ಆಸ್ಥಾನವಿದ್ವಾನ್ ಶ್ರೀಮಾನ್ ವೇದಮೂರ್ತಿ ಬಿ. ಎಂ. ತ್ರ್ಯಂಬಕ ಸಿದ್ಧಲಿಂಗಶಾಸ್ತ್ರಿಗಳವರು ಅವರ ದಿಗ್ದರ್ಶನ ಕಾವ್ಯವಿಮರ್ಶೆಯೂ.

ದಿಗ್ದರ್ಶನಂ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ವರ್ಗಕ್ಕೆ ಸಲ್ಲುವ ಶಾಲೀವಾಹನಶಕ ೧೮೫೯ ನೆಯ ಪ್ರಜೋತ್ಪತ್ತಿನಾಮ ಸಂವತ್ಸರದ ಫಾಲ್ಗುಣ ಬಹುಳ ಸಪ್ತಮಿಯಿಂದ ಫಾಲ್ಗುಣ ಬಹುಳ ತ್ರಯೋದಶಿ ವರೆಗಿನ ಪಂಚಾಂಗ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವಿನಾಸ ಮಾಸ
28	ಸೋಮ	ಸಪ್ತ	51-15	ಜ್ಯೇಷ್ಠ	11-43	16
29	ಮಂಗಳ	ಅಷ್ಟ	47-46	ಮೂಲ	9-28	17
30	[1] ಬುಧ	ನವ	45-33	ಪೂಷಾ	8-12	18
31	ಗುರು	ದಶ	44-20	ಉಷಾ	7-59	19
1	[2] ಶುಕ್ರ	ಏಕಾ	44-27	ಶ್ರವ	8-57	20
2	[3] ಶನಿ	ದ್ವಾದ	45-56	ಧನಿ	11-14	21
3	ಭಾನು	ತ್ರಯೋ	48-25	ಶತ	14-20	22

(1) ಮಳೆನಕ್ಷತ್ರ-ರೇವತಿ ೧ ನೆಯ ಪಾದ. (2) ... (3) ಮಳೆನಕ್ಷತ್ರ-ರೇವತಿ ೨ ನೆಯ ಪಾದ.

ಮೈಸೂರು: ಮೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG N. O. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಕ್ರೈಬ್ರಿಂಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸ್ ೧೯೩೭ ನೆಯ ಇಸವಿ ಏಪ್ರಿಲ್ ತಾರೀಖು ೪ ನೆಯ ಸೋಮವಾರ [ಸಂಚಿಕೆ ೧೪

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place for insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries, Economic Superintendents, Helpers and the Insurance Office, Public Office Buildings Bangalore.

(Sd.) S. SHA MANNA,
Secretary, Insurance Committee.

[60—38]

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರ	೦—೫—೦	೦—೧೦—೦
ಹರಿಕಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರನವನ	೦—೭—೦	೦—೧೨—೦
ಸಟೀಕ ಕರ್ನಾಟಕಶಬ್ದಮಂಜರಿ	೦—೭—೦	೦—೧೨—೦
ಸಟೀಕ ಶತಕತ್ರಯ	೧—೦—೦	೧—೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ವಿರಾಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಸ್ಟರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮೀದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು, ನಿದ್ದೆ ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೆಚ್ಛಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ಒಂದು ಡಬ್ಬಿಗೆ ೩| ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳ್ಳೇಉ ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೇ ಚೂರ್ಣ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ...

(Registerd Trade Mark)

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಏಪ್ರಿಲ್ ತಾ|| ೪ ನೆಯ ಸೋಮವಾರ.

ಅಂಗಿರಸ ಸಂವತ್ಸರ.

ಈಗ ನಡೆಯುತ್ತಿರುವ ಪ್ರಜೋತ್ಪತ್ತಿ ಸಂವತ್ಸರವು ಇದೇ ತಾ|| 5 ನೆಯ ಮಂಗಳವಾರಕ್ಕೆ ಅಂತ್ಯವಾಗಿ ಅಂಗಿರಸ ಸಂವತ್ಸರವು ತಾ|| 6 ನೆಯ ಬುಧವಾರದಿಂದಾರಂಭವಾಗುವುದು. ಪ್ರಸಕ್ತ ಸಂವತ್ಸರದಲ್ಲಿ ಭರತಖಂಡದ ಕೆಲವೆಡೆಗಳಲ್ಲಿ ಅನಾವೃಷ್ಟಿಯೂ, ಮತ್ತೆ ಕೆಲವೆಡೆಗಳಲ್ಲಿ ಅತಿವೃಷ್ಟಿಯೂ ಬೇರೆ ಕೆಲವೆಡೆಗಳಲ್ಲಿ ಸುವೃಷ್ಟಿಯೂ ಆಗಿ ಬೆಳೆಗಳು ತದನುಗುಣವಾಗಿದ್ದರೂ ಒಟ್ಟಿನಲ್ಲಿ ಅನುಕೂಲವಾಗಿದ್ದುವು. ಆದರೆ ಪರದೇಶ ವಸ್ತುಗಳ ಬಹಿಷ್ಕಾರದಿಂದಲೋ ಮತ್ತಾವ ಕಾರಣದಿಂದಲೋ ಧಾನ್ಯಾದಿ ಪದಾರ್ಥಗಳ ಬೆಲೆಯು ಬಹಳಮಟ್ಟಿಗಿಳಿದುಹೋಗಿ ರೈತರುಗಳು ಕಂದಾಯವನ್ನು ಕಟ್ಟಲು ಬಹಳ ತೊಂದರೆಯಾಗಿದ್ದುದು, ಕಡೆಯಲ್ಲಿ ಧಾನ್ಯದ ಬೆಲೆಯು ಕೊಂಚ ಏರಿದುದರಿಂದಲೂ, ಕೋಟ್ಯಂತರ ರೂಪಾಯಿಗಳ ಭಂಗಾರವು ಪಾಶ್ಚಾತ್ಯ ದೇಶಗಳಿಗೆ ಸಾಗಲುಪಕ್ರಮವಾಗಿ ಅದರ ಬೆಲೆಯು ತೊಲ ಒಂದಕ್ಕೆ 30-31 ರೂ. ವರೆಗೇರಿದ್ದುದರಿಂದ ದುಡ್ಡಿಗಾಗಿ ಆತುರಪಡುತ್ತಿದ್ದ ಜನರು ತಮ್ಮಲ್ಲಿದ್ದ ಭಂಗಾರವನ್ನೆಲ್ಲ ಮಾರಿದುದರಿಂದಲೂ ಅವರ ದುಡ್ಡಿನ ತಾಪತ್ರಯವು ಕೊಂಚಮಟ್ಟಿಗೆ ಕಡಿಮೆಯಾಯಿತು. ಲಂಡನ್ ನಗರದಲ್ಲಿ ಮೊದಲನೆಯ ವೇಳೆ ನೆರೆದಿದ್ದ ರೌಂಡುಟೇಬಲು ಸಭೆಯ ಕಾರ್ಯಕಲಾಪಗಳು ಭಾರತ ಕಾಂಗ್ರೆಸು ಪಕ್ಷದವರಾದ ಮಹಾತ್ಮ ಗಾಂಧಿ ಪ್ರಭೃತಿಗಳು ಆಹ್ವಾನಿಸಲ್ಪಡದಿದ್ದುದರಿಂದ ಫಲಕಾರಿಯಾಗದಿದ್ದುದು, ಈ ವೇಳೆ ಕಾಂಗ್ರೆಸು ಪ್ರತಿನಿಧಿಯಾಗಿ ಮಹಾತ್ಮರೂ ಪಂಡಿತ ಮದನಮೋಹನ ಮಾಲವ್ಯರವರೂ, ಸರೋಜಿನೀದೇವಿಯವರೂ ಆಹ್ವಾನಿಸಲ್ಪಟ್ಟಿದ್ದುದರಿಂದ ಫಲಪ್ರದವಾಗುತ್ತದೆಂದು ಭಾವಿಸಲ್ಪಟ್ಟಿದ್ದಿತು. ಆದರೆ ಕಾಂಗ್ರೆಸು ಮಹಾಸಭೆಯ ರಾಜಕೀಯ ಚಳುವಳಿಯನ್ನು ಮುರಿಯಲು ಮಹಾ ಕಠಿಣವಾದ ಶಾಸನಗಳು ಅನುಷ್ಠಾನಕ್ಕೆ ತರಲ್ಪಟ್ಟು ಶ್ರೀಯುತರುಗಳಾದ ಜವಹಾರಲಾಲನೆಹರು, ಪಟೇಲದ್ವಯರೇ ಆದಿಯಾಗಿ ದೇಶಸೇವಾಧುರಂಧರರೂ, ಶ್ರೀಮತಿಯವರಾದ ಕಸ್ತೂರಿಬಾಯಿ, ನೆಹರು ಸತಿಯವರೇ ಆದಿಯಾಗಿ ಅನೇಕ ಧುರಂಧರೆಯರೂ, ಸಾವಿರಾರು ದೇಶಸೇವಕ ಸೇವಕಿಯರೂ ಕಾರಾಗೃಹಗಳಲ್ಲಿ ಬಂಧಿಸಲ್ಪಟ್ಟರು. ಇದರಿಂದ ಪ್ರಜರ ಮನಸ್ಸು ಬಹಳವಾಗಿ ಪ್ರಕ್ಷುಬ್ಧಗೊಂಡು ಕೊಲೆ ಮೊದಲಾದ ಅತ್ಯಾಚಾರಗಳು ನಡೆಯಲು ಅವಕಾಶವಾಯಿತು. ಎರಡನೆಯ ರೌಂಡುಟೇಬಲ್ ಕಾನ್ಫರೆನ್ಸು ಸಭೆಯ ಫಲಿತಾಂಶವಾಗಿ ಮೂರು ಕಮಿಟಿಗಳೇರ್ಪಟ್ಟು ಅವು ಭಾರತ ದೇಶಕ್ಕೆ ಪ್ರತ್ಯಕ್ಷವಾಗಿ ಬಂದು ದೇಶೀಯ ಸಂಸ್ಥಾನಗಳಲ್ಲೂ, ರಾಷ್ಟ್ರಗಳಲ್ಲೂ ಸಂಚರಿಸಿ ರಾಜ್ಯಾಂಗರಚನೆಯ ವಿಚಾರದಲ್ಲಿ ಪ್ರಜರ ಅಭಿಪ್ರಾಯಗಳನ್ನು ಕೇಳಿ ತಿಳಿದುಕೊಳ್ಳುತ್ತಿರುವುವಲ್ಲದೆ ಇಷ್ಟರಲ್ಲೇ ತಮ್ಮ ಕಾರ್ಯವನ್ನು ಪೂರೈಸಿಕೊಂಡು ಸ್ವದೇಶಕ್ಕೆ ಹಿಂದಿರುಗಿ ತಮ್ಮ ವರದಿಯನ್ನು ಪ್ರಕಟಿಸುವವಾಗಿರುವವು. ಕಾಂಗ್ರೆಸು ಪ್ರತಿನಿಧಿಗಳಾದ ಮಹಾತ್ಮರು ನಿರ್ಬಂಧ ಶಾಸನಗಳಿಂದಾಗತಕ್ಕ ದುಷ್ಪರಿಣಾಮವನ್ನು ತಿಳಿಸಿ ಶಾಂತಿಸಮಾಧಾನೋಪಾಯವನ್ನು ಸೂಚಿಸಲು ಅವಕಾಶ ಕೊಡದೆ ಅವರು ಇಂಡ್ಯಾಕ್ಕೆ ಬಂದ ಕೂಡಲೆ ನಿರ್ಬಂಧಗೊಳಿಸಲ್ಪಟ್ಟುದರಿಂದ ನೂತನ ರಾಜ್ಯಾಂಗ ರಚನೆಯು ಭಾರತೀಯರ ಆಶೋತ್ತರಕ್ಕನುಕೂಲವಾಗಿರುವುದಿಲ್ಲವೆಂದು ಕೆಲರು ಶಂಕಿಸುತ್ತಾರೆ. ಗಡಿನಾಡಿನಲ್ಲಿ ಜನರು ದಂಗೆಯೆದ್ದು ಪ್ರಭುತ್ವದವರಿಗೆ ಬಹಳ ತೊಂದರೆಯನ್ನು ಕೊಟ್ಟುದರಮೇಲೆ ಅವರನ್ನು ನಿಗ್ರಹಿಸಲು ಪ್ರಭುತ್ವದವರು ಚತುರೋಪಾಯವನ್ನು ಕೈಕೊಳ್ಳಬೇಕಾಗಿ ಬಂದಿತು. ಕಾಶ್ಮೀರ ಸಂಸ್ಥಾನದಲ್ಲಿ ಹಿಂದು ಮಹಮ್ಮದೀಯರ ಕಲಹವು ನಡೆದು ಹಿಂದುಗಳಿಗೆ ಬಹಳ ನಷ್ಟ ಕಷ್ಟಗಳು ಸಂಭವಿಸಿದುವು ಮತ್ತು ಇದರಿಂದ ಅಲ್ಲಿಯ ಮಹಾರಾಜರಿಗೆ ಬಹಳ ಮನೋವ್ಯಾಕುಲವುಂಟಾಯಿತು. ಪರದೇಶಗಳಲ್ಲಿ ಆರ್ಥಿಕ ದುಸ್ಥಿತಿಯಿಂದ ಪಾಲಕಪಾಲ್ಯರುಗಳು ಬಹಳ ನಷ್ಟ ಕಷ್ಟಗಳನ್ನು ಅನುಭವಿಸುತ್ತಿರುವರು. ಚೀನಾ ಜಪಾನು ದೇಶಗಳು ಯುದ್ಧದಲ್ಲಿ ತೊಡಗಿರುವುವು. ಗ್ರೇಟ್ ಬ್ರಿಟನ್ನಿನವರಿಗೂ ಐರ್ಲೆಂಡಿನವರಿಗೂ ರಾಜಕೀಯ ವಿಚಾರದಲ್ಲಿ ಮನಸ್ತಾಪ ಹುಟ್ಟಿ ವಾಗ್ವಾದವು ನಡೆಯುತ್ತಿದೆ. ಇದು ಮುಂದೆ ಕಲಹರೂಪವಾಗಿ ಪರಿಣಮಿಸಬಹುದು. ಒಟ್ಟಿನಲ್ಲಿ ಪ್ರಸಕ್ತ ವರ್ಷದ ಫಲವು ಪ್ರಜೆಗಳಿಗೆ ಪ್ರತಿಕೂಲವಾಗಿಯೇ ಇದ್ದಿತು.

ಬರುವ ಅಂಗಿರಸ ಸಂವತ್ಸರದಲ್ಲಿ ಬುಧ ರಾಜನಾಗಿಯೂ, ಮಂತ್ರಿಯಾಗಿಯೂ; ಕುಜ ಸೇನಾಧಿಪನಾಗಿಯೂ, ಅರ್ಘ್ಯಾಧಿಪನಾಗಿಯೂ, ಮೇಘಾಧಿಪನಾಗಿಯೂ; ಶನಿ ಸಸ್ಯಾಧಿಪನಾಗಿಯೂ; ಗುರು ಧಾನ್ಯಾಧಿಪನಾಗಿಯೂ; ಶುಕ್ರ ನೀರಸಾಧಿಪನಾಗಿಯೂ; ಚಂದ್ರ ರಸಾಧಿಪನಾಗಿಯೂ; ಯಮ ಪಶುನಾಯಕನಾಗಿಯೂ ಇರುತ್ತಾರೆ. ಈ ನವನಾಯಕರುಗಳ ಚಾರುಪಕ್ಷದಲ್ಲಿ ಮಳೆಯು ಹೆಚ್ಚಾಗಿ ಆಗಿ ಕ್ಷೀರಧಾನ್ಯಗಳು ಸಮೃದ್ಧವಾಗಿರುವುವೆಂದೂ; ಯುದ್ಧಭಯವೂ, ಜನರಲ್ಲಿ ಕಲಹವೂ, ಅರಗು ಗೋಮೇಧಿಕ ಸೀಸ ಮುಂತಾದ ಪದಾರ್ಥಗಳಿಗೆ ಕ್ರಯಾಧಿಕ್ಯವೂ, ಹಸು ಮತ್ತು ಆನೆಗಳಿಗೆ ಅರಿಷ್ಟವೂ, ಪೂರ್ವ ಮತ್ತು ದಕ್ಷಿಣದೇಶಗಳ ಜನರಿಗೆ ಕಷ್ಟವೂ ಪ್ರಾಪ್ತವಾಗುವುವೆಂದೂ, ಭಾದ್ರಪದ ಶುಕ್ಲ ಪೌರ್ಣಮಿ ತಾ|| 14-9-1932 ನೆಯ ಬುಧವಾರ ಚಂದ್ರಗ್ರಹಣ ಬರುವುದೆಂದೂ, ಮಾಘ ಬಹುಳ ಅಮಾವಾಸ್ಯೆ ಶುಕ್ರವಾರ ಸಂಭವಿಸುವ ಸೂರ್ಯಗ್ರಹಣವು ಭಾರತದೇಶದಲ್ಲಿ ಕಾಣುವುದಿಲ್ಲವೆಂದೂ ದೈವಜ್ಞರು ಗುಣಿಸಿ ಹೇಳಿರುತ್ತಾರೆ. ಆಯುಧ ವಿಸರ್ಜನ ಸಭೆಯವರ ಸಮಾಧಾನ ಪ್ರಯತ್ನಕ್ಕೆ ಸಾಧ್ಯವಾಗದಿದ್ದ ಚೈನಾ-ಜಪಾನು ಯುದ್ಧವು ದೈವಕೃಪೆಯಿಂದ ಶಾಂತವಾಗಲೆಂದೂ, ಬ್ರಿಟನ್ನಿಗೂ ಐರ್ಲೆಂಡಿಗೂ, ಉಂಟಾಗಿರುವ ಮನಸ್ತಾಪವು ಪರಿಹಾರವಾಗಲೆಂದೂ, ಭಾರತ ದೇಶ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಕಾರಾಗೃಹ ಬಂಧನದಲ್ಲಿರುವ ಮಹಾತ್ಮಾ ಗಾಂಧಿ ನೆಹರು ಪ್ರಭೃತಿಗಳು ಬಿಡುಗಡೆಯನ್ನು ಹೊಂದಲೆಂದೂ, ಮಹಾತ್ಮರ ಆಪ್ತಾಲೋಚನೆಯಿಂದ ರೌಂಡುಟೇಬಲ್ ಸಭಾ ಪ್ರಯತ್ನವು ಫಲಪ್ರದವಾಗಿ ಭಾರತೀಯರ ಸ್ವಾತಂತ್ರ್ಯ ಸಾಧನೇಷ್ಟಾರ್ಥವು ಸಿದ್ಧಿಸಲೆಂದೂ ದಯಾಮಯನಾದ ಸರ್ವೇಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಸರ್ವೇಜನಾಸ್ಸುಖಿನೋಭವಂತು.

ದೊಂಬೀಕಲಹ

ಬಂಗಾಳಕ್ಕೆ ಸೇರಿದ ಮಲಹಾತ ಎಂಬಲ್ಲಿ ಕಳೆದ ಮಂಗಳವಾರ ನಾಮಶೂದ್ರರಿಗೂ ಮುಸಲ್ಮಾನರಿಗೂ ದೊಂಬಿ ಕಲಹ ಜರುಗಿತು. ಪೋಲೀಸಿನವರು ಕೂಡಲೆ ಬಂದು 5-6 ವೇಳೆ ಬಂದೂಕಗಳನ್ನು ಹಾರಿಸಿ ದೊಂಬಿಯನ್ನಡಗಿಸಿದರು.

ಆರ್ಥಿಕ ಭಯಂಕರ ಸ್ಥಿತಿ

ಆಸ್ಟ್ರಿಯಾ, ಹಂಗೇರಿ, ಗ್ರೀಸು ಮತ್ತು ಬಲ್ಗೇರಿಯಾ ದೇಶಗಳ ಆರ್ಥಿಕ ದುಸ್ಥಿತಿಯು ಬಹಳ ಭಯಂಕರವಾಗಿರುವುದರಿಂದ ತನ್ನಿವಾರಣೋಪಾಯವನ್ನು ಆಲೋಚಿಸಲು ಜಾತಿಸಮಿತಿಯು ಈ ತಾ|| 12 ರಲ್ಲಿ ಸಮಾವೇಶವಾಗುವುದು.

ಅಮೇರಿಕೆಯ ಆರ್ಥಿಕಪತ್ರ

ಅಮೇರಿಕೆಯ ಆರ್ಥಿಕಪತ್ರ (ಬಜೆಟ) ನ್ನು ಸರಿಪಡಿಸಲು 2,63,71,25,000 ರೂ. ಗಳು ಬೇಕಾಗಿರುತ್ತವೆ ಇದಕ್ಕಾಗಿ 1,58,10,00,000 ರೂ. ಗಳು ಕಂದಾಯಗಳಿಂದ ಬರುತ್ತವೆ. ವಿನೋದಗಳ ಮೇಲೆ ಶೇಕಡ 10 ರಂತೆ ತೆರಿಗೆ ವಿಧಿಸಲ್ಪಟ್ಟಿದೆ. ಆದಾಯತೆರಿಗೆಯೂ, ಅಂಚೆ, ತಂತಿವಾರ್ತೆಗಳ ಛಾರ್ಜುಗಳೂ ಹೆಚ್ಚಿಸಲ್ಪಟ್ಟಿವೆ.

ಲೋಥಿಯನ್ ಕಮಿಟಿಯವರು ಈ ತಾ|| ೨೧ ರಲ್ಲಿ ಇಂಗ್ಲೆಂಡಿಗೆ ಪ್ರಯಾಣ ಮಾಡುವರು

ಕಳೆದ ತಾ|| 30 ರಲ್ಲಿ ಲಾಹೋರಿಗೆ ಹೋಗಿದ್ದ ಕಮಿಟಿಯವರು ತಾ|| 6 ರಲ್ಲಿ ಪೆಷಾವರಿಗೆ ಬರುವರು. ಅಲ್ಲಿಂದ ತಾ|| 9 ರಲ್ಲಿ ಹೊರಟು ತಾ|| 11 ರಲ್ಲಿ ಸಿಮ್ಲಾವನ್ನು ತಲುಪುವರು. ಈ ಕಮಿಟಿಯಲ್ಲಿರುವ ಪಾರ್ಲಿಮೆಂಟ್ ಮೆಂಬರುಗಳು ತಾ|| 21 ರಲ್ಲಿ ಸಿಮ್ಲಾದಿಂದ ಹೊರಟು ಇಂಗ್ಲೆಂಡಿಗೆ ಪ್ರಯಾಣ ಮಾಡುವರು.

ವಿಠಲಭಾಯಿಯವರು ಐರ್ಲೆಂಡಿಗೆ ಹೋಗುವುದಿಲ್ಲ.

ವಿಯನ್ನಾಕ್ಕೆ ಹೋಗಿ ವೈದ್ಯಚಿಕಿತ್ಸೆಯನ್ನು ಹೊಂದುತ್ತಿರುವ ವಿಠಲಭಾಯಿ ಪಟೇಲರವರು ಐರ್ಲೆಂಡಿಗೆ ಹೋಗಿ ಭಾರತದೇಶದ ರಾಜಕೀಯ ವಿಚಾರವಾಗಿ ಉಪನ್ಯಾಸ ಮಾಡಲೊಪ್ಪಿರುತ್ತಾರೆಂದು ಪ್ರಕಟವಾಗಿದ್ದಿತು. ಈ ವಾರ್ತೆಯು ಕಲ್ಪಿತವೆಂದೂ, ವಿಯನ್ನಾ ಪಟ್ಟಣವನ್ನು ಬಿಟ್ಟು ಹೊರಡಲಾವ ಏರ್ಪಾಟನ್ನು ಮಾಡಿಲ್ಲವೆಂದೂ ಅವರೇ ಪ್ರಕಟಿಸಿರುತ್ತಾರೆ.

೨೨ ಜನ ಸ್ತ್ರೀಯರಿಗೆ ಕಠಿಣ ಸಜ

ಕಾಶೀ ಪಟ್ಟಣದಲ್ಲಿ ವಿದೇಶವಸ್ತ್ರಗಳ ಅಂಗಡಿಗಳನ್ನು ಪಿಕೆಟ್ಟುಮಾಡಿದರೆಂಬ ಅಪರಾಧಕ್ಕಾಗಿ 22 ಮಂದಿ ಸ್ತ್ರೀಯರಿಗೆ 6 ತಿಂಗಳ ಕಠಿಣಸಜವು ವಿಧಿಸಲ್ಪಟ್ಟಿತು. ಜೈಲಿನಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ ಎಂದೂ, ವಿವಾಹಿತರಾದವರು ಕುಂಕುಮವನ್ನು ಧರಿಸಿರಲು ಅನುಜ್ಞೆಯಾಗಬೇಕೆಂದೂ ಅಪರಾಧಿಗಳು ಹೇಳಿಕೊಳ್ಳಲು, ಜೈಲು ವಿಚಾರದಲ್ಲಿ ತಾವೇನನ್ನೂ ಮಾಡಲಿಕ್ಕಾಗುವುದಿಲ್ಲವೆಂದು ಮೆಜಿಸ್ಟ್ರೇಟರು ಹೇಳಿದರು.

ಮೆಜಿಸ್ಟ್ರೇಟರ ಮೇಲೆ ಕಲ್ಲನ್ನು ಹಾಕಿದುದು

ಬೊಂಬಾಯಿ ಗಿರ್ಗಾಮಿನ ಆನರರಿ ಮೆಜಿಸ್ಟ್ರೇಟು ಬೀದಿಯಲ್ಲಿ ಸಾಮಾನನ್ನು ಹೊತ್ತಿಕೊಂಡು ಮಾರುವವನಿಗೆ 1 ರೂಪಾಯಿ ಅರ್ಥದಂಡವನ್ನು ವಿಧಿಸಿದನು. ಅಪರಾಧಿಯು ಹೊರಕ್ಕೆ ಹೋಗಿ ಒಂದು ದೊಡ್ಡ ಕಲ್ಲನ್ನೆತ್ತಿಕೊಂಡು ಮೆಜಿಸ್ಟ್ರೇಟನ ಮೇಲೆ ಎಸದನು. ಆ ಕಲ್ಲು ಕೋರ್ಟಿನಲ್ಲಿದ್ದ ಓರ್ವ ಪಾರ್ಸಿ ಸ್ತ್ರೀಗೆ ತಗುಲಿ ಪೆಟ್ಟು ಬೀಳಲಾಗಿ, ಆಕೆಯು ಕೂಡಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟಳು. ಆ ತಲೆ ಹೋರೆಯ ವರ್ತಕನು ಕೂಡಲೆ ಸೆರೆಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾನೆ.

ಕಲಕತ್ತಾದಲ್ಲಿ ಸಿಡಿಮದ್ದುಗಳು

ಹೌರಾಕ್ಕೆ ಸಮೀಪದಲ್ಲಿರುವ ತಿಕಿಯಾಪಾರಾ ಎಂಬ ಗ್ರಾಮದಲ್ಲಿ ಒಬ್ಬ ಮಹಮ್ಮದೀಯನ ಮನೆಯೊಳಗೆ ಒಂದು ಚಿಕ್ಕ ಕೊಠಡಿಯಲ್ಲಿ ಸೆಣಬಿನ ಹುರಿಯಿಂದ ಸುತ್ತಲ್ಪಟ್ಟಿದ್ದ ನಾಲ್ಕು ಉಂಡೆಗಳನ್ನು ಆ ಮಹಮ್ಮದೀಯನು ಕಂಡು ಅನುಮಾನಿಸಿ ಕೂಡಲೆ ಪೋಲೀಸರಿಗೆ ತಿಳುಹಲು, ಅವರು ಬಂದು ಪರೀಕ್ಷಿಸಿ ಅವು ಸಿಡಿಮದ್ದುಗಳೆಂದು ನಿರ್ಧರಿಸಿದರು. ಇನ್ನೂ ಆರೂ ಸೆರೆಹಿಡಿಯಲ್ಪಟ್ಟಿಲ್ಲ.

ಅಜಿದ್ ವೃಕ್ಷನಿರ್ಮೂಲನ

ಅಲಹಾಬಾದಿನ ಆಲ್ಫ್ರೆಡ್ ಪಾರ್ಕ್ ಎಂಬ ಉದ್ಯಾನದಲ್ಲಿ ಒಂದು ಮರದ ಕೆಳಗೆ ಚಂದ್ರಶೇಖರ ಅಜದು ಎಂಬ ಓರ್ವ ವಿಪ್ಲವಕಾರನನ್ನು ಪೋಲೀಸರು ಗುಂಡಿನಿಂದ ಸುಟ್ಟುಹಾಕಿದರು. ಇದಕ್ಕಾಗಿ ಆ ವೃಕ್ಷವು ಅಜದ್ ವೃಕ್ಷವೆಂದು ಕರೆಯಲ್ಪಟ್ಟು ರಾಜಕೀಯ ಪ್ರಾಮುಖ್ಯತೆಯನ್ನು ಪಡೆದುದರಿಂದ, ಅದರ ಕೆಳಗೆ ಉತ್ಸವಾದಿಗಳೂ ಸಭೆಗಳೂ ಪೂಜೆಯೂ ನಡೆಯುತ್ತಿದ್ದುವು. ಈ ಮರವನ್ನು ಪ್ರಭುತ್ವದವರು ನಿರ್ಮೂಲಗೊಳಿಸಿದರು.

೭೦ ವರ್ಷದ ಬ್ರಿಟಿಷ್ ಪಾದ್ರಿಯ ವ್ಯಭಿಚಾರ

ರೆವರೆಂಡ್ ಹರೋಲ್ಡ್ ಫ್ರಾನ್ಸಿಸ್ ಡೇವಿಸ್ ಎಂಬಾತನು ನಾರ್ಫೋಕದಲ್ಲಿ ಮಠಗುರುವಾ (ರೆಕ್ಟರಾ) ಗಿದ್ದನು. ಈತನು ಇಬ್ಬರು ಸ್ತ್ರೀಯರಲ್ಲಿ ವ್ಯಭಿಚಾರ ಮಾಡಿ ಅವರಿಬ್ಬರನ್ನೂ ತನ್ನ ಮನೆಯಲ್ಲಿ ಸಂಬಳವಿಲ್ಲದೆ ಕೆಲಸಕ್ಕೆ ನೇಮಿಸಿಕೊಂಡು ರಮಿಸುತ್ತಿದ್ದನೆಂದೂ, ಫಲಾಹಾರದಂಗಡಿಯಲ್ಲಿ ಒಬ್ಬ ಯುವತಿಯನ್ನು ಬಹಿರಂಗವಾಗಿ ಆಲಂಗಿಸಿದನೆಂದೂ, 5 ವರ್ಷಗಳಿಂದಲೂ ನೀತಿಬಾಹ್ಯನಾಗಿ ಪ್ರವರ್ತಿಸುತ್ತಿದ್ದನೆಂದೂ, ಆ 5 ವರ್ಷಗಳಲ್ಲೂ ವ್ಯಭಿಚರಿಸುವ ಉದ್ದೇಶದಿಂದ ಜಾರಸ್ತ್ರೀಯರ ಕೂಡ ಸಂಚರಿಸುತ್ತಿದ್ದನೆಂದೂ ಆತನ ಮೇಲೆ ಆರೋಪಣೆಗಳು ಮಾಡಲ್ಪಟ್ಟಿವೆ.

ಬಿಕನೀರಿನಲ್ಲಿ ಹಿಂದು ಮಹಮ್ಮದೀಯರ ಕಲಹ

ಬಿಕನೀರಿನಲ್ಲಿ ಹೋಳಿ ಹಬ್ಬದ ದಿವಸ ಹಿಂದುಗಳು ವಾದ್ಯದೊಡನೆ ಉತ್ಸವ ಬರುತ್ತಿರುವಾಗ್ಗೆ, ಪಕ್ಕದಲ್ಲಿದ್ದ ಮಸೀತಿ ಬಳಿ ವಾದ್ಯವನ್ನು ನಿಲ್ಲಿಸಬೇಕೆಂದು ಮಹಮ್ಮದೀಯರು ಕೋರಿದರು. ಹಿಂದುಗಳು ವಾದ್ಯವನ್ನು ನಿಲ್ಲಿಸದೆ ಹೋಗಲು ಕಲಹಕ್ಕಾರಂಭವಾಗಿ ಕೆಲರಿಗೆ ಪೆಟ್ಟು ಬಿದ್ದಿತು. ಮಸೀದಿಯೊಳಗಿನಿಂದ ಕಲ್ಲುಗಳೆಸೆಯಲ್ಪಟ್ಟುವು. ಕೂಡಲೆ ಪೋಲೀಸಿನವರು ಬಂದು ಹೊಡದಾಟವು ಪ್ರಬಲಿಸದಂತೆ ಅದನ್ನು ತಡೆದು ನಿಲ್ಲಿಸಿದರು. ಮುಂದೆ ಪುನಃ ಕಲಹವಾಗದಂತೆ ಫಿರಂಗಿಗಳು ತರಲ್ಪಟ್ಟು ಸೇನೆಯು ಕಾವಲಿಡಲ್ಪಟ್ಟಿದೆ.

ಪಂಡಿತರ ಅಭಿಪ್ರಾಯ

ರೌಂಡುಟೇಬಲು ಕಾನ್ಫರೆನ್ಸಿನ ಫ್ರಾಂಚೈಜ್ ಕಮಿಟಿಯ ಅಧ್ಯಕ್ಷರಾದ ಲಾರ್ಡ್ ಲೋಥಿಯನ್‌ರವರು ಫ್ರಾಂಚೈಜ್ ಅಂದರೆ ಓಟು ಕೊಡುವ ಅಧಿಕಾರದ ವಿಚಾರವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಪಂಡಿತ ಮದನಮೋಹನ ಮಾಲವ್ಯರವರನ್ನು ಕೇಳಿದರು. ಅದಕ್ಕೆ ಪಂಡಿತರು "ನಿರ್ಬಂಧ ಶಾಸನಗಳನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು, ಎಲ್ಲ ರಾಜಕೀಯ ಕೈದಿಗಳು ಬಿಡಲ್ಪಡಬೇಕು ಮತ್ತು ದಬ್ಬಾಳಿಕೆಯು ತಪ್ಪಬೇಕು, ಇವುಗಳು ನೆರವೇರಿದ ಹೊರತು ಪ್ರಭುತ್ವದವರೊಂದಿಗೆ ಯಾವ ರೀತಿಯಲ್ಲೂ ಸಹಕರಿಸಲಾಗುವುದಿಲ್ಲ" ಎಂದು ಬರೆದು ತಿಳಿಸಿರುತ್ತಾರೆ.

ಮುಸಲ್ಮಾನರಿಗೂ ಹಿಂದುಗಳಿಗೂ ಗೋರಿ ವಿಚಾರವಾಗಿ ಕಲಹ.

ಬೊಂಬಾಯಿನ ಮಾಧವಬಾಗಿನಲ್ಲಿ ಎರಡು ಗೋರಿಗಳು ಹೊಸದಾಗಿ ಗೋಚರವಾಗಿವೆ. ಇವು ಸಮಾಧಿಗಳೆಂದು ಹಿಂದು ಸಂಘದವರೂ, ಗೋರಿಗಳೆಂದು ಮುಸಲ್ಮಾನ್ ಸಂಘದವರೂ ವಾದಿಸುತ್ತಿದ್ದು, ಮಹಮ್ಮದೀಯರು ಗೋರಿಗಳ ಬಳಿ ಪೂಜಾಪ್ರಾರ್ಥನೆಯನ್ನು ಮಾಡುತ್ತಿದ್ದರು ಮತ್ತು ಹಿಂದುಗಳು ಅಲ್ಲಿ ಹನುಮಂತನ ವಿಗ್ರಹವನ್ನಿರಿಸಿ ಪೂಜಿಸುತ್ತಿದ್ದರು. ಇದರಿಂದ ಉಭಯ ಸಂಘದವರಿಗೆ ಯಾವ ಸಂಘರ್ಷಣೆಯುಂಟಾಗದೆ ಉಭಯರೂ ಬಹಳ ಶಾಂತಿಯಿಂದ ಪೂಜೆಮಾಡುತ್ತಿದ್ದರಲ್ಲದೆ ಪೋಲೀಸಿನವರು ಬಹಳ ಎಚ್ಚರಿಕೆಯಿಂದ ಪರಿಸ್ಥಿತಿಯನ್ನು ಗಮನಿಸುತ್ತಿದ್ದರು. ಈ ಗೋರಿಗಳು ದಕ್ಷಿಣೋತ್ತರಾಭಿಮುಖವಾಗಿರುವುದರಿಂದ ಇವು ಹಿಂದು ಸಮಾಧಿಗಳೆಂದು ನಿರ್ಧರಿಸಲ್ಪಟ್ಟುವು.

ನವಗಾವದ ಅಸ್ಪೃಶ್ಯರ ಕಷ್ಟ

ಅಸ್ಪೃಶ್ಯರಿಗಾಗಿ ಏರ್ಪಟ್ಟಿದ್ದ ಪ್ರತ್ಯೇಕ ಪಾಠಶಾಲೆಗಳು ತೆಪ್ಪಿಸಲ್ಪಟ್ಟು ಸಾರ್ವಜನಿಕಪಾಠಶಾಲೆಗಳಿಗೆ ಅಸ್ಪೃಶ್ಯರು ಸೇರಿಸಲ್ಪಡಬೇಕೆಂದು ಬರೋಡಾ ಪ್ರಭುತ್ವದಾಜ್ಞೆಯಾಗಿರುವುದರಿಂದ ನವಗಾಂವ ಎಂಬ ಊರಿನ ಚತುರ್ವರ್ಣದವರು ಅಸ್ಪೃಶ್ಯರಿಗೆ ನಾನಾ ಕಷ್ಟಗಳನ್ನು ಕೊಡುತ್ತಿರುವರು. ಒಬ್ಬ ಅಸ್ಪೃಶ್ಯ ರೈತನ 3000 ಹುಲ್ಲು ಹೊರೆಗಳಿಗೆ ಬೆಂಕಿಹೊತ್ತಿಸಲ್ಪಟ್ಟಿತೆಂದೂ, ಅಸ್ಪೃಶ್ಯರ ಮೇಲೆ ಸೀಮೆಯೆಣ್ಣೆ ಚೆಲ್ಲಲ್ಪಟ್ಟಿತೆಂದೂ, ಅವರುಗಳ ಮನೆಗಳಿಗೆ ಬೆಂಕಿಹೊತ್ತಿಸಲ್ಪಡುವ ಪ್ರಯತ್ನ ನಡೆಯುತ್ತಿದೆ ಎಂದೂ, ಗ್ರಾಮ ಪಾಠಶಾಲೆಗೆ ಬಂದ ಅಸ್ಪೃಶ್ಯ ಬಾಲಕನು ಚೆನ್ನಾಗಿ ಮರ್ದಿಸಲ್ಪಟ್ಟನೆಂದೂ, ಆ ಜನರ ಮೇಲೆ ಸಾಂಘಿಕ ಬಹಿಷ್ಕಾರ ಪ್ರಾರಂಭಿಸಲ್ಪಟ್ಟಿರುವುದೆಂದೂ ತಿಳಿಯಬರುತ್ತದೆ.

ಒಬ್ಬ ಸ್ತ್ರೀ ಧೈರ್ಯಸಾಹಸಗಳು

ಡಿಬ್ರುಘುರಿಗೆ 27 ಮೈಲುಗಳ ದೂರದಲ್ಲಿರುವ ಟೀ ...ಟದ ಉದ್ಯೋಗಿಯಾದ ಮೊರ್ಗಟಿ ಎಂಬವನು ಒಂದು ...ತ್ರಿ ತೋಟಕ್ಕೆ ಹೋಗಿರುವುದನ್ನು ನೋಡಿಕೊಂಡು ಮೂವರು ...ಜಾಬಿಗಳು ಅರ್ಧರಾತ್ರಿಯಲ್ಲಿ ಅವನ ಮನೆಯನ್ನು ಪ್ರವೇ... ಮಲಗಿದ್ದ ಉದ್ಯೋಗಿಯ ಹೆಂಡತಿಯನ್ನೂ ಇಬ್ಬರು ...ಕರನ್ನೂ ಒಂದು ಕಂಭಕ್ಕೆ ಕಟ್ಟಿಹಾಕಿ ಕೆಲ ಪದಾರ್ಥ...ನ್ನು ಸಂಗ್ರಹಿಸುತ್ತಿರುವಾಗ್ಗೆ ಮಂಚದಮೇಲೆ ಮಲ... ಮಗುವು ಅಳಲಾರಂಭಿಸಿತು. ಮಗುವಿಗೆ ಹಾಲನ್ನು ...ಡಿಸಬೇಕೆಂದು ತಾಯಿಯು ಬಹಳ ದೈನ್ಯದಿಂದ ಪ್ರಾರ್ಥಿಸಿ...ಳ್ಳಲು ಆ ಕಳ್ಳರು ಆಕೆಯ ಕಟ್ಟನ್ನು ಬಿಚ್ಚಿದರು. ಆ ...ಡಲೆ ತಾಯಿಯು ಮಗುವಿಗೆ ಹಾಲನ್ನು ಕೊಡುವುದರ ...ಲು ತುಪಾಕಿಯನ್ನು ತೆಗೆದುಕೊಂಡು ಗುಂಡುಗಳನ್ನು ...ರಿಸಿ ಒಬ್ಬ ಕಳ್ಳನನ್ನು ಕೊಂದು ಇಬ್ಬರಿಗೆ ಗಾಯಪಡಿಸಿ... ಆ ತೋಟದ ಯಜಮಾನನು ಗುಂಡಿನ ಶಬ್ದವನ್ನು ... ಅಲ್ಲಿಗೆ ಬಂದು ಪಂಜಾಬಿಯು ಸತ್ತುಬಿದ್ದಿರುವುದನ್ನು ...ಡಿ ಪೋಲೀಸಿಗೆ ವರ್ತಮಾನ ಕೊಟ್ಟನು.

ಪಿ. ಸಿ. ರಾಯಿಯವರಿಗೆ ಸ್ವಾಗತಪತ್ರ

ಕಳೆದ ತಾ|| 27 ರಲ್ಲಿ ನಾಗಪುರದ ಮ್ಯುನಿಸಿಪಾಲಿಟಿಯ... ಸರ್ ಪ್ರಫುಲ್ಲಚಂದ್ರರಾಯಿಯವರಿಗೆ ಸ್ವಾಗತಪತ್ರವನ್ನು ...ರ್ಪಿಸಿದರು. ಅನೇಕ ದೊಡ್ಡಮನುಷ್ಯರುಗಳು ಬಂದಿದ್ದರು. ...ಲಿನ ಪ್ರೆಸಿಡೆಂಟರಾದ ಸಿ. ಬಿ. ಪರೇಖ್‌ರವರು ಸ್ವಾಗತ...ನ್ನೋದುತ್ತಿರುವಾಗ್ಗೆ ಒಬ್ಬ ಕಾಂಗ್ರೆಸು ವಾಲಂಟಿಯರು ...ತ್ರಗಳನ್ನು ಹಂಚಲುಪಕ್ರಮಿಸಲು ಪೋಲೀಸರು ಆತನನ್ನು ...ದುಕೊಂಡರು. ಸರ್ ಪಿ. ಸಿ. ರಾಯರು ಸ್ವಾಗತಪತ್ರಕ್ಕೆ ...ತ್ಯುತ್ತರವನ್ನು ಕೊಡುವಾಗ್ಗೆ "ನಾಗಪುರದ ರೋಡುಗಳು ... ಶುಭ್ರವಾಗಿರುವುದು ಸಂತೋಷಪ್ರದವು. ಇದರಂತೆಯೇ ...ಲಿಕಾರರ ನಿವಾಸಸ್ಥಳಗಳು ಶುಭ್ರವಾಗಿಡಲ್ಪಡಬೇಕಾಗಿ...ಸುತ್ತೇನೆ. ಖದ್ದರನ್ನೂ ಸ್ವದೇಶೀ ವಸ್ತುಗಳನ್ನೂ ನಾಗಪು... ಮ್ಯುನಿಸಿಪಾಲಿಟಿಯವರು ಪ್ರೋತ್ಸಾಹಿಸಬೇಕಾಗಿ ಸೂಚಿಸು...ನೆ. ದೇಶಕ್ಕೆ ಈಗ ಅತ್ಯಗತ್ಯವಾಗಿ ಬೇಕಾಗಿರುವುದು ...ರ್ವಪುತ್ರಮಗಳ ಪುನರುದ್ಧರಣವು. ಪ್ರಜೆಗಳಲ್ಲಿ ಸ್ವದೇಶಾ...ಮಾನವು ದೃಢವಾಗಿ ನಾಟಿಕೊಂಡರೆ ಇದು ಸಿದ್ಧಿಸುವುದು" ...ದು ರಾಯಿಯವರು ಹೇಳಿದರು. ಈ ಮಧ್ಯೆ ಇನ್ನೊಬ್ಬ ...ಲಂಟಿಯರೆದ್ದು ಭಾಷಣ ಮಾಡಲೆತ್ನಿಸಲು ಪೋಲೀಸರು ಅವ...ನ್ನು ಹಿಡಿದು ಹೊರಗೆ ಕಳುಹಿದರು.

ಬಂಗಾಳದ ಹೊಸ ಗೌರ್ನರು

... ಬಂಗಾಳದ ಹೊಸ ಗೌರ್ನರಾದ ಸರ್ ಜಾನ್ ಆಂಡರ್ಸನ್ ...ರು ಕಳೆದ ಮಂಗಳವಾರ ಪ್ರಾತಃಕಾಲ ಬೊಂಬಾಯಿನಿಂದ ...ಲ್ ರೈಲುಬಂಡಿಯಲ್ಲಿ ಕಲಕತ್ತಾಕ್ಕೆ ಬಂದರು. 17 ...ಡುಗಳು ಗೌರವಾರ್ಥವಾಗಿ ಹಾರಿಸಲ್ಪಟ್ಟುವು. ಸೈನಿಕರ ...ರ್ಯಾದೆಯನ್ನು ಕೈಕೊಂಡು ಉದ್ಯೋಗಸ್ಥರಿಂದ ಸನ್ಮಾನಿಸ...ಟ್ಟು 8 ಕುದುರೆಗಳೂಡಿದ ರಥದಲ್ಲಿ ಕುಳಿತು ವೈಭವದಿಂದ ...ರ್ಮೆಂಟ್ ಹೌಸನ್ನು ತಲುಪಿದರು. ಮಾರ್ಗದ ಇಕ್ಕೆಲ...ಲ್ಲೂ ಜನರು ಕಿಕ್ಕಿರಿದು ನಿಂತುಕೊಂಡು ನೋಡುತ್ತಿದ್ದರು ...ತ್ತು ಸೈನಿಕರೂ ಪೋಲೀಸಿನವರೂ ಕಾವಲಿದ್ದರು. ಮಾರ್ಗ...ದ್ದ ಮನೆಗಳೆಲ್ಲವೂ ಪೋಲೀಸರಿಂದ ಮುಂದಾಗಿ ಪರಿಶೋಧಿ...ಟ್ಟಿದ್ದುವು. ನಾನಾ ಅಧಿಕಾರಿಗಳಿಗೂ, ವರ್ತಕ ಪ್ರಮುಖ...ರು, ದೊಡ್ಡಮನುಷ್ಯರುಗಳಿಗೂ ದರ್ಶನವಿತ್ತು ಕೊಂಚ ವಿಶ್ರ...ಮಿಸಿಕೊಂಡ ತರುವಾಯ ಸರ್ ಜಾನ್ ಆಂಡರ್ಸನ್‌ರವರು ...ಧಾನ ನ್ಯಾಯಮೂರ್ತಿಯ ಇದಿರಿಗೆ ರಾಜಭಕ್ತಿಪ್ರಮಾಣ...ವನ್ನು ಮಾಡಿದರು. ಗುಂಡುಗಳು ಹಾರಿಸಲ್ಪಟ್ಟುವು. ರಾಜಪತಾಕೆ ...ಏರಿಸಲ್ಪಟ್ಟಿತು. ನಿವೃತ್ತರಾದ ಸರ್ ಸ್ಟಾನ್ಲಿ ಜಾಕ್ಸನ್ ...ರು 8-25 ಘಂಟೆಗೆ ಸ್ಪೆಷಲ್ ರೈಲುಬಂಡಿಯನ್ನು ಹತ್ತಿ ...ಬೊಂಬಾಯಿಗೆ ತೆರಳಿದರು. ಅವರ ಮರ್ಯಾದಾರ್ಥವಾಗಿ ಗುಂಡು... ಹಾರಿದುವು.

ಭಾರತ ಕಾಂಗ್ರೆಸ್ ಮಹಾಸಭೆ

ಶಾಸನೋಲ್ಲಂಘನವನ್ನು ಪ್ರತ್ಯಕ್ಷವಾಗಿಯೇ ಆಗಲಿ ...ರೋಕ್ಷವಾಗಿಯೇ ಆಗಲಿ ಪ್ರೋತ್ಸಾಹಪಡಿಸುವುದಿಲ್ಲವೆಂದು ...ಸಂಕಲ್ಪದಿಂದ ವಾಗ್ದಾನ ಮಾಡದಿದ್ದರೆ ಈ ವರ್ಷ ಮಹಾ...ಯನ್ನು ಜಗನ್ನಾಥದಲ್ಲಿ ನಡೆಸಲು ದೊರೆತನದವರು ಅಸು...ಮತಿಯನ್ನು ಕೊಡುವುದಿಲ್ಲ. ದೊರೆತನದವರ ಅನುಮತಿಯಿಲ್ಲ...ದೇ ಸಭೆಯನ್ನು ಮಾಡುವುದಾದರೆ ಭಾರತ ಕಾಂಗ್ರೆಸು ...ಯ ಸಂಘವೂ ಕಾಂಗ್ರೆಸು ಮಹಾಸಭೆಯೂ ಅಕ್ರಮ...ಗಳೆಂದು ದೊರೆತನದವರು ಪ್ರಕಟಿಸಿ ಈ ಎರಡು ಸಂಘ... ಸ್ವತ್ತುಗಳನ್ನು ವಶಪಡಿಸಿಕೊಳ್ಳುವರು. ಆದುದರಿಂದ ...ಗ್ರೆಸಿನ ಅತಿವಾದಿಗಳೆಲ್ಲರೂ ಈಗ ನಿರ್ಬಂಧಪಡಿಸಲ್ಪಟ್ಟಿರು...ದರಿಂದ ಭಾರತ ರಾಜ್ಯಾಂಗ ವಿಧಾನವು ಏರ್ಪಡಿಸಲ್ಪಡುವು... ಕಾಂಗ್ರೆಸ್ಸಿನವರು ಸಹಕರಿಸುವ ವಿಚಾರವಾಗಿ ...ಲೋಚಿಸಲು ಕಾಂಗ್ರೆಸು ಮಿತವಾದಿಗಳು ಸಭೆಯನ್ನು ಜರು...ಗಿಸಿದಲ್ಲಿ ಅದಕ್ಕೆ ದೊರೆತನದವರು ಸಂತೋಷಿಸುವರ... ಯಾವ ನಿರೋಧವನ್ನೂ ಮಾಡುವುದಿಲ್ಲ. ಕಾಂಗ್ರೆಸು ...ಹಾಸಭೆಯನ್ನು ನಡೆಯಿಸಿ ಈಗಿನ ರಾಜಕೀಯ ಪರಿಸ್ಥಿತಿ...ಯನ್ನು ಆಲೋಚಿಸುವುದು ಅಗತ್ಯವಾದುದರಿಂದ, ಅದಕ್ಕೆ ...ತನದವರ ಅನುಮತಿಯನ್ನು ಪಡೆಯಲು ಕಾಂಗ್ರೆಸಿನ ಮಿತ...ಗಳು ಅದಕ್ಕೆ ಪ್ರಯತ್ನಿಸುತ್ತಲೇ ಇದ್ದಾರೆ. ಈಗ ...ತಿ ಸರೋಜಿನೀದೇವಿಯವರು ಅಧ್ಯಕ್ಷೆಯಾಗಿರುವುದರಿಂದ ಅವರು ದೊರೆತನದವರೊಡನೆ ರಾಯಬಾರವನ್ನು ನಡೆಸುವರೆಂದು ತಿಳಿದುಬಂದಿದೆ. ಆದರೆ ಕಾಂಗ್ರೆಸಿನವರು ಇನ್ನೂ ಈ ವಿಷಯದಲ್ಲಿ ನಿರ್ಧಾರವನ್ನು ಮಾಡಿಲ್ಲ ಎಂದು ದಿಲ್ಲಿಯ ಸುದ್ದಿಗಾರನು ಬರೆದಿರುತ್ತಾನೆ.

ರೆಸಿಡೆನ್ಸಿ ಬಜಾರನ್ನು ನಿಜಾಮರಿಗೆ ಕೊಡಕೂಡದು

ರೆಸಿಡೆನ್ಸಿ ಬಜಾರು ಎಂಬ ಭಾಗವು ಹೈದರಾಬಾದು ಪಟ್ಟಣಕ್ಕೆ ಅಂಟಿಕೊಂಡಿದೆ. ಮೊದಲು ರೆಸಿಡೆಂಟರು ಇಲ್ಲಿ ವಾಸಮಾಡುತ್ತಿದ್ದುದರಿಂದ ಇದಕ್ಕೆ ಈ ಹೆಸರು ಬಂದಿರುವುದು. ಈಚೆಗೆ ರೆಸಿಡೆಂಟರು ಸಮೀಪದಲ್ಲಿರುವ ಬೊಲಾರಂ ಎಂಬ ಊರಿನಲ್ಲಿ ವಾಸಮಾಡುತ್ತಿರುವರು. ರೆಸಿಡೆಂಟರ ಆಳ್ವಿಕೆಯಲ್ಲಿರುವ ಈ ರೆಸಿಡೆನ್ಸಿ ಬಜಾರು ನೈಜಾಮರವರ ಆಳ್ವಿಕೆಗೆ ವಹಿಸಲ್ಪಡುವುದಾಗಿ ಪ್ರಬಲ ವರ್ತಮಾನವಿದೆ. ಇಲ್ಲಿರುವ ಪ್ರಮುಖ ವರ್ತಕರೆಲ್ಲ ಹಿಂದುಗಳೇ, ಅವರಲ್ಲಿ ಮುಖ್ಯವಾಗಿ ಮಾರ್ವಾಡಿ ಮತ್ತು ಮುಲ್ತಾನಿ ಜನರು ವಿಶೇಷವಾಗಿರುತ್ತಾರೆ. ಅವರುದ್ಯೋಗವು ಬಡ್ಡಿ ವ್ಯಾಪಾರವು. ಇರುವ ವರ್ತಕರುಗಳಲ್ಲೆಲ್ಲ ರಾಜಾ ಶಿವಲಾಲ್ ಮೋತಿಲಾಲ್‌ರವರೂ, ರಾಜಾ ಪ್ರತಾಪಗಿರ್ಜಿಯವರೂ, ರಾಜಾ ಬನ್ಸಿಲಾಲ್ ಅಭಿಚಂದ್ರನಾಥರೂ ಸದಾಸುಖಿ ಜಾನಕಿದಾಸ್ ಕಂಪೆನಿಯವರು, ರಾಜಾ ಭಗವಾನ್ ದಾಸ್‌ರವರೂ, ರಾಜಾ ಪುರುಷೋತ್ತಮದಾಸ್‌ರವರೂ ಪ್ರಮುಖರಾಗಿರುತ್ತಾರೆ. ಇವರುಗಳೆಲ್ಲರೂ "ನಮಗೂ ನಮ್ಮ ಆಸ್ತಿಗೂ ಸಂರಕ್ಷಣೆಯೂ ಸೌಖ್ಯವೂ ಉಂಟಾಗುವುವೆಂಬುದರ ಮೇಲೆ ಹೈದರಾಬಾದನ್ನು ಬಿಟ್ಟು ರೆಸಿಡೆನ್ಸಿ ಬಜಾರಿಗೆ ಬಂದು ವಾಸಮಾಡುತ್ತಿದ್ದೇವೆ. ಈಗ ಇದನ್ನು ನೈಜಾಂರವರಿಗೆ ವಹಿಸುವುದರಿಂದ ನಮಗೆ ಬಹಳ ಹಾನಿಯುಂಟಾಗುತ್ತಾದುದರಿಂದ ಅವರಿಗೆ ಖಂಡಿತವಾಗಿ ವಹಿಸಕೂಡದು, ಒಂದು ವೇಳೆ ವಹಿಸುವುದು ನಿಶ್ಚಯವಾಗಿದ್ದಲ್ಲಿ ನಾವುಗಳು ಬ್ರಿಟಿಷ್ ಆಳ್ವಿಕೆಯಲ್ಲಿರುವ ಬೇರೆ ಪ್ರಾಂತಗಳಿಗಾಗಲಿ, ಪರ ರಾಷ್ಟ್ರಗಳಿಗಾಗಲಿ ಹೋಗಬೇಕಾಗುತ್ತದೆ" ಎಂದು ರೆಸಿಡೆಂಟರಿಗೂ ಅವರ ಮೂಲಕ ಭಾರತಪ್ರಭುತ್ವದವರಿಗೂ ವಿನಂತಿಪತ್ರಗಳನ್ನು ಬರೆದುಕೊಂಡಿರುವರಂತೆ.

ಭಾರತೀಯರು ಸಂಪೂರ್ಣ ಸ್ವಾತಂತ್ರ್ಯ ಕೋರುವುದು

"ಈಗ ಐರ್ಲೆಂಡಿನವರು ಇಂಗ್ಲೆಂಡಿನಿಂದ ಬಿಡಿಸಿಕೊಂಡು ಹೋಗಲು ಕೋರುತ್ತಿರುವುದರಿಂದ ಇಂಡ್ಯಾದಲ್ಲಿ ಸಂಪೂರ್ಣ ಸ್ವಾತಂತ್ರ್ಯವಾದಿಗಳಿಗೆ ಪುನಃ ಉತ್ಸಹವುಂಟಾಗುತ್ತಿದೆ. ಐರ್ಲೆಂಡು ಈಗ ಕೋರುತ್ತಿರುವ ಸ್ವಾತಂತ್ರ್ಯವನ್ನು ಭಾರತ ದೇಶವು ಕೆಲ ಕಾಲಾನಂತರ ಕೋರುವುದು ಎಂದು ಭಾರತ ಸ್ವಾತಂತ್ರ್ಯವಾದಿಗಳು ಹೇಳುತ್ತಿದ್ದಾರೆ" ಎಂಬದಾಗಿ ಲೈಂಡನ್ ಟೈಂಸ್ ಪತ್ರಿಕೆಗೆ ಇಂಡ್ಯಾದ ಸುದ್ದಿಗಾರನು ಬರೆದಿದ್ದನು. ಇದರ ಮೇಲೆ ಕನ್ಸರ್ವೆಟಿವ್ ಪಕ್ಷಕ್ಕೆ ಸೇರಿದ ಲಾರ್ಡ್ ಸಾಲಿಸ್ಬರಿಯವರು "ನಾವು ಮನಃಪೂರ್ವಕವಾಗಿ ಏರ್ಪಡಿಸುವಂತೆಯೂ, ಭಾರತೀಯರು ಮನಃಪೂರ್ವಕವಾಗಿ ಅಂಗೀಕರಿಸುವಂತೆಯೂ ರಕ್ಷಣೆಗಳು ಶಾಸನವಾಗಿರದಿದ್ದರೆ ನಿಷ್ಫಲವಾಗುವುವು. ಅಲ್ಲದೆ ಚಕ್ರವರ್ತಿಯವರ ಪದವಿಯೂ, ಚಕ್ರವರ್ತಿಯವರಲ್ಲಿರುವ ರಾಜಭಕ್ತಿಯೂ ಸುಸ್ಥಿರವಾಗಿರಬೇಕು. ಇವುಗಳಿಲ್ಲದಿದ್ದರೆ ಸಾಮ್ರಾಜ್ಯ ನಿರ್ಮಾಣವು ನಿಷ್ಫಲವಾಗುವುದು" ಎಂದು ಅದೇ ಪತ್ರಿಕೆಯಲ್ಲಿ ಬರೆದಿರುತ್ತಾರೆ. ಈಗ ಇಂಡ್ಯಾಕ್ಕೆ ಬಂದಿರುವ ಡೇಲಿ ಎಕ್ಸ್‌ಪ್ರೆಸ್ ಪತ್ರಿಕೆಯ ಸುದ್ದಿಗಾರನು ಮೇಲ್ಕಂಡ ಲೇಖಗಳನ್ನು ಬಲಪಡಿಸಲು "ಬಂಗಾಳದಲ್ಲಿ ಅರಾಜಕರು ರಹಸ್ಯವಾಗಿ ಕೊಲೆಗಳನ್ನು ಮಾಡುತ್ತಿದ್ದಾರೆ. ಶ್ರೀಮಂತರಾದ ಯುವಕರನ್ನು ಪ್ರೋತ್ಸಾಹಿಸಿ ಅವರ ಕೈಯಿಂದ ಹತ್ಯೆಗಳನ್ನು ಮಾಡಿಸುತ್ತಿರುವರು ಮತ್ತು ಯುವತಿಯರಿಗೆ ಕೊಲೆ ಮಾಡುವಂತೆ ಬೋಧಿಸುತ್ತಿರುವರು. ಬಂಗಾಳದಲ್ಲಿರುವ ಬ್ರಿಟಿಷಿನವರು ತಮ್ಮ ಪ್ರಾಣರಕ್ಷಣೆಗಾಗಿ ರಾತ್ರಿವೇಳೆ ಬಂಗಲೆಯನ್ನು ಕಾಯಲು ಸೇವಕರನ್ನು ನಿಯಮಿಸುವುದು, ಮುಳ್ಳು ತಂತಿಯ ಬೇಲಿಯನ್ನು ಹಾಕಿಸುವುದು ಮೊದಲಾದ ಪ್ರಯತ್ನಗಳನ್ನು ಮಾಡುತ್ತಿರುವರು" ಎಂದು ಪತ್ರಿಕೆಗೆ ಬರೆದಿರುತ್ತಾನೆ.

ನಿಜಾಮರ ಹೊಸ ಉಪಾಯ

ಕೈಬಿಟ್ಟುಹೋಗಿರುವ ಬೀರಾರು ಪ್ರಾಂತವನ್ನು ಹಿಂದಿರುಗಿ ಪಡೆಯಲು ಹೈದರಾಬಾದು ಸಂಸ್ಥಾನಾಧೀಶರಾದ ನಿಜಾಂರವರು ಬಹಳ ಸಾಹಸಪಡುತ್ತಿರುವರಷ್ಟೆ. ಇದಕ್ಕಾಗಿ ನಿಜಾಮರು 25 ಕೋಟಿ ರೂಪಾಯಿಗಳನ್ನು ಭಾರತ ಪ್ರಭುತ್ವದವರಿಗೆ ಕೊಡಲೊಪ್ಪಿರುವುದಾಗಿ ಒಂದು ವದಂತಿ ಹುಟ್ಟಿದ್ದಿತು. ಬೀರಾರನ್ನು ಭಾರತ ಪ್ರಭುತ್ವದವರು ಶಾಶ್ವತ ಕೌಲಿನಿಂದ ತೆಗೆದುಕೊಂಡು ನಿಜಾಮರಿಗೆ 25 ಲಕ್ಷ ರೂಪಾಯಿಗಳನ್ನು ಕೊಡುತ್ತಿರುವರು. ಇದನ್ನು ಹಿಂದಿರುಗಿ ಪಡೆಯಲು ನಿಜಾಮರು ಪ್ರಯತ್ನಿಸಿರುವುದರ ಮೇಲೆ ಇದಕ್ಕೆ ತಕ್ಕ ಪ್ರತಿಫಲವನ್ನು ಕೊಡಬೇಕೆಂದು ಭಾರತ ಪ್ರಭುತ್ವದವರು ಕೋರಿರುವರು. ಬೀರಾರನ್ನು ಹಿಂದಿರುಗಿ ಪಡೆಯುವ ವಿಚಾರದಲ್ಲಿ ನಿಜಾಮರವರ ಮಂತ್ರಿಗಳ ಅಭಿಪ್ರಾಯವು ಬದಲಾಯಿಸಿದೆ. ಹಿಂದಕ್ಕೆ ಪಡೆಯುವಲ್ಲಿ ಮುತ್ಸದ್ದರ ಮಾಡಬಾರದೆಂದು ನಿಜಾಮರವರಿಗೆ ಹಿತಬೋಧೆಯನ್ನು ಮಾಡುತ್ತಿರುವರು. ಇದಕ್ಕೆ ಭಾರತ ಪ್ರಭುತ್ವವು ಕೋರುವ 25 ಕೋಟಿ ರೂಪಾಯು ಬಹಳ ಹೆಚ್ಚೆಂಬುದೂ, ದೇಶಾಭಿಮಾನಿ ಪ್ರಜೆಗಳಿಗೆ ರಾಜಕೀಯ ನ್ಯಾಯವು ವಿಶೇಷವಾಗಿರುವುದರಿಂದ ಅವರು ಹೈದರಾಬಾದಿನವರೊಡನೆ ಸೇರುವುದಾದರೆ ನಿಜಾಂ ಪ್ರಭುತ್ವಕ್ಕೆ ಶ್ರೇಯಸ್ಸುಂಟಾಗದೆ ಹೋಗಬಹುದೆಂಬುದೂ ಕಾರಣಗಳೆಂದೂಹಿಸಲ್ಪಟ್ಟಿದೆ. ಅದುದರಿಂದ ನಿಜಾಮರವರು ಬೀರಾರನ್ನು ಮಧ್ಯಪ್ರಾಂತಗಳಿಂದ ಬೇರೆ ಮಾಡಿ ಅದಕ್ಕೆ ಗೌರ್ನರನ್ನು ನಿಯಮಿಸುವ ಅಧಿಕಾರವನ್ನು ತಮಗೆ ಕೊಡಬೇಕೆಂದೂ, ಕೌಲು ಪ್ರಕಾರ ತಮಗೆ ಸಲ್ಲುವ 25 ಲಕ್ಷ ರೂ. ಗಳನ್ನು 30 ಲಕ್ಷಕ್ಕೆ ಹೆಚ್ಚಿಸಬೇಕೆಂದೂ ಕೋರಿರುತ್ತಾರಂತೆ. ಅಖಿಲಭಾರತ ರಾಷ್ಟ್ರಕೂಟದಲ್ಲಿ ಬೀರಾರು ಪ್ರತ್ಯೇಕ ರಾಷ್ಟ್ರವಾಗಿರಲು ನಿಜಾಮರೊಪ್ಪಿರುವರಂತೆ. ಇಂಡ್ಯಾ ಪ್ರಭುತ್ವದವರು ಮೇಲೆ ಹೇಳಿದ ಎರಡು ವಿಷಯಗಳನ್ನೂ ಅನುಮೋದಿಸುತ್ತಾರೆಂದು ಭಾವಿಸಲ್ಪಟ್ಟಿದೆ. ಆದರೆ ಬೀರಾರು ಬೇರ್ಪಡಿಸಲ್ಪಟ್ಟರೆ ಪರಿಪಾಲನಾ ಯಂತ್ರವ್ಯಯವನ್ನು ಅದು ನಿರ್ವಹಿಸಬಲ್ಲುದೇ ಎಂದು ಕೆಲರು ಸಂಶಯಪಡುತ್ತಿರುವರು.

ಒಳದೇಶದ ವೃತ್ತಾಂತಗಳು

ಉದಕಮಂಡಲಕ್ಕೆ ಮಿತಪರಿವಾರದೊಡನೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಗುರುವಾರ ಸಾಯಂಕಾಲ ರಾಜಧಾನಿಗೆ ಚಿತ್ತೈಸಿತು.

ಮೊನ್ನೆಯ ರಾತ್ರಿ ರಾಜಧಾನಿಯಲ್ಲೂ ನೆರೆಯ ಗ್ರಾಮಗಳಲ್ಲೂ ಒಳ್ಳೆಯ ಮಳೆಯಾಗಿ ಕೆರೆ ಕಟ್ಟೆಗಳಿಗೆ ತಕ್ಕ ಮಟ್ಟಿಗೆ ನೀರು ಬಂದಿದೆ. ರೈತರುಗಳು ಬಹಳ ಸಡಗರದಿಂದ ಜೋಳವನ್ನು ಬಿತ್ತಲುಪಕ್ರಮಿಸಿರುತ್ತಾರೆ.

ಮೈಸೂರು ರೈಲ್ವೆಗಳ ಸೀನಿಯರ್ ಎಕ್ಸಿಕ್ಯುಟಿವ್ ಇಂಜನೀಯರ್ ಮ|| ಆರ್. ಎನ್. ಮಿರ್ಜಯವರು 4 ತಿಂಗಳ ಪ್ರಿವಿಲೇಜ್ ರಜವನ್ನೂ, 2 ತಿಂಗಳ ಫರ್ಲೋ ರಜವನ್ನೂ ಕಳೆದ ಮಾರ್ಚಿ ತಾ|| 28 ರಿಂದ ಪಡೆದುಕೊಂಡಿರುತ್ತಾರೆ.

ಫಾರೆಸ್ಟು ಕನ್ಸರ್ವೇಟರಾಗಿದ್ದು ಉದ್ಯೋಗದಿಂದ ನಿವೃತ್ತರಾಗಿರುವ ಮ|| ಪಿ. ಎಸ್. ಗೋವಿಂದರಾಯರು ಕೆಲದಿವಸಗಳಿಂದ ಅಸ್ವಸ್ಥರಾಗಿರುವರು. ಶ್ರೀಮನ್ಮಹಾರಾಜರವರು ಮ|| ರಾಯರ ಮನೆಗೆ ಚಿತ್ತೈಸಿ ಅವರ ಆರೋಗ್ಯವನ್ನು ವಿಚಾರಿಸಿಕೊಂಡು ದಯಮಾಡಿಸಿದುದಾಗಿ ಕೇಳುತ್ತೇವೆ.

ಮೈಸೂರು ಪ್ರಭುತ್ವದಿಂದ ಪ್ರಕಟವಾಗಿರುವ ರಜಾ ದಿವಸಗಳ ಪಟ್ಟಿಯಲ್ಲಿ ಪ್ರತಿ ತಿಂಗಳ 3ನೆಯ ಶನಿವಾರವು ಸಂಪೂರ್ಣ ರಜಾ ದಿನವಾಗಿ ಸೇರಿಸಲ್ಪಟ್ಟು ದಸರಾ ರಜಾಕಾಲವು 5 ದಿವಸಗಳಿಗೆ ಅಂದರೆ ಸರಸ್ವತಿ ಆವಾಹನೆಯಿಂದ ವಿಜಯ ದಶಮಿವರೆಗೆ (ಉಭಯದಿನಗಳೂ ಸೇರಿ) ಕಡಿಮೆ ಮಾಡಲ್ಪಟ್ಟಿರುತ್ತದೆ.

ಬೆಂಗಳೂರು ಹಿಂದು ಸೋಪು ಫ್ಯಾಕ್ಟರಿಯ ಯಜಮಾನರಾದ ಮ|| ಬಿ. ಎಂ. ಶ್ರೀನಿವಾಸಯ್ಯನವರು ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ರೇಡಿಯಾಲಜಿ ಮತ್ತು ಎಲಕ್ಟ್ರೊಥೆರಪಿ ಎಂಬ ಯಂತ್ರಾಲಯವನ್ನು ತಮ್ಮ ಹೆಸರಿನ ಮೇಲೆ ಕಟ್ಟಲು 20,000 ರೂಪಾಯಿಗಳನ್ನು ಪ್ರಭುತ್ವದವರ ವಶಕ್ಕೆ ಕೊಟ್ಟಿರುವರು.

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷೆಗಳಲ್ಲಿ ಎರಡನೆಯ ಭಾಷೆಗಳಾಗಿ ಗೊತ್ತುಮಾಡಲ್ಪಟ್ಟಿರುವ ಕನ್ನಡ ಮತ್ತು ಉರ್ದುಗಳ ಜತೆಗೆ ಸಂಸ್ಕೃತ, ಅರಾಬಿಕ್, ಪರ್ಷ್ಯನ್, ತೆಲಗು ಮತ್ತು ತಮಿಳು ಭಾಷೆಗಳು ಸೇರಿಸಲ್ಪಡಬೇಕಾಗಿ ಕಳೆದ ತಾ|| 31 ರಲ್ಲಿ ರಾಜಧಾನಿಯೊಳಗೆ ನಡೆದ ಸೆನೇಟು ಮೀಟಿಂಗಿನಲ್ಲಿ ಬಹುಮತದಿಂದ ನಿರ್ಧರಿಸಲ್ಪಟ್ಟಿತು.

ಕಳೆದ ಮಾರ್ಚಿ ತಾ|| 24ಕ್ಕೆ ಅಂತ್ಯವಾದ ಒಂದು ವಾರದಲ್ಲಿ ಮೈಸೂರು ಸಂಸ್ಥಾನದಲ್ಲೆಲ್ಲ ಕಾಲರ ಮತ್ತು ರಿಲಾಪ್ಸಿಂಗ್ ಜ್ವರಗಳಿಂದ ಮರಣವಾಗಲಿಲ್ಲ. ಪ್ಲೇಗು ರೋಗವು 54 ಜನರಿಗೆ ತಗುಲಿ 24 ಮರಣಗಳಾದುವು. ರಾಜಧಾನಿಯಲ್ಲಿ ಈ ರೋಗಬಾಧೆಯೇನೂ ಇರಲಿಲ್ಲ. ಬೆಂಗಳೂರು ಸಿಟಿಯಲ್ಲಿ ಒಟ್ಟು 81 ಮರಣಗಳಾದುವು ಎಂದು ಆರೋಗ್ಯಶಾಖೆಯ ಡೈರೆಕ್ಟರ ವರದಿಯಿಂದ ಗೊತ್ತಾಗುತ್ತದೆ.

ಮೈಸೂರು ಸೀಮೆಯಲ್ಲಿ ಪ್ರಜಾಮಿತ್ರಮಂಡಲಿಯು ಕೈ|| ಬಸವಯ್ಯನವರ ಕಾಲದಲ್ಲೇರ್ಪಟ್ಟಿತು. ಅದರ ಮೇಲೆ 2 ವರ್ಷಗಳ ಕೆಳಗೆ ಪ್ರಜಾಪಕ್ಷವು ಹುಟ್ಟಿತು. ಸ್ವತಂತ್ರಪಕ್ಷ ಮತ್ತು ಸರ್ವಪಕ್ಷಗಳು ನೂತನವಾಗಿ ಉದ್ಭವಿಸಿ ಸರ್ವಪಕ್ಷದ ಪ್ರಥಮಾಧಿವೇಶನವು ಇದೇ ತಾ|| 10 ನೆಯ ಭಾನುವಾರ ಶಿವಮೊಗ್ಗಿ ಟವನ್ ಹಾಲಿನೊಳಗೆ ಹಾಸನದ ಡಿ|| ಬೋರ್ಡು ಪ್ರೆಸಿಡೆಂಟರು ಮ|| ರಾ|| ಹೆಚ್. ಬಿ. ಗುಂಡಪ್ಪಗೌಡ, ಬಿ.ಎ., ಎಲ್.ಎಲ್.ಬಿ., ಎಂ.ಎಲ್.ಸಿ., ಇವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಬೆಂಗಳೂರು ಸೆಂಟ್ ಮಾರ್ಥಾಸು ಆಸ್ಪತ್ರೆಯಿದಿರಿಗೆ ಹೊಸದಾಗಿ ಕಟ್ಟಿಸಲ್ಪಟ್ಟಿರುವ ಅಶ್ವತ್ಥಕಟ್ಟೆಯ ಆರಂಭೋತ್ಸವವು ಕಳೆದ ತಾ|| 29 ರಲ್ಲಿ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರ್ ಮಿ|| ಪಿ.ಹೆಚ್. ಕೃಷ್ಣರಾಯರಿಂದ ನಡೆಸಲ್ಪಟ್ಟಿತು. ಮ|| ರಾಯರು ತಮ್ಮಾರಂಭ ಭಾಷಣದಲ್ಲಿ ಅಶ್ವತ್ಥಕಟ್ಟೆಯ ನಿರ್ಮಾಣದ ಆವಶ್ಯಕತೆಯನ್ನೂ ಅದರ ಮಹಿಮೆಯನ್ನೂ ವಿವರಿಸಿ ಹೇಳಿದರು. ಮ್ಯುನಿಸಿಪಲ್ ಕೌನ್ಸಿಲರ್ ಮ|| ಶಂಕರಪ್ಪಶೆಟ್ಟರು ಈ ಅಶ್ವತ್ಥಕಟ್ಟೆಯ ನಿರ್ಮಾಣ, ಆರಂಭೋತ್ಸವ ಇದೇ ಸಮಯದಲ್ಲಿ ಜರುಗಿಸಿದ 5 ಧರ್ಮಾರ್ಥ ವಿವಾಹಗಳು ಅನ್ನದಾನ ಇತ್ಯಾದಿ ಕಾರ್ಯಗಳಿಗೆ 3000 ರೂ. ಗಳನ್ನು ವ್ಯಯಮಾಡಿ ತಮ್ಮ ದೈವಭಕ್ತಿಯನ್ನೂ ಧರ್ಮಬುದ್ಧಿಯನ್ನೂ ವ್ಯಕ್ತಗೊಳಿಸಿದರು.

ಹೈದರಾಬಾದಿನಲ್ಲಿ ೩೬ ಲಕ್ಷ ಕಂದಾಯ ಮನ್ನಿಸಲ್ಪಟ್ಟಿತು.

ಧಾನ್ಯದ ಬೆಲೆಯು ತಗ್ಗಾಗಿದ್ದ ವೇಳೆಯಲ್ಲಿ ಅನೇಕ ಡಿಸ್ಟ್ರಿಕ್ಟುಗಳೊಳಗೆ ರಿಸೆಟ್ಲಮೆಂಟು ಆಗಿದ್ದಿತು. ಬೆಳೆಯಾಗದಿದ್ದ ಸಂವತ್ಸರಗಳಲ್ಲಿ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಕಂದಾಯವು ಕಡಿಮೆಯಾಗಿಯೇ ಗೊತ್ತುಮಾಡಲ್ಪಟ್ಟಿದ್ದಿತು. ಆದುದರಿಂದ ಇನ್ನೂ ರೈತರಿಗೆ ಕಂದಾಯವನ್ನು ಕಡಿಮೆಮಾಡಬೇಕಾದ ಅಗತ್ಯವಿಲ್ಲವೆಂದು ಪ್ರಭುತ್ವದವರು ಭಾವಿಸಿದ್ದುದು ನ್ಯಾಯವಾಗಿದ್ದಿತು. ಆದರೆ ಈವರೆಗೂ ರೈತರಿಗೆ ಕೊಟ್ಟ ರೆಮಿಷನ್ನಿನಿಂದಲೂ, ದೇಶದ ಆರ್ಥಿಕ ದುಸ್ಥಿತಿಯಿಂದಲೂ, ಪ್ರಭುತ್ವದವರಿಗೆ ಕಂದಾಯವು ಕಡಿಮೆಯಾಗಿ ವಸೂಲಾಗಿರುವುದಾದರೂ ಕ್ರಮವಾಗಿ ಕೆಲ ವರ್ಷಗಳಿಂದ ರೈತರು ಪಡುತ್ತಿರುವ ಕಷ್ಟವನ್ನು ಪರಿಹರಿಸಲು ತಕ್ಕ ಸಮಯೊದಗಿರುತ್ತದೆಂದು ಪ್ರಭುತ್ವದವರು ಭಾವಿಸಿ 36 ಲಕ್ಷ ರೂಪಾಯಿಗಳನ್ನು ಮನ್ನಿಸಿರುವುದಾಗಿ ಪ್ರಭುತ್ವದವರು ಪ್ರಕಟಿಸಿರುತ್ತಾರೆ.

ಜಾಹಿರ ನೋಟೀಸು.

ಮುಂಬೈ, ಮದ್ರಾಸು, ಮೈಸೂರು ಇಲಾಖೆಗಳಲ್ಲಿರುವ ಯಾವತ್ತು ಕರ್ನಾಟಕ ನಾಟಕ ಕಂಪನಿ ಮಾಲೀಕರು ಮತ್ತು ಇತರೇ ಜನರಿಗೆ ಈ ನೋಟೀಸು ಮೂಲಕವಾಗಿ ತಿಳಿಸುವದೇನೆಂದರೆ—ನಮ್ಮ ನಾಟಕ ಕಂಪನಿಯ ಮಾಲ್ಕಿ ಹಕ್ಕು ಬಾಧ್ಯತೆಯುಳ್ಳ (1) ಬಿ.ಎ. (2) ಸ್ತ್ರೀ. (3) ಎಲ್‌ಎಲ್.ಬಿ. ಎಂಬ ಹೆಸರಿನ 3 ಸಾಮಾಜಿಕ ನಾಟಕಗಳನ್ನು ಕೆಲವು ಕಂಪನಿಯವರು ನಾಟಕವಾಡುತ್ತಿರುವದಾಗಿ ನಮ್ಮ ನಜರಿಗೆ ಬಂದಿರುತ್ತದೆ. ಕೆಲವರು ಮೇಲೆ ಬರೆದ ಹೆಸರುಗಳನ್ನು ಬದಲುಮಾಡಿಯೂ, ಸ್ವಲ್ಪ ವಿಷಯಾಂತರಮಾಡಿಯೂ, ಕೆಲವರು ಸದರಿ ಹೆಸರುಗಳನ್ನೇ ಕಾಯಂ ಇಟ್ಟು ಆಡುತ್ತಿರುವದಾಗಿ ನಮಗೆ ತಿಳಿಯಬಂದಿರುತ್ತದೆ. ನಮ್ಮ ಹೊರತು ಸದರಿ 3 ನಾಟಕಗಳನ್ನು ಆಡುವ ಹಕ್ಕು ಯಾರಿಗೂ ಯಾವ ರೀತಿಯಿಂದಲೂ ಇರುವದಿಲ್ಲ. ಹೀಗಿದ್ದು ಯಾರಾದರೂ ಸದರಿ ನಾಟಕಗಳನ್ನು ಆಡಿದರೆ, ಪ್ರಯೋಗಮಾಡಿದರೆ ಲುಕ್ಸಾನಿಗೆ ಗುರಿಯಾಗಬೇಕಾದೀತೆಂದು ಈ ನೋಟೀಸಿನ ಮೂಲಕವಾಗಿ ತಿಳಿಯಪಡಿಸಲಾಗಿದೆ.

K. Jatteppa,
ಮಾಲಕ

ಮೊಕ್ಕಾಂ ಗದಗ,
ತಾ|| 12-2-1932.
ಶ್ರೀ ಹಾಲಸಿದ್ಧೇಶ್ವರ ಪ್ರಸಾದಿತ ಲೋಕಸೇವಕ ನಾಟಕಮಂಡಳಿ, ಹಲಗೇರಿ.

[8—5]

ನೋಟೀಸು.

ಶ್ರೀ ವೀರಭದ್ರೇಶ್ವರ ಪ್ರಸಾದಿತ ನಾಟಕಮಂಡಳಿ ಮಾಲಕ ಮರುಳಸಿದ್ದಯ್ಯ ಮೊರಬ ತಾಲೂಕು ಕೂಡ್ಲಿಗಿ ಡಿ|| ಬಳ್ಳಾರಿ ಇವರಿಗೆ ಕೆಳಗೆ ಸಹಿಮಾಡಿದವರ ಕಡೆಯಿಂದಾ ಈ ನೋಟೀಸಿನ ಮೂಲಕವಾಗಿ ತಿಳಿಸುವದೇನೆಂದರೆ—ನೀವು, ನಮ್ಮ ಕಂಪನಿಯ ಹಕ್ಕುಬಾಧ್ಯತೆಯುಳ್ಳ "ಸ್ತ್ರೀ" "ಬಿ. ಎ." ನಾಟಕಗಳನ್ನು ಪ್ರಯೋಗಮಾಡಿ ಆಡುತ್ತಿರುವದಾಗಿ ನಮಗೆ ತಿಳಿದುಬಂದಿದೆ. ಈ ನಾಟಕಗಳನ್ನು ಆಡಲು ನಮ್ಮ ಹೊರ್ತು ಬೇರೆ ಯಾವ ಜನರಿಗೂ ಹಕ್ಕುಬಾಧ್ಯತೆ ಇರುವದಿಲ್ಲ. ನಮ್ಮ ಪರವಾನಿಗಿ ಇಲ್ಲದೆ ನಾಟಕವಾಡಿ ನೀವು ಕಾಯದೇ ವಿರುದ್ಧವಾಗಿ ನಡೆದಿರುತ್ತೀರಿ. ನೀವು ಈ ನೋಟೀಸು ಮುಟ್ಟಿದ 1 ತಿಂಗಳೊಳಗಾಗಿ ನಮಗೆ ಭೆಟ್ಟಿಯಾಗಿ ಸದರಿ ನಾಟಕಗಳನ್ನು ರೂಲ್ಸಿಗೆ ವಿರುದ್ಧವಾಗಿ ಆಡಿದ ಬಗ್ಗೆ ನಾವು ಠರಾಯಿಸಿದಷ್ಟು ರಕಮು ಲುಕ್ಸಾನ ಕೊಟ್ಟು ಹೋಗಬೇಕು. ನೀವು ಇದಕ್ಕೆ ತಪ್ಪಿದರೆ ನಿಮ್ಮ ಮೇಲೆ ಕಾಯದೇ ಪ್ರಕಾರ ಯೋಗ್ಯ ಇಲಾಜ ನಡಿಸುವದರಲ್ಲಿ ಬರುವದು. ಈ ನೋಟೀಸಿನ ಖರ್ಚು ನಿಮ್ಮ ತಲೆಯಮೇಲೆ ಅದೆ, ತಿಳಿಯುವದು.

[8—5]

K. Jatteppa,
ಮಾಲಕ

ಮುಕ್ಕಾಂ ಗದಗ,
ತಾ|| 12-2-1932.
ಶ್ರೀ ಹಾಲಸಿದ್ಧೇಶ್ವರ ಪ್ರಸಾದಿತ ಲೋಕಸೇವಕ ನಾಟಕಮಂಡಳಿ, ಹಲಗೇರಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬ ಅಂಶವನ್ನು ಸಕಲರೂ ತಿಳಿಯತಕ್ಕದು.—ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ನಿಷ್ಪಕ್ಷಪಾತವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟವಾಗಿಯೂ, ಇರಬೇಕೆಂದೂ ಬುಧವಾರ ಗುರುವಾರದೊಳಗೆ ನಮ್ಮ ಕೈಸೇರುವಂತೆ ಕಳುಹಲ್ಪಡಬೇಕೆಂದು, ಈ ನಿಬಂಧನೆಗೆ ವಿರುದ್ಧವಾದ ಲೇಖಗಳು ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದ್ದಾಗ್ಯೂ ಲೇಖಕರು ಲಕ್ಷಿಸದೆ ಲಂಬಿಸಿ ತಮಗೆ ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ ಪುಟಗಟ್ಟಲೆ ಅಸ್ಫುಟವಾಗಿ ಬರೆದು ನಮಗೆ ತ್ರಾಸನ್ನು ಕೊಡುತ್ತಿರುವರೆಂದು ಬರೆಯಲು ಖೇದವಾಗುತ್ತದೆ. ಆದುಕಾರಣ ಇತಃಪರ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಮಸ್ತರೂ ಗಮನಿಸತಕ್ಕದು.—ಸಂ.

ಲಲಿತಕಲಾಸಮಿತಿ ಮೈಸೂರು, ಕಲಾಪ್ರದರ್ಶನ.

ಮೈಸೂರು ಲಲಿತಕಲಾಸಮಿತಿಯ 2 ನೆಯ ಕಲಾಪ್ರದರ್ಶನವು ಎಂದಿನಂತೆ ಈ ವರ್ಷವೂ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ಸಮಯದಲ್ಲಿ (ಜೂನ್ ತಾ|| 12 ರಿಂದ ತಾ|| 20 ರ ವರೆಗೆ) ರಾಜಧಾನಿಯ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆಯಬೇಕೆಂದು ಗೊತ್ತಾಗಿದೆ. ಈ ಪ್ರದರ್ಶನವು ಸಮಗ್ರ ಸಂಸ್ಥಾನಕ್ಕೂ ಅನ್ವಯಿಸುವುದರಿಂದ ಸಂಸ್ಥಾನದ ಬೇರೆ ಬೇರೆ ಕಡೆ ಇರುವ ಸಮಸ್ತ ಕಲೋಪಾಸಕರೂ ಈ ಪ್ರದರ್ಶನದಲ್ಲಿ ಭಾಗಿಗಳಾಗಿ ಪ್ರೋತ್ಸಾಹಿಸಬೇಕೆಂದು ಈ ಮೂಲಕ ಕೋರಿದೆ. ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸುವವರು ಮುಂದಾಗಿ ಗೌರವ ಕಾರ್ಯದರ್ಶಿಗಳಲ್ಲೊಬ್ಬರಾದ ಮ|| ಜಿ. ಶಂಕರ್ ಶೇರಾವ್ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಮೈಸೂರು ಅವರಿಗೆ ಬರೆದು ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳಬಹುದು. ಸೆಕ್ರೆಟರಿ.

ಎಡಿಯೂರು ಶ್ರೀ ಸಿದ್ಧಲಿಂಗೇಶ್ವರ ರಥೋತ್ಸವ.

ತುಮಕೂರು ಡಿ|| ಕುಣಿಗಲ್ ತಾ|| ಎಡಿಯೂರು ಕ್ಷೇತ್ರದಲ್ಲಿ ನೆಲೆಗೊಂಡಿರುವ ಶ್ರೀಮದನಾದಿ ತೋಂಟದ ಸಿದ್ಧಲಿಂಗೇಶ್ವರ ಮಹಾಸ್ವಾಮಿಯವರ ಜಾತ್ರೆಯು ಇದೇ ಎಪ್ರಿಲ್ ತಾ|| 5 ನೆಯ ಮಂಗಳವಾರ ಆರಂಭವಾಗಿ ತಾ|| 12 ನೆಯ ಮಂಗಳವಾರ ಮಹಾರಥೋತ್ಸವ ನಡೆದು ತಾ|| 19 ನೆಯ ಮಂಗಳವಾರ ಮುಕ್ತಾಯವಾಗುವುದು. ಈ ಜಾತ್ರೆಯಲ್ಲಿ ದನಗಳ ಪ್ರದರ್ಶನವೂ ನಡೆದು ಉತ್ತಮವಾದ ರಾಸುಗಳಿಗೆ ಬಹುಮಾನಗಳು ಕೊಡಲ್ಪಡುವುವು. ರೋಗಾದಿಗಳೇನೂ ಇಲ್ಲದೆ ನೀರು ನೆರಳಿನ ಸೌಕರ್ಯವು ಚೆನ್ನಾಗಿರುತ್ತದೆ. ಭಕ್ತಾದಿಗಳಿಗೆ ಸಂತರ್ಪಣೆಗೂ, ವ್ಯಾಪಾರಸ್ಥರು, ನಾಟಕದವರು ಮೊದಲಾದವರಿಗೂ ತಕ್ಕ ಅನುಕೂಲಗಳು ಕಲ್ಪಿಸಲ್ಪಟ್ಟಿರುತ್ತವೆ. ಆದುದರಿಂದ ದೈವಭಕ್ತರುಗಳು ಬಂದು ಸ್ವಾಮಿಯ ಸೇವೆಮಾಡಿ ಕೃತಾರ್ಥರಾಗಬೇಕೆಂದು ಕೋರುತ್ತೇನೆ.

ಕೆ. ಎಸ್. ರುದ್ರಪ್ಪ,
ಧರ್ಮದರ್ಶಿ.

ಸಕಲ ವೀರಶೈವ ಮಹಾಜನರಲ್ಲಿ ವಿಜ್ಞಾಪನೆ.

ಶ್ರೀಯುತ ಹರ್ಡೇಕರ ಮಂಜಪ್ಪನವರು ವೀರಶೈವ ವಿದ್ಯಾಲಯ ಆಲಮಟ್ಟಿ ಇವರ ಸಂಗಡ ಕೆಲವರು ಬಳಿಕೆಮಾಡುತ್ತಿರಲಿಲ್ಲವಾಗಿ, ನಾವು ಧಾರವಾಡಕ್ಕೆ ಶ್ರೀ ಆರವತ್ತುಮೂರು ಪುರಾತನರ ಪೂಜೆಗೆ ಹೋದಾಗ ಕಣ್ಣಾರೆ ಪ್ರತ್ಯಕ್ಷವಾಗಿ ನಮಗೆ ಗೊತ್ತಾಯಿತು. ಆದುದರಿಂದ ಈಗ ಸಮಸ್ತ ವೀರಶೈವರಿಗೆ ತಿಳಿಸುವುದೇನೆಂದರೆ—ಶಕ ೧೮೫೪ ನೆಯ ಮಾರ್ಗಶಿರ ಶುದ್ಧ ೧೫ ದಿವಸ ಶ್ರೀಮದ್ವೀರಲಿಂಗ ಚರಚಕ್ರವರ್ತಿಗಳಾದ ಶ್ರೀಮದ್ರಂಭಾಪುರೀ ಪೀಠದ ಶಾಖಾನುವರ್ತಿಗಳಾದ ದೇವರ ಹಿಪ್ಪರಗಿ ಪರದೇಶೀಮಠದ ಶ್ರೀ ಸಿದ್ಧರಾಮಸ್ವಾಮಿಗಳವರಿಂದ ಆಲಮಟ್ಟಿ ವೀರಶೈವ ವಿದ್ಯಾಲಯದ ಶ್ರೀ ಬಸವಗವಿಯಲ್ಲಿ ಸದರಿ ಹರ್ಡೇಕರ ಮಂಜಪ್ಪನವರಿಗೆ ದೀಕ್ಷೆಯು ಯಥಾವಿಧಿಯಾಗಿ ನೆರವೇರಿಸಲ್ಪಟ್ಟಿದೆ. ಆಕಾಲಕ್ಕೆ ಆಲಮಟ್ಟಿ ಮತ್ತು ತಡವಲಗಿ ಮೊದಲಾದ ಪಟ್ಟಾಧ್ಯಕ್ಷರು ಕೂಡಾ ಹಾಜರಿದ್ದರು. ಕಾರಣ ಸದರಿಯವರ ಸಂಗಡ ಬಳಿಕೆ ಮಾಡುವ ವಿಷಯವಾಗಿ ಯಾವ ಸಂಶಯ ತಳೆಯಕೂಡದಾಗಿ ಸೂಚನೆ.

ಶ್ರೀ ಪಟ್ಟದ ಸ್ವಾಮಿಗಳು ಹಿರೇಮಠ, ಮಲಘಾಣ.

63 ಪುರಾತನರ (ಪೂಜಾ) ಸ್ಮಾರಕೋತ್ಸವ ಕ್ರಮವೆಂತು ?

ವೀರಶೈವರಲ್ಲಿ 63 ಮಂದಿ ಪುರಾತನರು ಬಹು ಶ್ರೇಷ್ಠವಾದ ಪೂಜ್ಯಸ್ಥಾನವನ್ನೈದಿರುವರು. ಶ್ರೀಮನ್ನಿಜಗುಣ ಶಿವಯೋಗಿಗಳವರು 63 ಪುರಾತನರ ತ್ರಿವಿಧಿಯನ್ನು ರಚಿಸಿ ಬಹುವಿಧವಾಗಿ ಸ್ತೋತ್ರಮಾಡಿರುವರು. "63 ಸಂಖ್ಯೆಯು" ವೀರಶೈವರಲ್ಲಿ ಬಹು ಗಣ್ಯಸ್ಥಾನವನ್ನು ಹೊಂದಿರುವದು. 63 ಪುರಾತನರ ಸ್ಮಾರಕಕ್ಕಾಗಿಯೇ ವೀರಶೈವರೆಲ್ಲರೂ 63 ಎಳೆಯ ಶಿವಧಾರವನ್ನು ರಚಿಸಿ ಧರಿಸುತ್ತಿರುವದು ಪ್ರಸಿದ್ಧವಾಗಿರುತ್ತದೆ. ಇದಕ್ಕೂ ಹೆಚ್ಚಿನ ವೈಭವ ಸ್ಮಾರಕವನ್ನು ನಡೆಯಿಸಲು ಕೆಲವು ಮಹನೀಯರು 63 ಮಂಟಪಗಳನ್ನೇರ್ಪಡಿಸಿ ಅವರ (ಪುರಾತನರ) ಹೆಸರಿನ ಸ್ಥಾನದಲ್ಲಿ 63 ಮಂದಿ ಸಂಸಾರರಹಿತರಾದ ಮೂರ್ತಿಗಳನ್ನು ಅಲಂಕರಿಸಿ ಪೂಜಿಸುವ ಏರ್ಪಾಟು ನಡೆಯಿಸಿರುವರು. ಆದರೆ ಈ ಪೂಜಾವಿಧಾನವು ಸಕ್ರಮವಾದದ್ದೆಂದು ನಂಬಲಿಕ್ಕೆ ಬರುವದಿಲ್ಲ. ಏಕೆಂದರೆ, ಈ 63 ಮಂದಿ ಪುರಾತನರೆಲ್ಲರೂ ಗೃಹಸ್ಥಾಶ್ರಮಿಗಳು. ಇಂತಹ ಗೃಹಸ್ಥಾಶ್ರಮಿಗಳ ಸ್ಥಾನಕ್ಕೆ ಬ್ರಹ್ಮಚರ್ಯಾದಿ ಉಳಿದ ಸ್ಥಳದವರು ಬರಲು ಕಾರಣವೇನಿರಬಹುದು ? ಈ ಪುರಾತನರೆಲ್ಲರೂ ಹೆಂಡರು ಮಕ್ಕಳುಗಳುಳ್ಳವರು. ಈರೀತಿ ಇರುವಾಗ ಹೆಂಡರು ಮಕ್ಕಳು ರಹಿತರಾದ ಆಶ್ರಮಿಗಳು ಸದರಿ ಪುರಾತನರ ಸ್ಥಾನವನ್ನು ಅಪೇಕ್ಷಿಸಲು ಅವ ಕಾರಣವಿರಬಹುದು? ಈ ಕಾರಣವನ್ನು ಸಮಂಜಸವಾಗಿ ತಿಳಿಸಲು ಕೋರುತ್ತೇನೆ. ಗೃಹಸ್ಥಾಶ್ರಮದ ಪೂಜ್ಯರನ್ನೇ ಮಂಟಪಗಳಲ್ಲಿ ಅಲಂಕರಿಸಿ ಪೂಜಿಸುವುದೇ ವಿಹಿತವಾದ ಮಾರ್ಗವೆಂದು ನನ್ನ ಅಭಿಪ್ರಾಯವಿದೆ.

ಸಿದ್ಧಗಿರಿ ಸಂಸ್ಥಾನ ನಿಷ್ಠಾತ್ ವಿ. ಎಂ. ಕಾಡಯ್ಯ.

ಮಠಸ್ಥಾಪನೆ.

ಇದೇ ಪ್ರಜೋತ್ಪತ್ತಿನಾಮಸಂವತ್ಸರ ಫಾಲ್ಗುಣ ಶು|| ೭ ಸೋಮವಾರ ಟಿ. ನರಸೀಪುರ ತಾಲ್ಲೂಕು ಯಾಕನೂರು ಗ್ರಾಮದ ಪಟೇಲ್ ಮಲ್ಲಪ್ಪನವರು ಗೌಡಿಕೆ ಪುಟ್ಟಬಸಪ್ಪನವರು ಮೊದಲಾದ ವೀರಶೈವ ಪ್ರಮುಖರು ವಾಟಾಳು ಸೂರ್ಯಸಿಂಹಾಸನಾಧೀಶ್ವರರಾದ ಪಟ್ಟದ ವೇ|| ಬ್ರ|| ಶ್ರೀ|| ಬಸವಲಿಂಗಸ್ವಾಮಿಗಳವರನ್ನು ಉತ್ಸವಪೂರ್ವಕವಾಗಿ ತಮ್ಮ ಗ್ರಾಮಕ್ಕೆ ಬಿಜಮಾಡಿಸಿಕೊಂಡು ಹೊಸದಾಗಿ ಕಟ್ಟಿಸಿರುವ ಮಠದ ಲಿಂಗಮುದ್ರೆ ಕಲ್ಲುಸ್ಥಾಪನೆಯನ್ನೂ 7-8 ವಟುಗಳ ದೀಕ್ಷೆಯನ್ನೂ 3 ಧರ್ಮಾರ್ಥ ವಿವಾಹಗಳನ್ನೂ ಶ್ರೀಯವರ ಮುಖೇನ ಷಟ್ಸ್ಥಲಶಿವಮತವಾಗಿಯೂ ವೇದಾಗಮಕ್ಕನುಸಾರವಾಗಿಯೂ ನೆರವೇರಿಸಿ ನೆರೆದಿದ್ದ ಸಹಸ್ರಾರು ಭಕ್ತಮಾಹೇಶ್ವರರನ್ನು ಗಣಾರಾಧನೆಯಿಂದ ತೃಪ್ತಿಗೊಳಿಸಿದರು. ತರುವಾಯ ಎಲ್ಲಾ ವೀರಶೈವರೂ ಸಭೆಸೇರಿ ವಾಟಾಳು ಶ್ರೀಯವರನ್ನೇ ಅಧ್ಯಕ್ಷರನ್ನಾಗಿ ಚುನಾಯಿಸಿದರು. ಅಧ್ಯಕ್ಷರು ಕೆಲವು ಮತಸಾಧಾರಣಾ ವಿಷಯವಾಗಿ ತಿಳಿಸಿದಮೇಲೆ ನಂಜನಗೂಡು ಹೆಚ್. ಜಿ. ಮಹಾದೇವಪ್ಪನವರು ಧೀಕ್ಷಾಸಂಸ್ಕಾರ ಮತ್ತು ಆಚಾರವಿಚಾರವಾಗಿಯೂ ಗುರೂಪದೇಶವನ್ನು ಹೊಂದುವ ವಿಚಾರವಾಗಿಯೂ ಸರ್ವರಿಗೂ ಚೆನ್ನಾಗಿ ತಿಳಿಯುವಂತೆ ಉಪನ್ಯಾಸಮಾಡಿದರು. ಅನಂತರ ಶ್ರೀಯವರ ಸಮೇತ ಸಭಾ ಫೋಟೋ ತೆಗೆಯಲ್ಪಟ್ಟಿತು. ಇದೇ ರಾತ್ರಿ ಶ್ರೀಯವರ ಉತ್ಸವವು ಅತಿವಿಜೃಂಭಣೆಯಿಂದ ನಡೆದು ಮಠವನ್ನು ತಲುಪಿದ ಮೇಲೆ ಶ್ರೀಯವರು ನೆರೆದಿದ್ದ ಸಭಾಸದರಿಗೂ ನಮ್ಮನ್ನಾಳುವ ಮಹಾಪ್ರಭುಗಳವರಿಗೂ ಆಶೀರ್ವಾದಮಾಡಿ ವೀರಶೈವ ಮಠೋದ್ಧಾರಕರಾದ ಕೈ|| ಯ|| ವೀರಸಂಗಪ್ಪ ಮಹನೀಯರ ಸ್ಮಾರಕಕ್ಕಾಗಿ 1 ರೂ. ದಕ್ಷಿಣೆಸಮೇತ ಅಗ್ರತಾಂಬೂಲವು ಹೆಚ್. ಜಿ. ಮಹಾದೇವಪ್ಪನವರ ವಶಕ್ಕೆ ದಯಪಾಲಿಸಿ ಜಯಘೋಷದೊಡನೆ ಸಭಾಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

[ಮೇಲ್ಕಂಡ 1 ರೂ. ಅನ್ನು ಮ|| ಹೆಚ್. ಜಿ. ಮಹಾದೇವಪ್ಪನವರ ಮೂಲಕ ಸ್ವೀಕರಿಸಿದೆ.—ಸಂ.]

ವಾರ್ಷಿಕೋತ್ಸವವು.

ಅರಸೀಕೆರೆ ತಾ|| ಹಾರನಹಳ್ಳಿ ಶ್ರೀ ಕೋಡೀಮಠದಲ್ಲಿ ಕಳೆದ ತಾ|| 23, 24 ಮತ್ತು 25 ರಲ್ಲಿ ಪದ್ಧತಿ ಪ್ರಕಾರ ಫಾಲ್ಗುಣಮಾಸದ ಪೌರ್ಣಮಿ ಸೇವಾಕಾರ್ಯವು ಚಿತ್ರನಕೆರೆ ಶಿವಲಿಂಗಪ್ಪನವರ ಭಕ್ತಿಯಿಂದ ಬಹಳ ವೈಭವದೊಡನೆ ನಡೆಯಿತು. ಈ ಕಾರ್ಯಕ್ಕೆ ಸಾಗರದ ತಾಲ್ಲೂಕು ಕೆಳದಿ ಸಂಸ್ಥಾನ ಶ್ರೀ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರೂ, ಸಕ್ಕರಾಯಪಟ್ಟಣದ ಶ್ರೀ ಸದಾಶಿವ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರೂ ದಯಮಾಡಿಸಿದ್ದರು. ಅಲ್ಲದೆ ಅನೇಕ ಕಡೆಗಳಿಂದ ಸಾವಿರಾರು ಪ್ರಜೆಗಳು ಬಂದಿದ್ದರು. ತಾ|| 25 ನೇ ಶುಕ್ರವಾರ ಬೆಳಿಗ್ಗೆ 10 ಘಂಟೆಗೆ ಸ್ವಾಮಿಯ ಪಲ್ಲಕ್ಕಿ ಉತ್ಸವವು ಅನೇಕ ವಾದ್ಯವೈಭವಗಳೊಡನೆಯೂ ಭಕ್ತಸಮೂಹದ ಜಯಘೋಷದೊಡನೆಯೂ ಹೊರಟು ಶ್ರೀಮಠದ ಸುತ್ತಲೂ ಬಂದು ಮುಂಭಾಗದ ಮಂಟಪದಲ್ಲಿ ಬಿಜಯಂಗೈಸಿ ಭಕ್ತಾದಿಗಳ ಹೆಚ್ಚಿನಮಸ್ಕಾರ, ಗುಗ್ಗುಳಸೇವಾ ವಗೈರೆ ಸೇವೆಗಳು ನಡೆದು ಪರಿಸಮಾಪ್ತಿಯಾಯಿತು. ಅನಂತರ ಸೇರಿದ್ದ ಪ್ರಜೆಗಳಿಗೆಲ್ಲಾ ಗಣಾರಾಧನಾ ಸಮಾರಂಭವು ರಾತ್ರಿ 12 ಘಂಟೆಯವರಿವಿಗೆ ತೃಪ್ತಿಕರವಾಗಿ ನಡೆಯಿತು. ಈ ಮಧ್ಯೆ, ಸಾಯಂಕಾಲ 6 ಘಂಟೆಗೆ ಸಭೆ ಸೇರಿ ಚನ್ನಬಸವೇಶ್ವರ ಪುರಾಣಶ್ರವಣವು ಹಾರನಹಳ್ಳಿ ಭದ್ರಪ್ಪನವರಿಂದ ನಡೆಸಲ್ಪಟ್ಟ ಮೇಲೆ ಕೆಳದಿ ಸಂಸ್ಥಾನ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರು ಗುರುಸೇವಾ ವಿಚಾರವಾಗಿಯೂ, ಸಕ್ಕರಾಯಪಟ್ಟಣದ ಶ್ರೀಗಳವರು ಗುರುದೇವತಾಭಕ್ತಿ, ಪುರಾಣಶ್ರವಣ, ಶ್ವೇತರಾಜನ ಕಥಾವಿಚಾರವಾಗಿಯೂ ಅಸ್ಖಲಿತವಾಣಿಯಿಂದ ಭಕ್ತಾದಿಗಳ ಮನಸ್ಸಿನ ಮೇಲೆ ತುಂಬಾ ಪರಿಣಾಮವಾಗುವಂತೆ ಭಾಷಣಗಳನ್ನು ಮಾಡಿದರು. ಅನಂತರ 9 ಘಂಟೆಗೆ ಶ್ರೀ ಕರ್ತೃಗದ್ದುಗೆಗೆ ಮಹಾಮಂಗಳಾರತಿಯು ಆನಡೆದು ಮಹಾಸ್ವಾಮಿಗೆ ಭಕ್ತಾದಿಗಳಿಂದ ಹಣ್ಣು, ಕಾಯಿ, ಕಾಣಿಕೆಗಳು ಸಮರ್ಪಿಸಲ್ಪಟ್ಟು ಶ್ರೀ ಶಿವಲಿಂಗಸ್ವಾಮಿಗಳವರ ಜಯಘೋಷದಿಂದಲೂ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದಲೂ ಸಭಾ ವಿಸರ್ಜಿಸಲ್ಪಟ್ಟಿತು.

ಓರ್ವ ಉತ್ಸವಭಾಗಿ.

ಭಯಂಕರ ಪ್ರಾಣಿವಧೆಯು ನಿಂತಿತು.

ದಾವಣಗೆರೆಯಲ್ಲಿ 2 ವರ್ಷಕ್ಕೊಂದುಸಾರಿ ಶ್ರೀ ದುರ್ಗಮ್ಮನ ಜಾತ್ರೆಯು ನಡೆದು ಅನೇಕ ಕೋಣಗಳೂ ಅಸಂಖ್ಯಾತ ಕುರಿಗಳೂ ವಧಿಸಲ್ಪಡುತ್ತಿದ್ದುವು. ಈ ಭಯಂಕರವಾದ ಹಿಂಸೆಯನ್ನು ತಪ್ಪಿಸಬೇಕೆಂದು ದಾವಣಗೆರೆ ಪ್ರಾಣಿದಯಾ ಸಂಘದವರು ಬಹಳವಾಗಿ ಪ್ರಯತ್ನಿಸುತ್ತಿದ್ದರು. ಇವರ ಪ್ರಯತ್ನದಿಂದ ವಧೆಯು ಸ್ವಲ್ಪಮಟ್ಟಿಗೆ ಕಡಿಮೆಯಾಗಿದ್ದರೂ ಸಂಪೂರ್ಣವಾಗಿ ನಿಂತಿರಲಿಲ್ಲ. ಆದರೂ ನಿರುತ್ಸಾಹಿಗಳಾಗದೆ ಪ್ರಯತ್ನಿಸುತ್ತಾ ಬಂದುದರಿಂದ ಅನೇಕ ಜನಗಳು ಇವರ ಬೋಧನೆಗೆ ಒಳಗಾಗಿ ಈ ವರ್ಷ ಅಂದರೆ 1932 ನೆಯ ಮಾರ್ಚಿ 15 ನೇ ಮಂಗಳವಾರ ನಡೆದ ಜಾತ್ರೆಯಲ್ಲಿ ಪಟ್ಟದಕೋಣನ ವಿನಃ ಯಾವ ಪ್ರಾಣಿಯನ್ನೂ ಕೊಲ್ಲಲಿಲ್ಲ. ಈ ಹಿಂದೆ ಭಯಂಕರ ಹಿಂಸೆಯು ನಡೆಯುತ್ತಿದ್ದ ಕಾಲದಲ್ಲಿ ಉತ್ತಮ ವರ್ಣದ ಒಬ್ಬರಾದರೂ ಆ ದೇವಸ್ಥಾನದ ಬಳಿ ಸುಳಿಯುತ್ತಿರಲಿಲ್ಲ. ಈ ಸಾರಿಯಾದರೋ ಪ್ರಾಣಿವಧೆಗೆ ಅವಕಾಶವಿರಲಿಲ್ಲವಾದುದರಿಂದ ಉತ್ತಮ ವರ್ಣದವರು ಸಹ ದೇವಸ್ಥಾನದ ಬಳಿ ಹಾಜರಿದ್ದು ಹಿಂಸೆಯು ನಿಂತುದರಿಂದ ತಮಗುಂಟಾದ ಆನಂದವನ್ನು ವ್ಯಕ್ತಗೊಳಿಸುತ್ತಿದ್ದರು. ಅನೇಕರು ಪ್ರಾಣಿದಯಾಸಂಘದವರು ನೆಟ್ಟ ಬೀಜವು ಫಲಕಾರಿಯಾಯಿತೆಂದು ಸಂತೋಷಚಿತ್ತರಾಗಿದ್ದರು. ದೇವಸ್ಥಾನದ ಬಳಿ ಯಾರನ್ನು ನೋಡಿದರೂ ಉತ್ಸಾಹದಿಂದಲೂ ಪ್ರೇಮದಿಂದಲೂ ನಲಿದಾಡುತ್ತಿದ್ದರು. ಮೈಸೂರು ದೇಶದಲ್ಲಿಯೇ ಬಹು ದೊಡ್ಡದಾಗಿದ್ದ ಈ ಭಯಂಕರ ಜಾತ್ರೆಯು ಪ್ರಾಣಿವಧೆಗೆ ಅವಕಾಶವಿಲ್ಲದಂತೆ ನಡೆದುದು ತುಂಬಾ ಸಂತೋಷದ ಸಂಗತಿಯೇ ಆಗಿದೆ. ಈ ಜಾತ್ರೆಯ ಕಾಲದಲ್ಲಿ ಪೂರ್ವಾಚಾರ ಪದ್ಧತಿಯ ಕೆಲವರು ಪ್ರಾಣಿವಧೆಯನ್ನು ಮಾಡಿಯೇತೀರುವೆವೆಂದು ಹಟ ತೊಟ್ಟು ಪ್ರಯತ್ನಿಸಿದರಾದರೂ ನವನಾಗರೀಕತೆಯನ್ನರಿತ ಅನೇಕ ಸ್ವಮತ ಬಂಧುಗಳೇ ಅವರಿಗೆ ತಿಳುವಳಿಕೆ ಹೇಳಿ ವಾಪಸು ಕಳುಹಿಸುತ್ತಿದ್ದುದು ಚಿತ್ತಾಕರ್ಷಣೀಯವಾಗಿದ್ದಿತು. ಒಟ್ಟಿನ ಮೇಲೆ ಈಸಾರಿ ರಕ್ತದ ಕಾಲುವೆಯು ನಿಂತಂತಾಯಿತು. ಸರ್ಕಾರದವರು ಈ ಸಂದರ್ಭದಲ್ಲಿ ಜನಗಳಿಗೆ ತಿಳುವಳಿಕೆ ಹೇಳಿ ಪ್ರಾಣಿವಧೆಗೆ ಅವಕಾಶವಾಗದಂತೆ ಮಾಡಿದುದು ಅಭಿನಂದನೀಯವು. ಅದಕ್ಕಾಗಿ ಸಬ್‌ಡಿವಿಜನ್ ಆಫೀಸರು, ಪೋಲೀಸ್ ಸೂಪರಿಂಟೆಂಡೆಂಟರು, ಅಮಲ್ದಾರರು ಮೊದಲಾದ ಅಧಿಕಾರಿಗಳಿಗೆ ತುಂಬಾ ಕೃತಜ್ಞರಾಗಿರಬೇಕಾಗಿದೆ. ಪೋಲೀಸ್ ಇನ್ಸ್‌ಪೆಕ್ಟರು ರಿಜರ್ವ್ ಪೋಲೀಸಿನವರಾದಿಯಾಗಿ ಎಲ್ಲ ಪೋಲೀಸಿನವರನ್ನೂ ದೇವಸ್ಥಾನದ ಬಳಿ ಕಾವಲಿಟ್ಟು ಬಹು ಮುತುವರ್ಜಿಯಿಂದ ಕೆಲಸ ಮಾಡಿದರು. ಸ್ವಮತದ ಕೆಲವರ ದೂಷಣೆಯನ್ನು ಸಹ ಲಕ್ಷಿಸದೆ ಬಹು ಉತ್ಸಾಹದಿಂದ ಕೆಲಸ ಮಾಡಿದ ಕೆಲವು ಮಹನೀಯರೂ ಮೆಚ್ಚಿಕೆಗೆ ಪಾತ್ರರು. ಇದೇ ರೀತಿಯಾಗಿ ಇನ್ನು ಮುಂದೆಯೂ ಜಾತ್ರೆಯನ್ನು ಸಾತ್ವಿಕ ರೀತಿಯಿಂದ ಆಚರಿಸಿ ಜನಗಳ ಪ್ರೇಮಾದರವನ್ನೂ ದೇವಿಯ ಕೃಪಾಕಟಾಕ್ಷವನ್ನೂ ಸಂಪಾದಿಸಬೇಕಾಗಿ ಕೋರಿಕೆ. ಈ ಕಾರ್ಯದಲ್ಲಿ ಸಹಾಯಕರಾಗಿದ್ದ ಸರ್ವರಿಗೂ ಭಗವಂತನು ಸನ್ಮಂಗಲವನ್ನೀಯಲೆಂದು ಹಾರೈಸುವೆನು.

ಪ್ರತ್ಯಕ್ಷದರ್ಶಿ.

ಭಾರತೀಯ ತತ್ತ್ವಶಾಸ್ತ್ರವೂ, ವಿದ್ವಾನ್ ರಾಘವೇಂದ್ರಾಚಾರ್ಯರೂ.

(ಲೇಖಕ: ಚಂದ್ರಶೇಖರಶಾಸ್ತ್ರೀ ವ್ಯಾಕರಣತೀರ್ಥ, ಪ್ರಿನ್ಸಿಪಾಲ ಗಂಗಾಧರ ಸಂಸ್ಕೃತ ಕಾಲೇಜು, ಹುಬ್ಬಳ್ಳಿ.)

ಮೈಸೂರಿನಲ್ಲಿರುವ ಮಹಾರಾಜರವರ ಕಾಲೇಜಿನಲ್ಲಿ ತತ್ತ್ವಶಾಸ್ತ್ರೋಪಾಧ್ಯಾಯರಾದ ವಿದ್ವಾನ್ ರಾಘವೇಂದ್ರಾಚಾರ್ಯ, ಎಂ. ಎ., ಇವರು "ಭಾರತೀಯ ತತ್ತ್ವಶಾಸ್ತ್ರ" ಎಂಬ ಗ್ರಂಥವನ್ನು ಕನ್ನಡಿಗರ ಉಪಯೋಗಾರ್ಥವಾಗಿ ಪ್ರಕಟಿಸಿರುತ್ತಾರೆ. ಗ್ರಂಥದ ಆರಂಭದಲ್ಲಿ ಭಾರತೀಯರ ಸಾಮಾನ್ಯ ಸ್ವರೂಪವನ್ನು ವರ್ಣಿಸಿ ಆ ನಂತರ ಆಧುನಿಕ ಪಂಡಿತರ ಮತ್ತು ಪ್ರಾಚೀನ ಪಂಡಿತರ ಅಭಿಪ್ರಾಯಗಳನ್ನು ದಿಗ್ದರ್ಶನಮಾಡಿ, ಉಪನಿಷತ್ತುಗಳ ವಿವೇಚನೆಯನ್ನು ತೋರಿಸಿ ಭಗವದ್ಗೀತೆಯ ವಿಷಯಕ್ಕೆ ಇರುವ ಪೌರ್ವಾತ್ಯ ಪಾಶ್ಚಿಮಾತ್ಯರ ಅಭಿಪ್ರಾಯಗಳನ್ನು ಪ್ರಕಟಿಸಿ, ಈಗ ಭರತಖಂಡದಲ್ಲಿ ಪ್ರಸಿದ್ಧಿಯನ್ನು ಪಡೆದ ದ್ವೈತಾದ್ವೈತ ವಿಶಿಷ್ಟಾದ್ವೈತ ಮತತತ್ತ್ವಗಳನ್ನು ವಿಶದವಾಗಿ ವರ್ಣಿಸಿ, ಚಾರ್ವಾಕ, ಜೈನ, ಬೌದ್ಧ ಮೊದಲಾದ ಮತಗಳ ಸ್ವರೂಪವನ್ನು ವಿಸ್ತಾರವಾಗಿ ಬರೆದಿರುತ್ತಾರೆ. ಸಂಪೂರ್ಣವಾಗಿ ಈ ಗ್ರಂಥವನ್ನೋದಿದರೆ ಆಚಾರ್ಯರ ಪಾಂಡಿತ್ಯವು ಸಂಸ್ಕೃತ ಮತ್ತು ಇಂಗ್ಲೀಷು, ಕನ್ನಡ ಮೂರು ಭಾಷೆಗಳಲ್ಲಿ ಓದುಗರನ್ನು ತಲೆದೂಗಿಸದೆ ಇರದು. ಆದರೆ ಆಚಾರ್ಯರಿಗೆ ವೀರಶೈವಮತದ ನೆನಪು ಸಹ ಆಗದೆ ಇದ್ದುದು ಕನ್ನಡಿಗರಿಗೆ ಆಶ್ಚರ್ಯವನ್ನುಂಟುಮಾಡಿದೆ. ದ್ವೈತಾದ್ವೈತಿಗಳಂತೆ ಪ್ರಸಿದ್ಧರಾಗಿರುವ ಶಕ್ತಿವಿಶಿಷ್ಟಾದ್ವೈತರಾದ ವೀರಶೈವರು ಕರ್ನಾಟಕ ಪ್ರಾಂತದಲ್ಲಿ ನೂರಕ್ಕೆ 60 ರಂತೆ ಇರುವದು ಗೊತ್ತಿದ್ದರೂ, ವೀರಶೈವರ ವಿಷಯವನ್ನು ಬಿಟ್ಟಿರುವುದನ್ನು ನೋಡಿದರೆ, ವೈಷ್ಣವರಾದವರಿಗೆ ವೀರಶೈವರ ವಿಷಯವು ಮುಳ್ಳು ಚುಚ್ಚಿದಂತೆ ಆಗಿರಬಹುದೆಂದು ತೋರುತ್ತದೆ. ಇಲ್ಲದಿದ್ದರೆ ಶೈವ ಮತ್ತು ಪಾಶುಪತ ಮತಗಳ ವರ್ಣನೆಯನ್ನು ಮಾಡುವ ಕಾಲಕ್ಕೆ 28 ಆಗಮಗಳ ಉಲ್ಲೇಖವನ್ನು ಮಾಡಿ ವೀರಶೈವರ ಹೆಸರನ್ನು ಕೂಡ ಎತ್ತದೆ ಇರುವದನ್ನು ನೋಡಿದರೆ ವಾಚಕರಿಗೆ ಇವರ ಅಂತರಂಗವು ಹೊಳೆಯದ ಇರಲಿಕ್ಕಿಲ್ಲ. ಅಂತೂ 700 ಪುಟಗಳಿಗಿರತಕ್ಕ ಪುಸ್ತಕದಲ್ಲಿ ವೀರಶೈವ ಎಂಬ ಒಂದು ಶಬ್ದವೂ ಕೂಡ ಬಂದಿರುವದಿಲ್ಲ ! ಮೈಸೂರಿನಲ್ಲಿರುವ ವೇ|| ಶಾಂತಿರಾಜಶಾಸ್ತ್ರಿಗಳು ನ್ಯಾಯತೀರ್ಥ ಇವರಿಂದ ಜೈನಮತದ ವಿಷಯವನ್ನು ತಿಳಿದುಕೊಂಡಂತೆ ವೀರಶೈವ ಶಾಸ್ತ್ರಿಗಳಿಂದ ವೀರಶೈವ ಮತದ ವಿಷಯವನ್ನು ತಿಳಿದು ಪ್ರಕಟಿಸಿದ್ದರೆ ಆಚಾರ್ಯರಿಗೆ ಭೂಷಣವಾಗುತ್ತಿರಲಿಲ್ಲವೆ ? ಭಾರತೀಯ ತತ್ತ್ವಶಾಸ್ತ್ರವೆಂದ ಮೇಲೆ ಎಲ್ಲಾ ಮತಗಳ ವಿಚಾರವೂ ಇರಬೇಕಲ್ಲವೆ ? ಬೇರೆ ಹೆಸರನ್ನಿಟ್ಟಿದ್ದರೆ ವೀರಶೈವರ ಆಕ್ಷೇಪಣೆಯು ಇರುತ್ತಿರಲಿಲ್ಲ. ಧಾರವಾಡದಲ್ಲಿ ಪ್ರಕಟವಾಗುತ್ತಿರುವ ಜಯಕರ್ನಾಟಕದ ಸಂಪಾದಕರು ಕೂಡ ತಮ್ಮ ವೈಶಾಖ ಅಥವಾ ಜ್ಯೇಷ್ಠ ಮಾಸದ ಸಂಚಿಕೆಯಲ್ಲಿ ಭಾರತೀಯತತ್ತ್ವಶಾಸ್ತ್ರವನ್ನು ಒಳ್ಳೇ ವರ್ಣನೆ ಮಾಡಿ, ವೀರಶೈವಮತವನ್ನು ಬಿಟ್ಟದ್ದು ಬಹಳೇ ಅನ್ಯಾಯವೆಂದು ಬರೆದು ಮುಂದಿನಸಾರಿಯಾದರೂ ಹಾಕಬೇಕೆಂದು ಆಚಾರ್ಯರವರಿಗೆ ಸೂಚನೆಯನ್ನು ಮಾಡಿರುತ್ತಾರೆ. ಈ ಗ್ರಂಥವು ಮೈಸೂರ ವಿಶ್ವವಿದ್ಯಾಲಯದವರ ಸಹಾಯದಿಂದ ಪ್ರಿಂಟಾಗಿದೆ ಎಂದು ತಿಳಿಯುತ್ತದೆ. ಮೈಸೂರ ಸ್ಟೇಟಿನಲ್ಲಿರತಕ್ಕ ಎಂಟು ಲಕ್ಷ ವೀರಶೈವರ ನೆನಪು ಸಹ ಯೂನಿವರ್ಸಿಟಿಯವರಿಗೆ ಆಗದೆ ಇರುವದು ಶೋಚನೀಯವೇ ಸರಿ ! ಮೈಸೂರು ವಿಶ್ವವಿದ್ಯಾಲಯವು ಯಾರ ಖರ್ಚಿನಿಂದ ನಡೆಯುತ್ತದೆ? ಸರ್ಕಾರದ ಖರ್ಚಿನಿಂದಲ್ಲವೆ ? ಸರ್ಕಾರಕ್ಕೆ ಹಣವು ಎಲ್ಲಿಂದ ಬರುತ್ತದೆ ? ಪ್ರಜೆಗಳ ಕಂದಾಯದಿಂದಲ್ಲವೆ ? ಪ್ರಜೆಗಳಾದ ವೀರಶೈವರು ಕಂದಾಯವನ್ನು ಕೊಡುವದಿಲ್ಲವೆ ? ಇವರು ಕೊಟ್ಟ ಕಂದಾಯದ ಸ್ವಲ್ಪ ಭಾಗವಾದರೂ ಇವರಿಗೆ ಉಪಯೋಗ ಬೀಳಬಾರದೆ ? ಹೀಗೆ ಪಕ್ಷಪಾತ ಮಾಡುವದು ಅನ್ಯಾಯವಲ್ಲವೆ ? ಬೇರೆ ಹೆಸರನ್ನಿಟ್ಟು ಆಚಾರ್ಯರು ಸ್ವಂತ ಖರ್ಚಿನಿಂದ ಪ್ರಿಂಟು ಮಾಡಿಸಿದ್ದರೆ ನನ್ನ ಆಕ್ಷೇಪವೇನೂ ಇರುತ್ತಿರಲಿಲ್ಲ. ಹೆಸರನ್ನು ನೋಡಿದರೆ ಭಾರತೀಯ ತತ್ತ್ವಸಂಗ್ರಹ; ಇದನ್ನು ಪ್ರಕಟಿಸಲಿಕ್ಕೆ ಸಹಾಯಮಾಡಿದವರು ವಿಶ್ವವಿದ್ಯಾಲಯದವರು. ಪ್ರಜೆಗಳ ದುಡ್ಡಿನಿಂದ ನಡೆಯುವ ವಿಶ್ವವಿದ್ಯಾಲಯಕ್ಕೆ ವಿಸ್ತೃತ ಬುದ್ಧಿಯು ಇರಬಾರದೆ? ಇನ್ನೊಂದು ಒಳ್ಳೇ ಚಮತ್ಕಾರವಾದ ವಿಷಯವನ್ನು ವಾಚಕರ ಎದುರಿಗೆ ಇಡದೆ ಇರಲಾರೆನು. ಅದೇನಂದರೆ,—750 ಪುಟಗಳುಳ್ಳ ಗ್ರಂಥದಲ್ಲಿ ವೀರಶೈವ ಎಂಬ ಶಬ್ದವನ್ನೂ ಕೂಡ ಬರೆಯಲಿಕ್ಕೆ ಅಂಜಿದ ರಾಘವೇಂದ್ರಾಚಾರ್ಯರು ವೀರಶೈವರ ದೊಡ್ಡ ದೊಡ್ಡ ಮಠಗಳಿಗೆ ಹೋಗಿ ಹತ್ತತ್ತು ಐವತ್ತು ಪ್ರತಿಗಳನ್ನು ಆಗ್ರಹದಿಂದ ಮಾರುತ್ತಾರೆಂದು ತಿಳಿಯಬಂದಿದೆ. ದುಡ್ಡಿಗಾದರೂ ವೀರಶೈವರ ಮಠಗಳು ನೆನಪಾದದ್ದು ಇದ್ದುದರಲ್ಲಿ ಸಂತೋಷವು. ಇರಲಿ, ಆಚಾರ್ಯರಿಗೆ ಇನ್ನೊಂದು ಸೂಚನೆಯನ್ನು ಮಾಡಿ ಈ ಲೇಖವನ್ನು ಮುಗಿಸುತ್ತೇನೆ. ಆಚಾರ್ಯರೇ ! ಸಾಹಿತ್ಯಸಾಗರದಲ್ಲಿ ಮುಣುಕಿದ ನೀವು ಜಾತಿಪಂಥಗಳಲ್ಲಿ ಸಮತಾ ಬುದ್ಧಿಯಿಂದ ಗ್ರಂಥಗಳನ್ನು ಪ್ರಕಟಿಸಿದರೆ ನಿಮ್ಮ ಕೀರ್ತಿ ಹೆಚ್ಚಾಗುವದು. ಪ್ರಾಕ್ತನವಿಮರ್ಶನ ವಿಚಕ್ಷಣರಾದ ರಾವ ಬಹದ್ದೂರು ನರಸಿಂಹಾಚಾರ್ಯ, ಎಂ. ಎ., ಇವರು ವೀರಶೈವರಿಂದ ನೋಬೆಲ್‌ಪ್ರೈಜನ್ನು ಹೊಂದುವ ಹಾಗೆ ಕವಿಚರಿತ್ರೆಯಲ್ಲಿ ಕೆಲಸ ಮಾಡಿಲ್ಲವೆ ? ಮತ್ತು ಈಗಿನ ಕರ್ನಾಟಕ ಸಾಹಿತ್ಯ ಸಾಗರದಲ್ಲಿ ಉಜ್ವಲರತ್ನಗಳಾಗಿರುವ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.,ರವರು ಮಾಸ್ತಿ ವೆಂಕಟೇಶಅಯ್ಯಂಗಾರ್, ಎಂ. ಎ., ಯವರು, ಎಂ. ಆರ್. ಶ್ರೀನಿವಾಸಮೂರ್ತಿಯವರು ಮೊದಲಾದವರು ಸಮಾನವಾದ ಬುದ್ಧಿಯಿಂದ ಕರ್ನಾಟಕದ ಸೇವೆಯನ್ನು ಮಾಡುವದಿಲ್ಲವೇ ? ನೀವಾದರೂ ಅವರುಗಳ ಅನುಕರಣವನ್ನು ಮಾಡಿ, ಮುಂದಿನ ಸಾರೆಯಾದರೂ ವೀರಶೈವಮತ ವಿಷಯವನ್ನು ಪ್ರಕಟಿಸಿ ಕರ್ನಾಟಕದಲ್ಲಿ ದೊಡ್ಡ ಜನಾಂಗವಾದ ವೀರಶೈವರಿಗೆ ಸಂತೋಷವನ್ನುಂಟುಮಾಡಬೇಕಾಗಿ ಅಪೇಕ್ಷಿಸುವೆನು.

ವೀರಶೈವ ಸಮಾಜವೋ, ಅನೈಕ್ಯದ ಮೊಟ್ಟೆಯೋ ?

(ಲೇ|| ಶ್ರೀ ನೀಲಕಂಠಸ್ವಾಮಿ, ಚಿಕ್ಕೋಡಿ)

ವಾಚಕರೇ ಜಗತ್ತಿನಲ್ಲಿ ಯಾವದೇ ಒಂದು ಸಮಾಜವು ಮುಂದಕ್ಕೆ ಬರಬೇಕಾದರೆ, ಆ ಸಮಾಜವು ಐಕ್ಯದಿಂದಿರಬೇಕಲ್ಲವೇ ? ಅಮೇರಿಕೆಯು ಐಕ್ಯದಿಂದಲೇ ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವದಲ್ಲವೇ ? ಹಿಂದುಸ್ಥಾನವಾದರೂ ಐಕ್ಯದಿಂದಲೇ ಸ್ವರಾಜ್ಯವನ್ನು ಹೊಂದಬೇಕಾಗಿದೆಯಲ್ಲವೇ? ಇದನ್ನರಿಯದೆ ನಮ್ಮ ವೀರಶೈವಸಮಾಜದಲ್ಲಿ ಸ್ವಾರ್ಥಾಂಧರಾದ ಕೆಲವು ಮೂರ್ಖಶಿಖಾಮಣಿಗಳು ತಮ್ಮ ದೊಡ್ಡಸ್ತನವನ್ನು ವ್ಯಕ್ತಮಾಡುವದಕ್ಕಾಗಿ ಸತ್ಕಾರ್ಯವನ್ನು ಮಾಡಿದ, ಮಾಡುತ್ತಿರುವ ಮಹನೀಯರನ್ನು ದೋಷೈಕದೃಷ್ಟಿಯಿಂದ ಛಿದ್ರಾನ್ವೇಷಿಗಳಾಗಿ ನಿಂದಿಸುತ್ತ ಈ ಸತ್ಕಾರ್ಯದಿಂದ ಏನು ಪ್ರಯೋಜನ? ಇಂಥ ಕಠಿಣ ಕಾಲದಲ್ಲಿ ಇದನ್ನು ಮಾಡುವದರಿಂದ ದುಡ್ಡಿನ ಅಪವ್ಯಯವಾಗುತ್ತದೆಂದು ಉಬ್ಬಿ ಉಬ್ಬಿ ಆ ಸತ್ಕಾರ್ಯಗಳನ್ನು ತಡೆಯಬೇಕೆಂಬ ತಮ ದುರಭಿಪ್ರಾಯವನ್ನು ವ್ಯಕ್ತಮಾಡುತ್ತ ಸಮಾಜದಲ್ಲಿ ಇಲ್ಲದ್ದೊಂದು ಗೊಂದಲವನ್ನೆಬ್ಬಿಸುತ್ತಿರುವದು ಅನೈಕ್ಯದ ಹೆಗ್ಗುರುತು ಅಥವಾ ಅನೈಕ್ಯದ ಮೊಟ್ಟೆ. ಮಹನೀಯರೇ, ದುಷ್ಟಕಾರ್ಯವಾಗಿದ್ದರೆ ಅದರ ಅಭಿವೃದ್ಧಿಯು ಆಗಲಾರದು. ಸತ್ಕಾರ್ಯವು ಎಂದಿಗೂ ನಿಲ್ಲಲಿಕ್ಕಿಲ್ಲೆಂದು ಆ ಮಹಾರಾಯರು ಗಟ್ಟಿಯಾಗಿ ತಿಳಕೊಳ್ಳಲಿ. ಇನ್ನು ಕೆಲವರು ನಾಹೆಚ್ಚು, ನೀಹೆಚ್ಚು ಎಂಬ ಒಣ ಅಹಂಕಾರ ಹವ್ಯಾಸದಲ್ಲಿ ಬಿದ್ದದ್ದರಿಂದ ಅವರ ಕಣ್ಣುಗಳು ಕಾಣದಂತಾಗಿವೆ. ಆದ್ದರಿಂದ ಬಸವಾದಿ ಪ್ರಮಥರ ತತ್ತ್ವನಿರ್ಣಯವೆಂಬ ಅಂಜನವನ್ನು ಹಚ್ಚಿ ಕಣ್ಣುಗಳನ್ನು ಸ್ವಚ್ಛವಾಗಿ ಮಾಡುವ ಕಾರ್ಯವನ್ನೇ ಮೊದಲು ಕೈಕೊಳ್ಳಬೇಕಾಗಿದೆ. ಇನ್ನು ಬಸವಾದಿ ಪ್ರಮಥರ ವಚನಗಳ ರಹಸ್ಯವನ್ನರಿಯಬೇಕೆಂದು ಪರಮತೀಯರು ವಚನ ವಾಙ್ಮಯ ಪರಿವರ್ತನೆಯನ್ನು ಮಾಡುವ ಕಾರ್ಯದಲ್ಲಿ ತೊಡಗಿ ಈಗಾಗಲೇ ಬಸವೇಶ್ವರ ವಚನಗಳನ್ನು ಆಂಗ್ಲಭಾಷೆಯಲ್ಲಿ ಪರಿವರ್ತಿಸುತ್ತಿರುವರೆಂಬದಾಗಿ ಕೇಳುತ್ತೇವೆ. ಅಂದಮೇಲೆ ಇಂಥ ಕಾಲದಲ್ಲಿ ಸ್ವಮತಸ್ಥರಾದ ಕೆಲವು ಕುಲಛಲವಾದಿಗಳು ವಿರೋಧಮಾಡುವದೆಂದರೆ ಎಷ್ಟು ನೀಚತನದ ಕೆಲಸವೆಂಬುದನ್ನು ವಾಚಕರೇ ಊಹಿಸಲಿ. ವಚನಜ್ಞಾನ ಗಂಧವಿಲ್ಲದ ಇವರಿಗೆ ಪ್ರಮಥರ ವಚನಗಳ ರಹಸ್ಯವು ತಿಳಿಯುವ ಬಗೆಯಂತು ? ನಡೆನುಡಿಯನ್ನೊಳಗೊಂಡು ಕನ್ನಡಿಯಂತೆ ಚೆನ್ನಾಗಿ ಹೊಳೆಯುವ ಕನ್ನಡಿಗರಿಗೆ ಕನ್ನಡಕಗಳಾಗಿಹ (Spectecales) ಚಿನ್ನದ ಹೊತ್ತಿಗೆಗಳನ್ನು ಅಲ್ಲಗಳೆವರಲ್ಲಾ ! ಅಯ್ಯೋ, ಇದು ವೀರಶೈವಮತದ ಅವನತಿಯ ಚಿಹ್ನವೇ ಹೊರತು ಬೇರೊಂದಲ್ಲ. ಇರಲಿ, ಮಹಾಶಯರೇ ! "ಪಂಚಾಚಾರ್ಯಪ್ರಭೆಯಲ್ಲಿ - ವೇಶ್ಯಾಪುತ್ರನ ಚಲ್ಲಾಟ" ಎಂದು ಓರ್ವ ವೀರಶೈವನು ಬರೆದಿದ್ದುದನ್ನು ನೋಡಿದರೆ ಮನಸ್ಸಿಗೆ ವಿಷಾದವೆನಿಸುತ್ತದೆ ಮತ್ತು ಇದೆಲ್ಲ ಬರೇ ಹುಡುಗಾಟಿಕೆಯಂತೆಯೇ ಕಾಣುತ್ತದೆ. ಏಕೆಂದರೆ, ಓರ್ವ ವೀರಶೈವನು ನಿಂದಿಸಿದ ವ್ಯಕ್ತಿಯು ಯಂತಹದು ? ಆ ವ್ಯಕ್ತಿಯ ಯೋಗ್ಯತೆಯು ಸಮಾಜದಲ್ಲಿ ಹೇಗಿದೆ ? ಎಂಥ ಕೆಲಸದಲ್ಲಿ ತೊಡಗಿರುವದು ? ಆ ವ್ಯಕ್ತಿಯಿಂದ ಸಮಾಜಕ್ಕೆ ಯಾವ ಯಾವ ಉಪಕಾರವು ಲಭಿಸಿರುವದು" ಎಂಬುದನ್ನು ವಿಚಾರಿಸದೆ ಹೀಗೆ ಬರೆಯುವದು ಲಜ್ಜಾಸ್ಪದವಾಗದಿರದು. ಇದಕ್ಕಾಗಿ ಯಾರೂ ಧಿಃಕರಿಸದೆ ಬಿಡರು. ಆದಕಾರಣ ಇಂಥಾ ಬರವಣಿಗೆಯಿಂದ ಮನಸ್ತಾಪವೇ ಹೊರತು ಮತ್ತೇನೂ ಪ್ರಯೋಜನವಾಗುವುದಿಲ್ಲ. ಆ ವ್ಯಕ್ತಿಯ ಹೆಸರು ಕೆಡಿಸಿ ಜನರಲ್ಲಿ ಅಪಹಾಸ್ಯಕ್ಕೆ ಗುರಿಮಾಡುವ ಅಪೇಕ್ಷೆಯಿಂದ ಲೇಖಕನು ಬರೆದಿದ್ದರೆ ತನ್ನ ಪೆದ್ದತನವನ್ನು ತಾನೇ ಹೊರಗೆಡವಿದಂತಾಗುತ್ತದೆ. ವಾಚಕರೇ, ಹಾಗೆ ಬರೆಯೋಣದರಿಂದ ಜನರೇನಾದರೂ ಶಹಬಾಸ್ ಅನುವರೋ ? ಎಂದು ಅನ್ನಲಾರರು. ಆದ್ದರಿಂದ ಇಂಥ ಹುಡುಗ ಬುದ್ಧಿಯನ್ನು ಬಿಟ್ಟು ಬಸವೇಶ್ವರನ ವಚನಾಮೃತವನ್ನು ಸೇವಿಸಿ ತನ್ನೊಳಗಿದ್ದ ಅಸೂಯಾ ವಿಷಯವನ್ನು ದೂರಮಾಡಿಕೊಳ್ಳಬೇಕೆಂದು ಕೆಲವು ವಚನಗಳನ್ನು ಉದಾಹರಿಸುತ್ತೇನೆ:— "ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ, ಮಂಡೋದರಿ ಕಪ್ಪೆಯ ಮಗಳು ಕುಲವನರಸದಿರಿ, ಭೋ ! ಕುಲದಿಂದ ಮುನ್ನೇನಾದಿರಿಂ ಭೋ ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದೂರ್ವಾಸ ಮಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿನ್ಯನೆಂಬ ಋಷಿ ಮೂರು ಭುವನವರಿಯೆ ನಾವಿಯಂದ ಕಾಣಿ ಭೋ ನಮ್ಮ ಕೂಡಲಸಂಗಮದೇವನ ವಚನವಿಂತೆಂದುದು. ಶ್ವಪಚೋಪಿಯಾದಡೇನು ? ಶಿವಭಕ್ತನೇ ಕುಲಜನು." "ಕೊಲುವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ. ಕುಲವೇನೋ, ಅವಂದಿರ ಕುಲವೇನೋ ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗನ ಶರಣರೇ ಕುಲಜರು." "ಶ್ವಪಚೋಪಿ ಮುನಿಶ್ರೇಷ್ಠಃ | ಯಸ್ತು ಲಿಂಗಾರ್ಚನೆ ರತಃ || ಲಿಂಗಾರ್ಚನವಿಹೀನೋಪಿ | ಬ್ರಾಹ್ಮಣಃ ಶ್ವಪಚಾಧಮಃ" ಎಂದುದಾಗಿ ಜಾತಿ ವಿಜಾತಿಯಾದರೇನು, ಅಜಾಂತಂಗೆ ಶರಣೆಂದೆನ್ನದವನು ಆತನೇ ಹೊಲೆಯಾ ಕೂಡಲಸಂಗಮದೇವಾ. ಇಂಥ ಮುತ್ತಿನಂತಹ ಮಾತುಗಳ ಮರ್ಮವನ್ನರಿಯದೇ ಅರ್ಥಮರ್ಥಕಲಿಸು ತಮ್ಮ ಪಾಂಡಿತ್ಯವನ್ನು ವ್ಯಕ್ತಗೊಳಿಸುವದಕ್ಕಾಗಿ ಅವರನ್ನು ಹೀಯಾಳಿಸುವದು ಎಲ್ಲಿಯ ನ್ಯಾಯ ? ವಾಚಕವೃಂದವೇ, ಇಂಥ ಕಿಡಿಗೇಡಿತನದಿಂದಲೇ ನಮ್ಮ ಸಮಾಜದಲ್ಲಿ ಅಂತಃಕಲಹವೆಂಬ ಕಾಳ್ಗಿಚ್ಚು ಪ್ರಜ್ವಲಿಸಿ ವೀರಶೈವಸಮಾಜ ವಟವೃಕ್ಷವನ್ನು ಹಾಳುಮಾಡುತ್ತಿರುವದು, ಇದು ವಿಷಾದ ಸಂಗತಿಯು ಮತ್ತು ಏನೊಂದು ಸಮಾಜಕ್ಕೆ ಹಿತವಾಗದೆ, ಸಮಾಜದಲ್ಲಿ ಬರೇ ಕಲಹವನ್ನೆಬ್ಬಿಸುವ ಲೇಖವನ್ನು ಬರೆದರೆ ಮತ್ತು ಅದನ್ನು ಪ್ರಸಿದ್ಧಿಸಿದರೆ ಸಮಾಜಘಾತಕರೆಂಬ ನಾಮವು ಎಂದೂ ಬಿಡಲಾರದೆಂದು ನಿಶ್ಚಂಕವಾಗಿ ಹೇಳಬಹುದು. ಹೀಗೆ ಒಬ್ಬರಿಗೊಬ್ಬರು ಅನೈಕ್ಯದಿಂದ ಬಡದಾಡಹತ್ತಿದರೆ ಸಮಾಜಾಭಿವೃದ್ಧಿಯು ಹೇಗಾಗುವದು ? ಇನ್ನುಳಿದ ಸಮಾಜವನ್ನು ನೋಡಿ ಇನ್ನಾದರೂ ಬುದ್ಧಿಗಲಿತು ಐಕ್ಯದಿಂದ ವರ್ತಿಸಿ ವೀರಶೈವ ಸಮಾಜದೇಳ್ಗೆಯನ್ನು ಮಾಡುವ ಬುದ್ಧಿಯನ್ನು ಜಗದೀಶನು ಎಲ್ಲರಿಗೂ ಕೊಡಲೆಂದು ಅನನ್ಯಭಾವದಿಂದ ಬೇಡಿ ಈ ಲೇಖವನ್ನು ಮುಗಿಸುತ್ತೇನೆ.

ಕೆಲ ಮಹತ್ವ ಪ್ರಶ್ನೆಗಳು.

ವೀರಶೈವಮತದ ಆಚರಣೆಗಳಲ್ಲಿ ಭಿನ್ನಾಭಿಪ್ರಾಯಗಳಿಗೆ ಎಡೆಗೊಡುವ ಪ್ರಶ್ನೆಗಳು ಅನೇಕವಾಗಿರುತ್ತವೆ. ಶಿಬಿಬಿಸುವುದು ಅಥವಾ ಪೂರ್ಣಯಾಗಿ ಬೋಳಿಸುವುದು, ಪಂಚಕಲಶ-ಷಟ್ಸ್ಥಲ ಸ್ಥಾಪನೆ ಇಂತಹವುಗಳೇ ಉದಾಹರಣೆಗಳಾಗಿವೆ. ಇಂತಹ ಕೆಲವು ಪ್ರಶ್ನೆಗಳನ್ನು ಈ ಕೆಳಗೆ ಕೊಟ್ಟಿರುವೆನು. ಅವುಗಳಿಗೆ ಮಹನೀಯರಾದವರೂ ಸರಿಯೇ ಉತ್ತರಗಳನ್ನು ದಯಪಾಲಿಸಿ, ನನಗೂ ನನ್ನಂತಹ ಜಿಜ್ಞಾಸುಗಳಿಗೂ ಉಪಕಾರ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ. ಈ ಪ್ರಶ್ನೆಗಳು ಸರ್ವಸಾಮಾನ್ಯವಾದವುಗಳೇ ವಿನಾ ಯಾವ ಪಕ್ಷವನ್ನಾಗಲೀ ವ್ಯಕ್ತಿಯನ್ನಾಗಲೀ ಕುರಿತು ಹೊರಹೊಂಟವುಗಳಾಗಿಲ್ಲ. ಆದುದರಿಂದ ಯಾರೂ ಶಾಂತಿಯ ಎಲ್ಲೆಯನ್ನು ಮೀರಲು ಅವಕಾಶವಿಲ್ಲ. ಅಲ್ಲದೆ ಈ ಎಲ್ಲಾ ಪ್ರಶ್ನೆಗಳಿಗೂ ಒಬ್ಬರೇ ಉತ್ತರ ಕೊಡುವುದು ಸಾಧ್ಯವಾಗದಿರಬಹುದು. ಹಾಗಿದ್ದಲ್ಲಿ ಯಾವ ಪ್ರಶ್ನೆಯು ತಮಗೆ ಹರಿಯುವುದೋ ಆ ಪ್ರಶ್ನೆಯೊಂದಕ್ಕೇ ಅವರು ಉತ್ತರ ಕೊಡಬಹುದು. ಮುಖ್ಯ ಸಮಂಜಸವಾದ ಉತ್ತರಗಳು ಬರಬೇಕೆಂಬುದೇ ನನ್ನ ಹಾರೈಕೆ.

1. ವೀರಶೈವನು ಗುರುದತ್ತವಾದ ಇಷ್ಟಲಿಂಗವನ್ನಲ್ಲದೆ ಮತ್ತಾವ ಲಿಂಗವನ್ನು ಪೂಜಿಸಬಾರದಲ್ಲವೆ ? ಹಾಗಾದರೆ ಅನೇಕ ಮಂದಿ ವೀರಶೈವರು ಸ್ಥಾವರಲಿಂಗಗಳ ಪೂಜಾರಿಗಳಾಗಿರುತ್ತಾರೆ; ಇದು ತಪ್ಪೋ ? ಅನೇಕರು ಬೇರೆ ಬೇರೆ ಸುಪ್ರಸಿದ್ಧ ವೀರಶೈವ ಅಥವಾ ಶೈವಕ್ಷೇತ್ರಗಳ ವೀರಭದ್ರ ಮೊದಲಾದ ದೇವರುಗಳನ್ನು ಮನೆದೇವರುಗಳನ್ನಾಗಿ ಭಾವಿಸಿ ಪೂಜಿಸುತ್ತಾರೆ, ಇದೂ ತಪ್ಪೋ ?

ನಮ್ಮ ವಚನಕಾರರು ಹದಿನಾರಾಣೆ ವೀರಶೈವರು; ಇವರಲ್ಲಿ ಪ್ರಾಯಶಃ ಪ್ರತಿಯೊಬ್ಬರೂ ತಂತಮ್ಮ ವಚನಗಳನ್ನು ಒಂದೊಂದು ಸ್ಥಾವರಲಿಂಗವನ್ನು (ಉದಾಹರಣೆ : ಕೂಡಲಸಂಗಮ, ಮಲ್ಲಿಕಾರ್ಜುನ ಇತ್ಯಾದಿ) ಕುರಿತು ಅಥವಾ ಅಂಕಿತವನ್ನಿಟ್ಟು ಹೇಳಿರುತ್ತಾರೆ. ಇದು ನ್ಯಾಯವೆಂದು ಸಮರ್ಥಿಸುವುದು ಹೇಗೆ ?

"ಶರಣಸತಿ, ಲಿಂಗಪತಿ" ಎಂಬ ನುಡಿಯನ್ನು ಹಿಡಿದು ಇಷ್ಟಲಿಂಗವನ್ನಲ್ಲದೆ ಮತ್ತಾವುದನ್ನು ಪೂಜಿಸಿದರೂ ಪತಿವ್ರತೆಯು ವ್ಯಭಿಚಾರವಾಡಿದಂತಾಗುವುದೆಂಬುದನ್ನು ಒಪ್ಪಬಹುದೆ ? ಒಪ್ಪುವುದಾದರೆ ಭಸ್ಮರುದ್ರಾಕ್ಷಿಗಳನ್ನು ಧಾರಣೆಮಾಡಬಹುದೇ ವಿನಾ ಪೂಜಿಸುವುದು ಹೇಗೆ ?

ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ಗಣಪತಿ, ನವಗ್ರಹಗಳು ಮೊದಲಾದುವುಗಳನ್ನು ಪೂಜಿಸುವುದೂ, ಕಲಶಗಳನ್ನು ಪೂಜಿಸುವುದೂ ನ್ಯಾಯವೆ ?

2. "ಭವಿ" ಎಂಬ ಶಬ್ದದ ಅರ್ಥವೇನು ? ಲಿಂಗಧಾರಿಯಲ್ಲದವನೇ ಭವಿ ಎಂಬುದು ಸರಿಯೆ ? ವೀರಶೈವ ಧರ್ಮಶಾಸ್ತ್ರಕಾರರೂ, ವಚನಕಾರರೂ ಭವಿಯ ಸಂಪರ್ಕಾದಿಗಳನ್ನೇ ನಿಷೇಧಿಸುತ್ತಾರೆ. ಇದು ನಿಜವೋ ? ಮತ್ತು ನ್ಯಾಯವೋ ?

63 ಮಂದಿ ಪುರಾತನರಲ್ಲಿ ಎಷ್ಟು ಮಂದಿ ಲಿಂಗಿಗಳು, ಎಷ್ಟು ಮಂದಿ ಅಲಿಂಗಿಗಳು ? ಅಲಿಂಗಿಗಳು ಭವಿಗಳಾದಮೇಲೆ ಅವರನ್ನು ವೀರಶೈವರು ಪೂಜಿಸುತ್ತಾ ಇರುವುದು ನ್ಯಾಯವೆ ? ಕೆಲವು ಶಿವದೇವಾಲಯಗಳಲ್ಲಿ ಈ ಪುರಾತನರ ಪ್ರತಿಮೆಗಳಿವೆ. ಅವುಗಳನ್ನು ವೀರಶೈವರು ಪೂಜಿಸಬಹುದೇ ?

3. ವಿಷ್ಣುವು ಶಿವಾರಾಧಕನೆಂದೂ, ಶಿವಭಕ್ತರಲ್ಲಿ ಅಗ್ರಗಣ್ಯನೆಂದೂ ಲಿಂಗಧಾರಿಯೆಂದೂ ಅನೇಕ ಕಡೆ ಹೇಳಿದೆ. "ಮದ್ಭಕ್ತಾಃ ಮಮಾಧಿಕಾಃ" ಎಂಬ ವಾಕ್ಯವನ್ನು ಹಿಡಿದು ವೀರಶೈವರು ವಿಷ್ಣುವನ್ನು ಏಕೆ ಪೂಜಿಸಬಾರದು ? ಪೂಜಿಸಬಹುದಾದರೆ ಹಿಂದಿನಿಂದಲೂ ಇದು ವೀರಶೈವರಲ್ಲಿ ರೂಢಿಗೆ ಬಂದಿರಲು ಕಾರಣವೇನು ?

ಮೇಲ್ಕಂಡಂತೆಯೇ ಲಕ್ಷ್ಮೀ, ಸರಸ್ವತಿ ಮೊದಲಾದವರಿಗೂ ಲಿಂಗಧಾರಣವು ಹೇಳಿದೆ. ಹಾಗಾದರೆ ವೀರಶೈವರು ವರಲಕ್ಷ್ಮೀಹಬ್ಬ ಮೊದಲಾದ ಹಬ್ಬಗಳನ್ನು ಆಚರಿಸಬಹುದೇ ?

4. ವೀರಶೈವರು ಉಪವಾಸಾದಿ ವ್ರತಗಳನ್ನು ಮಾಡಬಹುದೋ ? ಕೂಡದೆಂದರೆ ಆ ವ್ರತಗಳನ್ನು ತಪ (ಶರೀರಶೋಷಣ) ಕ್ಕಾಗಿ ಲಿಂಗಾರ್ಪಿತ ಬುದ್ಧಿಯಿಂದ ಮಾಡುವುದಾದರೆ ಕೂಡದೆಂದು ಹೇಳುವರೇಕೆ? ಶಿವರಾತ್ರಿಯ ದಿವಸ ವೀರಶೈವರು ಉಪವಾಸ, ಜಾಗರಣೆ ಇತ್ಯಾದಿಗಳನ್ನು ಆಚರಿಸಬಹುದೋ, ಕೂಡದೋ ?

ಷೋಡಶ ಸಂಸ್ಕಾರಗಳಲ್ಲಿ ಶ್ರಾದ್ಧಾದಿ 6 ಸಂಸ್ಕಾರಗಳು ವಿನಾ ಉಳಿದ ದಶಸಂಸ್ಕಾರಗಳು ವೀರಶೈವನಿಗುಂಟೋ, ಇಲ್ಲವೋ ? ಇಲ್ಲವಾದರೆ, ಜಾತಕರ್ಮ, ನಾಮಕರಣ, ಲಿಂಗಧಾರಣ, ದೀಕ್ಷಾ, ವಿವಾಹ ಈ ಮೊದಲಾದುವನ್ನು ಯಾವ ವರ್ಗಕ್ಕೆ ಸೇರಿಸುವಿರಿ ?

ಒಬ್ಬ ಭವಿಯನ್ನು ಭಕ್ತ (ವೀರಶೈವ) ನನ್ನಾಗಿ ಮಾಡಿಕೊಳ್ಳುವಾಗ ಮಾಡುವ ಸಂಸ್ಕಾರವು ಯಾವುದು ? ಅದು ದೀಕ್ಷೆಯೊಂದೇ ಅದರೆ ಇನ್ನುಳಿದ 9 ಸಂಸ್ಕಾರಗಳು ಅವನಿಗೆ ಇಲ್ಲವಾಗುತ್ತವೆ. ಹುಟ್ಟಿನಿಂದ ವೀರಶೈವನಾದವನಿಗೂ, ವೀರಶೈವಮತ ದೀಕ್ಷೆಯನ್ನು ಪಡೆದವನಿಗೂ ಈ ಭಾಗದಲ್ಲಿ ವ್ಯತ್ಯಾಸವಾದಂತಾಯಿತಲ್ಲವೆ ? ಇದಕ್ಕೆ ಪರಿಹಾರವೇನು ?

5. "ಶರಣಸತಿ ಲಿಂಗಪತಿ" ಎಂಬುದು ಸ್ತ್ರೀಯರಿಗೂ ಅನ್ವಯಿಸುವುದಷ್ಟೆ. ಹಾಗಾದರೆ ವಿವಾಹಿತಳಾದ ವೀರಶೈವ ಸ್ತ್ರೀಯರಿಗೆ ಒಬ್ಬನು ಲೌಕಿಕ ಪತಿಯೂ ಮತ್ತೊಬ್ಬನು ಪಾರಮಾರ್ಥಿಕಪತಿಯೂ ಇದ್ದಂತೆ ಆಯಿತು. ಇದು ನ್ಯಾಯವೋ ? ಈ ಇಬ್ಬರ ವಿಷಯದಲ್ಲಿ ಅವಳ ಕರ್ತವ್ಯಗಳು ವಿರೋಧಗಳಾಗುವ ಸಂಭವದಲ್ಲಿ ಅವಳೆ ಏನುಮಾಡಬೇಕು ?

ಜಿಜ್ಞಾಸು.

ಪ್ರಾಚೀನಗ್ರಂಥಗಳ ಪ್ರಸ್ತಾಪವೂ ಅಪ್ರಕಟಿತ ಗ್ರಂಥಗಳ ಶೋಧನೆಯೂ.

(ಲೇಖಕ : ಶ್ರೀಸ್ವಾಮಿ ಶಾಂತವೀರಾರ್ಯ ವಿರಕ್ತಮಠ, ರೀಸರ್ಚ್ ಸ್ಕಾಲರ್, ದಾವಣಗೆರೆ.)

ವೀರಶೈವ ಪ್ರಾಚೀನ ವಾಙ್ಮಯದ ಕೆಲಹದಿಯು ಇಲ್ಲವಾಗಿದೆ. ನಮ್ಮ ಪ್ರೇಮಾಭಿಮಾನಿಗಳಾದ ಪ್ರಾಕ್ತನವಿಮರ್ಶ ವಿಚಕ್ಷಣ ರಾವಬಹದ್ದೂರ್ ಆರ್. ನರಸಿಂಹಾಚಾರ್ಯ, ಎಂ. ಎ., ಎಂ. ಆರ್. ಎ. ಎಸ್. ಇವರು ಹಲವು ವೀರಶೈವ ಗ್ರಂಥಗಳನ್ನು ಬಹು ಶ್ರಮದಿಂದ ಶೋಧಿಸಿ ಅವುಗಳ ಉಲ್ಲೇಖವನ್ನು ತಮ್ಮ ಬಹು ಅಮೂಲ್ಯವಾದ "ಕರ್ನಾಟಕ ಕವಿಚರಿತೆ" ಎಂಬ ಗ್ರಂಥದಲ್ಲಿ ಪ್ರಕಟಗೊಳಿಸಿದುದಕ್ಕಾಗಿ ನಾವೆಲ್ಲರೂ ಅವರಿಗೆ ಬಹುಮಟ್ಟಿಗೆ ಋಣಿಯಾಗಿದ್ದೇವೆ.

ವೀರಶೈವ ಪ್ರಾಚೀನಗ್ರಂಥಭಂಡಾರವು ಅಪಾರವಿದ್ದು ಅದೆಲ್ಲ ಕ್ರಮೇಣ ಹುಳ, ಗೆದ್ದಲುಗಳ ಪಾಲಾಗಲಾರಂಭಿಸಿದೆ. ನಾನು ಕಲಕಾದಿಗೆ ಹೋದಾಗ್ಗೆ ಅಲ್ಲಿ ಸಾವಿರಾರು ಓಲೆಯ ಗ್ರಂಥಗಳು ಒಲೆಯ ಪಟುವಿಗೆ ಆಹುತಿಯಾಗಿರುವವೆಂದು ತಿಳಿಯಿತು. ಇನ್ನೂ ಎಷ್ಟೋ ಗ್ರಂಥಗಳು ಸಾಯುವವನ ಜೀವವಿದ್ದಂತೆ ಅಲ್ಲಲ್ಲಿ ನರಳುತ್ತಿರುವವು. ಆದರೆ ಅಂತಹ ಗ್ರಂಥಗಳನ್ನು ಉದ್ಧರಿಸುವ ಮಹನೀಯರ ಉದಯವೆಂದಾಗುವದು ? ಕೈ|| ರಾವಬಹದ್ದೂರ್ ವಾರದ ಮಲ್ಲಪ್ಪನವರೂ, ಕೈ|| ಯಜಮಾನ್ ವೈ. ವೀರಸಂಗಪ್ಪನವರೂ ಅನೇಕ ಗ್ರಂಥಗಳ ಜೀರ್ಣೋದ್ಧಾರಮಾಡಿ ಕೀರ್ತಿಕಾಯರಾಗಿರುವರು. ಅವರ ತರುವಾಯ ಇನ್ಯಾರೂ ಈ ಮಹಾಸ್ಥಾನದ ಕೀರ್ತಿಧ್ವಜವನ್ನೆತ್ತಲಿಲ್ಲ.

ವೀರಶೈವ ಧರ್ಮಸಿದ್ಧಾಂತ ಪ್ರತಿಪಾದಕವಾದ ಗೀತಾಭಾಷ್ಯ ಮೊದಲಾದ ಪ್ರಸ್ಥಾನತ್ರಯವಂತೂ ಸ್ವಪ್ನದಲ್ಲಿ ಸಹ ತೋರುವಂತಿಲ್ಲ. ಅದರೆ ವರುಷಕ್ಕೊಮ್ಮೆ ನೂತನ ಜಗದ್ಗುರು ತಂಡವು ಮಾತ್ರ ಬೆಳೆಯುತಲೇ ಇದೆ. ಈ ನೂತನ ಜಗದ್ಗುರು ತಂಡವು ಪ್ರಸ್ಥಾನತ್ರಯವನ್ನೇಕೆ ಗೊತ್ತುಹಚ್ಚಿ ಪ್ರಕಟಿಸಬಾರದು ? ಮತಸಿದ್ಧಾಂತ ಗ್ರಂಥಗಳು ಪ್ರಕಟವಾಗದೆ ಮತಬೋಧೆಯೆಂತಾಗುವುದು ? ಸಮಾಜದಲ್ಲಿ ಈ ನೂತನ ಜಗದ್ಗುರು ತಂಡವು ಬರಿದು ಬಾವಲಿಗಳ ಅಟ್ಟಹಾಸದಿಂದಲೂ ಛತ್ರಚಾಮರಗಳ ಹಾಗೂ ಅಪಾರವಾದ ಮಲತ್ರಯದ ಬಹಿರಾಡಂಬರ, ವಾಗಾಡಂಬರಗಳಿಂದಲೂ ತಮ್ಮ ಮೇಲ್ಮೆಯನ್ನುಂಟುಮಾಡಿಕೊಳ್ಳಲಾರಂಭಿಸಿರುವದು. ಹೀಗಿರುವುದರಿಂದ ನಮ್ಮ ಗ್ರಂಥಭಂಡಾರವೆಂತು ಜೀರ್ಣೋದ್ಧಾರವಾಗುವುದು ? ಸ್ವರಾಜ್ಯಸ್ಥಾಪನೆಗಾಗಿ ಮಹಾತ್ಮ ಗಾಂಧಿಯವರೂ, ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ಪಂಡಿತ ಮದನಮೋಹನ ಮಾಲವಿಯರವರೂ ಕಂಗೊಳಿಸುತ್ತಿರುವಂತೆ ನಮ್ಮ ಪ್ರಾಚೀನ ಗ್ರಂಥಗಳ ಜೀರ್ಣೋದ್ಧಾರಕ್ಕಾಗಿ ಅವತರಿಸಿದ ಮಹಾತ್ಮರಾರಿರುವರು ? ಹಾಗೂ ಅವರೆಂದಿಗುದಯಿಸುವರು ? ನಮ್ಮ ಪ್ರಾಚೀನ ಮಹರ್ಷಿಗಳು ಪರ್ಣಕುಟೀರದ ಪ್ರಶಾಂತಸ್ಥಲದಲ್ಲಿ ಕುಳಿತು ಪವಿತ್ರವಾದ ಓಲೆಗರಿಗಳಲ್ಲಿ ಸಹಸ್ರಾರು ಗ್ರಂಥಗಳನ್ನು ಏಕಾಗ್ರಚಿತ್ತದಿಂದ ಬರೆದಿಟ್ಟಿರುವರು. ಆದರೆ ನಮ್ಮ ನೂತನವರ್ಗವು ಅವುಗಳ ಕಡೆಗೆ ಕಣ್ತೆರೆದು ನೋಡದಷ್ಟು ಅಲಕ್ಷ್ಯಭಾವವನ್ನು ವಹಿಸಿದೆ. ಈ ಅಲಕ್ಷ್ಯಭಾವವು ಬಹು ದಿವಸಗಳಿಂದಲೂ ಬೇರೂರಿ ಹೋಗಿರುವುದರಿಂದ ವೀರಶೈವಸಮಾಜಕ್ಕೆ ಧರ್ಮತೃಷೆಯು ಬಹಳವಾಗಿ ಬಹು ದಿವಸಗಳಿಂದಲೂ ಬಳಲಹತ್ತಿದೆ. ಯಾವ ಪ್ರಕಾರ ಹಸಿದ ಮನುಷ್ಯನು ಹಳಸಿದ ಪದಾರ್ಥವನ್ನು ಸಹ ತಿನ್ನಲು ಹಿಂಜರಿಯುವದಿಲ್ಲವೋ ಅದೇ ಪ್ರಕಾರ ನಮ್ಮ ಜನರು ಅನಧಿಕಾರಿಗಳಿಂದ ಸಹ ಧರ್ಮಬೋಧೆಯನ್ನು ತೆಗೆದುಕೊಳ್ಳಲಾರಂಭಿಸಿದರು. ಈ ಪ್ರಸಕ್ತಿಯಲ್ಲಿಯೇ ಪದ್ಮದಳಾಕಾರ ಮುಖವುಳ್ಳ ಹಾಗೂ ಚಂದನಶೀತಳಸಮ್ಮತವಾದ ವಾಕ್ಯವುಳ್ಳ ಪಂಡಿತಂಮನ್ಯರು ಅಲ್ಲಲ್ಲಿ ಉದಯಿಸಿ ಸಮಾಜದ ಜನಮನವನ್ನಾಕರ್ಷಿಸಿ ಮನಬಂದಂತೆ ಬೋಧಿಸತೊಡಗಿದರು. ಇದರಿಂದ ಸಂಸ್ಕೃತ ಕಲಿತವರಮೇಲೂ ಜನರ ವಿಶ್ವಾಸವಳಿಯದೆ, ಸಂಸ್ಕೃತ ಕಲಿಯುವದರಲ್ಲೇನೂ ಅರ್ಥವಿಲ್ಲೆಂಬ ಉದ್ಗಾರವನ್ನು ಜನರು ಹೊರಡಿಸಲಾರಂಭಿಸಿದರು. ಇದೆಲ್ಲ ಧರ್ಮಸಿದ್ಧಾಂತ ಪ್ರತಿಪಾದಕ ಗ್ರಂಥಗಳ ಅಭಾವದ ದುಷ್ಪರಿಣಾಮವಾಗಿದೆ. ಶ್ರೀಭಗವತ್ಪಾದ ಜಗದ್ಗುರು ರೇಣುಕಾಚಾರ್ಯಕೃತ ಶ್ರೀ ರೇಣುಕಭಾಷ್ಯವು ಜರ್ಮನಿಯಲ್ಲಿರುವುದೆಂದು ಬಹು ಜನರು ತಿಳಿದುಕೊಂಡಿರುವರು. ಆದರೆ, ಜರ್ಮನಿಯಲ್ಲಿ ಪ್ರಸಿದ್ಧ ಪುಸ್ತಕಾಲಯವುಳ್ಳ ಬರ್ಲಿನ್ ನಗರದ ಪುಸ್ತಕಾಲಯಾಧಿಕಾರಿಯನ್ನು ಪತ್ರದ್ವಾರ ನಾನು ವಿಚಾರಿಸಿದುದರಲ್ಲಿ ಅವರು ಸರ್ವ ಪುಸ್ತಕಾಲಯಗಳ ಗ್ರಂಥಗಳ ಪಟ್ಟಿಗಳನ್ನೇ ನೋಡಿ ಜರ್ಮನಿಯಲ್ಲಿ ಈ ಗ್ರಂಥ ದೊರೆಯುವದಿಲ್ಲವೆಂದು ಉತ್ತರ ಬರೆದಿದ್ದಾರೆ. ನಾನು ಆಗಾಗ್ಗೆ (ವೀರಶೈವ) ಗ್ರಂಥಗಳ ನವಶೋಧನೆಯನ್ನು ಪ್ರಕಟಪಡಿಸುತ್ತೇನಷ್ಟೆ. ಈ ಸಾರೆ ಈ ಕೆಳಗೆ ವಿವರಿಸಿರುವ ಗ್ರಂಥಗಳು ದೊರೆದಿವೆ.

(1) ವೀರಭದ್ರ ಲೀಲಾರತ್ನ, (2) ಕೊರವಂಜಿ, ಈ ಕನ್ನಡ ಗ್ರಂಥಗಳು ಬಹಳ ಸಾರಸ್ಯವಾಗಿವೆ. (3) ಭಕ್ತಿಯಸೊನೆ, ಬಸವೇಶನ ವಿಷಯದಲ್ಲಿ ವಿಶೇಷ ಸಂಗತಿಯನ್ನು ತಿಳಿಸುವ ಬಹು ಮನೋಹರ ಗ್ರಂಥ. (4) ಏಕೋದೇವನ ಸ್ತೋತ್ರ. (5) ವೀರಶೈವಾಭರಣ. (6) ವೀರಾಗಮದ ಮತಸ್ಥಲ. (7) ಚೀಲಾಳಪ್ರಭುಸ್ವಾಮಿ ವಚನ. (8) ಮರುಳಾರಾಧ್ಯ ತ್ರಿವಿಧಿ. (9) ಮುರಿಗಾಸ್ವಾಮಿಗಳ ಪದ್ಯಗಳೂ ಮಂಗಲಗಳೂ. (10) ಪಾರ್ವತಿ ಪರಮೇಶ್ವರ ಸಂವಾದ ತಾರಾವಳಿ. (11) ಮುಂಡಿಗೆಯ ಪದ್ಯಗಳು (ರಾಘವಾಂಕಕೃತ.) (12) ಮೈಲಾರದ ಬಸಪ್ಪನವರಿಂದ ರಚಿತವಾದ ಚೌಪದಗಳು. (13) ಇಷ್ಟಲಿಂಗ ನಿರೀಕ್ಷಣೆಯ ವಿಚಕ್ಷಣ. (14) ಮಂಗಲಾಷ್ಟಕ (ಸಂಸ್ಕೃತದಲ್ಲಿ) ಪಾಲ್ಕುರಿಕೆ ಸೋಮನಾರಾಧ್ಯಕೃತ. (15) ಶೂಗಲತಾರಾವಳಿ. ಹೀಗೆಯೇ ಪ್ರಕಟವಾಗದಿರುವ ಅನೇಕ ಗ್ರಂಥಗಳಿದ್ದಾಗ್ಯೂ ಅವೆಲ್ಲವುಗಳನ್ನು ಸರ್ವತೋಮುಖವಾಗಿ ಶೇಖರಿಸಲು ವ್ಯವಸ್ಥೆ ಮಾಡುವ ಸಂಘವೊಂದಿಲ್ಲದಿರುವುದು ವೀರಶೈವ ಸಮಾಜದ ಶೋಚನೀಯ ಸ್ಥಿತಿಯಾಗಿದೆ. ನೋಡಿರಿ ಬಹು ದೂರ ದೇಶದ ಅಮೇರಿಕೆಯ ಆಲ್ಕಾಟ್ ಎಂಬುವನು ಮದ್ರಾಸಿಗೆ ಬಂದು ಅಲ್ಲಿಯ ಅಡ್ಯಾರ ಎಂಬ ಸ್ಥಳದಲ್ಲಿ ಸ್ಥಾಪಿಸಿದ ಪ್ರಾಚೀನಗ್ರಂಥಗಳ ಸೂರ್ಯಕಾಂತಿಯನ್ನೋದಿ ಯಾರುತಾನೆ ಚಕಿತರಾಗಲಾರರು ? ಆದ್ದರಿಂದ ಸಮಾಜಬಾಂಧವರು ಈ ಕಾರ್ಯವನ್ನು ಕೈಕೊಳ್ಳಬೇಕಾಗಿ ಕೋರಿಕೆ.

ಇದುವರೆಗೂ ನಮ್ಮಿಂದ ಶೋಧವಾದ ಗ್ರಂಥಗಳಿಂದ ವೀರಶೈವ ಧರ್ಮಕ್ಕೂ ಕರ್ನಾಟಕಕ್ಕೂ ಆಗಿರುವ ಪ್ರಯೋಜನಗಳು—(1) ರಾವಬಹದ್ದೂರ್ ಪ್ರಾಚ್ಯವಿದ್ಯಾವೈಭವ ಪ್ರಾಕ್ತನವಿಮರ್ಶ ವಿಚಕ್ಷಣ ರಾ|| ನರಸಿಂಹಾಚಾರ್ಯರು ನಮ್ಮಿಂದ ಬಹಳ ಉಪಕಾರವಾಗಿದೆ ಎಂದು ತಮ್ಮ ಅಮೂಲ್ಯ ಗ್ರಂಥವಾದ ಕರ್ನಾಟಕ ಕವಿಚರಿತೆಯಲ್ಲಿ ಉಲ್ಲೇಖಿಸಿದ್ದಾರೆ. (2) ಹೆಸರು ಗೊತ್ತಿಲ್ಲದ ವಚನಕಾರರನ್ನೂ ವಚನಗಳನ್ನೂ ಶೋಧಿಸಿ ಪ್ರಕಟಿಸಿದ್ದು. (3) ಸರ್ವಜ್ಞ ಗ್ರಂಥವನ್ನು ಪ್ರಕಟಿಸಲು ಮ|| ಉತ್ತಂಗಿ ಇವರಿಗೆ ಓಲೆಯ ಪ್ರತಿಯನ್ನೂ ಕಾಗದದ ಪ್ರತಿಯನ್ನೂ ಕೊಟ್ಟದ್ದು.— ಈ ಹಿಂದೆ ವಿಭಾಕರ ಪತ್ರಿಕೆಯಲ್ಲಿ ಇವರು ತಮ್ಮ ಕೃತಜ್ಞತೆಯನ್ನು ಪ್ರಕಟಿಸಿದ್ದಾರೆ. (4) ಶಿವಶರಣ ಜಕ್ಕಣ್ಣದೇವನ 15 ಗ್ರಂಥಗಳನ್ನು ಸ್ತೋತ್ರಮಂಜರಿ ಎಂಬ ಹೆಸರನ್ನಿಟ್ಟು ಪ್ರಕಟಿಸಿದೆ. [illegible] "[illegible]" ಎಂಬ ಗ್ರಂಥವು ಇದೇ ಶಬೆಯಿಂದಲೇ [illegible] [illegible] [illegible]

ಪಿಸಿ. ಇವುಗಳನ್ನು ಪ್ರಸಿದ್ಧಿಸಲು ಸಹಾಯಮಾಡುವವರಿಗೆ ಈ ಗ್ರಂಥಗಳು ಅರ್ಪಿಸಲ್ಪಡುವುವು. (೬) ಅರ್ಕಾಳಗಿಲಂಚಿ ಹೈಸ್ಕೂಲ್ ಪ್ರಿನ್ಸಿಪಾಲರಾದ ಮ॥ ಎಂ. ಆರ್. ಸಾಖರೆ, ಎಂ. ಎ. ಇವರು ನಮ್ಮ ಗ್ರಂಥಭಂಡಾರದಿಂದ ಶ್ರೀಕರಭಾಷ್ಯದ ಹಸ್ತಲಿಖಿತಪ್ರತಿಯನ್ನು ಎರವಾಗಿ ಓದಲು ತೆಗೆದುಕೊಂಡಿದ್ದಾರೆ. (೬) ಶಿವಯೋಗಮಂದಿರದ ವತಿಯಿಂದ ಶ್ರೀ ಸದಾಶಿವ ಶಿವಾಚಾರ್ಯ ಪಟ್ಟದದೇವರು ಷಟ್‌ಸ್ಥಲ ಗ್ರಂಥವನ್ನು ವೈದಿದ್ದಾರೆ. ಹೀಗೆಯೇ ಹಲವರು ಗ್ರಂಥಗಳನ್ನು ಓದುವ ಅವುಗಳಿಂದ ಅವರಿಗೆ ಬಹಳ ಉಪಯೋಗವಾದ ವಿಷಯ ವನ್ನು ವ್ಯಕ್ತಪಡಿಸಿದ್ದಾರೆ. ನಮ್ಮಲ್ಲಿ ಅನೇಕ ಪ್ರಾಚೀನಗ್ರಂಥಗಳಿರುತ್ತವೆ. ಅವುಗಳನ್ನು ಪ್ರಕಟಿಸಲು ಸಹಾಯಮಾಡುವವರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.

ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತಿ ಮಹೋತ್ಸವ.

ಸೊಲ್ಲಾಪುರ.

ವೀರಶೈವಮತಾಧೀಶಂ ವೀರಗೋತ್ರಾಧಿನಾಯಕಂ ।
ಜಗದ್ಗುರುಮಹಂವಂದೇ ರೇಣುಕಾಚಾರ್ಯಪುಂಗವಂ ॥

ಶ್ರೀ ಪರಶಿವಸದ್ಯೋಜಾತ ಮುಖೋದ್ಭೂತರಾದ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರು ಫಾಲ್ಗುಣ ಶು॥ ೧೩ ತಿಥಿಯಲ್ಲಿ ಕೊಲ್ಲಿಪಾಕಿ ಸೋಮನಾಥಲಿಂಗದಲ್ಲಿ ಆವಿರ್ಭವಿಸಿ ಭೂಲೋಕದಲ್ಲಿ ವೀರಶೈವಮತವನ್ನು ಸ್ಥಾಪಿಸಿದರು. ತಸ್ಮಾತ್ ಫಾಲ್ಗುಣ ಶು॥ ೧೩ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವೆಂದು ಬೋಧಿಸುವ ಶ್ರೀ ಷ॥ ಬ್ರ॥ ಚರಪಟ್ಟಾಧ್ಯಕ್ಷ ಮಹಲಿಂಗಸ್ವಾಮಿ ಜೈನಾಪುರ ಬೃಹನ್ಮಠ ಇವರ ವಾಕ್ಯಗಳನ್ನು ಕೇಳಿ ಗುರುಭಕ್ತಿಯುಕ್ತರಾದ ಸೊಲ್ಲಾಪುರದಲ್ಲಿ ಶ್ರೀಮಂತ ಸಿದ್ಧರಾಮಪ್ಪಾ ಜವಳಿ ಮಡಿವಾಳಪ್ಪಾ ದುಮಣೆ ಮಲ್ಲಪ್ಪಾ ಕೋನಾಪುರೆ ಸಿದ್ರಾಮಪ್ಪಾ ಪಟಣೆ ಸಿದ್ಧರಾಮಪ್ಪಾ ಬಾನಾಪುರೆ ಭೀಮಾಶಂಕರ ಮುಜಗೊಂಡ ಇವರೇ ಮೊದಲಾದ ಗುರುಭಕ್ತಪುಂಗವರು ಫಾಲ್ಗುಣ ಶು॥ ೧೩ ರವಿವಾರ ತಮ್ಮ ತಮ್ಮ ಗೃಹಗಳಲ್ಲಿ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರವನ್ನು ಸ್ಥಾಪಿಸಿ ವಿಧಿಪ್ರಕಾರವಾಗಿ ಪೂಜಿಸಿ ಗುರುಪ್ರಸಾದವನ್ನು ಸ್ವೀಕರಿಸಿದರು. ಅನಂತರದಲ್ಲಿ ಸಾಯಂಕಾಲ 5 ಘಂಟೆಗೆ ಶ್ರೀಮಂತ ಚನಬಸಪ್ಪಾ ಮಡಿಕಿ ಇವರ ಭವನದಲ್ಲಿ ಸಭೆಯು ಮಾಡಲ್ಪಟ್ಟಿತು. ಸಭೆಯಲ್ಲಿ ಪ್ರಥಮತಃ ಶ್ರೀಮದ್ವೀರಶೈವ ಪಾಠಶಾಲಾ ವಿದ್ಯಾರ್ಥಿಗಳು ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಭಾವಚಿತ್ರವನ್ನು ವೇದಾಧ್ಯಯನ ಪುರಸ್ಸರವಾಗಿ ಪೂಜಿಸಿ ಮಂಗಲವನ್ನು ಮಾಡಿದರು. ತರುವಾಯ ಸಭೆಯ ಅಧ್ಯಕ್ಷಸ್ಥಾನವು ವೀರಶೈವ ಪ್ರಮುಖರಾದ ಜಯದೇವರಾವ ದೇಶಮುಖ ಡಾಕ್ಟರ ಇವರಿಗೆ ಕೊಡಲ್ಪಟ್ಟಿತು. ಅನಂತರ ವೇ॥ ಶಂ॥ ಮಲ್ಲಿಕಾರ್ಜುನಶಾಸ್ತ್ರಿಗಳು ಮಹಾಜ್ಞಾರ ಸಿದ್ಧಮಲ್ಲಪ್ಪಾ ಕಲ್ಯಾಣಶೆಟ್ಟಿ ಮತ್ತು ಶ್ರೀಮದ್ವೀರಶೈವ ವಾರದ ಸಂಸ್ಕೃತಪಾಠಶಾಲಾ ಪ್ರೌಢವಿದ್ಯಾರ್ಥಿಗಳಾದ ವೇ॥ ಸದಾಶಿವ ಶರ್ಮ ಬೃಹನ್ಮಠ ರಾವ ಲಡಕಿ ಅಲ್ಲಮಪ್ರಭು ಬೃಹನ್ಮಠ ಆಲೂರ ಇವರು ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ನವಲೀಲೆಗಳನ್ನೂ ವೀರಶೈವಮತದ ಪ್ರಾಶಸ್ತ್ಯವನ್ನೂ ಕುರಿತು ಅನೇಕಾಗಮ ಉದಾಹರಣಪುರಸ್ಸರವಾಗಿ ಭಾಷಣವನ್ನು ಮಾಡಿದರು. ತರುವಾಯ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರು ಅನ್ಯಮತಾಚಾರ್ಯರಂತೆ ಮಾತೃಗರ್ಭದಲ್ಲಿ ಉದ್ಭವಿಸದೆ ಪರಶಿವನ ಸ್ವರೂಪಿಯಾದ ಶಿವಲಿಂಗದಲ್ಲಿ ಅವಿರ್ಭವಿಸಿ ಭೂತಲದಲ್ಲಿ ವೀರಶೈವಮತವನ್ನು ಸ್ಥಾಪಿಸಿ ಸಮಸ್ತರನ್ನು ಉದ್ಧಾರಗೊಳಿಸಿ ಮತ್ತು ಲಂಕಾ ಮೊದಲಾದ ದ್ವೀಪಗಳಿಗೆ ಹೋಗಿ ಅನೇಕ ಶಿವಲಿಂಗಗಳನ್ನು ಸ್ಥಾಪಿಸಿ 1400 ವರ್ಷಗಳವರೆಗೂ ಭೂಲೋಕದಲ್ಲಿ ವಾಸಮಾಡಿ ತಾವು ಯಾವ ಲಿಂಗದಲ್ಲಿ ಉದ್ಭವಿಸಿದರೋ ಅದೇ ಲಿಂಗದಲ್ಲಿ ಅಂತರ್ಧಾನರಾಗಿವರು. ತಸ್ಮಾತ್ ನಮ್ಮ ಮತಾಚಾರ್ಯರೇ ಪವಿತ್ರರು, ನಮ್ಮ ವೀರಶೈವಮತವೇ ಶ್ರೇಷ್ಠವಾದಂಥಾದ್ದೆಂದು ಹೇಳಿದರು. ತರುವಾಯ ಸಮಸ್ತರಿಗೂ ನಿತ್ಯಮಂಗಲವನ್ನುಂಟುಮಾಡಲೆಂದು ಶ್ರೀಮಜ್ಜಗದ್ಗುರು ರೇಣುಕಾಚಾರ್ಯರನ್ನು ಪ್ರಾರ್ಥಿಸಿ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಜಯಘೋಷಗಳೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ಬೆಂಗಳೂರು.

ಶ್ರೀ ರೇಣುಕ ಭಗವತ್ಪಾದರ ಜಯಂತಿಮಹೋತ್ಸವವನ್ನು ಬೆಂಗಳೂರು ವೀರಶೈವಸಮಾಜದವರು ಪದ್ಧತಿಯಂತೆ ಈ ವರ್ಷವೂ ಬಹುವೈಭವದಿಂದ ಆಚರಿಸಿದರು. ಬೆಂಗಳೂರಲ್ಲಿರುವ ಮ॥ ಗುಡೇಮಾರ್ನಹಳ್ಳಿ ಶಿವಪ್ಪನವರು ಅತ್ಯಂತ ಭಕ್ತಿಯಿಂದ ಮಾಡಿಸಿ ವಿಧ್ಯುಕ್ತವಾಗಿ ವೇ॥ ಗುರುಲಿಂಗಶಾಸ್ತ್ರಿಗಳವರ ಮುಖಾಂತರ ಪ್ರಾಣಪ್ರತಿಷ್ಠೆ ಮಾಡಿಸಿಕೊಟ್ಟ ಭಗವತ್ಪಾದ ರೇಣುಕಾಚಾರ್ಯರ ಉತ್ಸವಮೂರ್ತಿಯು ಈ ವರ್ಷದ ಜಯಂತಿಯನ್ನು ಸರ್ವಾಂಗಸುಂದರವನ್ನಾಗಿ ಮಾಡಿತು. ತಾ॥ 20-3-1932 ನೆಯ ಭಾನುವಾರ ರಾತ್ರಿ 8 ಘಂಟೆಗೆ ಸರಿಯಾಗಿ ಶ್ರೀ ರೇಣುಕ ಭಗವತ್ಪಾದರ ಉತ್ಸವವು ಅತ್ಯಂತ ಮನೋಹರವಾಗಿ ಕುಸುಮಶೋಭಿತವಾದ ವಿದ್ಯುದ್ದೀಪಗಳಿಂದಲಂಕೃತವಾದುದಾಗಿ ಈ ನಗರದ ಎಲ್ಲಾ ವೀಧಿಗಳಲ್ಲಿಯೂ ಬಹಳ ವಿಜೃಂಭಣೆಯಿಂದ ನಡೆಯಿತು. ಶ್ರೀವರ್ಣ ಗೌಡರ ವೀರಭದ್ರಪ್ಪನವರ ಧರ್ಮವೇದ ವಿದ್ಯಾಶಾಲೆಯ ವಿದ್ಯಾರ್ಥಿಗಳು ಮತ್ತು ವೇ॥ ಬ್ರ॥ ಭಾಸ್ಕರಪಂತ್ ಸುಬ್ಬನರಸಿಂಹಶಾಸ್ತ್ರಿ 'ವಿಶಾರ' ದ ಇವರ ವೇದಘೋಷವು ಶ್ರೀ ಪಂಚಾಚಾರ್ಯ ಸಂಸ್ಕೃತಪಾಠಶಾಲೆಯ ವಿದ್ಯಾರ್ಥಿಗಳ ಜಯ ಜಯಕಾರವು ಭೋಗಾಚಾರೆ ಯುತ್ತಿರಲು ಉತ್ಸವವು ವ್ಯತ್ಯಸ್ತ ಶೋಭೆಯನ್ನು ಪಡೆದು ವೀರಾಜಮಾನವಾಗಿದ್ದಿತು. ಈ ಉತ್ಸವಕ್ಕೆ ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಕೆ. ಟಿ. ಸಿಐ. ಇ. ಯವರು ಮ॥ ಗಳಾದ ಸಬ್ ಜಡ್ಜ್ ವೀರಬಸವಯ್ಯನವರು, ತುಮಕೂರು 1ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಸುಬ್ಬಣ್ಣನವರು, ಶ್ರೀವರ್ಣ ಗೌಡರ ರುದ್ರಪ್ಪನವರು, ಟಿ. ನಂಜಪ್ಪನವರು, ಎಂ. ನಾಗಪ್ಪನವರು, ಪಿ. ಎಂ. ಬಸಪ್ಪನವರು, ಜಿ. ಕೆ. ರುದ್ರಾರಾಧ್ಯರು, ಬಾಣಾವಾರದ ಹುಚ್ಚಪ್ಪನವರು, ಟಿ. ಎನ್. ಚನ್ನಪ್ಪನವರು, ಯಜಮಾನ್ ಮಾದಪ್ಪನವರು, ಗೊಲ್ಲಹಳ್ಳಿ ರುದ್ರಪ್ಪನವರು, ಹಲಸೂರು, ಯು. ಎಸ್. ಶಾಂತಪ್ಪನವರು, ಅಡ್ವೊಕೇಟ್ ಕೆ. ಸುಬ್ಬಯ್ಯನವರು, ಜಿ. ಸಿ. ವೀರಪ್ಪನವರು, ಪಿ. ಚನ್ನಯ್ಯನವರು, ಎನ್. ರುದ್ರಯ್ಯನವರು, ಜಿ. ಗಂಗಪ್ಪನವರು, ಕೆ. ನಾಗಪ್ಪನವರು, ಬಿ. ವಿ. ಭದ್ರಪ್ಪನವರು, ಹೆಚ್. ಭದ್ರಪ್ಪನವರು, ವೆಂಕಟಾಯಶೆಟ್ಟರು, ಕುಪ್ಪಶೆಟ್ಟರು, ಸುಬ್ಬರಾಯಪ್ಪನವರು, ಹೈಕೋರ್ಟ್ ಅಡ್ವೊಕೇಟ್ ವರದರಾಜಯ್ಯಂಗಾರ್‍ರು, ಮಂಡಿ ಹರಿಯಣ್ಣನವರು ಇವರುಗಳೇ ಮೊದಲಾಗಿ ಸ್ವಮತ ಪರಮತೀಯ ಬಾಂಧವರು ಆಗಮಿಸಿದ್ದರು. ಧಾರಿಯುದ್ದಕ್ಕೂ ಎಲ್ಲಾ ಮತೀಯರೂ ಭಿನ್ನಭಾವವಿಲ್ಲದೆ ಹಣ್ಣು ಕಾಯಿಗಳನ್ನು ಅರ್ಪಿಸಿ ಭಗವತ್ಪಾದರ ಅನುಗ್ರಹಕ್ಕೆ ಪಾತ್ರರಾದರು. ಈ ಪುಣ್ಯ ದಿವಸವನ್ನು ಮಹಂತಿನ ಮಠದಲ್ಲಿ ಪ್ರಥಮ ಗಣಾರಾಧನೆ ನಡೆಯಿತು. ಶ್ರೀಮನ್ನಿರಂಜನ ಜೋಳಿಮಠದ ಚರಮೂರ್ತಿಗಳು (ವಿರಕ್ತಸ್ವಾಮಿಗಳು) ದಯಮಾಡಿಸಿದ್ದರು. ದೊಡ್ಡದೊಂದು ಉತ್ಸವ ಸಮಾರಾಧನೆಗಳೇ

ಅಲ್ಲದೆ ಈ ವರ್ಷದ ಜಯಂತಿಯಲ್ಲಿ ಮತ್ತೊಂದು ವಿಶೇಷವಿತ್ತು. ಏನೆಂದರೆ, ಮಹಂತಿನ ಮಠದ ಮಹಡಿಯಮೇಲೆ ನೂತನವಾಗಿ ಹಾಕಿದ್ದ ಭವ್ಯವಾದ ಮಂಟಪದಲ್ಲಿ ಜಯಂತಿಯು ನಿಮಿತ್ತವಾಗಿ 4 ದಿವಸಗಳು ದೊಡ್ಡ ದೊಡ್ಡ ಸಭೆಗಳಾದುವು. ತಾ॥ 18-3-1932 ನೆಯ ಶುಕ್ರವಾರ 5 ಘಂಟೆಗೆ ಮ॥ ಸಬ್ ಜಡ್ಜ್ ವೀರಬಸವಯ್ಯ ಬಿ.ಎ., ಬಿ.ಎಲ್. ಇವರ ಅಧ್ಯಕ್ಷತೆಯಲ್ಲಿ ತುಮಕೂರು ಕೀರ್ತನಕೇಸರಿ ಕವಿರತ್ನ ವೇ॥ ಟಿ. ಶಿವಮೂರ್ತಿಶಾಸ್ತ್ರಿಗಳು "ಶ್ರೀ ರೇಣುಕವಿಜಯ" ಎಂಬ ಕೀರ್ತನದ ಕೆಲವು ಭಾಗಗಳನ್ನು ಬಹುಸರಸವಾಗಿಯೂ ಸಿದ್ಧಾಂತಪ್ರಕಾರವಾಗಿಯೂ ಹೇಳಿದರು. ಸಭಾಧ್ಯಕ್ಷರಾದ ಮ॥ ವೀರಬಸವಯ್ಯನವರು ಶಾಸ್ತ್ರಿಗಳವರ ಕೀರ್ತನನೈಪುಣ್ಯವನ್ನು ಕೊಂಡಾಡಿದ್ದಲ್ಲದೆ ಪ್ರಕೃತೋಚಿತವಾಗಿ ವೀರಶೈವಸಮಾಜಕ್ಕೆ ಹಿತವಾದ ಗಳನ್ನು ಹೇಳಿದರು. ತಾ॥ 19 ನೇ ಶನಿವಾರ ಸಾಯಂಕಾಲ ಹೈಕೋರ್ಟ್ ಜಡ್ಜರಾದ ಮ॥ ಪಿ. ಮಹಾದೇವಯ್ಯ, ಬಿ.ಎ., ಬಿ.ಎಲ್. ರವರ ಅಧ್ಯಕ್ಷತೆಯಲ್ಲಿ ಕೊಟ್ಟೂರು ವೇ॥ ಶಂ॥ ಮರುಳಸಿದ್ಧಶಾಸ್ತ್ರಿಗಳು, ಮ॥ ಹೆಚ್. ಸಿದ್ಧವೀರಪ್ಪನವರು ಸಹ "ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ" ಮೇಲೆ ಬಹಳ ಚನ್ನಾಗಿ ಮಾತನಾಡಿದರು. ಕನ್ನಡನಾಡಿನಲ್ಲಿ ಪ್ರಸಿದ್ಧರಾದ ಮ॥ ಎಂ. ಆರ್. ಶ್ರೀನಿವಾಸಮೂರ್ತಿ ಬಿ.ಎ., ಎಂಬವರು "ಷಟ್‌ಸ್ಥಲ" ದ ವಿಷಯವಾಗಿ ಬಹಳ ಸ್ವಾರಸ್ಯವಾಗಿ ಮಾತನಾಡಿದರು. ಅನಂತರ ಅಂದಿನ ಸಭಾಧ್ಯಕ್ಷರಾದ ಮ॥ ಪಿ. ಮಹಾದೇವಯ್ಯನವರು ಉಪನ್ಯಾಸಕರ ವಿಚಾರವಾಗಿಯೂ, ವೀರಶೈವಸಮಾಜದ ವಿಚಾರವಾಗಿಯೂ ಬಹಳ ಗಂಭೀರವಾಗಿ ಭಾಷಣಮಾಡಿದರು. ತಾ॥ 20 ನೆಯ ಭಾನುವಾರ ಸಾಯಂಕಾಲ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಕೆ. ಟಿ. ಸಿಐ. ಇ. ಯವರ ಅಧ್ಯಕ್ಷತೆಯಲ್ಲಿ ಸಭೆಸೇರಿತ್ತು. ಮ॥ ಗೌಡರ ವೀರಭದ್ರಪ್ಪನವರ ವೇದಪಾಠಶಾಲೆಯ ವಿದ್ಯಾರ್ಥಿಯಾದ ಎಂ. ಜಿ. ನಂಜುಂಡಾರಾಧ್ಯರೆಂಬವರು ಮಾಡಿದ ವೀರಶೈವಮತದ ಸಂಬಂಧವಾದ ಭಾಷಣವು ಬಹಳ ಬೆಲೆಯುಳ್ಳದ್ದಾಗಿದ್ದಿತು. ಶ್ರೀ ರೇಣುಕಾದಿ ಪಂಚಾಚಾರ್ಯರ ಪಾಠಶಾಲೆಯ ವಿದ್ಯಾರ್ಥಿಗಳು "ಷಟ್‌ಸ್ಥಲ" ದ ವಿಚಾರವಾಗಿ ಮಾಡಿದ ಪ್ರಸಂಗಗಳು ಮನೋಹರವಾಗಿದ್ದುವು. ಅನಂತರ ಕೊಟ್ಟೂರು ವೇ॥ ಶಂ॥ ಮರುಳಸಿದ್ಧಶಾಸ್ತ್ರಿಗಳೂ, ತುಮಕೂರು ಕೀರ್ತನಕೇಸರಿ ಶಿವಮೂರ್ತಿಶಾಸ್ತ್ರಿಗಳೂ ವೀರಶೈವಮತದ ವಿಚಾರವಾಗಿಯೂ ದೊಡ್ಡಬಳ್ಳಾಪುರದ ವೇ॥ ಬಸವಾರಾಧ್ಯರ ಪುತ್ರಿ ಸೌ॥ ಉಮಾದೇವಮ್ಮನವರು "ಸ್ತ್ರೀ ವಿದ್ಯಾಭ್ಯಾಸ" ವಿಚಾರವಾಗಿಯೂ ಮಾಡಿದ ಭಾಷಣಗಳು ಸಭಿಕರ ಮನಸ್ಸನ್ನು ಆನಂದಗೊಳಿಸಿದುವು. ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷೋಪನ್ಯಾಸವು ಬಹು ಮನನೀಯವಾಗಿದ್ದಿತು. ಈ ಮಹೋತ್ಸವವು ತಾ॥ 20 ನೆಯ ಭಾನುವಾರಕ್ಕೆ ಮುಗಿದರೂ ತಾ॥ 21 ನೆಯ ಸೋಮವಾರ ಸಾಯಂಕಾಲ ಯಥಾಪ್ರಕಾರ ಮಹಂತಿನ ಮಠದ ಮಹಡಿಯಮೇಲೆ ಹಾಕಿರುವ ಸಭಾಚಪ್ಪರದಲ್ಲಿ ಹೈಕೋರ್ಟ್ ವಕೀಲರೂ ಘನವಿದ್ವಾಂಸರೂ ವಿಶಾಲಚಿತ್ತರೂ ಆದ ಮ॥ ವರದರಾಜಯ್ಯಂಗಾರ್, ಬಿ.ಎ., ಬಿ.ಎಲ್. ಇವರ ಅಧ್ಯಕ್ಷತೆಯಲ್ಲಿ ಕೀರ್ತನಕೇಸರಿ ಶಿವಮೂರ್ತಿಶಾಸ್ತ್ರಿಗಳವರು ಮೊದಲನೆಯ ದಿವಸ ಹೇಳಿ ಬಿಟ್ಟಿದ್ದ ರೇಣುಕವಿಜಯದ ಉಳಿದ ಭಾಗಗಳನ್ನು ಪೂರ್ಣಮಾಡಿದರು. ಕೀರ್ತನಾನಂತರ ಅಂದಿನ ಅಧ್ಯಕ್ಷರು ಶ್ರೀ ರೇಣುಕಾದಿ ಆಚಾರ್ಯರವರ ಮಹಿಮೆಯನ್ನು ಕೊಂಡಾಡಿ, ವೀರಶೈವರು ವರ್ಷೇ ವರ್ಷೇ ಇತೋಪ್ಯತಿಶಯವಾಗಿ ಶ್ರೀ ರೇಣುಕಾದಿ ಆಚಾರ್ಯರ ಜಯಂತಿಗಳನ್ನು ಆಚರಿಸಿ ಪಂಚಮ್ಯಾದಿ ಮತಗಳಾದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತಗಳಲ್ಲೊಂದಾದ "ಶಿವಾದ್ವೈತ" ಮತವಾದೀವೀರಶೈವಮತವನ್ನು ಅತ್ಯುನ್ನತಸ್ಥಿತಿಗೆ ತಂದು ವೇದಧರ್ಮೋದ್ಧಾರಕಾರ್ಯಕ್ಕೆ ನೆರವಾಗಬೇಕೆಂದು ಆಶಿಸಿದರು. ಈ ಮಹಾಚಾರ್ಯರ ಜಯಂತಿ ವಿಚಾರದಲ್ಲಿ ಬೆಂಗಳೂರು ದೇಶದ ಶೆಟ್ಟರೂ ಯಜಮಾನರೂ, ಮೊದಲಾದ ಎಲ್ಲಾ ವೀರಶೈವರು ಅತ್ಯಂತ ಶ್ರಮವಹಿಸಿ ಗುರುಸೇವೆಯನ್ನು ಮಾಡಿ ಶಿವಾನುಗ್ರಹಕ್ಕೆ ಪಾತ್ರರಾಗಿರುತ್ತಾರೆ. ಒಟ್ಟಿನಲ್ಲಿ ಬೆಂಗಳೂರು ರೇಣುಕಜಯಂತೀಮಹೋತ್ಸವವು ಆದರ್ಶನೀಯವೂ ಶ್ಲಾಘನೀಯವೂ ಆಗಿದ್ದಿತು.

ಸಮಾಜಬಂಧು.

ಆಸ್ಥಾನವಿದ್ವಾನ್ ಶ್ರೀಮಾನ್ ವೇದಮೂರ್ತಿ ಬಿ. ಎಂ. ತ್ರ್ಯಂಬಕ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯವಿಮರ್ಶೆಯೂ.

(ಲೇಖಕ—ವೇ॥ ಎಚ್. ಗೋಪಾಲಕೃಷ್ಣಮಾಚಾರ್ಯ, ಕರ್ನಾಟಕ ಪಂಡಿತರು, ಟ್ರೇನಿಂಗ್ ಕಾಲೇಜು, ಮೈಸೂರು.)

ದಿಗ್ದರ್ಶನಂ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಕಂದ॥ ಗುರುವಂ ಸಚ್ಚಿದ್ಘನಶಿವ । ಗುರುವಂ ನೆನೆನೆನೆದುಪೊಗಳು ತುಂಪೊಡಮಡುವೆಂ ॥ ಗುರುವಿಂದಧಿಕಂ ಸುರವರ । ಗುರುವಂತೆಸದಿರ್ಪನಮಲಮತಿವ್ಯಭವದಿಂ ॥೨೨॥

ವಿದ್ಯಾಗುರುವನ್ನೂ, ಉತ್ತಮವಾದ ಜ್ಞಾನಘನನಾಗಿರುವ ಶಿವಾತ್ಮಗುರುವನ್ನೂ ಮನಸ್ಸಿನಲ್ಲಿ ನೆನೆನೆನೆದು ಹೊಗಳುತ್ತ ನಮಸ್ಕರಿಸುವೆನು. ಮನುಷ್ಯಮಾತ್ರನು ಭಕ್ತಿಯಿಂದ ಗುರುವನ್ನು ನಮಸ್ಕರಿಸುವುದರಿಂದ ಬೃಹಸ್ಪತಿಯಂತೆ ಪರಿಶುದ್ಧವಾದ ಬುದ್ಧಿಯ ಅಧಿಕ್ಯದಿಂದ ಪ್ರಕಾಶಿಸುವನು. (ಶ್ರುತಿ—"ಆಚಾರ್ಯದೇವೋಭವ" ಇತ್ಯಾದಿ.)

ಆತ್ಮನಾತ್ಮಾನಮಸ್ಯಾತ್ಮಾ ಗತಿರಾತ್ಮಾ ತಥಾತ್ಮನಃ । ಮಾವಮಂಸ್ಥಾಃ ಸ್ವಮಾತ್ಮಾನಂ ನೃಣಾಂ ಸಾಕ್ಷಿಣಮುತ್ತಮಂ ॥

ತಾನೇ ತನಗೆ ಸಾಕ್ಷಿಯೂ ಗತಿಯೂ ಹೀಗೆ ಸರ್ವೋತ್ಕೃಷ್ಟಸಾಕ್ಷಿಯಾಗಿರುವ ತನ್ನನ್ನು ವಂಚನೆ ಅನೃತ ಕಪಟ ಡಂಭನಾದಿಗಳಿಂದ ಅವಮಾನಪಡಿಸಿಕೊಳ್ಳಬೇಡ. ಎಂದರೆ ಹೇಸಿಗೆಯ ಗುಣಗಳಿಂದ ನಿನ್ನನ್ನು ನೀನೇ ಹೊಲಸು ಮಾಡಿಕೊಳ್ಳಬೇಡ ॥೨೩॥

ಕಂದ॥ ಅರಿಯಲರೋಳಗಾಂಪಿರಿಯಂ । ಬರಹುತ್ತನಗಮಿಗಿಲ್ವನ ನ್ನಿಂಪಿರಿಯಂ ॥ ಅರಿವಿನಬಲ್ಲಹರಿರಿಂ । ಬರಿಯದೆಗುಣ ಮೊದವೆಂದಿರ್ಪಬಿಡುವುದುಬರೆಸಂ ॥೨೪॥

ತಿಳಿಯದವರಲ್ಲೆಲ್ಲಾ ನಾನು ಬಹಳ ದೊಡ್ಡವನು. ಗರ್ಜಿಸುತ್ತ ನನ್ನೊಡನೆ ವಾದಕ್ಕೆ ಬರುವವನು ನನಗಿಂತಲೂ ಬಲು ದೊಡ್ಡವನು. ಜ್ಞಾನಪೂರ್ಣರು ಯಾರೇ ಆಗಲಿ ತಿರಸ್ಕರಿಸದೆ ಇದರಲ್ಲಿ ದೋಷಗಳು ಹೋಗಿ ಗುಣಬರುವಂತೆ ಇದನ್ನು ತಿದ್ದಬೇಕು ॥೨೪॥

"ಗುಣಯುಕ್ತಮುಂದೋಷದೂರಮುಮಾಗೆಮುಚ್ಚಿಕೊಳ್ಳುದಿದಂ" ಇತ್ಯಾದಿ.

ಕಂದ॥ ತಪ್ಪಿಬಡಿಡನೇಪೊಲ್ತಂ । ತಪ್ಪನೆಮಿಶ್ವರಪರತದೇನುಮನೊಪ್ಪಂ ॥ ಮುಪ್ಪಿನಕಳುಂಟಂದೊಣ್ಣೆಯ । ನಪ್ಪದೆ ಬಿಡನಪ್ಪೆಬಿಳ್ವೆನೆಂಬೊದರಿನಿಂ ॥೨೫॥

ತಪ್ಪನ್ನೇ ಮಾಡುವ ಮಂದಬುದ್ಧಿಯುಳ್ಳವನು ಯಾವಾಗಲೂ ತಪ್ಪನ್ನೇ ಆಶ್ರಯಿಸಿಕೊಂಡಿದ್ದು ಸರಿಯಾದುದು ಯಾವುದನ್ನೂ ಒಪ್ಪುವುದೇ ಇಲ್ಲ. ಏಕೆಂದರೆ, ಮುದುಕನಾದ ಕುಂಟನು ತಾನು ಬಿದ್ದುಬಿಡುತ್ತೇನೆಂಬ ಭಯದಿಂದ ಕೈಯಲ್ಲಿ ಹಿಡಿದುಕೊಂಡಿರುವ ದೊಣ್ಣೆಯನ್ನು ಬಹಳ ಗಟ್ಟಿಯಾಗಿ ಹಿಡಿದುಕೊಂಡೇ ಇರುತ್ತಾನಲ್ಲವೆ?

"ಜ್ಞಾನಲವದುರ್ವಿದಗ್ಧಂ ಬ್ರಹ್ಮಾಪಿ ನರಂ ನರಂಜಯತಿ" ಇತ್ಯಾದಿ.

"ಜ್ಞಾನಲವದಿಂದ ಅರ್ಧೆಟಿಸುವವನನ್ನು ಚತುರ್ಮುಖನೂ ಮೆಚ್ಚಿಸಲಾರನು ॥೨೬॥

ಕಂದ॥ ತಪ್ಪಿಗೆನೋಂತವನೊಬ್ಬಗ । ನಪ್ಪಂ ನೀನವನಕೆಣಕಿಕಿದಿರು ಸುಮತೀ ॥ ತಪ್ಪಿದನೆಂದೆನೆಕಿನಿಸಿಂ । ಕಪ್ಪದೆಮೇಲ್ವಾಯ್ದು ತಲೆಗೆರಗೆಯಕೊಲಂಬಂ ॥೨೭॥

ತಪ್ಪನ್ನೇ ಮಾಡಬೇಕೆಂದು ಕಂಕಣಕಟ್ಟಿಕೊಂಡಿರುವವನು ಜ್ಞಾನಹೀನನೇ ಆಗುತ್ತಾನೆ. ಒಳ್ಳೆಯ ಬುದ್ಧಿಯುಳ್ಳವನೇ, ನೀನು ಅವನನ್ನು ಕೆಣಕಬೇಡ. ಅಯ್ಯಾ, ಇಂತಹ ಕಡೆ ತಪ್ಪಿದ್ದೀಯೆ ನೋಡೆಂದು ತೋರಿಸಿಕೊಟ್ಟರೆ ಕೋಪದಿಂದ ಖಂಡಿತವಾಗಿ ನಿನ್ನ ಮೇಲೆಯೇ ಬಿದ್ದು ನಿನ್ನ ತಲೆಯನ್ನೇ ಒಡೆದುಹಾಕುತ್ತಾನೆ (ಇದು ದುರ್ಜನರ ಸ್ವಭಾವವು").

"ಕುಜನಬ್ರಹ್ಮವಗೆಲ್ಲಾಗರ್ವಮರಿದ್ಯೆ ಸರ್ವಜ್ಞ ಚೋದಿಯಾಣೇ"

ಕುವಿದಗ್ಧ ಶಠಾಃ ಧೂರ್ತಾಃ ದಾಂಭಿಕಾಃ ಖರವೃತ್ತಯಃ । ಮೂರ್ಖಾಃ ಕ್ರೂರಾಃ ಮಲೋಪೇತಾಃ ನಭಾಷ್ಯಾಃ ಬ್ರಹ್ಮವಾದಿಭಿಃ ॥

ಅಲ್ಪಜ್ಞರು ಶಾಠ್ಯವುಳ್ಳವರು ವಂಚಕರು ಡಂಭಾಚಾರವುಳ್ಳವರು ತೀಕ್ಷ್ಣಸ್ವಭಾವವುಳ್ಳವರು ಹಟವಾದಿಗಳು ಭಯಂಕರ ವ್ಯಾಪಾರವುಳ್ಳವರು ಪಾಪಿಗಳು ಇವರೇ ಮುಂತಾದವರೊಡನೆ ತಿಳಿದವರು ಮಾತನಾಡಲೇ ಬಾರದು ॥೨೮॥

ಕಂದ॥ ಕಿರಿಯರಿಂ ಪಂದಂ ತಡಹುತ । ಮರಿದರಕಳ್ಳೊಯ್ಯ ಮೊರೆದು ಮುಂದ್ಯೆತರುತುಂ ॥ ಅರಿವಿಗೆಸುಂಕವಕೊಂಬಾ । ಮರುಳಂ ಪೊರದೂಡಿಬಾಳ್ಬುದಲೆಯೊಳ್ ಚದುರರ್ ॥೨೯॥

ಅಲ್ಪವಾದ ಜ್ಞಾನದಿಂದಲೇ ಪ್ರಮುಖನ್ನ ಮುಂದಕ್ಕೆ ಹೋಗುತ್ತಾ ತಿಳಿದವರೊಡನೆ ಹೊಡೆದಾಡಿ ಗರ್ವಪಟ್ಟು ಮುಂದೆಬರುತ್ತಾ ಜ್ಞಾನಕ್ಕೆ ಸುಂಕವನ್ನು ತೆಗೆದುಕೊಳ್ಳುತ್ತಾ ಇರುವ ಹುಚ್ಚನ್ನು ಹೊರಕ್ಕೆ ತಳ್ಳಿ ಬುದ್ಧಿವಂತರು ಬದುಕಬೇಕು.

"ದುರ್ಜನಃ ಪರಿಹರ್ತವ್ಯಃ ವಿದ್ಯಯಾಲಂಕೃತೋಽಪಿಸಃ । ಮಣಿನಾ ಭೂಷಿತಸ್ಸರ್ಪಃ ಕಿಮಸೌ ನ ಭಯಂಕರಃ ॥"

ದುಷ್ಟನು ವಿದ್ವಾಂಸನಾದರೂ ಅವನನ್ನು ಬಿಟ್ಟುಬಿಡಬೇಕು. ಏಕೆಂದರೆ, ಸರ್ಪವು ರತ್ನದಿಂದ ಭೂಷಿತವಾಗಿದ್ದರೂ ಅದು ಭಯಂಕರವೇ ಅಲ್ಲವೇ? ॥೨೯॥

ಕಂದ॥ ಪೆಣ್ಣರಿವಿಂದಂ ಪಿರಿಯರ । ಕಣ್ಣಿಗೆಮಣ್ಣೆರಚಿಜರೆಯುತಗ್ಗರ ನೆಲ್ಲಂ ॥ ಕಣ್ಣನೆಮಾಡುತ್ತವಂ । ಬಣ್ಣಿಸಿಕೊಳ್ಳುತ್ತಮೆಸವವನೆಯರೆಮರುಳ್ಗಳ್ ॥೩೦॥

ಅತ್ಯಲ್ಪವಾದ ಜ್ಞಾನದಿಂದಲೇ ದೊಡ್ಡವರ ಕಣ್ಣಿಗೆ ಮಣ್ಣೆರಚಿ, ತಿರಸ್ಕರಿಸುತ್ತಾ, ತನಗಿಂತ ಚಿಕ್ಕವರನ್ನೆಲ್ಲಾ ಸೋಲಿಸುತ್ತಾ, ಅವರಿಂದ ತಾನು ತಿಳಿದವನೆಂದು ಹೊಗಳಿಸಿಕೊಳ್ಳುತ್ತ ಕೆಲವರು ಅಲ್ಪರಾದ ಮಂಕರು ಬಹಳ ಮೆರೆಯುತ್ತಾರೆ; ಇಂತಹವರೇ ಅರೆಹುಚ್ಚುಗಳು.

ಅಜ್ಞಾನಿಗಳು ತಾವು ಜ್ಞಾನಪೂರ್ಣರೆಂದು ಪ್ರಕಟಿಸಿಕೊಳ್ಳಲು ಯತ್ನಿಸಿ ತಾವು ಅಜ್ಞಾನಿಗಳೆಂಬುದನ್ನೇ ಸ್ಥಿರಪಡಿಸಿಕೊಳ್ಳುವವರು ಆಗುತ್ತಾರೆ.

"ಕೃಪಾರ್ಣವಪ್ರವಿಶ್ರಣಮಪಿದುರಂತದುರಿತೋದಯಾಯೈವ"

ಅವರೊಡನೆ ಮಾತನ್ನು ವಿಶ್ರಮಮಾಡುವುದೂ ಕೊನೆಯಿಲ್ಲದ ಪಾಪೋತ್ಪತ್ತಿಗೋಸ್ಕರವೇ ॥೩೦॥

ಕಂದ॥ ಅರಿವಂನಡೆನುಡಿಯೆಂಕದ । ಕುರುಪಿಂ ಬಿತ್ತರಿಸುತೊಪ್ಪುಗೆ ಮ್ಮಂಬಿಬುಧರ್ ॥ ಅರಿದರಬಾಳೇಜಗದು । ದ್ಧರಣಕೆಪಿರಿದಪ್ಪ ಸಾಧನಂಪೆರತೇಕೋ ॥೩೧॥

ತಮ್ಮ ಹೆಚ್ಚಾದ ಜ್ಞಾನವನ್ನು, ತಮ್ಮ ನಡೆ, ನುಡಿಗಳ ರೂಪವಾದ ಕಾರ್ಯದ (ಕ್ರಿಯೆಯ) ಗುರುತಿನಿಂದ ಲೋಕಕ್ಕೆ ಪ್ರಕಟಪಡಿಸುತ್ತಾ ವಿದ್ವಾಂಸರು ನಮ್ಮನ್ನು ರಕ್ಷಿಸಲಿ. ತಿಳಿದವರ ಜೀವನಕ್ರಮವೇ ಜಗತ್ತನ್ನು ಉತ್ತಮಗೊಳಿಸುವುದಕ್ಕೆ ದೊಡ್ಡ ಸಾಧನವು. ಇದಕ್ಕೆ ಬೇರೆ ಯಾವ ಸಾಧನ ತಾನೇ ಬೇಕಾಗಿದೆ.

"ಯದ್ಯದ್ವಿಭೂತಿಮತ್ಸತ್ವಂ ಶ್ರೀಮದೂರ್ಜಿತಮೇವವಾ । ತತ್ತದೇವಾವಗಚ್ಛತ್ವಂ ಮಮತೇಜೋಂಶಸಂಭವಂ ॥"

"ಎಲ್ಲೆಲ್ಲಿ ಉತ್ತಮವಾದ ಗುಣಗಳು ಕಾಣಬರುತ್ತವೋ ಅವೆಲ್ಲವೂ ನನ್ನ ಅಂಶಗಳೇ" ಎಂಬುದು ಭಗವದ್ವಾಕ್ಯವು. ಸಜ್ಜನನಾದ ವಿದ್ವಾಂಸನನ್ನು ಗೌರವಿಸಬೇಕು ॥೩೧॥ (ಸಶೇಷ.)

೧೯೩೨ ನೆಯ ಇಸವಿ ಏಪ್ರಿಲ್ ತಾ॥ ೪ರಿಂದ ಏಪ್ರಿಲ್ ತಾ॥ ೧೦ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೩ ನೆಯ ಪ್ರಜೋತ್ಪತ್ತಿನಾಮ ಸಂವತ್ಸರದ ಫಾಲ್ಗುಣ ಬಹುಳ ಚತುರ್ದಶಿಯಿಂದ ಶಾಲೀವಾಹನಶಕ ೧೮೫೪ ನೆಯ ಅಂಗೀರಸನಾಮಸಂವತ್ಸರದ ಚೈತ್ರ ಶುದ್ಧ ಚೌತಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವಿಜಾನ ಮಾಸ
4	ಸೋಮ	ಚತು	52-21	ಪೂಭಾ	19-18	23
5	ಮಂಗಳ	ಅಮಾ	56-53	ಉಭಾ	24-48	24
6	[1] ಬುಧ	ಪಾಡ್ಯ	60	ರೇವ	31-5	25
7	ಗುರು	ಪಾಡ್ಯ	2-24	ಅಶ್ವಿ	37-41	26
8	ಶುಕ್ರ	ಬಿದಿ	7-39	ಭರ	44-13	27
9	[2] ಶನಿ	ತದಿ	12-33	ಕೃತ್ತಿ	50-16	28
10	ಭಾನು	ಚೌತಿ	16-44	ರೋಹಿ	55-31	29

(1) ಚಾಂದ್ರಸಂವತ್ಸರಾರಂಭ, ಮಳೆನಕ್ಷತ್ರ-ರೇವತಿ ೪ ನೆಯ ಪಾದ
(2) ಮಳೆನಕ್ಷತ್ರ-ರೇವತಿ ೨ ನೆಯ ಪಾದ.

ಮೈಸೂರು: ಮೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG N. O. M. 124

ಮೈಸೂರ್ ಸ್ಟಾರ್.

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಶ್ರೀಕೃಪಾ । ಭೂನಪತಕ್ಷತಾವಹಾರಾ ಪಕ್ಷ್ಮಜ ನಕ್ಷತ್ರ ಸೋಮರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ಸಾಕಲಿತ ಸಾಡ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಶ್ರೀಮಂಚೆತ್ತೆಯುಂಗಚಾಪುರಿಗೆ ಗೌರೀಶಾಭುಕಂಪ್ರೋಜ್ಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಶೈಪ್ರಂಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆರ್ ೧೯೩೨ ನೆಯ ಇಸವಿ ಏಪ್ರಿಲ್ ತಾರೀಖು ೧೧ ನೆಯ ಸೋಮವಾರ [ಸಂಚಿಕೆ ೧೫

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place for insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries, Economic Superintendents, Helpers and the Insurance Office, Public Office Buildings Bangalore.

(Sd.) S. SHA MANNA,
Secretary, Insurance Committee.

[50—39]

ನೋಟೀಸು.

ಬೆಂಗಳೂರು ಮತ್ತು ಮೈಸೂರು ಪುರನಿವಾಸಿಗಳಿಗೆ ವಿಜ್ಞಾಪನೆ— ಈ ಪಟ್ಟಣಗಳಲ್ಲಿ ಈಚೆಗೆ ದೊಡ್ಡ ಬೆಳಕುಗಳ ಡೂಮುಗಳನ್ನು (ornamental Lamp Domes) ತುಂಟರು ಒಡೆಯುತ್ತಿದ್ದಾರೆ. ಇದರ ಕ್ರಯ ಒಂದಕ್ಕೆ ಸುಮಾರು ೫೦ ರೂಪಾಯಿ ಆಗುತ್ತೆ.

ದೇಶಾಭಿಮಾನಿಗಳಾದ ನೀವು ಯಾರಾದರು ಅವನ್ನ ನೋಡಿದ ಪಕ್ಷದಲ್ಲಿ ಹತ್ತಿರವಿರುವ ಪೊಲೀಸು ಸ್ಟೇಷನ್ನಿಗಾಗಲಿ ಅಥವಾ ನಮಗಾಗಲಿ ತಿಳಿಸಿದರೆ ನಾವು ಬಹಳ ಕೃತಜ್ಞರಾಗುತ್ತೇವೆ.

ಸಿ. ಎಂ. ಕರಿಯಪ್ಪ,
ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್.

[4—1]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗ ಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ | ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ರಜಿ] ವಜ್ರಾಂಗ ಸುಂದರಪಾಕದ. [ಸ್ಟರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಡಿಲ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು ನಿದ್ದೆ ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧೀ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಿಣಿ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೫॥ ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಕ್ಷೀಸು ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಡಿಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ ಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ಕೀವ್ರ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋದಿವಾಗುವದಿಲ್ಲ ಮತ್ತು ಬಡತನಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂತಿ ಮತ್ತುಪವೋ, ಇಂಥ ಬೇರೆ ಕಾರಣದಿಂದ ಸಂತತಿ ಇಚ್ಛಾ ಯಾರಿಗೆ ತೀರಿರುತ್ತದೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. ಶರೀರದಲ್ಲಿಯೂ ಸಂಸಾರ ಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆ ವೇಳೆಗೆ ಮುಡಿಚೆಟ್ಟು ಆಗುವದು ಸುರು ಇದ್ದು ಗರ್ಭಧಾರಣ ಬಂದು ಹೀಸುವದು. ಹಿಂದಿನಿಂದ ಬಿಡುಮಾಡಿದರೂ ಸುರು ಆಗುವದಿಲ್ಲ ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರ ಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ ಒಂದು ಡಬ್ಬಿಗೆ ೭ ರೂ. ಟ. ಖ. ೮ ಆಣೆ. ಮತ್ತು ಕಡೆಗಾದ ೪ ನೇ ದಿವಸ ಒಂದು ಪುಡಿ ತಣ್ಣೀರಿನ ಕೂಡ ಸೇವಿಸುವುದು. ೫ ನೇ ದಿವಸದಿಂದ ಮುಂಜಾನೆ ೧, ಗುಳಿಗೆ ಮಧ್ಯಾಹ್ನಕ್ಕೆ ೧, ಗುಳಿಗೆ ರಾತ್ರಿ ಊಟವಾದ ಅನಂತರ ೧ ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ನಾಸ್ತಿ. ಕೆಲವು ಹೆಚ್ಚು ಹಚ್ಚಿಗೆ ಇರುವ ಪತ್ರಿಕೆ ತರಿಸಿ ಓದಿಕೊಳ್ಳಿರಿ. [೫೦—೧೬]

ಪತ್ರ ಮೂಲಕ:—ವೈದ್ಯ ವಿ. ಎಸ್. ಕಾಪಸ, ಮು. ಪೋ. ಮಿರಜ. ಎಂ. ಎಸ್. ಎಂ.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕಾರ್ಲ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇಂ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿವಾಸಿ	೦—೪—೦	೦—೯—೦
ವೃಷಪಂಚಕ	೦—೪—೦	೦—೯—೦
ಗುರುಶಂಕರರೇಶ್ವರಶತಕ	೦—೧—೦	೦—೬—೦
ಬಸವೇಶ್ವರನಜನನ	೦—೮—೦	೦—೧೪—೦
ಸಟೀಕ ಕರ್ನಾಟಕಶಬ್ದಮಂಜರಿ	೦—೮—೦	೦—೧೪—೦
ಸಟೀಕ ಶತಕತ್ರಯ	೧—೦—೦	೧—೬—೦

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—ಶಿರಶ್ಶೂಲೆ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಕಫದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೧೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚುಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು, ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ವಿಷಯವಾಗಿ ಉಪಯೋಗಿಸುತ್ತಾರೆ. ಮಾದರಿ ಶೀಶೆ ಪುಕಸಟ್ಟೆ ಕಳುಹಿಸಲಾಗುವುದು.

(Registerd Trade Mark)

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೪ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ಬರೆಯಬೇಕೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್,
[೫೦—೩೩] ಪೋ. ಬಾ. ೫೫೧, ಮದರಾಸು.

ಮೈಸೂರು ಸ್ಟಾರ್.

೧೯೩೩ ನೇ ಇಸವಿ ಏಪ್ರಿಲ್ ತಾ|| ೧೧ ನೆಯ ಸೋಮವಾರ.

MYSORE UNIVERSITY SENATE.

If any one thinks that die-hards are only to be found in Government and its departments it is a great mistake. They are to be found to a much greater extent in the Mysore University Council and the Senate. The very composition of the Senate is such that the non-official opinion has hardly any chance of being heard. The few sprinkling of them that get into it by election and nomination can never make themselves felt, except when their propositions are such as would be helpful to the teaching element. It is quite unnecessary for us to add that the non-Brahmin element is in a hopeless minority both in the Senate and the University Council. The Budget session of the Senate lasted for 3 days. Being a retrenchment budget there was not much of time taken up in the discussion of the budget. The only thing of note is that during the year 1931-32 the Vice-Chancellor got his increment of Rs. 250 from Rs. 1750 to Rs. 2000, the financial depression not having come in the way. One of the most important decisions arrived at by the Senate was the revocation of the previous decision that the second language studies should be confined to Kannada and Urdu and the reversion to the practice of having Sans krit as also Arabic Persian, Tamil and Telagu included in the second language group. Needless to say that the Senate did right in changing from what was a most suicidal course. The question of having compartments in the Intermediate stage also came up again for discussion. The House seemed to be favourably inclined to fall in line with the practice in other Universities in India. But the die-hard element led by no less a person than the V. C. himself proved as in the past too strong. It is a great pity that some of our educationists have not a proper vision and are still influenced mostly by some old ideas. Words such as "disastrous" "slipdown the hill" were used. No such calamity has happened in Madras or Bombay or Bengal, though the compartmental system in a much more liberal form than proposed here is to be found in those places. On the top of this the Senate decided upon a Committee to regulate admissions. The term regulate was used in place of the original word restriction. This it would appear is apparently with a view to divert students to different courses suited to them. But the courses are so few that the net result of it would be keeping out of a large number of students who are eager to have University Education. Another subject of some controversy was that the counting of votes in the different elections should be in the presence of the candidates or their agents as in all other elections. The die-hard element again threw out the suggestion and preferred to have the present method of secret counting. The only other point of interest we may note is the Senate's decision to have two papers for medicine where there was only one as against the decision of the Faculty of Medicine itself. This proposition brought by the University Council was opposed by the medical members themselves on the ground that there should not be chances for answering alternate questions to medical students who are to be thorough in each subject. We need only State that it means more cost for setting papers and examining papers. In conclusion, we hope that the re-organisation scheme proposed nearly 3 years ago for the reconstitution of the Senate and University Council may be soon given effect to.

ಮೈಸೂರು ವಿಶ್ವವಿದ್ಯಾಲಯದ ಸೆನೇಟು.

ಮೈಸೂರು ವಿಶ್ವವಿದ್ಯಾಲಯದ ಸೆನೇಟಿನಲ್ಲೂ ಕೌನ್ಸಿಲಿನಲ್ಲೂ ಹಟಸಾಧಕರು ವಿಶೇಷವಾಗಿರುವುದರಿಂದ ಪ್ರಭುತ್ವೋದ್ಯೋಗಗಳಲ್ಲಿ ಮಾತ್ರ ಹಟವಾದಿಗಳಿರುವರೆಂದು ತಿಳಿಯುವುದು ತಪ್ಪು. ಈಗಣ ಸೆನೇಟು ಮೆಂಬರುಗಳ ನಿಯೋಜನಕ್ರಮದಲ್ಲಿ ಸರ್ಕಾರಿಯುದ್ಯೋಗಸ್ತರಲ್ಲದ ಮೆಂಬರುಗಳ ಅಭಿಪ್ರಾಯವನ್ನು ಲಕ್ಷಿಸುವ ಸಂಭವನೇ ಇರುವುದಿಲ್ಲ. ಚುನಾವಣೆಯಿಂದಲೂ, ನಾಮಕರಣದಿಂದಲೂ ಸೆನೇಟು ಮೆಂಬರಾಗಿರತಕ್ಕವರು ಬೋಧಕರಿಗೆ ಅನುಕೂಲವಾಗಿರುವ ವಿಷಯಗಳನ್ನು ಪ್ರತಿಪಾದಿಸಿದ ಸಂದರ್ಭದಲ್ಲಿ ಮಾತ್ರ ಅವರುಗಳ ಅಭಿಪ್ರಾಯವು ಅಂಗೀಕರಿಸಲ್ಪಡುವುದು. ಸೆನೇಟಿನಲ್ಲೂ ಕೌನ್ಸಿಲಿನಲ್ಲೂ ಬ್ರಾಹ್ಮಣೇತರ ಮೆಂಬರುಗಳ ಸಂಖ್ಯೆಯು ಅತ್ಯಂತ ಅಲ್ಪವಾಗಿರುತ್ತದೆಂದು ಹೇಳಬೇಕಾಗಿಯೇ ಇಲ್ಲ. ಈ ಸಲದ ಸೆನೇಟಿನ ಬಜೆಟ್ ಅಧಿವೇಶನವು 3 ದಿವಸಗಳ ವರೆಗೆ ನಡೆಯಿತು. ಕತ್ತರಿ ಪ್ರಯೋಗದ ಬಜೆಟ್ಟಾಗಿದ್ದುದರಿಂದ ತದ್ವಿಚಾರವಾಗಿ ದೀರ್ಘ ಚರ್ಚೆ ನಡೆಯಲಿಲ್ಲ. ಆದಾಯವು 1931-32 ರಲ್ಲಿ ಕಡಿಮೆಯಾಗಿದ್ದಾಗ್ಯೂ ವೈಸ್‌ಚಾನ್ಸಲರ ಸಂಬಳ ಮಾತ್ರ 1750 ರಿಂದ 2000 ರೂ. ಗೆ ಹೆಚ್ಚಿಸಲ್ಪಟ್ಟುದು ಗಮನೀಯವಾಗಿರುತ್ತದೆ. ಸಂಸ್ಕೃತ, ಅರಬ್ಬಿ, ಪಾರ್ಶಿ, ತಮಿಳು ಮತ್ತು ತೆಲುಗು ಭಾಷೆಗಳು, ಕನ್ನಡ ಮತ್ತು ಉರ್ದು ಭಾಷೆಗಳಂತೆ ದ್ವಿತೀಯಭಾಷೆಗಳಾಗಿ ಸೇರಿಸಲ್ಪಡಬೇಕೆಂದಾದ ನಿರ್ಧಾರವು ಬಹಳ ಪ್ರಾಮುಖ್ಯವಾಗಿದ್ದಿತು. ಇದು ಯುಕ್ತವಾದ ಬದಲಾವಣೆಯಾಗಿದೆ. ಇಂಟರ್‌ಮೀಡಿಯೇಟ್ ತರಗತಿಯಲ್ಲಿ ವಿದ್ಯಾರ್ಥಿಗಳು ತಮಗೆ ಬೇಕಾದ ವಿಷಯವನ್ನು ತೆಗೆದುಕೊಳ್ಳುವ ಪದ್ಧತಿಯನ್ನು ಅನುಷ್ಠಾನಕ್ಕೆ ತರುವ ವಿಚಾರವು ಈ ವೇಳೆಯೂ ದೀರ್ಘವಾಗಿ ಚರ್ಚಿಸಲ್ಪಟ್ಟು ಇತರ ವಿಶ್ವವಿದ್ಯಾಲಯಗಳಲ್ಲಿರುವ ಪದ್ಧತಿಯನ್ನನುಸರಿಸಬೇಕಾಗಿ ನಿರ್ಧರಿಸಲ್ಪಟ್ಟಿತು. ವೈಸ್‌ಚಾನ್ಸಲರೇ ಆದಿಯಾಗಿ ಕೆಲ ಹಟಸಾಧಕರು ಹಿಂದಿನಂತೆಯೇ ಬಲವಾಗಿ ಪ್ರತಿಭಟಿಸಿದರು. ನಮ್ಮ ವಿದ್ಯಾಧಿಕರಲ್ಲಿ ಕೆಲರು ವಿಶಾಲ ದೃಷ್ಟಿಯಿಲ್ಲದೆ ಸಂಕುಚಿತಭಾವವುಳ್ಳವರಾಗಿರುವುದು ಬಹಳ ಶೋಚನೀಯವು. "ಬಹಳ ಅನರ್ಥವಾಗುತ್ತದೆ, ಬಂಡೆಯ ಮೇಲಿಂದ ಕೆಳಕ್ಕುರುಳಿದಂತಾಗುತ್ತದೆ" ಎಂಬ ಶಬ್ದಗಳು ಸಹ ಅವರುಗಳ ಬಾಯಿಂದ ಹೊರಟವು. ನಮ್ಮ ಸೆನೇಟಿನಲ್ಲಿ ಸೂಚಿತವಾದುದಕ್ಕಿಂತಲೂ ಉದಾರರೀತಿಯಲ್ಲಿ ಕಂಪಾರ್ಟುಮೆಂಟು ಪದ್ಧತಿಯನ್ನನುಸರಿಸುತ್ತಿರುವ ಮದ್ರಾಸು ಬೊಂಬಾಯಿ ಬಂಗಾಳ ವಿಶ್ವವಿದ್ಯಾಲಯಗಳಾವುದರಲ್ಲೂ ಯಾವ ಅನರ್ಥವೂ ಸಂಭವಿಸಿರುವುದು ಕಂಡುಬರುವುದಿಲ್ಲ. ದೀರ್ಘವಾಗಿ ಚರ್ಚೆಯು ನಡೆದು ಕಡೆಯಲ್ಲಿ ವಿದ್ಯಾರ್ಥಿಗಳನ್ನು ಇಂಟರ್‌ಮೀಡಿಯೆಟ್ ತರಗತಿಗೆ ಸೇರಿಸಿಕೊಳ್ಳುವಾಗ್ಗೆ ಅವರ ಅಭಿರುಚಿ ಶಕ್ತಿ ಮೊದಲಾದುವುಗಳನ್ನು ಪರೀಕ್ಷಿಸುವುದಕ್ಕಾಗಿ ಒಂದು ಕಮಿಟಿಯೇರ್ಪಾಟಾಗಬೇಕೆಂದು ನಿರ್ಧರಿಸಲ್ಪಟ್ಟಿತು. ವಿದ್ಯಾರ್ಥಿಗಳು ತಮಗಭಿರುಚಿಯಿರುವ ವಿಷಯವನ್ನು ತೆಗೆದುಕೊಳ್ಳಲೆಂಬ ಅಭಿಪ್ರಾಯದಿಂದ ಈ ಏರ್ಪಾಟು ಮಾಡಲ್ಪಟ್ಟುದಾಗಿದೆ. ಆದರೆ ಅಂತಹ ವ್ಯಾಸಂಗ ವಿಷಯ ಭಾಗಗಳು ಬಹಳ ಕೊಂಚವಾಗಿರುವುದರಿಂದ ವಿಶ್ವವಿದ್ಯಾಲಯದ ಪ್ರೌಢವಿದ್ಯಾಫಲವನ್ನು ಹೊಂದಲು ಕುತೂಹಲರಾಗಿರುವ ಅನೇಕ ವಿದ್ಯಾರ್ಥಿಗಳಿಗೆ ಅವಕಾಶವಿಲ್ಲದಂತಾಗುವುದು. ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಸಭೆಗಳಿಗೆ ಮೆಂಬರುಗಳನ್ನು ನಿಯಮಿಸುವುದಕ್ಕಾಗಿ ನಡೆಯುವ ಚುನಾವಣೆಯ ಕಾಗದಗಳ ಎಣಿಕೆಯು ಅಭ್ಯರ್ಥಿಗಳ ಸಮಕ್ಷಮದಲ್ಲಿ ನಡೆಯಬೇಕೆಂಬ ವಿಚಾರವಾಗಿ ಚರ್ಚೆ ನಡೆದು, ಹಟಸಾಧಕರು ಪ್ರತಿಭಟಿಸಿದುದರ ಮೇಲೆ ಈಗ ನಡೆಯುವಂತೆಯೇ ಎಣಿಕೆಯು ರಹಸ್ಯವಾಗಿ ನಡೆಯತಕ್ಕುದೆಂದು ನಿರ್ಧರವಾಯಿತು. ವೈದ್ಯವಿದ್ಯಾ ಪರೀಕ್ಷೆಯಲ್ಲಿ ಔಷಧ ವಿಚಾರವಾಗಿ ಎರಡು ಪ್ರಶ್ನಪತ್ರಿಕೆಗಳನ್ನು ಕೊಟ್ಟು ಅವುಗಳಲ್ಲಾವುದಾದರೊಂದರ ಪ್ರಶ್ನೆಗಳಿಗೆ ಉತ್ತರ ಬರೆಯುವ ಏರ್ಪಾಟನ್ನು ಆಚರಣೆಗೆ ತರಬೇಕೆಂದು ವಿಶ್ವವಿದ್ಯಾನಿಲಯದ ಕೌನ್ಸಿಲಿನವರು ಸೂಚಿಸಿದ್ದರು. ಹೀಗೆ ಎರಡು ಪ್ರಶ್ನಪತ್ರಿಕೆಗಳಲ್ಲಿ ಯಾವುದಾದರಲ್ಲೊಂದರ ಪ್ರಶ್ನೆಗಳಿಗೆ ಉತ್ತರ ಬರೆಯುವಂತೆ ಮಾಡುವುದರಿಂದ ವೈದ್ಯರು ಪ್ರತಿಯೊಂದು ಔಷಧ ವಿಚಾರವನ್ನು ತಿಳಿದಿರಬೇಕಾದುದು ಅತ್ಯಗತ್ಯವಾದುದರಿಂದ ಒಂದೇ ಪ್ರಶ್ನಪತ್ರಿಕೆಯನ್ನು ಕೊಡುವ ಕ್ರಮವನ್ನು ಬದಲಾಯಿಸಕೂಡದೆಂದು ವೈದ್ಯವಿದ್ಯಾಪಂಡಿತರ ಸಂಘದವರು ಅಭಿಪ್ರಾಯಪಟ್ಟಿದ್ದರೂ, ವೈದ್ಯ ಮೆಂಬರುಗಳು ಬಲವಾಗಿ ವಾದಿಸಿದರೂ ಎರಡು ಪ್ರಶ್ನಪತ್ರಿಕೆಗಳು ಕೊಡಲ್ಪಡಬೇಕೆಂದೇ ನಿರ್ಧರವಾದುದು ಬಹಳ ಸ್ವಾರಸ್ಯವಾಗಿರುತ್ತದೆ. ಈ ಏರ್ಪಾಟಿನಿಂದ ಹೆಚ್ಚು ಪ್ರಶ್ನಪತ್ರಿಕೆಗಳನ್ನು ಬರೆಯುವುದಕ್ಕಾಗಿಯೂ, ಉತ್ತರಗಳನ್ನು ಪರೀಕ್ಷಿಸುವುದಕ್ಕಾಗಿಯೂ ಹೆಚ್ಚು ವೆಚ್ಚವಾಗಬೇಕಾಗುವುದೆಂದು ಒಡೆದು ಹೇಳಬೇಕಾಗಿಲ್ಲ. ಈಗ್ಗೆ 3 ವರ್ಷಗಳ ಹಿಂದೆ ಸೂಚಿಸಲ್ಪಟ್ಟಿದ್ದ ನಮ್ಮ ವಿಶ್ವವಿದ್ಯಾಲಯದ ಸೆನೇಟಿನ ಮತ್ತು ಕೌನ್ಸಿಲಿನ ಪುನರ್ರಚನೆಯ ವಿಧಾನವು ಆದಷ್ಟು ಶೀಘ್ರದಲ್ಲಿ ಆಚರಣೆಗೆ ತರಲ್ಪಡುವುದೆಂದು ನಿರೀಕ್ಷಿಸುತ್ತೇವೆ.

ಚೇಳುಕಡಿತದಿಂದಾದ ಮರಣ

ತಿನ್ನವೆಲ್ಲಿ ಡಿ|| ಶ್ರೀ ವೈಕುಂಠದಲ್ಲಿ ಒಬ್ಬ 12 ವರ್ಷದ ಅಯ್ಯರ್ ಹುಡುಗನು ಕಳೆದ ತಾ|| 2 ರಲ್ಲಿ ಚೇಳು ಕಡಿತದಿಂದ ಮೃತನಾದನು.

ವಿಜ್ಞಾನಶಾಸ್ತ್ರ ಪಂಡಿತನ ಮರಣ

ಲಿವರ್‌ಪೂಲಿನಲ್ಲಿ ವಿಜ್ಞಾನಶಾಸ್ತ್ರ ಪಂಡಿತನು ವಿದ್ಯಾರ್ಥಿಗಳಿಗೆ ಬೋಧೆ ಮಾಡುತ್ತಿರುವಾಗ್ಗೆ ದಾಹ ಶಮನಕ್ಕಾಗಿ ದ್ರಾವಕವನ್ನು ನೀರೆಂದು ಭ್ರಮಿಸಿ ಕುಡಿದು ಕೂಡಲೇ ಮೃತನಾದನು.

ಪಂಡಿತರ ಕಾರು ಹರಾಜಾಯಿತು

ಪಂಡಿತ ಜವಹಾರಿಲಾಲರಿಗೆ ವಿಧಿಸಲ್ಪಟ್ಟಿದ್ದ ಅರ್ಥ ದಂಡವನ್ನು ಬರಮಾಡಿಕೊಳ್ಳುವುದಕ್ಕಾಗಿ ಅವರ ಚಿವಲೆರಟ್ ಮೊಟಾರುಕಾರು ಅಲಹಾಬಾದು ಪೋಲೀಸಿನವರಿಂದ 1500 ರೂಪಾಯಿಗಳಿಗೆ ಹರಾಜಿನಲ್ಲಿ ವಿಕ್ರಯಿಸಲ್ಪಟ್ಟಿತು.

ಅನೇಕ ಹಳ್ಳಿಗಳು ನಿರ್ನಾಮವಾದುವು

ಬುಕರಸ್ಟಿನಲ್ಲಿ ನೀಸ್ಟರ್ ನದಿಯ ಪ್ರವಾಹವು ಮಿತಿಮೀರಿಬಂದು ಅನೇಕ ಹಳ್ಳಿಗಳು ಕೊಚ್ಚಿ ಹೋದುವು. ಸರೋಕ ಎಂಬೂರಿನಲ್ಲಿ ಸಾವಿರಾರು ಜನರು ಮನೆಯ ಮೇಲೆ ಹತ್ತಿ ಕಾಲ ಕಳೆಯುತ್ತಿರುವರು. ಅನೇಕ ಮನೆಗಳು ಮುರಿದು ಬಿದ್ದುವು. ಪ್ರವಾಹವು ಇನ್ನೂ ಉಕ್ಕಿ ಹರಿಯುತ್ತಿರುವುದಲ್ಲದೆ ಇಳಿಯುವ ಚಿಹ್ನೆಯಿಲ್ಲ.

ಪಂಡಿತರ ಕುವರಿಯ ಕಾರಿನ ಮಾರಾಟ

ಲಕ್ನೊ ಕಾರಾಗೃಹದಲ್ಲಿ ಕೈದಿಯಾಗಿರುವ ಗತಿಸಿದ ಪಂಡಿತ ಮೋತೀಲಾಲ ನೆಹರುಯವರ ಕುವರಿ ವಿಜಯಲಕ್ಷ್ಮೀಪಂಡಿತರು ಕೊಡಬೇಕಾಗಿರುವ 300 ರೂ. ಅರ್ಥದಂಡವನ್ನು ಬರಮಾಡಿಕೊಳ್ಳಲು ಆಕೆಯ ಚಿವಲ್‌ರಟ್ ಮೋಟಾರುಕಾರನ್ನು 725 ರೂ. ಗಳಿಗೆ ನಾಜಿಜ್ ತಾಸಲ್‌ದಾರರು ಹರಾಜುಮಾಡಿ 300 ರೂ. ಗಳನ್ನು ಸರ್ಕಾರಕ್ಕೆ ಜಮಾಕಟ್ಟಿಕೊಂಡು ಉಳಿದ ಮೊಬಲಗನ್ನು ಆಕೆಗೆ ಕೊಡತಕ್ಕವರಾಗಿರುವರು.

ಸ್ತ್ರೀ ಹಣದಾಸೆಯಿಂದ ಜ್ವಾಲೆಯಲ್ಲಿ ಸಿಕ್ಕಿ ಸತ್ತಳು

ಮೆಮರ್ಸಿಂಗಿಗೆ ಸೇರಿದ ಟಾಗೆಲ್ ಎಂಬ ಗ್ರಾಮದಲ್ಲಿ ಒಬ್ಬ ಮುಸಲ್ಮಾನನ ಗುಡಿಸಿಲಿಗೆ ಅಗ್ನಿಪ್ರವೇಶವಾಗಲು ಒಳಗಿದ್ದವರೆಲ್ಲರೂ ಹೊರಕ್ಕೆ ಬಂದು ಬೆಂಕಿಯನ್ನು ಆರಿಸುತ್ತಿರುವಾಗ್ಗೆ ಯಜಮಾನಿಯು 1500 ರೂಪಾಯಿಟ್ಟಿದ್ದ ಪೆಟ್ಟಿಗೆಯನ್ನು ತರಲು ಉರಿಯಲ್ಲಿ ನುಗ್ಗಿದಳು. ಬೆಂಕಿಯಾರಿದ ಮೇಲೆ ಅವಳ ದೇಹವು ಸುಟ್ಟು ಇದ್ದಲಾಗಿದ್ದುದು ಕಂಡುಬಂದಿತು.

ಪೋಲೀಸ್ ಇನ್ಸ್‌ಪೆಕ್ಟರ ಕೊಲೆ ಮತ್ತು ಆತ್ಮಹತ್ಯ

ದಿಲ್ಲಿಯಿಂದ ಕಲಕತ್ತಾಕ್ಕೆ ರೈಲ್ವೆ ಬಂಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಬಂಗಾಳಿ ಯುವಕನಬಳಿ ಬಂದೂಕಿದ್ದುದನ್ನು ಮಧುಘರ ರೈಲ್ವೆ ಸ್ಟೇಷನ್ನಿನಲ್ಲಿ ಪೋಲೀಸು ಸಬ್ ಇನ್ಸ್‌ಪೆಕ್ಟರು ಕಂಡು ಬಂದೂಕನ್ನು ಹಿಡಿಯಲು ಲೈಸನ್ಸನ್ನು ತೆಗೆದುಕೊಂಡಿದ್ದೀಯಾ ಎಂದು ಕೇಳಿದನು. ಯುವಕನು ಗುಂಡನ್ನು ಹಾರಿಸಿ ಪೋಲೀಸು ಇನ್ಸ್‌ಪೆಕ್ಟರನ್ನು ಕೊಂದು ತಾನೂ ಆತ್ಮಹತ್ಯಮಾಡಿಕೊಂಡನು. ಬಂದೂಕದ ಗುಂಡಿನೇಟು ಮತ್ತೊಬ್ಬ ಪ್ರಯಾಣಿಕನಿಗೆ ತಗಲಿ ಗಾಯವಾಯಿತು.

ಪಂಡಿತ ಜವಹಾರಿಲಾಲರ ದೇಹಸ್ಥಿತಿ

ಪಂಡಿತ ಜವಹಾರಿಲಾಲರವರನ್ನು, ಅವರ ತಾಯಿ, ಹೆಂಡಿತಿ ಮತ್ತು ಭಾವಮೈದುನರು ಕಾರಾಗೃಹಕ್ಕೆ ಹೋಗಿ ನೋಡಿಕೊಂಡುಬಂದರು. ಪಂಡಿತರಿಗೆ ಪ್ರತಿ ಸಾಯಂಕಾಲ 99 ಡಿಗ್ರಿ ವರೆಗೆ ಜ್ವರ ಬರುತ್ತದೆ. ಹೊಟ್ಟೆಯ ಬಲಗಡೆಯಲ್ಲಿ ಇನ್ನೂ ಕೊಂಚ ನೋವಿರುತ್ತದೆ. ಆದರೆ ಅವರ ದೇಹದ ತೂಕವು ಮಾತ್ರ ಕಡಿಮೆಯಾಗಿಲ್ಲ ಕೆಂಬಲೂ, ಆಯಸವೂ ಇಲ್ಲ" ಎಂದು ಜೈಲ್ ಸೂಪರಿಂಟೆಂಡೆಂಟರು ವರದಿಮಾಡಿರುವುದಾಗಿ ಪಂಡಿತರ ಭಾವಮೈದುನನು ಪತ್ರಿಕಾಪ್ರತಿನಿಧಿಗೆ ತಿಳಿಸಿರುತ್ತಾನೆ.

ಮಗುವಿನ ಕೊಲೆಗಾಗಿ ಯಾವಜ್ಜೀವ ಕೈದು

ಹೋದವರ್ಷದ ಏಪ್ರಿಲ್ ತಾ|| 17 ರಲ್ಲಿ ಮಾಬಾಜಿಜಾನ್ ಬೀಬಿ ಎಂಬ 20 ವರ್ಷದ ಯುವತಿಯು ಕ್ಷುದ್ಬಾಧೆಯಿಂದ ಕುಪಿತಳಾಗಿ ತನ್ನ ಕೈ ಮಗುವಿನ ಕುತ್ತಿಗೆಯನ್ನು ಕತ್ತರಿಸಿಕೊಂದ ಅಪರಾಧಕ್ಕಾಗಿ ರಂಗಪುರದ ಅ|| ಸೆಷನ್ಸು ಜಡ್ಜಿಯವರಿಂದ ಮರಣಾವಧಿ ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟಳು. ಈಕೆಯು ಹೊಟ್ಟೆಗಿಲ್ಲದ ಸಂಕಟದಿಂದ ಕೋಪಗೊಂಡು ಈ ಕೃತ್ಯವನ್ನು ಮಾಡಿದಳಾದುದರಿಂದ ಮರಣಾವಧಿ ಕಾರಾಗೃಹ ಶಿಕ್ಷೆಯನ್ನು ವಿಧಿಸಿರುತ್ತದೆಂದೂ, ಇದನ್ನು ಕ್ಷಮಿಸುವ ಬಗೆಗೆ ಪ್ರಭುತ್ವದವರನ್ನು ಪ್ರಾರ್ಥಿಸಿಕೊಳ್ಳಬಹುದೆಂದೂ ಜಡ್ಜಿಯು ಬರೆದಿರುತ್ತಾರೆ.

ಭಂಗಾರದ ಸಾಗುವಿಕೆಯು ತಗ್ಗಿತು

ಬೊಂಬಾಯಿ ಪಟ್ಟಣದ ಭಂಗಾರದ ವರ್ತಕರು ಇತಃಪರ ಭಂಗಾರವನ್ನು ಪರದೇಶಕ್ಕೆ ಕಳುಹುವುದನ್ನು ನಿಲ್ಲಿಸಬೇಕೆಂದು ನಿರ್ಧರಿಸಿಕೊಂಡಿರುವುದರ ಮೇಲೆ ಹಿಂದೆ ಸಾಗುತ್ತಿದ್ದ ಭಂಗಾರವು ಐದನೆಯೊಂದು ಭಾಗಕ್ಕಿಳಿದಿದೆ. ಇದಕ್ಕೆ ಮೊದಲು ಪ್ರತಿವಾರದಲ್ಲೂ 2 ಕೋಟಿ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ಭಂಗಾರವು ಕಳುಹಲ್ಪಡುತ್ತಿದ್ದುದು ಕಳೆದ ತಾ|| 1 ನೆಯ ಶುಕ್ರವಾರ 26½ ಲಕ್ಷ ಮತ್ತು ಶನಿವಾರ 46½ ಲಕ್ಷ ರೂ. ನ ಭಂಗಾರವು ಸಾಗಿತು. ಹೀಗೆ ಪರದೇಶಕ್ಕೆ ಸಾಗುವ ಭಂಗಾರವು ಕಡಿಮೆಯಾದುದು ಇದೇ ಮೊದಲು. ಇನ್ನು ಮುಂದೆ ಕೆಲ ಲಕ್ಷ ರೂ. ಗಳ ಭಂಗಾರವು ಮಾತ್ರ ಸಾಗುವುದೆಂದು ವರ್ತಕರುಗಳು ಹೇಳುತ್ತಾರೆ.

ಸಾಹುಕಾರರಿಗೆ ಬೆದರಿಕೆಯ ಕಾಗದ

ಬಂಗಾಳಾ ನೌಕಾಳಿ ಡಿಸ್ಟ್ರಿಕ್ಟಿಗೆ ಸೇರಿದ ಪುಣ್ಯನಗರದ ರೈತರುಗಳಿಗೆ ಸಾಹುಕಾರರು ಹಣವನ್ನು ಸಾಲವಾಗಿ ಕೊಟ್ಟು ಪ್ರಾಂಸರಿ ಪತ್ರಗಳನ್ನು ಬರೆಯಿಸಿಕೊಂಡಿರುವರು. ಈ ಪ್ರಾಂಸರಿಗಳನ್ನು ರೈತರುಗಳಿಗೆ ಹಿಂದಿರುಗಿ ಕೊಡಬೇಕೆಂದೂ, ಹಾಗೆ ಕೊಡದಿದ್ದಲ್ಲಿ ಸಾಹುಕಾರರುಗಳನ್ನು ಕೊಂದುಬಿಡುತ್ತೇವೆಂದೂ ಬಹಳವಾಗಿ ಬೆದರಿಸಿ ಕಾಗದಗಳು ಬರೆಯಲ್ಪಟ್ಟಿದ್ದು ಅನಂತರ ಸಾಹುಕಾರರುಗಳ ಮನೆಗಳೊಳಗೆ ಅಮೇಧ್ಯವು ಎಸೆಯಲ್ಪಟ್ಟಿತು. ಜಗನ್ನಾಥ ಮಜುಂದಾರ್ ಮೊದಲಾದವರು ಈ ಹಿಂಸೆಯನ್ನು ತಡೆಯಲಾರದೆ ಡಿಸ್ಟ್ರಿಕ್ಟ್ ಕಲೆಕ್ಟರಿಗೆ ಅರ್ಜಿಗಳನ್ನು ಬರೆದುಕೊಂಡರು. ಆ ಪುಣ್ಯನಗರದ ಪಾಠಶಾಲೆಯ ಉಪಾಧ್ಯಾಯರುಗಳು ಕೂಡ ಈ ಬೆದರಿಕೆಯ ಕಾಗದಗಳನ್ನು ಬರೆಯಲು ಕಾರಣಭೂತರೆಂದು ಕಲಕ್ಟರು ತಿಳಿಸಿದರು.

ಅಂಚೆ ಒಯ್ಯುವವನ ಕೊಲೆ

ಬಂಕುರಾಕ್ಕೆ ಸೇರಿದ ತಲದಂಗರ ಪೋಸ್ಟಾಫೀಸಿಗೆ ಅಂಚೆಯನ್ನು ಹೊತ್ತುಕೊಂಡು ಬರುತ್ತಿರುವಾಗ್ಗೆ ಆ ಊರಿನಿಂದ 2 ಮೈಲು ದೂರದಲ್ಲಿರುವ ಖುಲಮರ್ತಿ ಗ್ರಾಮ ಸಮೀಪದ ಕಾಡಿನಲ್ಲಿ ಕಳ್ಳರು ಅವನನ್ನು ಹಿಡಿದು ಅವನ ಬಾಯಿಗೆ ಬಟ್ಟೆಯನ್ನು ತುರುಕಿ ಚೆನ್ನಾಗಿ ಹೊಡೆದು ಮೈಯನ್ನೆಲ್ಲಾ ಗಾಯಮಾಡಿ ಮತ್ತು ತಲೆಯನ್ನು ಜಜ್ಜಿ ಮನಿಯಾರ್ಡರು ರಿಜಿಸ್ಟರು ಇನಶೂರು ಭಾಂಗಿ ಮೊದಲಾದವುಗಳಿದ್ದ ಚೀಲವನ್ನು ಅಪಹರಿಸಿಕೊಂಡು ಹೋದರು. ಮಧ್ಯಾಹ್ನ 2-30 ಘಂಟೆಗೆ ಬರಬೇಕಾಗಿದ್ದ ಅಂಚೆಯವನು 3-30 ಘಂಟೆಯಾದರೂ ಬರಲಿಲ್ಲವಾಗಿ ಪೋಸ್ಟ್‌ಮಾಸ್ಟರು ದಿಗಿಲುಬಿದ್ದು ಪೋಲೀಸಿಗೆ ತಿಳಿಸಿದನು. ಪೋಲೀಸಿನವರು ತಡಕಲು ಹೊರಟು ಆ ಕಾಡಿಗೆ ಬಂದು ಅಲ್ಲಿ ಬಿದ್ದಿದ್ದ ರಕ್ತದ ಬಟ್ಟೆಗಳ ಗುರುತನ್ನು ಹಿಡಿದು ಹೋಗಿ ಅಂಚೆಯವನು ಸತ್ತು ಬಿದ್ದಿರುವುದನ್ನು ಕಂಡುಹಿಡಿದರು. ಅಂಚೆಯ ಚೀಲವು ಸಿಕ್ಕಲಿಲ್ಲ ಮತ್ತು ಕಳ್ಳರೂ ಗೊತ್ತಾಗಿಲ್ಲ.

ಕಾಂಗ್ರೆಸ್ ಮಹಾಸಭೆ

ಕಾಂಗ್ರೆಸು ಮಹಾಸಭೆಯು ಪೂರಿಯಲ್ಲಿ ನಡೆಯಕೂಡದೆಂದು ಪ್ರಭುತ್ವದಾಜ್ಞೆಯಾದುದರ ಮೇಲೆ ಕಾಂಗ್ರೆಸು ಸಂಘಾಧ್ಯಕ್ಷೆಯರಾದ ಶ್ರೀ ಸರೋಜಿನಿ ದೇವಿಯವರು ಪಂಡಿತ ಮದನಮೋಹನ ಮಾಳವ್ಯರವರನ್ನು ದಿಲ್ಲಿಗೆ ಬರಮಾಡಿಕೊಂಡು ಪರಸ್ಪರ ಆಲೋಚಿಸಿ ದಿಲ್ಲಿಯಲ್ಲಿ ಮಹಾಸಭೆಯನ್ನು ನೆರವೇರಿಸಬೇಕಾಗಿ ನಿರ್ಧರಿಸಿದರು. ಇದರ ಮೇಲೆ 3-4 ಸ್ಥಳದಲ್ಲಾವುದಾದರೊಂದು ಕಡೆ ಸಭಾಮಂಟಪವನ್ನು ರಚಿಸಿ ಅಧಿವೇಶನವನ್ನು ನಡೆಯಿಸಲು ಪ್ರಭುತ್ವದವರಪ್ಪಣೆಯನ್ನು ಕೇಳಲಾಗಿ ಕಾಂಗ್ರೆಸ್ಸಿನ ಪ್ರೋತ್ಸಾಹದಿಂದ ಶಾಸನೋಲ್ಲಂಘನ ಕಾರ್ಯವು ನಡೆಯುತ್ತಿರುವುದರಿಂದ ಸಭೆ ನಡೆಯಲವಕಾಶ ಕೊಡಲ್ಪಡಲಾಗುವುದಿಲ್ಲವೆಂದು ಉತ್ತರ ಬಂದಿತು. ಆದರೂ ಪಂಡಿತರೂ ದೇವಿಯವರೂ ಸಭೆ ನಡೆಸಲು ಸಂಕಲ್ಪಿಸಿರುವರು. ಇವರ ಪ್ರಯತ್ನವೆಷ್ಟರಮಟ್ಟಿಗೆ ಸಿದ್ಧಿಸುವುದೊ ಮತ್ತು ಯಾವ ರೀತಿ ಪರಿಣಮಿಸುವುದೊ ನೋಡಬೇಕಾಗಿದೆ.

ಕೊಲೆ ಮತ್ತು ಲೂಟಿ

ರಂಗೂನಿಗೆ ಸೇರಿದ ಮಾಬಿ ಎಂಬಲ್ಲಿ 10 ಮಂದಿ ದರೋಡೆ ಕೋರರು ತುಪಾಕಿಗಳ ಸಮೇತ ಒಬ್ಬ ಸೆಟ್ಟಿಯ ಮನೆಗೆ ನುಗ್ಗಿ ಮೂವರು ಸೆಟ್ಟಿಗಳನ್ನೂ ಒಬ್ಬ ಬರ್ಮಾದವನನ್ನೂ ಕೊಂದುಹಾಕಿ ಅನೇಕರಿಗೆ ಅಪಾಯವನ್ನುಂಟುಮಾಡಿದರು ಮತ್ತು ಮೂರು ಮನೆಗಳಿಗೆ ಬೆಂಕಿಯನ್ನು ಹೊತ್ತಿಸಿ ಆಸ್ತಿಯನ್ನು ದೋಚಿಕೊಂಡು ಹೋದರು. ಇನ್ನೊಂದು ಮನೆಗೆ ನುಗ್ಗಿ ಇಬ್ಬರಿಗೆ ಪ್ರಾಣಾಪಾಯವನ್ನುಂಟುಮಾಡಿ 1000 ರೂ. ಬೆಲೆಯ ಪದಾರ್ಥಗಳನ್ನು ಅಪಹರಿಸಿದರು. ಎಮೆರ್ಥಿ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಬಂಡಿಯವನು ಮಾರಾಟಕ್ಕಾಗಿ ಸಾಮಾನುಗಳನ್ನು ತುಂಬಿಕೊಂಡು ಸಂತೆಗೆ ಹೋಗುತ್ತಿರುವಾಗ್ಗೆ ಕಳ್ಳರು ಬಂಡಿಯನ್ನು ತಡೆದುನಿಲ್ಲಿಸಿ ಬಂಡಿಯವನನ್ನು ಕೊಂದು ಸಾಮಾನುಗಳನ್ನು ಸೂರೆಮಾಡಿಕೊಂಡು ಹೋದರು. ಥಾರವಾಡ ಡಿಸ್ಟ್ರಿಕ್ಟಿನಲ್ಲಿ ಒಂದು ಕಾಡಿನೊಳಗೆ ವಿದ್ಯುದ್ದೀಪದ ಬೆಳಕನ್ನು ಕಂಡು ಪೋಲೀಸಿನವರು ಕಳ್ಳರನ್ನು ಹಿಡಿಯಲು ಹೋಗಿ ಗುಂಡುಗಳನ್ನು ಹಾರಿಸಿದರು. ಕಳ್ಳರು ಹಿಂದಿರುಗಿ ಪೋಲೀಸರ ಮೇಲೆ ಗುಂಡುಗಳನ್ನು ಹಾರಿಸಲು ಪೋಲೀಸು ಕಾನ್‌ಸ್ಟಬಲ್ ಪರ್ಮಾಯನ ಎಡಗಾಲಿಗೆ, ಭಾರತೀಯನಾದ ಹವಾಲ್ದಾರನ ತೋಳಿಗೆ ಮತ್ತು ಲ್ಯಾನ್ಸ್ ನಾಯಕನ ಬಲದ ತೊಡೆಗೆ ಗುಂಡಿನೇಟುಗಳು ಬಿದ್ದಿರುತ್ತವೆ.

ಅಮೇರಿಕೆಯ ಯುವತಿಯು ಮಹಾತ್ಮರ ಆಗಮನ ನಿರೀಕ್ಷಣೆಯಲ್ಲಿರುವುದು

ಅಮೇರಿಕೆಯಲ್ಲಿ ಪ್ರಸಿದ್ಧ ಕವಿಯಾಗಿದ್ದು ಗ್ರೀಸಿನಲ್ಲಿರುವ ಪರ್ನಾಸಸ್ ಪರ್ವತದಲ್ಲಿ ಗತಿಸಿದ ಜಾರ್ಜ್ ಕ್ರಾಂಕುಕ್ ಎಂಬಾತನ ಪುತ್ರಿ ಬಹು ಸುಂದರವತಿಯಾದ 21 ವರ್ಷ ವಯಸ್ಸಿನ ಕುಕ್ ಕನ್ಯೆಯು ಮಹಾತ್ಮ ಗಾಂಧಿಯವರ ಆಶ್ರಮದಲ್ಲಿ ವೈರಾಗಿಣಿಯಾಗಿದ್ದುಕೊಂಡು ಕಾಲಯಾಪನೆಮಾಡಿ ಗ್ರೀಸಿನಿಂದ ಬೊಂಬಾಯಿಗೆ ಬಂದು ಅಲ್ಲಿಂದ ಅಬುಪರ್ವತಕ್ಕೆ ಹೋಗಿ ಮಹಾತ್ಮರ ಬಿಡುಗಡೆಯ ನಿರೀಕ್ಷಣೆಯಲ್ಲಿರುವಳು. ಗ್ರೀಸಿನ ಹಳೇ ಮಾದ್ರಿಯ ಬಿಳೀ ಉಡುಪನ್ನು ಧರಿಸಿಕೊಂಡಿರುತ್ತಾಳಲ್ಲದೆ ಕಾಲುಗಳಿಗೆ ಕೆರಗಳನ್ನು ಮೆಡುತ್ತಾಳೆ. ಈಕೆಯನ್ನು ಭಾರತೀಯರು ನೀಲನಾಗವೇಣಿದೇವಿ ಎಂದು ಕರೆಯುವರು.

ಶುದ್ಧಿ ಸಂಸ್ಕಾರ

ಈಚೆಗೆ ಈಕೆಯು 14 ದಿವಸಗಳವರೆಗೆ ಉಪವಾಸ ವ್ರತವನ್ನು ಆಚರಿಸಿ ದೇವರ ಪ್ರಾರ್ಥನೆಯಲ್ಲಿ ನಿರತಳಾಗಿದ್ದು ಶುದ್ಧಿ ಸಂಸ್ಕಾರವನ್ನು ಹೊಂದಿ ಬ್ರಾಹ್ಮಣ ಮತಾವಲಂಬಿಯಾದಳು. ಅಮೇರಿಕೆಯರಲ್ಲಿ ತನಗೆ ಮೊದಲು ಯಾರೂ ಬ್ರಾಹ್ಮಣರಾಗಿರಲ್ಲಿಲ್ಲವೆಂದು ಆಕೆಯು ಹೇಳುತ್ತಾಳೆ. 'ಮಹಾತ್ಮರ ಧರ್ಮಬೋಧೆಯ ಸಮರ್ಥನದ ಬಗೆಗೆ ನಾನು ನನ್ನ 15 ನೆಯ ವರ್ಷ ವಯಸ್ಸಿನಿಂದಲೂ ಸಂಸ್ಕೃತ ಗ್ರಂಥಗಳ ಪರಿಶೋಧನೆಯಲ್ಲಿರುತ್ತೇನೆ ಮತ್ತು ಮಿಥ್ಯವಾದ ಪ್ರಾಪಂಚಿಕ ವಿಷಯವನ್ನು ತ್ಯಜಿಸಿರುತ್ತೇನೆ. ಗಾಂಧಿಯವರು ಅಮಾನುಷರಲ್ಲ; ಜಗದಾದಿಯಿಂದ ಸತ್ಯ, ಶಾಂತಿ ಮತ್ತು ಪ್ರೀತಿ ಮಾರ್ಗಗಳನ್ನು ಕೋರಿ ಸತಕ್ಕ ವೇದವಾಕ್ಯಗಳನ್ನನುಸರಿಸಿ ನಡೆಯತಕ್ಕವರು. ನನಗೆ ಸ್ವಪ್ನಪ್ರಾಯವಾಗಿರುವ ಉತ್ತಮ ಜನ್ಮವು ಮಹಾತ್ಮ ಗಾಂಧಿಯವರ ಮೂಲಕ ಲಭಿಸುವುದು. ನನ್ನ ದೃಷ್ಟಿಯು ವಿಕಸಿತವಾಗಿದೆ. ನಾನು ಒಬ್ಬ ಗುರುವನ್ನು ಅರಸುತ್ತಿದ್ದೆನು. ಆ ಗುರುವು ಗಾಂಧಿ ರೂಪದಲ್ಲಿ ದೊರಕಿರುವನು. ಇನ್ನು ಮುಂದೆ ಆತನು ನನ್ನ ಬೋಧಕನೂ ತಂದೆಯೂ ಆಗಿರುವನು. ನಾನು ಆತನ ಮಗಳಾಗಿರುವೆನು.

ಈಕೆಯು ಗ್ರೀಸಿನಲ್ಲಿದ್ದಾಗ್ಗೆ ಕನ್ಯೆಯರಿಗೂ ರೈತರುಗಳಿಗೂ ನೂಲುವುದನ್ನೂ ನೇಯುವುದನ್ನೂ ಬೋಧಿಸಿ ಆಚರಣೆಗೆ ತಂದಳು.

ನೇಗೆಯ ಹುಚ್ಚು

ನೂಲುವುದೂ ನೇಯುವುದೂ ದಾರಿದ್ರ್ಯ ನಿವಾರಣೋಪಾಯವೆಂದು ನಾನು ಬೋಧಿಸಿದಾಗ್ಗೆ ನನಗೆ ನೇಗೆಯ ಹುಚ್ಚು ಹಿಡಿದಿದೆ ಎಂದು ಜನರು ಪರಿಹಾಸಮಾಡಿದರು. ನೂಲುವುದರಲ್ಲೂ ನೇಯುವುದರಲ್ಲೂ ಮಹಾತ್ಮರಿಗೆ ಪೂರ್ಣ ವಿಶ್ವಾಸವುಂಟೆಂದು ನಾನು ಚೆನ್ನಾಗಿ ಬಲ್ಲೆ, ಏಕೆಂದರೆ ಅವರ ವಿಷಯವಾಗಿ ಕೇಳುವುದಕ್ಕೆ ಮೊದಲೇ ನಾನೇ ಅದರುಪಯೋಗವನ್ನರಿತಿದ್ದೆನು. ಇದರಿಂದ ಕಾರ್ಖ್ಯಾಲಯಗಳ ಕೂಲಿಕಾರರ ದಾಸತ್ವವೂ ಅವರ ದಾರಿದ್ರ್ಯವೂ ನಿವಾರಣೆಯಾಗುವುವು

ಒಳದೇಶದ ವೃತ್ತಾಂತಗಳು.

ಮೈಸೂರು ಸೆಕ್ರೆಟೆರಿಯಟ್ ಮತ್ತು ಕಂಟ್ರೋಲರ್ ಆಫೀಸುಗಳ ವೆಚ್ಚವನ್ನು ಕಡಿಮೆಮಾಡುವುದಕ್ಕಾಗಿ ಮ|| ಬ. ಟಿ. ಕೇಶವಯ್ಯಂಗಾರ್ಯರು ನಿಯಮಿಸಲ್ಪಡುವ ಸಂಭವವಿದೆ.

ಈ ದಿವಸ ಬೆಳಿಗ್ಗೆ ಶ್ರೀಮನ್ಮಹಾರಾಜರವರ ಸ್ವಾರಿಯು ಹುಜೂರು ಸೆಕ್ರೆಟರಿ ಮತ್ತೆ ಕೆಲವರೊಡನೆ ಹೆಚ್ಚುಕಟ್ಟಲೆಯ ರೈಲುಬಂಡಿಯಲ್ಲಿ ಅರಶೀಕೆರೆ ಮಾರ್ಗವಾಗಿ ಕೆಮ್ಮಣ್ಣುಗುಂಡಿಗೆ ಚಿತ್ತೈಸಿತು.

ಶ್ರೀಮನ್ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯರಾದ ಸರ್ ಚಾರ್ಲ್ಸ್ ಟಾಡ್ ಹಂಟರ್‌ರವರು ಇಷ್ಟರಲ್ಲೇ ಸೀಮೆಗೆ ಪ್ರಯಾಣ ಮಾಡಿ ಫೆಡರಲ್ ರಾಜ್ಯಾಂಗವಿಧಾನವು ರೂಪುಗೊಳ್ಳುವವರೆಗೂ ಅಲ್ಲೇ ಇದ್ದು ಬರುವರೆಂದು ವರ್ತಮಾನವಿದೆ.

ಅಸಿಸ್ಟೆಂಟ್ ಕಮಿಷನರುಗಳಾದ ಮ|| ಎಂ. ಶಾಮಣ್ಣನವರು ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಟ್ರಜರಿಯಿಂದ ಸಕಲೇಶಪುರ ಸಬ್‌ಡಿವಿಜನ್ನಿಗೂ, ಅಲ್ಲಿಂದ ಮ|| ಪಿ. ಸೂರ್ಯನಾರಾಯಣಶೆಟ್ಟರು ಚಿಕ್ಕಮಗಳೂರು ಡಿ|| ಟ್ರಜರಿಗೂ ವರ್ಗಾಯಿಸಲ್ಪಟ್ಟಿರುವರು.

ನಮ್ಮ ಶ್ರೀಮನ್ಮಹಾರಾಜರವರ ಷಡ್ಡಕರ ಅಳಿಯಂದರಾದ ಪಾಲಿಟಾಣಾ ಸಂಸ್ಥಾನದ ಮಹಾರಾಜರು ಕಳೆದ ಶನಿವಾರ ರಾಜಧಾನಿಗೆ ಬಂದು ಇಲ್ಲಿದ್ದ ತಮ್ಮ ಹೆಂಡತಿ ಮಕ್ಕಳುಗಳನ್ನು ನೆನ್ನೆಯ ಬೆಳಿಗ್ಗೆ ಉದಕಮಂಡಲಕ್ಕೆ ಕರೆದುಕೊಂಡು ಹೋದರು. ಇವರು ಬಂದಾಗಲೂ ಹೊರಟಾಗಲೂ 9-9 ಗುಂಡುಗಳು ಹಾರಿಸಲ್ಪಟ್ಟುವು.

ಸಿಂಹಳ ದ್ವೀಪದ ಕಾರ್ಮಿಕ ಮಂತ್ರಿಯೂ (ಲೇಬರ್ ಮಿನಿಸ್ಟರಾ) ದ ಮ|| ಪೆರಿಸುಂದರಂಯವರು ಬೆಂಗಳೂರಿಗೆ ಬಂದು ಪ್ರಭುತ್ವಾತಿಥಿಗಳಾಗಿದ್ದು ದಿವಾನರೊಡನೆ ದೊಡ್ಡಬಳ್ಳಾಪುರಕ್ಕೆ ಹೋಗಿ ಅಲ್ಲಿಂದ ರಾಜಧಾನಿಗೆ ಬಂದು ಶ್ರೀರಂಗಪಟ್ಟಣ, ಕೃಷ್ಣರಾಜಸಾಗರ, ಶಿವನಸಮುದ್ರ ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನು ಪರಾಮರಿಸಿಕೊಂಡು ತೆರಳಿದರು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರೂ, ಟ್ರಸ್ಟ್‌ಬೋರ್ಡಿನ ಚೇರ್ಮನ್‌ರವರೂ ಆದ ಮ|| ಟಿ. ಜಿ. ರಾಮಯ್ಯರ್‌ರವರು ಇದೇ ತಾ|| 7 ರಿಂದ 10 ದಿನಗಳ ಪ್ರಿವಿಲೆಜವನ್ನು ಪಡೆದುಕೊಂಡಿರುವುದರಿಂದ ಮ್ಯುನಿಸಿಪಲ್ ಕೌನ್ಸಿಲಿನ ವೈಸ್‌ಪ್ರೆಸಿಡೆಂಟರು ಪ್ರೆಸಿಡೆಂಟರಾಗಿಯೂ ಟ್ರಸ್ಟ್‌ಬೋರ್ಡು ಇಂಜನಿಯರು ಚೇರ್ಮನ್ನರಾಗಿಯೂ ಬದಲು ನೋಡುತ್ತಿರುವರು.

ಸಿವಿಲ್ ವೆಟರಿನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರುಗಳಾದ ಮ|| ಆರ್. ಎಂ. ಪಥಂಕರ್‌ರವರು ಮೈಸೂರಿನಿಂದ ಬೆಂಗಳೂರಿಗೂ, ಮ|| ಟಿ. ಎ. ಮಾಣಿಕರಾಜ್‌ರವರು ಬೆಂಗಳೂರಿಂದ ಶಿವಮೊಗ್ಗಿಗೂ, ಮ|| ಸಿ. ಕೆ. ಶ್ರೀನಿವಾಸಯ್ಯಂಗಾರ್ಯರು ಶಿವಮೊಗ್ಗಿಯಿಂದ ತುಮಕೂರಿಗೂ, ಮ|| ಕೆ. ಎನ್. ಶ್ರೀನಿವಾಸನ್‌ರವರು ತುಮಕೂರಿನಿಂದ ಮೈಸೂರಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ತುಮಕೂರು ಪ್ರಾಣಿದಯಾ ಪ್ರಚಾರಕ ಸಂಘದವರು ತುಮಕೂರು ಹೊರಪೇಟೆ ಎಲೆಕ್ಟ್ರಿಕ್ ಆಫೀಸ್ ಪಕ್ಕದಲ್ಲಿ ನೂತನವಾಗಿ ಕಟ್ಟಿಸಿರುವ ಗೋರಕ್ಷಣಶಾಲೆಯಲ್ಲಿ ಪ್ರಾಣಿದಯಾ ಪ್ರಚಾರಕ ಸಂಘದ ವಾರ್ಷಿಕೋತ್ಸವವು ತುಮಕೂರು ಡಿ|| ಡೆ|| ಕಮಿಷನರ್ ಮ|| ಎ. ಸುಂದರರಾಜಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನೆನ್ನೆಯ ದಿವಸ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ದಿವಾನ್ ಸರ್ ಮಿರ್ಜಾಯವರು ತಮ್ಮ ಪ್ರೈವೆಟ್ ಸೆಕ್ರೆಟರಿ ಚೀಫ್ ಇಂಜನಿಯರು ಮತ್ತೆ ಕೆಲ ಅಧಿಕಾರಿಗಳ ಸಮೇತ ಆಜೆವಾರ ಕಾನಕಾನಹಳ್ಳಿ ತಾಲ್ಲೂಕು ಮರಳವಾಡಿಯಲ್ಲಿ ಕಟ್ಟಲ್ಪಡುತ್ತಿರುವ ಕೆರೆಯನ್ನು ನೋಡಿಕೊಂಡು ಬಂದರು ಮತ್ತು ಸಿಂಲಾದಲ್ಲಿ ನಡೆಯುವ ರೌಂಡುಟೇಬಲ್ ಕಾನ್ಫರೆನ್ಸಿನ ಆಲೋಚನಾ ಕಮಿಟಿಯ ಸಮಾವೇಶಕ್ಕೆ ಈ ತಿಂಗಳ ಅಂತ್ಯದಲ್ಲಿ ಪ್ರಯಾಣ ಮಾಡುವವರಾಗಿರುವರು.

ನೆನ್ನೆಯ ಸಾಯಂಕಾಲ 4 ಘಂಟೆಯಲ್ಲಿ ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಿಯ ಸ್ವಾರಿಯು ಹೆಚ್ಚುಕಟ್ಟಲೆಯ ರೈಲುಬಂಡಿಯಲ್ಲಿ ಉದಕಮಂಡಲಕ್ಕೆ ಚಿತ್ತೈಸಿತು. ಶ್ರೀಮದ್ಯುವರಾಜರವರು ಅದೇ ಬಂಡಿಯಲ್ಲಿ ಪ್ರಯಾಣ ಮಾಡಿ ಮಧ್ಯೆ ಇಳಿದು ಶಾಲ್ಯದೊಳಗೆ ಈ ದಿವಸ ತಮ್ಮಧ್ಯಕ್ಷತೆಯಲ್ಲಿ ನೆರೆಯಲು ಗೊತ್ತಾಗಿರುವ ಕೋ ಆಪರೇಟಿವ್ ಸೊಸೈಟಿಗಳ ಕಾನ್ಫರೆನ್ಸಿನ ಕಾರ್ಯವನ್ನು ಮುಗಿಸಿಕೊಂಡು ಇದೇ ರಾತ್ರಿ ಉದಕಮಂಡಲಕ್ಕೆ ದಯಮಾಡಿಸುವರು. ಅವರ ಪತ್ನಿಪುತ್ರಾದಿಗಳೆಲ್ಲ ನೆನ್ನೆಯ ಪ್ರಾತಃಕಾಲ ಮೋಟಾರುಬಂಡಿಗಳಲ್ಲಿ ಉದಕಮಂಡಲಕ್ಕೆ ಪ್ರಯಾಣ ಮಾಡಿದರು.

ಬ್ರಿಟಿಷರ ಪಾರ್ಟಿ ವಿಧಾನವು.

ಬ್ರಿಟಿಷರ ಪಾರ್ಟಿ ವಿಧಾನವು ಸಮಸ್ತ ದೇಶೀಯರಿಗೂ ಆದರ್ಶಪ್ರಾಯವಾಗಿ ಬಹು ಕಾಲದಿಂದಲೂ ಹೆಸರ್ಗೊಂಡಿದ್ದಿತು. ಇದಕ್ಕೆ ಕಾರಣವು, ಪ್ರಪಂಚದಲ್ಲಿ ಯಾವಾಗಲೂ ಕಂಡು ಕೇಳದಿದ್ದ ಪಾರ್ಲಿಮೆಂಟು ವಿಧಾನವು ಇಂಗ್ಲೆಂಡಿನಲ್ಲಿ ಮೊದಲು ಏರ್ಪಟ್ಟು ಆಗಿದೆ. 600 ವರ್ಷಗಳಿಂದಲೂ ಈ ಪ್ರಜಾಹಿತ ರಾಜಕೀಯ ವಿಧಾನವು ಇಂಗ್ಲೆಂಡಿನಲ್ಲಿ ಆಚರಣೆಯಲ್ಲಿರುವುದು. ಇದರ ಮೂಲಕವಾಗಿ ಪಾರ್ಟಿ ವಿಧಾನವು ಈ ದೇಶದಲ್ಲಿ ಅತ್ಯುನ್ನತಸ್ಥಿತಿಗೆ ತರಲ್ಪಟ್ಟಿತು. ಈ ಕಾರಣದಿಂದಲೇ ಪರದೇಶಗಳಲ್ಲು ಕೂಡ, ಪ್ರಜಾಹಿತ ರಾಜಕೀಯ ಪರಿಪಾಲನವನ್ನು ಆಚರಣೆಯಲ್ಲಿ ತರುವ ಪ್ರಯತ್ನವು ನಡೆದಾಗ, ಇಂಗ್ಲೆಂಡಿನಲ್ಲಿ ಪ್ರಸಿದ್ಧವಾದ ಪಾರ್ಟಿ ವಿಧಾನವನ್ನು ಅನುಸರಿಸುವ ವಾಡಿಕೆಯಿದ್ದಿತು. ಕಳೆದ ವರ್ಷದ ವರೆಗೂ ಈ ಗೌರವವು ಇಂಗ್ಲೆಂಡಿಗು ಇದಿದ್ದಿತು. ಆದರೆ ಈಗ ಕೆಲ ಬದಲಾವಣೆಯಾಗಿದೆ. ಇದರಿಂದ ಆ ಗೌರವಕ್ಕೆ ಕೊಂಚ ಭಂಗ ಬಂದಿತು. ಈ ಪಾರ್ಟಿ ವಿಧಾನವೆಂತಹುದೋ, ಈ ಗೌರವವು ಹೇಗುಂಟಾಯಿತೋ, ಇದು ಯಾವ ವಿಧದಿಂದ ಕ್ಷೀಣಿಸಲು ಮೊದಲಾಯಿತೋ, ಅದಕ್ಕೆ ಕಾರಣಗಳೇನೋ ಇವೆಲ್ಲವೂ ಈ ಕೆಳಗೆ ವಿವರಿಸಲ್ಪಟ್ಟಿವೆ:—

ಇಂಗ್ಲೆಂಡಿನಲ್ಲಿ "ಲಿಮಿಟೆಡ್ ಮಾನಾರ್ಕಿ" ಅಂದರೆ ಪರಿಮಿತ ರಾಜಪರಿಪಾಲನವು ಸುಮಾರು 300 ವರ್ಷಗಳಿಂದ ನಡೆದುಕೊಂಡುಬರುತ್ತಿದೆ. ರಾಜನೇ ಸರ್ವಕ್ಕೂ ಮೂಲಾಧಾರನು. ನ್ಯಾಯನಿಬಂಧನೆಗಳನ್ನೂ ಶಾಂಘನ ವಿಧಾನಗಳನ್ನೂ ಅನುಸರಿಸುವಲ್ಲಿ ಸಾರ್ವಭೌಮನ ಗೌರವಕ್ಕೆ ಇಂಗ್ಲೆಂಡಿನಲ್ಲಿ ಏನೂ ಕೊರತೆಯಿಲ್ಲವು. ರಾಜನ ಹೆಸರಿಲ್ಲದೆ ಯಾವ ಶಾಸನವೂ ಆಚರಣೆಗೆ ಬರಲಾರದು. ರಾಜರ ಹಸ್ತಾಕ್ಷರವಲ್ಲದೆ ಬಿಲ್ಲುಗಳು ಶಾಸನ ಸಮ್ಮತವಾಗಲಾರವು. ರಾಜನ ಅನುಮತಿಯಿಲ್ಲದೆ ಇತರ ದೇಶದವರೊಡನೆ ನಡೆದ ಸಂಧಿ ಒಡಂಬಡಿಕೆಗಳು ಸಲ್ಲುವುದಿಲ್ಲ. ರಾಜ ಕೊಟ್ಟ ಹೊರತು ಗೌರವ ಪ್ರಶಸ್ತಿಗಳು ಅಂಗೀಕರಿಸಲ್ಪಡುವುದಿಲ್ಲ. ಈ ಪ್ರಕಾರವಾಗಿ ಬ್ರಿಟಿಷ್ ರಾಜ್ಯಾಂಗ ವಿಧಾನಗಳಲ್ಲಿಯ ಎಲ್ಲ ವಿಷಯಗಳಲ್ಲೂ ರಾಜನ ಗೌರವವು ಅತೀತವಾದುದು.

ಆದರೆ ಈ ವಿಷಯಗಳನ್ನೇ ನಾವು ಇನ್ನೊಂದು ವಿಧವಾಗಿ ವಿಚಾರಿಸಿ ನೋಡಿದರೆ, ನೋಡಲಿಕ್ಕೆ ಮಿತಿಯಿಲ್ಲದಿರುವ ರಾಜಪಟುತ್ವವು ವ್ಯವಹಾರರೀತ್ಯಾ ಅನೇಕ ವಿಧದಲ್ಲಿ ತಗ್ಗಿಸಲ್ಪಟ್ಟಿದೆ ಎಂದು ನಮಗೆ ಗೊತ್ತಾಗುತ್ತದೆ. ರಾಜನಿಗೆ ಸಲಹೆ ಕೊಡಲು "ಕ್ಯಾಬಿನೆಟ್" ಎಂದು ಒಂದು ಮಂತ್ರಿವರ್ಗವಿರುವುದು, ಇದರ ಅಧ್ಯಕ್ಷನು ಪ್ರಧಾನ ಮಂತ್ರಿಯು. ಈತನ ಕೈಕೆಳಗೆ ಅನೇಕ ಶಾಖಾಮಂತ್ರಿಗಳಿರುತ್ತಾರೆ. ಈಗ ಕ್ಯಾಬಿನೆಟ್ಟಿನಲ್ಲಿ ಮಂತ್ರಿಗಳೂ ಉಪಮಂತ್ರಿಗಳೂ ಸೇರಿ 25 ಮಂದಿಗಳಿರುತ್ತಾರೆ. ಇವರೆಲ್ಲರಿಗೂ ಕ್ಯಾಬಿನೆಟ್ಟಿನಲ್ಲಿ ನ್ಯಾಯಶಾಸ್ತ್ರದ ಪ್ರಕಾರ ಸ್ಥಳವಿಲ್ಲವು. ಅಂದರೆ ಕ್ಯಾಬಿನೆಟ್ಟು ಎಂಬ ಪದವು ಬ್ರಿಟಿಷ್ ಸಾಮ್ರಾಜ್ಯ ರಾಜಕೀಯ ಶಾಸ್ತ್ರದಿಂದ ನಿರ್ಧರಿಸಲ್ಪಟ್ಟಿಲ್ಲ. ಆದರೂ ಈ ಕ್ಯಾಬಿನೆಟ್ಟು ಮಾತ್ರ ಇಂಗ್ಲೆಂಡಿನಲ್ಲಿ ಅಪರಿಮಿತವಾದ ಶಕ್ತಿಯನ್ನುಳ್ಳದಾಗಿದೆ. ಕ್ಯಾಬಿನೆಟ್ಟು ಯಾವ ವಿಧವಾಗಿ ಆಚರಣೆಗೆ ತರಲ್ಪಟ್ಟಿರುವುದೆಂಬುದು ಕೆಳಗೆ ವಿವರಿಸಲ್ಪಟ್ಟಿದೆ. ಚಕ್ರವರ್ತಿಯವರ ಹಕ್ಕನ್ನೆಲ್ಲ ಕ್ರಿಯಾರೂಪವಾಗಿ ಈ ಕ್ಯಾಬಿನೇಟು ಸ್ವಾಧೀನಪಡಿಸಿಕೊಂಡಿರುವುದು. ಪಾರ್ಲಿಮೆಂಟಿನಲ್ಲಿ ಈ ಕ್ಯಾಬಿನೇಟು ಪಾರ್ಟಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಮಂತ್ರಿವರ್ಗದವರು ಪ್ರತಿಪಾದಿಸಿದ ಸಮಸ್ಯೆಗಳೆಲ್ಲ ಯಾವ ತೊಂದರೆಯೂ ಇಲ್ಲದೆ ಜಯಪ್ರದವಾಗುವುವು. ಈ ಕಾರಣದಿಂದ ಕ್ಯಾಬಿನೇಟಿನ ಧೈರ್ಯಸಾಹಸಗಳಿಗೆ ಮಿತಿಯಿಲ್ಲವು. ಅಂದರೆ ಕ್ಯಾಬಿನೇಟು ಒಂದು ವೇಳೆ ನಿಯಮಿಸಲ್ಪಟ್ಟ ನಂತರ ತನ್ನ ಜೀವಿತ ಕಾಲದಲ್ಲಿ ಇನ್ನೊಬ್ಬರ ಆಡಳಿತಗಳಿಗೆ ಹೆದರಬೇಕಾದುದಿಲ್ಲ.

ಈ ಮಂತ್ರಿವರ್ಗಕ್ಕೂ ರಾಜನಿಗೂ ಇರುವ ವ್ಯವಹಾರ ಸಂಬಂಧವನ್ನು ತಿಳಿಯಬೇಕಾಗಿದೆ. ಪ್ರಧಾನ ಮಂತ್ರಿ ನಿಯಮಿಸಿದ ಶಾಖಾ ಮಂತ್ರಿಗಳೂ, ಉಪಮಂತ್ರಿಗಳೂ ರಾಜನಿಂದ ಅನುಮೋದಿಸಲ್ಪಟ್ಟ ವಿನಾ ಅವರು ನ್ಯಾಯಶಾಸ್ತ್ರ ಪ್ರಕಾರ ಉದ್ಯೋಗಕ್ಕೆ ಅರ್ಹರಾಗುವುದಿಲ್ಲ. "ಪ್ರಿವಿ ಕೌನ್ಸಿಲ್" ಎಂಬ ಸಲಹೆಯನ್ನು ಕೊಡುವ ಸಂಘಕ್ಕೆ ರಾಜನೇ ಅಧ್ಯಕ್ಷನು. ಈ ಸಂಘದಲ್ಲಿ ಮುಖ್ಯ ಶಾಖಾ ಮಂತ್ರಿಗಳೆಲ್ಲರಿಗೂ ಸ್ಥಳವಿರುತ್ತದೆ. ಇವರೆಲ್ಲರೂ "ರೈಟ್ ಆನರಬಲ್" ಎಂಬ ಬಿರುದಿನಿಂದ ಕರೆಯಲ್ಪಡುವರು. ಇವರ ಸಲಹೆಯನ್ನು ರಾಜನು ಕೇಳುವನು. ಶ್ರೀ[illegible] ಈ

[illegible]

ಸಭೆಗೆ ಚುನಾಯಿಸಲ್ಪಡುತ್ತಿರುವರು. (ಸಶೇಷ)

ಹರಾಜ್ ನೋಟೀಸ್.

ಮೈಸೂರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟ್ ಸಾಹೇಬರವರ ಆಫೀಸಿನಿಂದ.

ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ:—

ಮೈಸೂರು ಸಿಟಿ ದೇವರಾಜ ಮೊಹಲ್ಲಾ ಲಕ್ಷ್ಮೀವಿಲಾಸ ರೋಡಿನಲ್ಲಿರುವ ಮ್ಯುನಿಸಿಪಾಲಿಟಿಗೆ ಸೇರಿದ ಮಳಿಗೆ ತಾರಶಿ ಕಟ್ಟಡ ಏಪ್ರಿಲ್ ತಿಂಗಳು 20 ನೇ ತಾರೀಖು ಬುಧವಾರ ಪ್ರಾತಃಕಾಲ 8-30 ಘಂಟೆಗೆ ಸರಿಯಾಗಿ ಮೇಲ್ಕಂಡ ಸ್ಥಳದಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ. ಇಷ್ಟವುಳ್ಳವರು ಜಡದರಖಾಸ್ತು ಮಾಡಿ ಕಟ್ಟಡವನ್ನು ಪಡೆಯಬಹುದು. ಆಖೈರು ಬಿಡ್ ಆದ ಕೂಡಲೇ ದರಖಾಸ್ತುದಾರನು ಹರಾಜಾದ ಮೊಬಲಗಿನ ¼ ಭಾಗವನ್ನು ಕೂಡಲೇ ಡಿಪಾಜಿಟ್ಟು ಮಾಡಿ, ಬಾಕಿ ಮೊಬಲಗನ್ನು ಒಂದು ವಾರದೊಳಗಾಗಿ ಪಾವತಿ ಮಾಡಿ ರಸೀತಿ ಪಡೆಯತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಡಿಪಾಜಿಟ್ ಮೊಬಲಗನ್ನು ವಾಪಸ್ ಕೊಡದೇ ಸೇರಿಸಲ್ಪಡುತ್ತದೆಯಲ್ಲದೆ ದುಸರಾ ಹರಾಜುಮಾಡಿ ಅದರಿಂದ ಆಗುವ ಲುಕ್ಸಾನಿಗೆ ಮೊದಲಿನ ಬಿಡ್‌ದಾರನನ್ನು ಗುರಿಪಡಿಸಲಾಗುತ್ತೆ.

ಆಖೈರ್ ಬಿಡ್ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟ್ ರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

ಷೆಡ್ಯೂಲ್ ಸ್ವತ್ತು ವಿವರ.

ಪೂರ್ವಕ್ಕೆ............ಮನೆ.
ಪಶ್ಚಿಮಕ್ಕೆ............ಮನೆ.
ಉತ್ತರಕ್ಕೆ............ಮನೆ.
ದಕ್ಷಿಣಕ್ಕೆ............ರಸ್ತೆ.

ಎರಡು ಅಂಕಣವುಳ್ಳ ಮಳಿಗೆ ತಾರಶಿ ಕಟ್ಟಡ. ಕಟ್ಟಡದಲ್ಲಿ ನ್ಯೂನತೆಗಳೇನಾದರೂ ಇದ್ದಲ್ಲಿ ಮಾಲೀಕರೇ ಜವಾಬ್ದಾರರಾಗಿರುತ್ತಾರೆ.

ಮ್ಯುನಿಸಿಪಲ್ ಆಫೀಸ್, 5—4—1932. } ಎ. ಕೃಷ್ಣ ಅಯ್ಯಂಗಾರ್, ಮ್ಯುನಿಸಿಪಲ್ ಇಂಜಿನಿಯರ್.

ಜಾಹಿರಾತ ನೋಟೀಸು.

ಮುಂಬೈ, ಮದ್ರಾಸು, ಮೈಸೂರು ಇಲಾಖೆಗಳಲ್ಲಿರುವ ಯಾವತ್ತು ಕರ್ನಾಟಕ ನಾಟಕ ಕಂಪನಿ ಮಾಲೀಕರು ಮತ್ತು ಇತರೇ ಜನರಿಗೆ ಈ ನೋಟೀಸು ಮೂಲಕವಾಗಿ ತಿಳಿಸುವದೇನೆಂದರೆ—ನಮ್ಮ ನಾಟಕ ಕಂಪನಿಯ ಮಾಲ್ಕಿ ಹಕ್ಕು ಬಾಧ್ಯತೆಯುಳ್ಳ (1) ಬಿ.ಎ. (2) ಸ್ತ್ರೀ. (3) ಎಲ್‌ಎಲ್.ಬಿ. ಎಂಬ ಹೆಸರಿನ 3 ಸಾಮಾಜಿಕ ನಾಟಕಗಳನ್ನು ಕೆಲವು ಕಂಪನಿಯವರು ನಾಟಕವಾಡುತ್ತಿರುವದಾಗಿ ನಮ್ಮ ನಜರಿಗೆ ಬಂದಿರುತ್ತದೆ. ಕೆಲವರು ಮೇಲೆ ಬರೆದ ಹೆಸರುಗಳನ್ನು ಬದಲುಮಾಡಿಯೂ, ಸ್ವಲ್ಪ ವಿಷಯಾಂತರಮಾಡಿಯೂ, ಕೆಲವರು ಸದರಿ ಹೆಸರುಗಳನ್ನೇ ಕಾಯಂ ಇಟ್ಟು ಆಡುತ್ತಿರುವದಾಗಿ ನಮಗೆ ತಿಳಿಯಬಂದಿರುತ್ತದೆ. ನಮ್ಮ ಹೊರತು ಸದರಿ 3 ನಾಟಕಗಳನ್ನು ಆಡುವ ಹಕ್ಕು ಯಾರಿಗೂ ಯಾವ ರೀತಿಯಿಂದಲೂ ಇರುವದಿಲ್ಲ. ಹೀಗಿದ್ದು ಯಾರಾದರೂ ಸದರಿ ನಾಟಕಗಳನ್ನು ಆಡಿದರೆ, ಪ್ರಯೋಗಮಾಡಿದರೆ ಲುಕ್ಸಾನಿಗೆ ಗುರಿಯಾಗಬೇಕಾದೀತೆಂದು ಈ ನೋಟೀಸಿನ ಮೂಲಕವಾಗಿ ತಿಳಿಯಪಡಿಸಲಾಗಿದೆ.

K. Jatteppa,
ಮಾಲಕ

ಮೊಕ್ಕಾಂ ಗದಗ,
ತಾ॥ 12-2-1932.
ಶ್ರೀ ಹಾಲಸಿದ್ಧೇಶ್ವರ ಪ್ರಸಾದಿಕ ಲೋಕಸೇವಕ ನಾಟಕಮಂಡಳಿ, ಹಲಗೇರಿ.
[8—6]

ನೋಟೀಸು.

ಶ್ರೀ ವೀರಭದ್ರೇಶ್ವರ ಪ್ರಸಾದಿಕ ನಾಟಕಮಂಡಳಿ ಮಾಲಕ ಮರುಳಸಿದ್ಧಯ್ಯ ಮೊರಬ ತಾಲ್ಲೂಕು ಕೂಡ್ಲಿಗಿ ಡಿ॥ ಬಳ್ಳಾರಿ ಇವರಿಗೆ ಕೆಳಗೆ ಸಹಿ ಮಾಡಿದವರ ಕಡೆಯಿಂದಾ ಈ ನೋಟೀಸಿನ ಮೂಲಕವಾಗಿ ತಿಳಿಸುವದೇನೆಂದರೆ—ನೀವು, ನಮ್ಮ ಕಂಪನಿಯ ಹಕ್ಕುಬಾಧ್ಯತೆಯುಳ್ಳ "ಸ್ತ್ರೀ" "ಬಿ. ಎ." ನಾಟಕಗಳನ್ನು ಪ್ರಯೋಗಮಾಡಿ ಆಡುತ್ತಿರುವದಾಗಿ ನಮಗೆ ತಿಳಿದುಬಂದಿದೆ. ಈ ನಾಟಕಗಳನ್ನು ಆಡಲು ನಮ್ಮ ಹೊರ್ತು ಬೇರೆ ಯಾವ ಜನರಿಗೂ ಹಕ್ಕುಬಾಧ್ಯತೆ ಇರುವದಿಲ್ಲ. ನಮ್ಮ ಪರವಾನಗಿ ಇಲ್ಲದೆ ನಾಟಕವಾಡಿ ನೀವು ಕಾಯದೇ ವಿರುದ್ಧವಾಗಿ ನಡೆದಿರುತ್ತೀರಿ. ನೀವು ಈ ನೋಟೀಸು ಮುಟ್ಟಿದ 1 ತಿಂಗಳೊಳಗಾಗಿ ನಮಗೆ ಭೆಟ್ಟಿಯಾಗಿ ಸದರಿ ನಾಟಕಗಳನ್ನು ರೂಲ್ಸಿಗೆ ವಿರುದ್ಧವಾಗಿ ಆಡಿದ ಬಗ್ಗೆ ನಾವು ಠರಾಯಿಸಿದಷ್ಟು ರಕಮು ಲುಕ್ಸಾನ ಕೊಟ್ಟು ಹೋಗಬೇಕು. ನೀವು ಇದಕ್ಕೆ ತಪ್ಪಿದರೆ ನಿಮ್ಮ ಮೇಲೆ ಕಾಯದೇ ಪ್ರಕಾರ ಯೋಗ್ಯ ಇಲಾಜ ನಡಿಸುವದರಲ್ಲಿ ಬರುವದು. ಈ ನೋಟೀಸಿನ ಖರ್ಚು ನಿಮ್ಮ ತಲೆಯಮೇಲೆ ಅದೆ, ತಿಳಿಯುವದು.

[8—6]
K. Jatteppa,
ಮಾಲಕ

ಮುಕ್ಕಾಂ ಗದಗ,
ತಾ॥ 12-2-1932.
ಶ್ರೀ ಹಾಲಸಿದ್ಧೇಶ್ವರ ಪ್ರಸಾದಿಕ ಲೋಕಸೇವಕ ನಾಟಕಮಂಡಳಿ, ಹಲಗೇರಿ.

ಅಖಿಲ ಶ್ರೀಮದ್ವೀರಶೈವ ಮಹಾಸಭೆಯ ಸ್ಟ್ಯಾಂಡಿಂಗ ಕಮಿಟಿ ಧಾರವಾಡ ಇವರಿಂದ ಪ್ರಸಿದ್ಧಮಾಡಲ್ಪಟ್ಟ ಪ್ರಕಟನೆ ನಂ. ೫.

(೧) ಅಧ್ಯಕ್ಷರನ್ನು ಆರಿಸುವ ವಿಷಯ.

ಧಾರವಾಡ ಲಿಂಗಾಯತ ಟೌನಹಾಲಿನಲ್ಲಿ ತಾ॥ 30-1-32 ನೇ ದಿವಸ ಸಾಯಂಕಾಲಕ್ಕೆ ಕೂಡಿದ ಸ್ಟ್ಯಾಂಡಿಂಗ ಕಮಿಟಿಯು ಠರಾವಿನ ಪ್ರಕಾರ [illegible]

[illegible]

(೨) ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು.

[illegible]

ತುಂಕೂರು ಡಿಸ್ಟ್ರಿಕ್ಟು ಬೋರ್ಡು.

ನೋಟಿಫಿಕೇಷನ್ ನಂಬರ್ ಎಲ್. ಎಫ್./2 ಸಿ. 979-31-32, ತಾ॥ 27 ನೆಯ ಮಾರ್ಚಿ 1932.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಈ ಡಿಸ್ಟ್ರಿಕ್ಟಿನಲ್ಲಿರತಕ್ಕ ಈ ಕೆಳಗೆ ನಮೂದು ಮಾಡಿರುವ ಡಿಸ್ಟ್ರಿಕ್ಟುಬೋರ್ಡು ಸಂತೆಗಳಲ್ಲಿ 1932-33 ನೇ ಸಾಲಿನಲ್ಲಿ ಸುಂಕ ವಸೂಲ್ಮಾಡುವ ಹಕ್ಕನ್ನು ಆಯಾಯ ಸಂತೆ ನಡೆಯುವ ಸ್ಥಳಗಳ ಮುಂದೆ ನಮೂದಿಸಿರುವ ಸ್ಥಳಗಳಲ್ಲಿಯೂ ಮತ್ತು ತಾರೀಖುಗಳಲ್ಲಿಯೂ ಬಹಿರಂಗವಾಗಿ ಹರಾಜುಮಾಡಲಾಗುತ್ತೆ. ಇಷ್ಟವುಳ್ಳವರು ಜಡದರಖಾಸ್ತು ಮಾಡಬಹುದು. ಹರಾಜು ತಪಸೀಲ್ ನೋಟಿಫಿಕೇಷನ್ ತಾಲ್ಲೂಕು ಕಚೇರಿ ಮೂಲಕವಾಗಿಯೇ ಆಗಲಿ ಅಥವಾ ನಮ್ಮ ಆಫೀಸು ಮೂಲಕವಾಗಿಯೇ ಆಗಲಿ ತಿಳಿದುಕೊಳ್ಳಬಹುದು.

ಜಂಜರ್ ನಂಬರ್	ಸಂತೆಗಳ ಹೆಸರು.	ಹರಾಜುಮಾಡುವ ಸ್ಥಳ.	ಹರಾಜು ತಾರೀಖು.
1.	ಹೆಬ್ಬೂರು	ತುಂಕೂರು ಡಿಸ್ಟ್ರಿಕ್ಟು ಬೋರ್ಡು ಆಫೀಸು	26-4-32
2.	ಬೆಳ್ಳಾವಿ		
3.	ಕ್ಯಾತಸಂದ್ರ		
4.	ಹೊನ್ನುಡಿಕೆ		
5.	ಶೀಬಿ		
6.	ಮಾವತ್ತೂರು	ಕೊರಟಗೆರೆ ಟ್ರಾವಿಲರ್ಸ್ ಬಂಗ್ಲೆ	25-4-32
7.	ಕಿಬ್ಬನಹಳ್ಳಿ	ತಿಪ್ಟೂರು ಮುಸಾಫರ್ ಖಾನೆ	30-4-32
8.	ಕೊನೆಹಳ್ಳಿ		
9.	ನೊಣವಿನಕೆರೆ		
10.	ಹುಳಿಯಾರು	ಹುಳಿಯಾರ್ ಮುಸಾಫರ್ ಖಾನೆ	2-5-32
11.	ಯಡಿಯೂರು	ಕುಣಿಗಲ್ ಮುಸಾಫರ್ ಖಾನೆ	27-4-32
12.	ಅಮೃತೂರು		
13.	ಹುತ್ರಿದುರ್ಗ		
14.	ನಾಗಸಂದ್ರ		
15.	ನಿಡುಸಾಲೆ		
16.	ಮಾಯಸಂದ್ರ	ಮಾಯಸಂದ್ರ ಟ್ರಾವಿಲರ್ಸ್ ಬಂಗ್ಲೆ	29-4-32
17.	ಕಲ್ಲೂರು	ಗುಬ್ಬಿ ಟ್ರಾವಿಲರ್ಸ್ ಬಂಗ್ಲೆ	28-4-32
18.	ಬಾಣಸಂದ್ರ	ತಿಪ್ಟೂರು ಮುಸಾಫರ್ ಖಾನೆ	30-4-32

D. S. MALLAPPA,
President,
District Board, Tumkur District.

[illegible]

(ಅ) ಮೆಂಬರರಿಂದ ಸೂಚಿಸಲ್ಪಟ್ಟ ಹೆಚ್ಚಿನ ವಿಷಯಗಳು.

[illegible]

G. H. HONNAPURMATH, ಜನರಲ್ ಸೆಕ್ರೆಟರಿ, K. A. KULKARNI, ಚೇರಮನ್ನ, ಸ್ಟ್ಯಾಂಡಿಂಗ ಕಮಿಟಿ ವೀರಶೈವ ಮಹಾಸಭಾ, ಧಾರವಾಡ.

ಅಖಿಲಭಾರತ ಶ್ರೀಮದ್ವೀರಶೈವ ಸಭಾ ಧಾರವಾಡ.

[illegible]

ಸಿ. ಜಿ. ಹುಂಡೇಕರ್,
ಎಸ್. ಎಸ್. ಬಸವನಾಲ್,
ಪಬ್ಲಿಕೇಷನ್ ಕಮಿಟಿ, ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆ, ಧಾರವಾಡ, ಇವರ ಪರವಾಗಿ.

ಬೇಲೂರು ತಾಲ್ಲೂಕು ಪ್ರಥಮ ವೀರಶೈವ ಸಮ್ಮೇಳನ

ನಮ್ಮ ತಾಲ್ಲೂಕಿನ ವೀರಶೈವ ಪ್ರಥಮ ಸಮ್ಮೇಳನವನ್ನು ತಾರೀಖು 17-4-1932 ನೇ ಭಾನುವಾರ ಬೇಲೂರಿನಲ್ಲಿ ನಡೆಯುವ ರಥೋತ್ಸವದ ಕಾಲದಲ್ಲಿ, ಶಿವಮೊಗ್ಗ ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರಾದ ಮ॥ ಹೆಚ್. ಸಿದ್ದಯ್ಯನವರು, ಬಿ.ಎ., ಬಿ.ಎಲ್., ಇವರ ಅಧ್ಯಕ್ಷತೆಯಲ್ಲಿ ನಡೆಯಿಸಬೇಕಾಗಿ ನಿಶ್ಚಯಿಸಿರುವುದರಿಂದ ಮಹಾಭಿಮಾನಿಗಳು ಆ ದಿನ 2 ಘಂಟೆಗೆ ಸರಿಯಾಗಿ ದಯಮಾಡಿಸಿ ಕಾರ್ಯ ಭಾಗಿಗಳಾಗಬೇಕಾಗಿ ವಿನಂತಿ.

ತಮ್ಮಗಳ ವಿಧೇಯರು,
ಬಿ. ಪಿ. ಮಲ್ಲೇಗೌಡ, ಬಾಳ್ಳು ಗುರಪ್ಪಗೌಡ, ಬೇಲೂರು ಸಾಹುಕಾರ್ ವೀರಶೆಟ್ಟಿ, ಕೋಗೋಡು ಪಟೇಲ್ ಮಲ್ಲೇಗೌಡ, ತೊಳಲು ಪಟೇಲ್ ಮುತ್ತೇಗೌಡ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಅನಂಗೀಕೃತ ಲೇಖಗಳು.

ಚಿತ್ರದುರ್ಗ ಡಿ॥ ಜಾಮಗಲ್ ಸ್ಕೂಲು ಸಂತೋಷಕಮಿಟಿ—ಈ ಲೇಖವು ಅಸ್ಪಷ್ಟವಾಗಿಯೂ, ಬಹಳ ದೀರ್ಘವಾಗಿಯೂ ಇರುವುದರಿಂದ ಪ್ರಕಟವಾಗಲು ಸಾಧ್ಯವಿಲ್ಲ.

ಮಹಾಮಾತೃಶ್ರೀಯವರಿಗೆ ಫಲಪುಷ್ಪ ಸಮರ್ಪಣೆ.

[illegible]

ಪ್ರತ್ಯಕ್ಷದರ್ಶಿ.

ಶ್ರೀ ಶೃಂಗೇರಿ ಜಗದ್ಗುರುಗಳ ಆಡಳಿತ.

[illegible]

ತಪ್ಪು ಲೇಖನವನ್ನು ಬರೆದವರ ಎದೆಗಾರಿಕೆಗೆ ಆಶ್ಚರ್ಯವಾಯಿತು.

[illegible]

ಚಿತ್ರದುರ್ಗದ ವರ್ತಮಾನಗಳು.

[illegible]

ಶ್ರೀ ಭಿಕ್ಷದಸ್ವಾಮಿಗಳವರು ಲಿಂಗೈಕ್ಯರಾದರು.

[illegible]

ಮಹಾಜನರ ಸನ್ನಿಧಿಯಲ್ಲಿ ಹೊಸ ವರ್ಷದ ವಿನಯಪೂರ್ವಕ ವಿಜ್ಞಾಪನೆ.

[illegible] ಗಳಿಗೆ ಗ್ರಾಸ (ಹುಲ್ಲು) ಧನವನ್ನು ಒದಗಿಸಿಕೊಡುವುದಕ್ಕಿಂತ ಅತಿಶಯವಾದ ಧರ್ಮವು ಮತ್ತಾವುದೂ ಇಲ್ಲ. ಇದನ್ನು ನಮ್ಮ ಧರ್ಮಸಹೋದರರೆಲ್ಲರೂ ಆಚರಿಸಿ ಪುಣ್ಯಭಾಗಿಗಳಾಗಬೇಕೆಂಬುದೇ ನನ್ನ ವಿಜ್ಞಾಪನೆ. ಧರ್ಮೈಕದೃಷ್ಟಿಗಳಾದ ತಾವು ಪ್ರಾಣಿದಯಾಪರರಾಗಿ ಈ ಸಂಘಕ್ಕೆ ದ್ರವ್ಯ ಸಹಾಯ ಮಾಡುವುದರ ಮೂಲಕ ಪುಣ್ಯಭಾಗಿಗಳಾಗಬೇಕೆಂದು ಪ್ರಾರ್ಥಿಸುತ್ತೇನೆ.

ಮಹಾಜನ ವಿಧೇಯ,
ಎಂ. ಸಿ. ತಮ್ಮಯ್ಯ, ಸಂತೇಪೇಟೆ ಮೈಸೂರು.

ಶ್ರೀಶೈಲದಲ್ಲಿ ನೆರೆದಿದ್ದ ವೀರಶೈವ ಸಭೆ.

ಕಳೆದ ಮಹಾಶಿವರಾತ್ರಿ ದಿವಸ ಶ್ರೀಶೈಲ ಮಹಾಕ್ಷೇತ್ರದಲ್ಲಿ ವೀರಶೈವ ಸಮ್ಮೇಳನವು ಬಳ್ಳಾರಿ ವಕೀಲ್ ಮ॥ ಷಡಕ್ಷರಯ್ಯ, ಎಂ.ಎ., ಬಿ.ಎಲ್., ರವರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ಸಾವಿರಾರು ಯಾತ್ರಿಕರು ಸೇರಿದ್ದರು. ಗಂಗಪ್ಪ ಗಡಿಗಿಯವರು ಶ್ರೀಶೈಲ ಕ್ಷೇತ್ರದ ನಗರದ ಯಾವತ್ತು ಪ್ರಾಕಾರವು ವೀರಶೈವರಿಂದಲೇ ಸ್ಥಾಪಿತವಾದುದೆನ್ನುವದಕ್ಕೆ ಈ ಕೆಳಗಿನ ಉಪನ್ಯಾಸವನ್ನು ಬಹುಗಂಭೀರವಾಗಿ ಮಾಡಿದರು. ಮ॥ ಓಬಳರೆಡ್ಡಿ, ಡಿಸ್ಟ್ರಿಕ್ಟು ಬೋರ್ಡು ನಂದ್ಯಾಲ ಇವರು ಈಗಿನ ಶ್ರೀಶೈಲ ವಿಚಾರವನ್ನು ಕುರಿತು ಭಾಷಣಮಾಡಿದರು. ಅದರಲ್ಲಿ ಗಡಿಗಿ ಗಂಗಪ್ಪನವರ ಭಾಷಣ:— ಈ ಕ್ಷೇತ್ರವು ವೀರಶೈವ ಮಹಾಮಠಸ್ಥಾಪಕರಲ್ಲಿ ಒಬ್ಬರಾದ ಜಗದ್ಗುರು ಪಂಡಿತಾರಾಧ್ಯರು ಆದಿಯಲ್ಲಿ ಇದೇ ಮಲ್ಲಿಕಾರ್ಜುನಲಿಂಗದಿಂದ ಉದ್ಭವಿಸಿದರೆಂದು ಶಿವಾಗಮಗಳು ಸಾರುತ್ತವೆ. ಈಗಲೂ ಮಲ್ಲಿಕಾರ್ಜುನಸ್ವಾಮಿಯವರ ಮತ್ತು ಭ್ರಮರಾಂಬೆಯವರ ದೇವಾಲಯಗಳ ಮಧ್ಯದಲ್ಲಿ ಈಗ ಇಂಚಗ್ ಹಾಕಿರುವದೇ ಸೂರ್ಯ ಸಿಂಹಾಸನಮಠವಿದ್ದಿತು. ಇಲ್ಲಿ ಈಗಲೂ ಶಿವಾಚಾರ್ಯರ ಗದ್ದುಗೆಗಳೂ, ಶಿವಪೂಜಾ ಭಾವಿಯೆಂತಲೂ ಅಡಿಗೆಯ ಭಾವಿಯೆಂತಲೂ 3 ಭಾವಿಗಳೂ, ಶಿವಪೂಜಾಮಂದಿರವೂ [illegible]

[illegible]

...ನಗರಕೆರೆಗ್ರಾಮದಲ್ಲಿರುವ ಶಾಲೆಗೆ ಪ್ರತಿ ದಿನವೂ 2 ವೇಳೆ ಹೋಗಿ ಬರಬೇಕಾಗಿದೆ. ನಮ್ಮ ಗ್ರಾಮಕ್ಕೂ ನಗರಕೆರೆಗೂ 5-6 ಫರ್ಲಾಂಗ್ ದೂರವಾತ್ರವೇ ಇದ್ದರೂ, ಮಧ್ಯೆ ಒಂದು ದೊಡ್ಡ ಹಳ್ಳ ಹರಿಯುತ್ತಿರುವುದರಿಂದಲೂ, ಸರಿಯಾದ ರಸ್ತೆಯಿಲ್ಲದಿರುವುದರಿಂದಲೂ ಪ್ರಯಾಣಿಕರಿಗೂ ...

... ಮತ್ತು ಹಳ್ಳಕ್ಕೆ ಸೇತುವೆ ಕಟ್ಟಿಸುವ ಕಾರ್ಯಗಳಿಗೆ ಡಿಸ್ಟ್ರಿಕ್ಟ್ ಬೋರ್ಡಿನಿಂದ ಉದಾರವಾಗಿ ಸಹಾಯಮಾಡಿಸಿ ಜನಸೌಕರ್ಯವನ್ನುಂಟುಮಾಡಿಕೊಡಬೇಕಾಗಿ ಕೋರುತ್ತೇವೆ. ತಮಗೆ ಭಗವಂತನು ಆಯುರಾರೋಗ್ಯ ಐಶ್ವರ್ಯಗಳನ್ನು ಕರುಣಿಸಿ ತಮ್ಮಿಂದ ಬಹುಕಾಲ ಹೆಚ್ಚಾದ ಜನಸೇವೆ ನಡೆಯುವಂತೆ ಅನುಗ್ರಹಿಸಲೆಂದು ಹಾರೈಸುತ್ತೇವೆ.

ಇತಿ, ನಿಮ್ಮ ಶ್ರೇಯಸ್ಕಾಂಕ್ಷಿಗಳು, ಸೋಮಪುರದ ಗ್ರಾಮಸ್ಥರು.

ಮ|| ಬಿ. ಎಸ್. ಪುಟ್ಟಸ್ವಾಮಯ್ಯನವರ ಸತ್ಕಾರ ಸಮಾರಂಭ.

ಅಭಿನಂದನಪತ್ರಿಕೆ.

ಮೈಸೂರು ಸಂಸ್ಥಾನದ ಪ್ರೈಮರಿ, ಮಿಡಲ್ ಸ್ಕೂಲುಗಳ ಉಪಾಧ್ಯಾಯ ಸಂಘಗಳ ಸೆಕ್ರೆಟರಿಯವರುಗಳಿಗೆ.

1932 ನೇ ಸಾಲ್ ಏಪ್ರಿಲ್ ದ್ವಿತೀಯವಾರದಲ್ಲಿ ಮೈಸೂರು ಸಂಸ್ಥಾನದ ಮಿಡಲ್ ಮತ್ತು ಪ್ರೈಮರಿ ಸ್ಕೂಲ್ ಉಪಾಧ್ಯಾಯರ ದ್ವಿತೀಯ ಮಹಾಸಮ್ಮೇಳನವು ಬೆಂಗಳೂರು ಪಟ್ಟಣದಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರ ಆಶ್ರಯದಲ್ಲಿ ನಡೆಯುವುದಾಗಿ ತಮ್ಮೆಲ್ಲರಿಗೂ ಅರಿಕೆ ಮಾಡಿರುವುದು ಸರಿಯಷ್ಟೆ. ಈ ಸಮ್ಮೇಳನವನ್ನು ಬೆಂಗಳೂರು ಡಿ|| ಬೋ|| ಅಧ್ಯಕ್ಷರವರ ಮತ್ತು ಡಿಸ್ಟ್ರಿಕ್ಟ್ ಎಡ್ಯುಕೇಷನಲ್ ಆಫೀಸರವರ ಇಷ್ಟಪ್ರಕಾರ ...

... ಕಳುಹಿಸಲು ಇಷ್ಟಪಟ್ಟವರು ಕಳುಹಿಸಬಹುದು ಇಲ್ಲವಾದರೆ ಪುನಃ ಕೇಳಿದಾಗ ಕಳುಹಿಸಬಹುದು. ಸಂಘಗಳನ್ನು ಲೀಗಿಗೆ ಅಫಿಲಿಯೇಟ್ ಮಾಡುವ ಬಗ್ಗೆ ಕಳುಹಿಸಬೇಕಾದ ಫೀಯನ್ನು ಕಳುಹಿಸಬೇಕು. ವಿದ್ಯಾಭ್ಯಾಸದ ಪ್ರದರ್ಶನಕ್ಕೆ ಸಾಮಾನುಗಳನ್ನು ಪುನಃ ಕೇಳುವವರೆಗೂ ಕಳುಹಿಸಬೇಕಾಗಿಲ್ಲ. ಚರ್ಚಿಸಬೇಕಾದ ವಿಷಯಗಳ ಪಟ್ಟಿ, ಉಪನ್ಯಾಸಗಳ ಪ್ರತಿ ಮತ್ತು ಡೆಲಿಗೇಟರ ಪಟ್ಟಿ ಮೊದಲಾದುವುಗಳನ್ನು ಈಗಲೂ ಕಳುಹಿಸಲು ಅಭ್ಯಂತರವಿಲ್ಲ.

24-3-1932. C. R. MADHAVA RAO, Secretary.

ಶ್ರೀಮತ್ ಸಚ್ಚಿದಾನಂದಸ್ವಾಮಿಗಳವರ ಜಾತ್ರೆಯು, ಗದಗ.

ಶ್ರೀಮದಖಂಡರಸಪರಿಪೂರ್ಣ ಅವಿರಳ ಪರಂಜ್ಯೋತಿ ಬ್ರಹ್ಮಾನಂದ ಪರಿಪೂರ್ಣರಾದ ಶ್ರೀ ಗುರುವರ್ಯ ಸಚ್ಚಿದಾನಂದ ಪರಮಹಂಸ ಸ್ವಾಮಿಗಳವರ ಚರಣ ಸನ್ನಿಧಿಯ ಕೃಪೆಯಿಂದ ಭಕ್ತಮಂಡಳಿಯವರು ವಿನಯಪೂರ್ವಕವಾಗಿ ಪ್ರಾರ್ಥಿಸುವದೇನಂದರೆ—

ಶ್ರೀಗಳವರ ಗದಗಿನ ಮಠದಲ್ಲಿ ಪ್ರತಿ ವರ್ಷದಂತೆ ಈ ವರ್ಷ ಅಂದರೆ ಶಕೆ 1854 ನೇ ಆಂಗಿರಸನಾಮಸಂವತ್ಸರದ ಚೈತ್ರ ಬಹುಳ ನವಮಿ (ತಾ|| 29-4-1932 ಶುಕ್ರವಾರದಿಂದ ಗುರುವಾರ ಅಮಾವಾಸ್ಯೆ (ತಾ|| 5-5-1932) ಯ ವರೆಗೆ ಸಪ್ತಾಹ ಪೂಜೆಯು ನಡೆಯುವದು. ಕಡೆಯ ದಿವಸ ಅಂದರೆ ಅಮಾವಾಸ್ಯೆಯ ದಿವಸ ಸಾಯಂಕಾಲಕ್ಕೆ ರಥೋತ್ಸವ ಸಮಾರಂಭವು ನಡೆಯುವದು. ಈ ಅವಧಿಯಲ್ಲಿ (ಏಳು ದಿವಸಗಳಲ್ಲಿ) ಶಾಸ್ತ್ರ, ಪುರಾಣ, ಕೀರ್ತನೆ, ಭಜನೆ, ಮಹಾತ್ಮರ ಉಪನ್ಯಾಸ, ಪ್ರವಚನ ಮೊದಲಾದ ಕಾರ್ಯಕ್ರಮ ...

... ಮಗಳ ತಪಶೀಲ ಮಾಹಿತಿಯನ್ನು ಉತ್ಸವದ ಪ್ರಕಾಶಕ-ಕಮಿಟಿಯವರು ಆಗಿಂದಾಗ್ಗೆ ಪ್ರಕಟನೆ ಹಾಗು ಜಾಹೀರಾತುಗಳ ಮೂಲಕ ಪ್ರಸಿದ್ಧಮಾಡುವರು. ಈ ಸಾರಿಯ ಉತ್ಸವಕ್ಕೆ ಯಾವತ್ತು ಭಕ್ತರು ತಮ್ಮ ಬಂಧುಬಾಂಧವ, ಇಷ್ಟಮಿತ್ರರೊಡನೆ ಬಂದು ಜಾತ್ರೆಯನ್ನು ಜಯಶೋಭಿತ ಮಾಡಬೇಕಾಗಿ ಪ್ರಾರ್ಥನೆ.

ತಮ್ಮ,
ರಾವಸಾಹೇಬ ಗುರಪ್ಪ ಟೆಂಗಿನಕಾಯಿ, ಪ್ರೆಸಿಡೆಂಟ್,
ಉತ್ಸವ ಕಮಿಟಿ, ಗದಗ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ, ಬೆಂಗಳೂರು.

ಲಗ್ನ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಿಸಿದ ಫಂಡಿನ ಹಣದ ತಪಸೀಲು—

ಮ|| ಗಳಾದ ...

... ಮಗ ಚಿ|| ಮಲ್ಲಪ್ಪನವರಿಗೂ ನಾಗಮಂಗಲದ ಬಳಿ ಲಿಂಗಶೆಟ್ಟರ ಪುತ್ರಿ ಚಿ|| ಸೌ|| ಪಾರ್ವತಮ್ಮನಿಗೂ ನಡೆದ ಲಗ್ನದಲ್ಲಿ ವಧೂವರರಿಂದ ತೆಗೆದದ್ದು ಹುಲಿಯೂರುದುರ್ಗದ ಮಠದ ವೇ|| ಹುಚ್ಚಪ್ಪದೇವರ ಮೂಲಕ 5 ರೂ. ಜುಂಲಾ 148-2-0.

ಎಂ. ನಾಗಪ್ಪ, ಆ|| ಸೆಕ್ರೆಟರಿ.
ಮೈ. ವೀ. ವಿ. ಫಂಡು ಸಂಘ.

೧೯೩೨ ನೆಯ ಇಸವಿ ಏಪ್ರಿಲ್ ತಾ|| ೧೧ರಿಂದ ಏಪ್ರಿಲ್ ತಾ|| ೧೭ರ ವರೆಗೆ ಸಲ್ಲುವ ಶಾಲಿವಾಹನಶಕೆ ೧೮೫೪ ನೆಯ ಆಂಗಿರಸನಾಮಸಂವತ್ಸರದ ಚೈತ್ರ ಶುದ್ಧ ಪಂಚಮಿಯಿಂದ ಚೈತ್ರ ಶುದ್ಧ ಏಕಾದಶಿ ವರೆಗಿನಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮೀನ ಮೇಷ
11	ಸೋಮ	ಪಂಚ	20-1	ಮೃಗ	59-38	30
12	ಮಂಗಳ	ಷಷ್ಠಿ	21-59	ಆರ್ದ್ರಾ	60	31
13	[1] ಬುಧ	ಸಪ್ತ	22-59	ಆರ್ದ್ರಾ	1-45	1
14	ಗುರು	ಅಷ್ಟ	22-14	ಪುನ	3-25	2
15	[2] ಶುಕ್ರ	ನವ	20-32	ಪುಷ್ಯ	3-45	3
16	[3] ಶನಿ	ದಶ	17-35	ಆಶ್ಲೇ	2-56	4
17	ಭಾನು	ಏಕಾ	13-45	ಮಘ	1-7	5

(1) ಎಡೆಯೂರು ಸಿದ್ಧಲಿಂಗೇಶ್ವರರಥ, ಮಹಾನಕ್ಷತ್ರ-ಅಶ್ವಿನಿ ೧ ನೇ ಪಾದ. (2) ಶ್ರೀರಾಮನವಮಿ. (3) ಕೊಟ್ಟೂರ್‌ಪೇಟೆ ರಾಮಸ್ವಾಮಿಯವರ ಬತ್ತೇರ್, ಮಹಾನಕ್ಷತ್ರ-ಅಶ್ವಿನಿ ೨ನೆಯ ಪಾದ.

ಮೈಸೂರು: ಮೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ...

REG N. O. M 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೩-೮-೦] [ಬಿಡಿಪ್ರತಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸ್ ೧೯೩೨ ನೆಯ ಇಸವಿ ಏಪ್ರಿಲ್ ತಾರೀಖು ೧೧ ನೆಯ ಸೋಮವಾರ [ಸಂಚಿಕೆ ೧೭

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place for insurance is the Public Branch of the Mysore State Life Insurance.

Policies are issued from Rs. 100 to Rs. 10,000 and copies of rules and forms of application can be had from all Government-Treasuries, Economic Superintendents, Helpers and the Insurance Office, Public Office Buildings Bangalore.

(Sd.) S. SHA MANNA,
Secretary, Insurance Committee.

[50—40]

ನೋಟೀಸು.

ಬೆಂಗಳೂರು ಮತ್ತು ಮೈಸೂರು ಪುರನಿವಾಸಿಗಳಿಗೆ ವಿಜ್ಞಾಪನೆ— ಈ ಪಟ್ಟಣಗಳಲ್ಲಿ ಈಚೆಗೆ ದೊಡ್ಡ ಬೆಳಕುಗಳ ಡೂಮುಗಳನ್ನು (ornamental Lamp Domes) ತುಂಟರು ಒಡೆಯುತ್ತಿದ್ದಾರೆ. ಇದರ ಕ್ರಯ ಒಂದಕ್ಕೆ ಸುಮಾರು ೫೦ ರೂಪಾಯಿ ಆಗುತ್ತೆ,

ದೇಶಾಭಿಮಾನಿಗಳಾದ ನೀವು ಯಾರಾದರು ಅದನ್ನ ನೋಡಿದ ಪಕ್ಷದಲ್ಲಿ ಹತ್ತಿರವಿರುವ ಪೋಲೀಸು ಸ್ಟೇಷನ್ನಿಗಾಗಲಿ ಅಥವಾ ನಮಗಾಗಲಿ ತಿಳಿಸಿದರೆ ನಾವು ಬಹಳ ಕೃತಜ್ಞರಾಗುತ್ತೇವೆ.

ಸಿ. ಎಂ. ಕರಿಯಪ್ಪ,
ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್.

[4—2]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಆದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಕರಾಗಿ ಕ್ಷೀಣರಾಗ ಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ಮಪ್ರಾಂಗ ಸುಂದರಪಾಕದ. [ಸ್ಟರ | ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಡಿಲವಾಗುವದು, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಸ್ಖಲಿತ ವೀರ್ಯಸ್ಖಲನ, ಪ್ರಮೇಹ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು, ನಿದ್ದೆ ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೪೪ ತೊಲಿಯ ಒಂದು ಡಬ್ಬಿಗೆ ೫| ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಕ್ಷೀಸು ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಆದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಡಿಚಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಡಿಚಿಟ್ಟು ಆಗೋಣ, ಮುಡಿಚಿಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಪ್ಪಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಆದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ತೀವ್ರ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ ಮತ್ತು ಬಡತನಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂತಿ ಹತ್ತುವವೋ, ಇಂಥ ಬೇರೆ ಕಾರಣದಿಂದ ಸಂತತಿ ಇಚ್ಛಾ ಯಾರಿಗೆ ತೀರಿರುತ್ತದೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. ಶರೀರದಲ್ಲಿಯೂ ಸಂಸಾರ ಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆ ವೇಳೆಗೆ ಮುಡಿಚಿಟ್ಟು ಆಗುವದು ಸುರು ಇಟ್ಟು ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ಏನುಮಾಡಿದರೂ ಸುರು ಆಗುವದಿಲ್ಲ ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರ ಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ ಒಂದು ಡಬ್ಬಿಗೆ ೭ ರೂ. ಟ. ಖ. ೮ ಆಣೆ. ಮತ್ತು ಕಡೆಗಾದ ೪ ನೇ ದಿವಸ ೬೦ ಪುಡಿ ತಣ್ಣೀರಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಗುಳಿಗೆ ಮಧ್ಯಾಹ್ನಕ್ಕೆ ೧, ಗುಳಿಗೆ ರಾತ್ರಿ ಊಟವಾದ ಅನಂತರ ೧ ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ. ಕೆಲವು ನಮ್ಮ ಕಡೆಗೆ ಇರುವ ಖಾತ್ರೀ ಔಷಧಗಳ ಕ್ಯಾಟಲಾಗ ತರಿಸಿಕೊಳ್ಳಿರಿ.

[60—17]

ಪತ್ತಾ ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜ. ಎಂ. ಎಸ್. ಎಂ.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ೦.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯೆ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸ	೦—೪—೦	೦—೯—೦
ವೃಷಭಪಂಚಕ	೦—೪—೦	೦—೯—೦
ಗುರುಶಂಕರದೇವ್ಯದಶಕ	೦—೧—೦	೦—೬—೦
ಬಸವೇಶ್ವರನಜನನ	೦—೮—೦	೦—೧೩—೦
ಸಟೀಕ ಕರಸ್ಥಲನಿರ್ಮಲ ಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೭—೦

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—ಶೀತ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಮೇಹದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕೆಲಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚುಮಾಡುತ್ತದೆ. ಮೂರು ಚಿಟಿಕೆ ನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು, ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[60—32] ಪೋ. ಬಾ. ೫೧೦, ಮದ್ರಾಸು.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಏಪ್ರಿಲ್ ತಾ|| ೧೮ ನೆಯ ಸೋಮವಾರ.

THE CHAMBER OF PRINCES

It is not very surprising to see that the Princes who met at Delhi have not been able to come to an agreement on some of the important questions, relating to their representation on the Federal legislature and allied questions. We cannot minimise their difficulties. There are rulers of big States and small ones, which are nothing more than zamindaries, each wanting a place in the sun. Sir Mirza M. Ismail had foretold in the very beginning that an understanding between the Princes themselves was foredoomed to failure and it has only come too true. Sir Mirza had suggested that an independent committee of Britishers should decide the dispute. To day it is the only alternative and we think that the suggestion of Sir Mirza that the Indian States Inquirey Committee may be required to take up the task and report on the same prior to their departure from India is the best that could be thought of in this connection. As regards the constitution of the Upper Chamber, it does not look as though Sir Mirza's suggestion in favour of a Federal Council composed of the representatives of the Governments of the different Federal units does not find much of an acceptance, as that would mean a restriction of the strength of the Council and the consequent difficulty in satisfying the demands of the various minor States. We feel that the existence of these small minor States should not be made to come in the way of a proper Federal constitution. If they are too small the feasability of giving them a place in the provincial constitution may also be considered, though we know they may not relish the idea in the least. The financial relationship between the Indian States and the Federal Government is not yet agreed upon. The chamber is agreed that the tributes must go. In fact, no one who has spoken about the tributes has had a word in favour of their continuance. We hope there will not be any unnecessary delay in settling this question and giving the much—needed relief to the States concerned. We may be pardoned if we state that while the Princes are all exercising their minds over their rights *inter-se* and in relation to the Federal Government they are not bestowing the least attention about their internal administration. They seem to have forgotten that the re-forming of Indian constitution consists as much in the making of a new constitution for the Provinces as for the Central Government, and that while the British-Indian units, namely, Provinces are getting full fledged provincial autonomy and self Government, their counter-parts, namely the Indian States also should forge a head towards, if not full autonamy, at least some form of popular administration. The Princes have to reform their own Governments before they can ask for a place in the Federal constitution. So that they may be broad-based on popular good will and confidence. We are not suggesting that they should be modelled exactly on the provincial Governments, but that they should be so constituted as to be receptive of and responsive to popular opinion. Otherwise, there will be developing two different sets of people in these two component parts of a new India—the one of provinces, self-reliant, self-respecting, manly and resourceful, the other of the Indian States, servile, depressed, weak and unresourceful. **This will mean that the contribution of the Indian States to the development of the greater India will necessarily be limited, leave alone the development of the States themselves. We hope that the Chamber of Princes** will tackle earnestly this important question also. We can only look to the more progressive among them to give the proper lead to those less progressive. While we cannot deny that Mysore has yet to evolve a popular constitution yet we can hold the example of Mysore to those other States which are feeling nervous about introducing constitutional reformes within their borders.

ನರೇಂದ್ರಮಂಡಲ.

ನರೇಂದ್ರಮಂಡಲದವರು ದಿಲ್ಲಿ ಪಟ್ಟಣದಲ್ಲಿ ಸಮಾವೇಶರಾಗಿದ್ದಾಗ್ಗೆ ಸಂಯುಕ್ತ ಶಾಸನ ಸಭೆ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲ ಮುಖ್ಯ ವಿಚಾರಗಳಲ್ಲಿ ಯಾವ ನಿರ್ಧಾರಕ್ಕೂ ಬಾರದಿದ್ದುದೇನೂ ಆಶ್ಚರ್ಯಕರವಲ್ಲವು. ಅವರ ತೊಂದರೆಗಳನ್ನು ಕಡಿಮೆ ಮಾಡಲು ನಮಗೆ ಸಾಧ್ಯವಿಲ್ಲ. ಜಹಗೀರಿಗಳಿಗೆ ಸರಿಸಮಾನವುಗಳಾದ ದೊಡ್ಡ ಮತ್ತು ಚಿಕ್ಕ ಸಂಸ್ಥಾನಗಳ ರಾಜರುಗಳಿರುತ್ತಾರೆ. ಅವರಲ್ಲಿ ಪ್ರತಿಯೊಬ್ಬರೂ ಸ್ಥಾನಾಪೇಕ್ಷಿಯಾಗಿರುವರು. ದೇಶೀಯ ರಾಜರುಗಳು ತಂತಮ್ಮೊಳಗೆ ಸಮಾಧಾನ ಮಾಡಿಕೊಳ್ಳುವುದು ಎಂದಿಗೂ ಸಾಧ್ಯವಿಲ್ಲವೆಂದು ಸರ್ ಮಿರ್ಜಾಯವರು ಆರಂಭದಲ್ಲೇ ಹೇಳಿದ್ದ ಭವಿಷ್ಯವು ಈಗ ಅಕ್ಷರಶಃ ನಿಶ್ಚಯವಾಗಿರುತ್ತದೆ. ಬ್ರಿಟಿಷರವರಿಂದಲೇ ಕೂಡಿದ ಸ್ವತಂತ್ರ ಕಮಿಟಿಯು ರಾಜರುಗಳಲ್ಲಿ ಹುಟ್ಟಿರುವ ವಿವಾದಾಂಶವನ್ನು ಬಗೆಹರಿಸಬೇಕೆಂದು ಸರ್ ಮಿರ್ಜಾಯವರು ಸೂಚಿಸಿದ್ದರು. ಇದರ ವಿನಾ ಪ್ರಕೃತದಲ್ಲಿ ಗತ್ಯಂತರವಿಲ್ಲ ಮತ್ತು ಈ ಸಂಬಂಧವಾಗಿ ಸರ್ ಮಿರ್ಜಾಯವರು ಸೂಚಿಸಿರುವಂತೆ ದೇಶೀಯ ಸಂಸ್ಥಾನಗಳ ವಿಚಾರಣೆ ಕಮಿಟಿಯವರು ಈ ಕಾರ್ಯವನ್ನು ಕೈಕೊಂಡು ಬಗೆಹರಿಸಿ ತಾವು ಭಾರತದೇಶವನ್ನು ಬಿಟ್ಟು ಹೊರಡುವುದಕ್ಕೆ ಮೊದಲೇ ತಮ್ಮ ವರದಿಯನ್ನು ಮಾಡುವುದೊಂದೇ ಉತ್ತಮ ಮಾರ್ಗವೆಂದು ನಮಗೆ ತೋರುತ್ತದೆ. ಸಂಯುಕ್ತ ಶಾಸನ ಸಭೆಯ ಅಂಗವಾದ ಮೊದಲನೆಯ ಸಭಾರಚನಾಕ್ರಮ ಸಂಬಂಧವಾಗಿ, ಬೇರೆ ಬೇರೆ ಸಂಯುಕ್ತ ರಾಷ್ಟ್ರಗಳ ಪ್ರಭುತ್ವಗಳ ಪ್ರತಿನಿಧಿಗಳಿಂದ ಕೂಡಿದ ಸಂಯುಕ್ತ ಮಂತ್ರಾಂಗವು (ಕೌನ್ಸಿಲ್ಲು) ಇರಬೇಕೆಂದು ಸರ್ ಮಿರ್ಜಾಯವರು ಸೂಚಿಸಿರುವುದು ಸಮ್ಮತಿಸಲ್ಪಡುವಂತಿಲ್ಲ. ಏಕೆಂದರೆ ಈ ಸೂಚನೆಯಿಂದ ಮಂತ್ರಾಂಗದ ಮೆಂಬರುಗಳ ಸಂಖ್ಯೆಯು ಕ್ಲುಪ್ತಗೊಳಿಸಲ್ಪಟ್ಟು ತನ್ಮೂಲಕ ಸಣ್ಣ ಪುಟ್ಟ ಸಂಸ್ಥಾನಗಳ ಕೋರಿಕೆಯನ್ನು ನೆರವೇರಿಸಿ ಅವರನ್ನು ತೃಪ್ತಿಗೊಳಿಸುವುದು ಕಷ್ಟವಾಗುತ್ತದೆ. ಸರಿಯಾದ ಸಂಯುಕ್ತ ರಾಜ್ಯಾಂಗರಚನೆಯಲ್ಲಿ ಸಣ್ಣ ಪುಟ್ಟ ಸಂಸ್ಥಾನಗಳು ಅಡ್ಡಬರಲು ಅವಕಾಶ ಕೊಡಬಾರದು. ಅವು ಅತ್ಯಂತ ಸಣ್ಣ ಸಭಾ ರಚನಾಕ್ರಮದಲ್ಲಿ ಅವುಗಳಿಗೆ ಸಭೆಯಲ್ಲಿ ಸ್ಥಾನವಿರುವುದರ ಸಾಧ್ಯತೆಯ ವಿಚಾರವಾಗಿ ಪರ್ಯಾಲೋಚಿಸಬಹುದಾಗಿದೆ. ಆದರೆ ಇದು ಅವರಿಗೆ ರುಚಿಸುವುದಿಲ್ಲವೆಂದೇನೋ ಬಲ್ಲೆವು. ದೇಶೀಯ ಸಂಸ್ಥಾನಗಳಿಗೂ ಸಂಯುಕ್ತ ಪ್ರಭುತ್ವಕ್ಕೂ ಇರಬೇಕಾದ ಆರ್ಥಿಕ ಸಂಬಂಧದಲ್ಲಿ ಮಾತ್ರ ಇನ್ನೂ ಒಪ್ಪಂದವಾಗಿಲ್ಲ. ದೇಶೀಯ ಸಂಸ್ಥಾನಗಳು ಕೊಡುತ್ತಿರುವ ಪೊಗದಿಯು ತಪ್ಪಿಸಲ್ಪಡಲೇ ಬೇಕೆಂಬ ವಿಚಾರಕ್ಕೆ ನರೇಂದ್ರಮಂಡಲದವರು ಸಂಪೂರ್ಣ ಒಪ್ಪಿಕೆಯನ್ನು ಕೊಟ್ಟಿರುತ್ತಾರಲ್ಲದೆ ಇದರ ವಿಚಾರವಾಗಿ ಮಾತನಾಡಿರುವವರಾರೂ ಪೊಗದಿಯು ನಡೆದುಕೊಂಡುಬರಬೇಕೆಂದು ಹೇಳಿಲ್ಲ. ಪೊಗದಿಯನ್ನು ತಪ್ಪಿಸುವ ವಿಚಾರವನ್ನು ಇತ್ಯರ್ಥಗೊಳಿಸುವಲ್ಲಿ ಮತ್ತು ಇದರಿಂದ ಪೊಗದಿಯನ್ನು ತೆರುತ್ತಿರುವ ಸಂಸ್ಥಾನಗಳ ಭಾರವನ್ನು ತಪ್ಪಿಸುವಲ್ಲಿ ಅನಾವಶ್ಯಕ ಕಾಲಹರಣವಾಗುವುದಿಲ್ಲವೆಂದು ನಿರೀಕ್ಷಿಸುತ್ತೇವೆ. ಸಂಯುಕ್ತ ಪ್ರಭುತ್ವದಲ್ಲಿ ತಮಗಿರಬೇಕಾದ ಸಂಬಂಧ ಮತ್ತು ಹಕ್ಕುಬಾಧ್ಯತೆಗಳಿಗಾಗಿ ರಾಜರುಗಳು ಹೋರಾಡುತ್ತಿರುವರಲ್ಲದೆ ಈ ಪ್ರಭುತ್ವದ ಒಳ ಆಡಳಿತದ ವಿಚಾರಕ್ಕೆ ಕೊಂಚವೂ ಗಮನ ಕೊಟ್ಟಿಲ್ಲವೆಂದು ಹೇಳುವುದಕ್ಕಾಗಿ ಕ್ಷಮೆಯನ್ನು ಕೋರುತ್ತೇವೆ. ಭಾರತ ರಾಜ್ಯಾಂಗ ಪುನರ್ರಚನೆಯಲ್ಲಿ ಕೇಂದ್ರ ಪ್ರಭುತ್ವವೇರ್ಪಡುವಂತೆ ಪ್ರಾಂತಿಕ ಪ್ರಭುತ್ವ ರಚನೆಯು ಆಗುವುದರ ಆವಶ್ಯಕತೆಯನ್ನೂ, ಬ್ರಿಟಿಷ್ ಇಂಡ್ಯಾ ಪ್ರಾಂತಗಳು ಸ್ವತಂತ್ರಾಧಿಕಾರವನ್ನು ಹೊಂದುವಾಗ್ಗೆ, ದೇಶೀಯ ಸಂಸ್ಥಾನಗಳು ಸಂಪೂರ್ಣ ಸ್ವತಂತ್ರಾಧಿಕಾರವನ್ನ ಹೊಂದದಿದ್ದಾಗ್ಯೂ ಯಾವುದಾದರೊಂದು ಪ್ರಜಾಸಮ್ಮತವಾದ ರಾಜ್ಯ ನಿಯಮ ಪ್ರಕಾರವಾಗಿಯಾದರೂ ಸ್ವಾತಂತ್ರ್ಯ ಹೊಂದಲಿಕ್ಕೆ ಪ್ರಯತ್ನಿಸಲು ಅವರುಗಳು ಮರೆತಿರುವಂತೆ ಕಾಣುತ್ತದೆ. ಸಂಯುಕ್ತ ರಾಜ್ಯಾಂಗ ರಚನೆಯಲ್ಲಿ ತಮಗೆ ತಕ್ಕ ಸ್ಥಾನವನ್ನು ಕೋರುವುದಕ್ಕೆ ಮೊದಲು ದೇಶೀಯ ರಾಜರು ತಮ್ಮ ಪ್ರಜೆಗಳ ಅಭಿಮಾನಕ್ಕೂ ವಿಶ್ವಾಸಕ್ಕೂ ಪಾತ್ರರಾಗುವ ರೀತಿಯಲ್ಲಿ ತಮ್ಮ ಪ್ರಭುತ್ವವನ್ನು ಪ್ರಥಮತಃ ಸುಧಾರಿಸಿಕೊಳ್ಳಬೇಕು. ಅವು ಪ್ರಜಾಭಿಪ್ರಾಯಕ್ಕೆ ಅನುಗುಣವಾಗಿರುವ ರೀತಿಯಲ್ಲಿ ಸುಧಾರಿಸಲ್ಪಡಬೇಕಲ್ಲದೆ ಪ್ರಾಂತಿಕ ಪ್ರಭುತ್ವಗಳ ಮಾದರಿಯನ್ನು ಯಥಾವತ್ತಾಗಿ ಅನುಸರಿಸಬೇಕೆಂದು ನಾವು ಸೂಚಿಸುವುದಿಲ್ಲ. ಹಾಗಲ್ಲದಿದ್ದರೆ ನವೀನ ಭಾರತದಲ್ಲಿ ಆತ್ಮಭರವಸೆ, ಆತ್ಮಗೌರವ, ಪೌರುಷ ಮತ್ತು ಉಪಪತ್ತಿ ಉಳ್ಳ ಪ್ರಾಂತಗಳ ಪ್ರಜಾವರ್ಗವೊಂದೂ; ಪರಸೇವೆ, ಅಧೈರ್ಯ, ಅಶಕ್ತಿ, ಅನುಪಪತ್ತಿ ಉಳ್ಳ ದೇಶೀಯಸಂಸ್ಥಾನಗಳ ಪ್ರಜಾವರ್ಗವೊಂದೂ ಅಭಿವೃದ್ಧಿಗೊಳ್ಳುತ್ತವೆ. ಇದರಿಂದ ಮಹಾಭಾರತಾಭಿವೃದ್ಧಿಗೆ **ದೇಶೀಯ ಸಂಸ್ಥಾನಗಳು ಮಾಡತಕ್ಕ ಸಹಾಯವು ಅದಕ್ಕೆ ಮಾತ್ರ ಅನ್ವಯಿಸುವಂತಾಗಿ ದೇಶೀಯ ಸಂಸ್ಥಾನಗಳು ತಮ್ಮಭಿವೃದ್ಧಿಯನ್ನು ತಾವೇ ನೋಡಿಕೊಳ್ಳಬೇಕಾಗುತ್ತದೆ. ಈ ಮುಖ್ಯ ವಿಚಾರವನ್ನು ನರೇಂದ್ರಮಂಡಲದವರು ತಮ್ಮ ಗಮನಕ್ಕೆ ತಂದುಕೊಂಡು ಶ್ರದ್ಧೆಯಿಂದ ಬಗೆಹರಿಸುವರೆಂದು ನಿರೀಕ್ಷಿಸುತ್ತೇವೆ. ಬಹಳ ಮುಂದುವರಿದ ಸಂಸ್ಥಾನಗಳು ಹಿಂದುಳಿದ ಸಂಸ್ಥಾನಗಳಿಗೆ ತಕ್ಕ ಮಾರ್ಗವನ್ನು ತೋರಿಸುವುದು ಆವಶ್ಯಕವು. ನಮ್ಮ ಮೈಸೂರು ಸಂಸ್ಥಾನವು ಪ್ರಜಾಸಮ್ಮತಪ್ರಭುತ್ವವನ್ನು ಇನ್ನೂ ಹೊಂದಿಲ್ಲವಾದರೂ, ಇದರ ಮಾರ್ಗವನ್ನು, ರಾಜಕೀಯ ಸುಧಾರಣೆಯನ್ನು ಈ ವರೆಗೆ ಮಾಡದಿರುವ ಸಂಸ್ಥಾನಗಳು ಅನುಸರಿಸಬೇಕಾಗಿ ಕೋರುತ್ತೇವೆ.**

ಜವಹಾರಿಲಾಲರ ಭಾವಮೈದುನನಿಗೆ ಶಿಕ್ಷೆ

ಪಂಡಿತ ಜವಹಾರಿಲಾಲರ ಭಾವಮೈದುನರೂ ಲಕ್ನೋ ವಿಶ್ವವಿದ್ಯಾನಿಲಯದಲ್ಲಿ ಶಾಸ್ತ್ರಪರಿಶೋಧಕರೂ ಆದ ಪಂಡಿತ ಕೈಲಾಸನಾಥಕಾಲ್‌ರವರು ಶಾಸನೋಲ್ಲಂಘನಾಪರಾಧಕ್ಕಾಗಿ 6 ತಿಂಗಳು ಕಠಿಣ ಸಜ ಮತ್ತು 200 ರೂ. ಅರ್ಥದಂಡ ವಿಧಿಸಲ್ಪಟ್ಟರು.

ಸಿಡಿಲು ಬಡಿದು ಮದನಣಿಗ ಸತ್ತನು

ಕೊಯಮತ್ತೂರು ತಾ|| ಪೆರಿನಾಯಕನ ಪಾಳ್ಯಕ್ಕೆ ಮದುವೆಗಾಗಿ ಬಂಧುಬಳಗದೊಡನೆ ಹೋಗುತ್ತಿದ್ದ 25 ವರ್ಷ ವಯಸ್ಸಿನ ಮದವಣಿಗನು ಸಿಡಿಲು ಬಡಿತದಿಂದ ಸತ್ತುಹೋದನು. ಈತನ ಲಗ್ನವು ಮಾರನೆಯ ದಿನ ನಡೆಯಬೇಕಾಗಿದ್ದಿತು.

ರೌಂಡುಟೇಬಲ್ ಸಲಹ ಸಂಘ

ಈ ವೇಳೆ ಈ ಕಾರ್ಯ ಸಲಹ ಸಂಘದವರು ಸಮಾವೇಶವೇ ಮೊದಲಾದ ಕಾರ್ಯವೆಲ್ಲವೂ ಪೂರೈಸುವವರೆಗೂ ವಿರಮಿಸಕೂಡದೆಂದು ನಿರ್ಧರವಾಗಿದೆ. ಆದುದರಿಂದ ಈ ಸಭೆಯು ಮೇ ತಾ|| 23ರಲ್ಲಿ ಪ್ರಾರಂಭವಾಗುವುದುತ್ತಮವೆಂದು ವೈಸ್ರಾಯರು ನಿಶ್ಚಯಿಸಿರುವರು. ಅದೇ ಪ್ರಕಾರ ಮೆಂಬರುಗಳಿಗೆ ಆಹ್ವಾನ ಕಳುಹಲ್ಪಡುವುದು.

ಸುಳ್ಳು ಸುದ್ದಿ

ಮಹಾತ್ಮ ಗಾಂಧಿಯವರನ್ನು ಕಾರಾಗೃಹ ಬಂಧನ ವಿಮುಕ್ತರನ್ನಾಗಿ ಮಾಡುವ ವಿಚಾರದಲ್ಲಿ ಇಂಡ್ಯಾ ಮಂತ್ರಿಯವರಾದ ಸರ್ ಸ್ಯಾಮ್ಯುಯಲ್ ಹೋರ್‌ರವರಿಗೂ ಮಹಾತ್ಮರಿಗೂ ಎರವಾಡ ಜೈಲಿನಲ್ಲಿ ಉತ್ತರ ಪ್ರತ್ಯುತ್ತರಗಳು ನಡೆದವೆಂಬವಾರ್ತೆಯು ಅಸತ್ಯವೆಂದು ಭಾರತ ಪ್ರಭುತ್ವದವರು ಪ್ರಕಟಿಸಿರುತ್ತಾರೆ.

ಅಗ್ನಿಪ್ರಮಾದದಿಂದ ಮಗುವಿನ ಮರಣ

ಅಹಮ್ಮದಾಬಾದು ಊರಿನ ಪಕ್ಕದ ಹೊಲದಲ್ಲಿದ್ದ ಗುಡಿಸಲುಗಳಿಗೆ ಅಗ್ನಿಪ್ರವೇಶವಾಗಿ 6-7 ಗುಡಿಸಲುಗಳು ಸುಟ್ಟುಹೋದವು. ಇದರಿಂದ 2 ವರ್ಷದ 1 ಮಗುವು ಸುಟ್ಟು ಬೂದಿಯಾಯಿತು. ಈ ಮಗುವನ್ನು ಸಂರಕ್ಷಿಸಲು ಜ್ವಾಲೆಯಲ್ಲಿ ನುಗ್ಗಿದ ತಾಯಿಯ ಮೈಸುಟ್ಟು ಅಪಾಯವನ್ನು ಹೊಂದಲು ಕೂಡಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆ ಹೊಂದುತ್ತಿರುವಳು.

ಸ್ವದೇಶೀ ಸಕ್ಕರೆಯ ಕಾರ್ಖಾನೆಗಳು

ಸ್ವದೇಶೀ ಸಕ್ಕರೆಯ ಕೈಗಾರಿಕೆಗೆ ಯಾವ ನಷ್ಟಕಷ್ಟಗಳು ಸಂಭವಿಸದಂತೆ 7 ವರ್ಷಕಾಲದವರೆಗೆ ಪ್ರಭುತ್ವದವರ ರಕ್ಷಣೆ ಪ್ರೋತ್ಸಾಹಗಳು ಕೊಡಲ್ಪಡುವುವೆಂದು ಈಚೆಗೆ ಕೊಟ್ಟ ಭರವಸೆಯ ಮೇಲೆ ಭಾರತದೇಶದ ಬೇರೆ ಬೇರೆ ಭಾಗಗಳಲ್ಲಿ 15 ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೇರ್ಪಾಟು ನಡೆಯುತ್ತಿದೆ. ಇದಕ್ಕಾಗಿ ಮುಜಫರಪುರದಲ್ಲಿ 20,000 ಎಕರೆ ಭೂಮಿಯು ಕಬ್ಬಿನ ವ್ಯವಸಾಯಕ್ಕಾಗಿ ತೆಗೆದುಕೊಳ್ಳಲ್ಪಟ್ಟಿರುವುದು.

ದಾರಿಕಟ್ಟಿ ಹೊಡೆದು ಕೊಂದರು

ಒಬ್ಬ ಬಂಗಾಳಿ ವರ್ತಕನು ತನ್ನ ರೈಸ್ ಮಿಲ್ಲಿನಿಂದ ಮನೆಗೆ ಹೋಗುತ್ತಿರುವಾಗ್ಗೆ ಯಾರೋ 6 ಜನರು ಮೋಟಾರು ಬಂಡಿಯಲ್ಲಿ ಕುಳಿತು ಹಿಂಬಾಲಿಸಿ ಅಡ್ಡಕಟ್ಟಿ ಬಂಡಿಯನ್ನು ನಿಲ್ಲಿಸಿ ವರ್ತಕನನ್ನು ಕತ್ತಿಯಿಂದ ತಿವಿದು ಅವನಲ್ಲಿದ್ದ ಧನವನ್ನು ಅಪಹರಿಸಿ ಯಥಾಪ್ರಕಾರ ಮೋಟಾರು ಬಂಡಿಯನ್ನು ಹತ್ತಿ ಪಲಾಯನವಾದರು. ವರ್ತಕನು ಕತ್ತಿ ಏಟಿನಿಂದ ಮೃತನಾದನು.

ಹೀರಾಚಂದರಿಗೆ ೨೦,೦೦೦ ರೂ. ಜುಲ್ಮಾನೆ.

ವಾಲ್ಚಂದ್ ಹೀರಾಚಂದ್‌ರವರ ತಮ್ಮ ಗೋಕುಲಚಂದ್ ಹೀರಾಚಂದ್‌ರವರು ಪೋಲೀಸರಿಗೆ ಪ್ರತಿದಿನವೂ ಕಾಣಿಸಿಕೊಳ್ಳಬೇಕೆಂಬ ಆಜ್ಞೆಯನ್ನುಲ್ಲಂಘಿಸಿದುದಕ್ಕಾಗಿ ಸೊಲ್ಲಾಪುರದ ಸಿಟಿ ಮೆಜಿಸ್ಟ್ರೇಟಿನಿಂದ 20,000 ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟರು. ಅಪರಾಧಿಯು ಧನಿಕನಾದುದರಿಂದ ಅವನ ಸ್ಥಿತಿಯನ್ನು ಗಮನಿಸಿ ಹೆಚ್ಚು ಮೊಬಲಗಿನ ಜುಲ್ಮಾನೆ ವಿಧಿಸಿದ್ದೇನೆಂದು ಆರ್ಡರ್ ಹೇಳುವಾಗ್ಗೆ ತಿಳಿಸಿದರು.

ಸತಾರಾ ಕಲೆಕ್ಟರ ದರ್ಬಾರು

ಸತಾರಾ ಕಲೆಕ್ಟರು, "ಎರಡನೆಯ ವಾರದ ಅಂತ್ಯದಲ್ಲಿ ಪ್ರಭುತ್ವಪಕ್ಷಪಾತಿಗಳ ಸಭೆಯನ್ನು ನಡೆಯಿಸಿ ದೇಶದಲ್ಲಿ ಪ್ರಭುತ್ವ ಪಕ್ಷವೆಂದೂ, ಕಾಂಗ್ರೆಸ್ ಪಕ್ಷವೆಂದೂ ಎರಡು ಪಕ್ಷಗಳು ಮಾತ್ರ ಇರುತ್ತವೆ, ಇವೆರಡರಲ್ಲಿ ಯಾವ ಪಕ್ಷವನ್ನು ಸೇರಬೇಕೆಂಬುದನ್ನು ಪ್ರಜೆಗಳು ನಿರ್ಣಯಿಸಬೇಕಾಗಿ ಕೋರುತ್ತೇನೆ" ಎಂದು ಹೇಳಿದರು. ಆ ಸಮಯದಲ್ಲಿ ಒಬ್ಬ ಯುವಕನು ಎದ್ದು ಕಾಂಗ್ರೆಸ್ ಪಕ್ಷವನ್ನು ಸಭಾಸದರು ಸೇರಬೇಕೆಂದು ಬೋಧಿಸಿದನು.

ಮಾಲವ್ಯರ ಸೊಸೆಯ ಸೆರೆ

ಕಾಶೀಪಟ್ಟಣದಲ್ಲಿ ಜಲಿಯನ್ ವಾಲಾಬಾಗ್ ಸ್ಮಾರಕ ದಿನೋತ್ಸವದಲ್ಲಿ ಹಿಂದುಗಳೆಲ್ಲರೂ ಕೆಲ ಮಹಮ್ಮದೀಯರೂ ಅಂಗಡಿಗಳನ್ನು ಮುಚ್ಚಿ ಹರತಾಳವನ್ನಾಚರಿಸಿದರು. ಆ ದಿವಸ ನಡೆದ ಉತ್ಸವದಲ್ಲಿ ಭಾಗಿಗಳಾಗಿದ್ದ ಪಂಡಿತ ಮದನಮೋಹನ ಮಾಲವ್ಯರ ಸೊಸೆ ಉಷಾ ಮಾಲವ್ಯರವರು ಮತ್ತೆ ಕೆಲರೊಡನೆ ಸೆರೆ ಹಿಡಿಯಲ್ಪಟ್ಟರು. ದಿಲ್ಲಿಯಲ್ಲಿ ನಡೆದ ಇದೇ ಜಾತೀಯ ಉತ್ಸವದಲ್ಲಿ ಸೇರಿದ್ದ ಜನರನ್ನು ಪೋಲೀಸಿನವರು ಲಾಠಿಯಿಂದ ಹೊಡೆದು ಸ್ವಾಮಿ ಶ್ರದ್ಧಾನಂದರವರ ಮೊಮ್ಮಗಳು ಸತ್ಯವತಿ ಮತ್ತೆ 18 ಮಂದಿಗಳನ್ನು ಸೆರೆ ಹಿಡಿದರು.

ಹಿಂಡೆನ್‌ಬರ್ಗ್‌ರವರ ಪ್ರಕಟನೆ.

ಜರ್ಮನ್ ಪ್ರಭುತ್ವಾಧ್ಯಕ್ಷರಾಗಿ ಆರಿಸಲ್ಪಟ್ಟಿದ್ದ ಕ್ಕೋಸ್ಕರ ತಮ್ಮ ವಂದನೆಯನ್ನು ಅರ್ಪಿಸುವಲ್ಲಿ, ನಿಷ್ಪಕ್ಷಪಾತವಾಗಿಯೂ, ನ್ಯಾಯವಾಗಿಯೂ ಶಕ್ತಿವಂಚನೆಯಿಲ್ಲದೆಯೂ ದೇಶಸೇವೆಯನ್ನು ಮಾಡುತ್ತೇನೆಂದೂ, ದೇಶೀಯರೂ, ಮಿತ್ರರೂ, ಪ್ರತಿಪಕ್ಷದವರೂ ತಂತಮ್ಮ ಭಿನ್ನಭಾವಗಳನ್ನು ಬಿಟ್ಟು ಏಕಮತ್ಯದಿಂದ ನಡೆದುಕೊಳ್ಳಬೇಕೆಂದೂ, ಎಲ್ಲರೂ ಏಕಮತ್ಯದಿಂದ ನಡೆದುಕೊಂಡರೇನೆಯೇ ತಮ್ಮ ಸ್ವಾರ್ಥವನ್ನು ಸಾಧಿಸಲಾಗುವುದೆಂದೂ ಹಿಂಡೆನ್‌ಬರ್ಗ್‌ರವರು ಪ್ರಕಟಿಸಿರುವರು.

ಮಹಾತ್ಮರ ಸಿನೆಮಾ ಪಟದ ನಿಷೇಧ.

ಸೆಂಟ್ರಲ್ ಪ್ರಾವಿನ್ಸ್ ಪ್ರಭುತ್ವದವರು ಮಹಾತ್ಮರ ಪುನರಾಗಮನ ಸಂಬಂಧವಾದ ಚಲನಚಿತ್ರಪಟ ಪ್ರದರ್ಶನವನ್ನು ಇತರ ಪ್ರಭುತ್ವದವರಂತೆ ನಿಷೇಧಿಸಿರುತ್ತಾರೆ. ಆದರೆ, ಮಹಾತ್ಮರು ಜಾರ್ಜ್ ಸಾರ್ವಭೌಮರೊಡನೆ ಮಾತನಾಡುತ್ತಿರುವಾಗ್ಗೆ ತೆಗೆದ ಪಟವನ್ನು ಸಹ ಪ್ರದರ್ಶಿಸದಂತೆ ನಿಷೇಧಿಸಿರುವುದು ಆಶ್ಚರ್ಯವಾಗಿರುತ್ತದೆ. ಪ್ರಾಯಶಃ ಮಹಾತ್ಮರೊಡನೆ ಚಕ್ರವರ್ತಿಯವರಿರುವುದನ್ನು ಪ್ರಜೆಗಳು ನೋಡಬಾರದೆಂಬ ಭಾವನೆಯಿಂದ ನಿಷೇಧಿಸಿರಬಹುದೆಂದು ತೋರುತ್ತದೆ.

ಬಂಗಾಳಾ ಐರ್ಲೆಂಡಿನಂತೆ ಇದೆ.

ಕನ್ಸರ್ವೇಟಿವ್ ಪಕ್ಷದವರ ಭಾರತೀಯಸಂಘ ಸಭೆಯಲ್ಲಿ ಇಂಡ್ಯಾ ಮಂತ್ರಿಯಾದ ಸರ್ ಸ್ಯಾಮ್ಯುಲು ಹೋರ್‌ರವರು ಉಪನ್ಯಾಸ ಮಾಡುವಾಗ್ಗೆ "ಐರ್ಲೆಂಡಿನಲ್ಲಿ ಮೊದಲು ಜಾತೀಯವಾದಿಗಳೂ ತರುವಾಯ ಸಿನ್‌ಫೇನು ಪಕ್ಷದವರೂ ಪ್ರಾಧಾನ್ಯವನ್ನು ಹೊಂದಿದ್ದಾಗ್ಗೆ ಐರ್ಲೆಂಡಿನ ಸ್ಥಿತಿಯು ಹೇಗಿದ್ದಿತೋ ಹಾಗೆ ಈಗ ಬಂಗಾಳ, ಬೊಂಬಾಯಿ ಪರಿಸ್ಥಿತಿ ಇರುತ್ತದೆ. ಆಗ ಐರ್ಲೆಂಡಿನಂತೆ ಈಗ ಇಂಡ್ಯಾದಲ್ಲಿ ರಹಸ್ಯ ಪಿತೂರಿಯೂ, ದೌರ್ಜನ್ಯವೂ ಪ್ರಬಲವಾಗಿವೆ. ಲಾ ಆರ್ಡರನ್ನು ಬಲಪಡಿಸುವವರು ತಮ್ಮ ಅಧಿಕಾರವನ್ನು ಉಪಯೋಗಿಸಲು ಭಯಪಡುತ್ತಿರುವರು" ಎಂದು ಹೇಳಿದರು.

ರೈಲುಬಂಡಿಯಲ್ಲಿ ಕೊಲೆ

ಅಲಹಾಬಾದಿಗೆ 12 ಮೈಲು ದೂರದಲ್ಲಿ ಹೋಗುತ್ತಿದ್ದ ಪ್ರಯಾಣಿಕರ ರೈಲುಬಂಡಿಯು ಪ್ರಮಾದಸೂಚಕ ತಂತಿ ಎಳೆಯಲ್ಪಟ್ಟುದರಿಂದ ನಿಲ್ಲಿಸಲ್ಪಟ್ಟಿತು. ಗಾರ್ಡು ದಿಗಿಲುಬಿದ್ದು ತಾನೊಯ್ಯುತ್ತಿದ್ದ 2,00,000 ರೂಪಾಯಿಗಳು ಅಪಹೃತವಾಗಿರಬಹುದೆಂದು ನೋಡುವಲ್ಲಿ ಅದು ಸುರಕ್ಷಿತವಾಗಿರುವುದನ್ನು ಕಂಡು ಅಂಚೆ ಬಂಡಿ ಬಳಿಗೆ ಬಂದು ಒಳಗೆ ಸಾರ್ಟರು 35 ವರ್ಷ ವಯಸ್ಸಿನ ಜಗನ್ನಾಥಪ್ರಸಾದ ಚೌಬಿ ಎಂಬಾತನು ಕತ್ತಿಯಿಂದ ಕತ್ತರಿಸಲ್ಪಟ್ಟು ಸತ್ತುಬಿದ್ದಿರುವುದನ್ನು ಕಂಡು ಪೋಲೀಸಿನವರಿಗೆ ತಿಳಿಸಿದನು. ಅವರು ತಡಕಿದಾಗ್ಯೂ ಹಂತಕರು ಸಿಕ್ಕಲಿಲ್ಲ.

ಭಾರತಕಾಂಗ್ರೆಸ್ ಮಹಾಸಭೆ

ಭಾರತ ಕಾಂಗ್ರೆಸ್ ಮಹಾಸಭೆಯ 47 ನೆಯ ಅಧಿವೇಶನವನ್ನು ದಿಲ್ಲಿನಗರದಲ್ಲಿ ನೆರೆಯಿಸುವುದರ ಸಂಬಂಧವಾಗಿ ಈಗ ಮಹಾಸಭಾಕಾಂಗ್ರೆಸ್‌ಸಂಘಾಧ್ಯಕ್ಷೆಯರಾಗಿರುವ ಸೌ|| ಸರೋಜಿನೀದೇವಿಯವರು ಒಂದು ಪ್ರಕಟನ ಪತ್ರಿಕೆಯನ್ನು ಹೊರಡಿಸಿರುವರು. ಅದರಲ್ಲಿ "ಪಂಡಿತ ಮದನಮೋಹನ ಮಾಲವ್ಯರ ಕೂಡ ಆಲೋಚಿಸಿ ಈ ಏಪ್ರಿಲ್ ತಿಂಗಳ ಕಡೆಯವಾರದಲ್ಲಿ ಅಧಿವೇಶನವನ್ನು ದಿಲ್ಲಿಯಲ್ಲಿ ಜರುಗಿಸಲು ನಿಶ್ಚಯಿಸಿದೆ. ಈ ಸಭಾಧ್ಯಕ್ಷತೆಯನ್ನು ಪಂ. ಮಾಲವ್ಯರವರು ವಹಿಸಲೊಪ್ಪಿರುವರು ಮತ್ತು ಸಭೆಯು ಒಂದು ದಿವಸ ಮಾತ್ರ ನಡೆಯುವುದು. ಅಧ್ಯಕ್ಷೋಪನ್ಯಾಸವು ನಡೆದಮೇಲೆ (1) ಕಾಂಗ್ರೆಸಿನ ಆಶಯವು ಸಂಪೂರ್ಣ ಸ್ವಾತಂತ್ರ್ಯವೇ ಎಂದು ಪ್ರಕಟಿಸುವುದು. (2) ಭಾರತ ಕಾಂಗ್ರೆಸ್ ಕಾರ್ಯ ಸಂಘದವರು ಸತ್ಯಾಗ್ರಹವನ್ನು ಕುರಿತು ಮಾಡಿದ ಕಡೆಯ ತೀರ್ಮಾನವನ್ನು ಸ್ಥಿರಪಡಿಸುವುದು. (3) ಕಾಂಗ್ರೆಸ್ ಪರವಾಗಿ ಮಾತನಾಡಲು ಮಹಾತ್ಮ ಗಾಂಧಿಯವರಿಗೆ ಮಾತ್ರ ಅಧಿಕಾರವಿರುತ್ತದೆಂದು ಸ್ಪಷ್ಟಪಡಿಸುವುದು—ಈ ಮೂರು ತೀರ್ಮಾನಗಳು ಅಂಗೀಕರಿಸಲ್ಪಡುವುವು" ಎಂದು ನಮೂದಿಸಲ್ಪಟ್ಟಿದೆ.

ಆಯುಧ ವಿಸರ್ಜನ ಸಭೆ

ದೊಡ್ಡ ಫಿರಂಗಿಗಳು, ಟಾಂಕುಗಳು, ಸಿಡಿಮದ್ದನ್ನು ಹಾಕಲುಪಯೋಗಿಸುವ ವಿಮಾನಗಳು, ವಿಮಾನಗಳನ್ನು ತೆಗೆದುಕೊಂಡು ಹೋಗುವ ಯಂತ್ರಗಳು, ವಿಷಕ್ರಿಮಿಪ್ರಯೋಗಗಳು ಸಂಪೂರ್ಣವಾಗಿ ತ್ಯಜಿಸಲ್ಪಡಬೇಕು. ಸೈನಿಕ, ನೌಕಾ, ವೈಮಾನಿಕ ಸೈನ್ಯಗಳಿಗೆ ಬೇಕಾದ ಆಯುಧಗಳನ್ನು ತೆಗೆದುಬಿಟ್ಟರೆ ಅಂತರ್ಜಾತೀಯ ಪ್ರಭುತ್ವದವರು ಕಠಿಣ ಚರ್ಯವನ್ನು ಮಾಡಲು ಅವಕಾಶವಿರುವುದಿಲ್ಲ. ಅಂತಹ ಕ್ರೂರಕೃತ್ಯಗಳನ್ನು ನಡೆಸಲು ಕಷ್ಟಗಳೂ ತೊಂದರೆಗಳೂ ಪ್ರಾಪ್ತವಾಗುವುವು ಎಂದು ಇಟಲಿ ಪ್ರಭುತ್ವ ಪ್ರತಿನಿಧಿಯಾದ ಗ್ರಾಂಡಿಯವರು ಆಯುಧ ವಿಸರ್ಜನ ಸಭೆಯಲ್ಲಿ ಹೇಳಿದರು. ಇವರಂತೆಯೇ ರಷ್ಯಾ ಜರ್ಮನಿ ಪ್ರತಿನಿಧಿಗಳೂ ಆಯುಧ ವಿಸರ್ಜನೆಯನ್ನು ಕೋರಿರುತ್ತಾರೆ. ಆದರೆ ಫ್ರೆಂಚ್ ಪ್ರಭುತ್ವ ಪ್ರತಿನಿಧಿಮಾತ್ರ ಅಂತರ್ಜಾತೀಯ ಸೈನ್ಯವಿದ್ದೇ ತಿರಬೇಕೆಂದು ಹೇಳಿರುವನು. ಈ ವಿಚಾರವಾಗಿ ಬ್ರಿಟಿಷ್ ಪ್ರಧಾನ ಮಂತ್ರಿಗಳಾದ ಮೆಕ್ಡೊನಾಲ್ಡ್‌ರವರ ಕೂಡ ಆಲೋಚಿಸುವುದಕ್ಕಾಗಿ ಬ್ರಿಟಿಷ್ ಪ್ರತಿನಿಧಿಯಾದ ಸರ್‌ಸೈಮನ್‌ರವರು ಇಂಗ್ಲೆಂಡಿಗೆ ಬಂದಿದ್ದು ಹೋದರು.

ದಕ್ಷಿಣ ಅಮೆರಿಕೆಯಲ್ಲಿ ಭೂಕಂಪ

ದಕ್ಷಿಣ ಅಮೇರಿಕೆಗೆ ಸೇರಿದ ಚಿಲ್ಲಿಯಲ್ಲಿ ಭೂಕಂಪವಾಗಿ ಕೆಲ ಪಟ್ಟಣಗಳು ತೂಗಾಡಿದುವು. ಅರ್ಜೆಂಟೈನಿನೊಳಗೆ ಅನೇಕ ಪ್ರದೇಶಗಳಲ್ಲಿ ಮಹಾ ಭಯೋತ್ಪಾತ ಕಂಪನವಾಗಿ ಬಹಳ ನಷ್ಟ ಸಂಭವಿಸಿತು. 3000 ಅಡಿ ಎತ್ತರದ ಪರ್ವತಗಳು ಬಾಯಿಬಿಟ್ಟು ಜ್ವಾಲೆಯನ್ನೂ ಕಾದ ಕಲ್ಲುಗಳನ್ನೂ ಮಣ್ಣನ್ನೂ ಕಾರುತ್ತಿದ್ದುವು. ಈ ಅನಾಹುತದಿಂದ ಅನೇಕ ದ್ರಾಕ್ಷಿ ತೋಟಗಳು ನಾಶವಾದುವು. ಮಾರ್ಗ್ಗೊ ಎಂಬಲ್ಲಿ 10,000 ಮಂದಿ ಪ್ರಾಣವಾಯು ಇಲ್ಲದೆ ತೊಂದರೆಪಡುತ್ತಿರುವರಾದುದರಿಂದ ಪ್ರಾಣವಾಯುವನ್ನೊದಗಿಸಲು ಏರ್ಪಾಟು ಮಾಡಲ್ಪಟ್ಟಿದೆ. ಆದರೂ ಇನ್ನೂ ಪ್ರಮಾದವು ತಪ್ಪಿಲ್ಲ. ಇವರುಗಳನ್ನು ರಕ್ಷಿಸಲು ಹೋಗಿದ್ದ ಜನರು ಹೊಗೆಯನ್ನು ಸಹಿಸಲಾರದೆ ಬಂದುಬಿಟ್ಟರು. ಮೆಂಡೋಜಾ ಎಂಬ ದೇಶದಲ್ಲಿರುವ 80,000 ಜನರನ್ನು ವಾಯು ವಿಮಾನಗಳ ದ್ವಾರಾ ಬೇರೆ ಕಡೆಗೆ ಕಳುಹಲು ಏರ್ಪಾಟು ನಡೆಯುತ್ತಿದೆ. ಈಗ ಅಗ್ನಿಪರ್ವತದ ಉದ್ರೇಕವು ಶಾಂತವಾಗಿರುವುದೆಂದು ಹೇಳುವರು. ಆಂಡಿಸಿನಲ್ಲಿರುವ ಅಗ್ನಿಪರ್ವತಗಳಿಂದ ಅರ್ಜೆಂಟೈನಿಗೆ ಕಾದ ಬೂದಿಯು ಹಾರಿಬಂದುದರಿಂದ ಹೊತ್ತಿಕೊಂಡುವು. ಇವುಗಳಿಂದಾದ ನಷ್ಟವೇನೂ ಹೆಚ್ಚಾಗಿಲ್ಲವೆಂದೂ, ಯಾರೂ ಸಾಯಲಿಲ್ಲವೆಂದೂ ತಿಳಿದುಬಂದಿದೆ. ಇನ್ನು ಮೇಲೆ ಭೂಕಂಪವಾಗುವುದಿಲ್ಲವೆಂದು ಒಬ್ಬ ಶಾಸ್ತ್ರಜ್ಞನು ಹೇಳಿದ್ದಾನೆ. ಅಗ್ನಿಪರ್ವತಗಳಿಂದ ಹಾರಿಬಂದ ಬೂದಿಯು ಸಿಮೆಂಟು ಮೊದಲಾದುವನ್ನು ಮಾಡಲುಪಯೋಗವಾಗುತ್ತದೆಂದೂ ಅದು ಬಿದ್ದ ಪ್ರದೇಶದಲ್ಲಿ ಜನರು ಸ್ತಿಮಿತವಾಗಿದ್ದರೆಂದೂ ತಿಳಿಯಬಂದಿದೆ.

ಈ ಜೂನ್ ತಾ|| ೨೮ ರೊಳಗೆ ಮಹಾತ್ಮರ ಬಿಡುಗಡೆಯಾಗುವುದು

ತಿರುತ್ತನಿ ಗಾಂಧಿ ಜ್ಯೋತಿಷಾಲಾಯಾಧಿಪತಿಯ ಪ್ರಕಟನೆ

"ಕಳೆದ ತಾ|| 14 ರ ಬೆಳಗಿನಝಾವ 4½ ಘಂಟೆಯಲ್ಲಿ ನನ್ನ ಉಪಾಸನಾಮೂರ್ತಿಯು ನನ್ನ ಸ್ವಪ್ನದಲ್ಲಿ ಬಂದು ಒಂದು ಸಂದೇಶವನ್ನು ಹೇಳಿತು. ಅನಂತರ ಮಹಾತ್ಮ ಗಾಂಧಿಯವರ ಜಾತಕವನ್ನು ಪರೀಕ್ಷಿಸಲಾಗಿ ಅದರ ಫಲವು ಈ ಕೆಳಗೆ ಕಂಡ ಪ್ರಕಾರ ನಡೆಯುವುದಾಗಿ ಸ್ಥಿರಪಟ್ಟಿತು.

ಈ ಏಪ್ರಿಲ್ ತಾ|| 29 ನೆಯ ಶುಕ್ರವಾರದ ವರೆಗೂ ಮಹಾತ್ಮರಿಗೂ ಅವರ ಪಕ್ಷದವರಿಗೂ ಪರಾಜಯವೇ ಆಗುತ್ತಿರುವುದು. ಕಾಂಗ್ರೆಸು ವಿಚಾರದಲ್ಲಿ ಪ್ರಪಂಚದ ಪ್ರಜೆಗಳ ಅಭಿಮಾನವು ಕಡಿಮೆಯಾಗುತ್ತಿರುವಂತೆ ಕಂಡುಬರುವುದು.

ಆದರೆ ಇದೇ ಏಪ್ರಿಲ್ ತಾ|| 30 ನೆಯ ಶನಿವಾರ ವೊದಲ್ಗೊಂಡು ಪ್ರಪಂಚಾಭಿಪ್ರಾಯವು ಮಹಾತ್ಮರಿಗನುಕೂಲವಾಗಿ ಪರಿಣಮಿಸುವುದು ನಿಶ್ಚಯವು. ಭಾರತದೇಶದಲ್ಲೂ ಇತರ ದೇಶಗಳಲ್ಲೂ ಪ್ರಮುಖರು ಕಾಂಗ್ರೆಸಿಗೆ ಅನುಕೂಲವಾಗಿ ಕೆಲಸ ಮಾಡಲುಪಕ್ರಮಿಸುವರು.

1932 ನೆಯ ಜೂನ್ ತಾ|| 28 ರೊಳಗೆ ಕಾಂಗ್ರೆಸಿನವರಿಗೂ ದೊರತನದವರಿಗೂ ಸಂಧಿ ಜರುಗುವುದು. ಆ ತಾರೀಖಿನೊಳಗೇ ಮಹಾತ್ಮರ ಬಿಡುಗಡೆಯಾಗುವುದು.

ಈ ಪ್ರಕಾರವಾಗಿ ಸಂಧಿ ಮಾಡುವುದರಲ್ಲಿ ಭಾರತೀಯರಂತೆ ಬ್ರಿಟಿಷ್ ದೇಶೀಯರೂ ಪ್ರಭುತ್ವದವರೂ ಪ್ರಬಲವಾಗಿ ಕೃಷಿಮಾಡುವರು.

1932 ನೆಯ ಜೂನ್ ತಾ|| 28 ರ ತರುವಾಯ ಮತ್ತೊಂದು ಮಹಾ ಯುದ್ಧವು ನಡೆಯುವ ಸೂಚನೆಯು ಕಂಡುಬರುತ್ತದೆ. ಕೆಲ ತಿಂಗಳ ವರೆಗೆ ಯುದ್ಧವು ತೀಕ್ಷ್ಣವಾಗಿ ನಡೆದು ಅನಂತರ ಸಂಪೂರ್ಣವಾಗಿ ಶಮನವಾಗುವುದು" ಎಂದು ತಿರುತ್ತನಿ ಗಾಂಧಿ ಜ್ಯೋತಿಷನಿಲಯದ ಯಜಮಾನರಾದ ಶಠಕೋಪಚಾರ್ಯರು ಪ್ರಕಟಿಸಿರುತ್ತಾರೆ.

ಒಳದೇಶದ ವೃತ್ತಾಂತಗಳು

ದಿವಾನರು ಕಳೆದ ಗುರುವಾರ ಕೆಮ್ಮಣ್ಣು ಗುಂಡಿಗೆ ಶ್ರೀಮನ್ಮಹಾರಾಜರವರ ದರ್ಶನಕ್ಕಾಗಿ ದಯಮಾಡಿಸಿದ್ದು ಈ ದಿವಸ ಬೆಂಗಳೂರಿಗೆ ಹಿಂದಿರುಗುವವರಾಗಿರುವರು.

ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ಮೈಸೂರು ಶಾಖಾ ಕಮಿಟಿಯ ಜನರಲ್ ಮೀಟಿಂಗು ನಾಳೆಯ ದಿವಸ ಸಾಯಂಕಾಲ 6 ಘಂಟೆಗೆ ಟವನ್‌ಹಾಲಿನಲ್ಲಿ ನಡೆಯುವುದು. ತಾತ್ಕಾಲಿಕ ಕಮಿಟಿಯವರು ರಾಜಧಾನಿಯಲ್ಲಿ ನಡೆಸಿದ ಶಿಶು ಆರೋಗ್ಯ ಪ್ರದರ್ಶನ ಸಪ್ತಾಹಕ್ಕೆ ಸಂಬಂಧಪಟ್ಟ ವಿಚಾರಗಳೂ ಶಾಖಾ ಕಮಿಟಿಗಳೇರ್ಪಾಟು ಮೊದಲಾದ ವಿಷಯಗಳೂ ಪರ್ಯಾಲೋಚಿಸಲ್ಪಡುವುವು.

ಮೈಸೂರು ಮತ್ತು ಕೊಡಗು ದೇಶಗಳ ಎರಡನೆಯ ಕುರುಹಿನಶೆಟ್ಟಿ ಮಹಾಸಭೆಯು ಕೃಷ್ಣರಾಜಪೇಟೆ ತಾ|| ಹೊಸಹೊಳಲಿನಲ್ಲಿ ಇದೇ ತಾ|| 23 ನೆಯ ಶನಿವಾರ ಎರಡನೆಯ ಕೌನ್ಸಿಲರ್ ರಾಜಮಂತ್ರ ಪ್ರವೀಣ ಮ|| ಕೆ. ಮಥ್ರಾರವರಿಂದ ಆರಂಭಿಸಲ್ಪಟ್ಟು ಹೊಳೇನರಸೀಪುರದ ಸಾಹುಕಾರ್ ಮ|| ಬಿ. ಏ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ಮಾರನೆಯ ದಿನವೂ ನಡೆಯುವುದು.

ನಾಳೆಯ ದಿವಸ ಮಧ್ಯಾಹ್ನ 12 ಘಂಟೆಗೆ ಮಾಗಡಿಯಲ್ಲಿ ಜಾತ್ರೆಗಾಗಿ ಹಾಕಲ್ಪಟ್ಟಿರುವ ನಾಟಕ ಚಪ್ಪರದಲ್ಲಿ ಮಾಗಡಿ ತಾಲ್ಲೂಕು ಜಮೀನ್ದಾರರ ಮತ್ತು ರೈತರ ಎರಡನೆಯ ಸಮ್ಮೇಳನವು ತುಮಕೂರು ಡಿ|| ಬೋರ್ಡ್ ಪ್ರೆಸಿಡೆಂಟರಾದ ಮ|| ಡಿ. ಎಸ್. ಮಲ್ಲಪ್ಪನವರಿಂದ ಆರಂಭಿಸಲ್ಪಟ್ಟು ಬೆಂಗಳೂರು ಡಿ|| ಬೋರ್ಡ್ ಪ್ರೆಸಿಡೆಂಟರಾದ ಮ|| ವಿ. ವೆಂಗಟಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಬೆಂಗಳೂರು ಪಟ್ಟಣದಲ್ಲಿ ಒಂದು ಟವನ್‌ಹಾಲನ್ನು ಕಟ್ಟುವುದಕ್ಕಾಗಿ ರಾಜಸಭಾ ಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಕೆಟಿ. ಸಿ. ಐ. ಇ., ಯವರು 75,000 ರೂಪಾಯಿಗಳನ್ನು ಕೊಡಲು ವಾಗ್ದಾನಮಾಡಿರುವರಷ್ಟೆ. ಈ ಕಟ್ಟಡದ ಪ್ಲಾನು ಪ್ಯಾರಿಸ್‌ನಗರದಲ್ಲಿ ಪ್ರಸಿದ್ಧ ಶಿಲ್ಪಿಗಳಿಂದ ಬರೆಯಲ್ಪಡುತ್ತಿರುವುದೆಂದೂ, ಇದು ಸಿದ್ಧವಾದ ಮೇಲೆ ನರಸಿಂಹರಾಜ ರೋಡಿನಲ್ಲಿ ಕಟ್ಟಲ್ಪಡುವುದೆಂದೂ ಕಟ್ಟಡವು ಅತ್ಯಂತ ರಮಣೀಯವಾಗಿರುವುದೆಂದೂ ತಿಳಿಯಬರುತ್ತದೆ.

ಬೆಂಗಳೂರು ಸಿಟಿ ಹೆಬ್ಬಾರು ಶ್ರೀವೈಷ್ಣವ ಸಭೆಯ ಪರವಾಗಿ ಮ|| ಗಳಾದ ಬಿ. ಎಸ್. ರಾಘವಾಚಾರ್ಯರು, ಬಿ. ಕೆ. ಗರುಡಾಚಾರ್ಯರು, ಎನ್. ವೆಂಕಟರಂಗಂರವರು ಮತ್ತೆ ಕೆಲರು ದಿವಾನರಲ್ಲಿಗೆ ರಾಯಬಾರ ಹೋಗಿದ್ದು ಈ ಸಭೆಯವರು ನೂತನವಾಗಿ ಕಟ್ಟುವ ಮಂದಿರಕ್ಕೆ ನಿವೇಶನವನ್ನು ಉಚಿತವಾಗಿ ಕೊಡಿಸಬೇಕೆಂದೂ ಇತರ ಸಹಾಯವನ್ನು ಮಾಡಬೇಕೆಂದೂ ಪ್ರಾರ್ಥಿಸಲಾಗಿ ಸಾಧ್ಯವಾದ ಸಹಾಯವನ್ನು ಮಾಡಲಾಗುವುದೆಂದು ದಿವಾನರು ಉತ್ತರವನ್ನು ಕೊಟ್ಟರು.

ಮೈಸೂರು ಹೈಕೋರ್ಟ್ ಚೀಫ್ ಜಡ್ಜಿಯವರಾದ ರಾಜಧರ್ಮ ಪ್ರವೀಣ ಮ|| ಸಿ. ಎಸ್. ದೊರಸ್ವಾಮಿ ಅಯ್ಯರ್‌ರವರ ಉದ್ಯೋಗ ಕಾಲಾವಧಿಯು 15-9-1934 ರ ವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ, ಆಗ್ಗೆ ಇವರಿಗೆ 61 ನೆಯ ವರ್ಷ ವಯಸ್ಸು ಪೂರೈಸುವುದು. ಇವರು ಸ್ಪೆಷಲ್ ರಿಫಾರಂ ಆಫೀಸರಾಗಿ ನಿಯಮಿಸಲ್ಪಟ್ಟು ಮದ್ರಾಸು ಹೈಕೋರ್ಟ್ ಜಡ್ಜಿಯವರಾದ ಸರ್ ಇ. ಪಿ. ವಾಲೆಸ್‌ರವರು ಮೈಸೂರು ಹೈಕೋರ್ಟಿನ ಚೀಫ್ ಜಡ್ಜಿಯವರಾಗಿ ನಿಯಮಿಸಲ್ಪಡುವರೆಂಬ ವದಂತಿಯು ನಿರಾಧಾರವಾದುದು ಎಂದು ಹಿಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ರಾಜಧಾನಿಯಲ್ಲಿ ಪ್ರಸಿದ್ಧ ವರ್ತಕರೂ ಶ್ರೀಮಂತರೂ ಆದ ಮ|| ಕಾವೇರಿ ಪಟ್ಟಣಂ ಸುಬ್ರಾಯಶೆಟ್ಟರು ಲೋವರ್ ಸೆಕೆಂಡರಿಗೆ ಮೇಲ್ಪಟ್ಟ ತರಗತಿಗಳಲ್ಲಿ ವ್ಯಾಸಂಗಮಾಡುವ ತಮ್ಮ ವೈಶ್ಯಕುಲದ 10 ಮಂದಿ ಬಡ ವಿದ್ಯಾರ್ಥಿಗಳ ಊಟಕ್ಕೂ ವಾಸಕ್ಕೂ ಸಿಲ್ವರ್ ಜ್ಯುಬಲಿ ಗಡಿಯಾರದ ಇದಿರಿಗಿರುವ ತಮ್ಮ ಸತ್ರದಲ್ಲಿ ಉಚಿತವಾಗಿ ಏರ್ಪಾಟು ಮಾಡಿರುತ್ತಾರೆಂದು ತಿಳುಹಲು ಬಹಳ ಸಂತೋಷವಾಗುತ್ತದೆ ಮತ್ತು ಇದಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ. ಈ ಉಚಿತ ಏರ್ಪಾಟಿನ ಸೌಲಭ್ಯವನ್ನು ಹೊಂದಲಿಷ್ಟವುಳ್ಳ ವೈಶ್ಯ ವಿದ್ಯಾರ್ಥಿಗಳು ಧರ್ಮಕರ್ತರಿಗೆ ಬರೆದು ಹೆಚ್ಚು ಸಂಗತಿಯನ್ನು ತಿಳಿದುಕೊಳ್ಳಬಹುದು.

ಕಂದಿಕೆರೆ ಜಮೀನ್ದಾರ್ ನಂಜುಂಡಯ್ಯನವರ ಮಗ ಕೆ. ಎನ್. ನಂಜುಂಡಯ್ಯನೆಂಬವನು ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದೇನೆಂದು ಹೇಳಿ ಚಿಕ್ಕಮಗಳೂರು ತಾ|| ಅಂಬಳೆ ಪ್ರೈಮರಿ ಸ್ಕೂಲು ಮಾಸ್ಟರಾಗಿ 15 ರೂ. ಸಂಬಳದಮೇಲೆ 1930 ರಲ್ಲಿ ಕೆಲಸಕ್ಕೆ ಸೇರಿದನು. ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವುದಕ್ಕೆ ಸರ್ಟಿಫಿಕೇಟನ್ನು ತೋರಿಸುವಂತೆ ಡಿ|| ವಿದ್ಯಾಭ್ಯಾಸದ ಅಧಿಕಾರಿಗಳು ಕೇಳುವಲ್ಲಿ ನಂಜುಂಡಯ್ಯನು 1925 ರಲ್ಲಿ ಕೊಟ್ಟಿರುವ 5785 ನೆಯ ನಂಬರ್ ಸರ್ಟಿಫಿಕೇಟಿನ ನಕಲನ್ನು ಲೋಕಲ್ ಎಕ್ಸಾಮಿನೇಷನ್ ಬೋರ್ಡಿನ ಸೆಕ್ರೆಟರಿಗೆ ಬರೆದು ತರಿಸಿಕೊಂಡು ಅದರಲ್ಲಿ ತಂದೆ ಹೆಸರು ಕೆ. ಲಕ್ಷ್ಮೀನರಸಿಂಹಯ್ಯ ಎಂದು ತಪ್ಪು ಬಿದ್ದಿರುತ್ತದೆ, ಅದನ್ನು ಕೆ. ನಂಜಪ್ಪಯ್ಯ ಎಂದು ತಿದ್ದಿ ಕಳುಹಿಸಬೇಕೆಂದು ಸೆಕ್ರೆಟರಿಗೆ ವಾಪಸ್ ಕಳುಹಿದನು. **ಇದರಮೇಲೆ ಅನುಮಾನ ಹುಟ್ಟಿ ವಿಚಾರಿಸುವಲ್ಲಿ ಕೆ. ನಂಜುಂಡಯ್ಯನೆಂಬ ಬ್ರಾಹ್ಮಣ ಹುಡುಗನ ಸರ್ಟಿಫಿಕೇಟೆಂದುಗೊತ್ತಾಗಿ ಲಿಂಗಾಯತನಾದ ನಂಜುಂಡಯ್ಯನು ಕೆಲಸದಿಂದ ಸಸ್ಪೆಂಡ್ ಮಾಡಲ್ಪಟ್ಟಿದ್ದನು. ಈ ಕೆ. ಎನ್. ನಂಜುಂಡಯ್ಯನು ೩ ವರ್ಷದವರೆಗೆ ಸರ್ಕಾರಿ ಯುದ್ಯೋಗಕ್ಕೆ ಸೇರಿಸಲ್ಪಡಕೂಡದೆಂದು ಪ್ರಭುತ್ವದಾಜ್ಞೆಯಾಗಿರುತ್ತದೆ.**

ಮೈಸೂರು ಸಂಸ್ಥಾನದ ದಿವಾನ್‌ರವರೂ ಮತ್ತು "ರೌಂಡ್ ಟೇಬಲ್" ಸಮ್ಮೇಳನಕ್ಕೆ ದಯಮಾಡಿಸಿದ್ದ ಪ್ರತಿನಿಧಿಗಳಲ್ಲೊಬ್ಬರೂ ಆದ ಸರ್ ಮಿರ್ಜಾ ಇಸ್ಮಾಯಿಲ್‌ರವರು ಇಂಡಿಯಾದ ಅಸೋಸಿಯೇಟೆಡ್ ಪ್ರೆಸ್ ಪ್ರತಿನಿಧಿಯವರು ತಮ್ಮ ಭೇಟಿಗೆ ಬಂದಿದ್ದಾಗ್ಗೆ ತಿಳಿಸಿದ ವಿವರ.

ಇಂಡಿಯಾದೇಶಕ್ಕೆ ಇಷ್ಟರಲ್ಲೇ ಏರ್ಪಡುವ ಹೊಸ ರಾಜ್ಯಾಂಗ ವ್ಯವಸ್ಥೆಯಲ್ಲಿ ಸಂಯುಕ್ತ ಶಾಸನ ಸಭೆಯೊಂದು ಸ್ಥಾಪಿಸಲ್ಪಡಬೇಕಾಗುವುದು ಸರಿಯಷ್ಟೆ. ಅದರಲ್ಲಿ ಸಂಸ್ಥಾನದ ಪ್ರತಿನಿಧಿಗಳಿಗೆ ಸದಸ್ಯಸ್ಥಾನಗಳು ಎಷ್ಟೆಷ್ಟಿರಬೇಕೆಂಬ ಅಂಶವನ್ನು ಇತ್ಯರ್ಥಪಡಿಸುವುದಕ್ಕಾಗಿ ನಿಷ್ಪಕ್ಷಪಾತವಾದೊಂದು ಸಮಿತಿಯನ್ನು ನೇಮಕಮಾಡಬೇಕೆಂಬುದಾಗಿ ನರೇಂದ್ರಮಂಡಲದವರು (Chamber of Princes) ಬ್ರಿಟಿಷ್ ಸರ್ಕಾರದವರನ್ನು ಶೀಘ್ರದಲ್ಲೇ ಪ್ರಾರ್ಥಿಸುವರೆಂದು ವರದಿಯಾಗಿದೆ. ಹೀಗೆ ವರದಿಯಾಗಿರುವುದನ್ನು ನೋಡಿ ನನಗೇನೂ ಆಶ್ಚರ್ಯವಾಗಲಿಲ್ಲ. ಈ ರೀತಿ ಮಾಡಬೇಕೆಂಬುದನ್ನು ನಾನು ಮೊದಲಿನಿಂದಲೂ ಸಲಹೆ ಮಾಡುತ್ತಲೇ ಇದ್ದೆನು. ರೌಂಡ್‌ಟೇಬಲ್ ಸಮ್ಮೇಳನದಲ್ಲಿ ನರೇಂದ್ರಮಂಡಲದ ಛಾನ್ಸಲರವರೂ, ಸಂಸ್ಥಾನಗಳ ಇತರ ಪ್ರತಿನಿಧಿಗಳೂ ಸಂಯುಕ್ತ ಶಾಸನ ಸಭೆಯ ಸದಸ್ಯಸ್ಥಾನಗಳ ಹಂಚಿಕೆಯ ವಿಚಾರವನ್ನು ಸಂಸ್ಥಾನಗಳವರೇ ವ್ಯವಸ್ಥೆಮಾಡಿಕೊಳ್ಳುವಂತೆ ಬಿಡಬಹುದೆಂದು ಒತ್ತಿ ಹೇಳಿ ಸಲಹೆಮಾಡಿದರು. ಈ ರೀತಿ ಸಲಹೆಮಾಡಿದುದು ಯುಕ್ತವೇ. ಈ ಸಲಹೆಯು ಫಲಕಾರಿಯಾಗಿ ಪರಿಣಮಿಸೀತೇ—ಎಂಬ ಸಂಶಯಬಿಟ್ಟು ನನ್ನ ಸಂಶಯವನ್ನು ಕೂಡ ನಾನು ಸೂಚಿಸಿಬಿಟ್ಟೆನು. ಎಲ್ಲ ಸಂಸ್ಥಾನಗಳೂ ವಿಸ್ತೀರ್ಣದಲ್ಲಿ ಸಮವಾಗಿಲ್ಲ. ಇದರಂತೆಯೇ ನಾನಾ ಸಂಸ್ಥಾನಗಳಿಗೂ ಪ್ರಾಮುಖ್ಯತೆಯಲ್ಲಿಯೂ ಬಹಳ ತಾರತಮ್ಯವುಂಟು. ಆದಕಾರಣ, ಸಂಸ್ಥಾನಗಳ ಪ್ರತಿನಿಧಿಗಳಾಗಿ ಸಭೆಗೆ ಬರುವವರು ಯಾವ ಯಾವ ಸಂಸ್ಥಾನಗಳಿಂದ ಎಷ್ಟೆಷ್ಟು ಮಂದಿಗಳಿರಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿ, ಅನು ವಿಶೇಷ ತೊಡಕಿನ ಸಮಸ್ಯೆಯಾಗುವುದರಲ್ಲಿ ಸಂಶಯವಿಲ್ಲ. ಹೀಗಾಗುವುದು ಸಹಜವಾಗಿಯೇ ಇರುತ್ತದೆ. ಆದಕಾರಣ, ಸದಸ್ಯಸ್ಥಾನಗಳ ಹಂಚಿಕೆಯ ವಿಚಾರವನ್ನು ಸಂಸ್ಥಾನಗಳ ಒಮ್ಮತ ಸಮ್ಮತವಾದ ತೀರ್ಮಾನಕ್ಕೇ ಬಿಡುವುದೆಂದರೆ ಆ ಪ್ರಯತ್ನವೆಂದಿಗೂ ಸಫಲವಾಗಿ ನೆರವೇರುವುದಿಲ್ಲವೆಂಬುದಾಗಿ ನನಗೆ ತೋರಿತು. ಇದರ ಮೇಲೆಯೇ ಈ ವಿಚಾರವನ್ನು ಸಂಸ್ಥಾನಗಳವರು ಚರ್ಚಿಸುವುದೆಂದರಂತೂ, ವೈಮನಸ್ಯವೂ ಉದ್ರೇಕವೂ ಸ್ವತಸ್ಸಿದ್ಧವಾಗಿ ಸಂಭವಿಸಿಯೇ ಸಂಭವಿಸುವುದೆಂದು ತೋರಿತು. ಇಂತಹ ಸನ್ನಿವೇಶವನ್ನು ತಪ್ಪಿಸಬೇಕೆಂಬುದೇ ನನಗಿದ್ದ ಅಭಿಲಾಷೆ. ಅಸಾಧ್ಯವು ಸಾಧ್ಯವಾಗುವುದೆಂಬ ಬಯಲು ಭ್ರಾಂತಿಯನ್ನಿಟ್ಟುಕೊಂಡು ಸುಮ್ಮನಿರದೆ, ನರೇಂದ್ರಮಂಡಲದವರು ನಿಷ್ಪಕ್ಷಪಾತವಾದ ಸಮಿತಿಯೊಂದು ಏರ್ಪಡಬೇಕಾದ ದರ ಆವಶ್ಯಕತೆಯನ್ನರಿತುಕೊಂಡರೆಂಬ ಸಂಗತಿಯು ನನಗೆ ಸಂತೋಷಕರವಾಗಿದೆ. ನಾನು 1931 ನೆಯ ಇಸವಿ ಸೆಪ್ಟೆಂಬರು 23 ನೆಯ ತಾರೀಖಿನ ದಿನ ಫೆಡರಲ್ ಸ್ಟ್ರಕ್ಚರ್ ಸಮಿತಿಯವರ ಮುಂದೆ ಹೇಳಿದ ಅಭಿಪ್ರಾಯಗಳೇ ಈಗಲೂ ಮಾರ್ಪಡದೆ ಸ್ಥಿರವಾಗಿವೆ. ಆ ದಿನ ನಾನು ಹೇಳಿದುದೇನೆಂದರೆ:—

"ಸಂಯುಕ್ತ ಶಾಸನ ಸಭೆಯಲ್ಲಿ ಯಾವ ಯಾವ ಸಂಸ್ಥಾನಗಳವರಿಗೆ ಎಷ್ಟೆಷ್ಟು ಸದಸ್ಯಸ್ಥಾನಗಳಿರಬೇಕೆಂಬ ವಿಚಾರದಲ್ಲಿ ಸಂಸ್ಥಾನಗಳವರೇ ಒಮ್ಮತ ಸಮ್ಮತವಾಗಿ ಒಂದು ತೀರ್ಮಾನಕ್ಕೆ ಬರುವುದೆಂದಿಗೂ ಸಾಧ್ಯವಿಲ್ಲ. ಆದಕಾರಣ ಈ ವಿಚಾರವನ್ನು ಸ್ವತಂತ್ರವಾದ ಮತ್ತು ನಿಷ್ಪಕ್ಷಪಾತವಾದೊಂದು ಸಮಿತಿಯವರು ವ್ಯವಸ್ಥೆ ಮಾಡುವಂತೆ ಏರ್ಪಡಿಸುವುದೇ ಅತ್ಯಂತ ಸುಲಭವಾದ ಮತ್ತು ಅತ್ಯಂತ ಸರಳವಾದ ಮಾರ್ಗ."

"ಸಣ್ಣ ಸಣ್ಣ ಸಂಸ್ಥಾನಗಳೂ, ಪುಟ್ಟ ಪುಟ್ಟ ಸಂಸ್ಥಾನಗಳೂ ಅನೇಕವಾಗಿವೆ. ಅವುಗಳನ್ನು ಆರಿಸಿ ಆರಿಸಿ ಗುಂಪು ಗುಂಪುಗಳಾಗಿ ಏರ್ಪಡಿಸಿ ಆ ಗುಂಪುಗಳಲ್ಲಿ ಸೇರಿರುವ ಸ್ಥಾನಗಳ ಪ್ರತಿನಿಧಿಗಳಾದ ಸದಸ್ಯರು ಸಭೆಗೆ ಬರುವಂತೆ ಮಾಡಬೇಕಾಗುತ್ತದೆ. ಇದು ಸಾಮಾನ್ಯ ವಿಚಾರವಲ್ಲ. ಈ ನಾನಾ ಸಂಸ್ಥಾನಗಳನ್ನೂ ಹೇಗೆ ಗುಂಪುಗಳಾಗಿ ಏರ್ಪಡಿಸಬೇಕೆಂಬುದೂ, ದೊಡ್ಡ ದೊಡ್ಡ ಸಂಸ್ಥಾನಗಳಿಗೆ ಎಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕೆಂಬುದೂ, ಅತಿ ಗಹನವಾದ ವಿಚಾರಗಳು. ಸಮಿತಿಯವರು ಈ ವಿಚಾರಗಳನ್ನು ಬಹಳ ಜಾಗರೂಕತೆಯಿಂದ ಪರಿಶೀಲಿಸಬೇಕಾಗುವುದು. ಇನ್ನು ಈ ಸಮಿತಿಯ ಸ್ವಭಾವವು ಹೇಗಿರಬೇಕೆಂಬ ವಿಚಾರ. ಅದೊಂದು ಸ್ವತಂತ್ರ ಸಮಿತಿಯಾಗಿರಬೇಕು. ಯಾವ ಸಂಸ್ಥಾನದ ಪ್ರತಿನಿಧಿಯೂ ಅದರಲ್ಲಿ ಸದಸ್ಯನಾಗಿರಕೂಡದು. ಹೀಗೆ ಸಮಿತಿಯು ಏರ್ಪಟ್ಟಲ್ಲಿ ಮಾತ್ರವೇ, ಆ ಸಮಿತಿಯವರ ಸಲಹೆಗಳಲ್ಲಿ ಪ್ರತಿಯೊಬ್ಬರಿಗೂ ಪೂರ್ಣ ವಿಶ್ವಾಸ ಭರವಸೆಗಳುಂಟಾಗುತ್ತವೆ."

ಈಗ ನೇಮಕವಾಗಿರುವ "ಇಂಡಿಯನ್ ಸ್ಟೇಟ್ಸ್ ಕಮಿಟಿ" ಎಂಬ ಸಮಿತಿಯಲ್ಲಿರುವ ಸದಸ್ಯರುಗಳು ಈ ಭಾಗದಲ್ಲಿ ವ್ಯವಹರಿಸಿ ಸಲಹೆ ಹೇಳಲು ತೀರ ಸಮರ್ಥರಾಗಿದ್ದಾರೆ. ಆದಕಾರಣ ಅವರಿಗೇ ಈ ಕೆಲಸವನ್ನು ವಹಿಸುವುದು ಯುಕ್ತವಾಗಿದೆ. ಈ ಸಮಿತಿಯವರು ಇನ್ನೂ ಇಂಡಿಯಾ ದೇಶದಲ್ಲೇ ಇರುವಾಗಲೇ ನರೇಂದ್ರಮಂಡಲದವರು ಈ ಸದಸ್ಯಸ್ಥಾನ ನಿರ್ಣಯದ ವಿಚಾರವು ನಿಷ್ಪಕ್ಷಪಾತವಾದೊಂದು ಸಮಿತಿಯಿಂದ ವ್ಯವಸ್ಥೆಯಾಗಬೇಕೆಂಬ ತೀರ್ಮಾನಕ್ಕೆ ಬಂದಿರುವುದು ಸಂತೋಷಕರವಾಗಿದೆ. ಈ ವಿಚಾರವನ್ನು ಇದೇ ಸಮಿತಿಯವರು ಪರ್ಯಾಲೋಚಿಸಿ ಸಲಹೆ ಹೇಳುವಂತೆ ಅವರಿಗೆ ಅಧಿಕಾರ ಬರುವಹಾಗೆ ಸಕಾಲದಲ್ಲಿ ಪ್ರಯತ್ನಮಾಡುವುದು ಉತ್ತಮ. ಪ್ರಸಕ್ತ ವಿಚಾರವನ್ನು ಈ ಸಮಿತಿಯವರ ಪರಿಶೀಲನೆಗೆ ಒಪ್ಪಿಸುವುದಾದರೆ, ಯುಕ್ತವಾದ ತೀರ್ಮಾನವು ದೊರೆಯುವುದೆಂದು ಸಂಸ್ಥಾನಗಳವರೆಲ್ಲರೂ ಪೂರ್ಣವಾಗಿ ಭರವಸೆಯಿಡಬಹುದು. ಏಕೆಂದರೆ, ಈ ದೊಡ್ಡ ಕೆಲಸವನ್ನು ವಹಿಸಿ ಇತ್ಯರ್ಥಪಡಿಸುವುದಕ್ಕೆ ಈ ಸಮಿತಿಯವರು ಸರಿಯಾದವರೂ ಆಗಿದ್ದಾರೆ; ಸಮರ್ಥರೂ ಆಗಿದ್ದಾರೆ. ಅವರಿಂದ ಸಮರ್ಪಕವಾದ ತೀರ್ಮಾನವು ದೊರೆತೇ ದೊರೆಯುತ್ತದೆ.

II.

ರಾಜ ಮಹಾರಾಜರುಗಳೊಡನೆಯೂ, ಸಚಿವರುಗಳೊಡನೆಯೂ, ಹೊಸ ದೆಹಲಿ ನಗರದಲ್ಲಿ ಈಚೆಗೆ ನಡೆದ ಚರ್ಚೆಗಳ ವಿಚಾರದಲ್ಲಿ ಸರ್ ಮಿರ್ಜಾ ಇಸ್ಮಾಯಿಲ್‌ರವರು ಕೆಲವು ಟೀಕೆಗಳನ್ನು ಮಾಡಿ ಪತ್ರಿಕೆಗಳಲ್ಲಿ ಪ್ರಕಟಣೆಗಾಗಿ ಕೊಟ್ಟ ವಿವರ.

ಸಮಗ್ರ ಭರತಖಂಡಕ್ಕೂ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯೊಂದು ಏರ್ಪಡುವುದೇ ತನುಗೆ ಸಮ್ಮತವೆಂಬುದಾಗಿ ಬಹುಮಂದಿ ಸಂಸ್ಥಾನಾಧಿಪತಿಗಳು ಬಹಿರಂಗವಾಗಿ ತಿಳಿಸಿರುವುದು ಭರತಖಂಡದ ಹಿತವನ್ನು ಬಯಸುವವರೆಲ್ಲರಿಗೂ ವಿಶೇಷ ಸಂತೋಷದಾಯಕವಾಗಿದೆ. ಸಂಸ್ಥಾನಗಳ ಮನೋಗತವು ಪರಿಣಾಮದಲ್ಲಿ ಹೀಗೆ ತಿರುಗುವುದೆಂಬುದರಲ್ಲಿ ಮೊದಲಿನಿಂದಲೂ ನನ್ನ ಮನಸ್ಸಿಗೆ ನಿಸ್ಸಂದೇಹವಾಗಿಯೇ ಇದ್ದಿತು. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ವಿಚಾರದಲ್ಲಿ ಅವರುಗಳಲ್ಲಿ ಅಷ್ಟೇನೂ ವಿಶೇಷ ಉತ್ಸಾಹಶಾಲಿಗಳಲ್ಲದಿರುವವರು ಕೂಡ ಪರಿಣಾಮದಲ್ಲಿ ಈ ರೀತಿ ಅಭಿಪ್ರಾಯಪಡುವರೆಂಬುದು ನನ್ನ ಮನಸ್ಸಿಗೆ ಖಂಡಿತವಾಗಿದ್ದಿತು. ಅವರುಗಳು ಈ ವಿಚಾರವನ್ನು ಹೆಚ್ಚು ಹೆಚ್ಚಾಗಿ ಯೋಚಿಸಿದಷ್ಟೂ, ತಾವುಗಳೆಲ್ಲರೂ ಸಾರ್ವತ್ರಿಕ ವಿಚಾರಗಳಲ್ಲಿ ಒಟ್ಟುಗೂಡಿ ವ್ಯವಹರಿಸುವುದರಿಂದ ತನುಗೂ, ತಮ್ಮ ಜನ್ಮಭೂಮಿಗೂ ಉಭಯತಾಪಿ ಶ್ರೇಯಸ್ಸುಂಟೆಂಬುದೂ, ರಾಜಕೀಯ ಮತ್ತು ಆರ್ಥಿಕ ವಿಚಾರಗಳೆಂಡರಲ್ಲಿಯೂ ಅದರಿಂದ ತಮ್ಮಲ್ಲಿ ಏಕಮತ್ಯವು ನೆಲೆಗೊಳ್ಳುವುದೆಂಬುದೂ, ಅಷ್ಟು ಅಷ್ಟು ಹೆಚ್ಚಾಗಿ ಅವರಿಗೆ ಗೋಚರವಾಗುವುವು.

ನರೇಂದ್ರಮಂಡಲದವರು (Chamber of Princes) ಮತ್ತೂ ಹೆಚ್ಚಿನ ಕಾರ್ಯವೊಂದನ್ನು ಸುಲಭವಾಗಿಯೇ ಸಾಧಿಸಬಹುದಾಗಿದ್ದಿತು. ಅವರ ಈಗಿನ ಮನೋಭಾವನೆಯೇನೋ ಮುಂದಿನ ಸತ್ಪರಿಣಾಮಕ್ಕೆ ಶುಭಸೂಚನೆಯಾಗಿದೆ. ಆದರೂ, ಈಗ್ಗೆ 1 ವರ್ಷಕ್ಕೆ ಮೇಲ್ಪಟ್ಟಷ್ಟು ಹಿಂದೆ ಅವರು ತೋರ್ಪಡಿಸಿದ ಮನೋಭಾವನೆಗಿಂತ ಈಗಿನದೇನೂ ಯಾವ ವಿಧದಲ್ಲಿಯೂ ಮುಂದುವರಿದಿಲ್ಲ. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಕಟ್ಟುಪಾಡನ್ನು ಪೂರ್ತಿಗೊಳಿಸಿ ಅಳವಡಿಸುವ ಕಾರ್ಯವನ್ನು ಇತರರು ನೆರವೇರಿಸಲೆಂದು ಸುಮ್ಮನಿರುವುದಕ್ಕೆ ಬದಲಾಗಿ, ಆ ಕೆಲಸವು ಸಾಂಗವಾಗಿ ನೆರವೇರುವುದಕ್ಕೆ ಅವರು ತಾವೇ ಮುಂದೆ ಬಂದು ಸಹಾಯಮಾಡಬಹುದು. ಮುಖ್ಯವಾದ ಕೆಲವು ವಿಚಾರಗಳಲ್ಲಿ ತಮ್ಮ ಮನಸ್ಸಿನ ಆಶಯಗಳೂ, ತಮ್ಮ ಸ್ವಂತ ಅಭಿಪ್ರಾಯಗಳೂ, ಯಾವರೀತಿಯಲ್ಲಿವೆಯೆಂಬುದನ್ನು ಅವರು ಸ್ಪಷ್ಟವಾಗಿ ತಿಳಿಸುವವರೆಗೂ, ಆ ಕಾರ್ಯವು ಪೂರ್ತಿಯಾಗಿಯೂ ತೃಪ್ತಿಕರವಾಗಿಯೂ, ನೆರವೇರುವಂತಿಲ್ಲ. ಈ ದೃಷ್ಟಿಯಿಂದ ನೋಡಿದಲ್ಲಿ, ಉದಯಪುರ, ಜಯಪುರ ಮತ್ತು ಜೋಧ್ಪುರ, ಈ ಮೂರು ಸಂಸ್ಥಾನಗಳವರೂ ಒಟ್ಟುಗೂಡಿ ಈಗ್ಗೆ ಕೆಲವು ದಿನಗಳ ಹಿಂದೆ ಹೊರಡಿಸಿರುವ ಹೇಳಿಕೆಯು ಎಲ್ಲರಿಗೂ ಬೇಕಾದುದಾಗಿದೆ. ರಾಜ್ಯಾಂಗ ವ್ಯವಸ್ಥೆಯನ್ನೊಂದು ಸುಸಮಯವಾಗಿ ತರುವ ಕೆಲಸದಲ್ಲಿ ಉದ್ಯುಕ್ತರಾಗಿರುವವರಿಗೆ ಇದರಿಂದ ಎಷ್ಟೋ ಸಹಾಯವಾಗುತ್ತದೆ. ಅವರು ಕೊಟ್ಟಿರುವ ಹೇಳಿಕೆಯು ಎಷ್ಟು ಬೇಗನೇ ಅಷ್ಟು ಮಾತ್ರವೇ ಖಡಾಖಡಿಯಾಗಿ ಅಚ್ಚುಕಟ್ಟಾಗಿದೆ; ಸ್ಪಷ್ಟವಾಗಿದೆ. ಎಲ್ಲಕ್ಕೂ ಮಿಗಿಲಾಗಿ, ವ್ಯವಹಾರ ಯೋಗ್ಯವೆನಿಸಿ ಯುಕ್ತವಾಗಿದೆ. ಆದಕಾರಣ, ಸ್ಪಷ್ಟವಾಗಿ ವಿಷಯಗಳನ್ನು ತಿಳಿಸದೆಯೂ, ನಿರ್ದಿಷ್ಟವಾದ ತೀರ್ಮಾನವನ್ನು ಸೂಚಿಸದೆಯೂ ಇರುವ ನರೇಂದ್ರಮಂಡಲದವರ ಹೇಳಿಕೆಗಿಂತಲೂ ಈ ಹೇಳಿಕೆಯಿಂದ ಹೆಚ್ಚು ಸಹಾಯವಾಗುವಂತಿದೆ.

ಸಂಸ್ಥಾನಗಳ ವಿಸ್ತೀರ್ಣವು ಎಷ್ಟೇ ಇರಲಿ, ಸಂಸ್ಥಾನಗಳ ರಾಜಕೀಯ ಪ್ರಾಮುಖ್ಯತೆಯು ಎಷ್ಟುಮಟ್ಟಿನದೇ ಆಗಿರಲಿ, ಇವೊಂದನ್ನೂ ಪರಿಗಣಿಸದೆ ಪ್ರಾತಿನಿಧ್ಯ ವಿಚಾರದಲ್ಲಿ ಶಾಸನ ಸಭೆಯ ಅಂಗವಾದ ಮೊದಲನೆಯ ಸಭೆಯಲ್ಲಿ ಎಲ್ಲ ಸಂಸ್ಥಾನಗಳಿಗೂ ಸಮಾನ ಸ್ಥಾನವನ್ನು ಕೊಡಬೇಕೆಂದು ಹೇಳುವುದು ಸರ್ವಥಾ ಅಸಂಬದ್ಧ ವಿಚಾರ. ಅದು ನ್ಯಾಯವೂ ಅಲ್ಲ; ಯುಕ್ತವೂ ಅಲ್ಲ. ಎಲ್ಲ ಸಂಸ್ಥಾನಗಳೂ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯಲ್ಲಿ ಸೇರುವುದು ಆಶಯವು ಇಷ್ಟೇ ಆಗಿದ್ದ ಪಕ್ಷದಲ್ಲಿ ದೊಡ್ಡ ದೊಡ್ಡ ಸಂಸ್ಥಾನಗಳಲ್ಲಿ ಸುಮಾರು ಹತ್ತೋ ಹನ್ನೆರಡೋ ಸಂಸ್ಥಾನಗಳು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಸೇರಿ, ಉಳಿದ 500ಕ್ಕೆ ಹೆಚ್ಚಿನ ಸಂಸ್ಥಾನಗಳು ಸದ್ಯದಲ್ಲಿ ಸೇರದೆ ಇರುವುದೇ ಈ ರಾಜ್ಯಾಂಗ ವ್ಯವಸ್ಥೆಯ ಹಿತಸಾಧನೆಗೆ ಉತ್ತಮ. ಇತರ ಭಾರಿಭಾರಿ ಅಂಶಗಳಿಗೆ ಹೋಲಿಸಿದರೆ ಇವುಗಳೆಲ್ಲಾ ಅಷ್ಟೇನೂ ಪ್ರಾಮುಖ್ಯವಲ್ಲದ ಅಂಶಗಳೇ ಸರಿ. ಇವುಗಳೆಲ್ಲಾ ಹೇಗೋ ವ್ಯವಸ್ಥೆಯಾಗಿ ಹೋಗುತ್ತವೆ. ಅತ್ಯಂತ ಮುಖ್ಯವಾದುದೆಂದರೆ ಸಂಯುಕ್ತ ಶಾಸನ ಸಭೆಯ ರಚನಾ ವಿಧಾನ. ಅದು ಅಖಂಡವಾದ ಒಂದೇ ಒಂದು ಸಭೆಯಾಗಿರಬೇಕೆ ಅಥವಾ ಅದು ಎರಡು ಸಭೆಗಳಿಂದ ಕೂಡಿರಬೇಕೆ, ಹಾಗೆ ಎರಡು ಸಭೆಗಳಿಂದ ಕೂಡಿರಬೇಕಾಗಿದ್ದರೆ ಅವುಗಳಲ್ಲಿ ಮೊದಲನೆಯದಕ್ಕೂ ಮತ್ತು ಎರಡನೆಯದಕ್ಕೂ ಯಾವ ಯಾವ ಕರ್ತವ್ಯಗಳನ್ನು ವಹಿಸಬೇಕು, ಮುಂತಾದ ವಿಚಾರಗಳು ಇತ್ಯರ್ಥವಾಗಬೇಕಾಗುತ್ತದೆ. ಲಾರ್ಡ್ ಸ್ಯಾಂಕಿಯವರು ಅಧ್ಯಕ್ಷರಾಗಿ ನೇಮಕವಾಗಿದ್ದ ಸಮಿತಿಯವರು ನಿಷ್ಕರ್ಷೆಗೆ ಬಂದಿರುವ ಏರ್ಪಾಡು ಸಂಯುಕ್ತ ರಾಷ್ಟ್ರವ್ಯವಸ್ಥೆಗೆ ಸರಿಹೋಗುವುದಕ್ಕಿಂತಲೂ ಹೆಚ್ಚಾಗಿ ಪ್ರಧಾನ ಸರ್ಕಾರವೂ ಅದಕ್ಕಧೀನವಾದ ಹಲವು ಸರ್ಕಾರಗಳೂ ಇಲ್ಲದ ರಾಷ್ಟ್ರಕ್ಕೇ ತಕ್ಕಂಥದಾಗಿದೆ. ಈ ವಿಚಾರವನ್ನು ನಾನು ಬರೆದಿರುವ ಪುಟ್ಟ ಪುಸ್ತಕದಲ್ಲಿ ವಿವರಿಸಿದ್ದೇನೆ. ಸಂಯುಕ್ತ ರಾಷ್ಟ್ರದ ಮೂರ್ತಸ್ವರೂಪವನ್ನೇ ನಾವು ಮನನಮಾಡಿಕೊಂಡು, ತದೇಕಚಿತ್ತರಾಗಿ ಯೋಚಿಸಿ ನಮ್ಮ ದೇಶಕ್ಕೆ ತಕ್ಕ ಸಂಯುಕ್ತ ರಾಜ್ಯಾಂಗವ್ಯವಸ್ಥೆಯನ್ನು ಏರ್ಪಡಿಸಿಕೊಳ್ಳಬೇಕಾಗಿದೆ. ಒಟ್ಟು ಇದಕ್ಕೆ ಸೇರುವ ನಾನಾ ಪ್ರಾಂತಗಳ ಮತ್ತು ನಾನಾ ಸಂಸ್ಥಾನಗಳ ಸರ್ಕಾರಗಳ ಪ್ರಾತಿನಿಧ್ಯದ ಏರ್ಪಾಡು ನಡೆಯಬೇಕು. ಒತ್ತಟ್ಟು ಇದೇ ರೀತಿಯಲ್ಲಿ ದೇಶದ ಆಡಳಿತದಲ್ಲಿ ಮೂಲ ಬಲಗಳಲ್ಲೊಂದಾದ ಪ್ರಜಾ ಪ್ರಾತಿನಿಧ್ಯಕ್ಕೂ ತಕ್ಕ ಏರ್ಪಾಡು ನಡೆಯಬೇಕು. ಇವೆರಡೂ ಅನುಗೂಡಿ ನೆರವೇರಿಲ್ಲದೆ ಹೋದಲ್ಲಿ ಅಂಥ ಯಾವ ರಾಜ್ಯಾಂಗ ವ್ಯವಸ್ಥೆಯಿಂದಲೂ ಇಂಡಿಯಾ ದೇಶದಲ್ಲಿ ತೃಪ್ತಿಕರವಾಗಿ ಕೆಲಸ ನಡೆಯಲಾರದೆಂದು ನನ್ನ ಮನಸ್ಸಿಗೆ ಖಂಡಿತವಾಗಿದೆ. ನಾನು ಕೊಟ್ಟಿರುವ ಸಲಹೆಯು ರಾಜ್ಯಶಾಸ್ತ್ರ ವಿಚಾರದಲ್ಲಿ ಪ್ರಥಮ ಶ್ರೇಣಿಗೆ ಸೇರಿದವರಲ್ಲಿ ಕೆಲವರ ಅಭಿಪ್ರಾಯಗಳಿಗನುಸಾರವಾಗಿದೆ. ಅಲ್ಲದೆ, ನಮ್ಮ ದೇಶದ ರಾಜ್ಯಾಂಗ ವ್ಯವಸ್ಥೆಯ ಸಮಸ್ಯೆಯು ಅದರಿಂದ ಅತ್ಯುತ್ತಮರೀತಿಯಲ್ಲಿ ಬಗೆಹರಿಯುವುದಾಗಿದೆ. ಲಂಡನ್ ನಗರದಲ್ಲಿದ್ದಾಗ್ಗೆ ಮಹಾತ್ಮಾ ಗಾಂಧಿಯವರು ಕೂಡ ನನ್ನ ಸಲಹೆಯನ್ನು ಪೂರ್ತಿಯಾಗಿ ಅನುಮೋದಿಸಿದ್ದರು. ಖಂಡಿತವಾಗಿ ಅವರು ಇಲ್ಲಿಯೂ ಅದನ್ನು ಅನುಮೋದಿಸುತ್ತಿದ್ದರು. ಕಾಂಗ್ರೆಸ್ಸಿನವರು ನಿಸ್ಸಂದೇಹವಾಗಿ ಅವರ ಅಭಿಪ್ರಾಯಕ್ಕೆ ಸಮ್ಮತಿ ಕೊಡುತ್ತಿದ್ದರು. ಆದುದರಿಂದ ನನ್ನ ಸಲಹೆಯು ವಸ್ತುತಃ ಸಮರ್ಪಕವಾದುದೆಂಬ ವಿಷಯವಾಗಿ ಒಟ್ಟು ದೇಶವನ್ನೇ ಮನಗಾಣಿಸಲು ಅಗ್ಗ ಯಾವ ತೊಂದರೆಯೂ ಇರುತ್ತಿರಲಿಲ್ಲ.

ಶಾಸನ ಸಭೆಯು ಅಖಂಡವಾಗಿ ಒಂದೇ ಆಗಿರಬೇಕೆ, ಅಥವಾ ಅದು ಎರಡು ಸಭೆಗಳಿಂದ ಕೂಡಿರಬೇಕೆ, ಎಂಬ ವಿಷಯವನ್ನು ವಿಶದವಾಗಿ ಪರಿಶೀಲಿಸಿ ಇನ್ನು ಸುಮಾರು ಎಂಟು ತಿಂಗಳುಗಳು ಕಳೆದ ಮೇಲೆ ವರದಿಯನ್ನೊಪ್ಪಿಸುವಂತೆ ನರೇಂದ್ರ ಮಂಡಲದವರು ಒಂದು ಸಮಿತಿಯನ್ನು ಏರ್ಪಡಿಸಿದ್ದಾರೆ. ಹೀಗೇತಕ್ಕೆ ತೀರ್ಮಾನಿಸಿದರೋ ತಿಳಿಯದು. ಇದೊಂದು ಅಸಾಧಾರಣವಾದ ತೀರ್ಮಾನವೇ ಸರಿ. ರಾಜಕೀಯ ಸುಧಾರಣೆಗಳೊಂದೂ ನಡೆಯದೆ ಅಷ್ಟು ದೀರ್ಘಕಾಲವೂ ದೇಶದ ಪರಿಸ್ಥಿತಿಯು ಸ್ತಬ್ಧವಾಗಿ ನಿಲುಗಡೆಗೆ ಬಂದಿರಬೇಕೆಂದು ಈ ರೀತಿ ಸಲಹೆ ಮಾಡಿದವರ ಉದ್ದೇಶವೋ ಏನೋ!

ಶಾಸನ ಸಭೆಯಲ್ಲಿ ಎರಡು ಸಭೆಗಳಿದ್ದು, ಕನಿಷ್ಠಪಕ್ಷ 250 ಮಂದಿ ಸದಸ್ಯರುಗಳಾದರೂ ಇರುವ ಸಭೆಯೊಂದು ಏರ್ಪಡಬೇಕೆಂಬುದು ಕೆಲವು ಮಂದಿ ಸಂಸ್ಥಾನಾಧಿಪತಿಗಳಿಗಿರುವ ಖಚಿತವಾದ ಅಭಿಪ್ರಾಯವೆಂಬುದು ನನಗೆ ಗೊತ್ತುಂಟು (ಅವರಲ್ಲಿ ಅತ್ಯಂತ ಸಂಸ್ಕೃತರೂ, ಅತ್ಯಂತ ಸಮರ್ಥರೂ ಆದವರೊಬ್ಬರು ಆರೀತಿ ಅಭಿಪ್ರಾಯವನ್ನಿಟ್ಟುಕೊಂಡಿದ್ದಾರೆ.) ಈ ಗುಂಪಿನವರಲ್ಲಿ ನನಗೆ ಗೌರವವೇನೋ ಉಂಟು. ಆದಾಗ್ಯೂ, ಹೀಗೆ ಅಭಿಪ್ರಾಯ ಪಡುವುದು ತಪ್ಪೆಂದು ನಾನು ಹೇಳಬೇಕಾಗಿದೆ. ಅದರಲ್ಲಿಯೂ ಸಂಸ್ಥಾನಗಳೆಲ್ಲಕ್ಕೂ ಸಮಾನ ಪ್ರಾತಿನಿಧ್ಯವಿರಬೇಕೆನ್ನುವುದಾದರೆ ಇದು ಸುತರಾಂ ಅನುಚಿತವೆಂದೇ ಹೇಳಬೇಕಾಗುತ್ತದೆ. ಇದೇ ನಿಯಮವನ್ನೇ ಮದರಾಸು, ಮುಂಬಯಿ ಮುಂತಾದ ಪ್ರಾಂತಗಳಿಗೂ ಅನ್ವಯಿಸಬೇಕೋ ಕೂಡದನ್ನುವುದಾದರೆ ಸಂಸ್ಥಾನಗಳಿಗೆ ಮಾತ್ರವೇ ಅದನ್ನೇಕೆ ಅನ್ವಯಿಸಬೇಕು? ಮುಸಲಾ 1 ಕೋಟಿ 40 ಲಕ್ಷ ಪ್ರಜೆಗಳುಳ್ಳ ಒಂದು ಸಂಸ್ಥಾನದವರು ಸುಮಾರು ಒಂದು ಲಕ್ಷ ಅಥವಾ ಅದಕ್ಕೂ ಕಡಿಮೆಯಾದ ಪ್ರಜಾಸಂಖ್ಯೆಯುಳ್ಳ ಮತ್ತೊಂದು ಸಂಸ್ಥಾನದವರಷ್ಟೇ ಪ್ರಾತಿನಿಧ್ಯದಲೇ ತಾವೂ ಏತಕ್ಕೆ ತೃಪ್ತರಾಗಿರಬೇಕು? ಇವೆರಡೂ "ಸಂಸ್ಥಾನ" ಎಂಬ ಸಮಾನ ನಾಮಧೇಯವನ್ನು ಪಡೆದಿವೆಯೆಂಬ ಕಾರಣದಿಂದಲೇ?

ಬ್ರಿಟಿಷ್ ಸರ್ಕಾರದವರಿಗೆ ವಿನಯಪೂರ್ವಕವಾಗಿ ನಾನು ಕೊಡುವ ಸಲಹೆಯು ಇಷ್ಟು; ಅವರು ತಮಗೆ ನಾನಾ ವರ್ಗಗಳವರೂ ತಿಳಿಸುವ ಅಭಿಪ್ರಾಯಗಳನ್ನೆಲ್ಲಾ ಸಾವಧಾನವಾಗಿ ಪರ್ಯಾಲೋಚಿಸಿ ನೋಡಲಿ; ಅವರು ನಮ್ಮ ದೇಶದ ಶ್ರೇಯಸ್ಸಿಗೆ ಅತ್ಯುತ್ತಮವಾದುದೆಂದು ತಮ್ಮ ವಿವೇಚನೆಯಲ್ಲಿ ತೋರಿಬರುವ ರಾಜ್ಯಾಂಗ ವ್ಯವಸ್ಥೆಯನ್ನು ಏರ್ಪಡಿಸಲಿ; ಅತ್ಯಂತ ಮುಖ್ಯವಾದ ವಿಚಾರಗಳಲ್ಲಿ ಕೂಡ ಏಕಮತ್ಯವು ಬರುವಂತೆ ಇಂಡಿಯಾದೇಶದ ಈಗಿನ ಸ್ಥಿತಿಯಲ್ಲಿ ನಿರೀಕ್ಷಿಸುವಹಾಗಿಲ್ಲ. ಅಂತಹ ಏಕಮತ್ಯದ ಪರಿಸ್ಥಿತಿಯನ್ನು ಪಡೆಯಲು ಪ್ರಯತ್ನಿಸಿ ಫಲವಿಲ್ಲ. ಒಡನೆಯೇ ಸಂಯುಕ್ತ ರಾಜ್ಯಾಂಗವ್ಯವಸ್ಥೆಗೆ ಸೇರಲಚ್ಛಿಸುವ ಸಂಸ್ಥಾನಗಳು ಅವಶ್ಯವಾಗಿ ಹಾಗೆ ಮಾಡಲು ಅವಕಾಶವಿರಬೇಕು. ಸದ್ಯಕ್ಕೆ ಆ ರೀತಿ ಸೇರಲಿಚ್ಛಿಸದೆ ಇರುವ ಸಂಸ್ಥಾನಗಳು ಸೇರದೆ ಇರುವುದಕ್ಕೂ ಅದೇ ರೀತಿ ಅವಕಾಶವಿರಬಹುದು. ಇದನ್ನು ಸ್ಪಷ್ಟಪಡಿಸಿಬಿಟ್ಟರೆ, ನೂತನ ರಾಜ್ಯಾಂಗ ವ್ಯವಸ್ಥೆಯನ್ನೇರ್ಪಡಿಸುವ ಕೆಲಸವು ಯಾವ ಪ್ರತಿಬಂಧಕವೂ, ಯಾವ ಅಂತರಾಯವೂ ಇಲ್ಲದೆ, ಅದು ಎಷ್ಟುಮಟ್ಟಿಗೆ ಸಾಧ್ಯವೆಂದು ಈಗ ತೋರುವುದೆಯೋ ಅದಕ್ಕಿಂತಲೂ ಹೆಚ್ಚು ಶೀಘ್ರವಾಗಿಯೂ, ಹೆಚ್ಚು ತೃಪ್ತಿಕರವಾಗಿಯೂ, ನೆರವೇರಲು ಅಗ್ಗ ಸುಸೂತ್ರವಾಗುತ್ತದೆ.

ಸುಲಲಿತವಾಗಿ ಕೆಲಸ ನಡೆಯುವಂಥದಾಗಿಯೂ ಪ್ರಜೆಗಳಿಗೆ ಸಮ್ಮತವಾಗುವುದಾಗಿಯೂ ಇರುವ ರಾಜ್ಯಾಂಗ ವ್ಯವಸ್ಥೆಯನ್ನು ಭರತಖಂಡದಲ್ಲಿ ಏರ್ಪಡಿಸುವುದೇ ಬ್ರಿಟಿಷರ ರಾಜನೀತಿ ಕೌಶಲತೆಯ ಮತ್ತು ಘನವಾದ ನಮ್ಮ ದೇಶದ ವಿಚಾರದಲ್ಲಿ ಅವರಿಗಿರುವ ಸೌಹಾರ್ದದ ನಿಕಷ ಪರೀಕ್ಷೆಯಾಗಿದೆ. ಅವರಿಗೆ ಈ ದೇಶದೊಡನೆ ಬಹುಕಾಲದಿಂದ ಸಂಬಂಧವಿದೆ. ಅವರು ಈ ನಿಕಷ ಪರೀಕ್ಷೆಯಲ್ಲಿ ಜಯಶೀಲರಾಗುವಂತೆಯೂ, ಇಂಡಿಯಾ ಮತ್ತು ಇಂಗ್ಲೆಂಡ್ ಇವೆರಡು ದೇಶಗಳ ಯೋಗಕ್ಷೇಮದ ದೃಷ್ಟಿಯಿಂದಲೂ ಇವೆರಡಕ್ಕೂ ಪರಸ್ಪರವಾಗಿ ಸ್ನೇಹ ಮಮತೆಗಳಿಂದ ತುಂಬಿದ ಶಾಶ್ವತಸಂಬಂಧವು ನೆಲೆಗೊಂಡಿರುವಂತೆಯೂ, ಅನುಗ್ರಹಿಸಲೆಂದು ಭಗವಂತನನ್ನು ಪ್ರಾರ್ಥಿಸೋಣ!

ಗೃಹಕೃತ್ಯದ ನೋಟೀಸು.

ಹುಣಸೂರು ತಾಲ್ಲೂಕು ಕಸಬಾ ಹೋಬಳಿ ಮೋದೂರು ಗ್ರಾಮದ ವೀರಶೈವಮತಸ್ಥನಾದ ಚನ್ನೇಗೌಡನ ಮಗ ಸಿದ್ದೇಗೌಡನು ಈ ನೋಟೀಸಿನಿಂದ ಸಮಸ್ತರಿಗೂ ತಿಳಿಸುವುದೇನೆಂದರೆ—ನನ್ನ ಅಣ್ಣನಾದ ಗತಿಸಿದ ಸಿದ್ದೇಗೌಡನ ಹೆಂಡತಿ ಲಿಂಗಮ್ಮನು ದುಷ್ಟಜನರ ದುರ್ಬೋಧೆಯಿಂದ ನಮ್ಮ ಅವಿಭಕ್ತ ಕುಟುಂಬಕ್ಕೆ ಸೇರಿದ ಜಮೀನು ಸ್ವತ್ತನ್ನು ಪರಭಾರೆ ಮಾಡಲುದ್ಯುಕ್ತಳಾಗಿರುವಳು. ಈಕೆಗೆ ನಮ್ಮ ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ಜೀವನಾಂಶದ ಹಕ್ಕುವಿನಾ ಆಧಾರ ಭೋಗ್ಯ ಕ್ರಯಗಳನ್ನು ಮಾಡಲು ಹಕ್ಕಿಲ್ಲವಾದುದರಿಂದ ಯಾರಾದರೂ ಸಾಲುಪಾರೀಕತ್ತು ಆಗದಿರತಕ್ಕ ನಮ್ಮ ಆಸ್ತಿಯನ್ನು ಆಕೆಯಿಂದ ಪಡೆದುಕೊಂಡಲ್ಲಿ ಅದು ಸಿದ್ಧವಾಗುವುದಿಲ್ಲವೆಂದು ಎಚ್ಚರಿಸಿದೆ. ಜಮೀನು—ಹುಣಸೂರು ತಾ॥ ಕಸಬಾ ಹೋಬಳಿ ಮೋದೂರು ಗ್ರಾಮದಲ್ಲಿರುವ (1) ಸರ್ವೆ ನಂ. 68 ಖುಷ್ಕಿ ವಿಸ್ತೀರ್ಣ 6-7 ಕಂದಾಯ 5 ರೂ. (2) ಸರ್ವೆ ನಂ. 88 ಖುಷ್ಕಿ ವಿಸ್ತೀರ್ಣ 6.23 ಕಂದಾಯ 4-8-0. (3) ಸರ್ವೆ ನಂ. 95 ಖುಷ್ಕಿ ವಿಸ್ತೀರ್ಣ 5-0 ಕಂದಾಯ 3-8-0. (4) ಸರ್ವೆ ನಂ. 163 ಬಾಗಾಯತು ವಿಸ್ತೀರ್ಣ 0-15 ಕಂದಾಯ 0-12-0. 12 ಕಂಬದ ಕೊಟ್ಟಮನೆ ಹಿತ್ತಲು ಸಮೇತ.

ಸಿದ್ದೇಗೌಡ.

DEPARTMENT OF PUBLIC INSTRUCTION.
MYSORE LOCAL EXAMINATIONS.

Notification D. No. 75 of 31-32 9/12th April 32.

It is hereby notified for general information that owing to the fact that there is reasonable apprehension that the questions set in Geography and Elementary Science Physics and Chemistry, were known to a large number of candidates for the S. S. L. C. Public Examination held in March 1932, before the Examination, a re-examination will be held in those subjects, according to the follwing Time Table:—

Thursday the 12th May 1932.

11 A. M. to 2 P. M	Elementary Science-I Paper Physics and Chemistry.
3 to 5 P. M.	Geography.

The marks obtained by the candidates in the re-examination in these subjects moderated in the manner provided for under the rules, will be the basis for declaring the results of the Examination

The admission tickets issued already will be tenable for the re-examination also. All the candidates that sat for the Examination held in March 1932, will be eligible to sit for the re-examination in May in the centre where they took the Examination in March last.

M. A. NARAYANA IYENGAR,
For Director of Public Instruction.

ಪತ್ರವ್ಯವಹಾರ

☞ ಪತ್ರವ್ಯವಹಾರಗಳ ಲೇಖಕರಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ನಿಷ್ಪಕ್ಷಪಾತವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟವಾಗಿಯೂ, ಇರಬೇಕೆಂದೂ ಬುಧವಾರ ಗುರುವಾರದೊಳಗೆ ನಮ್ಮ ಕೈಸೇರುವಂತೆ ಕಳುಹಿಸಲ್ಪಡಬೇಕೆಂದೂ, ಈ ನಿಬಂಧನೆಗೆ ವಿರುದ್ಧವಾದ ಲೇಖನಗಳು ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದ್ದಾಗ್ಯೂ ಲೇಖಕರು ಲಕ್ಷಿಸದೆ ಲಂಗಿಸಿ ತಮಗೆ ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ ಪುಟಗಟ್ಟಲೆ ಅಸ್ಫುಟವಾಗಿ ಬರೆದು ನಮಗೆ ತ್ರಾಸವನ್ನು ಕೊಡುತ್ತಿರುವರೆಂದು ಬರೆಯಲು ವೇದವಾಗುತ್ತದೆ. ಅದುಕಾರಣ ಇತಃಪರ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಮಸ್ತರೂ ಗಮನಿಸತಕ್ಕದು—ಸಂ.

ಶ್ರೀರಾಮಕೃಷ್ಣ ವಿದ್ಯಾರ್ಥಿ ನಿಲಯ, ಮೈಸೂರು.

ಮುಂದಿನ ಜೂನ್ ತಿಂಗಳಿನಿಂದ ಮೈಸೂರು ಶ್ರೀರಾಮಕೃಷ್ಣಾಶ್ರಮದವರು, ಒಂಟಿಕೊಪ್ಪಲಿನಲ್ಲಿ 1 ವಿದ್ಯಾರ್ಥಿನಿಲಯವನ್ನು ಏರ್ಪಡಿಸುವರು. ವಿದ್ಯಾರ್ಥಿಗಳ ನಡತೆ ಮತ್ತು ಆರೋಗ್ಯಗಳ ಶಿಕ್ಷಣಕ್ಕೆ ಈ ನಿಲಯದಲ್ಲಿ ಹೆಚ್ಚು ಗಮನಕೊಡಲಾಗುತ್ತದೆ. ವಿದ್ಯಾರ್ಥಿಗಳು ಸುಶೀಲರಾಗಿ, ಸ್ವಾವಲಂಬಿಗಳಾಗಿ ಬೆಳೆಯಲು ಬೇಕಾದ ಸನ್ನಿವೇಶವನ್ನುಂಟುಮಾಡುವುದೇ ಆಶ್ರಮದ ಧ್ಯೇಯವು. ನಿಲಯದ ಒಟ್ಟುಖರ್ಚನ್ನು ವಿದ್ಯಾರ್ಥಿಗಳೆಲ್ಲರಿಗೂ ಸಮವಾಗಿ ಹಂಚಲಾಗುತ್ತದೆ. ತಮ್ಮ ಮಕ್ಕಳನ್ನು ನಿಲಯಕ್ಕೆ ಸೇರಿಸಲು ಇಷ್ಟಪಡುವವರು ಮೈಸೂರು ಒಂಟಿಕೊಪ್ಪಲಿನಲ್ಲಿರುವ ಶ್ರೀರಾಮಕೃಷ್ಣಾಶ್ರಮದ ಕಾರ್ಯದರ್ಶಿಗಳಿಗೆ ಬರೆದುಕೊಳ್ಳಬೇಕು. ನಿಲಯದ ನಿಯಮಗಳೂ, ಅಪ್ಲಿಕೇಷನ್ ಫಾರಂಗಳೂ 1 ಆಣೆ ಸ್ಟಾಂಪು ಕಳುಹಿಸಿದವರಿಗೆ ದೊರಕುತ್ತವೆ. ಮೇ ತಾ॥ 15 ರೊಳಗಾಗಿ, ಅಪ್ಲಿಕೇಷನ್ ಫಾರಂಗಳು ಆಶ್ರಮಕ್ಕೆ ತಲುಪಬೇಕು. ಎಲ್ಲರೂ ಈ ಘನ ಉದ್ದೇಶಸಾಧನೆಯಲ್ಲಿ ಸಹಾಯಕರೂ, ಭಾಗಿಗಳೂ ಆಗುವರೆಂದು ನಂಬಿದ್ದೇವೆ.

ಶ್ರೀರಾಮಕೃಷ್ಣಾಶ್ರಮ, ಮೈಸೂರು.

ವಿದ್ಯಾರ್ಥಿ ವಸತಿ ಮತ್ತು ಪ್ರಸಾದ ವ್ಯವಸ್ಥೆ.

ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಫ್ರೀ ಬೋರ್ಡಿಂಗ್ ಹಾವೇರಿಪೇಟೆ ಧಾರವಾಡ ಈ ಸಂಸ್ಥೆಗೆ ಪ್ರತಿ ವರ್ಷದಂತೆ ಕೆಳಗೆ ಕಂಡ ಯಾದಿ ಪ್ರಕಾರ ಧಾರವಾಡ ಸೆಂಟರಿಗೆ ಮುಲ್ಕಿ ಮತ್ತು ಮ್ಯಾಟ್ರಿಕ್ ಪರೀಕ್ಷೆಗಳಿಗೆ ಬಂದ ಸರ್ವಜಾತಿಯ ವಿದ್ಯಾರ್ಥಿಗಳಿಗೆ ಉಚಿತ ಪ್ರಸಾದ ಮತ್ತು ವಸತಿ ವ್ಯವಸ್ಥಾ ಮಾಡಲಾಗಿತ್ತು. ಮುಲ್ಕೀ ಪರೀಕ್ಷೆಗೆ ಬಂದ ವಿದ್ಯಾರ್ಥಿಗಳ ಸಂಖ್ಯೆ 352 ಮಾಸ್ತರ ಜನರು ಕೂಡಿ 369 ಆಗಿತ್ತು. ಮುಲ್ಕೀ ಪರೀಕ್ಷೆಗೆ ಬಂದ ವಿದ್ಯಾರ್ಥಿಗಳಿಗೆ ತಾ॥ 3-4-32 ರಿಂದ ತಾ॥ 9 ರ ತನಕ ಉಚಿತ ಪ್ರಸಾದ ವ್ಯವಸ್ಥೆ ಆಯಿತು. ಇದೇ ಕಾಲಕ್ಕೆ ತಾ॥ 6-4-1932 ಹೊಸ ವರ್ಷ ಪ್ರತಿಪದ ಇದ್ದ ಕಾರಣ ಸೂಟಿ ಇದ್ದು ಆ ದಿವಸ ಸಂಜೆಯ 4 ಘಂಟೆಗೆ ಶ್ರೀ ಶಿವಯೋಗಿಗಳವರ ಸನ್ನಿಧಿಯಲ್ಲಿ ಮ॥ ಚಂದ್ರಶೇಖರಪ್ಪಾ ಹೆಡ್ಡಮಾಸ್ತರ ಮುಂಡರಗಿ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸದರಿ ಸಂಸ್ಥೆಯ ಪಾಠಶಾಲಾಧ್ಯಾಪಕರಲ್ಲೊಬ್ಬರಾದ ವೇ॥ ಬಸವರಾಜಶಾಸ್ತ್ರಿಗಳು ನಾಗಳ ಇವರು ಪಂಚಾಂಗಶ್ರವಣವನ್ನು ಎಲ್ಲರಿಗೂ ಮಾಡಿಸಿದರು. ಆ ಮೇಲೆ ಸದಾಚಾರ, ರಾಜನಿಷ್ಠೆ, ಮಾತಾಪಿತೃಭಕ್ತಿ, ಈ ವಿಷಯಗಳನ್ನು ಕುರಿತು ನೆರೆದ ಸಭಿಕರ ಮನಸ್ಸಿನಮೇಲೆ ಒಳ್ಳೇ ಪರಿಣಾಮವಾಗುವಂತೆ ಭಾಷಣಗಳಾದವು. ಆಮೇಲೆ ಶ್ರೀ ಶಿವಯೋಗೀಶ್ವರರ ಭಜನೆ ಆಗಿ ಆ ಹೊತ್ತಿನ ಕಾರ್ಯ ಸಮಾಪ್ತಿಯಾಯಿತು ಇದಲ್ಲದೆ ತಾ॥ 9 ರಿಂದ ಸರ್ವಜಾತಿಯ ಮ್ಯಾಟ್ರಿಕ್ ಪರೀಕ್ಷೆಯ 53 ವಿದ್ಯಾರ್ಥಿಗಳಿಗೆ ವ್ಯವಸ್ಥಾ ನಡೆದಿರುತ್ತದೆ.

ಮುಲ್ಕೀಪರೀಕ್ಷೆಗೆ ಬಂದಿದ್ದ ವಿದ್ಯಾರ್ಥಿಗಳ ವಿವರ—

ಲಿಂಗವಂತ 224 ಕುರುಬ 26 ಮುಸಲ್ಮಾನ 18 ತಳವಾರ 21 ರಡ್ಡಿ 15 ವಾಲೀರ 7 ತಬ್ಬೀರ 7 ಅಗಸರು 6 ಮಾರಾಟಾ 4 ಬಾರಕೇರ 4 ನಡ್ಡಿರ 4 ಗೊಲ್ಲರು 4 ಹೊಲೇರ 4 ಕ್ಷತ್ರಿಯ 2 ಹಡಪದ 1 ಲಮಾಣಿ 1 ತೊರಗರ 1 ಪಟೀಗಾರ 1 ಉಪಾರ 1 ಈಳಿಗೇರ 1

ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಗೆ ಬರಬಿದ್ದವರು.

ವೀರಶೈವರು 50 ಇತರರು 3 ಒಟ್ಟು 53

ನಂಜನಗೂಡು ವಿಚಾರಗಳು.

ಇಲ್ಲಿ ಬಿಸಿಲಿನ ತಾಪವು ದಿನೇ ದಿನೇ ಹೆಚ್ಚುತ್ತಿದೆ. ಜನಗಳ ಆರೋಗ್ಯಸ್ಥಿತಿಯು ಬದಲಾವಣೆಯಾಗಿದೆ. ಆಸ್ಪತ್ರೆಗೆ ಜನರು ತಂಡೋಪತಂಡವಾಗಿ ಬರುತ್ತಲಿದ್ದಾರೆ. ಇದಕ್ಕೆ ಈಗ ಬಂದಿರುವ ಡಾಕ್ಟರವರು ರೋಗಿಗಳನ್ನು ಬಹಳ ಚೆನ್ನಾಗಿ ಪರೀಕ್ಷಿಸಿ ಚಿಕಿತ್ಸೆಮಾಡುತ್ತಿರುವುದೇ ಕಾರಣವು. ಇವರ ಶಾಂತಗುಣವು ಸ್ತೋತ್ರಾರ್ಹವಾದುದು. ಮ್ಯುನಿಸಿಪಾಲಿಟಿಯಲ್ಲಿ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ. ಇದಕ್ಕೆ ಕೌನ್ಸಿಲರುಗಳಲ್ಲಿ ಪಾರ್ಟಿಯಾಗಿರುವದೇ ಕಾರಣವೆಂದು ತೋರುತ್ತದೆ. ವಿದ್ಯಾವಂತರೂ, ಅನುಭವಶಾಲಿಗಳೂ, ದಕ್ಷರೂ ಆದ ಮೆಂಬರುಗಳು ಚುನಾಯಿಸಲ್ಪಡದೆ ಕೇವಲ ದಾಕ್ಷಿಣ್ಯಕ್ಕಾಗಿ, ಯುವಕರೂ, ಸ್ವಲ್ಪ ವಿದ್ಯಾವಂತರೂ, ಅನನುಭವಿಗಳೂ ಆದವರು ಚುನಾಯಿಸಲ್ಪಟ್ಟಿರುವದರಿಂದ ಈ ರೀತಿ ಪಾರ್ಟಿಗೆ ಅವಕಾಶವಾಗಿರುವುದು. ಕಳೆದ ತಿಂಗಳಲ್ಲಿ ನಡೆದ ಬಜೆಟ್ ಮೀಟಿಂಗಿನಲ್ಲಿ ಚೀಫ್ ಆಫೀಸರು ಬೇಕೆಂದು ತೀರ್ಮಾನವಾಯಿತು. ಇದು ಬಹಳ ಅನ್ಯಾಯ. ಅನವಶ್ಯಕವಾಗಿ ಸಾಲೆಯಾನ 2,000 ರೂ. ವರೆಗೆ ದುಬಾರಿ ಖರ್ಚು ಆಗುವದು. ಮೆಂಬರುಗಳ ಪೈಕಿ ವೈಸ್‌ಪ್ರೆಸಿಡೆಂಟರಾಗಿ ಪ್ರಜಾಸೇವೆ ಮಾಡುವದಕ್ಕೆ ಉತ್ಸಾಹಿಗಳಾಗಿದ್ದವರು ಈ ಪಾರ್ಟಿದೆಸೆಯಿಂದ ಮೌನವ್ರತವನ್ನು ತಾಳಿದ್ದಾರೆ. ಈ 2,000 ರೂ. ಗಳು ಪುರಾಭಿವೃದ್ಧಿಗೆ ವೆಚ್ಚವಾದರೆ ತುಂಬ ಅನುಕೂಲವಾಗುವದರಲ್ಲಿ ಸಂಶಯವಿಲ್ಲ. ಈ ಊರು ದೇವಸ್ಥಾನದ ಆಡಳಿತಗಳನ್ನು 1 ಮನೆಯವರು ಅಂದರೆ ತಂದೆ ಪಾರುಪತ್ಯಗಾರನಾಗಿಯೂ, ಮಗ ಪರಿಚಾರಕನಾಗಿಯೂ ನೋಡುತ್ತಿದ್ದಾರೆ ಇವರುಗಳ ಸ್ವಾಧೀನದಲ್ಲಿ [illegible] ಇವುಗಳಿಗೆ ಸಂಬಂಧಪಟ್ಟ ಲೆಕ್ಕ ಇವರ [illegible] ಇರುತ್ತವೆ. ಹಿಂದೆ ಒಂದೇ ಮನೆಯವರು 3-4 ಜನ ಬೇರೆ ಬೇರೆ ಕೆಲಸವನ್ನು ಮಾಡುತ್ತಿದ್ದರೂ ಗೋಳುಳಿವೇ ಮಾಯವಾಯಿತು. [illegible] ಸರ್ಕಾರದ ಜ್ಞಾಪಕಕ್ಕೆ ಬಂದಿಲ್ಲ. ಹಿಂದೆ ಮುತ್ತು ಬದಲಾ [illegible] ಗೆದ್ದಲು ಮೇದುಹೋದ [illegible] ಜ್ಞಾಪಕಕ್ಕೆ ತರುವದಲ್ಲದೆ ಸರ್ಕಾರದಲ್ಲಿ [illegible] ಒಂದೇ [illegible]

[illegible]

ಕಾಶಿಯ ಜಗದ್ಗುರು ಮುರುಘಾಮಠದ ಫ್ರೀ ಬೋರ್ಡಿಂಗಿಗೆ ಗುಬ್ಬಿ ನಾಟಕ ಕಂಪೆನಿಯವರ ಸಹಾಯ.

ಕಳೆದ ಮಾರ್ಚಿ ತಾ॥ 17 ನೆಯ ಭಾನುವಾರ ದಾವಣಗೆರೆಯ ಧನಲಕ್ಷ್ಮೀ ಥಿಯೇಟರಿನಲ್ಲಿ ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕಮಂಡಳಿಯ ಬಾಲಾಮಂಡಳಿಯು ಶ್ರೀಕೃಷ್ಣ ಪಾರಿಜಾತ ನಾಟಕವನ್ನು ಅಭಿನಯಿಸಿ ಅದರಿಂದ ಬಂದ 400 ರೂ. ಗಳನ್ನು ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ಸ್ಥಾಪಿತವಾಗಿರುವ ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘಾಮಠದ ಜಯದೇವ ಫ್ರೀ ಬೋರ್ಡಿಂಗಿನ ಫಂಡಿಗೆ ಉಚಿತವಾಗಿ ಕೊಟ್ಟರೆಂದು ಬರೆಯಲು ಅತ್ಯಂತ ಸಂತೋಷವಾಗುತ್ತದೆ. ಈ ನಾಟಕ ಮಂಡಲಿಯವರು ತಾವು ಸಂಚರಿಸಿದ ಸ್ಥಳಗಳಲ್ಲೆಲ್ಲ ಧರ್ಮಸಂಸ್ಥೆಗೆ ದ್ರವ್ಯ ಸಹಾಯ ಮಾಡುತ್ತಿರುವುದು ಶ್ಲಾಘನೀಯವೂ ಮಾರ್ಗದರ್ಶಕವೂ ಆಗಿರುತ್ತದೆ. ಕಾಶಿಯ ಶ್ರೀ ಜಯದೇವ ಬೋರ್ಡಿಂಗ್ ಕಮಿಟಿಯವರ ಪರವಾಗಿ ದಾವಣಗೆರೆ ಸಬ್‌ಡಿವಿಜನ್ ಸಾಹೇಬರಾದ ಮ॥ ಎಚ್. ಸುಬ್ಬರಾಯರು ಸುವರ್ಣಪದಕವನ್ನು ನಾಟಕಮಂಡಳಿಯವರಿಗೆ ಬಹುಮಾನಿಸಿ ಮಂಡಳಿಯವರನ್ನು ವಂದಿಸಿದರು. ಈ ಕಂಪೆನಿಯ ಮಾಲೀಕರಾದ ವಿನೋದರತ್ನಾಕರ ಜಿ. ಹೆಚ್. ವೀರಣ್ಣನವರು ರಾಜಮಾನ್ಯರಾಗಿರುವಂತೆ ಸರಳಸ್ವಭಾವ ಮತ್ತು ಔದಾರ್ಯಾದಿ ಗುಣಗಳಿಂದ ದೇಶಮಧ್ಯದಲ್ಲಿ ಪ್ರಜಾಮಾನ್ಯರೂ ಆಗಿರುವರು. ಇವರ ಆಶ್ರಯದಿಂದ ಕರ್ಣಾಟಕದಲ್ಲಿ ಸಂಗೀತ ಸಾಹಿತ್ಯಕ್ಕೆ ಕಳೆಯುಂಟಾಗಿದೆ. ಧನ್ಯ! ದಕ್ಷಿಣ ಹಿಂದುಸ್ಥಾನದ ನಾನಾ ಭಾಗಗಳಿಂದ ಸಂಸ್ಕೃತಾಂಗ್ಲ ವಿದ್ಯಾಭ್ಯಾಸಕ್ಕಾಗಿ ಬರುವ ವಿದ್ಯಾರ್ಥಿಗಳೂ ಮತ್ತು ಯಾತ್ರಾರ್ಥಿಗಳೂ ಕಾಶಿಯಲ್ಲಿ ಅಶನವಸತಿಗಳ ಕೊರತೆಯಿಂದ ಪಡುತ್ತಿರುವ ತೊಂದರೆಯನ್ನು ದಯಾದ್ರ್ರಹೃದಯರಾದ ಚಿತ್ರದುರ್ಗದ ಜಗದ್ಗುರು ಮಹಾಸ್ವಾಮಿಗಳು ಕಂಡು ದಾವಣಗೆರೆ ಮಹಾಜನಗಳ ಸಹಾಯದಿಂದ ಬೋರ್ಡಿಂಗನ್ನು ಏರ್ಪಡಿಸಿ ವಿದ್ಯಾರ್ಥಿಗಳಿಗೂ ಮತ್ತು ಯಾತ್ರಿಕರಿಗೂ ತುಂಬಾ ಸಹಾಯವನ್ನು ಕಲ್ಪಿಸಿ ಚಿರಸ್ಮರಣೀಯರಾಗಿರುತ್ತಾರೆ. ಇದರಿಂದ ಕರ್ಣಾಟಕ, ಮಹಾರಾಷ್ಟ್ರ, ಹೈದರಾಬಾದು ಮತ್ತು ಮದ್ರಾಸು ಪ್ರಾಂತಗಳಿಂದ ಬರತಕ್ಕ ವಿದ್ಯಾರ್ಥಿಗಳು ಮತ್ತು ಯಾತ್ರಿಕರ ಸಂಖ್ಯೆಯು ಹೆಚ್ಚುತ್ತಿದ್ದು ದಕ್ಷಿಣ ದೇಶದವರು ಹೆಚ್ಚು ಜನರಿಲ್ಲದ ಆ ಪ್ರಾಂತದಲ್ಲಿ ಉಳ್ಳುತ್ತಿಗೆ ಅವಕಾಶವಿಲ್ಲದಾಗಿದೆ. ಆದ್ದರಿಂದ ಇದರ ಪುರೋಭಿವೃದ್ಧಿಗಾಗಿ ಮೊದಲಿನಿಂದಲೂ ಅವಿಶ್ರಾಂತ ಶ್ರಮಪಡುತ್ತಿರುವ ಶ್ರೀ॥ ನಿ. ವಿ. ಗುರುಶಾಂತಸ್ವಾಮಿಗಳವರಿಗೆ ಈ ಪ್ರಾಂತದ ಉದಾರಿಗಳು ನಾಟಕಶಿರೋಮಣಿ ವೀರಣ್ಣನವರಂತೆ ಹೆಚ್ಚಾಗಿ ಸಹಾಯ ಪ್ರೋತ್ಸಾಹಗಳನ್ನು ಕೊಟ್ಟು ಪುಣ್ಯಭಾಗಿಗಳಾಗಲು ಕೋರಿಕೆ.

ಪ್ರತ್ಯಕ್ಷದರ್ಶಿ.

ಶಿಖಾಧಾರಣ ಪ್ರಶ್ನೆಗೆ ಉತ್ತರ.

ಕೆಲ ಮಹತ್ವಪ್ರಶ್ನೆಗಳೆಂಬ ಅಂಕಿತದಿಂದ ಏಪ್ರಿಲ್ ತಾ॥ 4 ನೆಯ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಇವರು ಕೇಳಿರುವ ಪ್ರಶ್ನೆಗಳ ಪೈಕಿ ವೀರಶೈವರು ಜುಟ್ಟು ಬಿಡಬೇಕೋ ಬ್ಯಾಡವೂ ಎಂಬ ಪ್ರಶ್ನೆಗೆ ಉತ್ತರ—

ಶ್ಲೋ॥ "ಶಿಖಾಹೀನಸ್ಯ ಭಕ್ತಾನಾಂ ನಚವಕ್ತ್ರಾವಲೋಕನಂ"

ಜುಟ್ಟು ಇಲ್ಲದ ಭಕ್ತರ ಮುಖವನ್ನು ನೋಡಬಾರದೆಂದು ಪಾರಮೇಶ್ವರಾಗಮ ಬೋಧಿಸುತ್ತಿರುವುದು.

ಶ್ಲೋ॥ ಮುಖೇಮಂತ್ರಹೃದಿಧ್ಯಾನಂ ಮಸ್ತಕೇಲಿಂಗಧಾರಣಂ ಶಿಖಾ ರುದ್ರಾಕ್ಷಭಸ್ಮಾನಿ ಇತಿ ಬ್ರಾಹ್ಮಣ ಲಕ್ಷಣಂ"

ಈ ರೀತಿ ವೀರಶೈವ ಬ್ರಾಹ್ಮಣನು ಜುಟ್ಟನ್ನು ಬಿಡಿಸೇರಬೇಕೆಂದು ಗೌತಮ ಸ್ಮೃತಿಬೋಧಿಸುತ್ತಿರುವುದು.

ಶ್ಲೋ॥ "ಬ್ರಾಹ್ಮಣಾ ವೀರಶೈವಸ್ಥಾ ಶಿಖಾಯಜ್ಞೋಪವೀತಿನಃ ಲಿಂಗ ರುದ್ರಾಕ್ಷಭಸ್ಮಾಂಕಂ ಬ್ರಹ್ಮಕರ್ಮ ಸದಾವ್ರತಿ"

ಈ ಬ್ರಾಹ್ಮಣನೆಂಬ ವೀರಶೈವನು ಜುಟ್ಟನ್ನು ಬಿಡಿಸೇರಬೇಕೆಂದು ಶಿವರಹಸ್ಯವು ಬೋಧಿಸುತ್ತಿರುವುದು.

"ಬದ್ಧಶಿಖಂಕುಮಾರಂ" ಜುಟ್ಟನ್ನು ಕಟ್ಟಿಕೊಂಡಿರುವ ತನ್ನ ಮಗನನ್ನು ಎಂದು ದೀಕ್ಷಾವಿಧಿಯು ಬೋಧಿಸುತ್ತಿರುವುದು.

"ಶಿಖಾಯೈನಮಃ" ಅಂದರೆ ದೀಕ್ಷೆಯಾಗತಕ್ಕ ಕಾಲದಲ್ಲಿ ಮತ್ತು ಪ್ರತಿ ದಿನ ಶಿವಪೂಜೆ ಕಾಲದಲ್ಲಿ ಅಂಗನ್ಯಾಸಮಾಡುವಾಗ ಹಸ್ತದಿಂದ ಜುಟ್ಟನ್ನು ಸ್ಪರ್ಶಮಾಡಬೇಕೆಂದು ದೀಕ್ಷಾವಿಧಿಯೂ ವಿವೇಕಚಿಂತಾಮಣಿಯೂ ಬೋಧಿಸುತ್ತಿರುವವು.

"ಕಟ್ಟು ಇಲ್ಲದ ಕೆರೆಯು | ಮುಟ್ಟು ಇಲ್ಲದ ನಾರಿ ॥ ಜುಟ್ಟು ಇಲ್ಲದ ನರನಾಯಿ ಇವು ಮೂರ | ಮುಟ್ಟದಿರೆಂದ ಸರ್ವಜ್ಞ"

ಜುಟ್ಟನ್ನು ಖಂಡಿತವಾಗಿ ಬಿಡಿಸೇರಬೇಕೆಂದು ಸರ್ವಜ್ಞಮೂರ್ತಿಯು ಬೋಧಿಸಿರುವನು. ಆದ್ದರಿಂದ ಶಿವಭಕ್ತರೆಂಬವರೆಲ್ಲರೂ ಜುಟ್ಟನ್ನು ಬಿಡಿಸಲೇಬೇಕು. ಅಂದರೆ ಭಕ್ತರೆಂತಲೂ, ಲಿಂಗವಂತರೆಂತಲೂ, ಲಿಂಗಧಾರಕರೆಂತಲೂ, ಶಿವಭಕ್ತರೆಂತಲೂ, ವೀರಶೈವರೆಂತಲೂ, ವೀರಶೈವ ಬ್ರಾಹ್ಮಣರೆಂತಲೂ ಲಿಂಗಿಬ್ರಾಹ್ಮಣರಿಗೆ ಇವೆಲ್ಲಾ ಪರ್ಯಾಯನಾಮಗಳೆಂದು ತಿಳಿಯಬೇಕು.

ಕಂಪ್ಲಿ ಮಠದ ರುದ್ರಯ್ಯ, ತರೀಕೆರೆ.

ಬಂಡಯ್ಯನವರ ಸ್ಮಾರಕಧರ್ಮ.

ಸಾಹುಕಾರ್ ಬಿ. ಬಂಡಯ್ಯನವರು ನಂಜನಗೂಡಿನಲ್ಲಿ ಭಾರಿ ವ್ಯಾಪಾರಿಗಳೂ,ಕಂಟ್ರಾಕ್ಟರೂ ಆಗಿದ್ದರಲ್ಲದೆ ಸುಮಾರು 20 ವರ್ಷಗಳಕಾಲ ಅವಿಚ್ಛಿನ್ನವಾಗಿ ರೆಪ್ರಜೆಂಟಟಿವ್ ಅಸೆಂಬ್ಲಿ, ಮೈಸೂರು ಡಿ॥ ಬೋರ್ಡು ಹಿಂದಿದ್ದ ನಂಜನಗೂಡು ತಾಲ್ಲೂಕು ಬೋರ್ಡು, ಹಾಲಿ ಮ್ಯುನಿಸಿಪಾಲಿಟಿ ಇವುಗಳ ಮೆಂಬರಾಗಿಯೂ, ಕೆಲಕಾಲ ನಂಜನಗೂಡಿನ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾಗಿಯೂ ಇದ್ದು ಶ್ರದ್ಧೆಯಿಂದ ಕೆಲಸಮಾಡಿ ಜನರ ಪ್ರೀತಿ ವಿಶ್ವಾಸಗಳನ್ನು ಪಡೆದು ಮಾನ್ಯರಾಗಿದ್ದರು. ಇವರಿಗೆ ಸಂತಾನವಿಲ್ಲ. ತಮ್ಮ ಜೀವಿತಕಾಲದಲ್ಲಿ ಬಹುವಿನ ಪರೋಪಕಾರಿಗಳಾಗಿದ್ದುಕೊಂಡು, ಕೆಲವು ಶಾಶ್ವತಧರ್ಮಗಳನ್ನು ಮಾಡಬೇಕೆಂದು ನಿಶ್ಚಯಿಸಿದ್ದರು. ನಂಜನಗೂಡಿನಲ್ಲಿ ಗೌರೀಕಟ್ಟದ ಹತ್ತಿರ ಶಿಥಿಲವಾಗಿದ್ದ ಕಲ್ಲು ಮಂಟಪವನ್ನು ಬಹುಶಃ ಗೋಡಿನಿಂದ ಅದರ ಜೀರ್ಣೋದ್ಧಾರಮಾಡಿ ವರ್ಷಂಪ್ರತಿ ದೊಡ್ಡ ರಥೋತ್ಸವ ಕಾಲದಲ್ಲಿ 3 ದಿವಸಗಳು ಅವಿಚ್ಛಿನ್ನವಾಗಿ ಬಂದ ಆಗಂತುಕರಿಗೆ ಉದಾರವಾಗಿ ಅನ್ನದಾನ ಮಾಡಿಸುತ್ತಿದ್ದರು. ಇದಕ್ಕಾಗಿ ಅವರು ನಂಜನಗೂಡಿನ ಕಸಬಾದಲ್ಲಿ 10 ಎಕರೆ ಅತ್ಯುತ್ತಮವಾದ ತರೀ ಜಮೀನನ್ನು ದಾನವಾಗಿ ಸರ್ಕಾರಕ್ಕೆ ವಹಿಸಿರುತ್ತಾರೆ. ಅವರ ಧರ್ಮಪತ್ನಿಯವರಾದ ಶ್ರೀಮತಿ ತಿಮ್ಮಮ್ಮನವರು ತಮ್ಮ ಯಜಮಾನರ ಸದುದ್ದೇಶಗಳನ್ನು ಇತೋಪ್ಯತಿಶಯವಾಗಿ ನಡೆಸಿಕೊಂಡು ಬರುತ್ತಲಿದ್ದಾರೆ. ಮೊಳ್ಳಂತೆ ಅನ್ನದಾನಕ್ಕೆ ವರ್ಷಂಪ್ರತಿ ಬರುವ [illegible] ಅದಾಯಸಾಲದ್ದರಿಂದ ತಮ್ಮ ಸ್ವಂತ ಖಾಸಗೀ [illegible] 300-400 ರೂ. [illegible] ಶ್ರೀ [illegible] ತ್ರಿಕಾಲದಲ್ಲಿ ಒಂದು ಹೋಟೆಯನ್ನು [illegible] ಏರ್ಪಡಿಸಿರುತ್ತಾರೆ. ಮಹಾ ಸನ್ನಿಧಾನದ ಶ್ರೀ [illegible] ಅಮ್ಮನವರಿಗೆ 1 ಸಾವು [illegible] ಭಂಗಾರದ ಜಡೆ ಅಭರಣವನ್ನು ಸಮರ್ಪಿಸಲು ಸಿದ್ಧಗೊಳಿಸಿದ್ದಾರೆ. ತಮ್ಮ ಯಜಮಾನರು ಜೀವಿತಕಾಲದಲ್ಲಿ ಉದ್ದೇಶಿಸಿದ್ದಂತೆ, ಮೈಸೂರಿನಲ್ಲಿ ಸ್ಥಾಪಿತವಾಗಿರುವ ಕುಂಚಿಟಿಗರ ಸಂಘಕ್ಕೆ 10 ಸಾವಿರ ರೂ. ಗೆ ಮಿಗಿಲಾಗಿ ಬಾಳುವ ತಮ್ಮ ವಾಸದ 2 ದಿವ್ಯವಾದ ಕಟ್ಟಡಗಳನ್ನು, ಅನಾಥ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ದಾನಪತ್ರಮುಖೇನ ವಹಿಸಿರುತ್ತಾರೆ. ಕಳೆದವಾರ ಅನಾಥ ಮಕ್ಕಳ ವಿವಾಹ ಒಂದನ್ನು ಉಚಿತರೀತಿಯಲ್ಲಿ ತಮ್ಮ ಸ್ವಂತ ಖಾಗೋಣಿಯಿಂದ ಬಹು ಸಂತೋಷಕರವಾಗಿ ನೆರವೇರಿಸಿದರು. ಇದೇ ಪ್ರಕಾರ ಇನ್ನೂ ಹಲವು ವಿಧವಾದ ಧರ್ಮಕಾರ್ಯಗಳನ್ನು ದೃಗ್ಗೋಚರವಿಲ್ಲದಂತೆ ನಿರಭಿಮಾನದಿಂದ ನಡೆಸುತ್ತಿರುತ್ತಾರೆ. ಇಂಥ ಧರ್ಮಿಷ್ಠರಿಗೆ ಶ್ರೀ ಶ್ರೀಕಂಠೇಶ್ವರನು ನಿತ್ಯ ಕಲ್ಯಾಣವನ್ನೂ ಅವರ ಮೃತಪತಿಗಳ ಆತ್ಮಕ್ಕೆ ನಿತ್ಯಶಾಂತಿಯನ್ನೂ ಉಂಟು ಮಾಡಲೆಂದು ಅನನ್ಯಭಕ್ತಿಭಾವದಿಂದ ಪ್ರಾರ್ಥಿಸುತ್ತೇನೆ.

ಎಂ. ಸಿ. ನರಸಿಂಹಯ್ಯ.

ಪೇರೆಂಟ್ಸ್‌ಡೇ.

ನೆಲಮಂಗಲ ತಾ॥ ಗೊಲ್ಲಹಳ್ಳಿ ಪ್ರೈಮರಿ ಬಾಯ್ಸ್‌ಸ್ಕೂಲ್ II ಪೇರೆಂಟ್ಸ್‌ಡೇ ಉತ್ಸವವು ಬೆಂಗಳೂರು ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರಾದ ಮ॥ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ತಾ॥ 8-4-1932 ನೇ ಸಾಯಂಕಾಲ 3 ಘಂಟೆಗೆ ಸದರಿ ಸ್ಕೂಲು ಕಟ್ಟಡದಲ್ಲಿ ನೆರವೇರಿಸಲ್ಪಟ್ಟಿತು. ಬೆಂಗಳೂರು ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರಾದ ಮ॥ ಕೆ. ಟಿ. ಸುದರ್ಶನಂ ಅಯ್ಯಂಗಾರ್‌ರವರು, ನೆಲಮಂಗಲದ ರೇಂಜ್ ಅ॥ ಇನ್॥ ಸಾಹೇಬರವರು ಮತ್ತು ನೆಲಮಂಗಲದ ತಾಲ್ಲೂಕು ಕೆಲವು ಸರ್ಕಾರಿ ಉದ್ಯೋಗಸ್ಥರು ಇತರ ಅನೇಕ ದೊಡ್ಡಮನುಷ್ಯರು ಸಹ ದಯಮಾಡಿಸಿದ್ದರು. ಸಾಯಂಕಾಲ 3 ಘಂಟೆಗೆ ಸರಿಯಾಗಿ ಅಧ್ಯಕ್ಷರು ದಯಮಾಡಿಸಿದ ಅನಂತರ ಅಂದಿನ ಕಾರ್ಯಕ್ರಮವು ಪ್ರಾರಂಭವಾಯಿತು. ದೇವರ ಪ್ರಾರ್ಥನೆಯಾದನಂತರ ಸ್ಕೂಲು ರಿಪೋರ್ಟನ್ನು ಓದಲಾಯಿತು. ಅನೇಕ ಉಪನ್ಯಾಸಗಳಾದನಂತರ ಡಿ॥ ಎಜುಕೇಷನಲ್ ಆಫೀಸರವರು ವಿದ್ಯಾಭ್ಯಾಸದ ವಿಚಾರವನ್ನು ಕುರಿತು ಬಹಳ ಸ್ವಾರಸ್ಯವಾದ ಭಾಷಣವನ್ನಿತ್ತರು. ಅಧ್ಯಕ್ಷರಾದ ಮ॥ ವಿ. ವೆಂಕಟಪ್ಪನವರು ಗ್ರಾಮಾಭಿವೃದ್ಧಿ ಮತ್ತು ವಿದ್ಯಾಭಿವೃದ್ಧಿ ವಿಚಾರವಾಗಿ ಬಹಳ ಸ್ವಾರಸ್ಯವಾದ ಭಾಷಣವನ್ನಿತ್ತು ಗೊಲ್ಲಹಳ್ಳಿ ಸ್ಕೂಲು ಕಟ್ಟಡದ ಕಾಂಪೌಂಡು ಗೋಡೆಯನ್ನು ಕಟ್ಟಿಸಿಕೊಡಲು ಭರವಸೆಯನ್ನಿತ್ತರು. ಅಲ್ಲಿ ನೆರೆದಿದ್ದ ಮಹಾಜನರೂ ಅಧ್ಯಕ್ಷರೂ ಶಾಲೆಯ ಮಕ್ಕಳ ಆಟಪಾಟಗಳು, ಸ್ಕೂಲು ಹೆಡ್ಮಾಸ್ಟರು ಮ॥ ಎನ್. ಲಕ್ಷ್ಮೀನಾರಾಯಣಪ್ಪನವರು ಮತ್ತು ಸ್ಕೂಲು ಕಟ್ಟಡದ ಮುಂಭಾಗದಲ್ಲಿ, ಬಾಲಕರಿಗೆ ಪ್ರತ್ಯಕ್ಷಾನುಭವವಾಗುವಂತೆ ನವೀನ ಮಾದರಿಯಲ್ಲಿ ಸಿಮೆಂಟಿನಿಂದ ಮಾಡಿರತಕ್ಕ ಪೂರ್ವಾರ್ಧಗೋಳ, ಇಂಡಿಯ ಮತ್ತು ಮೈಸೂರು ಮ್ಯಾಪು ಮತ್ತು ಸ್ಕೂಲು ಮ್ಯೂಸಿಯಂಗಳನ್ನು ನೋಡಿ ತುಂಬಾ ಆನಂದಪಟ್ಟರು. ಫಲಾಹಾರಾನಂತರ ಅಧ್ಯಕ್ಷರಿಗೂ ಸಭಿಕರಿಗೂ ಗಂಧಪುಷ್ಪ ತಾಂಬೂಲಗಳ ವಿನಿಯೋಗವಾಗಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ಭರಖಾಸ್ತು ಮಾಡಲ್ಪಟ್ಟಿತು. ಈ ಶಾಲೆಯ ಮುಖ್ಯೋಪಾಧ್ಯಾಯರಾದ ಮ॥ ಎನ್. ಲಕ್ಷ್ಮೀನಾರಾಯಣಪ್ಪನವರು ಮತ್ತು ಸಹಾಯೋಪಾಧ್ಯಾಯರಾದ ಮ॥ ಜಿ. ನಂಜುಂಡಯ್ಯನವರು ಸಹ 2 ವರ್ಷಕ್ಕೆ ಮೇಲ್ಪಟ್ಟು ಶಾಲೆಯಲ್ಲಿದ್ದು ಶಾಲೆಯನ್ನು ತುಂಬಾ ಅಭಿವೃದ್ಧಿಗೆ ತಂದಿರುತ್ತಾರೆ. ಇಂಥವರುಗಳಿಗೆ ಇಲಾಖೆಯವರು ಮತ್ತು ಗ್ರಾಮಸ್ಥರು ಸಹ ಹೆಚ್ಚು ಪ್ರೋತ್ಸಾಹವನ್ನು ಕಲ್ಪಿಸಿಕೊಡಬೇಕಾಗಿ ಕೋರಿದೆ. ಈ ಗ್ರಾಮದ ವಿಲೇಜು ಪಂಚಾಯತಿ ಛೇರ್ಮನ್‌ರವರಾದ ಶ್ಯಾನುಭೋಗ್ ಮ॥ ಹನುಮಂತರಾಯಪ್ಪನವರು ಶಾಲೆಯ ಅಭಿವೃದ್ಧಿ ವಿಷಯದಲ್ಲಿ ಹೆಚ್ಚಾಗಿ ಮುತುವರ್ಜಿವಹಿಸಿರುವ ವಿಚಾರ ಬಹಳ ಶ್ಲಾಘನೀಯವಾಗಿದೆ.

ಪ್ರತ್ಯಕ್ಷದರ್ಶಿ

ಶ್ರೀಮದ್ವೀರಶೈವ ವಾರದ ಸಂಸ್ಕೃತಪಾಠಶಾಲೆಯ 55ನೇ ವರ್ಷದ ವರ್ಧಂತ್ಯುತ್ಸವ, ಸೊಲ್ಲಾಪುರ.

ಪರಮಾತ್ಮನು ಆಯಾ ಕಾಲಗಳಲ್ಲಿ ತಾನೂ, ತನ್ನ ಪ್ರಮಥಪುಂಗವರೂ, ಅನೇಕ ರೂಪುಗಳಿಂದ ಅವತರಿಸಿ ನಮ್ಮ ವೀರಶೈವ ಸಮಾಜವನ್ನುದ್ಧರಿಸುತ್ತ ಬಂದಿರುವರೆಂಬುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಅದರಂತೆಯೇ ಒಂದು ಕಾಲದಲ್ಲಿ ಅಂದರೆ, ಸುಮಾರು ಕ್ರಿ. ಶ. 1800 ವರ್ಷಗಳ ಹಿಂದೆ ನಮ್ಮ ವೀರಶೈವಮತವು ಧರ್ಮ ತತ್ವಗಳನ್ನರಿಯದೆ ಅಜ್ಞಾನಾಂಧಕಾರದಲ್ಲಿ ಮುಳುಗುತ್ತ ಇದ್ದಿತು. ವಿಶೇಷತಃ ಮಹಾರಾಷ್ಟ್ರದಲ್ಲಂತೂ ವೀರಶೈವರ ನಡಾವಳಿಯೇ ಗುರ್ತಿರಲಿಲ್ಲ. ಹೆಚ್ಚಿಗೇನು? ನಾಗಪೂರು ಮೊದಲಾದ ಮಧ್ಯ ಪ್ರಾಂತದಲ್ಲಂತೂ "ವೀರಶೈವ" ಎಂಬ ಹೆಸರಾದರೂ ಗುರ್ತಿರಲಿಲ್ಲವೆಂದು ಹೇಳಿದರೂ ಅತಿಶಯೋಕ್ತಿಯಾಗಲಾರದು. ಇಂಥ ವಿಷಮಪರಿಸ್ಥಿತಿಯಲ್ಲಾದರೂ ಸಮಾಜದ ಗುರುಗಳೆನ್ನಿಸಿಕೊಳ್ಳುವವರೂ, ಪರಮ ಪೂಜ್ಯರೂ, ಆದ ಪೀಠಾಧಿಪತಿಗಳೂ ಸ್ವಸ್ಥವಾಗಿ ಮಲಗಿಯೇ ಬಿಟ್ಟಿದ್ದರೆಂದರೂ ಅಯೋಗ್ಯವಾಗಲಾರದು. ಯಾಕೆಂದರೆ, ಆಗಿನ ಕಾಲದ ಮಠದ ಪಟ್ಟಚರಮೂರ್ತಿಗಳಿಗು ಕೂಡ ತಂತಮ್ಮ ಗೋತ್ರಸೂತ್ರಗಳು ಚೆನ್ನಾಗಿ ಗುರ್ತೇ ಇರಲಿಲ್ಲ ಅಥವಾ ಅವುಗಳನ್ನು ತಿಳುಹಿಸುವ ಧರ್ಮಗ್ರಂಥಗಳಾದರೂ ವಿಶೇಷ ಸಿಗುತ್ತಿರಲಿಲ್ಲ. ಎಲ್ಲಾದರೂ ಅಲ್ಪಸ್ವಲ್ಪ ಸಿಕ್ಕಿದರೆ ಕರ್ಣಾಟಕದಲ್ಲಿಯೇ ಸಿಗುತ್ತಿದ್ದವು. ಇಂಥ ವಿಷಮಪರಿಸ್ಥಿತಿಯನ್ನವಲೋಕಿಸಿ ನಮ್ಮ ವೀರಶೈವ ಧರ್ಮದಲ್ಲಿರುವ ಕುಂದುಕೊರತೆಗಳನ್ನು, ಅದಷ್ಟು ದೂರಮಾಡಲು ಬದ್ಧಕಂಕಣರಾದ ಶ್ರೀಮಂತ ಕೈ॥ ರಾ॥ ಬ॥ ಮಲ್ಲಪ್ಪ ಬಸಪ್ಪ ಉರುಫ್ ಅಪ್ಪಾಸಾಹೇಬ ವಾರದ ಸೊಲ್ಲಾಪುರ ಇವರು ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿ ಅನೇಕ ಪ್ರಯತ್ನಗಳಿಂದ ಆಯಾಯ ಗ್ರಾಮಗಳಲ್ಲಿ ಗೂಢವಾಗಿದ್ದ ಧರ್ಮಗ್ರಂಥಗಳನ್ನು ತರಿಸಿ ಪ್ರಿಂಟುಮಾಡಿಸಿ ಲೋಕೈಕಮಾನ್ಯರಾಗಿರುವದು ಸರ್ವ ಶ್ರುತವೇ ಇರುತ್ತದೆ. ಅದೇ ಮಹನೀಯರು ಧರ್ಮಗ್ರಂಥಗಳ ಜಿಜ್ಞಾಸರೂಪವನ್ನು ಬಯಲಿಗೆಳೆಯಲೂ, ನಾವೆಲ್ಲರೂ ಹೇಗೆ ಆಚರಿಸಬೇಕು, ನಮ್ಮ ಧರ್ಮತತ್ವಗಳ್ಯಾವವು, ನಮ್ಮ ಗೋತ್ರಸೂತ್ರಗಳ್ಯಾವವು, ಇವೇ ಮೊದಲಾದ ಅನೇಕ ಸಂಗತಿಗಳನ್ನು ನಮ್ಮ ಸಮಾಜವು ತಿಳಿದುಕೊಳ್ಳಲೆಂಬಿಚ್ಛೆಯಿಂದ ಶಾಲೀವಾಹನಶಕ 1800ನೇ ಚೈತ್ರ ಶುದ್ಧ ಪ್ರತಿಪದೆಯ ಸುಮುಹೂರ್ತದಲ್ಲಿ 1 ಸಂಸ್ಕೃತಪಾಠಶಾಲೆಯನ್ನು ಸ್ಥಾಪಿಸಿದರು. ಆ ಮೊದಲು ಈ ಪಾಠಶಾಲೆಯು ಅವಿಚ್ಛಿನ್ನವಾಗಿ ನಡೆಯುತ್ತ ಬಂದು ಈಗ್ಗೆ 54 ವರ್ಷಗಳು ಮುಗಿದು 55ನೇ ವರ್ಷವು ಪ್ರಾರಂಭವಾಗಿರುವದನ್ನು ನೋಡಿದರೆ ಅತ್ಯಂತ ಸಂತೋಷವು ಉಂಟಾಗುತ್ತದೆ. ಈ ಪಾಠಶಾಲೆಯಲ್ಲಿ ಅನೇಕ ಜನ ವಿದ್ಯಾರ್ಥಿಗಳು [illegible] ಕೆಲವರು ವಿರಕ್ತರೂ, ಪಟ್ಟಚರಮೂರ್ತಿಗಳೂ, [illegible] ಅಧ್ಯಾಪಕರೂ [illegible] ಅದ್ದರಿಂದ [illegible] ಶ್ರೀಮಂತ ಕೈ॥ ರಾ॥ ಬ॥ ವಾರದ [illegible]

ಮೈಸೂರು ಸಂಸ್ಥಾನದ ದಿವಾನರವರೂ ಮತ್ತು "ರೌಂಡ್ ಟೇಬಲ್" ಸಮ್ಮೇಳನಕ್ಕೆ ದಯಮಾಡಿಸಿದ್ದ ಪ್ರತಿನಿಧಿಗಳಲ್ಲೊಬ್ಬರೂ ಆದ ಸರ್ ಮಿರ್ಜಾ ಇಸ್ಮಾಯಿಲ್‌ರವರು ಇಂಡಿಯಾದ ಅಸೋಸಿಯೇಟೆಡ್ ಪ್ರೆಸ್ ಪ್ರತಿನಿಧಿಯವರು ತಮ್ಮ ಭೇಟಿಗೆ ಬಂದಿದ್ದಾಗ್ಗೆ ತಿಳಿಸಿದ ವಿವರ.

ಇಂಡಿಯಾದೇಶಕ್ಕೆ ಇಷ್ಟರಲ್ಲೇ ಏರ್ಪಡುವ ಹೊಸ ರಾಜ್ಯಾಂಗ ವ್ಯವಸ್ಥೆಯಲ್ಲಿ ಸಂಯುಕ್ತ ಶಾಸನ ಸಭೆಯೊಂದು ಸ್ಥಾಪಿಸಲ್ಪಡಬೇಕಾಗುವುದು ಸರಿಯಷ್ಟೆ. ಅದರಲ್ಲಿ ಸಂಸ್ಥಾನದ ಪ್ರತಿನಿಧಿಗಳಿಗೆ ಸದಸ್ಯಸ್ಥಾನಗಳು ಎಷ್ಟಿರಬೇಕೆಂಬ ಅಂಶವನ್ನು ಇತ್ಯರ್ಥಪಡಿಸುವುದಕ್ಕಾಗಿ ನಿಷ್ಪಕ್ಷಪಾತವಾದೊಂದು ಸಮಿತಿಯನ್ನು ನೇಮಿಸಬೇಕೆಂಬುದಾಗಿ ನರೇಂದ್ರಮಂಡಲದವರು (Chamber of Princes) ಬ್ರಿಟಿಷ್ ಸರ್ಕಾರದವರನ್ನು ಶೀಘ್ರದಲ್ಲೇ ಪ್ರಾರ್ಥಿಸುವರೆಂದು ವರದಿಯಾಗಿದೆ. ಹೀಗೆ ವರದಿಯಾಗಿರುವುದನ್ನು ನೋಡಿ ನನಗೇನೂ ಆಶ್ಚರ್ಯವಾಗಲಿಲ್ಲ. ಈ ರೀತಿ ಮಾಡಬೇಕೆಂಬುದನ್ನು ನಾನು ಮೊದಲಿನಿಂದಲೂ ಸಲಹೆ ಮಾಡುತ್ತಲೇ ಇದ್ದೆನು. ರೌಂಡ್‌ಟೇಬಲ್ ಸಮ್ಮೇಳನದಲ್ಲಿ ನರೇಂದ್ರಮಂಡಲದ ಛಾನ್ಸೆಲರವರೂ, ಸಂಸ್ಥಾನಗಳ ಇತರ ಪ್ರತಿನಿಧಿಗಳೂ ಸಂಯುಕ್ತ ಶಾಸನ ಸಭೆಯ ಸದಸ್ಯಸ್ಥಾನಗಳ ಹಂಚಿಕೆಯ ವಿಚಾರವನ್ನು ಸಂಸ್ಥಾನಗಳವರೇ ವ್ಯವಸ್ಥೆ ಮಾಡಿಕೊಳ್ಳುವಂತೆ ಬಿಡಬಹುದೆಂದು ಒತ್ತಿ ಹೇಳಿ ಸಲಹೆಮಾಡಿದರು. ಈ ರೀತಿ ಸಲಹೆಮಾಡಿದುದು ಯುಕ್ತವೇ, ಈ ಸಲಹೆಯು ಫಲಕಾರಿಯಾಗಿ ಪರಿಣಮಿಸೀತೇ—ಎಂದು ಸಂಶಯಪಟ್ಟು ನನ್ನ ಸಂದೇಹವನ್ನು ಆಗಲೇ ನಾನು ಸೂಚಿಸಿಬಿಟ್ಟೆನು. ಎಲ್ಲಾ ಸಂಸ್ಥಾನಗಳೂ ವಿಸ್ತೀರ್ಣದಲ್ಲಿ ಸಮವಾಗಿಲ್ಲ. ಇದರಂತೆಯೇ ನಾನಾ ಸಂಸ್ಥಾನಗಳಿಗೂ ಪ್ರಾಮುಖ್ಯತೆಯಲ್ಲಿಯೂ ಪರಸ್ಪರವಾಗಿ ಬಹಳ ತಾರತಮ್ಯವುಂಟು. ಆದಕಾರಣ, ಸಂಸ್ಥಾನಗಳ ಪ್ರತಿನಿಧಿಗಳಾಗಿ ಸಭೆಗೆ ಬರುವವರು ಯಾವ ಯಾವ ಸಂಸ್ಥಾನಗಳಿಂದ ಎಷ್ಟೆಷ್ಟು ಮಂದಿಗಳಿರಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿ, ಅವು ವಿಶೇಷ ತೊಡಕಿನ ಸಮಸ್ಯೆಯಾಗುವುದರಲ್ಲಿ ಸಂಶಯವಿಲ್ಲ. ಹೀಗಾಗುವುದು ಸಹಜವಾಗಿಯೇ ಇರುತ್ತದೆ. ಆದಕಾರಣ, ಸದಸ್ಯಸ್ಥಾನಗಳ ಹಂಚಿಕೆಯ [illegible]

[illegible] ವಾದ ತೀರ್ಮಾನವು ದೊರೆಯುವುದೆಂದು ಸಂಸ್ಥಾನಗಳವರೆಲ್ಲರೂ ಪೂರ್ಣವಾಗಿ ಭರವಸೆಯಿಡಬಹುದು. ಏಕೆಂದರೆ, ಈ ದೊಡ್ಡ ಕೆಲಸವನ್ನು ವಹಿಸಿ ಇತ್ಯರ್ಥಪಡಿಸುವುದಕ್ಕೆ ಈ ಸಮಿತಿಯವರು ಸರಿಯಾದವರೂ ಆಗಿದ್ದಾರೆ; ಸಮರ್ಥರೂ ಆಗಿದ್ದಾರೆ. ಅವರಿಂದ ಸಮರ್ಪಕವಾದ ತೀರ್ಮಾನವು ದೊರೆತೇ ದೊರೆಯುತ್ತದೆ.

II.

ರಾಜ ಮಹಾರಾಜರುಗಳೊಡನೆಯೂ, ಸಚಿವರುಗಳೊಡನೆಯೂ, ಹೊಸ ದೆಹಲಿ ನಗರದಲ್ಲಿ ಈಚೆಗೆ ನಡೆದ ಚರ್ಚೆಗಳ ವಿಚಾರದಲ್ಲಿ ಸರ್ ಮಿರ್ಜಾ ಇಸ್ಮಾಯಿಲ್‌ರವರು ಕೆಲವು ಟೀಕೆಗಳನ್ನು ಮಾಡಿ ಪತ್ರಿಕೆಗಳಲ್ಲಿ ಪ್ರಕಟಣೆಗಾಗಿ ಕೊಟ್ಟ ವಿವರ.

ಸಮಗ್ರ ಭರತಖಂಡಕ್ಕೂ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯೊಂದು ಏರ್ಪಡುವುದೇ ತಮಗೆ ಸಮ್ಮತವೆಂಬುದಾಗಿ ಬಹುಮಂದಿ ಸಂಸ್ಥಾನಾಧಿಪತಿಗಳು ಬಹಿರಂಗವಾಗಿ ತಿಳಿಸಿರುವುದು ಭರತಖಂಡದ ಹಿತವನ್ನು ಬಯಸುವವರೆಲ್ಲರಿಗೂ ವಿಶೇಷ ಸಂತೋಷದಾಯಕವಾಗಿದೆ. ಸಂಸ್ಥಾನಗಳ ಮನೋಗತವು ಪರಿಣಾಮದಲ್ಲಿ ಹೇಗೆ ತಿರುಗುವುದೆಂಬುದರಲ್ಲಿ ಮೊದಲಿನಿಂದಲೂ ನನ್ನ ಮನಸ್ಸಿಗೆ ನಿಸ್ಸಂದೇಹವಾಗಿಯೇ ಇದ್ದಿತು. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ವಿಚಾರದಲ್ಲಿ ಅವರುಗಳಲ್ಲಿ ಅಷ್ಟೇನೂ ವಿಶೇಷ ಉತ್ಸಾಹಶಾಲಿಗಳಲ್ಲದಿರುವವರು ಕೂಡ ಪರಿಣಾಮದಲ್ಲಿ ಈ ರೀತಿ ಅಭಿಪ್ರಾಯಪಡುವರೆಂಬುದು ನನ್ನ ಮನಸ್ಸಿಗೆ ಖಂಡಿತವಾಗಿದ್ದಿತು. [illegible]

[illegible] (Chamber of Princes) [illegible]

[illegible]

ಅವರು ಈ ಸಕಷ್ಟ ಪರೀಕ್ಷೆಯಲ್ಲಿ ಜಯಶೀಲರಾಗುವಂತೆಯೂ, ಇಂಡಿಯಾ ಮತ್ತು ಇಂಗ್ಲೆಂಡ್ ಇವೆರಡು ದೇಶಗಳ ಯೋಗಕ್ಷೇಮದ ದೃಷ್ಟಿಯಿಂದಲೂ ಇವೆರಡಕ್ಕೂ ಪರಸ್ಪರವಾಗಿ ಸ್ನೇಹ ಮಮತೆಗಳಿಂದ ತುಂಬಿದ ಶಾಶ್ವತಸಂಬಂಧವು ನೆಲೆಗೊಂಡಿರುವಂತೆಯೂ, ಅನುಗ್ರಹಿಸಲೆಂದು ಭಗವಂತನನ್ನು ಪ್ರಾರ್ಥಿಸೋಣ!

ಗೃಹಕೃತ್ಯದ ನೋಟೀಸು.

ಹುಣಸೂರು ತಾಲ್ಲೂಕು ಕಸಬಾ ಹೋಬಳಿ ಮೋದೂರು ಗ್ರಾಮದ ವೀರಶೈವಮತಸ್ಥನಾದ ಚನ್ನೇಗೌಡನ ಮಗ ಸಿದ್ದೇಗೌಡನು ಈ ನೋಟೀಸಿನಿಂದ ಸಮಸ್ತರಿಗೂ ತಿಳಿಸುವದೇನೆಂದರೆ—ನನ್ನ ಅಣ್ಣನಾದ ಗತಿಸಿದ ಸಿದ್ದೇಗೌಡನ ಹೆಂಡತಿ ಲಿಂಗಮ್ಮನು ದುಷ್ಟಜನರ ದುರ್ಬೋಧೆಯಿಂದ ನಮ್ಮ ಅವಿಭಕ್ತ ಕುಟುಂಬಕ್ಕೆ ಸೇರಿದ ಷೆಡ್ಯೂಲು ಸ್ವತ್ತನ್ನು ಪರಭಾರೆ ಮಾಡಲುದ್ಯುಕ್ತಳಾಗಿರುವಳು. ಈಕೆಗೆ ನಮ್ಮ ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ಜೀವನಾಂಶದ ಹಕ್ಕುವಿನಾ ಆಧಾರ ಭೋಗ್ಯ ಕ್ರಯಗಳನ್ನು ಮಾಡಲು ಹಕ್ಕಿಲ್ಲವಾದುದರಿಂದ ಯಾರಾದರೂ ಬಾಲುಪಾರೀಕತ್ತು ಆಗದಿರತಕ್ಕ ನಮ್ಮ ಆಸ್ತಿಯನ್ನು ಆಕೆಯಿಂದ ಪಡೆದುಕೊಂಡಲ್ಲಿ ಅದು ಸಿದ್ಧವಾಗುವುದಿಲ್ಲವೆಂದು ಎಚ್ಚರಿಸಿದೆ. ಷೆಡ್ಯೂಲು—ಹುಣಸೂರು ತಾ|| ಕಸಬಾ ಹೋಬಳಿ ಮೋದೂರುಗ್ರಾಮದಲ್ಲಿರುವ (1) ಸರ್ವೆ ನಂ. 68 ಖುಷ್ಕಿ ವಿಸ್ತೀರ್ಣ 6-7 ಕಂದಾಯ 5 ರೂ. (2) ಸರ್ವೆ ನಂ. 88 ಖುಷ್ಕಿ ವಿಸ್ತೀರ್ಣ 6.23 ಕಂದಾಯ 4-8-0. (3) ಸರ್ವೆ ನಂ. 95 ಖುಷ್ಕಿ ವಿಸ್ತೀರ್ಣ 5-0 ಕಂದಾಯ 3-8-0. (4) ಸರ್ವೆ ನಂ. 163 ಬಾಗಾಯತು ವಿಸ್ತೀರ್ಣ 0-15 ಕಂದಾಯ 0-12-0. 12 ಕಂಬದ ತೊಟ್ಟಿಮನೆ ಹಿತ್ತಲು ಸಮೇತ.

ಸಿದ್ದೇಗೌಡ.

DEPARTMENT OF PUBLIC INSTRUCTION.

MYSORE LOCAL EXAMINATIONS.

Notification D. No. 75 of 31-32 9/12th April 32.

It is hereby notified for general information that owing to the fact that there is reasonable apprehension that the questions set in Geography and Elementary Science Physics and Chemistry, were known to a large number of candidates for the S. S. L. C. Public Examination held in March 1932, before the Examination, a re-examination will be held in those subjects, according to the follwing Time Table:—

Thursday the 12th May 1932.

11 A. M. to 2 P. M.	Elementary Science-I Paper Physics and Chemistry.
3 to 5 P. M.	Geography.

The marks obtained by the candidates in the re-examination in these subjects moderated in the manner provided for under the rules, will be the basis for declaring the results of the Examination.

The admission tickets issued already will be tenable for the re-examination also. All the candidates that sat for the Examination held in March 1932, will be eligible to sit for the re-examination in May in the centre where they took the Examination in March last.

M. A. NARAYANA IYENGAR,
For Director of Public Instruction.

ಪತ್ರವ್ಯವಹಾರ

ಪತ್ರವ್ಯವಹಾರಗಳ ಲೇಖಕರಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ನಿಷ್ಪಕ್ಷಪಾತವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟವಾಗಿಯೂ, ಇರಬೇಕೆಂದೂ ಬುಧವಾರ ಗುರುವಾರದೊಳಗೆ ನಮ್ಮ ಕೈಸೇರುವಂತೆ ಕಳುಹಲ್ಪಡಬೇಕೆಂದು, ಈ ನಿಬಂಧನೆಗೆ ವಿರುದ್ಧವಾದ ಲೇಖನಗಳು ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದ್ದಾಗ್ಯೂ ಲೇಖಕರು ಲಕ್ಷ್ಯವಿಡದೆ ಲಂಗಿಬಿ ತಮಗೆ ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ ಪುಟಗಟ್ಟಲೆ ಅಸ್ಫುಟವಾಗಿ ಬರೆದು ನಮಗೆ ತ್ರಾಸನ್ನು ಕೊಡುತ್ತಿರುವರೆಂದು ಬರೆಯಲು ಖೇದವಾಗುತ್ತದೆ. ಅದುಕಾರಣ ಇತಃಪರ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಮಸ್ತರೂ ಗಮನಿಸತಕ್ಕದು—ಸಂ.

ಶ್ರೀರಾಮಕೃಷ್ಣ ವಿದ್ಯಾರ್ಥಿ ನಿಲಯ, ಮೈಸೂರು.

ಮುಂದಿನ ಜೂನ್ ತಿಂಗಳಿನಿಂದ ಮೈಸೂರು ಶ್ರೀರಾಮಕೃಷ್ಣಾಶ್ರಮದವರು, ಒಂಟಿಕೊಪ್ಪಲಿನಲ್ಲಿ 1 ವಿದ್ಯಾರ್ಥಿನಿಲಯವನ್ನು ಏರ್ಪಡಿಸುವರು. ವಿದ್ಯಾರ್ಥಿಗಳ ನಡತೆ ಮತ್ತು ಆರೋಗ್ಯಗಳ ಶಿಕ್ಷಣಕ್ಕೆ ಈ ನಿಲಯದಲ್ಲಿ ಹೆಚ್ಚುಗಮನಕೊಡಲಾಗುತ್ತದೆ. ವಿದ್ಯಾರ್ಥಿಗಳು ಸುಶೀಲರಾಗಿ, ಸ್ವಾವಲಂಬಿಗಳಾಗಿ ಬೆಳೆಯಲು ಬೇಕಾದ ಸನ್ನಿವೇಶವನ್ನುಂಟುಮಾಡುವುದೇ ಆಶ್ರಮದ ಧ್ಯೇಯವು. ನಿಲಯದ ಒಟ್ಟುಖರ್ಚನ್ನು ವಿದ್ಯಾರ್ಥಿಗಳೆಲ್ಲರಿಗೂ ಸಮವಾಗಿ ಹಂಚಲಾಗುತ್ತದೆ. ತಮ್ಮ ಮಕ್ಕಳನ್ನು ನಿಲಯಕ್ಕೆ ಸೇರಿಸಲು ಇಷ್ಟಪಡುವವರು ಮೈಸೂರು ಒಂಟಿಕೊಪ್ಪಲಿನಲ್ಲಿರುವ ಶ್ರೀರಾಮಕೃಷ್ಣಾಶ್ರಮದ ಕಾರ್ಯದರ್ಶಿಗಳಿಗೆ ಬರೆದುಕೊಳ್ಳಬೇಕು. ನಿಲಯದ ನಿಯಮಗಳೂ, ಅಪ್ಲಿಕೇಷನ್ ಫಾರಂಗಳೂ 1 ಆಣೆ ಸ್ಟಾಂಪು ಕಳುಹಿಸಿದವರಿಗೆ ದೊರಕುತ್ತವೆ. ಮೇ ತಾ|| 15 ರೊಳಗಾಗಿ, ಅಪ್ಲಿಕೇಷನ್ ಫಾರಂಗಳು ಆಶ್ರಮಕ್ಕೆ ತಲುಪಬೇಕು. ಎಲ್ಲರೂ ಈ ಘನ ಉದ್ದೇಶಸಾಧನೆಯಲ್ಲಿ ಸಹಾಯಕರೂ, ಭಾಗಿಗಳೂ ಆಗುವರೆಂದು ನಂಬಿದ್ದೇವೆ.

ಶ್ರೀರಾಮಕೃಷ್ಣಾಶ್ರಮ, ಮೈಸೂರು.

ವಿದ್ಯಾರ್ಥಿ ವಸತಿ ಮತ್ತು ಪ್ರಸಾದ ವ್ಯವಸ್ಥೆ.

ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಫ್ರೀ ಬೋರ್ಡಿಂಗ್ ಹಾವೇರಿಪೇಟೆ ಧಾರವಾಡ ಈ ಸಂಸ್ಥೆಗೆ ಪ್ರತಿ ವರ್ಷದಂತೆ ಕೆಳಗೆ ಕಂಡಯಾದಿ ಪ್ರಕಾರ ಧಾರವಾಡ ಸೆಂಟರಿಗೆ ಮುಲ್ಕಿ ಮತ್ತು ಮ್ಯಾಟ್ರಿಕ್ ಪರೀಕ್ಷೆಗಳಿಗೆ ಬಂದ [illegible] 1932 [illegible]

[illegible]

ಲಿಂಗವಂತ 224 ಕುರುಬ 26 ಮುಸಲ್ಮಾನ 18 ತಳವಾರ 21 ರಡ್ಡಿ 15 ವಾಣಿಕ 7 ತಬ್ಬಿಲ 7 ಅಗಸರು 6 ಮರಾಠಾ 4 ಬಾರಕೇರ 4 ನಡ್ಡಿಗರ 4 ಗೊಲ್ಲರು 4 ಹೊಲೆಯ 4 ಕ್ಷತ್ರಿಯ 2 ಪಡಸರ 1 ಲವಾಣಿ 1 ಕೊರಗರ 1 ಪಟೆಗಾರ 1 ಉಪಾರ 1 ಈಳಿಗರ 1

ಮ್ಯಾಟ್ರಿಕ್ಯುಲೇಷನ್ ಪರೀಕ್ಷೆಗೆ ಬರುವವರು.

ವೀರಶೈವರು 50 ಇತರರು 3 ಒಟ್ಟು 53

ನಂಜನಗೂಡು ವಿಚಾರಗಳು.

[illegible]

ಕಾಶಿಯ ಜಗದ್ಗುರು ಮುರುಘಾಮಠದ ಫ್ರೀ ಬೋರ್ಡಿಂಗಿಗೆ ಗುಬ್ಬಿ ನಾಟಕ ಕಂಪೆನಿಯವರ ಸಹಾಯ.

ಕಳೆದ ಮಾರ್ಚಿ ತಾ|| 17 ನೆಯ ಭಾನುವಾರ ದಾವಣಗೆರೆಯ ಧನಲಕ್ಷ್ಮೀ ಥಿಯೇಟರಿನಲ್ಲಿ ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕಮಂಡಳಿಯ ಕಾಯಾಮಂಡಳಿಯು ಶ್ರೀಕೃಷ್ಣ ಪಾರಿಜಾತ ನಾಟಕವನ್ನು ಅಭಿನಯಿಸಿ ಅದರಿಂದ ಬಂದ 400 ರೂ. ಗಳನ್ನು ಶ್ರೀ ಕಾಶೀ ಮಹಾಕ್ಷೇತ್ರದಲ್ಲಿ ಸ್ಥಾಪಿತವಾಗಿರುವ ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘಾಮಠದ ಜಯದೇವ ಫ್ರೀ ಬೋರ್ಡಿಂಗಿನ ಫಂಡಿಗೆ ಉಚಿತವಾಗಿ ಕೊಟ್ಟರೆಂದು ಬರೆಯಲು ಅತ್ಯಂತ ಸಂತೋಷವಾಗುತ್ತದೆ. ಈ ನಾಟಕ ಮಂಡಲಿಯವರು ತಾವು ಸಂಚರಿಸಿದ ಸ್ಥಳಗಳಲ್ಲೆಲ್ಲಾ ಧರ್ಮಸಂಸ್ಥೆಗೆ ದ್ರವ್ಯ ಸಹಾಯ ಮಾಡುತ್ತಿರುವುದು ಶ್ಲಾಘನೀಯವೂ ಮಾರ್ಗದರ್ಶಕವೂ ಆಗಿರುತ್ತದೆ. ಕಾಶಿಯ ಶ್ರೀ ಜಯದೇವ ಬೋರ್ಡಿಂಗ್ ಕಮಿಟಿಯವರ ಪರವಾಗಿ ದಾವಣಗೆರೆ ಸಬ್‌ಡಿವಿಜನ್ ಸಾಹೇಬರಾದ ಮ|| ಎಚ್. ಸುಬ್ಬರಾಯರು ಸುವರ್ಣಪದಕವನ್ನು ನಾಟಕಮಂಡಳಿಯವರಿಗೆ ಬಹುಮಾನಿಸಿ ಮಂಡಳಿಯವರನ್ನು ವಂದಿಸಿದರು. ಈ ಕಂಪೆನಿಯ ಮಾಲೀಕರಾದ ವಿನೋದರತ್ನಾಕರ ಜಿ. ಹೆಚ್. ವೀರಣ್ಣನವರು ರಾಜಮಾನ್ಯರಾಗಿರುವಂತೆ ಸರಳಸ್ವಭಾವ ಮತ್ತು ಔದಾರ್ಯಾದಿ ಗುಣಗಳಿಂದ ದೇಶಮಧ್ಯದಲ್ಲಿ ಪ್ರಜಾಮಾನ್ಯರೂ ಆಗಿರುವರು. ಇವರ ಆಶ್ರಯದಿಂದ ಕರ್ನಾಟಕದಲ್ಲಿ ಸಂಗೀತ ಸಾಹಿತ್ಯಕ್ಕೆ ಕಳೆಯುಂಟಾಗಿದೆ. [illegible] ದಾಗಿದೆ. ಆದ್ದರಿಂದ ಇದರ ಪುರೋಭಿವೃದ್ಧಿಗಾಗಿ ಮೊದಲಿನಿಂದಲೂ ಅವಿಶ್ರಾಂತ ಶ್ರಮಪಡುತ್ತಿರುವ ಶ್ರೀ|| ಸಿ. ವಿರಜಿ ಗುರುಶಾಂತಸ್ವಾಮಿಗಳವರಿಗೆ ಈ ಪ್ರಾಂತದ ಉದಾರಿಗಳು ನಾಟಕಶಿರೋಮಣಿ ವೀರಣ್ಣನವರಂತೆ ಹೆಚ್ಚಾಗಿ ಸಹಾಯ ಪ್ರೋತ್ಸಾಹಗಳನ್ನು ಕೊಟ್ಟು ಪುಣ್ಯಭಾಗಿಗಳಾಗಲು ಕೋರಿಕೆ.

ಪ್ರತ್ಯಕ್ಷದರ್ಶಿ.

ಶಿಖಾಧಾರಣ ಪ್ರಶ್ನೆಗೆ ಉತ್ತರ.

ಕೆಲ ಮಹತ್ವಪ್ರಶ್ನಗಳೆಂಬ ಅಂಕಿತದಿಂದ ಏಪ್ರಿಲ್ ತಾ|| 4 ನೆಯ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಇವರು ಕೇಳಿರುವ ಪ್ರಶ್ನೆಗಳ ಪೈಕಿ ವೀರಶೈವರು ಜುಟ್ಟು ಬಿಡಿಸಬೇಕೋ ಬ್ಯಾಡವೋ ಎಂಬ ಪ್ರಶ್ನೆಗೆ ಉತ್ತರ—

ಶ್ಲೋ|| "ಶಿಖಾಹೀನಸ್ಯ ಭಕ್ತಾನಾಂ ನಚವಕ್ತ್ರಾವಲೋಕನಂ"

ಜುಟ್ಟು ಇಲ್ಲದ ಭಕ್ತರ ಮುಖವನ್ನು ನೋಡಬಾರದೆಂದು ಪಾರಮೇಶ್ವರಾಗಮ ಬೋಧಿಸುತ್ತಿರುವುದು.

ಶ್ಲೋ|| ಮಹೇಶಮಂತ್ರಹೃದಿಧ್ಯಾನಂ ಮಸ್ತಕೇಲಿಂಗಧಾರಣಂ ಶಿಖಾ ರುದ್ರಾಕ್ಷಭಸ್ಮಾನಿ ಇತಿ ಬ್ರಾಹ್ಮಣ ಲಕ್ಷಣಂ"

ಈ ರೀತಿ ವೀರಶೈವ ಬ್ರಾಹ್ಮಣನು ಜುಟ್ಟನ್ನು ಬಿಡಿಸೇತೀರಬೇಕೆಂದು ಗೌತಮ ಸ್ಮೃತಿಬೋಧಿಸುತ್ತಿರುವುದು.

ಶ್ಲೋ|| "ಬ್ರಾಹ್ಮಣಾ ವೀರಶೈವಸ್ಥಾ ಶಿಖಾಯಜ್ಞೋಪವೀತಿನಃ ಲಿಂಗ ರುದ್ರಾಕ್ಷಭಸ್ಮಾಂಕಾಂ ಬ್ರಹ್ಮಕರ್ಮ ಸದಾವ್ರತಿ"

ಈ ಬ್ರಾಹ್ಮಣನೆಂಬ ವೀರಶೈವನು ಜುಟ್ಟನ್ನು ಬಿಡಿಸೇತೀರಬೇಕೆಂದು ಶಿವರಹಸ್ಯವು ಬೋಧಿಸುತ್ತಿರುವುದು.

"ಬದ್ಧಶಿಖಂಕುಮಾರಂ" ಜುಟ್ಟನ್ನು ಕಟ್ಟಿಕೊಂಡಿರುವ ತನ್ನ ಮಗನನ್ನು ಎಂದು ದೀಕ್ಷಾವಿಧಿಯು ಬೋಧಿಸುತ್ತಿರುವುದು.

"ಶಿಖಾಯೈವಷಟ್" ಅಂದರೆ ದೀಕ್ಷೆಯಾಗತಕ್ಕ ಕಾಲದಲ್ಲಿ ಮತ್ತು ಪ್ರತಿ ದಿನ ಶಿವಪೂಜೆ ಕಾಲದಲ್ಲಿ ಅಂಗನ್ಯಾಸಮಾಡುವಾಗ ಹಸ್ತದಿಂದ ಜುಟ್ಟನ್ನು ಸ್ಪರ್ಶಮಾಡಬೇಕೆಂದು ದೀಕ್ಷಾವಿಧಿಯೂ ವಿವೇಕಚಿಂತಾಮಣಿಯೂ ಬೋಧಿಸುತ್ತಿರುವವು.

"ಕಟ್ಟು ಇಲ್ಲದ ಕೆರೆಯು | ಮುಟ್ಟು ಇಲ್ಲದ ನಾರಿ || ಜುಟ್ಟು ಇಲ್ಲದ ನರನಾಯ ಇವು ಮೂರ | ಮುಟ್ಟದಿರೆಂದ ಸರ್ವಜ್ಞ"

ಜುಟ್ಟನ್ನು ಖಂಡಿತವಾಗಿ ಬಿಡಿಸೇತೀರಬೇಕೆಂದು ಸರ್ವಜ್ಞಮೂರ್ತಿಯು ಬೋಧಿಸಿರುವನು. ಆದ್ದರಿಂದ ಶಿವಭಕ್ತರೆಂಬವರೆಲ್ಲರೂ ಜುಟ್ಟನ್ನು ಬಿಡಿಸಲೇಬೇಕು. ಅಂದರೆ ಭಕ್ತರೆಂತಲೂ, ಲಿಂಗವಂತರೆಂತಲೂ, ಲಿಂಗಧಾರಕರೆಂತಲೂ, ಶಿವಭಕ್ತರೆಂತಲೂ, ವೀರಶೈವರೆಂತಲೂ, ವೀರಶೈವ ಬ್ರಾಹ್ಮಣರೆಂತಲೂ ಲಿಂಗಿಬ್ರಾಹ್ಮಣಂಗೆ ಇವೆಲ್ಲಾ ಪರ್ಯಾಯನಾಮಗಳೆಂದು ತಿಳಿಯಬೇಕು.

ಕಂಪ್ಲಿ ಮಠದ ರುದ್ರಯ್ಯ, ತರೀಕೆರೆ.

ಬಂಡಯ್ಯನವರ ಸ್ಮಾರಕಧರ್ಮ.

ಸಾಹುಕಾರ್ ವಿ. ಬಂಡಯ್ಯನವರು ನಂಜನಗೂಡಿನಲ್ಲಿ ಭಾರಿ ವ್ಯಾಪಾರಿಗಳೂ, ಕಂಟ್ರಾಕ್ಟರೂ ಆಗಿದ್ದರಲ್ಲದೆ ಸುಮಾರು 20 ವರ್ಷಗಳಕಾಲ ಅವಿಚ್ಛಿನ್ನವಾಗಿ ರೆಪ್ರಜೆಂಟಟಿವ್ ಅಸೆಂಬ್ಲಿ, ಮೈಸೂರು ಡಿ|| ಬೋರ್ಡು ಹಿಂದಿದ್ದ ನಂಜನಗೂಡು ತಾಲ್ಲೂಕು ಬೋರ್ಡು, ಹಾಲಿ ಮ್ಯುನಿಸಿಪಾಲಿಟಿ ಇವುಗಳ ಮೆಂಬರಾಗಿಯೂ, ಕೆಲಕಾಲ ನಂಜನಗೂಡಿನ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾಗಿಯೂ ಇದ್ದು ಶ್ರದ್ಧೆಯಿಂದ ಕೆಲಸಮಾಡಿ ಜನರ ಪ್ರೀತಿ ವಿಶ್ವಾಸಗಳನ್ನು ಪಡೆದು ಮಾನ್ಯರಾಗಿದ್ದರು. ಇವರಿಗೆ ಸಂತಾನವಿಲ್ಲ. ತಮ್ಮ ಜೀವಿತಕಾಲದಲ್ಲಿ ಬಹುವಿಧ ಪರೋಪಕಾರಿಗಳಾಗಿದ್ದುಕೊಂಡು, ಕೆಲವು ಶಾಶ್ವತ ಧರ್ಮಗಳನ್ನು ಮಾಡಬೇಕೆಂದು ನಿಶ್ಚಯಿಸಿದ್ದರು. ನಂಜನಗೂಡಿನಲ್ಲಿ ಗೌರೀಕಟ್ಟದ ಹತ್ತಿರ ಶಿಥಿಲವಾಗಿದ್ದ ಕಲ್ಲುಮಂಟಪವನ್ನು ಬಹುಶಾಗೋದಿನಿಂದ ಅದರ ಜೀರ್ಣೋದ್ಧಾರಮಾಡಿ ವರ್ಷಂಪ್ರತಿ ದೊಡ್ಡ ರಥೋತ್ಸವ ಕಾಲದಲ್ಲಿ 3 ದಿವಸಗಳು ಅವಿಚ್ಛಿನ್ನವಾಗಿ ಬಂದ ಆಗಂತುಕರಿಗೆ ಆಹಾರವಾಗಿ ಅನ್ನದಾನ ಮಾಡಿಸುತ್ತಿದ್ದರು. ಇದಕ್ಕಾಗಿ ಅವರು ನಂಜನಗೂಡಿನ ಕಸಬಾ [illegible]

[illegible] ತ್ತಿದ್ದಾರೆ. ಅಲ್ಲದೆ ಜೋಳಿ ದೇವರಿಗೆ ಒಂದು ಹಂದೋಲನವನ್ನು ಅರ್ಪಿಸಲು ಏರ್ಪಡಿಸಿರುತ್ತಾರೆ. ಮಹಾ ಸನ್ನಿಧಾನದ ಶ್ರೀ ಅಮ್ಮಣ್ಣಿ ಅಮ್ಮನವರಿಗೆ 1 ಸಾವಿರ ಬಂಗಾರದ ಜತೆ ಆಭರಣವನ್ನು ಸಮರ್ಪಿಸಲು ಸಿದ್ಧಗೊಳಿಸಿದ್ದಾರೆ. ತಮ್ಮ ಯಜಮಾನರು ಜೀವಿತಕಾಲದಲ್ಲಿ ಉದ್ದೇಶಿಸಿದ್ದಂತೆ, ಮೈಸೂರಿನಲ್ಲಿ ಸ್ಥಾಪಿತವಾಗಿರುವ ಕುಂಚಿಟಿಗರ ಸಂಘಕ್ಕೆ 10 ಸಾವಿರ ರೂ. ಗೆ ಮಿಗಿಲಾಗಿ ಬಾಳುವ ತಮ್ಮ ವಾಸದ 2 ದಿವ್ಯವಾದ ಕಟ್ಟಡಗಳನ್ನು, ಅನಾಥ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ದಾನಪತ್ರಮುಖೇನ ವಹಿಸಿರುತ್ತಾರೆ. ಕಳೆದವಾರ ಅನಾಥ ಮಕ್ಕಳ ವಿವಾಹ ಒಂದನ್ನು ಉಚಿತರೀತಿಯಲ್ಲಿ ತಮ್ಮ ಸ್ವಂತ ಖರ್ಚಿನಿಂದ ಬಹು ಸಂತೋಷಕರವಾಗಿ ನೆರವೇರಿಸಿದರು. ಇದೇ ಪ್ರಕಾರ ಇನ್ನೂ ಹಲವು ವಿಧವಾದ ಧರ್ಮಕಾರ್ಯಗಳನ್ನು ದೃಗ್ಗೋಚರವಿಲ್ಲದಂತೆ ನಿರಭಿಮಾನದಿಂದ ನಡೆಸುತ್ತಿರುತ್ತಾರೆ. ಇಂಥ ಧರ್ಮಿಷ್ಠರಿಗೆ ಶ್ರೀ ಶ್ರೀಕಂಠೇಶ್ವರನು ನಿತ್ಯ ಕಲ್ಯಾಣವನ್ನೂ ಅವರ ಮೃತಪತಿಗಳ ಆತ್ಮಕ್ಕೆ ನಿತ್ಯಶಾಂತಿಯನ್ನೂ ಉಂಟುಮಾಡಲೆಂದು ಅನನ್ಯಭಕ್ತಿಭಾವದಿಂದ ಪ್ರಾರ್ಥಿಸುತ್ತೇನೆ.

ಎಂ. ಸಿ. ನರಸಿಂಹಯ್ಯ.

ಪೇರೆಂಟ್ಸ್‌ಡೇ.

ನೆಲಮಂಗಲ ತಾ|| ಗೊಲ್ಲಹಳ್ಳಿ ಪ್ರೈಮರಿ ಬಾಯ್ಸ್‌ಸ್ಕೂಲ್ II ಪೇರೆಂಟ್ಸ್‌ಡೇ ಉತ್ಸವವು ಬೆಂಗಳೂರು ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರಾದ ಮ|| ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ತಾ|| 8-4-1932 ನೇ ಸಾಯಂಕಾಲ 3 ಘಂಟೆಗೆ ಸದರಿ ಸ್ಕೂಲು ಕಟ್ಟಡದಲ್ಲಿ ನೆರವೇರಿಸಲ್ಪಟ್ಟಿತು. ಬೆಂಗಳೂರು ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರಾದ ಮ|| ಕೆ. ಟಿ. ಸುದರ್ಶನಂ ಅಯ್ಯಂಗಾರ್‌ರವರು, ನೆಲಮಂಗಲದ ರೇಂಜ್ ಅ|| ಇನ್|| ಸಾಹೇಬರವರು ಮತ್ತು ನೆಲಮಂಗಲದ ತಾಲ್ಲೂಕು ಕೆಲವು ಸರ್ಕಾರಿ ಉದ್ಯೋಗಸ್ಥರು ಇತರ ಅನೇಕ ದೊಡ್ಡಮನುಷ್ಯರು ಸಹ ದಯಮಾಡಿಸಿದ್ದರು. ಸಾಯಂಕಾಲ 3 ಘಂಟೆಗೆ ಸರಿಯಾಗಿ ಅಧ್ಯಕ್ಷರು ದಯಮಾಡಿಸಿದ ಅನಂತರ ಅಂದಿನ ಕಾರ್ಯಕ್ರಮವು ಪ್ರಾರಂಭವಾಯಿತು. ದೇವರ ಪ್ರಾರ್ಥನೆಯಾದನಂತರ ಸ್ಕೂಲು ರಿಪೋರ್ಟನ್ನು ಓದಲಾಯಿತು. ಅನೇಕ [illegible]

ಪ್ರತ್ಯಕ್ಷದರ್ಶಿ.

ಶ್ರೀಮದ್ವೀರಶೈವ ವಾರದ ಸಂಸ್ಕೃತಪಾಠಶಾಲೆಯ ೫೫ನೇ ವರ್ಷದ ವರ್ಧಂತ್ಯುತ್ಸವ, ಸೊಲ್ಲಾಪೂರ.

ಪರಮಾತ್ಮನು ಆಯಾ ಕಾಲಗಳಲ್ಲಿ ತಾನೂ, ತನ್ನ ಪ್ರಮಥಪುಂಗವರೂ, ಅನೇಕ ರೂಪುಗಳಿಂದ ಅವತರಿಸಿ ನಮ್ಮ ವೀರಶೈವ ಸಮಾಜವನ್ನುದ್ಧರಿಸುತ್ತ ಬಂದಿರುವರೆಂಬುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ. ಅದರಂತೆಯೇ ಒಂದು ಕಾಲದಲ್ಲಿ ಅಂದರೆ, ಸುಮಾರು ಕ್ರಿ. ಶ. 1800 ವರ್ಷಗಳ ಹಿಂದೆ ನಮ್ಮ ವೀರಶೈವಮತವು ಧರ್ಮ ತತ್ವಗಳನ್ನರಿಯದೆ ಅಜ್ಞಾನಾಂಧಕಾರದಲ್ಲಿ ಮುಳುಗುತ್ತ ಇದ್ದಿತು. ವಿಶೇಷತಃ ಮಹಾರಾಷ್ಟ್ರದಲ್ಲಂತೂ ವೀರಶೈವರ ನಡಾವಳಿಯೇ ಗುರ್ತಿರಲಿಲ್ಲ. ಹೆಚ್ಚಿಗೇನು ? ನಾಗಪೂರು ಮೊದಲಾದ ಮಧ್ಯ ಪ್ರಾಂತದಲ್ಲಂತೂ "ವೀರಶೈವ" ಎಂಬ ಹೆಸರಾದರೂ ಗುರ್ತಿರಲಿಲ್ಲವೆಂದು ಹೇಳಿದರೂ ಅತಿಶಯೋಕ್ತಿಯಾಗಲಾರದು. ಇಂಥ ವಿಷಮಪರಿಸ್ಥಿತಿಯಲ್ಲಾದರೂ ಸಮಾಜದ ಗುರುಗಳೆನ್ನಿಸಿಕೊಳ್ಳುವವರೂ, ಪರಮ ಪೂಜ್ಯರೂ, ಆದ ಪೀಠಾಧಿಪತಿಗಳೂ ಸ್ವಸ್ಥವಾಗಿ ಮಲಗಿಯೇ ಬಿಟ್ಟಿದ್ದರೆಂದರೂ ಅಯೋಗ್ಯವಾಗಲಾರದು. ಯಾಕೆಂದರೆ, ಆಗಿನ ಕಾಲದ ಮಠದ ಪಟ್ಟಚರಮೂರ್ತಿಗಳಿಗು ಕೂಡ ತಂತಮ್ಮ ಗೋತ್ರಸೂತ್ರಗಳು ಚೆನ್ನಾಗಿ ಗುರ್ತೇ ಇರಲಿಲ್ಲ ಅಥವಾ ಅವುಗಳನ್ನು ತಿಳುಹಿಸುವ ಧರ್ಮಗ್ರಂಥಗಳಾದರೂ ವಿಶೇಷ ಸಿಗುತ್ತಿರಲಿಲ್ಲ. ಎಲ್ಲಾದರೂ ಅಲ್ಪಸ್ವಲ್ಪ ಸಿಕ್ಕಿದರೆ ಕರ್ನಾಟಕದಲ್ಲಿಯೇ ಸಿಗುತ್ತಿದ್ದವು. ಇಂಥ ವಿಷಮಪರಿಸ್ಥಿತಿಯನ್ನವಲೋಕಿಸಿ ನಮ್ಮ ವೀರಶೈವ ಧರ್ಮದಲ್ಲಿರುವ ಕುಂದುಕೊರತೆಗಳನ್ನು, ಅದಷ್ಟು ದೂರಮಾಡಲು ಬದ್ಧಕಂಕಣರಾದ ಶ್ರೀಮಂತ ಕೈ|| ರಾ|| ಅ|| ಮಲ್ಲಪ್ಪ ಬಸಪ್ಪ ಉರ್ಫ್ ಅಪ್ಪಾಸಾಹೇಬ ವಾರದ ಸೊಲ್ಲಾಪುರ ಇವರು ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿ ಅನೇಕ ಪ್ರಯತ್ನಗಳಿಂದ [illegible]

ಕೋರಣಗಳಿಂದಲೂ, ವಿದ್ಯುದ್ದೀಪಗಳಿಂದಲೂ ಅಲಂಕೃತವಾದ ಮಂದಿರದಲ್ಲಿಯೇ ಇಲ್ಲಿಯ ಸುಪ್ರಸಿದ್ಧ ಬ್ಯಾರಿಸ್ಟರ ಮಡಿವಾಳೇಶ್ವರ ಶಿವಶಂಕರ ಸರದಾರ ಇವರ ಅಧ್ಯಕ್ಷತೆಯ ಕೆಳಗೆ ಸಭೆಯು ನೆರವೇರಿಸಲ್ಪಟ್ಟಿತು. ಪ್ರಥಮತಃ ಪಾಠಶಾಲೆಯ ವಿದ್ಯಾರ್ಥಿಗಳು ಸರಸ್ವತೀದೇವಿಯ ಸ್ತುತಿಯನ್ನು ಮಾಡಿದನಂತರ ಪದ್ಧತಿಪ್ರಕಾರ ಅಧ್ಯಕ್ಷರನ್ನು ಆರಿಸಿದಮೇಲೆ ಈ ಪಾಠಶಾಲೆಯ ವ್ಯವಸ್ಥಾಪಕರಾದ ಮಲ್ಲಿಕಾರ್ಜುನಪ್ಪ ಅಪ್ಪಾರಾವ ಪಾಟೀಲ ಇವರು ವಾರದ ಪಾಠಶಾಲೆಯ ರಿಪೋರ್ಟನ್ನು ಓದಿ ಹೇಳಿದರು. ಆಮೇಲೆ [illegible]

[illegible]

ವರು ಆಗಾಗ್ಗೆ ಬಹು ಧಾರಾಳವಾಗಿ ಮಾಡುತ್ತಿರುವ ಧನಸಹಾಯಕ್ಕಾಗಿಯೂ, ತಮ್ಮ ಜನಾಂಗದ ಶಾಂತಿ ಸುಖಸಂಪತ್ತುಗಳಲ್ಲಿ ಸದಾ ಕಾಂಕ್ಷೆಯುಳ್ಳವರಾಗಿರುವುದಕ್ಕಾಗಿಯೂ ಶ್ರೀ ರಾಣಿಯವರನ್ನು ಬಹಳವಾಗಿ ವಂದಿಸಿದರು.

ಗುರುಶಾಂತಪ್ಪ.

ನೆಲ್ಯಾಳಂ ಶ್ರೀ ರಾಣೀ ಚೌರಮ್ಮಣ್ಣಿಯವರ ದಿವ್ಯಸನ್ನಿಧಿಯಲ್ಲಿ ಮಧುವನಹಳ್ಳಿ ಶ್ರೀ ಜಗದ್ಗುರು ಪಂಚಾಚಾರ್ಯವಾಚನಾಲಯದ ಸದಸ್ಯರುಗಳು ವಿನಯಪೂರ್ವಕ ಒಪ್ಪಿಸಿದ ಬಿನ್ನವತ್ತಳಿಕೆ.

ರಾಜ್ಞೀಯವರೇ,

ಈ ವಾಚನಾಲಯದ ವಾರ್ಷಿಕ ಸಮಾರಂಭಕ್ಕೆ ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿ ತಾವು ದಯಮಾಡಿಸಿದುದಕ್ಕೆ ತಮ್ಮಲ್ಲಿ ನಮ್ಮ ಕೃತಜ್ಞತೆಯನ್ನು ಸೂಚಿಸುತ್ತೇವೆ ಮತ್ತು ನಮ್ಮ ವಿಜ್ಞಾಪನಾಪತ್ರಿಕೆಯನ್ನು ತಮ್ಮಲ್ಲಿ ಒಪ್ಪಿಸುವ ಲಭ್ಯ ದೊರೆತುದು ನಮ್ಮ ಭಾಗ್ಯವಿಶೇಷವೆಂದು ಭಾವಿಸುತ್ತೇವೆ. ತಾವು ನಮ್ಮ ಗ್ರಾಮದಲ್ಲಿ ಅದರಲ್ಲೂ ನಮ್ಮ ವೀರಶೈವ ಸಮಾಜದಲ್ಲಿ ಜನಿಸಿ, ರಾಜ್ಞೀಪದವಿಯನ್ನು ಹೊಂದಿರುವುದರಿಂದುಂಟಾದ ನಮ್ಮ ಸಂತೋಷವನ್ನು ಇಷ್ಟೆಂದು ಹೇಳಲಾರದವರಾಗಿದ್ದೇವೆ.

ತಾವು ಈ ವೀರಶೈವ ಸಮಾಜದ ಹಾಗೂ ನಮ್ಮ ಗ್ರಾಮದ ಪುರೋಭಿವೃದ್ಧಿಯ ಬಗ್ಗೆ ತೋರಿಸುತ್ತಿರುವ ಆದರ-ಅಭಿಮಾನಗಳು ಮಿಗಿಲಾದುವು. ಕೊಳ್ಳೇಗಾಲದ ತಾಲ್ಲೂಕಿನಿಂದ ಬರುವ ವಿದ್ಯಾರ್ಥಿಗಳಿಗಾಗಿ ಮೈಸೂರು ಲಿಂಗಾಯತ ವಿದ್ಯಾಭಿವೃದ್ಧಿ ಫಂಡಿಗೆ ಮಾಡಿರುವ ಧನಸಹಾಯವು ಇದನ್ನು ನಿದರ್ಶಿಸಲು ಸಾಕಾಗಿದೆ. ನಮ್ಮ ಸಮಾಜದ ಎಲ್ಲ ಶ್ರೀಮಂತರೂ ಈ ರೀತಿ ಸತ್ಕಾರ್ಯದಲ್ಲಿ ತಮ್ಮ ಐಶ್ವರ್ಯವನ್ನು ವಿನಿಯೋಗಿಸಿ ಕೃತಕೃತ್ಯರಾಗಲು ತಾವು ಮಾರ್ಗತೋರಿಸಿಕೊಟ್ಟಿರುವಿರೆಂದರೆ ಅತಿಶಯೋಕ್ತಿಯಾಗದು.

ಹತ್ತನೆಯ ವೀರಶೈವ ಮಹಾಸಭೆಯು ಬೆಂಗಳೂರಿನಲ್ಲಿ ಜರುಗಿದ ವೇಳೆಯಲ್ಲಿ ರಾಜ್ಞೀಸ್ಥಾನದಲ್ಲಿರುವ ತಾವು ಸಭೆಯನ್ನಲಂಕರಿಸಿ ನವಕಳೆಯನ್ನುಂಟುಮಾಡಿದುದಲ್ಲದೆ ಸಹಸ್ರಾರು ರೂಪಾಯಿಗಳ ವೆಚ್ಚದಿಂದ ತಾವು ಮಾಡಿಸಿದ ಸತ್ಕಾರವು ಜ್ಞಾಪಕದಲ್ಲಿಡತಕ್ಕುದಾಗಿದೆ.

ತಮ್ಮಲ್ಲಿರುವ ಧರ್ಮಶ್ರದ್ಧೆ, ಮತವಾತ್ಸಲ್ಯ, ಸರ್ವಸಮತಾಭಾವ, ಪ್ರಾಣಿದಯೆ ಮುಂತಾದ ಸುಗುಣಗಳು ನಮಗೆ ಮಾತ್ರವಲ್ಲದೆ ಸರ್ವರಿಗೂ ಆದರ್ಶವಾಗಿವೆ ಒಂದೇ ಮಾತಿನಲ್ಲಿ ಹೇಳುವುದಾದರೆ ತಮ್ಮ ಚರಿತೆಯು ಸುವರ್ಣಾಕ್ಷರಗಳಿಂದ ಬರೆದಿಡಲು ಯೋಗ್ಯವಾಗಿದೆ.

ಅಮ್ಮಣ್ಣಿಯವರೇ,

[illegible]

ಶ್ರೀ ಜಗದ್ಗುರು ಪಂಚಾಚಾರ್ಯ ವಾಚನಾಲಯದ ಸದಸ್ಯರು.

ಭಗವಾನ್ ಶ್ರೀ ಬಸವೇಶ್ವರಜಯಂತಿ.

(ಲೇಖಕ—[illegible])

[illegible]

816 ವರುಷಗಳಾದವು. ಈ ಮಹಾನುಭಾವನ ಜಯಂತಿಯು ಇದೇ ಮೇ ತಾ|| 8 ನೇ ಭಾನುವಾರ ಇಂಡಿಯಾದೇಶದ ಎಲ್ಲಾ ಪ್ರದೇಶಗಳಲ್ಲಿಯೂ ನಡೆಯುತ್ತದೆ. ಉಚ್ಚ ನೀಚಭಾವಗಳನ್ನು ತಪ್ಪಿಸಿ ವಿರ್ಮಲಾಚಾರದ್ವಾರ ಪತಿತರನ್ನು ಮೇಲಕ್ಕೆತ್ತಿ ಲೋಕೋದ್ಧಾರವನ್ನು ಮಾಡಿ ಅಸಂಖ್ಯಾತ ವಿದ್ವಾಂಸರಿಂದಲೂ, ಶಿವಶರಣರಿಂದಲೂ ಗುರುಬಸವನೆಂದು ಹೊಗಳಿಸಿಕೊಳ್ಳಲ್ಪಟ್ಟ ನಮ್ಮ ಶ್ರೀ ಬಸವಸ್ವಾಮಿಯ ಜಯಂತಿಯನ್ನು ಸಕಲ ವೀರಶೈವರೂ ಆಚರಿಸಬೇಕು. ಈ ಜಯಂತಿಯ ದಿನ ಪ್ರತಿಯೊಬ್ಬ ವೀರಶೈವನೂ ಹಬ್ಬ [illegible]

[illegible]

ಹೇ! ವೀರಶೈವರೆ, ಹೇ!! ಲೋಕದ ಎಲ್ಲ ಮಾನವರೇ! [illegible]

[illegible]

ಬಸವೇಶ್ವರನ ಹೃದಯವು ಹೇಗೆ ದೊಡ್ಡದೋ ಆತನ ಕಾರ್ಯವೂ ಹಾಗೆಯೇ ದೊಡ್ಡದು. [illegible]

[illegible]

ರಕ್ಕಿಸಿಯನ್ನು ಕೊಂಡರು. [illegible] ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ [illegible]

[illegible]

ಸ್ತುತಿಮಾಡಿದಂತ ಅನಂತಾನಂತ ಕೋವಿದರ ಹೆಸರನ್ನು ಇಲ್ಲಿ ಬರೆಯುವದಕ್ಕಾಗುವದಿಲ್ಲ. ಇಂಥಾ ಮಹಾಮಹಿಮನಾದ ಶ್ರೀಬಸವೇಶ್ವರನ ಜಯಂತಿಯನ್ನು ಪ್ರತಿ ವರುಷವೂ ಎಲ್ಲಾ ವೀರಶೈವರೂ ತಪ್ಪದೆ ಆಚರಿಸಿ ಧನ್ಯರಾಗಬೇಕು.

ಜಾಹೀರ ನೋಟೀಸು.

ಮುಂಬೈ, ಮದ್ರಾಸು, ಮೈಸೂರು ಇಲಾಖೆಗಳಲ್ಲಿರುವ ಯಾವತ್ತೂ ಕರ್ನಾಟಕ ನಾಟಕ ಕಂಪನಿ ಮಾಲೀಕರು ಮತ್ತು ಇತರೇ ಜನರಿಗೆ ಈ ನೋಟೀಸು ಮೂಲಕವಾಗಿ ತಿಳಿಸುವದೇನೆಂದರೆ—ನಮ್ಮ ನಾಟಕ ಕಂಪನಿಯ ಮಾಲ್ಕಿ ಹಕ್ಕು ಬಾಧ್ಯತೆಯುಳ್ಳ (1) ಬಿ.ಎ. (2) ಸ್ತ್ರೀ. (3) ಎಲ್‌ಎಲ್.ಬಿ. ಎಂಬ ಹೆಸರಿನ 3 ಸಾಮಾಜಿಕ ನಾಟಕಗಳನ್ನು ಕೆಲವು ಕಂಪನಿಯವರು ನಾಟಕವಾಡುತ್ತಿರುವದಾಗಿ ನಮ್ಮ ನಜರಿಗೆ ಬಂದಿರುತ್ತದೆ. ಕೆಲವರು ಮೇಲೆ ಬರೆದ ಹೆಸರುಗಳನ್ನು ಬದಲುಮಾಡಿಯೂ, ಸ್ವಲ್ಪ ವಿಷಯಾಂತರಮಾಡಿಯೂ, ಕೆಲವರು ಸದರಿ ಹೆಸರುಗಳನ್ನೇ ಕಾಯಂ ಇಟ್ಟು ಆಡುತ್ತಿರುವದಾಗಿ ನಮಗೆ ತಿಳಿಯಬಂದಿರುತ್ತದೆ. ನಮ್ಮ ಹೊರತು ಸದರಿ 3 ನಾಟಕಗಳನ್ನು ಆಡುವ ಹಕ್ಕು ಯಾರಿಗೂ ಯಾವ ರೀತಿಯಿಂದಲೂ ಇರುವದಿಲ್ಲ. ಹೀಗಿದ್ದು ಯಾರಾದರೂ ಸದರಿ ನಾಟಕಗಳನ್ನು ಆಡಿದರೆ, ಪ್ರಯೋಗಮಾಡಿದರೆ ಲುಕ್ಸಾನಿಗೆ ಗುರಿಯಾಗಬೇಕಾದೀತೆಂದು ಈ ನೋಟೀಸಿನ ಮೂಲಕವಾಗಿ ತಿಳಿಯಪಡಿಸಲಾಗಿದೆ.

ಮೊಕ್ಕಾಂ ಗದಗ,
ತಾ|| 12-2-1932.
[8—7]

K. Jatteppa,
ಮಾಲಕ
ಶ್ರೀ ಹಾಲಸಿದ್ಧೇಶ್ವರ ಪ್ರಸಾದಿಕ ಲೋಕಸೇವಕ ನಾಟಕಮಂಡಳಿ, ಹುಲಗೇರಿ.

ನೋಟೀಸು.

ಶ್ರೀ ವೀರಭದ್ರೇಶ್ವರ ಪ್ರಾಸಾದಿಕ ನಾಟಕಮಂಡಳಿ ಮಾಲಕ ಮರುಳಸಿದ್ದಯ್ಯ ಮೊರಬ ತಾಲ್ಲೂಕು ಕೂಡ್ಲಿಗಿ ಡಿ|| ಬಳ್ಳಾರಿ ಇವರಿಗೆ ಕೆಳಗೆ ಸಹಿ ಮಾಡಿದವರ ಕಡಿಂದಾ ಈ ನೋಟೀಸಿನ ಮೂಲಕವಾಗಿ ತಿಳಿಸುವದೇನೆಂದರೆ—ನೀವು, ನಮ್ಮ ಕಂಪನಿಯ ಹಕ್ಕುಬಾಧ್ಯತೆಯುಳ್ಳ "ಸ್ತ್ರೀ" "ಬಿ. ಎ." ನಾಟಕಗಳನ್ನು ಪ್ರಯೋಗಮಾಡಿ ಆಡುತ್ತಿರುವದಾಗಿ ನಮಗೆ ತಿಳಿದುಬಂದಿದೆ. ಈ ನಾಟಕಗಳನ್ನು ಆಡಲು ನಮ್ಮ ಹೊರ್ತು ಬೇರೆ ಯಾವ ಜನರಿಗೂ ಹಕ್ಕುಬಾಧ್ಯತೆ ಇರುವದಿಲ್ಲ. ನಮ್ಮ ಪರವಾನಗಿ ಇಲ್ಲದೆ ನಾಟಕವಾಡಿ ನೀವು ಕಾಯದೇ ವಿರುದ್ಧವಾಗಿ ನಡೆದಿರುತ್ತೀರಿ. ನೀವು ಈ ನೋಟೀಸು ಮುಟ್ಟಿದ 1 ತಿಂಗಳೊಳಗಾಗಿ ನಮಗೆ ಭೆಟ್ಟಿಯಾಗಿ ಸದರಿ ನಾಟಕಗಳನ್ನು ರೂಲ್ಸಿಗೆ ವಿರುದ್ಧವಾಗಿ ಆಡಿದ ಬಗ್ಗೆ ನಾವು ಠರಾಯಿಸಿದಷ್ಟು ರಕಮು ಲುಕ್ಸಾನ ಕೊಟ್ಟು ಹೋಗಬೇಕು. ನೀವು ಇದಕ್ಕೆ ತಪ್ಪಿದರೆ ನಿಮ್ಮ ಮೇಲೆ ಕಾಯದೇ ಪ್ರಕಾರ ಯೋಗ್ಯ ಇಲಾಜ ನಡಿಸುವದರಲ್ಲಿ ಬರುವದು. ಈ ನೋಟೀಸಿನ ಖರ್ಚು ನಿಮ್ಮ ತಲೆಯಮೇಲೆ ಅದೆ, ತಿಳಿಯುವದು.

[8—7]

K. Jatteppa,
ಮಾಲಕ
ಮುಕ್ಕಾಂ ಗದಗ, ಶ್ರೀ ಹಾಲಸಿದ್ಧೇಶ್ವರ ಪ್ರಸಾದಿಕ ಲೋಕಸೇವಕ
ತಾ|| 12-2-1932. ನಾಟಕಮಂಡಳಿ, ಹುಲಗೇರಿ.

೧೯೩೨ ನೆಯ ಇಸವಿ ಏಪ್ರಿಲ್ ತಾ|| ೧೮ರಿಂದ ಏಪ್ರಿಲ್ ತಾ|| ೨೪ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಆಂಗಿರಸನಾಮಸಂವತ್ಸರದ ಚೈತ್ರ ಶುದ್ಧ ದ್ವಾದಶಿಯಿಂದ ಚೈತ್ರ ಬಹುಳ ಚೌತಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮೇಷ ಮಾಸ
18	ಸೋಮ	ದ್ವಾದ	9-3	ಉತ್ತ	55-20	6
19	[1] ಮಂಗಳ	ತ್ರಯೋ	3-44-54-26	ಹಸ್ತ	51-28	7
20	[2] ಬುಧ	ಪೌರ್ಣ	52-2	ಚಿತ್ತ	47-16	8
21	ಗುರು	ಪಾಡ್ಯ	45-51	ಸ್ವಾತಿ	43-3	9
22	ಶುಕ್ರ	ಬಿದಿ	39-53	ವಿಶಾ	39-58	10
23	[3] ಶನಿ	ತದಿ	34-16	ಅನೂ	36-15	11
24	ಭಾನು	ಚೌತಿ	29-13	ಜ್ಯೇಷ್ಠ	33-6	12

(1) ಮಳೆನಕ್ಷತ್ರ-ಅಶ್ವಿನಿ [illegible]. (2) [illegible] ಬಿಳಿಗಿರಿರಂಗಸ್ವಾಮಿರಥ. (3) ಮಳೆನಕ್ಷತ್ರ-ಅಶ್ವಿನಿ [illegible].

ಮೈಸೂರು: [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG N. O. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ರಿಕಾ ನಕ್ಷತ್ರ ಮೋಹರಾಜೀಯ[illegible]
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲ[illegible]
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪ[illegible] ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಬಿಡಿಪ್ರತಿಗೆ ೦-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆ ೧೯೩೨ ನೆಯ ಇಸವಿ ಏಪ್ರಿಲ್ ತಾರೀಖು ೨೫ ನೆಯ ಸೋಮವಾರ [ಸಂಚಿಕೆ ೧೭

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place for insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries, Economic Superintendents, Helpers and the Insurance Office, Public Office Buildings Bangalore.

[50—41] (Sd.) S. SHA MANNA,
Secretary, Insurance Committee.

ನೋಟೀಸು.

ಬೆಂಗಳೂರು ಮತ್ತು ಮೈಸೂರು ಪುರನಿವಾಸಿಗಳಿಗೆ ವಿಜ್ಞಾಪನೆ— ಈ ಪಟ್ಟಣಗಳಲ್ಲಿ ಈಚೆಗೆ ದೊಡ್ಡ ಬೆಳಕುಗಳ ಡೂಮುಗಳನ್ನು (ornamental Lamp Domes) ತುಂಟರು ಒಡೆಯುತ್ತಿದ್ದಾರೆ. ಇದರ ಕ್ರಯ ಒಂದಕ್ಕೆ ಸುಮಾರು ೫೦ ರೂಪಾಯಿ ಆಗುತ್ತೆ.

ದೇಶಾಭಿಮಾನಿಗಳಾದ ನೀವು ಯಾರಾದರು ಅದನ್ನ ನೋಡಿದ ಪಕ್ಷದಲ್ಲಿ ಹತ್ತಿರವಿರುವ ಪೋಲೀಸು ಸ್ಟೇಷನ್ನಿಗಾಗಲಿ ಅಥವಾ ನಮಗಾಗಲಿ ತಿಳಿಸಿದರೆ ನಾವು ಬಹಳ ಕೃತಜ್ಞರಾಗುತ್ತೇವೆ.

[4—3]

ಸಿ. ಎಂ. ಕರಿಯಪ್ಪ,
ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್.

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ. | **ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ** | ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ರಜಿ] ವಜ್ರಾಂಗ ಸುಂದರಪಾಕದ. [ಸ್ಟರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು, ನಿದ್ದೆ ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತೀಣ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ [illegible] ಪುರುಷರ ವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ಗೋಲಿಯ ಒಂದು ಡಬ್ಬಿಗೆ ೩| ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಕ್ಷೀಸು ಪಾಕದ ತೂಕ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀರೋಗ ನಿವಾರಣೀ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಡಿಚಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಡಿಚಿಟ್ಟು ಆಗೋಣ, ಮುಡಿಚಿಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ, ಕಿಬ್ಬಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ಗೋಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

ಮುಖ್ಯ ಡಿಪೋ:—ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜ. ಎಂ. ಎಸ್. ಎಂ.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಚಿತ್ರ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರ	೦—೫—೦	೦—೧೦—೦
ಹರಿಪಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರನಜನನ	೦—೮—೦	೦—೧೩—೦
ಸಚಿತ್ರ ಕಲ್ಪಾಟಿಕಬದ್ಧಮಂಜರಿ	೦—೮—೦	೦—೧೩—೦
ಸಚಿತ್ರ ಶಕಶಾಸ್ತ್ರ	೧—೦—೦	೧—೬—೦

ಡಾಕ್ಟರ್ ಜೀ. ಬೀ. ಝುವರ

ಸುಗಂಧ ನಶ್ಯದ ಪುಡಿ.

[illegible]

(Registerd Trade Mark)

[illegible]

(೫—೨೪) [illegible]

ಕೋಲಹಲಗಳಿಂದಲೂ, ವಿದ್ಯುದ್ದೀಪಗಳಿಂದಲೂ ಅಲಂಕೃತವಾದ ಮಂದಿರ ದಲ್ಲಿಯೇ ಇಲ್ಲಿಯ ಸುಪ್ರಸಿದ್ಧ ಬ್ಯಾರಿಸ್ಟರ ಮಡಿವಾಳೇಶ್ವರ ಶಿವಶಂಕರ ಸರದಾರ ಇವರ ಅಧ್ಯಕ್ಷತೆಯ ಕೆಳಗೆ ಸಭೆಯು ನೆರವೇರಿಸಲ್ಪಟ್ಟಿತು. ಪ್ರಥಮತಃ ಪಾಠಶಾಲೆಯ ವಿದ್ಯಾರ್ಥಿಗಳು ಸರಸ್ವತೀದೇವಿಯ ಸ್ತುತಿಯನ್ನು ಮಾಡಿದನಂತರ ಪದ್ಧತಿಪ್ರಕಾರ ಅಧ್ಯಕ್ಷರನ್ನು ಆರಿಸಿದಮೇಲೆ ಈ ಪಾಠಶಾಲೆಯ ವ್ಯವಸ್ಥಾಪಕರಾದ ಮಲ್ಲಿಕಾರ್ಜುನಪ್ಪ ಅಪ್ಪಾರಾವ ಪಾಟೀಲ ಇವರು ವಾರದ ಪಾಠಶಾಲೆಯ ರಿಪೋರ್ಟನ್ನು ಓದಿ ಹೇಳಿದರು. ಆಮೇಲೆ ಇಲ್ಲಿಯ ಪ್ರಮುಖರಾದ ಡಾಕ್ಟರು ಜಯದೇವರಾವ ದೇಶಮುಖ, ಸಿದ್ಧಮಲ್ಲಪ್ಪ ಕಲ್ಯಾಣಶೆಟ್ಟಿ, ಬಿ.ಎ., ಎಲ್ ಎಲ್.ಬಿ, ವಕೀಲ, ಎಕ್ಸ್. ಪಟವರ್ಧನ ಮಾಸ್ತರರು ವೊದಲಾದ ಪ್ರಮುಖ ಜನರು ಈ ಪಾಠಶಾಲೆಯು 55 ವರ್ಷಗಳಿಂದ ಅತ್ಯಂತ ಊರ್ಜಿತಸ್ಥಿತಿಯಲ್ಲಿರುವುದೆಂದೂ, ಇನ್ನು ಮುಂದಾದರೂ ಇರಬೇಕೆಂದೂ ಅಭಿನಂದನಪರ ಭಾಷಣಗಳನ್ನು ಸುಶ್ರಾವ್ಯವಾಗಿ ಮಾಡಿದರು. ಆಮೇಲೆ ಅಧ್ಯಕ್ಷರು ಯೋಗ್ಯ ಮತ್ತು ಸಮಯೋಚಿತ ಶಬ್ದಗಳಿಂದ ಸಮಾರೋಪಣೆಯನ್ನು ಮಾಡಿದನಂತರ ಶ್ರೀಯುತ ಬಸವಲಿಂಗಪ್ಪ ಕಲ್ಯಾಣಶೆಟ್ಟಿ ಮತ್ತು ಚನ್ನಮಲ್ಲಪ್ಪ ಬೇಲೂರೆ ಇವರೀರ್ವರು ಅಧ್ಯಕ್ಷರ ಮತ್ತು ಸಭಾಸದರ ಆಭಾರಮನ್ನಿಸಿದರು. ಆಮೇಲೆ ಅಧ್ಯಕ್ಷರಿಗೂ, ಸಭಿಕರಿಗೂ ಪುಷ್ಪಮಾಲಿಕೆ ತಾಂಬೂಲಾದಿಗಳು ಅರ್ಪಿತವಾಗಿ ಸರಸ್ವತೀದೇವಿಯ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಓರ್ವ ಪ್ರೇಕ್ಷಕ.

ವಾಚನಾಲಯದ ವಾರ್ಷಿಕೋತ್ಸವ.

ಕೊಳ್ಳೇಗಾಲ ತಾ|| ಮಧುವನಹಳ್ಳಿ ಗ್ರಾಮದ ಶ್ರೀ ಪಂಚಾಚಾರ್ಯ ವಾಚನಾಲಯದ 4 ನೆಯ ವಾರ್ಷಿಕಮಹೋತ್ಸವವು ಮ|| ಮುಡಿಗುಂಡದ ಗುರುಕಾರ್ ಮಾದಪ್ಪನವರ ಅಧ್ಯಕ್ಷತೆಯಲ್ಲಿ ಮತ್ತು ನೆಲ್ಲೆಯಾಳದ ಶ್ರೀ ರಾಜ್ಞಿ ಚೌರಮ್ಮಣ್ಣಿಯವರ ಸನ್ನಿಧಿಯಲ್ಲಿ ಏಪ್ರಿಲ್ ತಾ|| 7 ನೆಯ ಗುರುವಾರ ಜರುಗಿತು. ಈ ಸಮಾರಂಭಕ್ಕೆ ಮುಖ್ಯವಾಗಿ ಕೊಳ್ಳೇಗಾಲ ತಾಲ್ಲೂಕಿನ ವೀರಶೈವ ಶ್ರೀಮಂತರೂ ಪ್ರೌಢವಿದ್ಯಾರ್ಥಿಗಳೂ ಪದವೀಧರರೂ ಆಗಮಿಸಿದ್ದರು. ಶ್ರೀ ರಾಣಿಯವರು ವೀರಶೈವ ವಿದ್ಯಾರ್ಥಿಗಳ ಅನುಕೂಲತೆಗಾಗಿ ಮೈಸೂರು ಲಿಂಗಾಯತ ವಿದ್ಯಾವರ್ಧಕ ಫಂಡಿನ ಮೆಂಬರುಗಳ ಅಧೀನದಲ್ಲಿ ತಮ್ಮ ಹೆಸರಿನಲ್ಲಿ ಒಂದು ಶಾಶ್ವತವಾದ ಫಂಡನ್ನು ಸ್ಥಾಪಿಸಿ, ಈ ಫಂಡಿನಿಂದ ವಿದ್ಯಾರ್ಥಿಗಳಿಗೆ ಧನಸಹಾಯಮಾಡಿ ಪ್ರೋತ್ಸಾಹಿಸುತ್ತಿರುವ ವಿಷಯವನ್ನು ಮತ್ತು ಶ್ರೀ ರಾಣಿಯವರು ಈ ಜನಾಂಗದ ಏಳ್ಗೆಗಾಗಿ ಕೊಡುತ್ತಿರುವ ಇತರ ವಿಧವಾದ ಸಹಾಯ ಮತ್ತು ಪ್ರೋತ್ಸಾಹವನ್ನೂ ಸೂಚಿಸಿ. ಈ ಕೆಳಗೆ ಕಂಡ ಬಿನ್ನವತ್ತಳಿಕೆಯು ಶ್ರೀ ರಾಣಿಯವರಿಗೆ ಒಪ್ಪಿಸಲ್ಪಟ್ಟಿತು. ಶ್ರೀ ರಾಣಿಯವರು ಬಿನ್ನವತ್ತಳಿಕೆಯನ್ನು ಸ್ವೀಕರಿಸಿ ತಮ್ಮ ಸಂತೋಷವನ್ನು ಸೂಚಿಸಿದರಲ್ಲದೆ ವಾಚನಾಲಯದ ಮೂಲಧನಕ್ಕಾಗಿ 100 ರೂ. ಗಳನ್ನು ಉದಾರಮನಸ್ಸಿನಿಂದ ದಯಪಾಲಿಸಿದರು. ಅಧ್ಯಕ್ಷರಾದ ಮ|| ಗುರುಕಾರ್ ಮಾದಪ್ಪನವರು, ಈ ಸಮಾಜದ ಏಳ್ಗೆಗಾಗಿ ಶ್ರೀ ರಾಣಿಯವರು ಆಗಾಗ್ಗೆ ಬಹು ಧಾರಾಳವಾಗಿ ಮಾಡುತ್ತಿರುವ ಧನಸಹಾಯಕ್ಕಾಗಿಯೂ, ತಮ್ಮ ಜನಾಂಗದ ಶಾಂತಿ ಸುಖಸಂಪತ್ತುಗಳಲ್ಲಿ ಸದಾ ಕಾಂಕ್ಷೆಯುಳ್ಳವರಾಗಿರುವುದಕ್ಕಾಗಿಯೂ ಶ್ರೀ ರಾಣಿಯವರನ್ನು ಬಹಳವಾಗಿ ವಂದಿಸಿದರು. ಗುರುಶಾಂತಪ್ಪ.

ನೆಲ್ಯಾಳಂ ಶ್ರೀ ರಾಣೀ ಚೌರಮ್ಮಣ್ಣಿಯವರ ದಿವ್ಯಸನ್ನಿಧಿಯಲ್ಲಿ ಮಧುವನಹಳ್ಳಿ ಶ್ರೀ ಜಗದ್ಗುರು ಪಂಚಾಚಾರ್ಯವಾಚನಾಲಯದ ಸದಸ್ಯರುಗಳು ವಿನಯಪೂರ್ವಕ ಒಪ್ಪಿಸಿದ ಬಿನ್ನವತ್ತಳಿಕೆ.

ರಾಜ್ಞೀಯವರೇ,

ಈ ವಾಚನಾಲಯದ ವಾರ್ಷಿಕ ಸಮಾರಂಭಕ್ಕೆ ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿ ತಾವು ದಯಮಾಡಿಸಿದುದಕ್ಕೆ ತಮ್ಮಲ್ಲಿ ನಮ್ಮ ಕೃತಜ್ಞತೆಯನ್ನು ಸೂಚಿಸುತ್ತೇವೆ ಮತ್ತು ನಮ್ಮ ವಿಜ್ಞಾಪನಾಪತ್ರಿಕೆಯನ್ನು ತಮ್ಮಲ್ಲಿ ಒಪ್ಪಿಸುವ ಲಭ್ಯ ದೊರೆತುದು ನಮ್ಮ ಭಾಗ್ಯವಿಶೇಷವೆಂದು ಭಾವಿಸುತ್ತೇವೆ. ತಾವು ನಮ್ಮಿ ಗ್ರಾಮದಲ್ಲಿ ಅದರಲ್ಲೂ ನಮ್ಮ ವೀರಶೈವ ಸಮಾಜದಲ್ಲಿ ಜನಿಸಿ, ರಾಜ್ಞೀಪದವಿಯನ್ನು ಹೊಂದಿರುವುದರಿಂದುಂಟಾದ ನಮ್ಮ ಸಂತೋಷವನ್ನು ಇಷ್ಟೆಂದು ಹೇಳಲಾರದವರಾಗಿದ್ದೇವೆ.

ತಾವು ಈ ವೀರಶೈವ ಸಮಾಜದ ಹಾಗೂ ನಮ್ಮಿ ಗ್ರಾಮದ ಪುರೋಭಿವೃದ್ಧಿಯ ಬಗ್ಗೆ ತೋರಿಸುತ್ತಿರುವ ಆದರ-ಅಭಿಮಾನಗಳು ಮಿಗಿಲಾದುವು. ಕೊಳ್ಳೇಗಾಲದ ತಾಲ್ಲೂಕಿನಿಂದ ಬರುವ ವಿದ್ಯಾರ್ಥಿಗಳಿಗಾಗಿ ಮೈಸೂರು ಲಿಂಗಾಯತ ವಿದ್ಯಾಭಿವೃದ್ಧಿ ಫಂಡಿಗೆ ಮಾಡಿರುವ ಧನಸಹಾಯವು ಇದನ್ನು ನಿದರ್ಶಿಸಲು ಸಾಕಾಗಿದೆ. ನಮ್ಮ ಸಮಾಜದ ಎಲ್ಲ ಶ್ರೀಮಂತರೂ ಈ ರೀತಿ ಸತ್ಕಾರ್ಯದಲ್ಲಿ ತಮ್ಮ ಐಶ್ವರ್ಯವನ್ನು ವಿನಿಯೋಗಿಸಿ ಕೃತಕೃತ್ಯರಾಗಲು ತಾವು ಮಾರ್ಗತೋರಿಸಿಕೊಟ್ಟಿರುವಿರೆಂದರೆ ಅತಿಶಯೋಕ್ತಿಯಾಗದು.

ಹತ್ತನೆಯ ವೀರಶೈವ ಮಹಾಸಭೆಯು ಬೆಂಗಳೂರಿನಲ್ಲಿ ಜರುಗಿದ ವೇಳೆಯಲ್ಲಿ ರಾಜ್ಞೀಸ್ಥಾನದಲ್ಲಿರುವ ತಾವು ಸಭೆಯನ್ನಲಂಕರಿಸಿ ನವಕಳೆಯನ್ನುಂಟುಮಾಡಿದುದಲ್ಲದೆ ಸಹಸ್ರಾರು ರೂಪಾಯಿಗಳ ವೆಚ್ಚದಿಂದ ತಾವು ಮಾಡಿಸಿದ ಸತ್ಕಾರವು ಜ್ಞಾಪಕದಲ್ಲಿಡತಕ್ಕುದಾಗಿದೆ.

ತಮ್ಮಲ್ಲಿರುವ ಧರ್ಮಶ್ರದ್ಧೆ, ಮತವಾತ್ಸಲ್ಯ, ಸರ್ವಸಮತಾಭಾವ, ಪ್ರಾಣಿದಯೆ ಮುಂತಾದ ಸುಗುಣಗಳು ನಮಗೆ ಮಾತ್ರವಲ್ಲದೆ ಸರ್ವರಿಗೂ ಆದರ್ಶವಾಗಿವೆ. ಒಂದೇ ಮಾತಿನಲ್ಲಿ ಹೇಳುವುದಾದರೆ ತಮ್ಮ ಚರಿತೆಯು ಸುವರ್ಣಾಕ್ಷರಗಳಿಂದ ಬರೆದಿಡಲು ಯೋಗ್ಯವಾಗಿದೆ.

ಅಮ್ಮಣ್ಣಿಯವರೇ,

ತಮ್ಮ ಗುಣಕಥನ ಮಾಡಲು ಸಾಮಾನ್ಯರಾದ ನಮ್ಮಿಂದ ಸಾಧ್ಯವಿಲ್ಲ. ಮುಖ್ಯ ತಮಗೂ ತಮ್ಮ ಬಂಧು-ಬಾಂಧವರಿಗೂ ದಯಾಮಯನಾದ ಪಶುಪತಿಯು ಆಯುರಾರೋಗ್ಯ ಸಂಪದಗಳನ್ನೂ, ಇನ್ನೂ ಹೆಚ್ಚಿನ ಧರ್ಮಗುಣಗಳನ್ನೂ ದಯಪಾಲಿಸಲೆಂದು ಆತನನ್ನು ಹಗಲಿರುಳೂ ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ. ಇತಿ ತಮ್ಮ ಆಜ್ಞಾಧಾರಕರಾದ

ಶ್ರೀ ಜಗದ್ಗುರು ಪಂಚಾಚಾರ್ಯ ವಾಚನಾಲಯದ ಸದಸ್ಯರು.

ಭಗವಾನ್ ಶ್ರೀ ಬಸವೇಶ್ವರಜಯಂತಿ.

(ಲೇಖಕ—ಏಕಾತಿಪುರದ ಗಂಜಾಂ ಎಸ್. ಎಫ್. ಕಪ್ಪಣ್ಣಶೆಟ್ಟಿ.)

ಯಾವ ಮಹಾಪುರುಷನು ಅವತರಿಸಿ ತನ್ನ ದಿವ್ಯತೇಜಸ್ಸಿನಿಂದ ವೀರಶೈವಮತದ ಜ್ಯೋತಿಯನ್ನು ಪ್ರಪಂಚದಲ್ಲೆಲ್ಲಾ ಬೆಳಗಿ ನಲಿದಾಡಿದನೋ, ಯಾವ ಮಹಾಪುರುಷನ ನಡೆನುಡಿಗಳಿಗೆ ನಾವು ಕಿವಿಗೊಟ್ಟು ಸಂಗಾಧರನ ಘನಮಹಿಮೆಯನ್ನು ಅರಿತು ಲೋಕದಲ್ಲಿ ಧನ್ಯರೆನಿಸಿಕೊಂಡೆವೋ ಯಾವ ಮಹಾಪುರುಷನು ತನ್ನ ಹದಿನಾರಿಗಳಿಂದ ರಾಜಕೀಯ ಸಾಮಾಜಿಕ ಧಾರ್ಮಿಕ ಕಾರ್ಯಗಳ ತತ್ವಾರ್ಥವನ್ನು ಬೋಧಿಸಿ ಕಲಿಸಿದನೋ, ಯಾವ ಮಹಾಪುರುಷನು ಎಲ್ಲರಿಂದಲೂ ಶಿವನೆಂದು ಸ್ತುತಿಸಲ್ಪಡುತ್ತಿರುವನೋ, ಅಂತಹ [illegible] ಅವತಾರಿಯಾದ ಬಸವಣ್ಣನವರು ಭೂಲೋಕಕ್ಕೆ ಬಂದು ಇಂದಿಗೆ

816 ವರುಷಗಳಾದವು. ಈ ಮಹಾನುಭಾವನ ಜಯಂತಿಯು ಇದೇ ಮೇ ತಾ|| 8 ನೇ ಭಾನುವಾರ ಇಂಡಿಯಾದೇಶದ ಎಲ್ಲಾ ಪ್ರದೇಶಗಳಲ್ಲಿಯೂ ನಡೆಯುತ್ತದೆ. ಉಚ್ಚನೀಚಭಾವನೆಗಳನ್ನು ತಪ್ಪಿಸಿ ನಿರ್ಮಲಾಚಾರದ್ವಾರ ಪತಿತರನ್ನು ಮೇಲಕ್ಕೆತ್ತಿ ಲೋಕೋದ್ಧಾರವನ್ನು ಮಾಡಿ ಅಸಂಖ್ಯಾತ ವಿದ್ವಾಂಸರಿಂದಲೂ, ಶಿವಶರಣರಿಂದಲೂ ಗುರುಬಸವನೆಂದು ಹೊಗಳಿಸಿಕೊಳ್ಳಲ್ಪಟ್ಟ ನಮ್ಮ ಶ್ರೀ ಬಸವಸ್ವಾಮಿಯ ಜಯಂತಿಯನ್ನು ಸಕಲ ವೀರಶೈವರೂ ಆಚರಿಸಬೇಕು. ಈ ಜಯಂತಿಯ ದಿನ ಪ್ರತಿಯೊಬ್ಬ ವೀರಶೈವನೂ ಹಬ್ಬಗಳನ್ನು ಮಾಡಬೇಕು. ಮನೆಗಳಿಗೆ ತಳಿರುತೋರಣಗಳನ್ನು ಕಟ್ಟಬೇಕು. ಶಿವಭಕ್ತ ಸಮಾರಾಧನೆಗಳನ್ನು ಮಾಡಬೇಕು. ಬಸವೇಶ್ವರನ ವಿಗ್ರಹದ ಉತ್ಸವಮಾಡಬೇಕು. ಬಸವೇಶ್ವರನು ಲೋಕಕ್ಕೆ ಮಾಡಿದ ಉಪಕಾರವನ್ನು ಕುರಿತು ಉಪನ್ಯಾಸಗಳನ್ನು ಮಾಡಬೇಕು. ಬಸವೇಶ್ವರನ ನಾಟಕಗಳನ್ನು ಅಭಿನಯಿಸಬೇಕು. ಇವೇ ಮೊದಲಾದ ಆಚರಣೆಗಳನ್ನು ನಡೆಸಬೇಕು.

ಹೇ! ವೀರಶೈವರೆ, ಹೇ!! ಲೋಕದ ಎಲ್ಲ ಮಾನವರೇ! ಬಸವೇಶ್ವರನು ಲೋಕಕ್ಕೆ ಏನುಮಾಡಿದನು? ಅನೇಕ ನಕ್ಷತ್ರಗಳ ಮಧ್ಯೆ ಮೆರೆಯುವ ಚಂದ್ರನಂತೆ, ಅನೇಕ ಪಕ್ಷಿಗಳ ಮಧ್ಯೆ ಮೆರೆಯುವ ರಾಜಹಂಸನಂತೆ, ಅನೇಕ ಭವನಗಳ ಮಧ್ಯೆ ಮೆರೆಯುವ ಅರಮನೆಯಂತೆ, ಶ್ರೀ ಬಸವೇಶ್ವರ ದೇವರು ಅನೇಕ ಶಿವಶರಣರ, ಆಚಾರ್ಯರ ಮತ್ತು ಸದ್ಭಕ್ತರ ಮಧ್ಯೆ ಸುಪ್ರಕಾಶನಾಗಿ ಮೆರೆದನು. ಶ್ರೀ ಬಸವೇಶ್ವರದೇವರ ಮಾರ್ಗವನ್ನೇ ಎಲ್ಲ ವೀರಶೈವಾಚಾರ್ಯರೂ ಅನುಸರಿಸಿರುತ್ತಾರೆ, ಬಸವೇಶ್ವರನು ಎಲ್ಲ ವೀರಶೈವಮತಪ್ರವರ್ತಕರಿಗೂ ಆದರ್ಶಪ್ರಾಯನಾಗಿರುತ್ತಾನೆ. ರೇಣುಕರು ಮೊದಲಾದ ಆಚಾರ್ಯರೂ ನಿರಂಜನಜಗದ್ಗುರು ಪ್ರಭುದೇವರೂ ಬಸವೇಶ್ವರನ ಮಾರ್ಗಪಂಕ್ತಿಯೇ ನಡೆಸಿರುತ್ತಾರೆ. ಬಸವೇಶ್ವರನು ನಡೆಸಿದ ಮಹತ್ಕಾರ್ಯಗಳಿಂದ ಲೋಕವು ಬಹುಕಾಲದಿಂದ ಬಂದ ಭಿನ್ನಭಾವವೆಂಬ ಮಹತ್ತರವಾದ ಪೀಡನದಿಂದ ತಪ್ಪಿಸಲ್ಪಟ್ಟು ಉದ್ಧಾರವಾದದ್ದಾಯಿತು. ಒಂದುಕಡೆ ರೇಣುಕಾಚಾರ್ಯರು ವರ್ಣಿಸಿದ ಮಾರ್ಗವು ಬಸವೇಶ್ವರನ ಮಾರ್ಗವಾಗಿರುತ್ತದೆ. ಇನ್ನೊಂದುಕಡೆ ಮರುಳಾಚಾರ್ಯರು ವರ್ಣಿಸಿದ ಮಾರ್ಗವು ಬಸವೇಶ್ವರನ ಮಾರ್ಗವಾಗಿರುತ್ತದೆ, ಮತ್ತೊಂದುಕಡೆ ಏಕೋರಾಮಾರಾಧ್ಯರು ವರ್ಣಿಸಿದ ಮಾರ್ಗವು ಬಸವೇಶ್ವರನ ಮಾರ್ಗವಾಗಿರುತ್ತದೆ, ಮಗದೊಂದು ಕಡೆ ಪಂಡಿತಾರಾಧ್ಯರು ವರ್ಣಿಸಿದ ಮಾರ್ಗವು ಬಸವೇಶ್ವರನ ಮಾರ್ಗವಾಗಿರುತ್ತದೆ. ಇಷ್ಟೇ ಅಲ್ಲ. ಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಪ್ರಭುದೇವರು, ಕೊಂಡಗೂಳಿಯ ಕೇಶಿರಾಜರು, ಮರುಳಶಂಕರದೇವರು, ಕೋಲಶಾಂತಯ್ಯನವರು, ಮೈದುನರಾಮಯ್ಯನವರು ಮೊದಲಾದ ಲೆಕ್ಕವಿಲ್ಲದಷ್ಟು ಶಿವಶರಣರು ಮತ್ತು ಈಚಿನ ಅನೇಕಾನೇಕ ಮಹಿಮರೂ ವಿದ್ವಾಂಸರೂ ಬಸವೇಶ್ವರನು ತೋರಿಸಿದ ಪಂಜಿನ ಬೆಳಕಿನಲ್ಲೇ ನಡೆದಿರುತ್ತಾರೆ. ಈ ಬಸವೇಶ್ವರರೂ ಅವರಂತೆ ರೇವಣಸಿದ್ಧಾದಿ ಆಚಾರ್ಯರೂ ನಿರಂಜನ ಜಗದ್ಗುರು ಪ್ರಭುದೇವರೂ ಲೋಕೋದ್ಧಾರಕ್ಕಾಗಿ ಆಚರಿಸಿದ ಪಥವನ್ನು ಬಿಟ್ಟು ಮಧ್ಯಕಾಲದ ಕೆಲವು ಮಂದಿ ಸ್ವಾರ್ಥಪರರು ತಮ್ಮ ಪಿಸುಣವಿದ್ಯೆಯ ಪ್ರಭಾವದಿಂದ ಅಲ್ಲಮ ಬಸವಾದಿ ಪ್ರಮಥರ ಹೆಸರಿನಮೇಲೆ ಬಸವಧ್ವಾಂತ ದಿವಾಕರ ಬಸವಾದಿ ನಿಜತತ್ವದರ್ಪಣಗಳನ್ನು ಬರೆದು ಪ್ರಚಾರದಲ್ಲಿ ತಂದಿದ್ದಾರೆ. ಅನೇಕ ಮಂದಿ ಸೋದರರು ಈ ಗ್ರಂಥಗಳನ್ನು ಪ್ರಮಾಣಗ್ರಂಥಗಳೆಂದು ತಿಳಿದು ಮೋಸಹೋಗುತ್ತಿದ್ದಾರೆ. ಈ ಗ್ರಂಥಗಳಿಂದಲೇ ಶಕ್ತಿವಿಶಿಷ್ಟಾದ್ವೈತಮತವಾದ ವೀರಶೈವಮತದಲ್ಲಿ ದ್ವಿಪಾರ್ಟಿಗಳಾಗಿ ಗುರು ವಿರಕ್ತರಲ್ಲಿ ದ್ವೇಷಗಳು ಹೆಚ್ಚುತ್ತಿವೆ. ಈ ಗ್ರಂಥಗಳು ಆರ್ಯವರ್ತದ ಪ್ರಾಚೀನಕಾಲದ ಮಹಾಪುರುಷರಮೇಲೆ ವ್ಯಭಿಚಾರದೋಷವನ್ನು ಹೊರಿಸಿ ಅವರ ಮಹತ್ವವನ್ನು ಹಾಳುಮಾಡಿರುತ್ತವೆ. ಈ ಗ್ರಂಥಗಳಿಂದಲೇ ನಾವು ಇತರ ಮತದವರ ಅವಹೇಳನಕ್ಕೆ ಗುರಿಯಾಗಿರುತ್ತೇವೆ. ಇವುಗಳಲ್ಲಿ ಮೊದಲಿನಿಂದ ಕಡೆಯವರಿವಿಗೆ ವ್ಯಭಿಚಾರ, ಮೋಸ, ಸುಳ್ಳು, ಮತದ್ವೇಷ, ಮಹಾಪುರುಷರ ನಿಂದೆ ಇವೇ ವಿಷಯಗಳಿರುತ್ತವೆ. ಈ ಗ್ರಂಥಗಳಿಂದಲೇ ನಾವು ಅಲ್ಲಮ ಬಸವಾದಿ ಪ್ರಮಥರೇ ಮೊದಲಾದ ಮಹಾಪುರುಷರ ಯೋಗ್ಯತೆಯನ್ನು ತೂಕಮಾಡುವದಾದರೆ ಅವರನ್ನು ಪುಂಡು ಪೋಕರಿಗಳ ಗುಂಪಿಗೆ ಸೇರಿಸಬೇಕಾಗುತ್ತದೆ. ಪೌರಾಣಿಕ ಮುಲ್ಲಾಗಳ ಈ ಕೊಳಕು ಗ್ರಂಥಗಳನ್ನು ಅದಷ್ಟು ಜಾಗ್ರತೆ ವೀರಶೈವಮತದಿಂದ ಎತ್ತಿಹಾಕುವವರಿವಿಗೂ ಉಳಿಗಾಲವಿಲ್ಲ. ವೀರಶೈವ ಸಮಾಜದವರು ಈ ವಿಚಾರವನ್ನು ಚೆನ್ನಾಗಿ ಮನಸ್ಸಿನಲ್ಲಿಟ್ಟು ಕೇವಲ ಮತಾಭಿಮಾನದಿಂದಲೂ, ಲೋಕೋದ್ಧಾರ ದೃಷ್ಟಿಯಿಂದಲೂ ಭೇದಭಾವಗಳನ್ನು ಬಿಟ್ಟು ಸಮರಸಭಾವದಿಂದ ಬಸವಸ್ವಾಮಿಯಂತೆ ಕೆಲಸಮಾಡಿದರೆ ಮುಂದೆ ಒಳ್ಳೆಯದಾಗುತ್ತದೆ. ಭೇದಭಾವಗಳನ್ನು ಬೆಳಸಿ ನಾನು ಹೆಚ್ಚು ನೀನು ಕಡಿಮೆ ಎಂಬ ಗುಹವನ್ನು ಮುಂದುಮಾಡಿ ಛಿದ್ರಗಳನ್ನು ಹುಟ್ಟಿಸಿದರೆ ಮುಂದೆ ವೀರಶೈವಮತಕ್ಕೆ ಬಹಳ ನಷ್ಟವುಂಟಾಗುವದನ್ನು ತಿಳಿಯಬೇಕು.

ಬಸವೇಶ್ವರನ ಹೃದಯವು ಹೇಗೆ ದೊಡ್ಡದೊ ಆತನ ಕಾರ್ಯವೂ ಹಾಗೆಯೇ ದೊಡ್ಡದು. ಬಸವೇಶ್ವರನ ಹೃದಯವನ್ನು ಆತನ ವಚನದಲ್ಲಿ ನೋಡಬಹುದು. ಆತನ ಕಾರ್ಯವನ್ನು ಆತನ ವಿಷಯಕವಾದ ಬಸವಪುರಾಣದಲ್ಲಿ ನೋಡಬಹುದು. ಪುರಾಣದಲ್ಲಿ ಹೇಳುವ ಆತನ ಕಾರ್ಯಕ್ಕೂ ವಚನದಲ್ಲಿ ದ್ಯೋತಕವಾಗುವ ಆತನ ಹೃದಯಕ್ಕೂ ಆಶ್ಚರ್ಯವಾಗುವಂತೆ ಸರಿಹೋಗುತ್ತದೆ. ಬಸವೇಶ್ವರನು ಪತಿತರಿಗಾಗಿ ಬಹಳ ಮರುಗಿ ಅವರ ಉದ್ಧಾರಕ್ಕಾಗಿ ಬಹಳ ಶ್ರಮಪಟ್ಟನು. ಹರಳಯ್ಯನಿಗೂ ಮಧುವರಸಯ್ಯನಿಗೂ ರಕ್ತಸಂಬಂಧವನ್ನು ಮಾಡಿದ್ದೂ ಶಿವನಾಗಮಯ್ಯನನ್ನು ಆಸ್ಥಾನದೊಳಗೆ ಉನ್ನತಾಸನದಲ್ಲಿ ಕುಳ್ಳಿರಿಸಿ ಕಿಂಕರಭಾವವನ್ನು ತೋರಿಸಿದ್ದೂ, ಮಡಿವಾಳ ಮಾಚಿದೇವ, ಜೇಡರ ದಾಸಿಮಯ್ಯ, ಸಿದ್ಧರಾಮೇಶ್ವರ, ಕದಿರರೇಮಯ್ಯ, ಚಿಕ್ಕಮಾದಣ್ಣ ಮೊದಲಾದವರಿಗೆ ದಾಸಭಾವವನ್ನು ತೋರಿಸಿದ್ದೂ ದೃಷ್ಟಾಂತಗಳಾಗಿರುತ್ತವೆ. ಬಸವೇಶ್ವರನ ಶಿವಭಕ್ತ ಜನ ಪ್ರೀತಿಯೆಂಬುದನ್ನು ಹೇಳುವದಕ್ಕೆ ನಾಲಿಗೆ ಸಾಲದು. ಶಿವಭಕ್ತರಲ್ಲಿ ಅಚ್ಚಳಿಯದ ವಿಶ್ವಾಸವೆಂದರೆ ಬಸವೇಶ್ವರನದೇ. ರೇವಣಸಿದ್ಧರು ಮೊದಲಾದ ಐವರು ಆಚಾರ್ಯರು ತಾನು ಹಿಂದೆ ಹೇಳಿದಂತೆ ಬಸವೇಶ್ವರನು ತೋರಿಸಿದ ಪಥವನ್ನು ಅನುಸರಿಸಿ ಕೆಲಸಮಾಡಿ ಬಸವೇಶ್ವರನ ಮಾರ್ಗಕ್ಕೆ ಪುಷ್ಟಿಯನ್ನುಂಟುಮಾಡಿರುತ್ತಾರೆ. ರೇವಣಸಿದ್ಧರು ಮುಂದೆ ಶಿವಯೋಗೀಶ್ವರನಾದ ಸಿದ್ಧರಾಮೇಶ್ವರ ದೇವರು ಜನಿಸುತ್ತಾರೆಂದು ತಿಳಿದು ಸೊನ್ನಲಾಪುರದಲ್ಲಿ ಇದ್ದ ಮೊರಡಿಯ ಮುದ್ದುಗೌಡ ಸುಗ್ಗಲಯಿಗಳೆಂಬ ವೃದ್ಧದಂಪತಿಗಳ ಉದರವನ್ನು ಪೂಜಿಸಿದ್ದೂ, ಮಂಗಳವಾಡದಲ್ಲಿ ವೀರಬಿಜ್ಜಳನನ್ನು ಅನುಗ್ರಹಿಸುವದಕ್ಕೆ ಅವನ ಮಗಳು ಲಕ್ಷ್ಮಣಾದೇವಿಯನ್ನು ಮದುವೆಯಾದದ್ದೂ, ರಾಜೇಂದ್ರ ಚೋಳನ ಮಗಳು ಸೌಂದರಾದೇವಿಯನ್ನು ಮದುವೆಯಾಗಿ ಅವಳಲ್ಲಿ ಜನಿಸಿದ ರುದ್ರಮುನಿಸ್ವಾಮಿಗೆ ಪಟ್ಟವಕಟ್ಟಿದ್ದೂ ಇನ್ನು ಬೇರೆ ಬೇರೆ ಅರಸುಗಳ ಮಕ್ಕಳು 300 ಕನ್ನೆಯರನ್ನು ಮದುವೆಯಾದದ್ದೂ, ಇವೇ ಮೊದಲಾದ ಕಾರ್ಯಗಳು ಶ್ರೀ ಬಸವಸ್ವಾಮಿಯ ಕಾರ್ಯಗಳಿಗೆ ಪುಷ್ಟಿದಾಯಕಗಳಾಗಿಲ್ಲವೆ? ಪಂಡಿತಾರಾಧ್ಯರಂತೂ ಶ್ರೀ ಬಸವೇಶ್ವರನನ್ನು ತಮ್ಮ ಹೃದಯಕಮಲದಲ್ಲಿ ಅತ್ಯುನ್ನತ ಮೂರ್ತಿಯನ್ನಾಗಿ ಭಾವಿಸಿರುತ್ತಾರೆ, ಹಳೆಂದರೆ—ಪಂಡಿತಾರಾಧ್ಯರು ಶ್ರೀ ಬಸವಸ್ವಾಮಿಯನ್ನು ನೋಡುವದಕ್ಕೆ ಕಲ್ಯಾಣಕ್ಕೆ ಹೋಗುತ್ತಿರಲಾಗಿ ಒಬ್ಬ ಜಾರನಿಂದ ಬಸವೇಶ್ವರನು ಶಿವೈಕ್ಯನಾದ ಸಂಗತಿಯನ್ನು ತಿಳಿದು ಬಹಳ ದುಃಖಿತರಾದರೂ ಎಂದು ಮರುಗಿದರು. ಮರುಗಿದ್ದಲ್ಲದೆ ತಮ್ಮ [illegible]

ಕಕ್ಕೆ [illegible] ಕೊಂಡರು. [illegible] ತಮ್ಮಮುಖ್ಯಸ್ಥಾನದ ಭಕ್ತರು ದರದಲ್ಲಿ ಜನಿಸಿ ಅನೇಕಮಂದಿಗಳನ್ನು ಶೈವ ಧರ್ಮಕ್ಕೆ [illegible] ಲಿಂಗದಲ್ಲಿ ಅಡಗಿದರು. ಈ ರೀತಿಯಾಗಿ ಅವರೆಲ್ಲರೂ ಶ್ರೀ ಬಸವೇಶ್ವರನ ಮಾರ್ಗವನ್ನು ಬಿಟ್ಟು ಬೇರೆ ಹೋಸಮಾರ್ಗದಲ್ಲೇನೂ ನಡೆಯಲಿಲ್ಲ. ಬಸವೇಶ್ವರನಂತಹ ಸರ್ವಸಮಷ್ಟಿ ಪತಿತೋದ್ಧಾರ ಮಾರ್ಗಗಳಲ್ಲೇ ನಡೆದಿರುತ್ತಾರೆ. ಇವರೆಲ್ಲರೂ ಬಸವೇಶ್ವರಮಹತ್ವ ಪ್ರಕಾಶಕರಾಗಿರುತ್ತಾರೆ. ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಪೀಠದ ಮೂಲ ಕರ್ತೃಗಳಾದ ಅಲ್ಲಮ ಪ್ರಭುದೇವರು ಕೂಡ ಶ್ರೀ ಬಸವಸ್ವಾಮಿಯ ಕಾರ್ಯಗಳನ್ನೇ ಪುಷ್ಟೀಕರಿಸಿರುತ್ತಾರೆ. ಇವರು ಶ್ರೀ ಬಸವಸ್ವಾಮಿಯಿಂದ ಪೂಜೆಯನ್ನು ಕೈಕೊಂಡು ಗೊಗ್ಗಯ್ಯ ಮುಕ್ತಾಯಿಗಳಿಗೆ ತತ್ವಬೋಧೆಯನ್ನು ಮಾಡಿ ಸೊನ್ನಲಿಗೆಯ ಸಿದ್ಧರಾಮೇಶ್ವರನಿಗೆ ಶಿವತತ್ವವನ್ನು ಬೋಧಿಸಿ ಶೂನ್ಯಸಿಂಹಾಸನಾರೋಹಣವನ್ನು ಮಾಡಿ ಶ್ರೀಶೈಲಕ್ಕೆ ಹೋಗಿ ಮಹಾದೇವಿಯಕ್ಕನಿಗೆ ನಿರ್ವಾಣಪದವಿಯನ್ನು ಕೊಟ್ಟು ತಾವು ಕದಳಿಯಲ್ಲಿ ಬಯಲಾದರು. ಈ ರೀತಿಯಲ್ಲಿ ಆಚಾರ್ಯರೂ ಎಲ್ಲ ಶಿವಶರಣರೂ ವರ್ತಿಸಿದ ಮಾರ್ಗವನ್ನು ನೋಡಿದರೆ ಶ್ರೀ ಬಸವೇಶ್ವರನು ಎಂತಹ ಮಹತ್ಕಾರ್ಯವನ್ನು ಮಾಡಿದನೆಂಬುದು ಗೊತ್ತಾಗುತ್ತದೆ. ಇಂತಹ ಮಹಾತ್ಮನಾದುದರಿಂದಲೇ ಆದಿಯಿಂದ ಈವರಿವಿಗೂ ಅಂದರೆ 816 ವರುಷಗಳ ಕಾಲ ಬಸವೇಶ್ವರನ ಕೀರ್ತನೆ ಮಾಡದ ಮಾನವರೇ ಇಲ್ಲ. ಬಸವೇಶ್ವರನನ್ನು ಸ್ತುತಿಮಾಡಿದಂತ ಅನಂತಾನಂತ ಕೋವಿದರ ಹೆಸರನ್ನು ಇಲ್ಲಿ ಬರೆಯುವದಕ್ಕಾಗುವದಿಲ್ಲ. ಇಂಥಾ ಮಹಾಮಹಿಮನಾದ ಶ್ರೀಬಸವೇಶ್ವರನ ಜಯಂತಿಯನ್ನು ಪ್ರತಿ ವರುಷವೂ ಎಲ್ಲಾ ವೀರಶೈವರೂ ತಪ್ಪದೆ ಆಚರಿಸಿ ಧನ್ಯರಾಗಬೇಕು.

ಜಾಹಿರ ನೋಟೀಸು.

ಮುಂಬೈ, ಮದ್ರಾಸು, ಮೈಸೂರು ಇಲಾಖೆಗಳಲ್ಲಿರುವ ಯಾವತ್ತೂ ಕರ್ನಾಟಕ ನಾಟಕ ಕಂಪನಿ ಮಾಲೀಕರು ಮತ್ತು ಇತರೇ ಜನರಿಗೆ ಈ ನೋಟೀಸು ಮೂಲಕವಾಗಿ ತಿಳಿಸುವದೇನೆಂದರೆ—ನಮ್ಮ ನಾಟಕ ಕಂಪನಿಯವಾಲ್ಕೆ ಹಕ್ಕು ಬಾಧ್ಯತೆಯುಳ್ಳ (1) ಬಿ.ಎ. (2) ಸ್ತ್ರೀ. (3) ಎಲ್ ಎಲ್.ಬಿ. ಎಂಬ ಹೆಸರಿನ 3 ಸಾಮಾಜಿಕ ನಾಟಕಗಳನ್ನು ಕೆಲವು ಕಂಪನಿಯವರು ನಾಟಕವಾಡುತ್ತಿರುವದಾಗಿ ನಮ್ಮ ನಜರಿಗೆ ಬಂದಿರುತ್ತದೆ. ಕೆಲವರು ಮೇಲೆ ಬರೆದ ಹೆಸರುಗಳನ್ನು ಬದಲುಮಾಡಿಯೂ, ಸ್ವಲ್ಪ ವಿಷಯಾಂತರಮಾಡಿಯೂ, ಕೆಲವರು ಸದರಿ ಹೆಸರುಗಳನ್ನೇ ಕಾಯಂ ಇಟ್ಟು ಆಡುತ್ತಿರುವದಾಗಿ ನಮಗೆ ತಿಳಿಯಬಂದಿರುತ್ತದೆ. ನಮ್ಮ ಹೊರತು ಸದರಿ 3 ನಾಟಕಗಳನ್ನು ಆಡುವ ಹಕ್ಕು ಯಾರಿಗೂ ಯಾವ ರೀತಿಯಿಂದಲೂ ಇರುವದಿಲ್ಲ. ಹೀಗಿದ್ದು ಯಾರಾದರೂ ಸದರಿ ನಾಟಕಗಳನ್ನು ಆಡಿದರೆ, ಪ್ರಯೋಗಮಾಡಿದರೆ ಲುಕ್ಸಾನಿಗೆ ಗುರಿಯಾಗಬೇಕಾದೀತೆಂದು ಈ ನೋಟೀಸಿನ ಮೂಲಕವಾಗಿ ತಿಳಿಯಪಡಿಸಲಾಗಿದೆ.

K. Jatteppa,
ಮಾಲಕ

ಮೊಕ್ಕಾಂ ಗದಗ,
ತಾ|| 12-2-1932.
ಶ್ರೀ ಹಾಲಸಿದ್ಧೇಶ್ವರ ಪ್ರಸಾದಿಕ ಲೋಕಸೇವಕ ನಾಟಕಮಂಡಳಿ, ಹಲಗೇರಿ.

[8—7]

ನೋಟೀಸು.

ಶ್ರೀ ವೀರಭದ್ರೇಶ್ವರ ಪ್ರಾಸಾದಿಕ ನಾಟಕಮಂಡಳಿ ಮಾಲಕ ಮರುಳಸಿದ್ದಯ್ಯ ಮೊರಬ ತಾಲ್ಲೂಕು ಕೂಡ್ಲಿಗಿ ಜಿ|| ಬಳ್ಳಾರಿ ಇವರಿಗೆ ಕೆಳಗೆ ಸಹಿಮಾಡಿದವರ ಕಡಿಂದಾ ಈ ನೋಟೀಸಿನ ಮೂಲಕವಾಗಿ ತಿಳಿಸುವದೇನೆಂದರೆ—ನೀವು, ನಮ್ಮ ಕಂಪನಿಯ ಹಕ್ಕುಬಾಧ್ಯತೆಯುಳ್ಳ "ಸ್ತ್ರೀ" "ಬಿ. ಎ." ನಾಟಕಗಳನ್ನು ಪ್ರಯೋಗಮಾಡಿ ಆಡುತ್ತಿರುವದಾಗಿ ನಮಗೆ ತಿಳಿದುಬಂದಿದೆ. ಈ ನಾಟಕಗಳನ್ನು ಆಡಲು ನಮ್ಮ ಹೊರ್ತು ಬೇರೆ ಯಾವ ಜನರಿಗೂ ಹಕ್ಕುಬಾಧ್ಯತೆ ಇರುವದಿಲ್ಲ. ನಮ್ಮ ಪರವಾನಗಿ ಇಲ್ಲದೆ ನಾಟಕವಾಡಿ ನೀವು ಕಾಯಿದೇ ವಿರುದ್ಧವಾಗಿ ನಡೆದಿರುತ್ತೀರಿ. ನೀವು ಈ ನೋಟೀಸು ಮುಟ್ಟಿದ 1 ತಿಂಗಳೊಳಗಾಗಿ ನಮಗೆ ಭೆಟ್ಟಿಯಾಗಿ ಸದರಿ ನಾಟಕಗಳನ್ನು ರೂಲ್ಸಿಗೆ ವಿರುದ್ಧವಾಗಿ ಆಡಿದ ಬಗ್ಗೆ ನಾವು ಠರಾಯಿಸಿದಷ್ಟು ರಕಮು ಲುಕ್ಸಾನ ಕೊಟ್ಟು ಹೋಗಬೇಕು. ನೀವು ಇದಕ್ಕೆ ತಪ್ಪಿದರೆ ನಿಮ್ಮ ಮೇಲೆ ಕಾಯಿದೇ ಪ್ರಕಾರ ಯೋಗ್ಯ ಇಲಾಜ ನಡಿಸುವದರಲ್ಲಿ ಬರುವದು. ಈ ನೋಟೀಸಿನ ಖರ್ಚು ನಿಮ್ಮ ತಲೆಯಮೇಲೆ ಅದೆ, ತಿಳಿಯುವದು.

[8—7]

K. Jatteppa,
ಮಾಲಕ

ಮುಕ್ಕಾಂ ಗದಗ,
ತಾ|| 12-2-1932.
ಶ್ರೀ ಹಾಲಸಿದ್ಧೇಶ್ವರ ಪ್ರಸಾದಿಕ ಲೋಕಸೇವಕ ನಾಟಕಮಂಡಳಿ, ಹಲಗೇರಿ.

೧೯೩೨ ನೆಯ ಇಸವಿ ಏಪ್ರಿಲ್ ತಾ|| ೧೮ರಿಂದ ಏಪ್ರಿಲ್ ತಾ|| ೨೪ರ ವರೆಗೆ ಕಲ್ಪನ ಶಾಲಿವಾಹನಶಕ ೧೮೫೪ ನೆಯ ಅಂಗಿರಸನಾಮಸಂವತ್ಸರದ ಚೈತ್ರ ಶುದ್ಧ ದ್ವಾದಶಿಯಿಂದ ಚೈತ್ರ ಬಹುಳ ಚೌತಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮೇಷ ಮಾಸ
18	ಸೋಮ	ದ್ವಾದ	9-3	ಉತ್ತ	55-20	6
19	[1] ಮಂಗಳ	ತ್ರ-ಚ	3-44-54-26	ಹಸ್ತ	51-28	7
20	[2] ಬುಧ	ಪೌರ್ಣ	52-2	ಚಿತ್ತ	47-16	8
21	ಗುರು	ಪಾಡ್ಯ	45-51	ಸ್ವಾತಿ	43-2	9
22	ಶುಕ್ರ	ಬಿದಿ	39-53	ವಿಶಾ	38-58	10
23	[3] ಶನಿ	ತದಿ	34-16	ಅನೂ	35-15	11
24	ಭಾನು	ಚೌತಿ	29-13	ಜ್ಯೇಷ್ಠ	32-6	12

(1) ಮಳೆನಕ್ಷತ್ರ-ಅಶ್ವಿನಿ ೩ ನೆಯಪಾದ. (2) [illegible] [illegible]. (3) ಮಳೆನಕ್ಷತ್ರ-ಅಶ್ವಿನಿ ೪ ನೆಯ ಪಾದ.

ಮೈಸೂರು: ಕೃ. [illegible] ಮುದ್ರಿಸಿ ಪ್ರಕಾಶಿಸಲ್ಪಟ್ಟಿತು.

ಮೈಸೂರ್ ಸ್ಟಾರ್

REG N. O. M. 124

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮುಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ ನಹೃತ್ಕ ಮೋಹರಾಜೀಯಃ |
ಶ್ರೀಮತ್ಕೃಷ್ಣನೃಪಾಲಸುತ ಮುಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧು [illegible] |
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮುಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋ[illegible] ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಬಿಡಿ ಪ್ರತಿಗೆ [illegible]-೦]

ಸಂಪುಟ ೪೫] ಮೈಸೂರು ಸ್ಟಾರ್ ಸ್ ೧೯೩೨ ನೆಯ ಇಸವಿ ಏಪ್ರಿಲ್ ತಾರೀಖು ೧೮ ನೆಯ ಸೋಮವಾರ [ಸಂಚಿಕೆ ೧೭

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place for insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries, Economic Superintendents, Helpers and the Insurance Office, Public Office Buildings Bangalore.

[50—41]

(Sd.) S. SHA MANNA,
Secretary, Insurance Committee.

ನೋಟೀಸು.

ಬೆಂಗಳೂರು ಮತ್ತು ಮೈಸೂರು ಪುರನಿವಾಸಿಗಳಿಗೆ ವಿಜ್ಞಾಪನೆ—ಈ ಪಟ್ಟಣಗಳಲ್ಲಿ ಈಚೆಗೆ ದೊಡ್ಡ ಬೆಳಕುಗಳ ಡೂಮುಗಳನ್ನು (ornamental Lamp Domes) ತುಂಟರು ಒಡೆಯುತ್ತಿದ್ದಾರೆ. ಇದರ ಕ್ರಯ ಒಂದಕ್ಕೆ ಸುಮಾರು ೫೦ ರೂಪಾಯಿ ಆಗುತ್ತೆ.

ದೇಶಾಭಿಮಾನಿಗಳಾದ ನೀವು ಯಾರಾದರು ಅದನ್ನ ನೋಡಿದ ಪಕ್ಷದಲ್ಲಿ ಹತ್ತಿರವಿರುವ ಪೊಲೀಸು ಸ್ಟೇಷನ್ನಿಗಾಗಲಿ ಅಥವಾ ನಮಗಾಗಲಿ ತಿಳಿಸಿದರೆ ನಾವು ಬಹಳ ಕೃತಜ್ಞರಾಗುತ್ತೇವೆ.

ಸಿ. ಎಂ. ಕರಿಯಪ್ಪ,
ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್.

[4—3]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ವಿರಾಜಪೇಟೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಸಕ್ಕಾಗಿ ಕ್ಷೀಣರಾಗಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ | ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳಿರಿ.

ರಜಿ] ವಜ್ರಾಂಗ ಸುಂದರಪಾಕದ. [ಷ್ಟರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಡ್ಲ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಕ್ಷಣಿಕ ವೀರ್ಯಸ್ಖಲನ, ಪ್ರಮೇಹ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು, ನಿದ್ದೆ ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀಕ ತರುಣರಂತೆ ಕಾಮಚ್ಛಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧೀ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ಗೋಲಿಯ ಒಂದು ಡಬ್ಬಿಗೆ ೫| ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳ್ಸೀಸು ಪಾಕದ ತೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೇ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಡಿಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಪ್ಪಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ಗೋಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[illegible]

ಪತ್ತೆ ಮಾಹಿತ:—ವೈದ್ಯ ವಿ. ಎಸ್. ಕಾಪಸೆ. ಮು. ಪೋ. ವಿರಾಜ. ಎಂ. ಎಸ್. ಎಂ.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರಾಸ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ:	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ:	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲತಂತ್ರ	೦—೫—೦	೦—೧೦—೦
ಹರಿಜಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೬—೦	೦—೧೩—೦
ಸಟೀಕ ಕರ್ಣಾಟಕಶಬ್ದಮಂಜರಿ	೦—೬—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕೆಲವು ಲಕ್ಷ್ಯ, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ [illegible]

(Registerd Trade Mark)

[illegible]

ಸಾಧಾರಣ ನಶ್ಯಕ ಸಂಗಡ ಈ ಸುಗಂಧ ನಶ್ಯದ ಪುಡಿಯನ್ನು [illegible]

[illegible]

ವಿಳಾಸ—ಗುರುಬಸವ ಅಂಡ್ ಕಂಪನಿ [illegible]

[0—00] ಪೋ. ಬಾ. [illegible]

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಏಪ್ರಿಲ್ ತಾ|| ೧೧ ನೆಯ ಸೋಮವಾರ.

ELECTORAL REFORMS

Now and again some of the defects in the present system of election has been brought to the notice of the Government. In particular, the system of plural constituencies has been adversely commented upon as one which leads to a lot of unhealthy spirit among the candidates standing in each constituency. Combinations of an unholy character between candidates and each candidate trying to mislead the others by promising support while actually canvassing either single votes or votes in combination with another candidate these are some of the ugly features of the system. Very rarely is there a straight fight between candidates in these elections. This is the very reason why Great Britain has done away with the system of plural constituencies. This reform is necessary only so for as elections to the Representative Assembly and from the Representative Assembly to the Legislative Council are concerned. The direct Elections to the Legislative Council are all through single constituencies. It is easy to divide a plural constituency into two or three or four single constituencies as the case may be. This reform is needed equally in regard to the constituencies in Municipalities. As regards the elections from the Representative Assembly to the Legislative Council is concerned the difficulty cannot be overcome by any conversion to single constituencies, unless it be by dividing the members among the different districts, but such a division may not be a very desirable one. Other ways may have to be devised such as proportional representation where by strength of votes is determined by the rank which each of the candidates is given in the voting paper. These are some of the lines of reform which we would submit to Government as being very desirable and necessary.

ಮಾಳವ್ಯರ ಸೆರೆ-ದೇವಿಯರ ಕೈದು

ಕಳೆದ ಶನಿವಾರ ದಿಲ್ಲಿಯಲ್ಲಿ ನೆರೆಯಲು ಗೊತ್ತಾಗಿದ್ದ ಕಾಂಗ್ರೆಸ್ ಮಹಾಸಭೆಯ 47 ನೆಯ ವರ್ಷದ ಅಧಿವೇಶನದಲ್ಲಿ ಅಧ್ಯಕ್ಷತೆಯನ್ನು ವಹಿಸುವುದಕ್ಕಾಗಿ ಪಂಡಿತ ಮದನಮೋಹನ ಮಾಳವ್ಯರವರು ತಮ್ಮ ಕುಮಾರ ಗೋವಿಂದ ಕಾಂತಮಾಳವ್ಯ, ಮೊಮ್ಮಗ ಶ್ರೀಧರಮಾಳವ್ಯ, ಮೋತಿಲಾಲರ ಅಳಿಯ ಎಸ್. ಆರ್. ಪಂಡಿತ, ಡಾ|| ಮಂಗಳಸಿಂಗು ಮತ್ತೆ ಕೆಲರೊಡನೆ ತಾ|| 22 ರಲ್ಲಿ ಕಾಶಿಯಿಂದ ರೈಲ ಬಂಡಿಯಲ್ಲಿ ದಿಲ್ಲಿಗೆ ಪ್ರಯಾಣಮಾಡಿ ದಿಲ್ಲಿಯಿಂದ 41 ಮೈಲು ದೂರದಲ್ಲಿರುವ ಡಂಕರು ಸ್ಟೇಷನ್ನಿನಲ್ಲಿಳಿದು ಮೋಟಾರು ಬಂಡಿಗಳಲ್ಲಿ ಕುಳಿತು ದಿಲ್ಲಿಗೆ ಬರುತ್ತಿದ್ದರು ಜಮುನಾನದಿಯ ಸೇತುವೆಯ ಮೇಲೆ ದಿಲ್ಲಿಯ ಮೆಜಿಸ್ಟ್ರೇಟ್ ಸರ್ದಾರ್ ಅಬ್ದುಸ್‌ಸಮದ್‌ರವರು ಪಂಡಿತರ ಬಂಡಿಯನ್ನು ತಡೆದು ನಿಲ್ಲಿಸಿ ದಿಲ್ಲಿ ಪಟ್ಟಣವನ್ನು ಪ್ರವೇಶಿಸಕೂಡದೆಂಬ ಬಗೆಗೆ ತಡೆಯ ನೋಟೀಸನ್ನು ಅವರಿಗೆ ಕೊಟ್ಟರು. ಈ ಅಪ್ಪಣೆಯನ್ನು ಅಂಗೀಕರಿಸಲು ನಿರಾಕರಿಸಿದುದರಿಂದ ಪಂಡಿತರನ್ನೂ ಅವರ ಸಂಗಡಿಗರನ್ನೂ ಸೆರೆಹಿಡಿದು ಮೋಟಾರು ಲಾರಿಯಲ್ಲಿ ಕುಳ್ಳಿರಿಸಿಕೊಂಡು ಸೆಂಟ್ರಲ್ ಜೈಲಿಗೆ ಕರೆದುಕೊಂಡು ಹೋದರು.

ಸರೋಜಿನಿದೇವಿಯರಿಗೆ ಕೈದು

ದೇವಿಯವರು ಬೊಂಬಾಯಿ ಪಟ್ಟಣವನ್ನು ಈ ತಿಂಗಳ ಅಂತ್ಯದವರೆಗೂ ಎಲ್ಲಿಗೂ ಹೋಗಕೂಡದೆಂದು ಚೀಫ್ ಕಮಿಷನರು ಕಟ್ಟಪ್ಪಣೆಮಾಡಿದ್ದರು. ದೇವಿಯವರು ಕಳೆದ ಶುಕ್ರವಾರ ರಾತ್ರಿ ಬೊಂಬಾಯಿನ ವಿಕ್ಟೋರಿಯಾ ಸ್ಟೇಷನ್ನಿನಲ್ಲಿ ರೈಲು ಬಂಡಿಯನ್ನು ಹತ್ತಿ ದಿಲ್ಲಿಗೆ ಪ್ರಯಾಣಮಾಡಿದರು. ಸ್ಟೇಷನ್ನಿನಲ್ಲಿ ಕಾಂಗ್ರೆಸಿನ ಅನೇಕ ಮಂದಿಗಳು ದೇವಿಯರಿಗೆ ಪುಷ್ಪಮಾಲಿಕೆಗಳನ್ನಿತ್ತು ಜಯಘೋಷವನ್ನು ಮಾಡಿ ಸಾಗಕಳುಹಿಸಿಕೊಟ್ಟರು. ರೈಲು ಬಂಡಿಯು ಬೊಂಬಾಯಿಗೆ 10 ಮೈಲು ದೂರದಲ್ಲಿರುವ ಬಾಂದ್ರಾ ಸ್ಟೇಷನ್ನಿನಲ್ಲಿ ಅಪೂರ್ವವಾಗಿ ನಿಲ್ಲಿಸಲ್ಪಟ್ಟಿತು. ಅದೇ ಬಂಡಿಯಲ್ಲಿ ಪ್ರಯಾಣಮಾಡಿ ಬಂದ ಬೊಂಬಾಯಿ ಪೋಲೀಸು ಡೆಪ್ಯುಟಿಕಮಿಷನರೂ, ಸೂಪರಿಂಟೆಂಡೆಂಟರೂ ಬಂಡಿಯಿಂದಿಳಿದು ದೇವಿಯವರು ಕುಳಿತಿದ್ದ ಬಂಡಿಯ ಹತ್ತಿರಕ್ಕೆ ಬಂದು ದೇವಿಯವರಿಗೆ ವಂದನೆ ಮಾಡಿ ನಿಮ್ಮನ್ನು ಅರೆಸ್ಟು ಮಾಡಿದ್ದೇವೆಂದು ಹೇಳಿದರು. "ನಿಮ್ಮ ಸಂಗಡ ಬರಲು ನಾನು ಸಿದ್ಧಳಾಗಿರುತ್ತೇನೆ" ಎಂದು ದೇವಿಯವರು ಮುಗುಳು ನಗೆಯಿಂದ ಹೇಳಿ ಡಿ|| ಕಮಿಷನರ ಹಸ್ತವನ್ನು ಹಿಡಿದುಕೊಂಡು ಬಂಡಿಯಿಂದ ಕೆಳಕ್ಕಿಳಿದರು. ಅವರ ಸಾಮಾನನ್ನು ಕೂಲಿಯವನ ಕೈಲಿ ಹೊರಿಸಿಕೊಂಡು ಮೋಟಾರುಬಂಡಿಯಲ್ಲಿರಿಸಿ ಡಿ|| ಕಮಿಷನರು ದೇವಿಯವರನ್ನು ಮೋಟಾರು ಬಂಡಿಯಲ್ಲಿ ಕುಳ್ಳಿರಿಸಿಕೊಂಡು ಬೊಂಬಾಯಿ ಪಟ್ಟಣಕ್ಕೆ ಬಂದು ಆ ರಾತ್ರಿ ತಾಜ್‌ಮಹಲ್ ಹೋಟಲಿನಲ್ಲಿ ಬಿಟ್ಟಿದ್ದು ಮಾರನೆಯ ಬೆಳಿಗ್ಗೆ 11½ ಘಂಟೆಗೆ ಪ್ರಧಾನ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದರು. ಅಪಾದಿತರಾದ ದೇವಿಯವರು ಚೀಫ್ ಕಮಿಷನರಾಜ್ಞೆಯನ್ನು ಹೇಗೆ ಉಲ್ಲಂಘಿಸಿ ನೆನ್ನೆಯ ರಾತ್ರಿ ಬೊಂಬಾಯಿಪಟ್ಟಣವನ್ನು ಬಿಟ್ಟು ಪ್ರಯಾಣಮಾಡಿದರೆಂಬ ಬಗೆಗೆ ಡೆಪ್ಯುಟಿ ಪೋಲೀಸು ಕಮಿಷನರು ಸಾಕ್ಷ್ಯವನ್ನು ನುಡಿದುದರಮೇಲೆ ತಾವು ಹೇಳತಕ್ಕುದೇನೂ ಇಲ್ಲವೆಂದು ದೇವಿಯವರುತ್ತರ ಕೊಟ್ಟರು. ಅದರ ಮೇಲೆ ಮೆಜಿಸ್ಟ್ರೇಟರು ಎಮರ್ಜೆನ್ಸಿ ಆರ್ಡರ್ 21 ನೆಯ ಸೆಕ್ಷನ್ ಪ್ರಕಾರ 1 ವರ್ಷ ಸಾಧಾರಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿ ಅವರ ಆರೋಗ್ಯ ನೆಟ್ಟಗಿಲ್ಲದಿರುವುದರ ಮೇಲೆ ಎ ತರಗತಿಯಲ್ಲಿರಿಸಬೇಕಾಗಿ ಮೆಜಿಸ್ಟ್ರೇಟರು ಅಪ್ಪಣೆಮಾಡಿದರು. ಪಂಡಿತರ ಆಜ್ಞೋಲ್ಲಂಘನದ ವಿಚಾರಣೆಯು ಈ ದಿವಸ ನಡೆದು ಅದರ ಪರಿಣಾಮವು ಗೊತ್ತಾಗಬೇಕಾಗಿದೆ. ಮಹಾಸಭೆಯ ಪ್ರತಿನಿಧಿಗಳಾಗಿ ಬಂಗಾಳಾ, ಸಂಯುಕ್ತಪ್ರಾಂತ ಅಲಹಾಬಾದು, ಗುಜರಾತು, ಪಂಜಾಬು ಕಲಕತ್ತಾ ಮೊದಲಾದ ಸ್ಥಳಗಳಿಂದ ಹೊರಡುವಾಗಲೂ ಹೊರಟು ದಿಲ್ಲಿಯನ್ನು ಸೇರಿದಾಗಲೂ ನೂರಾರು ಮಂದಿಗಳು ಸೆರೆ ಹಿಡಿಯಲ್ಪಟ್ಟರು.

ಅಕ್ರಮಕೂಟಕ್ಕಾಗಿ ಅರ್ಥದಂಡ

ಕನ್ನರ ಎಂಬಲ್ಲಿ ಅಕ್ರಮ ಸಭೆ ಸೇರಿದ್ದರೆಂಬ ಅಪರಾಧಕ್ಕಾಗಿ ಪೆಷಾವರಿಗೆ ಸೇರಿದ 4 ಗ್ರಾಮಗಳವರಿಗೆ 630 ರೂ. ಮತ್ತೆ 7 ಗ್ರಾಮಗಳವರಿಗೆ 245 ರೂ. ಗಳು ದಂಡವು ಗಡಿನಾಡಿನ ಆರ್ಡಿನಾನ್ಸಿನ ಪ್ರಕಾರ ವಿಧಿಸಲ್ಪಟ್ಟಿತು.

ಸತ್ಯಮೂರ್ತಿಯವರ ಅಸ್ವಸ್ಥತೆ

ವೆಲ್ಲೂರು ಜೈಲಿನಲ್ಲಿರುವ ಮ|| ಸತ್ಯಮೂರ್ತಿಯವರು ಅಸ್ವಸ್ಥರಾಗಿ ಔಷಧಿಯನ್ನು ಸೇವಿಸುತ್ತಿರುವರು. ಈ ಕಾರಣದಿಂದ ಇವರ ಶರೀರದ ತೂಕವು ಜೈಲನ್ನು ಪ್ರವೇಶಿಸಿದಾಗ್ಗೆ 132 ಪೌಂಡಿದ್ದುದು ಈಗ 125 ಪೌಂಡಿಗಿಳಿದಿರುತ್ತದೆ.

ಕಾಂಗ್ರೆಸಿನವರಿಗೆ ಭೋಜನ ಮಾಡಿಸಿದ್ದಕ್ಕಾಗಿ ಶಿಕ್ಷೆ

ನಾಗಪುರದಲ್ಲಿ ಶ್ರೀಮಂತನೂ ಬ್ಯಾಂಕರೂ ಆದ ಕಾಳೀಚರಣ ಎಂಬಾತನು ಕಾಂಗ್ರೆಸು ವಾಲಂಟಿಯರುಗಳಿಗೆ ಭೋಜನ ಮಾಡಿಸಿದುದಕ್ಕಾಗಿ 6 ತಿಂಗಳು ಕಠಿಣ ಸಜಾ ಮತ್ತು 1000 ರೂ. ದಂಡ ವಿಧಿಸಲ್ಪಟ್ಟನು. ಈತ ಅಪೀಲು ಮಾಡಿರುತ್ತಾನೆ.

ಕೋರ್ಟಿನ ತಾರಸಿ ಬಿದ್ದು ೧೫ ಜನರು ಹತರಾದರು

ಫ್ರಾನ್ಸಿಗೆ ಸಮೀಪವಾಗಿ ಮಧ್ಯಧರಾ ಸಮುದ್ರದೊಳಗಿರುವ ಕಾರ್ಶಿಕಾಕ್ಕೆ ಸೇರಿದ ಬಸ್ತಿ ಎಂಬಲ್ಲಿ ಒಂದು ಕೋರ್ಟಿನ ತಾರಸಿಯು ಕುಸಿದು ಬಿದ್ದುಹೋಗಿ ಅದರ ಕೆಳಗೆ ಕುಳಿತಿದ್ದ ಮೆಜಿಸ್ಟ್ರೇಟರುಗಳು, ಬ್ಯಾರಿಸ್ಟರುಗಳು, ಸಾಕ್ಷಿಗಳು, ಪ್ರೇಕ್ಷಕರುಗಳಲ್ಲಿ 15 ಮಂದಿ ಸತ್ತುಹೋದರು.

ಮಗುವನ್ನು ಬದುಕಿಸಲು ನೀರಿನಲ್ಲಿ ಬಿದ್ದು ಸತ್ತ

ಪಾರ್ಲಿಮೆಂಟು ಮೆಂಬರಾದ ಸರ್ ಗಾಡ್‌ಫ್ರಿ ಕಾಲಿನ್ಸ್‌ರವರ ಮಗ ಅಲೆಕ್ಸಾಂಡರ್ ಕಾಲಿನ್ಸ್ ಎಂಬಾತನು ತನ್ನ ಕಂಕಳಿನಲ್ಲಿದ್ದ ಮಗುವು ಲಂಡನ್ ನಗರದ ಥೇಮ್ಸ್ ನದಿಯೊಳಕ್ಕೆ ಬಿದ್ದುಹೋಗಲು ಅದನ್ನು ರಕ್ಷಿಸುವುದಕ್ಕಾಗಿ ನದಿಯೊಳಕ್ಕೆ ದುಮುಕಿ ಮೃತನಾದನು. ಪೋಲೀಸರು ಅವನ ಶವವನ್ನು ತಡಕಿ ನದಿಯ ಮೇಲಿಕ್ಕೆ ತಂದರು.

ಮೀಸೆಗಾಗಿ ನಿರಶನ ವ್ರತ

ಅಕೋಲಾ ಜೈಲಿನಲ್ಲಿ ಬಂದಿಯಾಗಿರುವ ಸಂಪತರಾವ್ ಭೂಸ್ಕಾಟ್ ಎಂಬಾತನ ಮೀಸೆಯನ್ನು ಬೋಳಿಸಲು ಜೈಲಿನ ಅಧಿಕಾರಿಗಳು ಪ್ರಯತ್ನಿಸಿದಾಗ ಮೀಸೆಯನ್ನು ಈಗಲೇ ತೆಗಿಸಬೇಡಿ ಶ್ರೀರಾಮನವಮಿಯವರೆಗೆ ಇಟ್ಟುಕೊಂಡಿರಲು ಅವಕಾಶ ಕೊಡಬೇಕೆಂದು ಆತನು ಕೇಳಿಕೊಂಡಾಗ್ಯೂ ಮೀಸೆಯನ್ನು ಬೋಳಿಸಿದುದರಿಂದ ನಿರಶನವ್ರತವನ್ನು ಕೈಕೊಂಡಿರುವನು.

ಸತ್ಯವತಿಯ ಕೈದು

ಸ್ವಾಮಿ ಶ್ರದ್ಧಾನಂದರ ಮೊಮ್ಮಗಳು ಸತ್ಯವತಿಯವರಿಗೆ 18 ತಿಂಗಳ ಸಾದಾ ಸಜಾ ಮತ್ತು 100 ರೂ. ದಂಡ ಹಣ ಕೊಡದಿದ್ದಲ್ಲಿ ಇನ್ನು 6 ವಾರ ಸಾದಾಸಜಾ ವಿಧಿಸಲ್ಪಟ್ಟರು. ಈಕೆಯು ಇತಃಪರ ಈ ರೀತಿ ವರ್ತಿಸುವುದಿಲ್ಲವೆಂಬ ಭರವಸೆಯಿಲ್ಲದುದರಿಂದ ದೀರ್ಘಕಾಲ ಶಿಕ್ಷೆಯನ್ನು ವಿಧಿಸಬೇಕಾಗಿ ಬಂದಿತೆಂದು ಮೆಜಿಸ್ಟ್ರೇಟರು ತೀರ್ಪಿನಲ್ಲಿ ಬರೆದಿರುತ್ತಾರೆ. ಫಾತಿಮಾಬೀಗಮ್ಮಳಿಗೂ ಇದೇ ಶಿಕ್ಷೆ ವಿಧಿಸಲ್ಪಟ್ಟಿತು.

ಭಾರತದಲ್ಲಿ ಗೋಧಿ ಬೆಳೆ

ಒಟ್ಟು ಭಾರತ ದೇಶದೊಳಗೆ 1931-32ನೆಯ ವರ್ಷದಲ್ಲಿ 3,39,07,000 ಎಕರೆ ಭೂಮಿಯಲ್ಲಿ ಗೋಧಿ ವ್ಯವಸಾಯ ಮಾಡಲ್ಪಟ್ಟಿರುವುದಾಗಿಯೂ, 93,12,000 ಟನ್ ಬೆಳೆ ಉತ್ಪನ್ನವಾಗುವುದಾಗಿಯೂ, 1930-31 ರಲ್ಲಿ 3,15,83,000 ಎಕರೆಯಲ್ಲಿ ಬೆಳೆಯಲ್ಪಟ್ಟದ್ದು 92,89,000 ಟನ್ ಫಸಲು ಬಂದಿದ್ದುದಾಗಿಯೂ, ಪರಿಸ್ಥಿತಿಯು ಅನುಕೂಲವಾಗಿರುವುದಾಗಿಯೂ ವರದಿಯಿಂದ ವ್ಯಕ್ತವಾಗುತ್ತದೆ.

ಸಿಡಿಲಿನಿಂದ ಮರಣ

ಧಾರವಾಡದ ಕಾಟನ್‌ಮಾರ್ಕೆಟ್ಟಿನಲ್ಲಿ ಸಿಡಿಲು ಬಿದ್ದು ಒಬ್ಬನು ಸತ್ತನು, ಮೂವರು ಅಪಾಯವನ್ನು ಹೊಂದಿ ಆಸ್ಪತ್ರೆಯ ಚಿಕಿತ್ಸೆಯಲ್ಲಿರುತ್ತಾರೆ. ಶಿರ್ಶಿಯಲ್ಲಿ ಪ್ರಚಂಡವಾಯುಮಿಶ್ರವಾಗಿ ಮಳೆ ಬಂದು ಸುಮಾರು 125 ಮನೆಗಳಿಗೆ ಅಪಾಯವುಂಟಾಯಿತು. ಅನೇಕ ಮರಗಳು ಬಿದ್ದುಹೋದುವು. ಇದೇ ಸಮಯದಲ್ಲಿ ಸಿಡಿಲು ಬಡಿದು ಒಬ್ಬ ಹುಡುಗಳು ಸತ್ತನು ಮತ್ತೆ 5-6 ಜನರು ಕೊಂಚ ಅಪಾಯವನ್ನು ಹೊಂದಿದರು.

ಕಳ್ಳರು ಗ್ರಾಮಸ್ತರನ್ನು ಕೊಂದುದು

ಅನೇಕ ದರೋಡೆಗಳನ್ನು ಮಾಡಿ ಪೋಲೀಸರಿಗೆ ಸಿಕ್ಕದೆ ತಡಕಲ್ಪಡುತ್ತಿದ್ದ ಬಹಳ ಪ್ರಖ್ಯಾತ ದರೋಡೆಗಾರನಾದ ಸೋಮ್ಯ ಮತ್ತು ಅವನ ಜತೆಗಾರರು ಕೆಲ ದಿವಸಗಳ ಹಿಂದೆ ಧಾರವಾಡ ತಾ|| ಚಂದನಮಟ್ಟಿ ಗ್ರಾಮಕ್ಕೆ ನುಗ್ಗಿ ಅನೇಕ ಮನೆಗಳನ್ನು ಸೂರೆಮಾಡಿ ಇಬ್ಬರು ಗ್ರಾಮಸ್ತರನ್ನು ಕೊಂದು ಕೆಲ ಹುಲ್ಲು ಬಣವೆಗಳಿಗೆ ಬೆಂಕಿಯನ್ನು ಹೊತ್ತಿಸಿ ಸುಟ್ಟು ಪಲಾಯನರಾದರು. ಪೋಲೀಸರು ಇವರನ್ನು ಹಿಡಿಯಲು ಸಾಹಸಪಡುತ್ತಿರುವರು.

ತಂದೆಯನ್ನು ಹೊಡೆದುದಕ್ಕಾಗಿ ಕೈ ಕತ್ತರಿಸಿದಳು

ಕಲ್ಲಿಕೋಟೆಗೆ ಸೇರಿದ ಒಂದು ಗ್ರಾಮದಲ್ಲಿ ಒಬ್ಬ ಮನುಷ್ಯನು ಮತ್ತೊಬ್ಬ ಮನುಷ್ಯನನ್ನು ಹೊಡೆದನು. ಹೊಡಿಸಿಕೊಂಡವನ ಮಗಳು ಕೋಪಾವಿಷ್ಟಳಾಗಿ ತನ್ನ ತಂದೆಯನ್ನು ಹೊಡೆದವನ ಬಲಗೈಯನ್ನು ಕತ್ತರಿಸಿ ತನ್ನ ಸೇಡನ್ನು ತೀರಿಸಿಕೊಂಡಳು. ಏಕೆ ಹೀಗೆ ಮಾಡಿದೆ ಎಂದು ಪ್ರಶ್ನಿಸುವಲ್ಲಿ ಮತ್ತಾರನ್ನೂ ಹೊಡೆಯದಿರಲೆಂದು ಆ ರೀತಿ ಮಾಡಿದುದಾಗಿ ಹೇಳಿದಳು. ಕೈ ಕಳೆದುಕೊಂಡವನು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವನು.

ಸೀಮೆಗೆ ಮಾವಿನಹಣ್ಣು ಕಳುಹಲ್ಪಡುವುದು

ಮರದ ಮೇಲೆ ಚೆನ್ನಾಗಿ ಬಲಿತಿರುವ ಬಾದಾಮಿ ಮಾವಿನ ಕಾಯಿಗಳಲ್ಲಿ ಅತ್ಯುತ್ಕೃಷ್ಟವಾದ 6 ಡಜನ್ ಕಾಯಿಗಳನ್ನು ಬೊಂಬಾಯಿ ಅಧಿಪತ್ಯದ ಹಣ್ಣಿನ ವ್ಯಾಪಾರಿ ಸಂಘದವರು ಸರ್ಕಾರಿ ತೋಟಗಳ ಸೂಪರಿಂಟೆಂಡೆಂಟರಿಂದಲೂ, ಡಾಕ್ಟರಿಂದಲೂ ಪರೀಕ್ಷಿಸಿ ಜೆಲ್ಲಿಕಾಗದಗಳಲ್ಲಿ ಸುತ್ತಿ ಗಾಳಿ ತಗಲದಂತೆ ಪ್ಯಾಕ್ ಮಾಡಿ ಹಡಗಿನೊಳಗೆ ಮಂಜಿನಷ್ಟು ಸೀತಳವಾದ ಕೊಠಡಿಯಲ್ಲಿಟ್ಟು ಕಳುಹಿಸಿಕೊಟ್ಟಿರುತ್ತಾರೆ. ಇವು ಕೆಡದೆ ಸುರಕ್ಷಿತವಾಗಿ ಲಂಡನ್ ನಗರವನ್ನು ತಲುಪಿದರೆ ಚಕ್ರವರ್ತಿಯವರಿಗೆ ಒಪ್ಪಿಸಲ್ಪಡುವುವು ಮತ್ತು ಮುಂದೆ ವಿಶೇಷವಾಗಿ ಹಣ್ಣುಗಳು ಕಳುಹಲ್ಪಡಲುಪಕ್ರಮವಾಗುವುದು. ಆಗ ಈ ಹಣ್ಣಿನ ಬೆಲೆಯು ಹೆಚ್ಚಿ ಈ ದೇಶೀಯರಿಗೆ ಪ್ರಿಯವಾಗಬಹುದೆಂದು ತೋರುತ್ತದೆ.

ಗದಗಿನ ವೀರಶೈವ ಶಾಸ್ತ್ರಿಗಳ ನಿಧನ

ಗದಗಿನಲ್ಲಿ ಅಗರ್ಭ ಶ್ರೀಮಂತರೂ ಸಂಸ್ಕೃತ ಪಂಡಿತರೂ ಆಗಿದ್ದ ಕೋಟಿ ಬಸವಪ್ಪಶಾಸ್ತ್ರಿಗಳು ಕೆಲ ಕಾಲದಿಂದ ಅಸ್ವಸ್ಥರಾಗಿದ್ದು ಕಳೆದ ತಾ|| 12 ರಲ್ಲಿ ಕೈಲಾಸವಾಸಿಗಳಾದರೆಂದು ತಿಳುಹಲು ವಿಷಾದವಾಗುತ್ತದೆ. ಇವರು ತರ್ಕ ವ್ಯಾಕರಣಾದಿಗಳಲ್ಲಿ ಪೂರ್ಣ ಪಂಡಿತರಾಗಿದ್ದರಲ್ಲದೆ ಆಂಗ್ಲಭಾಷೆಯನ್ನೂ ಚೆನ್ನಾಗಿ ಬಲ್ಲವರಾಗಿದ್ದು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಫಲಾಪೇಕ್ಷೆಯಿಲ್ಲದೆ ಪಾಠವನ್ನು ಹೇಳುತ್ತಿದ್ದರು. ಇವರಿಗೆ ಮರಣಕಾಲದಲ್ಲಿ 55 ವರ್ಷಗಳಾಗಿದ್ದವು. ಇಂಥಾ ಶ್ರೀಮಂತ ವಿದ್ವಾಂಸರ ನಿಧನದಿಂದ ಗದಗು ಪಟ್ಟಣಕ್ಕೇ ಅಲ್ಲದೆ ವೀರಶೈವ ಸಮಾಜಕ್ಕೇ ವಿಶೇಷ ನಷ್ಟವಾಗಿರುತ್ತದೆ. ಮೃತರ ಆತ್ಮಕ್ಕೆ ಶಾಂತಿಯೂ, ಅವರ ವಿಯೋಗದುಃಖಭಾಜನರಿಗೆ ಮನಸ್ಸಮಾಧಾನವೂ ಉಂಟಾಗಲೆಂದು ಕೋರುತ್ತೇವೆ.

೫೦೦೦ ರೂ. ನಗಗಳ ಅಪಹರಣ

ಹೂಗಲಿ ಡಿಸ್ಟ್ರಿಕ್ಟಿನಲ್ಲಿ ಪ್ರತಿ ದಿವಸವೂ ದರೋಡೆಯ ಸಮಾಚಾರವು ಬರುತ್ತಲೇ ಇದೆ. ಆರಂಬಾಗಿಗೆ ಸೇರಿದ ಕುರುಕುರಿ ಗ್ರಾಮದಲ್ಲಿ 24 ಮಂದಿ ಕಳ್ಳರು ಆಯುಧಗಳನ್ನೂ ಪಂಜುಗಳನ್ನೂ ಹಿಡಿದುಕೊಂಡು ಬಾಬುಗಣೇಶಚಂದ್ರ ಬೋಸ್ ಎಂಬಾತನು ಕಲಕತ್ತಾಕ್ಕೆ ಹೋಗಿರುವ ಸಮಯದಲ್ಲಿ ಅವನ ಮನೆಗೆ ನುಗ್ಗಿ ಬೋಸನ ಹೆಂಡತಿಯ ಮೈಮೇಲಿದ್ದ ನಗಗಳನ್ನು ಕಸದುಕೊಂಡು ಇತರರನ್ನು ಚೆನ್ನಾಗಿ ಪ್ರಹರಿಸಿದರು. ಅವರಲ್ಲೊಬ್ಬನು ಹೆದರಿಕೊಂಡು ಕಬ್ಬಿಣದ ಪೆಟ್ಟಿಗೆಯ ಬೀಗವನ್ನು ತೆಗೆದುಬಿಡಲು ಅದರೊಳಗಿದ್ದ ನಗನಾಣ್ಯಗಳನ್ನು ದೋಚಿಕೊಂಡರಲ್ಲದೆ ಭೂಮಿಯೊಳಗೆ ಹೂಳಿಟ್ಟಿದ್ದ ಪದಾರ್ಥಗಳನ್ನೂ ತೆಗೆದುಕೊಂಡು ಹೋದರು. ಒಟ್ಟು 5000 ರೂ. ಬೆಲೆಯ ನಗನಾಣ್ಯ ಮೊದಲಾದ ಪದಾರ್ಥಗಳು ಕಳುವಾಗಿರುವುದಾಗಿ ಊಹಿಸಲ್ಪಟ್ಟಿದೆ.

ಸ್ವರೂಪರಾಣಿಯವರ ಪ್ರಕಟನೆ

"ಕಳೆದ ತಾ|| 8 ನೆಯ ಶುಕ್ರವಾರ ಅಲಹಾಬಾದಿನಲ್ಲಿ ನಡೆದ ಜಾತೀಯವಾರೋತ್ಸವದಲ್ಲಿ ನಾನು ಕುರ್ಚಿಯಮೇಲೆ ಕುಳಿತಿರುವಾಗ್ಗೆ ಒಬ್ಬನು ನನ್ನನ್ನು ಕೆಳಕ್ಕುರುಳಿಸಿದನು. ಅವನು ಉದ್ದೇಶಗಿಯೆಂದೇ ತಿಳಿದಿರುವೆನು. ನನಗೆ ಬಹಳವಾಗಿ ಏಟುಗಳು ಬಿದ್ದುವು. ಕಡೆಯೇಟು ತಲೆಗೆ ತಗಲಿ ಗಾಯವಾಗಿ ರಕ್ತ ಸುರಿಯಿತು. ಆಗ ಸ್ತಬ್ಧವಾಗಿದ್ದೆನಲ್ಲದೆ ಸ್ಮೃತಿ ತಪ್ಪಿರಲಿಲ್ಲ. ನನ್ನ ಸೆಕ್ರೆಟರಿ ಉಪಾಧ್ಯಾಯರು ಪೋಲೀಸರ ಕೈಯಿಂದ ಬಿಡಿಸಿಕೊಂಡು ಬಂದು ನನ್ನನು ಅಲ್ಲಿಂದ ಕರೆದುಕೊಂಡು ಹೋದರು. ನಿಜಸ್ಥಿತಿಯು ಹೀಗಿರುವಲ್ಲಿ, ಜನರ ನೂಕಾಟದಿಂದಲೋ ಅವರೆಸೆದ ಕಲ್ಲುಗಳೇಟಿನಿಂದಲೋ ನನಗೆ ಗಾಯವಾಗಿ ಸ್ಮೃತಿ ತಪ್ಪಿದ್ದಿತೆಂದು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಪ್ರಕಟಿಸಿರುತ್ತಾರೆ. ಇದು ಅಸತ್ಯವು" ಎಂದು ಶ್ರೀಮತಿ ಸ್ವರೂಪರಾಣಿಯವರು ಪ್ರಸಿದ್ಧಗೊಳಿಸಿರುವರು.

ಸಿನೆಮಾ ನಟನು ಗಂಡಾಂತರದಿಂದ ಪಾರಾದುದು

"ಭಾರತ ದೇಶದ ಆತ್ಮನಿರೂಪಣ" ಎಂಬ ಒಂದು ದೊಡ್ಡ ಫಿಲ್ಮು ತಯಾರಿಸಲ್ಪಡುತ್ತಿದೆ. ಭಾರತ ದೇಶದ ಪ್ರಕೃತಿ ಸೌಂದರ್ಯವನ್ನೂ, ಗಾಂಭೀರ್ಯವನ್ನೂ ಪ್ರದರ್ಶಿಸುವ ಅರಣ್ಯ ಭೂಮಿಗಳು ಈ ಕಥೆಯಲ್ಲಿ ಮುಖ್ಯ ರಂಗಗಳಾಗಿವೆ. ಈ ರಂಗಸ್ಥಳಗಳ ಸಹಜವಾದ ಫೋಟೋಗಳನ್ನು ತೆಗೆಯುವುದಕ್ಕಾಗಿ ಒಂದು ದಟ್ಟವಾದ ಅರಣ್ಯದಲ್ಲಿ ನಾಟಕವಾಡಿಸಲ್ಪಟ್ಟು ಫೋಟೋಗಳು ತೆಗೆಯಿಸಲ್ಪಡುತ್ತಿವೆ. ಈ ಅರಣ್ಯದಲ್ಲಿ ನಡೆಯುವ ನಾಟಕದಲ್ಲಿ ಪಾತ್ರಗಳನ್ನು ವಹಿಸಲು 2000 ಮಂದಿ ಸುಪ್ರಸಿದ್ಧ ನಾಟಕಾಭಿನೇತೃಗಳು ಸ್ವದೇಶ ಸಂಸ್ಥಾನಗಳಿಂದ ಬರಮಾಡಲ್ಪಟ್ಟಿರುತ್ತಾರೆ. ಅರಣ್ಯದೊಳಗೆ ಕಥಾಕಲಾಪವು ನಡೆಯುತ್ತಿರುವಾಗ ಸುಪ್ರಸಿದ್ಧ ನಟನಾದ ಷೇಕ್ ಇಫ್ತೆಕಾರ್ ರಸೂಲ್ ಎಂಬಾತನ ಗುಡಿಸಿಲಿಗೆ ಒಂದು ಚಿರತೆಯು ನುಗ್ಗಿ ಆತನಿಗೆ 2-3 ಅಂಗುಲ ದೂರದಲ್ಲಿ ಬಂದುನಿಂತಿತು. ಅಷ್ಟರಲ್ಲಿ ತುಪಾಕಿಯು ಹಾರಿಸಲ್ಪಟ್ಟು ಚಿರತೆಯು ಕೊಲ್ಲಲ್ಪಟ್ಟಿತು. ಇದರಿಂದ ರಸೂಲನಿಗೆ ಪ್ರಾಣಗಂಡ ತಪ್ಪಿತು.

ಸಂಸ್ಥಾನಗಳ ವಿಚಾರಣಾ ಸಂಘ

ಈ ಸಂಘದವರು ಸಿಮ್ಲಾಕ್ಕೆ ಹೋದಾರಭ್ಯ ಭಾವಲಪುರ, ಮಂಡೀ, ಮಾರ್ಲ್ ಕೋಟ್ಲಾ, ಸಿರ್‌ಮೂರ್, ಮೊದಲಾದ ಸಂಸ್ಥಾನಗಳ ಪ್ರತಿನಿಧಿಗಳ ಕೂಡ ಅನೇಕ ವೇಳೆ ಚರ್ಚೆಯನ್ನು ಮಾಡಿ ಅಸಾಮಿಗೆ ಸೇರಿದ ಮಣಿಪುರ ಸಂಸ್ಥಾನ ಪ್ರತಿನಿಧಿಗಳೊಡನೆ ಮಾತನಾಡಿದರು. ತಾ|| 16 ರಲ್ಲಿ ಪಾಟಿಯಾಲಾ ಮಹಾರಾಜರೊಡನೆಯೂ, ಅವರ ಇಬ್ಬರು ಮಂತ್ರಿಗಳೊಡನೆಯೂ ಪ್ರಸ್ತಾವಿಸಿದರು. ಇಲ್ಲಿಗೆ ಸಂಸ್ಥಾನಾಧೀಶ್ವರರ ಪ್ರತಿನಿಧಿಗಳ ಕೂಡ ಮಾತನಾಡುವುದು ಪೂರ್ತಿಯಾಯಿತು. ಒಟ್ಟಿನಲ್ಲಿ 88 ಸಂಸ್ಥಾನಗಳ ಪ್ರತಿನಿಧಿಗಳೊಡನೆ ಮಾತನಾಡಿದಂತಾಯಿತು. ಇದಲ್ಲದೆ ಸಿಮ್ಲಾ ಬೆಟ್ಟದಮೇಲಿರುವ ಚಿಕ್ಕ ಸಂಸ್ಥಾನಗಳ, ಬೊಂಬಾಯಿಗೆ ಸೇರಿದ ಕಾಥಿ ಮೊದಲಾದ ಚಿಕ್ಕ ಸಂಸ್ಥಾನಗಳ ಪ್ರತಿನಿಧಿಗಳ ಸಂಗಡ ಮಾತನಾಡಿದುದೂ ಆಯಿತು. ತಾವೇ ಸ್ವತಃ ಮಾತನಾಡಲಿಕ್ಕೆ ಪ್ರಮೇಯವಾಗಲಿ ಅವಕಾಶವಾಗಲಿ ಇಲ್ಲದ ಸಂಸ್ಥಾನಗಳ ಪ್ರತಿನಿಧಿಗಳಿಂದ ಸಂಘದವರು ಲಿಖಿತಮೂಲಕವಾಗಿ ಅವರುಗಳ ಅಭಿಪ್ರಾಯವನ್ನು ತರಿಸಿಕೊಂಡಿರುವರು. ಇನ್ನು ಅಧಿಕಾರಿಗಳ ಸಾಕ್ಷ್ಯವನ್ನು ಕೇಳಿ ಈ ಏಪ್ರಿಲ್ ತಾ|| 30 ರಲ್ಲಿ ಬೊಂಬಾಯಿನಿಂದ ಸೀಮೆಗೆ ಪ್ರಯಾಣಮಾಡುವರಾಗಿ ತಿಳಿಯಬರುತ್ತದೆ.

ಸ್ಥಳೀಯ ಸಂಸ್ಥೆಗಳ ಪತ್ರಿಕೆ

ಡಿಸ್ಟ್ರಿಕ್ಟು ಬೋರ್ಡು, ಮ್ಯುನಿಸಿಪಾಲಿಟಿ ಗ್ರಾಮಪಂಚಾಯತಿ ಮೊದಲಾದ ಸ್ಥಾನಿಕ ಸ್ವಪರಿಪಾಲನ ಸಂಸ್ಥೆಗಳ ಕಾರ್ಯಕಲಾಪಗಳನ್ನು ಸಮಗ್ರವಾಗಿ ಪ್ರಜೆಗಳು ದೈನಿಕ ಮತ್ತು ಸಾಪ್ತಾಹಿಕ ಪತ್ರಿಕೆಗಳ ಮೂಲಕ ತಿಳಿಯಲು ಅವಕಾಶವಿಲ್ಲದೆ ತೊಂದರೆಯಾಗಿರುವುದನ್ನರಿತು ಬೆಂಗಳೂರು ಸಿಟಿ ಮಾಡಲ್ ಪ್ರೆಸ್ಸಿನ ಯಜಮಾನರಾದ ಮ|| ಟಿ. ಎನ್. ಚನ್ನಪ್ಪನವರು ಸಂಸ್ಥಾನದ ಡಿ|| ಬೋರ್ಡುಗಳ ಮತ್ತು ಮ್ಯುನಿಸಿಪಾಲಿಟಿಗಳ ಅನುಮೋದನ ಪ್ರೋತ್ಸಾಹಗಳನ್ನು ಪಡೆದು "ಸ್ಥಳೀಯ ಸಂಸ್ಥೆಗಳ ಪತ್ರಿಕೆ" ಎಂಬ ಹೆಸರಿನಿಂದ ಪಕ್ಷ ಪತ್ರಿಕೆಯನ್ನು ಹೊರಡಿಸಲಾರಂಭಿಸಿ ಅದರ ಪ್ರಥಮ ಸಂಚಿಕೆಯನ್ನು ವಿನ್ಮಯಕ್ಕಾಗಿ ಕಳುಹಿಸಿಕೊಟ್ಟಿರುವುದನ್ನು ನಾವು ಪ್ರೀತಿಪುರಸ್ಸರವಾಗಿ ಸ್ವೀಕರಿಸಿರುತ್ತೇವೆ. ದಿವಾನ್ ಸರ್ ಮಿರ್ಜಾಯವರು, ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಡಿ|| ಬೋರ್ಡುಗಳ ಪ್ರೆಸಿಡೆಂಟರುಗಳಾದ ಮ|| ಬಿ. ಎಸ್. ಪುಟ್ಟಸ್ವಾಮಿಯವರು, ಮ|| ಡಿ. ಎಸ್. ಮಲ್ಲಪ್ಪನವರು, ಮ|| ಎಚ್. ಬಿ. ಗುಂಡಪ್ಪನವರು ಮತ್ತೆ ಕೆಲ ದೊಡ್ಡ ಮನುಷ್ಯರುಗಳು ಮ|| ಚನ್ನಪ್ಪನವರ ಪ್ರಯತ್ನವನ್ನು ಶ್ಲಾಘಿಸಿ ಉತ್ಕೃಷ್ಟ ಸಂದೇಶಗಳನ್ನು ಕಳುಹಿಸಿಕೊಟ್ಟಿರುವರು. ಈ ಪತ್ರಿಕೆಯು ಸ್ಥಾನಿಕ ಸ್ವಪರಿಪಾಲನ ಸಂಸ್ಥೆಗಳ ಸೇವೆಯನ್ನು ಮಾಡಿ ಪ್ರಜಾಪ್ರೀತಿ ಪ್ರೋತ್ಸಾಹಗಳಿಗೆ ಪಾತ್ರವಾಗಿ ಚಿರಂಜೀವಿಯಾಗಿರಲೆಂದು ಹರಸುತ್ತೇವೆ. ಇದರ ವಾರ್ಷಿಕಚಂದ ಸ್ಥಳದವರಿಗೆ ರೂ. 1-8-0 ಪರಸ್ಥಳದವರಿಗೆ 2 ರೂ.

ಷೌಕತಾಲಿಯವರ ವಿವಾಹವು ಸುಳ್ಳೆಂದುದು ನಿಜವಾಯಿತು

ಕಳೆದ ರೌಂಡುಟೇಬಲು ಸಮಾವೇಶಕ್ಕೆ ಮೌಲಾನಾಷೌಕತಾಲಿಯವರು ಇಂಗ್ಲೆಂಡಿಗೆ ಹೋಗಿದ್ದಾಗ್ಗೆ ಓರ್ವ ಆಂಗ್ಲ ವನಿತೆಯು ಅವರ ಪ್ರೈವೇಟ್ ಸೆಕ್ರೆಟರಿಯಾಗಿ ಕೆಲಸಮಾಡುತ್ತಿದ್ದು ಅವರೊಡನೆ ಇಂಡ್ಯಾಕ್ಕೆ ಬಂದು ಈಗ ಮಹಮ್ಮದೀಯ ಮತವನ್ನು ಸ್ವೀಕರಿಸಿ ಅಮೀನಾ ಎಂದು ಕರೆಯಲ್ಪಡುತ್ತಿದ್ದಾಳೆ. ಈಕೆಯು ಲಂಡನ್ನಿನಲ್ಲಿರುವಾಗ್ಗೆ ಅರಬ್ಬಿಯವನನ್ನು ಮದುವೆಮಾಡಿಕೊಂಡಿದ್ದಳು. ಅವನಿಗೆ ಹುಟ್ಟಿದ 3 ವರ್ಷದ ಒಬ್ಬ ಹುಡುಗನಿರುತ್ತಾನೆ. ಆ ಅರಬ್ಬಿಯವನು ಸತ್ತುಹೋಗಲು ಷೌಕತಾಲಿಯವರ ಆಶ್ರಯವನ್ನು ಹೊಂದಿ ಇಂಡ್ಯಾಕ್ಕೆ ಬಂದು ಅವರ ಸಂರಕ್ಷಣೆಯಲ್ಲಿರುವುದರಿಂದ ಈಕೆಯನ್ನು ವಿವಾಹಮಾಡಿಕೊಳ್ಳುವರೆಂಬ ವದಂತಿಯು ನಿಜವೆ ಎಂದು ಕೇಳಲು ಷೌಕತಾಲಿಯವರು "ಈ ವರ್ತಮಾನವು ಬರೇ ಅಪದ್ಧವು ಮತ್ತು ನನ್ನನ್ನು ಪರಿಹಾಸಮಾಡುವುದಕ್ಕಾಗಿ ಹುಟ್ಟಿದುದಾಗಿದೆ. ಆದರೂ ಈ ವೃದ್ಧಾಪ್ಯದಲ್ಲಿ ನನ್ನ ಪೋಷಣೆಮಾಡಲು ಒಬ್ಬ ಪತ್ನಿಯು ಅವಶ್ಯಕವು. ಆದುದರಿಂದ ಯಾರಾದರೂ ದಯೆಯಿಟ್ಟು ವಧುವನ್ನು ಒದಗಿಸಿಕೊಟ್ಟರೆ ಸಂತೋಷದಿಂದ ಮದುವೆಯಾಗುವೆನೆಂದು ಹೇಳಿದುದಾಗಿ ಸಿಂಧು ಅಬ್ಸರ್ವರ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತು. ಈ ರೀತಿ ಹೇಳಿದ್ದ ಷೌಕತ್ತಾಲಿಯವರು ತಮ್ಮ ಪೋಷಣೆಯಲ್ಲಿರುವ ರಾಯರ್ ಎಂಬ ಆಂಗ್ಲ ಸ್ತ್ರೀಯನ್ನು ಕಳೆದ ಗುರುವಾರ ಕಿಲಾಫತ್ ಕಮಿಟಿಯ ಆಫೀಸಿನೊಳಗೆ ಖಾಜಿಯ ಪೌರೋಹಿತ್ಯದಲ್ಲಿ ವಿಧ್ಯುಕ್ತವಾಗಿ ಲಗ್ನ ಮಾಡಿಕೊಂಡರು. 5-6 ಮಂದಿ ಪುರುಷರೂ ಇಬ್ಬರು ಸ್ತ್ರೀಯರೂ ಮಾತ್ರ ಆ ಸಮಯದಲ್ಲಿದ್ದರು. ವಧುವಿಗೆ 5000 ರೂಪಾಯಿಗಳ ಶುಲ್ಕವು ಕೊಡಲ್ಪಟ್ಟಿತು. ಈ ಲಗ್ನದ ವೇಳೆಯಲ್ಲಿ ಷೌಕತಾಲಿಯವರ ಮಗ ಮಿ|| ಜಹೆದಲಿಯವರು ಇರಲಿಲ್ಲ ಮತ್ತು ಈ ಸುದ್ದಿಯನ್ನು ಕೇಳಿ ಆಶ್ಚರ್ಯಚಕಿತರಾದರು. ಈ ಆಂಗ್ಲ ಸ್ತ್ರೀಯನ್ನು ವಿವಾಹಮಾಡಿಕೊಳ್ಳಲಾಗದೆಂದು ತಂದೆಯವರಿಗೆ ಮೊದಲಿಂದಲೂ ಹೇಳುತ್ತಿದ್ದರಂತೆ.

ಒಳದೇಶದ ವೃತ್ತಾಂತಗಳು

ಇದೇ ತಾ|| 28 ನೇ ಗುರುವಾರ ನಂಜನಗೂಡು ತಾ|| ಹುಳಿಮಾವು ಗ್ರಾಮದಲ್ಲಿ ಮ|| ಗುರುಕಾರ್ ನಂಜಪ್ಪನವರು ಧರ್ಮಾರ್ಥವಾಗಿ ಕಟ್ಟಿಸಿರುವ ಪಾಠಶಾಲೆಯ ಕಟ್ಟಡದ ಪ್ರವೇಶೋತ್ಸವವು ಮೈಸೂರು ಡಿ|| ಡೆ|| ಕಮಿಷನರ್ ಮ|| ಅಬ್ದುಲ್ ವಾಜಿದ್ ಸಾಹೇಬರವರಿಂದ ನೆರವೇರಿಸಲ್ಪಡುವುದು.

ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರಾದ ಸರ್ ಚಾರ್ಲೆಸ್ ಟಾಡ್‌ಹಂಟರ್ ಕೆ. ಸಿ. ಎಸ್. ಐ., ಯವರು 5 ತಿಂಗಳ ರಜವನ್ನು ಪಡೆದು ಸೀಮೆಗೆ ಹೋಗುವರಾದುದರಿಂದ ಅವರು ಬರುವವರೆಗೆ ಅಥವಾ ಬೇರೊಂದಪ್ಪಣೆಯಾಗುವವರೆಗೆ ಹುಜೂರು ಸೆಕ್ರೆಟರಿಯವರಾದ ರಾಜಸಭಾಭೂಷಣ ಟಿ. ತಂಬೂಶೆಟ್ಟರು ತಮ್ಮ ಕೆಲಸದೊಡನೆ ಪ್ರೈವೇಟ್ ಸೆಕ್ರೆಟರಿ ಕೆಲಸವನ್ನು ನೋಡುವಂತೆ ಅಪ್ಪಣೆಯಾಗಿದೆ.

ಮೈಸೂರು ವಿಶ್ವವಿದ್ಯಾಲಯದ ವೈಸ್‌ಚಾನ್ಸಲರಾದ ಮಿ|| ಮೆಟ್ಕಾಫ್‌ರವರು 6 ತಿಂಗಳ ರಜವನ್ನು ಪಡೆದುಕೊಂಡು ಸೀಮೆಗೆ ಹೋಗಿಬರುವರೆಂದೂ, ಅದುವರೆಗೆ ವಿದ್ಯಾಭ್ಯಾಸದ ಡೈರೆಕ್ಟರಾದ ಮ|| ಎನ್. ಎಸ್. ಸುಬ್ಬರಾಯರು ವೈಸ್ ಚಾನ್ಸಲರಾಗಿಯೂ, ಮಹಾರಾಜರವರ ಕಾಲೇಜಿನ ಪ್ರಫೆಸರಾದ ಮಿ|| ಎ. ಆರ್. ವಾಡಿಯರವರು ವಿದ್ಯಾಭ್ಯಾಸದ ಡೈರೆಕ್ಟರರಾಗಿಯೂ ಇರುವರೆಂದೂ ತಿಳಿಯಬರುತ್ತದೆ.

ರಾಜಧಾನಿಯಲ್ಲಿ ಮಳೆಬರುವ ಚಿಹ್ನೆಯಿರುವುದಾದರೂ ಮಳೆ ಬೀಳುತ್ತಿಲ್ಲ. ಲಷ್ಕರ್ ಮೊಹಲ್ಲ ಕುಂಬಾರಗೇರಿಯಲ್ಲಿ ಆಗಾಗ್ಗೆ ಪ್ಲೇಗು ಮರಣವಾಗುತ್ತಲೇ ಇದೆ. ಇದರ ಸಮಾಧಾನಕ್ಕಾಗಿ ಮ್ಯುನಿಸಿಪಾಲಿಟಿಯವರು ತಕ್ಕ ಗಮನ ಕೊಟ್ಟಂತೆ ತೋರುವುದಿಲ್ಲ. ಮೈಸೂರು ತಾಲ್ಲೂಕಿನ ಕೆಲ ಕಡೆಗಳಲ್ಲೂ, ಟಿ. ನರಸೀಪುರ ತಾಲ್ಲೂಕಿನಲ್ಲೂ ಮಳೆಯು ಆಗಿ ಜೋಳದ ಪೈರು ಚೆನ್ನಾಗಿರುವುದೆಂದು ತಿಳಿಯಬರುತ್ತದೆ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರ ಚುನಾವಣೆಗೆ ಮ|| ಬಿ. ಕೆ. ಗುರುಡಾಚಾರ್ಯರೂ, ಪಿ. ಸುಬ್ರಾಮಶೆಟ್ಟರೂ ಅಭ್ಯರ್ಥಿಗಳಾಗಿದ್ದಾಗ್ಗೆ ಕೆಲ ಕಾಲ ಅಧ್ಯಕ್ಷತೆಯನ್ನು ವಹಿಸಿಕೊಂಡು ಅನಂತರ ಬಿಟ್ಟುಕೊಡುತ್ತೇನೆಂದು ಮ|| ಸುಬ್ರಾಮಶೆಟ್ಟರೊಪ್ಪಿಕೊಂಡುದರ ಮೇಲೆ ಮ|| ಗುರುಡಾಚಾರ್ಯರು ಅಭ್ಯರ್ಥಿತ್ವವನ್ನು ಹಿಂದಕ್ಕೆ ತೆಗೆದುಕೊಂಡುದರಿಂದ ಮ|| ಶೆಟ್ಟರು ಪ್ರತಿಸ್ಪರ್ಧೆಯಿಲ್ಲದೆ ಚುನಾಯಿಸಲ್ಪಟ್ಟರಷ್ಟೆ. ಈಗ ಮ|| ಶೆಟ್ಟರು ತಮ್ಮ ವಾಗ್ದಾನ ಪರಿಪಾಲನೆಗಾಗಿ ಅಧ್ಯಕ್ಷಸ್ಥಾನವನ್ನು ಬಿಟ್ಟುಕೊಡುವರೆಂದೂ ಅವರ ಬದಲು ಮ|| ಗುರುಡಾಚಾರ್ಯರು ಅಧ್ಯಕ್ಷರಾಗಿ ಚುನಾಯಿಸಲ್ಪಡುವರೆಂದೂ ವದಂತಿಯಿದೆ.

ಬೆಂಗಳೂರು ಸಿಟಿಯಲ್ಲಿ ಪ್ರಸಿದ್ಧ ಫಲಸರ್ಕು ವ್ಯಾಪಾರಿಗಳಾದ ಆರ್. ಪಾಪಣ್ಣನವರ ದ್ವಿತೀಯ ಕುಮಾರರು ಮ|| ಪಿ. ಎ. ಭದ್ರಪ್ಪನವರು ತಮ್ಮ ದ್ವಿತೀಯ ಕುಮಾರ್ತೆ ಚಿ|| ಸೌ|| ನಾಗಾಂಬೆಯನ್ನು ಅಡ್ವೊಕೇಟ್ ಮ|| ಕೆ. ಗುಬ್ಬಣ್ಣ, ಬಿ.ಎ., ಎಲ್ ಎಲ್. ಬಿ., ಯವರಿಗೆ ಕೊಟ್ಟು ವಿವಾಹವನ್ನು ಕಳೆದ ಗುರುವಾರ ಬಹಳ ವಿಜೃಂಭಣೆಯಿಂದಲೂ ವಿಚಕ್ಷಣೆಯಿಂದಲೂ ನೆರವೇರಿಸಿದರಲ್ಲದೆ ಅದೇ ಸಾಯಂಕಾಲ ದಿವಾನರು ಕೌನ್ಸಿಲರುಗಳಾದಿಯಾಗಿ ಸರ್ಕಾರಿಯಧಿಕಾರಿಗಳನ್ನೂ ಲಾಯರುಗಳು ಕೌನ್ಸಿಲರುಗಳು ವರ್ತಕರುಗಳು ಮೊದಲಾದವರನ್ನೂ ಆಹ್ವಾನಿಸಿ ಸಂಗೀತ ಶ್ರವಣದಿಂದಲೂ ಫಲಪುಷ್ಪ ತಾಂಬೂಲ ವಿನಿಯೋಗದಿಂದಲೂ ಸತ್ಕರಿಸಿದರು. ಈ ನೂತನ ದಂಪತಿಗಳಿಗೆ ಸನ್ಮಂಗಳವಾಗಲೆಂದು ಹಾರೈಸುತ್ತೇವೆ.

ಈಗ್ಗೆ 15-20 ದಿವಸಗಳ ಹಿಂದೆ ರಾಜಧಾನಿಯ ದೊಡ್ಡಪೇಟೆಯಲ್ಲಿ ಬಾದುಗುಂಟೆಯವರ ಸತ್ರದಿಂದ ದಕ್ಷಿಣಕ್ಕೆ [illegible] ಕೆಲರು ವೈಶ್ಯ ಸ್ತ್ರೀಯರು ಒಂದು ಸಾಯಂಕಾಲ ತಟ್ಟೆಗಳಲ್ಲಿ ಹಣ್ಣು ಕಾಯಿಗಳನ್ನಿಟ್ಟುಕೊಂಡು ದೇವಸ್ಥಾನಕ್ಕೆ ಹೋಗುತ್ತಿರುವಾಗ್ಗೆ ಒಬ್ಬ ತುರಕರವನು ಹಿಂದಿನಿಂದ ಬಂದು ಒಬ್ಬ ಹೆಂಗುಸಿನ ಕಂಠೀಸರವನ್ನು ಕತ್ತರಿಸುತ್ತಿದ್ದುದನ್ನು ಆಕೆಯು ತಿಳಿದು ಕೂಗಿಕೊಳ್ಳಲಾಗಿ ಆ ಕಳ್ಳನು ಪಲಾಯನನಾದನು. ಮುಚ್ಚಂಜೆ ಹೊತ್ತಿನಲ್ಲಿ ಅದರಲ್ಲೂ ಪೈಠೋಡಿನಲ್ಲಿ ಈ ರೀತಿ ಕತ್ತಿನಲ್ಲಿ ಕಟ್ಟಿದ್ದ ಸರವನ್ನು ಕತ್ತರಿಸುವಷ್ಟು ಧೈರ್ಯಬರಲು ಈಚೆಗೆ ಚೌಕಗಳಲ್ಲಿ ಪೋಲೀಸಿನವರ ಕಾವಲು ತಪ್ಪಿಸಲ್ಪಟ್ಟುದೇ ಕಾರಣವೆಂದು ಹೇಳಬಹುದು.

ಕಳೆದ ತಾ|| 18 ರಲ್ಲಿ ನಡೆದ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಮೀಟಿಂಗಿನಲ್ಲಿ ಅಧಿಕಾರಿಗಳು ಕೌನ್ಸಿಲಿನ ಅನುಮತಿಯಿಲ್ಲದೆ ಕೆಲಸಗಳನ್ನು ಸ್ವೇಚ್ಛೆಯಿಂದ ಮಾಡುವುದು ಅನುಚಿತವೆಂಬ ವಿಚಾರವು ಚರ್ಚಿಸಲ್ಪಡುವಾಗ್ಗೆ ಅಧಿಕಾರಿಗಳನ್ನು ಆ ರೀತಿ ಬಂಡಿಸುವುದು ಚೆನ್ನಾಗಿಲ್ಲವೆಂದು ಕೌನ್ಸಿಲರ್ ಮ|| ಬಯಣ್ಣನವರು ಹೇಳಿದುದರ ಮೇಲೆ ತೀಕ್ಷ್ಣವಾಗಿ ಮಾತುಗಳು ನಡೆದುವು. ಮ|| ಬಯಣ್ಣನವರು ಅನುಚಿತವಾಗಿಯೂ ಪ್ರೆಸಿಡೆಂಟರಿಗೆ ಅಪಮಾನಕರವಾಗಿಯೂ ಮಾತನಾಡಿದುದರಿಂದ ಅವರು ಕ್ಷಮಾಪಣೆ ಕೇಳಬೇಕೆಂದು ಕೆಲ ಮೆಂಬರುಗಳು ಸೂಚಿಸಿದರು. ಮ|| ಬಯಣ್ಣನವರು ಅದಕ್ಕೊಪ್ಪದೆ ಹೊರಗೆದ್ದು ಹೋಗಿದ್ದು ಕೊಂಚ ಹೊತ್ತಿನ ಮೇಲೆ ಪುನಃ ಒಳಕ್ಕೆ ಬಂದರು. ಮ|| ಬಯಣ್ಣನವರು ಕಡೆಗೂ ತಮ್ಮ ಅನುಚಿತ (ವೆಂದು ಭಾವಿಸಲ್ಪಟ್ಟಿರುವ) ಮಾತುಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಿಲ್ಲವಾದುದರಿಂದ ಅದರ ನಿಷೇಧಾರ್ಥವಾಗಿ ಆ ದಿವಸದ ಸಭೆಯನ್ನು ಪ್ರೆಸಿಡೆಂಟರು ಮುಂದುವರಿಸಿದರು. ಇದುವರೆಗೂ ಐಕಮತ್ಯದಿಂದ ವರ್ತಿಸುತ್ತಿದ್ದ ಬೆಂಗಳೂರು ಸಿಟಿ ಕೌನ್ಸಿಲಿನಲ್ಲಿ ಈಗ ಬಿರುಗಾಳಿಯೆದ್ದುದು ವ್ಯಸನಕರವು.

ಮೈಸೂರು ತಾಲ್ಲೂಕು ಶಿರಸ್ತೆದಾರನಾಗಿದ್ದ ವೆಂಕಟರಾಘವಯ್ಯಂಗಾರ್ ಮತ್ತು ಸರಾಫ್ ಹೊನ್ನಯ್ಯ ಇವರುಗಳು ಖಜಾನೆ ಹಣವನ್ನು ದುರುಪಯೋಗಪಡಿಸಿ ನಂಬಿಕೆದ್ರೋಹ ಮಾಡಿದರೆಂದು ಅವರ ಮೇಲೆ ಇಂಡಿಯನ್ ಪೀನಲ್‌ಕೋಡು 409 ಮತ್ತು 477 ಎ ಸೆಕ್ಷನ್ನುಗಳ ಪ್ರಕಾರ ಪೋಲೀಸಿನವರು ಎರಡು ಛಾರ್ಜುಗಳನ್ನು ಹೊರಿಸಿ ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಪಿರ್ಯಾದು ಮಾಡಿದ್ದರು. ಆ ಛಾರ್ಜುಗಳಲ್ಲಿ 409 ನೆಯದರ ಮೇಲೆ ಕೇಸು ನಡೆಸಲ್ಪಟ್ಟು ಸೆಷನ್ಸ್ ವಿಚಾರಣೆಗೆ ಗುರಿಮಾಡಲ್ಪಟ್ಟಿರಲಾಗಿ ಉಭಯರಿಗೂ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಲ್ಪಟ್ಟಿತು. ಅದರ ಮೇಲೆ ಹೈಕೋರ್ಟಿಗೆ ಅಪೀಲಾಗಿದ್ದು ಉಭಯರೂ ದೋಷಮುಕ್ತರಾಗಿ ಮಾಡಲ್ಪಟ್ಟರು. ತರುವಾಯ 477 ನೇ ಸೆಕ್ಷನ್ನಿಗೆ ಸಂಬಂಧಪಟ್ಟ ಸುಳ್ಳು ಲೆಖ್ಖದ ಕೇಸು ಸಿಟಿ ಮೆಜಿಸ್ಟ್ರೇಟರ ವಿಚಾರಣೆಗೆ ತರಲ್ಪಟ್ಟು ಉಭಯರ ಮೇಲೂ ಛಾರ್ಜು ಮಾಡಲ್ಪಟ್ಟಿತು. ಹೈಕೋರ್ಟಿನಲ್ಲಿ ತಳ್ಳುಪಡಿಯಾದ ಕೇಸಿನಂತೆಯೇ ಪ್ರಕೃತ ತರಲ್ಪಟ್ಟಿರುವ ಕೇಸೂ ಇರುವುದರಿಂದ ಅಪರಾಧಿಗಳು ಚಾರ್ಜು ಮಾಡಲ್ಪಟ್ಟಿರುವುದು ತಪ್ಪೆಂದು ಹೈಕೋರ್ಟಿಗೆ ಅಪೀಲು ಮಾಡಿರಲು ಮೂರನೆಯ ಜಡ್ಜಿಯವರು ಉಭಯಕಕ್ಷಿಗಳಪರ ವಕೀಲರಗಳ ವಾದವನ್ನು ಕೇಳಿ ಮೊದಲು ವಜಾ ಆದ ಕೇಸಿಗೂ ಇದಕ್ಕೂ ಸಂಬಂಧವಿಲ್ಲವೆಂದು ಹೇಳಿ ಅಪೀಲನ್ನು ತಳ್ಳಿಬಿಟ್ಟರು.

ಪ್ರಕಟಣೆ.

No. 88/m Dated 5-4-1932.

ಚಿತ್ರದುರ್ಗದ ಟವನ್ ಮ್ಯುನಿಸಿಪಾಲಿಟಿ.

ಚಿತ್ರದುರ್ಗದ ನೀರಿನ ಸರಬರಾಯಿಗೋಸ್ಕರ 1917ನೇ ಇಸ್ವಿಯಲ್ಲಿ ತೆಗೆದಿರತಕ್ಕ ಡಿಬೆಂಚರ್ ಸಾಲವನ್ನು ಪಾವತಿ ಮಾಡತಕ್ಕ ವಿಚಾರ.

ಮೇಲ್ಕಂಡ ಸಾಲದ ಷರತ್ತುಗಳಿಗನುಸಾರವಾಗಿ ಡಿಬೆಂಚರುಗಳ ಮತ್ತು ಆಡಿಂಟರಿಮ್ ಆರ್ಡರುಗಳ ಅಸಲು ಹಣವು ಇದೇ 1-7-32 ರಲ್ಲಿ ವಾಪಸು ಕೊಡಲ್ಪಡತಕ್ಕದ್ದಾಗಿರುತ್ತೆ. ಅವುಗಳ ಅಸಲು ಹಣವನ್ನು ಪಾವತಿ ಮಾಡುವದರ ಪೂರ್ವಭಾವಿಯಾಗಿ ಇಂಡಾರ್ಸ್ಮೆಂಟುಗಳು ಸರಿಯಾಗಿವೆಯೇ ಇಲ್ಲವೇ ಎಂಬುದನ್ನು ಈ ಆಫೀಸಿನಲ್ಲಿಯೂ ಹಜರತ್ ಕಂಟ್ರೋಲರವರ ಆಫೀಸಿನಲ್ಲಿಯೂ ಪರಿಶೀಲನೆ ಮಾಡಬೇಕಾಗಿರುವದರಿಂದ ಡಿಬೆಂಚರು ಹೋಲ್ಡರುಗಳು ಈ ಕೆಳಗೆ ಕಂಡಂತೆ ಇಂಡಾರ್ಸು ಮಾಡಿ ಕೂಡಲೇ ತಮ್ಮ ಡಿಬೆಂಚರುಗಳನ್ನು ಮತ್ತು ಆಡಿಂಟರಿಮ್ ಆರ್ಡರುಗಳನ್ನು ಈ ಆಫೀಸಿಗೆ ರವಾನಿಸಬೇಕಾಗಿ ಕೋರಿದೆ. ಈ ಬಗ್ಗೆ ಹೆಚ್ಚು ವಿಷಯಗಳಿಗೆ 14-4-32 ನೇ ಮರ್‍ಯಾಂ ಮೈಸೂರು ಗೆಜೆಟ್ 3 ನೇ ಭಾಗದ 116 ನೇ ಪುಟವನ್ನು ನೋಡತಕ್ಕದ್ದು.

(Sd). S. [illegible],
ಪ್ರೆಸಿಡೆಂಟು.

ಈ ಡಿಬೆಂಚರಿನ / ಈ ಆಡಿಂಟರಿಮ್ ಆರ್ಡರಿನ ಅಸಲು ಹಣವು ಪಾವತಿಯಾಗಿದೆ.

[illegible]

ಬ್ರಿಟಿಷರ ಪಾರ್ಟಿ ವಿಧಾನವು.

(ತಾ|| 11ರ ಸಂಚಿಕೆಯಿಂದ ಮುಂದುವರಿದುದು.)

ಇಂಗ್ಲೆಂಡಿನಲ್ಲಿ ಪ್ರಜಾಹಿತ ರಾಜ್ಯಪಾಲನ ವಿಧಾನವು ಆಚರಣೆಗೆ ಬಂದಾಗ್ಗೆ ಈ 2 ಪಾರ್ಟಿಗಳು ಮಾತ್ರವೇ ಮಂತ್ರಿವರ್ಗವನ್ನು ಏರ್ಪಡಿಸಿಕೊಳ್ಳಲು ಪ್ರಯತ್ನಪಡುತ್ತಿವೆ. 14 ನೇ ಶತಮಾನದಿಂದ 16 ನೇ ಶತಮಾನದ ...

...

ಶವು ಮುಖ್ಯವಾದುದು. ಇದರ ಪರ್ಯವಸಾನವೇನೆಂದರೆ, ಅನಾದಿ ಕಾಲದಿಂದಲೂ ಉದ್ಯೋಗಗಳನ್ನೆಲ್ಲಾ ಆಕ್ರಮಿಸಿಕೊಂಡು ರಾಜಪಾಲನವು ತಮ್ಮ ಹಕ್ಕು ಭುಕ್ತಗಳನ್ನಾಗಿ ನಡೆಸಿಕೊಂಡು ಬರುತ್ತಿದ್ದ ಪ್ರಭುಗಳ ಪ್ರತಿಷ್ಠೆಗೆ ಹಾನಿಯುಂಟಾಗುವುದು ಮೊದಲನೆಯ ವಿಷಯವು. ಇದರ ಮೂಲಕ ಸೋಷಲಿಜಂ ಎಂಬ ಕಾರ್ಮಿಕರ ಕಾರ್ಯಕ್ರಮಕ್ಕೆ ಅನುಚರರು ಅನೇಕ ...

... ಪಾರ್ಲಿಮೆಂಟ್ ವಿಧಾನಗಳಲ್ಲಿ ... ಯೊಂದಾಯಿತು. ಇದನ್ನನುಸರಿಸಿಯೇ ಇಂಗ್ಲೆಂಡಿನಲ್ಲಿ ಅನಾದಿಕಾಲದಿಂದಲೂ ಪ್ರಬಲವಾಗಿದ್ದ ಪೂರ್ಣ ಪ್ರಜಾಹಿತ ರಾಜ್ಯಾಂಗ ವಿಧಾನವು ಬದಲಾವಣೆಯಾಗಿ “ಡಿಕ್ಟೇಟರ್‌ಷಿಪ್” ಎಂಬ ನಿರಂಕುಶ ಪ್ರಭುತ್ವಕ್ಕೆ ಅವಕಾಶವಾಗುವುದೆಂಬ ಸಂದೇಹ ಹುಟ್ಟಿರುತ್ತದೆ.

ಸ್ವೀಕಾರ

ಶ್ರೀ|| ವೀರಸಂಗಪ್ಪನವರ ಅಕ್ಷರಾಂಬಾಸಂಘದವರು ... ಸ್ವೀಕರಿಸಲಾಗಿದೆ.—ಸಂ.

(1) ಬೆಂಗಳೂರು ಫಲಸರ್ಕರ್ ಮಳಿಗೆ ಆರ್. ಪಾಪಣ್ಣನವರ ಮಕ್ಕಳು ಮ|| ಪಿ. ವಿ. ಭದ್ರಪ್ಪನವರ ಪುತ್ರಿ ಚಿ|| ಸೌ|| ನಾಗಾಂಬೆಯ, ತುಮಕೂರು ತಾ|| ಊರ್ಡಿಗೆರೆ ಮ|| ಕುಚ್ಚಂಗಿ ಗಂಗಪ್ಪನವರ ಪುತ್ರ ಮ|| ...

ಪ್ರಾಂತಿಕ ವೀರಶೈವ ಪ್ರಥಮ ಸಮ್ಮೇಳ.

ಇದೇ ತಾ|| 17-4-32 ರಲ್ಲಿ ಬೇಲೂರಿನಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ಮ|| ಎಸ್. ಸಿದ್ದಯ್ಯ, ಬಿ.ಎ., ಎಲ್.ಎಲ್.ಬಿ., ಮತ್ತು ಎಂ. ಎಲ್. ಸಿ ಅವರ ಅಧ್ಯಕ್ಷತೆಯಲ್ಲಿ ಪ್ರಥಮ ವೀರಶೈವ ಸಮ್ಮೇಳನವು ನೆರೆದಿತ್ತು. ...

...

ಮಲ್ಲಂದ ಅಧ್ಯಕ್ಷರು ...

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಬಸವೇಶ್ವರ ದೇವಾಲಯ ಜೀರ್ಣೋದ್ಧಾರ.

ಮಂಡ್ಯದಲ್ಲಿ ಸಂತೆಮಾಳಕ್ಕೆ ಸಮೀಪವಾದ ಮುಜರಾಯಿಗೆ ಸೇರಿದ ಪುರಾತನ ಬಸವೇಶ್ವರದೇವಾಲಯವು ...

...

ಶ್ರೀ ಯಾದಗಿರಿ ಶಂಕರಕಾಲೇಜು.

...

ಶ್ರೀ ವಿಶ್ವಕರ್ಮ ಜಯಂತ್ಯುತ್ಸವ, ಮೈಸೂರು.

...

ಪಿ. ಎಸ್. ಶ್ರೀಕಂಠಾಚಾರ್ಯ,

ಅಧ್ಯಕ್ಷ, ಶ್ರೀ ವಿಶ್ವಕರ್ಮ ಸಮಾಜ, ಮೈಸೂರು.

ಧರ್ಮ ವಿವಾಹಗಳು.

...

ರಾಚಪ್ಪ ನಾಗನೂರು, ಹಾವೇರಿ.

ಬಳಕೆ ಭೋಜನ.

...

ಲಿಂಗಾಯತರೆಂದೂ, ಲಿಂಗಾಯತರ ಮುಖಂಡರೆಂದೂ ... ಬರೆಯಿಸಿಕೊಳ್ಳುತ್ತಿದ್ದರು. ಉದಾಹರಣಾರ್ಥವಾಗಿ ತಾ|| 31-12-24 “ಬೊಂಬಾಯಿ ಕ್ರಾನಿಕಲ್” ಪತ್ರಿಕೆಯಲ್ಲಿ ಲಿಂಗಾಯತರ ಮುಂದಾಳು (Leader of Lingayets) ಎಂದು ಬರೆಯಿಸಿಕೊಂಡಿದ್ದರು. ಇದು ವೀರಶೈವ ಧರ್ಮಾಭಿಮಾನಿಗಳಿಗೆಲ್ಲಾ ವ್ಯಥೆಯನ್ನುಂಟುಮಾಡುವಂತಹದಲ್ಲವೇ? ಆದ್ದರಿಂದ ಈ ಸಂಬಂಧವಾಗಿ ತಾ|| 29-12-24ರ “ಬಸವರಾಜ” ದಲ್ಲಿ ಬಂದ ಲೇಖನಕ್ಕೆ ಉತ್ತರವಾಗಿ ತಾ|| 12-1-25 ರಲ್ಲಿ ಬರೆದ ಲೇಖನದ ದೆಸೆಯಿಂದ ಲೇಖಕರಮೇಲೆ ಮಾನನಷ್ಟಕ್ಕಾಗಿ 5000 ರೂ. ನ್ನು ಕೊಡಬೇಕಾಗಿ ಒಂದು ಗೊಡ್ಡು ಬೆದರಿಕೆಯ ಲಾಯರ ನೋಟೀಸು ಮ|| ಮಂಜಪ್ಪನವರ ಅಣ್ಣಂದಿರಾದ ಮ|| ಎಂ. ಮಧುಲಿಂಗಪ್ಪನವರ ಪರವಾಗಿ ಹಾವೇರಿ ವಕೀಲರಾದ ಮ|| ಎಸ್. ಬಿ. ಹಿರೇಮಠ, ಬಿ. ಎ., ಎಲ್. ಎಲ್. ಬಿ., ಇವರಿಂದ ಈಗ್ಗೆ ಸುಮಾರು 7 ವರ್ಷಗಳ ಕೆಳಗೆ ಕೊಡಲ್ಪಟ್ಟಿದ್ದಿತು. ಅದರ ಯಥಾ ನಕಲನ್ನು ಮಹಾಜನಗಳ ಅವಗಾಹನೆಗಾಗಿ ಈ ಕೆಳಗೆ ಪ್ರಕಟಿಸಿದೆ.

To

D. CHENNAVIRAPPA JAMINDAR,

Yalvatti (T. Harihar) Yalvatti.

Sir,

I have been instructed by my client M. Madhulingappa Hardekar to serve you the following notice upon you. An artical has been published in the 'Basavaraj' under the title "ನಿರಭಿಮಾನಿಗಳಿಗೆ ಕೊನೆಯ ಉತ್ತರ" in the name of "ಓರ್ವ ವೀರಶೈವ ಧರ್ಮಾಭಿಮಾನಿ" as the writer of it. But as desired by my client the Editor of the paper gives us your name as author of the same. The article in question has defamed my client for which he demands a damage of a sum of Rs. 5000 within a week. Failing to pay which, he is inclined to take legal steps in proper courts.

Dated 31-1-1925, *Haveri.* (Sd) S. B. HIREMATT, *Pleader.*

ವಿಧ್ಯುಕ್ತವಾಗಿ ದೀಕ್ಷಾಕ್ರಮವು ಜರುಗುವಾಗ ಇದೆಲ್ಲವನ್ನೂ ಪರಿಷ್ಕಾರ ಮಾಡಿಕೊಂಡು ಇವರ ಮೂಲಸ್ಥಳವಾದ ಬನವಾಸಿಯ ದೈವದವರಿಂದ ಪತ್ರ ತರಿಸಿಕೊಂಡು ಮಹಾ ಜನರ ಅಭಿಪ್ರಾಯವನ್ನು ಕೇಳಿ ಗುರುಪೀಠಗಳ ಅಪ್ಪಣೆ ಪಡೆದು ಈ ಕಾರ್ಯ ಮಾಡಬೇಕಾಗಿತ್ತು. ಹಾಗೆ ಮಾಡದಿದ್ದುದು ಪ್ರಮಾದವೆಂದು ಹೇಳುವುದರಲ್ಲಿ ಅಡ್ಡಿಯೇ ಇಲ್ಲ. ಇಡೀ ವೀರಶೈವ ಸಮಾಜದವರೆಲ್ಲರೂ ಇವರನ್ನು ಬಳಕೆ ಮಾಡಲು ಸಂಶಯ ತಗೆದುಕೊಳ್ಳಬಾರದೆಂದು ಗುರುಪೀಠಗಳ ಅಪ್ಪಣೆಯನ್ನು ಪಡೆಯದೆ ಆ ಪೀಠದ ಕೇವಲ ಸಾಂಪ್ರದಾಯಸ್ಥರೇ ಹೀಗೆ ಹೇಳುವುದನ್ನು ನೋಡಿದರೆ ಸಖೇದಾಶ್ಚರ್ಯವಾಗುತ್ತದೆ. ಸಮಾಜದ ಧರ್ಮ ಸಂರಕ್ಷಣೆಗಾಗಿಯೇ ನಾವು ಗುರುಪೀಠಗಳನ್ನು ಮಾಡಿಕೊಂಡಿದ್ದು ಅವುಗಳ ಆಜ್ಞಾಶೀರ್ವಾದಗಳನ್ನು ಪಡೆಯದೆ ಪ್ರತಿ ಪಟ್ಟಾಧ್ಯಕ್ಷರೂ, ಮಠಾಧ್ಯಕ್ಷರೂ ತಮತಮಗೆ ಬೇಕಾದ ವ್ಯಕ್ತಿಗಳಿಗೆ ದೀಕ್ಷಾ ಮಾಡಿ, ಇವರೊಡನೆ ಬಳಕೆ ಮಾಡಿರಿ ಎಂದು ಸಮಾಜದವರೆಲ್ಲರಿಗೂ ಸಾರುತ್ತಹೋದರೆ ಗುರುಪೀಠಗಳನ್ನಾತಕ್ಕಿರಬೇಕು? ಇದರಿಂದ ಬಹು ನಾಯಕತ್ವವುಂಟಾಗಿ ಅನಾಯಕತ್ವವುಂಟಾಗುತ್ತದೆ. ಅದರ ಫಲವೇ ಧರ್ಮಲೋಪ. ಧರ್ಮದ ಅಸ್ತಿಭಾರದ ಮೇಲೆ ನಿಂತಿರುವ ವೀರಶೈವ ಸಮಾಜವಿನ್ನೆಲ್ಲಿ? ಆದ್ದರಿಂದ ಸದರಿ ಮ|| ಮಂಜಪ್ಪನವರು ತಾವು ಈಗ್ಗೆ 4 ವರ್ಷಗಳ ಕೆಳಗೆ ಪಡೆದಿರುವ ದೀಕ್ಷಾ ಅಂಗೀಕಾರದ ಬಗ್ಗೆ ಗುರುಪೀಠಗಳಿಗೆ ನಿರಂಜನ ಪೀಠವಾಗಲಿ, ಆಚಾರ್ಯಪೀಠವಾಗಲಿ ಭಿನ್ನಯಿಸಿಕೊಂಡು ಅವರ ಆಶೀರ್ವಾದ ಅನುಗ್ರಹ ಪಡೆದು ಎಲ್ಲರಲ್ಲಿ ಬಳಕೆ ಮಾಡು ...

...

ಹಟ್ಟಲವಿವೇಕ.

...

ಪ್ರಕಟಣೆ.

ತುಂಕೂರು ಡಿಸ್ಟ್ರಿಕ್ಟು ಬೋರ್ಡು.

1932-33 ನೇ ಸಾಲಿನಲ್ಲಿ ತುಂಕೂರು ಡಿಸ್ಟ್ರಿಕ್ಟಿನ ಎಲ್ಲಾ ಟೋಲ್ ಗೇಟುಗಳಲ್ಲಿ ಟೋಲ್ ವಸೂಲ್ಮಾಡುವ ಹಕ್ಕನ್ನು ತಾರೀಖು 4-5-1932 ರ ಲಾಗಾಯಿತು ತಾರೀಖು 23-5-1932 ರ ವರಿವಿಗೆ ಆಯಾಯ ತಾಲ್ಲೂಕು ಹೆಡ್‌ಕ್ವಾರ್ಟರ್‌ನಲ್ಲಿ ಹರಾಜು ಮಾಡಲಾಗುವುದೆಂದು 1932 ನೇ ಇಸವಿ ಏಪ್ರಿಲ್ ತಾರೀಖು 14 ರಲ್ಲೂ ಮೈಸೂರು ಕನ್ನಡ ಗೆಜೆಟ್ಟು 125—130 ನೇ ಪುಟಗಳಲ್ಲಿ ಛಾಯಿಸ್ ಆಗಿರುವುದು ಸರಿಯಷ್ಟೆ.

ಇದನ್ನು ಬದಲಾಯಿಸಿ ಎಲ್ಲಾ ಟೋಲ್ ಗೇಟುಗಳನ್ನೂ 19-5-1932 ನೇ ಮಧ್ಯಾಹ್ನ ದಿವಿ 12 ಘಂಟೆ ಲಾಗಾಯಿತು ತುಂಕೂರು ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ಹರಾಜು ಮಾಡಲಾಗುತ್ತೆ.

(Sd) ಡಿ. ಎಸ್. ಮಲ್ಲಪ್ಪ,

ಪ್ರೆಸಿಡೆಂಟ್,

ಡಿಸ್ಟ್ರಿಕ್ಟು ಬೋರ್ಡು ತುಂಕೂರು ಡಿಸ್ಟ್ರಿಕ್ಟ್.

ತ್ರಯಂಗಳಲ್ಲಿ ಮಗ್ನನಾಗಿ ಸಂಸಾರವನ್ನು ಸೇವಿಸುವಾತ ಆಚಾರ್ಯನೆಂಬೆನೆ ಎನ್ನೆನಯ್ಯಾ ಎಂಬುದೀಗ ಕರೆಯ ಕುಡಿದವ ಗುರುವೆಂಬೆನೆ ಎಂಬ ಶಬ್ದಾರ್ಥ. ಅಷ್ಟಮದವೆಂಬ ಮದ್ಯಮಾಂಸವ ಸೇವಿಸುವಾತ ಲಿಂಗಾಂಗಿ ಶರಣನೆಂಬೆನೆ ಎಂಬುದೀಗ ಹೆಂಡವ ಕುಡಿದವ ಲಿಂಗಾಂಗಿ ಎಂಬೆನೆ ಎನ್ನೆನಯ್ಯಾ ಎಂಬ ಶಬ್ದಾರ್ಥ. ಗುರುಲಿಂಗ ಜಂಗಮವ ತಮ್ಮಂಗದಿಂ ವಿರಿಟ್ಟು ಅರ್ಚಿಸಿ, ಫಲಪದವ ಪಡೆದು, ಆ ಫಲಪದವೆಂಬ ಮಾಂಸವ ಸೇವಿಸುವಾತ, ಜಂಗಮಲಿಂಗಿಗಳೆಂದೆನೆ ಎನ್ನೆನಯ್ಯಾ, ಎಂಬುದೀಗ, ಕಂಡವಶಿಂದವ ಜಂಗಮವೆಂಬೆನೆ ಎನ್ನೆನಯ್ಯಾ ಎಂಬ ಶಬ್ದಾರ್ಥ.

ಗುರುವೆಂಬವನೇ ಹೊಲೆಯ, ಲಿಂಗಾಂಗಿ ಎಂಬವನೇ ಮಾದಿಗ, ಜಂಗಮನೆಂಬವನೇ ಸಮಗಾರ ಈ ಮೂವರೊಳಗೆ ಹೊಕ್ಕು ಬಳಕೆಯ ಮಾಡಿದಾತನೇ ಭಕ್ತ. ಆ ಭಕ್ತನೆಂಬವನೇ ಡೋಹಾರ, ಇಂತಿ ಚತುರ್ವಿಧ ಬೇಧವ ತಿಳಿದು ಪಾದೋದಕ ಪ್ರಸಾದವ ಕೊಡಬಲ್ಲರೆ ಗುರುಲಿಂಗ ಜಂಗಮವೆಂಬೆ. ಈ ನಿರ್ಣಯವ ತಿಳಿದು ಪಾದೋದಕ ಪ್ರಸಾದವ ಕೊಳ್ಳಬಲ್ಲರೆ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣೈಕ್ಯನೆಂಬ ಷಟ್‌ಸ್ಥಲ ಬ್ರಹ್ಮಿ ಎಂಬೆ. ಆತನೆ ಅಚ್ಚಪ್ರಸಾದಿ, ನಿಚ್ಚಪ್ರಸಾದಿ, ಸಮಯಪ್ರಸಾದಿ, ಏಕಪ್ರಸಾದಿ, ಇಂತೀ ಕ್ರಮವರಿತು ಪಾದೋದಕಪ್ರಸಾದವ ಕೊಳ್ಳಬಲ್ಲರೆ ಮೋಕ್ಷವಾಗುವುದಕ್ಕೆ ತಡವಿಲ್ಲವಯ್ಯಾ. ಈ ಭೇದವ ತಿಳಿಯದೆ ಅಯ್ಯಾ ಸಾದ, ಮಹಾಪ್ರಸಾದ, ಪ್ರಾಣಸಿರೆಂದು ಕರುಣಿಸಿರೆಂದು, ಶ್ರೀಪಾದವೆಂದು ಭೂತದೇಹಿಗಳೆಲ್ಲರಿಗೆ ಪಾತಕಮನುಜರು ಅಡ್ಡಡ್ಡ ಬಿದ್ದು, ಎದೆದಡ್ಡುಗಟ್ಟಿ, ಮೊಳಕಾಲ ಗೂಡುಗಟ್ಟಿ, ಹಣೆ ಬುಗುಟೆದ್ದು, ಈ ಪರಿಯಲ್ಲಿ ಅಯ್ಯಾ ಸಾದ ಪಾಲಿಸೆಂದು ಪಡಕೊಂಡು, ಲಿಂಗಕ್ಕೆ ತೋರಿ ತೋರಿ ತಮ್ಮ ಉದರಾಗ್ನಿ ಅಡಗಿಸಿಕೊಂಡು, ಕಡೆಯಲ್ಲಿ ಎಣ್ಣೆಯ ನಾತಕ್ಕೆ ಅಗಲನೆಕ್ಕುವ ಸೊಣಗನ ಹಾಗೆ ತಮ್ಮ ನಾಲಿಗೆಲಿ ತಳಿಗೆ ಬಾಣವನೆಕ್ಕಿ ನೆಕ್ಕಿ, ಆ ತಳಿಗೆ ಬಾಣ ಸವೆದು ಸಣ್ಣಾಗಿ ಹೋದವಲ್ಲದೆ, ಇಂತಪ್ಪ ಮತಿಭ್ರಷ್ಟ ಹೊಲಿಮಾದಿಗರಿಗೆ ಪರಶಿವ ಮಹಾಪ್ರಸಾದ ಸಾಧ್ಯವೇ, ಸಾಧ್ಯವಲ್ಲ. ಮುಂದೆ 84 ಲಕ್ಷ ಯೋನಿದ್ವಾರದಲ್ಲಿ ತಿರುಗಿ ತಿರುಗಿ ಭವದತ್ತ ಮುಖವಾಗಿ, ನರಕವನೇ ಭುಂಜಿಸುವುದು ಉಂಟು. ಟೀಕು॥ ಹೊಲೆಮಾದಿಗ ಸಮಗಾರರಲ್ಲಿ, ಆವ ಶೀಲ, ವ್ರತಾಚಾರ ನಾಸ್ತಿ ಎಂಬುದೀಗ, ಗುರುವೆಂಬವನೆ ಹೊಲೆಯ, ಲಿಂಗಾಂಗಿ ಎಂಬವನೇ ಮಾದಿಗ, ಜಂಗಮವೆಂಬವನೇ ಸಮಗಾರ, ಎಂಬ ಶಬ್ದಾರ್ಥ. ಗುರುಲಿಂಗ ಜಂಗಮವೆಂಬ ತ್ರಿಮೂರ್ತಿಗಳ ಆಚರಣೆ ಆಚರಿಸಿದಾತ ಅಖಂಡ ಪ್ರಸಾದಿ, ಅಖಂಡ ಪ್ರಸಾದಿ ಎಂಬಾತನೇ ನಿರಂಜನ ಬ್ರಹ್ಮವೆಂಬುದೀಗ, ಈ ಮೂವರೊಳಗೆ ಹೊಕ್ಕು ಬಳಕೆಯ ಮಾಡಿದಾತನೇ ಭಕ್ತ, ಆ ಭಕ್ತನೆಂಬವನೇ ಡೋಹಾರ ಎಂಬ ಶಬ್ದಾರ್ಥ.

ಹಂದಿ, ನೊಲ, ಪಶುವ ತಿಂದಾತನೇ ಭಕ್ತ; ಆನೆ ಕುದುರೆಯ ತಿಂದವನೇ ಮಹೇಶ್ವರ; ಕೋಣ, ಹುಲಿ, ಎಮ್ಮೆ ತಿಂದವನೇ ಪ್ರಸಾದಿ; ಕೋಡಗ, ಸರ್ಪ, ಉಡುವ ತಿಂದವನೇ ಪ್ರಾಣಲಿಂಗಿ; ಬೆಕ್ಕನು, ಹರಿಣೆಯನ್ನು ಕರುಳನು ತಿಂದವನೇ ಶರಣ; ಹದ್ದು, ಗೂಗೆ, ಪಿಪ್ಪಲೀಕನ ತಿಂದವನೇ ಐಕ್ಯ. ಇಂತಿ ಎಲ್ಲವನು ಕೊಂದು ತಿಂದವನ ಕೊಂಡು, ಆರು ಇಲ್ಲದ ದೇಶಕ್ಕೆ ಒಯ್ದು, ಅಗ್ನಿ ಇಲ್ಲದೇ ಸುಟ್ಟು, ನೀರಿಲ್ಲದೇ ಅಟ್ಟು, ಕಾಲಿಲ್ಲದೇ ನಡೆದು, ಕಣ್ಣಿಲ್ಲದೇ ನೋಡಿ, ಕೈಯಿಲ್ಲದೇ ಪಿಡಿದು, ಪರಿವಾಣವಿಲ್ಲದ ಹರಿವಾಣದಲ್ಲಿ ಘಡಣೆಸಿಕೊಂಡು, ಹಿಂದು ಮುಂದಿನ, ಎಡಬಲದ, ಸಂಶಯವನು ಬಿಟ್ಟು ನಿಶ್ಶಂಕನಾಗಿ ಸ್ವಸ್ಥ ಪದ್ಮಾಸನದಲ್ಲಿ ಮೂರ್ತವ ಮಾಡಿ ಏಕಾಗ್ರಚಿತ್ತದಿಂದ ಹಲ್ಲು ಇಲ್ಲದೆ ಮೆಲ್ಲಬಲ್ಲರೆ, ಆತನೇ ಅಚ್ಚಪ್ರಸಾದಿ, ನಿಚ್ಚಪ್ರಸಾದಿ, ಸಮಯಪ್ರಸಾದಿ, ಏಕಪ್ರಸಾದಿ, ಗುರುಲಿಂಗ ಜಂಗಮದ ಪಾದೋದಕಪ್ರಸಾದಿ ಎಂಬೆನಯ್ಯಾ. ಇಂತೀ ಬೇಧವನು ತಿಳಿಯದೆ ಭಕ್ತರ ಮನೆಯಲ್ಲಿ ಉನ್ನತಾಸನದ ಗದ್ದುಗೆಯ ಮೇಲೆ ಕುಳಿತು, ಅಷ್ಟವಿಧಾರ್ಚನೆ, ಷೋಡಶೋಪಚಾರಗಳಿಂದ ಪೂಜೆಗೊಂಬ ಗುರುಮೂರ್ತಿಗಳು, ಚರಮೂರ್ತಿಗಳು, ಇಂತಿ ಉಭಯರು ಸತ್ತ ಕ್ರಮದಿಂದತ್ತ ನೋಡಾ, ಇಂತಪ್ಪ ವಿಚಾರವನ್ನು ತಿಳಿಯದೆ ನಾವು ಪರಮ ವಿರಕ್ತರು, ಪಟ್ಟದಯ್ಯಗಳು, ಚರಮೂರ್ತಿಗಳು, ಗುರುಸ್ಥಲದ ಅಯ್ಯಾ ತಾನು ಮೂರ್ತಿಗಳೆಂದು, ಪಾದಪೂಜೆ ಮಾಡಿಸಿಕೊಂಡು, ಪಾದವ ಪಾಲಿಸುವರೆಂದು ಭಕ್ತರಿಗೆ ತೀರ್ಥವ ಕೊಡುವಂಥವರು ಬೀದಿ ಬಜಾರದಲ್ಲಿ ಕುಳಿತು ಕೆರೆ ಮಾರುವ ಹೆಂಡಗಾರರು ಇವರಿಬ್ಬರು ಸರಿ ಎಂಬೆ. ಇಂತಿ ನಿರ್ಣಯವನ್ನು ತಿಳಿಯದೆ ಭಕ್ತರ ನಡ್ಡಗೆಡಿಸಿಕೊಂಡು, ಪ್ರಸಾದವೆಂದು ತಮ್ಮ ಎಡಿಯೊಳಗಣ ಕೂಳ ತೆಗೆದು ಕೈಯತ್ತ ನೀಡುವರು. ಸ್ವಾತಿ, ಬಜಾರ, ಬೀದಿ, ಅಂಗಡಿ ಕಟ್ಟೆಯಲ್ಲಿ ಕುಳಿತು, ಹೋತು ಕುರಿಗಳನ್ನು ಕೊಯ್ದು ಅದರ ಕಂಡವನ್ನು ತಕ್ಕಡಿಯಲ್ಲಿ ಎತ್ತಿ ತೂಕ ಮಾಡಿ ಮಾರುವ ಕಟುಕರು, ಇವರಿಬ್ಬರು ಸರಿ ಎಂಬೆ. ಇಂತಿ ಭೇದವನು ತಿಳಿಯದೇ ಗುರುಲಿಂಗಜಂಗಮವೆಂಬ ತ್ರಿಮೂರ್ತಿಗಳು ಪರಶಿವಸ್ವರೂಪವೆಂದು ಭಾವಿಸಿ ಪಾದೋದಕ ಪ್ರಸಾದವ ಕೊಂಬ ಭಕ್ತನು ಕೊಡುವಂತ ಗುರುಹಿರಿಯರು, ಇವರ ಪಾದೋದಕ ಪ್ರಸಾದ ಎಂತಾಯಿತಯ್ಯಾ ಎಂದರೆ ಹಳೆನಾಯಿ, ಮುದಿಬೆಕ್ಕು, ನಾಯಿ, ಸತ್ತ ಮೂರು ದಿವಸದ ಮೇಲೆ ಆರಿಸಿಕೊಂಡು ಬಂದು ಅದರ ಜೀರ್ಣ ಮಾಂಸವನು ತಿಂದು, ಬೆಕ್ಕು ನಾಯಿ ಹಂದಿಯ ಉಚ್ಚಿಷ್ಟ ಕಡಿದಂತಾಯಿತಯ್ಯಾ, ಇಂತಿದರ ಅನುಭಾವವನು ಸ್ವಾನುಭಾವ ಗುರುಮೂರ್ತಿಗಳಿಂದ ತನ್ನ ಸ್ವಯಾತ್ಮಜ್ಞಾನದಿಂದ ವಿಚಾರಿಸಿ ತಿಳಿದು ನೋಡಿ, ಇಂಥವರನ್ನೆಲ್ಲಾ ಕೂಳಿಗೆ ಬಂದ ಬೆಕ್ಕು ನಾಯಿಗಳ ಹಾಗೆ, ಅವರ ಪಡಲಿಗೆ ಕೂಳನು ಹಾಕಿ ಬೆಕ್ಕು ನಾಯಿಗಳ ಅಟ್ಟಿದ ಹಾಗೆ ಅಟ್ಟಬೇಕು ನೋಡಾ. ಇಂತಿವರಲ್ಲಿ ಪಾದೋದಕ ಪ್ರಸಾದವ ಕೊಳಬಲ್ಲರೇ, ಆ ಭಕ್ತರಿಗೆ ಮೋಕ್ಷವೆಂಬುವದು ಕರತಳಾಮಳಕ ನೋಡೆಂದಯ್ಯಾ. ॥ಟೀಕು॥ ಹಂದಿ ಎಂದರೆ ಜೀವಾತ್ಮ ಅದೆಂತೆಂದೊಡೆ, ಹಂದಿಯು ಹಾಳಕೇರಿಯಲ್ಲಿ ಊರಮಲವ ಭಂಜಿಸುವುದು, ಹಾಗೆ ಸ್ಥೂಲತನು ಸಂಬಂಧವಾದ ವಿಶ್ವನೆಂಬ ಜೀವನು ಹೊನ್ನು, ಹೆಣ್ಣು, ಮಣ್ಣೆಂಬ ತ್ರಿವಿಧ ಮಲವನು ದೇಹಸಂಸಾರವೆಂಬ ಹಾಳಕೇರಿಯಲ್ಲಿ ಅನುಭೋಗಿಸುವುದು ಎಂಬುದೀಗ ವಿಶ್ವನೆಂಬ ಜೀವನಿಗೆ ಹಂದಿ ಎಂಬ ಶಬ್ದಾರ್ಥ. ನೊಲನೆಂದರೆ ಅಂತರಾತ್ಮ. ಅದೆಂತೆಂದಡೆ ನೊಲನು ಅರಣ್ಯದೊಳಗೆ ಸರೋವರ ತೀರದಲ್ಲಿ ಗರಿಕೆ ಹುಲ್ಲನು ಮೆಯ್ದು ಚರಿಸುತಿಪ್ಪ ಕಾರಣ, ಸೂಕ್ಷ್ಮತನು ಸಂಬಂಧವಾದ ತೈಜಸನೆಂಬ ಜೀವನು ದೇಹಾಂತರಂಗವೆಂಬ ಸಂಸಾರಕಾಸಾರತೀರದಲ್ಲಿ ಸಕಲಕರಣ ವಿಷಯವೆಂಬ ಹುಲ್ಲು ಸೇವಿಸಿ 84 ಭವಾರಣ್ಯದಲ್ಲಿ ಸಂಚರಿಸುತಿರ್ಪುದೆಂಬುದೀಗ ತೈಜಸನೆಂಬ ಜೀವನಿಗೆ ನೊಲನೆಂಬರ್ಥ. ಪಶುವೆಂದರೆ ಪರಮಾತ್ಮ. ಅದೆಂತೆಂದಡೆ ಅವುದಾನೊಂದು ಪಶುವು ಪ್ರಾಯಕ್ಕೆ ಬಂದರೆ ತಂಗಿಯೆಂಬುದನರಿಯದೆ, ತಾಯಿಯೆಂಬುದನರಿಯದೆ ಸಂಗವನಾಡುವುದಾದ ಕಾರಣ ಹಾಗೆ ಚಿದಾತ್ಮನು ತನ್ನ ತಾಯಿ ಮರೆದು ದೇಹಸಂಬಂಧಿಯಾದಲ್ಲಿ ಪ್ರಾಜ್ಞನೆಂಬ ಜೀವನೆನಿಸಿದ ಅಂತಪ್ಪ ಪ್ರಾಜ್ಞನೆಂಬ ಜೀವನಿಗೆ ಶಿವತ್ವಪೆಯಿಂ ಸುಜ್ಞಾನೋದಯವಾಗಲು ಚಿಚ್ಛಕ್ತಿ ಎಂಬ ಮಾತೆಯ ಉದರದಲ್ಲಿ ಸಾಹುಟ್ಟಿದ. ಎನ್ನಿಂದ ಜ್ಞಾನಶಕ್ತಿ ಪುಟ್ಟಿದಳೆಂಬುದನ್ನರಿಯದೆ ಉಭಯರ ಸಂಗವ ಮಾಡಿದನೆಂಬುದೀಗ ಪ್ರಾಜ್ಞನೆಂಬ ಜೀವನಿಗೆ ಪಶುವೆಂಬ ಶಬ್ದಾರ್ಥ. ಸುಜ್ಞಾನೋದಯವಾದ ಶಿವಶರಣನು ತ್ರಿವಿಧಾತ್ಮನಲ್ಲಿ ತ್ರಿವಿಧ ಲಿಂಗವ ಸ್ವಾಯತವ ಮಾಡಿ ತ್ರಿವಿಧ ಜೀವಾತ್ಮರ ಪ್ರಕೃತಿ ಜ್ಞಾನಾಗ್ನಿಯಲ್ಲಿ ದಹಿಸಿದಾತ, ಪೃಥ್ವಿತತ್ವದಲ್ಲಿ ಆಚಾರಲಿಂಗ ಸಂಬಂಧಿ ಎಂಬುದೀಗ ಹಂದಿ ನೊಲ ಪಶುವ ತಿಂದವನೇ ಭಕ್ತನೆಂಬ ಶಬ್ದಾರ್ಥ. ಆನೆ ಎಂದರೆ ಅಹಂಕಾರ, ಕುದುರೆ ಎಂದರೆ ದಶವಾಯುಗಳು, ನಾಯಿ ಎಂದರೆ ಪಂಚಕರಣಗಳು ಇಂತೀ ಎಲ್ಲವ ಸುಜ್ಞಾನಾಗ್ನಿಯಲ್ಲಿ ದಹಿಸಿದಾತ ಅಪ್ಪುತತ್ವದಲ್ಲಿ ಗುರುಲಿಂಗ ಸಂಬಂಧಿ ಎಂಬುದೀಗ ಆನೆ, ಕುದುರೆ, ನಾಯಿ ತಿಂದವನೇ ಮಹೇಶ್ವರನೆಂಬ ಶಬ್ದಾರ್ಥ. ಕೋಣವೆಂದರೆ ಅಷ್ಟಮದ, ಎಮ್ಮೆ ಎಂದರೆ ಸಪ್ತವ್ಯಸನಂಗಳು, ಹುಲಿ ಎಂದರೆ 84 ಲಕ್ಷ ಜೀವರಾಶಿಗಳ ಭಕ್ಷಿಸುವ ಕಾಲಮೃತ್ಯುನು; ಇಂತಿ ಎಲ್ಲವನು ಜ್ಞಾನಾಗ್ನಿಯಲ್ಲಿ ಭಕ್ಷಿಸಿದಾತನೆ ತೇಜತತ್ವದಲ್ಲಿ ಶಿವಲಿಂಗ ಸಂಬಂಧಿ ಎಂಬುದೀಗ, ಕೋಣ, ಎಮ್ಮೆ, ಹುಲಿ ತಿಂದವನೇ ಪ್ರಸಾದಿ ಎಂಬ ಶಬ್ದಾರ್ಥ. ಕೋಡಗನು ವೃಕ್ಷದ ಮೇಲೆ ಶಾಖೆಯಿಂದ ಶಾಖೆಗೆ ಲಂಘಿಸುವುದು, ಹಾಗೆ ತನುವೆಂಬ ವೃಕ್ಷದಲ್ಲಿ ಮನವೆಂಬ ಮರ್ಕಟನು, ಷಡ್ವರ್ಗಗಳೆಂಬ ಶಾಖೆಯಿಂದ ಶಾಖೆಗೆ ಹವಣಿಸುವುದು, ಮಹಾಕಾಳೋರಗನು ಅಂತಪ್ಪ ವಿಷಪೂರಿತನಾಗಿ, ಹುತ್ತಿನೊಳಗೆ ಇರ್ಪನು ಮನವೆಂಬ ಸರ್ಪನು. ಶಂಖವಿಷ ಸಂಬಂಧಿಯಾಗಿ ದೇಹವೆಂಬ ಹುತ್ತಿನೊಳಗೆ ಇರ್ಪುದು. ಉಡುವಿಂಗೆ ಎರಡು ನಾಲಿಗೆ, ಮನವೆಂಬುಡುವಿಗೆ ಸಂಕಲ್ಪವಿಕಲ್ಪವೆಂಬೆರಡು ನಾಲಿಗೆ. ಇಂತಪ್ಪ ಮನವ ಭಕ್ಷಿಸಿದಾತನೇ ವಾಯುತತ್ವದಲ್ಲಿ ಜಂಗಮಲಿಂಗಸಂಬಂಧಿಯಾಗಿ ಎಂಬುದೀಗ ಕೋಡಗ ಸರ್ಪ ಉಡುವ ತಿಂದವನೇ ಪ್ರಾಣಲಿಂಗಿ ಎಂಬ ಶಬ್ದಾರ್ಥ. ಬೆಕ್ಕು ದಿವಾರಾತ್ರಿಯಲ್ಲಿ ಉದರಾಗ್ನಿ ವಿಷಯಕ್ಕೆ ತಿರುಗುವುದು. ಹಾಗೆ ಮನವೆಂಬ ಮಾರ್ಜಾಲನು ಸದಾಕಾಲದಲ್ಲಿ ಕರಣವಿಷಯಕ್ಕೆ ಹರಿಯುವುದು. ಚಿಗರೆಯು ಅರಣ್ಯದಲ್ಲಿ ಮಲ್ಲು ನೀರಿಗೆ ತಿರುಗುವುದು. ಹಾಗೆ ಮಾಯಾ ಎಂಬ ಹರಿಣೆಯು ಭವಾರಣ್ಯದಲ್ಲಿ ಸಂಸಾರ ವಿಷಯಕ್ಕೆ ಹರಿಯುವದು. ಮನ ಮೊದಲಾಗಿ 66 ಕೋಟಿ ಕರಣಂಗಳು, ಆತ್ಮಂಗೆ ಕರುಳಾಗಿರ್ಪವು. ಇಂತಿ ಎಲ್ಲವನು ಜ್ಞಾನಾಗ್ನಿಯಲ್ಲಿ ಭಕ್ಷಿಸಿದಾತನೆ ಆಕಾಶತತ್ವದಲ್ಲಿ ಪ್ರಸಾದ ಲಿಂಗ ಸಂಬಂಧಿ ಎಂಬುದೀಗ ಬೆಕ್ಕು ಹರಿಣ ಕರುಳ ತಿಂದವನೇ ಶರಣನೆಂಬ ಶಬ್ದಾರ್ಥ. ಹದ್ದು ಎಂದರೆ ಪರಮಾತ್ಮ. ಹದ್ದು ಬಹುಕಾಲವಿರುವದು; ಆಕಾಶದಲ್ಲಿ ಆಡುವದು. ಹಾಗೆ ಪರಮಾತ್ಮನು ಆದಿ ಅನಾದಿಯಿಂದತ್ತತ್ತಲೆ, ಚಿದಾಕಾಶದಲ್ಲಿ ಚರಿಸುವನು. ಗೂಗಿ ಎಂದರೆ ಪರಶಿವನು. ಗೂಗಿಯು ಖಗಮೃಗಮಾನವರ ಸಂಚಾರವಿಲ್ಲದ ಘೋರಾರಣ್ಯದಲ್ಲಿರುವದು. ಹಾಗೆ ಪರಶಿವನು ಜೀವಾತ್ಮರ ಪ್ರಕೃತಿಯಿಲ್ಲದ ಚಿದಾರಣ್ಯದೊಳಗೆ ಬ್ರಹ್ಮರಂಧ್ರಸ್ಥಾನದೊಳಗಿರುವನು. ಪಿಪ್ಪಲೀಕನೆಂದಡೆ ಮೂಲಜ್ಞಾನ. ಪಿಪ್ಪಲೀಕನು ವೃಕ್ಷದ ಬುಡದ ಬೇರ ಮೂಸಿನೋಡಿ ತುದಿಯಲ್ಲಿ ಅಮೃತ ಫಲವಿದ್ದುದ ಬಲ್ಲದು, ಅದನ್ನು ಸೇವಿಸಿ ಸುಖದಲ್ಲಿರುವದು. ಹಾಗೆ ಮೂಲಜ್ಞಾನೋದಯವಾದ ಜ್ಞಾನಕಲಾತ್ಮನು ತನ್ನ ತಾನರಿದು ಪರಮಾಮೃತವ ಸೇವಿಸಿ ಶಿವಸುಖದಲ್ಲಿರ್ಪನು. ಇಂತಿ ಎಲ್ಲವನು ತನ್ನ ನಿಜಾಂತರಂಗದಲ್ಲಿ ನಿಕ್ಷೇಪಿಸಿಕೊಂಡಾತನೇ ಆತ್ಮತತ್ವದಲ್ಲಿ ಮಹಾಲಿಂಗ ಸಂಬಂಧಿ ಎಂಬುದೀಗ ಹದ್ದು, ಗೂಗಿ, ಪಿಪ್ಪಲೀಕನ ತಿಂದವನೇ ಐಕ್ಯನೆಂಬ ಶಬ್ದಾರ್ಥ, ಇಂತಪ್ಪ ಷಡ್ವಿಧಂಗದ ಪ್ರಕೃತಿ ನಷ್ಟವ ಮಾಡಿ, ಆ ಷಡ್ವಿಧಂಗದಲ್ಲಿ ಷಡ್ವಿಧ ಲಿಂಗವನು ಸಂಬಂಧಿಸಿದ ಶಿವಶರಣನ ಮನನಳಿದು, ಆ ಮನವನು ಸಕಲ ಕರಣಂಗಳ ಚಾರಿತ್ರವಿಲ್ಲದ ಬ್ರಹ್ಮರಂಧ್ರಕ್ಕೆ ಒಯ್ದು, ತಾಪತ್ರಯಾಗ್ನಿ ಇಲ್ಲದೆ ಜ್ಞಾನಾಗ್ನಿಯಲ್ಲಿ ದಹಿಸಿ, ಮನೋಜಲವಿಲ್ಲದೆ, ಉನ್ಮನಜಲದಲ್ಲಿ ಪರತತ್ವವೆಂಬ ಪಾಕವ ಮಾಡಿ ಎಂಬುದೀಗ, ಇಂತೀ ಎಲ್ಲವನು ಕೊಂದು ತಿಂದವನ ಕೊಂಡು ಆರು ಇಲ್ಲದ ದೇಶಕ್ಕೆ ಒಯ್ದು, ಅಗ್ನಿ ಇಲ್ಲದೆ ಸುಟ್ಟು ನೀರಿಲ್ಲದೆ ಅಟ್ಟು ಎಂಬ ಶಬ್ದಾರ್ಥ. ಅಂತಪ್ಪ ಪರತತ್ವವೆಂಬ ಪ್ರಸಾದಕ್ಕೆ ದುಜ್ಞಾರಿತ್ರವೆಂಬ ಚರಣವಿಲ್ಲದೆ, ಸಜ್ಞಾರಿತ್ರವೆಂಬ ಚರಣದಿಂದ ಚರಿಸಿ, ಭಿನ್ನಜ್ಞಾನದೃಷ್ಟಿ ಇಲ್ಲದೆ, ಸುಜ್ಞಾನದೃಷ್ಟಿಯಿಂದ ಕಂಡು ಕುಚಿತ್ತಹಸ್ತವಿಲ್ಲದೆ, ಸುಚಿತ್ತಹಸ್ತದಲ್ಲಿ ಪಿಡಿದು ಪೃಥ್ವಿತತ್ವ ಸಂಬಂಧವಾದ ಅಜ್ಞಾನಕಾಯವಿಲ್ಲದೆ ಚಿತ್ಪೃಥ್ವಿ ಸಂಬಂಧವಾದ ಜ್ಞಾನಕಾಯದಲ್ಲಿ ಅವಧರಿಸಿಕೊಂಡು ಎಂಬುದೀಗ ಕಾಲಿಲ್ಲದೆ ನಡೆದು, ಕಣ್ಣಿಲ್ಲದೆ ನೋಡಿ, ಕೈಯಿಲ್ಲದೆ ಪಿಡಿದು, ಪರಿವಾಣವಿಲ್ಲದೆ ಹರಿವಾಣದಲ್ಲಿ ಘಡಣಿಸಿಕೊಂಡು ಎಂಬ ಶಬ್ದಾರ್ಥ. ಅಂತಪ್ಪ ಜ್ಞಾನಕಾಯದಲ್ಲಿ ಪರತತ್ವಪ್ರಸಾದವ ಅವಧರಿಸಿದ ಶಿವಶರಣನು ಹಿಂದೆ ಅನಂತಯುಗದಲ್ಲಿ ಯನಗೆ ಜನನಮರಣವಿಲ್ಲ ಮುಂದೆ ಅನಂತಯುಗದಲ್ಲಿ ಉತ್ಪತ್ತಿ ಸ್ಥಿತಿ ಲಯಂಗಳಿಲ್ಲ ಎಂದು ಅಂಗಲಿಂಗೆಂಬ ಭೆಯಭಾವ ಅಳಿದು ಸಕಲ ಚಿಂತೆಯನ್ನು ಬಿಟ್ಟು ಶಿವಚಿಂತನಾಗಿ ಚಿತ್ಪಣಮ ಪೀಠದ ಮೇಲೆ ಮೂರ್ತವ ಮಾಡಿ, ಏಕಮೇವ ಪರಬ್ರಹ್ಮವೆಂಬ ಏಕೋಭಾವ ಬಲಿದು, ಆ ಪರತತ್ವವೆಂಬ ಮಹಾ ಘನ ಪ್ರಸಾದವನು ಕರಣ ಮಥನಂಗಳೆಂಬ ದಂತಗಳಿಲ್ಲದೆ, ನಿತ್ಯಾನಂದದಿಂದ ಸೇವಿಸಬಲ್ಲಾತನೇ ಮಹಾ ಘನ ಪ್ರಸಾದಿ ಎಂಬುದೀಗ ಹಿಂದು ಮುಂದಿನ ಎಡಬಲದ ಸಂಶಯಂಬಿಟ್ಟು ನಿಶ್ಶಂಕನಾಗಿ, ಸ್ವಸ್ಥ ಪದ್ಮಾಸನದಲ್ಲಿ ಏಕಾಗ್ರಚಿತ್ತದಿಂದ ಹಲ್ಲಿಲ್ಲದೇ ಮೆಲ್ಲಬಲ್ಲರೇ, ಆತನೇ ಅಚ್ಚ ಪ್ರಸಾದಿ ಎಂಬ ಶಬ್ದಾರ್ಥ. ಈ ರೀತಿ ಮಹಾನುಭಾವರ ವಚನವಿರುವದರಿಂದ ಸರ್ವರೂ ವಚನಕಾರರ ವಾಙ್ಮಾಲವನ್ನು ಅನುಸರಿಸಲು ಸರಿಯಾದ ಅಧಿಕಾರಿಗಳಾಗಬೇಕು. ಹಾಗಲ್ಲದೆ ಬರೇ ಬಹಿರಾಡಂಬರಕ್ಕೆ ಬಿದ್ದು ಬಾಹ್ಯಶುಚಿಯಾಗಲು ಪ್ರವರ್ತಿಸಬಾರದು. ಈಗಿನ ಕಾಲದಲ್ಲಿ ಹಸ್ತೀಕರನೇಕರು ಆಗಿ ವಿಚಾರವಿಲ್ಲದೆ ಗಂಗಾಳ ಕಟ್ಟಿಕೊಂಡು ಜ್ಞಾನವಿಲ್ಲದೇ ತಿರುಗಾಡುವರಲ್ಲದೆ ತಮ್ಮ ಹಿಂದೆ ನಿರಿಗಿ ಚರಂತರನ್ನು ಸಹ ಕಟ್ಟಿಕೊಂಡು ಪಕ್ಕಾಮಡಿಯೆಂದು ಗಿಲೀಟು ಮಾಡಿಕೊಂಡು ತಿರುಗಾಡಿ ಪೂರ್ವ ಪ್ರಮಥರ ಪಥವನ್ನು ಮೀರಿ ವರ್ತಿಸಹತ್ತಿದ್ದಾರೆ. ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ ಎಂಬ ಬಸವೋಕ್ತಿಯಂತೆ ವಿಚಾರವಿಲ್ಲದೆ ವರ್ತಿಸಿ ಸಿಕ್ಕಸಿಕ್ಕ ಹಾಗೆ ಹಸ್ತೀಕರನ್ನಾಗಿ ಮಾಡಬಾರದಾಗಿ ನಾನು ಸವಿನಯದಿಂದ ಕೋರುತ್ತೇವೆ

ಮಕ್ಕಳಿದ್ದರೆ ಮನೆ ಚಂದ.

ಬಂಜೆತನದಿಂದ ಮುಕ್ತರಾಗುವಿರಿ

ಮಕ್ಕಳಿಲ್ಲೆಂದು	**ಗರ್ಭಧಾರಣ ಸಂಜೀವಿನೀ**	ಚಿಂತಿಸ ಬೇಡಿರಿ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗುವಿರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. 1

ನಾರಿನವಸೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರ ತರಿಸಿ ಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

1 M. C.

ಜಾಹೀರ್ ಸೂಚನೆ.

ವೀರಶೈವ ವಿದ್ಯಾವರ್ಧಕ ಫಂಡ್-ಸಂಘ, ದಾವಣಗೆರೆ.

(1) ದಾವಣಗೆರೆಯಲ್ಲಿ ಕಟ್ಟಲ್ಪಡಬೇಕಾಗಿರುವ ಶ್ರೀಯುತ ಚಿಗಟೇರಿ ಸಣ್ಣರಾಚಪ್ಪನವರ ವೀರಶೈವ ಹಾಸ್ಟಲ್ ವಾರ್ಡನ್ಸ್ ಕಟ್ಟಡದ ಕೆಲಸವು 1933 ನೇ ಜೂನ್ ಆಖೈರ್ ಒಳಗಾಗಿ ಕಟ್ಟಿ ಪೂರೈಸತಕ್ಕದ್ದಿರುತ್ತೆ. ಕಂಟ್ರಾಕ್ಟರುಗಳು ತಮ್ಮ ಟೆಂಡರುಗಳನ್ನು 1932 ನೇ ಏಪ್ರೆಲ್ 30 ರ ಒಳಗಾಗಿ 100 ರೂ. ಗಳ ಸೆಕ್ಯುರಿಟಿಯೊಂದಿಗೆ ಕೆಳಗಿನ ಅಡ್ರೆಸ್ಸಿಗೆ ಕಳುಹಿಸತಕ್ಕದ್ದು.

(2) ಕಟ್ಟಡದ ತಪಸಿಲ್, ಪರಿಮಾಣ, ನಿಬಂಧನೆಗಳು ವಗೈರೆ ಅಪೇಕ್ಷಿಸತಕ್ಕವರು ಪ್ರೆಸಿಡೆಂಟರವರ ಆಫೀಸಿನಲ್ಲಿ ಮುಕ್ತ ಕಂಡು ತಿಳಿದುಕೊಳ್ಳಬಹುದು. ತಿರುಕಪ್ಪನವರ ಮಾಗದ ಷಡಾಕ್ಷರಪ್ಪ, ಪ್ರೆಸಿಡೆಂಟ್,

ವೀರಶೈವ ವಿದ್ಯಾವರ್ಧಕ ಫಂಡ್-ಸಂಘ, ದಾವಣಗೆರೆ.

ಜಾರಿಂದ ನೋಟೀಸು.

ಮುಂಬೈ, ಮದ್ರಾಸು, ಮೈಸೂರು ಇಲಾಖೆಗಳಲ್ಲಿರುವ ಯಾವತ್ತೂ ಕರ್ನಾಟಕ ನಾಟಕ ಕಂಪನಿ ಮಾಲೀಕರು ಮತ್ತು ಇತರೇ ಜನರಿಗೆ ಈ ನೋಟೀಸು ಮೂಲಕವಾಗಿ ತಿಳಿಸುವದೇನೆಂದರೆ—ನಮ್ಮ ನಾಟಕ ಕಂಪನಿಯ ಮಾಲ್ಕಿ ಹಕ್ಕು ಬಾಧ್ಯತೆಯುಳ್ಳ (1) ಬಿ.ಎ. (2) ಸ್ತ್ರೀ. (3) ಎಲ್.ಎಲ್.ಬಿ. ಎಂಬ ಹೆಸರಿನ 3 ಸಾಮಾಜಿಕ ನಾಟಕಗಳನ್ನು ಕೆಲವು ಕಂಪನಿಯವರು ನಾಟಕವಾಡುತ್ತಿರುವದಾಗಿ ನಮ್ಮ ನಜರಿಗೆ ಬಂದಿರುತ್ತದೆ. ಕೆಲವರು ಮೇಲೆ ಬರೆದ ಹೆಸರುಗಳನ್ನು ಬದಲು ಮಾಡಿಯೂ, ಸ್ವಲ್ಪ ವಿಷಯಾಂತರ ಮಾಡಿಯೂ, ಕೆಲವರು ಸದರಿ ಹೆಸರುಗಳನ್ನೇ ಕಾಯಂ ಇಟ್ಟು ಆಡುತ್ತಿರುವದಾಗಿ ನಮಗೆ ತಿಳಿಯಬಂದಿರುತ್ತದೆ. ನಮ್ಮ ಹೊರತು ಸದರಿ 3 ನಾಟಕಗಳನ್ನು ಆಡುವ ಹಕ್ಕು ಯಾರಿಗೂ ಯಾವ ರೀತಿಯಿಂದಲೂ ಇರುವದಿಲ್ಲ. ಹೀಗಿದ್ದು ಯಾರಾದರೂ ಸದರಿ ನಾಟಕಗಳನ್ನು ಆಡಿದರೆ, ಪ್ರಯೋಗಮಾಡಿದರೆ ಲುಕ್ಸಾನಿಗೆ ಗುರಿಯಾಗಬೇಕಾದೀತೆಂದು ಈ ನೋಟೀಸಿನ ಮೂಲಕವಾಗಿ ತಿಳಿಯಪಡಿಸಲಾಗಿದೆ.

K. Jatteppa, ಮಾಲಕ

ಮೊಕ್ಕಾಂ ಗದಗ, ತಾ॥ 12-2-1932. ಶ್ರೀ ಹಾಲಸಿದ್ಧೇಶ್ವರ ಪ್ರಸಾದಿಕ ಲೋಕಸೇವಕ ನಾಟಕಮಂಡಳಿ, ಹುಲಗೇರಿ.

[8—8]

ನೋಟೀಸು.

ಶ್ರೀ ವೀರಭದ್ರೇಶ್ವರ ಪ್ರಾಸಾದಿಕ ನಾಟಕಮಂಡಳಿ ಮಾಲಕ ಮರುಳಸಿದ್ದಯ್ಯ ನೊರಬ ತಾಲ್ಲೂಕು ಕೊಟ್ಟೂರು ಡಿ॥ ಬಳ್ಳಾರಿ ಇವರಿಗೆ ಕೆಳಗೆ ಸಹಿ ಮಾಡಿದವರ ಕಡೆಯಿಂದ ಈ ನೋಟೀಸಿನ ಮೂಲಕವಾಗಿ ತಿಳಿಸುವದೇನೆಂದರೆ—ನೀವು, ನಮ್ಮ ಕಂಪನಿಯ ಹಕ್ಕುಬಾಧ್ಯತೆಯುಳ್ಳ "ಸ್ತ್ರೀ" "ಬಿ ಎ." ನಾಟಕಗಳನ್ನು ಪ್ರಯೋಗಮಾಡಿ ಆಡುತ್ತಿರುವದಾಗಿ ನಮಗೆ ತಿಳಿದುಬಂದಿದೆ. ಈ ನಾಟಕಗಳನ್ನು ಆಡಲು ನಮ್ಮ ಹೊರ್ತು ಬೇರೆ ಯಾವ ಜನರಿಗೂ ಹಕ್ಕುಬಾಧ್ಯತೆ ಇರುವದಿಲ್ಲ. ನಮ್ಮ ಪರವಾನಗಿ ಇಲ್ಲದೆ ನಾಟಕವಾಡಿ ನೀವು ಕಾಯಿದೇ ವಿರುದ್ಧವಾಗಿ ನಡೆದಿರುತ್ತೀರಿ. ನೀವು ಈ ನೋಟೀಸು ಮುಟ್ಟಿದ 1 ತಿಂಗಳೊಳಗಾಗಿ ನಮಗೆ ಭೆಟ್ಟಿಯಾಗಿ ಸದರಿ ನಾಟಕಗಳನ್ನು ರೂಲ್ಸಿಗೆ ವಿರುದ್ಧವಾಗಿ ಆಡಿದ ಬಗ್ಗೆ ನಾವು ಠರಾಯಿಸಿದಷ್ಟು ರಕಮು ಲುಕ್ಸಾನ ಕೊಟ್ಟು ಹೋಗಬೇಕು. ನೀವು ಇದಕ್ಕೆ ತಪ್ಪಿದರೆ ನಿಮ್ಮ ಮೇಲೆ ಕಾಯಿದೇ ಪ್ರಕಾರ ಯೋಗ್ಯ ಇಲಾಜ ನಡಿಸುವದರಲ್ಲಿ ಬರುವದು. ಈ ನೋಟೀಸಿನ ಖರ್ಚು ನಿಮ್ಮ ತಲೆಯಮೇಲೆ ಆದೆ, ತಿಳಿಯುವದು.

[8—8]

K. Jatteppa, ಮಾಲಕ

ಮುಕ್ಕಾಂ ಗದಗ, ತಾ॥ 12-2-1932. ಶ್ರೀ ಹಾಲಸಿದ್ಧೇಶ್ವರ ಪ್ರಸಾದಿಕ ಲೋಕಸೇವಕ ನಾಟಕಮಂಡಳಿ, ಹುಲಗೇರಿ.

೧೯೩೨ ನೆಯ ಇಸವಿ ಎಪ್ರಿಲ್ ತಾ॥ ೨೫ ರಿಂದ ಮೇ ತಾ॥ ೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೫ ನೆಯ ಅಂಗಿರಸನಾಮಸಂವತ್ಸರದ ಚೈತ್ರ ಬಹುಳ ಪಂಚಮಿಯಿಂದ ಚೈತ್ರ ಬಹುಳ ಏಕಾದಶಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮೇಷ ಮಾಸ
25	ಸೋಮ	ಪಂಚ	24-55	ಮೂಲ	29-42	13
26	[1] ಮಂಗಳ	ಷಷ್ಠಿ	21-35	ಪೂಷಾ	28-16	14
27	ಬುಧ	ಸಪ್ತ	19-11	ಉಷಾ	27-48	15
28	ಗುರು	ಅಷ್ಟ	18-1	ಶ್ರವ	28-30	16
29	[2] ಶುಕ್ರ	ನವ	17-58	ಧನಿ	30-22	17
30	ಶನಿ	ದಶ	19-18	ಶತ	33-35	18
1	ಭಾನು	ಏಕಾ	21-49	ಪೂಭಾ	37-55	19

(1) ಮಳೆನಕ್ಷತ್ರ-ಭರಣಿ ೧ ನೆಯಪಾದ. (2) ಮಳೆನಕ್ಷತ್ರ-ಭರಣಿ ೨ ನೆಯ ಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಾಶಿಸಲ್ಪಟ್ಟಿತು.

REG N. O. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಷಕ್ಕಜ್ಞನಕ್ಷತ್ರ ಮೋಹರಾಜೀಯಾತ್ ॥
ಶ್ರೀನುತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಪ್ಸಿತದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ತೇ ಕಿಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸ್ತೆ ೧೯೩೨ ನೆಯ ಇಸವಿ ಮೇ ತಾರೀಖು ೨ ನೆಯ ಸೋಮವಾರ [ಸಂಚಿಕೆ ೧೮

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place for insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries, Economic Superintendents, Helpers and the Insurance Office, Public Office Buildings Bangalore.

(Sd.) S. SHAMANNA,
Secretary, Insurance Committee.

[50—42]

ನೋಟೀಸು.

ಬೆಂಗಳೂರು ಮತ್ತು ಮೈಸೂರು ಪುರವಾಸಿಗಳಿಗೆ ವಿಜ್ಞಾಪನೆ—ಈ ಪಟ್ಟಣಗಳಲ್ಲಿ ಈಚೆಗೆ ದೊಡ್ಡ ಬೆಳಕುಗಳ ಡೂಮುಗಳನ್ನು (ornamental Lamp Domes) ತುಂಟರು ಒಡೆಯುತ್ತಿದ್ದಾರೆ. ಇದರ ಕ್ರಯ ಒಂದಕ್ಕೆ ಸುಮಾರು ೫೦ ರೂಪಾಯಿ ಆಗುತ್ತೆ.

ದೇಶಾಭಿಮಾನಿಗಳಾದ ನೀವು ಯಾರಾದರು ಅದನ್ನ ನೋಡಿದ ಪಕ್ಷದಲ್ಲಿ ಹತ್ತಿರವಿರುವ ಪೊಲೀಸು ಸ್ಟೇಷನ್ನಿಗಾಗಲಿ ಅಥವಾ ನಮಗಾಗಲಿ ತಿಳಿಸಿದರೆ ನಾವು ಬಹಳ ಕೃತಜ್ಞರಾಗುತ್ತೇವೆ.

ಸಿ. ಎಂ. ಕರಿಯಪ್ಪ,
ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್.

[4—4]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	**ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ** ರಜಿ] ವಜ್ರಾಂಗ ಸುಂದರಪಾಕದ. [ಸ್ಟರ	ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು, ಜಿಡ್ಡು ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚೆಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ಒಂದು ಡಬ್ಬಿಗೆ ೫। ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳ್ಳೇಸು ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಆದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೇ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಡಿಚಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಡಿಚಿಟ್ಟು ಆಗೋಣ, ಮುಡಿಚಿಟ್ಟು ಆಗುವಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಆದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ತೀವ್ರ ಆದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋದಾಗುವದಿಲ್ಲ ಮತ್ತು ಬಡತನಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಜೆ [illegible] ಯಾರಿಗೆ ತೀರಿರುತ್ತದೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. [illegible]

[30—19]

ಪತ್ತಾ ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ ಎಂ. ಎಸ್. ಎಂ.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರಾಸ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿವಾಣ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರನಜನನ	೦—೮—೦	೦—೧೩—೦
ಸಟೀಕ ಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಣ್ಣಿಗೆ ಮೇಲ್ಪಟ್ಟ ೫೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಡಬ್ಬಿ



ನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಂಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕಸಟ್ಟೆ ಕಳುಹಿಸಲಾಗುವುದು.

ಚಿಕ್ಕ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜ್ ೫ ಅಣೆ.

ದಯಮಾಡಿ ನಿಮ್ಮ ಹೆಸರನ್ನು, ಅಡ್ರೆಸ್ಸನ್ನು ಸರಿಯಾಗಿ ಬರೆಯಬೇಕು ವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್, ಪೋ. ಬಾ. ೫೫೧, ಮದರಾಸು.

[30—36]

ತ್ರಯಂಗಳಲ್ಲಿ ಮಗ್ನನಾಗಿ ಸಂಸಾರವನ್ನು ಸೇವಿಸುವಾತ ಆಚಾರ್ಯನೆಂಬೆನೆ ಎನ್ನೆನಯ್ಯಾ ಎಂಬುದೀಗ ಶಿರೆಯ ಕುಡಿದವ ಗುರುವೆಂಬೆನೆ ಎಂಬ ಶಬ್ದಕ್ಕರ್ಥ. ಅಶ್ವಮುದವೆಂಬ ಮದ್ಯಮಾಂಸವ ಸೇವಿಸುವಾತ ಲಿಂಗಾಂಗಿ ಶರಣನೆಂಬೆನೆ ಎಂಬುದೀಗ ಹೆಂಡವ ಕುಡಿದವ ಲಿಂಗಾಂಗಿ ಎಂಬೆನೆ ಎನ್ನೆನಯ್ಯಾ ಎಂಬ ಶಬ್ದಕ್ಕರ್ಥ. ಗುರುಲಿಂಗ ಜಂಗಮವ ತನ್ನಂಗವಿಂದಿಂಟ್ಟು ಅರ್ಚಿಸಿ, ಫಲಪದವ ಪಡೆದು, ಆ ಫಲಪದವೆಂಬ ಮಾಂಸವ ಸೇವಿಸುವಾತ, ಜಂಗಮಲಿಂಗಿಗಳೆಂದೆನೆ ಎನ್ನೆನಯ್ಯಾ, ಎಂಬುದೀಗ, ಕಂಡವ ತಿಂದವ ಜಂಗಮವೆಂಬೆನೆ ಎನ್ನೆನಯ್ಯಾ ಎಂಬ ಶಬ್ದಕ್ಕರ್ಥ.

ಗುರುವೆಂಬವನೇ ಹೊಲಿಯ, ಲಿಂಗಾಂಗಿ ಎಂಬವನೇ ಮಾದಿಗ, ಜಂಗಮನೆಂಬವನೇ ಸಮಗಾರ ಈ ಮೂವರೊಳಗೆ ಹೊಕ್ಕು ಬಳಕೆಯ ಮಾಡಿದಾತನೇ ಭಕ್ತ. ಆ ಭಕ್ತನೆಂಬವನೇ ಡೋಹಾರ, ಇಂತಿ ಚತುರ್ವಿಧ ಬೇಧವ ತಿಳಿದು ಪಾದೋದಕ ಪ್ರಸಾದವ ಕೊಡಬಲ್ಲರೆ ಗುರುಲಿಂಗ ಜಂಗಮವೆಂಬೆ. ಈ ನಿರ್ಣಯವ ತಿಳಿದು ಪಾದೋದಕ ಪ್ರಸಾದವ ಕೊಳ್ಳಬಲ್ಲರೆ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣೈಕ್ಯನೆಂಬ ಷಟ್‌ಸ್ಥಲ ಬ್ರಹ್ಮ ಎಂಬೆ. ಆತನೆ ಅಚ್ಚಪ್ರಸಾದಿ, ನಿಚ್ಚಪ್ರಸಾದಿ, ಸಮಯಪ್ರಸಾದಿ, ಏಕಪ್ರಸಾದಿ, ಇಂತೀ ಕ್ರಮವರಿತು ಪಾದೋದಕಪ್ರಸಾದವ ಕೊಳ್ಳಬಲ್ಲರೆ ಮೋಕ್ಷವಾಗುವುದಕ್ಕೆ ತಡವಿಲ್ಲವಯ್ಯಾ. ಈ ಭೇದವ ತಿಳಿಯದೆ ಅಯ್ಯಾ ಸಾದ, ಮಹಾಪ್ರಸಾದ, ಪಾಲಿಸಿರೆಂದು ಕರುಣಿಸಿರೆಂದು, ಕೃಪೆಮಾಡೆಂದು ಭೂತದೇಹಿಗಳೆಡೆಗೆ ಹೋತನಮನುಜರು ಅಡ್ಡಡ್ಡ ಬಿದ್ದು, ಎದೆದಡ್ಡುಗಟ್ಟಿ, ಮೊಳಕಾಲು ಗೂಡುಗಟ್ಟಿ, ಹಣೆ ಬುಗುಟೆದ್ದು, ಈ ಪರಿಯಲ್ಲಿ ಅಯ್ಯಾಪ್ರಸಾದ ಪಾಲಿಸೆಂದು ಪಡಕೊಂಡು, ಲಿಂಗಕ್ಕೆ ತೋರಿ ತೋರಿ ತಮ್ಮ ಉದರಾಗ್ನಿ ಅಡಗಿಸಿಕೊಂಡು, ಕಡೆಯಲ್ಲಿ ಎಣ್ಣೆಯ ನಾತಕ್ಕೆ ಅಗಲನೆಕ್ಕುವ ಸೊಣಗನ ಹಾಗೆ ತಮ್ಮ ನಾಲಿಗೇಲಿ ತಳಿಗೆಹಾಂ ಬಾಣವನೆಕ್ಕಿ ನೆಕ್ಕಿ, ಆ ತಳಿಗೆಹಾಂ ಬಾಣ ಸವೆದು ಸಣ್ಣಾಗಿಹೋದವಲ್ಲದೆ, ಇಂತಪ್ಪ ಮತಿಭ್ರಷ್ಟ ಹೊಲೆಮಾದಿಗರಿಗೆ ಪರಶಿವ ಮಹಾಪ್ರಸಾದ ಸಾಧ್ಯವೇ, ಸಾಧ್ಯವಲ್ಲ. ಮುಂದೆ 84 ಲಕ್ಷ ಯೋನಿದ್ವಾರದಲ್ಲಿ ತಿರುಗಿ ತಿರುಗಿ ಭವದತ್ತ ಮಾಯಿವಾಗಿ, ನರಕವನೇ ಭುಂಜಿಸುವುದು ಉಂಟು. ಟೀಕು|| ಹೊಲೆಮಾದಿಗ ಸಮಗಾರರಲ್ಲಿ, ಅವ ಶೀಲ, ವ್ರತಾಚಾರ ನಾಸ್ತಿ ಎಂಬುದೀಗ, ಗುರುವೆಂಬವನೆ ಹೊಲಿಯ, ಲಿಂಗಾಂಗಿ ಎಂಬವನೇ ಮಾದಿಗ, ಜಂಗಮನೆಂಬವನೇ ಸಮಗಾರ, ಎಂಬ ಶಬ್ದಕ್ಕರ್ಥ. ಗುರುಲಿಂಗ ಜಂಗಮವೆಂಬ ತ್ರೈಮೂರ್ತಿಗಳ ಆಚರಣೆ ಆಚರಿಸಿದಾತ ಅಖಂಡ ಪ್ರಸಾದಿ, ಅಖಂಡ ಪ್ರಸಾದಿ ಎಂಬಾತನೇ ನಿರಂಜನ ಬ್ರಹ್ಮವೆಂಬುದೀಗ, ಈ ಮೂವರೊಳಗೆ ಹೊಕ್ಕು ಬಳಕೆಯ ಮಾಡಿದಾತನೇ ಭಕ್ತ, ಆ ಭಕ್ತನೆಂಬವನೇ ದೋಹಾರ ಎಂಬ ಶಬ್ದಕ್ಕರ್ಥ.

ಹಂದಿ, ಮೊಲ, ಪಶುವ ತಿಂದಾತನೇ ಭಕ್ತ ; ಆನೆ ಕುದುರೆಯ ತಿಂದವನೇ ಮಹೇಶ್ವರ ; ಕೋಣ, ಹುಲಿ, ಎಮ್ಮೆ ತಿಂದವನೇ ಪ್ರಸಾದಿ ; ಕೋಡಗ, ಸರ್ಪ, ಉಡುವ ತಿಂದವನೇ ಪ್ರಾಣಲಿಂಗಿ ; ಬೆಕ್ಕನು, ಹರಿಣಿಯನ್ನು ಕರುಳನು ತಿಂದವನೇ ಶರಣ ; ಹದ್ದು, ಗೂಗೆ, ಪಿಪ್ಪಲೀಕನ ತಿಂದವನೇ ಐಕ್ಯ. ಇಂತಿ ಎಲ್ಲವನು ಕೊಂದು ತಿಂದವನ ಕೊಂದು, ಆರು ಇಲ್ಲದ ದೇಶಕ್ಕೆ ಒಯ್ದು, ಅಗ್ನಿ ಇಲ್ಲದೇ ಸುಟ್ಟು, ನೀರಿಲ್ಲದೇ ಅಟ್ಟು, ಕಾಲಿಲ್ಲದೇ ನಡೆದು, ಕಣ್ಣಿಲ್ಲದೇ ನೋಡಿ, ಕೈಯಿಲ್ಲದೇ ಹಿಡಿದು, ಪರಿವಾಣವಿಲ್ಲದ ಹರಿವಾಣದಲ್ಲಿ ಘಡಣಿಸಿಕೊಂಡು, ಹಿಂದು ಮುಂದಿನ, ಎಡಬಲದ, ಸಂಶಯವನು ಬಿಟ್ಟು ನಿಶ್ಚಿಂತನಾಗಿ ಸ್ವಸ್ಥ ಪದ್ಮಾಸನದಲ್ಲಿ ಮೂರ್ತವಮಾಡಿ ಏಕಾಗ್ರಚಿತ್ತದಿಂದ ಹಲ್ಲು ಇಲ್ಲದೆ ಮೆಲ್ಲಬಲ್ಲರೆ, ಆತನೇ ಅಚ್ಚಪ್ರಸಾದಿ, ನಿಚ್ಚಪ್ರಸಾದಿ, ಸಮಯಪ್ರಸಾದಿ, ಏಕಪ್ರಸಾದಿ, ಗುರುಲಿಂಗ ಜಂಗಮದ ಪಾದೋದಕಪ್ರಸಾದಿ ಎಂಬೆನಯ್ಯಾ. ಇಂತೀ ಬೇಧವನು ತಿಳಿಯದೆ ಭಕ್ತರ ಮನೆಯಲ್ಲಿ ಉನ್ನತಾಸನದ ಗದ್ದುಗೆಯ ಮೇಲೆ ಕುಳಿತು, ಅಷ್ಟವಿಧಾರ್ಚನೆ, ಷೋಡಶೋಪಚಾರಗಳಿಂದ ಪೂಜೆಗೊಂಬ ಗುರುಮೂರ್ತಿಗಳು, ಚರಮೂರ್ತಿಗಳು, ಇಂತಿ ಉಭಯರು ಸತ್ತ ಕ್ರಮದಿಂದತ್ತ ನೋಡಾ, ಇಂತಪ್ಪ ವಿಚಾರವನ್ನು ತಿಳಿಯದೆ ನಾವು ಪರಮ ವಿರಕ್ತರು, ಪಟ್ಟದಯ್ಯಗಳು, ಚರಮೂರ್ತಿಗಳು, ಗುರುಸ್ಥಳದ ಅಯ್ಯಾ ತಾನು ಮೂರ್ತಿಗಳೆಂದು, ಪಾದಪೂಜೆ ಮಾಡಿಸಿಕೊಂಡು, ಪಾದವ ತೊಳಿಸುವರೆಂದು ಭಕ್ತರಿಗೆ ತೀರ್ಥವ ಕೊಡುವಂಥವರು ಬೀದಿ ಬಜಾರದಲ್ಲಿ ಕುಳಿತು ಸೆರೆ ಮಾರುವ ಹೆಂಡಗಾರರು ಇವರಿಬ್ಬರು ಸರಿ ಎಂಬೆ. ಇಂತಿ ನಿರ್ಣಯವನ್ನು ತಿಳಿಯದೆ ಭಕ್ತರ ನಡ್ಡ ಗೆಡಹಿಕೊಂಡು, ಪ್ರಸಾದವೆಂದು ತಮ್ಮ ಎಡಿಯೊಳಗಣ ಕೂಳ ತೆಗೆದು ಕೈಯುತ್ತ ನೀಡುವರು. ಪ್ಯಾಟಿ, ಬಜಾರ, ಬೀದಿ, ಅಂಗಡಿ ಕಟ್ಟೆಯಲ್ಲಿ ಕುಳಿತು, ಹೋತು ಕುರಿಗಳನ್ನು ಕೊಯ್ದು ಅವರ ಕಂಡವನ್ನು ತಕ್ಕಡಿಯಲ್ಲಿ ಎತ್ತಿ ತೂಕ ಮಾಡಿ ಮಾರುವ ಕಟುಕರು, ಇವರಿಬ್ಬರು ಸರಿ ಎಂಬೆ. ಇಂತಿ ಭೇದವನು ತಿಳಿಯದೇ ಗುರುಲಿಂಗಜಂಗಮವೆಂಬ ತ್ರಿಮೂರ್ತಿಗಳು ಪರಶಿವಸ್ವರೂಪವೆಂದು ಭಾವಿಸಿ ಪಾದೋದಕ ಪ್ರಸಾದವ ಕೊಂಬ ಭಕ್ತನು ಕೊಡುವಂತ ಗುರುಹಿರಿಯರು, ಇವರ ಪಾದೋದಕ ಪ್ರಸಾದ ಎಂತಾಯಿತಯ್ಯಾ ಎಂದರೆ ಹಳೆನಾಯಿ, ಮುದಿಬೆಕ್ಕು, ನಾಯಿ, ಸತ್ತ ಮೂರು ದಿವಸದ ಮೇಲೆ ಆರಿಸಿಕೊಂಡುಬಂದು ಅದರ ಜೀರ್ಣಮಾಂಸವನು ತಿಂದು, ಬೆಕ್ಕು ನಾಯಿ ಹಂದಿಯು ಉಚ್ಚಿಯ ಕುಡಿದಂತಾಯಿತಯ್ಯಾ, ಇಂತಿದರ ಅನುಭಾವವನು ಸ್ವಾನುಭಾವ ಗುರುಮೂರ್ತಿಗಳಿಂದ ತನ್ನ ಸ್ವಯಾತ್ಮಜ್ಞಾನದಿಂದ ವಿಚಾರಿಸಿ ತಿಳಿದು ನೋಡಿ, ಇಂಥವರನ್ನೆಲ್ಲಾ ಕೂಳಿಗೆ ಬಂದ ಬೆಕ್ಕು ನಾಯಿಗಳ ಹಾಗೆ, ಅವರ ಪಡಲಿಗೆ ಕೊಳನು ಹಾಕಿ ಬೆಕ್ಕು ನಾಯಿಗಳ ಅಟ್ಟಿದ ಹಾಗೆ ಅಟ್ಟಬೇಕು ನೋಡಾ. ಇಂತವರಲ್ಲಿ ಪಾದೋದಕ ಪ್ರಸಾದವ ಕೊಳಬಲ್ಲರೇ, ಆ ಭಕ್ತರಿಗೆ ಮೋಕ್ಷವೆಂಬುವದು ಕರತಳಾಮಳಕ ನೋಡೆಂದಯ್ಯಾ. ||ಟೀಕು|| ಹಂದಿ ಎಂದರೆ ಜೀವಾತ್ಮ, ಅದೆಂತೆಂದಡೆ, ಹಂದಿಯು ಹಾಳಕೇರಿಯಲ್ಲಿ ಊರಮಲವ ಭಂಜಿಸುವುದು, ಹಾಗೆ ಸ್ಥೂಲತನು ಸಂಬಂಧವಾದ ವಿಶ್ವನೆಂಬ ಜೀವನು ಹೊನ್ನು, ಹೆಣ್ಣು, ಮಣ್ಣೆಂಬ ತ್ರಿವಿಧ ಮಲವನು ದೇಹಸಂಸಾರವೆಂಬ ಹಾಳಕೇರಿಯಲ್ಲಿ ಅನುಭೋಗಿಸುವುದು ಎಂಬುದೀಗ ವಿಶ್ವನೆಂಬ ಜೀವನಿಗೆ ಹಂದಿ ಎಂಬ ಶಬ್ದಕ್ಕರ್ಥ. ಮೊಲನೆಂದರೆ ಅಂತರಾತ್ಮ. ಅದೆಂತೆಂದಡೆ ಮೊಲನು ಅರಣ್ಯದೊಳಗೆ ಸರೋವರ ತೀರದಲ್ಲಿ ಗರಿಕೆ ಹುಲ್ಲನು ಮೆಯ್ದು ಚರಿಸುತಿಪ್ಪ ಕಾರಣ, ಸೂಕ್ಷ್ಮತನು ಸಂಬಂಧವಾದ ತೈಜಸನೆಂಬ ಜೀವನು ದೇಹಾಂತರಂಗವೆಂಬ ಸಂಸಾರಕಾಸಾರತೀರದಲ್ಲಿ ಸಕಲಕರಣ ವಿಷಯವೆಂಬ ಹುಲ್ಲು ಸೇವಿಸಿ 84 ಭವಾರಣ್ಯದಲ್ಲಿ ಸಂಚರಿಸುತಿರ್ಪುದೆಂಬುದೀಗ ತೈಜಸನೆಂಬ ಜೀವನಿಗೆ ಮೊಲನೆಂಬರ್ಥ. ಪಶುವೆಂದರೆ ಪರಮಾತ್ಮ. ಅದೆಂತೆಂದಡೆ ಅವುದಾನೊಂದು ಪಶುವು ಪ್ರಾಯಕ್ಕೆ ಬಂದರೆ ತಂಗಿಯೆಂಬುದನರಿಯದೆ, ತಾಯಿಯೆಂಬುದನರಿಯದೆ ಸಂಗವಮಾಡುವುದಾದ ಕಾರಣ ಹಾಗೆ ಚಿದಾತ್ಮನು ತನ್ನ ತಾಯಿ ಮರೆದು ದೇಹ ಸಂಬಂಧಿಯಾದಲ್ಲಿ ಪ್ರಾಜ್ಞನೆಂಬ ಜೀವನೆನಿಸಿದ ಅಂತಪ್ಪ ಪ್ರಾಜ್ಞನೆಂಬ ಜೀವನಿಗೆ ಶಿವಕೃಪೆಯಿಂ ಸುಜ್ಞಾನೋದಯವಾಗಲು ಚಿಚ್ಛಕ್ತಿ ಎಂಬ ಮಾತೆಯ ಉದರದಲ್ಲಿ ನಾ ಹುಟ್ಟಿದೆ. ಎನ್ನಿಂದ ಜ್ಞಾನಶಕ್ತಿ ಪುಟ್ಟಿದಳೆಂಬುದನ್ನರಿಯದೆ ಉಭಯರ ಸಂಗವ ಮಾಡಿದೆನೆಂಬುದೀಗ ಪ್ರಾಜ್ಞನೆಂಬ ಜೀವನಿಗೆ ಪಶುವೆಂಬ ಶಬ್ದಕ್ಕರ್ಥ. ಸುಜ್ಞಾನೋದಯವಾದ ಶಿವಶರಣನು ತ್ರಿವಿಧಾತ್ಮನಲ್ಲಿ ತ್ರಿವಿಧ ಲಿಂಗವ ಸ್ವಾಯತವ ಮಾಡಿ ತ್ರಿವಿಧ ಜೀವಾತ್ಮರ ಪ್ರಕೃತಿ ಜ್ಞಾನಾಗ್ನಿಯಲ್ಲಿ ದಹಿಸಿದಾತ, ಪೃಥ್ವಿತತ್ವದಲ್ಲಿ ಆಚಾರಲಿಂಗ ಸಂಬಂಧಿ ಎಂಬುದೀಗ ಹಂದಿ ಮೊಲ ಪಶುವ ತಿಂದವನೇ ಭಕ್ತನೆಂಬ ಶಬ್ದಕ್ಕರ್ಥ. ಆನೆ ಎಂದರೆ ಅಹಂಕಾರ, ಕುದುರೆ ಎಂದರೆ ದಶವಾಯುಗಳು, ನಾಯಿ ಎಂದರೆ ಪಂಚಕರಣಗಳು ಇಂತೀ ಎಲ್ಲವ ಸುಜ್ಞಾನಾಗ್ನಿಯಲ್ಲಿ ದಹಿಸಿದಾತ ಅಪ್ಪುತತ್ವದಲ್ಲಿ ಗುರುಲಿಂಗ ಸಂಬಂಧಿ ಎಂಬುದೀಗ ಆನೆ, ಕುದುರೆ, ನಾಯಿ ತಿಂದವನೇ ಮಹೇಶ್ವರನೆಂಬ ಶಬ್ದಕ್ಕರ್ಥ. ಕೋಣವೆಂದರೆ ಅಷ್ಟಮದ, ಎಮ್ಮೆ ಎಂದರೆ ಸಪ್ತವ್ಯಸನಂಗಳು, ಹುಲಿ ಎಂದರೆ 84 ಲಕ್ಷ ಜೀವರಾಶಿಗಳ ಭಕ್ಷಿಸುವ ಕಾಲಮೃತ್ಯುವು; ಇಂತಿ ಎಲ್ಲವನು ಜ್ಞಾನಾಗ್ನಿಯಲ್ಲಿ ಭಕ್ಷಿಸಿದಾತನೆ ತೇಜತತ್ವದಲ್ಲಿ ಶಿವಲಿಂಗ ಸಂಬಂಧಿ ಎಂಬುದೀಗ, ಕೋಣ, ಎಮ್ಮೆ, ಹುಲಿ ತಿಂದವನೇ ಪ್ರಸಾದಿ ಎಂಬ ಶಬ್ದಕ್ಕರ್ಥ. ಕೋಡಗನು ವೃಕ್ಷದ ಮೇಲೆ ಶಾಖೆಯಿಂದ ಶಾಖೆಗೆ ಲಂಘಿಸುವುದು, ಹಾಗೆ ತನುವೆಂಬ ವೃಕ್ಷದಲ್ಲಿ ಮನವೆಂಬ ಮರ್ಕಟನು, ಷಡ್ವರ್ಗಗಳೆಂಬ ಶಾಖೆಯಿಂದ ಶಾಖೆಗೆ ಹಾರಿಸುವುದು, ಮಹಾಕಾಳೋರಗನು ಅಂತಪ್ಪ ವಿಷಪೂರಿತವಾಗಿ, ಹುತ್ತಿನೊಳಗೆ ಇರ್ಪುದು ಮನವೆಂಬ ಸರ್ಪನು. ಸಂಚಿತ ಸಂಬಂಧಿಯಾಗಿ ದೇಹವೆಂಬ ಹುತ್ತಿನೊಳಗೆ ಇರ್ಪುದು. ಉಡುವಿಂಗೆ ಎರಡು ನಾಲಿಗೆ, ಮನವೆಂಬುಡುವಿಗೆ ಸಂಕಲ್ಪವಿಕಲ್ಪವೆಂಬೆರಡು ನಾಲಿಗೆ. ಇಂತಪ್ಪ ಮನವ ಭಕ್ಷಿಸಿದಾತನೇ ವಾಯುತತ್ವದಲ್ಲಿ ಜಂಗಮಲಿಂಗಸಂಬಂಧಿಯಾಗಿ ಎಂಬುದೀಗ ಕೋಡಗ ಸರ್ಪ ಉಡುವ ತಿಂದವನೇ ಪ್ರಾಣಲಿಂಗಿ ಎಂಬ ಶಬ್ದಕ್ಕರ್ಥ. ಬೆಕ್ಕು ದಿವಾರಾತ್ರಿಯಲ್ಲಿ ಉದರಾಗ್ನಿ ವಿಷಯಕ್ಕೆ ತಿರುಗುವುದು. ಹಾಗೆ ಮನವೆಂಬ ಮಾರ್ಜಾಲನು ಸದಾಕಾಲದಲ್ಲಿ ಕರಣವಿಷಯಕ್ಕೆ ಹರಿಯುವುದು. ಚಿಗರೆಯು ಅರಣ್ಯದಲ್ಲಿ ಹುಲ್ಲು ನೀರಿಗೆ ತಿರುಗುವುದು. ಹಾಗೆ ಮಾಯಾ ಎಂಬ ಹರಿಣಿಯು ಭವಾರಣ್ಯದಲ್ಲಿ ಸಂಸಾರ ವಿಷಯಕ್ಕೆ ಹರಿಯುವದು. ಮನ ಮೊದಲಾಗಿ 66 ಕೋಟಿ ಕರಣಂಗಳು, ಆತ್ಮಂಗೆ ಕರುಳಾಗಿರ್ಪವು. ಇಂತಿ ಎಲ್ಲವನು ಜ್ಞಾನಾಗ್ನಿಯಲ್ಲಿ ಭಕ್ಷಿಸಿದಾತನೆ ಆಕಾಶತತ್ವದಲ್ಲಿ ಪ್ರಸಾದ ಲಿಂಗ ಸಂಬಂಧಿ ಎಂಬುದೀಗ ಬೆಕ್ಕು ಹರಿಣ ಕರುಳ ತಿಂದವನೇ ಶರಣನೆಂಬ ಶಬ್ದಕ್ಕರ್ಥ. ಹದ್ದು ಎಂದರೆ ಪರಮಾತ್ಮ. ಹದ್ದು ಬಹುಕಾಲವಿರುವದು; ಆಕಾಶದಲ್ಲಿ ಆಡುವದು. ಹಾಗೆ ಪರಮಾತ್ಮನು ಆದಿ ಅನಾದಿಯಿಂದತ್ತತ್ತಗೀ, ಚಿದಾಕಾಶದಲ್ಲಿ ಚರಿಸುವನು. ಗೂಗಿ ಎಂದರೆ ಪರಶಿವನು. ಗೂಗಿಯು ಖಗಮೃಗಮಾನವರ ಸಂಚಾರವಿಲ್ಲದ ಘೋರಾರಣ್ಯದಲ್ಲಿರುವದು. ಹಾಗೆ ಪರಶಿವನು ಜೀವಾತ್ಮರ ಪ್ರಕೃತಿಯಿಲ್ಲದ ಚಿದಾರಣ್ಯದೊಳಗೆ ಬ್ರಹ್ಮರಂಧ್ರಸ್ಥಾನದೊಳಗಿರುವನು. ಪಿಪ್ಪಲೀಕನೆಂದಡೆ ಮೂಲಜ್ಞಾನ. ಪಿಪ್ಪಲೀಕನು ವೃಕ್ಷದ ಬುಡದ ಬೇರ ಮೂಸಿನೋಡಿ ತುದಿಯಲ್ಲಿ ಅಮೃತ ಫಲವಿದ್ದುದ ಬಲ್ಲುದು, ಅದನ್ನು ಸೇವಿಸಿ ಸುಖದಲ್ಲಿರುವದು. ಹಾಗೆ ಮೂಲಜ್ಞಾನೋದಯವಾದ ಜ್ಞಾನಕಲಾತ್ಮನು ತನ್ನ ತಾನರಿದು ಪರಮಾಮೃತವ ಸೇವಿಸಿ ಶಿವಸುಖದಲ್ಲಿರ್ಪನು. ಇಂತಿ ಎಲ್ಲವನು ತನ್ನ ನಿಜಾಂತರಂಗದಲ್ಲಿ ನಿಕ್ಷೇಪಿಸಿಕೊಂಡಾತನೇ ಆತ್ಮತತ್ವದಲ್ಲಿ ಮಹಾಲಿಂಗ ಸಂಬಂಧಿ ಎಂಬುದೀಗ ಹದ್ದು, ಗೂಗಿ, ಪಿಪ್ಪಲೀಕನ ತಿಂದವನೇ ಐಕ್ಯನೆಂಬ ಶಬ್ದಕ್ಕರ್ಥ, ಇಂತಪ್ಪ ಷಡ್ವಿಧಂಗದ ಪ್ರಕೃತಿ ನಷ್ಟವ ಮಾಡಿ, ಆ ಷಡ್ವಿಧಂಗದಲ್ಲಿ ಷಡ್ವಿಧ ಲಿಂಗವನು ಸಂಬಂಧಿಸಿದ ಶಿವಶರಣನ ಮನವಳಿದು, ಆ ಮನವನು ಸಕಲ ಕರಣಂಗಳ ಜಾಗ್ರವಿಲ್ಲದ ಬ್ರಹ್ಮರಂಧ್ರಕ್ಕೆ ಒಯ್ದು, ತಾಪತ್ರಯಾಗ್ನಿ ಇಲ್ಲದೆ ಜ್ಞಾನಾಗ್ನಿಯಲ್ಲಿ ದಹಿಸಿ, ಮನೋಜಲವಿಲ್ಲದೆ, ಉನ್ಮನಜಲದಲ್ಲಿ ಪರತತ್ವವೆಂಬ ಪಾಕವ ಮಾಡಿ ಎಂಬುದೀಗ, ಇಂತೀ ಎಲ್ಲವನು ಕೊಂದು ತಿಂದವನ ಕೊಂದು ಆರು ಇಲ್ಲದ ದೇಶಕ್ಕೆ ಒಯ್ದು, ಅಗ್ನಿ ಇಲ್ಲದೆ ಸುಟ್ಟು ನೀರಿಲ್ಲದೆ ಅಟ್ಟು ಎಂಬ ಶಬ್ದಕ್ಕರ್ಥ. ಅಂತಪ್ಪ ಪರತತ್ವವೆಂಬ ಪ್ರಸಾದಕ್ಕೆ ದುಶ್ಚಾರಿತ್ರವೆಂಬ ಚರಣವಿಲ್ಲದೆ, ಸಚ್ಚಾರಿತ್ರವೆಂಬ ಚರಣದಿಂದ ಚರಿಸಿ, ಭಿನ್ನಜ್ಞಾನದೃಷ್ಟಿ ಇಲ್ಲದೆ, ಸುಜ್ಞಾನದೃಷ್ಟಿಯಿಂದ ಕಂಡು ಕುಚಿತ್ತಹಸ್ತವಿಲ್ಲದೆ, ಸುಚಿತ್ತಹಸ್ತದಲ್ಲಿ ಹಿಡಿದು ಪೃಥ್ವಿತತ್ವ ಸಂಬಂಧವಾದ ಅಜ್ಞಾನಕಾಯವಿಲ್ಲದೆ ಚಿತ್ಪೃಥ್ವಿ ಸಂಬಂಧವಾದ ಜ್ಞಾನಕಾಯದಲ್ಲಿ ಅವಧರಿಸಿಕೊಂಡು ಎಂಬುದೀಗ ಕಾಲಿಲ್ಲದೆ ನಡೆದು, ಕಣ್ಣಿಲ್ಲದೆ ನೋಡಿ, ಕೈಯಿಲ್ಲದೆ ಹಿಡಿದು, ಪರಿವಾಣವಿಲ್ಲದೆ ಹರಿವಾಣದಲ್ಲಿ ಘಡರಿಸಿಕೊಂಡು ಎಂಬ ಶಬ್ದಕ್ಕರ್ಥ. ಅಂತಪ್ಪ ಜ್ಞಾನಕಾಯದಲ್ಲಿ ಪರತತ್ವಪ್ರಸಾದವ ಅವಧರಿಸಿದ ಶಿವಶರಣನು ಹಿಂದೆ ಅನಂತಯುಗದಲ್ಲಿ ಯನಗೆ ಜನನಮರಣವಿಲ್ಲ ಮುಂದೆ ಅನಂತಯುಗದಲ್ಲಿ ಉತ್ಪತ್ತಿ ಸ್ಥಿತಿ ಲಯಂಗಳಿಲ್ಲ ಎಂದು ಅಂಗಲಿಂಗೆಂಬ ಭಯಭಾವ ಅಳಿದು ಸಕಲ ಚಿಂತೆಯನ್ನು ಬಿಟ್ಟು ಶಿವಚಿಂತನಾಗಿ ಚಿತ್ಪಣಮ ಪೀಠದ ಮೇಲೆ ಮೂರ್ತವ ಮಾಡಿ, ಏಕಮೇವ ಪರಬ್ರಹ್ಮವೆಂಬ ಏಕೋಭಾವವ ಬಲಿದು, ಆ ಪರತತ್ವವೆಂಬ ಮಹಾ ಘನ ಪ್ರಸಾದವನು ಕರಣಮಥನಂಗಳೆಂಬ ದಂತಗಳಿಲ್ಲದೆ, ನಿತ್ಯಾನಂದದಿಂದ ಸೇವಿಸಬಲ್ಲಾತನೇ ಮಹಾ ಘನ ಪ್ರಸಾದಿ ಎಂಬುದೀಗ ಹಿಂದು ಮುಂದಿನ ಎಡಬಲದ ಸಂಶಯಂಬಿಟ್ಟು ನಿಶ್ಚಿಂತನಾಗಿ, ಸ್ವಸ್ಥ ಪದ್ಮಾಸನದಲ್ಲಿ ಏಕಾಗ್ರಚಿತ್ತದಿಂದ ಹಲ್ಲಿಲ್ಲದೇ ಮೆಲ್ಲಬಲ್ಲರೇ, ಆತನೇ ಅಚ್ಚಪ್ರಸಾದಿ ಎಂಬ ಶಬ್ದಕ್ಕರ್ಥ. ಈ ರೀತಿ ಮಹಾನುಭಾವರ ವಚನವಿರುವದರಿಂದ ಸರ್ವರೂ ವಚನಕಾರರ ವಾಙ್ಮಾಲವನ್ನು ಅನುಸರಿಸಲು ಸರಿಯಾದ ಅಧಿಕಾರಿಗಳಾಗಬೇಕು. ಹಾಗಲ್ಲದೆ ಬರೇ ಬಹಿರಾಡಂಬರಕ್ಕೆ ಬಿದ್ದು ಬಾಹ್ಯಶುಚಿಯಾಗಲು ಪ್ರವರ್ತಿಸಬಾರದು. ಈಗಿನ ಕಾಲದಲ್ಲಿ ಹಸ್ತೀಕರನೇಕರು ಆಗ ವಿಚಾರವಿಲ್ಲದೆ ಗಂಗಾಳ ಕಟ್ಟಿಕೊಂಡು ಜ್ಞಾನವಿಲ್ಲದೇ ತಿರುಗಾಡುವರಲ್ಲದೆ ತಮ್ಮ ಹಿಂದೆ ನಿರಿಗಿ ಚರಂತರನ್ನು ಸಹ ಕಟ್ಟಿಕೊಂಡು ಪಕ್ಕಾಮಡಿಯೆಂದು ಗಿಲೀಟು ಮಾಡಿಕೊಂಡು ತಿರುಗಾಡಿ ಪೂರ್ವ ಪ್ರಮಥರ ಪಥವನ್ನು ಮೀರಿ ವರ್ತಿಸ ಹತ್ತಿದ್ದಾರೆ. ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ ಎಂಬ ಬಸವೋಕ್ತಿಯಂತೆ ವಿಚಾರವಿಲ್ಲದೆ ವರ್ತಿಸಿ ಸಿಕ್ಕಸಿಕ್ಕ ಹಾಗೆ ಹಸ್ತೀಕರನ್ನಾಗಿ ಮಾಡಬಾರದಾಗಿ ನಾನು ಸವಿನಯದಿಂದ ಕೋರುತ್ತೇವೆ

ಮಕ್ಕಳಿದ್ದರೆ ಮನೆ ಚಂದ.

ಮಕ್ಕಳಿಲ್ಲೆಂದು	ಬಂಜೆತನದಿಂದ ಮುಕ್ತರಾಗುವಿರಿ **ಗರ್ಭಧಾರಣ ಸಂಜೀವನೀ**	ಚಿಂತಿಸ ಬೇಡಿರಿ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗುವಿರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. 1

ನಾರಿನವೇಳೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರ ತರಿಸಿಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

1 M. C.

ಜಾಹೀರ್ ಸೂಚನೆ.

ವೀರಶೈವ ವಿದ್ಯಾವರ್ಧಕ ಫಂಡ್-ಸಂಘ, ದಾವಣಗೆರೆ.

(1) ದಾವಣಗೆರೆಯಲ್ಲಿ ಕಟ್ಟಲ್ಪಡಬೇಕಾಗಿರುವ ಶ್ರೀಯುತ ಚಿಗಟೇರಿ ಸಣ್ಣರಾಚಪ್ಪನವರ ವೀರಶೈವ ಹಾಸ್ಟಲ್ ವಾರ್ಡನ್ಸ್ ಕಟ್ಟಡದ ಕೆಲಸವು 1933 ನೇ ಜೂನ್ ಆಖೈರ್ ಒಳಗಾಗಿ ಕಟ್ಟಿ ಪೂರೈಸತಕ್ಕದ್ದಿರುತ್ತೆ. ಕಂಟ್ರ್ಯಾಕ್ಟರುಗಳು ತಮ್ಮ ಟೆಂಡರುಗಳನ್ನು 1932 ನೇ ಏಪ್ರೀಲ್ 30 ರ ಒಳಗಾಗಿ 100 ರೂ. ಗಳ ಸೆಕ್ಯೂರಿಟಿಯೊಂದಿಗೆ ಕೆಳಗಿನ ಅಡ್ರೆಸ್ಸಿಗೆ ಕಳುಹಿಸತಕ್ಕದ್ದು.

(2) ಕಟ್ಟಡದ ತಪಸೀಲ್, ಪರಿಮಾಣ, ನಿಬಂಧನೆಗಳು ವಗೈರೆ ಅಪೇಕ್ಷಿಸತಕ್ಕವರು ಪ್ರೆಸಿಡೆಂಟರವರ ಆಫೀಸಿನಲ್ಲಿ ಮುಖ್ತ ಕಂಡು ತಿಳಿದುಕೊಳ್ಳಬಹುದು. ತಿರುಕಪ್ಪನವರ ಮುರಿಗೆ ಷಡಾಕ್ಷರಪ್ಪ, ಪ್ರೆಸಿಡೆಂಟ್, ವೀರಶೈವ ವಿದ್ಯಾವರ್ಧಕ ಫಂಡ್-ಸಂಘ, ದಾವಣಗೆರೆ.

ಜಾಹಿರ ನೋಟೀಸು.

ಮುಂಬೈ, ಮದ್ರಾಸು, ಮೈಸೂರು ಇಲಾಖೆಗಳಲ್ಲಿರುವ ಯಾವತ್ತು ಕರ್ನಾಟಕ ನಾಟಕ ಕಂಪನಿ ಮಾಲೀಕರು ಮತ್ತು ಇತರೇ ಜನರಿಗೆ ಈ ನೋಟೀಸು ಮೂಲಕವಾಗಿ ತಿಳಿಸುವದೇನೆಂದರೆ—ನಮ್ಮ ನಾಟಕ ಕಂಪನಿಯ ಮಾಲ್ಕಿ ಹಕ್ಕು ಬಾಧ್ಯತೆಯುಳ್ಳ (1) ಬಿ.ಎ. (2) ಸ್ತ್ರೀ. (3) ಎಲ್.ಎಲ್.ಬಿ. ಎಂಬ ಹೆಸರಿನ 3 ಸಾಮಾಜಿಕ ನಾಟಕಗಳನ್ನು ಕೆಲವು ಕಂಪನಿಯವರು ನಾಟಕವಾಡುತ್ತಿರುವದಾಗಿ ನಮ್ಮ ನಜರಿಗೆ ಬಂದಿರುತ್ತದೆ. ಕೆಲವರು ಮೇಲೆ ಬರೆದ ಹೆಸರುಗಳನ್ನು ಬದಲುಮಾಡಿಯೂ, ಸ್ವಲ್ಪ ವಿಷಯಾಂತರಮಾಡಿಯೂ, ಕೆಲವರು ಸದರಿ ಹೆಸರುಗಳನ್ನೇ ಕಾಯಂ ಇಟ್ಟು ಆಡುತ್ತಿರುವದಾಗಿ ನಮಗೆ ತಿಳಿಯಬಂದಿರುತ್ತದೆ. ನಮ್ಮ ಹೊರತು ಸದರಿ 3 ನಾಟಕಗಳನ್ನು ಆಡುವ ಹಕ್ಕು ಯಾರಿಗೂ ಯಾವ ರೀತಿಯಿಂದಲೂ ಇರುವದಿಲ್ಲ. ಹೀಗಿದ್ದು ಯಾರಾದರೂ ಸದರಿ ನಾಟಕಗಳನ್ನು ಆಡಿದರೆ, ಪ್ರಯೋಗಮಾಡಿದರೆ ಲುಕ್ಸಾನಿಗೆ ಗುರಿಯಾಗಬೇಕಾದೀತೆಂದು ಈ ನೋಟೀಸಿನ ಮೂಲಕವಾಗಿ ತಿಳಿಯಪಡಿಸಲಾಗಿದೆ.

K. Jatteppa,
ಮಾಲಕ

ಮೊಕ್ಕಾಂ ಗದಗ,
ತಾ|| 12-2-1932.
ಶ್ರೀ ಹಾಲಸಿದ್ಧೇಶ್ವರ ಪ್ರಸಾದಿಕ ಲೋಕಸೇವಕ ನಾಟಕಮಂಡಳಿ, ಹಲಗೇರಿ.

[8—8]

ನೋಟೀಸು.

ಶ್ರೀ ವೀರಭದ್ರೇಶ್ವರ ಪ್ರಸಾದಿಕ ನಾಟಕಮಂಡಳಿ ಮಾಲಕ ಮರುಳಸಿದ್ದಯ್ಯ ಮೊರಬ ತಾಲೂಕು ಕೂಡ್ಲಿಗಿ ಡಿ|| ಬಳ್ಳಾರಿ ಇವರಿಗೆ ಕೆಳಗೆ ಸಹಿ ಮಾಡಿದವರ ಕಡೆಂದಾ ಈ ನೋಟೀಸಿನ ಮೂಲಕವಾಗಿ ತಿಳಿಸುವದೇನೆಂದರೆ—ನೀವು, ನಮ್ಮ ಕಂಪನಿಯ ಹಕ್ಕುಬಾಧ್ಯತೆಯುಳ್ಳ "ಸ್ತ್ರೀ" "ಬಿ. ಎ." ನಾಟಕಗಳನ್ನು ಪ್ರಯೋಗಮಾಡಿ ಆಡುತ್ತಿರುವದಾಗಿ ನಮಗೆ ತಿಳಿದುಬಂದಿದೆ. ಈ ನಾಟಕಗಳನ್ನು ಆಡಲು ನಮ್ಮ ಹೊರ್ತು ಬೇರೆ ಯಾವ ಜನರಿಗೂ ಹಕ್ಕುಬಾಧ್ಯತೆ ಇರುವದಿಲ್ಲ. ನಮ್ಮ ಪರವಾನಗಿ ಇಲ್ಲದೆ ನಾಟಕವಾಡಿ ನೀವು ಕಾಯದೇ ವಿರುದ್ಧವಾಗಿ ನಡೆದಿರುತ್ತೀರಿ. ನೀವು ಈ ನೋಟೀಸು ಮುಟ್ಟಿದ 1 ತಿಂಗಳೊಳಗಾಗಿ ನಮಗೆ ಭೆಟ್ಟಿಯಾಗಿ ಸದರಿ ನಾಟಕಗಳನ್ನು ರೂಲ್ಸಿಗೆ ವಿರುದ್ಧವಾಗಿ ಆಡಿದ ಬಗ್ಗೆ ನಾವು ಠರಾಯಿಸಿದಷ್ಟು ರಕಮು ಲುಕ್ಸಾನ ಕೊಟ್ಟು ಹೋಗಬೇಕು. ನೀವು ಇದಕ್ಕೆ ತಪ್ಪಿದರೆ ನಿಮ್ಮ ಮೇಲೆ ಕಾಯದೇ ಪ್ರಕಾರ ಯೋಗ್ಯ ಇಲಾಜ ನಡಿಸುವದರಲ್ಲಿ ಬರುವದು. ಈ ನೋಟೀಸಿನ ಖರ್ಚು ನಿಮ್ಮ ತಲೆಯಮೇಲೆ ಆದೆ, ತಿಳಿಯುವದು.

[8—8]

K. Jatteppa,
ಮಾಲಕ

ಮುಕ್ಕಾಂ ಗದಗ,
ತಾ|| 12-2-1932.
ಶ್ರೀ ಹಾಲಸಿದ್ಧೇಶ್ವರ ಪ್ರಸಾದಿಕ ಲೋಕಸೇವಕ ನಾಟಕಮಂಡಳಿ, ಹಲಗೇರಿ.

೧೯೩೨ ನೆಯ ಇಸವಿ ಏಪ್ರಿಲ್ ತಾ|| ೨೫ ರಿಂದ ಮೇ ತಾ|| ೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸನಾಮಸಂವತ್ಸರದ ಚೈತ್ರ ಬಹುಳ ಪಂಚಮಿಯಿಂದ ಚೈತ್ರ ಬಹುಳ ಏಕಾದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮೇಷ ಮಾಸ
25	ಸೋಮ	ಪಂಚ	24-55	ಮೂಲ	29-42	13
26	[1] ಮಂಗಳ	ಷಷ್ಠಿ	21-35	ಪೂಷಾ	28-16	14
27	ಬುಧ	ಸಪ್ತ	19-11	ಉಷಾ	27-48	15
28	ಗುರು	ಅಷ್ಟ	18-1	ಶ್ರವ	28-30	16
29	[2] ಶುಕ್ರ	ನವ	17-58	ಧನಿ	30-22	17
30	ಶನಿ	ದಶ	19-18	ಶತ	33-35	18
1	ಭಾನು	ಏಕಾ	21-49	ಪೂಭಾ	37-55	19

(1) ಮಳೆನಕ್ಷತ್ರ-ಭರಣಿ ೧ ನೆಯಪಾದ. (2) ಮಳೆನಕ್ಷತ್ರ-ಭರಣಿ ೨ ನೆಯ ಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ಯಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG N. O. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮುಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞ ನಹೃತ್ಯ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಲೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೧-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸ್ಟೆ ೧೯೩೨ ನೆಯ ಇಸವಿ ಮೇ ತಾರೀಖು ೨ ನೆಯ ಸೋಮವಾರ [ಸಂಚಿಕೆ ೧೮

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place for insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries, Economic Superintendents, Helpers and the Insurance Office, Public Office Buildings Bangalore.

(Sd.) S. SHA MANNA,
Secretary, Insurance Committee.

[50—42]

ನೋಟೀಸು.

ಬೆಂಗಳೂರು ಮತ್ತು ಮೈಸೂರು ಪುರನಿವಾಸಿಗಳಿಗೆ ವಿಜ್ಞಾಪನೆ—ಈ ಪಟ್ಟಣಗಳಲ್ಲಿ ಈಚೆಗೆ ದೊಡ್ಡ ಬೆಳಕುಗಳ ಡೂಮುಗಳನ್ನು (ornamental Lamp Domes) ತುಂಟರು ಒಡೆಯುತ್ತಿದ್ದಾರೆ. ಇದರ ಕ್ರಯ ಬಂದಕ್ಕೆ ಸುಮಾರು ೫೦ ರೂಪಾಯಿ ಆಗುತ್ತೆ.

ದೇಶಾಭಿಮಾನಿಗಳಾದ ನೀವು ಯಾರಾದರು ಅದನ್ನ ನೋಡಿದ ಪಕ್ಷದಲ್ಲಿ ಹತ್ತಿರವಿರುವ ಪೋಲೀಸು ಸ್ಟೇಷನ್ನಿಗಾಗಲಿ ಅಥವಾ ನಮಗಾಗಲಿ ತಿಳಿಸಿದರೆ ನಾವು ಬಹಳ ಕೃತಜ್ಞರಾಗುತ್ತೇವೆ.

ಸಿ. ಎಂ. ಕರಿಯಪ್ಪ,
ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್.

[4—4]

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ಯಾಸ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಸ್ವಲ್ಪಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ೦.
ವೀರಶೈವ ಶಿವಪೂಜಾವಿಧಿ।	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿ।	೦— ೮—೦	೦—೧೪—೦
ಷಟ್ಸ್ಥಲವಿದ್ಯಾ	೦— ೪—೦	೦— ೯—೦
ಚಾರುಶೀಲೆಚರಿತ್ರೆ	೦— ೫—೦	೦—೧೦—೦
ಹರಿವಾಸ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರಜನನ	೦— ೮—೦	೦—೧೩—೦
ಸಟೀಕ ಕರ್ನಾಟಕಶಬ್ದಮಂಜರಿ	೦— ೮—೦	೦—೧೩—೦
ಸಟೀಕ ಶತಕತ್ರಯ	೧— ೦—೦	೧— ೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗ ಬೇಡಿರಿ.	**ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ** ರಜಿ] ವಜ್ರಾಂಗ ಸುಂದರಪಾಕದ. [ಸ್ಟರ	ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು, ನಿದ್ದೆ ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧೀ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೪ ತೊಲಿಯ ಒಂದು ಡಬ್ಬಿಗೆ ೫| ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳ್ಳೇಸು ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಡಿಚಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಡಿಚಿಟ್ಟು ಆಗೋಣ, ಮುಡಿಚಿಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ತೀವ್ರ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋದಾಗುವದಿಲ್ಲ ಮತ್ತು ಬಡತನಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಕಿ ಮತ್ತು ಪರೋ, ಇಂಥ ಬೇರೆ ಕಾರಣದಿಂದ ಸಂತತಿ ಇಚ್ಛಾ ಯಾರಿಗೆ ತೀರಿರುತ್ತದೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. ಶರೀರದಲ್ಲಿಯೂ ಸಂಸಾರ ಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆ ವೇಳೆಗೆ ಮುಡಿಚಿಟ್ಟು ಆಗುವದು ಸುರು ಇದ್ದು ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ನಿಸುಮಾರಿದರೂ ಸುರು ಆಗುವದಿಲ್ಲ ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರ ಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ ಒಂದು ಡಬ್ಬಿಗೆ ೭ ರೂ. ಟ. ಖ. ೮ ಆಣೆ. ಮತ್ತು ಕಡೆಗಾದ ೪ ನೇ ದಿವಸ ೬೦ ಕ್ಷಣ ಕಟ ೯೦ ರಿಸ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂದಾದ ೧, ಗುಳಿಗೆ ಮಧ್ಯಾಹ್ನಕ್ಕೆ ೧, ಗುಳಿಗೆ ರಾತ್ರಿ ಊಟವಾದ ಅನಂತರ ೧ ಗುಳಿಗೆ ಕಟ ೯೦ ರಿಸ ಕೂಡ ನುಂಗಬೇಕು. ಪಥ್ಯ ಸಾದಾ. ಕೆಲವು ನಮ್ಮ ಕಡೆಗೆ ಇರುವ ಖಾತ್ರೀ ಔಷಧಗಳ ಲ್ಯಾಬೊರಟರಿಯ ಪತ್ರಿಕೆ ತರಿಸಿಕೊಳ್ಳಿರಿ.

[30—19]

ಪತ್ತಾ ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ ಎಂ. ಎಸ್. ಎಂ.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು

(Registerd Trade Mark)

ಗಳಾಗಿ, ಯೋಗ್ಯತಾಪತ್ರಗಳನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—ಶಿರಶೂಲಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕೆಲವು ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥ ಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಿಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾಗುವುದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೭—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜ್ ೦ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
ಪೋ. ಬಾ. ೫೧೦, ಮದರಾಸು.

[50—34]

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಮೆ ತಾ|| ೨ ನೆಯ ಸೋಮವಾರ.

IRISH QUESTION

One of the most fascinating questions, yet the most fateful one, so for as the British Common Wealth of nations is concerned is the stand that de Valera-President of the Irish Free State, has taken in regard to the Oath of Allegiance to the British Crown and the payment of the land annuities. de Valera wants to abolish the Oath of Allegiance as one which is against the inclinations of the Irish and against their spirit of independance, as expressed in the recent elections which placed de Valera at the head of the Government. His justification for doing so in spite of the treaty of *1921* is that that clauses were inserted at the point of the bayonet, that is, immediate terrible war. De Valera claims the right to introduce these modifications in the treaty while the British Government asserts that they are inviolable and any such action on the part of the Irish Government would be treated as a breach of the Treaty. General Hertzog, of South Africa writes to de Valera that while he loves independance as much as de Valera yet suggesting that the advantages of the British connection should not be lost and the friendly relationship must continue with Britain. General Hertzog does not disapprove of the step taken by Ireland. de Valera has replied thanking him for his greetings, and expressing the strong desire of his countrymen for independance. It would appear that to the Irish, the romance of life is in breathing the air of freedom and independance in his own country. This spirit of patriotism is one which is hardly dubbed as disloyalty. Infact, that word has never been used in connection with the Irish problem at all. One would like to know why in India such a spirit is labelled as sedition and disloyalty. If the activities of the National Congress are taken into consideration, if the speeches of its spokesman Mahatma Gandhi are read, and compared with the stand Ireland has taken now, one would find it difficult to justify the present policy of India Government. The result of the exchange of notes between Ireland and British Government is being watched by all Dominions very anxiously. British Statesmanship has hardly failed in such situations. We are sure it will rise to the occasion even in the case of Ireland. We are anxious that the British Government should display a really broad mind so far as India is concerned. Repression, however, justifiable is hardly wisdom. It deepens wounds, develops hatred and makes reconcilement difficult. Nothing has contributed to the development of patriotism and a feeling of solidarity in India so much as the present policy of repression, for, sympathy usually goes with the weak and the oppressed. It is a great misfortune that there are no leaders of influence trying to terminate this great non-violent war and cry a trauce. Each has tested the mettle of the other and each finds that the other is not going to get a defeat anywhere in the near future.. Why then should this agony be prolonged? We are sure that the Irish situation will make the British statesmen reflect seriously about the Indian situation and help them to solve the Indian problem as well.

ಐರ್ಲೆಂಡಿನ ಸಮಸ್ಯೆ.

ಐರ್ಲೆಂಡು ಬ್ರಿಟಿಷ್ ಚಕ್ರಾಧಿಪತ್ಯಕ್ಕೊಳಪಟ್ಟ ಪ್ರಜಾಪ್ರಭುತ್ವ ದೇಶವಾಗಿರುತ್ತದೆ. ಈ ಪ್ರಜಾಪ್ರಭುತ್ವದ ಅಧ್ಯಕ್ಷನು ಹೊಸದಾಗಿ ಚುನಾಯಿಸಲ್ಪಟ್ಟು ಮಂತ್ರಾಂಗಸಭಿಕರೂ ಅಧಿಕಾರಿಗಳೂ ನಿಯಮಿಸಲ್ಪಡುವಾಗ ಅವರುಗಳೆಲ್ಲರೂ ರಾಜಭಕ್ತಿ ಪ್ರಮಾಣಮಾಡುವುದು ವಾಡಿಕೆಯಾಗಿಯೂ ಒಡಂಬಡಿಕೆಗನುಗುಣವಾಗಿಯೂ ಇದೆ. ಈಗ ನೂತನವಾಗಿ ಪ್ರಭುತ್ವಾಧ್ಯಕ್ಷನಾಗಿ ಚುನಾಯಿಸಲ್ಪಟ್ಟಿರುವ ಡಿವಲೆರಾನು ರಾಜಭಕ್ತಿ ಪ್ರಮಾಣಮಾಡಕೂಡದೆಂದೂ, ಬ್ರಿಟಿಷ್ ಚಕ್ರವರ್ತಿಗೆ ವಾರ್ಷಿಕ ನೆಲಗಂದಾಯವನ್ನು ಕೊಡಕೂಡದೆಂದೂ ನಿರೋಧಿಸುತ್ತಿರುವುದು ಅತಂತ್ಯ ಚಿತ್ತಾಕರ್ಷಕವೂ ಅನ್ಯಪ್ಪ ಪರೀಕ್ಷಕವೂ ಆದ ಸಮಸ್ಯೆಯಾಗಿರುವುದು. ರಾಜಭಕ್ತಿ ಪ್ರಮಾಣವೂ ನೆಲಗಂದಾಯವೂ ಐರ್ಲೆಂಡು ದೇಶೀಯರ ಅಭಿಪ್ರಾಯಕ್ಕೂ ಸ್ವಾತಂತ್ರ್ಯಕ್ಕೂ ವಿರೋಧವಾಗಿರುವುದರಿಂದ ಇವೆರಡು ಪದ್ಧತಿಯನ್ನು ತಪ್ಪಿಸಬಿಡಬೇಕೆಂದು ಅಧ್ಯಕ್ಷನ ಚುನಾವಣೆಯ ಕಾಲದಲ್ಲಿ ಬೋಧಿಸಿ ಜನರ ಮನ ಒಲಿಸಿದುದರಿಂದ ಡಿವಲೆರನು ಉತ್ತೀರ್ಣನಾಗಿ ಪ್ರಭುತ್ವಾಧ್ಯಕ್ಷತೆಯನ್ನು ಹೊಂದಿದನು. ಅದುಕಾರಣ ಅವನ್ನು ತಪ್ಪಿಸುವುದಕ್ಕಾಗಿಯೇ ಈತನು ಹೋರಾಡುತ್ತಿರುವುದು. ಆಯುಧಪ್ರಯೋಗ ಭಯದಿಂದ ಅಂದರೆ ತತ್‌ಕ್ಷಣ ಯುದ್ಧವನ್ನಾರಂಭಿಸಿ ತೊಂದರೆಯನ್ನುಂಟುಮಾಡಿದುದರಿಂದ 1921 ರಲ್ಲಿ ನಡೆದ ಕವಲಿಗೆ ರಾಜಭಕ್ತಿಪ್ರಮಾಣವೂ ನೆಲಗಂದಾಯವೂ ಮನಸ್ಸಾಕ್ಷಿಗೆ ವಿರೋಧವಾಗಿ ಸೇರಿಸಲ್ಪಟ್ಟವು. ಅದುಕಾರಣ ಅವುಗಳನ್ನು ಅನುಸರಿಸುವುದು ಧರ್ಮವಲ್ಲವೆಂದು ಡಿವಲೆರಾನೂ, ಕವಲಿನಲ್ಲಿ ಕಂಡ ಪ್ರಕಾರ ಐರ್ಲೆಂಡಿನವರು ನಡೆದುಕೊಳ್ಳಲೇಬೇಕೆಂದೂ, ಹಾಗೆ ನಡೆಯದೆ ತಪ್ಪಿದಲ್ಲಿ ಒಡಂಬಡಿಕೆಯನ್ನು ಉಲ್ಲಂಘಿಸಿದಂತೆ ಭಾವಿಸಲ್ಪಡುವುದೆಂದೂ ಬ್ರಿಟಿಷ್ ಪ್ರಭುತ್ವದವರೂ ಪರಸ್ಪರ ವಾದಿಸಿ ಹೋರಾಡುತ್ತಿರುವರು. ನಿಮ್ಮಂತೆಯೇ ನಾನು ಸ್ವಾತಂತ್ರ್ಯಪ್ರಿಯನಾಗಿದ್ದರೂ, ಬ್ರಿಟಿಷರ ಸಂಬಂಧದಲ್ಲಿರುವ ಅನುಕೂಲ್ಯಗಳನ್ನು ಕಳೆದುಕೊಳ್ಳದೆ ಅವರ ಸಖ್ಯವನ್ನು ಎಂದಿನಂತೆ ನಡೆಸಿಕೊಂಡುಬರುವುದು ಶ್ರೇಯಸ್ಕರವೆಂದು ದಕ್ಷಿಣಾಫ್ರಿಕೆಯ ಜನರಲ್ ಹೆರ್ಟಾಜ್‌ಗನು ಡಿವಲೆರಾನಿಗೆ ಬರೆದಿರುತ್ತಾನೆ. ಐರ್ಲೆಂಡಿನವರು ಅನುಸರಿಸಿರುವ ಮಾರ್ಗವನ್ನು ಜನರಲ್ ಹೆರ್ಟಾಜ್‌ಗನು ಅನಂಗೀಕಾರ ಮಾಡಿರುವುದಿಲ್ಲ. ಶುಭವಾದಕ್ಕಾಗಿ ಜನರಲ್ ಹೆರ್ಟಾಜ್‌ಗನನ್ನು ಡಿವಲೆರಾನು ವಂದಿಸಿ, ತನ್ನ ದೇಶೀಯರ ಪ್ರಬಲಾಭಿಲಾಷೆಯನ್ನು ತಿಳಿಸಿರುತ್ತಾನೆ. ಸ್ವದೇಶದಲ್ಲಿ ಸ್ವಾತಂತ್ರ್ಯವನ್ನನುಭವಿಸುವುದೇ ಜನ್ಮ ಸಾಫಲ್ಯವೆಂದು ಐರ್ಲೆಂಡಿನವರು ಭಾವಿಸಿರುವುದಾಗಿ ತೋರುತ್ತದೆ. ಸ್ವದೇಶಾಭಿಮಾನೋತ್ಸಾಹವು ರಾಜದ್ರೋಹಕರವೆಂದು ಹೇಳಲಾಗುವುದಿಲ್ಲ. ಈ ಶಬ್ದವು ಐರ್ಲೆಂಡಿನ ಸಮಸ್ಯೆಯಲ್ಲೆಂದೂ ಉಪಯೋಗಿಸಲ್ಪಟ್ಟಿಲ್ಲ, ಅಂದರೆ ಐರ್ಲೆಂಡಿನವರ ಸ್ವಾತಂತ್ರ್ಯಸಾಧನ ಪ್ರಯತ್ನವು ರಾಜದ್ರೋಹಕರವೆಂದು ಬ್ರಿಟಿಷರಿಂದ ಭಾವಿಸಲ್ಪಟ್ಟಿಲ್ಲ. ಹೀಗಿದ್ದರೂ ಭಾರತೀಯರ ಸ್ವಾತಂತ್ರ್ಯಸಾಧನ ಪ್ರಯತ್ನವು ಮಾತ್ರ ರಾಜದ್ರೋಹಕರವೆಂದು ಭಾವಿಸಲ್ಪಟ್ಟಿರುವುದರ ಕಾರಣವನ್ನು ತಿಳಿಯಲು ಪ್ರತಿಯೊಬ್ಬನೂ ಕುತೂಹಲನಾಗಿರುತ್ತಾನೆ. ಭಾರತ ಕಾಂಗ್ರೆಸಿನ ಕಾರ್ಯಕಲಾಪಗಳನ್ನು ಅದರ ಮುಖ್ಯನಾಯಕರಾದ ಮಹಾತ್ಮ ಗಾಂಧಿಯವರ ಭಾಷಣಗಳನ್ನೂ ಓದಿ ಈಗ ಐರ್ಲೆಂಡಿನಲ್ಲಿ ನಡೆಯುತ್ತಿರುವ ಭಾಷಣಗಳಿಗೂ ಪ್ರಯತ್ನಗಳಿಗೂ ಹೋಲಿಸಿದುದಾದರೆ, ಭಾರತ ಪ್ರಭುತ್ವದವರ ಪ್ರಸಕ್ತ ರಾಜನೀತಿಯು ಅಧರ್ಮವಾಗಿರುತ್ತದೆಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಐರ್ಲೆಂಡಿಗೂ ಬ್ರಿಟಿಷ್ ಪ್ರಭುತ್ವದವರಿಗೂ ನಡೆಯುತ್ತಿರುವ ವಾದ ವಿವಾದಗಳ ಪರಿಣಾಮವನ್ನು ಬ್ರಿಟಿಷ್ ಚಕ್ರಾಧಿಪತ್ಯಕ್ಕೊಳಪಟ್ಟ ಪ್ರಜಾಪ್ರಭುತ್ವ ದೇಶದವರು ಬಹಳ ಕುತೂಹಲದಿಂದ ನಿರೀಕ್ಷಿಸುತ್ತಿರುವರು. ಇಂತಹ ಸಂದಿಗ್ಧ ಸಮಯದಲ್ಲಿ ಬ್ರಿಟಿಷರ ರಾಜನೀತಿ ಪ್ರೌಢಿಮೆಯು ಎಂದೂ ವಿಫಲವಾದುದಿಲ್ಲ. ಐರ್ಲೆಂಡಿನ ವಿಚಾರದಲ್ಲಿ ಬ್ರಿಟಿಷ್ ಪ್ರಭುತ್ವವು ಕಾಲಾನುಗುಣ್ಯವಾಗಿ ವರ್ತಿಸುವುದೆಂದು ಖಂಡಿತವಾಗಿ ಹೇಳುತ್ತೇವೆ. ಭಾರತದೇಶ ಸ್ವಾತಂತ್ರ್ಯ ವಿಚಾರದಲ್ಲಿ ಬ್ರಿಟಿಷ್ ಪ್ರಭುತ್ವದವರು ತಮ್ಮುದಾರಭಾವವನ್ನು ವ್ಯಕ್ತಪಡಿಸುವರೆಂದು ನಿರೀಕ್ಷಿಸುತ್ತೇವೆ. ಪ್ರಜಾ ಪ್ರಯತ್ನವನ್ನು ಅಣಗಿಸುವ ಏರ್ಪಾಟುಗಳು ಎಷ್ಟೇ ನಿರ್ದೋಷವಾಗಿ ತೋರುವುದಾದರೂ ವಿವೇಕಪೂರಿತವಾಗಿಲ್ಲ. ಇದು ಜನರ ಮನಸ್ಸನ್ನು ಮತ್ತಷ್ಟು ಹೆಚ್ಚಾಗಿ ನೋಯಿಸುವುದು, ಅಸೂಯೆಯನ್ನು ಬೆಳೆಸುವುದು ಮತ್ತು ಪರಸ್ಪರ ಸಮಾಧಾನ ಪ್ರಯತ್ನವನ್ನು ಪ್ರಯಾಸಕರವನ್ನಾಗಿ ಮಾಡುವುದು. ಇದಾವುದೂ ಸ್ವದೇಶಾಭಿಮಾನಾಭಿವೃದ್ಧಿಗೆ ಸಹಾಯಕರವಾಗಿರುವುದಿಲ್ಲ. ವಾಡಿಕೆಯಾಗಿ ದುರ್ಬಲರೂ ಪೀಡಿತರೂ ಆದವರ ವಿಷಯದಲ್ಲಿ ಸಹಾನುಭೂತಿ ಹುಟ್ಟುವುದರಿಂದ ಪ್ರಭುತ್ವದವರ ನಿರ್ಬಂಧಶಾಸನ ಪ್ರಯೋಗವು ಅಂತಹ ಸಹಾನುಭೂತಿ ಪ್ರದರ್ಶನಕ್ಕೆ ಸಹಕಾರಿಯಾಗಿರುವುದಿಲ್ಲ. ದೌರ್ಜನ್ಯರಹಿತವಾದ ಯುದ್ಧವನ್ನು ಕೊನೆಗಾಣಿಸಿ ಪರಸ್ಪರ ಸಮಾಧಾನವನ್ನುಂಟುಮಾಡುವ ಸಾಮರ್ಥ್ಯವುಳ್ಳ ಮುಂದಾಳುಗಳಿಲ್ಲದಿರುವುದು ಒಂದು ದೊಡ್ಡ ದುರದೃಷ್ಟವು. ಉಭಯಪಕ್ಷದವರೂ ಪರಸ್ಪರ ಸತ್ವವನ್ನು ಪರೀಕ್ಷಿಸಿರುತ್ತಾರೆ ಮತ್ತು ಸದ್ಯದಲ್ಲಿ ತಾವು ಸೋಲುವುದಿಲ್ಲವೆಂದು ತಿಳಿದಿರುತ್ತಾರೆ. ಹೀಗಿದ್ದರೂ ಏತಕ್ಕಾಗಿ ಈ ಮಹಾಸಂಕಟವು ಲಂಬಿಸಲ್ಪಡಬೇಕು? ಐರ್ಲೆಂಡಿನ ಪರಿಸ್ಥಿತಿಯು, ಬ್ರಿಟಿಷ್ ಮಂತ್ರಿವರ್ಗದವರು ಭಾರತದೇಶದ ಪರಿಸ್ಥಿತಿಯನ್ನು ಪೂರ್ಣ ಗಮನಕ್ಕೆ ತಂದುಕೊಂಡು ಭಾರತ ಸಮಸ್ಯೆಯನ್ನು ಪರಿಷ್ಕರಿಸುವಲ್ಲಿ ಸಾಹಾಯ್ಯಕರಿಸುವುದೆಂದು ನಂಬಿರುತ್ತೇವೆ.

ಜಲಘರು ಕಾರಾಗೃಹದಲ್ಲಿ ಬಂದಿಗಳಾಗಿರುವ ಜೆ. ಎಂ. ಸೇನ್‌ಗುಪ್ತರವರಿಗೆ ಅಸ್ವಸ್ಥತೆಯುಂಟಾಗಿ ಪ್ರತಿ ಸಾಯಂಕಾಲ ಜ್ವರ ಬರುತ್ತಿದೆ ಮತ್ತು ಮುಂಗೈ ನೋವಾಗಿರುತ್ತದೆ.

ಶ್ರೀ ಬಸವೇಶ್ವರನ ಜಯಂತ್ಯುತ್ಸವವು.

ಬರುವ ವೈಶಾಖ ಶುದ್ಧ ತದಿಗೆ ತಾ|| 8-5-1932 ನೆಯ ಭಾನುವಾರವು ಶ್ರೀ ದ್ವಿತೀಯಶಂಭುವಾದ ಬಸವೇಶ್ವರನ ಜನ್ಮವಾಸರವಾಗಿರುತ್ತದೆ. ಪರಮತಗಳ ಹಾವಳಿಯ ಇರುಕಿನಲ್ಲಿ ಸಿಕ್ಕಿ ಕೃಶವಾಗುತ್ತಿದ್ದ ವೀರಶೈವಮತೋದ್ಧಾರಕ್ಕೆ ಶ್ರೀ ಬಸವೇಶನ ಅವತಾರದಿಂದ ಎಷ್ಟು ಸಹಾಯವಾಯಿತೆಂಬುದನ್ನು ವಿವರಿಸಲು ಅಳವಲ್ಲ. ಶ್ರೀ ಶಂಕರಾಚಾರ್ಯರ ಅವತಾರದಿಂದ ಆಸ್ತಿಕಮತೋದ್ಧಾರಕ್ಕೆ ಆದಂತಹ ಮಹಾ ಸಹಾಯವೇ ಶ್ರೀ ಬಸವೇಶ್ವರನಿಂದ ಮತ್ತೊಂದು ತೆರದಲ್ಲಿ ವೀರಶೈವಮತಕ್ಕೆ ಉಂಟಾಗಿರುತ್ತದೆ. ಅದುಕಾರಣ ಮತಸ್ಥರೆಲ್ಲರೂ ಆ ಪುಣ್ಯಶ್ಲೋಕಿ ಶ್ರೀ ಬಸವೇಶ್ವರನ ಜನ್ಮದಿನೋತ್ಸವವನ್ನು ಭಕ್ತಿಯಿಂದ ಆಚರಿಸಿ ತಮ್ಮ ಕೃತಜ್ಞತೆಯನ್ನು ತೋರ್ಪಡಿಸಿ ಧನ್ಯರಾಗುವುದು ಕರ್ತವ್ಯವು, ಮತ್ತು ಸ್ವಯೂಥಕಲಹದಿಂದ ಅಂದರೆ ಗುರುವರ್ಗದವರಲ್ಲೂ ಭಕ್ತವರ್ಗದವರಲ್ಲೂ ಅನೈಕಮತ್ಯ ಅವಿಶ್ವಾಸಗಳು ಹುಟ್ಟಿ ಮತಾಭಿವೃದ್ಧಿಗೆ ಭಂಗವೂ, ಪರಮತೀಯರ ಅವಹೇಳನಕ್ಕೆ ಅವಕಾಶವೂ ಉಟಾಗಿರುವ ಈ ಸಮಯದಲ್ಲಿ ಪರಸ್ಪರ ಐಕಮತ್ಯವಿಶ್ವಾಸಗಳನ್ನುಂಟುಮಾಡಲು ಪ್ರಯತ್ನಶೀಲನಾಗುತ್ತೇನೆಂದು ಆ ಪುಣ್ಯದಿವಸ ಪ್ರತಿಯೊಬ್ಬ ವೀರಶೈವನೂ ಸಂಕಲ್ಪಮಾಡಿ ತಾನು ಆಚರಿಸುವ ಆ ವೀರಶೈವ ಮತೋದ್ಧಾರಕನ ಜಯಂತ್ಯುತ್ಸವವನ್ನು ಸಾರ್ಥಕಪಡಿಸುವುದು ಅತ್ಯಾವಶ್ಯಕವು. ಹಾಗಲ್ಲದೆ ಆ ದಿವಸ ಚೆನ್ನಾಗಿ ಉಂಡು ತೇಗಿ ದೇವತೋತ್ಸವನೆಪದಿಂದ ಕಾಲ ಕಳೆಯುವುದು ಬರೇ ಬಾಹ್ಯಾಡಂಬರವೆನಿಸುವುದಾದುದರಿಂದ, ಪ್ರತಿಯೊಬ್ಬ ವೀರಶೈವನೂ ಆ ಮಹಾಮಹಿಮನಾದ ಶ್ರೀ ಬಸವೇಶ್ವರನಂತೆ ಸ್ವಮತಾಭಿವೃದ್ಧಿ ಕಾರ್ಯಗಳಿಗಾಗಿ ತನುಮನಧನಗಳನ್ನರ್ಪಿಸಲು ಸಂಕಲ್ಪಮಾಡಿ ಕೃತಕೃತ್ಯನಾಗಲೆಂದು ಕೋರುವೆವು.

ಭಂಗಾರದ ಸಾಗುವಿಕೆ

60 ಲಕ್ಷ ರೂಪಾಯಿ ಬೆಲೆಯ ಭಂಗಾರವು ಸ್ಟ್ರೇಯಾಡ್ ಎಂಬ ಹಡಗಿನ ಮೂಲಕ ಬೊಂಬಾಯಿನಿಂದ ಸೀಮೆಗೆ ಕಳುಹಿಸಲ್ಪಟ್ಟಿತು.

ಸರೋಜಿನೀದೇವಿಯ ಸ್ಥಳಾಂತರ

ಒಂದು ವರ್ಷ ಸಾದಾ ಸಜವನ್ನು ಅನುಭವಿಸಬೇಕಾಗಿರುವ ಸರೋಜಿನೀದೇವಿಯವರು ಬೊಂಬಾಯಿ ಕಾರಾಗೃಹದಿಂದ ಪೂನಾ ಬಳಿ ಇರುವ ಎರವಾಡಾ ಜೈಲಿಗೆ ಬದಲಾಯಿಸಲ್ಪಟ್ಟರು.

ಆಶ್ಚರ್ಯಕರವಾದ ಅಂಚೆಯ ಮೋಸ

ಮೋಸದ ಮಣಿಯಾರ್ಡರಿನ ಮೇಲೆ 15,000 ರೂಪಾಯಿಗಳನ್ನು ಕೊಟ್ಟಂತೆ ಮದ್ರೋರಾ ಸಬ್ ಪೋಸ್ಟಾಫೀಸಿಗೆ ಬೆಂಕಿಪುರದಿಂದ ಬಂದ ಅಕ್ನಾಲೆಡ್ಜ್‌ಮೆಂಟ್ ರಸೀತಿಯಿಂದ ಗೊತ್ತಾಯಿತು. ಈ ಮೋಸದ ವಿಷಯವಾಗಿ ವಿಚಾರಣೆ ನಡೆಯುತ್ತಿದೆ.

ಹರದೋಯಿಯಲ್ಲಿ ಸಿಡಿಮದ್ದಿನ ಹಾವಳಿ

ಹರದೋಯಿ ಎಂಬಲ್ಲಿ ಎರಡು ಅಂಗಡಿಗಳ ವರ್ತಕರು ಹರತಾಳವನ್ನಾಚರಿಸಲೊಡಂಬಡಲಿಲ್ಲವಾಗಿ ಅವರಿಬ್ಬರ ಅಂಗಡಿಗಳಿಗೆ ಸಿಡಿಮದ್ದು ಹಾಕಲ್ಪಟ್ಟಿತು. ಇದರಿಂದ ಒಬ್ಬ ವರ್ತಕನ ಹೆಂಡತಿಗೆ ಕೊಂಚ ಅಪಾಯವಾಯಿತಂತೆ.

ಇಂಜನಿಯರ ಮೇಲೆ ಜಪ್ತಿವಾರಂಟು

ಕಲಕತ್ತಾದಲ್ಲಿ ಕನ್ಸಲ್ಟಿಂಗ್ ಇಂಜಿನಿಯರುದ್ಯೋಗವನ್ನು ಬಿಟ್ಟು ಕಾಂಗ್ರೆಸು ಸೇವಕರಾಗಿ ಕೆಲಸಮಾಡುತ್ತಿರುವ ಎ. ಜೆ. ಎಸ್. ವಿಶ್ವಾಸ ಎಂಬವರು 1930–31 ನೆಯ ವರ್ಷಕ್ಕಾಗಿ ಸರ್ಕಾರಕ್ಕೆ ಬರಬೇಕಾಗಿರುವ ಕಂದಾಯವನ್ನು ಸಲ್ಲಿಸದಂತೆ ಅಡ್ಡಿಪಡಿಸಿದರೆಂಬ ಅಪರಾಧಕ್ಕಾಗಿ ಅವರಮೇಲೆ ಜಪ್ತಿವಾರಂಟು ಜಾರಿಮಾಡಲ್ಪಟ್ಟಿತು.

ಬಾಲ್ಯವಿವಾಹಕ್ಕಾಗಿ ಶಿಕ್ಷೆ

12 ವರ್ಷ ವಯಸ್ಸಿನ ಬಾಲೆಯನ್ನು ವಿವಾಹಮಾಡಿಕೊಂಡುದಕ್ಕಾಗಿ ಕಾನ್ಸಾರಾ ಉಜಮಲ್ ಎಂಬವನಿಗೆ 250, ಹೆಣ್ಣಿನ ತಂದೆ ಕಾನ್ಸಾರಾಕುಸ್ರಾ ಎಂಬವನಿಗೆ 100 ರೂಪಾಯಿಗಳ ಜುಲ್ಮಾನೆಯು ಅಹಮದಾಬಾದಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಂದ ಶಾರದಾ ಬಾಲ್ಯ ವಿವಾಹ ನಿರೋಧಶಾಸನದ ಪ್ರಕಾರ ವಿಧಿಸಲ್ಪಟ್ಟಿತು.

ಲೋಥಿಯನ್ ಕಮಿಟಿಯವರ ಪ್ರಯಾಣ

ಈ ಕಮಿಟಿಯವರು ಕಳೆದ 30 ನೇ ಶನಿವಾರ ಬೊಂಬಾಯಿನಲ್ಲಿ ಸ್ಟ್ರಾತೀರ್ಡ್ ಹಡಗನ್ನು ಹತ್ತಿ ಸೀಮೆಗೆ ಪ್ರಯಾಣ ಮಾಡುವರೆಂದು ಗೊತ್ತಾಗಿದ್ದಿತು. ಈಗ ಅದು ತಪ್ಪಿ ಈ ವಾರವೆಲ್ಲ ಅವರು ಸಿಮ್ಲಾದಲ್ಲೇ ಇರುವರೆಂದು ಪ್ರಕಟವಾಗಿದೆ. ಇವರ ವರದಿಯು ಸಿದ್ಧವಾಗಿರುವುದಾದರೂ ಲೆಕ್ಕ ಪಟೇಲಿಕೆಯ ಕೆಲಸವು ಇನ್ನೂ ಪೂರೈಸಿರಲಿಲ್ಲವಾದ್ದರಿಂದ ಇವರು ನೆನ್ನೆಯ ದಿವಸ ರಿಪೋರ್ಟಿಗೆ ರುಜುಮಾಡುವವರಾಗಿದ್ದರು. ಇದು ಪ್ರಧಾನಮಂತ್ರಿಯವರಿಗೊಪ್ಪಿಸಲ್ಪಡುವುದಕ್ಕೆ ಮೊದಲು ಪ್ರಕಟವಾಗುವುದಿಲ್ಲ.

ಅಂಚೆಯ ಪೆಟ್ಟಿಗೆಗೆ ಬೆಂಕಿ ಹಾಕಿ ಸುಡುವುದು

ಅಲಹಾಬಾದಿನಲ್ಲಿ ಪೋಸ್ಟಾಫೀಸುಗಳ ಬಳಿಯಲ್ಲದೆ ಇತರ ಕಡೆಗಳಲ್ಲಿ 400 ವರೆಗೆ ಕಾಗದ ಹಾಕುವ ಪೆಟ್ಟಿಗೆಗಳಿರುತ್ತವೆ. ಈ ಪೆಟ್ಟಿಗೆಯೊಳಕ್ಕೆ ದ್ರಾವಕವನ್ನೋ ರಂಜಕವನ್ನೋ ಮತ್ತೇನನ್ನೋ ಹಾಕಿ ಅವುಗಳಲ್ಲಿರುವ ಕಾಗದಗಳನ್ನು ಸುಡುವುದು ಪಕ್ರಮವಾದುದರ ಮೇಲೆ ಪೋಸ್ಟ್ ಆಫೀಸುಗಳ ಬಳಿ ಇರುವ ಪೆಟ್ಟಿಗೆಗಳಿಗೆ ಕಾಗದವನ್ನು ಹಾಕುವುದು ಕ್ಷೇಮಕರವೆಂದು ಪೋಸ್ಟಿನವರು ಪ್ರಕಟಿಸಿರುವರಲ್ಲದೆ ಈ ಹಾವಳಿಯನ್ನು ಕಂಡುಹಿಡಿಯಲು ಕಾವಲುಗಳನ್ನಿಟ್ಟಿರುವರು. ಅದರೂ ಹಾವಳಿಯು ಇನ್ನೂ ತಪ್ಪಿರುವುದಿಲ್ಲ.

ಮುಯ್ಯಿಗೆ ಮುಯ್ಯಿ

ಪ್ರಿನ್ಸ್ ಆಫ್ ವೇಲ್ಸ್‌ರವರು ಟೈನ್‌ಸೈಡ್ ಎಂಬಲ್ಲಿ ಸಂಚಾರ ಹೊರಟಿರುವಾಗ್ಗೆ ಗೇಟ್ಸ್‌ಹೆಡ್ ಎಂಬಲ್ಲಿ ನಿರುದ್ಯೋಗಿಗಳಾಗಿರುವ ಜನರ ಸಂಗಡ ರಾಜಮರ್ಯಾದೆಯ ನಿರ್ಬಂಧವಿಲ್ಲದೆ ಸರ್ವಸಾಮಾನ್ಯರಂತೆ ಸಂಭಾಷಣೆ ಮಾಡಿಕೊಂಡು ಬಂದರು. ಅಲ್ಲಿಂದ ಒಂದು ಪಾಠಶಾಲೆಗೆ ಹೋಗಿ ಮಕ್ಕಳನ್ನು ಪೋಷಿಸುವಾಕೆಯ ಸಂಗಡ ಮಾತನಾಡುವಾಗ್ಗೆ ಮಕ್ಕಳು ಅವರ ಸುತ್ತಲೂ ಮುತ್ತಿಕೊಂಡುವು ಅವುಗಳಲ್ಲಿ ಒಂದು ಸಣ್ಣ ಹುಡುಗನ ಕಾಲನ್ನು ಕಾಣದೆ ತುಳಿದುದಕ್ಕಾಗಿ ಯುವರಾಜರು ಅವನ ಕ್ಷಮೆಯನ್ನು ಕೋರಿದರಲ್ಲದೆ ತಮ್ಮ ಕಾಲನ್ನು ಪ್ರತಿಯಾಗಿ ತುಳಿಯೆಂದು ಹೇಳಿದರು. ಆ ಹುಡುಗನು ಅದೇ ಪ್ರಕಾರ ಮಾಡಿದನು.

ವಸ್ತುಬಹಿಷ್ಕಾರವು ಅಪರಾಧವಲ್ಲ

ವಿದೇಶ ವಸ್ತುಬಹಿಷ್ಕಾರ ಕರಪತ್ರಗಳನ್ನು ಹಂಚಿದುದಕ್ಕಾಗಿ ಶಿಕ್ಷೆ ವಿಧಿಸಲ್ಪಟ್ಟಿದ್ದುದರ ಮೇಲೆ ಅಹಮದಾಬಾದು ಸೆಷನ್ಸು ಕೋರ್ಟಿಗೆ ಅಪೀಲಾಗಿದ್ದಿತು. ತಾವು ನೋಡಿರುವ ಮಟ್ಟಿಗೆ ಬ್ರಿಟಿಷ್ ವಸ್ತುಬಹಿಷ್ಕಾರವಾಗಲಿ ವಿದೇಶವಸ್ತುಬಹಿಷ್ಕಾರವಾಗಲಿ ಅಪರಾಧವಾಗುವುದಿಲ್ಲವೆಂದೂ, ಇದು ಅಪರಾಧವೆಂಬ ಬಗೆಗೆ ಯಾವ ಶಾಸನವಿರುವುದೂ ಕಂಡುಬರುವುದಿಲ್ಲವೆಂದೂ ಸೆಷನ್ಸು ಜಡ್ಜಿಯವರು ತಿಳಿಸಿ ಬಹಿಷ್ಕಾರ ಪತ್ರವನ್ನು ಹಂಚಿದುದಕ್ಕಾಗಿ ವಿಧಿಸಲ್ಪಟ್ಟಿದ್ದ ಶಿಕ್ಷೆಯನ್ನು ರದ್ದುಮಾಡಿದರು. ಶಿಕ್ಷೆಯನ್ನು ಅನುಭವಿಸುತ್ತಿರುವ 7 ಮಂದಿ ವಿದ್ಯಾರ್ಥಿಗಳನ್ನು ಕೂಡ ಬಿಟ್ಟುಬಿಡಬೇಕೆಂದು ಹೈಕೋರ್ಟಿಗೆ ಶಿಫಾರಸು ಮಾಡಿದರು.

ಐರಿಷು ಕುದುರೆ ಜೂಜಿನ ಲಾಟರಿ

ಇಟಲಿಯಲ್ಲಿ ಕಾಫಿ ಹೋಟಲನ್ನಿಟ್ಟುಕೊಂಡಿರುವ ಎಮಿಲಿಯೊಸ್ಕಾಲಾ ಎಂಬಾತನು ಐರಿಷು ಕುದುರೆ ಜೂಜಿನ ಲಾಟರಿಯಲ್ಲಿ ಗೆದ್ದನು. ಈ ಲಾಟರಿ ಟಿಕೆಟ್ಟಿನ ಸ್ವಂತದವನಾರೆಂಬುದನ್ನು ವಿಚಾರಿಸುವುದಕ್ಕಾಗಿ ಜೂಜಿನ ಪರಿಣಾಮವನ್ನು ಪ್ರಕಟಿಸಲು ಇಷ್ಟುಕಾಲ ನಿಧಾನವಾಯಿತು. ಕಡೆಗೆ ಸ್ಕಾಲಾ ಎಂಬಾತನೇ ಆ ಟಿಕೆಟ್ಟಿನ ಸ್ವಂತಗಾರನೆಂದು ನಿರ್ಧರವಾದುದರ ಮೇಲೆ ಆತನಿಗೆ ಖರ್ಚೆಲ್ಲ ಕಳೆದು 8,84,000 ರೂಪಾಯಿಗಳು ಬಂದುವು. ಇದರಲ್ಲಿ ಟಿಕೆಟ್ಟನ್ನು ಮಾರಿದವನಿಗೆ ಒಂದು ಭಾಗವನ್ನೂ, ಇವನ ನಾಲ್ವರು ಸಹೋದರರಿಗೆ ಒಬ್ಬೊಬ್ಬನಿಗೆ 85,000 ರೂ. ನಂತೆ ಕೆಲ ಭಾಗವನ್ನೂ ಹಂಚಿಕೊಟ್ಟನು. ಈ ಸ್ಕಾಲಾ ಎಂಬಾತನು ಇಷ್ಟರಲ್ಲೇ ಪ್ರಪಂಚ ಸಂಚಾರಕ್ಕೆ ಹೊರಡುವವನಾಗಿರುವನು.

ಹುಡುಗಿಯರ ಮಾರಾಟ

ಲಾಹೋರಿನಲ್ಲೂ ದನ್ಸೋ ಎಂಬಲ್ಲಿಯೂ ಅನಾಥೆಯರೂ ನಿರ್ಗತಿಕೆಯರೂ ಆದ ವಿಧವೆಯರ ಪೋಷಣೆಯ ನೆಪದಿಂದ ಎರಡು ವಿಧವಾಶ್ರಮಗಳು ಥಾಕೂರ್ ಧನಸಿಂಗ್ ಮತ್ತು ಅವನ ಹೆಂಡತಿ ಇವರುಗಳ ಮೇಲ್ವಿಚಾರಣೆಯಲ್ಲಿದ್ದುವು. ಈ ದಂಪತಿಗಳು 4 ಸಣ್ಣ ಹುಡುಗಿಯರನ್ನು ಪಂಜಾಬಿಗೆ ಕರೆದುಕೊಂಡು ಹೋಗಿ ಲಾಹೋರು ಆಶ್ರಮದ ಮೂಲಕ ವಿಕ್ರಯಿಸಲು ಪ್ರಯತ್ನಿಸುತ್ತಿರುವಾಗ್ಗೆ ಪೋಲೀಸರಿಂದ ಹಿಡಿಯಲ್ಪಟ್ಟು ಗಂಡ 5 ವರ್ಷ ಮತ್ತು ಹೆಂಡಿತಿ 1 ವರ್ಷ ಕಠಿಣ ಸಜಾ ವಿಧಿಸಲ್ಪಟ್ಟರು. ಇದರಮೇಲೆ ಆ ಅಪರಾಧಿಗಳು ಅಪೀಲು ಮಾಡಿರಲಾಗಿ, ಆ ಆಶ್ರಮಗಳು ಹುಡುಗಿಯರನ್ನು ಪಂಜಾಬಿನಲ್ಲಿ ಮಾರುವ ಉದ್ದೇಶದಿಂದೇರ್ಪಟ್ಟಿರುವವಲ್ಲದೆ ನಿಜವಾಗಿ ವಿಧವೆಯರ ಪೋಷಣೆಗಾಗಲ್ಲವೆಂದು ಜಸ್ಟಿಸ್ ಬಾನರ್ಜಿಯವರು ಅಭಿಪ್ರಾಯಪಟ್ಟು ಅಪೀಲನ್ನು ತಳ್ಳಿಬಿಟ್ಟರು.

ಟ್ರಾಂಬಂಡಿಯಲ್ಲಿ ಭಂಗಾರದ ಗಟ್ಟಿಗಳು ಸಿಕ್ಕಿದುವು

ಗುಡಿಯಾತಿನ ಒಬ್ಬ ಮಾರ್ವಾಡಿಯು 10,000 ರೂ. ಬೆಲೆ ಚಿನ್ನದ ಗಟ್ಟಿಗಳನ್ನು ಮಾರಲು ಕಳೆದ ಬುಧವಾರ ಮದ್ರಾಸಿಗೆ ತೆಗೆದುಕೊಂಡು ಬಂದು 4000 ರೂ. ಗಳಿಗೆ ಕೆಲ ಗಟ್ಟಿಗಳನ್ನು ಮಾರಿ ಉಳಿದ 6000 ರೂ. ನ ಗಟ್ಟಿಗಳನ್ನು ಕಳೆದ ಗುರುವಾರ ಟ್ರಾಂ ಬಂಡಿಯಲ್ಲಿಟ್ಟುಕೊಂಡು ಪೆಚ್ಚಪ್ಪನ ಸ್ಕೂಲು ವರೆಗೆ ಬಂದು ಆ ಗಟ್ಟಿಗಳ ಗಂಟನ್ನು ಮರೆತುಬಿಟ್ಟು ಬಂಡಿಯಿಂದಿಳಿದು ಹೋದನು. ಟ್ರಾಂಬಂಡಿಯ ಕಂಡಕ್ಟರು ಗಂಟು ಬಿದ್ದಿರುವುದನ್ನು ಕಂಡು ಅದನ್ನು ಬಿಚ್ಚಿನೋಡಿ ಅದರೊಳಗಿದ್ದ ಚಿನ್ನದ ಗಟ್ಟಿಗಳನ್ನು ಲಾ ಕಾಲೇಜು ಪೋಲೀಸ್‌ಸ್ಟೇಷನ್ನಿಗೆ ತೆಗೆದುಕೊಂಡುಹೋಗಿ ಪೋಲೀಸಿನವರ ವಶಪಡಿಸಿದನು. ಇತ್ತಲಾಗಿ ಗಂಟನ್ನು ಬಿಟ್ಟುಹೋದ ಮಾರ್ವಾಡಿ ರೈಲ್ವೆಸ್ಟೇಷನ್ನಿಗೆ ಹೋಗಿ ಟಿಕೆಟ್ಟು ತೆಗೆದುಕೊಳ್ಳುವಾಗ್ಗೆ ಗಂಟನ್ನು ಜ್ಞಾಪಿಸಿಕೊಂಡು ದಿಗಿಲುಬಿದ್ದು ಮೂರ್ಛೆ ಹೋದನು. ಜನರುಪಚಾರದಿಂದ ಚೇತರಿಸಿಕೊಂಡು ಸಮೀಪದ ಪೋಲೀಸು ಸ್ಟೇಷನ್ನಿಗೆ ಹೋಗಿ ಚಿನ್ನದ ಗಟ್ಟಿಗಳ ಗಂಟು ಹೋಗಿರುವುವನ್ನು ತಿಳಿಸಿದನು. ಪೋಲೀಸಿನವರ ವಶದಲ್ಲಿರುವ ಭಂಗಾರದ ಗಟ್ಟಿಗಳನ್ನು ಆ ಮಾರವಾಡಿಗೆ ಕೊಡಬೇಕೆಂದೂ ಅದನ್ನು ಪೋಲೀಸರ ವಶಮಾಡಿದ ಟ್ರಾಂಕಂಡಕ್ಟರಿಗೆ 50 ರೂ. ಬಹುಮಾನ ಕೊಡತಕ್ಕುದೆಂದೂ ಪೋಲೀಸು ಕಮಿಷನರು ಅಪ್ಪಣೆ ಮಾಡಿದರು.

ಮೋಸಗಾರ ಮಹಾತ್ಮನಿಗೆ ೨ ವರ್ಷ ಸಜ

ಕೆಲಕಾಲ ಸೇನೆಯಲ್ಲಿ ಕೆಲಸಮಾಡಿದ್ದ ಒಬ್ಬ ಹವಾಲ್ದಾರನು ಹಣವನ್ನು ಗಳಿಸುವುದಕ್ಕಾಗಿ ಒಂದು ದೊಡ್ಡ ಮೋಸದ ಮಾರ್ಗವನ್ನು ಹುಡುಕಿ ಮಹಾತ್ಮನಂತೆ ವೇಷಧಾರಿಯಾದನು ಮತ್ತು ಕೆಲ ಶಿಷ್ಯರನ್ನು ಹೊಂಚಿಸಿಕೊಂಡನು. ಈ ಮಹಾತ್ಮನು ತನ್ನ ಮಹಿಮಾಶಕ್ತಿಯಿಂದ ನೋಟುಗಳನ್ನು ಒಂದಕ್ಕೆರಡಾಗಿ ಮಾಡಬಲ್ಲನೆಂದು ಶಿಷ್ಯರ ಮೂಲಕ ಪ್ರಚಾರಗೊಳಿಸಿದನು. ಕೆಲ ಆಶಾಪಂವಶರು ಪರೀಕ್ಷೆಗಾಗಿ 5 ರೂಪಾಯಿನ ಮತ್ತು 10 ರೂಪಾಯಿನ ನೋಟುಗಳನ್ನು ತಂದುಕೊಡಲು ಅವನ್ನು ತೆಗೆದುಕೊಂಡು ಅವುಗಳಿಗೆರಡರಷ್ಟು ಹೊಸ ನೋಟುಗಳನ್ನು ಕೊಡುತ್ತಿದ್ದನು. ಇದರಿಂದ ಧನಿಕರು ಆಶ್ಚರ್ಯ ಚಕಿತರಾಗಿ ಮಹಾತ್ಮರ ಶಿಷ್ಯರುಗಳನ್ನು ರಹಸ್ಯವಾಗಿ ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಅವರಿಗೆ ಮೃಷ್ಟಾನ್ನಭೋಜನ ಮಾಡಿಸಿ 30 ಸಾವಿರ ರೂಪಾಯಿಗಳ ನೋಟುಗಳನ್ನು ಕೊಟ್ಟು ಅವಕ್ಕೆ ಪ್ರತಿಯಾಗಿ ಎರಡರಷ್ಟು ನೋಟುಗಳು ಕೊಡಲ್ಪಡುವುದನ್ನೇ ಇದಿರು ನೋಡುತ್ತಿದ್ದರು. ಆದರೆ ಮಹಾತ್ಮನು ಶಿಷ್ಯಂ ಸಮೇತ ಮಾಯವಾಗಿ ಹೋದನು. ಆದರೂ ನೋಟುಗಳನ್ನು ಕಳೆದುಕೊಂಡವರು ಪೋಲೀಸಿಗೆ ತಿಳುಹದೆ ಮೌನವಾಗಿದ್ದರು. ಮಹಾತ್ಮರ ಶಿಷ್ಯರುಗಳಲ್ಲೊಬ್ಬನು ಪೋಲೀಸರಿಗೆ ರಹಸ್ಯವನ್ನು ತಿಳುಹಲಾಗಿ ಅವರು ಮಹಾತ್ಮನನ್ನು ಸೆರೆಹಿಡಿದರು. ಈ ಮಹಾತ್ಮನ ಮೋಸಕ್ಕೆ ಒಳಗಾದವರಲ್ಲಿ ಗುಜರಾತಿನ ಧನಾಧಿಪತಿಗಳು ಅನೇಕರುದ್ದರು. ಭಾವನಗರದಲ್ಲಿ ಹಿಂದೆ ದಿವಾನರಾಗಿದ್ದಾತನು ತನ್ನ ಮನೆಗಳಲ್ಲೊಂದನ್ನು ತನ್ನ ತಂದೆಯ ಸ್ನೇಹಿತನಾದ ಧನಿಕನಲ್ಲಿ ವತ್ತೆಯಿಟ್ಟು 30,000 ರೂಪಾಯಿಗಳನ್ನು ಮೋಸಗಾರ ಮಹಾತ್ಮನಿಗೆ ಕೊಟ್ಟು ನಿರ್ಗತಿಕನಾದನು. ಒಬ್ಬ ಮಹಮ್ಮದೀಯ ಐಶ್ವರ್ಯವಂತನು ದುರಾಶೆಯಿಂದ 50,000 ರೂಪಾಯಿಗಳ ನೋಟುಗಳನ್ನು ಮಹಾತ್ಮನಿಗೆ ಕೊಟ್ಟು ದರಿದ್ರನಾದನು. ಈ ಮಹಾತ್ಮನು ಆಗಾಗ್ಗೆ, ಅಪಹರಿಸಿದ ನೋಟುಗಳಲ್ಲಿ ಕೆಲವು ಶಿಷ್ಯರ ಅಜಾಗರೂಕತೆಯಿಂದ ಸುಟ್ಟುಹೋದುವೆಂದು ಅವರಮೇಲೆ ಕೋಪಗೊಂಡವನಂತೆ ನಟಿಸುತ್ತಿದ್ದನು. ಕಡೆಯಲ್ಲಿ ಇವನ ಮೋಸವು ಬಯಲಾಗಿ ಇವನು ಪೋಲೀಸರಿಂದ ಸೆರೆಹಿಡಿಯಲ್ಪಟ್ಟು 2 ವರ್ಷ ಕಠಿಣ ಸಜಾ ವಿಧಿಸಲ್ಪಟ್ಟನು.

ಒಳದೇಶದ ವೃತ್ತಾಂತಗಳು.

ಮುಳಬಾಗಲಿನಲ್ಲಿ ಪ್ಲೇಗುಜಾಡ್ಯವಿರುವುದರಿಂದ ಅಲ್ಲಿ ಈ ತಾ|| 5 ರಿಂದ 15 ರ ವರೆಗೆ ನಡೆಯುವ ಶ್ರೀ ಸೋಮೇಶ್ವರ ಸ್ವಾಮಿಯ ದನಗಳ ಪರಿಷೆಗೆ ಇತರ ಕಡೆಯಿಂದ ಜನರು ಹೋಗಕೂಡದೆಂದು ಸರ್ಕಾರದ ಆಜ್ಞೆಯಾಗಿರುತ್ತದೆ.

ದಿವಾನ್ ಸರ್ ಮಿರ್ಜಾಯರು ಕಳೆದ ಗುರುವಾರ ತಮ್ಮ ಪ್ರೈವೇಟ್ ಸೆಕ್ರೆಟರಿಯವರೊಡನೆ ಬೊಂಬಾಯಿಗೆ ಹೋಗಿದ್ದು ಕಳೆದ ಶನಿವಾರ ಹಡಗನ್ನು ಹತ್ತಿ ಸೀಮೆಗೆ ಪ್ರಯಾಣ ಮಾಡಿದ ದೇಶೀಯ ಸಂಸ್ಥಾನಗಳ ವಿಚಾರಣ ಕಮಿಟಿಯವರನ್ನು ಸಾಗಕಳುಹಿಸಿಬಂದರು.

ರಾಜಧಾನಿಯಲ್ಲಿ ಕಳೆದ ವಾರ ಮಳೆ ಬರಲಿಲ್ಲ. ದಗೆ ಬಹಳ ಹೆಚ್ಚಾಗಿದೆ. ಕೂಡಲೆ ಮಳೆಯು ಬಾರದಿದ್ದಲ್ಲಿ ಜೋಳದ ಪೈರು ಒಣಗುವುದು. ಅಲ್ಲೊಂದು ಇಲ್ಲೊಂದು ಪ್ಲೇಗುಮರಣವಾಗುತ್ತಿದೆ. ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ ಸಮಯದಲ್ಲಿ ನಡೆಯುವ ಕುದುರೆ ಜೂಜಿಗೆ ಬರತಕ್ಕ ಜನರಿಗೂ ಅವರ ಕುದುರೆಗಳಿಗೂ ಡೇರಾ ಮೊದಲಾದ ವಸತಿಗಳು ಕಲ್ಪಿಸಲ್ಪಡುತ್ತಿವೆ.

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯಟ್ಟಿನ ರೆಜಿಸ್ಟ್ರಾರರಾದ ಮ|| ಸಿ. ಎಸ್. ಶ್ರೀನಿವಾಸಾಚಾರ್ರು, ವರ್ಧಂತಿ ಮಹೋತ್ಸವಕ್ಕಾಗಿ ರಾಜಧಾನಿಗೆ ಬರುವ ಭಾರತೀಯ ಅತಿಥಿ ಸತ್ಕಾರದೇರ್ಪಾಟಿಗಾಗಿ ಸ್ಪೆಷಲ್ ಡ್ಯೂಟಿ ಆಫೀಸರಾಗಿ ನಿಯಮಿಸಲ್ಪಟ್ಟಿರುತ್ತಾರೆ. ವಸತಿ ವಾಹನ ಇತ್ಯಾದಿ ವಿಷಯಗಳ ಸಂಬಂಧವಾಗಿ ಅತಿಥಿಗಳು ಈ ಆಫೀಸರಿಗೆ ಬರೆದುಕೊಳ್ಳಬೇಕಾಗಿ ಕೋರಲ್ಪಟ್ಟಿದೆ.

ಬೆಂಗಳೂರು ವೃತ್ತಪತ್ರಿಕಾ ಸಂಪಾದಕರ ಸಂಘದವರು ಮ|| ಗಳಾದ ಸಿ. ಹೈವದನರಾಯರ ಮತ್ತು ಡಿ. ವಿ. ಗುಂಡಪ್ಪನವರ ಯಾಜಮಾನ್ಯದಲ್ಲಿ ದಿವಾನರಲ್ಲಿಗೆ ರಾಯಬಾರ ಹೋಗಿದ್ದು ತಮ್ಮ ಸಂಘದ ಉದ್ದೇಶವನ್ನು ತಿಳಿಸಿ ಪ್ರಭುತ್ವದ ಸಹಾಯವನ್ನು ಕೋರಿದರು. ದಿವಾನರು ಸಾವಧಾನದಿಂದ ಆಲಿಸಿ ಸಾಧ್ಯವಾದ ಪ್ರಕರಣಗಳಲ್ಲಿ ಪ್ರಭುತ್ವದ ಸಹಾಯವು ದೊರೆಯುವುದೆಂದೂ ತಾವು ಈ ಸಂಘದ ಪೋಷಕರಾಗಿರುತ್ತೇವೆಂದೂ ವಾಗ್ದಾನ ಮಾಡಿದುದಾಗಿ ಕೇಳುತ್ತೇವೆ.

ರಾಜಧಾನಿಯ ದೊಡ್ಡಪೇಟೆಯಲ್ಲಿ ಬೂದಿಗುಂಟೆಯವರ ಸತ್ರದ ಬಳಿ ವಾಸಿಸುವ ಬಟ್ಟೆ ವ್ಯಾಪಾರಿ ಯಶವಂತರಾಯರ ಸಹೋದರರ ಸೊಸೆ ಚಿಕ್ಕ ವಯಸ್ಸಿನ ಗರ್ಭಿಣಿ ಸ್ತ್ರೀಯು ಕಳೆದ ಎಪ್ರಿಲ್ ತಾ|| 19 ನೆಯ ಮಂಗಳವಾರ ರಾತ್ರಿ ನೇಣುಹಾಕಿಕೊಂಡು ಮೃತಳಾದಳು. ಮಾರನೆಯ ಬೆಳಿಗ್ಗೆ ಪೋಲೀಸಿನವರು ಶವವನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಿ ವೈದ್ಯರಿಂದ ಪರೀಕ್ಷೆ ಮಾಡಿಸಿ ಮುಂದಣ ಸಂಸ್ಕಾರಕ್ಕಾಗಿ ಬಂಧುಗಳ ವಶಪಡಿಸಿದರು. ಮರಣದ ಕಾರಣ ಇನ್ನೂ ಹೊರಪಡಲಿಲ್ಲ. ಇದೇ ಮನೆಯಲ್ಲಿ ಕ್ಷಯರೋಗದಿಂದ ನರಳುತ್ತಿದ್ದ ತರುಣಿಯು ಮುಂದಣ ವಾರ ಗತಿಸಿದಳು.

ಭಾರತದೇಶಕ್ಕೆ ರಾಜಕೀಯ ಸುಧಾರಣೆಗಳನ್ನು ಪ್ರಸಾದಿಸುವುದನ್ನು ಕುರಿತು ಪರ್ಯಾಲೋಚಿಸಲು ಲಂಡನ್ ನಗರದಲ್ಲಿ ನೆರೆದಿದ್ದ ರೌಂಡುಟೇಬಲ್ ಮಹಾಸಭೆಯಲ್ಲಿ ಸರ್ ಎಂ. ಮಿರ್ಜಾಯವರು ಅಮೋಘವಾದ ಸಲಹೆಗಳನ್ನು ಕೊಟ್ಟುದಲ್ಲದೆ, ಆ ಸಭೆಯಲ್ಲಿ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಏರ್ಪಾಟಿನ ವಿಷಯದಲ್ಲಿ ಬಗೆಹರಿಯದೆ ಹೋದ ಕೆಲ ಮುಖ್ಯ ವಿಚಾರಗಳನ್ನು ಇತ್ಯರ್ಥ ಪಡಿಸಲಿಕ್ಕೆ ಸಹಾಯವಾಗುವಂತಹ ಅನೇಕ ಸೂಚನೆಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿರುತ್ತಾರೆ. ಇದರ ಪ್ರತಿಯೊಂದನ್ನು ನಾವು ಪ್ರೀತಿಯಿಂದ ಸ್ವೀಕರಿಸಿ ಈ ಪತ್ರಿಕೆಯ ಬೇರೆ ಕಡೆ ಭಾಗವಾಗಿ ಮುದ್ರಿಸಿರುತ್ತೇವೆ.

ಹೈದರಾಬಾದಿನ ರಾಮದಾಸರೆಂಬವರು ರಾಜಧಾನಿಯಲ್ಲಿ ಕಳೆದ ಮಾರ್ಚಿ ತಿಂಗಳಲ್ಲಿ ಸಾರ್ವಜನಿಕ ಧ್ವಜವನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಅಪ್ಪಣೆಯನ್ನುಲ್ಲಂಘಿಸಿ ಆರೋಹಣ ಮಾಡಿದ ಅಪರಾಧಕ್ಕಾಗಿ ಸಿಟಿ ಮೆಜಿಸ್ಟ್ರೇಟರಿಂದ 3 ತಿಂಗಳ ಸಾದಾ ಸಜಾ ವಿಧಿಸಲ್ಪಟ್ಟು ಮೈಸೂರು ಜೈಲಿನಲ್ಲಿ ಅನುಭವಿಸುತ್ತಿದ್ದರು. ಇವರು ತಮ್ಮ ಅಪರಾಧವನ್ನು ಕ್ಷಮಿಸಬೇಕೆಂದೂ, ಇತಃಪರ ರಾಜಕೀಯ ಚಳುವಳಿಯಲ್ಲಿ ಭಾಗಿಯಾಗುವುದಿಲ್ಲವೆಂದೂ ಪ್ರಭುತ್ವದವರಲ್ಲಿ ಬಿನ್ನೈಸಿಕೊಂಡಿದ್ದುದರ ಮೇಲೆ ಅವರನ್ನು ಬಂಧವಿಮುಕ್ತರನ್ನಾಗಿ ಮಾಡಬೇಕೆಂದು ಪ್ರಭುತ್ವದವರು ಆಜ್ಞೆಮಾಡಿದರು. ದಾಸರ ಶಿಕ್ಷೆಯಲ್ಲಿ ಒಂದುವರೆ ತಿಂಗಳು ಕಳೆದುಹೋಗಿದ್ದಿತು.

ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡು ಆಫೀಸು ಬೆಂಗಳೂರು ಒಕ್ಕಲಿಗರ ವಿದ್ಯಾವರ್ಧಕ ಫಂಡು ಸಂಘದ ಕಟ್ಟಡಕ್ಕೆ ಬದಲಾಯಿಸಲ್ಪಟ್ಟಿರುತ್ತದೆ. ಈ ಸಂಬಂಧವಾಗಿ ಕಳೆದ ಬೋರ್ಡು ಮೀಟಿಂಗಿನಲ್ಲಿ ಬಹಳ ತೀಕ್ಷ್ಣವಾಗಿ ಚರ್ಚೆಯು ನಡೆದು ಬೋರ್ಡಿನವರ ಅನುಮತಿಯನ್ನು ಪಡೆಯದೆ ಆಫೀಸು ಪ್ರಕೃತ ಕಟ್ಟಡಕ್ಕೆ ಬದಲಾಯಿಸಲ್ಪಟ್ಟುದು ತಪ್ಪೆಂದೂ, ಈ ವಿದ್ಯಾವರ್ಧಕ ಫಂಡು ಸಂಘದ ಕಾರ್ಯನಿರ್ವಾಹಕ ಮಂಡಳಿಯ ಪ್ರೆಸಿಡೆಂಟರಾದ ಬ್ಯಾರಿಸ್ಟರ್ ಮ|| ನಾಗಪ್ಪನವರು ಡಿಸ್ಟ್ರಿಕ್ಟ್ ಬೋರ್ಡು ಮೆಂಬರಾಗಿರುವುದರಿಂದ ಕಟ್ಟಡದ ಬಾಡಿಗೆ ಮೊದಲಾದ ವಿಚಾರವಾಗಿ ಅವರು ಒಡಂಬಡಿಕೆಯನ್ನು ಮಾಡಿಕೊಂಡಿರುವುದು ಬೋರ್ಡಿನ ರೂಲ್ಸಿಗೆ ವಿರೋಧವೆಂದೂ ನಿರ್ಧರಿಸಲ್ಪಟ್ಟುದಾಗಿ ತಿಳಿಯಬರುತ್ತದೆ.

ಅರಮನೆಯ ಧರ್ಮಾಧಿಕಾರಿಗಳಾಗಿದ್ದ ಧರ್ಮಪ್ರವರ್ತ ಪಂಡಿತ ನವೀನಂ ರಾಮಾನುಜಾಚಾರ್ಯರು ಕಳೆದ ತಾ|| 23 ನೇ ಶನಿವಾರ ಮಂಡ್ಯದಲ್ಲಿ ವೈಕುಂಠವಾಸಿಗಳಾದರೆಂದು ತಿಳುಹಲು ಖೇದವಾಗುತ್ತದೆ. ಇವರು ಸಂಸ್ಕೃತದಲ್ಲಿ ಪೂರ್ಣ ಪಂಡಿತರಾಗಿದ್ದು ಮೈಸೂರು ರಾಜಾಸ್ಥಾನದಲ್ಲೇ ಅಲ್ಲದೆ ಉತ್ತರ ದೇಶದ ಅನೇಕ ರಾಜಾಸ್ಥಾನಗಳಲ್ಲೂ ಪ್ರಖ್ಯಾತರಾಗಿದ್ದರು. ಇವರಿಗೆ ಅವಸಾನಕಾಲದಲ್ಲಿ 90 ವರ್ಷ ವಯಸ್ಸಾಗಿದ್ದಿತು. ಮೈಸೂರು ವಿಶ್ವವಿದ್ಯಾಲಯದಲ್ಲಿ ಸಂಸ್ಕೃತವನ್ನು ತೆಗೆದುಕೊಂಡು ಉತ್ತಮ ತರಗತಿಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ತಮ್ಮ ಹೆಸರಿನಲ್ಲಿ ಬಹುಮಾನ ಕೊಡಲು 30,000 ರೂಪಾಯಿಗಳನ್ನು ಪುದುವಟ್ಟಾಗಿಟ್ಟಿರುವರು ಮತ್ತು ಬ್ರಾಹ್ಮಣ ಅನಾಥಾಲಯಕ್ಕೂ ಸಹಾಯ ಮಾಡಿರುವರು.

ರಾಜಧಾನಿಯ ಸಯ್ಯಾಜಿರಾವ್ ರೋಡಿನಲ್ಲಿರುವ ರಾಜರಾಜೇಶ್ವರೀ ಹಾಲಿನ ಯಜಮಾನರಾದ ಮ|| ಯು. ಎಲ್. ರಾಮಚಂದ್ರರಾಯರು ಕಳೆದ 23 ನೆಯ ಶನಿವಾರ ತಮ್ಮ ಕುಮಾರ್ತೆಯ ಮತ್ತು ಸಹೋದರಿಯ ವಿವಾಹಮಹೋತ್ಸವಗಳನ್ನು ದೊಡ್ಡಪೇಟೆಯಲ್ಲಿರುವ ಜಗ್ಗೂಲಾಲರ ಧರ್ಮಶಾಲೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿಸಿದರು ಮತ್ತು ಭಾನುವಾರ ಸಾಯಂಕಾಲ ನೂತನ ದಂಪತಿಗಳ ಅಕ್ಷ್ಯಕ್ಷತೆಗೋಷ್ಠಿ ಡಿಸ್ಟ್ರಿಕ್ಟ್ ಜಡ್ಜಿಯವರಾದ ಮ|| ಶಂಕರನಾರಾಯಣರಾಯರೇ ಅಧಿಯಾಗಿ ಸರ್ಕಾರಿಯಧಿಕಾರಿಗಳನ್ನೂ, ಲಾಯರುಗಳನ್ನೂ, ವರ್ತಕರುಗಳನ್ನೂ ಆಹ್ವಾನಿಸಿ ಸಂಗೀತಶ್ರವಣದಿಂದಲೂ ಗಂಧಪುಷ್ಪ ತಾಂಬೂಲ ವಿನಿಯೋಗದಿಂದಲೂ ಸತ್ಕರಿಸಿದರು. ಅಲ್ಲದೆ ಮಂಗಳವಾರ ರಾತ್ರಿ ಉಭಯ ದಂಪತಿಗಳ ಉತ್ಸವವನ್ನು ನೂರಾರು ದೀಪಾವಳಿಗಳಿಂದಲೂ, ಮದ್ದಿನ ವಿನೋದದಿಂದಲೂ, ವಾದ್ಯಘೋಷದಿಂದಲೂ ನಡೆಯಿಸಿದರು.

ಇಂಡಿಯಾ ದೇಶಕ್ಕಾಗಿ ನಡೆದ "ರೌಂಡ್‌ಟೇಬಲ್" ಸಮ್ಮೇಳನ

ಅತಿ ಮುಖ್ಯವಾದ ಕೆಲವು ರಾಜಕೀಯ ವಿಚಾರಗಳ ಸಂಬಂಧವಾಗಿ ಕೆಲವು ಸಲಹೆಗಳು

ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರಿಂದ

ಅವತರಣಿಕೆ.

ಇಂಡಿಯಾದೇಶಕ್ಕೆ ರಾಜಕೀಯ ಸುಧಾರಣೆಗಳನ್ನು ಕೊಡುವ ವಿಷಯದ ಸಂಬಂಧವಾಗಿ "ರೌಂಡುಟೇಬಲ್" ಸಮ್ಮೇಳನವು ನಡೆದುದು ಸರಿಯಷ್ಟೆ. ಆ ಸಮ್ಮೇಳನದಲ್ಲಿ ಅಖಿಲ ಭಾರತೀಯ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯೊಂದರ ಏರ್ಪಾಡು ಸ್ಥೂಲವಾಗಿ ಇತ್ಯರ್ಥವಾಯಿತು. ಆಗ್ಗೆ ಅದರ ಸಂಬಂಧವಾಗಿ ಬಗೆಹರಿಯದೆ ಹೋದ ಕೆಲವು ಮುಖ್ಯ ವಿಚಾರ...

...ತುರಿತು ಬರೆದ ಲೇಖನದಿಂದಲೂ, ಅದು ಚರ್ಚೆಗೆ ಬಂದ ಕಾಲದಲ್ಲಿ ನಾನು ತಿಳಿಸಿದ ಅಭಿಪ್ರಾಯಗಳಿಂದಲೂ ಕೆಲಕೆಲವು ಭಾಗಗಳನ್ನು ಮುಂದೆ ಪರಿಶಿಷ್ಟದಲ್ಲಿ ಸೂಚಿಸಿದ್ದೇನೆ.

ಸಂಯುಕ್ತ ಶಾಸನ ಸಭೆ

ಸಾರ್ವತ್ರಿಕ ಪ್ರತಿನಿಧಿ ಸಭೆ.

ಒಟ್ಟು ಸದಸ್ಯರ ಸಂಖ್ಯೆ

ಫೆಡರಲ್ ಸ್ಟ್ರಕ್ಚರ್ ಸಮಿತಿಯವರು (ಮೂರನೆಯ ವರದಿಯ 41 ನೆಯ ಪ್ಯಾರಾದಲ್ಲಿ) ಈ ಸಭೆಯಲ್ಲಿ ಸುಮಾರು 300 ಮಂದಿ ಸದಸ್ಯರಿರಬೇಕೆಂದು ಸಲಹೆ ಮಾಡಿದ್ದಾರೆ. ಕೆಲವು ಪ್ರತಿನಿಧಿಗಳು ಈ ಸಭೆಯಲ್ಲಿ 600 ರಿಂದ 700 ರ ವರೆಗೆ ಸದಸ್ಯರಿರಬೇಕೆಂದೂ, ಹೀಗಿದ್ದಲ್ಲಿ ಯಾರು ಸಭೆಯಲ್ಲಿ ತಮಗೆ ಪ್ರಾತಿನಿಧ್ಯವಿರಬೇಕೆಂದು ಕೋರುವುದು ಯುಕ್ತವೆನಿಸುವುದೋ ಆ...

...ಮಂದಿ ಹಾಗೆ ಚುನಾವಣೆಯಾಗದೆ ತಪ್ಪಿಹೋಗಿರುತ್ತಾರೋ ಅಷ್ಟು ಮಂದಿಗಳನ್ನು ನಾಮನಿರ್ದೇಶ ಮೇರೆಗೆ ನೇಮಕ ಮಾಡಬೇಕೆಂಬ ವ್ಯವಸ್ಥೆಯನ್ನಿಟ್ಟು, ಸಾಮಾನ್ಯ ಜಂಟಿ ಚುನಾವಣೆ ಸ್ಥಾನಗಳೇ ಅವರಿಗೂ ಇರುವಂತೆಯೂ ಏರ್ಪಡಿಸಿದರೇ ಸಾಕೆಂದು ಕೋರುವುದು. ಅವರಿಗಾಗಿ ಪ್ರತ್ಯೇಕ ಪ್ರತ್ಯೇಕ ಚುನಾವಣೆ ಸ್ಥಾನಗಳೇನೂ ಇರಬೇಕಾದುದಿಲ್ಲವೆಂದು ಕಾಣುತ್ತದೆ. ಇಂಡಿಯಾ ದೇಶದ ಕ್ರೈಸ್ತರಿಗೆ ಯಾವ ಬಗೆಯಲ್ಲಿ ವಿಶೇಷ ರೀತಿಯ ಚುನಾವಣೆಯ ಏರ್ಪಾಡನ್ನು ಕಲ್ಪಿಸಬೇಕಾದುದೂ ಆವಶ್ಯಕವಿಲ್ಲವೆಂಬುದು ನನ್ನ ಅಭಿಪ್ರಾಯ.

ಮುಸಲ್ಮಾನರ ಪ್ರಾತಿನಿಧ್ಯ ವಿಚಾರ

ಈಗ ಯೋಚಿಸಿರುವಂತೆ, ಸಾರ್ವತ್ರಿಕ ಪ್ರತಿನಿಧಿ ಸಭೆಯಲ್ಲಿ ಬ್ರಿಟಿಷ್ ಇಂಡಿಯಾದಿಂದ ಬಂದ 200 ಮಂದಿಗಳೂ ಸಂಸ್ಥಾನಗಳಿಂದ ಬಂದ 100 ಮಂದಿಗಳೂ, ಸದಸ್ಯರಾಗಿರುವರೆಂದು ಭಾವಿಸೋಣ. ಹೀಗಾದ ಪಕ್ಷದಲ್ಲಿ ಬ್ರಿಟಿಷ್ ಇಂಡಿಯಾದ ಈ 200 ಸ್ಥಾನಗಳಲ್ಲಿ 52 ಸ್ಥಾನಗಳನ್ನೂ, ಸಂಸ್ಥಾನಗಳ ಈ 100 ಸ್ಥಾನಗಳಲ್ಲಿ 13 ಸ್ಥಾನಗಳನ್ನೂ ಮುಸಲ್ಮಾನರಿಗಾಗಿ...

ಅಲ್ಪಸಂಖ್ಯಾತ ಪಂಗಡಗಳವರ ಪ್ರಾತಿನಿಧ್ಯ ವಿಚಾರ.

...ಇನ್ನು ನಿಮ್ನ ಪಂಗಡಗಳು ಮತ್ತು ಆಂಗ್ಲೋ ಇಂಡಿಯನ್ನರು, ಈ ಎರಡು ಅಲ್ಪಸಂಖ್ಯಾತ ಪಂಗಡಗಳವರ ವಿಚಾರ. ಇವರುಗಳಲ್ಲಿ ಫಲಾನಾ ಪಂಗಡದವರು ಫಲಾನಾ ಮಂದಿ ಸದಸ್ಯರು ಚುನಾವಣೆಯಾಗದೆಹೋದಲ್ಲಿ ಎಷ್ಟು...

...ಹೆಚ್ಚಾಗಿ ಪರ್ಯಾಲೋಚಿಸಿ ನೋಡಬೇಕಾದುದು ಅಗತ್ಯವಾಗಿದೆ" ಎಂದು ಹೇಳಿದ್ದಾರೆ ಹಾಗೆ ಇದು ಪರ್ಯಾಲೋಚಿಸಲ್ಪಡಲೆಂಬ ಉದ್ದೇಶದಿಂದಲೇ ನಾನು ಫೆಡರಲ್ ಸ್ಟ್ರಕ್ಚರ್ ಸಮಿತಿಯ ಸದಸ್ಯರುಗಳ ಪರಿಶೀಲನೆಗೆ ಬಂದಿದ್ದ ಒಂದು ರಾಜ್ಯಾಂಗ ವ್ಯವಸ್ಥೆಯ ಏರ್ಪಾಡಿನ ಸಲಹೆಯನ್ನು...

ಸಿಕ್ಕರ ಪ್ರಾತಿನಿಧ್ಯ ವಿಚಾರ.

ನಿಮ್ನ ಪಂಗಡಗಳವರ ಪ್ರಾತಿನಿಧ್ಯ ವಿಚಾರ.

MYSORE RAILWAYS.

NOTICE.

No. 60 Dated 22-4-32.

One of the Bogie Third Class Carriages now running on Nos. 41 and 42 between Mysore and Maddur will run through between Maddur and Bangalore City with effect from the 1st May 1932 for the convenience of passengers. The timings of the trains between Maddur and Bangalore City will be as follows:—

READ UP. READ DOWN.

No. 41 H.	No. 41 M.		STATIONS.		No. 42 H.	No. 42 M.
3	45	Arr.	Bangalore City.	Dep.	23	55
23	26	Dep.	Channapatna.	Arr.	3	52
23	10	Arr.		Dep	4	06
22	02	Dep.	Maddur.	Arr.	4	58
21	39	Arr.		Dep.	5	33
17	30	Dep.	Mysore.	Arr.	9	55

For detailed timings, see time table exhibited at stations. 1

...ಹಾಗಿ ವಿಭಾಯಕ ಮಾಡಿದ್ದಲ್ಲದೆ, ಈಗಿನ ಸ್ಥಿತಿಯಲ್ಲಿ ಈ ಪಂಗಡದ ಸದಸ್ಯರು ಇಷ್ಟು ಮಂದಿ ಚುನಾವಣೆಯಾಗಿ ಬರುವ ಸಂಭವವೇ ಇಲ್ಲ. ಅದರ ಬದಲಾಗಿ ಈ ರೀತಿ ಕನಿಷ್ಠ ಸಂಖ್ಯೆಯ ಸ್ಥಾನಗಳನ್ನು ಗೊತ್ತುಮಾಡಿ ಖಾತರಿ ಮಾಡಿಕೊಡುವುದರಲ್ಲಿ ಈ ಪಂಗಡದವರ ಜನಸಂಖ್ಯೆಯ ಆಧಾರದ ಮೇಲೆ ಅವುಗಳನ್ನು ಗೊತ್ತುಮಾಡಬೇಕಾದುದಿಲ್ಲ...

ಆಂಗ್ಲೋ ಇಂಡಿಯನ್ ಜನರ ಪ್ರಾತಿನಿಧ್ಯ ವಿಚಾರ.

ಇಂಡಿಯಾದೇಶದ ಕ್ರೈಸ್ತ ಪಂಗಡದವರ ಪ್ರಾತಿನಿಧ್ಯ.

ಸಂಯುಕ್ತ ಶಾಸನ ಸಭೆ

ಸಂಸ್ಥಾನಗಳಿಗೆ ಸದಸ್ಯಸ್ಥಾನಗಳ ಹಂಚಿಕೆ.

...ಅಭಿಪ್ರಾಯಗಳನ್ನು ಸೂಚಿಸಿದ್ದೇನೆ. (ಸಶೇಷ)

ಸ್ವೀಕಾರ

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ಇತರ ಸಂದರ್ಭಗಳಲ್ಲಿ ತೆಗೆದು ಕಳುಹಲ್ಪಟ್ಟ ನೋಟುಗಳನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

(1) ಕೊಳ್ಳೇಗಾಲದಲ್ಲಿರುವ ಸಾಹುಕಾರ್ ಮ|| ಜಿ. ಪಿ. ಮಲ್ಲಪ್ಪನವರ ಪುತ್ರ ಚಿ|| ಸ|| ಮಾನಾತ್ತಮ್ಮನ ಗರ್ಭಾದಾನದ ಹೋತ್ಸವದಲ್ಲಿ 1 ರೂ. (2) ಮೈಸೂರು ಗಂಜಾಂಮುತದಲ್ಲಿರುವ ಮ|| ಗಂಗಾಧರಪ್ಪನವರ ಪುತ್ರ ಚಿ|| ಶಿವಣ್ಣನಿಗೂ ಮೈಸೂರು ಗಚ್ಚಿಮಠದ ಬಸಪ್ಪನವರ ಪುತ್ರಿ ಚಿ|| ಸ|| ಗಂಗಾಬೆಗೂ ನಡೆದ ವಿವಾಹಮಹೋತ್ಸವದಲ್ಲಿ ವಧೂವರರ ಕಡೆಯಿಂದ 2 ರೂಪಾಯಿ.

ಪತ್ರವ್ಯವಹಾರ

ಪತ್ರವ್ಯವಹಾರರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಪತ್ರವ್ಯವಹಾರರಿಗೆ ವಿಶೇಷ ಸೂಚನೆ.

ಆಯುರ್ವೇದ ವಿದ್ಯಾಪ್ರಸರಣ.

ದೇವನೂರಿನಲ್ಲಿ ಮಹಾಗುರಾರಾಧನೋತ್ಸವ.

...ರಾಶಿ, ಸವಿದೆಯ ರಾಶಿ, ಬಾಳೆಯಲೆ ಮತ್ತು ಮುತ್ತುಗದೆಲೆ ಪಿಂಡಿಗಳ ರಾಶಿಗಳು ಎಷ್ಟು ವಿನಿಯೋಗಿಸಲ್ಪಡುತ್ತಿದ್ದರೂ ತಗ್ಗದೆ ಅಕ್ಷಯ ನಿಧಿಗಳಂತೆ ಮುಕ್ತಮುಕ್ತ ವೃದ್ಧಿಗೊಳ್ಳುತ್ತ ನೋಡಲು ಬೆಟ್ಟಗುಡ್ಡಗಳಹಾಗೆ ಎತ್ತರವಾಗಿ ಕಂಗೊಳಿಸುತ್ತಿದ್ದುವು. ದೇವನೂರು ಮಹಾಜನಗಳು ಮತ್ತು ಕುಂಚನಹಳ್ಳಿ ಮಹಾಜನಗಳು ತಮ್ಮ ಗ್ರಾಮಕ್ಕೆ ನಾಲ್ಕಾರು ಮೈಲು ದೂರದಲ್ಲಿರುವ ಚನಹಳ್ಳಿಯಿಂದ ಗಾಡಿಗಳ ಮೇಲೆ ನೀರನ್ನು ತೆಗೆದುಕೊಂಡು ಬಂದು ಮಠದಲ್ಲಿರುವ ಭಾವಿಗಳಿಗೆ ತುಂಬುತ್ತಿದ್ದರು. 6-7 ಅಡಿ ಎತ್ತರದ ದೊಡ್ಡ ದೊಡ್ಡ ಕಡಾಯಿ ಪಾತ್ರೆ ಕೊಪ್ಪರಿಕೆಗಳಲ್ಲಿ ಅಡಿಗೆಯು ಸಿದ್ಧವಾಗುತ್ತಿತ್ತು. ದಿಕ್ಕುದಿಕ್ಕುಗಳನ್ನು ವ್ಯಾಪಿಸುವಂತೆ ಮಹಾಜನಗಳೆಲ್ಲರೂ ಅಡಿಗಡಿಗೆ ಶ್ರೀಗುರು ಬಸವಾದಿ ಪ್ರಮಥಗಣನಾಮಸಂಕೀರ್ತನೆಯನ್ನು ಮಾಡುತ್ತಿದ್ದರು. ವಿಶಾಲವಾದ ಹೊಲದಲ್ಲಿ ಸುಮಾರು 12 ಸಾವಿರ ಮಂದಿ ಭಕ್ತಮಹೇಶ್ವರರು ಭೋಜನಕ್ಕೆ ಕುಳಿತುಕೊಂಡರು. ಇದೇ ಮೊದಲನೆಯ ಪಂಕ್ತಿ. ಬಳಿಕ ನೆರವೇರಿಸಲ್ಪಟ್ಟ ಪಂಕ್ತಿಗಳಲ್ಲಿ ಒಂದೊಂದು ಪಂಕ್ತಿಗೆ 6 ಸಾವಿರದಂತೆ ಜನಗಳು ಕುಳಿತುಕೊಂಡು ಭೋಜನಮಾಡಿದರು. ಹೀಗೆ 12 ಸಾವಿರ...

...ದಿನ ಸೇರುವಂಥಾ ತಾಲ್ಲೂಕು ಸಮ್ಮೇಳನಗಳೂ ಅತ್ಯಾವಶ್ಯಕವು. ಇದನ್ನು ಅರಿತವರಾಗಿ ತಾವು ಈ ಸಮ್ಮೇಳನವನ್ನು ಏರ್ಪಡಿಸಿರುವುದು ತುಂಬಾ ಶ್ಲಾಘನೀಯವಾಗಿದೆ.

ಮತಬಾಂಧವರೇ, ನಿಮ್ಮ ತಾಲ್ಲೂಕಿನ ಒಟ್ಟು ಪ್ರಜಾಸಂಖ್ಯೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಐದರಲ್ಲಿ ಒಂದು ಭಾಗದಷ್ಟು ವೀರಶೈವರಿರುವುದನ್ನು ಕೇಳಿ ಸಂತೋಷವಾಗುತ್ತದಾದರೂ ಒಟ್ಟು ತಾಲ್ಲೂಕಿನಲ್ಲಿ ಒಬ್ಬ ವೀರಶೈವ ಗ್ರಾಜುಯೇಟ್ ಸಹಾ ಇಲ್ಲವೆಂಬ ವಾರ್ತೆಯನ್ನು ಮಾತ್ರ ಕೇಳಲು ವಿಷಾದವಾಗುತ್ತದೆ. ನಮ್ಮ ಸಮಾಜದವರ ವಿದ್ಯಾವಿಚಾರದಲ್ಲಿ ಈ ನಿಮ್ಮ ತಾಲ್ಲೂಕು ಎಷ್ಟು ಹಿಂದೆಬಿದ್ದಿರುವುದೆಂಬುದನ್ನು ಇದರಿಂದ ಊಹಿಸಬಹುದು ಇದು ಶೋಚನೀಯವಾಗಿದೆ. ಫಲದಾಯಕವಾದ ಮತ್ತು ಹಿತಕರವಾದ ವಿದ್ಯೆಯು ಸರ್ವರಿಗೂ ಸಮಸ್ತ ವಿಷಯದಲ್ಲಿಯೂ ಅತ್ಯಾವಶ್ಯಕವು. ವಿದ್ಯಾಭ್ಯಾಸದಿಂದಾಗುವ ನಾನಾವಿಧ ಪ್ರಯೋಜನ, ಸುಖ, ಸಂಪತ್ತುಗಳನ್ನು ಸಾಮಾನ್ಯವಾಗಿ ಎಲ್ಲರೂ ತಿಳಿದವರಾಗಿರುತ್ತೀರಿ. ಆದುದರಿಂದ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿರೆಂದು ಹೇಳುವುದೇ ಅಗತ್ಯವಿರುವುದಿಲ್ಲ. ಆದರೆ ಸಾಮಾನ್ಯವಾಗಿ ಕೈಯಲ್ಲಿ ಹಣವಿಲ್ಲದೆ ಬಡತನವು ವಿಶೇಷವಾಗಿರುವುದೂ, ಕೆಲವೆಳೆ ಐಶ್ವರ್ಯವಂತರ ಮಕ್ಕಳಿಗೆ ಸಹ ಪ್ರಾರಂಭದೊಳಿರುವ...

ಮಕ್ಕಳಿದ್ದರೆ ಮನೆ ಚಂದ.

ಬಂಜೆತನದಿಂದ ಮುಕ್ತರಾಗುವಿರಿ

ಮಕ್ಕಳಿಲ್ಲೆಂದು | ಚಿಂತಿಸಬೇಡಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗುವಿರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ ಖ. ೫ ಆಣೆ.

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. 2

ಇಂಡಿಯಾ ದೇಶಕ್ಕಾಗಿ ನಡೆದ "ರೌಂಡ್‌ಟೇಬಲ್" ಸಮ್ಮೇಳನ

ಅತಿ ಮುಖ್ಯವಾದ ಕೆಲವು ರಾಜಕೀಯ ವಿಚಾರಗಳ ಸಂಬಂಧವಾಗಿ ಕೆಲವು ಸಲಹೆಗಳು

ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರಿಂದ

ಅವತರಣಿಕೆ.

ಇಂಡಿಯಾದೇಶಕ್ಕೆ ರಾಜಕೀಯ ಸುಧಾರಣೆಗಳನ್ನು ಕೊಡುವ ವಿಷಯದ ಸಂಬಂಧವಾಗಿ "ರೌಂಡುಟೇಬಲ್" ಸಮ್ಮೇಳನವು ನಡೆದುದು ಸರಿಯಷ್ಟೆ. ಆ ಸಮ್ಮೇಳನದಲ್ಲಿ ಅಖಿಲ ಭಾರತೀಯ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯೊಂದರ ಏರ್ಪಾಡು ಸ್ಥೂಲವಾಗಿ ಇತ್ಯರ್ಥವಾಯಿತು. ...

[illegible]

ತುರಿತು ಬರೆದ ಲೇಖನದಿಂದಲೂ, ಅದು ಚರ್ಚೆಗೆ ಬಂದ ಕಾಲದಲ್ಲಿ ನಾನು ತಿಳಿಸಿದ ಅಭಿಪ್ರಾಯಗಳಿಂದಲೂ ಕೆಲಕೆಲವು ಭಾಗಗಳನ್ನು ಮುಂದೆ ಪರಿಶಿಷ್ಟದಲ್ಲಿ ಸೂಚಿಸಿದ್ದೇನೆ.

ಸಂಯುಕ್ತ ಶಾಸನ ಸಭೆ

ಸಾರ್ವತ್ರಿಕ ಪ್ರತಿನಿಧಿ ಸಭೆ.

ಒಟ್ಟು ಸದಸ್ಯರ ಸಂಖ್ಯೆ

ಫೆಡರಲ್ ಸ್ಟ್ರಕ್ಚರ್ ಸಮಿತಿಯವರು (ಮೂರನೆಯ ವರದಿಯ 41 ನೆಯ ಪ್ಯಾರಾದಲ್ಲಿ) ಈ ಸಭೆಯಲ್ಲಿ ಸುಮಾರು 300 ಮಂದಿ ಸದಸ್ಯರಿರಬೇಕೆಂದು ಸಲಹೆ ಮಾಡಿದ್ದಾರೆ. ಕೆಲವು ಪ್ರತಿನಿಧಿಗಳು ಈ ಸಭೆಯಲ್ಲಿ 600 ರಿಂದ 700 ರ ವರೆಗೆ ಸದಸ್ಯರಿರಬೇಕೆಂದೂ, ಹೀಗಿದ್ದಲ್ಲಿ ಯಾರು ಸಭೆಯಲ್ಲಿ ತಮಗೆ ಪ್ರಾತಿನಿಧ್ಯವಿರಬೇಕೆಂದು ಕೋರುವುದು ಯುಕ್ತವೆನಿಸುವುದೋ ಆ ... [illegible]

ಸಂಯುಕ್ತ ಶಾಸನ ಸಭೆ.

ಸರ್ಕಾರಗಳ ಪ್ರತಿನಿಧಿ ಸಭೆ

[illegible]

ಸಂಸ್ಥಾನಗಳ ಪ್ರಾತಿನಿಧ್ಯ ವಿಚಾರ

[illegible]

ಅಲ್ಪಸಂಖ್ಯಾತ ಪಂಗಡಗಳವರ ಪ್ರಾತಿನಿಧ್ಯ ವಿಚಾರ.

[illegible] ... ಇನ್ನು ನಿಮ್ನ ಪಂಡಗಳು ಮತ್ತು ಆಂಗ್ಲೋ ಇಂಡಿಯನ್ನರು, ಈ ಎರಡು ಅಲ್ಪಸಂಖ್ಯಾತ ಪಂಗಡಗಳವರ ವಿಚಾರ. ಇವರುಗಳಲ್ಲಿ ಫಲಾನಾ ಪಂಗಡದವರು ಫಲಾನಾ ಮಂದಿ ಸದಸ್ಯರು ಚುನಾವಣೆಯಾಗದೆಹೋದಲ್ಲಿ ಎಷ್ಟು

ಮಂದಿ ಹಾಗೆ ಚುನಾವಣೆಯಾಗದೆ ತಪ್ಪಿಹೋಗಿರುತ್ತಾರೋ ಅಷ್ಟು ಮಂದಿಗಳನ್ನು ನಾಮಿನೇಷನ್ ಮೇರೆಗೆ ನೇಮಕ ಮಾಡಬೇಕೆಂಬ ವ್ಯವಸ್ಥೆಯನ್ನಿಟ್ಟು, ಸಾಮಾನ್ಯ ಜಂಟಿ ಚುನಾವಣೆ ಸ್ಥಾನಗಳೇ ಅವರಿಗೂ ಇರುವಂತೆಯೂ ಏರ್ಪಡಿಸಿದರೇ ಸಾಕೆಂದು ತೋರುವುದು. ಅವರಿಗಾಗಿ ಪ್ರತ್ಯೇಕ ಪ್ರತ್ಯೇಕ ಚುನಾವಣೆ ಸ್ಥಾನಗಳೇನೂ ಇರಬೇಕಾದುದಿಲ್ಲವೆಂದು ಕಾಣುತ್ತದೆ. ಇಂಡಿಯಾ ದೇಶದ ಕ್ರೈಸ್ತರಿಗೆ ಯಾವ ಬಗೆಯಲ್ಲಿ ವಿಶೇಷ ರೀತಿಯ ಚುನಾವಣೆಯ ಏರ್ಪಾಡನ್ನು ಕಲ್ಪಿಸಬೇಕಾದುದೂ ಆವಶ್ಯಕವಿಲ್ಲವೆಂಬುದು ನನ್ನ ಅಭಿಪ್ರಾಯ.

ಮುಸಲ್ಮಾನರ ಪ್ರಾತಿನಿಧ್ಯ ವಿಚಾರ

ಈಗ ಯೋಚಿಸಿರುವಂತೆ, ಸಾರ್ವತ್ರಿಕ ಪ್ರತಿನಿಧಿ ಸಭೆಯಲ್ಲಿ ಬ್ರಿಟಿಷ್ ಇಂಡಿಯಾದಿಂದ ಬಂದ 200 ಮಂದಿಗಳೂ ಸಂಸ್ಥಾನಗಳಿಂದ ಬಂದ 100 ಮಂದಿಗಳೂ, ಸದಸ್ಯರಾಗಿರುವರೆಂದು ಭಾವಿಸೋಣ. ಹೀಗಾದ ಪಕ್ಷದಲ್ಲಿ ಬ್ರಿಟಿಷ್ ಇಂಡಿಯಾದ ಈ 200 ಸ್ಥಾನಗಳಲ್ಲಿ 52 ಸ್ಥಾನಗಳನ್ನೂ, ಸಂಸ್ಥಾನಗಳ ಈ 100 ಸ್ಥಾನಗಳಲ್ಲಿ 13 ಸ್ಥಾನಗಳನ್ನೂ ಮುಸಲ್ಮಾನರಿಗಾಗಿ ... [illegible]

ಆಂಗ್ಲೋ ಇಂಡಿಯನ್ ಜನರ ಪ್ರಾತಿನಿಧ್ಯ ವಿಚಾರ.

[illegible]

ಯೂರೋಪಿಯನ್ ಜನರ ಪ್ರಾತಿನಿಧ್ಯ ವಿಚಾರ

ಸಾರ್ವತ್ರಿಕ ಪ್ರತಿನಿಧಿ ಸಭೆಯಲ್ಲಿರಬೇಕೆಂದು ಸಲಹೆಯಾಗಿರುವ 300 ... [illegible]

ಸಿಕ್ಕರ ಪ್ರಾತಿನಿಧ್ಯ ವಿಚಾರ.

[illegible]

ನಿಮ್ನ ಪಂಗಡಗಳವರ ಪ್ರಾತಿನಿಧ್ಯ ವಿಚಾರ.

[illegible]

MYSORE RAILWAYS.

NOTICE.

No. 60 Dated 22-4-32.

One of the Bogie Third Class Carriages now running on Nos. 41 and 42 between Mysore and Maddur will run through between Maddur and Bangalore City with effect from the 1st May 1932 for the convenience of passengers. The timings of the trains between Maddur and Bangalore City will be as follows:—

READ UP. READ DOWN.

No. 41 H.	No. 41 M.		STATIONS.		No. 42 H.	No. 42 M.
3	45	Arr.	Bangalore City.	Dep.	23	55
23	26	Dep.	Channapatna.	Arr.	3	52
23	10	Arr.		Dep	4	06
22	02	Dep.	Maddur.	Arr.	4	58
21	39	Arr.		Dep.	5	33
17	30	Dep.	Mysore.	Arr.	9	55

For detailed timings, see time table exhibited at stations. 1

[illegible]

... ಸಂಬುದನ್ನು ತಿಳಿಸುವುದು ಅವಶ್ಯಕ. ಅವರು ಆರೀತಿ ಮಾಡುವುದರ ಮೂಲಕ ಕೊನೆಯಪಕ್ಷ ಚರ್ಚೆಯು ನಡೆಯುವುದಕ್ಕಾದರೂ ಅವಕಾಶವುಂಟಾಗಿ, ಸಕಾಲದಲ್ಲಿ ಈ ವಿಚಾರವು ವ್ಯವಸ್ಥೆಯಾಗುವುದಕ್ಕೆ ಸಹಾಯವಾಗುತ್ತದೆ. ಹೀಗಾಗಲೆಂಬ ಉದ್ದೇಶದಿಂದಲೇ ಆ ಸಮಿತಿಯ ಸಭಿಕರಲ್ಲೊಬ್ಬನಾದ ನಾನು ಈ ಚಿಕ್ಕಪುಸ್ತಕದಲ್ಲಿ ಮುಂದೆ ತಿಳಿಸಿರುವಂತೆ ನನ್ನ ಅಭಿಪ್ರಾಯಗಳನ್ನು ಸೂಚಿಸಿದ್ದೇನೆ. (ಸಶೇಷ)

ಸ್ವೀಕಾರ

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ನೊಬಲಗಳನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

(1) ಕೊಳ್ಳೇಗಾಲದಲ್ಲಿರುವ ಸಾಹುಕಾರ್ ಮ|| ಜಿ. ಪಿ. ಮಲ್ಲಪ್ಪನವರ ಪುತ್ರಿ ಚಿ|| ಸೌ|| ಮೀನಾಕ್ಷಮ್ಮನ ಗರ್ಭಾದಾನಮಹೋತ್ಸವದಲ್ಲಿ 1 ರೂ. (2) ಮೈಸೂರು ಗಂಜಾಂಮಠದಲ್ಲಿರುವ ಮ|| ಗಂಗಾಧರಪ್ಪನವರ ಪುತ್ರ ಚಿ|| ಶಿವಣ್ಣನಿಗೂ ಮೈಸೂರು ಗಚ್ಚಿಮಠದ ಬಸಪ್ಪನವರ ಪುತ್ರಿ ಚಿ|| ಸೌ|| ಗಂಗಾಬೆಗೂ ನಡೆದ ವಿವಾಹಮಹೋತ್ಸವದಲ್ಲಿ ವಧೂವರರ ಕಡೆಯಿಂದ 2 ರೂಪಾಯಿ.

ಪತ್ರವ್ಯವಹಾರ

[illegible]

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

[illegible]

ಆಯುರ್ವೇದ ವಿದ್ಯಾಪ್ರಾಶಸ್ತ್ಯ.

[illegible]

ಆಯುರ್ವೇದಾಭಿಮಾನಿ, ಚಿಕ್ಕಮಗಳೂರು.

ದೇವನೂರಿನಲ್ಲಿ ಮಹಾಗಣಾರಾಧನೋತ್ಸವವು.

[illegible] ... ದಾರ್ಯರ ಮಹಾಸ್ವಾಮಿಗಳವರ ಕೀರ್ತನಸಪ್ತಕಗಳಿಂದ ಯುಕ್ತವಾದ ಮುದ್ರಣಪತ್ರಿಕೆಗಳು ಹಂಚಲ್ಪಟ್ಟುವು. ಶ್ರೀಭಕ್ತದಾರ್ಯರವರ ಗದ್ದಿಗೆಯ ಮೇಲೆ ವಿಶೇಷವಾಗಿ ಸುವರ್ಣಪುಷ್ಪವೃಷ್ಟಿಗರೆದಿದ್ದಿತು. ಗುರುಭಕ್ತರು ಪೂಜೆಗೆ ತಂದಿದ್ದ ತೆಂಗಿನಕಾಯಿ, ಬಾಳೇಹಣ್ಣುಗಳನ್ನು ಲೆಖ್ಖ ಮಾಡಲು ಸಾಧ್ಯವಿರಲಿಲ್ಲ. ಕರ್ಪೂರ, ಗಂಧದಕಡ್ಡಿಗಳು ಮಣಗಟ್ಟಲೆಯಾಗಿ ಹಚ್ಚಲ್ಪಟ್ಟವು. ... ಕಾಯಿ ಪಲ್ಯಗಳ ರಾಶಿ, ಅಕ್ಕಿಯ ರಾಶಿ, ಕಾಳುಕಡ್ಡಿ ಬೇಳೆಗಳ ರಾಶಿ, ಬೆಲ್ಲದ ರಾಶಿ, ... [illegible]

ಓರ್ವ ಪ್ರತ್ಯಕ್ಷದರ್ಶಿ.

ಬೇಲೂರಲ್ಲಿ ನಡೆದ ವೀರಶೈವ ಪ್ರಾಂತಿಕ ಸಭಾಧ್ಯಕ್ಷತೆಯನ್ನು ವಹಿಸಿದ್ದ ಮ|| ಎಚ್. ಸಿದ್ದಯ್ಯ, ಬಿ.ಎ., ಎಲ್.ಎಲ್.ಬಿ. ಇವರು ಮಾಡಿದ ಭಾಷಣ.

[illegible]

ಮಕ್ಕಳಿದ್ದರೆ ಮನೆ ಚಂದ.

ಮಕ್ಕಳಿಲ್ಲೆಂದು | ಚಿಂತಿಸಬೇಡಿರಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗುವಿರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ.

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. 3

ಇಂಡಿಯಾ ದೇಶಕ್ಕಾಗಿ ನಡೆದ "ರೌಂಡ್‌ಟೇಬಲ್" ಸಮ್ಮೇಳನ

ಅತಿ ಮುಖ್ಯವಾದ ಕೆಲವು ರಾಜಕೀಯ ವಿಚಾರಗಳ ಸಂಬಂಧವಾಗಿ ಕೆಲವು ಸಲಹೆಗಳು

ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರಿಂದ

ಅವತರಣಿಕೆ.

ಇಂಡಿಯಾದೇಶಕ್ಕೆ ರಾಜಕೀಯ ಸುಧಾರಣೆಗಳನ್ನು ಕೊಡುವ ವಿಷಯದ ಸಂಬಂಧವಾಗಿ "ರೌಂಡುಟೇಬಲ್" ಸಮ್ಮೇಳನವು ನಡೆದುದು ಸರಿಯಷ್ಟೆ. ಆ ಸಮ್ಮೇಳನದಲ್ಲಿ ಅಖಿಲ ಭಾರತೀಯ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯೊಂದರ ಏರ್ಪಾಡು ಸ್ಥೂಲವಾಗಿ ಇತ್ಯರ್ಥವಾಯಿತು. ಆಗ್ಗೆ ಅದರ ಸಂಬಂಧವಾಗಿ ಬಗೆಹರಿಯದೆ ಹೋದ ಕೆಲವು ಮುಖ್ಯ ವಿಚಾರಗಳನ್ನು ಇತ್ಯರ್ಥಪಡಿಸುವುದಕ್ಕೆ ಸಹಾಯವಾಗುವ ನಾನಾ ಸಲಹೆಗಳನ್ನು ಈ ಚಿಕ್ಕ ಪುಸ್ತಕದಲ್ಲಿ ಕಾಣಿಸಲಾಗಿದೆ.

ಈ ಸಲಹೆಗಳು, ಬಹಳವಾಗಿ ಆಲೋಚಿಸಿ ವಿಶೇಷವಾಗಿ ಚರ್ಚೆಮಾಡಿದುದರ ಫಲಿತಾಂಶವಾಗಿವೆ. ಇಂಡಿಯಾದೇಶವು ಅತ್ಯಂತ ವಿಸ್ತಾರವಾದ ದೊಡ್ಡ ದೇಶ. ಇಂತಹ ದೇಶಕ್ಕೆ ಪ್ರಜಾಸತ್ತಾತ್ಮಕವಾದ ಆಡಳಿತ ವ್ಯವಸ್ಥೆಯನ್ನು ಏರ್ಪಡಿಸುವುದರಲ್ಲಿ ಅತಿಗಹನವಾಗಿಯೂ ಬಹು ಮುಖ್ಯವಾಗಿಯೂ ಇರುವ ಅನೇಕ ಕ್ಲಿಷ್ಟ ವಿಚಾರಗಳಿರುವುದು ಸಹಜವಾಗಿಯೇ ಇದೆ. ಇವುಗಳ ವ್ಯವಸ್ಥೆಗಾಗಿ ನಾನು ಇಲ್ಲಿ ಪ್ರಕಟಿಸಿರುವ ಸಲಹೆಗಳನ್ನು ಅದರಲ್ಲಿಯೂ ಮುಖ್ಯವಾಗಿ ಶಾಸನ ಸಭೆಯ ಅಂಗವಾದ ಎರಡು ಸಭೆಗಳಲ್ಲೊಂದಾದ—ಸಂಸ್ಥಾನಗಳ ಮತ್ತು ಬ್ರಿಟಿಷ್ ಇಂಡಿಯಾ ಪ್ರಾಂತಗಳ ಸರ್ಕಾರಗಳ ಪ್ರತಿನಿಧಿಗಳ—ಸಭೆಯ ಸಂಬಂಧದಲ್ಲಿ ನಾನು ಕೊಟ್ಟಿರುವ ಸಲಹೆಗಳನ್ನು ಬ್ರಿಟಿಷ್ ಸರ್ಕಾರದ ಅಧಿಕಾರಿಗಳು, ಸಂಸ್ಥಾನಗಳಲ್ಲಿಯೂ ಬ್ರಿಟಿಷ್ ಇಂಡಿಯಾದಲ್ಲಿಯೂ ಇರುವ ನನ್ನ ದೇಶಬಾಂಧವರೂ ಜಾಗರೂಕತೆಯಿಂದ ಪರ್ಯಾಲೋಚಿಸುವರೆಂದು ನಂಬಿದ್ದೇನೆ.

ಈ ಪುಸ್ತಕದಲ್ಲಿ ಸಲಹೆಮಾಡಿರುವ ಆಡಳಿತ ಕ್ರಮದಿಂದ ಚೆನ್ನಾಗಿ ಕೆಲಸ ನಡೆದು ಇಂಡಿಯಾ ದೇಶಕ್ಕೆ ಶಾಶ್ವತ ಪ್ರಯೋಜನಗಳುಂಟಾಗುವುವೆಂದು ನನಗೆ ತೋರುತ್ತದೆ.

ಮಿರ್ಜಾ ಎಂ. ಇಸ್ಮಾಯಿಲ್

ಸಂಯುಕ್ತ ಶಾಸನ ಸಭೆ.

ಸರ್ಕಾರಗಳ ಪ್ರತಿನಿಧಿ ಸಭೆ

ಸಂಯುಕ್ತ ಶಾಸನ ಸಭೆಯಲ್ಲಿ ಸರ್ಕಾರಗಳ ಪ್ರತಿನಿಧಿ ಸಭೆಯೆಂದೂ, ಸಾರ್ವತ್ರಿಕ ಪ್ರತಿನಿಧಿ ಸಭೆಯೆಂದೂ, ಎರಡು ಸಭೆಗಳಿರಬೇಕೆಂದು ಸಲಹೆಯಾಗಿದೆ. ಸರ್ಕಾರಗಳ ಪ್ರತಿನಿಧಿ ಸಭೆಯಲ್ಲಿ 200 ಮಂದಿ ಸದಸ್ಯರಿರಬೇಕೆಂದೂ, ಪ್ರಾಂತಿಕ ಪ್ರತಿನಿಧಿಗಳು ಪ್ರಾಂತಿಕ ಶಾಸನ ಸಭೆಗಳಿಂದ ಚುನಾವಣೆಯಾದವರಾಗಿರಬೇಕೆಂದೂ ಫೆಡರಲ್ ಸ್ಟ್ರಕ್ಚರ್ ಸಮಿತಿಯವರು ಹೇಳಿದ್ದಾರೆ. ಈ ರೀತಿ ಏರ್ಪಡಿಸುವುದು ಒಪ್ಪಿಗೆಯಾಗದೆ ಹೋದಲ್ಲಿ ಅನುಸರಿಸಬಹುದಾದ ಮತ್ತೊಂದು ಮಾರ್ಗವೂ ಸಮಿತಿಯವರಲ್ಲಿ ಸಲಹೆಯಾಗಿದೆ. ಅದನ್ನೂ ಸಮಿತಿಯವರು (ಮೂರನೆಯ ವರದಿಯ 12 ನೆಯ ಪ್ಯಾರಾದಲ್ಲಿ) ಸೂಚಿಸಿದ್ದಾರೆ. ಅದರ ಸಾರಾಂಶವೇನೆಂದರೆ, "ಇದು 200 ಮಂದಿ ಸದಸ್ಯರಿಂದ ಕೂಡಿದ ದೊಡ್ಡ ಸಭೆಯಾಗಿರುವುದಕ್ಕೆ ಬದಲಾಗಿ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಸೇರತಕ್ಕ ಸಂಸ್ಥಾನಗಳ ಮತ್ತು ಪ್ರಾಂತಗಳ ಸರ್ಕಾರಗಳವರು ನಾಮಿನೇಷನ್ ಮೂಲಕ ನೇಮಕಮಾಡಿದ ಕೆಲವು ಪ್ರತಿನಿಧಿಗಳಿಂದಲೇ ಈ ಸಭೆಯು ಕೂಡಿರಬೇಕು; ಕಾನೂನುಗಳನ್ನು ರಚಿಸಿ ಆಚರಣೆಗೆ ತರುವ ಭಾಗದಲ್ಲಿ ಕಾರ್ಯಾರಂಭ ಮಾಡುವುದಕ್ಕೆ ಈ ಸಭೆಗೆ ಹಕ್ಕಿರಬೇಕು; ಸಾರ್ವತ್ರಿಕ ಪ್ರತಿನಿಧಿ ಸಭೆಯವರು ಮಂಜೂರು ಮಾಡಿದ ನಾನಾ ಏರ್ಪಾಡುಗಳ ಮೇಲೂ ಅವಶ್ಯಕಂಡಾಗ ಅವುಗಳಲ್ಲಿ ಯಾವುದನ್ನಾದರೂ ಜಾರಿಯಲ್ಲಿ ಬಾರದಂತೆ ತಾತ್ಕಾಲಿಕವಾಗಿ ತಡೆದಿಡುವ ಅಧಿಕಾರವೂ ಈ ಸಭೆಯವರಿಗಿರಬೇಕು. ಅಲ್ಲದೆ ಸಂಯುಕ್ತ ಸರ್ಕಾರದ ಪ್ರತಿಯೊಂದು ಏರ್ಪಾಡೂ ಸಾರ್ವತ್ರಿಕ ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ಬರುವುದಕ್ಕೆ ಮೊದಲು ಅದರ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸುವುದಕ್ಕೂ ಈ ಸಭೆಯವರಿಗೆ ಅಧಿಕಾರವಿರಬೇಕು. ಇದು ಸಲಹೆಯಾಗಿರುವ ಮತ್ತೊಂದು ಏರ್ಪಾಡು. ಇದನ್ನು ಸಲಹೆಮಾಡಿರುವವರು ಸರ್ಕಾರಗಳ ಪ್ರತಿನಿಧಿ ಸಭೆಗೆ ರಾಜ್ಯಾಡಳಿತ ವಿಚಾರಗಳಲ್ಲಿ ಆಲೋಚನೆ ಹೇಳುವ ಕೆಲವು ಕರ್ತವ್ಯಗಳು ಇರುವಂತೆ ಮಾಡಬೇಕೆಂದೂ ಸೂಚಿಸಿದ್ದಾರೆ."

ಹೀಗೆ ಸೂಚಿಸಿ, ಈ ರೀತಿ ಏರ್ಪಾಡು ನಡೆಯಬೇಕೆಂಬುದಾಗಿ ನಾನು ಫೆಡರಲ್ ಸ್ಟ್ರಕ್ಚರ್ ಸಮಿತಿಯವರಲ್ಲಿ ಚರ್ಚೆಯ ಕಾಲದಲ್ಲಿ ಸಲಹೆ ಮಾಡಿ ತಿಳಿಸಿದ್ದೆನು. ಅದರ ವಿಚಾರವಾಗಿ ಈಚೆಗೆ ಯೋಚಿಸಿದಷ್ಟೂ ಅದರಿಂದ ಉಂಟಾಗುವ ಪ್ರಯೋಜನಗಳ ವಿಷಯದಲ್ಲಿ ನನ ಮನಸ್ಸು ಖಚಿತವಾಗಿ ಇನ್ನೂ ದೃಢಪಟ್ಟಿದೆ. ಸಮಿತಿಯವರು ಕೂಡ ಇದು ಆಚರಣೆಗೆ ತರಬಹುದಾದ ಮತ್ತೊಂದು ಮಾರ್ಗವೆಂಬುದಾಗಿ ಭಾವಿಸಿ "ಇದನ್ನು ಮತ್ತಷ್ಟು ಹೆಚ್ಚಾಗಿ ಪರ್ಯಾಲೋಚಿಸಿ ನೋಡಬೇಕಾದುದು ಅಗತ್ಯವಾಗಿದೆ" ಎಂದು ಹೇಳಿದ್ದಾರೆ. ಹಾಗೆ ಇದು ಪರ್ಯಾಲೋಚಿಸಲ್ಪಡಲೆಂಬ ಉದ್ದೇಶದಿಂದಲೇ ನಾನು ಫೆಡರಲ್ ಸ್ಟ್ರಕ್ಚರ್ ಸಮಿತಿಯ ಸದಸ್ಯರುಗಳ ಪರಿಶೀಲನೆಗೆ ಬಂದಿದ್ದ ಒಂದು ರಾಜ್ಯಾಂಗ ವ್ಯವಸ್ಥೆಯ ಏರ್ಪಾಡಿನ ಸಲಹೆಯನ್ನು ಕುರಿತು ಬರೆದ ಲೇಖನದಿಂದಲೂ, ಅದು ಚರ್ಚೆಗೆ ಬಂದ ಕಾಲದಲ್ಲಿ ನಾನು ತಿಳಿಸಿದ ಅಭಿಪ್ರಾಯಗಳಿಂದಲೂ ಕೆಲಕೆಲವು ಭಾಗಗಳನ್ನು ಮುಂದೆ ಪರಿಶಿಷ್ಟದಲ್ಲಿ ಸೂಚಿಸಿದ್ದೇನೆ.

ಸಂಯುಕ್ತ ಶಾಸನ ಸಭೆ

ಸಾರ್ವತ್ರಿಕ ಪ್ರತಿನಿಧಿ ಸಭೆ.

ಒಟ್ಟು ಸದಸ್ಯರ ಸಂಖ್ಯೆ

ಫೆಡರಲ್ ಸ್ಟ್ರಕ್ಚರ್ ಸಮಿತಿಯವರು (ಮೂರನೆಯ ವರದಿಯ 41 ನೆಯ ಪ್ಯಾರಾದಲ್ಲಿ) ಈ ಸಭೆಯಲ್ಲಿ ಸುಮಾರು 300 ಮಂದಿ ಸದಸ್ಯರಿರಬೇಕೆಂದು ಸಲಹೆ ಮಾಡಿದ್ದಾರೆ. ಕೆಲವು ಪ್ರತಿನಿಧಿಗಳು ಈ ಸಭೆಯಲ್ಲಿ 600 ರಿಂದ 700 ರ ವರೆಗೆ ಸದಸ್ಯರಿರಬೇಕೆಂದೂ, ಹೀಗಿದ್ದಲ್ಲಿ ಯಾರು ಸಭೆಯಲ್ಲಿ ತಮಗೆ ಪ್ರಾತಿನಿಧ್ಯವಿರಬೇಕೆಂದು ಕೋರುವುದು ಯುಕ್ತವೆನಿಸುವುದೋ ಆ ನಾನಾ ಪಂಗಡಗಳವರಿಗೂ ನಾನಾ ಬಾಬುಗಳವರಿಗೂ ಪ್ರಾತಿನಿಧ್ಯ ಕೊಡಲು ಅನುಕೂಲಿಸುವುದೆಂದೂ ಸೂಚಿಸಿದ್ದರು. ಅವರ ಆ ಕೋರಿಕೆಯನ್ನೂ ಸಮಿತಿಯವರು ಪರ್ಯಾಲೋಚಿಸಿ ತಮ್ಮ ವರದಿಯಲ್ಲಿ ಪ್ರಸ್ತಾಪಿಸಿದ್ದಾರೆ. ಈ ಸಭೆಯಲ್ಲಿ 350 ಮಂದಿ ಸದಸ್ಯರಿರುವಂತೆ ಗೊತ್ತುಮಾಡುವುದು ಉತ್ತಮವೆಂಬುದು ನನ್ನ ಅಭಿಪ್ರಾಯ. ಅಲ್ಲಿಗೆ ಸಮಿತಿಯವರು ಸಲಹೆ ಮಾಡಿರುವುದಕ್ಕಿಂತ 50 ಮಂದಿ ಸದಸ್ಯರು ಹೆಚ್ಚಾಗಿರುವಂತಾಗುತ್ತದೆ. ಸದಸ್ಯರ ಸಂಖ್ಯೆಯನ್ನು ಮಿತಿಮೀರಿ ಹೆಚ್ಚಿಸದಂತೆ ನೋಡಿಕೊಂಡು ನಾನಾ ಬಾಬುಗಳವರಿಗೂ ನಾನಾಪಂಗಡಗಳವರಿಗೂ ಪ್ರಾತಿನಿಧ್ಯ ಕೊಡುವುದಕ್ಕೂ ಅದರಿಂದ ನಾನಾಪಂಗಡಗಳವರಿಗೂ ಅನುಕೂಲವಾಗುತ್ತದೆ.

ಸಂಸ್ಥಾನಗಳ ಪ್ರಾತಿನಿಧ್ಯ ವಿಚಾರ

ಎಲ್ಲ ಸಂಸ್ಥಾನಗಳವರೂ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಒಪ್ಪಿ ಅದಕ್ಕೆ ಸೇರಲಿಚ್ಛಿಸುವರೆಂಬ ಭಾವನೆಯನ್ನಿಟ್ಟುಕೊಂಡು ಸಭೆಯ ಸದಸ್ಯರ ಒಟ್ಟು ಸಂಖ್ಯೆಯಲ್ಲಿ ಮೂರರಲ್ಲೊಂದು ಭಾಗದ ಸ್ಥಾನಗಳನ್ನು ಸಂಸ್ಥಾನಗಳ ಪ್ರತಿನಿಧಿಗಳಿಗಾಗಿ ಮೀಸಲಾಗಿಡಬೇಕೆಂದು ಸಲಹೆಯಾಗಿದೆ. ಇದು ಯುಕ್ತವಾಗಿಯೂ ಇದೆ; ಮತ್ತು ಸಮಾಚೀನವಾಗಿಯೂ ಇದೆ. ಆದರೆ ಸಂಸ್ಥಾನಗಳವರು ತಾವು ಕಳುಹಿಸುವ ಪ್ರತಿನಿಧಿಗಳ ಪೈಕಿ ಯಾವ ಭಾಗದ ಸ್ಥಾನಗಳನ್ನೂ ಅಲ್ಪಸಂಖ್ಯಾತ ಪಂಗಡಗಳವರಿಗಾಗಿ ಮೀಸಲು ಮಾಡಿಡಬೇಕೆಂದು ಕೇಳಕೂಡದು. ಹೀಗೆ ಮಾಡಿದಲ್ಲಿ ಕಾರ್ಯತಃ ಕೆಲವು ತೊಂದರೆಗಳುಂಟಾಗುತ್ತವೆ. ಇದು ಹೇಗೆಂಬುದನ್ನು ಮುಂದೆ ಸೂಚಿಸುತ್ತೇನೆ. ಮತ್ತೊಂದು ವಿಚಾರ. ಸದ್ಯದಲ್ಲಿ ಒಮ್ಮಿಂದೊಮ್ಮೆಗೇ ಹೆಚ್ಚು ಸಂಖ್ಯೆಯ ಸಂಸ್ಥಾನಗಳು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಏರ್ಪಾಡಿಗೆ ಸೇರಲು ಸಮ್ಮತಿಸದೆ ಹೋದೇವೆನ್ನಿ. ಸದ್ಯದಲ್ಲಿ ಈ ಏರ್ಪಾಡಿಗೆ ಸೇರಲಿಚ್ಛಿಸುವ ಸಂಸ್ಥಾನಗಳವರು ಈಚಿನ ಸಮ್ಮೇಳನ ಕಾಲದಲ್ಲಿ ಒತ್ತಿಹೇಳಿದ ಸಲಹೆಯಂತೆ (ವರದಿಯ 15 ನೆಯ ಪ್ಯಾರಾ) ಕೇಳುವುದೂ ಉಚಿತವಲ್ಲ. ಎಂದರೆ ಈ ಏರ್ಪಾಡಿಗೆ ಸೇರಲಿಚ್ಛಿಸುವ ಸಂಸ್ಥಾನಗಳಿಗೇ ಈ ಏರ್ಪಾಡಿಗೆ ಸೇರದೆ ಹೋದ ಸಂಸ್ಥಾನಗಳಿಗೆ ನಿಶ್ಚಿತವಾದ ಸದಸ್ಯಸ್ಥಾನಗಳೂ ದೊರೆಯುವಂತೆ ದಾಮಾಷಾಯನ್ನು ಅದಕ್ಕನುಗುಣವಾಗಿ ಹೆಚ್ಚಿಸಿಕೊಡಬೇಕೆಂದು ಕೋರುವುದೂ ಸರಿಯಲ್ಲ. ಆದರೆ ಒಂದು ವಿಷಯದಲ್ಲೇನೋ ಈ ಸಂಬಂಧದಲ್ಲಿ ಒಂದು ವಿನಾಯತಿಯನ್ನು ಕಲ್ಪಿಸಬೇಕಾದುದು ಆವಶ್ಯಕ. ಹೇಗೆಂದರೆ, ಸಣ್ಣ ಸಣ್ಣ ಸಂಸ್ಥಾನಗಳನ್ನು ಗುಂಪುಗುಂಪುಗಳಾಗಿ ವಿಂಗಡಿಸಿ, ಆ ಗುಂಪುಗಳಲ್ಲಿ ಪ್ರತಿಯೊಂದಕ್ಕೂ ಫಲಾನಾ ಸಂಖ್ಯೆಯ ಸದಸ್ಯಸ್ಥಾನಗಳೆಂದು ಗೊತ್ತುಮಾಡಬೇಕಾಗುವುದಷ್ಟೆ. ಈ ಗುಂಪುಗಳಲ್ಲಿ ಯಾವುದಾದರೂ ಗುಂಪಿನ ಸಂಸ್ಥಾನಗಳ ಪೈಕಿ ಕೆಲವು ಸಂಸ್ಥಾನಗಳು ಈ ಏರ್ಪಾಡಿಗೆ ಸೇರಲಿಚ್ಛಿಸಿ ಮತ್ತೆ ಕೆಲವು ಸೇರಲು ಸಮ್ಮತಿಸಲಿಲ್ಲವೆನ್ನಿ. ಆಗ್ಗೆ ಈ ರೀತಿ ಕೆಲವು ಸಂಸ್ಥಾನಗಳವರು ಸೇರದೆಹೋದ ಮಾತ್ರಕ್ಕೇ ಆ ಗುಂಪಿಗಾಗಿ ಪ್ರತಿನಿಧಿಗಳನ್ನು ಉಳಿದ ಸಂಸ್ಥಾನಗಳೇ ಕಳುಹಿಸಲು ಅವಕಾಶವಿಲ್ಲದಂತೆ ಮಾಡಿ ಈ ಏರ್ಪಾಡಿಗೆ ಸೇರಲಿಚ್ಛಿಸುವ ಸಂಸ್ಥಾನಗಳಿಗೂ ಪ್ರಾತಿನಿಧ್ಯವನ್ನು ಆ ಕಾರಣಕ್ಕಾಗಿ ತಪ್ಪಿಸುವುದು ಸರಿಯಲ್ಲ.

ಅಲ್ಪಸಂಖ್ಯಾತ ಪಂಗಡಗಳವರ ಪ್ರಾತಿನಿಧ್ಯ ವಿಚಾರ.

ಅಲ್ಪಸಂಖ್ಯಾತ ಪಂಗಡಗಳಿಗೆ ಸೇರಿದವರಾದ ಮುಸಲ್ಮಾನರು, ಸಿಕ್ಕರು, ಯೂರೋಪಿಯನ್ನರು, ಇವರುಗಳಿಗೆ ಪ್ರತ್ಯೇಕ ಚುನಾವಣೆ ಸ್ಥಾನಗಳಿಂದ ಪ್ರತಿನಿಧಿಗಳನ್ನು ಕಳುಹಿಸುವ ಸೌಕರ್ಯವನ್ನೊದಗಿಸಿ ಅವರಿಗೆ ಪ್ರಾತಿನಿಧ್ಯಕ್ಕೆ ಅವಕಾಶವನ್ನು ಕಲ್ಪಿಸಬೇಕೆಂಬುದನ್ನು ಸಾಮಾನ್ಯತಃ ಎಲ್ಲರೂ ಒಪ್ಪಿದ್ದಾರೆ. ಆದಾಗ್ಗೂ ಮುಂದೆ ಕೆಲವು ವರುಷಗಳ ಕಾಲ ಈ ಕ್ರಮವನ್ನು ಆಚರಣೆಯಲ್ಲಿಟ್ಟದ್ದು, ಇದನ್ನು ಬದಲಾಯಿಸಬೇಕೇ ಬೇಡವೇ—ಎಂಬ ಅಂಶವನ್ನು ಆ ಬಳಿಕ ಪರ್ಯಾಲೋಚಿಸಬೇಕಾಗುತ್ತದೆಂದು ತೋರುವುದು. ಇನ್ನು ನಿಮ್ನ ಪಂಗಡಗಳು ಮತ್ತು ಆಂಗ್ಲೋ ಇಂಡಿಯನ್ನರು, ಈ ಎರಡು ಅಲ್ಪಸಂಖ್ಯಾತ ಪಂಗಡಗಳವರ ವಿಚಾರ. ಇವರುಗಳಲ್ಲಿ ಫಲಾನಾ ಪಂಗಡದವರು ಫಲಾನಾ ಮಂದಿ ಸದಸ್ಯರು ಚುನಾವಣೆಯಾಗದೆಹೋದಲ್ಲಿ ಎಷ್ಟು ಮಂದಿ ಹಾಗೆ ಚುನಾವಣೆಯಾಗದೆ ತಪ್ಪಿಹೋಗಿರುತ್ತಾರೋ ಅಷ್ಟು ಮಂದಿಗಳನ್ನು ನಾಮಿನೇಷನ್ ಮೇರೆಗೆ ನೇಮಕ ಮಾಡಬೇಕೆಂಬ ವ್ಯವಸ್ಥೆಯನ್ನಿಟ್ಟು, ಸಾಮಾನ್ಯ ಜಂಟಿ ಚುನಾವಣೆ ಸ್ಥಾನಗಳೇ ಅವರಿಗೂ ಇರುವಂತೆಯೂ ಏರ್ಪಡಿಸಿದರೇ ಸಾಕೆಂದು ತೋರುವುದು. ಅವರಿಗಾಗಿ ಪ್ರತ್ಯೇಕ ಪ್ರತ್ಯೇಕ ಚುನಾವಣೆ ಸ್ಥಾನಗಳೇನೂ ಇರಬೇಕಾದುದಿಲ್ಲವೆಂದು ಕಾಣುತ್ತದೆ. ಇಂಡಿಯಾ ದೇಶದ ಕ್ರೈಸ್ತರಿಗೆ ಯಾವ ಬಗೆಯಲ್ಲಿ ವಿಶೇಷ ರೀತಿಯ ಚುನಾವಣೆಯ ಏರ್ಪಾಡನ್ನು ಕಲ್ಪಿಸಬೇಕಾದುದೂ ಆವಶ್ಯಕವಿಲ್ಲವೆಂಬುದು ನನ್ನ ಅಭಿಪ್ರಾಯ.

ಮುಸಲ್ಮಾನರ ಪ್ರಾತಿನಿಧ್ಯ ವಿಚಾರ

ಈಗ ಯೋಚಿಸಿರುವಂತೆ, ಸಾರ್ವತ್ರಿಕ ಪ್ರತಿನಿಧಿ ಸಭೆಯಲ್ಲಿ ಬ್ರಿಟಿಷ್ ಇಂಡಿಯಾದಿಂದ ಬಂದ 200 ಮಂದಿಗಳೂ ಸಂಸ್ಥಾನಗಳಿಂದ ಬಂದ 100 ಮಂದಿಗಳೂ, ಸದಸ್ಯರಾಗಿರುವರೆಂದು ಭಾವಿಸೋಣ. ಹೀಗಾದ ಪಕ್ಷದಲ್ಲಿ ಬ್ರಿಟಿಷ್ ಇಂಡಿಯಾದ ಈ 200 ಸ್ಥಾನಗಳಲ್ಲಿ 52 ಸ್ಥಾನಗಳನ್ನೂ, ಸಂಸ್ಥಾನಗಳ ಈ 100 ಸ್ಥಾನಗಳಲ್ಲಿ 13 ಸ್ಥಾನಗಳನ್ನೂ ಮುಸಲ್ಮಾನರಿಗಾಗಿ ಮೀಸಲಾಗಿಡಬೇಕಾಗುತ್ತದೆ; ಮುಸಲ್ಮಾನರ ಜನಸಂಖ್ಯೆಯ ದಾಮಾಷಾ ಮೇರೆಗೆ ಲೆಕ್ಕಾಚಾರಮಾಡಿದರೆ ಹೀಗೆ ಮಾಡಬೇಕಾಗುತ್ತದೆ. ಆದರೆ, ಬ್ರಿಟಿಷ್ ಇಂಡಿಯಾದ ಸ್ಥಾನಗಳಲ್ಲಿ 79 ಸ್ಥಾನಗಳನ್ನೂ, ಸಂಸ್ಥಾನಗಳ ಸ್ಥಾನಗಳಲ್ಲಿ 21 ಸ್ಥಾನಗಳನ್ನೂ ತಮಗಾಗಿ ಮೀಸಲಾಗಿಡಬೇಕೆಂದೂ, ತಮ್ಮ ಪಂಗಡದವರಿಗೆ ದೊರೆಯಬೇಕಾದ ಸದಸ್ಯಸ್ಥಾನಗಳನ್ನು ಈ ರೀತಿ ಹೆಚ್ಚಿಸಿ ಕೊಡಬೇಕೆಂದೂ ಈಗ ಮುಸಲ್ಮಾನರು ಕೇಳುತ್ತಿದ್ದಾರೆ. ಬ್ರಿಟಿಷ್ ಇಂಡಿಯಾಕ್ಕೆ ಕೊಡಲ್ಪಡುವ ಸದಸ್ಯಸ್ಥಾನಗಳಲ್ಲಿ ಮೂರರಲ್ಲೊಂದು ಭಾಗದ ಸದಸ್ಯಸ್ಥಾನಗಳು ಮುಸಲ್ಮಾನರಿಗೆ ಮೀಸಲಾಗಿರಬೇಕೆಂದು ಅಲ್ಲಿಯ ಮಹಾಜನರಲ್ಲಿ ವಸ್ತುತಃ ಎಲ್ಲ ಪಂಗಡಗಳವರೂ ಒಪ್ಪಿದ್ದಾರೆ. ಸಂಸ್ಥಾನಗಳ ಸಂಬಂಧವಾಗಿ ನೋಡಿದರೆ, ಕೆಲಸ ನಡೆಯಿಸುವುದರಲ್ಲಿ ಈ ರೀತಿಯ ವಿಶೇಷ ಪ್ರಾತಿನಿಧ್ಯದ ದೆಸೆಯಿಂದ, ಅದರಲ್ಲಿಯೂ ಹೆಚ್ಚಿನ ದಾಮಾಷಾ ಪ್ರತಿಬಂಧಕದ ದೆಸೆಯಿಂದ ಬಹು ದೊಡ್ಡ ದೊಡ್ಡ ತೊಂದರೆಗಳು ತಪ್ಪದೆ ಉಂಟಾಗುತ್ತವೆ. ಏಕೆಂದರೆ, ನಾನಾ ಸಂಸ್ಥಾನಗಳಲ್ಲಿಯೂ ಮುಸಲ್ಮಾನರ ಶೇಕಡಾವಾರು ಸಂಖ್ಯೆಯು ಒಂದೇಸಮನಾಗಿಲ್ಲ; ಒಟ್ಟು ಜನಸಂಖ್ಯೆಯಲ್ಲಿ ಮುಸಲ್ಮಾನರ ಸಂಖ್ಯೆಯ ಶೇಕಡಾವಾರು ಒಂದೊಂದು ಸಂಸ್ಥಾನದಲ್ಲಿ ಒಂದೊಂದು ಬಗೆಯಾಗಿದೆ. ಸಂಸ್ಥಾನಗಳಲ್ಲಿ ಒಂದೊಂದಕ್ಕೂ ಸಾರ್ವತ್ರಿಕ ಪ್ರತಿನಿಧಿ ಸಭೆಯಲ್ಲಿ ದೊರೆಯುವ ಸದಸ್ಯಸ್ಥಾನಗಳ ಸಂಖ್ಯೆಯು ಕೇವಲ ಪರಿಮಿತವಾಗಿ ತೀರ ಕಡಿಮೆಯಾಗಿದೆ. ಹೀಗಿರುವಲ್ಲಿ ಸದಸ್ಯಸ್ಥಾನಗಳನ್ನು ಮುಸಲ್ಮಾನರಿಗೇ ಇಷ್ಟೆಂದೂ, ಮುಸಲ್ಮಾನರಲ್ಲದವರಿಗೇ ಇಷ್ಟೆಂದೂ, ವಿಭಾಗಿಸಿಕೊಟ್ಟು ಅದರಂತೆ ವರ್ತಿಸುವುದಾದರೆ, ಸುಲಲಿತವಾಗಿ ಕೆಲಸ ನಡೆಯಲು ಅದರಿಂದ ಸುತರಾಂ ಕಷ್ಟವಾಗುತ್ತದೆ; ಒಂದು ಸಂಸ್ಥಾನಕ್ಕೆ ಸಾರ್ವತ್ರಿಕ ಪ್ರತಿನಿಧಿ ಸಭೆಯಲ್ಲಿ ಎರಡು ಮೂರು ಸದಸ್ಯಸ್ಥಾನಗಳು ದೊರೆತಿದ್ದು, ಒಟ್ಟು ಜನಸಂಖ್ಯೆಯಲ್ಲಿ ಮುಸಲ್ಮಾನರ ಪ್ರಜಾಸಂಖ್ಯೆಯ ಶೇಕಡಾವಾರೂ ಸಹ ಆ ಸಂಸ್ಥಾನದಲ್ಲಿ ಹೆಚ್ಚಾಗಿದ್ದ ಪಕ್ಷಕ್ಕೆ, ಮುಸಲ್ಮಾನ ಪಂಗಡದವರಿಗೆಂದು ಸದಸ್ಯಸ್ಥಾನಗಳನ್ನು ಮೀಸಲಾಗಿಡುವುದು ಆಗ್ಗೆ ಮಾತ್ರವೇ ಸಾಧ್ಯವಾಗಬಹುದು ಹೀಗೆ ಇವೆರಡು ಭಾಗದಲ್ಲಿಯೂ ಈ ರೀತಿ ಇರತಕ್ಕ ಸಂಸ್ಥಾನಗಳ ಸಂಖ್ಯೆಯು ತೀರ ಕಡಿಮೆ. ಉಳಿದ ಸಂಸ್ಥಾನಗಳ ಪೈಕಿ ಒಟ್ಟು ಪ್ರಜಾಸಂಖ್ಯೆಯಲ್ಲಿ ಮುಸಲ್ಮಾನ ಪಂಗಡದವರ ಶೇಕಡಾವಾರು ಸಂಖ್ಯೆಯು ಗಣನೀಯವಾಗಿರುವ ಸಂಸ್ಥಾನಗಳಿಗೆ ಹೆಚ್ಚು ಸದಸ್ಯಸ್ಥಾನಗಳಿಲ್ಲ; ಹೆಚ್ಚು ಸದಸ್ಯಸ್ಥಾನಗಳಿರುವ ಸಂಸ್ಥಾನಗಳಲ್ಲಿ ಒಟ್ಟು ಪ್ರಜಾಸಂಖ್ಯೆಯಲ್ಲಿ ಮುಸಲ್ಮಾನ ಪಂಗಡದವರ ಶೇಕಡಾವಾರು ಸಂಖ್ಯೆಯು ಹೆಚ್ಚಾಗಿಲ್ಲ. ಆದಕಾರಣ, ಸಂಸ್ಥಾನಗಳಿಗೆ ದೊರೆಯುವ ಸದಸ್ಯಸ್ಥಾನಗಳ ಪೈಕಿ ಇಷ್ಟು ಸಂಖ್ಯೆಯವುಗಳು ಮುಸಲ್ಮಾನ ಪಂಗಡದವರಿಗೇ ಮೀಸಲಾಗಿರಬೇಕೆಂದು ಚರ್ಚಿಸಿ ಆ ರೀತಿ ಮಾಡುವುದು ಸಾಧ್ಯವೇ ಇಲ್ಲ. ಆದುದರಿಂದ, ಮುಸಲ್ಮಾನ ಪಂಗಡದವರಿಗೆ ಸಾರ್ವತ್ರಿಕ ಪ್ರತಿನಿಧಿ ಸಭೆಯಲ್ಲಿ ಸಂಸ್ಥಾನಗಳಿಗೆ ದೊರೆತ ಸ್ಥಾನಗಳಲ್ಲಿ ಭಾಗವು ದೊರೆಯುವ ವಿಚಾರದಲ್ಲಿ ಮುಸಲ್ಮಾನ ಪಂಗಡಕ್ಕೆ ಸೇರಿದ ಪ್ರಭುಗಳ ಮನೋವೃತ್ತಿಯನ್ನೂ ಇತರರ ಸೌಹಾರ್ದವನ್ನೂ ನಂಬಿಕೊಂಡು, ಅವರುಗಳು ತಂತಮ್ಮ ಪರಿಸ್ಥಿತಿಗಳಿಗನುಸಾರವಾಗಿ ಮುಸಲ್ಮಾನ ಪಂಗಡದವರನ್ನು ಸದಸ್ಯರಾಗಲು ಪ್ರತಿನಿಧಿಗಳಾಗಿ ಕಳುಹಿಸಿಕೊಡುವರೆಂದು ಭರವಸೆಯಿಟ್ಟು ವರ್ತಿಸುವುದೇ ವಿವೇಕ.

ಯೂರೋಪಿಯನ್ ಜನರ ಪ್ರಾತಿನಿಧ್ಯ ವಿಚಾರ

ಸಾರ್ವತ್ರಿಕ ಪ್ರತಿನಿಧಿ ಸಭೆಯಲ್ಲಿರಬೇಕೆಂದು ಸಲಹೆಯಾಗಿರುವ 300 ಸದಸ್ಯಸ್ಥಾನಗಳಲ್ಲಿ ಯೂರೋಪಿಯನ್ ಜನರು ತಮ್ಮ ಜನಕ್ಕಾಗಿ 12 ಸದಸ್ಯಸ್ಥಾನಗಳಿರಬೇಕೆಂದು ಕೇಳಿದ್ದಾರೆ. ಇತರರೊಡನೆ ಹೋಲಿಸಿದರೆ ಈ ಜನರ ಜನಸಂಖ್ಯೆಯು ದಾಮಾಷಾ ಮೇರೆ ಬಹಳ ಕಡಿಮೆಯಾಗಿದೆ. ಆದರೆ ಭಾರಿ ಭಾರಿ ಉದ್ಯಮಗಳೇ ಮುಂತಾದುವುಗಳನ್ನು ಈ ಪಂಗಡದ ಜನರು ಬಹಳವಾಗಿ ನಡೆಯಿಸುತ್ತಿದ್ದಾರೆ. ಆದಕಾರಣ, ಇವರಿಗೆ ತಕ್ಕಷ್ಟು ಪ್ರಾತಿನಿಧ್ಯವಿರಬೇಕಾದುದು ಆವಶ್ಯಕ. ಆದರೆ ಈ ಪಂಗಡದವರು 12 ಮಂದಿ ಸದಸ್ಯರಿರುವಂತೆ ಸ್ಥಾನನಿರ್ಣಯ ಮಾಡಬೇಕೆಂದು ಕೇಳುವುದು ಬಹಳ ಹೆಚ್ಚೆಂದು ತೋರುತ್ತದೆ. ಈ ಪಂಗಡದವರಿಗೆ ನಾಲ್ಕು ಅಥವಾ ಐದು ಸದಸ್ಯಸ್ಥಾನಗಳಿರುವಂತೆ ಗೊತ್ತುಮಾಡಬಹುದಾಗಿದೆ.

ಸಿಕ್ಕರ ಪ್ರಾತಿನಿಧ್ಯ ವಿಚಾರ.

ಬ್ರಿಟಿಷ್ ಇಂಡಿಯಾಕ್ಕಾಗಿ ಗೊತ್ತಾಗುವ ಒಟ್ಟು ಸದಸ್ಯಸ್ಥಾನಗಳಲ್ಲಿ ತಮಗೆ ಶೇಕಡ 5 ಸ್ಥಾನಗಳಂತೆ ಕೊಡಬೇಕೆಂದು ಕೇಳಿದ್ದಾರೆ. ಅಲ್ಪಸಂಖ್ಯಾತ ಪಂಗಡಗಳ ಜಂಟಿ ಮೆಮೊರಾಂಡಮಿನಲ್ಲಿ ಈ ಅಂಶವು ಒಪ್ಪಿಗೆಯಾಗಿದೆ. ಅಲ್ಪಸಂಖ್ಯಾತ ಪಂಗಡಗಳ ಸಲುವಾಗಿ ನೇಮಕವಾಗಿದ್ದ ಸಮಿತಿಯ ಮೂರನೆಯ ಪರಿಶಿಷ್ಟದಲ್ಲಿ ಇದು ನಮೂದಾಗಿದೆ. ಅಂತೂ ಒಟ್ಟು ಇರತಕ್ಕ 200 ಸದಸ್ಯಸ್ಥಾನಗಳಲ್ಲಿ 10 ಸ್ಥಾನಗಳನ್ನು ತಮ್ಮ ಪಂಗಡಕ್ಕೆ ಮೀಸಲಾಗಿಡುವಹಾಗೆ ಸಿಕ್ಕರು ಕೇಳಿದಂತಾಯಿತು. ಸಿಕ್ಕರ ಜನಸಂಖ್ಯೆಯನ್ನು ಪರಿಗಣಿಸಿದರೆ ಹೀಗೆ 10 ಸದಸ್ಯಸ್ಥಾನಗಳನ್ನು ಈ ಪಂಗಡದವರಿಗೆ ಕೊಡುವುದು ಸುತರಾಂ ಹೆಚ್ಚು. ಅವರಿಗೆ 5 ಅಥವಾ 6 ಸದಸ್ಯಸ್ಥಾನಗಳನ್ನು ಕೊಡಬಹುದೆಂದು ಸಲಹೆ ಮಾಡಬಹುದಾಗಿದೆ.

ನಿಮ್ನ ಪಂಗಡಗಳವರ ಪ್ರಾತಿನಿಧ್ಯ ವಿಚಾರ.

ನಿಮ್ನ ಪಂಗಡಗಳವರು ಹಿಂದುಗಳೊಡನೆಯೇ ಸೇರಿ ಅಲ್ಲಿ ಹೆಚ್ಚಿನ ಹಕ್ಕು ಬಾಧ್ಯತೆಗಳನ್ನು ಪಡೆದು ಮುಂದಕ್ಕೆ ಬರುವ ಪ್ರಯತ್ನ ಮಾಡುತ್ತಿರುವಲ್ಲಿ, ಅವರಿಗೆ ಪ್ರತ್ಯೇಕ ಚುನಾವಣೆಯ ಸ್ಥಾನಗಳನ್ನೇಕೆ ಏರ್ಪಡಿಸಬೇಕೋ ತಿಳಿಯದು. ಇತರ ಹಿಂದುಗಳೊಡನೆ ಈ ಪಂಗಡದವರು ರಾಜಕೀಯ ಕ್ಷೇತ್ರಗಳಲ್ಲಿಯೂ ಇತರ ಕ್ಷೇತ್ರಗಳಲ್ಲಿಯೂ ಹೆಚ್ಚು ಹೆಚ್ಚಾಗಿ ಬೆರೆತವಾಗಿ ಸೇರುತ್ತ ಬರುವುದೇ ಅಸ್ಪೃಶ್ಯತೆಯೆಂಬುದರ ನಿವಾರಣೆಗೆ ಮುಖ್ಯವಾದ ಮಾರ್ಗ. ಇವರಿಗೇ ಪ್ರತ್ಯೇಕವಾದ ಚುನಾವಣೆಯ ಸ್ಥಾನಗಳನ್ನು ಏರ್ಪಡಿಸದೆ, ಎಲ್ಲರ ಜೊತೆಯಲ್ಲೇ ಈ ಪಂಗಡಗಳವರೂ ಚುನಾವಣೆಯಿಂದ ಸದಸ್ಯರಾಗುವಂತೆ ಮಾಡುವುದೇ ಸರಿಯಾದುದು. ಇದೇ ಯುಕ್ತವಾದುದೂ ಹೌದು. ಆದಾಗ್ಗೂ ಇದರಲ್ಲಿ ಒಂದು ಕಷ್ಟವಿದೆ. ಶಾಸನ ಸಭೆಯ ಶಾಖೆಗಳಂತಿರುವ ಎರಡು ಸಭೆಗಳಲ್ಲಿಯೂ ಸಹ, ಈ ಪಂಗಡದ ಸದಸ್ಯರು ಕನಿಷ್ಠಪಕ್ಷ ಫಲಾನಾ ಸಂಖ್ಯೆಯವರು ಇದ್ದೇ ಇರಬೇಕೆಂಬ ವಿಚಾರ ವಿಧಾಯಕ ಮಾಡಿದ್ದಲ್ಲದೆ, ಈಗಿನ ಸ್ಥಿತಿಯಲ್ಲಿ ಈ ಪಂಗಡದ ಸದಸ್ಯರು ತಕ್ಕಷ್ಟುಮಂದಿ ಚುನಾವಣೆಯಾಗಿ ಬರುವ ಸಂಭವವೇ ಇಲ್ಲ. ಅದರ್‌ ಇವರಿಗಾಗಿ ಈರೀತಿ ಕನಿಷ್ಠ ಸಂಖ್ಯೆಯ ಸ್ಥಾನಗಳನ್ನು ಗೊತ್ತುಮಾಡಿ ಖಾತರಿ ಮಾಡಿಕೊಡುವುದರಲ್ಲಿ ಈ ಪಂಗಡದವರ ಜನ ಸಂಖ್ಯೆಯ ಆಧಾರದ ಮೇಲೆ ಅವುಗಳನ್ನು ಗೊತ್ತುಮಾಡಬೇಕಾದುದಿಲ್ಲ. ನಾನು ಹೇಳುವುದು, ಒಂದು ವೇಳೆ ಈ ಪಂಗಡದವರ ಶರಾವಾರು ಜನ ಸಂಖ್ಯೆಯನ್ನು ಗೊತ್ತುಮಾಡುವುದು ಸಾಧ್ಯವಿದ್ದರೂ ಕೂಡ, ಅದರ ಆಧಾರದಮೇಲೆ ಅವರ ಸದಸ್ಯಸ್ಥಾನಗಳ ಕನಿಷ್ಠ ಪರಿಮಿತಿಯ ಸಂಖ್ಯೆಯನ್ನು ಗೊತ್ತುಮಾಡಬೇಕಾಗಿಲ್ಲವೆಂದು. ಸೈಮನ್ ಕಮಿಷನರವರು ಈ ನಿಮ್ನ ಪಂಗಡಗಳವರ ಜನಸಂಖ್ಯೆಯ ವಿಚಾರದಲ್ಲಿ "ನಿಮ್ನ ಪಂಗಡಗಳವರ ಒಟ್ಟು ಪ್ರಜಾಸಂಖ್ಯೆಯ ವಿಷಯದಲ್ಲಿ ಪರಸ್ಪರವಾಗಿ ತಾಳೆಯಾಗದಿರುವ ಸಂಖ್ಯೆಗಳನ್ನು ಅಗೀಂದಾಗ ನಾನಾ ಅಧಿಕಾರಿಗಳೂ ಸೂಚಿಸಿದ್ದಾರೆ. ನಿಮ್ನ ಪಂಗಡಗಳವರೆಂಬ ಹೆಸರನ್ನು ಇಂಥಿಂಥವರಿಗೆ ಮಾತ್ರವೇ ಕಡ್ಡಾಯವಾಗಿ ಅನ್ವಯಿಸಬೇಕೆಂಬುದು ನಿರ್ದಿಷ್ಟವಾಗಿಯೂ, ಖಚಿತವಾಗಿಯೂ ಗೊತ್ತಾಗಿಲ್ಲದಿರುವುದೇ, ಈ ರೀತಿಯ ವ್ಯತ್ಯಾಸಗಳಿಗೆ ಮುಖ್ಯ ಕಾರಣವಾಗಿದೆ."

ಸೈಮನ್ ಕಮಿಷನರವರು ಲೆಕ್ಕಾಚಾರಮಾಡಿರುವಂತೆ ನಿಮ್ನ ಪಂಗಡಗಳವರ ಜನ ಸಂಖ್ಯೆಯು ಸುಮಾರು 4 ಕೋಟಿ 36 ಲಕ್ಷ. ಅವರಿಗಾಗಿ 20 ಸದಸ್ಯಸ್ಥಾನಗಳನ್ನು ಮೀಸಲುಮಾಡಿಟ್ಟರೆ, ಕನಿಷ್ಠಪಕ್ಷ ಸದ್ಯಕ್ಕಾದರೂ ಅಷ್ಟು ಸಾಕೆಂದು ತೋರುತ್ತದೆ. ಆದರೆ ಸಾಮಾನ್ಯ ಚುನಾವಣೆಗಳಿಗೇ ಈ ಪಂಗಡಗಳವರೂ ಉಮೇದುವಾರರಾಗಿ ನಿಂತು ಈ ರೀತಿ 20 ಮಂದಿಗಳು ಚುನಾವಣೆಯಾಗಿ ಬಾರದೆಹೋದರೆ, ಈ ಪೈಕಿ ಎಷ್ಟು ಸದಸ್ಯಸ್ಥಾನಗಳು ಭರ್ತಿಯಾಗದೆ ಉಳಿದಿರುವುವೋ ಅವುಗಳಿಗೆ (1) ನಿಮ್ನ ಪಂಗಡಗಳವರಿಗೆ ಸೇರಿದ ಅಂಗೀಕೃತವಾದ ಸಂಘಗಳಿಂದ ಜನರನ್ನು ಚುನಾಯಿಸಿ ಕಳುಹಿಸುವಂತೆಯೋ, ಅಥವಾ ಅದೂ ಸಾಧ್ಯವಿಲ್ಲದೆ ಹೋದ ಅನಿವಾರ್ಯ ಪಕ್ಷದಲ್ಲಿ (2) ಗವರ್ನರ್ ಜನರಲ್‌ರವರು ಈ ಪಂಗಡದವರನ್ನು ನಾಮಿನೇಷನ್ ಮೂಲಕ ನೇಮಕಮಾಡುವುದರಿಂದಲೋ, ಸದಸ್ಯರನ್ನು ನೇಮಕಮಾಡಬೇಕೆಂದು ವಿಧಾಯಕಮಾಡಬಹುದು. ಈ ರೀತಿ ಚುನಾವಣೆಯಿಂದಲೂ, ಕ್ಲುಪ್ತಸ್ಥಾನಗಳಲ್ಲಿ ಚುನಾವಣೆಯಿಂದ ಪೂರ್ತಿ ಭರ್ತಿಯಾಗದೆ ಉಳಿದುಹೋದ ಸ್ಥಾನಗಳಿಗೆ ನಾಮಿನೇಷನ್ ಮೂಲಕ ಜನರನ್ನು ನೇಮಕಮಾಡುವುದರಿಂದಲೂ ಕೆಲಸ ನಡೆಯಿಸುವ ಏರ್ಪಾಡು, ಈಗ್ಗೆ ಕೆಲವು ವರುಷಗಳಿಂದಲೂ ಮೈಸೂರು ಸಂಸ್ಥಾನದಲ್ಲಿ ಆಚರಣೆಯಲ್ಲಿದೆ. ಅದರಿಂದ ಸುಸೂತ್ರವಾಗಿಯೂ, ತೃಪ್ತಿಕರವಾಗಿಯೂ ಕೆಲಸನಡೆಯುತ್ತಿದೆ.

ಆಂಗ್ಲೋ ಇಂಡಿಯನ್ ಜನರ ಪ್ರಾತಿನಿಧ್ಯ ವಿಚಾರ.

ಈ ಪಂಗಡದವರಿಗೆ ಮೂರು ಸದಸ್ಯಸ್ಥಾನಗಳನ್ನು ಮೀಸಲಾಗಿಟ್ಟು ಖಾತರಿಮಾಡಿಕೊಡಬೇಕೆಂಬುದಾಗಿಯೂ ಸಹ, ಹಿಂದೆ ಸೂಚಿಸಿದ ಅಲ್ಪಸಂಖ್ಯಾತ ಪಂಗಡಗಳ ಜಂಟಿ ಮೆಮೊರ್ಯಾಂಡಮಿನಲ್ಲಿ ಸಲಹೆಯಾಗಿದೆ. ಆದರೆ ಈ ಪಂಗಡದವರ ಜನಸಂಖ್ಯೆಯು ಬಹಳ ಕಡಿಮೆಯಾಗಿರುವುದರಿಂದ, ಇವರಿಗೆ ಒಂದು ಅಥವಾ ತಪ್ಪಿದರೆ ಎರಡು ಸದಸ್ಯಸ್ಥಾನಗಳನ್ನು ಕೊಟ್ಟರೆ ಅದೇ ಹೆಚ್ಚು; ಅದಕ್ಕೆ ಮೀರಿದಲ್ಲಿ ಯುಕ್ತವೆನಿಸುವುದಿಲ್ಲವೆಂದು ತೋರುತ್ತದೆ.

ಇಂಡಿಯಾದೇಶದ ಕ್ರೈಸ್ತ ಪಂಗಡದವರ ಪ್ರಾತಿನಿಧ್ಯ.

ತಮಗೆ ಪ್ರತ್ಯೇಕ ಚುನಾವಣೆ ಸ್ಥಾನವಿರಬೇಕೆಂದು, ಅಥವಾ ತಮ್ಮ ಪಂಗಡದವರಿಗೆ ಫಲಾನಾ ಸಂಖ್ಯೆಯ ಸದಸ್ಯಸ್ಥಾನಗಳನ್ನು ಮೀಸಲಾಗಿಟ್ಟು ಖಾತರಿಮಾಡಿಕೊಡಬೇಕೆಂದು, ಈ ಪಂಗಡದ ಪ್ರಮುಖರಾಗಲಿ, ಮುಖ್ಯ ಮುಖ್ಯ ಸಂಸ್ಥೆಗಳವರಾಗಲಿ, ಯಾರೂ ಕೇಳಿಕೊಂಡಿಲ್ಲ. ಈ ಪಂಗಡದವರು ವಿಶೇಷವಾಗಿ ಮುಂದುವರಿದವರಾಗಿದ್ದಾರೆ; ಆದಕಾರಣ, ಈ ಎರಡರಲ್ಲಿ ಯಾವುದನ್ನು ಈ ಪಂಗಡದವರು ಕೇಳಿಕೊಂಡರೂ, ಅವರು ತಮಗೆ ಸದಸ್ಯಸ್ಥಾನಗಳು ಚುನಾವಣೆಯಲ್ಲಿ ವಿಶೇಷವಾಗಿ ದೊರೆಯುವುದಕ್ಕೇ ಪ್ರತಿಬಂಧಕಗಳನ್ನು ತಂದುಕೊಂಡಂತಾಗುವುದೇ ಹೊರತು ಹಕ್ಕುಗಳನ್ನು ಕಲ್ಪಿಸಿಕೊಂಡಂತಾಗುವುದಿಲ್ಲವೆಂಬುದೇ ಇದರ ಆಶಯ.

ಸಂಯುಕ್ತ ಶಾಸನ ಸಭೆ

ಸಂಸ್ಥಾನಗಳಿಗೆ ಸದಸ್ಯಸ್ಥಾನಗಳ ಹಂಚಿಕೆ.

ಈ ವಿಚಾರವಾಗಿ ಫೆಡರಲ್ ಸ್ಟ್ರಕ್ಚರ್ ಸಮಿತಿಯವರು (ತಮ್ಮ ವರದಿಯ 26 ನೆಯ ಪ್ಯಾರಾದಲ್ಲಿ) "ಸದಸ್ಯಸ್ಥಾನಗಳು ನಾನಾ ಸಂಸ್ಥಾನಗಳಿಗೂ ಯಾವರೀತಿಯಲ್ಲಿ ಎಷ್ಟೆಷ್ಟರಂತೆ ಹಂಚಿಕೆಯಾಗಬೇಕೆಂಬ ವಿಚಾರದಲ್ಲಿ ಸಂಸ್ಥಾನಗಳ ಪ್ರಭುಗಳೇ ಒಂದು ವ್ಯವಸ್ಥೆಗೆ ಬರುವಂತೆ ಅವರಿಗೆ ಬಿನ್ನವಿಸಿ, ಅವರು ಈ ವಿಚಾರವನ್ನು 1932 ನೆಯ ಇಸವಿ ಮಾರ್ಚಿ ತಿಂಗಳ ಕೊನೆಯೊಳಗಾಗಿ ಇತ್ಯರ್ಥಪಡಿಸುವಂತೆ ಪ್ರಾರ್ಥಿಸುವುದೇ ಅತ್ಯುತ್ತಮವಾದ ಮಾರ್ಗವಾಗಿದೆ. ಆ ಅವಧಿಯೊಳಗಾಗಿ ಅವರು ಒಂದು ತೀರ್ಮಾನಕ್ಕೆ ಬಾರದೆ ಹೋದಲ್ಲಿ ಈ ವಿಷಯವನ್ನು ಇತ್ಯರ್ಥಪಡಿಸುವ ಬಗೆ ಹೇಗೆಂಬ ವಿಚಾರವಾಗಿ ಸಲಹೆ ಹೇಳುವುದಕ್ಕಾಗಿ ಸಾರ್ವಭೌಮ ಸರ್ಕಾರದವರು ನಿಷ್ಪಕ್ಷಪಾತವಾದೊಂದು ಸಮಿತಿಯೊಂದನ್ನು ನೇಮಕಮಾಡಬೇಕೆಂಬ ನಿಯಮದಮೇಲೆ ಆರೀತಿ ಮಾಡಬಹುದಾಗಿದೆ." ಎಂಬುದಾಗಿ ಹೇಳಿದ್ದಾರೆ. ಆಗ್ಗೆ ತೋರಿಬಂದಿದ್ದಂತೆಯೇ ಸಂಸ್ಥಾನಗಳವರು ಈ ಮುಖ್ಯ ವಿಚಾರದಲ್ಲಿ ಇನ್ನೂ ಯಾವುದೊಂದು ಒಪ್ಪಂದಕ್ಕೂ ಬಂದಿಲ್ಲ. ಇದಕ್ಕಾಗಿ ಗೊತ್ತಾಗಿದ್ದ ಅವಧಿಯೂ ಇನ್ನು ಕೆಲವು ವಾರಗಳಲ್ಲೇ ಮುಗಿದುಹೋಗುವವಾಗಿದೆ. ಹೀಗಿದ್ದೂ ಇನ್ನೂ ಈ ವಿಷಯವಾಗಿ ಯಾವುದೊಂದು ತೀರ್ಮಾನವೂ ನಡೆದಿಲ್ಲ. ಆದಕಾರಣ, ಈ ವಿಚಾರದಲ್ಲಿ ಆಸಕ್ತಿಯನ್ನು ವಹಿಸಿರುವ ಫೆಡರಲ್ ಸ್ಟ್ರಕ್ಚರ್ ಸಮಿತಿಯ ಸಭಿಕರುಗಳು ತಮ್ಮ ಅಭಿಪ್ರಾಯಗಳೇನೆಂಬುದನ್ನು ತಿಳಿಸುವುದು ಆವಶ್ಯಕ. ಅವರು ಆರೀತಿ ಮಾಡುವುದರ ಮೂಲಕ ಕೊನೆಯಪಕ್ಷ ಚರ್ಚೆಯು ನಡೆಯುವುದಕ್ಕಾದರೂ ಅವಕಾಶವುಂಟಾಗಿ, ಸಕಾಲದಲ್ಲಿ ಈ ವಿಚಾರವು ವ್ಯವಸ್ಥೆಯಾಗುವುದಕ್ಕೆ ಸಹಾಯವಾಗುತ್ತದೆ. ಹೀಗಾಗಲೆಂಬ ಉದ್ದೇಶದಿಂದಲೇ ಆ ಸಮಿತಿಯ ಸಭಿಕರಲ್ಲೊಬ್ಬನಾದ ನಾನು ಈ ಚಿಕ್ಕಪುಸ್ತಕದಲ್ಲಿ ಮುಂದೆ ತಿಳಿಸಿರುವಂತೆ ನನ್ನ ಅಭಿಪ್ರಾಯಗಳನ್ನು ಸೂಚಿಸಿದ್ದೇನೆ. (ಸಶೇಷ)

MYSORE RAILWAYS.

NOTICE.

No. 60 Dated 22-4-32.

One of the Bogie Third Class Carriages now running on Nos. 41 and 42 between Mysore and Maddur will run through between Maddur and Bangalore City with effect from the 1st May 1932 for the convenience of passengers. The timings of the trains between Maddur and Bangalore City will be as follows:—

READ UP. READ DOWN.

No. 41 H.	No. 41 M.		STATIONS.		No. 42 H.	No. 42 M.
3	45	Arr.	Bangalore City.	Dep.	23	55
23	26	Dep.	Channapatna.	Arr.	3	52
23	10	Arr.		Dep	4	06
22	02	Dep.	Maddur.	Arr.	4	58
21	39	Arr.		Dep.	5	33
17	30	Dep.	Mysore.	Arr.	9	55

For detailed timings, see time table exhibited at stations. 1

ಸ್ವೀಕಾರ

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

(1) ಕೊಳ್ಳೇಗಾಲದಲ್ಲಿರುವ ಸಾಹುಕಾರ್ ಮ|| ಜಿ. ವಿ. ಮಲ್ಲಪ್ಪನವರ ಪುತ್ರಿ ಚಿ|| ಸೌ|| ಮೀನಾಕ್ಷಮ್ಮನ ಗರ್ಭಾದಾನಮಹೋತ್ಸವದಲ್ಲಿ 1 ರೂ. (2) ಮೈಸೂರು ಗಂಜಾಂಮಠದಲ್ಲಿರುವ ಮ|| ಗಂಗಾಧರಪ್ಪನವರ ಪುತ್ರ ಚಿ|| ಶಿವಣ್ಣನಿಗೂ ಮೈಸೂರು ಗಟ್ಟಿಮಠದ ಬಸಪ್ಪನವರ ಪುತ್ರಿ ಚಿ|| ಸೌ|| ಗಂಗಾಬೆಗೂ ನಡೆದ ವಿವಾಹಮಹೋತ್ಸವದಲ್ಲಿ ವಧೂವರರ ಕಡೆಯಿಂದ 2 ರೂಪಾಯಿ.

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ಸ್ಪಷ್ಟವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟುವಾಗಿಯೂ, ಇರಬೇಕೆಂದೂ ಬುಧವಾರ ಗುರುವಾರದೊಳಗೆ ನಮ್ಮ ಕೈಸೇರುವಂತೆ ಕಳುಹಲ್ಪಡಬೇಕೆಂದೂ, ಈ ನಿಬಂಧನೆಗೆ ವಿರುದ್ಧವಾದ ಲೇಖನಗಳು ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದ್ದಾಗ್ಯೂ ಲೇಖಕರು ಲಕ್ಷಿಸದೆ ಬಂಚಿಬಿಕವುಗೆ ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ ಪುಟಗಟ್ಟಲೆ ಅಸ್ಪಷ್ಟವಾಗಿ ಬರೆದು ನಮಗೆ ಶ್ರಮವನ್ನು ಕೊಡುತ್ತಿರುವರೆಂದು ಬರೆಯಲು ಖೇದವಾಗುತ್ತದೆ. ಆದುಕಾರಣ ಇತಃಪರ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಮಸ್ತರೂ ಗಮನಿಸತಕ್ಕದ್ದು—ಸಂ.

ಆಯುರ್ವೇದ ವಿದ್ಯಾಪ್ರಾಶಸ್ತ್ಯ.

ಭರತಖಂಡದ ಆಯುರ್ವೇದ ವಿದ್ಯೆಯ ಪ್ರಭಾವವನ್ನು ಪ್ರಕಾಶಕ್ಕೆ ತರಲು ತಕ್ಕ ಪಾಂಡಿತ್ಯವೂ, ಪ್ರಾಜ್ಞತೆಯೂ ಇದ್ದರೆ ಪ್ರಾಚೀನಾಯುರ್ವೇದ ವಿದ್ಯೆಯು ಪ್ರಪಂಚದಲ್ಲಿ ಎಷ್ಟರಮಟ್ಟಿಗೆ ಪ್ರಾಶಸ್ತ್ಯವನ್ನು ಹೊಂದಿರುವುದೆಂಬುದು ಈ ಕೆಳಗಣ ಉದಾಹರಣೆಯಿಂದ ಸ್ಪಷ್ಟಪಡಿಸತಕ್ಕದ್ದಾಗಿರುತ್ತದೆ— ಇಲ್ಲಿನ ಸಾಂಖ್ಯತೀರ್ಥ ಚಿಕಿತ್ಸಾಲಯದ ಡಾಕ್ಟರ್ ಕವಿರಾಜ ರಾಮಚಂದ್ರ ವಾಸುದೇವರಾವ್ ಎಂ. ಎ. ಎಂ. ಅಂಡ್ ಎಲ್. ಸಿ. ಪಿ. ಎಸ್. ಇವರನ್ನು ನನ್ನ ಆರೋಗ್ಯ ಅಸ್ವಸ್ಥೆಗಾಗಿ ತಾ|| 17-4-32 ರಲ್ಲಿ ಹೋಗಿ ನೋಡಿದೆನು. ಆ ದಿನ ಕೊರಗ ಪೂಜಾರಿ ಎಂಬ ಸುಮಾರು 22 ವರ್ಷವಯಸ್ಸಿನ ಪ್ರಾಣಾಪಾಯಸ್ಥಿತಿಯಲ್ಲಿರುವ ರೋಗಿಯೊಬ್ಬನನ್ನು ತಮ್ಮ ವೈದ್ಯಾಲಯಕ್ಕೆ ದಾಖಲ್ ಮಾಡಿಕೊಂಡು ಚಿಕಿತ್ಸಾರಂಭಮಾಡಿದ್ದರು. (ಇವನು ಮಿ|| ಮಸ್ಕರ್ ಸಾಹೇಬರವರ ಸರ್ವೆಂಟ್) ಈ ರೋಗಿಯು ತಾ|| 15-4-32 ರಲ್ಲಿಯೇ ಇಲ್ಲಿನ ಜನರಲ್ ಆಸ್ಪತ್ರೆಗೆ ನಂ 7894 ರಲ್ಲಿ ದಾಖಲಾಗಿ ಆ ದಿನವೇ ತಿರಸ್ಕರಿಸಲ್ಪಟ್ಟು ಹೊರಗೆ ಹಾಕಲ್ಪಟ್ಟಿದ್ದನು. ಈ ರೋಗಿಯ ವೈದ್ಯೋಪಚಾರದಲ್ಲಿ ನಿರತರಾಗಿದ್ದ ಮ|| ರಾಮಚಂದ್ರರಾಯರವರ ಸಾಮರ್ಥ್ಯವನ್ನು ಸಾಕ್ಷಾತ್ತಾಗಿ ನಾನು ತಿಳಿದುಕೊಂಡಿದ್ದರೂ ಸದ್ಯದ ರೋಗಿಯ ಸ್ಥಿತಿಯನ್ನು ನೋಡಿದ ನನಗೂ ಸಂಕೋಚವೇ ಆಯಿತು. ಕೊನೆಗೆ ಹಟುಕುಜಲಿನನ್ನು ಸೇವಿಸಲು ಪ್ರಜ್ಞಾಹೀನನಾಗಿದ್ದ ಈ ಜೀವಚ್ಛವರೋಗಿಯನ್ನು 1 ವಾರದೊಳಗೆ ಪೂರ್ತಿಗುಣಪಡಿಸಿ ಕಳುಹಿಸಿಕೊಟ್ಟರು. ಸ್ವದೇಶವಾತ್ಸಲ್ಯಾಭಿಮಾನಿಗಳು ಪ್ರಾಚೀನಾಯುರ್ವೇದ ವಿದ್ಯೆಯ ಪ್ರಭಾವಕ್ಕೆ ಈಗಲಾದರೂ ಕಣ್ದೆರೆದು ದೇಶಮಾತೆಯನ್ನುದ್ಧರಿಸುವರೇ?

ಆಯುರ್ವೇದಾಭಿಮಾನಿ, ಚಿಕ್ಕಮಗಳೂರು.

ದೇವನೂರಿನಲ್ಲಿ ಮಹಾಗಣಾರಾಧನೋತ್ಸವವು.

ಕೈಲಾಸವಾಸಿಗಳಾದಂಥ ದೇವನೂರು ಶ್ರೀಭಕ್ತದ ರಾಚೋಟಿ ವೀರಭದ್ರ ದೇಶಿಕೇಂದ್ರ ಮಹಾಸ್ವಾಮಿಗಳವರ ಮಹಾಗಣಾರಾಧನಮಹೋತ್ಸವವು ಕಳೆದ ಏಪ್ರಿಲ್ ತಾ|| 15 ರಲ್ಲಿ ಅಭೂತಪೂರ್ವವಾದ ವೈಭವದಿಂದಲೂ ಭಕ್ತಸಂದೋಹದಿಂದಲೂ ನೆರವೇರಿತು. ಈ ಮಹೋತ್ಸವಕ್ಕೆ ಮೈಸೂರು, ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ಕೊಡಗು, ಮಲಯಾಳ ಮೊದಲಾದ ಪ್ರದೇಶಗಳಿಂದ ಬಹುಮಂದಿ ಭಕ್ತಮಾಹೇಶ್ವರರೂ, 63 ಮಠಗಳ ಪಟ್ಟದ ಮೂರ್ತಿಗಳೂ ದಯಮಾಡಿಸಿದ್ದರು. ಸುತ್ತೂರು ವೀರಸಿಂಹಾಸನಾಧಿಪತಿಗಳಾದಂಥ ಶ್ರೀ ಶಿವರಾತ್ರಿ ದೇಶಿಕೇಂದ್ರಮಹಾಸ್ವಾಮಿಗಳವರು ಹುಪ್ಪಿನ ಪಾಲಕಿಯಲ್ಲಿ ಮುಹೂರ್ತಮಾಡಿಸಲ್ಪಟ್ಟು ಛತ್ರಚಾಮರ ನಂದಿಧ್ವಜ ಮೊದಲಾದ ಬಿರುದಾವಳಿಗಳಿಂದ ಉತ್ಸವವು ನೆರವೇರಿಸಲ್ಪಟ್ಟಿತು. ವಾದ್ಯಗಳು ಘೋರ್ಗರೆಯುತ್ತಿದ್ದುವು. ಬಳಿಕ ಪ್ರಮಥಗಣ ಮಹಾಸಭಿಕರಿಗೆ ಶ್ರೀ ಭಕ್ತದಾರ್ಯ ಮಹಾಸ್ವಾಮಿಗಳವರ ಕೀರ್ತನಪದ್ಯಗಳಿಂದ ಯುಕ್ತವಾದ ಮುದ್ರಣಪತ್ರಿಕೆಗಳು ಹಂಚಲ್ಪಟ್ಟುವು. ಶ್ರೀಭಕ್ತದಾರ್ಯರವರ ಗದ್ದಿಗೆಯ ಮೇಲೆ ವಿಶೇಷವಾಗಿ ಸುವರ್ಣಪುಷ್ಪವೃಷ್ಟಿಗರೆದಿದ್ದಿತು. ಗುರುಭಕ್ತರು ಪೂಜೆಗೆ ತಂದಿದ್ದ ತೆಂಗಿನಕಾಯಿ, ಬಾಳೇಹಣ್ಣುಗಳನ್ನು ಲೆಖ್ಖಮಾಡಲು ಸಾಧ್ಯವಿರಲಿಲ್ಲ. ಕರ್ಪೂರ, ಗಂಧದಕಡ್ಡಿಗಳು ಮಣಗಟ್ಟಳೆಯಾಗಿ ಹಚ್ಚಲ್ಪಟ್ಟಿದ್ದುವು. ಕಾಯಿಪಲ್ಯಗಳ ರಾಶಿ, ಅಕ್ಕಿಯ ರಾಶಿ, ಕಾಳುಕಡ್ಡಿ ಬೇಳೆಗಳ ರಾಶಿ, ಬೆಲ್ಲದ ರಾಶಿ, ಸವಿದೆಯ ರಾಶಿ, ಬಾಳೆಯಲೆ ಮತ್ತು ಮುತ್ತಗದೆಲೆ ಪಿಂಡಿಗಳ ರಾಶಿಗಳು ಎಷ್ಟು ವಿನಿಯೋಗಿಸಲ್ಪಡುತ್ತಿದ್ದರೂ ತಗ್ಗದೆ ಅಕ್ಷಯ ನಿಧಿಗಳಂತೆ ಮತ್ತೆ ಮತ್ತೆ ವೃದ್ಧಿಗೊಳ್ಳುತ್ತ ನೋಡಲು ಬೆಟ್ಟಗಳ ಶಿಖರಗಳಹಾಗೆ ಎತ್ತರವಾಗಿ ಕಂಗೊಳಿಸುತ್ತಿದ್ದುವು. ದೇವನೂರು ಮಹಾಜನಗಳು ಮತ್ತು ಕುಂಚಿನಹಳ್ಳಿ ಮಹಾಜನಗಳು ತಮ್ಮ ಗ್ರಾಮಕ್ಕೆ ನಾಲ್ಕಾರು ಮೈಲು ದೂರದಲ್ಲಿರುವ ಚಿಟನಹಳ್ಳಿಯಿಂದ ಗಾಡಿಗಳ ಮೇಲೆ ನೀರನ್ನು ತೆಗೆದುಕೊಂಡು ಬಂದು ಮಠದಲ್ಲಿರುವ ಭಾವಿಗಳಿಗೆ ತುಂಬುತ್ತಿದ್ದರು. 6-7 ಅಡಿ ಎತ್ತರದ ದೊಡ್ಡ ದೊಡ್ಡ ಕಡಾಯಿ ಪಾತ್ರೆ ಕೊಪ್ಪರಿಗೆಗಳಲ್ಲಿ ಅಡಿಗೆಯು ಸಿದ್ಧವಾಗುತ್ತಿತ್ತು. ದಿಕ್ಕು ದಿಕ್ಕುಗಳನ್ನು ವ್ಯಾಪಿಸುವಂತೆ ಮಹಾಜನಗಳೆಲ್ಲರೂ ಅಡಿಗಡಿಗೆ ಶ್ರೀಗುರು ಬಸವಾದಿ ಪ್ರಮಥಗಣನಾಮಸಂಕೀರ್ತನೆಯನ್ನು ಮಾಡುತ್ತಿದ್ದರು. ವಿಶಾಲವಾದ ಹೊಲದಲ್ಲಿ ಸುಮಾರು 12 ಸಾವಿರ ಮಂದಿ ಭಕ್ತಮಾಹೇಶ್ವರರು ಭೋಜನಕ್ಕೆ ಕುಳಿತುಕೊಂಡರು. ಇದೇ ಮೊದಲನೆಯ ಪಂಗ್ತಿ. ಬಳಿಕ ನೆರವೇರಿಸಲ್ಪಟ್ಟ ಪಂಗ್ತಿಗಳಲ್ಲಿ ಒಂದೊಂದು ಪಂಗ್ತಿಗೆ 6 ಸಾವಿರದಂತೆ ಜನಗಳು ಕುಳಿತುಕೊಂಡು ಭೋಜನಮಾಡಿದರು. ಹೀಗೆ 12 ಸಾವಿರ ಜನರು 1 ಪಂಗ್ತಿಯಲ್ಲಿ ಕುಳಿತು ಭೋಜನಮಾಡಿದುದನ್ನು ಶ್ರೀಬಸವೇಶ್ವರರ ಕಾಲದಿಂದೀಚೆಗೆ ಯಾರೂ ಕಂಡ ಕೇಳಿರಲಿಲ್ಲ. ಪಾಕಶಾಲೆಯಿಂದ ಪದಾರ್ಥಗಳನ್ನು ತರುವುದಕ್ಕೂ, ಬಡಿಸುವುದಕ್ಕೂ, ಸಾವಿರಾರು ಜನರು ನಡುವನ್ನು ಕಟ್ಟಿಕೊಂಡು ಸಿದ್ಧರಾಗಿ ಕಾದುಕೊಂಡಿದ್ದರು. ಭೋಜನಾನಂತರ ಪ್ರತಿಯೊಬ್ಬ ಮಾಹೇಶ್ವರರಿಗೂ ಒಂದೊಂದು ಪಂಚೆ ಮತ್ತು ದಕ್ಷಿಣೆ ಸಮೇತವಾಗಿ ಗಂಧಪುಷ್ಪ ತಾಂಬೂಲಗಳು ಸಮರ್ಪಿಸಲ್ಪಟ್ಟುವು. ತಾ|| 16 ನೇ ಶನಿವಾರ ಗದ್ದಿಗೆಯ ಮಹಾದ್ವಾರದ ಮುಂಭಾಗದಲ್ಲಿ ಹಾಕಿದ್ದ ವಿಶಾಲವಾದ ಚಪ್ಪರದಲ್ಲಿ ಪಿಟೀಲ್ ಸಂಗೀತಕಚೇರಿಯೂ ಭೂರಂಭಾ ಸ್ತ್ರೀಯರ ನೃತ್ಯಾಭಿನಯ ಗಾನಗಳೂ ನೆರವೇರಿದುವು. ಬಳಿಕ ಶಿವಕಥಾಪಂಡಿತ ಸಿದ್ಧಶಿರೋಮಣೀತ್ಯಾದಿ ಬಿರುದಾಂಕಿತರಾದ ಮೈಸೂರು ಬ್ರ|| ಶ್ರೀ|| ವೇ|| ಶಿವಯ್ಯಶಾಸ್ತ್ರಿಗಳಿಂದ ಶಿವಭಕ್ತಿ ಪ್ರಭಾವಮಹಿಮಾತಿಶಯವೆಂಬ ಕಥಾಶ್ರವಣಮಾಡಿಸಲ್ಪಟ್ಟಿತು. ಬಳಿಕ ಮಠದ ಸರ್ವಾಧಿಕಾರಿಗಳಾದ ಬ್ರ|| ಶ್ರೀ ವೇ|| ಗುರುಸಿದ್ಧಸ್ವಾಮಿಗಳವರು ಬ್ರ|| ಶ್ರೀ|| ವೇ|| ಅನುಗ್ರಹಕರ್ತರಾದ ಗುರುಕೋಟಿದಾರ್ಯಸ್ವಾಮಿಗಳವರು ಮತ್ತು ಬ್ರ|| ಶ್ರೀ|| ವೇ|| ಭಿಕ್ಷಾವರ್ತಿ ಮಹಲಿಂಗಸ್ವಾಮಿಗಳವರು, ಶ್ರೀ ಗುರುಸ್ವಾಮಿಗಳವರು ಮುಖಂಡ ಭಕ್ತಮಾಹೇಶ್ವರರುಗಳನ್ನು ಮಠಕ್ಕೆ ಬರಮಾಡಿಕೊಂಡು ಬಹು ವಿಜೃಂಭಣೆಯಿಂದ ಗಣಾರಾಧನಮಹೋತ್ಸವವನ್ನು ನೆರವೇರಿಸಿದರೆಂದೂ ಶ್ರೀನಿರಂಜನ ಗುರುಮಲ್ಲೇಶ್ವರ ಮಹಾಪ್ರಭೋ ಎಂದೂ ಕೀರ್ತನೆಮಾಡುತ್ತ ಸರ್ವರೂ ಅವರವರ ಸ್ಥಳಗಳನ್ನು ಕುರಿತು ಸುಖಸಂತೋಷದಿಂದ ತೆರಳಿದಂಥವರಾದರು.

ಓರ್ವ ಪ್ರತ್ಯಕ್ಷದರ್ಶಿ.

ಬೇಲೂರಲ್ಲಿ ನಡೆದ ವೀರಶೈವ ಪ್ರಾಂತಿಕ ಸಭಾಧ್ಯಕ್ಷತೆಯನ್ನು ವಹಿಸಿದ್ದ ಮ|| ಎಚ್. ಸಿದ್ದಯ್ಯ, ಬಿ.ಎ., ಎಲ್.ಎಲ್.ಬಿ. ಇವರು ಮಾಡಿದ ಭಾಷಣ.

ಸ್ವಾಗತಸಮಿತಿಯ ಅಧ್ಯಕ್ಷರಾದ ಶ್ರೀಯುತ ಮಲ್ಲೇಗೌಡರೇ, ಮತಬಾಂಧವರೇ ಮತ್ತು ಮಹಾಶಯರೇ, ಈ ಸಭೆಯ ಅಗ್ರಾಸನವನ್ನು ವಹಿಸುವಂತೆ ಈ ಸಮ್ಮೇಳನದ ಕಾರ್ಯಕರ್ತರುಗಳು ನನ್ನನ್ನು ಆಹ್ವಾನಿಸಿದುದು ಘನವಾದ ಗೌರವವೆಂದು ಭಾವಿಸುವೆನು ಮತ್ತು ಈ ಸಭೆಯ ಚಾಲಕರಿಗೆ ನಾನು ಬಹಳ ಕೃತಜ್ಞನಾಗಿರುವೆನು, ಅಲ್ಲದೆ ಸ್ವಾಗತಸಮಿತಿಯ ಅಧ್ಯಕ್ಷರು ನಿಮ್ಮೆಲ್ಲರ ಪರವಾಗಿ ನನ್ನನ್ನು ಶ್ಲಾಘ್ಯವಾದ ರೀತಿಯಲ್ಲಿ ಸಂಬೋಧಿಸಿದುದಕ್ಕಾಗಿ ಮನಃಪೂರ್ವಕವಾಗಿ ಧನ್ಯವಾದಗಳನ್ನು ಅರ್ಪಿಸುವೆನು. ಇತಿಹಾಸಪ್ರಸಿದ್ಧವಾಗಿರುವ, ಹಿಂದಿನ ಕರ್ಣಾಟಕ ರಾಜ್ಯವೈಭವವನ್ನು, ಶಿಲ್ಪಕೌಶಲ್ಯವನ್ನು ಪ್ರಕಟಿಸುವ (ಜೈನ) ಬಸ್ತಿಗಳೂ, ಶ್ರೀ ಚೆನ್ನಕೇಶವ ದೇವಸ್ಥಾನ, ಹಳೇಬೀಡು ಹೊಯ್ಸಳೇಶ್ವರಗುಡಿ, ಯಾತ್ರಾಸ್ಥಳವಾದ ಪುಷ್ಪಗಿರಿ, ಪೂಜ್ಯರಾದ ಕೆರೆಸಮ್ಮರಸರ ಗದ್ದುಗೆ, ಹರೀಶ್ವರ ಮೊದಲಾದ ಸುಪ್ರಸಿದ್ಧ ವೀರಶೈವ ಕವಿಗಳ ವಾಸಸ್ಥಳ ಮೊದಲಾದ ಹೆಗ್ಗುರುತುಗಳಿಂದ ರಾಜಿಸುತ್ತಿರುವ ಚರಿತ್ರಾರ್ಹವೂ ರಮಣೀಯವೂ ಆದ ಈ ಪ್ರಾಂತಕ್ಕೆ ನಾನು ಬರಲು ಅವಕಾಶವನ್ನು ಕಲ್ಪಿಸಿಕೊಟ್ಟ ಈ ತಾಲ್ಲೂಕಿನ ಸಮಾಜಬಾಂಧವರಾದ ತಮಗೂ, ನನ್ನ ಪರಮಮಿತ್ರರೂ, ಅಡ್ವೋಕೇಟರೂ ಹಾಸನ ಡಿಸ್ಟ್ರಿಕ್ಟು ವೀರಶೈವಸಮಿತಿಯ ಕಾರ್ಯದರ್ಶಿಗಳೂ ಆದ ಮ|| ಧರ್ಮಪ್ಪನವರಿಗೂ ನಾನು ತುಂಬಾ ಕೃತಜ್ಞನಾಗಿದ್ದೇನೆ.

ಅನಾದಿ ಸಂಸಿದ್ಧವಾದ, ವೇದಮಾನ್ಯವಾದ, ಪುರಾಣಪ್ರಸಿದ್ಧವಾದ ಮತ್ತು ಶ್ರೇಷ್ಠತಮವಾದ ಈ ನಮ್ಮ ವೀರಶೈವಮತವು ಗತಿಸಿದ ಕೆಲವು ಶತಮಾನಗಳಲ್ಲಿ ತಕ್ಕಷ್ಟು ರಾಜಾಶ್ರಯವು ದೊರೆಯದುದರಿಂದಲೂ, ಧರ್ಮದ ಮುಖ್ಯ ತತ್ವಗಳನ್ನೂ, ಅವುಗಳ ಅರ್ಥಗಳನ್ನೂ ಸರಿಯಾಗಿ ತಿಳಿದುಕೊಳ್ಳದೆ ಇರುವುದರಿಂದಲೂ ಬೇರೆ ಕೆಲವು ಕಾರಣಗಳಿಂದಲೂ ಕ್ಷೀಣಗತಿಯನ್ನು ಹೊಂದಲು ಕಾರಣವಾಯಿತು ಮೊದಲಿನಿಂದಲೂ ಕೃಷಿಕರ್ಮದಲ್ಲಿಯೇ ಆಗಲಿ, ಕೈಗಾರಿಕೆ ಉದ್ಯೋಗಗಳಲ್ಲಿಯೇ ಆಗಲಿ, ವ್ಯಾಪಾರದಲ್ಲಿಯೇ ಆಗಲಿ ನಮ್ಮ ಸಮಾಜದವರೇ ಮುಂದುವರಿದವರಾಗಿದ್ದು ಈಚೆಗೆ ಮೊದಲಿನಂತೆ ಸಾಹಸವನ್ನು ಮಾಡದಿರುವ ಕಾರಣದಿಂದಲೋ ಇನ್ಯಾವ ಕಾರಣಗಳಿಂದಲೋ ನಮ್ಮವರಲ್ಲಿ ಆರ್ಥಿಕ ದುಸ್ಥಿತಿಯು ಪ್ರಬಲವಾಗಿರುವುದನ್ನು ತಿಳಿಯಲು ಅತ್ಯಂತ ವ್ಯಸನವಾಗುತ್ತದೆ. ನಮ್ಮ ಸಮಾಜದಲ್ಲಿರುವ ಲೋಪದೋಷಗಳನ್ನು ಕಂಡುಹಿಡಿದು, ತಿದ್ದುಪಡಿ ಮಾಡಿ ಅಥವಾ ತೆಗೆದುಹಾಕಿ, ಸಮಾಜದ ಹಿತಾಹಿತವನ್ನು ವಿಚಾರ ಮಾಡಿ, ಗುಣಾವಗುಣಗಳನ್ನು ನೋಡಿ, ನಾವು ವಿದ್ಯಾವಂತರಾಗಿ, ಸಂಪದಭಿವೃದ್ಧಿಯಿಂದ ತುಂಬಿ ಶ್ರೇಯೋವಂತರಾಗಲು ಉಪಾಯಗಳನ್ನು ಕಂಡುಕೊಂಡು ಅವುಗಳನ್ನು ಆಚರಣೆಯಲ್ಲಿ ತರುವುದಕ್ಕೆ ಅಖಿಲಭಾರತ ವೀರಶೈವ ಮಹಾಸಭೆಗಳೂ, ಚಿತ್ರದುರ್ಗ ಮತ್ತು ಹಾಸನಗಳಲ್ಲಿ ಮೊನ್ನೆತಾನೇ ನಡೆದ ಜಿಲ್ಲಾ ಸಭೆಗಳೂ ಕಾಗಲವಾಡಿಯಲ್ಲಿ ನಡೆದ ನಂಜನಗೂಡು ಸಬ್‌ಡಿವಿಜನ್ನಿನಂಥಾ ಪ್ರಾಂತಿಕ ಸಭೆಗಳೂ ಈ ದಿನ ಸೇರುವಂಥಾ ತಾಲ್ಲೂಕು ಸಮ್ಮೇಳನಗಳೂ ಅತ್ಯಾವಶ್ಯಕವು. ಇದನ್ನು ಅಂತಿಮರಾಗಿ ತಾವು ಈ ಸಮ್ಮೇಳನವನ್ನು ಏರ್ಪಡಿಸಿರುವುದು ತುಂಬಾ ಶ್ಲಾಘನೀಯವಾಗಿದೆ.

ಮತಬಾಂಧವರೇ, ನಿಮ್ಮ ತಾಲ್ಲೂಕಿನ ಒಟ್ಟು ಪ್ರಜಾಸಂಖ್ಯೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಐದರಲ್ಲಿ ಒಂದು ಭಾಗದಷ್ಟು ವೀರಶೈವರಿರುವುದನ್ನು ಕೇಳಿ ಸಂತೋಷವಾಗುತ್ತದಾದರೂ ಒಟ್ಟು ತಾಲ್ಲೂಕಿನಲ್ಲಿ ಒಬ್ಬ ವೀರಶೈವ ಗ್ರಾಜುಯೇಟ್ ಸಹಾ ಇಲ್ಲವೆಂಬ ವಾರ್ತೆಯನ್ನು ಮಾತ್ರ ಕೇಳಲು ವಿಷಾದವಾಗುತ್ತದೆ. ನಮ್ಮ ಸಮಾಜದವರ ವಿದ್ಯಾವಿಚಾರದಲ್ಲಿ ಈ ನಿಮ್ಮ ತಾಲ್ಲೂಕು ಎಷ್ಟು ಹಿಂದೆಬಿದ್ದಿರುವುದೆಂಬುದನ್ನು ಇದರಿಂದ ಊಹಿಸಬಹುದು. ಇದು ಶೋಚನೀಯವಾಗಿದೆ. ಫಲದಾಯಕವಾದ ಮತ್ತು ಹಿತಕರವಾದ ವಿದ್ಯೆಯು ಸರ್ವರಿಗೂ ಸಮಸ್ತ ವಿಷಯದಲ್ಲಿಯೂ ಅತ್ಯಾವಶ್ಯಕವು. ವಿದ್ಯಾಭ್ಯಾಸದಿಂದಾಗುವ ನಾನಾವಿಧ ಪ್ರಯೋಜನ, ಸುಖ, ಸಂಪತ್ತುಗಳನ್ನು ಸಾಮಾನ್ಯವಾಗಿ ಎಲ್ಲರೂ ತಿಳಿದವರಾಗಿರುತ್ತೀರಿ. ಆದುದರಿಂದ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿಯೆಂದು ಹೇಳುವುದೇ ಅನವಶ್ಯಕವಿರುವುದಿಲ್ಲ. ಆದರೆ ಸಾಮಾನ್ಯವಾಗಿ ಕೈಯಲ್ಲಿ ಹಣವಿಲ್ಲದೆ ಬಹುಜನವು ಬಡವರಾಗಿರುವುದೂ, ಕೆಲವೇಳೆ ಐಶ್ವರ್ಯವಂತರ ಮಕ್ಕಳಿಗೆ ಸಹ ವ್ಯಾಸಂಗದಲ್ಲಿರುವ ಶ್ರದ್ಧೆಯಿಲ್ಲ

ಮಕ್ಕಳಿದ್ದರೆ ಮನೆ ಚಂದ.

ಮಕ್ಕಳಿಲ್ಲೆಂದು | ಚಿಂತಿಸಬೇಡಿರಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗುವಿರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ.

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. 3

[illegible]

ದಿಂದಲೂ ಇನ್ನು ಮುಂದೆಯಾದರೂ ಈಗಿರುವುದಕ್ಕಿಂತಲೂ ಹೆಚ್ಚು ಅಂದರೆ ನ್ಯಾಯವಾಗಿ ಸಾಕಷ್ಟು ಉದ್ಯೋಗಗಳು ನಮ್ಮ ಸಮಾಜದವರಿಗೆ ದೊರೆಯುವಂತೆ ಪರಮೇಶ್ವರನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಮಹಾಶಯರೆ, ದೀರ್ಘವಾದ ನನ್ನ ಭಾಷಣದಿಂದ ತಮ್ಮನ್ನು ಆಯಾಸಗೊಳಿಸಿದ್ದಕ್ಕಾಗಿ ಮನ್ನಿಸಬೇಕೆಂದು ಕೋರುತ್ತೇನೆ. ತಾವೆಲ್ಲರೂ ಸೇರಿ ನನ್ನನ್ನು ಸಭಾಧ್ಯಕ್ಷನನ್ನಾಗಿ ಮಾಡಿದುದಕ್ಕೋಸ್ಕರ ಮತ್ತೊಮ್ಮೆ ತಮ್ಮನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಈ ಸಮ್ಮೇಳನ ಕಾರ್ಯವು ಜಯಪ್ರದವಾಗಿ ನೆರವೇರಲು ತಾವೆಲ್ಲರೂ ತಮ್ಮ ಸಹಾನುಭೂತಿಯನ್ನು ತೋರಿಸಿ ಒತ್ತಾಸೆಯನ್ನು ದಯಪಾಲಿಸಬೇಕಾಗಿ ಬೇಡುತ್ತೇನೆ.

೧೧ ನೇ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭಾ, ಧಾರವಾಡ.

ತಾ|| 24-4-1932 ನೇ ದಿವಸ ಧಾರವಾಡ ಲಿಂಗಾಯತ ಹಾಲಿನಲ್ಲಿ ಕೂಡಿದ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆಯ ರಿಸೆಪ್ಷನ್ ಕಮಿಟಿಯವರು ಕೂಡಿ ಮಾಡಿದ ಠರಾವುಗಳು.— (1) ಮ|| ಟಿ ವಿ. ಕೋಟಿ ವಕೀಲ ಗದಗ ಇವರು ಈ ದಿವಸದ ಸಭೆಯಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸತಕ್ಕದ್ದು. ಸೂಚಕರು—ಶ್ರೀ|| ಎಂ. ಎಸ್. ಕೇಸರಿ ವಕೀಲ ಧಾರವಾಡ. [illegible]

M. S. KESAREE.
C. G. HUNDEKAR.
S. S. BASAVANAL.

[illegible]

ಸುಪರವಾಯಿಜರ ಸ್ಕೂಲಬೋರ್ಡ ಡಿಸ್ಟ್ರಿಕ್ಟ್ ಲೋಕಲ್‌ಬೋರ್ಡ ಧಾರವಾಡ. ಈ ಜನರು 2 ತಾಡವಾಲಿಯ, 6 ಕೈಬರಹಗಳ, 1 ಮುಂಗಳೂರು ಶಿಲಾಛಾಪದ ಪ್ರತಿಗಳನ್ನು ದೊರಕಿಸಿ ಅವುಗಳ ಸಹಾಯದಿಂದ ಒಂದು ಶುದ್ಧವಾದ ಪ್ರತಿಯನ್ನು ಸಿದ್ಧಪಡಿಸಿ ಅದನ್ನು ಈಗ ಅಚ್ಚಿಗೆ ಕೊಟ್ಟಿರುವರು. ಅಚ್ಚಾಗುವ ಕೆಲಸವು ಸಹ ಆರಂಭವಾಗಿದ್ದು ಈಗ ಮೊದಲನೇ ನಾಲ್ಕು ಸಂಧಿಗಳು ಮುಗಿದಿರುವವು. ಈ ಗ್ರಂಥಕ್ಕೆ ಸುಮಾರು 100 ಪುಟಗಳ ಪ್ರಸ್ತಾವನೆಯನ್ನೂ, ಟಿಪ್ಪಣಿ ಕೋಶಗಳನ್ನೂ ಜೋಡಿಸುವುದರಲ್ಲಿ ಬರುವದು. ಕಮಿಟಿಯ ಜನರ ಯೋಗ್ಯತೆಯ ಮೇಲಿಂದ ಪ್ರಸ್ತಾವನೆಯು ಬಹಳ ಮಹತ್ವದ್ದಾಗುವದೆಂಬುದನ್ನು ಬೇರೆ ಹೇಳಲಿಕ್ಕೆ ಬೇಡ. ಗ್ರಂಥವು ಸುಮಾರು 900 ಪುಟಗಳುಳ್ಳದ್ದಾಗುವದು. ಇದಕ್ಕೆ ಅತ್ಯುತ್ತಮವಾದ ಕಾಗದಗಳನ್ನು ಉಪಯೋಗಿಸಿದ್ದು, ಹೊಸದಾಗಿ ಸಿದ್ಧಪಡಿಸಿದ ಮೊಳೆಗಳಿಂದ ಅಚ್ಚಿನ ಕೆಲಸವು ಪೂರೈಸುವದು. ಇದಲ್ಲದೆ ಕಲಾಕೋವಿದರಾದ ಶ್ರೀಯುತ ಬಡಿಗೇರ ಖಣಜಿಗಿ ಮುಂತಾದವರಿಂದ ತೆಗೆದ ಕೆಲವು ನಾನಾ ತರದ ಬಣ್ಣಗಳ ಚಿತ್ರಗಳು ಈ ಗ್ರಂಥದಲ್ಲಿ ಸೇರಿಸಲ್ಪಡುವವು. ಒಟ್ಟಿನ ಮೇಲೆ ಈ ಗ್ರಂಥವು ಒಂದು ಮಾದರಿಯ ಗ್ರಂಥವಾಗುವದೆಂಬದರಲ್ಲಿ ಸಂದೇಹವಿಲ್ಲ. ಇದರ ಬೆಲೆಯು ಒಂದು ಪ್ರತಿಗೆ ಸುಮಾರು 5 ರೂಪಾಯಿಯಾಗುವದು.

ಈ ಗ್ರಂಥವನ್ನು ಪ್ರಸಿದ್ಧಿಸಲಿಕ್ಕೆ ವಾಙ್ಮಯ ಶಾಖೆಯವರಿಗೆ ಸ್ವತಂತ್ರವಾಗಿ ಕೊಡಿಸಿಟ್ಟ ಹಣದ ಸಹಾಯವಿಲ್ಲ. ಈ ಕಾರ್ಯಕ್ಕಾಗಿ ಕಾಣಿಕೆಯ [illegible]

ವದು. ಕಾರಣ ಎಲ್ಲರೂ ಈ ಕಾರ್ಯಕ್ಕೆ ಕಾಣಿಕೆಯ ರೂಪದಿಂದಾಗಲೀ ಗ್ರಂಥಪ್ರತಿಗಳನ್ನು ಕೊಳ್ಳುವದರಿಂದಾಗಲೀ ಸಹಾಯ ಮಾಡಬೇಕೆಂದು ಆಗ್ರಹದ ವಿನಂತಿಯದೆ.

ಎಸ್. ಎಸ್. ಮಳೀಮಠ,
ಲಾಯಬ್ರೇರಿಯನ್, ವಾಙ್ಮಯಶಾಖೆ ಲಿಂ|| ವಿ|| ಸಂಸ್ಥೆ, ಧಾರವಾಡ.

ವೀರಶೈವ ಮತಬಾಂಧವರಲ್ಲಿ ವಿಜ್ಞಾಪನೆ

ಧರ್ಮಾಭಿಮಾನಿಗಳಾದ ಬೇಲೂರು ತಾ|| ಕಾಫಿಪ್ಲಾಂಟರು ಮ|| ಬಿ.ವಿ. ಮಲ್ಲೇಗೌಡರು ವೀರಶೈವ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ದಯಪಾಲಿಸಿರುವ ಹಾಸನದಲ್ಲಿರುವ ಕಟ್ಟಡದಲ್ಲಿ ಹಾಸನದಲ್ಲಿ ಮಿಡಲ್‌ಸ್ಕೂಲು ಮತ್ತು ಹೈಸ್ಕೂಲುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಬೋರ್ಡಿಂಗಿಗೆ ಅನುಕೂಲಪಡಿಸುವುದರಿಂದ ಇಷ್ಟವುಳ್ಳ ವಿದ್ಯಾರ್ಥಿಗಳು 1 ವಾರ ಮುಂಚಿತವಾಗಿ ಹಾಸ್ಟಲ್ ಸೆಕ್ರೆಟರಿಯವರಿಗೆ ಅಪ್ಲಿಕೇಷನ್ನು ಹಾಕಿಕೊಳ್ಳತಕ್ಕದ್ದು. ಮತ್ತು ಹಾಸ್ಟಲ್ಲಿಗೆ ಸೇರುವ ಕಾಲದಲ್ಲಿ 10 ರೂ. ಅಡ್ವಾನ್ಸು ಸಹ ಕೊಡಬೇಕು. ಹೈಸ್ಕೂಲು ಬರುವ ತಾ|| 8-6-32 ಕ್ಕೂ ಮತ್ತು ಮಿಡಲ್ ಸ್ಕೂಲು ತಾ|| 22-5-32 ಕ್ಕೂ ಸಹ ತೆರೆಯಲ್ಪಡುತ್ತವೆ.

ವೈ. ಧರ್ಮಪ್ಪ, ಬಿ.ಎ., ಬಿ ಎಲ್., ಸೆಕ್ರೆಟರಿ.
ವೀರಶೈವ ಹಾಸ್ಟಲ್, ಹಾಸನ.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ. ನಾರಿನವರು ಜರೂರ ತರಿಸಿಕೊಳ್ಳಿರಿ. ಕಿ. ೧| ರೂ. ಟ ಖ. ೫೪ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.
2 M. C

೧೯೩೨ ನೆಯ ಇಸವಿ ಮೇ ತಾ|| ೨ ರಿಂದ ಮೇ ತಾ|| ೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಆಂಗೀರಸನಾಮಸಂವತ್ಸರದ ಚೈತ್ರ ಬಹುಳ ದ್ವಾದಶಿಯಿಂದ ವೈಶಾಖ ಶುದ್ಧ ತದಿಗೆ ವರೆಗಿನ ಪಂಚಾಂಗ

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮೇ ಮಾಸ
2	ಸೋಮ	ದ್ವಾದ	25-26	ಉಭಾ	43-16	20
3	[1] ಮಂಗಳ	ತ್ರಯೋ	29-56	ರೇವ	49-24	21
4	ಬುಧ	ಚತು	35-0	ಅಶ್ವಿ	55-58	22
5	ಗುರು	ಅಮಾ	40-10	ಭರ	60	23
6	[2] ಶುಕ್ರ	ಪಾಡ್ಯ	45-6	ಭರ	2-35	24
7	[3] ಶನಿ	ಬಿದಿ	49-17	ಕೃತ್ತಿ	8-36	25
8	[4] ಭಾನು	ತದಿ	52-43	ರೋಹಿ	12-55	26

(1) ಮಳೆನಕ್ಷತ್ರ-ಭರಣಿ ೩ ನೆಯಪಾದ. (2) ಮಳೆನಕ್ಷತ್ರ-ಭರಣಿ ೪ ನೆಯ ಪಾದ. (3) ಮೊಹರಂ ಪ್ರಾರಂಭ. (4) ಬಿಕೋರಾಮಾರಾಧ್ಯರ ಜಯಂತಿ, ಶ್ರೀ ಬಸವೇಶ್ವರ ಜಯಂತಿ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG. NO. M. 124

ಮೈಸೂರ್ ಸ್ಟಾರ್.

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[ಸ್ಥಳದವರಿಗೆ ವಾರ್ಷಿಕಚಂದಾ ೧-೧೧-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆ್ ೧೯೩೨ ನೆಯ ಇಸವಿ ಮೇ ತಾರೀಖು ೯ ನೆಯ ಸೋಮವಾರ [ಸಂಚಿಕೆ ೧೯

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place for insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries, Economic Superintendents, Helpers and the Insurance Office, Public Office Buildings Bangalore.

(Sd.) S. SHA MANNA,
Secretary, Insurance Committee.

[50—43]

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇರಿ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿಹಾಸ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರನಚನನ	೦—೯—೦	೦—೧೩—೦
ಸಟೀಕ ಕರಸ್ಥಲಮಲ್ಲಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಸ್ಟರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು ಇದ್ದು ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ ತರತರೇಶ ತರುಣರಂತೆ ಕಾಮೆಚ್ಛಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣಿ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ಒಂದು ಡಬ್ಬಿಗೆ ೫| ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳ್ಳೇಸು ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಟ್ಟಿ ಅಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಟ್ಟಿ ಆಗೋಣ, ಮುಟ್ಟಿ ಅಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಅಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣ ಮಾಡುವ ಶಕ್ತಿ ಅತಿ ತೀವ್ರ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ ಮತ್ತು [illegible] ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ [illegible] ಇಂಥ ಬೇರೆ ಕಾರಣದಿಂದ ಸಂತತಿ ಇಚ್ಛಾ ಯಾರಿಗೆ ಇರಿರುತ್ತದೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. [illegible] ಪೂರ್ಣಗುಣಕಾರಿ ಒಂದು ಡಬ್ಬಿಗೆ ೬ ರೂ. ಟ. ಖ. ೮ ಅಣೆ. [illegible]

[illegible]

ಪತ್ತಾ ಮೊಹಳ:—ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜ. ಎಂ. ಎಸ್. ಎಂ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು [illegible] ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು

(Registerd Trade Mark)

ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ [illegible]

[illegible]

[illegible]

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[illegible] ಪೋ. ಬಾ. ೫೧೦, ಮದರಾಸು.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಮೇ ತಾ|| ೯ ನೆಯ ಸೋಮವಾರ.

A FINE CERTIFICATE

The creatures should worship the creator. Mysore City Municipal Council is a fine handmaid. At the last Municipal Council meeting held on 30th. April 1932, the President's note regarding the correspondence that passed between a nominated Municipal Councillor Mr. T. S. Alikhan and the President over the the question of circulation of papers, was taken up into consideration in the absence of Mr. T. S. Alikhan. The subject was deferred at the previous meeting on the ground that Mr. Alikhan was not present. When some one suggested that he may not come up even for the next meeting, then it was understood it could be taken up at the third meeting which Mr. Alikhan could not avoid without risking his very seat. Another factor in the March meeting when the subject was deferred was that the House was full and those who stand up boldly in the Council were present. But at the last meeting these latter elements were absent and it afforded a fine opportunity for getting a certificate from the Council. It may also be noted that neither the agenda nor the papers including the note of President was sent to Mr. Alikhan as the Regulation requires, so that Mr. Khan had no opportunity of either attending the meeting or sending his note in reply. The note while justifying the action of the President in the matter of late circulation of papers, and taking exception to the note made by Mr. Khan on the circulation paper at the same time sought the decision of the Council in the matter. The President in further explaining the position wanted to justify his altogether unjustifiable remarks that the interests of the ratepayers were no concern of Mr. Khan as he represented no constituency of any kind. It is reported that the President told the Council at the meeting that he had replied Mr. Khan that he and Mr. Khan were in the same position. But the correspondence, however, does not disclose such a statement. The President persisted in his attitude that Mr. Khan could not concern himself in the interests of the ratepayers and that he represented no constituency of any kind. Mr. A. Krishna Rao who followed the President exhibited another type of virtue. He went to the extent of saying that the circulation of papers was a matter of courtesy and not an obligatory function. Never was a more ignominous statement made in the Council. The Regulation requires that business of the meeting must be circulated and the procedure has been strictly adhered to all along. And now Mr. Krishna Rao propounds with all the forensic skill and legal lore at his command and with all courage and independence that the President circulating the business is a great obligation to the members of the Council. It is surprising that there should be such a slaivsh attitude exhibeted by any of the Councillors. Even the fact that the question arose in connection with one who may not belong to their party could be no justification for going to this extreme length. Mr. Y. Virupakshaiya raised an important preliminary point. The President had informed Mr. Alikhan that his decision was final and Mr. Virupakshaiya asked where then was the necessity to place the matter before the Council, when there was no appeal or requisition by Mr. Khan. The point, however, was evaded. The President evidently wanted a certificate from the Council which in view of its composition he was sure of getting and he had it. It may be noted that the Council avoided expressing any opinion on the remarks of the President about the rights of nominated members. But if the Council adopts an ostrich-like policy the people are not going to. The affront offered by the President to a nominated member is also an affront to Government which nominated him. Whether the Government takes note of it or not the public is not going to keep quiet. Already we hear that an interpellation has been sent to the Assembly about the insulting remarks of the President and the minds of the minority communities are agitated about it. The President may have a tomporary satisfaction and shrug his shoulders over the certificate of the rump of the Council, but there is a wider public which should judge the matter. We will wait and see the result.

ಶ್ರೀ ಜಯದೇವ ಬೋರ್ಡಿಂಗು ಕಾಶಿ

ಮಾನವನ ಇಹಪರ ಸುಖಸಾಧನ ಹೇತುವಾದುದು ವಿದ್ಯೆ. ಇಂಥಾ ವಿದ್ಯಾಪ್ರಾಪ್ತಿಗೆ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು ಬೆಂಗಳೂರು, ತುಮಕೂರು, ತಿಪಟೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಕೊಲ್ಲಾಪುರ ಮೊದಲಾದ ಸ್ಥಳಗಳಲ್ಲಿ ವೀರಶೈವ ವಿದ್ಯಾರ್ಥಿನಿಲಯಗಳನ್ನೂ, ಸಂಸ್ಕೃತ ಪಾಠಶಾಲೆಗಳನ್ನೂ 10-12 ಲಕ್ಷ ರೂಪಾಯಿಗಳ ವರೆಗೆ ವೆಚ್ಚಮಾಡಿ ಕಲ್ಪಿಸಿರುವುದು ಜಗದ್ವಿಖ್ಯಾತವಾಗಿರುತ್ತದೆ. ಸಮಸ್ತ ಭಾಷೆಗಳಿಗೆ ಮೂಲವೂ ಶ್ರೇಷ್ಠವೂ ಆದ ಸಂಸ್ಕೃತ ಭಾಷೆಗೆ ಶ್ರೀ ಕಾಶೀ ಮಹಾಕ್ಷೇತ್ರವು ಮುಖ್ಯ ಪೀಠವಾಗಿರುವುದು. ಅಲ್ಲಿಗೆ ಸಂಸ್ಕೃತ ಪ್ರೌಢವಿದ್ಯಾಭ್ಯಾಸಕ್ಕಾಗಿ ಹೋಗತಕ್ಕ ವೀರಶೈವ ವಿದ್ಯಾರ್ಥಿಗಳ ಅಶನವಸತಿಗಳಿಗೆ ಶ್ರೀ ಜಗದ್ಗುರು ವಿಶ್ವಾರಾಧ್ಯರ ಪೀಠವಾದ ಜಂಗಮವಾಡಿ ಮಠದಲ್ಲಿ ತಕ್ಕೇರ್ಪಾಟು ಮಾಡಲ್ಪಟ್ಟು ಅನೇಕ ವರ್ಷಗಳಿಂದಲೂ ನಡೆಸಲ್ಪಡುತ್ತಿದೆ. ಇಲ್ಲಿ ಅನೇಕರು ಇದ್ದುಕೊಂಡು ಪ್ರೌಢವಿದ್ಯಾಭ್ಯಾಸವನ್ನು ಮಾಡಿ ಘನ ಪ್ರಶಸ್ತಿಗಳನ್ನು ಪಡೆದು ದೊಡ್ಡ ಮಠಾಧಿಪತಿಗಳಾಗಿಯೂ, ಪಾಠಶಾಲೆಗಳಲ್ಲಿ ಬೋಧಕರಾಗಿಯೂ ಇರುತ್ತಾರೆ. ಆದರೆ ವೀರಶೈವ ಸಮಾಜದ ಒಕ್ಕಟ್ಟಿಗೂ ಗೌರವಕ್ಕೂ ಭಂಗಕಾರಿಯಾಗಿರುವ ಗುರುವಿರಕ್ತರ ಕಲಹದ ದೆಸೆಯಿಂದ ಶ್ರೀ ಜಂಗಮವಾಡಿ ಮಠದಲ್ಲಿ ವಿರಕ್ತ ಪಕ್ಷದವರಿಗೆ ಆಶ್ರಯವಿಲ್ಲದಂತಾಗಿ ಅವರ ವ್ಯಾಸಂಗಕ್ಕೂ ವಿರಕ್ತ ಪಕ್ಷಾಭಿಮಾನಿಗಳಾದ ಯಾತ್ರಿಕರ ವಸತಿಗೂ ತೊಂದರೆಯಾಗಿದ್ದುದನ್ನು ಶ್ರೀ ಜಗದ್ಗುರು ಜಯದೇವ ಪೂಜ್ಯಪಾದರು ಅರಿತು ದಾವಣಗೆರೆ ವೀರಶೈವ ಭಕ್ತಮಂಡಲಿಯ ಉದಾರ ಸಹಾಯದಿಂದ ಸಾವಿರಾರು ರೂ.ಗಳನ್ನು ವೆಚ್ಚಮಾಡಿ ಶ್ರೀ ಜಯದೇವ ಫ್ರೀ ಬೋರ್ಡಿಂಗ್ ಎಂಬ ಹೆಸರಿನಿಂದ ವಿದ್ಯಾರ್ಥಿನಿಲಯವನ್ನು ಕಲ್ಪಿಸಿರುವುದು ಸರ್ವಶ್ರುತವಿದೆ. ಈ ನಿಲಯದ ಕಾರ್ಯನಿರ್ವಾಹಕ ಸಂಘದ ಸೆಕ್ರೆಟರಿಯವರು ಪ್ರೀತಿಪೂರ್ವಕವಾಗಿ ಕಳುಹಿಸಿಕೊಟ್ಟಿರುವ ಗತ ವರ್ಷದ ವರದಿಯನ್ನು ವಂದನಾಪೂರ್ವಕ ಸ್ವೀಕರಿಸಿರುತ್ತವೆ. ಈ ನಿಲಯದ ಉದ್ದೇಶ, ಪ್ರಯೋಜನ, ವಿದ್ಯಾರ್ಥಿಗಳ ನಡೆನುಡಿ, ಸ್ಥಾಪಕರ ಮತ್ತು ಪೋಷಕರ ವಿದ್ಯಾಭಿಮಾನೌದಾರ್ಯ ಇತ್ಯಾದಿ ಸಂಗತಿಗಳನ್ನೊಳಗೊಂಡಿರುವ ಶ್ಲಾಘ್ಯವಾದ ಮುನ್ನುಡಿಯು ಬಳ್ಳಾರಿ ವಕೀಲರು ಶ್ರೀಯುತ ಟಿ. ಎಚ್. ಎಂ. ಸದಾಶಿವಯ್ಯ, ಎಂ. ಎ., ಬಿ. ಎಲ್., ರವರಿಂದ ಬರೆಯಲ್ಪಟ್ಟಿದೆ. 1931 ರಲ್ಲಿ ಸಾಹಿತ್ಯ ಆದ್ಯಮಧ್ಯಮ ಮತ್ತು ವ್ಯಾಕರಣ ಮಧ್ಯಮ ಪರೀಕ್ಷೆಗಳಿಗೆ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳು 20 ಮಂದಿ ವರೆಗಿದ್ದರು. ಈ ನಿಲಯದ ಪೋಷಣೆಗಾಗಿ ಏರ್ಪಟ್ಟಿರುವ ಚಿರಸ್ಥಾಯಿ ಫಂಡಿಗೆ 8555 ರೂ. ವಾಗ್ದಾನವಾಗಿ 5552 ರೂ. ಶೇಖರವಾಗಿರುತ್ತದೆ ಮತ್ತು ವಿದ್ಯಾರ್ಥಿಗಳ ಕೋಣೆಗಳನ್ನು ಕಟ್ಟಲು ದಾವಣಗೆರೆಯ ವೀರಶೈವ ಭಕ್ತಶಿರೋಮಣಿಗಳು 15016 ರೂಪಾಯಿಗಳನ್ನು ಸಲ್ಲಿಸಿರುತ್ತಾರೆ. ಪಠಾಸನಕ್ಕಾಗಿ 1861 ರೂ. ವಾಗ್ದಾನ ಮಾಡಲ್ಪಟ್ಟು 1361 ರೂ. ಸಲ್ಲಿಸಲ್ಪಟ್ಟಿದೆ. ಗೀರ್ವಾಣ ಭಾಷೆಗೆ ಮುಖ್ಯ ಪೀಠವಾಗಿಯೂ, ಮಾನವನ ಮುಕ್ತಿಸ್ಥಾನವಾಗಿಯೂ ಇರುವ ಕಾಶೀ ಮಹಾಕ್ಷೇತ್ರದಲ್ಲಿ ವಿರಕ್ತ ಪಕ್ಷಾಭಿಮಾನಿಗಳಾದ ವೀರಶೈವ ವಿದ್ಯಾರ್ಥಿಗಳಿಗೂ, ಯಾತ್ರಿಕರಿಗೂ ಇದ್ದ ಅಶನ ವಸತಿಗಳ ತೊಂದರೆಯನ್ನು ನೀಗಿಸಿದುದಕ್ಕಾಗಿ ಶ್ರೀಮಜ್ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳಿಗೆ ಸಮಾಜವು ಚಿರಕೃತಜ್ಞವಾಗಿರುವುದಲ್ಲದೆ, ಈ ಸಂಸ್ಥೆಯ ಅಭಿವೃದ್ಧಿಗಾಗಿ ಪಾಟುಪಡುತ್ತಿರುವ ಶ್ರೀಮನ್ನಿರಂಜನ ಮಿರ್ಜೆ ಗುರುಶಾಂತಸ್ವಾಮಿಗಳನ್ನು ವಂದಿಸುತ್ತದೆ. ಈ ಸಂಸ್ಥೆಗೆ ಎಲ್ಲ ದೇಶದ ವಿದ್ಯಾರ್ಥಿಗಳೂ ಬರುತ್ತಿರುವುದರಿಂದ ಎಲ್ಲ ದೇಶದ ವೀರಶೈವರು ದ್ರವ್ಯಸಹಾಯ ಮಾಡುವುದೂ, ಚಿತ್ರದುರ್ಗದ ಜಗದ್ಗುರು ಪೂಜ್ಯಪಾದರು ಸಂಸ್ಥಾಪಕರಾಗಿರುವಂತೆ ಹುಬ್ಬಳ್ಳಿ, ಗದಗು ಮೊದಲಾದ ಜಗದ್ಗುರು ಪೂಜ್ಯಪಾದರುಗಳು ಪೋಷಕರಾಗಿರುವುದೂ, ಮೈಸೂರು, ಧಾರವಾಡ ಮತ್ತು ಸಿರಸಂಗಿ ವಿದ್ಯಾವರ್ಧಕ ಸಂಘದವರು ದ್ರವ್ಯಸಹಾಯ ಮಾಡುವುದೂ ಅತ್ಯಾವಶ್ಯಕವಾಗಿರುವುದು.

ಮೈಸೂರು ದೇಶದಲ್ಲಿ ಸಕ್ಕರೆಯ ಕೈಗಾರಿಕೆ

ಸರ್ಕಾರದ ಸಾರಾಯಿ ಬಟ್ಟಿ ಕಾರ್ಖಾನೆಯ ಟ್ರಾನ್ಸ್‌ಫೋರ್ಸ್ಟ್ ಇನ್ಸ್‌ಪೆಕ್ಟರ್ ಮ|| ಬಿ. ಎಸ್. ಅಣ್ಣಯ್ಯ, ಬಿ. ಎ., ಎ. ಎಂ., (ಕೊಲಂಬಿಯ) ಯವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಆಚೆವಾರ ಸರ್ಕಾರಿ ಸಾಬೂನು ಕಾರ್ಖಾನೆಯ ಇಂಡಸ್ಟ್ರಿಯಲ್ ಮತ್ತು ಕೆಮಿಕಲ್ ಇಂಜನಿಯರಾದ ಮ|| ಎಸ್. ಜಿ. ಶಾಸ್ತ್ರಿ, ಎಂ. ಎಸ್. ಸಿ., ಎಫ್. ಸಿ. ಎಸ್., ರವರ ಅಧ್ಯಕ್ಷತೆಯಲ್ಲಿ ಮೈಸೂರು ದೇಶದಲ್ಲಿ ಎಥೇಚ್ಛವಾಗಿ ಕಬ್ಬನ್ನು ಬೆಳೆದು ಸಕ್ಕರೆ ಮಾಡಲವಕಾಶವಿರುತ್ತದೆಂದು ದೀರ್ಘೋಪನ್ಯಾಸ ಮಾಡಿದರು. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಕಬ್ಬಿನ ವ್ಯವಸಾಯ ಮತ್ತು ಸಕ್ಕರೆಯ ನಿರ್ಮಾಣ ಪರಿಶ್ರಮವು ಬಹಳ ಚೆನ್ನಾಗಿರುತ್ತವೆ. ಈ ವ್ಯವಸಾಯ ಸಂಬಂಧವಾಗಿ ಸರ್ಕಾರದ ವ್ಯವಸಾಯ ಶಾಖೆಯವರು ಅನೇಕ ಪರೀಕ್ಷೆಗಳನ್ನು ನಡೆಸಿರುತ್ತಾರೆ. ಈ ವ್ಯವಸಾಯಕ್ಕೆ ನೀರು, ಒಳ್ಳೇ ಬೀಜ ಮತ್ತು ಕೆಲಸಗಾರರು ವಿಶೇಷವಾಗಿ ಬೇಕಾಗಿರುತ್ತಾರಲ್ಲದೆ ಭದ್ರಾವತಿಯಲ್ಲಿ ಶಾಸ್ತ್ರಪ್ರಕಾರ ಕೆಲಸ ಮಾಡುತ್ತಿರುವ ಯುವಕರಂತೆ ಕಬ್ಬಿನ ವ್ಯವಸಾಯವನ್ನೂ ಸಕ್ಕರೆಯನ್ನೂ ಶಾಸ್ತ್ರರೀತ್ಯಾ ಮಾಡಬಲ್ಲ ಯುವಕರ ಸಹಾಯವೂ ಬೇಕಾಗಿರುವುದು. ಪರದೇಶದ ಸಕ್ಕರೆಯ ವಿಚಾರದಲ್ಲಿ ಯಾವ ಕಾರಣದಿಂದಲೋ ಜನರಿಗೆ ಬೇಸರ ಹುಟ್ಟಿ ಸ್ವದೇಶದ ಸಕ್ಕರೆಯ ಮೇಲೆ ಅಕ್ಕರೆ ಹೆಚ್ಚಾಗಿರುತ್ತದೆ. ಅಲ್ಲದೆ ಈ ಸಕ್ಕರೆಯ ದೆಸೆಯಿಂದ ಧನವು ಹೇರಳವಾಗಿ ಪರದೇಶಗಳಿಗೆ ಹರಿದುಹೋಗುವುದರ ಕಡೆಗೆ ಭಾರತೀಯರ ದೃಷ್ಟಿ ಬಿದ್ದು ಕಣ್ಣು ಕೆಂಪಗೆ ಆಗಿರುತ್ತದೆ. ನಮ್ಮ ಮೈಸೂರು ದೇಶದಲ್ಲಿ ಈ ಕಬ್ಬಿನ ವ್ಯವಸಾಯಕ್ಕೆ ಭೂಗುಣವು ಅನುಕೂಲವಾಗಿರುವುದಲ್ಲದೆ ಜಲವಸತಿಯು ಸಂಪೂರ್ಣವಾಗಿರುತ್ತದೆ. ಇರ್ವಿನ್ ನಾಲೆಯು ಪೂರೈಸಿದ ಮೇಲೆ 120 ಸಾವಿರ ಎಕರೆ ಭೂಮಿಗೆ ನೀರೊದಗುವುದು. ಮೇಲ್ಕಂಡ ಸೌಕರ್ಯಗಳು ಮೈಸೂರು ದೇಶವಲ್ಲಿರುವುದರಿಂದ ಮತ್ತು ಸಾಕಷ್ಟು ಮೂಲಧನವನ್ನು ಶೇಖರಿಸಲು ಸಾಧ್ಯವಿರುವುದರಿಂದ ಸಕ್ಕರೆಯ ಕಾರ್ಖಾನೆಗಳನ್ನು ಸ್ಥಾಪಿಸಿ ಮೈಸೂರು ದೇಶವನ್ನು ಇಂಡ್ಯಾಕ್ಕೆ ಜಾವಾದಂತೆ ಮಾಡಬಹುದೆಂದು ಮ|| ಅಣ್ಣಯ್ಯನವರು ವಿಶೇಷ ವಿಮರ್ಶೆಯಿಂದಲೂ ಶಾಸ್ತ್ರಾನುಭವದಿಂದಲೂ ಹೇಳಿರುತ್ತಾರೆ. ನಮ್ಮ ವ್ಯವಸಾಯಗಾರರು ಕಬ್ಬಿನ ಬೆಳೆಯನ್ನು ಅಭಿವೃದ್ಧಿಗೊಳಿಸಿ ಸಕ್ಕರೆಯ ಕಾರ್ಖಾನೆಗಳ ಸ್ಥಾಪನೆಗೆ ಪ್ರೋತ್ಸಾಹವನ್ನೂ ಅವಕಾಶವನ್ನೂ ಉಂಟುಮಾಡಿಕೊಡುವವರಾಗಲೆಂದು ಆಶಿಸುತ್ತೇವೆ.

ಫ್ರಾನ್ಸಿನ ಪ್ರೆಸಿಡೆಂಟರ ಕೊಲೆ

ಫ್ರಾನ್ಸಿನ ಪ್ರೆಸಿಡೆಂಟರಾದ ಡೌಮರ್‌ರವರನ್ನು ರಷ್ಯಾ ದೇಶದವನು ಮಾರ್ಗದಲ್ಲಿ ಗುಂಡಿನಿಂದ ಹೊಡೆದು ಕೊಂದನು.

೧ ಪೌಂಡು ತೂಕದ ಆಲಿಕಲ್ಲು

ಕಳೆದ ತಾ|| 28 ರಲ್ಲಿ ನಾಗಾರ್ಪುರದಲ್ಲೂ, ಪಟಾಸಿನಲ್ಲೂ, ನೆರೆ ಗ್ರಾಮಗಳಲ್ಲೂ ಆಲಿಕಲ್ಲಿನ ಮಳೆ ಸುರಿದಿತು. ಒಂದೊಂದು ಆಲಿಕಲ್ಲು 1 ಪೌಂಡು ತೂಕವಿದ್ದಿತಂತೆ.

ಅಂಚೆ ಕಾಗದಗಳನ್ನು ಸುಡುವುದು.

ಈ ಜಾಡ್ಯವು ನಾಗಪುರಕ್ಕೂ ವ್ಯಾಪಿಸಿ 4 ಶಾಖಾ ಪೋಸ್ಟಾಫೀಸುಗಳ ಕಾಗದದ ಪೆಟ್ಟಿಗೆಗಳಿಗೆ ಬೆಂಕಿಹಾಕಲ್ಪಟ್ಟಿದ್ದುದರಿಂದ ಒಳಗಿದ್ದ ಕಾಗದಗಳು ಸುಟ್ಟು ಹೋದುವು.

ಬ್ರಿಟಿಷ್ ಮುಖ್ಯಮಂತ್ರಿಗಳ ನೇತ್ರಚಿಕಿತ್ಸೆ

ಮಂತ್ರಿಗಳ ಎಡಗಣ್ಣು ಮೊದಲು ಬಾಧೆಯಾಗಿದ್ದುದರಿಂದ ಚಿಕಿತ್ಸೆ ಮಾಡಲ್ಪಟ್ಟು ಗುಣಹೊಂದಿತು. ಈಗ ಬಲಗಣ್ಣಿಗೆ ಬಾಧೆಯುಂಟಾದುದರ ಮೇಲೆ ಅದೂ ಚಿಕಿತ್ಸೆ ಮಾಡಲ್ಪಟ್ಟು ಗುಣಮುಖದಲ್ಲಿದೆ.

೭ ಮಂದಿಗೆ ಮರಣದಂಡನೆ

ಮಿರ್ಜಾಪುರ ನೊಂಬಿ ಮೊಕದ್ದಮೆಯಲ್ಲಿ 7 ಮಂದಿಗೆ ಮರಣದಂಡನೆಯೂ, 25 ಮಂದಿಗೆ ದ್ವೀಪಾಂತರವಾಸ ಶಿಕ್ಷೆಯೂ ಸೆಷನ್ಸು ಜಡ್ಜಿಯವರಿಂದ ವಿಧಿಸಲ್ಪಟ್ಟುವು. ಈ ಕೇಸು ಕಳೆದ ಒಂದು ವರ್ಷದಿಂದಲೂ ನಡೆಯುತ್ತಿದ್ದಿತು.

ಪ್ರಕೃತಿಯ ವೈಚಿತ್ರ್ಯ

ರಾಜಪುತ್ಯಕ್ಕೆ ಸೇರಿದ ಪರಯೂಪಾಳ್ಯದ ಬಳಿಯಿರುವ ಒಂದು ಗ್ರಾಮದಲ್ಲಿ ಒಬ್ಬ ಸ್ತ್ರೀ 4 ಮಕ್ಕಳನ್ನು ಹೆತ್ತು ಅವುಗಳ ಸಮೇತ ಸುಖವಾಗಿರುವಳು. ಇನ್ನೊಬ್ಬ ತರುಣಿಯು 6 ಅಂಗುಲ ಉದ್ದದ ಬಾಲವಿರುವ ಒಂದು ಹೆಣ್ಣು ಮಗುವನ್ನು ಹೆತ್ತು ಮಾರನೆಯ ದಿವಸ ಮೃತಳಾದಳು.

ಚೀನಾ ಜಪಾನು ಸಂಧಿ ಪತ್ರಕ್ಕೆ ರುಜು

ಚೀನಾ ಜಪಾನು ಸಂಧಿ ಒಡಂಬಡಿಕೆ ಪತ್ರಕ್ಕೆ ಉಭಯ ರಾಜ್ಯಾಧಿಕಾರಿಗಳ ರುಜುವಾಯಿತು. ಇತರ ರಾಜ್ಯಗಳ ರಾಯಭಾರಿಗಳ ರುಜುಗಳೂ ಹಾಕಲ್ಪಟ್ಟುವು. ಇದರಿಂದ ಚೀನಾ ಜಪಾನುಗಳ ಹೋರಾಟವು ಅಧಿಕಾರ ರೀತಿಯಾಗಿ ಕೊನೆಗಂಡಿತು.

ನಿದ್ರೆಯಲ್ಲಿ ಕೊಲೆ

ರಂಗೂನಿಗೆ ಸೇರಿದ ಥಾರಾವಡ್ಡಿಯಲ್ಲಿ ಯಾರೋ ಇಬ್ಬರು ಮನುಷ್ಯರು ಮಧ್ಯರಾತ್ರಿಯಲ್ಲಿ ಒಂದು ಮನೆಗೆ ನುಗ್ಗಿ ನಿದ್ರಿಸುತ್ತಿದ್ದ ತಾಯಿಯನ್ನೂ 20 ವರ್ಷದ ಅವಿವಾಹಿತಳಾದ ಮಗಳನ್ನೂ ಚೂರಿಯಿಂದ ತಿವಿದು ಪ್ರಾಣಾಪಾಯವನ್ನುಂಟುಮಾಡಿದರು. ಮಗಳು ಕೂಡಲೆ ಸತ್ತಳು, ತಾಯಿಯು ಚಿಕಿತ್ಸೆಯಲ್ಲಿರುವಳು.

ಈಜಿಪ್ಟಿನ ಮಂತ್ರಿಗಳ ರೈಲುಬಂಡಿಗೆ ಬಾಂಬು ಬಿದ್ದುದು

ಈಜಿಪ್ಟು ದೇಶದ ಮುಖ್ಯಮಂತ್ರಿ ಸಿದ್ಕಿಪಾಷಾರವರು ಇತರ ಮಂತ್ರಿಗಳೊಡನೆ ಪ್ರಯಾಣ ಮಾಡುತ್ತಿದ್ದ ರೈಲುಬಂಡಿಗೆ ಬಾಂಬನ್ನು ಹಾಕಲು ಕಾದಿದ್ದವರು ಬಂಡಿ ಬರುವುದರೊಳಗಾಗಿ ಬಾಂಬನ್ನು ಹಾಕಿದುದರಿಂದ ಕಾವಲಿದ್ದವರಿಬ್ಬರಿಗೆ ತಗಲಿ ಅವರು ಸತ್ತರು. ಮಂತ್ರಿಗಳು ಮರಣಗಂಡದಿಂದ ಪಾರಾದರು.

ಮಕ್ಕಳು ಆಹಾರವಿಲ್ಲದೆ ಸತ್ತುವು

ಅಂಬಾಲಾಕ್ಕೆ ಸೇರಿದ ಗ್ರಾಮದಲ್ಲಿ ಓರ್ವ ತರುಣಿಯು ತನ್ನ 15 ದಿವಸಗಳ ಅವಳಿಜವಳಿ ಮಕ್ಕಳನ್ನು ಒಂದು ಕೆರೆಯ ಬಳಿ ಮರದ ನೆರಳಿನಲ್ಲಿ ಮಲಗಿಸಿ ಕೆರೆಯಲ್ಲಿ ಬಟ್ಟೆಗಳನ್ನೊಗೆಯುತ್ತಿರುವಾಗ್ಗೆ ಯಾರೋ ದುಷ್ಟರು ಆ ಮಕ್ಕಳನ್ನು ಅಲ್ಲೇ ಬಿಟ್ಟು ಅವಳನ್ನೆತ್ತಿಕೊಂಡುಹೋದರು. ಇದಾದ ಎರಡು ದಿವಸಗಳ ಮೇಲೆ ಆ ಮಕ್ಕಳು ಆಹಾರವಿಲ್ಲದೆ ಸತ್ತುಬಿದ್ದಿದ್ದುದು ಗೊತ್ತಾಯಿತು.

ರೈಸ್ ಮಿಲ್ಲು ಅಗ್ನಿಪಾಲಾಯಿತು.

ಬರ್ಮಾಕ್ಕೆ ಸೇರಿದ ಪ್ರೋಂ ಡಿಸ್ಟ್ರಿಕ್ಟಿನಲ್ಲಿ ಒಬ್ಬ ಶೆಟ್ಟಿಗೆ ಸಂಬಂಧಪಟ್ಟ ರೈಸ್ ಮಿಲ್ಲು ಬೆಂಕಿಯಿಂದ ಹೊತ್ತಿಕೊಂಡು ಭಸ್ಮವಾಯಿತು. ಈ ಮಿಲ್ಲು 1 ಲಕ್ಷ ರೂ. ಬಾಳುವುದಾಗಿದ್ದಿತಾದರೂ 70,000 ರೂ. ಗಳಿಗೆ ಇನ್‌ಶೂರ್ ಮಾಡಲ್ಪಟ್ಟಿದ್ದಿತು. 6 ಸಾವಿರ ಬತ್ತದ ಮೂಟೆಗಳೂ ಸುಟ್ಟುಹೋದುವು. ಯಾರೋ ತುಂಟರು ಬೆಂಕಿಹಾಕಿ ಸುಟ್ಟಿರಬೇಕೆಂದೂಹಿಸಲ್ಪಟ್ಟಿದೆ.

೭೫,೦೦೦ ವರ್ಷಗಳ ಹಿಂದಿನ ಅಸ್ಥಿಪಂಜರ.

ಪ್ಯಾಲಸ್ಟೈನಿಗೆ ಸೇರಿದ ಅರ್ಲೆಟ್ ಬಳಿ ಆಂಗ್ಲೊ ಅಮೇರಿಕನ್ ಭೂಗರ್ಭ ಶೋಧಕರು ಕೆಲಸಮಾಡುತ್ತಿದ್ದಾಗ್ಗೆ ಕೆಲ ಅಸ್ಥಿಪಂಜರಗಳು ಸಿಕ್ಕಿರುತ್ತವೆ. ಇವು 75,000 ವರ್ಷಗಳ ಹಿಂದೆ ಇದ್ದ ಮನುಷ್ಯರುಗಳದೆಂದೂಹಿಸಲ್ಪಟ್ಟಿದೆಯಲ್ಲದೆ ಇಂತಹ ಶೋಧನವು ಪ್ರಪಂಚದಲ್ಲಿ ಈವರೆಗೆ ನಡೆದಿಲ್ಲವೆಂದು ಮಾನವ ಶಾಸ್ತ್ರಜ್ಞನಾದ ಮೆಕ್ಕಾರ್ಡ್ ಎಂಬಾತನು ಅಭಿಪ್ರಾಯಪಟ್ಟಿರುತ್ತಾನೆ.

ಸರ್ ವಿಲಿಯಂಮಿಲ್ಸ್‌ರವರ ಮರಣ

ಸರ್ ವಿಲಿಯಂಮಿಲ್ಸ್‌ರವರು ಬಾಂಬನ್ನು ಕಂಡುಹಿಡಿದವರು. ಇದಕ್ಕಾಗಿ ಇವರಿಗೆ ಪ್ರಭುತ್ವದವರು 6,29,000 ರೂ.ಗಳನ್ನು ಕೊಟ್ಟರು. ಮಿತ್ರಮಂಡಲಿಯವರಿಗೆ ಈ ಬಾಂಬಿನಿಂದ ಯೂರೋಪು ಮಹಾ ಯುದ್ಧದಲ್ಲಿ 1,27,50,00,000 ರೂ.ಗಳು ದೊರಕಿದುವು. ಈ ಮಿಲ್ಸ್‌ರವರಿಗೆ ಮರಣಕಾಲದಲ್ಲಿ 76 ವರ್ಷ ವಯಸ್ಸಾಗಿದ್ದಿತು ಮತ್ತು 6,43,093 ರೂ. ಆಸ್ತಿಯಿರುವುದು.

ಸಿಡಿಲು ಬಡಿದು ೭ ಮಂದಿ ಸತ್ತರು.

ಫರೀದಪುರ ಡಿಸ್ಟ್ರಿಕ್ಟಿನಲ್ಲಿ ಮುಖ್ಯ ವ್ಯಾಪಾರಸ್ಥಳವಾದ ಹಾಜಿಗಂಜ್ ಎಂಬೂರಿನಲ್ಲಿ ಮಳೆ ಬರುತ್ತಿರುವಾಗ್ಗೆ ಆಲಿಕಲ್ಲುಗಳು ಬೀಳುತ್ತಿದ್ದುದನ್ನು ನೋಡುವುದಕ್ಕಾಗಿ ಒಂದು ಮನೆಯ 11 ಮಂದಿ ಹೊರಗೆ ಬಂದಾಗ್ಗೆ ಸಿಡಿಲು ಬಡಿದು ಅವರಲ್ಲಿ 7 ಮಂದಿ ಕೂಡಲೇ ಮೃತರಾದರು, ಉಳಿದ ನಾಲ್ವರು ಪ್ರಾಣಾಪಾಯಸ್ಥಿತಿಯಲ್ಲಿರುವರು. ಬಂಗಾಳಾ ಮತ್ತು ಆಸಾಂ ಪ್ರಾಂತಗಳಲ್ಲಿ ಸಿಡಿಲು ಬಡಿದು ಅನೇಕ ಅನಾಹುತಗಳಾಗಿ 10-15 ಮಂದಿ ಮಡಿದರೆಂದೂ, ಧುಬ್ರಿ ಮ್ಯುನಿಸಿಪಲ್ ಆಫೀಸ್ ಕಟ್ಟಡವು ನಾಶವಾಯಿತೆಂದೂ ವರ್ದಿಯಾಗಿದೆ ಈ ಸಂವತ್ಸರದಲ್ಲಿ ಸಿಡಿಲಿನ ಹಾವಳಿಯು ಬಹಳವಾಗಿರುವಂತೆ ತೋರುವುದು.

ಪ್ರಪಂಚದ ಆರ್ಥಿಕ ಭಯಂಕರ ಸ್ಥಿತಿ

"ಯೂರೋಪು ಮಹಾ ಯುದ್ಧವು ಮುಗಿದ ತರುಣದಲ್ಲುಂಟಾಗಿದ್ದ ಆರ್ಥಿಕ ದುಸ್ಥಿತಿಗಿಂತ ಹೆಚ್ಚಾದ ದುಸ್ಥಿತಿಯು ಈಗ ಪ್ರಾಪ್ತವಾಗಿದೆ ನಾಣ್ಯ ಭಂಗಾರ ಮೊದಲಾದವುಗಳ ಸಮಸ್ಯೆಯನ್ನು ಕುರಿತು ಚರ್ಚಿಸಲು ಬ್ಯಾಂಕರುಗಳ ಸಭೆಯು ನಡೆಯಬೇಕೆಂದು ಯುದ್ಧ ಸಮಯದಲ್ಲಿ ನಾನು ಸೂಚಿಸಿದ್ದೆನು, ಆದರೆ ಈವರೆಗೆ ನಡೆಯಲಿಲ್ಲ. ಈ ವಿಷಯವನ್ನೂ, ಯುದ್ಧ ಋಣ, ನಷ್ಟಪರಿಹಾರ ಮೊದಲಾದ ವಿಷಯಗಳನ್ನೂ ನಾಯಕರು ಧೈರ್ಯದಿಂದ ಪರಿಷ್ಕರಿಸಿದ ವಿನಾ ಈ ದುಸ್ಥಿತಿ ತೊಲಗುವುದಿಲ್ಲ. ಆದ್ದರಿಂದ ನಾನಾ ದೇಶದವರ ಈ ವಿಷಯವನ್ನು ಪುರಸ್ಕರಿಸುವಂತೆ ವೃತ್ತಪತ್ರಿಕಾಕರ್ತರುಗಳು ಪ್ರೋತ್ಸಾಹಿಸಬೇಕು" ಎಂದು ಲಾಯಿಡ್ ಜಾರ್ಜ್‌ರವರು ತಿಳಿಸಿರುತ್ತಾರೆ.

ವಜ್ರಗಳಿಗೆ ಗಿರಾಕಿಯಿಲ್ಲ.

ವಜ್ರಗಳಿಗೆ ಸುತರಾಂ ಗಿರಾಕಿಗಳಿಲ್ಲದಿದುದರಿಂದ ಪ್ರಪಂಚದಲ್ಲೆಲ್ಲ ಕೋಟ್ಯಂತರ ರೂಪಾಯಿಗಳ ವಜ್ರಗಳ ಮಾರಾಟವನ್ನು ಮಾಡತಕ್ಕ ವರ್ತಕರುಗಳು ಬಹಳ ನಷ್ಟಕ್ಕೆ ಗುರಿಯಾಗಿರುತ್ತಾರೆ. ಲಂಡನ್ ಪಟ್ಟಣವೊಂದರಲ್ಲೇ 13,60,00,000 ರೂ.ಗಳ ವಜ್ರಗಳು ಗಿರಾಕಿಯಿಲ್ಲದೆ ವರ್ತಕರುಗಳ ಪೆಟ್ಟಿಗೆಯಲ್ಲಿ ಅಡಗಿರುತ್ತವೆ. ಪ್ರಪಂಚದಲ್ಲೆಲ್ಲ ಮಾರಾಟವಾಗದೆ ಉಳಿದಿರುವ ವಜ್ರಗಳ ಬೆಲೆಯು 34,00,00,000 ರೂ. ಗಳಾಗಬಹುದೆಂದೂಹಿಸಲ್ಪಟ್ಟಿದೆ. ಇವುಗಳು ವಿಕ್ರಯಿಸಲ್ಪಡಲು ಪ್ರಯತ್ನಪಟ್ಟಲ್ಲಿ ಬೆಲೆಯು ಬಿದ್ದುಹೋಗಿರುವುದರಿಂದ ಪ್ರತಿಯೊಬ್ಬ ವರ್ತಕನೂ ಹಾಳಾಗುವನು. ಪ್ರಪಂಚದಲ್ಲೆಲ್ಲ 1931 ರಲ್ಲಿ ಆದಷ್ಟು ಕಡಿಮೆಯಾಗಿ ವಜ್ರದ ಮಾರಾಟವು ಮಹಾಯುದ್ಧ ನಡೆದಂದಿನಿಂದೀಚೆಗೆ ಯಾವಾಗಲೂ ಆಗಿರಲಿಲ್ಲ. ಯಾವಾಗಲೂ ಸಾಮಾನ್ಯವಾಗಿ 20,40,00,000 ರೂ. ಬೆಲೆಯ ವಜ್ರವು ಮಾರಾಟವಾಗಬೇಕಾಗಿದ್ದುದು ಕಳೆದ ವರ್ಷ 3,40,00,000 ರೂ. ಬೆಲೆಯ ವಜ್ರ ಮಾತ್ರ ವಿಕ್ರಯವಾಯಿತು. ಲಂಡನ್ ನಗರದಲ್ಲಿ ಹಿಂದೆ ಯಾವಾಗಲೂ ಇಲ್ಲದಿದ್ದಷ್ಟು ವಜ್ರಗಳು ಇದರ ಮಾರಾಟದ ಸಂಘದವರಲ್ಲೂ ಬ್ಯಾಂಕುಗಳಲ್ಲೂ ನಿಂತುಹೋಗಿವೆ ಎಂದು ಒಬ್ಬ ವರ್ತಕನು ಪತ್ರಿಕಾ ಪ್ರತಿನಿಧಿಗೆ ತಿಳಿಸಿದನು. ಈ ವಜ್ರಗಳೆಲ್ಲವೂ ಬೆಲೆಯೇರಲೆಂದು ತಡೆಯಲ್ಪಟ್ಟಿವೆ. ಇವುಗಳೆಲ್ಲ ಮಾರಾಟಕ್ಕೆ ತೆಗೆಯಲ್ಪಟ್ಟಲ್ಲಿ ಅವುಗಳಿಂದ ಆಗತಕ್ಕ ಅನರ್ಥವನ್ನು ವರ್ಣಿಸಲಾಗುವುದಿಲ್ಲವೆಂದು ಒಬ್ಬ ವರ್ತಕನು ಹೇಳಿದನು. ಬೆಲೆ ಇಳಿದಿರುವ ಈ ವೇಳೆ ಅವು ಮಾರಲ್ಪಟ್ಟಲ್ಲಿ ಶೇಕಡ 90 ರಂತೆ ನಷ್ಟ ಸಂಭವಿಸಬಹುದು. ವರ್ತಕ ಸಂಘದವರಲ್ಲೆಷ್ಟು ವಜ್ರಗಳಿರುತ್ತವೋ ಅಷ್ಟೇ ವಜ್ರಗಳು ವರ್ತಕರಲ್ಲೂ ನಿಂತುಹೋಗಿರುತ್ತವೆ. ಹೀಗೆ ವಜ್ರಗಳು ಕ್ರಯವಾಗದೆ ನಿಂತುಹೋಗಿರುವುದರಿಂದ ದಕ್ಷಿಣಾಫ್ರಿಕೆಯ ವಜ್ರದ ಗಣಿಗಳು ಮುಚ್ಚಲ್ಪಟ್ಟಿರುತ್ತವೆ. ಆಫ್ರಿಕೆಯಿಂದ 1929 ರಲ್ಲಿ 20,40,00,000 ರೂ. ಬೆಲೆಯ ವಜ್ರಗಳು ಹೊರಕ್ಕೆ ಕಳುಹಲ್ಪಟ್ಟಿದ್ದುವು. 1931 ರಲ್ಲಿ 2,21,00,000 ರೂ. ಬೆಲೆಯಷ್ಟು ವಜ್ರ ಮಾತ್ರ ಹೊರಕ್ಕೆ ಹೋಗಿರುತ್ತದೆ. 1932 ರಲ್ಲಿ ವಜ್ರವು ಗಣಿಗಳಿಂದ ಪ್ರಾಯಶಃ ತೆಗೆಯಲ್ಪಡುವುದಿಲ್ಲವೆಂದು ಕಾಣಬರುತ್ತದೆ.

ಮಿಡ್ನಾಪುರದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರ ಹತ್ಯೆ

ಕಳೆದ ಏಪ್ರಿಲ್ ತಾ|| 30 ರ ರಾತ್ರಿ 9½ ಘಂಟೆಯಲ್ಲಿ ಮಿಡ್ನಾಪುರದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟ್ ಡಗ್ಲಸ್‌ರವರು ಡಿಸ್ಟ್ರಿಕ್ಟ ಬೋರ್ಡು ಅಧ್ಯಕ್ಷರಾಗಿದ್ದುದರಿಂದ ಬೋರ್ಡಿನ ಕಾಗದಗಳಿಗೆ ರುಜು ಮಾಡುತ್ತಿರುವಾಗ್ಗೆ ಅಕಸ್ಮಿಕವಾಗಿ ಗುಂಡಿನ ಶಬ್ದವು ಕೇಳಿಸಿತು. ವಿರಾಮವಿಲ್ಲದೆ 6 ಗುಂಡುಗಳು ಮೆಜಿಸ್ಟ್ರೇಟರ ಕಡೆಗೆ ಹಾರಿಸಲ್ಪಟ್ಟುವು. ಹಂತಕನು 4 ಗಜಗಳ ದೂರದಲ್ಲಿ ನಿಂತು ಹೊಡೆದನು. ಅವುಗಳಲ್ಲೆರಡು ಡಗ್ಲಸ್‌ರವರಿಗೆ ತಗುಲಿತು. ಹಂತಕನ ಸಂಗಡ ಮತ್ತೊಬ್ಬನಿದ್ದನು. ಸಬ್‌ಡಿವಿಜನ್ ಆಫೀಸರು ಪಿಸ್ತೂಲನ್ನು ಹಿಡಿದುಕೊಂಡು ಅವರಿಬ್ಬರನ್ನೂ ಕಚೇರಿ ತೋಟದಿಂದ ಓಡಿಸಿಕೊಂಡುಹೋದರು. ಅವರಲ್ಲೊಬ್ಬನು ಸಿಕ್ಕಲಿಲ್ಲ. ಇನ್ನೊಬ್ಬನು ಒಂದು ಪೊದೆಯಲ್ಲಿ ಸಿಕ್ಕಿ ಗುಡಿಸಿಲಿನೊಳಗೆ ದೂರಿದನು. ಅವನು ಅಲ್ಲಿ ಸೆರೆಹಿಡಿಯಲ್ಪಟ್ಟನು. ಅವನ ಬಳಿ ಒಂದು ಪಿಸ್ತೂಲೂ ಕೆಲ ತೋಟಾಗಳೂ ಇದ್ದುವು. ಡಗ್ಲಸ್‌ರವರಿಗೆ ಆಸ್ಪತ್ರೆಯಲ್ಲಿ ಡಾಕ್ಟರು ಬಹಳ ಸಾಹಸಪಟ್ಟು ಚಿಕಿತ್ಸೆ ಮಾಡಿದಾಗ್ಗೂ ಅವರು ಬದುಕಲಿಲ್ಲ. ಸೆರೆಹಿಡಿಯಲ್ಪಟ್ಟವನು ಮಿಡ್ನಾಪುರ ಡಿಸ್ಟ್ರಿಕ್ಟಿಗೆ ಸೇರಿದವನು. ಅವನ ಹೆಸರು ಪ್ರಭೋಧಚಂದ್ರ ಭಟ್ಟಾಚಾರಿ ಎಂದು. ಇವನ ಸಹೋದರ ಮಿಡ್ನಾಪುರದಲ್ಲಿ ಡಾಕ್ಟರಾಗಿರುವನು ಮತ್ತು ಇವನ ಬಂಧುವೊಬ್ಬನು ಪ್ಲೀಡರಾಗಿರುವನು. ಡಗ್ಲಸ್‌ರವರ ಕಳೇಬರವು ತಾ|| 1 ರಲ್ಲಿ ಸೇನಾ ಮರ್ಯಾದೆಯಿಂದ ದಿನನಮಾಡಲ್ಪಟ್ಟಿತು. ಹೋದ ವರ್ಷ ಇದೇ ಮಿಡ್ನಾಪುರದ ಡಿಸ್ಟ್ರಿಕ್ಟು ಮೆಜಿಸ್ಟ್ರೇಟ್‌ರಾಗಿದ್ದ ಪೆಡ್ಡಿಯವರು ಒಬ್ಬ ಅರಾಜಕನಿಂದ ಕೊಲ್ಲಲ್ಪಟ್ಟರು. ಈ ಡಗ್ಲಸ್‌ರವರ ದಾರುಣ ಕೊಲೆಗಾಗಿ ವೈಸ್ರಾಯರು ತಮ್ಮ ಅನುತಾಪವನ್ನೂ ಸಾನುಭೂತಿಯನ್ನೂ ಅವರ ಬಂಧುಗಳಿಗೆ ತಿಳಿಸಿರುತ್ತಾರೆ. ಇಂತಹ ನೀಚಕೃತ್ಯಗಳಿಂದ ಭಾರತೀಯರ ಸ್ವಾತಂತ್ರ್ಯಸಾಧನ ಪ್ರಯತ್ನವು ಪ್ರಯಾಸವಾಗುತ್ತದೆಂದೂ, ಈ ವಿಚಾರದಲ್ಲಿ ಸಾನುಭೂತಿಯುಳ್ಳ ಪರದೇಶೀಯರ ಮನಸ್ಸು ಕೆಡಲು ಕಾರಣವಾಗುತ್ತದೆಂದೂ ದೂರದೃಷ್ಟಿಯುಳ್ಳ ಭಾರತ ಮುಂದಾಳುಗಳು ಬಹಳವಾಗಿ ವಿಷಾದಪಡುತ್ತಾರೆ.

ಒಳದೇಶದ ವೃತ್ತಾಂತಗಳು.

ಭೂ ಅಡಮಾನ ಬ್ಯಾಂಕಿನ ಸೌಲಭ್ಯವು ಮಂಡ್ಯ ಮತ್ತು ಮದ್ದೂರು ತಾಲ್ಲೂಕುಗಳಿಗೂ ದೊರೆಯುವಂತೇರ್ಪಾಟಾಗಿರುತ್ತದೆ.

ಹೈದರಾಬಾದಿನ ಯುವರಾಜರೂ ಅವರ ಸಹೋದರರೂ ತಮ್ಮ ಪತ್ನಿಯರ ಸಮೇತವಾಗಿ ಈ ದಿವಸ ಬೆಂಗಳೂರಿಗೆ ಬರುವವರಾಗಿರುತ್ತಾರೆ.

ದಿವಾನರು ದಿಲ್ಲಿಯಲ್ಲಿ ನಡೆಯುವ ರೌಂಡುಟೇಬಲ್ ಸಭೆಯ ಸಲಹೆ ಸಂಘದ ಮೀಟಿಂಗಿಗಾಗಿ ಈ ತಾ|| 19 ರಲ್ಲಿ ಪ್ರಯಾಣಮಾಡುವವರಾಗಿರುವರು.

ಬೆಂಗಳೂರಿಗೆ ಕುಡಿಯುವ ನೀರನ್ನು ಚ್ಯುತಿಯಿಲ್ಲದೆ ಒದಗಿಸುವುದಕ್ಕಾಗಿ ಮಾಗಡಿ ತಾ|| ತೆಪ್ಪಗೊಂಡನಹಳ್ಳಿ ಬಳಿ ಕಟ್ಟಲ್ಪಡುತ್ತಿರುವ ಜಲಾಶಯಕ್ಕೆ ಚಾಮರಾಜೇಂದ್ರ ಜಲಾಶಯವೆಂದು ನಾಮಕರಣಮಾಡಲ್ಪಡಬೇಕಾಗಿ ಪ್ರಭುತ್ವದಪ್ಪಣೆಯಾಗಿರುತ್ತದೆ.

ಕುದುರೆಯ ಜೂಜಿನಲ್ಲಿ ಬುಕ್ಕಿಗಳಿಗೂ ಟೋಟಲಿಜೇಟರುಗಳಿಗೂ 1 ರೂಪಾಯಿಗೆ 1 ಆಣೆ ಯಂತೆ ತೆರಿಗೆಯನ್ನೂ, ನಾಟಕ ಸಿನಿಮಾ ಉತ್ಸವ ಯಮೇಲೂ ತೆರಿಗೆಯನ್ನೂ ವಿಧಿಸಬೇಕೆಂದು ಮೈಸೂರು ಪ್ರಭುತ್ವದವರು ಪರ್ಯಾಲೋಚಿಸಿರುವುದಾಗಿ ತಿಳಿಯುತ್ತೇವೆ.

ಪ್ರಜಾಪ್ರತಿನಿಧಿಸಭೆಯ ಬಡ್ಜೆಟ್ ಅಧಿವೇಶನವು ರಾಜಧಾನಿಯ ಜಗನ್ಮೋಹನ ಪ್ರಾಸಾದದೊಳಗೆ ಜೂನ್ ತಾ|| 6 ರಲ್ಲೂ, ನ್ಯಾಯವಿಧಾಯಕ ಸಭೆಯ ಬಡ್ಜೆಟ್ ಅಧಿವೇಶನವು ಬೆಂಗಳೂರು ಪಬ್ಲಿಕ್ ಆಫೀಸ್ ಕಟ್ಟಡದ ಸಭಾಂಗಣದೊಳಗೆ ಬರುವ ಜೂನ್ ತಾ|| 20 ರಲ್ಲೂ ಪ್ರಾರಂಭವಾಗುವುವು.

ಹಾಸನ ಡಿ|| ಅರಕಲಗೂಡು ವಾಸಸ್ಥರಾದ ಮ|| ಮಂಗಯ್ಯಶೆಟ್ಟರು ಕಳೆದ ಮಂಗಳವಾರ ತಮ್ಮ ಷಷ್ಟಿಪೂರ್ತಿ ಶಾಂತ್ಯುತ್ಸವವನ್ನು ನವಗ್ರಹ ಪೂಜೆ, ಸೂರ್ಯನಮಸ್ಕಾರ ಹೋಮಾದಿ ಕರ್ಮಗಳನ್ನು ವಿಧ್ಯುಕ್ತವಾಗಿ ಆಚರಿಸಿ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನದಲ್ಲಿ ಅಭಿಷೇಕ ಕುಂಕುಮಾರ್ಚನೆ ಮಾಡಿಸಿ ಬಡಬಗ್ಗರಿಗೆ ದಾನಕೊಟ್ಟು ಬಂಧು ಬಳಗವನ್ನು ಮೃಷ್ಟಾನ್ನ ಭೋಜನದಿಂದ ತೃಪ್ತಿಗೊಳಿಸಿದರು.

ಶಿವಮೊಗ್ಗ ಡಿಸ್ಟ್ರಿಕ್ ಪೋಲೀಸು ಸೂಪರಿಂಟೆಂಡೆಂಟರಾದ ಮ|| ಎಂ. ಸಿ. ಮರಿಯಪ್ಪನವರು 1 ತಿಂಗಳ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುವುದರಿಂದ ರಾಜಧಾನಿಯ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮ|| ಎಂ. ಕೆ. ನರಸಿಂಹಯ್ಯಂಗಾರ್ಯರು ಶಿವಮೊಗ್ಗ ಆಫೀಸಿಂಗ್ ಡಿ|| ಪೊ|| ಸೂ|| ರವರಾಗಿಯೂ, ಪೊ|| ಪ್ರಬೇಷನರ್ ಮ|| ಸಿ. ಎ. ಮಾಚಯ್ಯನವರು ರಾಜಧಾನಿಯ ಅ|| ಅ|| ಪೊ|| ಸೂಪರಿಂಟೆಂಡೆಂಟ್‌ರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ನೆನ್ನೆಯ ದಿವಸ ಶ್ರೀ ಬಸವಜಯಂತ್ಯುತ್ಸವ ದಿನವಾದುದರಿಂದ ರಾಜಧಾನಿಯ ಹಳೇ ಅಗ್ರಹಾರದ ವೀರಶೈವ ಮಂಡಲಿಯವರು ವಾಣೀವಿಲಾಸ ಮಾರ್ಕೆಟ್ಟಿನ ಬಳಿಯಿರುವ ಮ|| ಸೀತಾರಾಮಯ್ಯನವರ ಕಟ್ಟಡದಲ್ಲೂ, ವಾಣೀವಿಲಾಸ ರೋಡಿನಲ್ಲಿರುವ ಸಾಹುಕಾರ್ ಮ|| ಕ್ಯಾತನಹಳ್ಳಿ ಸಿದ್ದಣ್ಣನವರ ಸಂಸ್ಕೃತಪಾಠಶಾಲೆಯಲ್ಲೂ ನೆನ್ನೆಯಿಂದ ಪ್ರತಿ ದಿನ ಪ್ರಾತಃಕಾಲ ದೇವತಾರ್ಚನೆ ಮಂಗಳಾರತಿಯೂ ಸಾಯಂಕಾಲ ಸಂಗೀತ, ಶಿವಕಥ, ಪುರಾಣ ಪಠಣ ಮಂಗಳಾರತಿಯೂ 10 ದಿವಸಗಳವರೆಗೆ ನಡೆಯಲೇರ್ಪಡಿಸಿರುತ್ತಾರೆ.

ಶಿವಮೊಗ್ಗ ಡಿಸ್ಟ್ರಿಕ್ಟ ಪೋಲೀಸ್ ಸೂಪರಿಂಟೆಂಡೆಂಟರಾದ ಮ|| ಎಂ. ಸಿ. ಮರಿಯಪ್ಪನವರು ತಮ್ಮ ಏಕಮಾತ್ರ ಪುತ್ರಿಯಾದ ಚಿ|| ಸೌ|| ಅನಸೂಯಾದೇವಿಯನ್ನು ತಮ್ಮ ಭಾವನವರಾದ ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಮ|| ಕೆ. ಎಚ್. ರಾಮಯ್ಯನವರ ಜ್ಯೇಷ್ಠ ಪುತ್ರ ಮ|| ಮರುದೇವಗೌಡರಿಗೆ ಕೊಟ್ಟು ಇದೇ ತಾ|| 15 ನೆಯ ಭಾನುವಾರ ಬೆಂಗಳೂರು ವಿಶ್ವೇಶ್ವರಪುರದಲ್ಲಿ ವಿವಾಹಮಹೋತ್ಸವವನ್ನು ನಡೆಯಿಸಲು ನಿಶ್ಚಯಿಸಿರುವರು. ಈ ವಧೂವರರಿಗೆ ಸಕಲಸನ್ಮಂಗಳವಾಗಲೆಂದು ನಾವು ಹರಸುತ್ತೇವೆ.

ರಾಜಧಾನಿಯಲ್ಲಿ ಕಳೆದ ಮಂಗಳವಾರ ರಾತ್ರಿ 1 ಅಂಗುಲ ಮತ್ತು ಬುಧವಾರ ರಾತ್ರಿ 30 ಸೆಂಟು ಮಳೆಯಾಯಿತು. ಇದರಿಂದ ಕೆರೆ ಕುಂಟೆಗಳಿಗೆ ಕೊಂಚ ನೀರು ಬಂದಿರುತ್ತದೆ. ಜೋಳದ ಪೈರು ಚೆನ್ನಾಗಿರುವುದು. ಪ್ಲೇಗಿನಿಂದ ಆಗಾಗ್ಗೆ ಒಂದೊಂದು ಮರಣವಾಗುತ್ತಿರುವುದು. ಇತರ ರೋಗಗಳ ಬಾಧೆಯೇನೂ ಇಲ್ಲ. ಬೆಂಗಳೂರಿನಿಂದ ಮದ್ದೂರ್‌ವರೆಗೂ ಮಳೆಯಾಗಿಲ್ಲವೆಂತಲೂ, ನಂಜನಗೂಡು, ಟಿ. ನರಸೀಪುರ ಹೆಗ್ಗಡದೇವನಕೋಟೆ, ಯಡತೊರೆ ತಾಲ್ಲೂಕುಗಳಲ್ಲಿ ಮಳೆಯಾಗಿರುತ್ತದೆಂತಲೂ ಕೇಳುತ್ತೇವೆ.

ಪ್ರಕಟನೆಯು

ಯಾದಗಿರಿ ಶಂಕರಕಾಲೇಜು ಸ್ಥಾಪಿತವಾದಂದಿನಿಂದ ಇದುವರೆಗೂ ಅಭಿವೃದ್ಧಿ ಸ್ಥಿತಿಯಲ್ಲಿಯೇ ಇರುತ್ತದೆ. ಸ್ವಲ್ಪ ಕಾಲದಿಂದ ಮೆಂಬರರಲ್ಲಿ ಪರಸ್ಪರ ವೈಮನಸ್ಯವಿರುವದು ನಿಜ. ಆದರೆ ಇದು ಒಳ್ಳೇ ಸಂಧಿಯೆಂದು ಕೆಲವು ಪರೋತ್ಕರ್ಷವನ್ನು ಸಹಿಸದಿರುವ ಮತ್ಸರಿಗಳು ಧರ್ಮಕಾರ್ಯಕ್ಕೆ ಎಡರ ತರುವದೇ ತಮ್ಮ ಕರ್ತವ್ಯವೆಂದು ಭಾವಿಸಿದ ಧರ್ಮದ್ರೋಹಿಗಳು ತಮ್ಮ ತಮ್ಮ ಮನೋರಥವು ಸಿದ್ಧಿಸದಿರುವದರಿಂದ ಕುಪಿತರಾದ ಸ್ವಾರ್ಥಿಗಳು ಆದ ಜನರು ಈ ಕಾಲೇಜಿನ ಮೇಲೆ ದುರಾರೋಪವನ್ನು ಹೊರಿಸಬೇಕೆಂದು ವರ್ತಮಾನ ಪತ್ರಿಕೆಗಳಿಂದಲೂ ಹಸ್ತಪತ್ರಿಕೆಗಳಿಂದಲೂ ಕಳ್ಳ ಹೆಸರುಗಳನ್ನು ಹಾಕಿ ಸುಳ್ಳು ಸಂಗತಿಗಳನ್ನೇ ಪ್ರಕಟಿಸಹತ್ತಿದ್ದಾರೆ. ಈ ಸ್ವಾರ್ಥಿಗಳು ತಮ್ಮ ಹೆಸರನ್ನು ಮರೆಮಾಚಿಕೊಂಡಿರುವದಲ್ಲದೆ, ತಮ್ಮ ಲೇಖವನ್ನು ಛಾಪಿಸಿದ ಪ್ರಿಂಟಿಂಗ್ ಪ್ರೆಸ್ಸಿನ ಹೆಸರನ್ನು ಕೂಡ ಹಾಕಿಸಿರುವದಿಲ್ಲ. ಮುದ್ರಣಾಲಯದ ಹೆಸರಿಲ್ಲದ ಮತ್ತು ಬರೆದವರ ಪೂರ್ಣ ಹೆಸರಿಲ್ಲದ ಪ್ರಕಟನೆಗಳು ನಿರಾಧಾರವಾದವುಗಳೆಂದು ಸರ್ವರಿಗೂ ಗೊತ್ತಿದೆಯಷ್ಟೆ. ಆನೆಯನ್ನು ಕಂಡು ಶ್ವಾನವು ಬೊಗಳುತ್ತಿರುವಂತೆ ವಿಘ್ನವಾಗಿ ಕೂಗುತ್ತಿರುವ ಈ ಸ್ವಾರ್ಥಿಗಳ ಬರಹದಿಂದ ಕಾಲೇಜಕ್ಕೆ ಯಾವ ಹಾನಿಯೂ ಆಗುವಂತಿಲ್ಲ. ಆದರೂ ಈ ಕಾಲೇಜಿನಲ್ಲಿ ಹೊಸದಾಗಿ ಸೇರಿಕೊಳ್ಳಬೇಕೆನ್ನುವ ವಿದ್ಯಾರ್ಥಿಗಳಿಗೂ ಅವರ ತಂದೆ ಅಥವಾ ಪಾಲಕರಿಗೂ ಕಳ್ಳ ಹೆಸರಿನ ಸುಳ್ಳುಪ್ರಕಟನೆಗಳಿಂದ ವಿಪರೀತ ತಿಳುವಳಿಕೆಯಾಗಬಾರದೆಂದೇ ಕಾಲೇಜಿನ ಮೆಂಬರರು ತಾ|| 30-7-1341 ರ ಕಮಿಟಿಯಲ್ಲಿ ಪಾಸಾದ ಪ್ರಕಾರ ಈ ಪ್ರಕಟನೆಯನ್ನು ಹೊರಡಿಸಿರುತ್ತದೆ. ಸದ್ಯಃ ಕಾಲೇಜಿಗೆ ಬೇಸಿಗೆಯ ನಿಮಿತ್ತವಾಗಿ ವೈಶಾಖ ಶು|| ಚೌತಿಯಿಂದ 45 ದಿನ ಕಾಲ (ಸೂಟಿ) ಕೊಟ್ಟಿರುತ್ತದೆ. ಶಕೆ ೧೮೫೪ ನೇ ಜ್ಯೇಷ್ಠ ಬ|| ಚೌತಿಯಿಂದ ತಾ|| 22-6-32 ತೆರೆಯಲ್ಪಡುವದು ಅಲ್ಲಿಂದ ಆಷಾಢಮಾಸ 1932 ಜುಲೈ ಆಖೈರುವರೆಯೊಳಗಾಗಿ ಹೊಸದಾಗಿ ಸೇರಕೊಳ್ಳಬೇಕೆನ್ನುವ ವಿದ್ಯಾರ್ಥಿಗಳು ಛಾಪಿಸಿದ ಅರ್ಜಿ ಫಾರಮುಗಳನ್ನು ಈ ಕೆಳಗೆ ಕಂಡ ಹೆಸರಿನವರಿಗೆ ಬರೆದು ತರಿಸಿಕೊಳ್ಳಬೇಕು ಆಷಾಢಮಾಸ ಆದನಂತರ ಬಂದ ಅರ್ಜಿಯನ್ನು ಸ್ವೀಕರಿಸುವದಿಲ್ಲ. ಸದ್ಯಾ ಕಾಲೇಜಿನಲ್ಲಿ 50 ಜನರಿರುವದರಿಂದ ಈ ವರ್ಷ ಹೊಸಬರನ್ನು 25 ಜನರನ್ನೇ ಸೇರಿಸಿಕೊಳ್ಳುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಸೇರಲಿಚ್ಛೆಯುಳ್ಳವರು ಕಾಲವಿಲಂಬ ಮಾಡಿ ಮಿಡಿಕಾಡುವ ಪ್ರಸಂಗ ತಂದುಕೊಳ್ಳಬಾರದು. ನಮ್ಮ ಕಾಲೇಜಿನಲ್ಲಿ ಸಂಸ್ಕೃತವು ಮತ್ತು ವೈದಿಕವು ಮುಖ್ಯವಾಗಿಯೂ ಕನ್ನಡ,ಉರ್ದು, ಹಿಂದಿ, ಇಂಗ್ಲೀಷ ಇವು ಎರಡನೇ ಭಾಷೆಯಾಗಿ ಕಲ್ಪಿಸಲ್ಪಡುತ್ತವೆ. ವಿದ್ಯಾರ್ಥಿಗಳು ಭಕ್ತರಾಗಿದ್ದರೂ ಸೇರಿಸಿಕೊಳ್ಳುತೇವೆ. ಮಾಹೇಶ್ವರರೇ ಆಗಲಿ ಭಕ್ತರೇ ಆಗಲಿ ಸಂಸ್ಕೃತವನ್ನು ಮಾತ್ರ ಅಭ್ಯಾಸ ಮಾಡಲೇಬೇಕಾಗುವದು ಮತ್ತು ಕಾಲೇಜಿನ ರೂಲ್ಸುಗಳಿಗೆ ಒಳಪಟ್ಟು ನಡೆಯಬೇಕಾಗುವದು. ವಿದ್ಯಾರ್ಥಿಗಳು ಅನಾಥರೂ ಕೇವಲ ಬಡವರಿದ್ದಲ್ಲಿ ಅವರಿಗೆ ಪುಸ್ತಕ ವಗೈರೆ ಸಹಾಯಮಾಡಲ್ಪಡುತ್ತದೆ. ಬಡವರೆಂಬ ಬಗ್ಗೆ ಪ್ರಮುಖರ ಪತ್ರ ತರಬೇಕಾಗುವದು. ನಮ್ಮ ಕಾಲೇಜಿನಲ್ಲಿ ಸೇರಬೇಕೆನ್ನುವ ನಿಜಾಂ ದೇಶದ ವಿದ್ಯಾರ್ಥಿಗಳು ಕೋಶ, ಶಬ್ದರೂಪಾವಳಿ, ಸಮಾಸಚಕ್ರ, ಪ್ರಥಮಪುಸ್ತಕ ಇವನ್ನು ಅಭ್ಯಾಸ ಮಾಡಿದವರಾಗಿರಬೇಕು. ಬ್ರಿಟಿಷಿನ ಹಾಗೂ ಮೈಸೂರು ಇಲಾಖೆಯವರಾದರೆ ಸದರಿ ಪುಸ್ತಕಗಳ ಅಭ್ಯಾಸವನ್ನು ಮಾಡಿರುವದಲ್ಲದೆ ರಘುವಂಶ, ಕುಮಾರಸಂಭವ ಇವುಗಳಲ್ಲಿ ನಾಲ್ಕಾರು ಸರ್ಗಗಳನ್ನು ಓದಿದವರಿರಬೇಕು. ಇಷ್ಟು ಅಭ್ಯಾಸ ಮಾಡದೆ ಹಾಗೇ ಬಂದವರನ್ನು ಸೇರಿಸಿಕೊಳ್ಳುವುದಿಲ್ಲ. ಜ|| ಸೆಕ್ರೆಟರಿ,

ಶಂಕರ ಸಂಸ್ಕೃತ ಕಾಲೇಜ, ಯಾದಗಿರಿ.

ಇಂಡಿಯಾ ದೇಶಕ್ಕಾಗಿ ನಡೆದ "ರೌಂಡ್‌ಟೇಬಲ್" ಸಮ್ಮೇಳನ

ಅತಿ ಮುಖ್ಯವಾದ ಕೆಲವು ರಾಜಕೀಯ ವಿಚಾರಗಳ ಸಂಬಂಧವಾಗಿ ಕೆಲವು ಸಲಹೆಗಳು

ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರಿಂದ

(ತಾ|| 2 ರ ಸಂಚಿಕೆಯಿಂದ ಮುಂದುವರಿದುದು.)

ಸಾಮಾನ್ಯ ನಿಯಮಗಳು.

ಸದಸ್ಯಸ್ಥಾನಗಳ ಹಂಚಿಕೆಯು ಮುಖ್ಯವಾಗಿ ಜನಸಂಖ್ಯೆಯ ಆಧಾರದ ಮೇಲೆ ಮಾತ್ರವೇ ನಡೆಯಬೇಕು. ಆದರೆ ಜನಸಂಖ್ಯೆಯ ಆಧಾರದ ಮೇಲೆ ಪರಿಗಣಿಸಿ ನೋಡಿದರೆ ಒಂದು ಸದಸ್ಯಸ್ಥಾನವನ್ನು ಪಡೆಯುವುದಕ್ಕೂ ಪೂರ್ತಿಯಾಗಿ ಅವಕಾಶವಿಲ್ಲದಂತಹ ಸಂಸ್ಥಾನಗಳೂ ಇರಬಹುದು. ಇಂತಹ ಸಂಸ್ಥಾನಗಳಲ್ಲಿ ಯಾವುದೊಂದಕ್ಕೇ ಆಗಲಿ ಒಂದು ಸದಸ್ಯಸ್ಥಾನವನ್ನು ಕೊಡುವುದು ಯುಕ್ತವೇ ಎಂಬುದನ್ನು ನಿರ್ಧರಿಸುವುದಕ್ಕಾಗಿ ಅದರ ರಾಜಕೀಯ ಪ್ರಾಮುಖ್ಯತೆಯನ್ನು ಪರಿಗಣಿಸಿಯೂ ನೋಡಬಹುದು. (ಎಷ್ಟು ಕುಶಾಲು ತೋಪುಗಳನ್ನು ಗೌರವಾರ್ಥವಾಗಿ ಹಾರಿಸುವರೆಂಬುದಕ್ಕನುಸಾರವಾಗಿ ಸಂಸ್ಥಾನದ ರಾಜಕೀಯ ಪ್ರಾಮುಖ್ಯತೆಯನ್ನು ನಿರ್ಧರಿಸ

ಮೇಲೆ (೨) ಮತ್ತು (೩) ಇವೆರಡರ ಗುಂಪುಗಳಲ್ಲಿ ಪ್ರತಿಯೊಂದರಲ್ಲಿಯೂ ಸೇರಿರುವ ಸಂಸ್ಥಾನಗಳವರು ಸೇರಿ ಆಯಾ ಗುಂಪಿಗೆ ಪ್ರಜಾಸಂಖ್ಯೆಯ ಪ್ರಮಾಣದ ಆಧಾರದಮೇಲೆ ಗೊತ್ತುಮಾಡಿರುವಷ್ಟು ಸಂಖ್ಯೆಯ ಪ್ರತಿನಿಧಿಗಳನ್ನು ಸದಸ್ಯರಾಗಿ ಕಳುಹಿಸುವಂತೆ ಏರ್ಪಡಿಸಬೇಕು.

ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯಲ್ಲಿ ಸದಸ್ಯ ಸ್ಥಾನಗಳ ಹಂಚಿಕೆ.

ಎರಡನೆಯ ಸಭೆಯನ್ನು (ಎಂದರೆ, ಸರ್ಕಾರಗಳ ಪ್ರತಿನಿಧಿ ಸಭೆಯನ್ನು) ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯಾಗಿ (ಫೆಡರಲ್ ಕೌನ್ಸಿಲಾಗಿ) ಏರ್ಪಡಿಸಬೇಕೆಂಬುದಾಗಿ ತೀರ್ಮಾನವಾದಲ್ಲಿ, ಆಗ್ಗೆ ಅದರಲ್ಲಿ ಸದಸ್ಯಸ್ಥಾನಗಳ ಹಂಚಿಕೆಯಾಗಬೇಕಾದರೆ, ಮೇಲೆ ಹೇಳಿರುವ ನಿಯಮಗಳನ್ನು ಸ್ವಲ್ಪಮಟ್ಟಿಗೆ ಬದಲಾಯಿಸಿಕೊಳ್ಳಬೇಕಾಗಿ ಬರುತ್ತದೆ.

ಏಕೆಂದರೆ ಆಗ್ಗೆ ಒಟ್ಟು ಸದಸ್ಯರ ಸಂಖ್ಯೆಯು ಬಹಳ ಕಡಿಮೆಯಾಗಿರುತ್ತದೆ. ಆದಕಾರಣ, ಯಾವುದೊಂದು ಸಂಸ್ಥಾನಕ್ಕೂ ಆಗ್ಗೆ ಒಂದು ...

ಹಂಚಿಕೆಯ ಕಾರ್ಯಕ್ರಮ.

ಸರ್ಕಾರಗಳ ಪ್ರತಿನಿಧಿ ಸಭೆ.

ಸಾರ್ವತ್ರಿಕ ಪ್ರತಿನಿಧಿ ಸಭೆ.

ಸಂಯುಕ್ತ ವ್ಯವಸ್ಥೆಯ ಆಡಳಿತ ನಿರ್ವಾಹಕಸಾಧನ (ಫೆಡರಲ್ ಎಗ್ಜೆಕ್ಯುಟಿವ್)

ಗೃಹಕೃತ್ಯದ ನೋಟೀಸು.

... ನಾಸಿ ನಾಗಲಗಟ್ಟಿ ಭಿಮಪ್ಪ ಬಿನ್ ಭಿಮಪ್ಪನು ಈ ಮೂಲಕ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ :—

ಹಾಲಿ ಜಗಲೂರು ತಾಲ್ಲೂಕು ದೇವಿಕೆರೆಯಲ್ಲಿ ವಾಸವಾಗಿರುವ ಮರಿಯಪ್ಪಳ ಈರಪ್ಪನ ಮಗಳು ನಾಗವ್ವ ಎಂಬಾಕೆಯನ್ನು ನಾನು ಆನಂದನಾಮಸಂವತ್ಸರದಲ್ಲಿ ಮದುವೆಯಾಗಿದ್ದೆನು. ಆಕೆಯು ದುರ್ವೃತ್ತಿಗೆ ಮನಸ್ಸು ಕೊಟ್ಟು ವ್ಯಭಿಚಾರಕ್ಕೆ ಬಿದ್ದದ್ದರಿಂದ ಆಕೆಯು ನನ್ನ ಮನೆಯನ್ನು ಆ ವರ್ಷವೆ ತ್ಯಜಿಸಿ ವ್ಯಭಿಚಾರ ನಡಿಸುತ್ತಾ ಇದುವರೆಗೂ ನನ್ನಲ್ಲಿಗೆ ಬರದೆ ನನ್ನಲ್ಲಿ ಯಾವ ಸಂಪರ್ಕವೂ ಮಾಡದೆ ಇರುತ್ತಾಳೆ. ಹೀಗಿರುವಲ್ಲಿ ಈಗ್ಗೆ ಸುಮಾರು 5 ವರ್ಷದ ಕೆಳಗೆ ಆಕೆಯು 1 ಹೆಣ್ಣು ಕೂಸನ್ನು ಹಡದುಕೊಂಡಿರುವುದಾಗಿಯೂ, ಈಚೆಗೆ ಆಕೆಯು ಪುನಃ ಗರ್ಭಿಣಿಯಾಗಿರುವಂತೆಯೂ ವರ್ತಮಾನವಿರುತ್ತೆ. ಆದ್ದರಿಂದ ಸದರಿ ನಾಗವ್ವ ಮತ್ತು ಆಕೆಗೆ ಹುಟ್ಟಿರುವ ಹೆಣ್ಣುಮಗು ಮತ್ತು ಆಕೆಗೆ ಮುಂದೆ ಹುಟ್ಟಬಹುದಾದ ಮಕ್ಕಳಿಗೂ ನನಗೂ ನನ್ನ ಆಸ್ತಿಗೂ ಯಾವ ವಿಧವಾದ ಸಂಬಂಧವೂ ಇಲ್ಲ ಎಂಬಂತೆ ವಿಶದಪಡಿಸಿರುತ್ತೆ.

[3—1] ನಾಗಲಗಟ್ಟಿ ಭಿಮಪ್ಪ

... ವಂತೆ ನಿರ್ಣಯಗಳೇ ಮುಂತಾದುವೇನಾದರೂ ನಡೆದರೆ ಅವು ಆಚರಣೆಗೆ ಬಾರದಂತೆ ರದ್ದುಮಾಡಬಹುದು. ಈ ರೂಪದಲ್ಲಿ ಅವರು ಸಾಮಾನ್ಯವಾಗಿ ಅವರ ಆ ಅಧಿಕಾರವನ್ನು ಚಲಾಯಿಸುವಂತೆ ಏರ್ಪಡಿಸಬೇಕು.

ಪ್ರಜಾ ಸಾಮಾನ್ಯರ ಮುಖ್ಯವಾದ ಹಕ್ಕು ಬಾಧ್ಯತೆಗಳು.

ಇಂಡಿಯಾ ದೇಶದಲ್ಲಿ ಏರ್ಪಡುವ ಪರಿಷ್ಕೃತವಾದ ಹೊಸ ರಾಜ್ಯಾಡಳಿತ ಕ್ರಮದ ಅಂಗವಾಗಿ ಅನುಭವಿಸಲು ಪ್ರಜಾಮಾತ್ರಕ್ಕೆ ದೊರೆಯುವ ಮೂಲರೂಪದ ಹಕ್ಕುಬಾಧ್ಯತೆಗಳನ್ನು ಕಾಣಿಸಿರುವ ವ್ಯವಸ್ಥಾ ಪತ್ರಿಕೆಯನ್ನೂ ಸಾದರುಮಾಡಿ ಸಹಾಯಮಾಡಬೇಕೆಂಬುದಾಗಿ ಅಲ್ಪಸಂಖ್ಯಾತ ಪಂಗಡಗಳ ಪ್ರತಿನಿಧಿಗಳೂ, ಕೂಲಿಗಾರರ ಪ್ರತಿನಿಧಿಗಳೂ, ಭಾರತೀಯ ...

... ದೇಶ ಆಗಲಿ ವರ್ತಿಸಿದಲ್ಲಿ ತಕ್ಕ ಪರಿಹಾರವನ್ನು ಪಡೆಯುವುದಕ್ಕಾಗಿ ಗವರ್ನರ್ ಜನರಲ್‌ರವರಲ್ಲಿ (ಅಥವಾ ಗವರ್ನರ್‌ರವರಲ್ಲಿ) ಅಪೀಲು ಮಾಡಿಕೊಳ್ಳುವುದರಿಂದಲೂ,

ಈ ಉದ್ದೇಶವು ನೆರವೇರುವಂತೆ ಏರ್ಪಡಿಸಬೇಕೆಂದು ಈಗ ಸಲಹೆಯಾಗಿದೆ.

ಸ್ವೀಕಾರ

ಪತ್ರವ್ಯವಹಾರ.

ಕುದೇರಿನಲ್ಲಿ ನಡೆದ ಸತ್ಕಾರ ಸಮಾರಂಭ.

ಶ್ರೀ ರಾಮಕೃಷ್ಣ ಮತ್ತು ವಿವೇಕಾನಂದ ಸ್ವಾಮಿಗಳ ವರ್ಧಂತ್ಯುತ್ಸವ, ಪೊನ್ನಂಪೇಟೆ.

ಶಿವದೀಕ್ಷಾ ಸಮಾರಂಭ.

ತಳೆದ ತಾ|| 18-4-32 ನೇ ಸೋಮವಾರ ಕಡೂರು ತಾ|| ಯಗಟಿ ಹೋಬಳಿ ನಕ್ಕಲಗೆರೆ ಮಠದ ಸಿದ್ಧಾಂತಿ ಹಾಲಪ್ಪಯ್ಯನವರು ತಮ್ಮ ಉಪವನದಲ್ಲಿ ವಿಧಾನೋಕ್ತವಾಗಿ ಭವ್ಯವಾದ ದೀಕ್ಷಾಮಂಟಪವನ್ನು ತಯಾರು ಮಾಡಿಸಿ ಶಾಸ್ತ್ರಶಿಷ್ಟ ಸಾಂಪ್ರದಾಯದಂತೆ 6 ಕಲಶಗಳ ಸಂಸ್ಥಾಪನಾ ಪೂರ್ವಕವಾಗಿಯೇ ತಮ್ಮ ಮನೆ ಗುರುಗಳಾದ ಶ್ರೀಮತ್ ಚರ್ಕರಾಪುರೀ ...

ಮಕ್ಕಳಿದ್ದರೆ ಮನೆ ಚೆಂದ.

ಮಕ್ಕಳಿಲ್ಲೆಂದು | ಚಿಂತಿಸಬೇಡಿರಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗುವಿರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ.

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. 3

ಅಥಣಿ ಶ್ರೀ ಶಿವಯೋಗೀಶ್ವರ ರಥೋತ್ಸವ.

ಶಿವದೀಕ್ಷಾ ಸಂಸ್ಕಾರ.

... ಕೊಂಡಿದ್ದರೂ ವರ್ಷಾರಭ್ಯ ವಿಘ್ನ ಪ್ರಾಪ್ತವಾಗಿ ಕಾಲವಿಳಂಬವಾಗುತ್ತಾ ಬಂದಿತು. ಈ ತಳೂರು ಗ್ರಾಮದ ವೀರಶೈವ ತರುಣರು ಏರ್ಪಡಿಸಿಕೊಂಡಿರುವ ಶಿವಶಂಕರ ಮಂದಿರಕ್ಕೆ ಮೆಲ್ಲಹಳ್ಳಿ ಗ್ರಾಮದ ಮುಸಲ್ಮಾನ್ ದಸ್ತಗಿರಿ ಸಾಹೇಬರವರು ತುಂಬಾ ಸಹಾಯಕರಾಗಿರುತ್ತಾರೆ ಮತ್ತು ನಮ್ಮ ಮತ ತತ್ವವನ್ನು ಪ್ರಕಾಶಪಡಿಸಿಕೊಳ್ಳಲು ಒಳ್ಳೇ ಸದ್ಗುರುವನ್ನು ಹೊಂದಿರಿ, ದೀಕ್ಷಾಪೇಕ್ಷಿಗಳಾಗಿ ನಿಮ್ಮ ಮತ ಪದ್ಧತಿಯಂತೆ ಗುರುಲಿಂಗ ಜಂಗಮ ಪ್ರೇಮಿಗಳಾಗಿ ನಡೆಯಿರಿ ಎಂಬದಾಗಿ ತರುಣರಿಗೆ ಉತ್ತೇಜನ ಕೊಡುತ್ತಿರುವರಲ್ಲದೆ ತುಂಬಾ ಸಹಾಯಕರಾಗಿರುತ್ತಾರೆ. ಮೆಲ್ಲಹಳ್ಳಿ ವೀರಶೈವ ತರುಣರು ನಂಜನಗೂಡು ತಾಲ್ಲೂಕು ಸುತ್ತೂರು ವೀರಸಿಂಹಾಸನಾಧೀಶ್ವರರಾದ ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರಿಂದ ದೀಕ್ಷಾ ಸಂಸ್ಕಾರವನ್ನು ಹೊಂದಲು ಆಶಿಸಿ ತಾ|| 27-4-1932 ರಲ್ಲಿ ಸುತ್ತೂರ್ ವೀರಸಿಂಹಾಸನಾಧೀಶ್ವರರನ್ನು ತಮ್ಮ ಗ್ರಾಮಕ್ಕೆ ಉತ್ಸವಪೂರ್ವಕವಾಗಿ ಬಿಜಯಂಗೈಸಿಕೊಂಡು ಬಂದು 38 ವಟುಗಳಿಗೆ ಶಿವದೀಕ್ಷಾ ಸಂಸ್ಕಾರವನ್ನು ವೀರಶೈವ ಬ್ರಾಹ್ಮಣ ವಿಧಿಗನುಸಾರವಾಗಿ ...

[illegible]

(ಮುಂದಿನ ೭ ರಾ. ಗಳನ್ನು ... [illegible])

ವೀರಶೈವ ಧರ್ಮಾಭಿಮಾನಿಗಳಲ್ಲಿ ವಿನಂತಿ.

[illegible]

ವಿಗ್ರಶೇನ.

[illegible]

ಹೊಳಲ್ಕೆರೆ ವೀರಶೈವ ಅನಾಥ ವಿದ್ಯಾರ್ಥಿನಿಲಯ.

ಹೊಳಲ್ಕೆರೆ ಟವನ್ನಲ್ಲಿ ಕೈ|| ಚನ್ನಪಟ್ಟಣ್ಣದ ಕಾಳೈಹಳ್ಳಿ ಮಠದ ಶಾಂತಪ್ಪಯ್ಯನವರ ಧರ್ಮಸಹಾಯದಿಂದ ನಡೆಯುತ್ತಿರುವ ಅನಾಥವೀರಶೈವಾಶ್ರಮದಲ್ಲಿ ಇಂಗ್ಲಿಷು ಲೋವರು ಸೆಕೆಂಡರಿ ತರಗತಿಗಳಲ್ಲಿ ಅಭ್ಯಾಸ ಮಾಡಲು 15 ಮಂದಿ ವೀರಶೈವ ಅನಾಥ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನದ ಏರ್ಪಾಟು ಇಡಿಸಿರುತ್ತೆ. 1932 ನೇ ಮೇ ತಾ|| 15 ರ ಒಳಗಾಗಿ ವಿದ್ಯಾರ್ಥಿಗಳು ಅಪ್ಲಿಕೇಷನ್ ಬರದುಕೊಳ್ಳತಕ್ಕದ್ದು. ಅನಂತರ ಬರತಕ್ಕ ಅಪ್ಲಿಕೇಷನ್‌ಗಳನ್ನು ಗಮನಿಸಲ್ಪಡುವುದಿಲ್ಲ. ಬೇಕಾಗುವ ಅಪ್ಲಿಕೇಷನ್ ಫಾರಂಗಳನ್ನು ಈ ಕೆಳಗಿನ ಅಡ್ರೆಸ್ಸಿಗೆ 0-1-3 ಸ್ಟಾಂಪು ಇಟ್ಟು ಬರಕೊಂಡಲ್ಲಿ ಕಳುಹಿಸಲಾಗುತ್ತೆ.

G. M. MAHADEVAIYA,
Secretary,
Anatha Veerashiva Hostel, Holalkere.

ಸೂಚನೆ.

ಚೇರ್‌ಮನ್ ಶ್ರೀ ಶಿವಯೋಗೀಶ್ವರ ವೀರಶೈವ ಬೋರ್ಡಿಂಗ್ ಬ್ಯಾಡಗಿ ಇವರಿಂದ ತಿಳಿಸಲ್ಪಡುವುದೇನೆಂದರೆ:—

ನಮ್ಮ ಬೋರ್ಡಿಂಗಿನಲ್ಲಿ ಇಂಗ್ಲಿಷ 3 ನೇ ಇಯತ್ತೆಯ 5 ಸ್ಥಳಗಳೂ 4 ನೇ ಇಯತ್ತೆಯ 5 ಸ್ಥಳಗಳೂ ತೆರವಾಗಿರುತ್ತವೆ. ಈ ಸ್ಥಳಗಳನ್ನು ತುಂಬತಕ್ಕವರಿರುತ್ತೇವೆ, ಕಾರಣ ನಮ್ಮ ಈ ಸಂಸ್ಥೆಯಲ್ಲಿ ಸೇರಲಿಚ್ಛಿಸುವ 3 ನೇ 4 ನೇ ಇಯತ್ತೆಯ ವಿದ್ಯಾರ್ಥಿಗಳು ಬರುವ ಮೇ ತಿಂಗಳ ಅಖೈರದೊಳಗಾಗಿ ನಮ್ಮ ಕಡೆಗೆ ಅರ್ಜಿ ಮಾಡತಕ್ಕದ್ದು. ಅರ್ಜಿಯ ಸಂಗಡ ಗ್ರಾಮಸ್ಥರ ಹಾಗು ಸಬ್ಬೃಗ್ರುಹಸ್ಥರ ಸರ್ಟಿಫಿಕೇಟ ಚ. ದ. ಉತಾರ ಇವುಗಳನ್ನು ತಪ್ಪದೇ ಕಳಿಸತಕ್ಕದ್ದು. ಛಾಪಿಸಿದ ಅರ್ಜಿಯ ಹಾಗು ಸರ್ಟಿಫಿಕೇಟಿನ ನಮೂನೆಗಳು ನಮ್ಮಲ್ಲಿ ದೊರೆಯುವವು. ಬೇಕಾದವರು ತರಿಸಿಕೊಳ್ಳಬೇಕು.

ಕುರುವತ್ತಪ್ಪ ಶೆಟ್ಟಿ
ಚೇರ್‌ಮನ್,
ಶ್ರೀ ಶಿ. ವೀ. ಬೋರ್ಡಿಂಗ.

ಕುಂಚಿಟಿಗರ ೭ ನೇ ಮಹಾಸಭೆ

ಬೆಂಗಳೂರು ಸಿಟಿ ಶಿವಾನಂದ ನಾಟಕಶಾಲೆಯಲ್ಲಿ ತಾ|| 22-5-32 ನೇ ಭಾನುವಾರ ಬೆಳಗ್ಗೆ 9 ಘಂಟೆಗೆ ... [illegible]

[illegible]

ಕಾರ್ಯದರ್ಶಿಗಳು
ಎಸ್. ಕೆ. ನರಸಿಂಹಯ್ಯ, ಡಬ್ಲ್ಯು. ಹೆಚ್. ಹನುಮಂತಪ್ಪ,
ಕುಂಚಿಟಿಗರ ಹಾಸ್ಟಲ್, ಬೆಂಗಳೂರು.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರ ತರಿಸಿ ಕೊಳ್ಳಿರಿ. ಕಿ. ೧| ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

3 M. C.

೧೯೩೨ ನೆಯ ಇಸವಿ ಮೇ ತಾ|| ೯ ರಿಂದ ಮೇ ತಾ|| ೧೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸನಾಮಸಂವತ್ಸರದ ವೈಶಾಖ ಶುದ್ಧ ಚೌತಿಯಿಂದ ವೈಶಾಖ ಶುದ್ಧ ದಶಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮೋಹ ವೃಥ
9	ಸೋಮ	ಚೌತಿ	54-36	ಮೃಗ	18-12	27
10	[1]ಮಂಗಳ	ಪಂಚ	55-31	ಆದ್ರಾ	21-21	28
11	ಬುಧ	ಷಷ್ಠಿ	54-46	ಪುನ	23-7	29
12	ಗುರು	ಸಪ್ತ	53-3	ಪುಷ್ಯ	23-46	30
13	[2]ಶುಕ್ರ	ಅಷ್ಟ	49-55	ಆಶ್ಲೇ	23-7	31
14	ಶನಿ	ನವ	46-2	ಮಘ	21-34	1
15	ಭಾನು	ದಶ	41-6	ಹುಬ್ಬ	19-0	2

(1) ಮಳೆನಕ್ಷತ್ರ-ಕೃತ್ತಿಕೆ ೧ ನೆಯ ಪಾದ. (2) ಮಳೆನಕ್ಷತ್ರ-ಕೃತ್ತಿಕೆ ೨ ನೆಯ ಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG. NO. M. 124

ಮೈಸೂರ್ ಸ್ಟಾರ್.

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮುಥಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ರಿಕಾಷ್ಟನಿತ್ಯ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಿಲಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸರ್ ೧೯೩೨ ನೆಯ ಇಸವಿ ಮೇ ತಾರೀಖು ೧೬ ನೆಯ ಸೋಮವಾರ [ಸಂಚಿಕೆ ೨೦

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place for insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries, Economic Superintendents, Helpers and the Insurance Office, Public Office Buildings Bangalore.

(Sd.) S. SHAMANNA,
Secretary, Insurance Committee.

[50—44]

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲ್ಪಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇಂ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಚನ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿಭಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರದೇವ್ಯರಶತಕ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಸಟೀಕ ಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕೆಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ... [illegible]

(Registerd Trade Mark)

[illegible]

ವಿಳಾಸ—ಗುರುಸ್ವಾಮ ಅಂಡ್ ಕಂಪೆನಿ ಲಿಮಿಟೆಡ್, ... [illegible]

[10—36]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕದ. [ಸ್ಟರ	ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು ಇವು ಆಡಿವೆುಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ ಕರಕರೀತ ಕರುಣಾರಂತೆ ಕಾಮಿಚ್ಛಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತನ್ನ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ಒಂದು ಡಬ್ಬಿಗೆ ೫| ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳಸುವ ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಟ್ಟುಚಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಟ್ಟುಚಿಟ್ಟು ಆಗೋಣ, ಮುಟ್ಟುಚಿಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ [illegible] ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

ಪತ್ತಾ ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ. ಎಂ. ಎಸ್. ಎಂ.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಮೇ ತಾ|| ೧೬ ನೆಯ ಸೋಮವಾರ.

THE ALIKHAN—RAMA IYER CONTROVERSY

(BY Mr. B. S. PUTTASWAMY, B.A., B.L., PRESIDENT, DISTRICT BOARD, MYSORE).

I read with some interest not unmingled with feelings of pain and disappointment the press report of the proceedings of the City Municipal Council, Mysore, held on 30th April 32 and the comments thereon. As one deeply interested in the administration of the Local Bodies in Mysore, and in safeguarding our civic and public rights of citizenship against inroads from a high-handed executive, I am impelled to express my humble opinion on the various points that are raised in one of the most undesirable episodes of the City Municipal administration namely the Alikhan Rama Iyer Controversy.

On 19-12-1931, the President, in compliance with the provision of the Bye-law 17 of the Council placed the proceedings of the Managing Committee for the month of November 31, before the Council. Mr. H. C. Dasappa sought permission to revise the proceedings under Section 36 of the Regulation, and it was in this connection that Mr. Rama Iyer gave his ruling which subsequently became a starting point for the controversy. The ruling is that the proceedings of the Sub-committees come up for the first time before the Council for information under Bye-law 17 of the Council for being merely recorded. Revisional powers under Section 36, Clause 2 could only be exercised in a subsequent meeting after the requirements of Section 26, Clause 3, with regard to 10 days notice are satisfied. Assuming for the purpose of argument, but not conceding, that the ruling is correct I shall endeavour to point out the evil consequences which result from it, and how they could be averted under the provisions of the Statute. As it could be cleary seen, there would be an interval between the recordig of the said proceedings and their revision, during which many of the Committees' resolutions would have been put into operation and it would be too late to checkmate the mischief, if any, which the said operation might have caused. In view of this difficulty Mr. Alikhan suggested to the President that either he should withdraw the ruling or circulate the agenda earlier so as to allow sufficient time for the members to revise the procedings. Mr. Rama Iyer regards this position of Mr. Alikhan as a paradoxical one and complains that Mr. Alikhan has been asking him to do an impossibility under the Bye-law. To my mind there appears to be no paradox nor can I regard Mr. Alikhan's request as a cry for the moon. Section 26, Clause 3 prescribes a minimum period of seven clear days notice of an ordinary general meeting and a period of ten clear days notice for non-official propositions in order they may be included in the agenda. Neither this Section nor any other section of the Regulation nor any Bye-law of the Council precludes the President from issuing the notices of the meetings earlier than seven days. If notices are circulated a fortnight beforehand with a provisional agenda including the proceedings of various Sub-committees, the members could send in propositions in time to modify the proceedings of the Sub-Committees. A supplemental agenda could follow seven days before the meeting without any practical difficulty. Again Section 26, Clause 8, provides a wide discretion to the President to permit the Council to transact any business other than those mentioned in the agenda except the modification or cancellation of a resolution of the Council less than three months old. It being so, it would certainly be not unlawful if the President permits a member to exercise the revisional powers under Section 36, Clause 2, with reference to the proceedings of the Sub-Commitee which find a place on the agenda. This is exactly what Mr. Allikhan wanted, when he suggested to the President to withdraw his ruling. With due deference to Mr. A. Krishna Rao, I do not see any irrelevency in the requisition of Mr. Alikhan except it be, the irrelevent remarks of Mr. A. Krishna Rao, himself.

Any one in the place of Mr. Rama Iyer would have put an end to this imaginary difficulty by adopting any one of the above mentioned methods. But Mr. Rama Iyer does not propose to think in that strain. On the other hand he goes on adding insult to injury. When the real grievance was emphatically ventilated by Mr. Alikhan, Mr. Rama Iyer discovers an offence in the remarks and declines to give him any hope that his "turn for going through the papers in circulation will come more than two days before the meeting," and this too if he unconditionally withdraws his remarks. When Mr. Alikhan suggests to the President that the prevailing difficulty would be avoided if he were to adopt the old practice of dividing the agenda papers into different parts and sending them for circulation by different men, which practice I am told was in vogue during the regime of Mr. N. Madhava Rao, Mr. Rama Iyer pays no heed to the suggestion. When Mr. Alikhan in despair informs the President that "this controversy is one affecting the rights of the *members* of the Mysore City Municpal Council and through *them* the rights of the Rate Payers" in which there is no suggestion that Mr. Alikhan was a representative of a constituency Mr. Rama Iyer irrelevently reminds him of his position in the Council as a nominated member and audaciously makes an uncalled for and un-warranted remark to the effect that Mr. Alikhan represents no constituency *of any kind*. When it came to be known that the remark caused widespread resentment and that an interpellation was tabled for discussion in the ensuing meeting of the Representative Assembly, Mr. Rama Iyer climbs down from his olympic heights and comes forward with a lame explanation that he meant no offence or insult to Mr. Alikhan.

Ther is one thing which I should like to refer to before I proceed to examine the correctness of the President's ruling and that is the amazing statement made by Mr. A. Krishna Rao, in regard to the circulation of the papers. He thinks that he is not entitled to the agenda papers as a matter of right and that the circulation of these papers is being made as a matter of convention only. Never was a more stultifying and palpably absurd statement made by a responsible member of the house particularly when there is a rule in the statute providing for the circulation of papers.

I shall next proceed to examine the correctness of the President's ruling. The President holds that when the proceedings of the Sub-Committee are included in the agenda of the Council meeting for the first time they must be deemed to have been brought up for information under Bye-law 17 and for being merely recorded. According to him at that stage the Council is powerless to propose any alterations of the said proceedings and if any member desired to invoke the revisional powers of the Council under Section 36, Clause 2, he should give ten days notice under Section 26, Clause 3. If this be so, I should like to ask what is the effect when the Municipal Council "records" without a murmur the proceedings of the Sub-Committee which according to the Statute are subject to the revision of the Council. The effect, I think, is that the Municipal Council either accepts, affirms, approves, acknowledges, endorses or ratifies the said proceedings. It cannot merely record without doing one or other of these things. In other words the said proceedings become the accepted decisions of the Council. I fail to understand the reasoning of the President when he still considers them as the decisions of the Sub-Committee even after they are recorded and subject them to the revisional powers of the Council in a subsequent meeting under Section 36. My contention is that since they are the fully endorsed resolutions of the Council itself they could be modified or varied in an immediate subsequent meeting only under Section 26, Cl. 12 and not under Section 36. In short the effect of the President's ruling is that it renders the provisions of Section 36 absolutely nugatory. Hence the ruling of the President is wrong. In my opinion so soon as the proceedings of the Sub-Committee are placed before the Council for information the house gets seisen of the whole matter and it is incumbent on it, if it so desires, to exercise its revisional powers at that stage before the proceedings are recorded and so no such notice is necessary. In other words they ought to be placed before the Council for information in order to afford an opportunity to the Council to exercise its revisional powers immediately if it desires.

So much for the ruling. One of the most startling propositions propounded by the President to which I strongly demur is one in regard to the status of a nominated member. I have never before seen the mind of the minority communities in Mysore so profoundly agitated as over this. It is idle to say that no rate-payer's interest suffers through a nominated member. A nominated member is not a mere dummy in the Council or one tied to the apron strings of the President. He is sent there to safeguard the interest of some minority and that minority consists of human beings who are vitally affected by his omissions and commissions in the Council. There could not be a greater act of indiscretion on the part of the President who holds a responsible position in the State than to have given expression to this spacious heresy. I hope that a timely repudiation by the powers that be of this rather original political theory, would assuage the misgivings and misapprehensions that the indiscreet pronouncement of the President has caused.

These are days when there is a clamour for more political rights and privileges and for the greatest measure of local autonomy. He would be an enemy to progress who, instead of regarding the work and difficulties of the local bodies with understanding sympathy and kindly fceling, behaves more like a dictator than as a co-worker which he ought to strive to be. There may be many occasions of honest differences of opinion between the President and the members but the President must bring to bear on his work a conciliatory spirit, a spirit of give and take, and a desire to meet the public wishes at least half way. It is only on such a cordial co-operation that any success in local administration could be achieved. May I hope that better counsels will prevail and the President will not find it impossible to make proper amends for all that he has said and done?

ಒಳ್ಳೇ ಯೋಗ್ಯತಾಪತ್ರಿಕೆ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರಾಗಿ ನಾಮಕರಣವಾ (ನಾಮಿನೇಟಾ) ಗಿರುವ ಮ|| ಟಿ. ಎಸ್. ಅಲ್ಲಿಖಾನರಿಗೂ ಪ್ರೆಸಿಡೆಂಟರಿಗೂ ನಡೆದಿರುವ ಪತ್ರವ್ಯವಹಾರವು ಕಳೆದ ಏಪ್ರಿಲ್ ತಾ|| 30 ನೆಯ ಶನಿವಾರ ನಡೆದ ಮ್ಯುನಿಸಿಪಲ್ ಕೌನ್ಸಿಲ್ ಮೀಟಿಂಗಿನಲ್ಲಿ ಕೌನ್ಸಿಲರುಗಳ ಪರ್ಯಾಲೋಚನೆಗೆ ತರಲ್ಪಟ್ಟಿದ್ದಿತು. ಈ ಮೀಟಿಂಗಿಗೆ ಮ|| ಟಿ. ಎಸ್. ಅಲ್ಲಿಖಾನರವರು ಬಂದಿರಲಿಲ್ಲ. ಇದರ ಹಿಂದಣ ಮೀಟಿಂಗಿಗೂ ಮ|| ಅಲ್ಲಿಖಾನರವರು ಬಂದಿರಲಿಲ್ಲವಾಗಿ ಈ ವಿಚಾರವು ಕಳೆದ ಮೀಟಿಂಗಿಗೆ ಮುಂದುವರಿಸಲ್ಪಟ್ಟಿದ್ದಿತು. ಆ ವೇಳೆಯಲ್ಲಿ ಒಬ್ಬ ಮೆಂಬರು ಎರಡನೆಯ ಅಂದರೆ ಕಳೆದ ಮೀಟಿಂಗಿಗೂ ಮ|| ಅಲ್ಲಿಖಾನರವರು ಬಾರದಿದ್ದಲ್ಲಿ ಏನು ಮಾಡಬೇಕೆಂದು ಪ್ರಶ್ನಿಸಿದುದರಮೇಲೆ ಮೂರನೆಯ ಮೀಟಿಂಗಿಗಿಟ್ಟುಕೊಳ್ಳಬೇಕು, ಆ ಮೂರನೆಯ ಮೀಟಿಂಗಿಗೂ ಬಾರದಿದ್ದಲ್ಲಿ ಅವರು ಕೌನ್ಸಿಲರ ಸ್ಥಾನವನ್ನು ಕಳೆದುಕೊಳ್ಳಬೇಕಾಗುವುದರಿಂದ ಬಂದೇ ತೀರುವರು ಎಂದು ಸಮಾಧಾನ ಹೇಳಲ್ಪಟ್ಟಿತು. ಕಳೆದ ಮಾರ್ಚ್ ತಿಂಗಳ ಮೀಟಿಂಗಿನಲ್ಲಿ ಈ ವಿಚಾರವು ಮುಂದುವರಿಸಲ್ಪಟ್ಟಾಗ್ಗೆ ಮೆಂಬರುಗಳು ಹೆಚ್ಚಾಗಿ ಬಂದಿದ್ದರಲ್ಲದೆ ಈ ವಿಷಯವನ್ನು ಧೈರ್ಯವಾಗಿ ಪ್ರತಿಪಾದಿಸುವವರಾಗಿದ್ದ ಮೆಂಬರುಗಳು ಸಹ ಇದ್ದರು. ಆದರೆ ಕಳೆದ ಏಪ್ರಿಲ್ ಮೀಟಿಂಗಿಗೆ ಆ ಮೆಂಬರುಗಳು ಬಂದಿರಲಿಲ್ಲವಾದುದರಿಂದ, ಒಳ್ಳೇ ಯೋಗ್ಯತಾಪತ್ರವನ್ನು ಕೌನ್ಸಿಲಿನಿಂದ ಪಡೆಯಲು ಪ್ರೆಸಿಡೆಂಟರಿಗೆ ತಕ್ಕ ಸಮಯ ದೊರಕಿತು. ಚರ್ಚಿಸಲ್ಪಡತಕ್ಕ ವಿಷಯಗಳ ಪಟ್ಟಿಯಾಗಲಿ, ಕಾಗದ ಪತ್ರಗಳಾಗಲಿ ಪ್ರೆಸಿಡೆಂಟರ ಟಿಪ್ಪಣಿಯ ಸಮೇತ ರೂಲ್ಸು ಪ್ರಕಾರ ಮ|| ಅಲ್ಲಿಖಾನರವರಿಗೆ ಕಳುಹಲ್ಪಟ್ಟಿರಲಿಲ್ಲವಾದುದರಿಂದ ಅವರು ಮೀಟಿಂಗಿಗೆ ಬರಲಿಕ್ಕಾಗಲಿ, ತಾವು ಹೇಳತಕ್ಕ ಸಮಾಧಾನವನ್ನು ಬರೆದು ಕಳುಹಲಿಕ್ಕಾಗಲಿ ಅವರಿಗೆ ಅವಕಾಶವಿಲ್ಲವಾಯಿತು. ಮೀಟಿಂಗಿನಲ್ಲಿ ಪರ್ಯಾಲೋಚಿಸಲ್ಪಡಬೇಕಾದ ವಿಷಯಗಳ ಸಂಬಂಧವಾದ ಕಾಗದ ಪತ್ರಗಳನ್ನು ಮೆಂಬರುಗಳಿಗೆ ಸಾವಕಾಶವಾಗಿ ಕಳುಹಿಸುದರ ವಿಚಾರವಾಗಿ ಮ|| ಖಾನರವರು ಮಾಡಿದ ಆಕ್ಷೇಪವನ್ನು ಖಂಡಿಸಿ ಮತ್ತು ನಿಧಾನವಾಗಿ ಕಳುಹುವುದನ್ನು ಸಮರ್ಥಿಸಿ ತಾವು ಬರೆದಿದ್ದ ಟಿಪ್ಪಣಿಯನ್ನು ಪ್ರೆಸಿಡೆಂಟರು ಕಳೆದ ಮೀಟಿಂಗಿನಲ್ಲಿ ಮೆಂಬರುಗಳ ಅತ್ಯರ್ಥಕ್ಕಾಗಿಟ್ಟಿದ್ದರು. ಮ|| ಖಾನರವರು ಯಾವ ಓಟರುದಾರರಿಂದಲೂ ಚುನಾಯಿಸಲ್ಪಟ್ಟವರಲ್ಲವಾದುದರಿಂದ ಕಂದಾಯದಾರರ ಹಿತಸಾಧನೆಯು ಇವರಿಗೆ ಸಂಬಂಧಪಟ್ಟಿಲ್ಲವೆಂದು ಅನ್ಯಾಯವಾಗಿ ಮಾಡಿದ ವ್ಯಾಖ್ಯಾನವನ್ನು ಮೀಟಿಂಗಿನಲ್ಲಿ ಸಮರ್ಥಿಸಿ ಹೇಳಿದರು. ಮ|| ಅಲ್ಲಿಖಾನರವರೂ ತಾವೂ ಒಂದೇ ಸ್ಥಿತಿಯಲ್ಲಿರುವುದಾಗಿ ಮ|| ಖಾನರವರಿಗೆ ಉತ್ತರಕೊಟ್ಟಿರುವುದರಲ್ಲಿ ತಿಳಿಸಿರುವುದಾಗಿ ಮೀಟಿಂಗಿನಲ್ಲಿ ಮೆಂಬರುಗಳಿಗೆ ಪ್ರೆಸಿಡೆಂಟರು ತಿಳಿಯ ಹೇಳಿದರೆಂದು ಪತ್ರಿಕೆಯಲ್ಲಿ ಬರೆಯಲ್ಪಟ್ಟಿದೆ. ಈ ರೀತಿಯಾಗಿ ಹೇಳಿರುವುದು ಪ್ರೆಸಿಡೆಂಟರಿಗೂ ಮ|| ಖಾನರವರಿಗೂ ನಡೆದಿರುವ ಪತ್ರವ್ಯವಹಾರದಲ್ಲಿ ಕಂಡುಬರುವುದಿಲ್ಲ. ಮ|| ಖಾನರವರು ಚುನಾಯಿತರಲ್ಲವಾದುದರಿಂದ ಅವರಿಗೂ ಕಂದಾಯದಾರರ ಹಿತಚಿಂತನೆಗೂ ಸಂಬಂಧವಿಲ್ಲವೆಂದು ಪ್ರೆಸಿಡೆಂಟರು ಸಾಧಿಸುತ್ತಿರುವರು. ಮ|| ಎ. ಕೃಷ್ಣರಾಯರು ಪ್ರೆಸಿಡೆಂಟರ ವರ್ತನವನ್ನು ಸಮರ್ಥಿಸುವಲ್ಲಿ ತಮ್ಮ ವಿಚಿತ್ರಬುದ್ಧಿವಂತಿಕೆಯನ್ನು ಪ್ರದರ್ಶಿಸಿದರು. ಮೀಟಿಂಗಿನಲ್ಲಿ ಪರ್ಯಾಲೋಚಿಸಲ್ಪಡತಕ್ಕ ವಿಷಯಗಳಿಗೆ ಸಂಬಂಧಪಟ್ಟ ಕಾಗದಪತ್ರಗಳನ್ನು

ಮೆಂಬರುಗಳಿಗೆ ಕಳುಹತಕ್ಕದ್ದು ಐಚ್ಛಿಕವೇ ಹೊರತು ನಿರ್ಬಂಧವಲ್ಲವೆಂದು ಮ|| ರಾಯರು ಹೇಳಿದರು. ಇಂತಹ ನಾಚಿಕೆಗೇಡಾದ ಮಾತು ಕೌನ್ಸಿಲಿನಲ್ಲಿ ಯಾವಾಗಲೂ ಆಡಲ್ಪಟ್ಟಿರಲಿಲ್ಲ. ಮೀಟಿಂಗಿಗೆ ಸಂಬಂಧಪಟ್ಟ ಕಾಗದಪತ್ರಗಳು ಮೆಂಬರುಗಳಿಗೆ ಕಳುಹಲ್ಪಡಬೇಕೆಂದು ವಿಧಿಯಿರುವುದಲ್ಲದೆ ಈ ಪದ್ಧತಿಯು ಮೊದಲಿಂದಲೂ ಅನುಸರಿಸಲ್ಪಡುತ್ತಿದೆ. ಮೀಟಿಂಗಿನ ಕಾಗದಪತ್ರಗಳನ್ನು ಮೆಂಬರುಗಳಿಗೆ ಕಳುಹಿಸಿಕೊಡುವುದು ಮಹೋಪಕಾರವೆಂದು ಮ|| ಕೃಷ್ಣರಾಯರು ತಮ್ಮ ಕೋರ್ಟಿನ ಚಮತ್ಕಾರದಿಂದಲೂ, ನ್ಯಾಯಶಾಸ್ತ್ರ, ನೈಪುಣ್ಯ, ಧೈರ್ಯ, ಸ್ವಾತಂತ್ರ್ಯಗಳಿಂದಲೂ ಪ್ರತಿಪಾದಿಸಿದರು. ಈ ರೀತಿ ಕೌನ್ಸಿಲರು ಪರಾಧೀನತೆಯನ್ನು ಪ್ರದರ್ಶಿಸಿರುವುದು ಬಹಳ ಆಶ್ಚರ್ಯಕರವಾಗಿದೆ. ತಮ್ಮ ಪಾರ್ಟಿಗೆ ಸಂಬಂಧಪಡದಿರುವವರ ವಿಚಾರವಾಗಿ ಚರ್ಚೆ ಹುಟ್ಟಿರುವುದಾದರೂ ಈ ರೀತಿ ಅತಿಕ್ರಮಿಸಿ ವರ್ತಿಸುವುದು ನ್ಯಾಯವಾಗಿಲ್ಲ. ತಮ್ಮ ತೀರ್ಮಾನವು ಆಖೈರೆಂದು ಮ|| ಅಲ್ಲಿಖಾನರಿಗೆ ಪ್ರೆಸಿಡೆಂಟರು ತಿಳಿಸಿರುವಾಗ್ಗೆ ಮ|| ಖಾನರು ಕೌನ್ಸಿಲಿಗೆ ಅಪೀಲು ಮಾಡಿಕೊಳ್ಳದೆಯೇ ಈ ವಿಚಾರವು ಕೌನ್ಸಿಲಿನ ಪರ್ಯಾಲೋಚನೆಗೆ ತರಲ್ಪಡಲು ಕಾರಣವಿಲ್ಲವೆಂದು ಮ|| ವೈ. ವಿರೂಪಾಕ್ಷಯ್ಯನವರು ವಾದಿಸಿದರು. ಆದರೆ ಈ ಖಂಡನೆಯು ಬೆರಳಿನ ಸಂದಿನಲ್ಲಿ ಬಿಡಲ್ಪಟ್ಟಿತು. ತಾವು ಮಾಡಿದುದು ಯುಕ್ತವೆಂಬ ಬಗೆಗೆ ಕೌನ್ಸಿಲಿನಿಂದ ಒಂದು ಸರ್ಟಿಫಿಕೇಟು ಪ್ರೆಸಿಡೆಂಟರಿಗೆ ಬೇಕಾಗಿದ್ದಿತು. ಅದು ಈಗಿನ ಕೌನ್ಸಿಲಿನ ರಚನಾಕ್ರಮದಲ್ಲಿ ತಮಗೆ ದೊರಕೇದೊರಕುವುದೆಂದು ನಿರ್ಧರಿಸಿದ್ದ ಪ್ರಕಾರ ಲಭ್ಯವಾಯಿತು. ನಾಮಕರಣವಾದ ಮೆಂಬರಿನ ಹಕ್ಕಿನ ವಿಚಾರವಾಗಿ ಪ್ರೆಸಿಡೆಂಟರು ಆಡಿರುವ ಮಾತುಗಳಮೇಲೆ ಕೌನ್ಸಿಲು ತನ್ನಭಿಪ್ರಾಯವನ್ನು ತಿಳಿಸದಿದ್ದುದು ಗಮನೀಯ ವಿಚಾರವಾಗಿದೆ. ಆದರೆ, ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲನ್ನು ಕುಡಿಯುವ ರೀತಿಯನ್ನು ಕೌನ್ಸಿಲು ಅನುಸರಿಸಿದರೆ ಜನರೆಂದಿಗೂ ಅನುಸರಿಸುವುದಿಲ್ಲ. ಪ್ರೆಸಿಡೆಂಟರು ನಾಮಕರಣವಾದ ಮೆಂಬರಿಗೆ ಅವಮಾನಪಡಿಸಿರುವುದರಿಂದ ತಮ್ಮನ್ನು ನಾಮಕರಣ ಮಾಡಿರುವ ಪ್ರಭುತ್ವವನ್ನೂ ಅವಮಾನಪಡಿಸಿದಂತಾಗಿರುವುದು. ತಮಗಾದ ಅವಮಾನವನ್ನು ಪ್ರಭುತ್ವದವರು ಗಮನಿಸಲಿ ಗಮನಿಸದಿರಲಿ ಪ್ರಜೆಗಳು ಮಾತ್ರ ಗಮನಿಸದೆ ಬಿಡುವುದಿಲ್ಲ. ಪ್ರೆಸಿಡೆಂಟರು ಆಡಿರುವ ಅವಮಾನಕರವಾದ ಮಾತುಗಳ ಸಂಬಂಧವಾಗಿ ಕೆಲವು ಪ್ರಶ್ನೆಗಳು ಪ್ರಜಾಪ್ರತಿನಿಧಿ ಸಭೆಗೆ ಕಳುಹಲ್ಪಟ್ಟಿರುವುದಾಗಿಯೂ, ಸ್ವಲ್ಪ ಸಂಖ್ಯಾಕ ಪಂಗಡಗಳು ಪ್ರಕ್ಷುಬ್ಧವಾಗಿರುವುದಾಗಿಯೂ ಕೇಳುತ್ತೇವೆ. ತಮ್ಮ ವರ್ತನವು ನ್ಯಾಯಸಮ್ಮತವಾಗಿರುತ್ತದೆಂದು ಕೌನ್ಸಿಲಿನವರು ಸರ್ಟಿಫಿಕೇಟು ಕೊಟ್ಟಿರುತ್ತಾರೆಂದು ಪ್ರೆಸಿಡೆಂಟರು ಸದ್ಯಃತೃಪ್ತಿಯಿಂದ ತಮ್ಮ ಭುಜಗಳನ್ನು ಕುಣಿಸುತ್ತಿರಬಹುದು, ಆದರೆ ಈ ವಿಷಯವನ್ನು ಮಹಾಜನರು ವಿಚಾರಿಸತಕ್ಕವರಾಗಿರುತ್ತಾರೆ. ಅದರ ಫಲಿತಾಂಶವೇನಾಗುತ್ತದೋ ನೋಡೋಣ.

ಡಾ|| ಕಿಚ್ಲುಯವರ ಸೆರೆ ಮತ್ತು ಬಿಡುಗಡೆ

ಡಾಕ್ಟರ್ ಕಿಚಲುಯವರನ್ನು ಲೂಧಿಯಾನ ರೈಲ್ವೆಸ್ಟೇಷನ್ನಿನಲ್ಲಿ ಪೊಲೀಸರು ಸೆರೆಹಿಡಿದು ಲಾಹೋರಿಗೆ ಮೋಟಾರುಬಂಡಿಯಲ್ಲಿ ಕರೆದುಕೊಂಡುಬಂದು ಕೋಟೆಯಲ್ಲಿ ಕೆಲಕಾಲ ಇರಿಸಿದ್ದು ಲಾಹೂರನ್ನೂ ಜಲಂಧರನ್ನೂ ಪ್ರವೇಶಿಸಕೂಡದೆಂದು ನೋಟೀಸನ್ನು ಕೊಟ್ಟು ರೈಲಿನಲ್ಲಿ ಕುಳ್ಳಿರಿಸಿ ಭಾಟಿಂಡಾ ಎಂಬಲ್ಲಿ ಬಿಟ್ಟು ಬಂದರು.

ಭಾವನಗರದ ಪತ್ರಿಕಾಧಿಪತಿಗಳಿಗೆ ನೋಟೀಸು

"ಬ್ರಿಟಿಷ್ ದೊರೆತನದವರು ಪ್ರಕಟಿಸಿರುವ ಆರ್ಡಿನಾನ್ಸುಗಳಿಗೆ ವಿರೋಧವಾಗಿ ಯಾವ ವಿಷಯವನ್ನೂ ಪ್ರಚುರಪಡಿಸಕೂಡದು. ಹಾಗೆ ಪ್ರಚುರಪಡಿಸಿದಲ್ಲಿ 200 ರೂ. ದಂಡ ವಿಧಿಸಲ್ಪಡುವುದು" ಎಂದು ಭಾವನಗರ ಸಂಸ್ಥಾನದವರು ಪತ್ರಿಕಾಧಿಪತಿಗಳಿಗೆ ನೋಟೀಸನ್ನು ಕೊಟ್ಟಿರುತ್ತಾರೆ. ಸಂಸ್ಥಾನದ ಪೊಲೀಸಿನವರಿಗೆ ಅನುಮಾನಕಂಡುಬಂದಲ್ಲಿ ಮುದ್ರಾಶಾಲೆಗಳನ್ನು ಜಪ್ತಿ ಮಾಡಲು ಅವರಿಗೆ ಅಧಿಕಾರ ಕೊಡಲ್ಪಟ್ಟಿದೆ.

ಜವಹಾರಿಲಾಲರ ಅನಾರೋಗ್ಯ

ನೆಹರು ಕುಟುಂಬದ ವೈದ್ಯರಾದ ಡಾ|| ಬಿಧುನ ಚಂದ್ರ ರಾಯಿಯವರು ಬರೋಲಿ ಕಾರಾಗೃಹದಲ್ಲಿರುವ ಜವಹಾರಿಲಾಲ ನೆಹರುಯವರ ದೇಹಸ್ಥಿತಿಯನ್ನು ಪರೀಕ್ಷಿಸಲು ಪ್ರಭುತ್ವದ ಅನುಜ್ಞೆಯಾಗಿರುತ್ತದೆ. ಈಗ ಜವಹಾರಿಲಾಲರವರ ದೇಹಸ್ಥಿತಿಯು ಕೆಟ್ಟುಹೋಗಿ ಪ್ರತಿ ದಿನವೂ ಕೊಂಚ ಉಷ್ಣಾಧಿಕ್ಯವಾಗುತ್ತಿದೆ. ಡಾ|| ಬಿ. ಸಿ ರಾಯಿಯವರು ಷಿಲಾಂಗಿಗೆ ಹೋಗಿರುತ್ತಾರೆ. ಅವರು ಅಲ್ಲಿಂದ ಬಂದೊಡನೆಯೇ ಬರೇಲಿಗೆ ಹೋಗುವರು.

ಒಂದು ಕುಟುಂಬಕ್ಕೇ ಹುಚ್ಚು ಹಿಡಿಯಿತು

ಧಾರಾಪುರದಲ್ಲಿ 5 ಮಂದಿಯಿರುವ ಒಂದು ಮಹಮ್ಮದೀಯ ಕುಟುಂಬದಲ್ಲಿ ಒಂದು ದಿವಸ ಮಧ್ಯಾಹ್ನ ಊಟವಾದಮೇಲೆ ಒಬ್ಬರನಂತರೊಬ್ಬರಿಗೆ ಬುದ್ಧಿ ಭ್ರಮಣೆಯುಂಟಾಯಿತು. ಇದರ ಕಾರಣವನ್ನು ವಿಚಾರಿಸುವಲ್ಲಿ ಸಾರಿಗೆ ಮೆಣಸಿನಪುಡಿ ಹಾಕುವಾಗ್ಗೆ ದತ್ತೂರಿ ಬೀಜದ ಹಿಟ್ಟು ಉಪಯೋಗಿಸಲ್ಪಟ್ಟುದರಿಂದ ಹೀಗಾಯಿತೆಂದು ಗೊತ್ತಾಯಿತು. ಆ ಮನೆ ನಾಯಿಯು ಅದೇ ಆಹಾರವನ್ನು ತಿಂದುದರಿಂದ ಅದಕ್ಕೂ ಹುಚ್ಚು ಹಿಡಿದಿರುವುದಂತೆ. ಈಗ ಅವರೆಲ್ಲರೂ ಬಂಧನದಲ್ಲಿಡಲ್ಪಟ್ಟಿರುತ್ತಾರೆ.

ಲಿಂಡ್‌ಬರ್ಗ್ ಮಗುವಿನ ಅಸ್ಥಿ ಸಿಕ್ಕಿತು

ಅಮೇರಿಕೆಯ ಪ್ರಸಿದ್ಧ ಆಕಾಶವೈಮಾನಿಕನಾದ ಲಿಂಡ್‌ಬರ್ಗ್ ಎಂಬಾತನ ಮಗುವನ್ನು ಅಪಹರಿಸಿಕೊಂಡು ಹೋಗಿ ಲಕ್ಷಾಂತರ ರೂ. ಗಳನ್ನು ಕೊಟ್ಟಲ್ಲಿ ಮಗುವನ್ನು ಜೀವಸಹಿತ ತಂದುಕೊಡುವುದಾಗಿ ಬರೆದಿದ್ದರು. ಅದಕ್ಕೆ ತಂದೆಯು ಕೊಡಲು ಸಿದ್ಧನಾಗಿದ್ದರೂ ಮಗುವನ್ನು ತಂದುಕೊಡದಿದ್ದುದರಮೇಲೆ ಅದನ್ನು ತಡಕಲು ಪೊಲೀಸಿನವರು ಅಸಮಸಾಹಸಪಟ್ಟಾಗ್ಗೂ ಗೊತ್ತಾಗಲಿಲ್ಲ. ಈಗ ಲಿಂಡ್‌ಬರ್ಗ್‌ನ ಬಂಗಲೆಯ ಸಮೀಪದಲ್ಲೇ ಒಂದು ಪೊದೆಯಲ್ಲಿ ಒಂದು ಮಗುವಿನ ಅಸ್ಥಿಯು ಸಿಕ್ಕಿರುವುದಾಗಿಯೂ, ಅದರ ಹಲ್ಲು ಮೂಳೆ ವೊದಲಾದವುಗಳಿಂದ ಲಿಂಡ್‌ಬರ್ಗ್‌ನ ಮಗುವೆಂದೇ ಗೊತ್ತುಮಾಡಲ್ಪಟ್ಟಿರುವುದಾಗಿಯೂ ಪ್ರಕಟವಾಗಿದೆ.

೧೮ ಘಂಟೆವರೆಗೆ ಸಜೀವ ಹೂತುಹೋಗಿದ್ದುದು

ಓರ್ವ ಫ್ರೆಂಚ್ ತರುಣಿಯು ಒಂದು ಮನೆಯಲ್ಲಿ ಟೆಲಿಫೋನ್ ಮೂಲಕ ತನ್ನ ಪತಿಯೊಂದಿಗೆ ಮಾತನಾಡುತ್ತಿರುವಾಗ್ಗೆ ಭೂಮಿಯು ಕುಸಿದು ಮನೆಯು ಈಕೆಯ ಮೇಲೆ ಅಗತುಕೊಂಡಿತು. ಪತಿಯು ಮನೆ ಕುಸಿದುಬಿದ್ದ ಶಬ್ದವನ್ನು ಕೇಳಿ ಅನಂತರ ನಿಶ್ಶಬ್ದವಾದುದನ್ನು ಕಂಡು ದಿಗಿಲುಬಿದ್ದು ಓಡಿಬಂದು ಹೆಂಡತಿಯು ಮಣ್ಣುರಾಸಿಯ ಕೆಳಗೆ ಸಿಕ್ಕಿಕೊಂಡಿರುವುದನ್ನು ಕಂಡು ವ್ಯಸನಾಕ್ರಾಂತನಾಗಿ ಹಗಲೂರಾತ್ರಿ ಕಾದುಕೊಂಡಿದ್ದನು. 18 ಘಂಟೆಗಳ ತರುವಾಯ "ನಾನು ಇನ್ನೂ ಬದುಕಿದ್ದೇನೆ, ನನ್ನ ಪತಿಯೆಲ್ಲಿ" ಎಂದು ಹೆಂಡತಿಯು ಹೇಳಿದುದನ್ನು ಕೇಳಿ ಪರಮ ಸಂತುಷ್ಟನಾಗಿ ಮಣ್ಣಿನ ರಾಶಿಯನ್ನು ತೆಗಿಸಿ ಆಕೆಯನ್ನು ಹೊರಕ್ಕೆ ಕರೆದುಕೊಂಡನು.

ತುಂಗಭದ್ರ ಅಣೆಗೆ ೩೨ ಕೋಟಿ ರೂಪಾಯಿ

ತುಂಗಭದ್ರ ನದಿಗೆ ಅಣೆಕಟ್ಟುವ ಕಾರ್ಯವನ್ನು ಮದರಾಸು ಪ್ರಭುತ್ವದವರೂ ನೈಜಾಂ ಸಂಸ್ಥಾನದವರೂ ಒಟ್ಟುಗೂಡಿ ನಡೆಸುವರೆಂದು ತಿಳಿಯಬರುತ್ತದೆ. ಮದರಾಸು ಪ್ರಭುತ್ವದವರು ಈ ಅಣೆ ಕಟ್ಟುವುದನ್ನು ವಿಚಾರಿಸಿ ಅದರ ಮೇಲೆ ತಮ್ಮಭಿಪ್ರಾಯವನ್ನು ನೈಜಾಂ ಪ್ರಭುತ್ವದವರಿಗೆ ತಿಳಿಯಪಡಿಸಿರುವರು. ಈಗ ನೈಜಾಂ ಪ್ರಭುತ್ವದವರು ಈ ಕಾರ್ಯವನ್ನು ಕೈಕೊಳ್ಳುವುದರಿಂದ ತಮಗಾಗುವ ಲಾಭನಷ್ಟವನ್ನು ಕುರಿತು ಪರ್ಯಾಲೋಚಿಸುತ್ತಿದ್ದಾರೆ. ಕಟ್ಟಲ್ಪಡುವ ಅಣೆಯು ಬಹಳ ದೊಡ್ಡದು. ಮದರಾಸು ಪ್ರಭುತ್ವದವರ ತಿಳಿವಿಕೆಗೆ ಬಂದಿರುವುದರ ಪ್ರಕಾರ ಈ ಜಲಾಶಯದಿಂದ ಬೀಳುಬಿದ್ದಿರುವ 11,00,000 ಎಕರೆ ಭೂಮಿ ಸಾಗುವಳಿಯಾಗಲನುಕೂಲಿಸುವುದು; ಕ್ಷಾಮಬಾಧೆ ತಪ್ಪುವುದು. ಈ ಕಾರ್ಯನಿರ್ವಾಹಕ್ಕೆ ಒಟ್ಟು 32 ಕೋಟಿ ರೂ. ವ್ಯಯವಾಗಬೇಕಾಗಿರುವುದೆಂದೂಹಿಸಲ್ಪಟ್ಟಿದೆ. ಪ್ರಪಂಚದ ಇನ್ನಾವ ಭಾಗದಲ್ಲೂ ನೀರಾವರಿಗಾಗಿ ಇಷ್ಟು ಹೆಚ್ಚು ಹಣ ವೆಚ್ಚಮಾಡಲ್ಪಟ್ಟಿರುವುದಿಲ್ಲ. ಈಗ ಅಂದಾಜ ಮಾಡಲ್ಪಟ್ಟಿರುವ ಹಣದಲ್ಲಿ ಕೃಷ್ಣಾನದಿಯ ಮೇಲೆ ಹಲಿಚಿಂತಿಲದ ಹತ್ತಿರ ಅಣೆಕಟ್ಟುವುದರ ವೆಚ್ಚದ ಮೊಬಲಗು ಸಹ ಸೇರಿರುತ್ತದೆ.

ಪ್ರಚಂಡ ತುಫಾನು

ಕಳೆದ ಸೋಮವಾರ ಪ್ರಚಂಡಮಾರುತವು ಬ್ರಹ್ಮಪುತ್ರ ನದಿಯ ಮೇಲೆ ಬೀಸಲುಪಕ್ರಮವಾಗಿ ಮೇಮನ್‌ಸಿಂಗಿಗೆ ಬಂದು ಅಲ್ಲಿಯ ಜೈಲು ಕಟ್ಟಡವನ್ನು ನೆಲಸಮ ಮಾಡಿಬಿಟ್ಟಿತು. ಶತ್ರುಗಳು ನಾಶಪಡಿಸಿದ ಕೋಟೆಯಂತೆ ಜೈಲು ಕಟ್ಟಡ ಹಾಳುಬಿಡಿಯುತ್ತಿರುವುದು. ಕಟ್ಟಡವು ಖೈದಿಗಳ ಮೇಲೆ ಬಿದ್ದುದರಿಂದ 19 ಮಹಮ್ಮದೀಯರು, 4 ಹಿಂದುಗಳು, 5 ಬೇರೆಯವರು, ಒಟ್ಟು 28 ಮಂದಿ ಹತರಾದರು. ಅವರುಗಳ ಶವಗಳು ಹೊರಕ್ಕೆ ತೆಗೆಯಲ್ಪಟ್ಟಿವೆ. ಇನ್ನೂ ಅನೇಕರು ಕಲ್ಲು ಇಟ್ಟಿಗೆಗಳ ಕೆಳಗೆ ಸಿಕ್ಕಿಕೊಂಡಿರುತ್ತಾರೆ. 50 ಮಂದಿ ವರೆಗೆ ಗಾಯವಾಗಿರುತ್ತದೆ. ಇದೇ ಸಮಯದಲ್ಲಿ 200 ಖೈದಿಗಳು ತಪ್ಪಿಸಿಕೊಂಡು ಓಡಿಹೋಗಿದ್ದು ಹಿಡಿಯಲ್ಪಟ್ಟಿರುತ್ತಾರೆ. ಶಾಸನೋಲ್ಲಂಘನಕ್ಕಾಗಿ ಬಂಧಿಸಲ್ಪಟ್ಟಿರುವವರು ಮಾತ್ರ ಓಡಿಹೋಗಲಿಲ್ಲ. ಗಾಯವಡೆದು ಆಸ್ಪತ್ರೆಚಿಕಿತ್ಸೆ ಹೊಂದುತ್ತಿರುವವರಲ್ಲಿ ಕೆಲರು ಈಚೆಗೆ ಮಡಿದರು. ಈ ಜೈಲು ಕಟ್ಟಡದ ಸುತ್ತಲೂ ಪೊಲೀಸರ ಕಾವಲಿಡಲ್ಪಟ್ಟಿದೆ. ಕಾರರ, ಕಲ್ಯಾಣಪುರ ಮತ್ತು ಕಸ್ಮಾ ಎಂಬ ಗ್ರಾಮಗಳಲ್ಲಿ ಬಿರುಗಾಳಿಯ ಅನಾಹುತದಿಂದ ಅನೇಕ ಪಶುಗಳೂ 20 ಮನುಷ್ಯರುಗಳೂ ಸತ್ತುಹೋದರು, ಅನೇಕರು ಗಾಯವಡೆದಿರುವರು, ಕೆಲರು ಮಾಯವಾಗಿರುವರು. ಮಾವಿನ ಮರಗಳು ಬಹಳಮಟ್ಟಿಗೆ ನಾಶವಾದುವು. ಅರ್ಧ ಮೈಲು ದೂರದವರೆಗೆಲ್ಲಿನೋಡಿದರೂ ಗ್ರಾಮಗಳು ನಾಶವಾಗಿರುವುವು. ಅಲಹಾಬಾದು ಡಿಸ್ಟ್ರಿಕ್ಟಿನಲ್ಲಿ ಈ ಗಾಳಿಯ ಅನಾಹುತದಿಂದ 13 ಮಂದಿ ಸತ್ತರು ಮತ್ತು ಬಹಳ ನಷ್ಟ ಸಂಭವಿಸಿತು. ಅಲಹಾಬಾದಿನ ನೆರೆಯ ಗ್ರಾಮಗಳಲ್ಲಿ ಆಲಿಕಲ್ಲುಗಳು ಬಿದ್ದು ಗುಡಿಸಲುಗಳು ಹಾಳಾದವು, ಅನೇಕರಿಗೆ ಪೂರಾ ಪೆಟ್ಟು ಬಿದ್ದಿರುತ್ತದೆ. ಗಾಳಿಯಲ್ಲಿ ಕೊಚ್ಚಿಕೊಂಡು ಹೋಗಿ ಗೋಡೆಗಳಿಗೂ ಮನೆಗಳಿಗೂ ಡಿಕ್ಕಿಹೊಡದು 3 ಮಕ್ಕಳೂ 2 ಹೆಂಗಸರೂ ಸತ್ತರು.

ಒಳದೇಶದ ವೃತ್ತಾಂತಗಳು

ಬರುವ ಜೂನ್ ತಾ|| 4, 7, 9, 11 ಮತ್ತು 15 ರಲ್ಲಿ ರಾಜಧಾನಿಯೊಳಗೆ ಕುದುರೆಯ ಪಂದ್ಯಗಳು ನಡೆಯುವುವು. ಈ ವೇಳೆ ಅನೇಕ ಕುದುರೆಗಳು ಪಂದ್ಯಕ್ಕೆ ಬರುವುದಾಗಿ ನಿರೀಕ್ಷಿಸಲ್ಪಟ್ಟಿದೆ.

ನೆನ್ನೆಯ ದಿವಸ ಬೆಂಗಳೂರು ಪಟ್ಟಣದಲ್ಲಿ ಜರುಗಿದ ಮರಾಟೆಯ ಪಂಗಡದವರ ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಿದಾಗ್ಗೆ ದಿವಾನರು ಮಾಡಿದ ಭಾಷಣವು ಬೇರೊಂದ ಕಡೆ ಮುದ್ರಿಸಲ್ಪಟ್ಟಿದೆ.

ಪ್ರಜಾಪ್ರತಿನಿಧಿಸಭೆಯ ಬಡ್ಜೆಟ್ ಅಧಿವೇಶನವು ಬರುವ ಜೂನ್ ತಾ|| 6ನೆಯ ಸೋಮವಾರ ಮಧ್ಯಾಹ್ನ 12 ಘಂಟೆಗೆ ರಾಜಧಾನಿಯ ಜಗನ್ಮೋಹನ ಪ್ರಾಸಾದದ ಸಭಾಂಗಣದೊಳಗೆ ದಿವಾನರ ಅಧ್ಯಕ್ಷತೆಯಲ್ಲಿ ಆರಂಭವಾಗುವುದು.

ಕೆಮ್ಮಣ್ಣುಗುಂಡಿಗೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರವರ ಸ್ವಾರಿಯು ಈ ದಿವಸ ಪ್ರಾತಃಕಾಲ ಸ್ಪೆಷಲ್ ಟ್ರೇನಿನಲ್ಲಿ ಅರಸೀಕೆರೆ ಮಾರ್ಗವಾಗಿ ರಾಜಧಾನಿಗೆ ಚಿತ್ತೈಸಿತು ಮತ್ತು ತಾ|| 19-20 ರಲ್ಲಿ ಉದಕಮಂಡಲಕ್ಕೆ ಪ್ರಯಾಣಮಾಡಬಹುದು.

ರಾಜಧಾನಿಯಲ್ಲಿ ಕಳೆದ ಮಂಗಳವಾರ ಮತ್ತು ಬುಧವಾರ ಹಗಲೂ ರಾತ್ರಿಯೂ ಕೊಂಚ ಹೆಚ್ಚಾಗಿಯೂ ಮಳೆಯಾಗಿ ಕಾರಂಜಿಕೆರೆಗೂ ದೊಡ್ಡಕೆರೆಗೂ ನೀರು ಬಂದಿರುತ್ತದೆ. ಬೆಂಗಳೂರಿನಲ್ಲೂ ಕೊಂಚ ಮಳೆಯಾಗಿರುವುದಲ್ಲದೆ ಅನೇಕ ಕಡೆ ಆಗಿರುವುದಾಗಿ ತಿಳಿಯಬರುತ್ತದೆ. ಇಷ್ಟಾದರೂ ದಗೆಯು ಕಡಿಮೆಯಾಗಿಲ್ಲ.

ಕೃಷ್ಣರಾಜಪೇಟೆ ತಾ|| ಅನ್ವೇರಹಳ್ಳಿ ಸಮೀಪದಲ್ಲಿರುವ ಶ್ರೀ ರೇವಣಸಿದ್ಧೇಶ್ವರಸ್ವಾಮಿಯ ರಥೋತ್ಸವವು ಇದೇ ತಾ|| 20 ನೆಯ ಶುಕ್ರವಾರ ನಡೆಯುವುದು. ತತ್ಸಂಬಂಧವಾದ ಕಾರ್ಯಗಳು ತಾ|| 18 ರಲ್ಲಿ ಆರಂಭವಾಗಿ ತಾ|| 23 ರಲ್ಲಿ ಮುಕ್ತಾಯವಾಗುವುವೆಂದೂ, ಯಾತ್ರಿಕರ ಊಟ ಉಪಚಾರಗಳಿಗೆ ಧರ್ಮಾತ್ಮರುಗಳಿಂದೇರ್ಪಡಿಸಲ್ಪಟ್ಟಿರುವುದೆಂದೂ, ರೋಗಪ್ರದೇಶದಿಂದ ಬರತಕ್ಕವರು ಹಿಂದಿರುಗಿಸಲ್ಪಡುವರೆಂದೂ ಪಾರುಪತ್ತೇಗಾರರು ತಿಳಿಸಿರುತ್ತಾರೆ.

ಕಳೆದ ಗುರುವಾರ ದಿವಾನರವರು ಚಿಂತಾಮಣಿಗೆ ಹೋಗಿ ಅಲ್ಲಿ ನೂತನವಾಗಿ ಸ್ಥಾಪಿತವಾಗಿರುವ ಹೈಸ್ಕೂಲು ಪ್ರವೇಶೋತ್ಸವವನ್ನು ನೆರವೇರಿಸಿ ಬೆಂಗಳೂರಿಗೆ ಹಿಂದಿರುಗಿ ಬಂದು ಈ ದಿವಸ ಬೆಳಗ್ಗೆ ರಾಜಧಾನಿಗೆ ಬಂದರು ಮತ್ತು ಶ್ರೀಮನ್ಮಹಾರಾಜರವರ ದರ್ಶನವನ್ನು ತೆಗೆದುಕೊಂಡು ನಾಳೆ ನಾಡಿದ್ದರಲ್ಲಿ ಬೆಂಗಳೂರಿಗೆ ಹಿಂದಿರುಗಿ 19 ರಲ್ಲಿ ದಿಲ್ಲಿಗೆ ಪ್ರಯಾಣಮಾಡುವರು. ಇವರು ಚಿಂತಾಮಣಿಯ ಸ್ಕೂಲು ಪ್ರವೇಶೋತ್ಸವದಲ್ಲಿ ಮಾಡಿದ ಭಾಷಣವು ಈ ಪತ್ರಿಕೆಯ ಬೇರೆಕಡೆ ಮುದ್ರಿಸಲ್ಪಟ್ಟಿದೆ.

ಹೈದರಾಬಾದಿನ ಯುವರಾಜರಾದ ಅಜಂಝಾರವರು ತಮ್ಮ ಪತ್ನಿ ದುರ್ರುಷೆವಾರ್‌ರವರೊಡನೆಯೂ, ನೈಜಾಂರವರ ಎರಡನೆಯ ಕುಮಾರರಾದ ಮೊಜಂಝಾರವರು ತಮ್ಮ ಪತ್ನಿ ನಿಲುಫರ್ ಹನೀಂರವರೊಡನೆಯೂ ಕಳೆದ ಬುಧವಾರ ಸಾಯಂಕಾಲ ಬೆಂಗಳೂರಿಗೆ ಬಂದು ರೈಲ್ವೆ ಸ್ಟೇಷನ್ನಿನಲ್ಲಿ ಮೈಸೂರು ದಿವಾನರೇ ಆದಿಯಾಗಿ ಕೆಲ ಅಧಿಕಾರಿಗಳಿಂದ ಸುಸ್ವಾಗತಿಸಲ್ಪಟ್ಟು ಬಾಲಬ್ರೂ ಮತ್ತು ವಿಂಡ್ಸರ್ ಲಾಡ್ಜ್ ಎಂಬ ಭವನಗಳಲ್ಲಿಳಿದುಕೊಂಡಿರುವರು. ಇವರುಗಳು ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವವು ಕಳೆಯುವವರೆಗೂ ಇಲ್ಲೇ ಇರುವುದಾಗಿ ಕೇಳುತ್ತೇವೆ.

ಮೈಸೂರು ನೀಲಗಿರಿ ರೋಡಿನಲ್ಲಿ 137 ನೆಯ ಮೈಲು ಕಲ್ಲಿನ ಬಳಿ ಒಬ್ಬ ಮನುಷ್ಯನು ಸತ್ತುಬಿದ್ದಿದ್ದನು. ಈ ಸಂಗತಿಯನ್ನು ಕೇಳಿ ಆ ಸ್ಥಳಕ್ಕೆ ಹೋಗಿ ನೋಡುವಲ್ಲಿ ಒಂದು ಪ್ರಾಯದ ಆನೆಯ ಹೆಜ್ಜೆಯ ಗುರುತುಗಳೂ, ಶವದ ಬೆನ್ನು ಉಗುತೊಂಡಿರುವುದೂ, ಕೊಂಬುಗಳಿಂದ ತಿವಿದ ಗಾಯಗಳೂ ಕಂಡುಬಂದುದರಿಂದ ಆ ಮನುಷ್ಯನನ್ನು ಆನೆಯು ಕೊಂದಿರಬಹುದೆಂದು ಗೊತ್ತಾಗುತ್ತದೆ. ಆ ಮನುಷ್ಯನಾರೆಂಬುದೂ ಅವನನ್ನು ಕೊಂದ ಆನೆ ಎಲ್ಲಿದೆ ಎಂಬುದೂ ತಿಳಿಯಬರಲಿಲ್ಲ ಎಂದು ಚಾಮರಾಜನಗರ ಸಬ್ ಡಿವಿಜನ್ ಫಾರೆಸ್ಟು ಆಫೀಸರು ಕಳೆದ ತಾ|| 26 ರಲ್ಲಿ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗೆ ವರದಿಮಾಡಿದ್ದರು.

ರಾಜಧಾನಿಯ ದೇವರಾಜ ಮೊಹಲ್ಲಾ ಎ. ರಾಮಣ್ಣನವರ ಬೀದಿಯಲ್ಲಿ ವಾಸಮಾಡುತ್ತಿದ್ದ ರಿಟೈರ್ಡ್ ಸಬ್ ರಿಜಿಸ್ಟ್ರಾರ್ ವಿ. ಸುಬ್ರಹ್ಮಣ್ಯಯ್ಯರ್‌ರವರು 12-13 ದಿವಸಗಳ ಹಿಂದೆ ಮೈಸೂರು ಡಿಸ್ಟ್ರಿಕ್ಟ್ ಖಜಾನೆಗೆ ಹೋಗಿ ಯುದ್ಧದ ಸಾಲಪತ್ರದ ಬಾಬತು 110 ರೂಪಾಯಿಗಳನ್ನು ತೆಗೆದುಕೊಂಡು, ಅದರಲ್ಲಿ ಕೆಲವನ್ನು ಸೇವಿಂಗ್ಸ್ ಬ್ಯಾಂಕಿಗೆ ಕಟ್ಟಿ ಉಳಿದುದನ್ನು ತಮ್ಮ ಅಂಗಿಯ ಕಿಸೆಯಲ್ಲಿಟ್ಟುಕೊಂಡು ಒಂದು ಬೆಂಚಿನ ಮೇಲೆ ಕುಳಿತುಕೊಂಡು ವಿಶ್ರಮಿಸಿಕೊಳ್ಳುತ್ತಿದ್ದರು. ಕೊಂಚ ಹೊತ್ತಿನಮೇಲೆ ಬಾಯಾರಿಕೆಯಿಂದು ನೀರನ್ನು ಕುಡಿದು ಒಂದೆರಡು ನಿಮಿಷಗಳ ಮೇಲೆ ಶ್ವಾಸ ಬಂಧನವಾಗಿ ಮೃತರಾದರು. ಇವರಿಗೆ 65 ವರ್ಷ ವಯಸ್ಸಾಗಿದ್ದಿತು.

ಕಳೆದ ಶನಿವಾರ ರಾಜಧಾನಿಯಲ್ಲಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಬಡ್ಜೆಟ್ ಮೀಟಿಂಗು ಮ|| ಬಿ. ಎಸ್. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಬೋರ್ಡಿನ ಮೆಂಬರುಗಳು ಮೀಟಿಂಗಿಗೆ ಬಂದವೇಳೆಯಲ್ಲಿ ಫಲಾಹಾರಕ್ಕಾಗಿ ವೆಚ್ಚವಾಗುತ್ತಿದ್ದ 400 ರೂ. ಗಳು ಬಡ್ಜೆಟ್ಟಿನಲ್ಲಿ ಸೇರಿಸಲ್ಪಟ್ಟಿರಲಿಲ್ಲವಾಗಿ ಚರ್ಚೆನಡೆದು ಒಬ್ಬ ಮೆಂಬರು ತಮ್ಮ ಪ್ರಯಾಣದ ಭತ್ಯವನ್ನು ಬಿಟ್ಟುಕೊಡುತ್ತೇವೆಂದು ಸೂಚಿಸಿದರು. ಆ ವಿಚಾರವಾಗಿ ಬಹಳ ಚರ್ಚೆನಡೆದು ಪ್ರೆಸಿಡೆಂಟರ ಮತ್ತು ವೈಸ್‌ಪ್ರೆಸಿಡೆಂಟರ ಅಲೋಯನ್ಸನ್ನೂ ತಪ್ಪಿಸಿಬಿಡಬೇಕೆಂದು ಕೆಲರು ಸೂಚಿಸಿದರು. ಅದರ ಮೇಲೆ ಚರ್ಚೆನಡೆದು ಪ್ರೆಸಿಡೆಂಟರು ಅದನ್ನು ತಿರಸ್ಕರಿಸಿದರೆಂದು ಕೇಳುತ್ತೇವೆ.

ಬೆಂಗಳೂರು ನಗರದಲ್ಲಿ ನಡೆದ ಮರಾಟೆಯ ಪಂಗಡದವರ ಸಮ್ಮೇಳನವನ್ನು ಪ್ರಾರಂಭಗೊಳಿಸುವುದರಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಭಾಷಣ.

(1932 ನೆಯ ಇಸವಿ ಮೇ 15 ನೆಯ ತಾರೀಖು.)

ಮಹಾಶಯರೇ,

ನೀವು ಒಪ್ಪಿಸಿದ ಬಿನ್ನವತ್ತಳೆಗಾಗಿ ವಿಶ್ವಾಸಪೂರ್ವಕವಾಗಿ ನಿಮ್ಮೆಲ್ಲರನ್ನೂ ವಂದಿಸುವೆನು. ಈ ದಿನ ಇಲ್ಲಿಗೆ ಬಂದು ನಿಮ್ಮ ಸಮ್ಮೇಳನವನ್ನು ಪ್ರಾರಂಭಗೊಳಿಸುವುದು, ನನಗೆ ಬಹಳ ಸಂತೋಷಕರವಾಗಿದೆ.

ನಿಮ್ಮ ಸಮ್ಮೇಳನದಿಂದ ಉತ್ತಮವಾದ ಫಲವಾಗುವುದೆಂದು ನಾನು ನಂಬಿದ್ದೇನೆ. ಅಲ್ಲದೆ, ಈಗಿನ ಪರಿಸ್ಥಿತಿಯನ್ನು ಮೇಲ್ಪಡಿಸಿಕೊಳ್ಳುವುದಕ್ಕೆ ಸಾಧಕವಾದ ಪ್ರತಿಯೊಂದು ವಿಷಯದಲ್ಲಿಯೂ ನಿಮಗೆ ಗಾಢವಾದ ಮತ್ತು ತೀವ್ರವಾದ ಅಭಿಲಾಷೆಯುಂಟೆಂಬುದನ್ನು ಈ ಸಮ್ಮೇಳನವು ವ್ಯಕ್ತಪಡಿಸುತ್ತದೆ. ಇತರ ಪ್ರತಿಯೊಂದು ಪಂಗಡದವರಂತೆಯೇ, ನೀವು ಸಹ ನಿಮ್ಮ ಪಂಗಡದಲ್ಲಿರುವ ನ್ಯೂನತೆಗಳನ್ನು ಮನಗಂಡವರಾಗಿರುವಿರಿ. ಅಲ್ಲದೆ ಅವುಗಳನ್ನು ಪರಿಹರಿಸಿಕೊಳ್ಳಬೇಕೆಂದು ನಿಶ್ಚಯಮಾಡಿದ್ದೀರಿ. ಸಂಪದಭಿವೃದ್ಧಿಯ ವಿಚಾರದಲ್ಲಿ ಮಾತ್ರವೇ ಅಲ್ಲದೆ, ವಿದ್ಯಾಭಿವೃದ್ಧಿ, ಸಾಮಾಜಿಕ ಪರಿಷ್ಕರಣ, ರಾಜಕೀಯ ಪ್ರಗತಿಸಾಧನೆ, ಇವುಗಳ ದೃಷ್ಟಿಯಿಂದಲೂ ತಿಳಿವಳಿಕೆಯನ್ನು ವೃದ್ಧಿಪಡಿಸಿಕೊಂಡು ಅಭ್ಯುದಯಹೊಂದಿ ನಿಮ್ಮ ಪಂಗಡವನ್ನು ಮುಂದುವರಿಸಬೇಕೆಂದು ಸಂಕಲ್ಪಮಾಡಿದ್ದೀರಿ. ನಿಮ್ಮ ಪಂಗಡದಿಂದಲೂ ಸಹ ಸಂಸ್ಥಾನದ ಪುರೋಭಿವೃದ್ಧಿಗೆ ಉತ್ತಮವಾದ ಸೇವೆಯು ಲಭಿಸಬೇಕೆಂಬುದು ನಿಮಗಿರುವ ಅಭಿಲಾಷೆಯಾಗಿದೆ. ಈ ವಿಚಾರದಲ್ಲಿ [illegible]

ಕಾರ್ಯಸಿದ್ಧಿಯ ಮೂಲಮಂತ್ರ. ಕಷ್ಟಗಳ ಮಧ್ಯದಲ್ಲಿ, ಈ ಮುಖ್ಯ ಸಾಧನವಾದ ಐಕಮತ್ಯ ಭಂಡಾರವನ್ನು ನಿಮ್ಮಲ್ಲಿ ವೃದ್ಧಿಗೊಳಿಸಿಕೊಳ್ಳುವ ಪ್ರಯತ್ನವನ್ನೂ ನೀವು ಮಾಡುತ್ತಿರುವಿರೆಂದು ನಂಬಿದ್ದೇನೆ.

ನೀವುಗಳು ಕೈಕೊಂಡಿರುವ ಮಹತ್ತರವಾದ ಈ ಪ್ರಯತ್ನಗಳಲ್ಲೆಲ್ಲಾ ನಿಮಗೆ ಪೂರ್ಣಫಲವು ಲಭಿಸಲೆಂದು ಸಮಸ್ತರೂ ಹಾರೈಸುವವರಾಗಿರಲೇ ಬೇಕು.

ನಿಮ್ಮ ಸಮ್ಮೇಳನದ ಉದ್ದೇಶಗಳಲ್ಲಿ ನನಗೆ ಈರೀತಿ ಪೂರ್ಣಾದರವುಂಟು. ಸಂಘಗಳ ಸಮ್ಮೇಳನಗಳ ವಿಚಾರದಲ್ಲಿ ನನಗೆ ಅತಿ ಮುಖ್ಯವೆಂದು ತೋರುವ ಒಂದು ಅಂಶವನ್ನು ಒತ್ತಿಹೇಳಿ ತಿಳಿಸಲಿಚ್ಛಿಸುವೆನು.

ಸಂಘಗಳ ಸಮ್ಮೇಳನಗಳು ನಡೆಯಬೇಕಾದುದೇನೋ ಯುಕ್ತವೇ ಸರಿ. ಆದರೆ ನಾನಾ ಸಂಘಗಳವರೂ ತಮ್ಮ ತಮ್ಮ ಮಟ್ಟಿಗೆ ತಾವು ತಾವು ಪ್ರತ್ಯೇಕವಾಗಿದ್ದಂತೆ ಭಾವಿಸಿ ಈ ಸಮ್ಮೇಳನಗಳನ್ನು ನಡೆಯಿಸಿದರೆ ಫಲವಿಲ್ಲ. ಅಥವಾ ಇತರರಲ್ಲಿ ವಿರೋಧಬುದ್ಧಿಯಿಂದಲೇ ಆಗಲಿ, ಕೊನೆಗೆ ಇತರರು ಸಮ್ಮೇಳನಗಳನ್ನು ನಡೆಯಿಸುತ್ತಿರುವುದೇ ಮುಂತಾದ ವಿಚಾರಗಳನ್ನು ನೋಡಿ ಕೇವಲ ಆತ್ಮರಕ್ಷಣೆಗೋಸ್ಕರವೆಂದುಕೊಂಡೇ ಆಗಲಿ, ಈ ಸಮ್ಮೇಳನಗಳು ನಡೆದರೂ ಯಾರಿಗೂ ಪ್ರಯೋಜನವಿಲ್ಲ. ಹೀಗೆ ನಡೆಯುವುದಾದರೆ, ಅಂಥ ಸಮ್ಮೇಳನಗಳಿಂದ ದೇಶಕ್ಕೆ ಕೇಡೂ ಉಂಟು. ಸ್ವಂತ ಪ್ರಯೋಜನದಿಂದ ಮುಂದಕ್ಕೆ ದೃಷ್ಟಿಯನ್ನು ಪ್ರಸರಿಸಲಾರದ ಸಂಕುಚಿತ ಮನೋವೃತ್ತಿಯುಳ್ಳ ಯಾವ ಸಂಘವೂ ಊರ್ಜಿತವಾಗಲಾರದು. ಅಂಥ ಯಾವ ಸಂಘಕ್ಕೂ ಮುಂದಣ ಅಭ್ಯುದಯದ ಹಂಬಲಿಲ್ಲ. ಇದು ಸ್ವಲ್ಪ ಮಟ್ಟಿಗೆ ಮತಸಂಬಂಧವಾದ ವಿಚಾರವೂ ಹೌದು. ಏಕೆಂದರೆ, ಮತದ ತಿರುಳೂ ಇಲ್ಲಿ ಅಡಕವಾಗಿದೆ. ಸನಾತನ ಧರ್ಮವನ್ನವಲಂಬಿಸಿ ನಿಜವಾಗಿಯೂ ಹಿಂದುವಾಗಿರುವವನ ಮನಸ್ಸಿನಲ್ಲಿ, ಹಿಂದುಮತದ ಸಂಘಗಳಲ್ಲಿ ಪರಸ್ಪರವಾಗಿ ಲೇಶಮಾತ್ರವೂ ಭೇದಭಾವಗಳಿಗೆ ಅವಕಾಶವಿರಕೂಡದೆಂಬ ಭಾವನೆಯೂ, ಹಿಂದು ಮತವನ್ನವಲಂಬಿಸಿರುವವರೆಲ್ಲರೂ ಸನಾತನ ಮತಕ್ಕೇ ಸೇರಿದವರೆಂಬ ಭಾವನೆಯೂ ಅಚಲವಾಗಿ ನೆಲಸಿರಲೇಬೇಕು. ತಾವು ತಾವು ಪ್ರತ್ಯೇಕವೆಂಬ ಭಾವನೆಯು ಸಂಘಗಳವರಲ್ಲೇನಾದರೂ ಹುಟ್ಟಿದರೆ ಆ ಬಗೆಯ ಭೇದಜ್ಞಾನವು ಖಂಡಿತವಾಗಿಯೂ ಸನಾತನ ಧರ್ಮಕ್ಕೇ ವಿರುದ್ಧವಾದುದು.

ಅಷ್ಟೇ ಅಲ್ಲ; ಅನ್ಯಮತೀಯರಲ್ಲಿ ವಿರೋಧಬುದ್ಧಿಯನ್ನು ತೋರಿಸುವುದಕ್ಕೂ ಸನಾತನ ಧರ್ಮದಲ್ಲಿ ಅವಕಾಶವಿಲ್ಲ. ಇಂತಹ ವರ್ತನೆಯನ್ನೇ ಅದು ನಿಷೇಧಿಸುತ್ತದೆ. ಒಬ್ಬ ಹಿಂದುವು ಕ್ರೈಸ್ತರಲ್ಲಾಗಲಿ ಅಥವಾ ಮುಸಲ್ಮಾನರಲ್ಲಾಗಲಿ ಎಷ್ಟೆಷ್ಟು ಹೆಚ್ಚಾಗಿ ಸೌಹಾರ್ದವನ್ನು ತೋರಿಸಿದರೆ ಅವನು ಅಷ್ಟು ಅಷ್ಟು ನಿಜವಾದ ಸನಾತನ ಧರ್ಮಿಯೆನಿಸುತ್ತಾನೆ. ಈ ವಿಚಾರದಲ್ಲಿ ಉಜ್ವಲವಾದ ಪ್ರತ್ಯಕ್ಷ ನಿದರ್ಶನವೊಂದನ್ನು ನಮ್ಮ ದೇಶದಲ್ಲೇ ಕಾಣಬಹುದಾಗಿದೆ. ನಮ್ಮ ಶ್ರೀಮನ್ಮಹಾರಾಜರವರೇ ಇದಕ್ಕೆ ಅಮೋಘವಾದ ಪ್ರತ್ಯಕ್ಷ ನಿದರ್ಶನ. ಮಹಾಸ್ವಾಮಿಯವರು ತಮ್ಮ ಸ್ವಂತ ಮತದಲ್ಲಿ ಪೂರ್ಣ ಶ್ರದ್ಧೆಯುಳ್ಳವರಾಗಿರುವಂತೆಯೇ ಅನ್ಯಮತೀಯರಲ್ಲಿ ಪ್ರೀತಿಯುಳ್ಳವರಾಗಿಯೂ ಇದ್ದಾರೆ.

ನಾನು ಸೂಚಿಸಿರುವಂತೆ ಸಮಸ್ತರೂ ಸೌಹಾರ್ದದಿಂದಲೂ ಐಕಮತ್ಯದಿಂದಲೂ ಕೂಡಿ ಸಹಕರಿಸಿ ವರ್ತಿಸಬೇಕಾದುದು ಮತ ಧರ್ಮದ ಪ್ರಕಾರ ಅನುಷ್ಠಾನಕ್ಕಾಗಿ ವಿಧಾಯಕವಾಗಿರುವುದು ಮಾತ್ರವೇ ಅಲ್ಲ. ಸಮಾಜದ ಅಭ್ಯುದಯಕ್ಕೂ ದೇಶೋನ್ನತಿ ಸಾಧನೆಗೂ ಅದು ಅತ್ಯಾವಶ್ಯಕವೂ ಹೌದು. ಭಾಗ್ಯಾಭಿವೃದ್ಧಿಯಿಂದ ಹಿಡಿದು ರಾಜಕೀಯ ಪ್ರಗತಿ ಸಾಧನೆಯ ವರೆಗೂ ಮುಂದೆ ನಮ್ಮ ದೇಶದಲ್ಲಿ ನಡೆಯಬೇಕಾದ ಸಮಸ್ತ ಕಾರ್ಯಕಲಾಪಗಳಿಗೂ, ಭರತಖಂಡಕ್ಕೆ ಲಭಿಸಬೇಕಾದ ಪಾರಮಾರ್ಥಿಕ ಶ್ರೇಯಸ್ಸಿಗೂ ಅದೇ ಮೂಲವೆನ್ನಿಸುತ್ತದೆ. ಅದರ ಅವಲಂಬನದಿಂದಲೇ ಇವುಗಳೆಲ್ಲವೂ ನಡೆಯಬೇಕು.

ಪರಸ್ಪರ ಸೌಹಾರ್ದದಿಂದ ಸಮಸ್ತರೂ ಸಮ್ಮಿಳಿತವಾಗಿ ಸೇರಿ ವರ್ತಿಸುವುದೇ ಈಗ ನಮಗೆ ಎಲ್ಲಕ್ಕಿಂತಲೂ ಅತಿಶಯವಾಗಿ ಬೇಕಾಗಿದೆ. ಪರಂಪರೆಯಾಗಿ ನಡೆದುಬಂದಿರುವ ಅನವಶ್ಯವಾದ ಭೇದಭಾವಗಳಿಗೆ ಪ್ರಾಮುಖ್ಯತೆಯನ್ನು ಕೊಡುವುದರಿಂದ ಫಲವಿಲ್ಲ. ಅವುಗಳನ್ನು ಅವಶ್ಯವಾಗಿ ಬಿಟ್ಟುಬಿಡಬೇಕು. ಸರ್ವಸಾಧಾರಣವೆನಿಸಿ ಎಲ್ಲರಿಗೂ ಒಮ್ಮತ ಸಮ್ಮತವಾಗಿರುವ ವಿಚಾರಗಳನ್ನೇ ಪ್ರಾಮುಖ್ಯವಾಗೆಣಿಸಿ, ಅವರಿವರ ಅನುಕೂಲಗಳಿಗಿಂತಲೂ ಹೆಚ್ಚಾಗಿ ಒಟ್ಟು ಸಮುದಾಯದ ಶ್ರೇಯಸ್ಸನ್ನು ಕುರಿತು ಚಿಂತಿಸುವ ಉದಾತ್ತ ಚಿತ್ತವೃತ್ತಿಯು ವೃದ್ಧಿಯಾಗಬೇಕು. ಸಂಘದ ಮೇಲಣ ದುರಭಿಮಾನವೇ ಮತಾಚರಣೆಯೆಂಬ ಗೊಡ್ಡು ನಂಬಿಕೆಯನ್ನು ಬಿಟ್ಟಲ್ಲದೆ, ನಮಗೆ ಯಾವ ಕಾರ್ಯಸಿದ್ಧಿಯೂ ಕೈಗೂಡುವುದಿಲ್ಲ. ಜಾತಿಯ ಹೆಚ್ಚಳದ ಅಂಧ ಶ್ರದ್ಧೆಯನ್ನಿಟ್ಟುಕೊಂಡಿದ್ದು ಜನಾಂಗದ ಅಭ್ಯುದಯವನ್ನು ಸಾಧಿಸಬಹುದೆಂಬ ನಂಬಿಕೆಯು ಉಳಿದಿರುವ ವರೆಗೂ ನಾವು ಯಾವ ಮಹತ್ಕಾರ್ಯವನ್ನೂ ಸಾಧಿಸಲಾರೆವು.

ಈ ಸಮ್ಮೇಳನದ ಮೂಲಕವೂ ಮತ್ತು ಸಂತತವೂ ನೀವುಗಳು ಶ್ರಮಿಸುವ ಮೂಲಕವೂ, ನಿಮ್ಮ ಸಂಘದ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವ ನಿಮ್ಮ ಪ್ರಯತ್ನಕ್ಕೆ ಪೂರ್ಣ ಫಲವು ದೊರೆಯಲೆಂದು ಹಾರೈಸುವೆನು. ಅಲ್ಲದೆ, ಅವರುಗಳು ವಿದ್ಯಾವಂತರೂ ಹಣವಂತರೂ ಆದ ಸತ್ಪ್ರಜೆಗಳೆನಿಸಿ ಸುಖವಾಗಿ ಬಾಳಲೆಂದೂ ಹಾರೈಸುವೆನು. ದೇಶೋನ್ನತಿಯನ್ನು ಸಾಧಿಸುವ ಪ್ರಯತ್ನದಲ್ಲಿ, ನಿಮ್ಮ ಸಂಘದವರು ಹಿಂದೆ ವಿಶೇಷವಾಗಿ ಸಹಾಯ ಮಾಡಿರುವಂತೆಯೇ ಇನ್ನು ಮುಂದೆ ಕೂಡ, ವಿಶೇಷವಾಗಿ ಸಹಾಯಮಾಡಬಹುದಾಗಿದೆ.

ಈ ಸಮ್ಮೇಳನದಲ್ಲಿ ನೀವು ಆಡುವ ಪ್ರತಿಯೊಂದು ಮಾತಿಗೂ ನೀವು ಮಾಡುವ ಪ್ರತಿಯೊಂದು ಕೆಲಸಕ್ಕೂ, ದೇಶದ ಶ್ರೇಯಸ್ಸಿನೊಡನೆ ನಿಕಟ ಸಂಬಂಧವುಂಟು. ಇದನ್ನು ನೀವು ಎಷ್ಟೆಷ್ಟು ಹೆಚ್ಚಾಗಿ ಮನದಟ್ಟುಮಾಡಿಕೊಂಡು ವರ್ತಿಸಿದರೆ ಅಷ್ಟಷ್ಟು ಹೆಚ್ಚಾಗಿ ಈ ಸಮ್ಮೇಳನವು ಪ್ರಶಸ್ತವಾದುದೂ ನಿಮ್ಮ ಸಂಘಕ್ಕೆ ಹೆಚ್ಚು ಪ್ರಯೋಜನಕರವಾದುದೂ ಆಗುತ್ತದೆ.

ನಿಮ್ಮ ಸಮ್ಮೇಳನದ ವಿಷಯದಲ್ಲಿ ನನಗೆ ವಿಶೇಷ ಸಹಾನುಭೂತಿಯುಂಟು. ಸಮ್ಮೇಳನವು ಸಾಂಗವಾಗಿಯೂ ಸಫಲವಾಗಿಯೂ ನೆರವೇರಲೆಂದು ನಾನು ಹೃತ್ಪೂರ್ವಕವಾಗಿ ಹಾರೈಸುವೆನು.

ಈ ನಗರದಲ್ಲಿ ಅತ್ಯಂತ ಪ್ರಮುಖರಾಗಿಯೂ, ಗೌರವಕ್ಕೆ ಪಾತ್ರರಾಗಿಯೂ ಇರುವ ವರ್ತಕರಲ್ಲೊಬ್ಬರಾದ ಶ್ರೀಮಾನ್ ಸಜ್ಜನರಾಯರವರು ವೆಂಕಟರಾವ್ ಭೋಜ್‌ಗಡೆ ಮರಾಟ ವಿದ್ಯಾರ್ಥಿನಿಲಯಕ್ಕೆ 50,000 ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಡಬೇಕೆಂದು ನಿರ್ಧರ ಮಾಡಿದ್ದಾರೆ. ಉದಾರವಾದ ಅವರ ಈ ಧನಸಹಾಯದ ವಿಚಾರವನ್ನು ನಿಮಗೆ ತಿಳಿಸಲು ನಾನು ಬಹಳವಾಗಿ ಸಂತೋಷಿಸುತ್ತೇನೆ. ಈ ವಿದ್ಯಾರ್ಥಿನಿಲಯಕ್ಕೆ ಈಗಾಗಲೇ ಅವರಿಂದ ವಿಶೇಷವಾಗಿ ಸಹಾಯವು ದೊರೆತಿದೆ. ಅವರು ಇನ್ನೂ ಧರ್ಮಕಾರ್ಯಗಳನ್ನು ಮಾಡುವವರಾಗಿದ್ದಾರೆ. ವಿಶ್ವೇಶ್ವರಪುರದಲ್ಲಿ 60,000 ರೂಪಾಯಿಗಳನ್ನು ವೆಚ್ಚಮಾಡಿ ಒಂದು ದೇವಸ್ಥಾನವನ್ನೂ ಛತ್ರವನ್ನೂ ಅವರು ಕಟ್ಟಿಸುವವರಾಗಿದ್ದಾರೆ. ಶ್ರೀಮಾನ್ ಸಜ್ಜನರಾಯರಂಥ ಉದಾರಿಗಳು ಜನಿಸಿರುವ ಸಂಘವು ಸೌಭಾಗ್ಯಯುಕ್ತವೆನ್ನಲು ಅಡ್ಡಿಯೇ ಇಲ್ಲ.

ಮೈಸೂರು ವೀರಶೈವ ಅನಾಥಾಲಯ.

1932–33 ನೇ ಇಸವಿಯಲ್ಲಿ ಮೇಲ್ಕಂಡ ಅನಾಥಾಲಯಕ್ಕೆ ಸೇರಿ ಇಂಗ್ಲಿಷ್ ಮತ್ತು ಸಂಸ್ಕೃತ ವಿದ್ಯಾಭ್ಯಾಸ ಮಾಡಬೇಕೆಂಬ 18 ವರ್ಷ ವಯಸ್ಸಿನೊಳಗಿರತಕ್ಕ ಅನಾಥ ವೀರಶೈವ ವಿದ್ಯಾರ್ಥಿಗಳು 1932 ನೇ ಜೂನ್ ಮಾಹೆ 15 ನೇ ತಾರೀಖಿನೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಅಪ್ಲಿಕೇಷನ್ ಹಾಕಿಕೊಳ್ಳಬೇಕು. 15 ನೇ ತಾರೀಖಿನಿಂದಾಚೆಗೆ ಬರತಕ್ಕ ಅಪ್ಲಿಕೇಷನ್‌ಗಳಿಗೆ ನಿಗಾ ಕೊಡಲಾಗುವುದಿಲ್ಲ. ಅಪ್ಲಿಕೇಷನ್ ಫಾರಂಗಳನ್ನೂ ಮತ್ತು ಜವಾಬನ್ನು ಅಪೇಕ್ಷಿಸುವವರು ಒಂದೂಕಾಲು ಆಣೆ ಪೋಸ್ಟ್‌ಸ್ಟಾಂಪ್ ಇರಿಸಿ ಅಪ್ಲಿಕೇಷನ್‌ಗಳನ್ನು ರವಾನಿಸಬೇಕು.

R. MALLIKARJUNAPPA,
President,
Veerashiva Anathalaya, Mysore.

Office of the Chairman,
City Improvement Trust Board,
Mysore.

NOTICE.

Eleven very good Building sites in Chamundi Extension, Mysore will be sold in public auction on Friday the 20th May 1932 at 8 A. M.

For further particulars apply to the Chairman City Improvement Trust Board, Mysore.

T. G. RAMA IYER,
Dated 9th May 1932. *Chairman.*

ನೋಟೀಸು.

ಮೈಸೂರು ಸಿಟಿ ಚಾಮುಂಡಿ ಬಡಾವಣೆಯಲ್ಲಿರುವ ಹನ್ನೊಂದು ಒಳ್ಳೆಯ ಸೈಟ್‌ಗಳು 1932 ನೇ ಇಸ್ವಿ ಮೇ ಮಾಹೇ 20 ನೇ ತಾರೀಖು ಶುಕ್ರವಾರ ಪ್ರಾತಃಕಾಲ 8 ಘಂಟೆಗೆ ಹರಾಜುಮಾಡಲ್ಪಡುತ್ತವೆ.

ಹೆಚ್ಚು ತಪಸೀಲ್ ತಿಳಿಯಲಪೇಕ್ಷೆಯುಳ್ಳವರು ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡು ಛೇರ್‌ಮನ್‌ರವರಿಗೆ ಬರೆದುಕೊಳ್ಳತಕ್ಕದ್ದು.

T. G. RAMA Iyer.
ತಾ|| 9–5–1932 ಛೇರ್‌ಮನ್

ತುಂಕೂರು ಡಿಸ್ಟ್ರಿಕ್ಟು ಬೋರ್ಡು.

ನೋಟಿಫಿಕೇಷನ್ ನಂಬರ್ ಎಲ್. ಎಫ್. 2 C–979–31–32
ತಾರೀಕು 5 ನೆಯ ಮೇ ಮಾಹೆ 1932.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :—

ಈ ಡಿಸ್ಟ್ರಿಕ್ಟಿನಲ್ಲಿರತಕ್ಕ ಈ ಕೆಳಗೆ ನಮೂದುಮಾಡಿರುವ ಡಿಸ್ಟ್ರಿಕ್ಟ್ ಬೋರ್ಡು ಸಂತೆಗಳಲ್ಲಿ 1932–33 ನೇ ಸಾಲಿನಲ್ಲಿ ಸುಂಕ ವಸೂಲ್ಮಾಡುವ ಹಕ್ಕನ್ನು ಆಯಾಯ ಸಂತೆಗಳು ನಡೆಯುವ ಸ್ಥಳಗಳ ಮುಂದೆ ನಮೂದಿಸಿರುವ ಸ್ಥಳಗಳಲ್ಲಿಯೂ ಮತ್ತು ತಾರೀಖುಗಳಲ್ಲಿಯೂ ಬಹಿರಂಗವಾಗಿ ದುಸರ್ ಹರಾಜು ಮಾಡಲಾಗುತ್ತೆ. ಇಷ್ಟವುಳ್ಳವರು ಧಡದರಖಾಸ್ತು ಮಾಡಬಹುದು. ಹರಾಜು ಷರತ್ತುಗಳು ಮತ್ತು ಷೆಡ್ಯೂಲ್ ರೇಟುಗಳನ್ನೊಳಗೊಂಡ ನೋಟೀಸನ್ನು ತುಂಕೂರು ಡಿಸ್ಟ್ರಿಕ್ಟು ಬೋರ್ಡು ಆಫೀಸಿನಲ್ಲಿ ಪಡೆಯಬಹುದು.

ಜಂಜರ್ ನಂಬರು	ಸಂತೆಗಳ ಹೆಸರು	ಹರಾಜುಮಾಡುವ ಸ್ಥಳ	ಹರಾಜು ತಾರೀಖು
1	ಹೆಬ್ಬೂರು	ತುಂಕೂರು ಡಿಸ್ಟ್ರಿಕ್ಟು ಬೋರ್ಡು ಆಫೀಸು	19-5-1932
2	ಬೆಳ್ಳಾವಿ		
3	ಕ್ಯಾತಸಂದ್ರ		
4	ಹೊನ್ನುಡಿಕೆ		
5	ಶಿರಾ		
6	ಕಲ್ಲೂರು	ಗುಬ್ಬಿ ಟ್ರಾವಿಲರ್ಸ್ ಬಂಗಲೆ	20-5-1932
7	ಯಡಿಯೂರು	ಕುಣಿಗಲ್ ಮುಸಾಫರ್‌ಖಾನೆ	26-5-1932
8	ಅಮೃತೂರು		
9	ಹುತ್ರಿದುರ್ಗ		
10	ನಾಗಸಂದ್ರ		
11	ನಿಡುಸಾಲೆ		
12	ಮಾವತ್ತೂರು	ಕೊರಟಗೆರೆ ಟ್ರಾವಿಲರ್ಸ್ ಬಂಗಲೆ	27-5-1932

ಡಿ. ಎಸ್. ಮಲ್ಲಪ್ಪ,
ಪ್ರೆಸಿಡೆಂಟು,
ಡಿಸ್ಟ್ರಿಕ್ಟು ಬೋರ್ಡು, ತುಂಕೂರು ಡಿಸ್ಟ್ರಿಕ್ಟು

ಶ್ರೀಮದ್ವೀರಶೈವ ಫ್ರೀ ಬೋರ್ಡಿಂಗ ಬೆಳಗಾಂವ.

ಬರುವ ಜೂನ (1932) ತಿಂಗಳ ಒಂದನೇ ತಾರೀಖಿನಿಂದ ಬೆಳಗಾಂವಿಯಲ್ಲಿ ಇಂಗ್ಲೀಷ ಕಲಿಯುವ ವೀರಶೈವ ಬಡ ವಿದ್ಯಾರ್ಥಿಗಳ ದೆಸೆಯಿಂದ ಕೊಣ್ಣೂರ ( ) ಶ್ರೀಗಳವರು ಮತ್ತು ನಾಗನೂರ ( ) ರುದ್ರಾಕ್ಷಿ ಮಠದ ಶ್ರೀಗಳವರು ಒಂದು ಫ್ರೀ ಬೋರ್ಡಿಂಗ ಪ್ರಾರಂಭ ಮಾಡುವವರಿದ್ದಾರೆ. ಕಾರಣ ಸದರೀ ಬೋರ್ಡಿಂಗಿಗೆ ಬರಲಿಚ್ಛಿಸುವ ವಿದ್ಯಾರ್ಥಿಗಳು ಸಮಕ್ಷಮ ಅಥವಾ ನಮ್ಮಲ್ಲಿ ದೊರೆಯುವ ಅರ್ಜಿಫಾರ್ಮ ಟಪಾಲಿನಿಂದ ತರಿಸಿಕೊಂಡು ಮಾಹಿತಿಯನ್ನು ತುಂಬಿ ಕಳಿಸಬೇಕು. ಈ ವರ್ಷ ಇಪ್ಪತ್ತೈದು ವಿದ್ಯಾರ್ಥಿಗಳಿಗೆ ಊಟದ ಮತ್ತು ಇರುವ ವ್ಯವಸ್ಥೆಯು ಇರುವದು. ಅರ್ಜಿ ಮಾಡತಕ್ಕವರು 1932 ನೇ ಮೇ ತಿಂಗಳ 21 ನೇ ತಾರೀಖಿನೊಳಗಾಗಿ ನಮಗೆ ಅರ್ಜಿಯು ಮುಟ್ಟುವಂತೆ ಕಳಿಸಬೇಕು. ಅರ್ಜಿಯ ನಮೂನೆಗಳು ಮರ್ಡಿಮಠ (ಪೋಷ್ಟ, ಗೋಕಾಕ ತಾಲ್ಲು) ದಲ್ಲಿ ಸಿಗುವವು. ಟಪಾಲಿನಿಂದ ತರಿಸಿಕೊಳ್ಳುವವರು ಪೋಷ್ಟ ತಿಕೀಟು ಕಳಿಸಿದಲ್ಲಿ ಫಾರ್ಮ ಕಳಿಸುವದರಲ್ಲಿ ಬರುವದು.

ಕೊಣ್ಣೂರ ಮರ್ಡಿಮಠ,
ತಾ|| 4-5-32.

ವ್ಯವಸ್ಥಾಪಕ,
ಶ್ರೀ ಬೋರ್ಡಿಂಗ ಬೆಳಗಾಂವ.

ಗೃಹಕೃತ್ಯದ ನೋಟೀಸ್.

ಚಿತ್ರದುರ್ಗ ಡಿಸ್ಟ್ರಿಕ್ಟು ಜಗಲೂರು ತಾಲ್ಲೂಕು ಸೊಕ್ಕೆಗ್ರಾಮದ ವಾಸಿ ನಾಗಲಗಟ್ಟಿ ಭೀಮಪ್ಪ ಬಿನ್ ಭೀಮಪ್ಪನು ಈ ಮೂಲಕ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ :—

ಹಾಲಿ ಜಗಲೂರು ತಾಲ್ಲೂಕು ದೇವಿಕೆರೆಯಲ್ಲಿ ವಾಸವಾಗಿರುವ ಮರಿಯಪ್ಪಳ ಈರಪ್ಪನ ಮಗಳು ನಾಗವ್ವ ಎಂಬಾಕೆಯನ್ನ ನಾನು ಆನಂದ ನಾಮಸಂವತ್ಸರದಲ್ಲಿ ಮದುವೆಯಾಗಿದ್ದೆನು. ಆಕೆಯು ದುರ್ವೃತ್ತಿಗೆ ಮನಸ್ಸುಕೊಟ್ಟು ವ್ಯಭಿಚಾರಕ್ಕೆ ಬಿದ್ದದ್ದರಿಂದ ಆಕೆಯು ನನ್ನ ಮನೆಯನ್ನು ಆ ವರ್ಷವೆ ತ್ಯಜಿಸಿ ವ್ಯಭಿಚಾರ ನಡಿಸುತ್ತಾ ಇದುವರೆಗೂ ನನ್ನಲ್ಲಿಗೆ ಬರದೆ ನನ್ನಲ್ಲಿ ಯಾವ ಸಂಪರ್ಕವೂ ಮಾಡದೆ ಇರುತ್ತಾಳೆ. ಹೀಗಿರುವಲ್ಲಿ ಈಗ್ಗೆ ಸುಮಾರು 5 ವರ್ಷದ ಕೆಳಗೆ ಆಕೆಯು 1 ಹೆಣ್ಣು ಕೂಸನ್ನ ಹಡದುಕೊಂಡಿರುವುದಾಗಿಯೂ, ಈಚೆಗೆ ಆಕೆಯು ಪುನಃ ಗರ್ಭಿಣಿಯಾಗಿರುವಂತೆಯೂ ವರ್ತಮಾನವಿರುತ್ತೆ. ಆದ್ದರಿಂದ ಸದರಿ ನಾಗವ್ವ ಮತ್ತು ಆಕೆಗೆ ಹುಟ್ಟಿರುವ ಹೆಣ್ಣುಮಗು ಮತ್ತು ಆಕೆಗೆ ಮುಂದೆ ಹುಟ್ಟಬಹುದಾದ ಮಕ್ಕಳಿಗೂ ನನಗೂ ನನ್ನ ಆಸ್ತಿಗೂ ಯಾವ ವಿಧವಾದ ಸಂಬಂಧವೂ ಇಲ್ಲ ಎಂಬ ಅಂಶ ವಿಶದಪಡಿಸಿರುತ್ತೆ.

[3—2] ನಾಗಲಗಟ್ಟಿ ಭೀಮಪ್ಪ.

ಚಿಂತಾಮಣಿಯಲ್ಲಿ ಹೈಸ್ಕೂಲು ಕಟ್ಟಡದ ಅಸ್ತಿಭಾರಶಿಲೆಯನ್ನು ಪ್ರತಿಷ್ಠಿಸುವಾಗ್ಗೆ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಭಾಷಣ.

(1932 ನೆಯ ಇಸವಿ ಮೇ 12 ನೆಯ ತಾರೀಖು)

ಮಹಾಶಯರೇ,—

ಈ ದಿನ ನೆರವೇರುವುದಾಗಿರುವ ಶುಭಕಾರ್ಯದಲ್ಲಿ ಭಾಗಿಯಾಗುವುದು ನನಗೆ ವಿಶೇಷ ಸಂತೋಷಕರವಾಗಿದೆ. ಎರಡು ವಿಚಾರಗಳಲ್ಲಿ ನನ್ನ ಸಹಾನುಭೂತಿಯನ್ನೂ ಸಂತೋಷವನ್ನೂ ವ್ಯಕ್ತಪಡಿಸಲು ಇದರಿಂದ ನನಗೆ ಅವಕಾಶವು ದೊರೆತಿದೆ. ಮೊದಲನೆಯದು: ಹೈಸ್ಕೂಲು ವಿದ್ಯಾಭ್ಯಾಸದ ಸೌಕರ್ಯವನ್ನು ಹೆಚ್ಚುಹೆಚ್ಚಾಗಿ ಕಲ್ಪಿಸಿಕೊಳ್ಳುವ ವಿಚಾರದಲ್ಲಿ ಬಹುಮಂದಿಗಳಿಗೆ ಉಂಟಾಗಿರುವ ವಿಶೇಷ ಹೆಚ್ಚಿನ ಕುತೂಹಲ. ಇದರಲ್ಲಿ ನನಗೆ ವಿಶೇಷ ಸಹಾನುಭೂತಿಯುಂಟು. ಎರಡನೆಯದು; ಸಂಸ್ಥಾನದ ನಾನಾ ಪ್ರಾಂತಗಳ ಜನರೂ ಸ್ವಾವಲಂಬನದಿಂದ ಮುಂದೆ ಬಂದು ಈ ರೀತಿ ಮ್ಯುನಿಸಿಪಲ್ ಹೈಸ್ಕೂಲುಗಳನ್ನು ತಂತಮ್ಮ ಊರುಗಳಲ್ಲಿ ಸ್ಥಾಪಿಸಿಕೊಳ್ಳುತ್ತಿರುವ ಈ ಏರ್ಪಾಡಿನಿಂದ ಮುಂದೆ ಬಹಳ ಅನುಕೂಲವುಂಟಾಗುವ ಸಂಭವವಿದೆ. ಇವೆರಡೂ ನನಗೆ ಪ್ರಿಯಕರವಾದ ಅಂಶಗಳೇ ಸರಿ.

ಕಳೆದ ನಾಲ್ಕು ವರುಷಗಳ ಅವಧಿಯಲ್ಲಿ ಮ್ಯುನಿಸಿಪಾಲಿಟಿಗಳ ಮತ್ತು ಡಿಸ್ಟ್ರಿಕ್ಟು ಬೋರ್ಡುಗಳ ಒತ್ತಾಸೆಯಿಂದಲೂ ಅವಲಂಬನದಿಂದಲೂ ಈ ಬಗೆಯ ಆರು ಮ್ಯುನಿಸಿಪಲ್ ಹೈಸ್ಕೂಲುಗಳು ಸ್ಥಾಪಿತವಾಗಿವೆ. ತಂತಮ್ಮ ಸ್ಥಳಗಳಲ್ಲಿ ಹೈಸ್ಕೂಲುಗಳನ್ನು ಏರ್ಪಡಿಸಲು ಸಹಾಯಮಾಡುವುದಾಗಿ ಹೇಳಿ, ಮೊಟ್ಟಮೊದಲು ಮುಂದೆ ಬಂದಂಥವರ ಗುಂಪಿಗೇ ಈ ಊರಿನವರೂ ಸೇರುವುದು ಸಂತೋಷಕರವಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸವನ್ನು ವೃದ್ಧಿಗೊಳಿಸಿ ಪ್ರೈಮರಿ ಸ್ಕೂಲುಗಳನ್ನು ವಿಶೇಷವಾಗಿ ಸ್ಥಾಪಿಸಿಕೊಡಬೇಕೆಂಬುದಾಗಿ ಪ್ರಜೆಗಳಲ್ಲಿ ಬಹುಮಂದಿಗಳು ಬಯಸುತ್ತಾರೆ. ಆದರೆ ಆ ಏರ್ಪಾಡಿನ ಪರಿಣಾಮ ಫಲವಾಗಿ ಮಿಡ್ಲ್ ಸ್ಕೂಲುಗಳೂ ಮತ್ತು ಹೈಸ್ಕೂಲುಗಳೂ ಹೆಚ್ಚಬೇಕೆಂಬುದನ್ನು ಮಾತ್ರ ಅವರಲ್ಲಿ ಅನೇಕರು ಗಮನಿಸುವುದಿಲ್ಲ. ಕೋಲಾರದ ಡಿಸ್ಟ್ರಿಕ್ಟು ಬೋರ್ಡಿನವರು ತಮ್ಮ ಡಿಸ್ಟ್ರಿಕ್ಟಿನಲ್ಲಿ ಎರಡು ಮ್ಯುನಿಸಿಪಲ್ ಹೈಸ್ಕೂಲುಗಳನ್ನು ಏರ್ಪಡಿಸಲು ಸಹಾಯ ಮಾಡುವುದಾಗಿ ಮುಂದೆ ಬಂದುದನ್ನು ನೋಡಿದರೆ, ತಮ್ಮ ಡಿಸ್ಟ್ರಿಕ್ಟಿನ ಏಳಿಗೆಯ ಮೇಲೆ ಅವರಿಗಿರುವ ಅಭಿಮಾನವೂ, ದೂರದೃಷ್ಟಿಯೂ ಚೆನ್ನಾಗಿ ವ್ಯಕ್ತವಾಗುತ್ತವೆ.

ಈ ಹೈಸ್ಕೂಲುಗಳ ಸಾಧನ ಸಲಕರಣೆಗಳ ವಿಚಾರದಲ್ಲಿ ಅವುಗಳ ಆಡಳಿತಗಾರರಾಗಲಿ ಅಥವಾ ವಿದ್ಯಾಭ್ಯಾಸದ ಇಲಾಖೆಯವರಾಗಲಿ, ಪೂರ್ತಿಯಾಗಿ ತೃಪ್ತರಾಗಿದ್ದಾರೆಂದು ಹೇಳುವಹಾಗಿಲ್ಲ. ಈಗಿರುವ ನ್ಯೂನತೆಗಳನ್ನೆಲ್ಲಾ ಶೀಘ್ರದಲ್ಲೇ ಸರಿಪಡಿಸುವುದಕ್ಕಾಗಿ ಸರ್ವ ಪ್ರಯತ್ನಗಳನ್ನೂ ಅವರು ಮಾಡುವರೆಂಬುದರಲ್ಲಿ ಸಂದೇಹವಿಲ್ಲ. ಸಾಧನ ಸಲಕರಣೆಗಳು ಸಾಲದೆ ಇರುವ ಕೊರತೆಗೆ ಪ್ರತಿಯಾಗಿ ಈ ಏರ್ಪಾಡಿನ ಮುಖ್ಯ ಲಕ್ಷಣವಾಗಿ ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ಸ್ನಿಗ್ಧ ಸಂಬಂಧವಿರುವ ಅನುಕೂಲವನ್ನು ನಾವು ಗಮನಿಸಬೇಕು. ಈ ಮ್ಯುನಿಸಿಪಲ್ ಹೈಸ್ಕೂಲುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆ. ಆದಕಾರಣ, ದೊಡ್ಡ ದೊಡ್ಡ ಸ್ಕೂಲುಗಳಲ್ಲಿರುವುದಕ್ಕಿಂತಲೂ ಹೆಚ್ಚಾಗಿ ಉಪಾಧ್ಯಾಯರುಗಳು ವಿದ್ಯಾರ್ಥಿಗಳೊಡನೆ ಈ ರೀತಿ ವರ್ತಿಸುತ್ತ, ಅವರ ವಿಚಾರದಲ್ಲಿ ವಿಶೇಷವಾಗಿ ಗಮನಕೊಟ್ಟು ನೋಡಿಕೊಳ್ಳುವುದು ಸಾಧ್ಯ. ಇದು ಈ ಏರ್ಪಾಡಿಗೇ ಒಂದು ವಿಧದಲ್ಲಿ ಹೆಚ್ಚಿನ ಬಲವನ್ನೂ, ವರ್ಚಸ್ಸನ್ನೂ ಕೊಡುವ ದೊಡ್ಡದೊಂದು ಜೀವಾಳ. ಇದರ ದೆಸೆಯಿಂದ ಈಗ ಸಾಧನ ಸಲಕರಣೆಗಳು ಸಾಲದೆ ಇರುವ ಕೊರತೆಯೂ ಅಷ್ಟಾಗಿ ಗಣನೀಯವಲ್ಲವೆಂದು ತೋರುವಂತಾಗಿದೆ. ಈ ಮ್ಯುನಿಸಿಪಲ್ ಹೈಸ್ಕೂಲುಗಳ ಹೆಡ್ಮಾಸ್ಟರುಗಳು (ಮುಖ್ಯೋಪಾಧ್ಯಾಯರು) ಚಿಕ್ಕ ವಯಸ್ಸಿನವರು. ಇದೂ ನಾವು ಮುಖ್ಯವಾಗಿ ಗಮನಿಸಬೇಕಾದ ಮತ್ತೊಂದು ಅಂಶ. ಇವರುಗಳು ಇತರ ಹೈಸ್ಕೂಲುಗಳಲ್ಲಿ ಸೇರಿದ್ದರೆ ಬಹುಕಾಲದವರೆಗೂ ಅಸಿಸ್ಟೆಂಟ್ ಮಾಸ್ಟರುಗಳಾಗಿ (ಸಹಾಯೋಪಾಧ್ಯಾಯರಾಗಿ) ಕಾಲವನ್ನು ತಳ್ಳಬೇಕಾಗಿದ್ದಿತು. ಈಗ ಅದು ತಪ್ಪಿ, ಇವರುಗಳು ಒಂದು ಹೈಸ್ಕೂಲಿನ ಆಡಳಿತವನ್ನು ನಿರ್ವಹಿಸುವುದಕ್ಕೆ ಅವಕಾಶವನ್ನು ಪಡೆದಿದ್ದಾರೆ. ಇದು ಎಲ್ಲರೂ ಬಯಸುವ ಆದರೆ ಹಲವರಿಗೆ ದುರ್ಲಭವಾದ ಸುಯೋಗವೇ ಸರಿ. ಕೆಲವು ಮ್ಯುನಿಸಿಪಲ್ ಹೈಸ್ಕೂಲುಗಳಿಂದ ಸ್ಕೂಲ್ ಫೈನಲ್ ಪರೀಕ್ಷೆಗೆ ಹೋಗಿದ್ದ ವಿದ್ಯಾರ್ಥಿಗಳು ಉತ್ತಮರೀತಿಯಲ್ಲಿ ತೇರ್ಗಡೆಹೊಂದಿದ್ದಾರೆಂದು ನನಗೆ ತಿಳಿಯಬಂದಿದೆ. ಕಳೆದ ವರುಷ ಈ ಊರಿನ ಹೈಸ್ಕೂಲಿನಿಂದ ಆ ಪರೀಕ್ಷೆಗೆ ಹೋಗಿದ್ದ ವಿದ್ಯಾರ್ಥಿಗಳ ಪರೀಕ್ಷೆಯ ಫಲಿತಾಂಶವು ವಿಶೇಷ ತೃಪ್ತಿಕರವಾಗಿರಲಿಲ್ಲವೆಂಬುದೇನೋ ನಿಜ. ಈ ಹೈಸ್ಕೂಲಿನ ಹೆಡ್ಮಾಸ್ಟರೂ, ಅವರ ಜೊತೆಯವರೂ ಅನ್ಯೋನ್ಯಭಾವದಿಂದ ಕೂಡಿ ಸರ್ವದಾ ಉತ್ಸಾಹದಿಂದ ಕೆಲಸಮಾಡಿ, ಇದು ಚಿಂತಾಮಣಿ ತಾಲ್ಲೂಕಿನಲ್ಲಿ ಸಂಸ್ಕೃತಿಯ ಬೀಡೆನಿಸುವಂತೆ ರೂಪುಗೊಳಿಸುವರೆಂದು ನಾನು ನಂಬಿದ್ದೇನೆ. ಹೀಗಾಗಬೇಕಾದುದು ಯುಕ್ತವೂ ಹೌದು; ಹೀಗಾಗುವುದು ಸಾಧ್ಯವೂ ಇದೆ.

ಪ್ರತಿಯೊಂದು ತಾಲ್ಲೂಕು ಕಚೇರಿಯಲ್ಲಿಯೂ ಒಂದು ಹೈಸ್ಕೂಲು ಏರ್ಪಡುವಂತೆ ಮಾಡಬೇಕೆಂಬುದು ವಿದ್ಯಾಭ್ಯಾಸದ ಇಲಾಖೆಯವರಿಗಿರುವ ಆಸೆ. ಕೊಚ್ಚಿ ಮತ್ತು ತಿರುವಾಂಕೋಡು ಸಂಸ್ಥಾನಗಳಲ್ಲಿರುವ ಹೈಸ್ಕೂಲುಗಳ ಹೆಚ್ಚು ಸಂಖ್ಯೆಯನ್ನು ಪರಿಗಣಿಸಿದರೆ, ಹೀಗೆ ತಾಲ್ಲೂಕಿಗೊಂದರಂತೆ ಹೈಸ್ಕೂಲುಗಳು ಏರ್ಪಡುವುದೇನೂ ಹೆಚ್ಚಲ್ಲ. ಹೈಸ್ಕೂಲು ವಿದ್ಯಾಭ್ಯಾಸ ಪ್ರಚುರವಾಗುವುದೇನೊ ಒಳ್ಳೆಯದೇ ಸರಿ. ಆದರೆ ಅದರ ದೆಸೆಯಿಂದ ಕೊಂದರೆಗೂ ಅತಾಳ್ಪಣೆಗಳಿಗೂ ಅವಕಾಶವಾಗದಂತೆ ಅದನ್ನು ಸರಿಯಾದ ಸಮಳೆಟ್ಟಿನಲ್ಲಿ ಯುಕ್ತರೀತಿಯಲ್ಲಿ ನಡೆಯಿಸಬೇಕಾದುದು ಅವಶ್ಯಕ. ವಿಶ್ವವಿದ್ಯಾನಿಲಯದ ವ್ಯಾಸಂಗಕ್ಕೆ ಹೆಚ್ಚು ಮಂದಿಗಳನ್ನು ಸೇರಿಸಿಕೊಳ್ಳಕೂಡದೆಂಬ ವಿಷಯದ ಸಂಬಂಧವಾಗಿ ಸೆನೆಟ್ ಸಭೆಯಲ್ಲಿ ಸ್ವಾರಸ್ಯವಾಗಿ ಚರ್ಚೆಯು ನಡೆಯಿತು. ಉದ್ಯೋಗಗಳು ದೊರೆಯುವುದು ಸಾಧ್ಯವಿರುವುದಕ್ಕಿಂತಲೂ ಹೆಚ್ಚು ಮಂದಿಗಳು ವಿಶ್ವವಿದ್ಯಾನಿಲಯದ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದರಿಂದ, ವಿಶ್ವವಿದ್ಯಾನಿಲಯದ ತರಗತಿಗಳಿಗೆ ಸೇರಿಸಿಕೊಳ್ಳುವವರ ಸಂಖ್ಯೆಯೇ ಮಿತವಾಗಿರುವಂತೆ ಮಾಡಬೇಕೆಂಬುದೇ ಆ ವಿಷಯದ ಪರವಾಗಿ ಮಾತನಾಡಿದವರ ವಾದಸರಣಿ. ಈ ವಿಚಾರವು ಹಾಗಿರಲಿ. ಆ ತರಗತಿಗಳಿಗೆ ಹೋಗುವವರ ಸಂಖ್ಯೆಯೂ, ಅವಕ್ಕೆ ಹೋಗಲು ಅವರ ಅರ್ಹತೆಯೂ ಹೈಸ್ಕೂಲುಗಳಲ್ಲಿ ನಡೆಯುವ ಕೆಲಸದ ವಿಚಕ್ಷಣೆಗೂ, ಸ್ವಭಾವಕ್ಕೂ ಅನುಸಾರವಾಗಿರುತ್ತವೆಂಬುದು ತಿಳಿದೇ ಇದೆ. ಹೈಸ್ಕೂಲುಗಳು ವಿಶ್ವವಿದ್ಯಾನಿಲಯಕ್ಕೆ ಹೋಗುವವರಿಗೆ ಶಿಕ್ಷಣದ ಸ್ಥಾನವಾಗಿರುವುದು ಮಾತ್ರವೇ ಅಲ್ಲ. ವಿಶ್ವವಿದ್ಯಾನಿಲಯಕ್ಕೆ ಹೋಗದೆ ಜೀವನದ ನಾನಾ ವೃತ್ತಿಗಳನ್ನೂ ಅವಲಂಬಿಸಲಿಚ್ಛಿಸುವ ತರುಣರಿಗೂ ತಕ್ಕಮಟ್ಟಿಗೆ ವಿದ್ಯಾಪರಿಚಯ ಮಾಡಿ ಕೊಡುವ ಸಾಧನಗಳೂ ಆಗಿವೆ. ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿಕೊಡುವ ವಿದ್ಯಾರ್ಥಿಗಳ ಶಿಕ್ಷಣದ ಮಟ್ಟವೇನೋ ಬಹಳ ಹೆಚ್ಚಿನದಾಗಿಯೇ ಇರಬೇಕಾದುದು ಅವಶ್ಯಕ. ವಿಶ್ವವಿದ್ಯಾನಿಲಯದ ಪ್ರೌಢ ವ್ಯಾಸಂಗವನ್ನು ನಿರ್ವಹಿಸುವುದಕ್ಕೆ ತಕ್ಕಷ್ಟು ಯೋಗ್ಯತೆಯಿರುವವರನ್ನು ಹೈಸ್ಕೂಲುಗಳು ಸಿದ್ಧಗೊಳಿಸಲೇಬೇಕು. ಆದರೆ ಆರೀತಿ ಹೆಚ್ಚಿನ ಮಟ್ಟಕ್ಕೇರಲು ಅವಶ್ಯಕವಾದ ವಿಶೇಷ ವಿಧದ ಸಾಮರ್ಥ್ಯವಿಲ್ಲದಿದ್ದರೂ, ಹಲವು ವೃತ್ತಿಗಳನ್ನೂ ಅನುಸರಿಸುವುದಕ್ಕೆ ಯೋಗ್ಯತೆಯಿರುವ ತರುಣರೂ ಇರುತ್ತಾರೆ. ವಿಶ್ವವಿದ್ಯಾನಿಲಯಕ್ಕೆ ಹೋಗಿ ವ್ಯಾಸಂಗಮಾಡಲಾರದವರು ಹಾಗೆ ವೃತ್ತಿಗಳನ್ನು ಅನುಸರಿಸಬೇಕಾದುದೇ ಅವಶ್ಯಕವೂ ಹೌದು. ಅಂಥವರಿಗೂ ಹೈಸ್ಕೂಲುಗಳಲ್ಲಿ ತಕ್ಕ ಶಿಕ್ಷಣವು ದೊರೆಯಬೇಕು. ಅವರು ವಿಶ್ವವಿದ್ಯಾನಿಲಯದ ವ್ಯಾಸಂಗಕ್ಕೆ ತಕ್ಕವರಲ್ಲವೆಂದು ತೋರಿದ ಮಾತ್ರಕ್ಕೇ, ಅವರಿಗೆ ಉತ್ತಮರೀತಿಯ ಹೈಸ್ಕೂಲು ಶಿಕ್ಷಣದ ಪ್ರಯೋಜನಗಳಾದರೂ ಲಭಿಸದೆ ಹೋಗುವುದು ಸರ್ವಥಾ ಯುಕ್ತವಲ್ಲ. ದೇಶದ ಪ್ರತಿಯೊಬ್ಬ ಹುಡುಗನಿಗೂ, ಪ್ರತಿಯೊಬ್ಬ ಹುಡುಗಿಗೂ, ಹೈಸ್ಕೂಲು ವಿದ್ಯಾಭ್ಯಾಸವು ಜನ್ಮಸಿದ್ಧವಾದ ಹಕ್ಕೆಂಬ ಭಾವನೆಯು ಈಗ ಉಂಟಾಗುತ್ತಿದೆ. ಹೈಸ್ಕೂಲಿನಲ್ಲಿ ವ್ಯಾಸಂಗಮಾಡುವವರಲ್ಲಿ ಕೆಲವರೇನೋ ವಿಶ್ವವಿದ್ಯಾನಿಲಯದ ವ್ಯಾಸಂಗಕ್ಕೆ ಹೋಗಲಿ. ಆದರೆ ಉಳಿದ ಹಲವರಿಗೂ ಸಹ, ಸಾಮಾನ್ಯ ಸಂಸ್ಕೃತಿಯ ದೃಷ್ಟಿಯಿಂದಲೂ, ಯಾವುದಾದರೂ ಒಂದು ವೃತ್ತಿಯಲ್ಲಿ ವಿಶೇಷತಃ ಅಭಿರುಚಿಯನ್ನುಂಟುಮಾಡುವ ದೃಷ್ಟಿಯಿಂದಲೂ, ಹೈಸ್ಕೂಲು ಶಿಕ್ಷಣವು ಸಮಗ್ರವಾಗಿರಬೇಕಾದುದು ಅವಶ್ಯಕ. ಸಂಸ್ಥಾನದ ಹೈಸ್ಕೂಲು ವಿದ್ಯಾಭ್ಯಾಸದ ಶಿಕ್ಷಣ ವ್ಯವಸ್ಥೆಯು, ವಿಶ್ವವಿದ್ಯಾನಿಲಯದ ಪ್ರೌಢವ್ಯಾಸಂಗದಿಂದ ಹಿಡಿದು ನಾನಾ ವೃತ್ತಿಗಳವರೆಗೂ, ಜೀವನದ ಸಮಸ್ತ ಕ್ಷೇತ್ರಗಳಿಗೂ ಶಿಕ್ಷಿತರಾದ ಜನರನ್ನು ಒದಗಿಸುವ ಕೇಂದ್ರಸ್ಥಾನವಾಗಿರಬೇಕು.

ಹೀಗೆಂದ ಬಳಿಕ ಇನ್ನು ಇದಕ್ಕೆಲ್ಲ ಹಣವೆಲ್ಲಿಂದ ಬರಬೇಕೆಂಬ ಪ್ರಶ್ನೆಯು ಹುಟ್ಟಿಯೇ ಹುಟ್ಟುತ್ತದೆ. ಬಾಲಕ ಬಾಲಕಿಯರು ತಮಗೆ ಬೇಕಾದುದನ್ನು ಆರಿಸಿಕೊಳ್ಳುವಂತೆ ಬೇರೆ ಬೇರೆ ವ್ಯಾಸಂಗ ಕ್ರಮಗಳನ್ನು, ಅದರಲ್ಲಿಯೂ ಮುಖ್ಯವಾಗಿ ಯಾವುದಾದರೂ ಕಸಬುದಾರಿ ವೃತ್ತಿಯಕಡೆಗೆ ಮನಸ್ಸು ತಿರುಗುವಂತಹ ಬಗೆ ಬಗೆಯ ವ್ಯಾಸಂಗಕ್ರಮಗಳನ್ನು ಏರ್ಪಡಿಸುವುದೆಂದರೆ ವಿಶೇಷ ಹಣವು ಮುಟ್ಟಲೇಬೇಕು. ಆದರೆ ಅವಶ್ಯವಾಗಿ ಹಾಗೆ ಹಣವನ್ನು ವೆಚ್ಚಮಾಡಬೇಕು. ವಿಶೇಷ ಸಮರ್ಥರಾದ ಕೆಲವರ ಹೊರತು ಉಳಿದವರೆಲ್ಲರಿಗೂ ಅವರ ವ್ಯಾಸಂಗದಿಂದ ಫಲವಿಲ್ಲದೆ ಹೋಗಿರುವ ಈಗಿನ ಸ್ಥಿತಿಯನ್ನು ತಪ್ಪಿಸಬೇಕಾದರೆ, ಹೆಚ್ಚು ಹಣವನ್ನು ವ್ಯಯಮಾಡಲೇಬೇಕು. ಹೀಗೆ ಮಾಡುವುದರಿಂದ ಪರಿಣಾಮದಲ್ಲಿ ಅಪರಿಮಿತವಾದ ಪ್ರಯೋಜನಗಳಿರುವ ಕಾರಣ, ಈ ಹೆಚ್ಚು ವೆಚ್ಚವೂ ಉಚಿತವಾದುದೇ ಸರಿ. ಸರ್ಕಾರದಿಂದ ಧನಸಹಾಯಮಾಡುವ ಸಂಭವವನ್ನೇನೋ ಸದ್ಯದಲ್ಲಿ ಭರವಸೆ ಹೇಳುವಂತಿಲ್ಲ. ಆದರೂ ಈ ಬಗೆಯಲ್ಲಿ ವಿದ್ಯಾಭ್ಯಾಸಕ್ರಮವನ್ನು ಪರಿಷ್ಕರಿಸಿ ಅಭ್ಯುದಯಕ್ಕೆ ದಾರಿಮಾಡುವ ವಿಚಾರದಲ್ಲಿ ಸರ್ಕಾರದವರಿಗೆ ಯಾವಾಗಲೂ ಸಹಾನುಭೂತಿಯುಂಟು. ಅಲ್ಲದೆ ಮುಂದೆ ಯಥಾಕಾಲದಲ್ಲಿ ಅದಕ್ಕಾಗಿ ಧನಸಹಾಯ ಮಾಡುವುದೂ ಸರ್ಕಾರದವರಿಗೆ ಸಾಧ್ಯವಾಗುವುದೆಂದು ನಾನು ಹಾರೈಸುವೆನು.

ಮಹಾಶಯರೆ! ಈ ಹೈಸ್ಕೂಲು ಕಟ್ಟಡದ ಅಸ್ತಿಭಾರಶಿಲೆಯನ್ನು ನಾನು ಅತಿ ಸಂತೋಷದಿಂದ ಪ್ರತಿಷ್ಠಿಸುವೆನು. ಮುಂದಿನ ವರುಷಗಳಲ್ಲಿ ಇಲ್ಲಿ ವ್ಯಾಸಂಗಮಾಡುವ ವಿದ್ಯಾರ್ಥಿಗಳ ಮತ್ತು ಅವರ ಉಪಾಧ್ಯಾಯರ ಸಮಸ್ತ ಪ್ರಯತ್ನಗಳೂ ಸಫಲವಾಗಿ ನೆರವೇರುವಂತೆಯೂ, ಈ ಹೈಸ್ಕೂಲಿನಿಂದ ಚಿಂತಾಮಣಿ ತಾಲ್ಲೂಕಿಗೆಲ್ಲ ಸಂಸ್ಕೃತಿಯ ತನಿಬೆಳಕು ದೊರೆಯುವಂತೆಯೂ, ಜಗದೀಶ್ವರನು ಅನುಗ್ರಹಿಸಲೆಂದು ಪ್ರಾರ್ಥಿಸುವೆನು.

ಶ್ರೀ ಬಸವೇಶ್ವರಜಯಂತ್ಯುತ್ಸವಗಳು.

ತುಮ್ಮಿನಕಟ್ಟೆ

ಪದ್ಧತಿಯಂತೆ ತಾ|| 8 ನೇ ಭಾನುವಾರ ಭಗವಾನ್ ಶ್ರೀ ಬಸವೇಶ್ವರ ಜಯಂತಿಯು ಒಳ್ಳೆಯ ವಿಜೃಂಭಣೆಯಿಂದ ನೆರವೇರಿತು. ಬೆಳಗಿನ 6½ ಘಂಟೆಯಿಂದ 12 ಘಂಟೆಯ ವರೆವಿಗೆ ಈಶ್ವರದೇವರ ಅಭಿಷೇಕ, 1 ಘಂಟೆಯಿಂದ ಶೃಂಗರಿಸಿದ ಪಾಲಕಿಯಲ್ಲಿ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಫೋಟೋವನ್ನು ಮತ್ತು ಶ್ರೀ ಬಸವೇಶ್ವರ ಫೋಟೋವನ್ನು ಇಟ್ಟು ವಿಜೃಂಭಣೆಯಿಂದ ಕಟ್ಟಿದ ಉಚ್ಛಾಯದ ಮೇಲೆ ಈಶ್ವರದೇವರನ್ನು ಮುಹೂರ್ತಗೊಳಿಸಿ, ತಳಿರುತೋರಣಾದಿಗಳಿಂದ ಅಲಂಕರಿಸಿದ ಎಲ್ಲಾ ಪೇಟೆಯೊಳಗೆ ಬಾಜಾಬಜಂತ್ರಿಯಿಂದಲೂ ಜಯದೇವ ಭಜನಾಸಂಘದವರಿಂದಲೂ ಬಹಳ ವೈಭವದಿಂದ ನೆರವೇರಿಸಲ್ಪಟ್ಟಿತು.

ಉಲ್ಲಾಸದರ್ಶಿಗಳು,
1. ಕಬ್ಬಿಣಕಂತಿಮಠದ ಸಿದ್ಧಪ್ಪಯ್ಯನವರು,
2. ಹೊಸಮನೆ ಸಾಹುಕಾರ್ ಸಿದ್ಧರಾಮಪ್ಪನವರು,
3. ನವಿಂತ ಬಸವಲಿಂಗಪ್ಪನವರು.

ವ್ಯವಸ್ಥಾಪಕರು,
ಶರಬಣ್ಣ ಹಾದಿಮನೆ.

ಶಿರಾ ತಾ|| ಬದುನಕುಂಟೆ

ಇದೇ ತಾ|| 8 ನೇ ಭಾನುವಾರ ಇಲ್ಲಿಯ ಮಹಾಜನಗಳೆಲ್ಲಾ ಸೇರಿ ಹೊಸದಾಗಿ ಕಟ್ಟಿಸಿರತಕ್ಕ ಸ್ಕೂಲ್ ಕಟ್ಟಡವನ್ನು ತಳಿರುತೋರಣಗಳಿಂದ ಅಲಂಕರಿಸಿ ಜಗದುದ್ಧಾರಕನಾದ ಶ್ರೀ ಬಸವೇಶ್ವರನ ಭಾವಚಿತ್ರವನ್ನು ಪುಷ್ಪಾಲಂಕೃತವಾದ ಮಂಟಪದಲ್ಲಿ ಗಂಧಪುಷ್ಪಾದಿಗಳಿಂದ ಪೂಜಿಸಿ ಧೂಪ ದೀಪ ನೈವೇದ್ಯ ತಾಂಬೂಲಾರ್ಪಣದಿಂದಲೂ, ಮಂಗಳಾರತಿಗಳಿಂದಲೂ ಭಜನೆ ಮತ್ತು ವಾದ್ಯ ವೈಭವಗಳಿಂದಲೂ ಅರ್ಚಿಸಿದರು. ತರುವಾಯ ಮ|| ಈಶ್ವರಯ್ಯನವರು ಪ್ರಾಣಿದಯಾ ವಿಚಾರವನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಿ ನೆರೆದಿದ್ದ ಮಹಾಜನಗಳನ್ನು ಸಂತೋಷಪಡಿಸಿದರು. ಆ ಮೇಲೆ ಶ್ರೀ ಬಸವೇಶ್ವರಸ್ವಾಮಿಯ ಫೋಟೋವನ್ನು ಭಜನೆ ವಾದ್ಯಘೋಷಗಳಿಂದ ಊರಿನಲ್ಲೆಲ್ಲ ಮೆರವಣಿಗೆಯನ್ನು ಮಾಡಿಕೊಂಡು ಬಂದಮೇಲೆ ನೆರೆದಿದ್ದ ಸಭಾ ಜನ ಮತ್ತು ಪುರಜನರಿಗೆಲ್ಲ ಸ್ವಾಮಿಯ ಪ್ರಸಾದ, ಪಾನಕ ಫಲಾಹಾರಗಳು ಕೊಡಲ್ಪಟ್ಟವು. ಈ ಮಹೋತ್ಸವದಲ್ಲಿ ಭಾಗಿಗಳಾಗಿದ್ದ ಮಹಾಜನರಿಗೆ ಶ್ರೀ ಬಸವೇಶ್ವರಸ್ವಾಮಿಯು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುವ,

ಭಕ್ತಜನವಿಧೇಯ, ಎಂ. ಶಂಕರಪ್ಪ.

ಶಿವಯೋಗಮಂದಿರ.

" ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭೂತಲೇ |
ತದಾತದಾವತಾರೋಽಯಂ ಗಣೇಶಾನಾಮನುಗ್ರಹೀಕಲೇ ||"

ಅಂದರೆ ಭೂಲೋಕದಲ್ಲಿ ಯಾವಾಗ ಧರ್ಮವು ಕ್ಷೀಣತೆಯನ್ನು ಹೊಂದಿ ಅಧರ್ಮವು ತಲೆದೋರುವದೋ ಆ ಕಾಲದಲ್ಲಿ ಅವತರಿಸಿ ಧರ್ಮಹ್ರಾಸವನ್ನು ಕಳೆದು ತದುದ್ಧಾರವಮಾಡುವೆನೆಂದು ಪರಮಾತ್ಮನು ಕರುಣೆಯಿಂದ ಹೇಳಿರುವದು ಸರ್ವರಿಗೂ ತಿಳಿದ ಸಂಗತಿಯಾಗಿದೆ. ಅದರಂತೆ ಶ್ರೀಭಗವಾನ್ ಬಸವನು ಅವತರಿಸಿ ಸರ್ವ ಕಳೆಯನ್ನು ಕಳೆದುಕೊಂಡಿದ್ದ ವೀರಶೈವಮತವನ್ನು ಉನ್ನತಿಯ ಶಿಖರಕ್ಕೆ ಮುಟ್ಟಿಸಿದ್ದು ಯಾರಿಗೂ ಹೊಸಮಾತಲ್ಲ. ಇಂಥ ದ್ವಿತೀಯಶಂಭುವಾದ ಬಸವನ ಜಯಂತಿಯು ತಾ|| 8-5-1932 ನೇ ಭಾನುವಾರ ಇದ್ದ ಮೂಲಕ ಇಲ್ಲಿಯ ಮುಖ್ಯ ಮಠದ ಸಿಂಹಾಸನದಲ್ಲಿ ಶ್ರೀಬಸವನ ಭಾವಪಟವು ಅಲಂಕರಿಸಲ್ಪಟ್ಟು ಮಧ್ಯಾಹ್ನ 3½ ಘಂಟೆಗೆ ಶ್ರೀ ರೇಣುಕ ದೇಶಿಕರ ಅಧ್ಯಕ್ಷತೆಯಲ್ಲಿ ಸಭೆಸೇರಿ ಆದಿಯಲ್ಲಿ ಎಲ್ಲರೂ ಶ್ರೀ ಬಸವನ ಸ್ತೋತ್ರವನ್ನು ಮನೋಹರವಾಗಿ ಮಾಡಿದನಂತರ ವಟುಗಳು ಅವನ ಒಂದೊಂದು ವಚನವನ್ನು ತೆಗೆದುಕೊಂಡು ಒಂದೊಂದು ಗುಣದಮೇಲೆ ಯುಕ್ತಿಪ್ರಯುಕ್ತಿಗಳಿಂದ ಭಾಷಣಮಾಡಿದರು. ನೀಲಕಂಠ ದೇವರು, ಸಿದ್ಧವೀರ ದೇವರು, ಗಂಗಾಧರ ದೇವರು ಇವರೇ ಮೊದಲಾದ ಶಿವಯೋಗಿಗಳು ಅವನ ಧಾರ್ಮಿಕ, ನೈತಿಕ, ರಾಜಕೀಯ ಮತ್ತು ಆರ್ಥಿಕ ಇವೇ ಮೊದಲಾದ ವಿಷಯಗಳಮೇಲೆ ಒಳ್ಳೇ ಹೃದಯಂಗಮವಾಗಿ ಭಾಷಣಮಾಡಿದಮೇಲೆ ಪಂ|| ವಿರೂಪಾಕ್ಷಶಾಸ್ತ್ರಿಗಳು, ರೋಣ ಇವರು ಬಸವನಲ್ಲಿರುವ ಲೋಕೋತ್ತರಗಳಾದ ಗುಣಗಳ ವಿಷಯದಲ್ಲಿ ಸಭಿಕರು ತಲೆದೂಗುವಂತೆ ಹೇಳಿದನಂತರ ಸಭೆಯಲ್ಲಿ ನೆರೆದಿದ್ದ ಸದ್ಗೃಹಸ್ಥರೆಲ್ಲರೂ ಬಸವನಲ್ಲಿರುವ ತಮ್ಮ ತಮ್ಮ ಪೂಜ್ಯಭಾವವನ್ನು ವ್ಯಕ್ತಪಡಿಸಿದರು. ಅಧ್ಯಕ್ಷರ ಸಮಾರೋಪಣೆಯ ಭಾಷಣವಾಗಿ ಸಭೆಯು ಸಾಯಂಕಾಲ 7 ಘಂಟೆಗೆ ಬಸವ ಜಯ ಜಯಕಾರದೊಡನೆ ವಿಸರ್ಜಿಸಲ್ಪಟ್ಟಿತು.

ವ್ಯವಸ್ಥಾಪಕ, ಶಿವಯೋಗಮಂದಿರ.

ಯಾದಗಿರಿ

ಮಹಾಶಯರೇ, ಯಾದಗಿರಿ ವೀರಶೈವ ಮಹಾಜನಗಳು ವೀರಶೈವ ಮತೋದ್ಧಾರಕನಾದ ಬಸವೇಶ್ವರನ ಜಯಂತಿಯನ್ನು ಮಾಡಲು ಆರಂಭಿಸಿ ಇಲ್ಲಿಗೆ 6 ವರ್ಷಗಳಾದುವು. ಆದರೂ ಇಲ್ಲಿಯವರೆಗೂ ಉತ್ಸವಕಾಲಕ್ಕೆ ಯಾವ ತರದ ವಿಘ್ನವಿಲ್ಲದೆ ಬಸವಾನುಗ್ರಹದಿಂದ ಸಾಂಗವಾಗಿ ಜರುಗುತ್ತ ಬಂದಿರುವದು. ಆದರೆ ಈ ವೇಳೆ ತದಿಗ ತಿಥಿಯಲ್ಲಿಯೇ ಮೊಹರಂ ಮೊದಲನೆಯ ತಾರೀಖು ಬಂದದ್ದರಿಂದ ತದಿಗ ತಿಥಿಯ ಬದಲಾಗಿ ಬಿದಿಗ ತಿಥಿಯಲ್ಲಿಯೇ ಉತ್ಸವವನ್ನು ಹೊರಡಿಸಬೇಕಾಯಿತು. ಬಿದಿಗೆ ಶನಿವಾರ ಪ್ರಾತಃಕಾಲದಲ್ಲಿಯೇ ಪುರಪ್ರಮುಖರೆಲ್ಲರೂ ಸ್ನಾನ ಶಿವಪೂಜಾದಿ ಕಾರ್ಯಗಳನ್ನು ಪೂರೈಸಿಕೊಂಡು ಮಳೆ ಬಗಿಮಠಕ್ಕೆ ಆಗಮಿಸಿದರು. ಅನಂತರ ಶ್ರೀ ಬಸವೇಶ್ವರನ ಭಾವಚಿತ್ರದ ಪೂಜೆಯನ್ನು ವಿಧಿವತ್ತಾಗಿ ಮಾಡಿಸಿ ನೀರಾಜನವನ್ನು ಮಾಡಿ ವಾದ್ಯಗಳ ಸಮೇತ ಮಹಾನುಭಾವರ ಚಿತ್ರಪಟವನ್ನು ಶೃಂಗಾರವಾದ ಪಲ್ಲಕ್ಕಿಯಲ್ಲಿರಿಸಿ ತಳಿರುತೋರಣಗಳಿಂದಲೂ, ರಂಭಾಸ್ತಂಭಗಳಿಂದಲೂ, ಧ್ವಜಪತಾಕೆಗಳಿಂದಲೂ, ಕಮಾನುಗಳಿಂದಲೂ ಅಲಂಕರಿಸಲ್ಪಟ್ಟ ಪುರಬೀದಿಗಳಲ್ಲಿ ಉತ್ಸವಮಾಡಿದರು. ಅಲ್ಲಲ್ಲಿ ನಂದೀಧ್ವಜದವರ ಕುಣಿತವು ಮನೋರಂಜಕವಾಗಿದ್ದಿತು. ಇಂಪಾದ ಭಜನೆಯ ಮತ್ತು ಬಸವೇಶ್ವರನ ಜಯಜಯಕಾರದ ಧ್ವನಿಯು ಕರ್ಣಗಳನ್ನು ಭೇದಿಸಿ ಆನಂದವನ್ನುಂಟುಮಾಡುತ್ತಿದ್ದಿತು. ಪುರಂಧ್ರಿಯರು ಆರತಿಯನ್ನು ಮಾಡಿ ಕಾಯಿ ಕರ್ಪೂರಗಳನ್ನು ಅರ್ಪಿಸುತ್ತಿದ್ದರು. ಬಸವೇಶ್ವರನ ದೇವಾಲಯದ ವರೆಗೂ ಉತ್ಸವವು ಹೋಗಿ ಪುನಃ ಮಠಕ್ಕೆ ಬಂದಬಳಿಕ ಬಸವೇಶ್ವರನಿಗೆ ಆರತಿಯನ್ನು ಮಾಡಿ ಉತ್ಸವವು ವಿಸರ್ಜಿಸಲ್ಪಟ್ಟಿತು. ನಾಳನೆದಿನವೆಂದರೆ ರವಿವಾರ ತದಿಗ ತಿಥಿಯಲ್ಲಿ ಪುನಃ ಸರ್ವರೂ ಸಭೆಸೇರಿ ಸಾಯಂಕಾಲ 4 ಘಂಟೆಯಲ್ಲಿ ಸ್ತ್ರೀಯರು ನಾಮಕರಣ ವಿಧಿಯನ್ನು ತೀರಿಸಿದನಂತರ ಅಕ್ಕಸಾಲಿಗರ ಘಂಟಪ್ಪನಿಂದ, ಪೀಟೀಲು, ಮೃದಂಗಗಳೊಡನೆ ಬಸವಾವತಾರದ ಪದ್ಯಗಳನ್ನು ಹೇಳಿಸಿದರು. ಆಮೇಲೆ ರಾಲಿ ಕಂಪನಿ ಏಜಂಟರಾದ ಮ|| ಹುಬ್ಬಳ್ಳಿ ಇಂಡಿ ಗುರುಸಿದ್ದಪ್ಪನವರು ಇಂಗ್ಲಿಷ ಭಾಷೆಯಲ್ಲಿ ಬರೆಯಲ್ಪಟ್ಟ ಬಸವಣ್ಣನವರ ಚರಿತ್ರದ ಮುದ್ರಣದ ಸಹಾಯಕ್ಕಾಗಿ 10 ರೂ. ಗಳನ್ನು ಕಳಿಸುವಂತೆ ಇಲ್ಲಿಯ ವೀರಶೈವ ವ್ಯಾಪಾರಿ ಮಂಡಳಿಯವರಿಗೆ ಸೂಚಿಸಲು ಅದಕ್ಕೆ ಮ|| ಶಿಣ್ಣೂರ ರುದ್ರಪ್ಪನವರು ಅನುಮೋದನವನ್ನು ಕೊಟ್ಟರು. ಈ ಹಣವನ್ನು ಮ|| ಹರ್ಡೇಕರ ಮಂಜಪ್ಪನವರಿಗೆ ಕಳಿಸುವಂತೆ ಸದಸ್ಯರು ಪಾಸುಮಾಡಿದರು ಮತ್ತು ಇಲ್ಲಿಯ ತರುಣರು ಒಳಪಂಗಡದ ಪಕ್ಷಭೇದವನ್ನು ದೂರಮಾಡಿ ಸದಾಚಾರಸಂಪನ್ನರಾದ ಸರ್ವಲಿಂಗಾಂಗಿಗಳಲ್ಲಿ ಭೋಜನವನ್ನು ಮಾಡಬೇಕೆಂದು ಠರಾವು ಪಾಸು ಮಾಡಿದರು. ಆ ಮೇಲೆ ಮಂಗಳಾರತಿಯಾಗಿ ಸರ್ವರಿಗೂ ಪ್ರಸಾದ ಹಂಚಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ, ಬಸವಭಕ್ತ.

ಮಂಜರಾಬಾದು ತಾ|| ಎಸಳೂರುಪೇಟೆ.

ದ್ವಿತೀಯಶಂಭುವೂ, ವೀರಶೈವ ಮತೋದ್ಧಾರಕನೂ ಪೂಜ್ಯಪುರುಷನೂ ಆದ ಶ್ರೀ ಬಸವೇಶ್ವರನ ಜಯಂತಿಯನ್ನು ಈ ಗ್ರಾಮದ ವೀರಶೈವರು ಬಹಳ ವಿಜೃಂಭಣೆಯಿಂದ ಆಚರಿಸಿದರು. ಆ ದಿನವೆಲ್ಲಾ ಪುರಜನರು ಆ ಗ್ರಾಮದ ಬಸವೇಶ್ವರ ದೇವರಿಗೆ ಅಭಿಷೇಕ, ಅರ್ಚನ, ಮಂಗಳಾರತಿ ವಗೈರೆ ಮಾಡಿ ಸಂತೋಷದಿಂದ ಕಾಲ ಕಳೆದರು. ಆ ದಿನ ಪುರಜನರೆಲ್ಲರೂ ಸಾಯಂಕಾಲ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ಸಭೆ ಸೇರಿದ್ದರು. ಹಾಸನದ ಅಡ್ವೊಕೇಟ್ ಮ|| ಧರ್ಮಪ್ಪನವರು, ಪ್ರೈಮರಿ ಸ್ಕೂಲ್ ಹೆಡ್ಮಾಸ್ಟರ್ ಸಿದ್ಧಯ್ಯನವರು ಇತರರು ಸಹ ಬಸವೇಶ್ವರನಿಂದ ವೀರಶೈವ ಸಮಾಜಕ್ಕೆ ಉಂಟಾದ ಉಪಕಾರವನ್ನು ಕುರಿತು ಮಾತನಾಡಿದ್ದಲ್ಲದೆ ಬಸವೇಶ್ವರನ ಚರಿತ್ರೆಯನ್ನು ಸಹ ಸಂಕ್ಷೇಪವಾಗಿ ಹೇಳಿದರು. ಮ|| ಧರ್ಮಪ್ಪನವರ ಉತ್ತೇಜನದ ಪ್ರಕಾರ ಆ ದಿನದ ಸಭೆಯಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಮೂಡಿಗೆರೆ ಮಿಡ್ಲ್‌ಸ್ಕೂಲ್ ಹೆಡ್ಮಾಸ್ಟರು ಮ|| ಚಂದ್ರಶೇಖರಯ್ಯನವರ ಸಮ್ಮುಖದಲ್ಲಿ ಬೆಂಗಳೂರು ವೀರಶೈವ ವಿದ್ಯಾವರ್ಧಕ ಫಂಡಿನವರು ರಿಟೈರ್ಡ್ ಸೀನಿಯರ್ ಪೊಲೀಸ್ ಸೂಪರಿಂಟೆಂಡೆಂಟ್ ಮ|| ಜಿ. ಶಾಂತವೀರಪ್ಪನವರ ಸಲಹೆಯಿಂದ ಏರ್ಪಡಿಸಿರುವ 1 ರೂ. ಫಂಡನ್ನು ಆ ಗ್ರಾಮದಲ್ಲಿಯೂ ಪ್ರಾರಂಭಿಸಿದರು. ವರ್ಷಕ್ಕೊಂದುಸಾರಿ ಪ್ರತಿ ಮನೆಯವರೂ ವಿದ್ಯಾಪ್ರಚಾರಕ್ಕಾಗಿ ವರ್ಷದ ಒಳ್ಳೇ ದಿನದಲ್ಲಿ ಮನೆಗೆ 1 ರೂ. ನಂತೆ ಕೊಟ್ಟು ಫಂಡನ್ನು ಅಭಿವೃದ್ಧಿಪಡಿಸುವ ಏರ್ಪಾಡು ಬಹಳ ಶ್ಲಾಘನೀಯವಾದ್ದೆಂದು ಬಹುವಾಗಿ ಸಮ್ಮತಿಸಿ ಅಲ್ಲಿ ನೆರೆದಿದ್ದವರಲ್ಲಿ ಕೆಲವರು ಆಗಲೇ ಕೊಟ್ಟುಬಿಟ್ಟರು. ಒಟ್ಟು 121 ರೂ. ಉತ್ಪತ್ತಿಯಾಯ್ತು. ಆ ಗ್ರಾಮದಲ್ಲಿ ಒಟ್ಟು 125 ವೀರಶೈವ ಮನೆಗಳಿರುವುದು ಬಹಳ ಸಂತೋಷವು. ಈ ಫಂಡಿಗಾಗಿ 12 ಜನಗಳುಳ್ಳ ಒಂದು ಕಮಿಟಿಯು ಸಹ ಏರ್ಪಾಡಾಯ್ತು. ಇದಕ್ಕೆ ಕಾರಾಕೊಪ್ಪದ ಎಸ್ಟೇಟ್ ಮ|| ಹದಾಲ್ ಗುರುಶಾಂತಯ್ಯನವರು ಪ್ರೆಸಿಡೆಂಟರಾಗಿಯೂ, ಸಾಹುಕಾರ್ ಕೂಚಳ್ಳಿ ಮಲ್ಲಪ್ಪನವರು ಟ್ರೆಜರರ್ ಆಗಿಯೂ ಪ್ರೈಮರಿ ಸ್ಕೂಲ್ ಮಾಸ್ಟರ್ ಅಣ್ಣಪ್ಪನವರು ಸೆಕ್ರೆಟರಿಯಾಗಿಯೂ ಚುನಾಯಿಸಲ್ಪಟ್ಟರು. ಉಳಿದ ಮೊಬಲಗನ್ನು ಕೂಡ್ಲೆ ವಸೂಲ್ ಮಾಡುವುದಾಗಿ ಮೇಲ್ಕಂಡ ಮಹಶಯರು ಒಪ್ಪಿಕೊಂಡಿರುತ್ತಾರೆ. ವೀರಶೈವ ಜನ ಬಾಹುಳ್ಯವುಳ್ಳ ಇತರ ಗ್ರಾಮಸ್ಥರು ಸಹ ಇದನ್ನು ಮೇಲ್ಪಂಕ್ತಿಯನ್ನಾಗಿಟ್ಟುಕೊಂಡು ಆಯಾಯಾ ಮಧ್ಯರಾಷ್ಟ್ರ ಸ್ಥಳಗಳಲ್ಲಿ ಇಂಥಾ ಒಂದು ರೂಪಾಯಿ ಫಂಡನ್ನು ಏರ್ಪಡಿಸಿ ವಿದ್ಯಾಭಿವೃದ್ಧಿಗೆ ಇನ್ನೂ ಹೆಚ್ಚು ಅವಕಾಶ ಕೊಡುತ್ತಾರೆಂದು ನಂಬಿದೆ. ಅಂತ್ಯದಲ್ಲಿ ಆ ದಿನದ ಸಭೆಗೆ ಅಧ್ಯಕ್ಷರಾಗಿದ್ದ ಮ|| ಚಂದ್ರಶೇಖರಯ್ಯನವರು ವೀರಶೈವಸಮಾಜಾಭಿವೃದ್ಧಿಗೆ ಅತ್ಯವಶ್ಯಕವಾಗಿ ಅನುಸರಿಸಬೇಕಾದ ಕೆಲವು ಅಮೂಲ್ಯವಾದ ಸಲಹೆಗಳನ್ನು ಕೊಟ್ಟರು. ಅನಂತರ ಶ್ರೀ ಬಸವೇಶ್ವರನಿಗೆ ಮಂಗಳಾರತಿಯಾಗಿ ಸಭಿಕರಿಗೆಲ್ಲ ಮ|| ಧರ್ಮಪ್ಪನವರು ಏರ್ಪಡಿಸಿದ್ದ ಫಲಾಹಾರಾದಿಗಳು ಹಂಚಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರೇಕ್ಷಕ.

ಸ್ವೀಕಾರ

ಕೈ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

ಅದಲಗೆರೆಯಲ್ಲಿರುವ ಭದ್ರಶೆಟ್ಟರ ಮಕ್ಕಳು ಚಿ|| ಹುಚ್ಚೀರಪ್ಪನೆಂಬ ವರನಿಗೂ ಚಿ|| ಸೌ|| ಸರ್ವಮಂಗಳಮ್ಮನೆಂಬ ವಧುವಿಗೂ ನಡೆದ ವಿವಾಹ ಮಹೋತ್ಸವದಲ್ಲಿ ವಧೂವರರ ಕಡೆಯಿಂದ ತುಮಕೂರು ತಾ|| ಹೊನ್ನುಡಿಕೆಯಲ್ಲಿರುವ ಯಜಮಾನ್ ರುದ್ರಯ್ಯನವರ ಮೂಲಕ 1 ರೂಪಾಯಿ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಕಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ನಿಷ್ಪಕ್ಷಪಾತವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟವಾಗಿಯೂ, ಇರಬೇಕೆಂದೂ ಬುಧವಾರ ಗುರುವಾರದೊಳಗೆ ನಮ್ಮ ಕೈಸೇರುವಂತೆ ಕಳುಹಲ್ಪಡಬೇಕೆಂದು, ಈ ನಿಬಂಧನೆಗೆ ವಿರುದ್ಧವಾದ ಲೇಖಗಳು ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದ್ದಾಗ್ಯೂ ಲೇಖಕರು ಲಕ್ಷಿಸದೆ ಅಂಕಿತ ತಮಗೆ ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ ಪುಟಗಟ್ಟಲೆ ಅಸ್ಫುಟವಾಗಿ ಬರೆದು ನಮಗೆ ತ್ರಾಸನ್ನು ಕೊಡುತ್ತಿರುವರೆಂದು ಬರೆಯಲು ಖೇದವಾಗುತ್ತದೆ. ಅದುಕಾರಣ ಇತಃಪರ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಮಸ್ತರೂ ಗಮನಿಸತಕ್ಕದು.—ಸಂ.

ಉಪಕಾರಸ್ಮರಣೆ.

ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಸೊರಬ, ಶಿಕಾರಿಪುರ ಮತ್ತು ನಗರ ತಾಲ್ಲೂಕುಗಳಿಂದ ಕನ್ನಡ ಮತ್ತು ಇಂಗ್ಲಿಷ್ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿಗಳಿಗೆ ಸಾಗರ ಟವನ್ನು ಸೆಂಟರಾಗಿರುತ್ತದೆ. ಇಲ್ಲಿ ಹೋಟಲುಗಳಿರುವವಾದರೂ ವಿದ್ಯಾರ್ಥಿಗಳಿಗೆ ಪರೀಕ್ಷೆ ಕಾಲಕ್ಕೆ ಸರಿಯಾಗಿ ಊಟ ಉಪಚಾರಗಳು ನಡೆಯಲು ಸಾಧ್ಯವಿಲ್ಲದೆ ಬಹಳ ತೊಂದರೆಯಾಗಿತ್ತು. ಆದ್ದರಿಂದ ಈವೇಳೆ ಪರೀಕ್ಷೆಗೆ ಬಂದಿದ್ದ 80 ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳೊಳಗೆ ವೀರಶೈವರಲ್ಲಿ ಊಟಮಾಡುವವರಿಗೆ ಇಲ್ಲಿನ ಗೋಪಿನಕೋಪೆ ದಾಸೋಹ ಮಠದಲ್ಲಿ ಕಾಲ ಕಾಲಕ್ಕೆ ಸರಿಯಾಗಿ ಊಟ ಉಪಚಾರಗಳು ನಡೆಯಲು ಮಠದ ಶ್ರೀ ಸ್ವಾಮಿಗಳು ಏರ್ಪಾಡು ಮಾಡಿದುದು ಬಹಳ ಸ್ತುತ್ಯವಾಗಿರುತ್ತದೆ. ಇದಕ್ಕಾಗಿ ಪರೀಕ್ಷೆಗೆ ಬಂದಿದ್ದ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಅವರುಗಳ ಪೋಷಕರುಗಳೂ ಶ್ರೀಗಳವರಿಗೆ ಕೃತಜ್ಞರಾಗಿರುವುದಲ್ಲದೆ ಅವರ ಶ್ರೇಯಸ್ಸನ್ನು ಕೋರುತ್ತಾರೆ.

[illegible]

ಮಕ್ಕಳಿದ್ದರೆ ಮನೆ ಚಂದ.

ಮಕ್ಕಳಿಲ್ಲೆಂದು | ಚಿಂತಿಸಬೇಡಿರಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಫಲಿತಾರ್ಥ ಆಗುವಿರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C.

ಹಿಂದೀ ಸೇವಾಸಮಾಜ, ಮೈಸೂರು.

ಹಿಂದೀ ಸೇವಾಸಮಾಜದ ಮೈಸೂರು ನಗರದ ಶಾಖೆಯ ವಿರಾಟ್ ಅಧಿವೇಶನವು (General metting) ತಾ|| 1-5-32 ನೇ ಭಾನುವಾರ ಮ|| ಸೂರ್ಯನಾರಾಯಣಪಂಡಿತರ ಸಭಾಪತಿತ್ವದಲ್ಲಿ ಸಮಾಜದ ಭವನದಲ್ಲಿ ಸಾಯಂಕಾಲ 3 ಘಂಟೆಗೆ ನೆರೆಯಿತು. ಕಳೆದ ವರ್ಷದ ಕಾರ್ಯಕಲಾಪಗಳ ವರದಿ ಓದಲ್ಪಟ್ಟಿತು. ಮೈಸೂರು ನಗರದಲ್ಲಿ 36 ಕಡೆ ಬೇರೆ ಬೇರೆ ಹಿಂದೀ ತರಗತಿಗಳು ನಡೆಯುತ್ತಿದ್ದು, ಭಿನ್ನ ಭಿನ್ನ ಪರೀಕ್ಷೆಗಳಿಗೆ ಒಟ್ಟು 1300 ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆದು, ಅವರ ಪೈಕಿ 700 ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರು. ಬಳಿಕ ಮುಂದಿನ ವರ್ಷದ ಕಾರ್ಯನಿರ್ವಾಹಕಮಂಡಲಿಗೆ ಮ|| ಎಸ್. ರಂಗಾಚಾರ್, ಬಿ. ಎ., ವಿಶಾರದರವರು ಪ್ರಧಾನ ಪ್ರಚಾರಕರಾಗಿಯೂ, ಮ|| ಕೆ. ಟಿ. ಗೋಪಾಲಕೃಷ್ಣಯ್ಯಂಗಾರ್ಯರು ವೈಸ್‌ಪ್ರೆಸಿಡೆಂಟರಾಗಿಯೂ, ಮ|| ಎ. ವಿ. ಕೃಷ್ಣಮೂರ್ತಿಯವರು ಮತ್ತು ಕೆ. ಎ. ಧನಪಾಲಶೆಟ್ಟಿ ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು. ಇತರ ಕಾರ್ಯಗಳು ನಡೆದನಂತರ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿದ ಮೇಲೆ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಎ. ವಿ. ಕೃಷ್ಣಮೂರ್ತಿ ಮತ್ತು ಕೆ. ವಿ. ಧನಪಾಲಶೆಟ್ಟಿ,
ಗೌ|| ಕಾರ್ಯದರ್ಶಿಗಳು.

ಮಾಲೂರು ತಾಲ್ಲೂಕು ಬೆಂಚ್‌ಮೆಜಿಸ್ಟ್ರೇಟರ ಕೋರ್ಟು.

ಈ ಮಾಲೂರು ತಾಲ್ಲೂಕಿನಲ್ಲಿ ಪ್ರಜಾಸೇವೆಯನ್ನು ಮಾಡತಕ್ಕ ಕೆಲ ದೊಡ್ಡ ಮನುಷ್ಯರುಗಳು ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲೂ ಇರುತ್ತಾರೆ. ಮ|| ಗಳಾದ ಡಿ|| ಬೋರ್ಡ್ ಪ್ರೆಸಿಡೆಂಟ್ ಎಲ್. ವೇಮಾರೆಡ್ಡಿಯವರು, ಮ್ಯುನಿಸಿಪಲ್ ಪ್ರೆಸಿಡೆಂಟ್ ವಿದ್ಯಾಭೂಷಣ ಎಂ. ವಿ. ರುದ್ರಯ್ಯನವರು, ವಿಲೇಜ್ ಮುನ್ಸಿಫ್ ವಿರಾರ್ ಮಹಮದ್‌ರವರು, ಡಿ|| ಬೋ|| ಮೆಂಬರುಗಳಾದ ಸಂತೆಹಳ್ಳಿ ಪಟೇಲ್ ವೆಂಕಟಸ್ವಾಮಿಗೌಡರು ಪಟೇಲ್ ಆಂಜನೇಯರೆಡ್ಡಿಯವರು, ಬೆಂಚ್‌ಮೆಜಿಸ್ಟ್ರೇಟ್ ಮತ್ತು ಚೇರ್ಮನ್ ಎಂ. ಬಾಪುರಾಯರು, ಎಂ. ವೆಂಕಟಸ್ವಾಮಿನಾಯುಡುಯವರು, ಹೊಂಗೇನಹಳ್ಳಿ ಜೋಡಿದಾರ್ ಎಚ್. ಎಸ್. ಮಾಧವರಾವ್, ಬಿ.ಎ., ಯವರುಗಳಂತಹ ಅನುಭವಸ್ಥ ವಿದ್ಯಾವಂತರೂ, ಪಕ್ಷಪಾತರಹಿತರೂ ಪ್ರಜಾಸೇವೆಯಲ್ಲಿ ಸದಾ ನಿರತರೂ, ಕೇವಲ ಶ್ರದ್ಧೆಯಿಂದಲೂ ಅಭಿಮಾನದಿಂದಲೂ ದಕ್ಷತೆಯಿಂದಲೂ ಕೆಲಸ ಮಾಡತಕ್ಕವರೂ ಬೆಂಚ್‌ಕೋರ್ಟು ಸ್ಥಾಪಿತವಾದಾರಭ್ಯ ಯಾವ ಪ್ರಕಾರಿಗೂ ಆಸ್ಪದ ಕೊಡದೆ ಕೆಲಸಮಾಡಿ ಮುಂದೆ ಮಾಡಲು ವಿರಾಮವುಳ್ಳವರಾಗಿರುವವರೂ ಅನೇಕರಿರುತ್ತಾರೆ. ಹೀಗಿದ್ದಾಗ್ಯೂ ಅಮಲ್ದಾರ್‌ರವರ ಶಿಫಾರಸಿನ ಮೇಲೆ ಸಬ್‌ರಿಜಿಸ್ಟ್ರಾರನ್ನು ಬೆಂಚ್‌ಕೋರ್ಟಿನ ಖಾಯಂ ಚೇರ್ಮನ್ನರಾಗಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಮಾಡಿರುತ್ತಾರೆ. ಈ ಉದ್ಯೋಗಕ್ಕೆ ತಕ್ಕವರಾದ ಖಾಸಗಿ ಜನರು ಯಾರೂ ಇಲ್ಲವೆಂದು ಅಮಲ್ದಾರರವರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ಬರೆದು ಸಬ್‌ರಿಜಿಸ್ಟ್ರಾರರ ಹೆಸರನ್ನು ಶಿಫಾರಸ್ ಮಾಡಿರಬಹುದು. ಅದನ್ನು ನಂಬಿ ಡಿ|| ಮೆಜಿಸ್ಟ್ರೇಟರು ಅವರನ್ನು ನಿಯಮಿಸಿರಬಹುದು. ಇದರಿಂದ ಪ್ರಜಾಸೇವೆಯನ್ನು ಉಚಿತವಾಗಿ ಮಾಡತಕ್ಕ ಖಾಸಗಿ ಜನರ ಮನಸ್ಸು ಕೆಟ್ಟು ಮುಂದೆ ಯಾವ ಕೆಲಸಕ್ಕೂ ಅವರುಗಳು ಬಾರದೆ ನಿಲ್ಲಲು ಕಾರಣವಾಗುತ್ತದೆ. ಆದ್ದರಿಂದ ಘನಸರ್ಕಾರದವರು ಈ ಸಂದರ್ಭವನ್ನು ವಿಚಾರಿಸಿ ಖಾಸಗಿ ದಕ್ಷತೆಯಿಂದ ಚೇರ್ಮನ್ ಕೆಲಸ ನೋಡಲು ಸಮರ್ಥರಾದವರನ್ನು ನಿಯಮಿಸಿ, ಎಲ್ಲಾ ಭಾಗದಲ್ಲೂ ಮಾದರಿ ಟೌನೆಂದು ಹೆಸರುಪಡೆದಿರುವ ಮಾಲೂರಿಗೆ ಈಗ ಬಂದಿರುವ ಕಳಂಕವನ್ನು ಹೋಗಲಾಡಿಸಿ ಪ್ರಜೆಗಳ ವಂದನೆಗೆ ಪಾತ್ರರಾಗಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ,

ಪ್ರಜಾಸೇವಕ.

ಶಿವಾನುಭವಿಗಳ ಶಿವೈಕ್ಯ.

ಬಾಗಲಕೋಟೆಯ ವೀರಶೈವ ಸಮಾಜದ ಪ್ರಸಿದ್ಧ ಮುಂದಾಳುಗಳೂ ಶಿವಾನುಭವ ಶಾಸ್ತ್ರದ ಯಥಾರ್ಥಜ್ಞಾನಿಗಳೂ ಶಿವಭಕ್ತಶಿರೋಮಣಿಗಳೂ ಆದ ಬಸವಲಿಂಗಪ್ಪ ಅಣ್ಣಾಕಿಣಗಿ ಇವರು ತಾ|| 28-4-32 ನೆಯ ಬುಧವಾರ ಬಾಗಲಕೋಟೆಯಲ್ಲಿ ಪಾಂಚಭೌತಿಕ ದೇಹವನ್ನು ಪಂಚಾಕ್ಷರಮಯನಾದ ಪರಮೇಶ್ವರನಲ್ಲಿ ಲೀನಮಾಡಿದರೆಂದು ಬರೆಯಲು ಅತ್ಯಂತ ವಿಷಾದವೆನಿಸುತ್ತದೆ. ಇವರು ಬಾಗಲಕೋಟೆಯಲ್ಲಿ ಪ್ರಸಿದ್ಧವಾದ ಕಿಣಗಿಯವರ ಮನೆತನದಲ್ಲಿ ಜನ್ಮತಾಳಿದ್ದು ಆಗರ್ಭ ಶ್ರೀಮಂತರಿದ್ದರು. ಇವರು ಬಹು ಧಿಟ್ಟಿಗ ಗುಣವುಳ್ಳವರೂ, ಧರ್ಮಾಭಿಮಾನಿಗಳೂ ಅಷ್ಟಾವರ್ಣ ಸಂಪನ್ನರೂ ಸದಾಲಿಂಗಪೂಜಾನಿರತರೂ ಆಗಿರುತ್ತಿದ್ದರು. ಇವರು ಧರ್ಮದ ಬೆಳೆಯಗೋಸ್ಕರ ಸ್ವಂತ ಹಣದಿಂದ ಒಂದು ಸಂಸ್ಕೃತ ಪಾಠಶಾಲೆಯನ್ನು ಇಡಿಸಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಅನ್ನೋದಕಗಳನ್ನು ಕೊಡುವ ವಿರ್ಪಾಟನ್ನು ಮಾಡಿದ್ದರು. ಬಾಗಲಕೋಟೆಯಲ್ಲಿ ನಡೆಯುವ ಪ್ರತಿಯೊಂದು ಧಾರ್ಮಿಕ ಕಾರ್ಯದಲ್ಲಿ ಇವರು ಭಾಗ ತೆಗೆದುಕೊಳ್ಳುತ್ತಿದ್ದರು. ಇಂದಿಗೆ 42 ವರ್ಷಗಳ ಕೆಳಗೆ ವೀರಶೈವರು ಖಾನೇಷುಮಾರಿಯಲ್ಲಿ "ವೀರಶೈವಲಿಂಗೀಬ್ರಾಹ್ಮಣರೆಂದು" ಬರೆಯಿಸುವುದರ ಸಲುವಾಗಿ ಪ್ರಯತ್ನವನ್ನು ಕೈಲಾಸವಾಸಿ ಮೈಸೂರು ವೈ|| ವೀರಸಂಗಪ್ಪನವರು ಮತ್ತು ಸೋಲಾಪುರದ ರಾವಬಹದ್ದೂರ ಶ್ರೀಮಂತ ಅಪ್ಪಾಸಾಹೇಬ ವಾರದ ಇವರ ಸಹಾಯದಿಂದ ಹೋರಾಡಿ ತಮ್ಮ ಮನೋರಥವನ್ನು ಸಫಲಮಾಡಿಕೊಂಡರು. ಇಂಥ ಅನೇಕ ಸಾಮಾಜಿಕ ಕಾರ್ಯಗಳನ್ನು ತಮ್ಮ ಜೀವಮಾನಕಾಲದಲ್ಲಿ ಮಾಡಿ ಕೀರ್ತಿಭಾಜನರಾಗಿರುವರು. ಮುಂದೆ ಕೆಲವು ದಿವಸಗಳ ಮೇಲೆ ಇವರಿಗೆ ಪ್ರಪಂಚದ ಅಡಚಣೆ ಮೂಲಕ ತೊಂದರೆಯೊದಗಿ ಊರು ಬಿಡುವ ಪ್ರಸಂಗ ಬಂದಾಗ್ಯೂ ತಮ್ಮ ಧರ್ಮದ ನಿರ್ಬಂಧವನ್ನು ಶಿಥಿಲ ಮಾಡಲಿಲ್ಲ. ತಮ್ಮ ಸರ್ವಸ್ವವನ್ನೂ ಗುರುಲಿಂಗ ಜಂಗಮಕ್ಕೆ ಸಲ್ಲಿಸುತ್ತ ಯಾವಾಗಲೂ ವಚನಶಾಸ್ತ್ರದ ನಿಜತತ್ವವನ್ನು ಪ್ರಚುರಪಡಿಸುತ್ತಿದ್ದರು. ಈಗಿನ ಕಾಲದಲ್ಲಿ ವಚನಶಾಸ್ತ್ರದಲ್ಲಿ ಹಾಗೂ ಶಿವಾನುಭವದಲ್ಲಿ ನಿಷ್ಣಾತರಾದವರಲ್ಲಿ ಇವರೊಬ್ಬರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇತ್ತೀಚೆಗೆ ಧಾರವಾಡ, ದಾವಣಗೆರೆ, ಹುಬ್ಬಳ್ಳಿ, ಸೊಲಾಪುರ ಮೊದಲಾದ ಸ್ಥಳಗಳಲ್ಲಿ ವಚನಶಾಸ್ತ್ರವನ್ನು ತಮ್ಮ ಧಾರ್ಮಿಕ ಧರ್ಮ ತತ್ವಗಳನ್ನು ಬಹುಸ್ವಾರಸ್ಯವಾಗಿ ಪರಮತದವರು ಸಹ ಒಪ್ಪುವಂತೆ ಬೋಧಿಸುತ್ತಿದ್ದರು. ಈಗ 6 ತಿಂಗಳುಗಳ ಕೆಳಗೆ ಹುಬ್ಬಳ್ಳಿಯಲ್ಲಿ ಶಿವಸ್ತೋತ್ರದೀಪಿಕೆಯೆಂಬ ಉದ್ಗ್ರಂಥವನ್ನು ಶ್ರೀ ಜಗದ್ಗುರು ಮೂರು ಸಾವಿರ ಮಠದಲ್ಲಿ ವಿಶದವಾಗಿ ಸರ್ವರಿಗೂ ತಿಳಿಯುವಂತೆ ಹೇಳಿದರು. ಇವರು ಎರಡು ಮೂರು ವಾರಗಳ ಹಿಂದೆ ಶ್ರೀ. ಪ್ರ. ಸ್ವ. ಗಳಾದ ಮೃತ್ಯುಂಜಯಸ್ವಾಮಿಗಳನ್ನು ಬಾಗಲಕೋಟೆಗೆ ತಮ್ಮ ಮನೆಗೆ ಕರೆಯಿಸಿಕೊಂಡು ಧಾರವಾಡದಲ್ಲಿ ಹೊಸದಾಗಿ ಸ್ಥಾಪಿತವಾದ "ಶ್ರೀ ಶಿವಯೋಗೀಶ್ವರ ಸಂಸ್ಕೃತ ಕಾಲೇಜಿಗೆ" 101 ರೂ. ಗಳನ್ನು ಅರ್ಪಿಸಿದರು. ಇವರಿಗೆ ಮೂವರು ಗಂಡುಮಕ್ಕಳಿದ್ದು ಎಲ್ಲರೂ ವಿದ್ಯಾವಂತರೂ ಸದಾಚಾರಿಗಳೂ ಉದ್ಯೋಗನಿರತರೂ ಇದ್ದು ತಮ್ಮ ತಂದೆಯವರ ಧರ್ಮಾಚರಣೆಗೆ ಯಾವದೂ ಕೊರತೆ ಬಾರದಂತೆ ಅನುಕೂಲತೆಗಳನ್ನು ಒದಗಿಸಿಕೊಡುತ್ತಿದ್ದರು. ಇವರ ವಿಯೋಗದಿಂದ ಇವರ ಆಪ್ತ ಜನರಿಗೂ ಸಮಾಜದ ಎಲ್ಲ ಭಾಗದವರಿಗೂ ಬಹಳ ವಿಷಾದವಾಗಿರುತ್ತದೆ. ದೇವರು ಇವರ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದು ಪ್ರಾರ್ಥಿಸುವ, ತಮ್ಮ ಚಂದಾದಾರ.

ಆಸ್ಥಾನವಿದ್ವಾನ್ ಶ್ರೀಮಾನ್ ವೇದಮೂರ್ತಿ ಬಿ. ಎಂ. ಶ್ರ್ಯಂಬಕ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯವಿಮರ್ಶೆಯೂ.

(ಲೇಖಕ — ವೇ|| ಎಚ್. ಗೋಪಾಲಕೃಷ್ಣಮಾಚಾರ್ಯ, ಕರ್ಣಾಟಕ ಪಂಡಿತರು, ಟ್ರೇನಿಂಗ್ ಕಾಲೇಜು, ಮೈಸೂರು.)

ದಿಗ್ದರ್ಶನಂ

(ಮೇ ತಾ|| 9 ರ ಸಂಚಿಕೆಯಿಂದ ಮುದುವರಿದುದು)

ಅರಿವಿಗೆ ಲಿಂಗದಸಂಗಂ | ದೊರೆಕೊಳೆಸಾನಿತೆ ಪೆರತರಿಂದೇನಹುದೋ ||
ಪರಿಪರಿಹೊತ್ತಗೆಯರಿವಿಂ | ಪರಿಯದು ಭವ ಪಾಶಮರಿದುಮರಿಯದನಪ್ಪಂ ||

ಜ್ಞಾನವಾಗುವುದಕ್ಕೆ ಶಿವನ ಸಂಬಂಧವು ಭಕ್ತನಿಗೆ ದೊರೆತರೆ ಅಷ್ಟೇ ಸಾಕು. ಉಳಿದವುಗಳಿಂದ ಆಗಬೇಕಾದ ಪ್ರಯೋಜನವೇನೋ. ಅನೇಕ ಪುಸ್ತಕಗಳನ್ನು ಓದುವುದರಿಂದುಂಟಾದ ಜ್ಞಾನದಿಂದಲೇ ಕೂಡಿರತಕ್ಕವನು ಬಹುಮಾದ ಅಂಶಗಳನ್ನು ತಿಳಿದವನಾಗಿದ್ದರೂ ಭಗವದ್ ವಿಷಯಕ ಜ್ಞಾನಹೀನನೇ ಆಗುತ್ತಾನೆ. ಇಂತಹವನಿಗೆ ಸಂಸಾರವೆಂಬ ಪಾಶವು ಬಿಟ್ಟು ಹೋಗುವುದಿಲ್ಲ, ಎಂದರೆ ಮುಕ್ತಿಯು ದೊರಕುವುದಿಲ್ಲ.

ಲಿಂಗಾಂಗ ಶಬ್ದ ಮೂಲಗಳಾದ "ಲಿಗಿ, ಅಗಿ" ಧಾತುಗಳು ಗತ್ಯರ್ಥಕಗಳಾಗಿರುವುದರಿಂದ ಜ್ಞಾನಾರ್ಥಕಗಳೂ ಆಗಿವೆ. ಹಾಗಾದರೆ ಈಶ್ವರನು ಶರೀರವಾಗಿಯೂ ಜೀವನು ತದಂಗವಾಗಿಯೂ ಇದ್ದಾರೆ. ಇಲ್ಲಿ ವಿಶೇಷವೇನೆಂದರೆ, ಈಶ್ವರನು ಸರ್ವಜ್ಞತ್ವಾದಿ ಗುಣವಿಶಿಷ್ಟನೂ ಜೀವನು ಕಿಂಚಿತ್ ಜ್ಞತ್ವಾದಿಗುಣವಿಶಿಷ್ಟನೂ ಆಗಿದ್ದಾರೆ. ಲೋಕದೃಷ್ಟಿಯಲ್ಲಿ ವಿಚಾರಿಸಲು ಪ್ರಾಕೃತ ವಿದ್ಯೆಯಲ್ಲಿ ಅಲ್ಪಜ್ಞನಾಗಿದ್ದವನು ವಿಶೇಷಜ್ಞನಾಗುವುದನ್ನು ನಾವು ಪ್ರತ್ಯಕ್ಷವಾಗಿ ನೋಡುತ್ತಿರುವುದರಿಂದ ಅಲ್ಪಜ್ಞನಾದ ಜೀವನು ಸರ್ವಜ್ಞನಾಗುವುದು ಸಾಧ್ಯವೆಂದು ಹೇಳುವುದಕ್ಕೆ ಪೂರ್ವಿಕರಾದ ಅನೇಕ ಆಚಾರ್ಯರುಗಳೂ ಋಷಿಗಳೂ ಸಾಕ್ಷಿಗಳಾಗಿದ್ದಾರೆ. ಈ ವಿಷಯದಲ್ಲಿ ಪಾರಮಾರ್ಥಿಕಜ್ಞಾನವು ಅಭಿವೃದ್ಧಿಯಾಗಬೇಕಾಗುತ್ತದೆ. ಈ ಅಭಿವೃದ್ಧಿಗೆ ಪ್ರತಿಬಂಧಕವು ಅಪರಿಮಿತವಾಗಿದೆಯೆಂದು ಹೇಳುವುದು ನಿರಾಕ್ಷೇಪವಾಗಿದೆ. ಒಟ್ಟಾಗಿ ಆ ಪ್ರತಿಬಂಧಕವು ಶರೀರಕ್ಕಿಂತಲೂ ನೀಚವಾದ ಭೋಗ್ಯವಸ್ತುಗಳ ಅಪ್ರಮಪ್ರಾಪ್ತಿಯ ಆಶೆಯಾಗಿದೆ. ಆ ಭೋಗ್ಯವಸ್ತುಗಳು ಪರರ ಹೆಣ್ಣು ಹೊನ್ನು ಮಣ್ಣುಗಳೇ ಆಗಿವೆ.

ಈ ಅರ್ಥವು ಜಡಾನುರಾಗಿಗಳಿಗೆ ಸುಲಭವಲ್ಲ. ಈ ಅರ್ಥದಲ್ಲಿ ಶ್ರೀಕೃಷ್ಣಪರಮಾತ್ಮನ ಆಜ್ಞಾರೂಪವಾದ ದಯೋಪದೇಶವು :—

"ಯತ್ರಸುಪ್ತಾಜನಾನಿತ್ಯಂ ಪ್ರಬುದ್ಧಸ್ತತ್ರಸಂಯಮೀ | ಪ್ರಬುದ್ಧಾಯತ್ರತೇ ವಿದ್ವಾನ್ ಪ್ರಸುಪ್ತಸ್ತತ್ರ ಭಾರತ ||"

"ಎಲ್ಲಿ ಜನರು ನಿದ್ರಿಸುತ್ತಾರೋ ಅಲ್ಲಿ ಯೋಗಿಯು ಎಚ್ಚರವಾಗಿದ್ದಾನೆ. ಜನರು ಎಲ್ಲಿ ಎಚ್ಚರವಾಗಿದ್ದಾರೋ ಅಲ್ಲಿ ವಿದ್ವಾಂಸನು ನಿದ್ರಿಸುವಂತೆ ಇದ್ದಾನೆ" ಇತ್ಯಾದಿ :—ಈ ಜ್ಞಾನವು ಉದಯವಾಗದಿರುವುದಕ್ಕೆ (ನಮ್ಮಲ್ಲಿ) ಇನ್ನೂ ಪ್ರತಿಬಂಧಕ ಸಾಮಗ್ರಿಗಳಿರುತ್ತವೆ.

"ಶಿಷ್ಟಾನಾಮುಪದಾರೋಪಶ್ಚಿಷ್ಟಸಂಸರ್ಗವರ್ಜನಂ | ಅಶಿಷ್ಟಾಚಾರಮದೃಷ್ಟೇಜ್ಞಾನಾನುತ್ಪತ್ತಿಕಾರಣಂ || ದುರ್ವೃತ್ತೈರಪಿಸಂಸರ್ಗೋದ್ವೃತ್ತಾನಾಂಚಪೋಷಣಂ | ದುರ್ವೃತ್ತತ್ವಂಚಭೂನಾಥಜ್ಞಾನಾನುತ್ಪತ್ತಿಕಾರಣಂ ||

ಕಾಮಃಕ್ರೋಧಶ್ಚಲೋಭಶ್ಚ ಮೋಹೋದಂಭಸ್ತಥೈವಚ | ಆಲಸ್ಯಮಪಿ ಮಾತ್ಸರ್ಯಂ ಜ್ಞಾನಾನುತ್ಪತ್ತಿಕಾರಣಂ ||

ಸಾಧೂನಾಂಭಯಕಾರಿತ್ವಂ ದುರ್ಜನೋಪಕೃತಿಸ್ತಥಾ | ಪರಸ್ತ್ರೀದರ್ಶನಶ್ರದ್ಧಾ ಪರಸ್ತ್ರೀಗಮನೇರತಿಃ || ಪರಸ್ತ್ರೀಗಮನಂಚಾಪಿ ಜ್ಞಾನಾನುತ್ಪತ್ತಿಕಾರಣಂ | ಅಶಕ್ತಾನಾಮರಕ್ಷಾಚಶಕ್ತಾಪರಾಧನಂ | ಅಶಕ್ತಾನಾಂಚ ನಿಂದಾಚ ಜ್ಞಾನಾನುತ್ಪತ್ತಿಕಾರಣಂ ||

ಸಜ್ಜನರಮೇಲೆ ದೋಷಾರೋಪಣೆಯೂ ಸಜ್ಜನರ ಸಂಗವನ್ನು ಬಿಡುವುದೂ ನನ್ನ ಭಕ್ತಿಯಲ್ಲಿ ಶಿಕ್ಷಿಸಲ್ಪಡದಿರುವುದೂ ಜ್ಞಾನೋದಯಕ್ಕೆ ಪ್ರತಿಬಂಧಕವು ನೀಚರೊಡನೆ ಸಂಗವೂ ನೀಚರನ್ನು ಪೋಷಿಸುವುದೂ ಕೆಟ್ಟ ನಡತೆಯೂ ಜ್ಞಾನೋದಯಕ್ಕೆ ವಿಘ್ನವು. ಕಾಮಕ್ರೋಧ ಲೋಭಗಳು ಮೋಹದಂಭಗಳೂ ಆಲಸ್ಯ ಮಾತ್ಸರ್ಯಗಳೂ ಜ್ಞಾನದ ಶತ್ರುಗಳು. ಸಾಧುಗಳಿಗೆ ಭಯಹುಟ್ಟಿಸುವುದೂ, ದುರಾತ್ಮರಿಗೆ ಉಪಕರಿಸುವುದೂ ಪರಸ್ತ್ರೀದರ್ಶನದಲ್ಲಿ ಆನಂದವೂ ಅವರ ಸಂಗದಲ್ಲಿ ಅಪೇಕ್ಷೆಯೂ ಅವರ ಸಂಗವೂ ಜ್ಞಾನಕ್ಕೆ ಶತ್ರುಗಳು ಮತ್ತು ಅರ್ಹರಾದ ಅಶಕ್ತರನ್ನು ರಕ್ಷಿಸದಿರುವುದು ಅರ್ಹರಾದ ಶಕ್ತರಿಗೆ ಅಪರಾಧಮಾಡುವುದು ನಿರಪರಾಧಿಗಳಾದ ಅಶಕ್ತರ ಮೇಲೆ ನಿಂದೆಹೊರಿಸುವುದು ಇವುಗಳು ಜ್ಞಾನದ ವೈರಿಗಳು ಇತ್ಯಾದಿ.

ಮುಖ್ಯವಾಗಿ ಲಿಂಗಲಕ್ಷಣವನ್ನೂ ಜ್ಞಾನಾನುತ್ಪತ್ತಿಕಾರಣವನ್ನೂ ವಿವರಿಸುವುದು ಅಸಾಧ್ಯವೂ ಅಗನ್ಯವೂ ಆದುದು. ಆದರೂ ಇಲ್ಲಿ ಸಂಕ್ಷೇಪಿಸಲಾಗಿದೆ ಏಕೆಂದರೆ, ವಾಚಕರು ಕಳೆದವಾರದ ಪತ್ರಿಕೆಗಳಿಗಿಂತ ಬರುವ ವಾರದ ಪತ್ರಿಕೆಗೆ ಬೆಲೆ ಕಟ್ಟತಕ್ಕವರಾಗಿದ್ದಾರೆ.

ವೇದಾಂತವಾಕ್ಯೋತ್ಥ ಪರಾತ್ಮವಿದ್ಯಾಂಶಿವಸ್ಯಲಿಂಗಂ ಕಥಯಂತಿಕೇಚಿತ್ | ವಿಚಾರಜನ್ಯಾಮಪಿಸತ್ಯವಿದ್ಯಾಂಬ್ರುವಂತಿಚಾನ್ಯೇ ಪರಮಸ್ಯಲಿಂಗಂ ||

ಯದ್ಯಲ್ಲಿಂಗತಯಾಶಿವಸ್ಯಕಥಿತಂತತ್ತಜ್ಜಡಂವಸ್ತುತೋಲಿಂಗಂನೈವಭವೇದ್ವಿಶುದ್ಧಮತಯೋಜ್ಞಾನಂಹಿಲಿಂಗಂವಿದುಃ || ಕಸ್ಮಾದೇವಮಹೇಶ್ವರಃ ಪರತರಃತತ್ಪದೋಪಾಧಿತಃಚಿದ್ರೂಪಪ್ರಥಿತಃಪ್ರಭೋರ್ಗಮಕಮಿತ್ಯರ್ಥಸ್ಥಿತಿಸ್ಸ್ವಸ್ಯತು ||

ಮತ್ತು ನಾವು ಲಿಂಗಲಕ್ಷಣವನ್ನು ಕುರಿತು ಈವರೆಗೂ ಪತ್ರಿಕೋಚಿತವಾಗಿ ಪ್ರಕಾಶಪಡಿಸಿದ್ದರೂ ಪುನಃ ಸ್ವಲ್ಪದೂರ ವಿವರಿಸುವುದು ಅಗತ್ಯವೆಂದು ಕಂಡುಬಂದಿದೆ ಏಕೆಂದರೆ :—ಬ್ರಹ್ಮಪರ್ಯಾಯ ನಾಮವಾದ ಲಿಂಗಶಬ್ದವನ್ನು ಅರ್ಥಮಾಡುವ ವಿಷಯದಲ್ಲಿ ಸುಮಾರು ಹತ್ತೆಂಟು ವಿಧವಾದ ಭಿನ್ನಾಭಿಪ್ರಾಯಗಳು ನಮಗೆ ದೊರೆಯುತ್ತವೆ. ಅವುಗಳಲ್ಲಿ ಕೆಲವು ಹಾಸ್ಯಕರಗಳಾಗಿಯೂ ಕೆಲವು ಆಕ್ಷೇಪಕರಗಳಾಗಿಯೂ ಕೆಲವು ಮಧ್ಯಮಗಳಾಗಿಯೂ ಇರುತ್ತವೆ. ಇವುಗಳೆಲ್ಲವನ್ನೂ ಬಿಟ್ಟು ನಾವು ಹೇಳುವ ಕ್ರಮವೇ ಸಮಂಜಸವೂ ನಿರಾಕ್ಷೇಪವೂ ಮತ್ತು ಶಾಸ್ತ್ರೀಯವೂ ಆತ್ಮೀಯ ಮತೋಚಿತವೂ ಆಗಿದೆಯೆಂಬ ಅಭಿಪ್ರಾಯವನ್ನು ಸಮಯೋಚಿತವಾಗಿ ಮಹರ್ಷಿ ವಚನ ಪ್ರಮಾಣಗಳಿಂದ ದೃಢೀಕರಿಸುವುದು ಯುಕ್ತವೆಂದು ಕಂಡುಬಂದಿದೆ. ಲೋಕದಲ್ಲಿ ಹೇಳುವವರಿಗಿಂತಲೂ ಅದರಂತೆ ನಡೆಯುವವರು ವಿರಳರಷ್ಟೇ.

"ಪ್ರಕೃತ್ಯಾ ಅಕೃತಿಃಪ್ರತ್ಯಯೇನಭವತೀತಿಪ್ರಕೃತಿಃ" "ಪ್ರತೀಯತೆ ವಿಧೀಯತ ಇತಿಪ್ರತ್ಯಯಃ" "ಯೇರಜಿತ್‌ಯಚ್ ಭಾವಕರ್ಮನೋರ್ಯಗಿತಿ ಯಚ್‌ಚ" "ಇದಿತಾಂ ಮುಮಿತಿಮುಮಾಗಮಃ" ಈರೀತಿಯಾಗಿ ಪ್ರಕೃತಿ ಪ್ರತ್ಯಯಾತ್ಮಕವಾದ ಲಿಂಗಶಬ್ದಕ್ಕೆ ಗತ್ಯರ್ಥವು ಮೊದಲನೆಯದಾಗಿಯೂ ಜ್ಞಾನಾರ್ಥವು ಎರಡನೆಯದಾಗಿಯೂ ಇರುವುದರಿಂದ ಜ್ಞಾನದಿಂದುಂಟಾಗುವ ಕ್ರಿಯೆಗಿಂತಲೂ ಕ್ರಿಯೆಯಿಂದುಂಟಾಗುವ ಜ್ಞಾನವು ಅಮುಷ್ಮಿಕರಸಸಾಧಕಗಿ ಅತ್ಯುತ್ಕೃಷ್ಟವಾಗಿದೆ. "ಏಥಾವಾದೈಕ್ರಥಮ್ಯಕಸ್ತ್ಯಾಯಾಭಾವೋರಸಸ್ಮೃತಃ" ಇತ್ಯಾದಿ.

(ಶೇಷಂ.)

ವೀರಶೈವ ಅನಾಥಾಲಯ, ಬೆಂಗಳೂರು ಸಿಟಿ.

ವಿದ್ಯಾರ್ಥಿಗಳಿಗೆ ಸೂಚನೆ.

ಬೆಂಗಳೂರು ಸಿಟಿಯಲ್ಲಿರುವ ವೀರಶೈವ ಅನಾಥಾಲಯಕ್ಕೆ ಅನಾಥರೂ, ಬಡವರೂ, 18 ವರ್ಷಕ್ಕೆ ಮೀರದವರೂ, ಕೈಗಾರಿಕೆಯನ್ನು ಕಲಿಯಲಿಷ್ಟವುಳ್ಳವರೂ ಆದ ವೀರಶೈವ ಬಾಲಕರು ತಾ|| 15-6-1932 ರೊಳಗೆ ಸೇರಿಸಲ್ಪಡಲು ಮತ್ತು ಅವರುಗಳಿಗೆ ಉಚಿತವಾಗಿ ಅಶನವಸತಿಗಳನ್ನು ಕಲ್ಪಿಸಲು ಏರ್ಪಡಿಸಿದೆ. ಆದ್ದರಿಂದ ಇಷ್ಟವುಳ್ಳವರು ತಾವು ಬಡವರೆಂಬುದಕ್ಕೆ ಸರ್ಟಿಫಿಕೇಟನ್ನು ಪಡೆದು ಮೇಲ್ಕಂಡ ತಾರೀಕಿನೊಳಗೆ ಸೆಕ್ರೆಟರಿಗಳಿಗೆ ಬರೆದುಕೊಳ್ಳತಕ್ಕದ್ದು. ಈ ತಾರೀಕು ಮೀರಿಬರುವ ಅರ್ಜಿಗಳಿಗೆ ಸಿಗ ಕೊಡಲ್ಪಡುವುದಿಲ್ಲ.

ಯಜಮಾನ್ ಮಾದಪ್ಪ, ಕೆ. ಶಿವಪ್ಪ, ಸೆಕ್ರೆಟರಿಗಳು.

ಲಗ್ನ ಮುಂತಾದ ಶುಭಕಾರ್ಯಗಳಲ್ಲಿ ಸಹಾಯಮಾಡಿದ ಮಹನೀಯರುಗಳು.

ಮ|| ಗಳಾದ ಬೆಂಗಳೂರು ಸಿಟಿ ಚಾಮರಾಜಪೇಟೆ ಪಿ. ಎಂ. ಬಸಪ್ಪನವರ ಸಹೋದರರು ಪಿ. ವಿ. ಛತ್ರಪ್ಪನವರ ಮನೆಯಲ್ಲಿ ನಡೆದ ಅವರ ಪುತ್ರಿ ಚಿ|| ಸೌ|| ನಾಗಾಂಬೆಗೂ ತುಮಕೂರು ತಾ|| ಊರ್ಡಿಗೆರೆ ಹುಚ್ಚಿಂಗಿ ಗಂಗಪ್ಪನವರ ಪುತ್ರ ರಾ|| ಅಡ್ವೊಕೇಟ್ ಟಿ. ಕೆ. ಗುಬ್ಬಯ್ಯನವರಿಗೂ ನಡೆದ ವಿವಾಹಮಹೋತ್ಸವ ಕಾಲದಲ್ಲಿ ವಧೂವರರಿಂದ ಬಂದದ್ದು 10 ರೂ. (೨) ಬೆಂಗಳೂರು ಸಿಟಿ ಅರಳೇಪೇಟೆ ಜಿ. ರೇವಣ್ಣಶೆಟ್ಟಿಯವರ ಮನೆಯಲ್ಲಿ ನಡೆದ ಅವರ ಪುತ್ರಿ ಚಿ|| ಸೌ|| ಯಲ್ಲಮ್ಮನಿಗೂ ಡಿಟೋ ಪೇಟೆ ಜಿ. ಮರಿಯಪ್ಪನವರ ಪುತ್ರ ರಾ|| ಸಿದ್ಧಲಿಂಗಪ್ಪನವರಿಗೂ ನಡೆದ ವಿವಾಹಮಹೋತ್ಸವದಲ್ಲಿ ವರನಿಂದ ಬಂದದ್ದು 5 ರೂಪಾಯಿ.

ಯಜಮಾನ್ ಮಾದಪ್ಪ, ಕೆ. ಶಿವಪ್ಪ, ಸೆಕ್ರೆಟರಿಗಳು.

ವಿವೇಕಾನಂದ ಸಂಜೀವಿನಿತೈಲ

ಈ ತೈಲವು ಮುರಿದ ಮೂಳೆಗಳ ನೋವು ಮತ್ತು ತಪ್ಪಿದ ಕೀಲುಗಳೂ ಉಳುಕು ನೋವುಗಳಿಗೂ ಸಕಲ ವಾಯುಗಳಿಗೂ ವಾಯುವಿನಿಂದ ನರಗಳು ಇಳಿದಿರುವುದು ವಾಯುಗಂಟು ಈ ನೋವುಗಳಿಗೆ ಸವರಲು ಉತ್ತಮ ಗುಣಕಾರಿ. 3 ಔನ್ಸ್ ಬಾಟ್ಲಿ 1 ಕ್ಕೆ 1—8—0 ರೂಪಾಯಿ.

ವಿವೇಕಾನಂದ ಸಂಜೀವಿ

ಶರೀರದ ಯಾವ ಭಾಗದ ಮೂಳೆಗಳು ಮುರಿದಿದ್ದರೂ, ಕೀಲುಗಳು ತಪ್ಪಿದ್ದರೂ ಈ ಕಾರಣದಿಂದ ಗಂಟುಕಟ್ಟಿದ್ದರೂ, ಮುರಿದ ಮೂಳೆಗಳನ್ನು ಸರಿಪಡಿಸುತ್ತದೆ. **ಇದೂ ಅಲ್ಲದೆ ಸಕಲ ವ್ಯಾಧಿಗಳಿಗೂ ಅಮೂಲ್ಯವಾದ ಔಷಧಿ** ನಮ್ಮಲ್ಲಿ ದೊರೆಯುತ್ತ.

3 ತೊಲ ಡಬ್ಬಿ 1 ಕ್ಕೆ 2—8—0 ರೂಪಾಯಿ.

ಕ್ಯಾಟ್ಲಾಕಿಗೆ ಬರೆದರೆ ಉಚಿತವಾಗಿ ಕಳಿಸುತ್ತೇವೆ.

ಪಂಡಿತ್ ಎಚ್. ಲಕ್ಷ್ಮಣರಾಜು ಅಂಡ್ ಬ್ರದರ್ಸ್,
[4—1] ಸೀತಾವಿಲಾಸ ಡಿಸ್ಪೆನ್ಸರಿ ಚಾಮರಾಜಪೇಟೆ, ಮೈಸೂರು.

ನಾರಿನವೇಳೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರ ತರಿಸಿಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

4 M. C.

೧೯೩೨ ನೆಯ ಇಸವಿ ಮೇ ತಾ|| ೧೬ ರಿಂದ ಮೇ ತಾ|| ೨೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ ಅಂಗಿರಸನಾಮಸಂವತ್ಸರದ ವೈಶಾಖ ಶುದ್ಧ ಏಕಾದಶಿಯಿಂದ ವೈಶಾಖ ಬಹುಳ ಬಿದಿಗೆ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಷಭ ಮಾಸ
16	ಸೋಮ	ಏಕಾದ	35-45	ಉತ್ತ	15-50	3
17	(1) ಮಂಗಳ	ದ್ವಾದ	29-49	ಹಸ್ತ	12-6	4
18	ಬುಧ	ತ್ರಯೋ	23-46	ಚಿತ್ತ	8-3	5
19	ಗುರು	ಚತು	17-36	ಸ್ವಾತಿ	3-53	6
20	(2) ಶುಕ್ರ	ಪೌರ್ಣ	11-33	ಅನೂ	55-50	7
21	ಶನಿ	ಪಾಡ್ಯ	5-57	ಜ್ಯೇಷ್ಠ	52-33	8
22	ಭಾನು	ಬಿ-ಉ	0-52-55-0	ಮೂಲ	49-53	9

(1) ಮಳೆನಕ್ಷತ್ರ-ಕೃತ್ತಿಕೆ ೩ ನೆಯ ಪಾದ, ದೋಷ ... ಕೊನೆ ದಿನ.
(2) ಮಳೆನಕ್ಷತ್ರ-ಕೃತ್ತಿಕೆ ೪ ನೆಯ ಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ... ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

ಮೈಸೂರ್ ಸ್ಟಾರ್

REG. NO. M. 124

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ರಜ್ಞನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಕಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆ ೧೯೩೨ ನೆಯ ಇಸವಿ ಮೇ ತಾರೀಖು ೨೩ ನೆಯ ಸೋಮವಾರ [ಸಂಚಿಕೆ ೨೧

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place for insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries, Economic Superintendents, Helpers and the Insurance Office, Public Office Buildings Bangalore.

(Sd.) S. SHAMANNA,
Secretary, Insurance Committee.

[50—45]

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕರ್ನಾಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇಂ.
ವೀರಶೈವ ಶಿವಪೂಜಾವಿಧಿಃ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿಃ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೬—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿವಾಣಿ	೦—೪—೦	೦—೬—೦
ವ್ರತಸಂಚಿಕೆ	೦—೪—೦	೦—೬—೦
ಗುರುಶಂಕರೇಶ್ವರಶತಕ	೦—೧—೦	೦—೭—೦
ಬಸವೇಶ್ವರನಜನನ	೦—೮—೦	೦—೧೩—೦
ಸಟೀಕ ಕರಸ್ಥಲಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತತ್ರಯ	೧—೦—೦	೧—೭—೦

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ನಿವೃತ್ತಿಯಾಗುವ ವ್ಯಾಧಿಗಳು ಯಾವವೆಂದರೆ—ಶೀತ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ನಿವಾರಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದ ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು, ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕೆಂಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ನಿಗೆ ಪುಗಸಟ್ಟೆ ಕಳುಹಿಸಲಾಗುವದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜ್ ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನು, ಅಡ್ರೆಸ್ಸನ್ನು ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್
[೫೦—೫೭] ಪೋ. ಬಾ. ೫೫೧, ಮದ್ರಾಸು.

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಷ್ಟರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು ಇದ್ದು ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ ಶರೀರ ತರುಣರಂತೆ ಕಾಮೆಚ್ಛಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧೀ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಿಣಿ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ಒಂದು ಡಬ್ಬಿಗೆ ೫। ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳ್ಳೀಸು ಪಾಕದ ಕೂಡ ಕಳಿಸುವ ಅನುಪಾನ. ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಡಿಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಗಳಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ಕ್ಷೀಣ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ ಮತ್ತು ... ಯಾವ ಸ್ತ್ರೀಯರಿಗೆ ಭಯಂಕರ ... ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. [illegible]

ಪತ್ತಾ ಮಾಲಕ :—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ ಎಂ. ಎಸ್. ಎಂ.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಮೇ ತಾ|| ೨೩ ನೆಯ ಸೋಮವಾರ.

THE BOMBAY RIOTS

Yet another wave of communal frenzy and madness is passing over Bombay. The Police and Military had to open fire a number of times on the unruly mobs. The result is an unprecedented tole of deaths and casualties. It may be too early to lay the guilt of raising the storm at the door of either of the two communities, the Hindu or the Muslim. Their is a proposal to form a committee to investigate the causes, and we may trust that its composition will be such as to command full confidence of both the communities and as to ensure an impartial finding. We are more concerned with the decease itself and the steps that ought to be taken for its nonrecurrance. It is difficult to believe that the outbreak was just an accident, for if it were so surely it would not have assumed such huge proportions. That there is a certain amount of ill-will, not merely want of good-will, a certain amount of soreness there can hardly be any doubt. The rioting may be confined, so for as active participation is concerned, to the hooligan elements in both the communities. But when it comes to a deeper study it is difficult to deny that non-hooligan elements also, to howsoever small and limited extent at least it may be, are in sympathy with such acts of lawlessness. The responsibility lies on two bodies, the general public and the Government. We are afraid neither of them have discharged their responsibility in full. In 1929 it was a serious charge on the powers-that-be that they did not act promptly. One would wish that Government did not lay itself again open to that charge. The emergency measures proceeded slowly, though the public had a right to expect them to be issued without any delay. Communal feelings once allowed to develop, are difficult to stem even with very stringent measures later on. The public, especially of the two communities, has an equaly important though less direct responsibility. There should be an organisation for sustained propaganda and the best minds of all communities should lead the movement. Very often we find that that part of the public which by its intelligence and wealth can undertake such kind of work, keeps out, feeling too proud of their own position or utterly indifferent about the consequences. We had an experience of such inaction at the time of what now is known as Bangalore disturbance, which can hardly be the proper term for it when it is compared with the riots elsewhere, but which, however, some designing folk magnified out of all its proportions. We hope that the steps that Government have taken at Bombay will be effective not only to put down the riots, but also to ensure a friendly relationship and that the leaders of both the communuities will also rise up to the occasion. We are sorry to note that Movlana Shoukat Ali should have staged a walk out at the peace meeting on grounds which can hardly be called justifiable. We hope there will be others to take his place on the peace committee and to contribute their quota in a constructive manner and that all together will unite in one friendly brotherhood to re-establish the harmony between the two great sister-communities.

THE "MYSORE OBSERVOR," which can be expected to take a dispassionate view of matters has something very intersting and very candid to say about the Alikhan—Rama Iyer controversy. We publish below its observations with which none can disagree, except probably Mr. T. G. Rama Iyer himself and his supporter, Mr. A. Krishna Rao:—

NOMINATED COUNCILLORS.

While in Bangalore we have the spectacle of the will of the Municipal Council being too often in conflict with Government's in the "cummerbund" atmosphere of Mysore, the non-official elected Municipal Councillors agreed with the official President in his views and procedure in the matter of his correspondence with Mr. Tippu Sultan Ali Khan. The latter merely complained that he had not enough time to consider the agenda to prepare himself actively to contribute to the Council's debates and thus effectively represent the interests of the rate-payers and got the reply from the bureaucratic head of the Municipality that being a nomintated Councillor, he represented nobody but himself. This gratuitous expression of opinion is entirely irrelevant and nothing short of impudence and it is difficult to comprehend the self-respect of a body which took it lying down. A nominated Councillor, this omnicient bureaucrat may yet learn, is sent to the Municipal Council under the present constitution by the Government not to watch his personal affairs but to represent some minority or special interest which may not have got in by the open door of election; on that account he does not cease to possess the right to voice the feelings of the ratepayers and, under the present constitution, he is as good as any other elected Councillor and is equally entitled to be regarded as a representative of the ratepayer's interests. It is a pity that in this case at least the numinated Councillor put up a tougher fight for his rights than the non official elected Councillors to whom the President of the Mysore Municipality was graciously pleased to concede the claim of representing the interests of the rate-payers.

ಬೊಂಬಾಯಿನ ದಂಗೆ.

ಬೊಂಬಾಯಿ ಪಟ್ಟಣದಲ್ಲಿ ಮೊಹರಂ ಹಬ್ಬದ ಸಂಬಂಧವಾಗಿ ಹಿಂದು ಮಹಮ್ಮದೀಯರಿಗೆ ಕಲಹವು ಹುಟ್ಟಿ ಮಹಾನರ್ಥಕಾರಿಯಾಗಿ ಪರಿಣಮಿಸಿದ್ದಿತು. ಕಲಹಗಾರರ ಪುಂಡನ್ನು ಅಣಗಿಸಲು ಪೊಲೀಸಿನವರೂ ಸೈನಿಕರೂ ಗುಂಡುಗಳನ್ನು ಹಾರಿಸಬೇಕಾಗಿ ಬಂದಿತು. ಇದರಿಂದ ಅಭೂತಪೂರ್ವವಾದ ಮರಣವೂ ಅಪಾಯವೂ ಸಂಭವಿಸಿರುತ್ತವೆ. ಈ ಮಹಾನರ್ಥಕ್ಕೆ ಹಿಂದು ಮಹಮ್ಮದೀಯರುಗಳಲ್ಲಿ ಯಾರು ಕಾರಣರೆಂದು ಸದ್ಯದಲ್ಲಿ ಹೇಳಲು ಸಾಧ್ಯವಿಲ್ಲ. ಈ ಕಲಹದ ಕಾರಣವನ್ನು ವಿಚಾರಿಸಲು ಒಂದು ಸಂಘವೇರ್ಪಡಿಸಲ್ಪಡುವುದಾಗಿದೆ. ಈ ಸಂಘಕ್ಕೆ ಪ್ರಜೆಗಳ ಸಂಪೂರ್ಣ ವಿಶ್ವಾಸಕ್ಕೆ ಪಾತ್ರರೂ ನಿಷ್ಪಕ್ಷಪಾತ ನಿರ್ದಾಕ್ಷಿಣ್ಯಗಳಿಂದ ವರ್ತಿಸತಕ್ಕವರೂ ಆದ ಹಿಂದು-ಮಹಮ್ಮದೀಯ ದೊಡ್ಡ ಮನುಷ್ಯರುಗಳು ಸದಸ್ಯರಾಗಿ ನಿಯಮಿಸಲ್ಪಡುವರೆಂದು ನಂಬುತ್ತೇವೆ. ಈ ದಂಗೆಯ ರೋಗದ ಕಾರಣವು ಕಂಡುಹಿಡಿಯಲ್ಪಟ್ಟು ಅದು ಪುನಃ ಪ್ರಾಪ್ತವಾಗದಂತೆ ತಕ್ಕ ಚಿಕಿತ್ಸೆ ಮಾಡಲ್ಪಡುವುದು ಅತ್ಯಂತಾವಶ್ಯಕವು. ಈ ರೋಗವು ಆಕಸ್ಮಿಕವಾಗಿ ಸಂಭವಿಸಿತೆಂದು ನಂಬಲು ಸಾಧ್ಯವಿಲ್ಲ. ಏಕೆಂದರೆ, ಹಾಗೆ ಆಕಸ್ಮಿಕವಾಗಿದ್ದಲ್ಲಿ ಅದು ಇಂತಹ ಉಗ್ರಸ್ವರೂಪವನ್ನು ಹೊಂದುತ್ತಿರಲಿಲ್ಲ. ಉಭಯ ಪಂಗಡದವರಿಗೂ ಪರಸ್ಪರ ವೈಮನಸ್ಯವಿರುವುದೆಂದು ನಿಸ್ಸಂದೇಹವಾಗಿ ಹೇಳಬಹುದು. ಈಗಿನ ದಂಗೆಗೆ ಉಭಯ ಪಕ್ಷದ ತುಂಟರು ಕಾರಣರಾಗಿರುವರಾದರೂ, ದೀರ್ಘವಾಗಿ ವಿಚಾರ ಮಾಡಿದರೆ, ಇತರರ ಸಹಾಯ ಸಹಾನುಭೂತಿಗಳು ತಕ್ಕಮಟ್ಟಿಗಾದರೂ ಇರಲಿಲ್ಲವೆಂದು ಹೇಳಲಾಗುವುದಿಲ್ಲ. ಇದನ್ನಣಗಿಸುವಲ್ಲಿ ಪ್ರಜಾವರ್ಗದವರೂ ಪ್ರಭುತ್ವದವರೂ ಬಾಧ್ಯರಾಗಿರುತ್ತಾರೆ. ಈ ಉಭಯರಲ್ಲಿ ಆರೂ ತಮ್ಮ ಬಾಧ್ಯತೆಯನ್ನು ನಿವಾರಿಸಿಕೊಂಡಂತೆ ತೋರುವುದಿಲ್ಲ. 1929 ರಲ್ಲಿ ಸಂಭವಿಸಿದ ದಂಗೆಯನ್ನು ಅಣಗಿಸಲು ಪ್ರಭುತ್ವದವರು ಕೂಡಲೆ ತಕ್ಕ ಪ್ರಯತ್ನ ಮಾಡಲಿಲ್ಲವೆಂಬ ದೂರು ಪ್ರಬಲವಾಗಿದ್ದಿತು. ಅದರಂತೆಯೇ ಈ ವೇಳೆಯೂ ಪ್ರಭುತ್ವದವರು ದೂರಿಗೆ ಗುರಿಯಾಗಬಾರದೆಂಬುದು ಪ್ರತಿಯೊಬ್ಬನ ಆಶಯವಾಗಿದೆ. ಇಂತಹ ಸಂದರ್ಭಗಳಲ್ಲಿ ತಕ್ಕನಿಗ್ರಹೋಪಾಯಗಳನ್ನು ತತ್ಕ್ಷಣದಲ್ಲಿ ಪ್ರಭುತ್ವದವರು ಕೈಕೊಳ್ಳಬೇಕೆಂದು ಕೇಳುವ ಅಧಿಕಾರವು ಪ್ರಜೆಗಳಿಗಿದ್ದಾಗ್ಗ್ಯೂ ಪ್ರಭುತ್ವದವರು ಮಾತ್ರ ತಾತ್ಸಾರವಾಗಿಯೇ ಕೈಕೊಳ್ಳುವರು. ಜಾತಿ ಪಂಗಡಗಳ ದ್ವೇಷವು ಕೂಡಲೆ ನಿಗ್ರಹಿಸಲ್ಪಡದೆ ಬೆಳೆಯಲಿಕ್ಕೆ ಅವಕಾಶ ಕೊಡಲ್ಪಟ್ಟಲ್ಲಿ, ಮುಂದೆ ಅದನ್ನು ಅತ್ಯಂತ ಕಠಿಣಚರ್ಯೆಯಿಂದ ಸಹ ನಿಗ್ರಹಿಸಲು ಬಹಳ ಪ್ರಯಾಸವಾಗುವುದು. ಪ್ರಜೆಗಳಿಗೆ ಮುಖ್ಯವಾಗಿ ಹಿಂದು-ಮಹಮ್ಮದೀಯ ಪಂಗಡಗಳಿಗೆ ನೇರವಾಗಿ ಜವಾಬ್ದಾರಿಯಿಲ್ಲವಾದರೂ, ಅವುಗಳ ಜವಾಬ್ದಾರಿಯು ಮುಖ್ಯವಾಗಿರುತ್ತದೆ. ಎಲ್ಲ ಪಂಗಡಗಳ ವಿವೇಕಶಾಲಿಗಳು ಸೇರಿ ಇಂತಹ ಜಾತಿ ವೈಷಮ್ಯಗಳೂ ಕಲಹಗಳೂ ನಡೆಯದಂತೆ ನೋಡಿಕೊಳ್ಳುವುದು ಅತ್ಯಾವಶ್ಯಕವು. ಆದರೆ ಬುದ್ಧಿವಂತರೂ ಧನವಂತರೂ ಆದ ಪಂಗಡದವರು ತಮ್ಮ ಸ್ಥಿತಿಗೆ ಗರ್ವಪಟ್ಟುಕೊಂಡು ಇಂತಹ ವಿಚಾರಗಳಿಗೆ ಗಮನಕೊಡದೆ ಬಹಳ ಅನಾದರಣೆಯಿಂದಿರುವುದನ್ನು ನೋಡುತ್ತಿದ್ದೇವೆ. ಈ ವಿಧವಾದ ಅನಾದರಣೆಯು ಬೆಂಗಳೂರು ದಂಗೆಯಲ್ಲಿ ಅನುಭವಕ್ಕೆ ಬಂದಿರುತ್ತದೆ. ಬೆಂಗಳೂರಿನಲ್ಲಿ ನಡೆದ ಕಲಹವನ್ನು ಇತರ ಕಡೆಗಳಲ್ಲಿ ನಡೆದ ದಂಗೆಗಳಿಗೆ ಹೋಲಿಸಿದರೆ ಅದು ದಂಗೆಯೆನಿಸಿಕೊಳ್ಳುವುದಿಲ್ಲವಾದರೂ, ಕೆಲ ಸಂಧಾನಿಗಳು ಅದಕ್ಕೆ ಅಂತಹ ಉಗ್ರಸ್ವರೂಪವನ್ನು ಕೊಟ್ಟರು. ಈಗ ಬೊಂಬಾಯಿ ಪ್ರಭುತ್ವದವರು ಕೈಕೊಂಡಿರುವ ಕಾರ್ಯವಿಧಾನವು ದಂಗೆಯನ್ನು ಅಣಗಿಸುವುದು ಮಾತ್ರವಲ್ಲದೆ ಉಭಯ ಪಂಗಡಗಳಲ್ಲಿ ಸಖ್ಯವನ್ನುಂಟುಮಾಡುವುದೆಂದೂ, ಈ ವಿಚಾರದಲ್ಲಿ ಉಭಯ ಪಕ್ಷಿಗಳ ಮುಖಂಡರು ಮುಂದೆ ಬಂದು ಸಾಹಾಯ್ಯಾಕರಿಸುವರೆಂದೂ ನಿರೀಕ್ಷಿಸುತ್ತೇವೆ. ಉಭಯ ಪಂಗಡಗಳಿಗೂ ಸಮಾಧಾನಪಡಿಸುವುದಕ್ಕಾಗಿ ಕೂಡಿದ್ದ ಸಭೆಯಲ್ಲಿ ಮೌಲಾನಾ ಷೌಕತಾಲಿಯವರು ಅಸಮಂಜಸ ನೆಪಗಳನ್ನು ಹೇಳಿ ಇರದೆ ಹೊರಟುಹೋದುದಕ್ಕಾಗಿ ವಿಷಾದಿಸುತ್ತೇವೆ ಮತ್ತು ಬೇರೆಯವರು ಶಾಂತಿಸ್ಥಾಪನ ಕಮಿಟಿಯಲ್ಲಿ ಅವರಿಗೆ ಬದಲು ಇದ್ದುಕೊಂಡು ಶಾಂತಿಸ್ಥಾಪನಾಕಾರ್ಯವು ಜಯಪ್ರದವಾಗಿ ನಡೆಯಲು ಸಾಹಾಯ್ಯಾಕರಿಸಬೇಕೆಂದೂ, ಎಲ್ಲ ಮೆಂಬರುಗಳೂ ಭ್ರಾತೃಭಾವದಿಂದ ಒಟ್ಟುಗೂಡಿ ಪ್ರಬಲ ಪಂಗಡಗಳಾದ ಹಿಂದು ಮಹಮ್ಮದೀಯರುಗಳಲ್ಲಿ ಮೈತ್ರಿಯನ್ನೂ ಸೌಹಾರ್ದವನ್ನೂ ಉಂಟುಮಾಡಬೇಕೆಂದೂ ಅಪೇಕ್ಷಿಸುತ್ತೇವೆ.

ಅಭಯಂಕರರ ಮೋಟಾರ್‌ಕಾರು ಹರಾಜಾಯಿತು

ನಾಗಪುರದ ಕೋಲ್‌ಹಟ್‌ರವರು ಅಭಯಂಕರರ ಮೊಟಾರ್ ಕಾರನ್ನು ಹರಾಜಿನಲ್ಲಿ 1600 ರೂ. ಗೆ ಕೊಂಡು ಅಭಯಂಕರರ ಡ್ರೈವರನ ಮೂಲಕ ಆಕಾರನ್ನು ಅವರ ಮನೆಗೆ ಕಳುಹಿಸಿಕೊಟ್ಟರು.

ವಾಲಂಟಿಯರಿಗೆ ವಸತಿಯೇರ್ಪಡಿಸಿದ್ದಕ್ಕಾಗಿ ಶಿಕ್ಷೆ

ಮದ್ರಾಸಿನಲ್ಲಿ ಡಾಕ್ಟರ್ ಕೆ. ರಂಗನಾಥರವರು ಕಾಂಗ್ರೆಸ್ ವಾಲಂಟಿಯರುಗಳಿಗೆ ವಸತಿಯನ್ನೇರ್ಪಡಿಸಿದುದಕ್ಕಾಗಿ 6 ತಿಂಗಳ ಕಠಿಣ ಸಜ ಮತ್ತು 200 ರೂಪಾಯಿ ದಂಡ ವಿಧಿಸಲ್ಪಟ್ಟರು.

ಬಿರುಗಾಳಿಯಿಂದಾದ ನಷ್ಟ

ಕಳೆದ ತಾ|| 16 ರ ರಾತ್ರಿ ಜಮಲಪುರ ಸಬ್‌ಡಿವಿಜನ್ನಿನಲ್ಲಿ ವಿಪರೀತ ಗಾಳಿ ಮಿಶ್ರವಾದ ಮಳೆ ಬಂದು 6 ಗ್ರಾಮಗಳಿಗೆ ಬಹಳ ನಷ್ಟ ಸಂಭವಿಸಿತು, ಒಬ್ಬನು ಸತ್ತನು, 20 ಮಂದಿ ಅಪಾಯ ಹೊಂದಿದರು.

ಅಮೇರಿಕೆಯ ಸ್ತ್ರೀ ಕಾರಾಗೃಹ

ಅಮೆರಿಕೆಯಲ್ಲಿ ಸ್ತ್ರೀಯರ ಕಾರಾಗೃಹವು ಪ್ರತ್ಯೇಕವಾಗಿದೆ. ಇದರೊಳಗೆ ವಿಹಾರಮಂದಿರದಲ್ಲಿರುವ ಎಲ್ಲ ಸೌಕರ್ಯಗಳಿರುತ್ತವೆ. ಪ್ರತಿಯೊಂದು ಕೋಣೆಯಲ್ಲೂ ಒಳ್ಳೆಯ ಹಾಸಿಗೆ, ಮುಖ ನೋಡಿಕೊಳ್ಳಲು ಕನ್ನಡಿ, ಬಿಸಿನೀರಿನ ಮತ್ತು ತಣ್ಣೀರಿನ ಕೊಳಾಯಿಗಳು ಮೊದಲಾದವುಗಳು ಸಿದ್ಧಗೊಳಿಸಲ್ಪಟ್ಟಿವೆ.

ದಿಲ್ಲಿ ಮ್ಯುನಿಸಿಪಲ್ ಕಮಿಷನರಿಗೆ ಶಿಕ್ಷೆ

ದಿಲ್ಲಿಯಲ್ಲಿ ಕಾಂಗ್ರೆಸು ಮಹಾಸಭೆಯನ್ನು ನಡೆಸುವ ಪ್ರಯತ್ನ ಮಾಡುವಾಗ್ಗೆ 144 ನೇ ಸೆಕ್ಷನ್ನನ್ನು ತಿರಸ್ಕರಿಸಿ ಉತ್ಸವವನ್ನು ನಡೆಸಿದುದಕ್ಕಾಗಿ ಮ್ಯುನಿಸಿಪಲ್ ಕಮಿಷನರ್ ದೇಶಬಂಧು ಗುಪ್ತರವರು 6 ತಿಂಗಳ ಕಠಿಣ ಸಜ, 300 ರೂ. ದಂಡ, ಇದನ್ನು ಕೊಡಲು ತಪ್ಪಿದಲ್ಲಿ ಇನ್ನು 6 ತಿಂಗಳ ಸಜ ವಿಧಿಸಲ್ಪಟ್ಟರು.

ಹಡಗಿಗಾದ ಅಗ್ನಿಪ್ರಮಾದ

ಫ್ರೆಂಚು ಹಡಗು ಮಧ್ಯ ಸಮುದ್ರದಲ್ಲಿ ಅಗ್ನಿಯಿಂದ ಹೊತ್ತಿಕೊಂಡು ಮುಳುಗಿಹೋಯಿತು. ಅದರಲ್ಲಿದ್ದ ಪ್ರಯಾಣಿಕರಲ್ಲಿ 670 ಮಂದಿ ಸೋವಿಯಟ್ ಮತ್ತು ಬ್ರಿಟಿಷ ಹಡಗುಗಳ ಸಹಾಯದಿಂದ ಸಂರಕ್ಷಿಸಲ್ಪಟ್ಟರು. ಉಳಿದವರು ಮರಣ ಹೊಂದಿರಬೇಕೆಂದೂಹಿಸಲ್ಪಟ್ಟಿದೆ. ಎಷ್ಟು ಮಂದಿ ಸತ್ತು ಎಷ್ಟು ದ್ರವ್ಯ ನಷ್ಟವಾಯಿತೆಂಬುದು ಇನ್ನೂ ಗೊತ್ತಾಗಲಿಲ್ಲ.

ರೌಂಡುಟೇಬಲ್ ಸಲಹ ಸಂಘ

ಈ ಸಲಹ ಸಂಘವು ಈ ದಿವಸ ದಿಲ್ಲಿಯಲ್ಲಿ ಸಭೆ ಸೇರುವುದಾಗಿ ಗೊತ್ತಾಗಿದ್ದಿತು. ಆದರೆ ಇದರ ಅಧ್ಯಕ್ಷರಾದ ವೈಸ್‌ರಾಯರು ಮೆಂಬರುಗಳೊಡನೆ ಆಲೋಚಿಸಿ ಈಗ ಕೆಲ ಕಾಲದವರೆಗೆ ಸಭೆಯನ್ನು ನಡೆಯಿಸಬೇಕಾದುದಿಲ್ಲವೆಂದು ನಿಶ್ಚಯಿಸಿರುತ್ತಾರೆ. ಕೆಲ ಕಾಲಾನಂತರ ಪುನಃ ಮೆಂಬರುಗಳೊಡನೆ ಆಲೋಚಿಸಿ ಎಂದು ಸಭೆ ಸೇರಬೇಕೆಂಬುದನ್ನು ಗೊತ್ತುಮಾಡಿ ತಾರೀಖನ್ನು ತಿಳಿಸುವುದಾಗಿ ಪ್ರಕಟವಾಗಿದೆ.

ಬೊಂಬಾಯಿ ವೈಮಾನಿಕ ವಿಹಾರ ಸಂಘ

ಬೊಂಬಾಯಿನಲ್ಲಿರುವ ವೈಮಾನಿಕ ವಿಹಾರ ಸಂಘವನ್ನು ಬೊಂಬಾಯಿ ಗೌರ್ನರು ದಂಪತಿಗಳು ಸಂದರ್ಶಿಸಿದಾಗ್ಗೆ ವೈಮಾನಿಕರು ವಿಮಾನಗಳನ್ನು ಚಿತ್ರವಿಚಿತ್ರವಾಗಿ ಆಕಾಶದಲ್ಲಿ ನಡೆಯಿಸಿ ದಂಪತಿಗಳಿಗೆ ಸಂತೋಷವನ್ನುಂಟುಮಾಡಿದರಲ್ಲದೆ ವೈಸ್ರಾಯರು ನಡಿಸಿದ ವೈಮಾನಿಕ ವಿಹಾರ ಪಂದ್ಯದಲ್ಲಿ ಬಹುಮಾನವಾಗಿ ಪಡೆದ ಬೆಳ್ಳಿಯ ಪಾತ್ರೆಯನ್ನು ತೋರಿಸಿದರು. ದಂಪತಿಗಳು ಒಂದು ವಿಮಾನದಲ್ಲಿ ಕುಳಿತು ಬೊಂಬಾಯಿ ಪಟ್ಟಣದ ಮೇಲೆ ಆಕಾಶದಲ್ಲಿ ಸಂಚರಿಸಿಕೊಂಡು ಬಂದರು.

ಡಗ್ಲಾಸ್‌ರವರ ಕೊಲೆಯ ವಿಚಾರಣೆ

ಮಿಡ್ನಾಪುರದಲ್ಲಿ ಡಿ|| ಮೆಜಿಸ್ಟ್ರೇಟರಾಗಿದ್ದ ಡಗ್ಲಾಸ್‌ರವರ ಕೊಲೆಯ ಸಂಬಂಧವಾಗಿ ಪ್ರೊದ್ಯುತ ಕುಮಾರಭಟ್ಟಾಚಾರ್ಯನೇ ಮೊದಲಾಗಿ 24 ಮಂದಿ ಸೆರೆ ಹಿಡಿಯಲ್ಪಟ್ಟು ಅಡಿಷನಲ್ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರು. ಇವರಲ್ಲಿ ನಾಲ್ವರು ದೋಷಮುಕ್ತರಾಗಿ ಬಿಡಲ್ಪಟ್ಟು ಉಳಿದವರು ಹೊಣೆಯ ಮೇಲೆ ಬಿಡಲ್ಪಡಲು ನಿರಾಕರಿಸಲ್ಪಟ್ಟರು. ಇದರ ಮುಂದಣ ವಿಚಾರಣೆಯು ತಾ|| 30 ರಲ್ಲಿ ನಡೆಯುವುದು.

ಮದವಣಿಗನ ಕಡೆಯವರಿಗಾದ ಅನಾಹುತ

ಮದವಣಿಗನನ್ನೂ ಅವನ ಕಡೆಯ ಜನರನ್ನೂ ಕುಳ್ಳಿರಿಸಿಕೊಂಡು ಜಗಮೋಹನಪುರದಿಂದ ಚಿತ್ರಪುರಕ್ಕೆ ಹೋಗುತ್ತಿದ್ದ ಮೋಟಾರು ಲಾರಿಯು ಜಾನ್ಸಿಬಳಿ ಬೆಟವ ನದಿಯನ್ನು ದೋಣಿಯ ಮೂಲಕ ದಾಟುವಾಗ್ಗೆ ಲಾರಿಯು ನದಿಯೊಳಕ್ಕೆ ಮಗುಚಿಕೊಂಡಿತು. ಬಂಡಿಯೊಳಗೆ ಕುಳಿತಿದ್ದ 21 ಮಂದಿಯಲ್ಲಿ ಡ್ರೈವರು ಸಮೇತ 7 ಮಂದಿ ಮೃತರಾದರು. ನಾಲೆಗಳ ಎಕ್ಸಿಕ್ಯುಟಿವ್ ಇಂಜನಿಯರು ಜನರ ಸಹಾಯದಿಂದ ಉಳಿದವರ ಪ್ರಾಣ ರಕ್ಷಣೆಮಾಡಿದರು. ಮದವಣಿಗನೂ ಅವನ ತಂದೆಯೂ ಬದುಕಿಕೊಂಡರು.

ವಿ. ಸಿ ಪಾಲರು ದಿವಂಗತರಾದರು

ಕಲಕತ್ತಾದಲ್ಲಿ ಮಹಾಮೇಧಾವಿಗಳೂ, ವಾಚಾಳಿಗಳೂ, ವಿದ್ವನ್ಮಣಿಗಳೂ ಆಗಿದ್ದ ವಿಪಿನಚಂದ್ರಪಾಲರವರು ಕಳೆದ ಶುಕ್ರವಾರ ಮಧ್ಯಾಹ್ನ ಅನಿರೀಕ್ಷಿತವಾಗಿ ಅರ್ಧಾಂಗ ಬೇನೆಯನ್ನು ಹೊಂದಿ ಕೂಡಲೆ ಮೃತರಾದರು. ಮರಣಕಾಲದಲ್ಲಿ ಇವರಿಗೆ 73 ವರ್ಷ ವಯಸ್ಸಾಗಿದ್ದಿತು. ಬಂಗಾಳಾ ವಿಭಜನಕಾಲದಲ್ಲಿ ತೀವ್ರವಾದಿಗಳಾಗಿದ್ದು ಅನಾರೋಗ್ಯ ದಶೆಯಿಂದ ಕೆಲ ವರ್ಷಗಳಿಂದಲೂ ರಾಜಕೀರಂಗದಿಂದ ದೂರರಾಗಿದ್ದರಲ್ಲದೆ ಅಸಹಾಯೋದ್ಯಮದಲ್ಲಿ ಮಹಾತ್ಮರೊಡನೆ ಏಕೀಭವಿಸದೆ ಭಾಷಾಸೇವೆಯಲ್ಲಿ ನಿರತರಾಗಿದ್ದರು.

ಅಗ್ನಿಕೊಂಡವನ್ನು ಸುತ್ತುವಾಗಾದ ಅನಾಹುತ

ಕಡಲೂರಿನಲ್ಲಿ ಕಳೆದ ಮೊಹರಂ ಹಬ್ಬದೊಳಗೆ ಹುಡುಗರು ಬಾಬಾಯ್ಯನ ಅಗ್ನಿಕೊಂಡವನ್ನು ಸುತ್ತುವಾಗ್ಗೆ 9 ವರ್ಷದ ಮುಸಲ್ಮಾನರ ಹುಡುಗನು ಅಗ್ನಿಕೊಂಡಕ್ಕೆ ಮುಖ ಕೆಳಗಾಗಿ ಬಿದ್ದುಬಿಟ್ಟನು ಮತ್ತು ಅವನ ಹಿಂದಿದ್ದ ಹುಡುಗನು ಅವನ ಮೇಲೆ ಬಿದ್ದನು. ಕೂಡಲೆ ಜನರು ಎರಡನೆಯ ಹುಡುಗನನ್ನು ಮೇಲಕ್ಕೆತ್ತಿಕೊಳ್ಳುವಷ್ಟರಲ್ಲಿ ಅವನ ಕೆಳಗೆ ಬಿದಿದ್ದ ಮೊದಲನೆಯ ಹುಡುಗನು ಬಹಳವಾಗಿ ಸುಟ್ಟುಹೋಗಿದ್ದನು. ಅವನು ಕೂಡಲೆ ಮೇಲಕ್ಕೆತ್ತಲ್ಪಟ್ಟು ಆಸ್ಪತ್ರೆಗೆ ಸಾಗಿಸಲ್ಪಟ್ಟನು. ಅವನ ಮೈ ವಿಶೇಷವಾಗಿ ಸುಟ್ಟುಹೋಗಿರುವುದಾದರೂ ಅವನು ಗುಣಮುಖದಲ್ಲಿರುವನು.

ಖೈದಿಯ ಕುತ್ತಿಗೆಗೆ ಹಾವು ಸುತ್ತಿಕೊಂಡಿದ್ದುದು

ನಯಿನೀ ಜೈಲಿನಲ್ಲಿ ಒಬ್ಬ ಖೈದಿಯು ಬಾವಿಯೊಳಕ್ಕಿಳಿದು ನೀರನ್ನೆತ್ತುವ ಪಂಪನ್ನು ಸರಿಮಾಡಿ ಮೇಲಕ್ಕೆ ಹತ್ತಿ ಬರುವಾಗ್ಗೆ ಅವನ ಕುತ್ತಿಗೆಗೇನೋ ತಗಲಿದಂತಾಯಿತು. ಅದೇನೆಂದು ನೋಡುವಲ್ಲಿ ಕುತ್ತಿಗೆಗೆ ಹಾವು ಸುತ್ತಿಕೊಂಡಿರುವುದು ಗೊತ್ತಾಗಲು ಅವನು ಅಧೈರ್ಯಪಡದೆ ಹಾವಿನ ಕತ್ತನ್ನು ಒಂದು ಕೈಯಲ್ಲಿ ಭದ್ರವಾಗಿ ಹಿಡಿದುಕೊಂಡು ಮೇಲಕ್ಕೆ ಹತ್ತಿಬಂದನು. ಆಗ ಅಸಿಸ್ಟೆಂಟ್ ಜೈಲರು ಅದನ್ನು ಹೊಡೆದುಹಾಕಿ ಆ ಖೈದಿಯು ಅಷ್ಟು ಧೈರ್ಯವನ್ನು ಪ್ರದರ್ಶಿಸಿದುದಕ್ಕಾಗಿ ಅವನ ಶಿಕ್ಷೆಯ ಕಾಲಾವಧಿಯಲ್ಲಿ 10 ದಿವಸಗಳನ್ನು ಕಡಿಮೆಮಾಡಿಸಿದರು.

ದೇಶೀಯ ಮೋಟಾರುಕಾರು ನಿರ್ಮಾಣ ಪ್ರೋತ್ಸಾಹ

ಕಲಕತ್ತಾ ಮ್ಯುನಿಸಿಪಲ್ ಕಾರ್ಪೊರೇಷನ್ನಿನವರು ತಕ್ಕ ಪ್ರೋತ್ಸಾಹವಿಲ್ಲದೆ ನಿಂತುಹೋಗಿರುವ ಮೊಟಾರು ಬಂಡಿಯ ನಿರ್ಮಾಣವನ್ನು ಪುನಃ ಪ್ರಾರಂಭಿಸಿ ಅಭಿವೃದ್ಧಿಗೊಳಿಸಬೇಕೆಂಬ ಉದ್ದೇಶದಿಂದ ಕಲಕತ್ತಾ ಇಂಜಿನಿಯರಾದ ವಿಪಿನವಿಹಾರ ದಾಸರವರಿಗೆ 5 ಮಂದಿ ಕುಳಿತುಕೊಳ್ಳುವ 15 ಕುದುರೆ ಬಲದ ಒಂದು ಮೊಟಾರು ಬಂಡಿಯನ್ನು 3000 ರೂಪಾಯಿ ಬೆಲೆಗೆ ನಿರ್ಮಿಸಲು ಆರ್ಡರನ್ನು ಕೊಟ್ಟಿರುತ್ತಾರೆ. ಈ ಮೋಟಾರುಕಾರು ಪರಿಶ್ರಮವು ಭಾರತದೇಶದಲ್ಲಿ ಅಭಿವೃದ್ಧಿ ಹೊಂದಿದಲ್ಲಿ ಪರದೇಶಗಳಿಂದ ಸಾವಿರಾರುಗಟ್ಟಲೆ ಬರುವುದು ನಿಂತುಹೋಗಿ ಅವುಗಳಿಗಾಗಿ ಹೊರಕ್ಕೆ ಹೋಗುವ ಕೋಟ್ಯಂತರ ರೂಪಾಯಿಗಳು ಈ ದೇಶದಲ್ಲೇ ಉಳಿದುಕೊಳ್ಳುವಂತಾಗುವುದು.

ಮೆಕ್ಡೊನಾಲ್ಡ್‌ರವರಿಗೆ ಸಂಪೂರ್ಣಾರೋಗ್ಯ

ಗ್ರೇಟ್ ಬ್ರಿಟನ್ನಿನ ಮುಖ್ಯಮಂತ್ರಿಗಳಾದ ಮೆಕ್ಡೊನಾಲ್ಡ್‌ರವರ ಬಲಗಣ್ಣು ಬಹಳ ತೊಂದರೆಕೊಡುತ್ತಿದುದರಿಂದ, ಅದಕ್ಕೆ ಶಸ್ತ್ರಚಿಕಿತ್ಸೆ ಮಾಡಲ್ಪಟ್ಟಿತು. ಇದರಿಂದ ಈಗ ಅವರು ಬಹಳ ಆರೋಗ್ಯವಾಗಿಯೂ ಬಲವಾಗಿಯೂ ಇರುತ್ತಾರೆ. ತಮ್ಮ ಕುಮಾರ್ತೆ ಮತ್ತು ಇಬ್ಬರು ಕಾರ್ಯದರ್ಶಿಗಳೊಡನೆ ಲಾಸೀಮತ್ತಿಗೆ ವಿಶ್ರಾಂತಿಗಾಗಿ ಹೋಗಿರುತ್ತಾರೆ. ಅಲ್ಲಿ ಲಾಸೇನು ಕಾನ್ಫರೆನ್ಸು ನಡೆಯಲು ಏರ್ಪಾಟಾಗುತ್ತಿದೆ. ಬಾಲ್ಡ[illegible], ಥಾಮಸ್, ಸರ್ ಜೇಮಸ್ ವಾಲ್ಸಿಟಾರ್ಡು ಇವರುಗಳು ಮೆಕ್ಡೊನಾಲ್ಡ್‌ರವರು ಹೊರಡುವುದಕ್ಕೆ ಮೊದಲು ಅವರಲ್ಲಿಗೆ ಹೋಗಿ ಬಹಳ ಹೊತ್ತು ಮಾತನಾಡಿಕೊಂಡುಬಂದರು. ಜೂನ್ ತಾ|| 18 ರಲ್ಲಿ ಮೆಕ್ಡೊನಾಲ್ಡ್‌ರವರು ಹಿಂದಿರುಗಿ ಲಂಡನ್ನಿಗೆ ಬರುವವರಾಗಿರುವರು.

ಮಸೀದಿಯನ್ನೂ ದೇವಸ್ಥಾನವನ್ನೂ ಒಡೆಯುವುದು

ಲಾಹೋರಿನಲ್ಲಿ ಈಗ್ಗೆ 20 ವರ್ಷಗಳ ಹಿಂದೆ ಒಂದು ಹಿಂದು ದೇವಾಲಯವೂ ಒಂದು ಮಸೀದಿಯೂ ಕಟ್ಟಲ್ಪಟ್ಟವು. ಆಗ್ಗೆ ಮ್ಯುನಿಸಿಪಾಲಿಟಿಯವರ ಅನುಮತಿಯು ಪಡೆಯಲ್ಪಟ್ಟಿರಲಿಲ್ಲ. 15 ವರ್ಷಗಳ ಹಿಂದೆ ಈ ವಿಷಯವು ಮ್ಯುನಿಸಿಪಾಲಿಟಿಯವರ ಗಮನಕ್ಕೆ ಬಂದಿತಾದರೂ ಅವರು ಆಗ್ಗೆ ಯಾವ ಚರ್ಯವನ್ನೂ ನಡೆಸಲಿಲ್ಲ. ಈ ವರ್ಷ ಮಸೀದಿಯನ್ನೂ ದೇವಸ್ಥಾನವನ್ನೂ ಒಡೆದುಹಾಕಬೇಕೆಂದು ಮ್ಯುನಿಸಿಪಾಲಿಟಿಯವರು ನಿರ್ಧರಿಸಿದರು. ಇದರಮೇಲೆ ಒಡೆಯಕೂಡದೆಂದೂ, ಹಾಗೆ ಒಡೆದರೆ ಅನಾಹುತವಾಗುತ್ತದೆಂದೂ ಜನರು ಹೆದರಿಸಿ ಮ್ಯುನಿಸಿಪಾಲಿಟಿಗೆ ಕಾಗದಗಳನ್ನು ಬರೆಯುತ್ತ ಬಂದುದರಮೇಲೆ ಸಭೆಯಲ್ಲಿ ಚರ್ಚೆ ನಡೆದು ಪೊಲೀಸರ ಸಹಾಯವನ್ನು ಪಡೆದುಕೊಂಡು ಅವೆರಡನ್ನೂ ಒಡನೇ ಹಾಕಬೇಕೆಂದು ನಿರ್ಧರಿಸಲ್ಪಟ್ಟಿತು.

ಡಿವೆಲೆರಾಯವರ ಎಚ್ಚರಿಕೆ

ಅಯಿರ್ಲೆಂಡಿನ ಪಾರಿಶ್ರಾಮಿಕ ವ್ಯವಸಾಯಕ ಪ್ರದರ್ಶನವನ್ನು ಡಿವೆಲೆರಾಯವರು ಆರಂಭಿಸುವಾಗ್ಗೆ ಅಯಿರ್ಲೆಂಡು ಪ್ರಜೆಗಳ ಸಾಂಘಿಕ ಮತ್ತು ಆರ್ಥಿಕ ವಿಚಾರಗಳನ್ನು ಕುರಿತು ಕೆಲ ಸೂಚನೆಗಳನ್ನು ಕೊಡುವಲ್ಲಿ "ಸಾಂಘಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಅಯಿರ್ಲೆಂಡು ದೇಶೀಯರೇ ಪರಿಷ್ಕರಿಸಲು ಸಮರ್ಥರಾಗಿರುತ್ತಾರೆ. ನ್ಯಾಯವಾದ ಮಾರ್ಗದಲ್ಲಿ ಧನವನ್ನು ಆರ್ಜಿಸಿ ಜೀವಯಾತ್ರೆಯನ್ನು ನಡೆಯಿಸಲು ಆಗತ್ಯವಾದ ಸೌಕರ್ಯಗಳನ್ನೆಲ್ಲ ಪ್ರಜೆಗಳಿಗೆ ದೊರೆತನದವರು ಒದಗಿಸಿಕೊಡುವರು. ಪ್ರಾರಂಭದಲ್ಲಿ ಎಲ್ಲರೂ ಸ್ವಲ್ಪ ತ್ಯಾಗವನ್ನು ಮಾಡಿದಲ್ಲಿ ಅಯಿರ್ಲೆಂಡಿನವರು ಕೃತಾರ್ಥರಾಗುವರೆಂಬ ಭರವಸೆಯು ನನಗಿರುತ್ತದೆ. ಹಾಗಾದ ಪಕ್ಷದಲ್ಲಿ ಅಯಿರ್ಲೆಂಡು ದೇಶವು ಅನುಕೂಲಸ್ಥಿತಿಗೆ ಬರುವುದು ಖಂಡಿತ" ಎಂದು ಹೇಳಿದರು.

ಬರೋಡಾ ಡಿ|| ಮೆಜಿಸ್ಟ್ರೇಟರ ಆಜ್ಞೆ

ಬರೋಡಾ ನಗರದಲ್ಲೂ ತಾಲ್ಲೂಕುಗಳಲ್ಲೂ ವರ್ತಮಾನವನ್ನು ಬರೆಯುವವರಿಗೆ ಬರೋಡಾ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಈ ಪ್ರಕಾರವಾಗಿ ಆಜ್ಞೆ ಮಾಡಿರುತ್ತಾರೆ:—ವರ್ತಮಾನಗಳನ್ನು ಮಾತ್ರ ಬೋರ್ಡುಗಳ ಮೇಲೆ ಬರೆಯುವವರು ಅದು ನಿಜವೆಂದು ರುಜುವಾತು ಕೊಡಲು ಸಿದ್ಧರಾಗಿರಬೇಕು. ಬ್ರಿಟಿಷ್ ಪ್ರಭುತ್ವದವರ ಮೇಲೆ ವಿಮರ್ಶೆಯನ್ನು ಬರೆಯಕೂಡದು. ಬ್ರಿಟಿಷ್ ಪ್ರಭುತ್ವದವರ ಮೇಲೆ ಪತ್ರಿಕೆಗಳು ಬರೆಯುವ ವಿಮರ್ಶೆಯನ್ನು ಕೂಡ ಪ್ರಕಟಿಸಲಾಗದು. ಪ್ರಜೆಗಳು ತಪ್ಪು ಮಾರ್ಗಕ್ಕೆ ಹೋಗದಂತೆ ಬಹಳ ಸುಲಭವಾದ ಭಾಷೆಯಲ್ಲಿ ಬರೆಯಬೇಕು. ಬ್ರಿಟಿಷ್ ಪದಾರ್ಥಗಳನ್ನು ಬಹಿಷ್ಕರಿಸಬೇಕೆಂದು ಬರೆಯಕೂಡದು. ಈ ಆಜ್ಞೆಯನ್ನುಲ್ಲಂಘಿಸಿ ಬರೆಯಲ್ಪಡುವ ಬೋರ್ಡುಗಳು ಪ್ರಭುತ್ವದವರ ವಶಪಡಿಸಿಕೊಳ್ಳಲ್ಪಡುವುವು.

ಒಂಟೆಯು ಯಜಮಾನನನ್ನು ಕೊಂದಿತು

ಪಂಜಾಬಿಗೆ ಸೇರಿದ ಒಂದು ಗ್ರಾಮದಲ್ಲಿ ದಿಲೀಪಸಿಂಗ್ ಎಂಬವನು ತನ್ನ ಗಂಡು ಒಂಟೆಯು ಹೆಣ್ಣು ಒಂಟೆಯ ಮೇಲೆ ಹತ್ತಲಿಕ್ಕೆ ಅವಕಾಶಕೊಡಲಿಲ್ಲವಾಗಿ ಅದು ಯಜಮಾನನ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಿತು. ಯಜಮಾನನು ಇದನ್ನು ತಿಳಿದು ಬಹಳ ಎಚ್ಚರಿಕೆಯಿಂದಿದ್ದನಲ್ಲದೆ ಒಂಟಿಯಾಗಿ ಒಂಟೆಯನ್ನು ದೂರಪ್ರದೇಶಕ್ಕೆ ತೆಗೆದುಕೊಂಡು ಹೋಗುತ್ತಿರಲಿಲ್ಲ. ಹೀಗೆ 6 ತಿಂಗಳಕಾಲ ಕಳೆದಮೇಲೆ ಒಂಟೆಯು ಕೋಪವನ್ನು ಬಿಟ್ಟಿರಬೇಕೆಂದು ತಿಳಿದು ಯಜಮಾನನು ತನ್ನ ಹೊಲದಿಂದಾಚೆ 2 ಮೈಲು ದೂರ ಪ್ರದೇಶಕ್ಕೆ ಅದನ್ನು ಹೊಡೆದುಕೊಂಡು ಹೋಗಿ ಹುಲ್ಲನ್ನು ಕುಯಿದು ಹೊರೆಕಟ್ಟಿ ಅದರಮೇಲೆ ಹೇರಿ ತಾನೂ ಕುಳಿತುಕೊಂಡು ಹಿಂದಿರುಗುವಾಗ್ಗೆ ಅದು ರೇಗಿ ದೂರದಲ್ಲಿರುವ ಕಾಡಿನೊಳಕ್ಕೆ ನುಗ್ಗಿ ತನ್ನ ಬಾಯಿಯಿಂದ ಅವನ ಕಾಲನ್ನು ಹಿಡಿದುಕೊಂಡು ಅವನನ್ನು ಕೆಳಕ್ಕೆ ಕೆಡಿವಿ ಕಾಲನ್ನು ಕಡಿದು ಅವನೆದೆಯಮೇಲೆ ತುಳಿದು ಅವನನ್ನು ಕೊಂದುಬಿಟ್ಟು ಹುಲ್ಲನ್ನು ಮೇಯುತ್ತಿದ್ದಿತು. ಬಹಳ ಹೊತ್ತಿನವರೆಗೂ ದಿಲೀಪಸಿಂಗನೂ ಒಂಟೆಯೂ ಮನೆಗೆ ಬರಲಿಲ್ಲವಾಗಿ ಮನೆಯವರು ದಿಗಿಲುಬಿದ್ದು ತಡಕಿಕೊಂಡು ಒಂಟೆಯಿದ್ದಲ್ಲಿಗೆ ಬಂದು ಸಿಂಗನು ಸತ್ತು ಬಿದ್ದಿರುವದನ್ನು ಕಂಡು ಶವದ ಬಳಿಗೆ ಹೋಗಲು ಒಂಟೆಯು ರೇಗಿ ಅವರಮೇಲೆ ನುಗ್ಗಿತು. ಅವರುಗಳು ಅದನ್ನು ಚೆನ್ನಾಗಿ ಪ್ರಹರಿಸಿ ಹಿಡಿದು ನಿಲ್ಲಿಸಿದರು.

ಬೊಂಬಾಯಿ ದಂಗೆ

ಬೊಂಬಾಯಿ ಪಟ್ಟಣದಲ್ಲಿ ಕೆಲ ಮಹಮ್ಮದೀಯ ಹುಡುಗರು ಬಾಬಯ್ಯಗಳನ್ನು ಕುಳ್ಳಿರಿಸಲು ಅಂಗಡಿಯವರನ್ನು ಯಾಚಿಸಿ ದುಡ್ಡನ್ನೆತ್ತುತ್ತ ಒಂದು ಮುಲ್ತಾನಿಯಂಗಡಿಗೆ ಹೋದರು. ಮುಲ್ತಾನಿಯು ದುಡ್ಡನ್ನು ಕೊಡಲು ತಿರಸ್ಕರಿಸಿದುದರಮೇಲೆ ಪರಸ್ಪರ ವಾಗ್ವಾದಗಳು ನಡೆದು ಕಡೆಗೆ ಆ ಹುಡುಗರಕಡೆಯ ದೊಡ್ಡವರು ಬಂದು ಕಲಹಕ್ಕೆ ನಿಂತರು. ಈ ಕಲಹವು ಪ್ರಬಲಿಸಿ ಹಿಂದು-ಮಹಮ್ಮದೀಯರ ಕಲಹವಾಗಿ ಪರಿಣಮಿಸಿ ಮಹಾಭಯಂಕರ ಸ್ವರೂಪವನ್ನು ತಾಳಿತು. ಈ ದಂಗೆಯನ್ನು ಅಣಗಿಸಲಿಕ್ಕೆ ಪೊಲೀಸರಿಗೆ ಅಸಾಧ್ಯವಾಗಲು ಸಾಯುಧರಾದ ಪೊಲೀಸರೂ, ಸೈನಿಕರೂ ಗುಂಡುಗಳನ್ನು ಒಂದುವಾರಕಾಲ ಹೊಡೆಯಬೇಕಾಗಿ ಬಂದಿತು. ಈ ಗುಂಡುಗಳೇಟಿನಿಂದ ಒಟ್ಟು 150 ಮಂದಿ (ಇವರಲ್ಲಿ 38 ಮಹಮ್ಮದೀಯರು) ಹತರಾಗಿ 1500 ಮಂದಿಗೆ ಗಾಯಗಳಾಗಿರುವುದಾಗಿಯೂ, 1500 ಮಂದಿ ಪುಂಡರು ಸೆರೆಹಿಯಲ್ಪಟ್ಟಿರುವುದಾಗಿಯೂ ಪ್ರಭುತ್ವ ಪ್ರಕಟನೆಯಿಂದ ಗೊತ್ತಾಗುತ್ತದೆ. ಇವರುಗಳಲ್ಲಿ ಹಿಂದುಗಳಿಗೇ ಹೆಚ್ಚಾಗಿ ಪ್ರಾಣನಷ್ಟವೂ ಅಪಾಯವೂ ಸಂಭವಿಸಿರುತ್ತವೆ. ಅನೇಕ ಅಂಗಡಿ ಮನೆಗಳೂ, ಬಟ್ಟೆಬರೆ ಪದಾರ್ಥಗಳೂ ಸುಟ್ಟುಹಾಕಲ್ಪಟ್ಟಿರುವುದರಿಂದ, ಲಕ್ಷಾಂತರ ರೂ. ಗಳ ನಷ್ಟ ಸಂಭವಿಸಿರುತ್ತದೆ. ದಂಗೆಗೆ ಹೆದರಿ 8-10 ಸಾವಿರ ಜನರು ಪರಸ್ಥಳಕ್ಕೆ ಹೊರಟುಹೋಗಿರುವರು. ವ್ಯಾಪಾರವು ಸುತರಾಂ ನಿಂತುಹೋಗಿದೆ. ಉಭಯ ಪಂಗಡಗಳಿಗೂ ಸಮಾಧಾನವನ್ನುಂಟುಮಾಡಲು ಅನೇಕ ಪ್ರಯತ್ನಗಳು ನಡೆಯುತ್ತಿರುವುದರ ಮೇಲೆ ಪಟ್ಟಣವು ಈಗೀಗ ಸಮಾಧಾನಸ್ಥಿತಿಗೆ ಬರುತ್ತಿದೆಯಂತೆ. ಶಾಂತಿಸ್ಥಾಪನೆಗಾಗಿ ಪ್ರಭುತ್ವದವರು ಹಿಂದು-ಮಹಮ್ಮದೀಯರಲ್ಲಿ ಪ್ರಮುಖರಾದವರನ್ನೂ ಕೆಲ ಸರ್ಕಾರಿಯಧಿಕಾರಿಗಳನ್ನೂ ಸೇರಿಸಿ ಈಗ ಒಂದು ಕಮಿಟಿಯನ್ನೇರ್ಪಡಿಸಿರುತ್ತಾರೆ. ಮೌಲಾನಾ ಷೌಕತಾಲಿಯವರು ಶಾಂತಿಯನ್ನು ಸ್ಥಾಪಿಸುತ್ತೇವೆಂದು ನಟಿಸುತ್ತಿದ್ದು ಈ ದಂಗೆಗೆ ಹಿಂದುಗಳೇ ಕಾರಣರೆಂದು ಹೇಳಿ ಶಾಂತಿಸ್ಥಾಪನಾ ಸಂಘಕ್ಕೆ ಸೇರದೆ ಪೃಥಕ್ಕಾಗಿರುವರು. ಈಗಿನಂಥಾ ಮಹಾಭಯಂಕರ ಮತ್ತು ಹಾನಿಕರ ದಂಗೆಯು ಹಿಂದೆ ಎಂದೂ ನಡೆದಿಲ್ಲವೆಂದು ಭಾವಿಸಲ್ಪಟ್ಟಿದೆ.

ಒಳದೇಶದ ವೃತ್ತಾಂತಗಳು

ಶ್ರೀಮನ್ಮಹಾರಾಜರವರು ಕಳೆದ ಬುಧವಾರ ಉದಕಮಂಡಲಕ್ಕೆ ದಯಮಾಡಿಸಿದರು.

ಬರುವ ಜೂನ್ ತಾ|| 3 ನೆಯ ಶುಕ್ರವಾರ ಜಾರ್ಜ್ ಚಕ್ರವರ್ತಿಯವರ ವರ್ಧಂತ್ಯುತ್ಸವ ದಿನವಾದುದರಿಂದ ಸಂಸ್ಥಾನದ ಎಲ್ಲ ಕೋರ್ಟು ಕಚೇರಿಗಳಿಗೂ ಪಾಠಶಾಲೆಗಳಿಗೂ ಆ ದಿವಸ ರಜಾದಿನವಾಗಿರುವುದೆಂದು ಪ್ರಕಟವಾಗಿದೆ.

ಚೀಫ್ ಸೆಕ್ರೆಟರಿಯವರಾದ ಮ|| ಎನ್. ಮಾಧವರಾಯರು ಇದೇ ತಾ|| 16 ರಿಂದ 16 ದಿವಸಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡಿರುವುದರಿಂದ, ಅದುವರೆಗೆ ಜನರಲ್ ಸೆಕ್ರೆಟರಿಯವರಾದ ಮ|| ಆರ್. ರಂಗರಾಯರು ಆಕ್ಟಿಂಗ್ ಚೀಫ್ ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟಿರುವರು.

ರಾಜಧಾನಿಯ ಪಬ್ಲಿಕ್ ಪ್ರಾಸಿಕ್ಯೂಟರಾದ ಅಡ್ವೊಕೇಟ್ ಮ|| ಕೆ. ರಾಮಸ್ವಾಮಿ, ಬಿ.ಎ., ಬಿ.ಎಲ್., ರವರ 3 ವರ್ಷಗಳ ಉದ್ಯೋಗ ಕಾಲಾವಧಿಯು ಮುಗಿದುದರಿಂದ ಇನ್ನು 3 ವರ್ಷಗಳವರೆಗೆ ಹೆಚ್ಚಿಸಲ್ಪಟ್ಟಿರುವುದೆಂದು ಕೇಳಿ ಸಂತೋಷಿಸುತ್ತೇವಲ್ಲದೆ ಇದಕ್ಕಾಗಿ ಮ|| ರಾಮಸ್ವಾಮಿಯವರನ್ನು ಅಭಿನಂದಿಸುತ್ತೇವೆ.

ದಿವಾನ್‌ರವರು ಶ್ರೀಮನ್ಮಹಾರಾಜರವರ ದರ್ಶನಭಾಷಣಾನಂತರ ರಾಜಧಾನಿಯ ಕೆಲ ಪ್ರದೇಶಗಳ ಆರೋಗ್ಯಸ್ಥಿತಿಯನ್ನು ಪರಾಮರ್ಶಿಸಿಕೊಂಡು ಮಂಗಳವಾರ ರಾತ್ರಿ ಬೆಂಗಳೂರಿಗೆ ದಯಮಾಡಿಸಿದರು. ಇವರು ತಾ|| 19 ರಲ್ಲಿ ದಿಲ್ಲಿಗೆ ಪ್ರಯಾಣಮಾಡಬೇಕಾಗಿದ್ದುದು ರೌಂಡುಟೇಬಲ್ ಸಲಹೆಯ ಕಮಿಟಿಯು ಸದ್ಯದಲ್ಲಿ ನಡೆಯುವುದಿಲ್ಲವೆಂದು ಗೊತ್ತಾದುದರ ಮೇಲೆ ನಿಂತುಹೋಯಿತು.

ಭಾವಲ್ಪುರ ಸಂಸ್ಥಾನದ ಪ್ರಭುತ್ವದವರು ತಮ್ಮುದ್ಯಾನಗಳನ್ನು ಸುಧಾರಿಸುವುದಕ್ಕಾಗಿ ಬೆಂಗಳೂರು ಲಾಲ್‌ಬಾಗ್ ಸೂಪರಿಂಟೆಂಡೆಂಟರಾದ ಮ|| ಸಿ. ಜವರಯ್ಯನವರನ್ನು ಕೆಲ ಕಾಲದಮಟ್ಟಿಗೆ ಕಳುಹಿಸಿಕೊಡಬೇಕೆಂದು ನಮ್ಮ ಪ್ರಭುತ್ವದವರನ್ನು ಕೇಳಿದ್ದರು. ಮ|| ಜವರಯ್ಯನವರು ಪ್ರಭುತ್ವದವರಪ್ಪಣೆಯಪ್ರಕಾರ ನೆನ್ನೆಯ ಸಾಯಂಕಾಲ ಭಾವಲ್ಪುರಕ್ಕೆ ಪ್ರಯಾಣಮಾಡುವವರಾಗಿದ್ದರು.

ಸ್ಟೇಟ್ ಲೈಫ್ ಇನ್ಷೂರೆನ್ಸ್ ಕಮಿಟಿಯ ಸೆಕ್ರೆಟರಿಯವರಾದ ಮ|| ಎಂ. ಪಿ. ಭೀಮರಾಯರು 6 ತಿಂಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡಿರುವುದರಿಂದ, ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸರಾದ ಮ|| ಜಿ. ಮಾಧವರಾಯರು ಈ ಕಮಿಟಿಯ ಆಕ್ಟಿಂಗ್ ಸೆಕ್ರೆಟರಿಯಾಗಿಯೂ, ಸೀನಿಯರ್ ಅ|| ಕಮಿಷನರ್ ಮ|| ಎಂ. ಸದಾಶಿವರಾಯರು ಮೈಸೂರು ಡಿ|| ಟ್ರೆಜರಿ ಆಫೀಸರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ ಕಳೆದವಾರ 3-4 ಅಂಗುಲದವರೆಗೆ ಮಳೆಯಾಗಿ ಬಹಳ ತಂಪಾಗಿರುತ್ತದೆ. ಇದರಂತೆ ಎಲ್ಲ ಕಡೆಗಳಲ್ಲೂ ಮಳೆಯಾಗಿ ಕೆರೆ ಕಟ್ಟೆಗಳಿಗೆ ನೀರು ಬಂದು ಜೋಳದ ಪೈರುಗಳು ಬಹಳ ಹುರುಪಾಗಿ ಬೆಳೆದಿರುತ್ತವೆ. ಈ ಸಂವತ್ಸರ ಮಾವಿನ ಮರಗಳಲ್ಲಿ ಹೂಬಿಟ್ಟಿದ್ದುದನ್ನು ನೋಡಿ ಕಾಸಿಗೆ 1-2 ಖಸೀಮಾವಿನ ಹಣ್ಣು ದೊರೆಯಬಹುದೆಂದು ಜನರು ನಿರೀಕ್ಷಿಸಿದ್ದರು. ಆದರೆ ಫಲ ಮಾತ್ರ ಅತ್ಯಂತ ಕಡಿಮೆಯಾಗಿ ಒಳ್ಳೇ ಖಸೀಹಣ್ಣು ಆಣೆಗೆ ಒಂದು ಸಹ ದೊರೆಯುವುದು ಕಷ್ಟವಾಗಿದೆ.

ಕಳೆದ ತಾ|| 13 ನೆಯ ಶುಕ್ರವಾರ ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಲೈನಿನಲ್ಲಿ ದೇವನಹಳ್ಳಿಗೂ ದೊಡ್ಡಜಾಲಕ್ಕೂ ಮಧ್ಯೆ ರೈಲ್ವೆ ಬಂಡಿಯು ಹೋಗುತ್ತಿರುವಾಗ್ಗೆ 5 ವ್ಯಾಗನ್ನುಗಳೂ 1 ಪ್ರಯಾಣಿಕರ ಬಂಡಿಯೂ ಕಂಬಿಗಳನ್ನು ಬಿಟ್ಟು ಕೆಳಕ್ಕುರುಳಿ ಮಗುಚಿಕೊಂಡವು. ಇದರಿಂದ ಪ್ರಯಾಣಿಕರಲ್ಲಿ 5 ಮಂದಿ ಮೃತರಾಗಿ ಅನೇಕರು ಅಪಾಯವನ್ನು ಹೊಂದಿದರು. ರೈಲ್ವೆ ಏಜಂಟರು ಡಿ. ಟಿ ಸೂಪರಿಂಟೆಂಡೆಂಟರು ಮೊದಲಾದವರು ತಕ್ಷಣ ಹೋಗಿ ವಿಚಾರಿಸಿ ಮುಂದೆ ಬಂಡಿಗಳು ತಿರುಗಾಡಲು ತಕ್ಕೇರ್ಪಾಟನ್ನು ಮಾಡಿದರು. ಈ ಅನಾಹುತದ ಕಾರಣವು ಕಂಡುಹಿಡಿಯಲ್ಪಟ್ಟು ಇನ್ನುಮೇಲೆ ನಡೆಯದಿರಲು ತಕ್ಕೇರ್ಪಾಟನ್ನು ರೈಲ್ವೆಯಧಿಕಾರಿಗಳೂ ಪ್ರಭುತ್ವದವರೂ ಮಾಡುವರೆಂದು ನಿರೀಕ್ಷಿಸುತ್ತೇವೆ.

ಮಹಾತ್ಮರಿಗಿಂತ ಉತ್ತಮ ಮಹಮ್ಮದೀಯನಿಲ್ಲ.

ತುರ್ಕಿ ದೇಶವನ್ನು ಸುಲ್ತಾನ್ ಅಬ್ದುಲ್ಲ ಹಮೀದನು ಆಳುತ್ತಿದ್ದಾಗ್ಗೆ ವಾಷಿಂಗ್‌ಟನ್ನಿನಲ್ಲಿ ತುರ್ಕಿಯ ರಾಯಭಾರಿಯಾಗಿದ್ದ ಅಬ್ದುಲ್ ಇಜ್ಜತ್‌ಪಾಷಾನ ಮಗಳು ಬೇಗಂ ಫಟಾಕ್ ಷರೀಫ್ ಇಜ್ಜತ್‌ಪಾಷಾ ಎಂಬಾಕೆಯು ಈಗ ಬೊಂಬಾಯಿನಲ್ಲಿರುತ್ತಾಳೆ. ಇಜ್ಜತ್‌ಪಾಷನು ಅರೇಬಿಯಾ ವಾಸಸ್ಥನು. ಪ್ರಪಂಚದಲ್ಲಿ ಮಹಾ ಧನಿಕರೆಂದು ಪ್ರಸಿದ್ಧರಾಗಿರುವ 10 ಮಂದಿಗಳಲ್ಲಿ ಇವನೊಬ್ಬನಾಗಿದ್ದಾನೆ. ಈಗ ಈತ ನಿಜಾಮ

ದೇಶದಲ್ಲಿ ಅರ್ಥಿಕ ಮಂತ್ರಿಯಾಗಿರುವನು. ಡಿ. ಸಿ. ಷಾ ಎಂಬಾತನು ಈಕೆಯನ್ನು ಕಂಡು ಈಕೆಯು ತಿಳಿಸಿದ ಅಭಿಪ್ರಾಯವನ್ನು ಈ ಕೆಳಗೆ ಹೇಳಿರುವ ಮೇರೆಗೆ ಬೊಂಬಾಯಿ ಕ್ರಾನಿಕಲಿನಲ್ಲಿ ಪ್ರಕಟಿಸಿರುತ್ತಾನೆ.

ವಿಜ್ಞಾನವಂತರು

ಬೀಗಮ್ ಫಟೂರ್ ಷರೀಫ್ ಇಜ್ಜತ್ ಪಾಷಾ ಕನ್ಯೆಯು ವಿದ್ಯಾವತಿಯು. ಈಕೆಯು ಈಗ ಬೊಂಬಾಯಿನಲ್ಲಿ ತಾಜ್ ಮಹಲ್ ಹೋಟಲಿನೊಳಗೆ ಇಳಿದುಕೊಂಡಿರುತ್ತಾಳೆಂದು ಕೇಳಿ ಈಕೆಯನ್ನು ನೋಡಲು ಹೋಗಿದ್ದೆನು ಮತ್ತು ಘೋಷಾ ಸ್ತ್ರೀಯಳಿರಬೇಕೆಂದು ತಿಳಿದಿದ್ದೆನು. ಯೂರೋಪಿಯನ್ನರ ಉಡುಪನ್ನು ಧರಿಸಿಕೊಂಡು ಅವರಂತೆ ತಲೆಯ ಕೂದಲನ್ನು ತುಂಡಾಗಿ ಕತ್ತರಿಸಿಕೊಂಡಿರುವ ಓರ್ವ ಸ್ತ್ರೀಯು ನಾನಿದ್ದೆಡೆಗೆ ಬಂದು ನನಗೆ ವಂದನೆಯನ್ನು ಮಾಡಿದಳು. ನಾನು ಆಕೆಯೊಡನೆ ೨ ದಿವಸ ಮಾತನಾಡಿದುದರಲ್ಲಿ ಆಕೆಯು ಪಾಶ್ಚಾತ್ಯ ಪದ್ಧತಿಯನ್ನನುಸರಿಸಿದ್ದರೂ ಸ್ವದೇಶ ಸ್ವಮತಾಭಿಮಾನವು ಬಹಳವಾಗಿರುವುದಾಗಿಯೂ, ಚರಿತ್ರೆ, ವಾಙ್ಮಯ, ಶಾಸ್ತ್ರ, ಸಂಗೀತ ವಿವಿಧ ಕಲೆ ಇತ್ಯಾದಿ ವಿಚಾರಗಳಲ್ಲಿ ಪರಿಶ್ರಮವಿರುವುದಾಗಿಯೂ ತಿಳಿದು ನನಗೆ ಆಶ್ಚರ್ಯವಾಯಿತು. ಈಕೆಗೆ ಇಂಗ್ಲಿಷು, ಫ್ರೆಂಚು, ಗ್ರೀಕು, ಇಟಾಲಿಯರ್, ತುರ್ಕಿ, ಅರಬ್ಬಿ ಭಾಷೆಗಳು ಚೆನ್ನಾಗಿ ಬರುತ್ತವಲ್ಲದೆ ಅರಬ್ಬಿ, ಫ್ರೆಂಚು, ಇಂಗ್ಲಿಷ್ ಭಾಷೆಗಳಲ್ಲಿ ಕವಿತಾಶಕ್ತಿಯಿರುತ್ತದೆ. ಈಕೆಯು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸಂಗ ಮಾಡಿದುದು. ಈಕೆಗೆ 31 ವರ್ಷ ವಯಸ್ಸಾಗಿದೆ.

ಮಹಾತ್ಮ ಗಾಂಧಿಯವರು

ನನ್ನ ಕೂಡ ಸಂಭಾಷಿಸುವಾಗ್ಗೆ ಈಕೆಯು ಮಹಾತ್ಮ ಗಾಂಧಿಯವರ ವಿಚಾರವಾಗಿ ಬಹಳ ಉತ್ಸಾಹದಿಂದ ಮಾತನಾಡಿದಳು. ರೌಂಡ್‌ಟೇಬಲ್ ಸಭೆಗೆ ಮಹಾತ್ಮರು ಲಂಡನ್ನಿಗೆ ಬಂದಿದ್ದಾಗ್ಗೆ ಈಕೆ ಅಲ್ಲಿ ಮಹಾತ್ಮರನ್ನು ಸಂದರ್ಶಿಸಿ ಅವರ ವಿಚಾರವಾಗಿ ಈ ರೀತಿ ಹೇಳಿದಳು:—

“ಮಹಾತ್ಮರು ವಿಶೇಷ ಪ್ರೀತಿಪಾತ್ರರು. ಪ್ರಪಂಚದಲ್ಲಿರುವವರೆಲ್ಲರಿಗಿಂತಲೂ ಮಹಾತ್ಮರನ್ನು ನಾನು ಬಹಳ ಗೌರವದಿಂದ ಪ್ರೀತಿಸುತ್ತೇನೆ. ಲಂಡನ್ನಿನಲ್ಲಿ ನಾನು ಅವರನ್ನು ಅನೇಕ ಸಂದರ್ಭದಲ್ಲಿ ನೋಡಿರುತ್ತೇನೆ. ಸಿರಿಯಾ ದೇಶದವರು ಕಳುಹಿದ ಆಹ್ವಾನವನ್ನು ಪುರಸ್ಕರಿಸಿ ನನ್ನ ದೇಶಕ್ಕೆ ಬರಬೇಕೆಂದು ಕೇಳಿಕೊಂಡೆನು. ಜಾಗ್ರತೆಯಲ್ಲಿ ಭಾರತದೇಶಕ್ಕೆ ಹೋಗಬೇಕಾಗಿರುವುದರಿಂದ ಸದ್ಯದಲ್ಲಿ ನಿಮ್ಮ ಆಹ್ವಾನವನ್ನಂಗೀಕರಿಸಲಿತ್ತವಿಲ್ಲವಾದುದರಿಂದ ಸಾಧ್ಯವಾದಷ್ಟು ಜಾಗ್ರತೆಯಲ್ಲಿ ಸಿರಿಯಾ ದೇಶಕ್ಕೆ ಬರುತ್ತೇನೆಂದು ಮಹಾತ್ಮರು ಹೇಳಿದರು. ಅವರು ನಮ್ಮ ದೇಶಕ್ಕೆ ಬಂದರೆ ಅವರಿಗೆ ಅತಿಥಿ ಸತ್ಕಾರವನ್ನು ಮಾಡುವ ಗೌರವವು ನನ್ನ ತಂದೆಗೆ ಲಭ್ಯವಾಗುವುದು” ಎಂದು ಹೇಳಿದಳು.

ಲಂಡನ್ ಪಟ್ಟಣದಲ್ಲಿ ಜರುಗಿದ ಒಂದು ಸಣ್ಣ ವಿಷಯವನ್ನು ನನಗೆ ತಿಳಿಸಿದಳು. ಏನೆಂದರೆ—ಒಂದು ದಿವಸ ಮಹಾತ್ಮರಿಳಿದಿದ್ದ ಸ್ಥಳಕ್ಕೆ ಹೋಗಿ ಮಹಾತ್ಮರನ್ನು ನೋಡಲಾಗುವುದೇ? ಎಂದು ಹೊರಗಿದ್ದವರನ್ನು ಕೇಳಿದೆನು. ಒಳಗಿನಿಂದಲೇ ಈ ಮಾತುಗಳನ್ನು ಕೇಳುತ್ತಿದ್ದ ಮಹಾತ್ಮರು ನನ್ನನ್ನು ಕರೆದು “ಇದು ದೇವರ ಮನೆ, ಒಳಕ್ಕೆ ಬರಲು ಯಾರ ಅಪ್ಪಣೆಯೂ ಬೇಕಾಗಿರುವುದಿಲ್ಲ. ಯಾವಾಗಬೇಕಾದರೂ ಸಂತೋಷದಿಂದ ಬರಬಹುದು” ಎಂದು ಹೇಳಿದರು.

ಉತ್ತಮ ಮಹಮ್ಮದೀಯನು

ಮಹಾತ್ಮರಿಗೆ ವಿಶೇಷ ಆಕರ್ಷಣ ಶಕ್ತಿ ಇರುತ್ತದೆ. ಪ್ರಪಂಚದಲ್ಲಿರುವ ಮನುಷ್ಯರುಗಳೊಳಗೆಲ್ಲ ಇವರೇ ಉತ್ಕೃಷ್ಟರೆಂಬುದು ನನ್ನ ಅಭಿಪ್ರಾಯವು. ಅಷ್ಟೇ ಅಲ್ಲದೆ, ಇವರಿಗಿಂತ ಉತ್ತಮ ಮಹಮ್ಮದೀಯನು ಬೇರೊಬ್ಬನಿಲ್ಲ. ಮಹಮ್ಮದೀಯ ಮತದ ಮುಖ್ಯ ಸೂತ್ರಗಳಾದ ನಿರಾಡಂಬರ, ಸತ್ಯಸಂಕಲ್ಪ, ವಿನಯ, ಸತ್ಯ, ಇವುಗಳು ಇವರ ಜೀವಿತದಲ್ಲಿ ಕಂಡುಬರುತ್ತಿರುವಂತೆ ಮತ್ತಾವ ಮಾನವ ಜೀವಿತದಲ್ಲಿ ಕಂಡುಬರುವುದಿಲ್ಲ. ಇವರು ಮಹಮ್ಮದೀಯ ಮತವನ್ನುದ್ಧರಿಸುತ್ತಿದ್ದಾರೆ. ಮಹಾತ್ಮರನ್ನು ಗೌರವಿಸದವರು ಸತ್ಯವನ್ನಂಗೀಕರಿಸತಕ್ಕವರಲ್ಲವೆಂದೂ, ಸತ್ಯಕ್ಕೆ ಶತ್ರುಗಳೆಂದೂ ಹೇಳಲಭ್ಯಂತರವಿಲ್ಲ” ಎಂದು ಆಕೆಯು ಹೇಳಿದಳು.

ಸ್ವದೇಶೀ ಪ್ರಯತ್ನ

ಭಾರತದೇಶದ ಪರಿಸ್ಥಿತಿಯನ್ನು ತಿಳಿಯಬೇಕೆಂಬ ಕುತೂಹಲವನ್ನು ವ್ಯಕ್ತಪಡಿಸಲಾಗಿ ಇಲ್ಲಿಯ ಸ್ವದೇಶೀ ಪ್ರಯತ್ನವನ್ನು ತಿಳಿಸಿದೆನು. ನಾನು ಹೇಳಿದುದನ್ನು ಕೇಳಿ ಆಕೆಯು ಹೀಗೆ ಹೇಳಿದಳು:—ನಿಮ್ಮ ದೇಶದ ಸ್ಥಿತಿಯು ನನಗೆ ನಾಚಿಕೆಯನ್ನುಂಟುಮಾಡುತ್ತಿದೆ. ಭಾರತದೇಶದಲ್ಲಿ ಸ್ವದೇಶೀ ಪ್ರಯತ್ನದಲ್ಲಿ 30 ಕೋಟಿ ಪ್ರಜೆಗಳು ತೋರಿಸುತ್ತಿರುವ ಅಭಿಮಾನವನ್ನು ಚಿಕ್ಕ ದೇಶವಾದ ಸಿರಿಯಾ ದೇಶದಲ್ಲಿ 1½ ಕೋಟಿ ಪ್ರಜೆಗಳು ತೋರಿಸದಿರುವುದು ನನಗೆ ಬಹಳ ನಾಚಿಕೆಯನ್ನುಂಟುಮಾಡಿದೆ. ನಾನು ಈ ಬೊಂಬಾಯಿನಲ್ಲಿ ಒಂದು ಚಿಕ್ಕ ಉಪಾಹಾರ ಕೂಟಕ್ಕೆ ಹೋಗಿದ್ದೆ. ಅಲ್ಲಿಗೆ ಸರೋಜಿನಿ ನಾಯುಡುಯವರು ಮತ್ತೆ ಕೆಲ ಮುಖಂಡರು ಬಂದಿದ್ದರು. ಒಬ್ಬ ಭಾರತೀಯನು ವಿದೇಶದ ನೆಕ್‌ಟೈ ಅಂದರೆ ಕೊರಳಿನ ಪಟ್ಟಿಯನ್ನು ಧರಿಸಿಕೊಂಡುಬಂದಿದ್ದನು. ಈ ಸಂತೋಷಕೂಟಕ್ಕೆ ಬಂದಿದ್ದ ಇತರರೆಲ್ಲರೂ ಆತನನ್ನು ಆಕ್ಷೇಪಿಸತೊಡಗಲು ಆತನಿಗೆ ಬಹಳ ನಾಚಿಕೆಯಾಯಿತು. ಭಾರತದೇಶದಲ್ಲಿ ಸ್ವದೇಶೀ ಅಭಿಮಾನವು ಹುಟ್ಟಿ ಹಬ್ಬುತ್ತಿರುವುದು ಬಹಳ ಸಂತೋಷಕರವು.

ಗ್ರಂಥ ಸ್ವೀಕಾರ.

ಶಿಶುಚಂದ್ರಿಕೆ

ಇದು ಪದ್ಯಕಾವ್ಯ ರೂಪದಲ್ಲಿ ಹಾಸನದ ಡಿಸ್ಟ್ರಿಕ್ಟ್ ಆಫೀಸ್ ಎಕ್ಸೈಸ್ ಹೆಡ್‌ಕ್ಲಾರ್ಕರಾಗಿರುವ ಮ|| ಬಿ. ಶ್ರೀಕಂಠಯ್ಯನವರಿಂದ ರಚಿಸಲ್ಪಟ್ಟು ಕ್ರೌನ್ ಅಷ್ಟಪತ್ರಾಕೃತಿಯಲ್ಲಿ ಮುದ್ರಿಸಲ್ಪಟ್ಟಿರುವುದಲ್ಲದೆ ನಮ್ಮ ರಾಜಕುಲದೀಪಕರಾದ ಜಯಚಾಮರಾಜ ಒಡೆಯರವರಿಗೆ ಅರ್ಪಿಸಲ್ಪಟ್ಟಿರುತ್ತವೆ. ಪದ್ಯಗಳು ಲಲಿತವಾಗಿಯೂ ಮನೋಹರವಾಗಿಯೂ, ಭಾವಗರ್ಭಿತವಾಗಿಯೂ ಇರುತ್ತವೆ. ಶಿಶುಪಾಲನ ಲಾಲನ ಕ್ರಮಗಳು ಬಹಳ ಮನೋಹರವಾಗಿಯೂ ಸ್ವಾರಸ್ಯವಾಗಿಯೂ ವರ್ಣಿಸಲ್ಪಟ್ಟಿವೆ. ಕರ್ನಾಟಕ ಭಾಷಾರತ್ನ ಕ್ರೈ|| ವೇ|| ಕರಿಬಸವಶಾಸ್ತ್ರಿಗಳೂ, ಮ|| ರಾಜಸೇವಾಧುರೀಣ ಎಚ್. ಲಿಂಗರಾಜ ಅರಸಿನವರು ಮತ್ತೆ ಕೆಲ ವಿದ್ವಾಂಸರುಗಳು ಶ್ಲಾಘ್ಯವಾದ ಯೋಗ್ಯತಾಪತ್ರಿಕೆಗಳನ್ನು ಕೊಟ್ಟಿರುತ್ತಾರೆ. ಗ್ರಂಥವು ಪ್ರತಿಯೊಬ್ಬರಿಂದಲೂ ಸುಗ್ರಾಹ್ಯವಾಗಿರುವುದಲ್ಲದೆ ಸ್ಕೂಲುಗಳಲ್ಲಿ ಪಠ್ಯಪುಸ್ತಕವಾಗಿಡಲ್ಪಡಲು ಯೋಗ್ಯವಾಗಿರುತ್ತದೆ. ಇದರ ಬೆಲೆ 5 ಆಣೆ.

ಮನೋರಮಾ

ಇದು ಸ್ವಕಲ್ಪಿತ ಕಥೆ, ನಾಟಕಾಭಿನಯಕ್ಕೆ ಅನುಕೂಲಿಸುವಂತೆ ಕಂದ ವೃತ್ತಗಳಿಂದಲೂ ನವೀನ ಮಟ್ಟುಗಳಿಂದಲೂ ರಿಟೈರ್ಡ್ ಸಬ್ ರಿಜಿಸ್ಟ್ರಾರ್ ಮ|| ಎನ್. ನಾರಾಯಣರಾವ್, ಬಿ.ಎ., ಇವರಿಂದ ರಚಿಸಲ್ಪಟ್ಟು ಕ್ರೌನ್ ಅಷ್ಟಪತ್ರಾಕೃತಿಯಲ್ಲಿ ಮುದ್ದಾಗಿ ಮುದ್ರಿಸಲ್ಪಟ್ಟಿದೆ. ಈ ನಾಟಕದ ಪದಲಾಲಿತ್ಯವೂ ಶಬ್ದಸೌಷ್ಠವವೂ, ಕಥಾಸಂವಿಧಾನವೂ ಬಹಳ ಶ್ಲಾಘ್ಯವಾಗಿಯೂ ಮನೋರಂಜಕವಾಗಿಯೂ ಇರುತ್ತವೆ. ಗ್ರಂಥಕರ್ತರಾದ ಮ|| ನಾರಾಯಣರಾಯರಿಗೆ ಬಾಲ್ಯಾರಭ್ಯ ನಾಟಕದಲ್ಲಿ ಅಭಿರುಚಿಯಿರುವುದಲ್ಲದೆ, ಇವರು ಬಿ.ಎ., ಪರೀಕ್ಷೆಗೆ ಓದುತ್ತಿದ್ದಾಗ್ಗೆ ಮರ್ಚೆಂಟ್ ಆಫ್ ವೆನಿಸ್ ಎಂಬ ನಾಟಕದಲ್ಲಿ ಬಸಾನಿಯೋ ಪಾತ್ರವನ್ನು ಬಹಳ ಶ್ಲಾಘ್ಯವಾಗಿ ಅಭಿನಯಿಸಿ ಹೆಸರನ್ನಾಂತು ಸ್ವಾನುಭವಶಾಲಿಗಳಾಗಿರುವುದರಿಂದ ಈ ನಾಟಕವನ್ನು ಬಹಳ ರಸವತ್ತಾಗಿಯೂ ಮನೋರಂಜಕವಾಗಿಯೂ ಬರೆದಿರುತ್ತಾರೆ. ವಿದ್ಯಾಶಾಖೆಯವರು ಈ ಗ್ರಂಥವನ್ನು ಪಠ್ಯಪುಸ್ತಕವನ್ನಾಗಿಟ್ಟು ಮತ್ತು ನಾಟಕಸಭೆಯವರು ಇದನ್ನು ಅಭಿನಯಿಸಿ ಗ್ರಂಥಕರ್ತರ ಶ್ರಮವನ್ನು ಸಾರ್ಥಕಪಡಿಸುವರೆಂದು ನಿರೀಕ್ಷಿಸುತ್ತೇವೆ.

METHOD OF STUDY AND SUCCESS IN THE EXAMINATION.

This book has been written by Mr. G. C. Veerappa B. A., LL. B., Advocate, Sometime Teacher Educational Supervisor and Author of Limitation Act for beginners, Analytical Abstract of New Indian Succession Act 2nd Ed. Mercantile Law etc., Cottenpet, Bangalore City, and printed in Crown 8 Vo. It contains many valuable instructions useful to those that sit for Examinations and also to those that have once or twice failed. Prize Re. 1—0—0

ಪ್ರಕೃತಿಪರೀಕ್ಷೆ

ಮನುಷ್ಯನ ಆರೋಗ್ಯಸಂಬಂಧವಾದ ಈ ಗ್ರಂಥವು ಆಬಾಲವೃದ್ಧರಾದಿಯಾಗಿ ಸಮಸ್ತರ ಉಪಯೋಗಾರ್ಥವಾಗಿ ಡಾ|| ಸ್ವಾಮಿ ಚಂದ್ರಶೇಖರ ಶಾಸ್ತ್ರಿಗಳವರಿಂದ ಬರೆಯಲ್ಪಟ್ಟಿದೆ. ಮನುಷ್ಯ ದೇಹದ ಯಾವ್ಯಾವ ಅವಯವದಲ್ಲಿ ಯಾವ್ಯಾವ ರೋಗೋತ್ಪತ್ತಿಯಾಗುತ್ತದೆ ಮತ್ತು ಉತ್ಪತ್ತಿಯ ಕಾರಣ, ಲಕ್ಷಣ ಇತ್ಯಾದಿ ವಿಷಯಗಳು ಬಹಳ ಚೆನ್ನಾಗಿ ವಿವರಿಸಲ್ಪಟ್ಟಿವೆ. ಪ್ರಪಂಚದಲ್ಲಿ ಆರೋಗ್ಯಭಾಗ್ಯಕ್ಕಿಂತಲೂ ಶ್ರೇಷ್ಠವಾದ ಭಾಗ್ಯವು ಬೇರೊಂದಿಲ್ಲವಾದುದರಿಂದ ಪ್ರತಿಯೊಬ್ಬ ಮನುಷ್ಯನು ಈ ಗ್ರಂಥವನ್ನು ಸಂಗ್ರಹಿಸುವುದು ಆವಶ್ಯಕವು. ಇದರ ಬೆಲೆ 5 ಆಣೆ. ಇದು ಸಜ್ಜನ ಮತ್ತು ಕಂಪನಿ ಇಲಕಲ್ಲ ಇವರಲ್ಲಿ ದೊರೆಯುತ್ತದೆ.

ಮಾನಸಸರೋವರ ಮತ್ತು ಕೈಲಾಸಕ್ಷೇತ್ರ ಯಾತ್ರಾ ಪ್ರಕರಣವು

ಈ ಗ್ರಂಥವು ಮೈಸೂರು ಕರ್ನಾಟಕ ಶಂಕರವಿಜಯ ಮಾಸಪತ್ರಿಕೆಯ ಸಂಪಾದಕರಾದ ಮ|| ಪ್ರೊ|| ಸಾ|| ಶ್ರೀಕಂಠಶಾಸ್ತ್ರಿಗಳಿಂದ ರಚಿಸಲ್ಪಟ್ಟು ಡೆಮ್ಮಿ ಅಷ್ಟಪತ್ರಾಕೃತಿಯಲ್ಲಿ ಮುದ್ರಿಸಲ್ಪಟ್ಟಿದೆ. ಶ್ರೀಮನ್ಮಹಾರಾಜರವರ ಮಾನಸಸರೋವರ ಮತ್ತು ಕೈಲಾಸಕ್ಷೇತ್ರ ಯಾತ್ರೆಯು ವಿಶದವಾಗಿ ಬಿಡುಗನ್ನಡದಲ್ಲಿ ವರ್ಣಿಸಲ್ಪಟ್ಟಿರುವುದಲ್ಲದೆ ಶ್ರೀಮನ್ಮಹಾರಾಜರವರ ಮತ್ತು ಮುಖ್ಯ ಯಾತ್ರಾ ಸ್ಥಳಗಳ ಸುಂದರವಾದ ಭಾವಚಿತ್ರಗಳು ಕೊಡಲ್ಪಟ್ಟಿವೆ. ಈ ಪುಸ್ತಕವು ಯಾತ್ರಿಕರಿಗೆ ಬಹಳ ಉಪಯೋಗವಾಗಿರುತ್ತದೆ. ಇದರ ಬೆಲೆ 8 ಆಣೆ.

ಗೃಹಕೃತ್ಯದ ನೋಟೀಸು.

ಚಿತ್ರದುರ್ಗ ಡಿಸ್ಟ್ರಿಕ್ಟ್ ಜಗಲೂರು ತಾಲ್ಲೂಕು ಸೊಕ್ಕೆಗ್ರಾಮದ ವಾಸಿ ಸಾಗಲಗಟ್ಟೆ ಭಿಮಪ್ಪ ಬಿನ್ ಭಿಮಪ್ಪನು ಈ ಮೂಲಕ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ :—

ಹಾಲಿ ಜಗಲೂರು ತಾಲ್ಲೂಕು ದೇವಿಕೆರೆಯಲ್ಲಿ ವಾಸವಾಗಿರುವ ಮರಿಯಪ್ಪಳ ಈರಪ್ಪನ ಮಗಳು ನಾಗವ್ವ ಎಂಬಾಕೆಯನ್ನ ನಾನು ಆನಂದ ನಾಮಸಂವತ್ಸರದಲ್ಲಿ ಮದುವೆಯಾಗಿದ್ದೆನು. ಆಕೆಯು ದುರ್ವೃತ್ತಿಗೆ ಮನಸ್ಸುಕೊಟ್ಟು ವ್ಯಭಿಚಾರಕ್ಕೆ ಬಿದ್ದದ್ದರಿಂದ ಆಕೆಯು ನನ್ನ ಮನೆಯನ್ನು ಆ ವರ್ಷವೆ ತ್ಯಜಿಸಿ ವ್ಯಭಿಚಾರ ನಡಿಸುತಾ ಇದುವರೆಗೂ ನನ್ನಲ್ಲಿಗೆ ಬರದೆ ನನ್ನಲ್ಲಿ ಯಾವ ಸಂಪರ್ಕವೂ ಮಾಡದೆ ಇರುತಾಳೆ. ಹೀಗಿರುವಲ್ಲಿ ಈಗ್ಗೆ ಸುಮಾರು 5 ವರ್ಷದ ಕೆಳಗೆ ಆಕೆಯು 1 ಹೆಣ್ಣು ಕೂಸನ್ನ ಹಡದುಕೊಂಡಿರುವುದಾಗಿಯೂ, ಈಚೆಗೆ ಆಕೆಯು ಪುನಃ ಗರ್ಭಿಣಿಯಾಗಿರುವಂತೆಯೂ ವರ್ತಮಾನವಿರುತ್ತೆ. ಅದ್ದರಿಂದ ಸದರಿ ನಾಗವ್ವ ಮತ್ತು ಆಕೆಗೆ ಹುಟ್ಟಿರುವ ಹೆಣ್ಣುಮಗು ಮತ್ತು ಆಕೆಗೆ ಮುಂದೆ ಹುಟ್ಟಬಹುದಾದ ಮಕ್ಕಳಿಗೂ ನನಗೂ ನನ್ನ ಆಸ್ತಿಗೂ ಯಾವ ವಿಧವಾದ ಸಂಬಂಧವೂ ಇಲ್ಲ ಎಂಬ ಅಂಶ ವಿಶದಪಡಿಸಿರುತ್ತೆ.

[3—3] ಸಾಗಲಗಟ್ಟೆ ಭಿಮಪ್ಪ.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡ್ ಆಫೀಸು

ನೋಟಿಫಿಕೇಷನ್.

12 ನೇ ಮೇ 1932 ನೇ ಮರ್ಕುಂ C 875 L. F. 1931—32

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :—

ಈ ಕೆಳಗೆ ನಲ್ಲಿ ಕಂಡ ಸಂತೆಗಳಲ್ಲಿ ಸುಂಕ ವಸೂಲು ಮಾಡುವುದನ್ನು ತಾ|| 24-4-32 ರಲ್ಲಿ ನಡೆದ ಡಿ|| ಬೋರ್ಡು ಮೀಟಿಂಗಿನಲ್ಲಿ ಠರಾವು ಮಾಡಿರುತ್ತಾರೆ. ಈ ಬಗ್ಗೆ ಯಾರಾದರೂ ತಕರಾರ್ ಮಾಡುವ ಭಾಗದಲ್ಲಿ ಅಂಥಾವರು ಸಕಾರಣ ಸಹಿ ಅರ್ಜಿ ಮೂಲಕ ಈ ನೋಟಿಫಿಕೇಷನ್ ಗೆಜಿಟನಲ್ಲಿ ಛಾಯಿಪ್ ಆದ ತಾರೀಖು ಲಗಾಯತು 1 ತಿಂಗಳ ಒಳಗಾಗಿ ಈ ಆಫೀಸಿಗೆ ತಲಪುವಂತೆ ಕಳುಹಿಸತಕ್ಕದ್ದು. ವಾಯಿದೆ ಗತಿಸಿದನಂತರ ಬರುವ ತಕರಾರುಗಳನ್ನು ಅಂಗೀಕರಿಸಲಾಗುವುದಿಲ್ಲ.

G. CHANNAPPA,
ಪ್ರೆಸಿಡೆಂಟ್,
ಡಿಸ್ಟ್ರಿಕ್ಟ್ ಬೋರ್ಡು

ಚಿತ್ರದುರ್ಗ,
ತಾ|| 12-5-32.

1. ಚಿಕ್ಕಜಾಜೂರು.
2. ರಾಮಗಿರಿ.
3. ಕೊಡಗನೂರು.
4. ಹದಡಿ.
5. ಶ್ರೀರಾಮಪುರ.
6. ಬಾಗೂರು.
7. ರಾಂಪುರ.
8. ದೇವಸಮುದ್ರ.
9. ಮಲೇಬೆನ್ನೂರು.
10. ಸಿರಿಗೆರೆ (ಹರಿಹರ ಸಬ್‌ತಾಲ್ಲೂಕು)

ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡ್

ನೋಟಿಫಿಕೇಷನ್

ನಂ C 703 L. F. 31-32 ತಾ|| 12-5-1932.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :—ಈ ಮೊದಲೆ ಮೈಸೂರು ಗೆಜಿಟ್ಟನಲ್ಲಿ ಮತ್ತು ಸ್ಟಾರ್ ಪತ್ರಿಕೆಯಲ್ಲಿ ಪ್ರಚುರಪಡಿಸಿರುವಂತೆ ಈ ಡಿಸ್ಟ್ರಿಕ್ಟ್ ಬೋರ್ಡಿಗೆ ಒಳಪಟ್ಟ ಈ ಕೆಳಗೆ ಕಂಡ ಟೋಲ್‌ಗೇಟುಗಳು ಮತ್ತು ಸಂತೆಗಳು ಇವುಗಳಲ್ಲಿ ಸುಂಕ ವಸೂಲ್ಮಾಡುವ ಹಕ್ಕನ್ನು 1932-33 ನೇ ಸಾಲಿಗಾಗಿ ಹರಾಜು ಮಾಡಿಸಲಾಗಿ ಸರಿಯಾದ ಬಿಡ್ಡುಗಳು ಬಾರದೆ ಇದ್ದದ್ದರಿಂದಲೂ ಮತ್ತು ಹೆಚ್ಚಿಗೆ ಸವಾಲ್ ಮಾಡುವುದಾಗಿ ಈಚೆಗೆ ಅರ್ಜಿಗಳು ತಲಪಿರುವುದರಿಂದಲೂ ಸದರಿ ಟೋಲ್‌ಗೇಟುಗಳು ಯಾ ಸಂತೆಗಳಲ್ಲಿ ಸುಂಕ ವಸೂಲ್ಮಾಡುವ ಹಕ್ಕನ್ನು ಟೆಂಡರುಗಳ ಮೂಲಕ ವಿಲೇಪಡಿಸಲು ತೀರ್ಮಾನಿಸಿರುತ್ತೆ.

ಇಷ್ಟವುಳ್ಳವರು ಈ ಕೆಳಗೆ ಕಂಡ ಆಯಾಯ ಟೋಲ್‌ಗೇಟು ಅಥವಾ ಸಂತೆಗಳ ಪಕ್ಕದಲ್ಲಿ ನಮೂದಿಸಿರುವ ಡಿಪಾಜಿಟ್ ಹಣವನ್ನು ತಾಲ್ಲೂಕು ಅಥವಾ ಡಿಸ್ಟ್ರಿಕ್ಟ್ ಟ್ರಜರಿಗೆ “ಡಿಸ್ಟ್ರಿಕ್ಟ್ ಫಂಡ್ಸ್” ಗೆ ಜಮಾ ಮಾಡಿಸಿ ಒಂದು ಚಲನ್ ಸಹಿ ಈ ಆಫೀಸಿಗೆ **30-5-1932** ನೇ ದಿವಿ 3 ಘಂಟೆಗಳ ಒಳಗಾಗಿ ತಲಪುವಂತೆ ಸೀಲ್ಡ್ ಕವರಿನಲ್ಲಿ ಹೆಚ್ಚಿಗೆ ಸವಾಲ್ ಕೊಡುವುದರ ಮೂಲಕ ಟೆಂಡರುಗಳನ್ನು ಕಳುಹಿಸತಕ್ಕದ್ದು. ಅನಂತರ ಬರತಕ್ಕ ಟೆಂಡರುಗಳನ್ನು ಅಂಗೀಕರಿಸುವುದಿಲ್ಲ.

ಅವುಗಳನ್ನು ಹಾಜರಿರಬಹುದಾದ ಟೆಂಡರರುಗಳ ಸಮಕ್ಷಮ ತಾರೀಖು 30-5-1932 ದಿನ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರು ಒಡೆದು, ಪರಿಶೀಲಿಸಿ ಹೆಚ್ಚಿಗೆ ಮೊಬಲಗಿಗೆ ಟೆಂಡರು ಬಂದಿರತಕ್ಕವರ ಹೆಸರಿಗಾಗಲಿ ಅಥವ ಒಂದೇ ಮೊಬಲಗನ್ನು ಎರಡು ಅಥವಾ ಜಾಸ್ತಿಯಾಗಿ ಸವಾಲ್ ಬಂದ ಪಕ್ಷದಲ್ಲಿ ಮುಸರೆ ಹರಾಜು ಕ್ರಮನಡಿಸುವುದಕ್ಕಾಗಲಿ ಅಥವಾ ಇನ್ಯಾವ ತರಹೆಯಲ್ಲಿಯಾಗಲಿ ಸೂಕ್ತ ಕಂಡುಬಂದಂತೆ ಸದರಿ ಬಾಬುಗಳನ್ನು ವಿಲೇಪಡಿಸಲಾಗುತ್ತೆ. ಈ ವಿಚಾರದಲ್ಲಿ ಪ್ರೆಸಿಡೆಂಟರವರ ತೀರ್ಮಾನವೇ ಆಖೈರಾಗಿರುತ್ತೆ.

ಸದರಿ ಟೋಲ್‌ಗೇಟುಗಳ ಮತ್ತು ಸಂತೆಗಳ ಹರಾಜನ್ನು ಈ ಮೊದಲೇ ಛಾಯಿಪ್ ಆಗಿರುವ ತಾ|| 12-3-1932 ನೇ ಮರ್ಕುಂ ಇಸ್ತಿಹಾರುಗಳ ಷರತ್ತುಗಳನ್ನು ಅನುಸರಿಸಿ ನಡಿಸಲಾಗುತ್ತೆ.

ಹೆಚ್ಚಿಗೆ ವಿಷಯಗಳನ್ನು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರ ಆಫೀಸಿನ ಮೂಲಕ ತಿಳಿದುಕೊಳ್ಳಬಹುದಾಗಿರುತ್ತೆ.

G. CHANNAPPA,
ಪ್ರೆಸಿಡೆಂಟ್,
ಡಿಸ್ಟ್ರಿಕ್ಟ್ ಬೋರ್ಡು.

ಚಿತ್ರದುರ್ಗ,
ತಾ|| 12-5-32.

ಟೋಲ್‌ಗೇಟುಗಳು.	ಡಿಪಾಜಿಟ್ ಮೊಬಲಗು.
(1) ಹೊಸದುರ್ಗದ ತಾಲ್ಲೂಕು ಗುತ್ತಿಕಟ್ಟೆ ಮತ್ತು ಕೆಲ್ಲೋಡು ಟೋಲ್‌ಗೇಟುಗಳು	584 ರೂಪಾಯಿ.
(2) ದಾವಣಗೆರೆ ತಾಲ್ಲೂಕು ಮಲ್ಲಿಕಟ್ಟೆ ಟೋಲ್‌ಗೇಟು	1000 ರೂಪಾಯಿ.
(3) ಜಗಲೂರು ತಾಲ್ಲೂಕು ಲಕ್ಕಂಪುರದ ಹತ್ತಿರ ಟೋಲ್‌ಗೇಟು	125 ರೂಪಾಯಿ.
ಸಂತೆಗಳು.	
(1) ಚಿತ್ರದುರ್ಗದ ತಾಲ್ಲೂಕು ಭರ್ಮಸಾಗರದ ಸಂತೆ	110 ರೂಪಾಯಿ.
(2) ಚಿತ್ರದುರ್ಗದ ತಾಲ್ಲೂಕು ಚಿಕ್ಕೊಂಡನಹಳ್ಳಿ ಸಂತೆ	40 ರೂಪಾಯಿ.

ಸ್ವೀಕಾರ

ಶ್ರೀ|| ವೀರಸಂಗಪ್ಪನವರ ಅನ್ನಶಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

(1) ಬೆಂಗಳೂರು ಅಕ್ಕಿಪೇಟೆ ಗೊಲ್ಲಹಳ್ಳಿ ರುದ್ರಪ್ಪನವರ ಅಣ್ಣನವರ ಪುತ್ರ ಚಿ|| ಸಿದ್ಧಲಿಂಗಪ್ಪನವರಿಗೂ ಸಬ್‌ರಿಜಿಸ್ಟ್ರಾರ್ ಅರಳೇಪೇಟೆ ಜಿ. ರೇವಣ್ಣಶೆಟ್ಟರ ಪುತ್ರಿ ಚಿ|| ಸೌ|| ಯಲ್ಲಮ್ಮನಿಗೂ ನಡೆದ ಲಗ್ನದಲ್ಲಿ 1 ರೂ. (2) ಬೆಂಗಳೂರು ಸಿಟಿ ಕೊಟ್ಟಿಗೆಗಲ್ಲಿ ಎಚ್. ಎಲ್. ನಂಜಪ್ಪನವರ ಪುತ್ರಿ ಚಿ|| ಸೌ|| ಭ್ರಮರಾಂಬೆಗೂ ಎಚ್. ಪಿ. ಬಸಪ್ಪಶೆಟ್ಟರ ಜ್ಯೇಷ್ಠ ಪುತ್ರ ಚಿ|| ಪಿ. ಬಿ. ರುದ್ರಪ್ಪನವರಿಗೂ ನಡೆದ ಲಗ್ನದಲ್ಲಿ 1 ರೂ. (3) ಬೆಂಗಳೂರು ಸಿಟಿ ದೊಡ್ಡಪೇಟೆ ಗ್ರಾಂ|| ಅಂ|| ಶ್ರೀಕಂಠಪ್ಪನವರ ವೀರಭದ್ರಪ್ಪನವರ ಕುಮಾರೀ ಚಿ|| ಸೌ|| ಪಾರ್ವತಮ್ಮನಿಗೂ ಕೊಳ್ಳೇಗಾಲದ ಗ್ರಂದಿಗೆ ಪುಟ್ಟಸ್ವಾಮಪ್ಪನವರ ಕುಮಾರ ಚಿ|| ರಾ|| ಜಿ. ಪಿ. ಪರಶಿವಯ್ಯನವರಿಗೂ ನಡೆದ ಲಗ್ನದಲ್ಲಿ 1 ರೂ. ಒಟ್ಟು 3 ರೂ ಕ್ಯಾಪ್ಟನ್ ವೈ. ವಿ ಅಯ್ಯನವರ ಮೂಲಕ (4) ಬೀರೂರು ಶ್ರೀ|| ವೀರಭದ್ರೇಶ್ವರಸ್ವಾಮಿಯ ದೇವಸ್ಥಾನದಲ್ಲಿ ತೋಟದಯ್ಯನವರ ಸಿದ್ಧಲಿಂಗಪ್ಪನವರು ನಡೆಸಿದ ಶಿವದೀಕ್ಷಾ ಮಹೋತ್ಸವದಲ್ಲಿ ಬೀರೂರು ಬರ್ಮಶೆಲ್ ಏಜಂಟ್ ಎಂ. ವಿ. ಮರುಳಸಿದ್ದಯ್ಯನವರ ಮೂಲಕ 1 ರೂ.

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ನಿಷ್ಪಕ್ಷಪಾತವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷೇಪವಾಗಿಯೂ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟವಾಗಿಯೂ, ಇರಬೇಕೆಂದೂ ಬುಧವಾರ ಗುರುವಾರದೊಳಗೆ ನಮ್ಮ ಕೈಸೇರುವಂತೆ ಕಳುಹಲ್ಪಡಬೇಕೆಂದು, ಈ ನಿಬಂಧನೆಗೆ ವಿರುದ್ಧವಾದ ಲೇಖನಗಳು ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದ್ದಾಗ್ಯೂ ಲೇಖಕರು ಲಕ್ಷ್ಯಸದೆ ಲಂಗಿಬಿತನಗೆ ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ ಪುಟಗಟ್ಟಲೆ ಅಸ್ಪುಟವಾಗಿ ಬರೆದು ನಮಗೆ ತ್ರಾಸನ್ನು ಕೊಡುತ್ತಿರುವರೆಂದು ಬರೆಯಲು ಖೇದವಾಗುತ್ತದೆ. ಅದುಕಾರಣ ಇತಃಪರ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಮಸ್ತರೂ ಗಮನಿಸತಕ್ಕದು—ಸಂ.

ದೇವತಾಕಾರ್ಯಕ್ಕೆ ಸಹಾಯ.

ಜಗಲೂರು ತಾ|| ಸೂರಗೊಂಡನಹಳ್ಳಿ ಪಟೇಲ್ ಮ|| ಭೈರೆಗೌಡರು ಇದೇ ವೈಶಾಖ ಶು|| ೭ ದಿವಸ ಸ್ವಗೃಹದಲ್ಲಿ ನೆರವೇರಿಸಿದ ತಮ್ಮ ಪುತ್ರ, ಪುತ್ರಿಯರ ವಿವಾಹಮಹೋತ್ಸವಸಮಯದಲ್ಲಿ, ದಾವಣಗೆರೆ ತಾ|| ತುಂಬಿಗೆರೆ ಗ್ರಾಮದಲ್ಲಿ ಮೈಸೂರು ಧರ್ಮಸರ್ಕಾರದ ಸಹಾಯಾದಿಗಳಿಂದ ಜೀರ್ಣೋದ್ಧಾರಗೊಳಿಸಲ್ಪಟ್ಟಿರುವ ಶ್ರೀ ರಾಮೇಶ್ವರಸ್ವಾಮಿ ದೇವಾಲಯದ ಅಭಿವೃದ್ಧಿ ಕಾರ್ಯಗಳ ಧರ್ಮಫಂಡಿಗೆ 25 ರೂ. ಗಳನ್ನು ಅರ್ಪಿಸಿರುತ್ತಾರೆ. ಈ ಸುಹೃದಯರಿಗೆ ಪರಮೇಶ್ವರನು ಶುಭೋದಯವನ್ನುಂಟುಮಾಡಲೆಂದು ಹಾರೈಸುವ

ಧರ್ಮಕಾರ್ಯಾಭಿಮಾನಿ.

ದುಃಖವಾರ್ತೆ.

ಇದೇ ಮೇ ತಾ|| 13 ನೇ ಶುಕ್ರವಾರ ಚಾಮರಾಜನಗರದ ತಾಲ್ಲೂಕು ಕುದೇರುಗ್ರಾಮದಲ್ಲಿ ವರ್ತಕಾಗ್ರಗಣ್ಯರಾಗಿದ್ದ ಮ|| ಸಂಗಶೆಟ್ಟರ ಮಕ್ಕಳು ಬಸವಣ್ಣನವರು ಕೈಲಾಸವಾಸಿಗಳಾದರೆಂದು ತಿಳಿಸಲು ಅತ್ಯಂತ ವ್ಯಸನವಾಗುತ್ತದೆ. ಇವರು ನಯನೀತಿ ನಡೆನುಡಿಗಳಿಂದ ವರ್ತಕರೆಲ್ಲರ ಮನಸ್ಸನ್ನು ವಶಪಡಿಸಿಕೊಂಡು ನಮ್ಮ ಈ ಪ್ರಾಂತ್ಯಕ್ಕೆ ಭಾರೀ ವರ್ತಕರಾಗಿದ್ದರು. ತಮ್ಮ 30 ನೆಯ ವಯಸ್ಸಿನಲ್ಲೇ ಅಕಾಲಮರಣವನ್ನು ಹೊಂದಿದುದರಿಂದ ವರ್ತಕಮಂಡಲಿಯವರು ತಮ್ಮ ವಿಷಾದವನ್ನು ಸೂಚಿಸುವುದಕ್ಕಾಗಿ ಆ ದಿವಸ ತಮ್ಮ ಅಂಗಡಿಗಳನ್ನೆಲ್ಲ ಮುಚ್ಚಿ ಕೆಲಸಕಾರ್ಯಗಳನ್ನು ನಿಲ್ಲಿಸಿದ್ದರು. ಇದರಿಂದ ಕುದೇರುಗ್ರಾಮವೇ ಇವರ ಅಕಾಲ ಮರಣವನ್ನು ನೋಡಿ ಮರುಗುವಂತೆ ತೋರಿಬರುತ್ತಿತ್ತು. “ಕುದೇರಿನ ವ್ಯಾಪಾರದ ಹಡಗು ಮುಳುಗಿಹೋಯಿತು. ಕುದೇರಿನ ವರ್ತಕಮಂಡಲಿಗೆ ಕೀರ್ತಿಯನ್ನು ತಂದ ಪುರುಷನು ಅಳಿದುಹೋದ” ಎಂದು ಮೊದಲಾಗಿ ಜನರು ಹೇಳಿಕೊಳ್ಳುತ್ತಿರುವರಲ್ಲದೆ ಕುದೇರಿನ ವರ್ತಕಮಂಡಲಿಯಲ್ಲಿ ಇಂತಹ ಬಾಲಸೂರ್ಯನು ಮತ್ತಾವಾಗ ಉದಿಸುವನೆಂದು ಪ್ರಶ್ನಿಸುತ್ತಿರುವರು. ಈ ವರ್ತಕಮಂಡಲಿಯೂ ಗ್ರಾಮದ ಜನರೂ ಇಂಥಾ ಗುಣಾಢ್ಯನನ್ನು ಕಳೆದುಕೊಂಡ ಕುಟುಂಬಕ್ಕೆ ಈ ದುಃಖವನ್ನು ಸಹಿಸಿಕೊಳ್ಳಲು ಶಕ್ತಿಯನ್ನು ಕೊಡಲೆಂದು ಭಗವಂತನನ್ನು ಪ್ರಾರ್ಥಿಸುತ್ತಾರೆ.

ದುಃಖಭಾಗಿ.

ಶ್ರೀ ಬಸವೇಶ್ವರಜಯಂತ್ಯುತ್ಸವಗಳು.

ಬೆಳಗಾಂ ಜಿಲ್ಲಾ ಕೊಣ್ಣೂರು.

ಕಳೆದ ತಾ|| 8 ನೇ ರವಿವಾರ ಬೆಳಗಾಂವ ಜಿಲ್ಲಾ ಕೊಣ್ಣೂರ ಗ್ರಾಮದಲ್ಲಿ ಶ್ರೀ ಬಸವಜಯಂತ್ಯುತ್ಸವವನ್ನು ಶ್ರೀ ಕೊಣ್ಣೂರ ಕೆಂಪಯ್ಯ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಗ್ರಾಮದ ಯಾವತ್ತು ವೀರಶೈವರಷ್ಟೇ ಅಲ್ಲದೇ ಇನ್ನುಳಿದ ಮತದ ಮುಖಂಡರು ಕೂಡ ಅತ್ಯಂತ ಪ್ರೇಮಪೂರ್ವಕವಾಗಿ ಸೇರಿ ವಿಜೃಂಭಣೆಯಿಂದ ನೆರವೇರಿಸಿದರು. ಉತ್ಸವವು ಶ್ರೀ ಕಾಡಸಿದ್ಧೇಶ್ವರ ದೇವಸ್ಥಾನದಿಂದ ಹೊರಟು ಊರ ದೊಡ್ಡ ದೊಡ್ಡ ಬೀದಿಗಳಲ್ಲಿ ಭಜನಾ, ಗಾಯನ ಮೊದಲಾದ ಮಂಗಳವಾದ್ಯಗಳಷ್ಟೇ ಅಲ್ಲದೇ ಊರಲ್ಲಿರತಕ್ಕ ದೊಡ್ಡ ದೊಡ್ಡ ಎತ್ತುಗಳನ್ನು ಕೂಡ ಶೃಂಗರಿಸಿಕೊಂಡು ಮೆರವಣಿಗೆಯು ಸಾಯಂಕಾಲ 6 ಘಂಟೆಯಿಂದ ರಾತ್ರಿ 11 ಘಂಟೆಗೆ ಮುಗಿಸಲ್ಪಟ್ಟಿತು. ಸುಮಾರು 2000 ಜನರು ಉತ್ಸವದಲ್ಲಿ ಭಾಗಿಗಳಾಗಿದ್ದರು. ಉತ್ಸವವು ಮಠಕ್ಕೆ ತಲ್ಪಿದ ಅನಂತರ ಶ್ರೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ವೇ|| ಫಾಲಾಕ್ಷಶಾಸ್ತ್ರಿ ಚಿನ್ನದ ಶಾಂತಿಮಠ, ಇವರು ಯಾವತ್ತರಿಗೂ ತಿಳಿಯುವಂತೆ ಶ್ರೀ ದ್ವಿತೀಯಶಂಭುವೆನಿಸಿದ ಶ್ರೀ ಬಸವೇಶನ ಜನನ ಮತ್ತು ವೀರಶೈವ ಮತಾಭಿವೃದ್ಧಿ, ಈ ವಿಷಯದಲ್ಲಿ ಭಾಷಣಮಾಡಿದಮೇಲೆ ಅಧ್ಯಕ್ಷ ಮಹಾಶಯರಾದ ಶ್ರೀಗಳು ಕೂಡ ಶ್ರೀ ಬಸವೇಶ್ವರನ ತತ್ವಗಳಂತೆ ಸಮಸ್ತ ಮತೀಯರು ಕೂಡ ಏಕ್ಯಭಾವದಿಂದಿರಬೇಕೆಂದು ಜನರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಭಾಷಣಮಾಡಿ ಎಲ್ಲರಿಗೂ ಪರಮಾನಂದವನ್ನುಂಟುಮಾಡಿದರು. ತರುವಾಯ ಮಂಗಲಾದಿ ಕಾರ್ಯಗಳಿಂದ ಸರ್ವಕಾರ್ಯವು ಮುಗಿಸಲ್ಪಟ್ಟಿತು.

ಓರ್ವ ಮತಾಭಿಮಾನಿ.

ಹೆಗ್ಗಡದೇವನಕೋಟೆ ತಾ|| ಅಂತರಸಂತೆ.

ಈ ಗ್ರಾಮದಲ್ಲಿ ಪದ್ಧತಿಪ್ರಕಾರ ತಾ|| 8-5-32 ನೇ ಭಾನುವಾರ ಶ್ರೀ ಬಸವಪರಮಾತ್ಮನ ಜಯಂತ್ಯುತ್ಸವವು ಅತ್ಯಂತ ವಿಜೃಂಭಣೆಯಿಂದ “ಶ್ರೀ ಬಸವೇಶ್ವರ ಭಜನಾಸಂಘ” ದವರಿಂದ ನೆರವೇರಿಸಲ್ಪಟ್ಟಿತು. ಈ ಶುಭ ದಿವಸ ಭಜನಾಸಂಘದಲ್ಲಿ ಶ್ರೀ ಬಸವರಾಜಸ್ವಾಮಿಯ ಪೂಜಾದಿ ಸೇವೆಗಳಾದ ನಂತರ ಶ್ರೀ ಬಸವಸ್ವಾಮಿಯ, ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಯವರ ಮತ್ತು ಅಥಣಿ ಮುರುಘೇಂದ್ರ ಶಿವಯೋಗೀಶ್ವರರ ಭಾವಚಿತ್ರಗಳು ಅಂದವಾಗಿ ಶೃಂಗರಿಸಲ್ಪಟ್ಟು ಪುಷ್ಪ ಪಾಲಕಿಯಲ್ಲಿಡಲ್ಪಟ್ಟು ಉತ್ಸವವು ಹೊರಡಿಸಲ್ಪಟ್ಟಿತು. ಈ ಉತ್ಸವವು ಶ್ರೀಯವರ ಭಜನಾಸಂಘದವರ ಭಕ್ತಿಪ್ರದವಾದ ಭಜನೆಯಿಂದಲೂ, ಶ್ರೀ|| ವೇ|| ನಾಟ್ಯದ ಲಿಂಗಪ್ಪದೇವರ ಘನವಾದ ನಾಟ್ಯದಿಂದಲೂ, ಗ್ಯಾಸ್ ದೀಪಗಳ ಪ್ರಕಾಶದಿಂದಲೂ, ಓಲಗ, ತಾಳ, ಮೇಳವೇ ಮುಂತಾದ ವಾದ್ಯವಿಶೇಷದಿಂದಲೂ, ನೂರಾರು ಪ್ರೇಕ್ಷಕರ ಸಂದಣಿ ಮತ್ತು ಶ್ರೀಯವರ ಜಯಘೋಷದಿಂದಲೂ, ತಳಿರುತೋರಣ, ಸಾರಣೆಕಾರಣೆಗಳಿಂದ ಶೃಂಗಾರವಾದ ಮಾರ್ಗಗಳಲ್ಲಿ ರಾತ್ರಿ 8 ಘಂಟೆಗೆ ಹೊರಟು, ಉತ್ಸವವು ಬೆಳಗಿನ 4 ಘಂಟೆಗೆ ಭಜನಾಮಂದಿರವನ್ನು ಸೇರಿತು. ಮಾರ್ಗದಲ್ಲಿ ಕಾಯಿ, ಕರ್ಪೂರ ಮಾಡಿಸುವ ಮತ್ತು ಶ್ರೀಯವರ ಜಯಘೋಷಮಾಡುವ ಭಕ್ತರ ಶ್ರೇಣಿಯು ಅಗಣಿತವಾಗಿತ್ತು. ಅನಂತರ ಭಜನಾಮಂದಿರದಲ್ಲಿ ಶ್ರೀಯವರ ಭಜನೆ ಮತ್ತು ನಮ್ಮ ಪ್ರಭುವರ್ಯರ ಶ್ರೇಯಃಪ್ರಾರ್ಥನೆ, ಮಹಾಮಂಗಳಾರತಿ ನಡೆದು, ಮಂದಿರದಲ್ಲಿ ನೆರೆದಿದ್ದ ಸರ್ವರಿಗೂ, ಗಂಧಪುಷ್ಪ ತಾಂಬೂಲಾದಿ ವಿನಿಯೋಗದಿಂದ “ಶ್ರೀಮದ್ರಾಜಾಧಿರಾಜ ಮಹಾರಾಜ ಬಸವರಾಜಕೀ ಜೈ” ಎಂಬ ಜಯಘೋಷದೊಡನೆ ಸಭಾವಿಸರ್ಜಿತವಾಯಿತು. ಮಾರನೇ ದಿವಸ ಶ್ರೀಯವರ ಪೂಜಾದಿ ಸೇವೆ ಮತ್ತು ಸಂಘದವರ ಭಜನೆಯೂ ತಾ|| 10 ನೇ ಮಂಗಳವಾರ ರಾತ್ರಿ ಶ್ರೀ ಕೃಷ್ಣದಾಸ್ ಬೆಳಕವಾಡಿ ಇವರಿಂದ “ಶಬರಶಂಕರವಿಲಾಸ” ವೆಂಬ ಶಿವಕಥಾಕಾಲಕ್ಷೇಪವೂ, ಮ|| ಎಸ್. ಎಲ್. ಪುಟ್ಟನಂಜಪ್ಪ ಹಾರ್ಮೋನಿಸ್ಟ್ ಇವರ ಹಾರ್ಮೋನಿಯಂ, ಮ|| ರಂಗಾಚಾರ್ ಇವರ ತಬಲಗಳಿಂದೊಡಗೂಡಿ ಅತ್ಯಂತ ಮನೋಹರವಾಗಿ ನಡಿಸಲ್ಪಟ್ಟವು.

ಸೆಕ್ರೆಟರಿ.

ನಿಡುಮಾಮಿಡಿ.

ಕಳೆದ ತಾ|| 8 ನೇ ಭಾನುವಾರ ಮಾಮೂಲಾಗಿ ನಡೆಯತಕ್ಕ ಶ್ರೀ ಬಸವೇಶ್ವರ ಜಯಂತ್ಯುತ್ಸವವನ್ನು ಬಾಗೇನಹಳ್ಳಿ ತಾ|| ಗೂಳೂರು ಹೋ|| ಶ್ರೀ ನಿಡುಮಾಮಿಡಿ ಮಠದಲ್ಲಿ ಮತ್ತು ಗೂಳೂರಲ್ಲಿ ಶ್ರೀ ಸದರಿ ಮಠದ ಪಟ್ಟಾಧ್ಯಕ್ಷರಾದ ಶ್ರೀ ಮರಿಕರಿಬಸವರಾಜ ದೇಶಿಕೇಂದ್ರ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಪ್ರಮುಖರಾದ ಮತ್ತು ಸದರಿ ಮಠದ ಸರ್ವಾಧಿಕಾರಿಗಳಾದ ಎಂ. ರುದ್ರಶಾಸ್ತ್ರಿಗಳು, ರಿಕಾರ್ಡುಕೀಪರ್ ಪಾರುಪತ್ಯದಾರ್, ಬಿ. ಚನ್ನಯ್ಯನವರು ಸ್ಥಾನದ ಪೌರೋಹಿತರಾದ ಶಿರಸ್ತೇದಾರ್ ಟಿ. ಎಂ. ಗಂಗಾಧರಶಾಸ್ತ್ರಿಗಳು ಸರ್ಕೀಟು ಪಾರುಪತ್ಯದಾರ್ ಕೆ. ಎನ್. ವೀರಭದ್ರಯ್ಯನವರು, ಗೂಳೂರು ಸಕ್ಕರೆ ಸಿದ್ಧನಂಜಪ್ಪನವರು, ಜಗಣಿ ಪಾಪಯ್ಯನವರು, ತ್ರಿಪುರಾಂತಕ ನಾಗಪ್ಪನವರು, ನಂಜಯ್ಯನವರು ಮತ್ತು ಗ್ರಾಮದ ಪಟೇಲ್ ಶಾನುಭೋಗರುಗಳು ಶ್ರೀ ಸಂಸ್ಥಾನದ ವೀರಭದ್ರದೇವರ ಉತ್ಸವದೊಡನೆ ಶ್ರೀ ಬಸವೇಶ್ವರ ಫೋಟೋವನ್ನು ವಾದ್ಯಘೋಷದೊಡನೆ ಶ್ರೀ ಬಸವೇಶ್ವರ ಕಟ್ಟೆಬಳಿ ತೆಗೆದುಕೊಂಡು ಹೋಗಿ ಅಲ್ಲಿ ತಳಿರುತೋರಣಗಳಿಂದಲೂ ರಂಭಾಸ್ತಂಭಗಳಿಂತಲೂ ಹಸರು ಚಪ್ಪರಗಳಿಂದಲೂ ಅಲಂಕರಿಸಲ್ಪಟ್ಟ ಸದರಿ ದೇವಸ್ಥಾನದಲ್ಲಿ ಶ್ರೀ ವೀರಭದ್ರದೇವರನ್ನು ಮಹೂರ್ತಮಾಡಿಸಿ ಶ್ರೀ ಬಸವೇಶ್ವರ ಸ್ವಾಮಿಗೆ ಏಕಾದಶವಾರ ರುದ್ರಾಭಿಷೇಕ ಸಹಸ್ರನಾಮಾರ್ಚನೆ ಮಹಾಮಂಗಳಾರತಿ ಇವುಗಳನ್ನು ನಡೆಸಿದುದಲ್ಲದೆ ಸಾಯಂಕಾಲ 4 ಘಂಟೆಯಿಂದ ಸಂಗೀತ ಕಛೇರಿಯನ್ನೂ, ಅನಂತರ ಶ್ರೀ ಬಸವೇಶ್ವರದೇವರ ಪೂರ್ವಚರಿತ್ರೆಯ ಉಪನ್ಯಾಸವನ್ನೂ ಮಾಡಿಸಿ ಸಭಿಕರೆಗೆಲ್ಲರನ್ನು ಗಂಧಪುಷ್ಪ ತಾಂಬೂಲಾದಿಗಳಿಂದ ತೃಪ್ತಿಪಡಿಸಿ ರಾತ್ರಿ ಭದ್ರಕಾಳಿಸಮೇತವಾದ ಶ್ರೀ ವೀರಭದ್ರಸ್ವಾಮಿಯನ್ನು ಶ್ರೀ ಬಸವೇಶ್ವರ ಫೋಟೋದೊಂದಿಗೆ ಶ್ರೀ ಗೂಳೂರು ಗ್ರಾಮದಲ್ಲಿ ಇಂಪಾದ ವಾದ್ಯಗಳಿಂದಲೂ ಬಾಣಬಿರುಸು ವಗ್ಗೆರೆಯಿಂದಲೂ ಉತ್ಸವವನ್ನು ನಡಿಸಿ ಶ್ರೀ ಸ್ವಾಮಿಯನ್ನು ದೇವಸ್ಥಾನಕ್ಕೆ ಬಿಜಯಮಾಡಿಸಿ ಮಂತ್ರಪುಷ್ಪಾದಿಗಳಿಂದ ಮಹಾಮಂಗಳಾರತಿಯನ್ನು ನೆರವೇರಿಸಿದರು. ಈ ಕಾರ್ಯಕ್ಕಾಗಿ ಸಮಸ್ತಖರ್ಚುಗಳನ್ನು ಇಟ್ಟು ಕಾರ್ಯನಿರ್ವಾಹಮಾಡಿದ ಸದರಿ ಸಕ್ಕರೆ ಸಿದ್ಧನಂಜಪ್ಪನವರಿಗೆ ಜಗದೀಶ್ವರನು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಸದಾ ಕೊಡಲೆಂದು ನಾವುಗಳು ಪರಮೇಶ್ವರನನ್ನು ಪ್ರಾರ್ಥಿಸುತ್ತೇವೆ.

ಎಂ. ರುದ್ರಶಾಸ್ತ್ರಿಗಳು, ಸರ್ವಾಧಿಕಾರಿ, ನಿಡುಮಾಮಿಡಿ ಮಠ.

ಹುಬ್ಬಳ್ಳಿ.

ವೀರಶೈವ ಮತೋದ್ಧಾರಕನಾದ ಬಸವೇಶ್ವರನ ಜಯಂತ್ಯುತ್ಸವದ ಸಂಬಂಧವಾಗಿ ಶ್ರೀ ಜಗದ್ಗುರು ಮೂರುಸಾವಿರ ಮಠದಲ್ಲಿಯ ಯಾವತ್ತು ಸಂಸ್ಕೃತ, ಇಂಗ್ಲಿಷು ವಿದ್ಯಾರ್ಥಿಗಳು ಕೂಡಿ ಪ್ರತಿ ದಿವಸ ಪ್ರಾತಃಕಾಲ 5 ಘಂಟೆಗೆ ಎದ್ದು ಬಸವೇಶ್ವರನ ಮಹತ್ವವನ್ನು ಬೋಧಿಸುವ ಭಜನೆಯನ್ನು 7 ಘಂಟೆಯವರೆಗೆ ಮಾಡುತ್ತ ಊರಲ್ಲಿ ತಾ|| 6 ರಿಂದ ತಾ|| 8 ರ ವರೆಗೆ ಸಂಚರಿಸಿದರು. ಜಯಂತಿಯ ದಿವಸ ಪ್ರಾತಃಕಾಲ 7 ಘಂಟೆಗೆ ಸರಿಯಾಗಿ ಶ್ರೀ ಮೂರುಸಾವಿರ ಮಠದಿಂದ ಬಸವಮಹಾರಾಜನ ಪಾಲಕಿಯು ಹೊರಟು ತಳಿರು ತೋರಣಗಳಿಂದ ಅಲಂಕೃತವಾದ ನಗರದ ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯಿದು ಓಲೀಮಠಕ್ಕೆ ಹೋಗಿ ಅಲ್ಲಿ ಪೂಜೆಗೊಂಡು ಅನಂತರ ತಿರುಗಿ ಮೂರುಸಾವಿರ ಮಠಕ್ಕೆ ಬಂದು ವಿಧಿಪ್ರಕಾರ ಪೂಜಾದಿ ಕಾರ್ಯಗಳು ಜರುಗಿದವು. ಸಾಯಂಕಾಲ 6 ಘಂಟೆಗೆ ಶ್ರೀ ಮಹಾಜಗದ್ಗುರುಗಳವರು ಶೂನ್ಯಸಿಂಹಾಸನಾರೋಹಣವನ್ನು ಮಾಡಿದನಂತರ ಪದ್ಧತಿಯ ಪ್ರಕಾರ ಶಿವಭಜನೆಯಾಗಿ ಸಭೆಯು ಪ್ರಾರಂಭವಾಯಿತು. ಮೊದಲು ಶ್ರೀಯುತ ರುದ್ರಪ್ಪನವರು ಕೋಟಗಿ ಮಾಸ್ತರ ಗಜೇಂದ್ರಗಡ ಇವರು ಬಸವೇಶ್ವರನೂ ವೀರಶೈವರ ಶೀಲವೂ ಎಂಬ ವಿಷಯಕ್ಕೆ ಭಾಷಣ ಮಾಡಿದರು. ಆಮೇಲೆ ಶ್ರೀಯುತ ಸಿದ್ಧರಾಮಪ್ಪನವರು ಪಾವಟೆ ವಕೀಲ ಇವರು ಶ್ರೀ ಬಸವೇಶ್ವರನು ವೀರಶೈವ ಮತಸ್ಥಾಪಕನೂ ಅಲ್ಲ ಮತೋದ್ಧಾರಕನೂ ಅಲ್ಲ, ಆದರೆ ಆತನು ವೀರಶೈವ ಧರ್ಮಸ್ವರೂಪನಿರುವನು. ಬಸವನೆಂದರೆ ವೀರಶೈವವು ವೀರಶೈವವೆಂದರೆ ಬಸವನು ಒಟ್ಟಿನಮೇಲೆ ಬಸವನನ್ನು ಬಿಟ್ಟರೆ ವೀರಶೈವ ಮತವೇ ಇಲ್ಲವೆಂತಲೂ, ಆತನು ಅದ್ವಿತೀಯ ಶಂಭುಸ್ವರೂಪನಾಗಿರುವನೆಂತಲೂ ಹೇಳಿದರು ಮತ್ತು ವೀರಶೈವರಲ್ಲಿ ಜಾತಿಭೇದಗಳು ಪ್ರಬಲವಾಗಿ ಬೆಳೆದದ್ದು ಅವುಗಳ ಸಂಸ್ಕಾರವಿಶೇಷದಿಂದ ನನ್ನಂಥವನಿಗೂ ಸಹ ಅನ್ಯಪಂಗಡದವರಲ್ಲಿ ಬಳಕೆ, ಭೋಜನ ಮಾಡಲು ಮನಸ್ಸು ಒಪ್ಪದಿರುವಂಥ ಪರಿಸ್ಥಿತಿಯುಂಟಾಗಿದೆ, ಆದರೂ ಆ ಧರ್ಮಮೂರ್ತಿಯಾದ ಬಸವೇಶ್ವರನ ಆಚರಣೆಯಂತೆ ಸರ್ವರೂ ನಡೆದುಕೊಂಡು ಸುಖಿಗಳಾಗಬೇಕೆಂದು ಹೇಳಿದರು. ಇವರ ಭಾಷಣವಾದ ಬಳಿಕ ವೇ|| ಸೋಮನಾಥಶಾಸ್ತ್ರಿಗಳು ಇಟಗಿ ಇವರು ಬಸವನು ಸರ್ವವ್ಯಾಪಿಯಂತಲೂ ಬಸವಮಂತ್ರವು ಪುರಾತನವಾದದ್ದೆಂತಲೂ ಅಷ್ಟಾವರಣ ಪಂಚಾಚಾರಸಂಪನ್ನರಾದ ಶಿವಾಚಾರಿಗಳು ಪಾದೋದಕಪ್ರಸಾದ ಸಮಯದಲ್ಲಿ ಜಾತಿಭೇದವನ್ನು ಎಣಿಸುವದಿಲ್ಲವೆಂತಲೂ ಬಸವೇಶ್ವರನ ನಿಜಾಚರಣೆಯ ಮಾರ್ಗವನ್ನು ಎಲ್ಲರೂ ಆಚರಿಸಬೇಕೆಂತಲೂ ಹೇಳಿದರು. ಬಳಿಕ ಶ್ರೀಯುತ ವೀರಪ್ಪನವರು ಬೆಳಿಅಂಗಡಿ ವಕೀಲ ಇವರು ಬಸವೇಶ್ವರನ ಕೆಲವು ಪವಾಡಗಳನ್ನು ಹೇಳಿದ ತರುವಾಯ ಪ್ರಿನ್ಸಿಪಾಲ್ ಪಂ|| ಚಂದ್ರಶೇಖರಶಾಸ್ತ್ರಿಗಳು ವ್ಯಾಕರಣತೀರ್ಥ ಹೊಳಲು ಇವರು ಬಸವೇಶ್ವರನು ಧಾರ್ಮಿಕ, ಸಾಮಾಜಿಕ, ದೃಷ್ಟಿಯಿಂದ ವೀರಶೈವ ಸಮಾಜಕ್ಕೂ ವಾಙ್ಮಯ ದೃಷ್ಟಿಯಿಂದ ಇಡೀ ಕರ್ನಾಟಕಕ್ಕೂ ಮಾಡಿದ ಉಪಕಾರವನ್ನು ವಿವರಿಸಿದ್ದಲ್ಲದೆ ಈ ಪುಣ್ಯಮೂರ್ತಿಯ ಉತ್ಸವವನ್ನು ಸರ್ವರೂ ಆಚರಿಸಿ ಆತನ ನಡೆನುಡಿಯಂತೆ ನಡೆದು ಧನ್ಯರಾಗಬೇಕೆಂದು ಹೇಳಿದರು. ಬಳಿಕ ಮಂಗಳಪೂರ್ವಕವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಬೆಂಗಳೂರು ಡಿ|| ಬಿಡದಿ.

ಭರತಖಂಡದ ಕೆಲ ವೀರಶೈವೇತರರ ಮತ್ತು ಪಾಶ್ಚಿಮಾತ್ಯರ ಕೆಲವು ಉತ್ಸಾಹಕರವಾದ ಮತ್ತು ಆಕರ್ಷಣೀಯವಾದ ನವೀನ ಮತತತ್ವ ನಡೆನುಡಿಗಳಿಂದ ನಮ್ಮ ವೀರಶೈವ ಮತಕ್ಕೆ ಅನಿರೀಕ್ಷಣೆಯಿಂದ ಸಂಭವಿಸಿದ ವಿಷಮಸನ್ನಿವೇಶದಲ್ಲಿ ನಮ್ಮ ಮತದ ಪೂರ್ವತತ್ವಗಳ ಪ್ರಯೋಜನ ಮತ್ತು ಶಕ್ತಿಗಳೇ ಕುಗ್ಗಿಹೋಗಿ ಮತಬಾಂಧವರಲ್ಲಿ ದಿನೇ ದಿನೇ ಮತದಲ್ಲಿ ನಂಬಿಕೆಯು ಕಮ್ಮಿಯಾಗುತ್ತಾ ಮತ್ತು ಪರಮತೀಯರ ನವೀನ ಚಳವಳಿಗಳ ಕಗ್ಗತ್ತಲೆಯಿಂದ ಆವರಿಸಲ್ಪಟ್ಟು ದಿಕ್ಕೇತೋಚದೆ ಆ ಮರೆಯಲ್ಲಿ ಇತರ ಮತಗಳ ಆವಾಹನಾ ಶಕ್ತಿಯಿಂದ ಸೂರೆಗೊಳ್ಳುತ್ತಿದ್ದು ಕ್ಷೀಣಸ್ಥಿತಿಗೆ ನಮ್ಮ ಮತವು ಜಾರುತ್ತಾ ಇರಲು ಆ ಮಹಾಸ್ವಾಮಿಯಾದ ಪರಶಿವಮೂರ್ತಿಯು ಒಂದಾನೊಂದು ದಿವಸ ತನ್ನ ಒಡ್ಡೋಲಗದಲ್ಲಿ ಕುಳಿತಿರಲು ಹಾಗೆಯೇ ತನ್ನ ದಿವ್ಯ ಮತ್ತು ವಿಚಾರದೃಷ್ಟಿಗಳಿಂದ ಸರ್ವವನ್ನೂ ಅರಿತು ವೀರಶೈವಮತವನ್ನು ಭೂಲೋಕದಲ್ಲಿ ಉದ್ಧರಿಸುವುದಲ್ಲದೆ ಶ್ರೀ ಪಂಚಾಚಾರ್ಯರುಗಳು ಸ್ಥಾಪಿಸಿದಂತೆ ಇನ್ನೂ ಹೆಚ್ಚುಹೆಚ್ಚಾಗಿ ಸ್ಥಾಪಿಸಬೇಕೆಂದು ಕೊಟ್ಟ ಆಜ್ಞಾನುಸಾರವಾಗಿ ಭೂಲೋಕದಲ್ಲಿ ಅವತರಿಸಿ ಬಿಜ್ಜಳಮಹಾರಾಜನ ಮಂತ್ರಿಯಾಗಿ ಸಭೆಯಲ್ಲಿ ದೇವಲಿಪಿಯನ್ನೋದಿ ಗದ್ದುಗೆಯ ಕೆಳಗಿದ್ದ 60 ಕೋಟಿಗಳ ಹೊನ್ನನ್ನು ತೆಗೆಯಿಸಿ, ತನ್ನ ಮನೆಗೆ ನುಗ್ಗಿದ್ದ ಕಳ್ಳರನ್ನು ಲಿಂಗಿಗಳನ್ನಾಗಿ ಮಾಡಿ, ಜೋಳವನ್ನು ಮುತ್ತು ಮಾಡಿ ಜಂಗಮರಿಗೆ ಕೊಟ್ಟು, ಕನ್ನಡಿಯಲ್ಲಿ ಹಣೆಗಣ್ಣನ್ನು ತೋರಿಸಿ, ಲೆಖ್ಖದ ಒಪ್ಪಿತವನ್ನು ಮಾಡುವ ವೇಳೆಯಲ್ಲಿ 11 ದಿನಗಳವರೆಗೆ ಸೂರ್ಯನನ್ನು ತಡೆದು, ಗೊಲ್ಲತಿಯ ಮಜ್ಜಿಗೆ ಪಾತ್ರೆಯನ್ನು ಹಿಡಿದು, ಮಂಚಣ್ಣನ ಜಾಡಿಯಿಂದ ರಾಜನಿಗೆ ಉಂಟಾಗಿದ್ದ ತೊಂದರೆಗಳನ್ನು ಪರಿಹರಿಸಿ, ಗಡಿಗೆಯ ನೀರನ್ನು ಗಟ್ಟಿಮಾಡಿ, ಶಿವನಾಗಯ್ಯನ ಬೆರಳಿನಿಂದ ಹಾಲನ್ನು ಕರೆದು, ಕಣಗಿಲೆಯ ಹೂವನ್ನು ಸಂಪಿಗೆ ಹೂವನ್ನಾಗಿ ಮಾಡಿ, ತನ್ನ ದೇಹವನ್ನು ಕಚ್ಚಿ ಸತ್ತ ಹಾವಿಗೆ ಪ್ರಾಣವನ್ನು ಕೊಟ್ಟು, ಚಿತ್ರದಲ್ಲಿದ್ದ ಹಲಸಿನ ಹಣ್ಣನ್ನು ನಿಜವಾದ ಹಣ್ಣನ್ನಾಗಿ ಮಾಡಿ, ಹೆಂಡವನ್ನು ಅಮೃತವನ್ನಾಗಿ ಮಾಡಿ, ವಿಷವನ್ನು ಹಾಲನ್ನಾಗಿ ಮಾಡಿ, ದೊರೆಯ ರಾಣಿವಾಸದವರನ್ನೆಲ್ಲಾ ಜಂಗಮರ ಭಕ್ತರನ್ನಾಗಿ ಮಾಡಿ, ತೊಗರಿಯನ್ನು ರತ್ನಗಳನ್ನಾಗಿ ಮಾಡಿ, ಜಂಗಮಕ್ಕೆ ತನ್ನ ಪತ್ನಿಯನ್ನು ಕೊಟ್ಟು ಜಂಗಮನೊಡನೆ ತನ್ನ ಪ್ರಾಣವನ್ನು ಬಿಟ್ಟು, ಅಗ್ಗಣಿಯ ಹೊನ್ನಯ್ಯನ ಕುಷ್ಠರೋಗವನ್ನು ವಾಸಿಮಾಡಿದ್ದಲ್ಲದೆ ಇನ್ನೂ ಅನೇಕಾನೇಕ ಅಮಾನುಷ ಕೆಲಸಗಳನ್ನು ಮಾಡಿ ಭೂಲೋಕೇಶ್ವರನೆಂದು ಹೆಸರ್ಗೊಂಡ ಆ ಮಹಿಮನಾದ ಶ್ರೀ ಬಸವೇಶ್ವರನ ಜಯಂತಿಯು ಈ ಸ್ಥಳದಲ್ಲಿ ನಡೆಯುವುದು ಕೆಲ ವರ್ಷಗಳಿಂದ ನಿಂತಿದ್ದಿತು, ಆದರೆ ಈ ವರ್ಷ ಪುನರುಜ್ಜೀವನಗೊಳಿಸಿ ಜಯಂತಿಯ ದಿವಸ (ತಾ|| 8-5-1932) ಬಹುಜನ ವೀರಶೈವರು ನೂತನ ವಸ್ತ್ರಾಲಂಕೃತರಾಗಿ ತಮ್ಮ ಮನೆಮಠಗಳನ್ನು ತಳಿರುತೋರಣಗಳಿಂದಲಂಕರಿಸಿ ವಿಶೇಷವಾದ ಪೂಜೆಪುನಸ್ಕಾರಗಳಿಂದ ಒಂದು ದೊಡ್ಡ ಹಬ್ಬದಂತೆಯೇ ಆಚರಿಸಿದ್ದು ತುಂಬಾ ಸ್ತೋತ್ರಾರ್ಹವೇ ಸರಿ! ಎಲ್ಲಾ ದೇವಾಲಯಗಳಲ್ಲೂ ಆ ದಿವಸ ವಿಶೇಷವಾದ ಪೂಜೆಗಳು ಜರುಗಿದ್ದಲ್ಲದೆ ಸಾಯಂಕಾಲ ಶ್ರೀ ಬಸವೇಶ್ವರನ ಮಹಾರಥೋತ್ಸವವು ರಾಜಬೀದಿಗಳಲ್ಲಿ ಹೊರಟು ಮಂಜುಳ ವಾದ್ಯಗಳಿಂದ ಶೋಭಾಯಮಾನವಾಗಿ ಬಹುಜನ ಸ್ವಮತ ಮತ್ತು ಪರಮತೀಯರಿಂದ ಭಕ್ತಿಪುರಸ್ಸರವಾಗಿ ಪೂಜಿಸಲ್ಪಟ್ಟು ಜಯ ಜಯಕಾರದೊಡನೆ ಸ್ವಸ್ಥಳಕ್ಕೆ ಬಿಜಯಮಾಡಿತು. ಜಯಂತಿಯಲ್ಲಿ ಅನೇಕ ವೀರಶೈವ ಹಿರಿಯರು ಮತ್ತು ವಿದ್ಯಾರ್ಥಿಗಳು ಭಾಗಿಗಳಾಗಿದ್ದದ್ದು ತುಂಬಾ ಶ್ಲಾಘನೀಯವೂ ಅಮೂಲ್ಯವೂ ಆಗಿದ್ದುದಲ್ಲದೆ ಶ್ರೀ ಬಸವೇಶ್ವರನ ದೀರ್ಘವಾದ ಮತ್ತು ವಿಶಾಲವಾದ ಆಲೋಚನಾಶಕ್ತಿಯನ್ನೂ, ಆತನ ತತ್ವಗಳ ಪ್ರಯೋಜನ ಪ್ರಾಬಲ್ಯಗಳನ್ನೂ ವ್ಯಕ್ತಗೊಳಿಸುತ್ತದೆ.

ಒಬ್ಬ ಜಯಂತ್ಯುತ್ಸವಪ್ರಿಯ.

ಮಕ್ಕಳಿದ್ದರೆ ಮನೆ ಚೆಂದ.
ಮಕ್ಕಳಿಲ್ಲೆಂದು | ಚಿಂತಿಸಬೇಡಿರಿ
ಬಂಜೆತನದಿಂದ ಮುಕ್ತರಾಗುವಿರಿ
ಗರ್ಭಧಾರಣ ಸಂಜೀವಿನೀ
ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗುವಿರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ
ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. 5

ಅಸ್ಥಾನವಿದ್ವಾನ್ ಶ್ರೀಮಾನ್ ವೇದಮೂರ್ತಿ ಬಿ. ಎಂ. ತ್ರ್ಯಂಬಕ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯವಿಮರ್ಶೆಯೂ.

(ಲೇಖಕ—ವೇ॥ ಎಚ್. ಗೋಪಾಲಕೃಷ್ಣವಣಚಾರ್ಯ, ಕರ್ಣಾಟಕ ಪಂಡಿತರು, ಟ್ರೇನಿಂಗ್ ಕಾಲೇಜು, ಮೈಸೂರು.)

ದಿಗ್ದರ್ಶನಂ.

(ಮೇ ತಾ॥ 16ರ ಸಂಚಿಕೆಯಿಂದ ಮುಂದುವರಿದುದು.)

ಭವಸಾಗರದಲ್ಲಿ ಮುಳುಗಿದವರಾದುದರಿಂದಲೇ ಅಜ್ಞಾನದಿಂದ ಕುರುಡರಾದವರು ಭಾಷಾಪಾಂಡಿತ್ಯವುಳ್ಳವರು ಆದರೂ ಅಪರಿಪಕ್ವಾಂತಃಕರಣರಾದ ಕಾರಣ ಅವರ ಭಾವನಾರ್ಥವು ವಿಪರೀತವೂ ಅಸಂಭಾವ್ಯವೂ ಆಗುವುದು ಆಶ್ಚರ್ಯವಲ್ಲ. ಈ ಅರ್ಥವು ದಿಗ್ದರ್ಶನದ ("ವಾಣೀದೇವ್ಯೈ ಹಿಯಾರ್ ಅಂ") ಎಂಬ ವಾಕ್ಯದಿಂದ ಹೇಳಲ್ಪಟ್ಟಿದೆ.

"ಸಂಸಾರಾರ್ಣವಮಗ್ನಾನಾಂ ಅಜ್ಞಾನಾಂಧೀಕೃತಾತ್ಮನಾಂ | ಚಿತ್ಪಾಕಾನುಗುಣ್ಯೇನ ಭಾವನಾರ್ಥೋ ದ್ವಿಜರ್ಷಭಾಃ" ॥ ಇತ್ಯಾದಿ "ಲೀಯಮಾನ ಮಿದಂ ಸರ್ವಂ ಬ್ರಹ್ಮಣ್ಯೇವ ಹಿ ಲೀಯತೇ | ನಲೀಯತೇ ಪರಂ ಬ್ರಹ್ಮ ಸದಾ ಸತ್ಯಸ್ವಭಾವತಃ ॥ ಲೀಯತೇ ಹಿ ಶಿವಾದನ್ಯದ ದೇಶಪು ಶಿವಂ ಶಿವೇ | ಅತೋ ಲಿಂಗಂ ದ್ವಿಜಶ್ರೇಷ್ಠಾಃ ಹ್ಯವಿನಾಶೀತರತ್ವಯಂ ॥" "ಯತ್ ಪ್ರಯಂತ್ಯಭಿಸಂವಿಶನ್ತಿ" ಇತಿ ಶ್ರುತಿಃ ॥ ಬ್ರಹ್ಮೇತಿ ಲಿಂಗವಾಖ್ಯಾತಂ ಲಿಂಗಂ ಬ್ರಹ್ಮ ಸನಾತನಂ | ಇತ್ಯಾದಿ ಶಿವಪವಸ್ವಯಂ ಲಿಂಗಂ ಲಿಂಗಂ ಗದುಕ ಶಿವೋ ವಹಿ | ಶಿವೇನ ಗನ್ಯತೇ ಸರ್ವಂ ಶಿವೋ ನಾನ್ಯೇನ ಗನ್ಯತೇ ॥ ಇತ್ಯಾದಿ.

ಈ ವಿಷಯವು ಸುಲಭಗ್ರಾಹ್ಯವಲ್ಲದಿದ್ದರೂ ಸಮಯೋಚಿತವಾಗಿ ವಿವರಿಸಲಾಗಿದೆ (ಪ್ರಕರಣಾನುಸಾರವಾಗಿ ಮುಂದೆ ವಿವರಿಸಲಾಗುವುದು.) "ಯಾರಿಗೆ ತಪಸ್ಸೂ ಬ್ರಹ್ಮಚರ್ಯವೂ ಇವೆಯೋ | ಯಾರಲ್ಲಿ ಸತ್ಯವು ಪ್ರತಿಷ್ಠಿಸಲ್ಪಟ್ಟಿದೆಯೋ ಅವರಿಗೆ ಮಾತ್ರ ನಿರಂಜನಪದವು. ಯಾರಲ್ಲಿ ಡೊಂಕೂ ಸುಳ್ಳೂ ಅವಿದ್ಯೆಯೂ ಇವೆಯೋ ಅವರಿಗಲ್ಲವು." ॥

"ಯೇಷಾಂ ತಪೋ ಬ್ರಹ್ಮಚರ್ಯಂ | ಯೇಷು ಸತ್ಯಂ ಪ್ರತಿಷ್ಠಿತಂ ॥ ತೇಷಾಮಸೌ ವಿರಜೋ ಬ್ರಹ್ಮಲೋಕೋ | ನಯೇಷು ಜಿಹ್ಮಮನೃತಂ | ನಮಾಯಾಚ." ಇತಿ ಶ್ರುತಿಃ ॥ ಸ್ಕಂಧಶಾಖಾದಿಭೇದೇನ ಯಥಾ ವೃಕ್ಷೋ ವ್ಯವಸ್ಥಿತಃ | ತದಾರುದ್ರಾದಿಭೇದೇನ ಶಿವ ಏಕೋ ವ್ಯವಸ್ಥಿತಃ ॥

ಹೇಗೆ ವೃಕ್ಷವು ಶಾಖೋಪಶಾಖೆಗಳ ಭೇದದಿಂದ ಕೂಡಿರುವುದೋ ಹಾಗೆ ಶಿವನು ರುದ್ರಾದಿಭೇದದಿಂದ ಇರುವನು.

ವನಾನಿ ಶಂಭುರ್ಭುವನಾನಿ ಶಂಭುಃ | ಭೂತಾನಿ ಶಂಭುಃ | ಗಿರಯಶ್ಚ ಶಂಭುಃ | ॥ ಇತ್ಯಾದಿ.

ಈ ಅರ್ಥದಲ್ಲಿ ಅಸತ್ ಆದ ಜಡಾಂಶವನ್ನು ಬಿಟ್ಟು ಸತ್ಯವಾದ ಸತ್ ಅಂಶವನ್ನು ಮಾತ್ರ ಅಂಗೀಕರಿಸತಕ್ಕದ್ದಾಗಿದೆ. ಆದರೂ, "ಯಸ್ಯದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ | ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ" ॥ ಎಂಬುದು ಸಾಕ್ಷಿಯಾಗಿದೆ. ॥೩೩॥

ಹರನೊಲವಿಂದಮೆ ನಡೆನುಡಿ | ಯಿರಕಂದೊರೆಕೊಳ್ಳು ಮದೆ ವಿಮುಕ್ತಿಗೆ ಬೀಜಂ ॥ ಧರಣಿಯ ಭೋಗ್ಯದ್ರವ್ಯೋ | ತ್ಕರಮದು ಕೇಳ್ ಪೂರ್ವಪುಣ್ಯ ಸಂಬಂಧಕರಂ ॥೩೪॥

ಹರನ ಕರುಣೆಯಿಂದಲೇ ನಡೆಯಲ್ಲಿಯೂ ನುಡಿಯಲ್ಲಿಯೂ ಸರಿಯಾಗಿರಬೇಕೆಂಬ ಪ್ರಯತ್ನವು ಉಂಟಾಗುವುದು ಅದೇ ಮುಕ್ತಿಗೆ ಮುಖ್ಯವಾದ ಕಾರಣವು. ಈ ಭೂಮಂಡಲದಲ್ಲಿರುವ, ಸುಖಭೋಗಕ್ಕಾಗಿಯೇ ಹುಟ್ಟಿದೆಯೆಂದು ಅಭಾಗ್ಯ ಜನರ ಕಣ್ಣಿಗೆ ಕಾಣುವ, ಎಲ್ಲ ಪದಾರ್ಥಗಳೂ ಜನರ ಪೂರ್ವಜನ್ಮದ ಫಲವೇ ಹೊರತು ಶಿವಾನುಗ್ರಹ ಜನ್ಯವಲ್ಲವು ಇವುಗಳೆಲ್ಲವೂ ಸಂಸಾರಪಾಶದಲ್ಲಿ ಜನರನ್ನು ಸಿಕ್ಕಿಸಿ ಮುಕ್ತಿಗೆ ಕಂಟಕವಾಗುತ್ತವೆ. "ತಾನು ಒಳ್ಳೆಯವನು ಎಂಬುದಕ್ಕೆ ತನ್ನ ಸಾಕ್ಷಿಯು ವ್ಯರ್ಥವಾದರೆ ಅನ್ಯ ಸಾಕ್ಷಿಯು ಸಾರ್ಥಕವಾಗಲಾರದು." ಈ ವಾಕ್ಯರತ್ನವು "ಕಣ್ಣಿರೆ" ಯಲ್ಲಿದೆ. ಲೋಕದಲ್ಲಿ ಇವನಿಂತಹವನು ಎಂದು ನಿರ್ಣಯಿಸುವುದಕ್ಕೆ ಅವನ ನಡೆನುಡಿಗಳು ಹೊರತು ಬೇರೆ ಮಾರ್ಗವೂ ಸಾಧನವೂ ಇಲ್ಲವೇ ಇಲ್ಲವಷ್ಟೆ. ನಡೆನುಡಿಗಳ ಏಕತ್ವದಿಂದ ಒಳ್ಳೆಯವನೂ ಭಿನ್ನತ್ವದಿಂದ ಕೆಟ್ಟವನೂ ನಿಜವು, ಎಂಬ ಲೋಕಾನುಭವವನ್ನು ಅಳಿಸಿಬಿಡುವುದಕ್ಕೆ ಮಾನವರಿಂದ ಮಾತ್ರವಲ್ಲ, ದೇವತೆಗಳಿಂದಲೂ ಅಸಾಧ್ಯವು. ಶಾಸ್ತ್ರವಾದರೂ ಅದನ್ನು ಅನುವಾದಿಸುತ್ತದೆ (ಕ್ರಿಯಾವತ್ ಜ್ಞಾನಸಮುತ್ಪನ್ನಮುಪಕ್ಷಪ್ತಂತಥೇತರಂ) ಇಂತಹ ಜ್ಞಾನಕ್ರಿಯಾಸಮುಚ್ಚಯವು ಈಶ್ವರಾನುಗ್ರಹದಿಂದುಂಟಾಗಬೇಕಲ್ಲದೆ ಬೇರೆ ಮಾರ್ಗವೇ ಇಲ್ಲವು. (ಸಕರ್ಮಣಾನಪ್ರಜಯಾ) ಇತ್ಯಾದಿ. ಲಿಂಗವು ತಾನೇ ಜ್ಞಾನಕರ್ಮಸಮುಚ್ಚಯಸ್ವರೂಪವಾದುದರಿಂದ ತನಂಗವು (ಜೀವನು) ಭಿನ್ನವಾಗುವುದು ಹೇಗೆ? ಒಂದು ವೇಳೆ ಅವಿದ್ಯೆಯಿಂದ ಭಿನ್ನವಾದರೆ ಅದು ಅನಂಗವೇ ಸರಿ. ಪರಮೇಶ್ವರನು ಅನಂಗದಾಹಕನಷ್ಟೆ. ಒಂದು ವೃಕ್ಷದಲ್ಲಿ ಒಂದು ಕೊಂಬೆಯು ಸಾಮರಸ್ಯವಿಲ್ಲದೆ (ಸತ್ತಾನುಸ್ಯೂತಿಯಿಲ್ಲದೆ) ಎಂದರೆ (ಹರನ ಜೀವವಿಲ್ಲದೆ) ಒಣಗುತ್ತಾ ಬಂದರೆ ಅದನ್ನು ಕಡಿದು ಸುಟ್ಟುಬಿಡುವುದು ರೂಢಿಯಷ್ಟೇ. ಅಥವಾ ಲೋಕೋಪದೇಶಾರ್ಥವಾಗಿ ಆ ಭೂತಿಯನ್ನು (ಬೂದಿ) ಧರಿಸಲೂಬಹುದು.

"ಜ್ಞಾನಶಕ್ತ್ಯಾತ್ಮಕಂ ಲಿಂಗಂ ಕ್ರಿಯಾಶಕ್ತಿಸ್ತು ಪೀಠಿಕಾ | ಜ್ಞಾನಕ್ರಿಯಾತ್ಮಕಂ ಲಿಂಗಂ ಸದಾಯೋಗಿಭಿರರ್ಚ್ಯತೇ ॥"

ಹೀಗೆ ಮಹರ್ಷಿ ವಚನವಿರುವುದರಿಂದ ಇಂತಹ ಶಾಸ್ತ್ರವನ್ನೇ ಹಿಡಿದು ಸ್ವಲ್ಪ ದೂರ ವಿಚಾರಿಸೋಣ. ತನ್ನ ತನ್ನ ವರ್ಣಾಶ್ರಮೋಕ್ತವಾದ ಧರ್ಮಗಳನ್ನು ಆಚರಿಸುವುದರಿಂದ ಪ್ರತಿಬಂಧಕ ಪಾಪಕ್ಷಯವಾಗಿ ಚಿತ್ತಶುದ್ಧಿಗೆ ಕಾರಣಕ್ಕೆ ಮಾರ್ಗವಾಗುತ್ತದೆ.

"ನಿತ್ಯನೈಮಿತ್ತಿಕೈರೇವ ಕುರ್ವಾಣೋ ದುರಿತಕ್ಷಯಂ" ಇತ್ಯಾದಿ।

ಆಮೇಲೆ ಅಂತರಂಗವಿಚಾರಕ್ಕೆ ಅವಕಾಶವಾಗುತ್ತದೆ. ಈ ವಿಷಯದಲ್ಲಿ ಪೂಜ್ಯಪಾದರಾದ ಪತಂಜಲಿ ಮಹರ್ಷಿಗಳು ಅನುಗ್ರಹಿಸುವುದೇನೆಂದರೆ:— ಅಜ್ಞಾನಿಯು ಮನೋಮಲವು, ಅದುಳ್ಳವರು ಮಲಿನಚಿತ್ತರು. ಇಂತಹ ಮನೋಮಲವನ್ನು ತೊಲಗಿಸುವುದಕ್ಕೋಸ್ಕರ ಸಾಧನಗಳಾವುವೆಂದರೆ:—

ಮೈತ್ರೀಕರುಣಾಮುದಿತೋಪೇಕ್ಷಾಣಾಂ ಸುಖದುಃಖಪುಣ್ಯಾಪುಣ್ಯವಿಷಯಾಣಾಂ ಭಾವನಾತಃ ಚಿತ್ತಪ್ರಸಾದನಮ್ | ಎಂದರೆ ಸುಖಿಗಳಲ್ಲಿ ಮೈತ್ರಿಯನ್ನು ಭಾವಿಸುವವನಿಗೆ ಪರರ ಸುಖವು ನನ್ನದೇ ಎಂಬ ಅಭಿಮಾನದಿಂದ ಚಿತ್ತಗತವಾದ ಈರ್ಷ್ಯಾಮದವು ತೊಲಗುತ್ತದೆ. ದುಃಖಿಗಳಲ್ಲಿ ಕರುಣೆಯನ್ನು ಭಾವಿಸುವವನಿಗೆ ಸ್ವಯಂ ದುಃಖೋತ್ಪಾದನಹೇತುವಾದ ದ್ವೇಷವು ತೊಲಗುತ್ತದೆ. ಪುಣ್ಯಕರ್ಮಿಗಳಲ್ಲಿ ಹರ್ಷವನ್ನು ಭಾವಿಸುವವನಿಗೆ ದುಃಖಿಗಳಲ್ಲಿ ದೋಷಾರೋಪಣೆ ಮಾಡುವ ಅಸೂಯಾಮಲವು ತೊಲಗುತ್ತದೆ. [illegible]

ಸಂಗದೋಷಮಲವು ತೊಲಗುತ್ತದೆಯೆಂಬುದೇ. ಇದರಿಂದ ಮನೋನೈರ್ಮಲ್ಯವುಂಟಾಗಿ ಆಚಾರ್ಯಾನುಗ್ರಹದಿಂದ ಮಾಹೇಶ್ವರೀಶಕ್ತಿಪಾತಕ್ಕೆ ಮಾರ್ಗವಾಗುತ್ತದೆ:—

(ಜ್ಞಾನಶಕ್ತಿಸ್ಮರಣ)

"ಪಾರ್ವತೀಪರಮಾದೇವೀ ಬ್ರಹ್ಮವಿದ್ಯಾಪ್ರದಾಯಿನೀ" ಇತ್ಯಾದಿ.

ಸಶೇಷ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ, ಬೆಂಗಳೂರು.

ಲಗ್ನ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಿಸಿದ ಫಂಡಿನ ಹಣದ ತಪಸೀಲು—

ಮ॥ ಗಳಾದ—(1) ಬೆಂಗಳೂರು ಜುಮ್ಮಾಮಸೀದಿ ರೋಡು ಎ. ಜಿ. ಶ್ಯಾಮಣ್ಣನವರು ಜವಳಿ ಅಂಗಡಿಯನ್ನು ತಮ್ಮ ಸ್ವಂತ ನೂತನ ಗೃಹದಲ್ಲಿ ಪ್ರಾರಂಭಿಸಿದ ಸುಸಮಯದಲ್ಲಿ ರೂ 5. (2) ತುಮಕೂರು ತಾ॥ ಊರ್ಡಿಗೆರೆ ಕುಚ್ಚಂಗಿ ಗಂಗಪ್ಪನವರ ತೃತೀಯಕುಮಾರ ಚಿ॥ ರಾ॥ ಅಡ್ವೊಕೇಟ್ ಕೆ. ಗುಬ್ಬಯ್ಯ, ಬಿ. ಎ., ಎಲ್ ಎಲ್. ಬಿ., ಯವರಿಗೂ ಬೆಂಗಳೂರು ದೊಡ್ಡಪೇಟೆ ಗ್ರಂ॥ ಅಂ॥ ನಾಗಣ್ಣನವರ ಪಿ. ವಿ. ಭದ್ರಪ್ಪನವರ ದ್ವಿತೀಯ ಕುಮಾರ್ತೆ ಚಿ॥ ಸೌ॥ ನಾಗಾಂಬಿಕೆಗೂ ನಡೆದ ವಿವಾಹಮಹೋತ್ಸವದಲ್ಲಿ ವಧುವಿನ ಕಡೆಯಿಂದ 10 ವರನ ಕಡೆಯಿಂದ 10 ಜುಮ್ಲಾ ರೂ. 20. (3) ಬೆಂಗಳೂರು ಹಲಸೂರು ಕೆ. ನಾಗಪ್ಪನವರ ಕುಮಾರ ಚಿ॥ ರಾ॥ ಸೋಮಪ್ಪನವರಿಗೂ ಮೈಸೂರು ದಿನಸಿಮಂಡಿ ದಾಸಪ್ಪನವರ ಕುಮಾರ್ತೆ ಚಿ॥ ಸೌ॥ ಪಾರ್ವತಮ್ಮನಿಗೂ ನಡೆದ ನಿಶ್ಚಿತಾರ್ಥದಲ್ಲಿ ರೂ. 2. (4) ಬೆಂಗಳೂರು ಸಿಟಿ ಅಕ್ಕಿಪೇಟೆ ಎಂ. ಪಿ. ಚನ್ನಪ್ಪನವರ ಜ್ಯೇಷ್ಠಪುತ್ರ ಚಿ॥ ರಾ॥ ಮಲ್ಲಿಕಾರ್ಜುನಪ್ಪನವರಿಗೂ ಹಲಸೂರು ಮಲ್ಲಪ್ಪನವರ ಪುತ್ರಿ ಚಿ॥ ಸೌ॥ ಗಂಗಮ್ಮನಿಗೂ ನಡೆದ ಲಗ್ನದಲ್ಲಿ ವಧೂವರರ ಕಡೆಯಿಂದ 2 ರೂ. (5) ಡಿಟೋ ಅಕ್ಕಿಪೇಟೆ ಈರಪ್ಪನವರ ಜಿ. ಮರಿಯಪ್ಪನವರ ಕುಮಾರ ಚಿ॥ ರಾ॥ ಸಿದ್ಧಲಿಂಗಪ್ಪನವರಿಗೂ ಅರಳೇಪೇಟೆ ಗುರುಸಿದ್ಧಪ್ಪನವರ ಜಿ. ರೇವಣ್ಣಶೆಟ್ಟರ ಕುಮಾರ್ತೆ ಚಿ॥ ಸೌ॥ ಯಲ್ಲಮ್ಮನಿಗೂ ನಡೆದ ಲಗ್ನದಲ್ಲಿ ವಧುವಿನ ತಂದೆ ಜಿ. ರೇವಣ್ಣಶೆಟ್ಟರಿಂದ 10 ವರನ ಚಿಕ್ಕಪ್ಪನವರಾದ ಜಿ. ರುದ್ರಪ್ಪನವರಿಂದ 15 ಜುಮ್ಲಾ 25 ರೂ. (6) ಬೆಂಗಳೂರು ಸಿಟಿ ಕೊಟ್ಟಿಗೆಗಲ್ಲಿ ಎಚ್. ಎಲ್. ನಂಜಪ್ಪನವರ ಪುತ್ರಿ ಚಿ॥ ಸೌ॥ ಭ್ರಮರಾಂಬನೆಂಬ ವಧುವಿಗೂ ಎಚ್. ಪಿ. ಬಸಪ್ಪಶೆಟ್ಟರ ಜ್ಯೇಷ್ಠಪುತ್ರ ಚಿ॥ ರಾ॥ ಪಿ. ಬಿ. ರುದ್ರಪ್ಪನೆಂಬ ವರನಿಗೂ ನಡೆದ ಲಗ್ನದಲ್ಲಿ ವಧುವಿನ ಕಡೆಯಿಂದ 10 ವರನ ಕಡೆಯಿಂದ 10 ಜುಮ್ಲಾ 20 ಒಟ್ಟು ಜುಮ್ಲಾ ಫಂಡು ಸೆಕ್ರೆಟರಿಯವರ ಹಸ್ತ 74 ರೂ. (7) ಬೆಂಗಳೂರು ಸಿಟಿ ಮೋಕ ಭದ್ರಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ಟಿ. ಎಚ್. ಚನ್ನಪ್ಪನವರ ಮೂಲಕ 3 ರೂ. ಮೈಸೂರು ಶ್ರೀ॥ ಆಸ್ಥಾನ ವಿದ್ವಾನ್ ವೇ॥ ಎಚ್. ಆರ್. ಕಂಬಸವಶಾಸ್ತ್ರಿಗಳವರ ಪುತ್ರಿ ಚಿ॥ ಸೌ॥ ವಿಜಯಾಂಬೆಗೂ ಟಿ ನರಸೀಪುರದ ಸಾಹುಕಾರ್ ನಂ॥ ಪುಟ್ಟಣ್ಣನವರ ಕುಮಾರ ಚಿ॥ ರಾ॥ ಪುಟ್ಟಹೊನ್ನಪ್ಪನಿಗೂ ನಡೆದ ಲಗ್ನದಲ್ಲಿ ವಧೂವರರ ಕಡೆಯಿಂದ 4 ರೂ ಗಳು ಮತ್ತು ಮೈಸೂರು ಕೃಷ್ಣರಾಜ ಮೊಹಲ್ಲಾ ದಿನಸಿ ಅಂಗಡಿ ಬಸಮಯ್ಯನವರ ಪ್ರಮಥವಿಲಾಸವೆಂಬ ನೂತನಗೃಹದಲ್ಲಿ ನೆರವೇರಿಸಿದ ಶಿವದೀಕ್ಷಾಮಹೋತ್ಸವದಲ್ಲಿ 1 ರೂ. ಮೈಸೂರು ಸ್ಟಾರ್ ಆಫೀಸು ಮೂಲಕ ಒಟ್ಟು 5 ರೂ. (9) ಕೋಲಾರ ಡಿ॥ ಉರಿಗಂನಲ್ಲಿರುವ ಮಲ್ಲಪ್ಪನವರ ಕುಮಾರ್ತೆ ಚಿ॥ ಸೌ॥ ಬಸವಲಿಂಗಮ್ಮನ ವಿವಾಹಮಹೋತ್ಸವದಲ್ಲಿ ವಧೂವರರ ಕಡೆಯಿಂದ ತೆಗೆದದ್ದು ಎಸ್. ನಾಗಪ್ಪನವರ ಮೂಲಕ 4 ರೂ. (10) ಕುಣಿಗಲ್ ತಾ॥ ಹುಲಿಯೂರ್ ದುರ್ಗದ ಮಠದ ವೇ॥ ಗುರುಸಿದ್ಧಶಾಸ್ತ್ರಿಗಳು ಧರ್ಮಾರ್ಥವಾಗಿ ನಡೆಸಿದ ಲಗ್ನದಲ್ಲಿ 1 ರೂ. (11) ಬೆಂಗಳೂರು ಸಿಟಿ ದೊಡ್ಡಪೇಟೆ ಗ್ರಂ॥ ಅಂ॥ ಶ್ರೀಕಂಠಪ್ಪನವರ ವೀರಭದ್ರಪ್ಪನವರ ಕುಮಾರ್ತೆ ಚಿ॥ ಸೌ॥ ಪಾರ್ವತಮ್ಮನಿಗೂ ಕೊಳ್ಳೇಗಾಲದ ಗ್ರಂದಿಗೆ ಪುಟ್ಟಸ್ವಾಮಪ್ಪನವರ ಕುಮಾರ ಚಿ॥ ರಾ॥ ಜಿ. ಪಿ. ಪರಶಿವಯ್ಯನಿಗೂ ನಡೆದ ವಿವಾಹದಲ್ಲಿ ವಧೂವರರ ಕಡೆಯಿಂದ ತೆಗೆದದ್ದು ತುಂಬಿಗೆರೆ ನಂಜಪ್ಪನವರ ಮೂಲಕ 7 ರೂ. (12) ಬೀರೂರು ಶ್ರೀ॥ ವೀರಭದ್ರೇಶ್ವರಸ್ವಾಮಿಯ ದೇವಸ್ಥಾನದಲ್ಲಿ ಕೋಟಿದಯ್ಯನವರ ಸಿದ್ಧಲಿಂಗಪ್ಪನವರು ನಡೆಸಿದ ಶಿವದೀಕ್ಷಾಮಹೋತ್ಸವ ಸಮಯದಲ್ಲಿ ಫಂಡಿಗೆ ತೆಗೆದದ್ದು 2 ರೂ. (13) ಆನೇಕಲ್ ತಾ॥ ಶ್ರೀ ರಾಜಾಪುರದ ಮಠಕ್ಕೆ ತಾ॥ 4-5-32 ರಲ್ಲಿ ಉತ್ತರಾಧಿಕಾರಿಗಳ ಪಟ್ಟಾಭಿಷೇಕದ ಕಾಲದಲ್ಲಿ ಫಂಡಿಗೆ ತೆಗೆದದ್ದು ಬೆಂಗಳೂರು ಹೊಸತರಗಿನ ಮಂಡಿ ವೇ॥ ಎಚ್. ರುದ್ರಯ್ಯನವರ ಮೂಲಕ 15 ಒಟ್ಟು ಜುಮ್ಲಾ 111 ರೂ.

ಎಂ ನಾಗಪ್ಪ,

ಆ॥ ಸೆಕ್ರೆಟರಿ, ಮೈ. ವೀ. ವಿ. ಫಂಡು ಸಂಘ.

ಕುರುಹಿನಶೆಟ್ಟಿ ವಿದ್ಯಾರ್ಥಿಗಳಿಗೆ ಸೂಚನೆ.

ಬೆಂಗಳೂರು ಕುರುಹಿನಶೆಟ್ಟಿ ಸಂಘದವರು "ಕುರುಹಿನಶೆಟ್ಟಿ" ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಬರುವ ಜೂನ್ ತಿಂಗಳಲ್ಲಿ 1 ಹಾಸ್ಟಲನ್ನು ಪ್ರಾರಂಭಿಸಲು ನಿಶ್ಚಯಿಸಿರುತ್ತಾರೆ ಆದ್ದರಿಂದ ಬೆಂಗಳೂರಿಗೆ ಬಂದು ವ್ಯಾಸಂಗಮಾಡಲಿಚ್ಛಿಸುವ ಹೈಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳು 1932 ನೇ ಜೂನ್ ತಾ॥ 3 ರೊಳಗಾಗಿ ಸೆಕ್ರೆಟರಿ ಕುರುಹಿನಶೆಟ್ಟಿ ಸಂಘ, 10-11 ಮನವಾರ್ತೆಪೇಟೆ, ಬೆಂಗಳೂರು ಸಿಟಿ ಇವರಿಗೆ ಬರೆದುಕೊಳ್ಳಬೇಕಾಗಿ ಈ ಮೂಲಕ ತಿಳಿಸಿದೆ.

ಬಿ. ಆರ್. ಕಾವೇಟಿರಂಗಪ್ಪ,

ಸೆಕ್ರೆಟರಿ.

---

೧೧ ನೇ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆಯು

ತಾ॥ 13-5-1932 ನೇ ದಿವಸ ಧಾರವಾಡ ಲಿಂಗಾಯತ ಹಾಲಿನಲ್ಲಿ ಕೂಡಿದ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆಯ ರಿಸೆಪ್ಷನ್ ಕಮಿಟಿಯಲ್ಲಿ ಪಾಸಾದ ಠರಾವುಗಳು:—

(1) ಈ ಮೊದಲು ವರ್ಕಿಂಗ್ ಕಮಿಟಿಯವರು ಮಾಡಿದ ನಿರ್ಣಯದ ಪ್ರಕಾರ ಮೇ ತಿಂಗಳ ಕಡೆಯ ವಾರವು ವ್ಯಾಪಾರಕ್ಕೆ ರಿಕ್ತ, ಮೈಸೂರ ಸಂಸ್ಥಾನದಲ್ಲಿರುವ ಅಧಿಕಾರಿಗಳಿಗೂ ವಕೀಲರಿಗೂ ಅನನುಕೂಲವಾಗುವದರಿಂದ, ಮಹಾಸಭೆಯ ಅಧ್ಯಕ್ಷ ಶ್ರೀ॥ ವಾ॥ ಶ್ರೀಮಂತ ಲಿಂಗಪ್ಪ ಜಾಯಪ್ಪಾ ದೇಸಾಯಿ ಇವರ ಶಿರಾಮೂರ್ತಿಯನ್ನ ಸ್ಥಾಪಿಸುವದು ಈ ಮೊದಲೇ ಗೊತ್ತಾಗಿದ್ದು ಅದರ ಕೆಲಸವು ಅಪೂರ್ಣವಾಗಿರುವದರಿಂದ, ಮತ್ತು ಇದೇ ಸಭೆಯ ಕಾಲಕ್ಕೆ ಮಹಿಳಾಪರಿಷತ್ತು, ಶಿಕ್ಷಣ ಸಂಸ್ಥೆಗಳ ಪರೀಕ್ಷೆ ಮಾಡುವದು ಅವಶ್ಯವಿದ್ದು ಈ ಅಭ್ಯಾಸಗಳಲ್ಲಿ ಈ ಕೆಲಸಗಳನ್ನು ನೆರವೇರಿಸುವದು ಕಠಿಣಸಾಧ್ಯವಾದ ಮೂಲಕ ಈ ಸಾಲೆ ಧಾರವಾಡದಲ್ಲಿ 11 ನೇ ಅಖಿಲ ವೀರಶೈವ ಮಹಾಸಭೆಯನ್ನು ನೆರವೇರಿಸುವದನ್ನು ಇದೇ ಇಸವಿಯ ಡಿಶಂಬರ ತಿಂಗಳ ಕೊನೆಯ ವಾರದ (ನಾತಾಳಸೂಟಿಯಲ್ಲಿ) ವರೆಗೆ ಮುಂದುವರಿಸಲ್ಪಡತಕ್ಕದೆಂದು ಸ್ವಾಗತ ಸಂಘವು ಅಭಿಪ್ರಾಯಪಡುತ್ತದೆ.

ಸೂಚಕರು:—ಎಸ್. ಬಿ. ಹಿರೇಮಠ ವಕೀಲರು, ಹಾವೇರಿ.

ಅನುಮೋದಕರು:—ಶ್ರೀ॥ ಮೂಗಪ್ಪಣ್ಣನವರು ಸವದತ್ತಿ, ಧಾರವಾಡ. ಈ ನಿರ್ಣಯವು ಸರ್ವಾನುಮತದಿಂದ ಪಾಸಾಯಿತು. (2) 1 ನೇ ಠರಾವಿನ್ನಯ ಈ ದಿವಸ ಅಜೆಂಡಾದ ಮೇಲಿನ 1 ನೇ ವಿಷಯವನ್ನು ಮುಂದೆ ಹಾಕಬೇಕೆಂದು ಮಿ॥ ವ್ಹಿ. ಬಿ. ಗೋವಿನಕೊಪ್ಪ ವಕೀಲ ಧಾರವಾಡ ಇವರು ಸೂಚಿಸಿದ್ದಕ್ಕೆ ಮಿ॥ ಎಂ. ಬಿ. ಇನಾಮತಿ ವಕೀಲ ಧಾರವಾಡ ಇವರು ಅನುಮೋದಿಸಿದರು. ಈ ನಿರ್ಣಯವು ಸರ್ವಾನುಮತದಿಂದ ಪಾಸಾಯಿತು. (3) ಚಿರಸ್ಥಾಯಿ ಫಂಡಿನಿಂದ 3000 ರೂಪಾಯಿಗಳ 2 ನೇ ಭಾಗದ ಅರ್ಧ ನೋಟುಗಳು ಸ್ವಾಗತ ಕಮಿಟಿಯ ಚೇರಮನ್ನರ ಕಡೆಗೆ ತಾ॥ 7-5-1932 ರಲ್ಲಿ ಬಂದದ್ದರಿಂದ ಆ ದಿವಸ ಮತ್ತು ಮರುದಿವಸ ಬ್ಯಾಂಕ ಸೂಟಿ ಇದ್ದ ಮೂಲಕ ಮತ್ತು ಸ್ವಾಗತ ಕಮಿಟಿಯ ಚೇರಮನ್ನರು ಧಾರವಾಡದಲ್ಲಿ ಇಲ್ಲದ ಮೂಲಕ ಈ ದಿವಸದ ವರೆಗೆ ಬ್ಯಾಂಕಿನಲ್ಲಿ ಇಡುವದು ಆಗದ್ದರಿಂದ ಈ ದಿವಸ ಬ್ಯಾಂಕಿಗೆ ಕಳಿಸಿಕೊಡಬೇಕೆಂದು ನಿರ್ಣಯಿಸಲ್ಪಟ್ಟಿತು. (4) ಸ್ಟ್ಯಾಂಡಿಂಗ್ ಕಮಿಟಿಯ ಚೇರ್ಮನ್ನರ ಕಡೆಯಿಂದ ತಾ॥ 9-5-1932 ನೇ ದಿವಸ ಬಂದ ಪತ್ರವನ್ನು ಓದಲಾಯಿತು. ಮೇಲಿನ ಠರಾವಿನ ನಕಲನ್ನು ಕಳಿಸಬೇಕೆಂದು ನಿರ್ಣಯವಾಯಿತು.

M. S. KESAREE,
C. G. HUNDEKAR,
S. S. BASAVANAL,
ಪಬ್ಲಿಕೇಶನ್ ಕಮಿಟಿ,

11 ನೇ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭಾ ಧಾರವಾಡ.

ವಿವೇಕಾನಂದ ಸಂಜೀವಿನಿತೈಲ

ಈ ತೈಲವು ಮುರಿದ ಮೂಳೆಗಳ ನೋವು ಮತ್ತು ತಪ್ಪಿದ ಕೀಲುಗಳ ಉಳುಕು ನೋವುಗಳಿಗೂ ಸಕಲ ವಾಯುಗಳಿಗೂ ವಾಯುವಿನಿಂದ ನರಗಳು ಇಳಿದಿರುವುದು ವಾಯುಗಂಟು ಈ ನೋವುಗಳಿಗೆ ಸವರಲು ಉತ್ತಮ ಗುಣಕಾರಿ. 3 ಡ್ರಾಂ ಬಾಟ್ಲಿ 1 ಕ್ಕೆ 1—8—0 ರೂಪಾಯಿ.

ವಿವೇಕಾನಂದ ಸಂಜೀವಿ

ಶರೀರದ ಯಾವ ಭಾಗದ ಮೂಳೆಗಳು ಮುರಿದಿದ್ದರೂ, ಕೀಲುಗಳು ತಪ್ಪಿದ್ದರೂ ಈ ಕಾರಣದಿಂದ ಗಂಟುಕಟ್ಟಿದ್ದರೂ, ಮುರಿದ ಮೂಳೆಗಳನ್ನು ಸರಿಪಡಿಸುತ್ತದೆ. **ಇದೂ ಅಲ್ಲದೆ ಸಕಲ ವ್ಯಾಧಿಗಳಿಗೂ ಅಮೂಲ್ಯವಾದ ಔಷಧಿ** ನಮ್ಮಲ್ಲಿ ದೊರೆಯುತ್ತೆ.

3 ತೊಲ ಡಬ್ಬಿ 1 ಕ್ಕೆ 2—8—0 ರೂಪಾಯಿ.

ಕ್ಯಾಟ್ಲಾಕಿಗೆ ಬರೆದರೆ ಉಚಿತವಾಗಿ ಕಳಿಸುತ್ತೇವೆ.

ಪಂಡಿತ್ ಎಚ್. ಲಕ್ಷ್ಮಣರಾಜು ಅಂಡ್ ಬ್ರದರ್ಸ್,

[4—2] ಸೀತಾವಿಲಾಸ ಡಿಸ್ಪೆನ್ಸರಿ ಚಾಮರಾಜಪೇಟೆ, ಮೈಸೂರು.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರ ತರಿಸಿಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

5 M. C.

೧೯೩೨ ನೆಯ ಇಸವಿ ಮೇ ತಾ॥ ೨೩ ರಿಂದ ಮೇ ತಾ॥ ೨೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ ಅಂಗಿರಸನಾಮಸಂವತ್ಸರದ ವೈಶಾಖ ಬಹುಳ ಚೌತಿಯಿಂದ ವೈಶಾಖ ಬಹುಳ ದಶಮಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಷಭ ಮಾಸ
23	ಸೋಮ	ಚೌತಿ	52-36	ಪೂಷಾ	48-15	10
24	[1] ಮಂಗಳ	ಪಂಚ	49-56	ಉಷಾ	47-23	11
25	ಬುಧ	ಷಷ್ಠಿ	48-35	ಶ್ರವ	47-46	12
26	ಗುರು	ಸಪ್ತ	48-30	ಧನ	49-54	13
27	[2] ಶುಕ್ರ	ಅಷ್ಟ	49-36	ಶತ	52-13	14
28	ಶನಿ	ನವ	52-7	ಪೂಭಾ	55-26	15
29	ಭಾನು	ದಶ	60	ಉಭಾ	60	16

(1) ಮಳೆನಕ್ಷತ್ರ ರೋಹಿಣಿ ೧ ನೆಯ ಪಾದ. (2) ಮಳೆನಕ್ಷತ್ರ ರೋಹಿಣಿ ೨ ನೆಯ ಪಾದ.

ಮೈಸೂರು: [illegible]

REG. NO. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಸೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ರಜ್ಞನಕ್ಷತ್ರ ಮೋಹರಾಜೇಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂ ಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂ ನಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸ್ ೧೯೩೨ ನೆಯ ಇಸವಿ ಮೇ ತಾರೀಖು ೩೦ ನೆಯ ಸೋಮವಾರ [ಸಂಚಿಕೆ ೨೨

MYSORE SANDALWOOD OIL Distilled in GOVERNMENT FACTORIES

GUARANTEED B.P.P.J., & AM 4. P. STANDARDS.

PROVIDES

Excellent Base for the manufacture of Soaps, Perfumes, and other Toilet preparations of the Highest quality.

USED ALL THE WORLD OVER.

BUY A BOTTLE TO-DAY.

Available in Sealed Aluminium Bottles.

MYSORE GOVERNMENT SANDALWOOD OIL FACTORY, BANGALORE.

1 [60—46]

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇಂ.
ವೀರಶೈವ ಶಿವಪೂಜಾವಿಧಿ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿ	೦— ೮—೦	೦—೧೪—೦
ಷಟ್ಸ್ಥಲವಿದ್ಯಾ	೦— ೪—೦	೦— ೬—೦
ಚಾರುಶೀಲಚರಿತ್ರೆ	೦— ೫—೦	೦—೧೦—೦
ಹರಿಜಾತಿ	೦— ೪—೦	೦— ೬—೦
ವೃತಪಂಚಕ	೦— ೪—೦	೦— ೬—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರನಜನನ	೦— ೮—೦	೦—೧೩—೦
ಸಟೀಕ ಕರ್ನಾಟಕಶಬ್ದಮಂಜರಿ	೦— ೮—೦	೦—೧೩—೦
ಸಟೀಕ ಶತಕತ್ರಯ	೧— ೦—೦	೧— ೬—೦

೧೦೦೦ ರೂಪಾಯಿ ಇನಾಮು

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗಬೇಡಿರಿ.	**ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ** ರಜಿ] ವಜ್ರಾಂಗ ಸುಂದರಪಾಕದ. [ಷ್ಟರ	ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು ಇದ್ದ ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ ಶರಶರೀರ ತರುಣರಂತೆ ಕಾಮಚ್ಛಾ ಆಗುತ್ತದೆ. ಕೌಚಿಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ಒಂದು ಡಬ್ಬಿಗೆ ೫। ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳ್ಳೇಸು ಗಾತದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೇ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಟ್ಟಿಚಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಡಿಚಿಟ್ಟು ಆಗೋಣ, ಮುಡಿಚಿಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ಸಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ತೀವ್ರ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ ಮತ್ತು ಬಡತನಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂತಿ ಹತ್ತುವವೋ, ಇಂಥ ಬೇರೆ ಕಾರಣದಿಂದ ಸಂತತಿ ಇಚ್ಛಾ ಯಾರಿಗೆ ತೀರಿರುತ್ತದೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. ಶರೀರದಲ್ಲಿಯೂ ಸಂಸಾರ ಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆ ವೇಳೆಗೆ ಮುಡಿಚಿಟ್ಟು ಆಗುವದು ಸುರು ಇದ್ದು ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ [illegible] ಸುರು ಆಗುವದಿಲ್ಲ ಹೀಗೆ ಖಾತ್ರಿ ಅದೆ. ಪೂರ್ಣವಿಚಾರ ಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ ಒಂದು ಡಬ್ಬಿಗೆ ೬ ರೂ. ಟ. ಖ. ೮ ಆಣೆ. ಮತ್ತು ಆರೋಗದ ೪ ನೇ ದಿವಸ ೬೦ ಪ್ರತಿ ಹಣೆ [illegible] ಕಳುಹಿಸಬೇಕು. [illegible] ೧, ಗುಳಿಗೆ ಮಧ್ಯಾಹ್ನಕ್ಕೆ ೧, ಗುಳಿಗೆ ರಾತ್ರಿ [illegible] ೧ ಗುಳಿಗೆ [illegible]. ಪಥ್ಯ ಸಾದಾ. ಕೆಲವು ನಮ್ಮ ಕಡೆಗೆ ಇರುವ ಖಾತ್ರೀ [illegible] ತರಿಸಿಕೊಳ್ಳಿರಿ.

[60—28]

ಪತ್ತಾ ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ. ಎಂ. ಎಸ್. ಎಂ.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು

(Registerd Trade Mark)

ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—ಶಿರಶೂಲೆ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಚಿಟಿಕೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು, ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕಸಟ್ಟೆ ಕಳುಹಿಸಲಾರೆವು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಖರ್ಚು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[60—39] ಪೋ. ಬಾ. ೫೫೦, ಮದರಾಸು.

ಮೈಸೂರು ಸ್ಟಾರ್ ಸೆ ೧೯೩೨ ನೆಯ ಇಸವಿ ಮೇ ತಾರೀಖು ೩೦ ನೆಯ ಸೋಮವಾರ ೩

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಮೇ ತಾ|| ೩೦ ನೆಯ ಸೋಮವಾರ.

EFFICIENCY IS IT!

Of all the journals in the State the Thai Nadu of Bangalore has sought to bestow compliments on the worthy President of the Mysore Municipal Council and that through the pen of Mr. M. Venkatakrishnayya. A compliment from that journal usually means condemnation Mr. Venkatakrishnayya is old almost bordering on senility and one need not take him too seriously. He speaks of Rama's virtues becoming manifest only with a Ravana to fight against. So are Mr. Rama Iyer's virtues becoming manifest with the presence of Ravanas in the City. We have had occasion to point out in our previous issues about the ways of this President in creating his rump in the Council, and in his clannish instincts having full sway. More recently we had occasion to point out the insult he had offered to a nominated member Mr. T. S. Alikhan by telling him that the interests of the rate-payers were no concern of his, which was a sufficient insult to Government which nominated him. Our Government of course is evidently so absorbed in various matters that it can hardly concern itself with these small affairs. In fact, it is very doubtful if the Government is at all serious in developing Local Self-Government and securing the co-operation of the people. It dumps an Official President on the Council, and sits silent over his vagaries. The last Municipal meeting held on Saturday the 28th May 1932 was very interesting and not a little amusing. In the first place, the meeting was attended by Mr. T. S. Alikhan who had not attended the meeting since the Alikhan-Rama Iyer controversy had begun. It appears ever since Mr. Alikhan had refused to withdraw his remarks on the circulation memo, the President had not sent him the papers for circulation or even notice of the agenda, as he himself stated in his note. This note of the President was approved by the Council and one would have expected that till Mr. Alikhan withdrew the remarks the agenda and papers would not be sent to Mr. Alikhan. But the high-placed President made a big climb-down and it would appear that he sent round both the agenda and the papers to Mr. Alikhan. Evidently the President thought that discretion was the better part of valour. If he had not sent the agenda Mr. Alikhan would not attend the meeting for the third time and then the removal of his name for non-attendance would become necessary. The President would hardly summon the courage to take the step when he himself had failed to send out agenda and business as required by the Regulation. The most important subject that came up for discussion was the failure of the Executive to execute a decree obtained against a toll-contractor for Rs. 3040 in time and allowing it to get time-barred. The President discovered this ommission too late and as usual the result was a note before the Council. The President placed his proposition laying the blame mostly at the door of the ex-Revenue Officer, Mr. Hassan Ali, and his office clerks. Mr. H. C. Dasappa questioned whether there was not the liability of the President and his office in the matter. He pointed out that the responsibility as per S 24 of the Regulation and Section of chapter IV of the Rules and the Bye-laws vested in the President and his Head Office as well. It was pointed out that the Municipal Manual made it obligatory on the part of the Revenue Section to maintain the register of suits and it was the procedure also that the Revenue Officer should see to the suits. But one would like to ask a few questions. Whether it is not the duty of the President to watch over the financial administration of the Municipal Council? Have not the bye-laws provided for the powers of S 164 of the Regulation relating to suits being exercised by the President? Even if the Revenue Section was responsible for maintaining the suit register, was it not the duty of the President who is a full time paid officer to check the same? Did the President see that the audit objections relating to the particular suit were properly answered during all the three years? Did not the President see that the administration Reports during the period prepared under his own direction contained the piece of information that the suit in particular was decreed? Was it not a fact that the file of papers relating to the suit remained in the Head Office and was not sent to the Revenue Section during the period in question? It may be the fault of the clerks in not bringing it to the notice of the higher offiicers. But what are the higher officers for if they cannot check the work of their subordinates and supervise their work? Whose duty was it to see that the audit objections were answered properly? When the administration reports contained the information that the suit was decreed and not pending was it not easily possible for the very President to know the answer for the audit objection? How can the President find time to look into these questions about finances when he is so busy about carrying on a merciless campaign of prosecutions for nuisance offences. He could find time to launch literally hundreds of prosecutions for nuisance offences using the powers under S 161 of the regulation, but he could not see that his powers under S 164 were being properly exercised. All this is Mr. Rama Iyer's efficiency of which Mr. Venkatakrishnayya talks in Thai Nadu. The blame is laid only on the clerks and the Revenue Officers and none on those on whom the responsibility lay and who should have supervised the working of the sections and who neglected to do so. Yet such efficencey thrives. One wonders whether one should wonder or not at such a state of affairs.

ಇದು ಕಾರ್ಯದಕ್ಷತೆಯ ಪ್ರಭಾವವೇ?

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾದ ಮ|| ಟಿ. ಜಿ. ರಾಮಯ್ಯರ್‌ರವರು ರಾಮಾವತಾರವೇ, ಇಂತಹವರನ್ನು ಪುರಪಾಲಕ ಸಂಘಾಧ್ಯಕ್ಷರನ್ನಾಗಿ ಪಡೆದಿರುವುದು ರಾಜಧಾನಿಯ ರೇಟ್‌ಪೇಯರುಗಳ ಪುಣ್ಯವಿಶೇಷವೇ ಎಂದು ಮೊದಲಾಗಿ ಮ|| ಎಂ. ವೆಂಕಟಕೃಷ್ಣಯ್ಯನವರು ಬರೆದಿರುವ ಲೇಖನವು ಬೆಂಗಳೂರು ತಾಯಿನಾಡು ಪತ್ರಿಕೆಯಲ್ಲಿ ಪ್ರಕಟವಾಗಿದೆ. ತಾಯಿನಾಡಿನ ಅಭಿನಂದನವೆಂದರೆ ಸಾಮಾನ್ಯವಾಗಿ ಖಂಡನೆಯೆಂತಲೇ ಭಾವನೆ. ಒಬ್ಬ ರಾವಣನ ದೆಶೆಯಿಂದ ರಾಮನ ಸದ್ಗುಣಗಳು ಪ್ರಕಾಶಕ್ಕೆ ಬಂದುವು. ತದ್ವತ್ ಮ|| ರಾಮಯ್ಯರ್‌ರವರ ಅಸಾಧಾರಣ ಗುಣಗಳು ರಾಜಧಾನಿಯಲ್ಲಿರುವ ಅನೇಕ ರಾವಣರುಗಳ ದೆಶೆಯಿಂದ ಪ್ರಕಾಶಕ್ಕೆ ಬಂದಿರುತ್ತವೆ ಎಂದು ಮೊದಲಾಗಿ ಮ|| ವೆಂಕಟಕೃಷ್ಣಯ್ಯನವರು ಹೊಗಳಿ ಮ|| ಅಯ್ಯರ್‌ರವರನ್ನು ಮುಗಿಲಿಗೇರಿಸಿದ್ದಾರೆ. ತಮಗೆ ಬೇಕಾದವರು ಲೋಕಕಂಟಕರಾಗಿದ್ದರೂ ಅವರನ್ನು ರಾಮನಿಗೂ ನಳ ಹರಿಶ್ಚಂದ್ರಾದಿಗಳಿಗೂ, ತಮಗೆ ಬೇಡವಾದವರು ಸತ್ಯಸಂಧರಾಗಿದ್ದರೂ ಅವರನ್ನು ಸೈತಾನನಿಗೂ ಪಾಪಿಷ್ಠರಿಗೂ ಹೋಲಿಸಿ ಭೂಷಿಸಿ ದೂಷಿಸುವುದು ಮ|| ವೆಂಕಟಕೃಷ್ಣಯ್ಯನವರ ಜನ್ಮಸಿದ್ಧವಾದ ಗುಣವಾಗಿದೆ. ಈಗಂತೂ 85 ವರ್ಷ ವಯಸ್ಸಾಗಿರುವುದರಿಂದ ಅವರ ಅರುಳು ಮರಳು ತನದ ಮಾತಿಗೆ ಬೆಲೆಯೇ ಇಲ್ಲ. ಮ|| ಅಯ್ಯರ್‌ರವರು ಕೌನ್ಸಿಲು ಮೆಂಬರುಗಳಲ್ಲಿ ಒಡಕನ್ನು ಹುಟ್ಟಿಸಿ ಬಹು ಜನರನ್ನು ವಶಪಡಿಸಿಕೊಂಡು ನ್ಯಾಯವಿರುದ್ಧವಾದ ಕಾರ್ಯವನ್ನು ಸಹ ಸಾಧಿಸುತ್ತಿರುವುದನ್ನು ಅನೇಕ ಸಂದರ್ಭಗಳಲ್ಲಿ ನಾವು ವ್ಯಕ್ತಪಡಿಸಿರುವೆವು. ಪ್ರಭುತ್ವದವರಿಂದ ನಾಮಕರಣರಾಗಿರುವ ಮ|| ಟಿ. ಎಸ್. ಅಲಿಖಾನರಿಗೂ ಪ್ರೆಸಿಡೆಂಟರಿಗೂ ಲಿಖಿತಮೂಲಕವಾಗಿ ನಡೆದ ಚರ್ಚೆಯಲ್ಲಿ, ಮ|| ಖಾನರವರು ಕಂದಾಯದಾರರ ಪ್ರತಿನಿಧಿಗಳಲ್ಲವೆಂದು ಹೇಳಿ ಅವರನ್ನು ಅವಮಾನಪಡಿಸಿ ತನ್ಮೂಲಕ ಅವರನ್ನು ನಿಯಮಿಸಿದ ಪ್ರಭುತ್ವದವರನ್ನು ಸಹ ಅವಮಾನಪಡಿಸಿರುವ ವಿಚಾರವನ್ನು ಈ ಪತ್ರಿಕಾವಾಚಕರ ಅವಗಾಹನೆಗೆ ತಂದಿರುತ್ತೇವೆ. ನಮ್ಮ ಪ್ರಭುತ್ವದವರು ಕಾರ್ಯಗೌರವದಿಂದ ಇಂತಹ ಸಣ್ಣ ವಿಚಾರಗಳಿಗೆ ಗಮನಕೊಡಲು ವ್ಯವಧಾನವಿರುವುದಿಲ್ಲವಲ್ಲದೆ ಸ್ಥಾನಿಕ ಸ್ವರಾಜ್ಯಸ್ಥಾಪನಪದ್ಧತಿಯನ್ನು ಅಭಿವೃದ್ಧಿಗೊಳಿಸಿ ಪ್ರಜೆಗಳ ಸಹಕಾರವನ್ನು ಹೊಂದಬೇಕೆಂಬ ಕಾಂಕ್ಷೆಯು ಪ್ರಭುತ್ವದವರಿಗಿರುವುದು ಸಂಶಯವಾಗಿದೆ. ಸರ್ಕಾರಿಯಧಿಕಾರಿಯನ್ನು ಕೌನ್ಸಿಲಿನ ಪ್ರೆಸಿಡೆಂಟರನ್ನಾಗಿ ನಿಯಮಿಸಿ ಅವರು ಮಾಡುವ ಮನಸ್ವೇಕಾರಬಾರನ್ನು ಗಮನಕ್ಕೆ ತಂದುಕೊಳ್ಳುತ್ತಿಲ್ಲ. ಕಳೆದ ಶನಿವಾರ ನೆರೆದಿದ್ದ ಮ್ಯು|| ಕೌನ್ಸಿಲ್ ಮೀಟಿಂಗಿನಲ್ಲಿ ಕೆಲ ವಿಚಿತ್ರ ಸಂಗತಿಗಳು ಜರುಗಿದುವು. ಮ|| ಅಲಿಖಾನರವರು ತಮಗೂ ಪ್ರೆಸಿಡೆಂಟರಿಗೂ ಚರ್ಚೆ ನಡೆದಾರಭ್ಯ ೨ ಮೀಟಿಂಗುಗಳಿಗೆ ಬಾರದಿದ್ದು ಈಸಲದ ಮೀಟಿಂಗಿಗೆ ಬಂದಿದ್ದರು. ಮೀಟಿಂಗಿಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ಕೆಲ ದಿವಸಗಳ ಮುಂಚಿತವಾಗಿ ಕಳುಹಲಾಗದಿದ್ದರೆ ಅವುಗಳನ್ನು ಪ್ರೆಸಿಡೆಂಟರೇ ಇಟ್ಟುಕೊಳ್ಳಬಹುದೆಂದು ಮ|| ಅಲಿಖಾನರವರು ಬರೆದಿರುವುದನ್ನು ವಾಪಸ್ ತೆಗೆದುಕೊಳ್ಳುವವರೆಗೂ ಮೀಟಿಂಗಿನ ಕಾರ್ಯಕ್ರಮದ ಪಟ್ಟಿಯೂ ಕಾಗದಪತ್ರಗಳೂ ಅವರಿಗೆ ಕಳುಹಲ್ಪಡುವುದಿಲ್ಲವೆಂದು ಪ್ರೆಸಿಡೆಂಟರು ಬರೆದಿದ್ದ ಅಂಶವು ಕೌನ್ಸಿಲಿನಲ್ಲಿ ಅನುಮೋದಿತವಾಗಿದ್ದಿತು. ಮ|| ಅಲಿಖಾನರವರು ತಮ್ಮ ವಾಕ್ಯವನ್ನು ವಾಪಸ್ ತೆಗೆದುಕೊಳ್ಳದಿದ್ದಾಗ್ಗೂ ಈ ವೇಳೆ ಕಾಗದಪತ್ರಗಳು ಅವರಿಗೆ ಕಳುಹಲ್ಪಟ್ಟಿದ್ದುದನ್ನು ನೋಡಿದರೆ ಶಿಖರದ ಮೇಲಿದ್ದ ಪ್ರೆಸಿಡೆಂಟರು ಕೆಳಕ್ಕಿಳಿದಂತೆ ತೋರುತ್ತದೆ. ಈ ವೇಳೆ ಕಾಗದಪತ್ರಗಳು ಮ|| ಅಲಿಖಾನರವರಿಗೆ ಕಳುಹಲ್ಪಡದಿದ್ದಲ್ಲಿ ಅವರು ಕಳೆದ ಮೀಟಿಂಗಿಗೂ ಬರಲಿಕ್ಕಾಗುತ್ತಿರಲಿಲ್ಲ ಮತ್ತು ಇದರಿಂದ ಮೆಂಬರತನವನ್ನೇ ಕಳೆದುಕೊಳ್ಳಬೇಕಾಗಿದ್ದಿತು. ಪ್ರೆಸಿಡೆಂಟರು ತಮ್ಮ ವರ್ತನವು ಅಕ್ರಮವೆಂದು ತಿಳಿದುಕೊಂಡು ತಾವಾಗಿಯೇ ಕಾಗದಪತ್ರಗಳನ್ನು ಕಳುಹಿಸಿರಬೇಕೆಂದು ತೋರುತ್ತದೆ. ಒಬ್ಬ ಕಂಟ್ರಾಕ್ಟರಿನಿಂದ ಬರಬೇಕಾಗಿದ್ದ 3040 ರೂ. ಗಳಿಗಾಗಿ ಕೋರ್ಟಿನಲ್ಲಿ ಪಡೆದುಕೊಂಡಿದ್ದ ಡಿಕ್ರಿಯನ್ನು ಜಾರಿಮಾಡಿಸದೆ ಹಣವನ್ನು ಕಳೆದುಕೊಂಡ ವಿಚಾರವು ಮುಖ್ಯ ಚರ್ಚನೀಯಾಂಶವಾಗಿದ್ದಿತು. ಈ ಲೋಪವನ್ನು ಪ್ರೆಸಿಡೆಂಟರು ಡಿಕ್ರಿಯ 3 ವರ್ಷಕಾಲಾವಧಿಯು ಕಳೆದ ಅನಂತರ ಕಂಡುಹಿಡಿದು ಇದಕ್ಕೆ ರೆವಿನ್ಯೂ ಆಫೀಸರಾಗಿದ್ದ ಮ|| ಹಸೇನಲಿಯವರ ಮತ್ತು ಅವರ ಅಧೀನ ಉದ್ಯೋಗಸ್ಥರ ಅಜಾಗರೂಕತೆಯೇ ಕಾರಣವಾದುದರಿಂದ ಅವರುಗಳು ಮೇಲ್ಕಂಡ ಮೊಬಲಗನ್ನು ಹಂಚಿಕೆಯ ಪ್ರಕಾರ ಕೊಡಬೇಕೆಂದು ಗೊತ್ತುಮಾಡಿ ಕೌನ್ಸಿಲಿನ ಅನುಮೋದನೆಗಾಗಿಟ್ಟಿದ್ದರು. ಈ ವಿಚಾರದಲ್ಲಿ ಮ್ಯುನಿಸಿಪಲ್ ರೆಗ್ಯುಲೇಷನ್ ಮತ್ತು ಬೈಲಾ ಪ್ರಕಾರ ಪ್ರೆಸಿಡೆಂಟರು ಜವಾಬ್ದಾರರೆಂದು ಮ|| ಎಚ್. ಸಿ. ದಾಸಪ್ಪನವರು ವಾದಿಸಲಾಗಿ, ಮ್ಯುನಿಸಿಪಲ್ ಮ್ಯಾನ್ಯುಯಲ್ ಪ್ರಕಾರ ಕೇಸುಗಳ ರಿಜಿಸ್ಟರನ್ನಿಟ್ಟು ಅವುಗಳ ನಡವಳಿಕೆ ಮತ್ತು ಹಣವಸೂಲಿಯನ್ನು ಮಾಡುವುದು ರೆವಿನ್ಯೂ ಆಫೀಸರಿಗೆ ಸಂಬಂಧಪಟ್ಟಿರುವುದರಿಂದ ಪ್ರೆಸಿಡೆಂಟರು ಕೇಸುಗಳ ಸಂಬಂಧವಾದ ಲೋಪದೋಷಗಳಿಗೆ ಜವಾಬ್ದಾರರಲ್ಲವೆಂದು ಉತ್ತರವಿತ್ತರು. ಈ ಉತ್ತರವನ್ನು ಪ್ರೆಸಿಡೆಂಟರ ಪ್ರೀತಿವಿಶ್ವಾಸಗಳಿಗೆ ಪಾತ್ರರಾಗಿರುವ ಮೆಂಬರುಗಳು ರೆಗ್ಯುಲೇಷನ್ ಮತ್ತು ಬೈಲಾಗಳ ಸೆಕ್ಷನ್ನುಗಳಿಗೆ ವ್ಯಾಖ್ಯಾನಗಳನ್ನು ಮಾಡಿ ಪುಷ್ಟೀಕರಿಸಿ ಮ|| ಹಸೇನಲಿಯವರು, ಈಗಿನ ರೆವಿನ್ಯೂ ಆಫೀಸರು ಮತ್ತು ಅವರ ಕೈಕೆಳಗಿನ ಉದ್ಯೋಗಸ್ಥರು 3040 ರೂ. ಗಳನ್ನು ಪ್ರೆಸಿಡೆಂಟರು ಹಂಚಿರುವ ಪ್ರಕಾರ ಭರ್ತಿಮಾಡಿಕೊಡಬೇಕೆಂದು ನಿರ್ಧರಿಸಿದರು. ಡಿಕ್ರಿಯ 3 ವರ್ಷ ಕಾಲಾವಧಿಯು ಪೂರೈಸುವವರೆಗೂ ಅದು ಜಾರಿಗೆ ತರಲ್ಪಡಲಿಲ್ಲವೆಂಬುದು ಪ್ರೆಸಿಡೆಂಟರವರ ಗಮನಕ್ಕೆ ಬರಲಿಲ್ಲವೆ? ಒಂದುವೇಳೆ ಅದರ ಲೋಪಕ್ಕೆ ರೆವಿನ್ಯೂ ಆಫೀಸರೂ ಅವರ ಕೈಕೆಳಗಿನವರೂ ಜವಾಬ್ದಾರರಾಗಿದ್ದರೂ ಅವರ ಕರ್ತವ್ಯ ಲೋಪವನ್ನು ಪ್ರೆಸಿಡೆಂಟರು ಸಕಾಲದಲ್ಲಿ ವಿಚಾರಿಸಿ ತಕ್ಕ ಎಚ್ಚರಿಕೆಯನ್ನು ಕೊಡತಕ್ಕದ್ದು ಅವರ ಕರ್ತವ್ಯವಲ್ಲವೆ? ಲೆಕ್ಕಪರಿಶೋಧಕರು ಈ ಲೋಪವಿಚಾರವಾಗಿ ಮಾಡಿದ ಆಕ್ಷೇಪಕ್ಕೆ ತಕ್ಕ ಸಮಾಧಾನ ಕೊಡಲ್ಪಟ್ಟಿದೆಯೋ ಇಲ್ಲವೇ ಎಂಬುದನ್ನು ಪ್ರೆಸಿಡೆಂಟರು ವಿಚಾರಿಸಿದರೆ? ತಮ್ಮ ಸೂಚನೆಯ ಪ್ರಕಾರ ಸಿದ್ಧಗೊಳಿಸಲ್ಪಡುವ ವರ್ಷಾಡಳಿತದ ವರದಿಗಳಲ್ಲಿ ಈ ಡಿಕ್ರಿ ವಿಚಾರವು ಸೇರಿಸಲ್ಪಟ್ಟಿದ್ದಿತೇ ಇಲ್ಲವೇ ಎಂಬುದನ್ನು ಪ್ರೆಸಿಡೆಂಡರು ಗಮನಿಸಿಲ್ಲವೆ? ಈ ಕೇಸಿಗೆ ಸಂಬಂಧಪಟ್ಟ ರಿಕಾರ್ಡೆಲ್ಲವೂ ಕಾಲಾತೀತವಾಗುವವರೆಗೂ ರೆವಿನ್ಯೂ ಆಫೀಸರಿಗೆ ಕಳುಹಲ್ಪಡದೆ ಪ್ರೆಸಿಡೆಂಟರ ಆಫೀಸಿನಲ್ಲೇ ನಿಲ್ಲಿಸಿಕೊಳ್ಳಲ್ಪಟ್ಟಿದ್ದುದು ಸುಳ್ಳೆ? ಈ ವಿಚಾರವನ್ನು ಮೇಲ್ಪಟ್ಟ ಅಧಿಕಾರಿಗಳ ಗಮನಕ್ಕೆ ತರಲ್ಪಡದಿದ್ದುದು ಕ್ಲಾರ್ಕುಗಳ ತಪ್ಪಾಗಿರಬಹುದಾದರೂ ಅದನ್ನು ವಿಚಾರಿಸಿ ಕ್ರಮಪಡಿಸತಕ್ಕದು ಮೇಲ್ಪಟ್ಟ ಅಧಿಕಾರಿಗಳ ಕರ್ತವ್ಯವಲ್ಲವೆ? ಹೇಸಿಗೆಯ ಸಂಬಂಧವಾಗಿ ಜನರನ್ನು ನಿರ್ದಾಕ್ಷಿಣ್ಯದಿಂದ ಪ್ರಾಸೆಕ್ಯೂಷನ್ ಮಾಡುವ ಕಾರ್ಯಗೌರವದಲ್ಲಿ ಹಣಕಾಸಿನ ಕಡೆಗೆ ಗಮನಕೊಡಲು ಪ್ರೆಸಿಡೆಂಟರಿಗೆ ವ್ಯವಧಾನವೆಲ್ಲಿತಾನೇ ಇದ್ದೀತು! ಮ|| ರಾಮಯ್ಯರ್‌ರವರ ಇಂತಹ ಕಾರ್ಯದಕ್ಷತೆಯನ್ನೇ ಮ|| ವೆಂಕಟಕೃಷ್ಣಯ್ಯನವರು ತಾಯಿನಾಡುಪತ್ರಿಕೆಯಲ್ಲಿ ಪ್ರಶಂಸಿಸಿರುವುದು. ಲೋಪದೋಷಗಳಿಗೆಲ್ಲ ಕ್ಲಾರ್ಕುಗಳು ಹೊಣೆಯಲ್ಲದೆ ಅವುಗಳನ್ನು ವಿಚಾರಿಸಿ ಸರಿಪಡಿಸತಕ್ಕ ಅಧಿಕಾರಿಗಳ ಅನಾದರಣೆಯು ಮಾತ್ರ ಹೊಣೆಯಲ್ಲವಂತೆ! ಇಂತಹ ಕಾರ್ಯದಕ್ಷತೆಗೇನೇ ಜಯಪ್ರಾಪ್ತಿ.

ಒಳದೇಶದ ವೃತ್ತಾಂತಗಳು

ನೆನ್ನೆಯ ಸಾಯಂಕಾಲ ಶ್ರೀಮನ್ಮಹಾರಾಜರವರ ಸ್ವಾರಿಯು ಊದಕಮಂಡಲದಿಂದ ರಾಜಧಾನಿಗೆ ಚಿತ್ತೈಸಿತು.

ಈ ದಿವಸ ಶ್ರೀಮದ್ಯುವರಾಜರವರ ವರ್ಧಂತ್ಯುತ್ಸವ ನಿಮಿತ್ತವಾಗಿ ರಾಜಧಾನಿಯ ಎಲ್ಲಾ ಕೋರ್ಟು ಕಚೇರಿಗಳಿಗೂ ಸ್ಕೂಲುಗಳಿಗೂ ರಜವು ಕೊಡಲ್ಪಟ್ಟಿರುವುದು.

ಮದರಾಸ್ ಮತ್ತು ಸದರನ್ ಮರಾಟಾ ರೈಲ್ವೆಯಲ್ಲಿ ಟ್ರಾಫಿಕ್ ಮ್ಯಾನೇಜರಾಗಿದ್ದ ಮಿ|| ಎ. ಸಿ. ರೆಂಡಾಲ್‌ರವರು ಮೈಸೂರು ರೈಲ್ವೆಗಳ ಲೋಕೋ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ರಾಜಧಾನಿಯ ಸ್ವದೇಶೀವಸ್ತು ಪ್ರದರ್ಶನ ಸಂಘದವರು ನೆನ್ನೆಯ ದಿವಸ ಸಾಯಂಕಾಲ ಸ್ವದೇಶಿ ದಿನಾಚರಣೆಯನ್ನು ನೆರವೇರಿಸಿದರು ಮತ್ತು ಬರುವ ಜೂನ್ ತಾ|| 11ರಿಂದ ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲ್ ಕಟ್ಟಡದಲ್ಲಿ ಸ್ವದೇಶೀ ವಸ್ತುಪ್ರದರ್ಶನವನ್ನು ನಡೆಸಬೇಕೆಂದು ನಿರ್ಧರಿಸಿರುವರು.

ರಾಜಧಾನಿಯ ಎಕ್ಸ್‌ಮ್ಯುನಿಸಿಪಲ್ ಕೌನ್ಸಿಲರಾದ ಮ|| ಎಂ. ಮಾದಪ್ಪನವರು ತಮ್ಮ ಇಬ್ಬರು ಕುಮಾರಿಯರ ವಿವಾಹಮಹೋತ್ಸವವನ್ನು ಆಚೇವಾರ ಬಹಳ ವೈಭವದಿಂದ ನೆರವೇರಿಸಿ ಅನ್ನದಾನವನ್ನು ಯಥೇಚ್ಛವಾಗಿ ಮಾಡಿದರು. ಈ ಲಗ್ನಗಳಿಗೆ ದೊಡ್ಡ ಮನುಷ್ಯರುಗಳು ಆಹ್ವಾನಿಸಲ್ಪಟ್ಟಿದ್ದು ಸತ್ಕರಿಸಲ್ಪಟ್ಟರು.

ಮೈಸೂರು ವೃತ್ತಪತ್ರಿಕಾ ಕರ್ತರ ಸಂಘದ ಆರಂಭೋತ್ಸವವು ಇದೇ ಗುರುವಾರ ಬೆಂಗಳೂರು ಇಂಟರ್‌ಮಿಡಿಯೇಟ್ ಕಾಲೇಜಿನಲ್ಲಿ ಶ್ರೀಮದ್ಯುವರಾಜರವರಿಂದ ನೆರವೇರಿಸಲ್ಪಟ್ಟು ಮದ್ರಾಸು ಹಿಂದು ಪತ್ರಿಕೆಯ ಪ್ರಸಿದ್ಧ ಸಂಪಾದಕರಾದ ಮ|| ಎ. ರಂಗಸ್ವಾಮಯ್ಯಂಗಾರ್, ಬಿ.ಎ., ಬಿ.ಎಲ್., ರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ರಾಜಧಾನಿಯಲ್ಲಿ ಈಚೆಗೆ ಮಳೆಯಿಲ್ಲದೆ ಬರೀ ಮೋಡವಾಡುತ್ತಿರುವುದರಿಂದ ಕೊಂಚ ದಗೆಯುಂಟಾಗಿದೆ. ರೋಗಾದಿಗಳ ಬಾಧೆಯೇನೂ ಇಲ್ಲ. ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವಕ್ಕಾಗಿ ಸರ್ಕಾರಿ ಕಟ್ಟಡಗಳಿಗೆ ಸುಣ್ಣ ಬಣ್ಣವೂ ಮಾರ್ಗಗಳನ್ನು ಸರಿಪಡಿಸುವಿಕೆಯೂ ಸಡಗರದಿಂದ ನಡೆಯುತ್ತಿವೆ. ಕುದುರೆ ಜೂಜಿನವರು ನಿತ್ಯದಲ್ಲೂ ಬರುತ್ತಿದ್ದಾರೆ.

ಈಗ ಬೆಂಗಳೂರಿಗೆ ಸಪತ್ನೀಕರಾಗಿ ಬಂದಿರುವ ಹೈದರಾಬಾದಿನ ಯುವರಾಜರೂ ಅವರ ಸಹೋದರರೂ ಬರುವ ಜೂನ್ ತಾ|| 14 ರಲ್ಲಿ ನಡೆಯುವ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವಕ್ಕೆ ಆಹ್ವಾನಿಸಲ್ಪಟ್ಟಿರುವುದರಿಂದ ಬರುವ ಜೂನ್ ತಾ|| 12ರಲ್ಲಿ ರಾಜಧಾನಿಗೆ ಬಂದು ವಸಂತಮಹಲಿನಲ್ಲಿ ಅತಿಥಿಗಳಾಗಿದ್ದುಕೊಂಡು ಶಿವನಸಮುದ್ರದ ಜಲಪಾತ ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನು ಪರಾಮರ್ಶಿಸುವವರಾಗಿರುವರು.

ಬರುವ ಪ್ರಜಾಪ್ರತಿನಿಧಿಸಭೆಯಲ್ಲಿ ಸದಸ್ಯರುಗಳ ಅವಗಾಹನೆಗೆ ತರಲ್ಪಡಲಿಕ್ಕೆ ಸಿದ್ಧಗೊಳಿಸಲ್ಪಟ್ಟಿರುವ ಸಂಸ್ಥಾನದ 1932-33 ನೆಯ ವರ್ಷದ ಆಯವ್ಯಯಪಟ್ಟಿಯಿಂದ 352·72 ಲಕ್ಷ ರೂ. ಉತ್ಪನ್ನವೂ 362·60 ಲಕ್ಷ ವ್ಯಯವೂ ಆಗಿ 9·88 ಲಕ್ಷ ರೂ. ನಷ್ಟಸಂಭವಿಸುವುದಾಗಿ ವ್ಯಕ್ತವಾಗುತ್ತದೆ. ಪ್ರಸಕ್ತ ವರ್ಷದಲ್ಲಿ 379·82 ಲಕ್ಷ ರೂ. ಉತ್ಪನ್ನವಾಗುತ್ತದೆಂದು ನಿರೀಕ್ಷಿಸಲ್ಪಟ್ಟಿದ್ದುದಕ್ಕೆ 348·83 ಲಕ್ಷ ರೂ. ಉತ್ಪನ್ನವಾಗಿ 367.40 ಲಕ್ಷ ರೂ. ವ್ಯಯವಾದುದರಿಂದ 18.57 ಲಕ್ಷ ರೂ. ಕಡಿಮೆ ಬಂದಿರುತ್ತದೆ.

ಕಳೆದ ವಾರ ಬೆಂಗಳೂರು ರೈಲ್ವೆಸ್ಟೇಷನ್ನಿನಿಂದ ರಾತ್ರಿ 2·30 ಘಂಟೆಗೆ ಹೊರಟ ಎಕ್ಸ್‌ಪ್ರೆಸ್ ರೈಲು ಬಂಡಿಯು ಸ್ಟೇಷನ್ನಿನಿಂದ ೨ ಮೈಲು ದೂರದಲ್ಲಿರುವ ಲೆವಲ್ ಕ್ರಾಸಿಂಗ್ ಬಳಿ ಬಂದ ಸಮಯಕ್ಕೆ ಸರಿಯಾಗಿ ಒಬ್ಬ ಮನುಷ್ಯನು ಒಂದು ಕೋಣವನ್ನು ಓಡಿಸಿಕೊಂಡು ಇಂಜನ್ನಿನ ಮುಂಗಡೆ ಬಂದನು. ಡ್ರೈವರು ಬ್ರೇಕನ್ನು ಹಾಕಿ ಬಂಡಿಯನ್ನು ನಿಲ್ಲಿಸುವಷ್ಟರೊಳಗೆ ಕೋಣ ಇಂಜನ್ನಿಗೆ ಸಿಕ್ಕಿ ಸತ್ತುಹೋಯಿತು ಮತ್ತು ಅವನನ್ನು ಅಟ್ಟಿಕೊಂಡು ಬಂದವನಿಗೆ ಘೋರ ಅಪಾಯ ಸಂಭವಿಸಿತು. ಅವನನ್ನು ಅದೇ ಬಂಡಿಯಲ್ಲಿ ಹಾಕಿಕೊಂಡು ಬೆಂಗಳೂರಿಗೆ ಹಿಂದಿರುಗಿ ಹೋಗಿ ಆಸ್ಪತ್ರೆಗೆ ಸಾಗಿಸಿದರು.

ರಾಜಧಾನಿಯ ಒಂದನೇ ಮುನ್ಸೀಫರಾದ ಮ|| ಬಿ. ರಾಮಣ್ಣನವರ ದ್ವಿತೀಯ ಕುಮಾರ ಮ|| ಬಿ. ಆರ್. ವೆಂಕಟವರದನ್‌ರವರಿಗೆ ಓರಿಯಂಟಲ್ ಲೈಫ್ ಇನ್ಷೂರೆನ್ಸ್ ಕಂಪೆನಿ ಏಜಂಟರಾದ ಮ|| ಬಿ. ಶ್ರೀನಿವಾಸಯ್ಯಂಗಾರ್ಯರ ಮೊಮ್ಮಗಳು ಚಿ|| ಸೌ|| ಸುನಂದಾಯವರು ಕೊಡಲ್ಪಟ್ಟು ವಿವಾಹ ಮಹೋತ್ಸವವು ನೆನ್ನೆಯ ದಿವಸ ಬೆಂಗಳೂರು ಶಂಕರಪುರದಲ್ಲಿ ಬಹಳ ವೈಭವದಿಂದ ನಡೆದಿತು. ದಿವಾನರು ಕೌನ್ಸಿಲರುಗಳೇ ಆದಿಯಾಗಿ ಸರ್ಕಾರಿಯಧಿಕಾರಿಗಳು, ಲಾಯರುಗಳು, ಮ್ಯುನಿಸಿಪಲ್ ಕೌನ್ಸಿಲರುಗಳು ಮತ್ತು ಇತರ ದೊಡ್ಡ ಮನುಷ್ಯರುಗಳು ಮಹೋತ್ಸವಕ್ಕೆ ದಯಮಾಡಿಸಿ ವಧೂವರರ ಶ್ರೇಯಸ್ಸನ್ನು ಕೋರಿ ಫಲಪುಷ್ಪವನ್ನು ಸ್ವೀಕರಿಸಿ ಬಂದರು. ನೂತನ ದಂಪತಿಗಳಿಗೆ ಸಕಲ ಸನ್ಮಂಗಳವಾಗಲೆಂದು ಹಾರೈಸುತ್ತೇವೆ.

ಕಳೆದ ತಾ|| 20 ನೆಯ ಶುಕ್ರವಾರ ಬೆಂಗಳೂರು ಮಲ್ಲೇಶ್ವರವಾಸಿ 30 ವರ್ಷ ವಯಸ್ಸಿನ ಮ|| ಅನಂತಕೇಶವಮೂರ್ತಿ, ಬಿ. ಎಸ್‌ಸಿ., ಬಿ.ಟಿ. ಯವರು ಅಂಗಾರಕದ್ರಾವಕದೊಡನೆ ಮೈಲುತುತ್ತ ಟರ್ಪನ್ಟೈನ್ ಮಿಶ್ರಮಾಡಿ ಸೇವಿಸಿ ವಾಂತಿಮಾಡಿ ಆಸ್ಪತ್ರೆಯಲ್ಲಿ ಚಿಕಿತ್ಸೆಮಾಡಲ್ಪಟ್ಟಾಗ್ಗೂ ಗುಣಹೊಂದದೆ ವಿಧಿವಶರಾದರು. ಇವರಿಗೆ 18 ವರ್ಷ ವಯಸ್ಸಿನ ಹೆಂಡತಿಯಿರುವಳು. ಕಳೆದ 7 ವರ್ಷಗಳಿಂದಲೂ ಯಾವ ಉದ್ಯೋಗವು ದೊರೆಯದೆಯೂ ಈಗಿನ ಕತ್ತರಿಯಪ್ರಯೋಗದಿಂದಾದರೂ ಉದ್ಯೋಗ ದೊರೆಯುವ ನಿರೀಕ್ಷಣೆಯೂ ಇಲ್ಲದಿರುವುದರಿಂದ ಜೀವನಯಾತ್ರೆ ನಡೆಸಲು ಯತ್ನವಿಲ್ಲದೆ ಆತ್ಮಹತ್ಯೆಗೆ ಪ್ರಯತ್ನಿಸಿದೆನೆಂದು ಮರಣಕಾಲದ ವಾಙ್ಮೂಲದಲ್ಲಿ ತಿಳಿಸಿದರಂತೆ. ಮೃತರು ಹೇಳಿದ ಕಾರಣವು ವಾಸ್ತವ್ಯವಾಗಿದ್ದಲ್ಲಿ ಬಹಳ ವಿಷಾದಕರವು ಮತ್ತು ಇಂತಹ ಶೋಚನೀಯ ಪರಿಸ್ಥಿತಿಯ ನಿವಾರಣೆಗೆ ಪ್ರೌಢವಿದ್ಯಾಭ್ಯಾಸ ಪ್ರೋತ್ಸಾಹವನ್ನು ತಪ್ಪಿಸುವುದೇ ತಕ್ಕ ಉಪಾಯವು.

ಕಳೆದ ಗುರುವಾರ ಮಧ್ಯಾಹ್ನ 1 ಘಂಟೆ ಸಮಯದಲ್ಲಿ ರಾಜಧಾನಿಯ ರೈಲ್ವೆಸ್ಟೇಷನ್ನಿನಲ್ಲಿರುವ ಪುಸ್ತಕದಂಗಡಿಯಲ್ಲಿ ಕೆಲಕಾಲ ಇದ್ದ ಮ|| ಕೃಷ್ಣರಾಯರ 16 ವರ್ಷದ ಮಗನು ತನ್ನ ಮನೆಯೊಳಗೆ ಗಲ್ಲಿಗೆ ಹಾಕಿಕೊಂಡು ಮೃತನಾದನು. ಇವನು ಲ್ಯಾನ್ಸ್‌ಡೌನ್ ಬಜಾರಿನಲ್ಲಿ ಪುಸ್ತಕದ ಅಟ್ಟುಕಟ್ಟುವವನಂಗಡಿಗೆ ವಿಶೇಷವಾಗಿ ಹೋಗುಬರುತ್ತಿದ್ದು ಒಂದು ದಿವಸ ಆ ಅಂಗಡಿಯವನು ತಾನು ರಟ್ಟುಕಟ್ಟಿದ್ದ ಭಗವದ್ಗೀತಾ ಪುಸ್ತಕಗಳಲ್ಲಿ ಕೆಲವಿಲ್ಲದಿದ್ದುದನ್ನು ಕಂಡು ಈ ಹುಡುಗನನ್ನು ವಿಚಾರಿಸಿದನು. ಅವನು ಪುಸ್ತಕಗಳನ್ನು ತಾನು ನೋಡಲಿಲ್ಲವೆಂದು ಹೇಳಲು ಅಂಗಡಿಯವನು ಸಂಶಯಪಟ್ಟುಕೊಂಡು ಪುಸ್ತಕವನ್ನು ತಂದುಕೊಡದಿದ್ದಲ್ಲಿ ಪೊಲೀಸಿಗೆ ತಿಳಿಸುತ್ತೇನೆಂದು ಬೆದರಿಸಿದುದಲ್ಲದೆ ತಂದೆಗೆ ಹೇಳಿದನು. ಆ ಹುಡುಗನು ಅಂಗಡಿಗೆ ಬರುವುದನ್ನು ಬಿಟ್ಟುದರಮೇಲೆ ಅವನೇ ಅಪಹರಿಸಿರಬೇಕೆಂದು ಅಂಗಡಿಯವನು ನಿರ್ಧರಿಸಿ ತಂದೆತಾಯಿಗಳಿಗೆ ಪುನಃ ಹೇಳಿದನು. ಅವರು ಬಹಳ ವಿಧವಾಗಿ ಕೇಳಿದರೂ ಹೇಳದೆ ಹೋಗಲು ಮಗನನ್ನು ಗದ್ದರಿಸಿದರು. ಹುಡುಗನು 1-2 ದಿವಸ ಊಟಮಾಡದೆ ಉಪವಾಸವಿದ್ದು ಗುರುವಾರದ ದಿವಸ ಸ್ನಾನಸಂಧ್ಯಾವಂದನೆಯನ್ನು ಬಹಳ ನಿಷ್ಠೆಯಿಂದ ಮಾಡಿ ಊಟಮಾಡೆಂದು ತಾಯಿಯು ಎಷ್ಟು ಪೀಡಿಸಿದರೂ ಮಾಡದೆ ಕೊಠಡಿಯೊಳಕ್ಕೆ ಹೋದನು. ಅಷ್ಟರಲ್ಲಿ ಅವರ ಬಂಧುವು ಮನೆಗೆ ಬಂದು ಹುಡುಗನವಿಚಾರವನ್ನು ತಾಯಿ ಮೂಲಕ ತಿಳಿದು ಕೊಠಡಿಯ ಬಾಗಿಲನ್ನು ನೂಕಿದನು. ಅದು ಬರಲಿಲ್ಲವಾಗಿ ಒದೆದು ಒಡೆದುಹಾಕಿ ಒಳಗೆ ಹೋಗಿ ನೋಡುವಲ್ಲಿ ಹುಡುಗನು ಒಂದು ಎತ್ತರವಾದ ಕಾಲುಮಣೆಯ ಮೇಲೆ ನಿಂತು ತುತ್ತಿಗೆಗೆ ಹಗ್ಗದ ಒಂದು ಕೊನೆಯನ್ನು ಬಿಗಿದುಕೊಂಡು ಕೊನೆಯನ್ನು ಮೇಲಕ್ಕೆ ಕಟ್ಟಿ ಕಾಲುಮಣೆಯನ್ನು ಕಾಲಿನಿಂದ ತಳ್ಳಿ ಗಲ್ಲಿಗೆ ಹಾಕಿಕೊಂಡಿದ್ದುದನ್ನು ಕಂಡು ಕೂಡಲೆ ಹಗ್ಗವನ್ನು ಕತ್ತರಿಸಿ ಶರೀರವನ್ನು ನೆಲದಮೇಲೆ ಮಲಗಿಸಿ ನೋಡುವಲ್ಲಿ ಸ್ಮೃತಿಯಿರಲಿಲ್ಲ. ಕೈಕಾಲು ಬೆಚ್ಚಗಿದ್ದುದರಿಂದ ಆಸ್ಪತ್ರೆಗೆ ಸಾಗಿಸಿ ಪರೀಕ್ಷಿಸುವಲ್ಲಿ ಪ್ರಾಣ ಹೋಗಿದ್ದಿತು. ಅನಂತರ ಶವವು ಪರೀಕ್ಷಿಸಲ್ಪಟ್ಟು ಸಂಸ್ಕಾರಕ್ಕಾಗಿ ತಂದೆತಾಯಿಗಳ ವಶಮಾಡಲ್ಪಟ್ಟಿತು.

ಭಾರತದೇಶದಿಂದ ಭಂಗಾರಸಾಗಿದುದು

ಕಳೆದ ಶನಿವಾರ 61,70,000 ರೂ. ಗಳ ಭಂಗಾರವು ಮಾಲ್ವಾ ಎಂಬ ಹಡಗಿನಲ್ಲಿ ಲಂಡನ್ ಪಟ್ಟಣಕ್ಕೆ ಸಾಗಿಸಲ್ಪಟ್ಟಿತು.

ಪಿಷಾವರಿನಲ್ಲಿ ಬೆಂಕಿಯನಾಹುತ

ಪಿಷಾವರಿನ ಚರ್ಸಾದಾ ಬೀದಿಯಲ್ಲಿ ಅಗ್ನಿಪ್ರವೇಶವಾಗಿ 1000 ಅಂಗಡಿ ಮನೆಗಳು ಸುಟ್ಟುಹೋದುವು.

ಸಿಂಹಾಕೃತಿಯ ಹಸುವಿನಕರು

ಬರೇಲಿಯಲ್ಲಿ ಒಂದು ಹಸು ಸಿಂಹದ ಮರಿಯ ಮುಖ ಮತ್ತು ದೇಹಾಕೃತಿಯ ಕರುವನ್ನು ಈನಿತು. ಅದು ಜನನವಾದ ಕೂಡಲೆ ಸತ್ತುಹೋಯಿತು.

ಜವಹಾರಿಲಾಲರ ದೇಹಾರೋಗ್ಯ

ಪಂಡಿತ ಜವಹಾರಿಲಾಲರವರಿಗೆ ಕೊಂಚವಾಗಿ ಜ್ವರಬರುತ್ತಿರುವುದರಿಂದ ಅವರು ಡೇರಾಡನ್ನಿಗೆ ಸಾಗಿಸಲ್ಪಟ್ಟರು. ಗೋವಿಂದ ವಲ್ಲಭಪಂತರು ಸೊಂಟಬಾಧೆಯಿಂದ ನರಳುತ್ತಿರುವರು.

ಟ್ರಾವಂಕೂರು ಮಹಾರಾಜರ ತಾಯಿ

ಸೀಮೆಗೆ ಪ್ರಯಾಣಮಾಡಿರುವ ಟ್ರಾವಂಕೂರು ಮಹಾರಾಜರವರ ತಾಯಿ ಚಿಕ್ಕ ಮಹಾರಾಣಿಯವರು ಜಿನೀವಾ ಪಟ್ಟಣವನ್ನು ಸುರಕ್ಷಿತವಾಗಿ ತಲುಪಿದರು ಮತ್ತು ಬರುವ ಜೂನ್ ತಾ|| 2 ರಲ್ಲಿ ಲಂಡನ್ ಪಟ್ಟಣವನ್ನು ಸೇರುವವರಾಗಿರುವರು.

ಸ್ಕೂಲು ಕಟ್ಟಡಬಿದ್ದು ೩ ಮಕ್ಕಳು ಸತ್ತರು

ಟ್ರಾವಂಕೂರಿಗೆ ಸೇರಿದ ನಿಡುಮಂಗಾಡು ತಾಲ್ಲೂಕಿನಲ್ಲಿ ಒಂದು ಗ್ರಾಮ ಪಾಠಶಾಲೆಯಲ್ಲಿ 25 ಮಕ್ಕಳು ಓದುತ್ತಿರುವಾಗ್ಗೆ ಗಾಳಿಮಿಶ್ರವಾದ ಮಳೆಯು ಬಂದು ಪಾಠಶಾಲೆಯ ಕಟ್ಟಡವು ಕುಸಿದುಬಿದ್ದಿತು. ಇದರಿಂದ 3 ಮಕ್ಕಳು ಕೂಡಲೆ ಸತ್ತರು, 18 ಮಕ್ಕಳು ಅಪಾಯಹೊಂದಿದರು. ಇವರಲ್ಲಿ 9 ಮಕ್ಕಳು ಆಸ್ಪತ್ರೆಗೆ ಸಾಗಿಸಲ್ಪಟ್ಟರು.

ದೋಣಿಯು ಮುಳುಗಿ ೮ ಮಂದಿ ಸತ್ತರು

ಜಮುನಾ ನದಿಯ ಮೇಲೆ 11 ಮಂದಿ ಪುರುಷರೂ ಸ್ತ್ರೀಯರೂ ಮಕ್ಕಳೂ ಒಂದು ದೋಣಿಯಲ್ಲಿ ಕುಳಿತು ಹೋಗುತ್ತಿರುವಾಗ್ಗೆ ದೋಣಿಯು ಒಂದು ಹಡಗಿಗೆ ತಾಕು ಬಡಿದು ಮಗುಚಿಕೊಂಡಿತು. ಅದರೊಳಗಿದ್ದ ಪ್ರಯಾಣಿಕರಲ್ಲಿ 8 ಮಂದಿ ಜಲಸಮಾಧಿಯನ್ನು ಹೊಂದಿದರು. ಉಳಿದ ಮೂವರು ಈಜಿಕೊಂಡು ಬಂದು ದಡ ಸೇರಿದರು.

ರೊಟ್ಟಿಗಾಗಿ ಕೊಲೆ

ನಾಗಪುರಕ್ಕೆ ಸೇರಿದ ಬೇತುಲ ಎಂಬಲ್ಲಿ ಕ್ಷಾಮ ಪ್ರಾಪ್ತವಾಗಿ ಒಬ್ಬ ಹೆಂಗುಸು ಕ್ಷುದ್ಬಾಧೆಯನ್ನು ಸಹಿಸಲಾರದೆ ಒಂದು ಚಿಕ್ಕ ಹುಡುಗಿಯು ತಿನ್ನುತ್ತಿದ್ದ ರೊಟ್ಟಿಯನ್ನು ಕಿತ್ತುಕೊಳ್ಳಲೆತ್ನಿಸಿದಾಗ ಆ ಹುಡುಗಿಯು ಕೊಡದೆ ಹೋಗಲಾಗಿ ಅವಳನ್ನು ಬಲವಾಗಿ ಹೊಡೆದಳು. ಆ ಹುಡುಗಿಯು ಕೂಡಲೆ ಮೃತಳಾದಳು. ಇದರಿಂದ ನಾಗಪುರದಲ್ಲಿ ಕ್ಷಾಮಬಾಧೆಯು ಎಷ್ಟು ಭಯಂಕರವಾಗಿದೆ ಎಂಬುದು ವ್ಯಕ್ತವಾಗುತ್ತದೆ.

ಉದಕಮಂಡಲಕ್ಕೆ ವೈಸ್ರಾಯರಾಗಮನ

ಬರುವ ಜುಲೈ ತಿಂಗಳಲ್ಲಿ ಕಾರ್ಯವ್ಯವಧಾನವಾದರೆ ವೈಸ್ರಾಯ ದಂಪತಿಗಳು ಆಕಾಶಯಾನದಲ್ಲಿ ಮೈಸೂರು ರಾಜಧಾನಿಯವರೆಗೆ ಪ್ರಯಾಣಮಾಡಿ ಅಲ್ಲಿಂದ ಮೋಟಾರು ಬಂಡಿಯಲ್ಲಿ ಉದಕಮಂಡಲಕ್ಕೆ ಹೋಗಿ ಅಲ್ಲಿ ಕೆಲ ದಿವಸಗಳವರೆಗಿರಲು ಯೋಚಿಸಿರುವುದಾಗಿ ತಿಳಿಯಬರುತ್ತದೆ. ಹಾಗೆ ಬರುವುದಾದರೆ ಅವರ ಸ್ವಾಗತಕ್ಕೆ ರಾಜಧಾನಿಯಲ್ಲಿ ತಕ್ಕೇರ್ಪಾಟು ನಡೆಯಬಹುದು.

ಪ್ರಪಂಚದಲ್ಲೆಲ್ಲ ಅತ್ಯಂತ ಭಾರವಾದ ಮನುಷ್ಯ

ಅಮೇರಿಕೆಯಲ್ಲಿ ಪ್ರಪಂಚದಲ್ಲಿರತಕ್ಕ ಎತ್ತರವಾದ ಮನುಷ್ಯರಿಗಿಂತಲೂ ಎತ್ತರವಾದ ಮನುಷ್ಯರಿರುವುದಾಗಿ ಈ ವರೆಗೆ ಪ್ರಸಿದ್ಧವಾಗಿದೆ. ಈಗ ಅಲ್ಲಿ ಅತ್ಯಂತ ಭಾರವಾದ ಮನುಷ್ಯನಿರುತ್ತಾನೆ. ಇವನು ಕ್ಯಾಲಿಫೋರ್ನಿಯಾ ವಾಸಸ್ಥನು. ಇವನಿಗೆ 23 ವರ್ಷ ವಯಸ್ಸು. ಇವನು 6 ಅಡಿ 1 ಅಂಗುಲ ಎತ್ತರವಿದ್ದು 786 ಪೌಂಡು ತೂಕವುಳ್ಳವನಾಗಿದ್ದಾನೆ. ಇವನಷ್ಟು ಭಾರವಾದ ಮನುಷ್ಯನು ಪ್ರಪಂಚದ ಮತ್ತಾವ ಭಾಗದಲ್ಲೂ ಇಲ್ಲ ಮತ್ತು ಹಿಂದೆ ಯಾವಾಗಲೂ ಇರಲಿಲ್ಲ. ಇಂಗ್ಲೆಂಡಿನೊಳಗೆ 1809 ರಲ್ಲಿ 739 ಪೌಂಡು ತೂಕವುಳ್ಳ ಮನುಷ್ಯನಿದ್ದನು. ಒಂದು ಸರ್ಕಸ್ ಕಂಪನಿಯಲ್ಲಿ 630 ಪೌಂಡು ತೂಕವಿರುವ ಒಬ್ಬ ಹೆಂಗುಸಿರುತ್ತಾಳೆ.

ಲಾರ್ಡ್ ಇಂಚ್‌ಕೇಪರ ಮರಣ

ಲಾರ್ಡ್ ಇಂಚ್‌ಕೇಪರವರು ಕೆಲ ದಿವಸಗಳಿಂದ ಅಸ್ವಸ್ಥರಾಗಿದ್ದು ರೋವಲ್ ಎಂಬ ಸ್ವಂತ ಹಡಗಿನಲ್ಲಿ ಪ್ರಯಾಣ ಮಾಡುತ್ತಿರುವಾಗ್ಗೆ ಛಳಿಯಾಧಿಕ್ಯದಿಂದ ಪ್ರಾಣಚಲನೆಯು ನಿಂತುಹೋಗಿ ಮೃತರಾದರು. ಇವರಿಗೆ 79 ವರ್ಷ ವಯಸ್ಸಾಗಿದ್ದಿತು. ಇವರು ಬಹಳ ಸಾಮಾನ್ಯ ಸ್ಥಿತಿಯಲ್ಲಿದ್ದವರು ಬುದ್ಧಿ ಚಾತುರ್ಯದಿಂದಲೂ ಧೈರ್ಯಸಾಹಸಗಳಿಂದಲೂ ಹಡಗಿನ ಯಜಮಾನರಾದರಲ್ಲದೆ ಕಳೆದ 30 ವರ್ಷಗಳಿಂದ ಬ್ರಿಟಿಷ್ ರಾಜಕೀಯದಲ್ಲಿ ಬಹಳ ಪ್ರಮುಖರಾಗಿದ್ದು ಖ್ಯಾತಿಯನ್ನು ಪಡೆದರು ಮತ್ತು 1923-24 ರಲ್ಲಿ ಭಾರತ ಪ್ರಭುತ್ವದ ವೆಚ್ಚವನ್ನು ಕಡಿಮೆಮಾಡಲೇರ್ಪಟ್ಟಿದ್ದ ಕಮಿಟಿಯ ಅಧ್ಯಕ್ಷರಾಗಿದ್ದು ಭಾರತ ದೇಶದಲ್ಲೂ ಖ್ಯಾತಿಯನ್ನು ಪಡೆದಿದ್ದರು. ಆದರೆ ಭಾರತೀಯರಿಗೆ ಸ್ವರಾಜ್ಯವನ್ನು ಪ್ರಸಾದಿಸುವ ವಿಚಾರದಲ್ಲಿ ಮಾತ್ರ ಭಿನ್ನಾಭಿಪ್ರಾಯವುಳ್ಳವರಾಗಿದ್ದುದರಿಂದ ಭಾರತೀಯರ ಪ್ರೀತಿಗೆ ಪಾತ್ರರಾಗಿರಲಿಲ್ಲ.

ಮಾವಿನಹಣ್ಣು ಚಕ್ರವರ್ತಿಯವರಿಗೊಪ್ಪಿಸಲ್ಪಟ್ಟಿತು

ಬಹಳ ಉತ್ಕೃಷ್ಟವಾದ ಬಲಿತ ಬಾದಾಮಿ ಮಾವಿನ ಕಾಯಿಗಳು ಲಂಡನ್ ಪಟ್ಟಣಕ್ಕೆ ಹಡಗಿನಲ್ಲಿ ಬಹಳ ಎಚ್ಚರಿಕೆಯಿಂದ ಕಳುಹಲ್ಪಟ್ಟುವೆಂದೂ, ಅವು ಸುರಕ್ಷಿತವಾಗಿ ತಲುಪಿದಲ್ಲಿ ಚಕ್ರವರ್ತಿಯವರಿಗೊಪ್ಪಿಸಲ್ಪಡುವುವೆಂದೂ ಹಿಂದೆ ತಿಳಿಸಿದ್ದೆವಷ್ಟೆ. ಹಡಗಿನಲ್ಲಿ ಕೆಡದಿರಲು ಮಂಜಿನಗಡ್ಡೆಗಳ ಮಧ್ಯೆ ಇಟ್ಟು ವಿಶೇಷ ಎಚ್ಚರಿಕೆಯಿಂದ ಸಾಗಿಸಲ್ಪಟ್ಟುದರ ಮೇಲೆ ಕಾಯಿಗಳು ಕೆಟ್ಟಿರಲಿಲ್ಲವಾದುದರಿಂದ ಅವುಗಳಲ್ಲಿ ಪಕ್ವವಾಗಿಯೂ ಶ್ರೇಷ್ಠವಾಗಿಯೂ ಇದ್ದವುಗಳು ಬೊಂಬಾಯಿನ ಫಲವರ್ತಕರ ಪರವಾಗಿ ದೊರೆಯವರಿಗೊಪ್ಪಿಸಲ್ಪಟ್ಟುವು. ಅವರು ಅವನ್ನು ಸೇವಿಸಿ ಪರಮಾನಂದವನ್ನು ಪ್ರದರ್ಶಿಸಿದರಂತೆ. ಹಣ್ಣುಗಳನ್ನು ಸೇವಿಸಿದ ಇತರರೂ ಆನಂದಪರವಶರಾಗಿ ಅವುಗಳನ್ನು ಯಥೇಚ್ಛವಾಗಿ ತರಿಸಿಕೊಡಬೇಕೆಂದು ಕೇಳುತ್ತಿರುವರಂತೆ. ಇನ್ನುಮೇಲೆ ಈ ಹಣ್ಣುಗಳು ವಿಶೇಷವಾಗಿ ಕಳುಹಲ್ಪಡುವಂತಾಗಿ ಮಾರಾಟಗಾರರಿಗೆ ಬಹಳ ಲಾಭವು ಬರುವುದು ಮತ್ತು ಈ ದೇಶಿಯರಿಗೆ ಪ್ರಿಯವಾಗುವುದು.

ಮೆರ್ಮನ್‌ಸಿಂಗಿನಲ್ಲಿ ಅಡಿಗೆಯಿಲ್ಲ

ವಿದ್ಯಾವಂತರಿಗು ಸಹ ಮೂಢಭಕ್ತಿಯು ಇನ್ನೂ ಹೋಗಿಲ್ಲವೆಂಬುದಕ್ಕೆ ಮೆರ್ಮನ್‌ಸಿಂಗಿನಲ್ಲಿ ಒಂದು ವಿಚಿತ್ರ ಕಥೆಯು ಜನರೊಳಗೆ ಹರಡಿ ಕಳೆದ ಸೋಮವಾರದಿಂದಲೂ ಅಡಿಗೆ ಮಾಡಲ್ಪಡದಿರುವುದು ನಿದರ್ಶನವಾಗಿದೆ. ಒಂದು ಸೋಮವಾರ ಒಬ್ಬ ಹೆಂಗುಸು ಹರಿಗೋಲಿನವನ ಬಳಿಗೆ ಹೋಗಿ ನದಿಯ ಆಚೆ ದಡಕ್ಕೆ ತನ್ನನ್ನು ಕರೆದುಕೊಂಡು ಹೋಗಿ ಬಿಡಬೇಕೆಂದು ಬಹಳವಾಗಿ ಕೇಳಿಕೊಂಡಳು. ಅದರಮೇಲೆ ಅವನು ಆಕೆಯನ್ನು ದೋಣಿಯಲ್ಲಿ ಕುಳ್ಳಿರಿಸಿಕೊಂಡು ನದಿಯ ಮಧ್ಯಭಾಗಕ್ಕೆ ಬಂದಾಗ್ಗೆ 7 ಮಂದಿ ಕನ್ಯಾಸ್ತ್ರೀಯರು ಅಕಸ್ಮಾತ್ತಾಗಿ ಹರಿಗೋಲಿನಿಂದ ಮೇಲಕ್ಕೆ ಬಂದರು. ಹರಿಗೋಲಿನವನು ಅವರನ್ನು ಕಂಡು ಭಯಗ್ರಸ್ತನಾಗಲು ಆ ಕನ್ಯೆಯರು ನಾವು ವಾಯುದೇವತೆಗಳು, ನಮ್ಮಲ್ಲಿ ಪ್ರತಿಯೊಬ್ಬರೂ ಒಂದೊಂದು ಸೋಮವಾರ ಒಂದು ಪ್ರಚಂಡಗಾಳಿಯನ್ನು ಹುಟ್ಟಿಸಿ ಪ್ರಾಣ ಮತ್ತು ಆಸ್ತಿಗಳನ್ನು ನಾಶಪಡಿಸುವೆವು ಎಂದು ಹೇಳಿದರು. ಆ ಹರಿಗೋಲಿನವನು ಅದನ್ನು ಕೇಳಿ ಮತ್ತಷ್ಟು ಭಯಗ್ರಸ್ತನಾದುದನ್ನು ಕಂಡು, ಸೋಮವಾರ ಯಾರು ಮನೆಗಳಲ್ಲಿ ಅಡಿಗೆಯನ್ನು ಮಾಡದೆ ಉಪವಾಸವಿರುವರೋ ಅವರಿಗೆ ಯಾವ ಬಾಧೆಯನ್ನೂ ಕೊಡದೆ ಅವರನ್ನು ಸಂರಕ್ಷಿಸುತ್ತೇವೆಂದು ಅಭಯವನ್ನಿತ್ತರು. ಅದಕ್ಕೆ ಸರಿಯಾಗಿ ಕಳೆದ ಮೂರು ಸೋಮವಾರ ಮೆರ್ಮನ್‌ಸಿಂಗಿನಲ್ಲಿ ಪ್ರಳಯಕಾಲದ ಗಾಳಿ ಮಳೆ ಬಂದುದು ಆ ಕನ್ಯಾಸ್ತ್ರೀಯರು ಹೇಳಿದುದರ ಫಲವಾಗಿರಬೇಕೆಂದು ಭಾವಿಸಲ್ಪಟ್ಟಿದೆ.

ಸರ್ಪವು ಕ್ಷೇತ್ರಯಾತ್ರೆ ಮಾಡಿದುದು

ತಿನ್ನವೆಲ್ಲಿ ಡಿಸ್ಟ್ರಿಕ್ಟಿಗೆ ಸೇರಿದ ತಿರೂಚೂರಿನ ದೇವಾಲಯದಲ್ಲಿ ವೈಶಾಖಮಾಸೋತ್ಸವವು ಬಹಳ ವೈಭವದಿಂದ ನಡೆಯುವುದು. ಆ ಕಾಲದಲ್ಲಿ ನಾನಾ ಕಡೆಯಿಂದ ಯಾತ್ರಾರ್ಥಿಗಳು ಕಾವಡಿ ಸೇವೆಯನ್ನು ತೆಗೆದುಕೊಂಡು ಹೋಗುವರು. ಈಸಲ ವೈಶಾಖಮಾಸೋತ್ಸವಕ್ಕೆ ಮಧುರೆಯಿಂದ ದೈವಭಕ್ತಿ ದಂಪತಿಗಳು ಮತ್ಸ್ಯಕಾವಡಿಯನ್ನು ತೆಗೆದುಕೊಂಡುಹೋಗಲು ನಿಶ್ಚಯಿಸಿದ್ದರು. ಈವೇಳೆ ಸರ್ಪಕಾವಡಿಯನ್ನು ತೆಗೆದುಕೊಂಡು ಹೋಗುವಂತೆ ಒಂದು ರಾತ್ರಿ ಗಂಡನಿಗೆ ಸ್ವಪ್ನವಾಯಿತು. ಅವನು ಇದು ದೇವರಾಜ್ಞೆಯೆಂದು ನಂಬಿದನು. ಆದರೆ ಸಜೀವ ಸರ್ಪವು ತನಗೆ ದೊರಕುವುದು ಹೇಗೆಂದು ಯೋಚಿಸುತ್ತಿರುವಲ್ಲಿ ಪೆರುಮಂಗಲವೆಂಬ ಗ್ರಾಮಕ್ಕೆ ಹೋದರೆ, ಅಲ್ಲಿ ಒಂದು ಆಲದ ಮರದಲ್ಲಿ ಸರ್ಪವು ನಿನ್ನನ್ನು ನಿರೀಕ್ಷಿಸಿಕೊಂಡಿರುತ್ತದೆಂದು ಪುನಃ ಸ್ವಪ್ನವಾಯಿತು. ಅವನು ಅದೇ ಪ್ರಕಾರ ಆ ಗ್ರಾಮಕ್ಕೆ ತನ್ನ ಹೆಂಡತಿಯ ಸಮೇತ ಹೋದನು. ಇವನು ಬಂದ ವಿಚಾರವು ಆ ಗ್ರಾಮಸ್ಥರಿಗೆ ಹೇಗೋ ತಿಳಿದು ಅವರು ಬಂದು ಆ ಆಲದ ಮರದ ಸುತ್ತ ಗುಂಪುಕೂಡಿದರು. ಆ ದಂಪತಿಗಳು ಸರ್ಪನ ಆಗಮನವನ್ನು ಪ್ರಾರ್ಥಿಸುತ್ತ ಬಹಳ ಹೊತ್ತಿನವರೆಗೆ ನಿಂತುಕೊಂಡಿರುವಲ್ಲಿ ಬೆಳಗಿನ 9 ಘಂಟೆಯ ಸಮಯದಲ್ಲಿ ಒಂದು ಸುಂದರವಾದ ನಾಗರಹಾವು ಮರದಿಂದ ನಿಧಾನವಾಗಿ ಇಳಿದು ಬಂದು ಕಾವಡಿಯ ಬಳಿ ನಿಂತಿತು. ಆ ದಂಪತಿಗಳು ಕೆರೆಗೆ ಹೋಗಿ ಸ್ನಾನಮಾಡಿ ಮಡಿಯನ್ನುಟ್ಟುಕೊಂಡು ಬರುವಷ್ಟರಲ್ಲಿ ಸರ್ಪವು ಮರದ ಪೊಟ್ರೆಯೊಳಕ್ಕೆ ಹೋಗಿ ಸೇರಿಕೊಂಡಿತು. ಸ್ನಾನಮಾಡಿಕೊಂಡು ಬಂದು ಕಾವಡಿಯ ಚಂಬಿನ ಬಾಯಿಯನ್ನು ತೆರೆದು ಹಾವು ಬಂದು ಅದರೊಳಗೆ ಸೇರುವುದನ್ನು ನಿರೀಕ್ಷಿಸಿಕೊಂಡು ನಿಂತರು. ಆದರೆ ಅದು ಬಹಳ ಹೊತ್ತಿನವರೆಗೂ ಬಾರದೆ ಹೋಗಲು ಗಂಡನು ಹಾವನ್ನು ಪೊಟ್ರೆಯಿಂದ ತೆಗೆದು ಚಂಬಿನೊಳಕ್ಕೆ ಬಿಟ್ಟು ಬಾಯನ್ನು ಮುಚ್ಚಿದನು. ನೆರೆದಿದ್ದ ಜನರು ನೋಡಿ ಆಶ್ಚರ್ಯಚಕಿತರಾದರು. ತರುವಾಯ ಆ ದಂಪತಿಗಳು ಸರ್ಪಕಾವಡಿಯನ್ನು ಹೊತ್ತುಕೊಂಡು ದೇವಸ್ಥಾನಕ್ಕೆ ಹೋಗಿ ಅಲ್ಲಿ ಕಾವಡಿಯನ್ನು ಬಿಚ್ಚಿದರು. ಸರ್ಪವು ಹೊರಗೆ ಬಂದು ದೇವಾಲಯದ ಗೋಪುರವನ್ನು ಹತ್ತಿ ಮಾಯವಾಯಿತು ಎಂದು ಪ್ರತ್ಯಕ್ಷದರ್ಶಿಯು ಆಂಗ್ಲಪತ್ರಿಕೆಗೆ ಬರೆದಿರುತ್ತಾನೆ.

ಒಬ್ಬ ಕನ್ಯೆಗೆ ೧೦೦೦ ವರ

ಕೆಂಟ್ ಎಂಬ ದೇಶದಲ್ಲಿ ಸಿಬಿಲ್ ಜೋನ್ಸ್ ಎಂಬ ಕನ್ಯೆಯಿರುತ್ತಾಳೆ. ಇವಳು ಉದ್ದವಾಗಿಯೂ, ಕೋಮಲವಾಗಿಯೂ ಇರುವಳು. ಈಕೆಯ ನೇತ್ರಗಳು ಬೂದುಬಣ್ಣವಾಗಿಯೂ, ಕೇಶವು ಹೊಂಬಣ್ಣವಾಗಿಯೂ ಬಾಯಿ ಅಂದವಾಗಿಯೂ ಇರುತ್ತವೆ. ಬೇಸಾಯಗಾರರು, ಶ್ರೀಮಂತರು, ವಿದ್ವಾಂಸರು ಮತ್ತು ಕಸಬುದಾರರು ತಮ್ಮನ್ನು ಮದುವೆಯಾಗುವಿಯೇ ಎಂದು ಕೇಳಿ ಪ್ರಪಂಚದ ಎಲ್ಲಾ ಭಾಗಗಳಿಂದಲೂ ಆಕೆಗೆ ಕಾಗದಗಳನ್ನು ಬರೆಯುತ್ತಿರುವರು. ಆದರೆ ಆಕೆಯು ವಿವಾಹ ಮಾಡಿಕೊಳ್ಳಕೂಡದೆಂದು ನಿರ್ಧರಿಸಿರುವಳು. "ಈಗ್ಗೆ 2 ವರ್ಷಗಳ ಹಿಂದಿನ ಸ್ಥಿತಿಯೇ ಬೇರೆಯಾಗಿದ್ದಿತು. ಆಗ ಒಬ್ಬ ಮನುಷ್ಯನನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದೆನು ಮತ್ತು ಅವನೂ ನನ್ನನ್ನು ಪ್ರೀತಿಸುತ್ತಿದ್ದನು. ಪ್ರಪಂಚದಲ್ಲೆಲ್ಲ ನಾನೇ ಅತ್ಯಂತ ಸುಖಿಯಾದ ಬಾಲೆಯಾಗಿದ್ದೆನು. ಆ ಕಾಲ ಕಳೆದು ಹೋಯಿತು. ಈಗ ನಾನೆಂದಿಗೂ ಮದುವೆಯಾಗುವುದಿಲ್ಲ" ಎಂದು ಹೇಳಿದಳು. ಈ ಜೋನ್ಸ್ ಕನ್ಯೆಗೆ ಕಳೆದ 4 ವರ್ಷಗಳಲ್ಲಿ 1000 ಕ್ಕಿಂತಲೂ ಹೆಚ್ಚಾಗಿ ಜನರು ಈಕೆಯನ್ನು ಮದುವೆಯಾಗಲಿಷ್ಟಪಟ್ಟು ಬರೆದಿರುವರು. "ಅವುಗಳಲ್ಲಿ ಕೆಲವು ಬಹಳ ಆಭಾಸವಾಗಿದ್ದುದರಿಂದ ಅವುಗಳನ್ನು ಸುಟ್ಟುಬಿಟ್ಟೆನು. ಕೆಲ ವರ್ತಮಾನಪತ್ರಿಕೆಗಳ ಪ್ರಕಟನೆಯಲ್ಲಿ ಕೊಟ್ಟಿರುವ ನನ್ನ ಭಾವಚಿತ್ರವನ್ನು ನೋಡಿ ಅನೇಕರು ವರಿಸಿ ಬರೆದಿರುತ್ತಾರೆ. ಅಮೇರಿಕೆಯ ಒಬ್ಬ ಬೇಸಾಯಗಾರನು ನನ್ನನ್ನು ವರಿಸಿ ಪದೇ ಪದೇ ಕಾಗದಗಳನ್ನು ಬರೆಯುತ್ತಿದ್ದಾನೆ. ತನ್ನ ಭಾವಚಿತ್ರವನ್ನೂ ಕಳುಹಿಸಿಕೊಟ್ಟು ತನ್ನ ಮನೆಯನ್ನು ನನಗಾಗಿ ಬಿಟ್ಟಿರುತ್ತೇನೆಂದು ಪ್ರತಿಯೊಂದು ಕಾಗದದಲ್ಲೂ ತಿಳಿಸುತ್ತಿದ್ದಾನೆ. ಹಂಗೇರಿಯವನಾದ ಒಬ್ಬ ಶ್ರೀಮಂತನು ಮೋಹಕರವಾದ ಕಾಗದವನ್ನು ತಿಂಗಳೊಂದಾವೃತ್ತಿ ಬರೆಯುತ್ತಿರುವನು. ನಾನು ಮಾತ್ರ ಒಂದಕ್ಕೂ ಉತ್ತರವನ್ನು ಕೊಟ್ಟಿಲ್ಲ. ಆದರೂ ಬರೆಯುತ್ತಿದ್ದಾನೆ. ನಿತ್ಯಗಟ್ಟಲೆಯ ಕೆಲಸವನ್ನು ಪೂರೈಸಿಕೊಂಡು ಮನೆಗೆ ಹೋಗಿ ಸಾಯಂಕಾಲದ ವೇಳೆ ತಾಯಿಸಂಗಡ ಕುಳಿತುಕೊಂಡು ಗ್ರಾಮಾಫೋನನ್ನು ಕೇಳಿ ಅಥವಾ ಪುಸ್ತಕ ಓದಿ ಅಥವಾ ಸಂಗೀತವನ್ನು ಪಾಡಿ ಕಾಲವನ್ನು ಬಹಳ ಆನಂದದಿಂದ ಕಳೆಯುತ್ತಿರುವೆನು" ಎಂದು ಹೇಳುತ್ತಾಳೆ. ಪ್ರಪಂಚದಲ್ಲೆಲ್ಲ ಈಕೆಯ ಭಾವಚಿತ್ರದಷ್ಟು ಹೆಚ್ಚಾಗಿ ಮತ್ತಾರ ಭಾವಚಿತ್ರವೂ ತೆಗೆಯಲ್ಪಟ್ಟಿಲ್ಲ. 1928 ರಿಂದ ಈವರೆಗೆ ಈಕೆಯ ಭಾವಚಿತ್ರಗಳು 10,000 ದ ವರೆಗೆ ತೆಗೆಯಲ್ಪಟ್ಟಿವೆ ಮತ್ತು ಈಕೆಯ ಮುಖಭಾವವು ನೂರಾರು ಬಣ್ಣದ ಮಾಸಪುಸ್ತಕಗಳ ಮುಖಪತ್ರದ ಮೇಲೆ ಮುದ್ರಿಸಲ್ಪಟ್ಟಿದೆ.

ದೀರ್ಘಾಯಸ್ಸು.

ದೀರ್ಘಾಯಸ್ಸೆಂದರೆ ಅದು ಎಷ್ಟು ವರ್ಷ ಪರಿಮಿತಿಯುಳ್ಳದ್ದು ಎಂಬದಾಗಿ ವಿಚಾರಪರರು ಹೇಳುವರು. ಪೂರ್ವಿಕರಲ್ಲಿ ಅನೇಕರು ಅನೇಕ ಸಾವಿರ ವರ್ಷಗಳು ಬದುಕಿದರೆಂಬದಾಗಿ ಕೆಲವು ಗ್ರಂಥಗಳಲ್ಲಿ ಬರೆಯಲ್ಪಟ್ಟಿರುವುದು. ಇದು ಎಷ್ಟರ ಮಟ್ಟಿಗೆ ನಿಜವೋ ಹೇಳುವುದಕ್ಕಾಗುವುದಿಲ್ಲ. ಆದರೆ ಕೆಲವು ರಿಕಾರ್ಡುಗಳನ್ನು ಪರಿಶೀಲಿಸಿದರೆ ಬಹುಕಾಲ ಬದುಕಿದವರ ಚರಿತ್ರೆಯು ಗೊತ್ತಾಗುತ್ತದೆ. ಸಾವಿರಾರು ಜನರು 100 ವರ್ಷಗಳ ಮೇಲೆ 110 ವರ್ಷಗಳ ವರೆಗೂ ಬದುಕಿದ್ದರು. 60 ಜನರು 110 ರಿಂದ 120 ರ ವರೆಗೂ ಬದುಕಿದ್ದರು. 29 ಜನರು 120 ರಿಂದ 130 ರ ವರೆಗೂ ಬದುಕಿದ್ದರು. 15 ಜನರು 130 ರಿಂದ 140 ರ ವರೆಗೂ ಬದುಕಿದ್ದರು. ೬ ಜನರು ೧೪೦ ರಿಂದ ೧೫೦ ರ ವರೆಗೂ ಬದುಕಿದ್ದರು. ಒಬ್ಬ ಮನುಷ್ಯನು ೧೮೯ ವರ್ಷಗಳ ವರೆಗೂ ಬದುಕಿದ್ದನು. ಇದು ಯೂರೋಪ್ ಖಂಡದಲ್ಲಿ ಸರಕಾರದ ಲೆಕ್ಕದಿಂದ ಗೊತ್ತು ಮಾಡಲ್ಪಟ್ಟಿರುವುದು. ರಷ್ಯಾ ದೇಶದಲ್ಲಿ ತುಂಬಾ ವರ್ಷ ಬದುಕಿದವರ ಚರಿತ್ರೆಯು ಗೊತ್ತುಮಾಡಲ್ಪಟ್ಟಿರುವುದು. ಆ ದೇಶದಲ್ಲಿ ೧೫೦ ರಿಂದ ೧೬೦ರ ವರೆಗೂ ೨೫೦ ಜನರು ಬದುಕಿದ್ದರೆಂದು ೧೮೩೦ ನೆಯ ಇಸವಿಯಲ್ಲಿ ತೆಗೆದ ಲೆಕ್ಕಗಳಿಂದ ಗೊತ್ತಾಗುತ್ತದೆ. ಇಂಗ್ಲೆಂಡ್ ಮತ್ತು ವೇಲ್ಸ್ ಪ್ರಾಂತ್ಯಗಳಲ್ಲಿ ೭೦೦ ಜನರು ೧೮೩೦ರಲ್ಲಿ ೧೦೦ ವರ್ಷದ ವರೆಗೂ ಬದುಕಿದ್ದರೆಂದು ಗೊತ್ತಾಗುತ್ತದೆ. ಬ್ರಿಟಿಷ್ ರಾಜ್ಯದಲ್ಲಿ ೯೫ರಿಂದ ೩೭೦ ವಯಸ್ಸಿನ ವರೆಗೂ ಬದುಕಿದವರ ಚರಿತ್ರೆಯು "ಪೀರ‍್ಸ್ ಆಫ್ ಬ್ರಿಟನ್" ಎಂಬ ಗ್ರಂಥದಲ್ಲಿ ಬರೆಯಲ್ಪಟ್ಟಿರುವುದು. ಅವರ ಪೈಕಿ ೨೧ ಜನರು ೧೫೦ ವರ್ಷಗಳ ವರೆಗೂ ಬದುಕಿದ್ದರು. ೩೦ ಜನರು ೧೨೦ ವರ್ಷಗಳು ಬದುಕಿದ್ದರು. ೧೦೪ ಜನರು ೧೦೪ರ ಮೇಲೆ ೧೧೦ ವರ್ಷಗಳ ವರೆಗೂ ಬದುಕಿದ್ದರು. ಪನಾಮ ಎಂಬ ಸ್ಥಳದಲ್ಲಿ ೫ ಜನರು ೧೨೦ ರಿಂದ ೧೫೦ ರ ವರೆಗೂ ಬದುಕಿದ್ದರು. ಪ್ಲಾನರೀಸಿಯಾ ಎಂಬ ಸ್ಥಳದಲ್ಲಿ ಒಬ್ಬ ಮನುಷ್ಯನು ೧೩೦ ವರ್ಷ ಬದುಕಿದ್ದನು. ಅಮೇರಿಕ ದೇಶದ ಜನಗಳು ಸಾರಾಯಿ ಕುಡಿಯುವುದು ಆಚರಣೆಗೆ ಬರುವದಕ್ಕಿಂತ ಮುಂಚೆ ಸರಾಸರಿ ೧೦೦ ವರ್ಷ ಬದುಕುತ್ತಿದ್ದರು. ಕ್ರೈವರ್ಕೆನ್ ಎಂಬವನು ೧೫೦ ವರ್ಷ ಬದುಕಿದ್ದನು. ಥಾಮಸ್‌ಫಾರ್ ಎಂಬವನು ೧೫೨ ವರ್ಷ ಬದುಕಿದ್ದನು. ಜಾಯಿಸ್‌ಹಟ್ ಎಂಬವನು ೧೬೨ ವರ್ಷ ಬದುಕಿದ್ದನು. ಹೆನ್ರಿ ಜೆಂಕಿನ್ಸ್ ಎಂಬವನು ೧೬೯ ವರ್ಷ ಬದುಕಿದ್ದನು. ಜಾನ್‌ರೋವನ್ ಎಂಬವನು ೧೭೨ ವರ್ಷ ಬದುಕಿದ್ದನು. ಪೀಟರ್ ಪೋರ್ಟೆರ್ ಎಂಬವನು ೧೮೫ ವರ್ಷ ಬದುಕಿದ್ದನು. ಥಾಮಸ್ ಕ್ಯಾನ್ ಎಂಬವನು ೨೦೭ ವರ್ಷ ಬದುಕಿದ್ದನು. ನ್ಯೂ ಮ್ಯಾಡಿಗನ್ ಎಂಬವನು ೩೭೦ ವರ್ಷ ಬದುಕಿದ್ದನು. ಈ ರೀತಿಯಲ್ಲಿ ಆರೋಗ್ಯಶಾಸ್ತ್ರವನ್ನು ಬರೆದಿರತಕ್ಕ ಕೆಲವು ಗ್ರಂಥಕರ್ತರು ಬರೆದಿರುತ್ತಾರೆ. ಹೀಗೆ ದೀರ್ಘವಾದ ಆಯುಸ್ಸನ್ನು ಹೊಂದಿದ್ದವರು ಆಹಾರ ವಿಹಾರಗಳಲ್ಲಿ ಹೇಗೆ ಕ್ಲುಪ್ತವಾಗಿದ್ದರೋ ಚಾಪಲ್ಯಕ್ಕೆ ಹೇಗೆ ಗುರಿಯಾಗುತ್ತಿರಲಿಲ್ಲವೋ ಜಿತೇಂದ್ರಿಯರಾಗಿ ಅರಿಷಡ್ವರ್ಗಗಳನ್ನು ಹೇಗೆ ಹತೋಟಿಯಲ್ಲಿಟ್ಟುಕೊಂಡಿದ್ದರೋ ಹೇಗೆ ಶಾಂತಿಯೆಂಬ ಸಾಗರದಲ್ಲಿ ಸದಾ ವಿಹರಿಸುತ್ತಿದ್ದರೋ ಕೇವಲ ತೃಪ್ತರಾಗಿ ಯಾರಿಗೂ ದ್ರೋಹಮಾಡದೆ ತಮ್ಮ ಇಷ್ಟಾರ್ಥಸಿದ್ಧಿಯನ್ನು ಹೇಗೆ ಸಂಪಾದಿಸಿಕೊಳ್ಳುತ್ತಿದ್ದರೋ ಅವುಗಳನ್ನೆಲ್ಲಾ ನಿರೂಪಿಸಿ, ದೀರ್ಘಾಯುರಾರೋಗ್ಯಗಳಿಗೂ ಪುರುಷಾರ್ಥ ಪ್ರಾಪ್ತಿಗೂ ಪರೋಪಕಾರ ಪರಾಯಣತೆಯೂ ಪರಪೀಡೆಯಲ್ಲಿ ಪರಾಙ್ಮುಖತೆಯೂ ಜಗದೀಶ್ವರನ ಶಾಂತಿಗೆ ಸಮಾನವಾದ ಶಾಂತಿಯೂ ಯಾರಿಗಿರುವುದೋ ಅಪಕಾರಿಗಳಿಗೂ ಯಾರು ಉಪಕಾರವನ್ನು ಮಾಡುವರೋ ಅಂಥವರಿಗೆ ಮಾತ್ರ ದೀರ್ಘಾಯುಸ್ಸು ಹೇಗೆ ಲಭ್ಯವಾಗುವುದೋ ಪ್ರಾಯಶಃವಾಗಿ "ಅತಿ ಸರ್ವತ್ರ ವರ್ಜಯೇತ್" ಎಂಬ ರೂಲನ್ನು ಯಾರು ಅನುಷ್ಠಾನದಲ್ಲಿಟ್ಟುಕೊಂಡಿರುವರೋ ಅವರಿಗೆ ದೀರ್ಘಾಯುರಾರೋಗ್ಯಗಳು ಹೇಗೆ ಲಭ್ಯವಾಗುವವೋ ಈ ವಿಷಯಗಳನ್ನೆಲ್ಲಾ ಆರೋಗ್ಯಶಾಸ್ತ್ರದಲ್ಲಿ ನಿಪುಣರಾದವರು ಬರೆದಿರುತ್ತಾರೆ. ಈ ವಿಷಯಕ್ಕೆ ದೀರ್ಘಾಯುರಾರೋಗ್ಯಗಳಲ್ಲಿಯೂ ಪುರುಷಾರ್ಥಪ್ರಾಪ್ತಿಗಳಲ್ಲಿಯೂ ಆಸಕ್ತರಾದವರು ಗಮನವನ್ನು ಕೊಡಬೇಕು. ಹಾಗೆ ಗಮನವನ್ನು ಕೊಡತಕ್ಕವರಿಗೆ ದೇವರು ಆಯುಸ್ಸಿನ ಜೊತೆಗೆ ಆರೋಗ್ಯದೃಢಕಾಯತೆಯನ್ನೂ ಕೊಡುವನು. ಆರೋಗ್ಯಭಾಗ್ಯದಿಂದ ಕೂಡಿದ ದೀರ್ಘಾಯುಸ್ಸು ಅಪೇಕ್ಷಣೀಯವೇ ಹೊರತು ಆರೋಗ್ಯವಿಲ್ಲದ ಆಯುಸ್ಸು ಅಪೇಕ್ಷಣೀಯವಲ್ಲ. ಪರಾಧೀನರಾಗುವ ಸ್ಥಿತಿಯು ಬರುವುದಕ್ಕೆ ಮುಂಚೆಯೇ ಅವತಾರ ಪೂರ್ತಿಯಾದರೆ ಅದು ಕ್ಷೇಮವಾದದ್ದು. ಬುದ್ಧಿಶಾಲಿಗಳಾದವರು ಪರಾಧೀನರಾಗದೆ ಇರುವಷ್ಟು ಆಯುಸ್ಸು ಕೊಟ್ಟರೆ ಸಾಕು. ಅನಂತರ ಬದುಕಿರುವುದಕ್ಕೂ ನರಕಕ್ಕೂ ವ್ಯತ್ಯಾಸವೇನೂ ಇರುವುದಿಲ್ಲ. ಯಾರು ವರ್ಣಾಶ್ರಮ ಧರ್ಮಗಳನ್ನು ಅನುಷ್ಠಾನಕ್ಕೆ ತಂದುಕೊಳ್ಳುವರೋ ಅವರಿಗೆ ಪ್ರಾಯಶಃವಾಗಿ ದೀರ್ಘಾಯುಸ್ಸೂ ಆರೋಗ್ಯವೂ ಲಭ್ಯವಾಗುವುವು. ಶಾರೀರಕ ಧರ್ಮಶಾಸ್ತ್ರ ಉಲ್ಲಂಘನರೂಪವಾದ ಪಾಪಗಳು ಅನೇಕವಾಗಿರುತ್ತವೆ. ಯಾರು ಈ ಪಾಪಗಳನ್ನು ಮಾಡುವುದಿಲ್ಲವೋ ಅವರಿಗೆ ದೀರ್ಘಾಯುರಾರೋಗ್ಯ ಐಶ್ವರ್ಯಗಳು ಲಭ್ಯವಾಗುವುವು.

ರಾ. ಬ.

ಮೈಸೂರು ಸಿಟಿ ಮುನಿಸಿಪಲ್ ಆಫೀಸ್,
ಮೈಸೂರು.
ತಾ|| 26-5-1932.

ಪ್ರಸಿದ್ಧಪತ್ರಿಕೆ.

ಮೈಸೂರು ಸಿಟಿ ಮುನಿಸಿಪಲ್ ಆಡಳಿತಕ್ಕೆ ಒಳಪಟ್ಟ ಸೂಯೆಜ್ ಫಾರಂನಲ್ಲಿರುವ ರಾಸುಗಳಿಗೆ 1932 ನೇ ಇಸವಿ ಜುಲೈ 1ನೇ ತಾರೀಖಿನ ಲಾಗಾಯ್ತು 1933 ನೇ ಇಸವಿ ಜೂನ್ 30ನೆ ಆಖೈರು ತಾರೀಕಿನ ವರೆವಿಗೆ ಹುರಳಿ, ಹುಲ್ಲು, ಉಪ್ಪು ವಗೈರೆ ಸಪ್ಲೈ ಮಾಡತಕ್ಕವರು 10-6-1932 ನೇ ತಾರೀಕಿನ ಒಳಗಾಗಿ ಟೆಂಡರನ್ನು ಮುನಿಸಿಪಲ್ ಹೆಲ್ತಾಫಿಸರವರಲ್ಲಿ ಸೀಲ್ ಮಾಡಿದ ಕವರುಗಳಲ್ಲಿ ಕೊಡಬಹುದು.

ಹೆಚ್ಚಿಗೆ ವಿಚಾರವನ್ನು ತಿಳಿಯಲು ಅಪೇಕ್ಷಿಸುವವರು ಆಫೀಸ್ ಇರುವ ವೇಳೆಯಲ್ಲಿ ಹೆಲ್ತ್ ಆಫಿಸಿನಲ್ಲಿ ಬಂದು ತಿಳಿದುಕೊಳ್ಳಬಹುದು.

(Sd.) T. G. RAMA IYER,
President.

ಹೊಳೆನರಸೀಪುರದ ಟವುನ್ ಮುನಿಸಿಪಲ್ ಆಫೀಸಿನಿಂದ—

ಪ್ರಸಿದ್ಧಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ- ಈ ಮುನಿಸಿಪಾಲಿಟಿಯ ಬಾಬ್ತು ಮಾರ್ಜಿನಲ್ಲಿ ನಮೂದಿಸಿರುವ ಬಾಬುಗಳು 6-6-1932 ನೇ ತಾರೀಖು ಸೋಮವಾರ ದಿವಿ 11 ಘಂಟೆಗೆ ಸರಿಯಾಗಿ ಹೊಳೆನರಸೀಪುರದ ಟವುನ್ ಮುನಿಸಿಪಲ್ ಆಫೀಸು ಬಳಿ ಪ್ರೆಸಿಡೆಂಟ್, ಯಾ ವೈಸ್‌ಪ್ರೆಸಿಡೆಂಟ್‌ರವರಿಂದ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಹಾಜರಾಗಿ ಭಡಸವಾಲ್ ಮೂಲಕ ಪಡೆಯಬಹುದು.

ಹರಾಜಿಗೆ ಸಂಬಂಧಪಟ್ಟ ಇತರ ವಿಷಯಗಳನ್ನು ತಿಳಿಯಲು ಇಷ್ಟಪಡುವವರು ಈ ಮುನಿಸಿಪಾಲಿಟಿಯ ಪ್ರೆಸಿಡೆಂಟ್ ಯಾ ವೈಸ್‌ಪ್ರೆಸಿಡೆಂಟರವರಿಗೆ ಬರೆದು ತಿಳಿದುಕೊಳ್ಳಬಹುದು.

ಈ ಸಂಬಂಧವಾದ ಹರಾಜ್ ಇಸ್ತಿಹಾರು ಕಾಪಿಗಳನ್ನು ಆಫೀಸು ಬಾಗಲಿಗೆ ಬಹಿರಂಗವಾಗಿ ಚಿಕಟಾಯಿಸಿರುತ್ತೆ.

ತಾ|| 21-5-1932.

ಬಿ. ಸುಬ್ಬರಾವ್,
ಪ್ರೆಸಿಡೆಂಟ್.

ಬಾಬುಗಳು.

1. ಡೈಲಿ ಟೋಲ್.
2. ಬೀಫ್‌ಸ್ಲಾಟರ್ ಹೌಸ್ ಫಿ.
3. ಶೀಪ್‌ಸ್ಲಾಟರ್ ಹೌಸ್ ಫಿ.
4. ಬೀಫ್‌ಸ್ಟಾಲ್ ರೆಂಟ್.
5. ಮಟನ್‌ಸ್ಟಾಲ್ ರೆಂಟ್.
6. ಕನ್‌ಸರವೆನ್ಸಿ ವಗೈರೆ ಗೊಬ್ಬರ.
7. ಕನ್‌ಸರವೆನ್ಸಿ ಗಾಡಿಗಳು.
8. ವೀಕ್ಲಿ ಮಾರ್ಕೆಟ್ ಫಿ.
9. ಮ್ಯುನಿಸಿಪಲ್ ಲೈಟಿಂಗ್ ಮಾತ್ರ ಟೆಂಡರ್ ಮೂಲಕವೂ.

ಇಂಡಿಯಾ ದೇಶಕ್ಕಾಗಿ ನಡೆದ "ರೌಂಡ್‌ಟೇಬಲ್" ಸಮ್ಮೇಳನ

ಅತಿ ಮುಖ್ಯವಾದ ಕೆಲವು ರಾಜಕೀಯ ವಿಚಾರಗಳ ಸಂಬಂಧವಾಗಿ ಕೆಲವು ಸಲಹೆಗಳು

ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರಿಂದ

(ತಾ|| 9 ರ ಸಂಚಿಕೆಯಿಂದ ಮುಂದುವರಿದುದು.)

ಈ ಕೊಂದರೆಯು ಇಂಡಿಯಾ ಸರ್ಕಾರದವರಿಗೂ ಕೋರಿಬಂದಿದ್ದಿತು. ಅವರು ರಾಜಕೀಯ ಸುಧಾರಣೆಗಳ ವಿಚಾರದಲ್ಲಿ ಕಳುಹಿಸಿದ ಸಲಹೆಗಳ 45 ನೆಯ ಪುಟದಲ್ಲಿ ಈ ವಿಚಾರವಾಗಿ ಅವರು ಹೇಳಿರುವುದೇನೆಂದರೆ :—

"ಈ ಹಕ್ಕುಗಳನ್ನು ಕೇವಲ ಅನಿರ್ದಿಷ್ಟ ರೀತಿಯಲ್ಲಿ ರಾಜಕೀಯ ವಿಚಾರದ ಸೂಕ್ತಿಮಂಜರಿಯಂತೆ ಹೇಳಿಬಿಟ್ಟರೆ ಉದ್ದಿಷ್ಟವಾದ ಸಾರ್ಥಕವಾಗಿ ನೆರವೇರುವುದಕ್ಕೆ ಅದರಿಂದ ಏನೇನೂ ಸಹಾಯವಾಗುವುದಿಲ್ಲ. ಅದೇನೋ ಸರಿಯೆ. ಆದರೆ ಎಲ್ಲ ಹಕ್ಕುಗಳ ಸಂಬಂಧದಲ್ಲಿಯೂ ಕೋರ್ಟಿಗೆ ಹೋಗಲು ಅವಕಾಶವಾದರೆ ಅದರಿಂದಲೂ ತೊಂದರೆಯುಂಟು. ಕೆಲವು ಹಕ್ಕುಗಳ ಸಂಬಂಧದಲ್ಲಂತೂ, ಅವುಗಳಿಗುಂಟಾದ ಪ್ರತಿಬಂಧಕಗಳನ್ನು ಅಥವಾ ಲೋಪಗಳನ್ನು ಕುರಿತು ಕೋರ್ಟು ವ್ಯವಹರಣೆಗಳು ನಡೆಯುವುದಕ್ಕೆ ಅವಕಾಶವನ್ನು ಕಲ್ಪಿಸುವುದು ಉಚಿತವಲ್ಲವೆಂದೇ ತೋರುವುದು. ಆಡಳಿತ ನಿರ್ವಹಣ ಕ್ರಮದಲ್ಲಿ ನಡೆದ ಎಲ್ಲ ಹುಕುಮುಗಳ ಮೇಲೂ ಕೋರ್ಟು ವ್ಯವಹರಣೆಗೆ ಅವಕಾಶವಿರುವಂತೆ ಮಾಡಿದರೆ, ಅದರ ದೆಸೆಯಿಂದ ಅನೇಕ ಪ್ರಬಲವಾದ ಅನನುಕೂಲಗಳೂ, ಮುಗ್ಗಟ್ಟಿನ ಸ್ಥಿತಿಯೂ ತಪ್ಪದೆ ಸಂಭವಿಸುತ್ತವೆ. ಅದಾಗ್ಗೂ, ಈ ಹಕ್ಕುಗಳಿಗೆ ಯಾವ ವ್ಯವಹಾರ ಬಲೀಯವೂ ಇಲ್ಲದೆ ಅವು ಕೇವಲ ನಿರರ್ಥಕವಾಗದಂತೆಯೂ, ಅಥವಾ ಅವುಗಳಲ್ಲದರ ಸಂಬಂಧದಲ್ಲಿಯೂ ಕೋರ್ಟು ವ್ಯವಹರಣೆಗಳಿಗೆ ಅವಕಾಶವಿದ್ದು ಇಲ್ಲದ ಸಲ್ಲದ ರಗಳೆಗೆ ಅವಕಾಶವಾಗದಂತೆಯೂ, ಇವೆರಡಕ್ಕೂ ಮಧ್ಯಸ್ಥವಾದ ಅನುಕೂಲ ಮಾರ್ಗವೊಂದು ಇರಬಹುದು."

ಈ ಬಗೆಯ ಅನುಕೂಲಮಾರ್ಗವಾಗಿ ಕೆಲವು ಸಲಹೆಗಳನ್ನು ಕೊಡಬಹುದಾಗಿದೆ. ಅವು ಯಾವುವೆಂದರೆ :—

(೧) ಆಡಳಿತ ಕ್ರಮದ ಹೊಸ ಶಿಸ್ತಿನಲ್ಲೇ ಅಂಗಭೂತವಾಗಿರುವಂತೆ ಹಕ್ಕುಗಳ ವ್ಯವಸ್ಥಾಪತ್ರಿಕೆಯೊಂದನ್ನು ಸೇರಿಸಬೇಕಾದಲ್ಲಿ, ಪ್ರಜಾಮಾತ್ರಕ್ಕೆ ವಾಸ್ತವವಾಗಿ ದೊರೆಯಬೇಕಾದ ಮತ್ತು ಚೆನ್ನಾಗಿ ಅಂಗೀಕೃತವಾದ ಹಕ್ಕುಗಳನ್ನು ಮಾತ್ರವೇ ಅದರಲ್ಲಿ ಕಾಣಿಸಬೇಕು. ವಿವಾದಾಸ್ಪದವಾದ ನಿಯಮಗಳನ್ನಾಗಲಿ ಬಹಳ ಹಣ ವ್ಯಯವಾಗುವ ಸಾಮಾಜಿಕ ಸುಧಾರಣೆಯ ಕಾರ್ಯಕ್ರಮವನ್ನಾಗಲಿ ಅದರಲ್ಲಿ ಸೇರಿಸಕೂಡದು. ಮುಂದೆ ಹೇಳುವ ವಿವರವನ್ನು ಕಾಣಿಸಿದರೆ ಸಾಕೆಂದು ತೋರುವುದು. (ದಿವಂಗತರಾದ ಮೋತೀಲಾಲ್ ನೆಹರೂ—ಅವರು ಸೂಚಿಸಿದ್ದ ಆಡಳಿತ ಕ್ರಮದ ಸಲಹೆಗಳಲ್ಲಿ ಅಡಕವಾಗಿರುವ ಅಂಶಗಳನ್ನೇ ಇಲ್ಲಿ ಸಾಮಾನ್ಯವಾಗಿ ಅನುಸರಿಸಲಾಗಿದೆ.) ಆ ವಿವರವು ಯಾವುದೆಂದರೆ :—

ಕಾನೂನಿಗನುಗುಣವಾದ ರೀತಿಯಲ್ಲಿ ಹೊರತು ಯಾವ ಮನುಷ್ಯನಿಗಾದರೂ ಅವನ ಸ್ವಾತಂತ್ರ್ಯಕ್ಕೆ ಭಂಗವನ್ನುಂಟುಮಾಡಕೂಡದು, ಅಥವಾ ಅವನ ಮನೆಗಾಗಲಿ ಸ್ವತ್ತಿಗಾಗಲಿ ಪ್ರವೇಶಿಸಕೂಡದು, ಅಥವಾ ಅವುಗಳನ್ನು ದೇಣಿಗಳ ವಿಲೆಗಾಗಿ ಈಡು ಮಾಡಕೂಡದು ಅಥವಾ ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಕೂಡದು.

ಸಾರ್ವಜನಿಕ ನೆಮ್ಮದಿಗೆ ಅಥವಾ ಸದ್ವರ್ತನೆಗೆ ಭಂಗವನ್ನುಂಟುಮಾಡದೆ ಯಾರು ಯಾವ ಮನೋವೃತ್ತಿಯನ್ನು ಬೇಕಾದರೂ ಇಟ್ಟುಕೊಂಡು ಯಾವ ಮತ ಧರ್ಮಗಳನ್ನು ಬೇಕಾದರೂ ಹೇಳಿಕೊಂಡು ಆಚರಣೆಗೆ ತಂದುಕೊಳ್ಳಬಹುದೆಂದು ಈ ಮೂಲಕ ಹಕ್ಕುಬಾಧ್ಯತೆಗಳನ್ನು ಎಲ್ಲರಿಗೂ ಕೊಡಲಾಗಿದೆ.

ಪ್ರಜಾನೆಮ್ಮದಿಗೂ, ಸಾರ್ವಜನಿಕ ನೀತಿನಯಗಳಿಗೂ ವಿರುದ್ಧವಾಗಿಲ್ಲದ ಉದ್ದೇಶಗಳಿಗಾಗಿ ಪ್ರಜೆಗಳು ತಂತಮ್ಮ ಅಭಿಪ್ರಾಯಗಳನ್ನು ಧಾರಾಳವಾಗಿ ವ್ಯಕ್ತಪಡಿಸುವ ಹಕ್ಕನ್ನೂ, ಆಯುಧಗಳಿಲ್ಲದೆ ಶಾಂತರೀತಿಯಿಂದ ಸಭೆ ಸೇರುವ ಹಕ್ಕನ್ನೂ ಮತ್ತು ಸಂಘಗಳನ್ನೂ ಯೂನಿಯನ್ನುಗಳನ್ನೂ ಏರ್ಪಡಿಸುವ ಹಕ್ಕನ್ನೂ ಈ ಮೂಲಕವಾಗಿ ಪ್ರಜೆಗಳಿಗೆ ಖಾತರಿ ಮಾಡಿಕೊಡಲಾಗಿದೆ.

ನ್ಯಾಯಶಾಸನ ವಿಚಾರದಲ್ಲಿ ಸಮಸ್ತ ಪ್ರಜೆಗಳಿಗೂ ಸಮಾನತೆಯೂ, ಸಮಾನವಾದ ಪೌರಕಾರ್ಯದ ಹಕ್ಕುಗಳೂ ಇರುತ್ತವೆ.

ಪ್ರಜೆಗಳಲ್ಲಿ ಪಕ್ಷಪಾತಕ್ಕೆ ಕಾರಣವಾಗುವಂಥ ಯಾವ ಶಾಸನ ನಿಬಂಧನೆಗಳಾಗಲಿ, ವ್ಯವಹರಣೆಯ ವಿಧಾನದ ನಿಯಮಗಳಾಗಲಿ, ತಪ್ಪಿತಸ್ಥರ ದಂಡನೆಯ ಸಂಬಂಧವಾದ ಕಾನೂನುಗಳಲ್ಲಿರತಕ್ಕುದಲ್ಲ.

ಯಾವುದಾದರೂ ಒಂದು ಕೆಲಸವನ್ನು ಮಾಡಿದ ಕಾಲದಲ್ಲಿ ಅದು ದಂಡನಾರ್ಹವಾದ ಅಪರಾಧವೆಂದು ಪರಿಗಣಿಸಲ್ಪಡದೆ ಇದ್ದ ಪಕ್ಷದಲ್ಲಿ, ಆ ತರುವಾಯ ಅದೇ ಕೆಲಸಕ್ಕಾಗಿ ದಂಡನೆಯನ್ನು ವಿಧಿಸತಕ್ಕುದಲ್ಲ.

ಸರ್ಕಾರಿ ನೌಕರಿಗಳನ್ನಾಗಲಿ ಭಾರಿಯಾದ ಅಥವ ಗೌರವ ಯುಕ್ತವಾದ ಹುದ್ದೆಯನ್ನಾಗಲಿ ಪಡೆಯುವುದಕ್ಕೂ, ಯಾವುದಾದರೂ ವ್ಯಾಪಾರವನ್ನು ನಡೆಯಿಸುವುದಕ್ಕೂ ಅಥವಾ ವೃತ್ತಿಯನ್ನು ಕೈಕೊಳ್ಳುವುದಕ್ಕೂ ಯಾರೊಬ್ಬರ ಮತ, ಜಾತಿ, ಮತ್ತು ಪಂಗಡ, ಇದೊಂದೂ ಪ್ರತಿಬಂಧಕವಾಗಿರತಕ್ಕುದಲ್ಲ.

ಯಾರೇ ಆಗಲಿ ಯಾವುದಾದರೂ ಇತರ ಮತವನ್ನು ಅವಲಂಬಿಸಿದಾಗ ಅಷ್ಟರಿಂದ ಮಾತ್ರವೇ ಅವರಿಗೆ ಪೌರರಾಗಿ ಇದ್ದ ಹಕ್ಕುಗಳಾಗಲಿ, ವಿಶೇಷಾಧಿಕಾರಗಳಾಗಲಿ ತಪ್ಪಿಹೋಗತಕ್ಕುದಲ್ಲ ಮತ್ತು ಅವರು ಯಾವ ದಂಡನೆಗೂ ಗುರಿಯಾಗತಕ್ಕುದಲ್ಲ.

ಬಹಿರಂಗವಾಗಿ ಎಲ್ಲ ರಸ್ತೆಗಳನ್ನೂ ಉಪಯೋಗಿಸುವುದಕ್ಕೂ, ಎಲ್ಲ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶಿಸುವುದಕ್ಕೂ ಪ್ರಜೆಗಳೆಲ್ಲರಿಗೂ ಸರ್ವ ಸಮಾನವಾದ ಹಕ್ಕುಗಳಿರತಕ್ಕುದಾಗಿದೆ.

ಕೂಲಿಗಾರರ ಯೋಗಕ್ಷೇಮವನ್ನು ಕಾಪಾಡಿ ಅವರ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿಯೂ, ಆರ್ಥಿಕ ಪರಿಸ್ಥಿತಿಯನ್ನು ಮೇಲ್ಪಡಿಸುವುದಕ್ಕಾಗಿಯೂ, ಒಟ್ಟಿಗೆ ಸೇರುವುದಕ್ಕೂ, ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೂ, ಎಲ್ಲ ಕಸಬುಗಳನ್ನು ಅವಲಂಬಿಸುವುದಕ್ಕೂ ಪ್ರತಿಯೊಬ್ಬರಿಗೂ ಸ್ವಾತಂತ್ರ್ಯವುಂಟು. ಈ ಸ್ವಾತಂತ್ರ್ಯಕ್ಕೆ ನಿರ್ಬಂಧವನ್ನಾಗಲಿ, ಅಡಚಣೆಯನ್ನಾಗಲಿ, ಉಂಟುಮಾಡತಕ್ಕ ಎಲ್ಲ ಒಪ್ಪಂದಗಳೂ, ಎಲ್ಲ ಏರ್ಪಾಡುಗಳೂ, ನೀತಿವಿರುದ್ಧವಾದುವುಗಳೇ ಸರಿ.

ಸ್ತ್ರೀಯರಿಗೂ, ಪುರುಷರಿಗೂ, ಪ್ರಜೆಗಳಾಗಿ ಸಮಾನವಾದ ಹಕ್ಕುಗಳುಂಟು.

(೨) ದೇಶದ ಶಾಸನ ಸಭೆಗಳು ವಾಡಿಕೆಯಾಗಿ ಈ ನಿಯಮಗಳಿಗೆ ಗೌರವವನ್ನು ಕೊಟ್ಟು ವರ್ತಿಸುವುವೆಂದು ನಿರೀಕ್ಷಿಸಬಹುದಾಗಿದೆ. ಆದರೆ ಅಲ್ಪಸಂಖ್ಯಾತಪಂಗಡಗಳವರು ತಮ್ಮ ವಿಶೇಷ ವಿಧದ ಹಕ್ಕುಬಾಧ್ಯತೆಗಳನ್ನು ಕಾಪಾಡುವುದಕ್ಕಾಗಿ ಆಡಳಿತ ಯಂತ್ರದಲ್ಲೇ ಅವಕಾಶವನ್ನು ಕಲ್ಪಿಸುವುದು ಅವಶ್ಯಕವೆಂಬುದಾಗಿಯೂ, ಅದು ಕೇವಲ ಪ್ರಾಮುಖ್ಯವೆಂಬುದಾಗಿಯೂ ಭಾವಿಸಿರುವುದರಿಂದ ನಡೆವಳಿಕೆಯ ವಿಧಾನದಲ್ಲಿ ಅವರುಗಳ ಸಲಹೆಯಂತೆ ಮುಂದೆ ಹೇಳುವ ಮಾರ್ಗಗಳನ್ನು ಅನುಸರಿಸಿ ಅನುಕೂಲ್ಯಗಳನ್ನು ಕಲ್ಪಿಸಬಹುದೇ—ಎಂಬುದನ್ನು ಪರ್ಯಾಲೋಚಿಸಬಹುದಾಗಿದೆ :—

ಸಂಯುಕ್ತಶಾಸನ ಸಭೆಯಿಂದಾಗಲಿ ಪ್ರಾಂತಿಕಶಾಸನ ಸಭೆಯಿಂದಾಗಲಿ, ಒಂದು ಮಸೂದಾಕಾನೂನು ಮಂಜೂರಾದರೆ, ಮತ್ತು ಯಾವುದಾದರೂ ಒಂದು ಪಂಗಡಕ್ಕೆ ಸೇರಿದ ಅದರ ಸದಸ್ಯರಲ್ಲಿ ಮೂರರಲ್ಲೊಂದು ಭಾಗದ ಸದಸ್ಯರ ಅಭಿಪ್ರಾಯದಲ್ಲಿ ಅದು ಅವರ ಮತಕ್ಕಾಗಲಿ ಅಥವಾ ಮತಧರ್ಮವನ್ನವಲಂಬಿಸಿರುವ ಸಾಮಾಜಿಕ ಪದ್ಧತಿಗಳಿಗಾಗಲಿ ಬಾಧಕವನ್ನುಂಟುಮಾಡುವುದಾಗಿದೆಯೆಂದು ತೋರಿದರೆ, ಆ ಸದಸ್ಯರುಗಳು ಆ ಮಸೂದಾಕಾನೂನು ಮಂಜೂರಾದ ಒಂದು ತಿಂಗಳೊಳಗಾಗಿ ಸಭೆಯ ಅಧ್ಯಕ್ಷರಲ್ಲಿ (ಪ್ರೆಸಿಡೆಂಟರಲ್ಲಿ) ತಮ್ಮ ಆಕ್ಷೇಪಣೆಗಳನ್ನು ಬರೆದು ದಾಖಲು ಮಾಡಬೇಕು. ಆಯಾ ಸಂದರ್ಭಾನುಸಾರವಾಗಿ ಅಧ್ಯಕ್ಷರು ಆ ಆಕ್ಷೇಪಣೆಗಳನ್ನು ಗವರ್ನರ್ ಜನರಲ್‌ರವರಿಗಾಗಲಿ, ಅಥವಾ ಗವರ್ನರಿಗಾಗಲಿ, ಕಳುಹಿಸಬೇಕು. ಗವರ್ನರ್ ಜನರಲ್‌ರವರು ಅಥವಾ ಗವರ್ನರವರು ತಮ್ಮಲ್ಲಿಗೆ ಬಂದ ಆ ಆಕ್ಷೇಪಣೆಗಳನ್ನು ಸಂಯುಕ್ತ ವ್ಯವಸ್ಥೆಯ ದೊಡ್ಡ ನ್ಯಾಯಸ್ಥಾನಕ್ಕೆ (ಫೆಡರಲ್ ಕೋರ್ಟಿಗೆ) ಕಳುಹಿಸಿ ಆ ಆಕ್ಷೇಪಣೆಗಳು ಯುಕ್ತವಾದುವೇ ಅಲ್ಲವೇ ಎಂಬ ಭಾಗದಲ್ಲಿ ಆ ನ್ಯಾಯಸ್ಥಾನದವರ ಅಭಿಪ್ರಾಯವನ್ನು ತಮ್ಮಲ್ಲಿಗೆ ತರಿಸಿಕೊಳ್ಳಬೇಕು. ಆ ಆಕ್ಷೇಪಣೆಗಳು ಯುಕ್ತವಾದವುಗಳಲ್ಲವೆಂದು ಅಭಿಪ್ರಾಯವು ಬಂದಿದ್ದರೆ; ಮೇಲೆ ಹೇಳಿದಂತೆ ಮಂಜೂರಾಗಿರುವ ಮಸೂದಾಕಾನೂನಿಗೆ ತಮ್ಮ ಸಮ್ಮತಿಯನ್ನು ಕೊಟ್ಟು ಆ ಕಾನೂನನ್ನು ಆಚರಣೆಗೆ ತರಬೇಕು. ಆ ಆಕ್ಷೇಪಣೆಗಳು ಯುಕ್ತವಾದವುಗಳೆಂದು ಅಭಿಪ್ರಾಯವು ಆ ನ್ಯಾಯಸ್ಥಾನದವರಿಂದ ಬಂದಿದ್ದರೆ, ಮೇಲೆ ಹೇಳಿದಂತೆ ಸಭೆಯಲ್ಲಿ ಮಂಜೂರಾದ ಮಸೂದಾಕಾನೂನಿಗೆ ತಮ್ಮ ಸಮ್ಮತಿಯನ್ನು ಕೊಡಲಾಗುವುದಿಲ್ಲವೆಂದು ನಿರಾಕರಿಸಬೇಕು. ಒಂದು ಮಸೂದಾಕಾನೂನಿಗೆ ಗವರ್ನರ್ ಜನರಲ್‌ರವರ ಅಥವಾ ಗವರ್ನರವರ ಸಮ್ಮತಿಯು ದೊರೆತ ತರುವಾಯ ಅದು ಪ್ರಜಾಮಾತ್ರದವರಿಗೆ ದೊರೆಯುವ ಯಾವುದಾದರೂ ಒಂದು ಮೂಲರೂಪದ ಮುಖ್ಯವಾದ ಹಕ್ಕಿಗೆ ಬಾಧಕವನ್ನುಂಟುಮಾಡುವುದಾಗಿದೆಯೆಂಬ ಕಾರಣದ ಮೇಲೆ ಯಾವ ನ್ಯಾಯಸ್ಥಾನದಲ್ಲಾಗಲಿ ಅದರ ಸಲುವಳಿಯ ವಿಷಯದಲ್ಲಿ ತರ್ಕಿಸುವುದಕ್ಕೆಂದಿಗೂ ಅವಕಾಶವಿರತಕ್ಕುದಲ್ಲ.

(೩) ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯಲ್ಲಿ ಸೇರಿಸಲ್ಪಟ್ಟಿರುವ ಹಕ್ಕುಗಳ ವ್ಯವಸ್ಥಾಪತ್ರಿಕೆಯು ಸಂಯುಕ್ತ ವ್ಯವಸ್ಥೆಯ ಕಾರ್ಯಕ್ಷೇತ್ರಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ಹೊರತು ಇತರ ಯಾವ ರೀತಿಯಲ್ಲಿಯೂ ಸಂಸ್ಥಾನಗಳಿಗೆ ಅನ್ವಯಿಸತಕ್ಕುದಲ್ಲ. ಸಂಯುಕ್ತರಾಜ್ಯಾಂಗ ವ್ಯವಸ್ಥೆಯ ಕಾನೂನಿನಲ್ಲಿ ಸೇರಿಸುವ ಆ ವ್ಯವಸ್ಥಾಪತ್ರಿಕೆಯ ಮಾದರಿಯನ್ನೇ ಸಾಮಾನ್ಯವಾಗಿ ಅನುಸರಿಸಿ ಸಂಸ್ಥಾನಗಳವರು ತಂತಮ್ಮ ಸಂಸ್ಥಾನದ ಸ್ಥಿತಿಗತಿಗಳಿಗೂ, ವಿಶೇಷ ವಿಧದ ಆವಶ್ಯಕತೆಗಳಿಗೂ ಅನುಸಾರವಾಗಿ ತಮ್ಮ ಪ್ರಜೆಗಳಿಗೆ ಹಕ್ಕುಬಾಧ್ಯತೆಗಳ ವ್ಯವಸ್ಥಾಪತ್ರಿಕೆಯನ್ನು ರಚಿಸಿಕೊಡುವುದಕ್ಕೆ ಅವರಿಗೆ ಅವಕಾಶವಿರಬೇಕು.

ರಕ್ಷಾ ಸಾಧನಗಳು.

ಇಂಡಿಯಾ ದೇಶಕ್ಕೆ ರಾಜಕೀಯ ಸುಧಾರಣೆಗಳನ್ನು ಕೊಡುವ ಸಂಬಂಧವಾಗಿ ತಾವು ಅನುಸರಿಸಬೇಕೆಂದಿರುವ ಕಾರ್ಯನಿಯಮವನ್ನು ಕುರಿತು ಪ್ರಸ್ತಾಪಿಸುವಲ್ಲಿ ಬ್ರಿಟಿಷ್ ಸರ್ಕಾರದ ಪ್ರಧಾನ ಸಚಿವರು (ಪ್ರೈಮ್ ಮಿನಿಸ್ಟರವರು) ರೌಂಡ್‌ಟೇಬಲ್ ಸಮ್ಮೇಳನದ ಮೊದಲನೆಯ ಅಧಿವೇಶನದಲ್ಲಿ ರಕ್ಷಾಸಾಧನಗಳ (ಸೇಫ್ ಗಾರ್ಡ್ಸ್) ವಿಚಾರದಲ್ಲಿ ತಿಳಿಸಿದ ಅಂಶಗಳನ್ನು ಎರಡನೆಯ ಅಧಿವೇಶನದಲ್ಲಿಯೂ ತಿಳಿಸಿ ದೃಢೀಕರಿಸಿದರು. ಕಾನೂನಿನಲ್ಲಿ ಏರ್ಪಡಿಸತಕ್ಕ ರಕ್ಷಾಸಾಧನಗಳನ್ನು ಶಾಶ್ವತವಾಗಿ ಆಚರಣೆಯಲ್ಲಿಡುವ ಉದ್ದೇಶವೇನೂ ಇಲ್ಲವೆಂದೂ, ಕೇವಲ ಮಧ್ಯಕಾಲದ ಅವಧಿಗಾಗಿ ಮಾತ್ರವೇ ಆಚರಣೆಯಲ್ಲಿಡುವ ಉದ್ದೇಶದಿಂದ ಅವುಗಳನ್ನು ಏರ್ಪಡಿಸಲಾಗುವುದೆಂದೂ, ಅವರು ತಿಳಿಸಿದರು. ಕೆಲವು ವಿಚಾರಗಳಲ್ಲಿ ಶಾಸನ ಸಭೆಯವರು ಪ್ರವರ್ತಿಸಲು ಅವಕಾಶವಿಲ್ಲದಂತೆ ಕಾಯ್ದಿಡಲ್ಪಟ್ಟ ವಿಶೇಷಾಧಿಕಾರಗಳನ್ನು ಉಂಟುಮಾಡಿಕೊಡುವುದೇ ಈ ರಕ್ಷಾಸಾಧನಗಳ ಉದ್ದೇಶವಷ್ಟೆ. ಈ ವಿಶೇಷಾಧಿಕಾರಗಳನ್ನೂ, ಅವುಗಳನ್ನು ಚಲಾಯಿಸುವ ವಿಧಾನಗಳನ್ನೂ ಗೊತ್ತುಮಾಡುವುದರಲ್ಲಿ ಇಂಡಿಯಾ ದೇಶವು ಪ್ರಭುತ್ವಕ್ರಮದ ಹೊಸಶಿಸ್ತಿನ ಮೂಲಕ ಪೂರ್ಣ ಜವಾಬ್ದಾರಿ ಸರ್ಕಾರವನ್ನು ಪಡೆಯುವುದಕ್ಕೆ ಲೇಶಮಾತ್ರವೂ ಬಾಧಕವಿಲ್ಲದಂತೆ ವರ್ತಿಸಬೇಕೆಂಬುದೇ ಸಾರ್ವಭೌಮ ಸರ್ಕಾರದವರ ಮುಖ್ಯೋದ್ದೇಶವಾಗಿರುತ್ತದೆಂದೂ ಸಹ ಪ್ರಧಾನ ಸಚಿವರು ಭರವಸೆ ಹೇಳಿದ್ದಾರೆ. "ಹೌಸ್ ಆಫ್ ಕಾಮನ್ಸ್" ಸಭೆಯಲ್ಲಿ ಭಾಷಣ ಮಾಡುವಾಗ್ಗೆ ಇಂಡಿಯಾದೇಶದ ಸ್ಟೇಟ್ ಸೆಕ್ರೆಟರಿಯವರಾದ ಸರ್ ಸ್ಯಾಮ್ಯುಯೆಲ್ ಹೋರ್‌ರವರೂ ಇದೇ ಅಭಿಪ್ರಾಯವನ್ನೇ ವ್ಯಕ್ತಪಡಿಸಿ "ಇಂಡಿಯಾ ದೇಶದ ಮುಂದಣ ಅಭ್ಯುದಯಕ್ಕೆ ಈ ರಕ್ಷಣಾ ಸಾಧನಗಳು ಪ್ರತಿಬಂಧಕವಾಗಿರುವುದಿಲ್ಲ. ಇಷ್ಟಕ್ಕೂ ಅವು ಇಂಡಿಯಾ ದೇಶದ ಪ್ರಭುತ್ವ ಕ್ರಮದ ಹೊಸ ಶಿಸ್ತು ದೃಢಮೂಲವಾಗಿಯೂ ದಾರ್ಢ್ಯದಿಂದಲೂ ಕೂಡಿ ನಡೆದು ಬರುವುದಕ್ಕೆ ಅತ್ಯಾವಶ್ಯಕವಾಗಿ ಬೇಕಾದ ಸಾಧನದಂತಿರುತ್ತವೆ. ಅವುಗಳಿಲ್ಲದೆ ಹೋದರೆ ಆ ಹೊಸ ಶಿಸ್ತು ಆ ರೀತಿ ಇರುವುದಕ್ಕಾಗುವುದಿಲ್ಲ" ಎಂಬುದಾಗಿ ಹೇಳಿದ್ದಾರೆ.

ದಕ್ಷರೂ, ಇಂಡಿಯಾದೇಶದ ಯೋಗಕ್ಷೇಮದಲ್ಲಿ ನಿಶ್ಚಲವಾದ ಆಸಕ್ತಿಯುಳ್ಳವರೂ, ಆಗಿರುವ ಈ ರಾಜನೀತಿ ವಿಶಾರದರು ಹೀಗೆ ಹೇಳಿರುವುದನ್ನು ನೋಡಿದರೆ, ಬ್ರಿಟಿಷ್ ಜನಾಂಗದ ನಿಜವಾದ ಉದ್ದೇಶಗಳ ವಿಚಾರದಲ್ಲಿರಬಹುದಾದ ಸಮಸ್ತ ವಿಧದ ಶಂಕಾತಂಕಗಳೂ ನಿವಾರಣೆಯಾಗಲೇಬೇಕು. ಇಂಡಿಯಾದೇಶದ ಈಗಿನ ಸ್ಥಿತಿಯಲ್ಲಿ ಯಾವುದಾದರೂ ಒಂದು ರೀತಿಯಲ್ಲಿ ರಕ್ಷಾಸಾಧನಗಳು ಇದ್ದಲ್ಲದೆ ನಿರ್ವಾಹವಿಲ್ಲವೆಂಬ ಸಂಗತಿಯನ್ನು ನಾವೂ ಮನವಮುಟ್ಟ ಅರಿತುಕೊಳ್ಳಬೇಕು. ಆದಕಾರಣ, (೧) ಈ ರಕ್ಷಾಸಾಧನಗಳ ಆಶಯವು ಎಷ್ಟು ಮಟ್ಟಿಗಿರಬೇಕೆಂಬುದನ್ನೂ, (೨) ಅವು ಎಷ್ಟು ಕಾಲ ಚಾಲ್ತಿಯಲ್ಲಿರಬೇಕೆಂಬುದನ್ನೂ ವಿಚಾರಮಾಡಬೇಕಾದುದೇ ನಾವು ಅವಶ್ಯವಾಗಿ ಜರುಗಿಸಬೇಕಾದ ಕಾರ್ಯವಾಗಿದೆ.

ದೇಶರಕ್ಷಣೆಯ ಸೈನ್ಯ.

ಕ್ಲುಪ್ತವಾದೊಂದು ಅವಧಿಯನ್ನು ಗೊತ್ತುಮಾಡಿ. ಆ ಅವಧಿಯಲ್ಲಿ ಸೈನ್ಯದ ಹತೋಟಿಯ ಅಧಿಕಾರಸೂತ್ರವು ಗವರ್ನರ್ ಜನರಲ್‌ರವರ ಕೈಯಲ್ಲಿರಬೇಕೆಂದೂ, ಆ ಬಳಿಕ ಅದು ಶಾಸನ ಸಭೆಗೆ ಜವಾಬ್ದಾರರಾಗಿರುವ ಸಚಿವರ ಕೈಗೆ ಹೋಗಬಹುದೆಂದೂ ಏರ್ಪಡಿಸುವುದೇನೂ ಅಸಾಧ್ಯವಾಗಿರಲಾರದು. ಈ ಅವಧಿಯು ೧೫ ಅಥವಾ ೨೦ ವರುಷಗಳೆಂದು ಗೊತ್ತುಮಾಡಬಹುದು. ಹೀಗೆ ಒಂದು ಅವಧಿಯನ್ನು ನಿರ್ದಿಷ್ಟರೀತಿಯಲ್ಲಿ ಗೊತ್ತುಮಾಡಿ ಆ ಅವಧಿಯಲ್ಲಿ ಮಾತ್ರವೇ ಸೈನ್ಯದ ಆಡಳಿತ ಸೂತ್ರವು ಗವರ್ನರ್ ಜನರಲ್‌ರವರ ಕೈಯಲ್ಲಿರುವುದೆಂದು ತಿಳಿಸಿದಲ್ಲಿ ಮಾತ್ರವೇ ಇಂಡಿಯಾ ದೇಶದ ಪ್ರಜೆಗಳು ತಮಗೆ ವಾಗ್ದಾನವಾಗಿರುವ ಜವಾಬ್ದಾರಿ ಸರ್ಕಾರ ಕ್ರಮವು ಕನ್ನಡಿಯೊಳಗಿನ ಗಂಟಲ್ಲವೆಂದೂ, ಅದು ಶೀಘ್ರದಲ್ಲೇ ವಾಸ್ತವವಾಗಿ ದೊರೆಯುವುದೆಂದೂ, ಭಾವಿಸಲು ಭರವಸೆಯುಂಟಾಗುತ್ತದೆ.

ಮೇಲೆ ತಿಳಿಸಿರುವ ಈ ನಿರೂಪಣೆಗಳಿಗೊಳಪಡಿಸಿ, ನಾನೂ ಈ ವಿಚಾರಗಳಲ್ಲಿ ರೌಂಡ್‌ಟೇಬಲ್ ಸಮ್ಮೇಳನದವರು ಮಾಡಿರತಕ್ಕ ತೀರ್ಮಾನಗಳನ್ನೇ ಸಾಮಾನ್ಯತ್ವೇನ ಅಂಗೀಕರಿಸುತ್ತೇನೆ. ಅವರು ಮಾಡಿರುವ ತೀರ್ಮಾನಗಳು ಯಾವುವೆಂದರೆ—

(೧) ಹೀಗೆ ಕ್ಲುಪ್ತಮಾಡಿದ ಮಧ್ಯಕಾಲದ ಅವಧಿಯಲ್ಲಿ ಸೈನ್ಯದ ಆಡಳಿತ ಸೂತ್ರವೂ, ದೇಶರಕ್ಷಣೆಯ ಜವಾಬ್ದಾರಿಯೂ ಗವರ್ನರ್ ಜನರಲ್‌ರವರು ತಮಗೆ ಸರಿತೋರಿದ ಯಾರನ್ನಾದರೂ ನೇಮಕಮಾಡಿಕೊಳ್ಳುವಂತೆ ಆ ವಿಚಾರವನ್ನು ಅವರ ಸಂಪೂರ್ಣ ವಿವೇಚನೆಗೆ ಬಿಟ್ಟುಬಿಡಬೇಕು. ಪರಂತು ಈ ಹುದ್ದೆಯನ್ನು ಭಾರತೀಯರಿಗೇ ಕೊಡಬೇಕೆಂಬ ಮತ್ತು ಶಾಸನ ಸಭೆಯ ಸದಸ್ಯರಿಗೇ ಕೊಡಬೇಕೆಂಬ ಸಂಪ್ರದಾಯವು ಮುಂದೆ ಯಥಾಕಾಲದಲ್ಲಿಯೂ, ಮತ್ತು ತಕ್ಕ ಸಂದರ್ಭಗಳಲ್ಲಿಯೂ ಮಾತ್ರವೇ ಏರ್ಪಡುವಂತೆಯೂ, ಸದ್ಯದಲ್ಲಿ ಆ ವಿಚಾರಗಳನ್ನು ಪರ್ಯಾಲೋಚಿಸದೆಯೂ ಬಿಟ್ಟುಬಿಡಬೇಕು ;

(೨) ದೇಶರಕ್ಷಣೆಯ ಸೈನ್ಯದ ವೆಚ್ಚಕ್ಕಾಗಿ ಎಷ್ಟು ಮೊಬಲಗನ್ನು ವಿನಿಯೋಗಿಸುವುದು ಉಚಿತವೆಂಬುದನ್ನು ಚಕ್ರವರ್ತಿಗಳ ಪ್ರತಿನಿಧಿಗಳೂ ಮತ್ತು ಶಾಸನ ಸಭೆಯ ಪ್ರತಿನಿಧಿಗಳೂ ಸೇರಿ ಚರ್ಚಿಸಿ ನಿಯತಕಾಲಗಳಿಗೊಮ್ಮೆ ಗೊತ್ತುಮಾಡಬೇಕು ;

(೪) ದೇಶರಕ್ಷಣೆಯು ಬ್ರಿಟಿಷ್ ಸರ್ಕಾರದವರಿಗೆ ಮಾತ್ರವೇ ಸೇರಿದ ಜವಾಬ್ದಾರಿಯ ಕಾರ್ಯವಾಗಿರದೆ ಇಂಡಿಯಾದೇಶೀಯರಿಗೂ ಸದಾ ಆ ಜವಾಬ್ದಾರಿಯು ಹೆಚ್ಚು ಹೆಚ್ಚಾಗಿ ಸೇರುತ್ತ ಬರಬೇಕೆಂಬ ನಿಯಮಕ್ಕೆ ಗಮನಕೊಟ್ಟು, ಸೈನ್ಯ ಸಂಬಂಧವಾದ ಕಾರ್ಯ ನಿಯಮ ಕಲಾಪಗಳ ಚರ್ಚೆಯಲ್ಲಿ ಭಾಗವನ್ನು ವಹಿಸಿ ತಮ್ಮ ಮಾತಿಗೂ ತೂಕವಿರುವಂತೆ ಮಾಡಿಕೊಂಡು ತಮ್ಮ ಉದ್ದೇಶವೂ ಸ್ವಲ್ಪಮಟ್ಟಿಗೆ ನಡೆಯುವಂತೆ ನೋಡಿಕೊಳ್ಳುವ ಭಾಗದಲ್ಲಿ ಶಾಸನ ಸಭೆಯವರಿಗೆ ಈಗಿರುವ ಅವಕಾಶಗಳು ಕಡಿಮೆಯಾಗದೆ ಅವು ಕ್ರಮಕ್ರಮವಾಗಿ ಹೆಚ್ಚುತ್ತ ಬರುವಂತೆ ಏರ್ಪಡಿಸಬೇಕು.

(೫) ಸೈನ್ಯದಲ್ಲಿ ಭಾರತೀಯರನ್ನು ನೇಮಕಮಾಡುವ ಕೆಲಸವು ಸಾಧ್ಯವಾಗುವಷ್ಟು ಮಟ್ಟಿಗೂ ಸಾಂಗವಾಗಿ ನೆರವೇರುವವರೆಗೂ, ಸೈನ್ಯಕ್ಕೆ ಭಾರತೀಯರನ್ನೇ ಹೆಚ್ಚು ಹೆಚ್ಚಾಗಿ ಸೇರಿಸುತ್ತ ಬರಬೇಕು ; ಮತ್ತು

(೬) ಸೈನ್ಯದ ಆಡಳಿತದ ಸಂಬಂಧದಲ್ಲಿ ಕಾರ್ಯನಿರ್ವಾಹಕ ಮಂಡಲಿಯೊಂದನ್ನು (ಮಿಲಿಟರಿ ಕೌನ್ಸಿಲ್) ಏರ್ಪಾಡುಮಾಡಿ ಸಂಸ್ಥಾನಗಳ ಪ್ರತಿನಿಧಿಗಳಿಗೂ ಅಲ್ಲಿ ಸದಸ್ಯಸ್ಥಾನಗಳಿರುವಂತೆ ಗೊತ್ತುಮಾಡಬೇಕು.

ವಿದೇಶಗಳೊಡನೆ ವ್ಯವಹಾರ.

ಈ ವಿಚಾರವಾಗಿ ಫೆಡರಲ್ ಸ್ಟ್ರಕ್ಚರ್ ಸಮಿತಿಯವರ ನಾಲ್ಕನೆಯ ವರದಿಯು ೧೧ ಮತ್ತು ೧೨ನೆಯ ಪ್ಯಾರಾಗಳಲ್ಲಿ ಹೇಳಿರುವ ಅಂಶಗಳನ್ನೇ ನಾನೂ ಸಾಮಾನ್ಯತ್ವೇನ ಅಂಗೀಕರಿಸಿರುವೆನು. ಆದರೂ ಎರಡು ವಿಚಾರಗಳನ್ನು ಮಾತ್ರ ನಾನು ವಿಶೇಷವಾಗಿ ಒತ್ತಿ ಹೇಳಿ ತಿಳಿಸುವೆನು. ಅವು ಯಾವುವೆಂದರೆ:—(೧) ಸೈನ್ಯದ ಆಡಳಿತ ಸೂತ್ರದ ವಿಚಾರದಲ್ಲಿ ಗೊತ್ತುಮಾಡಿರುವಂತೆಯೇ ಪರದೇಶಗಳೊಡನೆ ನಡೆಯುವ ವ್ಯವಹಾರಗಳ ವಿಚಾರದಲ್ಲಿಯೂ ಸಹ ೧೫-೨೦ ವರುಷಗಳ ನಿರ್ದಿಷ್ಟವಾದೊಂದು ಅವಧಿಯಲ್ಲಿ ಮಾತ್ರವೇ ಅಧಿಕಾರವು ಗವರ್ನರ್ ಜನರಲ್‌ರವರಲ್ಲಿ ನೆಲಸಿರಬೇಕು ; ಮತ್ತು (೨) ಬ್ರಿಟಿಷ್ ಡೊಮಿನಿಯನ್ನುಗಳೊಡನೆಯೂ ಮತ್ತು ಪರದೇಶಗಳೊಡನೆಯೂ ನಡೆಯತಕ್ಕ ವಾಣಿಜ್ಯ ಕಾರ್ಯಕಲಾಪಗಳ ಹತೋಟಿಯ ಅಧಿಕಾರವೂ ಮತ್ತು ಕೌನ್ಸಲುಗಳೆಂಬ ಹೆಸರಿನಿಂದ ವಿದೇಶಗಳಲ್ಲಿರುವ ರಾಯಭಾರಿಗಳ ಕೆಲಸದ ಮೇಲಣ ಹತೋಟಿಯ ಅಧಿಕಾರವೂ ಸಹ, ಸಂಯುಕ್ತ ವ್ಯವಸ್ಥೆಯ ಸಚಿವರುಗಳಲ್ಲೇ (ಫೆಡರಲ್ ಮಿನಿಸ್ಟರುಗಳಲ್ಲೇ) ನೆಲಸಿರಬೇಕು.

ಹಣಕಾಸಿನ ಸಂಬಂಧವಾದ ರಕ್ಷಾಸಾಧನಗಳು.

ಇಂಡಿಯಾದೇಶದ ಸ್ಟೇಟ್ ಸೆಕ್ರೆಟರಿಯವರು ಏರ್ಪಡಿಸಿರತಕ್ಕ ಸರ್ಕಾರಿ ಸಾಲಗಳ ಸಂಬಂಧದಲ್ಲಿ ಬಡ್ಡಿ ಮುಂತಾದುವುಗಳ ವೆಚ್ಚಕ್ಕೂ, ಪರಿಣಾಮದಲ್ಲಿ ಅವುಗಳನ್ನು ತೀರಿಸುವುದಕ್ಕೂ ಹಣವನ್ನೊದಗಿಸಬೇಕು. ಅಲ್ಲದೆ, ಶಾಸನ ಸಭೆಗಳವರು ವ್ಯವಹರಿಸಲು ಅವಕಾಶವಿಲ್ಲದೆ ಗವರ್ನರ್ ಜನರಲ್‌ರವರಲ್ಲಿ ಮಾತ್ರವೇ ಅಧಿಕಾರವು ನೆಲಸಿರುವ ಬಾಬುಗಳಲ್ಲಿ ವೆಚ್ಚಕ್ಕೂ ಸಹ, ತಕ್ಕಷ್ಟು ಹಣವನ್ನು ಒದಗಿಸಬೇಕು. ಗವರ್ನರ್ ಜನರಲ್‌ರವರು ತಮ್ಮ ಜವಾಬ್ದಾರಿಗಳನ್ನು ಸರಿಯಾಗಿ ನೆರವೇರಿಸಲು ಅವಕಾಶವಿರುವಂತೆ, ಅತಿ ಜರೂರು ಸಂದರ್ಭಗಳಲ್ಲಿ ಅವರು ಚಲಾಯಿಸಬಹುದಾದ ವಿಶೇಷಾಧಿಕಾರಗಳನ್ನೂ ತಕ್ಕಂತೆ ಅವರಿಗೆ ಕೊಟ್ಟಿರಬೇಕು. ಇಷ್ಟರ ಹೊರತು, ಉಳಿದ ಸಮಸ್ತ ವಿಚಾರಗಳಲ್ಲಿಯೂ ಸಹ, ಶಾಸನ ಸಭೆಯವರಿಗೆ ಹಣಕಾಸಿನ ವೈವಾಟಿನ ಕಾರ್ಯನಿಯಮಗಳ ಮತ್ತು ರಾಜ್ಯಾಡಳಿತದ ವಿಷಯವಾಗಿ ಯಾವ ಬಗೆಯ ನಿರ್ಬಂಧಗಳೂ ಇಲ್ಲದೆ ಅವರಿಗೆ ಪೂರ್ಣಾಧಿಕಾರವಿರಬೇಕು. ಒಂದು ರಿಜರ್ವ್ ಬ್ಯಾಂಕನ್ನೂ, ಕರೆನ್ಸಿ ವಿಚಾರಗಳಲ್ಲಿ ನಿಪುಣರ ಸಭೆಯೊಂದನ್ನೂ, ಏರ್ಪಡಿಸಿಕೊಳ್ಳುವುದೇನೋ ಯುಕ್ತವಾಗಿರಬಹುದು. ಆದರೆ, ಮುಂದೆ ಏರ್ಪಡುವ ಸಂಯುಕ್ತ ಶಾಸನ ಸಭೆಯವರು ತಮ್ಮಿಂದಲೇ ಆಗಲಿ, ಅಥವಾ ತಮಗೆ ಅಧೀನರಾದ ಆಡಳಿತ ನಿರ್ವಹಣೆಯ ಅಧಿಕಾರವರ್ಗದವರಿಂದಲೇ ಆಗಲಿ ಹಣಕಾಸು ಪೋಲಾಗದೆ ಅಚ್ಚುಕಟ್ಟಾಗಿ ಕೆಲಸ ನಡೆಯುವಂತೆ ಮಾಡಲು, ಲೋಕಾನುಭವದ ವಿವೇಕದಿಂದ ಆಯವ್ಯಯ ವಿಚಾರಗಳೇ ಮುಂತಾದುವುಗಳಲ್ಲಿ ಯಾವ ಬಗೆಯ ನಿರ್ಬಂಧದ ಮತ್ತು ತಾಳಿಗೆ ಸಾಧಕವಾದ ಸಾಧನಗಳನ್ನಾದರೂ ಏರ್ಪಡಿಸಿಕೊಳ್ಳುವ ಕಾರ್ಯವು ಅವರನ್ನೇ ಸೇರಿದೆ. ಇಂಡಿಯಾದೇಶದ ವಾರ್ಷಿಕ ಹುಟ್ಟುವಳಿಯಲ್ಲಿ ಸುಮಾರು ಮೂರರಲ್ಲೆರಡುಪಾಲಿನಷ್ಟು ಮೊತ್ತವು, ಶಾಸನ ಸಭೆಯವರು ಆಡಳಿತದಲ್ಲಿ ಕೈಹಾಕುವುದಕ್ಕಿಲ್ಲದ ಸೈನ್ಯವೇ ಮುಂತಾದ ಇಲಾಖೆಗಳಿಗೂ ಮತ್ತು ಸರ್ಕಾರಿ ಸಾಲಗಳ ಸಲುವಾಗಿಯೂ ವೆಚ್ಚವಾಗಲು ಮೀಸಲಾಗಿದೆ. ಹೀಗಿರುವಲ್ಲಿ ಯಾವ ಸಂದರ್ಭದಲ್ಲೇ ಆಗಲಿ ಶಾಸನ ಸಭೆಯವರಿಗೆ ಉಳಿದಿರುವ ಆಯವ್ಯಯಗಳ ಆಡಳಿತದ ಅವಕಾಶವು, ಅವುಗಳ ಒಟ್ಟು ದಾಮಾಷಿಗೆ ಹೋಲಿಸಿ ನೋಡಿದರೆ ಪರಿಮಿತವಾಗಿದೆಯೆಂದೇ ಹೇಳಬೇಕು. ಇಷ್ಟು ಪರಿಮಿತವಾದ ಕ್ಷೇತ್ರದಲ್ಲಿ ಕೂಡ ಅವರಿಗೆ ಸಂಪೂರ್ಣವಾದ ಅಡಳಿತ ಸ್ವಾತಂತ್ರ್ಯವಿಲ್ಲದಂತೆ ನಿರ್ಬಂಧಗಳನ್ನು ಕಲ್ಪಿಸುವುದರಿಂದ, ಶಾಸನ ಸಭೆಯಲ್ಲಿ ಜವಾಬ್ದಾರಿಯ ಬುದ್ಧಿಯೇ ಇಲ್ಲದಂತಾಗುತ್ತದೆ ; ಹಾಗಾಗಕೂಡದೆಂಬ ಉದ್ದೇಶದಿಂದಲೇ ಕಾರ್ಯಾರಂಭಮಾಡಿಯೂ ಕೂಡ, ಹಾಗಾಗುವುದಕ್ಕೇ ಅವಕಾಶವನ್ನು ಕಲ್ಪಿಸಿದಂತಾಗುತ್ತದೆ. ಹೀಗೆ ಮಾಡುವುದೆಂದಿಗೂ ಉಚಿತವಲ್ಲ.

(ಸಶೇಷ.)

ಸ್ವೀಕಾರ

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಸಂ.

ಹಾಸನದ ಶೇಣಿ ಮಹಾದೇವಪ್ಪನವರ ಪುತ್ರ ಚಿ|| ಗಂಗಾಧರಯ್ಯನವರಿಗೂ ಬೇಗೋಡು ಕೋರಿನಾಗಪ್ಪನವರ ಪುತ್ರಿ ಚಿ|| ಸೌ|| ಸುಶೀಲಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ಆಲೂರು ಶಿ. ಕಾಳಪ್ಪನವರ ಮೂಲಕ 1 ರೂಪಾಯಿ.

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕುದು.—ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ನಿಷ್ಪಕ್ಷಪಾತವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟವಾಗಿಯೂ, ಇರಬೇಕೆಂದೂ ಬುಧವಾರ ಗುರುವಾರದೊಳಗೆ ನಮ್ಮ ಕೈಸೇರುವಂತೆ ಕಳುಹಲ್ಪಡಬೇಕೆಂದು, ಈ ನಿಬಂಧನೆಗೆ ವಿರುದ್ಧವಾದ ಲೇಖನಗಳು ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದ್ದಾಗ್ಯೂ ಲೇಖಕರು ಲಕ್ಷಿಸದೆ ಲಂಚಿಣಿ ತಮಗೆ ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ ಪುಟಗಟ್ಟಲೆ ಅಸ್ಫುಟವಾಗಿ ಬರೆದು ನಮಗೆ ತ್ರಾಸನ್ನು ಕೊಡುತ್ತಿರುವರೆಂದು ಬರೆಯಲು ಖೇದವಾಗುತ್ತಿದೆ. ಆದುಕಾರಣ ಇತಃಪರ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಮಸ್ತರೂ ಗಮನಿಸತಕ್ಕದು.—ಸಂ.

ಸಿದ್ಧಲಿಂಗೇಶ್ವರ ಸಂಸ್ಕೃತಪಾಠಶಾಲೆಗೆ ಸಹಾಯ.

ತುಮಕೂರು ತಾ|| ಶ್ರೀ ಸಿದ್ಧಗಂಗಾ ಕ್ಷೇತ್ರದ ಪಾಠಶಾಲೆಯು ಸ್ಥಾಪಿತವಾಗಿ ಸುಮಾರು 15 ವರ್ಷಗಳಾದವು. ಅಂದಿನಿಂದಲೂ ಅದು ಅಭಿವೃದ್ಧಿಯನ್ನು ಹೊಂದುತ್ತಿರುವುದರಿಂದ ಅನೇಕ ಜನಗಳು ಅದರ ಉಪಯೋಗವನ್ನು ಹೊಂದುತ್ತಿದ್ದಾರೆ. ಈಗ 60 ಮಂದಿ ವಿದ್ಯಾರ್ಥಿಗಳೂ 5 ಮಂದಿ ಉಪಾಧ್ಯಾಯರುಗಳೂ ಇರುತ್ತಾರೆ. ಈ ಶಾಲೆಯಭಿವೃದ್ಧಿಗಾಗಿ ಅನೇಕ ಮಹನೀಯರು ಸಹಾಯಮಾಡಿ ಕೀರ್ತಿಗೆ ಭಾಗಿಗಳಾಗಿರುವರು. ಈಚೆಗೆ ಮ|| ಗುಬ್ಬಿ ಶಿವರಾತ್ರಿ ಶಿವರಾಂತಪ್ಪನವರು ಇತರರ ಮೇಲುಪಜ್ಞೆಯನ್ನನುಸರಿಸಿ 600 ರೂ. ಗಳನ್ನು ಪಾಠಶಾಲೆಗೋಸ್ಕರ ವಾಗ್ದಾನಮಾಡಿ, ತಮ್ಮ ಉದಾರ ಬುದ್ಧಿಯನ್ನು ಮತ್ತು ಧಾರ್ಮಿಕ ವಿದ್ಯಾಭಿಮಾನವನ್ನು ಪ್ರಕಟಿಸಿರತಕ್ಕದ್ದು ತುಂಬಾ ಸಂತೋಷಕರವಾಗಿದೆ. ಇದೇ ರೀತಿ ಶ್ರೀ ಕ್ಷೇತ್ರದಲ್ಲಿ ನಡೆಯುವ ದಾಸೋಹದ ಉಪಯೋಗಕ್ಕಾಗಿ ಬೆಂಗಳೂರು ಕಂಟೋನ್‌ಮೆಂಟಿಗೆ ಸೇರಿದ ದೊಡ್ಡಕುಂಟೆ ದಾಖಲೆ ಜೀವನಹಳ್ಳಿಯಲ್ಲಿರುವ ತೆಲುಗುಬಣಜಿಗರಜಾತಿ ಸೂನಂಗಿ ಮುನಿಯಪ್ಪನವರ ಮಕ್ಕಳು ಮ|| ರಾಘವಪ್ಪನವರು ತುಂಕೂರು ತಾ|| ವೈದಾಳದ ಅಮಾನಿಕೆರೆ ಹಿಂದೆ ಸುಮಾರು 600 ರೂ. ಬಾಳತಕ್ಕ 3 ಎಕರೆ ತರೀ ಜಮೀನನ್ನು ದಾನವಾಗಿ ಕೊಟ್ಟು ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕೃಪೆಗೆ ಪಾತ್ರರಾಗಿರುವುದು ಬಹಳ ಸಂತೋಷಕರವಾಗಿದೆ, ಮೇಲ್ಕಂಡ ಧರ್ಮಾಭಿಮಾನಿಗಳಿಬ್ಬರಿಗೂ ಶ್ರೀ ಸಿದ್ಧಲಿಂಗೇಶ್ವರಸ್ವಾಮಿಯು ಸಹಾಸ್ಥಿರತರಾಯುರಾರೋಗ್ಯ ಸಂಪತ್ಸಮೃದ್ಧಿಗಳನ್ನು ಕರುಣಿಸಲೆಂದು ಹಾರೈಸುತ್ತೇನೆ.

ವಿದ್ಯಾರ್ಥಿ.

ಶ್ರೀ ಚಂದ್ರಮೌಳೇಶ್ವರ ಪ್ರತಿಷ್ಠಾ ಮಹೋತ್ಸವ.

ಕಾನಕಾನಹಳ್ಳಿ ಕಸಬ ಪೇಟೆಯಲ್ಲಿರುವ ದೇಶದ ಶ್ರೀ ನಂದೀಶ್ವರ ದೇವಾಲಯದಲ್ಲಿ ತಾ|| 15-5-32 ನೇ ಭಾನುವಾರ ಹಿಂದೆ ಪ್ರಕಟಿಸಲ್ಪಟ್ಟಿದ್ದ ಆಹ್ವಾನ ಪತ್ರಿಕೆಯ ಕಾರ್ಯಕ್ರಮಗಳನ್ನನುಸರಿಸಿ, ಶುಭ ಮುಹೂರ್ತದಲ್ಲಿ ಶ್ರೀ ಚಂದ್ರಮೌಳೇಶ್ವರನ ಪ್ರತಿಷ್ಠಾ ಮಹೋತ್ಸವವೂ, ಇದೇ ರಾತ್ರಿ ಗಿರಿಜಾಕಲ್ಯಾಣ ಮಹೋತ್ಸವವೂ ಮರುದಿನ ಮಹಾನ್ಯಾಸ ಏಕಾದಶವಾರ ರುದ್ರಾಭಿಷೇಕ, ಮಂಗಳಾರತಿ, ರಾಜಾಶೀರ್ವಾದ ಮೊದಲಾದ ಕಾರ್ಯಗಳೂ ಬೆಂಗಳೂರಿನ ಕೀರ್ತಿಶೇಷರಾದ ಶ್ರೀ|| ಶ್ರೀಮಾನ್ ಗೌಡರ ವೀರಭದ್ರಪ್ಪನವರ ಧರ್ಮವೇದ ಪಾಠಶಾಲೆಯ ವಿದ್ಯಾರ್ಥಿಗಳ ಪೌರೋಹಿತ್ಯದಲ್ಲಿ ವಿಧ್ಯುಕ್ತವಾಗಿ ನಡೆಯಿಸಲ್ಪಟ್ಟವು. ಇದುವರೆಗೂ ಕಾನಕಾನಹಳ್ಳಿಯ ಸುತ್ತಮುತ್ತಲೂ ಮಳೆಯಾಗ ಕೇವಲ ಈ ಗ್ರಾಮದ ಹದ್ದುಬಸ್ತನ್ನು ಮಾತ್ರ ಬಿಟ್ಟಿದ್ದುದರಿಂದ ಪ್ರಜೆಗಳಲ್ಲಿ ಹಾ ಹಾಕಾರ ಹುಟ್ಟಿದ್ದಿತು. ಸಮಯಕ್ಕೆ ಸರಿಯಾಗಿ ಈ ಗ್ರಾಮದ ಸುಪ್ರಸಿದ್ಧ ಶ್ರೀಮಂತರಾದ ಗುರುಕಾರ್ ಚನ್ನಬಸಪ್ಪನವರೂ ಈ ಊರಿನ ಎಲ್ಲ ವೀರಶೈವ ಮಹಾಜನರೂ ಈ ಮಹಾಕಾರ್ಯವನ್ನು ಕೈಗೊಂಡು ನಡೆಸಿದುದು ಸ್ತುತ್ಯವಾಗಿದೆ. ಇಲ್ಲಿನ ವೀರಶೈವ ತರುಣ ಸಂಘದವರು ಅತ್ಯಂತ ಶ್ರದ್ಧಾಭಕ್ತಿಯಿಂದ ಕಾಲಕ್ಕನುಸಾರವಾಗಿ ಕಾರ್ಯಗಳನ್ನು ಬಹಳ ವೈತ್ರಿಯಿಂದ ಮಾಡಿದರು. ಈ ಸೇವೆಯಿಂದ ಸಂತುಷ್ಟನಾದ ಚಂದ್ರಮೌಳಿಯ ಶಿರಶ್ಚಲನೆಯಿಂದ ಜಟಾಬದ್ಧಳಾದ ಗಂಗೆಯು ವಿಶೇಷ ವರ್ಷಿಸಿ, ಪ್ರಜೆಗಳ ಆರ್ತನಾದವನ್ನು ದೂರಮಾಡಿದಳು. ಮಂಗಳವಾರ ಪ್ರಾತಃಕಾಲ ಗ್ರಾಮದ ಎಲ್ಲ ಬೀದಿಗಳಲ್ಲಿಯೂ ಶ್ರೀ ಚಂದ್ರಮೌಳೇಶ್ವರನ ಪುಷ್ಪಕೋತ್ಸವವು ಸುಶ್ರಾವ್ಯವಾದ ವೇದಘೋಷದೊಡನೆ ಅತ್ಯಂತ ವೈಭವದಿಂದ ನಡೆಯಿಸಲ್ಪಟ್ಟಿತು. ಇಂಥಾ ಮಹತ್ಕಾರ್ಯವನ್ನು ಕೈಗೊಂಡು, ಬದ್ಧಕಂಕಣರಾಗಿ ಪರಮಾತ್ಮನ ಸೇವೆಗೈದ ಮ|| ಗುರುಕಾರ್ ಚನ್ನಬಸಪ್ಪನವರಿಗೂ ಅವರ ಕುಟುಂಬದವರಿಗೂ ಗ್ರಾಮದ ಎಲ್ಲ ಮಹಾಜನರಿಗೂ ಭಗವಂತನು ಚಿರಾಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನುಂಟುಮಾಡಲೆಂದು ಪ್ರಾರ್ಥಿಸುವ

ಓರ್ವ ಪ್ರತ್ಯಕ್ಷದರ್ಶಿ.

ಮಕ್ಕಳಿದ್ದರೆಮನೆ ಚಂದ.
ಬಂಜೆತನದಿಂದ ಮುಕ್ತರಾಗುವಿರಿ

ಮಕ್ಕಳಿಲ್ಲೆಂದು | ಚಿಂತಿಸಬೇಡಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗುವಿರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ.

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ. M. C. 6

ಧರ್ಮಸತ್ರದ ಪ್ರವೇಶೋತ್ಸವ.

[illegible]

ಶ್ರೀಮನ್ನೇಪಣಸಿದ್ಧೇಶ್ವರಚೆಟ್ಟಿಕ್ಕೆ ವಿದ್ಯುದ್ದೀಪಾವಿಷ್ಕಾರ.

[illegible]

ಬಿಗ್ಗಶರ್ನ.

[illegible]

ವಿದ್ಯಾರ್ಥಿಗಳಿಗೆ ಸೂಚನೆ.

[illegible]

ಚೀರಮಣ್ಣ.

ನೆಲಮಂಗಲದ ವೀರಶೈವ ವಿದ್ಯಾರ್ಥಿನಿಲಯ.

ನೆಲಮಂಗಲದ ಶ್ರೀಜಯದೇವ ವಿದ್ಯಾರ್ಥಿನಿಲಯಕ್ಕೆ ಫ್ರೀ ಬೋರಡರ್‌ಗಳಾಗಿ ಸೇರುವ ಬಡವಿದ್ಯಾರ್ಥಿಗಳು ತಾವು ಬಡವರೆಂಬ ಬಗ್ಗೆ ಸರಟಿಫಿಕೇಟು ಸಮೇತ ಜೂನ್ ತಾ॥ 15 ರೊಳಗಾಗಿ ಅಪ್ಲಿಕೇಷನ್ ಮಾಡಿಕೊಳ್ಳತಕ್ಕದ್ದು. ವೇದ, ಪೌರೋಹಿತ್ಯ, ಜೋತಿಷ ಇವುಗಳನ್ನು ವ್ಯಾಸಂಗಮಾಡಲಪೇಕ್ಷಿಸುವ ವಿದ್ಯಾರ್ಥಿಗಳಿಗೆ ಮೊದಲು ಗಮನಕೊಡಲ್ಪಡುತ್ತದೆ. ಅನುಕೂಲವಾಗಿರುವ ವಿದ್ಯಾರ್ಥಿಗಳು ವರ್ಷಕ್ಕೆ 50 ರೂ. ಅಥವ ಆ ಕಿಂಮತ್ತಿನ ದವಸ ಇವುಗಳಲ್ಲಿ ಯಾವುದಾದರೊಂದನ್ನು ಪಾವತಿಮಾಡಿ ಸೇರಬಹುದು.

M. GUBBI HUCHAPPA,
ಎಸ್. ಟಿ. ಮಲ್ಲಪ್ಪಶೆಟ್ಟಿ, ಜಾಯಿಂಟ್ ಸೆಕ್ರೆಟರಿಗಳು.

ಶ್ರೀಮನ್ನಿರಾಜನಿರಂಜನ ಜಗದ್ಗುರುಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಶ್ರೀ ವೀರಶೈವಾನಂದಾಶ್ರಮ, ತಿಪಟೂರು.

ತಿಪಟೂರು ಗೌರ್ನಮೆಂಟ್ ಹೈಸ್ಕೂಲು ಸಂಸ್ಕೃತಪಾಠಶಾಲಾ ಮತ್ತು ವೇದಪಾಠಶಾಲಾ ಇವುಗಳಲ್ಲಿ ಅಭ್ಯಾಸಮಾಡಬೇಕೆಂದು ಇಚ್ಛಿಸುವ ಬಡವರೂ ಯೋಗ್ಯರೂ ಆದ ವೀರಶೈವ ವಿದ್ಯಾರ್ಥಿಗಳಿಗೆ ಮೇಲ್ಕಂಡ ತಿಪಟೂರು ಶ್ರೀ ವೀರಶೈವಾನಂದಾಶ್ರಮದಲ್ಲಿ ಫ್ರೀಯಾಗಿ ಊಟಕ್ಕೂ ವಾಸಕ್ಕೂ ಏರ್ಪಾಡು ಮಾಡಿರುತ್ತದೆ. ಇಲ್ಲಿಗೆ ಸೇರಲಪೇಕ್ಷಿಸುವ ವಿದ್ಯಾರ್ಥಿಗಳು ಜೂನ್ ಮಾಹೆ 6 ನೇ ತಾರೀಖಿನೊಳಗಾಗಿ ಈ ಕೆಳಗೆ ಕಂಡ ವಿಳಾಸಕ್ಕೆ ಅಪ್ಲಿಕೇಷನ್ ಕಳುಹಿಸಿಕೊಡತಕ್ಕದ್ದು.

(1) ವಿದ್ಯಾರ್ಥಿಗಳು ತಾವು ನಿಜವಾಗಿಯೂ ಬಡವರೆಂಬುದಕ್ಕೆ ಸ್ಥಳದ ದೊಡ್ಡ ಮನುಷ್ಯರಿಂದ ಸರ್ಟಿಫಿಕೇಟನ್ನು ಅಪ್ಲಿಕೇಷನ್ನಿನ ಜೊತೆಯಲ್ಲಿಯೇ ಲಗತ್ತಿಡಬೇಕು. (2) ವಿದ್ಯಾರ್ಥಿಗಳು ಇಲ್ಲಿನ ರೂಲ್ಸಿಗೆ ಒಳಪಟ್ಟಿರಬೇಕು. (3) ಖಾಯಿಲೆಯ ಕಾರಣದ ವಿನಃ ಮಧ್ಯಕಾಲದಲ್ಲಿ ಬಿಟ್ಟು ಹೋಗಕೂಡದು. (4) ಕಾಲವನ್ನು ಮೀರಿಬರುವ ಅಪ್ಲಿಕೇಷನ್‌ಗಳಿಗೆ ಅವಕಾಶ ಕೊಡಲಾಗುವುದಿಲ್ಲ.

H. R. BASAVANNAPPA, B.A., L.L. B.
Hon. Secretary,
Sree Veerasaiva Anandashrama, Tiptur.

ವಿವೇಕಾನಂದ ಸಂಜೀವಿನಿತೈಲ

ಈ ತೈಲವು ಮುರಿದ ಮೂಳೆಗಳ ನೋವು ಮತ್ತು ತಪ್ಪಿದ ಕೀಲುಗಳ ಉಳುಕು ನೋವುಗಳಿಗೂ ಸಕಲ ವಾಯುಗಳಿಗೂ ವಾಯುವಿನಿಂದ ನರಗಳು [illegible] 3 ಔನ್ಸ್ ಬಾಟ್ಲು 1 ಕ್ಕೆ 1—8—0 ರೂಪಾಯಿ.

ವಿವೇಕಾನಂದ ಸಂಜೀವಿ.

[illegible] ಇದೂ ಅಲ್ಲದೆ ಸಕಲ ವ್ಯಾಧಿಗಳಿಗೂ ಅಮೂಲ್ಯವಾದ ಔಷಧಿ ನಮ್ಮಲ್ಲಿ ದೊರೆಯುತ್ತೆ.

3 ತೊಲ ಡಬ್ಬಿ 1 ಕ್ಕೆ 2—8—0 ರೂಪಾಯಿ.

ಕ್ಯಾಟ್ಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ಪಂಡಿತ್ ಎಚ್. ಲಕ್ಷ್ಮಣರಾಜು ಅಂಡ್ ಬ್ರದರ್ಸ್,

[4—3] ಸೀತಾವಿಲಾಸ ಡಿಸ್ಪೆನ್ಸರಿ ಚಾಮರಾಜಪೇಟೆ, ಮೈಸೂರು.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರ ತರಿಸಿ ಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಶಸೆ, ವಿರಜ.

6 M. C.

೧೯೩೨ ನೆಯ ಇಸವಿ ಮೇ ತಾ॥ ೩೦ ರಿಂದ ಜೂನ್ ತಾ॥ ೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ ಅಂಗಿರಸನಾಮಸಂವತ್ಸರದ ವೈಶಾಖ ಬಹುಳ ಏಕಾದಶಿಯಿಂದ ಜ್ಯೇಷ್ಠ ಶುದ್ಧ ಪಾಡ್ಯದವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಷ ಮಾಸ
30	(1) ಸೋಮ	ಏಕಾ	60	ಉಭಾ	1-58	17
31	(2) ಮಂಗಳ	ಏಕಾ	0-24	ರೇವ	7-56	18
1	ಬುಧ	ದ್ವಾದ	5-18	ಅಶ್ವಿ	14-23	19
2	ಗುರು	ತ್ರಯೋ	10.33	ಭರ	20-56	20
3	(3) ಶುಕ್ರ	ಚತು	15-9	ಕೃತ್ತಿ	27-10	21
4	ಶನಿ	ಅಮಾ	19-17	ರೋಹಿ	32-44	22
5	ಭಾನು	ಪಾಡ್ಯ	22-21	ಮೃಗ	37-11	23

(1) ಶ್ರೀಮದ್ಯುವರಾಜರವರ ವರ್ಧಂತಿ. (2) ಮಳೆನಕ್ಷತ್ರ-ರೋಹಿಣಿ ೩ ನೆಯ ಪಾದ. (3) ಚಕ್ರವರ್ತಿಯವರ ವರ್ಧಂತಿ, ಮಳೆನಕ್ಷತ್ರ-ರೋಹಿಣಿ ೪ ನೆಯ ಪಾದ

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರಾನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG. NO. M. 134

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಬಿಡಿಪ್ರತಿಗೆ ೩-೦-೦]

ಸಂಪುಟ ೪೫] ಮೈಸೂರು ಸ್ಟಾರ್ ೧೯೩೨ ನೆಯ ಇಸವಿ ಜೂನ್ ತಾರೀಖು ೬ ನೆಯ ಸೋಮವಾರ [ಸಂಚಿಕೆ ೨೩

MYSORE SANDALWOOD OIL
Distilled in
GOVERNMENT FACTORIES

GUARANTEED B.P.P.J., & AM 4. P. STANDARDS.
PROVIDES
Excellent Base for the manufacture of Soaps, Perfumes, and other Toilet preparations of the Highest quality.
USED ALL THE WORLD OVER.
BUY A BOTTLE TO-DAY.
Available in Sealed Aluminium Bottles.
MYSORE GOVERNMENT SANDALWOOD OIL FACTORY,
BANGALORE.
2 [60—47]

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರಾನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

[illegible]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ವಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಶಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಸ್ವರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪಮರ್, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು, [illegible] ಎಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, [illegible] ಆಗುತ್ತದೆ. [illegible] ಇದರಿಂದ ಪುರುಷರ ವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣ ಚೂರ್ಣವನ್ನು [illegible] ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. [illegible] ೨೧ ದಿವಸ ಸಾಲುವ [illegible] ರೂಪಾಯಿ. [illegible] ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೇ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

ಪತ್ತಾ ಮಾಲಕ :—ವೈದ್ಯ ವ್ಹಿ. ಎಸ್. ಕಾಶಸೆ, ಮು. ಪೋ. ವಿರಜ. ಎಂ. ಎಸ್. ಎಂ.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]

ವಿಳಾಸ—ಗುರುಸುತ ಅಂಡ್ ಕಂಪೆನಿ ಲಿಮಿಟೆಡ್,

[illegible]

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಜೂನ್ ತಾ|| ೬ ನೆಯ ಸೋಮವಾರ.

OUR CONGRATULATIONS

We offer our hearty congratulations to Dharmaprakash D. Banumiah on the high distinction of Rao Bahadur bestowed on him by His Excellency the Viceroy. If there was any who deserved such a recognition in Mysore it was our popular Sahukar. His charitable disposition had already met with the recognition of our Beloved Sovereign who has a rare capacity for descerning merit among the public workers in the State. Very often the obtaining of a title is the culmination of a man's endeavours and his public service or philanthropy ends with the title. With our Sahukar the bestowal of the distinction Dharmaprakash meant only a further incentive for greater service. Since then his contributions to various charities large and small have never ceased. There is not a single movement of any consequence and public utility in the city and even outside in the State which has not had a generous patron in the person of Sahukar Banumiah. His recent donations to the Sanitorium, the Ayurvedic and Unani College, the optholmic section of Krishnarajendra Hospital, the Maternity and Child Welfare centre, apart from numerous other charities have won him an honoured place among the citizens of the State. Though sufficiently aged the Sahukar is young in spirits and remarkably active for his age. May God grant him long life and health to enjoy the distinction is our prayer.

We are also very glad to see that Mr. M. Ramaswamy Vice President of the City Municipal Council is the recipient of the title of Rao Saheb. Young as he is, he has devoted himself to public service and has been doing a great deal of work in various spheres. He has been the Secretary of the Gunamba Maternity and Child Welfare Trust, the Mysore Pinjrapole from their very inception. He has yet a good future before him and we offer him our hearty congratulations on the distnic-tion with our best wishes for his future.

We wish to offer our felicitations to Mrs. W. H. Theobald on her becoming the recipient of the Kaiser-in-hind Medal. She has been rendering useful service in various public movements, and as Honorary Bench Magistrate and Superintendent of the Vocational Institute for women.

We offer also our sincere congratulations to Rao Sahib K. Ramaswamy Corporation Engineer Bombay on his getting the further distinction of Rao Bahadur. Mysore must be proud of such a gentleman who having risen by dint of merit to a high position abroad has been striving his best to be of help to Mysoreans and Mysore. He is a generous soul instinctively and he richly deserves the distinction.

A USEFUL CIRCULAR

The Government have been pleased to pass a G. O. for the prompt disposal of petitions. While drawing the attention of officers to the instructions issued in G. O. dated 11th July 1922 they direct that where a petition is not expected to be disposed of in a fortnight, an acknowledgment should invariably be sent to the party with the least possible delay. An adherance to this rule is sure to mitigate a lot of hardship which petitioners at present labour and we hope that the G. O. will be respected by all officers. We ake it that this direction is not only meant for officers subordinate to Government but to the Secretariat and Government as well. Not very often the petitions addressed to Government remain unanswered for months without even an acknowledgment. We hope it will not be too much to expect that Government also will adhere to the principle strictly.

ಅಭಿನಂದನೆ.

ಭಾರತ ಸಾರ್ವಭೌಮರ ವರ್ಧಂತ್ಯುತ್ಸವದಲ್ಲಿ ಪ್ರಸಾದಿಸಲ್ಪಟ್ಟ ಪ್ರಶಸ್ತಿಗಳಲ್ಲಿ ರಾಜಧಾನಿಯ ಧರ್ಮಪ್ರಕಾಶ ಸಾಹುಕಾರ್ ಡಿ. ಬನುಮಯ್ಯನವರಿಗೆ ರಾವ್‌ಬಹದ್ದೂರು ಪ್ರಶಸ್ತಿಯೂ, ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟ್ ಮ|| ಎಂ. ರಾಮಸ್ವಾಮಿಯವರಿಗೆ ರಾವ್‌ಸಾಹೇಬ್ ಪ್ರಶಸ್ತಿಯೂ, ಮ್ಯುನಿಸಿಪಲ್ ಕೌನ್ಸಿಲರ್ ಮಿ|| ಡಬ್ಲ್ಯು. ಎಚ್. ತಿಯೋಬಾಲ್ಡ್‌ರವರ ಪತ್ನಿಯವರಿಗೆ ಕೇಸರಿ ಹಿಂದ್ ಪದಕವೂ, ಬೊಂಬಾಯಿ ಪಟ್ಟಣದ ಮ್ಯುನಿಸಿಪಲ್ ಇಂಜನಿಯರ್ ರಾವ್‌ಸಾಹೇಬ್ ಕಿಕ್ಕೇರಿ ರಾಮಸ್ವಾಮಿಯವರಿಗೆ ರಾವ್‌ಬಹದ್ದೂರ್ ಪ್ರಶಸ್ತಿಯೂ ವೈಸ್ರಾಯರಿಂದ ದಯಪಾಲಿಸಲ್ಪಟ್ಟದಕ್ಕಾಗಿ ಈ ಮಹಾಶಯರುಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಶ್ರೀಯುತ ಡಿ. ಬನುಮಯ್ಯನವರು ಒಂದುಕಾಲುಲಕ್ಷ ರೂಪಾಯಿಗಳ ಮೇಲೆಯೇ ವೆಚ್ಚಮಾಡಿ ಹೈಸ್ಕೂಲನ್ನು ಸ್ಥಾಪಿಸಿ ಗುಣೈಕಪಕ್ಷಪಾತಿಗಳೂ ಧರ್ಮೋತ್ತೇಜಕರೂ ಆದ ಶ್ರೀಮನ್ಮಹಾರಾಜರವರ ಮೆಚ್ಚುಗೆಗೆ ಪಾತ್ರರಾಗಿ ಧರ್ಮಪ್ರಕಾಶ ಎಂಬ ಅನ್ವರ್ಥ ಪ್ರಶಸ್ತಿಯನ್ನು ಪಡೆದರು. ಈರೀತಿಯಾಗಿ ಪ್ರಜೋಪಯುಕ್ತವಾದ ಧರ್ಮಕಾರ್ಯವನ್ನು ಮಾಡಿ ಪ್ರಶಸ್ತಿಯನ್ನು ಪಡೆಯತಕ್ಕವರು ಸಾಮಾನ್ಯವಾಗಿ ತಮ್ಮ ಪುರುಷಾರ್ಥಸಿದ್ಧಿಸಿತೆಂದು ಭಾವಿಸಿ ಮೌನರಾಗುವರು. ಆದರೆ ನಮ್ಮ ಧರ್ಮಪ್ರಕಾಶರು ಆರೀತಿ ಮೌನರಾಗಿರದೆ ಮತ್ತಷ್ಟು ಹೆಚ್ಚಾದ ಧರ್ಮಕಾರ್ಯಗಳನ್ನು ಮಾಡಲು ಉತ್ತೇಜಿತರಾಗಿ ಪ್ರಜೋಪಯುಕ್ತ ಧರ್ಮಕಾರ್ಯಗಳನ್ನು ನಾನಾ ರೀತಿಯಲ್ಲಿ ಮಾಡಿಯೂ ಮಾಡುತ್ತಲೂ ಇರುವರು. ರಾಜಧಾನಿಯಲ್ಲಿ ಇವರ ಸಹಾಯವಿಲ್ಲದಿರುವ ಧರ್ಮಕಾರ್ಯವಾವುದೂ ಇಲ್ಲವೆಂದೂ, ಸಂಸ್ಥಾನದ ಹೊರಗಡೆಯಲ್ಲೂ ಇವರಿಂದ ಬಹಳ ಮಟ್ಟಿಗೆ ಧರ್ಮಸಹಾಯವಾಗಿರುತ್ತದೆಂದೂ ಹೇಳಿದರೆ ಅತಿಶಯೋಕ್ತಿಯಾಗಲಾರದು. ಕ್ಷಯರೋಗ ಆಸ್ಪತ್ರೆಯಲ್ಲಿ ಒಂದು ವಾರ್ಡನ್ನೂ, ಆಯುರ್ವೇದೀಯ ಮತ್ತು ಯುನಾನಿ ಕಾಲೇಜಿನ ಮೇಲ್ಭಾಗದಲ್ಲಿ ರೋಗಿಗಳಿಗಾಗಿ ವಾರ್ಡುಗಳನ್ನೂ, ಕೃಷ್ಣರಾಜ ಆಸ್ಪತ್ರೆಯಲ್ಲಿ ಕಣ್ಣಾಸ್ಪತ್ರೆಯನ್ನೂ ಗರ್ಭಿಣಿ ಶಿಶುರಕ್ಷಣಾಲಯವನ್ನೂ ಕಟ್ಟಲು ಸಾವಿರಾರು ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿರುವರಲ್ಲದೆ ಇನ್ನೂ ಅನೇಕಾನೇಕ ಸಣ್ಣ ದೊಡ್ಡ ಧರ್ಮಕಾರ್ಯಗಳನ್ನು ಮಾಡಿ ಸಂಸ್ಥಾನದಲ್ಲೆಲ್ಲ ವಿಶೇಷ ಗೌರವವನ್ನು ಸಂಪಾದಿಸಿರುತ್ತಾರೆ. ಆದುದರಿಂದ ಘನತರವಾದ ರಾವ್‌ಬಹದ್ದೂರ್ ಪ್ರಶಸ್ತಿಯನ್ನು ಪಡೆಯಲು ಇವರಿಗಿಂತಲೂ ಅರ್ಹರಾದವರು ನಮ್ಮ ರಾಜಧಾನಿಯಲ್ಲಿ ಬೇರೊಬ್ಬರಿಲ್ಲ. ಈ ಧರ್ಮಪುರುಷರು ವೃದ್ಧರಾಗಿದ್ದರೂ ಧೈರ್ಯೋತ್ಸಾಹದಲ್ಲಿ ಯುವಕರಾಗಿರುತ್ತಾರೆ. ಈ ಪುಣ್ಯಾತ್ಮರು ದೀರ್ಘಾಯುರಾರೋಗ್ಯದಿಂದಿದ್ದು ಈ ಘನತರ ಪ್ರಶಸ್ತಿಯನ್ನು ಅನುಭವಿಸುವಂತೆ ಅನುಗ್ರಹಿಸಲೆಂದು ಆ ದಯಾಮಯನಾದ ಪರಶಿವನನ್ನು ಬೇಡುತ್ತೇವೆ. ಅಲ್ಲದೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ವೈಸ್‌ಪ್ರೆಸಿಡೆಂಟರಾಗಿಯೂ, ಪಿಂಜ್ರಾಪೋಲು ಮತ್ತು ಗುಣಾಂಬಾ ಗರ್ಭಿಣಿ ಶಿಶು ಸಂರಕ್ಷಣಾಲಯಗಳ ಸೆಕ್ರೆಟರಿಯವರಾಗಿಯೂ ಇದ್ದುಕೊಂಡು ಪರಹಿತಕಾರ್ಯವನ್ನು ನಿಷ್ಕಾಮಬುದ್ಧಿಯಿಂದ ಮಾಡುತ್ತಿರುವ ಮತ್ತು ಇನ್ನೂ ಅತಿಶಯವಾಗಿ ಮಾಡಲು ದೇಹಶಕ್ತಿಯನ್ನೂ ಕಾಲವ್ಯವಧಾನವನ್ನೂ ಉಳ್ಳ ಮ|| ಎಂ. ರಾಮಸ್ವಾಮಿಯವರಿಗೂ; ಆನರರಿ ಬೆಂಚು ಮೆಜಿಸ್ಟ್ರೇಟರಾಗಿಯೂ, ಸ್ತ್ರೀಯರ ಉಪವೃತ್ತಿ ಶಿಕ್ಷಾಲಯದ ಸೂಪರಿಂಟೆಂಡೆಂಟರಾಗಿಯೂ ಇದ್ದುಕೊಂಡು ಪ್ರಜೋಪಯುಕ್ತ ಕಾರ್ಯಗಳನ್ನು ಮಾಡುತ್ತಿರುವ ಮಿ|| ತಿಯೋಬಾಲ್ಡರವರ ಪತ್ನಿಯವರಿಗೂ; ಮೈಸೂರು ದೇಶದಲ್ಲಿ ಹುಟ್ಟಿ ಬೊಂಬಾಯಿ ಮಹಾಪಟ್ಟಣಕ್ಕೆ ಹೋಗಿ ಅಲ್ಲಿಯ ಮ್ಯುನಿಸಿಪಲ್ ಇಂಜನಿಯರಾಗಿದ್ದುಕೊಂಡು ವಿಶೇಷ ಸಾಮರ್ಥ್ಯದಿಂದ ಉದ್ಯೋಗವನ್ನು ನಿರ್ವಹಿಸಿ ವಿಶೇಷ ಗೌರವಪ್ರತಿಷ್ಠೆಗಳನ್ನು ಪಡೆದು ನಮ್ಮ ಸೀಮೆಗೆ ಕೀರ್ತಿಯನ್ನು ತಂದಿರುವ ಮತ್ತು 50–60 ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ಹೊಳೆನರಸೀಪುರದಲ್ಲಿ ಹೆರಿಗೆಯ ಆಸ್ಪತ್ರೆಯನ್ನು ಕಟ್ಟಿಸಿ ಮಹೋಪಕಾರವನ್ನು ಮಾಡಿರುವ ಮ|| ಕೆ. ರಾಮಸ್ವಾಮಿಯವರಿಗೂ ಆಯುರಾರೋಗ್ಯವನ್ನು ಇತೋಪ್ಯತಿಶಯವಾದ ಪ್ರಶಸ್ತಿಗಳನ್ನೂ ದಯೆಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಉಪಯುಕ್ತ ಪ್ರಭುತ್ವಾಜ್ಞೆ.

ಸರ್ಕಾರಿಯಧಿಕಾರಿಗಳಿಗೆ ಪ್ರಜೆಗಳು ಬರೆದುಕೊಳ್ಳುವ ಅರ್ಜಿಗಳು ವರ್ಷಗಟ್ಟಲೆ ಇತ್ಯರ್ಥವಾಗದೆ ಇರುವುದರಿಂದ ಪ್ರಜೆಗಳಿಗೆ ಬಹಳ ನಷ್ಟ ಕಷ್ಟಗಳು ಪ್ರಾಪ್ತವಾಗುತ್ತವೆಂಬ ದೂರು ಪ್ರಬಲವಾದುದರಮೇಲೆ, ಅರ್ಜಿಗಳು ಕೂಡಲೆ ವಿಲೆಯಾಗಬೇಕೆಂಬ ಬಗೆಗೆ ಪ್ರಭುತ್ವದವರು ಈಗ ತಾನೇ ಒಂದಪ್ಪಣೆಯನ್ನು ಮಾಡಿರುತ್ತಾರೆ. ಅದರಲ್ಲಿ ಅರ್ಜಿಯು ಎರಡು ವಾರದೊಳಗೆ ವಿಲೆಯಾಗಲು ಸಾಧ್ಯವಿಲ್ಲದಿರುವ ಪಕ್ಷದಲ್ಲಿ ಅರ್ಜಿದಾರರಿಗೆ ಕೂಡಲೆ ಇಂಡಾರ್ಸನ್ನು ಕೊಡಬೇಕೆಂದು ಹೇಳಲ್ಪಟ್ಟಿದೆ. ಈ ಆಜ್ಞೆಯು ಅನುಸರಿಸಲ್ಪಟ್ಟಲ್ಲಿ ಈಗ ಅರ್ಜಿದಾರರು ಅನುಭವಿಸುತ್ತಿರುವ ಕಷ್ಟನಷ್ಟಗಳು ಬಹಳಮಟ್ಟಿಗೆ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲವಾದುದರಿಂದ, ಎಲ್ಲಾ ಅಧಿಕಾರಿಗಳೂ ಈ ಆಜ್ಞೆಯನ್ನು ಗೌರವಿಸುವರೆಂದು ನಿರೀಕ್ಷಿಸುತ್ತೇವೆ. ಈ ಆಜ್ಞೆಯು ಕೆಳಗಿನ ಅಧಿಕಾರಿಗಳಿಗೆ ಮಾತ್ರ ಅನ್ವಯಿಸದೆ ಸೆಕ್ರೆಟರಿಯೇಟಿನವರಿಗೂ ಪ್ರಭುತ್ವಾಧಿಕಾರಿಗಳಿಗೂ ಅನ್ವಯಿಸುತ್ತದೆಂದು ಭಾವಿಸುತ್ತೇವೆ. ಅನೇಕವೇಳೆ ಪ್ರಭುತ್ವದವರಿಗೆ ಬರೆದುಕೊಂಡಂತಹ ಅರ್ಜಿಗಳು ತಿಂಗಳುಗಟ್ಟಲೆ ವಿಲೆಯಿಲ್ಲದೆ ಬಿದ್ದಿರುತ್ತವಲ್ಲದೆ ಅವು ತಲುಪಿದುವೆಂದು ಸಹ ಅರ್ಜಿದಾರರಿಗೆ ತಿಳುಹಲ್ಪಡುತ್ತಿಲ್ಲ. ಆದುಕಾರಣ ಪ್ರಭುತ್ವದವರು ತಮ್ಮಾಜ್ಞೆಯನ್ನು ತಾವು ಸಹ ಪಾಲಿಸುವರೆಂದು ನಿರೀಕ್ಷಿಸುತ್ತೇವೆ.

ಫೋರ್ಡ್ ಮೋಟಾರು ಕಂಪೆನಿಗೆ ನಷ್ಟ

1931ನೆಯ ವರ್ಷದಲ್ಲಿ ಫೋರ್ಡು ಮೋಟಾರು ಕಂಪೆನಿಗೆ 1,80,000 ರೂ. ಗಳವರೆಗೂ ನಷ್ಟ ಸಂಭವಿಸಿರುತ್ತದೆ. ಇದಕ್ಕೆ ಮೋಟಾರುಬಂಡಿಗಳ ನಿರ್ಮಾಣವು ಕಡಿಮೆಯಾದುದೇ ಕಾರಣವಂತೆ.

ಮೂವರು ಸಜೀವರಾಗಿ ಹೂತುಹೋದರು

ಕಲ್ಲಿಕೋಟೆಯಲ್ಲಿ ಮಳೆ ಗಾಳಿಯನಾಹುತದಿಂದ ಕುರದೊಟ್ಟಿ ಗ್ರಾಮದ ಸಮೀಪದಲ್ಲಿರುವ ಒಂದು ಗುಡ್ಡದ ಒಂದು ಭಾಗವು ಕುಸಿದು ಬಿದ್ದಿತು. ಇದರ ಕೆಳಗೆ ಒಬ್ಬ ಮಾಪಿಳ್ಳೆಯೂ ಇಬ್ಬರು ಹೆಂಗುಸರೂ ಸಿಕ್ಕಿ ಹತರಾದರು.

ಮಾಲವ್ಯರವರ ಸೊಸೆಗೆ ಶೈದು

ಪಂಡಿತ ಮದನಮೋಹನ ಮಾಲವ್ಯರವರ ಕುಮಾರ ಮುಕುಂದ ಮಾಲವ್ಯರವರ ಪತ್ನಿಯು ಕಳೆದ ತಾ|| 24 ರಲ್ಲಿ ನಡೆದ ಮಂಡಲ ಸಭೆಗೆ ಪೋಲೀಸು ಆಜ್ಞೆಯನ್ನು ಮೀರಿ ಹೋಗಲು ಪ್ರಯತ್ನಿಸಿದ ಅಪರಾಧಕ್ಕಾಗಿ ಒಂದು ವರ್ಷ ಕಠಿಣ ಸಜಾ ವಿಧಿಸಲ್ಪಟ್ಟಿತು.

ಜಪಾನಿನಲ್ಲಿ ಜಾತೀಯ ಪ್ರಭುತ್ವಸ್ಥಾಪನೆ

ಜಪಾನಿನ ಪ್ರಧಾನ ಮಂತ್ರಿಯ ಹತ್ಯದದೆಶೆಯಿಂದ ರಾಜಕೀಯದಲ್ಲಿ ಏನಾದರೊಂದು ತೊಂದರೆಯು ಸಂಭವಿಸಬಹುದೆಂದಿದ್ದ ಭಯವು ತೊಲಗಿತು. ಇದಕ್ಕೆ ಜಾತೀಯ ಪ್ರಭುತ್ವವೇರ್ಪಟ್ಟುದೇ ಕಾರಣವು. ಹೊಸ ಪ್ರಧಾನ ಮಂತ್ರಿಗೆ 73 ವರ್ಷ ವಯಸ್ಸಾಗಿದೆ.

ಬೆಂಕಿಯ ಅನಾಹುತ

ಪಂಜಾಬಿನಲ್ಲಿ ಹೊಸ್ಯಾರಪುರ ಡಿಸ್ಟ್ರಿಕ್ಟಿಗೆ ಸೇರಿದ ಒಂದು ಗ್ರಾಮದಲ್ಲಿ ಪ್ರಚಂಡ ಗಾಳಿ ಬೀಸುತ್ತಿರುವಾಗ್ಗೆ ಒಂದು ಮನೆಯು ಬೆಂಕಿಯಿಂದ ಹೊತ್ತಿಕೊಂಡಿತು. ಅದರ ಜ್ವಾಲೆಯು ಸುತ್ತಲೂ ಹರಡಿಕೊಂಡು 100 ಕ್ಕೆ ಮೇಲ್ಪಟ್ಟ ಮನೆಗಳು ಸುಟ್ಟುಹೋಗಿ ಸುಮಾರು 150 ಕುಟುಂಬಗಳಿಗೆ ನೆರಳೂ ಆಹಾರವೂ ಇಲ್ಲದಂತಾಗಿದೆ.

ಬ್ರಿಟಿಷ್ ಸಾಮ್ರಾಜ್ಯ ಸಂರಕ್ಷಣಾವಶ್ಯಕತೆ

ಚಕ್ರವರ್ತಿಯವರ ಜನ್ಮದಿನೋತ್ಸವ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳು ಉಪನ್ಯಾಸಮಾಡುವಾಗ್ಗೆ "ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿದ ದೇಶಗಳೆಲ್ಲ ಈವರೆಗೆ ಏಕೀಭಾವದಿಂದಿರುತ್ತವೆ. ಈಗ ಈ ಸಂಬಂಧವನ್ನು ಸಡಲಿಸಿದಲ್ಲಿ ಪ್ರಪಂಚಕ್ಕೆ ಮಹತ್ತರ ಅನರ್ಥವು ಸಂಭವಿಸುವುದು. ಒಟೋವಾ ಸಭೆಯು ಜಯಪ್ರದವಾಗಿ ನಡೆಯುವುದೆಂಬ ಭರವಸೆಯು ನನಗೆ ಸಂಪೂರ್ಣವಾಗಿರುತ್ತದೆ" ಎಂದು ಹೇಳಿದರು.

ಅಯರಲೆಂಡು ರಾಜಭಕ್ತಿಪ್ರಮಾಣ

ಅಯರಲೆಂಡು ರಾಜಭಕ್ತಿಪ್ರಮಾಣ ನಿಷೇಧದ ಬಿಲ್ಲು ಅಯರ್ಲೆಂಡು ಪಾರ್ಲಿಮೆಂಟಿನಲ್ಲಿ ಮೂರುವೇಳೆ ಅನುಮೋದಿತವಾದುದರಮೇಲೆ ಡಿವಿಲೆರಾಯವರು ಸೆನೇಟು ಸಭೆಯಲ್ಲಿ ಉಪಪಾದಿಸಿರುವರು. ಇದು ಸೆನೇಟು ಸಭೆಯಲ್ಲೂ ಎರಡುವೇಳೆ ಅನುಮೋದಿತವಾಯಿತು ಮತ್ತು ಮೂರನೆಯ ವೇಳೆಯೂ ಅನುಮೋದಿತವಾಗುವ ಭರವಸೆಯಿದೆ. ಅನಂತರ ಬ್ರಿಟಿಷರು ಅದರ ಮೇಲೇನು ಯೋಚನೆಮಾಡುವರೋ ನೋಡಬೇಕು.

ರಷಿಯಾ ಜಪಾನಿಗೆ ಯುದ್ಧ ನಡೆಯಬಹುದು

ರಷಿಯಾ ಜಪಾನಿಗೆ ಶೀಘ್ರದಲ್ಲಿಯೇ ಯುದ್ಧ ನಡೆಯುವ ಪರಿಸ್ಥಿತಿಯುಂಟಾಗುತ್ತಿದೆ ಎಂದು ಹೇಳಲ್ಪಡುತ್ತಿದೆ. ಜವಾರ್ ಡಿಕ್ಟೇಟರು ಮುಕಡನ್ನನ್ನು ಬಿಟ್ಟು ಹರ್ಬಿನ್ನಿನಲ್ಲಿ ಜವಾರ್ ಸೈನಿಕ ಮುಖ್ಯ ಕಾರ್ಯಾಲಯವನ್ನೇರ್ಪಡಿಸಿ ತಾನು ಈಗ ಅಲ್ಲಿಯೇ ಇರುತ್ತಾನೆ. ಇನ್ನೊಂದು ಕಡೆ ಜಪಾನು ಸೇನೆಯು ಚೀನಾಕ್ಕೆ ಪೂರ್ವದಲ್ಲಿರುವ ಸುಂಗರೀ ನದಿಯ ಕೆಳಭಾಗದಲ್ಲಿ ರಷ್ಯಾ ಸರಹದ್ದಿಗೆ ತ್ವರಿತದಿಂದ ಹೋಗುತ್ತಿದೆ.

ಬೊಂಬಾಯಿನಲ್ಲಿ ಸಮಾಧಾನವಾಗಿದೆ

ಬೊಂಬಾಯಿನಲ್ಲಿ ಕಳೆದ ಮೊಹರಂನಲ್ಲಿ ನಡೆದ ಹಿಂದು ಮಹಮ್ಮದೀಯರ ಕಲಹದಲ್ಲಿ ಈ ವರೆಗೆ 3000 ಮಂದಿ ಗಾಯಪಡೆದು 200 ಮಂದಿ ಹತರಾದರು. ಇದರಲ್ಲಿ ಹಿಂದುಗಳ ಸಂಖ್ಯೆಯೇ ಹೆಚ್ಚಾಗಿರುವುದು. ಈಗ ಕಲಹವು ನಿಂತು ಸಮಾಧಾನಸ್ಥಿತಿಗೆ ಬರುತ್ತಿರುವುದಾಗಿ ತಿಳಿಯಬರುತ್ತದೆ. ಶಾಂತಿ ಸ್ಥಾಪನೆಗಾಗೇರ್ಪಟ್ಟಿರುವ ಸಂಘದವರು ಹಿಂದು ಮಹಮ್ಮದೀಯರಿಗೆ ಕೋಪೋದ್ರೇಕವಾಗುವಂತಹ ಲೇಖನವನ್ನು ಬರೆಯಬಾರದೆಂದು ವೃತ್ತಪತ್ರಿಕಾಕರ್ತರುಗಳನ್ನು ಪ್ರಾರ್ಥಿಸಿರುತ್ತಾರೆ.

ಪೋಲೀಸಿನವನು ಕೈಬಳೆಗಳನ್ನ ಪಹರಿಸಿದುದು

ಲಾಹೋರಿನಲ್ಲಿ ಚಿಕ್ಕ ವಯಸ್ಸಿನ ಹಿಂದು ಹುಡುಗಿಯು ಸಂಗಡಗಾತಿಯರ ಕೂಡ ಆಡುತ್ತಿರುವಾಗ್ಗೆ ಒಬ್ಬ ಪೋಲೀಸಿನವನು ಬಂದು ಆ ಹುಡುಗಿಯ ಕೈಗಳನ್ನು ಹಿಡಿದುಕೊಂಡು

ಕಪಾಳಕ್ಕೆ ಚೆನ್ನಾಗಿ ಹೊಡೆದನು. ಆ ಹುಡುಗಿಯು ಕೊಂಚ ಕಾಲ ಜ್ಞಾನತಪ್ಪಿದ್ದು ಅನಂತರ ಚೇತರಿಸಿಕೊಂಡೆದ್ದು ನೋಡುವಲ್ಲಿ ತನ್ನ ಕೈಬಳೆಗಳಿರಲಿಲ್ಲ. ಇದಕ್ಕಾಗಿ ಪೋಲೀಸಿನವನು ಕೆಲಸದಿಂದ ತಾತ್ಕಾಲಿಕವಾಗಿ ತೆಗೆಯಲ್ಪಟ್ಟಿರುವನಲ್ಲದೆ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾನೆ. ವಿಚಾರಣೆಯಲ್ಲಿ ಹುಡುಗಿಯು ನಡೆದ ವಿದ್ಯಮಾನವನ್ನೆಲ್ಲ ಯಥಾವತ್ತಾಗಿ ತಿಳಿಸಿದಳಲ್ಲದೆ ಪೋಲೀಸಿನವನು ಬಳೆಗಳನ್ನು ತನಗೆ ಮಾರಿರುತ್ತಾನೆಂದು ಒಬ್ಬ ಸಾಕ್ಷಿಯು ಹೇಳಿರುತ್ತಾನೆ.

ನೀರಿನ ತೊಟ್ಟಿಯಲ್ಲಿ ಮಗು ಬಿದ್ದು ಸತ್ತಿತು

ದಿಲ್ಲಿಯ ನಗರದಲ್ಲಿ ನೀರಿನ ಅಭಾವದಿಂದ ಮ್ಯುನಿಸಿಪಾಲಿಟಿಯವರು ಕ್ಲುಪ್ತಕಾಲದಲ್ಲಿ ಮಿತವಾಗಿ ನೀರನ್ನೊದಗಿಸುತ್ತಿರುವ ಪ್ರಯುಕ್ತ ಜನರು ನೀರನ್ನು ತೊಟ್ಟಿಗಳಲ್ಲೂ ಹಂಡೆಗಳಲ್ಲೂ ಶೇಖರಿಸಿಟ್ಟುಕೊಳ್ಳುತ್ತಿರುವರು. ರೈಲ್ವೆ ಆಫೀಸು ಕ್ಲಾರ್ಕಿನ ಗಂಡುಮಗು ಸ್ನಾನದ ಮನೆಯಲ್ಲಿ ನೀರು ತುಂಬಿದ್ದ ತೊಟ್ಟಿಯೊಳಕ್ಕೆ ಬಿದ್ದು ಸತ್ತು ಹೋಗಿದ್ದಿತು. ಒಂದು ಲೋಟಾ ನೀರನ್ನು ತರಲು ಯಾರೊ ಸ್ನಾನದ ಮನೆಗೆ ಹೋಗಿ ನೋಡುವಲ್ಲಿ ಮಗುವಿನ ಶವವು ತೊಟ್ಟಿಯ ನೀರಿನ ಮೇಲೆ ತೇಲಾಡುತ್ತಿದ್ದನ್ನು ಕಂಡು ದಿಗಿಲುಬಿದ್ದು ಕೂಗಿಕೊಳ್ಳಲಾಗಿ ತಂದೆ ತಾಯಿಗಳು ಓಡಿ ಹೋಗಿ ನೋಡಿ ಬಹಳವಾಗಿ ರೋದಿಸಿದರು.

ಜರ್ಮನಿಯಲ್ಲಿ ನಿರುದ್ಯೋಗಿಗಳ ಸಂಖ್ಯೆ

ಜರ್ಮನಿಯಲ್ಲಿ 60,00,000 ಮಂದಿ ಉದ್ಯೋಗವಿಲ್ಲದಿರುತ್ತಾರೆ. ಇವರುಗಳ ಮೇಲೆ ಅಷ್ಟೇ ಸಂಖ್ಯೆಯ ಜನರು ಆಧಾರಪಟ್ಟಿಕೊಂಡಿರುವರು, ಅಂದರೆ ಜರ್ಮನಿಯ ಒಟ್ಟು ಪ್ರಜಾಸಂಖ್ಯೆಯಲ್ಲಿ ⅕ ಭಾಗದಷ್ಟು ಜನರು ತಕ್ಕ ಜೀವನ ಸಾಧನವಿಲ್ಲದಿರುತ್ತಾರೆ. ಈ ದುಸ್ಥಿತಿಯು ನಿವಾರಣೆಯಾಗಲು ಪ್ರಪಂಚವೆಲ್ಲ ಒಟ್ಟುಗೂಡಿ ವಿಶ್ವಾಸದಿಂದ ಕೃಷಿಮಾಡಬೇಕಾದುದು ಅತ್ಯಾವಶ್ಯಕ, ಆದರೆ ಅಂತಹ ವಿಶ್ವಾಸವು, ನಷ್ಟ ಪರಿಹಾರ ಸಮಸ್ಯೆಯು ಆಯುಧವಿಸರ್ಜನ ಸಭೆಯಲ್ಲಿ ಪರಿಷ್ಕಾರವಾಗುವವರೆಗೂ ಹುಟ್ಟುವುದಿಲ್ಲ ಎಂದು ಜರ್ಮನಿಯ ಪ್ರಧಾನ ಮಂತ್ರಿಯು ಒಂದು ಔತಣ ಸಮಯದಲ್ಲಿ ಹೇಳಿದರು.

ದಿವಂಗತರಾದ ಸರ್ ಡಿ. ತಾತಾಯವರು

ಪ್ರಸಿದ್ಧ ತಾತಾಕಂಪೆನಿಯ ಪ್ರೊಪ್ರೈಟರಾಗಿದ್ದ ಸರ್ ಡೊರಾಬ್ಜಿ ತಾತಾಯವರು ದೇಹಾರೋಗ್ಯಕ್ಕಾಗಿ ಜರ್ಮನಿಗೆ ಹೋಗಿ ಅಲ್ಲಿಯ ಒಂದು ಆರೋಗ್ಯಸ್ಥಳದಲ್ಲಿ ವಾಸಮಾಡುತ್ತಿದ್ದು ಕಳೆದ ಶುಕ್ರವಾರ ಹೃದ್ರೋಗದಿಂದ ಮೃತರಾದರು. ಇವರು ಯೂರೋಪಿಗೆ ಹೊರಡುವುದಕ್ಕೆ ಮೊದಲು ಮಾರ್ಚಿ ತಿಂಗಳಲ್ಲಿ 3 ಕೋಟಿ ರೂ. ಬೆಲೆಬಾಳುವ ತಮ್ಮಾಸ್ತಿಯನ್ನು ಆಕಸ್ಮಿಕ ವಿಪತ್ತಿಗೆ ಗುರಿಯಾಗುವ ಜನರ ಸಹಾಯಕ್ಕಾಗಿ ಧರ್ಮಮಾಡಿದರಲ್ಲದೆ, ಇದಕ್ಕೆ ಮೊದಲೇ ಕ್ಷುದ್ರೋಗ ಚಿಕಿತ್ಸಾಕ್ರಮವನ್ನು ಕಲಿಯಲು ವಿದ್ಯಾರ್ಥಿಗಳಿಗೆ ವೇತನವನ್ನು ಕೊಡಲು 25 ಲಕ್ಷ ರೂ. ಗಳನ್ನು ಕೊಟ್ಟಿದ್ದರು. ಇಂತಹ ಧರ್ಮಾತ್ಮರ ಮರಣದಿಂದ ಭಾರತದೇಶಕ್ಕೆ ಅಪಾರ ನಷ್ಟವಾಯಿತು.

ಬ್ಯಾಂಕಿನ ೩೭೦೦೦ ರೂ. ಅಪಹರಣ

ಮದರಾಸು ಚಾರ್ಟರ್ಡ್ ಬ್ಯಾಂಕಿನ ಸರಾಫನಾದ ಮುತ್ತು ಮೊದಲಿಯಾರನ ಸಹಾಯದಿಂದ ರಾಜರತ್ನ ಎಂಬ ವರ್ತಕನು 37000 ರೂಪಾಯಿಗಳನ್ನು ಬ್ಯಾಂಕಿಗೆ ಕಟ್ಟಿರುವಂತೆ ಲೆಕ್ಕದಲ್ಲಿ ಬರೆದು ಅನಂತರ 37000 ರೂ. ಗಳಿಗೆ ಚಕ್ಕನ್ನು ಕೊಟ್ಟು ಆ ಮೊಬಲಗನ್ನು ತೆಗೆದುಕೊಂಡನು. ಆ ದಿವಸ ಸಾಯಂಕಾಲ ಬ್ಯಾಂಕಿನ ಲೆಕ್ಕ ಜಡ್ತಿ ಮಾಡುವಾಗ್ಗೆ 37000 ರೂ. ಕಡಿಮೆ ಇರುವುದು ಕಂಡು ಬಂದಿತು. ಆ ಜಡ್ತಿ ಸಮಯದಲ್ಲಿ ಸರಾಫನು ಬ್ಯಾಂಕಿನಲ್ಲಿರಲಿಲ್ಲವಾಗಿ ಅನುಮಾನ ಹುಟ್ಟಿ ಪೋಲೀಸಿಗೆ ತಿಳುಹಲ್ಪಟ್ಟಿತು. ಪೋಲೀಸಿನವರು ರಾಜರತ್ನನ್ನು ಸೆರೆ ಹಿಡಿದು ಅವನ ವಶದಲ್ಲಿದ್ದ 8000 ರೂ. ಗಳನ್ನು ತಮ್ಮ ವಶಪಡಿಸಿಕೊಂಡು ಸರಾಫನನ್ನು ತಡಕುವಲ್ಲಿ ಅವನು ಪಲಾಯನನಾಗಿದ್ದನು.

ಶಾರಾದಾ ಆಕ್ಟ್ ಉಲ್ಲಂಘನೆಗಾಗಿ ದಂಡ

ಸಾಂದ್ವೀಪವಾಸಿಯಾದ ಭೈರವ ಎಂಬಾತನು ತನ್ನ ಕುಮಾರ್ತಿ 7 ವರ್ಷ ವಯಸ್ಸಿನ ಸ್ನೇಹಲತೆಯನ್ನು ಚಂದ್ರಹರಶರ್ಮನೆಂಬ 19 ವರ್ಷ ವಯಸ್ಸಿನ ವರನಿಗೆ ಕೊಡಲು ನಿಶ್ಚಯಿಸಿ ಲಗ್ನವನ್ನು ಕಟ್ಟಿಸಿದನು. ಈ ವಿವಾಹವು ನ್ಯಾಯವಿರುದ್ಧವಾದುದರಿಂದ ನಡೆಯಕೂಡದೆಂದು ಅದೇ ಊರಿನ ಭೈರವ ಚಂದ್ರಶರ್ಮನೂ ಇತರ ಬಂಧುಗಳೂ ಹೆಣ್ಣಿನ ತಂದೆಗೆ ಹೇಳಿದರು. ಅವನು ಅವರುಗಳ ಮಾತನ್ನು ಉಲ್ಲಂಘಿಸಿದುದರ ಮೇಲೆ ಯೂನಿಯನ್ ಬೋರ್ಡು ಪ್ರೆಸಿಡೆಂಟರ ಮೂಲಕ ಹೆಣ್ಣಿನ ತಂದೆಗೆ ಇಂಜಕ್ಷನ್ ನೋಟೀಸನ್ನು ಕೊಡಿಸಿದರು. ಆದರೂ ಹೆಣ್ಣಿನ ತಂದೆಯು ಆ ನೋಟೀಸನ್ನೂ ಲಕ್ಷಿಸದೆ ಲಗ್ನಮಾಡಿಯೇ ಬಿಟ್ಟನು. ಅದರಮೇಲೆ ಭೈರವಚಂದ್ರಶರ್ಮನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ಅರ್ಜಿಬರೆದನು. ಮೆಜಿಸ್ಟ್ರೇಟು ಅಪರಾಧಿಯನ್ನು ಖರಮಾಡಿಕೊಂಡು ವರನಾದ ಚಂದ್ರಹರಶರ್ಮನಿಗೆ 50 ರೂ. ಯನ್ನೂ ಕನ್ಯೆಯ ಕಡೆಯ ಪುರೋಹಿತನಿಗೆ 100 ರೂ. ವರನಕಡೆಯ ಪುರೋಹಿತನಿಗೆ 25 ರೂ. ದಂಡವನ್ನೂ ವಿಧಿಸಿ ಈಗ ದೇಶದಲ್ಲಿ ದುಡ್ಡಿಲ್ಲದೆ ಜನರು ದುರ್ದಶಾಪನ್ನರಾಗಿರುವುದರಿಂದ ಅಪರಾಧಿಗಳ ಮೇಲೆ ಕನಿಕರವಿಟ್ಟು ಸ್ವಲ್ಪ ದಂಡವನ್ನು ವಿಧಿಸಿರುತ್ತೇನೆಂದು ಹೇಳಿದನು.

ಚೈನಾಸ್ತ್ರೀಯ ವಿಚಿತ್ರಸತಿ

ಹಿಂದುಗಳಲ್ಲಿ ಬಹಳವಾಗಿ ರೂಢಿಯಲ್ಲಿದ್ದ ಸತಿಯು ಅನೇಕ ಶತಮಾನಗಳಿಂದಲೂ ಚೈನಾ ದೇಶದಲ್ಲಿ ಅನುಸರಿಸಲ್ಪಡುತ್ತಿಲ್ಲವಾದರೂ ಆ ಪದ್ಧತಿಯನ್ನು ಶ್ಲಾಘಿಸುವವರು ನೂರಾರು ಜನರಿರುತ್ತಾರೆಂಬುದಕ್ಕೆ ಅನೇಕ ನಿದರ್ಶನಗಳಿವೆ. ಒಬ್ಬ ಮನುಷ್ಯನು ಅಗ್ನಿಯ ಪಾಲಾಗಿ ಸತ್ತರೆ ಅವನ ಹೆಂಡತಿಯಾಕೃತಿಯಲ್ಲಿ ಕಾಗದದ ಬೊಂಬೆ ಮಾಡಲ್ಪಟ್ಟು ಕಾಗದದ ಮನೆ ರಿಕ್ಷಾ ಬಂಡಿ ಕಾಗದದ ನಾಣ್ಯ ಮೊದಲಾದ ಪದಾರ್ಥಗಳೊಡನೆ ಸುಡಲ್ಪಡುವುದು. ಆ ಸತ್ತವನ ಹೆಂಡಿತಿ, ಮನೆ, ನಗನಾಣ್ಯಾದಿಗಳು ಅವನ ಕೂಡ ಬರುತ್ತವೆಂಬುದನ್ನು ತೋರಿಸಲಿಕ್ಕಾಗಿ ಆ ರೀತಿ ಸುಡಲ್ಪಡುವುದು. ಆದರೆ ಕೆಲ ದಿನಗಳ ಕೆಳಗೆ ಒಬ್ಬ ಮನುಷ್ಯನು ಸತ್ತು ಹೋಗಲು ಅವನ 21 ವರ್ಷ ವಯಸ್ಸಿನ ಹೆಂಡಿತಿಯು ಪತಿವಿಯೋಗ ದುಃಖವನ್ನು ಸಹಿಸಲಾರದೆ ವಿಷಪಾನದಿಂದ ಆತ್ಮಹತ್ಯೆಯನ್ನು ಮಾಡಿಕೊಂಡು ತನ್ನ ಪತಿಭಕ್ತಿಪರಾಯಣತೆಯನ್ನು ಪ್ರದರ್ಶಿಸಿದಳು. ಅಲ್ಲಿಯ ಜನರು ಈ ಕೃತ್ಯವನ್ನು ಬಹಳವಾಗಿ ಶ್ಲಾಘಿಸುತ್ತಿದ್ದಾರೆ, ಅಲ್ಲದೆ ಆಕೆಯ ಗಂಡನು ಒಂದು ಕಾರ್ಯಾಲಯದಲ್ಲಿ ಸಾಮಾನ್ಯ ಕೂಲಿಗಾರನಾಗಿದ್ದರೂ ಅವನ ಶವಸಂಸ್ಕಾರಕ್ಕೆ ಗೌರ್ನರೂ, ಮೇಯರೂ ಸಾವಿರಾರು ಮಂದಿ ಅಧಿಕಾರಿಗಳೂ, ಲಾಯರುಗಳೂ, ವರ್ತಕರುಗಳೂ ಸ್ಮಶಾನಕ್ಕೆ ಹೋಗಿದ್ದು ಗೌರವವನ್ನು ಪ್ರದರ್ಶಿಸಿ ಲೋಕದಲ್ಲೆಲ್ಲ ಪ್ರಸಿದ್ಧವಾಗುವಂತೆ ಮಾಡಿದರು.

ದೌರ್ಜನ್ಯವನ್ನಡಗಿಸಲು ಪ್ರಜಾಪ್ರಬೋಧವು

"ಬಂಗಾಳಾದಲ್ಲಿ ಪ್ರಬಲಿಸಿರುವ ದೌರ್ಜನ್ಯಪಕ್ಷದವರ ಮೇಲೆ ಪ್ರಜೆಗಳಿಗೆ ತಿರಸ್ಕಾರ ಬುದ್ಧಿ ಹುಟ್ಟುವಂತೆ ಮಾಡಿದಲ್ಲಿ ದೌರ್ಜನ್ಯಪಕ್ಷವು ಅಡಗಿ ಹೋಗುವುದು. ಇದರ ವಿನಾ ಬೇರೊಂದುಪಾಯವಿಲ್ಲ. ಬಂಗಾಳಾದಲ್ಲಿ ಸ್ವಪರಿಪಾಲನವನ್ನಪೇಕ್ಷಿಸುತ್ತಿರುವ ನಾಯಕರುಗಳು ಪ್ರಜೆಗಳಲ್ಲಿ ಇಂತಹ ಬುದ್ಧಿ ಹುಟ್ಟುವಂತೆ ಈ ವರೆಗೆ ಪ್ರಯತ್ನಿಸಿದ ಹಾಗೆ ಕಂಡು ಬರಲಿಲ್ಲ. ದೌರ್ಜನ್ಯಪಕ್ಷವನ್ನು ಅಲಕ್ಷಿಸಿ ರಾಜಕೀಯ ಸ್ವಾತಂತ್ರ್ಯವನ್ನು ಅನುಷ್ಠಾನಕ್ಕೆ ತರತಕ್ಕುದಲ್ಲ. ಪಾಶ್ಚಾತ್ಯದೇಶದಲ್ಲಿರುವ ಪ್ರಜಾಪರಿಪಾಲನ ಪದ್ಧತಿಯನ್ನು ಕೂಡಲೆ ಭಾರತದೇಶದಲ್ಲಿ ಅನುಸರಿಸಬಾರದು. ಭಾರತೀಯರು ಅದಕ್ಕೆ ಸಿದ್ಧರಾಗಿಲ್ಲ. ಆದುದರಿಂದ ಅದು ಆ ದೇಶದಲ್ಲಿ ಉಪಯೋಗವಾಗುವುದಿಲ್ಲ. ಅಲ್ಲದೆ ಭಾರತೀಯರು ಅದನ್ನು ಕೋರಿಲ್ಲ. ಭಾರತದೇಶವು ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಮುಖ್ಯ ಭಾಗವಾಗಿರಲು ಭಾರತದೇಶಕ್ಕೂ, ಅಲ್ಲಿ ಬ್ರಿಟಿಷ್‌ನವರಿಗೂ ಲಾಭಕರವಾಗಿರುವ ರೀತಿಯಲ್ಲಿ ವಿಶೇಷ ಬಾಧ್ಯತೆಯನ್ನು ಕೊಟ್ಟು ಸಂಪೂರ್ಣ ಬಾಧ್ಯತೆಯನ್ನು ಕ್ರಮೇಣ ಪ್ರಸಾದಿಸಬೇಕು" ಎಂದು ಹಿಂದೆ ಬಂಗಾಳಾ ಗೌರ್ನರಾಗಿದ್ದ ಸರ್ ಸ್ಟಾನ್ಲಿ ಜಾಕ್ಸನ್‌ರವರು ಕನ್ಸರ್ವೇಟಿವ್ ಇಂಡ್ಯಾ ಸೊಸೈಟಿಯಲ್ಲಿ ಉಪನ್ಯಾಸ ಮಾಡುವಾಗ್ಗೆ ಹೇಳಿದರು.

ಒಳದೇಶದ ವೃತ್ತಾಂತಗಳು.

ಆಫಿಸಿಯೇಟಿಂಗ್ ಎಕ್ಸೈಸ್ ಕಮಿಷನರಾದ ಮ|| ಡಿ. ಶ್ರೀನಿವಾಸಯ್ಯಂಗಾರರಿಗೆ 2 ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿದೆ.

ಮದ್ರಾಸ್ ಗೌರ್ನರು ದಂಪತಿಗಳು ಈ ತಾ|| 9 ರಲ್ಲಿ ಉದಕಮಂಡಲದಿಂದ ರಾಜಧಾನಿಗೆ ಬಂದು ಗೌರ್ನಮೆಂಟ್ ಹೌಸಿನಲ್ಲಿ ಶ್ರೀಮನ್ಮಹಾರಾಜರವರ ಆತಿಥ್ಯದಲ್ಲಿದ್ದುಕೊಂಡು ತಾ|| 15 ರ ಸಾಯಂಕಾಲ ಉದಕಮಂಡಲಕ್ಕೆ ಪ್ರಯಾಣ ಮಾಡುವವರಾಗಿರುವರು.

ಚೀಫ್ ಎಲೆಕ್ಟ್ರಿಕಲ್ ಇಂಜನಿಯರಾದ ಮ|| ಸಿ. ಎಂ. ಕಾರಿಯಪ್ಪನವರು ಮೇ ತಾ|| 30 ರಿಂದ 1 ತಿಂಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡಿರುವುದರಿಂದ ಇವರ ಅಸಿಸ್ಟೆಂಟರಾದ ಮ|| ಎ. ಆರ್. ಕೌಶಿಕ್‌ರವರು ತಮ್ಮ ಕೆಲಸದೊಡನೆ ಚೀಫ್ ಎಲೆಕ್ಟ್ರಿಕಲ್ ಇಂಜನಿಯರ ಕೆಲಸವನ್ನು ನೋಡಿಕೊಳ್ಳಲಪ್ಪಣೆಯಾಗಿದೆ.

ಮಳವಳ್ಳಿಯ ಪಾಪಯ್ಯನವರ ಮಗ ಕೆ. ರಾಜಯ್ಯ ಎಂಬವನು ರೆಕ್ರ್ಯೂಟ್‌ಮೆಂಟ್ ಬೋರ್ಡಿಗೆ ಕೊಟ್ಟ ಅರ್ಜಿಯಲ್ಲಿ ತನ್ನ ಅರ್ಹತೆಯ ವಿಚಾರವಾಗಿ ಸುಳ್ಳು ಬರೆದು ಕೆಲಸವನ್ನು ಪಡೆದಿದ್ದುದರಿಂದ 2 ವರ್ಷ ಕಾಲದವರೆಗೆ ಅವನು ಸರ್ಕಾರಿಯುದ್ಯೋಗಕ್ಕೆ ಸೇರಿಸಲ್ಪಡಕೂಡದೆಂದು ಸರ್ಕಾರದ ಆಜ್ಞೆಯಾಗಿದೆ.

ಆಕ್ಟಿಂಗ್ ಜನರಲ್ ಸೆಕ್ರೆಟರಿಯವರಾಗಿರುವ ಮ|| ಎಚ್. ವಿ. ರಾಮಸ್ವಾಮಿಯವರು ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾಗಿಯೂ, ಡಿ|| ಮೆಜಿಸ್ಟ್ರೇಟರಾಗಿಯೂ ವರ್ಗಾಯಿಸಲ್ಪಟ್ಟಿರುವುದರಿಂದ ಇದುವರೆಗೆ ಬದಲು ನೋಡುತ್ತಿದ್ದ ಮ|| ಎನ್. ಸುಂದರರಾಜಯ್ಯಂಗಾರ್‌ರವರಿಗೆ 2 ತಿಂಗಳ ಫರ್ಲೋ ರಜ ಕೊಡಲ್ಪಟ್ಟಿದೆ.

ರಾಜಧಾನಿಯಲ್ಲಿ ಕುದುರೆಯ ಜೂಜು ಕಳೆದ ಶನಿವಾರ ಆರಂಭವಾಗಿ ಇದೇ ತಾ|| 7, 9, 11 ಮತ್ತು 15 ರಲ್ಲಿ ನಡೆಯುವುದು. ಈವೇಳೆ ಹಿಂದಿನವರ್ಷಗಳಿಗಿಂತಲೂ ಹೆಚ್ಚಾಗಿ ಕುದರೆಗಳು ಬಂದಿರುವುವಲ್ಲದೆ ಜೂಜುಗಾರರೂ ಬಂದಿರುತ್ತಾರೆ. ಪೋಲೋ ಪಂದ್ಯವೂ ನಡೆಯುತ್ತಿದೆ. ಇದಕ್ಕೂ ಜಯಪುರ ಮೊದಲಾದ ಕಡೆಗಳಿಂದ ಆಟಗಾರರು ಬಂದಿರುತ್ತಾರೆ.

ಕೊಳ್ಳೇಗಾಲ ತಾ|| ಮುಡುಗುಂಡದ ಶ್ರೀಮಂತ ಮ|| ಗುರುಕಾರ್ ಜೋಶಪ್ಪನವರು 15–20 ದಿವಸಗಳಿಂದ ಅಸ್ವಸ್ಥರಾಗಿದ್ದು ಕಳೆದ ಬುಧವಾರ ಸ್ವಸ್ಥಳದಲ್ಲಿ ಕೈಲಾಸವಾಸಿಗಳಾದರೆಂದು ತಿಳುಹಲು ಬಹಳ ವಿಷಾದವಾಗುತ್ತದೆ. ಮಧ್ಯವಯಸ್ಕರಾಗಿಯೂ, ಪ್ರಸಿದ್ಧ ವರ್ತಕರಾಗಿಯೂ, ಉದಾರಧರ್ಮಿಷ್ಟರಾಗಿಯೂ, ಪ್ರಸಿದ್ಧರಾಗಿಯೂ ಇದ್ದ ಮ|| ಜೋಶಪ್ಪನವರ ಅಕಾಲಮರಣದಿಂದ ಆ ಪ್ರಾಂತೀಯರೆಲ್ಲರಿಗೂ ಬಹಳ ವ್ಯಸನವುಂಟಾಗಿದೆ. ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬದವರಿಗೆ ದುಃಖಸಮಾಧಾನವನ್ನು ಕೋರುತ್ತೇವೆ.

ಮೈಸೂರು ಸೀಮೆಯ ವೃತ್ತಪತ್ರಿಕಾಕರ್ತರ ಸಂಘದ ಆರಂಭೋತ್ಸವವು ಶ್ರೀಮದ್ಯುವರಾಜರವರಿಂದ ಕಳೆದ ಗುರುವಾರ ನಡೆಸಲ್ಪಟ್ಟಿತು. ಆ ಕಾಲದಲ್ಲಿ ಶ್ರೀಮದ್ಯುವರಾಜರವರು ಮತ್ತು ಈ ಮಹೋತ್ಸವಕ್ಕಾಗಿ ಆಹ್ವಾನಿಸಲ್ಪಟ್ಟಿದ್ದ ಪ್ರಸಿದ್ಧ ಹಿಂದು ಪತ್ರಿಕೆಯ ಸಂಪಾದಕರಾದ ಮ|| ಎಂ. ರಂಗಸ್ವಾಮಯ್ಯಂಗಾರ್ಯರು ಪತ್ರಿಕಾಕರ್ತರ ಮುಖ್ಯ ಧರ್ಮ ಮತ್ತು ವಾಚಕರ ಕರ್ತವ್ಯ ಇತ್ಯಾದಿ ವಿಷಯಗಳ ಮೇಲೆ ಬಹಳ ಉಪಯುಕ್ತವೂ ಉತ್ತೇಜನಕರವೂ ಆದ ಭಾಷಣಗಳನ್ನು ಮಾಡಿದರು. ಅದರಂತೆ ಉಭಯರೂ ವರ್ತಿಸಿದುದಾದರೆ ನಮ್ಮ ದೇಶದ ವೃತ್ತಪತ್ರಿಕೆಗಳು ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದ ಸೆಕ್ರೆಟರಿಯವರಾದ ಕಂಟ್ರಾಕ್ಟರ್ ಮ|| ಎಂ. ನಾಗಪ್ಪನವರ ಜ್ಯೇಷ್ಠಪುತ್ರ ಮ|| ಮಲ್ಲಪ್ಪನವರ ದ್ವಿತೀಯಪುತ್ರಿ ಚಿ|| ಸೌ|| ನಾಗಮ್ಮನನ್ನು ಬೆಂಗಳೂರು ದಂಡು ಹಲಸೂರಿನಲ್ಲಿರುವ ಮ|| ಯಜಮಾನ್ ಯು. ಎಸ್. ಕಾಳಪ್ಪನವರ ಕುಮಾರ ಮತ್ತು ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ದೌಹಿತ್ರ ಮ|| ಷಣ್ಮುಖಪ್ಪನವರಿಗೆ ಕೊಟ್ಟು ಇದೇ ತಾ|| 18 ರಲ್ಲೂ, ಮ|| ಮಲ್ಲಪ್ಪನವರ ತೃತೀಯಪುತ್ರಿ ಚಿ|| ಸೌ|| ಸುಶೀಲಮ್ಮನನ್ನು ಮೈಸೂರು ದಿನಸಿಮಂಡಿ ಮ|| ಸಿ. ದಾಸಪ್ಪನವರ ಪುತ್ರ ಮ|| ತಮ್ಮಯ್ಯನವರಿಗೆ ಕೊಟ್ಟು ತಾ|| 10 ರಲ್ಲೂ ಬೆಂಗಳೂರು ಶ್ರೀ ಜಗದ್ಗುರು ಜಯದೇವ ವೀರಶೈವ ವಿದ್ಯಾರ್ಥಿನಿಲಯದಲ್ಲಿ ವಿವಾಹಮಹೋತ್ಸವಗಳನ್ನು ನಡೆಸಲು ನಿಶ್ಚಯಿಸಿರುವರು. ಈ ದಂಪತಿಗಳಿಗೆ ಸಕಲಸನ್ಮಂಗಳವಾಗಲೆಂದು ಹರಸುತ್ತೇವೆ.

ಮೈಸೂರು ಸಿಟಿ ಮುನಿಸಿಪಲ್ ಆಫೀಸ್,
ಮೈಸೂರು.
ತಾ|| 26-5-1932.

ಪ್ರಸಿದ್ಧಪತ್ರಿಕೆ.

ಮೈಸೂರು ಸಿಟಿ ಮುನಿಸಿಪಲ್ ಆಡಳತಕ್ಕೆ ಒಳಪಟ್ಟ ಸೂಯೆಜ್ ಫಾರಂನಲ್ಲಿರುವ ರಾಸುಗಳಿಗೆ 1932 ನೇ ಇಸವಿ ಜುಲೈ 1ನೇ ತಾರೀಖಿನ ಲಾಗಾಯ್ತು 1933 ನೇ ಇಸವಿ ಜೂನ್ 30ನೇ ಆಖೈರು ತಾರೀಕಿನ ವರಿವಿಗೆ ಹುರಳಿ, ಹುಲ್ಲು, ಉಪ್ಪು ವಗೈರೆ ಸಪ್ಲೈ ಮಾಡತಕ್ಕವರು 10-6-1932 ನೇ ತಾರೀಕಿನ ಒಳಗಾಗಿ ಟೆಂಡರನ್ನು ಮುನಿಸಿಪಲ್ ಹೆಲ್ತಾಫೀಸರವರಲ್ಲಿ ಸೀಲ್ ಮಾಡಿದ ಕವರುಗಳಲ್ಲಿ ಕೊಡಬಹುದು.

ಹೆಚ್ಚಿಗೆ ವಿಚಾರವನ್ನು ತಿಳಿಯಲು ಅಪೇಕ್ಷಿಸುವವರು ಆಫೀಸ್ ಇರುವ ವೇಳೆಯಲ್ಲಿ ಹೆಲ್ತ್ ಆಫಿಸಿನಲ್ಲಿ ಬಂದು ತಿಳಿದುಕೊಳ್ಳಬಹುದು.

(Sd.) T. G. RAMA IYER,
President.

2

ಸ್ವೀಕಾರ

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

ಮ|| ಗಳಾದ

(1) ಶ್ರೀರಂಗಪಟ್ಟಣದ ಮ|| ಗಳಾದ ತಾ|| ಮಾರಶಿಂಗನಹಳ್ಳಿ ಮಠದ ಮುರುಗಪ್ಪನವರ ಕುಮಾರ ಚಿ|| ರಾ|| ಶಿವರುದ್ರಪ್ಪನಿಗೂ ಲೋಕಸರದ ಮರಿದೇವರ ಕುಮಾರ್ತೆ ಚಿ||ಸೌ|| ಶಿವನಂಜಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ಅನ್ವೇರಹಳ್ಳಿ ಪೂರ್ವಭಾವಿ ಮಠದ ವೇ||ಬ್ರ||ಶ್ರೀ|| ಶಿವಲಿಂಗರಾಜೇಂದ್ರಸ್ವಾಮಿಗಳವರ ಅಪ್ಪಣೆ ಮೇರಿಗೆ ವಧೂವರರ ಕಡೆಯಿಂದ ಮಾರಶಿಂಗನಹಳ್ಳಿಯಲ್ಲಿರುವ ಮಾರ್ತಾಂಡರಾಜ ವೈದ್ಯಶಾಲಾ ಪ್ರೊಪ್ರೈಟರ್ ಎಂ. ಚೆನ್ನಬಸಪ್ಪನವರ ಮೂಲಕ ರೂ. 1.

(2) ನಂಜನಗೂಡಿನಲ್ಲಿರುವ ಹೆಮ್ಮರಗಾಲದ ಚಿಕ್ಕಣ್ಣಶೆಟ್ಟರವರ ಕುಮಾರ ಚಿ|| ಸುಬ್ಬಣ್ಣನಿಗೂ ಅದೇ ಊರಿನಲ್ಲಿರುವ ಛತ್ರದ ಮಲ್ಲಣ್ಣನವರ ಕುಮಾರ್ತೆ ಚಿ|| ಸೌ|| ಸೌಭಾಗ್ಯಮ್ಮನಿಗೂ ಲಗ್ನ ನಡೆದು ಗಂಡಿನಮನೆಯಲ್ಲಿ ಅಕ್ಷತಾ ಮಹೋತ್ಸವ ಕಾಲದಲ್ಲಿ ವರನಕಡೆಯಿಂದ ಎಚ್. ಜಿ. ಮಹದೇವಪ್ಪನವರ ಮೂಲಕ ರೂ. 1.

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖಕಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು—ಸಂಪಾದಕ.

ಪರೀಕ್ಷಾ ಫಲವು.

ಪ್ರತಿ ವರ್ಷದಂತೆ 1932 ನೇ [illegible]
[illegible]

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಜೂನ್ ತಾ|| ೬ ನೆಯ ಸೋಮವಾರ.

OUR CONGRATULATIONS

We offer our hearty congratulations to Dharmaprakash D. Banumiah on the high distinction of Rao Bahadur bestowed on him by His Excellency the Viceroy. If there was any who deserved such a recognition in Mysore it was our popular Sahukar. His charitable disposition had already met with the recognition of our Beloved Sovereign who has a rare capacity for descerning merit among the public workers in the State. Very often the obtaining of a title is the culmination of a man's endeavours and his public service or philanthropy ends with the title. With our Sahukar the bestowal of the distinction Dharmaprakash meant only a further incentive for greater service. Since then his contributions to various charities large and small have never ceased. There is not a single movement of any consequence and public utility in the city and even outside in the State which has not had a generous patron in the person of Sahukar Banumiah. His recent donations to the Sanitorium, the Ayurvedic and Unani College, the optholmic section of Krishnarajendra Hospital, the Maternity and Child Welfare centre, apart from numerous other charities have won him an honoured place among the citizens of the State. Though sufficiently aged the Sahukar is young in spirits and remarkably active for his age. May God grant him long life and health to enjoy the distinction is our prayer.

We are also very glad to see that Mr. M. Ramaswamy Vice President of the City Municipal Council is the recipient of the title of Rao Saheb. Young as he is, he has devoted himself to public service and has been doing a great deal of work in various spheres. He has been the Secretary of the Gunamba Maternity and Child Welfare Trust, the Mysore Pinjrapole from their very inception. He has yet a good future before him and we offer him our hearty congratulations on the distinction with our best wishes for his future.

We wish to offer our felicitations to Mrs. W. H. Theobald on her becoming the recipient of the Kaiser-in-hind Medal. She has been rendering useful service in various public movements, and as Honorary Bench Magistrate and Superintendent of the Vocational Institute for women.

We offer also our sincere congratulations to Rao Sahib K. Ramaswamy Corporation Engineer Bombay on his getting the further distinction of Rao Bahadur. Mysore must be proud of such a gentleman who having risen by dint of merit to a high position abroad has been striving his best to be of help to Mysoreans and Mysore. He is a generous soul instinctively and he richly deserves the distinction.

A USEFUL CIRCULAR

The Government have been pleased to pass a G. O. for the prompt disposal of petitions. While drawing the attention of officers to the instructions issued in G. O. dated 11th July 1922 they direct that where a petition is not expected to be disposed of in a fortnight, an acknowledgment should invariably be sent to the party with the least possible delay. An adherance to this rule is sure to mitigate a lot of hardship which petitioners at present labour and we hope that the G. O. will be respected by all officers. We ake it that this direction is not only meant for officers subordinate to Government but to the Secretariat and Government as well. Not very often the petitions addressed to Government remain unanswered for months without even an acknowledgment. We hope it will not be too much to expect that Government also will adhere to the principle strictly.

ಅಭಿನಂದನ.

ಭಾರತ ಸಾರ್ವಭೌಮರ ವರ್ಧಂತ್ಯುತ್ಸವದಲ್ಲಿ ಪ್ರಸಾದಿಸಲ್ಪಟ್ಟ ಪ್ರಶಸ್ತಿಗಳಲ್ಲಿ ರಾಜಧಾನಿಯ ಧರ್ಮಪ್ರಕಾಶ ಸಾಹುಕಾರ್ ಡಿ. ಬನುಮಯ್ಯನವರಿಗೆ ರಾವ್‌ಬಹದ್ದೂರು ಪ್ರಶಸ್ತಿಯೂ, ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟ್ ಮ|| ಎಂ. ರಾಮಸ್ವಾಮಿಯವರಿಗೆ ರಾವ್‌ಸಾಹೇಬ್ ಪ್ರಶಸ್ತಿಯೂ, ಮ್ಯುನಿಸಿಪಲ್ ಕೌನ್ಸಿಲರ್ ಮಿ|| ಡಬ್ಲ್ಯು. ಎಚ್. ತಿಯೋಬಾಲ್ಡ್‌ರವರ ಪತ್ನಿಯವರಿಗೆ ಕೇಸರಿ ಹಿಂದ್ ಪದಕವೂ, ಬೊಂಬಾಯಿ ಪಟ್ಟಣದ ಮ್ಯುನಿಸಿಪಲ್ ಇಂಜನಿಯರ್ ರಾವ್‌ಸಾಹೇಬ್ ಕಿಕ್ಕೇರಿ ರಾಮಸ್ವಾಮಿಯವರಿಗೆ ರಾವ್‌ಬಹದ್ದೂರ್ ಪ್ರಶಸ್ತಿಯೂ ವೈಸ್ರಾಯರಿಂದ ದಯಪಾಲಿಸಲ್ಪಟ್ಟಿದ್ದಕ್ಕಾಗಿ ಈ ಮಹಾಶಯರುಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಶ್ರೀಯುತ ಡಿ. ಬನುಮಯ್ಯನವರು ಒಂದುಕಾಲುಲಕ್ಷ ರೂಪಾಯಿಗಳ ಮೇಲೆಯೇ ವೆಚ್ಚಮಾಡಿ ಹೈಸ್ಕೂಲನ್ನು ಸ್ಥಾಪಿಸಿ ಗುಣೈಕಪಕ್ಷಪಾತಿಗಳೂ ಧರ್ಮೋತ್ತೇಜಕರೂ ಆದ ಶ್ರೀಮನ್ಮಹಾರಾಜರವರ ಮೆಚ್ಚುಗೆಗೆ ಪಾತ್ರರಾಗಿ ಧರ್ಮಪ್ರಕಾಶ ಎಂಬ ಅನ್ವರ್ಥ ಪ್ರಶಸ್ತಿಯನ್ನು ಪಡೆದರು. ಈರೀತಿಯಾಗಿ ಪ್ರಜೋಪಯುಕ್ತವಾದ ಧರ್ಮಕಾರ್ಯವನ್ನು ಮಾಡಿ ಪ್ರಶಸ್ತಿಯನ್ನು ಪಡೆಯತಕ್ಕವರು ಸಾಮಾನ್ಯವಾಗಿ ತಮ್ಮ ಪುರುಷಾರ್ಥಸಿದ್ಧಿಸಿತೆಂದು ಭಾವಿಸಿ ಮೌನರಾಗುವರು. ಆದರೆ ನಮ್ಮ ಧರ್ಮಪ್ರಕಾಶರು ಆರೀತಿ ಮೌನರಾಗಿರದೆ ಮತ್ತಷ್ಟು ಹೆಚ್ಚಾದ ಧರ್ಮಕಾರ್ಯಗಳನ್ನು ಮಾಡಲು ಉತ್ತೇಜಿತರಾಗಿ ಪ್ರಜೋಪಯುಕ್ತ ಧರ್ಮಕಾರ್ಯಗಳನ್ನು ನಾನಾ ರೀತಿಯಲ್ಲಿ ಮಾಡಿಯೂ ಮಾಡುತ್ತಲೂ ಇರುವರು. ರಾಜಧಾನಿಯಲ್ಲಿ ಇವರ ಸಹಾಯವಿಲ್ಲದಿರುವ ಧರ್ಮಕಾರ್ಯವಾವುದೂ ಇಲ್ಲವೆಂದೂ, ಸಂಸ್ಥಾನದ ಹೊರಗಡೆಯಲ್ಲೂ ಇವರಿಂದ ಬಹಳ ಮಟ್ಟಿಗೆ ಧರ್ಮಸಹಾಯವಾಗಿರುತ್ತದೆಂದೂ ಹೇಳಿದರೆ ಅತಿಶಯೋಕ್ತಿಯಾಗಲಾರದು. ಕ್ಷಯರೋಗ ಆಸ್ಪತ್ರೆಯಲ್ಲಿ ಒಂದು ವಾರ್ಡನ್ನೂ, ಆಯುರ್ವೇದೀಯ ಮತ್ತು ಯುನಾನಿ ಕಾಲೇಜಿನ ಮೇಲ್ಭಾಗದಲ್ಲಿ ರೋಗಿಗಳಿಗಾಗಿ ವಾರ್ಡುಗಳನ್ನೂ, ಕೃಷ್ಣರಾಜ ಆಸ್ಪತ್ರೆಯಲ್ಲಿ ಕಣ್ಣಾಸ್ಪತ್ರೆಯನ್ನೂ ಗರ್ಭಿಣಿ ಶಿಶುರಕ್ಷಣಾಲಯವನ್ನೂ ಕಟ್ಟಲು ಸಾವಿರಾರು ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿರುವರಲ್ಲದೆ ಇನ್ನೂ ಅನೇಕಾನೇಕ ಸಣ್ಣ ದೊಡ್ಡ ಧರ್ಮಕಾರ್ಯಗಳನ್ನು ಮಾಡಿ ಸಂಸ್ಥಾನದಲ್ಲೆಲ್ಲ ವಿಶೇಷ ಗೌರವವನ್ನು ಸಂಪಾದಿಸಿರುತ್ತಾರೆ. ಆದುದರಿಂದ ಘನತರವಾದ ರಾವ್‌ಬಹದ್ದೂರ್ ಪ್ರಶಸ್ತಿಯನ್ನು ಪಡೆಯಲು ಇವರಿಗಿಂತಲೂ ಅರ್ಹರಾದವರು ನಮ್ಮ ರಾಜಧಾನಿಯಲ್ಲಿ ಬೇರೊಬ್ಬರಿಲ್ಲ. ಈ ಧರ್ಮಪುರುಷರು ವೃದ್ಧರಾಗಿದ್ದರೂ ಧೈರ್ಯೋತ್ಸಾಹದಲ್ಲಿ ಯುವಕರಾಗಿರುತ್ತಾರೆ. ಈ ಪುಣ್ಯಾತ್ಮರು ದೀರ್ಘಾಯುರಾರೋಗ್ಯದಿಂದಿದ್ದು ಈ ಘನತರ ಪ್ರಶಸ್ತಿಯನ್ನು ಅನುಭವಿಸುವಂತೆ ಅನುಗ್ರಹಿಸಲೆಂದು ಆ ದಯಾಮಯನಾದ ಪರಶಿವನನ್ನು ಬೇಡುತ್ತೇವೆ. ಅಲ್ಲದೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ವೈಸ್‌ಪ್ರೆಸಿಡೆಂಟರಾಗಿಯೂ, ಪಿಂಜ್ರಾಪೋಲು ಮತ್ತು ಗುಣಾಂಬಾ ಗರ್ಭಿಣಿ ಶಿಶು ಸಂರಕ್ಷಣಾಲಯಗಳ ಸೆಕ್ರೆಟರಿಯವರಾಗಿಯೂ ಇದ್ದುಕೊಂಡು ಪರಹಿತಕಾರ್ಯವನ್ನು ನಿಷ್ಕಾಮಬುದ್ಧಿಯಿಂದ ಮಾಡುತ್ತಿರುವ ಮತ್ತು ಇನ್ನೂ ಅತಿಶಯವಾಗಿ ಮಾಡಲು ದೇಹಶಕ್ತಿಯನ್ನೂ ಕಾಲವ್ಯವಧಾನವನ್ನೂ ಉಳ್ಳ ಮ|| ಎಂ. ರಾಮಸ್ವಾಮಿಯವರಿಗೂ; ಆನರರಿ ಬೆಂಚು ಮೆಜಿಸ್ಟ್ರೇಟರಾಗಿಯೂ, ಸ್ತ್ರೀಯರ ಉಪವೃತ್ತಿ ಶಿಕ್ಷಾಲಯದ ಸೂಪರಿಂಟೆಂಡೆಂಟರಾಗಿಯೂ ಇದ್ದುಕೊಂಡು ಪ್ರಜೋಪಯುಕ್ತ ಕಾರ್ಯಗಳನ್ನು ಮಾಡುತ್ತಿರುವ ಮಿ|| ತಿಯೋಬಾಲ್ಡರವರ ಪತ್ನಿಯವರಿಗೂ; ಮೈಸೂರು ದೇಶದಲ್ಲಿ ಹುಟ್ಟಿ ಬೊಂಬಾಯಿ ಮಹಾಪಟ್ಟಣಕ್ಕೆ ಹೋಗಿ ಅಲ್ಲಿಯ ಮ್ಯುನಿಸಿಪಲ್ ಇಂಜನಿಯರಾಗಿದ್ದುಕೊಂಡು ವಿಶೇಷ ಸಾಮರ್ಥ್ಯದಿಂದ ಉದ್ಯೋಗವನ್ನು ನಿರ್ವಹಿಸಿ ವಿಶೇಷ ಗೌರವಪ್ರತಿಷ್ಠೆಗಳನ್ನು ಪಡೆದು ನಮ್ಮ ಸೀಮೆಗೆ ಕೀರ್ತಿಯನ್ನು ತಂದಿರುವ ಮತ್ತು 50-60 ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ಹೊಳೆನರಸೀಪುರದಲ್ಲಿ ಹೆರಿಗೆಯ ಆಸ್ಪತ್ರೆಯನ್ನು ಕಟ್ಟಿಸಿ ಮಹೋಪಕಾರವನ್ನು ಮಾಡಿರುವ ಮ|| ಕೆ. ರಾಮಸ್ವಾಮಿಯವರಿಗೂ ಆಯುರಾರೋಗ್ಯವನ್ನು ಇತೋಪ್ಯತಿಶಯವಾದ ಪ್ರಶಸ್ತಿಗಳನ್ನೂ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಉಪಯುಕ್ತ ಪ್ರಭುತ್ವಾಜ್ಞೆ.

ಸರ್ಕಾರಿಯಧಿಕಾರಿಗಳಿಗೆ ಪ್ರಜೆಗಳು ಬರೆದುಕೊಳ್ಳುವ ಅರ್ಜಿಗಳು ವರ್ಷಗಟ್ಟಲೆ ಇತ್ಯರ್ಥವಾಗದೆ ಇರುವುದರಿಂದ ಪ್ರಜೆಗಳಿಗೆ ಬಹಳ ನಷ್ಟ ಕಷ್ಟಗಳು ಪ್ರಾಪ್ತವಾಗುತ್ತವೆಂಬ ದೂರು ಪ್ರಬಲವಾದುದರಮೇಲೆ, ಅರ್ಜಿಗಳು ಕೂಡಲೆ ವಿಲೆಯಾಗಬೇಕೆಂಬ ಬಗೆಗೆ ಪ್ರಭುತ್ವದವರು ಈಗ ತಾನೇ ಒಂದಪ್ಪಣೆಯನ್ನು ಮಾಡಿರುತ್ತಾರೆ. ಅದರಲ್ಲಿ ಅರ್ಜಿಯು ಎರಡು ವಾರದೊಳಗೆ ವಿಲೆಯಾಗಲು ಸಾಧ್ಯವಿಲ್ಲದಿರುವ ಪಕ್ಷದಲ್ಲಿ ಅರ್ಜಿದಾರರಿಗೆ ಕೂಡಲೆ ಇಂಡಾರ್ಸನ್ನು ಕೊಡಬೇಕೆಂದು ಹೇಳಲ್ಪಟ್ಟಿದೆ. ಈ ಆಜ್ಞೆಯು ಅನುಸರಿಸಲ್ಪಟ್ಟಲ್ಲಿ ಈಗ ಅರ್ಜಿದಾರರು ಅನುಭವಿಸುತ್ತಿರುವ ಕಷ್ಟನಷ್ಟಗಳು ಬಹಳಮಟ್ಟಿಗೆ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲವಾದುದರಿಂದ, ಎಲ್ಲಾ ಅಧಿಕಾರಿಗಳೂ ಈ ಆಜ್ಞೆಯನ್ನು ಗೌರವಿಸುವರೆಂದು ನಿರೀಕ್ಷಿಸುತ್ತೇವೆ. ಈ ಆಜ್ಞೆಯು ಕೆಳಗಿನ ಅಧಿಕಾರಿಗಳಿಗೆ ಮಾತ್ರ ಅನ್ವಯಿಸದೆ ಸೆಕ್ರೆಟರಿಯೇಟಿನವರಿಗೂ ಪ್ರಭುತ್ವಾಧಿಕಾರಿಗಳಿಗೂ ಅನ್ವಯಿಸುತ್ತದೆಂದು ಭಾವಿಸುತ್ತೇವೆ. ಅನೇಕವೇಳೆ ಪ್ರಭುತ್ವದವರಿಗೆ ಬರೆದುಕೊಂಡಂತಹ ಅರ್ಜಿಗಳು ತಿಂಗಳುಗಟ್ಟಲೆ ವಿಲೆಯಿಲ್ಲದೆ ಬಿದ್ದಿರುತ್ತವಲ್ಲದೆ ಅವು ತಲುಪಿದುವೆಂದು ಸಹ ಅರ್ಜಿದಾರರಿಗೆ ತಿಳುಹಲ್ಪಡುತ್ತಿಲ್ಲ. ಅದುಕಾರಣ ಪ್ರಭುತ್ವದವರು ತಮ್ಮಾಜ್ಞೆಯನ್ನು ತಾವು ಸಹ ಪಾಲಿಸುವರೆಂದು ನಿರೀಕ್ಷಿಸುತ್ತೇವೆ.

ಫೋರ್ಡ್ ಮೋಟಾರು ಕಂಪೆನಿಗೆ ನಷ್ಟ

1931ನೆಯ ವರ್ಷದಲ್ಲಿ ಫೋರ್ಡ್ ಮೋಟಾರು ಕಂಪೆನಿಗೆ 1,80,000 ರೂ. ಗಳವರೆಗೂ ನಷ್ಟ ಸಂಭವಿಸಿರುತ್ತದೆ. ಇದಕ್ಕೆ ಮೋಟಾರುಬಂಡಿಗಳ ನಿರ್ಮಾಣವು ಕಡಿಮೆಯಾದುದೇ ಕಾರಣವಂತೆ.

ಮೂವರು ಸಜೀವರಾಗಿ ಹೂತುಹೋದರು

ಕಲ್ಲಿಕೋಟೆಯಲ್ಲಿ ಮಳೆ ಗಾಳಿಯನಾಹುತದಿಂದ ಕುರದೊಟ್ಟಿ ಗ್ರಾಮದ ಸಮೀಪದಲ್ಲಿರುವ ಒಂದು ಗುಡ್ಡದ ಒಂದು ಭಾಗವು ಕುಸಿದು ಬಿದ್ದಿತು. ಇದರ ಕೆಳಗೆ ಒಬ್ಬ ಮಾಪಿಳ್ಳೆಯೂ ಇಬ್ಬರು ಹೆಂಗುಸರೂ ಸಿಕ್ಕಿ ಹತರಾದರು.

ಮಾಲವ್ಯರವರ ಸೊಸೆಗೆ ಖೈದು

ಪಂಡಿತ ಮದನಮೋಹನ ಮಾಲವ್ಯರವರ ಕುಮಾರ ಮುಕುಂದ ಮಾಲವ್ಯರವರ ಪತ್ನಿಯು ಕಳೆದ ತಾ|| 24 ರಲ್ಲಿ ನಡೆದ ಮಂಡಲ ಸಭೆಗೆ ಪೋಲೀಸು ಆಜ್ಞೆಯನ್ನು ಮೀರಿ ಹೋಗಲು ಪ್ರಯತ್ನಿಸಿದ ಅಪರಾಧಕ್ಕಾಗಿ ಒಂದು ವರ್ಷ ಕಠಿಣ ಸಜಾ ವಿಧಿಸಲ್ಪಟ್ಟಿತು.

ಜಪಾನಿನಲ್ಲಿ ಜಾತೀಯ ಪ್ರಭುತ್ವಸ್ಥಾಪನೆ

ಜಪಾನಿನ ಪ್ರಧಾನ ಮಂತ್ರಿಯ ಹತ್ಯದದೆಸೆಯಿಂದ ರಾಜಕೀಯದಲ್ಲಿ ಏನಾದರೊಂದು ತೊಂದರೆಯು ಸಂಭವಿಸಬಹುದೆಂದಿದ್ದ ಭಯವು ತೊಲಗಿತು. ಇದಕ್ಕೆ ಜಾತೀಯ ಪ್ರಭುತ್ವವೇರ್ಪಟ್ಟುದೇ ಕಾರಣವು. ಹೊಸ ಪ್ರಧಾನ ಮಂತ್ರಿಗೆ 73 ವರ್ಷ ವಯಸ್ಸಾಗಿದೆ.

ಬೆಂಕಿಯ ಅನಾಹುತ

ಪಂಜಾಬಿನಲ್ಲಿ ಹೊಸ್ಯರಪುರ ಡಿಸ್ಟ್ರಿಕ್ಟಿಗೆ ಸೇರಿದ ಒಂದು ಗ್ರಾಮದಲ್ಲಿ ಪ್ರಚಂಡ ಗಾಳಿ ಬೀಸುತ್ತಿರುವಾಗ್ಗೆ ಒಂದು ಮನೆಯು ಬೆಂಕಿಯಿಂದ ಹೊತ್ತುಕೊಂಡಿತು. ಅದರ ಜ್ವಾಲೆಯು ಸುತ್ತಲೂ ಹರಡಿಕೊಂಡು 100 ಕ್ಕೆ ಮೇಲ್ಪಟ್ಟು ಮನೆಗಳು ಸುಟ್ಟುಹೋಗಿ ಸುಮಾರು 150 ಕುಟುಂಬಗಳಿಗೆ ನೆರಳೂ ಆಹಾರವೂ ಇಲ್ಲದಂತಾಗಿದೆ.

ಬ್ರಿಟಿಷ್ ಸಾಮ್ರಾಜ್ಯ ಸಂರಕ್ಷಣಾವಶ್ಯಕತೆ

ಚಕ್ರವರ್ತಿಯವರ ಜನ್ಮದಿನೋತ್ಸವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಉಪನ್ಯಾಸಮಾಡುವಾಗ್ಗೆ "ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿದ ದೇಶಗಳೆಲ್ಲ ಈವರೆಗೆ ಏಕೀಭಾವದಿಂದಿರುತ್ತವೆ. ಈಗ ಈ ಸಂಬಂಧವನ್ನು ಸಡಲಿಸಿದಲ್ಲಿ ಪ್ರಪಂಚಕ್ಕೆ ಮಹತ್ತರ ಅನರ್ಥವು ಸಂಭವಿಸುವುದು. ಒಟೋವಾ ಸಭೆಯು ಜಯಪ್ರದವಾಗಿ ನಡೆಯುವುದೆಂಬ ಭರವಸೆಯು ನನಗೆ ಸಂಪೂರ್ಣವಾಗಿರುತ್ತದೆ" ಎಂದು ಹೇಳಿದರು.

ಐಯರಲೆಂಡು ರಾಜಭಕ್ತಿಪ್ರಮಾಣ

ಐಯರಲೆಂಡು ರಾಜಭಕ್ತಿಪ್ರಮಾಣ ನಿಷೇಧದ ಬಿಲ್ಲು ಐಯರ್ಲೆಂಡು ಪಾರ್ಲಿಮೆಂಟಿನಲ್ಲಿ ಮೂರುವೇಳೆ ಅನುಮೋದಿತವಾದುದರಮೇಲೆ ಡಿವಿಲೆರಾಯವರು ಸೆನೇಟು ಸಭೆಯಲ್ಲಿ ಉಪಪಾದಿಸಿರುವರು. ಇದು ಸೆನೇಟು ಸಭೆಯಲ್ಲೂ ಎರಡುವೇಳೆ ಅನುಮೋದಿತವಾಯಿತು ಮತ್ತು ಮೂರನೆಯ ವೇಳೆಯೂ ಅನುಮೋದಿತವಾಗುವ ಭರವಸೆಯಿದೆ. ಅನಂತರ ಬ್ರಿಟಿಷರು ಅದರ ಮೇಲೇನು ಯೋಜನೆಮಾಡುವರೋ ನೋಡಬೇಕು.

ರಷಿಯಾ ಜಪಾನಿಗೆ ಯುದ್ಧ ನಡೆಯಬಹುದು

ರಷಿಯಾ ಜಪಾನಿಗೆ ಶೀಘ್ರದಲ್ಲಿಯೇ ಯುದ್ಧ ನಡೆಯುವ ಪರಿಸ್ಥಿತಿಯುಂಟಾಗುತ್ತಿದೆ ಎಂದು ಹೇಳಲ್ಪಡುತ್ತಿದೆ. ಜಪಾನ್ ಡಿಕ್ಟೇಟರು ಮುಕಡನ್ನನ್ನು ಬಿಟ್ಟು ಹರ್ಬಿನ್ನಿನಲ್ಲಿ ಜಪಾನ್ ಸೈನಿಕ ಮುಖ್ಯ ಕಾರ್ಯಾಲಯವನ್ನೇರ್ಪಡಿಸಿ ತಾನು ಈಗ ಅಲ್ಲಿಯೇ ಇರುತ್ತಾನೆ. ಇನ್ನೊಂದು ಕಡೆ ಜಪಾನು ಸೇನೆಯು ಚೀನಾಕ್ಕೆ ಪೂರ್ವದಲ್ಲಿರುವ ಸುಂಗರೀ ನದಿಯ ಕೆಳಭಾಗದಲ್ಲಿ ರಷ್ಯಾ ಸರಹದ್ದಿಗೆ ತ್ವರಿತದಿಂದ ಹೋಗುತ್ತಿದೆ.

ಬೊಂಬಾಯಿನಲ್ಲಿ ಸಮಾಧಾನವಾಗಿದೆ

ಬೊಂಬಾಯಿನಲ್ಲಿ ಕಳೆದ ಮೊಹರಂನಲ್ಲಿ ನಡೆದ ಹಿಂದು ಮಹಮ್ಮದೀಯರ ಕಲಹದಲ್ಲಿ ಈ ವರೆಗೆ 3000 ಮಂದಿ ಗಾಯವಡೆದು 200 ಮಂದಿ ಹತರಾದರು. ಇದರಲ್ಲಿ ಹಿಂದುಗಳ ಸಂಖ್ಯೆಯೇ ಹೆಚ್ಚಾಗಿರುವುದು. ಈಗ ಕಲಹವು ನಿಂತು ಸಮಾಧಾನಸ್ಥಿತಿಗೆ ಬರುತ್ತಿರುವುದಾಗಿ ತಿಳಿಯಬರುತ್ತದೆ. ಶಾಂತಿಸ್ಥಾಪನೆಗಾಗೇರ್ಪಟ್ಟಿರುವ ಸಂಘದವರು ಹಿಂದು ಮಹಮ್ಮದೀಯರಿಗೆ ಕೋಪೋದ್ರೇಕವಾಗುವಂತಹ ಲೇಖವನ್ನು ಬರೆಯಬಾರದೆಂದು ವೃತ್ತಪತ್ರಿಕಾಕರ್ತರುಗಳನ್ನು ಪ್ರಾರ್ಥಿಸಿರುತ್ತಾರೆ.

ಪೋಲೀಸಿನವನು ಕೈಬಳೆಗಳನ್ನಪಹರಿಸಿದುದು

ಲಾಹೋರಿನಲ್ಲಿ ಚಿಕ್ಕ ವಯಸ್ಸಿನ ಹಿಂದು ಹುಡುಗಿಯು ಸಂಗಡಗಾತಿಯರ ಕೂಡ ಆಡುತ್ತಿರುವಾಗ್ಗೆ ಒಬ್ಬ ಪೋಲೀಸಿನವನು ಬಂದು ಆ ಹುಡುಗಿಯ ಕೈಗಳನ್ನು ಹಿಡಿದುಕೊಂಡು

ಕಪಾಳಕ್ಕೆ ಚೆನ್ನಾಗಿ ಹೊಡೆದನು. ಆ ಹುಡುಗಿಯು ಕೊಂಚಕಾಲ ಜ್ಞಾನತಪ್ಪಿದ್ದು ಅನಂತರ ಚೇತರಿಸಿಕೊಂಡೆದ್ದು ನೋಡುವಲ್ಲಿ ತನ್ನ ಕೈಬಳೆಗಳಿರಲಿಲ್ಲ. ಇದಕ್ಕಾಗಿ ಪೋಲೀಸಿನವನು ಕೆಲಸದಿಂದ ತಾತ್ಕಾಲಿಕವಾಗಿ ತೆಗೆಯಲ್ಪಟ್ಟಿರುವನಲ್ಲದೆ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾನೆ. ವಿಚಾರಣೆಯಲ್ಲಿ ಹುಡುಗಿಯು ನಡೆದ ವಿದ್ಯಮಾನವನ್ನೆಲ್ಲ ಯಥಾವತ್ತಾಗಿ ತಿಳಿಸಿದಳಲ್ಲದೆ ಪೋಲೀಸಿನವನು ಬಳೆಗಳನ್ನು ತನಗೆ ಮಾರಿರುತ್ತಾನೆಂದು ಒಬ್ಬ ಸಾಕ್ಷಿಯು ಹೇಳಿರುತ್ತಾನೆ.

ನೀರಿನ ತೊಟ್ಟಿಯಲ್ಲಿ ಮಗು ಬಿದ್ದು ಸತ್ತಿತು

ದಿಲ್ಲಿಯ ನಗರದಲ್ಲಿ ನೀರಿನ ಅಭಾವದಿಂದ ಮ್ಯುನಿಸಿಪಾಲಿಟಿಯವರು ಕ್ಲಪ್ತಕಾಲದಲ್ಲಿ ಮಿತವಾಗಿ ನೀರನ್ನೊದಗಿಸುತ್ತಿರುವ ಪ್ರಯುಕ್ತ ಜನರು ನೀರನ್ನು ತೊಟ್ಟಿಗಳಲ್ಲೂ ಹಂಡೆಗಳಲ್ಲೂ ಶೇಖರಿಸಿಟ್ಟುಕೊಳ್ಳುತ್ತಿರುವರು. ರೈಲ್ವೆ ಆಫೀಸು ಕ್ಲಾರ್ಕಿನ ಗಂಡುಮಗು ಸ್ನಾನದ ಮನೆಯಲ್ಲಿ ನೀರು ತುಂಬಿದ್ದ ತೊಟ್ಟಿಯೊಳಕ್ಕೆ ಬಿದ್ದು ಸತ್ತು ಹೋಗಿದ್ದಿತು. ಒಂದು ಲೋಟಾ ನೀರನ್ನು ತರಲು ಯಾರೊ ಸ್ನಾನದ ಮನೆಗೆ ಹೋಗಿ ನೋಡುವಲ್ಲಿ ಮಗುವಿನ ಶವವು ತೊಟ್ಟಿಯ ನೀರಿನ ಮೇಲೆ ತೇಲಾಡುತ್ತಿದ್ದನ್ನು ಕಂಡು ದಿಗಿಲುಬಿದ್ದು ಕೂಗಿಕೊಳ್ಳಲಾಗಿ ತಂದೆ ತಾಯಿಗಳು ಓಡಿ ಹೋಗಿ ನೋಡಿ ಬಹಳವಾಗಿ ರೋದಿಸಿದರು.

ಜರ್ಮನಿಯಲ್ಲಿ ನಿರುದ್ಯೋಗಿಗಳ ಸಂಖ್ಯೆ

ಜರ್ಮನಿಯಲ್ಲಿ 60,00,000 ಮಂದಿ ಉದ್ಯೋಗವಿಲ್ಲದಿರುತ್ತಾರೆ. ಇವರುಗಳ ಮೇಲೆ ಅಷ್ಟೇ ಸಂಖ್ಯೆಯ ಜನರು ಆಧಾರಪಟ್ಟಿಕೊಂಡಿರುವರು, ಅಂದರೆ ಜರ್ಮನಿಯ ಒಟ್ಟು ಪ್ರಜಾಸಂಖ್ಯೆಯಲ್ಲಿ ⅕ ಭಾಗದಷ್ಟು ಜನರು ತಕ್ಕ ಜೀವನ ಸಾಧನವಿಲ್ಲದಿರುತ್ತಾರೆ. ಈ ದುಸ್ಥಿತಿಯು ನಿವಾರಣೆಯಾಗಲು ಪ್ರಪಂಚವೆಲ್ಲ ಒಟ್ಟುಗೂಡಿ ವಿಶ್ವಾಸದಿಂದ ಕೃಷಿಮಾಡಬೇಕಾದುದು ಅತ್ಯಾವಶ್ಯಕ, ಆದರೆ ಅಂತಹ ವಿಶ್ವಾಸವು, ನಷ್ಟ ಪರಿಹಾರ ಸಮಸ್ಯೆಯು ಆಯುಧವಿಸರ್ಜನ ಸಭೆಯಲ್ಲಿ ಪರಿಷ್ಕಾರವಾಗುವವರೆಗೂ ಹುಟ್ಟುವುದಿಲ್ಲ ಎಂದು ಜರ್ಮನಿಯ ಪ್ರಧಾನ ಮಂತ್ರಿಯು ಒಂದು ಔತಣ ಸಮಯದಲ್ಲಿ ಹೇಳಿದರು.

ದಿವಂಗತರಾದ ಸರ್ ಡಿ. ತಾತಾಯವರು

ಪ್ರಸಿದ್ಧ ತಾತಾಕಂಪೆನಿಯ ಪ್ರೊಪ್ರೈಟರಾಗಿದ್ದ ಸರ್ ದೊರಾಬ್ಜಿ ತಾತಾಯವರು ದೇಹಾರೋಗ್ಯಕ್ಕಾಗಿ ಜರ್ಮನಿಗೆ ಹೋಗಿ ಅಲ್ಲಿಯ ಒಂದು ಆರೋಗ್ಯಸ್ಥಳದಲ್ಲಿ ವಾಸಮಾಡುತ್ತಿದ್ದು ಕಳೆದ ಶುಕ್ರವಾರ ಹೃದ್ರೋಗದಿಂದ ಮೃತರಾದರು. ಇವರು ಯೂರೋಪಿಗೆ ಹೊರಡುವುದಕ್ಕೆ ಮೊದಲು ಮಾರ್ಚಿ ತಿಂಗಳಲ್ಲಿ 3 ಕೋಟಿ ರೂ. ಬೆಲೆಬಾಳುವ ತಮ್ಮಾಸ್ತಿಯನ್ನು ಆಕಸ್ಮಿಕ ವಿಪತ್ತಿಗೆ ಗುರಿಯಾಗುವ ಜನರ ಸಹಾಯಕ್ಕಾಗಿ ಧರ್ಮಮಾಡಿದರಲ್ಲದೆ, ಇದಕ್ಕೆ ಮೊದಲೇ ಕ್ಷುದ್ರೋಗ ಚಿಕಿತ್ಸಾಕ್ರಮವನ್ನು ಕಲಿಯಲು ವಿದ್ಯಾರ್ಥಿಗಳಿಗೆ ವೇತನವನ್ನು ಕೊಡಲು 5 ಲಕ್ಷ ರೂ. ಗಳನ್ನು ಕೊಟ್ಟಿದ್ದರು. ಇಂತಹ ಧರ್ಮಾತ್ಮರ ಮರಣದಿಂದ ಭಾರತದೇಶಕ್ಕೆ ಅಪಾರ ನಷ್ಟವಾಯಿತು.

ಬ್ಯಾಂಕಿನ ೩೭೦೦೦ ರೂ. ಅಪಹರಣ

ಮದರಾಸು ಚಾರ್ಟರ್ಡ್ ಬ್ಯಾಂಕಿನ ಸರಾಫನಾದ ಮುತ್ತು ಮೊದಲಿಯಾರನ ಸಹಾಯದಿಂದ ರಾಜರತ್ನ ಎಂಬ ವರ್ತಕನು 37000 ರೂಪಾಯಿಗಳನ್ನು ಬ್ಯಾಂಕಿಗೆ ಕಟ್ಟಿರುವಂತೆ ಲೆಕ್ಕದಲ್ಲಿ ಬರೆದು ಅನಂತರ 37000 ರೂ. ಗಳಿಗೆ ಚೆಕ್ಕನ್ನು ಕೊಟ್ಟು ಆ ಮೊಬಲಗನ್ನು ತೆಗೆದುಕೊಂಡನು. ಆ ದಿವಸ ಸಾಯಂಕಾಲ ಬ್ಯಾಂಕಿನ ಲೆಕ್ಕ ಜಡ್ತಿ ಮಾಡುವಾಗ್ಗೆ 37000 ರೂ. ಕಡಿಮೆ ಇರುವುದು ಕಂಡು ಬಂದಿತು. ಆ ಜಡ್ತಿ ಸಮಯದಲ್ಲಿ ಸರಾಫನು ಬ್ಯಾಂಕಿನಲ್ಲಿರಲಿಲ್ಲವಾಗಿ ಅನುಮಾನ ಹುಟ್ಟಿ ಪೋಲೀಸಿಗೆ ತಿಳುಹಲ್ಪಟ್ಟಿತು. ಪೋಲೀಸಿನವರು ರಾಜರತ್ನನನ್ನು ಸೆರೆ ಹಿಡಿದು ಅವನ ವಶದಲ್ಲಿದ್ದ 8000 ರೂ. ಗಳನ್ನು ತಮ್ಮ ವಶಪಡಿಸಿಕೊಂಡು ಸರಾಫನನ್ನು ತಡಕುವಲ್ಲಿ ಅವನು ಪಲಾಯನನಾಗಿದ್ದನು.

ಶಾರಾದಾ ಆಕ್ಟ್ ಉಲ್ಲಂಘನೆಗಾಗಿ ದಂಡ

ಸಾಂದ್ವೀಪವಾಸಿಯಾದ ಭೈರವ ಎಂಬಾತನು ತನ್ನ ಕುಮಾರ್ತಿ 7 ವರ್ಷ ವಯಸ್ಸಿನ ಸ್ನೇಹಲತೆಯನ್ನು ಚಂದ್ರಹರಶರ್ಮನೆಂಬ 19 ವರ್ಷ ವಯಸ್ಸಿನ ವರನಿಗೆ ಕೊಡಲು ನಿಶ್ಚಯಿಸಿ ಲಗ್ನವನ್ನು ಕಟ್ಟಿಸಿದನು. ಈ ವಿವಾಹವು ನ್ಯಾಯವಿರುದ್ಧವಾದುದರಿಂದ ನಡೆಯಕೂಡದೆಂದು ಅದೇ ಊರಿನ ಭೈರವಚಂದ್ರಶರ್ಮನೂ ಇತರ ಬಂಧುಗಳೂ ಹೆಣ್ಣಿನ ತಂದೆಗೆ ಹೇಳಿದರು. ಅವನು ಅವರುಗಳ ಮಾತನ್ನು ಉಲ್ಲಂಘಿಸಿದುದರ ಮೇಲೆ ಯೂನಿಯನ್ ಬೋರ್ಡ್ ಪ್ರೆಸಿಡೆಂಟರ ಮೂಲಕ ಹೆಣ್ಣಿನ ತಂದೆಗೆ ಇಂಜಕ್ಷನ್ ನೋಟೀಸನ್ನು ಕೊಡಿಸಿದರು. ಆದರೂ ಹೆಣ್ಣಿನ ತಂದೆಯು ಆ ನೋಟೀಸನ್ನೂ ಲಕ್ಷಿಸದೆ ಲಗ್ನಮಾಡಿಯೇ ಬಿಟ್ಟನು. ಅದರಮೇಲೆ ಭೈರವಚಂದ್ರಶರ್ಮನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ಅರ್ಜಿಬರೆದನು. ಮೆಜಿಸ್ಟ್ರೇಟು ಅಪರಾಧಿಯನ್ನು ಬರಮಾಡಿಕೊಂಡು ವರನಾದ ಚಂದ್ರಹರಶರ್ಮನಿಗೆ [illegible]0 ರೂ. ಯನ್ನೂ ಕನ್ಯೆಯ ಕಡೆಯ ಪುರೋಹಿತನಿಗೆ 100 ರೂ. ವರನಕಡೆಯ ಪುರೋಹಿತನಿಗೆ 35 ರೂ. ದಂಡವನ್ನೂ ವಿಧಿಸಿ ಈಗ ದೇಶದಲ್ಲಿ ದುಡ್ಡಿಲ್ಲದೆ ಜನರು ದಾರಿದ್ರ್ಯವಸ್ಥೆಯಲ್ಲಿರುವುದರಿಂದ ಅಪರಾಧಿಗಳ ಮೇಲೆ ಕನಿಕರವಿಟ್ಟು ಸ್ವಲ್ಪ ದಂಡವನ್ನು ವಿಧಿಸುತ್ತೇನೆಂದು ಹೇಳಿದರು.

ಚೈನಾಸ್ತ್ರೀಯ ವಿಚಿತ್ರಸತಿ

ಹಿಂದುಗಳಲ್ಲಿ ಬಹಳವಾಗಿ ರೂಢಿಯಲ್ಲಿದ್ದ ಸತಿಯು ಅನೇಕ ಶತಮಾನಗಳಿಂದಲೂ ಚೈನಾ ದೇಶದಲ್ಲಿ ಅನುಸರಿಸಲ್ಪಡುತ್ತಿಲ್ಲವಾದರೂ ಆ ಪದ್ಧತಿಯನ್ನು ಶ್ಲಾಘಿಸುವವರು ನೂರಾರು ಜನರಿರುತ್ತಾರೆಂಬುದಕ್ಕೆ ಅನೇಕ ನಿದರ್ಶನಗಳಿವೆ. ಒಬ್ಬ ಮನುಷ್ಯನು ಅಗ್ನಿಯ ಪಾಲಾಗಿ ಸತ್ತರೆ ಅವನ ಹೆಂಡತಿಯಾಕೃತಿಯಲ್ಲಿ ಕಾಗದದ ಬೊಂಬೆ ಮಾಡಲ್ಪಟ್ಟು ಕಾಗದದ ಮನೆ ರಿಕ್ಷಾಬಂಡಿ ಕಾಗದದ ನಾಣ್ಯ ಮೊದಲಾದ ಪದಾರ್ಥಗಳೊಡನೆ ಸುಡಲ್ಪಡುವುದು. ಆ ಸತ್ತವನ ಹೆಂಡಿತಿ, ಮನೆ, ನಗನಾಣ್ಯಾದಿಗಳು ಅವನ ಕೂಡ ಬರುತ್ತವೆಂಬುದನ್ನು ತೋರಿಸಲಿಕ್ಕಾಗಿ ಆ ರೀತಿ ಸುಡಲ್ಪಡುವುದು. ಆದರೆ ಕೆಲ ದಿನಗಳ ಕೆಳಗೆ ಒಬ್ಬ ಮನುಷ್ಯನು ಸತ್ತು ಹೋಗಲು ಅವನ 21 ವರ್ಷ ವಯಸ್ಸಿನ ಹೆಂಡಿತಿಯು ಪತಿವಿಯೋಗ ದುಃಖವನ್ನು ಸಹಿಸಲಾರದೆ ವಿಷಪಾನದಿಂದ ಆತ್ಮಹತ್ಯೆಯನ್ನು ಮಾಡಿಕೊಂಡು ತನ್ನ ಪತಿಭಕ್ತಿಪರಾಯಣತೆಯನ್ನು ಪ್ರದರ್ಶಿಸಿದಳು. ಅಲ್ಲಿಯ ಜನರು ಈ ಕೃತ್ಯವನ್ನು ಬಹಳವಾಗಿ ಶ್ಲಾಘಿಸುತ್ತಿದ್ದಾರೆ, ಅಲ್ಲದೆ ಆಕೆಯ ಗಂಡನು ಒಂದು ಕಾರ್ಯಾಲಯದಲ್ಲಿ ಸಾಮಾನ್ಯ ಕೂಲಿಗಾರನಾಗಿದ್ದರೂ ಅವನ ಶವಸಂಸ್ಕಾರಕ್ಕೆ ಗೌರ್ನರೂ, ಮೇಯರೂ ಸಾವಿರಾರು ಮಂದಿ ಅಧಿಕಾರಿಗಳೂ, ಲಾಯರುಗಳೂ, ವರ್ತಕರುಗಳೂ ಸ್ಮಶಾನಕ್ಕೆ ಹೋಗಿದ್ದು ಗೌರವವನ್ನು ಪ್ರದರ್ಶಿಸಿ ಲೋಕದಲ್ಲೆಲ್ಲ ಪ್ರಸಿದ್ಧವಾಗುವಂತೆ ಮಾಡಿದರು.

ದೌರ್ಜನ್ಯವನ್ನಡಗಿಸಲು ಪ್ರಜಾಪ್ರಬೋಧವು

"ಬಂಗಾಳಾದಲ್ಲಿ ಪ್ರಬಲಿಸಿರುವ ದೌರ್ಜನ್ಯಪಕ್ಷದವರ ಮೇಲೆ ಪ್ರಜೆಗಳಿಗೆ ತಿರಸ್ಕಾರ ಬುದ್ಧಿ ಹುಟ್ಟುವಂತೆ ಮಾಡಿದಲ್ಲಿ ದೌರ್ಜನ್ಯಪಕ್ಷವು ಅಡಗಿ ಹೋಗುವುದು. ಇದರ ವಿನಾ ಬೇರೊಂದುಪಾಯವಿಲ್ಲ. ಬಂಗಾಳಾದಲ್ಲಿ ಸ್ವಪರಿಪಾಲನವನ್ನಪೇಕ್ಷಿಸುತ್ತಿರುವ ನಾಯಕರುಗಳು ಪ್ರಜೆಗಳಲ್ಲಿ ಇಂತಹ ಬುದ್ಧಿ ಹುಟ್ಟುವಂತೆ ಈ ವರೆಗೆ ಪ್ರಯತ್ನಿಸಿದ ಹಾಗೆ ಕಂಡು ಬರಲಿಲ್ಲ. ದೌರ್ಜನ್ಯಪಕ್ಷವನ್ನು ಅಲಕ್ಷಿಸಿ ರಾಜಕೀಯ ಸ್ವಾತಂತ್ರ್ಯವನ್ನು ಅನುಷ್ಠಾನಕ್ಕೆ ತರತಕ್ಕುದಲ್ಲ. ಪಾಶ್ಚಾತ್ಯದೇಶದಲ್ಲಿರುವ ಪ್ರಜಾಪರಿಪಾಲನ ಪದ್ಧತಿಯನ್ನು ಕೂಡಲೆ ಭಾರತದೇಶದಲ್ಲಿ ಅನುಸರಿಸಬಾರದು. ಭಾರತೀಯರು ಅದಕ್ಕೆ ಸಿದ್ಧರಾಗಿಲ್ಲ. ಆದುದರಿಂದ ಅದು ಆ ದೇಶದಲ್ಲಿ ಉಪಯೋಗವಾಗುವುದಿಲ್ಲ. ಅಲ್ಲದೆ ಭಾರತೀಯರು ಅದನ್ನು ಕೋರಿಲ್ಲ. ಭಾರತದೇಶವು ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಮುಖ್ಯ ಭಾಗವಾಗಿರಲು ಭಾರತದೇಶಕ್ಕೂ, ಅಲ್ಲಿ ಬ್ರಿಟಿಷ್‌ನವರಿಗೂ ಲಾಭಕರವಾಗಿರುವ ರೀತಿಯಲ್ಲಿ ವಿಶೇಷ ಬಾಧ್ಯತೆಯನ್ನು ಕೊಟ್ಟು ಸಂಪೂರ್ಣ ಬಾಧ್ಯತೆಯನ್ನು ಕ್ರಮೇಣ ಪ್ರಸಾದಿಸಬೇಕು" ಎಂದು ಹಿಂದೆ ಬಂಗಾಳಾ ಗೌರ್ನರಾಗಿದ್ದ ಸರ್ ಸ್ಟಾನ್ಲಿ ಜಾಕ್ಸನ್‌ರವರು ಕನ್ಸರ್ವೇಟಿವ್ ಇಂಡ್ಯಾ ಸೊಸೈಟಿಯಲ್ಲಿ ಉಪನ್ಯಾಸ ಮಾಡುವಾಗ್ಗೆ ಹೇಳಿದರು.

ಒಳದೇಶದ ವೃತ್ತಾಂತಗಳು.

ಅಫಿಷಿಯೇಟಿಂಗ್ ಎಕ್ಸೈಸ್ ಕಮಿಷನರಾದ ಮ|| ಡಿ. ಶ್ರೀನಿವಾಸಯ್ಯಂಗಾರರಿಗೆ 2 ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿದೆ.

ಮದ್ರಾಸ್ ಗೌರ್ನರು ದಂಪತಿಗಳು ಈ ತಾ|| 9 ರಲ್ಲಿ ಉದಕಮಂಡಲದಿಂದ ರಾಜಧಾನಿಗೆ ಬಂದು ಗೌರ್ನಮೆಂಟ್ ಹೌಸಿನಲ್ಲಿ ಶ್ರೀಮನ್ಮಹಾರಾಜರವರ ಆತಿಥ್ಯದಲ್ಲಿದ್ದುಕೊಂಡು ತಾ|| 15 ರ ಸಾಯಂಕಾಲ ಉದಕಮಂಡಲಕ್ಕೆ ಪ್ರಯಾಣ ಮಾಡುವವರಾಗಿರುವರು.

ಚೀಫ್ ಎಲೆಕ್ಟ್ರಿಕಲ್ ಇಂಜನಿಯರಾದ ಮ|| ಸಿ. ಎಂ. ಕಾರಿಯಪ್ಪನವರು ಮೇ ತಾ|| 30 ರಿಂದ 1 ತಿಂಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡಿರುವುದರಿಂದ ಇವರ ಅಸಿಸ್ಟೆಂಟರಾದ ಮ|| ಎ. ಆರ್. ಕೌಶಿಕ್‌ರವರು ತಮ್ಮ ಕೆಲಸದೊಡನೆ ಚೀಫ್ ಎಲೆಕ್ಟ್ರಿಕಲ್ ಇಂಜನಿಯರ ಕೆಲಸವನ್ನು ನೋಡಿಕೊಳ್ಳಲಪ್ಪಣೆಯಾಗಿದೆ.

ಮಳವಳ್ಳಿಯ ಪಾಪಯ್ಯನವರ ಮಗ ಕೆ. ರಾಜಯ್ಯ ಎಂಬವನು ರಿಕ್ರೂಟ್‌ಮೆಂಟ್ ಬೋರ್ಡಿಗೆ ಕೊಟ್ಟ ಅರ್ಜಿಯಲ್ಲಿ ತನ್ನ ಅರ್ಹತೆಯ ವಿಚಾರವಾಗಿ ಸುಳ್ಳು ಬರೆದು ಕೆಲಸವನ್ನು ಪಡೆದಿದ್ದುದರಿಂದ 2 ವರ್ಷ ಕಾಲದವರೆಗೆ ಅವನು ಸರ್ಕಾರಿಯುದ್ಯೋಗಕ್ಕೆ ಸೇರಿಸಲ್ಪಡಕೂಡದೆಂದು ಸರ್ಕಾರದ ಆಜ್ಞೆಯಾಗಿದೆ.

ಆಕ್ಟಿಂಗ್ ಜನರಲ್ ಸೆಕ್ರೆಟರಿಯವರಾಗಿರುವ ಮ|| ಎಚ್. ವಿ. ರಾಮಸ್ವಾಮಿಯವರು ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾಗಿಯೂ, ಡಿ|| ಮೆಜಿಸ್ಟ್ರೇಟರಾಗಿಯೂ ವರ್ಗಾಯಿಸಲ್ಪಟ್ಟಿರುವುದರಿಂದ ಇದುವರೆಗೆ ಬದಲು ನೋಡುತ್ತಿದ್ದ ಮ|| ಎನ್. ಸುಂದರರಾಜಯ್ಯಂಗಾರ್‌ರವರಿಗೆ 2 ತಿಂಗಳ ಫರ್ಲೋ ರಜ ಕೊಡಲ್ಪಟ್ಟಿದೆ.

ರಾಜಧಾನಿಯಲ್ಲಿ ಕುದುರೆಯ ಜೂಜು ಕಳೆದ ಶನಿವಾರ ಆರಂಭವಾಗಿ ಇದೇ ತಾ|| 7, 9, 11 ಮತ್ತು 15 ರಲ್ಲಿ ನಡೆಯುವುದು. ಈವೇಳೆ ಹಿಂದಿನವರ್ಷಗಳಿಗಿಂತಲೂ ಹೆಚ್ಚಾಗಿ ಕುದುರೆಗಳು ಬಂದಿರುವುವಲ್ಲದೆ ಜೂಜುಗಾರರೂ ಬಂದಿರುತ್ತಾರೆ. ಪೋಲೋ ಪಂದ್ಯವೂ ನಡೆಯುತ್ತಿದೆ. ಇದಕ್ಕೂ ಜಯಪುರ ಮೊದಲಾದ ಕಡೆಗಳಿಂದ ಆಟಗಾರರು ಬಂದಿರುತ್ತಾರೆ.

ಕೊಳ್ಳೇಗಾಲ ತಾ|| ಮುಡುಗುಂಡದ ಶ್ರೀಮಂತ ಮ|| ಗುರುಕಾರ್ ಜೋತಪ್ಪನವರು 15-20 ದಿವಸಗಳಿಂದ ಅಸ್ವಸ್ಥರಾಗಿದ್ದು ಕಳೆದ ಬುಧವಾರ ಸ್ವಸ್ಥಳದಲ್ಲಿ ಕೈಲಾಸವಾಸಿಗಳಾದರೆಂದು ತಿಳುಹಲು ಬಹಳ ವಿಷಾದವಾಗುತ್ತದೆ. ಮಧ್ಯವಯಸ್ಕರಾಗಿಯೂ, ಪ್ರಸಿದ್ಧ ವರ್ತಕರಾಗಿಯೂ, ಉದಾರಧರ್ಮಿಷ್ಠರಾಗಿಯೂ, ಪ್ರಸಿದ್ಧರಾಗಿಯೂ ಇದ್ದ ಮ|| ಜೋತಪ್ಪನವರ ಅಕಾಲಮರಣದಿಂದ ಆ ಪ್ರಾಂತೀಯರೆಲ್ಲರಿಗೂ ಬಹಳ ವ್ಯಸನವುಂಟಾಗಿದೆ. ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬದವರಿಗೆ ದುಃಖಸಮಾಧಾನವನ್ನು ಕೋರುತ್ತೇವೆ.

ಮೈಸೂರು ಸೀಮೆಯ ವೃತ್ತಪತ್ರಿಕಾಕರ್ತರ ಸಂಘದ ಆರಂಭೋತ್ಸವವು ಶ್ರೀಮದ್ಯುವರಾಜರವರಿಂದ ಕಳೆದ ಗುರುವಾರ ನಡೆಸಲ್ಪಟ್ಟಿತು. ಆ ಕಾಲದಲ್ಲಿ ಶ್ರೀಮದ್ಯುವರಾಜರವರು ಮತ್ತು ಈ ಮಹೋತ್ಸವಕ್ಕಾಗಿ ಆಹ್ವಾನಿಸಲ್ಪಟ್ಟಿದ್ದ ಪ್ರಸಿದ್ಧ ಹಿಂದು ಪತ್ರಿಕೆಯ ಸಂಪಾದಕರಾದ ಮ|| ಎಂ. ರಂಗಸ್ವಾಮಿಯ್ಯಂಗಾರ್ಯರು ಪತ್ರಿಕಾಕರ್ತರ ಮುಖ್ಯ ಧರ್ಮ ಮತ್ತು ವಾಚಕರ ಕರ್ತವ್ಯ ಇತ್ಯಾದಿ ವಿಷಯಗಳ ಮೇಲೆ ಬಹಳ ಉಪಯುಕ್ತವೂ ಉತ್ತೇಜನಕರವೂ ಆದ ಭಾಷಣಗಳನ್ನು ಮಾಡಿದರು. ಅದರಂತೆ ಉಭಯರೂ ವರ್ತಿಸಿದುದಾದರೆ ನಮ್ಮ ದೇಶದ ವೃತ್ತಪತ್ರಿಕೆಗಳು ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದ ಸೆಕ್ರೆಟರಿಯವರಾದ ಕಂಟ್ರಾಕ್ಟರ್ ಮ|| ಎಂ. ನಾಗಪ್ಪನವರ ಜ್ಯೇಷ್ಠಪುತ್ರ ಮ|| ಮಲ್ಲಪ್ಪನವರ ದ್ವಿತೀಯಪುತ್ರಿ ಚಿ|| ಸೌ|| ನಾಗಮ್ಮನನ್ನು ಬೆಂಗಳೂರು ದಂಡು ಹಲಸೂರಿನಲ್ಲಿರುವ ಮ|| ಯಜಮಾನ್ ಯು. ಎಸ್. ಕಾಳಪ್ಪನವರ ಕುಮಾರ ಮತ್ತು ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ದೌಹಿತ್ರ ಮ|| ಷಣ್ಮುಖಪ್ಪನವರಿಗೆ ಕೊಟ್ಟು ಇದೇ ತಾ|| 18 ರಲ್ಲೂ, ಮ|| ಮಲ್ಲಪ್ಪನವರ ತೃತೀಯಪುತ್ರಿ ಚಿ|| ಸೌ|| ಸುಶೀಲಮ್ಮನನ್ನು ಮೈಸೂರು ದಿನಸಿಮಂಡಿ ಮ|| ಸಿ. ದಾಸಪ್ಪನವರ ಪುತ್ರ ಮ|| ತಮ್ಮಯ್ಯನವರಿಗೆ ಕೊಟ್ಟು ತಾ|| 10 ರಲ್ಲೂ ಬೆಂಗಳೂರು ಶ್ರೀ ಜಗದ್ಗುರು ಜಯದೇವ ವೀರಶೈವ ವಿದ್ಯಾರ್ಥಿನಿಲಯದಲ್ಲಿ ವಿವಾಹಮಹೋತ್ಸವಗಳನ್ನು ನಡೆಸಲು ನಿಶ್ಚಯಿಸಿರುವರು. ಈ ದಂಪತಿಗಳಿಗೆ ಸಕಲಸನ್ಮಂಗಳವಾಗಲೆಂದು ಹರಸುತ್ತೇವೆ.

ಮೈಸೂರು ಸಿಟಿ ಮುನಿಸಿಪಲ್ ಆಫೀಸ್,
ಮೈಸೂರು.
ತಾ|| 26-5-1932.

ಪ್ರಸಿದ್ಧಪತ್ರಿಕೆ.

ಮೈಸೂರು ಸಿಟಿ ಮುನಿಸಿಪಲ್ ಆಡಳಿತಕ್ಕೆ ಒಳಪಟ್ಟ ಸೂಯೆಜ್ ಫಾರಂನಲ್ಲಿರುವ ರಾಸುಗಳಿಗೆ 1932 ನೇ ಇಸವಿ ಜುಲೈ 1ನೇ ತಾರೀಖಿನ ಲಾಗಾಯ್ತು 1933 ನೇ ಇಸವಿ ಜೂನ್ 30ನೇ ಆಖೈರು ತಾರೀಕಿನ ವರಿವಿಗೆ ಹುರಳಿ, ಹುಲ್ಲು, ಉಪ್ಪು ವಗೈರೆ ಸಪ್ಲೈ ಮಾಡತಕ್ಕವರು 10-6-1932 ನೇ ತಾರೀಕಿನ ಒಳಗಾಗಿ ಟೆಂಡರನ್ನು ಮುನಿಸಿಪಲ್ ಹೆಲ್ತಾಫೀಸರವರಲ್ಲಿ ಸೀಲ್ ಮಾಡಿದ ಕವರುಗಳಲ್ಲಿ ಕೊಡಬಹುದು.

ಹೆಚ್ಚಿಗೆ ವಿಚಾರವನ್ನು ತಿಳಿಯಲು ಅಪೇಕ್ಷಿಸುವವರು ಆಫೀಸ್ ಇರುವ ವೇಳೆಯಲ್ಲಿ ಹೆಲ್ತ್ ಆಫಿಸಿನಲ್ಲಿ ಬಂದು ತಿಳಿದುಕೊಳ್ಳಬಹುದು.

(Sd.) T. G. RAMA IYER,
President.

2

ಸ್ವೀಕಾರ

ಕೈ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

ಮ|| ಗಳಾದ

(1) ಶ್ರೀರಂಗಪಟ್ಟಣದ ಮ|| ಗಳಾದ ತಾ|| ಮಾರಸಿಂಗನಹಳ್ಳಿ ಮಠದ ಮುರುಗಪ್ಪನವರ ಕುಮಾರ ಚಿ|| ರಾ|| ಶಿವರುದ್ರಪ್ಪನಿಗೂ ಲೋಕಸರದ ಮರಿದೇವರ ಕುಮಾರ್ತೆ ಚಿ|| ಸೌ|| ಶಿವನಂಜಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ಅನ್ವೇರಹಳ್ಳಿ ಪೂರ್ವಭಾವಿ ಮಠದ ವೇ|| ಬ್ರಂ|| ಶ್ರೀ|| ಶಿವಲಿಂಗರಾಜೇಂದ್ರಸ್ವಾಮಿಗಳವರ ಅಪ್ಪಣೆ ಮೇರಿಗೆ ವಧೂವರರ ಕಡೆಯಿಂದ ಮಾರಸಿಂಗನಹಳ್ಳಿಯಲ್ಲಿರುವ ಮಾರ್ಕಾಂಡರಾಜ ವೈದ್ಯಶಾಲಾ ಪ್ರೊಪ್ರೈಟರ್ ಎಂ. ಚೆನ್ನಬಸಪ್ಪನವರ ಮೂಲಕ ರೂ. 1.

(2) ನಂಜನಗೂಡಿನಲ್ಲಿರುವ ಹೆಮ್ಮರಗಾಲದ ಚಿಕ್ಕಣ್ಣಶೆಟ್ಟರವರ ಕುಮಾರ ಚಿ|| ಸುಬ್ಬಣ್ಣನಿಗೂ ಅದೇ ಊರಿನಲ್ಲಿರುವ ಛತ್ರದ ಮಲ್ಲಣ್ಣನವರ ಕುಮಾರ್ತೆ ಚಿ|| ಸೌ|| ಸೌಭಾಗ್ಯಮ್ಮನಿಗೂ ಲಗ್ನ ನಡೆದು ಗಂಡಿನಮನೆಯಲ್ಲಿ ಅರ್ಕಾಕ್ಷತಾ ಮಹೋತ್ಸವ ಕಾಲದಲ್ಲಿ ವರನಕಡೆಯಿಂದ ಎಚ್. ಜಿ. ಮಹದೇವಪ್ಪನವರ ಮೂಲಕ ರೂ. 1.

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

ಪರೀಕ್ಷಾಫಲವು.

ಪ್ರತಿ ವರ್ಷದಂತೆ 1932 ನೇ ಫೆಬ್ರವರಿ ತಿಂಗಳಲ್ಲಿ [illegible] ಮೂರನೆಯ ಮಾಡ್ಯುಯ ಸೆಂಟರದಲ್ಲಿ [illegible]

ಪಾಠಶಾಲೆಯಿಂದ 16 ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ಅಂದರೆ 10 ಜನರು ಕಾವ್ಯಮಧ್ಯಮದಲ್ಲಿ, 5 ಜನರು ಕಾವ್ಯಾದ್ಯದಲ್ಲಿ, 1 ಜನನು ವೇದಾಂತಾದ್ಯದಲ್ಲಿ ಕುಳಿತಿದ್ದು, ಕಾವ್ಯಮಧ್ಯಮದಲ್ಲಿ 8 ಜನರು, ಕಾವ್ಯಾದ್ಯದಲ್ಲಿ 5 ಜನರು, ವೇದಾಂತಾದ್ಯದಲ್ಲಿ ಒಬ್ಬನು ಅಂತು 14 ಜನರು (ಒಬ್ಬನು 1 ನೇ ವರ್ಗದಲ್ಲಿ, 13 ಜನರು 2 ನೇ ವರ್ಗದಲ್ಲಿ) ಉತ್ತೀರ್ಣರಾಗಿರುತ್ತಾರೆ.

ಜಗದೀಶಶಾಸ್ತ್ರಿಗಳು, ಪ್ರಧಾನಾಧ್ಯಾಪಕ.

ಪ್ರೈಮರಿ ಗರ್ಲ್ಸ್‌ಸ್ಕೂಲ್ 'ಡೇ' ಮಹೋತ್ಸವ, ಕುದೇರು.

ಈ ಗ್ರಾಮದ ಶ್ರೀ|| ಸಾಹುಕಾರ್ ವೀರಭದ್ರಪ್ಪನವರ ಮೆಮೋರಿಯಲ್ ಪ್ರೈಮರಿ ಗರ್ಲ್ಸ್‌ಸ್ಕೂಲ್ 'ಡೆ' ಮಹೋತ್ಸವವು ತಾ|| 27-5-1932 ರ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಸ್ಕೂಲ್ ಹಾಲಿನಲ್ಲಿ ಚಾಮರಾಜನಗರದ ರೇಂಜ್ ಸ್ಕೂಲ್‌ಗಳ ಅಸಿಸ್ಟೆಂಟ್ ಇನ್‌ಸ್ಪೆಕ್ಟರವರಾದ ಶ್ರೀಯುತ ಸಿ. ರಂಗಣ್ಣ, ಬಿ.ಎ., ಯವರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ಜರುಗಿತು. ದೇವರ ಪ್ರಾರ್ಥನಾನಂತರ ಸ್ತ್ರೀ ವಿದ್ಯಾಭ್ಯಾಸದ ಆವಶ್ಯಕತೆಯ ವಿಚಾರವಾಗಿ ಉಪನ್ಯಾಸಗಳು ಮತ್ತು ಬಾಲಿಕೆಯರಿಂದ ಹಾಡುಗಾರಿಕೆಯು ಆದನಂತರ ಸ್ಕೂಲ್ ಹೆಡ್ಮಾಸ್ಟರವರಾದ ಮ|| ಎಚ್. ಶ್ರೀಕಂಠಯ್ಯನವರಿಂದ ಸ್ಕೂಲಿನ ವರದಿಯು ಓದಲ್ಪಟ್ಟಿತು. ಅಧ್ಯಕ್ಷರಿಂದ ಬಾಲಿಕೆಯರಿಗೆ ಬಹುಮಾನಗಳು ಹಂಚಲ್ಪಟ್ಟವು. ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನಾನಂತರ ಗಂಧಪುಷ್ಪ ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟು ಸಭೆಯು ಮುಕ್ತಾಯವಾಯಿತು.

ಪ್ರತ್ಯಕ್ಷದರ್ಶಿ.

ಮಾದರಿ ಮದುವೆ.

ಕಳೆದ ವೈಶಾಖ ಬಹುಳ ಸಪ್ತಮಿಯಲ್ಲಿ ನಂಜನಗೂಡಿನೊಳಗೆ 3 ವೀರಶೈವರ ಲಗ್ನಗಳು ನಡೆದುವು. ಅವುಗಳಲ್ಲೊಂದರಲ್ಲಿ ಗಂಡಿನವರು ತಮ್ಮ ಮನೆಯಲ್ಲಿ ದೇವರ ಸೇವೆಯನ್ನು ಅತ್ಯಂತ ಮಿತವಾಗಿ ನೆರವೇರಿಸಿ ಓಲಗ ಮೋಟಾರು ಕುದುರೆಬಂಡಿಗಳಾವವೂ ಇಲ್ಲದೆ ಸಾಮಾನ್ಯ ಎತ್ತಿನಬಂಡಿಯಲ್ಲಿ ಬಹಳ ಸಮೀಪಬಂಧುಗಳಾದ ಕೆಲವರೊಡನೆ ಕನ್ಯೆಯ ಮನೆಗೆ ಬಂದು ಲಗ್ನವನ್ನು ಅತ್ಯಂತ ಮಿತವ್ಯಯದಿಂದಲೂ, ನಿರಾಡಂಬರದಿಂದಲೂ ನೆರವೇರಿಸಿ ತಮ್ಮ ಮನೆಗೆ ಗಂಡು ಹೆಣ್ಣಿನ ಆರತ್ಯಕ್ಷತೆಯನ್ನು ನಡಿಸಲು ದಿವಸವನ್ನು ಗೊತ್ತುಮಾಡಿಕೊಂಡು ಹೆಣ್ಣಿನ ಮನೆಗೆ ಬಂದರು. ಹೆಣ್ಣು ಗಂಡು ಕೂಡಿಕೊಳ್ಳಲು ಮೋಟಾರು ಬಂಡಿಯನ್ನೂ ಹೆಣ್ಣಿನ ತಾಯಿ ಮೊದಲಾದವರಿಗೆ ಕುದುರೆ ಬಂಡಿಯನ್ನೂ, ಕಿಟ್ಸ್ ಲೈಟುಗಳನ್ನೂ, ಒಳ್ಳೇ ಬ್ಯಾಂಡನ್ನೂ ತಂದು ಉತ್ಸವದಿಂದ ಕರೆದುಕೊಂಡು ಹೋಗಬೇಕೆಂದು ಹೆಣ್ಣಿನ ತಾಯಿ ಗಂಡಿನವರಿಗೆ ತಿಳಿಸಿದರು. ಯಾವ ಆಟ್ಟಹಾಸವೂ ಇಲ್ಲದೆ ಬಹಳ ಸ್ವಲ್ಪ ಖರ್ಚಿನಿಂದ ಲಗ್ನಮಾಡಿ ಬಡಬಗ್ಗರಿಗೆ ಮೇಲುಪಜ್ಞೆ ಹಾಕಿಕೊಡಲು ಸಂಕಲ್ಪಿಸಿರುತ್ತೇವೆಂದು ಗಂಡಿನವರು ಎಷ್ಟು ವಿಧವಾಗಿ ಸಮಾಧಾನ ಹೇಳಿದರೂ ಹೆಣ್ಣಿನ ತಾಯಿಯು ಕೇಳದೆ ಮೋಟಾರು ಕಾರು ಬ್ಯಾಂಡು ಮೊದಲಾದವುಗಳನ್ನು ತೆಗೆದುಕೊಂಡು ಬರದಿದ್ದಲ್ಲಿ ನಿಮ್ಮ ಗಂಡನ್ನು ಕರೆದುಕೊಂಡು ಹೋಗಿ, ಹೆಣ್ಣನ್ನು ಕಳುಹಿಸುವುದಿಲ್ಲವೆಂದು ಕಠಿಣವಾಗಿ ಹೇಳಿ ತಿರಸ್ಕರಿಸಲಾಗಿ ಗಂಡಿನವರು ಗಂಡು ಹೆಣ್ಣನ್ನು ಮನೆದುಂಬಿಸಿಕೊಳ್ಳಲಿಟ್ಟಿರುವ ಲಗ್ನ ಮೀರಿಹೋಗುತ್ತದೆಂದು ಬಹಳವಾಗಿ ಪೇಚಾಡಿಕೊಂಡು ಬೇರೊಂದುಪಾಯವನ್ನು ಕಾಣದೆ ಊರಿನಲ್ಲಿ ತಡಕಿ ಒಂದು ಮೋಟಾರು ಕಾರನ್ನೂ ಕುದುರೆ ಬಂಡಿಯನ್ನೂ ದೀಪಗಳು ವಾದ್ಯಗಾರರುಗಳನ್ನು ಒದಗಿಸಿಕೊಂಡು ಬಂದು ಮೋಟಾರುಕಾರಿನಲ್ಲಿ ಗಂಡು ಹೆಣ್ಣನ್ನೂ ಕುದುರೆ ಬಂಡಿಯಲ್ಲಿ ಹೆಣ್ಣಿನ ತಾಯಿಯನ್ನೂ ಕುಳ್ಳಿರಿಸಿಕೊಂಡು ಮೆರವಣಿಗೆಯಿಂದ ತಮ್ಮ ಸ್ಥಳಕ್ಕೆ ಕರೆದುಕೊಂಡು ಹೋಗಿ ಆರ್ತ್ಯಕ್ಷತೆಯ ಕಾರ್ಯವನ್ನು ಮುಗಿಸಿದರು. ಆದರೆ ಯಾವ ದುಂದುಗಾರಿಕೆಯೂ, ಆಡಂಬರವೂ ಇಲ್ಲದೆ ಬಹಳ ಸಾಮಾನ್ಯವಾಗಿ ನಡೆಸಬೇಕೆಂದಿದ್ದ ಅವರು ತಮ್ಮ ಸಂಕಲ್ಪಕ್ಕೆ ಕಡೆಯಲ್ಲಿ ಭಂಗಬಂದುದಕ್ಕಾಗಿ ಅತ್ಯಂತ ವ್ಯಸನಪಡುತ್ತಿದ್ದಾರೆ.

ಲಗ್ನಭಾಗಿ.

ಶ್ರೀ ಬಸವೇಶ್ವರಜಯಂತ್ಯುತ್ಸವಗಳು.

ಮಂಡ್ಯದ ತಾ|| ದುದ್ದ.

ಈ ಗ್ರಾಮದ ಮ|| ಯಜಮಾನ್ ಲಿಂಗಪ್ಪನವರು, ಪಟೇಲ್ ಚಿಕ್ಕಯ್ಯನವರು, ಮೇಸ್ತ್ರರು ಲಿಂಗಯ್ಯನವರೇ ಮೊದಲಾಗಿ ವೀರಶೈವ ಪ್ರಮುಖರು ಶ್ರೀ ಬಸವಜಯಂತಿಯನ್ನು ಮಾಡಬೇಕೆಂದು ಪ್ರೋತ್ಸಾಹಿಸಿದುದರಮೇಲೆ 50-60 ಮನೆಯ ವೀರಶೈವರು ಆ ದಿವಸ ಹಬ್ಬದಂತೆ ಆಚರಿಸಿ ಶ್ರೀ ಬಸವೇಶ್ವರದೇವಸ್ಥಾನದಲ್ಲಿ ದೇವತಾರ್ಚನೆಯನ್ನು ವಿಧಿವತ್ತಾಗಿ ಮಾಡಿಸಿದರಲ್ಲದೆ ತಮ್ಮ ಎತ್ತುಗಳನ್ನೂ ಹಸುಗಳನ್ನೂ ಅಲಂಕರಿಸಿ ಊರಿನಲ್ಲೆಲ್ಲ ವಾದ್ಯಸಮೇತವಾಗಿ ಮೆರವಣಿಗೆ ಮಾಡಿದರು. ಸಾಯಂಕಾಲ ಶ್ರೀಬಸವೇಶ್ವರನ ಉತ್ಸವವನ್ನು ಬಹಳ ವಿಜೃಂಭಣೆಯಿಂದ ಮಾಡಿ ದೇವಸ್ಥಾನಕ್ಕೆ ಹಿಂದಿರುಗಿದಮೇಲೆ ಪ್ರತಿ ವರ್ಷವೂ ಈ ಜಯಂತ್ಯುತ್ಸವವನ್ನು ನೆರವೇರಿಸಬೇಕೆಂದು ಮ|| ಲಿಂಗಪ್ಪನವರು ನೆರೆದಿದ್ದ ಜನರಿಗೆ ಬೋಧಿಸಿದರು. ತರುವಾಯ ಸ್ವಾಮಿಯ ಮಂಗಳಾರತಿ ಪ್ರಸಾದ ವಿನಿಯೋಗವಾಗಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಎಲ್ಲರೂ ತಂತಮ್ಮ ಮನೆಗಳಿಗೆ ತೆರಳಿದರು.

ಗ್ರಾಮವಾಸಿ.

ಗುಂಡ್ಲುಪೇಟೆ ತಾ||. ಕಲ್ಲಹಳ್ಳಿ.

ತಾ|| 8-5-32 ನೇ ಭಾನುವಾರ ಶ್ರೀ ಬಸವಜಯಂತಿ ಉದ್ದಿಶ್ಯವಾಗಿ ಈ ಗ್ರಾಮದ ಶ್ರೀ ಬಸವೇಶ್ವರಸ್ವಾಮಿ ದೇವಸ್ಥಾನವನ್ನು ತಳಿರುತೋರಣಗಳಿಂದ ಅಲಂಕರಿಸಿ ಶ್ರೀ ಬಸವೇಶ್ವರಸ್ವಾಮಿಗೆ ಮಹಾಭಿಷೇಕ ನಡೆದು ಪ್ರಾತಃಕಾಲ 6 ಘಂಟೆಗೆ ಸರಿಯಾಗಿ ದೇವರ ಉತ್ಸವವು ಅನೇಕ ಬಿರುದಾವಳಿಗಳಿಂದಲೂ ನಂದಿಧ್ವಜ ಛತ್ರಚಾಮರ ವಾದ್ಯವಾಜಂತ್ರಿಗಳಿಂದಲೂ ಗ್ರಾಮದಲ್ಲೆಲ್ಲ ಬಹಳ ವಿಜೃಂಭಣೆಯಿಂದ ಮೆರವಣಿಗೆಯಾಗಿ ಸುಮಾರು 10 ಘಂಟೆಗೆ ದೇವರು ದೇವಸ್ಥಾನಕ್ಕೆ ಬಿಜಯಮಾಡಿದನಂತರ ಇದೇ ಗ್ರಾಮದ ಮ|| ಸಾ|| ಪ|| ಚಿಕ್ಕಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಜನಗಳೆಲ್ಲರೂ ಸಭೆ ಸೇರಿದಮೇಲೆ ಶ್ರೀಬಸವಣ್ಣನವರ ದಿವ್ಯ ಕಥಾಪಠನ, ಸಂಗೀತಶ್ರವಣ ಮತ್ತು ಉಪನ್ಯಾಸಗಳು ನಡೆದು ಶ್ರೀಯವರ ಮಂಗಳಾರತಿಯಾಗಿ ಗಂಧಪುಷ್ಪ ತಾಂಬೂಲ ವಿನಿಯೋಗದೊಡನೆ ಸಭೆ ಬರಖಾಸ್ತಾಯಿತು. ಅನಂತರ ಮ|| ಸಾ|| ಪ|| ಚಿಕ್ಕಮಲ್ಲಪ್ಪನವರು ತಮ್ಮ ಮನೆಯಲ್ಲಿ ಸ್ಥಳಪರಸ್ಥಳಗಳ ಭಕ್ತ ಮಾಹೇಶ್ವರರುಗಳನ್ನು ದಿವ್ಯವಾದ ಭೋಜನದಿಂದ ಸತ್ಕರಿಸಿದರು. ಇಂಥಾ ಸತ್ಕಾರ್ಯಗಳನ್ನು ಮುಕುವರ್ಜಿಯಿಂದ ನಡೆಸತಕ್ಕ ಮ|| ಸಾ|| ಪ|| ಚಿಕ್ಕಮಲ್ಲಪ್ಪನವರಿಗೂ ಇವರ ಕುಟುಂಬಕ್ಕೂ ಶ್ರೀ ಬಸವೇಶ್ವರನು ದೀರ್ಘಾಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ರಕ್ಷಿಸಲೆಂದು ಕೋರುವ

ಬಸವಭಕ್ತ.

ಆಸ್ಥಾನವಿದ್ವಾನ್ ಶ್ರೀಮಾನ್ ವೇದಮೂರ್ತಿ ಬಿ. ಎಂ. ತ್ರ್ಯಂಬಕ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯವಿಮರ್ಶೆಯೂ.

(ಲೇಖಕ—ವೇ|| ಎಚ್. ಗೋಪಾಲಕೃಷ್ಣಮಾಚಾರ್ಯ, ಕರ್ಣಾಟಕ ಪಂಡಿತರು, ಟ್ರೇನಿಂಗ್ ಕಾಲೇಜು, ಮೈಸೂರು.)

ದಿಗ್ದರ್ಶನಂ.

(ಮೇ ತಾ|| 30ರ ಸಂಚಿಕೆಯಿಂದ ಮುಂದುವರಿದುದು.)

ಹರನೊಲವಿಲ್ಲದ ಭಾಗ್ಯಂ | ನರಯದ ಹೆದ್ದಾರಿಕಾಮುಕಾಲರಕಾಟಂ ||
ಮರಣದಮೂಲಂಮಿಳ್ತನ | ಕರದೊಳ್ನೆಲಸಿರ್ಪ ನಿಶಿತತರಕರವಾಳಂ ||೩೭||

ಶಿವನಲ್ಲಿ ಭಕ್ತಿಯಿಲ್ಲದವನ ಸಂಪತ್ತು ನರಕಕ್ಕೆ ಛಾಟಾಮಾರ್ಗವಾಗಿದೆ. ಕಾಮಕ್ರೋಧಾದಿಗಳನ್ನೂ ಯಮಹಿಂಸೆಯನ್ನೂ ಉಂಟುಮಾಡತಕ್ಕದ್ದಾಗಿದೆ. ಮರಣಕ್ಕೆ ಮುಖ್ಯ ಕಾರಣವಾಗಿದೆ. ಮೃತ್ಯುದೇವತೆಯ ಕೈಯಲ್ಲಿರುವ ಬಹಳ ಹರಿತವಾದ ಕತ್ತಿಯೇ ಆಗಿದೆ.

“ಸಂಪತ್ತಿಃಕಿಂಪಚಾನಾನಾಂ ಸಂಪ್ರಾಪ್ತಾ ಕಾಪಥೇನವಾ | ನರಕಾನುಭವೋದರ್ಕಾ ನಸಾಲಕ್ಷ್ಮ್ಯಾಃ ಶ್ರೇಯಃಫಲಂ ||”

ಅನಾತ್ಮವಾದ ದೇಹಾದಿಗಳಲ್ಲಿ ಆತ್ಮತ್ವ ಭ್ರಮವು ಅಸ್ಮಿತೆಯು (ಅದು ಮೋಹವು). ದೇಹ ಭೋಗಗಳಾದ ಸ್ರಕ್‌ಚಂದನವನಿತಾದಿಗಳಲ್ಲಿ ಅಭಿಲಾಷೆಯು ರಾಗವು. ಅದು ಮಹಾ ಮೋಹವು. ಅವುಗಳ ಪ್ರಾಪ್ತಿಯ ವಿಘ್ನದಲ್ಲಿ ದ್ವೇಷವು. ಅದು ತಾಮಸವು. ಇದು ಅಹಿತವೆಂದು ತಿಳಿದಿದ್ದರೂ ಬಿಡದಿರುವುದು ಅಭಿನಿವೇಶವು. ಅದು ಅಂಧತಾಮಿಸ್ರವು. ಅವಿದ್ಯಾ ಗ್ರಂಥಿ ಪಂಚಕವಿದು.

ಮರಣಂತ್ವಂಧತಾಮಿಸ್ರಃ | ಇತ್ಯಾದಿ.

ಕಂದ|| ಪರವಧುವಿನ್‌ಮುಖಗಳಿಗಾಂ |
ಕರಗಿದಚಣದಲ್ಲಿ ನಿನ್ನನಗಲಿದೆನಹಹಾ ||
ಪೊರಗಿರಲೆನಗಾಮೂರುಂ |
ಪುರಹರನಿನ್ನಾಜ್ಞೆನಿನ್ನ ಭಕ್ತಿಗರಾಜೆ ||೩೮||

ಪರಸ್ತ್ರೀ ವಿಷಯದಲ್ಲಿಯೂ ನವರತ್ನಗಳ ವಿಷಯದಲ್ಲಿಯೂ ಸಂಪತ್ತಿನ ವಿಷಯದಲ್ಲಿಯೂ, ನಾನು ಆಶಿಪಟ್ಟ ಕೂಡಲೇ ನಿನ್ನನ್ನು ನಾನು ಮರೆತಂತೆಯೇ ಸರಿ. ಅಯ್ಯೋ ! ಮೇಲೆ ಹೇಳಿದ ಮೂರರ ವಿಷಯದಲ್ಲೂ ನನಗೆ ಆಶೆಯು ಬರದೇ ಇರಲು, ಅದಕ್ಕೆ ನಿನ್ನ ಆಜ್ಞೆಯೂ ನಿನ್ನ ಭಕ್ತರ ಆಜ್ಞೆಯೂ ಕಾರಣವೇ ಹೊರತು ಮತ್ತೇನೂ ಅಲ್ಲವೇ ಅಲ್ಲ.

ಅನ್ಯದೀಯೇಷ್ವನೇರತ್ನೇಕಾಂಚನೇಮೌಕ್ತಿಕೇಪಿವಾ | ಮನಸಾಪಿನಿವೃತ್ತಿರ್ಯಾತದಸ್ತೇಯಮಿಹೋಚ್ಯತೇ || ಸ್ಮರಣಂಕೀರ್ತನಂಕೇಳಿಃಪ್ರೇಕ್ಷಣಂ ಗುಹ್ಯಭಾಷಣಂ | ಸಂಕಲ್ಪೋಽಧ್ಯವಸಾಯಶ್ಚ ಕ್ರಿಯಾನಿರ್ವೃತಿರೇವಚ | ಏತನ್ಮೈಥುನಮಷ್ಟಾಂಗಂ ಪ್ರವದಂತಿಮನೀಷಿಣಃ || ನಹೀದೃಶಮನಾಯುಷ್ಯಂ ಲೋಕೇಕಿಂಚನವಿದ್ಯತೇ | ಯಾದೃಶಂಪುರುಷಸ್ಯೇಹಪರದಾರೋಪಸೇವನಂ || ಅಹೇರಿವಗಣಾದ್ಭೀತಃ ಸಂಮಾನಾನ್ಮರಣಾದಿವ | ಕುಣಪಾದಿವಯಸ್ತ್ರೀಭ್ಯಸ್ತಂದೇವಾಬ್ರಾಹ್ಮಣಂವಿದುಃ ||

ಕಂದ|| ಪರಶಿವನವನೀಮೂಜಗ |
ಕೊರೆದಂಪೆಣ್ಣೊಂದುಮೆಯ್ಯೊಳರ್ಧವತಿಸ್ಥಂ ||
ಪೆರತೊಂದಿರಲಸುತಲೆಯಂ |
ಸೆರೆವಿಡಿದವುದೆಂದುಶಾಕ್ತನಿಜವಿಗ್ರಹದಿಂ ||೩೯||

ಶ್ರೀ ಶಿವನು ಪಾರ್ವತೀಪತಿಯು, ಗಂಗಾಧರನು. ಇವನನ್ನು ಪಾರ್ವತೀಪತಿಯನ್ನಾಗಿಯೂ, ಗಂಗಾಧರನನ್ನಾಗಿಯೂ ಸಾಕಾರನನ್ನಾಗಿಯೂ, ಕೆಲವರು ಪೂಜಿಸುವರು. ಶಿವನನ್ನು ಅರ್ಧನಾರೀಶ್ವರನೆಂದು ಕರೆವ ವಾಡಿಕೆಯೂ ಉಂಟು. ಪರಮೇಶ್ವರನೇ ಮೂರು ಲೋಕಕ್ಕೂ, “ಒಬ್ಬ ಹೆಂಗಸೇ ಗಂಡನ ಅರ್ಧದೇಹವನ್ನು ಸ್ವಾಧೀನಪಡಿಸಿಕೊಳ್ಳುತ್ತಾಳೆ. ಇನ್ನೊಬ್ಬ ಹೆಂಗಸು ಇರಲಾಗಿ ಅವಳು ಗಂಡನ ತಲೆಯನ್ನೇ ತನ್ನಧೀನ ಮಾಡಿಕೊಳ್ಳುತ್ತಾಳೆ” ಎಂದು ಲೋಕಕ್ಕೆ ಹೇಳುವನೋ ಎಂಬಂತೆ ಗಂಗಾಧರನಾದ ಅರ್ಧನಾರೀಶ್ವರನು ಪ್ರಕಾಶಮಾನನಾಗಿದ್ದಾನೆ (ಇಲ್ಲಿ ಉತ್ತಮವಾದ ಪ್ರತಿಭೆಯು ತೋರಿಸಲ್ಪಟ್ಟಿದೆ. ಲಿಂಗಪತಿ, ಶರಣಸತಿ ಎಂಬುದು ಫಲಿತಾರ್ಥವು.)

ದ್ವಿಧಾಕೃತ್ವಾತ್ಮನೋದೇಹಮರ್ಧೇನ ಪುರುಷೋಽಭವತ್ | ಅರ್ಧೇನ ನಾರೀತಸ್ಯಾಂತು ವಿರಾಜಮಸೃಜತ್ಪ್ರಭುಃ || ನಶಿವೇನವಿನಾಶಕ್ತಿರ್ನಶಕ್ತಿರಹಿತಶ್ಶಿವಃ | ಉಮಾಶಂಕರಯೋರೈಕ್ಯಂಯಃ ಪಶ್ಯತಿಸಪಶ್ಯತಿ || ಇತ್ಯಾದಿ.

ಕಂದ|| ಅಂಗದ ಮೊಸರಿನಲೆಬ |
ಲಿಂಗಕೆಪೊರಗಾಗುತರರೆಸೋಡಂಬಾಡಂ ||
ಲಿಂಗದಕುರುಪಂತಾಳುತೆ |
ಭಂಗಕೆಗುರಿಯಾಗಿ ಭವಭವಂಗಳೊಳಲೆವರ್ ||೪೦||

ಕೆಲವರು ಅಶಾಶ್ವತವಾದ ದೇಹಸುಖಕ್ಕೋಸ್ಕರಲೇ ಶ್ರಮಪಡುತ್ತ ದೇವರನ್ನು ನೆನೆಯದೆ, ಅಯ್ಯೋ ! ಲಿಂಗಧಾರಣೆಯನ್ನು ಮಾಡುತ್ತ ಅನೇಕ ತೊಂದರೆಗಳಿಗೆ ಈಡಾಗಿ ಅನೇಕ ಜನ್ಮಗಳಲ್ಲಿ ಹೆಚ್ಚಾಗಿ ಕಷ್ಟಪಡುವರು (ಅರಿವನ್ನು ಬಿಟ್ಟು ಕುರುಹನ್ನು ಹಿಡಿಯಬಾರದು, ಎಂಬುದು ಆಶಯವು). “ಸತ್ತಾಸಿದ್ಧಿಸ್ತುಸರ್ವೇಷಾಂಮಹಾದೇವ ಪ್ರಸಾದತಃ”

ಕಂದ|| ಜೀವದಮರಣದಮಾರ್ಗವ |
ನಾವಂಕೆಂಡಿರುವನವನೆಪಶುಪತಿಯಪ್ಪಂ ||
ಜೀವವಪೆರ್ಚಿಸುತೊಲವಿಂ |
ಸಾವಂಕಿಡಿಸುತ್ತೆ ಪಶುಗಳಂಪಾಲಿಸುವಂ ||೪೧||

ಬದುಕುವಿಕೆಯ, ಸಾವಿನ, ನಿಜಾಂಶವನ್ನು ಯಾವನು ಕಂಡಿರುವನೋ ಅವನು ಪಶುಪತಿಸದೃಶನಾಗುತ್ತಾನೆ. ಇಹಲೋಕದ ಸುಖವನ್ನೇ ಪ್ರೀತಿಯಿಂದ ಹೆಚ್ಚು ಮಾಡಿಕೊಳ್ಳುತ್ತ ಮರಣವನ್ನು ತಪ್ಪಿಸುತ್ತ ಜೀವಾತ್ಮಗಳನ್ನು ಪಾಲಿಸುತ್ತಾನೆ.

“ನಸಪುನರಾವರ್ತತೆ” ಎಂಬ ವೇದ ಭಾಗವನ್ನು ಸ್ಮರಿಸಿಕೊಳ್ಳಬೇಕು.

“ಪಶುಪತಿಯಪ್ಪಂ” ಎಂಬಲ್ಲಿ ಶಿವನೊಡನೆ ಪರಮಸಾಮ್ಯವೆಂಬ ಶ್ರುತಿ ಪಙ್ಕ್ತಿಯನ್ನು ತಿಳಿಯಬೇಕು.

ಗುರುವು ಶಿಷ್ಯರ ಆತ್ಮ ಶಕ್ತಿಯನ್ನು ಅಭಿವೃದ್ಧಿ ಪಡಿಸಬೇಕು.

ಮೃತ್ಯುವಿಗೆ ಅಧೀನನಾಗುವುದನ್ನು ತಪ್ಪಿಸಿಕೊಳ್ಳಬೇಕು (ಪರಮೇಶ್ವರನನ್ನು ಭಕ್ತಿಯಿಂದ ಧ್ಯಾನಿಸುವುದರಿಂದ).

“ಪಶುಗಳಂ” ಎಂದರೆ ಜೀವಾತ್ಮರುಗಳನ್ನು “ನಂಬಿದ ತನ್ನ ಭಕ್ತರನ್ನು”

||೪೧||

ಕಂದ|| ಗುರುವುಂಗುರುವಂ ಸಾಚಲಿಕೆ |
ಪೊರೆವನು ಮಖಿಲೇಶನವನ ಸೊಲಿಸಲ್ ಬಗೆದೀ ||
ನರನುಂ ಗುರುವನೊಡರ್ಚುತೆ |
ಗುರುವಿಗೆ ಗುರುವಾದನಮತಿ ಶಿಷ್ಯನುಮಾದಂ ||೪೨||

ಆಚಾರ್ಯನೂ, ನಮಗೆ ಆಚಾರ್ಯನನ್ನು ಕರುಣಿಸಿ ರಕ್ಷಿಸುವವನೂ ಪರಮೇಶ್ವರನೇ ಆಗಿದ್ದಾನೆ. ಈ ಮನುಷ್ಯನು ಆತನನ್ನು ಒಲಿಸಿಕೊಳ್ಳುವುದಕ್ಕೆ ಯೋಚಿಸಿ ಗುರುವನ್ನು ಮಾಡುತ್ತಾ ಆ ಗುರುವಿಗೆ ಗುರುವಾದನು, ಶಿಷ್ಯನೂ ಆದನು. ಆಶ್ಚರ್ಯವು

ಇಲ್ಲಿ ಗುರುವನ್ನು ಮಾಡುವುದರಿಂದ ಆತನಿಗೆ ಗುರುವಾದನು, ನಮಸ್ಕರಿಸುವುದರಿಂದ ಶಿಷ್ಯನೂ ಆದನು ಎಂಬುದು ಆಶ್ಚರ್ಯಾರ್ಥವು.

ಸಶೇಷ.

ಸಮಸ್ತ ವೀರಶೈವ ಮಹಾಶಯರಿಗೆ.

ಈ ನೋಟೀಸಿನ ಮೂಲಕ ತಿಳಿಸುವದೇನೆಂದರೆ:—ಶ್ರೀ ವೀರಶೈವ ವಿದ್ಯಾ ಪೀಠಾಂತರ್ಗತ ಶ್ರೀ ಶಿವಯೋಗೀಶ್ವರ ವೀರಶೈವ ಸಂಸ್ಕೃತ ಕಾಲೇಜಿನ ಸೂಟಿಯು ಮುಗಿದು ಇದೇ ತಿಂಗಳ ತಾ|| 15-6-32 ಕ್ಕೆ ಪುನಃ ಪ್ರಾರಂಭವಾಗುವದು. ಕಾಲೇಜಿನಲ್ಲಿ ತರ್ಕ, ವ್ಯಾಕರಣ, ಜ್ಯೋತಿಷ, ಸಾಹಿತ್ಯ, ಕನ್ನಡ, ಹಿಂದಿ ಮುಂತಾದ ಅಭ್ಯಾಸಗಳು ನಡೆಯುತ್ತವೆ. ವಿದ್ಯಾರ್ಥಿಗಳಿಗೆ ಊಟ, ವಸತಿ, ದೀಪಗಳ ಅನುಕೂಲವಿರುವದು. ಇದರಲ್ಲಿ ಸೇರಲಪೇಕ್ಷೆಯುಳ್ಳ ವಿದ್ಯಾರ್ಥಿಗಳು ಕನ್ನಡ 5 ನೇ ಇಯತ್ತೆ ಪಾಸಾಗಿರಬೇಕು. ಹಾಗು ಸದರಿ ಕಾಲೇಜಿನ ಅರ್ಜಿ ಫಾರ್ಮು ತರಿಸಿಕೊಂಡು ತಾ|| 15-6-32 ರೊಳಗಾಗಿ ಚೇರಮನ್‌ರ ಕಡೆಗೆ ಕಳಿಸಬೇಕು.

ಶ್ರೀ|| ಶಿ|| ವೀ|| ಸಂಸ್ಕೃತಕಾಲೇಜು ಹಾವೇರಿಪೇಟ ಧಾರವಾಡ, ಈ ಸಂಸ್ಥೆಯ ಚೇರಮನ್.

ನೆಲ್ಯಾಳಂ ಸಂಸ್ಥಾನದ ರಾಜ್ಞಿ ಶ್ರೀ ಬೌರಮ್ಮಣ್ಣಿಯವರ ವಿದ್ಯಾಭಿವೃದ್ಧಿ ವೇತನದ ಫಂಡು.

ಮೇಲ್ಕಂಡ ಫಂಡಿನಿಂದ ಸಹಾಯವನ್ನು ಅಪೇಕ್ಷಿಸುವ ಮೈಸೂರು ದೇಶದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಕೊಯಮತ್ತೂರು, ನೀಲಗಿರಿ ಮತ್ತು ಮಲಬಾರ್ ಜಿಲ್ಲೆಗಳ ವೀರಶೈವ ವಿದ್ಯಾರ್ಥಿಗಳು ಬರುವ ಜುಲೈ ತಾ|| 31 ರ ಒಳಗಾಗಿ ತಲುಪುವಂತೆ ಅಪ್ಲಿಕೇಷನನ್ನು ಈ ಕೆಳಗೆ ಕಂಡ ಸೆಕ್ರೆಟರಿಯವರಿಗೆ ಬರೆದುಕೊಳ್ಳತಕ್ಕದ್ದು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡುಸಂಘ, ಬೆಂಗಳೂರು. ಬಡವೀರಶೈವ ವಿದ್ಯಾರ್ಥಿಗಳಿಗೆ ಸೂಚನೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದಿಂದ ಸಹಾಯವನ್ನು ಅಪೇಕ್ಷಿಸತಕ್ಕ ಕಾಲೇಜು, ಹೈಸ್ಕೂಲು ಮತ್ತು ಟೆಕ್ನಿಕಲ್ ಸ್ಕೂಲುಗಳಲ್ಲಿ ಅಭ್ಯಾಸಮಾಡುತ್ತಿರುವ ಬಡವೀರಶೈವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರುಗಳು ಬರುವ ಜುಲೈ ತಾ|| 31 ರ ಒಳಗಾಗಿ ಫಂಡ್ ಸೆಕ್ರೆಟರಿಯವರಿಗೆ ತಲುಪುವಂತೆ ಗೊತ್ತಾದ ಪ್ರಿಂಟೆಡ್ ಫಾರಮ್ಮಿನಲ್ಲಿ ಅರ್ಜಿಬರೆದುಕೊಳ್ಳತಕ್ಕದ್ದು. ಅರ್ಜಿಫಾರಂಗಳು ಬೇಕಾಗಿದ್ದಲ್ಲಿ ಅರ್ಧಾಣೆ ಸ್ಟಾಂಪುಕಳುಹಿಸಿ ಅಡ್ರಸ್ಸನ್ನು ತಿಳಿಸಿದಲ್ಲಿ ಕಳುಹಿಸಲ್ಪಡುವುವು. ಅರ್ಜಿ ಫಾರಮ್ಮಿನಲ್ಲಿ ನಮೂದಿಸಿರುವ ಪ್ರತಿಯೊಂದು ಐಟನ್ನೂ ಕ್ರಮವಾಗಿ ಭರ್ತಿಮಾಡಲ್ಪಡದೆಯೂ, ಅಸಲು ಸರ್ಟಿಫಿಕೇಟ್ (Original Certificate) ಇಲ್ಲದೆಯೂ, ವಾಯಿದೆ ಮೀರಿಯೂ ಬರತಕ್ಕ ಅರ್ಜಿಗಳು ಅಂಗೀಕರಿಸಲ್ಪಡಲಾರವು.

ಎಂ. ನಾಗಪ್ಪ, ಆ|| ಸೆಕ್ರೆಟರಿ,
ಮೈ. ವೀ. ವಿದ್ಯಾಭಿವೃದ್ಧಿ ಫಂಡು ಸಂಘ, ಬೆಂಗಳೂರು

ಇಂಡಿಯಾ ದೇಶಕ್ಕಾಗಿ ನಡೆದ ''ರೌಂಡ್‌ಟೇಬಲ್'' ಸಮ್ಮೇಳನ

ಅತಿ ಮುಖ್ಯವಾದ ಕೆಲವು ರಾಜಕೀಯ ವಿಚಾರಗಳ ಸಂಬಂಧವಾಗಿ ಕೆಲವು ಸಲಹೆಗಳು

ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರಿಂದ

(ತಾ|| 30ರ ಸಂಚಿಕೆಯಿಂದ ಮುಂದುವರಿದುದು.)

ಪರಿಶಿಷ್ಟ

ಇಂಡಿಯಾ ದೇಶಕ್ಕಾಗಿ ಒಂದು ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯನ್ನು ಏರ್ಪಡಿಸುವ ವಿಚಾರದಲ್ಲಿ ಸಲಹೆ.

ಸರ್ ಮಿರ್ಜಾ ಇಸ್ಮಾಯಿಲ್‌ರವರಿಂದ.

ಫೆಡರಲ್ ಸ್ಟ್ರಕ್ಚರ್ ಸಮಿತಿಯವರ ಎರಡನೆಯ ವರದಿಯಲ್ಲಿದ್ದ ಮುಖ್ಯವಾದ ಸಲಹೆಗಳು ಯಾವುವೆಂದರೆ :—

(1) ಸಂಯುಕ್ತ ಶಾಸನ ಸಭೆಯು (ಫೆಡರಲ್ ಲೆಜಿಸ್ಲೇಚರ್) ಎರಡು ಸಭೆಗಳಿಂದ ಕೂಡಿರಬೇಕು. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಸೇರಿರುವ ಸಂಸ್ಥಾನಗಳ ಮತ್ತು ಬ್ರಿಟಿಷ್ ಇಂಡಿಯಾ ಪ್ರಾಂತಗಳ ಪ್ರತಿನಿಧಿಗಳು ಈ ಎರಡು ಸಭೆಗಳಲ್ಲಿಯೂ ಇರಬೇಕು. ಇವೆರಡು ಸಭೆಗಳಿಗೂ ಪರಸ್ಪರವಾಗಿ ಭಿನ್ನಾಭಿಪ್ರಾಯಗಳುಂಟಾದಾಗಲೆಲ್ಲ ಸಭೆಗಳೆರಡರ ಜಂಟಿ ಅಧಿವೇಶನಗಳನ್ನೇರ್ಪಡಿಸಬೇಕು.

(2) ಆಡಳಿತ ನಿರ್ವಹಣೆಯ ಅಧಿಕಾರ ವರ್ಗದವರು(ಎಗ್ಜಿಕ್ಯುಟಿವ್) ಶಾಸನ ಸಭೆಗೆ ಜವಾಬ್ದಾರರಾಗಿರಬೇಕು.

(3) ಹಣಕಾಸಿನ ಆಡಳಿತ ವಿಚಾರಗಳಲ್ಲಿ ಕೆಲವು ವಿಷಯಗಳಿಗೆ ಸಂಬಂಧಪಟ್ಟ ಆಡಳಿತದಲ್ಲಿ ಶಾಸನ ಸಭೆಯವರು ಪ್ರವೇಶಿಸಲು ಅವಕಾಶವಿಲ್ಲದೆ ಗವರ್ನರ್ ಜನರಲ್‌ರವರಿಗೆ ಮಾತ್ರವೇ ಅವುಗಳಲ್ಲಿ ಪೂರ್ಣಾಧಿಕಾರವಿರಬೇಕು ಮತ್ತು ಕೆಲವು ರಕ್ಷಾಸಾಧನಗಳು ಏರ್ಪಡಬೇಕು.

ಫೆಡರಲ್ ಸ್ಟ್ರಕ್ಚರ್ ಉಪಸಮಿತಿಯವರು ಸಲಹೆ ಮಾಡಿರುವ ರೀತಿಯಲ್ಲಿ ಶಾಸನ ಸಭೆಯು ಎರಡು ಶಾಖಾಸಭೆಗಳ ರೂಪದಲ್ಲಿರುವಂತೆಯೇನೋ ತೋರುತ್ತದೆ. ಆದರೆ ಮೇಲೆ ನೋಡುವುದಕ್ಕೆ ಮಾತ್ರ ಹೀಗೆ ತೋರುತ್ತದೆಯೇ ಹೊರತು, ನಿಜಸ್ಥಿತಿಯು ಹೀಗಿಲ್ಲ. ಏಕೆಂದರೆ, ಎರಡು ಸಭೆಗಳಿಗೂ ಭಿನ್ನಾಭಿಪ್ರಾಯವುಂಟಾದಾಗಲೆಲ್ಲಾ, ಎರಡು ಸಭೆಗಳೂ ಒಟ್ಟುಗೂಡಿ ಜಂಟಿಯಾಗಿ ಅಧಿವೇಶನವನ್ನು ನಡೆಯಿಸಿ ವ್ಯವಹರಿಸಬೇಕಾಗುತ್ತದೆ. ಎಂದರೇನಾಯಿತು ? ಸುಮಾರು 600-700 ಮಂದಿ ಸದಸ್ಯರಿಂದ ಕೂಡಿ, ಕೆಲಸ ನಡೆಯಿಸುವುದರಲ್ಲಿ ಸ್ವಲ್ಪ ಮುಜುಗರವನ್ನುಂಟುಮಾಡುವ ಅತಿ ದೊಡ್ಡ ಸಭೆಯೊಂದು ನಡೆಯಬೇಕಾಗುತ್ತದೆ. ಈರೀತಿ ಶಾಸನ ಸಭೆಯು ವಾಸ್ತವಿಕವಾಗಿ ಒಂದೇ ಸಭೆಯಾಗಿದ್ದಂತೆಯೇ ಆಗುತ್ತದೆ.

ಇಂತಹ ರಾಜ್ಯಾಡಳಿತ ಕ್ರಮದ ಶಿಸ್ತಿನಿಂದ ದಕ್ಷತೆಯಿಂದಲೂ ಸುಸೂತ್ರವಾಗಿಯೂ ಕೆಲಸ ನಡೆಯಲಿ, ಅತಿ ವಿಸ್ತಾರವಾದ ಮತ್ತು ಪ್ರತಿಯೊಂದು ಬಗೆಯ ಭೇದ ಪ್ರಭೇದಗಳಿಂದ ಕೂಡಿ, ಏಕಮುಖವಾಗಿಲ್ಲದ ಇಂಡಿಯಾ

ದೇಶದ ಆವಶ್ಯಕತೆಗಳಿಗೆ ಅದು ಸರಿಹೋದೀತೆ—ಎಂಬಿವು ನಾವು ಪರ್ಯಾಲೋಚಿಸಬೇಕಾದ ವಿಚಾರಗಳು. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಏರ್ಪಟ್ಟಿರುವ ಅನೇಕ ದೇಶಗಳಲ್ಲಿ ಒಂದೇ ಬಗೆಯ ಅಧಿಕಾರಗಳು ಎರಡಕ್ಕೂ ಇರುವಂತೆ ಸೆನೆಟ್ ಸಭೆಗಳು ಏರ್ಪಟ್ಟಿರುವ ಸಂದರ್ಭಗಳಲ್ಲೆಲ್ಲ ಸುಮುಖವಾಗಿ ಕೆಲಸ ನಡೆಯದೆ ರಗಳೆಯುಂಟಾಗಿದೆ. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಸೇರಿರುವ ಎಲ್ಲಾ ಸರ್ಕಾರಗಳ ಪ್ರತಿನಿಧಿಗಳೂ ತಂಡೋಪತಂಡವಾಗಿ ಸದಸ್ಯರಾಗಿರುವ ಹಾಗೆ ಅತಿ ದೊಡ್ಡ ಸಭೆಗಳನ್ನು ಏರ್ಪಡಿಸಿಕೊಂಡು ದಕ್ಷತೆಯಿಂದಲೂ ಸಫಲವಾಗಿಯೂ ಯಾರೂ ಕೆಲಸ ಮಾಡಿಲ್ಲ. ಎಲ್ಲಿಯೂ ಕೂಡ ಸಂಯುಕ್ತ ವ್ಯವಸ್ಥೆಗೆ ಸೇರಿದ ಸರ್ಕಾರಗಳಿಗೆ ಕೇಂದ್ರ ಸರ್ಕಾರದ ಕಾರ್ಯಕಲಾಪಗಳೊಡನೆ ಸಹಕರಿಸಿ ಸಹಾಯಮಾಡುವ ಕೆಲಸವು ವಹಿಸಲ್ಪಟ್ಟಿಲ್ಲದಿರುವುದೇ ಈ ನ್ಯೂನತೆಗೆ ಮುಖ್ಯ ಕಾರಣವಾಗಿದೆ. ಎಲ್ಲ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗಳಲ್ಲಿಯೂ ಪ್ರತಿನಿಧಿ ಸಭೆಯು ಮೊದಲನೆಯ ಸಭೆಯಾಗಿರುತ್ತದೆ; ಅದಕ್ಕೆ ಸಂಯುಕ್ತರಾಜ್ಯಾಂಗ ವ್ಯವಸ್ಥೆಗೆ ಸೇರಿರುವ ಎಲ್ಲ ಸರ್ಕಾರಗಳವರೂ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿಯೇ ಇರುತ್ತಾರೆ. ಎರಡನೆಯ ಸಭೆಯಲ್ಲಿ ಮತ್ತೆ ಆ ಸರ್ಕಾರಗಳವರಲ್ಲಿ ಪ್ರತಿಯೊಂದು ಸರ್ಕಾರದವರ ಪ್ರತಿನಿಧಿಗಳೂ ಇರುವಂತೆ ಮಾಡದೆ, ಆ ಸರ್ಕಾರಗಳಲ್ಲಿರುವ ನಾನಾ ಪಕ್ಷಗಳ ಪ್ರತಿನಿಧಿಗಳು ಮಾತ್ರವೇ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಅಲ್ಲಿ ಸದಸ್ಯರಾಗಿರುವಂತೆ ಏರ್ಪಡಿಸುವುದೇ ವಾಡಿಕೆಯಾಗಿದೆ. ಅಂತೂ ರಾಜಕೀಯ ವಿಚಾರಗಳ ಮುಖ್ಯಾಂಗದಂತಿರುವ ಪ್ರಜಾ ಸಮುದಾಯಕ್ಕೆ ಈರೀತಿ ಎರಡುಸಾರಿ ಪ್ರಾತಿನಿಧ್ಯವು ದೊರೆತಂತಾಗುವುದು. ಹೇಗೆಂದರೆ, ಮೊದಲನೆಯ ಸಭೆಯಲ್ಲಿ ಪ್ರಜಾ ಸಮುದಾಯದಿಂದ ಚುನಾವಣೆಯಾದ ಪ್ರತಿನಿಧಿಗಳು ಸದಸ್ಯರಾಗಿರುವರು. ಎರಡನೆಯ ಸಭೆಯಲ್ಲಿ ನಾನಾ ಸರ್ಕಾರಗಳ ಪಾರ್ಲಿಮೆಂಟ್ ಸಭೆಗಳಿಂದಲೂ ಚುನಾಯಿಸಲ್ಪಟ್ಟ ಪ್ರತಿನಿಧಿಗಳೇ ಇರುವುದರಿಂದ, ಅಲ್ಲಿ ಕೂಡ ಪರೋಕ್ಷವಾಗಿ ಪ್ರಜಾಸಮುದಾಯದ ಪ್ರತಿನಿಧಿಗಳೇ ಇದ್ದಂತಾಗುವುದು. ರಾಜ್ಯಶಾಸ್ತ್ರ ನಿಪುಣರಾದ ಈಗಿನ ಅನೇಕ ಮಂದಿ ಮಹನೀಯರ ನಿಷ್ಕೃಷ್ಟವಾದ ಅಭಿಪ್ರಾಯವೂ ಇದೇ ಆಗಿದೆ. ರಾಜ್ಯಾಂಗ ವ್ಯವಸ್ಥಾಮೀಮಾಂಸೆಯನ್ನು ಅತಿ ವಿಶೇಷವಾಗಿಯೂ ಕೂಲಂಕಷವಾಗಿಯೂ ಪರಿಶೀಲನಮಾಡಿ ಪ್ರಪಂಚದ ನಾನಾ ದೇಶಗಳಲ್ಲಿಯೂ ಕಾರ್ಯತಃ ಆಚರಣೆಯಲ್ಲಿರುವ ರಾಜ್ಯಾಂಗ ವ್ಯವಸ್ಥೆಯ ನಿಯಮಗಳನ್ನೂ ಪರಿಶೀಲಿಸಿ ಮತ್ತು ಆಧುನಿಕ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ದೇಶಗಳ ಸೆನೆಟ್ ಸಭೆಯ ಸಂಬಂಧವಾದ ಅನುಭವವನ್ನೂ ತೂಗಿ ನೋಡಿ, ಆ ಬಳಿಕ ಅವರುಗಳು ಹೀಗೆ ಅಭಿಪ್ರಾಯಪಟ್ಟಿದ್ದಾರೆ.

ಇತರ ದೇಶಗಳಲ್ಲಿಯ ಈ ಅನುಭವದ ಪ್ರಯೋಜನವನ್ನು ಪಡೆಯದೆ ನಿರಾಕರಿಸಿ, ಇಂಥ ವಿಚಾರಗಳನ್ನೇ ಗಮನಿಸದೆ, ಇಂಡಿಯಾ ದೇಶೀಯರು ತಾವೇ ಒಂದು ಬಗೆಯಾಗಿ ನೂತನ ರಾಜ್ಯಾಂಗ ವ್ಯವಸ್ಥೆಯನ್ನು ಏರ್ಪಡಿಸಿಕೊಳ್ಳುವ ದೊಡ್ಡ ಪ್ರಯತ್ನವನ್ನು ಮಾಡುವುದು ವಿವೇಕವೆನಿಸೀತೆ ? ಈಗ ಕಂಡುಬಂದಿರುವ ದೊಡ್ಡ ನ್ಯೂನತೆಯನ್ನು ಪರಿಹರಿಸಿ ಅವಕ್ಕೆ ಅವಕಾಶ ಕೊಡದಂತೆಯೇ ನಮ್ಮ ದೇಶದಲ್ಲಿ ನೂತನ ರಾಜ್ಯಾಂಗ ವ್ಯವಸ್ಥೆಯ ಶಿಸ್ತನ್ನು ಏರ್ಪಡಿಸಿಕೊಳ್ಳುವುದು ಸಾಧ್ಯವೆಂಬುದು ನನ್ನ ಅಭಿಪ್ರಾಯ. ಆದುದರಿಂದ, ನಾನು ಮುಂದೆ ಸೂಚಿಸಿರುವ ಕ್ರಮವನ್ನು ಪರ್ಯಾಲೋಚಿಸಿ ನೋಡಬೇಕೆಂದು ಬಿನ್ನವಿಸುವೆನು.

ಇಂಡಿಯಾ ದೇಶದಲ್ಲಿ ಮುಂದೆ ನೆಲೆಗೊಳ್ಳುವ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಏರ್ಪಾಡಿನಲ್ಲಿ ಮುಖ್ಯವಾದ ಎರಡು ಸಭೆಗಳು ಸ್ಥಾಪಿತವಾಗಿ ಕೆಲಸ ನಡೆಯಬೇಕು. ಅವು ಯಾವುವೆಂದರೆ :—

(1) ಪ್ರಜಾಸಮುದಾಯದ ಪ್ರತಿನಿಧಿಗಳಿಂದ ಕೂಡಿರುವ ಒಂದು ಸಭೆ. ಇದನ್ನು ಸಂಯುಕ್ತ ಪ್ರತಿನಿಧಿಸಭೆ (ಫೆಡರಲ್ ಅಸೆಂಬ್ಲಿ) ಎಂದು ಕರೆಯಬಹುದು.

(2) ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿ (ಫೆಡರಲ್ ಕೌನ್ಸಿಲ್) ಎಂಬುದಾಗಿ ಕರೆಯುವ ಮತ್ತೊಂದು ಸಭೆ.

ಸಂಯುಕ್ತ ಪ್ರತಿನಿಧಿಸಭೆಯಲ್ಲಿ (ಫೆಡರಲ್ ಅಸೆಂಬ್ಲಿಯಲ್ಲಿ) ಪ್ರತ್ಯಕ್ಷವಾದ ಮತ್ತು ಪರೋಕ್ಷವಾದ ಚುನಾವಣೆಯ ವಿಧಾನಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಸದಸ್ಯರಾಗಿರಬೇಕು. ಪ್ರತ್ಯಕ್ಷವಾದ ಮತ್ತು ಪರೋಕ್ಷವಾದ ಚುನಾವಣೆಯ ವಿಧಾನಗಳೆರಡರಿಂದಲೂ ಚುನಾಯಿಸಲ್ಪಟ್ಟ ಸದಸ್ಯರಿರುವುದೇ ಸರ್ವೋತ್ತಮ. ಈ ಸಭೆಯಲ್ಲಿ ಪ್ರಾತಿನಿಧ್ಯವು ಸ್ವಲ್ಪ ಹೆಚ್ಚು ಕಡಿಮೆ ಆಯಾ ಸಂಸ್ಥಾನಗಳ ಮತ್ತು ಪ್ರಾಂತಗಳ ಪ್ರಜಾಸಂಖ್ಯೆಗಳಿಗನುಸಾರವಾಗಿಯೇ ಇರುವಂತೆ ಸದಸ್ಯರು ಚುನಾವಣೆಯಾಗಬೇಕು. ಈ ಸಭೆಯಲ್ಲಿ ಸುಮಾರು 300-350 ಮಂದಿ ಸದಸ್ಯರಿರಬಹುದು. ಅವರಲ್ಲಿ ಮೂರರಲ್ಲೊಂದು ಭಾಗದ ಸದಸ್ಯರು ಸಂಸ್ಥಾನಗಳಿಂದ ಬಂದ ಸದಸ್ಯರಾಗಿರಬೇಕು. ಚುನಾವಣೆಯ ವಿಧಾನದ ವಿಚಾರದಲ್ಲಿ ಮಹಾತ್ಮ ಗಾಂಧಿಯವರು ಮಾಡಿರುವ ಸಲಹೆಯಿಂದ ಉತ್ತಮೋತ್ತಮವಾದ ಫಲಿತಾಂಶಗಳುಂಟಾಗುವುವೆಂದು ತೋರುತ್ತದೆ. ಒಂದು ಚುನಾವಣೆಯ ಶಾಲೆಯನ್ನು (ಎಲೆಕ್ಟರಲ್ ಕಾಲೇಜನ್ನು) ಸ್ಥಾಪಿಸಬೇಕೆಂದೂ, ಅಲ್ಲಿಗೆ ಹೋಗಿ ತಮ್ಮ ಪರವಾಗಿ ಓಟುಕೊಡುವುದಕ್ಕಾಗಿ ಗ್ರಾಮಗಳಿಂದ ಪ್ರತಿನಿಧಿಗಳನ್ನು ಕಳುಹಿಸುವಂತೆ ಏರ್ಪಡಿಸಬೇಕೆಂದೂ ಅವರು ಸಲಹೆಮಾಡಿದ್ದಾರೆ. ಸದಸ್ಯರ ಚುನಾವಣೆಗೆ ಗ್ರಾಮಸ್ಥರುಗಳೇ ಪ್ರತ್ಯಕ್ಷವಾಗಿ ಓಟುಕೊಡುವಂತೆ ಮಾಡುವ ಏರ್ಪಾಡಿಗಿಂತಲೂ ಈ ಏರ್ಪಾಡು ಕಾರ್ಯತಃ ಸುಲಭವಾಗಿ ಸಾಗತಕ್ಕುದೆಂಬುದು ಸ್ಪಷ್ಟವಾಗಿಯೇ ಇದೆ.

ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯು(ಫೆಡರಲ್ ಕೌನ್ಸಿಲ್) ಸಂಯುಕ್ತ ಸರ್ಕಾರದ (ಫೆಡರಲ್ ಸರ್ಕಾರದ) ಅಂಗವಾಗಿರಬೇಕಾಗುತ್ತದೆ. ಸಂಯುಕ್ತ ಸರ್ಕಾರವು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗನುಸಾರವಾಗಿರಬೇಕಾದ ಕಾರಣ, ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯಲ್ಲಿ ಸಂಯುಕ್ತಸ್ವಭಾವವು ಮುದ್ರೆಯೊತ್ತಿದಂತೆ ಚೆನ್ನಾಗಿ ರೂಪುಗೊಂಡಿರಬೇಕು. ಆದಕಾರಣ, ಸಂಸ್ಥಾನಗಳ ಸರ್ಕಾರಗಳಿಂದಲೂ ಪ್ರಾಂತಿಕ ಸರ್ಕಾರಗಳಿಂದಲೂ ನೇಮಕವಾಗಿ ಕಳುಹಿಸಲ್ಪಟ್ಟ ಪ್ರತಿನಿಧಿಗಳು ಅದರಲ್ಲಿ ಸದಸ್ಯರಾಗಿದ್ದರೆ ಅಷ್ಟೂ ಅಷ್ಟು ವಿಚಕ್ಷಣೆಯಿಂದ ಕೆಲಸ ನಡೆಯಲನುಕೂಲಿಸುತ್ತದೆ.

ಅದರ ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯ (ಫೆಡರಲ್ ಕೌನ್ಸಿಲಿನ) ಸದಸ್ಯರು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಸೇರಿದ ಸಂಸ್ಥಾನಗಳವರಿಂದ ಮತ್ತು ಪ್ರಾಂತಗಳವರಿಂದಲೇ ಯಾವ ರೀತಿಯಲ್ಲಾದರೂ ಆರಿಸಲ್ಪಟ್ಟವರಾಗಿರಬೇಕು. ಹಾಗಿಲ್ಲದೆ ಹೋದಲ್ಲಿ ರಾಜ್ಯಾಡಳಿತದ ಶಿಸ್ತು, ಬೇರೆ ಬೇರೆ ಸರ್ಕಾರಗಳವರು ಸೇರಿರುವ ಸಂಯುಕ್ತ ಸ್ವಭಾವದಿಂದ ಕೂಡಿರುವುದೆಂಬ ಹೆಸರಿಗೇ ಪಾತ್ರವಾಗದೆ, (ಇಂಗ್ಲೆಂಡ್ ಮುಂತಾದ ದೇಶಗಳಲ್ಲಿರುವಂತೆ) ಒಂದು ಸರ್ಕಾರದವರೇ ಒಟ್ಟು ಆಡಳಿತವನ್ನೂ ನಡೆಯಿಸುತ್ತ ಸಂಯುಕ್ತ ಪದ್ಧತಿಗೆ ವಿರುದ್ಧ ರೀತಿಯಲ್ಲಿ ಏಕಮುಖವಾಗಿ ಪ್ರಭುತ್ವ ಮಾಡಿದಂತಾಗುತ್ತದೆ. ಈ ಕಾರಣಕ್ಕಾಗಿ ಕಾರ್ಯನಿರ್ವಾಹಕ ಮಂಡಲಿಯ ಸಂಯುಕ್ತ ಸ್ವಭಾವವನ್ನು ಕಾಪಾಡಬೇಕಾದರೆ, ಅದರ ಸದಸ್ಯರುಗಳು ಸಂಸ್ಥಾನಗಳ ಮತ್ತು ಪ್ರಾಂತಗಳ ಸರ್ಕಾರಗಳವರ ಸ್ವಂತ ವಿವೇಚನೆಗನುಸಾರವಾಗಿಯೂ ಮತ್ತು ಅವರ ರಾಜ್ಯಾಡಳಿತ ಜ್ಞಾನಕ್ಕನುಗುಣವಾದ ಪ್ರಾತಸ್ತ್ಯದ ಮೇಲೂ ನೇಮಕವಾದವರಾಗಿರಬೇಕು. ಈ ಪ್ರತಿನಿಧಿಗಳು ತಂತಮ್ಮ ಸರ್ಕಾರಗಳ ಮುಖಾಂತರರಾಗಿ (ಏಜೆಂಟರುಗಳಾಗಿ) ತಮಗೆ ಬರತಕ್ಕ ಆಯಾ ಸರ್ಕಾರಗಳ ಅನುಜ್ಞೆಗಳಿಗನುಸಾರವಾಗಿ ಓಟುಗಳನ್ನು ಕೊಟ್ಟು ವರ್ತಿಸಿಕೊಂಡು ಬರಬೇಕು. ಒಂದು ಸಂಸ್ಥಾನಕ್ಕೆ ಅಥವಾ ಪ್ರಾಂತಕ್ಕೆ ಹೆಚ್ಚು ಸಂಖ್ಯೆಯ ಸದಸ್ಯರುಗಳಿದ್ದರೆ, ಅವರು ತಮ್ಮಲ್ಲಿ ಭಿನ್ನಾಭಿಪ್ರಾಯವಿಲ್ಲದೆ, ಏಕರೀತಿಯಲ್ಲಿ ಒಂದೇ ಅಭಿಪ್ರಾಯಕ್ಕೇ ಓಟು ಕೊಡಬೇಕು. ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯಲ್ಲಿ 60 ಜನ ಸದಸ್ಯರುಗಳಿರಬಹುದು. ಅವರಲ್ಲಿ ಕೊನೆಯಪಕ್ಷ 24 ಮಂದಿಗಳಾದರೂ ಸಂಸ್ಥಾನಗಳ ಸರ್ಕಾರಗಳ ಪ್ರತಿನಿಧಿಗಳಾಗಿರಬೇಕು.

ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಗಳೂ ಸದಸ್ಯರಾಗಿದ್ದು, ಸಂಯುಕ್ತ ವ್ಯವಸ್ಥೆಗೆ ಸೇರಿದ ಉಚ್ಚತರಗತಿಯ ಅಧಿಕಾರಿಗಳ ಸಹಕಾರವು ದೊರೆಯಲನುಕೂಲಿಸುವಂತೆ ತನ್ಮೂಲಕ ಅವಕಾಶವನ್ನುಂಟುಮಾಡಿಕೊಡಬೇಕು. ಅವರು ಸದಸ್ಯರಾಗುವುದರಿಂದ ಮತ್ತೊಂದು ಅನುಕೂಲವೂ ಉಂಟು. ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರ ತಂಡ ತಂಡಗಳವರೂ, ಒಂದು ತಂಡದವರು ಮಾಡಿದ ಕೆಲಸವನ್ನೇ ಮತ್ತೊಂದು ತಂಡದವರೂ ಮಾಡದಂತೆ, ಇದರಿಂದ ಅನುಕೂಲವಾಗುತ್ತದೆ. ಅಲ್ಲದೆ, ಅನ್ಯೋನ್ಯತೆಯಿಲ್ಲದೆ ಪರಸ್ಪರ ವಿರುದ್ಧವಾಗಿ ವರ್ತಿಸದೆ ಸಮಿಚೀನವಾಗಿ ಕೆಲಸಮಾಡುವುದಕ್ಕೂ ಇದರಿಂದ ಅನುಕೂಲವಾಗುತ್ತದೆ.

ಕಾನೂನು ರಚನೆಯಲ್ಲಿ ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯ ಅಧಿಕಾರಗಳು.

ಸಂಯುಕ್ತ ಪ್ರತಿನಿಧಿಸಭೆಯವರು (ಫೆಡರಲ್ ಅಸೆಂಬ್ಲಿಯವರು) ಮಂಜೂರುಮಾಡಿದ ಯಾವುದಾದರೂ ಕಾನೂನುಗಳಿಗೆ ಸಂಯುಕ್ತಕಾರ್ಯನಿರ್ವಾಹಕ ಮಂಡಲಿಯವರು ತಾವು ಸಮ್ಮತಿಸದೆ ಹೋದಲ್ಲಿ, ಆ ಕಾನೂನುಗಳು ತಾತ್ಕಾಲಿಕವಾಗಿ ಚಾಲ್ತಿಗೆ ಬರದೆ ನಿಂತಿರುವಂತೆ ನಿರ್ಬಂಧವನ್ನುಂಟುಮಾಡಲು ನಿಲುವಳಿ ಓಟುಕೊಟ್ಟು ತೀರ್ಮಾನಿಸುವ ಅಧಿಕಾರವಿರಬೇಕು.

ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯವರು ಆರೀತಿ ನಿಲುವಳಿ ಓಟು ಕೊಟ್ಟು ತೀರ್ಮಾನಮಾಡಿದ ಸಂದರ್ಭದಲ್ಲಿ, ಸಂಯುಕ್ತ ಪ್ರತಿನಿಧಿಯವರು ಮಾಡಿದ್ದ ಮಂಜೂರಾತಿಯು ಅದರ ಮೇಲೂ ಊರ್ಜಿತವಾಗಬೇಕಾದರೆ ಅದು ಅತಿ ಹೆಚ್ಚಿನ ಸಂಖ್ಯೆಯ ಸದಸ್ಯರಿಂದ ಎಂದರೆ ಒಟ್ಟು ಸದಸ್ಯರಲ್ಲಿ ನೂರರಲ್ಲೆರಡುಪಾಲಿನ ಅಥವಾ ಮುಕ್ಕಾಲು ಪಾಲಿನ ಸದಸ್ಯರಿಂದ ಮಂಜೂರಾದುದೆಂದು ತೋರಿಸಿಕೊಡಬೇಕು. ನಿಲುವಳಿ ಓಟು ಕೊಡಬೇಕಾದಲ್ಲಿ ರಾಜ್ಯಾಡಳಿತ ಕ್ರಮದ ಹೊಸ ಶಿಸ್ತಿನಿಂದ ನಿರ್ಧರಿಸಲ್ಪಡುವಂತೆ ಫಲಾನಾ ಅವಧಿಯೊಳಗಾಗಿ ಮಾತ್ರವೇ ಆರೀತಿ ನಿಲುವಳಿ ಓಟು ಕೊಡುವ ಅಧಿಕಾರವನ್ನು ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯವರು (ಫೆಡರಲ್ ಕೌನ್ಸಿಲಿನವರು) ಚಲಾಯಿಸತಕ್ಕುದೆಂದು ಗೊತ್ತಾಗಬೇಕು.

ಸಂಯುಕ್ತ ವ್ಯವಸ್ಥೆಯ ಆಡಳಿತ ನಿರ್ವಹಣದ ಅಧಿಕಾರಿವರ್ಗದವರು (ಫೆಡರಲ್ ಎಗ್ಜಿಕ್ಯುಟಿವ್) ರಚಿಸಿದ ಮಸೂದಾ ಕಾನೂನುಗಳು (ಬಿಲ್ಲುಗಳು) ಮೊದಲು ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಗೆ (ಫೆಡರಲ್ ಕೌನ್ಸಿಲಿಗೆ) ಒಪ್ಪಿಸಲ್ಪಟ್ಟು ಅಲ್ಲಿ ಚರ್ಚೆಯಾಗಬೇಕು. ಅಲ್ಲಿ ಮಂಜೂರಾದ ಮೇಲೆ ಅವುಗಳು ಸಂಯುಕ್ತ ಪ್ರತಿನಿಧಿಸಭೆಗೆ (ಫೆಡರಲ್ ಅಸೆಂಬ್ಲಿಗೆ) ಹೋಗಿ ಅಲ್ಲಿ ಪರಿಶೀಲಿಸಲ್ಪಡಬೇಕು. ಸಂಯುಕ್ತ ಕಾರ್ಯ ನಿರ್ವಾಹಕ ಮಂಡಲಿಯವರೇನಾದರೂ ಮಸೂದಾ ಕಾನೂನುಗಳನ್ನು ಬದಲಾಯಿಸಬೇಕೆಂದು ಇಷ್ಟಪಟ್ಟಲ್ಲಿ ಅವುಗಳನ್ನು ರಚಿಸಿದ ಅಧಿಕಾರಿ ವರ್ಗದವರು ಮಸೂದೆಗಳನ್ನು ಆರೀತಿ ಬದಲಾಯಿಸಬೇಕು. ಅವರು ಆರೀತಿ ಮಾಡದೆ ತಪ್ಪಿದಲ್ಲಿ, ಸಂಯುಕ್ತ ಕಾರ್ಯ ನಿರ್ವಾಹಕ ಮಂಡಲಿಯವರು ಮಸೂದಾ ಕಾನೂನನ್ನು ಸಂಯುಕ್ತ ಪ್ರತಿನಿಧಿಸಭೆಗೆ ಕಳುಹಿಸುವಾಗ್ಗೆ ತಾವು ಭಿನ್ನಾಭಿಪ್ರಾಯಪಟ್ಟ ವಿವರವನ್ನೂ ಬರೆದು ಸೇರಿಸುವ ಹಕ್ಕು ಅವರಿಗೆ ಇರಬೇಕು.

ಈರೀತಿ ಆಡಳಿತ ನಿರ್ವಹಣದ ಅಧಿಕಾರಿ ವರ್ಗದವರು (ಎಗ್ಜಿಕ್ಯುಟಿವ್) ರಚಿಸಿದ ಮಸೂದಾ ಕಾನೂನುಗಳನ್ನು ಪರಿಶೀಲಿಸುವ ಅಧಿಕಾರದ ಜೊತೆಗೆ ಸಂಯುಕ್ತ ಕಾರ್ಯ ನಿರ್ವಾಹಕ ಮಂಡಲಿಯವರು ತಾವೂ ಮಸೂದಾ ಕಾನೂನುಗಳನ್ನು ರಚಿಸಿ ಚರ್ಚೆಗೆ ತರುವ ಅಧಿಕಾರವನ್ನೂ ಸಹ ಸಂಯುಕ್ತ ಪ್ರತಿನಿಧಿ ಸಭೆಯವರಂತೆಯೇ ಪಡೆದಿರಬೇಕು.

ಸಂಯುಕ್ತ ಕಾರ್ಯ ನಿರ್ವಾಹಕ ಮಂಡಲಿಗಿರುವ ಆಡಳಿತ ನಿರ್ವಹಣೆಯ (ಎಗ್ಜಿಕ್ಯುಟಿವ್) ಕರ್ತವ್ಯಗಳು.

ಈ ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯು ಇಂಡಿಯಾ ದೇಶದ ಸಂಯುಕ್ತ ಸರ್ಕಾರದ ಅಂಗಭೂತವಾದ ಸಂಯುಕ್ತ ಸಂಸ್ಥೆಯಾಗಿದೆ. ಆದಕಾರಣ, ತದನುಗುಣವಾಗಿ ಈ ಸಂಸ್ಥೆಗೆ ಸಂಯುಕ್ತ ವ್ಯವಸ್ಥೆಯ ಆಡಳಿತ ನಿರ್ವಹಣದ ಅಧಿಕಾರಿ ವರ್ಗದವರ (ಫೆಡರಲ್ ಎಗ್ಜಿಕ್ಯುಟಿವ್) ಸಂಬಂಧವಾಗಿ ಕೆಲವು ಅಧಿಕಾರಗಳಿರಬೇಕಾದುದು ಅವಶ್ಯಕ. ಆದರೆ, ಈ ಸಂಸ್ಥೆಯು ಅವರಿಗೆ ಕೇವಲ ಮಂತ್ರಾಲೋಚನೆ ಹೇಳುವ ಅಧಿಕಾರವನ್ನು ಮಾತ್ರವೇ ಪಡೆದಿರಬೇಕೇ ಹೊರತು ಅವರು ನಡೆಯಿಸುವ ರಾಜ್ಯಾಡಳಿತ ಕಾರ್ಯದಲ್ಲಿ ಅನವಶ್ಯವಾಗಿ ತಲೆಹಾಕಿ ಅವರಿಗೆ ನಿರ್ಬಂಧವನ್ನುಂಟುಮಾಡುವುದಕ್ಕೆಂದಿಗೂ ಅವಕಾಶವಿರಕೂಡದು. ಆಡಳಿತದ ಕಾರ್ಯಕಲಾಪಗಳಿಗೆ ಸಂಬಂಧಪಟ್ಟ ಚಾಲ್ತಿ ವಿಚಾರಗಳಲ್ಲಿ ಅವರಿಂದ ವರದಿಗಳನ್ನು ಕೇಳಿ ತರಿಸಿಕೊಳ್ಳುವ ಅಧಿಕಾರವೂ, ಮುಂದೆ ಅವರು ಏರ್ಪಡಿಸಬೇಕೆಂದಿರುವ ಮಸೂದಾ ಕಾನೂನುಗಳ ರಚನೆಗೆ ಸಂಬಂಧವಾದ ನಾನಾ ಸಂಗತಿಗಳನ್ನು ಕೇಳಿ ತಿಳಿದುಕೊಳ್ಳುವ ಅಧಿಕಾರವೂ ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಗಿರಬಹುದು.

ಆಡಳಿತ ಸಂಬಂಧವಾದ ಕೆಲವು ವ್ಯವಹಾರಗಳಲ್ಲಿ ಸಹಕರಿಸಿ ವರ್ತಿಸುವ ಅಧಿಕಾರವೂ ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಗಿರಬಹುದು. ಎಂದರೆ ಉದಾಹರಣೆಗಾಗಿ, ಅಮೇರಿಕಾಖಂಡದ ಸಂಯುಕ್ತ ಸಂಸ್ಥಾನಗಳ ಸೆನೆಟ್ ಸಭೆಯೊಡನೆ ಬಾಹ್ಯವ್ಯವಹಾರಗಳು, ಅಥವಾ ಉದಾಹರಣೆಯಾಗಿ ಕೆಲವು ದೊಡ್ಡ ಹುದ್ದೆಗಳಿಗೆ ಫಲಾನಾ ಜನಗಳನ್ನು ನೇಮಕಮಾಡಬೇಕೆಂದು ಸೂಚಿಸುವ ಅಧಿಕಾರ. ಇಂತಹ ಸಲಹೆಗಳನ್ನು ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯವರು ಸೂಚಿಸಿದಾಗ ಸರ್ಕಾರದವರು ಅವುಗಳ ಮೇರೆಗೇ ನಡೆಯಲೇಬೇಕೆಂಬ ಬದ್ಧತೆಯೇನೂ ಇರಬೇಕಾದುದಿಲ್ಲ. ಆದರೂ, ಸರ್ಕಾರದವರು ಸಾಮಾನ್ಯವಾಗಿ ಅವುಗಳಂತೆಯೇ ವರ್ತಿಸುವರೆಂದೇ ಅನುಮೋದಿಸಬಹುದಾಗಿದೆ. ಆದರೆ ಹಾಗೆ ಮಾಡಲು ವಿಶೇಷವಿಧದ ಅಭ್ಯಂತರಗಳೇನಾದರೂ ಇದ್ದಲ್ಲಿ ಮಾತ್ರ ಸರ್ಕಾರದವರು ಬಿಟ್ಟುಬಿಡಬಹುದು.

ಸಂಯುಕ್ತರಾಜ್ಯಾಂಗ ವ್ಯವಸ್ಥೆಯ ಹೊಸ ಶಿಸ್ತಿನಲ್ಲಿ ಎರಡನೆಯ ಸಭೆಯನ್ನು (ಎಂದರೆ ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯನ್ನು) ಹಿಂದೆ ಹೇಳಿದ ರೀತಿಯಲ್ಲಿ ಏರ್ಪಡಿಸಿದ ಪಕ್ಷದಲ್ಲಿ, ಆಗ್ಗೆ ಲಭಿಸುವ ಅನುಕೂಲಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸಬಹುದಾಗಿದೆ. ಅವು ಯಾವುವೆಂದರೆ :—

(1) ಅದರಲ್ಲಿ ಸದಸ್ಯರ ಸಂಖ್ಯೆಯು ಮಿತವಾಗಿ ಅಚ್ಚುಕಟ್ಟಾಗಿರುತ್ತದೆ. ಆದಕಾರಣ, 250 ಅಥವಾ 300 ಮಂದಿ ಸದಸ್ಯರುಗಳಿರುವ ಸಭೆಗಿಂತಲೂ ಇದರಲ್ಲಿ ಹೆಚ್ಚು ವಿಚಕ್ಷಣೆಯಿಂದಲೂ, ಕೆಲಸ ನಡೆಯುತ್ತದೆ; ಸದಸ್ಯರ ಪ್ರಯಾಣ ಮುಂತಾದುವುಗಳಿಗೆ ತಗಲುವ ವೆಚ್ಚವೂ ಮಿತವಾಗಿರುತ್ತದೆ. ಅಂತೂ ವೆಚ್ಚವೂ ಕಡಿಮೆ; ಸಂಸ್ಥಾನಗಳ ಮತ್ತು ಪ್ರಾಂತಗಳ ಶಾಸನ ಸಭೆಗಳಲ್ಲಿಯ ಸದಸ್ಯರು ಬಹುಮಂದಿಗಳು ಇಲ್ಲಿಗೆ ಸದಸ್ಯರಾಗಿ ಬಂದು ಅಲ್ಲಿಯ ಸಭೆಗಳಲ್ಲಿ ತಕ್ಕಷ್ಟು ಜನವಿಲ್ಲದ ತೊಂದರೆಯು ತಪ್ಪಿ ಉತ್ತಮವರ್ಗದ ಸದಸ್ಯರೂ ದೊರೆಯುವಂತಾಗುತ್ತದೆ.

(2) ಸದಸ್ಯರನ್ನು ಅವರಿಗಿರುವ ರಾಜನೀತಿ ಕುಶಲತೆಯ ಆಧಾರದ ಮೇಲೆ ಅದಕ್ಕನುಗುಣವಾಗಿ ಮಾತ್ರವೇ ಆರಿಸುವುದರಿಂದ ಅವರು ಇತರ ರಷ್ಟು ಮಟ್ಟಿಗೆ ಪಕ್ಷಗಳ ಮೇಲಣ ಅಭಿಮಾನದಿಂದ ಕೂಡಿರುವುದಿಲ್ಲ. ಅಲ್ಲದೆ ಅವರ ಮನಸ್ಸು ಸಂಸ್ಥೆಯ ಸಂಯುಕ್ತ ಸ್ವಭಾವದ ಕಡೆಗೆ ಗಮನ ಕೊಡುವಷ್ಟು ಮಟ್ಟಿಗೆ ಸ್ಥಳೀಯ ವಿಚಾರಗಳಿಗೂ ಮತ್ತು ಪಂಗಡಗಳ ಮೇಲಣ ಅಭಿಮಾನಕ್ಕೂ ಅಷ್ಟಾಗಿ ಗಮನ ಕೊಡುವುದಿಲ್ಲ.

(3) ಸಂಯುಕ್ತ ಸಂಸ್ಥೆಗೆ ಸೇರುವ ಸಂಸ್ಥಾನಗಳ ಮತ್ತು ಪ್ರಾಂತಗಳ ಸರ್ಕಾರಗಳ ಅಭಿಪ್ರಾಯಗಳು ಸಂಯುಕ್ತ ಕಾರ್ಯನಿರ್ವಾಹಕಮಂಡಲಿಯಲ್ಲಿ ಸಕಾಲದಲ್ಲಿ ಆಯಾ ಪ್ರತಿನಿಧಿಗಳಿಂದ ಸೂಚಿತವಾಗುತ್ತವೆ. ಆದಕಾರಣ, ಈ ಸರ್ಕಾರಗಳಿಗೂ, ಸಂಯುಕ್ತ ವ್ಯವಸ್ಥೆಯ ಆಡಳಿತಗಳನ್ನು ನಿರ್ವಹಿಸುವ ಕೇಂದ್ರ ಸಂಸ್ಥೆಯವರಿಗೂ (ಸೆಂಟ್ರಲ್ ಎಗ್ಜಿಕ್ಯುಟಿವ್) ವಿವಾದಗಳು ಹುಟ್ಟಿ ತೊಂದರೆಯಾಗುವ ಸಂದರ್ಭಗಳೇ ಇಲ್ಲದೆ ಹೋಗುವುವು ಅಥವಾ ಅವುಗಳು ಕನಿಷ್ಠ ಪರಿಮಿತಿಗಿಳಿಯುವುವು.

(4) ಸರ್ಕಾರಗಳ ಪ್ರತಿನಿಧಿಸಭೆಯವರು ಹಣಕಾಸಿನ ಆಡಳಿತದ ವಿಚಾರದಲ್ಲಿ ಚಲಾಯಿಸುವ ಹತೋಟಿಯ ಅಧಿಕಾರಗಳನ್ನು ಕುರಿತು ಬ್ರಿಟಿಷ್ ಇಂಡಿಯಾದವರು ಆಕ್ಷೇಪಗಳನ್ನು ಮಾಡುವುದಕ್ಕೆ ಅವಕಾಶವಿಲ್ಲದಂತಾಗುತ್ತದೆ.

(5) ಸಂಯುಕ್ತ ಪ್ರತಿನಿಧಿಸಭೆಯವರು ಮಂಜೂರುಮಾಡಿ ಸಮ್ಮತಿಯನ್ನು ಕೊಟ್ಟ ನಿಬಂಧನೆಗಳು ತಮಗೆ ಸಮ್ಮತವಿಲ್ಲದೆಹೋದಲ್ಲಿ ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯವರು ಅವುಗಳನ್ನು ತಾತ್ಕಾಲಿಕವಾಗಿ ಜಾರಿಯಲ್ಲಿರದಂತೆ ತಪ್ಪಿಸುವ ನಿಲುವಳಿ ಓಟನ್ನು ಕೊಡಬಹುದೇ ಹೊರತು, ಅವುಗಳನ್ನು ಆಚರಣೆಗೇ ತರಕೂಡದೆಂಬುದಾಗಿ ಶಾಶ್ವತವಾಗಿ ಚಾಲ್ತಿಯಲ್ಲಿರುವ ನಿಲುವಳಿ ಓಟನ್ನು ಕೊಡುವ ಅಧಿಕಾರವು ಅವರಿಗಿಲ್ಲ. ಹೀಗಿರುವುದರಿಂದ ಇಂತಹ ಸಭೆಯಲ್ಲಿ ಅರ್ಧಭಾಗದ ಸದಸ್ಯಸ್ಥಾನಗಳೂ ಕೂಡ ಸಂಸ್ಥಾನಗಳ ಪ್ರತಿನಿಧಿಗಳಿಗೆ ದೊರೆಯುವ ಏರ್ಪಾಡು ಮಾಡಬೇಕೆಂದಾಗೂ ಸಹ ಬ್ರಿಟಿಷ್ ಇಂಡಿಯಾದವರು ಅದಕ್ಕೆ ಸಮ್ಮತಿಸದೆ ಅನುಮಾನಿಸುವ ಪ್ರಮೇಯವೇ ಇರುವುದಿಲ್ಲ.

(6) ಕಾನೂನು ರಚನೆಯ ಸಂಬಂಧದಲ್ಲಿ ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಯ ಅಧಿಕಾರಗಳು ಒಂದು ವಿಧದಲ್ಲಿ ಕಡಮೆಯಾಗಿ ಈ ಮಂಡಲಿಯವರು ತಾವಾಗಿಯೇ ಅನೇಕ ವಿಚಾರಗಳಲ್ಲಿ ಕಾರ್ಯಾರಂಭ ಮಾಡಿ ಮುಂದುವರಿಸುವ ಅಧಿಕಾರವಿರುತ್ತದೆ; ಅಲ್ಲದೆ, ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಆಡಳಿತ ನಿರ್ವಹಣದ ಅಧಿಕಾರಿ ವರ್ಗದವರೊಡನೆ ಸೇರಿ ಕೆಲವು ಆಡಳಿತ ವಿಚಾರಗಳಲ್ಲಿ ಕೆಲಸ ನಡೆಯಿಸುವ ಹಕ್ಕಿರುತ್ತದೆ ಮತ್ತು ಸಂಸ್ಥಾನಗಳಿಗೂ ಮತ್ತು ಪ್ರಾಂತಗಳಿಗೂ ಸಂಬಂಧಪಟ್ಟ ಆಡಳಿತದ ಕಾರ್ಯನಿಯಮ ವಿಷಯಕವಾದ ಸಮಸ್ತ ವಿಚಾರಗಳಲ್ಲಿಯೂ ಮಂತ್ರಾಲೋಚನೆ ಹೇಳುವ ಅಧಿಕಾರವೂ ಇರುತ್ತದೆ. ಮುಖ್ಯವಾದ ಈ ಕರ್ತವ್ಯಗಳಲ್ಲಿ ಸಂಸ್ಥಾನಗಳಿಗೂ ಬ್ರಿಟಿಷ್ ಇಂಡಿಯಾಕ್ಕೂ ಸಮಾನವಾದ ಅಧಿಕಾರಗಳಿರುತ್ತವೆ.

(7) ಸಂಸ್ಥಾನಗಳವರು ತಮ್ಮ ಕಡೆಯ ಪ್ರತಿನಿಧಿಗಳನ್ನು ಸಂಯುಕ್ತ ಕಾರ್ಯನಿರ್ವಾಹಕ ಮಂಡಲಿಗೆ ಕಳುಹಿಸಿ, ತಮಗೆ ವಿಶೇಷತಃ ಅನ್ವಯಿಸುವಂತಹವಾಗಿರುವ ವಿಚಾರಗಳು ಅಲ್ಲಿ ಚರ್ಚೆಗೆ ಬಂದಾಗ್ಗೆ ಅವರುಗಳು (ಅಧಿವೇಶನದಲ್ಲಿ ಓಟು ಕೊಡದೆ) ಅವುಗಳ ವಿಷಯದಲ್ಲಿ ಅಲ್ಲಿ ವಾದಿಸುವಂತೆ ಮಾಡಲು ಅವಕಾಶವಿರುತ್ತದೆ. ತಮ್ಮ ಸ್ವಂತ ಪ್ರತಿನಿಧಿಯನ್ನು ಅಲ್ಲಿ ಸದಸ್ಯನಾಗಿರಲು ಕಳುಹಿಸುವುದಕ್ಕೆ ಹಕ್ಕುಬಾರದಿರುವಂತಹ ಸಂಸ್ಥಾನದವರಿಗೆ ಈ ರಿಯಾಯಿತಿಯ ಏರ್ಪಾಡಿನಲ್ಲಿ ವಿಶೇಷ ಆದರವಿರುವಂತಾಗುವುದನ್ನಲು ಸಂಶಯವಿಲ್ಲ.

ಫೆಡರಲ್ ಸ್ಟ್ರಕ್ಚರ್ ಸಮಿತಿಯ ಅಧಿವೇಶನದ ನಡವಳಿಕೆಗಳಿಂದ ಉದ್ಧೃತ 1931 ನೆಯ ಇಸವಿ ನವೆಂಬರು 2 ನೆಯ ತಾರೀಖು.

ಮೂರನೆಯ (ಮಸೂದಾ) ವರದಿಯ 12 ನೆಯ ಪ್ಯಾರಾದ ವಿಚಾರವಾಗಿ ಸರ್ ಮಿರ್ಜಾ ಇಸ್ಮಾಯಿಲ್‌ರವರು ಸೂಚಿಸಿದ ಅಭಿಪ್ರಾಯಗಳು.

ನಮ್ಮಲ್ಲಿ ಸಿದ್ಧವಾಗಿರುವ ಮಸೂದಾ ವರದಿಯ ಮೇರೆಗೆ ಮುಂದೆ ಏರ್ಪಡಬೇಕೆಂದು ಸಲಹೆಯಾಗಿರುವ ಸಂಯುಕ್ತಶಾಸನ ಸಭೆಯು ಶಿಸ್ತು ಹೀಗಿದೆ. ಅದರ ಅಂಗಭೂತವಾಗಿರುವ ಸಭೆಗಳು ಎರಡು. ಅವುಗಳಲ್ಲೊಂದಾದ ಸಾರ್ವತ್ರಿಕ ಪ್ರತಿನಿಧಿಸಭೆಯಲ್ಲಿ 300 ಮಂದಿ ಸದಸ್ಯರುಗಳಿರಬೇಕು. ಅವರಲ್ಲಿ 300 ಮಂದಿ ಸದಸ್ಯರು ಪ್ರತ್ಯಕ್ಷವಾದ ಅಥವಾ ಪರೋಕ್ಷವಾದ [illegible] ಚುನಾಯಿಸಲ್ಪಡಬೇಕು. ಅದರ 300

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿರಿ

ಗರ್ಭಧಾರಣ ಸಂಜೀವಿನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರಿ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗುವಿರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C.

ಮಂದಿ ಸದಸ್ಯರು ಸಂಸ್ಥಾನಗಳಿಂದ ಆರಿಸಲ್ಪಡಬೇಕು. ಎರಡನೆಯ ಸಭೆಯಾದ ಸರ್ಕಾರಗಳ ಪ್ರತಿನಿಧಿಸಭೆಯಲ್ಲಿ 200 ಮಂದಿ ಸದಸ್ಯರುಗಳಿರಬೇಕು. ಅವರಲ್ಲಿ ಕೆಲವರು ಬ್ರಿಟಿಷ್ ಇಂಡಿಯಾದ ಪ್ರಾಂತಗಳ ಶಾಸನ ಸಭೆಗಳಿಂದ ಚುನಾಯಿಸಲ್ಪಟ್ಟವರು. ಉಳಿದವರು ಸಂಸ್ಥಾನಗಳಿಂದ ನೇಮಕವಾದವರು. ಈರೀತಿ ಅತಿ ದೊಡ್ಡವಾದ ಎರಡು ಸಭೆಗಳಿರುತ್ತವೆ. ಅವುಗಳಲ್ಲಿ ಎರಡರಲ್ಲಿರುವ ಸದಸ್ಯರುಗಳ ಪಂಗಡಗಳೂ ಪರಸ್ಪರ ವ್ಯತ್ಯಾಸಗಳೇನೂ ಇಲ್ಲದೆ ಒಂದೇ ಸಮ. ಆದಕಾರಣ ಎರಡು ಸಭೆಗಳಲ್ಲಿರುವ ಸದಸ್ಯರುಗಳ ಮನೋವೃತ್ತಿಗಳೂ ಹೆಚ್ಚು ವ್ಯತ್ಯಾಸಗಳೇ ಇಲ್ಲದೆ ಏಕರೂಪದಲ್ಲಿರುತ್ತವೆ. 2 ನೆಯ ಸಭೆಯಾದ ಸರ್ಕಾರಗಳ ಪ್ರತಿನಿಧಿಸಭೆಯಲ್ಲಿ ಸದಸ್ಯರಾಗತಕ್ಕವರಿಗೆ ಹೆಚ್ಚಿನ ಅರ್ಹತೆಗಳನ್ನು ಗೊತ್ತುಮಾಡಿರುವುದೇನೋ ನಿಜ. ಆದರೂ ಈ ಸಭೆಯ ಸದಸ್ಯರುಗಳು ಅವರ ಯೋಗ್ಯತೆಯಲ್ಲೂ, ಅನುಭವದಲ್ಲೂ, ಗುಣದಲ್ಲೂ, ಸಾರ್ವತ್ರಿಕ ಪ್ರತಿನಿಧಿಸಭೆಯ ಸದಸ್ಯರಿಗಿಂತ ಶ್ರೇಷ್ಠರಾದವರಾಗಿರುತ್ತಾರೇಯೋ ಎಂಬುದು ಸಂಶಯಾಸ್ಪದವಾಗಿದೆ. ಅಂತೂ ಸಂಭವವನ್ನು ನೋಡಿದರೇನೋ ಈ ಸಭೆಯೂ ಸಾರ್ವತ್ರಿಕ ಪ್ರತಿನಿಧಿಸಭೆಯ ಪಡಿಯಚ್ಚೇ ಎನ್ನುವಂತಿರುತ್ತದೆಂದು ತೋರುತ್ತದೆ.

ಮ್ಯಾರಿಯಟ್ ಎಂಬವರು “ಚುನಾವಣೆಯ ಮೂಲಕ ಸದಸ್ಯರನ್ನು ಆರಿಸಿ ಸ್ಥಾಪಿಸಿದ ಶಾಸನಸಭೆಗಳಲ್ಲಿ ವಿವಾದಗಳು ಪದೇ ಪದೇ ಉಂಟಾಗುತ್ತಲೇ ಇರುವುವೆಂಬುದೂ, 2 ನೆಯ ಸಭೆಯಲ್ಲಿ ಅವು ಬಹಳ ತೀಕ್ಷ್ಣವಾಗಿರುವುವೆಂಬುದೂ ಅನುಭವದಿಂದ ಕಂಡು ಬಂದಿದೆ.” ಎಂದು ಹೇಳಿದ್ದಾರೆ. ಕೆಲವು ರಾಜ್ಯಾಂಗ ವ್ಯವಸ್ಥೆಗಳಲ್ಲಂತೂ, 2 ಸಭೆಗಳಿಗೂ ವಿವಾದಗಳು ಹುಟ್ಟಿ ಮುಗ್ಗಟ್ಟುಂಟಾಗುವುದನ್ನು ತಪ್ಪಿಸುವುದಕ್ಕಾಗಿ ವಿಶದವಾಗಿ ನಿಬಂಧನೆಗಳೇರ್ಪಟ್ಟಿವೆ. ಈ ಬಗೆಯ ಶಾಸನ ಸಭೆಗಳಲ್ಲಿ ಸ್ವತಸ್ಸಿದ್ಧವಾಗಿ ನ್ಯೂನತೆಗಳಿದ್ದೇ ಇರುವುವೆಂಬುದಕ್ಕೆ ಇದಕ್ಕಿಂತ ಹೆಚ್ಚಿನ ನಿದರ್ಶನಗಳು ...

[illegible]

ಅಲ್ಲದೆ ಕಾರ್ಯತಃ ನೋಡಿದರೂ ಸಹ, ಅದರಿಂದ ಸಫಲವಾಗಿ ಕೆಲಸ ನಡೆಯುವುದಿಲ್ಲ. ಆದಕಾರಣ ಅಂತಹದನ್ನು ಏರ್ಪಡಿಸಿಯೂ ಪ್ರಯೋಜನವಿಲ್ಲ.

ವೀರಶೈವ ವಿದ್ಯಾವರ್ಧಕ ಫಂಡ್ ಸಂಘ, ದಾವಣಗೆರೆ.

ಸೂಚನೆ.

ದಾವಣಗೆರೆ ಹೈಸ್ಕೂಲಿನಲ್ಲಿ ಅಭ್ಯಾಸಮಾಡತಕ್ಕ ಮೈಸೂರು ಸೀಮೆಯ ವೀರಶೈವ ಬಡವಿದ್ಯಾರ್ಥಿಗಳು ಈ ಸಂಘದ ರೂಲ್ಸಿಗೆ ಒಳಪಟ್ಟು ನಡದುಕೊಳ್ಳುವವರಿಗೆ ಮಾತ್ರ ಬೋರ್ಡಿಂಗಿನಲ್ಲಿ ಸೀಟು ಕೊಡಲ್ಪಡುತ್ತೆ. ಸೇರಲಪೇಕ್ಷೆಯುಳ್ಳವರು ಈ ಸಂಘದ ಪ್ರಿಂಟುಫಾರಂನಲ್ಲಿ 1932 ನೇ ಜೂನ್ ತಾ|| 8 ರ ಒಳಗಾಗಿ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು. (1) ಕಾಲ ವಿಳಂಬವಾಗಿ ಬರತಕ್ಕ ಅಪ್ಲಿಕೇಷನ್ನುಗಳು ಖಂಡಿತವಾಗಿ ತಿರಸ್ಕರಿಸಲ್ಪಡುವುವು. ಒಂದುವೇಳೆ ಬೋರ್ಡಿಂಗಿನಲ್ಲಿ ಸೀಟುಗಳಿದ್ದರೆ ಮಾತ್ರ ಸಗಕೊಡಲ್ಪಡುವುದು. (2) ಅಪ್ಲಿಕೇಷನ್ನಿನಲ್ಲಿರುವ ಪ್ರತಿಯೊಂದು ಕಾಲಮ್ಮೂ ಕ್ರಮವಾಗಿ ಭರ್ತಿಮಾಡಲ್ಪಡಬೇಕು, ಹಾಗಿಲ್ಲದಿದ್ದರೆ ತಿರಸ್ಕರಿಸಲ್ಪಡುವದು. (3) ಟ್ರೂ ಕಾಪಿ ಸರ್ಟಿಫಿಕೇಟುಗಳು ತಿರಸ್ಕರಿಸಲ್ಪಡುವವು. (4) ಅಪ್ಲಿಕೇಷನ್ ಫಾರಂ ಅಪೇಕ್ಷೆಯುಳ್ಳವರು ಪೋಸ್ಟ್ ಖರ್ಚಿಗಾಗಿ ಅರ್ಧಾಣೆ ಸ್ಟಾಂಪು ಕಳುಹಿಸುವುದು.

ತರುಕಪ್ಪನವರ ಮಠದ ಷಡಾಕ್ಷರಪ್ಪ,

ಪ್ರೆಸಿಡೆಂಟ್,

ವೀರಶೈವ ವಿದ್ಯಾವರ್ಧಕ ಫಂಡ್ ಸಂಘ, ದಾವಣಗೆರೆ.

ವಿವೇಕಾನಂದ ಸಂಜೀವಿನಿತೈಲ.

ಈ ತೈಲವು ಮುರಿದ ಮೂಳೆಗಳ ನೋವು ಮತ್ತು ತಪ್ಪಿದ ಕೀಲುಗಳ ಉಳುಕು ನೋವುಗಳಿಗೂ ಸಕಲ ವಾಯುಗಳಿಗೂ ವಾಯುವಿನಿಂದ ನರಗಳು ಇಳಿದಿರುವುದು ವಾಯುಗಂಟು ಈ ನೋವುಗಳಿಗೆ ಸವರಲು ಉತ್ತಮ ಗುಣಕಾರಿ. 3 ಔನ್ಸ್ ಬಾಟ್ಲಿ 1 ಕ್ಕೆ 1—8—0 ರೂಪಾಯಿ.

ವಿವೇಕಾನಂದ ಸಂಜೀವಿ.

ಶರೀರದ ಯಾವ ಭಾಗದ ಮೂಳೆಗಳು ಮುರಿದಿದ್ದರೂ, ಕೀಲುಗಳು ತಪ್ಪಿದ್ದರೂ ಈ ಕಾರಣದಿಂದ ಗಂಟುಕಟ್ಟಿದ್ದರೂ, ಮುರಿದ ಮೂಳೆಗಳನ್ನು ಸರಿಪಡಿಸುತ್ತದೆ. **ಇದೂ ಅಲ್ಲದೆ ಸಕಲ ವ್ಯಾಧಿಗಳಿಗೂ ಅಮೂಲ್ಯವಾದ ಔಷಧಿ** ನಮ್ಮಲ್ಲಿ ದೊರೆಯುತ್ತೆ.

3 ತೊಲ ಡಬ್ಬಿ 1 ಕ್ಕೆ 2—8—0 ರೂಪಾಯಿ.

ಕ್ಯಾಟ್ಲಾಕಿಗೆ ಬರೆದರೆ ಉಚಿತವಾಗಿ ಕಳಿಸುತ್ತೇವೆ.

ಪಂಡಿತ್ ಎನ್. ಲಕ್ಷ್ಮಣರಾಜು ಅಂಡ್ ಬ್ರದರ್ಸ್,

[4—4] ಸೀತಾವಿಲಾಸ ಡಿಸ್ಪೆನ್ಸರಿ ಚಾಮರಾಜಪೇಟೆ, ಮೈಸೂರು.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರ ತರಿಸಿಕೊಳ್ಳಿರಿ. ಕಿ. ೧| ರೂ. ಟ. ಖ. ೫| ಆಣೆ.

ಪತ್ತಾ—ವೈದ್ಯ ಪ್ಹಿ. ಎಸ್. ಕಾಪಸೆ, ಮಿರಜ.

7 M. C.

೧೯೩೨ ನೆಯ ಇಸವಿ ಜೂನ್ ತಾ|| ೬ ರಿಂದ ಜೂನ್ ತಾ|| ೧೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ ಆಂಗಿರಸನಾಮಸಂವತ್ಸರದ ಜ್ಯೇಷ್ಠ ಶುದ್ಧ ಬಿದಿಗೆಯಿಂದ ಜ್ಯೇಷ್ಠ ಶುದ್ಧ ಅಷ್ಟಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಷಭ ಮಾಸ
6	ಸೋಮ	ಬಿದಿ	24-30	ಆದ್ರಾ	40-49	24
7	[1] ಮಂಗಳ	ತದಿ	25-7	ಪುನ	42-49	25
8	ಬುಧ	ಚೌತಿ	24-37	ಪುಷ್ಯ	43-48	26
9	ಗುರು	ಪಂಚ	22-43	ಆಶ್ಲೇ	43-30	27
10	[2] ಶುಕ್ರ	ಷಷ್ಠಿ	19-56	ಮಖ	42-9	28
11	ಶನಿ	ಸಪ್ತ	15-58	ಪುಬ್ಬ	39-33	29
12	ಭಾನು	ಅಷ್ಟ	11-12	ಉತ್ತ	36-35	30

(1) ಮಳೆನಕ್ಷತ್ರ-ಮೃಗಶಿರ ೧ ನೆಯ ಪಾದ. (2) ಮಳೆನಕ್ಷತ್ರ-ಮೃಗಶಿರ ೨ ನೆಯ ಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರಾಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG. NO. M. 124

ಮೈಸೂರ್ ಸ್ಟಾರ್.

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮುಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಕ್ಷ್ಮಜ್ಞನಕ್ಷತ್ರ ಮೋಹರಾಜೀಯಾತ್ ||

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||

ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಳಿಯಂಸದಾಪೂರಿಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧—೧೦—೦] [ಪರಸ್ಥಳದವರಿಗೆ ೨—೮—೦] [ಲೈಬ್ರರಿಗೆ ೩—೮—೦]

ಸಂಪುಟ ೪೫] ಮೈಸೂರು ಸ್ಟಾರ್ ೧೯೩೨ ನೆಯ ಇಸವಿ ಜೂನ್ ತಾರೀಖು ೧೩ ನೆಯ ಸೋಮವಾರ [ಸಂಚಿಕೆ ೨೪

MYSORE SANDALWOOD OIL
Distilled in
GOVERNMENT FACTORIES

GUARANTEED B.P.P.J., & AM 4. P. STANDARDS.

PROVIDES

Excellent Base for the manufacture of Soaps, Perfumes, and other Toilet preparations of the Highest quality.

USED ALL THE WORLD OVER.

BUY A BOTTLE TO-DAY.

Available in Sealed Aluminium Bottles.

MOYSRE GOVERNMENT SANDALWOOD OIL FACTORY, BANGALORE.

3 [50—48]

THE MYSORE AGRICULTURAL SCHOOL, HEBBAL, BANGALORE.

Abstract Notification No. A. S. M. GI. 225 of 31-32 dated 25th May 1932.

The Mysore Agricultural School at Hebbal, Bangalore will commence work for the session 1932-33 on 18th July 1932.

Applications for admission should be made to the Principal, Agricultural School, Department of Agriculture, Bangalore in the prescribed form with the necessary certificates, so as to reach the principal on or before the 20th June 1932. The entrance examination will be held on 27th June 1932.

For Further particulars see page 798-799, Part III of the Mysore Gazette dated 19th May 1932.

V. K. BADMI,
Principal.

1

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರಾಸ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ

ದೊರೆಯುವ ಗ್ರಂಥಗಳು.

[illegible]

	ಕ್ರಯ	ವಿ. ಪಿ. ಸೇ.
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಸಟೀಕ ಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶಬರಶಂಕರವಿಳಾಸ	೧—೦—೦	೧—೬—೦

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದನ್ನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.	**ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ** ರಜಿ] ವಜ್ರಾಂಗ ಸುಂದರಪಾಕದ. [ಷ್ಟರ	ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪ್ರಮೇಹ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು ... [illegible]

ಸ್ತ್ರೀ ರೋಗ ನಿವಾರಣೇ ಚೂರ್ಣ.

[Small text illegible.]

ಸಂತತಿ ಪ್ರತಿಬಂಧಕ ಗುಳಿಗೆಗಳು.

[Small text illegible.]

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ...

(Registerd Trade Mark)

... ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[೮—೮]

ಮೈಸೂರು ಸ್ಟಾರ್.

೧೯೩೧ ನೇ ಇಸವಿ ಜೂನ್ ತಾ|| ೧೫ ನೆಯ ಸೋಮವಾರ.

THE REPRESENTATIVE ASSEMBLY

The budget session of the Representative Assembly which commenced its sittings on the 6th June has been very interesting. As regards the budget itself, for the first time in recent years the Government have placed estimates which show a deficit. The accounts for the year 1930-31 show a deficit of Rs. 61,94,049, a huge one which the State was able to stand only on account of the successful flotation of the loan. The estimates for the year 1931-32, framed as was shown by the non-official members of the two Houses at the time in a very optimistic manner, provided for a surplus of nearly Rs. 2 lakhs, but as per the revised estimates they expect a deficit of Rs. 18,57,000. We would not wonder if it goes over Rs. 20 lakhs when the stage of accounts comes. The Dewan's address to the Assembly therefore showed nothing particularly interesting as regards these estimates. He, however, dealt with the one important question of Federal Finance in regard to the Indian States. In particular he remarked how there was no place for any tribute of an obsolete nature in a Federal Government. He was sorry to note that the Percy Committee which has recently submitted its report had taken a very unfair and incorrect view on this question of subsidy. The Percy Committee could have done well to have left the matter alone as there was the Davidson Committee which could be expected to take a fairer view of the question. The Dewan Sahib said that the Federal Structure Committee had definitely stated that there was no place for any contributions of a feudal nature in the future Federal constitution. The Peel Committee also while generally agreeing that the levy of subsidy from some of the Indian States was not right, had at the same time stated that even if there should be such a cash contribution it should not exceed five percent of the revenues of the State which pays the subsidy. Mr. B. S. Puttuswamy had tabled a special resolution to the effect that Mysore should not enter Federation so long as the subsidy was continued to be levied. As the Government was anxious to have the views of the Assembly on the matter, the subject was taken up and Mr. Puttuswamy showed by a reference to the past history of the levy that it was unjust and further that when there was the question of Federation on the anvil it was certainly most inconsistant with the dignity of the State to join it with this badge of inferiority. There was a very interesting discussion in which the two European members Mr. Heathcote and Mr. Newcombe joined and expressed their views in no uncertain terms that the subsidy must go. We feel that the levy is unjust, inequitable and dishonourable to the State. It is unjust because, when it was levied more than a century ago, it was stated to be for the protection which the British gave for the State. Then there was no other contribution from the State. But later on the Imperial Government began to levy various duties on salt, opium etc., and on imported goods in the shape of customs etc., There are also the postal and coinage revenue which has grown since to an enormous extent. These form undeniably indirect taxation on Mysore amounting in all to nearly Rs. 1½ crores annually. These are for the Defence of India. It will therefore be seen that this subsidy acts as a double levy for one and the same object. There can be nothing more unjust. If we consider the state of our present finances and the years of deficit that we are having, there can be nothing more inequitable. If we contemplate the all-India Federation that is in the making there can be nothing more dishonourable to a State than this levy. The first principle of Federation is that the units must stand on an equal basis. It would be highly compromising to the self-respect of a State to enter Federation with this badge. The House was unanimous in complimenting Dewan Sahib on the strenuous efforts he was making to get rid of the subsidy and we hope that he would succeed ere long. One other subject of great importance before the Assembly was Sir K. P. Puttanna Chetty's Bill to restrain child marriages. The Bill contemplates to penalise marriages of girls below 14 years and boys below 18 years of age with the proviso that in the case of girls between 12 and 14 if the parties want to get the marriage celebrated they could do so with the permission of the District Court. It looked as though the whole house would vote by this wholesome measure, but there was brisk canvassing against the measure. Any how the house voted by a majority in favour of the measure and Sir Puttanna Chetty is now free to bring up the Bill before the Assembly. We congratulate the revered Knight for the passage of the measure in the Assembly and hope that he will pilot it through safely in the Legislative Council. The Dewan has, however, sought to throw cold water on the measure in his concluding speech. One cannot imagine a more pusilanimous attitude on the part of a Government which prides itself national. We are, however, strengthened by the hope that Sir K. P. P. Chetty has got a right to bring it up before the Legislative Council and that he is not the man to abandon the meature which is calculated to bring about the salvation of the future race simply because of the lukewarmness of our Government.

Mr. RAMA IYER'S PLUCKED FEATHERS

Mr. T. G. Rama Iyer, the President of the Mysore City Municipal Council always used to derive a great satisfaction in seeing his supposed opponents getting defeated in the Council and obtaining fine certificates at its hands for his own achievements. He would not spare any effort to treat the members who differed from him with the utmost discourtesy, on the strength of the majority that he had in the Council. The Alikhan—Rama Iyer controversy is by now fairly well known to the public. Mr. Alikhan had approached the Government to ascertain whether Mr. Rama Iyer's taunt to him that he should not concern himself with the interests of the rate-payers as he represented no constituency of any kind wns justified. There was also an interpellation on the same subject in the Assembly. The Government have been pleased to give a definite unequivocal answer that a nominated member represents the rate-payers as much as an elected member. The Dewan Sahib himself stated in unambiguous terms that it was highly improper on the part of the President to tell a member, nominated or elected that the interests of the rate-payers should not be his concern. It was also elicited that Mr. Rama Iyer had been pointed out that he was incorrect. It was also stated that nothing more was called for in the case of a high officer like him. When they were asked what amends the President had made to Mr. Alikhan the Government answered that it was a matter between the two gentlemen. When the President was getting certificates of approval from the Council for his deeds, here was the Government and the Assembly granting their certificates. This was on the 10th June. On the 11th June the Special First Class Magistrate delivered judgment in the prosecution of Mr. Mohamad Sait by the Municipal Council. This case of nuisance under S 128 of the Municipal Regulation was chargesheeted in the Court of the Bench of Magistrates. It was transferred to the Court of the City Magistrate on the ground that it involved intricate questions of law and fact. The Prosecution got it transferred to the Special Magistrate's Court on the ground that it was not possible to obtain justice at the hands of the City Court. The trial went on for one and a half years. In the first instance Mr. K. Puttu Rao Municipal Advocate was engaged. Later the Learned Public Prosecutor was engaged for the prosecution. We will try and publish the Judjment next week. For the first time in such a case a photo was taken, and the Health Officer examined as a prosecution witness. We are glad to find that Mr. Mohamad Sait has been acquitted of the charge. He had terrible odds against him and we congratulate him on his success. Justice has been vindicated. The elation which the President used to display has met with its due reward. We are afraid his position after these reverses is very much like the bird with plucked feathers. We hope that the President will hereafter at least give up his pettiness and revengefulness and become tolerant of criticism.

ಪ್ರಜಾಪ್ರತಿನಿಧಿಸಭೆ.

ಪ್ರಜಾಪ್ರತಿನಿಧಿಸಭೆಯ ಬಡ್ಜೆಟ್ ಅಧಿವೇಶನವು ಕಳೆದ ಸೋಮವಾರ ದಿವಾನರ ಅಧ್ಯಕ್ಷತೆಯಲ್ಲಿ ಆರಂಭವಾಗಿ ಈ ದಿವಸ ಪರಿಸಮಾಪ್ತಿಗೊಂಡಿತು. ಸಂಸ್ಥಾನದ ಆಯವ್ಯಯವನ್ನು ಕುರಿತು ದಿವಾನರು ಮಾಡಿದ ಭಾಷಣವು ಈ ಪತ್ರಿಕೆಯ ಬೇರೆ ಕಡೆ ಸಂಪೂರ್ಣವಾಗಿ ಮುದ್ರಿಸಲ್ಪಟ್ಟಿದೆ. 1930-31 ನೆಯ ಸಾಲಿನಲ್ಲಿ 61,94,049 ರೂ. ಗಳು ಒಟ್ಟು ಆದಾಯದಲ್ಲಿ ಕಡಿಮೆ ಬಂದಿರುವುದಾಗಿಯೂ, ಈ ಕೊರತೆಯು ಸಂಸ್ಥಾನವು ತೆರಬೇಕಾಗಿರುವ ಋಣದ ಕಾಲಾವಧಿಯನ್ನು ಹೆಚ್ಚಿಸಿದುದರಿಂದ ನಿರ್ವಹಿಸಿಕೊಳ್ಳಲು ಸಾಧ್ಯವಾಯಿತೆಂದೂ ಆಯ ವ್ಯಯ ಲೆಕ್ಕದಿಂದ ವ್ಯಕ್ತವಾಗುತ್ತದೆ. 1931-32 ನೆಯ ಸಾಲಿನ ಒಟ್ಟು ಬಡ್ಜೆಟ್ಟನ್ನು ತಯಾರಿಸುವಾಗ್ಗೆ ಖರ್ಚು ಜಾತಾ 2 ಲಕ್ಷ ರೂ. ಮಿಗತಾಯವಾಗುತ್ತದೆಂದು ನಿರೀಕ್ಷಿತವಾಗಿದ್ದುದರ ಬದಲಾಗಿ ವರ್ಷಾಂತ್ಯದಲ್ಲಿ 18,57,000 ರೂ. ಕಡಿಮೆ ಬರುವುದೆಂದು ಲೆಕ್ಕದ ಪುನರ್ವಿಮರ್ಶೆಯಿಂದ ಗೊತ್ತಾಗುವುದು. ಈ ಆಯವ್ಯಯ ಸಂಬಂಧವಾಗಿ ಸ್ವಾರಸ್ಯವಾದ ಅಂಶಗಳೇನೂ ದಿವಾನರ ಭಾಷಣದಲ್ಲಿ ಕಂಡುಬರುವುದಿಲ್ಲ. ಆದರೂ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಸಂಬಂಧಪಟ್ಟ ಹಣ ಕಾಸಿನ ಮತ್ತು ದೇಶೀಯ ಸಂಸ್ಥಾನಗಳ ಸಂಬಂಧವಾಗಿ ಕೆಲ ಪ್ರಾಮುಖ್ಯ ವಿಚಾರಗಳನ್ನು ಕುರಿತು ದಿವಾನರು ಪ್ರಸ್ತಾಪಿಸಿರುತ್ತಾರೆ. ಅದರಲ್ಲೂ ಪ್ರಾಮುಖ್ಯವಾಗಿ, ಈ ನೂತನ ಸಂಯುಕ್ತ ರಾಜ್ಯಾಂಗ ಪ್ರಭುತ್ವದಲ್ಲಿ ದೇಶೀಯ ಸಂಸ್ಥಾನಗಳು ಪೊಗದಿಯನ್ನು ತೆರಬೇಕೆಂಬ ನಿರ್ಬಂಧಕ್ಕೆ ಅವಕಾಶವಿಲ್ಲವೆಂದು ಹೇಳಿರುವರು. ಈ ಪೊಗದಿಯನ್ನು ನಿಲ್ಲಿಸುವ ವಿಚಾರದಲ್ಲಿ ಪರ್ಸಿ ಕಮಿಟಿಯವರು ಪ್ರತಿಕೂಲಾಭಿಪ್ರಾಯಪಟ್ಟಿರುವುದಕ್ಕಾಗಿ ದಿವಾನರು ತಮ್ಮ ವಿಷಾದವನ್ನು ವ್ಯಕ್ತಪಡಿಸಿರುತ್ತಾರೆ. ಈ ಪರ್ಸಿ ಕಮಿಟಿಯವರು ಪೊಗದಿಯ ಸಮಸ್ಯೆಯ ಗೋಜಿಗೆ ಹೋಗದೆ, ಈ ವಿಚಾರವನ್ನು ಸದ್ಭಾವದಿಂದ ಪರಿಗಣಿಸುವರೆಂದು ನಿರೀಕ್ಷಿಸಲ್ಪಟ್ಟಿದ್ದ ಡೇವಿಡ್‌ಸನ್ ಕಮಿಟಿಯವರ ಇತ್ಯರ್ಥಕ್ಕೆ ಬಿಟ್ಟಿದ್ದರೆ ಉತ್ತಮವಾಗಿರುತ್ತಿದ್ದಿತು. ಮುಂದಣ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯಲ್ಲಿ ಪೊಗದಿಯನ್ನು ನಡೆಸಿಕೊಂಡು ಬರುವುದಕ್ಕೆ ಅವಕಾಶವಿಲ್ಲವೆಂದು ಫೆಡರಲ್ ಸ್ಟ್ರಕ್ಚರ್ ಕಮಿಟಿಯವರು ಖಚಿತವಾಗಿ ಹೇಳಿರುತ್ತಾರೆಂದು ದಿವಾನ್ ಸಾಹೇಬರು ತಿಳಿಸಿರುವರು. ಪೊಗದಿಯನ್ನು ಕೆಲ ಸಂಸ್ಥಾನಗಳಿಗೆ ವಿಧಿಸುವುದು ಅನ್ಯಾಯವೆಂದೂ, ಒಂದು ವೇಳೆ ನಗದಾಗಿ ಕೊಡಬೇಕೆಂದು ವಿಧಿಸುವುದಾದರೆ ಅದು ಪೊಗದಿಯನ್ನು ತೆರುವ ಸಂಸ್ಥಾನದ ಒಟ್ಟು ಆದಾಯದಲ್ಲಿ ಶೇಕಡ 5 ಕ್ಕಿಂತ ಹೆಚ್ಚಾಗಿರಕೂಡದೆಂದೂ ಪೀಲ್ ಕಮಿಟಿಯವರು ಅಭಿಪ್ರಾಯ ಪಟ್ಟಿರುತ್ತಾರೆ. ಈ ಪೊಗದಿಯು ತಪ್ಪಿಸಲ್ಪಡುವವರೆಗೂ ನಮ್ಮ ಸಂಸ್ಥಾನವು ಫೆಡರೇಷನ್ನಿಗೆ ಸೇರಕೂಡದೆಂಬ ಬಗೆಗೆ ಮ|| ಬಿ. ಎಸ್. ಪುಟ್ಟಸ್ವಾಮಿಯವರು ಒಂದು ಸ್ಪೆಷಲ್ ರೆಜ್ಯುಲೇಷನ್ನನ್ನು ಕಳುಹಿದ್ದರು. ಈ ವಿಚಾರವಾಗಿ ಪ್ರಜಾಪ್ರತಿನಿಧಿಸಭೆಯವರ ಅಭಿಪ್ರಾಯವನ್ನು ತಿಳಿಯಬೇಕೆಂದು ಪ್ರಭುತ್ವದವರು ಕುತೂಹಲರಾಗಿದ್ದುದರ ಮೇಲೆ ಈ ವಿಚಾರವು ಪರ್ಯಾಲೋಚನೆಗೆ ತೆಗೆದುಕೊಳ್ಳಲ್ಪಟ್ಟಿತು. ಆಗ ಮ|| ಬಿ. ಎಸ್. ಪುಟ್ಟಸ್ವಾಮಿಯವರು ಈ ಪೊಗದಿಯು ಮೊದಲು ಹೇಗೆ ವಿಧಿಸಲ್ಪಟ್ಟಿತು ಮತ್ತು ಅದು ಹೇಗೆ ಅನ್ಯಾಯವಾಗಿರುತ್ತದೆಂಬ ವಿಚಾರವನ್ನು ವಿಶದೀಕರಿಸಿ, ಸಂಯುಕ್ತ ರಾಜ್ಯಾಂಗರಚನೆಯಲ್ಲಿ ಈ ವಿಚಾರವು ಇತ್ಯರ್ಥವಾಗುವುದಕ್ಕೆ ಮೊದಲು ನಮ್ಮ ಸಂಸ್ಥಾನವು ಪೊಗದಿ ತೆರುವ ರಾಜ್ಯವೆಂಬ ಅಪಮಾನಕರವಾದ ಬಿರುದನ್ನಿಟ್ಟುಕೊಂಡು ಫೆಡರೇಷನ್ನಿಗೆ ಸೇರುವುದು ಶುದ್ಧ ಅಸಂಗತವೆಂದು ಒತ್ತಿ ಹೇಳಿದರು. ಈ ವಿಚಾರದಲ್ಲಿ ಚರ್ಚೆಯು ಬಹಳ ಸ್ವಾರಸ್ಯವಾಗಿ ನಡೆದು, ಇಬ್ಬರು ಯೂರೋಪಿಯನ್ ಮೆಂಬರುಗಳು ಸಹ ಪೊಗದಿಯು ತಪ್ಪಿಹೋಗಬೇಕೆಂದು ನಿಷ್ಕಾಪಟ್ಯದಿಂದ ಹೇಳಿದರು. ಪೊಗದಿಯನ್ನು ವಿಧಿಸಿರುವುದು ಬಹಳ ಅನ್ಯಾಯ, ಅಕ್ರಮ ಮತ್ತು ನಮ್ಮ ಸಂಸ್ಥಾನದ ಗೌರವಕ್ಕೆ ಕುಂದಕವೆಂದು ಹೇಳಬೇಕಾದ ಅಗತ್ಯವೇ ಇಲ್ಲ. ನಮ್ಮ ಸಂಸ್ಥಾನ ರಕ್ಷಣೆಗಾಗಿ ಸೈನ್ಯವನ್ನಿಡಬೇಕೆಂಬ ನೆಪದಮೇಲೆ ಒಂದು ಶತಮಾನದ ಹಿಂದೆ ಈ ಪೊಗದಿಯು ವಿಧಿಸಲ್ಪಟ್ಟಿತು. ಆಗ್ಗೆ ಮತ್ತಾವ ವಿಧವಾಗಿ ವಂತಿಗೆಯನ್ನು ಕೊಡಬೇಕಾಗಿರಲಿಲ್ಲ. ಆದರೆ ಈಚೆಗೆ ಸಾರ್ವಭೌಮ ಪ್ರಭುತ್ವದವರು ಉಪ್ಪು, ಅಫೀಮು ಮೊದಲಾದವುಗಳ ತೆರಿಗೆಯನ್ನೂ, ಪರದೇಶಗಳಿಂದ ಬರುವ ಪದಾರ್ಥಗಳ ಮೇಲೆ ಸುಂಕವನ್ನೂ ವಿಧಿಸುತ್ತಾ ಬಂದರು. ಇಷ್ಟೇ ಅಲ್ಲದೆ ಈಗ ಬಹಳವಾಗಿ ಹೆಚ್ಚಿರುವ ಅಂಚೆಯ ಮತ್ತು ನಾಣ್ಯದ ಆದಾಯವು ಸಹ ತಪ್ಪಿಹೋಗಿರುತ್ತದೆ. ಇವುಗಳಿಂದೆಲ್ಲ ವರ್ಷ 1 ಕ್ಕೆ 1½ ಕೋಟಿ ರೂಪಾಯಿಗಳವರೆಗೆ ನಮ್ಮ ಸಂಸ್ಥಾನವು ಪರೋಕ್ಷವಾಗಿ ಕಂದಾಯವನ್ನು ತೆರುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ. ಇವೆಲ್ಲವೂ ಭಾರತ ದೇಶಸಂರಕ್ಷಣಾರ್ಥವಾಗಿ. ಈ ಪೊಗದಿಯು ಒಂದೇ ಉದ್ದೇಶಕ್ಕಾಗಿ ದ್ವಿಗುಣ ಕಂದಾಯ ವಿಧಿಸಲ್ಪಟ್ಟಂತೆ ಆಗಿರುವುದು, ಇದಕ್ಕಿಂತಲೂ ಅನ್ಯಾಯವಾದುದು ಬೇರೊಂದಿಲ್ಲ. ನಮ್ಮ ಪ್ರಕೃತ ಆರ್ಥಿಕ ದುಸ್ಥಿತಿಯನ್ನೂ ಸಾಂವತ್ಸರಿಕ ಉತ್ಪತ್ತಿಯು ಕಡಿಮೆಯಾಗುತ್ತಿರುವುದನ್ನೂ ಪರಿಗಣಿಸಿದರೆ ಇದಕ್ಕಿಂತಲೂ ಅಧರ್ಮವು ಬೇರೊಂದಿಲ್ಲವೆಂದು ತೋರುತ್ತದೆ. ಯಾವದ್ಭಾರತ ಸಂಯುಕ್ತ ರಾಜ್ಯಾಂಗರಚನೆಯಲ್ಲಿ ಈ ಪೊಗದಿಯು ಸೇರಿಸಲ್ಪಡುವುದಾದರೆ ಅದಕ್ಕಿಂತಲೂ ಅಪಮಾನಕರವಾದುದು ಮತ್ತೊಂದಿಲ್ಲ. ಪ್ರತಿಯೊಂದು ಫೆಡರಲ್ ಸಂಸ್ಥಾನವು ಸಮಾನಪರಿಸ್ಥಿತಿಯಲ್ಲಿರಬೇಕೆಂಬುದೇ ಈ ಫೆಡರೇಷನ್ನಿನ ಮುಖ್ಯ ನೀತಿಯಾಗಿರುತ್ತದೆ. ಇಂತಹ ಅಪಮಾನಕರವಾದ ಪೊಗದಿಯ ಭಾರವನ್ನು ಹೊತ್ತುಕೊಂಡು ಫೆಡರೇಷನ್ನಿಗೆ ಸೇರುವುದು ಆತ್ಮಗೌರವ ಉಳ್ಳ ಸಂಸ್ಥಾನಕ್ಕೆ ಬಹಳ ಹೀನಾಯವು. ಈ ಅಗೌರವಕರವಾದ ಪೊಗದಿಯನ್ನು ತೊಲಗಿಸಲು ವಿಶೇಷ ಸಾಹಸಪಡುತ್ತಿರುವುದಕ್ಕಾಗಿ ಪ್ರತಿನಿಧಿಸಭೆಯ ಮೆಂಬರುಗಳೆಲ್ಲರೂ ಏಕೀಭವಿಸಿ ದಿವಾನರನ್ನು ಅಭಿನಂದಿಸಿದರು. ನಾವೂ ಅವರಂತೆಯೇ ದಿವಾನರನ್ನು ವಂದಿಸಿ ಅವರ ಪ್ರಯತ್ನವು ಕೂಡಲೆ ಸಿದ್ಧಿಸಲೆಂದು ಹಾರೈಸುತ್ತೇವೆ. ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಬಾಲ್ಯ ವಿವಾಹ ನಿರೋಧಶಾಸನದ ಬಿಲ್ಲಿನ ವಿಚಾರವೂ ಬಹಳ ಪ್ರಾಮುಖ್ಯವಾಗಿದ್ದಿತು. 14 ವರ್ಷ ವಯಸ್ಸಿನೊಳಗಿರುವ ಬಾಲೆಯರಿಗೂ, 18 ವರ್ಷಗಳೊಳಗಿರುವ ಬಾಲಕರಿಗೂ ವಿವಾಹವಾಗಕೂಡದೆಂದೂ, ಒಂದು ವೇಳೆ ಅನಿವಾರ್ಯ ಸಂದರ್ಭದಲ್ಲಿ 12-14 ವರ್ಷಗಳೊಳಗಿರುವ ಬಾಲೆಯರಿಗೆ ಡಿಸ್ಟ್ರಿಕ್ಟ್ ಜಡ್ಜಿಯವರಪ್ಪಣೆ ಪಡೆದು ವಿವಾಹಮಾಡಬಹುದೆಂದೂ, ಈ ವಿಧಿಗೆ ವಿರುದ್ಧವಾಗಿ ಆಚರಿಸುವವರು ಶಿಕ್ಷೆಗೆ ಗುರಿಯಾಗಬೇಕೆಂದೂ ಆ ಬಿಲ್ಲಿನಲ್ಲಿ ಹೇಳಲ್ಪಟ್ಟಿದೆ. ಈ ಬಿಲ್ಲನ್ನು ಸಭಾ ಮೆಂಬರೆಲ್ಲರೂ ಅನುಮೋದಿಸುವವರಾಗಿದ್ದರು, ಆದರೆ ಕೆಲರು ಪ್ರತಿಕೂಲವಾಗಿ ಬೋಧಿಸಿದುದರಿಂದ 97 ಮಂದಿ ಅನುಕೂಲವಾಗಿಯೂ 86 ಮಂದಿ ಪ್ರತಿಕೂಲವಾಗಿಯೂ ಓಟನ್ನು ಕೊಟ್ಟರು. ಇದರಿಂದ ಬಿಲ್ಲು ಪ್ರಜಾಪ್ರತಿನಿಧಿಸಭೆಯಲ್ಲಿ ಪ್ಯಾಸಾದಂತಾಯಿತು. ಆದರೆ ಈ ಬಿಲ್ಲನ್ನು ಪ್ರತಿಭಟಿಸುವವರ ಸಂಖ್ಯೆಯು ಹೆಚ್ಚಾಗಿರುವುದರಿಂದ, ಬಾಲ್ಯವಿವಾಹವನ್ನು ನಿರೋಧಿಸುವ ಕಾನೂನಿಗೆ ಒತ್ತಾಸೆ ಕೊಡುವ ವಿಷಯದಲ್ಲಿ ಪ್ರಜಾಭಿಪ್ರಾಯವು ಇನ್ನೂ ಹೆಚ್ಚು ಪ್ರಸನ್ನವಾಗಿ ಅದು ಆಗಿಯೇ ತೀರಬೇಕೆಂದು ದೃಢಪಡುವವರೆಗೂ, ಸರ್ಕಾರದವರು ಈ ವಿಷಯದಲ್ಲಿ ಪ್ರವರ್ತಿಸಲು ಮನಸ್ಸಿಲ್ಲದವರಾಗಿದ್ದಾರೆ ಎಂದು ದಿವಾನರು ತಮ್ಮ ಸಭಾಪರಿಸಮಾಪ್ತಿ ಭಾಷಣದಲ್ಲಿ ಹೇಳಿದರು. ಇದಕ್ಕಾಗಿ ನಾವು ವಿಷಾದಿಸುತ್ತೇವಲ್ಲದೆ ಸರ್ ಶೆಟ್ಟರು ನಿರಾಶರಾಗದೆ ನ್ಯಾಯವಿಧಾಯಕ ಸಭೆಯಲ್ಲಿ ಪ್ಯಾಸಾಗಲು ಪ್ರಯತ್ನಿಸುವರೆಂದು ನಿರೀಕ್ಷಿಸುತ್ತೇವೆ.

ಮ|| ಮಹಮದ ಸೇಟರು ನಿರ್ದೋಷಿಗಳೆಂದರು

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರೂ, ನ್ಯಾಯವಿಧಾಯಕ ಮತ್ತು ಪ್ರಜಾಪ್ರತಿನಿಧಿ ಸಭೆಗಳ, ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರೂ, ದೊಡ್ಡ ಜವಳಿ ವರ್ತಕರೂ ಆದ ಮ|| ಮಹಮ್ಮದ್ ಸೇಟರವರು ತಮ್ಮ ಬಂಗಲೆಯ ಬಚ್ಚಲ ನೀರನ್ನು ಭೂಮಿಯೊಳಗಿನ ಬಚ್ಚಲಿಗೆ ಬಿಡದೆ ಹೊರಗಡೆ ಬಿಟ್ಟಿರುತ್ತಾರೆಂಬ ಅಪರಾಧಕ್ಕಾಗಿ ರಾಜಧಾನಿಯ ಸಿಟಿ ಮ್ಯುನಿಸಿಪಾಲಿಟಿಯವರು ಮ|| ಸೇಟರಮೇಲೆ ಬೆಂಚ್ ಕೋರ್ಟಿನಲ್ಲಿ ವಿವಾದವನ್ನು ಹೂಡಿದ್ದರು. ಈ ವಿವಾದವು ಅಪರಾಧಿಯ ಪ್ರಾರ್ಥನೆಯ ಮೇರಿಗೆ ಸಿಟಿ ಮೆಜಿಸ್ಟ್ರೇಟರ ಕೋರ್ಟಿಗೆ ವರ್ಗವಾಗಿ ಅಲ್ಲಿ ನಡೆಯುತ್ತಿದ್ದು ಫಿರ್ಯಾದಿಯ ಕೋರಿಕೆಯಂತೆ ಮೈಸೂರು ಸ್ಪೆಷಲ್ ಮೆಜಿಸ್ಟ್ರೇಟರ ಕೋರ್ಟಿಗೆ ವರ್ಗವಾಗಿ ಅದರ ವಿಚಾರಣೆಯೆಲ್ಲವೂ ನಡೆದು ಉಭಯ ಪಕ್ಷದ ಲಾಯರುಗಳ ಆರ್ಗ್ಯುಮೆಂಟಾಗಿ ಮ|| ಮಹಮ್ಮದ್ ಸೇಟರು ನಿರ್ದೋಷಿಗಳೆಂದು ಸ್ಪೆಷಲ್ ಮೆಜಿಸ್ಟ್ರೇಟರಾದ ಮ|| ಈಶ್ವರಯ್ಯನವರು ಮೊನ್ನೆಯ ದಿವಸ ತೀರ್ಮಾನವನ್ನು ಹೇಳಿದರೆಂದು ತಿಳಿಯಲು ಸಂತೋಷವಾಗುತ್ತದೆ. ರಾಜಧಾನಿಯ ಬಡ ಕಂದಾಯದಾರರು ತಮ್ಮ ಮನೆಗಳ ಬಚ್ಚಲ ನೀರನ್ನು ಭೂಮಿಯೊಳಗಿನ ಬಚ್ಚಲಿಗೆ ಬಿಟ್ಟಿರಲಿಲ್ಲವೆಂಬ ಅಪರಾಧಕ್ಕಾಗಿ ಕೋರ್ಟಿನ ವಿಚಾರಣೆಗೆ ಗುರಿಮಾಡಲ್ಪಟ್ಟು ಅರ್ಥದಂಡ ವಿಧಿಸಲ್ಪಡುತ್ತಿದ್ದ ಮ್ಯುನಿಸಿಪಾಲಿಟಿಯವರ ನಿರ್ಘೃಣ ಮತ್ತು ಅನ್ಯಾಯಕ್ರಮವನ್ನು ತಪ್ಪಿಸಲು ತಕ್ಕ ಪ್ರಯತ್ನವನ್ನು ಮಾಡಿದುದಕ್ಕಾಗಿ ಮ|| ಸೇಟರು ಪ್ರೆಸಿಡೆಂಟರಾದ ಮ|| ಟಿ. ಜಿ. ರಾಮಯ್ಯರ್‌ರವರ ಆಗ್ರಹಕ್ಕೆ ಗುರಿಯಾಗಿ ಕೋರ್ಟಿಗೆಳೆಯಲ್ಪಟ್ಟಿದ್ದು ವಿಚಾರಣಾಂತ್ಯದಲ್ಲಿ ದೋಷಮುಕ್ತರಾದುದಕ್ಕಾಗಿ ಮ|| ಸೇಟರನ್ನು ಅಭಿನಂದಿಸುತ್ತೇವೆ.

ಅಗ್ನಿಯ ಅನಾಹುತ

ಬೂದನ ಎಂಬಲ್ಲಿ ಒಬ್ಬ ರಿಟೈರ್ಡ್ ಸ್ಕೂಲ್ಮಾಸ್ಟರ ಮನೆಯು ಬೆಂಕಿಯಿಂದ ಹೊತ್ತಿಕೊಂಡು, 6 ಮಂದಿ ಹೆಂಗುಸರೂ 9 ಮಕ್ಕಳೂ ಅಗ್ನಿಗೆ ಆಹುತಿಯಾದರು.

ಬ್ರಿಟನ್ನಿನಲ್ಲಿ ನಿರುದ್ಯೋಗಿಗಳ ಸಂಖ್ಯೆ

ಕಳೆದ ಮೇ ತಾ|| 28 ರಲ್ಲಿ ಇಂಗ್ಲೆಂಡಿನೊಳಗೆ ನಿರುದ್ಯೋಗಿಗಳ ಸಂಖ್ಯೆಯು ಕಳೆದ ಏಪ್ರಿಲ್ ತಿಂಗಳಲ್ಲಿದ್ದುದಕ್ಕಿಂತ 89000 ಹೆಚ್ಚಾಗಿಯೂ, 1931 ನೆಯ ಜೂನ್ ತಾ|| 1 ರಲ್ಲಿದ್ದುದಕ್ಕಿಂತ, 1,11,000 ಹೆಚ್ಚಾಗಿಯೂ ಇದ್ದಿತು.

ಕೆ. ನಾಗೇಶ್ವರರಾಯರ ಬಿಡುಗಡೆ

ವೆಲ್ಲೂರು ಕಾರಾಗೃಹದಲ್ಲಿ ಕಳೆದ 6 ತಿಂಗಳಿಂದಲೂ ರಾಜಕೀಯ ಬಂದಿಗಳಾಗಿದ್ದ ಮದ್ರಾಸು ಆಂಧ್ರ ಪತ್ರಿಕಾ ಸಂಪಾದಕರಾದ ಮ|| ಕಾಶೀನಾಥ ನಾಗೇಶ್ವರರಾಯರು ಕಳೆದ ಶುಕ್ರವಾರ ಬಿಡುಗಡೆಯನ್ನು ಹೊಂದಿದರು.

ವಿ. ಜೆ ಪಟೇಲರು

ಮ|| ವಿಠಲಭಾಯಿ ಪಟೇಲರವರು ಈಗ ಲಂಡನ್ ಪಟ್ಟಣಕ್ಕೆ ಬಂದಿರುತ್ತಾರೆ. ಇವರು ಕೆಲ ವಾರಗಳವರೆಗಲ್ಲಿದ್ದು ಕಾಂಗ್ರೆಸು ಉಪಸಂಘವನ್ನು ಪುನರುಜ್ಜೀವನಗೊಳಿಸಿ ಅನಂತರ ಅಮೇರಿಕೆಗೆ ಪ್ರಯಾಣಮಾಡುವವರಾಗಿರುವರು.

ಜಡ್ಜಿಯ ಮನೆಯಲ್ಲಿ ಕಳ್ಳತನ

ಅಯೋಧ್ಯೆಯ ಚೀಫ್ ಕೋರ್ಟಿನ ಚೀಫ್ ಜಡ್ಜಿಯವರಾದ ಸರ್ ವಜೀರ್ ಹಸನ್‌ರವರ ಮನೆಯ ಬಾಗಿಲನ್ನೊಡೆದು ಒಳಕ್ಕೆ ನುಗ್ಗಿ ಪಿಸ್ತೋಲು ತುಪಾಕಿ, ಚಿನ್ನ, ಬೆಳ್ಳಿ ಮೊದಲಾದ ಪದಾರ್ಥಗಳನ್ನು ಅಪಹರಿಸಿಕೊಂಡು ಹೋದರು. ಪೊಲೀಸಿನವರು ಕಳ್ಳರನ್ನು ತಡಕುತ್ತಿದ್ದಾರೆ.

ಸಾವಿತ್ರಿ ದೇವಿಯ ಮೇಲೆ ವಿವಾದ

ಜಾಫರಲಿಯವರ ಪತ್ನಿ ಸಾವಿತ್ರಿದೇವಿ ಎಂಬ ಖಿಲಾಫ್ ಸ್ತ್ರೀಯು ಮದ್ದು ಗುಂಡು ಹಾಕಿ ಸಿದ್ಧವಾಗಿದ್ದ ಎರಡು ಬಂದೂಕಗಳನ್ನೂ, ಮದ್ದು ಗುಂಡುಗಳನ್ನೂ ಲೈಸೆನ್ಸು ಇಲ್ಲದೆ ಇಟ್ಟುಕೊಂಡಿದ್ದಳೆಂಬ ಅಪರಾಧಕ್ಕಾಗಿ ಅ|| ಸೆಷನ್ಸ್ ಜಡ್ಜಿಯವರ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾಳೆ.

ಟ್ರಾವನ್ಕೂರು ಮಹಾರಾಜರ ಪ್ರಯಾಣ

ವೈಸ್ರಾಯರ ಆಹ್ವಾನದ ಮೇಲೆ ಟ್ರಾವನ್ಕೂರು ಮಹಾರಾಜರು ತಮ್ಮ ಸಹೋದರರೊಡನೆ ಸಿಮ್ಲಾಕ್ಕೆ ಪ್ರಯಾಣಮಾಡಿರುವರು. ಇವರು ಬರುವ ಆಗಸ್ಟ್ ತಿಂಗಳ ಕಡೆಯಲ್ಲಿ ಸೀಮೆಯಿಂದ ಹಿಂದಿರುಗಿ ಬರುವವರಾಗಿರುವ ತಮ್ಮ ತಾಯಿಯವರೊಡನೆ ಸ್ವಸ್ಥಳಕ್ಕೆ ಹಿಂದಿರುಗುವವರಾಗಿರುತ್ತಾರೆ.

ವೈಸ್ರಾಯರ ದೇಶಸಂಚಾರ

ವೈಸ್ರಾಯರು ಬರುವ ಜುಲೈ ತಿಂಗಳ ಮಧ್ಯಭಾಗದಲ್ಲಿ ಭಾರತ ದೇಶದ ನಾನಾಭಾಗದಲ್ಲಿ 5 ವಾರದವರೆಗೆ ಸಂಚರಿಸುವುದಾಗಿ ತಿಳಿಯಬರುತ್ತದೆ. ಇವರು ತಿರುಗಿ ಸಿಮ್ಲಾ ಸೇರುವುದರೊಳಗೆ ಕಲಕತ್ತ, ಉದಕಮಂಡಲ, ಮೈಸೂರು, ಪೂನಾ, ಇಂದೂರು ದಿಲ್ಲಿ ಈ ಸ್ಥಳಗಳನ್ನು ಸಂದರ್ಶಿಸುವರು.

ಬಂದಿಗಳಾಗಿರುವ ಮಹಾತ್ಮರು

ಎರ್ರಾವಡಾ ಕಾರಾಗೃಹದಲ್ಲಿ ಬಂದಿಗಳಾಗಿರುವ ಮಹಾತ್ಮರ ದರ್ಶನಮಾಡಲಿಚ್ಛಿಸುವವರಿಗೆ ವಾರಕ್ಕೊಮ್ಮೆ ಅವಕಾಶ ಕೊಡಲ್ಪಟ್ಟಿರುವುದನ್ನೂ, ಮಹಾತ್ಮರ ಪರಮ ಶಿಷ್ಯೆಯಾದ ಮಿಸ್ ಸ್ಲೇಡ್‌ರವರಿಗೆ ಮಹಾತ್ಮರ ದರ್ಶನಕ್ಕೆ ಅವಕಾಶಕೊಡಲ್ಲಿಲ್ಲವಾದುದರಿಂದ ತಮ್ಮನ್ನು ನೋಡಲು ಕಲ್ಪಿಸಿರುವ ಅವಕಾಶವನ್ನು ತಪ್ಪಿಸಬೇಕೆಂದು ಪ್ರಭುತ್ವದವರಿಗೆ ಲೇಖನವನ್ನು ಬರೆದಿರುವರೆಂತಲೂ, ತಮ್ಮ ಸತ್ಯಾಗ್ರಹಾಶ್ರಮದ ಚರಿತ್ರೆಯನ್ನು ಬರೆಯುತ್ತಿರುವರೆಂತಲೂ, ಕೂಡಲೆ ತಮ್ಮ ಬಂಧವಿಮೋಚನವಾಗುವುದೆಂಬ ಭವಿಷ್ಯವು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ಓದಿ ನಕ್ಕರೆಂತಲೂ ತಿಳಿಯಬರುತ್ತದೆ. ಈ ವಿಚಾರದಲ್ಲಿ ಅವರು ಬಹಳ ತಾತ್ಸಾರವಾಗಿರುತ್ತಾರಂತೆ.

ನಾಮಕರಣವಾದ ಮೆಂಬರೂ ಪ್ರತಿನಿಧಿಯೇ

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಮೀಟಿಂಗಿನಲ್ಲಿ ಚರ್ಚಿಸಬೇಕಾದ ವಿಷಯಗಳ ಪಟ್ಟಿಯನ್ನೂ ಕಾಗದ ಪತ್ರಗಳನ್ನೂ ಮೀಟಿಂಗು ಕಾಲಕ್ಕೆ ಮುಂಚಿತವಾಗಿ ಮೆಂಬರುಗಳಿಗೆ ಕಳುಹಿಸಿಕೊಡಬೇಕೆಂಬ ವಿಚಾರವಾಗಿ ಪ್ರೆಸಿಡೆಂಟರಿಗೂ ಮ|| ಅಲಿಖಾನರಿಗೂ ನಡೆದ ಪತ್ರವ್ಯವಹಾರದಲ್ಲಿ ನಿಯಮಿತರಾದ ಮ|| ಅಲಿಖಾನರು ಕಂದಾಯದಾರರ ಪ್ರತಿನಿಧಿಯಲ್ಲವೆಂದು ನಿರ್ಧರಿಸಿದ್ದರು. ಅದರಮೇಲೆ ಮ|| ಅಲಿಖಾನರು ಪ್ರಭುತ್ವದವರಿಗೆ ಬರೆದುಕೊಂಡಿರಲಾಗಿ ನಾಮಕರಣವಾದ ಮೆಂಬರು ಚುನಾಯಿತರಾದ ಮೆಂಬರಿನಂತೆಯೇ ಕಂದಾಯದಾರರ ಪ್ರತಿನಿಧಿಯೆಂದು ಉತ್ತರಕೊಟ್ಟಿರುತ್ತಾರೆ. ಅಲ್ಲದೆ ಮೊನ್ನೆ ಪ್ರಜಾಪ್ರತಿನಿಧಿಸಭೆಯಲ್ಲಿ ಇದೇ ವಿಚಾರವು ಚರ್ಚಿತವಾದಾಗ್ಗೆ, ಮ್ಯುನಿಸಿಪಲ್ ಪ್ರೆಸಿಡೆಂಟರು ಅದರಲ್ಲೂ ಉದ್ಯೋಗಿಕ ಪ್ರೆಸಿಡೆಂಟರು ಚುನಾಯಿತರಾದ ಮೆಂಬರಾಗಲಿ ನಾಮಕರಣರಾದ ಮೆಂಬರಾಗಲಿ ಯಾರ ಪ್ರತಿನಿಧಿಯಲ್ಲವೆಂದು ಹೇಳುವುದು ಶುದ್ಧ ತಪ್ಪೆಂದು ಪ್ರಭುತ್ವದವರು ಉತ್ತರವನ್ನು ಕೊಟ್ಟಿರುತ್ತಾರೆ. ಇನ್ನಾದರೂ ಮ|| ಟಿ. ಜಿ. ರಾಮಯ್ಯರ್‌ರವರು ತಮ್ಮ ಹಟವನ್ನೂ ಸರ್ವಜ್ಞತ್ವದ ದುರಭಿಮಾನವನ್ನೂ ಬಿಟ್ಟು ಸಹೋದ್ಯೋಗಿಗಳಾದ ಕೌನ್ಸಿಲರುಗಳೊಡನೆ ಸ್ನೇಹಭಾವದಿಂದ ವರ್ತಿಸುವರೆ ?

ಒಳದೇಶದ ವೃತ್ತಾಂತಗಳು

ದಿವಾನರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್, ಕೆಟಿ., ಸಿ.ಐ.ಇ., ಒ ಬಿ ಇ. ಯವರು ಲಂಡನ್ ನಗರದಲ್ಲಿ ನೆರೆಯುವ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಭಾಗಿಗಳಾಗಲು ನಿಯಮಿಸಲ್ಪಟ್ಟಿರುತ್ತಾರೆ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರುದ್ಯೋಗನ್ನು ಮ|| ಪಿ. ಸುಬ್ರಾಮಶೆಟ್ಟರು ತಮ್ಮ ಸಂಕಲ್ಪದ ಪ್ರಕಾರ ಬಿಟ್ಟುಕೊಟ್ಟುದನ್ನು ಪ್ರಭುತ್ವದವರು ಅಂಗೀಕರಿಸಿ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರು ಪ್ರೆಸಿಡೆಂಟರ ಉದ್ಯೋಗವನ್ನು ತಾತ್ಕಾಲಿಕವಾಗಿ ನೋಡುವಂತೆ ಅಪ್ಪಣೆ ಮಾಡಿರುತ್ತಾರೆ.

ಪಾಶ್ಚಾತ್ಯ ಮತ್ತು ಪೂರ್ವಾತ್ಯ ಸಂಗೀತ ಮತ್ತು ನರ್ತನಗಳಲ್ಲಿ ಪ್ರಖ್ಯಾತರಾದ ಶ್ರೀ ರಜನೀದೇವಿಯವರು ಕೆಲ ದಿವಸಗಳ ಕೆಳಗೆ ತಮ್ಮ ವಿದ್ಯಾನೈಪುಣ್ಯವನ್ನು ಶ್ರೀಮನ್ಮಹಾರಾಜರವರ ಸಮುಖದಲ್ಲಿ ಪ್ರದರ್ಶಿಸಿ ಬಹುಮಾನ ಪಡೆದರು. ಇವರು ಈ ದಿವಸ ಸಾಯಂಕಾಲ ರಾಯಲ್ ಆಪೆರಾ ಸಿನೆಮಾ ಕಟ್ಟಡದಲ್ಲಿ ತಮ್ಮ ಪಾಂಡಿತ್ಯ ಪ್ರದರ್ಶಿಸುವವರಾಗಿರುವರು.

ಇರ್ವಿನ್ ನಾಲಾ ಕೆಳಗಿನ ರೈತರುಗಳು ರಾಜಧಾನಿಯೊಳಗೆ ಮೀಟಿಂಗುಮಾಡುವುದರಿಂದ ಅಧಿಕಾರಿಗಳ ತಿರಸ್ಕಾರಕ್ಕೆ ಕಾರಣಭೂತವಾಗುತ್ತಾದ ಪ್ರಯುಕ್ತ 2 ತಿಂಗಳವರೆಗೆ ಮೀಟಿಂಗನ್ನು ಮಾಡಕೂಡದೆಂದು ಮೈಸೂರು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಆಜ್ಞೆಮಾಡಿರುತ್ತಾರೆ. ಇದೇ ವಿಚಾರವಾಗಿ ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚೆನಡೆಯಲು ಅವಕಾಶ ಕೊಡಲ್ಪಡಲಿಲ್ಲ.

ಕೈ|| ಆರ್. ಪುಟ್ಟಣ್ಣನವರ ಅಳಿಯಂದಿರಾದ ಪುಂಗನೂರು ಸಂಸ್ಥಾನಾಧೀಶ ಕುಮಾರರಾಜರು ತಮ್ಮ 35-36 ನೆಯ ವರ್ಷ ವಯಸ್ಸಿನಲ್ಲಿ ಮತ್ತು ದಾವಣಗೆರೆಯ ಪ್ರಸಿದ್ಧ ವರ್ತಕರಾದ ದೇವೇಂದ್ರಪ್ಪನವರು ತಮ್ಮ 54-55 ನೆಯ ವರ್ಷ ವಯಸ್ಸಿನಲ್ಲಿ ವಿಧಿವಶರಾದರೆಂದು ತಿಳಿಯಲು ಬಹಳ ವ್ಯಸನವಾಗುತ್ತದೆ. ಉಭಯರ ಆತ್ಮಕ್ಕೆ ಶಾಂತಿಯೂ, ಅವರ ಕುಟುಂಬದವರಿಗೆ ದುಃಖಸಮಾಧಾನವೂ ಉಂಟಾಗಲೆಂದು ಕೋರುತ್ತೇವೆ.

ಮದ್ರಾಸ್ ಗೌರ್ನರ್ ದಂಪತಿಗಳು ಕಳೆದ ಗುರುವಾರ ರಾಜಧಾನಿಗೆ ಬಂದು ಗೌರ್ನಮೆಂಟ್ ಹೌಸಿನಲ್ಲಿ ಪ್ರಭುತ್ವಾತಿಥಿಗಳಾಗಿರುವರು. ಇವರು ಅರಮನೆಯ ಅಶ್ವಶಾಲೆ, ಪ್ರಾಣಿ ಪ್ರದರ್ಶನಾಲಯ, ಚಾಮುಂಡಿಬೆಟ್ಟ, ಜಗನ್ಮೋಹನಪ್ರಾಸಾದ ಚಾಮರಾಜೇಂದ್ರ ಕೈಗಾರಿಕೆಯ ಪಾಠಶಾಲೆ, ಗಂಧದೆಣ್ಣೆಯ ಕಾರ್ಖಾಲಯ ಶ್ರೀರಂಗಪಟ್ಟಣ, ಕೃಷ್ಣರಾಜಸಾಗರ ಇವುಗಳನ್ನು ನೋಡಿಕೊಂಡು ಬಂದು ತಾ|| 15 ರ ಸಾಯಂತರ ಉದಕಮಂಡಲಕ್ಕೆ ಹಿಂದಿರುಗುವವರಾಗಿರುತ್ತಾರೆ.

ಸರ್ ಎಂ. ಕಾಂತರಾಜ ಅರಸಿನವರ ಸ್ವೀಕೃತಪುತ್ರ ಮ|| ನರಸರಾಜ ಅರಸಿನವರಿಗೆ ಮ|| ಎಚ್. ಡಿ. ಸುಬ್ಬರಾಜ ಅರಸಿನವರ ಸೋದರಸೊಸೆ ಚಿ|| ಸೌ|| ಸುಂದರ ಅಮ್ಮಣ್ಣಿಯವರನ್ನು ತಂದು ನೆನ್ನೆಯ ದಿವಸ ಬೆಳಿಗ್ಗೆ ಶ್ರೀ ಜಯಲಕ್ಷ್ಮಿ ವಿಲಾಸಪ್ರಾಸಾದದಲ್ಲಿ ವಿವಾಹಮಹೋತ್ಸವವು ಬಹಳ ವೈಭವದಿಂದ ನಡೆಯಿತು. ದಿವಾನರೇ ಆದಿಯಾಗಿ ಸರ್ಕಾರಿಯಧಿಕಾರಿಗಳೂ, ರಾಜಬಂಧುಗಳೂ ಪುರಪ್ರಮುಖರೂ ಆಹ್ವಾನಿಸಲ್ಪಟ್ಟಿದ್ದು ಗಂಧಪುಷ್ಪ ತಾಂಬೂಲ ವಿನಿಯೋಗದಿಂದ ಸತ್ಕರಿಸಲ್ಪಟ್ಟರು. ಈ ನೂತನ ದಂಪತಿಗಳಿಗೆ ಸಕಲ ಸನ್ಮಂಗಳವಾಗಲೆಂದು ಹರಸುತ್ತೇವೆ.

ಇದೇ ತಾ|| 16 ರಲ್ಲಿ ಮೈಸೂರು ಸೀಮೆಯ ಮುಸಲ್ಮಾನರ ಮಹಾಸಭೆಯ 3 ನೆಯ ಅಧಿವೇಶನವು ಖಾನ್ ಬಹದ್ದೂರ್ ಮುಹಮ್ಮದ್ ಅಬ್ಬಾಸ್ ಖಾನರವರ ಅಧ್ಯಕ್ಷತೆಯಲ್ಲೂ, ತಾ|| 17 ರಲ್ಲಿ ಮತಸಂಬಂಧವಾದ ಸಭೆಯು ಲಾಹೋರು ಹೈಕೋರ್ಟು ಅಡ್ವೊಕೇಟ್ ಮಿ|| ಮೌಲಾನಾ ಸಯದ್ ಗುಲಾಂ ಭೀಕ್ ನೈರಂಗ್, ಬಿ.ಎ., ಯವರ ಅಧ್ಯಕ್ಷತೆಯಲ್ಲೂ, ತಾ|| 18 ರಲ್ಲಿ ವಿದ್ಯಾವಿಷಯಕವಾದ ಸಭೆಯು ಮದ್ರಾಸಿನ ಮೌಲಾನಾ ಯಾಕೂಬು ಹುಸೇನ್, ಎಂ. ಎಲ್. ಸಿ, ಯವರ ಅಧ್ಯಕ್ಷತೆಯಲ್ಲೂ ರಾಜಧಾನಿಯ ವಸ್ತುಪ್ರದರ್ಶನಾಲಯದಲ್ಲಿ ನಡೆಯುವುವು.

ಧರ್ಮಪ್ರಕಾಶ ಡಿ. ಬನುಮಯ್ಯನವರಿಗೆ ರಾವ್ ಬಹದ್ದೂರ್ ಪ್ರಶಸ್ತಿಯೂ, ಮ್ಯುನಿಸಿಪಲ್ ಕೌನ್ಸಿಲ್ ವೈಸ್ ಪ್ರೆಸಿಡೆಂಟರಾದ ಮ|| ಎಂ. ರಾಮಸ್ವಾಮಿಯವರಿಗೆ ರಾವ್ ಸಾಹೇಬ್ ಪ್ರಶಸ್ತಿಯೂ ಲಭ್ಯವಾದುದರಿಂದ ತಮಗುಂಟಾದ ಸಂತೋಷವನ್ನು ಪ್ರದರ್ಶಿಸಿ ಉಭಯರಿಗೂ ತಕ್ಕ ಮರ್ಯಾದೆಯನ್ನು ಮಾಡಲು ರಾಜಧಾನಿಯ ನಿವಾಸಿಗಳು ತಕ್ಕೇರ್ಪಾಟನ್ನು ಮಾಡುತ್ತಿರುವುದಾಗಿ ಕೇಳುತ್ತೇವೆ. ಮೇಲ್ಕಂಡ ಈ ಉಭಯ ಬಹುಮಾನಿತ ದೊಡ್ಡ ಮನುಷ್ಯರುಗಳನ್ನು ಪ್ರಜಾಪ್ರತಿನಿಧಿಸಭೆಯ ಮೆಂಬರುಗಳು ನೆನ್ನೆಯ ದಿವಸ ಸಾಯಂಕಾಲ ಟೌನ್ ಹಾಲಿಗೆ ಬರಮಾಡಿಕೊಂಡು ಅವರ ಗುಣಕಥನವನ್ನು ಮಾಡಿ ತಮ್ಮ ಸಂತೋಷವನ್ನು ಪ್ರದರ್ಶಿಸಿ ಅಭಿನಂದಿಸಿದರು.

ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡ್

ನೋಟೀಸು.

ಚಿತ್ರದುರ್ಗದ ತಾಲ್ಲೂಕಿನಲ್ಲಿ ಈ ಕೆಳಗೆ ನಮೂದು ಮಾಡಿರುವ ಕಾಂಗಾರಿಗಳನ್ನು ನಡೆಸತಕ್ಕ ಬಗ್ಗೆ ಬೇರೆ ಬೇರೆ ಸೀಲ್ಡು ಟೆಂಡರುಗಳು ತಾ|| 2-7-1932 ನೇ ಮಧ್ಯಾಹ್ನ 3 ಘಂಟೆ ವರುವಿಗೆ ತೆಗೆದುಕೊಳ್ಳಲಾಗುತ್ತೆ. ಪ್ಲಾನ್ ವಗೈರೆ ತಪಸೀಲುಗಳನ್ನು ಕೆಲಸ ನಡೆಯುತ್ತಿರುವ ಕಾಲಗಳಲ್ಲಿ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

			ರೂ.
1.	ಸಾದರಹಳ್ಳಿ ಭಾವಿಮಾಡಿಸುವುದು, ಡಿಪಾಜಿಟ್		100
2.	ಚಿಪ್ಪಿನಕೆರೆ	.... ,,	100
3.	ಚಿಕ್ಕ ಗುಂಟನೂರು	.... ,,	100
4.	ಗೊಡಬನಹಾಳು	.... ,,	100

ಕಾಂಗಾರಿಗಳನ್ನು 1932 ನೇ ಡಿಸೆಂಬರ್ ಆಖೈರೊಳಗೆ ಪೂರೈಸಬೇಕು.

ಜಿ. ಚೆನ್ನಪ್ಪ,
ಪ್ರೆಸಿಡೆಂಟ್.

[2—1]

ಆಸ್ಥಾನವಿದ್ವಾನ್ ಶ್ರೀಮಾನ್ ವೇದಮೂರ್ತಿ ಬಿ. ಎಂ. ತ್ರ್ಯಂಬಕ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯವಿಮರ್ಶೆಯೂ.

(ಲೇಖಕ—ವೇ|| ಎಚ್. ಗೋಪಾಲಕೃಷ್ಣಮಾಚಾರ್ಯ, ಕರ್ಣಾಟಕ ಪಂಡಿತರು, ಟ್ರೇನಿಂಗ್ ಕಾಲೇಜು, ಮೈಸೂರು.)

ದಿಗ್ದರ್ಶನಂ.

(ಜೂನ್ ತಾ|| 6 ರ ಸಂಚಿಕೆಯಿಂದ ಮುಂದುವರಿದುದು.)

ಆಚಾರ್ಯ ಏವಸಂಸಾರಮೋಚಕಸ್ಸದ ಉಚ್ಯತೆ| ಆಚಾರ್ಯೇಣಾನು ವೇದಾಂತವಿಚಾರೇಣಾತ್ಮವೇದನಃ || ಏವಮಾತ್ಮಾನಮದ್ವಂದ್ವಂ ನಿರ್ವಿಕಲ್ಪಂ ನಿರಂಜನಂ | ನಿತ್ಯಂಶುದ್ಧಂ ನಿರಾಭಾಸಂ ಚಿನ್ಮಾತ್ರಂಚ ಪರಾಮೃತಂ || ಯೋವಿಜಾನಾತಿವೇದಾಂತೈಸ್ಸಾಕ್ಷಾದನುಭವಾತ್ಮಚನಿಶ್ಚಿತಂ | ಸೋತಿವರ್ಣಾಶ್ರ ಮಿನಾನ್ಯಸ್ಯ ಏವಗುರುಸತ್ತಮಃ || ಆತ್ಮನ್ಯಾರೋಪಿತಾಯೇನ ಭ್ರಾಂತ್ಯಾ ಕೇನಾತ್ಮವೇದಿನಃ | ನವಿಧಿರ್ನನಿಷೇಧಶ್ಚ ನವರ್ಜ್ಯಾವರ್ಜ್ಯಕಲ್ಪನಾ | ಆತ್ಮವಿಜ್ಞಾನಿನಾಮಸ್ತಿ ಕಥಂನಾನ್ಯಜನಾರ್ದನ || ಯೋವಿದ್ಯಾಸಂತತಿಜ್ಞಾನವಿಹೀನೋದೇಶಿಕೋಭವೇತ್ | ಸಘೋರಂಯಾತಿನರಕಂನಾಸ್ತಿ ಸಂದೇಹಕಾರಣಂ || ಯೋವಿದ್ಯಾಸಂತತಿಜ್ಞಾನವಿಹೀನೋದೇಶಿಕೋಭವೇತ್ ಸನಭೋಕ್ತ್ಯೇನ್ಯೈವ ಕ್ಷುದ್ವ್ಯಾಧಿಂವಿನಿವರ್ತಯೇತ್ ||

ಯಾವನು ಬ್ರಹ್ಮವಿದ್ಯಾಸಂತತಿಜ್ಞಾನವಿಹೀನನಾಗಿ ಗುರುವಾಗುತ್ತಾನೋ ಅವನು ಭಯಂಕರವಾದ ನರಕವನ್ನು ಹೊಂದುತ್ತಾನೆ. ಈ ವಿಷಯದಲ್ಲಿ ಸಂದೇಹವಿಲ್ಲ. ಯಾವನು ಬ್ರಹ್ಮವಿದ್ಯಾಪರಂಪರಾಜ್ಞಾನಸಹಿತನಾಗಿ ಆಚಾರ್ಯನಾಗುತ್ತಾನೋ ಆತನು ಆಕಾಶವನ್ನು ಭಕ್ಷಿಸುವುದರಿಂದಲೇ ಹಸಿವನ್ನು ಹೋಗಲಾಡಿಸುವನು.

ಗುಶಬ್ದಸ್ತ್ವಂಧಕಾರಸ್ಸ್ಯಾತ್ ರುಶಬ್ದಸ್ತನ್ನಿರೋಧಕಃ | ಅಂಧಕಾರನಿವರ್ತಿತ್ವಾತ್ ಗುರುರಿತ್ಯಭಿಧೀಯತೆ || ಸಿದ್ಧಂಸತ್ಸಂಪ್ರದಾಯೇಸ್ಥಿರಧಿಯ ಮನಘಂಶ್ರೋತ್ರಿಯಂ ಬ್ರಹ್ಮನಿಷ್ಠಂ | ಸತ್ವಸ್ಥಂಸತ್ಯವಾಚಂಸಮಯನಿಯತಯಾಸಾಧುವೃತ್ತ್ಯಾಸಮೇತಂ | ದಂಭಾಸೂಯಾದಿಮುಕ್ತಂಜಿತವಿಷಯಗಣಂದೀರ್ಘಬಂಧುಂದಯಾಳುಂ | ಸ್ಖಾಲಿತ್ಯೇಶಾಸಿತಾರಂಸ್ವಪರಹಿತಪರಂ ದೇಶಿಕಂಭೂಷ್ಣುರೀಪ್ಸೇತ್ || ಇತ್ಯಾದಿ.

"ವಂಶಕ್ರಮಾಗಂತುಕಶ್ಚೇತಿಗುರುದ್ವಿವಿಧ ಉಚ್ಯತೆ" ವಂಶನೆಂದೂ ಆಗಂತುಕನೆಂದೂ ಗುರುವು ಎರಡು ವಿಧವಾಗಿರುತ್ತಾನೆ. ಗುರೂಪದೇಶದಿಂದ ಭಗಹೀನ ಭವಹೀನಗಳ ಪರಿಕ್ಷೆಯನ್ನು ಹೊಂದಿ ಪ್ರತ್ಯಕ್ ಬ್ರಹ್ಮೈಕ್ಯಜ್ಞಾನಪೂರ್ಣನಾದರೆ ಮಾತ್ರ ಆಗಂತುಕನು ಗುರುವಾಗಲರ್ಹನು (ವಿದ್ಯೋತ್ಕರ್ಷ ಬಲೇನೈವಗುರುರ್ಭವತಿನಾನ್ಯಥಾ || ಇತ್ಯಾದಿ).

ಬೀಜ್ಯನಾದರೋ ಅನೂಚಾನವಾಗಿ ಶಿವಪ್ರಸಾದ (ಜ್ಞಾನಕರ್ಮಸಮುಚ್ಚಯ) ಪೂರ್ಣವನಾದುದರಿಂದ ಪರಂಪರಾಗತನು (ಆಗಂತುಕನು ಕಟ್ಟಿಐದ ಗುಂಡಿನಂತಿದ್ದಾನೆ. ವಂಶನು ಪುಟಚೆಂಡಿನಂತಿದ್ದಾನೆ).

ಯಥಾಹಂಸರ್ವಲೋಕಾನಾಂಗುರುರಂಬಿಕೆಯಾಸಹ | ತಥೈವನಮು ಭಕ್ತೋಪೀತ್ಯಾದಿ ||

ಶಾಸ್ತ್ರದಲ್ಲಿ ಶಾಬ್ದಿಕವಾಗಿರುವ ಸಕಲಾರ್ಥವೂ ಸರ್ವಜ್ಞತ್ವಕ್ಕೆ ಕಾರಣವಾದ ಶಿವತ್ವದಿಂದ ಸ್ವೀಕೃತವಾಗುತ್ತದೆಂದು ಸಂಸ್ಕೃತದಿಗ್ದರ್ಶನಕಾವ್ಯದ ಚತುರ್ಥದರ್ಶನದಲ್ಲಿ ಹೇಳಲ್ಪಟ್ಟಿದೆ—

ಉದಾ—ವೇದಾಂತಪ್ರಗುಣಾರ್ಥನಿರ್ಣಯ ಮಹಾವೈದಗ್ಧ್ಯವಿಭ್ರಾಜಿತಂ | ಧರ್ಮಾಧರ್ಮ ವಿಚಾರಚಾರುಚತುರವ್ಯಾಹಾರಸಾರಾದ್ಭುತಂ || ಸೇವ್ಯಾಸೇವ್ಯವಿಭೇದಸಾಧನಸಮಾಚೀನಾದ್ಯವಿದ್ಯೋತಕಂ | ಸಾರ್ವಜ್ಞ್ಯಂಪರಿದೃಶ್ಯ ತೇಹಿಶಿವತಾದಾತ್ಮ್ಯಪ್ರಸನ್ನಾತ್ಮನೀತ್ಯಾದಿ ||

ಈವರೆಗೂ ನಾವು ದಿಗ್ದರ್ಶನಕಾವ್ಯವಿಮರ್ಶೆಗೆ ಪ್ರಾರಂಭಿಸಿದಂದಿನಿಂದ ಸಮಯದೊರೆತಹಾಗೆ ವಿಷಯಗಳನ್ನು ವಿಸ್ತಾರವಾಗಿಯೂ ಸಂಕ್ಷೇಪವಾಗಿಯೂ ಬರೆಯುತ್ತಾ ಬಂದಿದ್ದೇವೆ. ಈ ಸಂದರ್ಭದಲ್ಲಿ ಕೆಲವರು ಮಹೋದಯರು ನಮ್ಮನ್ನು ಸಂಧಿಸಿ ಪತ್ರಿಕೆಗಳಲ್ಲಿ ಈರೀತಿ ವಿಸ್ತರಿಸುವುದು ಏಹಿತವೇ ಎಂದು ಪ್ರಶ್ನಿಸಿದುದರಿಂದ ಅದನ್ನು ನಾವು ಅಂಗೀಕರಿಸಿ ಪ್ರಕೃತೋಚಿತವಾಗಿ ಬರೆಯುವುದು ಉಚಿತವೆಂದು ಕಂಡುಬಂದಿದೆ. ಈ ಕ್ರಮವೇ ಮುಂದೆ ಅನುಸರಿಸಲಾಗುವುದು.

ಇದು ಪ್ರಥಮದರ್ಶನವು.

ದ್ವಿತೀಯದರ್ಶನಂ.

ಕಂದ|| ಧೀರಂಭೂಭೃತ್ಕುಲಗಂ |
ಭೀರಂಸದ್ಧರ್ಮವಿಬುಧಜನಮಂದಾರಂ ||
ಶೂರಂ ವಿಶ್ರುತನೀತ್ಯಾ |
ಧಾರಂವರಚಾಮರಾಜನೆನಿಗರಸಾದಂ ||೧೧||

ಧೈರ್ಯಶಾಲಿಯೂ ರಾಜರ ಗುಂಪಿನಲ್ಲಿ ಉತ್ತಮನಾದ ಗಾಂಭೀರ್ಯವುಳ್ಳವನೂ ಉತ್ತಮವಾದ ಧರ್ಮಾಚರಣೆಯುಳ್ಳವನೂ ವಿದ್ವಾಂಸರಿಗೆ ಕಲ್ಪವೃಕ್ಷದಂತಿರತಕ್ಕವನೂ ಶೂರನೂ ಸುಪ್ರಸಿದ್ಧವಾದ ಅನೇಕ ನೀತಿ ಶಾಸ್ತ್ರಗಳಿಗೆ ಆಧಾರಭೂತನೂ ಆದ ಶ್ರೇಷ್ಠನಾದ ಶ್ರೀ ಚಾಮರಾಜ ಪ್ರಭುವು ಶೋಭಿಸಿದನು.

"ಸುಖೇಷುದುಃಖೇಷು ಅಚಲಿತಚಿತ್ತತ್ವಂಧೈರ್ಯಂ" ಸುಖಕಾಲಗಳಲ್ಲೂ ದುಃಖಕಾಲಗಳಲ್ಲೂ ಚಲಿಸದ ಚಿತ್ತವೃತ್ತಿಯು ಧೈರ್ಯವು.

ಕಂದ|| ಆತಂಗವಿಲಾಸವಿ |
ಖ್ಯಾತಂಗಂ ರಾಜ್ಯಲಕ್ಷ್ಮಿಯೆನಿಸತ್ಕುಲಸಂ ||
ಜಾತೆಯುವಿನೀತಭಾಗ್ಯೆ |
ಪೇತೆಯುಮಚ್ಚರಸಿ ಕೆಂಪನಂಜಾಂಬಿಕೆಯಿಂ||೧೨||

ಭೂಲೋಕದಲ್ಲಿ ಪ್ರಸಿದ್ಧನಾಗಿರುವ ಆತನಿಗೆ ರಾಜ್ಯಲಕ್ಷ್ಮಿಯಂತೆ, ಉತ್ತಮಕುಲದಲ್ಲಿ ಹುಟ್ಟಿದ ಹೊಗಳುವುದಕ್ಕೆ ಅರ್ಹಳಾದ ಭಾಗ್ಯಶಾಲಿನಿಯಾದ ಕೆಂಪನಂಜಾಂಬಿಕೆಯೆಂಬಾಕೆಯು ಪಟ್ಟದರಸಿಯಾದಳು.

ಶ್ರೀಚಾಮರಾಜಪ್ರಭುವು ರಾಜ್ಯಲಕ್ಷ್ಮಿಯಿಂದಲೂ ಶ್ರೀಕೆಂಪನಂಜಾಂಬಿಕೆಯಿಂದಲೂ ಯುಕ್ತನಾಗಿದ್ದನು; ಎಂದರೆ, ಭೂಪತಿಯೂ ಕೆಂಪನಂಜಾಂಬಿಕಾ ಪತಿಯೂ ಆಗಿದ್ದನು.

ಗದ್ಯ—ಸರುವಾಯದಿಂ ರಾಜರಾಣಿಯುನಿರ್ವರುಂ. ಆಣಿಯರಂ ಸೊಬಗಿಂದನುಂಕಾದಲ್ಕೆಯಿಂದಮುಂ ಸೊಗಂಬಡೆದೆರಕದಿಂದೊಂದುಳಿಯೊಳ್ ಒಂದಿರಲ್ ಪರಿವಡೆನಸಬ್ಬಾಣಿಯರಸನಹಸಾದದಿಂ||

ಅದಾದಮೇಲೆ ರಾಜರಾಣಿಯರು ಇಬ್ಬರೂ ಹೆಚ್ಚಾದ ಸೌಭಾಗ್ಯದಿಂದಲೂ ಪ್ರೀತಿಯಿಂದಲೂ ಸುಖವನ್ನು ಹೊಂದಿ (ಪ್ರೀತಿಯಿಂದ) ಸಂತೋಷದಿಂದ ಸೇರಿರಲು ಪ್ರಖ್ಯಾತವಾದ ಶ್ರೀ ಪರಮೇಶ್ವರನ ಪ್ರಸಾದದಿಂದ ...

ಕಂದ|| ನಲಿಯಲ್ ಸುಜನರ್ ಸ್ವಜನರ್ |
ಕೆಲೆಯಲ್ ಪ್ರಜೆಯೊಲ್ದು ಹಿಗ್ಗಿ ಹರಸಲ್ತರದಿಂ ||
ವಿಲಸದ್ರಾಜ್ಞೀಮಣಿಯುಂ |
ಗಲಕರಮೆನಿಸಿರ್ದಗರ್ಭಮಂತಾಳ್ದಿಸೆದಳ್ ||೧೩||

ಒಳ್ಳೆಯ ಜನರು ಸಂತೋಷದಿಂದ ಕುಣಿಯಲು, ಬಂಧುಗಳು ಸಂತೋಷದಿಂದ ಧ್ವನಿಮಾಡಲು, (ಹೆಚ್ಚಾಗಿ ಸಂತೋಷದಿಂದಿರಲು) ಜನಗಳ ಸಮುದಾಯವು ಪ್ರೀತಿಸಿ ಸಂತೋಷದಿಂದುಬ್ಬಿ ರಾಣಿಗೆ ಶ್ರೇಯಸ್ಸನ್ನು ಕ್ರಮವಾದ ರೀತಿಯಲ್ಲಿ ಕೋರಲು, ಹೆಚ್ಚಾದ ಕಾಂತಿಯಿಂದ ಕೂಡಿದ ರಾಣೀಮಣಿಯು ಶುಭಕರವೆನಿಸಿದ ಗರ್ಭವನ್ನು ಧರಿಸಿ (ಗರ್ಭಿಣಿಯಾಗಿ) ಇನ್ನೂ ಚೆನ್ನಾಗಿ ಪ್ರಕಾಶಿಸುತ್ತಿದ್ದಳು.

ಗದ್ಯ—ಬಳಿಕ್ಕಂಕಾಲಕ್ರಮದಿಂ ಪ್ರಸವಸಮಯಮ್ ಸಂಪ್ರಾಪ್ತಮಾಗಲ್ ಪೂರ್ವೋಕ್ತ ನಾಡೊಡೆಯಂ, ಸಂದವಣಿಯುಂಮುಂತಣಂಗೊಡೆದೆರ್ ಮೊದಲ್ ಮುಯ್ಯಾದರ್ಶಣಂಗಳೊಳ್,

ಅನಾದಿಬೋಧಶಕ್ತಿಯುಂ, ನಿತ್ಯತೃಪ್ತಶಕ್ತಿಯುಂ, ಸರ್ವಜ್ಞಶಕ್ತಿಯುಂ, ಅಲುಪ್ತಶಕ್ತಿಯುಂ, ಸ್ವತಂತ್ರಶಕ್ತಿಯುಂ, ಅನಂತಶಕ್ತಿಯು ಮಾಗಿ ಷಟ್‌ಶಕ್ತಿ ಸ್ವರೂಪಿಣಿಯುಂ,

ಬಳಿಕೆಯಂತರಿಂದ್ರಿಯದೊಳ್ ಇಚ್ಛಾಶಕ್ತಿಯುಂ, ಜ್ಞಾನೇಂದ್ರಿಯದೊಳ್ ಜ್ಞಾನಶಕ್ತಿಯುಂ, ಕರ್ಮೇಂದ್ರಿಯದೊಳ್ ಕ್ರಿಯಾಶಕ್ತಿಯುಂ, ತದಿಚ್ಛಾಜ್ಞಾನ ಕ್ರಿಯಾಖ್ಯಶಕ್ತಿತ್ರಯ ಸ್ವರೂಪಿಣಿಯು ಮಾಗಿರ್ದೊಡಂ ಸ್ವಾನುಭೂತ್ಯೇಕಮಾನಿಯುಂ,

ನಿಜಾಜ್ಞೋಲ್ಲಂಘನೆಯೊಳ್ ಮಹಾಘೋರಪ್ರಲಯೋನ್ಮುಖಿಯುಂ ಮಿಳ್ತಂತೊಳ್ತುಗೆಯ್ದು, ಅದರಸುಗರುಂ, ಪುಗಲ್ಗೆಯ್ದರುಮಾಗಿ, ಪಳಂಚಿದ ಮೊಬ್ಬಿಗರ ಮೊಗ್ಗರಮುಂಬರೆಸೆಳೆದು ಅಂಡಲೆದಸುಂಗೊಂಡು ಬರಿಕೆಯ್ದ ಜಗನ್ನಾಯಿಕೆಯುಂ ತ್ರಿನಯನೆಯುಮಪ್ಪ, ಶ್ರೀಮಚ್ಚಾಮುಂಡಾಂಬಿಕೆಯ ನಲ್ಮೆಯಿಂದಮುಂ, ಗುಣ್ಪಿನಹರ್ಷದಿಂದಮುಂ, ತನ್ನೆಯಮೆಲ್ಲೆದೇಯೊಳ್ ಚಾನಿಸಿ, ಬಲನಂದುಕುಂಬಿಟ್ಟು,

ತತ್‌ಪ್ರಸೂತಿಕರ್ಮ ನಿರ್ಧಾರ್ಯ ಚತುರರಪ್ಪ ಅಚ್ಚುಕಾಯ್ತರಂ ನಿಯಮಿಸಿಯಸವಸದಿಂ, ಬಿಸವಂದಂಬೊಂದಿಯಾತ್ತವಿತ ಪರಿವಾರದೊಡನೊಂದಿಡೆಯೊಳ್,

ಅದಾದಮೇಲೆ ಕಾಲಕ್ರಮದಿಂದ ಹೆರುಗೆಯ ಕಾಲವು ಬರಲು ಸಂತೋಷಪಟ್ಟಿದ್ದ ಆ ಭೂಮಿಪತಿಯು ಸಂಧಾನಕ್ರಮದಲ್ಲಿ ಆಲೋಚಿಸಿ ಎದೆಯೇ ಮೊದಲಾದ ಆರು ಸ್ಥಳಗಳಲ್ಲಿ,

ಅನಾದಿಬೋಧಶಕ್ತಿಯೂ, ನಿತ್ಯತೃಪ್ತಶಕ್ತಿಯೂ, ಸರ್ವಜ್ಞಶಕ್ತಿಯೂ, ಅಲುಪ್ತಶಕ್ತಿಯೂ, ಸ್ವತಂತ್ರಶಕ್ತಿಯೂ, ಅನಂತಶಕ್ತಿಯೂ ಆಗಿ ಷಟ್‌ಶಕ್ತಿ ಸ್ವರೂಪಿಣಿಯೂ,

ಬಳಿಕ ಅಂತರಿಂದ್ರಿಯದಲ್ಲಿ ಇಚ್ಛಾಶಕ್ತಿಯೂ, ಜ್ಞಾನೇಂದ್ರಿಯದಲ್ಲಿ ಜ್ಞಾನಶಕ್ತಿಯೂ, ಕರ್ಮೇಂದ್ರಿಯದಲ್ಲಿ ಕ್ರಿಯಾಶಕ್ತಿಯೂ, ತದಿಚ್ಛಾಜ್ಞಾನ ಕ್ರಿಯಾಖ್ಯಶಕ್ತಿತ್ರಯಸ್ವರೂಪಿಣಿಯಾಗಿದ್ದರೂ ಸ್ವಾನುಭವಕ್ಕೆ ಒಬ್ಬಳೇ ಆದವಳೂ,

ತನ್ನ ಅಪ್ಪಣೆಯನ್ನು ಮೀರಿದ ಸಂದರ್ಭದಲ್ಲಿ ಮಹಾಘೋರಪ್ರಲಯೋನ್ಮುಖಿಯೂ ಮೃತ್ಯುದೇವತೆಯನ್ನು ಆಳನ್ನಾಗಿ ಮಾಡಿಕೊಂಡು, ಅದರಿಂದ ಹುಟ್ಟಿದವರೂ (ಅಸುರರೂ) ಗರ್ವಿಷ್ಠರೂ ಆಗಿ, ಮೇಲೆ ಬಿದ್ದ ತಾಮಸರಾದ ಅಸುರರ ಗುಂಪನ್ನು ಹತ್ತಿರಕ್ಕೆ ಎಳೆದುಕೊಂಡು ಹಿಂಸೆಪಡಿಸಿ ಪ್ರಾಣಾಪಹರಣಮಾಡಿ ನಾಶಮಾಡಿದ ಜಗನ್ಮಾತೆಯೂ ಮುಕ್ಕಣ್ಣಿಯೂ ಆದ,

ಶ್ರೀ ಚಾಮುಂಡಾಂಬಿಕೆಯನ್ನು ಪ್ರೀತಿಯಿಂದಲೂ, ಗಾಂಭೀರ್ಯಾತಿಶಯದಿಂದಲೂ,

ತನ್ನ ಕೋಮಲವಾದ ಹೃದಯದಲ್ಲಿ ಧ್ಯಾನಮಾಡಿ, ಪ್ರದಕ್ಷಿಣೆಮಾಡಿ ನಮಸ್ಕರಿಸಿ, ಆ ಹೆರಿಗೆಯ ಕೆಲಸದಲ್ಲಿ ನಿಪುಣರಾದ ಪರಿವಾರದವರನ್ನು ಗೊತ್ತುಮಾಡಿ ಕುತೂಹಲಿ (ಜಾಗ್ರತೆ) ಯಾಗಿ ಆತ್ಮರವನ್ನು ಹೊಂದಿ ಇಷ್ಟರಾದ ಕೆಲವು ಜನ ಪರಿವಾರದವರೊಡನೆ. ಸಶೇಷ.

ಕುಂಚಿಟಿಗರ ಹಾಸ್ಟಲ್, ಮಧುಗಿರಿ.

ಮೇಲ್ಕಂಡ ಹಾಸ್ಟಲನ್ನು ಈ ವರ್ಷ ನೂತನವಾಗಿ ತಾ|| 1-7-1932ರ ಲಾಗಾಯತು ನಮ್ಮ ಜನಗಳಿಗೆ ಮಧ್ಯಸ್ಥಾನವಾಗಿಯೂ ಹೈಸ್ಕೂಲ್ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿಯೂ ಇರುವ ಮಧುಗಿರಿ ಟವನ್ನಿನಲ್ಲಿ ಏರ್ಪಡಿಸಲು ನಿಶ್ಚಯಿಸಿರುತ್ತೆ. ಇಲ್ಲಿ ಸೇರತಕ್ಕ ಹುಡುಗರುಗಳಿಗೆ ಆಗತಕ್ಕ ಖರ್ಚನ್ನು ದಿಮಾಪಾ ಪ್ರಕಾರ ಹಂಚಲಾಗುತ್ತೆ. ಹುಡುಗರ ಮೇಲ್ವಿಚಾರಣೆ ವಿದ್ಯಾಭ್ಯಾಸಂಗ ಸೌಕರ್ಯ, ಆರೋಗ್ಯ ವಿಚಾರ ಇವುಗಳಿಗೆಲ್ಲಾ ಮುಖ್ಯತಾಗಿ ತಕ್ಕ ಏರ್ಪಾಡು ಮಾಡಲಾಗುತ್ತೆ. ಇಷ್ಟವುಳ್ಳವರು ಇದೇ ಮಾಹೆ ತಾ|| 25 ರ ಒಳಗಾಗಿ ಮ|| ಕೆ. ಹೆಂಜೇರಪ್ಪ ಬಿ.ಎ., ಬಿ ಎಲ್., ಅಡ್ವೋಕೇಟ್ ಮಧುಗಿರಿ ಇವರಿಗೆ ಅಪ್ಲಿಕೇಷನ್ ಬರೆದುಕೊಳ್ಳತಕ್ಕದ್ದು. ಇನ್ನು ಹೆಚ್ಚಿಗೆ ವಿಚಾರವನ್ನು ತಿಳಿಯಬೇಕೆನ್ನುವವರು ಸದರಿಯವರೊಂದಿಗೆ ಪತ್ರವ್ಯವಹಾರ ನಡೆಸತಕ್ಕದ್ದು.

ಡಿ. ಬಸಮಯ್ಯ, ಪ್ರೆಸಿಡೆಂಟ್,
ಕುಂಚಿಟಿಗರ ಸಂಘ, ಮೈಸೂರು.

ಸ್ವೀಕಾರ

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

ಮ|| ಗಳಾದ

(1) ಬೆಂಗಳೂರು ಸಿಟಿ ಬಳ್ಳಾಪುರಪೇಟೆಯಲ್ಲಿರುವ ಕಂಟ್ರಾಕ್ಟರ್ ಎಂ. ನಾಗಪ್ಪನವರ ಜ್ಯೇಷ್ಠಪುತ್ರ ಮಲ್ಲಪ್ಪನವರ ದ್ವಿತೀಯಪುತ್ರಿ ಚಿ|| ಸೌ|| ನಾಗಮ್ಮನಿಗೂ, ಬೆಂಗಳೂರು ದಂಡು ಹಲಸೂರಿನಲ್ಲಿರುವ ಯಜಮಾನ್ ಯು. ಎಸ್. ಕಾಳಪ್ಪನವರ ಪುತ್ರ ಚಿ|| ಷಣ್ಮುಖಪ್ಪನವರಿಗೂ ನಡೆದ ವಿವಾಹಮಹೋತ್ಸವದಲ್ಲಿ ಹಾಸನದ ಸಬ್‌ಡಿವಿಜನ್ ಆಫೀಸರು ಜ. ಮಲ್ಲಿಕಾರ್ಜುನಯ್ಯನವರ ಮೂಲಕ 2 ರೂ. (2) ತಿಪಟೂರು ಸಾವು ಬಸಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ಡಿ. ಎಸ್. ಮಲ್ಲಪ್ಪನವರ ಮೂಲಕ ರೂ. 1-2-0.

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖಕಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು—ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ನಿಷ್ಪಕ್ಷಪಾತವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟವಾಗಿಯೂ, ಇರಬೇಕೆಂದೂ ಬುಧವಾರ ಗುರುವಾರದೊಳಗೆ ನಮ್ಮ ಕೈಸೇರುವಂತೆ ಕಳುಹಲ್ಪಡಬೇಕೆಂದು, ಈ ನಿಬಂಧನೆಗೆ ವಿರುದ್ಧವಾದ ಲೇಖಗಳು ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದ್ದಾಗ್ಯೂ ಲೇಖಕರು ಲಕ್ಷಿಸದೆ ಲಂಬಿತವಾಗಿ ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ ಪುಟಗಟ್ಟಲೆ ಅಸ್ಫುಟವಾಗಿ ಬರೆದು ನಮಗೆ ತ್ರಾಸನ್ನು ಕೊಡುತ್ತಿರುವರೆಂದು ಬರೆಯಲು ಖೇದವಾಗುತ್ತದೆ. ಆದುಕಾರಣ ಇತಃಪರ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಮಸ್ತರೂ ಗಮನಿಸತಕ್ಕದು—ಸಂ.

ಕಂಪಲಿ ಸಾಂಗತ್ರಯೀ ಪಾಠಶಾಲಾ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ.

ಶ್ರೀ ಷ|| ಬ್ರಹ್ಮಿಗಳಾದ ಗುರುಸಿದ್ಧ ಮರಿದೇವರಿಂದ ಸ್ಥಾಪಿಸಲ್ಪಟ್ಟ ಕಂಪಲಿ ಸಾಂಗತ್ರಯೀ ಪಾಠಶಾಲೆಯು 16 ವರ್ಷಗಳಿಂದಲೂ ಅವ್ಯಾಹತವಾಗಿ ನಡೆಯುತ್ತಾ ಬಂದು ಮಧ್ಯದಲ್ಲಿ ಹಣದ ಕೊರತೆಯಿಂದ ಕುಂಠಿತಾವಸ್ಥೆಯಲ್ಲಿರಲು, ಈ ಗ್ರಾಮದ ಕೈ|| ಶ್ರೀಮಂತ ಕಲ್ಲುಗುಡಿ ಗುಂಡಪ್ಪ ಯಜಮಾನರ ಧರ್ಮಪತ್ನಿಯವರಾದ ಶ್ರೀಮತಿ ಗಂಗಮ್ಮನವರೂ ಇವರ ದತ್ತಪುತ್ರರಾದ ಶ್ರೀಮಂತ ಕರಿಬಸಪ್ಪನವರೂ 2,000 ರೂ. ಗಳನ್ನು ಧರ್ಮಾರ್ಥವಾಗಿ ವಾಗ್ದಾನಮಾಡಿ, ಅದರ ಬಡ್ಡಿಯನ್ನು ಪ್ರತಿ ತಿಂಗಳಿಗೆ 15 ರೂ. ನಂತೆ "ನಭವತಿಪುನರುಕ್ತಂಭಾಷಿತಂ ಸಜ್ಜನಾನಾಂ" ಎನ್ನುವ ನೀತಿಯನ್ನನುಸರಿಸಿ ತಮ್ಮ ವಾಗ್ದಾನದ ಮೇರಿಗೆ ಪಾಠಶಾಲೆಗೆ ಸಲ್ಲಿಸುತ್ತಿರುವರು. ಈ ಪಾಠಶಾಲೆಗೆ ವೇ|| ಪಂಡಿತ ಅಮರನಾಥಶಾಸ್ತ್ರಿಗಳು ಹಿರೇಮಠ ಬನ್ನಿಗೋಳ ಇವರು 2 ವರ್ಷದಿಂದಲೂ ಅಧ್ಯಾಪಕರಾಗಿರುವದರಿಂದ ಈಗಿನ ನವೀನ ಪದ್ಧತಿಯ ಮೇರಿಗೆ ಈ ವರ್ಷ ಮದ್ರಾಸ್ ಯೂನಿವರ್ಸಿಟಿ ಪರೀಕ್ಷೆಗೆ ಪಡದಯ್ಯ ಸಂತೆಕೆಲೂರು ಸಾರಂಗಮಠ 276 ನಂಬರು, ಚನ್ನಯ್ಯ ಜಡಿಮಡೆಮಠ ಸಂಸ್ಥಾನ ಸೊಂಡೂರು ನಂಬರು 265 ಇವರಿಬ್ಬರೂ ಇಂಟರ್ ಪರೀಕ್ಷೆಗೆ ಕೂತಿದ್ದು ಉತ್ತಮತರಗತಿಯಲ್ಲಿ ಪಾಸಾಗಿರುತ್ತಾರೆ. ಸದ್ಯ ಇಲ್ಲಿ 16 ಜನ ವಿದ್ಯಾರ್ಥಿಗಳಿದ್ದು ಇಬ್ಬರು ವಿದ್ವಾನ್ ಪರೀಕ್ಷೆಗೂ ನಾಲ್ವರು ಇಂಟರ್ ಪರೀಕ್ಷೆಗೂ ಕೂತಿರುತ್ತಾರೆ. ಈ ವಿದ್ಯಾದಾನದ ಅಕ್ಷಯ ಪುಣ್ಯಕ್ಕೂ ಖ್ಯಾತ್ಯೇಕೀರ್ತಿಗೂ ಈ ಪಾಠಶಾಲಾ ಪೋಷಕರಾದ ಸದರಿ ಶ್ರೀಮತಿ ಕಲ್ಲುಗುಡಿ ಗಂಗಮ್ಮನವರೂ ಇವರ ದತ್ತಪುತ್ರರಾದ ಶ್ರೀಮಂತ ಕರಿಬಸವಪ್ಪನವರೂ ಭಾಗಿಗಳಾಗಿರುತ್ತಾರೆ. ಈ ಧರ್ಮನಿಷ್ಠರಾದ ಮಹಾಶಯರಿಗೆ ಇಹಲೋಕ್ಯಾತಿಶಯವಾದ ಧಾರ್ಮಿಕ ಬುದ್ಧಿಯನ್ನೂ ಚಿರಾಯುರಾರೋಗ್ಯವನ್ನೂ ಕೊಟ್ಟು ರಕ್ಷಿಸಲೆಂದು ದಯಾಘನನಾದ ಜಗದೀಶನನ್ನು ಕುರಿತು ಪ್ರಾರ್ಥಿಸುವ

ಸಾಂಗತ್ರಯೀ ಪಾಠಶಾಲಾ ಸೆಕ್ರೆಟರಿ.

ಭಕ್ತರ ಭಾಗ್ಯನಿಧಿಯಾದ ಶ್ರೀ ಗುದ್ಲಿ ಸ್ವಾಮಿಗಳವರ ನಿಧನ.

ಕರ್ಜಗಿ ತಾ|| ಹೊಸರಿತ್ತಿ ಗ್ರಾಮದಲ್ಲಿ ಬಹುಕಾಲದಿಂದಲೂ ಸುಪ್ರಸಿದ್ಧರಾಗಿದ್ದ ಶ್ರೀಮನ್ನಿರಂಜನ ಗುದ್ಲಿಸ್ವಾಮಿಗಳವರು ಬಹುಕಾಲದಿಂದ ಭಕ್ತರ ಭಕ್ತಿಕ್ಷೇತ್ರವೆಂಬ ತಮ್ಮ ಭೃಹನ್ಮಠದಲ್ಲಿ ಶ್ರೀಮದ್ವೀರಶೈವ ಮತಸಿದ್ಧಾಂತಾಚಾರಗಳ ಉದ್ಧಾರಾರ್ಥವಾಗಿ ಭಕ್ತಾದಿಗಳಿಗೆ ಸಹಾಯಕರಾಗಿದ್ದುಕೊಂಡು ಶಿವಾಜ್ಞೆಯನ್ನು ಭೂತಲದಲ್ಲಿ ನೆರವೇರಿಸಿ ತಮ್ಮ ಕಾರ್ಯಗಳನ್ನಾಗಮಾಡಿಕೊಂಡು ತಾವು ಮುಕ್ತರಾಗಿ ತಮ್ಮನ್ನಾಶ್ರಯಿಸಿದ ಭಕ್ತವೃಂದವನ್ನು ಧನ್ಯರಂಮಾಡುವದಕ್ಕಾಗಿ ಕಳೆದ ಚೈತ್ರ ಬ|| ೨ ಶುಕ್ರವಾರ (ತಾ|| 2-4-1932) ತಮ್ಮ ಹೊಸರಿತ್ತಿಯ ಮಠದಿಂದ ತಿಪಟೂರು, ಸಾಸಲು, ಒಡ್ಡರಹಳ್ಳಿ, ಕುರುಬರಹಳ್ಳಿ ಮುಂತಾದ ಆಜುಬಾಜು ಗ್ರಾಮದ ಭಕ್ತಾದಿಗಳ ಪ್ರಾರ್ಥನೆಯ ಮೇರಿಗೆ ದಯಮಾಡಿಸಿದರು ಅಲ್ಲಿಯ ಭಕ್ತಮಾಹೇಶ್ವರರಿಗೆ ದರ್ಶನಾಶೀರ್ವಾದಗಳನ್ನಿತ್ತು, ಸದರಿ ತಿಪಟೂರು ಮುಕ್ಕಾಮಿನಲ್ಲಿಯೇ ತಮ್ಮ 75ನೇ ವಯಸ್ಸಿನಲ್ಲಿ ಇದೇ ವೈಶಾಖ ಶು|| ೧೧ ಸೋಮವಾರ ರಾತ್ರಿ 12 ಘಂಟೆಗೆ ತಮ್ಮ ನಿತ್ಯನೈಮಿತ್ತಿಕಾದಿ ಕರ್ಮಗಳನ್ನೆಲ್ಲಾ ಆಚರಿಸಿ ಕ್ರಮವಾಗಿ ಶಮದಮಾದಿ ಗುಣಗಳೊಡನೆ ಷಟ್‌ಸ್ಥಲಾಭ್ಯಾಸದಿಂದ ಯೋಗಜ್ಞಾನಗಳೆರಡರ ಸಿದ್ಧಿಯಂ ಪಡೆದು "ಯಥಾಜಲೇಜಲಂ ಕ್ಷಿಪ್ತಂ ಕ್ಷೀರೇಕ್ಷೀರಂ ಘೃತೇಘೃತಂ| ಅವಿಶೇಷೋ ಭವೇತ್ತದ್ವದಾತ್ಮಸ್ಯಾಪರಮಾತ್ಮನಿ ||" ಎಂಬ ಸುಪ್ರಭೇದಾಗಮವಚನದಂತೆ ಹಾಲಿನಲ್ಲಿ ಹಾಲು, ನೀರಿನಲ್ಲಿ ನೀರು, ತುಪ್ಪದಲ್ಲಿ ತುಪ್ಪವು ಬೆರದಂತೆ ಜ್ಞಾನಕ್ರಿಯಾ ಸಿದ್ಧಿಗಳುಳ್ಳ ಸದಾಶಿವತತ್ತ್ವಾಶಿಗಳಾದ ಮೂರನೇ ಪಟ್ಟದ ಶ್ರೀಮನ್ನಿರಂಜನ ಗುದ್ಲಿ ಮಹಾಸ್ವಾಮಿಗಳವರು ಲಿಂಗೈಕ್ಯರಾದರೆಂದು ತಿಳಿಸಲು ವಿಷಾದವಾಗುತ್ತದೆ. ಸದರಿ ಶ್ರೀಗಳವರ ಕ್ರಿಯಾ ಸಮಾಧಿಯು ತಿಪಟೂರು ವೀರಶೈವಾನಂದಾಶ್ರಮದಲ್ಲಿ ತಾ|| 18-5-1932 ನೇ ಬುಧವಾರ ಮಧ್ಯಾಹ್ನ 3 ಘಂಟೆ ಸಮಯದಲ್ಲಿ ಸರ್ವಭಕ್ತಮಾಹೇಶ್ವರರಿಂದ ನೆರವೇರಿಸಲ್ಪಟ್ಟಿತು. ಇಂಥ ಶಿವಯೋಗಿಗಳವರನ್ನು ಕಳೆದುಕೊಂಡುದು ನಮ್ಮ ಸಮಾಜದ ದುರ್ದೈವವೇ ಸರಿ.

ಗುರುಭಕ್ತ.

ಮೈಸೂರು ಪ್ರಜಾಪ್ರತಿನಿಧಿಸಭೆಯ ಬಡ್ಜೆಟ್ ಅಧಿವೇಶನದಲ್ಲಿ ದಿವಾನರವರು ಮಾಡಿದ ಭಾಷಣ.

(1932ನೆಯ ಇಸವಿ ಜೂನ್ 6ನೆಯ ತಾರೀಖು ಸೋಮವಾರ.)

ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿರಾ,

ಸಂಸ್ಥಾನದ ಹಣಕಾಸಿನ ಆಡಳಿತವನ್ನು ಕುರಿತು ಪ್ರಸ್ತಾಪಿಸಿ, ಈಗ ಮುಗಿಯುವುದರಲ್ಲಿರುವ ವರುಷದ ಆಯವ್ಯಯಗಳನ್ನು ಕುರಿತು ಸಂಕ್ಷೇಪವಾಗಿ ವಿಮರ್ಶಿಸುವುದೂ, ಈಗ ನಮಗೆ ತೋರಿಬಂದಿರುವಂತೆ ನಾವು ನಿರೀಕ್ಷಿಸಿರುವ ಮುಂದಣ ವರುಷದ ಆಯವ್ಯಯಗಳ ಸ್ಥಿತಿಯನ್ನು ತಮಗೆ ಶ್ರುತಪಡಿಸುವುದೂ, ನನ್ನ ಕರ್ತವ್ಯವಾಗಿದೆ.

ಕಳೆದ ದಸರಾ ಅಧಿವೇಶನದಿಂದೀಚೆಗೆ ಆರ್ಥಿಕ ದುರ್ದಶೆಯಿಂದ ಒಟ್ಟು ಪ್ರಪಂಚವೇ ಕಂಪಿತವಾಗಿ ತತ್ತರಿಸಿಹೋಗಿದೆ. ಆದಾಗ್ಯೂ, ಪ್ರಪಂಚದ ಆರ್ಥಿಕ ದುರವಸ್ಥೆಗಳನ್ನೂ ಅವುಗಳ ಪರಿಹಾರ ಮಾರ್ಗಗಳನ್ನೂ ಕುರಿತು ಪ್ರಸ್ತಾಪಿಸಿ, ನಾನು ತಮ್ಮ ಚಿತ್ತಕ್ಕೆ ಆಯಾಸವನ್ನುಂಟುಮಾಡುವವನಾಗಿಲ್ಲ. ಈಗ ನಾವು ವಿಚಾರಮಾಡಬೇಕಾದುದು, ಅವುಗಳಿಂದ ನಮ್ಮ ದೇಶದ ಆಯವ್ಯಯಗಳ ಮೇಲೆ ಉಂಟಾಗಿರುವ ಪರಿಣಾಮಗಳನ್ನು ಮಾತ್ರವೇ.

ನಮ್ಮ ಬಡ್ಜೆಟ್ಟಿನಲ್ಲಿರುವ ಎರಡು ಮೂರು ಮುಖ್ಯ ಬಾಬುಗಳ ವಿಚಾರವನ್ನೇ ಪಂಗಣಿಸಿದರೂ ಆ ಪರಿಣಾಮಗಳ ಫಲಿತಾಂಶವು ವ್ಯಕ್ತವಾಗುವುದು. ನಮಗೆ ಭಾರಿ ವರಮಾನವನ್ನು ತರುತ್ತಿದ್ದ ಗಂಧದೆಣ್ಣೆಯ ವ್ಯಾಪಾರವು ಕಡಮೆಯಾಗಿ ಹೋಯಿತು. ಜಂಗಲುಗಳ ಬಾಬಿನಿಂದಲೂ, ರೈಲ್ವೆಗಳ ಬಾಬಿನಿಂದಲೂ ಬರುತ್ತಿದ್ದ ಹುಟ್ಟುವಳಿಯೂ ಕಡಿಮೆಯಾಯಿತು. ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಂತೂ, ಈಗಲೂ ನಷ್ಟವಾಗುತ್ತಲೇ ಬಂದಿದೆ. ಒಟ್ಟು ಪ್ರಪಂಚವನ್ನೇ ಆವರಿಸಿರುವ ಆರ್ಥಿಕ ದುರವಸ್ಥೆಗಳಿಂದ ಹುಟ್ಟಿದ ಪ್ರತಿಕೂಲ ಸನ್ನಿವೇಶಗಳೇ ಇದೆಲ್ಲಕ್ಕೂ ಕಾರಣ. ಆ ಪ್ರತಿಕೂಲ ಸನ್ನಿವೇಶಗಳು ನಮ್ಮ ಹತೋಟಿಯಲ್ಲಿಲ್ಲ. ನಮ್ಮ ಜನಾಂಗದವರೂ, ಅಂತರರಾಷ್ಟ್ರೀಯವಾಗಿ ಒಟ್ಟು ಪ್ರಪಂಚದವರೂ, ರಾಜಕೀಯ ವಿಚಾರಗಳಲ್ಲಿಯೂ ಹಣಕಾಸಿನ ಆಡಳಿತದಲ್ಲಿಯೂ ಕೈಕೊಳ್ಳುವ ವಿವೇಕಮಯವಾದ ವರ್ತನೆಯಿಂದಲೇ ಅವು ಪರಿಹಾರವಾಗಬೇಕು. ಹೀಗೆ ಅವು ಪರಿಹಾರವಾಗುವ ದಿನವನ್ನೇ ನಾವು ತವಕದಿಂದ ನಿರೀಕ್ಷಿಸುತ್ತಿರಬೇಕಾಗಿದೆ.

ಚಾಲ್ತಿಸಾಲಿನ ಹುಟ್ಟುವಳಿ ಮತ್ತು ಮೂಲಧನದ ವಹಿವಾಟು.

1932-33ನೆಯ ಸಾಲಿಗೆ ಬಡ್ಜೆಟ್ಟಿನಲ್ಲಿ ಕಾಣಿಸಿರುವ ಆಯವ್ಯಯಗಳ ವಿಚಾರವನ್ನು ವಿವರಿಸಿ ಹೇಳುವುದಕ್ಕೆ ಮುಂಚೆ, ಚಾಲ್ತಿ ವರುಷದಲ್ಲಿ ನಡೆದ ಹುಟ್ಟುವಳಿ ಬಾಬಿನ ಮತ್ತು ಮೂಲಧನದ ಬಾಬಿನ ಕಾರ್ಯಕಲಾಪಗಳ ವಿಷಯವಾಗಿ ನಾವು ನಿರೀಕ್ಷಿಸಿರುವ ಫಲಿತಾಂಶಗಳನ್ನು ವಾಡಿಕೆಯಂತೆ ಸಂಕ್ಷೇಪವಾಗಿ ಶ್ರುತಪಡಿಸುವೆನು.

ಹಿಂದಿನ ಜೂನ್ ತಿಂಗಳಿನಲ್ಲಿ ಬಡ್ಜೆಟ್ಟನ್ನು ಸಿದ್ಧಪಡಿಸಿದಾಗ್ಗೆ ನಾವು 379 ಲಕ್ಷ ರೂ. ಗಳ ಹುಟ್ಟುವಳಿಯು ಬರುವುದೆಂದು ನಿರೀಕ್ಷಿಸಿದ್ದೆವು; ಆ ಹುಟ್ಟುವಳಿಯಿಂದ 377 ಲಕ್ಷ ರೂ. ಗಳ ವೆಚ್ಚಕ್ಕೆ ಹಣವನ್ನು ಒದಗಿಸಿದ್ದೆವು. ವೆಚ್ಚವು ಕಳೆದು 2 ಲಕ್ಷ ರೂ. ಗಳು ಉಳಿಯುವುದೆಂದು ನಿರೀಕ್ಷೆಯಿದ್ದಿತು. ಚಾಲ್ತಿಸಾಲಿನ ಆದಿಭಾಗದಲ್ಲಿ ಬಂದ ಹುಟ್ಟುವಳಿಗಳನ್ನು ನೋಡುದುದರಲ್ಲಿ, ಕೆಲವು ಬಾಬುಗಳಲ್ಲಿ ನಾವು ನಿರೀಕ್ಷಿಸಿದ್ದಷ್ಟು ಹುಟ್ಟುವಳಿಯು ಬರುವ ಹಾಗಿಲ್ಲವೆಂದು ತೋರಿತು. ಕಳೆದ ಅಕ್ಟೋಬರಿನಲ್ಲಿ ತಮಗೆ ತಿಳಿಸಿದಂತೆ ಹುಟ್ಟುವಳಿಯಲ್ಲಿ 30 ಲಕ್ಷ ರೂ. ಗಳಷ್ಟು ಭಾರಿ ಮೊಬಲಗು ಕಡಿಮೆ ಬೀಳಬಹುದೆಂದು ತೋರಿತು. ಅಲ್ಲದೆ, ಆಯವ್ಯಯಗಳ ಸ್ಥಿತಿಯು ಈ ರೀತಿ ಹದಗೆಟ್ಟುದನ್ನು ಸರಿಪಡಿಸಿಕೊಳ್ಳುವ ಪ್ರಯತ್ನದಲ್ಲಿ ಆಗಲೇ ನೆರವೇರಿಸಿದ್ದ ಮತ್ತು ಮುಂದೆ ನೆರವೇರಿಸಬೇಕೆಂದಿದ್ದ ಮಿತವ್ಯಯದ ನಾನಾ ಏರ್ಪಾಡುಗಳೂ ಆಗ್ಗೆ ತಮಗೆ ವಿವರಿಸಲ್ಪಟ್ಟೀ ಇವೆ.

ಇದುವರೆಗೆ ದೊರೆತಿರುವ ಲೆಕ್ಕಗಳ ಆಧಾರದಿಂದ ತೂಗಿ ನೋಡಿದರೆ, ಹುಟ್ಟುವಳಿಯು ಬಡ್ಜೆಟ್ಟಿನಲ್ಲಿ ನಿರೀಕ್ಷಿಸಿದ್ದುದಕ್ಕಿಂತ 30 ಲಕ್ಷ ರೂ. ಗಳು ಕಡಮೆಯಾಗುವುದಾಗಿದೆ. ಆದರೆ ವೆಚ್ಚದಲ್ಲಿ ಕಡಿಮೆಯಾಗುವ ಮೊಬಲಗು $9\frac{1}{3}$ ಲಕ್ಷ ರೂ. ಗಳು ಮಾತ್ರವೇ. ಅಂತೂ, ಚಾಲ್ತಿ ವರುಷದ ಹುಟ್ಟುವಳಿ ಬಾಬಿನ ಆಡಳಿತದ ಫಲಿತಾಂಶವಾಗಿ ನಾವು ನಿರೀಕ್ಷಿಸಿದ್ದಂತೆ ವೆಚ್ಚವು ಕಳೆದು 2 ಲಕ್ಷ ರೂ. ಗಳು ಉಳಿಯುವುದಕ್ಕೆ ಬದಲಾಗಿ, $18\frac{1}{3}$ ಲಕ್ಷ ರೂ. ಗಳು ವೆಚ್ಚಕ್ಕೆ ಸಾಲದೆ ಬರುವ ಕೊರತೆಯು ಬಹುಶಃ ಕಂಡುಬರುವುದಾಗಿದೆ. ಆದರೆ, ಒಂದು ವಿಚಾರ. ಈ ರೀತಿ ಮೊಬಲಗು ಕಡಿಮೆ ಬರುವ ಕೊರತೆಯು, ಸಾಲವನ್ನು ತೀರಿಸುವುದಕ್ಕಾಗಿ ನಾವು ವಾಡಿಕೆಯಂತೆ ಕೊಡಬೇಕಾದ 19 ಲಕ್ಷ ರೂ. ಗಳನ್ನು ಸಾಲ ತೀರ್ವೆಯ ನಿಧಿಗೆ ಒದಗಿಸಿದ ಮೇಲೆ ಕಂಡುಬರುವುದಾಗಿದೆ. ಸಾಲಕ್ಕಾಗಿ ನಾವು ಹೀಗೆ ಮೊಬಲಗನ್ನು ಒದಗಿಸದೆ ಹೋಗಿದ್ದರೆ, ನಮಗೆ ದೊರೆಯುವ ಹುಟ್ಟುವಳಿಗೂ, ಚಾಲ್ತಿ ವೆಚ್ಚಕ್ಕೂ, ಅಲ್ಲಿಗಲ್ಲಿಗೆ ಸರಿಹೋಗುತ್ತಿದ್ದಿತು. ಎಂದರೇನಾಯಿತು? ಅಸಾಧಾರಣವಾದ ಈಗಿನ ಆರ್ಥಿಕ ದುಸ್ಥಿತಿಯಲ್ಲಿ, ನಮ್ಮ ಚಾಲ್ತಿ ಹುಟ್ಟುವಳಿಗಳಿಂದ ನಮ್ಮ ಸಾಲದ ಹೊರೆಯನ್ನು ಕಡಿಮೆ ಮಾಡಿಕೊಳ್ಳುವುದಕ್ಕಾಗಿ ನಾವು ಹಣವೇನನ್ನೂ ಕೊಡುವುದು ನಮಗೆ ಸಾಧ್ಯವಿಲ್ಲದೆ ಹೋಗಿದೆ, ಇದೇ ವಾಸ್ತವಿಕವಾಗಿ ಕಂಡುಬಂದಿರುವ ಪರಿಸ್ಥಿತಿ.

ಮುಖ್ಯವಾಗಿ ಮೂರು ಬಾಬುಗಳಲ್ಲಿ ಹುಟ್ಟುವಳಿಯು ಕಡಿಮೆಯಾಗಿದೆ. ಅವು ಯಾವುವೆಂದರೆ:—

ಫಾರೆಸ್ಟು 13 ಲಕ್ಷ ರೂ. ಗಳು. ಎಕ್ಸೈಜು 8 ಲಕ್ಷ ರೂ ಗಳು. ರೈಲ್ವೆಗಳು 9 ಲಕ್ಷ ರೂ. ಗಳು.

ಹಿಂದಿನ ಜೂನ್ ತಿಂಗಳಿನಲ್ಲಿ ಈ ಸಭೆಯಲ್ಲಿ ನಾನು ಭಾಷಣ ಮಾಡಿದಾಗ್ಗೆ, ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಕಾರ್ಯಕಲಾಪಗಳಲ್ಲಿ ಕೆಲವು ಏರ್ಪಾಡುಗಳನ್ನು ಮಾಡಬೇಕೆಂದು ನಾವು ಯೋಚಿಸಿದ್ದೆವು. ಅವುಗಳ ಫಲಿತಾಂಶವಾಗಿ ಚಾಲ್ತಿ ವರುಷದಲ್ಲಿ ಕಾರ್ಖಾನೆಯ ಹುಟ್ಟುವಳಿಯೂ, ವೆಚ್ಚವೂ, ಒಂದಕ್ಕೊಂದಕ್ಕೆ ಸರಿಸಮವಾಗುವುದೆಂದೂ ನಾವು ನಿರೀಕ್ಷಿಸಿದ್ದೆವು. ಆದರೆ ಕಾರ್ಖಾನೆಯಲ್ಲಿ ಕೆಲಸ ನಡೆದುದರ ಬಾಬು ಚಾಲ್ತಿ ಸಾಲಿನಲ್ಲಿ 1,68,000 ರೂ. ಗಳೂ ಮತ್ತು ಮುಂದಿನ ವರುಷ 84,000 ರೂ. ಗಳೂ ನಷ್ಟವಾಗುವುದಾಗಿ ವರದಿಯಾಗಿದೆ. ಈ ನಷ್ಟದ ಮೊಬಲಗುಗಳನ್ನು ಲೆಕ್ಕದಿಂದ ವಜಾಮಾಡಬೇಕೆಂದು ಉದ್ದೇಶಿಸಲಾಗಿದೆ.

ಉಕ್ಕನ್ನು ತಯಾರಿಸುವ ಏರ್ಪಾಡಿನ ಸಾಧಕಬಾಧಕಗಳು ಇನ್ನೂ ಪರಿಶೀಲನೆಯಲ್ಲಿವೆ.

1931-32ನೆಯ ಸಾಲಿನ ವೆಚ್ಚಗಳು.

ಇನ್ನು ಚಾಲ್ತಿ ಸಾಲಿನ ವೆಚ್ಚಗಳ ವಿಚಾರ. ವೆಚ್ಚವನ್ನು ತಗ್ಗಿಸಬೇಕೆಂದು ಉದ್ದೇಶಿಸಿದ ಮೇರೆಗೆ, ಪ್ರಾಯಿಕವಾಗಿ ಎಲ್ಲ ಬಾಬುಗಳಲ್ಲಿಯೂ ವೆಚ್ಚವನ್ನು ತಗ್ಗಿಸಿರುವುದು ತಿದ್ದುಪಾಟಾದ ಅಂದಾಜುಗಳಲ್ಲಿ ಕಾಣಿಸಿರುವ ಮೊಬಲಗುಗಳಿಂದ ತಮಗೆ ವೇದ್ಯವಾಗುತ್ತದೆ. ವೆಚ್ಚವನ್ನು ತಗ್ಗಿಸುವುದಕ್ಕಾಗಿಯೂ ಮಿತವ್ಯಯ ಮಾಡುವುದಕ್ಕಾಗಿಯೂ ಸರ್ಕಾರದವರು ಮಂಜೂರು ಮಾಡಿದ ನಾನಾ ಏರ್ಪಾಡುಗಳೂ ಫೈನಾನ್ಷಿಯಲ್ ಸೆಕ್ರೆಟರಿಯವರು ಸಾದರುಮಾಡಿರುವ ವಿವರಣೆಯ ರೂಪದ ಮೆಮೊರಾಂಡಮಿನಲ್ಲಿ ವಿಶದವಾಗಿ ನಮೂದಾಗಿವೆ. ಆದಕಾರಣ, ಅವುಗಳನ್ನು ಕುರಿತು ಈಗ ವಿಸ್ತಾರವಾಗಿ ಪ್ರಸ್ತಾಪಿಸಬೇಕಾದುದು ಅನಾವಶ್ಯಕ. ಆಗಲೇ ತಿಳಿಸಿರುವಂತೆ ವಾರ್ಷಿಕ ಹುಟ್ಟುವಳಿಯಿಂದಲೇ ಹಣವನ್ನೊದಗಿಸಬೇಕಾದ ವೆಚ್ಚಗಳಲ್ಲಿ $9\frac{1}{3}$ ಲಕ್ಷ ರೂ. ಗಳನ್ನು ಕಡಿಮೆಮಾಡಲಾಗಿದೆ. ಮೂಲಧನದ ಕಾಮಗಾರಿಗಳಿಗಾಗಿ ನಡೆಯತಕ್ಕ ವೆಚ್ಚಗಳಲ್ಲಿಯೂ ಸಹ, ಬಡ್ಜೆಟ್ಟಿನಲ್ಲಿ ಕಾಣಿಸಿದ್ದುದಕ್ಕಿಂತಲೂ $15\frac{1}{2}$ ಲಕ್ಷ ರೂ. ಗಳನ್ನು ಕಡಿಮೆ ಮಾಡಬೇಕೆಂದು ತಿದ್ದುಪಾಟಾದ ಅಂದಾಜಿನ ಮೇರೆಗೆ ಗೊತ್ತುಮಾಡಲಾಗಿದೆ.

1932-33ನೆಯ ಸಾಲಿನ ಬಡ್ಜೆಟ್ ಅಂದಾಜುಗಳು.

ಇನ್ನು, ಮುಂದಿನ ಸಾಲಿನ ಬಡ್ಜೆಟ್ ಅಂದಾಜುಗಳ ವಿಚಾರವನ್ನು ನಾನು ಪ್ರಸ್ತಾಪಿಸುವೆನು. ವ್ಯಾಪಾರವು ಶೀಘ್ರದಲ್ಲೇ ಹಿಂದಿನ ಸ್ಥಿತಿಗೆ ಬರುವ ಸಂಭವವೇನೋ ಸದ್ಯದಲ್ಲಿ ಅಷ್ಟೇನೂ ಹೆಚ್ಚಾಗಿ ತೋರುವುದಿಲ್ಲ. ಆದಕಾರಣ, ತಿದ್ದುಪಾಟಾದ ಅಂದಾಜುಗಳಲ್ಲಿ ಕಾಣಿಸಿರುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮುಂದಿನ ವರುಷ ಹುಟ್ಟುವಳಿಯು ಬಂದೀತೆಂದು ನಿರೀಕ್ಷಿಸುವುದು ಯುಕ್ತವಲ್ಲ. ಹೆಚ್ಚಿಗೆ ತೆರಿಗೆಯನ್ನು ಹಾಕುವುದಕ್ಕೂ ಅವಕಾಶವು ತೀರ ಕಡಿಮೆಯಾಗಿದೆ. ಆಡಳಿತ ವಿಚಕ್ಷಣೆಗೆ ಕುಂದುಕ ವುಂಟಾಗದಂತೆ ಸರ್ಕಾರೀ ಕಾರ್ಯಕಲಾಪಗಳ ಸದ್ಯದ ಆವಶ್ಯಕತೆಗಳನ್ನೂ ಮುಂದಿನ ಆವಶ್ಯಕತೆಗಳನ್ನೂ ನೋಡಿಕೊಂಡು, ಸಾಧ್ಯವಿರುವಷ್ಟು ಮಟ್ಟಿಗೂ ಎಲ್ಲ ಬಾಬುಗಳಲ್ಲಿಯೂ ವೆಚ್ಚವನ್ನು ತಗ್ಗಿಸಿದ್ದೇವೆ.

ಮುಂದಿನ ವರುಷ ಒಟ್ಟು 3 ಕೋಟಿ 53 ಲಕ್ಷ ರೂ. ಗಳ ಹುಟ್ಟುವಳಿಯು ಬರುವುದೆಂಬ ನಿರೀಕ್ಷೆಯನ್ನಿಟ್ಟುಕೊಂಡು, ಹುಟ್ಟುವಳಿಯ ಬಾಬಿನಿಂದಲೇ ಹಣವನ್ನೊದಗಿಸಬೇಕಾದ ವೆಚ್ಚಗಳಿಗಾಗಿ 3 ಕೋಟಿ 63 ಲಕ್ಷ ರೂ. ಗಳು ಸಲ್ಲಬೇಕೆಂದು ನಿಷ್ಕರ್ಷೆಮಾಡಿ ಬಡ್ಜೆಟ್ಟನ್ನು ಏರ್ಪಡಿಸಿದ್ದೇವೆ. ಆದಕಾರಣ, ಮುಂದಿನ ಸಾಲಿನಲ್ಲಿ ಹುಟ್ಟುವಳಿಗಿಂತಲೂ ವೆಚ್ಚವು 10 ಲಕ್ಷ ರೂ. ಗಳು ಹೆಚ್ಚಾಗಿರುತ್ತದೆ. ಆಯವ್ಯಯಗಳು ಸಮತೂಕದಲ್ಲಿರುವಂತೆ ಬಡ್ಜೆಟ್ಟನ್ನು ಏರ್ಪಡಿಸುವುದು ಸಾಧ್ಯವಾಗಿದ್ದ ಪಕ್ಷಕ್ಕೆ ನನಗೆ ಅನನ್ಯ ರೀತಿಯಲ್ಲಿ ಪರಮಸಂತೋಷವಾಗುತ್ತಿದ್ದಿತು. ಈ ರೀತಿ ವೆಚ್ಚಕ್ಕೆ ಹಣವು ಸಾಲದೆಬರುವ ಕೊರತೆಗೆ ಅವಕಾಶವಿಲ್ಲದಂತೆಯೇ ಕೂಡಲೆ ಏರ್ಪಡಿಸುವುದಾದರೆ, ಅತ್ಯವಶ್ಯವಾದ ನಾನಾ ಕಾರ್ಯಕಲಾಪಗಳನ್ನೂ ಕಡಿಮೆ ಮಾಡಲೇಬೇಕಾಗುತ್ತದೆ; ಅಲ್ಲದೆ, ಸರ್ಕಾರೀ ಆಡಳಿತ ಯಂತ್ರದ ಅಚ್ಚುಕಟ್ಟೂ ಆಯತಪ್ಪಲೇಬೇಕಾಗುತ್ತದೆ; ಹೀಗಾಗದಂತೆ ಆ ರೀತಿ ವೆಚ್ಚಕ್ಕೆ ಹಣವು ಸಾಲದೆ ಬಂದಿರುವ ಕೊರತೆಯನ್ನು ಈ ಕೂಡಲೆ ಒಮ್ಮಿಂದೊಮ್ಮೆಗೇ ಪರಿಹರಿಸಿಬಿಡುವುದು ಸುತರಾಂ ಸಾಧ್ಯವಿಲ್ಲದ ಮಾತು. ಮಿತವ್ಯಯವನ್ನು ಸಾಧ್ಯವೆನಿಸುವಮಟ್ಟಿಗೂ ಮುಂದುವರಿಸುತ್ತ ಬಂದು ಈಗಿನ ನ್ಯೂನತೆಯನ್ನು ಸರಿಪಡಿಸಬೇಕಾದುದು ಅತ್ಯಾವಶ್ಯಕವೆಂಬುದನ್ನು ಸರ್ಕಾರದವರು ಸಂಪೂರ್ಣವಾಗಿ ಮನಗಂಡಿದ್ದಾರೆ. ಸಂಸ್ಥಾನದ ಆಯವ್ಯಯಗಳ ಸಮತೆಯು ಮತ್ತೆ ಪೂರ್ಣವಾಗಿ ನೆಲೆಗೊಳ್ಳುವವರೆಗೂ ಸರ್ಕಾರಿ ವೆಚ್ಚವನ್ನು ಇನ್ನೂ ತಗ್ಗಿಸಬೇಕೆಂಬುದೇ ಸರ್ಕಾರದವರ ಉದ್ದೇಶವಾಗಿದೆ.

ಮುಂದಿನ ಸಾಲಿನ ಆಯವ್ಯಯಗಳ ಅಂದಾಜುಗಳ ಮುಖ್ಯ ಲಕ್ಷಣಗಳನ್ನು ಕುರಿತು ಈಗ ಸಂಕ್ಷೇಪವಾಗಿ ಪ್ರಸ್ತಾಪಿಸುವೆನು.

ನಾಟಕ, ಸರ್ಕಸ್ಸು, ಮುಂತಾದ ರಂಜನ ವಿನೋದನಗಳ ಮೇಲೂ ಮತ್ತು ಕುದುರೆ ಜೂಜುಗಳ ಸಂಬಂಧದಲ್ಲಿ ಜೂಜು ಕಟ್ಟುವುದರ ಮೇಲೂ ಬ್ರಿಟಿಷ್ ಇಂಡಿಯಾದ ಅನೇಕ ಪ್ರಾಂತಗಳಲ್ಲಿ ತೆರಿಗೆಗಳನ್ನು ಹಾಕಿದ್ದಾರೆ. ಇದೇ ತೆರಿಗೆಗಳನ್ನು ಮೈಸೂರು ಸಂಸ್ಥಾನದಲ್ಲಿಯೂ ವಿಧಾಯಕ ಮಾಡಬೇಕೆಂದು ಉದ್ದೇಶಿಸಲಾಗಿದೆ. ಜೂಜಿನ ತೆರಿಗೆಯ ವರಮಾನವು ಸರ್ಕಾರಕ್ಕೆ ಮಾತ್ರವೇ ಸಲ್ಲುವಂತೆ ಗೊತ್ತುಮಾಡಿ, ಆ ತೆರಿಗೆಯನ್ನು ವಿಧಿಸಲಾಗುತ್ತದೆ. ನಾಟಕ, ಸರ್ಕಸ್ಸು ಮುಂತಾದುವುಗಳ ಮೇಲಿನ ತೆರಿಗೆಯನ್ನು ಮಾತ್ರ, ಆಯಾ ಸ್ಥಳೀಯ ಸಂಸ್ಥೆಗಳಿಗೆ ಕ್ಲುಪ್ತವಾದೊಂದು ಭಾಗವು ಸಲ್ಲಬಹುದಾದ ತೆರಿಗೆಗಳ ಪಟ್ಟಿಗೆ ಸೇರಿಸಲಾಗುತ್ತದೆ. ತಮಗೆ ಒಪ್ಪಿಸಲ್ಪಟ್ಟಿರುವ ಬಡ್ಜೆಟ್ಟಿನಲ್ಲಿ ನಮೂದಿಸಿರುವಂತೆ, ಜೂಜಿನ ಸಂಬಂಧವಾದ ಈ ತೆರಿಗೆಯಿಂದ 50,000 ರೂ. ಗಳ ಹುಟ್ಟುವಳಿಯು ಬರುವಂತೆ ನಾವು ನಿರೀಕ್ಷಿಸಿದ್ದೇವೆ.

ಮುಖ್ಯ ಮುಖ್ಯವಾದ ಹುಟ್ಟುವಳಿಯ ಬಾಬುಗಳಲ್ಲೆಲ್ಲಾ, ಚಾಲ್ತಿ ಸಾಲಿನ ತಿದ್ದುಪಾಟಾದ ಅಂದಾಜಿನ ಆಧಾರದ ಮೇಲೆ ಮಾತ್ರವೇ ಮುಂದಿನ ಸಾಲಿನ ವರಮಾನಗಳನ್ನು ಅಂದಾಜುಮಾಡಲಾಗಿದೆ. ಅದೂ ಸಹ, ಹುಟ್ಟುವಳಿಗಳು ಹೆಚ್ಚು ಕಡಮೆಯಾಗುವ ಸಂಭವದ ವಿಚಾರದಲ್ಲಿ ನಿಶ್ಚಿತವಾದ ಸಂಗತಿಗಳನ್ನೆಲ್ಲಾ ತೂಗಿನೋಡಿ, ತದನುಗುಣವಾಗಿ ಮುಂದಿನ ಸಾಲಿನ ವರಮಾನಗಳ ಅಂದಾಜನ್ನು ಆ ರೀತಿ ನಿಷ್ಕರ್ಷೆಮಾಡಿ ಬಡ್ಜೆಟ್ಟಿನಲ್ಲಿ ಕಾಣಿಸಿದ್ದೇವೆ. ಮೂರು ಬಾಬುಗಳಲ್ಲಿ ಮಾತ್ರವೇ ಸ್ವಲ್ಪಮಟ್ಟಿಗೆ ಹೆಚ್ಚು ಹುಟ್ಟುವಳಿಯು ಬಂದೀತೆಂದು ಅಂದಾಜು ಮಾಡಿದ್ದೇವೆ.

ಚಾಲ್ತಿಸಾಲಿನ ಕೊನೆಯಲ್ಲಿ ಜಮೀನು ಕಂದಾಯದ ಬಾಕಿಗಳು ಸ್ವಲ್ಪಮಟ್ಟಿಗೆ ಭಾರಿಯಾಗಿಯೇ ಉಳಿದಿರುತ್ತವೆ. ಮುಂದಣ ಸಾಲಿನಲ್ಲಿ ಆ ಬಾಕಿಗಳಲ್ಲಿ ಸ್ವಲ್ಪ ಭಾಗವಾದರೂ ವಸೂಲಾದೀತೆಂಬ ನಂಬಿಕೆಯಿಂದ ಜಮೀನು ಕಂದಾಯದ ಬಾಬಿನಲ್ಲಿ ಚಾಲ್ತಿಸಾಲಿಗಿಂತಲೂ ಮುಂದಣ ಸಾಲಿನಲ್ಲಿ ಸುಮಾರು 2 ಲಕ್ಷ ರೂ. ಗಳಷ್ಟು ಹೆಚ್ಚು ಹುಟ್ಟುವಳಿಯು ಬಂದೀತೆಂದು ಅಂದಾಜು ಮಾಡಲಾಗಿದೆ.

ಗಂಧದ ಎಣ್ಣೆಯ ಮಾರಾಟದ ವ್ಯವಸ್ಥೆಯನ್ನು ಉತ್ತಮಪಡಿಸುವುದಕ್ಕಾಗಿ ಅನೇಕ ಏರ್ಪಾಡುಗಳನ್ನು ಮಾಡುತ್ತಿದೆ. ಗಂಧದ ಎಣ್ಣೆಯ ಮಾರಾಟದಿಂದ ಬರುವ ಒಟ್ಟು ಹುಟ್ಟುವಳಿಯು ಸುಮಾರು $3\frac{1}{2}$ ಲಕ್ಷ ರೂಗಳಷ್ಟು ಹೆಚ್ಚ ಬಹುದೆಂಬುದಾಗಿ ನಿರೀಕ್ಷಿಸಲಾಗಿದೆ.

ಈಗ ಮೋಟಾರುಬಸ್ಸುಗಳ ಪೈಪೋಟಿಯ ದೆಸೆಯಿಂದ ರೈಲುಗಳಲ್ಲಿ ಪ್ರಯಾಣಿಕರ ಸಂಖ್ಯೆಯು ಕಡಿಮೆಬಿದ್ದಿದೆಯಷ್ಟೆ. ರೈಲುಗಳ ಸಂಚಾರದಲ್ಲಿ ಹೆಚ್ಚಿನ ಸೌಕರ್ಯಗಳನ್ನು ರೈಲ್ವೆ ಇಲಾಖೆಯವರು ಜನರಿಗೆ ಒದಗಿಸುತ್ತಿದ್ದಾರೆ. ಹೀಗೆ ಮಾಡುವುದರ ಮೂಲಕ ಈಗಿನ ಕೊರತೆಯು ಪರಿಹಾರವಾಗಿ ರೈಲ್ವೇ ಪ್ರಯಾಣಿಕರ ಸಂಖ್ಯೆಯು ಹೆಚ್ಚಾಗುವಂತೆ ತಕ್ಕ ಅವಕಾಶವನ್ನು ಅವರು ಕಲ್ಪಿಸುತ್ತಿದ್ದಾರೆ. ಇದರ ಪರಿಣಾಮವಾಗಿಯೂ, ರೈಲ್ವೆ ಇಲಾಖೆಯಲ್ಲಿ ಕೆಲಸ ನಡೆಸುವುದಕ್ಕೆ ತಗಲುವ ವೆಚ್ಚವನ್ನು ಕಡಿಮೆ ಮಾಡುವ ಪ್ರಯತ್ನಗಳ ಫಲಿತಾಂಶವಾಗಿಯೂ, ರೈಲ್ವೆ ಇಲಾಖೆಯವರು ಮುಂದಿನ ಸಾಲಿನಲ್ಲಿ 6 ಲಕ್ಷ ರೂಪಾಯಿಗಳ ಹೆಚ್ಚು ವರಮಾನವು ಬರುವುದೆಂದು ನಿರೀಕ್ಷಿಸಿದ್ದಾರೆ.

ಅರಮನೆಯಿಂದ 1,31,000 ರೂ. ಗಳ ಮೊಬಲಗು ಸಹಾಯಾರ್ಥವಾಗಿ ಸರ್ಕಾರಕ್ಕೆ ದೊರೆಯುತ್ತದೆಂದು ನಿರೀಕ್ಷಿಸಿದ್ದೇವೆ. ವಿಶೇಷ ಸ್ವಭಾವದ ಈ ಬಾಬಿನ ಮೊತ್ತವನ್ನು ಮುಂದಿನ ಸಾಲಿನ ಬಡ್ಜೆಟ್ಟಿನಲ್ಲಿ ಲೆಕ್ಕಕ್ಕೆ ಸೇರಿಸಿಕೊಳ್ಳಲಾಗಿದೆ.

ಇನ್ನು, ವೆಚ್ಚದ ವಿಚಾರವನ್ನು ಪರಿಶೀಲಿಸೋಣ. ನಾನಾ ಇಲಾಖೆಗಳಲ್ಲಿಯೂ ಜರೂರು ಆವಶ್ಯಕತೆಗಳನ್ನು ಪೂರ್ತಿಯಾಗಿ ಪರ್ಯಾಲೋಚಿಸಿ ನೋಡಿ, ಎಷ್ಟು ಮೊಬಲಗನ್ನು ಒದಗಿಸದೆ ಹೋದರೆ ತೀರ ನಿರ್ವಾಹವೆ ಇಲ್ಲವೋ ಅಷ್ಟುಮಟ್ಟಿನ ಕನಿಷ್ಠ ಪರಿಮಿತಿಯ ಮೊಬಲಗುಗಳನ್ನು ಮಾತ್ರವೇ ಅವುಗಳ ವೆಚ್ಚಗಳಿಗೆ ಒದಗಿಸಿದ್ದೇವೆ. ವೆಚ್ಚವನ್ನು ತಗ್ಗಿಸುವುದು ಸಾಧ್ಯಕಂಡ ಬಾಬುಗಳಲ್ಲೆಲ್ಲಾ ಅತ್ಯಂತ ವಿಶೇಷವಾಗಿ ವೆಚ್ಚವನ್ನು ತಗ್ಗಿಸಿದ್ದೇವೆ. ಮುಂದಣ ಸಾಲಿನ ಒಟ್ಟು ವೆಚ್ಚವು, ಚಾಲ್ತಿಸಾಲಿನ ತಿದ್ದುಪಾಟಾದ ಅಂದಾಜಿನ ಮೇರೆಗೆ ಗೊತ್ತಾಗಿರುವ ವೆಚ್ಚಕ್ಕಿಂತಲೂ ಸುಮಾರು 5 ಲಕ್ಷ ರೂ. ಗಳಷ್ಟು ಕಡಿಮೆಯಾಗಿರುವಂತೆ ಬಡ್ಜೆಟ್ಟಿನಲ್ಲಿ ಗೊತ್ತುಮಾಡಲಾಗಿದೆ. 1930-31 ನೆಯ ಸಾಲಿನ ಆಯವ್ಯಯಗಳ ಲೆಕ್ಕಗಳು ಈಗ ಪರಿಷ್ಕಾರವಾಗಿ ಸಿದ್ಧವಾಗಿವೆ. ಆ ವರ್ಷ ಹುಟ್ಟುವಳಿಯ ಬಾಬಿನಿಂದಲೇ ಹಣವನ್ನೊದಗಿಸಬೇಕಾದ ವೆಚ್ಚವು 3 ಕೋಟಿ 98 ಲಕ್ಷ ರೂ. ಗಳು. ಮುಂದಣ ಸಾಲಿನ ಬಡ್ಜೆಟ್ಟಿನ ಪ್ರಕಾರ 3 ಕೋಟಿ 63 ಲಕ್ಷ ರೂ. ಗಳ ವೆಚ್ಚವು ನಡೆಯಬೇಕೆಂದು ನಿಷ್ಕರ್ಷೆಮಾಡಲಾಗಿದೆ. ಹೀಗೆ 2 ವರ್ಷಗಳ ಅವಧಿಯಲ್ಲಿ 35 ಲಕ್ಷ ರೂ. ಗಳನ್ನು, ಅಥವಾ ಸೇಕಡಾ ಸುಮಾರು 10 ರಷ್ಟು ಭಾಗವನ್ನು, ವೆಚ್ಚದಲ್ಲಿ ಕಡಿಮೆ ಮಾಡಲಾಗಿದೆ.

ಸಂಸ್ಥಾನದ ಹಣಕಾಸಿನ ವಿಚಾರವನ್ನೆಲ್ಲಾ ಬಹಳ ಜಾಗರೂಕತೆಯಿಂದ ಪರಿಶೀಲಿಸಿದ ತರುವಾಯ "ರಿಟ್ರೆಂಚ್ಮೆಂಟ್ ಕಮಿಟಿ" ಯವರು ತಮ್ಮ ವರದಿಯಲ್ಲಿ ಸೂಚಿಸಿರುವಂತೆ, ಸರ್ಕಾರದವರು ಸಂಸ್ಥಾನದಲ್ಲಿಟ್ಟುಕೊಳ್ಳಬೇಕಾದುದೆಂದು ಆ ಸಮಿತಿಯವರು ಸಲಹೆಮಾಡಿರುವ ವೆಚ್ಚದ ಪ್ರಮಾಣವು ಇದೇ ಆಗಿದೆ. ಅವರು ಅಭಿಪ್ರಾಯಪಟ್ಟ ಮಟ್ಟಕ್ಕೇ ಸರ್ಕಾರದವರು ವೆಚ್ಚವನ್ನು ತಗ್ಗಿಸಿದ್ದಾರೆಂಬ ಸಂಗತಿಯು ನಿಮ್ಮ ಮನಸ್ಸಿಗೆ ಹಿತವಾಗಿರುವುದೆಂದು ನಂಬಿದ್ದೇನೆ.

1932-33 ನೆಯ ಸಾಲಿಗೆ ಮೂಲಧನದ ವೆಚ್ಚ.

ಮುಂದಣ ವರ್ಷ ಮೂಲಧನದ ಕಾಮಗಾರಿಗಳಿಗಾಗಿ 38,74,000 ರೂ. ಗಳನ್ನೊದಗಿಸಬೇಕೆಂದು ಗೊತ್ತುಮಾಡಲಾಗಿದೆ. ಈ ಮೊತ್ತವನ್ನು ಹಂಚಿಕೆ ಮಾಡಿರುವ ಬಗೆಯು ಹೇಗೆಂದರೆ:—

ರೈಲ್ವೆಗಳು—ರೈಲುಗಳು ಓಡಾಡುತ್ತಿರು "ಓಪನ್ ಲೈನು" ಗಳಿಗೂ ಮತ್ತು ಹೊಸದಾಗಿ ಏರ್ಪಡಿಸುವ ರೈಲುಮಾರ್ಗಗಳ ಕಾಮಗಾರಿಗಳಿಗೂ ಸಹ 10.75 ಲಕ್ಷ ರೂಪಾಯಿಗಳು.

ಕೃಷ್ಣರಾಜಸಾಗರ ಕಾಮಗಾರಿಗಳು—ಅಣೆಕಟ್ಟು ಮತ್ತು ಇರ್ವಿನ್ ನಾಲಾ ಕಾಮಗಾರಿಗಳು 14.00 ಲಕ್ಷ ರೂ. ಗಳು. ವಿದ್ಯುಚ್ಛಕ್ತಿಯ ಕಾಮಗಾರಿಗಳು 7.00 ಲಕ್ಷ ರೂ. ಬೆಂಗಳೂರಿಗೆ ನೀರು ಸರಬರಾಯಿ ಮಾಡುವ ಹೊಸ ಏರ್ಪಾಡಿನ ಕಾಮಗಾರಿಗಳಿಗೆ 5.00 ಲಕ್ಷ ರೂ. ಗಂಧದ ಎಣ್ಣೆಯ ಕಾರ್ಖಾನೆ ಮತ್ತು ಇತರ ಕೈಗಾರಿಕೆ ಕಾಮಗಾರಿಗಳು .99 ಲಕ್ಷ ರೂ. ಕಬ್ಬಿಣದ ಕಾರ್ಖಾನೆ 1.00 ಲಕ್ಷ ರೂ. ಜುಮ್ಲಾ 38.74 ಲಕ್ಷ ರೂ.

ಮೂಲಧನದ ವೆಚ್ಚವನ್ನು ಕೈಕೊಂಡು ಕೆಲಸಮಾಡತಕ್ಕ ಇಲಾಖೆಗಳಲ್ಲಿ ಮಂಜೂರಾದ ಕಾಮಗಾರಿಗಳಲ್ಲಿ ಇನ್ನೂ ಪೂರ್ತಿಯಾಗದೆ ಇರುವವುಗಳನ್ನು ಪೂರ್ತಿಗೊಳಿಸುವುದಕ್ಕೂ ಈಗಾಗಲೇ ಕಾರ್ಯಾರಂಭವಾಗಿರುವ ಉದ್ಯಮಗಳನ್ನು ಮತ್ತಷ್ಟು ಬಡಾವಣೆಗೊಳಿಸಿ ಅಭಿವೃದ್ಧಿ ಪಡಿಸುವುದಕ್ಕೂ ಮಾತ್ರವೇ ಆ ಇಲಾಖೆಗಳಿಗೆ ವೆಚ್ಚಕ್ಕೆ ಹಣವನ್ನೊದಗಿಸಲಾಗಿದೆ. ಅಷ್ಟೇ ಹೊರತು, ಹೊಸದಾಗಿ ಯಾವ ಭಾರಿ ಕಾಮಗಾರಿಯನ್ನು ಹಿಡಿಯುವುದಕ್ಕೂ ಮುಂದಣ ಸಾಲಿನ ಬಡ್ಜೆಟ್ಟಿನಲ್ಲಿ ವೆಚ್ಚಕ್ಕೆ ಹಣವನ್ನೊದಗಿಸಿಲ್ಲ.

ಆಯವ್ಯಯಗಳ ವಿಚಾರದಲ್ಲಿ ಮುಂದಿನ ಪರಿಸ್ಥಿತಿ.

ಹುಟ್ಟುವಳಿ ಬಾಬಿನಲ್ಲಿಯೂ ಮೂಲಧನದ ಕಾಮಗಾರಿಗಳ ಬಾಬಿನಲ್ಲಿಯೂ, ಚಾಲ್ತಿಸಾಲಿನ ಮತ್ತು ಮುಂದಿನಸಾಲಿನ ಆಯವ್ಯಯಗಳ ವಹಿವಾಟುಗಳ ಸಂಬಂಧವಾದ ಮುಖ್ಯ ವಿಚಾರಗಳನ್ನು ತಮಗೆ ಈಗ ಶ್ರುತಪಡಿಸಿದಂತಾಯಿತು.

ಈ 2 ವರ್ಷಗಳಲ್ಲಿಯೂ ಹುಟ್ಟುವಳಿಗಿಂತಲೂ ಹೆಚ್ಚು ಹಣವು ವೆಚ್ಚವಾಗುವುದಾಗಿದೆಯೆಂಬ ಅಂಶವನ್ನು ನಾನು ತಿಳಿಸಿದೆನಷ್ಟೆ. ಆ ಹೆಚ್ಚು ಮೊಬಲಗು ಖಜಾನೆಯಲ್ಲಿ [illegible] ಕೈಬಿಟ್ಟು [illegible] ದೆಂಬ ಈ ಸಂಗತಿಯನ್ನು ಕೇಳಿ, ಯಾರೂ [illegible] ಇಲ್ಲ. ಪ್ರಕೃತದಲ್ಲಿ ಸಮಗ್ರತಕ್ಕ [illegible] ಅವ್ಯಕ್ತಗಳಿಗೆ [illegible] ಇದ್ದೇವೆ. ಮುಂದಿನ [illegible]

ಮಕ್ಕಳಿದ್ದರೆಮನೆ ಚೆಂದ.

ಮಕ್ಕಳಿಗೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಫಲಿತ್ರಿಣಿ ಆಗುವಿರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. 8

[illegible]

ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಸಂಬಂಧಪಟ್ಟ ಹಣಕಾಸಿನ ವಿಚಾರಗಳು. (ಫೆಡರಲ್ ಫೈನಾನ್ಸ್)

[illegible]

“ಫೆಡರಲ್ ಫೈನಾನ್ಸ್” ಸಮಿತಿಯವರ ವರದಿ.

[illegible]

ಜಗದ್ಗುರು ಜಯದೇವ ವೀರಶೈವ ಹಾಸ್ಟಲ್
ಬೆಂಗಳೂರು.

[illegible]

Hon. Secretary
Jayadeva Veerasaiva Hostel,
Seshadri Road, Bangalore City

ನಾರಸಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ [illegible]
ಎಂದೂ ಆಗುವದಿಲ್ಲ. ನಾರಸವರು ಜರೂರ ತರಿಸಿ [illegible]
ಕೊಳ್ಳಿರಿ. ಕಿ. ೧ ರೂ. ಟ. ಖ. ೫ ಆಣೆ.
ಪತ್ತಾ—ವೈದ್ಯ ಪ್ಪಿ. ಎಸ್. ಕಾಪಸೆ, ಮಿರಜಿ [illegible]
8 M. C

೧೯೩೨ ನೆಯ ಇಸವಿ ಜೂನ್ ತಾ॥ ೧೩ ರಿಂದ ಜೂನ್ ತಾ॥ ೧೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಆಂಗಿರಸನಾಮಸಂವತ್ಸರದ ಜ್ಯೇಷ್ಠ ಶುದ್ಧ ನವಮಿಯಿಂದ ಜ್ಯೇಷ್ಠ ಬಹುಳ ಪಾಡ್ಯಮಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]
13	ಸೋಮ	ನ-ಉ	5-38-54-21	ಹಸ್ತ	32-48	24
14	(1) ಮಂಗಳ	ಏಕಾ	53-58	ಚಿತ್ರ	28-49	25
15	ಬುಧ	ದ್ವಾದ	47-40	ಸ್ವಾತಿ	24-36	26
16	ಗುರು	ತ್ರಯೋ	41-33	ವಿಶಾ	20-28	27
17	(2) ಶುಕ್ರ	ಚತು	35-49	ಅನೂ	16-37	28
18	ಶನಿ	ಪೌರ್ಣ	30-34	ಜ್ಯೇಷ್ಠ	13-13	29
19	ಭಾನು	ಪಾಡ್ಯ	26-8	ಮೂಲ	10-26	30

(1) ಶ್ರೀಮನ್ಮಹಾರಾಜರವರ ವರ್ಧಂತಿ, ಮಳೆನಕ್ಷತ್ರ-ಮೃಗಶಿರ ೩ ನೆಯ ಪಾದ. (2) ಮಳೆನಕ್ಷತ್ರ-ಮೃಗಶಿರ ೪ ನೆಯ ಪಾದ.

ಮೈಸೂರು : ಶ್ರೀ. [illegible]

REG. NO. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[illegible] ||
[illegible] ||
[illegible] ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸ್ ೧೯೩೨ ನೆಯ ಇಸವಿ ಜೂನ್ ತಾರೀಖು ೨೦ ನೆಯ ಸೋಮವಾರ [ಸಂಚಿಕೆ ೨೫

MYSORE SANDALWOOD OIL
Distilled in
GOVERNMENT FACTORIES

GUARANTEED B.P.P.J., & AM 4. P. STANDARDS.

PROVIDES

Excellent Base for the manufacture of Soaps, Perfumes, and other Toilet preparations of the Highest quality.

USED ALL THE WORLD OVER.

BUY A BOTTLE TO-DAY.

Available in Sealed Aluminium Bottles.

MOYSRE GOVERNMENT SANDALWOOD OIL FACTORY,
BANGALORE.

[50—48]

THE MYSORE AGRICULTURAL SCHOOL, HEBBAL, BANGALORE.

Abstract Notification No. A. S. M. GL. 225 of 31-32 dated 25th May 1932.

The Mysore Agricultural School at Hebbal, Bangalore will commence work for the session 1932-33 on 18th July 1932.

Applications for admission should be made to the Principal, Agricultural School, Department of Agriculture, Bangalore in the prescribed form with the necessary certificates, so as to reach the principal on or before the 20th June 1932. The entrance examination will be held on 27th June 1932.

For Further particulars see page 798-799, Part III of the Mysore Gazette dated 19th May 1932.

V. K. BADMI,
Principal.

[3—2]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕದ. [ಸ್ಟರ	ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ ವಕ್ರತಾ, ನಾಮರ್ದಕನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪಮ್ಮ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು ಇದ್ದ ಕಡಿಮೆ ಬರೋಣ, ಯಾವದೇಶರದ ರೋಗದಿಂದ ಎಡ್ಡ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ [illegible]

ಸ್ತ್ರೀ ರೋಗ ನಿವಾರಣೇ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[50—36]

ಪತ್ತಾ ಮಾಲಕ :—ವೈದ್ಯ ಪ್ಪಿ. ಎಸ್. ಕಾಪಸೆ. ಮು. ಪೋ. ಮಿರಜ ಎಂ. ಎಸ್. ಎಂ.

ಲಗ್ನಪತ್ರಿಕೆಗಳ
ಮುದ್ರಣಕ್ರಮ.

ನಮ್ಮ ಕರ್ಣಿ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಷಿಪ್ರಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ
ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇಂ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೬—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೬—೦
ವ್ರತಪಂಚಕ	೦—೪—೦	೦—೬—೦
ಗುರುಶಂಕರದೇವರಚರಿತೆ	೦—೧—೦	೦—೩—೦
ಬಸವೇಶ್ವರವಚನ	೦—೭—೦	೦—೧೨—೦
ಸಟೀಕ ಕರ್ನಾಟಕಶಬ್ದಮಂಜರಿ	೦—೮—೦	೦—೧೨—೦
ಸಟೀಕ ಶತಕತ್ರಯ	೧—೦—೦	೧—೬—೦

ಡಾಕ್ಟರ್ ಜೀ. ಬೀ. ಯವರ
ಸುಗಂಧ ನಶ್ಯದ ಪುಡಿ.

[illegible]

[illegible]

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
ಪೋ. ಬಾ. ೫೫೧, ಮದರಾಸು.

[50—41]

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಜೂನ್ ತಾ|| ೨೦ ನೆಯ ಸೋಮವಾರ.

SIR K. P. P. CHETTY'S BILL

We had occasion to refer in brief to the vote of the Representative Assembly on the Child Marriage Restraint's Bill of Sir K. P. P. Puttanna Chetty. The House by a majority decided in favour of the Bill, though the majority was not an overwhelming one. The Dewan Saheb who seemed to be in favour of the measure originally threw an unexpected surprise on the House by stating that in the matter of a piece of social legislation it may not be desirable to push through it when there was ophosition to the same. We would like to ask whether there could be any social legislation without opposition—and a very stout one too—from the community? If the community as a whole was aware of the evil against which one should legislate, there would hardly be any need for the legislation. The only point for consideration is whether the evil of early marriages is existing or not. Is it not having a most disastrous effect on the future race of the country? To us there can be only one answer, that is, in the positive. But what is really amusing in the attitude of those who stood against the Bill and the Dewan Saheb who was so susceptible to the tender feelings of the Pandit and Purohit elements is that while the whole of British India has accepted the measure Mysore alone becomes nervous about adopting it and thinks in all its wisdom that it is saving the mankind. The Brahmin members of the Assembly wanted to give a communal turn to the discussions, though the Bill was never intended to remedy the evil in any one community but in all communities irrespective of caste, creed or religion. In fact it was pointed out that the number of widows under the age of 15 among Brahmins was only about 5 percent of the total number, so that the non-Brahmins had about 95 percent of the widows under 15 among them. But yet the opposition came largely from the Brahmin community. They even said that Brahmanism was at stake! It was a curious kind of Brahmanism which could get dissolved at the mere postponement of a marriage to an age which is physically and morally the right age. It is a yet greater curious Brahmanism which can survive the Sarada Act in the British India but which cannot survive a much milder and more diluted measure of Sir K. P. P. Chetty! we wonder whether Mysore is going to constitute itself the sole guardian of this most precious heritage of child marriage. Even though Mysore is hesitant to adopt this wholesome measure it is not going to help any body in particular. On the other hand it will only perpetuate the evil that is eating into the very vitals of the society. It is a most fallacious thing to think that even the so-called orthodox elements are opposed to the measure. During the Birthday season the orthodox ladies organised a meeting at the Mahila Samaj under the presidency of Srimati Kamalamma Dasappa. There were only two speakers against the measure while there were four who spoke in favour of it. The result of voting was very intersting. 46 ladies all Brahmins voted against the measure, while 30 Brahmin ladies and 8 non-Brahmin ladies voted for the measure. We congratulate those Brahmin ladies who have shown a more progressive and courageous outlook than those Brahmin members of the Assembly, who are supposed to be more enlightened. We really wish that Government would get into real touch with the opinion in the country and not be guided by a few vocal reactionaries. We hope that public opinion in Mysore would become more expressive and stand by Sir K. P. P. Chetty.

ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಬಿಲ್ಲು.

ಬಾಲ್ಯವಿವಾಹ ನಿರೋಧಕ್ಕಾಗಿ ಸರ್ ಕೆ. ಪಿ. ಪುಟ್ಟಣ್ಣ ಶೆಟ್ಟರು ಸಿದ್ಧಗೊಳಿಸಿರುವ ಬಿಲ್ಲು ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಟ್ಟು ಸಭಿಕರೆಲ್ಲರಿಂದಲೂ ಅನುಮೋದಿಸಲ್ಪಡದಿದ್ದಾಗ್ಯೂ ಕೆಲವೇ ಹೆಚ್ಚು ಮತದಿಂದ ಅನುಮೋದಿತವಾದ ಸಂದರ್ಭವನ್ನು ಕಳೆದವಾರದ ಸ್ಟಾರ್ ಪತ್ರಿಕೆಯಲ್ಲಿ ತಿಳಿಸಿರುತ್ತೇವಷ್ಟೆ. ಈ ನಿರೋಧಶಾಸನವನ್ನು ಸಂಸ್ಥಾನದಲ್ಲಿ ಅನುಷ್ಠಾನಕ್ಕೆ ತರುವ ವಿಚಾರದಲ್ಲಿ ಮೊದಲು ಅನುಕೂಲಾಭಿಪ್ರಾಯವುಳ್ಳವರಾಗಿ ತೋರುತ್ತಿದ್ದ ದಿವಾನರವರು, ಬಹು ಜನಾಭಿಪ್ರಾಯವು ಪ್ರತಿಕೂಲವಾಗಿರುವುದರಿಂದ ಪ್ರಭುತ್ವದವರು ಈ ವಿಷಯದಲ್ಲಿ ಪ್ರವರ್ತಿಸಲು ಮನಸ್ಸಿಲ್ಲದವರಾಗಿರುತ್ತಾರೆಂದು ತಮ್ಮ ಉಪಸಂಹಾರ ಭಾಷಣದಲ್ಲಿ ಹೇಳಿ ಸಭಿಕರಿಗೆ ಅನಿರೀಕ್ಷಿತವಾದ ವಿಸ್ಮಯವನ್ನುಂಟುಮಾಡಿದರು. ಸಾಮಾಜಿಕ ಸುಧಾರಣೆಯ ಸಂಬಂಧವಾಗಿ ಯಾವ ಶಾಸನವು ತಾನೆ ವೃದ್ಧಾಚಾರ ಬದ್ಧರಾದವರ ಪ್ರಬಲ ನಿರೋಧವಿಲ್ಲದೆ ನಿರ್ಮಿಸಲ್ಪಡಲು ಸಾಧ್ಯವೆ? ಸಮಾಜದಲ್ಲಿ ಕೆಲ ವೃದ್ಧಾಚಾರಗಳಿಂದ ಕೆಡಕಾಗುತ್ತದೆಂದು ಜನರು ತಿಳಿದುಕೊಂಡಿರುವ ಪಕ್ಷದಲ್ಲಿ ಅದರ ನಿರೋಧಕ್ಕಾಗಿ ಯಾವ ಶಾಸನ ನಿರ್ಮಾಣಕ್ಕೂ ಅವಶ್ಯಕತೆಯೇ ಇರುವುದಿಲ್ಲ. ಈಗಿನ ಬಾಲ್ಯವಿವಾಹ ಪದ್ಧತಿಯಿಂದ ಕೆಡಕಾಗುತ್ತದೆಯೇ ಇಲ್ಲವೇ ಎಂಬುದು ಮುಖ್ಯವಾಗಿ ಪರಿಶೀಲಿಸಲ್ಪಡತಕ್ಕುದಾಗಿದೆ. ಈ ಕೆಡಕನ್ನು ನಿವಾರಣೆ ಮಾಡದಿದ್ದಲ್ಲಿ ಮುಂದಿನ ಪೀಳಿಗೆಗೆ ಮಹಾನರ್ಥವಾಗದೆ ತಪ್ಪುವುದಿಲ್ಲವೆಂದು ಹೇಳಬಲ್ಲೆವು. ಆದರೆ, ಪಂಡಿತರ ಮತ್ತು ಪುರೋಹಿತರ ಮಾತಿನಲ್ಲಿ ಬಹಳ ಗೌರವವನ್ನಿಟ್ಟಿರುವ ನಮ್ಮ ದಿವಾನರು ಬ್ರಿಟಿಷ್ ಇಂಡ್ಯಾದಲ್ಲೆಲ್ಲ ಅನುಮೋದಿತವಾಗಿ ಆಚರಣೆಗೆ ಬಂದಿರುವ ಬಾಲ್ಯವಿವಾಹ ನಿರೋಧ ಶಾಸನವನ್ನು ನಮ್ಮ ಸೀಮೆಯಲ್ಲಿ ಆಚರಣೆಗೆ ತರುವುದರಿಂದ ಮನುಷ್ಯವರ್ಗಕ್ಕೇ ಮಹಾ ಅನರ್ಥಪ್ರಾಪ್ತವಾಗುತ್ತದೆಂದು ಭಾವಿಸಿ ಅದನ್ನು ಅನುಮೋದಿಸದೆ ಹೋದುದು ಬಹಳ ಚೋಜಗವಾಗಿರುತ್ತದೆ. ಈ ಶಾಸನ ನಿರ್ಮಾಣವು ಯಾವುದಾದರೊಂದು ಕೋಮಿನಲ್ಲಿರುವ ಕೆಡಕನ್ನು ಮಾತ್ರ ನಿವಾರಣೆ ಮಾಡತಕ್ಕುದಾಗಿರದೆ ಜಾತಿ ಮತತಾರತಮ್ಯವಿಲ್ಲದೆ ಎಲ್ಲ ಕೋಮುಗಳಲ್ಲಿರುವ ಕೆಡಕನ್ನೂ ನಿವಾರಣೆ ಮಾಡುವುದಾಗಿದ್ದರೂ ಇದರಿಂದ ಬ್ರಾಹ್ಮಣ್ಯಕ್ಕೆ ಬಹಳ ಕೆಡಕಾಗುತ್ತದೆಂದು ಪ್ರಜಾಪ್ರತಿನಿಧಿಸಭೆಯ ಬ್ರಾಹ್ಮಣ ಮೆಂಬರುಗಳು ವಾದಿಸಿದರು. 15 ವರ್ಷಗಳೊಳಗಿರುವ ವಿಧವೆಯರ ಸಂಖ್ಯೆಯು ಬ್ರಾಹ್ಮಣರಲ್ಲಿ ಶೇಕಡ 5 ರಂತಿದ್ದರೆ, ಬ್ರಾಹ್ಮಣೇತರರಲ್ಲಿ ಶೇಕಡ 95 ರಂತಿರುತ್ತದೆಂದು ತೋರಿಸಿಕೊಡಲ್ಪಟ್ಟಿತಾದರೂ ಬ್ರಾಹ್ಮಣರೆಲ್ಲರೂ ಏಕವಾಕ್ಯತೆಯಿಂದ ಪ್ರತಿಭಟಿಸಿದರು. ಅಲ್ಲದೆ ಇದರಿಂದ ತಮ್ಮ ಬ್ರಾಹ್ಮಣ್ಯವೇ ನಾಶವಾಗಿ ಹೋಗುತ್ತದೆಂದು ಹೇಳಿದರು! ಪುಷ್ಟಿ ಮತ್ತು ತುಷ್ಟಿಕರವಾಗಿಯೂ, ಸತ್ಸಂತಾನಪ್ರದವಾಗಿಯೂ ಇರುವ ವಯಸ್ಸಿಗೆ ವಿವಾಹಕಾಲವನ್ನು ಹೆಚ್ಚಿಸುವುದರ ಮಾತ್ರದಿಂದಲೇ ಬ್ರಾಹ್ಮಣ್ಯವು ನಾಶವಾಗುವುದಾದರೆ, ಅದು ವಿಚಿತ್ರ ಬ್ರಾಹ್ಮಣ್ಯವೆಂದು ಹೇಳಬೇಕಾಗುತ್ತದೆ. ಬ್ರಿಟಿಷ್ ಇಂಡ್ಯಾದಲ್ಲಿ ಶಾರದಾ ಶಾಸನವು ಅನುಷ್ಠಾನದಲ್ಲಿರುವುದಾದರೂ ಉಳಿದುಕೊಂಡಿರುವ ಬ್ರಾಹ್ಮಣ್ಯವು ಶಾರದಶಾಸನದಷ್ಟು ಕಠಿಣವಾಗಿಲ್ಲದಿರುವ ಸರ್ ಕೆ. ಪಿ. ಪಿ. ಶೆಟ್ಟರ ಶಾಸನದಿಂದ ನಾಶವಾಗಿಹೋಗುವ ಬ್ರಾಹ್ಮಣ್ಯವು ಮತ್ತಷ್ಟು ವಿಚಿತ್ರವಾದುದೇ ಸರಿ. ಪಿತ್ರಾರ್ಜಿತವಾಗಿ ನಡೆದು ಬಂದಿರುವ ಈ ಅಮೂಲ್ಯ ಬಾಲ್ಯವಿವಾಹ ಪದ್ಧತಿಯನ್ನು ನಮ್ಮ ಪ್ರಭುತ್ವದವರು ಪೋಷಿಸಿಕೊಂಡು ಬರುವರೇನೊ ನೋಡಬೇಕಾಗಿದೆ. ಈ ಉಪಯುಕ್ತವಾದ ಬಿಲ್ಲನ್ನು ನಮ್ಮ ಪ್ರಭುತ್ವದವರು ಅನುಷ್ಠಾನಕ್ಕೆ ತರಲು ಸಂಕೋಚಪಡುವುದರಿಂದ ಯಾರಿಗೂ ಯಾವ ಪ್ರಯೋಜನವಾಗದೆ ಸಮಾಜಕ್ಕೆ ಮಾತ್ರ ಮತ್ತಷ್ಟು ಹಾನಿಯಾಗುತ್ತದೆ. ಪೂರ್ವಾಚಾರಪರಾಯಣರೆಲ್ಲರೂ ಈ ಶಾಸನ ನಿರ್ಮಾಣಕ್ಕೆ ವಿರೋಧವಾಗಿರುತ್ತಾರೆಂದು ಭಾವಿಸುವುದು ಶುದ್ಧ ತಪ್ಪು. ಕಳೆದ ವರ್ಧಂತಿಯ ಮಹೋತ್ಸವಕಾಲದಲ್ಲಿ ಪೂರ್ವಾಚಾರ ಶರಣ್ಯರ ಸ್ತ್ರೀಯರು ರಾಜಧಾನಿಯ ಮಹಿಳಾ ಸೇವಾಸಮಾಜದಲ್ಲಿ ಶ್ರೀಮತಿ ಕಮಲಮ್ಮ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ಈ ಬಾಲ್ಯವಿವಾಹ ನಿರೋಧಶಾಸನದ ಸಾಧಕ ಬಾಧಕಗಳನ್ನು ಕುರಿತು ಪರ್ಯಾಲೋಚಿಸುವಾಗ್ಗೆ, ಇಬ್ಬರು ಮಹಿಳೆಯರು ಪ್ರತಿಕೂಲವಾಗಿಯೂ ನಾಲ್ವರು ಅನುಕೂಲವಾಗಿಯೂ ಭಾಷಣ ಮಾಡಿದ ಮೇಲೆ 46 ಮಂದಿ ಬ್ರಾಹ್ಮಣ ಸ್ತ್ರೀಯರು ಶಾಸನವನ್ನು ಅನುಷ್ಠಾನಕ್ಕೆ ತರಕೂಡದೆಂದೂ, 30 ಮಂದಿ ಬ್ರಾಹ್ಮಣ ಸ್ತ್ರೀಯರೂ 8 ಮಂದಿ ಬ್ರಾಹ್ಮಣೇತರ ಸ್ತ್ರೀಯರೂ ಅನುಷ್ಠಾನಕ್ಕೆ ತರಬೇಕೆಂದೂ ಓಟುಗಳನ್ನು ಕೊಟ್ಟರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಈ ಶಾಸನವನ್ನು ವಿರೋಧಿಸಿದ ಮಹಾ ನಾಗರಿಕರೆಂದೆನಿಸಿಕೊಂಡಿರುವ ಬ್ರಾಹ್ಮಣ ಮೆಂಬರುಗಳಿಗಿಂತ ಧೈರ್ಯದಿಂದಲೂ ಸಮಾಜಾಭಿವೃದ್ಧಿ ಕಾಂಕ್ಷೆಯಿಂದಲೂ ಓಟನ್ನು ಕೊಟ್ಟ ಬ್ರಾಹ್ಮಣ ಮಹಿಳೆಯರನ್ನು ನಾವು ಅಭಿನಂದಿಸುತ್ತೇವೆ. ನಮ್ಮ ಪ್ರಭುತ್ವದವರು ಕೆಲವರ ಗೊಡ್ಡು ಬೆದರಿಕೆಯ ಮಾತಿಗೆ ಕಿವಿಕೊಡದೆ ಸಂಸ್ಥಾನದ ಬಹುಜನಾಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂದು ಆಶಿಸುತ್ತೇವಲ್ಲದೆ, ಮೈಸೂರಿನವರ ಅಭಿಪ್ರಾಯವಾದರೂ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಬಾಲ್ಯವಿವಾಹ ನಿರೋಧ ಶಾಸನ ನಿರ್ಮಾಣಕ್ಕೆ ಸಹಾಯಕವಾಗಿರುತ್ತದೆಂದು ನಿರೀಕ್ಷಿಸುತ್ತೇವೆ.

ಮುಸಲೋನಿಯವರನ್ನು ಕೊಲ್ಲಲೆತ್ನಿಸಿದವನಿಗೆ ಮರಣ ಶಿಕ್ಷೆ

ಇಟಲಿಯ ಪ್ರಭುತ್ವಾಧ್ಯಕ್ಷರಾದ ಮುಸಲೋನಿಯವರನ್ನು ಕೊಲ್ಲಲೆತ್ನಿಸಿದ ಏಂಜಿನಸ್ಬಾರ್ಡಿಲೆಸಿಲ್ಲೊ ಎಂಬವನಿಗೆ ಮರಣ ಶಿಕ್ಷೆ ವಿಧಿಸಲ್ಪಟ್ಟಿತು.

ಮಹಾತ್ಮರ ಪ್ರತಿಪಾದನ

ಮೊದಲು ಅರೆಸ್ಟಾಗಿರುವ ಭಾರತ ಕಾಂಗ್ರೆಸು ಸಂಘದವರು ಪುನಃ ಸ್ವೇಚ್ಛೆಯಾಗಿ ಸಭೆ ಸೇರಿ ನಿರ್ಣಯಿಸುವವರೆಗೂ ತಾವು ಯಾವ ವಿಷಯವನ್ನೂ ಹೇಳಲಾರವೆಂದು ಮಹಾತ್ಮರು ಹೇಳಿದುದಾಗಿ ವರ್ತಮಾನವಿದೆ.

ಸುರಂಗದ ರೈಲುಬಂಡಿಗಳ ತಾಕಾಟ

ಲಂಡನ್ ಪಟ್ಟಣದ ಸುರಂಗದಲ್ಲಿ ಓಡಾಡುವ ವಿದ್ಯುತ್ ರೈಲುಬಂಡಿಗಳು ತಾಕಾಡಿ ಕೆಲವಕ್ಕೆ ಅಪಾಯವಾಯಿತಲ್ಲದೆ ಪ್ರಯಾಣಿಕರಲ್ಲಿ ಇಬ್ಬರಿಗೆ ಕೊಂಚ ಪೆಟ್ಟು ತಗಲಿತು. ಕಳೆದ 20 ವರ್ಷಗಳಿಂದಲೂ ಬಂಡಿಗಳ ತಾಕಾಟವಾಗಿರಲಿಲ್ಲವಂತೆ.

೧೦೦ ನಿಮಿಷದಲ್ಲಿ ಮೈಸೂರಿನಿಂದ ಮದ್ರಾಸಿಗೆ

ರಾಜಧಾನಿಗೆ ವಾಯುವಿಮಾನದಲ್ಲಿ ಬಂದಿದ್ದ ಮದ್ರಾಸಿನ ಆನಡಿಯಪ್ಪಶೆಟ್ಟರು ತಮ್ಮ ಮಿತ್ರನೊಬ್ಬನೊಡನೆ ಕಳೆದ ಗುರುವಾರ ಪ್ರಾತಃಕಾಲ 8-30 ಘಂಟೆಗೆ ರಾಜಧಾನಿಯಿಂದ ಆಕಾಶಯಾನದಲ್ಲಿ ಹೊರಟು 9 ಘಂಟೆಗೆ ಬೆಂಗಳೂರನ್ನು ತಲುಪಿ ಅಲ್ಲಿ ಕೆಲಕಾಲದವರೆಗೆ ವಿಶ್ರಮಿಸಿಕೊಂಡು ಮಧ್ಯಾಹ್ನ 2-20 ಘಂಟೆಗೆ ಬೆಂಗಳೂರಿಂದ ಪ್ರಯಾಣಮಾಡಿ ಮದ್ರಾಸನ್ನು 3-30 ಘಂಟೆಗೆ ಸುರಕ್ಷಿತವಾಗಿ ತಲುಪಿದರು.

ಸಪ್ರೂ ಜಯಕರು ರಾಯಭಾರ

ಸರ ತೇಜ್ ಬಹದ್ದೂರ್ ಸಪ್ರೂಯವರು ಕೂಡಲೆ ಸಿಂಲಾಕ್ಕೆ ಬರಬೇಕೆಂದು ತಾ|| 13 ರಲ್ಲಿ ಪೂನಾದಲ್ಲಿದ್ದ ಜಯಕರರವರಿಗೆ ತಂತಿಯನ್ನು ಕೊಟ್ಟು ತಾವು ಸಿಮ್ಲಾಕ್ಕೆ ಬಂದಿರುವರು. ಜಯಕರರವರೂ ಸಿಮ್ಲಾಕ್ಕೆ ಬಂದಿರುತ್ತಾರೆ. ಪ್ರಕೃತ ರಾಜಕೀಯ ಪರಿಸ್ಥಿತಿಯನ್ನು ಅಂದರೆ ಅಲ್ಪಸಂಖ್ಯಾಕರ ಸಮಸ್ಯೆಯನ್ನು ಪರಿಷ್ಕರಿಸುವುದು, ರೌಂಡ್ ಟೇಬಲ್ ಸಲಹೆ ಸಂಘವನ್ನು ನಿಲ್ಲಿಸಿಬಿಡುವುದು, ಸಂಸ್ಕರಣಗಳ ಕಾಲವನ್ನು ನಿರ್ಣಯಿಸುವುದು ದೊರೆತನದವರಿಗೂ ಕಾಂಗ್ರೆಸ್ಸಿನವರಿಗೂ ರಾಜಿಮಾಡುವುದು ಮೊದಲಾದ ವಿಷಯಗಳನ್ನು ಕುರಿತು ಇವರಿಬ್ಬರೂ ವೈಸ್ರಾಯರೊಡನೆ ಸಂಭಾಷಿಸಿದುದಾಗಿ ತಿಳಿಯಬಂದಿದೆ.

ಕೊಲೆಗಾಗಿ ಶಿಕ್ಷೆ

ಮೆಮೆನ್‌ಸಿಂಗಿಗೆ ಸೇರಿದ ಒಂದು ಗ್ರಾಮವಾಸಿಯಾದ ಮಿಥುಶೇಖ್ ಎಂಬವನಿಗೂ ನೆರೆ ಗ್ರಾಮಸ್ಥರಿಗೂ ಮನಸ್ತಾಪವಿದ್ದಿತು. ಒಂದು ದಿವಸ ರಾತ್ರಿ ಮಿಥುಶೇಖನನ್ನು ನೆರೆ ಗ್ರಾಮದವರು ಔತಣಕ್ಕೆ ಬರಮಾಡಿಕೊಂಡು ಊಟವಾದ ಮೇಲೆ ಮಿಥುಶೇಖನನ್ನು ಪುಸಲಾಯಿಸಿ ಗ್ರಾಮದ ಹೊರಕ್ಕೆ ಕರೆದುಕೊಂಡು ಹೋಗಿ ಅವನ ಬಾಯಿಗೆ ಬಟ್ಟೆ ತುರುಕಿ ಅವನನ್ನು ಬಾವಿಯೊಳಕ್ಕೆ ಹಾಕಿ ಅದನ್ನು ಮಣ್ಣಿನಿಂದ ಮುಚ್ಚಿ ಬಂದಿದ್ದುದಕ್ಕಾಗಿ 10 ಮಂದಿ ಸೆರೆ ಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿರುವಲ್ಲಿ ಇಬ್ಬರಿಗೆ ಯಾವ ಜ್ಜೀವಕಾರಾಗೃಹವಾಸ ಶಿಕ್ಷೆಯೂ ಉಳಿದವರಿಗೆ 18 ತಿಂಗಳ ಕಠಿಣ ಸಜವೂ ವಿಧಿಸಲ್ಪಟ್ಟುವು.

ಅಗ್ನಿ ಅನಾಹುತದಿಂದ ತಾಯಿ ಮಗು ಸತ್ತರು

ಗುಡಿವಾಡ ಸಮೀಪದ ಹಳ್ಳಿಯಲ್ಲಿ ಒಬ್ಬ ವೈಶ್ಯ ಯುವತಿಯು ಸೀಮೆಯೆಣ್ಣೆಯ ಟಿನ್ನಿನಿಂದ ದೀಪದ ಬುಡ್ಡಿಗೆ ಎಣ್ಣೆಯನ್ನು ಹುಯ್ಯುತ್ತಿರುವಾಗ್ಗೆ ಬುಡ್ಡಿಯಿಂದ ದೀಪದ ಕಿಡಿ ಡಬ್ಬಾಕ್ಕೆ ಬಿದ್ದು ಎಣ್ಣೆಯು ಬುಗ್ಗೆಂದು ಹೊತ್ತಿಕೊಂಡು ಕೂಡಲೆ ಮನೆಗೆಲ್ಲಾ ವ್ಯಾಪಿಸಿತು. ತತ್‌ಕ್ಷಣವೇ ಆ ಹೆಂಗುಸು ಅಲ್ಲಿದ್ದ ತನ್ನೆರಡು ಮಕ್ಕಳಲ್ಲಿ ಒಂದನ್ನು ಹೊರಕ್ಕೆ ತಂದುಬಿಟ್ಟು ಇನ್ನೊಂದು ಮಗುವನ್ನೆತ್ತಿಕೊಂಡು ಬರಲು ಮನೆಯೊಳಕ್ಕೆ ನುಗ್ಗಿದಳು. ಕೂಡಲೆ ಅವಳ ಬಟ್ಟೆಯು ಹೊತ್ತಿಕೊಂಡು ಆಕೆಯು ಸುಟ್ಟುಹೋದಳಲ್ಲದೆ ಒಳಗಿದ್ದ ಮಗುವೂ ಹೊತ್ತಿಕೊಂಡು ಮೃತವಾಯಿತು. ಮನೆಯೊಳಗಿದ್ದ ಸರ್ವಸ್ವವೂ ಸುಟ್ಟು ಭಸ್ಮವಾಯಿತು. ಆ ಯುವತಿಯು ಹೊರಕ್ಕೆ ತರಲ್ಪಟ್ಟ ಕೊಂಚ ಹೊತ್ತಿನಮೇಲೆ ಪ್ರಾಣಬಿಟ್ಟಳು.

ಮೋಸದಿಂದ ವರದಕ್ಷಿಣೆ ಪಡೆದುದಕ್ಕಾಗಿ ಶಿಕ್ಷೆ

ಸುಶೀಲ ಕುಮಾರ ಬಾನರ್ಜಿ ಎಂಬವನು ಕಲಕತ್ತಾ ವಿಶ್ವವಿದ್ಯಾಲಯದಿಂದ ಎಂ.ಎ., ಪ್ರಶಸ್ತಿಯನ್ನು ಪಡೆದಿರುತ್ತೇನೆಂದೂ, ಅನೇಕಾನೇಕ ಪ್ರಶಸ್ತಿ ಪತ್ರಗಳೂ ಬಹುಮಾನಗಳೂ ಬಂದಿರುತ್ತವೆಂದೂ ಮೂರು ವೇಳೆ ಸುಳ್ಳು ಹೇಳಿ ಮೂರು ಕನ್ಯೆಗಳನ್ನು ವಿವಾಹ ಮಾಡಿಕೊಂಡು ಅವರ ಮೂಲಕ ಅಪಾರ ವರದಕ್ಷಿಣೆಯನ್ನೂ ಆಭರಣದುಕೂಲಗಳನ್ನು ಪಡೆದು ಕಡೆಯಲ್ಲಿ ಆ ಹೆಂಡಿರುಗಳನ್ನು ತ್ಯಜಿಸಿಬಿಟ್ಟುದಕ್ಕಾಗಿ ಇವನಿಗೆ ಕಲಕತ್ತಾ ಪ್ರೆಸಿಡೆನ್ಸಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ 3 ವರ್ಷ ಕಠಿಣ ಸಜಾ ಇವನಿಗೆ ಸಹಾಯಕರಾಗಿದ್ದ ಇವನ ತಾಯಿ ಸುಶೀಲ ಬಾಲಾದೇವಿಗೆ 2 ವರ್ಷ, ಚಿಕ್ಕಪ್ಪ ನಳಿನಾಥ ಭಾಟರ್ಜಿ ಗೋಪಿನ ಘಟಕಿಗೆ 6 ತಿಂಗಳ ಸಜ ವಿಧಿಸಲ್ಪಟ್ಟಿತಲ್ಲದೆ ಇವನ ಅಣ್ಣನ ಮಗನಾದ ಹರಿಚರಣ ಭಾಟರ್ಜಿಯು ಇವನಂತೆಯೇ ಒಳ್ಳೆ ಪ್ರತಿಷ್ಠಿತನಾದ ಯುವಕನೆಂದು ಹೇಳಿ ಯುವತಿಯನ್ನು ಮದುವೆಯಾಗಿ ವರದಕ್ಷಿಣೆ ಮೊದಲಾದ ದ್ರವ್ಯವನ್ನು ಪಡೆದುದಕ್ಕಾಗಿ 1 ವರ್ಷ ಕಠಿಣ ಸಜಾ ವಿಧಿಸಲ್ಪಟ್ಟಿತು.

ದೊರೆತನದವರಿಗೂ ಕಾಂಗ್ರೆಸಿನವರಿಗೂ ರಾಜೀಪ್ರಯತ್ನ

ಕಾಂಗ್ರೆಸಿನವರೊಡನೆ ರಾಜಿಮಾಡಿಕೊಳ್ಳಲು ಬ್ರಿಟಿಷ್ ಮಂತ್ರಿವರ್ಗದವರು ಈವರೆಗೆ ಪ್ರಯತ್ನಿಸಿದ ಸೂಚನೆ ಕಂಡು ಬರಲಿಲ್ಲವಾದರೂ ಆಂಡ್ರೂಸ್ ಮೊದಲಾದವರು ಒಂದು ಸಂಘವನ್ನು ಮಾಡಿಕೊಂಡು ಈ ವಿಷಯವಾಗಿ ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆ. ಇವರು ಮಹಾತ್ಮರಿಗೆ ಬರೆದ ಕಾಗದವನ್ನು ದೊರೆತನದವರು ಬಹಳ ಆಲಸ್ಯವಾಗಿ ಮಹಾತ್ಮರಿಗೆ ಕಳುಹಿಸಿಕೊಟ್ಟರು. ಅದಕ್ಕೆ ಮಹಾತ್ಮರು ಬರೆದ ಉತ್ತರವನ್ನು ಭಾರತ ಮಂತ್ರಿಗಳು ಬಹಳ ಸಾವಕಾಶವಾಗಿ ಮಿತ್ರರ ಸಂಘಕ್ಕೆ ಕಳುಹಿಸಿಕೊಟ್ಟರು. "ಡಾಕ್ಟರ್ ರವೀಂದ್ರರ ಸಂದೇಶದ ಭಾವವನ್ನು ಒಟ್ಟಿನಲ್ಲಿ ಅನುಮೋದಿಸುತ್ತೇನಾದರೂ ಇತರ ಕಾಂಗ್ರೆಸುನಾಯಕರೊಡನೆ ಆಲೋಚಿಸಿದೆಯೇ ನಿರ್ಧಾರವಾಗಿ ಏನನ್ನೂ ತಿಳಿಸಲಾರೆನು" ಎಂದು ಮಹಾತ್ಮರು ಬರೆದಿರುವುದಾಗಿ ತಿಳಿಯಬಂದಿದೆ. ರವೀಂದ್ರರ ಪ್ರಕಟನೆಯನ್ನು ಬ್ರಿಟಿಷ್ ಪತ್ರಿಕೆಗಳು ಬರೆಯುತ್ತಿವೆ ಅಲ್ಲದೆ, ಮಹಾತ್ಮರ ಪ್ರತ್ಯುತ್ತರವನ್ನು ಆಧಾರವಾಗಿಟ್ಟುಕೊಂಡು ಮತ್ತಷ್ಟು ಹೆಚ್ಚಾಗಿ ಪ್ರಚಾರ ಮಾಡುತ್ತಿರುವುದರವಿನಾ ಈಗ ಪಾರ್ಲಿಮೆಂಟು ಸಭೆಯಲ್ಲಿ ಅಧಿಕ ಸಂಖ್ಯಾಕರು ಪ್ರತಿಕೂಲರಾಗಿರುವುದರಿಂದ ಯಾವ ಪ್ರಯೋಜನವೂ ಆಗುವುದಾಗಿ ಕಂಡುಬರುವುದಿಲ್ಲ.

ಸಾವಿತ್ರಿದೇವಿಯ ವಿಚಾರಣೆ

ಲೈಸೆನ್ಸು ಇಲ್ಲದೆ ತುಪಾಕಿಗಳನ್ನೂ ಮದ್ದುಗುಂಡುಗಳನ್ನೂ ಇಟ್ಟುಕೊಂಡಿದ್ದುದಕ್ಕಾಗಿ ಸಾವಿತ್ರಿದೇವಿ ನಾಮಧೇಯಳಾದ ಪಂಜಾಬ್ ಸ್ತ್ರೀಯು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದಳೆಂದು ತಿಳಿಸಿದ್ದೆವಷ್ಟೆ. ಈಕೆಯು ತನ್ನ ವಿಚಾರಣೆಯಲ್ಲಿ "ನಾನು ಯಾವಾಗಲೂ ತುಪಾಕಿಗಳನ್ನೂ, ಮದ್ದುಗುಂಡುಗಳನ್ನೂ ಇಟ್ಟಿರಲಿಲ್ಲ ಮತ್ತು ಅವನ್ನು ಕೊಠಡಿಯಲ್ಲಾಗಲಿ ಸಾಮಾನುಗಳ ಸಂಗಡವಾಗಲಿ ಇದ್ದುದನ್ನು ಅರಿತವಳಲ್ಲ, ಅಲ್ಲದೆ ಅವುಗಳನ್ನೆಂದೂ ಮುಟ್ಟಿದವಳಲ್ಲ. ಈ ಕಾರಣದಿಂದ ನನ್ನಲ್ಲಿ ಲೈಸೆನ್ಸು ಇರಬೇಕಾದ ನಿಮಿತ್ತವಿಲ್ಲ. ನನ್ನ ಬಳಿಯಲ್ಲಿದ್ದಿತೆಂದು ತೋರಿಸುವ ಪಿತ್ತಾಳೆ ಕಡ್ಡಿಯು ನನ್ನದಲ್ಲ ಮತ್ತು ನನ್ನ ಕೊಠಡಿಯಲ್ಲಿ ಪೊಲೀಸಿನವರು ನನ್ನ ಸಮಕ್ಷಮ ಯಾವ ಪದಾರ್ಥವನ್ನೂ ತೆಗೆದುಕೊಂಡುದನ್ನು ನಾನು ನೋಡಲಿಲ್ಲ. ಮುಖ್ಯವಾಗಿ ನಾನು ಕುಳಿತಿದ್ದ ಸ್ಥಳ ಬಿಟ್ಟೇಳಗೊಡಲಿಲ್ಲ. ಕೃತ್ಯ ನಡೆದ ದಿವಸ ಆದ ತುಪಾಕಿಗಳ ಏಟಿನಿಂದ ಕಂಪಿತಳಾಗಿ ಭಯಭ್ರಾಂತೆಯಾದೆ. ಆ ವೇಳೆಯಲ್ಲಿ ನನ್ನ ವಿನಾ ಮತ್ತಾರೂ ನನ್ನ ಕೊಠಡಿಯಲ್ಲಿಲ್ಲದಿದ್ದುದನ್ನರಿತು ಪೊಲೀಸಿನವರು ಬಹಳ ಜುಲುಮಿನಿಂದ ಶೋಧನೆ ಮಾಡಿದರು. ಯಾವ ಪದಾರ್ಥಗಳನ್ನು ಶೋಧಿಸಿ ತೆಗೆದುಕೊಂಡರೆಂದು ನೋಡಿಕೊಳ್ಳಲು ನನ್ನ ಕಡೆಯವರಾರೂ ಇರಲಿಲ್ಲ. ಈ ಶೋಧನೆಯೆಲ್ಲವೂ ಬಹಳ ಅಕ್ರಮದಿಂದಲೂ ಜುಲುಮಿನಿಂದಲೂ ನಡೆದಿತು. ಅವರು ಇದರ ಕಾರಣವನ್ನೂ ಹೇಳಲಿಲ್ಲ ವಾರಂಟನ್ನೂ ತಂದಿರಲಿಲ್ಲ, ಆದರೂ ನಾನು ಮಾತ್ರ ಅವರನ್ನು ಅಡ್ಡಿ ಪಡಿಸಲಿಲ್ಲ. ನನ್ನ ಕೊಠಡಿಯಲ್ಲಿ ಸಿಕ್ಕಿದುವೆಂದು ಪೊಲೀಸಿನವರು ಹೇಳುವ ಪದಾರ್ಥಗಳು ಖಂಡಿತವಾಗಿಯೂ ನನ್ನವಲ್ಲ ಮತ್ತು ನನ್ನಲ್ಲಿರಲಿಲ್ಲ. ಇವುಗಳ ಗೋಜಿಗೆ ನಾನೆಂದೂ ಹೋದವಳಲ್ಲ. ನಾನು ವಿರೋಪ್ಯ ಸ್ತ್ರೀ ಎಂಬುದು ನಿಜ ಅಲ್ಲದೆ ಈ ದೇಶದ (ಈಚೆಗೆ ನನ್ನ ದೇಶದ) ಪ್ರಜೆಗಳ ರಾಜಕೀಯ ಆಶೋತ್ತರಗಳಲ್ಲಿ ನನಗೆ ಪೂರ್ಣ ಸಹಾನುಭೂತಿಯಿರುತ್ತದೆ. ನಾನು ಖದ್ದರನ್ನು ಧರಿಸುತ್ತೇನಲ್ಲದೆ ವಿಶೇಷಕಾಲದಲ್ಲಿ ಬೀದಿಗಳಲ್ಲಿ ಹೊತ್ತುಕೊಂಡು ಮಾರುತ್ತೇನೆ. ನಾನು ಮಹಾತ್ಮರ ಶಿಷ್ಯೆಯಾಗಿರುವೆನು. ನನ್ನಲ್ಲಿ ಮದ್ದುಗುಂಡು ಇದ್ದುವೆಂದು ಸುಳ್ಳು ಹೇಳುವುದು ನನ್ನ ರಾಜಕೀಯ ಉದ್ದೇಶಕ್ಕೆ ಅಪಾರ್ಥವನ್ನು ಕಲ್ಪಿಸುವುದಕ್ಕಾಗಿ. ಅಂತಹ ಪದಾರ್ಥಗಳಿಗೂ, ಅವುಗಳನ್ನುಳ್ಳ ಜನರಿಗೂ ನನಗೂ ಯಾವ ಸಂಬಂಧವೂ ಇರುವುದಿಲ್ಲ. ಈ ಸಂದರ್ಭದಲ್ಲಿ ನಾನು ತಪ್ಪಿಸಿಕೊಳ್ಳಲು ಬೇರೊಬ್ಬರ ಮೇಲೆ ಸುಳ್ಳು ಅಪಾದನೆ ಮಾಡತಕ್ಕವಳಲ್ಲ, ಆದರೆ ಯಾವುದೊಂದು ಕಾರಣವಿಲ್ಲದೆ ಅಪಾದಿತಳನ್ನಾಗಿ ಮಾಡಿರುವರೆಂದು ಬಹಳ ಧೈರ್ಯದಿಂದ ಹೇಳುವೆನು. ನಾನು ನಿರಪರಾಧಳೆಂದು ಮನಸ್ಸಾಕ್ಷಿಯಾಗಿ ಅರಿತಿರುವೆನು ಮತ್ತು ಕೋರ್ಟಿನವರು ಸಹ ಹಾಗೆಯೇ ತಿಳಿದು ದೋಷಮುಕ್ತಳನ್ನಾಗಿ ಮಾಡುವರೆಂದು ನಿರೀಕ್ಷಿಸುತ್ತೇನೆ" ಎಂದು ಹೇಳಿದಳು.

ಒಳದೇಶದ ವೃತ್ತಾಂತಗಳು.

ಮೈಸೂರು ಮತ್ತು ಬೆಂಗಳೂರುಗಳಲ್ಲಿರುವ ಕುರುಬರ ಹಾಸ್ಟೆಲ್‌ಗಳು ಜುಲೈ ತಿಂಗಳಲ್ಲಿ ಪ್ರಾರಂಭಿಸಲ್ಪಡುತ್ತವೆ. ಇಷ್ಟವುಳ್ಳ ವಿದ್ಯಾರ್ಥಿಗಳು ಆಯಾ ಹಾಸ್ಟೆಲ್‌ಗಳ ಸೆಕ್ರೆಟರಿಯವರಿಗೆ ಬರೆದುಕೊಳ್ಳತಕ್ಕುದು.

ನಮ್ಮ ಸಹೋದ್ಯೋಗಿಯಾದ ರಾಜಧಾನಿಯ ವಿಶ್ವಬಂಧು ಪತ್ರಿಕೆಯ 9 ನೆಯ ವರ್ಷದ ವರ್ಧಂತ್ಯುತ್ಸವವು ಕಳೆದ ತಾ|| 11 ನೆಯ ಶನಿವಾರ ಅಸಿಸ್ಟೆಂಟ್ ಕಮಿಷನರ್ ಮ|| ಕೆ. ಬಸವರಾಜ ಅರಸಿನವರ ಅಧ್ಯಕ್ಷತೆಯಲ್ಲಿ ನೆರವೇರಿತೆಂದು ತಿಳಿಯಲು ಸಂತೋಷಿಸುತ್ತೇವಲ್ಲದೆ ಈ ಪತ್ರಿಕೆಯು ದೀರ್ಘಾಯುವಾಗಿದ್ದು ಪ್ರಜಾಸೇವೆಯನ್ನು ಮಾಡಿ ಕೃತಕೃತ್ಯವಾಗಲೆಂದು ಹರಸುತ್ತೇವೆ.

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯ ವೆಸ್ಲಿಯನ್ ಮಿಷನ್ ಬಾಲಿಕಾಪಾಠಶಾಲೆಗಳ ಉಪಾಧ್ಯಾಯ ಉಪಾಧ್ಯಾಯಿನಿಯರುಗಳೂ, ವಿದ್ಯಾರ್ಥಿನಿಯರುಗಳೂ ಸೀಮೆಗೆ ತೆರಳುವ ರೆವರೆಂಡ್ ಸಾಡೆಸಾಹೇಬರನ್ನು ಬರಮಾಡಿಕೊಂಡು ಅವರ ಗುಣಪ್ರಶಂಸಾಪತ್ರಿಕೆಯನ್ನು ಪ್ರಫೆಸರ್ ವಾಡಿಯರವರ ಅಧ್ಯಕ್ಷತೆಯಲ್ಲಿ ಒಪ್ಪಿಸಿ ಸಾಹೇಬರಲ್ಲಿ ತಮಗಿರುವ ಪ್ರೀತಿ ಗೌರವಗಳನ್ನು ವ್ಯಕ್ತಪಡಿಸಿದರು.

ದಿವಾನರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್, ಕೆ‍ಟಿ.ಸಿ.ಐ.ಇ., ಒ.ಬಿ.ಇ., ಯವರು ಲಂಡನ್ ನಗರದಲ್ಲಿ ನೆರೆಯುವ ರೌಂಡ್‌ಟೇಬಲ್ ಕಾನ್ಫರೆನ್ಸಿನಲ್ಲಿ ಭಾಗಿಗಳಾಗಲು ನಿಯಮಿಸಲ್ಪಟ್ಟಿರುತ್ತಾರೆಂದು 1931 ರಲ್ಲಿ ಪ್ರಕಟವಾಗಿದ್ದ ವಿಷಯವನ್ನು ಅಜಾಗರೂಕತೆಯಿಂದ ಕಳೆದ ವಾರದ ಸ್ಟಾರ್‌ಪತ್ರಿಕೆಯ ಒಳದೇಶದ ವರ್ತಮಾನಗಳಲ್ಲಿ ಪ್ರಕಟಿಸಿರುವುದಕ್ಕಾಗಿ ವಿಷಾದಿಸುತ್ತೇವೆ.

ರಾಜಧಾನಿಯಲ್ಲಿ ಈ ಸಲ ನಡೆದ ಕುದುರೆ ಜೂಜಿನೊಳಗೆ ಮಹಾರಾಜರವರ ಕಪ್ ಸ್ವೀಪ್ ಲಾಟರಿಯಲ್ಲಿ ಮೊದಲನೆಯ ಬಹುಮಾನವಾದ 7626 ರೂ. ಕೊಯಮುತ್ತೂರಿನ ಬಾಲಾಂಬಾ ಎಂಬಾಕೆಗೂ, ಎರಡನೆಯ ಬಹುಮಾನವಾದ 3813 ರೂ. ನೀಲಗಿರಿಯ ಲೊವೆಡೇಲಿನ ಎಂ. ಅಲ್ಕೀನ್‌ಸರ್‌ರವರ ಕುಮಾರರಿಗೂ, ಮೂರನೆಯ ಬಹುಮಾನವಾದ 1906 ರೂ. ಮದ್ರಾಸಿನ ಪಾಡೆಯವರಿಗೂ, ಒಬ್ಬೊಬ್ಬರಿಗೆ 204 ರೂ. ನಂತೆ 14 ಮಂದಿಗೂ ಬಂದಿರುತ್ತವೆ.

ರಾಜಧಾನಿಯಲ್ಲಿ 1-2 ವಾರಗಳಿಂದ ಮಳೆಯಿಲ್ಲದೆ ಶಕೆಯು ಹೆಚ್ಚಾಗಿದೆ ಮತ್ತು ಬಹಳ ಹೊರವಾಗಿ ಬೆಳೆದಿರುವ ಜೋಳದ ಪೈರುಗಳು ಬಾಡುತ್ತಿರುವುದರಿಂದ ಜನರು ಆಕಾಶವನ್ನೇ ನೋಡುತ್ತಿರುವರು. ವರ್ಧಂತ್ಯುತ್ಸವಕ್ಕೆ ಬಂದಿದ್ದ ಮದ್ರಾಸ್ ಗೌರ್ನರು ಹೈದರಾಬಾದಿನ ಯುವರಾಜ ಸಹೋದರ ದಂಪತಿಗಳು, ಜಯಪುರ ಮಹಾರಾಜರು ಮೊದಲಾದ ಅತಿಥಿಗಳೆಲ್ಲರೂ ಹಿಂದಿರುಗಿ ಪ್ರಯಾಣಮಾಡಿದರು. ಹೊರಗಿನಿಂದ ಬಂದಿರುವ ಸಂಗೀತಗಾರರ ಹಾಡುಗಾರಿಕೆಯು ಶ್ರೀಮನ್ಮಹಾರಾಜರವರ ಸಮುಖದಲ್ಲಿ ನಡೆಯುತ್ತಿರುವುದು.

ಈ ವೇಳೆ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದಲ್ಲಿ ಶ್ರೀಮದ್ಯುವರಾಜರವರ ಸ್ವಾರಿಯೂ ಇದ್ದುದರಿಂದ ಅತ್ಯಂತ ಶೋಭಾಯಮಾನವಾಗಿಯೂ ಆಹ್ಲಾದಕರವಾಗಿಯೂ ಇದ್ದಿತು. ರಾತ್ರಿ ಅರಮನೆಗೆ ಹಿಂದಿರುಗಿ ಬರುವಾಗ್ಗೆ ಪ್ರಭುಸಹೋದರರುಗಳು ಅತ್ಯಂತ ಮನೋರಂಜಕವಾಗಿ ಅಲಂಕರಿಸಲ್ಪಟ್ಟಿದ್ದ ಮೋಟಾರು ಬಂಡಿಯಲ್ಲಿ ಕುಳಿತುಕೊಂಡಿದ್ದುದೂ ಮುಂಗಡೆ ಕುಲದೀಪಕರಾದ ಶ್ರೀ ಜಯಚಾಮರಾಜ ಒಡೆಯರವರು ಕುದರೆ ಸ್ವಾರಿಮಾಡಿಕೊಂಡು ಬರುತ್ತಿದ್ದುದೂ ಪ್ರೇಕ್ಷಕರ ಕಣ್ಣುಗಳನ್ನು ಸೂರೆಮಾಡಿದ್ದುವು. ಇಂತಹ ಉತ್ಸವಗಳನ್ನು ಪ್ರಜೆಗಳು ಅನಂತವಾಗಿ ನೋಡಿ ಧನ್ಯರಾಗುವಂತೆ ಅನುಗ್ರಹಿಸಲೆಂದು ಪರಮೇಶ್ವರನನ್ನು ನಾವು ಸರ್ವರೊಡನೆ ಪ್ರಾರ್ಥಿಸುತ್ತೇವೆ.

ಮೈಸೂರು ಪ್ರಜಾಪ್ರತಿನಿಧಿ ಸಭೆ.

ಬಜೆಟ್ ಅಧಿವೇಶನ—ಜೂನ್ 1932.

ದಿವಾನ್‌ರವರು ಅಧಿವೇಶನವನ್ನು ಪರಿಸಮಾಪ್ತಿಗೊಳಿಸುವುದರಲ್ಲಿ ಅಪ್ಪಣೆಕೊಡಿಸಿದ ಮುಕ್ತಾಯಭಾಷಣ.

13 ನೆಯ ಜೂನ್ 1932.

ಮಹನೀಯರೆ,—

ಪ್ರಜಾಪ್ರತಿನಿಧಿ ಸಭೆಯ ಈ ಅಧಿವೇಶನವನ್ನು ಮುಕ್ತಾಯಗೊಳಿಸುವುದರಲ್ಲಿ ನಾನು ಕೆಲವು ಅಂಶಗಳನ್ನು ಮಾತ್ರವೇ ಸೂಚಿಸುತ್ತೇನೆ.

ಈ ಅಧಿವೇಶನದಲ್ಲಿ ಸದಸ್ಯರುಗಳ ಪರ್ಯಾಲೋಚನೆಗಾಗಿ ಸರ್ಕಾರದವರು ಕೆಲವು ಮಸೂದಾ ಕಾನೂನುಗಳ ಸಾಮಾನ್ಯ ನಿಯಮಗಳ ವಿವರಣೆಗಳನ್ನು ಒಪ್ಪಿಸಿದ್ದರಷ್ಟೆ. ಈ ಸಂಬಂಧದಲ್ಲಿ ಒಂದೇ ಒಂದು ಮಸೂದಾ ಕಾನೂನಿನ ಹೊರತು ಉಳಿದ ಮಸೂದಾ ಕಾನೂನುಗಳೆಲ್ಲವನ್ನೂ ಈ ಸಭೆಯವರು ಅನುಮೋದಿಸಿದರು. ಭೂ ಸಂಪಾದನೆಯ ರೆಗ್ಯುಲೇಷನನ್ನು ತಿದ್ದುಪಾಟು ಮಾಡತಕ್ಕ ಮಸೂದಾ ಕಾನೂನಿನ ಸಂಬಂಧದಲ್ಲಿ ಮಾತ್ರ ಈ ಸಭೆಯವರ ಒಪ್ಪಿಗೆಯು ದೊರೆಯಲಿಲ್ಲ. ಈ ರೆಗ್ಯುಲೇಷನಿನ ಉದ್ದೇಶಗಳಿಗಾಗಿ ಪರಸ್ಪರ ಸಹಾಯ ಸಂಘಗಳನ್ನೂ ರಿಜಿಸ್ಟರ್ ಮಾಡಲ್ಪಟ್ಟ ಇತರ ಸಂಘಗಳನ್ನೂ ಕಂಪನಿಗಳಂತೆಯೇ ಭಾವಿಸುವಂತೆ ಭೂ ಸಂಪಾದನೆಯ ರೆಗ್ಯುಲೇಷನನ್ನು ತಿದ್ದುಪಾಟು ಮಾಡಬೇಕೆಂದು ಈ ಮಸೂದಾ ಕಾನೂನನ್ನು ಸದಸ್ಯರುಗಳಿಗೆ ಒಪ್ಪಿಸಲಾಗಿದ್ದಿತು. ಈ ಸಲಹೆಯಲ್ಲಿ ಹೊಸ ವಿಚಾರವೇನೂ ಸೇರಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿ 12 ವರುಷಗಳಿಂದಲೂ ಇದೇ ಬಗೆಯ ಕಾನೂನು ಆಚರಣೆಯಲ್ಲಿದ್ದು ಉಪಯುಕ್ತವಾಗಿ ಕಂಡುಬಂದಿದೆ. ಆ ಕಾನೂನಿನ ನಿಯಮಗಳನ್ನೇ ಮೈಸೂರು ಸಂಸ್ಥಾನದಲ್ಲಿಯೂ ಆಚರಣೆಗೆ ತರಬೇಕೆಂಬ ಉದ್ದೇಶದಿಂದ ಮಾತ್ರವೇ ಈ ಮಸೂದಾ ಕಾನೂನನ್ನು ರಚಿಸಿ ಅದರ ಸಾಮಾನ್ಯ ನಿಯಮಗಳ ವಿವರಣೆಯನ್ನು ಈ ಸಭೆಯವರಿಗೆ ಒಪ್ಪಿಸಿದ್ದೆವು. ಅದನ್ನು ಸದಸ್ಯರುಗಳು ಸಂತೋಷದಿಂದ ಅಂಗೀಕರಿಸುವರೆಂದೂ ನಂಬಿದ್ದೆವು. ಅದರ ಆಶಯದ ವಿಷಯದಲ್ಲಿಯೂ, ಅದರಿಂದ ಉಂಟಾಗಬಹುದಾದ ಫಲಿತಾಂಶಗಳ ವಿಷಯದಲ್ಲಿಯೂ ಸದಸ್ಯರುಗಳಿಗೆ ಸ್ವಲ್ಪಮಟ್ಟಿಗೆ ಯಾವುದೋ ಒಂದು ಬಗೆಯ ಶಂಕೆಯುಂಟಾಯಿತೆಂದು ತೋರುತ್ತದೆ, ಈ ಮಸೂದಾ ಕಾನೂನಿನ ವಿಚಾರದಲ್ಲಿ ಸಭೆಯವರ ಅನುಮತಿಯು ದೊರೆಯದೆ ಹೋದುದಕ್ಕೆ ಅದು ಮಾತ್ರವೇ ಕಾರಣವಾಗಿರಬೇಕು.

ನಾಟಕ, ಸರ್ಕಸ್ ಮುಂತಾದುವುಗಳ ಮೇಲಣ ತೆರಿಗೆ.

ನಾಟಕ, ಸರ್ಕಸ್ಸು, ಚಲನಚಿತ್ರಗಳು ಮುಂತಾದ ರಂಜನವಿನೋದನಗಳ ಮೇಲೆ ತೆರಿಗೆಯನ್ನು ಹಾಕುವುದಕ್ಕಾಗಿ ರಚಿಸಿರುವ ಮಸೂದಾ ಕಾನೂನಿನ ವಿಚಾರ. ಈ ತೆರಿಗೆಯಿಂದ ಬರುವ ಹಣವನ್ನು ಸ್ಥಳೀಯ ಸಂಸ್ಥೆಗಳಿಗೆ ಹಂಚಬೇಕೇ ಹೊರತು, ಅದರ ಯಾವ ಭಾಗವನ್ನೂ ಸರ್ಕಾರಿ ಹುಟ್ಟುವಳಿಗೆ ಸೇರಿಸಕೂಡದೆಂದೂ, ಆ ತೆರಿಗೆಯನ್ನು ವಸೂಲು ಮಾಡುವುದರಲ್ಲಿ ಸರ್ಕಾರಕ್ಕೆ ವೆಚ್ಚವೇನಾದರೂ ತಗಲಿದರೆ, ಅದನ್ನು ಮಾತ್ರವೇ ಸರ್ಕಾರದವರು ಆ ಹಣದಲ್ಲಿ ತೆಗೆದುಕೊಳ್ಳಬೇಕೆಂದೂ, ಸದಸ್ಯರುಗಳು ಸಲಹೆ ಮಾಡಿದರು. ಈ ಸಲಹೆಯನ್ನು ಸರ್ಕಾರದವರು ಅಂಗೀಕರಿಸಿರುತ್ತಾರೆ.

ಜಮೀನು ಹಕ್ಕುಗಳ ದಾಖಲಾತಿ ರೆಗ್ಯುಲೇಷನಿನ ಮೇರೆಗೆ ವಸೂಲಾಗುವ ಫೀಜುಗಳ ವಿಚಾರ.

ಜಮೀನು ಹಕ್ಕುಗಳ ದಾಖಲಾತಿಯ ರೆಗ್ಯುಲೇಷನಿನ ಮೇರೆಗೆ ವಸೂಲ್ಮಾಡುತ್ತಿರುವ ಫೀಜುಗಳನ್ನು ತಗ್ಗಿಸಬೇಕೆಂದು ಅರಿಕೆಗಳಾದುವು. ಹಿಂದೆ ಎರಡು ವರುಷಗಳ ಕೆಳಗೆ ಈ ಸಭೆಯಲ್ಲಿ ಇದೇ ಬಗೆಯ ಅರಿಕೆಗಳು ಮಾಡಲ್ಪಟ್ಟಾಗ, ನಾನು ಹೇಳಿದ್ದುದನ್ನೇ ಪುನಃ ಈಗಲೂ ಹೇಳಬೇಕಾಗಿದೆ. ಆಗ ನಾನು ಹೇಳಿದ್ದುದೇನೆಂದರೆ:—

"ಈ ರೆಗ್ಯುಲೇಷನಿನ ಮೇರೆಗೆ ವಿಧಾಯಕವಾಗಿರುವ ಫೀಜುಗಳಿಂದ ಲಾಭ ಸಂಪಾದನೆಮಾಡಿಕೊಳ್ಳಬೇಕೆಂಬ ಉದ್ದೇಶವು ನಮಗೆ ಖಂಡಿತವಾಗಿಯೂ ಇಲ್ಲ. ಜಮೀನು ಹಕ್ಕುಗಳ ದಾಖಲಾತಿಯ ಶಿಸ್ತನ್ನು ಆಚರಣೆಗೆ ತರಲು ತಗಲುವ ವೆಚ್ಚವು ಆ ಏರ್ಪಾಡಿಗೆ ಸಂಬಂಧಪಟ್ಟ ಕಾರ್ಯಕಲಾಪಗಳಿಂದ ಹುಟ್ಟುವಳಿಯಾಗುವಂತಿರಬೇಕೆಂಬ ಉದ್ದೇಶದಿಂದ ಮಾತ್ರವೇ, ಸರ್ಕಾರದವರು ಈಗ ಜಾರಿಯಲ್ಲಿರುವ ಫೀಜುಗಳ ದರವನ್ನು ಗೊತ್ತುಮಾಡಿದ್ದಾರೆ."

ಈ ವಿಷಯವಾಗಿ ಚರ್ಚೆಯು ನಡೆಯುತ್ತಿದ್ದಾಗ ತಮಗೆ ಒಪ್ಪಿಸಿದ ಲೆಕ್ಕಗಳಿಂದ ಈ ಬಾಬಿನಲ್ಲಿ ವೆಚ್ಚಕ್ಕಿಂತಲೂ ಹುಟ್ಟುವಳಿಯು ಎಲ್ಲೋ ಅಲ್ಪಸ್ವಲ್ಪ ಮಾತ್ರವೇ ಹೆಚ್ಚಾಗಿದೆಯೆಂಬುದು, ತಮಗೆ ಮನಮುಟ್ಟಿ ಗೋಚರವಾಗಿರಬೇಕು. ಹೀಗಿರುವಲ್ಲಿ ಫೀಜುಗಳ ದರವನ್ನು ಪ್ರಕೃತದಲ್ಲಿ ತಗ್ಗಿಸುವುದು ಸಾಧ್ಯವಲ್ಲವೆಂಬ ವಿಷಯವು ತಮ್ಮುಗಳಿಗೆ ಮನದಟ್ಟಾಗಿರುವುದೆಂದು ಖಂಡಿತವಾಗಿ ನಂಬುತ್ತೇನೆ. ಆದರೂ ಈ ಕೂಡಲೇ ಜಮೀನು ಹಕ್ಕುಗಳ ದಾಖಲಾತಿಯ ಶಿಸ್ತಿಗೆ ತಗಲತಕ್ಕ ವೆಚ್ಚವನ್ನು ತಗ್ಗಿಸುವುದಕ್ಕೇನಾದರೂ ಅವಕಾಶವುಂಟೆ ಎಂಬ ಸಂಗತಿಯನ್ನು ಮತ್ತೊಮ್ಮೆ ಪರಿಶೀಲಿಸಿ ನೋಡಿ, ಫೀಜಿನ ದರವನ್ನೇನಾದರೂ ತಗ್ಗಿಸುವುದು ಸಾಧ್ಯಕಂಡಲ್ಲಿ, ಹಾಗೆ ಸಾಧ್ಯಕಂಡಷ್ಟು ಸಹಾಯವನ್ನೂ ಮಾಡಲಾಗುವುದು.

ಬಾಲ್ಯವಿವಾಹ ನಿರೋಧಕ ಮಸೂದಾ ಕಾನೂನಿನ ವಿಚಾರ.

ಬಾಲ್ಯವಿವಾಹವನ್ನು ನಿರೋಧಿಸುವ ಮಸೂದಾ ಕಾನೂನಿನ ವಿಚಾರದಲ್ಲಿ ತೀವ್ರಾಸಕ್ತಿಯಿಂದಲೂ ಸ್ವಾರಸ್ಯವಾಗಿಯೂ ಚರ್ಚೆಯು ನಡೆಯಿತು.

ಸದಸ್ಯರಲ್ಲಿ ಬಹುಭಾಗದವರೇನೋ ಈ ಮಸೂದಾ ಕಾನೂನನ್ನು ಆಚರಣೆಗೆ ತರಬಹುದೆಂದು ಅಭಿಪ್ರಾಯಪಟ್ಟರು. ಆದರೆ ಬಾಲ್ಯವಿವಾಹವು ನಡೆಯುವುದಾದರೆ ಅಂತಹ ಸಂದರ್ಭಗಳಲ್ಲಿ ಶಿಕ್ಷೆಯನ್ನು ವಿಧಾಯಕಮಾಡಿ ತನ್ಮೂಲಕ ಅದನ್ನು ತಪ್ಪಿಸುವುದಾದ ಈ ಮಸೂದಾ ಕಾನೂನನ್ನು ಆಚರಣೆಗೆ ತಂದಲ್ಲಿ, ಒಳ್ಳೆಯದಾಗುವುದಕ್ಕಿಂತಲೂ ಹೆಚ್ಚಾಗಿ ಕೆಡುಕೇ ಆಗುವುದೆಂದು ಹಲವು ಮಂದಿ ಸದಸ್ಯರು ಅಭಿಪ್ರಾಯಪಟ್ಟರು. ಅಂತೂ ಹಾಗೂ ಹೀಗೂ ಇರುವವರ ಮನೋಭಾವಗಳನ್ನೆಲ್ಲಾ ತೂಗಿ ನೋಡಿದರೆ, ಸದ್ಯದಲ್ಲೇನೋ ಈ ವಿಚಾರದಲ್ಲಿ ವಿದ್ಯಮಾನಗಳನ್ನು ಈಗಿರುವಂತೆಯೇ ಬಿಟ್ಟು ಸುಮ್ಮನಿರುವುದು ಮೇಲೆಂದು ಅನುಮೇಯಿಸಬೇಕಾಗಿದೆ. ಮತಕ್ಕೂ, ಸಾಮಾಜಿಕ ವಿಚಾರಗಳಿಗೂ ಉಭಯತಾಪಿ ಸಂಬಂಧಪಟ್ಟಿರುವ ವಿಷಯಗಳಲ್ಲಿ ಕಾನೂನನ್ನು ವಿಧಾಯಕ ಮಾಡಲು ನಮ್ಮ ದೇಶದಲ್ಲಿ ಎಷ್ಟೋ ಅನೇಕ ತಪ್ಪುಗಳಿವೆ. ಹೆಚ್ಚುಕಾಲ ಸ್ಥಿರವಾಗಿ ನಿಲ್ಲುವಂತಹ ವಾಸ್ತವವಾದ ಸುಧಾರಣೆಗಳಾಗಬೇಕಾದರೆ ಜನಗಳು ತಮ್ಮ ತಿಳುವಳಿಕೆಯಿಂದ ತಾವೇ ಮನಃಪೂರ್ವಕವಾಗಿ ಸುಧಾರಣೆಗಳನ್ನು ನೆರವೇರಿಸುವುದರಿಂದ ಅದು ಸರಾಗವಾಗಿ ಸಾಗುವುದೆಂಬುದೂ ಒಂದು ತತ್ತ್ವವಾಗಿದೆ. ಹೊರಗಿನ ನಿರ್ಬಂಧಗಳನ್ನು ಕಲ್ಪಿಸುವುದರಿಂದ ಅದು ನೆರವೇರುವಂತೆ ಮಾಡುವುದು ಸಾಧ್ಯವಿಲ್ಲ.

ನಾನು ಹೀಗೆ ಹೇಳುತ್ತಿರುವೆನಾದರೂ ಅನೇಕಾನೇಕ ಸುಧಾರಣೆಗಳನ್ನು ಆಚರಣೆಗೆ ತಂದಿರುವ ತುರ್ಕಿಸ್ಥಾನದವರ ಉದಾಹರಣೆಯನ್ನು ನಾನು ಮರೆತಿಲ್ಲ. ಆದಾಗ್ಯೂ, ನಮ್ಮ ದೇಶದ ಸ್ಥಿತಿಗತಿಗಳು, ಅದರಲ್ಲಿಯೂ ಮುಖ್ಯವಾಗಿ ಮತವಿಷಯಕವಾದ ಮತ್ತು ಸಾಮಾಜಿಕ ವಿಷಯವಾದ ಸ್ಥಿತಿಗತಿಗಳು, ತುರ್ಕಿಸ್ಥಾನದ ಸ್ಥಿತಿಗತಿಗಳಂತಿಲ್ಲವೆಂಬುದನ್ನೂ ನಾವು ಮರೆಯಕೂಡದು ಒಂದು ದೇಶದಲ್ಲಿ ಅವಶ್ಯವೂ ಮತ್ತು ಉಪಾದೇಯವೂ ಆದುದು, ಮತ್ತೊಂದು ದೇಶದಲ್ಲಿ ಅನಾವಶ್ಯಕವಾಗಿರಬಹುದಲ್ಲದೆ, ಅಲ್ಲಿ ಅದನ್ನು ಆಚರಣೆಗೆ ತರುವುದು ಉಚಿತವೆನಿಸದೆ ಇರಬಹುದು.

ಆದಕಾರಣ, ಬಾಲ್ಯವಿವಾಹವನ್ನು ನಿರೋಧಿಸುವ ಕಾನೂನಿಗೆ ಒತ್ತಾಸೆ ಕೊಡುವ ವಿಷಯದಲ್ಲಿ ಪ್ರಜಾಭಿಪ್ರಾಯವು ಇನ್ನೂ ಹೆಚ್ಚು ಪ್ರಸನ್ನವಾಗಿ ಅದು ಆಗಿಯೇ ತೀರಬೇಕೆಂದು ದೃಢಪಡುವವರೆಗೂ, ಸರ್ಕಾರದವರು ಈ ವಿಷಯದಲ್ಲಿ ಪ್ರವರ್ತಿಸಲು ಮನಸ್ಸಿಲ್ಲದವರಾಗಿದ್ದಾರೆ. ಪ್ರಗತಿಸಾಧನೆಯ ಮನೋಭಾವವು ನಮ್ಮ ದೇಶದಲ್ಲಿ ಅನೇಕ ವಿಷಯಗಳಲ್ಲಿ ಈಗ ವ್ಯಕ್ತಗೊಂಡಿದೆ. ಈ ವಿಚಾರದಲ್ಲಿಯೂ ಕೂಡ ಅದು ತಕ್ಕಷ್ಟುಮಟ್ಟಿಗೆ ಪರಿಸ್ಫುಟವಾಗಿ ವೃದ್ಧಿಹೊಂದಿ ಅವಶ್ಯರೀತಿಯಲ್ಲಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ನಮಗೆ ಸೌಕರ್ಯವನ್ನುಂಟುಮಾಡಲೆಂದು ಹಾರೈಸೋಣ.

ಮೈಸೂರು ಸಂಸ್ಥಾನದ ಫೊಗದಿ ಮತ್ತು ಅಖಿಲ ಭಾರತೀಯ ಸಂಯುಕ್ತ ರಾಜ್ಯಾಂಗ ವ್ಯವಸ್ಥೆ.

ಫೊಗದಿಯ ವಿಷಯವಾಗಿ ತಾವುಗಳೆಲ್ಲರೂ ಈ ಬಗೆಯಲ್ಲಿ ಏಕಕಂಠವಾಗಿ ಅರಿಕೆ ಮಾಡಿದುದನ್ನು ಕುರಿತು ಆ ಸಂಬಂಧವಾಗಿ ನಾನು ಕೆಲವು ಸಂಗತಿಗಳನ್ನು ಸೂಚಿಸುವೆನು ನಾನು ಹಾಗೆ ಮಾಡುವೆನೆಂದು ತಾವು ನಿರೀಕ್ಷಿಸಿರುವಿರೆಂಬುದರಲ್ಲಿ ಸಂಶಯವಿಲ್ಲ.

ಈ ಫೊಗದಿಯ ವಿಚಾರವು ಅನುಕೂಲರೀತಿಯಲ್ಲಿ ವ್ಯವಸ್ಥೆಯಾಗದೆ ಹೋದರೆ ನಿರ್ವಾಹವೇ ಇಲ್ಲವೆನ್ನುವಷ್ಟುಮಟ್ಟಿಗೆ ಅದು ಸಂಸ್ಥಾನದ ಪ್ರಜೆಗಳಿಗೆ ಅಷ್ಟು ಅಷ್ಟು ಪ್ರಾಮುಖ್ಯವಾಗಿದೆ. ಆದಕಾರಣ ಇದರ ವಿಷಯದಲ್ಲಿ ಸಹಜವಾಗಿಯೇ ತಾವುಗಳೆಲ್ಲರೂ ತಂತಮ್ಮ ಮನಸ್ಸಿನ ಅಭಿಪ್ರಾಯಗಳನ್ನೆಲ್ಲಾ ಅತಿ ಧಾರಾಳವಾಗಿ ವ್ಯಕ್ತಪಡಿಸಿರುವಿರಿ. ಈ ವಿಷಯದಲ್ಲಿ ಸದಸ್ಯರುಗಳ ಅಭಿಪ್ರಾಯಗಳೂ ಆಶಯಗಳೂ ಹೇಗಿವೆ ಎಂಬುದು ಸರ್ಕಾರದವರಿಗೆ ಸಂಪೂರ್ಣವಾಗಿ ಗೋಚರವಾಗುವುದಕ್ಕೆ ಇದರಿಂದ ಅವಕಾಶವುಂಟಾಯಿತು. ತಾವುಗಳು ವ್ಯಕ್ತಪಡಿಸಿದ ಈ ಅಂಶಗಳೆಲ್ಲಕ್ಕೂ ಮಹಾಜನಗಳ ಅಭಿಪ್ರಾಯವೂ ಆಧಾರವಾಗಿ ಅದರ ಅವಲಂಬನವೂ ಒತ್ತಾಸೆಯೂ ಇರುವುವೆಂಬುದನ್ನೂ ಸಹ, ಸರ್ಕಾರದವರು ಅರಿತುಕೊಂಡೇ ಇದ್ದಾರೆ. ಈ ವಿಷಯದಲ್ಲಿ ಬ್ರಿಟಿಷ್ ಇಂಡಿಯಾದಲ್ಲಿರುವ ನಮ್ಮ ದೇಶಬಾಂಧವರ ಸಹಾನುಭೂತಿಯೂ ನಮಗುಂಟು. ಈ ಅಂಶವು "ರೌಂಡ್ ಟೇಬಲ್" ಸಮ್ಮೇಳನದ ಕಳೆದ ಅಧಿವೇಶನದಲ್ಲಿ ವ್ಯಕ್ತವಾಯಿತೆಂಬುದನ್ನು ನಾನು ಇಲ್ಲಿ ಸೂಚಿಸಬಹುದಾಗಿದೆ.

ನಿಖಿಲ ಭಾರತೀಯ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ವಿಷಯಕ್ಕೆ ನಮ್ಮ ಮೈಸೂರು ಸಂಸ್ಥಾನಕ್ಕಿಂತಲೂ ಅಧಿಕವಾದ ಒತ್ತಾಸೆಯನ್ನು ಏಕಪ್ರಕಾರವಾಗಿ ಮೊದಲಿನಿಂದಲೂ ಕೊಟ್ಟಿರುವ ಸಂಸ್ಥಾನವು ಮತ್ತಾವುದೂ ಇಲ್ಲ. ಬ್ರಿಟಿಷ್ ಇಂಡಿಯಾದ ಮತ್ತು ಸಂಸ್ಥಾನಗಳ ಪುರೋಭಿವೃದ್ಧಿಗೂ ಉಭಯತಾಪಿ ಸಂಬಂಧಪಟ್ಟಿರುವ ಅನೇಕ ವಿಷಯಗಳು ಇತ್ಯರ್ಥವಾಗಬೇ...

...ಜಿಸುತ್ತ, ಎಷ್ಟು ಕಾಲವು ಕಳೆದರೂ ಲೇಶಮಾತ್ರವೂ ಅಚ್ಚಳಿಯದೆ ಶಾಶ್ವತವಾಗಿ ಕಂಗೊಳಿಸುವಂತೆ ಸಂಯುಕ್ತ ವ್ಯವಸ್ಥೆಯ ಭವ್ಯಮಂದಿರವನ್ನು ನಿರ್ಮಿಸುವುದಕ್ಕೆ ಕಾರಣವಾಗಲೆಂಬುದಾಗಿ ನಾವೆಲ್ಲರೂ ಹೃತ್ಪೂರ್ವಕವಾಗಿ ಹಾರೈಸೋಣ.

ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡ್

ನೋಟೀಸು.

ಚಿತ್ರದುರ್ಗದ ತಾಲ್ಲೂಕಿನಲ್ಲಿ ಈ ಕೆಳಗೆ ನಮೂದು ಮಾಡಿರುವ ಕಾಂಗಾರಿಗಳನ್ನು ನಡೆಸತಕ್ಕ ಬಗ್ಗೆ ಬೇರೆ ಬೇರೆ ಸೀಲ್ಡು ಟೆಂಡರುಗಳು ತಾ|| 2-7-1932 ನೇ ಮಧ್ಯಾಹ್ನ 3 ಘಂಟೆ ವರುವಿಗೆ ತೆಗೆದುಕೊಳ್ಳಲಾಗುತ್ತೆ. ಪ್ಲಾನ್ ವಗೈರೆ ತಪಸೀಲುಗಳನ್ನು ಕೆಲಸ ನಡೆಯುತ್ತಿರುವ ಕಾಲಗಳಲ್ಲಿ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

		ರೂ.
1.	ಸಾದರಹಳ್ಳಿ, ಭಾವಿಮಾಡಿಸುವುದು, ಡಿಪಾಜಿಟ್	100
2.	ಚಿಪ್ಪಿನಕೆರೆ .... ,,	100
3.	ಚಿಕ್ಕ ಗುಂಟನೂರು .... ,,	100
4.	ಗೊಡಬನಹಾಳು .... ,,	100

ಕಾಂಗಾರಿಗಳನ್ನು 1932 ನೇ ಡಿಸೆಂಬರ್ ಆಖೈರೊಳಗೆ ಪೂರೈಸಬೇಕು.

ಜಿ. ಚೆನ್ನಪ್ಪ,
ಪ್ರೆಸಿಡೆಂಟ್.

[2—2]

NOTICE.

Tenders are invited for preparing a scheme and an estimate for installation of electric plants in Gadag Betgeri Municipal limits to provide 1000 electric lights of 25 candle power excluding decorative lights and big lights on public squares.

Sealed tenders should be submitted within one month from the date of this notice only by the qualified electrical engineers or by companies who have employed such engineers.

In the tenders information should be given regarding the charges for preparing the scheme and estimate after visiting this place.

Detailed information if any required may be obtained from this office.

Municipal Office,
Gadag Betgeri, 16-6-32.

T. V. KOTI,
President,
Gadag Betgeri
Municipal Borough.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ

ಗುಂಡ್ಲುಪೇಟೆ ತಾ|| ಮಡಹಳ್ಳಿ

ತರೀಕೆರೆ ತಾ|| ಗಡಿಹಳ್ಳಿ

ಕ್ಲೋಸ್‌ಪೇಟೆ.

ಹಸ್ ಕಿತ್ತಳೆಗಿಡಗಳು.

ನಮ್ಮಲ್ಲಿ 2 ಅಡಿಯಿಂದ 4 ಅಡಿ ವರೆಗೆ ಯತ್ತರವಿರುವ ಬೀಜದ ಹಸ್ ಕಿತ್ತಳೆ ಗಿಡಗಳು, 100 ಗಿಡಗಳಿಗೆ 10 ರೂ. ಗಳಂತೆ ಕ್ರಯಕ್ಕೆ ದೊರೆಯುತ್ತವೆ ಅಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ವಿಳಾಸ:-ಜಂಗಮರ ಸಣ್ಣಯ್ಯ ಯಾನೆ ಕರಿಬಸವಯ್ಯ,
1 ಗುಡಗಳಲೆ ಗ್ರಾಮ, ಶನಿವಾರ ಸಂತೆ ಪೋಸ್ಟು, ಕೊಡಗು.

ಸ್ವೀಕಾರ

ಕೈ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ವೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ವೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

ವು|| ಗಳಾಡ

(1) ಹಾಸನದ ಹೊ|| ಮುಳ್ಳಪ್ಪನವರ ಪುತ್ರ ಚಿ|| ಮರುಳಸಿದ್ಧಪ್ಪನವರಿಗೂ ಆಲೂರು ಕೆ. ರುದ್ರಪ್ಪನವರ ಪುತ್ರಿ ಚಿ|| ಸೌ|| ಪಾರ್ವತಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ಆಲೂರು ಶೀಳಿನ ಕಾಳಪ್ಪನವರ ...

ಪತ್ರವ್ಯವಹಾರ

ಶುಭೋದಯ ಸೂಚನೆ.

ಶ್ರೀ ಜಗದಾಚಾರ್ಯರ ಅಡ್ಡಪಲ್ಲಕ್ಕಿಯುತ್ಸವವು.

ಮಾದರಿ ಮದುವೆ ಆಕ್ಷೇಪಗಳಿಗೆ ಜವಾಬು.

ಖರ್ಚುಮಾಡಲಿಲ್ಲವೆಂದೂ, ಮೋಟಾರುಕಾರು ಕುದುರೆ ಬಂಡಿ ವಗೈರೆಗಳನ್ನು ತಂದ ಹೊರತು ಬರ ವುದಿಲ್ಲವೆಂದೂ ಹೆಣ್ಣಿನವರು ಹೇಳಲಿಲ್ಲವೆಂದು ಲಗ್ನಕ್ಕೆ ಬಂದಿದ್ದ ಸ್ಥಳ ... ಚೆನ್ನಾಗಿ ಗೊತ್ತು ... ಬರುವುದನ್ನು ನೋಡಿದರೆ, ಈ ಲಗ್ನಭಾಗಿಗಳು ಮದುವೆ ಮನೆಯ ...

ಪುಣಸಟ್ಟಿ ಸಂಬಳ.

ಮದ್ದೂರು ತಾಲ್ಲೂಕು ಬೇಸಗರಹಳ್ಳಿ.

ಶಿವದೀಕ್ಷಾ ಸಂಸ್ಕಾರ.

... ಮತದ ವೇ|| ಪಟ್ಟದ ಶಿವರುದ್ರಸ್ವಾಮಿಗಳವರು ದೀಕ್ಷಾಕರ್ತೃತ್ವವನ್ನು ವಹಿಸಿದ್ದರು. ಸ್ವಾಮಿಗಳು ವಟುಗಳ ಸಮೇತ ಹುಲ್ಲಹಳ್ಳಿ ವಿರಕ್ತಮಠದ ಶ್ರೀನಿರಂಜನ ಪ್ರಣವಸ್ವರೂಪಿಗಳಾದ ಚೆನ್ನಮಲ್ಲದೇಶಿಕೇಂದ್ರ ಮಹಾಸ್ವಾಮಿಯವರನ್ನು ಸ್ತೋತ್ರಮಾಡಿ ವಟುಗಳಿಗೆ ದೀಕ್ಷಾಸಂಸ್ಕಾರಮಾಡಲು ಅಪ್ಪಣೆ ...

ಸ್ಕೂಲ್ ಕಟ್ಟಡದ ಪ್ರವೇಶೋತ್ಸವ.

ದಾವಣಗೆರೆಯ ಕಳಸವು ಕಳಚಿಬಿದ್ದಿತು.

... ವರ ದುರ್ದೈವದಿಂದ ಕಳಚಿಬಿದ್ದಂತಾಯಿತು. ಅವರು ಊರಿಗೆ ಎಂತಹ ಗಂಡಾಂತರಬಂದರೂ ಸ್ವಲ್ಪವೂ ಧೈರ್ಯಗೆಡದೆ ಗಂಡಾಂತರ ಪರಿಹಾರಕ್ಕೆ ಏನೇನು ಬೇಕೋ ಅದನ್ನು ಮಾಡುತ್ತಿದ್ದರು. ಊರಿನ ಅಭಿವೃದ್ಧಿಗಾಗಿ ತಮ್ಮ ದೇಹವನ್ನೇ ಸವೆಸುತ್ತಿದ್ದರು. ಪೌರಸಭೆಯಲ್ಲಿ ಬಹು ವರ್ಷಗಳಿಂದ ...

ಸದಸ್ಯರಾಗಿದ್ದುಕೊಂಡು ಪೌರಸಭೆಯ ಕಾರ್ಯವು ... ನಡೆಯಲು ಸಹಾಯಕರಾಗಿದ್ದರು ... ಪ್ರಯೋಜನವನ್ನು ಅಪೇಕ್ಷಿಸಿ ಹೇಳುವ ಹಾಗಿಲ್ಲ. ... ಪ್ರತಿಯೊಬ್ಬರೂ ಇವರಿಗೆ 'ದೊಡ್ಡಪ್ಪ' 'ದೊಡ್ಡಪ್ಪ' ಎಂಬುದಾಗಿ ಹೇಳುತ್ತಿದ್ದರು. ...

ದಾವಣಗೆರೆ ಪುರವಾಸಿಗಳ ಅನುತಾಪಸೂಚನಾಸಭೆ.

ಮೈಸೂರು ಸೀಮೆಯ ಶ್ರೀಮನ್ಮುಕ್ಕುಕ ವೀರಶೈವರ ಪ್ರಥಮ ಸಮ್ಮೇಳನ.

... ಆರಂಭೋತ್ಸವವು ಹೊಳಲ್ಕೆರೆ ತಾ|| ಅಬ್ಬಿನಾಯಕನಹಳ್ಳಿ ಗ್ರಾಮದ ಶ್ರೀಯುತ ನಾಡಿಗ ಸಿದ್ಧರಾಮಪ್ಪನವರಿಂದ ನೆರವೇರಿಸಲ್ಪಟ್ಟಿತು. ಇದಾದನಂತರ ಸ್ವಾಗತಮಂಡಲಿಯ ಅಧ್ಯಕ್ಷರಾದ ವು|| ನಂದಿಹೊಸಳ್ಳಿ ಚಂದೇಗೌಡರು ತಮ್ಮ ಭಾಷಣದಲ್ಲಿ ಈ ಸಮ್ಮೇಳನದ ಉದ್ದೇಶಗಳನ್ನು ತಿಳಿಸಿದರು. ಸಮ್ಮೇಳನದ ಅಧ್ಯಕ್ಷರು ವೀರಶೈವ ಜನಾಂಗದ ಪೂರ್ವದ ಪ್ರಾಶಸ್ತ್ಯವನ್ನೂ ಈಗಿನ ಅವನತಿಯನ್ನೂ ವಿವರಿಸಿ ಇದಕ್ಕೆ ಕಾರಣಗಳು ವಿದ್ಯಾವಿಹೀನತೆ ಮತ್ತು ಈ ಜನಾಂಗದ ಒಳಪಂಗಡಗಳಲ್ಲಿರುವ ಪರಸ್ಪರ ದ್ವೇಷಾಸೂಯೆಗಳೇ ಮುಖ್ಯವಾದುವುಗಳೆಂದೂ, ಅವುಗಳನ್ನು ಹೋಗಲಾಡಿಸತಕ್ಕ ಬಗ್ಗೆ ಈಗಿನ ಕಾಲಕ್ಕನುಸಾರವಾಗಿ ಸಮಾಜ ಸುಧಾರಣೋಪಾಯಗಳನ್ನು ಅಂಗೀಕರಿಸಿ ...

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿರಿ

ಗರ್ಭಧಾರಣ ಸಂಜೀವಿನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆವಿಗುರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ ಖ. ೫ ಆಣೆ

ಪತ್ತೆ—ವೈದ್ಯ ಪ್ಪಿ. ಎಸ್. ಕಾಪಸೆ. ಮಿರಜ. M. C. 9

ಮುಂತಾಗಿ ಸೂಚಿಸಿ, ಈ ಮಠಸ್ಥ ವೀರಶೈವ ಸಂಘದ ಶ್ರೇಯೋಭಿವೃದ್ಧಿಗೆ ಆವಶ್ಯಕವಾದ ಕೆಲವು ಅಂಶಗಳನ್ನು ತಿಳಿಸಿದರು. ಇದಾದಮೇಲೆ ಮ... ಗಳಾದ ಗುಬ್ಬಿ ತಾ|| ಹುಲ್ಲೇಕೆರೆ ನಂಜೇಗೌಡರು, ... ತಾ|| ... ಮಾರಂಗೆರೆ ಚನ್ನೇಗೌಡರು, ಚಿಕ್ಕನಾಯಕನಹಳ್ಳಿ ತಾ|| ... ಪುರದ ಎಸ್. ಕೆ. ಶಿವಪ್ಪಗೌಡರು, ... ನಾಯಕನಹಳ್ಳಿ ತಾ|| ದೊಡ್ಡ ಯಗ್ಗೆರೆ ಮು. ... ಭದ್ರೇಗೌಡರು, ಹೊಸದುರ್ಗ ತಾ|| ... ನವರು, ಹೊಳಲ್ಕೆರೆ ತಾ|| ಅಬ್ಬಿನಾಯಕನಹಳ್ಳಿ ಎಂ. ಬಿ. ... ನವರು, ತರೀಕೆರೆ ತಾ|| ಕಲ್ಲೇನಹಳ್ಳಿ ರಾಮಪ್ಪನವರು ಮತ್ತು ... ಸಿದ್ದಪ್ಪನವರು ವಗೈರೆಯವರು ಸಂಘಶಕ್ತಿಯಿಂದಾಗುವ ಪ್ರಯೋಜನ, ವಿದ್ಯಾಪ್ರಾಮುಖ್ಯತೆ, ಸಮಾಜದ ವ್ಯಕ್ತಿಗಳಲ್ಲಿ ಪರಸ್ಪರ ಪ್ರೇಮಭಾವವನ್ನು ಏಕಮತ್ಯವನ್ನು ಬೆಳಸುವುದು, ಸಮಾಜದಲ್ಲಿನ ಕುಂದುಕೊರತೆಗಳನ್ನು ಹೋಗಲಾಡಿಸುವುದು ಮುಂತಾದ ವಿಷಯಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಭಾಷಣಗಳನ್ನು ಮಾಡಿದರು. ಈ ಸಭೆಯಲ್ಲಿ ಸಮಾಜೋದ್ಧಾರಕ್ಕೆ ಅನುಕೂಲವಾದ ಅನೇಕ ನಿರ್ಣಯಗಳು ಚರ್ಚೆಗೆ ತರಲ್ಪಟ್ಟವು. ಅವುಗಳಲ್ಲಿ ಸರ್ವಾನುಮತದಿಂದ ಒಪ್ಪಲ್ಪಟ್ಟ ಮುಖ್ಯವಾದ ಕೆಲವನ್ನು ಮಾತ್ರ ಇಲ್ಲಿ ಸೂಚಿಸಿದೆ :—

(1) ಈ ಸಮಾಜದಲ್ಲಿ ವಿದ್ಯಾಪ್ರಸಾರದ ಬಗ್ಗೆ ಒಂದು ಫಂಡನ್ನು ಏರ್ಪಡಿಸತಕ್ಕದ್ದು. ಈ ಫಂಡಿನ ವ್ಯವಸ್ಥೆಗಳನ್ನು ನೋಡಿಕೊಳ್ಳತಕ್ಕ ಬಗ್ಗೆ 1 ಸಂಘವನ್ನೇರ್ಪಡಿಸಿ ಅದಕ್ಕೆ "ಮೈಸೂರು ಸೀಮೆಯ ಶ್ರೀಮಠ ಮಠಸ್ಥ ವೀರಶೈವ ಸಂಘ" ಎಂದು ಹೆಸರು ಇಡತಕ್ಕದ್ದು. ಈ ಸಂಘಕ್ಕೆ ಮೆಂಬರಾಗಿ ಸೇರತಕ್ಕ ಪ್ರತಿಯೊಬ್ಬ ಸಮಾಜಾಭಿಮಾನಿಯೂ ವರ್ಷ 1 ಕ್ಕೆ ಕನಿಷ್ಠ ಪಕ್ಷ 1 ರೂ. ನಂತೆ ಕೊಡತಕ್ಕದ್ದು.

(2) ಈ ಸಂಘದ ಕಾರ್ಯಕಲಾಪಗಳನ್ನು ನಡೆಸತಕ್ಕ ಬಗ್ಗೆ 150 ಜನ ಮೆಂಬರುಗಳುಳ್ಳ 1 ಜನರಲ್ ಕಮಿಟಿಯಿರತಕ್ಕದೆಂದು ಮತ್ತು ಈ ಕಮಿಟಿಯಿಂದಲೇ ಚುನಾಯಿಸಲ್ಪಟ್ಟ 30 ಜನ ಮೆಂಬರುಗಳುಳ್ಳ 1 ಕಾರ್ಯನಿರ್ವಾಹಕ ಮಂಡಳಿ ಇರತಕ್ಕದ್ದೆಂದು ತೀರ್ಮಾನವಾದನಂತರ ಈ ಮೆಂಬರುಗಳ ಚುನಾವಣೆಯು ಸಹ ನಡೆಸಲ್ಪಟ್ಟು ಇವೆರಡು ಕಮಿಟಿಗಳಿಗೂ ಈ ಸಭೆಯ ಅಧ್ಯಕ್ಷರಾದ ಮ|| ಗಳಾದ ನಾಡಿಗ ಬಸಪ್ಪನವರು, ಬಿ.ಎ., ವಕೀಲರು. ಇವರೇ ಅಧ್ಯಕ್ಷರಾಗಿರಬೇಕೆಂದೂ, ... ತಾ|| ಕಲ್ಲಕೆರೆ ಗ್ರಾಮದ ಕೆ. ಲಿಂಗಪ್ಪನವರು ಮತ್ತು ಮಾಳೇನಹಳ್ಳಿ ಗ್ರಾಮದ ನಂಜಪ್ಪನವರು ಸಹ ಸೆಕ್ರೆಟರಿಗಳಾಗಿರಬೇಕೆಂದೂ, ಮಾಳೇನಹಳ್ಳಿ ಮುಂದಲಮನೆ ಹನುಮಪ್ಪನವರು ಖಜಾಂಚಿಯವರಾಗಿರತಕ್ಕದ್ದೆಂದೂ, ಉಳಿದವರು ಇವರುಗಳ ಸಹಾಯಕ್ಕಾಗಿ ಆಯಾಯ ಕಮಿಟಿಗಳಲ್ಲಿ ಮೆಂಬರುಗಳಾಗಿರತಕ್ಕದ್ದೆಂದೂ ತೀರ್ಮಾನವಾಯಿತು.

(3) ಈ ಸಮಾಜದಲ್ಲಿ ನಡೆಸಲ್ಪಡತಕ್ಕ ಪ್ರತಿಯೊಂದು ಶುಭ ಶೋಭನ ಕಾರ್ಯಗಳಲ್ಲಿಯೂ ಈ ಸಂಘಕ್ಕೆ 2 ರೂ. ನಂತೆ ಆಯಾಯ ಗ್ರಾಮದ ಪ್ರತಿನಿಧಿಗಳು ಕಾರ್ಯಸ್ಥರಿಂದ ವಸೂಲ್ಮಾಡಿ ಸಂಘದ ಸೆಕ್ರೆಟರಿಯವರ ಹೆಸರಿಗೆ ಕಳಿಸಿ ರಸೀದಿ ಪಡೆಯತಕ್ಕದ್ದು.

(4) ಈ ಸಮಾಜದವರು ಲಗ್ನಕಾಲಗಳಲ್ಲಿ ಮಿತವ್ಯಯವನ್ನು ಆಚರಣೆಗೆ ತರತಕ್ಕ ಬಗ್ಗೆ ತಾತ್ಕಾಲದಲ್ಲಿ ಆಚರಣೆಯಲ್ಲಿರುವ ದುಂದುವೆಚ್ಚಕ್ಕೆ ಕಾರಣಗಳಾದ ಹೆಚ್ಚುದಿನ ಲಗ್ನ ಕಾರ್ಯವನ್ನು ನಿಲ್ಲಿಸುವಿಕೆ, ಊಟ ಮತ್ತು ವೀಳ್ಯ ಮೊದಲಾದ ವಿಷಯಗಳಲ್ಲಿರತಕ್ಕ ನಿರ್ಬಂಧದ ಕಟ್ಟುಗಳು ಮುಂತಾದುವುಗಳನ್ನು ಬಿಟ್ಟು ತನ್ಮೂಲಕ ಬಹು ಸುಲಭೋಪಾಯದಿಂದ ಲಗ್ನಗಳನ್ನು ನಡೆಸತಕ್ಕದ್ದು.

(5) ಈ ಸಮಾಜದ ಜನಗಳನೇಕರಲ್ಲಿ ಲಗ್ನಕಾಲದಲ್ಲಿ ತೆಗೆದುಕೊಳ್ಳತಕ್ಕ ಕನ್ಯಾಶುಲ್ಕ ಅಂದರೆ ಹೆಣ್ಣಿನ "ತೆರ" ವನ್ನು ತೆಗೆದುಕೊಳ್ಳುವ ಪದ್ಧತಿಯನ್ನು ಮತ್ತು ಲಗ್ನದ ಖರ್ಚಿಗಾಗಿ ಹೆಣ್ಣಿನವರು ತೆಗೆದುಕೊಳ್ಳುವ ಹಣವನ್ನು ಸಂಪೂರ್ಣವಾಗಿ ಬಿಟ್ಟು ಶಾಸ್ತ್ರೋಕ್ತ ಕನ್ಯಾದಾನ ಪದ್ಧತಿಯನ್ನು ಆಚರಣೆಗೆ ತರತಕ್ಕದ್ದು.

(6) ಈ ಮತದಲ್ಲಿರುವ ಕೆಲವು ಮೂಢಸಂಪ್ರದಾಯಗಳು ಅಂದರೆ ಅನ್ಯದೇವತಾಭಜನೆ, ಪೂಜೆ, ಹಂಕೆ ವಗೈರೆಗಳನ್ನು ನಡೆಸುವುದನ್ನು ಮತ್ತು ದನಕರುಗಳನ್ನು ಕಟುಕರಿಗೆ ಮಾರುವುದನ್ನು ಸಂಪೂರ್ಣವಾಗಿ ತ್ಯಜಿಸತಕ್ಕದ್ದು.

ಇವೇ ಮೊದಲಾದ ಠರಾವುಗಳು ತೀರ್ಮಾನವಾದನಂತರ ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಈ ಸಭಾ ಚಾಲಕರಾದ ಮಹನೀಯರನ್ನು ಸಮಾಜದ ಪರವಾಗಿ ವಂದಿಸಿದರು. ಯಾವ ಕಾರ್ಯವೇ ಆಗಲಿ ಪ್ರಯೋಜನವನ್ನು ಕೊಡಬೇಕಾದರೆ, ಅದಕ್ಕೆ ಸಂಬಂಧಪಟ್ಟವರೆಲ್ಲರೂ ತ್ರಿಕರಣಪೂರ್ವಕವಾಗಿ ಅದನ್ನು ಕೈಕೊಂಡು ನಡೆಸಿದಾಗ ಮಾತ್ರವೇ ಪ್ರಯೋಜನಕರವಾಗುವುದು. ಆದುದರಿಂದ ತಾವು ಕೈಗೊಂಡಿರುವ ಈ ಪವಿತ್ರವಾದ ಸಮಾಜಸೇವಾಕಾರ್ಯವನ್ನು ಇಲ್ಲಿಗೆ ಕೊನೆಗಾಣಿಸದೆ ಎಲ್ಲರಲ್ಲಿಯೂ ಪ್ರಚಾರಪಡಿಸಿ ಅವರವರ ಶಕ್ತ್ಯನುಸಾರ ಈ ಕಾರ್ಯಕ್ಕೆ ಸಹಾಯ ಸೌಕರ್ಯಗಳನ್ನು ಒದಗಿಸಲು ಯತ್ನಿಸಬೇಕು. ನಮ್ಮ ನಮ್ಮಲ್ಲಿರತಕ್ಕ ವ್ಯಕ್ತಿ ವಿಷಯಕವಾದ ಹೆಚ್ಚು ಕಡಿಮೆಗಳನ್ನೂ, ಕುಂದುಕೊರತೆಗಳನ್ನೂ ಮನಸ್ಸಿಗೆ ತಂದುಕೊಳ್ಳದೆ ಎಲ್ಲರಲ್ಲಿಯೂ ಒಗ್ಗಟ್ಟು ಬೆಳೆಯಲು ಯತ್ನಿಸಿ ತನ್ಮೂಲಕ ಸಮಾಜವು ಅಭಿವೃದ್ಧಿಯಾಗುವಂತೆ ಮಾಡುವವರಾಗಬೇಕೆಂದು ಹೇಳಿ ಈ ಸಭೆಯನ್ನು ಮುಕ್ತಾಯಗೊಳಿಸಿದರು. ಇದಾದನಂತರ ಸಭೆಯಲ್ಲಿ ತೀರ್ಮಾನವಾದ ಮೊದಲನೇ ಠರಾವಿನ ಪ್ರಕಾರ ಸಂಘವು ಸ್ಥಾಪನೆಯಾಗಿ ತತ್ಸಂಬಂಧವಾದ ಕಾರ್ಯಗಳು ಆಗಲೇ ಆರಂಭವಾದವು. ಸಭೆಗೆ ಬಂದಿದ್ದ ಮಹನೀಯರನೇಕರು ಈ ಸಂಘಕ್ಕೆ ದ್ರವ್ಯಸಹಾಯ ಮಾಡುವುದಾಗಿ ವಾಗ್ದಾನಮಾಡಿದ್ದು ಬಹು ಸಂತೋಷಾರ್ಹವಾಗಿದೆ. ಹೀಗೆ ವಾಗ್ದಾನ ಮಾಡಿದ ಹಣವು ಸುಮಾರು 3,000 ರೂ. ಗಳಾಗಬಹುದು. ಸಂಘದವರು ಈ ಹಣವನ್ನು ವಸೂಲ್ಮಾಡಿ ಸಮಾಜಕಾರ್ಯಕ್ಕೆ ಬೇಕಾದ ಕರ್ತವ್ಯಗಳನ್ನು ನಡೆಸಲು ಕೂಡಲೆ ಆರಂಭಮಾಡಬೇಕಾಗಿ ವಿಜ್ಞಾಪನೆ.

ಮತಾಭಿಮಾನಿ.

[illegible]

ಯಸ್ಯನಾಸ್ತಿ ಸ್ವಯಂಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಂ | ಲೋಚನಾಭ್ಯಾಂ ವಿಹೀನಸ್ಯ ದರ್ಪಣಃ ಕಿಂ ಕರಿಷ್ಯತಿ ಇತ್ಯಾದಿ || ಸ್ಥೂಲಸೂಕ್ಷ್ಮಾರ್ಥವಿಷಯಾ ಮತಿರಾಗಾದಿಗೋಚರಾ | ಬುದ್ಧಿಸ್ತಾತ್ಕಾಲಿಕೀಜ್ಞೇಯಾ ಪ್ರಜ್ಞಾ ತ್ರೈಕಾಲ್ಯಗೋಚರಾ || ಇತ್ಯಾದಿ.

ಸಶೇಷ.

ಆಸ್ಥಾನವಿದ್ವಾನ್ ಶ್ರೀಮಾನ್ ವೇದಮೂರ್ತಿ ಬಿ. ಎಂ. ಶ್ರೀಕಂಠ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯ ವಿಮರ್ಶೆಯೂ.

(ಲೇಖಕ —ವೇ|| ಎಚ್. ಗೋಪಾಲಕೃಷ್ಣಮಾಚಾರ್ಯ, ಕರ್ಣಾಟಕ ಪಂಡಿತರು, ಟ್ರೇನಿಂಗ್ ಕಾಲೇಜು, ಮೈಸೂರು.)

ದಿಗ್ದರ್ಶನಂ.

(ಜೂನ್ ತಾ|| 13ರ ಸಂಚಿಕೆಯಿಂದ ಮುಂದುವರಿದುದು.)

ಈಗ ಮಹಾಗಹನವಾದ ಶಕ್ತಿಲಕ್ಷಣವನ್ನು ವಿಚಾರಿಸುವವರಾಗಿದ್ದೇವೆ. ಈ ವಿಚಾರವು ಪ್ರಕೃತೋಚಿತವೇ ಹೊರತು ಅಪ್ರಸ್ತುತವಲ್ಲ. ಶಿವಶಕ್ತಿಯರಿಗೆ ಇರುವ ಸಂಬಂಧವು ಅವಿನಾಭಾವವುಳ್ಳದಾಗಿರುವುದರಿಂದ ಅದು ಪಾರಮಾರ್ಥಿಕವೇ ಆಲೂಸ್ಪಷ್ಟವಾದ ವಿಚಾರದಲ್ಲಿ ತೋರುವ ಭೇದವು

ಅಖಿಲ ಶ್ರೀಮದ್ವೀರಶೈವ ಮಹಾಸಭೆಯ ಸ್ಟ್ಯಾಂಡಿಂಗ ಕಮಿಟಿ ಧಾರವಾಡ ಇವರಿಂದ ಪ್ರಸಿದ್ಧ ಮಾಡಲ್ಪಟ್ಟ ಪ್ರಕಟನೆ ನಂ. ೬.

ಅಖಿಲ ಶ್ರೀಮದ್ವೀರಶೈವ ಮಹಾಸಭೆಯ ಸ್ಟ್ಯಾಂಡಿಂಗ ಕಮಿಟಿಯ ಯಾವತ್ತು ಮೆಂಬರರಿಗೂ, ಮಹಾಸಭೆಯ ಯಾವತ್ತು ಆಶ್ರಯದಾತರಿಗೂ ಇದರ ಮೂಲಕ ತಿಳಿಯಿಸುವುದೇನೆಂದರೆ :—

(1) ಅಧ್ಯಕ್ಷರನ್ನು ಆರಿಸುವದು; ಮತ್ತು ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು.

ನಮ್ಮ ಪ್ರಕಟನೆ ನಂ. 4 ಮತ್ತು 5 ನೇದ್ದರ ಪ್ರಕಾರ ಈ ಸಾರೆ ಅಂದರೆ 11 ನೇ ವೀರಶೈವ ಮಹಾಸಭೆಯ ಅಧ್ಯಕ್ಷಸ್ಥಾನಕ್ಕೆ ಯಾರನ್ನು ನೇಮಿಸಬೇಕು ಮತ್ತು ಮಹಾಸಭೆಯಲ್ಲಿ ಯಾವ ಯಾವ ವಿಷಯಗಳನ್ನು ಚರ್ಚೆಮಾಡಬೇಕು ಎಂಬುವದರ ಬಗ್ಗೆ ಸ್ಟ್ಯಾಂಡಿಂಗ ಕಮಿಟಿಯನ್ನು ಕರೆದು ಯಾವತ್ತು ಸ್ಟ್ಯಾಂಡಿಂಗ ಕಮಿಟಿಯ ಮೆಂಬರರ ಮತ್ತು ಆಶ್ರಯದಾತರ ಅಭಿಪ್ರಾಯವನ್ನು ನೋಟೀಸು ಸರಕ್ಯುಲೇಟ ಮಾಡಿ ಸಹ ಮತಗಳನ್ನು ತೆಗೆದುಕೊಂಡು ನಿರ್ಣಯ ಮಾಡೋಣವಾಯಿತು. ಆ ನಿರ್ಣಯದ ಪ್ರಕಾರ ರಾ. ಸಾ. ಫಕೀರಪ್ಪಾ ಗುರಬಸಪ್ಪಾ ಹಳಕಟ್ಟಿ ಬಿ.ಎ., ಎಲ್‌ಎಲ್.ಬಿ., ವಕೀಲ ವಿಜಾಪೂರ ಹಾಗು ಶಿವಾನುಭವ ಮತ್ತು ನವಕರ್ನಾಟಕ ಇವುಗಳ ಸಂಪಾದಕರು ಇವರನ್ನು ಅಧ್ಯಕ್ಷಸ್ಥಾನಕ್ಕೆ ಆರಿಸೋಣವಾಯಿತು ಮತ್ತು ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳನ್ನು ಸಹ ಪ್ರಕಟನೆ ನಂ. 4 ಮತ್ತು 5 ನೇದ್ದರ ಪ್ರಕಾರ ನಿರ್ಣಯ ಮಾಡುವದಾಯಿತು ಮತ್ತು ಬಾಗಲಕೋಟೆಯ ಶ್ರೀಯುತ ಮುರಿಗೆಯ್ಯ ಸೋಮಯ್ಯ ಜಂಗಿನ ಇವರು ಬರೆದು ಕಳಿಸಿದ ಸೂಚನೆಯ ಮೇಲಿಂದ (1) ವೀರಶೈವರ ದಿವಾಣಿ ವಿವಾದಗಳಲ್ಲಿ ಹಚ್ಚಬೇಕಾದ ಒಂದು ಸ್ಪೆಷಲ್ ಕಾಯಿದೆಯನ್ನು ಸರಕಾರದಿಂದ ಪಾಸುಮಾಡಿಸಿಕೊಳ್ಳುವದು, ಹಾಗೂ (2) ಕರ್ನಾಟಕಕ್ಕೆ ಒಂದು ಸ್ವತಂತ್ರ ಬಂದರವನ್ನು ದೊರಕಿಸುವ ಬಗ್ಗೆ ಪ್ರಯತ್ನ ಮಾಡುವದು, ಈ 2 ಹೆಚ್ಚಿನ ವಿಷಯಗಳನ್ನು ಚರ್ಚೆಗೆ ಇಡಬೇಕೆಂದು ನಿರ್ಣಯವಾಯಿತು.

(2) ಮಹಾಸಭೆಯು ಮುಂದೆ ಹಾಕಲ್ಪಟ್ಟದ್ದು.

ಈ ಪ್ರಕಾರ ಮಹಾಸಭೆಯ ಅಧ್ಯಕ್ಷರನ್ನು ಆರಿಸಿದ ಬಳಿಕ ಮತ್ತು ವಿಷಯಗಳನ್ನು ಆರಿಸಿದ ಬಳಿಕ ಇದೇ ಮೇ ತಿಂಗಳಲ್ಲಿ ನೆರೆಯಬೇಕೆಂದು ಮೊದಲು ವರ್ಕಿಂಗ ಕಮಿಟಿಯವರು ಗೊತ್ತು ಮಾಡಿದ ಠರಾವನ್ನು ಆ ನಂತರ ನಿರ್ಮಾಣಮಾಡಲ್ಪಟ್ಟ ಮಹಾಸಭೆಯ ಸ್ವಾಗತ ಕಮಿಟಿಯವರು ತಾ|| 13-5-1932 ನೇ ದಿವಸ ಕೂಡಿದ ತಮ್ಮ ಕಮಿಟಿಯ ಮೀಟಿಂಗಿನಲ್ಲಿ ಕೆಳಗೆ ಬರೆದ ಠರಾವುಗಳನ್ನು ಪಾಸುಮಾಡಿ ಸ್ಟ್ಯಾಂಡಿಂಗ ಕಮಿಟಿಯವರಿಗೆ ತಿಳಿಸಿರುತ್ತಾರೆ. ಅವುಗಳು ಯಾವವೆಂದರೆ :—

ಠರಾವ ನಂ. 1. ಈ ಮೊದಲು ವರ್ಕಿಂಗ ಕಮಿಟಿಯವರು ಮಾಡಿದ ನಿರ್ಣಯದ ಪ್ರಕಾರ ಮೇ ತಿಂಗಳ ಕಡೆಯವಾರವು ವ್ಯಾಪಾರಸ್ಥರಿಗೂ ಮತ್ತು ಮೈಸೂರು ಸಂಸ್ಥಾನದಲ್ಲಿರುವ ಅಧಿಕಾರಿಗಳಿಗೂ ಮತ್ತು ವಕೀಲರಿಗೂ ಅನನುಕೂಲವಾಗುವದರಿಂದ, ಮಹಾಸಭೆಯ ಕಾಲಕ್ಕೆ ಕೈ|| ವಾ|| ಶ್ರೀಮಂತ ಲಿಂಗಪ್ಪಾ ಚಾಯಪ್ಪಾ ಸರದೇಸಾಯಿ ಇವರ ಶಿಲಾಮೂರ್ತಿಯನ್ನು ಸ್ಥಾಪಿಸುವದು ಈ ಮೊದಲೇ ಗೊತ್ತಾಗಿದ್ದು ಅದರ ಕೆಲಸವು ಈಗ ಅಪೂರ್ಣವಾಗಿರುವದರಿಂದ ಮತ್ತು ಇದೇ ಸಭೆಯ ಕಾಲಕ್ಕೆ ಮಹಿಳಾಪರಿಷತ್ತು, ಶಿಕ್ಷಣ ಸಂಸ್ಥೆಗಳ ಪರಿಷತ್ತು, ವೀರಶೈವ ಕಲಾಕೌಶಲ್ಯ ವಸ್ತುಗಳ ಪ್ರದರ್ಶನ ಮುಂತಾದವುಗಳನ್ನು ಏರ್ಪಾಡು ಮಾಡುವದು ಅಗತ್ಯವಿದ್ದು ಈ ಕೆಲಸಗಳನ್ನು ಈ ಅಲ್ಪಾವಧಿಯಲ್ಲಿ ನೆರವೇರಿಸುವದು ಕಠಿಣಸಾಧ್ಯವಿರುವದರಿಂದ ಈಸಾರೆ ಧಾರವಾಡದಲ್ಲಿ 11 ನೇ ಅಖಿಲ ವೀರಶೈವ ಮಹಾಸಭೆಯನ್ನು ನೆರವೇರಿಸುವದನ್ನು ಇದೇ ಇಸವಿಯ ಡಿಸೆಂಬರ ತಿಂಗಳ ಕೊನೆಯ ವಾರದವರೆಗೆ (ನಾತಾಳಸೂಟಿಯ ವರೆಗೆ) ಮುಂದುವರಿಸತಕ್ಕದ್ದೆಂದು ಸ್ವಾಗತ ಸಂಘವು ಅಭಿಪ್ರಾಯಪಡುತ್ತದೆ.

ಠರಾವು ನಂ. 2. (ನಮ್ಮ ಕಡೆಗೆ ಬರೆದು ಬಂದಿಲ್ಲ.)

ಠರಾವು ನಂ. 3. ಚಿರಸ್ಥಾಯಿ ಫಂಡಿನಿಂದ 3,000 ರೂ. ಗಳ 2 ನೇ ಭಾಗದ ಅರ್ಧ ನೋಟುಗಳು ಸ್ವಾಗತ ಕಮಿಟಿಯ ಚೇರಮನ್ನರ ಕಡೆಗೆ ತಾ|| 7-5-32 ನೇ ದಿವಸ ಬಂದದ್ದರಿಂದ ಆ ದಿವಸ ಮತ್ತು ಮರುದಿವಸ ಬ್ಯಾಂಕ ಸೂಟಿ ಇದ್ದ ಮೂಲಕ ಈ ದಿವಸದ ವರೆಗೆ ಬ್ಯಾಂಕಿನಲ್ಲಿ ಇಡುವದು ಆಗದ್ದರಿಂದ ಈ ದಿವಸ ಬ್ಯಾಂಕಿಗೆ ಕಳಿಸಿಕೊಡಬೇಕೆಂದು ನಿರ್ಣಯಿಸಲ್ಪಟ್ಟಿತು.

ಈ ಪ್ರಕಾರ ವೀರಶೈವ ಮಹಾಸಭೆಯ ಸ್ವಾಗತ ಕಮಿಟಿಯವರು ಈ ಸಾರೆಯ ವೀರಶೈವ ಮಹಾಸಭೆಯನ್ನು 1932 ನೇ ಡಿಸೆಂಬರಕ್ಕೆ ಕರೆಯಬೇಕೆಂದು ನಿರ್ಣಯಮಾಡಿದ್ದಾರೆ.

G. H. Honnapurmath, ಜನರಲ್ ಸೆಕ್ರೆಟರಿ
K. A. Kulkarni, ಚೇರಮನ್ನ

ಸ್ಟ್ಯಾಂಡಿಂಗ ಕಮಿಟಿ ವೀರಶೈವ ಮಹಾಸಭಾ ಧಾರವಾಡ, ತಾ|| 22-5-32.

ನಾರಿನವ್ಯಾಳೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರ ತರಿಸಿಕೊಳ್ಳಿರಿ. ಕಿ ೧| ರೂ. ಟ. ಖ. ೫| ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ

9 M. C

೧೯೩೨ ನೆಯ ಇಸವಿ ಜೂನ್ ತಾ|| ೨೦ ರಿಂದ ಜೂನ್ ತಾ|| ೨೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಆಂಗಿರಸನಾಮಸಂವತ್ಸರದ ಜ್ಯೇಷ್ಠ ಬಹುಳ ಬಿದಿಗೆಯಿಂದ ಜ್ಯೇಷ್ಠ ಬಹುಳ ಅಷ್ಟಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ಮಾಸ
20	ಸೋಮ	ಬಿದಿ	22-27	ಪೂಷಾ	8-31	7
21	(1) ಮಂಗಳ	ತದಿ	19-54	ಉಷಾ	7-34	8
22	ಬುಧ	ಚೌತಿ	18-23	ಶ್ರವ	7-42	9
23	ಗುರು	ಪಂಚ	18-12	ಧನಿ	9-5	10
24	(2) ಶುಕ್ರ	ಷಷ್ಠಿ	19-12	ಶತ	11-40	11
25	ಶನಿ	ಸಪ್ತ	21-30	ಪೂಭಾ	15-20	12
26	ಭಾನು	ಅಷ್ಟ	24-50	ಉಭಾ	20-24	13

(1) ಮಳೆನಕ್ಷತ್ರ-ಆರ್ದ್ರಾ ೧ ನೆಯ ಪಾದ. (2) ಮಳೆನಕ್ಷತ್ರ-ಆರ್ದ್ರಾ ೨ ನೆಯ ಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG. No. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಸೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞನಪ್ರತ್ಯ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ ಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸ್ ೧೯೩೨ ನೆಯ ಇಸವಿ ಜೂನ್ ತಾರೀಖು ೨೭ ನೆಯ ಸೋಮವಾರ [ಸಂಚಿಕೆ ೨೬

MYSORE SANDALWOOD OIL Distilled in GOVERNMENT FACTORIES

GUARANTEED B.P.P.J., & AM 4. P. STANDARDS.

PROVIDES

Excellent Base for the manufacture of Soaps, Perfumes, and other Toilet preparations of the Highest quality.

USED ALL THE WORLD OVER.

BUY A BOTTLE TO-DAY.

Available in Sealed Aluminium Bottles.

MOYSRE GOVERNMENT SANDALWOOD OIL FACTORY, BANGALORE.

5 [50—50]

THE MYSORE AGRICULTURAL SCHOOL, HEBBAL, BANGALORE.
Notification No. A. S. M. Gl. 225 of 31-32, dated 21st June 1932.

In supersession of the previous notification No. A. S. M. Gl. 225 of 31—32, dated 22nd April 1932 published in the Mysore Gazette, Part III, Pages 798—799 dated 19th May 1932, the time for sending up the applications for admissions to the Mysore Agricultural School at Hebbal, Bangalore, has been extended to 10th July 1932 and that of the entrance examination has been postponed to 17th July 1932 at 12 noon, as the results of the S. S. L. C. Examination have not yet been declared.

V. K. BADMI,
Principal.

[3—1]

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—[illegible]—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—[illegible]—೦
ವ್ರತಪಂಚಕ	೦—೪—೦	೦—[illegible]—೦
ಗುರುಶಂಕರಲೀಲಾರಹಸ್ಯ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಸಟೀಕ ಕರಸ್ಥಲಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಕ್ಯಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಸ್ಟರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದಪನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು, ನಿದ್ರೆ ಕಡಿಮೆಬರೋದು, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ಶರೀರೀಕ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಿಣಿ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು ? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ಗೋಲಿಯ ಒಂದು ಡಬ್ಬಿಗೆ ೩| ರೂಪಾಯಿ. ಟಪಾಲು ಖರ್ಚು ೧೪ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳ್ಳೀಸು ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

ಎಲ್ಲ ಬಗ್ಗೆಯ ಸೆರಗು, ಮುಟ್ಟುಚಿಟ್ಟು ಆಗುವದು ಅಡೆಯುಂಟಿನ, ಹೆಚ್ಚು ಕಡಿಮೆಗಂಟುಗಂಟು ಮುಟ್ಟುಚಿಟ್ಟು ಆಗೋದು, ಮುಟ್ಟುಚಿಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋದು, ಎದೆ ಹಾರೋದು, ಉಷ್ಣತಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋದು, ಗರ್ಭಪಾತವಾಗೋದು, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ಗೋಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣ ಮಾಡುವ ಶಕ್ತಿ ಅತಿ ತೀವ್ರ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋದಾಗುವದಿಲ್ಲ ಮತ್ತು ಅವರವರ ಶಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂತಿ ಹತ್ತುವದೋ, ಇಂಥ ಬೇರೆ ಕಾರಣದಿಂದ ಸಂತತಿ ಇಚ್ಛಾ ಯಾರಿಗೆ ಇರಿರುತ್ತದೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. ಶರೀರದಲ್ಲಿಯೂ ಸಂಸಾರ ಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆ ವೇಳೆಗೆ ಮುಟ್ಟುಚಿಟ್ಟು ಆಗುವದು ಸುರು ಇದ್ದು ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ವಿನಿಮಯಿಸಿದರೂ ಸುರು ಆಗುವದಿಲ್ಲ ಹೀಗೆ ಶಾಸ್ತ್ರ ಅದೆ. ಪೂರ್ಣವಿಚಾರ ಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ ಒಂದು ಡಬ್ಬಿಗೆ ೬ ರೂ. ಟ. ಖ. ೮ ಆಣೆ. ಮತ್ತು ಕಡೆಗಾದ ೪ ನೇ ದಿವಸ ೨೦ ಘಂ ಹಗಲಿನ ಕೂಡ ಕುಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಗುಳಿಗೆ ಮಧ್ಯಾಹ್ನಕ್ಕೆ ೧, ಗುಳಿಗೆ ರಾತ್ರಿ ಊಟವಾದ ಅನಂತರ ೧ ಗುಳಿಗೆ ಹಗಲಿನ ಕೂಡ ನುಂಗಬೇಕು. ಪಥ್ಯ ಸಾದಾ. ಕೆಲವು ನಮ್ಮ ಕಡೆಗೆ ಇರುವ ಖಾತ್ರಿ ಔಷಧಗಳ ಕ್ಯಾಟಲಾಗ ತರಿಸಿಕೊಳ್ಳಿರಿ.

[80—27]

ಪತ್ತಾ ಮೊಹರ :—ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜ. ಎಂ. ಎಸ್. ಎಂ.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—ಪೀನಸಿ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದ ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಂಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾಗುವುದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ, ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[80—40] ಪೋ. ಬಾ. ೫೧೦, ಮದರಾಸು.

WANTED

Applications with particulars of father's name, caste, age, and examinations passed are invited so as to reach by 20th July 1932, from persons who have passed Book-keeping examination for appointment as clerk on Rs. 15—1—20 with the benefits of Provident Fund and annual bonus.

M. THAMMIAH,
Honorary Secretary,
The Palace Stables Co-operative Society Ltd.,
Mysore.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಜೂನ್ ತಾ|| ೨೭ ನೆಯ ಸೋಮವಾರ.

THE LEGISLATIVE COUNCIL

BUDGET SESSION

The Government had placed heavy business of its own at this budget session of the Council with the result that the non-official members found that they had not enough time for either general discussion of the budget or for particular discussions on the voting of the demands. The three bills relating to Cities, Towns and Minor Municipalities occupied nearly three days of the time of the House. The House welcomed on the whole the Town and the Minor Municipalities Bills, particularly the latter as the privilege of adult franchise was granted therin. The one general demand was that the Presidentships and the Vice-Precidentships should be thrown open for election to non-officials. The Government promised to work the measure in as liberl a manner as possible. As regards the City Municipalities Bill there was greater opposition as even according to Government it did not seek to introduce any essential changes in the existing regulation. The general opinion was that as this Bill was only applicable to the two cities of Bangalore and Mysore, the Government should not keep the old provision which would enable them to make a difference between them, the one to have an elected President, the other an official President, which was a negation of local self-Government. The utter illogicality of it was pointed out by almost every member who spoke about the Bill. The desire of the non-official memberes was to see it modelled on the basis of City Co-operation Acts of British India. But yet the Government were extremely nervous to give the same privilege to Mysore as they had done to Bangalore on the one vague and what seems to us to be a specious plea that the special circumstances of Mysore would not permit of it. The House was not told exactly what the special circumstances were. But one could fairly understand what Government meant. It would be absurd to suggest that a non-official President would not be found as efficient and as loyal as an official. We would like to know how the presence of official Presidents in the Mysore City has been of special help in the special circumstances? How often have the Council and the President come into conflict over any of the special requirements of Mysore? What reasons have the Government to think that the Council would behave in a different way with one of its own non-official President. The galling nature of the invidious distinction was pointed out by the honourable members. We do hope that these reactionary parts of the Bill would be set right at the Select Committee stage. One of the most important subjects that was brought up before the House was the relief that should be granted to the ryots at this hour of extreme depression. The Government was reminded of its undertaking last year to review the situation in case it continued to be bad during the next year, and of its not having done anything to relive the situation. The non-official element in the House was almost unanimous that some relief should be given either by way of reverting to the rates of assessment prevailing prior to the resettlement or of a percentage reduction. Reasons were given in favour of such a relief and arguments advanced. But of what avail was all that before a Government which was inclined to resile from its previous position and was adamant against all such arguments. We fear that Government is far too much out of touch with the realities of the situation. The ryot has been really hit very hard. The Government is in such a high altitude that it is almost impossible for it to understand the sad realities of the situation. How we wish that those at the helm of affairs would live for a short while in the villages and experience the life of the villager, bereft of all the comforts they could command in the cities. We do hope that our Governmet will adopt a more sympathetic attitude. At present we do not see much signs of their meeting popular wishes. They are having all their own way and as some of the members said there seems to be a lot of patience on the part of non-officials in giving up their jobs, taking all the trouble to study questions and crying at these Houses only for Government to turn a deaf ear to their proposals. We do hope that Government will see the reasonableness of the views put forward by non-official members in many respects and will at least accept partially their proposals. Otherwise all these discussions will look a big tamash and, something worse, a waste of a lot of people's money.

ಮೈಸೂರು ನ್ಯಾಯವಿಧಾಯಕ ಸಭೆ.

ಕಳೆದ ಸೋಮವಾರ ಬೆಂಗಳೂರು ಪಬ್ಲಿಕ್ ಆಫೀಸು ಕಟ್ಟಡದ ಸಭಾಂಗಣದೊಳಗೆ ದಿವಾನ್ ಸರ್ ಮಿರ್ಜಾ ಎಂ. ಇಸ್ಮೇಲ್‌ರವರ ಅಧ್ಯಕ್ಷತೆಯಲ್ಲಿ ಆರಂಭಗೊಂಡು ನಡೆಯುತ್ತಿರುವ ಮೈಸೂರು ನ್ಯಾಯವಿಧಾಯಕ ಸಭೆಯ ಬಜೆಟ್ ಅಧಿವೇಶನವು ನಾಳೆಯ ದಿವಸ ಮುಕ್ತಾಯವಾಗುವುದಾಗಿದೆ. ಪ್ರಭುತ್ವಕ್ಕೆ ಸಂಬಂಧಪಟ್ಟ ವಿಷಯಗಳು ಹೆಚ್ಚಾಗಿದ್ದುದರಿಂದ ಬಜೆಟ್ಟಿನ ಸಾಮಾನ್ಯ ವಿಷಯಗಳನ್ನಾಗಲಿ ಓಟನ್ನು ಕೊಡಬೇಕಾಗಿರುವ ವಿಷಯಗಳನ್ನಾಗಲಿ ಕುರಿತು ಚರ್ಚಿಸಲು ಅನಾಫೀಶಿಯಲ್ ಮೆಂಬರುಗಳಿಗೆ ಸಾಕಾದಷ್ಟು ವ್ಯವಧಾನವಿರಲಿಲ್ಲ. ಇತರ ವಿಷಯಗಳನ್ನು ಕುರಿತು ಮುಂದೆ ಪ್ರಸ್ತಾಪಿಸುವೆವು.

ಆರ್. ಎ. ಮೆಂಬರುಗಳ ಸಂಖ್ಯಾಧಿಕ್ಯ.

ಮೈಸೂರು ಪ್ರಜಾಪ್ರತಿನಿಧಿಸಭೆಯ ಮೆಂಬರುಗಳ ಒಟ್ಟು ಸಂಖ್ಯೆಯು ಸಾಮಾನ್ಯವಾಗಿ 250, ಆದರೆ ಇದನ್ನು 275 ಕ್ಕೆ ಹೆಚ್ಚಿಸಲು ಪ್ರಭುತ್ವದವರಿಗೆ ಅಧಿಕಾರವಿರುತ್ತದೆ. ಈಗ 273 ಮೆಂಬರುಗಳಿರುತ್ತಾರೆ. ಹೊಸದಾಗೇರ್ಪಟ್ಟಿರುವ ತಾಲ್ಲೂಕುಗಳಿಂದಲೂ, 5000 ಜನಸಂಖ್ಯೆಗೆ ಕಡಿಮೆ ಇಲ್ಲದಿರುವ ಟೌನ್ ಮ್ಯುನಿಸಿಪಾಲಿಟಿಗಳಿಂದಲೂ ಮೆಂಬರುಗಳನ್ನು ಚುನಾಯಿಸಬೇಕಾಗಿರುವುದರಿಂದ ಪ್ರಜಾಪ್ರತಿನಿಧಿಸಭೆಯ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸಲು ಮತ್ತು ಈಗಿರತಕ್ಕ ಪ್ರಾತಿನಿಧ್ಯ ಇತ್ಯಾದಿ ವಿಷಯಗಳಲ್ಲಿ ಹೆಚ್ಚುಕಡಿಮೆ ಮಾಡಲು ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿದೆ. ಇದಕ್ಕೆ 2 ನೆಯ ಕೌನ್ಸಿಲರು ರಾಜಮಂತ್ರಪ್ರವೀಣ ಮ|| ಕೆ. ಮ್ಯಾಥ್ಯೂರವರು ಅಧ್ಯಕ್ಷರಾಗಿಯೂ, ಮ|| ಗಳಾದ (1) ಎಸ್. ಪಿ. ರಾಜಗೋಪಾಲಾಚಾರಿಯವರು (2) ಎನ್. ಮಾಧವರಾಯರು (3) ಕೆ. ಎಚ್. ರಾಮಯ್ಯನವರು (4) ಎನ್. ರಾಮರಾಯರು ಉದ್ಯೋಗಿಕ ಮೆಂಬರುಗಳಾಗಿಯೂ (5) ಶ್ರೀಮತಿ ಕಮಲಮ್ಮ ದಾಸಪ್ಪನವರು (6) ಬಿ. ಎಸ್. ಪುಟ್ಟಸ್ವಾಮಿಯವರು (7) ಜೆ. ಮಹಮದ್ ಇಮಾಂರವರು (8) ಬಿ. ಗೋಪಾಲಾಚಾರ್‌ರವರು (9) ಎಲ್. ವೇಮಾರೆಡ್ಡಿಯವರು ಅನುದ್ಯೋಗಿಕ ಮೆಂಬರುಗಳಾಗಿಯೂ, ಪ್ರಜಾಪ್ರತಿನಿಧಿಸಭೆಯ ಸೆಕ್ರೆಟರಿಯವರೇ ಈ ಕಮಿಟಿಯ ಸೆಕ್ರೆಟರಿಯವರಾಗಿಯೂ ನಿಯಮಿಸಲ್ಪಟ್ಟಿರುವರು. ಈ ಕಮಿಟಿಯವರು ಸಾಧ್ಯವಾದಮಟ್ಟಿಗೆ ಜಾಗ್ರತೆ ಸಮಾವೇಶರಾಗಿ ತಮ್ಮ ವರದಿಯನ್ನು ಬರುವ ಸೆಪ್ಟಂಬರ್ ತಾ|| 30 ರೊಳಗೆ ಕಳುಹಿಸಿಕೊಡಬೇಕೆಂದು ಪ್ರಭುತ್ವದವರು ಕೋರಿರುತ್ತಾರೆ.

ಆರ್ಡಿನೆನ್ಸುಗಳ ಪುನರುದ್ಧರಣ

ಬರುವ ಜುಲೈ ತಾ|| 4 ರಲ್ಲಿ ಕೊನೆಗಾಣುವ ಆರ್ಡಿನಾನ್ಸುಗಳನ್ನೆಲ್ಲ ಒಟ್ಟುಗೂಡಿಸಿ ಕೆಲ ಬದಲಾವಣೆಯಿಂದ ವೈಸ್ರಾಯರು ಒಂದು ಹೊಸ ಆರ್ಡಿನನ್ಸನ್ನು ಪ್ರಯೋಗಿಸುವರೆಂದು ವರ್ತಮಾನವಿದೆ.

ಡಗ್ಲಾಸರನ್ನು ಕೊಂದವನಿಗೆ ಮರಣ ಶಿಕ್ಷೆ

ಕಳೆದ ಏಪ್ರಿಲ್ ತಾ|| 30ರಲ್ಲಿ ಮಿಡ್ನಾಪುರದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಡಗ್ಲಾಸರವರನ್ನು ಕೊಂದು ಪ್ರತ್ಯೇಕ ಜಡ್ಜಿಗಳ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದ ಪ್ರದ್ಯೋತ ಕುಮಾರ ಭಟ್ಟಾಚಾರ್ಜಿ ಎಂಬವನಿಗೆ ಮರಣದಂಡನೆ ವಿಧಿಸಲ್ಪಟ್ಟಿತು.

ದಿಲ್ಲಿಯಲ್ಲಿ ಕುಡಿಯುವ ನೀರಿನ ತೊಂದರೆ

ದಿಲ್ಲಿ ಮ್ಯುನಿಸಿಪಾಲಿಟಿಯವರು ಪಟ್ಟಣಕ್ಕೆ ಕುಡಿಯುವ ನೀರನ್ನು ಸರಿಯಾಗಿ ಒದಗಿಸುತ್ತಿಲ್ಲವೆಂದೂ, ಪ್ರಜೆಗಳಲ್ಲಿ ಮರಣ ಸಂಖ್ಯೆಯು ಹೆಚ್ಚಾಗಿರುವುದೆಂದೂ, ಇದಕ್ಕೆಲ್ಲ ಮ್ಯುನಿಸಿಪಾಲಿಟಿಯವರೇ ಜವಾಬುದಾರರೆಂದೂ, ಇದು ಬಹಳ ಅಪಮಾನಕರವೆಂದೂ ಬ್ಯಾರಿಸ್ಟರ್ ಅಸಫಲಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ಪ್ರಜೆಗಳ ಬಹಿರಂಗ ಸಭೆಯಲ್ಲಿ ತೀರ್ಮಾನಿಸಲ್ಪಟ್ಟಿರುತ್ತದೆ.

ವೈಸ್ರಾಯರ ವರ್ಷಾಕಾಲ ಪ್ರಯಾಣನಿಂತಿತು

ಬರುವ ಜುಲೈ ತಿಂಗಳ ಮಧ್ಯಭಾಗದಲ್ಲಿ ವೈಸ್ರಾಯರು ದೇಶ ಸಂಚಾರ ಹೊರಟು ಮೈಸೂರು ಮಾರ್ಗವಾಗಿ ಉದಕಮಂಡಲಕ್ಕೆ ಹೋಗುವರೆಂದು ಪ್ರಕಟವಾಗಿದ್ದಿತಷ್ಟೆ. ರೌಂಡು ಟೇಬಲು ಸಲಹ ಸಂಘಕ್ಕೆ ಸಂಬಂಧಪಟ್ಟ ಕಾರ್ಯಗಳು ಪ್ರತಿಬಂಧಕವಾಗಿರುವಪ್ರಯುಕ್ತ ವೈಸ್ರಾಯರ ದೇಶಸಂಚಾರವು ನಿಲ್ಲಿಸಲ್ಪಟ್ಟುದರಿಂದ ಉದಕಮಂಡಲಕ್ಕೆ ಅವರು ಬರುವುದಿಲ್ಲವೆಂದು ಪ್ರಕಟವಾಗಿದೆ.

ಓರ್ವ ಸ್ತ್ರೀ ಗಂಡನನ್ನು ಕೊಂದಳು

ಬಹೋಕಿ ಎಂಬೂರಿನಲ್ಲಿ ಕ್ರೈಸ್ತರ ಬೀದಿಯನ್ನು ಗುಡಿಸುತ್ತಿದ್ದ ಒಬ್ಬ ಸ್ತ್ರೀಯ ನಡತೆಯ ವಿಚಾರದಲ್ಲಿ ಆಕೆಯ ಗಂಡನು ಅನುಮಾನಪಟ್ಟುಕೊಂಡಿದ್ದನು. ಆದರಮೇಲೆ ಆಕೆಗೆ ಕೋಪ ಹುಟ್ಟಿ ಗಂಡನನ್ನು ಕೊಂದುಹಾಕುತ್ತೇನೆಂದು ಅನೇಕ ವೇಳೆ ಹೇಳುತ್ತಿದ್ದು ಕಡೆಯಲ್ಲಿ ಅವನು ಮಲಗಿ ನಿದ್ರಿಸುತ್ತಿದ್ದಾಗ ಕುತ್ತಿಗೆಯನ್ನು ಮಿಸುಕಿ ಕೊಂದುಬಿಟ್ಟು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಯಾಗಿರುವಳು.

ಧಾರವಾಡದಲ್ಲಿ ೯ ಮಂದಿಗಳ ಸೆರೆ

ಕಳೆದ ವಾರ ಧಾರವಾಡದಲ್ಲಿ ಮ|| ಗಳಾದ ರಘುನಾಥರಾವ್ ಜಠಾರ, ವಕೀಲ; ಅನಂತರಾವ್ ಕರ್ಮಕರ, ವಕೀಲ; ಗೋಪಾದಾಚಾರ್ಯ, ವಕೀಲ; ಡಾ|| ಕಮಲಾಪುರ; ಶ್ರೀನಿವಾಸರಾವ್ ಜೋಗ; ದತ್ತೋಪಂಥ, ಜೆಂಡ್ರೆ ಮಾಸ್ತರ; ದೇವರ ಮನೆ ಆನಂದರಾವ ಉಡಪಿ; ಬೇಲೂರ ಮತ್ತು ಕಬ್ಬೂರ, ವಕೀಲ ಇವರುಗಳು ಪೊಲೀಸು ಅಧಿಕಾರಿಗಳಿಂದ 3 ನೆಯ ಆರ್ಡಿನಾನ್ಸು 1 ನೇ ಸೆಕ್ಷನ್ನಿನ ಪ್ರಕಾರ ಸೆರೆ ಹಿಡಿಯಲ್ಪಟ್ಟು ಬೆಳಗಾಗಮಿಗೆ ಸಾಗಿಸಲ್ಪಟ್ಟರು.

ದೇವದಾಸ ಗಾಂಧಿಯವರಿಗೆ ಜ್ವರ

ಗೊರಕಪುರ (ಗೋರಕ್ಷಣಪುರ) ದ ಕಾರಾಗೃಹದಲ್ಲಿರುವ ಮಹಾತ್ಮರ ಕುಮಾರರಾದ ದೇವದಾಸ ಗಾಂಧಿಯವರಿಗೆ ಕಳೆದ 13 ದಿನಗಳಿಂದಲೂ ಜ್ವರಬರುತ್ತಿರುವುದಾದರೂ ಅದರ ವಿವರ ತಿಳಿಯಲಿಲ್ಲವೆಂದೂ, ಕಾರಾಗೃಹಕ್ಕೆ ಹೋಗಿ ದೇವದಾಸರಿಗೆ ಉಪಚಾರ ಮಾಡಬೇಕೆಂದು ಗೊರಕಪುರವಾಸಿಯಾದ ಹನುಮಾನ್ ಪ್ರಸಾದ ಪೊದ್ದಾರ್‌ರವರಿಗೆ ಮಹಾತ್ಮರಿಂದ ತಂತಿ ಬಂದಿರುವುದಾದರೂ ಜೈಲಿನ ಅಧಿಕಾರಿಗಳು ಪೊದ್ದಾರರವರನ್ನು ಜೈಲಿನೊಳಕ್ಕೆ ಬಿಡಲಿಲ್ಲವೆಂದೂ ಅಜದ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಮುಸಲ್ಮಾನನ ಕೃಷ್ಣ ಪಾತ್ರಧಾರಣಕ್ಕಾಗಿ ಆಕ್ರೋಶ

ಲಾಹೋರು ಮೆಜೆಸ್ಟಿಕ್ ಚಲನಚಿತ್ರ ಪ್ರದರ್ಶನಶಾಲೆಯಲ್ಲಿ ಬಿಲ್ವಮಂಗಲ ಅಥವಾ ಚಿಂತಾಮಣಿ ಎಂಬ ನಾಟಕವು ಪ್ರದರ್ಶಿಸಲ್ಪಡುತ್ತಿರುವಾಗ್ಗೆ ಶ್ರೀಕೃಷ್ಣನ ಪಾತ್ರವನ್ನು ಮಹಮ್ಮದೀಯನು ವಹಿಸಿ ಅಭಿನಯಿಸಿದನೆಂದು ಪ್ರೇಕ್ಷಕರಲ್ಲೊಬ್ಬ ಹಿಂದು ವಿದ್ಯಾರ್ಥಿಯು ತಿಳಿದು ಕೋಪಾವಿಷ್ಟನಾಗಿ ಸಿನೆಮಾ ಛಾಯಾಚಿತ್ರ ಬೀಳುತ್ತಿದ್ದ ತೆರೆಯನ್ನು ಹರಿದುಹಾಕಿಬಿಟ್ಟನು. ಇದಕ್ಕಾಗಿ ಅವನಮೇಲೆ ಕಂಪೆನಿಯವರು ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ವಿವಾದವನ್ನು ಹೂಡಿರಲು ಅವನಿಗೆ 200 ರೂ. ದಂಡವೂ 6 ತಿಂಗಳ ಕಠಿಣ ಕಾರಾಗೃಹವಾಸ ಶಿಕ್ಷೆಯೂ ವಿಧಿಸಲ್ಪಟ್ಟವು.

ಐರ್ಲೆಂಡು ರೈತರಿಗುಪಶಾಂತಿ

ಐರ್ಲೆಂಡಿನ ರೈತರಿಗುಪಶಾಂತಿಯನ್ನುಂಟುಮಾಡಲು ಡಿವೆಲಿರಾ ಪ್ರಭುತ್ವದವರು ನಿರ್ಧರಿಸಿರುತ್ತಾರೆ. 1931 ರ ಕಡೆಯವರೆಗೆ ರೈತರುಗಳಮೇಲೆ ಬಾಕಿ ನಿಂತಿರುವುದನ್ನು ಬರಮಾಡಲು ಕೈಕೊಂಡಿರುವ ಚರ್ಯವನ್ನು ನಿಲ್ಲಿಸಿಬಿಟ್ಟು ಬಾಕಿಯನ್ನು ವಸೂಲ್ಮಾಡಲು ಇನ್ನೊಂದು ವರ್ಷದವಧಿಯನ್ನು ಕೊಡಲು ಪ್ರಭುತ್ವದವರೊಪ್ಪಿಕೊಂಡಿರುವರು. ಭೂಮಿಯ ಕಪ್ಪದ ವಿಷಯದಲ್ಲಿ ಬ್ರಿಟಿಷಿನವರು ಉಪಶಾಂತಿಯನ್ನುಂಟುಮಾಡಬೇಕೆಂದು ಕೋರುತ್ತಿರುವ ಡಿವೆಲಿರಾಯವರು ತಮ್ಮ ರೈತರುಗಳಿಗೆ ಉಪಶಾಂತಿ ಮಾಡಲು ಉದಾರಭಾವವನ್ನೂ ದೂರದೃಷ್ಟಿಯನ್ನೂ ತೋರಿಸುವವರಾಗಿರುತ್ತಾರೆ. ಆದುದರಿಂದ ಡಿವೆಲಿರಾಯವರ ಪ್ರಸಕ್ತ ಚರ್ಯದಿಂದ ಐರಿಷು ಪ್ರಜೆಗಳು ಸಂತೋಷಪಟ್ಟುಕೊಂಡು ಕೃತಜ್ಞರಾಗಿರುವರು.

ಜರ್ಮನಿಯ ನಷ್ಟಪರಿಹಾರ

ಜರ್ಮನಿಯು ತೆರಬೇಕಾಗಿರುವ ನಷ್ಟಪರಿಹಾರದ ವಿಚಾರವಾಗಿ ಬ್ರಿಟಿಷರ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿ ಒಂದು ಪ್ರಕಟನೆಯನ್ನು ಹೊರಡಿಸುವಂತೆ ಮುಖ್ಯ ಮಂತ್ರಿ ಮೆಕ್ಡೊನಾಲ್ಡರವರು ಹರಿಯೊಟರವರಿಗೆ ಹೇಳಿದರು. ಜರ್ಮನಿಯು ನಷ್ಟಪರಿಹಾರವನ್ನು ಕೊಡಲಾರದೆಂಬ ಅಭಿಪ್ರಾಯದಿಂದ ಈ ಪ್ರಕಟನೆಯನ್ನು ಸಿದ್ಧಗೊಳಿಸಿರುವುದಾಗಿದೆ. ಮುಂದಾವಾಗಲಾದರೂ ಜರ್ಮನಿಯ ಪರಿಹಾರವನ್ನು ಕೊಡಬೇಕಾಗಿ ಬಂದಲ್ಲಿ ಜರ್ಮನಿಯು ಕೈಕಾಲು ಚೇತರಿಸಿಕೊಳ್ಳಲು ಅವಕಾಶವಿರುವಂತೆ ಗಡುವು ಕೊಡಲ್ಪಡಬೇಕು. ಜರ್ಮನಿಗೆ ಶಕ್ತಿಬರುವ ಏರ್ಪಾಡನ್ನು ಮಾಡಬೇಕು. ಆ ಏರ್ಪಾಟುಗಳು ಕಡೇ ಪರಿಷ್ಕಾರವಾಗುವಂತಿರಬೇಕು. ಈ ಏರ್ಪಾಟುಗಳು ಮಾಡಲ್ಪಟ್ಟಲ್ಲಿ ಅವು ಜರ್ಮನಿಗೆ ಅನುಕೂಲವಾಗಿರಬೇಕಲ್ಲದೆ ಅಭ್ಯಂತರವಾಗಿರಕೂಡದು ಎಂದು ಹೇಳಿರುತ್ತಾರೆ.

ಮಹಾತ್ಮರು ಜೈಲಿನಿಂದ ಬರೆದ ಪತ್ರ

"ಇಂಡಿಯನ್ ರಿಕನ್ಸಿಲಿಯೇಷನ್ ಗ್ರೂಪ್" (ಇಂಡ್ಯಾ ಸಮಾಧಾನ ಸಂಘ) ಎಂಬ ಹೆಸರಿನ ಒಂದು ಸಂಘದ ಪ್ರತಿನಿಧಿಗಳಾಗಿ ಕ್ವಾಕರು ಪಕ್ಷಕ್ಕೆ ಸೇರಿದ ಮೂವರು ಇಂಡ್ಯಾದೇಶಕ್ಕೆ ಬಂದಿದ್ದು ಇಲ್ಲಿಯ ರಾಜಕೀಯ ಪರಿಸ್ಥಿತಿಯನ್ನೂ ಸಮಾಧಾನವಾಗುವುದರ ಸಾಧ್ಯಾಸಾಧ್ಯತೆಯನ್ನೂ ವಿಚಾರಿಸಿಕೊಂಡು ಸೀಮೆಗೆ ಹಿಂದಿರುಗಿ ಪ್ರಯಾಣಮಾಡಿದರು. ಆ ಮೂವರಲ್ಲೊಬ್ಬರಾದ ಪರ್ಸಿ ಬಾರ್ಟ್ ಎಂಬವರಿಗೆ ಮಹಾತ್ಮರು ಎರವಾಡಾ ಕಾರಾಗೃಹದಿಂದ ಬರೆದಿರುವ ಲೇಖವು ಲಂಡನ್ ಟೈಂಸ್ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ. ಅದೇನೆಂದರೆ:—"ಭಾರತ ಜಾತೀಯ ಗೌರವಕ್ಕೆ ಭಂಗಬಾರದ ರೀತಿಯಲ್ಲಿ ಪುನಃ ಸಮಾಧಾನವನ್ನೂ ಶಾಂತಿಯನ್ನೂ ಉಂಟುಮಾಡಲು ನಾನು ಸರ್ವಶಕ್ತಿಯನ್ನುಪಯೋಗಿಸುವೆನು. ಶಾಂತಿಸಮಾಧಾನಗಳನ್ನುಂಟುಮಾಡುವಲ್ಲಿ ನಾನು ಯಾರಿಗೂ ಕಡಿಮೆಯಾಗಿರುವುದಿಲ್ಲ. ಆದುದರಿಂದ ಶಾಂತಿಸಮಾಧಾನವನ್ನು ನಿರೋಧಿಸುವ ಯಾವ ಕಾರ್ಯವನ್ನೂ ನಾನು ಮಾಡುವುದಿಲ್ಲವೆಂದು ನೀವು ನಂಬಿರತಕ್ಕುದು. ಜೈಲಿನಲ್ಲಿರುವವರೆಗೆ ಇದಕ್ಕಿಂತಲೂ ಹೆಚ್ಚಾಗಿ ನಾನೇನನ್ನೂ ಬರೆಯಕೂಡದು."

ಅಲಕ್ಷ್ಯ ವೈದ್ಯ ಚಿಕಿತ್ಸೆಗಾಗಿ 7958 ರೂ. ಪರಿಹಾರ

ಸಿಮ್ಲಾದ ಸಿವಿಲ್ ಸರ್ಜನ್ ಲೆಫ್ಟನೆಂಟ್ ಕರ್ನಲ್ ವಿಟ್ಮೊರು ಎಂಬವರು ಅಲಕ್ಷ್ಯದಿಂದ ವೈದ್ಯಚಿಕಿತ್ಸೆ ಮಾಡಿದ ಪ್ರಯುಕ್ತ ತನಗೆ ಮರಣಾವಧಿ ನಷ್ಟ ಸಂಭವಿಸಿತು. ಇದಕ್ಕಾಗಿ ಸಿವಿಲ್ ಸರ್ಜನ್ನಿನಿಂದ 30,000 ರೂ. ನಷ್ಟ ಪರಿಹಾರವನ್ನು ಕೊಡಿಸಬೇಕೆಂದು ಲಾಯಿಲ್ಪುರದಲ್ಲಿ ಪ್ಲೀಡರಾಗಿರುವ ಆರ್. ಎಸ್. ರಾಷ್ರು ಎಂಬಾತನು ಅದೇ ಊರಿನ ಸಬ್ ಕೋರ್ಟಿನಲ್ಲಿ ದಾವಾ ಮಾಡಿದ್ದನು. ವೈದ್ಯನು ತಪ್ಪಿತಸ್ಥನೆಂದು ನಿರ್ಧರವಾಗಿ ಈ ಪ್ರಕಾರವಾಗಿ ನಷ್ಟಪರಿಹಾರ ಗೊತ್ತುಮಾಡಲ್ಪಟ್ಟಿತು. (1) ವೈದ್ಯಕ್ಕಾಗಿ ಖರ್ಚಾಗಿರುವುದು 1769 ರೂ. (2) ಬೇಕಾಬಟ್ಟೆ ಚಿಕಿತ್ಸೆಮಾಡಿದುದರಿಂದ ಪ್ಲೀಡರಿಗೆ ದೇಹದೌರ್ಬಲ್ಯವುಂಟಾಗಿ ಜೀವಿತ ಸೌಖ್ಯವಿಲ್ಲದಂತಾದುದಕ್ಕಾಗಿಯೂ, ಕೈ ಬೆರಳುಗಳೂ ಎಡಗೈಯೂ ನಿರುಪಯೋಗವಾದುದರಿಂದಲೂ, ದೃಷ್ಟಿಯು ಕೆಟ್ಟುಹೋಗಿ ಬುದ್ಧಿಮಾಂದ್ಯವುಂಟಾದುದರಿಂದಲೂ ಆತನ ದ್ರವ್ಯಸಂಪಾದನೆಗೆ ಅವಕಾಶವಿಲ್ಲದಂತಾದುದಕ್ಕಾಗಿಯೂ 5000 ರೂಪಾಯಿಗಳು ಒಟ್ಟು 7958 ರೂ. ಪರಿಹಾರದ್ರವ್ಯವು ಕೊಡಲ್ಪಡಬೇಕೆಂದು ತೀರ್ಮಾನಿಸಲ್ಪಟ್ಟಿತು. ಇದೇ ವೈದ್ಯನು ಸುಳ್ಳು ಸಾಕ್ಷ್ಯವನ್ನು ನುಡಿದುದಕ್ಕಾಗಿ ಈತನಮೇಲೆ ಮತ್ತೊಂದು ವಿವಾದವನ್ನು ಅದೇ ಪ್ಲೀಡರು ಹೂಡಿರುತ್ತಾನೆ.

ಹೆಂಡಿತಿಯ ವಿಕ್ರಯ

ಬಂಗಾಳಾಕ್ಕೆ ಸೇರಿದ ಕೋಮಿಲ ಸಬ್‌ಡಿವಿಜನಲ್ ಮೆಜಿಸ್ಟ್ರೇಟರಲ್ಲಿ ಗಂಡನು ಹೆಂಡಿತಿಯನ್ನು ವಿಕ್ರಯಿಸಿದ ವಿವಾದವು ನಡೆಯುತ್ತಿದೆ. ಉರಿಯುನ ಎಂಬ ಗ್ರಾಮದಲ್ಲಿ ರೇವತಿ ಮೋಹನ ಚಕ್ರವರ್ತಿ ಎಂಬ ಒಬ್ಬ ಬ್ರಾಹ್ಮಣ ಯುವಕನು ತನ್ನ ಮಾವನ ಆಸ್ತಿಗೆ ತಾನೇ ಹಕ್ಕುದಾರನಾಗಿ ತನ್ನ ಹೆಂಡಿತಿ ಮತ್ತು ಅತ್ತೆಯರೊಡನೆ ಮಾವನ ಮನೆಯಲ್ಲೇ ವಾಸವಾಗಿದ್ದನು. ಕೆಲ ಕಾಲಾನಂತರ ನಾಗರಭಾಷಿದೇವಿ ಎಂಬ 14 ವರ್ಷದ ಬಾಲೆಯನ್ನು ಮದುವೆಮಾಡಿಕೊಂಡು ತನ್ನ ಮನೆಗೆ ಕರೆದುಕೊಂಡು ಬಂದನು. ಆದರೆ ತನ್ನ ಮೊದಲನೆಯ ಹೆಂಡಿತಿಯೂ ಅವಳ ತಾಯಿಯೂ ಎರಡನೆಯ ಹೆಂಡಿತಿಯನ್ನು ಬಹಳವಾಗಿ ಹಿಂಸಿಸುತ್ತ ಬಂದುದರಮೇಲೆ ಆ ಹುಡುಗಿಯನ್ನು ನವಕಾಳಿಯ ವಿಪಿನವಿಹಾರಿದಾಸ ಎಂಬವನಿಗೆ 150 ರೂಪಾಯಿಗಳಿಗೆ ವಿಕ್ರಯಿಸಿ ಒಂದು ಪತ್ರವನ್ನು ಸಹ ಬರೆದುಕೊಟ್ಟನು. ಈ ಸಂಗತಿಯನ್ನು ಆ ಹುಡುಗಿಯ ಅಣ್ಣನು ತಿಳಿದು ಪೊಲೀಸಿಗೆ ವರದಿಮಾಡಿದನು. ಪೊಲೀಸಿನವರು ಅವಳ ಗಂಡನಾದ ಚಕ್ರವರ್ತಿಯನ್ನೂ, ಇವನಿಗೆ ಮಾರಾಟದಲ್ಲಿ ಸಹಾಯಕರಾಗಿದ್ದ ಮೂವರನ್ನೂ ಸೆರೆಹಿಡಿದು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುವರು. ಇವರ ವಿಚಾರಣೆಯು ಈ ತಾ|| 30 ರಲ್ಲಿ ನಡೆಯುವುದು.

ಸರ್ಪದಷ್ಟನು ಬದುಕಿದುದು

ಹೈದರಾಬಾದಿನೊಳಗೆ ದೊಡ್ಡ ವ್ಯಾಪಾರಸ್ಥಳವಾದ ಲಾರ್ಡ್‌ಬಜಾರ್ ಎಂಬ ಪೇಟೆಯಲ್ಲಿ ಒಬ್ಬ ಹಾವಾಡಿಗರವನು ತನ್ನ ಹಾವಿನ ಬುಟ್ಟಿ ಮೊದಲಾದ ಸಾಮಗ್ರಿಗಳನ್ನು ಮಡಗಿಕೊಂಡು ಜನರ ಗುಂಪುಸೇರುವುದಕ್ಕಾಗಿ ಡೋಲನ್ನು ಬಡಿಯುತ್ತಿದ್ದನು. ಜನರು ಬಂದು ಸೇರುತ್ತಿದ್ದರು. ಈ ಮಧ್ಯೆ ಬುಟ್ಟಿಯೊಳಗಿದ್ದ ದೊಡ್ಡ ನಾಗರಹಾವು ಹೇಗೋ ಹೊರಗಡೆಗೆ ಬಂದು 18 ವರ್ಷದ ಒಬ್ಬ ಯುವಕನ ಸಮೀಪಕ್ಕೆ ಹೋಗಿ ಅವನನ್ನು ಕಡಿದಿತು. ಅವನು ಹೆದರಿ ಕೆಳಗೆ ಬಿದ್ದು ಕೂಡಲೆ ಮೂರ್ಛೆಹೋದನು. ಈ ಅಚಾತುರ್ಯವನ್ನು ಹಾವಾಡಿಗರವನು ನೋಡಿ ದಿಗಿಲುಬೀಳದೆ ತನ್ನ ಚೀಲದಿಂದ ಒಂದು ಒಣ ಬೇರನ್ನು ತೆಗೆದು ತನ್ನಲ್ಲಿದ್ದ ಮುಂಗೂಸಿಯ ಬಾಯಿನೊಳಕ್ಕೆ ಕೊಟ್ಟನು. ಅದು ಆ ಬೇರನ್ನು ಚೆನ್ನಾಗಿ ಅಗಿದು ಮುದ್ದೆಮಾಡಿ ಜ್ಞಾನತಪ್ಪಿ ಬಿದ್ದಿದ್ದ ಯುವಕನ ಮುಖದಮೇಲೆ ಹತ್ತಿ ತನ್ನ ಬಾಯಿಯಲ್ಲಿದ್ದ ಬೇರಿನ ಮುದ್ದೆಯನ್ನು ಅವನ ಬಾಯಿಯ ಹಲ್ಲನ್ನು ಬಿಡಿಸಿ ಒಳಕ್ಕೆ ತುರುಕಿತು. ಕೊಂಚಹೊತ್ತಿನ ಮೇಲೆ ಆ ಹುಡುಗನು ಜ್ಞಾನ ತಿಳಿದು ಮೇಲಕ್ಕೆದ್ದನು. ಈ ಹಾವಾಡಿಗರು ಇಂತಹ ಮೂಲಿಕಾಪ್ರಯೋಗವನ್ನು ತಾವು ಸಾಕಿರುವ ಮುಂಗುಸಿ ಮೊದಲಾದ ಪ್ರಾಣಿಗಳಿಂದ ಅರಿತುಕೊಂಡಿರಬಹುದು.

ಕೆಳಗೆ ಬಿದ್ದಿದ್ದ ಮರ ಮೇಲಕ್ಕೆದ್ದಿರುವುದು

ಮಡಕಶಿರಾಕ್ಕೆ ಸೇರಿದ ಹರಿಸಮುದ್ರ ಎಂಬ ಗ್ರಾಮದ ಬಳಿ ಬಹಳ ಪುರಾತನವಾದ ಒಂದು ಮರವು ಈ ತಿಂಗಳ ಆದಿಭಾಗದಲ್ಲಿ ಮುರಿದುಬಿದ್ದು ಹೋಗಿದ್ದಿತು. ಇದನ್ನು ಕಡಿದು ತೆಗೆದುಕೊಂಡು ಹೋಗಲು ರೆವಿನ್ಯೂ ಶಾಖೆಯವರು ಹರಾಜು ಮಾಡಿದರು. ಅದನ್ನು ಕೊಂಡವನು ಅದರ ಕೊಂಬೆಗಳನ್ನೆಲ್ಲ ಕತ್ತರಿಸಿ ಮುಂಡವನ್ನು ಬಿಟ್ಟುಹೋಗಿದ್ದನು. ಕೆಲಕಾಲಾನಂತರ ಒಂದು ದಿವಸ ದನಕಾಯುವ ಹುಡುಗರು ತಮ್ಮ ದನಕರುಗಳನ್ನು ಆ ಮುರಿದು ಬಿದ್ದಿದ್ದ ಮುಂಡದ ಸಮೀಪದಲ್ಲಿ ಮೇಯಿಸುತ್ತಿರುವಾಗ್ಗೆ ಅಕಸ್ಮಾತ್ತಾಗಿ ಆ ಮುಂಡವು ಘಟ್ಟಿಯಾಗಿ ಧ್ವನಿಮಾಡುತ್ತ ಮೇಲಕ್ಕೆದ್ದು ನೆಟ್ಟಗೆ ನಿಂತುಕೊಂಡಿತು. ಆ ಹುಡುಗರು ಇದನ್ನು ನೋಡಿ ಭಯಭ್ರಾಂತರಾಗಿ ಪಿಶಾಚವು ಮರದಲ್ಲಿ ಸೇರಿರಬೇಕೆಂದು ಭಾವಿಸಿ ಊರಿಗೆ ಓಡಿಹೋಗಿ ನಡೆದ ಸಂಗತಿಯನ್ನು ಜನರಿಗೆ ತಿಳಿಸಿದರು. ಜನರು ಗುಂಪುಕಟ್ಟಿಕೊಂಡು ಬಂದು ಈ ಅದ್ಭುತಕಾರ್ಯವನ್ನು ನೋಡಿ ಇದು ದೈವಿಕ ಚಮತ್ಕಾರವೆಂದು ತಿಳಿದು ಮರಕ್ಕೆ ಹಣ್ಣುಕಾಯಿಗಳನ್ನು ಅರ್ಪಿಸಿ ಮಂಗಳಾರತಿ ಮಾಡಿಸಿದರು. ಈ ಮರದಲ್ಲಿ ವಾಸಿಸುತ್ತಿದ್ದ ಘಟಸರ್ಪದ ಮಹಿಮೆಯೆಂದು ಹೇಳಲ್ಪಡುತ್ತಿದೆ. ನೆರೆಗ್ರಾಮಗಳಿಂದ ನೂರಾರು ಜನರು ಬಂದು ನೋಡಿ ಆಶ್ಚರ್ಯಪಟ್ಟುಕೊಂಡು ಹೋಗುತ್ತಿರುವರಂತೆ!

ಅಸ್ಪೃಶ್ಯತಾನಿವಾರಣೆ.

ಯಾವದ್ಭಾರತ ಸ್ವಾಮಿ ಶ್ರದ್ಧಾನಂದ ಮೆಮೋರಿಯಲ್ ಟ್ರಸ್ಟಿನವರು ವೃತ್ತಪತ್ರಿಕೆಗಳಲ್ಲಿ ಈ ಪ್ರಕಾರವಾಗಿ ಪ್ರಕಟಿಸಿರುತ್ತಾರೆ:—ಅಸ್ಪೃಶ್ಯತಾನಿವಾರಣ ಸಮಸ್ಯೆಯನ್ನು ಇನ್ನೂ ಬಗೆಹರಿಸದೆ ಇಟ್ಟುಕೊಂಡಿರಕೂಡದು. ಈ ಸಮಸ್ಯೆಯು ಪರಿಷ್ಕಾರವಾಗದಿದ್ದರೆ ಹಿಂದು ಸಮಾಜವು ಉಳಿಯುವುದೇ ಕಷ್ಟವಾಗುವುದು. ಒಂದುಕಡೆ ಡಾಕ್ಟರು ಅಂಬೇಡಕರರು ಹಿಂದು ಸಮಾಜನಾಶಕ್ಕೆ ಹೇತುವಾದ ಪ್ರತ್ಯೇಕ ನಿಯೋಜಕ ವರ್ಗಕ್ಕಾಗಿ ಪ್ರಯತ್ನಿಸುತ್ತಿರುವರು. ಈ ಪ್ರಯತ್ನದಿಂದ ಭಾರತ ದೇಶದಲ್ಲಿ ಪ್ರಜಾಹಿತಕಾರ್ಯಗಳಿಗೂ, ರಾಜಕೀಯ ಕಾರ್ಯಗಳಿಗೂ ಅನರ್ಥಕಾರಿಯಾಗಿ ಪರಿಣಮಿಸುವುದು. ಈ ಪ್ರಯತ್ನವನ್ನು ಪ್ರತಿಭಟಿಸಿ ಹಿಂದು ಸಮಾಜವು ವಿಚ್ಛಿನ್ನವಾಗದಂತೆ ಮಾಡುವುದು ಹಿಂದುಗಳ ಕರ್ತವ್ಯವಾಗಿರುತ್ತದೆ. ತಾವು ಕೀಳೆಂಬ ಭಾವನೆಯು ಅಸ್ಪೃಶ್ಯರನ್ನು ಆವರಿಸಿಕೊಂಡಿದೆ. ಈ ಭಾವನೆಯನ್ನು ಅಸ್ಪೃಶ್ಯರು ಬಿಡಲಾರದವರಾಗಿರುತ್ತಾರೆ. ಆದುದರಿಂದ ಅವರಲ್ಲಿ ಭಾವಪರಿವರ್ತನವಾಗತಕ್ಕುದು ಅತ್ಯಾವಶ್ಯಕವು. ಅಸ್ಪೃಶ್ಯರೆಂದು ಎಂದಿನಂತೆ ಪರಿಗಣಿಸಿ ಹಿಂದು ಚತುರ್ವರ್ಣದವರು ಭಗವಂತನಿಗೂ, ಮಾನವರಿಗೂ ದ್ರೋಹಮಾಡುತ್ತಿರುವರು. ಇನ್ನು ಮೇಲೆ ಈರೀತಿ ಇರುವುದು ಎಷ್ಟು ಮಾತ್ರಕ್ಕೂ ಯುಕ್ತವಲ್ಲ. ಈ ವೇಳೆಯಲ್ಲಿ ದೇಶದಲ್ಲೆಲ್ಲ ಪ್ರಾಪ್ತವಾಗಿರುವ ವಿಶೇಷ ಸಂದಿಗ್ಧಸ್ಥಿತಿಯನ್ನು ಅರಿತುಕೊಂಡು ಜುಲೈ ತಾ|| 17 ರಲ್ಲಿ ಅಸ್ಪೃಶ್ಯತಾನಿವಾರಣೆಗಾಗಿ ಪ್ರಯತ್ನಿಸಲು ಪ್ರಜೆಗಳನ್ನು ಪ್ರಾರ್ಥಿಸಿಕೊಳ್ಳುವುದಕ್ಕಾಗಿ ಯಾವದ್ಭಾರತ ಸ್ವಾಮಿ ಶ್ರದ್ಧಾನಂದ ಮೆಮೋರಿಯಲ್ ಟ್ರಸ್ಟಿನವರು ನಿಶ್ಚಯಿಸಿರುತ್ತಾರೆ. ಮತಗುರುಗಳೂ, ಸಭೆಗಳ ಸಮಾಜಗಳ ಕಾರ್ಯನಿರ್ವಾಹಕರುಗಳೂ ಈ ವಿಜ್ಞಾಪನೆಯನ್ನು ಲಾಲಿಸಿ ಆ ತಾರೀಖಿನಲ್ಲಿ ಗೊತ್ತಾಗುವ ಕಾರ್ಯಕ್ರಮಗಳನ್ನು ಜರುಗಿಸುವಂತೆ ಕೋರುತ್ತೇವೆ. ಆ ದಿವಸದಿಂದ ಅಸ್ಪೃಶ್ಯತೆಯನ್ನು ಪರಿಗಣಿಸಬಾರದು. ಅಸ್ಪೃಶ್ಯರೆಂದೂ, ನಿಮ್ನ ಜನರೆಂದೂ ಕರೆಯಲ್ಪಡುವವರನ್ನು ಪುನಃ ಸಮಾಜಕ್ಕೆ ಸೇರಿಸಿಕೊಳ್ಳಬೇಕು. ಪ್ರಜೆಗಳು ಸೇರುವ ಸಭೆಗೆ ಅವರನ್ನು ಬರಗೊಡಬೇಕು. ದೇವಾಲಯಗಳಿಗೂ ಅವರನ್ನು ಪ್ರವೇಶಗೊಳಿಸಬೇಕು. ಜುಲೈ ತಾ|| 17 ರಲ್ಲಿ ನಡೆಯುವ ಸಭೆಯಲ್ಲಿ ಮುಂದಣ ಕಾರ್ಯಕ್ರಮಗಳು ಅನುಸರಿಸಲ್ಪಡುವುವು:-(1) ಅಸ್ಪೃಶ್ಯತಾ ಪಾಪದ ಮೇಲೆ ಉಪನ್ಯಾಸಗಳಾಗುವುವು (2) ರಾಜಾ-ಮೂಂಜೆ ಒಪ್ಪಂದವನ್ನು ಬಲಪಡಿಸುವುದು. ಅಂಬೇಡಕರ ಅನರ್ಥಕಾರಿಯಾದ ಪ್ರಚಾರವನ್ನು ಖಂಡಿಸಿ ತೀರ್ಮಾನಮಾಡುವುದು. (3) ದೇವಾಲಯದಲ್ಲಿ ಸಮಸ್ತರೂ ಸೇರಿ ಪೂಜೆಮಾಡಿಸುವುದು, ಬಾವಿಗಳಲ್ಲಿ ಎಲ್ಲರೂ ನೀರನ್ನುಪಯೋಗಿಸುವುದು ಎಂದು ಪ್ರಸಿದ್ಧಪಡಿಸುವುದು (4) ಸಾಧ್ಯವಿದ್ದೆಡೆಯಲ್ಲಿ ಅಂತರ್ವರ್ಣ ಭೋಜನಕ್ಕೇರ್ಪಾಟುಮಾಡುವುದು.

ಒಳದೇಶದ ವೃತ್ತಾಂತಗಳು.

ಮೈಸೂರು ಬ್ಲೂಬುಕ್ಕು ಮತ್ತು ಪಬ್ಲಿಸಿಟಿ ಜರ್ನಲ್ ಎಂಬ ಮಾಸಪತ್ರಿಕೆಯ ಪ್ರಕಟನೆಯು ಈ ಜೂನ್ ತಿಂಗಳಾದ್ಯ ನಿಲ್ಲಿಸಲ್ಪಟ್ಟಿತು.

ನಂಜನಗೂಡಿನಲ್ಲಿ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಕಲ್ಯಾಣಮಹೋತ್ಸವವು ಬರುವ ಜುಲೈ ತಾ|| 7 ನೆಯ ಗುರುವಾರ ಪ್ರಾತಃಕಾಲ 9–54 ರ ಮೇಲೆ 10–6 ಘಂಟೆಯೊಳಗೆ ನಡೆಯುವುದು. ತದಂಗವಾದ ವರಪೂಜೆ ಮೊದಲಾದ ಕಾರ್ಯಗಳು ತಾ|| 6 ರಲ್ಲಿ ಆರಂಭವಾಗಿ ತಾ|| 13 ರಲ್ಲಿ ತೆಪ್ಪೋತ್ಸವ ನಡೆದು ಪರಿಸಮಾಪ್ತಿಗೊಳ್ಳುವುವು.

ಸರ್ಕಾರಿಯುದ್ಯಾನಗಳ ಡೈರೆಕ್ಟರಾಗಿದ್ದ ಮಿ|| ಜೆ. ಎಚ್. ಕ್ರುಂಬೀಗಲ್‌ರವರು ಬರುವ ಜುಲೈ ತಾ|| 1 ರಲ್ಲಿ ಉದ್ಯೋಗದಿಂದ ನಿವೃತ್ತರಾಗುವ ಪ್ರಯುಕ್ತ ಉದ್ಯಾನಗಳ ಸೂಪರಿಂಟೆಂಡೆಂಟರಾದ ಮ|| ಎಚ್. ಸಿ. ಜವರಯ್ಯನವರು ಉದ್ಯಾನ ಶಾಖೆಯ ಮತ್ತು ಬೆಂಗಳೂರಿನ ಸರ್ವವಸ್ತು ಪ್ರದರ್ಶನಾಲಯದ ಮೇಲ್ವಿಚಾರಕರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರ ಚುನಾವಣೆಯು ಈ ತಾ|| 30 ರಲ್ಲಿ ನಡೆಯುವುದು. ಈ ಚುನಾವಣೆಗೆ ಮ್ಯು|| ಕೌನ್ಸಿಲರುಗಳಾದ ಮ|| ಬಿ. ಕೆ. ಗರುಡಾಚಾರ್ಯರೂ, ಅಡ್ವೊಕೇಟ್ ಮ|| ಎನ್. ಬಾಲಕೃಷ್ಣಯ್ಯನವರೂ ಅಭ್ಯರ್ಥಿಗಳಾಗಿರುವರು. ಈ ಚುನಾವಣೆಯ ಫಲಿತಾಂಶವು ಬಹಳ ಕುತೂಹಲದಿಂದ ನಿರೀಕ್ಷಿಸಲ್ಪಟ್ಟಿದೆ.

ಹಾಸನ ಡಿ|| ಅರಸೀಕೆರೆ ತಾ|| ಮಾಲೇಕಲ್ಲು ತಿರುಪತಿಯಲ್ಲಿ ನಡೆಯುವ ರಥೋತ್ಸವಕಾಲದಲ್ಲಿ ಅಂದರೆ ಬರುವ ಜುಲೈ ತಾ|| 16, 17 ಮತ್ತು 18 ರಲ್ಲಿ ಆರ್ಯವೈಶ್ಯ ಕೋ-ಆಪರೇಟಿವ್ ಕಾನ್ಫರೆನ್ಸು ಮತ್ತು ಇನ್‌ಫಾರ್ಮಲ್ ಕಾನ್ಫರೆನ್ಸು ನಡೆಸಲ್ಪಡುವುದಾಗಿಯೂ, ಈ ಸಭೆಗೆ ಬರತಕ್ಕ ವೈಶ್ಯರುಗಳ ಭೋಜನಕ್ಕೆ ಏರ್ಪಡಿಸಿರುವುದಾಗಿಯೂ ಹಾಸನದ ಮ|| ಆರ್. ವಿ. ಸೂರ್ಯನಾರಾಯಣಶೆಟ್ಟಿ ಬ್ರದರ್ಸ್‌ರವರು ತಿಳಿಸಿರುತ್ತಾರೆ.

ಕಳೆದ ಬುಧವಾರ ಬೆಂಗಳೂರಿಂದ ಹೊಸೂರು ಮಾರ್ಗವಾಗಿ ಹೊರಟ ಪ್ರಯಾಣಿಕರ ಬಸ್ಸು ಮಡಿವಾಳದ ಬಳಿ ಇದಿರಾಗಿ ಬರುತ್ತಿದ್ದ ಎತ್ತಿನಬಂಡಿಗೆ ದಾರಿಯನ್ನು ಕೊಡುವ ಪ್ರಯತ್ನದಲ್ಲಿ ಪಕ್ಕದಲ್ಲಿದ್ದ ಹಳ್ಳಕ್ಕೆ ಮಗುಚಿಕೊಂಡಿತು. ಇದರಿಂದ ಡ್ರೈವರಿಗೂ ಕಂಡಕ್ಟರಿಗೂ ಮತ್ತಿಬ್ಬರು ಪ್ರಯಾಣಿಕರಿಗೂ ವಿಶೇಷ ಅಪಾಯವು ಸಂಭವಿಸಿರುವುದು. ಪೊಲೀಸಿನವರು ಕೂಡಲೆ ಬಂದು ಅಪಾಯವನ್ನು ಹೊಂದಿದವರನ್ನು ಬೆಂಗಳೂರಿನ ಆಸ್ಪತ್ರೆಗೆ ಸಾಗಿಸಿದರು.

ರಾಜಧಾನಿಯ ಇಟಿಗೆಗೂಡಿನಲ್ಲಿರುವ ಮ|| ಸಾಹುಕಾರ್ ಎ. ಸಿದ್ದಣ್ಣನವರ ಪುತ್ರ ಮ|| ಎ. ಎಸ್. ಚೆನ್ನಯ್ಯನವರ 18–19 ವರ್ಷ ವಯಸ್ಸಿನ ಪತ್ನಿಯು ಕೆಲ ದಿವಸಗಳಿಂದ ಕೃಷ್ಣಾಜಮ್ಮಣ್ಣಿ ಕ್ಷಯರೋಗ ಆಸ್ಪತ್ರೆಯ ಚಿಕಿತ್ಸೆಯಲ್ಲಿದ್ದು ಈ ದಿವಸ ಕಾಲವಾದರೆಂದು ತಿಳಿಸಲು ಖೇದವಾಗುತ್ತದೆ. ಈಕೆಗೆ ಒಂದು ಗಂಡುಮಗುವಿರುವುದು. ಮ|| ಚೆನ್ನಯ್ಯನವರಿಗೆ ಪತ್ನಿವಿಯೋಗದುಃಖಪ್ರಾಪ್ತವಾದುದಕ್ಕಾಗಿ ನಮ್ಮ ಅನುತಾಪವನ್ನು ಸೂಚಿಸಿ ಇವರಿಗೆ ಮನಸ್ಸಮಾಧಾನವೂ ಮೃತರ ಆತ್ಮಕ್ಕೆ ಶಾಂತಿಯೂ ಉಂಟಾಗಲೆಂದು ಕೋರುತ್ತೇವೆ.

ರಾಜಧಾನಿಯಲ್ಲಿ ನಡೆದ ಮಹಮ್ಮದೀಯರ ಸಭೆಗೆ ಬಂದಿದ್ದ ಮದ್ರಾಸಿನ ಮಿ|| ಸಿ. ಅಬ್ದುಲ್ ಹಕೀಂಸಾಹೇಬರು ಇಲ್ಲಿಯ ಮಹಮ್ಮದೀಯ ಅನಾಥಾಲಯಕ್ಕೆ ಹೋಗಿದ್ದು ಅದರ ಕಾರ್ಯಕ್ರಮವನ್ನೂ ಹುಡುಗರ ವಿದ್ಯಾಭಿವೃದ್ಧಿಯನ್ನೂ ಕೇಳಿ ತಿಳಿದುಕೊಂಡು ಬಹಳವಾಗಿ ಸಂತೋಷಪಟ್ಟು ಆಲಯದ ಸಹಾಯಾರ್ಥವಾಗಿ 10,000 ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟರೆಂದು ಕೇಳಿ ಸಂತೋಷಿಸುತ್ತೇವಲ್ಲದೆ ಅವರನ್ನು ಅಭಿನಂದಿಸುತ್ತೇವೆ ಮತ್ತು ಇತರ ಮಹಮ್ಮದೀಯ ದೊಡ್ಡ ಮನುಷ್ಯರುಗಳು ಅವರ ಮೇಲ್ಪಂಕ್ತಿಯನ್ನು ಅನುಸರಿಸಬೇಕಾಗಿ ಕೋರುತ್ತೇವೆ.

ಕಳೆದ ಬುಧವಾರ ಸಾಯಂಕಾಲ 4 ಘಂಟೆಯ ಸಮಯದಲ್ಲಿ ರಾಜಧಾನಿಯಿಂದ ನಾಗಮಂಗಲಕ್ಕೆ ಹೊರಟ ಸರ್ವಸಿದ್ಧಿಪ್ರದಾಯಕ ಮೋಟಾರು ಬಸ್ಸು ವೀರನಗೆರೆ ಉಕ್ಕಡದ ಸಮೀಪದಲ್ಲಿ ಮುಂದುಗಡೆಹೋಗುತ್ತಿದ್ದ ಮತ್ತೊಂದು ಬಸ್ಸನ್ನು ಹಿಂಹಾಕುವ ಪ್ರಯತ್ನದಲ್ಲಿ ಗೇಟಿನಕಲ್ಲು ಕಂಭಕ್ಕೆ ಬಹಳ ರಭಸದಿಂದ ಬಡಿಯಲು ಕಂಭವು ಮುರಿದು ತುಂಡುತುಂಡಾಗಿ ಬಿದ್ದಿತು ಮತ್ತು ಬಂಡಿಯ ಒಂದು ಪಾರ್ಶ್ವವು ಮುರಿದುಹೋಯಿತು, ಬಂಡಿಯೊಳಗಿದ್ದ ಪ್ರಯಾಣಿಕರಲ್ಲಿ ಒಬ್ಬನಿಗೆ ಸೀಟಿನ ಕಬ್ಬಿಣಗಳು ಬಡಿದು ಭಯಂಕರವಾದ ಅಪಾಯವು ಸಂಭವಿಸಿ ಅವನು ಕುಳಿತಲ್ಲೇ ಮೃತನಾದನು. ಇನ್ನೊಬ್ಬ ಸಾಹುಕಾರರ ಮಗನಿಗೂ ಡ್ರೈವರಿಗೂ ಪೂರಾ ಪೆಟ್ಟುಬಿದ್ದುದರ ಮೇಲೆ ಕೃಷ್ಣರಾಜ ಆಸ್ಪತ್ರೆಗೆ ಸಾಗಿಸಲ್ಪಟ್ಟರು. ಅವರಲ್ಲಿ ಆ ಹುಡುಗನು ಸತ್ತುಹೋಗಿ ಡ್ರೈವರು ಚಿಕಿತ್ಸೆಹೊಂದುತ್ತಿರುವನು. ಒಬ್ಬ ಗರ್ಭಿಣಿಗೂ ಮತ್ತೆ ಮೂವರಿಗೂ ಸುಮಾರಾಗಿ ಪೆಟ್ಟು ಬಿದ್ದಿರುತ್ತದೆ. ಇಂತಹ ಅನಾಹುತಗಳು ಪದೇ ಪದೇ ನಡೆಯುತ್ತಿವೆ, ಆದರೆ ಡ್ರೈವರುಗಳಿಗೆ ಕಠಿಣ ಶಿಕ್ಷೆಯು ವಿಧಿಸಲ್ಪಡದಿರುವುದರಿಂದ ಅವರು ನಿರ್ಲಕ್ಷ್ಯದಿಂದಲೂ, ನಿರ್ಭೀತಿಯಿಂದಲೂ ಮನಸ್ಸಿಗೆ ಬಂದಿಗಳನ್ನೋಡಿಸಿ ಪ್ರಾಣಾಪಾಯವನ್ನುಂಟುಮಾಡುತ್ತಿರುವರು. ಇದು ನಿಲ್ಲಬೇಕಾದಲ್ಲಿ ಅಂಥಾ ಡ್ರೈವರುಗಳಿಗೆ ಪ್ರಬಲವಾದ ಕಾರಾಗೃಹವಾಸ ಶಿಕ್ಷೆಯೂ ಬಂಡಿಯ ಯಜಮಾನರುಗಳಿಗೆ ಅರ್ಥದಂಡವೂ ವಿಧಿಸಲ್ಪಡಬೇಕು. ಅದು ವಿಷಾ ಗಣ್ಯಂವಿಲ್ಲ.

ಮೈನರ್ವಾ ಮಿಲ್ಸ್ ಲಿಮಿಟೆಡ್

[3—1]

ಪ್ರತಿ **500** ರೂ. ಗೆ ಸಾಲಿಯಾನ ಶೇಕಡ **7½** ರೂ. ಬಡ್ಡಿಯಂತೆ **18,00,000** ರೂಪಾಯಿಗಳನ್ನು ಆಸ್ತಿಯ ಮೊದಲನೆಯ ಅಡಮಾನದಿಂದ ಸಾಲವಾಗಿ ತೆಗೆಯಲು ಗೊತ್ತುಮಾಡಿದೆ.

ಬೆಂಗಳೂರಲ್ಲಿರುವ ಮೇಲ್ಕಂಡ ಕಂಪೆನಿಯ **35,00,000** ರೂಪಾಯಿ ಬೆಲೆ ಬಾಳುವ ಆಸ್ತಿಯು ಈ ಸಾಲಕ್ಕೆ ಈಡಾಗಿರುತ್ತದೆ.

ಈ ಮಿಲ್ಲಿನಲ್ಲಿ **32,416** ಕದಿರುಗಳು ಮತ್ತು **440** ಮಗ್ಗಗಳು ನವೀನ ಉಪಕರಣಗಳ ಸಮೇತವಾಗಿರುತ್ತವೆ.

ಈ ಸಾಲದ ಮೊಬಲಗು **1940** ನೇ ಇಸವಿ ಜನವರಿ ತಾರೀಕು **2** ರಲ್ಲಿ ತೀರಿಸಲ್ಪಡುವುದು. ಈ ಸಾಲದ ಮೊಬಲಗನ್ನು ಪೂರ್ತಿಯಾಗಿ ಆಗಲಿ ಭಾಗವಾಗಿ ಆಗಲಿ **1935** ನೆಯ ಜನವರಿ ತಾ॥ **2** ರಲ್ಲಿ ಅಥವಾ ಅನಂತರದಲ್ಲಿ ಬಡ್ಡಿ ಸಮೇತ ಕಂಪೆನಿಯವರಿಗೆ ಸೂಕ್ತ ತೋರಿದಂತೆ ವಾಪಸ್ಸು ಕೊಡುವ ಅಧಿಕಾರವನ್ನು ಕಂಪೆನಿಯವರಿಟ್ಟುಕೊಂಡಿರುತ್ತಾರೆ.

ಇಟಲಿಯ ಫಾಸಿಷ್ಟ್ ವಿಧಾನ.

20 ನೆಯ ಶತಮಾನದಲ್ಲಿ ಯೂರೋಪುಖಂಡದೊಳಗೆ ಎರಡು ದೇಶಗಳು ಅತ್ಯುನ್ನತದೆಶೆಗೆ ಬಂದುವು. ಅವುಗಳಲ್ಲೊಂದಾದ ಜರ್ಮನಿಯು ಮಹಾಯುದ್ಧದಲ್ಲಿ ಪರಾಜಯವನ್ನು ಹೊಂದಿದುದರಿಂದ ಈಗ ತನ್ನ ಗೌರವವನ್ನು ಉಳಿಸಿಕೊಳ್ಳುವುದು ಕಷ್ಟವಾಗಿದ್ದಿತು. ಆದರೆ ಮೇಲೆ ಹೇಳಿದ ದೇಶಗಳಲ್ಲಿ 2 ನೆಯದಾದ ಇಟಲಿ ದೇಶವು ಮಾತ್ರ ಈಗಲೂ ತನ್ನ ಗೌರವಪ್ರತಿಷ್ಠೆಗೆ ಭಂಗ ಬಾರದಂತೆ ಪ್ರಯತ್ನಪಡುತ್ತಿರುವುದು. ಯುದ್ಧದಲ್ಲಿ ಜರ್ಮನಿಯು ಸೋತು ಕ್ಷೀಣವಾಗುತ್ತಿದ್ದರೆ ಇಟಲಿ ದೇಶವು ಇದೇ ಯುದ್ಧದಲ್ಲಿ ಜಯವನ್ನು ಹೊಂದಿದುದರಿಂದಲೂ, ಅದರ ಪರ್ಯವಸಾನದಿಂದಲೂ 19 ನೆಯ ಶತಮಾನದಲ್ಲಿ "ಮಾಜಿನೀ" "ಗ್ಯಾರಿಬಾಲ್ಡಿ" "ಕಾವೂರು" ಮೊದಲಾದವರು ನಾಯಕರು ಮಾಡಿದ ಪ್ರಯತ್ನಗಳ ಫಲವನ್ನು ಹೊಂದುವಂತಾಯಿತು. ಈಗಲೂ ಯೂರೋಪುಖಂಡದಲ್ಲಿ ಫ್ರಾನ್ಸುದೇಶವನ್ನು ಬಿಟ್ಟರೆ ಇಟಲಿಯು ಅತ್ಯಂತ ಬಲವಾದ ದೇಶವೆಂದು ಹೇಳಲಭ್ಯಂತರವಿಲ್ಲ. ಫ್ರಾನ್ಸುದೇಶದ ಪ್ರಾಮುಖ್ಯತೆಯು ಅನಾದಿಕಾಲದಿಂದಲೂ ಒಪ್ಪಿಕೊಳ್ಳಲ್ಪಟ್ಟುದಾಗಿದೆ. ಆದರೂ ಇಟಲಿಯು ಎಂದೋ ಇಂತಹ ಪ್ರಬಲಸ್ಥಾನವನ್ನು ಅಲಂಕರಿಸಿರುತ್ತದೆ. ಇದರಿಂದ ಇಟಲಿ ದೇಶವು ನೂತನ ಶಕ್ತಿಯನ್ನು ಹೊಂದಿ ತನ್ನ ಸ್ವಂತ ಪ್ರಯತ್ನದಿಂದ ಇತರರಿಗೆ ಅಪಾಯಕರವಾಗಿರುವಂತೆ ಪ್ರವರ್ತಿಸುತ್ತಿದ್ದಿತು. ಈಗಿನ ಕಾಲದಲ್ಲಿ ಯೂರೋಪುಖಂಡವು ಇಟಲಿಯ ಕಾರ್ಯವನ್ನು ಬಹಳ ಎಚ್ಚರಿಕೆಯಿಂದ ನಿತ್ಯದಲ್ಲೂ ಪರಿಶೀಲಿಸುತ್ತಿರುವುದು. ರೋಮು ಪಟ್ಟಣದಲ್ಲಿ ನಿಯಮಿಸಲ್ಪಟ್ಟಿರುವ ಸಂಸ್ಥೆಗಳೆಲ್ಲ ಯೂರೋಪುಖಂಡ ಸಮುಸ್ತಯಾಗಿ ಪರಿಣಮಿಸುತ್ತಿರುವುದು. ಹೀಗೆ ದೌರ್ಜನ್ಯಪೂರಿತವಾದ ಇಟಲಿ ದೇಶದ ಪ್ರಾಮುಖ್ಯತೆಗೆ ಕಾರಣವು ಈ ಕೆಳಗೆ ವಿವರಿಸಲ್ಪಟ್ಟಿದೆ.

ಇಟಲಿಯ ಪೂರ್ವಚರಿತ್ರೆ

1914-1918 ರ ಮಹಾಯುದ್ಧ ಕಾಲದವರೆಗೂ ಇಟಲಿ ದೇಶವು ಬಹಳ ಹೀನಸ್ಥಿತಿಯಲ್ಲಿದ್ದಿತು. ಇದಕ್ಕೆ ಕಾರಣಗಳು ಅನೇಕವಾಗಿವೆ. 19 ನೆಯ ಶತಾಬ್ದದ ಮಧ್ಯಕಾಲದವರೆಗೂ ಇಟಲಿ ದೇಶದಲ್ಲಿ ಒಂದು ಪ್ರಜಾಸಾಮ್ರಾಜ್ಯ ಇರಲಿಲ್ಲವು. ಮೊದಲಿನಿಂದಲೂ ಆಸ್ಟ್ರೀಲಿಯಾ ದೇಶದ ಚಕ್ರವರ್ತಿಯ ರಾಜ್ಯವು "ಹೋಲಿರೋಮನ್" ಎಂಪೈರ್ ಎಂದು ಕರೆಯಲ್ಪಡುತ್ತ ಇಟಲಿ ದೇಶವು ಕೂಡ ತನ್ನ ರಾಜ್ಯದಲ್ಲಿ ಒಂದು ಭಾಗವೆಂದು ಭಾವಿಸಿದ್ದಿತು. ವಿಯನ್ನಾ ಪಟ್ಟಣವಿರುವ ರಾಜ್ಯವನ್ನು ಪರಿಪಾಲಿಸುತ್ತಿದ್ದ ಈ ಚಕ್ರವರ್ತಿಗಳು ಹೋಲಿರೋಮನ್ ಚಕ್ರವರ್ತಿಗಳಾಗಿ ಪರಿಗಣಿಸಲ್ಪಡುತ್ತಿದ್ದುದಕ್ಕೆ ಒಂದು ಕಾರಣವುಂಟು. ಕ್ರೈಸ್ತಮತದಲ್ಲಿ ಅನಾದಿ ರೋಮನ್ ಕ್ಯಾಥೋಲಿಕ್ ಎಂಬ ಮತಾಚಾರ್ಯನು ರೋಮ್ ಪಟ್ಟಣದಲ್ಲಿ ವಾಸಿಸುತ್ತಿರುವನು. ಈತನನ್ನು ಪೋಪೆಂದು ಕರೆಯುವರು. ಈ ರೋಮನ್ ಕ್ಯಾಥೋಲಿಕ್ ಪಂಗಡದವರು ಪ್ರಪಂಚದೆಲ್ಲಾ ಭಾಗದಲ್ಲೂ ಕಂಡುಬರುತ್ತಾರೆ. ಈ ಮತಾಚಾರ್ಯರು ತಮ್ಮ ರಾಜ್ಯದಲ್ಲಿರುವ ರೋಮ್ ಪಟ್ಟಣದಲ್ಲಿರುವುದರಿಂದಲೂ, ಕೆಲಕಾಲದವರೆಗೆ ತಮ್ಮ ವಂಶ ಪುರೋಹಿತರಾಗಿದ್ದು ಕಡೆಯಲ್ಲಿ ಪೋಪನಿಗೂ ಚಕ್ರವರ್ತಿಗೂ ವಿರೋಧವುಂಟಾಗಲು ಪೋಪನು ಚಕ್ರವರ್ತಿಯನ್ನು ಬಂಧಿಸಿದುದರಿಂದಲೂ ಈ ಆಸ್ಟ್ರಿಯಾ ದೇಶದ ಚಕ್ರವರ್ತಿಗಳು ಹೋಲಿರೋಮನ್ನಿನ (ಅಂದರೆ ಪವಿತ್ರ ರೋಮನ್ ದೇಶದ) ಚಕ್ರವರ್ತಿಗಳಾಗಿ ಭಾವಿಸಲ್ಪಡುತ್ತಿದ್ದರು.

ಹೀಗೆ ಪವಿತ್ರವಾದ ರೋಮನ್ ಸಾಮ್ರಾಜ್ಯದಲ್ಲಿ ಒಂದು ಭಾಗವಾಗಿ ಇಟಲಿ ದೇಶವು 30 ವರ್ಷಕಾಲ ಪರಿಗಣಿಸಲ್ಪಟ್ಟಿದ್ದಿತು. ಇಂತಹ ಸಂದಿಗ್ಧ ಸಮಯದಲ್ಲಿ ಫ್ರಾನ್ಸುದೇಶದಲ್ಲಿ ನೆಪೋಲಿಯನ್ ಎಂಬ ಮಹಾ ಸೇನಾನಿಯು ಹುಟ್ಟಿ ಕಡೆಯಲ್ಲಿ ಚಕ್ರವರ್ತಿ ಪದವಿಯನ್ನು ಹೊಂದಿದನು. ನೆಪೋಲಿಯನ್ನಿನ ಚಕ್ರಾಧಿಪತ್ಯವು ಯೂರೋಪುಖಂಡದಲ್ಲೆಲ್ಲಾ ವ್ಯಾಪಿಸಿತು. ಇಷ್ಟೇ ಅಲ್ಲದೆ ಆಫ್ರಿಕಾಖಂಡದಲ್ಲಿರುವ ರಷ್ಯಾದೇಶದ ಮೇಲು ಸಹ ದಂಡೆತ್ತಿ ಹೋಗುವ ಶಕ್ತಿಸಾಮರ್ಥ್ಯವು ನೆಪೋಲಿಯನ್ ಚಕ್ರವರ್ತಿಗಿದ್ದಿತು. ಪವಿತ್ರವಾದ ರೋಮು ಸಾಮ್ರಾಜ್ಯದಲ್ಲಿರುವ ಉಪ ರಾಷ್ಟ್ರಗಳನ್ನು ಆಕ್ರಮಿಸಿ ಅವನ್ನು ಸೋಪಾನಗಳನ್ನಾಗಿ ಮಾಡಿಕೊಂಡು ಕಡೆಯಲ್ಲಿ ಆಸ್ಟ್ರಿಯಾ ರಾಜರುಗಳನ್ನು ಓಡಿಸಲಾಗದವನಾಗಿ ಚಕ್ರವರ್ತಿಯಾಗಲಾರದೆ ಹೋದನು. ಈ ವಿಷಯಗಳು ನಡೆದು 110 ವರ್ಷಗಳಾದುವು. ಇದೇ ಸಮಯದಲ್ಲಿ ಇಟಲಿ ದೇಶವು ಕೂಡ ನೆಪೋಲಿಯನ್ನಿನ ಸಾಮ್ರಾಜ್ಯದಲ್ಲಿ ಒಂದು ಭಾಗವಾಗಿ ಬದಲಾಯಿಸಿ ಹೋಯಿತು. ಆಗಲಿಂದಲೂ ಇಟಲಿ ದೇಶದಲ್ಲಿ ಏಕಮುಖ್ಯ, ಸ್ವರಾಜ್ಯಘೋಷ ಹುಟ್ಟಿ ಇಂದಿಗೂ ಪ್ರಬಲ ರಾಜ್ಯವಾಗಿರುವುದು.

ನೆಪೋಲಿಯನ್ನಿನ ರಾಜ್ಯಭಾರ ಫಲವು

ಕೆಲ ಸಂವತ್ಸರಗಳವರೆಗೆ ಆಸ್ಟ್ರಿಯಾದವರು ಇಟಲೀ ದೇಶವನ್ನು ಪಾಲಿಸುತ್ತಿದ್ದಾಗ್ಗೂ ದೇಶಾಭಿವೃದ್ಧಿ ಮಾತ್ರ ಅವರ ಮನಸ್ಸಿಗೆ ಬರಲಿಲ್ಲ. ಇದರಿಂದ ಅನಾದಿಕಾಲದಿಂದಲೂ ಪ್ರಬಲವಾಗಿದ್ದ ಇಟಲೀ ದೇಶದ ಪಟ್ಟಣ ರಾಷ್ಟ್ರಗಳೆಲ್ಲ ಅಣಗಿಹೋದುವು. ಇದರಮೇಲೆ ಈ ರಾಷ್ಟ್ರಗಳು ತಂತಮ್ಮೊಳಗೆ ಕಲಹ ಮಾಡುತ್ತ ಒಬ್ಬರನ್ನೊಬ್ಬರು ಸಂಹರಿಸುತ್ತ ದೇಶವೆಲ್ಲವನ್ನೂ ಅರಾಜಕರ ಪಾಲುಮಾಡಿದರು. ಇಟಲಿಯು ನೆಪೋಲಿಯನ್ನಿನ ಪರಿಪಾಲನದಲ್ಲಿ ಕೆಲ ಕಾಲ ಮಾತ್ರವಿದ್ದಾಗ್ಗೂ ಎಂದಿಗೂ ಬದಲಾಯಿಸದಿರುವಂತಹ ಹೊಸ ಸಂಸ್ಥೆಗಳನ್ನು ಅನೇಕವಾಗಿ ಏರ್ಪಡಿಸಿದನು. ಫ್ರಾನ್ಸಿನಲ್ಲಿ ಪ್ರಸಿದ್ಧಿಯಾಗಿರುವ "ಕೋಡು ನೆಪೋಲಿಯನ್" ಎಂಬ ನ್ಯಾಯವಿಧಾನವು ಏರ್ಪಡಿಸಲ್ಪಟ್ಟಿತು. ಪಟ್ಟಣ ರಾಷ್ಟ್ರಗಳಲ್ಲಿ ಮನಸ್ಸು ಬಂದ ಹಾಗೆ ತಿರುಗುವ ಸಂಬಂಧಿಗಳನ್ನೆಲ್ಲ ತೆಗೆದುಬಿಟ್ಟನು. ರಾಜ್ಯವೆಲ್ಲವೂ ಒಂದೇ ಆಗಿ ಪರಿಗಣಿಸಲ್ಪಟ್ಟು ಆಳಲ್ಪಡುತ್ತಲಿದ್ದುದರಿಂದ ದೇಶದ ಜನರಿಗೆ ಸಂಘೀಭಾವವು ಸೂಚಿತವಾಯಿತು. ನೆಪೋಲಿಯನ್ನಿನ ರಾಜ್ಯವು 1815 ರಲ್ಲಿ ಒಡೆದು ಛಿದ್ರವಾಯಿತು. ಆದರೆ ಅವನ ರಾಜ್ಯಾಂಗ ವಿಧಾನ ಮಾತ್ರ ಎಲ್ಲ ಕಾಲದಲ್ಲೂ ಜೀವಿಸಿರುವುದು. ಇದರಿಂದ ಇಟಲಿಗೆ ಮಾಡಿದ ಸಹಾಯವು ನೆಪೋಲಿಯನ್ ಚಕ್ರವರ್ತಿಯ ಮಹಾಕಾರ್ಯಗಳಲ್ಲಿ ಒಂದಾಗಿ ಪರಿಗಣಿಸಲ್ಪಡಲು ಕಾರಣಭೂತವಾಯಿತು.

ನೂತನ ಶಕಾರಂಭ

ಮೇಲೆ ಹೇಳಿರುವ ಗಾರಿಬಾಲ್ಡೀ, ಮಾಜಿನೀ ಮೊದಲಾದವರು ನೆಪೋಲಿಯನ್ನಿನ ರಾಜ್ಯಭಾರವು ವಿಚ್ಛಿನ್ನವಾದ ಕಾಲದಿಂದಲೂ ಅದೇ ಕನಿಷ್ಠೆಯಿಂದ ಇಟಲಿದೇಶಾಭಿವೃದ್ಧಿಗೆ ಬಹಳ ಸಾಹಸಪಟ್ಟರು. ಮಾಜಿನಿಯು "ಯಂಗ್ ಇಟಲೀ" ದೇಶವನ್ನುದ್ಧರಿಸಿದನಲ್ಲದೆ ಪ್ರಪಂಚಕ್ಕೆಲ್ಲ ಆದರ್ಶಪ್ರಾಯವಾಗಿದ್ದನು. ಇವರು ಮೂವರು ಮಾಡುವ ಕಾರ್ಯಗಳಿಗೆ ಅನುಗುಣವಾಗಿ ಆ ದೇಶದ ರಾಜನಾದ ವಿಕ್ಟರ್ ಎಮಾನ್ಯುಯಲನು ರಾಜ್ಯಭಾರಮಾಡುತ್ತಿದ್ದನು.

ಈ ನಾಲ್ವರ ಯೋಜನಾಮೃತದಲ್ಲಿ ಇಟಲೀ ದೇಶವು ಜಾಗ್ರತೆಯಲ್ಲಿ ತನ್ನ ನಿಜಶಕ್ತಿಯನ್ನು ಅರಿತುಕೊಂಡು ದಿನ ದಿನಕ್ಕೆ ಅಭಿವೃದ್ಧಿ ಹೊಂದುತ್ತಿದ್ದಿತು. ಇಪ್ಪತ್ತನೆಯ ಶತಮಾನದಲ್ಲಿ ಮೊದಲು 10 ವರ್ಷಗಳು ಇಟಲೀ ದೇಶಕ್ಕೆ ಕಷ್ಟಕಾಲವಾಗಿ ಪರಿಣಮಿಸಿದುವು. ಎಂದೂ ಕಾಣದ ಮತ್ತು ಅರಿಯದ ಹೊಸರಾಷ್ಟ್ರೀಯ ಸಂಘೀಭಾವವು ಪ್ರಜೆಗಳಲ್ಲಿ ಉಂಟಾಯಿತು. ಅದರಿಂದ ಹೊಸ ಹೊಸದಾದ ಮಹ ಉತ್ತರಬಾಧ್ಯತೆಯು ದೇಶವನ್ನಾವರಿಸಿಕೊಂಡಿದ್ದಿತು. ಆಸ್ಟ್ರಿಯಾ ಚಕ್ರವರ್ತಿಯವರ ಆಳಿಕದ ಕಾಲದಲ್ಲಾಗಲಿ, ನೆಪೋಲಿಯನ್ನಿನ ಕಾಲದಲ್ಲಾಗಲಿ ಇಟಲಿಯು ಪರದೇಶಗಳೊಡನೆ ಸಂಬಂಧ ಬಾಂಧವ್ಯಗಳನ್ನು ಬೆಳಸಿರಲಿಲ್ಲ. ಹೊಸ ರಾಷ್ಟ್ರವಾಗಿ ನಿಯಮಿಸಲ್ಪಟ್ಟಿದ್ದರಿಂದಲೇ ಸ್ವಶಕ್ತಿಯಿಂದ ಇಟಲೀ ದೇಶವು ಇತರ ದೇಶೀಯರೊಡನೆ ಪ್ರತಿಘಟಿಸಬೇಕಾಗಿ ಬಂದಿತು. ಇದರಿಂದ ದೊಡ್ಡ ಸೈನ್ಯಗಳೂ ನೌಕಾದಳವೂ ಬೇಕಾಗಿ ಬಂದುವು. ಇದೇ ಪ್ರಕಾರವಾಗಿ ಹೊಸದಾದ ರಾಜ್ಯಾಂಗ ವಿಧಾನಕ್ಕೆ ಬೇಕಾದ ಪರಿಕರಗಳನ್ನೆಲ್ಲ ಏರ್ಪಡಿಸಿಕೊಳ್ಳಬೇಕಾಗಿ ಬಂದಿತು. ಹೊಸದಾದ ಶಾಸನಸಭೆಗಳು ಅನುಷ್ಠಾನಕ್ಕೆ ತರಲ್ಪಟ್ಟುವು. ಒಟ್ಟಿನಮೇಲೆ ಹೊಸದೇಶಗಳು ಒಂದುಸಾರಿ ಒಟ್ಟುಗೂಡಿ ಇಟಲೀ ದೇಶದಮೇಲೆ ದಂಡೆತ್ತಿ ಬಂದುವು.

ಈ ಸಂಧಿ ಸಮಯದಲ್ಲಿ ಇಟಲೀ ದೇಶಕ್ಕೆ ಬಹಳ ನಷ್ಟವುಂಟಾಯಿತು. ಪ್ರಜೆಗಳು ಹೊಸಮಾರ್ಗಗಳನ್ನು ಅಣಗಿಸಿ ಸಮರ್ಥಿಸಿಕೊಳ್ಳುವ ಶಕ್ತಿಯುಳ್ಳವರಾಗಿರಲಿಲ್ಲ. ದೇಶದಲ್ಲಿ ಹೊಸ ಕಂದಾಯಗಳನ್ನು ವಿಶೇಷವಾಗಿ ವಿಧಿಸಿ ಪ್ರಜೆಗಳನ್ನು ಬಾಧಿಸುತ್ತಿದ್ದುದರಿಂದ ಅಧೋಗತಿಗೆ ಬರಬೇಕಾಯಿತು. ಎಲ್ಲಿ ನೋಡಿದರೂ ಕೆಲಸದ ಕ್ಷಾಮವೇ ಮತ್ತು ಸರ್ಕಾರಿಯಧಿಕಾರಿಗಳ ದುಂಡಾವರ್ತಿಯ ಕೆಲಸಗಳೇ. ಒಟ್ಟಿನಲ್ಲಿ ಆ ವೇಳೆಯಲ್ಲಿ ಇಟಲೀ ದೇಶದವರು ಬಹಳವಾಗಿ ಪೀಡಿಸಲ್ಪಡುತ್ತಿದ್ದರು.

ಯೂರೋಪು ಮಹಾಯುದ್ಧ

ದುರ್ಭಿಕ್ಷದಲ್ಲಿ ಅಧಿಕಮಾಸವೆಂಬ ಗಾದೆಯಂತೆ ಬಹಳ ಭಯಂಕರ ಪೀಡನಕ್ಕೆ ಗುರಿಯಾಗಿದ್ದ ಇಟಲೀ ದೇಶವು 1914 ರಿಂದ 1918 ರ ವರೆಗೆ ನಡೆದ ಮಹಾಯುದ್ಧದಲ್ಲಿ ಇಂಗ್ಲೆಂಡು ಫ್ರಾನ್ಸಿನ ಪರವಾಗಿ ಜರ್ಮನಿ ಆಸ್ಟ್ರಿಯಾದೇಶಗಳ ವಿರುದ್ಧವಾಗಿ ಕಾದಾಡಿತು. ಮೊದಲು 2 ವರ್ಷಗಳಲ್ಲಿ ಇಟಲೀ ದೇಶವು ಎಲ್ಲ ಕಡೆಯಲ್ಲೂ ಪರಾಜಯವನ್ನು ಹೊಂದಿತು. ಆದರೆ ಮುಸಲೋನಿ ಎಂಬ ಮಹಾನಾಯಕನು ಮುಂದೆ ಬಂದು ಸೋತುಹೋಗಿದ್ದ ಇಟಲೀ ಸೈನ್ಯಗಳು ಜಯಶಾಲಿಗಳಾಗುವಂತೆ ಮಾಡಿದನು.

ಫಾಸಿಸ್ಟೀ ಉದ್ಯಮವ್ಯಾಪ್ತಿ

ಮೇಲಿನ ಪ್ರಸಾರದ ಪರ್ಯವಸಾನವು "ಫಾಸಿಸ್ಟಿ" ಎಂಬ ಇಟಲೀ ದೇಶದ ಸಂಘಗಳುತ್ಪನ್ನವೇ. ಫಾಸಿಸ್ಟಿಯಲ್ಲಿ ಪುರುಷರು, ಸ್ತ್ರೀಯರು ಬಾಲಕ ಬಾಲಿಕೆಯರು ಎಲ್ಲರೂ ಸೇರಬಹುದು. ಇದರಲ್ಲಿ ಗಂಡಸರಿಗೂ ಹೆಂಗಸರಿಗೂ ಬಿಳೀ ಉಡುಪುಗಳು ಫಾಸಿಸ್ಟೀಯವರ ಯೂನಿಫಾರಮಾಗಿ ಉಪಯೋಗಿಸಲ್ಪಟ್ಟಿದೆ. ಇವರು ಮಾಡುವ ನಮಸ್ಕಾರವು ಜನಸಾಮಾನ್ಯವು ಮಾಡುವ ರೀತಿಯಲ್ಲಿಲ್ಲ. ಈ ವಿಧವಾಗಿ ಫಾಸಿಸ್ಟಿಯ ಉಪಸಂಘಗಳು ದೇಶದಲ್ಲೆಲ್ಲ ಸ್ಥಾಪಿತವಾದುವು. ಯುದ್ಧವು ಮುಗಿದ 2-3 ವರ್ಷಗಳಲ್ಲಿ ಮುಸಲೋನಿಯ ಪಾರ್ಟಿಗೆ ವಿಶೇಷ ಬಲಬಂದಿತು. ಹೀಗೆ ಬಲ ಬಂದ ಕೂಡಲೇ ಮುಸಲೋನಿಯು ದೇಶದಲ್ಲಿ ಶಿಥಿಲವಾಗಿ ಹೋಗುತ್ತಿದ್ದ ಶಾಸನ ಸಭೆಯಲ್ಲಿ ಪ್ರವೇಶಿಸಿ ಅದನ್ನು ವಶಪಡಿಸಿಕೊಂಡು ಅದನ್ನು ಭಗ್ನಗೊಳಿಸಿ ತನ್ನ ನಿರಂಕುಶ ಫಾಸಿಷ್ಟು ಪ್ರಭುತ್ವವನ್ನು ಸ್ಥಾಪಿಸಿದನು. 10 ವರ್ಷಗಳಲ್ಲಿ ಈ ಫಾಸಿಷ್ಟು ಪ್ರಭುತ್ವವು ಉನ್ನತ ದೆಶೆಗೆ ಬಂದಿತು.

ಇಟಲೀ ದೇಶದ ರಾಜನಾದ ವಿಕ್ಟರ್ ಇಮಾನ್ಯುಯಲು ದೇಶವನ್ನು ನಾಮ ಮಾತ್ರಕ್ಕೆ ಪರಿಪಾಲಿಸುತ್ತಿರುವನು. ಇಂಗ್ಲೀಷು ರಾಜರುಗಳಂತೆ ಈತನು ಮಾತ್ರ ರಾಜ್ಯಾಂಗ ವಿಧಾನ ನಿಯಮಕ್ಕೆ ಬದ್ಧನಲ್ಲವು. ಏಕೆಂದರೆ, ಇಟಲಿಯಲ್ಲಿ ರಾಜ್ಯಾಂಗ ವಿಧಾನ ಪ್ರಮಾಣವೇನೂ ಇಲ್ಲ. ಈ ಕಾರಣದಿಂದ ಮುಸಲೋನಿಯೇ ರಾಜ್ಯಾಂಗ ಪ್ರಮಾಣವು, ಅಂದರೆ ಇಟಲೀ ರಾಜನು ಮುಸಲೋನಿಯು ಹೇಳಿದಂತೆ ನಡೆದುಕೊಳ್ಳಬೇಕು.

ದೇಶದಲ್ಲಿ ಹೆಸರಿಗೆ ಮಾತ್ರ ಎರಡು ಶಾಸನಸಭೆಗಳಿರುತ್ತವೆ. ಆದರೆ ಅವೆರಡೂ ಫಾಸಿಷ್ಟುಗಳ ಕೈಯಲ್ಲಿ ಸಿಕ್ಕಿಬಿದ್ದಿರುವುವು. ಏಕೆಂದರೆ, ಇಟಲೀ ದೇಶದಲ್ಲಿ ಫಾಸಿಷ್ಟರ ವಿನಾ ಬೇರೆ ಪಾರ್ಟಿಯಿರಲು ಅವಕಾಶವಿಲ್ಲ. ದೇಶದ ಪ್ರಜೆಗಳೆಲ್ಲರೂ ಫಾಸಿಷ್ಟುಗಳಾಗಿ ಇದ್ದೇ ತೀರಬೇಕು. ಹಾಗಿರಲಾರದವರೆಲ್ಲ ಕಾರಾಗೃಹದಲ್ಲಿ ಬಂಧಿಸಲ್ಪಡುವರು ಅಥವಾ ಗಡೀಪಾರ್ಮಾಡಲ್ಪಡುವರು. ಈ ನಿರ್ಬಂಧದಿಂದ ಅನೇಕ ಇಟಲಿಯವರು ಲಂಡನ್ನಿಗೂ ಪ್ಯಾರಿಸ್ಸಿಗೂ ಬರ್ಲಿನ್ ಪಟ್ಟಣಕ್ಕೂ ವಲಸೆಹೋದವರಲ್ಲಿ ಹಿಂದಿರುಗಿ ಬಂದವರು ಮರಣದಂಡನೆಗೆ ಗುರಿಮಾಡಲ್ಪಡುತ್ತಿದ್ದರು. ಈ ಪ್ರಕಾರವಾಗಿ ಇಟಲಿಯಲ್ಲಿ ವಿದ್ಯಾವಂತರೂ, ಹಿತವಾದಿಗಳೂ ಬಹಳ ಕಷ್ಟಕ್ಕೆ ಗುರಿಯಾಗಬೇಕಾಗಿದ್ದಿತು. ಈ ವಿಷಯದಲ್ಲಿ ಮುಸಲೋನಿಯು ರಷ್ಯಾದೇಶದಲ್ಲಿ ನಡೆಯುತ್ತಿದ್ದ ಸೋವಿಯಟ್ಟು ವಿಧಾನವನ್ನನುಸರಿಸಿದಂತೆ ತೋರುವುದು. ಇದು ಹೀಗಿದ್ದರೂ ಇಟಲಿಯಲ್ಲಿ ಜನಸಾಮಾನ್ಯ ಮಾತ್ರ ಮುಸಲೋನಿಯ ಫಾಸಿಷ್ಟು ಉದ್ಯಮವನ್ನು ಸಂಪೂರ್ಣವಾಗಿ ಕೊನೆಗಾಣಿಸಲು ಪ್ರಯತ್ನಮಾಡುತ್ತಿರುವಂತೆ ನಿರ್ಧರಿಸಬಹುದು.

ಫಾಸಿಸ್ಟು ಮುಖ್ಯ ಸಿದ್ಧಾಂತವೂ ಕಾರ್ಮಿಕ ಕ್ಷೇಮವೂ.

ಇದಕ್ಕೆ 2-3 ಕಾರಣಗಳಿವೆ. ದೇಶಾಭಿವೃದ್ಧಿಗಾಗಿ ತಮ್ಮ ನಿಜವಾದ ಹಕ್ಕನ್ನು ಸಹ ಬಿಟ್ಟುಕೊಡಬೇಕೆಂಬುದೇ ಫಾಸಿಷ್ಟರ ಉದ್ದೇಶಗಳಲ್ಲಿ ಮುಖ್ಯವಾದುದು. ಅಂದರೆ ದೇಶಾಭಿವೃದ್ಧಿಯಿಂದಲೇ ಪ್ರಜೆಗಳಿಗೆ ಒಳ್ಳೆಯದಾಗುವುದು. ಆದುದರಿಂದ ಪ್ರಜೆಗಳು ಸ್ವಲಾಭಕ್ಕಾಗಿ ಇಷ್ಟಬಂದ ರೀತಿಯಲ್ಲಿ ದೇಶಕ್ಕೆ ಸಹಾಯಮಾಡುವರೆಂಬ ನೀತಿಯು ಈ ದೇಶಕ್ಕೆ ಅನ್ವಯಿಸುವುದಿಲ್ಲ. ದೇಶಕ್ಷೇಮಕ್ಕಾಗಿ ಅನುಸರಿಸುವ ರಾಜ್ಯಾಂಗ ಕಠಿಣ ಚರ್ಯೆಗಳನ್ನು ಪ್ರಜೆಗಳು ಅನುಮೋದಿಸಲೇಬೇಕು. ಈ ಪ್ರಕಾರವಾದ ತತ್ವವಿಧಾನವನ್ನು ಇಟಲೀ ದೇಶದವರೆಲ್ಲರೂ ಅನುಮೋದಿಸಿಯೇ ಇರುತ್ತಾರೆ. ಕಾರ್ಮಿಕರಿಗೆ ಪೂರ್ವಕಾಲದಿಂದಲೂ ಅನುಸರಿಸಿ ಬಂದಿದ್ದ ಹೀನಸ್ಥಿತಿಯು ಈಗ ಕಳೆದುಹೋಗಿರುವುದು. ಇದಕ್ಕೆ ಬದಲಾಗಿ ಫಾಸಿಸ್ಟಿ ಪಾರ್ಟಿಯೊಳಗೆ ತಾರತಮ್ಯವಿಲ್ಲದ ಸಮರಸ ದೃಷ್ಟಿಯಿಂದ ಎಲ್ಲರನ್ನೂ ಪರಿಗಣಿಸುತ್ತಿರುವ ಪದ್ಧತಿಯು ಆಚರಣೆಯಲ್ಲಿದೆ.

ವಾಣಿಜ್ಯಾಭಿವೃದ್ಧಿ.

ಯುದ್ಧವಾದಂದಿನಿಂದಲೂ ಇಟಲೀ ದೇಶವು ಪಾರಿಶ್ರಾಮಿಕದಲ್ಲೂ ವ್ಯಾಪಾರದಲ್ಲೂ ತಕ್ಕರೀತಿಯಲ್ಲಿ ಉನ್ನತಸ್ಥಾನವನ್ನು ಪಡೆದಿತು, ಇದಕ್ಕಾಗಿ ಮುಸ್ಸಲೋನಿಯು ದೇಶಕ್ಕೆ ಹೊರಗಿನಿಂದ ಬರುವ ಪದಾರ್ಥಗಳಿಗೆ ಹೆಚ್ಚು ಸುಂಕವನ್ನು ವಿಧಿಸಿ ದೇಶೀಯ ಪರಿಶ್ರಮವನ್ನು ವೃದ್ಧಿಗೊಳಿಸಿದನು. ಇಷ್ಟು ಮಾತ್ರವಲ್ಲದೆ ಸೈನ್ಯವನ್ನೂ ನೌಕಾದಳವನ್ನೂ ವೈಮಾನಿಕದಳವನ್ನೂ ಪ್ರಬಲವಾಗಿ ಏರ್ಪಡಿಸಿ ಅವುಗಳಿಗೆ ಬೇಕಾದ ಯುದ್ಧಸಾಮಗ್ರಿಗಳನ್ನು ಒದಗಿಸುತ್ತ ಬಂದುದರಿಂದ ವರ್ತಕರುಗಳಿಗೆಲ್ಲ ಹೆಚ್ಚು ಲಾಭವು ಕಂಡುಬಂದಿತು. ಈ ಪ್ರಕಾರವಾಗಿ ಫಾಸಿಷ್ಟು ಪಾರ್ಟಿಯವರು ದೇಶೀಯ ಜನರಲ್ಲಿ ವಿದ್ಯಾರ್ಥಿಕರೂ, ಹಿತವಾದಿಗಳೂ ಹೊರತಾಗಿ ಉಳಿದವರಿಗೆಲ್ಲ ಯಾವುದೋ ಒಂದು ವಿಧವಾಗಿ ಲಾಭವನ್ನು ತೋರಿಸಿ ಅವರ ಸಂಪೂರ್ಣ ಸಹಾಯವನ್ನು ಪಡೆಯುತ್ತಿದ್ದರು. ಈ ಫಾಸಿಷ್ಟು ಪಾರ್ಟಿಮಾಡಿದ ಕಾರ್ಯಗಳು ಅನೇಕವಾಗಿರುತ್ತವೆ. ದೇಶೀಯರ ಅಭ್ಯುದಯವೇ ಅದರ ಮುಖ್ಯ ಉದ್ದೇಶವು. ಬಾಲನಾಗಲಿ ಬಾಲಿಕೆಯಾಗಲಿ ಈ ಫಾಸಿಷ್ಟು ಪಾರ್ಟಿಗೆ ಸೇರಲೇ ಬೇಕು. ಸ್ತ್ರೀಯರಾಗಲಿ ಪುರುಷರಾಗಲಿ ಈ ಫಾಸಿಷ್ಟು ಪಾರ್ಟಿಗೆ ವಿರುದ್ಧವಾಗಿ ನಡೆಯಲಾಗುವುದಿಲ್ಲ. ಇದಕ್ಕೆ ಮೊಂಡರಾಗಿ ಸೇರದವರು ಕಾರಾಗೃಹದಲ್ಲಿ ಬಂಧಿಸಲ್ಪಡುವರು ಅಥವಾ ಗಡೀಪಾರ್ಮಾಡಲ್ಪಡುವರು. ಮುಸಲೋನಿಯು ಈ ಪಾರ್ಟಿಯ ಮುಖ್ಯನಾಯಕನು. ಆತನ ಮಾತಿಗೆ ದೇಶದಲ್ಲಿ ಬದಲು ಹೇಳುವವರೇ ಇಲ್ಲ.

ಇಂಥಾ ಫಾಸಿಷ್ಟು ಪಾರ್ಟಿಯ ಕಾರ್ಯಕ್ರಮವು ಇಟಲೀ ದೇಶವನ್ನು ಕಳೆದ 10 ವರ್ಷಗಳಲ್ಲಿ ಅತ್ಯುನ್ನತಸ್ಥಿತಿಗೆ ತಂದಿರುತ್ತದೆನ್ನುವುದರಲ್ಲಿ ಸಂದೇಹವಿಲ್ಲ. ಈಗಲೂ ಇಟಲಿಯ ಹೆಸರೆತ್ತಿದರೆ ಫ್ರಾನ್ಸಿಗು ಸಹ ಭಯವುಂಟಾಗುತ್ತದೆ.

ಜರ್ಮನಿಗೆ ದುರವಸ್ಥೆ ಯೇಕೆ ?

ಭಾರತೀಯರ ದುರವಸ್ಥೆಗೂ ಅದೇ ಕಾರಣ

ಜರ್ಮನ್ ರಾಷ್ಟ್ರವು ಪ್ರಪಂಚದ ಎಲ್ಲ ರಾಷ್ಟ್ರಗಳಿಗಿಂತಲೂ ಸುಧಾರಿಸಿದ್ದಾಗಿದೆ. ಜರ್ಮನಿಯ ಶೂರತನವು ಪ್ರಪಂಚವನ್ನೇ ಅಂಜಿಸಿತು. ಜರ್ಮನಿಯ ಯಂತ್ರ ಕಲೆಯು ಜಗತ್ತನ್ನೇ ಆಶ್ಚರ್ಯಗೊಳಿಸಿತು. ಜರ್ಮನಿಯ ಉದ್ಯೋಗಾಭಿವೃದ್ಧಿಯು ಅನೇಕ ರಾಷ್ಟ್ರಗಳ ಉದ್ಯೋಗವನ್ನು ಮೂಲೆಗೊತ್ತಿತು. ಈ ಪ್ರಕಾರ ಜರ್ಮನಿಯು ಕೇವಲ 20 ವರ್ಷಗಳ ಹಿಂದೆ ಪ್ರಪಂಚದ ಶ್ರೇಷ್ಠ ರಾಷ್ಟ್ರಗಳಲ್ಲಿ ಶ್ರೇಷ್ಠವಾಗಿ ಮೆರೆಯುತ್ತಿದ್ದಿತಷ್ಟೆ. ಇಂತಹ ಜರ್ಮನಿಗೆ ದುರವಸ್ಥೆಯೇಕೆ ಬಂದಿತೆಂಬುದನ್ನು ತಿಳಿದುಕೊಳ್ಳುವುದು ಅಗತ್ಯವಾಗಿಲ್ಲವೆ ?

ಈಗ ಜರ್ಮನಿಯು ಭಯಂಕರವಾದ ವಿಪತ್ತಿಗೊಳಗಾಗಿದೆ. ಆ ರಾಷ್ಟ್ರದ ಅಂತಃಕಲಹ ಅಸಂತೋಷಗಳು ಅನಿರ್ವಚನೀಯವಾಗಿವೆ. ಮಂತ್ರಿಮಂಡಲದಲ್ಲಾಗುತ್ತಿರುವ ವ್ಯತ್ಯಾಸಗಳು ಅಲ್ಲಿನ ದುರವಸ್ಥೆಯ ದುಶ್ಚಿನ್ಹೆಗಳಾಗಿವೆ. ಡಾ॥ ಬ್ರೂನಿಂಗ್‌ರವರು ಜರ್ಮನಿಯು ಸಾಲಗಾರರಿಗೆ ಸಾಲವನ್ನು ಕೊಡುವಂತಹ ಸ್ಥಿತಿಯಲ್ಲಿಲ್ಲವೆಂದು 2-3 ತಿಂಗಳುಗಳ ಹಿಂದೆಯೇ ಪ್ರಕಟಿಸಿದ್ದಾರೆ. ಜಗತ್ತಿನಲ್ಲಿ ಅತ್ಯಂತ ಧನಿಕವಾದ ಈ ಜರ್ಮನಿಯು ದಿವಾಳಿಯಾದುದೇಕೆ ?

ಈಗ ಜಗತ್ತಿನ ಎಲ್ಲಾ ರಾಷ್ಟ್ರಗಳೂ ಸಾಂಪತ್ತಿಕ ವಿಪತ್ತಿನಿಂದ ಬೆಂದು ಬೆಂಡಾಗುತ್ತಲಿವೆ. ಹಿಂದುಸ್ಥಾನವೂ ಈ ಹಣವಿಲ್ಲದ ಗೋಳಿಗೆ ಒಳಗಾಗಿಯೇ ಬಳಲುತ್ತಿದೆಯಷ್ಟೆ. ಹತ್ತಿಯ ಬೆಲೆಯು ಮಣಕ್ಕೆ 1 ರೂ. ಆಯಿತಲ್ಲಾ ! ಇನ್ನೇನುಗತಿ ? ಎಂದು ಒಕ್ಕಲಿಗರೂ ವ್ಯಾಪಾರಿಗಳೂ ಬಾಯಿ ಬಡುತ್ತಿದ್ದಾರಲ್ಲವೇ ? ಹತ್ತಿಯನ್ನು ಕೊಂಡು ಜನರ ಹಣವನ್ನು ಸುಲಿಯುತ್ತಿದ್ದ ಪಾಶ್ಚಾತ್ಯ ರಾಷ್ಟ್ರಗಳ ಗತಿಯೇನಾಗಿದೆಯೆಂಬುದು ಈ ನಮ್ಮ ದಡ್ಡ ದೇಶಬಾಂಧವರಿಗೇನು ಗೊತ್ತು ? ಗಾಂಧಿಯು ನಮಗೆ ಈ ಗತಿಯನ್ನು ತಂದಿಟ್ಟನಪ್ಪಾ ಎಂದು ಗಾಂಧಿಯ ಹೆಸರಿನಿಂದ ಹಣೆ ಹಟ್ಟಿಕೊಳ್ಳುತ್ತಿದ್ದಾರೆ.

ಈ ನಮ್ಮ ದಡ್ಡರು ಜರ್ಮನಿಗೆ ದುರವಸ್ಥೆಯೇಕೆಂಬುದನ್ನು ಯೋಚಿಸಿರುವರೇನು ? ಪಾಪ ! ನೆರೆ ಊರಿನ ಸ್ಥಿತಿಯನ್ನು ಕೂಡಾ ತಿಳಿಯಲಾರದ ಈ ನಮ್ಮ ದಡ್ಡರು ಜರ್ಮನಿಯ ಸ್ಥಿತಿಯನ್ನು ತಿಳಿದುಕೊಳ್ಳುವುದು ಶಕ್ಯವೆ?

ಜರ್ಮನಿಯು 15 ವರ್ಷಗಳ ಹಿಂದೆ ಘನಘೋರ ಯುದ್ಧವನ್ನು ಪ್ರಾರಂಭಿಸಿ ಯೂರೋಪಖಂಡದಲ್ಲಿ 4 ವರ್ಷ ರಕ್ತದ ಕಾಲುವೆಯನ್ನು ಹರಿಸಿತಷ್ಟೆ. ಆ ಮಹಾಪಾಪವಾದ ಫಲವನ್ನೇ ಆ ರಾಷ್ಟ್ರವೂ ಅದರಲ್ಲಿ ಸೇರಿದ ಪ್ರಪಂಚದ ಬಹುರಾಷ್ಟ್ರಗಳೂ ಈಗ ಅನುಭವಿಸುತ್ತಲಿವೆ.

ಆ ಮಹಾಯುದ್ಧದಲ್ಲಿ ಜರ್ಮನಿಯು ಗೆದ್ದಿದ್ದರೆ ಅದು ಈಗ ಪ್ರಪಂಚವನ್ನೇ ತನ್ನ ಕೈಯಲ್ಲಿಟ್ಟುಕೊಳ್ಳುತ್ತಿದ್ದಿತು. ಅದು ಆಗ ಸೋತುದರಿಂದ ಈಗ ಪ್ರಪಂಚದಿಂದಲೇ ತುಳಿಸಿಕೊಳ್ಳುವ ಹೊತ್ತು ಬಂದಿತು. ಕರ್ಮಕ್ಕೆ ತಕ್ಕ ಫಲವನ್ನು ಅನುಭವಿಸಲೇ ಬೇಕಲ್ಲವೆ ?

ಪ್ರಪಂಚದ ಧನ ಪ್ರಾಣಗಳನ್ನು ಭಯಂಕರವಾಗಿ ಆ ರಣದೇವಿಗೆ ಆಹುತಿ ಕೊಟ್ಟುದರಿಂದ ಈಗ ಪ್ರಪಂಚವು ಬಳಲಬೇಕಾಯಿತು. ಜರ್ಮನಿಯು ಸೋತು ಇಂಗ್ಲಿಷ್, ಫ್ರಾನ್ಸ್ ಮೊದಲಾದ ಮಿತ್ರರಾಷ್ಟ್ರಗಳ ಹೇಳಿಕೆಯಂತೆ ಕೇಳಬೇಕಾಯಿತು. ವರ್ಸಾಲಿಸ್ ಎಂಬಲ್ಲಿಯ ಒಪ್ಪಂದವೇ ಜರ್ಮನಿಯನ್ನು ಇಷ್ಟು ಹಣ್ಣು ಮಾಡಿತು.

ಮಹಾಯುದ್ಧದಿಂದಾದ ನಷ್ಟವನ್ನೂ ಸಾಲವನ್ನೂ ಜರ್ಮನಿಯು ಮಿತ್ರ ರಾಷ್ಟ್ರಗಳಿಗೆ ಕೊಡಬೇಕಾಯಿತು. ಕಳೆದ 15 ವರ್ಷಗಳಿಂದ ಜರ್ಮನಿಯನ್ನು ಹಿಂಡಿ ಹಿಪ್ಪೆಮಾಡಿದರೂ ಆ ಒಪ್ಪಂದದ ಪ್ರಕಾರ ಹಣ ಬಾರದಂತಾಯಿತು. ಜರ್ಮನಿಯ ಕೈಯಿಂದ ಈಗ ಹಣ ಹುಟ್ಟದಾಗಿರಲಿ, ರಕ್ತವು ಕೂಡಾ ಬರದಂತಹ ಸ್ಥಿತಿಯಾಯಿತು. ಇಷ್ಟು ಫ್ರಾನ್ಸ್ ರಾಷ್ಟ್ರವು ಜರ್ಮನಿಯ ದ್ರವ್ಯಶೋಷಣವನ್ನು ಆ ಒಪ್ಪಂದದ ಪ್ರಕಾರ ಮಾಡಿಬಿಟ್ಟಿದೆ.

ಎಲ್ಲ ರಾಷ್ಟ್ರಗಳೂ ಪರಸ್ಪರ ಸಾಲಶೂಲಗಳಿಂದ ನಿರ್ಧನಿಕವಾಗಿವೆ. ಜರ್ಮನಿಯಲ್ಲಿ 60 ಲಕ್ಷ ಜನರು ನಿರುದ್ಯೋಗಿಗಳಾಗಿ ಹೊಟ್ಟೆಗಿಲ್ಲದೆ ಅತ್ತಿತ್ತ ಅಲೆದಾಡುತ್ತಿದ್ದಾರೆ. ಜರ್ಮನಿಯು ಹಣ ಹೋಗಿ ಹೆಣದಂತಾದುದೇ ಅದರ ದುರವಸ್ಥೆಗೆ ಮುಖ್ಯ ಕಾರಣ. ಎಷ್ಟು ಬುದ್ಧಿ, ಶಕ್ತಿ, ಸಾಹಸಗಳಿದ್ದರೂ ಆ ಹಣವೊಂದಿಲ್ಲದಿದ್ದುದರಿಂದ ಅದು ಈಗ ಪ್ರಪಂಚದಲ್ಲಿ ಮಾನಗೇಡಿಯಾಗಿ ಬಾಳಬೇಕಾಗಿದೆ.

ಭಾರತೀಯರ ದುರವಸ್ಥೆಗು ಕೂಡಾ ನಮ್ಮ ಬಡತನವೇ ಕಾರಣವಾಗಿದೆಯೆಂಬುದು ಜರ್ಮನಿಯ ದೃಷ್ಟಾಂತದಿಂದ ಸ್ಪಷ್ಟವಾಗುವದಿಲ್ಲವೇ ? ನಮ್ಮ ಎಷ್ಟು ಬುದ್ಧಿ ಎಂಥ ಸಂಸ್ಕೃತಿಗಳಿದ್ದರೂ ಪರದೇಶಗಳಿಗೆ ಪ್ರತಿವರುಷ ಕೋಟ್ಯಂತರ ರೂ. ಗಳನ್ನು ಸೂರೆ ಮಾಡಿ ಬಂಗ್ಯೆ ಬಂಟರಾಗುತ್ತಿರುವುದರಿಂದ ನಾನಾ ಹಿಂಸೆಗಳಿಗೊಳಗಾಗಬೇಕಾಗಿರುತ್ತದೆ.

ಫ್ರಾನ್ಸ್‌ದೇಶದ ಮುತ್ಸದ್ದಿಗಳಾದ ಎಂ. ಪೊನ್ನಿವ್ಸ್ ಎಂಬುವವರು ಹೇಳಿರುವಂತೆ ಮುಂದೆ ಕೂಡುವ ಲಾಸಾನೆ ಪರಿಷತ್ತಿನಲ್ಲಿ ಜರ್ಮನಿಯನ್ನು ಋಣಮುಕ್ತ ರಾಷ್ಟ್ರವನ್ನಾಗಿ ಎಲ್ಲ ರಾಷ್ಟ್ರಗಳೂ ಮಾಡದಿದ್ದರೆ ಅದು ಮುಂದೆ ರಾಷ್ಟ್ರವಾಗಿ ಜೀವಿಸುವುದೇ ಶಕ್ಯವಿಲ್ಲ.

ಇದೇ ಪ್ರಕಾರ ಹಿಂದುಸ್ಥಾನವೂ ಮುಂದೆ ರಾಷ್ಟ್ರವಾಗಿ ಜೀವಿಸಬೇಕಾಗಿದ್ದರೆ ಇದರ ಈಗಿನ ಘೋರ ಬಡತನವು ನಿವಾರಣೆಯಾಗುವಂತೆ ಮಹಾತ್ಮ ಗಾಂಧಿಯವರ ಹೇಳಿಕೆಯ ಪ್ರಕಾರ ಸ್ವರಾಜ್ಯ ದೊರೆಯಬೇಕು.

ಜರ್ಮನಿಗೆ ಈಗಿನ ದುರವಸ್ಥೆಯು ಬಡತನದಿಂದಲೇ ಬಂದಿತೆಂತಲೂ, ಆ ಬಡತನವು ಮಹಾಯುದ್ಧದಿಂದುಂಟಾಗಿ ಈಗ ಪ್ರಪಂಚವನ್ನೇ ವ್ಯಾಪಿಸಿದೆಯೆಂತಲೂ ವಿಚಾರಪರರು ತಿಳಿದುಕೊಳ್ಳಬೇಕು. ಶ. ಸಂ.

ಬ್ರಾಹ್ಮಣರು ಆಪದ್ಧರ್ಮವಾಗಿ ಉಳಬಹುದು

ಇಂದಿನ ಪರಿಸ್ಥಿತಿಯಲ್ಲಿ ಬ್ರಾಹ್ಮಣರ ಜೀವನದ ವಿಚಾರದಲ್ಲಿ ಆಪತ್ಕಾಲವು ಬಂದೊದಗಿರುವುದರ ಕುರಿತು ಪ್ರಕೃತ ಲೇಖದಲ್ಲಿ ಬರೆಯುವುದವಶ್ಯ ತೋರುವುದಿಲ್ಲ. ಇಂಥ ಆಪತ್ಕಾಲದಲ್ಲಿ ನೇಗಿಲಿನಿಂದ ಉಳಬಹುದೆಂಬುದರ ಕುರಿತು ಶಾಸ್ತ್ರವಚನವನ್ನು ಕೆಳಗೆ ವಿವೇಚಿಸುತ್ತೇನೆ.

"ಕಲೌ ಪಾರಾಶರಾಃ ಸ್ಮೃತಾಃ" (ಕಲಿಯುಗದಲ್ಲಿ ಪರಾಶರ ಸ್ಮೃತಿಯಲ್ಲಿ ಹೇಳಿದ ಧರ್ಮಗಳು) ಎಂಬದಾಗಿ ಹೇಳಿರುವ ಪರಾಶರ ಸ್ಮೃತಿಯಲ್ಲಿ—

ಷಟ್ಕರ್ಮಸಹಿತೋ ವಿಪ್ರಃ ಕೃಷಿಕರ್ಮ ಚ ಕಾರಯೇತ್ ॥

(ಆಚಾರಕಾಂಡ ಅಧ್ಯಾಯ ೨ ಶ್ಲೋಕ ೨.)

(ಬ್ರಾಹ್ಮಣನು ಷಟ್ಕರ್ಮನಿರತನಾಗಿ ಕೃಷಿಯನ್ನು ಮಾಡಿಸಬೇಕು.) ಈ ವಚನದ ವ್ಯಾಖ್ಯಾನದಲ್ಲಿ ಮಾಧವಾಚಾರ್ಯರು "ಕೃಷಿಕರ್ಮವನ್ನು ಮಾಡಿಸುವುದು ಬ್ರಾಹ್ಮಣರ ಮುಖ್ಯ ಧರ್ಮ" ಎಂಬದಾಗಿಯೂ ಅಂತೆಯೇ—

"ಕುಸೀದಕೃಷಿವಾಣಿಜ್ಯಂ ಪ್ರಕುರ್ವೀತಾಸ್ವಯಂಕೃತಂ ।

ಆಪತ್ಕಾಲೇ ಸ್ವಯಂಕುರ್ವಾಣ್ಣೈನ ಸಾಯುಜ್ಯತೇನರಃ ॥"

ಎಂಬ ಬೃಹಸ್ಪತಿಯ ವಚನದ ಮೇಲಿಂದ "ಬ್ರಾಹ್ಮಣರು ನೇಗಿಲಿನಿಂದ ಉಳುವುದು ಆಪದ್ಧರ್ಮ" ವೆಂದೂ ವ್ಯವಸ್ಥೆಮಾಡಿರುತ್ತಾರೆ. ಇದಕ್ಕನುಕೂಲವಾಗಿ ಮುಂದೆ ಮೂಲ ಪರಾಶರ ಸ್ಮೃತಿಯಲ್ಲಿಯೂ "ಕ್ಷುಧಿತಂ ತೃಷಿತಂ ಶ್ರಾಂತಂ ಬಲೀವರ್ದಂ ನಯೋಜಯೇತ್ । ಹೀನಾಂಗಂವ್ಯಾಧಿತಂ ಕ್ಲೀಬಂ ವೃಷಂ ವಿಪ್ರೋನವಾಹಯೇತ್ ॥೩॥ ಸ್ಥಿರಾಂಗಂ ನೀರುಜಂ ತೃಪ್ತಂ ಸುನರ್ದಂ ಷಂಢವರ್ಜಿತಂ । ವಾಹಯೇದ್ದಿವಸಸ್ಯಾರ್ಧಂ ಪಶ್ಚಾತ್‌ಸ್ನಾನಂ ಸಮಾಚರೇತ್ ॥೪॥ (ಆಚಾರಕಾಂಡ ೧) (ಹಸಿದ, ನೀರಡಿಸಿದ, ಬಾಯಾರಿದ ಮುಂತಾದ ದೋಷಯುಕ್ತ ವಿಶೇಷಣವುಳ್ಳ ಎತ್ತನ್ನು ನೇಗಿಲಿಗೆ ಕಟ್ಟದೆ ಮೈಯಲ್ಲಿ ಸಶಕ್ತವಾದ ಮೊದಲಾದ ಗುಣಯುಕ್ತ ವಿಶೇಷಣವುಳ್ಳ ಒಳ್ಳೇ ಎತ್ತಿನಿಂದಲೇ ದಿವಸದಲ್ಲಿ ಒಪ್ಪೊತ್ತು ಹೂಡಿಸಿ ಬಳಿಕ ಸ್ನಾನಮಾಡಬೇಕು.) ಎಂಬದಾಗಿ ಬ್ರಾಹ್ಮಣರು ಸ್ವತಃ ಉಳುವ ವಿಧಾನವನ್ನು ಹೇಳಿದುದಲ್ಲದೆ ಮುಂದೆ ಅದೇ ಪರಾಶರ ಸ್ಮೃತಿಯಲ್ಲಿ—

"ಸ್ವಯಂ ಕೃಷ್ಟೇತಥಾಕ್ಷೇತ್ರೇ ಧಾನ್ಯೈಶ್ಚಸ್ವಯ ಮಾರ್ಜಿತೈಃ ॥ ನಿರ್ವಪೇತ್ ಪಂಚಯಜ್ಞಾಂಶ್ಚ ಕ್ರತುದೀಕ್ಷಾಂಚ ಕಾರಯೇತ್ ॥ (ತಾನು ಸ್ವತಃ ಉತ್ತ ಗದ್ದೆಯಲ್ಲಿ ಹುಟ್ಟಿದ ತನ್ನ ಸ್ವಂತ ದುಡಿತದಿಂದ ಸಂಗ್ರಹಿಸಿದ ಕಾಳುಗಳಿಂದ ಪಂಚಯಜ್ಞಾದಿಗಳನ್ನು ಮಾಡಬೇಕು). ಎಂದು ಮೊದಲಾಗಿ ಹೇಳಿದುದರ ಮೇಲಿಂದ "ಆಪತ್ಕಾಲದಲ್ಲಿ ಬ್ರಾಹ್ಮಣರು ನೇಗಿಲಿನಿಂದ ಉಳಬಹುದು" ಎಂಬದಾಗಿ ಪರಾಶರ ಮಾಧವರ ಆಶಯವೆಂದು ಸ್ಪಷ್ಟ ತೋರದಿರಲಾರದು.

ಇನ್ನು ಕುಷ್ಯವಾದವನ್ನೆಬ್ಬಿಸುವವರಿಗೆ ಅನುಕೂಲವಾಗಿ ಖಿಲಯಜ್ಞದ ಪ್ರಸ್ತಾವನೆಗಾಗಿ "ಕೃಷಿಯನ್ನು ಮಾಡಬಾರದೆಂದು" ಹೇಳಿ ಅರ್ಥವಾದವೆಂದೂಹಿಸಬಹುದಾದ ಕೃಷಿನಿಂದೆಯನ್ನು ಮಾಡಿದ್ದೂ ದೊರೆಯಬಹುದು.

ಆದರೆ "ಋತಾ ಮೃತಾಭ್ಯಾಂ ಜೀವೇತ್ತುಮೃತೇನ ಪ್ರಮೃತೇನವಾ । ಸತ್ಯಾನೃತಾಭ್ಯಾಮಪಿವಾ ನಶ್ವವೃತ್ತ್ಯಾ ಕದಾಚನಾ" ॥೪॥ (ಮನು ಅ. ೪) (ಕೃಷಿಯಿಂದಾದರೂ ಜೀವಿಸಬಹುದು ಗುಲಾಮಗಿರಿಯಿಂದ ಎಂದೂ ಜೀವಿಸಬಾರದು) ಎಂದು ನಿಷೇಧಿಸಿರುವ ಶ್ವವೃತ್ತಿಯಂತಿರುವ, ಹಿಂದುಗಳಲ್ಲದವರಿಗೂ ಮಣಿಯಬೇಕಾಗುವಂಥ ನೌಕರತನಕ್ಕೆ ಬಾಯಿಬಿಡುವುದಕ್ಕಿಂತ ಸ್ವತಂತ್ರವಾದ ಕೃಷಿಯನ್ನು ಕೈಕೊಳ್ಳುವುದೇ ಲೇಸು.

ಇಂಥ ವಿಷಯಗಳಲ್ಲಿ ಮಠಾಧೀಶರು ರಾಯಸ ಅಪ್ಪಣೆಯನ್ನು ಕೊಡುವುದು ಕಷ್ಟಸಾಧ್ಯ. ಉದಾಹರಣೆಗಾಗಿ ಶಾರದಾ ಕಾನೂನಿನಂತೆ 14 ವರ್ಷ ಕಳೆದ ಹುಡುಗಿಗೇನೆ ಮದುವೆಮಾಡಬೇಕಾಗಿದ್ದರೂ ಈ ಕುರಿತು ಯಾವದೊಂದು ಮಠಾಧೀಶರಾದರೂ ಪ್ರೌಢವಿವಾಹವನ್ನು ಮಾಡಬಹುದೆಂದು ಸರ್ಕಲಾರನ್ನು ಹೊರಡಿಸಿರುವರೇ ?

ಇದೊಂದು ವಿಧದಲ್ಲಿ ನ್ಯಾಯವೆಂದೂ ಹೇಳಬಹುದು. ಹಿಂದೆ ಆಪತ್ಕಾಲದಲ್ಲಿ ವಿಶ್ವಾಮಿತ್ರನು ವ ಚಾಕ್ರಾಯಣ ಮೊದಲಾದವರು ನಿಷಿದ್ಧಭಕ್ಷಣ ಮಾಡಿದುದರಿಂದ ಧರ್ಮಕ್ಕೆ ಹಾನಿ ಬರಲಿಲ್ಲೆಂದು ತೋರಿದರೂ ಅಂಥ ನಿಷಿದ್ಧ ಭಕ್ಷಣವನ್ನು ಮಾಡಬಹುದೆಂಬ ಸಾರ್ವಜನಿಕ ವಿಧಿಯನ್ನು ನಿರ್ಮಿಸಲಿಲ್ಲ. ಅಂತೆಯೇ ಆಪತ್ಕಾಲವಾಗಿ ಕೃಷಿಮಾಡಬಹುದಾಗಿದ್ದರೂ ಮಠಾಧೀಶರು ಸಾರ್ವಜನಿಕವಾಗಿ ಸರ್ಕಲಾರನ್ನು ಜಾಹೀರುಪಡಿಸಲಿಕ್ಕೆ ಹೇಗಾದೀತು ? ಆದರೆ ಯಾರಾದರೊಬ್ಬರು ಕೃಷಿಮಾಡಿದರೆ ಅವನ ಮೇಲೆ ದ್ವೇಷದಿಂದ ಯಾರಾದರೂ ಬಿನ್ನವತ್ತಳೆಯನ್ನು ಬರೆದುಕೊಂಡರೆ ಅದಕ್ಕೆ ಕಿವಿಗೊಟ್ಟು ದಂಡಪ್ರಾಯಶ್ಚಿತ್ತಾದಿಗಳನ್ನು ವಿಧಿಸದಿದ್ದರೆ ಅದೇ ಬಹಳ ಉಪಕಾರ. ರಾ. ಬ.

ಸ್ವೀಕಾರ

ಶ್ರೀ॥ ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

ಮ॥ ಗಳಾದ

(1) ಬೆಂಗಳೂರು ತಾ॥ ಗೊಟ್ಟಿಗೆರೆಯಲ್ಲಿರುವ ವೇ॥ ವೀರಪ್ಪಾರಾಧ್ಯರ ದ್ವಿತೀಯಪುತ್ರ ಚಿ॥ ರುದ್ರಮರಿಯಪ್ಪಾರಾಧ್ಯರಿಗೂ ಗೊಟ್ಟಿಗೆರೆ ರುದ್ರಾರಾಧ್ಯರ ಪುತ್ರಿ ಚಿ॥ ಸೌ॥ ಸಿದ್ಧಲಿಂಗಾಂಬೆಗೂ ನಡೆದ ವಿವಾಹಮಹೋತ್ಸವದಲ್ಲಿ ಮೈಸೂರು ಆಸ್ಥಾನ ವಿದ್ವಾನ್ ಶ್ರೀ॥ ಎನ್. ಆರ್. ಕರಿಬಸವಶಾಸ್ತ್ರಿಗಳ ಮಕ್ಕಳು ರುದ್ರಪ್ಪನವರ ಮೂಲಕ ರೂ. 1 (2) ತುಮಕೂರು ತಾ॥ ಕೆಸ್ತೂರು ಟಿ. ಜಿ. ಗಂಗಪ್ಪನವರ ಕುಮಾರ್ತೆ ಚಿ॥ ಸೌ॥ ಮಹಾದೇವಮ್ಮನಿಗೂ ತುಮಕೂರಿನಲ್ಲಿರುವ ಸೊಂಡೆಕೊಪ್ಪದ ವೀರಶೆಟ್ಟಪ್ಪನವರ ಕುಮಾರ ಚಿ॥ ರಾ॥ ವೀರಭದ್ರಪ್ಪನವರಿಗೂ ನಡೆದ ವಿವಾಹಮಹೋತ್ಸವದಲ್ಲಿ ಕೆಸ್ತೂರು ಶ್ರೀ ಧನಲಕ್ಷ್ಮೀ ಕೋ-ಆಪರೇಟಿವ್ ಸೊಸೈಟಿ ಪ್ರೆಸಿಡೆಂಟ್ ಟಿ. ಜಿ. ರಾಜಶೇಖರಯ್ಯನವರ ಮೂಲಕ ರೂ. 1 (3) ಬೆಂಗಳೂರು ಸಿಟಿ ಬಳ್ಳಾಪುರಪೇಟೆಯಲ್ಲಿರುವ ಎಂ. ನಾಗಪ್ಪನವರ ಜ್ಯೇಷ್ಠ ಪುತ್ರ ಮಲ್ಲಪ್ಪನವರ ತೃತೀಯ ಪುತ್ರಿ ಚಿ॥ ಸೌ॥ ಸುಶೀಲಮ್ಮನಿಗೂ ಮೈಸೂರು ಹಳೇ ಅಗ್ರಹಾರದಲ್ಲಿರುವ ಲೇಟ್ ಸಿ ದಾಸಪ್ಪನವರ ಪುತ್ರ ಚಿ॥ ರಾ॥ ತಮ್ಮಯ್ಯನವರಿಗೂ ನಡೆದ ವಿವಾಹಮಹೋತ್ಸವದಲ್ಲಿ ರೂ. 2. (4) ಗೊಲ್ಲಹಳ್ಳಿ ರುದ್ರಪ್ಪನವರ ಅಣ್ಣಂದಿರು ಜಿ. ಮರಿಯಪ್ಪನವರ ಮಕ್ಕಳು ಚಿ॥ ನಂಜಪ್ಪನವರಿಗೂ ಬೆಂಗಳೂರು ಸಿಟಿ ಚಾಮರಾಜಪೇಟೆಯಲ್ಲಿರುವ ಬಸಪ್ಪನವರ ಮೊಮ್ಮಗಳು ಚಿ॥ ಸೌ॥ ಗೌರಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ 2 ರೂ. ಒಟ್ಟು 4 ರೂ. ಕ್ಯಾಪ್ಟನ್ ವೈ. ವಿ. ಅಯ್ಯನವರ ಮೂಲಕ.

ಪತ್ರವ್ಯವಹಾರ.

☞ ಪತ್ರವ್ಯವಹಾರಕರ ಲೇಖಕಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ನಿಷ್ಪಕ್ಷಪಾತವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟುವಾಗಿಯೂ, ಇರಬೇಕೆಂದೂ ಬುಧವಾರ ಗುರುವಾರದೊಳಗೆ ನಮ್ಮ ಕೈಸೇರುವಂತೆ ಕಳುಹಲ್ಪಡಬೇಕೆಂದು, ಈ ನಿಬಂಧನೆಗೆ ವಿರುದ್ಧವಾದ ಲೇಖಗಳು ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದ್ದಾಗ್ಗೂ ಲೇಖಕರು ಲಕ್ಷಿಸದೆ ಲಂಸಿಬತಮಗೆ ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ ಪುಟಗಟ್ಟಲೆ ಅಸ್ಫುಟವಾಗಿ ಬರೆದು ನಮಗೆ ತ್ರಾಸನ್ನು ಕೊಡುತ್ತಿರುವರೆಂದು ಬರೆಯಲು ಖೇದವಾಗುತ್ತದೆ. ಅದುಕಾರಣ ಇತಃಪರ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಮಸ್ತರೂ ಗಮನಿಸತಕ್ಕದು—ಸಂ.

ವೀರನಪುರಕ್ಕೆ ಗೌರವಬಂದಿತು.

ಗುಂಡ್ಲುಪೇಟೆ ತಾ॥ ಕಲ್ಲಹಳ್ಳಿ ಪಟೇಲ್ ಮ॥ ಚಿಕ್ಕಮಲ್ಲಪ್ಪನವರ ಅಳಿಯಂದಿರು ವೀರನಪುರದ ಪಟೇಲ್ ಮ॥ ಪುಟ್ಟಪ್ಪನವರ ಮಗ ಮ॥ ವಿ. ಪಿ. ನಾಗಮಲ್ಲಪ್ಪನವರು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದು ಈಸಲ ನಡೆದ ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದರೆಂದು ತಿಳಿಸಲು ಬಹಳ ಸಂತೋಷವಾಗುತ್ತದೆ. ಈ ತಾಲ್ಲೂಕಿನ ವೀರಶೈವರಲ್ಲಿ ಇಷ್ಟರವರೆಗೆ ಕಷ್ಟಪಟ್ಟು ಓದಿ ಈ ಪರೀಕ್ಷೆಯನ್ನು ಈ ವರೆಗೆ ಯಾರೂ ಮಾಡಿರಲಿಲ್ಲ. ಈ ಮ॥ ವಿ. ಪಿ. ನಾಗಮಲ್ಲಪ್ಪನವರು ಇನ್ನೂ ಬಹಳ ಚಿಕ್ಕವಯಸ್ಸಿನವರಾದುದರಿಂದ ಬಿ.ಎ., ಮೊದಲಾದ ದೊಡ್ಡ ಪರೀಕ್ಷೆಗಳಿಗೆ ಓದಿ ಪ್ಯಾಸುಮಾಡಿ ತಾವು ಅಭಿವೃದ್ಧಿಗೆ ಬರುವುದಲ್ಲದೆ ತಮ್ಮ ಮನೆತನಕ್ಕೂ ನಮ್ಮ ತಾಲ್ಲೂಕಿಗೂ ಗೌರವವನ್ನು ತರುವರೆಂದು ಆಶಿಸುವ ವಿದ್ಯಾಭಿಮಾನಿ.

ನಾಯಕರ ಸಂಘ, ಚಿತ್ರದುರ್ಗ.

ಗುಬ್ಬಿ ಶ್ರೀ ಚನ್ನಬಸವೇಶ್ವರ ಥಿಯೇಟ್ರಿಕಲ್ ನಾಟಕ ಕಂಪೆನಿಯ ಪ್ರೊಪ್ರೈಟರ್ ವಿನೋದರತ್ನಾಕರ ಮ॥ ಜಿ. ಹೆಚ್. ವೀರಣ್ಣನವರು ತಾ॥ 8-6-32 ನೇ ದಿವಸ ಚಿತ್ರದುರ್ಗದಲ್ಲಿ "ವೀರಸಿಂಹ" ಎಂಬ ನಾಟಕವನ್ನಭಿನಯಿಸಿ ಬಂದ ಉತ್ಪತ್ತಿಯಲ್ಲಿ 211 ರೂ. ಗಳನ್ನು ಚಿತ್ರದುರ್ಗದ ನಾಯಕರ ಸಂಘದ ವಿದ್ಯಾರ್ಥಿನಿಲಯದ ಕಟ್ಟಡಕ್ಕೋಸ್ಕರ ದಯಪಾಲಿಸಿದರು. ರಂಗಭೂಮಿಯು ಧನಾರ್ಜನೆಗೆ ಮಾತ್ರವಲ್ಲದೆ ಜನತೆಯ ಏಳ್ಗೆಗೂ, ನಾಡಿನ ನಾಗರೀಕತೆಗೂ ಸಹಾಯಕವಾದ ಒಂದು ಮುಖ್ಯಾಂಗವೆಂಬುದನ್ನು ಧ್ಯೇಯವಾಗುಳ್ಳ ಮಹನೀಯರಲ್ಲಿ ಶ್ರೀಯುತ ವೀರಣ್ಣನವರೊಬ್ಬರಾಗಿರುತ್ತಾರೆ. ವಿದ್ಯಾಸಹಾಯಕ್ಕೆಂದರೆ ಇವರು ಕೇವಲ ಮುಂದಾಳುಗಳು. ಇದುವರೆಗೆ ಈ ಮಹನೀಯರು 1 ಲಕ್ಷ ರೂ. ಗಳವರೆಗೂ ಧರ್ಮಸಹಾಯ ಮಾಡಿರುತ್ತಾರೆ. ಸಂಘದಪರವಾಗಿ ಈ ಮಹಾಶಯರಿಗೆ ಕೃತಜ್ಞತಾ ವಂದನೆಗಳನ್ನರ್ಪಿಸುವುದಲ್ಲದೆ ಪರಮಾತ್ಮನು ಈ ಧರ್ಮಾತ್ಮರಿಗೆ ಚಿರಾಯುರಾರೋಗ್ಯೈಶ್ವರ್ಯಗಳನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

ಬಿ. ಚಿನ್ನೋಬಯ್ಯ, ಪ್ರೆಸಿಡೆಂಟ್.

ಸಂಸ್ಕೃತ ವಿದ್ಯಾಪ್ರೋತ್ಸಾಹ.

ವೀರಶೈವ ಸಮಾಜದ ಏಳ್ಗೆಗೆ ರಾಜಕೀಯ ವಿದ್ಯಾಭಿವೃದ್ಧಿಯು ಎಷ್ಟು ಆವಶ್ಯಕವೋ ಧಾರ್ಮಿಕ ವಿದ್ಯಾಭಿವೃದ್ಧಿಯೂ ಅಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚು ಆವಶ್ಯಕತೆಯುಳ್ಳದ್ದಾಗಿದೆ. ವೀರಶೈವ ಮತತತ್ವಗಳನ್ನು ತಿಳಿಯಪಡಿಸಿ ಅವರ ಶ್ರೇಷ್ಠತೆಯನ್ನು ಪ್ರಚಾರಪಡಿಸಲು ಸಂಸ್ಕೃತ ವಿದ್ಯೆಯು ಅತ್ಯಗತ್ಯವಾಗಿದೆ. ಈ ಉದ್ದೇಶದಿಂದಲೇ ಈಚೆಗೆ ಅನೇಕ ಸಂಸ್ಕೃತಪಾಠಶಾಲೆಗಳೂ, ಕಾಲೇಜುಗಳೂ ಸ್ಥಾಪಿಸಲ್ಪಟ್ಟಿವೆ. ಈ ಪೈಕಿ ತುಮಕೂರು ತಾ॥ ಶ್ರೀ ಸಿದ್ಧಗಂಗಾ ಮಹಾಕ್ಷೇತ್ರದ ಶಾಲೆಯು ಒಂದಾಗಿದೆ. ಇದರ ಪುರೋಭಿವೃದ್ಧಿಗಾಗಿ ಅನೇಕ ಮಹನೀಯರು ಶಕ್ತ್ಯಾನುಸಾರ ಸಹಾಯಮಾಡಿ ಕೀರ್ತಿಭಾಗಿಗಳಾಗಿರುತ್ತಾರೆ. ಈಚೆಗೆ ಬೆಂಗಳೂರು ಸಿಟಿ ಚಾಮರಾಜಪೇಟೆ ನುಂಡಿ ಲೇಟ್ ಶಿ. ಗುರುಸಿದ್ಧಪ್ಪನವರ ಕುಟುಂಬ ಸಿದ್ಧಬಸಮ್ಮನವರೂ ಇವರ ಮಕ್ಕಳು ಗಂಗಪ್ಪ ಉರುಫ್ ಶಿವಣ್ಣ ಮತ್ತು ರೇವಣ್ಣ ಇವರುಗಳೂ 500 ರೂ. ಗಳನ್ನು ಮತ್ತು ರಾಯಚೂರಿನಲ್ಲಿರುವ ಅತ್ತನೂರು ಶಿವಪ್ಪಗೌಡರು 500 ರೂ. ಗಳನ್ನು ವಾಗ್ದಾನಮಾಡುವುದರ ಮೂಲಕ ಧಾರ್ಮಿಕ ವಿದ್ಯೆಯಲ್ಲಿ ತಮಗಿರುವ ಅಭಿಮಾನವನ್ನು ವ್ಯಕ್ತಗೊಳಿಸಿರುತ್ತಾರೆ. ಮೇಲ್ಕಂಡವರಿಗೆ ಶ್ರೀಸಿದ್ಧಲಿಂಗೇಶ್ವರಸ್ವಾಮಿಯು ಸದಾ ಸ್ಥಿರತರಾಯುರಾರೋಗ್ಯೈಶ್ವರ್ಯಗಳನ್ನು ಅನುಗ್ರಹಿಸಲೆಂದು ಹಾರೈಸುವ ಸಂಸ್ಕೃತ ವಿದ್ಯಾರ್ಥಿ.

ಶ್ರೀ ಬಸವರಾಜ ವಾಚನಾಲಯಕ್ಕೆ ಧನಸಹಾಯ.

ಹಲಗೇರಿ ಶ್ರೀ ಹಾಲಸಿದ್ಧೇಶ್ವರ ಕಂಪೆನಿಯವರು ಪರತಂತ್ರದಲ್ಲಿ ಇರುವ ಮಾತೆಯನ್ನು ಸ್ವತಂತ್ರಳನ್ನಾಗಿ ಮಾಡುವ ರಾಷ್ಟ್ರವೀರರುಗಳ ಪ್ರಯತ್ನಗಳಂತೆ ಇವರಾದರೂ ಮಾತೃಭಾಷೆಯಾದ ಕನ್ನಡ ಭಾಷೆಯಲ್ಲಿ ನಾಟಕರೂಪದಿಂದ ಮಾಡುವ ಸೇವೆಯನ್ನೂ, ಸ್ತ್ರೀ ಮತ್ತು ಬಿ.ಎ., ಎಂಬ ಪ್ರಯೋಗಗಳನ್ನೂ ನೋಡಿದರೆ ಪುರುಷರನ್ನು (ಪತಿಗಳನ್ನು) ಸನ್ಮಾರ್ಗಗಾಮಿಗಳನ್ನಾಗಿ ಮಾಡುವ ಜವಾಬ್ದಾರಿಯು ಸ್ತ್ರೀಯರ (ಸತಿಯರ) ಮೇಲೆ ಎಷ್ಟು ಇರುವದೆಂಬುದು ಆಡಿ ತೋರಿಸುವ ಈ ಕಂಪೆನಿಯವರು ತಮ್ಮ ಮುಕ್ಕಾಮಿನಲ್ಲಿ 5-6 ನಾಟಕಗಳನ್ನು ಗದಗ-ಬೆಟಗೇರಿ ಪೇಟೆಯ ತರುಣಸಂಘದಿಂದ ನಡೆಯುವ ಧರ್ಮಾರ್ಥ ವಾಚನಾಲಯ ಪ್ರಿಂಟಿಂಗ್ ಪ್ರೆಸ್ ವಗೈರೆಗಳಿಗೆ ಕೊಟ್ಟಿರುವದು ಇವರ ಉದಾರಬುದ್ಧಿಯನ್ನು ವ್ಯಕ್ತಗೊಳಿಸುತ್ತದೆ. ಇವರು ಹೋದಸಾರೆ ತಮ್ಮ ಈ ಊರ ಮುಕ್ಕಾಮಿನಲ್ಲಿ ಸದರಿ ವಾಚನಾಲಯಕ್ಕೆ ಸ್ತ್ರೀ ಎಂಬ ನಾಟಕದ ಉತ್ಪನ್ನದ ಅರ್ಧಭಾಗವನ್ನು ಕೊಟ್ಟು ಪ್ರೋತ್ಸಾಹಿಸಿದ ಬಗ್ಗೆ ಇವರಿಗೆ ನಾವು ಬಹು ಋಣಿಯಾಗಿರುತ್ತೇವೆ. ಇಂಥಾ ನಿಸ್ವಾರ್ಥ ಮತ್ತು ದೇಶಭಾಷಾಸೇವೆಗೈವ ಕಂಪೆನಿಯವರಿಗೆ ರಾಷ್ಟ್ರದ ಮುಖಂಡರೂ ನಮ್ಮ ನಾಡಿನ ಮಹಾರಾಜರೂ ಬಹುಮಾನ ಪದಕಗಳನ್ನು ಹೋದ ಹೋದಲ್ಲಿ ಸಹಾಯವನ್ನು ಕೊಟ್ಟು ಪ್ರೋತ್ಸಾಹಿಸುವರೆಂದು ಶ್ರೀ ಬಸವಣ್ಣನವರನ್ನು ಅನನ್ಯಬಾವದಿಂದ ಪ್ರಾರ್ಥಿಸುತ್ತೇನೆ. ಕರಿಯಪ್ಪಾ ಕರಬಸಪ್ಪಾ,

ಮುಧೋಳ, ಗದಗ ದ. ಖು.

ಗುರುಮಠಕಲ್ಲು ಶ್ರೀಗಳ ಆಗಮನ ನಿರೀಕ್ಷಣೆ.

ನೈಜಾಂ ಇಲಾಖಾ ಗುರುಮಠಕಲ್ಲು ಶ್ರೀಮನ್ನಿರಂಜನ ಶಾಂತವೀರ ಸ್ವಾಮಿಗಳವರು ಕಳೆದ ಮಾಘಮಾಸದಲ್ಲಿ ಧಾರವಾಡದಲ್ಲಿ ನಡೆದ 63 ಪುರಾತನರ ಪೂಜೆಯ ಕಾಲಕ್ಕೆ ನಮ್ಮ ಪ್ರಾಂತಕ್ಕೆ ದಯಮಾಡಿಸಿ ಕಳೆದ 4 ತಿಂಗಳಿಂದಲೂ ಈ ಪ್ರಾಂತದ ನಾನಾ ಕಡೆಗಳಲ್ಲಿ ಸಂಚರಿಸಿ ಸಮಾಜದ ನಾನಾ ಮಹತ್ವದ ಕಾರ್ಯಗಳನ್ನು ಜರುಗಿಸುತ್ತಲಿರುವರು. ಮೊದಲು ಈ ಸ್ವಾಮಿಗಳು ಧಾರವಾಡದ ಲಿಂಗಾಯತ ಟೌನ್‌ಹಾಲಿನಲ್ಲಿ ಸೇರಿದ್ದ ಪ್ರಮುಖ ಜನರ ಸಭೆಯಲ್ಲಿ ಸ್ವಲ್ಪಕಾಲ ಭಾಷಣಮಾಡಿ ಸಭಿಕರನ್ನು ಚಕಿತರನ್ನಾಗಿ ಮಾಡಿದರು. ಅಲ್ಲಿಂದ ಶ್ರೀಗಳು ಹೋದಕಡೆಗಳಲ್ಲಿ ಇವರ ವ್ಯಾಖ್ಯಾನ ಕೇಳಲು ಜನರು ಉತ್ಸುಕರಾಗಿ ಶ್ರೀಗಳ ಕೆಲಸಕ್ಕೆ ಸಹಾಯಕರಾಗುತ್ತಿರುವರು. ಶಾಂತವೀರ ಶ್ರೀಗಳ ಸರಳಸ್ವಭಾವ, ಸ್ವಾಮಿನಿಷ್ಠೆ, ಸಮಾಜ ಕಳಕಳಿ ಈ ಸದ್ಗುಣಗಳು ಇವರಲ್ಲಿ ಎಲ್ಲರಿಗೂ ಒಡೆದುಕಾಣುತ್ತಲಿವೆ. ಇವರು ಉಳವಿ ಕ್ಷೇತ್ರಕ್ಕೆ ದಯಮಾಡಿಸಿ, ದೇವಸ್ಥಾನದಲ್ಲಿ ಪೂಜಾದಿ ಕಾರ್ಯಗಳು ಕ್ರಮವಾಗಿ ನಡೆಯುವಂತೆಯೂ, ಯಾತ್ರಿಕರ ಅನುಕೂಲಕ್ಕಾಗಿ 7-8 ಬಿಡಾರಗಳನ್ನು ಯಾತ್ರಿಕರ ಸಹಾಯದಿಂದ ಏರ್ಪಡಿಸಿಯೂ ಯಾತ್ರಿಕರ ಅನೇಕ ಕೊರತೆಗಳನ್ನು ನಿವಾರಿಸಿ ಜನರ ಆದರಕ್ಕೆ ಪಾತ್ರರಾಗಿರುತ್ತಾರೆ. ಇದರಂತೆ ಗೋಕರ್ಣ ಕ್ಷೇತ್ರಕ್ಕೆ ದಯಮಾಡಿಸಿ ವೀರಶೈವ ಯಾತ್ರಿಕರ ತೊಂದರೆಗಳನ್ನು ಕಣ್ಣಾರಕಂಡು ಅದರ ನಿವಾರಣೆಗಾಗಿ ಅಲ್ಲಿ ಸೇರಿದ ಯಾತ್ರಿಕರಲ್ಲಿ ವೀರಶೈವ ಸಭೆಯನ್ನು ಸೇರಿಸಿ, ಅಲ್ಲೊಂದು "ವೀರಶೈವಾಶ್ರಮ" ವನ್ನು ಏರ್ಪಡಿಸಲು ಗೊತ್ತುಮಾಡಿರುವರು. ಸಭೆಯಲ್ಲೇ 500-600 ರೂ. ಗಳು ವಾಗ್ದಾನವಾಗಿ ನೂರಾರು ರೂ. ಗಳು ಕೇಖುರವಾಗಿವೆ. ಈ ಮಹತ್ವದ ಕಾರ್ಯವನ್ನು ಚಿತ್ರದುರ್ಗದ ಜಗದ್ಗುರುಗಳ ಸಹಾಯದಿಂದ ಶೀಘ್ರದಲ್ಲಿಯೇ ಮಾಡುವರಾಗಿರುವರು. ಇದಲ್ಲದೆ ಇವರು ಬೆಳಗಾಂ ಜಿಲ್ಲೆಯಲ್ಲಿ ಸಂಚಾರಮಾಡಿ ಬಾಗೇವಾಡಿ ಮೊದಲಾದ ಕಡೆಗಳಲ್ಲಿ ತರುಣಸಂಘ, ವಾಚನಾಲಯ ಮೊದಲಾದುವುಗಳನ್ನು ಏರ್ಪಾಡುಮಾಡಿರುವರು. ಸದ್ಯಃ ಈ ಶಾಂತವೀರಸ್ವಾಮಿಗಳವರು ಹುಬ್ಬಳ್ಳಿಯ ಜಗದ್ಗುರುಗಳೊಡನೆ ಸಮಾಜ ಶ್ರೇಯಸ್ಸಾಧಕವಾದ ಕೆಲವು ಮಹತ್ವದ ಕಾರ್ಯಗಳ ಸಮಾಲೋಚನೆಗೆ ಹುಬ್ಬಳ್ಳಿಗೆ ದಯಮಾಡಿಸಿ 10-15 ದಿವಸಗಳಾದವು. ಇವರು ಸಮಾಜದ ಶ್ರೇಯಸ್ಸಿಗಾಗಿ ಹೋದಕಡೆಯಲ್ಲೆಲ್ಲಾ ಈರೀತಿ ಅವಿಶ್ರಾಂತಶ್ರಮಪಡುತ್ತಾ ಜನಗಳ ಆದರಕ್ಕೆ ಪಾತ್ರರಾಗುತ್ತಾ "ವೀರಶೈವ ವಿವೇಕಾನಂದ" ರೆನಿಸಿರುವರು. ಈ ಶ್ರೀಗಳ ತೇಜಸ್ಸೂ, ವಿನಯ, ಗಾಂಭೀರ್ಯದಿಂದ ಕೂಡಿದ ಅಸ್ಖಲಿತವಾಣಿಯ ಕಳಕಳಿಯ ಭಾಷಣವೂ ಜನರ ಮೇಲೆ ಬಹು ಪರಿಣಾಮವಾಗಿ ಜನರಲ್ಲಿ ಶ್ರದ್ಧಾಭಕ್ತಿಗಳನ್ನು ಹುಟ್ಟಿಸುವುದರಿಂದಲೇ ಜನರು ತಮ್ಮ ತಮ್ಮ ಊರುಗಳಿಗೆ ಬಿಡುವಿಲ್ಲದೆ ಕರೆಯುತ್ತಿರುವರು. ಇದರಿಂದ ತಮ್ಮ ನೈಜಾಂ ಪ್ರಾಂತಕ್ಕೆ ದಯಮಾಡಿಸಲು ಅವಕಾಶವಿಲ್ಲದ್ದಾಗಿದೆಯಲ್ಲದೆ, ಅಲ್ಲಿ ವೀರಶೈವರ ಶ್ರೇಯಸ್ಸಾಧಕವಾದ ಮಹತ್ವದ ಕಾರ್ಯವು ಜಾಗ್ರತೆ ಕೈಗೂಡಲು ವಿಳಂಬವಿಲ್ಲದೆ ಸಾವಕಾಶವಾಗಲು ಕಾರಣವಾಗಿದೆ. ಈ ವರೆಗೆ ಈ ಕಾರ್ಯಕ್ಕಾಗಿ ಹುಬ್ಬಳ್ಳಿಯಿಂದ ಚಲಿಸದೆ ನಿಂತಿರುವರು. ಶ್ರೀ ಭಗವಂತನ ಕೃಪೆಯಿಂದ ಇವರ ಈ ಮಹತ್ವದ ಕಾರ್ಯವು ಕೈಗೂಡಿ ಶಾಂತವೀರ ಶ್ರೀಗಳು ನಮ್ಮ ಮೈಸೂರು ಪ್ರಾಂತಕ್ಕೂ ದಯಮಾಡಿಸುವವರಾಗಲೆಂದು ಪ್ರಾರ್ಥಿಸುತ್ತೇನೆ.

[illegible]

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿರಿ

ಗರ್ಭಧಾರಣ ಸಂಜೀವಿನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆವಿಗುರಿ. ೯ ಗುಳಿಗೆಗಳ ೩. ೩ ರೂಪಾಯಿ. ೬. ೩. ೨ ಆಣೆ.

ಪತ್ತೆ—ವೈದ್ಯ ವಿ. ಎಸ್. ಕಾಶೆ. ಮಿರಜ. M. C. 10

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ

ಕೆಸ್ತೂರು ಮತ್ತು ಕೋವಿನಕೆರೆ.

ಇಲ್ಲಿಯ ಸೆಂಟ್ರಲ್ ಮಿಡಲ್ ಸ್ಕೂಲ್ ಹೆ॥ ಮಾ॥ ಮ॥ ವರದರಾಜ ಐಯಂಗಾರ್‍ರವರ ಮಹನತ್ತಿನಿಂದ ಪಾಠಶಾಲೆಯ ಬಾಲಕರು ಸ್ಕೂಲ್ ಮೈದಾನದಲ್ಲಿ ವೃಕ್ಷಗಳ ಕೆಳಗೆ ನಮ್ಮನ್ನಾಳುವ ಮಹಾಸ್ವಾಮಿಯವರ ಭಾವಚಿತ್ರವನ್ನು ತಳಿರುತೋರಣಗಳಿಂದಲೂ ರಂಭಾಸ್ತಂಭಗಳಿಂದಲೂ ಪುಷ್ಪಮಾಲಿಕೆಗಳಿಂದಲೂ ಅಲಂಕರಿಸಿ, ಧೂಪದೀಪ ನೈವೇದ್ಯಗಳಿಂದ ಅರ್ಚಿಸಿ ಸಭಿಕರನ್ನು ಆನಂದಗೊಳಿಸಿದರು. ತರುವಾಯ ನಾನಾ ವಿಧವಾದ ಆಟಗಳಿಂದ ನೆರೆದಿದ್ದ ಸಭಿಕಮಹಾಶಯರನ್ನು ಆನಂದಗೊಳಿಸಿದರು. ಆಮೇಲೆ ಮ॥ ಹೆ॥ ಮಾ॥ ರವರು ಆಟಗಳಲ್ಲಿ ಗೆದ್ದ ಬಾಲಕರಿಗೆ ಆ ದಿನ ಈ ಸಮಾರಂಭಕ್ಕೆ ಅಧ್ಯಕ್ಷಪದವಿಯನ್ನು ವಹಿಸಿದ್ದ ಮ॥ ಸೂರೇನಹಳ್ಳಿ ಶ್ಯಾ॥ ಸೀಬಣ್ಣನವರ ಮುಖೇನ ಅನೇಕ ಬಹುಮಾನಗಳನ್ನೂ ಮೆಡಲ್‍ಗಳನ್ನೂ ದಯಪಾಲಿಸಲು ಅವಕಾಶವನ್ನು ಕಲ್ಪಿಸಿದ್ದರು. ಬಹುಮಾನ ವಿನಿಯೋಗಾನಂತರ ಕೆಸ್ತೂರು ಶ್ರೀ ಧನಲಕ್ಷ್ಮೀ ಕೋ-ಆಪರೇಟಿವ್ ಸೊಸೈಟಿ ಪ್ರೆಸಿಡೆಂಟರಾದ ಮ॥ ಟಿ. ಜಿ. ರಾಜಶೇಖರಯ್ಯನವರು ಸ್ವಾರಸ್ಯವಾದ ಉಪನ್ಯಾಸಮಾಡಿದರು. ಇಂತಹ ಸಂತೋಷ ಸಮಾರಂಭವನ್ನು ಯಾವುದೊಂದು ನ್ಯೂನತೆಯೂ ಇಲ್ಲದೆ ನಿರ್ವಿಘ್ನವಾಗಿ ನೆರವೇರಿಸಿದ ನಮ್ಮ ಹೆ॥ ಮಾ॥ ಮ॥ ವರದರಾಜ ಐಯಂಗಾರರವರಿಗೂ ಸಹಾಯೋಪಾಧ್ಯಾಯರುಗಳಿಗೂ ತಮ್ಮ ಅಮೋಘವಾದ ಕಾರ್ಯಕಲಾಪಗಳನ್ನು ಮಾನಿಕವಾಡಿ ದಯವಿಟ್ಟು ದಯಮಾಡಿಸಿದ ದೊಡ್ಡ ಮನುಷ್ಯರುಗಳಿಗೂ, ವಿದ್ಯಾರ್ಥಿಗಳಿಗೂ ದಯಾಘನನಾದ ಭಗವಂತನು ಚಿರಾಯುರಾರೋಗ್ಯ ಭಾಗ್ಯಗಳನ್ನು ದಯಪಾಲಿಸಲೆಂದೂ ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರ ಇಂಥಾ ಜನ್ಮದಿನೋತ್ಸವಗಳನ್ನು ಅನಂತವಾಗಿ ದೊರಕಿಸಿಕೊಡಲೆಂದೂ ದಯಾಘನನಾದ ಭಗವಂತನನ್ನು ತಮ್ಮೆಲ್ಲರೊಂದಿಗೆ ಪ್ರಾರ್ಥಿಸುತ್ತೇನೆಂದು ಹೇಳಿದರು. ತರುವಾಯ ಗಂಧಪುಷ್ಪ ಫಲತಾಂಬೂಲ ವಿನಿಯೋಗಾನಂತರ ಶ್ರೀಮನ್ಮಹಾರಾಜಸಾಹೇಬ್ ಬಹದ್ದೂರರವರ ಜಯಘೋಷದೊಡನೆ ಸಭೆಯು ವಿಸರ್ಜನೆಯಾಯಿತು.

ಉತ್ಸವಭಾಗಿ.

ಆಸ್ಥಾನವಿದ್ವಾನ್ ಶ್ರೀಮಾನ್ ವೇದಮೂರ್ತಿ ಬಿ. ಎಂ. ತ್ರ್ಯಂಬಕ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯವಿಮರ್ಶೆಯೂ.

(ಲೇಖಕ—ವೇ॥ ಎಚ್. ಗೋಪಾಲಕೃಷ್ಣಮಾಚಾರ್ಯ, ಕರ್ಣಾಟಕ ಪಂಡಿತರು, ಟ್ರೇನಿಂಗ್ ಕಾಲೇಜು, ಮೈಸೂರು.)

ದಿಗ್ದರ್ಶನಂ.

(ಜೂನ್ ತಾ॥ 20ರ ಸಂಚಿಕೆಯಿಂದ ಮುಂದುವರಿದುದು.)

೪೪

ಶ್ರೀ ಚಾಮರಾಜಪ್ರಭುವು ಸ್ವಲ್ಪವೂ ವಿರಾಮವಿಲ್ಲದೆ ಆಲೋಚಿಸುತ್ತ ಸುಪ್ರಸಿದ್ಧರಾದ ಜೋಯಿಸರನ್ನು ಕರೆದು ಅವರ ಮುಖವನ್ನು ನೋಡುತ್ತ ಇನ್ನು ಸ್ವಲ್ಪ ಹೊತ್ತಿನಲ್ಲೇ ನನ್ನ ಧರ್ಮಪತ್ನಿಯು ಪ್ರಸವಿಸುವ ಶಿಶುವು ಗಂಡಾಗಿರುವುದೋ ಹೆಣ್ಣಾಗಿರುವುದೋ ಎಂಬುದನ್ನು ಶಾಸ್ತ್ರರೀತ್ಯಾ ಗುಣಿಸಿ ಹೇಳಿದರೆ ನಿಮಗೆ ಉತ್ತಮವಾದ ಬಹುಮಾನಗಳನ್ನು ಕೊಡುವೆನೆಂಬುವಷ್ಟರಲ್ಲೇ ಉತ್ತಮವಾದ ಲಗ್ನದಲ್ಲಿ ಆ ಮನೋಹರರೂಪಿಣಿಯು ಪತಿಗೆ ಪ್ರೀತಿಪೂರ್ವಕವಾಗಿ ಪುತ್ರರತ್ನ ರೂಪವಾದ ಉತ್ತಮವಾದ ಬಹುಮಾನವನ್ನು ಕೊಟ್ಟಳು.

ಪದ್ಯ—ಬಿಡುವೇನಿಲ್ಲದೆ ಚಿಂತಿಸುತ್ತೆ ಕರೆದಾದೈವಜ್ಞರಂ ನೋಡುತಂ ದೊಡನೆನ್ನೀರಮಣೀಲಲಾವರಫಲಂ ಗಂಡಪ್ಪುದೋ ಪೆಣ್ಣೊ ಪೇ ॥ ಳ್ದೊಡೆ ಮಾನ್ಯಂಗಳನೀವೆನೆಂಬನಿತರೊಳ್ ಸಲ್ಲಗ್ನದೊಳ್ ಕಾಂತೆತಾಂ । ಪಡೆದಿತ್ತಳ್ ಪತಿಗೊಲ್ದು ಪುತ್ರಬಹುಮಾನ ಪ್ರನ್ಯಮಂನನ್ಯಮಂ ॥೪೪॥

ಮಹಾರಾಜ್ಞಿ ತಾಂ ಬಾಲವತಿಯಾದುದರತ್ತಣಿಂ, ನಿರ್ಬಂಧಿತ ಗೃಹಾಂತಸ್ಥಿತಿಯನೆಂಬುಕೆಯುದ್ದ, ಸಮುಕಟ್ಟಿಂ, ನಿಜಪತಿರಾಜನಪ್ಪ ಚಾಮರಾಜನಂ ಜನಕರಾಜನಂಗೆಯ್ದು, ಕೃತಕೃತ್ಯೆಯಾಗಿರ್ದು,

ಮಹಾರಾಣಿಯಾದರೋ ಪುತ್ರವತಿಯಾದುದರ ದೆಸೆಯಿಂದ, ಮನೆಯೊಳಗೆ ಇದ್ದುಕೊಂಡು (ಆರೋಗ್ಯರಕ್ಷಣೆಗೋಸ್ಕರ), ತಕ್ಕ ರೀತಿಯಿಂದ, ತನ್ನ ಪತಿಯೂ ರಾಜಶ್ರೇಷ್ಠನೂ ಆಗಿರತಕ್ಕ ಶ್ರೀ ಚಾಮರಾಜನನ್ನು ರಾಜರ್ಷಿಯಾದ (ಶ್ರೇಷ್ಠನಾದ ತಂದೆಯನ್ನಾಗಿ) ಜನಕರಾಜನನ್ನಾಗಿ ಮಾಡಿ, ಧನ್ಯಳಾಗಿದ್ದುಕೊಂಡು,

ಗದ್ಯ—ಪತಿಯೊಡನೆ ವಿಧ್ಯುದೀರಿತಕ್ರಮದಿಂ ನಿಜಕುಮಾರ ಕಂಠೀರವಂಗೆ "ಶ್ರೀ ಕೃಷ್ಣರಾಜ ಒಡೆಯರ್" ಎಂಬ ಪೆರ್ಮಪೆತ್ತ, ನಲ್ಪೆಸರಿಟ್ಟು, ಪರಮಾನಂದದೊಳ್ ಒಂದಿ, ಪ್ರಭುತ್ವೋಚಿತೋಪಚಾರಂಗಳಿಂ ಪರಿಪಾಲಿಸುತ್ತ ಮರಗುವರನ ಬಳವಿಯನೆಪಾರುತ್ತಮಿರೆಯಿರೆ,

ವಲ್ಲಭನೊಡನೆ ಶಾಸ್ತ್ರದಲ್ಲಿ ಹೇಳಲ್ಪಟ್ಟ ಕ್ರಮದಿಂದ ತನ್ನ ಶ್ರೇಷ್ಠನಾದ ಕುಮಾರನಿಗೆ "ಶ್ರೀ ಕೃಷ್ಣರಾಜ ಒಡೆಯರ್" ಎಂಬ ಘನತೆಯನ್ನು ಹೊಂದಿದ, ಉತ್ತಮವಾದ ಹೆಸರನ್ನಿಟ್ಟು, ಹೆಚ್ಚಾದ ಸಂತೋಷದಲ್ಲಿ ಮುಳುಗಿ, ರಾಜತ್ವಕ್ಕೆ ತಕ್ಕ ಉಪಚಾರಗಳಿಂದ ಸಂರಕ್ಷಿಸುತ್ತ ರಾಜಪುತ್ರನ ಅಭಿವೃದ್ಧಿಯನ್ನೇ ನಿರೀಕ್ಷಿಸುತ್ತ ಇರಲಾಗಿ,

೪೫

ಕಂದ॥ ನರಪತಿಲಕ್ಷಣಲಕ್ಷಿತ ।
ನುರುತರಗಾಂಭೀರ್ಯಧೈರ್ಯಶೌರ್ಯೋದ್ದಾಮಂ ॥
ಸರಸಾಲಾಪಂಬಳೆದಂ ।
ಕರನೊದವಿಸುತಂದುಪೆತ್ತವರ್ಗತಿಮುದಮಂ ॥

ರಾಜಲಕ್ಷಣಗಳಿಂದ ಕೂಡಿಕೊಂಡಿರತಕ್ಕ ಹೆಚ್ಚಾದ ಗಾಂಭೀರ್ಯ ಧೈರ್ಯ ಶೌರ್ಯಗಳಿಂದ ಮಹಾಮಹಿಮೆಯುಳ್ಳ ಮಧುರವಾದ ಮಾತುಗಳನ್ನಾಡುವ ಶ್ರೀ ಕೃಷ್ಣರಾಜಪ್ರಭುವು, ಆಗ ತಾಯಿತಂದೆಗಳಿಗೆ ಹೆಚ್ಚಾದ ಸಂತೋಷವನ್ನು ನಿತ್ಯರೀತಿಯಲ್ಲಿ ಉಂಟುಮಾಡುತ್ತ ಅಭಿವೃದ್ಧಿಯನ್ನು ಹೊಂದಿದನು.

ಗದ್ಯ—ಮೊತ್ತಮೊದಲೊಳ್ ಅಶೇಷಗ್ರಾಂಥಿಕಜ್ಞಾನಮಂ, ಪರಿವಿಡಿಯಿಂ ಕ್ರಿಯಾಜ್ಞಾನಸಮುಚ್ಚಯ ಜನ್ಯಮಾದವಿಶುದ್ಧಾದ್ವೈತಪೂರ್ಣಪ್ರಮೆಯಿಂ ಸನ್ನಿಧಾನಕರ್ತೃಕಪ್ರಭೂತಜ್ಞಪ್ತಿಯಿಂ ತಳೆದದರತ್ತಣಿಂ, ಸಂಕಲಿತಮಪ್ಪ ಪಶುಜ್ಞಾನಮಂತಳ್ದೊಯ್ದು,

ಪ್ರಾರಂಭದಲ್ಲಿ ಸಮಸ್ತವಾದ ಗ್ರಂಥಗಳಲ್ಲಿರುವ ವಿಷಯಗಳ ಜ್ಞಾನವನ್ನೂ, ಕ್ರಮವಾಗಿ ಕ್ರಿಯಾಜ್ಞಾನಸಮುಚ್ಚಯದಿಂದುಂಟಾದ ವಿಶುದ್ಧಾದ್ವೈತಪೂರ್ಣ (ಯಥಾರ್ಥಜ್ಞಾನ) ಪ್ರಮೆಯಿಂದಲೂ ಸನ್ನಿಧಾನಕರ್ತೃಕಪ್ರಭೂತಜ್ಞಪ್ತಿಯನ್ನು ಹೊಂದಿ ಅದರ ದೆಸೆಯಿಂದ, ಸೇರಿಕೊಂಡಿರತಕ್ಕ ಪಶುಜ್ಞಾನವನ್ನು ಹೊಡೆದಟ್ಟಿ,

ಪದ್ಯ—"ಜಂಹಂಸವರ್ಣಂಮ್ಯಕ್ಯಪದಮಾರ್ಜನಂ ಟ್ರಿಹ್ಯತೀಪದಂ । ಬಿಕಾವಾನ್ ಜ್ಞಾನವಿಷಯಃಶಿಂಪ್ರಲಾಪಃಕರಿಷ್ಯತೇ ॥"

ಎಲ್ಲ ವಿಧವ ವಕ್ರತೆಯೂ ನರಕವನ್ನುಂಟುಮಾಡತಕ್ಕದ್ದು, ಸರಳತೆಯು ಪರಬ್ರಹ್ಮನ ಲೋಕವನ್ನು ಹೊಂದಿಸತಕ್ಕದ್ದು. ತಿಳಿಯಬೇಕಾದ ಅಂಶವು ಇಷ್ಟೇ. ಹೆಚ್ಚಾದ, ರೋದನವು (ವಾಗಾಡಂಬರವು) ಏತಕ್ಕೆ ಮಾಡಲ್ಪಡುತ್ತದೆ.

ಎಂಬ ಶಾಸ್ತ್ರೋಕ್ತಿಯಂ ಪರಿಭಾವಿಸಿಯುಂ, ಪಶುಪರ್ಯಾಯನಾಮಿಯಪ್ಪ, ಕುದ್ದಲವುಮುಭಯರಾಜ್ಯಪ್ರಜೆಯಾಗಿ, ಕುಯಲ್ಲಿ, ಹೊಲಬುಗೆಟ್ಟು, ಕೋಲಲಿ, ಬಳಲಿ, ಬಾಳ್ಗೆಟ್ಟು, ಮಡಿವುದಂಕಂಡು ಮರುಮರುಗಿ,

ಎಂಬ ಶಾಸ್ತ್ರದ ಮಾತನ್ನು ಯೋಚಿಸಿಯೂ, ಪಶುಸಮಾನವಾದ ಹೆಸರುಳ್ಳ ಆ ಜೀವಾತ್ಮನು ಶಿವಮಾಯಾ ರಾಜ್ಯಗಳೆರಡರ ಪ್ರಜೆಯಾಗಿ, ಕೂಗಿಕೊಂಡು,

ದಿಗ್ಭ್ರಮೆಹೊಂದಿ, ಬಹಳವಾಗಿ ಸುತ್ತಿ ಆಯಾಸಪಟ್ಟು, ಸರಿಯಾದ ಜೀವನಕ್ರಮವಿಲ್ಲದೆ, ಸಾಯುವುದನ್ನು ಕಂಡು ಹೆಚ್ಚಾಗಿ ಮರುಗಿ,

ಶಮಾದ್ಯಾತ್ಮಗುಣಂಗಳ್ ಶಿವರಾಜ್ಯಲಕ್ಷಣಮೆಂದುಂ, ಕಾಮಾದ್ಯನಾತ್ಮಗುಣಂಗಳ್, ಮಾಯಾರಾಜ್ಯಲಕ್ಷಣಮೆಂದುಮದಕ್ಕಂ ಕಲಿರಾಜ್ಯಂ, ಮೃತ್ಯುರಾಜ್ಯಮೆಂಬಪರ್ಯಾಯನಾಮಂಗಳ್ ಒಳವೆಂದುಂ, ಮಿತ್ರಶತ್ರುವ್ಯೂಹಮಂ ಚೊಕ್ಕಳಿಕೆಯಿನಲವಧರಿಸಿಯು ಮಾರೂಥಂ ಶಿವರಾಜ್ಯಪ್ರಜೆಯೆಂದುಂ, ಪತಿತಂ ಮಾಯಾರಾಜ್ಯಪ್ರಜೆಯೆಂದುಮವಂಗೆ ನಿತ್ಯಜೀವನಮುಮಿವಂಗೆ ನಿತ್ಯಮರಣಮುಂಸಿದ್ಧಮೆಂದು ಮೆಡ್ಡಮೆನಲ್ ನಿರ್ಣಯಿಸಿಯುಂ,

ಶಮವೇ (ಶಾಂತಿಯೇ) ಮೊದಲಾದ ಆತ್ಮಗುಣಗಳು ಶಿವ (ಉತ್ತಮ) ರಾಜ್ಯಲಕ್ಷಣವೆಂದೂ, ಕಾಮವೇ (ಕೆಟ್ಟ ಆಶೆಯೇ) ಮೊದಲಾದ ಅನಾತ್ಮಗುಣಗಳು ಮಾಯಾರಾಜ್ಯಲಕ್ಷಣವೆಂದೂ, ಇವುಗಳಿಗೆ ಕಲಿರಾಜ್ಯ, ಮೃತ್ಯುರಾಜ್ಯವೆಂದು ಇದೇ ಅರ್ಥದ ಬೇರೆ ಹೆಸರುಗಳು ಉಂಟೆಂದೂ,

ಸ್ನೇಹಿತರ ಮತ್ತು ವಿರೋಧಿಗಳ ಸಮುದಾಯವನ್ನು ಸ್ವಚ್ಛವಾದ ರೀತಿಯಲ್ಲಿ ನೋಡಿಯೂ,

ಉತ್ತಮಸ್ಥಿತಿಯಲ್ಲಿರತಕ್ಕವನು ಶಿವರಾಜ್ಯದ ಪ್ರಜೆಯೆಂದೂ. ಮೇಲೆ ಹೇಳಿದ ಗುಣಗಳಿಂದ ಬಿಡಲ್ಪಟ್ಟವನು ಮಾಯಾರಾಜ್ಯ ಪ್ರಜೆಯೆಂದೂ ಅವನಿಗೆ ನಿತ್ಯಜೀವವೂ (ಸುಖವೂ) ಇವನಿಗೆ ನಿತ್ಯಮರಣವೂ (ಕಷ್ಟವೂ) ಸಹಜವಾಗಿದೆಯೆಂದೂ ಮನೋಹರವಾದ ರೀತಿಯಲ್ಲಿ ಗೊತ್ತುಮಾಡಿಯೂ,

"ದುಷ್ಟಸ್ಯಶಿಕ್ಷಣಂರಕ್ತಿರ್ಭಕ್ತಿಶ್ಶಿಷ್ಟಸ್ಯರಕ್ಷಣಂ । ಶಕ್ತಿಭಕ್ತ್ಯೋರ್ನಭೇದೋಸ್ತಿ ತತ್ತ್ವದೃಷ್ಟ್ಯಾವಿಚಾರಿತೇ ॥"

ಸಶೇಷ.

ಶ್ರೀ ಜಗದ್ಗುರು ಗಂಗಾಧರ ಸಂಸ್ಕೃತಕಾಲೇಜು, ಹುಬ್ಬಳ್ಳಿ.

ಈ ಕಾಲೇಜಿನಿಂದ ಈಸಾರೆ ಕಲಕತ್ತಾ ಪರೀಕ್ಷೆಗೆ ಸಾಹಿತ್ಯ ಮಧ್ಯಮದವರು 2, ಆದ್ಯದವರು 2 ಈ 4 ರಲ್ಲಿ 3 ವಿದ್ಯಾರ್ಥಿಗಳು ಪಾಸಾಗಿರುತ್ತಾರೆ. ಅದರಲ್ಲಿಯೂ ಒಬ್ಬರು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ತಾ॥ 12-6-32 ರಲ್ಲಿ ಕಾಲೇಜವು ಪ್ರಾರಂಭವಾಗಿರುವದು. ಇಲ್ಲಿ ನ್ಯಾಯ, ವ್ಯಾಕರಣ, ಸಾಹಿತ್ಯ, ವೇದಾಂತ, ಉಪನಿಷತ್, ಪುರಾಣ, ಸಾಂಖ್ಯ ಮೊದಲಾದ ಪರೀಕ್ಷೆಗಳ ಅಭ್ಯಾಸವು ನಡೆಯುವದಲ್ಲದೆ ಹಿಂದಿ, ಇಂಗ್ಲಿಷು, ಭಾಷಾಜ್ಞಾನದ ಮಟ್ಟಿಗೆ ಕಲಿಸಲ್ಪಡುವವು. ಪುರಾಣ ಕೀರ್ತನಕ್ಕೆ ಬೇಕಾಗುವ ರಾಗದ ಮಾಹಿತಿಯದೆಸೆಯಿಂದ ಸಂಗೀತ ವ್ಯವಸ್ಥೆಯು ಮಾಡಲ್ಪಟ್ಟಿರುತ್ತದೆ. ಸದರಿ ಕಾಲೇಜಿಗೆ ಸೇರಲಿಚ್ಛಿಸುವವರು ತೀವ್ರವೇ ಬರತಕ್ಕದ್ದು.

ಪ್ರಿನ್ಸಿಪಾಲ ಚಂದ್ರಶೇಖರಶಾಸ್ತ್ರಿಗಳು, ವ್ಯಾಕರಣತೀರ್ಥ
ಹೊಳಲು, ಹುಬ್ಬಳ್ಳಿ.

ಕಾಶಿ ಶ್ರೀ ಜಗದ್ಗುರು ಮುರುಘಾಮಠದ ಜಯದೇವ ಬೋರ್ಡಿಂಗಿನ

ವಿದ್ಯಾರ್ಥಿಗಳ 1932 ನೇ ಇಸವಿಯ ಪರೀಕ್ಷೆಯ ಫಲಿತಾಂಶ.

1. ಗುರುಸಿದ್ಧಶಾಸ್ತ್ರಿ ಪೌರಾಣಿಕಮಠ (ಮಥುರಯೂನಿವರ್ಸಿಟಿ) ಸಾಹಿತ್ಯ ಆಚಾರ್ಯ. 2. ವಿರೂಪಾಕ್ಷ ಶಿವಾಚಾರ್ಯ ರೋಣ (ಮಥುರಯೂನಿವರ್ಸಿಟಿ) ಸಾಹಿತ್ಯ ಆಚಾರ್ಯ. 3. ಶಂಭುಲಿಂಗಶಾಸ್ತ್ರಿ ಭೀಮನಹಳ್ಳಿ, (ಕಲಕತ್ತ ಯೂನಿವರ್ಸಿಟಿ) ಸಾಹಿತ್ಯತೀರ್ಥ. 4. ಶಿವಕುಮಾರ ಶರ್ಮ ಅಮ್ಮಿನಗಿ (ಕಲಕತ್ತ ಯೂನಿವರ್ಸಿಟಿ) ಸಾಹಿತ್ಯತೀರ್ಥ. 5. ಜಯದೇವಶರ್ಮ ಚಿತ್ರದುರ್ಗ (ಬನಾರಸ್ ಕ್ವೀನ್ಸ್‌ಕಾಲೇಜು) ವ್ಯಾಕರಣ ಮಧ್ಯಮ ಸಂಪೂರ್ಣ. 6. ಶಿವಕುಮಾರ ಪಟ್ಟದಾರ್ಯ ಕೋಟಬಾಗಿ, (ಬನಾರಸ್ ಕ್ವೀನ್ಸ್‌ಕಾಲೇಜು) ವ್ಯಾಕರಣ ಮಧ್ಯಮ ಸಂಪೂರ್ಣ. 7. ಮೃತ್ಯುಂಜಯದೇವರು ಮುಧೋಳ (ಬನಾರಸ್ ಕ್ವೀನ್ಸ್‌ಕಾಲೇಜು) ಸಾಹಿತ್ಯ ಮಧ್ಯಮ. 8. ಕಾಶೀನಾಥಶಾಸ್ತ್ರಿ ಖಾನಾಪುರ (ಕಲಕತ್ತ ಕ್ವೀನ್ಸ್ ಕಾಲೇಜು) ವ್ಯಾಕರಣ ಮಧ್ಯಮ. 9. ಪಟ್ಟದಾರ್ಯ ಬೆಂಡಿಗೇರಿ (ಕಲಕತ್ತ ಕ್ವೀನ್ಸ್‌ಕಾಲೇಜು) ಸಾಹಿತ್ಯ ಮಧ್ಯಮ. 10. ಗುರುಸಿದ್ಧದೇವರು ಕಿತ್ತೂರು (ಕಲಕತ್ತ ಕ್ವೀನ್ಸ್‌ಕಾಲೇಜು) ಸಾಹಿತ್ಯ ಮಧ್ಯಮ. 11. ಪಟ್ಟದ್ದೇವರು ಮುತನಾಳ (ಕಲಕತ್ತ ಕ್ವೀನ್ಸ್‌ಕಾಲೇಜು) ಸಾಹಿತ್ಯ ಮಧ್ಯಮ. 12. ಮುರುಘೇಂದ್ರ ಬ್ರಹ್ಮಚಾರಿ ಕುಂಭಕೋಣ (ಕ್ವೀನ್ಸ್‌ಕಾಲೇಜು) ಪ್ರವೇಶಪರೀಕ್ಷೆ. 13. ಶಿವಮೂರ್ತಿಶರ್ಮ ಹೆಬ್ಬಾಳು (ಕ್ವೀನ್ಸ್‌ಕಾಲೇಜು) ಪ್ರವೇಶಪರೀಕ್ಷೆ. 14. ಷಣ್ಮುಖಶರ್ಮ ಪುರಾಣೀಕ (ಹಿಂದು ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್.

ಅಂತು 14 ಜನ ವಿದ್ಯಾರ್ಥಿಗಳು ಈ ಬೋರ್ಡಿಂಗಿನಿಂದ ಪರೀಕ್ಷೆಗೆ ಕುಳಿತಿದ್ದು 14 ಜನರೂ ಉತ್ತೀರ್ಣರಾದ್ದಲ್ಲದೆ, ಪಂ. ಗುರುಸಿದ್ಧಶಾಸ್ತ್ರಿಗಳು ಮಥುರಾ ಯೂನಿವರ್ಸಿಟಿಯ "ಸಾಹಿತ್ಯ ಆಚಾರ್ಯ" ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸಿನಲ್ಲಿಯೂ, ಪಂ. ಕಾಶಿನಾಥಶಾಸ್ತ್ರಿಗಳು ವ್ಯಾಕರಣ ಮಧ್ಯಮದಲ್ಲಿ ಫಸ್ಟ್‌ಕ್ಲಾಸಿನಲ್ಲಿಯೂ ಇನ್ನುಳಿದೆಲ್ಲಾ ವಿದ್ಯಾರ್ಥಿಗಳು ಸೆಕೆಂಡು ಕ್ಲಾಸಿನಲ್ಲಿಯೂ ಉತ್ತೀರ್ಣರಾಗಿರುತ್ತಾರೆ. ಇದರಂತೆ ಈ ಬೋರ್ಡಿಂಗು ಉತ್ತರೋತ್ತರ ಅಭಿವೃದ್ಧಿಹೊಂದಿ ಸಮಾಜ ಶ್ರೇಯಸ್ಸಾಧಕವಾಗಲೆಂದೂ, ಇದಕ್ಕೆ ಸಮಾಜದವರ ಪ್ರೋತ್ಸಾಹವು ದೊರೆಯಲೆಂದು ಹಾರೈಸುತ್ತೇವೆ.

ಮುಪ್ಪಣ್ಣ, ಚ. ಬೆಳ್ಳಿ, ಸೆಕ್ರೆಟರಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ, ಬೆಂಗಳೂರು.

ಲಗ್ನ ಮೊದಲಾದ ಶುಭಕಾರ್ಯಗಳಲ್ಲಿ ತೆಗೆದು ಕಳುಹಿಸಿದ ಫಂಡಿನ ಹಣದ ತಪಸೀಲು—

ಮ॥ ಗಳಾದ

(1) ಬಾಣಾವಾರದ ಅತ್ತಿಗುಪ್ಪೆ ನಂಜುಂಡಪ್ಪನವರ ಮಗ ಚಿ॥ ರುದ್ರಪ್ಪನವರಿಗೂ ಕೃಷ್ಣರಾಜಪೇಟೆ ಶೆಟ್ಟರು ಸಿದ್ಧಲಿಂಗಯ್ಯನವರ ಪುತ್ರಿ ಚಿ॥ ಸೌ॥ ಗೌರಮ್ಮನಿಗೂ ನಡೆದ ಲಗ್ನದಲ್ಲಿ ಕೃಷ್ಣರಾಜಪೇಟೆ ಮಿಡ್ಲ್ ಸ್ಕೂಲು ಮಾಸ್ಟರ್ ಹೆಚ್. ಹೆಚ್. ಶಿವಯ್ಯನವರ ಮೂಲಕ 2 ರೂ. (2) ಅರಸೀಕೆರೆ ಎಂ. ಚೆನ್ನಬಸಪ್ಪನವರ ಕುಮಾರ ಚಿ॥ ಎಂ. ಸಿ. ಬಸಪ್ಪನವರಿಗೂ ಶಿಲ್ಪನಗೆರೆ ಸಿದ್ಧಲಿಂಗಪ್ಪನವರ ಕುಮಾರಿ ಚಿ॥ ಸೌ॥ ಮಾದಮ್ಮನಿಗೂ ನಡೆದ ಲಗ್ನದಲ್ಲಿ ಎಂ. ಚೆನ್ನಬಸಪ್ಪನವರಿಂದ 2 ರೂ. (3) ಮೈಸೂರು ಕೃಷ್ಣರಾಜಮೊಹಲ್ಲಾ ದನಸಿನಮಂಡಿ ವೀರಭದ್ರಪ್ಪನವರ ಅಣ್ಣಂದಿರಾದ ಲೇಟ್ ಸಿ. ದಾಸಪ್ಪನವರ ತೃತೀಯಪುತ್ರಿ ಚಿ॥ ಸೌ॥ ಪಾರ್ವತಮ್ಮನಿಗೂ ಬೆಂಗಳೂರು ದಂಡು ಹಲಸೂರು ದನಸಿನಮಂಡಿ ಕೆ. ನಾಗಪ್ಪನವರ ಜ್ಯೇಷ್ಠಪುತ್ರ ಚಿ॥ ಸೋಮಪ್ಪನವರಿಗೂ ನಡೆದ ಲಗ್ನದಲ್ಲಿ ವಧುವಿನ ಕಡೆಯಿಂದ 10 ರೂ. ವರನ ಕಡೆಯಿಂದ 10 ರೂ. ಜುಂಲಾ ಬೆಂಗಳೂರು ಜವಳಿ ಅಂಗಡಿ ಬಿ.ಎಸ್. ಕಪ್ಪಣ್ಣನವರ ಮೂಲಕ 20 ರೂ. (4) 1. ಕೋಲಾರದ ಚಿಕ್ಕಚೆನ್ನಂಜಪ್ಪ ಶೆಟ್ಟರ ಮನೆಯಲ್ಲಿ ನಡೆದ ಹೊಸಕೋಟೆ ಮಲ್ಲಯ್ಯನವರ ಶಾಂತಿಪ್ರಸ್ತದಲ್ಲಿ ವಧೂವರರಿಂದ 3 ರೂ. ಫಲದಕ್ಷಿಣೆ ಬಾಬತು 2 ಆಣೆ, 2. ಕೆನಮಂಗಲದ ನಂಜುಂಡಪ್ಪನವರ ಮನೆಯಲ್ಲಿ ನಡೆದ ಮಾಗಡಿ ಯಡಿಯೂರಪ್ಪನವರ ಶಾಂತಿಪ್ರಸ್ತದಲ್ಲಿ ವಧೂವರರ ಕಡೆಯಿಂದ 3 ರೂ. 3. ಕಾನಕಾನಹಳ್ಳಿ ಮಿಠಾಯಿ ಅಂಗಡಿ ರೇವಣಸಿದ್ಧಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ವಧೂವರರ ಕಡೆಯಿಂದ 3 ರೂ. ಜುಂಲಾ ಬೆಂಗಳೂರು ಮಾಮೂಲ್ ಪೇಟೆ ಅಡಿಕೆ ಅಂಗಡಿ ಕೆ. ಬಿ. ದೊಡ್ಡರಾಜಪ್ಪನವರ ಮೂಲಕ ರೂ. 9-2-0. (5) ಮಾಗಡಿ ತಾ॥ ಬಂಡೆಮಠದಲ್ಲಿ ನಡೆದ ಲಗ್ನದಲ್ಲಿ ಶ್ರೀ ಚರಮೂರ್ತಿ ತೋಂಟದಾರ್ಯಸ್ವಾಮಿಗಳಿಂದ ಬೆಂಗಳೂರು ರುದ್ರಮುನಿಯಪ್ಪನವರ ಮೂಲಕ 4 ರೂ. (6) ನೇಮತಿ ಸೋಗಿ ವೀರಭದ್ರಪ್ಪನವರ ಮಗ ಚಿ॥ ಈಶ್ವರಪ್ಪನವರಿಗೂ ಬೆಂಗಳೂರು ಅರಳೆಪೇಟೆ ಎಸ್. ರಾಚಪ್ಪನವರ ಪುತ್ರಿ ಚಿ॥ ಸೌ॥ ಮಹಾದೇವಮ್ಮನಿಗೂ ನಡೆದ ಲಗ್ನದಲ್ಲಿ ವಧೂವರರ ಕಡೆಯಿಂದ ತೆಗೆದದ್ದು ಗೊಲ್ಲಹಳ್ಳಿ ರುದ್ರಪ್ಪನವರ ಮೂಲಕ 3 ರೂ. (7) ಬೆಂಗಳೂರು ಅಕ್ಕಿಪೇಟೆ ತಾವರೆಕೆರೆ ಬಸಪ್ಪನವರ ದ್ವಿತೀಯಪುತ್ರಿ ಚಿ॥ ಸೌ॥ ಚೆನ್ನಬಸಮ್ಮನ ಲಗ್ನದಲ್ಲಿ ವಧೂವರರ ಕಡೆಯಿಂದ ದೇ॥ ಶೆಟ್ಟರು ಸಿದ್ಧಬಸಪ್ಪ ಶೆಟ್ಟರ ಮೂಲಕ 5 ರೂ. (8) ಆನೇಕಲ್ ತಾ॥ ಜಿಗಣಿ ಹೊನ್ನಗಂಗಪ್ಪನವರ ಕುಮಾರ್ತಿ ಚಿ॥ ಸೌ॥ ಹೊನ್ನಮ್ಮನ ಲಗ್ನದಲ್ಲಿ ವಧೂವರರ ಕಡೆಯಿಂದ ಬೆಂಗಳೂರು ಅರಳೆಪೇಟೆ ಯಜಮಾನ್ ಗಂಗಪ್ಪನವರ ಮೂಲಕ 5 ರೂ. (9) ಬೆಂಗಳೂರು ಸುಲ್ತಾನ್‌ಪೇಟೆ ಯೂನಿವರ್ಸಲ್ ಪವರ್ ಪ್ರೆಸ್ ಶ್ರೀಕಂಠಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ತೆಗೆದದ್ದು ದೇ॥ ಯಜಮಾನ್ ಪುಟ್ಟಪ್ಪನವರ ಮೂಲಕ 3 ರೂ. (10) ಕೋಲಾರದಲ್ಲಿರುವ ಮಾಲೂರು ಶಂಕರಯ್ಯನವರ ಪುತ್ರ ಚಿ॥ ಮಲ್ಲಪ್ಪನವರಿಗೂ ಮಾಲೂರು ಪುಟ್ಟಣ್ಣನವರ ಮೊಮ್ಮಗಳು ಚಿ॥ ಸೌ॥ ಪಾರ್ವತಮ್ಮನಿಗೂ ನಡೆದ ಲಗ್ನದಲ್ಲಿ ವರನ ಕಡೆಯಿಂದ 5 ರೂ, ವಧುವಿನಕಡೆ ಎಂ. ಪಿ. ಮಲ್ಲೇಶಯ್ಯನವರಿಂದ 10 ರೂ. ಜುಂಲಾ ಬೆಂಗಳೂರು ಮೈಸೂರು ಬ್ಯಾಂಕ್ ಕೆ. ವೈ. ಮಲ್ಲಶೆಟ್ಟಪ್ಪನವರ ಮೂಲಕ 15 ರೂ. (11) ಮಾಗಡಿ ತಾ॥ ತಾವರೆಕೆರೆ ಕರಿಬಸಪ್ಪನವರ ಬಸವರಾಜಪ್ಪನವರ ಕುಮಾರ ಚಿ॥ ಶಿವಗಂಗಪ್ಪನೆಂಬ ವರನಿಗೂ ಮಾಗಡಿ ಕೆಂಬಿ ರುದ್ರಪ್ಪನವರ ಮಲ್ಲಿಕಾರ್ಜುನಯ್ಯನವರ ಕುಮಾರ್ತೆ ಚಿ॥ ಸೌ॥ ಭ್ರಮರಾಂಬನೆಂಬ ವಧುವಿಗೂ ನಡೆದ ಲಗ್ನದಲ್ಲಿ ವರನಕಡೆಯಿಂದ 5 ರೂ, ವಧುವಿನ ಕಡೆಯಿಂದ 1 ರೂ. ಜುಂಲಾ ಶೆಟ್ಟರ ಕರಿಬಸಣ್ಣನವರಿಂದ 6 ರೂ. ಜುಂಲಾ ರೂ. 74-2-0.

ಎಂ. ನಾಗಪ್ಪ, ಆ॥ ಸೆಕ್ರೆಟರಿ,
ಮೈ. ವೀ. ವಿದ್ಯಾಭಿವೃದ್ಧಿ ಫಂಡು, ಸಂಘ.

ಹಸರ್ ಕಿತ್ತಳೆಗಿಡಗಳು.

ನಮ್ಮಲ್ಲಿ 2 ಅಡಿಯಿಂದ 4 ಅಡಿ ವರೆಗೆ ಯತ್ತರವಿರುವ ಬೀಜದ ಹಸರ್ ಕಿತ್ತಳೆ ಗಿಡಗಳು, 100 ಗಿಡಗಳಿಗೆ 10 ರೂ. ಗಳಂತೆ ಕ್ರಯಕ್ಕೆ ದೊರೆಯುತ್ತವೆ. ಅಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿರಿ.

ವಿಳಾಸ:-ಜಂಗಮರ ಸಣ್ಣಯ್ಯ ಯಾನೆ ಕರಿಬಸವಯ್ಯ,
2 ಗುಡಗಳಲೆ ಗ್ರಾಮ, ಶನಿವಾರ ಸಂತೆ ಪೋಸ್ಟು, ಕೊಡಗು.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ. ನಾರಿನವರು ಜರೂರ ತರಿಸಿಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

10 M. C

೧೯೩೨ ನೆಯ ಇಸವಿ ಜೂನ್ ತಾ॥ ೨೭ ರಿಂದ ಜುಲೈ ತಾ॥ ೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ ಅಂಗಿರಸನಾಮಸಂವತ್ಸರದ ಜ್ಯೇಷ್ಠ ಬಹುಳ ನವಮಿಯಿಂದ ಜ್ಯೇಷ್ಠ ಬಹುಳ ಅಮಾವಾಸ್ಯೆ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ಮಾಸ
27	ಸೋಮ	ನವ	29-6	ರೇವ	26-10	14
28	[1] ಮಂಗಳ	ದಶ	33-55	ಅಶ್ವಿ	32-33	15
29	ಬುಧ	ಏಕಾ	39-5	ಭರ	39-10	16
30	ಗುರು	ದ್ವಾದ	43-55	ಕೃತ್ತಿ	45-33	17
1	[2] ಶುಕ್ರ	ತ್ರಯೋ	48-7	ರೋಹಿ	51-19	18
2	ಶನಿ	ಚತು	51-26	ಮೃಗ	56-13	19
3	ಭಾನು	ಅಮಾ	53-41	ಆರ್ದ್ರಾ	60	20

(1) ಮಳೆನಕ್ಷತ್ರ-ಆರ್ದ್ರಾ ೩ ನೆಯ ಪಾದ. (2) ಮಳೆನಕ್ಷತ್ರ-ಆರ್ದ್ರಾ ೪ ನೆಯ ಪಾದ.

ಮೈಸೂರು: ಶ್ರೀ. ವಿರೂಪಾಕ್ಷಯ್ಯನವರಿಂದ ಕರ್ರ್ ಎಲೆಕ್ಟ್ರಿಕ್ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಮುದ್ರಿತವಾಯಿತು.

ಮೈಸೂರ್ ಸ್ಟಾರ್

REG. NO. M. 124.

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಸೂರಪುರೀಶಾರಾ ಪರಮಧಿಗತರಾಜಮಂಡಲಹಿತ್ಯಾ । ಘನಪಥಕೃತಾವತಾರಾ ಪಕ್ವಜ್ಞ ನಹ್ಯತ್ಯ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ತೆಯೊಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೨ ನೆಯ ಇಸವಿ ಜುಲೈ ತಾರೀಖು ೪ ನೆಯ ಸೋಮವಾರ [ಸಂಚಿಕೆ ೨೭

MYSORE SANDALWOOD OIL
Distilled in
GOVERNMENT FACTORIES

GUARANTEED B.P.P.J., & AM 4. P. STANDARDS.

PROVIDES

Excellent Base for the manufacture of Soaps, Perfumes, and other Toilet preparations of the Highest quality.

USED ALL THE WORLD OVER.

BUY A BOTTLE TO-DAY.

Available in Sealed Aluminium Bottles.

MYSORE GOVERNMENT SANDALWOOD OIL FACTORY, BANGALORE.

6 [50—1]

THE MYSORE AGRICULTURAL SCHOOL, HEBBAL, BANGALORE.

Notification No. A. S. M. Gl. 225 of 31-32, dated 21st June 1932.

In supersession of the previous notification No. A. S. M. Gl. 225 of 31—32, dated 22nd April 1932 published in the Mysore Gazette, Part III, Pages 798-799 dated 19th May 1932, the time for sending up the applications for admissions to the Mysore Agricultural School at Hebbal, Bangalore, has been extended to 10th July 1932 and that of the entrance examination has been postponed to 17th July 1932 at 12 noon, as the results of the S. S. L. C. Examination have not yet been declared.

V. K. BADMI,
Principal.

[3—2]

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕರ್ರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸಹ.
ವೀರಶೈವ ಶಿವಪೂಜಾವಿಧಿ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿ	೦— ೮—೦	೦—೧೪—೦
ಷಟ್ಸ್ಥಲವಿದ್ಯಾ	೦— ೪—೦	೦— ೯—೦
ಚಾರುಶೀಲೆಚರಿತ್ರೆ	೦— ೫—೦	೦—೧೦—೦
ಹರಿಬಾಸಿ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ರುದ್ರಗುಣಶಂಕರೀಸ್ತವಶತಕ	೦— ೧—೦	೦— ೬—೦
ಬಸವೇಶ್ವರನವನ	೦— ೮—೦	೦—೧೩—೦
ಸಟೀಕ ತರ್ಕಾಟೀಕಶಬ್ದಮಂಜರಿ	೦— ೮—೦	೦—೧೩—೦
ಸಟೀಕ ಶತಕತ್ರಯ	೧— ೦—೦	೧— ೬—೦

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ. **ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ** ರಜಿ] ವಜ್ರಾಂಗ ಸುಂದರಪಾಕದ. [ಷ್ಟರ ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು, ನಿದ್ರೆ ಕಡಿಮೆ ಬರೋಣ, ಯಾವದೇಶರದ ರೋಗದಿಂದ ಎಲ್ಲ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ಶರೀರ ತರುಣರಂತೆ ಕಾಂತಿಯುಕ್ತ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತನ್ನ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ಒಂದು ಡಬ್ಬಿಗೆ ೫। ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೩೨ ವನಸ್ಪತಿಗಳ ಹೆಸರು ಮತ್ತು ಬಳಸುವ ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೇ ಚೂರ್ಣ.

ಎಲ್ಲ ಬಗೆಯ ಸೆರಗು, ಮುಟ್ಟಿಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಟ್ಟಿಚೆಟ್ಟು ಆಗೋಣ, ಮುಟ್ಟಿಚೆಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ಕಡಿಮೆ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋದಾಗುವದಿಲ್ಲ ಮತ್ತು ಬಸರಿನಸ್ಥಿತಿಯಲ್ಲಿ ಹೆಚ್ಚು ಸಂಕಟಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಜೆತನವುಂಟೋ, ಇಂಥ ಜೀವೆ ಕಾರಣದಿಂದ ಸಂತತಿ ಇಚ್ಛಾ ಯಾರಿಗೆ ಇಲ್ಲವೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. ಶರೀರದಲ್ಲಿಯೂ ಸಂಸಾರ ಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆ ವೇಳೆಗೆ ಮುಟ್ಟಿಚೆಟ್ಟು ಆಗುವದು ಶುರು ಇದ್ದು ಗರ್ಭಧಾರಣ ಬಂದು ಹೋಗುವದು. ಹಿಂದಿನಂತೆ ವಿನಿಮಯಮಾಡಿದರೂ ಸುರು ಅಗುವದಿಲ್ಲ ಹೀಗೆ ಸರ್ವಾಶ್ರಿ ಅದೆ. ಪೂರ್ಣವಿಚಾರ ಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣವಾದ ಒಂದು ಡಬ್ಬಿಗೆ ೭ ರೂ. ಟ. ಖ. ೮ ಆಣೆ. ಮತ್ತು ಕಡೆಗಾದ ೪ ನೇ ದಿವಸ ೬೦ ಗ್ರೆ ಹಳೆ ೧೧ರ ಕಡಿತ ಕಡಿಮೆಯಾಗಬೇಕು. ೫ ನೇ ದಿವಸದಿಂದ ಮುಂಜಾನೆ ೧, ಗುಳಿಗೆ ಮಧ್ಯಾಹ್ನಕ್ಕೆ ೧, ಗುಳಿಗೆ ರಾತ್ರಿ ಊಟವಾದ ಅನಂತರ ೧ ಗುಳಿಗೆ ಹಳೆ ೧೧ರ ಕಡಿತ ಸುಂಟಬೇಕು. ಪಥ್ಯ ಸಾದಾ. ಕೇಳು ನಮ್ಮ ಕಡೆಗೆ ಇರುವ ಸ್ತ್ರೀ ಡಾಕ್ಟರಳ ಸ್ಥಿತಿವಾದಿ ತರಿಸಿಕೊಳ್ಳಿರಿ.

[10—10]

ಪತ್ತಾ ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜ. ಎಂ. ಎಸ್. ಎಂ.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

(Registerd Trade Mark)

ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—ಶಿರಶೂಲೆ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಕಾಣುವ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಶ್ವಾಸ ಮೆಲ್ಲಗೆ ೯೬ ವ್ಯಾಧಿಗಳನ್ನೂ ಸ್ವಸ್ಥ ಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಪಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಸ್ವಗೃಹದಲ್ಲಿ ಸುಂಟುಂಟು ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ನೀವೆ ಪರೀಕ್ಷಿಸಿ ಕಳುಹಿಸಬಹುದು.

ಒಂದು ಡಜನ್ ಬಾಟಲಿ ಕ್ರಯ ರೂ. ೦—೪—೦. ವಿ. ಪಿ. ೦—೭—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೦ ಅಣೆ.

ಸಮೀಪದಲ್ಲಿರುವ ನಮ್ಮ ಏಜಂಟರಲ್ಲಿ, ಅಂಗಡಿಗಳಲ್ಲಿ, ವಾಚಾಲಿಯ ಸಂತೆ ಕಡೆಯೂ.

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[10—10] ಪೋ. ಬಾ. ೫೫೧, ಮದರಾಸು.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಜುಲೈ ತಾ|| ೪ ನೆಯ ಸೋಮವಾರ.

R. T. C. DISSOLVED

Whatever doubts the pessimists entertained about the outcome of the Round Table Conference few were prepared for its dissolution in such an unceremonious manner as Sir Samual Hoare, the Secretary of State for India did at the House of Commons. When H. E. the then Viceroy Lord Irwin referred to the formation of the Round Table Conference he made it quite certain that it should enjoy the fullest freedom as regards its functions, and that its conclusions would form the basis of the proposals which would be later submitted to the Parliament. The Prime Minister in his speech on 1st December 1931 when he proposed setting up expert committees to work in India on questions of Finance, Franchise and Indian States, with a Consultative Committee expressly stated that in the end they would have to meet again "for final review of the whole scheme." Further, when the approval of the Indian policy was sought at the hands of the Parliament, the Premier assured that the R. T. C. would be continued for final review. The reports of the three committees are ready and R. T. C. should have met without delay if the assurances of the British Government had any value. But what has happened now. Sir Samual Hoare has sung the funeral song of the R. T. C. abandoned the co-operation of Indians, and proposes a new scheme which provides for (1) a single Bill for autonomcus constitution of provinces and for Federation of Provinces and States, (2) a Joint Select Committee of the two Houses to draft the Bill, (3) the Consultative Committee to formulate its decisions on various matters yet undecided by the R. T. C. committees and (4) the summoning of a body of Indians for further discussion in London with the Joint Select Committee if the Consuitative Committee cannot formulate definite proposals by that time. This means definitely that the policy of arriving at the largest possible agreement between Britain, Brtish India and the Indian States by joint discussion which the R. T. C. stood for is given up. Whatever justification the British Government can now advance in favour of their new policy, there can be no doubt that they have committed a most serious breach of its promise and prejudiced seriously its reputation in the eyes of the moderate opinion of India which had still some faith in its sense of fairness and honour. It evidently means that the characterisation of the R. T. C. as a bid debating society by Mahatma Gandhi has only proved too true. The British were not prepared to attach any more value to its conclusions and today the whole of the R. T. C. deliberations only looks like a big tamash and something worse, a costly and wasteful tamash. All that we can say is that we were not prepared for such a performance on the part of the British Cabinet, inspite of the fact that the Conservatives who are virtually in power in the National Government were exercising their own influence to wreck the R. T. C. method. We are not inclined to examine the definite proposals of the Secretary of State in detail. The proposal to hold up the All-India Federation till the units are prepared actually to federate has given rise to a great deal of apprehension as that would mean liberty to provinicial units as well to join or not which was the last thing India bargained for. The voluntary basis for joining the Fediration can only be made applicable to the Indian States but never to British India. **There is also the fear that though the Bill is a single one, the time between the introduction of provincial autonomy and of the Federal Government would be too long and in fact the All-India Federation would not come about for long as innumerable difficulties would crop up meantime. It looks as though the** National Government is not going to advance in practice much beyond the proposals of the Simon Commission. We do hope that the British statesmanship is not dead, for any such reactionary tendency will only weaken the link between India and Britain and surely the latter stands to suffer more by such weakening.

ಚಕ್ರಗೋಷ್ಠಿಯ ಅವಸಾನ.

ಚಕ್ರಗೋಷ್ಠಿ ಅಥವಾ ರೌಂಡುಟೇಬಿಲು ಕಾನ್ಫರೆನ್ಸಿನ ಪರಿಣಾಮವು ಹೇಗಾಗುತ್ತದೋ ಎಂದು ಕೆಲರು ಅನುಮಾನಗ್ರಸ್ತರಾಗಿರುವಲ್ಲಿ ಮತ್ತೆ ಕೆಲರು ಅದನ್ನು ನಾಶಗೊಳಿಸಲು ಸನ್ನದ್ಧರಾಗಿದ್ದರು. ಅದರಂತೆಯೇ ಕಳೆದ ಹೌಸು ಆಫ್ ಕಾಮನ್ಸ್ ಸಭೆಯಲ್ಲಿ ಆದಕ್ಕೆ ಭಾರತ ಮಂತ್ರಿಯವರಿಂದ ಅವಸಾನಪ್ರಾಪ್ತವಾಯಿತು. ಈ ರೌಂಡುಟೇಬಿಲು ಕಾನ್ಫರೆನ್ಸಿನ ರಚನೆಯ ಕಾಲದಲ್ಲಿ ವೈಸ್ರಾಯರಾಗಿದ್ದ ಲಾರ್ಡ್ ಇರ್ವಿನ್ ರವರು ಈ ಸಭೆಗೆ ಕಾರ್ಯನಿರ್ವಹಣದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದೂ, ಅದರ ತೀರ್ಮಾನವು ಕಡೆಯಲ್ಲಿ ಪಾರ್ಲಿಮೆಂಟಿಗೆ ಕಳುಹಲ್ಪಡುವ ಸೂಚನೆಗಳಿಗೆ ಮುಖ್ಯಾಧಾರವಾಗಿರಬೇಕೆಂದೂ ಖಚಿತವಾಗಿ ಹೇಳಿದ್ದರು. ಆರ್ಥಿಕ, ಚುನಾವಣೆ ಮತ್ತು ದೇಶೀಯ ಸಂಸ್ಥಾನಗಳ ಸಂಬಂಧವಾದ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಮೂರು ಸಮರ್ಥ ಕಮಿಟಿಗಳನ್ನು ಮತ್ತು ಒಂದು ಆಲೋಚನ ಕಮಿಟಿಯನ್ನು ರಚಿಸುವುದರ ವಿಚಾರವಾಗಿ ಪ್ರಧಾನ ಮಂತ್ರಿಗಳು 1931 ನೆಯ ಡಿಸೆಂಬರ್ ತಾ|| 1 ರಲ್ಲಿ ಭಾಷಣಮಾಡುವಾಗ್ಗೆ, "ರಾಜ್ಯಾಂಗ ರಚನೆಯ ಸಂಪೂರ್ಣ ವಿಧಾನವನ್ನು ಕಡೆಯಲ್ಲಿ ಪುನರ್ವಿಮರ್ಶಿಸಿ ನಿರ್ಧರಿಸಲು ಆರ್. ಟಿ. ಸಿ. ಪುನಃ ಸಮಾವೇಶವಾಗಬೇಕು" ಎಂದು ಹೇಳಿದ್ದರು. ಅಷ್ಟೇ ಅಲ್ಲದೆ ಭಾರತ ನೀತಿಯ ವಿಚಾರದಲ್ಲಿ ಪಾರ್ಲಿಮೆಂಟಿನವರ ಅನುಮತಿಯನ್ನು ತೆಗೆದುಕೊಳ್ಳುವ ವೇಳೆಯಲ್ಲಿ ರೌಂಡುಟೇಬಿಲು ಸಭೆಯು ಕಡೆಯ ನಿರ್ಧರವಾಗುವವರೆಗೂ ನಡೆದುಕೊಂಡು ಬರುವುದೆಂದು ಪ್ರಧಾನಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದರು. ಬ್ರಿಟಿಷ್ ಪ್ರಭುತ್ವದವರ ಭರವಸೆಗೆ ಬೆಲೆಯಿರುವ ಪಕ್ಷದಲ್ಲಿ ಮೂರು ಕಮಿಟಿಯವರ ವರದಿಗಳು ಸಿದ್ಧವಾಗಿರುವುದರಿಂದ ಅವನ್ನು ಪುನರ್ವಿಮರ್ಶಿಸಿ ನಿರ್ಧರಿಸಲು ರೌಂಡುಟೇಬಲು ಕಾನ್ಫರನ್ಸು ತಾಮಸವಿಲ್ಲದೆ ಸಮಾವೇಶವಾಗಬೇಕು. ಆದರೆ ಈಗ ಭಾರತ ಮಂತ್ರಿಗಳಾದ ಸರ್ ಸ್ಯಾಮ್ಯುಲ್ ಹೋರ್ ರವರು ಸಾವೇರಿರಾಗವನ್ನು ಹಾಡಿರುವರು ಮತ್ತು ಪ್ರಾಂತಿಕ ಸ್ವರಾಜ್ಯ ಮತ್ತು ಪ್ರಾಂತಗಳ ಹಾಗೂ ಸಂಸ್ಥಾನಗಳ ಫೆಡರೇಷನ್ನಿನ ರಚನೆಗಾಗಿ ಒಂದು ಮಸೂದೆ ತಯಾರಾಗುವುದು. (2) ಈ ಮಸೂದೆಯನ್ನು ತಯಾರಿಸಲು ಕಾಮನ್ಸ್ ಮತ್ತು ಲಾರ್ಡ್ಸ್ ಸಭೆಗಳಿಂದ ಚುನಾಯಿಸಲ್ಪಟ್ಟ ಮೆಂಬರುಗಳಿಂದ ಕೂಡಿದ ಒಂದು ಕಮಿಟಿಯೇರ್ಪಾಟಾಗುವುದು. (3) ಆರ್. ಟಿ. ಸಿ. ಕಮಿಟಿಗಳವರಿಂದ ಈವರೆಗೆ ನಿರ್ಧರವಾಗದಿರುವ ವಿಚಾರಗಳನ್ನು ಆಲೋಚನ ಸಂಘದವರು ನಿರ್ಧರಿಸುವುದು. (4) ಅವಧಿಯೊಳಗಾಗಿ ಆಲೋಚನ ಸಂಘದವರು ನಿರ್ದಿಷ್ಟವಾದ ಸೂಚನೆಗಳನ್ನು ಕೊಡಲು ಸಾಧ್ಯವಾಗದಿದ್ದಲ್ಲಿ ಲಂಡನ್ನಿನಲ್ಲಿ ಸಂಯುಕ್ತ ಸಂಘದವರೊಡನೆ ಕಲೆತು ವಿಷಯಗಳನ್ನು ಚರ್ಚಿಸಲು ಕೆಲ ಭಾರತೀಯರನ್ನು ಕರೆಸಿಕೊಳ್ಳುವುದು ಈ ವಿಷಯಗಳನ್ನೊಳಕೊಂಡಿರುವ ಒಂದು ಹೊಸ ಹಂಚಿಕೆಯನ್ನು ಸೂಚಿಸಿರುವರು. ಆರ್. ಟಿ. ಸಿ. ಮೂಲಕ ಬ್ರಿಟನ್, ಬ್ರಿಟಿಷ್ ಇಂಡ್ಯಾ ಮತ್ತು ದೇಶೀಯ ಸಂಸ್ಥಾನಗಳು ಇವುಗಳ ಮಧ್ಯೆ ಒಡಂಬಡಿಕೆಯನ್ನು ಮಾಡಿಕೊಳ್ಳಬೇಕೆಂಬ ಆಲೋಚನೆಯು ಖಂಡಿತವಾಗಿ ತಪ್ಪಿಹೋದಂತೆ ಇದರಿಂದ ವ್ಯಕ್ತವಾಗುತ್ತದೆ. ಬ್ರಿಟಿಷ್ ಪ್ರಭುತ್ವದವರು ತಾವು ಈಗ ಹೊಸದಾಗಿ ಅನುಸರಿಸಿರುವ ನೀತಿಯನ್ನು ಸಮರ್ಥಿಸಿ ಎಷ್ಟು ವಾದಿಸಿದಾಗ್ಯೂ ತಮ್ಮ ವಾಗ್ದಾನವನ್ನುಲ್ಲಂಘಿಸಿ ನ್ಯಾಯಪರತೆಯ ಮೇಲೂ ಗೌರವದ ಮೇಲೂ ದೃಷ್ಟಿಯುಳ್ಳ ಭಾರತಿಯ ಸೌಮ್ಯಪಕ್ಷದವರಲ್ಲಿ ತನ್ನ ಮರ್ಯಾದೆಗೆ ಕುಂದನ್ನುಂಟುಮಾಡಿಕೊಂಡಿತೆಂಬುದರಲ್ಲಿ ಸಂದೇಹವಿಲ್ಲ. ಈ ರೌಂಡುಟೇಬಿಲು ಕಾನ್ಫರೆನ್ಸು ಚರ್ಚಾಸಂಘವಲ್ಲದೆ ಮತ್ತೆ ಬೇರೆಯಲ್ಲವೆಂದು ಮಹಾತ್ಮ ಗಾಂಧಿಯವರು ಹೇಳಿದುದು ಅಕ್ಷರಶಃ ನಿಶ್ಚಯವಾಯಿತು. ಈ ಆರ್. ಟಿ. ಸಿ. ನ ತೀರ್ಮಾನವನ್ನು ಬ್ರಿಟಿಷಿನವರು ಗೌರವಿಸತಕ್ಕವರಾಗಿರಲಿಲ್ಲವಾದುದರಿಂದ ಅದರ ನಡವಳಿಕೆಯೆಲ್ಲವೂ ಒಂದು ತಮಾಷೆ ಅದರಲ್ಲೂ ವಿಶೇಷ ದ್ರವ್ಯನಷ್ಟಕರವಾದ ತಮಾಷೆಯಾಗಿ ಪರಿಣಮಿಸಿರುತ್ತದೆ. ಈಗಿನ ಸಾರ್ವಜನಿಕ ಪ್ರಭುತ್ವಾಧಿಕಾರದಲ್ಲಿರುವ ಕನ್ಸರ್ವೆಟಿವಗಳು ಆರ್. ಟಿ. ಸಿ. ಯವರ ಕಾರ್ಯಕ್ರಮವನ್ನು ಮಣ್ಣುಗೂಡಿಸಲು ಸಾಹಸಪಡುತ್ತಿದ್ದುದು ನಿಜವೆಂದು ತಿಳಿದಿದ್ದೆವಲ್ಲದೆ ಬ್ರಿಟಿಷ್ ಕ್ಯಾಬಿನೆಟ್ಟಿನವರು ಅಂದರೆ ಮಂತ್ರಿ ವರ್ಗದವರು ಈ ರೀತಿ ವರ್ತಿಸುತ್ತಾರೆಂದೂಹಿಸಿರಲಿಲ್ಲ. ಈಗೇರ್ಪಡಲಿಕ್ಕಿರುವ ಪ್ರಾಂತಿಕ ಸ್ವರಾಜ್ಯಪ್ರಭುತ್ವಗಳು ಫೆಡರೇಟಾಗಲು ತಕ್ಕ ಅರ್ಹತೆಯನ್ನು ಸಂಪಾದಿಸಿಕೊಂಡಮೇಲೆ ಕೇಂದ್ರ ಪ್ರಭುತ್ವ ಸ್ವರಾಜ್ಯಸ್ಥಾಪನೆಯಾಗುವುದೆಂದು ಹೇಳಿರುವುದು ಅನುಮಾನಕರವಾಗಿರುತ್ತದೆ. ಫೆಡರೇಷನ್ನಿಗೆ ತಾನಾಗಿ ಸೇರುವಂತಾಗಬೇಕೆಂಬುದು ದೇಶೀಯ ಸಂಸ್ಥಾನಗಳಿಗೆ ಅನ್ವಯಿಸಬಹುದಲ್ಲದೆ ಬ್ರಿಟಿಷ್ ಇಂಡ್ಯಾಕ್ಕೆ ಅನ್ವಯಿಸುವುದೇ ಇಲ್ಲ. **ಈಗಿನ ಮಸೂದೆಯು ಒಂದೇ ಆಗಿರುವುದಾದರೂ ಪ್ರಾಂತಿಕ ಸ್ವರಾಜ್ಯಗಳು ಕೇಂದ್ರ ಸ್ವರಾಜ್ಯವನ್ನು ಸಂಪಾದಿಸಲು ಹಿಡಿಯುವ ಕಾಲಾವಧಿಯು ಬಹಳ ದೀರ್ಘವಾಗುವುದರಿಂದ ಮತ್ತು ಈ ಮಧ್ಯೆ ನಾನಾತೊಂದರೆಗಳು ಹುಟ್ಟುವುದರಿಂದ ಯಾವದ್ಭಾರತ ಫೆಡರೇಷನ್ನು ಬಹಳ ಕಾಲದವರೆಗೂ ಲಭ್ಯವಾಗುವಂತಿಲ್ಲ. ಸೈಮನ್ ಕಮಿಷನ್ನಿನವರು ಸೂಚಿಸಿರುವುದಕ್ಕಿಂತಲೂ ಹೆಚ್ಚಾಗಿ ಬ್ರಿಟಿಷ್ ಸಾರ್ವಜನಿಕ ಪ್ರಭುತ್ವದವರಿಂದ ಪ್ರಯೋಜನವಾಗುವಂತೆ ತೋರುವುದಿಲ್ಲ. ಪ್ರತಿಕೂಲ ಭಾವನೆಯಿಂದ ಭಾರತದೇಶಕ್ಕೂ ಬ್ರಿಟನ್ನಿಗೂ ಇರತಕ್ಕ ಸಂಬಂಧವು ಸಡಿಲವಾಗಿ ತನ್ಮೂಲಕ ಬ್ರಿಟನ್ನಿಗೆ ಬಹಳ ನಷ್ಟ ಸಂಭವಿಸುವುದರಿಂದ ಬ್ರಿಟಿಷ್ ರಾಜನೀತಿಜ್ಞರು ಜಾಗರೂಕರಾಗಿರುವರೆಂದು ನಿರೀಕ್ಷಿಸುತ್ತೇವೆ.**

ಒಳದೇಶದ ವೃತ್ತಾಂತಗಳು

ಇರ್ವಿನ್ ನಾಲಾ ಕೆಳಗಿನ ರೈತರುಗಳ ಕಷ್ಟನಷ್ಟಗಳನ್ನು ಕಣ್ಣಾರ ನೋಡಿ ತಿಳಿಯಲು ದಿವಾನರು ತಮ್ಮ ಪ್ರೈವೇಟ್ ಸೆಕ್ರೆಟರಿಯವರೊಡನೆ ಈ ತಾ|| 7 ರಲ್ಲಿ ಮಂಡ್ಯದ ತಾಲ್ಲೂಕು ಸಂಚಾರ ಹೊರಡುವರು.

ಕಳೆದ ಗುರುವಾರ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರ ಚುನಾವಣೆಗಾಗಿ ನಡೆದ ಸ್ಪೆಷಲ್ ಮೀಟಿಂಗಿನಲ್ಲಿ ಅಭ್ಯರ್ಥಿಗಳಾಗಿದ್ದ ಇಬ್ಬರಲ್ಲಿ ಮ|| ಎಂ. ಬಾಲಕೃಷ್ಣಯ್ಯನವರು ತಮ್ಮ ಅಭ್ಯರ್ಥಿತ್ವವನ್ನು ಹಿಂದಕ್ಕೆ ತೆಗೆದುಕೊಂಡುದರಿಂದ ಮ|| ಬಿ. ಕೆ. ಗರುಡಾಚಾರರು ಪ್ರತಿಸ್ಪರ್ಧೆಯಿಲ್ಲದೆ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು.

ಫೈನಾನ್ಸಿಯಲ್ ಸೆಕ್ರೆಟರಿಯವರಾಗಿದ್ದ ಮ|| ಬಿ. ಶ್ರೀನಿವಾಸಯ್ಯಂಗಾರರು ಈ ತಾ|| 1 ರಲ್ಲಿ ಉದ್ಯೋಗದಿಂದ ನಿವೃತ್ತರಾದರು. ಇವರ ಬದಲು ಕಂಟ್ರೋಲರಾದ ಮ|| ಎಸ್. ಶಾಮಣ್ಣನವರು ಫೈನಾನ್ಸಿಯಲ್ ಸೆಕ್ರೆಟರಿಯವರಾಗಿಯೂ, ಸೆನ್ಸಸ್ ಸೂಪರಿಂಟೆಂಡೆಂಟ್ ರವರಾದ ಮ|| ಎಚ್. ವೆಂಕಟೇಶಯ್ಯಂಗಾರರು ಕಂಟ್ರೋಲರಾಗಿಯೂ ನಿಯಮಿಸಲ್ಪಟ್ಟಿರುವರಲ್ಲದೆ ಮ|| ಬಿ. ಶ್ರೀನಿವಾಸಯ್ಯಂಗಾರರು ವ್ಯಯಕರ್ತನ ಕಮಿಟಿಯವರ ಸೂಚನೆಯ ಪ್ರಕಾರ ಯಾವ್ಯಾವ ಶಾಖೆಯಲ್ಲಿ ಎಷ್ಟೆಷ್ಟು ವೆಚ್ಚವನ್ನು ಕಡಿಮೆ ಮಾಡಲು ಸಾಧ್ಯವೆಂಬುದನ್ನು ಗೊತ್ತುಮಾಡಲು 2 ತಿಂಗಳಿನ ವರೆಗೆ ಸ್ಪೆಷಲ್ ಆಫೀಸರಾಗಿ ನಿಯಮಿಸಲ್ಪಟ್ಟಿರುವರು. ಈ ಹೊಸ ಉದ್ಯೋಗವು 2 ತಿಂಗಳಲ್ಲಿಯೇ ಮುಗಿಯುವಂತೆ ತೋರುವುದಿಲ್ಲವಾದುದರಿಂದ ಕಾಲಾವಧಿಯು ಹೆಚ್ಚಿಸಲ್ಪಡಬಹುದು.

ಈಗ್ಗೆ 3 ವರ್ಷಗಳ ಹಿಂದೆ ಸೀಮೆಗೆ ಹೋಗಿ ಮುದ್ರಣ ಕಲೆಯಲ್ಲಿ ಹೆಚ್ಚು ಪರಿಶ್ರಮವನ್ನು ಹೊಂದಿ ದೊಡ್ಡ ಪ್ರಶಸ್ತಿಗಳನ್ನೂ ಪದಕಗಳನ್ನೂ ಪಡೆದುಕೊಂಡು ಹಿಂದಿರುಗಿ ಬಂದಿರುವ ಗೌರ್ನಮೆಂಟ್ ಪ್ರೆಸ್ಸ್ ಸಬ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮ|| ಬಿ. ಕೃಷ್ಣಸ್ವಾಮಿಶೆಟ್ಟಿ, ಬಿ. ಇ., ಯವರಿಗೆ ಈ ಜುಲೈ ತಾ|| 1 ರಿಂದ 3 ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುವುದು. ಇವರಿಗೆ ರಾಜಧಾನಿಯ ವೈಶ್ಯ ಸಮಾಜದವರು ಮಾಡಿದ ಸುಖಾಗಮನ ಸತ್ಕಾರ ಸಂಬಂಧವಾದ ಪತ್ರವ್ಯವಹಾರವು ಬೇರೆ ಕಡೆ ಮುದ್ರಿಸಲ್ಪಟ್ಟಿದೆ. ಇವರು ಈಗ ಪ್ರೆಸ್ಸಿನ ಸೂಪರಿಂಟೆಂಡೆಂಟರಾಗಿರುವ ಮ|| ಬಿ. ಪುಟ್ಟಯ್ಯನವರಂತೆ ತಮ್ಮ ವಿದ್ಯಾನೈಪುಣ್ಯವನ್ನು ಪ್ರದರ್ಶಿಸಿ ಮತ್ತು ಕೈಕೆಳಗಿನ ಕೆಲಸಗಾರರನ್ನು ಪ್ರೀತಿಯಿಂದಲೂ ಕರುಣೆಯಿಂದಲೂ ಕಂಡು ಅಭಿವೃದ್ಧಿಯನ್ನು ಹೊಂದುವವರಾಗಲೆಂದು ಆಶಿಸುತ್ತೇವೆ.

ಮೈಸೂರು ರೈಲ್ವೆಯಲ್ಲಿ, ಬೆಂಗಳೂರಿನಿಂದ ಚೆನ್ನಪಟ್ಟಣಕ್ಕೂ, ಚೆನ್ನಪಟ್ಟಣದಿಂದ ಬೆಂಗಳೂರಿಗೂ ಹೋಗಿಬರುವ 72, 73, 74 ಮತ್ತು 75 ನೇ ನಂಬರ್ ಷಟಲ್ ಗಾಡಿಗಳಲ್ಲಿಯೂ, ಬೆಂಗಳೂರಿನಿಂದ ಚಿಕ್ಕಬಳ್ಳಾಪುರಕ್ಕೂ, ಚಿಕ್ಕಬಳ್ಳಾಪುರದಿಂದ ಬೆಂಗಳೂರಿಗೂ, ಹೋಗಿ ಬರುವ 35, 36, 77 ಮತ್ತು 78 ಷಟಲ್ ರೈಲ್ ಗಾಡಿಗಳಲ್ಲಿ ಪ್ರಯಾಣ ಮಾಡತಕ್ಕವರುಗಳ ಅನುಕೂಲಕ್ಕಾಗಿ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ನಿಂದ ಊರೊಳಕ್ಕೂ, ಊರೊಳಗಿನಿಂದ ಬೆಂಗಳೂರು ಸಿಟಿ ಸ್ಟೇಷನ್ನಿಗೂ, ಮೇಲೆ ನಮೂದಿಸಿರುವ ಎಲ್ಲಾ ಗಾಡಿಗಳಿಗೂ ಸಿಟಿ ಸ್ಟೇಷನ್ನಿಗೆ ಸಕಾಲಕ್ಕೆ ಬೆಂಗಳೂರು ಸಿಟಿ ಬಸ್ಸು ಸರ್ವಿಸ್ಸಿನವರುಬ್ಬರ ಬಸ್ಸುಗಳು ಬರುವಂತೆ ಏರ್ಪಾಟು ಮಾಡಿರುತ್ತಾರೆ. ಈ ಬಸ್ಸುಗಳಲ್ಲಿ ಪ್ರಯಾಣ ಮಾಡುವವರು ಹಾಲಿ ಜಾರಿಯಲ್ಲಿರತಕ್ಕ ಬಸ್ಸು ಚಾರ್ಜುಗಳನ್ನು ಕೊಡಬೇಕು ಎಂದು ಟ್ರಾಫಿಕ್ ಮ್ಯಾನೇಜರು ಪ್ರಕಟಿಸಿರುತ್ತಾರೆ.

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ಡಿನ ವಾರ್ಷಿಕೋತ್ಸವವು ಕಳೆದ ತಾ|| 26 ನೆಯ ಭಾನುವಾರ ಲಕ್ಷ್ಮೀಥಿಯೇಟರಿನಲ್ಲಿ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾದ ಮ|| ಟಿ. ಜಿ. ರಾಮಯ್ಯರ್ ರವರ ಅಧ್ಯಕ್ಷತೆಯಲ್ಲಿ ಜರುಗಿತಲ್ಲದೆ, ಈ ಸೊಸೈಟಿಯ ಮೊದಲನೇ ಪ್ರೆಸಿಡೆಂಟರಾಗಿದ್ದ ಮ|| ಸಾಹುಕಾರ್ ಶೆಟ್ಟಪ್ಪ ಸಿದ್ದಪ್ಪನವರ ಭಾವಚಿತ್ರದ ಅನಾವರಣೋತ್ಸವವು ಸೊಸೈಟಿ ಮಂದಿರದಲ್ಲಿ ಮ|| ಟಿ. ಜಿ. ರಾಮಯ್ಯರ್ರಿಂದಲೇ ನಡೆಸಲ್ಪಟ್ಟಿತು. ಈ ಉತ್ಸವಗಳಿಗೆ ಅಧಿಕಾರಿಗಳೂ ಸೊಸೈಟಿಯ ಮೆಂಬರುಗಳೂ ಆಹ್ವಾನಿಸಲ್ಪಟ್ಟಿದ್ದು ಸಂಗೀತಶ್ರವಣದಿಂದಲೂ ತಾಂಬೂಲ ವಿನಿಯೋಗದಿಂದಲೂ ಸತ್ಕರಿಸಲ್ಪಟ್ಟರು. ಮ|| ಶೆಟ್ಟಪ್ಪ ಸಿದ್ದಪ್ಪನವರು ಸೊಸೈಟಿಯ ಪ್ರೆಸಿಡೆಂಟರಾಗಿದ್ದು ದಕ್ಷತೆಯಿಂದ ಕಾರ್ಯವನ್ನು ನಿರ್ವಹಿಸಿ ಸೊಸೈಟಿಯನ್ನು ಅಭಿವೃದ್ಧಿಗೆ ತಂದು ಮೆಂಬರುಗಳ ಗೌರವಕ್ಕೆ ಪಾತ್ರರಾದುದು ಸಂತೋಷಪ್ರದವು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾದ ಮ|| ಟಿ. ಜಿ. ರಾಮಯ್ಯರ್ ರವರು ಈ ತಾ|| 14 ರಲ್ಲಿ 2 ತಿಂಗಳ ಪ್ರಿವಿಲೆಜ್ ರಜದಮೇಲೆ ಹೋಗುವುದರಿಂದ ಗೌರ್ನಮೆಂಟು ಸೆಕ್ರೆಟರಿಯಾಗಿರುವ ಮ|| ಬಿ. ಟಿ. ಕೇಶವಯ್ಯಂಗಾರ್ಯರು ಆಕ್ಟಿಂಗ್ ಪ್ರೆಸಿಡೆಂಟರಾಗಿರುವರೆಂದೂ, ಮ|| ಟಿ. ಜಿ. ರಾಮಯ್ಯರ್ ರವರು ತಮ್ಮ ರಜ ಪೂರೈಸಿದ ಮೇಲೆ ಚಿತ್ರದುರ್ಗದ ಡೆಪ್ಯುಟಿ ಕಮಿಷನರಾಗಿ ವರ್ಗಾಯಿಸಲ್ಪಟ್ಟು ಮ|| ಬಿ. ಟಿ. ಕೇಶವಯ್ಯಂಗಾರ್ಯರು ಪ್ರೆಸಿಡೆಂಟ್ ಉದ್ಯೋಗದಲ್ಲಿ ಸ್ಥಿರಗೊಳಿಸಲ್ಪಡುವರೆಂದೂ ಪ್ರಬಲವಾದ ವದಂತಿಯಿದೆ. ಮ|| ಕೇಶವಯ್ಯಂಗಾರ್ಯರು ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯರಾಗಿದ್ದು ಗತಿಸಿದ ಬಿ. ತಿರುಮಲಾಚಾರ್ಯರ ಕುಮಾರರು ಮತ್ತು ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನ ಕಮಿಷನರಾಗಿಯೂ, ಶಿವಮೊಗ್ಗ ಡಿ|| ಡೆಪ್ಯುಟಿ ಕಮಿಷನರಾಗಿಯೂ ಕೆಲಸ ಮಾಡಿ ಮ್ಯುನಿಸಿಪಾಲ್ ಆಡಳಿತವನ್ನು ಚೆನ್ನಾಗಿ ಅರಿತವರಾಗಿರುತ್ತಾರೆ. ಇವರು ಬಹಳ ಸರಸಿಗಳಾಗಿಯೂ ನಿಗರ್ವಿಗಳಾಗಿಯೂ ಸ್ನೇಹಪರರಾಗಿಯೂ ಇರುವುದರಿಂದ ಇವರ ಆಡಳಿತದಲ್ಲಿ ರಾಜಧಾನಿಯ ಮ್ಯುನಿಸಿಪಲ್ ಕೆಲಸಗಳು ಸುಲಲಿತವಾಗಿಯೂ ರೈಟ್ ಪೇಯರುಗಳಿಗೆ ಹಿತಕರವಾಗಿಯೂ ನಡೆಯುವುವೆಂದು ನಿರೀಕ್ಷಿಸುತ್ತೇವೆ.

ಕಳೆದ ಮಂಗಳವಾರ ರಾಜಧಾನಿಯ ಪುರಾಭಿವೃದ್ಧಿ ಸಂಘ ಅಂದರೆ ಸಿಟಿ ಇಂಪ್ರುವ್ ಮೆಂಟ್ ಟ್ರಸ್ಟ್ ಬೋರ್ಡಿನ ತಿಂಗಳ ಮೀಟಿಂಗು ನಡೆದಿತು. ಆಗ ಆಯುರ್ವೇದೀಯ ಆಸ್ಪತ್ರೆಯ ಕಟ್ಟಡವನ್ನು ಸಯ್ಯಾಜಿರಾವ್ ರೋಡಿನಲ್ಲಿರುವ ಬಾಳೇಅರಸಿನವರ ಲಾಯದಲ್ಲಿ 25,000 ರೂ. ಗಳ ವೆಚ್ಚದಿಂದ ಕಟ್ಟಲು ನಿರ್ಧರಿಸಲ್ಪಟ್ಟಿತು. ಇರ್ವಿನ್ ರೋಡಿನಲ್ಲಿ ಅಂದರೆ ಕಾಳಮ್ಮನ ಗುಡಿಯ ದಕ್ಷಿಣಭಾಗದಲ್ಲಿ ವಿಹಾರಾರ್ಥವಾಗಿ ಬಿಟ್ಟಿರುವ ಬೈಲುಪ್ರದೇಶವನ್ನು ಉಚಿತವಾಗಿ ಅಥವಾ ಅಲ್ಪಬೆಲೆಗೆ ಕೊಟ್ಟಲ್ಲಿ 30,000 ರೂ. ವೆಚ್ಚಮಾಡಿ ಸುಂದರವಾದ ಅಂತಸ್ತಿನ ಸತ್ರವನ್ನು ಕಟ್ಟಿಸಿಕೊಡುತ್ತೇನೆಂದು ಅರಮನೆಯ ಕಂಟ್ರಾಕ್ಟರ್ ಮ|| ತಿಮ್ಮಯ್ಯಾಚಾರರು ಕೇಳಿದ್ದುದರಮೇಲೆ ವಿಹಾರಾರ್ಥವಾಗಿ ಮತ್ತೊಂದು ಪ್ರದೇಶವನ್ನು ಕಲ್ಪಿಸುವುದರ ವೆಚ್ಚಕ್ಕಾಗಿ 2,000 ರೂ. ಗಳನ್ನು ಕೊಟ್ಟು ಸತ್ರವನ್ನು ಮ್ಯುನಿಸಿಪಾಲಿಟಿಯವರ ಆಡಳಿತಕ್ಕೆ ಬಿಟ್ಟುಕೊಡಲೊಪ್ಪಿದಲ್ಲಿ ಆ ಪ್ರದೇಶವು ಉಚಿತವಾಗಿ ಕೊಡಲ್ಪಡುವುದೆಂದು ನಿರ್ಧರಿಸಲ್ಪಟ್ಟಿತು. ಮೀಟಿಂಗಿನಲ್ಲೇ ಇದ್ದ ಮ|| ತಿಮ್ಮಯ್ಯಾಚಾರರು ಅದಕ್ಕೊಪ್ಪಿಕೊಂಡರು. ಮೈಸೂರು ಮಾನಂದವಾಡಿ ರೋಡಿನಲ್ಲಿರುವ ಕ್ರೈಸ್ತರ ಗುಡಿ ಪಕ್ಕದ ಕಾಲಿ ನಿವೇಶನವು ಕಾನ್ವೆಂಟ್ ಗರ್ಲ್ಸ್ ಸ್ಕೂಲನ್ನು ಕಟ್ಟುವುದಕ್ಕಾಗಿ ಫಾದರ್ ಲೋಬೋಯವರಿಗೆ ಚದರ ಗಜ 1 ಕ್ಕೆ 3 ಆಣೆಯಂತೆ ವಿಕ್ರಯಿಸಬೇಕಾಗಿ ನಿರ್ಧರವಾಯಿತು.

ಕೆಲಗ್ರಾಮಗಳಿಗೆ ೫೦೦೦ ರೂ. ದಂಡ

ಚಿಟಗಾಂಗ್ ಡಿಸ್ಟ್ರಿಕ್ಟಿನಲ್ಲಿ ಕೆಲ ಗ್ರಾಮಸ್ಥರು ಶಾಸನೋಲ್ಲಂಘನದಿಂದ ನೆಮ್ಮದಿ ಭಂಗವನ್ನುಂಟುಮಾಡುತ್ತಲೂ ಆ ರೀತಿ ಆಚರಿಸಲು ಜನರಿಗೆ ಬೋಧಿಸುತ್ತಲೂ ಇರುವುದರಿಂದ ಅವರುಗಳಿಗೆ ಬಂಗಾಳ ಗೌರ್ನರು 5000 ರೂಪಾಯಿಗಳ ದಂಡವನ್ನು ವಿಧಿಸಿರುವರು.

ಕಾಂಗ್ರೆಸ್ ಮಹಾ ಸಭಾಧ್ಯಕ್ಷರು

ಅಖಿಲಭಾರತ ಕಾಂಗ್ರೆಸ್ ಮಹಾ ಸಭಾಧ್ಯಕ್ಷರಾಗಿದ್ದ ಮ|| ಗಂಗಾಧರರಾವ್ ದೇಶಪಾಂಡೆಯವರು ಶಿಕ್ಷಿಸಲ್ಪಟ್ಟುದರಿಂದ ಅವರ ಬದಲು ದಿಲ್ಲಿ ದೊಂಬಿ ಮೊಖದ್ದಮೆಯಲ್ಲಿ ಮುಖ್ಯವಕೀಲರಾದ ಡಾಕ್ಟರ್ ಕಿಚಲುಯವರು ಮಹಾ ಸಭಾಧ್ಯಕ್ಷರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ನಡ್ಯಾದಲ್ಲಿ ೧೦೦೦ ಸೆರೆ

ಕೈರಾ ಡಿಸ್ಟ್ರಿಕ್ಟು ಕಾನ್ಫರೆನ್ಸನ್ನು ನಡ್ಯಾದಲ್ಲಿ ನಡೆಯಿಸಲು ಪ್ರಯತ್ನಿಸಲ್ಪಟ್ಟಿದ್ದಿತು. ಈ ಸಭೆಗೆ ಪರಸ್ಥಳಗಳಿಂದ ಬರುತ್ತಿದ್ದ ಜನರನ್ನು ಪೋಲೀಸಿನವರು ರೈಲ್ವೆಸ್ಟೇಷನ್ನುಗಳಲ್ಲಿ ಕಾವಲಿದ್ದು ತಡೆದು ನಿಲ್ಲಿಸಿಬಿಟ್ಟರಲ್ಲದೆ 1000 ಜನರವರೆಗೆ ಸೆರೆಹಿಡಿದಿರುತ್ತಾರೆ. ಪ್ರಭಾತಫೇರಿಯಲ್ಲಿ ಭಾಗಿಗಳಾಗಿದ್ದ ಸ್ತ್ರೀಯರು ಸಹ ಸೆರೆಹಿಡಿಯಲ್ಪಟ್ಟಿರುವರು.

ಡಾಕ್ಟರ್ ಅನ್ಸಾರಿಯವರ ದೇಹಸ್ಥಿತಿ

ಈಗ ಕಾರಾಗೃಹ ಬಂಧನದಲ್ಲಿರುವ ಡಾಕ್ಟರ್ ಅನ್ಸಾರಿಯವರು ಈ ತಾ|| 7ರಲ್ಲಿ ಬಿಡಲ್ಪಡುವರು. ಇವರಿಗೆ ಕಾರಾಗೃಹ ಬಂಧನವಾದ ಮೇಲೆ ರುಂಡಿಯ ನೋವು ಪ್ರಬಲವಾಗಿ ದೇಹಸ್ಥಿತಿಯು ಬಹಳಮಟ್ಟಿಗೆ ಕೆಟ್ಟುಹೋಗಿರುವ ಪ್ರಯುಕ್ತ ಸಮರ್ಥರಾದ ವೈದ್ಯರಿಂದ ಚಿಕಿತ್ಸೆಯನ್ನು ಪಡೆಯಲು ಇವರು ಕೂಡಲೆ ಯೂರೋಪಿಗೆ ಪ್ರಯಾಣಮಾಡುವುದಾಗಿ ತಿಳಿಯಬರುತ್ತದೆ.

ಚುನಾವಣೆಯಲ್ಲಿ ಬಡಿದಾಟ

ಮುಸಲಿಪಟ್ಟಣ ಡಿ|| ಗೆ ಸೇರಿದ ಘಂಟಶಲಪಳಂ ಎಂಬಲ್ಲಿ ಯೂನಿಯನ್ ಬೋರ್ಡು ಮೆಂಬರುಗಳ ಚುನಾವಣೆಯು ನಡೆಯುವಾಗ್ಗೆ ಅಭ್ಯರ್ಥಿಗಳ ಕಡೆಯವರಿಗೆ ಹೋರಾಟ ಬಡಿದಾಟ ನಡೆದು 25 ಮಂದಿಗೆ ಗಾಯಗಳಾಗಿ ಕೆಲರು ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆ ಹೊಂದುತ್ತಿರುವರು. ಇದೇ ರೀತಿ ಚೆನ್ನಮುಪ್ಪೂರು ಎಂಬಲ್ಲಿ ಬಡಿದಾಟವಾಗಿ 15 ಮಂದಿಗೆ ಗಾಯಗಳಾಗಿರುತ್ತವೆ.

ರೋಮು ದೇವಾಲಯಗಳು

ಒಂದು ಸಾವಿರ ವರ್ಷಗಳಿಗೆ ಮೇಲ್ಪಟ್ಟಾಗಿನಿಂದಲೂ ಈ ದೇವಾಲಯಗಳಲ್ಲಿ ನಡೆದುಕೊಂಡು ಬರುತ್ತಿರುವ ಮೇಣದ ಬತ್ತಿಗಳ ದೀಪಾರಾಧನೆಯು ಈಗ ನಿಷೇಧಿಸಲ್ಪಟ್ಟಿದೆ. ಈ ದೀಪಗಳಿಂದ ಹೊಗೆ ಹುಟ್ಟಿ ವಾಯುವು ಕಲುಷಿತವಾಗುವುದು, ಗೋಡೆಗಳಿಗೆ ಹೊಗೆ ಹಿಡಿಯುವುದು, ಕೃತ್ರಿಮ ಪುಷ್ಪಗಳನ್ನು ಧರಿಸಬಾರದು ಪರ್ವದಿನಗಳಲ್ಲಿ ನಡೆಯುವ ಮತಕಾರ್ಯಗಳ ಸಂದರ್ಭದಲ್ಲಿ ಛಾಯಾ ಪಟ (ಫೋಟೋ) ಗಳನ್ನು ತೆಗೆಯಬಾರದು ಎಂದು ಗೊತ್ತುಮಾಡಲ್ಪಟ್ಟಿದೆ.

ರೈಲುಬಂಡಿಯಿಂದ ಸ್ತ್ರೀ ಹೊರಗೆಸೆಯಲ್ಪಟ್ಟಳು

ಬಿಕನೀರು ಸಂಸ್ಥಾನದ ಒಬ್ಬ ಇಂಜನಿಯರ ಹೆಂಡಿತಿಯು ರೈಲ್ವೆ ಬಂಡಿಯ ಎರಡನೇ ತರಗತಿಯಲ್ಲಿ ಪ್ರಯಾಣಮಾಡುತ್ತಿರುವಾಗ್ಗೆ ರಾಜಪುರ ಹತ್ತಿರ ಯಾರಿಂದಲೋ ಬಂಡಿಯಿಂದ ಹೊರಗೆ ಬಿಸಾಡಲ್ಪಟ್ಟಿದ್ದು ಕಂಬಿಗಳ ಬಳಿ ಜ್ಞಾನತಪ್ಪಿ ಬಿದ್ದಿದ್ದಳು. ಎಷ್ಟೋ ಹೊತ್ತಿನಮೇಲೆ ಯಾರೋ ಕಂಡು ಆಕೆಯನ್ನು ಆಸ್ಪತ್ರೆಗೆ ಸಾಗಿಸಿದರು. ಅಲ್ಲಿ ಆಕೆಯು ಮೃತಳಾದಳು. ಆಕೆಯು ಪ್ರಯಾಣಮಾಡಿದ ಬಂಡಿಯಿಂದ ಸಾಮಾನನ್ನು ಹೊರಕ್ಕೆ ಸಾಗಿಸಿದ ಆಳು ಸೆರೆಹಿಡಿಯಲ್ಪಟ್ಟಿರುತ್ತಾನೆ.

ಮುದ್ರೆಯೊತ್ತುವಾಗ ಕಾಗದ ಹೊತ್ತಿಕೊಂಡುದು

ದಿಲ್ಲಿಯ ಪೋಸ್ಟಾಫೀಸಿನಲ್ಲಿ ಕಾಗದಗಳಿಗೆ ಒಬ್ಬನು ಮುದ್ರೆಯೊತ್ತುತ್ತಿರುವಾಗ್ಗೆ ಒಂದು ಕಾಗದವು ಭುಗಿಲ್ಲೆಂದು ಹೊತ್ತಿಕೊಂಡಿತು. ಇದರಿಂದ ಮುದ್ರೆಯನ್ನೊತ್ತುವವನ ಕೈ ಸುಟ್ಟುಹೋಯಿತಾದರೂ ಅವನು ಕಾಗದವನ್ನು ಕೂಡಲೆ ಕೆಳಕ್ಕೆ ಬಿಸಾಡಿದುದರಿಂದ ಇತರ ಕಾಗದಗಳು ಹೊತ್ತಿಕೊಳ್ಳಲವಕಾಶವಾಗಲಿಲ್ಲ. ಹಿಂದೆಯೊಂದಾವರ್ತಿ ಇದೇ ರೀತಿಯಾಗಿದ್ದಿತು. ಈ ಕೃತ್ಯಮಾಡುವವರನ್ನು ಹಿಡಿದುಕೊಟ್ಟಲ್ಲಿ 100 ರೂ. ಬಹುಮಾನಕೊಡುವುದಾಗಿ ಪೋಲೀಸು ಕಮಿಷನರು ಪ್ರಕಟಿಸಿರುತ್ತಾರೆ.

ದೇಶಪಾಂಡೆಯವರ ಶಿಕ್ಷೆ

ಎಮರ್ಜೆನ್ಸಿ ಪವರ್ಸು ಆರ್ಡಿನೆನ್ಸ್ ಪ್ರಕಾರ ಕಳೆದ ತಾ|| 21ರಲ್ಲಿ ಸೆರೆ ಹಿಡಿಯಲ್ಪಟ್ಟ ಅಖಿಲ ಭಾರತ ಕಾಂಗ್ರೆಸ್ ಸಂಘಾಧ್ಯಕ್ಷರಾದ ಮ|| ಗಂಗಾಧರರಾವ್ ದೇಶಪಾಂಡೆಯವರು ತಾ|| 28ರಲ್ಲಿ ಸೆರೆಯಿಂದ ಬಿಡಲ್ಪಟ್ಟು ಕೂಡಲೆ ಊರಿಗೆ ಹೋಗಕೂಡದೆಂದೂ, ಪೋಲೀಸಿನವರಲ್ಲಿಗೆ ಪ್ರತಿದಿನವೂ ಕಾಣಿಸಿಕೊಳ್ಳಬೇಕೆಂದೂ, ಇನ್ನುಮೇಲೆ ಶಾಸನೋಲ್ಲಂಘನ ಕಾರ್ಯಗಳಲ್ಲಿ ಸೇರಕೂಡದೆಂದೂ ಡಿಸ್ಟ್ರಿಕ್ಟು ಮೆಜಿಸ್ಟ್ರೇಟರು ಅಪ್ಪಣೆ ಮಾಡಿದ್ದರು. ಆದರೆ ದೇಶಪಾಂಡೆಯವರು ಆ ರೀತಿ ನಡೆಯಲಿಲ್ಲವಾಗಿ 1 ವರ್ಷ ಕಠಿಣ ಸಜ ಮತ್ತು 300 ರೂ. ಜುಲ್ಮಾನೆ ವಿಧಿಸಲ್ಪಟ್ಟರು.

ಸ್ಪೆಷಲ್ ಮೆಜಿಸ್ಟ್ರೇಟರ ಕೊಲೆ

ವಿಕ್ರಮಪುರದ ಸ್ಪೆಷಲ್ ಮೆಜಿಸ್ಟ್ರೇಟರಾದ ಕಾಮಾಖ್ಯಪ್ರಸಾದಸೇನರು ಢಾಕ ಸಬ್ ಡಿವಿಜನ್ ಆಫೀಸರಾದ ಮ|| ಶಚೀಂದ್ರ ಚಟರ್ಜಿಯವರ ಮನೆಗೆ ಬಂದಿಳಿದುಕೊಂಡಿದ್ದರು. ಕಳೆದ ತಾ|| 27 ನೆಯ ರಾತ್ರಿ ಕಾಮಾಖ್ಯಪ್ರಸಾದರು ಮಲಗಿಕೊಂಡಿರುವಾಗ್ಗೆ ಯಾರೋ ಹಂತಕರು ಕಿಟಿಕಿಯ ಮೂಲಕ 4 ಗುಂಡುಗಳನ್ನು ಹೊಡೆದು ಕೊಂದು ಪಲಾಯನವಾದರು. ಗುಂಡಿನ ಶಬ್ದವನ್ನು ಕೇಳಿ ಮಹಡಿಯ ಮೇಲೆ ಮಲಗಿದ್ದ ಶಚೀಂದ್ರರು ಓಡಿಬಂದು ನೋಡುವಲ್ಲಿ ಕಾಮಾಖ್ಯರ ಎದೆ ಹೊಟ್ಟೆಗಳಲ್ಲಿ ಗುಂಡುಗಳು ನಾಟಿದ್ದುದು ಕಂಡುಬಂದಿತು. ಪೋಲೀಸರು ಆ ಹಂತಕರನ್ನು ತಡಕುತ್ತಿರುವರು.

ಜವಹಾರಿಲಾಲರ ದರ್ಶನ ನಿರಾಕರಣ

ಪಂಡಿತ ಜವಹಾರಿಲಾಲನೆಹರುಯವರಿಗೆ ಜೈಲಿನಲ್ಲಿ ಬಂಧುಗಳನ್ನು ನೋಡಲಿಕ್ಕೆ ಕಲ್ಪಿಸಿದ್ದ ಅವಕಾಶವನ್ನು ಪ್ರಭುತ್ವದವರು ನಿರಾಕರಿಸಿದರು. ಅವರ ತಾಯಿಯೂ ಪತ್ನಿಯೂ, ಕುಮಾರಿ ಶ್ಯಾಮಕುಮಾರಿಯೂ ಭಾನುವಾರ ಅವರನ್ನು ನೋಡಲಿಕ್ಕೆ ಡೇರಾಡನ್ನಿಗೆ ಹೋಗಿದ್ದು ನೋಡದೆಯೇ ಹಿಂದಿರುಗಿ ಬಂದುಬಿಟ್ಟರು. ರಾಜಕೀಯ ಪರಿಸ್ಥಿತಿಯನ್ನು ಕುರಿತು ಪ್ರಭುತ್ವದವರು ಅವರೊಡನೆ ಉತ್ತರ ಪ್ರತ್ಯುತ್ತರವನ್ನು ನಡೆಸುತ್ತಿರುವುದಾಗಿಯೂ, ಆ ರಹಸ್ಯವು ಹೊರಪಡಕೂಡದೆಂಬ ಉದ್ದೇಶದಿಂದ ಸಂದರ್ಶನವು ನಿರಾಕರಿಸಲ್ಪಟ್ಟುದಾಗಿಯೂ ತಿಳಿಯಬರುತ್ತದೆ.

ಮೈಮೇಲೆ ಉಗುಳಿ ಕಳುವು ಮಾಡಿದುದು

ಮದ್ರಾಸಿನ ಒಂದು ಬೀದಿಯ ಕಾಲುದಾರಿಯಲ್ಲಿ ಒಬ್ಬ ಮನುಷ್ಯನು ನಡೆದುಕೊಂಡು ಹೋಗುತ್ತಿರುವಾಗ್ಗೆ ಪಕ್ಕದಲ್ಲಿ ಬರುತ್ತಿದ್ದ ನಾಲ್ವರಲ್ಲಿ ಒಬ್ಬನು ಅವನಮೇಲೆ ಉಗುಳಿದನು. ಆಗ ಉಳಿದ ಮೂವರು ಕಾಣದೆ ಉಗುಳಿದುದಕ್ಕಾಗಿ ಕ್ಷಮಿಸಬೇಕೆಂದು ಹೇಳಿ ಉಗುಳಿಸಿಕೊಂಡವನನ್ನು ಸಮಾಧಾನ ಪಡಿಸುವವರಂತೆ ನಟಿಸಿ ನಲ್ಲಿಯ ಬಳಿಗೆ ಕರೆದುಕೊಂಡು ಹೋಗಿ ಬಟ್ಟೆಯನ್ನು ತೊಳೆಯುವಾಗ್ಗೆ ಅವರಲ್ಲೊಬ್ಬನು ಅವನ ಜೇಬಿನಲ್ಲಿದ್ದ 90 ರೂ. ನ ಚೀಲವನ್ನೆತ್ತಿಕೊಂಡೋದಿದನು. ಉಳಿದವರೂ ಪಲಾಯನವಾದರು. ಆಗ ಆ ಮನುಷ್ಯನು ಕೂಗಿಕೊಳ್ಳಲು ಪೋಲೀಸರು ಹಿಂಬಾಲಿಸಿ ನಾಲ್ವರನ್ನೂ ಹಿಡಿದು ಅವರಲ್ಲಿದ್ದ ಸ್ವಲ್ಪ ಹಣವನ್ನು ವಶಪಡಿಸಿಕೊಂಡರು.

ಸ್ನಾನ ಮಾಡುವಾಗ್ಗೆ ಸರ್ಪದಷ್ಟರಾಗಿ ಐವರು ಸತ್ತರು

ಕಳೆದ ತಾ|| 23ರಲ್ಲಿ ಪಿಯ್ಯಾಲಿಯ ಲೋಕಲ್ ಫಂಡ್ ಓವರ್‌ಸಿ ನಟರಾಜಯ್ಯರು ಮತ್ತೆ 5 ಮಂದಿಗಳು ಅಣ್ಣಾಮಯರ ಚತ್ರ ಎಂಬ ಊರಿನ ಬಳಿ ಕೋಲರೂನು ನದಿಯಲ್ಲಿ ಸ್ನಾನ ಮಾಡುವಾಗ್ಗೆ, ಸಮುದ್ರ ನೀರಿನಿಂದ ಕೊಚ್ಚಿಕೊಂಡು ಬಂದಿರುವ ವಿಷದ ಹಾವುಗಳಿಂದ ಕಡಿಯಲ್ಪಟ್ಟು ಔಷಧೋಪಚಾರ ಮಾಡಲ್ಪಟ್ಟಾಗ್ಯೂ ಗುಣ ಹೊಂದದೆ ಮೃತರಾದರು. ಈ ಹಾವುಗಳು ಒಂದು ಮೊಳ ಉದ್ದವಿದ್ದು ಮಹಾ ವಿಷಕರವಾಗಿರುವವಲ್ಲದೆ ನೀರಿನ ಮೇಲೆ 4 ಅಡಿ ಎತ್ತರಕ್ಕೆ ಹಾರಿ ದೋಣಿಯಲ್ಲಿ ಸಂಚರಿಸುವ ಜನರನ್ನು ಕಡಿಯುತ್ತವೆಯಂತೆ. ಇವುಗಳ ಕಾಟಕ್ಕಾಗಿ ಆ ಸ್ಥಳದಲ್ಲಿ ಯಾರೂ ಸ್ನಾನ ಮಾಡದಂತೆ ಎಚ್ಚರಿಸಲು ಪೋಲೀಸು ಕಾವಲಿಡಲ್ಪಟ್ಟಿರುವುದು.

ಲೋಥಿಯನ್ ರವರ ಅಂತ್ಯೋಪನ್ಯಾಸ

"ನೀವು ಇಂಡ್ಯಾದ ಸಹಾಯ ಮಂತ್ರಿಯಾಗಿ ಇಂಡ್ಯಾಕ್ಕೆ ಹೋಗಿದ್ದಾಗ್ಗೆ ನೀವು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಕುರಿತು ಮುಂದಾಗಿ ಇಂಡ್ಯಾ ಮಂತ್ರಿಗಳ ಮತ್ತು ವೈಸ್ ರಾಯರ ಅನುಮತಿಯನ್ನು ಪಡೆದಿದ್ದಿರಾ?" ಎಂದು ಹೌಸ್ ಆಫ್ ಲಾರ್ಡ್ಸ್ ಸಭೆಯಲ್ಲಿ ಲಾರ್ಡ್ ಲಾಯಿಡ್ ರವರು ಪ್ರಶ್ನಿಸಿದರು. ಅದಕ್ಕೆ "ನಾನು ಇಂಡ್ಯಾಕ್ಕೆ ಹೋಗುವುದಕ್ಕೆ ಮೊದಲೇ ಇಂಡ್ಯಾ ಸಹಾಯ ಮಂತ್ರಿ ಪದವಿಯನ್ನು ತಾತ್ಕಾಲಿಕವಾಗಿ ಬಿಟ್ಟುಕೊಟ್ಟೆನು. ಆದುದರಿಂದ ನಾನು ಇಂಡ್ಯಾದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವೆಲ್ಲವೂ ನನ್ನ ಸ್ವಂತವಲ್ಲದೆ ಸ್ಟೇಟ್ ಸೆಕ್ರೆಟರಿಯವರ ಅಥವಾ ವೈಸ್ರಾಯರ ಪ್ರತಿನಿಧಿಯಾಗಿ ತಿಳಿಸಿದ ಅಭಿಪ್ರಾಯವಲ್ಲ" ಎಂದು ಲಾರ್ಡ್ ಲೋಥಿಯನ್ ರವರು ಉತ್ತರವನ್ನು ಕೊಟ್ಟರು.

ಬರ್ಲಿನ್ನಿನಲ್ಲಿ ಲಂಚ ಕಲ್ಪನೆಗಳಿಗಾಗಿ ಕಠಿಣಶಿಕ್ಷೆ

ಜರ್ಮನಿಯ ರಾಜಧಾನಿಯಾದ ಬರ್ಲಿನ್ ಪಟ್ಟಣದ ಮ್ಯುನಿಸಿಪಾಲಿಟಿಯ ಕೆಲಸಗಾರರಿಗೆ ಉಡುಪುಗಳನ್ನೊದಗಿಸಲು ಕಂಟ್ರಾಕ್ಟನ್ನು ತೆಗೆದುಕೊಂಡಿದ್ದ ಮೂವರು ಸಹೋದರರು ಆಫೀಸಿನ ಕೆಲಸಗಾರರನ್ನು ವಶಪಡಿಸಿಕೊಂಡು ಕಲ್ಪನೆ, ಮೋಸ ಮೊದಲಾದ ಕೃತ್ಯಗಳನ್ನು ನಡೆಯಿಸಿ ಮ್ಯುನಿಸಿಪಲ್ ಬ್ಯಾಂಕಿನಿಂದ ಲಕ್ಷಾಂತರ ರೂಪಾಯಿಗಳ ಸಂಪಾದನೆಮಾಡಿ ಕುದುರೆ ಜೂಜಿಗಾಗಿ ಬೇಕಾದಷ್ಟು ದ್ರವ್ಯವನ್ನು ವೆಚ್ಚಮಾಡಿ ಜರ್ಮನಿಯಲ್ಲೆಲ್ಲ ಬಹಳ ಪ್ರಖ್ಯಾತರಾಗಿದ್ದರು. ಕಡೆಯಲ್ಲಿ ಇವರ ಮೋಸವು ಹೊರಪಟ್ಟು ಮೆಜಿಸ್ಟ್ರೇಟರಲ್ಲಿ ಕಳೆದ 32 ತಿಂಗಳಿಂದಲೂ ವಿಚಾರಣೆ ನಡೆದು ಇಬ್ಬರು ಸಹೋದರರಿಗೆ 4 ವರ್ಷ ಅತ್ಯಂತ ಕಠಿಣ ಸಜವೂ ಇವರಿಗೆ ಸಹಾಯಕರಾಗಿದ್ದ ಉದ್ಯೋಗಸ್ಥರಿಗೆ 3 ರಿಂದ 18 ತಿಂಗಳವರೆಗೆ ಸಜವೂ ವಿಧಿಸಲ್ಪಟ್ಟಿತು. ಮೂರನೆಯ ಸಹೋದರನು ಅಸ್ವಸ್ಥನಾಗಿರುವುದರಿಂದ ಅವನ ವಿಚಾರಣೆಯು ಮುಂದೆ ನಡೆಯುವುದು. ಈ ವಿವಾದದಲ್ಲಿ 600 ಮಂದಿ ಸಾಕ್ಷಿ ನುಡಿದರಂತೆ.

ಬೊಂಬಾಯಿ ದಂಗೆ

ನೂರಾರು ಜನರು ಮಡಿದು ಸಾವಿರಾರು ಜನರು ಸೆರೆ ಹಿಡಿಯಲ್ಪಟ್ಟಿದ್ದಾಗ್ಯೂ ಹಿಂದು-ಮಹಮ್ಮದೀಯರ ಕಲಹವು ಶಾಂತವಾಗದೆ ಪುನಃ ಪುನಃ ನಡೆಯುತ್ತಲೇ ಇದೆ. ಹಿಂದು-ಮಹಮ್ಮದೀಯರು ಪರಸ್ಪರ ಕಲ್ಲುಗಳಿಂದ ಹೊಡೆದಾಡುವುದೂ ಚೂರಿಗಳಿಂದ ತಿವಿದು ಕೊಲ್ಲುವುದೂ ಹೆಚ್ಚುತ್ತಿರುವುದು. ಇದರಲ್ಲಿ ಹಿಂದುಗಳಿಗೇ ವಿಶೇಷ ನಷ್ಟವಾಗುತ್ತಿದೆ. ಪೋಲೀಸಿನವರು ಯಥಾಪ್ರಕಾರ ಗುಂಡುಗಳನ್ನು ಹಾರಿಸುತ್ತಿರುವರಾದರೂ ಉಭಯ ಪಕ್ಷದಲ್ಲೂ ಪ್ರಾಣನಷ್ಟವಾಗುವುದರ ವಿನಾ ಮತ್ತಾವ ಪ್ರಯೋಜನವೂ ಇಲ್ಲ. ಕಲಹ ನಡಿಯುತ್ತಿರುವ ಬೀದಿಗಳಲ್ಲಿ ಅಂಗಡಿಗಳು ಮುಚ್ಚಲ್ಪಟ್ಟು ವ್ಯಾಪಾರವೂ ಜನಸಂಚಾರವೂ ನಿಂತುಹೋಗಿವೆ. ಪೋಲೀಸಿನವರೂ ಸೈನಿಕರೂ ಗುಂಡುಗಳನ್ನು ಹಾರಿಸಿ ಪ್ರಾಣನಷ್ಟವನ್ನುಂಟುಮಾಡುತ್ತಿದ್ದರೂ ಈ ಕಲಹವನ್ನು ಸಮಾಧಾನ ಪಡಿಸಲು ಒಂದು ಸಂಘವೇರ್ಪಟ್ಟಿದ್ದರೂ ಕಲಹವು ಇನ್ನೂ ಶಾಂತವಾಗದಿರುವುದು ಅತ್ಯಂತ ಶೋಚನೀಯವಾಗಿರುವುದಲ್ಲದೆ ವ್ಯಾಪಾರದಲ್ಲೂ ಐಶ್ವರ್ಯದಲ್ಲೂ ಇಂಡ್ಯಾಕ್ಕೆ ಲಂಡನ್ನಿನಂತಿರುವುದೆಂದು ಖ್ಯಾತಿಪಡೆದಿದ್ದ ಬೊಂಬಾಯಿಪಟ್ಟಣವು ನಿರ್ನಾಮವಾಗಲು ಕಾರಣವಾಗಿರುತ್ತದೆ.

ಅಬ್ಧಿಶಯನ ಯೋಗಿ

ತಿರುವಾಂಕೂರು ಸಂಸ್ಥಾನದಲ್ಲಿ ಕಾರುನಾಗಪಳ್ಳಿ ಎಂಬ ಗ್ರಾಮವಿರುತ್ತದೆ. ಇಲ್ಲಿ ಸಮುದ್ರದ ನೀರು ಗ್ರಾಮಕ್ಕೊತ್ತಿಕೊಂಡಿರುವುದು. ಈ ಉಪ್ಪುನೀರಿನ ಮೇಲೆ ಯಾವಾಗಲೂ ದಿಗಂಬರನಾಗಿ ಒಬ್ಬ 16 ವರ್ಷ ವಯಸ್ಸಿನ ಯೋಗಿ ಮಲಗಿಕೊಂಡಿರುತ್ತಿದ್ದನು. ಅವನನ್ನು ನೀರಿನಿಂದ ಹೊರಕ್ಕೆ ಸಾಗಿಸಿಕೊಂಡು ಬರಲು ಎಷ್ಟೋ ಜನರು ಸಾಹಸಪಟ್ಟಾಗ್ಯೂ ಸಾಧ್ಯವಾಗಲಿಲ್ಲ. **ಅದರಮೇಲೆ ಕಳೆದ ತಾ|| 24 ರ ಬೆಳಿಗ್ಗೆ ಕೆಲ ದೋಣಿಯವರು ಆ ಯೋಗಿಯನ್ನೆತ್ತಿ ತಮ್ಮ ದೋಣಿಯಲ್ಲಿ ಕುಳ್ಳಿರಿಸಿಕೊಂಡು ಬೈಲು ಪ್ರದೇಶಕ್ಕೆ ಸಾಗಿಸಿಕೊಂಡು ಬಂದರು. ಆಗ ಅಸ್ಪಷ್ಟವಾಗಿ ಮಾತನಾಡಿ ಫಲಾಹಾರ ಮಾಡಿದನು. ಸಾವಿರಾರು ಜನರು ಬಂದು ನೋಡಿಕೊಂಡು ಹೋಗುತ್ತಿದ್ದರು. ಕಡೆಯಲ್ಲಿ ಅಧಿಕಾರಿಗಳು ಅವನನ್ನು ಮೋಟಾರಿನಲ್ಲಿ ಕುಳ್ಳಿರಿಸಿ**

ಕೊಂಡು ಮಾವೇಲಿಕೆರೆ ಎಂಬಲ್ಲಿಗೆ ಕರೆದುಕೊಂಡು ಹೋದರು. ಅದು ಆತನ ಜನ್ಮ ಸ್ಥಲವಂತೆ. ಕೆಲ ವರ್ಷಗಳ ಹಿಂದೆ ಇದೇ ಕಾರುನಾಗಪಳ್ಳಿಯಲ್ಲಿ ಇನ್ನೊಬ್ಬ ಯೋಗಿಯು ಇದೇ ಪ್ರಕಾರವಾಗಿ ನೀರಿನ ಮೇಲೆ ಮಲಗಿಕೊಂಡಿರುತ್ತಿದ್ದನಂತೆ.

ಇಂಡ್ಯಾಕ್ಕೆ ಬ್ರಿಟಿಷ್ ಪ್ರತಿನಿಧಿಗಳು ಬರುವುದು.

ಇಂಡ್ಯಾಲೀಗಿನವರ ಯಾಜಮಾನ್ಯದಲ್ಲಿ ಕಳೆದ ಮಂಗಳವಾರ ಸಾಯಂಕಾಲ ಪಾರ್ಲಿಮೆಂಟು ಸಭಾಮಂದಿರದೊಳಗೆ ಜಾರ್ಜ್ ಲಾನ್ಸ್‌ಬರಿಯವರ ಅಧ್ಯಕ್ಷತೆಯಲ್ಲಿ ಬಹಿರಂಗಸಭೆ ನಡೆದಿತು. ಪ್ರಫೆಸರ್ ಹೆರಾಲ್ಡ್‌ಲಾಸ್ಕೀ, ಪೆನ್ನಾ, ಗ್ರಾಹಂಪೋಲ್, ಹರಾಬ್ಜೀ, ಮಾರ್ಲೆ, ಮುನ್ಷೀ, ಈಶ್ವರಶರಣ, ಮಾರ್ಗನ್ ಜೋನ್ಸ್, ಲಲ್ಲೇಜ್ ವಿಲ್ಕಿನ್‌ಸನ್, ರಾಯಿನರ್ ಕನ್ನ ಮೊದಲಾದವರನೇಕರು ಬಂದಿದ್ದರು. "ಲೇಬರ್ ಪಕ್ಷದವರು ಪುನಃ ಅಧಿಕಾರಕ್ಕೆ ಬಂದಲ್ಲಿ ಇಂಡ್ಯಾಕ್ಕೆ ರಾಷ್ಟ್ರೀಯ ಸ್ವಪರಿಪಾಲನಕ್ಕಿಂತ ಅಧಿಕವಾದ ಸ್ವಪರಿಪಾಲನವು ಲಭಿಸುವುದೆಂದು ನನಗೆ ತೋರುತ್ತದೆ. ದೇಶೀಯ ಸಂಸ್ಥಾನಾಧಿಪತಿಗಳು ಸದ್ಭಾವವನ್ನು ತೋರಿಸದಿದ್ದರೆ ಸೆಂಟರಿನಲ್ಲಿ ಬಾಧ್ಯತೆಯನ್ನು ಕೊಡುವುದು ಎಂದಿಗೂ ಕೊನೆ ಸಾಗುವುದಿಲ್ಲವೆಂದು ತೋರುತ್ತದೆ" ಎಂದು ಲಸ್ಕಿಯವರು ಭಾಷಣಮಾಡಿ ಇಂಡ್ಯಾಮಂತ್ರಿಯವರನ್ನು ತೀವ್ರವಾಗಿ ಖಂಡಿಸಿದರು. ಭಾರತದೇಶದ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡಿ ತಿಳಿದುಕೊಳ್ಳುವುದಕ್ಕಾಗಿ ಕೆಲ ಮಂದಿ ಬ್ರಿಟಿಷ್ ಪ್ರತಿನಿಧಿಗಳನ್ನು ಇಂಡ್ಯಾಕ್ಕೆ ಕಳುಹಿಸಬೇಕೆಂದು ನಿರ್ಧರಿಸಲ್ಪಟ್ಟಿತು.

WANTED

Applications with particulars of father's name, caste, age, and examinations passed are invited so as to reach by 20th July 1932, from persons who have passed Book-keeping examination for appointment as clerk on Rs. 15—1—20 with the benefits of Provident Fund and annual bonus.

M. THAMMIAH,
Honorary Secretary,
The Palace Stables Co-operative Society Ltd.,
2 *Mysore*

ಮೈನರ್ವಾ ಮಿಲ್ಸ್ ಲಿಮಿಟೆಡ್

[3—2]

ಪ್ರತಿ **500** ರೂ. ಗೆ ಸಾಲಿಯಾನ ಶೇಕಡ **7½** ರೂ. ಬಡ್ಡಿಯಂತೆ **18,00,000** ರೂಪಾಯಿಗಳನ್ನು ಆಸ್ತಿಯ ಮೊದಲನೆಯ ಅಡಮಾನದಿಂದ ಸಾಲವಾಗಿ ತೆಗೆಯಲು ಗೊತ್ತುಮಾಡಿದೆ.

ಬೆಂಗಳೂರಲ್ಲಿರುವ ಮೇಲ್ಕಂಡ ಕಂಪೆನಿಯ **35,00,000** ರೂಪಾಯಿ ಬೆಲೆ ಬಾಳುವ ಆಸ್ತಿಯು ಈ ಸಾಲಕ್ಕೆ ಈಡಾಗಿರುತ್ತದೆ.

ಈ ಮಿಲ್ಲಿನಲ್ಲಿ **32,416** ಕದುರುಗಳು ಮತ್ತು **440** ಮಗ್ಗಗಳು ನವೀನ ಉಪಕರಣಗಳ ಸಮೇತವಾಗಿರುತ್ತವೆ.

ಈ ಸಾಲದ ಮೊಬಲಗು **1940** ನೇ ಇಸವಿ ಜನವರಿ ತಾರೀಕು **2** ರಲ್ಲಿ ತೀರಸಲ್ಪಡುವುದು. ಈ ಸಾಲದ ಮೊಬಲಗನ್ನು ಪೂರ್ತಿಯಾಗಿ ಅಗಲಿ ಭಾಗವಾಗಿ ಆಗಲಿ **1935** ನೆಯ ಜನವರಿ ತಾ॥ **2** ರಲ್ಲಿ ಅಥವಾ ಅನಂತರದಲ್ಲಿ ಬಡ್ಡಿ ಸಮೇತ ಕಂಪೆನಿಯವರಿಗೆ ಸೂಕ್ತ ತೋರಿದಂತೆ ವಾಪಸ್ಸು ಕೊಡುವ ಅಧಿಕಾರವನ್ನು ಕಂಪೆನಿಯವರಿಟ್ಟುಕೊಂಡಿರುತ್ತಾರೆ.

ರಾಜಕೀಯ ಪರಿಸ್ಥಿತಿಯ ಮೇಲೆ ವೈಸ್ರಾಯರ ಪ್ರಕಟನೆ.

ಕಳೆದ ಮಂಗಳವಾರ ಭಾರತ ರಾಜಕೀಯ ಪರಿಸ್ಥಿತಿಯನ್ನು ಕುರಿತು ವೈಸ್ರಾಯರು ಈ ಕೆಳಗಿನ ಪ್ರಕಟನೆಯನ್ನು ಹೊರಡಿಸಿದರು. ಇದೇ ದಿವಸ ಭಾರತ ಮಂತ್ರಿಯವರು ಕೂಡ ಪಾರ್ಲಿಮೆಂಟಿನಲ್ಲಿ ಇಂತಹ ಪ್ರಕಟನೆಯ ನ್ನಿತ್ತಿದರು.

ಬ್ರಿಟಿಷ್ ದೊರೆತನದವರ ರಾಜಕೀಯ ವಿಧಾನವನ್ನು ಮುಖ್ಯಮಂತ್ರಿಯು ರೌಂಡ್‌ಟೇಬಲ್ ಸಭೆಯಲ್ಲಿ ಪ್ರಕಟಿಸಿದಮೇಲೆ ಪಾರ್ಲಿಮೆಂಟಿನವರು ಕೂಡ ಅದನ್ನು ಸ್ವೀಕರಿಸಿದರು. ಆದುದರಿಂದ ಆ ಪ್ರಕಾರವಾಗಿ ಬಹಳ ಜಾಗ್ರತೆಯಲ್ಲಿ ಚಟ್ಟವ (ವಿಧಿಯ) ನ್ನು ಮಾಡಲಿಕ್ಕೆ ಬೇಕಾದ ಏರ್ಪಾಟುಗಳನ್ನು ಮಾಡಲಿಕ್ಕೆ ಬ್ರಿಟಿಷ್ ದೊರೆತನದವರು ಕೈಕೊಂಡರು.

ಮೂರು ಉಪಸಂಘಗಳು

ಎಲ್ಲಕ್ಕೂ ಅವರು ಮೂರು ಸಂಘಗಳನ್ನು ನಿಯಮಿಸಿದರು. ಆ ಸಂಘಗಳವರು ಭಾರತದೇಶಕ್ಕೆ ಬಂದು ವಿಚಾರಣೆಮಾಡಿಕೊಂಡು ಹಿಂದಿರುಗಿ ಇಂಗ್ಲೆಂಡಿಗೆ ಹೋದರು. ಈ ಮೂರು ಸಂಘಗಳಲ್ಲಿ ಎರಡು ಸಂಘಗಳ ನಿವೇದಿಕೆಯು ಬ್ರಿಟಿಷ್ ದೊರತನದವರಿಗೆ ತಲುಪಿರುತ್ತದೆ. ಮೂರನೆಯ ಸಂಘದವರ ನಿವೇದಿಕೆಯೂ ಕೂಡಲೆ ತಲುಪುವುದಾಗಿರುವುದು. ಆದುದರಿಂದ ಮುಂದೆ ನಡೆಯಬೇಕಾದ ಕಾರ್ಯಗಳನ್ನು ಕುರಿತು ಅವರು ಕೈಕೊಳ್ಳಬೇಕಾಗಿರುವ ವಿಧಾನವನ್ನು ಸೂಚಿಸಲಿಕ್ಕೆ ಅವರಿಗೀಗ ಅವಕಾಶವುಂಟಾಗಿರುವುದು.

ಒಂದು ಮಸೂದೆಯನ್ನು ಉಪಪಾದಿಸುವರು

ಬ್ರಿಟಿಷ್ ದೊರೆತನದವರು ಪಾರ್ಲಿಮೆಂಟಿನಲ್ಲಿ ಒಂದು ಮಸೂದೆಯನ್ನು ಉಪಪಾದಿಸಿರುವರು. ಅದರಲ್ಲಿಯೇ ರಾಷ್ಟ್ರೀಯ ಸ್ವಪರಿಪಾಲನಕ್ಕೂ ಫೆಡರೇಷನ್ನಿಗೂ ಏರ್ಪಾಟು ಮಾಡಲ್ಪಡುವುದು.

ಮೊದಲು ರಾಷ್ಟ್ರೀಯ ಪರಿಪಾಲನವೇರ್ಪಡುವುದು

ಆದರೆ ಫೆಡರೇಷನ್ನನ್ನು ಪ್ರಾರಂಭಿಸಲಿಕ್ಕೆ ಅವಶ್ಯವಾದ ಏರ್ಪಾಟುಗಳೆಲ್ಲ ಪೂರ್ತಿಯಾಗುವವರೆಗೂ ರಾಷ್ಟ್ರೀಯ ಸ್ವಪರಿಪಾಲನವು ಕೂಡ ನಿಲ್ಲಿಸಬೇಕಾದ ಆವಶ್ಯಕತೆಯಿಲ್ಲದೆ ಕೂಡಲೆ ರಾಷ್ಟ್ರೀಯ ಸ್ವಪರಿಪಾಲನವನ್ನು ಪ್ರಾರಂಭಿಸಲು ಕೂಡ ಮಸೂದೆಯಲ್ಲಿ ಅವಕಾಶಕಲ್ಪಿಸಲ್ಪಡುವುದು.

ಫೆಡರೇಷನ್ನಿನ ವಿವರ

ಯಾವದಾದರ ಫೆಡರೇಷನ್ನೇರ್ಪಡಿಸುವುದೇ ಬ್ರಿಟನು ದೊರೆತನದವರ ಮುಖ್ಯೋದ್ದೇಶವಾದುದರಿಂದ ಫೆಡರೇಷನ್ನಿನಲ್ಲಿ ಸೇರುವ ಪ್ರಾಂತಗಳು ಫೆಡರೇಷನಿನಲ್ಲಿ ಸೇರಲು ಸಿದ್ಧವಾಗಿರಬೇಕು. ಆದರೆ ಈ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಮಾಡಬೇಕಾಗಿರುವ ಸೂಚನೆಗಳು ಸಮಗ್ರವಾಗಿರಬೇಕು.

ರಾಷ್ಟ್ರಗಳೂ, ಸಂಸ್ಥಾನಗಳೂ ಫೆಡರಲ್ ಗೌವರ್ನಮೆಂಟುಗಳೂ, ಪಾರ್ಲಿಮೆಂಟೂ ಸಮಗ್ರದಿಂದಲೂ ಸಾಮರಸ್ಯದಿಂದಲೂ ತಂತಮ್ಮ ಕರ್ತವ್ಯಗಳನ್ನು ನೆರವೇರಿಸಲು ಆರ್ಥಿಕಾದಿ ಸೌಕರ್ಯಗಳನ್ನು ಪೂರ್ತಿಯಾಗಿ ಹೊಂದಿರುತ್ತವೆಂದು ನಂಬಲು ತಕ್ಕವಾಗಾ ನಗಳನ್ನು, ವಿಧಿಯನ್ನು ಉಪಪಾದಿಸುವ ವೇಳೆಯಲ್ಲಿ ಮುಖ್ಯವಾಗಿ ಮಾಡಬೇಕು.

ರಕ್ಷಣೆ

ರಕ್ಷಣೆಯನ್ನು ಪಡೆಯಲು ಅರ್ಹತೆಯುಳ್ಳ ಸಂಘಗಳನ್ನು ನೆರವೇರಿಸಲು ಸಾಧ್ಯವಿದ್ದ ಮಟ್ಟಿಗೂ ರಕ್ಷಣವೇರ್ಪಡಿಸಲ್ಪಡುವುದು ಎಂಬ ನಂಬಿಕೆಯನ್ನುಂಟುಮಾಡಬೇಕು. ಈ ಪರತ್ತುಗಳನ್ನು ನೆರವೇರಿಸಲು ಶಕ್ತಿವಂಚನೆಯಿಲ್ಲದೆ ಕೆಲಸಮಾಡಬೇಕೆಂದು ಬ್ರಿಟಿಷ್ ದೊರತನದವರು ಮುಖ್ಯವಾಗಿ ಕೋರುತಾರೆ. ಆದರೆ, ಇವುಗಳ ವಿವರವನ್ನು ಪರೀಕ್ಷಿಸಿದಲ್ಲಿ ಬಹಳ ನಿರೋಧಗಳು ಕಂಡುಬರುವುದು ಖಂಡಿತ. ಆ ನಿರೋಧಗಳನ್ನು ಸಾಧ್ಯವಾದ ಮಟ್ಟಿಗೆ ಜಾಗ್ರತೆಯಲ್ಲಿ ತೊಲಗಿಸಲು ತಕ್ಕ ಸಾಧನಗಳನ್ನು ಕಂಡುಹಿಡಿಯಲು ದೊರೆತನದವರು ಶ್ರದ್ಧೆವಹಿಸುವವರಾಗಿರುವರು.

ಭಾರತೀಯರ ಸಹಕಾರ

ಆದಷ್ಟು ಜಾಗ್ರತೆಯಲ್ಲೇ ಬಹಳ ಶ್ರೇಷ್ಠವಾಗಿಯೂ, ಈ ನಿರೋಧಗಳನ್ನು ತೊಲಗಿಸಲಿಕ್ಕಾಗಿಯೂ ರೌಂಡುಟೇಬಲು ಸಭೆಯವರು ನಿರ್ಣಯಿಸಿರುವ ರೀತಿಯಲ್ಲಿ ಭಾರತೀಯರ ಸಲಹೆಯನ್ನೂ ಸಹಕಾರವನ್ನೂ ಪಡೆಯಲು ಅವಲಂಬಿಸಬೇಕಾದ ವಿಧಾನವನ್ನು ಕುರಿತು ಬ್ರಿಟಿಷ್ ದೊರೆತನದವರು ಬಹಳ ಶ್ರದ್ಧೆಯಿಂದ ಆಲೋಚಿಸಿರುವರು.

3 ನೆಯ ರೌಂಡುಟೇಬಲ್ ಸಭೆಯೂ ಫೆಡರಲ್ ಸ್ಟ್ರಕ್ಚರ್ ಸಭೆಯೂ ಜರುಗುವುದಿಲ್ಲ

ಈಗಿನ ಪರಿಸ್ಥಿತಿಯನ್ನು ಕುರಿತು ಬ್ರಿಟಿಷ್ ದೊರೆತನದವರು ಬಹಳ ಶ್ರದ್ಧೆಯಿಂದ ಆಲೋಚಿಸಿರುವರು. ಈಗೇರ್ಪಟ್ಟಿರುವ ಪರಿಸ್ಥಿತಿಯಲ್ಲಿ ಅತ್ಯಧಿಕ ಸಂಖ್ಯಾಕರಾದ ಮೆಂಬರುಗಳಿಂದ ಕೂಡಿದ ರೌಂಡುಟೇಬಲು ಸಭೆಯಾಗಲಿ ಫೆಡರಲು ಸ್ಟ್ರಕ್ಚರ್ ಸಂಘ ಸಭೆಯಾಗಲಿ ನಡೆಯುವುದರಿಂದ ಬಹಳ ಆಲಸ್ಯವಾಗುವುದು. ಅತ್ಯಂತ ಮುಖ್ಯವಾದ ಸಮಸ್ಯೆಗಳನ್ನು ಬಹಳ ಜಾಗ್ರತೆಯಲ್ಲಿ ಬಗೆಹರಿಸಬೇಕಾಗಿರುವುದಕ್ಕೆ ಈ ಸಭೆಗಳಿಂದ ಬಹಳ ಸಾವಕಾಶವಾಗುವುದೆಂದು ದೊರೆತನದವರು ನಿರ್ಧರಿಸಿರುವರು. ಇದಕ್ಕೆ ದೊರೆತನದವರು ಅವಲಂಬಿಸಲಿಕ್ಕಿರುವ ಪದ್ಧತಿಯು ಹಿಂದಲ ಪದ್ಧತಿಗೆ ಕೊಂಚ ವ್ಯತ್ಯಾಸವಾಗಿರುವುದು. ಇದರಿಂದ ಇಂತಹ ಮುಖ್ಯ ಸಮಸ್ಯೆಗಳನ್ನು ಶೀಘ್ರದಲ್ಲಿ ಬಗೆಹರಿಸಲು ಅವಕಾಶಕಲ್ಪಿಸಲ್ಪಡುವುದು. ಈವರೆಗೆ ನಡೆದಿರುವ ಕೆಲಸಕ್ಕೆ ಮೂಲಾಧಾರವಾಗಿ ಭಾರತೀಯರ ಸಹಕಾರವು ಕೂಡ ಸಂಪೂರ್ಣವಾಗಿ ಲಭಿಸುವುದೆಂದು ಬ್ರಿಟಿಷ್ ದೊರತನದವರು ನಿರ್ಧರಿಸಿರುವರು.

ಅಲ್ಪ ಸಂಖ್ಯಾಕರ ಸಮಸ್ಯ

ಮೊದಲು ಆರು ನಿರೋಧಗಳನ್ನು ತೊಲಗಿಸುವರು. ಈಗ ಅಭಿವೃದ್ಧಿಗೆ ನಿರೋಧಕವಾಗಿರುವ ಅಲ್ಪ ಸಂಖ್ಯಾಕರ ಸಮಸ್ಯೆಗೆ ಸಂಬಂಧಪಟ್ಟ ಕೆಲ ವಿಷಯಗಳನ್ನು ಕುರಿತು ತಮ್ಮ ಪರಿಷ್ಕಾರವನ್ನು ತಿಳಿಸಲಿಕ್ಕೆ ದೊರೆತನದವರು ಪ್ರಯತ್ನಿಸಿ ಅದನ್ನು ಪ್ರಕಟಿಸುವರು. ಆ ನಿರ್ಧಾರದಲ್ಲಿ ಕಂಡ ಮುಖ್ಯ ಸಮಸ್ಯೆಗಳನ್ನು ಕುರಿತು ಅವರು ಈಗ ಪರ್ಯಾಲೋಚಿಸುತ್ತಿರುವರು. ಅದಕ್ಕೆ ಪುನಃ ಹೊಸ ತೊಡಕುಗಳೇನೂ ಹುಟ್ಟದಿದ್ದಲ್ಲಿ ಈ ಬೇಸಿಗೆಯ ಕಾಲವು ಮುಗಿಯುವುದರೊಳಗಾಗಿಯೇ ಅವರು ತಮ್ಮ ಪರಿಷ್ಕಾರವನ್ನು ಪ್ರಕಟಿಸುವರು.

ರೌಂಡುಟೇಬಲು ಆಲೋಚನ ಸಂಘ.

ಈ ಪ್ರಕಟನೆಯಿಂದ ಅಲ್ಪ ಸಂಖ್ಯಾಕರ ಸಮಸ್ಯೆಗೆ ಸಂಬಂಧಿಸಿದ ನಿರೋಧಗಳನ್ನು ತಪ್ಪಿಸಿ ಕೂಡಲೆ ರೌಂಡುಟೇಬಲು ಆಲೋಚನ ಸಂಘ ಸಭೆಯು ಪುನಃ ಪ್ರಾರಂಭಿಸಲ್ಪಡುವುದು. ಅವರು ಅನೇಕ ಮುಖ್ಯ ಸಮಸ್ಯೆಗಳನ್ನು ಪರಿಷ್ಕರಿಸಬೇಕಾಗಿರುವುದಲ್ಲದೆ ವಿರಾಮವಿಲ್ಲದೆ ಅವರು ಕೆಲಸ ಮಾಡುವರು. ಆ ಸಮಸ್ಯೆಗಳಲ್ಲಿ ಬಹಳ ಸಮಸ್ಯೆಗಳನ್ನು ಕುರಿತು ಈವರೆಗೆ ಲಂಡನ್ನಿನಲ್ಲಿ ರೌಂಡುಟೇಬಲ್ ಸಭೆಯವರೂ, ಫೆಡರಲ್ ಕಮಿಟಿಯವರೂ ಯೋಚಿಸಿರಲಿಲ್ಲ.

ಸಂಸ್ಥಾನಗಳ ಸಮಸ್ಯ

ಬ್ರಿಟಿಷ್ ಇಂಡ್ಯಾಕ್ಕೂ ಸಂಸ್ಥಾನಗಳಿಗೂ ಸಂಬಂಧಪಟ್ಟ ಸಮಸ್ಯೆಗಳನ್ನು ಕುರಿತು ಆಲೋಚಿಸಿದ ಸಂಘದವರು ಚರ್ಚಿಸುತ್ತಿದ್ದ ಬರೀ ಸಂಸ್ಥಾನಗಳಿಗೆ ಮಾತ್ರ ಸಂಬಂಧಿಸಿದ ಕಠಿನ ಸಮಸ್ಯೆಗಳನ್ನು ಬಹಳ ಜಾಗ್ರತೆಯಲ್ಲಿ ಪರಿಷ್ಕರಿಸಲು ಬ್ರಿಟಿಷ್ ದೊರತನದವರು ಯತ್ನಿಸುವರು. ಆಲೋಚನ ಸಂಘದವರ ಚರ್ಯದಿಂದ ಬಹಳ ಅಭಿವೃದ್ಧಿಯುಂಟಾಗುವುದೆಂದು ದೊರೆತನದವರು ಬಹಳವಾಗಿ ಆಶಿಸುತಾರೆ.

ಲಂಡನ್ನಿನಲ್ಲಿ ವ್ಯಕ್ತಿಗಳೊಡನೆ ಆಲೋಚನೆ

ಆಲೋಚನ ಸಂಘದವರ ಕೆಲಸವು ಮುಗಿಯುವಷ್ಟರಲ್ಲಿ ಆರ್ಥಿಕ ರಕ್ಷಣೆ ಮೊದಲಾದ ಕೆಲ ಸಮಸ್ಯೆಗಳು ಮಾತ್ರ ಉಳಿದಿರುತ್ತವೆ. ಅಂತಹ ಸಮಸ್ಯೆಗಳ ವಿಚಾರವಾಗಿ ಅಭಿಪ್ರಾಯವನ್ನು ಕೊಡಲು ತಕ್ಕ ಅರ್ಹತೆಯನ್ನೂ, ಅನುಭವವನ್ನೂ ಉಳ್ಳ ವ್ಯಕ್ತಿಗಳೊಂದಿಗೆ ಲಂಡನ್ನಿನಲ್ಲಿ ಅವುಗಳ ವಿಚಾರವಾಗಿ ದೊರತನದವರು ಆಲೋಚಿಸುವರು.

ವಿಧಿಯುಪಪಾದನೆ

ಈ ರೀತಿಯಾಗಿ ಹೇಳಿಕೊಳ್ಳುವ ಮೇರೆಗೆ ಎಲ್ಲ ಕೆಲಸಗಳನ್ನು ಸರಿಯಾಗಿ ನೆರವೇರಿಸಿ ಅನಂತರ ಅವರು ಪಾರ್ಲಿಮೆಂಟಿನಲ್ಲಿ ವಿಧಿಯನ್ನು ಉಪಪಾದಿಸಬೇಕೆಂದಿರುವರು.

ಕೆಲ ಮುಖ್ಯ ಸಮಸ್ಯೆಗಳನ್ನು ಕುರಿತು ಮಾತ್ರ ಕಡೆಯಲ್ಲಿ ಭಾರತೀಯರೊಡನೆ ಆಲೋಚಿಸಬೇಕೆಂದು ಅವರು ನಿಶ್ಚಯಿಸಿರುವರು.

ಜಾಯಿಂಟು ಪಾರ್ಲಿಮೆಂಟು ಸೆಲೆಕ್ಟ್ ಕಮಿಟಿ

"ಭಾರತ ರಾಜ್ಯಾಂಗ ವಿಧಾನವನ್ನು ಸರಿಪಡಿಸುವಲ್ಲಿ ದೊರೆತನದವರು ಮಾಡಿರುವ ಸೂಚನೆಗಳನ್ನು ಕುರಿತು ಆಲೋಚಿಸಲಿಕ್ಕೆ ಎರಡು ಪಾರ್ಲಿಮೆಂಟು ಸಭೆಯವರೂ ಒಟ್ಟುಗೂಡಿ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನು ಏರ್ಪಡಿಸಬೇಕು. ಭಾರತೀಯ ಪ್ರತಿನಿಧಿಗಳೊಡನೆ ಆಲೋಚಿಸಲು ಆ ಕಮಿಟಿಗೆ ಅವಧಿ ಕೊಡಬೇಕು" ಎಂದು ದೊರೆತನದವರು ಪಾರ್ಲಿಮೆಂಟಿನವರನ್ನು ಕೇಳುವರು. ಪಾರ್ಲಿಮೆಂಟಿನಲ್ಲಿ ವಿಧಿಯನ್ನುಪಪಾದಿಸುವುದಕ್ಕೆ ಮೊದಲು ಜಾಯಿಂಟ್ ಕಮಿಟಿಯವರು ವಿಧಿಯಲ್ಲಿರುವ ಸೂಚನೆಗಳನ್ನು ಕುರಿತು ಆಲೋಚಿಸುವರಲ್ಲದೆ ಇದಕ್ಕೆ ಭಾರತೀಯರೂ ಸಮ್ಮತಿಸುವರೆಂದು ದೊರತನದವರು ತಿಳಿಯುತಾರೆ. ಆಗ ಆಲೋಚನೆಯ ತೀರ್ಮಾನವಾಗುವುದು. ಆ ವೇಳೆಯಲ್ಲಿ ಭಾರತೀಯರು ಪಾರ್ಲಿಮೆಂಟು ಕಮಿಟಿಯವರಿಗೆ ಸಹಕಾರಿಗಳಾಗಿದ್ದು ತಮ್ಮಭಿಪ್ರಾಯವನ್ನು ಅವರಿಗೆ ತಿಳಿಸುವುದರಿಂದ ಬಹಳ ಅನುಕೂಲವಾಗುವುದೆಂದು ದೊರೆತನದವರು ನಂಬುತಾರೆ.

ಕಾಲವಿಳಂಬ

ರೌಂಡುಟೇಬಲು ಸಲಹಸಂಘದವರ ವಿಚಾರಣೆಯು ಪೂರೈಸುತಲೆ ಪಾರ್ಲಿಮೆಂಟು ಜಾಯಿಂಟು ಕಮಿಟಿಯವರ ವಿಚಾರಣೆಯು ಪ್ರಾರಂಭವಾಗಲು ತಕ್ಕ ಅವಕಾಶವುಂಟಾದರೆ ನಾನು ಮೇಲೆ ಹೇಳಿದ ಪ್ರಕಾರ ಎಲ್ಲವೂ ಜರುಗುವುದು, ಇಲ್ಲವಾದಲ್ಲಿ ಪುನಃ ಒಂದು ಸಂಘದವರು ಈ ವಿಷಯವನ್ನು ಚೆನ್ನಾಗಿ ಆಲೋಚಿಸಿದ ಹೊರತು ಪಾರ್ಲಿಮೆಂಟು ರೀಕಮಿಟಿಯವರ ವಿಚಾರಣೆಯು ಪ್ರಾರಂಭವಾಗಲು ಅವಕಾಶವಿಲ್ಲವೆಂದು ದೊರೆತನದವರಿಗೆ ತೋರಿದಲ್ಲಿ ಆಗ ವಿಧಿಯನ್ನುಪಪಾದಿಸಲು ಇನ್ನು ಕೊಂಚ ಆಲಸ್ಯವಾಗುವುದಾದರೆ ದೊರೆತನದವರು ಆಗಿನ ಪರಿಸ್ಥಿತಿಗಳಿಗೆ ಅನುಕೂಲವಾದ ರೀತಿಯಲ್ಲಿ ಏರ್ಪಾಟು ಮಾಡುವರು.

ಲಂಡನ್ನಿನಲ್ಲಿ ಆಲೋಚಿಸಬೇಕಾಗಿರುವ ಸಂಘ

ದೊರೆತನದವರ ಅಭಿಪ್ರಾಯವು ಕೊನೆಸಾಗುವುದಿಲ್ಲವೆಂದು ಅವರಿಗೆ ತೋರಿದ ವಿನಾ ಅವರು ಲಂಡನ್ನಿಗೆ ಅತ್ಯಧಿಕಸಂಖ್ಯೆಯ ಮೆಂಬರಿರುವ ಸಂಘವನ್ನು ಆಹ್ವಾನಿಸಬೇಕೆಂದಿರುವುದಿಲ್ಲ. ಪುನಃ ಆಲೋಚಿಸುವುದು ಆವಶ್ಯಕವೆಂದು ನಿರ್ಣಯಿಸಿದಲ್ಲಿ ವಿಷಯಗಳ ಸಂಖ್ಯೆಯನ್ನನುಸರಿಸಿ ಅವರು ವ್ಯಕ್ತಿಗಳನ್ನು ಆಹ್ವಾನಿಸಲು ಯೋಚಿಸಿರುವರು.

ಈ ಪ್ರಕಾರ ಮಾಡಿದರೆ ಕೆಲಸವು ಜಾಗ್ರತೆ ನೆರವೇರುವುದು. ಬ್ರಿಟನ್ನಿನ ಲೇಬರು ಲಿಬರಲು ಕನ್ಸರ್ವೇಟಿವ್ ಪಾರ್ಟಿಯವರುಗಳು ಒಟ್ಟುಗೂಡಿ ಆಲೋಚಿಸಲಿಕ್ಕೂ ಬ್ರಿಟಿಷು ಪ್ರತಿನಿಧಿಗಳೂ, ಭಾರತ ಪ್ರತಿನಿಧಿಗಳೂ ಕೂಡಿ ಆಲೋಚಿಸಲಿಕ್ಕೂ ಅವಕಾಶವಿರುವುದು. ರಾಜ್ಯಾಂಗ ವಿಧಾನವು ಸಫಲವಾಗಲಿಕ್ಕೆ ಇದು ಮೂಲಾಧಾರವಾಗಿರುವುದೆಂದು ಬ್ರಿಟಿಷು ದೊರೆತನದವರು ನಿರ್ಣಯಿಸಿರುವರು" ಎಂದು ವೈಸ್ರಾಯರು ಪ್ರಕಟಿಸಿರುತಾರೆ.

ಕಾಶ್ಮೀರದ ಸತ್ಯಸ್ಥಿತಿ ಏನಿದೆ?

ಪೂರ್ವಪೀಠಿಕೆ

ಕಳೆದ 6-7 ತಿಂಗಳುಗಳಿಂದ ಕಾಶ್ಮೀರದ ಪ್ರಕರಣವು ಧುಮಧುಮಿಸುತ್ತಿರುವದು. ಈ ಆಂದೋಲನದ ಹೊಟ್ಟೆಯಲ್ಲಿ ಯಾವ ಮಹತ್ವಾಕಾಂಕ್ಷೆಯು ನೆಟ್ಟಿರುವದೆಂದು ನೋಡಿದರೆ ವಾಚಕರಿಗೆ ಈ ಚಳವಳಿಯ ಸತ್ಯಸ್ಥಿತಿ ತಿಳಿದೀತು.

ಸೃಷ್ಟಿಸೌಂದರ್ಯದಲ್ಲಿ ಸ್ವಿಝರ್ಲಂಡವು ಹೇಗೋ ಹಾಗೆ ಕಾಶ್ಮೀರ ದೇಶವು ಸ್ವಾಭಾವಿಕ ಸೌಂದರ್ಯದಲ್ಲಿಯೂ ಖನಿಜ ಸಂಪತ್ತಿನಿಂದಲೂ ಕೈಗಾರಿಕೆಗಳಿಂದಲೂ ಭೂಲೋಕದ ನಂದನವನವಾಗಿರುವದು. ಅಲ್ಲಿ ಬಹುಸಂಖ್ಯ ವಸತಿಯು ಮುಸಲ್ಮಾನರದಿರುವದು. ಈ ಮುಸಲ್ಮಾನರನ್ನು ಗಝನಿ ಮಹಮ್ಮದನ ಕಾಲದಿಂದ, ಅನಂತರದ ಮುಸಲ್ಮಾನರ ಆಳಿಕೆಯ ಕಾಲದಲ್ಲಿ ಅವರನ್ನು ಜುಲುಮೆಯಿಂದ ಮುಸಲ್ಮಾನರನ್ನಾಗಿ ಮಾಡುವದರಲ್ಲಿ ಬಂದಿದೆ.

ಈ ಮುಸಲ್ಮಾನರು ಶುದ್ಧ ಆರ್ಯರಕ್ತದವರಿರುವರು. ಇವರಲ್ಲಿ ಸಂಸ್ಕೃತ ಭಾಷೆಯ ತವರುಮನೆಯೆಂದು ಪ್ರಸಿದ್ಧಿಗೊಂಡ ಕಾಶ್ಮೀರದ ದೊಡ್ಡ ದೊಡ್ಡ ಪಂಡಿತರಿಗೆ ಜುಲುಮೆಯಿಂದ ಇಸ್ಲಾಮಧರ್ಮ ಸ್ವೀಕರಿಸಬೇಕಾಯಿತು. ಇನ್ನು ಕೆಲವರಿಗೆ ಸ್ಥಾನತ್ಯಾಗಮಾಡಬೇಕಾಯಿತು. (ಉದಾ:—ನೆಹರು, ಮಾಲವೀಯ, ಸಪ್ರು ಮುಂತಾದ ಕಾಶ್ಮೀರ ಪಂಡಿತರ ಮನೆಗಳು ಇದೇ ಜುಲುಮೆಯ ಕಾಲದಲ್ಲಿ ಸ್ಥಾನತ್ಯಾಗಮಾಡಿದವರಿರುವರು).

ಬ್ರಿಟಿಷ್ ಹಿಂದುಸ್ಥಾನದಲ್ಲಿ ದಂಗೆಗಳಾದಂತೆ ಸಂಸ್ಥಾನಗಳಲ್ಲಿ ಈ ಹಿಂದು-ಮುಸಲ್ಮಾನರಲ್ಲಿಯ ವಡವಾಗ್ನಿಯು ಎಂದೂ ವಿಕೋಪಗೊಂಡಿಲ್ಲ. ಹೀಗಿರುವಾಗ ಬ್ರಿಟಿಷ್ ಹದ್ದಿನೊಳಗಿನ ವಿಘ್ನಸಂತೋಷಿಗಳಾದ ಕೆಲ ಮುಸಲ್ಮಾನರು ತಮ್ಮ ಶಿಕ್ಷಣದಿಂದ, ತಮ್ಮ ಬಹಳ ವರ್ಷಗಳಿಂದ ನೆನಸಿಟ್ಟ ಇಚ್ಛೆಯ ತೃಪ್ತಿಯ ಬಗ್ಗೆ ಕೆಲ ಸಂಸ್ಥಾನಗಳಲ್ಲಿ ದಂಗೆಗಳನ್ನು ಇತ್ತೀಚಿಗಾಗಿ ಮಾಡಿಸಿದ ಉದಾಹರಣೆಗಳುಂಟು. ಅದರಂತೆಯೇ ಹೊರಗಿನ ಮುಸಲ್ಮಾನರ ಕತ್ರ್ಯತ್ವದ ಫಲವು ಈಗಿನ ಕಾಶ್ಮೀರದ ದಂಗೆಯಲ್ಲಿ ಇರುವದು. ಇದರಿಂದ ಹಿಂದುಗಳು ಯೋಗ್ಯಬೋಧ ಪಡೆದು ಎಚ್ಚರಾಗಲೆಂದೇ, ಕಾಶ್ಮೀರದ ಪ್ರಶ್ನೆ ಮುಂದಿಟ್ಟುಕೊಂಡು ಹಿಂದುಗಳ ಸ್ಥಿತಿಯ ವಿವೇಚನೆ ಮಾಡುತ್ತೇನೆ.

ಮುಸಲ್ಮಾನೀ ರಾಷ್ಟ್ರಗಳಲ್ಲಿ ಕಳೆದ 20-25 ವರ್ಷಗಳಿಂದ ಪ್ಯಾನ್-ಇಸ್ಲಾಮಿಝಮದ ಮಹತ್ವಾಕಾಂಕ್ಷೆಯು ತುಂಬಿರುತ್ತದೆ. ಕಳೆದ ಮಹಾಯುದ್ಧದಲ್ಲಿ ಕಾನ್ಸ್ಟಂಟಿನೋಪಲದ ಖಿಲಾಫತದ ಮೇಲೆ ಗದೆಯು ಬಂದಂದಿನಿಂದ, ಅವರ (ಮುಸಲ್ಮಾನರ) ಧಾರ್ಮಿಕ ಜಾಗೃತಿಯನ್ನು ಮುಲ್ಲಾ-ಮೌಲ್ವಿಗಳು ಅಧಿಕ ಪ್ರಜ್ವಲಿತ ಮಾಡಿದರು ಮತ್ತು ಅದರ ಉಪಯೋಗವು

ತಮ್ಮ ಕಾರ್ಯದಲ್ಲಿ ಅವರೆಂದು ಮಹಾತ್ಮರಿಗೆ ಎಣಿಸು ಮತ್ತು ಹಿಂದುಗಳೂ ಕಾಂಗ್ರೆಸದ ವತಿಯಿಂದ ಅಧಿಕ ಪ್ರೋತ್ಸಾಹನ ಕೊಟ್ಟರು. ಅಂದಿನಿಂದ ಕಾಂಗ್ರೆಸದ ಧೋರಣವು ಮುಸಲ್ಮಾನರ ಬಾಬಿಗೆ ಕೈಹಚ್ಚಿ ಸಂತೋಷಿಸುವದೇ ಆಗಿದೆ. ಅವರು ಬೇಡಿದ ಸವಲತ್ತುಗಳನ್ನು ಅವರಿಗೆ ಕೊಡುವುದು ಮತ್ತು ಕೊಡಿಕೊಳ್ಳುವ ಕಾರ್ಯಕರ್ತ ನೀತಿಯು ಸಿದ್ಧಿಯಾದಂದಿನಿಂದ ಮುಸಲ್ಮಾನರಲ್ಲಿ ಕೆಲವರು ದುರಾಗ್ರಹವನ್ನು ನಡಿಸಿದರು. ಹಿಂದುಗಳಿಗೆ ಅಥವಾ ಕಾಂಗ್ರೆಸಿಗೆ ಈ ಧೋರಣದಿಂದ ನಾವು ಮುಸಲ್ಮಾನರ ದ್ವೇಷಾಗ್ನಿಯು ಮೇಲೆ ನೀರೆರೆಯುತ್ತೇವೆ ಎಂದು ಎಣಿಸುತ್ತಿದ್ದರೋ ಏನೋ. ಆದರೆ ಅನುಭವವು ಇದರ ವಿರುದ್ಧ ಬರುತ್ತಿತ್ತು. ಮಹಾತ್ಮಾಜಿಯವರ ಇಚ್ಛೆಯಿಂದ ಈ ಖಿಲಾಫತ್ ಪ್ರಕರಣವು ಕಾಂಗ್ರೆಸಿನ ಮಂಟಪದಲ್ಲಿ ಸೇರಿತು. ಆ ವೇಳೆಯಲ್ಲಿ ಮುಸಲ್ಮಾನರ ಪುಢಾರಿಗಳು ಹಿಂದು-ಮುಸಲ್ಮಾನರ ರಾಜಿಯ ಬಗ್ಗೆ ಸುಂದರವಾದ ಉಪನ್ಯಾಸಗಳನ್ನು ಕೊಡುತ್ತಿದ್ದರು. ಆ ಕಾಲದಲ್ಲಿ ಹಿಂದು-ಮುಸಲ್ಮಾನರ ರಾಜಿಯ ನಾಟಕವೂ ಆಯಿತು. ಇದರ ಮರ್ಮವು ಸಾಧುಸ್ವಭಾವದ ಹಿಂದುಗಳಿಗೆ ತಿಳಿಯಲಿಲ್ಲ. ಅಲ್ಲಿ ಬಂಧುಗಳ ಆಟವಂತೂ ಹೇಳಲಶಕ್ಯ! ಇವರು ಮಹಾತ್ಮಾಜಿಯವರ ವಿಷಯದಲ್ಲಂತೂ ಗುರು-ಶಿಷ್ಯರ ವಿನಾ ಶಬ್ದವಿಲ್ಲ, ಆ ಪ್ರೇಮಾಲಿಂಗನ ಮತ್ತು ಖಾದಿಯ ಉಡುಪುಗಳನ್ನು ಈಗ ಲಕ್ಷ್ಯಕ್ಕೆ ತಂದರೆ ಅಲ್ಲಿ ಬಂಧುಗಳಿವರೋ? ಎಂದು ಕಣ್ಣೆದುರಿಗೆ ಪ್ರಶ್ನೆ ನಿಲ್ಲುತ್ತದೆ. ತಾತ್ಪರ್ಯವೇನೆಂದರೆ ಈ ನೋಟ ಇಷ್ಟು ಪಸರಿಸಿತೋ, ಸಾಧಾರಣ ಮನುಷ್ಯನಿಗೆ ಸಂಶಯ ಬರಬೇಕು! ಅದೇ ಅಂತ್ಯಕ್ಕೆ ನಿಜವಾಯಿತು.

ಅಲ್ಲಿ ಬಂಧುಗಳೂ ಇಕ್‌ಬೋಲರೂ

ಅಲ್ಲಿ ಬಂಧು ಮತ್ತು ಆ ಪಕ್ಷದ ಇತರ ಮುಸಲ್ಮಾನರ ಇಚ್ಛೆಯು ಕ್ರಮೇಣ ಮಾಪಿಳ್ಳೆಯವರ ದಂಗೆ, ಕಲಬುರ್ಗಿ, ಕೋಹಟ, ನಾಗಪೂರ, ಕಲಕತ್ತಾ ಮತ್ತು ಸರ್ಹಾಣಪೂರ ಮುಂತಾದ ಕಡೆಯ ದಂಗೆಗಳಿಂದ ವ್ಯಕ್ತವಾಯಿತು. ಕಡೆಗೆ ಛೋಟಾಬಾಯಿ (ಮಹಮ್ಮದಲ್ಲಿ) ಯವರು ಕೋಕೋನಾಡದ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನದಿಂದ "ಅಸ್ಪೃಶ್ಯರನ್ನು ಅರ್ಧ ಹಿಂದುಗಳು, ಅರ್ಧ ಮುಸಲ್ಮಾನರು ಹಂಚಿಕೊಳ್ಳಬೇಕು" ಎಂಬಲ್ಲಿಯವರೆಗೆ ಬಂದು ಸುಲಭವಾದ ಅಸ್ಪೃಶ್ಯತಾ ನಿವಾರಣೆಯ ಮಾರ್ಗವನ್ನು ತೋರಿಸಿದರು! ಈಗಂತೂ ಬಡಾಭಾಯಿ (ಶೌಕತ ಅಲ್ಲಿ) ಮುಂತಾದವರು ಮಹಾತ್ಮಾಜೀ, ಕಾಂಗ್ರೆಸ ಮತ್ತು ಹಿಂದುಗಳನ್ನು ಯಾವ ದೃಷ್ಟಿಯಿಂದ ನೋಡುತ್ತಿರುವರೆಂದು ಪ್ರತಿ ದಿನವೂ ಕಾಣುತ್ತದೆ. ಇದರ ಮೇಲಿಂದ ನನ್ನ ಪ್ರಿಯಾಸೂಜ್ಞ ವಾಚಕರಿಗೆ ಸದ್ಯದ ಕಾಶ್ಮೀರ ಪ್ರಕರಣದಲ್ಲಿ ಏನು ಬೇಯುತ್ತಿರುವದೆಂದು ಸಂಶಯ ಬಾರದೇ ಇರದು.

ಹೋದವರ್ಷ ಅಖಿಲಭಾರತೀಯ ಮುಸ್ಲೀಂ ಅಧಿವೇಶನದ ಅಧ್ಯಕ್ಷಸ್ಥಾನದಿಂದ ಸರ್ ಮಹಮ್ಮದ ಇಕ್‌ಬೋಲರು (ಈ ಗೃಹಸ್ಥರು 1921 ರಲ್ಲಿ ಸ್ವಾತಂತ್ರ್ಯದ ಪುರಸ್ಕರ್ತರೆಂದು ಹೆಸರಾಗಿದ್ದರು. ಇವರು ಪರ್ಷಿಯನ್, ಉರ್ದು ಭಾಷೆಗಳಲ್ಲಿ ಉತ್ತಮ ಕವಿಗಳಿವರು. ಆಗ ರಚಿಸಿದ ಹಿಂದುಸ್ಥಾನದ ಸ್ವಾತಂತ್ರ್ಯಗೀತಗಳು ಬಹು ಪ್ರಸಿದ್ಧವಿವೆ. ಆಗ ಇವರು ಸರ್ ಆಗಿದ್ದಿಲ್ಲ!) ಮಾಡಿದ ಭಾಷಣದಲ್ಲಿ ಬಹಳ ವರ್ಷಗಳಿಂದ ಜತನಮಾಡಿದ "ಸಂಯುಕ್ತ ಮುಸಲ್ಮಾನೀ ರಾಷ್ಟ್ರ" ದ ಸ್ವಪ್ನವನ್ನು ವ್ಯಕ್ತಮಾಡಿದರು. ಇದರ ಬಗ್ಗೆ ಕೆಲ ಮುಸಲ್ಮಾನರು ಶಾಬ್ದಿಕ ನಿಷೇದಮಾಡಿದರೂ, ಇದರಲ್ಲಿ ಏನು ಬೇಯುತ್ತಿರುವದೆಂದು ಸ್ಪಷ್ಟ ಕಾಣುತ್ತದೆ.

ಕೆಲ ತಿಂಗಳ ಹಿಂದೆ ಕಾಶ್ಮೀರದಲ್ಲಿ ಡಾಕ್ಕಾದ ನವಾಬರ ಅಧ್ಯಕ್ಷತೆಯಲ್ಲಿ ಮುಸಲ್ಮಾನರ ಸಮ್ಮೇಳನವಾಗಿತ್ತು. ಆ ಕಾಲದಲ್ಲಿ ಈ ಮಹಾಶಯರು "ಮುಸಲ್ಮಾನರು ಬಹು ಸಂಖ್ಯಾಕರಿರುವಾಗ ಹಿಂದು ರಾಜನು ಇಲ್ಲಿ ಆಳುವದು ಇಸ್ಲಾಮಕ್ಕೆ ಕಳಂಕ" ವೆಂದು ಹೇಳಿದರು. ಈ ಭಾಷಣದ ಬಗ್ಗೆ ಹಿಂದು ಹಿತದ ಬಗ್ಗೆ ಹೆಣಗಾಡುವ ಕೆಲ ಪತ್ರಿಕೆಗಳು ಹಿಂದುಗಳಿಗೆ ಎಚ್ಚರಿಕೆ ಕೊಟ್ಟವು. ಆದರೆ ಹಿಂದುಗಳು ಕುಂಭಕರ್ಣನ ಘೋರನಿದ್ರೆಯಲ್ಲಿ ಮಗ್ನರಾಗಿರುವಾಗ ಹೇಗೆ ಕೇಳಿಸಬೇಕು? ಕಾಶ್ಮೀರದಲ್ಲಿ ಮುಸಲ್ಮಾನರಿಗೆ ಇದ್ದ ಸವಲತ್ತು ನೋಡಿದರೆ, ರಾಜನು ಮುಸಲ್ಮಾನನಿದ್ದರೂ ಇದಕ್ಕಿಂತ ಹೆಚ್ಚಿಗೆ ಮಾಡಲಾರದೆಂದು ಕಂಡೀತು.

ಒಂದು ಹೋಲಿಕೆ

ಮುಸಲ್ಮಾನರ ಈ ಚಳವಳಿಯ ಕಾರಣವು ರಾಜಕೀಯ ಹಕ್ಕುಗಳನ್ನು ಪಡೆಯುವದಿದ್ದರೆ, ಅದಕ್ಕೆ ಯಾರೂ ಅಡ್ಡಿ ಮಾಡಲು ಕಾರಣವು ಇಲ್ಲಾಗಿತ್ತು. ಆದರೆ ಹೆಸರಿಗೆ ಮಾತ್ರ ರಾಜಕೀಯ ಹಕ್ಕನ್ನು ಪಡೆಯುವ ಚಳವಳಿಯೆಂದು ಕೂಗು, ಕಾಶ್ಮೀರದ ಮಹಾರಾಜರಾದ ಸರ್ ಹರಿಸಿಂಗರನ್ನು ಪದಚ್ಯುತಮಾಡಿ ಆ ಸ್ಥಾನದಲ್ಲಿ ಅಮಾನುಲ್ಲಾ ಶಹಾರವರ ಬಂಧುಗಳೂ, ಪಾನ್ ಇಸ್ಲಾಮಿಝಮದ ಪುರಸ್ಕರ್ತರೂ ಆದ ಇನಾಯತುಲ್ಲಾ ಅಥವಾ ಇನ್ನಾರಿಗೋ ಕೊಡಿಸುವ ಗುಪ್ತ ಕಾರಸ್ಥಾನವಿದೆ. ಇದರ ವಿರುದ್ಧ, ನೂರಕ್ಕೆ 90 ಜನರು ಹಿಂದುಗಳಿದ್ದ ಹೈದರಬಾದ (ದಕ್ಷಿಣ), ಜುನಾಗಡ, ಭೋಪಾಳ, ರಾಮಪೂರ ಮುಂತಾದ ಸಂಸ್ಥಾನಗಳಲ್ಲಿ ನೋಡಿರಿ, ಬಹು ಸಂಖ್ಯಾಕರು ಹಿಂದುಗಳಿದ್ದೂ, ತಮ್ಮ ಜೀವಿತ-ವಿತ್ತದ ಮತ್ತು ಧರ್ಮದ ಶಾಶ್ವತವಿಲ್ಲ. ಶಿಕ್ಷಣ ಮತ್ತು ನವಕರಿ ವಿಷಯದಲ್ಲಂತೂ ಆಗುವ ಕಷ್ಟಗಳನ್ನು ಬರೆಯದಿರುವದೇ ಒಳಿತು. ಇಷ್ಟೇ ಅಲ್ಲ ಹೈದರಬಾದದಲ್ಲಿಯ ಪ್ರಜೆಗಳಲ್ಲಿ 60 ಲಕ್ಷ ತೆಲುಗು, 34 ಲಕ್ಷ ಮರಾಠಿ ಮತ್ತು 16-17 ಲಕ್ಷ ಕನ್ನಡ ಮಾತಾಡುವ ಹಿಂದುಗಳಿದ್ದು ಅವರಿಗೆ ಮಾತೃ ಭಾಷೆಯ ಶಿಕ್ಷಣವಿಲ್ಲ. ಯಾರಾದರೂ ಖಾಸಗಿಯಿಂದ ಶಾಲೆಗಳನ್ನು ತೆರೆದರೆ ನಿಜಾಮನು ಕಾಯ್ದೆಯಿಂದ ಬಂದಮಾಡಿಸುವನು. ಉರ್ದುಭಾಷೆಯಲ್ಲಿ ಬೇಕಾದರೆ ಶಿಕ್ಷಣ ಪಡೆಯಬಹುದು! ಹೀಗಾಗಿ ಹಿಂದುಗಳು ಶಿಕ್ಷಣವಿಲ್ಲದೆ ಇರುವರು. ಧರ್ಮದ ವಿಷಯದಲ್ಲಂತೂ ದೇವಸ್ಥಾನಗಳ ಜೀರ್ಣೋದ್ಧಾರ ಸಹ ಮಾಡಕೂಡದು. ಇನ್ನೂ ಬಹಳವಿದೆ. ಕೆಲ ವರ್ಷಗಳ ಹಿಂದೆ ಪ್ರಸಿದ್ಧ ಲೇಖಕರಾದ ಸೆಂಟ ನಿಹಾಲಸಿಂಗರು ಬರೆದ ಹೈದರಾಬಾದ ಸಂಸ್ಥಾನದಲ್ಲಿಯ ಹಿಂದುಗಳ ಮೇಲಾಗುವ ಅತ್ಯಾಚಾರಗಳ ವಿಷಯವನ್ನು ಎಷ್ಟೋ ಜನರು ಓದಿರಲಿಕ್ಕೆ ಸಾಕು. 2-3 ತಿಂಗಳ ಹಿಂದೆ ಪುಣೆಯ ಪ್ರಸಿದ್ಧ "ಕೇಸರಿ" ಪತ್ರದಲ್ಲಿ ಹೈದರಾಬಾದದ ಹಿಂದುಗಳ ಸ್ಥಿತಿಯ ವಿಷಯದಲ್ಲಿ ಬರೆದ ವಿಸ್ತೃತ ಲೇಖಗಳನ್ನು ಓದಿದರೆ ಅಲ್ಲಿಯ ನಿಜಸ್ಥಿತಿ ತಿಳಿದೀತು. ಮೇಲಾಗಿ ಆ ಸಂಸ್ಥಾನದಲ್ಲಿ ತಮ್ಮ ಮೇಲಿನ ಅತ್ಯಾಚಾರದ ಬಗ್ಗೆ ಅರುಹಲು ಸಹ ಸ್ವಾತಂತ್ರ್ಯವಿಲ್ಲ! ಆ ಲೇಖ ಬರೆಯುತ್ತಿರುವಾಗಲೇ ಭೋಪಾಳದ ಸುದ್ದಿ ಓದುವದರಲ್ಲಿ ಬಂತು. ಮೊದಲು ಹಿಂದುಗಳಿಗೆ ಸಭೆನಡಿಸಲು ಅಪ್ಪಣೆ ಕೊಟ್ಟು ಅನಂತರ ಹಿಂದುಗಳ ಒಬ್ಬೊಬ್ಬ ಪುಢಾರಿಗಳನ್ನು ಎತ್ತಿ ಹಿಡಿಯಲು ಮಾಡುತ ಹಂಚಿಕೆ ಹುಟ್ಟಿಸಿದರು. ಹೀಗಾಗಿ ಸಭೆಯು ಅನಿಶ್ಚಿತಕಾಲದವರೆಗೆ ಬಂದು ಇಡಬೇಕಾಯಿತು. ಈ ಸಾಲು ಪೂರ್ತಿ ಬರೆಯುವದರಲ್ಲಿ ಮರಾಠಿ "ನವಾಕಾಳ" ಪತ್ರದಲ್ಲಿ ಹೈದರಾಬಾದದೊಳಗೆ ನೂರಕ್ಕೆ 90 ಇದ್ದ ಹಿಂದುಗಳ ಪರಿಷದ ಕೂಡಿಸಲು ಅಲ್ಲಿಯ ಹಿಂದು ಪುಢಾರಿಗಳು ಅಪ್ಪಣೆ ಕೇಳಲಾಗಿ ಅಲ್ಲಿಯ ಹಿಂದು ಮಹಾಸಭೆಗೆ ಉತ್ತರ ಬಂದಿರುವದೇನೆಂದರೆ "ನೀವು ಪಾಸುಮಾಡುವ ಠರಾವುಗಳ ಪ್ರತಿ ಕಳಿಸಿರಿ" ಎಂಬರ್ಥದ ಮಜಕೂರು ಓದುವದರಲ್ಲಿ ಬಂತು. ಹಿಂದುಸ್ಥಾನದ ಎಲ್ಲ ಸಂಸ್ಥಾನಗಳಲ್ಲಿ ರಾಜನಿಂದ ಪ್ರಜೆಗಳು ಪೀಡಿತರಾಗಿ ಜರ್ಜರಿತರಾದರೆ ಕಾಶ್ಮೀರದಲ್ಲಿ ಪ್ರಜೆಗಳಿಂದಲೇ ರಾಜನು ಪೀಡಿತನಾಗಿ ಜರ್ಜರಿತನಾಗಿದ್ದಾನೆ! ಇದಕ್ಕೆ ರಾಜನ ದುರ್ಬಲತೆ ಮತ್ತು ಮುಸಲ್ಮಾನರ ಪ್ರತಿಯೊಂದು ಬೇಡಿಕೆಗಳನ್ನು ಮಾನ್ಯ ಮಾಡಿದ್ದರಿಂದ ಉಂಟಾದ ಏರಿಕೆ ಇವೇ ಕಾರಣಗಳಿರುತ್ತವೆ. ಹೈದರಾಬಾದ, ಭೋಪಾಳ ಮುಂತಾದ ಸಂಸ್ಥಾನಗಳಲ್ಲಿಯ ನವಕರಿಗಳು ಅಲಿಗಡ ಯೂನಿವರ್ಸಿಟಿಯ ಪದವೀಧರರ ಬಗ್ಗೆ ಕಾದಿಟ್ಟ (ರಿಝರ್ವ್) ವೆಂದು ಹೇಳಿದರೂ ಅಡ್ಡಿ ಇಲ್ಲ. ಅಲ್ಲಿಯ ಯಾವದೇ ಸಣ್ಣ ದೊಡ್ಡ ನವಕರಿಯನ್ನು ನೋಡಿದರೆ ಅವರೆಲ್ಲರೂ ಮುಸಲ್ಮಾನರೆಂದು ಕಾಣದೇ ಇರದು.

ರಾ. ಬ.

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖಕರಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ನಿಷ್ಪಕ್ಷಪಾತವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟವಾಗಿಯೂ, ಇರಬೇಕೆಂದೂ ಬುಧವಾರ ಗುರುವಾರದೊಳಗೆ ನಮ್ಮ ಕೈಸೇರುವಂತೆ ಕಳುಹಲ್ಪಡಬೇಕೆಂದು, ಈ ನಿಬಂಧನೆಗೆ ವಿರುದ್ಧವಾದ ಲೇಖನಗಳು ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದ್ದಾಗ್ಯೂ ಲೇಖಕರು ಲಕ್ಷಿಸದೆ ಲಂಚಿಕವಾಗಿ ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ ಪುಟಗಟ್ಟಲೆ ಅಸ್ಪುಟವಾಗಿ ಬರೆದು ನಮಗೆ ತ್ರಾಸನ್ನು ಕೊಡುತ್ತಿರುವರೆಂದು ಬರೆಯಲು ಖೇದವಾಗುತ್ತದೆ. ಆದುಕಾರಣ ಇತಃಪರ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಮಸ್ತರೂ ಗಮನಿಸತಕ್ಕದ್ದು.—ಸಂ.

ಕೈಲಾಸತೀರ್ಥಯಾತ್ರಾ ವಿಜಯಪುಸ್ತಕಪಠನ.

ಶ್ರೀಮದ್ಧರ್ಮಾವತಾರಿಗಳಾದ ಶ್ರೀಮನ್ಮಹಾರಾಜ ಕೃಷ್ಣರಾಜಒಡೆಯರ್ ಬಹದೂರ್, ಜಿ.ಸಿ.ಎಸ್.ಐ., ಜಿ.ಬಿ.ಇ., ರವರು ಪ್ರಜಾಕ್ಷೇಮಲಾಭಕ್ಕಾಗಿ ಅನಂತ ಕಷ್ಟಪರಂಪರೆಗಳನ್ನು ಲಕ್ಷಿಸದೆ ದೇವಭೂಮಿಯಲ್ಲಿ ಪ್ರವೇಶಿಸಿ ಮಾನಸಸರೋವರದಲ್ಲಿ ಸ್ನಾನಮಾಡಿ ಗೌರೀಶಂಕರರ ಬಿಂಬದರ್ಶನಾನಂತರ, ಪಾಲಗುರ್ಜರರಾಯನು ಪರಿವಾರಸಮೇತ ಕೈಲಾಸಗಿರಿಗೆ ಪ್ರಯಾಣಮಾಡಿದಂತೆ ಪರಿವಾರಸಮೇತ ಕೈಲಾಸಪರ್ವತವನ್ನು ಸೇರಿ ತತ್ಪರಿಕ್ರಮಣೆಯಲ್ಲಿದ್ದ ವಿಷಯವೂ, ಲಿಂಗಸಂದರ್ಶನಮಾತ್ರದಿಂದ ಲಭಿಸಿದ ವರಪ್ರಸಾದ ವಿಷಯವೂ, ಮೈಸೂರು ವೇ॥ ಸಂಗಪ್ಪಶಾಸ್ತ್ರಿಗಳವರಿಂದ ರಾಜಭಕ್ತಿಪ್ರದರ್ಶನಾರ್ಥವಾಗಿ ಷಟ್ಪದಿಕಾವ್ಯರೂಪದಲ್ಲಿ ರಚಿಸಲ್ಪಟ್ಟು ಆಳುವ ಮಹಾಸ್ವಾಮಿಯವರ ಸನ್ನಿಧಿಗೆ ತೃತೀಯ ಗ್ರಂಥಕುಸುಮವಾಗಿ ಮೇಲ್ಕಂಡವರಿಂದ ಅರ್ಪಿಸಲ್ಪಟ್ಟ "ಶ್ರೀಮನ್ಮಹಾರಾಜ ಕೃಷ್ಣರಾಜೇಂದ್ರ ಕೈಲಾಸತೀರ್ಥಯಾತ್ರಾ ವಿಜಯ" ವೆಂದು ಪ್ರಸಿದ್ಧಿಗೊಂಡಿರುವ ಮಹಾತ್ಮನ ಚರಿತ್ರೆಯು, ಮ॥ ಗಳಾದ ಇಟಿಗೆಗೂಡು ಸಾಹುಕಾರ್ ಲಿಂಗಣ್ಣನವರು, ಸಾ॥ ಚನ್ನಯ್ಯನವರು, ಸಿದ್ಧಲಿಂಗಣ್ಣನವರು, ಕುಟ್ಟಿಮೊದಲಿಯಾರ್ರವರು, ಲಕ್ಷ್ಮಣ ಮೊದಲಿಯಾರ್ರವರು, ಗುರುಸ್ವಾಮಿ ಮೊದಲಿಯಾರ್ರವರು, ಡಾಕ್ಟರ್ ನಟರಾಜ ಮೊದಲಿಯಾರ್ರವರು, ಡಾ॥ ರಾಜಪ್ಪ ಮೊದಲಿಯಾರ್ರವರು, ಓವರ್ಸಿಯರ್ ನೀಲಮೇಘಂ ಪಿಳ್ಳೆಯವರು, ಕೇಶವರಾಜು ನಾಮದೇವ ಗೋವಿಂದರಾಯರು ಇವರೇ ಮೊದಲಾದ ಮಹಾಜನಗಳಿಗುಂಟಾದ ರಾಜಭಕ್ತಿಗಾಗಿ ಇಟಿಗೆಗೂಡು ವೇ॥ ಸೋಮಶೇಖರಯ್ಯನವರ ಶ್ರೀಗುರು ದಕ್ಷಿಣಾಮೂರ್ತಿ ದೇವಾಲಯದಲ್ಲಿ ವೇ॥ ವಾಟಾಳು ಸಿದ್ಧಲಿಂಗಯ್ಯನವರಿಂದ ತಾ॥ 20-6-32 ರಿಂದ ತಾ॥ 25-6-32ರ ವರೆಗೆ ಓದಿ ಪೂರೈಸಲ್ಪಟ್ಟಿತು. ತತ್ಪ್ರಯುಕ್ತ ತಾ॥ 26-6-32 ನೇ ದಿನ ಹಗಲು ಜಂಗಮಾರಾಧನೆಯೂ, ರಾತ್ರಿ ಶ್ರೀ ಅರಮನೆ ಜಪದಕಟ್ಟೆ ಮಠದ ಏಜಂಟ್ ಮುದ್ವೀರಪ್ಪನವರು, ಹುಚ್ಚೀರಪ್ಪನವರು, ಕಾಶಿಯಪ್ಪನವರು, ಅಗ್ರಹಾರದ ಸಾ॥ ಸೋಮಣ್ಣನವರು, ಸಾ॥ ಚೆನ್ನಬಸವಪ್ಪನವರು, ಇಟಿಗೆಗೂಡು, ಮಂಡಿ, ಶಿವರಾಮಪೇಟೆ, ಬಾಡೀಗಾರ್ಡ್ ಮೊದಲಾದ ಸ್ಥಳೀಯ ಮಹಾಜನಗಳಿಂದಲಂಕೃತವಾದ ಮಹಾಸಭೆಯಲ್ಲಿ ಆಸ್ಥಾನ ವೀಣಾವಿದ್ವಾನ್ ಬಕ್ಷಿ ಸುಬ್ರಹ್ಮಣ್ಯಯ್ಯರವರ ಉತ್ಸಾಹಬಲದಿಂದ ಆಸ್ಥಾನ ಪಿಟೀಲುವಿದ್ವಾನ್ ಶಿವರುದ್ರಪ್ಪನವರ ಪಿಟೀಲಿನ ತಾಳಕಚೇರಿಯೂ, ಮ॥ ವಿದ್ವಾನ್ ದೊರೆಸಾಮಿ ಅಯ್ಯರ್, ಬಿ.ಎ., ರವರ ಮೃದಂಗಭಾಜನವೂ ಅತ್ಯಂತ ವಿಜೃಂಭಣೆಯಿಂದ ನಡೆದನಂತರ ಗಂಧಪುಷ್ಪಾದಿಗಳ ವಿನಿಯೋಗವಾಗಿ ಶ್ರೀಮನ್ಮಹಾರಾಜರವರ ಮತ್ತು ಅವರ ಅಶೇಷ ಕುಟುಂಬದವರ ಶ್ರೇಯಃಪ್ರಾರ್ಥನಾನಂತರ ಸಭಾ ವಿಸರ್ಜನೆಯಾಗಿ ಶ್ರೀಗುರು ದಕ್ಷಿಣಾಮೂರ್ತಿಯ ಚಿತ್ರಪಟದೊಡನೆ ಅಲಂಕರಿಸಲ್ಪಟ್ಟ ಶ್ರೀಮನ್ಮಹಾರಾಜರವರ ಭಾವಚಿತ್ರಪಟದ ಮಹೋತ್ಸವವು ಇಟಿಗೆಗೂಡು ಮಹಾಜನರಿಂದ ನಡೆಸಲ್ಪಟ್ಟಿತು.

ಕಾರ್ಯಭಾಗಿ.

ಸಂಗ್ರಹಗಳು.

ಹೈಸ್ಕೂಲು—ಇಲ್ಲಿಯ ವಿದ್ಯಾರ್ಥಿಗಳ ಪರೀಕ್ಷೆಯ ಫಲಿತಾಂಶ ಸಮಾಧಾನಕರವಾಗಿಲ್ಲ. ಹೆಡ್ಮಾಸ್ಟರೂ ಒಬ್ಬ ಅ॥ ಮಾಸ್ಟರುಗಳೂ ವರ್ಗವಾಗಿ ಹೋದರು. ಬಂದವರು ಸರಿಯಾಗಿ ಕೆಲಸಮಾಡುವರೆಂದು ನಿರೀಕ್ಷಿಸಿಯಿದೆ. ಇದುವರೆಗೂ ಈ ಸ್ಕೂಲಿನ ಯಾವ ಹೆಡ್ಮಾಸ್ಟರೂ ಅಣತಿದ್ದ ಎಸ್ಟಾಬ್ಲಿಷ್ಮೆಂಟುಗಳು ಈ ವರ್ಗವಾದವರಿಗೆ ಅದನ್ನು ತುಂಬಾ ಸಂತೋಷಕರವು. ಇವರ ಮೇಲ್ಪಂಕ್ತಿಯನ್ನು ಮುಂದೆ ನಮ್ಮ ಹಿಂದು ಬಾಂಧವರು ಅನುಸರಿಸುವರಲ್ಲವೆ? ಬಾಯ್ಸ್ ಮಿಡ್ಲ್ ಸ್ಕೂಲು—ದಕ್ಷರಾದ ಹೆಡ್ಮಾಸ್ಟರು ಇರುವುದರಿಂದ ಕೆಲಸಗಳು ಚಟುವಟಿಕೆಯಿಂದ ನಡೆಯುತ್ತಲಿವೆ. ಗರ್ಲ್ಸ್ ಮಿಡ್ಲ್ ಸ್ಕೂಲು—ಇದು ಹೊಸದು. ಇದುವರೆಗೂ ಇದ್ದ ಹೆಡ್‌ಮಿಸ್ಟ್ರೆಸ್ಸಿಗೆ ವರ್ಗವೆಂದೂ ಈಕೆಯ ಸ್ಥಾನಕ್ಕೆ ಹೆಡ್ಮಾಸ್ಟರು ಬರುವರೆಂದೂ ಪ್ರಬಲವಾದ ವದಂತಿ. ಇದು ನಿಜವಾಗಿದ್ದಲ್ಲಿ ವಿಷಾದಕರವೇ ಸರಿ. ಬೇಕಾದ ಹಾಗೆ ದೊಡ್ಡ ವಿದ್ಯಾಪ್ರಶಸ್ತಿ ಪಡೆದಿರತಕ್ಕ ಸ್ತ್ರೀಯರು ದೊರೆಯುವಾಗ ಗಂಡುಸರನ್ನು ತರಲು ಕಾರಣವೇನಿರಬೇಕು? ವಯಸ್ಕರಾದ ಬಾಲಿಕೆಯರ ವಿದ್ಯಾಭ್ಯಾಸಕ್ಕೆ ಇದು ಕುಂದಕವಲ್ಲವೆ? ಅನುಭವಶಾಲಿಗಳಾದ ವಿದ್ಯಾವತಿಯರನ್ನು ತಂದರೆ ಸ್ಕೂಲು ನಿಲ್ಲುವುದು. ಪ್ರೈಮರಿ ಸ್ಕೂಲುಗಳು—ಇಲ್ಲಿ ಅನೇಕ ವರುಷಗಳಿಂದ ಅನೇಕ ಕೆಲಸಕಾರ್ಯಗಳನ್ನು ಇಟ್ಟುಕೊಂಡು ನೆಪಮಾತ್ರಕ್ಕೆ ಸ್ಕೂಲು ಕೆಲಸಗಳನ್ನು ವಹಿಸಿಕೊಂಡಿರುವ ಅನೇಕ ಅ॥ ಮಾಸ್ಟರುಗಳು ತಮ್ಮ ಕಾಲವನ್ನೂ ಬುದ್ಧಿಶಕ್ತಿಯನ್ನೂ ಅನ್ಯಥಾ ಕಳೆಯುವ, ಇವರು ಶಾಲೆಯಲ್ಲಿ ಏನು ಕೆಲಸ ಮಾಡುವರು? ಹೆಡ್ಮಾಸ್ಟರುಗಳು ಇದಕ್ಕಾಗಿ ಏನುಮಾಡಬಲ್ಲರು? ಇದಕ್ಕೆ ಇಲಾಖೆಯವರು ಗಮನಕೊಡುವರೆಂದು ನಂಬಿದೆ. ಅದರಲ್ಲೂ ಶ್ರೀಕಂಠೇಶ್ವರ ಪ್ರೈಮರಿ ಸ್ಕೂಲು ಹೇಳತೀರದಷ್ಟು ಶೋಚನೀಯ ಸ್ಥಿತಿಯಲ್ಲಿದೆ. ಮ್ಯುನಿಸಿಪಾಲಿಟಿ—ಅಂತಃಕಲಹಗಳು ಹೇಳದಷ್ಟು ಇವೆ. ಚೀಫ್ ಆಫೀಸರು ಬೇಕೆಂಬವರು ಹೆಚ್ಚು, ಬೇಡವೆಂಬವರು ಕಡಿಮೆ ವೈಸ್‌ಪ್ರೆಸಿಡೆಂಟು ಬೇಕೆಂಬವರು ಕಡಮೆ, ಬೇಡವೆಂಬವರು ಹೆಚ್ಚು. ಚೀಫ್ ಆಫೀಸರನ್ನು ತೆಗೆದರು. ಖರ್ಚೆನೋ ಉಳಿತಾಯವಾಗುವುದು, ಆದರೆ ವೈಸ್‌ಪ್ರೆಸಿಡೆಂಟರು ಕೆಲಸಮಾಡುವರೇ? ಮೊನ್ನೆ ನಡೆದ ತೆಂಗಿನ ಮರದ ವ್ಯವಹಾರದಲ್ಲಿ ಇವರು ಪರಾಜಿತರಾಗಿ ಖಾಸಗಿ ಮನುಷ್ಯರಿಗೆ ದಂಡತೆತ್ತದ್ದಾಗಿ ವದಂತಿಯಿದೆ. ಇದನ್ನು ಮಾಡಿದ ಅಧಿಕಾರಿಗಳು ಕೈಯಿಂದ ತೆತ್ತರೋ ಜನಗಳ ದುಡ್ಡಿನಿಂದ ಕೊಟ್ಟರೋ ತಿಳಿಯದು. ಇದನ್ನು ಪ್ರಕಟಿಸಿದರೆ ಉತ್ತಮ. ಬಡಾವಣೆಯಲ್ಲಿಯೇ ಹೆಚ್ಚು ರೊಚ್ಚು ಇರುವಾಗ ಇನ್ನು ಊರಿನ ಸ್ಥಿತಿ ಏನು, ಯಾರಿಗೆ ಹೇಳಬೇಕು? ಅಧಿಕಾರಿಗಳಿಗೆ ಸಂಬಳ ಸಂಚಾರ ದ್ರವ್ಯ ಅಷ್ಟೇ ಅಲ್ಲವೆ! ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ—ಗಿರಿಜಾಕಲ್ಯಾಣವೇನೋ ಬಂತು. ಖರ್ಚು ಬರೆದು ದ್ರವ್ಯವನ್ನು ಮುಗಿಸುವರೋ ಅಥವಾ ಕೆಲಸಗಳನ್ನು ಸಮರ್ಪಕವಾಗಿ ನಡೆಸುವರೋ ನೋಡತಕ್ಕದ್ದಾಗಿದೆ. ಸರ್ಕಾರದ ನಿಯಮಕ್ಕೆ ವಿರುದ್ಧವಾಗಿ ಈ ದೇವಸ್ಥಾನದಲ್ಲಿರುವ ನೌಕರರಾದ ಪಾರುಪತ್ತೇಗಾರರು ಸನ್ನಿಧಿಯ ಪರಿಚಾರಕರು, ಗುಮಾಸ್ತರು ಇವರಿಗೆ ಅನ್ವಯಿಸುವುದಿಲ್ಲವೋ ದಕ್ಷರೆಂದೆನ್ನಿಸಿಕೊಳ್ಳಬೇಕೆಂದಿರುವ ಪೇಷ್ಕಾರರೂ ಕೂಡ ಮೌನದಿಂದಿರುವರೋ ತುಂಬಾಶ್ಚರ್ಯ. ಡಿಸ್ಪೆನ್ಸರಿಗಳು—ಎರಡೇನೋ ಇವೆ. ಈ ಡಾಕ್ಟರು ಬಂದಮೇಲೆ, ಹೆಂಗಸರು ಮಕ್ಕಳನ್ನು, ಹೆಂಗಸರ ಆಸ್ಪತ್ರೆಗೆ ಹೋಗಿ ಎಂದು ನಿಯಮಕ್ಕನುಸಾರವಾಗಿ ಹೇಳುವರಂತೆ. ಅಲ್ಲಿಗೆ ಹೋದರೆ ಹೇಳಕೇಳುವವರೇ ಇಲ್ಲ! ಅಂತೂ ಹೆಂಗಸರು ಮಕ್ಕಳ ಗತಿ ಅಧೋಗತಿಯಾಗಿದೆ. ಇದು ಸರಿಮಾಡಲ್ಪಡುವದೆಂದು ನಂಬಿಕೆ.

ಪ್ರಜಾಮಿತ್ರ.

ಪಟ್ಟಾಧಿಕಾರಮಹೋತ್ಸವ.

ಕರ್ಜಗಿ ತಾ॥ ಹೊಸರಿತ್ತಿಯ ಬೃಹನ್ಮಠದ ಗತಿಸಿದ 3 ನೇ ಪಟ್ಟದ ಶ್ರೀಗುದ್ಲೀಸ್ವಾಮಿಗಳವರ ಅಪ್ಪಣೆಯಮೇರೆಗೆ ಹೊಸರಿತ್ತಿ, ಕೊರಡೂರು, ಚನ್ನೂರು ಮುಂತಾದ ಅಜುಬಾಜು ಗ್ರಾಮಗಳ ಭಕ್ತಮಂಡಲಿಯವರು ವೇ॥ ರಾಚೋಟಪ್ಪಯ್ಯನವರ ಸುಪುತ್ರ ಗದಿಗೆಪ್ಪಯ್ಯನವರನ್ನು ಮರಿದೇವರನ್ನಾಗಿ ನಿಯಮಿಸಿಕೊಂಡಿರುವ ಪ್ರಯುಕ್ತ ತಾವು ದಯಮಾಡಿಸಿ ಸದರಿ ಮಠಕ್ಕೆ ಇದೇ ಮರಿದೇವರನ್ನು ಮಠಪದ್ಧತಿ ಪ್ರಕಾರ ಅನುಗ್ರಹಿಸಿ ಶ್ರೀಮನ್ನಿರಂಜನ ಪಟ್ಟಾಧಿಕಾರ ಕೆಲಸವನ್ನು ನೆರವೇರಿಸಬೇಕೆಂದು ನಿಡಗುಂದಿ ಮುಕ್ಕಾಮಿನಲ್ಲಿದ್ದ ಶ್ರೀಮನ್ನಿರಂಜನ ಜಗದ್ಗುರು ಮೃಡಗಿರಿ (ಮುಂಡರಗಿ) ಶೂನ್ಯ ಸಿಂಹಾಸನಾಧೀಶ ಅನ್ನದಾತ ಭಕ್ತವತ್ಸಲ ಶ್ರೀಗುರು ಅನ್ನದಾನ ಮಹಸ್ವಾಮಿಗಳವರ ಚರಣಸನ್ನಿಧಿಗೆ ಬಿನ್ನಹಪತ್ರದಿಂದ ಅಂಕಿತಮಾಡಿಕೊಳ್ಳಲು ಶ್ರೀಗಳವರು ಇದೇ ಜ್ಯೇಷ್ಠ ಶುದ್ಧ ೧೫ ಶನಿವಾರ ದಿವಸ ಹೊಸರಿತ್ತಿಯ ಬೃಹನ್ಮಠಕ್ಕೆ ಭಕ್ತರ ಬೇಡಿಕೆಯ ಪ್ರಕಾರ ದಯಮಾಡಿಸಿ ಇದೇ ಜ್ಯೇಷ್ಠ ಬ॥ ೨ (ತಾ॥ 20-6-1932 ನೇ) ಸೋಮವಾರ ಶುಭದಿವಸದಲ್ಲಿ ಶ್ರೀಮನ್ನಿರಂಜನುಪದೇಶ ಕ್ರಮವನ್ನು ಜರುಗಿಸಿದರು. ಅನಂತರ ಭಕ್ತಮಹೇಶ್ವರಾದಿಗಳಿಗೆ ಅನ್ನಸಂತರ್ಪಣೆ ನಡೆಸಲ್ಪಟ್ಟು ಸಾಯಂಕಾಲಕ್ಕೆ ಶೃಂಗರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಗತಿಸಿದ 3 ನೇ ಪಟ್ಟದ ಶ್ರೀಗಳವರ ಆವುಗೆಗಳನ್ನೂ ಅವರ ಫೋಟೋವನ್ನೂ ಇಟ್ಟು ನೂತನ ಶ್ರೀಗಳವರನ್ನು ಅಶ್ವಾರೋಹಣಮಾಡಿಸಿ ಅಲಂಕೃತವಾದ ಪುರದ ಬೀದಿಗಳಲ್ಲಿ ಪಂಚಕಳಶ, ಶ್ವೇತಛತ್ರ, ಮಕರತೋರಣ ಮುಂತಾದ ಬಿರುದುಗಳು ಮತ್ತು ವಾದ್ಯ ವೈಭವದೊಡನೆ ಉತ್ಸವ ಹೊರಡಿಸಿದರು. ಬೀದಿಗಳಲ್ಲಿ ಮನೆಯ ಭಕ್ತಾದಿಗಳೆಲ್ಲರು ಕಾಯಿ ಕರ್ಪೂರವನ್ನು ಅರ್ಪಿಸಿ ದರ್ಶನಾಶೀರ್ವಾದಗಳನ್ನು ಪಡೆಯುತ್ತಿದ್ದರು. ಉತ್ಸವವು ಮಠಕ್ಕೆ ಬಿಜಯಂಗೈದನಂತರ ಮಠದ ಪದ್ಧತಿಯ ಪ್ರಕಾರ ಶ್ರೀಮನ್ನಿರಂಜನ ಗದಿಗೆಪ್ಪಯ್ಯಸ್ವಾಮಿಗಳವರು ಜಯಘೋಷದೊಡನೆ ಮೊದಲೇ ಶೃಂಗರಿಸಲ್ಪಟ್ಟ ಶೂನ್ಯಸಿಂಹಾಸನಾರೂಢರಾಗಲು ಕೂಡಿದ ಸಮಸ್ತ ಭಕ್ತಮಂಡಲಿಯು ಜಯಃನಮಃಪಾರ್ವತೀಪತಿ ಹರಹರ ಮಹಾದೇವ ಎಂದು ಕರತಾಡನಮಾಡಿ ಶಿರಸಾಷ್ಟಾಂಗನಮಸ್ಕಾರವಂಗೈದು ಕುಳಿತುಕೊಂಡಮೇಲೆ ವೇ॥ ಕರವೀರಶಾಸ್ತ್ರಿಗಳು ಸಂಗಮಗೊಂದಿ ಮಠ ಕಿತ್ತೂರು ಇವರು ಸಮಯೋಚಿತವಾಗಿ ಗತಿಸಿದ ಶ್ರೀಗಳವರ ಚರಿತ್ರೆಯನ್ನು ವಿವರಿಸಿ ಸಮಾಜದವರೆಲ್ಲರೂ ಎಂದಿನಂತೆ ಮಠದ ಸರ್ವಕಾರ್ಯಗಳಲ್ಲಿ ಭಕ್ತಿಶ್ರದ್ಧೆಯುಳ್ಳವರಾಗಿರಬೇಕೆಂದೂ ಮಠದ ಭಾರವನ್ನು ಸ್ವೀಕರಿಸಿರುವ ನೂತನ ಶ್ರೀಮನ್ನಿರಂಜನ ಗದಿಗೆಪ್ಪಯ್ಯ ಶ್ರೀಗಳವರಿಗೆ ಪ್ರಥಮದಲ್ಲಿ ಕಾಣಿಕೆಯನ್ನರ್ಪಿಸುವ ಸುದೈವವು ನಮ್ಮೆಲ್ಲರಿಗೆ ಒದಗಿಬಂದೂ ಹೇಳಿ ಕುಳಿತ ಅನಂತರ ಅಜುಬಾಜು ಗ್ರಾಮದ ಭಕ್ತಮಾಹೇಶ್ವರಾದಿಗಳು ತಮ್ಮ ಶಕ್ತ್ಯಾನುಸಾರ ಕಾಣಿಕೆಯನ್ನರ್ಪಿಸಿದಮೇಲೆ ವೇ॥ ಶಿವಲಿಂಗಯ್ಯನವರು ಹಿರೇಮಠ ಕಾಲವಾಡ ಇವರ ಶಿವಕೀರ್ತನದಿಂದಲೂ, ಸಂಗೀತಶಾಸ್ತ್ರ[illegible] ಪಂಡಿತ [illegible]ಯ್ಯನವರು, ಮರೋಳ ವೇ॥ ಸಂ॥ [illegible]ಯ್ಯನವರು [illegible]

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು | ಚಿಂತಿಸ ಬೇಡಿರಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಅಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರ ಪುತ್ರಿಣಿ ಆವಿಗುರಿ. ೯ ಗುಳಿಗೆಗಳ ೩. ೩ ರೂಪಾಯಿ. ಟ. ಖ. ೫ ಆಣೆ.

ಪತ್ತ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ. M. C. 11

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ

ಮೈಸೂರು ಪಟ್ಟಣದಲ್ಲಿ ಒಬ್ಬ ಆರ್ಯವೈಶ್ಯ ಮಹನೀಯರಿಗೆ ನಡೆದ ಸನ್ಮಾನ.

ಮ|| ರಾ|| ಶ್ರೀ|| ಬಚ್ಚೇಪೇಟೆ ಕೃಷ್ಣಸ್ವಾಮಿ ಶೆಟ್ಟಿ

B.E., A.M.A.S.M.E., A.R.P.S. ವಾರಿಗೆ

ಮೈಸೂರು ರಾಜಧಾನಿ ಆರ್ಯವೈಶ್ಯ ಮಹಾಜನಲು ಒಪ್ಪಿಂಚಿನ ಸನ್ಮಾನ ಪತ್ರಿಕ.

ಪ್ರಿಯವರ್ಯ,

ಮೈಸೂರು, ತಾ|| 30-6-32. } ಮೈಸೂರು ಆರ್ಯವೈಶ್ಯ ಮಂಡಲಿ.

WANTED.

1. A Kanarese knowing Lady Doctor who has passed L.M. & S. or M.B.B.S. and who has experience of work in Maternity Hospitals to serve as a Doctor in the 'Dandapa Manvi Maternity Hospital' at Gadag.

2. A Kanarese knowing Nurse who has passed the Bombay Provincial Nurses, Association Test and who has some experience of work in a Maternity Hospital to serve as a Nurse in the 'Dandapa Manvi Maternity Hospital' at Gadag.

Applications with testimonials and terms should reach the undersigned before 25th July 1932.

MUNICIPAL OFFICE, Gadag Betgeri, 15-6-1932. } T. V. KOTI, *President, Gadag Betgeri Municipality.*

MARIMALLAPPA'S CHARITIES' FUND'S SCHOLARSHIPS.

Applications for the above Scholarships are invited from Verasaiva Students who have passed S.S.L.C. Examination and wish to continue thier studies further. Applications should be sent to the undersigned on or before the 31st July 1932. Form can be had by sending half an anna Postage Stamp.

MYSORE, 1-7-1931. } M. BASAVALINGAYYA, *Secretary, Marimallappa's Charities' Ramachandra Agrahar, Mysore.*

ಕುಂಚಿಟಿಗರ ಸಂಘ ಹಾಸ್ಟಲ್, ಮೈಸೂರು.

M. C. NARASIMHIAH, Manager.

ಶಂಕರ ಸಂಸ್ಕೃತಕಾಲೇಜಿನ ಪರೀಕ್ಷಾಫಲಿತಾಂಶ.

ಪ್ರಸಿದ್ಧಪತ್ರಿಕೆ.

ನಾರಿನವೇಳೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ. ನಾರಿನವರು ಜರೂರ ತರಿಸಿ ಕೊಳ್ಳಿರಿ. ಕಿ. ೧ ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

11 M. C

೧೯೩೨ ನೆಯ ಇಸವಿ ಜೂಲೈ ತಾ|| ೪ ರಿಂದ ಜೂಲೈ ತಾ|| ೧೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ ಆಂಗಿರಸನಾಮಸಂವತ್ಸರದ ಆಷಾಢ ಶುದ್ಧ ಪಾಡ್ಯಮಿಯಿಂದ ಆಷಾಢ ಶುದ್ಧ ಸಪ್ತಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥ ಮಾಸ
4	ಸೋಮ	ಪಾಡ್ಯ	54-23	ಪುನ	60	21
5	[1] ಮಂಗಳ	ಬಿದಿ	53-57	ಪುನ	1.50	22
6	ಬುಧ	ತದಿ	52-6	ಪುಷ್ಯ	2-58	23
7	ಗುರು	ಚೌತಿ	49-38	ಆಶ್ಲೇ	3-14	24
8	[2] ಶುಕ್ರ	ಪಂಚ	45-12	ಮ-ಪು	1-42-58-17	25
9	ಶನಿ	ಷಷ್ಠಿ	40-31	ಉತ್ತ	57-9	26
10	ಭಾನು	ಸಪ್ತ	35-3	ಹಸ್ತ	53-26	27

(1) ಮಳೆನಕ್ಷತ್ರ-ಪುನರ್ವಸು ೧ ನೆಯ ಪಾದ. (2) ಮಳೆನಕ್ಷತ್ರ ಪುನರ್ವಸು ೨ ನೆಯ ಪಾದ.

ಮೈಸೂರು: ವೈ. ವಿ. ... ಲೈಟ್ ... ಅಚ್ಚು ಹಾಕಿ ಪ್ರಕಟಿಸಲ್ಪಟ್ಟಿತು.

REG. NO. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೩-೮-೦] [ಬಿಡಿಪ್ರತಿಗೆ ೩-೦-೦]

ಸಂಪುಟ ೪೫] ಮೈಸೂರು ಸ್ಟಾರ್ ೧೯೩೨ ನೆಯ ಇಸವಿ ಜುಲೈ ತಾರೀಖು ೧೧ ನೆಯ ಸೋಮವಾರ [ಸಂಚಿಕೆ ೨೮

MYSORE SANDALWOOD OIL Distilled in GOVERNMENT FACTORIES

GUARANTEED B.P.P.J., & AM 4. P. STANDARDS.

PROVIDES

Excellent Base for the manufacture of Soaps, Perfumes, and other Toilet preparations of the Highest quality.

USED ALL THE WORLD OVER.

BUY A BOTTLE TO-DAY.

Available in Sealed Aluminium Bottles.

MYSORE GOVERNMENT SANDALWOOD OIL FACTORY, BANGALORE.

7 [50—2]

THE MYSORE AGRICULTURAL SCHOOL, HEBBAL, BANGALORE.

Notification No. A. S. M. Gl. 225 of 31-32, dated 21st June 1932.

In supersession of the previous notification No. A. S. M. Gl. 225 of 31—32, dated 22nd April 1932 published in the Mysore Gazette, Part III, Pages 798-799 dated 19th May 1932, the time for sending up the applications for admissions to the Mysore Agricultural School at Hebbal, Bangalore, has been extended to 10th July 1932 and that of the entrance examination has been postponed to 17th July 1932 at 12 noon, as the results of the S. S. L. C. Examination have not yet been declared.

[3—3] V. K. BADMI, *Principal.*

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕರ್ಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳುಳ್ಳ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಸ್ವಲ್ಪಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕದ. [ಸ್ಟರ | ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಶಿಥಿಲತೆ, ನಪುಂಸಕತ್ವ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪ್ರಮೇಹ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು ಇದ್ದು ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮುಚ್ಛಾ ಆಗುತ್ತದೆ. ಶೌಚೆಗೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತನು ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಿಣಿ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ನೀಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಅಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೪ ತೊಲೆಯ ಒಂದು ಡಬ್ಬಿಗೆ ೫| ರೂಪಾಯಿ. ಟಪಾಲು ಖರ್ಚ ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಕ್ಷೀಸು ಪಾತದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಇದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ

ಸಂತತಿ ಪ್ರತಿಬಂಧಕ ಗುಳಿಗೆಗಳು.

[50—20]

ಪತ್ತಾ ವಿಳಾಸ:—ವೈದ್ಯ ವ್ಹಿ. ಎಸ್. ಕಾಪಸೆ ಮು. ಪೋ. ಮಿರಜ ಎಂ. ಎಸ್. ಎಂ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ವಿಳಾಸ—ಗುರುಬಸವ ಅಂಡ್ ಕಂಪೆನಿ ... ಪೋ. ... ಮೈಸೂರು.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಜುಲೈ ತಾ|| ೧೧ ನೆಯ ಸೋಮವಾರ.

MUNICIPAL PRESIDENTSHIP

Mr. T. G. Rama Iyer, who has been the President of the Mysore City Municipal Council for some years stands transferred as the Deputy Commissioner of Chitaldurg, and Mr. B. T. Kesava Iyengar is to take the place of the President. It would appear that some of the Municipal Councillors went on a deputation to Bangalore to wait on the Dewan Saheb with a prayer for cancelling the order for transfer and keeping Mr. T. G. Rama Iyer here for some more time. The result of the deputation does not seem to have been favourable. One could only say that it is very unfortunate that Mr. Rama Iyer who has been the President for so long should be going away in such regrettable circumstances. The position of a President is a privilege and an honour. Nothing but the most honourable conduct is expected of the officer. One most rise above all pettinesses and prejudices. The only desire should be to exercise the powers honourably and sympathetically. It is no place for a narrow-minded man. Only liberal minded men should aspire for it, liberal even with purse if occasions demand. Besides, he has to guide and be guided by the Municipal Council, a predominently non-official body. There is no room save for perfect mutual courtesy and cordiality in the relationship with that Council. It is hardly a place for displaying power, much less abuse of power, towards unworthy ends such as satisfying personal animosities. Nor could one be justified in setting up one party against another and making the Council an arena for party bickerings. It is best that one abandons all partisanship, even vestige of partisanship, and allows everything to be decided on its own merits. All this may look like an ideal, but it is quite a practical ideal because an official president does not stand in need of party support. Besides, there ought to be no question of party fights in the field of local self-Government. Judged from these, what we may call, accepted standards, we are afraid Mr. Rama Iyer's *regime* has been none too commendable. Mr. Rama Iyer is still young and has years of service before him. We do hope that his experiences as President will be helpful lessons to him in his future career. His successor Mr. B. T. Kesava Iyengar has had good experience of Municipal administration in Bangalore City as its Commissioner for some years, and we expect his experiences in foreign countries would also be of much help to Mysore. He has intimate permanent associations in the City itself. He comes of a highly respectable family and, for aught we know, is possessed of singularly pleasant address. We welcome him to this premier city and wish him all success.

ಮ್ಯುನಿಸಿಪಲ್ ಪ್ರೆಸಿಡೆಂಟ್ ಪದವಿ.

ಕೆಲ ವರ್ಷಗಳಿಂದ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾಗಿರುವ ಮ|| ಟಿ. ಜಿ. ರಾಮಯ್ಯರ್‌ರವರು ಚಿತ್ರದುರ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾಗಿ ವರ್ಗಪಟ್ಟು ಅವರ ಬದಲು ಮ|| ಬಿ. ಟಿ. ಕೇಶವಯ್ಯಂಗಾರ್ಯರು ಮ್ಯುನಿಸಿಪಲ್ ಪ್ರೆಸಿಡೆಂಟರಾಗಿ ಬರತಕ್ಕವರಾಗಿರುವರು. ಕೆಲ ಮ್ಯುನಿಸಿಪಲ್ ಕೌನ್ಸಿಲರುಗಳು ಬೆಂಗಳೂರಲ್ಲಿರುವ ದಿವಾನರಲ್ಲಿಗೆ ರಾಯಬಾರ ಹೋಗಿದ್ದು ಮ|| ಟಿ. ಜಿ. ರಾಮಯ್ಯರ್‌ರವರ ವರ್ಗವನ್ನು ತಪ್ಪಿಸಿ ಇನ್ನು ಕೆಲಕಾಲದವರೆಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರುದ್ಯೋಗದಲ್ಲೇ ಇರಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡುದಾಗಿ ತಿಳಿಯಬರುತ್ತದೆ. ಈ ಪ್ರಾರ್ಥನೆಯು ಸಫಲವಾದಂತೆ ತೋರುವುದಿಲ್ಲ. ಬಹಳ ದಿವಸಗಳಿಂದ ಪ್ರೆಸಿಡೆಂಟರಾಗಿರುವ ಮ|| ಟಿ. ಜಿ. ರಾಮಯ್ಯರ್‌ರವರು ಪಶ್ಚಾತ್ತಾಪಕರವಾದ ಸ್ಥಿತಿಯಲ್ಲಿ ವರ್ಗಪಟ್ಟು ಹೋಗುವುದು ದುರದೃಷ್ಟವೆಂದು ಹೇಳಬೇಕಾಗಿದೆ. ಪ್ರೆಸಿಡೆಂಟ್ ಪದವಿಯು ವಿಶೇಷಾಧಿಕಾರ ಮತ್ತು ಗೌರವಯುಕ್ತವಾದುದು. ಈ ಪದವಿಗೆ ಬರತಕ್ಕವರು ಅಲ್ಪತ್ವ ದುರಾಗ್ರಹಗಳನ್ನು ಬಿಟ್ಟು ಅತ್ಯಂತ ಗೌರವದಿಂದ ವರ್ತಿಸುವವರಾಗಿಯೂ, ತಮ್ಮಧಿಕಾರವನ್ನು ಗೌರವ ಸಹಾನುಭೂತಿ ಮಾರ್ಗದಲ್ಲಿ ವಿನಿಯೋಗಿಸುವವರಾಗಿಯೂ ಇರಬೇಕು. ಈ ಪದವಿಗೆ ಸಣ್ಣ ಮನಸ್ಸಿನವರು ಅರ್ಹರಲ್ಲ. ಆದುದರಿಂದ ವಿಶಾಲಹೃದಯರು ಮತ್ತು ಸಂದರ್ಭಾನುಸಾರ ಉದಾರವಾಗಿ ದ್ರವ್ಯ ಸಹಾಯಮಾಡತಕ್ಕವರು ಮಾತ್ರ ಈ ಪದವಿಯನ್ನು ಅಪೇಕ್ಷಿಸತಕ್ಕುದಾಗಿದೆ. ಅವರು ಸರ್ಕಾರಿಯುದ್ಯೋಗಸ್ಥರಲ್ಲದ ಮೆಂಬರುಗಳು ಅಧಿಕವಾಗಿರುವ ಮ್ಯುನಿಸಿಪಲ್ ಕೌನ್ಸಿಲನ್ನು ಸೌಹಾರ್ದದಿಂದ ನಡೆಸಿಕೊಂಡು ಹೋಗಬೇಕಾಗಿರುವುದಲ್ಲದೆ ತಾವೂ ನಡೆದುಕೊಂಡು ಹೋಗಬೇಕಾಗಿರುವುದು. ಪ್ರೆಸಿಡೆಂಟರಿಗೂ ಕೌನ್ಸಿಲರುಗಳಿಗೂ ಪರಸ್ಪರ ಪ್ರೀತಿ ವಿಶ್ವಾಸಾನುಬಂಧವಿದ್ದ ಹೊರತು ನಿರ್ವಹಿಸುವುದು ಸಾಧ್ಯವಿಲ್ಲ. ಮಾತ್ಸರ್ಯವನ್ನೂ ಸ್ವಾರ್ಥತೆಯನ್ನೂ ಸಾಧಿಸುವುದಕ್ಕೋಸ್ಕರ ಅಧಿಕಾರವನ್ನು ತೋರಿಸಲಿಕ್ಕಾಗಲಿ ದುರ್ವಿನಿಯೋಗಮಾಡಲಿಕ್ಕಾಗಲಿ ಎಡೆಯೇ ಇರುವುದಿಲ್ಲ, ಅಲ್ಲದೆ ಕೌನ್ಸಿಲರುಗಳಲ್ಲಿ ಪಾರ್ಟಿಗಳನ್ನು ಹುಟ್ಟಿಸಿ ಒಂದರಮೇಲೆ ಮತ್ತೊಂದನ್ನೆತ್ತಿಕಟ್ಟಿ ಕೌನ್ಸಿಲನ್ನು ಪರಸ್ಪರ ಹೋರಾಡುವ ಆಖಾಡಾವನ್ನಾಗಿ ಮಾಡುವುದು ಪ್ರೆಸಿಡೆಂಟರಿಗೆ ಯುಕ್ತವಲ್ಲ. ಯಾವ ಪಕ್ಷವನ್ನೂ ವಹಿಸದೆ ಪ್ರತಿಯೊಂದು ಕೆಲಸವು ನ್ಯಾಯವಂತು ಇತ್ಯರ್ಥವಾಗುವ ಹಾಗೆ ಮಾಡುವುದು ಸರ್ವೋತ್ಕೃಷ್ಟವು. ಇದೆಲ್ಲವೂ ಕಾಲ್ಪನೀಕ ಉಪದೇಶವಾಗಿ ತೋರಬಹುದು, ಆದರೆ ಸರ್ಕಾರಿಯುದ್ಯೋಗಸ್ಥರಾದ ಪ್ರೆಸಿಡೆಂಟರಿಗೆ ಯಾವ ಪಾರ್ಟಿಯ ಸಹಾಯವೂ ಅವಶ್ಯವಿಲ್ಲದಿರುವುದರಿಂದ ಇದು ಅನುಭವವೇದ್ಯವಾದ ಬೋಧೆಯಾಗಿದೆ. ಸ್ಥಳೀಯ ಸ್ವರಾಜ್ಯ ಪ್ರಭುತ್ವದಲ್ಲಿ ಪಾರ್ಟಿ ಹೋರಾಟಕ್ಕೆ ಕಾರಣವೇ ಇರುವುದಿಲ್ಲ. ಸರ್ವಸಮ್ಮತವಾದ ಈ ನಿರ್ದುಷ್ಟ ಗುಣಗಳು ಮ|| ಟಿ. ಜಿ. ರಾಮಯ್ಯರ್‌ರವರಲ್ಲಿ ಮೃಗ್ಯವಾಗಿರುವುದರಿಂದ ಅವರ ಆಡಳಿತವು ಪ್ರಶಂಸನೀಯವಾಗಿಲ್ಲ. ಇವರಿಗೆ ವಯಸ್ಸು ಇನ್ನೂ ಗಳಿಸಿಲ್ಲವಾದುದರಿಂದ ಇವರ ಉದ್ಯೋಗ ಕಾಲಾವಧಿಯು ಹೆಚ್ಚಾಗಿದೆ. ಆದುದರಿಂದ ಇವರಿಗೆ ತಮ್ಮ ಪ್ರೆಸಿಡೆಂಟ್ ಉದ್ಯೋಗದಲ್ಲುಂಟಾಗಿರುವ ಅನುಭವವು ತಮ್ಮ ಮುಂದಣ ಉದ್ಯೋಗ ನಿರ್ವಾಹದಲ್ಲಿ ಬಹಳ ಮಟ್ಟಿಗೆ ಸಾಹಾಯ್ಯಕಾರಿಸುವುದೆಂದು ನಿರೀಕ್ಷಿಸುತ್ತೇವೆ. ಇವರ ಬದಲು ಪ್ರೆಸಿಡೆಂಟರಾಗಿ ಬರುವ ಮ|| ಬಿ. ಟಿ. ಕೇಶವಯ್ಯಂಗಾರ್ಯರು ಬೆಂಗಳೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ಕೆಲ ವರ್ಷಗಳ ಕಾಲ ಕಮಿಷನರಾಗಿದ್ದುಕೊಂಡು ಮ್ಯುನಿಸಿಪಲ್ ಆಡಳಿತದಲ್ಲಿ ಪಡೆದಿರುವ ಅನುಭವದಿಂದಲ್ಲದೆ ಪಾಶ್ಚಾತ್ಯದೇಶ ಪರ್ಯಟನದಿಂದ ಇವರಿಗೆ ಉಂಟಾಗಿರುವ ಅನುಭವದಿಂದಲೂ ನಮ್ಮ ರಾಜಧಾನಿಗೆ ಬಹಳ ಮಟ್ಟಿಗೆ ಪ್ರಯೋಜನವಾಗುವುದೆಂದು ನಿರೀಕ್ಷಿಸುತ್ತೇವೆ. ಇವರಿಗೆ ಈ ರಾಜಧಾನಿಯಲ್ಲಿ ನಿಕಟ ಸಂಬಂಧವಿದೆ. ಇವರು ದೊಡ್ಡ ಗೌರವ ಕುಟುಂಬಕ್ಕೆ ಸೇರಿದವರಾಗಿ ವಿಶೇಷ ಗುಣಾಢ್ಯರಾಗಿರುತ್ತಾರೆ. ಇವರನ್ನು ಈ ರಾಜಧಾನಿಗೆ ಸುಸ್ವಾಗತಿಸಿ ಇವರಿಗೆ ಉದ್ಯೋಗ ನಿರ್ವಾಹದಲ್ಲಿ ಜಯವಾಗಲೆಂದು ಕೋರುತ್ತೇವೆ.

ಕುದುರೆ ಜೂಜಿನಲ್ಲಿ ೪,೮೦,೦೦೦ ರೂ. ಬಂದಿತು

ಡರ್ಬಿಸ್ವೀಪ್ ಕುದುರೆ ಜೂಜಿನ ಲಾಟರಿಯಲ್ಲಿ ಬರ್ಮಾ ಹೈಸ್ಕೂಲು ಉಪಾಧ್ಯಾಯನ ಹೆಂಡಿತಿ ಡಾಚಿಟ್‌ಸೆವೆ ಎಂಬಾಕೆಗೆ 4,80,000 ರೂಪಾಯಿಗಳು ಬಂದುವು. ಇದಲ್ಲವೆ ಅದೃಷ್ಟಮಹಿಮೆ!

ಮಧುರೆ ಬಳಿ ಬಸ್ಸು ಅನಾಹುತ

16 ಪ್ರಯಾಣಿಕರನ್ನು ಕುಳ್ಳಿರಿಸಿಕೊಂಡು ಒಂದು ಬಸ್ಸು ಮಧುರೆಗೆ ಬರುತ್ತಿರುವಾಗ್ಗೆ ಒಂದು ಆಲದ ಮರವು ಮುರಿದು ಬಸ್ಸಿನಮೇಲೆ ಬೀಳಲು ಅದು ನುಚ್ಚುನೂರಾಗಿ ಒಳಗೆ ಕುಳಿತ್ತಿದ್ದ ಪ್ರಯಾಣಿಕರಲ್ಲಿ 6 ಮಂದಿ ಹೆಂಗುಸರು ಮಕ್ಕಳು ಸಮೇತವಾಗಿ 12 ಮಂದಿ ನಜ್ಜಿ ಹೋಗಿ ಕೂಡಲೆ ಮೃತರಾದರು, ಉಳಿದವರಿಗೆ ವಿಶೇಷ ಅಪಾಯ ಹೊಂದಿದರು.

ಮೋಟಾರುಬಂಡಿಯ ಹೊಸತೆರಿಗೆ

ಮೋಟಾರುಬಂಡಿಗಳ ಹೊಸ ತೆರಿಗೆಯು ಸುಮಾರು 4,47,000 ರೂ. ಗಳಾಗುತ್ತವೆ. ಕಲಕತ್ತಾಪಟ್ಟಣದಲ್ಲಿ ಮೊಟಾರು ಸೈಕಲ್ಲುಗಳು ಸೇರಿ 25,000 ಮೋಟಾರುಬಂಡಿಗಳಿರುತ್ತವೆ. ಇವುಗಳಲ್ಲಿ 11,000 ಬಂಡಿಗಳಿಂದ ಮಾತ್ರ ತೆರಿಗೆಯು ವಸೂಲಾಗುತ್ತಿರುವುದು. ಉಳಿದ ಬಂಡಿಗಳಿಂದಲೂ ತೆರಿಗೆ ವಸೂಲಾಗುವುದಾದರೆ ಇನ್ನೂ 6 ಲಕ್ಷ ರೂ. ಗಳುತ್ಪನ್ನವಾಗುವುದು. ಮೋಟಾರುಬಂಡಿಗಳ ತೆರಿಗೆಯನ್ನು ಹೆಚ್ಚಿಸಿದುದರಿಂದ ಒಂದು ಪಟ್ಟಣದಲ್ಲಿಷ್ಟು ಹೆಚ್ಚು ಹಣವುತ್ಪನ್ನವಾಗಿರುವಾಗ್ಗೆ ಒಟ್ಟು ಭಾರತದೇಶದಲ್ಲೆಲ್ಲ ಇನ್ನೆಷ್ಟು ಹಣ ಉತ್ಪನ್ನವಾಗಿರಬೇಕು?

ಅಮೇರಿಕೆಯ ಸ್ವಾತಂತ್ರ್ಯದಿನೋತ್ಸವ

ಈ ಸ್ವಾತಂತ್ರ್ಯದಿನೋತ್ಸವವು ಪ್ರತಿ ವರ್ಷದಲ್ಲೂ ನಡೆಯುವಾಗ್ಗೆ ಜನಸಮ್ಮರ್ದನ, ಮದ್ದನ್ನು ಹಾರಿಸುವುದು ಇತ್ಯಾದಿಗಳಿಂದ ಪ್ರಾಣಾಪಾಯವು ಸಂಭವಿಸುತ್ತಲಿರುವುದು. ಈ ವರ್ಷ ಕಳೆದ ಸೋಮವಾರ ನಡೆದ ಉತ್ಸವದಲ್ಲಿ ಮೋಟಾರುಬಂಡಿಗಳ ಅನಾಹುತದಿಂದಲೂ, ನೀರಿನಲ್ಲೀಜುವುದರಿಂದಲೂ ಆದ 80 ಮರಣಗಳು, ಸೇರಿ ಒಟ್ಟು 300 ಮರಣಗಳಾದುವು. ತಾರಾಮಂಡಲಗಳನ್ನುಹೊತ್ತಿಸುವಾಗ್ಗೆ ಅವು ಒಡೆದುಹೋಗಿ 6 ಹುಡುಗರು ಮೇಲಕ್ಕೆ ಹಾರಿಸಲ್ಪಟ್ಟು ಅವುಗಳ ಶವಗಳು ಬಹುದೂರದಲ್ಲಿ ಸಿಕ್ಕಿದುವು.

ನೈಜಾಂರವರ ಸ್ವದೇಶ ವಸ್ತ್ರಾಭಿಮಾನ

ಗೃಹಪರಿಶ್ರಮಾಲಯವು ಅಂದರೆ ಮನೆಯಲ್ಲಿ ಮಾಡಬಹುದಾದ ಕೈಗಾರಿಕೆಯನ್ನು ಬೋಧಿಸುವ ಆಲಯವು ಕಳೆದ ಸೋಮವಾರ ಮುರುಷದಾಬಾದಿನಲ್ಲಿ ನೈಜಾಂರವರಿಂದ ಆರಂಭಿಸಲ್ಪಟ್ಟಿತು. ಆ ಕಾಲದಲ್ಲಿ ನೈಜಾಂರವರು "ನಮ್ಮ ಸಂಸ್ಥಾನದಲ್ಲಿ ತಯಾರಾಗುವ ವಸ್ತುಗಳು ಇತರ ವಸ್ತುಗಳಿಗಿಂತ ಬಹಳ ನಾಣ್ಯವಾಗಿಯೂ ಗಟ್ಟಿಯಾಗಿಯೂ ಇರುತ್ತವೆ. ನಾನು ಈ ವಸ್ತುಗಳನ್ನು ಉಪಯೋಗಿಸುತ್ತಿದ್ದೇನೆ. ಈ ದೇಶದ ಧನಾಢ್ಯರೆಲ್ಲರೂ ನನ್ನಂತೆಯೇ ಈ ದೇಶದ ವಸ್ತುಗಳನ್ನು ಮಾತ್ರ ಉಪಯೋಗಿಸುತ್ತ ಬಂದರೆ ಸಂಸ್ಥಾನದ ಗೃಹಪರಿಶ್ರಮವು ಚೆನ್ನಾಗಿ ಅಭಿವೃದ್ಧಿಯಾಗುವುದು. ಪರದೇಶದ ವಸ್ತುಗಳು ಸ್ವದೇಶವಸ್ತುಗಳಿಗಿಂತ ಚೆನ್ನಾಗಿರುವುದಾದರೂ ಈಗ ಪ್ರಪಂಚದ ಎಲ್ಲ ದೇಶಗಳವರೂ ಸ್ವದೇಶಿ ವಸ್ತುಗಳನ್ನೇ ಅಪೇಕ್ಷಿಸುತ್ತಿರುವರು. ಅದರಂತೆಯೇ ನಮ್ಮ ಸಂಸ್ಥಾನದವರೂ ನಡೆಯದಿರಲು ಯಾವ ಕಾರಣವೂ ಕಂಡು ಬರುವುದಿಲ್ಲವಾದುದರಿಂದ, ಸಾಧ್ಯವಾದ ಮಟ್ಟಿಗೆ ಆ ರೀತಿ ಮಾಡಬೇಕು." ಎಂದು ಮೊದಲಾಗಿ ಅಪ್ಪಣೆ ಕೊಡಿಸಿ ತಮಗಿರುವ ಸ್ವದೇಶ ವಸ್ತ್ರಾಭಿಮಾನವನ್ನು ವ್ಯಕ್ತಪಡಿಸಿದರು.

ಬೊಂಬಾಯಿನ ಕಲಹ

ಬೊಂಬಾಯಿನಲ್ಲಿ ಹಿಂದು ಮಹಮ್ಮದೀಯರೊಳಗೆ ಜಾತಿ ಕಲಹವು ಪ್ರಾರಂಭವಾದಾರಭ್ಯ ಕಳೆದ ಬುಧವಾರದವರೆಗೆ 211 ಮಂದಿ ಮಡಿದು 2667 ಮಂದಿ ಗಾಯಪಡೆದಿರುತ್ತಾರೆ. ಅಲ್ಲಿಂದೀಚೆಗೆ ಮಳೆಯುಪಕ್ರಮವಾಗಿ ಕಲಹಸ್ಥಳಗಳಲ್ಲಿ ನೀರು ನಿಂತಿರುವುದರಿಂದ ಜನರು ಗುಂಪು ಸೇರಲವಕಾಶವಿಲ್ಲದೆ ಬಡಿದಾಟವು ತಾನಾಗಿ ನಿಂತಿರುತ್ತದೆ. ಪೊಲೀಸರ ಮತ್ತು ಸೈನಿಕರ ಕಾವಲು ಪ್ರಬಲವಾಗಿರುವುದು. ಕಲಹ ಪ್ರದೇಶಗಳಲ್ಲಿ ಅಂಗಡಿಗಳು ಮುಚ್ಚಲ್ಪಟ್ಟು ಅವು ನಿರ್ಜನ ಪ್ರದೇಶದಂತೆ ಹಾಳು ಬಿಡಿಯುತ್ತಿವೆ. ಬೊಂಬಾಯಿ ಪುರಪಾಲಕ ಸಂಘಾಧ್ಯಕ್ಷರು ಕೂಡಿಸಿದ್ದ ಶಾಂತಿ ಸಭೆಯವರು, "ಶಾಂತಿಸ್ಥಾಪನೆಗಾಗಿ ಪ್ರಭುತ್ವದವರು ಹಿಂದು ಮಹಮ್ಮದೀಯರನ್ನೂ ಇತರ ಜಾತಿಯವರನ್ನೂ ಕೂಡಿಸಿ ಒಂದು ಅನಾಧಿಕಾರ ಸಂಘವನ್ನೇರ್ಪಡಿಸಬೇಕು. ಈ ಸಂಘವು ಯಾವಾಗಲೂ ಶಾಂತಿಸ್ಥಾಪನೆಗಾಗಿ ಪ್ರಯತ್ನಿಸುತ್ತಿರಬೇಕು. ಹೋಂ ಮೆಂಬರೂ ಪೊಲೀಸು ಕಮಿಷನರೂ ಈ ಶಾಂತಿಸ್ಥಾಪನ ಕಾರ್ಯದಲ್ಲಿ ಸಹಾಯಕರಾಗಿರಬೇಕು. ಅಲ್ಲದೆ ಹೋಂ ಮೆಂಬರು ಕಲಹವು ಸಂಪೂರ್ಣವಾಗಿ ನಿಲ್ಲುವವರೆಗೂ ಬೊಂಬಾಯಿನಲ್ಲೇ ವಾಸಮಾಡಬೇಕು" ಎಂದು ಪ್ರಭುತ್ವದವರಲ್ಲಿ ನಿವೇದಿಸಿಕೊಂಡಿರುವರು.

ಸಪ್ರೂ ಜಯಕರರ ರಾಜೀನಾಮೆ

ಭಾರತರಾಜ್ಯಾಂಗರಚನಾಕ್ರಮವು ರೌಂಡುಟೇಬಲು ಸಭೆಯ ಮೂಲಕ ಜಾಗ್ರತೆಯಲ್ಲಿ ನಿರ್ಧರವಾಗುವುದಿಲ್ಲವಾದುದರಿಂದ ಜಾಯಿಂಟ್ ಕಮಿಟಿಯದ್ವಾರ ಇತ್ಯರ್ಥಗೊಳಿಸಲು ನಿರ್ಧರಿಸಿರುವುದಾಗಿ ಇಂಡ್ಯಾ ಮಂತ್ರಿಯವರು ಪ್ರಕಟಿಸಿರುವರಷ್ಟೆ. ಈ ಪ್ರಕಟನೆಯಿಂದ ಸಪ್ರೂ ಜಯಕರರುಗಳು ಅಸಮಾಧಾನಗೊಂಡು "ಹೊಸ ಕಾರ್ಯಕ್ರಮದಲ್ಲಿ ನನಗೆ ಅಷ್ಟು ನಂಬಿಕೆಯಿಲ್ಲವಾದುದರಿಂದ ನಾನು ಸಲಹೆಸಂಘದಲ್ಲಿದ್ದುಕೊಂಡು ಏನನ್ನೂ ಮಾಡಲಾರೆನು. ಈ ಸಂಘವು ರೌಂಡುಟೇಬಿಲು ಸಭೆಗೆ ಕಾರ್ಯಸಂಘವಾಗಿರುವುದರ ಬದಲು ಸ್ವತಂತ್ರ ಸಂಘವಾಗಿರುವುದರಿಂದ ಇದರ ಮೆಂಬರತನಕ್ಕೆ ರಾಜೀನಾಮೆ ಕೊಟ್ಟಿರುತ್ತೇನೆ" ಎಂದು ಡಾ|| ಸಪ್ರೂಯವರೂ; "ಇದುವರೆಗೆ ಅವಲಂಬಿಸಿದ ಪದ್ಧತಿಯಲ್ಲಿ ನನಗೆ ಇನ್ನೂ ವಿಶ್ವಾಸವಿರುವುದರಿಂದ ನೂತನ ಕಾರ್ಯಕ್ರಮದಲ್ಲಿ ನನಗೆ ವಿಶ್ವಾಸವಿಲ್ಲವು. ಅದುಕಾರಣ ಸಲಹಸಂಘದಲ್ಲಿ ನಾನಿದ್ದುಕೊಂಡು ನಾನು ಯಾವ ಕಾರ್ಯವನ್ನೂ ಮಾಡಲಾರೆನೆಂದು ಭಾವಿಸಿರುತ್ತೇನೆ. ಈ ಸಂಘವು ರೌಂಡುಟೇಬಿಲು ಕಮಿಟಿಯವರ ಕಾರ್ಯಸಂಘವಾಗಿರುವುದಿಲ್ಲ, ಏಕೆಂದರೆ ಈ ಸಂಘದ ಸಿಫಾರ್ಸುಗಳನ್ನು ವಿಚಾರಿಸಲು ಪುನಃ ರೌಂಡುಟೇಬಿಲು ಸಭೆಯು ಕೂಡುವುದಿಲ್ಲ" ಎಂದು ಜಯಕರರವರೂ ಸೂಚಿಸಿ ರಾಜೀನಾಮೆಗಳನ್ನು ಕೊಟ್ಟಿರುತ್ತಾರೆ.

ಲಂಡನ್ನಿನಲ್ಲಿ ಮಹಮ್ಮದೀಯ ನಾಯಕರ ಪ್ರಚಾರ

ಕಳೆದ ಗುರುವಾರ ಲಂಡನ್ ನಗರದಲ್ಲಿ ಪಾರ್ಲಿಮೆಂಟು ಸಭಾಮಂದಿರದೊಳಗೆ ಕಾಮನ್ಸ್ ಮತ್ತು ಲಾರ್ಡ್ಸ್ ಸಭೆಗಳ ಮೆಂಬರುಗಳು ಸಮಾವೇಶವಾಗಿದ್ದ ವೇಳೆಯಲ್ಲಿ ನೂತನ ರಾಜ್ಯಾಂಗವಿಧಾನದಲ್ಲಿ ಮಹಮ್ಮದೀಯರ ಹಕ್ಕನ್ನು ಕುರಿತು ಮಹಮ್ಮದೀಯ ನಾಯಕರು ಭಾಷಣಮಾಡುವಾಗ್ಗೆ "ಬ್ರಿಟಿಷ್ ಪ್ರಭುತ್ವದವರು ಪ್ರಪಂಚದಲ್ಲೆಲ್ಲ ಪಾರತಂತ್ರ್ಯವನ್ನು ನಿರ್ಮೂಲನಮಾಡಿರುತ್ತಾರೆ. ಹೀಗಿರುವಾಗ್ಗೆ ಇಂಡ್ಯಾದಲ್ಲಿ ಅತ್ಯಂತ ರಾಜಭಕ್ತಿಯುತರಾದ 180 ಲಕ್ಷ ಮಂದಿ ಮಹಮ್ಮದೀಯರು ಪರತಂತ್ರರಾಗಿರುವುದನ್ನು ಬ್ರಿಟಿಷಿನವರು ಹೇಗೆತಾನೆ ಸಮ್ಮತಿಸುವರು?" ಎಂದು ಹಯಾತುಖಾನರವರೂ, "ಹಿಂದುಗಳಿಗೂ ಮಹಮ್ಮದೀಯರಿಗೂ ತೃಪ್ತಿಯನ್ನುಂಟುಮಾಡಬೇಕೆಂದು ಬ್ರಿಟಿಷಿನವರು ಆಲೋಚಿಸದೆ ನ್ಯಾಯವನ್ನನುಸರಿಸಿ ಪರಿಷ್ಕರಿಸಬೇಕು" ಎಂದು ಹರೂನರವರೂ, "ಬೊಂಬಾಯಿನ ಜಗಳದಲ್ಲಿ 2 ತಿಂಗಳೊಳಗೆ 300 ಮಂದಿ ಮೃತರಾದರು. ಸಿವಿಲ್ ಪ್ರಭುತ್ವಾಧಿಕಾರವು ತೊಲಗಿದಮೇಲೆ ಏನು ಪ್ರಾಪ್ತವಾಗುವುದೆಂದು ಯಾರೂ ಹೇಳಲಾರರು. ಸಾಮಂತ ಪ್ರಜೆಗಳ ಸ್ವಾತಂತ್ರ್ಯಕ್ಕೆ ಭಂಗವುಂಟಾಗುತ್ತಿದ್ದರೂ ದೊರೆತನದವರು ಮೌನದಿಂದ ನೋಡುತ್ತಿರುವರು. ಅಲ್ಪಸಂಖ್ಯಾಕ ಪ್ರಜೆಗಳನ್ನು ಹೀಗೆ ಪೀಡಿಸುತ್ತಿದ್ದರೆ ಅವರು ತಿರುಗಿಬೀಳುವರು" ಎಂದು ಆಮೀರಲಿಯವರೂ ಹೇಳಿದರು. ಈ ಸಭಾಧ್ಯಕ್ಷತೆಯನ್ನು ವಹಿಸಿದ್ದ ಸರ್ ರಿಜಿನಾಲ್ಡ್‌ಕ್ರಾಡಕ್‌ರವರು "ಪರಿಶೀಲನಾಧಿಕಾರವು ಬ್ರಿಟಿಷ್ ಪ್ರಭುತ್ವಾಧಿಕಾರಿಗಳಿಗಿರುವವರೆಗೆ ಹಿಂದು-ಮಹಮ್ಮದೀಯ ವಿರೋಧವು ತಲೆಯೆತ್ತದು" ಎಂದು ಹೇಳಿದರು.

ಒಳದೇಶದ ವೃತ್ತಾಂತಗಳು

ನೆನ್ನೆಯ ದಿವಸ ಮಧ್ಯಾಹ್ನ $3\frac{1}{2}$ ಘಂಟೆಯಲ್ಲಿ ಶ್ರೀಮನ್ಮಹಾರಾಜರವರ ಸ್ವಾರಿಯು ಬೆಂಗಳೂರಿಗೆ ಚಿತ್ತೈಸಿತು.

ಕಳೆದ ಗುರುವಾರ ದಿವಾನರವರು ಇರ್ವಿನ್ ನಾಲಾ ಕೆಳಗಿನ ರೈತರ ಕಷ್ಟನಷ್ಟಗಳನ್ನು ವಿಚಾರಿಸಿ ತಿಳಿಯುವುದಕ್ಕಾಗಿ ರೆವಿನ್ಯೂ ಕಮಿಷನರೊಡನೆ ಮಂಡ್ಯಕ್ಕೆ ದಯಮಾಡಿಸಿದ್ದಾಗ್ಗೆ ರೈತಮಂಡಲಿಯವರೊಪ್ಪಿಸಿದ ವಿಜ್ಞಾಪನಾ ಪತ್ರಿಕೆಯೂ ದಿವಾನರು ಕೊಟ್ಟ ಉತ್ತರವೂ ಮುಂದಿನ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುವು. ರೈತರ ಹಿತ ಸಾಧನೆಗಾಗಿ ಬ್ಲಾಕ್ ಪದ್ಧತಿಯನ್ನೇರ್ಪಡಿಸುವುದರಿಂದ ಅದನ್ನು ತಪ್ಪಿಸಲಾಗುವುದಿಲ್ಲವೆಂಬುದು ದಿವಾನರ ಉತ್ತರದ ಮುಖ್ಯ ಸಾರಾಂಶವಾಗಿರುತ್ತದೆ.

ಕಳೆದ ಬುಧವಾರ ಬೆಂಗಳೂರು ಪಟ್ಟಣದಲ್ಲಿ ನಡೆದ ಸೋಷಿಯಲ್ ಅಂಡ್ ಮಾರಲ್ ಹೈಜೀನ್ ಅಸೋಸಿಯೇಷನ್ ಎಂಬ ಸಾಮಾಜಿಕ ಮತ್ತು ನೈತಿಕ ಪಾರಿಶುದ್ಧ್ಯರಕ್ಷಣೆಯ ಸಂಘದ ಸಮ್ಮೇಳದಲ್ಲಿ ಮತ್ತು ಶುಕ್ರವಾರ ಬಿಡದಿಯಲ್ಲಿ ಪ್ರಾರಂಭೋತ್ಸವವನ್ನು ನೆರವೇರಿಸುವ ವೇಳೆಯಲ್ಲಿ ದಿವಾನರು ಮಾಡಿದ ಭಾಷಣಗಳು ಈ ಪತ್ರಿಕೆಯ ಬೇರೆ ಕಡೆ ಮುದ್ರಿಸಲ್ಪಟ್ಟಿವೆ. ವ್ಯಭಿಚಾರ ನಿರ್ಮೂಲನವು ಹೇಳುವಷ್ಟು ಸುಲಭಸಾಧ್ಯವಲ್ಲ ಮತ್ತು ಇದರಿಂದ ಬೇರೆ ವಿಧವಾದ ಅನರ್ಥವು ಸಂಘಟಿಸುವ ಸಂಭವವಿರುತ್ತಾದುದರಿಂದ ಅದನ್ನು ಹತೋಟಿಯಲ್ಲಿಡಲು ಪ್ರಯತ್ನಿಸುವುದುತ್ತಮವೆಂದು ತೋರುತ್ತದೆ.

ಮೈಸೂರು ಸಂಸ್ಥಾನದ 1931 ನೆಯ ಇಸವಿಯ ಜನಸಂಗಣತಿಯ ಪುಸ್ತಕದ ಎರಡನೆಯ ಭಾಗದ ಪ್ರತಿಯೊಂದು ಈಗತಾನೆ ಪ್ರಕಟವಾಗಿದೆ. ಅದರ ಪ್ರತಿಯೊಂದನ್ನು ನಾವು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ. ಈ ಗಣತಿಯ ಪ್ರಕಾರ ಒಟ್ಟು ಸಂಸ್ಥಾನದ ವಿಸ್ತೀರ್ಣವು ಬೆಂಗಳೂರು ದಂಡು ಸೇರಿ 29,326 ಚದರ ಮೈಲುಗಳು ಮತ್ತು ಪ್ರಜಾಸಂಖ್ಯೆ 65,57,302. ಒಕ್ಕಲಿರುವ 108 ಪಟ್ಟಣಗಳೂ, 16,483 ಹಳ್ಳಿಗಳೂ ಇರುತ್ತವೆ. ಪಟ್ಟಣಗಳ ಜನ ಸಂಖ್ಯೆಯು 10,45,042; ಹಳ್ಳಿಗಳ ಜನ ಸಂಖ್ಯೆಯು 55,12,260. ಅಕ್ಷರಸ್ಥರ ಒಟ್ಟು ಸಂಖ್ಯೆಯು 5,94,526 ಇದರಲ್ಲಿ 92,046 ಜನರಿಗೆ ಇಂಗ್ಲೀಷು ಬರುತ್ತದೆ. ಒಟ್ಟು ಸಂಸ್ಥಾನದಲ್ಲಿ 60,15,880 ಹಿಂದುಗಳೂ, 3,98,628 ಮಹಮ್ಮದೀಯರೂ, 87,538 ಕ್ರಿಶ್ಚಿಯನ್ನರೂ ಇರುತ್ತಾರೆ. ಹಿಂದುಗಳಲ್ಲಿ 10,00,326 ಆದಿಕರ್ನಾಟಕರು ಸೇರಿರುವರು.

ರಾಜಧಾನಿಯ ಭಗಿನಿ ಸೇವಾಸಮಾಜದವರಿಂದೇರ್ಪಡಿಸಲ್ಪಟ್ಟು ನಡೆಸಲ್ಪಡುತ್ತಿರುವ ಕುಶಲ ಕೈಗಾರಿಕೆಯ ವಸ್ತುಪ್ರದರ್ಶನದ ಆರಂಭೋತ್ಸವವು ಕಳೆದ ಸೋಮವಾರ ಶ್ರೀ|| ರಾಜಕುಮಾರಿ ಲೀಲಾವತಿಯವರಿಂದ ನೆರವೇರಿಸಲ್ಪಟ್ಟಿತು. ಆ ಸಮಯದಲ್ಲಿ ರಾಜಕುಮಾರಿಯವರು ಗೃಹಕೃತ್ಯವೂ, ಶಿಶುಪಾಲನವೂ ಸ್ತ್ರೀಯರ ಧರ್ಮವಾಗಿರುವುದರ ಜತೆಗೆ ಪಾಶ್ಚಾತ್ಯ ಸ್ತ್ರೀಯರಂತೆ ಇತರ ಶಿಶುಗಳ ಪಾಲನೆಯನ್ನು ಧರ್ಮವನ್ನಾಗಿಟ್ಟುಕೊಳ್ಳುವುದೂ, ಪುರುಷರಂತೆ ವಿದ್ಯಾವ್ಯಾಸಂಗ ಮಾಡುವುದೂ ಆವಶ್ಯಕವು. ಈ ಸಮಾಜದವರು ಬಾಲಿಕೆಯರಿಗೆ ಇಂಗ್ಲೀಷು ಕನ್ನಡ, ಸಂಸ್ಕೃತ ಮತ್ತು ಸಂಗೀತ ವಿದ್ಯೆಯನ್ನೂ, ಹೊಲಿಗೆ ಮೊದಲಾದ ಕೆಲ ಕಸಬನ್ನೂ ಕಲಿಸುತ್ತಿರುವುದು ಬಹಳ ಪ್ರಯೋಜನಕಾರಿಯಾಗಿರುವುದಲ್ಲದೆ ಈ ದಿವಸ ಪ್ರದರ್ಶನಕ್ಕಿಟ್ಟಿರುವ ವಸ್ತುಗಳು ಬಹಳ ಶ್ಲಾಘ್ಯವಾಗಿರುತ್ತವೆ ಎಂದು ಮೊದಲಾಗಿ ಕನ್ನಡದಲ್ಲಿ ಭಾಷಣಮಾಡಿ ಬಹುಮಾನಗಳನ್ನು ಹಂಚಿದರು.

ಬೆಂಗಳೂರಿನಲ್ಲಿ 10 ವರ್ಷಗಳ ಹಿಂದೆ ಹೆಂಡತಿಯನ್ನು ಬಿಟ್ಟಿದ್ದ ಮೊದಲಿಯಾರು ಜಾತಿಯ 35 ವರ್ಷ ವಯಸ್ಸಿನ ಸಿಪಾಯಿ ಮುನಿಸಾಮಿ ಎಂಬವನು 6 ತಿಂಗಳ ಹಿಂದೆ ಗಂಡನಿಂದ ಬಿಡಲ್ಪಟ್ಟಿದ್ದ ಅದೇ ಜಾತಿಯ ಇಂದಿರದೇವಮ್ಮ ಎಂಬ 18 ವರ್ಷ ವಯಸ್ಸಿನ ಯುವತಿಯನ್ನು ಮೋಹಿಸಿ ಅವಳ ಸಂಗವನ್ನು ಮಾಡಲೆತ್ನಿಸುತ್ತಿದ್ದನು. ಆದರೆ ಆಕೆಯು ಅದಕ್ಕೆ ಒಡಂಬಡಲಿಲ್ಲವಾಗಿ ಕಳೆದ ಸೆಪ್ಟಂಬರ್ ತಾ|| 25 ರ ಬೆಳಗಿನ 10 ಘಂಟೆಯಲ್ಲಿ ಆಕೆಯು ತನ್ನ ಮನೆಯೊಳಗೆ ಒಬ್ಬಳೇ ಇದ್ದು ಅಡಿಗೆ ಮಾಡುತ್ತಿರುವಾಗ್ಗೆ ಸಿಪಾಯಿ ಮುನಿಸಾಮಿಯು ಒಂದು ಮಚ್ಚನ್ನು ಹಿಡಿದುಕೊಂಡು ಅವಳ ಮನೆಗೆ ಹೋಗಿ ಅವಳನ್ನು ಕತ್ತರಿಸಿ ಹಾಕಿ ಹೊರಗೆ ಬರುತ್ತಿರುವಾಗ್ಗೆ ಇದಿರು ಮನೆಯ ತಂಗಮ್ಮನೆಂಬವಳು ಮುನಿಸಾಮಿಯು ರಕ್ತ ಮಯವಾದ ಮಚ್ಚನ್ನು ಹಿಡಿದಿರುವುದನ್ನು ಕಂಡಳು. ಮುನಿಸಾಮಿಯು ಅವಳ ಹಣೆಯಮೇಲೆ ಮಚ್ಚಿನಿಂದ ಹೊಡೆದು ಗಾಯ ಮಾಡಿದನು. ಈ ಅಪರಾಧಕ್ಕಾಗಿ ಮುನಿಸಾಮಿಗೆ ಬೆಂಗಳೂರು ಸೆಷನ್ಸುಜಡ್ಜಿಯವರು ಮರಣದಂಡನೆಯನ್ನು ವಿಧಿಸಿ ಅವನ ಹೇಳಿಕೆಯನ್ನು ಕೇಳುವಲ್ಲಿ "ನನ್ನ ತಂದೆ ತಾಯಿಗಳಿಗೆ ನಾನು ಸಹಿತ 10 ಮಕ್ಕಳು ಹುಟ್ಟಿದೆವು ನನ್ನ ವಿನಾ ಉಳಿದವರೆಲ್ಲರೂ ತಂದೆ ತಾಯಿಗಳ ಸಹಿತ ಕಾಲವಾದರು. ನಾವುಗಳು ಬಹಳ ಮರ್ಯಾದೆಯಿಂದ ಬಾಳುತ್ತಿದ್ದೆವು. ಕಡೆಗೆ ದುರವಸ್ಥೆಯು ಪ್ರಾಪ್ತವಾಗಲು ಇನ್ನು ಪ್ರಪಂಚದಲ್ಲಿ ಬದುಕಿರುವುದರಿಂದ ಪ್ರಯೋಜನವಿಲ್ಲವೆಂದು ಜಿಗುಪ್ಸೆ ಪಟ್ಟುಕೊಂಡು ದೇಶಾಂತರ ಹೊರಟು ಪ್ರಪಂಚದ ನಾನಾ ಭಾಗದಲ್ಲಿ ಸಂಚರಿಸಿ ನಾನಾ ಕಷ್ಟನಷ್ಟಗಳಿಗೆ ಗುರಿಯಾಗಿ ಸ್ವಸ್ಥಳಕ್ಕೆ ಬಂದೆನು. ನಾನು ಯುವತಿಯನ್ನು ಕೊಂದುದು ನಿಜ. ಈ ಪಾಪಕೃತ್ಯವನ್ನು ಮಾಡಿ ಇನ್ನು ಜೀವಿಸಿರಲು ಇಷ್ಟವಿಲ್ಲ. ಆದುದರಿಂದ ನನ್ನನ್ನು ಗಲ್ಲಿಗೇರಿಸಿಬಿಡಿ ಎಂದು ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುವುದೇ ನನ್ನ ಹೇಳಿಕೆಯಾಗಿದೆ" ಎಂದು ಜಡ್ಜಿಯವರಲ್ಲಿ ತಿಳಿಸಿದನು. ಚೀಫ್ ಕೋರ್ಟಿನ ಜಡ್ಜಿಗಳು ಈ ಅಪರಾಧಿಗೆ ಬುದ್ಧಿ ವಿಕಲ್ಪವಾಗಿರಬೇಕೆಂದು ತಿಳಿದು, ಇವನು ವಿಚಾರಣೆಯ ಕಾಲದಲ್ಲಿ ಜೈಲಿನಲ್ಲಿದ್ದನಾದುದರಿಂದ ಜೇಲ್ ಸೂಪರಿಂಟೆಂಡೆಂಟರ ಅಭಿಪ್ರಾಯವನ್ನು ಕೇಳಿರುವಲ್ಲಿ, ಅವರು ವೈದ್ಯರ ಅಭಿಪ್ರಾಯವನ್ನು ಕೇಳಿ ಅಪರಾಧಿಗೆ ಬುದ್ಧಿ ವಿಕಲ್ಪವಾಗಿಲ್ಲವೆಂದು ತಿಳಿಸಿದುದರಮೇಲೆ ಮರಣದಂಡನೆಯನ್ನು ಸ್ಥಿರಗೊಳಿಸಿದರು.

ಬಿಡದಿ ಗ್ರಾಮದಲ್ಲಿ ವಿದ್ಯುಚ್ಛಕ್ತಿಯ ದೀಪೋತ್ಸವವನ್ನು ನೆರವೇರಿಸುವಾಗ್ಗೆ ದಿವಾನರವರು ಮಾಡಿದ ಭಾಷಣ.

೧೯೩೨ನೆಯ ಇಸವಿ ಜುಲೈ ೮ನೆಯ ತಾರೀಖು

ಮಹಾಶಯರೇ,—

ಈ ದಿನ ನಿಮ್ಮೊಡನೆ ಸೇರಿ ವಿದ್ಯುಚ್ಛಕ್ತಿಯ ದೀಪೋತ್ಸವದಲ್ಲಿ ಭಾಗಿಯಾಗುವುದು ನನಗೆ ವಿಶೇಷ ಸಂತೋಷಕರವಾಗಿದೆ. ಈಚೆಗೆ ನಮ್ಮ ಸಂಸ್ಥಾನದಲ್ಲಿ ಒಂದಾದಮೇಲೆ ಮತ್ತೊಂದರಂತೆ ಅನೇಕ ಊರುಗಳಿಗೆ ವಿದ್ಯುಚ್ಛಕ್ತಿಯ ದೀಪಗಳು ಬರುತ್ತಿವೆ. ಹೀಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಪಡೆದಿರುವ ಸ್ಥಳಗಳಲ್ಲಿ ನಿಮ್ಮ ಊರೂ ಒಂದೆಂಬುದನ್ನು ಕಂಡು, ನನ್ನ ಸಂತೋಷವು ಮತ್ತೂ ಹೆಚ್ಚಾಗಿದೆ. ನೀವುಗಳು ಬಹಳ ಆದರದಿಂದ ನನಗೆ ಸ್ವಾಗತವನ್ನು ಬಯಸಿರುವುದಲ್ಲದೆ, ನನಗೆ ಒಳ್ಳೆಯದನ್ನು ಕೋರುವ ಹಾರೈಕೆಗಳಿಂದ ತುಂಬಿರುವ ಅಭಿನಂದನ ಪತ್ರಿಕೆಯನ್ನೂ ಒಪ್ಪಿಸಿದ್ದೀರಿ. ಇದಕ್ಕಾಗಿ ನಿಮ್ಮೆಲ್ಲರಿಗೂ ನನ್ನ ವಂದನೆಗಳನ್ನು ಅರ್ಪಿಸುವೆನು. ಒಂದು ಊರಿಗೆ ವಿದ್ಯುಚ್ಛಕ್ತಿಯು ದೊರೆಯುವಂತಾದರೆ, ಅದರಿಂದ ಆ ಊರಿಗೆ ಉಂಟಾಗುವ ಸಧ್ಯದ ಪ್ರಯೋಜನಗಳನ್ನೂ ಮುಂದಿನ ಅನುಕೂಲಗಳನ್ನೂ ಕುರಿತು ಈ ದಿನ ಪ್ರಸ್ತಾಪಿಸುವುದನ್ನು, ನಾನು ಅಷ್ಟೇನೂ ಮುಖ್ಯವೆಂದು ಭಾವಿಸಿಲ್ಲ. ಏಕೆಂದರೆ, ಇತರ ಅನೇಕ ಊರುಗಳಲ್ಲಿ ವಿದ್ಯುಚ್ಛಕ್ತಿಯ ದೀಪೋತ್ಸವವನ್ನು ನೆರವೇರಿಸುವಾಗ್ಗೆ, ಆ ಅಂಶಗಳನ್ನು ಕುರಿತು ನಾನು ವಿಶದವಾಗಿ ಪ್ರಸ್ತಾಪಿಸಿಯೇ ಇದ್ದೇನೆ. ಆದಕಾರಣ, ಅಭಿವೃದ್ಧಿ ಸ್ಥಿತಿಯಲ್ಲಿರುವ ನಿಮ್ಮ ಚಿಕ್ಕ ಊರನ್ನು ನೋಡಿ ನನಗುಂಟಾಗಿರುವ ಸಂತೋಷವನ್ನು ಸೂಚಿಸುವುದು, ಆ ಅಂಶಗಳನ್ನು ಕುರಿತು ಮಾತನಾಡುವುದಕ್ಕಿಂತಲೂ ನನ್ನ ಮನಸ್ಸಿಗೆ ಬಹು ಮುಖ್ಯವೆಂದು ತೋರಿಬಂದಿದೆ. ಗ್ರಾಮಗಳ ಜನರ ಜೀವನ ಪರಿಸ್ಥಿತಿಯು ಉತ್ತಮ ಪಡುವುದಕ್ಕೆ ಸಾಧಕವಾದ ಕಾರ್ಯಗಳಲ್ಲಿ ಅವರೊಡನೆ ಸೇರಿ ಸಹಾಯ ಮಾಡುವುದು, ನನಗೆ ಕೇವಲ ಸಂತೋಷಕರವಾಗಿರುತ್ತದೆ.

ಈಚಿನ ವರುಷಗಳಲ್ಲಿ ಸರ್ಕಾರದವರು ಸಾಧ್ಯಕಂಡ ಊರುಗಳಿಗೆಲ್ಲ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಬೇಕೆಂದು ನಿರ್ಧರಿಸಿರುವುದು ಸರಿಯಷ್ಟೆ. ಈ ಕಾರ್ಯಕ್ರಮವು ನಿಮ್ಮ ಮನಸ್ಸಿಗೆ ಅಚ್ಚುಮೆಚ್ಚಾಗಿರುವುದನ್ನು ನೀವು ಅಭಿನಂದನ ಪತ್ರಿಕೆಯಲ್ಲಿ ಸೂಚಿಸಿದ್ದೀರಿ. ಗ್ರಾಮಗಳ ಜನಗಳ ಜೀವನ ಸ್ಥಿತಿಯನ್ನು ಉತ್ತಮಪಡಿಸಿ ಅವರು ವಿದ್ಯಾವಂತರೂ ಅನುಕೂಲಸ್ಥರೂ, ಆಗುವಂತೆ ಮಾಡಬೇಕಾದುದು ಅವಶ್ಯಕ. ಈ ವಿಚಾರದಲ್ಲಿ ಸರ್ಕಾರದವರು ತಮ್ಮಿಂದ ಸಾಧ್ಯವಾದುದನ್ನೆಲ್ಲಾ ಮಾಡಲು ಸಿದ್ಧವಾಗಿಯೇ ಇದ್ದಾರೆ. ಇದು ನಿಮಗೂ ಗೊತ್ತೇ ಇದೆ. ಆದರೆ ಮತ್ತೊಂದು ವಿಚಾರ, ಸರ್ಕಾರದವರು ತಮಗೆ ಬರುವ ಹುಟ್ಟುವಳಿಯ ಸಹಾಯದಿಂದ ಒಟ್ಟು ಪ್ರಜಾಸಮುದಾಯದ ಯೋಗಕ್ಷೇಮವನ್ನೂ ನೋಡಿಕೊಳ್ಳಬೇಕಾಗಿದೆ. ಆದಕಾರಣ, ಈ ಜವಾಬ್ದಾರಿಗನುಸಾರವಾಗಿ ಇತರ ಬಾಬುಗಳಿಗೆ ಎಷ್ಟು ಹಣವನ್ನು ಕೊಡಲೇಬೇಕೆಂಬುದನ್ನು ನೋಡಿಕೊಂಡು, ಉಳಿದ ಹಣವನ್ನು ಮಾತ್ರವೇ ಸರ್ಕಾರದವರು ಗ್ರಾಮಗಳ ಪುನರುಜ್ಜೀವನಕ್ಕೆ ಯುಕ್ತಕಂಡಂತೆ ವೆಚ್ಚಮಾಡಬೇಕಾಗಿದೆ. ಇದು ಸರ್ಕಾರದವರ ಮಾತಾಯಿತು. ಇನ್ನು ಗ್ರಾಮಸ್ಥರ ಮಾತು. ಗ್ರಾಮಸ್ಥರ ಮೇಲೂ ಒಂದು ಕರ್ತವ್ಯವಿದೆ. ಅವರು ತಂತಮ್ಮ ಕೆಲಸಗಳನ್ನು ತಾವು ತಾವೇ ನೋಡಿಕೊಳ್ಳುತ್ತ, ಸಹಾಯಕ್ಕಾಗಿ ಇತರರ ಕೈಯನ್ನು ಕಾಯುವುದನ್ನು ಆದಷ್ಟುಮಟ್ಟಿಗೂ ಕಡಿಮೆಮಾಡಿಕೊಳ್ಳಬೇಕು. ಸಮಾಜವು ಮಾಡಿಕೊಳ್ಳಬೇಕಾದುದನ್ನೂ ಸರ್ಕಾರವೇ ಮಾಡಿ ಪೂರೈಸಲಾರದು. ಗ್ರಾಮಸ್ಥರೂ ಸಹ, ಸ್ವಂತ ಅವಲಂಬನದಿಂದ ಆದಷ್ಟು ಹೆಚ್ಚಾಗಿ ಕೆಲಸಮಾಡಿಕೊಳ್ಳಬೇಕು. ಹಾಗೆ ಮಾಡದೆಹೋದಲ್ಲಿ, ಗ್ರಾಮಗಳು ಅಭಿವೃದ್ಧಿಸ್ಥಿತಿಗೆ ಬರುವುದು ಕನಸಿನಲ್ಲಿಯೂ ಸಾಧ್ಯವಿಲ್ಲ. ಗ್ರಾಮಪಂಚಾಯತಿಯವರ ವಿಷಯವನ್ನೇ ತೆಗೆದುಕೊಳ್ಳಿ. ಗ್ರಾಮಪಂಚಾಯತಿಯವರಿಗೆ ಗ್ರಾಮದ ವಿದ್ಯಮಾನಗಳೆಲ್ಲಾ ಕನ್ನಡಿ ಹಿಡಿದಂತೆ ಗೊತ್ತಿರುತ್ತವೆ. ಗ್ರಾಮದಲ್ಲಿ ಜನಗಳ ಜೀವನಸ್ಥಿತಿಯೂ, ಗ್ರಾಮಸ್ಥರ ಸ್ವಭಾವವೂ ಹೇಗಿವೆಯೆಂಬುದು ಅವರಿಗೆ ಪ್ರತ್ಯಕ್ಷವಾಗಿ ಅನುಭವದಲ್ಲಿರುತ್ತದೆ. ಆದಕಾರಣ, ಗ್ರಾಮಸ್ಥರಿಗೆ ದಾರಿತೋರಿಸುವ ಮುಖಂಡರಾಗಿ ನಿಂತು, ಗ್ರಾಮವನ್ನು ಅಭಿವೃದ್ಧಿಸ್ಥಿತಿಗೆ ತರುವ ಭಾಗದಲ್ಲಿ ಗ್ರಾಮಪಂಚಾಯತಿಯವರಿಗೆ ಹೆಚ್ಚು ಅನುಕೂಲವುಂಟು. ಅವರು ಮನಸ್ಸಿಟ್ಟು ಕೆಲಸಮಾಡುವುದಾದರೆ ಸರ್ಕಾರದವರಿಗಿಂತಲೂ ಹೆಚ್ಚಾಗಿ ಅವರು ತಾವೇ ಗ್ರಾಮಾಭಿವೃದ್ಧಿಯ ಕೆಲಸಗಳನ್ನು ನೆರವೇರಿಸಿಕೊಳ್ಳಬಹುದು. ಸರ್ಕಾರದವರು ಎಷ್ಟೇ ಹೆಚ್ಚಾಗಿ ಸಹಾಯಮಾಡಿದರೂ ಕೂಡ, ಗ್ರಾಮಸ್ಥರು ಸ್ವಂತ ಅವಲಂಬನದಿಂದ ಕೆಲಸಕ್ಕೆ ನಿಲ್ಲದೆಹೋದರೆ ಏನೇನೂ ಫಲವಿಲ್ಲ. ಸರ್ಕಾರದವರ ಪ್ರಯತ್ನದಿಂದ ಮಾತ್ರವೇ ಅಭಿವೃದ್ಧಿ ಕಾರ್ಯವು ನಡೆದರೆ, ಅದು ತೃಪ್ತಿಕರವಾಗಿಯೂ ಇರುವುದಿಲ್ಲ; ಅದು ಹೆಚ್ಚು ಕಾಲ ಬಾಳುವಂತೆ ನಿಲ್ಲುವುದೂ ಇಲ್ಲ. ಅಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ನಡೆದು ಅವುಗಳ ಪ್ರಯೋಜನವು ಸ್ಥಿರವಾಗಿರಬೇಕಾದರೆ, ಗ್ರಾಮಸ್ಥರು ತಾವೂ ಆಸಕ್ತಿಯನ್ನು ವಹಿಸಿ ಆದರದಿಂದ ಕೆಲಸಕ್ಕೆ ಕೈಹಾಕಬೇಕು. ಜನರು ತಮ್ಮ ಅವಲಂಬನದಿಂದ ತಾವೇ ತಮ್ಮ ಕೆಲಸಗಳನ್ನು ಮಾಡಿಕೊಂಡಾಗಲೇ ಭಗವಂತನಿಗೆ ಸಂತೋಷ. ಅವರು ಎಷ್ಟೆಷ್ಟು ಹೆಚ್ಚಾಗಿ ಆ ರೀತಿ ಮಾಡಿದರೆ, ಅವನೂ ಅಷ್ಟಷ್ಟು ಹೆಚ್ಚಾಗಿ ಸಂತೋಷಿಸಿ ಅನುಗ್ರಹಮಾಡುವನು. ಸರ್ಕಾರದವರೇನೋ ತಮ್ಮ ಭಾಗದ ಸಹಾಯವನ್ನು ಮಾಡಲು ಸಿದ್ಧವಾಗಿದ್ದಾರೆ. ಆದರೆ, ಅವರ ಸಹಾಯದಿಂದ ಹೆಚ್ಚು ಫಲವಾಗಬೇಕಾದರೆ, ಗ್ರಾಮಸ್ಥರು ಸ್ವಂತ ಪ್ರಯತ್ನದಿಂದ ತಮ್ಮ ಪಾಲಿನ ಕೆಲಸವನ್ನು ಮಾಡಲು ತಾವೂ ಸಿದ್ಧವಾಗಿರಬೇಕು. ಸ್ವಂತ ಅವಲಂಬನದಿಂದ ಕೆಲಸಮಾಡುವ ಗುಣವು ಅಮೂಲ್ಯವಾದುದು. ಜನಗಳೆಲ್ಲರೂ ಸೇರಿ, ಒಟ್ಟು ಗ್ರಾಮದ ಪ್ರಯೋಜನಕ್ಕಾಗಿ ಸಂಘಶಕ್ತಿಯಿಂದ ಕೆಲಸಮಾಡುವುದಾದರೆ, ಅದರಿಂದ ಮಹತ್ತರವಾದ ಪ್ರಯೋಜನವುಂಟು. ಈ ಊರಿನವರೆಲ್ಲರೂ ಈ ಅಂಶಗಳನ್ನು ಗ್ರಹಿಸಿಯೇ ಇರುವರೆಂದು ನಾನು ನಂಬಿದ್ದೇನೆ. ಸರ್ಕಾರಿ ಉದ್ಯೋಗಸ್ಥರೂ, ಸರ್ಕಾರಿ ಉದ್ಯೋಗಸ್ಥರಲ್ಲದವರೂ, ನಾವೆಲ್ಲರೂ ಒಟ್ಟಿಗೆ ಸೇರಿ ದೇಶದ ಪುರೋಭಿವೃದ್ಧಿಯನ್ನೇ ಮನಸ್ಸಿನಲ್ಲಿಟ್ಟು ಕೆಲಸಮಾಡುವುದು ಸಾಧ್ಯವಾದರೆ ಸಾಕು. ಅಭಿವೃದ್ಧಿಹೊಂದುತ್ತಿರುವ ನಮ್ಮ ಸಂಸ್ಥಾನವು ಮತ್ತಷ್ಟು ಏಳಿಗೆಗೆ ಬರುವುದು ಅಲ್ಲಿಗೆ ಖಂಡಿತವೆನ್ನಬಹುದು. ನಮ್ಮ ಸಂಸ್ಥಾನವು ಉನ್ನತಸ್ಥಿತಿಗೆ ಬಂದು ಶಾಶ್ವತವಾಗಿ ಅಭ್ಯುದಯಹೊಂದುವುದಕ್ಕೆ ಇದೇ ದಾರಿಯೆಂಬುದು ನಿಸ್ಸಂದೇಹವಾದ ಮಾತು.

ಕಬ್ಬನ್ನೂ, ಉಪ್ಪುನೇರಳೆಯನ್ನೂ ಭಾರಿ ಪ್ರಮಾಣದಲ್ಲಿ ಸಾಗುವಳಿಮಾಡಲು ನಿಮ್ಮ ಊರಿನಲ್ಲಿ ಅನುಕೂಲವಿರುವುದನ್ನು ಕೇಳಿ ಸಂತೋಷವಾಯಿತು. ಇಲ್ಲಿರತಕ್ಕ ರೇಷ್ಮೆ ವ್ಯವಸಾಯದ ಪರೀಕ್ಷಾ ಕ್ಷೇತ್ರದಿಂದ ಜನರು ಸರಿಯಾಗಿ ಪ್ರಯೋಜನವನ್ನು ಪಡೆಯಲು ಪ್ರಯತ್ನಪಟ್ಟರೆ, ರೇಷ್ಮೆ ಕೈಗಾರಿಕೆಯು ವೃದ್ಧಿಹೊಂದುವುದಕ್ಕೆ ಅನುಕೂಲವಾಗುತ್ತದೆ. ಈ ಕೈಗಾರಿಕೆಯನ್ನು ವೃದ್ಧಿಪಡಿಸುವುದಕ್ಕೂ, ಇಲ್ಲಿ ನಡೆಯಿಸಲು ಅನುಕೂಲವಿರುವ ಇತರ ಕೈಗಾರಿಕೆಗಳನ್ನು ಪ್ರಾರಂಭಿಸುವುದಕ್ಕೂ, ಈ ಊರಿನಲ್ಲಿ ವಿದ್ಯುಚ್ಛಕ್ತಿಯು ದೊರೆಯುವಂತಾದುದರಿಂದ, ತುಂಬ ಪ್ರೋತ್ಸಾಹವುಂಟಾಗುವುದಾಗಿದೆ. ಈ ಭಾಗಗಳಲ್ಲಿ, ಮುಂದೆ ಈ ಊರಿನಲ್ಲಿ ಇನ್ನೂ ಹೆಚ್ಚಿನ ಕಾರ್ಯಕಲಾಪಗಳು ನಡೆದು, ಈ ಊರು ಮತ್ತಷ್ಟು ಅಭಿವೃದ್ಧಿಹೊಂದುವುದರಲ್ಲಿ ಸಂಶಯವೇ ಇಲ್ಲ.

ನಿಮ್ಮ ಊರಿಗೆ ಆಗಬೇಕಾಗಿರುವ ಕೆಲವು ಕಾರ್ಯಗಳನ್ನು ಕುರಿತು ಅಭಿನಂದನ ಪತ್ರಿಕೆಯಲ್ಲಿ ಪ್ರಸ್ತಾಪಿಸಿದ್ದೀರಿ. ಅವುಗಳ ವಿಚಾರವಾಗಿ ನಾನು ಒಂದೆರಡು ಮಾತುಗಳನ್ನು ತಿಳಿಸಲಿಚ್ಛಿಸುವೆನು. ಈ ಗ್ರಾಮದ ಮಧ್ಯದಲ್ಲಿರುವ ಮದರಾಸು—ಕನ್ನಾನೂರು ರಸ್ತೆಯನ್ನು ಊರಿನಿಂದ ಹೊರಗೆ ಹಾಕಿಸಬೇಕೆಂದೂ, ಜನರಿಗೆ ಅಪಾಯವುಂಟಾಗುವ ಸಂಭವವನ್ನು ಆ ಮೂಲಕ ತಪ್ಪಿಸಬೇಕೆಂದೂ ಕೋರಿರುತ್ತೀರಿ. ಆ ರಸ್ತೆಯನ್ನು ನಿಮ್ಮ ಕೋರಿಕೆಯಂತೆ ಊರಿನಿಂದ ಹೊರಗೆ ಹಾಕಿಸಬೇಕೆಂದು ತೀರ್ಮಾನಿಸಿದ್ದೇವೆ. ಈ ಕೆಲಸವನ್ನು ಶೀಘ್ರದಲ್ಲೇ ಪ್ರಾರಂಭಿಸಿ ಈ ವರುಷವೇ ಪೂರ್ತಿಗೊಳಿಸುತ್ತೇವೆ.

ನೆಲ್ಲಿಗುಡ್ಡೆ ಕೆರೆಯ ಕಾಮಗಾರಿಯು ಅರೆವಾಸಿ ನಡೆದು ಈಗ ನಿಂತುಹೋಗಿದೆಯಷ್ಟೆ. ಅದನ್ನು ಪೂರ್ತಿಗೊಳಿಸಬೇಕೆಂಬ ನಿಮ್ಮ ಕೋರಿಕೆಯನ್ನು ಈಗ ಸಧ್ಯದಲ್ಲೇ ನೆರವೇರಿಸಿಕೊಡಲು ಸಾಧ್ಯವಿಲ್ಲವೆಂದು ಹೇಳಬೇಕಾಗಿದೆ. ಈ ಕೆರೆಯ ಕಾಮಗಾರಿಯನ್ನು ಪೂರ್ತಿಗೊಳಿಸಿದರೆ ೮೦೦ ಎಕರೆ ಜಮೀನು ನೀರಾವರಿ ಸಾಗುವಳಿಗೆ ಬರುತ್ತದೆಂದೂ, ಈ ಕೆರೆಗೆ ತಗಲುವ ವೆಚ್ಚವು ಎರಡೂವರೆ ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗುವುದೆಂದೂ, ತಿಳಿಯಬಂದಿದೆ. ಕೆರೆ ಕಾಮಗಾರಿಯನ್ನು ಮುಗಿಸಿಕೊಟ್ಟರೆ, ಹೆಚ್ಚಿನ ದರಗಳಲ್ಲಿ ಕಂಟ್ರಿಬ್ಯೂಷನ್ ಹಣವನ್ನೂ ನೀರುಕರದ ಹಣವನ್ನೂ ಕೊಡುವುದಾಗಿ ರೈತರುಗಳು ಈಚೆಗೆ ತಿಳಿಸಿರುವುದೂ ನಿಜವೇ. ಆದರೆ ಇದರ ಪ್ರಕಾರ ನೋಡಿದರೂ ಕೂಡ, ಸರ್ಕಾರದವರ ಭಾಗವಾಗಿ ವೆಚ್ಚಮಾಡಿದ ಹಣದ ಮೇಲೆ ಸಾವಿರಕ್ಕೆ ೨ರಂತೆ ಮಾತ್ರವೇ, ಈ ಕೆರೆಯಿಂದ ವರಮಾನವು ಬರುವುದಾಗಿದೆ. ನಿಮಗೆ ತಿಳಿದೇ ಇರುವಂತೆ ಅರೆವಾಸಿ ನಡೆದು ನಿಂತುಹೋಗಿರುವ ಕಾಮಗಾರಿಗಳು ಅನೇಕವಾಗಿವೆ. ಅವುಗಳಲ್ಲಿ ಕೆಲವು ಅತಿಜರೂರಾದುವೂ ಹೌದು. ಹೀಗಿದ್ದರೂ, ಅವುಗಳನ್ನು ಪೂರ್ತಿಗೊಳಿಸಲು ಸರ್ಕಾರದವರು ಹಣವನ್ನೇ ಒದಗಿಸಿಲ್ಲ. ಈಗ ಸರ್ಕಾರದಲ್ಲಿ, ಅದಕ್ಕೆಲ್ಲಾ ಹಣವಿಲ್ಲದಿರುವುದೇ ಹೀಗೆ ಮಾಡಿರುವುದಕ್ಕೆ ಕಾರಣ. ಆದಾಗ್ಯೂ, ಹಣಕಾಸಿನ ಸ್ಥಿತಿಯು ಉತ್ತಮಪಟ್ಟ ಕೂಡಲೆ, ನೆಲ್ಲಿಗುಡ್ಡೆ ಕೆರೆಯ ಕಾಮಗಾರಿಯನ್ನು ಮುಂದುವರಿಸಿ ಪೂರ್ತಿಯಾಗಿ ನೆರವೇರಿಸಲಾಗುವುದೆಂದು ನಿಮಗೆ ಭರವಸೆಕೊಡುತ್ತೇನೆ.

ಮಹಾಶಯರೇ, ನೀವು ಆದರದಿಂದ ನನ್ನನ್ನು ಬರಮಾಡಿಕೊಂಡು ಸ್ವಾಗತವನ್ನು ಬಯಸಿರುವುದಕ್ಕಾಗಿ ಮತ್ತೊಮ್ಮೆ ನಿಮ್ಮೆಲ್ಲರಿಗೂ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ ಮಹಾರಾಜರವರ ವಿಷಯದಲ್ಲಿ ನೀವು ಸೂಚಿಸಿರುವ ರಾಜಭಕ್ತಿ ವಿಶ್ವಾಸಗಳನ್ನು ಮಹಾಸ್ವಾಮಿಯವರಿಗೆ ಸಂತೋಷದಿಂದ ಭಿನ್ನವಿಸುವೆನು. ಗ್ರಾಮಗಳು ಅಭಿವೃದ್ಧಿಸ್ಥಿತಿಗೆ ಬರಬೇಕೆಂಬುದಾಗಿ ಮಹಾಸ್ವಾಮಿಯವರಿಗೆ ತುಂಬ ಅಭಿಲಾಷೆಯುಂಟು. ಮಹಾಸ್ವಾಮಿಯವರು ಸರ್ವದಾ ಗ್ರಾಮಸ್ಥರ ಹಿತವನ್ನೇ ಬಯಸುವವರಾಗಿದ್ದಾರೆ. ನಿಮಗೆ ಸಮಸ್ತ ಸುಖಸಂತೋಷಗಳೂ ಉಂಟಾಗಲೆಂದು ಹಾರೈಸಿ, ದೀಪೋತ್ಸವವನ್ನು ಸಂತೋಷದಿಂದ ನೆರವೇರಿಸುವೆನು.

ಬೆಂಗಳೂರು ನಗರದಲ್ಲಿ ನಡೆದ "ಸೋಷಿಯಲ್ ಅಂಡ್ ಮಾರಲ್ ಹೈಜೀನ್ ಅಸೋಸಿಯೇಷನ್" ಎಂಬ ಸಮಾಜಿಕ ಮತ್ತು ನೈತಿಕ ಪಾರಿಶುದ್ಧ್ಯ ರಕ್ಷಣೆಯ ಸಂಘದ ವಾರ್ಷಿಕ ಸಮ್ಮೇಳನದಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಭಾಷಣ.

೧೯೩೨ನೆಯ ಇಸವಿ ಜುಲೈ ೬ನೆಯ ತಾರೀಖು.

ಮಹಿಳೆಯರೇ ಮತ್ತು ಮಹನೀಯರೇ,—

ಈ ದಿನದ ಸಮ್ಮೇಳನದಲ್ಲಿ ಅಧ್ಯಕ್ಷತೆಯನ್ನು ವಹಿಸಬೇಕೆಂದು ನನಗೆ ನಿಮ್ಮಿಂದ ಆಹ್ವಾನವು ಬಂದಾಗ, ಈಗಿನ ನನ್ನ ಭಾಷಣವು ಯಾವ ರೀತಿಯಲ್ಲಿರುವುದು ಉಚಿತವೆಂಬ ವಿಚಾರದಲ್ಲಿ ನನಗೊಂದು ಅಂಶವು ತೋರಿತು. ಮೇಹರೋಗದ ಹಾವಳಿಯನ್ನೂ, ಸೂಳೆಗಾರಿಕೆಯನ್ನೂ ಇತರ ಸಮಾಜಿಕ ದೋಷಗಳ ದಾಂಧಲೆಯನ್ನೂ ಅಡಗಿಸುವ ಮಾರ್ಗಗಳನ್ನು ಸೂಚಿಸಿ ಸಲಹೆ ಹೇಳುವುದಕ್ಕಾಗಿ ನೇಮಕವಾಗಿದ್ದ "ಬ್ರಿಟಿಷ್ ಸೋಷಿಯಲ್ ಹೈಜೀನ್ ಕೌನ್ಸಿಲ್" ಎಂಬ ಸಂಘದ ಪ್ರತಿನಿಧಿ ಸಮಿತಿಯವರು ೧೯೨೬ ನೆಯ ಇಸವಿಯಲ್ಲಿ ಇಂಡಿಯಾದೇಶಕ್ಕೆ ಬಂದಿದ್ದುದು ಸರಿಯಷ್ಟೆ. ಅವರು ಹೇಳಿದ ಸಲಹೆಗಳ ವಿಚಾರವನ್ನೂ ಮತ್ತು ಆ ಸಲಹೆಗಳ ಬಾಬುಗಳಲ್ಲಿ ಪ್ರತಿಯೊಂದರ ವಿಷಯದಲ್ಲಿಯೂ ಕಳೆದ ಆರು ವರುಷಗಳಲ್ಲಿ ನಾವು ಎಷ್ಟುಮಟ್ಟಿಗೆ ಕೆಲಸ ನಡೆಯಿಸಿದ್ದೇವೆಂಬ ವಿಚಾರವನ್ನೂ ಸೂಚಿಸಿ ಭಾಷಣಮಾಡುವುದೇ, ನಿಮ್ಮ ಇಂದಿನ ಕಾರ್ಯಕಲಾಪಗಳಲ್ಲಿ ಭಾಗಿಯಾಗುವುದರಲ್ಲಿ ನಾನು ಅನುಸರಿಸಲು ಸಾಧ್ಯವಿರುವ ಸರಳವಾದ ಮತ್ತು ಪ್ರಯೋಜನಕರವಾದ ಮಾರ್ಗವೆಂದು ನನಗೆ ತೋರಿತು.

ಸಮಿತಿಯವರ ವರದಿಯನ್ನು ನಾನು ಮತ್ತೆ ಓದಿದೆನು. ಅವರ ವಿಚಾರಗಳು ಅಸಾಧಾರಣ ರೀತಿಯಲ್ಲಿ ಪರಿಷ್ಕಾರವಾಗಿಯೂ ಸರಿಯಾಗಿಯೂ ಇರುವುದನ್ನೂ, ಅವರು ನಮ್ಮ ಸಂಸ್ಥಾನದಲ್ಲಿದ್ದ ಮೂರೇ ದಿನಗಳ ಅಲ್ಪಕಾಲದಲ್ಲಿ ಅವರು ಸಂಗ್ರಹಮಾಡಿದ ಸಂಗತಿಗಳ ಮತ್ತು ಅವರು ನೆರವೇರಿಸಿದ ಕೆಲಸಗಳ ಭಾರಿ ಪರಿಮಾಣವನ್ನೂ ಕಂಡು, ಅವರ ವರದಿಯು ಮೊಟ್ಟಮೊದಲು ಬಂದ ಕಾಲದಲ್ಲಿ ಅದನ್ನು ಓದಿದಾಗ್ಗೆ ನನಗೆ ಆಶ್ಚರ್ಯವುಂಟಾದಂತೆಯೇ ಮತ್ತೆ ಅದನ್ನು ಓದುವಾಗಲೂ ಆಶ್ಚರ್ಯವುಂಟಾಯಿತು. ಅವರ ಸೂಚನೆಗಳನ್ನು

ಪರಿಶೀಲಿಸಿ ನೋಡಿದರೆ, ಅವರು ತಾವು ಸಲಹೆ ಹೇಳಿದ ನಮ್ಮ ದೇಶೀಯರೂ ಸಹ ತಮ್ಮಷ್ಟೇ ಹುರುಪಿನಿಂದಲೂ ತಮ್ಮಷ್ಟೇ ಪರಿಷ್ಕಾರವಾಗಿಯೂ ಕೆಲಸ ನಡೆಯಿಸಬೇಕೆಂದು ನಿರೀಕ್ಷಿಸಿದ್ದರೆಂಬುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಅವರು ಸಲಹೆಮಾಡಿರುವ ಏಟ್ಟು ಏರ್ಪಾಡನ್ನು ಆಚರಣೆಗೆ ತರಬೇಕಾದರೆ ಎಷ್ಟು ಭಾರಿ ಪ್ರಮಾಣದಲ್ಲಿ ಕೆಲಸ ನಡೆಯಬೇಕೆಂಬುದನ್ನು, ಎಷ್ಟು ಹೇರಳವಾಗಿ ಹಣವು ಖರ್ಚಾಗಬೇಕೆಂಬುದನ್ನು ಯೋಚಿಸಿ ನನಗೆ ವಿಸ್ಮಯವುಂಟಾಗಿದೆ. ಆದಕಾರಣ, ನಾವು ನೆರವೇರಿಸಿರುವ ಕಾರ್ಯಗಳನ್ನು ಸಂಕ್ಷೇಪವಾಗಿ ಇಲ್ಲಿ ಸೂಚಿಸುವುದರಲ್ಲಿ ಅವರ ಸಲಹೆಗಳ ಪೈಕಿ ನಾವು ಪೂರ್ತಿಯಾಗಿಯೇ ಆಗಲಿ, ಅಥವಾ ಸ್ವಲ್ಪಮಟ್ಟಿಗೇ ಆಗಲಿ ಆಚರಣೆಗೆತರಲು ಸಾಧ್ಯವಾಗಿರುವಂಥವುಗಳನ್ನು ಮಾತ್ರವೇ ಕುರಿತು ನಾನು ಪ್ರಸ್ತಾಪಿಸುತ್ತೇನೆ. ಅವರ ಸಲಹೆಗಳಲ್ಲಿ ನಮಗೆ ಆದರವುಂಟೆಂಬುದಕ್ಕೂ ಅವರ ವರದಿಗೆ ಸಂಬಂಧಪಟ್ಟ ವಿಚಾರವು ಅತ್ಯಂತ ಪ್ರಾಮುಖ್ಯವಾದುದೆಂದು ನಾವು ಭಾವಿಸಿದ್ದೇವೆಂಬುದಕ್ಕೂ ಮೊಟ್ಟಮೊದಲನೆಯ ಗುರುತಾಗಿ, ಅವರ ವರದಿಯನ್ನು ಅಚ್ಚುಹಾಕಿಸಿ ಮಹಾಜನರಲ್ಲಿ ಹಂಚಿದೆವು.

ಚಿಕಿತ್ಸೆಗೆ ಸಂಬಂಧಪಟ್ಟ ವಿಚಾರಗಳು, ಬೋಧನೆಗೆ ಸಂಬಂಧಪಟ್ಟ ವಿಚಾರಗಳು, ಸಾಮಾಜಿಕ ವರ್ತನೆಗೆ ಸಂಬಂಧಪಟ್ಟ ವಿಚಾರಗಳು, ಮತ್ತು ಚಲನಚಿತ್ರಗಳಿಗೆ (ಸಿನೇಮಾ) ಸಂಬಂಧಪಟ್ಟ ವಿಚಾರಗಳು, ಎಂಬುದಾಗಿ ಅವರು ತಮ್ಮ ವರದಿಯನ್ನು ನಾಲ್ಕು ಮುಖ್ಯ ಭಾಗಗಳಾಗಿ ವಿಭಾಗಿಸಿದ್ದಾರೆ.

ಮೇಹ ಸಂಬಂಧವಾದ ರೋಗಗಳ ಚಿಕಿತ್ಸೆ ಮುಂತಾದುವುಗಳಲ್ಲಿ ಅತ್ಯುಚ್ಚ ಶಿಕ್ಷಣವನ್ನು ಪಡೆದ ನಿಪುಣರಾದ ಅಧಿಕಾರಿಯೊಬ್ಬರನ್ನು ನೇಮಕ ಮಾಡಬೇಕೆಂಬುದು, ಚಿಕಿತ್ಸೆಗೆ ಸಂಬಂಧಪಟ್ಟ ವಿಚಾರಗಳಲ್ಲಿ ಸಮಿತಿಯವರ ವರದಿಯಲ್ಲಿರುವ ಅತಿ ಮುಖ್ಯವಾದ ಸಲಹೆಯಾಗಿದೆ. ಈ ಸಲಹೆಯನ್ನು ನಾವು ನೆರವೇರಿಸಿದ್ದೇವೆ. ವೈದ್ಯದ ಇಲಾಖೆಯ ಆಫೀಸರೊಬ್ಬರನ್ನು ಯೂರೋಪಿಗೆ ಕಳುಹಿಸಿದ್ದೆವು. ಅವರು ಮೇಹ ಸಂಬಂಧವಾದ ರೋಗಗಳ ಚಿಕಿತ್ಸೆಯೇ ಮುಂತಾದ ವಿಚಾರಗಳಲ್ಲಿ ಸಮಗ್ರವಾದ ವ್ಯಾಸಂಗಮಾಡಿಕೊಂಡು ಬಂದಿದ್ದಾರೆ. ಈ ರೋಗಗಳ ಹಾವಳಿಯನ್ನಡಗಿಸುವ ಭಾಗದಲ್ಲಿ ತಕ್ಕ ಏರ್ಪಾಡುಗಳನ್ನು ಮಾಡುವುದಕ್ಕೂ ಮತ್ತು ಆಸ್ಪತ್ರೆಗಳಲ್ಲಿಯೂ ಇತರ ಸ್ಥಳಗಳಲ್ಲಿಯೂ ಈ ರೋಗಗಳ ಚಿಕಿತ್ಸೆಯ ಅವಕಾಶಗಳನ್ನು ಹೆಚ್ಚಿಸಿಕೊಡುವುದಕ್ಕೂ ವರದಿಯಲ್ಲಿ ಸೂಚಿಸಿರುವಷ್ಟುಮಟ್ಟಿನ ಅನುಕೂಲವನ್ನು ಅವರಿಗೆ ಕಲ್ಪಿಸಿಕೊಟ್ಟಿಲ್ಲವೆಂಬುದೇನೋ ನಿಜ. ಆದಾಗ್ಯೂ ಈ ಬಗೆಯ ರೋಗಗಳನ್ನು ಗುಣಪಡಿಸುವ ವಿಚಾರದಲ್ಲಿಯೂ, ಈ ರೋಗಗಳ ವಿಷಯವನ್ನು ಬೋಧೆಮಾಡಿ ಅವು ಬಾರದಂತೆ ಶೀಲಶುದ್ಧಿಯನ್ನು ಕಾಪಾಡಿಕೊಳ್ಳುವುದು ಎಷ್ಟು ಆವಶ್ಯಕವೆಂಬುದನ್ನು ಜನಗಳಿಗೆ ತಿಳಿಸುವ ವಿಚಾರದಲ್ಲಿಯೂ, ಅವರು ಮುತುವರ್ಜಿಯಿಂದ ಬಹಳವಾಗಿ ಕೆಲಸಮಾಡಿದ್ದಾರೆನ್ನಲು ಅಡ್ಡಿಯಿಲ್ಲ. ಮೇಹ ಸಂಬಂಧವಾದ ರೋಗಗಳ ಚಿಕಿತ್ಸೆಗೆ ಸಂಬಂಧಪಟ್ಟ ವಿಚಾರಗಳಲ್ಲಿ ಸಮಿತಿಯವರು ಕೊಟ್ಟಿರುವ ಸಲಹೆಗಳಲ್ಲಿ ಚಿಕಿತ್ಸೆಯು ಉಚಿತವಾಗಿ ನಡೆಯುವಂತೆ ಏರ್ಪಡಿಸಬೇಕೆಂಬುದೂ ಒಂದಾಗಿದೆ. ಸೀನಿಯರ್ ಸರ್ಜನ್‌ರವರು ಈ ಅಂಶವನ್ನು ಪದೇ ಪದೇ ನಮ್ಮ ಗಮನಕ್ಕೆ ತಂದಿದ್ದಾರೆ. ಈ ಕಾರ್ಯಕ್ಕಾಗಿ ನಮಗೆ ಸಾಧ್ಯವೆಂದಷ್ಟು ಹಣವನ್ನು ಕೊಟ್ಟಿದ್ದಾಗಿದೆ. ನಾವು ಕೊಟ್ಟ ಹಣದಜೊತೆಗೆ "ರೆಡ್‌ಕ್ರಾಸ್ ಸೊಸೈಟಿ" ಯವರೂ ಹಣವನ್ನು ಒದಗಿಸಿಕೊಳ್ಳುವುದು ಸಾಧ್ಯವಾಗಿರುವುದನ್ನು ಕಂಡು ನನಗೆ ವಿಶೇಷ ಹರ್ಷವುಂಟಾಗಿದೆ.

ಮೇಹ ಸಂಬಂಧವಾದ ರೋಗಗಳ ಸ್ವಭಾವವನ್ನೂ, ಅವುಗಳ ಹಾವಳಿಯನ್ನಡಗಿಸುವ ವಿಧಾನಗಳನ್ನೂ, ಅವು ಎಷ್ಟು ಭಯಂಕರವಾದ ರೋಗಗಳೆಂಬುದನ್ನೂ ಜನರಿಗೆ ಬೋಧಿಸಿ, ಶೀಲಶುದ್ಧಿಗೂ ತನ್ಮೂಲಕ ಸಾಮಾಜಿಕ ಪಾರಿಶುದ್ಧ್ಯಕ್ಕೂ ಅವಕಾಶವುಂಟಾಗುವಂತೆ ಮಾಡುವ ವಿಚಾರದಲ್ಲಿ ಸಮಿತಿಯವರ ಸಲಹೆಗಳು ಕೇವಲ ಪರಿಣಾಮಕಾರಿಗಳಾಗಿವೆ. ವಿದ್ಯಾ ಇಲಾಖೆಯ ಅಧಿಕಾರಿಗಳೂ, ವೈದ್ಯದ ಇಲಾಖೆಯವರೂ ಅವಕ್ಕೆ ಯುಕ್ತರೀತಿಯಲ್ಲಿ ಗಮನಕೊಟ್ಟಿದ್ದಾರೆಂದು ನಾನು ನಂಬಿದ್ದೇನೆ. ಹೀಗೆ ಗಮನಕೊಟ್ಟಿರುವುದರಿಂದ ಜನರ ಮನೋವೃತ್ತಿಯನ್ನು ಉಪಯುಕ್ತ ರೀತಿಯಲ್ಲಿ ಬದಲಾಯಿಸುವುದಕ್ಕೂ, ಆ ಮೂಲಕ ಜನಗಳು ಮೇಹರೋಗವನ್ನು ತಂದುಕೊಳ್ಳದಂತೆ ಮಾಡುವುದಕ್ಕೂ, ಕಾರ್ಯತಃ ಅವಕಾಶವು ಎಷ್ಟುಮಟ್ಟಿಗುಂಟಾಗಿದೆಯೆಂಬುದನ್ನು ನಾನು ಈಗ ನಿರ್ಧರವಾಗಿ ಹೇಳಲಾರೆ. ಇಂಥ ಸಾಮಾಜಿಕ ವಿಚಾರಗಳನ್ನು ಸಮಾಚೀನವಾದ ಕ್ರಮದಲ್ಲಿ ಜನರಿಗೆ ಬೋಧನೆ ಮಾಡಿದ ದೇಶಗಳಲ್ಲೆಲ್ಲ, ಜನಗಳು ತಪ್ಪುದಾರಿಯಲ್ಲಿ ನಡೆದು ರೋಗಗಳನ್ನು ತಂದುಕೊಳ್ಳುವುದು ತಪ್ಪದೆ ಕಡಿಮೆಯಾಗಿದೆಯೆಂದು ಸಮಿತಿಯವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಈ ಕಾರಣಕ್ಕಾಗಿಯೇ ಅವರ ವರದಿಯನ್ನು ಮಹಾಜನರಲ್ಲಿ ಹಂಚುವ ಯೋಚನೆಯನ್ನು ನಾನು ಮಾಡಿದುದು. ನಿಮ್ಮ ಸಂಘದವರು ಕೆಲಸವನ್ನು ಮುಂದುವರಿಸಿ, "ಸೋಷಿಯಲ್ ಹೈಜೀನ್ ಕೌನ್ಸಿಲ್" ಸಭೆಯವರೊಡನೆ ವ್ಯವಹರಿಸಿ, ನಮ್ಮ ದೇಶದಲ್ಲಿ ಮೇಹರೋಗ ಸಂಬಂಧವಾದ ಇದುವರೆಗಿನ ಲೆಕ್ಕಪತ್ರಗಳು ಪರಿಷ್ಕಾರವಾಗಿಯೂ ಸರಿಯಾಗಿಯೂ ಸಂಗ್ರಹವಾಗಲನುಕೂಲಿಸುವಂತೆ ವಿಚಾರಣೆಯನ್ನು ನಡೆಯಿಸಿದರೆ, ಉತ್ತಮವಾದ ಫಲಿತಾಂಶಗಳುಂಟಾಗುವುದರಲ್ಲಿ ಸಂಶಯವಿಲ್ಲ.

ವಿದ್ಯಾಭ್ಯಾಸವು ನಡೆಯುವ ಕಾಲದಲ್ಲಿಯೂ ಆ ತರುವಾಯವೂ ಬಾಲಕರಿಗೂ ಬಾಲಕಿಯರಿಗೂ ಅಂಗಸಾಧನೆಯಲ್ಲಿಯೂ ಆಟಪಾಟಗಳಲ್ಲಿಯೂ ಶಿಕ್ಷಣವನ್ನು ಕೊಟ್ಟು, ಆಟಪಾಟಗಳಿಗೂ, ಸ್ಕೌಟ್ ಏರ್ಪಾಡಿಗೂ, ಬಾಲಕಿಯರ ಗೈಡ್ ಏರ್ಪಾಡಿಗೂ, ಅಂಗಸಾಧನೆಗೂ, ತಕ್ಕ ಸೌಕರ್ಯಗಳನ್ನು ಕಲ್ಪಿಸಬೇಕೆಂದೂ ಸಮಿತಿಯವರು ಸಲಹೆಮಾಡಿದ್ದಾರೆ. ಈ ವಿಚಾರದಲ್ಲಿ ಕೂಡ, ನಾವು ಸಾಧ್ಯವೆಂದಷ್ಟು ಪ್ರಯತ್ನಗಳನ್ನೂ ನೆರವೇರಿಸಿದ್ದೇವೆಂದು ನನಗೆ ತೋರುತ್ತದೆ. ಅದರಲ್ಲಿಯೂ ವಿಶೇಷವಾಗಿ ಬೆಂಗಳೂರು ಮೈಸೂರು ನಗರಗಳಲ್ಲಿ ನಾನಾ ವಿದ್ಯಾಸಂಸ್ಥೆಗಳಲ್ಲಿಯೂ ವ್ಯಾಸಂಗಮಾಡುವ ಬಾಲಕ ಬಾಲಕಿಯರಿಗೆ ಬಗೆಬಗೆಯ ಆಟದ ಬಯಲುಗಳೂ, ಮೈದಾನಗಳೂ, ಪ್ರಶಸ್ತವಾಗಿ ಏರ್ಪಟ್ಟಿವೆ. ಮೈಸೂರು ನಗರದಲ್ಲಿ ದೊರೆಯತಕ್ಕದಾಗಿರುವ ಬಯಲು ಪ್ರದೇಶಗಳಲ್ಲಿ ಅನುಕೂಲವಾಗಿರತಕ್ಕವುಗಳನ್ನು ಅಲ್ಲಿರುವ ನಾನಾ ವಿದ್ಯಾಸಂಸ್ಥೆಗಳಿಗೂ ಅತ್ಯಂತ ಪ್ರಯೋಜನವಾಗುವಂತೆ ಹಂಚಿಕೊಡುವುದಕ್ಕಾಗಿ ಸಲಹೆ ಹೇಳಲು ಒಂದು ಸಮಿತಿಯನ್ನು ಏರ್ಪಡಿಸಲಾಗಿದ್ದಿತು. ಆ ಸಮಿತಿಯವರು ಈಚೆಗೆ ತಮ್ಮ ಪರಿಶೀಲನೆಗಳನ್ನು ಪೂರ್ತಿಗೊಳಿಸಿದ್ದಾರೆ. ಸ್ಕೌಟ್ ಏರ್ಪಾಡು ಉತ್ತಮಸ್ಥಿತಿಯಲ್ಲಿರುವುದಲ್ಲದೆ ವೃದ್ಧಿಯಾಗುತ್ತಲೂ ಇದೆ. ಬಯಲುಗಳಲ್ಲಿಯೂ, ಇತರ ಸ್ಥಳಗಳಲ್ಲಿಯೂ ನಡೆಯತಕ್ಕ ಆಟಪಾಟಗಳಲ್ಲಿಯೂ, ಅಂಗಸಾಧನೆಯಲ್ಲಿಯೂ ಜನಗಳಿಗೆ ಆಸಕ್ತಿಯುಂಟಾಗುತ್ತಿದೆ.

ಸಾಮಾಜಿಕ ವರ್ತನೆಗೆ ಸಂಬಂಧಪಟ್ಟಂತೆ ಸಮಿತಿಯವರು ಮಾಡಿರತಕ್ಕ ಸಲಹೆಗಳಲ್ಲಿ, ಮೈಸೂರು ಸಂಸ್ಥಾನದಲ್ಲಿ ಶೀಲಶುದ್ಧಿಗೂ ಸಾಮಾಜಿಕ ಪಾರಿಶುದ್ಧ್ಯಕ್ಕೂ ಸಾಧಕವಾಗುವ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಒಂದು "ಸೋಷಿಯಲ್ ಹೈಜೀನ್ ಕೌನ್ಸಿಲ್" ಎಂಬ ಸಭೆಯನ್ನು ಏರ್ಪಡಿಸಬೇಕೆಂಬುದೇ ಮುಖ್ಯವಾದುದು. ನೀವುಗಳು ಈ ಸಂಘವನ್ನು ಏರ್ಪಡಿಸಿದುದರಿಂದ ಆ ಸಲಹೆಯು ನೆರವೇರಿದಂತಾಯಿತು. ಈ ಸಂಘದ ಶಾಖೆಯೊಂದು ಆಗಲೇ ಮೈಸೂರು ನಗರದಲ್ಲಿ ಏರ್ಪಟ್ಟಿದೆಯೆಂದೂ, ಅದರಿಂದ ಆಗಲೇ ಅನೇಕ ಕಾರ್ಯಕಲಾಪಗಳು ಕೂಡ ಜರುಗುತ್ತಿವೆಯೆಂದೂ, ಕೇಳಿ ನನಗೆ ಹರುಷವುಂಟಾಗಿದೆ. ಸೂಳೆಗಾರಿಕೆಯು ನಡೆಯುವುದನ್ನು ತಪ್ಪಿಸುವುದರ ಸಂಬಂಧವಾಗಿ ಕಾನೂನನ್ನು ಮಾಡಿಸುವ ಪ್ರಯತ್ನಕ್ಕೂ ನೀವು ಕೈಹಾಕಿದ್ದೀರಿ. ಸಮಿತಿಯವರು ಸೂಚಿಸಿರುವ ಮತ್ತೊಂದು ಸಲಹೆಯನ್ನು ಸರ್ಕಾರದವರು ನೆರವೇರಿಸುವುದಕ್ಕೂ ನೀವುಗಳು ಇದರಿಂದ ಸಹಾಯ ಮಾಡಿದಂತಾಯಿತು. ಆದರೆ, ಈ ವಿಷಯದಲ್ಲಿ ನೀವು ರಚಿಸಿರುವ ಮಸೂದಾ ಕಾನೂನಿನಲ್ಲಿ ಒಂದು ಅಂಶವು ಬಿಟ್ಟುಹೋಗಿರುವಂತೆ ತೋರುತ್ತದೆ. ಸೂಳೆಗಾರಿಕೆಗಾಗಿ ಮಾಡಿಕೊಂಡ ಸಾಕುಮಕ್ಕಳನ್ನು ಹೀನವೃತ್ತಿಯಿಂದ ಬಿಡಿಸಿ ಸಹಾಯಮಾಡುವ ಭಾಗದಲ್ಲಿ ಅದರಲ್ಲಿ ಯಾವ ನಿಬಂಧನೆಯೂ ಏರ್ಪಟ್ಟಿಲ್ಲ. ಈ ಬಗೆಯ ಸಾಕುಮಕ್ಕಳ ಸಂಖ್ಯೆಯೂ ಬಹಳ ಹೆಚ್ಚಾಗಿಯೇ ಇದೆ. ತಾಯಿಯುರ ಯೋಗಕ್ಷೇಮವನ್ನೂ ಮಕ್ಕಳ ಯೋಗಕ್ಷೇಮವನ್ನೂ ನೋಡಿಕೊಳ್ಳುವ ಕೆಲವು ಕಾರ್ಯಾಲಯಗಳ (ಮೆಟರ್ನಿಟಿ ಅಂಡ್ ಚೈಲ್ಡ್ ವೆಲ್ಫೇರ್ ಸೆಂಟರುಗಳ) ರಿಜಿಸ್ಟರುಗಳಲ್ಲಿ ಕೂಡ ಸಾಕುಮಕ್ಕಳುಗಳೆಂದು ದಾಖಲಾಗಿರುವ ಹುಡುಗಿಯರ ಸಂಖ್ಯೆಯು ಹೆಚ್ಚಾಗಿಯೇ ಇರುತ್ತದೆ. ಆದಕಾರಣ, ಸೂಳೆಗಾರಿಕೆಗಾಗಿ ಹೀಗೆ ಸಾಕಿಕೊಂಡ ಮಕ್ಕಳನ್ನೂ ಕೂಡ ಹೀನವೃತ್ತಿಯಿಂದ ಉದ್ಧರಿಸುವ ವಿಷಯವನ್ನು ನಿಮ್ಮ ಸಂಘದ "ಲೀಗಲ್ ಕಮಿಟಿ" ಎಂಬ ಕಾನೂನು ಸಮಿತಿಯವರು ಆಲೋಚಿಸಬೇಕೆಂದು ಸೂಚಿಸುವೆನು.

ಈ ಬಗೆಯ ಸಂಘದವರು, ಧರ್ಮಕಾರ್ಯಗಳಿಗಾಗಿ ಏರ್ಪಟ್ಟಿರುವ ಇತರ ನಾನಾಬಗೆಯ ಸಂಘಗಳವರೊಡನೆಯೂ ಸಹಕಾರದಿಂದ ಸೇರಿ ವರ್ತಿಸುತ್ತ, ಮೇಹ ಸಂಬಂಧವಾದ ರೋಗಗಳ ಹಾವಳಿಯನ್ನಡಗಿಸುವ ವಿಚಾರದಲ್ಲಿ ಅವರಿಗೆ ಆಸಕ್ತಿಯುಂಟಾಗುವಂತೆ ಮಾಡಬೇಕೆಂಬುದು ಪ್ರತಿನಿಧಿ ಸಮಿತಿಯವರ ಮತ್ತೊಂದು ಸಲಹೆಯಾಗಿದೆ. ಈ ವಿಷಯದಲ್ಲಿ ಈಚೆಗೆ ಮದರಾಸಿನಲ್ಲಿ ಕಾರ್ಯಕಾರಿಯಾದ ಏರ್ಪಾಡನ್ನು ಮಾಡುತ್ತಿದ್ದಾರೆ. ಅದು ನಿಮ್ಮ ಗಮನಕ್ಕೂ ಬಂದೇ ಇರಬಹುದು. ಅಲ್ಲಿ ಧರ್ಮಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಸ್ಥಾಪಿತವಾಗಿರುವ ಎಲ್ಲ ಸಾರ್ವಜನಿಕ ಸಂಸ್ಥೆಗಳವರನ್ನೂ ಒಟ್ಟಿಗೆ ಸೇರಿಸಿ, ಒಂದು ಸಂಸ್ಥೆಯವರು ಮಾಡುವ ಕೆಲಸವನ್ನೇ ಮತ್ತೆ ಕೆಲವು ಸಂಸ್ಥೆಗಳವರೂ ಚರ್ವಿತ ಚರ್ವಣವಾಗಿ ತಾವು ತಾವೂ ನೆರವೇರಿಸುವುದನ್ನು ತಪ್ಪಿಸುವ ಪ್ರಯತ್ನವು ನಡೆಯುತ್ತಿದೆ. ಆ ಸಂಬಂಧದಲ್ಲಿ ನಡೆದ ಒಂದು ಸಭೆಯಲ್ಲಿ (ಮೀಟಿಂಗಿನಲ್ಲಿ) ಮದರಾಸಿನ ಬಿಷಪ್ಪರವರು ವಿಶೇಷ ರೀತಿಯಲ್ಲಿ ಭಾಗವನ್ನು ವಹಿಸಿದ್ದರು. ನಾನಾ ಸಂಸ್ಥೆಗಳವರೂ ನಿರ್ದಿಷ್ಟ ರೀತಿಯಲ್ಲಿ ತಮತಮಗೆ ಗೊತ್ತುಮಾಡಲ್ಪಟ್ಟ ಕಾರ್ಯಗಳನ್ನು ನೆರವೇರಿಸುತ್ತ, ಒಂದೊಂದು ಸಂಸ್ಥೆಯವರೂ ಇತರ ಸಂಸ್ಥೆಗಳವರಿಗೆ ಸಹಾಯಕರಾಗಿ ವರ್ತಿಸುವಂತೆ ಮಾಡಬೇಕೆಂಬುದೂ ಸಹ, ಆ ಪ್ರಯತ್ನದ ಉದ್ದೇಶ. ಅದು ನೆರವೇರಿದಲ್ಲಿ, ನೈತಿಕ ಮತ್ತು ಸಾಮಾಜಿಕ ಪಾರಿಶುದ್ಧ್ಯರಕ್ಷಣೆಯ ಸಂಘಕ್ಕೆ ಬಹಳ ಅನುಕೂಲ. ಮದರಾಸಿನ ಬಿಷಪ್ಪರವರೂ ಸಹ, ಇದೇ ಅಭಿಪ್ರಾಯವನ್ನೇ ವ್ಯಕ್ತಪಡಿಸಿದ್ದಾರೆ. ಮೇಹಸಂಬಂಧವಾದ ರೋಗಗಳ ಹಾವಳಿಯನ್ನಡಗಿಸುವ ಸಂಬಂಧದಲ್ಲಿ ಕೆಲಸಮಾಡುವುದಕ್ಕೇ, ಜನರು ಮನಸ್ಸಿನಲ್ಲಿ ಏನೋ ಒಂದು ಬಗೆಯ ಹೀನಾಯವನ್ನೂ, ಸಂಕೋಚವನ್ನೂ ಇಟ್ಟುಕೊಂಡಿರುತ್ತಾರೆ. ವ್ಯಕ್ತಿಗಳ ಶೀಲಶುದ್ಧಿಯೇ ಒಟ್ಟು ಪ್ರಜಾಸಮುದಾಯದವರ ಆರೋಗ್ಯಕ್ಕೆ ಮೂಲಾಧಾರವೆಂಬ ತತ್ತ್ವವನ್ನರಿಯದೆ ಹೋದರೆ ನೀತಿಪತನಕ್ಕೂ ಆರ್ಥಿಕ ದೃಷ್ಟಿಯಿಂದ ಬಹಳ ಅನರ್ಥಗಳಿಗೂ ಕಾರಣವಾಗುವುವೆಂಬ ಅಂಶವನ್ನು ಜನರಿಗೆ ಖಚಿತವಾಗಿ ಮನದಟ್ಟು ಮಾಡಿಕೊಡಬೇಕು. ಹಾಗೆ ಮನದಟ್ಟು ಮಾಡಿಕೊಡುವವರೆಗೂ, ಮೇಹಸಂಬಂಧವಾದ ರೋಗಗಳ ಹಾವಳಿಯನ್ನಡಗಿಸುವ ವಿಚಾರದಲ್ಲಿ ಮುಂದೆ ಬಂದು ಕೆಲಸ ಮಾಡುವುದಕ್ಕೆ ಜನಗಳು ಸಂಕೋಚದಿಂದ ಹೀನಾಯಪಡುವುದು ತಪ್ಪುವಂತಿಲ್ಲ. ಇದಲ್ಲದೆ, ಮೇಹಸಂಬಂಧವಾದ ರೋಗಗಳು ಬಹು ಮಂದಿಗಳಲ್ಲಿವೆಯೆಂಬುದೇ ಪ್ರಜೆಗಳಲ್ಲಿ ಅನೇಕರಿಗೆ ತಿಳಿಯದು. ಎಲ್ಲೋ ಅಲ್ಪಸ್ವಲ್ಪ ಜನರಿಗೆ ಈ ರೋಗಗಳಿದ್ದ ಮಾತ್ರಕ್ಕೇ ಅವನ್ನು ಹೋಗಲಾಡಿಸಲು ಇಷ್ಟು ಅಗಾಧವಾದ ಪ್ರಯತ್ನವೇಕೆಂಬ ಮನೋವೃತ್ತಿಯೂ ಪ್ರಜೆಗಳಿಗಿದೆ. ಈ ರೋಗಗಳ ಹಾವಳಿಯನ್ನಡಗಿಸಲು ಹೆಚ್ಚು ಜನರು ಮುಂದೆ ಬಾರದಿರುವುದಕ್ಕೆ ಈ ಬಗೆಯ ಮನೋವೃತ್ತಿಯೂ ಕಾರಣ. ಜನರಿಗಿರುವ ಈ ಬಗೆಯ ಮನೋವೃತ್ತಿಯು ಕಡಿಮೆಯಾಗಿ, ನಿಮ್ಮ ಸಂಘದ ಉದ್ದೇಶಗಳು ಸಾರ್ಥಕವಾಗಿ ನೆರವೇರುವಹಾಗೆ ಇನ್ನೂ ಹೆಚ್ಚು ಮಂದಿಗಳು ನಿಮ್ಮ ಪ್ರಯತ್ನಗಳಿಗೆ ಒತ್ತಾಸೆಯನ್ನು ಕೊಡಬೇಕಾದರೆ, ಮನುಷ್ಯರಿಗೆ ಬರತಕ್ಕ ಇತರ ರೋಗಗಳಂತೆಯೇ ಮೇಹಸಂಬಂಧವಾದ ರೋಗಗಳೂ ಹೌದೆಂಬ ಭಾವನೆಯಿಂದ ಕೂಡಿ, ಈ ರೋಗಗಳಿಂದ ನರಳುವವರ ವಿಷಯದಲ್ಲಿಯೂ ಸಹ, ಇತರ ರೋಗಿಗಳ ವಿಷಯದಲ್ಲಿ ತೋರಿಸುವಂತೆಯೇ ಅದೇ ರೀತಿಯಲ್ಲಿ ಸಹಾನುಭೂತಿಯನ್ನು ತೋರಿಸಬೇಕು; ಅಲ್ಲದೆ, ಪೌರ ಸಾಮಾಜಿಕ ಸಂಘ, ಅಥವಾ "ರೆಡ್‌ಕ್ರಾಸ್" ಸಂಘದಂಥ ಇತರ ಯಾವುದಾದರೂ ಸಂಘದವರೂ ಈ ಸಮಗ್ರ ವಿಚಾರದಲ್ಲಿಯೂ ಆಸಕ್ತಿಯನ್ನು ವಹಿಸಿ, ಈ ಮೇಹ ಸಂಬಂಧವಾದ ರೋಗಗಳ ನಿವಾರಣೆಯ ಸಂಬಂಧವಾದ ಕಾರ್ಯಕಲಾಪಗಳನ್ನು ನೆರವೇರಿಸುವುದೂ ಸಹ, ತಮ್ಮ ಸಂಘದ ಉದ್ದೇಶಗಳಲ್ಲಿ ಸೇರಿರುವಹಾಗೆ ಏರ್ಪಡಿಸುವಂತೆ ಮಾಡಬೇಕು.

ಪ್ರತಿನಿಧಿ ಸಮಿತಿಯವರು ತಮ್ಮ ವರದಿಯ ಕೊನೆಯ ಭಾಗದಲ್ಲಿ ಚಲನ ಚಿತ್ರಗಳಿಗೆ (ಸಿನಿಮಾಕ್ಕೆ) ಸಂಬಂಧಪಟ್ಟ ಸಲಹೆಗಳನ್ನು ಸೂಚಿಸಿದ್ದಾರೆ. ಜನಗಳ ಮನಸ್ಸಿನ ಮೇಲೆ ಮೋಹವಿಕಾರದ ದುಷ್ಪರಿಣಾಮವನ್ನುಂಟು ಮಾಡುವಂಥ ಚಿತ್ರಗಳನ್ನು (ಫಿಲ್ಮುಗಳನ್ನು) ಸಿನಿಮಾಮಂದಿರಗಳಲ್ಲಿ ತೋರಿಸಲು ಅವಕಾಶವಿರದಂತೆ, ಯಾವ ಚಿತ್ರಗಳನ್ನು ತೋರಿಸಬಹುದು ಮತ್ತು ಯಾವ ಚಿತ್ರಗಳನ್ನು ತೋರಿಸಕೂಡದು, ಎಂಬುದನ್ನು ನಿರ್ಧರಿಸಿ ಅಪ್ಪಣೆ ಮಾಡಲು ಪರಿಶೀಲಕರ ಸಭೆಯೊಂದನ್ನು (Board of censors) ಏರ್ಪಡಿಸಬೇಕೆಂಬುದೂ ಆ ಸಲಹೆಗಳಲ್ಲೊಂದಾಗಿದೆ. ಅದನ್ನು ನಾವು ಆಚರಣೆಗೆ ತರಬೇಕೆಂದು ಉದ್ದೇಶಿಸಿ, ಅಂಥ ಸಭೆಯೊಂದನ್ನು ಏರ್ಪಡಿಸಿದ್ದೇವೆ. ಅದರ ಸದಸ್ಯರು ಕೇವಲ ಶೀಘ್ರದಲ್ಲೇ ಕೆಲಸವನ್ನು ಪ್ರಕ್ರಮಿಸುವರೆಂದೂ, ಮೈಸೂರು ಸಂಸ್ಥಾನದಲ್ಲಿ ದುಷ್ಪರಿಣಾಮಕಾರಿಗಳಾದ ಚಿತ್ರಗಳು (ಫಿಲ್ಮುಗಳು) ಪ್ರದರ್ಶಿಸಲ್ಪಡುವುದು ವಿಶೇಷ ಕಡಿಮೆಯಾಗುವುದೆಂದೂ ನಾನು ನಂಬಿದ್ದೇನೆ.

ಮಹನೀಯರೇ, ಇದುವರೆಗೆ ನಡೆದಿರುವ ಕಾರ್ಯಕಲಾಪಗಳನ್ನು ಕುರಿತು ಸಂಕ್ಷೇಪವಾಗಿ ಪ್ರಸ್ತಾಪಿಸಿದ್ದೇನೆ. ಮುಂದೆ ನೆರವೇರಬೇಕಾಗಿರುವ ಕಾರ್ಯಗಳಲ್ಲಿ ಕೆಲವನ್ನು ಇನ್ನು ಸೂಚಿಸುವೆನು. ಸೂಳೆಗಾರಿಕೆಯು ನಡೆಯದಂತೆ ನಿರೋಧಿಸುವ ಒಂದು ಕಾನೂನನ್ನು ಏರ್ಪಡಿಸುವುದು ಆವಶ್ಯಕವಾಗಿದೆ. ಸೂಳೆಗಾರಿಕೆಯ ಮನೆಗಳಿಂದ ಬಿಡುಗಡೆಮಾಡಿ ಕರೆದು ತಂದ ಹೆಂಗಸರಿಗೂ, ಹುಡುಗಿಯರಿಗೂ ರಕ್ಷಣೆಯು ದೊರೆಯುವಂತೆ ಒಂದು ಆಶ್ರಮವು ನಮಗೆ ಬೇಕಾಗುತ್ತದೆ. ಮೇಹ ಸಂಬಂಧವಾದ ರೋಗಗಳನ್ನು ಅಡಗಿಸುವುದಕ್ಕಾಗಿ ಪ್ರಬಲವಾದ ಏರ್ಪಾಡುಗಳನ್ನು ನಡೆಯಿಸುವುದೂ, ಈ ರೋಗಗಳು ಬಂದಿರತಕ್ಕವರಿಗೆ ಚಿಕಿತ್ಸೆಗಾಗಿ ಇನ್ನೂ ಅತ್ಯಂತ ಹೆಚ್ಚಿನ ಸೌಕರ್ಯಗಳನ್ನು ಒದಗಿಸಬೇಕಾದುದೂ ಆವಶ್ಯಕ. ಈ ಕಾರ್ಯಗಳನ್ನೆಲ್ಲಾ ನೆರವೇರಿಸಬೇಕಾದರೆ ನಿಮಗೆ ಧನ ಸಹಾಯವು ಅಗತ್ಯವಾಗಿ ಬೇಕಾಗುತ್ತದೆ.

ಈಗತಾನೆ ನಮಗೆ ಓದಿ ಹೇಳಿದ ವಿವರಗಳನ್ನು ನಾನು ವಿಶೇಷ ಸಂತೋಷದಿಂದಲೂ, ತೀವ್ರಾಸಕ್ತಿಯಿಂದಲೂ ಆಲಿಸಿ ಕೇಳಿದೆನು. ಕೇವಲ ಸ್ವಾರ್ಥತ್ಯಾಗದಿಂದ ಕೆಲಸ ಮಾಡುತ್ತಿರುವ ಮಿಸ್ ಪಾಟರ್‌ರವರೂ, ಮತ್ತು ಡಾಕ್ಟರ್ ಪಿಲ್ಲಿರ್‌ರವರೂ, ಮತ್ತು ಅವರ ಜೊತೆಯವರೂ, ಸಂತೋಷದಿಂದ ಹೆಮ್ಮೆಪಡುವಷ್ಟುಮಟ್ಟಿಗೆ ವಿಚಕ್ಷಣೆಯಿಂದ ಕೆಲಸಗಳು ನಡೆದಿವೆ. ಅನೇಕ ಪ್ರತಿಕೂಲ ಸಂದರ್ಭಗಳಿದ್ದೂ ಸಹ, ಇಷ್ಟುಮಟ್ಟಿಗೆ ಕೆಲಸ ನಡೆಯಿಸಿರುವುದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸೂಚಿಸುತ್ತೇನೆ. ಅವರ ಪ್ರಯತ್ನವು ಸಫಲವಾಗಿರುವುದಕ್ಕೆ ಈ ದಿನದ ಸಭೆಯೇ ಒಂದು ಪ್ರತ್ಯಕ್ಷ ನಿದರ್ಶನವಾಗಿದೆ. ಮುಂದೆ ಅವರು ಇನ್ನೂ ಹೆಚ್ಚಿನ ಕಾರ್ಯಗಳನ್ನು ಸಾಧಿಸುವರೆಂಬುದರಲ್ಲಿ ಸಂದೇಹವೇ ಇಲ್ಲ. ಅವರು ಕೈಕೊಂಡಿರುವ ಕಾರ್ಯಕಲಾಪಗಳು ವಿಶೇಷ ಕಷ್ಟಸಾಧ್ಯವಾದುವುಗಳು. ಕಾರ್ಯಸಾಧನೆಯು ಅಸಾಧ್ಯವೆಂದೇ ಮೊದಲಿನಲ್ಲಿ ತೋರುವಂಥಹ ವಿಘ್ನಗಳೂ ಇವೆ. ಆದರೆ ಉತ್ಸಾಹವೂ, ವ್ಯವಸ್ಥೆಯಿಂದ ನಡೆಯುವ ಕಾರ್ಯಕ್ರಮದ ಅಚ್ಚುಕಟ್ಟೂ, ಸೇರಿದರೆ ಆ ವಿಘ್ನಗಳೆಲ್ಲ ನಿವಾರಣೆಯಾಗಿ, ಕೇವಲ ಫಲಪ್ರದವಾಗಿ ಕಾರ್ಯಗಳು ನೆರವೇರುವುದರಲ್ಲಿ ಸಂಶಯವೇ ಇಲ್ಲ.

ಆದಕಾರಣ, ಬೆಂಗಳೂರು ಮೈಸೂರು ನಗರಗಳಲ್ಲಿ ಜನಗಳ ಶೀಲಶುದ್ಧಿಯನ್ನೂ ಆರೋಗ್ಯ ಭಾಗ್ಯವನ್ನೂ ಇನ್ನೂ ಉತ್ತಮಸ್ಥಿತಿಗೆ ತಂದು, ಆ ಮೂಲಕ ಸಾಮಾಜಿಕ ಪಾರಿಶುದ್ಧ್ಯವನ್ನು ಮತ್ತಷ್ಟು ಹೆಚ್ಚಿಸುವುದಕ್ಕಾಗಿ ಅವರುಗಳು ನೆರವೇರಿಸುವ ಪ್ರಯತ್ನಗಳು ಸಾಂಗವಾಗಿ ಕೈಗೂಡಲೆಂದು ನಾನು ಹೃತ್ಪೂರ್ವಕವಾಗಿ ಹಾರೈಸುವೆನು. ಅವರ ಉದ್ದಿಷ್ಟಗಳೂ, ಅವರ ಆಶೋತ್ತರಗಳೂ, ನೆರವೇರುವುದಕ್ಕಾಗಿ ನನ್ನಿಂದ ಸಾಧ್ಯವಿರುವುದೇನನ್ನಾದರೂ ಮಾಡಬೇಕಾದಲ್ಲಿ, ಅದನ್ನು ಮಾಡುವುದೇ ಒಂದು ಸುಯೋಗವೆಂದು ನಾನು ಸಂತತವೂ ಭಾವಿಸಿರುವೆನು.

ಮೈಸೂರು ದೇಶದ ವೀರಶೈವ ಬಡವಿದ್ಯಾರ್ಥಿಗಳಿಗೆ ಸೂಚನೆ.

ದಾವಣಗೆರೆ ವೀರಶೈವ ವಿದ್ಯಾವರ್ಧಕಫಂಡ್ ಸಂಘದಿಂದ ಸ್ಕಾಲರ್‌ಷಿಪ್ ಪಡೆಯಲಪೇಕ್ಷೆಯುಳ್ಳ ಲಾ, ಬಿ.ಎ., ಇಂಟರ್‌ಮೀಡಿಯೆಟ್, ಟೆಕ್ನಿಕಲ್, ಸಂಸ್ಕೃತ ವಿದ್ಯಾರ್ಥಿಗಳು, ಚಿತ್ರದುರ್ಗ ಡಿಸ್ಟ್ರಿಕ್ಟಿನ ವಾಸಸ್ಥರಾಗಿ ಹೈಸ್ಕೂಲಿನಲ್ಲಿ ಅಭ್ಯಾಸಿಸುವ ವಿದ್ಯಾರ್ಥಿಗಳು ಮತ್ತು ದಾವಣಗೆರೆ ಮಿಡ್ಲ್ ಸ್ಕೂಲಿನಲ್ಲಿ ಅಭ್ಯಾಸಮಾಡತಕ್ಕ ವಿದ್ಯಾರ್ಥಿಗಳು ಸಹ ಈ ಸಂಘದ ಪ್ರಿಂಟೆಡ್ ಫಾರಂನಲ್ಲಿ 1932 ನೇ ಜುಲೈ ತಾ|| 31 ರ ಒಳಗಾಗಿ ಅಪ್ಲಿಕೇಷನ್ ಹಾಕಿಕೊಳ್ಳಬಹುದು.

ಷರಾ—(1) ವಾಯಿದೆಮೀರಿ ಬರುವ ಅಪ್ಲಿಕೇಷನ್ನುಗಳು ಅಂಗೀಕರಿಸಲ್ಪಡುವದಿಲ್ಲ. (2) ಮೀಟಿಂಗಿನಲ್ಲಿ ವ್ಯವಸ್ಥೆಯಾದ ಬಳಿಕ ಮುಂದೆ ಬರುವ ಅರ್ಜಿ ವಗೈರೆಗಳಿಗೆ ಸಿಗಕೊಡುವುದಿಲ್ಲ. (3) ಅಪ್ಲಿಕೇಷನ್ ಫಾರಂನಲ್ಲಿ ನಮೂದಿಸಿರುವ ಪ್ರತಿಯೊಂದು ಕಾಲಂಗಳು ಪೂರ್ತಿಯಾಗಿ ವಿಶದವಾಗಿ ಭರ್ತಿಮಾಡಲ್ಪಡಬೇಕು, ಹಾಗಿಲ್ಲದಿದ್ದರೆ ಸಿಗಕೊಡುವುದಿಲ್ಲ ಮತ್ತು ಟ್ರೂ ಕಾಪಿ ಸರ್ಟಿಫಿಕೇಟುಗಳು ತಿರಸ್ಕರಿಸಲ್ಪಡುವುವು. (4) ಅಪ್ಲಿಕೇಷನ್ ಫಾರಂ ಅಪೇಕ್ಷಿಸತಕ್ಕವರು ಅರ್ಧಾಣೆ ಸ್ಟಾಂಪುಕಳುಹಿಸುವುದು.

ತಿರುಕಪ್ಪನವರ ಮಠದ ಷಡಾಕ್ಷರಪ್ಪ
ಪ್ರೆಸಿಡೆಂಟ್,
ವೀರಶೈವ ವಿದ್ಯಾವರ್ಧಕ ಫಂಡ್ ಸಂಘ, ದಾವಣಗೆರೆ.

Mr. MOHAMED SAIT ACQUITTED.

IN THE COURT OF THE SPECIAL FIRST CLASS MAGISTRATE AT MYSORE.

Dated the 11th day of June 1932.

PRESENT:

T. V. A. ISVARAN, Esquire, B.A.,
Special First Class Magistrate, Mysore.

Criminal Case No. 169 of 1931-32.

Complainant.	Accused
Government by	Mr. Mohamed Sait.
Mysore City Municipality.	

JUDGMENT.

This is a prosecution under section 128 of the Municipal Regulation instituted by the City Municipality through the Sanitary Inspector of Lasker Mohalla against Mr. Mohamed Sait, Municipal Counciller, and owner and occupier of the Bunglow known as 'Abba Manzil' situated in Abba Road in Lasker Mohalla. The prosecution report in the case was first placed in the Court of the Honorary Bench Magistrates and the case was transferred therefrom after some time to the City Magistrate's Court and was again transferred to this Court by the District Magistrate for disposal.

2. The case for the prosecution is that just prior to the institution of this complaint the Health Department of the Municipality had embarked upon a series of prosecutions for the prevention of certain nuisances in the City as the existence of these had contributed to the continuance and spread of certain types of epidemic diseases and the Sanitary Staff had therefore been instructed to take action against those who had infringed the provisions of Section 128 and other connected sections of the Municipal Regulations. In the course of the execution of his normal duties the Sanitary Inspector of Lasker Mohalla noticed for the first time on 3-12-1930, sewage water flowing through two out-lets leading from the out houses attached to 'ABBA MANZIL' and emptying into the Municipal surface drain running in the conservancy lane behind and to the north of the premises in contravention of the provisions of the aforesaid section of the Municipal Regulation and although a free underground connection had been provided for the building by the Trust Board, some time in the year 1927 for the carriage of sewage from the latrine. This free conection is marked as exhibit P 1 (c) in the plan Exbit P 1 in the case. The Sanitary Inspector, it is alleged, brought this misfeasance on the part of the owner and occupier of the building to the notice of the Health Officer, who issued a notice in duplicate Exbit P 1 (a) and Exhibit P 2 (b) to be served on the individual, conveying a warning to the effect that he should within one month from the date of service of the notice on him arrange to prevent the flow of sewage water in Sewers other than the one provided free of cost to the building by the Trust Board, or that he should make an application to the Trust Board and secure additional connections and that if he failed to comply with any of the aforesaid conditions, he would render himself liable for prosecution for offences under sections 101 and 128 of the Municipal Regulation. It is alleged by the prosecution that Mr. Mohamed Sait refused to accept the notice when it was taken to him on 19-12-30. A complaint was thereupon lodged in the Bench Court on 22-12-30.

3. When the substance of the charge against Mr. Mohamed Sait was explained to him he denied the charge and filed a written statement to the same effect and stressed therein that the prosecution was the outcome of misunderstanding between himself and the President.

4. Section 128 of the Municipal Regulation reads as follows:—Whoever causes or allows the water of any sink or sewer or any other liquid or other matter which is or which is likely to become offensive from any building or land under his control to run, drain or be thrown or put upon any street or open space or to soak through any external wall or causes or allows any offensive matter from any sewers or privy to run, drain or be thrown into a surface drain in any street without the permission in writing of the Municipal Council or who fails to comply with any condition prescribed in such permission shall be punished with fine which may extend to twenty five rupees. The Case in question appears to fall under the latter part of the section.

5. It is quite obvious that Section 128 does not contemplate the issue of a notice to the offender before a prosecution is launched but the Health Department of the Municipality adopted this course in pursuance of the resolution of the Council recorded at its special sitting on 14-11-30 and a notice Exhibit P 2 (a) Exhibit P 2 (b) was issued on 7-12-30 to be served on Mr. Mohamed Sait for offences under Sections 101 and 128 of Municipal Regulation. Section 101 however does require the issue of a notice before a prosecution is undertaken. It next arises for consideration whether the notice in the case was duly served on the party and whether he was allowed a month's time to take action in respect of the alleged offence in any one of the two directions indicated in the notice. With regard to the first question the prosecution has itself furnished a clear answer to the effect that the notice was not served on the party. It is found in the prosecution report filed by the Sanitary Inspector in Court that the printed words "a notice was served on the accused" have been scored out and there is no insertion either that the notice was refused by the accused. I think that a note to that effect would have been the most appropriate one to have been made if the alleged refusal was true. It is equally clear that no time was allowed to the party to remedy the evil, if any, and the prosecution itself was sanctioned on the afternoon of the 20th, the so called refusal of the notice having accrued on the morning of the 19th. The prosecution has however endeavoured to show that the several attempts made by PWS 1 and 2 to serve the notice failed. It is interesting to note what these two witnesses have stated on this point. PW 1 has stated 'I could not get at the accused as he was busy with the elections till the 13th; then I fell ill and returned to duty on the 19th. On the last named date I took the notice for service with Overseer Gulam Dastagir. I sent him inside for service and myself stood outside the bunglow,' and that is about 50 yards from the bunglow, and further on he has stated "I myself did not go inside the house as it is the duty of the overseer to serve notices. It is usual every time we went near the house of the accused for service of notice to enquire the peons first whether the accused was in or out. If they say he was not we used to go away from the place." But PW 2 has an entirely different tale to tell and it is this "I went to the accused's house twice or thrice to serve notices. He was not found. PW 1 did not accompany me on these two or three occassions. The servants told me that the accused was not in the house. I had no other occassion to serve any notice on the accused either at his shop or at his house. I have served only this one notice in my division. This notice was with me for 2 or 3 days unserved.' These are irreconcilable statements and both of them cannot be true. Then with regard to the alleged refusal to take the notice there is only the evidence of PW 2 on the point. Mr. Mohamed Sait has denied the visit of PW 2 to his house on that date and characterised the version of the prosecution in this behalf as a delerebately false one and looking at the matter in all its aspects and considering also the furtive behaviour of the two PWS I cannot but regard the prosecution story in this behalf as a degenerate myth.

6. Mr. K. Ramaswamy who appeared along with the Municipal Advocate on behalf of the prosecution, argued that as Section 128 did not require the issue of notice before prosecution, the resolution of the Council prescribing this course was "inconsistant with the regulation" as per Section 46 of the Municipal regulation and it was not binding on the delegated authority to follow. The decision and the proceedings themselves were not therefore invalidated. There can, I think be a differance of opinion on this point viz., whether decision of the Council requiring notice to issue is or is not inconsistant with the substance of the section but as the decision in the case does not rest mainly on this aspect of the case, I may concede the contention of the Council for the prosecution.

7. The fundamental question on which a finding has to be recorded in this case is whether "any offensive matter from any sewer or privy" was allowed to run, into the Municipal Surface drain C D without permission through the two outlets marked exhibit P 1 (a) and Exhibit P 1 (b) in the plan Exhibit P 1 from the out house indicated as "Kitchen and garage" in the same plan.

The Sanitary Inspector's evidence is that he saw sewage water flowing through the two outlets on the 3rd, 6th and 7th December. In the prosecution report he has said "sewage and other liquid matter of the house which is offensive flow" and in his deposition he has stated that "At A and B offensive liquids mixed with sewage flow. At A liquids from the kitchen come and at B those from the outer yard come." These are dogmatic statements of the complainant who is naturally most interested in the prosecution and they require to be supported by reliable and independant testimoney before PW 1's description can be accepted. Admittedly PW 1 made no attempt to examine closely the matter alleged to be flowing through the outlets and he did not collect it either for examination by a competent authority to ascertain its offensive character. PW 1 made no interior inspection of the building or even the compound in all his term of office extending over 12 years in the Municipality to ascertain with certainity wherefrom the matter was allowed to run. He has freely resorted to guessing and to a mechanical repitition of the phrases of the section. PW 2 who works under PW 1 does not entirely support the version of PW 1 and he has stated that "sewage water from the bunglow flows into this drain at two places, before a flushing arrangement was made about 1½ years ago." Corroboration of these witnesses on this question of flow of some liquid from the outlets was attempted to be secured by means of a pictorial re-production of the actual situation and PW 3 of Messrs. Varadacharlu and Sons took a Photograph at the instance of the Sanitary Inspector and Exhibit P 6 is a true copy thereof. In the course of this very short examination PW 3 stated "I do not see any water flowing through the vents." This was shocking news to the prosecution and it made no attempt to explain away this meterial factor which goes against the prosecution voersion. PW 5 an Overseer of the Trust Board who prepared Exhibit P 1, while deposing on the point that he prepared Exhibit P 1 some days after the prosecution was instituted, declared with much glee and illconcealed satisfaction that he too noticed "dirty water" flowing from the outlets. He has spoken to the situation as it existed, if at all it existed, subsequent to the prosecution itself and it is therefore worthless for the purpose of the present case which is founded on the circumstance as it was on 7-12-30. This is but one example of an attempt on the part of the prosecution to reconstruct the case even as it was proceeding in Court. There remains for consideration the evidence of the Health Officer PW 4 who stated to have initiated the Proceedings after an inspection of the spot on the 20th of December. He has described that 'waste water' was flowing from the outlets. Whether this conclusion is based on inspection or immagination as contended by the learned defence council Mr. Dasappa has to be examined next. With regard to the inspection PW 4 has deposed "I wanted to satisfy myself and so I went there." "PW 1 was with me when I went to inspect on the 20th. We started together from the Municipal Office in my Car. We went straight to the spot in Abba Road. I might have stayed for a few minutes in the office. I came back to office with PW 1 after inspection—I did not send word to Mr. Mohamed Sait then." The evidence of PW 1 on this point is this:—Both of us visited the spot at about 9 A.M. that day (20th). He was out on inspection duty. We saw the old beaf market area. He also came near the house of the accused to generally inspect the Conservancy lane. He might have observed the outlets also attached to their house. I did not particularly show him these outlets. The Health Officer did not come with me again. He did not go into the house of the accused on the 6th. The Health Officer came in a car and walked into the lane. The car was stopped near Sattar Sait's Bunglow. After visiting the beaf market we came on foot. I do not know whether he came from east or west. He looked up whether there was rubbish in the lane and went. He walked slowly and went. He made a sort of general inspection of the lane. I cannot say whether it was a detailed or general inspection, that he made." The evidence of these witnesses is doubtless conflicting in respect of essentail details and the discrepancies in either evidence raise naturally a feeling of doubt as to whether the inspection did take place as averred by the prosecution. PW 4 is a responsible officer and statement emanating from a person of his status to the effect that he made an inspection of the spot is entitled to weight and credence and I therefore believe that he has inspected the locality. He has however diposed more than once that he noticed 'waste water' flowing through the 2 outlets. Like PW 1 he did not make an inspection of the compound to know wherefrom the waste water was flowing. He did not examine closely the waste water that was flowing. He did not arrange either to have the waste water tested in order to secure independant and reliable evidence as to its offensive character. It is urged that waste water may or may not be offensive. The Health Officer's evidence leaves us in the region of doubt, and he does not appear to support the statement of PW 1 whose assertions in the matter are therefore of no consequence. There is thus no reliable evidence in the case to indicate conclusively that the liquid was offensive and the prosecution must therefore inevitably fail.

8. I may in conclusion indicate one other aspect from which the case for the prosecution may be viewed. I am inclined to think that the prosecution case does not at all come under the purview of the latter part of Section 128. It is of course obvioues that the case does not fall under the first part of the section though the learned councils for the prosecution argued, rather ingeniously, but ineffectually, that the case did come under both parts of the section. The words 'offensive matter from any sewer or privy' occurring in the latter part of section refer essentially in my view, to excrementitious matter and do not apply to kitchen slips or as PW 4 has put it to waste water. A sewer has been described by a standard authority as a 'large and generally underground passage or conduit for fluid and peculant matter, and it is in this generally accepted sense that the term sewer is used in the latter part of the section. This interpretation of the term which to my mind appears to be reasonable and appropriate takes the case out of the scope of the latter part of the section.

The result is that I acquit Mr. Mohamed Sait under Section 245 C.P.C.

In open Court.

(Sd) T. V. A. ISVARAN,
Special Magistrate, Mysore. 11-6-32.

The prosecution was conducted by Messrs K. Ramaswamy and K. Puttu Rao and the defence by Mr. H. C. Dasappa.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರ್ ಮ|| ಮಹಮ್ಮದ್ ಸೇಟ್‌ರವರ ಮೇಲೆ ಮ್ಯುನಿಸಿಪಾಲಿಟಿಯವರು ಮ್ಯುನಿಸಿಪಲ್ ರೆಗ್ಯುಲೇಷನ್ 128 ನೆಯ ಸೆಕ್ಷನ್ ಪ್ರಕಾರ ಮೈಸೂರು ಫಸ್ಟ್‌ಕ್ಲಾಸ್ ಸ್ಪೆಷಲ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿದ್ದ ಕ್ರಿಮಿನಲ್ ಮೊಕದ್ದಮೆಯಲ್ಲಿ ಮ|| ಸೇಟರು ದೋಷಮುಕ್ತರಾದರು. ಈ ಮೊಕದ್ದಮೆಯ ಜಡ್ಜ್‌ಮೆಂಟಿನ ಸಾರಾಂಶ:—

ಈ ವಿವಾದವು ಮೊದಲು ಆನರರಿ ಬೆಂ. ಮೆಜಿಸ್ಟ್ರೇಟರ ಕೋರ್ಟಿನಲ್ಲಿ [illegible] ಅನಂತರ ಅಪರಾಧಿಯ ಕೋರಿಕೆಯ ಪ್ರಕಾರ [illegible] ಮೆಜಿಸ್ಟ್ರೇಟ್ ಕೋರ್ಟಿಗೂ, ಅಲ್ಲಿಂದ ಈ ಕೋರ್ಟಿಗೂ ವರ್ಗಾಯಿಸಲ್ಪಟ್ಟಿತು. ಮ್ಯುನಿಸಿಪಾಲಿಟಿಯ ಹೆಲ್ತ್ ಶಾಖೆಯವರು ರಾಜಧಾನಿಯಲ್ಲಿ [illegible]

ಮಕ್ಕಳಿದ್ದರೆಮನೆ ಚೆಂದ.
ಬಂಜೆತನದಿಂದ ಮುಕ್ತರಾಗುವಿರಿ
ಮಕ್ಕಳಿಲ್ಲೆಂದು | ಗರ್ಭಧಾರಣ ಸಂಜೀವಿನೀ | ಚಿಂತಿಸಬೇಡಿರಿ
ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆವಿಗುರಿ. ೯ ಗುಳಿಗೆಗಳ ಕಿ. ೩ ರೂಪಾಯಿ ಟ. ಖ. ೫ ಆಣೆ.
ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ವಿರಜ M. C.

ಆಶ್ಯಕರುತ್ಪತ್ತಿಗೆ ಕಾರಣವಾದ ಮನೆಗಳ ಹೊಗೆಯನ್ನು ತಿಳಿಸುವುದಕ್ಕೋಸ್ಕರ 128 ನೆಯ ಸೆಕ್ಷನ್ನಿಗೆ ವಿರೋಧವಾಗಿ ಮನೆಯ ಹೊಲಸು ನೀರನ್ನು ಭೂಮಿಯೊಳಗಿನ ಬಚ್ಚಲಿಗೆ ಬಿಡದೆ ಮೇಲ್ಗಡೆಯ ಬಚ್ಚಲಿಗೆ ಬಿಟ್ಟಿರುವವರನ್ನು ಪ್ರಾಸಿಕ್ಯೂಷನ್ನಿಗೆ ಗುರಿಮಾಡುತ್ತ ಬಂದರು. ಇವುಗಳಲ್ಲಿ ಸ್ಯಾನಿಟರಿ ಇನ್ಸ್ಪೆಕ್ಟರು ತಾ|| 3-12-1930 ರಲ್ಲಿ ಮ|| ಮಹಮ್ಮದ್ ಸೇಟರ 'ಅಬ್ದುಲ್ಲಾ' ಎಂಬ ಬಂಗಲೆಯ ಕಕ್ಕಸಿನ ನೀರು ಸೆಕ್ಷನ್ನಿಗೆ ವಿರೋಧವಾಗಿ ಮ್ಯುನಿಸಿಪಾಲಿಟಿಯ ಭೂಮಿ ಮೇಲಿನ ಬಚ್ಚಲಿಗೆ ಬಿಟ್ಟಿರುವುದನ್ನು ನೋಡಿ ಅದನ್ನು ತಪ್ಪಿಸಿ ಭೂಮಿಯೊಳಗಿನ ಬಚ್ಚಲಿಗೆ ಬಿಡಬೇಕೆಂದೂ, ತಪ್ಪಿದಲ್ಲಿ ರೂಲ್ಸು ಪ್ರಕಾರ ಪ್ರಾಸಿಕ್ಯೂಟ್ ಮಾಡುತ್ತೇವೆಂದೂ 19-12-30 ರಲ್ಲಿ ಕೊಟ್ಟಿದ್ದ ನೋಟೀಸನ್ನು ಮಹಮ್ಮದ್ ಸೇಟರು ತೆಗೆದುಕೊಳ್ಳದೆ ತಿರಸ್ಕರಿಸಿದರು. ಅದರ ಮೇಲೆ ಮೊಕದ್ದಮೆಯು ತಾ|| 22-12-30 ರಲ್ಲಿ ಬೆಂಚ್ ಕೋರ್ಟಿನಲ್ಲಿ ದಾಖಲ್ಮಾಡಲ್ಪಟ್ಟಿತು.

ಅಪಾದನೆಯ ಮುಖ್ಯಾಂಶವನ್ನು ಅಪರಾಧಿಗೆ ವಿವರಿಸಿ ಹೇಳಲು ಈ ಅಪಾದನೆಯು ಸುಳ್ಳೆಂದೂ, ತನಗೂ ಮ್ಯುನಿಸಿಪಲ್ ಪ್ರೆಸಿಡೆಂಟರಿಗೂ ಉಂಟಾಗಿರುವ ಮನಸ್ತಾಪದಿಂದ ಮಾಡಲ್ಪಟ್ಟುದಾಗಿರುತ್ತದೆಂದೂ ಲಿಖಿತ ಮೂಲಕವಾಗಿ ಸ್ಟೇಟ್ಮೆಂಟನ್ನು ಕೊಟ್ಟರು.

ಯಾವ ಮನೆಯ ಹೊಲಸು ನೀರನ್ನಾಗಲಿ ಇತರ ಪದಾರ್ಥವನ್ನಾಗಲಿ ಬೀದಿಯ ಬಚ್ಚಲಿಗೆ ಬಿಡುವುದು, ನೆಲದಮೇಲೆ ಚೆಲ್ಲುವುದು ಇತ್ಯಾದಿ ಕೃತ್ಯಗಳನ್ನು ಮಾಡುವವರು 25 ರೂ. ವರೆಗಿನ ಜುಲ್ಮಾನೆಗೆ ಗುರಿಯಾಗುವರೆಂದು ಮ್ಯುನಿಸಿಪಲ್ ರೆಗ್ಯುಲೇಷನ್ನಿನ 128 ನೆಯ ಸೆಕ್ಷನ್ನಿನಲ್ಲಿ ಹೇಳಲ್ಪಟ್ಟಿದೆ.

ಈ ಅಪರಾಧಕ್ಕಾಗಿ ಕೇಸು ಮಾಡುವುದಕ್ಕೆ ಮೊದಲು ಅಪರಾಧಿಗೆ ನೋಟೀಸು ಕೊಡಬೇಕಾಗಿಲ್ಲವೆಂದು 128 ನೆಯ ಸೆಕ್ಷನ್ನಿನಲ್ಲಿ ಹೇಳಲ್ಪಟ್ಟಿರುವುದಾದರೂ, 14-11-30 ರಲ್ಲಿ ನಡೆದ ಕೌನ್ಸಿಲ್ ಮೀಟಿಂಗಿನಲ್ಲಿ ನೋಟೀಸನ್ನು ಕೊಡಬೇಕೆಂದು ತೀರ್ಮಾನವಾದ ಪ್ರಕಾರ ಹೆಲ್ತ್ ಶಾಖೆಯವರಿಂದ 7-12-30 ರಲ್ಲಿ ಮ|| ಮಹಮ್ಮದ್ ಸೇಟರಿಗೆ 101 ಮತ್ತು 128 ನೆಯ ಸೆಕ್ಷನ್ನುಗಳಲ್ಲಿ ಕಂಡ ಅಪರಾಧಕ್ಕಾಗಿ ನೋಟೀಸು ಕೊಡಲ್ಪಟ್ಟಿತು. ಈ ನೋಟೀಸು ಅಪರಾಧಿಗೆ ಜಾರಿಯಾಯಿತೆ ಮತ್ತು ನೋಟೀಸಿನಲ್ಲಿ ಕಂಡ ವಿಷಯವನ್ನು ಸರಿಪಡಿಸಲು 1 ತಿಂಗಳ ಅವಧಿಯು ಕೊಡಲ್ಪಟ್ಟಿದ್ದಿತೆ ಎಂಬತವನ್ನು ತಿಳಿಯಬೇಕಾಗಿದೆ. ಮೊದಲನೆಯ ಪ್ರಶ್ನೆಗೆ ನೋಟೀಸನ್ನು ಅಪರಾಧಿಗೆ ಜಾರಿಮಾಡಲಿಲ್ಲವೆಂದು ಫಿರ್ಯಾದಿಯಿಂದುತ್ತರ ಬಂದಿರುತ್ತದೆ. "ನೋಟೀಸು ಅಪರಾಧಿಗೆ ಜಾರಿಮಾಡಲ್ಪಟ್ಟಿತು" ಎಂದು ಅಚ್ಚಾಗಿರುವ ಮಾತುಗಳು ನೋಟೀಸಿನಲ್ಲಿ ಹೊಡೆದುಹಾಕಲ್ಪಟ್ಟಿದೆ. ಆದರೆ ಅದರ ಬದಲು ಅಪರಾಧಿಯು ನೋಟೀಸನ್ನು ತೆಗೆದುಕೊಳ್ಳಲು ತಿರಸ್ಕರಿಸಿದನೆಂದು ಬರೆಯಲ್ಪಟ್ಟಿಲ್ಲ. ಅಪರಾಧಿಯು ನೋಟೀಸನ್ನು ತೆಗೆದುಕೊಳ್ಳಲು ತಿರಸ್ಕರಿಸಿದನೆಂದು ಈಗ ಹೇಳುವುದು ನಿಜವಾಗಿದ್ದಲ್ಲಿ ಆರೀತಿ ಬರೆದಿದ್ದರೆ ಬಹಳ ಸಾಧಕವಾಗಿರುತ್ತಿದ್ದಿತು. ಅಂತಹ ನ್ಯೂನತೆಯೇನಾದರೂ ಇದ್ದರೆ ಅದನ್ನು ಸರಿಪಡಿಸಿಕೊಳ್ಳಲು ವ್ಯವಧಾನವನ್ನು ಕೊಡದೆ ತಾ|| 19ರಲ್ಲಿ ನೋಟೀಸು ಹುಟ್ಟಿ ತಾ|| 20ರಲ್ಲಿ ಕೇಸು ದಾಖಲ್ಮಾಡಲ್ಪಟ್ಟಿತು. ಅಪರಾಧಿಯು ಚುನಾವಣೆ ಸಂಬಂಧದಲ್ಲಿ ತಾ|| 13ರ ವರೆಗೆ ಉದ್ಯುಕ್ತನಾಗಿದ್ದುದರಿಂದ ಅಪರಾಧಿಯು ಸಿಕ್ಕಲಿಲ್ಲ ಮತ್ತು ನಾನು ಕಾಯಿಲೆಯಿದ್ದು ತಾ|| 19 ರಲ್ಲಿ ಕೆಲಸದ ಮೇಲೆ ಬಂದೆ, ಅದೇ ದಿವಸ ಓವರ್ಸೀರ್ ಗುಲಾಂದಸ್ತಗಿರ ಸಂಗಡ ನೋಟೀಸು ಜಾರಿಮಾಡಲು ಅಪರಾಧಿ ಬಂಗಲೆ ಬಳಿ ಹೋಗಿದ್ದು 50 ಅಡಿ ದೂರದಲ್ಲಿ ನಿಂತು ಓವರ್ಸೀರನ್ನು ಒಳಗೆ ಕಳುಹಿಸಿದೆ. ನೋಟೀಸು ಜಾರಿಮಾಡುವುದು ಓವರ್ಸೀಯ ಕೆಲಸವಾದ್ದರಿಂದ ನಾನು ಒಳಗೆ ಹೋಗಲಿಲ್ಲ. ಪ್ರತಿಯೊಂದುವೇಳೆ ನಾವು ಹೋದಾಗ ಹೊರಗಡೆ ನಿಂತು ಅಪರಾಧಿಯು ಮನೆಯಲ್ಲಿದ್ದಾರೆಯೋ ಇಲ್ಲವೆ ಎಂದು ವಿಚಾರಿಸುತ್ತಿದ್ದೆವು. ಅವರು ಹೊರಗೆ ಹೋಗಿದ್ದಾರೆಂದು ತಿಳಿದಮೇಲೆ ಬಂದುಬಿಡುತ್ತಿದ್ದೆವು ಎಂದು ಫಿರ್ಯಾದಿಪರ 1 ನೇ ಸಾಕ್ಷಿ ಸ್ಯಾನಿಟರಿ ಇನ್ಸ್ಪೆಕ್ಟರು ನುಡಿದಿರುತ್ತಾರೆ. ನೋಟೀಸು ಜಾರಿಮಾಡಲು ನಾನು ಎರಡು ಮೂರು ವೇಳೆ ಅಪರಾಧಿ ಮನೆಗೆ ಹೋಗಿದ್ದೆ, ಅಪರಾಧಿ ಮನೆಯಲ್ಲಿರುತ್ತಿರಲಿಲ್ಲ. 1 ನೇ ಸಾಕ್ಷಿ ನನ್ನ ಕೂಡ ಯಾವಾಗಲೂ ಬರಲಿಲ್ಲ. ಅಪರಾಧಿಗೆ ಮನೆಯಲ್ಲಾಗಲಿ ಅಂಗಡಿಯಲ್ಲಾಗಲಿ ನೋಟೀಸು ಜಾರಿಮಾಡಲವಕಾಶವಾಗಲಿಲ್ಲ ಎಂದು ಫಿರ್ಯಾದಿಪರ 2 ನೇ ಸಾಕ್ಷಿ ಓವರ್ಸೀಯು ಹೇಳಿರುತ್ತಾನೆ. ಈ ಪರಸ್ಪರ ವಿರೋಧವಾದ ಇಬ್ಬರ ಸಾಕ್ಷ್ಯವನ್ನು ನಂಬಲಿಕ್ಕಾಗುವುದಿಲ್ಲ. ನೋಟೀಸು ತಿರಸ್ಕರಿಸಲ್ಪಟ್ಟಿತೆಂದು 2 ನೇ ಸಾಕ್ಷಿ ಮಾತ್ರ ಹೇಳುತ್ತಾನೆ ಮ|| ಮಹಮದ್ ಸೇಟರು 2 ನೇ ಸಾಕ್ಷಿ ತಮ್ಮ ಮನೆಗೆ ಬಂದಿರಲಿಲ್ಲವೆಂದೂ ಫಿರ್ಯಾದಿಪರ ಸಾಕ್ಷಿಗಳ ಹೇಳಿಕೆಯೆಲ್ಲವೂ ಶುದ್ಧ ಸುಳ್ಳೆಂದೂ ಹೇಳುತ್ತಾರೆ. ಈ ವಿಷಯಗಳನ್ನೆಲ್ಲಾ ಚೆನ್ನಾಗಿ ಪರಿಶೀಲನೆಮಾಡಿದುದರಿಂದಲೂ ಈ ಎರಡು ಸಾಕ್ಷಿಗಳ ಕಪಟವರ್ತನೆಯಿಂದಲೂ ಈ ಫಿರ್ಯಾದಿನ ಕಥೆಯೆಲ್ಲವೂ ಹೇಯವಾದ ಸುಳ್ಳೆಂದು ನಾನು ಪರಿಗಣಿಸುತ್ತೇನೆ.

ನೋಟೀಸನ್ನು ಕೊಡಬೇಕೆಂದು ಕೌನ್ಸಿಲಿನಲ್ಲಿ ತೀರ್ಮಾನವಾಗಿದ್ದಾಗ್ಗೂ ರೂಲ್ಸು ಪ್ರಕಾರ ಕೊಡಬೇಕಾದುದಿಲ್ಲವೆಂದು ಫಿರ್ಯಾದಿಪರ ಲಾಯರಾದ ಮ|| ಕೆ. ರಾಮಸ್ವಾಮಿಯವರು ವಾದಿಸಿದರು, ಅದನ್ನು ನಾನೊಪ್ಪಿಕೊಳ್ಳುವೆನಾದರೂ ಅದರಿಂದಲೇ ಈ ವಿವಾದವು ಇತ್ಯರ್ಥವಾಗತಕ್ಕುದಲ್ಲ.

ಅಪರಾಧಿಯು ಬಂಗಲೆಯಿಂದ ನಕ್ಷೆಯಲ್ಲಿ ಕಂಡ ಎರಡು ಬಚ್ಚಲುಗಳ ಮೂಲಕ ಬರುತ್ತಿದ್ದ ನೀರು ಹೊಲಸುಸಂಬಂಧವಾದುದೇ ಅಲ್ಲವೇ ಎಂಬುದು ಮುಖ್ಯಾಂಶವಾಗಿರುತ್ತದೆ.

ಡಿಸೆಂಬರು ತಾ|| 3, 6 ಮತ್ತು 7 ರಲ್ಲಿ ಎರಡು ಬಚ್ಚಲುಗಳಿಂದಲೂ ಹೊಲಸು ನೀರು ಬರುತ್ತಿದ್ದಿತೆಂದು ಸ್ಯಾನಿಟರಿ ಇನ್ಸ್ಪೆಕ್ಟರು ಸಾಕ್ಷಿಯಲ್ಲಿ ನುಡಿದಿರುತ್ತಾನೆ ಆದರೆ ತಾನು ಮಾಡಿರುವ ರಿಪೋರ್ಟಿನಲ್ಲಿ ಹೊಲಸು ಮತ್ತು ಇತರ ನೀರು ಸೇರಿ ಹರಿಯುವುದು. ಒಂದು ಬಚ್ಚಲಿನಲ್ಲಿ ಅಡಿಗೆ ಮನೆಯ ನೀರೂ ಇನ್ನೊಂದರಲ್ಲಿ ಕಕ್ಕಸಿನ ನೀರೂ ಬರುತ್ತದೆ ಎಂದು ತಿಳಿಸಿರುತ್ತಾನೆ. ಫಿರ್ಯಾದುದಾರನಾದ 1 ನೇ ಸಾಕ್ಷಿಯೇ ಹೀಗೆ ಪರಸ್ಪರ ವಿರೋಧವಾಗಿ ಹೇಳಿರುವುದರಿಂದ ಇದರ ನಿಜಾಂಶವನ್ನು ಬೇರೆ ಸಾಕ್ಷ್ಯದಿಂದ ತಿಳಿಯಬೇಕಾಗಿದೆ. ಬಚ್ಚಲುಗಳಲ್ಲಿ ಹರಿಯುವ ನೀರು ಎಂಥಾದ್ದೆಂದು 1 ನೇ ಸಾಕ್ಷಿಯು ಪರೀಕ್ಷಿಸಲಿಲ್ಲ ಮತ್ತು ಅದು ಎಂಥಾದ್ದೆಂದು ಪರೀಕ್ಷಿಸಿ ನಿರ್ಧರಿಸಲು ಅಧಿಕಾರಿಗಳಿಗೆ ಕಳುಹಿಸಿಕೊಡಲಿಲ್ಲ. ಈ 1 ನೇ ಸಾಕ್ಷಿ ಸ್ಯಾ|| ಇನ್ಸ್ಪೆಕ್ಟರು ತಾನಿಲ್ಲಿರುವ ಕಳೆದ 12 ವರ್ಷಗಳಿಂದಲೂ ಕಟ್ಟಡದ ಒಳಗೆಹೋಗಿ ಪರೀಕ್ಷಿಸಿರಲಿಲ್ಲ. ಸೆಕ್ಷನ್ನಿನಲ್ಲಿ ಹೇಳಿರುವಂತೆ ಆ ನೀರು ಹೊಲಸಾದುದೆಂದೂಹಿಸಿರುವುದಾಗಿದೆ. ಎರಡನೇ ಸಾಕ್ಷಿಯು 1 ನೇ ಸಾಕ್ಷಿ ಹೇಳಿಕೆಗೆ ಅನುಕೂಲವಾಗಿ ಹೇಳಿಲ್ಲ. ನಕ್ಷೆಯ ಫೋಟೋ ತೆಗೆದ ಮ|| ವರದಾಚಾರ್ಲು ಅಂಡ್ ಸನ್ಸ್ ರವರ ಕಡೆಯ ಸಾಕ್ಷಿಯು ಫೋಟೋದಲ್ಲಿ ಕಂಡ ದ್ವಾರಗಳಿಂದ ಯಾವ ನೀರೂ ಹರಿಯುವುದು ಕಾಣುವುದಿಲ್ಲವೆಂದು ನುಡಿದಿರುತ್ತಾನೆ. ಇದನ್ನು ಕೇಳಿ ಫಿರ್ಯಾದಿಗೆ ಭಯವುಂಟಾಯಿತು. ತಮಗೆ ವಿರೋಧಾಂಶವನ್ನು ಸರಿಪಡಿಸಿಕೊಂಡು ಹೇಳಲು ಪ್ರಯತ್ನಿಸಲಿಲ್ಲ. 5 ನೇ ಸಾಕ್ಷಿ ಬಚ್ಚಲುಗಳ ಪ್ಲಾನನ್ನು ಬರೆದ ಟ್ರಸ್ಟ್ ಬೋರ್ಡ್ ಓವರ್ಸಿಯು ಈ ಪ್ಲಾನನ್ನು ಮೊಕದ್ದಮೆ ದಾಖಲ್ಮಾಡಿದ ಕೆಲ ದಿವಸಗಳ ಮೇಲೆ ಬರೆದನೆಂದಲೂ, ಕಕ್ಕಲನೀರು ಹರಿಯುತ್ತಿದ್ದುದನ್ನು ನೋಡಿದೆನೆಂದಲೂ ಹೇಳಿರುತ್ತಾನೆ. 4 ನೆಯ ಸಾಕ್ಷಿ [illegible]—ಪ್ರತ್ಯಕ್ಷವಾಗಿ ನೋಡಿ ನಿರ್ಧರಿಸಲು ಸ್ಯಾನಿಟರಿ ಇನ್ಸ್ಪೆಕ್ಟರ ಸಮೇತ ಅಪರಾಧಿಯ ಮನೆಗೆ ಹೋಗಿದ್ದೆ. ಬಚ್ಚಲುಗಳಿಂದ ಕಕ್ಕಲನೀರು ಹರಿಯುತ್ತಿದ್ದಿತು. ಮ||

ಮಹಮ್ಮದ್ ಸೇಟರಿಗೆ ಹೇಳಿಕಳುಹಿಸಲಿಲ್ಲ ಎಂದು ಹೇಳಿರುತ್ತಾರೆ ನಾವಿಬ್ಬರೂ ತಾ|| 21 ರ ಬೆಳಿಗ್ಗೆ ಇನ್ಸ್ಪೆಕ್ಷನ್ನಿಗೆ ಹೋಗಿರುವಾಗ್ಗೆ ಹೆಲ್ತಾಫೀಸರು ಅಪರಾಧಿ ಮನೆಬಳಿ ಬಂದರು ನಾನೂ ಅಲ್ಲಿಗೆ ಬಂದೆ. ಅವರಿಗೆ ಬಚ್ಚಲುಗಳನ್ನು ನಾನು ತೋರಿಸಲಿಲ್ಲ. ಅವರೇ ನೋಡಿರಬಹುದು. ಅವರು ಪುನಃ ಅಲ್ಲಿಗೆ ಬರಲಿಲ್ಲ ಎಂದು 1 ನೇ ಸಾಕ್ಷಿ ಹೇಳಿರುತ್ತಾನೆ. 4 ನೇ ಸಾಕ್ಷಿ ಮೆಡಿಕಲ್ ಆಫೀಸರಾದ್ದರಿಂದ ಅವರು ಆ ಸ್ಥಳ ಪರೀಕ್ಷೆ ಮಾಡಿದರೆಂದು ನಂಬಬೇಕಾಗಿದೆ. ಬಚ್ಚಲಲ್ಲಿ ಕೊಳೆನೀರು ಬರುತ್ತಿದ್ದಿತೆಂದು ಎರಡು ಮೂರು ಸಲ ಹೇಳುತ್ತಾರೆ. 1 ನೇ ಸಾಕ್ಷಿಯಂತೆ ಇವರು ಕಾಂಪೌಂಡಿನೊಳಗೆ ಹೋಗಿ ಎಲ್ಲಿಂದ ನೀರು ಬರುತ್ತಿದ್ದಿತೆಂಬುದನ್ನು ಪರೀಕ್ಷಿಸಲಿಲ್ಲ ಮತ್ತು ಅದು ಎಂಥಾ ನೀರೆಂದು ಪರೀಕ್ಷಿಸಲಿಲ್ಲ ಅಲ್ಲದೆ ಅದು ಅಪಾಯಕರವಾದ ಹೊಲಸು ನೀರೆಂದು ಪರೀಕ್ಷೆಮಾಡಿಸಲು ಪ್ರಯತ್ನಿಸಲಿಲ್ಲ. 1 ನೇ ಸಾಕ್ಷಿಯ ಹೇಳಿಕೆಯನ್ನು ಹೆಲ್ತಾಫೀಸರು ಪುಷ್ಟೀಕರಿಸಲಿಲ್ಲವಾಗಿ 1 ನೇ ಸಾಕ್ಷಿಯ ಹೇಳಿಕೆಯು ಏನೂ ಪ್ರಯೋಜನಕ್ಕೆ ಬರುವುದಿಲ್ಲ. ಬಚ್ಚಲ ನೀರು ಅಪಾಯಕರವೆಂಬ ಬಗ್ಗೆ ಸರಿಯಾದ ರುಜುವಾತು ಬರಲಿಲ್ಲವಾಗಿ ಫಿರ್ಯಾದು ಊರ್ಜಿತವಾಗಲಿಕ್ಕಿಲ್ಲ. ಫಿರ್ಯಾದಿ ಪರ ಲಾಯರುಗಳು ಮೊಕದ್ದಮೆಯು 128 ನೆಯ ಸೆಕ್ಷನ್ನಿನಲ್ಲಿ ಕಂಡ ಮೊದಲನೆಯ ಮತ್ತು ಕಡೆಯ ಭಾಗಗಳಲ್ಲಿ ಹೇಳಿರುವ ಅಪರಾಧಕ್ಕೆ ಅನ್ವಯಿಸುತ್ತದೆಂದು ಯುಕ್ತಿಯಿಂದ ವಾದಿಸಿದರಾದರೂ ಅದು ಸ್ಥಿರವಾಗತಕ್ಕದ್ದಲ್ಲ. ಈ ಸೆಕ್ಷನ್ನಿನ ಕಡೆಯ ಭಾಗದಲ್ಲಿ ಅಪಾಯಕರವೆಂದು ಹೇಳಿರುವ ನೀರು ಕಕ್ಕಸ್ಸಿನ ನೀರಿಗಲ್ಲದೆ ಕೋಣೆಯ ನೀರಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ಈ ಸೆಕ್ಷನ್ನಿನ ಕಡೆಯ ಭಾಗದಲ್ಲಿ ಹೇಳಿರುವ ಅಪರಾಧವು ಈ ಮೊಕದ್ದಮೆಗೆ ಅನ್ವಯಿಸುವುದಿಲ್ಲವಾದುದರಿಂದ ಮ|| ಮಹಮ್ಮದ್ ಸೇಟರನ್ನು ಸಿ. ಪಿ. ಸಿ. 245 ನೆಯ ಸೆಕ್ಷನ್ ಪ್ರಕಾರ ದೋಷಮುಕ್ತರನ್ನಾಗಿ ಮಾಡಿರುತ್ತೇನೆ.

ಮೈಸೂರು ತಾ|| 11-6-32. (ರುಜು) ಟಿ. ವಿ. ಎ. ಈಶ್ವರನ್.

ಫಿರ್ಯಾದಿಪರ ಮ|| ಗಳಾದ ಕೆ. ರಾಮಸ್ವಾಮಿಯವರೂ ಕೆ. ಪುಟ್ಟೊರಾಯರೂ ಅಪರಾಧಿಪರ ಮ|| ಎಚ್. ಸಿ. ದಾಸಪ್ಪನವರೂ ವಕೀಲರುಗಳಾಗಿದ್ದರು.

ಆಸ್ಥಾನವಿದ್ವಾನ್ ಶ್ರೀಮಾನ್ ವೇದಮೂರ್ತಿ ಬಿ. ಎಂ. ತ್ರ್ಯಂಬಕ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯವಿಮರ್ಶೆಯೂ.

(ಲೇಖಕ—ವೇ|| ಎಚ್. ಗೋಪಾಲಕೃಷ್ಣಮಾಚಾರ್ಯ, ಕರ್ಣಾಟಕ ಪಂಡಿತರು, ಟ್ರೇನಿಂಗ್ ಕಾಲೇಜು, ಮೈಸೂರು.)

ದಿಗ್ದರ್ಶನಂ.

(ಜೂನ್ ತಾ|| 27ರ ಸಂಚಿಕೆಯಿಂದ ಮುಂದುವರಿದುದು)

ದುಷ್ಟನಿಗೆ ಬುದ್ಧಿ ಕಲಿಸೋಣವು ಶಕ್ತಿಯೆನಿಸುವುದು, ಶಿಷ್ಟರ ರಕ್ಷಣವು ಭಕ್ತಿಯೆನಿಸುವುದು, ಯಥಾರ್ಥವಾದ ತಿಳಿವಳಿಕೆಯಿಂದ ವಿಚಾರಿಸಲು ಶಕ್ತಿ ಭಕ್ತಿಗಳಿಗೆ ಭೇದವಿಲ್ಲ.

ಎಂಬ ಸೈದ್ಧಾಂತಿಕ ಸರಸ್ವತಿಯ ಮನಸೆಂದು ಮರೆಪಳಿವಾತೆಂದುಂ ಬಗೆಗೊಂಡುಂ,

ಎಂಬ ನಿಷ್ಕೃಷ್ಟವಾದ ಮಾತನ್ನು ಹೇಗೂ ಅದೇ ವೇದವಾಕ್ಯವೆಂದೂ ಮನಸ್ಸಿನಲ್ಲಿಟ್ಟುಕೊಂಡು,

ಕೌವರೆಯಿಂ, ಮಾಯಾರಾಜ್ಯ ನಿರ್ಮೂಲನಮೇ ಶಿವರಾಜ್ಯ ಸ್ಥಾಪನಮೆಂದುಮುಪ್ಪಕೆಯ್ದಿಂ, ಕಯ್ಪೊಯ್ದುಂ, ಪ್ರಭುತ್ವಮನಂಗೀಕರಿಸಿ, ಕರದಿಂದೈತಂದ ಪಟ್ಟವನೆಯನಡರ್ದು,

ಸಂಭ್ರಮದಿಂದ ಕಲಿರಾಜ್ಯ ನಿರ್ಮೂಲವೇ ಉತ್ತಮ ರಾಜ್ಯಸ್ಥಾಪನವೆಂದು ತಿಳಿದೂ, ಪ್ರತಿಜ್ಞೆ ಮಾಡಿ ರಾಜಪದವಿಯನ್ನು ಅಂಗೀಕರಿಸಿ ಕ್ರಮವಾಗಿ ಬಂದ ಸಿಂಹಾಸನವನ್ನು ಹತ್ತಿ,

ಬೊಂದುಕನುಂ, ಬದಿಗನುಂ ಅನಸೆಗನುಂ, ಅಂಬನುಂ, ಕೊರ್ಕಣಿಗನುಂ, ಚಾವಳನುಂ ನಾಣಿಲಿಯುಂ. ನುಸುಳಿಗನುಂ, ಪೆಂಕುಳಿಗನುಂ, ಬಾಗುಳಿಗನುಂ, ಪುಗಾಳ್ಯನುಂ, ನೆಲಕೆಲನುಂ, ಸಿತಗನುಂ, ಮಾಂಜಿಗನುಂ, ಕೆರುಂಬಿಗನುಂ, ಕವರಿಗನುಂ, ತೆಗಳಿಗನುಂ, ಪಿಸುಣನುಂ,

ಬೊಂದುಕನೂ, ಪಕ್ಕದಲ್ಲಿರುವವನೂ, ಅನಸೆಗನೂ, ಅಂಬನೂ, ಹೊಟ್ಟೆಬಾಕನೂ, ನೀಚನೂ, ನಾಚಿಕೆಯಿಲ್ಲದವನೂ, ನುಸುಳಿಗನೂ, ಹೆಣ್ಣಿಸ್ವಭಾವದವನೂ, ವ್ಯಾಕುಲವುಳ್ಳವನೂ, ಗರ್ವಿಷ್ಠನೂ, ಲೋಭಿಯೂ, ಪರಸ್ತ್ರೀ ಕಾಮುಕನೂ, ಮಾಂಜಿಗನೂ, ಹೊಟ್ಟೆಕಿಚ್ಚುಪಡುವವನೂ, ಸರ್ವಸ್ವಾಪಹರಣ ಮಾಡತಕ್ಕವನೂ, ನಿಂದಿಸುವವನೂ, ಚಾಡಿಕೋರನೂ,

ಮತ್ತಮಟಮಟಿಗನುಂ, ತಟಮಟಿಗನುಂ, ಕಂತೆಗನುಂ, ಬೊಂತೆಗನುಂ, ಗಳಪಿಗನುಂ, ಕೇಡಿಗನುಂ, ಹಂಗಿಗನುಂ, ಹಿಂಚಾಳಿಗನುಂ, ಹೊದಕುಳಿಯುಂ, ಪೋರ್ಕುಳಿಯು ಮುಳದುಣಿಯುಂ,

ಅಲ್ಲದೆ ಆಟಮಟಗನೂ, ಸುಳ್ಳು ಹೇಳುವನೂ, ಕಂತೆಗನೂ, ಬೊಂತೆಗನೂ, ಹರಟುವವನೂ, ಕೇಡಿಗನೂ, ಹಂಗಿಗನೂ, ಚಾಡಿ ಹೇಳತಕ್ಕವನೂ, ಹೊಡಕುಳಿಯೂ, ಹೊಡೆದಾಡುವ ಸ್ವಭಾವದವನೂ, ಅಳದುಣಿಯೂ,

ತಿರಿಕುಳಿಯು ಮಾಯ್ಕುಳಿಯುಂ, ಪಿರಿದಿನಿಯುಂ, ಪುಸಿಗನುಂ, ಉರುಟಿಗನುಂ, ಲಂಚಂಗುಳಿಯುಂ, ಕುತ್ತುಂಗುಳಿಯುಂ, ತುಡುಗುಣಿಯು ಮೆಡರ್ಕುಳಿಯುಂ, ಟಕ್ಕಿಗನುಂ, ಕಿರಿಯನುಂ, ಬಳ್ಳನುಂ, ಕೆಟ್ಟನುಮೆಂಬವರ್ ಮೊದಲಪ್ಪೆಡಗರೆಲ್ಲರ್,

ತಿರಿಯುವ ಸ್ವಭಾವದವನೂ, ಆಯ್ದು ತಿನ್ನುವ ಸ್ವಭಾವದವನೂ, ಸಿಕ್ಕಿದುದನ್ನು ತಿನ್ನುವ ಸ್ವಭಾವದವನೂ, ಸುಳ್ಳುಹೇಳುವ ಸ್ವಭಾವದವನೂ, ಉರುಟಿಗನೂ, ಲಂಚಗುಳಿಯೂ, ರೋಗಿಯೂ, ತುಡುಗುಣಿಯೂ, ಎಡರ್ಕುಳಿಯೂ. ಮೋಸಗಾರನೂ, ಕ್ಷುದ್ರನೂ, ಬಳ್ಳನೂ, ಕೆಟ್ಟವನೂ ಎಂದು ಹೇಳಿಸಿಕೊಳ್ಳುವವರೇ ಮೊದಲಾದ ಎಡಗರೆಲ್ಲರೂ,

ಅಸನ್ ಮಾಯಾ ಜನ್ಮಭೂಮಿಗಳುಂ ಆ ಮಾಯಾರಾಜ್ಯಪ್ರಜೆಗಳುಮಾಗಿ, ಎದೆಯುಡುಗಿ, ಕಡುಗಿ, ಪೆಟ್ಟುವೆರ್ಚಿ, ಉರ್ಕಿನಿಂಸೊರ್ಕಿ,

ಅಸತ್ತಾದ ಮಾಯೆಯಿಂದ ಹುಟ್ಟಿದವರೂ ಆ ಮಾಯಾ ರಾಜ್ಯದ ಪ್ರಜೆಗಳೂ ಆಗಿ ಎದೆಯುಡುಗಿ, ಉತ್ಸಾಹಪಟ್ಟು, ಪೆಟ್ಟುವೆರ್ಚಿ. ಹೆಚ್ಚಾಗಿ ಗರ್ವಪಟ್ಟು,

ಹೊಕ್ಕಿರ್ದು, ಹಾಸಂ ಹಸಗೆಡಿಸುವಂತೆಯುಂ, ಪೆಣ್ಗಳು ಗಂಡಂದಿಂಡುಗೆಡಿಸುವಂತೆಯುಂ, ಆಳ್ದರಸಂ ಮರೆಸುವಂತೆಯುಂ, ಕೆಳೆಯೊಳ್ದು ಬೆಳೆಯು ನಳಿಸುವಂತೆಯುಂ, ನೇರಿದರ ಕಣ್ಗೆ ಕತ್ತಲೆಯುಂ, ಬಾಯ್ಗೆ ಬೀಗಮುಂ, ಕೈಗೆ ಕೋಳಮುಂ, ಕಾಲ್ಗೆ ಸಂಕಲೆಯುಮಾಗಿ,

ಮಗ್ಗದ ಹೊಕ್ಕಿದ್ದು ಹಾಸನ್ನು ಶಕ್ತಿಹೀನವನ್ನಾಗಿ ಮಾಡುವಂತೆಯೂ, ಹೆಂಗಸು ಪ್ರಬಲಿಸಿ ಗಂಡಸನ್ನು ಹಿಂದಕ್ಕೆ ತಳ್ಳುವಂತೆಯೂ, ಸೇವಕನು ಪ್ರಬಲಿಸಿ ಪ್ರಭುವನ್ನು ಕಾಂತಿಹೀನನನ್ನಾಗಿ ಮಾಡುವಂತೆಯೂ, ಕೆಲಸಕ್ಕೆ ಬಾರದ ಪೈರು ಪ್ರಬಲಿಸಿ ಮುಖ್ಯವಾದ ಬೆಳೆಯನ್ನು ನಾಶಪಡಿಸುವಂತೆಯೂ, ಸರಿಯಾದ ದಾರಿಯಲ್ಲಿ ನಡೆಯತಕ್ಕವರ ಕಣ್ಣುಗಳಿಗೆ ಕತ್ತಲೆಯೂ, ಬಾಯ್ಗೆ ಬೀಗವೂ, ಕೈಗೆ ಕೋಳವೂ, ಕಾಲುಗಳಿಗೆ ಸಂಕೋಲೆಯೂ ಆಗಿ,

ಅವರಿವರೊಳ್ ಕಳ್ದುಂ, ಕವಿದುರ್ಗಂ, ತಿರಿದುಂ, ಪುಸಿಯುಂ, ಬೆಳ್ಗರೆಯಾಂತ, ಪುಳ್ಗಳೆಯ. ಉಗ್ಗಡಿಯುಂ, ರಾಗದ್ವೇಷಾಯಿಸ [illegible]

ಟಿಮುಂ, ಪಕ್ಷಪಾತದ ಆಟಂಬೋಲನುಂ ಅಪ್ಪ ಪೆಡಂಬರಿನ ಪೆಗ್ಗಳ್ಳನುಂ, ಪುಸಿದುಂ, ಪೆಸಿದುಂ, ಕೋದುಂ, ಸತ್ತಂ ಅಂಗುಲ್ಮುಟ್ಟದೆ ನುಂಗಲ್ ಅಳುರ್ದು ಬಾಯ್ಮಾಡಿ,

ಅವರಿವರಲ್ಲಿ ಕದ್ದೂ, ಅಪಹರಿಸಿಯೂ, ತಿರಿದೂ, ಹುಸಿಯಿಯೂ, ನಿಂದೆಯ ರೂಪವಾದ ದೋಷವನ್ನು ಹೊಂದಿದ. ಪೊಳ್ಳಾದ ತಲೆಯುಳ್ಳ ದೊಡ್ಡ ಕಂತೆಯೂ, ರಾಗದ್ವೇಷಗಳ ಆಶ್ರಯ ಸ್ಥಳವೂ, ಪಕ್ಷಪಾತದ ಕ್ರೀಡಾಸ್ಥಾನವೂ ಆಗಿರುವ ಅಸಹ್ಯಕರವಾದ ಅಭಿಪ್ರಾಯವುಳ್ಳ ದೊಡ್ಡ ಗ್ರಂಥಗಳನ್ನು ಕಷ್ಟದಿಂದ ರಚಿಸಿಯೂ, ಸತ್ಯವನ್ನು ಗಂಟಲಿಗೆ ತಗುಲಿಸದೇ ನುಂಗಿಹಾಕುವುದಕ್ಕೆ ಆಶೆಪಟ್ಟು ಬಾಯಿಮಾಡಿ,

ಬೋಸರಿಸುತಂ ಅರಸುತನದೊಳ್ ಅನೀತಿಯನನುಗೊಳಿಸಿ, ಪರಿಜೀವಿಕೆಯನಮರ್ಚಿ, ನೂಳೆದುಂಬಾದುರ್, ನೀತಿಗಂ ನಿರಾಶ್ರಯಮನೊದಗಿಸಿ, ಪೊಂಪುಳಿವೋಗುತಂ ಅಧರ್ಮದಿನೊಳಸೇರ್ದು, ಧರ್ಮದಿಂಪೆಡಮಗುಳ್ದು,

ಸುಳ್ಳು ಸುಳ್ಳಾಗಿ ಆದರಿಸುತ್ತಲೂ, ರಾಜ್ಯಭಾರದಲ್ಲಿ ನೀತಿಯು ಇಲ್ಲದಿರುವಂತೆಮಾಡಿ, ಪರತಂತ್ರ ಜೀವಿಕೆಯನ್ನು ಮಾಡಿಕೊಂಡು, ಅಧಿಕವಾಗಿ ನಿರೀಕ್ಷಿಸಿ, ನೀತಿವಂತರಿಗೆ ಆಶ್ರಯವನ್ನು ತಪ್ಪಿಸಿ, ರೋಮಾಂಚವನ್ನು ಹೊಂದುತ್ತ ಅಧರ್ಮದಲ್ಲಿ ಸೇರಿಕೊಂಡು, ಧರ್ಮಮಾರ್ಗದಿಂದ ಹಿಂದಿರುಗಿ,

ತನ್ನೊಳ್ ಫಲಿಸದುದಂ ಅನ್ಯರ್ಗೆ ಉಪದೇಶಿಸಿಯಾನೇಬನ್ನಣಿಯೆಂದ ರಿದುಬ್ಬೇರಿ, ವಿಲುಪ್ತಜ್ಞಪ್ತಿಶಕ್ತನಪ್ಪುದರಿಂ ಪರಮಪದದಿಂ ಜಗುಳ್ದು, ಕಡುಕೆಯ್ದು ಮಲವರಂಗೊಂಡು, ತನಗೆ ಫಲ ಕೊಡದುದನ್ನು ಇತರರಿಗೆ ಉಪದೇಶಿಸಿ ತಾನೇ ವಿಜ್ಞಾನಿಯೆಂದು ತಿಳಿದುಕೊಂಡು ಗರ್ವಪಟ್ಟು, ಚಿತ್ತನಶಕ್ತಿಯಿಲ್ಲದುದರಿಂದ ಕೈಲಾಸಲೋಕದಿಂದ ಜಾರಿಬಿದ್ದು, ತೀವ್ರವಾದ ರೀತಿಯಲ್ಲಿ ಪಶ್ಚಾತ್ತಾಪಮಾಡಿ,

ಮಿಂದುಮಡಿಯುಡುವುದರಿಂದಮುಂ, ಕೊಟುಕೊಡೆಯುಂದಮುಂ, ತನ್ನಯ ಕರ್ಮಪಾಶಂ ಪೊರಮಾರ್ದುದೆಂದುಸಿನೇರಂಬಗೆದು ಅನೇಕುದ್ಧನುಂ ಬುದ್ಧನುಂ, ದೇವನು ಮೆನುತಂ ಕೆಳದುರ್ ಎಡೆತಡೆಯಿಲ್ಲದೆ, ಜರ್ಬಿನಿಂ ಕೊರ್ಚಿ, ತನ್ನಂ ಘನಪಡಿಸಿಕೊಳಲೆಂದುಮೆಲ್ಲುಂ ಕನ್ನಮನರಸುವನೆಂದುಂ ತರಿಸಂದುಂ

ಸ್ನಾನಮಾಡಿ ಮಡಿಬಟ್ಟೆಗಳನ್ನು ಉಡುವುದರಿಂದಲೂ, ಕೊಡುವುದು ತೆಗೆದುಕೊಳ್ಳುವುದರಿಂದಲೂ, ತನ್ನ ದುಷ್ಕರ್ಮಗಳಿಂದುಂಟಾದ ಬಂಧನವು ಪರಿಹಾರವಾಯಿತೆಂದು ನಿಷ್ಕಾರಣವಾಗಿ ತಿಳಿದು ತಾನೇ ಪರಿಶುದ್ಧನೂ, ಜ್ಞಾನಿಯೂ, ದೇವರೆಂದೂ ಹೇಳುತ್ತಲೂ, ಕೋಪಿಸಿಕೊಂಡು ಎಡೆತಡೆಯಿಲ್ಲದೆ, ಜರಬಿನಿಂದ ಹೆಚ್ಚು ಮಾತನಾಡಿ, ತನ್ನಂ ದೊಡ್ಡವನನ್ನಾಗಿ ಮಾಡಿಕೊಳ್ಳಬೇಕೆಂದೂ, ಎಲ್ಲೆಲ್ಲೂ ತನಗೆ ಅನುಕೂಲವಾದ ಸನ್ನಿವೇಶವನ್ನು ಹುಡುಕುವನೆಂದೂ ನಿಶ್ಚಯಿಸಿಯೂ,

ಮತ್ತಮೊಳಕೆಯ್ದು ಆರಯ್ಯಲ್ ಇವನೊರ್ವರನಲ್ಲದಿರ್ವರನಪ್ಪುದರಿಂ, ನಡೆವಳಿ ನುಡಿವಳಿಯೊಳ್ಸಲ್ಲದೆ, ಬಂಟನೊರ್ವಂ ಇರ್ವರ್ ದಣಿಗಳಂ ಮೆಚ್ಚಿಸಲರಿದಪ್ಪುದರಿಂ, ಮಾಯೊಮಯಾವಿಯಾಗಿರುತಂ ಅವನೊಳ್ ಅವನಂತೆಯುಂ ಇವನೊಳ್ ಇವನಂತೆಯುಂ ಇರ್ದುಂ,

ಅಲ್ಲದೆ ಮನಸ್ಸಿಗೆ (ಮನಃಪೂರ್ವಕವಾಗಿ) ತೆಗೆದುಕೊಂಡು ವಿಚಾರಿಸಲು ಇವನು ಏಕರೀತಿಯಾದವನು ಅಲ್ಲದೆ ಎರಡು ರೀತಿಯವನು ಆಗಿರುವುದರಿಂದ, ನಡೆನುಡಿಗಳಲ್ಲಿ ಹೊಂದದೆ, ಒಬ್ಬ ಸೇವಕನು ಇಬ್ಬರು ಯಜಮಾನರನ್ನು ಮೆಚ್ಚಿಸುವುದು ಅಸಾಧ್ಯವಾದುದರಿಂದ ಮಾಯೆಯಿಂದಲೂ ರೋಗಗಳಿಂದಲೂ ಕೂಡಿರುತ್ತ ಅವನೆದುರಿಗೆ ಅವನಂತೆ ಹೇಳುತ್ತಲೂ ಇವನೆದುರಿಗೆ ಇವನಂತೆ ಹೇಳುತ್ತಲೂ ಇದ್ದುಕೊಂಡೂ,

ಸಿರಿತನ ಬಡತನಂಗಳ್ ಪೋಗಲುಂ ಬರಲುಂ ಅರ್ಪುವೆಂದು, ಕೀರ್ತ್ಯಕೀರ್ತಿಗಳ್ ಬಂದೊಡೆ ಅಗಲವೆಂದುಂ ಅರಿಯದೆಯುಂ,

ಸಿರಿತನ ಬಡತನಗಳು ಹೊರಟು ಹೋಗಲೂ ಬರಲೂ (ಹಣಗಾರನಾಗುವುದೂ ಬಡವನಾಗುವುದೂ) ಸಾಧ್ಯವೆಂದೂ, ಒಳ್ಳೆಯ ಹೆಸರು ಕೆಟ್ಟ ಹೆಸರುಗಳು ಬಂದುಬಿಟ್ಟರೆ ಎಂದೂ ಬಿಟ್ಟುಹೋಗುವುದಿಲ್ಲವೆಂದೂ ತಿಳಿಯದೆಯೂ,

ಸಶೇಷ.

ನಾರಿನವರ್ಮಂತೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರ ತರಿಸಿ ಕೊಳ್ಳಿರಿ. ಕಿ. ೧| ರೂ ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ವಿರಜ.

12 M. C

೧೯೩೨ ನೆಯ ಇಸವಿ ಜುಲೈ ತಾ|| ೧೧ ರಿಂದ ಜುಲೈ ತಾ|| ೧೭ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ ಅಂಗಿರಸನಾಮಸಂವತ್ಸರದ ಆಷಾಢ ಶುದ್ಧ ಅಷ್ಟಮಿಯಿಂದ ಆಷಾಢ ಶುದ್ಧ ಪೌರ್ಣಮಿ ವರೆಗಿನ ಪಂಚಾಂಗ

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಿಥುನ ಕಾ
11	ಸೋಮ	ಅಷ್ಟ	29-11	ಚಿತ್ತ	49-26	28
12	[1] ಮಂಗಳ	ನವ	23-3	ಸ್ವಾತಿ	45-13	29
13	ಬುಧ	ದಶ	16-49	ವಿಶಾ	40-58	30
14	[2] ಗುರು	ಏಕಾ	10-44	ಅನೂ	37-0	31
15	[3] ಶುಕ್ರ	ದ್ವಾ-ತ್ರ	4-59-54-21	ಜ್ಯೇಷ್ಠ	54-21	32
16	ಶನಿ	ಚತು	54-54	ಮೂಲ	30-34	1
17	[4] ಭಾನು	ಪೌರ್ಣ	50-56	ಪೂಷಾ	28-17	2

(1) ಮಳೆನಕ್ಷತ್ರ ಪುನರ್ವಸು ೪ ನೆಯ ಪಾದ. (2) ಸರ್ವತ್ರ ಪ್ರಥಮೈಕಾದಶೀ. (3) ಮಳೆನಕ್ಷತ್ರ ಪುನರ್ವಸು ೪ ನೆಯ ಪಾದ. (4) ಮಹಮ್ಮದ್ ಹುಟ್ಟಿದದಿವಸ.

ಮೈಸೂರು: [illegible]

REG. N. O. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ಕಜ್ಜನಕೃತ ಮೋಹರಾಜೇಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾಧ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ತಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸ್ ೧೯೩೨ ನೆಯ ಇಸವಿ ಜುಲೈ ತಾರೀಖು ೧೮ ನೆಯ ಸೋಮವಾರ [ಸಂಚಿಕೆ ೨೯

MYSORE SANDALWOOD OIL
Distilled in
GOVERNMENT FACTORIES
GUARANTEED B.P.P.J., & AM 4. P. STANDARDS.
PROVIDES
Excellent Base for the manufacture of Soaps, Perfumes, and other Toilet preparations of the Highest quality.
USED ALL THE WORLD OVER.
BUY A BOTTLE TO-DAY.
Available in Sealed Aluminium Bottles.
MYSORE GOVERNMENT SANDALWOOD OIL FACTORY,
BANGALORE.
8 [50—3]

ಲಗ್ನಪತ್ರಿಕೆಗಳ
ಮುದ್ರಣಕ್ರಮ.

ನಮ್ಮ ಕರ್ರ್ಇ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲಪ್ತಕಾಲದಲ್ಲ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ
ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿಬಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರನಜನನ	೦—೮—೦	೦—೧೩—೦
ಸಟೀಕ ಶರಣ್ಣಟೆಕವನ್ನಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಡಾಕ್ಟರ್ ಜೀ. ಬೀ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು

(Registerd Trade Mark)

ಗಳಾಗಿ, ಯೋಗ್ಯತಾಪತ್ರಗಳನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—ತಲೆ ಶೂಲೆ, ಒಂದುತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ಸರ್ವ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂಗು ಬೆಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕಂಚಿಯಿಂದ [illegible] ಗಿಸುತ್ತಾರೆ. ಮಾದರಿ ನೀಗೆ ಪುಡಿಯನ್ನು ಕಳುಹಿಸಲಾಗುವದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. [illegible]

[illegible]

ವಿಳಾಸ—ಗುರುಮೂರ್ತಿ ಅಂಡ್ ಕಂಪೆನಿ [illegible]
[೫—೫] [illegible]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮ [ಅದೇನು ನೋಡೋಣ
ವಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ
ರಜಿ] ವಜ್ರಾಂಗ ಸುಂದರಪಾಕದ. [ಸ್ಟರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದಾಶನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು, ನಿದ್ದೆ ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ. ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ಶರೀರ ತರುಣರಂತೆ ಕಾಂತಿಯುಕ್ತ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣಿ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇತ್ಯಾದಿಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ಗೋಲಿಯ ಒಂದು ಡಬ್ಬಿಗೆ ೫| ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳ್ಳೇಸು ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಟ್ಟಿನ ಹೊತ್ತು ಅಸುವದು ಅನಿಯಮಿತತನ, ಹೆಚ್ಚು ಕಡಿಮೆ ಗಂಟುಗಂಟು ಮುಟ್ಟಿನ ಹೊತ್ತು ಆಗೋಣ, ಮುಟ್ಟಿನ ಹೊತ್ತು ಆಗುವ ಕಾಲಕ್ಕೆ ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ ಪಿತ್ತಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತದೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ಗೋಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ಕಡಿಮೆ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋದಾಗುವದಿಲ್ಲ ಮತ್ತು ಆದಕಾರಣ ಅವರಿಗೆ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಜೆತನವೋ, ಇಂಥ ಬೇರೆ ಕಾರಣದಿಂದ ಸಂತತಿ ಇಚ್ಛಾ ಯಾರಿಗೆ ಇಲ್ಲದಿರುತ್ತದೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. ಶರೀರದಲ್ಲಿಯೂ ಸಂಸಾರ ಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆ ವೇಳೆಗೆ ಮುಟ್ಟಿನ ಹೊತ್ತು ಆಸುವದು ಸುರು ಇದ್ದು ಗರ್ಭಧಾರಣ ಬಂದು ಬೀಳುವದು. ಹಿಂದಿನಂತೆ ಸಿನುವರೂ ಅದರೂ ಸುರು ಆಸುವದಿಲ್ಲ ಹೀಗೆ ಖಾತ್ರಿ ಅದೆ. ಪೂರ್ಣವಿಚಾರ ಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ ಒಂದು ಡಬ್ಬಿಗೆ ೩ ರೂ. ಟ. ಖ. ೮ ಆಣೆ, ಮತ್ತು [illegible] ೦ ನೇ ದಿವಸ ೬೦ [illegible] ಕಳುಹಿಸುವೆವು. [illegible] ದಿವಸದಿಂದ ಮುಂಚಿತ ೧, ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ ರಾತ್ರಿ [illegible] ಗುಳಿಗೆ [illegible] ತೆಗೆದು [illegible]. [illegible]
[೫—೫]

ಪತ್ರಾ ವಿಳಾಸ:—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ವಿರಜ ಎಂ. ಎಸ್. ಎಂ.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಜುಲೈ ತಾ|| ೧೮ ನೆಯ ಸೋಮವಾರ.

INDIAN POLITICAL SITUATION

The well considered attitude of the Liberals towords the altered procedure laid down by the Secretary of State has created a new situation which might lead to practically a rupture in the negotiations between the British and Indian representatives. It is a great pity that the British Government which had hitherto proceeded on the basis of joint deliberation and mutual agreement before submission of proposals to Parliament now want India only to assist them as and when they seek their views at the stage of Joint Select Committee sittings. The time when India could be satisfied with boons dropped from the high altitude which the British had thought themselves to be in to a subject race is long past. Not even the most moderate of moderates feels that it is a favour that he is claiming at the hands of the British. He claims it as a matter of birth-right and the British have come to realise the force of that contention. The world currents are India's side and it is too late in the day for the British to adopt any other attitude. Though there are sharp differences as to the result of the two sessions of the Round Table Conference, we yet believe that they had generated a lot of good will and understanding which had enhanced the mutual regard and esteem. It was a wonderful experiment and was sure to lead to succese in spite of other difficulties. We have a shrewd suspicion that the Indians were more than a match to the British and their case was so intrinsically just and righteous that it would have been impossible for the British delegates to dissent from many of the liberalising proposals which would go to make up the future constitution, without stultifying themselves in the eyes of the modern world. As the times of India has characterised the later pronouncements of Sir Samuel Hoare, it is only deepening the fog all the more and has not helped in the slightest to clear the apprehensions of the Indian delegates. The resignations of Sir T. V. Sapru and Mr. Jayaker followed by others are the only effective answers which the delegates could give. We are glad that the Liberals have taken up the right course. The various modificasions in the procedure since the appointment of the Simon Commission are simply bewildering. The attack against the constitution of Simon Commission resulted in the appointment of an Indian Committee, and the altered procedure in the conduct of their enquiry. Then came the constitution of the Round Table Conference and its procedure. Now is this new procedure reverting practically to what would have well gone on with Simon Commission only. We can only say that the reactionary elements are getting the upper hand in British politics and it would bode no good whatever to the British. Indians have patience but in the words of Shakespeare "Patience is a tired mare." It might start kicking after its patience is exhausted. We only hope that the British will not adopt such a shortsighted policy and make India lose its patience, and that their statesmanship will rise to the occasion.

ಭಾರತರಾಜಕೀಯ ಪರಿಸ್ಥಿತಿ.

ಭಾರತ ರಾಜ್ಯಾಂಗ ರಚನಾಕ್ರಮದಲ್ಲಿ ಭಾರತ ಮಂತ್ರಿಗಳು ಹೊಸದಾಗಿ ಮಾಡಿರುವ ಬದಲಾವಣೆಯಿಂದ ಲಿಬರಲ್ ಪಕ್ಷದವರಿಗುಂಟಾಗಿರುವ ವಿಚಾರ ಪೂರ್ವಕವಾದ ಮನೋಭಾವವು ಬ್ರಿಟಿಷ್ ಮತ್ತು ಭಾರತ ಪ್ರತಿನಿಧಿಗಳ ಮಧ್ಯೆ ನಡೆಯುತ್ತಿರುವ ಒಡಂಬಡಿಕೆಯ ಸಂಧಾನವನ್ನು ಮುರಿಯುವ ಪರಿಸ್ಥಿತಿಯನ್ನುಂಟುಮಾಡಿದೆ. ರಾಜ್ಯಾಂಗ ರಚನೆಯ ವಿಚಾರವಾಗಿ ಬ್ರಿಟಿಷ್ ಮತ್ತು ಭಾರತ ಪ್ರತಿನಿಧಿಗಳು ಸಮಾನಗೌರವದಿಂದ ಕೂಡಿ ಗೊತ್ತುಮಾಡಿದ ಸೂಚನೆಗಳನ್ನು ಪಾರ್ಲಿಮೆಂಟಿಗೆ ಕಳುಹಿಸಬೇಕೆಂದು ಏರ್ಪಡಿಸಿದ್ದ ಬ್ರಿಟಿಷ್ ಪ್ರಭುತ್ವವು ಜಾಯಿಂಟ್ ಸೆಲೆಕ್ಟ್ ಕಮಿಟಿಯ ಸಮಾವೇಶದ ವೇಳೆಯಲ್ಲಿ ತನಗುಂಟಾಗಿದ್ದ ಅಭಿಪ್ರಾಯದಲ್ಲಿ ಮಾತ್ರ ಭಾರತದೇಶವು ಸಹಕರಿಸಬೇಕೆಂದು ಈಗ ಕೋರುವುದು ಬಹಳ ವಿಷಾದಕರವು. ಅಧೀನ ಪ್ರಜೆಗಳಾದ ಭಾರತೀಯರು ತಮ್ಮ ವರಪ್ರಸಾದದಿಂದ ಸಂತೃಪ್ತರಾಗುವರೆಂದು ಬ್ರಿಟಿಷರವರು ತಮಗೆ ತಾವೇ ಮಾಡಿಕೊಂಡಿದ್ದ ಯೋಚನೆಯು ಈಗ ಸ್ವಪ್ನಪ್ರಾಯವಾಗಿದೆ. ಸೌಮ್ಯಪಕ್ಷದವರಲ್ಲಿ ಅತ್ಯಂತ ಸೌಮ್ಯನಾದವನು ಸಹ ತನಗೆ ಜನ್ಮಸಿದ್ಧವಾದ ಹಕ್ಕನ್ನು ಬ್ರಿಟಿಷರಿಂದ ಪಡೆಯಲು ಅಪೇಕ್ಷಿಸುತ್ತಾನಲ್ಲದೆ ಅವರಿಂದ ಭಿಕ್ಷೆ ಬೇಡಲಿಚ್ಛಿಸುವುದಿಲ್ಲವೆಂದು ಬ್ರಿಟಿಷರವರು ಚೆನ್ನಾಗಿ ಅರಿತುಕೊಂಡಿರುವರು. ಪ್ರಪಂಚದ ಅಭಿಪ್ರಾಯವೆಲ್ಲವೂ ಭಾರತೀಯರ ಕಡೆಗೊಲಿದಿರುವುದರಿಂದ ಬ್ರಿಟಿಷರವರು ಯಾವ ವಕ್ರಮಾರ್ಗವನ್ನೂ ಅನುಸರಿಸಲು ಸಾಧ್ಯವಿಲ್ಲ. ಈವರೆಗೆ ನಡೆದಿರುವ ರೌಂಡು ಟೇಬಲು ಕಾನ್ಫರೆನ್ಸಿನ ಎರಡು ಸಭೆಗಳ ಫಲಿತಾಂಶದಲ್ಲಿ ಸೂಕ್ಷ್ಮ ವ್ಯತ್ಯಾಸಗಳಿರುವನಾದರೂ, ಉಭಯ ದೇಶೀಯರಲ್ಲಿ ಪರಸ್ಪರ ಪ್ರೀತಿ ವಿಶ್ವಾಸಗಳು ಹುಟ್ಟಿ ಅವುಗಳಿಂದ ಗೌರವ ಪ್ರತಿಷ್ಠೆಗಳು ಹೆಚ್ಚಿರುತ್ತವೆಂದು ನಂಬುತ್ತೇವೆ. ಉಭಯರ ಸಮ್ಮೇಳನವು ಆಶ್ಚರ್ಯಕರವಾದ ಪರೀಕ್ಷೆಯನ್ನು ಮಾಡುವುದಾಗಿದ್ದಿತಲ್ಲದೆ ಇತರ ತೊಂದರೆಗಳಿದ್ದಾಗ್ಯೂ ಫಲಪ್ರದವಾಗಿದ್ದಿತು. ಭಾರತೀಯರು ಬ್ರಿಟಿಷರಿಗೆ ಅಸಮಾನಸ್ಕಂದರಾಗಿಲ್ಲ ಮತ್ತು ಅವರ ಕೋರಿಕೆಯು, ಪ್ರಪಂಚದ ಪರಿಹಾಸಕ್ಕೆ ಗುರಿಮಾಡದೇನೆ ರಾಜ್ಯಾಂಗ ರಚನೆಯನ್ನು ಸಂಪೂರ್ಣಗೊಳಿಸಲು ಸುಲಭ ಸಾಧ್ಯವಾದ ಸಲಹೆಗಳನ್ನು ಬ್ರಿಟಿಷ್ ಪ್ರತಿನಿಧಿಗಳು ತಿರಸ್ಕರಿಸುವಷ್ಟು ಅಸಾಧ್ಯವಾಗಿಯೂ ಅನ್ಯಾಯವಾಗಿಯೂ ಇರುವುದಿಲ್ಲ. ಭಾರತ ಮಂತ್ರಿಗಳಾದ ಸರ್ ಸ್ಯಾಮ್ಯುಯೆಲ್ ಹೋರ ರವರ ಹೊಸ ಪ್ರಕಟಣೆಯು ರಾಜಕೀಯ ಮಂಜನ್ನು ಮತ್ತಷ್ಟು ಹೆಚ್ಚಾಗಿ ಹೆಪ್ಪುಗಟ್ಟಿಸುವುದಲ್ಲದೆ ಭಾರತ ಪ್ರತಿನಿಧಿಗಳ ಶಂಕೆಯನ್ನು ಪರಿಹರಿಸುವುದಾಗಿಲ್ಲ. ಇದಕ್ಕೆ ಸರ್ ತೇಜ್ ಬಹದ್ದೂರ್ ಸಪ್ರು ಮತ್ತು ಮ|| ಜಯಕರ್ ಪ್ರಭೃತಿಗಳು ತಮ್ಮ ಪ್ರಾತಿನಿಧ್ಯಕ್ಕೆ ರಾಜೀನಾಮೆಯನ್ನು ಕೊಟ್ಟಿರುವುದೇ ನಿದರ್ಶನವಾಗಿದೆ. ಉದಾರ ಪಕ್ಷದವರು ಈ ಉಚಿತ ಮಾರ್ಗವನ್ನವಲಂಬಿಸಿರುವುದು ಸಂತೋಷಕರವು. ಸೈಮನ್ ಕಮಿಷನ್ನು ನಿಯಾಮಕವಾದಾರಭ್ಯ ರಾಜ್ಯಾಂಗ ರಚನಾಕ್ರಮದಲ್ಲಿ ಅನೇಕ ವ್ಯತ್ಯಾಸಗಳಾಗುತ್ತಿರುವುದು ಘಾಬರಿಯನ್ನುಂಟುಮಾಡತಕ್ಕುದಾಗಿದೆ. ಸೈಮನ್ ಕಮಿಷನ್ ರಚನೆಯನ್ನು ಪ್ರತಿಘಟಿಸಿದುದರ ಫಲವಾಗಿ ಭಾರತ ಕಮಿಟಿಯು ನಿಯಮಿಸಲ್ಪಟ್ಟು ಅವುಗಳ ವಿಚಾರಣೆಯ ಕ್ರಮವು ವ್ಯತ್ಯಾಸಗೊಳಿಸಲ್ಪಟ್ಟಿತು. ತರುವಾಯ ರೌಂಡುಟೇಬಲು ಸಭೆಯುತ್ಪನ್ನವಾಗಿ ಅದರ ಕಾರ್ಯಕ್ರಮವು ಜರುಗಿತು. ಸೈಮನ್ ಕಮಿಷನ್ನಿನವರಿಂದಲೇ ನಿರ್ವಹಿಸಬಹುದಾಗಿದ್ದ ಕಾರ್ಯಕ್ರಮವು ಈಗ ಹೊಸದಾಗಿ ಅನುಸರಿಸಲ್ಪಟ್ಟದಾಗಿದೆ. ಬ್ರಿಟಿಷರ ರಾಜಕೀಯದಲ್ಲಿ ಪ್ರತೀಕಾರದವರ ಕೈಮೇಲಾಗಿರುವುದು. ಇದರಿಂದ ಬ್ರಿಟಿಷರಿಗೆ ಹಾನಿಯಾಗುವುದಲ್ಲದೆ ಮೇಲಾಗುವಂತಿಲ್ಲ. ಭಾರತೀಯರಿಗೆ ಶಾಂತಿಯು ಹೆಚ್ಚು, ಆದರೆ "ಶಾಂತಿಯು ದಣಿದ ಹೆಣ್ಣು ಕುದುರೆಯಂತಿದೆ" ಎಂದು ಷೇಕ್ಸ್ಪಿಯರ್ ಮಹಾಕವಿಯು ಹೇಳಿರುತ್ತಾನೆ. ಅಂದರೆ ಹೆಣ್ಣು ಕುದುರೆಯು ಶಾಂತವಾಗಿದೆಯೆಂದು ದಣಿಸಿದರೆ ಒದೆಯುವುದಕ್ಕುಪಕ್ರಮಿಸುವುದು. ಆದುದರಿಂದ ಬ್ರಿಟಿಷರವರು ಅಂತಹ ವಿಚಾರಶೂನ್ಯವಾದ ನೀತಿಯನ್ನನುಸರಿಸಿ ಭಾರತ ದೇಶವು ತನ್ನ ಶಾಂತಿಯನ್ನು ಬಿಡುವ ಹಾಗೆ ಮಾಡದೆ ಕಾಲಾನುಗುಣವಾಗಿ ವರ್ತಿಸುವರೆಂದು ನಿರೀಕ್ಷಿಸುತ್ತೇವೆ.

ತಾರಾಸಿಂಗರು ೮ ಘಂಟೆಯಲ್ಲಿ ಹೊರಟು ಹೋಗಬೇಕು

ಪ್ರತ್ಯೇಕ ಆರ್ಡಿನೆನ್ಸಿನ ಪ್ರಕಾರ ಸಿಕ್ಕರ ನಾಯಕರಾದ ಮಾಸ್ಟರ್ ತಾರಾಸಿಂಗರವರು ಲಾಹೋರು, ಅಮೃತಸರ, ಲ್ಯಾಲಾಪುರ ಡಿಸ್ಟ್ರಿಕ್ಟುಗಳನ್ನು ಬಿಟ್ಟು ೮ ಘಂಟೆಯೊಳಗೆ ಹೊರಟುಹೋಗಬೇಕಾಗಿ ಆಜ್ಞೆಯಾಗಿದೆ.

ಪ್ರೆಸಿಡೆಂಟ್ ಹೂವರ್‌ರವರ ಮೇಲ್ಪಂಕ್ತಿ

ಖರ್ಚನ್ನು ಕಡಿಮೆಮಾಡುವ ಉದ್ಯಮಕ್ಕೆ ಅಮೇರಿಕೆಯ ಅಧ್ಯಕ್ಷರಾದ ಹೂವರವರು ಮಾರ್ಗದರ್ಶಕರಾಗಿರುತ್ತಾರೆ. ಇವರು ತಮ್ಮ ಸಂಬಳದಲ್ಲಿ 75 ಸಾವಿರ ಡಾಲರಿನಿಂದ 60 ಸಾವಿರ ಡಾಲರಿಗೆ ಕಡಿಮೆಮಾಡಿಕೊಂಡಿರುವರು. ಮಂತ್ರಿ ವರ್ಗದವರು 15,000 ಡಾಲರನ್ನು 12750 ಡಾಲರಿಗಿಳಿಸಿಕೊಂಡಿರುವರು.

ಡಾ|| ರವೀಂದ್ರರಿಗೆ ಉದ್ಯೋಗ ಪ್ರಾಪ್ತಿ

ಕಲಕತ್ತಾ ವಿಶ್ವವಿದ್ಯಾನಿಲಯದ ಸಿಂಡಿಕೇಟಿನವರು ಡಾ|| ರವೀಂದ್ರನಾಥ ಟಾಗೂರರವರನ್ನು ವಿಶ್ವವಿದ್ಯಾನಿಲಯದಲ್ಲಿ ಬಂಗಾಳೀ ಭಾಷಾ ಪಂಡಿತರುದ್ಯೋಗವನ್ನು ಅಂಗೀಕರಿಸಬೇಕೆಂದೂ, ಇದಕ್ಕಾಗಿ ಒಂದು ವರ್ಷಕ್ಕೆ 85,000 ರೂ. ಗಳ ಗೌರವ ವೇತನವನ್ನು ಕೊಡುತ್ತೇವೆಂದೂ ಕೇಳಿದ್ದುದರಮೇಲೆ ರವೀಂದ್ರರು ಅಂಗೀಕರಿಸಿರುವುದಾಗಿ ತಿಳಿಯಬಂದಿದೆ.

ಲೇಬರು ಪಕ್ಷದ ಪ್ರತಿನಿಧಿಗಳು ಇಂಡ್ಯಾಕ್ಕೆ ಬರುವರು

ಭಾರತ ದೇಶದ ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡಿ ತಿಳಿದುಕೊಳ್ಳುವುದಕ್ಕಾಗಿ ಬ್ರಿಟಿಷ್ ಲೇಬರು ಪಕ್ಷದ ಪ್ರತಿನಿಧಿಗಳು ಕೆಲವರನ್ನು ಇಂಡ್ಯಾಕ್ಕೆ ಕಳುಹಿಸಲು ನಿರ್ಧರಿಸಿರುವುದರಿಂದ ಅವರುಗಳಿಗೆ ತಗಲುವ ಖರ್ಚಿಗಾಗಿ 20,400 ರೂಪಾಯಿಗಳನ್ನು ಬ್ರಿಟನ್ನಿನಲ್ಲಿರುವ ಶ್ರೀಮಂತ ಭಾರತೀಯರು ಕೊಡಬೇಕೆಂದು ಕೋರಲ್ಪಟ್ಟಿರುತ್ತಾರೆ.

ಮಿೀರಾಬೇನರ ಚಪ್ರಾಪ್ರವೇಶ

ಮಿೀರಾಬೇನರು ಶರಣ ಡಿ|| ಚಪ್ರಾದಲ್ಲಿ ಅಸ್ವಸ್ಥರಾಗಿರುವ ಬಾಬು ರಾಜೇಂದ್ರ ಪ್ರಸಾದರವರನ್ನು ನೋಡುವುದಕ್ಕಾಗಿ ಕಳೆದ ಗುರುವಾರ ಚಪ್ರಾಕ್ಕೆ ಬಂದಿದ್ದರು. ಶರಣ ಡಿಸ್ಟ್ರಿಕ್ಟು ಮೆಜಿಸ್ಟ್ರೇಟರು ಆರ್ಡಿನೆನ್ಸಿನ ಪ್ರಕಾರ ಮಿೀರಾಬೇನರು 12 ಘಂಟೆಯ ಕಾಲದೊಳಗೆ ಶರಣ ಡಿಸ್ಟ್ರಿಕ್ಟನ್ನು ಬಿಟ್ಟು ಹೋಗಬೇಕೆಂದೂ ಅಲ್ಲಿಗೆ ಮರಳಿ 1 ತಿಂಗಳ ವರೆಗೆ ಬರಕೂಡದೆಂದೂ ಆಜ್ಞೆ ಮಾಡಿದರು.

ಇರ್ವಿನ್‌ರವರು ವಿದ್ಯಾಶಾಖಾ ಮಂತ್ರಿಗಳಾದರು

ಲಾರ್ಡ್ ಇರ್ವಿನ್‌ರವರು ಬ್ರಿಟನ್ ವಿದ್ಯಾಶಾಖೆಯ ಮಂತ್ರಿಯಾಗಿ ನಿಯಮಿಸಲ್ಪಟ್ಟಿರುತ್ತಾರೆ. ಇದಕ್ಕೆ ಮೊದಲು ಮಂತ್ರಿಯಾಗಿದ್ದು ಗತಿಸಿದ ಸರ್ ಡೊನಾಲ್ಡ್ ಮಕ್ಲೀನ್‌ರವರು ಲಿಬರಲ್ ಪಕ್ಷಕ್ಕೆ ಸೇರಿದವರಾಗಿದ್ದುದರಿಂದ ಇವರ ಸ್ಥಾನಕ್ಕೆ ಅದೇ ಪಕ್ಷದವರು ನಿಯಮಿಸಲ್ಪಡದೆ ಕನ್ಸರ್ವೇಟಿವ್ ಪಕ್ಷಕ್ಕೆ ಸೇರಿದ ಇರ್ವಿನ್‌ರವರು ನಿಯಮಿತರಾಗಿರುವುದರಿಂದ ಲಿಬರಲ್ ಪಕ್ಷದವರಿಗೆ ಅಸಮಾಧಾನವುಂಟಾಗಿದೆ.

ರವೀಂದ್ರರಿಗೆ ಕಲಕತ್ತಾ ವಿಶ್ವವಿದ್ಯಾನಿಲಯದ ಸನ್ಮಾನ

ಕವೀಂದ್ರರಾದ ರವೀಂದ್ರನಾಥಟಾಗೂರ್‌ರವರ ಸಪ್ತತಿ ಅಂದರೆ 70 ನೆಯ ವರ್ಷದ ವರ್ಧಂತ್ಯುತ್ಸವ ಸಂದರ್ಭದಲ್ಲಿ ಕಲಕತ್ತಾ ವಿಶ್ವವಿದ್ಯಾನಿಲಯದವರು ರವೀಂದ್ರರಿಗೆ ಸನ್ಮಾನಪತ್ರವನ್ನೊಪ್ಪಿಸಬೇಕೆಂದಿದ್ದರು, ಆದರೆ ಅವರಿಗೆ ಆ ವೇಳೆಯಲ್ಲಿ ಅನಾರೋಗ್ಯವಾಗಿದ್ದುದರಿಂದ ಬರುವ ಆಗಸ್ಟ್ ತಾ|| 6 ರಲ್ಲಿ ಒಪ್ಪಿಸಲು ಗೊತ್ತುಮಾಡಿ ಆ ಸಮಯಕ್ಕೆ ತಕ್ಕ ಏರ್ಪಾಟು ಮಾಡಲ್ಪಡುತ್ತಿದೆ.

ಕಾಮಾಖ್ಯ ಪ್ರಸಾದರ ಕುಟುಂಬಕ್ಕೆ ಪಿನ್ಷನ್

ಮುನ್ಷಿಗಂಜ್ ಸ್ಪೆಷಲ್ ಮೆಜಿಸ್ಟ್ರೇಟರಾಗಿದ್ದ ಕಾಮಾಖ್ಯ ಪ್ರಸಾದರವರು ಢಾಕಾದಲ್ಲಿ ಡಿ|| ಮೆಜಿಸ್ಟ್ರೇಟರವರ ಮನೆಯೊಳಗೆ ನಿದ್ರಿಸುತ್ತಿದ್ದಾಗ್ಗೆ ಕೊಲ್ಲಲ್ಪಟ್ಟರಷ್ಟೆ. ಇವರ ಶ್ರಾದ್ಧದ ವೆಚ್ಚಕ್ಕಾಗಿ ತತ್‌ಕ್ಷಣ 1000 ರೂಪಾಯಿಗಳನ್ನು ಕೊಡಬೇಕೆಂದು ಬಂಗಾಳಾ ಪ್ರಭುತ್ವದವರು ಅಪ್ಪಣೆಮಾಡಿರುವುದಾಗಿಯೂ, ಕಾಮಾಖ್ಯರ ಪತ್ನಿಗೂ ಇತರ ಆಶ್ರಿತರಿಗೂ ಪಿಂಚನ್ ಕೊಡುವ ಆಲೋಚನೆಯಲ್ಲಿರುವುದಾಗಿಯೂ ತಿಳಿಯಬರುತ್ತದೆ.

ಇಂಗ್ಲೆಂಡ್-ಐರ್ಲೆಂಡ್ ರಾಜಿ ವಿಫಲವಾಯ್ತು

ಐರ್ಲೆಂಡು ಪ್ರಭುತ್ವಾಧ್ಯಕ್ಷರಾದ ಡಿವೆಲಿರಾಯವರ್ ಕಾರ್ಯದರ್ಶಿಯೊಡನೆ ಲಂಡನ್ ನಗರಕ್ಕೆ ಬ್ರಿಟನ್ ಪ್ರಧಾನ ಮಂತ್ರಿಗಳಿಂದ ಆಹ್ವಾನಿಸಲ್ಪಟ್ಟಿದ್ದರು. ಡಿವೆಲಿರಾಯವರಿಗೂ ಪ್ರಧಾನ ಮಂತ್ರಿಗಳಿಗೂ ಐರ್ಲೆಂಡ್ ಪದಾರ್ಥಗಳ ಮೇಲೆ ಬ್ರಿಟನ್ನವರು ವಿಧಿಸಿರುವ ಸುಂಕದ ವಿಚಾರವಾಗಿ ಸಂಭಾಷಣೆಯು ನಡೆದು ಭೂ ಕಪ್ಪದ ವಿಚಾರವು ಮೊದಲು ಇತ್ಯರ್ಥವಾಗಬೇಕೆಂದು ಪ್ರಧಾನ ಮಂತ್ರಿಗಳು ಹೇಳಿದುದರ ಮೇಲೆ ಡಿವೆಲಿರಾಯವರು ಅದಕ್ಕೊಡಂಬಡದೆ ಸ್ವದೇಶಕ್ಕೆ ಹಿಂದಿರುಗಿದರು.

ಉದಯಪುರದಲ್ಲಿ ದಂಗೆ

ರಜಪುಟಾನದಲ್ಲಿ ಒಂದು ಸಣ್ಣ ಆಶ್ರಯ ಸಂಸ್ಥಾನವಾಗಿರುವ ಉದಯಪುರದಲ್ಲಿ ಒಂದು ಹೊಸ ತೆರಿಗೆಯು ಪ್ರಜಾಭಿಪ್ರಾಯವಿಲ್ಲದೆ ವಿಧಿಸಲ್ಪಟ್ಟಿತು. ಇದು ತಮಗೆ ಭಾರವಾಗಿರುವುದೆಂದು ಕೋಪೋದ್ರೇಕರಾಗಿ ಅರಮನೆಗೆ ಮುತ್ತಿಗೆ ಹಾಕುವ ಉದ್ದೇಶದಿಂದಲೋ ಇದನ್ನು ತಪ್ಪಿಸಬೇಕೆಂದು ರಾಜನಲ್ಲಿ ಮೊರೆಯಿಟ್ಟುಕೊಳ್ಳಬೇಕೆಂಬ ಅಭಿಪ್ರಾಯದಿಂದಲೋ ಅರಮನೆ ಬಳಿ ಪ್ರಜೆಗಳು ಗುಂಪುಕಟ್ಟಿಕೊಂಡು ಹೋಗಿರಲು ಪೊಲೀಸಿನವರೂ ಸೈನಿಕರೂ ಅವರನ್ನು ಚದರಿಸುವ ಪ್ರಯತ್ನದಲ್ಲಿ ಪರಸ್ಪರ ಬಡಿದಾಟಗಳು ನಡೆದುದುರ ಮೇಲೆ ಸೈನಿಕರು ಗುಂಡುಗಳನ್ನಾರಿಸಿದರು. ಜನರು ಚದರ ಹೋಗುವಾಗ್ಗೆ ಕೆಲರು ನೀರಿನಲ್ಲಿ ಬಿದ್ದು ಸತ್ತರು ಮತ್ತೆ ಕೆಲರು ಗುಂಡಿನೇಟು ತಿಂದು ಮಡಿದರು, ಅನೇಕರಿಗೆ ಗಾಯಗಳಾಗಿವೆ.

ಪ್ರದ್ಯೋತ ಕುಮಾರನ ತಾಯಿಯ ಬಿನ್ನಹ

ಡಗ್ಲಾಸ್‌ರವರನ್ನು ಕೊಂದುದಕ್ಕಾಗಿ ಮರಣದಂಡನೆಗೆ ಗುರಿಯಾಗಿರುವ ಪ್ರದ್ಯೋತ ಕುಮಾರನನ್ನು ನೋಡಲು ಅವನ ಬಂಧುಮಿತ್ರರು ಕಾರಾಗೃಹಕ್ಕೆ ಬಿಡಲ್ಪಡುತ್ತಿಲ್ಲ. ಮರಣ ದಂಡನೆಗೆ ಗುರಿಯಾದವರನ್ನು ಅವರ ಬಂಧುವರ್ಗದವರು ನೋಡಲಿಕ್ಕೆ ಕಾರಾಗೃಹದ ಮ್ಯಾನ್ಯುಯಲ್ಲಿನಲ್ಲಿ ಅವಕಾಶವಿರುವುದರಿಂದಲೂ, ಬೇರೆ ಕೆಲವರನ್ನು ನೋಡಲು ಅವಕಾಶಕೊಡಲ್ಪಟ್ಟಿದ್ದುದರಿಂದಲೂ ತನ್ನ ಮಗನಾದ ಪ್ರದ್ಯೋತ ಕುಮಾರನನ್ನು ಪ್ರತಿದಿನವೂ ಬಂಧುಗಳು ನೋಡಿ ಮಾತನಾಡಿಸಲು ಅವಕಾಶಕೊಡಬೇಕೆಂದೂ, ಅವನಿಗೆ ಸರಿಯಾದ ಆಹಾರವನ್ನೂ ಓದಲೂ ಬರೆಯಲೂ ಪುಸ್ತಕ ಮೊದಲಾದ ಉಪಕರಣಗಳನ್ನೊದಗಿಸಿಕೊಡಬೇಕೆಂದೂ ಪ್ರದ್ಯೋತನ ತಾಯಿಯಾದ ಪಂಕಜಿನಿ ದೇವಿಯು ರಾಜಕೀಯ ಶಾಖಾಧಿಕಾರಿಗಳಿಗೆ ಪತ್ರದ್ವಾರ ಬಿನ್ನೈಸಿಕೊಂಡಿರುತ್ತಾಳೆ.

ವೀರಶೈವ ಪಟ್ಟಭದ್ರನ ಅಭಿನಂದನ

ಸೊಲ್ಲಾಪುರದ ವೀರಶೈವ ಏಕೀಕರಣ ಸಂಘದವರು ಕಳೆದ ತಾ|| 29 ನೆಯ ಬುಧವಾರ ಮ|| ಶಿವಶಂಕರಪ್ಪ ಜೇರಿಗೆ ಇವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನೆರೆಯಿಸಿ ಕಳೆದ ವರ್ಷ ಬಿ. ಎ. ಪರೀಕ್ಷೆಯ ಮೊದಲನೇ ತರಗತಿಯಲ್ಲಿ ಉತ್ತೀರ್ಣರಾದ ಮ|| ಶಿವಲಿಂಗಪ್ಪ ನೀಲಕಂಠಪ್ಪ ಇವರ ಅಭಿನಂದನವನ್ನು ಮಾಡಿ ತಮಗುಂಟಾದ ಸಂತೋಷವನ್ನು ಪ್ರದರ್ಶಿಸಿದರು. ಈ ಪಟ್ಟಭದ್ರರು ಮೊದಲು ಸೊಲ್ಲಾಪುರದ ಹರಿಭಾಯಿದೇವಕರ್ಣ ಹೈಸ್ಕೂಲಿನಲ್ಲಿ ವ್ಯಾಸಂಗಮಾಡಿ ಅನಂತರ ಧಾರವಾಡಕ್ಕೆ ಹೋಗಿ ಮುಂದಣ ವ್ಯಾಸಂಗವನ್ನು ಪೂರೈಸಿದರು. ಇವರು ಧನಸಹಾಯವನ್ನು ಹೊಂದಿ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗೋದಲು ಸೀಮೆಗೆ ಹೋಗಬೇಕೆಂದಿರುತ್ತಾರೆ.

ವಿಚಿತ್ರ ಸೃಷ್ಟಿ

ಈಗ್ಗೆ 15-16 ವರ್ಷಗಳ ಹಿಂದೆ ಇಂಗ್ಲೆಂಡಿನಲ್ಲಿ ಒಬ್ಬನು ಒಂದು ಬೆಕ್ಕನ್ನು ಮುದ್ದಾಗಿ ಸಾಕಿಕೊಂಡಿದ್ದನು. ಆ ಬೆಕ್ಕು ಒಂದು ಇಲಿಯನ್ನು ಸಾಕಿಕೊಂಡು ಅದರ ಸಂಗಡ ಸರಸವಾಡುತ್ತಿತ್ತು. ಆ ಇಲಿಯು ಬೆಕ್ಕಿನ ಮೈಮೇಲೆಲ್ಲಾ ಓಡಾಡಿಕೊಂಡು ಆಟವಾಡುತ್ತಿದ್ದಿತು. (2) ಯೂರೋಪಿನ ಮಹಾಸಂಗ್ರಾಮದಲ್ಲಿ ಒಬ್ಬ ಸೋಲ್ಜರನ ಹಣೆಗೆ ಗುಂಡುತಗಲಿ ಒಂದು ರಂಧ್ರಬಿದ್ದಿರುವುದು. ಆ ಸೋಲ್ಜರನು ಆ ರಂಧ್ರದಲ್ಲಿ ಸಿಗರೇಟನಿಟ್ಟುಕೊಂಡು ಸೇದುತ್ತ ಅದರ ಹೊಗೆಯನ್ನು ಬಾಯಿನಲ್ಲಿ ಬಿಡುವನು (3) ಪ್ರಾಯಕವಾಗಿ ನೀರಿನಲ್ಲಿ ಮೀನುಗಳು ಗಾಳಗಳ ಮೂಲಕ ಹಿಡಿಯಲ್ಪಡುವವಷ್ಟೆ. ಬ್ರೆಜಿಲ್ ದೇಶಕ್ಕೆ ಸೇರಿದ ಎಲ್‌ಗ್ರ್ಯಾನ್ ಎಂಬೂರಿನಲ್ಲಿ ಭೂಮಿಯನ್ನಗೆದು ಮೀನನ್ನು ಹಿಡಿಯುವರು. (4) ಫ್ರಾನ್ಸು ದೇಶದಲ್ಲಿ ಒಬ್ಬ ರೈತನಿಗೆ ಜನನಾರಭ್ಯ ಎರಡು ಮೂಗುಗಳಿರುತ್ತವೆ. (5) ಫ್ರಾನ್ಸಿಗೆ ಸೇರಿದ ಫ್ರಾಂಕ್ಫೋರ್ಟ್ ಎಂದಲ್ಲಿ ಒಬ್ಬ ಸ್ತ್ರೀಗೆ ೨ ನಾಲಿಗೆಗಳಿರುತ್ತವೆ, ಆದರೆ ಮಾತನಾಡಲಿಕ್ಕೆ ಮಾತ್ರ ಆಗುವುದಿಲ್ಲ.

ಗಾಂಧಿ ಟೋಪಿಯನ್ನು ತೆಗದದ್ದಕ್ಕಾಗಿ ದಾವಾ

ವಕೀಲಿಯನ್ನು ಬಿಟ್ಟು ಕೊಪ್ಪೂರಿನಲ್ಲಿ ವಾಸವಾಗಿರುವ ವಲ್ಲೂರಿ ಸೂರ್ಯನಾರಾಯಣರಾವ್, ಬಿ. ಎ., ಬಿ. ಎಲ್., ರವರು ಕಳೆದ ಜನವರಿಯಲ್ಲಿ ರಾಜಮಹೇಂದ್ರದ ಮಾರ್ಕೆಟ್ಟಿಗೆ ಹಣ್ಣನ್ನು ಕೊಳ್ಳಲು ಹೋಗಿದ್ದಾಗ್ಗೆ ತಮ್ಮ ತಲೆಯಮೇಲಿಟ್ಟಿದ್ದ ಗಾಂಧಿ ಟೋಪಿಯನ್ನು ಪೊಲೀಸು ಹೆಡ್‌ಕಾನೆಸ್ಟಬಲು ಬಲವಂತವಾಗಿ ಕಿತ್ತು ಬಿಸಾಡಿ ಅಪಮಾನಪಡಿಸಿದನೆಂದು ಪೊಲೀಸು ಅಧಿಕಾರಿಗಳಿಗೂ ಡಿಸ್ಟ್ರಿಕ್ಟು ಮೆಜಿಸ್ಟ್ರೇಟರಿಗೂ ತಿಳಿಸಿದರು. ಆದರೆ ಅವರುಗಳು ಅದಕ್ಕೆ ಗಮನಕೊಡಲಿಲ್ಲ. ಅದರಮೇಲೆ ಟೋಪಿಯ ಬೆಲೆಗಾಗಿ 1 ರೂ. ಮತ್ತು ಅದನ್ನು ಕಿತ್ತು ಬಿಸಾಡಿ ಅಪಮಾನಪಡಿಸಿದುದಕ್ಕಾಗಿ 50 ರೂ., ಒಟ್ಟು 51 ರೂ. ಗಳನ್ನು ಕೊಡದಿದ್ದಲ್ಲಿ ದಾವಾಮಾಡುತ್ತೇನೆಂದು ನೋಟೀಸು ಕೊಟ್ಟಿದ್ದು ಅದಕ್ಕೆ ಉತ್ತರ ಬರಲಿಲ್ಲವಾಗಿ ರಾಯರು ಹೆ|| ಕಾನಸ್ಟಬಲಿನ ಮೇಲೆ ರಾಜಮಹೇಂದ್ರ ಡಿ|| ಮುನ್ಸೀಫ್ ಕೋರ್ಟಿನಲ್ಲಿ ದಾವಾಮಾಡಿರುತ್ತಾರೆ.

ಹಣವನ್ನು ವ್ಯಭಿಚಾರದಲ್ಲಿ ಕಳೆದುದಕ್ಕಾಗಿ ಆತ್ಮಹತ್ಯೆ

ಪಂಜಾಬಿಗೆ ಸೇರಿದ ಬಲೋವಾಲ ಸಮೀಪದಲ್ಲಿ ಇಬ್ಬರು ಯುವಕರು ರೈಲು ಬಂಡಿಯ ಕೆಳಗೆ ಬಿದ್ದು ಎರಡು ತುಂಡಾಗಿ ಕತ್ತರಿಸಿಹೋಗಿದ್ದರು. ಇವರಲ್ಲೊಬ್ಬನ ಜೇಬಿನಲ್ಲಿ ಒಂದು ಕಾಗದವು ದೊರಕಿತು. ಅದರಲ್ಲಿ ಈ ಪ್ರಕಾರವಾಗಿ ಬರೆಯಲ್ಪಟ್ಟಿದ್ದಿತು.—"ನಾವಿಬ್ಬರೂ ಪ್ರಾಣಸ್ನೇಹಿತರು. ನಾನು ನನ್ನ ತಾಯಿಯ ಆಭರಣಗಳನ್ನು ಮಾರಿ 6000 ರೂಪಾಯಿಗಳನ್ನು ತೆಗೆದುಕೊಂಡು ನನ್ನ ಪ್ರಾಣಸ್ನೇಹಿತನೊಡನೆ ಸರ್ಗೋಡಿಗೆ ಬಂದು ವೇಶ್ಯೆಯ ಮನೆಯನ್ನು ಸೇರಿ ಭೋಗಲಾಲಸರಾಗಿ ಹಣವನ್ನೆಲ್ಲ ವ್ಯಯಮಾಡಿದೆವು. ಒಂದು ದಿವಸ ಕೈಯಲ್ಲಿ ಕಾಸಿಲ್ಲದೆ ವೇಶ್ಯೆಯ ಮನೆಗೆ ಹೋಗಲು ಅವಳು ನಮ್ಮನ್ನು ಬೈದು ಹೊರಕ್ಕೆ ನೂಕಿಸಿಬಿಟ್ಟಳು. ಇದರಿಂದ ನಮ್ಮ ಮನಸ್ಸಿಗೆ ಅತ್ಯಂತ ವ್ಯಸನವೂ ಸಂಕಟವೂ ಉಂಟಾಗಿ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿ 8 ಆಣೆಗಳನ್ನು ಒಬ್ಬನಲ್ಲಿ ಸಾಲವಾಗಿ ತೆಗೆದುಕೊಂಡು ಬಲೋವಾಲಕ್ಕೆ ಬಂದು ರೈಲುಕೆಳಗೆ ಮಲಗಿಕೊಂಡು ಪ್ರಾಣಬಿಡಲು ಸಿದ್ಧವಾಗಿರುತ್ತೇವೆ. ನಮ್ಮಿಬ್ಬರ ಶವಗಳನ್ನೂ ಅಂತ್ಯಕ್ರಿಯೆಗಾಗಿ ಉತ್ಸವದೊಡನೆ ತೆಗೆದುಕೊಂಡುಹೋಗಿ ಒಂದರಮೇಲೊಂದು ಶವವನ್ನು ಇರಿಸಿ ದಹನಮಾಡಬೇಕು ಮತ್ತು ನಾವು ಅನುರಕ್ತರಾಗಿದ್ದ ವೇಶ್ಯೆಯಿಂದಲೇ ಉತ್ಸವದಲ್ಲಿ ನರ್ತನವನ್ನು ಮಾಡಿಸಬೇಕು" ಎಂದು ಬರೆಯಲ್ಪಟ್ಟಿದ್ದಿತು.

ಆರ್. ಟಿ. ಸಭ್ಯರ ಸಮ್ಮೇಳನ

ಕಳೆದ ತಾ|| 10 ನೆಯ ಭಾನುವಾರ ಬೊಂಬಾಯಿಯಲ್ಲಿರುವ ರೆಡಿಮನಿ ಭವನದೊಳಗೆ ರೌಂಡುಟೇಬಲು ಸಭ್ಯರ ಸಭೆಯು ಸಿ. ವೈ. ಚಿಂತಾಮಣಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಸರ್ ಪುರುಷೋತ್ತಮದಾಸ್ ಠಾಕೂರ್‌ದಾಸ್, ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿ, ಮ|| ಗಳಾದ ಎಂ. ಆರ್. ಜಯಕರ್, ಎ. ರಂಗಸ್ವಾಮಯ್ಯಂಗಾರ್, ಎಸ್. ಬಿ. ತಾಂಬೆ, ಬಿ. ಶಿವರಾವ್, ದಿ|| ಬ|| ಮೊರ್ಜಿ ರಾಮಚಂದ್ರ ರಾವ್ ಪಂತಲು, ಬಿ. ವೈ. ಜಾದವ, ಸರ್ ಫಿರೋಜ್‌ಸೇತನಾ, ಸರ್ ಕೌಸ್ಜಿಜಹಂಗಿರ್, ಎಸ್. ಎಂ. ಜೋಷಿ ಮೊದಲಾದವರು ಸಭೆಗೆ ಬಂದಿದ್ದರು. ಭಾರತ ಮಂತ್ರಿಯವರು ಪಾರ್ಲಿಮೆಂಟ್ ಸಭೆಯಲ್ಲಿ ಮಾಡಿದ ಪ್ರಕಟನೆಯ ಮೇಲೆ ಸಭೆಯಲ್ಲಿ ಅನೇಕ ಚರ್ಚೋಪನ್ಯಾಸಗಳು ನಡೆದು ಈ ಮುಂದಣ ತೀರ್ಮಾನಗಳು ಸರ್ವ ಸಮ್ಮತಿಯಿಂದ ಮಾಡಲ್ಪಟ್ಟವು :—

(1) ಇದೇ ಜೂನ್ ತಾ|| 27 ರಲ್ಲಿ ಭಾರತ ಮಂತ್ರಿಯವರು ಪಾರ್ಲಿಮೆಂಟ್ ಸಭೆಯೊಳಗೆ ಮಾಡಿದ ಪ್ರಕಟನೆಯ ವಿಚಾರವಾಗಿ ಈಚೆಗೆ ಕೊಡಲ್ಪಟ್ಟ ಸಮಾಧಾನವನ್ನು ಈ ಸಭೆಯವರು ಬಹಳ ಶ್ರದ್ಧೆಯಿಂದ ಪರ್ಯಾಲೋಚಿಸಿರುತ್ತಾರೆ. ಮುಂದಣ ರಾಜ್ಯಾಂಗನಿರ್ಮಾಣ ವಿಧಾನವನ್ನು ಭಾರತ ಪ್ರತಿನಿಧಿಗಳೂ ಬ್ರಿಟನ್ ಪ್ರತಿನಿಧಿಗಳೂ ಸಮಾನ ಗೌರವದಿಂದಕೂಡಿ ಆಲೋಚಿಸಬೇಕೆಂಬ ನಿಯಮವು ಈವರೆಗಿದ್ದುದರಿಂದಲೇ ನಮ್ಮ ಸಂಘದವರು ಮನಃಪೂರ್ವಕವಾಗಿ ದೊರೆತನದವರೊಡನೆ ಸಹಕರಿಸಲು ನಿಶ್ಚಯಿಸಿದ್ದರು. ಈಗ ಆ ನಿಯಮವು ಬದಲಾಗಿರುವುದು. ಬ್ರಿಟನ್ ಪ್ರಭುತ್ವದ ಪಕ್ಷವಾಗಿ ಹಿಂದೆ ವೈಸ್ರಾಯರೂ ಪ್ರಧಾನ ಮಂತ್ರಿಗಳೂ ಬಹಿರಂಗವಾಗಿ ಮಾಡಿದ ವಾಗ್ದಾನಗಳೆಲ್ಲ ಈಗ ಭಂಗಪಡಿಸಲ್ಪಟ್ಟಿರುವುದಕ್ಕಾಗಿ ಈ ಸಭೆಯವರು ತಮ್ಮ ಅಸಮಾಧಾನವನ್ನು ತಿಳಿಸುತ್ತಾರೆ. ಈಗ ಸೂಚಿಸಲ್ಪಟ್ಟಿರುವ ವಿಧಾನಗಳಿಂದ ಎರಡು ದೇಶಗಳಿಗೂ ತೃಪ್ತಿಕರವಾದ ಪದ್ಧತಿಯು ಏರ್ಪಡುವುದಿಲ್ಲ. ಆದಕಾರಣ ಇನ್ನು ಮೇಲೆ ನಡೆಯುವ ಆಲೋಚನೆಗಳಲ್ಲಿ ನಮ್ಮ ಪಕ್ಷದವರು ಯಾವ ವಿಧದಲ್ಲೂ ಸಹಕರಿಸುವುದಿಲ್ಲ. ರೌಂಡು ಟೇಬಲು ಪದ್ಧತಿಯು ಪುನಃ ಅವಲಂಬಿಸಲ್ಪಟ್ಟ ವಿನಾ ನಾವು ಯಾವ ಸಹಕಾರವನ್ನೂ ಮಾಡಲಾರೆವು. (2) ರಾಷ್ಟ್ರೀಯ ಸ್ವಪರಿಪಾಲನವನ್ನು ಮಾತ್ರ ಮೊದಲು ಸ್ಥಾಪಿಸಿ ಅನಂತರ ಯಾವಾಗಲೋ ಸೆಂಟರಿನಲ್ಲಿ ಬಾಧ್ಯತೆಯನ್ನು ಸ್ಥಾಪಿಸುವುದರಿಂದ ಪ್ರಬಲವಾದ ಪ್ರತಿಕೂಲಗಳೂ ಅನರ್ಥಗಳೂ ಉಂಟಾಗುವ ಪ್ರಯುಕ್ತ ಸೆಂಟರಿನಲ್ಲಿ ಬಾಧ್ಯತೆಯನ್ನು ಏಕಕಾಲದಲ್ಲಿ ಸ್ಥಾಪಿಸಬೇಕು. (3) ಹೊಸ ಆರ್ಡಿನೆನ್ಸನ್ನು ಜಾರಿಯಲ್ಲಿ ತರುವುದು ಅನುಚಿತವೆಂದು ಈ ಸಭೆಯವರು ಸ್ಪಷ್ಟೀಕರಿಸುತ್ತಾರೆ. ಕಾಂಗ್ರೆಸಿನವರು ಅವಲಂಬಿಸಿರುವ ಸತ್ಯಾಗ್ರಹ ವಿಚಾರದಲ್ಲಿ ಈ ಸಭೆಯವರು ತಮ್ಮ ಅಸಮ್ಮತಿಯನ್ನು ತಿಳಿಸುತ್ತಾರೆ. ತಾ|| 27ರಲ್ಲಿ ಪಾರ್ಲಿಮೆಂಟು ಸಭೆಯೊಳಗೆ ಇಂಡ್ಯಾ ಮಂತ್ರಿಗಳು ಮಾಡಿದ ಪ್ರಕಟನೆಯನ್ನು ನೋಡಿದರೆ ದೊರೆತನದವರು ಕಪಿಮುಷ್ಟಿಹಿಡಿದಿರುವುದಾಗಿ ವ್ಯಕ್ತವಾಗುತ್ತದೆ. ಇದರಿಂದ ಯಾವ ಪ್ರಯೋಜನವೂ ಇಲ್ಲ. ಆದುದರಿಂದ ದೊರೆತನದವರು ಉದಾರಮನಸ್ಸಿನಿಂದ ಸಮಾಧಾನಕರವಾದ ಪದ್ಧತಿಯನ್ನು ಅನುಸರಿಸಬೇಕೆಂದು ಈ ಸಭೆಯವರು ಕೋರುತ್ತಾರೆ. (4) ಗತಿಸಿದ ಸಂಘ ಸಭ್ಯರ ಕುಟುಂಬಕ್ಕೆ ಸಹಾನುಭೂತಿಯನ್ನು ಈ ಸಭೆಯು ತಿಳಿಸುತ್ತದೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರಿಗೆ ದಯಮಾಡಿಸಿದ್ದ ಶ್ರೀಮನ್ಮಹಾರಾಜರವರು ಕಳೆದ ಶನಿವಾರ ಪ್ರಾತಃಕಾಲ ರಾಜಧಾನಿಗೆ ಚಿತ್ತೈಸಿದರು.

ಬೆಂಗಳೂರು ಅಶಕ್ತಪೋಷಕಸಭೆಯ ಪೋಷಣೆಗಾಗಿ ರಿಟೈರ್ಡ್ ಡೆಪ್ಯುಟಿಕಮಿಷನರ್ ಮ|| ಟಾಜ್‌ಪಿರಾನ್‌ರವರು 500 ರೂ. ಗಳನ್ನು ಕೊಟ್ಟರಲ್ಲದೆ ಶಿವಮೊಗ್ಗ ಮತ್ತು ಹಾಸನ ಡಿಸ್ಟ್ರಿಕ್ಟು ಬೋರ್ಡುಗಳು ಪ್ರತಿಯೊಂದೂ 50 ರೂ. ಗಳನ್ನು ಕೊಟ್ಟಿರುತ್ತದೆ.

ಶಿವಮೊಗ್ಗ ಸಬ್ ಡಿವಿಜನ್ ಆಫೀಸರಾದ ಹು|| ಆರ್. ತಮ್ಮಾಜಿರಾಯರು ಇದೇ ತಾ|| 15 ರಿಂದ ೨ ತಿಂಗಳವರೆಗೆ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುವ ಪ್ರಯುಕ್ತ ಅಮಲ್ದಾರರಾದ ಮ|| ಪುಟ್ಟರಂಗಸ್ವಾಮಿಯವರು ಆಕ್ಟಿಂಗ್ ಸಬ್ ಡಿವಿಜನ್ ಆಫೀಸರಾಗಿ ನಿಯಮಿಸಲ್ಪಟ್ಟಿರುವರು.

ರಾಜಧಾನಿಯ ಅಡಿಷನಲ್ ಸಬ್ ಜಡ್ಜಿಯರಾದ ಬ್ಯಾರಿಸ್ಟರ್ ಮ|| ನಾಗಭೂಷಣರಾಯರು ಮುನ್ಸೀಫರಾಗಿ ಚಿತ್ರದುರ್ಗಕ್ಕೂ ಅಲ್ಲಿಯ ಮುನ್ಸೀಫರಾದ ಮ|| ಎಚ್. ನಂಜುಂಡಯ್ಯನವರು ಆಕ್ಟಿಂಗ್ ಅಡಿಷನಲ್ ಸಬ್ ಜಡ್ಜಿಯರಾಗಿ ರಾಜಧಾನಿಗೂ ವರ್ಗಾಯಿಸಲ್ಪಟ್ಟಿರುವರು.

ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರಾದ ಮ|| ಜಿ. ಎಂ. ಮೇಕ್ರಿಯವರು ಇದೇ ತಾ|| 14 ರಿಂದ 10 ದಿವಸಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡಿರುವುದರಿಂದ ಶಿವಮೊಗ್ಗ ಡಿ|| ಟ್ರಜರಿ ಅ|| ಕಮಿಷನರ್ ಮ|| ಸಿ. ರಾಮಚಂದ್ರರಾಯರು ತಮ್ಮ ಕೆಲಸದೊಂದಿಗೆ ಡೆ|| ಕ|| ರವರ ಕೆಲಸವನ್ನು ನೋಡಿಕೊಳ್ಳುವಂತೆ ಅಪ್ಪಣೆಯಾಗಿದೆ.

ಕಳೆದ ಗುರುವಾರ ಬೆಳಿಗ್ಗೆ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನವರು (ಕೆಲವರವಿನಾ) ಮ|| ಟಿ. ಜಿ. ರಾಮಯ್ಯರ್‌ರವರನ್ನು ಅಲ್ಪಾಹಾರದಿಂದ ಸತ್ಕರಿಸಿ ಬೀಳ್ಕೊಟ್ಟರು. ಇವರ ಬದಲು ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿರುವ ಮ|| ಬಿ. ಟಿ. ಕೇಶವಯ್ಯಂಗಾರ್ಯರು ಅದೇ ದಿವಸ 11 ಘಂಟೆಗೆ ಬಂದು ಮ|| ಅಯ್ಯರ್‌ರವರಿಂದ ಅಧ್ಯಕ್ಷಾಧಿಕಾರವನ್ನು ವಹಿಸಿಕೊಂಡರು.

ಬೆಂಗಳೂರು ಸಬ್‌ಜಡ್ಜಿಯವರಾದ ಮ|| ಎಚ್. ಕೆ. ವೀರಬಸವಯ್ಯನವರು ಈ ತಾ|| 18 ರಿಂದ 27 ದಿವಸಗಳವರೆಗೆ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುವುದರಿಂದ ಅವರು ಬರುವವರೆಗೆ ಮ|| ಗಳಾದ ಮುನ್ಸೀಫ್ ಎಂ. ಸುಂದರರಾಜಾಚಾರ್ಯರು ಬೆಂಗಳೂರು ಸಬ್‌ಜಡ್ಜಿಯವರಾಗಿಯೂ, ಬೆಂಗಳೂರು ಅಡ್ವೊಕೇಟ್ ಕೆ. ವಿ. ಶ್ಯಾಮರಾಯರು ಬೆಂಗಳೂರು ಸೆಕೆಂಡ್ ಗ್ರೇಡ್ ಮ್ಯುನ್ಸೀಫರಾಗಿಯೂ ಬದಲಿ ನೇಮಿಸಲ್ಪಟ್ಟಿರುತ್ತಾರೆ.

ಮೈಸೂರು ಪವರ್ ಮತ್ತು ಲೈಟ್ ಸೂಪರಿಂಟೆಂಡೆಂಟ್ ಮ|| ಸೀತಾರಾಮಯ್ಯನವರು 96 ದಿವಸಗಳ ರಜವನ್ನು ಪಡೆದುಕೊಂಡು ರಿಟೈರಾಗುವುದರಿಂದ ಬೆಂಗಳೂರು ಪವರ್ ಮತ್ತು ಲೈಟ್ ಸೂಪರಿಂಟೆಂಡೆಂಟ್ ಮ|| ಎ.ಸಿ. ಮುನಿರತ್ನ ಮೊದಲಿಯಾರರು ಮೈಸೂರಿಗೆ ವರ್ಗಾಯಿಸಲ್ಪಟ್ಟು ಚಿನ್ನದಗಣಿಯಲ್ಲಿ ಅಸಿಸ್ಟೆಂಟ್ ಚೀಫ್ ಆಪರೇಟರಾಗಿದ್ದ ಮ|| ಸಿ. ಆರ್. ಗೌಡರು ಬೆಂಗಳೂರು ಪವರ್ ಮತ್ತು ಲೈಟ್ ಆಕ್ಟಿಂಗ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಕಳೆದ ಏಪ್ರಿಲ್ ತಾ|| 12 ರ ರಾತ್ರಿ ರಾಜಧಾನಿಯಲ್ಲಿ ವೆಂಕಟರಾಜ ಉರುಫ್ ಪಾಪಯ್ಯ ಮತ್ತು ನಾಲ್ವರು ಗಿರಿಯಮ್ಮ ಎಂಬವಳನ್ನು ಹೊಡೆದು ಅವಳ ಸೀರೆಯನ್ನು ಬಿಚ್ಚಿ ಬೀದಿಗೆ ಅಟ್ಟಿ ಅವಳ ಮಾನಭಂಗಮಾಡಿದರೆಂಬ ಅಪರಾಧಕ್ಕಾಗಿ ಸಿಟಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು ಇದೇ ತಾ|| 11 ರಲ್ಲಿ ಗಿರಿಯಮ್ಮನ ಸೀರೆಯನ್ನು ಕಿತ್ತುಹಾಕಿ ಬೆತ್ತಲೆ ಬೀದಿಗೋಡಿಸಿದ 2 ನೇ ಅಪರಾಧಿಗೆ 50 ರೂ. ದಂಡವೂ, ಇದನ್ನು ಕೊಡದಿದ್ದಲ್ಲಿ 1 ತಿಂಗಳ ಕಠಿಣಸಜವೂ, ಇತರರಿಗೆ ತಲಾ 10 ರೂ. ದಂಡ ಅಥವಾ 1 ವಾರ ಕಠಿಣಸಜವೂ ವಿಧಿಸಲ್ಪಟ್ಟವು.

1932 ನೆಯ ಅಕ್ಟೋಬರ್ ತಾ|| 10ನೆಯ ಸೋಮವಾರ ರಾಜಧಾನಿಯಲ್ಲಿ ಜರುಗುವ ಪ್ರಜಾಪ್ರತಿನಿಧಿಸಭೆಯ ದಸರಾ ಅಧಿವೇಶನದಲ್ಲಿ ಪರ್ಯಾಲೋಚಿಸಲ್ಪಡಬೇಕಾದ ಅರಿಕೆಗಳೂ, ಪ್ರಶ್ನೆಗಳೂ, ನಿರ್ಧಾರಗಳೂ ಮೆಂಬರುಗಳಿಂದ ಆಗಸ್ಟ್ ತಾ|| 1 ರೊಳಗೆ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರುಗಳಿಗೆ ಕಳುಹಲ್ಪಡಬೇಕೆಂದೂ, ಡೆ|| ಕಮಿಷನರುಗಳು ಆಗಸ್ಟ್ ತಾ|| 18 ರಲ್ಲಿ ಅಥವಾ ಅದರೊಳಗೆ ಮೆಂಬರುಗಳ ಮೀಟಿಂಗನ್ನು ನಡೆಯಿಸಿ ತಮ್ಮಲ್ಲಿಗೆ ಬಂದಿರುವ ವಿಷಯಗಳಲ್ಲಿ ಮುಖ್ಯವಾದವುಗಳನ್ನು ಚುನಾಯಿಸಿ ಸೆಪ್ಟಂಬರ್ ತಾ|| 1 ರೊಳಗೆ ಪ್ರಜಾಪ್ರತಿನಿಧಿ ಸಭೆಯ ಸೆಕ್ರೆಟರಿಯವರಿಗೆ ತಲುಪುವಂತೆ ಕಳುಹಿಸಿಕೊಡಬೇಕೆಂದೂ ಕಳೆದವಾರದ ಗೆಜೆಟ್ಟಿನಲ್ಲಿ ಪ್ರಕಟವಾಗಿದೆ.

1931 ನೆಯ ಅಕ್ಟೋಬರ್ ತಿಂಗಳಲ್ಲಿ ರಾಜಧಾನಿಯ ನಜರಬಾದು ಪೊಲೀಸು ಸ್ಟೇಷನ್ನಿನ ಸೆರೆಯಲ್ಲಿದ್ದ ಒಬ್ಬ ಮಹಮ್ಮದ್ ಯುವಕನು ಕಿಟಕಿಯ ಕಬ್ಬಿಣದ ಸಲಾಕಿಯನ್ನು ಮುರಿದು ತಪ್ಪಿಸಿಕೊಂಡು ಹೋಗಿದ್ದನು. ಇದಕ್ಕಾಗಿ ಆ ದಿವಸ ಕಾವಲಿದ್ದ ಪೊಲೀಸು ಕಾನಸ್ಟೇಬಲು ಸಸ್ಪೆಂಡ್ ಮಾಡಲ್ಪಟ್ಟಿದ್ದನು. ಕಳ್ಳನು ಬಹಳ ದಿವಸದ ವರೆಗೆ ಸಿಕ್ಕದಿದ್ದು ಕಡೆಯಲ್ಲಿ ಬೆಂಗಳೂರಿನೊಳಗೆ ಕಳ್ಳತನಮಾಡಿ ಶಿಕ್ಷೆಗೆ ಗುರಿಯಾದನು. ಈ ವಿಚಾರವು ರಾಜಧಾನಿಯ ಪೊಲೀಸಿನವರಿಗೆ ತಿಳಿದು ಅವರು ಅವನನ್ನು ಬರಮಾಡಿಕೊಂಡು ಸಿಟಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದ್ದುದರಮೇಲೆ ಮೆಜಿಸ್ಟ್ರೇಟರು ಅವನಿಗೆ 1 ವರ್ಷ ಕಠಿಣ ಸಜವನ್ನು ವಿಧಿಸಿ ಈಗ ಅನುಭವಿಸುತ್ತಿರುವ ಶಿಕ್ಷೆ ಮುಗಿದನಂತರ ಈ ಶಿಕ್ಷೆಯನ್ನನುಭವಿಸತಕ್ಕುದೆಂದು ಅಪ್ಪಣೆಮಾಡಿರುವರು.

ಕಳೆದ ಜೂನ್ ತಾ|| 6 ರಲ್ಲಿ ರಾಜಧಾನಿಯ ನಜರಬಾದು ಮಾರ್ಗವಾಗಿ ತಿರುಮಕೂಡ್ಲು ನರಸೀಪುರಕ್ಕೆ ಹೋಗುವದಾರಿಯಲ್ಲಿ ಹಾಲನಹಳ್ಳಿ ಬಂಗಲೆ ಸಮೀಪದಲ್ಲಿರುವ ಮಾವಿನ ತೋಪಿನಲ್ಲಿ ಯಾವನೋ ಒಬ್ಬ ಮನುಷ್ಯನು ಮಲ್ಲುಪಂಚೆಯ ಒಂದು ಕೊನೆಯನ್ನು ತನ್ನ ಕುತ್ತಿಗೆಗೆ ಕಟ್ಟಿಕೊಂಡು ಇನ್ನೊಂದು ಕೊನೆಯನ್ನು ಮರಕ್ಕೆ ಕಟ್ಟಿ ನೇತುಹಾಕಿಕೊಳ್ಳಲು ಪ್ರಯತ್ನಿಸಿರುವನೆಂದು ಬಂಗಲೆಯ ಸಮೀಪದಲ್ಲಿ ವಾಸವಾಗಿರುವ ಮ|| ಎಂ. ಪಿ. ಸುಬ್ರಹ್ಮಣ್ಯರಾಜ ಅರಸಿನವರು ನಜರಬಾದು ಪೊಲೀಸು ಸ್ಟೇಷನ್ನಿಗೆ ಟೆಲಿಫೋನ್ ಮೂಲಕ ತಿಳಿಸಿದರು. ಪೊ|| ಸಾರ್ಜೆಂಟು ಕೂಡಲೆ ಸ್ಥಳಕ್ಕೆ ಹೋಗಿ ಜ್ಞಾನತಪ್ಪಿ ಬಿದ್ದಿದ್ದ ಮನುಷ್ಯನನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಮಾಡಿಸಿ ಗುಣವಾದಮೇಲೆ ಅವನನ್ನು ಆತ್ಮಹತ್ಯದೋಷಕ್ಕಾಗಿ ಸಿಟಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದ್ದರು. ಕಳೆದ ಮಂಗಳವಾರ ಮೆಜಿಸ್ಟ್ರೇಟರು ಅಪರಾಧಿಯು ಮುಂದೆ ಇಂತಹ ಚರ್ಯವನ್ನು ಮಾಡುವುದಿಲ್ಲವೆಂಬ ಬಗೆಗೆ 500 ರೂ. ಹೊಣೆಯನ್ನು ಕೊಟ್ಟಲ್ಲಿ ಅಪರಾಧಿಯನ್ನು ಬಿಟ್ಟುಬಿಡುವಂತೆ ಅಜ್ಞೆಮಾಡಿದರು. ಇವನಿಗೆ ಶಿಕ್ಷೆಯನ್ನು ವಿಧಿಸುವಾಗ್ಗೆ ಮೆಜಿಸ್ಟ್ರೇಟರು "ಈ ಅಪರಾಧಿಯು ಪುದುಕೋಟೆಯ ವಾಸಸ್ಥನು. ಇವನ ತಂದೆ ಅಲ್ಲಿಯ ಸೇನೆಯಲ್ಲಿ ಜಮಾದಾರನಾಗಿರುತ್ತಾನೆ. ಅಪರಾಧಿಯು ೩ ವರ್ಷ ಪೊಲೀಸು ಕಾನೆಸ್ಟಬಲಾಗಿದ್ದು ಅನಂತರ ಅಲ್ಲಿಯ ಅರಮನೆಯಲ್ಲಿ 8 ತಿಂಗಳಕಾಲ ಮೋಟಾರು ಡ್ರೈವರಾಗಿದ್ದು ಅಲ್ಲಿ ಕಾಯಿಲೆಯಾದುದರಿಂದ ಕೆಲಸವನ್ನು ಬಿಟ್ಟು ಇಲ್ಲಿಗೆ ಅಕ್ಕನ ಮನೆಗೆ ಬಂದು ಜೀವನಕ್ಕೆ ಮಾರ್ಗವಿಲ್ಲದಿದ್ದು ಅಕ್ಕ ಸತ್ತುಹೋದಮೇಲೆ ನಿರಾಶನಾಗಿ ಆತ್ಮಹತ್ಯಮಾಡಿಕೊಳ್ಳಲು ನಿರ್ಧರಿಸಿದನೆಂದು ಗೊತ್ತಾಗುತ್ತದೆ. ವಯಸ್ಸಾದ ತಂದೆಯು ಮಗನನ್ನು ಬಿಡಿಸಿಕೊಳ್ಳುವುದಕ್ಕಾಗಿ ಪುದುಕೋಟೆಯಿಂದ ಬಂದಿರುತ್ತಾನೆ. ಆದುದರಿಂದ ಇವನನ್ನು ಹೊಣೆಯ ಮೇಲೆ ಬಿಡಲು ತಕ್ಕ ಕಾರಣವಿದೆ" ಎಂದು ಅಭಿಪ್ರಾಯಪಟ್ಟಿರುವರು.

ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡು

NOTICE

No. C. 92. 31-32 Dated 14-7-32.

ಚಿತ್ರದುರ್ಗ ತಾಲ್ಲೂಕು ಚಿಕ್ಕಗುಂಟನೂರಿನಲ್ಲಿ ಭಾವಿ ತೆಗೆಯತಕ್ಕ ಬಗ್ಗೆ ಕೆಲಸನಡೆಯತಕ್ಕ ವಿವರಗಳಲ್ಲಿ ಮತ್ತು ಕಾಲದಲ್ಲಿ ತಾ 6-8-32ನೇ ಮಧ್ಯಾಹ್ನ 3 ಗಂಟೆ ವರಿವಿಗೂ ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ಸೀಲ್ಡು ಟೆಂಡರುಗಳನ್ನು ತೆಗೆದುಕೊಳ್ಳಲಾಗುತ್ತೆ.

ಡಿಪಾಜಿಟ್ ಮೊಬಲಗು ರೂಪಾಯಿ 100

ಕಾಂಗಾರಿಯನ್ನು 1932 ನೇ ಡಿಸೆಂಬರ್ ಆಖೈರಿನಲ್ಲಿ ಪೂರೈಸಬೇಕು

ಪ್ಲಾನ್ ವಗೈರೆ ಪರತ್ತುಗಳನ್ನು ಆಫೀಸಿನಲ್ಲಿ ನೋಡಬಹುದು.

G. CHENAPPA,
President.

2—1

ತುಮಕೂರು ಡಿಸ್ಟ್ರಿಕ್ಟ್ ಬೋರ್ಡು.

ಪ್ರಕಟನೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಕುಣಿಗಲ್ ತಾಲ್ಲೂಕು ಹುಲಿಯೂರು ದುರ್ಗದ ಹೋಬಳಿ ಸಿಡಸಾಲೆ ಗ್ರಾಮದ ಸಂತೆಯಲ್ಲಿ 1932-33 ನೆಯ ಸಾಲಿನಲ್ಲಿ ಸುಂಕ ವಸೂಲ್ಮಾಡುವ ಹಕ್ಕನ್ನು ಹರಾಜುಮಾಡಲಾಗಿತ್ತು. ಬಾಜು ಮದ್ದೂರು ತಾಲ್ಲೂಕು ಮಲ್ಲನಾಯಕನಹಳ್ಳಿಯಲ್ಲಿ ಇದೇ ಸೋಮವಾರ ಸಂತೆ ನಡೆಯುವುದರ ದೆಸೆಯಿಂದ ಈ ಸಿಡಸಾಲೆ ಗ್ರಾಮದಲ್ಲಿ ಸಂತೆ ಸೇರದಿರುವ ಪ್ರಯುಕ್ತ, ಸಿಡಸಾಲೆ ಸಂತೆಯಲ್ಲಿ ಸುಂಕ ವಸೂಲ್ಮಾಡುವುದನ್ನು ವಜಾಮಾಡಿ, ಈ ಸಾಲಿನ ಕಂಟ್ರಾಕ್ಟನ್ನು ಕ್ಯಾನ್ಸಲ್ ಮಾಡಿರುತ್ತೆ.

ಡಿ. ಎಸ್. ಮಲ್ಲಪ್ಪ,
ಪ್ರೆಸಿಡೆಂಟ್,
ಡಿಸ್ಟ್ರಿಕ್ಟ್ ಬೋರ್ಡು, ತುಮಕೂರು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ, ಬೆಂಗಳೂರು.

ವಿಜ್ಞಾಪನೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘದ ಜನರಲ್ ಕಮಿಟಿ ಮೀಟಿಂಗು 1932 ನೇ ಇಸವಿ ಆಗಸ್ಟು ಮಾಹೆ ತಾ|| 7 ನೇ ಭಾನುವಾರ ಸಾಯಂಕಾಲ 4 ಘಂಟೆಗೆ ಸರಿಯಾಗಿ ಬೆಂಗಳೂರು ಸಿಟಿ ಕೇಪಾದ್ರಿ ರೋಡಿನಲ್ಲಿರುವ ಶ್ರೀಜಗದ್ಗುರು ಜಯದೇವ ವೀರಶೈವ ವಿದ್ಯಾರ್ಥಿನಿಲಯದಲ್ಲಿ ನಡೆಯಬೇಕೆಂದು ನಿರ್ಧರವಾಗಿರುವುದರಿಂದ, ತಾವು ಆ ಕಾಲಕ್ಕೆ ದಯಮಾಡಿಸಬೇಕಾಗಿ ಪ್ರಾರ್ಥನೆ. ಅಲ್ಲದೆ ಕಳೆದ ಜನರಲ್ ಕಮಿಟಿ ಮೀಟಿಂಗಿನಲ್ಲಿ ಮೆಂಬರುಗಳಿಂದ ಚಂದಾ ಮೊಬಲಗನ್ನು ತಪ್ಪದೆ ವಸೂಲ್ಮಾಡಬೇಕೆಂದು ತೀರ್ಮಾನವಾಗಿರುವದರಿಂದ ದಯವಿಟ್ಟು ತಮ್ಮ ಬಾಬ್ತು ಚಾಲ್ತಿ ವರ್ಷ (1931-32) ದ ಚಂದ ಮೊಬಲಗು ಒಂದು ರೂಪಾಯಿಯನ್ನು ಕೊಡಲಿ ಕಳುಹಿಸುವಿರೆಂದು ನಂಬಿರುತ್ತೇನೆ.

ವಿಷಯಗಳು

1. ತಾ|| 1-7-1931 ರಿಂದ ತಾ|| 30-6-32 ರ ವರೆಗಿನ ಜಮಾ ಖರ್ಚು ವಿಚಾರದಲ್ಲಿ ಆಡಿಟರುಗಳ ರಿಪೋರ್ಟು.
2. ಸೆಕ್ರೆಟರಿಯವರ ರಿಪೋರ್ಟು.
3. ಕಾರ್ಯನಿರ್ವಾಹಕ ಸಂಘದ ಅಧ್ಯಕ್ಷರು ಮೊದಲಾಗಿ ಇತರ ಮೆಂಬರುಗಳ ಚುನಾವಣೆ.
4. ಇತರ ವಿಷಯಗಳು (ಮೆಂಬರುಗಳಿಂದ ಒಂದು ವಾರ ಮುಂಚಿತವಾಗಿ ಯಾವುದಾದರೂ ಸೆಕ್ರೆಟರಿಯವರಿಗೆ ಕಳುಹಲ್ಪಟ್ಟದ್ದು ಮೀಟಿಂಗಿನಲ್ಲಿ ಇಡಲ್ಪಟ್ಟರೆ).

M. NAGAPPA,
ಆ|| ಸೆಕ್ರೆಟರಿ,
ವೈ. ವೀ. ವಿ. ಫಂಡು ಸಂಘ.

ಬೆಂಗಳೂರು,
ತಾ|| 6-7-1932.

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖಕರಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಮಿ|| ಟಿ. ಜಿ. ರಾಮಯ್ಯರ್‌ರವರ ದ್ವೇಷ.

ಮೈಸೂರು ಮ್ಯುನಿಸಿಪಾಲಿಟಿಯವರು ಮಿ|| ಮಹಮ್ಮದ್ ಸೇಟರ ಮೇಲೆ ಮಾಡಿದ್ದ ಕ್ರಿಮಿನಲ್ ಕೇಸಿನ ಜಜ್ಮೆಂಟು ಕಳೆದವಾರದ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿರುವದನ್ನು ಓದಿದೆನು. ಈ ಮೊಕದ್ದಮೆ ನಡೆಯಲು ಮಿ|| ಟಿ. ಜಿ. ರಾಮಯ್ಯರ್‌ರವರ ದ್ವೇಷವೇ ಕಾರಣ. ಮಿ|| ಮಹಮದ್ ಸೇಟರು ತಮ್ಮ ಮನೆಯ ಬಿಟ್‌ಲೆಟ್ಟುಗಳಿಗೆ ಸೂಯಿಜ್ ಕನೆಕ್ಷನ್ ತೆಗೆದುಕೊಳ್ಳಲಿಲ್ಲವೆಂಬ ಅಪರಾಧಕ್ಕಾಗಿ ಅವರನ್ನು ಪ್ರಾಸಿಕ್ಯೂಷನ್ನಿಗೆ ಗುರಿಮಾಡಿದ್ದಂತೆ ನೋಟೀಸು ಕೊಡದೆ ನೂರಾರು ಬಡ ರೇಟ್‌ಪೇಯರುಗಳನ್ನು ಪ್ರಾಸಿಕ್ಯೂಷನ್ನಿಗೆ ಗುರಿಮಾಡಿ ಅವರಿಗೆ ಜುಲ್ಮಾನೆ ವಿಧಿಸುತ್ತಾ ಬಂದುದರ ಮೇಲೆ ಅವರೆಲ್ಲರೂ ಲಕ್ಷ್ಯರಹಿತಲ್ಲ ಮ್ಯುನಿಸಿಪಲ್ ಕೌನ್ಸಿಲರುಗಳಿಗೆ ತಮ್ಮ ತೊಂದರೆಗಳನ್ನೂ ಕನೆಕ್ಷನ್ ತೆಗೆದುಕೊಳ್ಳಲು ತಮಗೆ ಚೈತನ್ಯವಿಲ್ಲದಿರುವುದನ್ನೂ ಹೇಳಿಕೊಳ್ಳಲಾಗಿ ಮ್ಯು|| ಕೌನ್ಸಿಲರುಗಳು ಮುಖ್ಯವಾಗಿ ಮಹಮುದ್ ಸೇಟರು, ನೋಟೀಸು ಕೊಡದೆ ರೂಲ್ಸು ವಗೈರೆ ತಿಳಿಯದ ಜನರನ್ನು ಪ್ರಾಸಿಕ್ಯೂಷನ್ನಿಗೆ ಗುರಿಮಾಡುವುದು ಸರಿಯಲ್ಲವಾದ್ದರಿಂದ ಇನ್ನು ಮುಂದೆ 1 ತಿಂಗಳ ವಾಯಿದೆಯುಳ್ಳ ನೋಟೀಸು ಕೊಟ್ಟು ಅಷ್ಟರೊಳಗೆ ಮಾಡಿಸದಿದ್ದಲ್ಲಿ ಪ್ರಾಸಿಕ್ಯೂಷನ್ ಮಾಡಬೇಕೆಂದು ಪ್ರೆಸಿಡೆಂಟರಿಗೆ ತಿಳಿಸಿದರು. ಅವರೂ ಪ್ರೆಸಿಡೆಂಟರು ನೋಟೀಸು ಕೊಡದೆ ಪ್ರಾಸಿಕ್ಯೂಷನ್ ನಡೆಸುತ್ತ ಬಂದುದರಮೇಲೆ ಮುಂದೆ, ಎಕ್ಸ್‌ಪೆನ್ಸಲ್ಲ ರೇಟ್‌ಪೇಯರುಗಳ ಕಷ್ಟವನ್ನು ಕಂಡೂ ಅವರುಗಳಿಗೆ ಮ್ಯುನಿಸಿಪಾಲಿಟಿಯವರಿಂದ ಆಗುತ್ತಿರುವ ತೊಂದರೆಗಳನ್ನೆಲ್ಲ ವಿವರಿಸಿ ಅವನ್ನು ತಪ್ಪಿಸಿಕೊಡುವಂತೆ ದಿವಾನ್ ಸಾಹೇಬರಿಗೂ ಶ್ರೀಮನ್ಮಹಾರಾಜರವರಿಗೂ ಬರೆದುಕೊಳ್ಳಬೇಕಾಗಿ ರೆಜ್ಯುಲೇಷನ್ ಮಾಡಿಸಿದನು, ಅಲ್ಲದೆ ಮ್ಯುನಿಸಿಪಲ್ ಮೀಟಿಂಗಿನಲ್ಲಿ ಸಹ ಚರ್ಚೆಗೆ ತಂದರು. ಇದಕ್ಕಾಗಿ ಮಿ|| ಮಹಮ್ಮದ್ ಸೇಟರ ಮೇಲೆ ಮಿ|| ಟಿ. ಜಿ. ರಾಮಯ್ಯರ್‌ರವರು ದ್ವೇಷವನ್ನು ಸಾಧಿಸುತ್ತಾ ಬಂದರು. ಸೇಟರ ಮೇಲಿನ ಹಗೆತೀರಿಸಿಕೊಳ್ಳಲು ಸಮಯನಿರೀಕ್ಷಣೆಯಲ್ಲಿದ್ದು ಬಿಟ್‌ಲೆಟ್ಟುಗಳಿಗೆ ಸೂಯಿಜ್ ಕನೆಕ್ಷನ್ನು ತೆಗೆದುಕೊಳ್ಳಲು ಕೊಟ್ಟಿದ್ದ ನೋಟೀಸನ್ನು ತಿರಸ್ಕರಿಸಿದರೆಂದು ಅವರ ಮೇಲೆ ಕೇಸನ್ನು ಸ್ಯಾನಿಟರಿ ಇನ್ಸ್‌ಪೆಕ್ಟರ ಮೂಲಕ ಹಾಕಿಸಿದರು. ಕಡೆಯಲ್ಲಿ ಮ್ಯುನಿಸಿಪಾಲಿಟಿಯವರು ಮಾಡಿದ ಪ್ರಾಸಿಕ್ಯೂಷನು "ಡಿಚ ರೇಟ್ ಪ್ರಕ" ಅಂದರೆ ಸೇಯವಾದ ಸುಳ್ಳೆಂದು ಮೆಜಿಸ್ಟ್ರೇಟರು ಅಭಿಪ್ರಾಯಪಟ್ಟು ಕೇಸು ರುಜುವಾತು ಆಗಲಿಲ್ಲವೆಂದು ಬಡ ರೇಟ್‌ಪೇಯರುಗಳ ಸಲುವಾಗಿ ಹೋರಾಡಿ ಕಡೆಯಲ್ಲಿ ಪ್ರಾಸಿಕ್ಯೂಷನ್ನಿಗೆ ಗುರಿಯಾದ ಮಿ|| ಸೇಟರನ್ನು ಅಕ್ವಿಟ್ ಮಾಡಿದರು. ಹೆಲ್ತಾಫೀಸರು ತಮ್ಮ ಸಾಕ್ಷಿ ಕೈಫಿಯತ್ತಿನಲ್ಲಿ ಬಿಟ್ ಲೆಟ್ಟುಗಳಿಂದ ಬರುತ್ತಿದ್ದ ನೀರು ಫಿಲ್ಟರ್‌ವಾಟರ್ ಎಂದು ಹೇಳದೆ ವೇಸ್ಟ್‌ವಾಟರ್ ಎಂದು ಹೇಳಿದ್ದರಿಂದ ಕೇಸು ಕೆಟ್ಟುಹೋಯಿತೆಂದು ಮಿ|| ರಾಮಯ್ಯರ್‌ರವರು ಹೆಲ್ತಾಫೀಸರನ್ನು ಆಕ್ಷೇಪಿಸುತ್ತಿರುವುದಾಗಿ ವರ್ತಮಾನವಿದೆ. ಹೆಲ್ತಾಫೀಸರು ಸೇಟರ ಬಂಗಲೆಹತ್ತಿರ ಹೋಗಿ ಪರೀಕ್ಷಿಸಿದಾಗ ಫಿಲ್ಟರ್‌ವಾಟರು ಬರದೆ ವೇಸ್ಟ್‌ವಾಟರು ಬರುತ್ತಿದ್ದದನ್ನು ಕಂಡು ಸೇಟರ ಮೇಲೆ ಕೇಸ್‌ಮಾಡಲು ಕಾರಣವಿಲ್ಲವೆಂದು ಅಭಿಪ್ರಾಯಪಟ್ಟಾಗ್ಯೂ ರಾಮಯ್ಯರ್‌ರವರು ಕೇಳದೆ ಕೇಸನ್ನು ಮಾಡಲೇಬೇಕೆಂದು ಹಟಹಿಡಿದು ಸ್ಯಾನಿಟರಿ ಇನ್ಸ್‌ಪೆಕ್ಟರ್ ಕೈಯಿಂದ ದಾಖಲ್ಮಾಡಿಸಿದರು. ಹೆಲ್ತಾಫೀಸರು ತಮ್ಮ ಸಾಕ್ಷಿ ಕೈಫಿಯತ್ತಿನಲ್ಲಿ ಸುಳ್ಳು ಹೇಳಲು ಮನಸ್ಸುಬಾರದೆ ವೇಸ್ಟ್‌ವಾಟರ್ ಬರುತ್ತಿತ್ತೆಂದು ಯಥಾರ್ಥವನ್ನು ನುಡಿದಿರುವರು. ಕೇಸುಮಾಡಲು ಕಾರಣವಿಲ್ಲದಿದ್ದರೂ ಸೇಟರ ಮೇಲಿನ ಹಗೆಯನ್ನು ತೀರಿಸಿಕೊಳ್ಳುವುದಕ್ಕಾಗಿ ಸುಳ್ಳುಕೇಸುಮಾಡಿಸಿ ಅದು ತಕ್ಕ ರುಜುವಾತಿಲ್ಲದೆ ಕೆಟ್ಟುಹೋದರೆ ಸತ್ಯವನ್ನು ನುಡಿದ ಹೆಲ್ತಾಫೀಸರು ಕಾರಣರೆ? ಮಿ|| ಸೇಟರು ಮಿ|| ರಾಮಯ್ಯರ್‌ರವರ ಕೋಪಕಾರ್ಯಗಳಿಗೆ ಹೆದರದೆ ಸಭೆಗಳನ್ನು ಮಾಡಿಸಿ ದಿವಾನರಿಗೂ ಶ್ರೀಮನ್ಮಹಾರಾಜರವರಿಗೂ ಅರ್ಜಿಗಳನ್ನು ಬರೆಸಿ ಮತ್ತು ರೆಜ್ಯುಲೇಷನ್ನುಗಳನ್ನು ಮಾಡಿಸದಿದ್ದಲ್ಲಿ ಪ್ರೆಸಿಡೆಂಟರು ಇಷ್ಟುಹೊತ್ತಿಗೆ ಸಾವಿರಾರು ರೇಟ್‌ಪೇಯರುಗಳನ್ನು ಅದರಲ್ಲೂ ಬ್ರಾಹ್ಮಣೇತರರನ್ನು ಪ್ರಾಸಿಕ್ಯೂಷನ್ನಿಗೆ ಗುರಿಮಾಡಿಸಿ ಜುಲ್ಮಾನೆಯನ್ನು ತೆರಿಸುತ್ತಿದ್ದರು. ಮನೆಯ ಬಿಟ್‌ಲೆಟ್ಟುಗಳಿಗೆ ಸೂಯಿಜ್ ಕನೆಕ್ಷನ್ ತೆಗೆದುಕೊಳ್ಳದಿರುವುದರಿಂದಲೇ ಕೆಟ್ಟವ್ಯಾಧಿಗಳು ಹುಟ್ಟಲು ಕಾರಣವೆಂದು ಹೇಳಿ ಅದನ್ನು ನಿಲ್ಲಿಸುವುದಕ್ಕಾಗಿ ಈರೀತಿ ಜನರನ್ನು ಪ್ರಾಸಿಕ್ಯೂಷನ್ನಿಗೆ ಗುರಿಮಾಡಬೇಕಾಯಿತೆಂದು ಪ್ರೆಸಿಡೆಂಟರು ಹೇಳುತ್ತಿದ್ದುದು ನಿಜವಾಗಿದ್ದಲ್ಲಿ ಮಹಮ್ಮದ್‌ಸೇಟರು ಅಡ್ಡಬಂದನಂತರ ಮತ್ತು ಅವರ ಮೇಲೆ ಕೇಸು ನಡಿಸಿದನಂತರ ಒಬ್ಬರಮೇಲಾದರೂ ಪ್ರಾಸಿಕ್ಯೂಷನನ್ನೇಕೆ ನಡಿಸಲಿಲ್ಲ ಮತ್ತು ಏಕೆ ಈ ಕನೆಕ್ಷನ್ ಪ್ರಸ್ತಾಪವನ್ನೇ ಬಿಟ್ಟುಬಿಟ್ಟರಲ್ಲ? ಇದಲ್ಲದೆ ಪ್ರಾಸಿಕ್ಯೂಷನ್ ಮಾಡುವದಕ್ಕೆ ಮೊದಲು ನೋಟೀಸು ಕೊಡಬೇಕೆಂದು ರೂಲ್ಸಿನಲ್ಲಿಲ್ಲವೆಂದು ಪ್ರೆಸಿಡೆಂಟರು ಮೀಟಿಂಗಿನಲ್ಲಿ ವಾದಿಸಿದ್ದರಮೇಲೆ ಪ್ರೆಸಿಡೆಂಟರ ನಡವಳಿಕೆ ನ್ಯಾಯವೆಂದೊಪ್ಪಿಕೊಂಡಂಥ ಕೌನ್ಸಿಲರುಗಳು ಸೇಟರ ಮೇಲೆ ಕೇಸು ದಾಖಲಾದನಂತರ ಕನೆಕ್ಷನ್ ತೆಗೆದುಕೊಳ್ಳದಿದ್ದವರನ್ನು ಪ್ರಾಸಿಕ್ಯೂಷನ್ನಿಗೆ ಯಾಕೆ ಗುರಿಮಾಡಲಿಲ್ಲವೆಂದು ಕೇಳಿ ಮುಂದೆ ಮಾಡುವಂತೆ ರೆಜ್ಯುಲೇಷನ್ನುಗಳನ್ನು ಏಕೆ ಮಾಡಲಿಲ್ಲ? ಇದರಿಂದಲೇ ಪ್ರೆಸಿಡೆಂಟರ ದುಂಡಾವೃತ್ತಿಯು ಅನ್ಯಾಯವೆಂದೂ ಸೇಟರ ಮೇಲೆ ಕೇಸುಮಾಡಿದ್ದು ಅವರ ಮೇಲಿನ ದ್ವೇಷವನ್ನು ತೀರಿಸಿಕೊಳ್ಳುವದಕ್ಕಾಗೆಂದೂ ಗೊತ್ತಾಗುವದಿಲ್ಲವೆ? ಈರೀತಿ ತಮ್ಮ ಹಟವನ್ನು ಸಾಧಿಸುವುದಕ್ಕಾಗಿ ಸುಳ್ಳುಕೇಸುಮಾಡಿಸಿ ಇಬ್ಬರು ಲಾಯರುಗಳನ್ನಿಟ್ಟು 200-300 ರೂ. ವರೆಗೆ ಫೀಜು ಕೊಟ್ಟಿರುವುದು ಮಿ|| ರಾಮಯ್ಯರ್‌ರವರ ತಪ್ಪೆಂದು ಠರಾಯಿಸಿ ಈ ಹಣವನ್ನು ಅವರ ಕೈಯಿಂದ ಹಾಕಿಸುವದು ರೇಟ್‌ಪೇಯರುಗಳ ಪ್ರತಿನಿಧಿಗಳಾಗಿರುವ ಕೌನ್ಸಿಲರುಗಳ ಕೆಲಸವಲ್ಲವೆ? ಹೀಗೆ ರೇಟ್‌ಪೇಯರುಗಳಿಗೆ ಕಿರುಕುಳವನ್ನು ಕೊಟ್ಟು ಅವರ ದುಡ್ಡನ್ನು ಹಾಳುಮಾಡಿದ ಪ್ರೆಸಿಡೆಂಟರಿಗೆ ಎಂಟರ್ಟೈನ್‌ಮೆಂಟು ಕೊಟ್ಟು ಅವರನ್ನು ಹೊಗಳಿದ ಕೌನ್ಸಿಲರುಗಳು ನಿಜವಾಗಿಯು ರೇಟ್‌ಪೇಯರ ಹಿತಚಿಂತಕರೆ?

ಜುಲ್ಮಾನೆತೆತ್ತ ರೇಟ್‌ಪೇಯರು.

ಅರ್ವಿನ್ ನಾಲಾ ರೈತರ ಗೋಳನ್ನು ವಿಚಾರಿಸಲು ಮಂಡ್ಯಕ್ಕೆ ದಿವಾನರ ಭೇಟಿ.

ಅರ್ವಿನ್ ನಾಲಾ ರೈತರ ಮೊರೆಯನ್ನು ಮತ್ತೊಮ್ಮೆ ಸ್ಥಳದಲ್ಲಿ ಕೇಳುವುದಕ್ಕಾಗಿ ದಿವಾನ್‌ರವರು ನೆನ್ನೆ ದಿನ ಮಂಡ್ಯಕ್ಕೆ ದಯಮಾಡಿಸಿದ್ದರು. ಅರ್ವಿನ್ ನಾಲಾ ಪ್ರದೇಶಕ್ಕೆ ಸೇರಿದ ಸುಮಾರು 5-6 ಸಾವಿರ ಮಂದಿ ರೈತರು ಸೇರಿದ್ದರು. ಮಧ್ಯಾಹ್ನ 2 ಘಂಟೆಯಿಂದ ಸಾಯಂಕಾಲ 4 ಘಂಟೆ ವರಿವಿಗೂ ಜೋರಾದ ಚರ್ಚೆ ನಡೆಯಿತು. ಸರ್ಕಾರದವರು ತಾವು ಮಾಡಿರುವುದೇ ಸರಿ ಎಂಬುದನ್ನು ಸಾಧಿಸುತ್ತ ರೈತರಿಗೆ ಸಮಾಧಾನ ಹೇಳುವುದಕ್ಕೆ ಪ್ರಯತ್ನಿಸಿದರೇ ಹೊರತು ರೈತರು ಕೇಳಿಕೊಂಡ ಯಾವ ರಿಯಾಯಿತಿಯನ್ನು ತೋರಿಸಲಾಗದೆಂದು ನಿರ್ಧರವಾಗಿ ಹೇಳಿಬಿಟ್ಟರು. ಇದರಿಂದ ಆಶಾಭಂಗಹೊಂದಿದ ರೈತರು ಇನ್ನು ಚರ್ಚಿಸುವುದು ಅಥವ ಬೇಡಿಕೊಳ್ಳುವುದರಲ್ಲಿ ಪ್ರಯೋಜನವಿಲ್ಲವೆಂದು ತಿಳಿದುಕೊಂಡು ಇನ್ನೂ ಮಾತುಕತೆಗಳು ನಡೆಯುತ್ತಿರುವಾಗಲೇ ಸಭೆಯಿಂದ ಎದ್ದು ಹೊರಟುಹೋದರು. ವಿವರಗಳನ್ನು ಈ ಕೆಳಗೆ ಕೊಟ್ಟಿದೆ:—

ದಿವಾನ್‌ರು ಸಭೆಗೆ ದಯಮಾಡಿಸಿದ ಒಡನೆ "ಅರ್ವಿನ್ ನಾಲಾ ರೈತರ ಮಂಡಲಿಯ ಪರವಾಗಿ ಮ|| ಗಳಾದ ಜಿ. ವಿ. ನಂಜಪ್ಪಶೆಟ್ಟರು ಮತ್ತು ಎಚ್. ಹೊನ್ನಯ್ಯನವರು ದಿವಾನ್‌ರಿಗೂ ರೆವಿನ್ಯೂ ಕಮಿಷನರಿಗೂ ಹಾರತುರಾಯಿಗಳನ್ನು ಕೊಟ್ಟು ಸನ್ಮಾನಿಸಿದರು. ದಿವಾನ್‌ರು ಅರ್ವಿನ್ ನಾಲೆ ಸಾಗುವಳಿ ಸಂಬಂಧವಾಗಿ ರೈತರಿಗಿರುವ ತೊಂದರೆಗಳನ್ನು ಕುರಿತು ತಿಳಿಸುವವರು ತಿಳಿಸಬಹುದೆಂದು ಹೇಳಿದರು. ಮಂಡ್ಯದ ಸಬ್‌ಡಿವಿಜನ್ ಆಫೀಸರೂ, ಅಮಲ್ದಾರರೂ ಸಹ ಕೆಲವರು ಪ್ರಮುಖ ರೈತರು ಅಂಕಿತಮಾಡಿಕೊಳ್ಳುತ್ತಾರೆಂದು, ಕಿಕ್ಕಿರಿದು ಸೇರಿದ್ದ ರೈತರ ಮಧ್ಯೆ ಮ|| ಗಳಾದ ಗಾಣದಾಳು ಲಿಂಗೇಗೌಡರು, ಹೊನಗಾನಹಳ್ಳಿ ಕುಳ್ಳೇಗೌಡರು, ಸಾತನೂರು ಗಿರಿಯಪ್ಪನವರ ದಾಸಪ್ಪನವರು, ದುದ್ದದ ನರಸೇಗೌಡರು ಇವರನ್ನು ಸ್ಥಳಬಿಡಿಸಿ ಕರೆಸಿ ಮುಂಭಾಗದಲ್ಲಿ ಕುಳ್ಳಿರಿಸಿದರು ಮತ್ತು ಗಾಣದಾಳು ಶಿವೇಗೌಡರು ಎಲ್ಲಿ? ಎಂ. ಸಿ. ಲಿಂಗೇಗೌಡರು ಎಲ್ಲಿ? ಎಂದು ಹುಡುಕಾಡುತ್ತಿದ್ದರು. ಜಿ. ವಿ. ನಂಜಪ್ಪಶೆಟ್ಟರವರು ಎದ್ದು ಅರ್ವಿನ್ ನಾಲಾ ರೈತರ ಮಂಡಲಿಯ ಪರವಾಗಿ ಅರ್ಜಿಯೊಂದನ್ನು ಒಪ್ಪಿಸುವುದಕ್ಕೆ ಅವಕಾಶಕೊಡಬೇಕೆಂದು ದಿವಾನ್‌ರನ್ನು ಕೇಳಿಕೊಂಡು ಅರ್ಜಿಯನ್ನು ಓದುವುದಕ್ಕೆ ಪ್ರಾರಂಭಿಸಿದರು (ಅರ್ಜಿಯ ಪ್ರತಿಯನ್ನು ಬೇರೆಕಡೆ ಪ್ರಕಟಿಸಿದೆ). ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪೋಲೀಸ್ ರೆಗ್ಯುಲೇಷನ್ 39 ನೇ ಸೆಕ್ಷನ್ ಅನುಸರಿಸಿ ಮಂಡ್ಯ ಮದ್ದೂರು ತಾಲ್ಲೂಕುಗಳಲ್ಲಿ ಯಾರೂ ಸಭೆ ವಗೈರೆ ನಡೆಸಕೂಡದೆಂದು ಹುಕ್ಕುಂ ಮಾಡಿ ಪ್ರಜೆಗಳ ಅಜನ್ಮಸಿದ್ಧವಾದ ಹಕ್ಕನ್ನು ಕಿತ್ತುಕೊಂಡಿರುವರು ಎಂದು ಅರ್ಜಿಯಲ್ಲಿರುವ ಭಾಗವನ್ನು ಓದಿದಾಗ, ದಿವಾನ್‌ರು, ಏನು ಕಿತ್ತುಕೊಂಡಿದ್ದಾರೆ? ಅದು ಸಾಲದು ಇನ್ನೂ ಹೆಚ್ಚಾಗಿ ಮಾಡಬೇಕಾಗಿತ್ತು ಎಂದು ಹೇಳಿದರು. ಆಗ ಮ|| ನಂಜಪ್ಪಶೆಟ್ಟರು ದಿವಾನ್‌ರನ್ನು ಕುರಿತು—ಸ್ವಾಮಿ, ಮುಚ್ಚಳಿಕೆ ಸಂಬಂಧವಾಗಿ ಸಭೆ ವಗೈರೆ ನಡೆಸಕೂಡದೆಂದು ಡಿ|| ಮ್ಯಾ|| ಹುಕ್ಕುಂ ಮಾಡಿದರು. ಅದು ನ್ಯಾಯವಾದುದೋ ಅನ್ಯಾಯವಾದುದೋ, ಅದು ಏನೇ ಆದರೂ ಅದಕ್ಕೆ ವಿಧೇಯರಾಗಿರಬೇಕೆಂದು ನಾವು ಭಾವಿಸಿದೆವು. ಆದರೆ ಮುಚ್ಚಳಿಕೆಯ ಪ್ರಸ್ತಾಪವನ್ನೇ ಎತ್ತದೆ ಮುಂದೆ ದಿವಾನ್‌ಸಾಹೇಬರಲ್ಲೇ ಪುನಃ ಅರ್ಜಿಕೊಡಬೇಕೆ ಅಥವ ಆಳುವ ಮಹಾಸ್ವಾಮಿಯವರಲ್ಲಿ ಮೊರೆಯಿಟ್ಟುಕೊಳ್ಳುವ ಪ್ರಯತ್ನ ಮಾಡಬೇಕೆ ಎಂಬ ಬೇರೆ ವಿಷಯವನ್ನು ಕುರಿತು ಆಲೋಚಿಸುವ ಉದ್ದೇಶದಿಂದ ಸಭೆ ನಡೆಸಬೇಕಾಗಿದೆ ಅದಕ್ಕಾಗಿ ಅಪ್ಪಣೆ ಕೊಡಬೇಕೆಂದು ನಾನೇ ಎರಡಾವರ್ತಿ ಅರ್ಜಿ ಬರೆದು ಕೇಳಿಕೊಂಡೆನು, ಆದರೆ ಅವರು ಆ ಬೇಡಿಕೆಯನ್ನು ತಿರಸ್ಕರಿಸಿದರು. ಅಂದಮೇಲೆ ಯಾವ ಸಂಬಂಧವಾಗಿ ನಾವು ಸಭೆ ಸೇರಕೂಡದೆಂದರೆ ನಮ್ಮ ಹಕ್ಕು ಬಾಧ್ಯತೆಗಳೇನು ಉಳಿದುವು? ಎಂದು ಕೇಳಿದರು. ಆಮೇಲೆ ಅರ್ಜಿಯನ್ನು ಪೂರ್ತಿ ಓದಿ ಸಾವಿರಾರು ಮಂದಿ ರೈತರ ರುಜುಗಳ ಸಮೇತ ದಿವಾನ್‌ರಿಗೆ ಒಪ್ಪಿಸಿದರು.

ದಿವಾನ್‌ರು ಭಾಷಣಮಾಡುತ್ತ—ಸರ್ಕಾರದವರು ಇಷ್ಟೊಂದು ಹಣ ವೆಚ್ಚಮಾಡಿ ನೀರು ತಂದಿರುತ್ತಾರೆ ನಿಮ್ಮ ಉಪಕಾರಕ್ಕಾಗಿ. ರೈತರಿಗೆ ತೊಂದರೆ ಕೊಡಬೇಕೆಂಬುದು ನಮ್ಮ ಉದ್ದೇಶವಲ್ಲ, ನಮ್ಮಲ್ಲಿ ನಂಬಿಕೆಯಿಡಿರಿ. ಅವರಿವರ ಮಾತನ್ನು ಕೇಳಬೇಡಿ. ನೀರುತೆಗೆದುಕೊಳ್ಳಿಯೆಂದು ಯಾರನ್ನೂ ಬಲಾತ್ಕರಿಸುವುದಿಲ್ಲ. ಬೇಕಾದವರು ತೆಗೆದುಕೊಳ್ಳಬಹುದು, ಬೇಡವಾದವರು ಬಿಡಬಹುದು. ಬೇರೆಯವರಿಗೆ ನೀರು ಕೊಡುವ ಏರ್ಪಾಡು ಮಾಡುತ್ತೇವೆ. ಅದೇನೂ ಕಷ್ಟವಾಗುವುದಿಲ್ಲ. ಬ್ಲಾಕು ಸಿಸ್ಟಂ ಬಹಳ ಒಳ್ಳೆಯದು. ಆ ಪ್ರಕಾರ ಸಾಗುವಳಿ ಮಾಡದಿದ್ದರೆ ಒಂದು ದೊಡ್ಡ ಅಪಾಯವಿದೆ. ಬರಿ ಬತ್ತವನ್ನೇ ಬೆಳೆಯುವ ಇತರ ಪ್ರದೇಶಗಳಲ್ಲಿರುವಂತೆ ಇಲ್ಲಿಯೂ ಮಲೇರಿಯ ಬಂದುಬಿಡುತ್ತದೆ. ಬರಿ ಬತ್ತ ಬೆಳೆದರೆ ಪ್ರಯೋಜನವಿಲ್ಲ. ಅದರಿಂದ ಹೆಚ್ಚು ಹಣ ಸಿಕ್ಕುವುದಿಲ್ಲ. ಮದರಾಸು ಅಧಿಪತ್ಯದಲ್ಲಿ ಮೆಟ್ಟೂರು ಕಾವೇರಿ ಅಣೆಕಟ್ಟಿನ ಪ್ರಾಂತ್ಯದಲ್ಲೂ ಈಗ ಬತ್ತಕ್ಕೆ ಬದಲಾಗಿ ಕಬ್ಬು ಬೆಳೆಯಬೇಕೆಂದೇ ಏರ್ಪಡಿಸಿರುವರು. ಆದ್ದರಿಂದ ನೀವೂ ಇಲ್ಲಿ ಕಬ್ಬು ಬೆಳೆಯಿರಿ ಎಂದು ಹೇಳುವುದು. ಇದೆಲ್ಲಾ ನಿಮ್ಮ ಒಳ್ಳೆಯದಕ್ಕೋಸ್ಕರ ಹೇಳುವ ಮಾತು. ನೀವು ಮಕ್ಕಳ ಹಾಗೆ ಹಟಮಾಡಿದರೆ ನಿಮಗೆ ಲುಕ್ಸಾನು ಎಂದು ಮುಂತಾಗಿ ರೈತರಿಗೆ ಬುದ್ಧಿವಾದ ಹೇಳಿದರು.

ಆಮೇಲೆ ಮ|| ಗಾಣದಾಳು ಲಿಂಗೇಗೌಡರು ಎದ್ದು ಕಂಟ್ರಿಬ್ಯೂಷನ್ ಮತ್ತು ನೀರು ಸರ್ದಿ ದರಗಳು ಹೆಚ್ಚೆಂದೂ, ಬ್ಲಾಕ್ ಸಿಸ್ಟಂಪ್ರಕಾರ ವ್ಯವಸಾಯ ಮಾಡುವುದು ಬಹಳ ಕಷ್ಟ ನಷ್ಟಗಳಿಗೆ ಕಾರಣವಾಗಿರುವುದರಿಂದ ಆ ನಿರ್ಬಂಧವನ್ನು ತಪ್ಪಿಸಬೇಕೆಂದೂ, ಕಡೆಗೆ 3 ಬ್ಲಾಕುಗಳನ್ನು ತಪ್ಪಿಸಿ 1 ಬಾಗಾಯಿತು ಎಂದು 2 ಬ್ಲಾಕುಗಳನ್ನಾದರೂ ಮಾಡಬೇಕೆಂದು ಕೇಳಿಕೊಂಡರು. ಹಾಗೆ ಮಾಡುವುದು ಸ್ವಲ್ಪ ಕಷ್ಟ. ಆ ವಿಚಾರವನ್ನು ವ್ಯಾಪಾರ ಮತ್ತು ಕೈಗಾರಿಕೆಗಳ ಇಲಾಖ ಡೈರೆಕ್ಟರು ತಿಳಿಸುತ್ತಾರೆಂದು ದಿವಾನ್‌ರು ಹೇಳಿದರು.

ಮ|| ನವರತ್ನರಾಮರಾಯರು ಎದ್ದು ಬ್ಲಾಕು ಸಿಸ್ಟಂ ಗುಣಗಾನ ಮಾಡುತ್ತ ಈಗಿರುವ ನೀರಿನಿಂದ ಪ್ರಯೋಜನಕರವಾದ ಬೆಳೆ ಬೆಳೆಯುವುದು; ನೀರು ಪೋಲಾಗದಂತೆ ಉಪಯೋಗಿಸಿಕೊಳ್ಳುವುದು. ಆರೋಗ್ಯಕಾಪಾಡಿಕೊಳ್ಳುವುದು. ಈ 3 ಮುಖ್ಯ ಉದ್ದೇಶಗಳಿಂದ ಈ ಪದ್ಧತಿಯನ್ನು ಆಚರಣೆಗೆ ತರಬೇಕಾಗಿದೆ ಎಂದು ಹೇಳಿ ಬ್ಲಾಕ್ ಸಿಸ್ಟಂ ವಜಾಮಾಡುವ ವಿಚಾರದಲ್ಲಿ ಯಾವ ಆಕಾಂಕ್ಷೆಯನ್ನು ರೈತರಿಗೆ ಕೊಡುವುದಕ್ಕೆ ಆಗುವುದಿಲ್ಲವೆಂದು ತಿಳಿಸಿದರು.

ರೆವಿನ್ಯೂ ಕಮಿಷನರೂ, ಸಹಾಯಕ ಸಂಘಗಳ ರಿಜಿಸ್ಟ್ರಾರರೂ ಬ್ಲಾಕು ಸಿಸ್ಟಂ ಪ್ರಕಾರ ಕೆಲಸಮಾಡುವಂತೆ ಬುದ್ಧಿ ಹೇಳಿ ಭಾಷಣಗಳನ್ನು ಮಾಡಿದರು. ಆಗ ರೈತರು ನಿಮ್ಮ ಸಮಾಧಾನದ ಮಾತುಗಳು ಬೇಡಿ ಸ್ವಾಮಿ ನಮ್ಮ ಕಷ್ಟ ಪರಿಹಾರಮಾಡಿಕೊಡಿ ಎಂದು ಕೇಳಿಕೊಂಡರು.

3 ಬ್ಲಾಕಿಗೆ ಬದಲು 2 ಬ್ಲಾಕುಗಳನ್ನು ಮಾಡಿದರೆ ಏನುತೊಂದರೆ ಎಂಬುದಕ್ಕೆ ಕಾರಣಗಳನ್ನು ತಿಳಿಸಿಯೆಂದು ದಿವಾನ್‌ರು ಅಧಿಕಾರಿಗಳನ್ನು ಕೇಳಿದರು. ಮ|| ಗಳಾದ ನವರತ್ನರಾಮರಾಯರು, ರಾಜಗೋಪಾಲಾಚಾರಿಯವರು, ಎಚ್. ನರಸಿಂಹಯ್ಯಂಗಾರ್ಯರು, ವ್ಯವಸಾಯದ ಇಲಾಖ ಡೈರೆಕ್ಟರು ಕೃಷ್ಣಯ್ಯನವರು ಮುಂತಾದ ಅಧಿಕಾರಿಗಳು ಹಾಗೆ ಮಾಡುವುದಕ್ಕೂ ಪ್ರಯತ್ನಿಸಿ ಯಾವ ಕಾರಣವನ್ನು ಹೇಳುವುದಕ್ಕೂ ಆಗದೆ ಹಾಗೆ ಮಾಡುವುದಕ್ಕೆ ಆಗುವುದಿಲ್ಲ 3 ಬ್ಲಾಕುಗಳೇ ಇರಬೇಕೆಂದು ವಾದಿಸಿದರು. ರೈತರು ಸಮಾಧಾನಪಡಲಿಲ್ಲ.

ದಿವಾನ್‌ಸಾಹೇಬರು—ನೀರು ಸ್ವಲ್ಪ ಇದೆ ಅದನ್ನು ಹೆಚ್ಚು ಮಂದಿಗೆ ಹಂಚುವ ಉದ್ದೇಶದಿಂದ ಬ್ಲಾಕ್ ಸಿಸ್ಟಂನನ್ನು ಆಚರಣೆಗೆ ತರಬೇಕೆಂದಿದೆ ಎಂದು ಅಪ್ಪಣೆ ಕೊಡಿಸಿದರು. ಎಕ್ಸಿಕ್ಯುಟಿವ್ ಇಂಜನೀರು ಮ|| ಸುಬ್ಬರಾಯರು ಎದ್ದು ನೀರು ಸಾಲುವುದೆ? ಇಲ್ಲವೆ? ಎಂಬುದು ಪ್ರಶ್ನೆಯಲ್ಲ ಸಮುದ್ರದಲ್ಲಿ ನೀರು ಬೇಕಾದಷ್ಟಿದೆ. ಎಷ್ಟು ಬೇಕಾದರು ನೀರು ಒದಗಿಸಬಹುದು. ಆದರೆ ಆರೋಗ್ಯ ಹೆಚ್ಚು ಲಾಭ ಇವೇ ಮೊದಲಾದ ದೃಷ್ಟಿಯೇ ಈ ಪದ್ಧತಿಯನ್ನು ಆಚರಣೆಗೆ ತರಬೇಕೆನ್ನುವುದಕ್ಕೆ ಮುಖ್ಯ ಕಾರಣವೆಂದು ಹೇಳಿದರು.

ಮ|| ಹೊನ್ನಯ್ಯನವರು ದಿವಾನ್‌ರನ್ನು ಕುರಿತು ಸ್ವಾಮಿ, ನೀವು ಇದ್ದ ಸಂಗತಿಯನ್ನು ಸತ್ಯವಾಗಿ ಆಡಿರಿ. ನಾವೂ ಒಪ್ಪಿಕೊಳ್ಳುತ್ತೇವೆ. ಆದರೆ ನಿಮ್ಮೆದುರಿಗೆ ಇವರು ಸುಳ್ಳು ಹೇಳುತ್ತಾರಲ್ಲಾ ಇದು ನ್ಯಾಯವೇ ಎಂದು ಕೇಳಿದರು.

ಮ|| ಹೊನ್ನಯ್ಯನವರಿಗೆ ಮ|| ಸುಬ್ಬರಾಯರು ಉತ್ತರ ಹೇಳಲು ಪ್ರಯತ್ನಿಸುತ್ತಿರುವಾಗ್ಗೆ ದಿವಾನ್‌ರು ಅವರನ್ನು ಸುಮ್ಮನಿರಿಸಿ ಹಿಂದಕ್ಕೆ ಕರೆದರು.

3 ಬ್ಲಾಕುಗಳಿಗೆ ಬದಲಾಗಿ 2 ಬ್ಲಾಕುಗಳಿರಬೇಕೆಂಬ ವಿಷಯದಲ್ಲಿ ಮ|| ಗಳಾದ ಎಚ್. ಹೊನ್ನಯ್ಯನವರು ವಳಗೆರಹಳ್ಳಿ ಹೊನ್ನಗಿರಿಗೌಡರು ಗೆಜ್ಜಲಗೆರೆ ಮರಿಸಾಮಿಗೌಡರು, ಕೀಲಾರದ ಚಿಕ್ಕತಮ್ಮಯ್ಯನವರು ಮುಂತಾದ ರೈತರು ಬಹಳವಾಗಿ ಚರ್ಚಿಸಿ ಕಾರಣಗಳಸಮೇತ ಬೇಡಿಕೊಂಡರು. 2 ಭಾಗ ಮಾಡಿ 1 ಭಾಗ ತರಿ, ಇನ್ನೊಂದು ಭಾಗ ಬಾಗಾಯಿತು ಮಾಡಿ ಬಾಗಾಯಿತಿನಲ್ಲಿ ಕಬ್ಬು, ಅಲಸಂದೆ, ಕುರುಳ್ಳಿ, ಬೆಳ್ಳುಳ್ಳಿ ಮುಂತಾದುವುಗಳನ್ನು ಬೆಳೆದುಕೊಳ್ಳುತ್ತೇವೆ. ಆದಾಗದಿದ್ದರೆ, ತರಿ ಭಾಗದಲ್ಲೇ ಅನುಕೂಲವುಳ್ಳವರು ಕಬ್ಬುಹಾಕಿಕೊಳ್ಳುತ್ತಾರೆ; ಖುಷ್ಕಿ ಭಾಗದಲ್ಲಿ ಮಾರಾಟ ಫಸಲುಗಳನ್ನು ಬೆಳೆದುಕೊಳ್ಳುತ್ತೇವೆ, ತರೀ ಭಾಗಕ್ಕೆ ನೀವು ಈಗ ಹಾಕಿರುವಷ್ಟೇ ಕಂಟ್ರಿಬ್ಯೂಷನ್ ಮತ್ತು ನೀರು ಸರ್ದಿ ಕೊಡುತ್ತೇವೆ. ಖುಷ್ಕಿ ಭಾಗಕ್ಕೆ ಅವುಗಳನ್ನು ವಜಾಮಾಡಿ ಅಥವ ನೀರು ತೆಗೆದುಕೊಂಡವರಿಗೆ ನ್ಯಾಯವಾದಷ್ಟು ನೀರು ತೆರಿಗೆ ತೆಗೆದುಕೊಳ್ಳಿ. ಬತ್ತದ ಭಾಗದಲ್ಲಿ ಕಬ್ಬು ಹಾಕಿದರೆ, ಬತ್ತ ಕಟಾವಾದಮೇಲೆ ಕಬ್ಬಿಗೆ ನೀರಿಲ್ಲದೆ ಹೋಗುವದೆನ್ನುತ್ತೀರಿ. ಅಂತ್ಯಕಾಲದಲ್ಲಿ ಕಬ್ಬಿಗೆ [illegible] ನೀರು

[illegible]ಮೇಲೆ 2-3 ಹದ ನೀರು ಕೊಡುವ ಏರ್ಪಾಡು ಮಾಡಿ ಎಂದು ಬಹಳ ಹೊತ್ತು ರೈತರು ಬೇಡಿಕೊಂಡರು.

ದಿವಾನ್‌ರು ಅಧಿಕಾರಿಗಳನ್ನು ಕುರಿತು ಅವರು ಕೇಳಿಕೊಳ್ಳುವುದು ನ್ಯಾಯವಾಗಿ ಕಾಣುತ್ತೆ. ಅದೇಕೆ ಹಾಗೆ ಮಾಡಲು ಆಗುವುದಿಲ್ಲ ಕಾರಣಗಳನ್ನು ತಿಳಿಸಿ ಎಂದು ಪುನಃ ಕೇಳಿದರು. ಅಧಿಕಾರಿಗಳು ದಿವಾನ್‌ರ ಕಿವಿಯಲ್ಲೇ ಸಮಾಧಾನ ಮತ್ತು ಕಾರಣಗಳನ್ನು ಹೇಳಿದರು. ಆಗ ಕೀಲಾರದ ಮ|| ತಮ್ಮಯ್ಯನವರು ದಿವಾನ್‌ರನ್ನು ಕುರಿತು ಸ್ವಾಮಿ, ನೀವು ನಮ್ಮನ್ನು ಕಾಪಾಡುವುದಕ್ಕಾಗಿ ನಮ್ಮಗಳ ತಂದೆಯಹಾಗೆ ದಯಮಾಡಿದ್ದೀರಿ. ನಿಮಗೆ ನಮ್ಮ ಮೇಲೆ ದಯೆಯಿದೆ. ಆದರೆ ನಿಮ್ಮ ಸುತ್ತಲಿರುವ ನಾಲ್ಕಾರು ಮಂದಿ ಅಧಿಕಾರಿಗಳು ನಿಮ್ಮ ಕಿವಿಯಲ್ಲಿ ಏನೇನೋ ಹೇಳಿ ನಮ್ಮ ಕಷ್ಟಪರಿಹಾರವಾಗದಂತೆ ಅಡ್ಡಿ ಮಾಡುತ್ತಿದ್ದಾರೆ ಎಂದು ಹೇಳಿದರು. ಅಲ್ಲದೆ ಮ|| ತಮ್ಮಯ್ಯನವರು ಸರ್ಕಾರದವರು ಹೇಳಿದ ಆಕ್ಷೇಪಣೆಗಳಿಗೆಲ್ಲಾ ಸರಿಯಾದ ಉತ್ತರ ಹೇಳುತ್ತ ರೈತರ ಕಷ್ಟಪರಂಪರೆಗಳನ್ನು ಹೃದಯಂಗಮವಾಗಿ ವಿವರಿಸಿ ಅಧಿಕಾರಿಗಳನ್ನು ಅಡ್ಡಬರಬೇಡಿರೆಂದು ಬೇಡಿಕೊಂಡು ರೈತರನ್ನು ಉದ್ಧರಿಸಬೇಕಾಗಿ ದಿವಾನ್‌ರನ್ನು ಪ್ರಾರ್ಥಿಸಿಕೊಂಡರು.

ಮ|| ಗಳಾದ ಎಸ್. ಸಿ. ಮಲ್ಲಯ್ಯನವರು, ಮಂಡ್ಯದ ಹೊಂಬಯ್ಯನವರ ಲಿಂಗೇಗೌಡರು, ಗುರುದೇವರಹಳ್ಳಿ ಕೆಂಪಯ್ಯನವರು, ದೊಡ್ಡಅರಸೀಕೆರೆ ಚಿಕ್ಕೇಗೌಡರು, ಅಣ್ಣೂರು ಪುಟ್ಟೇಗೌಡರು ಮುಂತಾದ ರೈತರು ಸಹ ರೈತರ ವಿವಿಧಕಷ್ಟ ನಷ್ಟಗಳನ್ನು ವಿವರಿಸಿ ಅವುಗಳನ್ನು ಪರಿಹರಿಸಿಕೊಡಬೇಕೆಂದು ಕೇಳಿಕೊಂಡರು.

ಸಾಯಂಕಾಲ 4 ಘಂಟೆಯವರೆಗೂ ಈ ರೀತಿ ಚರ್ಚೆ ನಡೆದಮೇಲೆ ದಿವಾನ್‌ರು, ರೈತರನ್ನು ಕುರಿತು ನೀವು ಹಳೇ ದಾರಿಯಲ್ಲೇ ಹೋಗಬೇಕೆಂದು ಹಠಹಿಡಿಯಬೇಡಿ. ಹೊಸದಾರಿ ತೋರಿಸಿಕೊಡುತ್ತೇನೆ. ನನ್ನ ಜೊತೆಯಲ್ಲಿ ಸ್ವಲ್ಪದೂರ ಬನ್ನಿ ಕಷ್ಟವಾದರೆ ಹಿಂದಕ್ಕೆ ಹೋಗುವಿರಿ, ಬರುವುದೇ ಇಲ್ಲವೆಂದು ಹಠಮಾಡಬೇಡಿರೆಂದು ಹೇಳಿದರು. ರೈತರ ಮುಖಂಡರು ಬರುವುದೇ ಇಲ್ಲವೆಂದು ನಾವು ಹಠಮಾಡುತ್ತಿಲ್ಲ ಸ್ವಾಮಿ. ಆದರೆ ನಮ್ಮನ್ನು ಹೊಸದಾರಿಯಲ್ಲಿ ಓಡಿಸುವಾಗ ಮುಗ್ಗರಿಸಿ ಬೀಳಿಸದೆ ಕಾಪಾಡಿ ಎಂದು ಮಾತ್ರ ಕೇಳಿಕೊಳ್ಳುತ್ತೇವೆಂದು ಅರಿಕೆ ಮಾಡಿಕೊಂಡರು.

ಈಗ ಮಾಡಿರುವ ಹುಕ್ಕುಂಗಳನ್ನು ಬದಲಾಯಿಸುವುದಕ್ಕೆ ಆಗುವುದಿಲ್ಲವೆಂದೂ ನ್ಯಾಯವಾದ ತೊಂದರೆಗಳೇನಾದರೂ ಇದ್ದರೆ ಡೆಪ್ಯುಟಿಕಮಿಷನರವರ ಅಧ್ಯಕ್ಷತೆಯಲ್ಲಿ ಏರ್ಪಟ್ಟಿರುವ ಸ್ಥಳೀಯ ಸಮಿತಿಯವರು ಪರಿಹಾರಮಾಡುವರೆಂದೂ ದಿವಾನ್‌ರು ಹೇಳಿದರು. ಒಬ್ಬ ಬಾತ್ಮಿದಾರ್.

ಮೈಸೂರು ಸಂಸ್ಥಾನದ ದಿವಾನ್ ಸಾಹೇಬರು ಅಮೀನ್-ಉಲ್-ಮುಲ್ಕ್ ಸರ್ ಮಿರ್ಜ್ ಎಂ. ಇಸ್ಮೈಲ್ ಬಿ.ಎ., ಸಿ. ಐ. ಇ., ಒ. ಬಿ. ಇ. ಯವರ ಸನ್ನಿಧಿಯಲ್ಲಿ ಅರ್ವಿನ್ ನಾಲಾ ರೈತಮಂಡಲಿಯವರ ವಿಜ್ಞಾಪನೆಗಳು.

ಸ್ವಾಮಿ, ಅರ್ವಿನ್ ನಾಲಾ ಸಾಗವಳಿ ಸಂಬಂಧವಾಗಿ ನಮ್ಮಗಳಿಗುಂಟಾಗುವ ಕಷ್ಟ, ನಷ್ಟಗಳ ಮೊರೆಯನ್ನು ಮತ್ತೊಮ್ಮೆ ಕೇಳುವುದಕ್ಕಾಗಿ ಮಹೋನ್ನತವಾದ ತಮ್ಮ ಪದವಿಗೆ ಸಂಬಂಧಿಸಿದ ಘನತರ ಜವಾಬ್ದಾರಿಯುಳ್ಳ ರಾಜಕಾರ್ಯಗಳನ್ನು ಈ ದಿವಸದಮಟ್ಟಿಗೆ ಮನ್ನಿಸಿ, ಈ ಪ್ರಯಾಣದಿಂದ ತಮಗುಂಟಾಗುವ ದೇಹಾಲಸ್ಯವನ್ನು ಗಣನೆಗೆ ತಾರದೆ ತಾವು ನಮ್ಮಗಳಿಗೆ ಈ ದಿನ ಇಲ್ಲಿ ಭೇಟಿ ದಯಪಾಲಿಸಿದುದಕ್ಕಾಗಿ ನಾವೆಲ್ಲರೂ ತಮಗೆ ಚಿರ ಋಣಿಗಳಾಗಿದ್ದೇವೆ.

ಕಳೆದ ಜನವರಿ ಮೊದಲನೇ ವಾರದಲ್ಲಿ ಅರ್ವಿನ್ ನಾಲೆ ಕೆಳಗಿನ ಸುಮಾರು 4000 ಮಂದಿ ರೈತರಾದ ನಾವು ಇಲ್ಲಿಂದ ಬೆಂಗಳೂರಿಗೆ ಕಾಲುನಡೆಯಲ್ಲಿ ಪ್ರಯಾಣಬೆಳೆಸಿ, ತಮ್ಮ ಭೇಟಿಮಾಡಿ ನಮ್ಮಗಳ ಗೋಳನ್ನು ಹೇಳಿಕೊಂಡುದರ ಪರಿಣಾಮವಾಗಿ ಘನಸರ್ಕಾರದವರು ಕಂಟ್ರಿಬ್ಯೂಷನ್ ಕಂತುಗಳಮೇಲೆ ವಿಧಿಸಿದ್ದ ಬಡ್ಡಿಯನ್ನು ವಜಾಮಾಡಿ, ಕಂಟ್ರಿಬ್ಯೂಷನ್ ಮೊಬಲಗನ್ನು ಕೊಡಬೇಕಾದ ಕಂತುಗಳ ವಾಯಿದೆಯನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಿದುದಕ್ಕಾಗಿ ದಯಾಳು ಸರ್ಕಾರದವರಿಗೆ ನಮ್ಮಗಳ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಈ ಮೂಲಕ ಅರ್ಪಿಸುತ್ತೇವೆ.

ದಯಾಳು ಸರ್ಕಾರದವರು ತೋರಿಸಿರುವ ರಿಯಾಯಿತಿಗಳಿಂದ ನಮ್ಮಗಳಿಗುಂಟಾಗುವ ಕಷ್ಟ, ನಷ್ಟಗಳೆಲ್ಲವೂ ಪರಿಹಾರವಾದಂತಾಗಲಿಲ್ಲವೆಂದು ಸನ್ನಿಧಿಯಲ್ಲಿ ಅರಿಕೆ ಮಾಡಿಕೊಳ್ಳಬೇಕಾಗಿದೆ. ನಮ್ಮಗಳಿಗುಂಟಾಗಬಹುದಾದ ತೊಂದರೆಗಳನ್ನು ಪರಿಹರಿಸಿಕೊಳ್ಳುವ ಉದ್ದೇಶದಿಂದ ನಾವುಗಳು ಪರಸ್ಪರ ಕಲೆತು ಕೆಲಸ ಮಾಡದಂತೆ ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ತಮಗಿರುವ ಅಧಿಕಾರವನ್ನು ದುರುಪಯೋಗಮಾಡಿ ನಮ್ಮಗಳ ಅಜನ್ಮಸಿದ್ಧವಾದ ಸಭಾಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ ಮುಂತಾದ ಹಕ್ಕುಗಳನ್ನು ಕಿತ್ತುಕೊಂಡಿರುವವರೆಂಬುದನ್ನು ವಿಷಾದಪೂರ್ವಕವಾಗಿ ವಿಜ್ಞಾಪಿಸಿಕೊಳ್ಳಬೇಕಾಗಿದೆ.

ನಮಗುಂಟಾಗುವ ಕಷ್ಟನಷ್ಟಗಳೇನೆಂಬ ವಿಚಾರವು ಇದುವರಿವಿಗೆ ತಮ್ಮ ಘನವಾದ ಚಿತ್ತಕ್ಕೆ ವೇದ್ಯವಾಗಿಯೇ ಇದೆ. ನಮ್ಮ ಮಂಡಲಿಯಿಂದ ಈಚೆಗೆ ಪ್ರಕಟವಾಗಿರುವ ಪುಸ್ತಕದಲ್ಲಿ ನಮಗುಂಟಾಗುವ ನಿಜವಾದ ಕಷ್ಟ, ನಷ್ಟಗಳು ಮತ್ತು ನಮ್ಮ ನ್ಯಾಯವಾದ ಬೇಡಿಕೆಗಳು ಮೊದಲಾದ ವಿಷಯಗಳೆಲ್ಲವೂ ಸ್ಥೂಲವಾಗಿ ವಿವರಿಸಲ್ಪಟ್ಟಿವೆ. ಸ್ವಾಮಿಯವರ ಪರಾಂಬರಿಕೆ ಬಗ್ಗೆ ಆ ಪುಸ್ತಕದ ಪ್ರತಿಯೊಂದನ್ನು ಈ ವಿಜ್ಞಾಪನಾಪತ್ರಿಕೆಯೊಡನೆ ಒಪ್ಪಿಸಲು ಅನುಜ್ಞೆ ಬೇಡುತ್ತೇವೆ. ಪುಸ್ತಕವನ್ನು ಸಾವಧಾನವಾಗಿ ಅವಲೋಕಿಸುವುದರಿಂದ ನಮ್ಮ ಕಷ್ಟ ನಷ್ಟಗಳು ನಿಜವಾದುವುಗಳೆಂದೂ, ನಮ್ಮ ಬೇಡಿಕೆಗಳು ನ್ಯಾಯವಾದುವುಗಳೆಂದೂ ತಮ್ಮ ದಿವ್ಯ ಚಿತ್ತಕ್ಕೆ ವೇದ್ಯವಾಗುವುದಲ್ಲದೆ, ನಾವುಗಳು "ತಿಳಿಗೇಡಿಗಳಾದ ಕೆಲವು ಜನರ ದುರ್ಬೋಧನೆಗೆ ಒಳಪಟ್ಟು ಅವರಿಂದ ತಪ್ಪುದಾರಿಗೆಳೆಯಲ್ಪಡುತ್ತಿದ್ದೇವೆ" ಎಂದು ಸರ್ಕಾರದವರಿಗೆ ಉಂಟಾಗಿರುವ ಭಾವನೆಯು ಸರಿಯಾದುದಲ್ಲವೆಂಬ ಅಂಶವೂ ಸ್ಪಷ್ಟಪಡುವುದೆಂದು ನಂಬಿದ್ದೇವೆ.

ಸ್ವಾಮಿ, ಅರ್ವಿನ್ ನಾಲೆ ಸಾಗುವಳಿ ಸಂಬಂಧವಾಗಿ ಸರ್ಕಾರದವರು ಇದುವರೆಗೆ ಹೊರಡಿಸಿರುವ ಹುಕ್ಕುಂಗಳಿಗೆ ಕೃಷ್ಣರಾಜಸಾಗರ ಕಮಿಟಿಯವರ ಸಲಹೆಗಳೇ ಮುಖ್ಯ ಆಧಾರವಾಗಿವೆ. ಆ ಕಮಿಟಿಯಲ್ಲಿ ಮೊದಲು ಮೊದಲು ಸ್ವತಃ ವ್ಯವಸಾಯಗಾರರಾಗಲಿ, ವ್ಯವಸಾಯಶಾಸ್ತ್ರಜ್ಞರಾಗಲಿ ಸದಸ್ಯರಾಗಿರಲಿಲ್ಲ. ಈ ಆಕ್ಷೇಪಣೆಯು ಸರ್ಕಾರದವರ ಕಿವಿಮುಟ್ಟಿದ ಮೇಲೆ ಒಬ್ಬಿಬ್ಬರು ವ್ಯವಸಾಯಗಾರರನ್ನೂ ಒಬ್ಬಿಬ್ಬರು ವ್ಯವಸಾಯದ ಇಲಾಖಾ ಅಧಿಕಾರಿಗಳನ್ನೂ ಆ ಕಮಿಟಿಗೆ ಸದಸ್ಯರನ್ನಾಗಿ ಸರ್ಕಾರದವರು ನಿಯಮಿಸಿದುದೇನೋ ನಿಜ. ಆದರೆ ಈ ಹೊಸ ಸದಸ್ಯರು ಆ ಕಮಿಟಿ ಮೀಟಿಂಗುಗಳಿಗೆ ಹೋಗುವುದಕ್ಕೆ ಮೊದಲೇ ಅನೇಕ ವಿಷಯಗಳು ಆ ಕಮಿಟಿಯ ಹಿಂದಿನ ಮೀಟಿಂಗುಗಳಲ್ಲಿ ಚರ್ಚಿಸಲ್ಪಟ್ಟು ತೀರ್ಮಾನವಾಗಿದ್ದವು. ಆದುದರಿಂದ ಆ ವಿಷಯಗಳನ್ನು ಹೊಸ ಸದಸ್ಯರು ಪುನಃ ಪ್ರಸ್ತಾಪಿಸಲು ಅವಕಾಶವೇ ಆಗಲಿಲ್ಲ. ಹೀಗೆ ಸರ್ಕಾರಿ ಹುಕ್ಕುಂಗಳಿಗೆ ಮೂಲಾಧಾರವಾಗಿರುವ ಕಮಿಟಿಯ ತೀರ್ಮಾನಗಳು ವ್ಯವಸಾಯಗಾರರ ಅಥವಾ ವ್ಯವಸಾಯಶಾಸ್ತ್ರಜ್ಞರ ಅಭಿಪ್ರಾಯಗಳನ್ನೊಳಗೊಳ್ಳದೆ ಇರುವುದರಿಂದಲೇ ನಮಗೆ ಈ ಬಗೆಯ ತೊಂದರೆಗಳು ಸಂಭವಿಸಿವೆ.

ಈಗ ನಮ್ಮ ಬೇಡಿಕೆಯಾದರೂ ಇಷ್ಟೆ. ನಮಗೆ ನಾಲೆಯಿಂದ ನೀರು ಕೊಡುವಷ್ಟು ಜಮೀನಿಗೆ ಮಾತ್ರ ನ್ಯಾಯವಾದ ಕಂಟ್ರಿಬ್ಯೂಷನ್ ಮತ್ತು ಕಂದಾಯವನ್ನು ವಿಧಿಸಿ, ಸಾಗವಳಿ ಸಂಬಂಧವಾಗಿರುವ ನಿರ್ಬಂಧವನ್ನು ತಪ್ಪಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ. ಈ ಕಾರ್ಯವು ಸರ್ವಸಮರ್ಪಕವಾಗಿ ನೆರವೇರಬೇಕಾದರೆ ಕೃಷ್ಣರಾಜಸಾಗರ ಕಮಿಟಿಯವರ ಸಲಹೆಗಳನ್ನೂ, ಅವುಗಳ ಆಧಾರದ ಮೇಲೆ ಹೊರಟಿರುವ ಸರ್ಕಾರಿ ಹುಕುಂಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಈ ಸಂಬಂಧವಾಗಿ ವ್ಯವಸಾಯದ ಶಾಸ್ತ್ರಜ್ಞರ ಮತ್ತು ವ್ಯವಸಾಯಗಾರರ ಹೇಳಿಕೆಗಳನ್ನು ತೆಗೆದುಕೊಂಡು ಒಟ್ಟಿನಲ್ಲಿ ಈ ವಿಷಯವನ್ನೇ ಪುನರಾಲೋಚನೆಮಾಡಿ ಸರ್ಕಾರಕ್ಕೆ ತಮ್ಮ ಸಲಹೆಗಳಿಂದ ಕೂಡಿದ ವರದಿಯನ್ನು ಕಳುಹಿಸುವ ಕರ್ತವ್ಯವನ್ನೊಳಗೊಂಡ ಅಧಿಕಾರಿಗಳು ಮತ್ತು ನಮ್ಮಿಂದ ಚುನಾವಣೆಯಾದ ಖಾಸಗಿ ಸದಸ್ಯರಿರುವ ಸ್ವತಂತ್ರ ವಿಚಾರಣಾಸಮಿತಿಯೊಂದನ್ನು ನೇಮಿಸುವುದು ಅತ್ಯಾವಶ್ಯಕವಾಗಿದೆ. ತಾವು ನಮಗೆ ಬೆಂಗಳೂರಿನಲ್ಲಿ ಭೇಟಿ ದಯಪಾಲಿಸಿದ ಸಮಯದಲ್ಲಿ ನಮ್ಮ ಕೋರಿಕೆಯಂತೆ ಒಂದು ಸಮಿತಿಯನ್ನು ನೇಮಿಸುವುದಾಗಿಯೂ, ಅದಕ್ಕೆ ನಾವು ನಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸುವುದಕ್ಕೆ ಅವಕಾಶ ಕೊಡುವುದಾಗಿಯೂ ಭರವಸೆ ಕೊಟ್ಟಿದ್ದಿರಿ. ಆದರೆ ಸರ್ಕಾರದವರು ಮಾತ್ರ ಆ ರೀತಿ ಮಾಡದೆ ಸಾಗುವಳಿಗೆ ಪ್ರಾರಂಭವಾದಮೇಲೆ ತಲೆದೋರಬಹುದಾದ ತೊಂದರೆಗಳ ಪರಿಹಾರವನ್ನು ಕುರಿತು ಸರ್ಕಾರಕ್ಕೆ ಸಲಹೆ ಕೊಡುವ ಉದ್ದೇಶದಿಂದ ಒಂದು ಸ್ಥಿರ ಸಮಿತಿಯನ್ನು ನೇಮಿಸಿ ಅದಕ್ಕೆ ಸರ್ಕಾರದವರೇ ಕೆಲವು ಮಂದಿ ಖಾಸಗಿ ಜೊತೆಮನುಷ್ಯರನ್ನು ನಾಮಕರಣ ಮಾಡಿಕೊಂಡಿರುವುದಾಗಿ ವರ್ತಮಾನ ಕೇಳುತ್ತೇವೆ. ಇದು ಕೇವಲ ವಿಷಾದಕರವಾಗಿದೆ. ಇಂಥ ಸಮಿತಿಯಿಂದ ನಮಗೆ ಸ್ವಲ್ಪವೂ ಸಮಾಧಾನವಿಲ್ಲವೆಂತಲೂ, ಇದರಿಂದ ಯಾವ ಪ್ರಯೋಜನವೂ ಆಗಲಾರದೆಂದೂ ವಿಜ್ಞಾಪಿಸಿಕೊಳ್ಳಲು ವ್ಯಸನಪಡುತ್ತೇವೆ. ಈಗಲೂ ನಾವು ಮೇಲೆ ಸೂಚಿಸಿರುವ ಉದ್ದೇಶ ಮತ್ತು ಕರ್ತವ್ಯವನ್ನೊಳಗೊಂಡ ವಿಚಾರಣಾ ಸಮಿತಿಯೊಂದನ್ನು ನೇಮಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇವೆ. ಅಲ್ಲದೆ, ಆ ಸಮಿತಿಯವರ ಸಲಹೆಗಳನ್ನೊಳಗೊಂಡ ವರದಿಯು ಸರ್ಕಾರಕ್ಕೆ ಹೋಗಿ ಅದರ ಮೇಲೆ ಸರ್ಕಾರದ ಹುಕ್ಕುಂ ಆಗುವವರೆಗೂ ಈಗ ಕೆಲವು ಸ್ಥಳೀಯ ಅಧಿಕಾರಿಗಳು ನಡೆಯುತ್ತಿರುವ ಬಲವಂತವಾಗಿಯೂ ಹೆದರಿಸಿ ಬೆದರಿಸುವುದರಿಂದಲೂ ದುರಾಶೆ ಪ್ರತ್ಯಾಶೆಗಳನ್ನು ತೋರಿಸುವುದರ ಮೂಲಕವೂ ಮುಚ್ಚಳಿಕೆ ಬರೆಸಿಕೊಳ್ಳುತ್ತಿರುವುದು, ಮುಚ್ಚಳಿಕೆ ಬರೆದುಕೊಡದಿದ್ದವರನ್ನು ತಕರಾರು ತಃಖ್ತೆಗೆ ಗುರಿಮಾಡಿ, ಅಧಿಕವಾದ ಜುಲ್ಮಾನೆ ವಿಧಿಸಿ, ಚರಸ್ವತ್ತಿನ ಜಪ್ತಿ ಮಾಡುವುದೇ ಮುಂತಾದ ವಿವಿಧ ಕಿರುಕುಳಗಳನ್ನು ಕೊಡುವುದು ಇವೇ ಮೊದಲಾದ ಕಾರ್ಯಗಳನ್ನು ನಡೆಸದಂತೆ ಕಟ್ಟಾಜ್ಞೆ ಮಾಡಬೇಕಾಗಿ ಬೇಡಿಕೊಳ್ಳುತ್ತೇವೆ. ನಾವುಗಳು ಬೆಂಗಳೂರಿನಲ್ಲಿ ತಮ್ಮ ದರ್ಶನ ತೆಗೆದುಕೊಂಡ ಸಮಯದಲ್ಲಿ ಈ ವಿಚಾರವನ್ನು ಅರಿಕೆಮಾಡಿಕೊಂಡಿದ್ದೆವು. ಮುಂದೆ ಆ ರೀತಿ ನಡೆಯದಂತೆ ಏರ್ಪಡಿಸುವುದಾಗಿ ತಾವು ಭರವಸೆ ಕೊಟ್ಟಿದ್ದಿರಿ. ಆದರೂ ಅಧಿಕಾರಿಗಳಿಂದ ನಮಗೆ ಸಂಭವಿಸುತ್ತಿರುವ ಕಿರುಕುಳವು ದಿನದಿನಕ್ಕೆ ಹೆಚ್ಚುತ್ತಿದೆಯೇ ಹೊರತು ಕಡಿಮೆಯಾಗಲಿಲ್ಲವೆಂಬ ಅಂಶವನ್ನು ಸನ್ನಿಧಿಯಲ್ಲಿ ಪುನಃ ವಿಜ್ಞಾಪಿಸಿಕೊಳ್ಳುವಂತಾದುದಕ್ಕಾಗಿ ಚಿಂತಿಸುತ್ತೇವೆ. ಈಗಲಾದರೂ ಅಧಿಕಾರಿಗಳಿಂದ ಈ ಬಗೆಯ ಹಿಂಸೆಗಳು ನಮಗೆ ಉಂಟಾಗದಂತೆ ಮಾಡಿ ನಮ್ಮನ್ನು ಕಾಪಾಡಬೇಕಾಗಿ ಬೇಡಿಕೊಳ್ಳುತ್ತೇವೆ. ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ತಮ್ಮ ಪೋಲೀಸ್ ರೆಗ್ಯುಲೇಷನ್ 39 ನೇ ಸೆಕ್ಷನ್ ಹುಕ್ಕುಮಿನಿಂದ ನಮ್ಮ ಅಜನ್ಮಸಿದ್ಧವಾದ ಹಕ್ಕುಗಳಿಗೆ ಅಡಚಣೆಯನ್ನುಂಟುಮಾಡಿರುವುದನ್ನು ತಪ್ಪಿಸಬೇಕಾಗಿಯೂ ಪ್ರಾರ್ಥಿಸಿಕೊಳ್ಳುತ್ತೇವೆ.

ಸ್ವಾಮಿ, ನಮ್ಮ ಈ ವಿಜ್ಞಾಪನೆಗಳನ್ನು ಸಾವಧಾನಚಿತ್ತರಾಗಿ ಲಾಲಿಸಿದುದಕ್ಕಾಗಿಯೂ ನಮ್ಮಗಳಿಗೆ ದರ್ಶನಕೊಟ್ಟುದುದಕ್ಕಾಗಿಯೂ ಮತ್ತೊಮ್ಮೆ ತಮ್ಮನ್ನು ಹೃತ್ಪೂರ್ವಕವಾಗಿ ವಂದಿಸುತ್ತೇವೆ. ತಮಗೆ ಭಗವಂತನು ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇವೆ; ಅಲ್ಲದೆ ನಮ್ಮ ಅನನ್ಯ ರಾಜಭಕ್ತಿಯನ್ನು ಆಳುವ ಮಹಾಸ್ವಾಮಿಯವರ ದಿವ್ಯಸನ್ನಿಧಿಯಲ್ಲಿ ನಿವೇದಿಸಬೇಕಾಗಿ ಬೇಡಿಕೊಳ್ಳುತ್ತೇವೆ.

ಇತಿ ರಾಜಭಕ್ತಿಯುತರೂ, ಸರ್ಕಾರಕ್ಕೆ ವಿಧೇಯರೂ ಆದ
ಅರ್ವಿನ್ ನಾಲಾ ರೈತಮಂಡಲಿಯವರು.

ದಿವಾನ್‌ರವರು ಮಂಡ್ಯಕ್ಕೆ ದಯಮಾಡಿದ್ದರು.
ರೈತರುಗಳ ದೊಡ್ಡ ಸಭೆ.
ಅರ್ವಿನ್ ನಾಲಾ ಬಯಲಿನ ನೀರಾವರಿ ವಿಚಾರಗಳು.

ಬೆಂಗಳೂರು. ತಾರೀಖು 8-7-1932.

ಅರ್ವಿನ್ ನಾಲಾ ಬಯಲಿನ ಜಮೀನುಗಳ ನೀರಾವರಿಗಾಗಿ ಮೈಸೂರು ಸರ್ಕಾರದವರು ಮಾಡಿರುವ ಏರ್ಪಾಡುಗಳು ಇಷ್ಟರಲ್ಲೇ ಆಚರಣೆಗೆ ಬರುವಂತಿರುವುದು ಸರಿಯಷ್ಟೆ. ಈ ಸಂಬಂಧವಾಗಿ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನದಲ್ಲಿಯೂ, ಇತರ ರೀತಿಗಳಲ್ಲಿಯೂ, ದಿವಾನ್‌ರವರಿಗೆ ಅರಿಕೆಗಳು ಮಾಡಲ್ಪಟ್ಟುವು. ಅವರು ಅರ್ವಿನ್ ನಾಲಾ ಪ್ರದೇಶದ ರೈತರ ಅಹವಾಲುಗಳನ್ನು ಖುದ್ದಾಗಿ ಲಾಲಿಸಿ, ಅವರಿಗೆ ತಕ್ಕ ಪರಿಹಾರಗಳು ದೊರೆಯುವಂತೆ ಮಾಡಬೇಕೆಂಬುದೇ ಆ ಅರಿಕೆಗಳ ಸಾರಾಂಶ. ಆ ಅರಿಕೆಗಳನ್ನು ಗೌರವಿಸಿ, ರೈತರಿಗೆ ಭೇಟಿಕೊಡುವುದಕ್ಕಾಗಿ ದಿವಾನ್‌ರವರು ನೆನ್ನೆಯದಿನ ಬೆಳಿಗ್ಗೆ ಮಂಡ್ಯಕ್ಕೆ ದಯಮಾಡಿದ್ದರು.

ನೆನ್ನೆಯದಿನ ಮಧ್ಯಾಹ್ನ ಎರಡು ಗಂಟೆಗೆ 3,000 ಮಂದಿಗಳಿಗೆ ಮೇಲ್ಪಟ್ಟ ರೈತರು ಸಭೆ ಸೇರಿದ್ದರು. ಸುಮಾರು ಮೂರು ಗಂಟೆಗಳಕಾಲ ಸಭೆಯು ನಡೆಯಿತು. ದಿವಾನ್‌ರವರೊಡನೆ ರೆವಿನ್ಯೂ ಕಮಿಷನರವರೂ ಕೈಗಾರಿಕೆಗಳ ಇಲಾಖಾ ಡೈರೆಕ್ಟರವರೂ, ವ್ಯವಸಾಯದ ಇಲಾಖಾ ಡೈರೆಕ್ಟರವರೂ, ಪರಸ್ಪರ ಸಹಾಯಸಂಘಗಳ ರಿಜಿಸ್ಟ್ರಾರರವರೂ, ಕೃಷ್ಣರಾಜಸಾಗರ ಕಾಮಗಾರಿಗಳ ಚೀಫ್ ಇಂಜಿನಿಯರವರೂ, ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರೂ ಸಭೆಗೆ ದಯಮಾಡಿದ್ದರು.

ಸಭೆಯ ಆರಂಭದಲ್ಲೇ ದಿವಾನ್‌ರವರು ತಾವು ಮಂಡ್ಯಕ್ಕೆ ಬಂದಿದ್ದ ಉದ್ದೇಶವನ್ನು ರೈತರಿಗೆ ವಿವರಿಸಿ ಹೇಳಿದರು: ಅರ್ವಿನ್‌ನಾಲೆಯ ಪ್ರದೇಶದಲ್ಲಿರುವ ಜಮೀನುಗಳ ನೀರಾವರಿಗಾಗಿ ಸರ್ಕಾರದವರು ಏರ್ಪಡಿಸಿರುವ ಕ್ರಮವನ್ನನುಸರಿಸುವುದರಲ್ಲಿ ರೈತರುಗಳು ತಮಗಿರುವುದಾಗಿ ಭಾವಿಸಿರುವ ಅಥವಾ ಶಂಕಿಸಿರುವ ತೊಂದರೆಗಳೇನೆಂಬುದನ್ನು ಖುದ್ದಾಗಿ ಅವರಿಂದಲೇ ವಿಚಾರಿಸಿ ತಿಳಿದುಕೊಳ್ಳುವುದು; ನಿಜವಾಗಿಯೂ ತೊಂದರೆಗಳು ಎಷ್ಟರಮಟ್ಟಿಗಿದ್ದುವು, ಅವು ಪರಿಹಾರವಾಗಲು ಅವಕಾಶವಿಲ್ಲವೇ—ಎಂಬ ಅಂಶಗಳನ್ನು ರೈತರೊಡನೆ ಚರ್ಚಿಸುವುದು; ಈ ನೀರಾವರಿ ಏರ್ಪಾಡಿನಿಂದ ಸುಸೂತ್ರವಾಗಿ ಕೆಲಸ ನಡೆಯುವಹಾಗೆ ರೈತರ ಪೂರ್ಣ ಸಹಕಾರವನ್ನು ಪಡೆಯುವುದು; ಈ ಉದ್ದೇಶಗಳಿಂದ ತಾವು ಮಂಡ್ಯಕ್ಕೆ ಬಂದಿದ್ದುದಾಗಿ ದಿವಾನ್‌ರವರು ತಿಳಿಸಿದರು. ರೈತರುಗಳು ಸ್ವಲ್ಪವೂ ಮುಚ್ಚುಮರೆಯಿಲ್ಲದೆ ತಮ್ಮ ಅಭಿಪ್ರಾಯಗಳನ್ನು ತಿಳಿಸಬಹುದೆಂದೂ ಸಹ ಅವರು ಹೇಳಿದರು.

ಆ ಬಳಿಕ ರೈತರ ಪರವಾಗಿ ದಿವಾನ್‌ರವರಿಗೆ ಒಂದು ಅರ್ಜಿಯನ್ನು ಕೊಟ್ಟರು. ದಿವಾನ್‌ರವರು ರೈತರ ಅಹವಾಲುಗಳನ್ನು ಕೇಳುವುದಕ್ಕಾಗಿ ಮಂಡ್ಯಕ್ಕೆ ಬಂದುದಕ್ಕಾಗಿಯೂ, ಕಂಟ್ರಿಬ್ಯೂಷನ್ ಹಣದ ಪಾವತಿಗೆ ಗೊತ್ತಾಗಿದ್ದ ವಾಯಿದೆಯನ್ನು ಹೆಚ್ಚು ಮಾಡಿಕೊಟ್ಟು, ಕಂಟ್ರಿಬ್ಯೂಷನ್ ಹಣದಲ್ಲಿ ಪಾವತಿಯಾಗದೆ ಉಳಿದಿದ್ದ ಹಣದಮೇಲೆ ಬಡ್ಡಿಯ ದರವನ್ನು ಕಡಿಮೆಮಾಡಿ ಉದಾರಭಾವದಿಂದ ರಿಯಾಯಿತಿಯನ್ನು ಮಂಜೂರುಮಾಡಿದುದಕ್ಕಾಗಿಯೂ, ರೈತರು ತಮ್ಮ ಕೃತಜ್ಞತೆಯನ್ನು ಆ ಅರ್ಜಿಯಲ್ಲಿ ಸೂಚಿಸಿದ್ದರು. ಒಟ್ಟು ಜಮೀನಿನಲ್ಲೆಲ್ಲಾ ಬತ್ತದ ಬೆಳೆಯನ್ನಿಡುವುದಕ್ಕೆ ಅವಕಾಶವನ್ನು ತಪ್ಪಿಸಿ ತಾಕುವಾರು ಶಿಸ್ತಿನ (ಬ್ಲಾಕ್‌ಸಿಸ್ಟಂ) ಪ್ರಕಾರ ಜಮೀನುಗಳನ್ನು ಮೂರು ಮೂರು ಹಂತಗಳಾಗಿ ವಿಭಾಗಿಸಿ ಅವುಗಳಲ್ಲಿ ಸರದಿಯಮೇಲೆ ಬತ್ತ, ಕಬ್ಬು, ಮತ್ತು ಖುಷ್ಕಿ ಬೆಳೆಗಳನ್ನಿಡಬೇಕೆಂಬುದಾಗಿ ವಿಧಾಯಕಮಾಡಿ ನಿರ್ಬಂಧವನ್ನು ಕಲ್ಪಿಸಿದುದರಿಂದ ತಮಗೆ ತೊಂದರೆಯೆಂದೂ ರೈತರು ಅರ್ಜಿಯಲ್ಲಿ ನಮೂದಿಸಿದ್ದರು. ಈ ನಿರ್ಬಂಧವನ್ನು ತೆಗೆದುಹಾಕಿ, ಈಗಲೇ ಆಚರಣೆಯಲ್ಲಿರುವ ಪದ್ಧತಿಗಳಮೇಲೆ ರೈತರು ತಮ್ಮ ಪಾಡಿಗೆ ತಾವು ಜಮೀನುಗಳನ್ನು ವ್ಯವಸಾಯಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಬೇಕೆಂಬುದಾಗಿಯೂ ಸಹ, ರೈತರು ಅರ್ಜಿಯಲ್ಲಿ ಕಾಣಿಸಿದ್ದರು.

ಆ ಅರ್ಜಿಯನ್ನು ಪರಾಂಬರಿಸಿ ದಿವಾನ್‌ರವರು ತಿಳಿಸಿದ ಅಂಶಗಳಿವು: ಅರ್ವಿನ್ ನಾಲಾ ಪ್ರದೇಶದಲ್ಲಿ ನೀರಾವರಿ ಸಾಗುವಳಿಯು ಯಾವ ರೀತಿಯಲ್ಲಿ ನಡೆಯುವುದಕ್ಕೆ ಅವಕಾಶಕೊಡಬೇಕೆಂಬ ವಿಚಾರದಲ್ಲಿ ಅದಕ್ಕೆ ಸಂಬಂಧಪಟ್ಟ ನಾನಾ ಅಂಶಗಳನ್ನೂ ಒಂದು ಸಮಿತಿಯವರು ಯಾವ ಪಕ್ಷಪಾತವೂ ಇಲ್ಲದೆ ಚೆನ್ನಾಗಿ ಪರಿಶೀಲಿಸಿ ನೋಡಿದರು. ಆ ವಿಚಾರದಲ್ಲಿ ತುಂಬ ತಿಳಿವಳಿಕೆಯೂ ಅನುಭವವೂ ಇರತಕ್ಕವರು ಆ ಸಮಿತಿಯಲ್ಲಿ ಸದಸ್ಯರಾಗಿದ್ದರು. ರೈತರಿಗೆ ಅನುಕೂಲಮಾಡಿಕೊಡಬೇಕೆಂಬ ಉದ್ದೇಶದಿಂದಲೇ ಅವರು ನಾನಾ ಅಂಶಗಳನ್ನೂ ಚೆನ್ನಾಗಿ ಪರ್ಯಾಲೋಚಿಸಿ ನೋಡಿ, ನಾಲಾ ಬಯಲಿನಲ್ಲಿ ತಾಕುವಾರು ಶಿಸ್ತಿನಲ್ಲಿ ಸರದಿಯ ಕ್ರಮದಲ್ಲಿ ಸಾಗುವಳಿಯು ನಡೆಯುವಂತೆ ಏರ್ಪಾಡುಮಾಡಬೇಕೆಂದು ಸಲಹೆ ಹೇಳಿದರು. ಅವರ ಸಲಹೆಯ ಮೇಲೆ ಮಾತ್ರವೇ ಸರ್ಕಾರದವರು ಈ ಹೊಸ ಏರ್ಪಾಡು ಆಚರಣೆಗೆ ಬರಬೇಕೆಂದು ಹುಕುಂ ಮಾಡಿದರು. ಈ ತಾಕುವಾರು ಶಿಸ್ತಿನ (ಬ್ಲಾಕ್ ಸಿಸ್ಟಂ) ಏರ್ಪಾಡು ಇಂಡಿಯಾ ದೇಶದ ಇತರ ನಾನಾ ಪ್ರಾಂತಗಳಲ್ಲಿಯೂ ಆಚರಣೆಯಲ್ಲಿದ್ದೇ ಇದೆ. ಆದಕಾರಣ, ಇದೇನೂ ಇಲ್ಲಿ ಮಾತ್ರವೇ ಹೊಸದಾಗಿ ಯಾರೂ ಮಾಡದಿರುವ ಏರ್ಪಾಡನ್ನು ಜಾರಿಗೆ ತರುವಂಥದಾಗಿಲ್ಲ. ರೈತರ ಹಿತಸಾಧನೆಗೋಸ್ಕರವೇ ಇದನ್ನು ಜಾರಿಗೆ ತರಬೇಕೆಂದು ನಿರ್ಧರಿಸಲಾಗಿದೆ. ಇದು ಅನೇಕ ದೃಷ್ಟಿಗಳಿಂದ ರೈತರಿಗೆ ಪ್ರಯೋಜನಕರವಾಗಿದೆ. ಇದರಿಂದ ನೀರನ್ನು ಲಾಭದಾಯಕವಾಗುವಂತೆ ಮಿತವಾಗಿ ಉಪಯೋಗಿಸುವುದಕ್ಕೆ ಅವಕಾಶವಾಗುತ್ತದೆ. ಜೌಗು ಹೆಚ್ಚುವುದಕ್ಕೂ, ಆ ಮೂಲಕ ಮಲೇರಿಯಾ ಜ್ವರವು ಹಬ್ಬಿ ಹರಡುವುದಕ್ಕೂ ಸುತರಾಂ ಕಾರಣವಿಲ್ಲದಂತಾಗುತ್ತದೆ. ರೈತರಿಗೆ ಹೆಚ್ಚು ವರಮಾನವು ಬರುವಂತಾಗುತ್ತದೆ. ಈ ಏರ್ಪಾಡಿನಿಂದ ಉಂಟಾಗುವ ಮುಖ್ಯವಾದ ಅನುಕೂಲಗಳು ಯಾವುವೆಂದರೆ, ಭೂಮಿಯು ಫಲವತ್ತಾಗಿರುವ ಗುಣವು ಇದರಿಂದ ಹೆಚ್ಚುತ್ತದೆ. ಅಲ್ಲದೆ, ಅತ್ಯಂತ ಹೆಚ್ಚು ವಿಸ್ತೀರ್ಣದ ಜಮೀನುಗಳನ್ನು ಉತ್ತಮ ವ್ಯವಸ್ಥೆಯಿಂದ ನಡೆಯುವ ನೀರಾವರಿ ಶಿಸ್ತಿಗೆ ಒಳಪಡಿಸಿ ಅತ್ಯಂತ ಹೆಚ್ಚು ಸಂಖ್ಯೆಯ ಜನರಿಗೆ ಅನುಕೂಲಮಾಡಿಕೊಡುವುದಕ್ಕೆ ಅವಕಾಶವಾಗುತ್ತದೆ. ಇದರ ಜೊತೆಗೆ ಅನಾರೋಗ್ಯಕರವಾದ ಸನ್ನಿವೇಶಗಳುಂಟಾಗುವುದು ತಪ್ಪಿಹೋಗಿ ಜನರು ಸುಖವಾಗಿರುವ ಅನುಕೂಲವು ದೊರೆಯುತ್ತದೆ.

ಸಾಮಾನ್ಯ ಸಂದರ್ಭಗಳಲ್ಲಿ ರೈತರು ಯಾವ ರೀತಿ ಬೇಕಾದರೂ ಸಾಗುವಳಿ ಮಾಡಿಕೊಳ್ಳಲೆಂದು ಸರ್ಕಾರದವರು ಸುಮ್ಮನಿರುತ್ತಾರೆಯೇ ಹೊರತು, ಅವರು ಹೀಗೆ ಸಾಗುವಳಿಮಾಡಬೇಕು, ಹಾಗೆ ಸಾಗುವಳಿ ಮಾಡಬೇಕು, ಎಂದು ವಿಧಾಯಕಮಾಡುವುದಿಲ್ಲ. ಕಂದಾಯವೂ, ನೀರುಸರದಿ ಮುಂತಾದ ತೆರಿಗೆಗಳೂ ಕ್ರಮವಾಗಿ ಸರ್ಕಾರದವರಿಗೆ ಸಂದಾಯವಾದರೆ ಸಾಕು; ಸಾಮಾನ್ಯ ಸಂದರ್ಭಗಳಲ್ಲಿ ಸರ್ಕಾರದವರು ಸಾಗುವಳಿ ವಿಧಾನದ ಗೋಜಿಗೆ ಹೋಗುವುದಿಲ್ಲ; ಆದರೆ 1 ಲಕ್ಷ ಎಕರೆಗಳಿಗೆ ಮೇಲ್ಪಟ್ಟ ಭೂವಿಸ್ತೀರ್ಣವು ನೀರಾವರಿ ಸಾಗುವಳಿಗೆ ಬರತಕ್ಕದಾಗಿರುವ ಈ ಅರ್ವಿನ್ ನಾಲಾ ಪ್ರದೇಶದ ವಿಷಯವೇ ಬೇರೆ. ಇದರ ನೀರಾವರಿಯ ವಿಚಾರದಲ್ಲಿ ವಿಶೇಷ ಸ್ವಭಾವದ ಏರ್ಪಾಡುಗಳು ನಡೆದೇ ನಡೆಯಬೇಕೆಂದೂ ಅದು ಅತ್ಯಾವಶ್ಯಕವೆಂದೂ ತೋರಿತು. ಸಾಗುವಳಿಗೆ ಮಿತಿಮೀರಿ ನೀರಾವರಿಯಾಗಿ, ಜೌಗು ವಿಪರೀತವಾಗಿ ಹೆಚ್ಚಿ ಒಟ್ಟು ಪ್ರದೇಶವೇ ಅನಾರೋಗ್ಯಕರವಾಗಿ ಪರಿಣಮಿಸದಂತೆಯೂ, ರೈತರಿಗೆ ತುಂಬ [illegible]

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಗೊಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿ

ಗರ್ಭಧಾರಣ ಸಂಜೀವಿನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ [illegible] ಗುಳಿಗೆಗಳ [illegible] ರೂಪಾಯಿ. [illegible]

ಪತ್ತೆ—ವೈದ್ಯ ವ್ಹಿ. ಎಸ್. ಕಾಜಸೆ. ಮಿರಜ M. C.

[illegible]

ನೋಟೀಸು.

[illegible]

ಶ್ರೀ ಜಗದ್ಗುರು ಮೂರುಸಾವಿರ ಮಠದಯಾತ್ರಾ ಮಹೋತ್ಸವವು.

[illegible]

ಮೈಸೂರು ವೀರಶೈವ ವಿದ್ಯಾರ್ಥಿನಿಲಯ ಫಂಡು ಸಂಘ, ಬೆಂಗಳೂರು.

[illegible]

ಮಜಕೂರ.

ರಾಜಪ್ಪಾ ಮಹಾಲಿಂಗಪ್ಪಾ ತಂಗಡಿ ನಾನು ಸೋಟಿ ಜಮಾಬರ್ಜು ಬರೆಯಲಿಕ್ಕೆ ಇರತಕ್ಕವನಿದ್ದೇನೆ. ಪಗಾರ ತಿಂಗಳು ಒಂದಕ್ಕೆ ೫೦ ರೂ. ಗಳ ಪ್ರಕಾರ ಪತ್ರಬಾಯಂಜಾಗ ಇದ್ದರೆ ಅಥಣಿಗೆ ನನ್ನ ಹೆಸರಿಗೆ ಪತ್ರಬರೆದು ತಿಳಿಸಬೇಕು. ಪತ್ರಬರೆದನಂತರ ನಾನು ಬರುತ್ತೇನೆ.

ರಾಜಪ್ಪ ಮಹಾಲಿಂಗಪ್ಪ ತಂಗಡಿ, ಅಥಣಿ, ಬೆಳಗಾಂ ಡಿ||

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ. ನಾರಿನವರು ಜರೂರ ತರಿಸಿ ಕೊಳ್ಳಿರಿ. ಕಿ. ೧| ರೂ. ೬. ೩. ೫ ಆಣೆ.
ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

13 M. C

೧೯೩೨ ನೆಯ ಇಸವಿ ಜುಲೈ ತಾ|| ೧೮ ರಿಂದ ಜುಲೈ ತಾ|| ೨೪ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೫ನೆಯ ಆಂಗಿರಸನಾಮಸಂವತ್ಸರದ ಆಷಾಢ ಬಹುಳ ಪಾಡ್ಯಮಿಯಿಂದ ಆಷಾಢ ಬಹುಳ ಸಪ್ತಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕಳಾ ಮಾಸ
18	ಸೋಮ	ಪಾಡ್ಯ	47-21	ಉಷಾ	27-12	3
19	[1] ಮಂಗಳ	ಬಿದಿ	46-40	ಶ್ರವ	26-57	4
20	ಬುಧ	ತದಿ	46-29	ಧನಿ	28-6	5
21	ಗುರು	ಚೌತಿ	46-19	ಶತ	30-19	6
22	[2] ಶುಕ್ರ	ಪಂಚ	49-39	ಪೂಭಾ	33-57	7
23	[3] ಶನಿ	ಷಷ್ಠಿ	52-40	ಉಭಾ	38-23	8
24	ಭಾನು	ಸಪ್ತ	57-10	ರೇವ	44-13	9

(1) ಮಹಾನಕ್ಷತ್ರ-ಪುಷ್ಯ ೧ ನೆಯ ಪಾದ. (2) ಅಮೃತಸಿದ್ಧಿಯೋಗ, ಮಹಾನಕ್ಷತ್ರ-ಪುಷ್ಯ ೨ ನೆಯ ಪಾದ. (3) [illegible]

[illegible]

REG N. O. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[illegible]

[ಸ್ಥಳದವರಿಗೆ ವಾರ್ಷಿಕ ಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [illegible]

[ಸಂಪುಟ ೪೫] ಮೈಸೂರು ಸ್ಟಾರ್ ೧೯೩೨ ನೆಯ ಇಸವಿ ಜುಲೈ ತಾರೀಖು ೨೫ ನೆಯ ಸೋಮವಾರ [ಸಂಚಿಕೆ ೩೦

MYSORE SANDALWOOD OIL
Distilled in
GOVERNMENT FACTORIES

GUARANTEED B.P.P.J., & AM 4. P. STANDARDS.
PROVIDES
Excellent Base for the manufacture of Soaps, Perfumes, and other Toilet preparations of the Highest quality

USED ALL THE WORLD OVER
BUY A BOTTLE TO-DAY.
Available in Sealed Aluminium Bottles.

MYSORE GOVERNMENT SANDALWOOD OIL FACTORY,
BANGALORE.

9 (50—4)

MYSORE RAILWAYS.

With effect from 1st August 1932, the issue of mileage coupon ticket books for mercantile firms will be stopped over this Railway but mileage coupons books already issued will be accepted for exchange of tickets during the period of their currency.

1

A. A. KHAN,
Traffic Manager.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕರ್ಸ್ಟ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹುಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇ.)
ವೀರಶೈವ ಶಿವಪೂಜಾವಿಧಿ	೦—೧೩—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
[illegible]	೦—[illegible]—೦	೦—[illegible]—೦
[illegible]	೦—[illegible]—೦	೦—೧೦—೦
[illegible]	೦—[illegible]—೦	೦—[illegible]—೦
[illegible]	೦—[illegible]—೦	೦—[illegible]—೦
ಗುರುಶಂಕರೇಶ್ವರಶತಕ	೦—೧—೦	೦—[illegible]—೦
[illegible]	೦—[illegible]—೦	೦—೧[illegible]—೦
[illegible]	೦—[illegible]—೦	೦—೧[illegible]—೦
[illegible]	೧—೦—೦	೧—[illegible]—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ವಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕದ. [ಸ್ವರ

[illegible]

ಸ್ತ್ರೀ ರೋಗ ನಿವಾರಣೀ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

ಪತ್ತಾ ಮಾಲಕ :—ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜ ಎಂ. ಎಸ್. ಎಂ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]

[illegible]

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಜುಲೈ ತಾ|| ೨೫ ನೆಯ ಸೋಮವಾರ.

COMMUNAL AWARD

The Bombay Chronicle has published a forecast of the communal award which the Prime Minister will shortly make. Seven out of the fourteen points of the Muslims seem to have been granted. Separate electorates are to last for a period of seven years. We believe, whatever the opposition to the question of separate electorates, India should in the circumstances tolerate them during the short period of seven years. We have gone on so for with them, that for the sake of the country we may as well let them subsist for another period of seven years. But the question is what next? If that is not also decided now, we are sure, there will be another ugly wrangle at the end of seven years, making for a great deal of disharmony. We would very much like that the award which the Prime Minister is to make is not only a kind of a makeshift but also a permanent one which should be the last word on this vexed question. It would appear that adequate representation of minorities and one third representation for Muslims in the Central Legislature are conceded. As regards the former it was only a foregone conclusion, and even there we hope it is only a temporary evil. But as regards the one-third representation for Muslims in the Central Legislature we would like to know whether that is exclusive of the number of Muslims who would be there as representatives of Indian States, in which case the one-third would stand the chance of being always the majority party in the Central Legislature. It is quite likely that this aspect has been overlooked or not fully considered. The points not conceded relate to territorial distribution, the Muslim representation in public services, protection of Muslim culture etc. Though the demand for a proportion of one-third Moslem Ministers in the Central as well as Provincial Cabinets has not been conceded yet the Governors will be told in their instruments of instructions to regard it as a convention. That is only as it aught to be when Provincial autonomy is to be granted and some amount of responsibility is to be introduced in the Central Legislature. What we cannot understand is that the claim for uniform autonomy for all Provinces has not been granted. The Punjab, Assam, North-west Frontier and Sind will have only limited autonomy regarding taxation, law and order and control of labour. These curiously happen to be provinces where Muslims are in the majority. The Muslims are sure to feel this as an invidious distinction and it is difficult to support the decision till the reasons for such a differential treatment are forthcoming. It might be that this award will undergo modifications in the course of the further stages and we hope that when it emerges ultimately it will be even more acceptable than it is to day.

COURTING TROUBLE

We had referred to the deputation of some of the gentlemen of Mysore City that waited on the Dewan Saheb at Bangalore with the prayer that Mr. T. G. Rama Iyer should be kept on as President of the City Municipal Council for some more time and to the unfavourable reply they got. These gentlemen who were led by Mr. M. Ramaswamy the Vice-President are evidently feeling sore over the result and they are making herculean efforts to exhibit Mr. Iyer in popular colours as a protest against the reply they got at the hands of Government. They think that the transfer of Mr. Rama Iyer might be due to the agitation that was afoot latterly, though for aught we know, it may not be on that account, and those who have had certain advantages during the *regime* of Mr. Iyer have simply lost their mental balance at the turn of events. Nobody need be surprised that Mr. M. Ramaswamy is taking the lead in getting up entertainments to Mr. Iyer, because Mr. Iyer took a lot of trouble to get nominations for the Council which would be helpful to him in securing the Vice-Presidentship. The public might know of the tea party given to him by some of the Municipal Councillors on the morning of Doddaekadasi, in the absence of the other chief guest who was to be welcomed, the new President. It would appear that some of the Municipal Councillors who wer not equally enamoured of Mr. Iyer's work were not even invited to the function, but their absence is very conspicuously noted in the press. Not satisfied with such a party, we are told these self-same admirers led by Mr. Ramaswamy are busying themselves about an entertainment to Mr. Iyer in the name of the public of Mysore City. We do not know why they should make such desperate efforts to bolster up such a highly unpopular figure, at whose exit no man feels in the least sorry, unless it be that the fact that they failed in their deputation has upset them so much that they want to hold out a challenge to Government and show he was a man much wanted in the City. We lern that there was a hole and corner meeting of this clique at a Ramamandiram to which other leaders of the City had no invitation or access on Saturday last where the subject of a public entertainment was considered. We are afraid they are making a great mistake in their move. For one thing these artificial devices to parade an unpopular figure as a popular one only irritate those who were inclined to forget the past and think of the future to challenge the right of the clique to act on behalf of the public. Already we hear that there is likely to be a public meeting to record their disapproval of the regime of Mr. Rama Iyer, and verily they have a catalogue of grievances to expose. There were such popular figures as Mr. N. Madhava Rao and Mr. C. S. Kuppuswamy Iyengar, to whom, deserving as they were, no such public entertainment were given. Again, if these friends want to do anything in the name of the public they will only court trouble as the real public of Mysore is not in a mood to tolerate any such thing and the result may be extremely awkward. We may ask what are the special claims of Mr. Iyer? Is it because he borrowed at the instance of Government Rs. 2 laks and tarred the streets the credit for which should go to Government? Is it because he, the great savant as he was of music subscribed a magnificent sum of...(we will publish the amount if it becomes necessary in the next issue) towards the entertainment of Sangeetha Shastra Ratna Vasudevacharya? Or is it because he promised most generously a sum of Rs. 300 to the Brahmin Anathalaya but has paid only a sum of Rs. (to be noted later on if necessary)? Is it because he started a campaign of merciless campaign of prosecution against illiterate and ignorant parties about Municipal offences? Is it because he set up one party against another and created a lot of bad blood in the Council and the City? We have yet a lot more to say but we refrain for the present. Our own view is that Mr. Rama Iyer whose future we have as much at heart as any of his friends should not agree to such a proposal of an entertainment as he knows the Mysore situation full well. We earnestly request that these friends from whome Mr. Iyer could well be spared will drop the idea as things have gone well enough so far.

ಸಾಂಘಿಕ ಸಮಸ್ಯೆಯ ನಿರ್ಣಯ.

ಸಾಂಘಿಕ ಸಮಸ್ಯೆಯ ನಿರ್ಣಯದ ವಿಚಾರವಾಗಿ ಪ್ರಧಾನಮಂತ್ರಿಗಳು ಕೂಡಲೆ ಒಂದು ಪ್ರಕಟನೆಯನ್ನು ಹೊರಡಿಸುವರೆಂದು ಬೊಂಬಾಯಿ ಕ್ರಾನಿಕಲ್ ಪತ್ರಿಕೆಯು ಭವಿಷ್ಯವನ್ನು ನುಡಿದಿರುತ್ತದೆ. ಮಹಮ್ಮದಿಯರ 14 ಕೋರಿಕೆಗಳಲ್ಲಿ 7 ಕೋರಿಕೆಗಳು ನೆರವೇರಿಸಲ್ಪಟ್ಟಿರುವುವಂತೆ. ಪ್ರತ್ಯೇಕ ಚುನಾವಣೆಯು 7 ವರ್ಷಗಳವರೆಗೆ ನಡೆಯತಕ್ಕದಾಗಿದೆ. ಈ ಪ್ರತ್ಯೇಕ ಚುನಾವಣೆಯ ವಿಚಾರದಲ್ಲಿ ಪ್ರತಿಘಟನೆಯಿರುವುದಾದರೂ, 7 ವರ್ಷಗಳವರೆಗೆ ಆ ಪದ್ಧತಿಯು ನಡೆದುಕೊಂಡುಬರುವ ವಿಚಾರವಾಗಿ ಭಾರತದೇಶವು ಪ್ರಕೃತ ಸಂದರ್ಭದಲ್ಲಿ ಸೈರಿಸಿಕೊಂಡಿರಬೇಕಾಗಿದೆ. ಹಿಂದುಗಳು ಈವರೆಗೆ ಅವರೊಡನೆ ಏಕೀಭವಿಸಿರುವುದರಿಂದ ಅವರ ಕೋರಿಕೆಯು ಇನ್ನು 7 ವರ್ಷಗಳವರೆಗೆ ನಡೆದುಕೊಂಡು ಬರುವಲ್ಲಿ ಸಮ್ಮತಿಸಬಹುದು. ಆದರೆ ಮುಂದೆ ಹೇಗಾಗಬೇಕೆಂಬುದು ಪ್ರಕೃತ ಸಮಸ್ಯೆಯು. ಆ ವಿಚಾರವು ಈಗ ಇತ್ಯರ್ಥವಾಗದಿದ್ದಲ್ಲಿ, 7 ವರ್ಷಗಳಾಂತ್ಯದಲ್ಲಿ ಪರಸ್ಪರ ಮನಸ್ತಾಪಹುಟ್ಟಿ ಕಚ್ಚಾಡಲು ಅವಕಾಶವಾಗುತ್ತದೆ. ಈಗ ಪ್ರಧಾನಮಂತ್ರಿಗಳು ಮಾಡಲಿಕ್ಕಿರುವ ನಿರ್ಣಯವು ತಾತ್ಕಾಲಿಕವಾಗಿರದೆ ಶಾಶ್ವತವಾಗಿಯೂ, ಕಠಿಣ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸತಕ್ಕದಾಗಿಯೂ ಇರಬೇಕು. ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ ಮೈನಾರಿಟಿಯವರಿಗೆ ಸಾಕಾದಷ್ಟು ಪ್ರಾತಿನಿಧ್ಯವೂ, ಮಹಮ್ಮದೀಯರಿಗೆ ಮೂರನೆಯ ಒಂದು ಭಾಗದಷ್ಟು ಪ್ರಾತಿನಿಧ್ಯವೂ ಕೊಡಲ್ಪಡುವುದಾಗಿ ಕಂಡುಬರುತ್ತದೆ. ಮೈನಾರಿಟಿಯವರ ಪ್ರಾತಿನಿಧ್ಯದ ವಿಚಾರವು ಮೊದಲೇ ಗೊತ್ತಿದ್ದಿತು. ಇದರಲ್ಲು ಸಹ ತಾತ್ಕಾಲಿಕ ಕೆಡಕಿದ್ದೇ ಇರುವುದು. ಕೇಂದ್ರಶಾಸನ ಸಭೆಯಲ್ಲಿ ಮಹಮ್ಮದೀಯರಿಗೆ ಮೂರನೆಯೊಂದುಭಾಗದ ಪ್ರಾತಿನಿಧ್ಯವಿರುವುದರೊಳಗೆ ಭಾರತದೇಶೀಯ ಸಂಸ್ಥಾನಗಳ ಪ್ರತಿನಿಧಿಗಳಾಗಿ ಬರುವ ಮಹಮ್ಮದೀಯರ ಸಂಖ್ಯೆಯು ಸೇರಿರುವುದಿಲ್ಲವೆ ಎಂಬುದನ್ನು ತಿಳಿಯಬೇಕಾಗಿದೆ. ಹಾಗಿದ್ದಲ್ಲಿ ಮೂರನೆಯ ಒಂದು ಭಾಗದ ಮಹಮ್ಮದೀಯರು ಕೇಂದ್ರಶಾಸನ ಸಭೆಯಲ್ಲಿ ಯಾವಾಗಲೂ ಮೆಜಾರಿಟಿ ಪಕ್ಷದವರಾಗಿರಲು ಅವಕಾಶವಿರುವುದು. ಈ ಸಂದರ್ಭವು ಗಮನಿಸಲ್ಪಡದೆ ಅಥವಾ ಸಂಪೂರ್ಣವಾಗಿ ಪರ್ಯಾಲೋಚಿಸಲ್ಪಡದೆ ಇರಬಹುದು. ರಾಜ್ಯಾಧಿಕಾರ ವಿಭಜನೆ, ಸರ್ಕಾರಿಯುದ್ಯೋಗಗಳಲ್ಲಿ ಮಹಮ್ಮದೀಯರ ಪ್ರಾತಿನಿಧ್ಯ ಮತ್ತು ಅವರ ವಿದ್ಯಾಭಿವೃದ್ಧಿ ಸಂರಕ್ಷಣೆ ಇತ್ಯಾದಿ ವಿಚಾರಗಳು ನಿರ್ಣಯವಾಗಿಲ್ಲ. ಕೇಂದ್ರ ಮತ್ತು ಪ್ರಾಂತಿಕ ಮಂತ್ರಿಮಂಡಲಗಳಲ್ಲಿ ಮಹಮ್ಮದೀಯ ಮಂತ್ರಿಗಳ ಸಂಖ್ಯೆಯು ಮೂರನೆಯ ಒಂದು ಭಾಗದಷ್ಟು ಇರಬೇಕೆಂಬ ಕೋರಿಕೆಯು ನೆರವೇರಿಸಲ್ಪಡದಿದ್ದಾಗ್ಯೂ ಅದನ್ನು ಒಂದು ಒಪ್ಪಂದವಾಗಿ ಪರಿಗಣಿಸುವಂತೆ ಗೌರ್ನರುಗಳಿಗೆ ಸೂಚಿಸಲ್ಪಡುವುದು. ಇದು ಪ್ರಾಂತಿಕ ಸ್ವರಾಜ್ಯವು ಕೊಡಲ್ಪಡುವಾಗ್ಗೆ ಮತ್ತು ಕೇಂದ್ರ ಶಾಸನ ಸಭೆಯಲ್ಲಿ ಸ್ವಲ್ಪ ಜವಾಬ್ದಾರಿಯು ವಹಿಸಲ್ಪಡುವಾಗ್ಗೆ ನಡೆಯತಕ್ಕದಾಗಿದೆ. ಎಲ್ಲ ಪ್ರಾಂತಗಳಿಗೂ ಒಂದೇ ವಿಧವಾದ ಸ್ವತಂತ್ರಾಧಿಕಾರವು ಕೊಡಲ್ಪಡಬೇಕೆಂಬ ಕೋರಿಕೆಯು ನೆರವೇರದಿರುವುದರ ಕಾರಣ ಗೊತ್ತಾಗಲಿಲ್ಲ. ಪಂಜಾಬು, ಅಸ್ಸಾಮು, ವಾಯುವ್ಯಮೂಲೆಯ ಗಡಿ ಮತ್ತು ಸಿಂದ್ ಪ್ರಾಂತಗಳಲ್ಲಿ ಕಂದಾಯವನ್ನು ವಿಧಿಸುವುದು, ನ್ಯಾಯ ನೆಮ್ಮದಿಗಳನ್ನು ಕಾಪಾಡುವುದು ಮತ್ತು ಕೂಲಿಯವರನ್ನು ಹತೋಟಿಯಲ್ಲಿಡುವುದು ಈ ವಿಚಾರಗಳಲ್ಲಿ ಮಿತವಾದ ಅಧಿಕಾರ ಕೊಡಲ್ಪಡುವುದು. ಇವು ಮಹಮ್ಮದೀಯರು ವಿಶೇಷವಾಗಿರುವ ಪ್ರಾಂತಗಳಾಗಿರುತ್ತವೆ. ಇದು ಅಸೂಯೆಯಿಂದ ಮಾಡಲ್ಪಟ್ಟ ವ್ಯತ್ಯಾಸವೆಂದು ಮಹಮ್ಮದೀಯರು ಖಂಡಿತವಾಗಿ ಭಾವಿಸುವರು ಮತ್ತು ಈ ವ್ಯತ್ಯಾಸಕ್ಕೆ ಸರಿಯಾದ ಕಾರಣವು ಕೊಡಲ್ಪಡುವವರೆಗೆ ಅದನ್ನು ಪುಷ್ಟೀಕರಿಸುವುದು ಕಷ್ಟ. ಈಗಿನ ನಿರ್ಣಯವು ಮುಂದಣ ಅವಸ್ಥೆಗಳಲ್ಲಿ ಬದಲಾವಣೆಗಳನ್ನು ಹೊಂದಬಹುದು, ಆದರೆ ಅಂತ್ಯಾವಸ್ಥೆಗೆ ಬಂದಾಗ ಮಾತ್ರ ಇಂದಿರುವುದಕ್ಕಿಂತಲೂ ಹೆಚ್ಚು ಸಮ್ಮತವಾಗಿರುವುದೆಂದು ನಿರೀಕ್ಷಿಸುತ್ತೇವೆ.

ಅರಿಷ್ಟಾಹ್ವಾನ

ಮ|| ಟಿ. ಜಿ. ರಾಮಯ್ಯರ್‌ರವರನ್ನು ರಾಜಧಾನಿಯ ಪ್ರೆಸಿಡೆಂಟರನ್ನಾಗಿ ಇನ್ನೂ ಕೆಲಕಾಲದವರೆಗಿರಿಸಿಕೊಡಬೇಕೆಂದು ಕೆಲವರು ದಿವಾನರಲ್ಲಿಗೆ ರಾಯಬಾರಹೋಗಿದ್ದು ಭಗ್ನಮನೋರಥರಾಗಿ ಬಂದ ವಿಷಯವನ್ನು ಹಿಂದೆಯೇ ತಿಳಿಸಿರುತ್ತೇವೆ. ಬಹಳ ಪ್ರಜಾನುರಾಗಿಗಳಾದ ಮ|| ರಾಮಯ್ಯರ್‌ರವರನ್ನು ಮೈಸೂರಿನಲ್ಲೇ ಇನ್ನೂ ಕೆಲಕಾಲದವರೆಗೆ ಇರಿಸಿಕೊಡಬೇಕೆಂದು ರಾಜಧಾನಿಯ ಪ್ರಜೆಗಳ ಪರವಾಗಿ ಪ್ರಾರ್ಥಿಸಿಕೊಂಡಾಗ್ಯೂ ಮನ್ನಿಸದುದು ತಪ್ಪೆಂದು ಪ್ರಭುತ್ವದವರಿಗೆ ತೋರಿಸುವುದಕ್ಕಾಗಿ ಪಬ್ಲಿಕ್ ಎಂಟರ್ಟೇನ್‌ಮೆಂಟನ್ನು ಕೊಟ್ಟು ಅವರ ಪ್ರಜಾನುರಾಗವನ್ನು ವ್ಯಕ್ತಪಡಿಸಲು ಮ|| ಅಯ್ಯರ್‌ರವರಿಂದ ಉಪಕೃತರಾಗಿರುವ ಕೆಲವರು ರಾಮಮಂದಿರದಲ್ಲಿ ಕಳೆದ ಶನಿವಾರ ರಾತ್ರಿ ಸಮಾವೇಶರಾಗಿ, ನಿರ್ಧರಿಸಿ ಮ|| ಎಂ. ರಾಮಸ್ವಾಮಿಯವರ ಮುಖಂಡತ್ವದಲ್ಲಿ ಪ್ರಯತ್ನಿಸುತ್ತಿರುವುದಾಗಿ ತಿಳಿಯಬರುತ್ತದೆ. ತಮ್ಮನ್ನು ವೈಸ್‌ಪ್ರೆಸಿಡೆಂಟರನ್ನಾಗಿ ಚುನಾಯಿಸುವಲ್ಲಿ ಸಹಾಯಕರಾಗಿರಬೇಕಾಗಿದ್ದವರನ್ನು ಮ್ಯುನಿಸಿಪಲ್ ಕೌನ್ಸಿಲರನ್ನಾಗಿ ನಾಮಕರಣಮಾಡಿಸಿದುದಕ್ಕಾಗಿ ಮ|| ರಾಮಸ್ವಾಮಿಯವರೂ, ಕಟ್ಟಡಕಟ್ಟಲು ನಿವೇಶನ ಲೈಸೆನ್ಸು ಮೊದಲಾದ ವಿಚಾರಗಳಲ್ಲಿ ಪ್ರಯೋಜನಹೊಂದಿರುವವರೂ, ತಮ್ಮ ಪ್ರಾರ್ಥನೆಯನ್ನು ನೆರವೇರಿಸಿಕೊಡದಿದ್ದುದಕ್ಕಾಗಿ ಪ್ರಭುತ್ವದವರಮೇಲೆ ಕೋಪಿಸಿಕೊಂಡಿರುವ ರಾಯಬಾರದವರೂ ಮ|| ಟಿ. ಜಿ. ರಾಮಯ್ಯರ್‌ರವರು ಬಹಳ ಜನಾನುರಾಗಿಗಳಾಗಿದ್ದುದರಿಂದ ಅವರಗಲಿಕೆಗಾಗಿ ರಾಜಧಾನಿಯ ನಿವಾಸಿಗಳು ವ್ಯಸನಾಕ್ರಾಂತರಾಗಿರುವರೆಂದು ಪ್ರಭುತ್ವದವರಿಗೆ ತೋರಿಸಲಿಕ್ಕಾಗಿ ಪ್ರಯತ್ನಿಸುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಮ|| ಅಯ್ಯರ್‌ರವರು ಕೌನ್ಸಿಲು ಮೆಂಬರುಗಳಲ್ಲಿ ಪಾರ್ಟಿಯನ್ನೇರ್ಪಡಿಸಿ ಪರಸ್ಪರ ಕಿತ್ತಾಡುವಂತೆಯೂ, ಅನೇಕ ಕಂದಾಯದಾರರನ್ನು ಪ್ರಾಸಿಕ್ಯೂಷನ್ನಿಗೆ ಗುರಿಪಡಿಸಿ ಅವರುಗಳು ತಪಿಸುವಂತೆಯೂ ಮಾಡಿ ಜನಾನುರಾಗವನ್ನು ಕಳೆದುಕೊಂಡಿರುವುದನ್ನು ಪ್ರಭುತ್ವದವರು ಅರಿತೇ ವರ್ಗಮಾಡಿರುತ್ತಾರೆ, ಅಲ್ಲದೆ ರಾಜಧಾನಿಯ ಪ್ರಜಾಸನ್ಮಾನಗಳಿಗೆ ಅರ್ಹರಾಗಿದ್ದ ಮ|| ಗಳಾದ ಎನ್. ಮಾಧವರಾಯರಿಗೂ ಸಿ. ಎಸ್. ಕುಪ್ಪುಸ್ವಾಮಯ್ಯಂಗಾರ್ಯರಿಗೂ ಅವರುಗಳು ಪ್ರೆಸಿಡೆಂಟರಾಗಿದ್ದಾಗ್ಗೆ ನಡೆಯದಿದ್ದ ಪಬ್ಲಿಕ್ ಎಂಟರ್ಟೇನ್‌ಮೆಂಟನ್ನು ಮ|| ಅಯ್ಯರ್‌ರವರಿಗೆ ಕೊಡುವುದನ್ನು ನಿರೋಧಿಸತಕ್ಕವರು ಅನೇಕರಿರುತ್ತಾರೆ. ಆದುದರಿಂದ "ವಿನಾಯಕಂ ಪ್ರಕುರ್ವಾಣೋ ರಚಯಾಮಾಸ ವಾನರಂ" ಎಂಬಂತೆ ಮ|| ಅಯ್ಯರ್‌ರವರಿಗೆ ಮರ್ಯಾದೆಯನ್ನು ಮಾಡಲಿಕ್ಕೆತ್ನಿಸಿ ಇಲ್ಲದ ಅರಿಷ್ಟವನ್ನು ಬರಮಾಡಿಕೊಂಡು ಅಪಮಾನಪಡಿಸುವುದು ಯುಕ್ತವಲ್ಲವೆಂದು ಅವರ ಮಿತ್ರರಿಗೆ ಸೂಚಿಸುತ್ತೇವಲ್ಲದೆ ಮ|| ರಾಮಯರ್‌ರವರು ತಮ್ಮ ಪುರೋಭಿವೃದ್ಧಿಯಮೇಲೆ ದೃಷ್ಟಿಯಿಟ್ಟು ಈ ಪ್ರಯತ್ನವನ್ನು ಸಮ್ಮತಿಸುವುದಿಲ್ಲವೆಂದು ನಿರೀಕ್ಷಿಸುತ್ತೇವೆ.

ವಿಠ್ಠಲಭಾಯಿ ಪಟೇಲರ ಅನಾರೋಗ್ಯ

ಕಾಶಿಯಲ್ಲಿ ಪಂಡಿತ ಮದನ ಮೋಹನ ಮಾಳವ್ಯರವರ ಗೃಹದಲ್ಲಿಳಿದಿರುವ ವಿಠ್ಠಲಭಾಯಿ ಪಟೇಲರವರು ಮಲೇರಿಯಾ ಜ್ವರಪೀಡಿತರಾಗಿರುವರು.

ಶಾಸನೋಲ್ಲಂಘನ ಖೈದಿಗಳು

ಕಳೆದ ಜೂನ್ ತಿಂಗಳ ಕಡೆಯಲ್ಲಿದ್ದ ಖೈದಿಗಳಲ್ಲಿ 29,587 ಮಂದಿ ಶಾಸನೋಲ್ಲಂಘನ ಖೈದಿಗಳಾಗಿದ್ದರು. ಇದರ ಹಿಂದಿನ ಮೆ ತಿಂಗಳಲ್ಲಿದ್ದ ಖೈದಿಗಳ ಸಂಖ್ಯೆಗಿಂತ 1,607 ಕಡಿಮೆಯಾಗಿರುವುದು.

ಮೆಜಿಸ್ಟ್ರೇಟರ ಕೊಠಡಿಗೆ ಮುತ್ತಿಗೆ

ಕಳೆದ ಸೋಮವಾರ 8 ಮಂದಿ ಸ್ವಯಂಸೇವಕರು ಕಟಕಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಮೆಜಿಸ್ಟ್ರೇಟರ ಕೊಠಡಿಯೊಳಕ್ಕೆ ನುಗ್ಗಿ ಸ್ಥಳವನ್ನು ಬಿಟ್ಟು ಹೋಗಬೇಕೆಂದು ಮೆಜಿಸ್ಟ್ರೇಟರಿಗೆ ಹೇಳಿದರು. ಮೆಜಿಸ್ಟ್ರೇಟರು ಪೋಲೀಸಿನವರನ್ನು ಕೂಗಿ ಅವರುಗಳನ್ನು ಸೆರೆ ಹಿಡಿಸಿ ಹೊರಕ್ಕೆ ಸಾಗಿಸಿದರು.

ಹೆಂಡತಿಯ ಮೂಗನ್ನು ಕಚ್ಚಿದುದಕ್ಕಾಗಿ ಶಿಕ್ಷೆ

ಅಲಹಾಬಾದಿನಲ್ಲಿ ಸುಖದೇವನೆಂಬವನು ತನ್ನ ಹೆಂಡತಿಯು ಆಸ್ಪತ್ರೆಯಲ್ಲಿ ಖಾಯಿಲೆಯಿದ್ದ ತನ್ನ ತಾಯಿಗೆ ಅನ್ನವನ್ನು ತೆಗೆದುಕೊಂಡುಹೋಗಿದ್ದುದರಿಂದ ಗುಡುಗುಡಿಗೆ ಹೊಗೆಸೊಪ್ಪನ್ನು ಹಾಕಿ ಹಚ್ಚಿಡಲು ವ್ಯವಧಾನವಾಗಲಿಲ್ಲವೆಂದು ಹೇಳಿದುದರ ಮೇಲೆ ಕೋಪಗೊಂಡು ಅವಳ ಮೂಗನ್ನು ಕಚ್ಚಿ ಕುರೂಪಿಯನ್ನಾಗಿ ಮಾಡಿದುದಕ್ಕಾಗಿ 3 ತಿಂಗಳ ಕಠಿಣ ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟನು.

ಕೋತಿಯು ಹಂತಕನನ್ನು ಹಿಡಿದುಕೊಟ್ಟುದು

ಹಿಸ್ಸಾರು ಡಿಸ್ಟ್ರಿಕ್ಟಿನಲ್ಲಿ ಒಬ್ಬ ಗಾರಡಿಗನು ತನ್ನ ಕೋತಿಯ ಸಂಗಡ ಅಡವಿಯಲ್ಲಿ ಹೋಗುತ್ತಿರುವಾಗ್ಗೆ ಕೆಲ ಕಳ್ಳರು ಅವನನ್ನು ಹಿಡಿದು ಕೊಂದು ಹಾಕಿ ಅವನಲ್ಲಿದ್ದ ಹಣವನ್ನು ತೆಗೆದುಕೊಂಡು ಶವವನ್ನು ಭೂಮಿಯಲ್ಲಿ ಹೂಳಿ ಹೊರಟುಹೋದರು. ಕೋತಿಯು ಅವರ ಹಿಂದುಗಡೆಯೇ ಹೊರಟು ಊರನ್ನು ಸೇರಿ ಗ್ರಾಮಾಧಿಕಾರಿ ಬಳಿಗೆ ಹೋಗಿ ಏನೇನೋ ಸಂಜ್ಞೆ ಮಾಡಿ ಗ್ರಾಮಾಧಿಕಾರಿಯನ್ನು ಸಂಗಡ ಕರೆದುಕೊಂಡು ಕಾಡಿಗೆ ಹೋಗಿ ಶವ ಹೂಳಲ್ಪಟ್ಟಿದ್ದ ಸ್ಥಳವನ್ನು ತೋರಿಸಿತು. ಅವನು ಮಣ್ಣನ್ನು ಅಗಿಸಿ ಶವವನ್ನು ಹೊರಕ್ಕೆ ತೆಗಿಸಿ ಊರಿಗೆ ಬಂದನು. ಕೋತಿಯು ಊರಿಗೆ ಬಂದು ಹಂತಕನನ್ನು ಗುರ್ತಿಸಿ ತೋರಿಸಿತು. ಗ್ರಾಮಾಧಿಕಾರಿಯು ಆ ಹಂತಕನನ್ನೂ ಕೋತಿಯನ್ನೂ ಪೋಲೀಸರ ವಶಪಡಿಸಿದನು. ಅವರು ಮುಂದಣ ವಿಚಾರಣೆಯನ್ನು ನಡೆಸುತ್ತಿರುವರು.

ಹೆಂಡತಿಯ ಕೊಲೆಗಾಗಿ ಜೀವಾವಧಿ ಸಜ

ಲಾಹೋರಿನಲ್ಲಿ ಒಂದು ಮುದ್ರಣಾಲಯದ ಫೋರ್‌ಮನ್ನನಾದ ಮಹಮ್ಮದ ಲತೀಫ್ ಎಂಬ ಯುವಕನು ತನ್ನ ಪತ್ನಿಯ ಕತ್ತನ್ನು ಕತ್ತರಿಸಿದುದಕ್ಕಾಗಿ ಸೆಷನ್ಸ್ ಜಡ್ಜಿಯವರಿಂದ ಮರಣಾವಧಿ ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟನು. ಇವನು ಟ್ರೈಯಿಂಗ್ ಮೆಜಿಸ್ಟ್ರೇಟರ ವಿಚಾರಣೆಯಲ್ಲಿ ತನ್ನ ವಾಙ್ಮೂಲವನ್ನು ಈ ಪ್ರಕಾರವಾಗಿ ಕೊಟ್ಟಿರುತ್ತಾನೆ:-"ನನ್ನ ಹೆಂಡತಿಯು ನನ್ನ ಸ್ನೇಹಿತರುಗಳನ್ನು ನಾನು ಮನೆಯಲ್ಲಿಲ್ಲದ ವೇಳೆಯಲ್ಲಿ ಸೇರಿಸಿಕೊಂಡು ವ್ಯಭಿಚಾರ ಮಾಡುತ್ತಿದ್ದಳು. ಇದನ್ನು ನಾನು ತಿಳಿದು ಇತಃಪರ ಇಂತಹ ನೀಚಕೃತ್ಯವನ್ನು ಮಾಡಬೇಡವೆಂದು ಅನೇಕವೇಳೆ ಬುದ್ಧಿ ಹೇಳಿ ಹೊಡೆದು ಪರಪುರುಷರೊಡನೆ ಸೇರದಂತೆ ಕೊಠಡಿಯೊಳಗೆ ಕೂಡಿಹಾಕಿ ಶಿಕ್ಷಿಸಿದಾಗ್ಯೂ ತನ್ನ ಚಾಳಿಯನ್ನು ಬಿಡಲಿಲ್ಲ. ಅದರಮೇಲೆ ಒಂದು ರಾತ್ರಿ ಮನೆಬಿಟ್ಟುಹೋಗುವಿಯಾ ಅಥವಾ ಸಾಯುವಿಯಾ ಎಂದೂ ಕೇಳಲಾಗಿ ಸಾಯಲು ಸಿದ್ಧವಾಗಿದ್ದೇನೆಂದು ಹೇಳಿದಳು. ತರುವಾಯ ನಾವಿಬ್ಬರೂ ಸ್ನಾನಮಾಡಿ ಮಡೀಬಟ್ಟೆಗಳನ್ನುಟ್ಟುಕೊಂಡು ದೇವರ ಪ್ರಾರ್ಥನೆಯನ್ನು ಮಾಡಿದಮೇಲೆ ನನ್ನ ಹೆಂಡತಿಯು ಹಾಸಿಗೆಯಮೇಲೆ ಮಲಗಿಕೊಂಡಳು. ನಾನು ಮುಖ ಕ್ಷೌರಮಾಡಿಕೊಳ್ಳುವ ಸೇಫ್ಟಿರೇಜರ್ ಎಂಬ ಕತ್ತಿಯಿಂದ ಅವಳ ಕುತ್ತಿಗೆಯನ್ನು ಅರ್ಧಂಗುಲ ಆಳದವರೆಗೆ ಕತ್ತರಿಸಿದೆನು. ಆಗ ಅವಳು ನನ್ನನ್ನು ಮುತ್ತಿಟ್ಟು ತನ್ನ ಬೆರಳನ್ನು ರಕ್ತದಲ್ಲಿ ಅದ್ದಿ ಗೋಡೆಯಮೇಲೆ ಮಿಂಡನ ಹೆಸರಿನ ಮೊದಲಕ್ಷರಗಳನ್ನು ಬರೆದು ಪುನಃ ಹಾಸಿಗೆಯಮೇಲೆ ಮಲಗಿಕೊಂಡಳು. ನಾನು ಅವಳ ಕತ್ತನ್ನು ಪೂರ್ತಿಯಾಗಿ ಕತ್ತರಿಸಿಬಿಟ್ಟು ನಾನೇ ಪೋಲೀಸಿಗೆ ಹೋಗಿ ನಡೆದ ಸಂಗತಿಯೆಲ್ಲವನ್ನೂ ತಿಳಿಸಿದೆನು.'

ಒಳದೇಶದ ವೃತ್ತಾಂತಗಳು

ಬರುವ ಆಗಸ್ಟ್ ತಾ|| 6 ಮತ್ತು 7 ರಲ್ಲಿ ಬೆಂಗಳೂರು ಲಾಲಬಾಗಿನೊಳಗೆ ಫಲಪುಷ್ಪ ಪ್ರದರ್ಶನವು ನಡೆಯಲು ಗೊತ್ತಾಗಿರುವುದು.

ಶ್ರೀಮದ್ಯುವರಾಜರವರು ಕಳೆದ ಶನಿವಾರ ಬೊಂಬಾಯಿನಲ್ಲಿ ಹಡಗನ್ನು ಹತ್ತಿ ಸೀಮೆಗೆ ಪ್ರಯಾಣಮಾಡುವವರಾಗಿದ್ದರೆಂದು ಕೇಳುತ್ತೇವೆ.

ಬೆಂಗಳೂರಲ್ಲಿ 4 ತಿಂಗಳ ಕೆಳಗೆ ಬಹಳ ಉಲ್ಬಣವಾಗಿದ್ದು ನಿಂತುಹೋಗಿದ್ದ ಪ್ಲೇಗುರೋಗವು ಮಲ್ಲೇಶ್ವರದಲ್ಲಿ ಪುನಃ ಪ್ರಾರಂಭವಾಗಿರುತ್ತದೆ. ಇದರಿಂದ ಆಗಲೇ 1 ಮರಣವಾಯಿತು.

ಕಳೆದ ತಾ|| 14 ರ ಸಾಯಂಕಾಲ ರಾಜಧಾನಿಯ ರೈಲ್ವೆ ಗುಡ್ಸ್‌ಷೆಡ್ಡಿನಲ್ಲಿ ಇಬ್ಬರು ಪೋರ್ಟರುಗಳು 39½ ಸೇರು ತೊಗರಿಬೇಳೆಯನ್ನು ಕದ್ದುದಕ್ಕಾಗಿ ಸಿಟಿ ಮೆಜಿಸ್ಟ್ರೇಟರಿಂದ ಪ್ರತಿಯೊಬ್ಬನಿಗೂ ಒಂದೊಂದು ವರ್ಷ ಕಠಿಣ ಸಜ ವಿಧಿಸಲ್ಪಟ್ಟಿತು. "ಕದ್ದ ಪದಾರ್ಥದ ಬೆಲೆ ಅಲ್ಪವಾದರೂ, ಅಪರಾಧವು ದೊಡ್ಡದಾಗಿರುವುದರಿಂದ ಹೆಚ್ಚು ಶಿಕ್ಷೆ ಕೊಡಬೇಕಾಗಿದೆ" ಎಂದು ಮೆಜಿಸ್ಟ್ರೇಟರು ಅಭಿಪ್ರಾಯಪಟ್ಟಿರುವರು.

ಕಳೆದ ಶನಿವಾರ ಶ್ರೀ ಜಯಚಾಮರಾಜ ಒಡೆಯರವರ ವರ್ಧಂತ್ಯುತ್ಸವ ದಿನವಾದುದರಿಂದ ಆ ದಿವಸ ಪ್ರಾತಃಕಾಲ ಶ್ರೀಯವರಿಗೆ ಅಭ್ಯಂಜನಸ್ನಾನ ದೇವತಾರ್ಚನಾದಿಗಳೂ ಆರ್ತ್ಯಕ್ಷತೆಯೂ ಬಂಧುವರ್ಗಕ್ಕೆ ಸುಖಭೋಜನವೂ ನಡೆದವು ಅಲ್ಲದೆ ದೇವಸ್ಥಾನಗಳಲ್ಲಿ ಸಹಸ್ರಕಲಶಾಭಿಷೇಕಾದಿ ಅರ್ಚನೆಯೂ, ಶ್ರೀಯವರ ಶ್ರೇಯಃಪ್ರಾರ್ಥನೆಯೂ ಕೆಲ ಬ್ರಾಹ್ಮಣರಿಗೆ ಸಂತರ್ಪಣೆಯೂ ಜರುಗಿದುವು. ರಾತ್ರಿ ಅರಮನೆ ಮತ್ತು ಕೋಟೆ ಬಾಗಿಲುಗಳ ಮೇಲೆ ವಿದ್ಯುದ್ದೀಪೋತ್ಸವವು ಮಾತ್ರ ನಡೆದಿತು. ಈ ಉತ್ಸವಕ್ಕಾಗಿ ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಶುಕ್ರವಾರ ಸಾಯಂಕಾಲ ಬೆಂಗಳೂರಿನಿಂದ ರಾಜಧಾನಿಗೆ ಚಿತ್ತೈಸಿತು.

ಕಳೆದ ಮಾರ್ಚಿ ತಿಂಗಳಲ್ಲಿ ದೇವರಯ್ಯ ಎಂಬವನು ಮೈಸೂರು ನಜರಬಾದಿನಲ್ಲಿ ಮೋಟಾರುಬಂಡಿಯನ್ನು ವೇಗವಾಗಿ ನಡಿಸಿಕೊಂಡು ಹೋಗುವಾಗ್ಗೆ ಮುಂದುಗಡೆ ಹೋಗುತ್ತಿದ್ದ ಕೃಷ್ಣರಾಜೇಂದ್ರ ಆಸ್ಪತ್ರೆಯ ಡಾಕ್ಟರ್ ವಾಸುಯವರ ಮೋಟಾರು ಬಂಡಿಗೆ ತಾಕುಬಡಿಸಿ ಅದನ್ನು ಕೆಡವಿಬಿಟ್ಟನೆಂಬ ಅಪರಾಧಕ್ಕಾಗಿ ಸಿಟಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದನು. ಬಂಡಿಯನ್ನುರುಳಿಸಿದುದನ್ನು ತೋರಿಸುವ ಫೋಟೋಯಿಂದಲೂ ಸಾಕ್ಷಿಗಳ ಹೇಳಿಕೆಯಿಂದಲೂ ಅಪರಾಧಿಯು ಬಹಳ ಎಚ್ಚರಿಕೆಯಿಂದಲೂ ನಿಧಾನದಿಂದಲೂ ಹೋಗುತ್ತಿದ್ದನೆಂದೂ ಈ ಅನಾಹುತವು ಆಕಸ್ಮಿಕವಲ್ಲದೆ ಅವನ ದೋಷದಿಂದಾದುದಲ್ಲವೆಂದೂ ಗೊತ್ತಾಗಿ ಬಿಡುಗಡೆ ಮಾಡಲ್ಪಟ್ಟನು.

ರಾಜಧಾನಿಯ ಮಂಡಿಮೊಹಲ್ಲಾದಲ್ಲಿರುವ ಮ|| ಮುಕ್ಕಾಜಪ್ಪನವರು ತಮ್ಮ ಮನೆಯ ಸೂರನ್ನು ನೆರೆವಾಸಿಯಾದ ಕಂಟ್ರಾಕ್ಟರ್ ಮ|| ರಾಜಯ್ಯನವರು ಕುಯಿದರೆಂದು ಅವರ ಮೇಲೆ ಸಿಟಿ ಕೋರ್ಟಿನಲ್ಲಿ ಫಿರ್ಯಾದುಮಾಡಿದ್ದರು. ಅಪರಾಧಿಯು ಸೂರನ್ನು ಕುಯಿದುದು ತಪ್ಪೆಂದು ಮೆಜಿಸ್ಟ್ರೇಟರು ನಿರ್ಧರಿಸಿ ಅರ್ಥದಂಡವನ್ನು ವಿಧಿಸಿದರು. ಇದರಮೇಲೆ ಮ|| ರಾಜಯ್ಯನವರು ಮೈಸೂರು ಡಿವಿಜನ್ ಸೆಷನ್ಸ್ ಕೋರ್ಟಿಗೆ ಅಪೀಲು ಮಾಡಿದ್ದರು. ಫಿರ್ಯಾದಿಪರ ಪಬ್ಲಿಕ್ ಪ್ರಾಸಿಕ್ಯೂಟರ್ ಮ|| ಕೆ. ರಾಮಸ್ವಾಮಯ್ಯನವರ ಮತ್ತು ಅಪರಾಧಿಪರ ಮ|| ಎಚ್. ಸಿ ದಾಸಪ್ಪನವರ ಆರ್ಗ್ಯುಮೆಂಟು ನಡೆದು ಕಳೆದ ಗುರುವಾರ ಅರ್ಥದಂಡವು (ಜುಲ್ಮಾನೆಯು) ಮನ್ನಿಸಲ್ಪಟ್ಟಿತು.

ರಿಟೈರ್ಡ್ ಡೆಪ್ಯುಟಿ ಕಮಿಷನರ್ ಮ|| ಎಂ. ಚೆಂಗಯ್ಯಶೆಟ್ಟರು ವೃದ್ಧಾಪ್ಯದೆಶೆಯಿಂದ ಅಸ್ವಸ್ಥರಾಗಿದ್ದು ಕಳೆದ ಗುರುವಾರ ಬೆಂಗಳೂರು ಚಾಮರಾಜಪೇಟೆಯಲ್ಲಿರುವ ಸ್ವಗೃಹದಲ್ಲಿ ಸ್ವರ್ಗಸ್ಥರಾದರೆಂದು ತಿಳುಹಲು ವ್ಯಸನವಾಗುತ್ತದೆ. ಇವರಿಗೆ ಅವಸಾನಕಾಲದಲ್ಲಿ 80 ವರ್ಷ ವಯಸ್ಸಾಗಿದ್ದಿತು. ಇವರು ಮದ್ರಾಸು ಕಡೆಯಿಂದ ನಮ್ಮ ದೇಶಕ್ಕೆ ಬಂದು ಸರ್ಕಾರಿಯುದ್ಯೋಗಕ್ಕೆ ಸೇರಿ ಡೆಪ್ಯುಟಿ ಕಮಿಷನರುದ್ಯೋಗವನ್ನು ಬಹಳ ಕಾಲದವರೆಗೆ ಅನುಭವಿಸಿ ರಿಟೈರಾದ ಮೇಲೆ ಮೈಸೂರು ಸೀಮೆಯ ವೈಶ್ಯಮಂಡಲಿಯವರ ವಿದ್ಯೆ ವ್ಯಾಪಾರಾದಿ ಅಭಿವೃದ್ಧಿ ಕಾರ್ಯಗಳಲ್ಲಿ ಮುಂದಾಳಾಗಿದ್ದು ಅವರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು. ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬದವರಿಗೆ ದುಃಖಸಮಾಧಾನವನ್ನೂ ಕೋರುತ್ತೇವೆ.

ಬೆಂಗಳೂರು ಮೆಡಿಕಲ್ ಸ್ಕೂಲಿನ ವಿದ್ಯಾರ್ಥಿ ಬಿ. ಆರ್. ಕೃಷ್ಣಯ್ಯಂಗಾರ್ ಎಂಬವನು ರಾಜಧಾನಿಯ ವೆಂಕಟರಮಣಶೆಟ್ಟರ ಅಂಗಡಿಯಲ್ಲಿ 146-12-0 ರೂ. ಬೆಲೆಯ 4 ಧರ್ಮಾವರಂ ಸೀರೆಗಳನ್ನು ಮನೆಯಲ್ಲಿ ಹೆಂಗುಸರಿಗೆ ತೋರಿಸಿ ಒಂದು ಸೀರೆಯನ್ನಿಟ್ಟುಕೊಂಡು ಅದರ ಖರೀದಿ ಹಣವನ್ನೂ ಉಳಿದ 3 ಸೀರೆಗಳನ್ನೂ ಕಳುಹಿಸಿಕೊಡುತ್ತೇನೆಂದು ಹೇಳಿ ತೆಗೆದುಕೊಂಡು ಬೆಂಗಳೂರಿಗೆ ಹೋಗಿ ಒಂದನ್ನು ಮಾರವಾಡಿಯಲ್ಲಿ ಅಡುಎಟ್ಟು ಉಳಿದ ಮೂರು ಸೀರೆಗಳನ್ನು ಬೇಲೂರಿನಲ್ಲಿರುವ ತನ್ನ ಹೆಂಡತಿಗೆ ಕಳುಹಿಸಿಕೊಟ್ಟನು. ಇದಲ್ಲದೆ ಒಂದು ಬೈಸಿಕಲ್ಲನ್ನು ಬಾಡಿಗೆಗೆ ತೆಗೆದುಕೊಂಡು ಮೈಸೂರಿನ ಮರ್ವಾಡಿಯಲ್ಲಿ ಅಡುಎಟ್ಟಿದ್ದನು. ಇದಕ್ಕಾಗಿ ಮೈಸೂರು ಸಿಟಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಯಾಗಿದ್ದು ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟು ಕಡೆಯಲ್ಲಿ ಅಪರಾಧವನ್ನೊಪ್ಪಿಕೊಂಡು ಬುದ್ಧಿಗೆಟ್ಟು ಮಾಡಿದ ಕೃತ್ಯವನ್ನು ಕ್ಷಮಿಸಬೇಕೆಂದು ಕೇಳಿಕೊಳ್ಳಲಾಗಿ ಮೆಜಿಸ್ಟ್ರೇಟರು ಕರುಣಿಸಿ ಪ್ರತಿಯೊಂದಪರಾಧಕ್ಕೂ ಒಂದೊಂದು ತಿಂಗಳ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

1931 ನೇ ಆಗಸ್ಟ್ ತಿಂಗಳಲ್ಲಿ ಮಾಲೂರು ತಾ|| ತಾಯಿನಹಳ್ಳಿಯ ಮುನಿಶೆಲ್ಲಪ್ಪಂಬವನ ಮೊದಲನೆಯ ಹೆಂಡತಿ ಮಗ ವೆಂಕಟಗಿರಿ ಎಂಬವನು ತನ್ನ ಮಲತಾಯಿಯು ಕೊಡಿಯನೂರು ಸಂತೆಗೆ ಹೋಗಿದ್ದಾಗ್ಗೆ ಅವಳ ಮಗ 8-9 ವರ್ಷದ ತಿಮ್ಮರಾಯ ಎಂಬ ಹುಡುಗನನ್ನು ಸೊಸಿತೋಪಿಗೆ ಕರೆದುಕೊಂಡು ಹೋಗಿ ತನ್ನ ದಾಯಾದಿ ಮುನಿಯಪ್ಪ ಮತ್ತು ಆಳು ಮುನಿಸ್ವಾಮಿ ಇವರಿಬ್ಬರ ಸಹಾಯದಿಂದ ತನ್ನ ಮೊದೆ ಬಳಿ ತೆಗೆದಿದ್ದ ಗುಂಡಿಯಲ್ಲಿ ಹುಡುಗನನ್ನು ಜೀವಸಹಿತ ಹೂಳಿಬಿಟ್ಟಿದ್ದನು. 15 ದಿವಸಗಳಮೇಲೆ ಪೋಲೀಸಿನವರು ತಿಳಿದು ಶವವನ್ನು ಡಾಕ್ಟರಿಂದ ಪರೀಕ್ಷೆಮಾಡಿಸಿ ಮೇಲ್ಕಂಡ ಮೂವರನ್ನೂ ಬೆಂಗಳೂರು ಸೆಷನ್ಸು ಜಡ್ಜಿಯವರ ವಿಚಾರಣೆಗೆ ಗುರಿಮಾಡಿದ್ದರು. 1 ನೇ ಅಪರಾಧಿಯು ಕೃತ್ಯವನ್ನು 2-3 ನೆಯ ಅಪರಾಧಿಗಳ ಸಹಾಯದಿಂದ ಮಾಡಿದೆನೆಂದೊಪ್ಪಿಕೊಂಡುದರಮೇಲೆ, ಮೂವರೂ ಯಾವಜ್ಜೀವ ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟರು. ಇದರ ಮೇಲೆ ಅವರುಗಳು ಹೈಕೋರ್ಟಿಗೆ ಅಪೀಲು ಮಾಡಿಕೊಂಡಿರುವಲ್ಲಿ ಮೊದಲನೇ ಅಪರಾಧಿಯ ಶಿಕ್ಷೆಯನ್ನು ಸ್ಥಿರಗೊಳಿಸಿ 2-3 ನೆಯಪರಾಧಿಗಳನ್ನು ಅವರಮೇಲೆ ತಕ್ಕನಿದರ್ಶನಬರಲಿಲ್ಲವೆಂದು ಬಿಡುಗಡೆಮಾಡಿದರು.

ಕಡೂರು ಡಿಸ್ಟ್ರಿಕ್ಟ್ ಪ್ರಜೆಗಳಿಂದ ರೈಲ್ವೆಸೆಸ್ಸಿಗಾಗಿ ಪ್ರತಿವರ್ಷದಲ್ಲೂ ಎತ್ತಲ್ಪಡುತ್ತಿರುವ 60,000 ರೂ. ಗಳು ಮತ್ತು ಇದರ ಬಡ್ಡಿ 40,000 ರೂ. ಗಳು ಸೇರಿ 1 ಲಕ್ಷ ರೂ. ನಂತೆ ಈವರೆಗೆ ಆಗಿರುವ 11 ಲಕ್ಷ ರೂ. ಗಳನ್ನು ಉಚಿತವಾಗಿ ಪ್ರಭುತ್ವದವರಿಗೆ ವಹಿಸುವುದಾಗಿಯೂ, ರೈಲ್ವೆಹಾಕುವುದರಿಂದ ನಷ್ಟ ಸಂಭವಿಸಿದಲ್ಲಿ ಕೆಲ ವರ್ಷಗಳವರೆಗೆ ಆ ನಷ್ಟವನ್ನು ಕಟ್ಟಿಕೊಡುವುದಾಗಿಯೂ ಕಡೂರು ಡಿಸ್ಟ್ರಿಕ್ಟ್ ಬೋರ್ಡಿನವರು ನಿರ್ಧರಿಸಿರುತ್ತಾರೆ. ಅದರಮೇಲೆ ಡಿ|| ಬೋರ್ಡಿನ ಪ್ರೆಸಿಡೆಂಟರು ಇಬ್ಬರು ಬೋರ್ಡು ಮೆಂಬರುಗಳೊಡನೆ ಈ ತಾ|| 21 ರಲ್ಲಿ ದಿವಾನರಲ್ಲಿಗೆ ರಾಯಬಾರ ಹೋಗಿ ಕಡೂರಿನಿಂದ ಚಿಕ್ಕಮಗಳೂರಿಗೆ ರೈಲ್ವೆ ಹಾಕುವೇರ್ಪಾಟು ಮಾಡಬೇಕೆಂದೂ, ಇದಕ್ಕಾಗಿ ಮೇಲ್ಕಂಡ 11 ಲಕ್ಷ ರೂ. ಗಳನ್ನೂ ನಷ್ಟವನ್ನೂ ಕೊಡಲು ಸಿದ್ಧವಾಗಿರುತ್ತೇವೆಂದೂ, ಈ ಕಾರ್ಯವನ್ನು ಪೂರೈಸಲು 24 ಲಕ್ಷ ರೂ. ವೆಚ್ಚವಾಗುವುದಾಗಿ ಅಂದಾಜಾ ಆಗಿದೆ ಎಂದೂ ಬಿನ್ನೈಸಿಕೊಂಡರು. ಅದಕ್ಕೆ ದಿವಾನರವರು ಈ ಕಾರ್ಯವು ಅಗತ್ಯವಾಗಿ ನಡೆಯಬೇಕಾಗಿದೆ, ಆದರೆ ದುಡ್ಡಿನ ಕೊರತೆಯಿರುವುದರಿಂದ ಸರ್ಕಾರದಿಂದ ನಡಿಸಲಾಗುವುದೋ ಅಥವಾ ಬೋರ್ಡಿನವರೇ ನಡಿಸಲು ಸಾಧ್ಯವೆ ಎಂಬ ವಿಚಾರವನ್ನು ಆಲೋಚಿಸುತ್ತೇನೆಂದು ಅಪ್ಪಣೆಕೊಡಿಸಿದರು.

ಚಿತ್ರದುರ್ಗ ಡಿಸ್ಟ್ರಿಕ್ಟ್ ಬೋರ್ಡ್

NOTICE

No. C. 92. 31-32 Dated 14-7-32.

ಚಿತ್ರದುರ್ಗ ತಾಲ್ಲೂಕು ಚಿಕ್ಕಗುಂಟನೂರಿನಲ್ಲಿ ಭಾವಿ ತೆಗೆಯತಕ್ಕ ಬಗ್ಗೆ ಕೆಲಸನಡೆಯತಕ್ಕ ದಿವಸಗಳಲ್ಲಿ ಮತ್ತು ಕಾಲದಲ್ಲಿ ತಾ 6-8-32ನೇ ಮಧ್ಯಾನ್ಹ 3 ಗಂಟೆ ವರವಿಗೂ ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ಸೀಲ್ಡು ಟೆಂಡರುಗಳು ತೆಗೆದುಕೊಳ್ಳಲ್ಪಡುತ್ತೆ.

ಡಿಪಾಜಿಟ್ ನೊಬಲಗು ರೂಪಾಯಿ 100

ಕಾಂಗಾರಿಯನ್ನು 1932 ನೇ ಡಿಸೆಂಬರ್ ಆಖೈರಿನಲ್ಲಿ ಪೂರೈಸಬೇಕು

ಪ್ಲಾನ್ ವಗೈರೆ ಷರತ್ತುಗಳನ್ನು ಆಫೀಸಿನಲ್ಲಿ ನೋಡಬಹುದು.

G. CHENAPPA,
President.

2—2

ಪ್ರಕಟನೆ.

ಧಾರವಾಡ ಲಿಂಗಾಯತ ಎಜ್ಯುಕೇಷನ್
ಅಸೋಸಿಯೇಶನ್ನದ ವಾಙ್ಮಯ ಶಾಖೆಯವರು.

೧. ಶ್ರೀ ಬಸವಣ್ಣನವರ ವಚನಗಳು.
ಷಡಕ್ಷರದೇವಕೃತ.
೨. ಕವಿಕರಣರಸಾಯನ.

ಈ ಗ್ರಂಥಗಳನ್ನು ಪರಿಶೋಧಿಸಿ ಮುದ್ರಿಸಿ ಪ್ರಕಟಿಸುವ ಕಾರ್ಯವನ್ನು ಕೈಕೊಂಡಿದ್ದಾರೆ. ಅದಕ್ಕಾಗಿ ಯಾವ ಮಹನೀಯರಲ್ಲಾದರೂ ಮೇಲ್ಕಂಡ ಗ್ರಂಥಗಳ ಕೈಬರಹದ ಅಥವಾ ತಾಡವಾಲೆಯ ಪ್ರತಿಗಳು ಇದ್ದುದಾದರೆ ಅವುಗಳನ್ನು ಕೆಳಗೆ ಕಾಣಿಸಿದ ವಿಳಾಸಕ್ಕೆ ಆದಷ್ಟು ಬೇಗನೆ ದಯವಿಟ್ಟು ಕಳುಹಬೇಕೆಂದು ಬಿನ್ನಹ. ಪರಿಶೋಧನೆಯ ಕಾರ್ಯ ಮುಗಿದ ಕೂಡಲೆ ಅವರವರ ಗ್ರಂಥಗಳನ್ನು ಅವರವರಿಗೆ ತಿರುಗಿ ಕಳುಹಿಸಿಕೊಡಲಾಗುವದು. ಈ ಗ್ರಂಥಗಳ ಹಳೇ ಪ್ರತಿಗಳು ಯಾರಲ್ಲಿಯಾದರೂ ಇದ್ದ ಸಂಗತಿಯನ್ನು ದಯವಿಟ್ಟು ತಿಳುಹಿಸಿದಲ್ಲಿ ವಾಙ್ಮಯ ಶಾಖೆಯವರು ಉಪಕೃತರಾಗುವರು.

ಎಸ್. ಎಸ್. ಹಿರೇಮಠ,

ಲಾಯಿಬ್ರೇರಿಯನ್
ಲಿಂಗಾಯತ ಎಜ್ಯುಕೇಷನ್ ಅಸೋಸಿಯೇಷನ್ನ
ವಾಙ್ಮಯಶಾಖೆ, ಧಾರವಾಡ.

ಐಮಂಗಲ P. O. ಹಿರಿಯೂರು ತಾಲ್ಲೂಕು

ನಿಮಗೆ ಶುದ್ಧವಾದ ಖಾದೀ ಬೇಕೋ ?

ಹಾಗಾದರೆ ಚಿತ್ರದುರ್ಗದ ಡಿಸ್ಟ್ರಿಕ್ಟು ಬೋರ್ಡಿನ ಆಶ್ರಯದಲ್ಲಿ ಸ್ಥಾಪಿತವಾಗಿರುವ ಐಮಂಗಲ ಖಾದಿ ಕೇಂದ್ರದಲ್ಲಿ ವಿಚಾರಿಸಿ ಪಡೆಯಬಹುದು.

ಈ ಖಾದಿ ಕೇಂದ್ರದಲ್ಲಿ ಶುದ್ಧವಾದ ಖಾದಿಯ ಕೋಟಿನ ಬಟ್ಟೆಗಳು, ಷರಟಿನ ಬಟ್ಟೆಗಳು, ಟವಲುಗಳು, ಅಂಗ ವಸ್ತ್ರಗಳು, ಧೋತ್ರಗಳು ವಗೈರೆ ಬಿಕರಿಗೆ ಸಿದ್ಧವಾಗಿವೆ. ದೇಶಾಭಿಮಾನಿಗಳು ಪ್ರೋತ್ಸಾಹಿಸಬೇಕಾಗಿ ಕೋರಿದೆ.

ಬಾಕಿ ತಪಸೀಲುಗಳಿಗೆ ಮ್ಯಾನೇಜರ್ ಐಮಂಗಲ ಖಾದಿ ಕೇಂದ್ರಕ್ಕೆ ಬರೆದು ತಿಳಿದುಕೊಳ್ಳಬಹುದು.

ಚಿತ್ರದುರ್ಗ, ತಾ|| 19-7-32.

G. Channappa,
ಪ್ರೆಸಿಡೆಂಟ್ ಡಿಸ್ಟ್ರಿಕ್ಟು ಬೋರ್ಡು,
ಚಿತ್ರದುರ್ಗ.

ಗೃಹಕೃತ್ಯದ ನೋಟೀಸು.

ಮೈಸೂರು ತಾಲ್ಲೂಕು ಇಲವಾಲ ಹೋಬಳಿ ಬೆಳವಾಡಿ ಗ್ರಾಮದಲ್ಲಿರುವ ಕುಂಟಮಾಯಿಗೌಡನ ಮಾಯಿಗೌಡನ ಮಗ ಬಸವೇಗೌಡನು ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:— ನನ್ನ ತಂದೆಯಾದ ಮೇಲ್ಕಂಡ ಮಾಯಿಗೌಡನಿಗೆ ನಾನು ಒಬ್ಬನೇ ಗಂಡುಮಗನಾಗಿ ಕುಟುಂಬದ ಆಸ್ತಿಗಳಿಗೆಲ್ಲಾ ನಾನು ವಾರಸುದಾರನಾಗಿ ಸ್ವತ್ತು ಸ್ವಾಧೀನಾನುಭವದಾರನಾಗಿರುತ್ತೇನೆ. ನಮ್ಮ ಕುಟುಂಬಕ್ಕೆ ಸುಮಾರು ಮೂರು ಸಾವಿರ ರೂಪಾಯಿನ ಪಿತರಾರ್ಜಿತವಾದ ಸ್ಥಿರಸೊತ್ತೂ ಸುಮಾರು ಮೂರು ಸಾವಿರ ರೂಪಾಯಿಗಳು ಬರತಕ್ಕ ಲೇವಾದೇವಿಯೂ ಇರುತ್ತವೆ. ಈ ಮೇಲ್ಕಂಡ ಆಸ್ತಿಗಳಿಗೆಲ್ಲಾ ನಾನೇ ಸಂಪೂರ್ಣ ಹಕ್ಕುದಾರನಾಗಿರುತ್ತೇನೆ. ನಮ್ಮ ಕುಟುಂಬದಿಂದ ಹೊರಗೆ ಕೊಡಬೇಕಾದ ಸಾಲಗಳು ಯಾವದೂ ಇಲ್ಲ. ಸದರಿ ನನ್ನ ತಂದೆ ಮಾಯಿಗೌಡನಿಗೆ ಈಗ್ಗೆ ಆರು ತಿಂಗಳಿಂದ ಬುದ್ಧಿ ವಿಕಲ್ಪವಾಗಿರುತ್ತೆ. ಈತನಿಂದ ಸ್ಥಿರಸೊತ್ತುಗಳನ್ನು ಪರಭಾರೆ ಮಾಡಿಸಲು ಕುಮಂತ್ರಿಗಳು ಹುಟ್ಟಿ ಆತನಿಗೆ ಚಿತಾವಣೆಮಾಡುತ್ತಿರುವಂತೆ ತಿಳಿಯಬರುತ್ತೆ. ಇದಲ್ಲದೆ ಲೇವಾದೇವಿಗಳನ್ನು ಖುಲ್ ಮಾಡಿಸುವ ತರದೂದು ಮಾಡುತ್ತಿರುವದಾಗಿಯೂ, ಸದರಿಯವನಿಗೆ ಬೇರೆ ದತ್ತು ಮಾಡಿಸುವ ಪ್ರಯತ್ನ ನಡಿಸುತ್ತಿರುವದಾಗಿಯೂ ತಿಳಿಯಬರುತ್ತೆ. ಈ ಕಾರಣಗಳಿಗೋಸ್ಕರ ಈತನಿಂದ ಯಾರೂ ಕ್ರಯ, ದಾನ, ಆಧಾರ, ಭೋಗ್ಯ, ಪರಿವರ್ತನೆ ಇನ್ಯಾವ ಮೂಲಕವಾಗಿ ಪಡೆದರೂ ಅವಿಭಕ್ತ ಕುಟುಂಬದ ಆಸ್ತಿಗಳಾದ ಸಾಲದ ಪತ್ರಗಳ ಅಸಲು ಬಿಡ್ಡಿಯನ್ನು ಸದರಿ ಮಾಯಿಗೌಡನಿಗೆ ಪಾವತಿಮಾಡಿ ಓಚರು ಪಡೆದರೂ ಅದು ಊರ್ಜಿತವಾಗತಕ್ಕದ್ದಲ್ಲವೆಂತಲೂ ಇದರಿಂದ ಯಾವ ಪ್ರಯೋಜನವೂ ಉಂಟಾಗುವುದಿಲ್ಲವೆಂತಲೂ ಖರ್ಚುವಗೈರೆಗಳಿಗೆ ಜವಾಬ್ದಾರಿಯಿಲ್ಲವೆಂತಲೂ ಈ ಮೂಲಕ ಎಚ್ಚರಿಸಿರುತ್ತೇನೆ.

ಬಸವೇಗೌಡನ ರುಜು.

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖಕರಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ನಿಷ್ಪಕ್ಷಪಾತವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟವಾಗಿಯೂ, ಇರಬೇಕೆಂದೂ ಬುಧವಾರ ಗುರುವಾರದೊಳಗೆ ನಮ್ಮ ಕೈಸೇರುವಂತೆ ಕಳುಹಲ್ಪಡಬೇಕೆಂದು, ಈ ನಿಬಂಧನೆಗೆ ವಿರುದ್ಧವಾದ ಲೇಖನಗಳು ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದ್ದಾಗ್ಯೂ ಲೇಖಕರು ಲಕ್ಷ್ಯಸದೆ ಬಂಸಿ ತಮಗೆ ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ ಪುಟಗಟ್ಟಲೆ ಅಸ್ಪುಟವಾಗಿ ಬರೆದು ನಮಗೆ ತ್ರಾಸನ್ನು ಕೊಡುತ್ತಿರುವರೆಂದು ಬರೆಯಲು ಖೇದವಾಗುತ್ತದೆ. ಆದುಕಾರಣ ಇನ್ನುಮೇಲೆ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಮಸ್ತರೂ ಗಮನಿಸತಕ್ಕದ್ದು.—ಸಂ.

ಇನಾಂದಾರರಿಗೆ ಅನುಕರಣೀಯವು.

ನಮ್ಮ ಮೈಸೂರು ಘನಸರ್ಕಾರದವರು ಹಳ್ಳಿಗಾಡಿನವರ ತೊಂದರೆಗಳನ್ನು ನೋಡಿ ಅವುಗಳ ಪರಿಹಾರಕಾರ್ಯಗಳಿಗಾಗಿ ಆಯಾ ಗ್ರಾಮದ ಮೊಹತರ್ಫ ಹುಟ್ಟುವಳಿಯನ್ನು ಆಯಾ ಗ್ರಾಮಕ್ಕೇ ವಹಿಸಿಬಿಟ್ಟು ಗ್ರಾಮ ಕಾರ್ಯನಿರ್ವಾಹಕ್ಕೆ ಪಂಚಾಯತಿಗಳನ್ನು ನಿಯಮಿಸಿರುವರಷ್ಟೆ. ಈ ಏರ್ಪಾಟಾಗಿ 5 ವರ್ಷಗಳಾದುವು. ಮೊದಲು ಅನೇಕ ಇನಾಂದಾರರುಗಳು ಮೊಹತರ್ಫಬಾಬು ಹುಟ್ಟುವಳಿಯನ್ನು ಗ್ರಾಮಕ್ಕೆ ವಹಿಸಲು ಅನುಕೂಲಿಸಲಿಲ್ಲ. ಆದರೆ ಹೆಗ್ಗಡದೇವನಕೋಟೆ ತಾಲ್ಲೂಕು ಸರ್ವಮಾನ್ಯ ಚಿಕ್ಕೂರು ಇನಾಂದಾರ್ ಶ್ರೀ|| ಸರ್ ಎಂ. ಕಾಂತರಾಜ ಅರಸಿನವರ ಕುಮಾರಿ ಸೌಭಾಗ್ಯವತಿ ಲೀಲಾವತಿ ಅಮ್ಮನವರು ತಮ್ಮ ಇನಾಂ ಗ್ರಾಮದ ಮೋಹತರ್ಫಬಾಬನ್ನು ಗ್ರಾಮದುಪಯೋಗಕ್ಕೆ ವಹಿಸಿಕೊಟ್ಟರು ಮತ್ತು ಆ ಗ್ರಾಮದ ಸ್ಕೂಲಿಗಾಗಿ ಕಟ್ಟಡವನ್ನು ಕಟ್ಟಿಸಲು ಸ್ವಂತದಿಂದ 350 ರೂ.ಗಳನ್ನು ದಯಪಾಲಿಸಿದರು. ಅಲ್ಲದೆ ಇವರ ಸಹಾಯಕರಾದ ಮೈಸೂರು ...

ಮಾನವೂ ಉದಾರಬುದ್ಧಿಯೂ ಇತರ ಇನಾಂದಾರರಿಗೆ ಅನುಕರಣೀಯವಾಗಿವೆ. ಇವರಂತೆ ಅವರುಗಳೂ ಆಚರಿಸಿ ತಮ್ಮ ಗ್ರಾಮಗಳ ರೈತರ ಕೃತಜ್ಞತೆಗೆ ಪಾತ್ರರಾಗುವರೆಂದು ಹಾರೈಸುತ್ತೇನೆ.

ಬಿ. ಲಕ್ಷ್ಮೀನಾರಣಪ್ಪ, ಡಿ|| ಬೋರ್ಡ್ ಮೆಂಬರು.

ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ ವಿದ್ಯಾರ್ಥಿಗಳ ಪರೀಕ್ಷಾಫಲಿತಾಂಶ.

ಕಾಶೀ ಗೌರ್ನಮೆಂಟ್ ಸಂಸ್ಕೃತಪರೀಕ್ಷೆ

1. ನ್ಯಾಯಶಾಸ್ತ್ರ ಪ್ರಥಮಖಂಡದಲ್ಲಿ—ಚನ್ನಮಲಿಂಗಶಿವಾಚಾರ್ಯರು, ಮೊಳಕಾಲ್ಮೂರು.
2. ಸಾಹಿತ್ಯ ಸಂಪೂರ್ಣ ಮಧ್ಯಮದಲ್ಲಿ—ರುದ್ರಾರಾಧ್ಯಶರ್ಮರು, ಚುಂಚನಗೋಪ್ಪ.

ಕಾಶೀ ವಿಶ್ವವಿದ್ಯಾಲಯ ಪರೀಕ್ಷೆ

3. ಸಂಪೂರ್ಣ ನ್ಯಾಯಶಾಸ್ತ್ರದಲ್ಲಿ—ಗುರುಲಿಂಗದೇವರು, ಬೆಳಗಾಂವ.
4. ಇಂಗ್ಲಿಷು ಇಂಟರ್‌ಮೀಡಿಯೇಟಿನಲ್ಲಿ—ಸೋಮಶೇಖರಶರ್ಮರು, ಹುಸ್ಕೂರು.

ಕಲಕತ್ತಾ ಗೌರ್ನಮೆಂಟು ಪರೀಕ್ಷೆ

5. ನ್ಯಾಯ ಮಧ್ಯಮದಲ್ಲಿ—ವೃಷಭಲಿಂಗಶಿವಾಚಾರ್ಯರು, ಗೊಬ್ಬೂರು (ಇವರು ಫಸ್ಟ್‌ಕ್ಲಾಸಿನಲ್ಲಿ ಉತ್ತೀರ್ಣರು).
6. ಸ್ಮೃತಿ ಮಧ್ಯಮದಲ್ಲಿ—ಚಿ. ಮ. ವೀರಭದ್ರಶರ್ಮರು, ಹೈದರಾಬಾದ್ (ಇವರು ಫಸ್ಟ್‌ಕ್ಲಾಸಿನಲ್ಲಿ ಉತ್ತೀರ್ಣರು).
7. ಕಾವ್ಯ ಮಧ್ಯಮದಲ್ಲಿ ಸಿದ್ಧಲಿಂಗಶಾಸ್ತ್ರಿಗಳು, ಇನಾಮು ಹೊಂಗಲ್.
8. ದರ್ಶನಾದ್ಯದಲ್ಲಿ—ಚಿ.ಮ|| ವೀರಭದ್ರಶರ್ಮರು, ಹೈದರಾಬಾದು.

ವಾಸುದೇವರಾವ್ ಏಜೆಂಟ್, ಜಂಗಮವಾಡಿ ಮಠ.

ಸಂಸ್ಕೃತವಿದ್ಯಾರ್ಥಿಗಳೂ, ಶಿರಸಂಗಿಯ ಫಂಡು.

ವೀರಶೈವ ಸಮಾಜದ ವಿದ್ಯಾಭಿವೃದ್ಧಿಯ ಸಲುವಾಗಿ ಶಿರಸಂಗಿಯ ಲಿಂಗರಾಜರು ತಮ್ಮ ಸಂಸ್ಥಾನವನ್ನೇ ಕೊಟ್ಟು ಕಲಿಯುಗದ ಕರ್ಣನೆನ್ನಿಸಿಕೊಂಡಿರುವರು ...

ವೀರಶೈವರಿಗೆ ಸಂಸ್ಕೃತವು ಬೇಡವೇ?

ಮ|| ರಾಮಯ್ಯನವರಿಗೆ ಪಬ್ಲಿಕ್ ಎಂಟರ್ಟೇನ್‌ಮೆಂಟ್.

ವೀರಶೈವ ತತ್ವಪ್ರಚಾರಕ ಸಂಘದವರಿಗೆ ಆಮಂತ್ರಣವು.

ಅಧ್ಯಕ್ಷಾದಿ ಸಮಸ್ತ ಸದಸ್ಯರೇ, ಈ 20 ನೆಯ ಶತಮಾನವು ಕಲಿಯುಗ ಪ್ರಾದುರ್ಭವಿಸದಿದ್ದರೂ, ಅವನ ಮುಖ್ಯ ಕೇಂದ್ರವಾಗುವ ತಯಾರಿಯೊಳಗೆ ಇರುತ್ತದೆ. ಕಲಿಯೆಂದರೆ ಕಲಹವು. ಅದೀಗ ಪರಾಕಾಷ್ಠಸ್ಥಿತಿಗೆ ಬಂದಿದೆ ...

... ಎಂಬ ವಾಕ್ಯದಿಂದ ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ಅಂತ್ಯಜನಾಗಲಿ, ಶಿವನಲ್ಲಿ ಭಕ್ತಿಯುಳ್ಳವನಾದರೆ ಶಿವನಂತೆ ಗೌರವಿಸಲಿಕ್ಕೆ ಅರ್ಹನೆಂಬುದೇ ಸಿದ್ಧವಾಗುವದಲ್ಲದೆ, ಅಂತ್ಯಜನಾದರೂ ಬ್ರಾಹ್ಮಣನಾಗುತ್ತಾನೆಂದು ಜಾತಿಸಾಂಕರ್ಯ ಬೋಧವಾಗುವದಿಲ್ಲ. ಈ ಪ್ರಕಾರ ಶ್ಲೋಕಾರ್ಥವುಳ್ಳವುಗಳನ್ನು ...

ದುರ್ಬೋಧವುಗಳಾಗಿರುವದರಿಂದಲೇ ಶ್ರೀಕರಾಚಾರ್ಯರು ಇವರ ಉತ್ತರದಲ್ಲಿಯೇ ನಿರಾಕರಿಸ್ವೈತನಿರಸನ ಸ್ಥಲವನ್ನು ಬರೆದಿರುವರು. ಇದಕ್ಕೂ ಹೆಚ್ಚಿನ ವಿಷಯವನ್ನು ಚತುರ್ವಿಂಶತಿವರ್ಣನಿಯಮಗಳಿಂದ ಪ್ರಮಾಣಾನುಸಾರ ಯುಕ್ತ್ಯನುಭವಗಳಿಂದಲೇ ಸಭೆಯಲ್ಲಿ ಸಾಧಿಸುತ್ತೇವೆ. ವೃತ್ತಪತ್ರಿಕೆಯಲ್ಲಿ ವಿಸ್ತಾರವಾಗಿ ಬರೆಯುವದು ಪ್ರಯೋಜನವಿಲ್ಲ. ಸಭೆಗೆ ಒಪ್ಪದೆ ಪಾಠಿ ಪ್ರಶ್ನೋತ್ತರಗಳಿಂದಲೇ ಬರೆಯಹತ್ತಿದರೆ ಇನ್ನು ಮುಂದೆ ಯಾರೂ ಉತ್ತರವನ್ನು ಕೊಡಲಾರರು. ಶೀಘ್ರವಾಗಿ ಸಭೆಯ ಸ್ಥಾನಕಾಲ ನಿಯಮಾದಿಗಳನ್ನು ತಿಳಿಸುವವರಾಗಿರಿ.

ವಾದನಿಯಮಗಳು:— ವಾದಿ ಪ್ರತಿವಾದಿಗಳು ತಮ್ಮ ತಮ್ಮ ಪಕ್ಷಸಾಧಕಗಳಾದ ಪ್ರಶ್ನೆ ಉತ್ತರ ಸಿದ್ಧಾಂತ ಇವುಗಳನ್ನು ಪ್ರತ್ಯೇಕ ಪುಸ್ತಕದಲ್ಲಿ ಬರೆಯಿಸಿ, 1 ವಾದಿಗೂ, 1 ಪ್ರತಿವಾದಿಗೂ, 1 ತೀರ್ಮಾನಮಾಡುವವರಿಗೂ ಕೊಡಬೇಕು. ಕೂಡಿದವರಲ್ಲಿ ಸರ್ವಸಮ್ಮತಿಯಿಂದ ಆರಿಸಲ್ಪಟ್ಟವರೇ ಅಧ್ಯಕ್ಷರು. ಉಭಯ ಪಕ್ಷಗಳಿಂದ ಆರಿಸಲ್ಪಟ್ಟ 20 ಜನರ ಸಭೆಯಿಂದ ತೀರ್ಮಾನಿಸತಕ್ಕದ್ದು. ಈ 20 ಜನರಿಗೂ ತೀರ್ಮಾನಮಾಡುವದಕ್ಕಾಗಿ 1 ತಿಂಗಳು ಇರುವ ಸಂದರ್ಭಬಿದ್ದರೆ ವಸತಿ ಭೋಜನಾದಿಗಳನ್ನೂ ದಗಿಸಿಕೊಡುತ್ತೇನೆ. ನಿಮ್ಮೆಲ್ಲರ ಮನಸೊಪ್ಪುವಂತೆ ಸಿದ್ಧಾಂತಮಾಡುವದಕ್ಕೂ ನಿಮ್ಮಗಳ ಉಪಚಾರಮಾಡುವದಕ್ಕೂ ವಿಧೇಯನಾಗಿದ್ದೇನೆ. ಇಷ್ಟು ಮಾತ್ರಕ್ಕೆ ಪಂಡಿತಪ್ರಕಾಂಡ ಜಗದ್ಗುರು ರಂಭಾಪುರೀಶ್ವರರ ಆಹ್ವಾನವೇಕೆ? ಕಾಲ ಸ್ಥಾನನಿಯಮಗಳಿಗೆ ಪತ್ರವ್ಯವಹಾರಮಾಡತಕ್ಕವರು ಚಂದ್ರಶೇಖರಶಾಸ್ತ್ರಿ ಪಗಡಿನ್ನಿ ಬೆನ್ನೂರು ಮಠಾಧಿಕಾರಿ, ಮು|| ಕಂಪ್ಲಿ, ಪೋ|| ಕಂಪ್ಲಿ ಜಿಲ್ಲಾ ಬಳ್ಳಾರಿ ಎಂದು ಬರೆಯಬೇಕು. ವಿಚಾರಾಪೇಕ್ಷಿಗಳಾಗಿರತಕ್ಕವರು ತಮ್ಮ ಸಂಘದ ಸರ್ವ ಜನರಿಗೂ ತಿಳಿಸಿ, ಯಾವತ್ತು ಜವಾಬ್ದಾರಿಯುಳ್ಳವರಾಗಿರಬೇಕು ಮತ್ತು ಎಷ್ಟು ಜನರು ಬರುವರೆಂಬುದನ್ನು ನಮಗೆ ಮುಂಚಿತವಾಗಿ ತಿಳಿಸಬೇಕು.

ವೀರಶೈವ ಪತ್ರಿಕಾಕರ್ತರಿಗೆ— ಈ ಲೇಖನವು ವ್ಯಕ್ತಿಮಾತ್ರೋಪಯೋಗಿ ಆಗಿರದೆ ಮತಪ್ರಯೋಜಕವೂ ಶಾಂತಿಸ್ಥಾಪಕವೂ ಆಗಿರೋಣದರಿಂದ ಸರ್ವರೂ ಪ್ರಕಟಿಸಬೇಕಾಗಿ ವಿನಂತಿ.

ವಿದ್ವಜ್ಜನ ವಿಧೇಯ,
ಚಂದ್ರಶೇಖರಶಾಸ್ತ್ರಿ ಬೆನ್ನೂರು ಪಗಡಿನ್ನಿ ಬೃಹನ್ಮಠಾಧಿಕಾರಿ,
ಮು. ಪೋ. ಕಂಪ್ಲಿ, ಜಿಲ್ಲಾ ಬಳ್ಳಾರಿ.

ಬೆಂಗಳೂರು ನಗರದಲ್ಲಿರುವ ಕಲಾಮಂದಿರದಲ್ಲಿ ನಡೆದ ಕಲಾಪ್ರದರ್ಶನದ ಪ್ರಾರಂಭಮಹೋತ್ಸವವನ್ನು ನೆರವೇರಿಸುವಾಗ್ಗೆ ದಿವಾನರವರು ಮಾಡಿದ ಭಾಷಣ.

(1932ನೆಯ ಇಸವಿ ಜುಲೈ 16ನೆಯ ತಾರೀಖು.)

ಮಹಿಳೆಯರೇ, ಮತ್ತು ಮಹನೀಯರೇ:—

ನಮ್ಮಲ್ಲಿ ಅನೇಕರು ರಾಜಕೀಯ ವಿಚಾರಗಳಿಂದಲೇ ತುಂಬಿಹೋಗಿರುವ ವಾತಾವರಣದಲ್ಲಿ ವ್ಯವಹರಿಸಬೇಕಾದ ಪರಿಸ್ಥಿತಿಯಲ್ಲಿದ್ದೇವೆ. ಆದಕಾರಣ, ...

ಮಕ್ಕಳಿದ್ದರೆಮನೆ ಚಂದ.
ಬಂಜೆತನದಿಂದ ಮುಕ್ತರಾಗುವಿರಿ

ಮಕ್ಕಳಿಲ್ಲೆಂದು | ಚಿಂತಿಸಬೇಡಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆವಿಗುರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ.

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. 14

ಗಾಗಿ ಕಾಲವನ್ನೂ ಶ್ರಮವನ್ನೂ ವಿಶೇಷವಾಗಿ ವಿನಿಯೋಗಿಸುವುದೂ ಸಹ, ಮನುಷ್ಯವರ್ಗವನ್ನು ಇತರ ಪ್ರಾಣಿಗಳಿಂದ ಪ್ರತ್ಯೇಕಿಸಿ ಮೇಲಿನ ಮೆಟ್ಟಿಲಕ್ಕೆ ಮುಟ್ಟಿಸುವ ಮುಖ್ಯ ಲಕ್ಷಣಗಳಲ್ಲೊಂದೆನ್ನಬಹುದು. ಆಟವೊಂದು ಮಾತ್ರ ಮನುಷ್ಯರಿಗೂ ಮತ್ತು ಇತರ ಅನೇಕ ಪ್ರಾಣಿಗಳಿಗೂ ಬೇಕಾಗಿರುವಂತಹ ಈ ಬಗೆಯ ಕಾರ್ಯಗಳಲ್ಲೊಂದಾಗಿದೆ. ಪ್ರಾಣಿಗಳಿಗೂ ಮನುಷ್ಯರಿಗೂ ಸಮಾನ ಧರ್ಮವೆನಿಸಿರುವ ಈ ಬಗೆಯ ಕಾರ್ಯವು ಆಟವೊಂದೇ—ಎಂದು ತೋರುತ್ತದೆ. ಮಾನವ ಸ್ವಭಾವವು ಹೂವಿನಂತೆ ಅರಳಿ ಮನುಷ್ಯ ಜನ್ಮವು ಸಾರ್ಥಕವಾಗಲು ಹೊಟ್ಟೆಯನ್ನು ಹೊರೆದುಕೊಳ್ಳುವುದೊಂದೇ ಸಾಲದು. ಆಹಾರ ಮುಂತಾದ ಕೇವಲ ಪ್ರಾಣಿಧರ್ಮಗಳನ್ನು ನೆರವೇರಿಸಿಕೊಳ್ಳುವಷ್ಟರಿಂದಲೇ ತೃಪ್ತಿಯನ್ನು ಪಡೆದಲ್ಲಿ, ಮಾನವನೆಂದಿಗೂ ಚರಿತಾರ್ಥನಾಗುವುದಿಲ್ಲ. ಜೀವನಕ್ಕೆ ಸಂಸ್ಕಾರವನ್ನುಂಟುಮಾಡುವ ಸಾಧನಸಾಮಗ್ರಿಗಳೂ ಮನುಷ್ಯನಿಗೆ ಆಗತ್ಯವಾಗಿ ಬೇಕೇಬೇಕು. ದೇಹದ ಆವಶ್ಯಕತೆಗಳಂತೆಯೇ, ಬುದ್ಧಿಗೂ ಹೃದಯಕ್ಕೂ ಬೇಕಾದ ಆವಶ್ಯಕತೆಗಳಿಗೂ ಸಹ, ಆಗತ್ಯವಾಗಿ ಗಮನಕೊಡಬೇಕಾದುದೇ ಮನುಷ್ಯಧರ್ಮ. ದೇಹವು ಬೆಳೆಯುವುದು ಆಟಪಾಟಗಳ ಮತ್ತು ಅಂಗಸಾಧನೆಯ ಸಹಾಯದಿಂದ. ಮನುಷ್ಯನ ಬುದ್ಧಿಯೂ ಭಾವನಾಶಕ್ತಿಯೂ ಕುದುರಿ, ವೃದ್ಧಿಹೊಂದಿ, ವಿಕಸಿತವಾಗುವುದು, ಮುಖ್ಯವಾಗಿ ದರ್ಶನಶಾಸ್ತ್ರ ಸಾಹಿತ್ಯ ಮತ್ತು ಲಲಿತಕಲೆಗಳು ಇವು ಮೂರರ ಅವಲಂಬನದಿಂದಲೇ. ಆದಕಾರಣ, ಮನುಷ್ಯರೆನಿಸಿದವರಿಗೆ ಇವುಗಳೂ ಅತ್ಯವಶ್ಯವಾಗಿ ಬೇಕೇಬೇಕು.

ಕಲಾ ಪ್ರಪಂಚದಲ್ಲಿ ಭರತಖಂಡಕ್ಕೆ ಅನನ್ಯ ಸಾಧಾರಣವಾದ ಶ್ರೇಷ್ಠಸ್ಥಾನವು ದೊರೆತಿದ್ದ ಕಾಲವೂ ಒಂದಿದ್ದಿತು. ಭಾರತೀಯರು ನಿರ್ಮಿಸಿರುವ ಕೆಲವು ಕಟ್ಟಡಗಳನ್ನೂ, ಭಾರತೀಯರು ಬರೆದಿರುವ ಕೆಲವು ಚಿತ್ರಗಳನ್ನೂ, ಭಾರತೀಯರು ಮಾಡಿತೋರಿಸಿರುವ ಕೆಲವು ವಿಗ್ರಹಗಳೇ ಮುಂತಾದ ಕೆತ್ತನೆಯ ಕೆಲಸಗಳನ್ನೂ, ಮೀರಿಸುವಷ್ಟು ಸೌಂದರ್ಯವುಳ್ಳ ಕೃತಿಗಳನ್ನು ಪ್ರಪಂಚದಲ್ಲಿ ಮತ್ತಾವ ದೇಶದವರೂ ಇಂದಿಗೂ ರಚಿಸಿಲ್ಲ. ಒಂದೆರಡು ನಿದರ್ಶನಗಳನ್ನೇ ತೆಗೆದುಕೊಳ್ಳೋಣ, ಆಗ್ರಾದಲ್ಲಿರುವ ತಾಜಮಹಲ್ ಕಟ್ಟಡವು ಜಗತ್ತಿನಲ್ಲೇ ಅತ್ಯಂತ ರಮಣೀಯವಾಗಿದೆಯೆಂಬುದನ್ನು ಸಮಸ್ತರೂ ಒಪ್ಪಿದ್ದಾರೆ. ಅಜಂತದ ಗುಹೆಗಳಲ್ಲಿರುವ ಚಿತ್ರಗಳಂತೂ, ಜಗತ್ತಿನಲ್ಲೇ ವಿಸ್ಮಯಕರವಾಗಿವೆ. ಇನ್ನು ಕಲ್ಲಿನಲ್ಲಿ ಮಾಡಿರುವ ಕೆತ್ತನೆಯ ಕೆಲಸದ ಸೌಂದರ್ಯವಿಚಾರ. ಬೇಲೂರು ಹಳೇಬೀಡು ದೇವಾಲಯಗಳಲ್ಲಿಯೂ ಆಬೂಪರ್ವತದ ಜೈನ ತೀರ್ಥಂಕರ ದೇವಾಲಯಗಳಲ್ಲಿಯೂ ಇರತಕ್ಕ ರಮಣೀಯವಾದ ಕೆತ್ತನೆಯ ಕೆಲಸದ ವೈಖರಿಯನ್ನು ಮತ್ತೆಲ್ಲಿತಾನೆ ಕಾಣಲು ಸಾಧ್ಯ?

ಇಂಡಿಯಾ ದೇಶದ ಕಲಾ ಸಂಪತ್ತಿನ ವೈಶಿಷ್ಟ್ಯವೂ, ವೈಖರಿಯೂ ಲೋಕೋತ್ತರವಾದುವುಗಳು. ಭಾರತೀಯ ಕುಶಲ ಕಲೆಯು ಮತ್ತಾವ ದೇಶದ ಕಲೆಯ ಮಾದರಿಯನ್ನೂ ಅನುಕರಿಸಿ ಹುಟ್ಟಿದುದಲ್ಲ. ಅದು ಭಾರತೀಯರ ಪ್ರತಿಭೆಯಿಂದಲೇ ಸ್ವಂತವಾಗಿ ಕಲ್ಪಿತವಾದುದು. ಅಲ್ಲದೆ, ಅದು ಸರ್ವತೋಮುಖವೆನಿಸಿ ಸಮಸ್ತವಿಧಗಳ ಮಾದರಿಗಳನ್ನೂ ಒಳಗೊಂಡಿದೆ. ಹೆಚ್ಚೇಕೆ? ಅದು ಭಾರತೀಯರಲ್ಲಿ [illegible] ಕ್ರಿಯಾ ಮಾಧುರ್ಯಭಾವದ ವ್ಯಕ್ತರೂಪವೆಂದೇ ಹೇಳಬಹುದು. [illegible]

ಭಾರತೀಯ ಕಲೆಯು ಪರಿಪೂರ್ಣತೆಯನ್ನು ಪಡೆಯುವ ಮಟ್ಟಿಗೆ ವೃದ್ಧಿಹೊಂದಬೇಕಾದರೆ, ಭಾರತೀಯರ ಪೂರ್ವ ಸಂಪ್ರದಾಯವನ್ನನುಸರಿಸುವುದರ ಜೊತೆಗೆ ಪಾಶ್ಚಾತ್ಯ ಸಂಪ್ರದಾಯದಲ್ಲಿ ಕಂಡುಬರುವ ಉತ್ತಮ ಲಕ್ಷಣಗಳನ್ನೂ ಸೇರಿಸಿಕೊಳ್ಳುತ್ತ ಬರಬೇಕು. ಇಂಡಿಯಾದೇಶದ ಕಲಾಭಿಜ್ಞರು ಕೇವಲ ಪಾಶ್ಚಾತ್ಯ ರೀತಿಯನ್ನನುಸರಿಸಿ ಅತ್ಯುತ್ತಮವಾಗಿ ಕೆಲಸಮಾಡಿದ್ದಾರೆ. ಭಾರತೀಯ ದೃಶ್ಯಗಳನ್ನೂ, ಭಾರತೀಯ ವ್ಯಕ್ತಿಗಳನ್ನೂ ಪಾಶ್ಚಾತ್ಯ ಕಲಾ ಸಂಪ್ರದಾಯಕ್ಕನುಸಾರವಾಗಿ ನಮ್ಮ ದೇಶದ ಚಿತ್ರಲೇಖಕರು ಚಿತ್ರಿಸಿದ್ದಾರೆ. ಹಾಗೆ ಚಿತ್ರಿಸಿರುವ ಹಲವು ಚಿತ್ರಗಳು ನಿಜವಾಗಿಯೂ ಅಂದವಾಗಿವೆ. ಅಲ್ಲದೆ ಒಂದು ದೊಡ್ಡ ಚಿತ್ರಶಾಲೆಯನ್ನೇ ಏರ್ಪಡಿಸಿ ಭರ್ತಿಮಾಡಬಹುದಾದಷ್ಟು ಹೆಚ್ಚು ಸಂಖ್ಯೆಯಲ್ಲಿಯೂ ಇವೆ. ಆದರೆ, ನಾವು ಚಿತ್ರಕಲೆಯ ಪೂರ್ಣತೆಯನ್ನು ಕಾಣುವುದೇನೋ, ಭಾರತೀಯ ಕಲಾಸಂಪ್ರದಾಯದ ವರ್ಚಸ್ಸೂ ಭಾರತೀಯ ಭಾವನಾ ಸಂಪತ್ತಿಯ ತೇಜಸ್ಸೂ ಪ್ರಧಾನವಾಗಿರುವ ಚಿತ್ರಗಳಲ್ಲೇ. ಪಾಶ್ಚಾತ್ಯ ಕಲೆಯ ಮಾದರಿಗಳನ್ನನುಸರಿಸಿ ಬರೆದ ಚಿತ್ರಗಳಲ್ಲಿ ಕೇವಲ ಹೊರಗಿನ ರೂಪಕ್ಕೆ ಸ್ಥಾನವಿದೆಯೇ ಹೊರತು, ಒಳ ಸಂಕೇತದ ಅರ್ಥವಾವುದೂ ಅವುಗಳಿಂದ ಸೂಚಿತವಾಗವುದಿಲ್ಲವೆಂದು ಅವುಗಳ ಮೇಲೆ ದೂರು ಹೊರಿಸುವುದೇನೋ ಯುಕ್ತವಲ್ಲ. ಆದಾಗ್ಯೂ, ವಾಸ್ತವವಾಗಿಯೂ ಭಾರತೀಯ ಕಲೆಯ ಸೊಗಸನ್ನು ಚಿತ್ರದಲ್ಲಿ ತುಂಬಬೇಕಾದಲ್ಲಿ ಮಾತ್ರ, ಅದಕ್ಕೆ ಬೇಕಾದ ಭಾವ ಸಮೃದ್ಧಿಯೇ ಬೇರೆ. ಅದು ಭಾರತೀಯ ಸಂಪ್ರದಾಯದಿಂದಲೇ ದೊರೆಯಬೇಕು. ಭಾವ ಸಮೃದ್ಧಿಯನ್ನು ಭಾರತೀಯ ಸಂಪ್ರದಾಯದಿಂದ ಪಡೆದುಕೊಂಡು, ಚಿತ್ರಲೇಖನ ವಿಧಾನಕ್ಕೆ ಮಾತ್ರ ಪಾಶ್ಚಾತ್ಯ ಸಂಪ್ರದಾಯದ ಉತ್ತಮ ಲಕ್ಷಣಗಳನ್ನು ಆರಿಸಿ ಅಳವಡಿಸಿಕೊಂಡಿರುವ ಈಗಿನ ಕೆಲವರು ಚಿತ್ರಲೇಖಕರ ಕೃತಿಗಳು, ಬಹಳ ಮನೋಹರವಾಗಿವೆ.

ಮಹಾಜನರ ಅಭಿರುಚಿಯಿಂದ ಕುಶಲ ವಿದ್ಯೆಗಳಿಗೆ ಅವರ ಆಶ್ರಯವು ದೊರೆತಲ್ಲದೆ ಕಲಾಭಿವೃದ್ಧಿಗೆ ಮಾರ್ಗವೂ ಇಲ್ಲ; ಅಲ್ಲದೆ ಕಲೆಯ ವರ್ಚಸ್ಸೂ ಜನಜೀವನದ ಮೇಲೆ ಬೀಳುವಂತಿಲ್ಲ. ಆದರೆ ನಮ್ಮ ದೇಶದ ರಾಜಕೀಯ ಪರಿಸ್ಥಿತಿಯು ಮುಂದೆ ಹೇಗೆ ವ್ಯವಸ್ಥೆಯಾಗುವುದೆಂಬುದು ಇತ್ಯರ್ಥಪಡದೆ ಅನಿಶ್ಚಿತವಾಗಿರುವವರೆಗೂ ಮಹಾಜನರಿಗೆ ಕಲೆಯಲ್ಲಿ ಹೆಚ್ಚು ಆಸಕ್ತಿಯುಂಟಾಗಿ ಅವರ ಪ್ರೋತ್ಸಾಹವು ದೊರೆಯಲಾರದು. ದೇಶದಲ್ಲಿ ಮೊದಲು ನಿರಾಂತಕವಾಗಿ ಶಾಂತಿಯು ನೆಲೆಗೊಳ್ಳಬೇಕು. ಅದರ ಜೊತೆಗೆ ಆರ್ಥಿಕ ಪರಿಸ್ಥಿತಿಯು ಉತ್ತಮಪಡಬೇಕು. ಬಡತನದಿಂದ ಕೂಡಿ ಚಿತ್ತಶಾಂತಿಯಿಲ್ಲದೆ ಆತಂಕ ಪಡುತ್ತಿರುವ ಜನರಿಗೆ ಕಲಾಭಿವೃದ್ಧಿಯ ಕಾರ್ಯಕಲಾಪಗಳಿಗೆ ಗಮನ ಕೊಡಲು ವ್ಯವಧಾನವು ಬಹಳ ಕಡಿಮೆ; ಅವರಿಗೆ ಕಲಾಭಿವೃದ್ಧಿಯಲ್ಲಿರುವ ಆಸಕ್ತಿಯಂತೂ ಇನ್ನೂ ಕಡಿಮೆ.

ಯುಕ್ತವೆನ್ನಿಸುವಮಟ್ಟಿಗೆ ಕಲಾಭಿವೃದ್ಧಿಯ ಕಾರ್ಯಕಲಾಪಗಳಿಗೆ ಗಮನಕೊಡಲು ಅನುಕೂಲಿಸುವಂತಹ ಜೀವನ ಪರಿಸ್ಥಿತಿಯು ಶೀಘ್ರದಲ್ಲೇ ಏರ್ಪಡಲೆಂದು ಹಾರೈಸೋಣ. ವಿಜ್ಞಾನವೂ ಕಲೆಯೂ ವೃದ್ಧಿಹೊಂದಿ ಅವುಗಳ ಅವಲಂಬನೆಯಿಂದ ಸಮಸ್ತ ಕಾರ್ಯಕ್ಷೇತ್ರಗಳಲ್ಲಿಯೂ ಹೊಸ ಹೊಸ ಸಾಧನ ಸಂಪತ್ತುಗಳನ್ನು ಹೊಂದಿಸಿಕೊಂಡು ಜನಜೀವನ ವಿಧಾನವೇ ನೂತನ ರೀತಿಯಲ್ಲಿ ಕಂಗೊಳಿಸುವಂತೆ ಮಾಡುವ ನವಯುಗದ ಮುಂಬೆಳಗು ಭರತಖಂಡದಲ್ಲಿ ತಲೆದೋರಲೆಂದು ಪ್ರಾರ್ಥಿಸೋಣ.

ಆಸ್ಥಾನವಿದ್ವಾನ್ ಶ್ರೀಮಾನ್ ವೇದಮೂರ್ತಿ ಬಿ. ಎಂ. ತ್ರ್ಯಂಬಕ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯವಿಮರ್ಶೆಯೂ.

(ಲೇಖಕ — ವೇ॥ ಎಚ್. ಗೋಪಾಲಕೃಷ್ಣಮಾಚಾರ್ಯರ್, ಕರ್ಣಾಟಕ ಪಂಡಿತರು, ಟ್ರೇನಿಂಗ್ ಕಾಲೇಜು, ಮೈಸೂರು.)

ದಿಗ್ದರ್ಶನಂ

(ಜುಲೈ ತಾ॥ 11ರ ಸಂಚಿಕೆಯಿಂದ ಮುಂದುವರಿದುದು.)

ಪೋರ್ಪೀರರ, ಗಂಡರೆಂಡಿರ, ಗುರುಶಿಷ್ಯರ, ರಾಜಪ್ರಜೆಗಳ ದೇವಭಕ್ತರ, ಮದ್ಯದೊಳ್ ಚರಿಸುತಿರ್ಪನೆಂದುಂ, ಚೊಕ್ಕಮೆನಲ್ ಬಗೆದುಂ,

ನಂಬಿಗನುಂ, ಬಿಕ್ಕಗನುಂ, ಬದರ್ಗನುಂ, ಡಿಂಗರಿಗನುಂ, ಬಿನ್ನಣಿಯುಂ, ಕಲ್ಪಾಯ್ತನುಂ, ಪೆರ್ಗಡಿಯುಂ, ಓಜನುಂ, ಗೊರವನುಂ, ದೇಶಿಗನುಂ, ವಿಮ್ಮಡನುಂ, ಸೈದನುಂ, ಗನಹನುಂ, ಚಾಗೊಡೆಯನುಂ, ಬಲ್ಲಹನುಂ, ಬರ್ಗಿಲನುಂ, ಒಳ್ಪಿದನುಂ, ಸೊಬಗನುಂ, ಚೆನ್ನಿಗನುಂ, ದಮ್ಮಿಗನುಂ, ನಿಮ್ಮಳನುಂ, ನನ್ನಿಗನು ಮೊತ್ತರನು ಮೊಬರ್ಗೆಯನುಂ, ಸಾದುವುಂ, ಒನರ್ಗಡಿಕಾರನುಂ,

ಜಗನಾಡಕನ್ಯನಂಬ್ಬರ, ಗಂಡಕೆಂಡತಿಯರ, ಗುರುಶಿಷ್ಯರ, ರಾಜಪ್ರಜೆಗಳ ದೇವಭಕ್ತರ, ಸಮುದಾಯದಲ್ಲಿ ಓಡಾಡುತ್ತಿರುವನೆಂದೂ, ಪರಿಶುದ್ಧನಾದುದೆಂದೂ ತಿಳಿದೂ (ಪರಿಶುದ್ಧನಾದವನು)

ನಂಬಿಕೆಗೆ ಅರ್ಹನೂ, ಪ್ರೌಢನೂ, ಅನುರಕ್ತನೂ, ಭಕ್ತನೂ, ವಿಜ್ಞಾನಿಯೂ, ಉಪಾಧ್ಯಾಯನೂ, (ಆಚಾರ್ಯನೂ) ಮುಖ್ಯಸ್ಥನೂ, ಆಲಿಸುವವನೂ, ಗುರುವೂ, ದೇಸಿಗನೂ, ಬಲ್ಲವನೂ, ಭಾಗ್ಯಶಾಲಿಯೂ, ದೊಡ್ಡತನವುಳ್ಳವನೂ, ಚಾಣತನದವನೂ, ಬಲ್ಲಹನೂ, ಮರಣವಿಲ್ಲದವನೂ, ಸುಜನನೂ, ಸೌಂದರ್ಯಶಾಲಿಯೂ, ಚೆನ್ನಿಗನೂ, ದಮ್ಮಿಗನೂ, ನಿರ್ಮಲನೂ, ಸತ್ಯವಾದಿಯೂ, ಏಕರೀತಿ ವ್ಯವಹಾರವುಳ್ಳವನೂ, ಒಂದೇ ಅಭಿಪ್ರಾಯವುಳ್ಳವನೂ, ಸಾಧುಸ್ವಭಾವದವನೂ, ಖಂಡಿತವಾಗಿ ಮಾತನಾಡತಕ್ಕವನೂ, (ದಮ್ಮಿಗನುಂ = ಧರ್ಮಮಾರ್ಗದಿಂದ ಜೀವಿಸತಕ್ಕವನೂ)

ಮತ್ತಂ, ಬಳ್ದನುಂ, ಗಟ್ಟಿಗನುಂ, ಗಾಡಿಕಾರನುಂ, ಕಬ್ಬಿಗನುಂ, ನೇರಿದನುಂ, ಸಿರಿಯನುಂ, ಅರಿದನುಂ, ಕೆತ್ತಿಗನುಂ, ಎಂಬಿವರ್ ಮೊದಲಪ್ಪವರೆಲ್ಲ ಮಾಳ್ಕೆಯೊಳ್ ನೀತಿಯನನುಸಂಧಾನಂಗೆಯ್ಯುತ್ತೆಳಸುತಂ ಆಸ್ಮೀನೆಂಬೆರಡನಳಿಸಿ, ಪತಿಜೀವಿಕಾಸಕ್ತರಪ್ಪ ಶಿವರಾಜ್ಯ ಪ್ರಜೆಗಳೆಂದು, ನೀಡುಂ ನೋಡಿ,

ಮತ್ತಮೀಳೆಯಾಣ್ಮನೆನಿಪ್ಪೆಂಟರೆಯರಂಶದಿಂ ದೊರೆಗೆನೆಂಬುದಂ ಮನಿದಗೊಂಡು,

ಪುನಃ ಬಳ್ದನೂ, ಗಟ್ಟಿಗನೂ, ವಿಲಾಸಗಾರನೂ, ಕಾವ್ಯಬರೆಯತಕ್ಕವನೂ, ಋಜುಮಾರ್ಗ ಪ್ರವರ್ತಕನೂ, ದೊಡ್ಡವನೂ, ತಿಳಿದವನೂ, ಆರ್ಜಿಸಿದವನೂ, ಇವರೇ ಮೊದಲಾದ ಶ್ರೇಷ್ಠರೂ ಎಲ್ಲ ರೀತಿಯಲ್ಲೂ ನೀತಿಮಾರ್ಗದಿಂದ ನಡೆಯಲು ಅಪೇಕ್ಷಿಸುತ್ತಲೂ ನಾನು ನೀನು ಎಂಬ ಭೇದಭಾವವನ್ನು ಹೋಗಲಾಡಿಸಿ, ಪ್ರಭುವನ್ನು ಆಶ್ರಯಿಸಿ ಜೀವಿಸುವುದರಲ್ಲಿ ಆಸಕ್ತಿಯುಳ್ಳ ಉತ್ತಮರಾಜ್ಯ ಪ್ರಜೆಗಳೆಂದು, ಚೆನ್ನಾಗಿ ನೋಡಿ,

ಅಲ್ಲದೆ, ಭೂಪತಿಯು ಅಷ್ಟದಿಕ್ಪಾಲಕರ ಅಂಶದಿಂದ ಅವತರಿಸುವನು ಎಂಬುದನ್ನು ಮನಸಾ ತಿಳಿದು,

“ಅಷ್ಟಾಭಿರ್ಲೋಕಪಾಲಾನಾಂ ಮಾತ್ರಾಭಿರ್ನಿರ್ಮಿತೋನೃಪಃ ॥”

ಮುಗಿಲ್ದೇರಂ, ಒಳ್ಳಿದಂಗೆಯ್ದ ಮನಾವನಾದೊಡಂ ತನ್ನಯಬರ್ಗಲೋಳ್ ಅವಂಗೆ ಮನ್ನಣೆಯನೊಡರ್ಚುವಂತೆಯುಂ,

ಇಂದ್ರನು, ಪುಣ್ಯಕಾರ್ಯವನ್ನು ಮಾಡಿದವನು ಯಾವನೇ ಆಗಲಿ ಅವನಿಗೆ ತನ್ನ ಸ್ವರ್ಗಲೋಕದಲ್ಲಿ ಮರ್ಯಾದೆ ಮಾಡುವಂತೆಯೂ,

ಎಲರ್ಗೆಳೆಯಂ, ಸಮಸ್ತ ವಸ್ತುಜಾತಮುಂ ಪರಿಪಕ್ವದಶೆಯನೈದಿಸುವಂತೆಯುಂ,

ಅಗ್ನಿದೇವನು, ಎಲ್ಲವಸ್ತುಗಳ ಸಮುದಾಯವನ್ನೂ ಉಪಯೋಗಿಸಲು ಅರ್ಹವಾದ ಸ್ಥಿತಿಯನ್ನು ಹೊಂದಿಸುವಂತೆಯೂ,

ಮತ್ತಮುರಂ, ಪಾಪ ಮಿರಲ್ ಒಳ್ಳಿದನಾದೊಡಂ ದಂಡಿಸುವಂತೆಯುಂ,

ಅಲ್ಲದೆ ಯಮಧರ್ಮನು, ಪಾಪವಿರಲು ಒಳ್ಳೆಯವನನ್ನಾದರೂ ದಂಡನೆಗೆ ಒಳಪಡಿಸುವಂತೆಯೂ,

ಕೊಂತಗಯ್ಯಂ, ವಿದಿಕ್ಕಿನ ಅರಸುತನದೊಳಂ ಆತ್ಮರಕ್ಷೆಯೊಳ್ ಎಚ್ಚತ್ತಿರ್ಪಂತೆಯುಂ,

ನೈರುತ್ಯದಿಕ್ಕಿನ ಅಧಿಪತಿಯು, ವಿದಿಕ್ಕಿನ ರಾಜ್ಯಭಾರದಲ್ಲೂ ತನ್ನನ್ನು ತಾನು ರಕ್ಷಿಸಿಕೊಳ್ಳುವುದರಲ್ಲೂ ಜಾಗರೂಕನಾಗಿರುವಂತೆಯೂ,

ಮುನ್ನೀರೆರೆಯಂ, ಭುವನೋಪಕಾರಕ್ಕೆ ಉಚಿತಮಪ್ಪ ಭುವನಮಂ ಬಿಟ್ಟುಳಿದುದ ನೆಳೆದು ಬಿಡುವಂತೆಯುಂ,

ಸಮುದ್ರರಾಜನು, ಲೋಕಗಳ ಉಪಕಾರಕ್ಕೆ ತಕ್ಕುದಾಗಿರುವ ನೀರನ್ನು ಹೊರತು ಉಳಿದ ವಸ್ತುಗಳನ್ನು ಎಳೆದುಹಾಕಿ ಬಿಡುವಂತೆಯೂ,

ಕೆಂಪುವನಂ, ಎತ್ತೆಡೆಯೊಳ್ ಚರಿಸುತಂ ಪ್ರವೃತ್ತಿಜ್ಞನಪ್ಪಂತೆಯುಂ,

ವಾಯುದೇವನು, ಎಲ್ಲ ಕಡೆಗಳಲ್ಲೂ ತಿರುಗುತ್ತಾ ಸಮಾಚಾರವನ್ನು ತಿಳಿವಂತೆಯೂ,

ಪೊನ್ನೊಡೆಯಂ, ಅನವರ್ಗವೆನ್ನ ನಿಯಮಕಳಕಿನದಿಂ ತುದಿಮೊದಲಿಲ್ಲದ ನಿಧಿಗಧಿಪನಪ್ಪಂತೆಯುಂ,

ಕುಬೇರನು, ಮುಕ್ಕಣ್ಣಂಗನಾಪತಿಯ (ಪಾರ್ವತೀ ಪತಿಯ) ಸ್ನೇಹದಿಂದ ಕೊನೆಮೊದಲಿಲ್ಲದ ನವನಿಧಿಗಳಿಗೆ ಸ್ವಾಮಿಯಾಗಿರುವಂತೆಯೂ,

ಮತ್ತಮೀಬಾಪ್ಪವಿರಂ, ಅಳಕೆಯೊಡೆಯಗೆಗ್ಗದಾಪ್ಪರ ಎದೆಯೊಳ್ ಇರ್ಪಂತೆಯುಂ,

ಅಲ್ಲದೆ ಪ್ರೇಮಶೇಖರನು, ಕುಬೇರ ಇಂದ್ರರ ಸಮೀಪದಲ್ಲೇ ಇರುವಂತೆಯೂ,

ತಿರೆಯನಾಳ್ವಂ, ಪಿರಿಯ ಸಿರಿಯಿಂದಮುಂ, ಪೆಂಪಿನ ಅಲಂ ಪಿಂದಮುಂ ಉನ್ನತಿಕ್ಕೆಯಂತ ಪ್ರಜಾಸಮುದಾಯದೊಳ್ ನೆಲಸಿರವೇಳ್ಕುಮೆಂದುಮಂತಾದಿಗೀಶರೆಲ್ಲರ ಕೆಳೆಯಂ ಬಯಸುತಮಿಂತು ಪರಿಕರಬಂಧನಮನನುಗೊಳಿಸಿಕೊಂಡತ್ಯಂತ ಪ್ರಸನ್ನಮಾನಸನಾಗಿ,

ಭೂಪತಿಯು, ಅಪಾರವಾದ ಸಂಪತ್ತಿನಿಂದಲೂ, ಭೋಗದ ಆಧಿಕ್ಯದಿಂದಲೂ ಮಹತ್ವವನ್ನು ಹೊಂದಿದ ಜನಸಮುದಾಯದ ಮಧ್ಯದಲ್ಲಿ ಇರಬೇಕೆಂದೂ ಆರೀತಿಯಾಗಿ ಮೇಲೆ ಹೇಳಿದ ದಿಕ್ಪತಿಗಳೆಲ್ಲರ ಸಹಾಯವನ್ನು (ಸ್ನೇಹ) ಅಪೇಕ್ಷಿಸುತ್ತ ಈರೀತಿಯಲ್ಲಿ ಪರಿಕರಬಂಧನವನ್ನು ಸಂಪಾದಿಸಿಕೊಂಡು ಅಧಿಕವಾಗಿ ಸಂತೋಷಪಟ್ಟ ಮನಸ್ಸುಳ್ಳವನಾಗಿ,

ಅರಸುತನಂಗೆಯ್ಕಲ್ ಸೂರುಳ್ದು, ಕಡಂಗಿಮೊಗಸಿದನದೆಂತುಂ ಕಯ್ಯರಿಯಲ್ಲುಮೇಳೆನಲ್,

ರಾಜ್ಯಭಾರಮಾಡಲು ಪ್ರತಿಜ್ಞೆಮಾಡಿ, ಉತ್ಸಾಹವುಳ್ಳವನಾಗಿ ಅಪೇಕ್ಷೆಪಟ್ಟನು. ಆ ಕ್ರಮವು ಹೇಗೂ ಆಶ್ಚರ್ಯವಲ್ಲವು ಅದೇಕೆಂದರೆ,

ಇದು ದ್ವಿತೀಯದರ್ಶನವು.

ತೃತೀಯದರ್ಶನಂ.

೪೬.

ಕಂದ॥ ಒಡೆಯರ್ ಸಬುದಮುದೆಂತುಂ ।
ಪೊಡವಿಯಪತಿಯಲ್ಲಿ ಕೊಳಪಕಲ್ಪಾಯ್ತನೊಳಂ ॥
ಪಡೆವೆರಡರ್ಥಮನೀತನೊಂ ।
ಳೆಡೆಗೊಂಡುದೆ? ಕೃಷ್ಣರಾಜರಾಜೋತ್ತಮನೊಳ್ ॥

ಒಡೆಯರ್ ಎಂಬ ಶಬ್ದವು ಭೂಪತಿಯಲ್ಲಿಯೂ ಜ್ಞಾನದಿಂದ ಪ್ರಕಾಶಿಸುವ ಉಪಾಧ್ಯಾಯನಲ್ಲೂ ಇದ್ದುಕೊಂಡು ಈ ಸುಪ್ರಸಿದ್ಧ ಮಹಾಪ್ರಭುವಿನಲ್ಲಿ ಸಾರ್ಥಕವಾದ ಎರಡರ್ಥವನ್ನುಳ್ಳದಾಗಿ ಹೊಂದಿಕೊಂಡಿದೆ ಯಲ್ಲವೇ?

ಒಡೆಯರ್ ಶಬ್ದಕ್ಕೆ ಮಹಾರಾಜ, ಆಚಾರ್ಯ ಎಂಬೆರಡು ಅರ್ಥಗಳುಂಟು. ಲೋಕದಲ್ಲಿ ಮಹಾರಾಜತ್ವವೂ, ಆಚಾರ್ಯತ್ವವೂ ಒಂದೆಡೆಯಿರುವುದು ಬಹಳ ಅಪೂರ್ವ. ಈ ನಮ್ಮ ಸುಪ್ರಸಿದ್ಧ ಶ್ರೀ ಕೃಷ್ಣರಾಜ ಮಹಾಪ್ರಭುವಿನಲ್ಲಿ ರಾಜತ್ವವೂ ಆಚಾರ್ಯತ್ವಕ್ಕೆ ಬೇಕಾದ ಅಸಮಾನವಾದ ಜ್ಞಾನವೂ ಇವೆಯೆಂದು ತಾತ್ಪರ್ಯವು. ಸಶೇಷ.

ಪ್ರಕಟನೆಯು

ಶ್ರೀ ಶಾಂತವೀರಸ್ವಾಮಿಗಳು ಗುರುಮನೆಕಲ್ಲ ಇವರಿಂದ ತಾ॥ 1 ಶಹರೇವರ 1341 ನೆಯ ಫಸಲಿ ತಾ॥ 7-7-1932 ನೆಯ ಇಸವಿ ದಿವಸ ಹೊರಡಿಸಲ್ಪಟ್ಟ ನೋಟೀಸು ಕೆಳಗೆ ಬರೆದ ಕಾರಣಗಳಿಂದ ಕಾಯಿದೆ ವಿರುದ್ಧವಿರುವ ಮೂಲಕ ಅದನ್ನು ಯೋಗ್ಯವಾದುದೆಂದು ಯಾರೂ ನಂಬಬಾರದು:—

1. ಕಾಲೇಜಿನ ಜನರಲ್ ಕಮಿಟಿಯು ಮೆಂಬರರಿಗೆ 15 ದಿನ ಮುಂಚಿತವಾಗಿ ತಿಳಿಸದೆ ಕೂಡಲಾಗದು.

2. ಕಾಲೇಜಿನ ಯಾವ ಕಮಿಟಿಯಾದರೂ ಕಾಲೇಜಿನ ಬಿಲ್ಡಿಂಗಿನಲ್ಲಿಯೇ ನಡೆಯಬೇಕಲ್ಲದೆ ಬೇರೆ ಸ್ಥಲದಲ್ಲಿ ನಡೆಯಲಾಗದು.

3. ಯಾವ ಅಧಿಕಾರಿಗಳನ್ನಾದರೂ ತೆಗೆಯಬೇಕಾದರೆ 8 ಜನ ಮೆಂಬರರ ಒಪ್ಪಿಗೆಯಿಲ್ಲದೆ ಯಾವ ಕಮಿಟಿಗೂ ತೆಗೆಯಲಿಕ್ಕೆ ಅಧಿಕಾರವಿರುವುದಿಲ್ಲ.

4. ಜನರಲ್ ಕಮಿಟಿಯು 8 ಜನ ಮೆಂಬರರು ಕೂಡದೆ ನಡೆಯಲಾಗದು. ಕೋರಂಭರ್ತಿಯಾಗದಿದ್ದರೆ ಯಾವ ಕಮಿಟಿಯೂ ನಡೆಯುವುದಿಲ್ಲ.

ಸದರಿ ಕಾರಣಗಳಿಂದ ಶ್ರೀ ಶಾಂತವೀರಸ್ವಾಮಿಗಳು 7 ದಿನ ಮುಂಚಿತವಾಗಿ ತಿಳಿಸಿ ಬೇರೆ ಸ್ಥಲದಲ್ಲಿ ಆರೇ ಜನರು ಕೂಡಿ ಕಮಿಟಿಮಾಡಿ ಹೊರಡಿಸಿರುವ ನೋಟೀಸು ತಾ॥ 18-7-32 ನೆಯ ಶರಣಸಂದೇಶದಲ್ಲಿ ಪ್ರಕಟಿಸಲ್ಪಟ್ಟಿರುವುದು. ನಿರುಪಯೋಗವಾದದ್ದಿರುತ್ತದೆ. ಈ ನೋಟೀಸಿನಿಂದ ಶಾಂತವೀರಸ್ವಾಮಿಗಳ ಮತ್ತು ಇವರ ಅನುಕರಣಮಾಡುವ ಇತರ ಮೆಂಬರರ ಸ್ವಾರ್ಥಸಾಧನೆಯು ಕಂಡುಬರುತ್ತದೆ. ಆದುದರಿಂದ ಸದರಿ ಜನರು ಕಮಿಟಿಯ ಮೆಂಬರರಿರಲು ಯೋಗ್ಯರಿರುವುದಿಲ್ಲ. ಈ ಪ್ರಕಾರ ನನ್ನ ಅಭಿಪ್ರಾಯವನ್ನು ಸರ್ವಜನರಿಗೆ ತಿಳಿಸುವದಕ್ಕೋಸ್ಕರ ಈ ಪ್ರಕಟನೆಯು ಹೊರಡಿಸಲ್ಪಟ್ಟಿರುತ್ತದೆ. ಕಾಲೇಜಿನ ಜನರಲ್ ಸೆಕ್ರೆಟರಿ ಕೆಲಸವನ್ನು ಜ॥ ಹಂಪಣ್ಣ ಸಜ್ಜನಶೆಟ್ಟಿ ಇವರೇ ಮಾಡುತ್ತಿರುವರು. ಇನ್ನು ಮುಂದಾದರೂ ಸೆಕ್ರೆಟರಿಯು ಯಾವತ್ತೂ ಕಾರ್ಯಗಳನ್ನು ಮಾಡಲು ಯೋಗ್ಯರಿರುತ್ತಾರೆ. ಕಾರಣ ಕಾಲೇಜಿನ ಯಾವತ್ತು ಲೇವಾದೇವಿ ವ್ಯವಹಾರಗಳನ್ನು ಇವರೊಡನೆ ಮಾಡತಕ್ಕದ್ದು, ಇದಕ್ಕೆ ವಿರೋಧವಾಗಿ ಯಾರಾದರೂ ಮಾಡಿದರೆ ಆಗತಕ್ಕ ಲುಕ್ಸಾನಕ್ಕೆ ಅವರೇ ಬಾಧ್ಯರಾಗುವರು. ಗಂಗಮ್ಮ ಜೆವಜೆ ಕ್ಕೈ॥ ಶಂಕರಣ್ಣ,

ತಾ॥ 14-7-32. ಧನುರ್ವೀರ ಸಜ್ಜನಶೆಟ್ಟಿ ಸಾ॥ ಯಾದಗಿರಿ

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರ ತರಿಸಿ ಕೊಳ್ಳಿರಿ. ಕಿ ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ಪ್ಹಿ. ಎಸ್. ಕಾಪಸೆ, ಮಿರಜ.

14 M. C

೧೯೩೨ ನೆಯ ಇಸವಿ ಜುಲೈ ತಾ॥ ೨೫ ರಿಂದ ಜುಲೈ ತಾ॥ ೩೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ ಅಂಗಿರಸನಾಮಸಂವತ್ಸರದ ಆಷಾಢ ಬಹುಳ ಅಷ್ಟಮಿಯಿಂದ ಆಷಾಢ ಬಹುಳ ತ್ರಯೋದಶಿ ವರೆಗಿನ ಪಂಚಾಂಗ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಗಿರಿಕ ಮಾಸ
25	ಸೋಮ	ಅಷ್ಟ	60	ಅಶ್ವಿ	50-26	10
26	[1] ಮಂಗಳ	ಅಷ್ಟ	2-11	ಭರ	57-6	11
27	ಬುಧ	ನವ	7-14	ಕೃತ್ತಿ	60	12
28	ಗುರು	ದಶ	12-7	ಕೃತ್ತಿ	3-31	13
29	[2] ಶುಕ್ರ	ಏಕಾ	16-31	ರೋಹಿ	9-28	14
30	ಶನಿ	ದ್ವಾದ	19-34	ಮೃಗ	14-18	15
31	ಭಾನು	ತ್ರಯೋ	21-54	ಆರ್ದ್ರಾ	18-14	16

(1) ಮಳೆನಕ್ಷತ್ರ-ಪುಷ್ಯ ೩ ನೆಯ ಪಾದ. (2) ಆದಿಶುಕ್ರವಾರ, ಮಳೆನಕ್ಷತ್ರ-ಪುಷ್ಯ ೪ ನೆಯಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರಿಂಟಿಂಗ್ ವರ್ಕ್ಸ್ ನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG N. O. M. 134

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮುಧಿಗತರಾಜಮಂಡಲಹಿಕೈಪಾ । ಘನಪಥಕ್ಯತಾವತಾರಾ ಪಕ್ಷಜ್ಞ ಸಹೃತ್ಕ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತೆಳೆಯಂಸದಾಪೊರೆಗೆ ಗೌರೀಕಾನುಕಂಪೋಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆ ೧೯೩೨ ನೆಯ ಇಸವಿ ಆಗಸ್ಟ್ ತಾರೀಖು ೧ ನೆಯ ಸೋಮವಾರ [ಸಂಚಿಕೆ ೩೧

1932 ನೆಯ ಇಸವಿಯ ಮೈಸೂರು ದಸರಾ ವಸ್ತುಪ್ರದರ್ಶನ.

ಇಡೀ ಭರತಖಂಡದಲ್ಲೆಲ್ಲಾ ನಿಮ್ಮ ವಸ್ತುಗಳಿಗೆ ಗಿರಾಕಿಯನ್ನು ಪಡೆಯುವ ಅಭಿಲಾಷೆಯು ನಿಮಗಿದೆಯೆ?

ದಸರಾ ಕಾಲದಲ್ಲಿ ಭರತಖಂಡದ ಸಮಸ್ತ ಪ್ರಾಂತಗಳಿಂದಲೂ ಧನಿಕರಾದ ಜನರು ಗುಂಪು ಗುಂಪಾಗಿ ಮೈಸೂರು ನಗರಕ್ಕೆ ಬರುತ್ತಾರೆ. ಅವರು ನಿಮ್ಮ ವಸ್ತುಗಳನ್ನು ಕೊಳ್ಳುವ ಭರವಸೆಯೂ ವಿಶೇಷವಾಗಿದೆ.

ಅವರು ನಿಮ್ಮ ಸರಕುಗಳನ್ನು 1932 ನೆಯ ಇಸವಿ ಅಕ್ಟೋಬರು 1 ರ ಲಾಗಾಯಿತು 15 ನೆಯ ತಾರೀಖಿನವರೆಗೂ ನಡೆಯುವ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಅಜಮಾಯಿಷಿಮಾಡಿ ನೋಡುವುದಕ್ಕೆ ಅವಕಾಶಕೊಡಿ.

ಪ್ರದರ್ಶಕರಿಗೆ ಸಮಸ್ತ ಸೌಕರ್ಯಗಳನ್ನೂ ಒದಗಿಸಲಾಗುವುದು.

ಪ್ರದರ್ಶನಕ್ಕೆ ಸಂಬಂಧಪಟ್ಟ ಒಂದು ಕೈಪಿಡಿಯನ್ನು ಪ್ರಕಟಿಸುತ್ತೇವೆ. ಇದಕ್ಕೆ ಹಿಂದಣ ವರುಷಗಳಂತೆಯೇ ಅತ್ಯಧಿಕವಾಗಿ ಅದರ ಪ್ರತಿಗಳು ಮಾರಾಟವಾಗುವುವು. ಅದರಲ್ಲಿ ಕೆಲವು ಜಾಹಿರಾತುಗಳಿಗೆ ಮಾತ್ರವೇ ಸ್ಥಳವಿರುತ್ತದೆ.

“ಪ್ರಾಸ್ಪೆಕ್ಟಸ್” ಎಂಬ ಪ್ರಸಿದ್ಧಪತ್ರಿಕೆಗಾಗಿಯೂ ಜಾಹಿರಾತು ಪ್ರಕಟಣೆಯ ದರಗಳು ಮುಂತಾದವುಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

[50—5] ಸೆಕ್ರೆಟರಿ, ಮೈಸೂರು ದಸರಾ ಎಗ್ಜಿಬಿಷನ್ ಕಮಿಟಿ,
ಆಠಾರಾ ಕಚೇರಿ, ಬೆಂಗಳೂರು.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ಲಾರ್ಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಸ್ವಲ್ಪಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್; ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಹಲ್ಲಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿಹಾಸ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಸಟೀಕ ಕರಸ್ಥಲಶತಕ ಸಂಗ್ರಹ	೦—೮—೦	೦—೧೩—೦
ಸಟೀಕ ಶತಕತ್ರಯ	೧—೨—೦	೧—೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ | ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ರಜಿ] ವಜ್ರಾಂಗ ಸುಂದರಪಾಕದ. [ಪ್ವರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪಮ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವ, ನಿದ್ದೆ ಕಡಿಮೆಬರೋದು, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭವು, ಶರೀರದ ತರುಣರಂತೆ ಕಾಂತಿಯು ಆಗುತ್ತದೆ. ಕೌಚಿಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತೇಜಸ್ಸು ಕೂಡ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಿಣಿ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ಗೋಲಿಯ ಒಂದು ಡಬ್ಬಿಗೆ ೩। ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಟಳ್ಳೀಕು ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಟ್ಟುಬಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಟ್ಟುಬಿಟ್ಟು ಆಗೋದು, ಮುಟ್ಟುಬಿಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋದು, ಎದೆ ಹಾರೋದು, ಅಜೀರ್ಣ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದ ಇರೋದು, ಗರ್ಭಪಾತವಾಗೋದು, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತದೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ಗೋಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ಕ್ಷೀಣ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋದಾಗುವದಿಲ್ಲ ಮತ್ತು ಬಡತನದ ಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂದಿಹತ್ತುವದೋ, ಇಂಥ ಬೇರೆ ಕಾರಣದಿಂದ ಸಂತತಿ ಇಚ್ಛಾ ಯಾರಿಗೆ ಇರಿರುತ್ತದೋ, ಅವರಿಗೆ ಈ ಔಷಧಿಯು ಬಹಳ ಹಿತಕರ ಅದೆ. [illegible]

[50—18]

ಪತ್ತಾ ಮಾಲಕ:—ವೈದ್ಯ ಪ್ಹಿ. ಎಸ್. ಕಾಪಸೆ, ಮು. ಪೋ. ಮಿರಜ ಎಂ. ಎಸ್. ಎಂ.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕೆಂಪುಡಬ್ಬಿಯುಳ್ಳದ್ದು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ [illegible] ವ್ಯಾಧಿಗಳು ಯಾವವೆಂದರೆ— [illegible]

ಚಿಕ್ಕ ಡಬ್ಬಿಗೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
[illegible]

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[50—47] ಪೋ. ಬಾ. ೫೧೧, ಮದ್ರಾಸು.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಆಗಸ್ಟ್ ತಾ|| ೧ ನೆಯ ಸೋಮವಾರ.

DAVIDSON COMMITTEE AND MYSORE

The report of the Indian States Committee prisided over by the Right Honerable J. C. C. Davidson has been issued simultaneously in England and India. The main question before the Committee was to examine the financial relations of the Indian States with the Government of India with a view to remove the obstacles that would lie in the way of an ideal system of Federal finance. The distinguishing features of the situation were two, firstly, the direct contribution made by the States to which there was no parallel in the case of British Indian Provinces, and secondly, many of the States enjoying a measure of immunity from the incidence of those very taxes which would be the main sources of Federal revenue. In this article we would like to refer to the findings of the Davidson Committee with regard to the former especially from the point of view of Mysore. It may be noted that this Committee made an extensive tour among the Indian States and have to their credit an expenditure of over a lakh and a half of rupees. The report gives no doubt an indication of a detailed study of the problem concerned but we certainly cannot give them credit for much sympathy with some of the States. Every one will remember the recommendation of the Federal Structure Committee of the R. T. C. that in so far as the cash contributions made by the States were of a feudal nature they should be wiped out *Pari Passu* with the direct contributions required from the British Indian Provinces and further, that there should be immediate remission in respect of any part of such contribution which may be in excess of 5 percent of the total revenue of the State concerned. The present report, however, says that these contributions are not of a feudal nature. We would like to know from the eminent authors of the report what is the nature of the contributions if they are not of a feudal character. They should surely have taken the trouble of enlightening the readers of the report on the exact nature of the contributions. Evidently they were afraid that if they termed these contributions as of a feudal character, they would not be able to justify their continuence for any longer. After a mountain of labour, this Committee has produced the mouse of a remission of what is in excess of 5 percent of the total revenues. They have not gone a bit further than the Federal Structure Committee. As regards the remaining payments by the States the Committee recommends that the moiety should be extinguished at the latest in 10 years from Federation and the whole within 20 years. We are sorry to observe that this Committee has missed the fundamental point in the case. It is not that the States are unwilling to contribute their quota to the Federal revenues even as the provinces would do, but they feel it inconsistant with their position as units of the same Federation, to pay a tribute to that Federal Government. If the Committee had brought their unprejudiced mind to bear upon this important question there would have been no difficulty in appriciating this standpoint. If they had honestly tackled the question from this point of view they would have been compelled by both the force of logic and the need for equity, to come to the irresistable conclusion of doing away with these tributes. We wonder how it did not appeal to the Committee that it would be almost galling to the self respect of a State to enter into a Federation with the badge of inferiority which the payment of a tribute would certainly mean. In fact, the States have been insisting on the wiping out of these tributes as a condition precedent to their joining the Federation. As regards those States which are not joining the Federation the Committee's recommendation for the abolition of the contributions in the course of 20 years does not apply at all. This is hardly an honest way of welcoming States to join the Federation. The Committee not satisfied with such a concervative and ill-liberal and we may add unfair and unjust proposal, have gone about to define who the recipients of these contributions are. They say that they are payable to the Paramount power and not to the Federal Government. There cannot be a more puerile suggestion than this because they at the same time say that the Paramount power would place the contributions, so long as they continue to be paid, at the disposal of the Federal Government. Every pie of these contributions ever since they have been levied, has gone to the Goverment of India Exchequer. Now when the Federal Government is to be constituted we are astonished that this Committee should attempt to lug in the claim of the Paramount power in connection with these contributions as opposed to the claims of the Fedaral Government. So much about the contributions. They do not say anything about the restoration of the Assigned Tracts, namely the Civil and Military Station. We would like to await the full report in connection with this question. So far as the present summary of the recommendation goes there is no indication as to their restoration. We would not be surprised if the Committee have been equally unsympathatic with regard to this question also. After all, the net advantage to Mysore would be a saving about Rs. 7.7 lakhs. In these hard days we suppose that we should say something is better than nothing. We hope that our energetic and patriotic Dewan whose efforts in this direction have deservedly won him praise from all quarters, will not rest until he gets these contributions wiped out completely.

ಡೇವಿಡ್‌ಸನ್ ಕಮಿಟಿಯೂ, ಮೈಸೂರೂ.

ಆರ್ಥಿಕ ವಿಚಾರದಲ್ಲಿ ಭಾರತ ಪ್ರಭುತ್ವಕ್ಕೂ ದೇಶೀಯ ಸಂಸ್ಥಾನಗಳಿಗೂ ಇರತಕ್ಕ ಪರಸ್ಪರ ಸಂಬಂಧವು ಮುಂದಾಗಲಿಕ್ಕಿರುವ ಫೆಡರೇಷನ್ನಿನ ನಿರ್ಮಾಣಕ್ಕೆಷ್ಟರಮಟ್ಟಿಗೆ ಪ್ರತಿಬಂಧಕವಾಗಿರುತ್ತದೆಂಬುದನ್ನು ವಿಚಾರಿಸಿ ತನ್ನಿವಾರಣಾರ್ಥವಾಗಿ ತಕ್ಕ ಸೂಚನೆಗಳನ್ನು ಕೊಡಲು ಏರ್ಪಟ್ಟಿದ್ದ ಡೇವಿಡ್‌ಸನ್ ಕಮಿಟಿಯವರು 10 ಸಾವಿರ ಮೈಲು ಸಂಚರಿಸಿ 88 ಸಂಸ್ಥಾನಾಧೀಶರುಗಳೊಡನೆ ಅಥವಾ ಅವರ ಮಂತ್ರಿಗಳೊಡನೆ ಸಂಭಾಷಿಸಿ ಇಂಗ್ಲೆಂಡಿಗೆ ಹಿಂದಿರುಗಿ ಕಳೆದ ಮೇ ತಿಂಗಳಲ್ಲಿ ಬರೆದ ವರದಿಯು ಇಂಗ್ಲೆಂಡಿನಲ್ಲೂ ಇಂಡ್ಯಾದಲ್ಲೂ ಕಳೆದ ಗುರುವಾರ ಏಕಕಾಲದಲ್ಲಿ ಪ್ರಕಟಿಸಲ್ಪಟ್ಟಿತು. ಇವರ ಸಂಚಾರಕ್ಕಾಗಿ $1\frac{1}{2}$ ಲಕ್ಷ ರೂ. ವೆಚ್ಚವಾಗಿರುವುದು. ಈ ವರದಿಯ ಕನ್ನಡ ಭಾಷಾಂತರವು ಸಶೇಷವಾಗಿ ಈ ಪತ್ರಿಕೆಯ ಬೇರೆಕಡೆ ಮುದ್ರಿಸಲ್ಪಟ್ಟಿದೆ. ಈ ಕಮಿಟಿಯವರು ಕೆಲಸಂಸ್ಥಾನಗಳ ವಿಚಾರದಲ್ಲಿ ಮಾತ್ರ ತಮ್ಮ ಸಾನುಭೂತಿಯನ್ನು ತೋರಿಸಿರುವುದಕ್ಕಾಗಿ ನಾವು ಅವರನ್ನು ಖಂಡಿತವಾಗಿ ಪುರಸ್ಕರಿಸುವುದಿಲ್ಲ. ಸಂಸ್ಥಾನಗಳು ಸಲ್ಲಿಸುತ್ತಿರುವ ಪೊಗದಿಯು ಅವುಗಳ ಗೌರವಕ್ಕೆ ಕುಂದಕವಾಗಿರುವುದರಿಂದ ಅದು ಕೂಡಲೆ ತಪ್ಪಿಸಲ್ಪಡಬೇಕೆಂದೂ, ಈ ಪೊಗದಿಯು ಸಂಸ್ಥಾನದ ಒಟ್ಟು ಆದಾಯದಲ್ಲಿ ಶೇಕಡ 5 ಕ್ಕಿಂತ ಹೆಚ್ಚಾಗಿದ್ದರೆ ಹೆಚ್ಚು ಮೊಬಲಗು ಅವುಗಳಿಗೆ ಬಿಟ್ಟುಕೊಡಲ್ಪಡಬೇಕೆಂದೂ ಫೆಡರಲ್ ಸ್ಟ್ರಕ್ಚರ್ ಕಮಿಟಿಯವರು ಅಭಿಪ್ರಾಯಪಟ್ಟಿರುವುದು ಎಲ್ಲರಿಗೂ ತಿಳಿದೇ ಇರುವುದು. ಆದರೆ ಈ ಪೊಗದಿಯನ್ನು ತೆರುವುದು ಸಂಸ್ಥಾನಗಳಿಗೆ ಅವಮಾನಕರವಲ್ಲವೆಂದು ಪ್ರಸಕ್ತ ವರದಿಯಲ್ಲಿ ಹೇಳಲ್ಪಟ್ಟಿದೆ ಹಾಗೆ ಅದು ಅಪಮಾನಕರವಲ್ಲದಿದ್ದರೆ ಮತ್ತೆಂತಹುದೆಂಬುದನ್ನು ಈ ಕಮಿಟಿಯವರು ವಿವರಿಸಿದ್ದರೆ ಅನುಕೂಲವಾಗಿರುತ್ತಿದ್ದಿತು. ಈ ಪೊಗದಿಯು ಫ್ಯೂಡಲ್ ಅಂದರೆ ಗುತ್ತಿಗೆಯ ಸ್ವಭಾವವೆಂದು ಹೇಳಿದ್ದರೆ ಅದು ಸಲ್ಲಿಸಲ್ಪಡದೆ ಸಲ್ಲಿಸಲ್ಪಡಬೇಕೆಂದು ಹೇಳಲಾಗುತ್ತಿರಲಿಲ್ಲವೆಂದರಿತೇ ಹಾಗೆ ಹೇಳದೆ ಬಿಟ್ಟಿರುವರು. ಈ ಕಮಿಟಿಯವರ ಸಾಹಸವು ಬೆಟ್ಟವನ್ನಗಿದು ಇಲಿಯನ್ನು ಹಿಡಿದಂತೆ ಪರಿಣಮಿಸಿರುತ್ತದೆ. ಶೇಕಡ 5 ಕ್ಕಿಂತ ಹೆಚ್ಚಾಗಿರುವ ಮೊಬಲಗು ತಪ್ಪಿಸಲ್ಪಟ್ಟ ಮೇಲುಳಿಯುವ ಮೊಬಲಗಿನಲ್ಲಿ ಅರ್ಧವು 10 ವರ್ಷದೊಳಗೆ ತಪ್ಪಿಸಲ್ಪಡಬೇಕೆಂದೂ ಉಳಿದ ಅರ್ಧವು 20 ವರ್ಷದೊಳಗೆ ನಿಶ್ಶೇಷವಾಗಿ ತಪ್ಪಿಹೋಗಬೇಕೆಂದೂ ಅಭಿಪ್ರಾಯಪಟ್ಟಿರುವರು. ಸಂಸ್ಥಾನಗಳವರು ತಮ್ಮಾದಾಯದಲ್ಲಿ ಕೊಂಚ ಭಾಗವನ್ನು ಫೆಡರಲ್ ಪ್ರಭುತ್ವಾದಾಯಕ್ಕೆ ಕೊಡಲು ಅಸಮ್ಮತಿಸುವುದಿಲ್ಲವಾದರೂ ಹಾಗೆ ಕೊಡುವುದು ಫೆಡರೇಷನ್ನಿಗೆ ಸೇರಲೊಪ್ಪಿರುವ ತಮ್ಮ ಯೋಗ್ಯತೆಗೆ ಕುಂದಕವೆಂದು ಭಾವಿಸುತ್ತಾರೆ. ಈ ಕಮಿಟಿಯವರು ನಿರ್ಮತ್ಸರ ಬುದ್ಧಿಯಿಂದ ಈ ವಿಷಯವನ್ನು ಪರ್ಯಾಲೋಚಿಸಿದ್ದರೆ ಪೊಗದಿಯನ್ನು ಕೂಡಲೆ ತಪ್ಪಿಸಬಹುದಾದ್ದು ನ್ಯಾಯವೂ ಆವಶ್ಯಕವೂ ಎಂದು ಅವರು ನಿರ್ಧಾರವಾಗಿ ಹೇಳದೆ ಇರುತ್ತಿರಲಿಲ್ಲ. ದೇಶೀಯ ಸಂಸ್ಥಾನಗಳು ಆತ್ಮಗೌರವಕ್ಕೆ ಕುಂದಕವಾದ ಪೊಗದಿಯನ್ನು ತೆರುತ್ತ ಫೆಡರೇಷನ್ನಿಗೆ ಸೇರುವುದು ಮನೋವೇಧಕವೆಂಬುದು ಈ ಕಮಿಟಿಯವರಿಗೆ ತೋರದಿದ್ದುದು ಆಶ್ಚರ್ಯ. ಫೆಡರೇಷನ್ನಿಗೆ ಸೇರುವುದರ ಮೊದಲೇ ಪೊಗದಿಯನ್ನು ತಪ್ಪಿಸಬೇಕೆಂದು ಸಂಸ್ಥಾನಗಳು ಒತ್ತಾಯಪಡಿಸುತ್ತಿರುವುದು ಯುಕ್ತವಾಗಿದೆ. ಇದಕ್ಕೆ ಫೆಡರೇಷನ್ನಿಗೆ ಸೇರದಿರುವಂತಹವುಗಳ ಪೊಗದಿಯು 20 ವರ್ಷಗಳೊಳಗೆ ತಪ್ಪಿಸಲ್ಪಡಬೇಕೆಂದು ಕಮಿಟಿಯವರು ಮಾಡಿರುವ ಶಿಫಾರ್ಸು ಅನ್ವಯಿಸುವುದಿಲ್ಲ. ಈ ಕಮಿಟಿಯವರು ಅನ್ಯಾಯವೂ, ಅನುಚಿತವೂ, ಅನುದಾರವೂ, ಅಸಹನವೂ ಆದ ಸಲಹೆಯನ್ನು ಮಾಡಿರುವುದು ಸಾಲದೆ, ಪೊಗದಿಯು ಯಾರಿಗೆ ಸಲ್ಲತಕ್ಕದೆಂಬುದನ್ನು ಸಹ ವಿವರಿಸಿರುತ್ತಾರೆ. ಈ ಪೊಗದಿಯು ಸಾಮ್ರಾಜ್ಯಪ್ರಭುತ್ವಕ್ಕಲ್ಲದೆ ಫೆಡರಲ್ ಪ್ರಭುತ್ವಕ್ಕೆ ಸಲ್ಲತಕ್ಕದ್ದಲ್ಲವೆಂದು ಸೂಚಿಸಿರತಕ್ಕ ಈ ಕಮಿಟಿಯವರು, ಪೊಗದಿಯು ಕೊಡಲ್ಪಡುವುದು ಆಚರಣೆಯಲ್ಲಿರುವವರೆಗೂ ಇದು ಸಾಮ್ರಾಜ್ಯ ಪ್ರಭುತ್ವದವರಿಂದ ಫೆಡರಲ್ ಪ್ರಭುತ್ವಕ್ಕೆ ಕೊಡಲ್ಪಡುವುದೆಂದು ಹೇಳಿರುವುದು ಹಾಸ್ಯಾಸ್ಪದವಾಗಿದೆ. ಪೊಗದಿಯು ಕೊಡಲ್ಪಡಲಿಕ್ಕಾರಂಭವಾದಂದಿನಿಂದ ಅದರ ಪ್ರತಿಯೊಂದು ಕಾಸೂ ಇಂಡ್ಯಾ ಪ್ರಭುತ್ವದ ಬೊಕ್ಕಸಕ್ಕೇ ಹೋಗಿರುವುದು. ಫೆಡರಲ್ ಪ್ರಭುತ್ವ ನಿರ್ಮಾಣವಾದಾಗ್ಗೆ ಇದಕ್ಕೆ ಸಲ್ಲಬೇಕಾದ ಪೊಗದಿಯ ಹಣವು ಸಾಮ್ರಾಜ್ಯ ಪ್ರಭುತ್ವಕ್ಕೆ ಸಲ್ಲುವಂತೆ ಮಾಡಲು ಈ ಕಮಿಟಿಯವರು ಪ್ರಯತ್ನಿಸಿರುವುದು ಚೋಜಗವೆನಿಸುತ್ತದೆ. ಪೊಗದಿಯ ವಿಚಾರವಾಗಿ ಮೇಲ್ಕಂಡಂತೆ ಹೇಳಿರುತ್ತಾರಲ್ಲದೆ ಸಂಸ್ಥಾನಗಳು ಭಾರತಪ್ರಭುತ್ವದವರಿಗೆ ವಹಿಸಿಕೊಟ್ಟಿರುವ ಭೂಪ್ರದೇಶವನ್ನು ಅಂದರೆ ದಂಡುಪ್ರದೇಶವನ್ನು ಅವರುಗಳಿಗೆ ಹಿಂದಿರುಗಿ ವಹಿಸಿಕೊಡುವ ವಿಚಾರದಲ್ಲಿ ಏನನ್ನೂ ಹೇಳಿರುವುದಿಲ್ಲ. ಆದರೂ ಈ ವಿಚಾರವಾಗಿ ಸಂಪೂರ್ಣ ವರದಿಯಲ್ಲಿ ಏನು ಹೇಳಲ್ಪಟ್ಟಿರುವುದೆಂಬುದನ್ನು ನೋಡಬೇಕಾಗಿದೆ. ಈಗಿನ ವರದಿಯಲ್ಲಿ ಮಾತ್ರ ದಂಡುಪ್ರದೇಶವನ್ನು ಸಂಸ್ಥಾನಗಳಿಗೆ ಹಿಂದಿರುಗಿ ವಹಿಸಿಕೊಡುವ ವಿಚಾರದಲ್ಲಿ ಅವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರೂ ನಾವು ಆಶ್ಚರ್ಯಪಡಬೇಕಾಗಿರಲಿಲ್ಲ. ತಾನು ಪ್ರತಿವರ್ಷದಲ್ಲೂ ತೆರುತ್ತಿರುವ ಪೊಗದಿಯಲ್ಲಿ 7·7 ಲಕ್ಷ ರೂ. ಮಿಗತಾಯವಾಗುವುದೇ ನಮ್ಮ ಸಂಸ್ಥಾನಕ್ಕೆ ಸಾಮ್ರಾಜ್ಯ ಪ್ರಭುತ್ವ ನಿರ್ಮಾಣದಿಂದ ಆಗುವ ಪ್ರಯೋಜನವು. ಈ ಆರ್ಥಿಕ ವಿಷಮಸ್ಥಿತಿಯಲ್ಲಿ ದೊರತಷ್ಟೆ ಲಾಭವೆಂದು ಭಾವಿಸಬೇಕಾಗಿದೆ. ಸಂಸ್ಥಾನದ ಪೊಗದಿಯನ್ನು ಬಿಡಿಸಿಕೊಳ್ಳಲು ಅಸಮಸಾಹಸಮಾಡಿ ಸಮಸ್ತರ ಪ್ರಶಂಸೆಗೆ ಪಾತ್ರರಾಗಿರುವ ನಮ್ಮ ದಿವಾನ್ ಸರ್ ಮಿರ್ಜಯವರು ದುಸ್ಸಹವಾದ ಪೊಗದಿಯು ನಿರ್ಮೂಲವಾಗುವವರೆಗೂ ಪ್ರಯತ್ನಿಸದೆ ಬಿಡುವುದಿಲ್ಲವೆಂದು ನಿರೀಕ್ಷಿಸುತ್ತೇವೆ.

ಡಿ. ಎಲ್. ಎ. ಅಸೋಸಿಯೇಷನ್ನಿನ ವರದಿ

ಧಾರವಾಡ ಲಿಂಗಾಯತ ಎಜ್ಯುಕೇಷನ್ ಅಸೋಸಿಯೇಷನ್ನಿನ 1931–32ನೆಯ ವರ್ಷದ ವರದಿಯ ಪ್ರತಿಯನ್ನು ಸಂತೋಷದಿಂದ ಸ್ವೀಕರಿಸುತ್ತೇವೆ. ಈ ಫಂಡಿನ ಮೂಲಧನವಾದ 2,05,000 ರೂಪಾಯಿಗಳು ಗವರ್ನಮೆಂಟು ಸೆಕ್ಯೂರಟಿಗಳ ಮೇಲೆ ಬೊಂಬಾಯಿ ಖಜಾನೆಯಲ್ಲಿಡಲ್ಪಟ್ಟಿವೆ. ಈ ಮೊಬಲಗಿಗೆ ಪ್ರತಿ ವರ್ಷದಲ್ಲೂ ಬರುವ 6,925 ರೂ. ಬಡ್ಡಿಯನ್ನು ಬ್ಯಾಂಕಿನಲ್ಲಿಡುವುದರಿಂದ ಇದಕ್ಕೆ 400 ರೂ. ಬಡ್ಡಿ ಬರುತ್ತದೆ. ಇದಲ್ಲದೆ ಹುಬ್ಬಳ್ಳಿಯ ಶ್ರೀ ಗಂಗಾಧರಸ್ವಾಮಿ ಮೂರು ಸಾವಿರ ಮಠ ಪ್ರೆಸ್ಸಿಂಗ್ ಮತ್ತು ಟ್ರೇಡಿಂಗ್ ಕಂಪೆನಿಯವರಿಂದ ಪ್ರತಿ ವರ್ಷದುತ್ಪನ್ನದಲ್ಲಿ ಕಾಲುಭಾಗ ಅಂದರೆ ಸುಮಾರು 1,000 ಚಿಲ್ಲರೆ ರೂಪಾಯಿಗಳು ಕೊಡಲ್ಪಡುತ್ತಿವೆ. ಪ್ರಸಕ್ತ ವರ್ಷದಲ್ಲಿ ಹೈಸ್ಕೂಲು ವಿದ್ಯಾರ್ಥಿಗಳು 95, ದೇವಿಹೊಸೂರು ಒಕ್ಕಲತನ ಶಾಲಾವಿದ್ಯಾರ್ಥಿಗಳು 2, ಕಾಲೇಜಿನವರು 13, ಧಾರವಾಡ ಕೋ ಆಪರೇಟಿವ್ ಸ್ಕೂಲಿನ ವಿದ್ಯಾರ್ಥಿ 1, ಬರೋಡಾ ಕಲಾಭವನದವನು 1, ಶಾಂತಿನಿಕೇತನದ ವಿದ್ಯಾರ್ಥಿ 1, ಮದ್ರಾಸು ಪಾರೆಸ್ಟು ಕಾಲೇಜಿನವನು 1, ಲಂಡನ್ನಿನಲ್ಲಿ ಪ್ರೌಢಚಿತ್ರಕಲೆಯನ್ನು ಕಲಿಯುವವನು 1, ಕಾಶಿಯಲ್ಲಿ ಸಂಸ್ಕೃತ ವ್ಯಾಸಂಗ ಮಾಡುವವರು 12 ಈ ಪ್ರಕಾರವಾಗಿ 128 ವಿದ್ಯಾರ್ಥಿಗಳಿಗೆ ಒಟ್ಟು 8,026 ರೂ. ಗಳ ವೇತನವು ಕೊಡಲ್ಪಟ್ಟಿರುವುದು. ವಿದ್ಯಾರ್ಥಿವೇತನವನ್ನು ಕೋರಿದ್ದ 250 ಮಂದಿಗಳಲ್ಲಿ ಧನಾಭಾವದಿಂದ 128 ಮಂದಿಗಳಿಗೆ ಮಾತ್ರ ಕೊಡಬೇಕಾಗಿ ಬಂದಿತೆಂದೂ, ವಿದ್ಯಾರ್ಥಿಗಳು ಬರೇ ಆರ್ಟ್ಸ್ ಗ್ರಾಜ್ಯುಯೆಟರುಗಳಾಗಲು ಪ್ರಯತ್ನಿಸುವುದಕ್ಕಿಂತ ಕಾಲಾನುಗುಣವಾಗಿ ಔದ್ಯೋಗಿಕ ಶಿಕ್ಷಣದ ಕಡೆಗೆ ಗಮನ ಕೊಡುವುದುತ್ತಮವೆಂದೂ ವರದಿಯಲ್ಲಿ ಹೇಳಲ್ಪಟ್ಟಿದೆ. ಈಗಿನ ಕಾಲದಲ್ಲಿ ಸರ್ಕಾರಿಯುದ್ಯೋಗವು ದೊರೆಯುವುದು ಕಷ್ಟವಾದುದರಿಂದ ಆದಾಯಕರವಾದ ಔದ್ಯೋಗಿಕ ಶಿಕ್ಷಣವನ್ನು ಹೊಂದುವುದು ಶ್ರೇಯಸ್ಕರವು. ಈ ಫಂಡಿನಿಂದ ವೇತನವನ್ನು ಪಡೆದವರು ಸಂಪಾದನಕರ್ತರಾದ ಮೇಲೆ ಆ ಹಣವನ್ನು ಹಿಂದಿರುಗಿ ಕೊಡಬೇಕೆಂಬ ನಿಯಮಾನುಸಾರವಾಗಿ 1389–13–7 ರೂ. ಬರಮಾಡಲ್ಪಟ್ಟು ಮೂಲಧನಕ್ಕೆ ಸೇರಿಸಲ್ಪಟ್ಟಿರುತ್ತದೆ. ಆದರೆ ಇಬ್ಬರು ವಕೀಲರು ಹಣವನ್ನು ಕೊಡದೆ ದಾವಾ ಮಾಡಿಸಿಕೊಂಡಿರುವುದು ಬಹಳ ವಿಷಾದಕರವು. ಪ್ರಭುತ್ವೋದ್ಯೋಗಕ್ಕೆ ಸೇರಲು ಅರ್ಹರಾದ ವೀರಶೈವ ಅಭ್ಯರ್ಥಿಗಳ ಹೆಸರನ್ನು ಬೊಂಬಾಯಿ ಪ್ರಭುತ್ವದವರಿಗೆ ತಿಳುಹಿಸಿ ಶಿಫಾರ್ಸುಮಾಡುವ ಸೌಲಭ್ಯವು ಲಾರ್ಡ್ ವಿಲ್ಲಿಂಗ್‌ಡನ್‌ರವರು ಬೊಂಬಾಯಿ ಗೌರ್ನರಾಗಿದ್ದಾಗ್ಗೆ ಈ ಸಂಘದವರಿಗೆ ಕೊಡಲ್ಪಟ್ಟಿತು. ಅದರ ಪ್ರಕಾರ ಈ ವರ್ಷದಲ್ಲಿ 37 ಮಂದಿಗಳು ಶಿಫಾರ್ಸುಮಾಡಲ್ಪಟ್ಟಿದ್ದರು. ಆದರೆ ಆರ್ಥಾಭಾವದಿಂದ ಯಾರಿಗೂ ಉದ್ಯೋಗ ದೊರೆಯಲಿಲ್ಲ. ವೆಚ್ಚವನ್ನು ಕಡಿಮೆ ಮಾಡುವುದಕ್ಕಾಗಿ ಉದ್ಯೋಗಸ್ಥರನ್ನು ತೆಗೆಯುವುದರಲ್ಲಿ ವೀರಶೈವರನ್ನು ಕಡಿಮೆಮಾಡಬಾರದೆಂದು ಸಂಘದವರು ಪ್ರಾರ್ಥಿಸಿಕೊಂಡಿದ್ದರು. ಅದರಿಂದ ಸ್ವಲ್ಪವಾದರೂ ಪ್ರಯೋಜನವಾಗಿರಬೇಕೆಂದು ನೆನಸಲ್ಪಟ್ಟಿದೆ. ಇಂತಹ ಸೌಲಭ್ಯವನ್ನು ನಮ್ಮ ಮೈಸೂರು ಸೀಮೆಯ ವೀರಶೈವ ವಿದ್ಯಾವರ್ಧಕ ಫಂಡು ಸಂಘದವರೂ ನಮ್ಮ ಪ್ರಭುತ್ವದವರಿಂದ ಪಡೆದುಕೊಂಡಲ್ಲಿ ವೀರಶೈವ ವಿದ್ಯಾವಂತರುಗಳಿಗೆ ವಿಶೇಷ ಪ್ರಯೋಜನವಾಗುವುದಲ್ಲದೆ ಸಂಘದವರಿಗೂ ಬಹಳ ಭೂಷಣವಾಗಿರುತ್ತದೆ. ಆದ್ದರಿಂದ ಈ ಸಂಘದವರು ಈ ತಿಂಗಳಲ್ಲಿ ನಡೆಯುವ ವಾರ್ಷಿಕಾಧಿವೇಶನದಲ್ಲಿ ಈ ವಿಚಾರವನ್ನು ಪರ್ಯಾಲೋಚಿಸತಕ್ಕ ಪ್ರಯತ್ನವನ್ನು ಮಾಡುವವರಾಗಲೆಂದು ಸೂಚಿಸುತ್ತೇವೆ. ತಮ್ಮ ಜಹಗೀರಿಯನ್ನೇ ವೀರಶೈವರ ವಿದ್ಯಾಭಿವೃದ್ಧಿಗಾಗಿ ದಾನಮಾಡಿದ ಕೈ|| ಲಿಂಗರಾಜ ಸಿರಸಂಗಿ ದೇಸಾಯರ ಶಿಲಾ ಪ್ರತಿಮೆಯನ್ನು ಸಾವಿರಾರು ರೂಪಾಯಿಗಳ ವೆಚ್ಚದಿಂದ ಮಾಡಿಸಿ ಬರುವ ಡಿಸೆಂಬರಿನಲ್ಲಿ ಧಾರವಾಡದೊಳಗೆ ವೀರಶೈವ ಮಹಾಸಭೆಯು ನೆರೆಯುವ ಸಮಯದಲ್ಲಿ ಪ್ರತಿಷ್ಠೆಯನ್ನು ಮಾಡಿಸುವ ಪ್ರಯತ್ನವನ್ನು ಈ ಫಂಡಿನವರು ಕೈಕೊಂಡಿರುವುದೂ, ತಮ್ಮಾಶ್ರಯದಲ್ಲಿ ವಾಙ್ಮಯ ಶಾಖೆಯನ್ನೇರ್ಪಡಿಸಿ ತನ್ಮೂಲಕ ವೀರಶೈವ ಪುರಾತನ ಮತಗ್ರಂಥಗಳನ್ನು ಶೇಖರಿಸಿ ಶೋಧಿಸಲುಪಕ್ರಮಿಸಿ ಚನ್ನಬಸವ ಪುರಾಣಗ್ರಂಥವನ್ನು ಮುದ್ರಣ ಮಾಡಿಸುತ್ತಿರುವುದೂ ಸ್ತುತ್ಯವೂ ಇತರ ವೀರಶೈವ ವಿದ್ಯಾವರ್ಧಕ ಸಂಘಗಳಿಗೆ ಮಾರ್ಗದರ್ಶಕವೂ ಆಗಿರುತ್ತವೆ. ನಮ್ಮ ಮೈಸೂರಿನ ವೀರಶೈವ ವಿದ್ಯಾವರ್ಧಕ ಸಂಘದವರು ಕೆಲ ವರ್ಷಗಳ ಹಿಂದೆ ಕೈಕೊಂಡಿದ್ದ ಶ್ರೀಕರ ಭಾಷ್ಯದ ಮುದ್ರಣವು ಇನ್ನೂ ಪೂರೈಸದೆ ಇದ್ದರೆ ಜಾಗ್ರತೆ ಪೂರೈಸುವಂತೆ ಪ್ರಯತ್ನಿಸುವರೆಂದೂ, ತತ್ಸಂಬಂಧವಾದ ವಿಷಯವನ್ನು ಈ ತಿಂಗಳಿನಲ್ಲಿ ನಡೆಯುವ ಸಂಘದ ಜನರಲ್ ಮೀಟಿಂಗಿನಲ್ಲಿ ತಿಳಿಸುವರೆಂದೂ ನಿರೀಕ್ಷಿಸುತ್ತೇವೆ. ಧಾರವಾಡದ ವಿದ್ಯಾವರ್ಧಕ ಸಂಘದವರ ಆಡಳಿತವು ಪ್ರಸಕ್ತ ವರ್ಷದಲ್ಲಿ ಬಹಳ ಸಮರ್ಪಕವಾಗಿ ನಡೆದಿರುವುದು ಅಭಿನಂದನೀಯವು ಮತ್ತು ಅವರು ಇನ್ನೂ ಹೆಚ್ಚಾಗಿ ವಿದ್ಯಾರ್ಥಿವೇತನಗಳನ್ನು ಕೊಡಲು ಅನುಕೂಲವಾಗುವಂತೆ ಮತಾಭಿಮಾನಿಗಳು ಸಂಘಕ್ಕೆ ದ್ರವ್ಯಸಹಾಯ ಮಾಡುವುದು ಆವಶ್ಯಕವು.

ಒಬ್ಬ ಖೈದಿಯನ್ನು ಹಾವು ಕಡಿಯಿತು

ದಿಲ್ಲಿಯ ಸೆಂಟ್ರಲ್ ಜೈಲು ಹೊರಗಡೆ ನಾಲೆಯ ಹತ್ತಿರ 60 ಮಂದಿ ಸಿ ಕ್ಲಾಸ್ ಖೈದಿಗಳು ಕೆಲಸಮಾಡುತ್ತಿರುವಾಗ್ಗೆ ಅವರಲ್ಲೊಬ್ಬನನ್ನು ಹಾವು ಕಡಿಯಿತು. ಅವನು ಕೂಡಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟನು.

ಹಳೇ ಅಡ್ವೋಕೇಟ್ ಜನರಲ್‌ರವರ ಸೆರೆ

ಹಿಂದೆ ಅಡ್ವೊಕೇಟ್ ಜನರಲ್ಲಾಗಿದ್ದ ಬಲ್ಲುಭಾಯಿ ಜೆ. ದೇಶಾಯಿಯವರು ತಮ್ಮ ಮನೆಯಲ್ಲಿರುವಾಗ್ಗೆ ಪೊಲೀಸು ಡೆಪ್ಯುಟಿ ಕಮಿಷನರ್ ಖಾನ್ ಬಹದ್ದೂರ್ ಪೋಟ್‌ರವರಿಂದ ಸೆರೆ ಹಿಡಿಯಲ್ಪಟ್ಟರು. ಇನ್ನೊಬ್ಬ ಅಡ್ವೊಕೇಟರೂ ಸೆರೆ ಹಿಡಿಯಲ್ಪಟ್ಟರು.

ಹಡಗಿನ ದೊಡ್ಡ ಅಧಿಕಾರಿಗೆ ಅರ್ಥ ದಂಡ

ಎಸ್. ಎಸ್. ಹವಾಲ್ದಾರ್ ಎಂಬ ಹಡಗಿನಲ್ಲಿ ದೊಡ್ಡ ಅಧಿಕಾರಿಯಾಗಿರುವ ಇ. ಎಚ್. ಮೇಕ್‌ಫೀಲ್ಡ್‌ರವರು ಇಬ್ಬರು ಯೂರೋಪಿಯನ್ ಅಪ್ರೆಂಟಿಸ್‌ರವರಿಂದ ಬಿಸಿಲಿನಲ್ಲಿ ಕೆಲಸ ಮಾಡಿಸಿದರೆಂಬ ಅಪರಾಧಕ್ಕಾಗಿ ಪೋರ್ಟು ರೂಲ್ಸಿನ ಪ್ರಕಾರ 30 ರೂ. ಜುಲ್ಮಾನೆ ವಿಧಿಸಲ್ಪಟ್ಟರು.

ಮೆಜಿಸ್ಟ್ರೇಟರಮೇಲೆ ಪಾದರಕ್ಷಾ ಪ್ರಯೋಗ

ಎರಡು ಕಳ್ಳತನ ಮಾಡಿದ ಅಪರಾಧಿಗೆ $3\frac{1}{2}$ ವರ್ಷ ಕಠಿಣ ಸಜಾ ವಿಧಿಸಿರುವುದಾಗಿ ಅಹಮದಾಬಾದಿನ ಮೆಜಿಸ್ಟ್ರೇಟರು ತೀರ್ಪನ್ನು ಹೇಳಿದರು. ಖೈದಿಯು ಅದನ್ನು ಕೇಳಿ ಜೋಡನ್ನು ಮೆಜಿಸ್ಟ್ರೇಟರ ಮೇಲೆಸೆದನು. ಅದು ದೈವಾಧೀನದಿಂದ ಅವರಿಗೆ ತಗಲಲಿಲ್ಲವಾಗಿ ಖೈದಿಯು ಮತ್ತೊಂದು ಜೋಡನ್ನೆಸೆಯಲು ಪ್ರಯತ್ನಿಸುತ್ತಿರುವಷ್ಟರಲ್ಲಿ ಪೊಲೀಸಿನವರು ಅವನನ್ನು ಹಿಡಿದುಕೊಂಡರು.

ಗಾಂಧಿಯವರೊಡನೆ ರಾಯಬಾರ ನಡೆಯಲಿಲ್ಲ

ಬ್ರಿಟನ್ ದೊರೆತನದವರಿಗೂ ಮಹಾತ್ಮ ಗಾಂಧಿಯವರಿಗೂ ರಾಯಬಾರ ನಡೆಯುತ್ತಿರುವುದೆಂಬ ವರ್ತಮಾನವು ನಿರಾಧಾರವಾದುದು. ಸತ್ಯಾಗ್ರಹವು ವಿರಮಿಸಲ್ಪಡುವವರೆಗೆ ಯಾವ ರಾಯಬಾರವೂ ನಡೆಯುವುದಿಲ್ಲ. ರಾಯಬಾರವನ್ನು ನಡೆಸಲು ಒಂದು ಪಕ್ಷ ಇಂಡ್ಯಾ ಮಂತ್ರಿ ಹೋರ್‌ರವರು ಒಪ್ಪಿದರೂ ಈಗಿನ ಪಾರ್ಲಿಮೆಂಟು ಮೆಂಬರುಗಳೊಪ್ಪುವುದಿಲ್ಲವೆಂದು ಆಂಗ್ಲ ಪತ್ರಿಕೆಯು ತಿಳಿಸಿರುತ್ತದೆ.

ಬಲಿಕೊಡಲ್ಪಡಲಿಕ್ಕಿದ್ದ ಗೋವನ್ನು ಅಪಹರಿಸಿದನು

ಮಹಮ್ಮದೀಯರು ಒಂದು ಮಸೀತಿಯಲ್ಲಿ ಬಲಿಕೊಡಲಿಕ್ಕೆ ತಂದಿದ್ದ ಗೋವನ್ನು ಪರಿಷದ್‌ದಾಸ್ ಎಂಬ ಸನ್ಯಾಸಿಯು ಪೊಲೀಸ್ ಕಾನ್‌ಸ್ಟೆಬಲ್ ಸುರಾಜ್‌ರಾಯ ಎಂಬವನ ಸಹಾಯದಿಂದ ಅಪಹರಿಸಿಕೊಂಡು ಹೋದುದರ ಮೇಲೆ ಹಿಂದು ಮಹಮ್ಮದೀಯರಿಗೆ ಬಡಿದಾಟವು ನಡೆದಿತು. ಇದಕ್ಕಾಗಿ ಆ ಸನ್ಯಾಸಿಯೂ ಕಾನ್‌ಸ್ಟೇಬಲೂ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರ ವಿಚಾರಣೆಗೆ ಗುರಿಯಾಗಿರುತ್ತಾರೆ.

ಸರ್ಪವು ಹಗೆಯನ್ನು ತೀರಿಸಿಕೊಂಡಿತು

ಕಲ್ಲಿಕೋಟೆಯಲ್ಲಿ ಒಬ್ಬ ತಿಯ್ಯಾ ಜಾತಿಯ ಯುವಕನು ಕಳೆದ ತಾ|| 21 ರ ರಾತ್ರಿ ಕತ್ತಲೆಯಲ್ಲಿ ಮನೆಗೆ ಬರುತ್ತಿರುವಾಗ್ಗೆ ದಾರಿಯಲ್ಲಿ ಒಂದು ಸರ್ಪವನ್ನು ಕಾಣದೆ ತುಳಿಯಲು ಅದು ಅವನನ್ನು ಕಡಿಯಲೆತ್ನಿಸಿತು. ಆದರೆ ಅವನು ತಪ್ಪಿಸಿಕೊಂಡು ಮನೆಗೆ ಬಂದು ಊಟಮಾಡಿ ಸುಖವಾಗಿ ಮಲಗಿ ನಿದ್ರೆಹೋದನು. ಆ ಹಾವು ಮಧ್ಯರಾತ್ರಿಯಲ್ಲಿ ಬಂದು ತನ್ನ ಕೋಪವು ತೀರುವವರೆಗೂ ಅವನನ್ನು ಕಚ್ಚಿತು. ಅದರಿಂದ ಅವನು ಮೃತನಾದನು.

ಡಜಿಕ್ ಕೊಲೆ ಮಾಡಿದವನಿಗೆ ಮರಣ ದಂಡನೆ

ಒಂದು ಡಜನ್ ಕೊಲೆಮಾಡಿ ಪ್ರಸಿದ್ಧನಾಗಿದ್ದ ಕಳ್ಳನು ಕಡೆಯಲ್ಲಿ ಪೊಲೀಸಿನವರಿಗೆ ಸಿಕ್ಕುಬಿದ್ದು ಸೆಷನ್ಸ್ ಜಡ್ಜರಿಂದ ಅವನಿಗೆ ವಿಧಿಸಲ್ಪಟ್ಟಿದ್ದ ಮರಣ ದಂಡನೆಯು ಹೈ ಕೋರ್ಟಿನಲ್ಲಿ ಸ್ಥಿರಗೊಳಿಸಲ್ಪಟ್ಟಿತು. ಈ ಹಂತಕನು ಟೋಹಾನಾ ಅಮಲ್ದಾರನನ್ನು ಕೊಂದಿದ್ದನು ಮತ್ತು ಒಂದು ಗ್ರಾಮದಲ್ಲಿ ಗೋಹತ್ಯಮಾಡುತ್ತಿದ್ದ ಅನೇಕ ಮಂದಿ ಕಸಾಬರನ್ನು ಒಂದು ದಿವಸ ಕೊಂದುಬಿಟ್ಟನು. ಇಷ್ಟೇ ಅಲ್ಲದೆ ಆ ಪ್ರಾಂತದಲ್ಲಿ ಅವನು ಅನೇಕ ದರೋಡೆಗಳನ್ನು ನಡೆಸಿದ್ದನು.

೬೦೦ ಟಿನ್ನು ಪೆಟ್ರೋಲಿಯಂ ಅಗ್ನಿಪಾಲಾಯಿತು

600 ಪೆಟ್ರೋಲಿಯಂ ಟಿನ್ನುಗಳನ್ನು ತುಂಬಿಕೊಂಡು ಬೆಜವಾಡಕ್ಕೆ ಸೇರಿದ ಎಲೂರು ಕಾಲುವೆಯಲ್ಲಿ ಹೋಗುತ್ತಿದ್ದ ದೋಣಿಯೊಳಗೆ ನಾವಿಕರು ಎಂದಿನಂತೆ ಅಡಿಗೆ ಮಾಡುತ್ತಿರುವಾಗ್ಗೆ ಪೆಟ್ರೋಲಿಯಮಿಗೆ ಬೆಂಕಿ ಬಿದ್ದು ಟಿನ್ನುಗಳು ಹೊತ್ತಿಕೊಂಡು ಉರಿದುಹೋದುವು. 20,000 ಮಂದಿ ದಡದಮೇಲೆ ನಿಂತು ನೋಡುತ್ತಿದ್ದರು. ಆವೇಳೆಯಲ್ಲಿ ಮಳೆಹುಯ್ಯುತ್ತಿದ್ದಾಗ್ಗೂ ಜ್ವಾಲೆಯನ್ನಾರಿಸಲು 3 ಗಂಟೆಕಾಲ ಹಿಡಿದಿತು. ಇದರಿಂದ ಕಂಪೆನಿಗೆ ಬಹಳ ನಷ್ಟಸಂಭವಿಸಿರುವುದು.

ಭಾರತ ಸಾಂಘಿಕ ಸಮಸ್ಯಾ ಪರಿಷ್ಕಾರ

ಪ್ರಧಾನ ಮಂತ್ರಿ ಮೆಕ್ಡೊನಾಲ್ಡ್‌ರವರು ಈಗ ಲಾಸಿಮತ್ತಿನಲ್ಲಿ ಭಾರತ ಸಾಂಘಿಕ (ಮತ) ಸಮಸ್ಯೆಯನ್ನು ಬಗೆಹರಿಸುವ ವಿಚಾರವಾಗಿ ಬಹಳ ಶ್ರದ್ಧೆಯಿಂದ ಆಲೋಚಿಸುತ್ತಿರುವರು. ಈ ತಾ|| 4 ರಲ್ಲಿ ಮಂತ್ರಿ ವರ್ಗಕ್ಕೆ ಸೇರಿದ ಸಂಘ ಸಭೆಯು ಜರುಗುವುದು. ಆ ಸಭೆಯಲ್ಲಿ ಮೆಕ್ಡೊನಾಲ್ಡ್‌ರವರು ಮುಖ್ಯವಾದ ಸೂಚನೆಯನ್ನು ಕೊಡಬೇಕಾಗಿದೆ. ಮೆಕ್ಡೊನಾಲ್ಡರವರಿಗೆ ಬಹಳವಾಗಿ ಆರೋಗ್ಯವಾಗಿರುವುದು. ತಾ|| 3 ರಲ್ಲಿ ಲಂಡನ್ ಪಟ್ಟಣಕ್ಕೆ ಬರುವರು. ಆಗ ಐರ್ಲೆಂಡು ಸಮಸ್ಯೆಯನ್ನೂ ಭಾರತ ಸಮಸ್ಯೆಯನ್ನೂ, ಆಟ್ಟವಾ ಸಭೆಯನ್ನೂ ಕುರಿತು ಮಂತ್ರಿವರ್ಗದವರೊಡನೆ ಪರ್ಯಾಲೋಚಿಸುವರು.

ಮೊಸಳೆಯು ಮಗುವನ್ನು ನುಂಗಿತು

ಹಿಂದು ದಂಪತಿಗಳು ತಮ್ಮ ಮಗುವಿನ ಸಮೇತ ಒಂದು ದೋಣಿಯಲ್ಲಿ ಕುಳಿತು ರವಿ ನದಿಯಮೇಲೆ ವಿಹರಿಸುತ್ತಿರುವಾಗ್ಗೆ ಸ್ತ್ರೀಯು ತನ್ನ ಮಗುವನ್ನು ಸ್ನಾನಮಾಡಿಸಲು ಅದನ್ನು ನೀರಿನಲ್ಲಿ ಅದ್ದಿ ಕೊಂಚಹೊತ್ತಿನ ಮೇಲೆ ಮಗುವನ್ನು ಮೇಲಕ್ಕೆತ್ತಿದಳು. ಆ ಮಗುವು ಮೇಲಕ್ಕೆ ಸರಾಗವಾಗಿ ಬರಲಿಲ್ಲ ಮತ್ತು ಯಾವುದೋ ಅದನ್ನು ಹಿಡಿದುಕೊಂಡು ಕೆಳಕ್ಕೆಳೆಯುವಂತೆ ಆಕೆಗೆ ತೋರಿತು. ಮೇಲೆಕ್ಕೆತ್ತಲು ಆಕೆಯು ಎಷ್ಟು ಪ್ರಯತ್ನಿಸಿದಾಗ್ಗೂ ಪ್ರಯೋಜನವಾಗಲಿಲ್ಲವಾಗಿ ದೋಣಿಯೊಳಗೆ ಕುಳಿತಿದ್ದವರೆಲ್ಲರೂ ಒಬ್ಬನ ತರುವಾಯ ಒಬ್ಬನು ಮಗುವನ್ನು ಹಿಡಿದುಕೊಂಡು ಮೇಲಕ್ಕೆತ್ತಲು ಸಾಹಸಪಟ್ಟರಾದರೂ ಸಾಧ್ಯವಾಗಲಿಲ್ಲ ಮತ್ತು ಈ ಪ್ರಯತ್ನದಲ್ಲಿ ದೋಣಿಯೊಳಕ್ಕೆ ನೀರು ಸಹ ತುಂಬಿ ಇದರಿಂದ ದೋಣಿಯು ಮುಳುಗಿ ಹೋಗುವ ಭಯವುಂಟಾಗಲು ಮಗುವನ್ನು ನೀರಿನೊಳಕ್ಕೆ ಬಿಟ್ಟುಬಿಟ್ಟರು.

ರವೀಂದ್ರನಾಥ ಟಾಗೂರರ ವಿಷಾದವು

ಪ್ರಕೃತ ಭಾರತ ಸ್ಥಿತಿಯ ವಿಚಾರವಾಗಿ ಕವೀಂದ್ರರಾದ ರವೀಂದ್ರನಾಥ ಟಾಗೂರ್‌ರವರು ತಮ್ಮ ವಿಷಾದವನ್ನು ಈ ಪ್ರಕಾರವಾಗಿ ಪ್ರಕಟಿಸಿರುತ್ತಾರೆ:—ನ್ಯಾಯದ ಮೇಲೂ, ಸಾಮರಸ್ಯದ ಮೇಲೂ ಆಧಾರಪಟ್ಟುಕೊಂಡು ಸಾಮರಸ್ಯದಿಂದ ಕೂಡಿದ ಸಮಾಧಾನವನ್ನುಂಟುಮಾಡಲಿಕ್ಕೆ ತಕ್ಕ ಅವಕಾಶವು ಈ ಗುಂಟಾಗಿದೆ. ಈಸಮಾಧಾನವನ್ನುಂಟುಮಾಡಲು ಭಾರತೀಯ ನಾಯಕರೂ, ಭಗವದಿಚ್ಛೆಯಿಂದ ಭಾರತ ದೇಶದೊಡನೆ ಸಂಬಂಧವನ್ನುಂಟುಮಾಡಿಕೊಂಡಿರುವ ವಿದೇಶೀಯರೂ ದೂರದೃಷ್ಟಿಯಿಂದಲೂ ಧೈರ್ಯ ಸ್ಥೈರ್ಯದಿಂದಲೂ ಕೃತಿಮಾಡಬೇಕು. ಭಾರತ ದೇಶದ ಮುಂದಣ ಕಲ್ಯಾಣದಿಂದಲೇ ಸಮಸ್ತರಿಗೂ ಪ್ರಯೋಜನವಾಗಬೇಕಾಗಿರುವುದರಿಂದ ಅದನ್ನು ಪಡೆಯಲು ಎಲ್ಲರೂ ಭಿನ್ನ ಭಾವವನ್ನು ಬಿಟ್ಟು ತಕ್ಕ ರಾಜ್ಯಾಂಗ ವಿಧಾನವನ್ನೇರ್ಪಡಿಸಲು ಪ್ರಯತ್ನಿಸಬೇಕು. ಶಾಂತಿಯುತವಾದ ಸಾಂಘಿಕ ಮತ್ತು ಆರ್ಥಿಕ ಅಭಿವೃದ್ಧಿ ಸಾಧಕವಾದ ರಾಜ್ಯಾಂಗ ವಿಧಾನವನ್ನು ಏರ್ಪಡಿಸಬೇಕು. ಈಗ ಭಾರತ ದೇಶದಲ್ಲಿ ರಾಜಕೀಯದಲ್ಲಿ ಆಂದೋಳನವುಂಟಾಗಿದೆ. ಇದು ಮುಂದೆಯೂ ಹೀಗೆಯೇ ಇರುವುದಾದಲ್ಲಿ ಭೇದವು ಬಹಳವಾಗಿ ಹೆಚ್ಚುವುದರಿಂದ ಅನುಕೂಲ ಪರಿಸ್ಥಿತಿಯನ್ನುಂಟುಮಾಡಲು ಧೀಮಂತರು ಬಹಳವಾಗಿರುತ್ತಾರೆಂಬ ನಂಬಿಕೆಯು ನನಗಿರುತ್ತದೆ. ದೇಶದಲ್ಲಿ ಪರಿಸ್ಥಿತಿಯು ಬರುಬರುತ್ತ ಕಿರಾತ ಸ್ವರೂಪವನ್ನು ಹೊಂದುತ್ತಿದೆ. ಅವಿಶ್ವಾಸ, ಸಂಶಯ, ದ್ವೇಷ ಮೊದಲಾದವುಗಳು ಹೆಚ್ಚುತ್ತಿರುವುವು. ದೊರೆತನದವರ ಕಠಿಣ ವಿಧಾನವೂ, ಭಿನ್ನ ಮತಾಂತರದವರ ಪ್ರತೀಕಾರವೂ ಬಹಳವಾಗಿ ಹೆಚ್ಚುತ್ತಿವೆ. ಈ ಸ್ಥಿತಿಯನ್ನು ಕೂಡಲೆ ತೊಲಗಿಸದಿದ್ದರೆ ಧೀಮಂತರು ಸಹ ಸಕ್ರಮ ಸ್ಥಿತಿಯನ್ನುಂಟುಮಾಡಲಾರರು. ಮತ ಕಲಹವನ್ನು ತಾತ್ಕಾಲಿಕವಾಗಿ ಹೋಗಲಾಡಿಸುವುದರಿಂದೇನೂ ಪ್ರಯೋಜನವಾಗುವುದಿಲ್ಲ. ಕಷ್ಟವು ಎಷ್ಟು ಹೆಚ್ಚಾಗಿದ್ದರೂ ಸಹಿಸಬಹುದು. ಕಡೆಯಲ್ಲಿ ಮರೆತು ಬಿಡಲಿಕ್ಕೆ ಸಹ ಅವಕಾಶವಿರುವುದು, ಆದರೆ ನೀತಿಬಾಹಿರವಾದ ದುಷ್ಕಾರ್ಯಗಳಿಂದ ಮನೋವ್ಯಥೆ ಉಂಟಾದರೆ ಮಾತ್ರ ಅದು ಎಂದಿಗೂ ಹೋಗುವುದಿಲ್ಲ. ಪ್ರಪಂಚದಲ್ಲೆಲ್ಲ ಆರ್ಥಿಕಸ್ಥಿತಿಯುಂಟಾದರೆ ಅದನ್ನು ಸಹಿಸಬಹುದು, ಆದರೆ ಅನ್ಯಾಯಕರವಾದ ಅತ್ಯಾಚಾರಗಳಿಂದ ಮನುಷ್ಯನ ಸೌಭ್ರಾತೃಭಾವವು ಸಂಪೂರ್ಣವಾಗಿ ಹೋಗುವುದು. ಆದುದರಿಂದ ಮನುಷ್ಯ ಚಾರಿತ್ರೆಯನ್ನು ಕಾಪಾಡಬೇಕೆಂಬವರು ಇವುಗಳಿಗೆ ಯಾವಾಗಲೂ ಅವಕಾಶ ಕೊಡಕೂಡದು. ಇಂಡ್ಯಾದಲ್ಲಿ ಪಾಲಕಪಾಲ್ಯರಲ್ಲಿ ನೈತಿಕ ಸಂಬಂಧವು ಕೆಟ್ಟುಹೋಗಿರುವುದರಿಂದ ಉಂಟಾಗಿರುವ ದುಸ್ಥಿತಿಯು ದಿನದಿನಕ್ಕೆ ದುರ್ಭರವಾಗುತ್ತಿರುವುದಲ್ಲದೆ ಬಹಳ ಅಸಹ್ಯಕರವಾಗಿ ಸಹ ಕಂಡುಬರುತ್ತಿದೆ. ಇದರಿಂದ ದೇಶವು ಕೇವಲ ಕಿರಾತಸ್ಥಿತಿಗೆ ಬರುವ ಸೂಚನೆಯು ಕಂಡುಬರುತ್ತಿರುವುದೆಂದು ಪ್ರಕಟಿಸಿರುತ್ತಾರೆ.

ಒಳಿವೇತನ ವೃತ್ತಾಂತಗಳು

ಶ್ರೀಮನ್ಮಹಾರಾಜರವರ ಸ್ವಾರಿಯು ಕಳೆದ ಸೋಮವಾರ ಬೆಂಗಳೂರಿಗೆ ಚಿತ್ತೈಸಿದ್ದು ಕಳೆದ ಶುಕ್ರವಾರ ಸಾಯಂಕಾಲ ರಾಜಧಾನಿಗೆ ದಯಮಾಡಿ ನೆನ್ನೆಯ ದಿವಸ ಬೆಂಗಳೂರಿಗೆ ತೆರಳಿತು.

ರಾಜಧಾನಿಯಲ್ಲಿ ಇಲಿಗಳು ಸಾಯುವುದು ಹೆಚ್ಚಾಗಿ ಇಟ್ಟಿಗೆಗೂಡಿನಲ್ಲಿ ಪ್ಲೇಗು ಮರಣಗಳಾದವಲ್ಲದೆ ಲಷ್ಕರ್ ಮೊಹಲ್ಲಾ ಸೀಬಯ್ಯನ ಗಲ್ಲಿಯಲ್ಲೊಂದೂ ಕುಂಬಾರಗೇರಿಯಲ್ಲೊಂದೂ ಪ್ಲೇಗು ಮರಣಗಳಾದವು. ಇದರಿಂದ ಈ ರೋಗವು ಪ್ರಬಲಿಸಬಹುದೆಂದು ತೋರುತ್ತದೆ.

ರಾಜಧಾನಿಯ ಜೈಲು ಸೂಪರಿಂಟೆಂಡೆಂಟರಾದ ಮ|| ಆರ್. ಮಲ್ಲಿಕಾರ್ಜುನಪ್ಪನವರು ಈ ತಾ 4 ರಲ್ಲಿ ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಡುವುದರಿಂದ, ಕೃಷ್ಣರಾಜೇಂದ್ರ ಆಸ್ಪತ್ರೆಯ ಆ|| ಸರ್ಜನ್ ಮ|| ಎಸ್. ಎಸ್. ಪ್ರಸಾದರವರು ತಮ್ಮ ಕೆಲಸದೊಡನೆ ಜೈಲು ಸೂಪರಿಂಟೆಂಡೆಂಟ್ ಕೆಲಸವನ್ನೂ ನೋಡಿಕೊಳ್ಳಬೇಕಾಗಿ ಅಪ್ಪಣೆಯಾಗಿರುತ್ತದೆ.

5-6 ದಿವಸಗಳ ಹಿಂದೆ ಶ್ರೀರಂಗಪಟ್ಟಣದಿಂದಾಚೆಗಿರುವ ಕಿರಂಗೂರು ಸೇತುವೆಯ ಬಳಿ ಕಾವೇರಿ ನದಿಯ ದಡದಲ್ಲಿ ಪಂಚೆಯನ್ನೊಗೆಯುತ್ತಿದ್ದ ಒಬ್ಬ ತರುಣನೂ ಅವನ ಸಹಾಯಕ್ಕಾಗಿ ಹೋಗಿದ್ದ ಅವನ ಮಾವನೂ ಇವರುಗಳ ಸಮೀಪದಲ್ಲಿ ಮುಖವನ್ನು ತೊಳೆಯುತ್ತಿದ್ದ ಮತ್ತೊಬ್ಬನೂ ನದಿಯಲ್ಲಿ ಆಕಸ್ಮಾತ್ ಪ್ರವಾಹವು ಹೆಚ್ಚಿ ಬಂದುದರಿಂದ ಮೂವರೂ ನೀರಿನಲ್ಲಿ ಕೊಚ್ಚಿ ಹೋದರೆಂದು ಕೇಳುತ್ತೇವೆ.

ಬೆಂಗಳೂರಲ್ಲಿರುವ ಹೈದರಾಬಾದು ಸಂಸ್ಥಾನದ ಯುವರಾಜ ಸಹೋದರ ದಂಪತಿಗಳಲ್ಲಿ ಯುವರಾಜರ ಪತ್ನಿಯವರು ದಿವಾನ್ ಸರ್ ಮಿರ್ಜಾಯವರೊಡನೆ ಕಳೆದ ಮಂಗಳವಾರ ಸಾಯಂಕಾಲ ಪಬ್ಲಿಕ್ ಆಫೀಸು ಕಟ್ಟಡಕ್ಕೆ ಬಂದಿದ್ದು ಚೀಫ್ ಸೆಕ್ರೆಟರಿ ಮ|| ಎನ್. ಮಾಧವರಾಯರಿಂದಲೂ ರಿಜಿಸ್ಟ್ರಾರ್ ಜನರಲ್‌ರವರಿಂದಲೂ ಗೌರವಪೂರ್ವಕವಾಗಿ ಇದಿರುಗೊಳ್ಳಲ್ಪಟ್ಟು ದಿವಾನರ ಕೊಠಡಿಯನ್ನೂ, ಸಚಿವರ ಮತ್ತು ನ್ಯಾಯವಿಧಾಯಕ ಸಭೆಯ ಮಂದಿರಗಳನ್ನೂ ಪರಾಮರ್ಶಿಸಿದರು.

ಮಂಡ್ಯದ ಸಬ್ ಡಿವಿಜನ್ ಆಫೀಸರಾದ ಮ|| ಆರ್. ಎ. ನರಸಿಂಹಯ್ಯಂಗಾರ್ಯರು ಲ್ಯಾಂಡ್ ಆಕ್ವಿಜಿಷನ್ ಆಫೀಸರಾಗಿಯೂ ಇರುವುದರಿಂದ ತತ್ಸಂಬಂಧವಾಗಿ ಕಳೆದ ಶನಿವಾರ ಹಿರೋಡೆಗೆ ಬಂದಿದ್ದು ಹಿರೋಡೆ ಬೆಟ್ಟಕ್ಕೆ ಹೋಗಿ ಅಲ್ಲಿದ್ದ ಸನ್ಯಾಸಿಗಳ ದರ್ಶನವನ್ನು ಮಾಡಿಕೊಂಡು ಹೊರಟವರು ಬಿಡಾರಕ್ಕೆ ಬರಲಿಲ್ಲವೆಂದೂ, ಎಲ್ಲಿಗೆ ಹೋದರೆಂಬುದು ಗೊತ್ತಾಗಲಿಲ್ಲವೆಂದೂ, ಈ ವಿಚಾರವನ್ನು ತಿಳಿದು ಮೈಸೂರು ಡೆಪ್ಯುಟಿ ಕಮಿಷನರು ಅಲ್ಲಿಗೆ ಹೋಗಿದ್ದರೆಂದೂ ತಿಳಿಯಬರುತ್ತದೆ. ಮ|| ನರಸಿಂಹಯ್ಯಂಗಾರ್ಯರಿಗೆ ಒಂದೊಂದು ವೇಳೆ ಬುದ್ಧಿ ವಿಕಲ್ಪವಾಗಿ 1-2 ದಿವಸಗಳ ಮೇಲೆ ನೆಟ್ಟಗಾಗುವುದುಂಟೆಂದು ಅವರ ಮನೆಯವರು ಹೇಳುವರಂತೆ.

ಕಳೆದ 1929 ನೆಯ ಮಾರ್ಚಿ ತಾ|| 27 ರಲ್ಲಿ ಚೆನ್ನಪಟ್ಟಣದ ಮುಸಲ್ಮಾನರು ನಿಡಗಟ್ಟದ ಸಂತೆಗೆ ಹೋಗುತ್ತಿರುವಾಗ್ಗೆ, ಬೈರಾಪಟ್ಟಣದ ಮತ್ತು ಕೆಲ ನೆರೆ ಗ್ರಾಮಗಳ ರೈತರುಗಳು ಆ ಮುಸಲ್ಮಾನರ ಮೇಲೆ ಬಿದ್ದು ಹೊಡೆದರೆಂಬ ಅಪರಾಧಕ್ಕಾಗಿ ಸುಬ್ಬೇಗೌಡ, ಕೆಂಪಯ್ಯ ಮತ್ತೆ ಐವರು ಬೆಂಗಳೂರು ಅಸಿಸ್ಟೆಂಟ್ ಸೆಷನ್ಸ್ ಜಡ್ಜಿಯವರಿಂದ 6 ತಿಂಗಳ ಕಠಿಣ ಸಜ ವಿಧಿಸಲ್ಪಟ್ಟಿದ್ದರು. ಅಪರಾಧಿಗಳೆಲ್ಲರ ವಿಚಾರಣೆಯು ಒಟ್ಟಿಗೆ ಮಾಡಲ್ಪಟ್ಟುದು ನ್ಯಾಯವಿರುದ್ಧವೆಂದು ಹೇಳಿ ಚೀಫ್ ಕೋರ್ಟಿಗೆ ಅಪೀಲುಮಾಡಲ್ಪಟ್ಟದ್ದರ ಮೇಲೆ, ಎಲ್ಲರ ವಿಚಾರಣೆಯನ್ನೂ ಒಟ್ಟಿಗೆ ಮಾಡುವುದು ನ್ಯಾಯವಿರುದ್ಧವಲ್ಲವೆಂದೂ, ಟ್ರೈಯಿಂಗ್ ಮೆಜಿಸ್ಟ್ರೇಟರು ಬಹಳ ಎಚ್ಚರಿಕೆಯಿಂದ ವಿಚಾರಣೆ ನಡೆಸಿರುತ್ತಾರೆಂದೂ, ಜಸ್ಟಿಸ್ ಪಿ. ಮಹಾದೇವಯ್ಯನವರು ಅಭಿಪ್ರಾಯಪಟ್ಟು ಕಠಿಣ ಸಜವನ್ನು ತಪ್ಪಿಸಿ ಸಾದಾ ಸಜವನ್ನು ವಿಧಿಸಿದರು.

ರಾಜಧಾನಿಯ ಲಷ್ಕರ್‌ಮೊಹಲ್ಲಾ ಕುಂಬಾರಗೇರಿಯಲ್ಲಿರುವ ಕಂಟ್ರಾಕ್ಟರ್ ಮ|| ವೈ. ಶಿವಪ್ಪನವರ ಮನೆಗೆ ನೆನ್ನೆಯ ದಿವಸ ಬೆಳಗಿನ 8-9 ಘಂಟೆಯಲ್ಲಿ ಒಬ್ಬ ಹೆಂಗಸು ನುಗ್ಗಿ ಮಹಡಿಯ ಮೇಲಕ್ಕೆ ಹೋಗಿ ಬೀಗ ತೆಗೆದಿದ್ದ ಕೊಠಡಿಯೊಳಕ್ಕೆ ಪ್ರವೇಶಿಸಿ ಎರಡು ದೊಡ್ಡ ಬೆಳ್ಳಿಯ ತಟ್ಟೆಗಳನ್ನು ಅಪಹರಿಸಿಕೊಂಡು ಇಳಿಯುತ್ತಿರುವಾಗ್ಗೆ ಮನೆಯ ಹೆಂಗಸರು ಕಂಡು ಏನೆಂದು ಪ್ರಶ್ನಿಸಲು ಅವಳು ಉತ್ತರಕೊಡದೆ ಕಾಲಿಗೆ ಬುದ್ಧಿ ಹೇಳಿದಳು. ಅವರು ಅವಳನ್ನು ಹಿಂಬಾಲಿಸಲು ಅವಳು ಸಮೀಪದಲ್ಲಿದ್ದ ಮನೆಯ ಹಿತ್ತಲಿಗೆ ಹೋಗಿ ತಟ್ಟೆಗಳನ್ನು ಮುಚ್ಚಿಟ್ಟು ಬಿಟ್ಟುಕೊಂಡಿದ್ದಳು. ಇದನ್ನು ನೋಡುತ್ತಿದ್ದ ಒಬ್ಬ ಹುಡುಗನು ಅವಳನ್ನು ಹಿಂಬಾಲಿಸುತ್ತಿದ್ದ ಹೆಂಗಸರಿಗೆ ತಿಳಿಸಲು ಅವರು ಇತರರನ್ನು ಸಹಾಯಕ್ಕೆ ಕೂಗಿದರು. ಕಡೆಗೆ ಆ ಚೋರಳು ತಟ್ಟೆಗಳನ್ನಲ್ಲೇ ಬಿಟ್ಟೋಡಿದಳು. ಮನೆಯವರು ಅವುಗಳನ್ನು ತೆಗೆದುಕೊಂಡು ಪೊಲೀಸಿನವರಿಗೆ ತಿಳಿಸಲು ಇನ್ನು ಒಡನೆ ಸಿಕ್ಕಿದಮೇಲೆ ಮುಂದಣ ಪ್ರಯತ್ನವೇಕೆಂದು ಹೇಳಿಬಿಟ್ಟರಂತೆ !

1931 ರಲ್ಲಿ ನಡೆದ ಮೈಸೂರು ಸೀಮೆಯ ಜನಪರಿಗಣತಿ.

ವಿಸ್ತೀರ್ಣ, ಮನೆಗಳು ಮತ್ತು ಜನಸಂಖ್ಯೆ.

ಡಿಸ್ಟ್ರಿಕ್ಟು ಅಥವಾ ಸಂಸ್ಥಾನ—	ವಿಸ್ತೀರ್ಣ ಚದರ ಮೈಲಿಗಳಲ್ಲಿ	ಪಟ್ಟಣಗಳು	ಒಕ್ಕಲಿರುವ ಗ್ರಾಮಗಳು	ಒಕ್ಕಲಿರುವ ಮನೆಗಳು: ಒಟ್ಟು	ಒಕ್ಕಲಿರುವ ಮನೆಗಳು: ಪಟ್ಟಣಗಳಲ್ಲಿ	ಒಕ್ಕಲಿರುವ ಮನೆಗಳು: ಗ್ರಾಮಗಳಲ್ಲಿ	ಜನಸಂಖ್ಯೆ: ಜನಗಳು ಒಟ್ಟು	ಜನಗಳು ಪಟ್ಟಣ	ಜನಗಳು ಗ್ರಾಮ	ಪುರುಷರು ಒಟ್ಟು	ಪುರುಷರು ಪಟ್ಟಣ	ಪುರುಷರು ಗ್ರಾಮ	ಸ್ತ್ರೀಯರು ಒಟ್ಟು	ಸ್ತ್ರೀಯರು ಪಟ್ಟಣ	ಸ್ತ್ರೀಯರು ಗ್ರಾಮ
ಬೆಂಗಳೂರು ದಂಡು ಸೇರಿ ಸಂಸ್ಥಾನ	29,326	108	16,483	1,311,445	205,567	1,105,878	6,557,302	1,045,042	5,512,260	3,353,963	546,822	2,807,141	3,203,339	498,220	2,705,119
,, ಬಿಟ್ಟು ,,	29,311	107	16,483	1,289,833	183,955	1,105,878	6,423,189	910,929	5,512,260	3,284,554	477,413	2,807,141	3,138,635	433,516	2,705,119
ಬೆಂಗಳೂರು ಸಿಟಿ	12	1	....	34,657	34,657	....	172,357	172,357	....	91,680	91,680	....	80,677	80,677	....
,, ಡಿಸ್ಟ್ರಿಕ್ಟು	2,922	13	2,478	176,955	15,631	161,324	908,056	77,990	830,066	461,905	39,827	422,078	446,151	38,163	407,988
ಕೋಲಾರ ಗೋಲ್ಡ್ ಫೀಲ್ಡ್ಸ್ (ಪಟ್ಟಣ)	30	1	....	19,448	19,448	....	85,103	85,103	....	45,051	45,051	....	40,052	40,052	....
,, ಡಿಸ್ಟ್ರಿಕ್ಟು	3,161	11	2,751	150,993	13,710	137,283	763,934	70,040	693,894	389,262	35,766	353,496	374,672	34,274	340,398
ತುಮಕೂರು ,,	4,082	10	2,381	171,184	12,083	159,101	861,405	61,586	799,819	439,144	32,182	406,962	422,261	29,404	392,857
ಮೈಸೂರು ಪಟ್ಟಣ	10	1	....	21,715	21,715	....	107,142	107,142	....	56,772	56,772	....	50,370	50,370	....
,, ಡಿಸ್ಟ್ರಿಕ್ಟು	5,492	26	2,709	291,050	23,526	267,524	1,403,984	115,056	1,288,928	703,838	58,862	644,976	700,146	56,194	643,952
ಚಿತ್ರದುರ್ಗ ,,	4,149	11	1,239	124,798	13,369	111,429	656,569	66,451	590,118	336,786	34,586	302,200	319,783	31,865	287,918
ಹಾಸನ ,,	2,635	12	2,252	122,435	10,560	111,875	596,937	52,567	544,370	300,746	27,525	273,221	296,191	25,042	271,149
ಕಡೂರು ,,	2,771	9	959	73,649	7,985	65,664	347,715	39,911	307,804	184,389	21,328	163,061	163,326	18,583	144,743
ಶಿವಮೊಗ್ಗ ,,	4,048	12	1,714	102,949	11,271	91,678	519,987	62,726	457,261	274,981	33,834	241,147	245,006	28,892	216,114
ಬೆಂಗಳೂರು ದಂಡು	14	1	....	21,612	21,612	....	134,113	134,113	....	69,409	69,409	....	64,704	64,704	....

ಮೊಹಮ್ಮದೀಯರ ಪ್ರಾಬಲ್ಯಕ್ಕೆ ಸಿಕ್ಕರ ಅಸಮ್ಮತಿ

ಕಳೆದ ಜುಲೈ ತಾ|| 22 ನೆಯ ಶುಕ್ರವಾರ ಸಿಮ್ಲಾದಲ್ಲಿರುವ ಸಿಂಗು ಸಭಾ ಮಂದಿರದಲ್ಲಿ ಸರ್ ಸುಂದರಸಿಂಗು ಸರದಾರ್ ಉಜ್ವಲಸಿಂಗು, ಆನರಬಲ್ ಸರ್ದಾರ್ ಬೂಲುಸಿಂಗು, ಭಾಯಿ ಅರ್ಜುನಸಿಂಗು ಇವರೇ ಮೊದಲಾಗಿ ಸಿಕ್ಕನಾಯಕರುಗಳೂ ಇತರರೂ ಸರದಾರ್ ಬಹದೂರು ಖಾನಸಿಂಗರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಗಯಾನೀಶೇರುಸಿಂಗರವರು ಪ್ರಧಾನೋಪನ್ಯಾಸಮಾಡುವಾಗ್ಗೆ "ಮುಹಮ್ಮದೀಯರಿಗೆ ಮೆಕ್ಕಾ ಮದೀನಾ ಹೇಗೆ ಪವಿತ್ರಸ್ಥಾನಗಳೋ ಹಾಗೆ ಸಿಕ್ಕರಿಗೆ ಪಂಜಾಬು ಪವಿತ್ರಸ್ಥಾನವಾಗಿರುತ್ತದೆ. ಮುಹಮ್ಮದೀಯರಿಗೆ ಯಾವರೀತಿಯಾಗಿ ಅಧಿಕ್ಯವನ್ನು ಕೊಟ್ಟರೂ ನಾವು ಮುಹಮ್ಮದೀಯರ ಪರಿಪಾಲನಕ್ಕೊಳಪಡುವುದಿಲ್ಲ. ಅವಶ್ಯವಾದಲ್ಲಿ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಕಾದಾಡಲು ಲಕ್ಷಮಂದಿ ಸಿಕ್ಕರು ಸಿದ್ಧರಾಗಿರುವರು. ಶಾಸನಸಭೆಯ ಸ್ಥಾನಗಳ ಪರಿಷ್ಕಾರದಲ್ಲಿ ಯಾವ ಲೋಪವುಂಟಾದರೂ ಅದಕ್ಕೆ ವೈಸ್ರಾಯರೂ ಪಂಜಾಬುಗೌರ್ನರೂ ಜವಾಬದಾರರಾಗುವರು. ಆರ್ಥಿಕಸ್ಥಿತಿಯ ವಿಚಾರದಲ್ಲಿ ಹಿಂದುಗಳಿಗೂ ಸಿಕ್ಕರಿಗೂ ಸಾಮ್ಯವಿರುವುದಕ್ಕಿಂತ ಮುಹಮ್ಮದೀಯರಿಗೂ ಸಿಕ್ಕರಿಗೂ ಸಾಮ್ಯವು ಹೆಚ್ಚಾಗಿರುತ್ತದೆ. ಯಾವವೂ ಕೆಲ ಸ್ಥಾನಗಳಿಗೆ ಮುಹಮ್ಮದೀಯರು ಆಶಪಟ್ಟರೆ ಅವರಿಗೆ ಸಿಕ್ಕರೊಡನೆ ಸ್ನೇಹವು ಶಾಶ್ವತವಾಗಿ ಕಳೆದುಹೋಗುವುದು" ಎಂದು ಹೇಳಿದರು. "ಸಮಷ್ಟಿ ನಿಯೋಜಕವರ್ಗದಿಂದಲೂ, ಪಂಜಾಬನ್ನು ಸಾಂಘಿಕವಾಗಿ ವಿಭಜನಮಾಡುವುದರಿಂದಲೂ ಈ ಸಮಸ್ಯೆಯನ್ನು ಪರಿಷ್ಕರಿಸಲು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದುವು. ಸಿಕ್ಕರು ಕತ್ತಿಯ ಸಹಾಯದಿಂದ ಪಂಜಾಬನ್ನು ಸಂಪಾದಿಸಿದರು, ಇದನ್ನು ಬ್ರಿಟಿಷು ದೊರತನದವರು ಲೇಖನಿಯ ಸಹಾಯದಿಂದ ಸಾಂಘಿಕ ಮುಹಮ್ಮದೀಯರ ಪರಿಪಾಲನದಿಂದ ಕಾಪಾಡಿದರು. ಅಧಿಕಸಂಖ್ಯಾಕರಾದ ಮುಹಮ್ಮದೀಯರಿಗೆ ಅಧೀನರಾಗಿರಲು ನಾವೆಷ್ಟುಮಾತ್ರಕ್ಕೂ ಒಪ್ಪುವುದಿಲ್ಲ" ಎಂದು ಸರ್ದಾರ್ ಉಜ್ವಲಸಿಂಗರೂ ಹೇಳಿದರು. "ಪಂಜಾಬು ಶಾಸನ ಸಭೆಯ ಸಭ್ಯತ್ವದಲ್ಲಿ ಸಿಕ್ಕರಿಗಿರುವ ನ್ಯಾಯವಾದ ಹಕ್ಕುಗಳನ್ನೂ ಸಿಕ್ಕರು ಈವರೆಗೆ ಮಾಡಿದ ಉಪಕಾರವನ್ನೂ ದೊರತನದವರು ಈಗ ಮರೆತು ಹೆಚ್ಚು ಸ್ಥಾನಗಳನ್ನು ಮುಹಮ್ಮದೀಯರಿಗೆ ಕೊಡಲು ನಿಶ್ಚಯಿಸಿರುವರೆಂಬ ವರ್ತಮಾನವು ಪ್ರಬಲವಾಗಿರುವುದರಿಂದ ಸಿಮ್ಲಾದಲ್ಲಿರುವ ಸಿಕ್ಕರಿಗೆ ಬಹಳ ವ್ಯಾಕುಲವಾಗಿರುತ್ತದೆ. ಸಿಕ್ಕಮತಕ್ಕೆ ಪಂಜಾಬು ಜನ್ಮಸ್ಥಾನವು. ಅಲ್ಪಸಂಖ್ಯಾಕರಾಗಿರುವ ಮುಹಮ್ಮದೀಯರು, ಆಂಗ್ಲೋ ಇಂಡಿಯನ್ನರು, ಯೂರೋಪಿಯನ್ನರು ಮೊದಲಾದವರುಗಳಿಗೆ ತೋರಿಸಲ್ಪಡುತ್ತಿರುವಂತಹ ಸೌಕರ್ಯಗಳೇ ಸಿಕ್ಕರಿಗೂ ಸಹ ಒದಗಿಸಿಕೊಡಬೇಕು. ಹಾಗಿಲ್ಲದಿದ್ದಲ್ಲಿ ಬಹಳ ಆಶಾಭಂಗವಾಗುವುದು" ಎಂದು ಈ ಸಭೆಯವರು ನಿಷ್ಕರ್ಷೆಯಿಂದಲೂ ಧೈರ್ಯದಿಂದಲೂ, ಸವಿನಯದಿಂದಲೂ ದೊರೆತನದವರಿಗೆ ತಿಳಿಸಲಿಚ್ಛಿಸುತ್ತಾರೆ. ಪಂಜಾಬಿನಲ್ಲಿ ಸಿಕ್ಕರ ಸಂಖ್ಯೆಯು ಬಹಳ ಹೆಚ್ಚಾಗಿರುತ್ತದೆ. ಅವರಿಗೆ ಸಂಪೂರ್ಣ ರಕ್ಷಣೆಯು ಲಭಿಸದಿದ್ದರೆ ಅವರು ಶಾಂತಿಯುತವಾದ ಸಾಧನಗಳಿಂದೆಲ್ಲ ಪ್ರತಿಭಟಿಸದೆ ಬಿಡರು. ರಾಷ್ಟ್ರೀಯ ಸ್ವಪರಿಪಾಲನವನ್ನು ಕಳೆದುಕೊಳ್ಳಲು ಸಿಕ್ಕರೊಪ್ಪುವುದಿಲ್ಲ. ಆದರೆ ಬ್ರಿಟಿಷ್ ದೊರತನದವರ ಪುರಸ್ಕಾರದಿಂದ ಮುಹಮ್ಮದೀಯರ ಪರಿಪಾಲನವೇರ್ಪಟ್ಟಲ್ಲಿ ಅದಕ್ಕೆ ಅಧೀನರಾಗಲು ಸಿಕ್ಕರೆಷ್ಟು ಮಾತ್ರಕ್ಕೂ ಸಮ್ಮತಿಸುವುದಿಲ್ಲ. ಭಾರತ ಶಾಸನಸಭೆಯಲ್ಲಿ 100 ಕ್ಕೆ 5 ಸ್ಥಾನಗಳೂ, ಸರಹದ್ದು ರಾಷ್ಟ್ರ ಸಭೆಯಲ್ಲಿ 6 ಸ್ಥಾನಗಳೂ ಭಾರತ ಪ್ರಭುತ್ವ ವರ್ಗದಲ್ಲಿ ಒಂದು ಸ್ಥಾನವೂ ಸಿಕ್ಕರಿಗೆ ದೊರಕಬೇಕು. ಸಿಕ್ಕರು ಕೋರುವ 17 ವಿಷಯಗಳು ನೆರವೇರಬೇಕು" ಎಂದು ತೀರ್ಮಾನಿಸಲ್ಪಟ್ಟಿತು.

ಮನುಷ್ಯರ ಮುತ್ತಜ್ಜಿ

ಡಚ್ ಪ್ರೊಫೆಸರರಾದ ಬೆರ್ನೆಲೋಟ್ ಮೋಯಿನ್ಸ್ ಎಂಬವರು ಡಾರ್ವಿನರಂತೆಯೇ ಪ್ರಸಿದ್ಧಪ್ರಾಣಿಶಾಸ್ತ್ರಜ್ಞರು; ಮಂಗನೆ ಮನುಷ್ಯನ ಅಜ್ಜ ಎಂಬುದು ಅವರ ಸಿದ್ಧಾಂತ. ಅವರಿಗೆ ಈಗ ಒಬ್ಬಳು ಹುಡುಗಿಯು ದೊರೆತಿರುವಳಂತೆ. ಅವಳು ಮನುಷ್ಯರ—ಮಂಗಗಳ ಮಧ್ಯವರ್ತಿನಿಯಾಗಿದ್ದಾಳೆ ಎಂದವರು ಹೇಳುತ್ತಾರೆ. ಹುಡುಗಿಯ ಹೆಸರೇನೆಂಬುದನ್ನು ಅವರಿನ್ನೂ ತಿಳಿಸಲಿಲ್ಲ. ಅವಳು ಮನುಷ್ಯನ ಮುತ್ತಜ್ಜಿಯಾಗಿರಲು ಅರ್ಹಳಂತೆ. ಇಂದಿನ ಮುತ್ತಜ್ಜಿಯಲ್ಲ; ಕೋಟ್ಯಂತರ ವರ್ಷಗಳ ಹಿಂದಿನ ಮುತ್ತಜ್ಜಿ. ಇಂಥವಳ ಪರಿಚಯವನ್ನು ಅವರು ಹೀಗೆ ಕೊಡುತ್ತಾರೆ:—ನೈಸ್ ನಗರದಲ್ಲಿಯ ಸುಪ್ರಸಿದ್ಧ ಕುಟುಂಬಕ್ಕೆ ಸೇರಿದವಳೀಕೆ. ವಿಜ್ಞಾನಶಾಸ್ತ್ರಗಳಿಗೆ ತನ್ನಿಂದಾಗುವ ಲಾಭವೇನೆಂದು ಅವಳಿಗೆ ಗೊತ್ತಿದೆ; ಅವಳ ಬಂಧುಬಳಗಕ್ಕೆ ಗೊತ್ತಿದೆ; ಆದ್ದರಿಂದ ಅವಳ ಭಾವಚಿತ್ರವೊಂದನ್ನು ತೆಗೆಯಲು ಅವರೆಲ್ಲರೂ ಒಪ್ಪಿದ್ದಾರೆ. ಹೊರಗಿನಿಂದ ನೋಡುವಾಗ ಅವಳ ಆಕಾರದಲ್ಲಿ ವಿಶೇಷವೇನೂ ತೋರುವುದಿಲ್ಲ. ಆದರೆ ವಸ್ತ್ರಗಳನ್ನು ತೆಗೆದರೆ ಎದೆಯಿಂದ ಮೊಣಕಾಲಿನ ವರೆಗೆ ಮಂಗನ ಮೈಯಲ್ಲಿರುವಂತಹ ಉಣ್ಣೆಯನ್ನು ನೋಡಬಹುದು. ಇದರರ್ಥವೇನೆಂದರೆ ಈ ಹುಡುಗಿಗೆ, ಆಕೆಯ ಅತಿ ಪುರಾತನ ಪೂರ್ವಿಕರಾದ ಮಂಗಗಳ ಸ್ವಭಾವ ಬಂದಿದೆ. ಇದರಿಂದ ಡಾರ್ವಿನರ ವಿಕಾಸವಾದವು ಸರಿ. ಪ್ರಾಣಿಗಳು ಬುದ್ಧಿಶಕ್ತಿಯಲ್ಲಿ ಅಭಿವೃದ್ಧಿಹೊಂದಿ ಆಕಾರದಲ್ಲಿ ಸ್ವಲ್ಪ ವ್ಯತ್ಯಾಸಗೊಂಡು ಮನುಷ್ಯರೆನಿಸಿಕೊಂಡರು, ಎಂದು ಈ ಪಂಡಿತರು ಹೇಳುತ್ತಾರೆ. ಪ್ರಪಂಚದ ಪ್ರಾಣಿಶಾಸ್ತ್ರಜ್ಞರಲ್ಲಿ ನಿಪುಣರಾದವರು ಇವಳನ್ನು ಪರೀಕ್ಷೆಮಾಡಿ ಮಂಗನಿಗೂ ಮನುಷ್ಯರಿಗೂ ಇರುವ ಸಂಬಂಧವನ್ನು ಒಮ್ಮೆ ನಿಷ್ಕರ್ಷೆಮಾಡಿಬಿಡುವರಂತೆ!

ರಾ. ಬ.

ತುಮಕೂರು ಡಿಸ್ಟ್ರಿಕ್ಟು ಬೋರ್ಡು

ಪ್ರಕಟನೆ.

ತಾ|| 20-7-1932.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ತುಮಕೂರು ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದುಮಾಡಿರುವ ಸಂತೆಗಳಲ್ಲಿ ಹಿಂದೆ 20-8-1926 ನೆಯ ಮರ್ಕ್ಯುಂ, ಎಲ್ 1295 ಎಲ್. ಬಿ. 21-26-2 ನೆಯ ನಂಬರು ಗೌರ್ನಮೆಂಟು ಆರ್ಡರಿನಲ್ಲಿ ಮಂಜೂರುಮಾಡಿರುವ ದರಗಳಂತೆ ಸುಂಕವನ್ನು ವಸೂಲ್ಮಾಡುವಹಾಗೆ ಬೋರ್ಡಿನಲ್ಲಿ ತೀರ್ಮಾನಿಸಿರುತ್ತಾರೆ.

ಸದರಿ ಸಂತೆಗಳಲ್ಲಿ ಸುಂಕವನ್ನು ವಸೂಲ್ಮಾಡುವ ವಿಚಾರದಲ್ಲಿ ತಕರಾರುಗಳು ಏನಾದರೂ ಇದ್ದಪಕ್ಷದಲ್ಲಿ ಈ ಇಸ್ತಿಹಾರ್ನಾಮೆ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಅಂತಹ ತಕರಾರುಗಳನ್ನು ಲಿಖಿತಮೂಲಕ ತುಮಕೂರು ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರಿಗೆ ಬರೆದುಕೊಳ್ಳತಕ್ಕದಿರುತ್ತದೆ.

ಕಾಲಾತೀತವಾಗಿ ಬರುವ ತಕರಾರುಗಳಿಗೆ ಗಮನ ಕೊಡುವುದಿಲ್ಲ.

ತಾಲ್ಲೂಕು ಹೆಸರು.	ಸಂತೆ ನಡೆಯುವ ಸ್ಥಳ.
1. ಮಧುಗಿರಿ	(i) ಬಡವನಹಳ್ಳಿ
	(ii) ಕೊಡಿಗೇನಹಳ್ಳಿ
2. ಶಿರಾ	(i) ಪಟ್ಟನಾಯ್ಕನಹಳ್ಳಿ
	(ii) ಚಿಕ್ಕನಹಳ್ಳಿ
3. ಗುಬ್ಬಿ	(i) ಕಡಬ
	(ii) ದಂಡಿನಶಿವರ
4. ಕುಣಿಗಲು	(i) ಯಲಗಲವಾಡಿ
	(ii) ಹುಲಿಯೂರುದುರ್ಗ

ಡಿ. ಎಸ್. ಮಲ್ಲಪ್ಪ,
ಪ್ರೆಸಿಡೆಂಟ್ ಡಿಸ್ಟ್ರಿಕ್ಟು ಬೋರ್ಡು,
ತುಮಕೂರು ಡಿಸ್ಟ್ರಿಕ್ಟ್.

ಡೇವಿಡ್ಸನ್ ಕಮಿಟಿಯ ವರದಿ.

ಆರ್ಥಿಕ ವಿಷಯದಲ್ಲಿ ಭಾರತದೇಶೀಯ ಸಂಸ್ಥಾನಗಳಿಗೂ ಫೆಡರಲ್ ಪ್ರಭುತ್ವದವರಿಗೂ ಇರಬೇಕಾದ ಪರಸ್ಪರ ಸಂಬಂಧ ವಿಷಯವನ್ನು ವಿಚಾರಿಸಿ ತಕ್ಕ ಸೂಚನೆಗಳನ್ನು ಕೊಡಲು ನಿಯಮಿಸಲ್ಪಟ್ಟಿದ್ದ ರೌಂಡುಟೇಬಲ್ ಸಭೆಯ ಉಪಸಂಘದವರ ವರದಿಯು ಕಳೆದ ಗುರುವಾರ ಇಂಗ್ಲೆಂಡಿನಲ್ಲೂ ಇಂಡ್ಯಾದಲ್ಲೂ ಏಕಕಾಲದಲ್ಲಿ ಪ್ರಕಟಿಸಲ್ಪಟ್ಟಿತು. ಈ ಸಂಘದ ಅಧ್ಯಕ್ಷರಾದ ರೈಟ್ ಆನರಬಲ್ ಡೇವಿಡ್ಸನ್‌ರವರು ಮೆಂಬರುಗಳಾದ ಸರ್ ರೆಜಿನಾಲ್ಡ್ ಗ್ಲಾನ್ಸಿ, ಲಾರ್ಡ್ ಹೇಸ್ಟಿಂಗ್ಸ್ ಹಚಿಸನ್, ಸರ್ ಮಾಲಿಸುಗ್ವೈರ್, ಸರ್ ಚಾರ್ಲ್ಸ್ ಸ್ಟ್ಯೂಯರ್ಟ್ ವಿಲಿಯಂಸ್, ಜೆ. ರಮಾರ್ಜನ್‌ರವರು ವರದಿಗೆ ರುಜುವನ್ನು ಮಾಡಿರುತ್ತಾರೆ.

ವಿಚಾರಣಾಂಶಗಳು

ಆರ್ಥಿಕ ವಿಷಯದಲ್ಲಿ ಇಂಡ್ಯಾ ಪ್ರಭುತ್ವದವರಿಗೂ, ದೇಶೀಯ ಸಂಸ್ಥಾನಗಳಿಗೂ ಇರುವ ಪರಸ್ಪರ ಸಂಬಂಧವು ಫೆಡರಲ್ ನಿರ್ಮಾಣಕ್ಕೆ ಎಷ್ಟರಮಟ್ಟಿಗೆ ಅಡ್ಡಿಯಾಗಿರುವುದೆಂಬ ವಿಷಯವನ್ನು ಪರಿಶೀಲಿಸುವುದಕ್ಕಾಗಿ ಈ ವಿಚಾರಣ ಸಂಘವು ನಿಯಮಿಸಲ್ಪಟ್ಟಿರುವುದು. ಎಲ್ಲಾ ರಾಷ್ಟ್ರಗಳವರೂ ಒಂದೇ ಪದ್ಧತಿಯನ್ನು ಅನುಸರಿಸಿ ಫೆಡರಲ್ ಪ್ರಭುತ್ವದ ಆದಾಯಕ್ಕೆ ತಮ್ಮಾದಾಯದಲ್ಲಿ ಕೊಂಚ ಭಾಗವನ್ನು ಬಿಟ್ಟುಕೊಡಬೇಕೆಂದು ಪ್ರಧಾನ ಮಂತ್ರಿಗಳು ಸೂಚನೆಯನ್ನು ಕೊಟ್ಟಿದ್ದರು. ಆದರೆ ಭಾರತದೇಶದಲ್ಲಿ ಈ ಸಮಸ್ಯೆಯು ದೊಡ್ಡ ತೊಡಕಿನಿಂದ ಕೂಡಿರುತ್ತದೆ. ಕೆಲ ಸಂಸ್ಥಾನಗಳವರು ಇಂಡ್ಯಾಪ್ರಭುತ್ವದವರಿಗೆ ಗೊತ್ತಾದ ಮೊಬಲಗನ್ನು ಪ್ರತಿ ವರ್ಷದಲ್ಲೂ ಕಪ್ಪವಾಗಿ ಕೊಡುತ್ತಿರುವರು. ಫೆಡರಲ್ ಪ್ರಭುತ್ವಕ್ಕೆ ನ್ಯಾಯವಾಗಿ ಸೇರಬೇಕಾದ ಹಣವನ್ನು ಮತ್ತೆ ಕೆಲ ಸಂಸ್ಥಾನಗಳಿಗೆ ವಿಧಿಸಲ್ಪಟ್ಟಿಲ್ಲ. ಫೆಡರಲ್ ಪ್ರಭುತ್ವಪರಿಪಾಲನೆಗೊಳಪಟ್ಟಿರಬೇಕಾದ ಪೋಸ್ಟ್, ಟೆಲಿಗ್ರಾಫ್, ಕರೆನ್ಸಿ ಮೊದಲಾದ ವಿಷಯಗಳಲ್ಲಿ ಕೆಲ ಸಂಸ್ಥಾನಗಳಿಗೆ ಸ್ವತಂತ್ರವಾದ ಹಕ್ಕಿರುವುದು. ಕಪ್ಪವೂ, ವಿನಾಯಿತಿಯೂ, ಸ್ವತಂತ್ರ ಹಕ್ಕುಗಳೂ ಏರ್ಪಟ್ಟಿರುವ ವಿಧಾನವನ್ನು ಪರಿಶೀಲಿಸಿ ಇವನ್ನು ಸರಿಪಡಿಸಲು ಸಂಸ್ಥಾನಾಧಿಪತಿಗಳೊಡನೆ ರಾಯಬಾರವನ್ನು ನಡೆಸಬೇಕಾಗಿ ಬಂದಿತು. ಈ ಕಾರಣದಿಂದ ಈ ಕಮಿಟಿಯವರು ಭಾರತದೇಶದಲ್ಲಿ ಸಂಚರಿಸಿ ಹಳೇ ರಿಕಾರ್ಡುಗಳನ್ನು ಸಹ ಪರಿಶೀಲಿಸಬೇಕಾಯಿತು. ಕಮಿಟಿಯವರು 10 ಸಾವಿರ ಮೈಲು ತಿರುಗಿ 88 ಸಂಸ್ಥಾನಾಧೀಶರುಗಳೊಡನೆಯೂ ಅವರ ಮಂತ್ರಿಗಳೊಡನೆಯೂ ಸಂಭಾಷಣೆ ಮಾಡಿದರು. ಇಂಗ್ಲೆಂಡಿನೊಳಗೆ ಮೇ ತಿಂಗಳಲ್ಲಿ ಈ ವರದಿಯು ಬರೆಯಲ್ಪಟ್ಟಿತು.

ಸಂಸ್ಥಾನಾಧಿಪತಿಗಳಿಗೂ ಬ್ರಿಟಿಷ್ ಪ್ರಭುತ್ವದವರಿಗೂ ನಡೆದಿರುವ ಒಡಂಬಡಿಕೆಗಳು

ಸಂಸ್ಥಾನಾಧಿಪತಿಗಳಿಗೂ ಬ್ರಿಟಿಷ್ ಪ್ರಭುತ್ವದವರಿಗೂ ನಡೆದಿರುವ ಒಡಂಬಡಿಕೆಗಳ ವಿಷಯಕ್ಕೆ ಸಂಬಂಧಪಟ್ಟ ಚರಿತ್ರೆಯು ಈ ವರದಿಯ 2 ನೇ ಅಧ್ಯಾಯದಲ್ಲಿ ಬರೆಯಲ್ಪಟ್ಟಿದೆ. ಸಂಸ್ಥಾನಗಳಲ್ಲಿ ಅರಾಜಕವೂ ವಿರೋಧವೂ ಪ್ರಬಲವಾಗಿದ್ದ ಸಮಯದಲ್ಲಿ ಬ್ರಿಟಿಷ್ ಪ್ರಭುತ್ವದವರು ಎಚ್ಚರಿಕೆಯಿಂದಿದ್ದು ಶಾಂತಿಯನ್ನುಂಟುಮಾಡಿ ಪುನಃ ಕಲಹವುಂಟಾಗದಿರಲು ಕೆಲ ಕಟ್ಟುಪಾಡುಗಳನ್ನು ಮಾಡಿದರು. ಆದರೆ ಭಾರತ ದೇಶದಲ್ಲಿ ಫೆಡರೇಷನ್ನೇರ್ಪಡಬೇಕೆಂಬ ಅಭಿಪ್ರಾಯವು ಹುಟ್ಟುವುದಕ್ಕೆ ಮೊದಲೇ ಅನೇಕ ಸಂಸ್ಥಾನಗಳು ರೈಲ್ವೆ, ಕರೆನ್ಸಿ, ಪೋಸ್ಟು, ಟೆಲಿಗ್ರಾಫ್ ಮೊದಲಾದ ಶಾಖೆಗಳ ಆಡಳಿತವನ್ನು ಸಂಪೂರ್ಣವಾಗಿ ಇಂಡ್ಯಾ ಪ್ರಭುತ್ವದವರಿಗೆ ವಹಿಸಿಕೊಟ್ಟಿದ್ದರು. ಇಂಡ್ಯಾ ಪ್ರಭುತ್ವದವರ ಪರಿಪಾಲನಕ್ಕೊಳಪಟ್ಟ ಶಾಖೆಗಳು ಸಂಸ್ಥಾನಗಳಲ್ಲೂ ಇಂಡ್ಯಾಪ್ರಭುತ್ವೋದ್ಯೋಗಿಗಳಿಂದಲೇ ನಿರ್ವಹಿಸಲ್ಪಡುತ್ತಿವೆ. ಸುಂಕ ಉಪ್ಪು ಶಾಖೆಗಳು ಇಂಡ್ಯಾ ಪ್ರಭುತ್ವದವರ ಅಧಿಕಾರಕ್ಕೊಳಪಟ್ಟು ಯಾವ ವಿನಾಯಿತಿಯೂ ಇಲ್ಲದಿರುವುದರಿಂದ ಈ ವಿಷಯದಲ್ಲಿ ಪ್ರಭುತ್ವದವರ ವಿಧಾನವನ್ನು ವಿಮರ್ಶಿಸಲಿಕ್ಕಾಗಲಿ ಬದಲಾವಣೆ ಮಾಡಲಿಕ್ಕಾಗಲಿ ಸಂಸ್ಥಾನದವರಿಗೆ ಅವಕಾಶವಿಲ್ಲದ ಸ್ಥಿತಿಯುಳ್ಳದ್ದಾಗಿರುತ್ತದೆ. ಆದುದರಿಂದ ಈ ಬೊಕ್ಕಸವನ್ನು

ಹೊಣೆಮಾಡಿಸಿ ಕೇಂದ್ರ ಶಾಖೆಗಳ ಪರಿಪಾಲನ ವಿಧಾನವನ್ನು ನಿರ್ಣಯಿಸುವ ವಿಷಯದಲ್ಲಿ ಸಂಸ್ಥಾನಾಧಿಪತಿಗಳ ಪ್ರತಿನಿಧಿಗಳೊಡನೆ ಆಲೋಚಿಸುವುದು ಅವಶ್ಯಕವು

ಜಮಾಖರ್ಚು

ಎಲ್ಲಾ ಸಂಸ್ಥಾನಗಳಿಗೂ ಸಮಾನವಾಗಿ ಅನ್ವಯಿಸುವಂತಹ ಪದ್ಧತಿಯನ್ನು ಸೂಚಿಸುವುದು ಅಸಾಧ್ಯವೆಂದು ಕಮಿಟಿಯವರು ವಿಚಾರಣೆಯ ಆರಂಭದಲ್ಲೇ ತಿಳಿದುಕೊಂಡರು. ಒಂದೊಂದು ಸಂಸ್ಥಾನವನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಎಲ್ಲಾ ವಿಷಯಗಳನ್ನು ಪರಿಶೀಲಿಸಿ ಪ್ರತ್ಯೇಕ ಒಡಂಬಡಿಕೆಯನ್ನು ಮಾಡಿಕೊಳ್ಳುವುದು ಅವಶ್ಯಕವು. ಒಂದೊಂದು ಸಂಸ್ಥಾನವು ಈಗ ಸಲ್ಲಿಸುತ್ತಿರುವ ಕಪ್ಪವನ್ನು ಅದರ ಹೆಸರಿನಲ್ಲಿ ಜಮಾ ಕಟ್ಟಿಕೊಂಡು ಈಗ ಅನುಭವಿಸುತ್ತಿರುವ ಪ್ರತ್ಯೇಕ ಸೌಕರ್ಯಗಳಿಗೂ ಹಕ್ಕುಗಳಿಗೂ ಕೊಂಚ ಹಣವನ್ನು ಖರ್ಚು ಬರೆದು ಬಾಕೀ ಹಣವನ್ನುಳಿಸುವುದು ಅಗತ್ಯವು.

ಕಪ್ಪಗಳು

ಅನೇಕ ಸಂಸ್ಥಾನಗಳು ಕೇಂದ್ರಪ್ರಭುತ್ವಕ್ಕೆ ಕಪ್ಪಗಳನ್ನು ಕೊಡುತ್ತಿವೆ. ಸಾಮ್ರಾಜ್ಯ ಪ್ರಭುತ್ವಕ್ಕೆ ಅಧೀನರಾಷ್ಟ್ರಗಳು ಸಲ್ಲಿಸುವ ಹಣವು ಕಪ್ಪವೆಂದು ಕರೆಯಲ್ಪಡುತ್ತದೆ. ಆದುದರಿಂದ ಫೆಡರೇಷನು ಏರ್ಪಟ್ಟರೆ ಕಪ್ಪಕೊಡುವ ಪದ್ಧತಿಯು ತಪ್ಪಬೇಕೆಂದು ಫೆಡರಲ್ ಸ್ಟ್ರಕ್ಚರ್ ಕಮಿಟಿಯ ಆರ್ಥಿಕೋಪಸಂಘದವರು ಅಭಿಪ್ರಾಯಪಟ್ಟಿರುತ್ತಾರೆ. ಬ್ರಿಟಿಷ್ ಇಂಡ್ಯಾ ರಾಷ್ಟ್ರಗಳು ಫೆಡರಲ್ ಪ್ರಭುತ್ವದವರಿಗೆ ಕೊಡಬೇಕಾದ ಕಪ್ಪವನ್ನು ತಪ್ಪಿಸುವಾಗ್ಗೆ ಸಂಸ್ಥಾನಗಳು ಕೊಡಬೇಕಾಗಿರುವ ಕಪ್ಪವು ಕೂಡ ತಪ್ಪಿಸಲ್ಪಡಬೇಕೆಂದೂ, ಈಗ ರಾಷ್ಟ್ರಗಳು ಕೊಡುತ್ತಿರುವ ಕಪ್ಪವು ರಾಷ್ಟ್ರದ ಆದಾಯದಲ್ಲಿ 20 ಭಾಗದಷ್ಟಕ್ಕಿನ್ನ ಅಧಿಕವಾದ ಮೊತ್ತವು ತಕ್ಷಣವೇ ಕಡಿಮೆಮಾಡಲ್ಪಡಬೇಕೆಂದೂ ಈ ಉಪಸಂಘದವರು ಸೂಚಿಸಿರುತ್ತಾರೆ. ಆದರೆ ಈ ವಾದವನ್ನು ಈ ವಿಚಾರಣ ಸಂಘದವರು ಅಂಗೀಕರಿಸಿರುವುದಿಲ್ಲ. ಆದಾಗ್ಗೂ ಬ್ರಿಟಿಷ್ ಇಂಡ್ಯಾ ರಾಷ್ಟ್ರಗಳು ಸಲ್ಲಿಸುವ ಕಪ್ಪವು ತಪ್ಪಿಸಲ್ಪಟ್ಟಲ್ಲಿ ಸಂಸ್ಥಾನಗಳು ಸಲ್ಲಿಸಬೇಕಾಗಿರುವ ಕಪ್ಪವು ಕೂಡ ತಪ್ಪಿಸಲ್ಪಡಬೇಕಾದುದು ನ್ಯಾಯವೆಂದು ಇವರು ಅಂಗೀಕರಿಸಿರುವರು. ಸುಂಕಗಳ ಭಾರವು ಎಲ್ಲಾ ರಾಷ್ಟ್ರಗಳವರೂ ಸಮಾನವಾಗಿ ಹಂಚಲ್ಪಡಬೇಕೆಂಬ ಸೂಕ್ತಿಯನ್ನು ಅನುಸರಿಸಿ ಇವರು ಈ ಸೂಚನೆಯನ್ನು ಕೊಟ್ಟಿರುವರು. ಒಂದು ಸಂಸ್ಥಾನದ ಕಪ್ಪವು ಸಂಸ್ಥಾನದ ಒಟ್ಟು ಆದಾಯದಲ್ಲಿ 20 ರಷ್ಟಕ್ಕಿನ್ನ ಅಧಿಕವಾಗಿದ್ದರೆ ಆ ಹೆಚ್ಚು ಮೊಬಲಗು ಕೂಡಲೆ ತಪ್ಪಿಸಲ್ಪಡಬೇಕೆಂಬ ಸೂಚನೆಯನ್ನು ಇವರು ಅನುಮೋದಿಸುತ್ತಾರೆ. ಇಂತಹ ಕಪ್ಪಗಳಲ್ಲಿ (1) ಪ್ರತ್ಯೇಕ ಕಾರಣದಿಂದ ವಿಧಿಸಲ್ಪಟ್ಟ ಕಪ್ಪ (2) ಒಂದು ಸಂಸ್ಥಾನವು ಇನ್ನೊಂದು ಸಂಸ್ಥಾನಕ್ಕೆ ಕೊಡಬೇಕಾದ ಕಪ್ಪವನ್ನು ಪ್ರಭುತ್ವಕ್ಕೆ ಅವಾಲ್ತೆಮಾಡಿ ಸಲ್ಲಿಸುತ್ತಿರುವ ಕಪ್ಪ ಹೋಗಲಾಗಿ ಉಳಿದ ಕಪ್ಪವನ್ನು ಕ್ರಮೇಣ ತಪ್ಪಿಸಲ್ಪಡಬೇಕೆಂದು ಇವರು ಸೂಚಿಸಿರುತ್ತಾರೆ. ಎರಡನೇ ತರಗತಿಗೆ ಸೇರಿದ ಕಪ್ಪದಲ್ಲಿ ಕೇಂದ್ರ ಪ್ರಭುತ್ವದವರು ಈ ಕಪ್ಪವನ್ನು ಬಿಟ್ಟುಕೊಡಬೇಕೆಂದೂ, ಮೊದಲು ಯಾವ ಸಂಸ್ಥಾನಕ್ಕೆ ಈ ಕಪ್ಪವು ಸಲ್ಲಿಸಲ್ಪಡುತ್ತಿದ್ದಿತೋ ಈಗಲು ಕೂಡ ಆ ಸಂಸ್ಥಾನಕ್ಕೇ ಈ ಕಪ್ಪವು ಕೊಡಲ್ಪಡಬೇಕೆಂದೂ ಸೂಚಿಸಲ್ಪಟ್ಟಿದೆ. ಆದರೂ ಕಪ್ಪವನ್ನು ಸಲ್ಲಿಸುವ ಪದ್ಧತಿಯು ಸಮಾನವಾದ ಹಕ್ಕುಗಳನ್ನುಳ್ಳ ಫೆಡರೇಷನ್ನಲ್ಲಿರತಕ್ಕ ಕಾರಣವಿಲ್ಲ. ಆದುದರಿಂದ ಕ್ರಮೇಣ 20 ವರ್ಷಗಳೊಳಗೆ ಎಲ್ಲ ಕಪ್ಪಗಳೂ ತಪ್ಪಿಸಲ್ಪಡುವ ಏರ್ಪಾಟುಮಾಡುವುದುಚಿತವು. ಸಂಸ್ಥಾನದ ಆದಾಯದಲ್ಲಿ 20 ರಷ್ಟಕ್ಕಿನ್ನ ಹೆಚ್ಚು ಭಾಗವು ಸಲ್ಲುತ್ತಿದ್ದಲ್ಲಿ ಕಪ್ಪವು ತಪ್ಪಿಸಲ್ಪಟ್ಟು ಸಂವತ್ಸರಕ್ಕೆ 11 ಲಕ್ಷ ರೂಪಾಯಿಗಳು ಕೊಡಲ್ಪಡಬಹುದು. ಕಪ್ಪವು ಸಂಪೂರ್ಣವಾಗಿ ತಪ್ಪಿಸಲ್ಪಟ್ಟಲ್ಲಿ 69 ಲಕ್ಷ ರೂಪಾಯಿಗಳನ್ನು ಬಿಟ್ಟುಕೊಡಬೇಕಾಗುತ್ತದೆ. ಈ ಕಪ್ಪಗಳು ಸಾಮ್ರಾಜ್ಯಾಧಿಕಾರಕ್ಕೆ ಕೊಡಲ್ಪಡುತ್ತಿವೆ. ಅಷ್ಟುಮಾತ್ರಕ್ಕೇ ಈ ಮೊಬಲಗು ಫೆಡರಲ್ ಪ್ರಭುತ್ವದವರಿಗೆ ಸೇರಬೇಕೆಂದು ಹೇಳಲು ನ್ಯಾಯವಿಲ್ಲ. ಆದಾಗ್ಗೂ ಸಾಮ್ರಾಜ್ಯಾಧಿಕಾರಿಗಳು ಈ ಮೊಬಲಗುಗಳನ್ನು ಫೆಡರಲ್ ಪ್ರಭುತ್ವದವರ ವಶಕ್ಕೆ ವಹಿಸಿಕೊಡುವರೆಂದೂ ಈ ಏರ್ಪಾಟಿಗೆ ಸಂಸ್ಥಾನಾಧಿಪತಿಗಳು ಆಕ್ಷೇಪಿಸುವುದು ಉಚಿತವಲ್ಲವೆಂದೂ ವಿಚಾರಣ ಸಂಘದವರು ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

ದತ್ತಮಂಡಲ

ಸಂಸ್ಥಾನಗಳ ಸಂರಕ್ಷಣೆಗಾಗಿ ಸೇನೆಯನ್ನೇರ್ಪಡಿಸಿ, ಸಂಸ್ಥಾನದಲ್ಲಿ ಆ ಸೇನೆಯನ್ನಿರಿಸುವುದಕ್ಕಾಗಿ ಕೆಲ ಸಂಸ್ಥಾನಾಧಿಪತಿಗಳು ತಮ್ಮ ರಾಜ್ಯದಲ್ಲಿ ಕೆಲಭಾಗವನ್ನು ಪ್ರಭುತ್ವದವರಿಗೆ ಕೊಟ್ಟು ಒಡಂಬಡಿಕೆಯನ್ನು ಮಾಡಿಕೊಂಡಿರುವರು. ಹೈದರಾಬಾದು, ಬರೋಡ, ಗ್ವಾಲಿಯರು, ಇಂದೋರು, ಸಾಂಗ್ಲಿ ಸಂಸ್ಥಾನಗಳಿಗೂ, ಈಸ್ಟ್ ಇಂಡ್ಯಾ ಕಂಪೆನಿಗಳಿಗೂ ಇಂತಹ ಒಡಂಬಡಿಕೆಗಳಾಗಿರುತ್ತವೆ. ಫೆಡರೇಷನ್ನೇರ್ಪಟ್ಟಾಗ ಈ ಒಡಂಬಡಿಕೆಯನ್ನು ರದ್ದುಮಾಡಿ ಪ್ರದೇಶವನ್ನು ಬಿಟ್ಟುಕೊಟ್ಟಿರುವುದಕ್ಕಾಗಿ ಆಯಾ ರಾಷ್ಟ್ರಗಳಿಗೆ ಕೊಂಚ ಮೊಬಲಗನ್ನು ಕೊಡಬೇಕೆಂದು ಈ ಸಂಘದವರು ಸೂಚಿಸುತ್ತಾರೆ. ಏಕೆಂದರೆ, ಕೆಲ ಸಂಸ್ಥಾನಗಳು ಕಪ್ಪಕ್ಕೆ ಬದಲಾಗಿ ಕೊಂಚ ಪ್ರದೇಶವನ್ನು ಬಿಟ್ಟುಕೊಟ್ಟಿರುತ್ತವೆ. ಕಪ್ಪವು ರದ್ದಾಗುವಾಗ್ಗೆ ಈ ತರಗತಿಗೆ ಸೇರಿದ ಸಂಸ್ಥಾನಗಳಿಗೆ ಕೊಂಚ ಪರಿಹಾರವನ್ನು ಕೊಡುವುದು ಅವಶ್ಯಕವು. ಒಡಂಬಡಿಕೆಯಾದ ವೇಳೆಯಲ್ಲಿ ಪ್ರಭುತ್ವದವರಿಗೆ ವಹಿಸಿಕೊಡಲ್ಪಟ್ಟ ಪ್ರದೇಶದಿಂದ ಬರುತ್ತಿದ್ದ ವರ್ಷದ ಆದಾಯವನ್ನು ಆಧಾರವಾಗಿಟ್ಟುಕೊಂಡು ಕೆಳಗೆ ಸೂಚಿಸಿರುವ ಮೊಬಲಗು ಪರಿಹಾರವಾಗಿರಬೇಕೆಂದು ವಿಚಾರಣ ಸಂಘದವರು ನಿರ್ಣಯಿಸಿರುವರು.

ಬರೋಡಾ—	22 ಲಕ್ಷದ	98 ಸಾವಿರ	ರೂಪಾಯಿ.	
ಗ್ವಾಲಿಯರು—	11 ,,	78 ,,	,,	
ಇಂದೂರು—	1 ,,	11 ,,	,,	
ಸಾಂಗ್ಲಿ—	1 ,,	10 ,,	,,	

ಇನ್ನು ಮೇಲೆ ಸಹ ಸೈನ್ಯ ಸಂರಕ್ಷಣೆಯ ಬಾಧ್ಯತೆಯನ್ನು ಕೇಂದ್ರ ಪ್ರಭುತ್ವದವರೇ ವಹಿಸಬೇಕೆಂದು ಹೈದರಾಬಾದು ಸಂಸ್ಥಾನದವರು ಕೋರಿರುವುದರಿಂದ ಈ ಸಂಸ್ಥಾನಕ್ಕೆ ಪರಿಹಾರದ ಮೊಬಲಗೆಷ್ಟೆಂಬುದನ್ನು ಸೂಚಿಸಿಲ್ಲ.

ಇತರ ವಿಧವಾದ ಪರಿಹಾರ

ಇತರ ವಿಧವಾದ ಪರಿಹಾರಗಳನ್ನು ಕೆಲ ಸಂಸ್ಥಾನಾಧಿಪತಿಗಳು ಕೋರಿರುವರು. ಕೆಲ ಸಂಸ್ಥಾನಗಳಲ್ಲಿ ಒಳ್ಳೇ ಸೇನೆಯಿರುವುದು. ಸಂಸ್ಥಾನರಕ್ಷಣೆಗಾಗಿಯೂ, ಅವಶ್ಯವಾದಲ್ಲಿ ಕೇಂದ್ರಪ್ರಭುತ್ವದವರಿಗೆ ಸಹಾಯಮಾಡಲಿಕ್ಕಾಗಿಯೂ ಈ ಸೇನೆಯುಪಯೋಗಿಸಲ್ಪಡುತ್ತದೆ. ಆದರೆ ಸೇನೆಗಾಗಿ ಕೊಂಚ ಮೊಬಲಗನ್ನು ಕೊಡಲು ಅವಕಾಶವಿಲ್ಲ. ಫೆಡರೇಷನ್ನು ಏರ್ಪಟ್ಟನಂತರ ಈ ವಿಷಯವನ್ನು ಕುರಿತು ಆಲೋಚಿಸಬಹುದು.

ರೈಲ್ವೆ ಮತ್ತು ಸೈನ್ಯ ಶಾಖೆಗಳ ಉಪಯೋಗಾರ್ಥವಾಗಿ ಕೊಡಲ್ಪಟ್ಟಿರುವ ಭೂಮಿಗಾಗಿ ಪರಿಹಾರವು ಕೋರಲ್ಪಟ್ಟಿದೆ. ಈ ವಿಷಯದಲ್ಲಿ ಸಂಸ್ಥಾನಗಳವರ ಕೋರಿಕೆಯನ್ನು ಅಂಗೀಕರಿಸುವುದು ಅಗತ್ಯವಾಗಿದೆ. ಈ ಪ್ರದೇಶಗಳ ಮೇಲೆ ಸಂಸ್ಥಾನಗಳವರು ಮುನಿಸಿಪಲ್ ಕಂದಾಯವನ್ನು ವಿಧಿಸಬಹುದೆಂದೂ, ಸಂಸ್ಥಾನಗಳಲ್ಲಿ ರೈಲ್ವೆ ಕೆಲಸ ಮಾಡುತ್ತಿರುವವರಿಂದ ಆದಾಯತೆರಿಗೆಯನ್ನು ವಸೂಲ್ಮಾಡಬಹುದೆಂದೂ ಕಮಿಟಿಯವರು ಸೂಚಿಸಿರುತ್ತಾರೆ. ಸಂಸ್ಥಾನಗಳಲ್ಲಿ ಹೆಂಡ ಅಫೀಮು ಮೊದಲಾದ ನಿಷಾಪದಾರ್ಥಗಳ ಮೇಲೆ ವಿಧಿಸಲ್ಪಡುವ ಎಕ್ಸೈಜು ಕಂದಾಯದಿಂದ ಬರುವ ಆದಾಯವು ಸಂಸ್ಥಾನಗಳ ಉಪಯೋಗಾರ್ಥವಾಗಿಯೇ ವ್ಯಯಮಾಡಬಹುದೆಂಬ ಸೂತ್ರವನ್ನು ಅಂಗೀಕರಿಸುವುದು ಅವಶ್ಯಕವು.

ಉಪ್ಪಿನ ತೆರಿಗೆ

ಭಾರತ ದೇಶದಲ್ಲಿ ಉಪ್ಪು ಬಹಳವಾಗಿ ಉತ್ಪನ್ನವಾಗುತ್ತದೆ. ಈ ಉಪ್ಪಿನಿಂದ ಪ್ರಭುತ್ವದವರಿಗೆ ವಿಶೇಷ ಆದಾಯಬರುತ್ತಿರುವುದು. ಫೆಡರಲ್ ಪ್ರಭುತ್ವವೇರ್ಪಟ್ಟಲ್ಲಿ ವರ್ಷಕ್ಕೆ ಒಂದು ಉಪ್ಪಿನ ಮೂಲಕವೇ 6,80,00,000 ರೂಪಾಯಿಗಳ ಆದಾಯ ಬರುವುದು. ಅಂದರೆ ಒಟ್ಟು ಆದಾಯದಲ್ಲಿ ನೂರಕ್ಕೆ 6½ ಪ್ರಕಾರ ಉಪ್ಪಿನಿಂದುತ್ಪನ್ನವಾಗುವುದು. ಕಾಥೆವಾಡ ಮತ್ತು ಕಚ್ಛ ಪ್ರದೇಶಗಳ ವಿನಾ ಉಳಿದ ಭಾರತದೇಶದಲ್ಲೆಲ್ಲ ಉಪ್ಪನ್ನು ತಯಾರಿಸುವ ಅಧಿಕಾರವು ಪ್ರಭುತ್ವದವರಿಗೇ ಇರುವುದು. 60 ವರ್ಷಗಳ ಹಿಂದೆ ಬೇರೆ ಬೇರೆ ಸಂಸ್ಥಾನಗಳೊಡನೆ ಒಡಂಬಡಿಕೆ ಮಾಡಿಕೊಂಡು ಇಂಡ್ಯಾ ಪ್ರಭುತ್ವದವರು ಈ ಹಕ್ಕನ್ನು ಪಡೆದುಕೊಂಡಿರುವರು. ಈ ಒಡಂಬಡಿಕೆಯಲ್ಲಿ ಈಗ ಯಾವ ವ್ಯತ್ಯಾಸವೂ ಆಗಕೂಡದೆಂದು ಸೂಚಿಸಿರುವರು. ವಿದೇಶಗಳಿಂದ ಈಗಲೂ ವರ್ಷಕ್ಕೆ 4,50,000 ಟನ್ನು ಉಪ್ಪು ಬರುತ್ತಿದೆ. ಇದನ್ನು ಕಡಿಮೆ ಮಾಡಲೂ, ಪ್ರಭುತ್ವದವರು ಅನುಭವಿಸುತ್ತಿರುವ ಹಕ್ಕಿಗಾಗಿ ಸಂಸ್ಥಾನಗಳಿಗೆ ಕೊಡುತ್ತಿರುವ ಪರಿಹಾರವನ್ನು ತಗ್ಗಿಸಲೂ ಫೆಡರಲ್ ಪ್ರಭುತ್ವದವರು ಕ್ರಮೇಣ ಪ್ರಯತ್ನಿಸಬಹುದು. ಆದರೆ ಕಥೆವಾಡ ಕಚ್ಛ ಪ್ರದೇಶಗಳಲ್ಲಿ ಮಾತ್ರ ಉಪ್ಪು ಉತ್ಪತ್ತಿಯನ್ನು ಹೆಚ್ಚಿಸಿ ಫೆಡರಲ್ ಪ್ರಭುತ್ವದವರೇ ಉಪ್ಪು ತೆರಿಗೆಯನ್ನು ವಸೂಲ್ಮಾಡಲು ತಕ್ಕ ಒಡಂಬಡಿಕೆಯನ್ನು ಮಾಡಿಕೊಳ್ಳುವುದು ಅಗತ್ಯವು.

ಉಪ್ಪು ತೆರಿಗೆಯಿಂದ ನ್ಯಾಯವಾಗಿ ಬರಬೇಕಾದ ಮೊಬಲಗಿನಲ್ಲಿ ಸಂಸ್ಥಾನಾಧಿಪತಿಗಳೊಡನೆ ಮಾಡಿಕೊಂಡಿರುವ ಒಡಂಬಡಿಕೆಯ ಪ್ರಕಾರ 46,06,057 ರೂಪಾಯಿಗಳನ್ನು ಪ್ರಭುತ್ವದವರಿಗೆ ಕೊಡುತ್ತಿಲ್ಲ. ಕಥೆವಾಡ ಕಚ್ಛ ಪ್ರದೇಶಗಳಲ್ಲಿ ಫೆಡರಲ್ ಪ್ರಭುತ್ವದವರು ಉಪ್ಪು ಸುಂಕವನ್ನು ವಸೂಲ್ಮಾಡಿದರೆ ಮೇಲ್ಕಂಡ ಮೊಬಲಗಿನಲ್ಲಿ 10,20,000 ರೂ. ಕಡಿಮೆಯಾಗುವುದು.

ರೇವೆಗಳು—ಸುಂಕಗಳು

ಸಂಸ್ಥಾನಗಳಿಗೆ ಬೇರೆ ಬೇರೆ ರೇವೆಗಳಲ್ಲಿರುವ ಹಕ್ಕಿನಿಂದ ಸಂಸ್ಥಾನ ನಿರ್ಮಾಣವನ್ನು ಸಮನ್ವಯ ಮಾಡುವುದು ಬಹಳ ಕಷ್ಟ ವಿಷಯವಾಗಿದೆ. 1930-31 ರಲ್ಲಿ 36,182 ಲಕ್ಷ ರೂಪಾಯಿಗಳ ಬೆಲೆಯ ಸರಕುಗಳು ಭಾರತ ದೇಶಕ್ಕೆ ಬಂದಿರುತ್ತವೆ. ಈ ಹಣದಲ್ಲಿ ಸಂಸ್ಥಾನಗಳಿಗೆ ಸೇರಿದ ರೇವೆಗಳಲ್ಲಿ ಬಂದಿಳಿದ ಸರಕುಗಳ ಬೆಲೆಯು 1550 ಲಕ್ಷ ರೂ. ಆಗುವುದು. ಈ ವರ್ಷದಲ್ಲಿ ಸಂಸ್ಥಾನಗಳು 280 ಲಕ್ಷದ 78 ಸಾವಿರ ರೂಪಾಯಿಗಳ ಸುಂಕವನ್ನು ವಸೂಲ್ಮಾಡಿರುತ್ತವೆ, ಆದರೆ ಕಥೆವಾಡ ದೇಶದ ಸಮಾಪದಲ್ಲಿ ಬ್ರಿಟಿಷ್ ಪ್ರಭುತ್ವದವರು ತಡೆಯನ್ನೇರ್ಪಡಿಸಿರುವುದರಿಂದ ಮೇಲ್ಕಂಡ ಮೊಬಲಗಿನಲ್ಲಿ 122 ಲಕ್ಷದ 65 ಸಾವಿರ ರೂ. ಬ್ರಿಟಿಷ್ ಪ್ರಭುತ್ವದವರಿಗೆ ಲಭ್ಯವಾಗಿರುತ್ತದೆ. ಆದುದರಿಂದ ಒಟ್ಟಿನಲ್ಲಿ ಸುಂಕದಿಂದ ಬಂದ ಆದಾಯದಲ್ಲಿ 100 ಕ್ಕೆ 4 ರಂತೆ ಮಾತ್ರ ಸಂಸ್ಥಾನಗಳಿಗೆ ಸೇರಿರುವುದು. ಆದರೆ ಆ ಮೊಬಲಗಿನಲ್ಲಿ ಕಾಶ್ಮೀರ ಮೊದಲಾದ ರಾಷ್ಟ್ರಗಳಿಗೆ ಕಲ್ಪಿಸಲ್ಪಟ್ಟಿರುವ ಪ್ರತ್ಯೇಕ ಸೌಕರ್ಯಗಳ ಲೆಕ್ಕವು ಸೇರಿಸಲ್ಪಟ್ಟಿಲ್ಲ. ಒಟ್ಟಿನಮೇಲೆ ಸುಂಕದಿಂದ ನ್ಯಾಯವಾಗಿ ಪ್ರಭುತ್ವದವರಿಗೆ ಬರಬೇಕಾದ ಆದಾಯದಲ್ಲಿ ಸಂಸ್ಥಾನಗಳು 184 ಲಕ್ಷದ 42 ಸಾವಿರ ರೂ. ಗಳನ್ನು ಸಲ್ಲಿಸಲಿಲ್ಲ. ಸುಂಕವನ್ನು ವಸೂಲ್ಮಾಡುವ ಹಕ್ಕುಗಳನ್ನು ಬಿಟ್ಟುಕೊಡುವುದಕ್ಕಾಗಿ ಸಂಸ್ಥಾನಗಳಿಗೆ ಫೆಡರಲ್ ಪ್ರಭುತ್ವದವರು ಎಷ್ಟು ಹಣವನ್ನು ಪರಿಹಾರವಾಗಿ ಕೊಡಬೇಕೆಂಬುದನ್ನು ನಿರ್ಣಯಿಸುವುದು ಬಹಳ ಕಷ್ಟಕಾರ್ಯವು. ಆದಾಗ್ಗೂ, ಕೊಚ್ಚಿನ್ ರೇವೆಯ ವಿಷಯದಲ್ಲಿ ಪ್ರಭುತ್ವದವರು ತಿರುವಾಂಕೂರು ಕೊಚ್ಚಿನ್ನು ಸಂಸ್ಥಾನಗಳೊಡನೆ ಕೂಡಲೆ ರಾಯಬಾರವನ್ನು ನಡೆಸುವುದು ಅಗತ್ಯವೆಂಬುದು ಕಮಿಟಿಯವರ ಅಭಿಪ್ರಾಯವಾಗಿದೆ. ಬೊಂಬಾಯಿ ಕೊಲಂಬೊ ರೇವೆಗಳ ಮಧ್ಯೆ ಕೊಚ್ಚಿನ್ ರೇವೆಯೇ ದೊಡ್ಡದು. ಇಲ್ಲಿ ದೊಡ್ಡ ಸ್ಟೀಮರುಗಳು ಬರಲು ಅವಕಾಶವಿರುತ್ತದೆ. ಆದುದರಿಂದ ಈ ರೇವೆಯ ಮೇಲೆ ಎರಡು ಸಂಸ್ಥಾನಗಳಿಗಿರುವ ಹಕ್ಕನ್ನು ಕೇಂದ್ರಪ್ರಭುತ್ವದವರು ಕೊಂಡುಕೊಳ್ಳಬೇಕು, ಆದರೆ ಇತರ ರೇವೆಗಳ ವಿಷಯವು ಈರೀತಿಯಾಗಿರುವುದಿಲ್ಲ. ಫೆಡರಲ್ ಪ್ರಭುತ್ವಕ್ಕೆ ಸೇರಿದ ರಾಷ್ಟ್ರಗಳು ಸುಂಕವನ್ನು ವಸೂಲ್ಮಾಡುವುದು ವಿರುದ್ಧ ಪದ್ಧತಿಯಾಗಿರುವುದಾದರೂ, ಈ ಹಕ್ಕನ್ನು ಬಿಟ್ಟುಕೊಡಲು ಫೆಡರಲ್ ರಾಷ್ಟ್ರಗಳಿಗಿಷ್ಟವಿಲ್ಲದಿರುವುದರಿಂದ ಯಾವುದಾದರೊಂದು ವಿಧದಲ್ಲಿ ರಾಜಿಮಾಡಿಕೊಳ್ಳುವುದು ಒಳ್ಳೇದು. ಇವರುಗಳ ಕಡೆಗಟ್ಟಿನಂತೆ ಫೆಡರಲ್ ಪ್ರಭುತ್ವದವರು ಪ್ರತ್ಯೇಕವಾಗಿ ಒಂದು ತಡೆಯನ್ನು ಕಲ್ಪಿಸಿ ಸುಂಕವನ್ನು ವಸೂಲ್ಮಾಡುವಲ್ಲಿ ಇವರುಗಳು ಯಾವ ಪ್ರತಿಬಂಧವನ್ನೂ ಮಾಡಲಾರರು. ಆದುದರಿಂದ ಫೆಡರಲ್ ಪ್ರಭುತ್ವಾಧಿಕಾರಕ್ಕೆ ಭಂಗಬಾರದ ವಿಧಾನವನ್ನು ಸುಂಕದಿಂದ ಸಂಸ್ಥಾನಗಳಿಗೆ ಉಂಟಾಗುವ ಆದಾಯಕ್ಕೆ ಅಪೋಹಬರುವ ವಿಷಯದಲ್ಲಿ ರಾಜೀಮಾಡಿಕೊಳ್ಳುವುದು ಅಗತ್ಯವು.

ಸಶೇಷ.

ಪ್ರಕೃತಿಸಿದ್ಧವಾದ ಆಹಾರ.

ವಾತ ಪಿತ್ತ ಶ್ಲೇಷ್ಮ ವಿಕಾರದಿಂದಲೇ ರೋಗೋತ್ಪತ್ತಿಯಾಗುವುದೆಂದು ನಮ್ಮ ಆಯುರ್ವೇದಗಳು ಹೇಳುತ್ತಿವೆ. ಈ ತ್ರಿದೋಷಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಪ್ರಕೃತ್ಯಾಹಾರ ವಿನಾ ಮತ್ತಾವುದಕ್ಕೂ ಸಾಧ್ಯವಿಲ್ಲ. ಬೇಯಿಸಲ್ಪಟ್ಟ ಆಹಾರದಿಂದಲೇ ಶ್ಲೇಷ್ಮವು ಹುಟ್ಟುವದೆಂಬುದು ನಿರ್ವಿವಾದಾಂಶವು. ಸ್ವಾಭಾವಿಕಾಹಾರವನ್ನು ತಿನ್ನುತ್ತಿರುವ ಮಧ್ಯೆ ಒಂದು ದಿವಸ ಮಾನೂಲು ಅನ್ನವನ್ನು ತಿಂದರೆ ಮಾರನೆಯ ದಿವಸ ಶರೀರವೂ, ಮುಖವೂ ಊದಿಕೊಂಡು ನಂಜುಮುಖದಂತೆ ಆಗುವುದು. ಬೇಯಿಸಿದ ಅನ್ನ ಮೊದಲಾದವು ಶರೀರದಲ್ಲಿರುವ ಟಿಸ್ಯುಗಳಲ್ಲಿ ಶ್ಲೇಷ್ಮವಾಗಿಯೂ, ಕೊಬ್ಬಾಗಿಯೂ ಏರ್ಪಡುವುವು. ಕೃತ್ರಿಮವೂ, ಅನಾರೋಗ್ಯವೂ ಆದ ಅಲಂಕಾರವನ್ನು ನಾವು ನೋಡಿ ನನ್ನು ಬಲವು ಆರೋಗ್ಯವೆಂದು ತಿಳಿದುಕೊಳ್ಳುವೆವು. ಈ ಕಾಲದಲ್ಲಿ ಆರೋಗ್ಯವಾದ ಶರೀರಸ್ವರೂಪವು ಗಗನಕುಸುಮದಂತೆ ಅಲಭ್ಯವು. ಈ ಕಾರಣದಿಂದ ಪ್ರಕೃತ್ಯಾಹಾರವನ್ನು ನೋಡಿ ಎಲ್ಲರೂ ಹಾಸ್ಯಮಾಡುವುದೂ ಮೂತಿಮುರಿಕೆಸುವುದೂ ತಪ್ಪಿಹೋಗುವುದು.

ಸ್ವಾಭಾವಿಕ ಆಹಾರವನ್ನು ತೆಗೆದುಕೊಂಡರೆ ಅನ್ನವನ್ನು ತಿಂದಂತಾಗುವುದೇ ಎಂದು ಕೇಳುವರು. ಮೊದಲು ಹಾಗಿರದೆ ಅನಂತರ ಕ್ರಮ ಕ್ರಮವಾಗಿ ತೃಪ್ತಿಯುಂಟಾಗುವುದು. ಈ ಆಹಾರವನ್ನು ಅಡಿಗೆ ಮಾಡಲು ಸ್ವಲ್ಪ ಕಾಲ ಹಿಡಿಯುವುದು. ಅಷ್ಟರೊಳಗೆ ಶರೀರವು ಕೃಶವಾಗಲುಪಕ್ರಮಿಸುವುದು. ಕೆಲರಲ್ಲಿ ವಿಪರೀತವಾದ ಉಷ್ಣಾಧಿಕ್ಯವು ಕಂಡುಬರುವುದು. ಅಜೀರ್ಣವು, ವಾಂತಿ ಮೊದಲಾದವು ಉಂಟಾಗುವುವು. ಇವುಗಳಿಗೆ ಪ್ರಕೃತಿ ಚಿಕಿತ್ಸೆಯ ಪದ್ಧತಿಯಿಂದಲೇ ಉಪಶಮನಮಾಡಬೇಕು. ಹಾಗೆ ಮಾಡುವಾಗ್ಗೆ ಸ್ವಲ್ಪ ವಿವೇಕದಿಂದ ಆಹಾರವನ್ನು ತೆಗೆದುಕೊಳ್ಳಬೇಕು. ವಿಷವು ಸಾಧಾರಣವಾದ ಆಹಾರದಂತೆ ತೆಗೆದುಕೊಳ್ಳುವುದು ಶ್ರೇಯಸ್ಕರವಲ್ಲ. ಕ್ರಮೇಣ ಶರೀರಬಾಧೆಯು ನಿವಾರಣೆಯಾಗುವುದು. ಆಹಾರದ ಮೇಲೆ ಇಚ್ಛೆಯಾಗುವುದು. ಹಸಿವು ಉಂಟಾಗುವುದು. ಬಲವು ಬರುವುದು. ಶರೀರವು ಹಗುರವಾಗಿಯೂ ಚುರುಕಾಗಿಯೂ ಆಗುವುದು. ಅನ್ನ ತಿನ್ನುವಾಗಿರುವ ಆಯಾಸವು ಈ ಆಹಾರವನ್ನು ತಿನ್ನುವಾಗ್ಗೆ ಇರುವುದಿಲ್ಲ. ಮಧ್ಯೆ ಮಧ್ಯೆ ಹಸಿವು ತೋರಿ ತಿನ್ನಲಿಚ್ಛೆಯಾದರೆ ಹಗುರವಾದ ರಸಫಲಗಳನ್ನು ತಿನ್ನಬಹುದು. ಮಾಮೂಲಿನಂತೆ ಕೆಲಸಮಾಡಲು ಶಕ್ತಿಯಿರುವುದೇ? ಇದಕ್ಕೆ ಉತ್ತರ:—

ಕಂಡಗಳಿಗಿರುವ ಶಕ್ತಿಯು ಅವರ ಅಭ್ಯಾಸ ಮತ್ತು ಸಾಧನವನ್ನು ಸರಿಸಿರುತ್ತದೆ. ಕೆಲಸಮಾಡುವವನಿಗೆ ಅವನ ಕೆಲಸಕ್ಕೆ ತಕ್ಕ ಕಂಡಪುಷ್ಟಿಯಾಗಿರುವುದು. ಆದುದರಿಂದ ಶಕ್ತಿಲೋಪವೇನೂ ಇರುವುದಿಲ್ಲ. ತಾಳ್ಮೆಯೂ, ಲವಲವಿಕೆಯೂ ಹೆಚ್ಚುವುವು. ಆಲಸಿಕೆಯು ಕಡಿಮೆಯಾಗುವುದು. ಈ ಪರಿವರ್ತನವಾಗಲು ತಕ್ಕ ಅವಕಾಶವನ್ನು ಕೊಡಬೇಕು. ತೊಂದರೆ ಪಡಬಾರದು. ಪುಂಸತ್ವವು ಎಂತಿರುವುದೆ? ಇದು ಎಲ್ಲಕ್ಕಿಂತಲೂ ದೊಡ್ಡ ಪ್ರಶ್ನೆಯು. ಕೆಲ ವಿದ್ಯಾರ್ಥಿಗಳು ಈ ಆಹಾರವನ್ನು ತೆಗೆದುಕೊಳ್ಳಬೇಕೆಂದಿಷ್ಟಪಟ್ಟು ಆಂಗ್ಲವೈದ್ಯರ ಸಲಹೆಯನ್ನು ಕೇಳಿದರು. ಇದರಿಂದ ಇಂದ್ರಿಯಪುಷ್ಟಿಯು ಹೋಗುತ್ತದೆಂದು ಅವರು ವಿದ್ಯಾರ್ಥಿಗಳನ್ನು ಹೆದರಿಸಿದರು. ಇಂತಹ ಸಲಹೆಯನ್ನು ಕೊಡಲು ಅವರಿಗೆ ಯಾವ ಆಧಾರವಿದ್ದಿತೋ ತಿಳಿಯಲಿಲ್ಲ. ಶರೀರವನ್ನು ಆಹಾರಶಾಸ್ತ್ರವನ್ನನುಸರಿಸಿ ಪರಿಶೀಲಿಸಿದವರ ಅಭಿಪ್ರಾಯವು ನಿರಾಧಾರವೆಂದು ತೋರುತ್ತದೆ. ಮೇಲೆ ವಿವರಿಸಿದ ಸಂಗತಿಗಳಿಂದ ಪ್ರಕೃತಿಸಿದ್ಧವಾದ ಆಹಾರವು ಎಲ್ಲಾ ವಿಧದಲ್ಲೂ ಆರೋಗ್ಯದಾಯಕವೆಂದೂ, ರಕ್ತಶುದ್ಧಿ ಮಾಡುವುದೆಂದೂ, ತ್ರಿದೋಷವಿಕಾರವನ್ನು ಹೋಗಲಾಡಿಸುವುದೆಂದೂ ಸ್ಪಷ್ಟವಾಗುತ್ತದೆ. ಪರಿಶುದ್ಧ ರಕ್ತದಿಂದುಂಟಾಗುವ ಶುಕ್ಲವು ಪರಿಶುದ್ಧವಾಗಿರುವುದೆಂದು ಬೇರೆ ಹೇಳಬೇಕಾಗಿಲ್ಲ. ಆದರೆ ಡಾಕ್ಟರುಗಳ ಅಭಿಪ್ರಾಯವು ಸಂಭೋಗಶಕ್ತಿ ಕಡಿಮೆಯಾಗುವುದೆಂದಿರಬಹುದು. ಈ ಅಭಿಪ್ರಾಯವು ನಿರಾಧಾರವಾದುದು. ಏಕೆಂದರೆ, ಈ ಶಕ್ತಿಯು ರೇತಸ್ಸು ಶಕ್ತಿಯ ಮೇಲಿಂದ ನಿರ್ಣಯಿಸಲ್ಪಡುವುದು. ರೇತಸ್ಸು ಸ್ವಚ್ಛವಾದುದು. ಮಂದವಾಗಿದ್ದಲ್ಲಿ ಈ ಶಕ್ತಿಗೆ ಲೋಪವುಂಟಾಗುವುದಿಲ್ಲ. ಈಗ ನಮ್ಮಲ್ಲಿ ಅನೇಕ ಜನರು ನಿರ್ವೀರ್ಯರಾಗಿಯೂ, ನಿಸ್ತೇಜಸ್ಕರಾಗಿಯೂ, ದುರ್ಬಲರಾಗಿಯೂ ಇರುತ್ತಾರೆ. ಇದಕ್ಕೆ ವಿಷಯಲೋಲುಪತೆಯೇ ಮುಖ್ಯಕಾರಣವು. ಈ ವಿಷಯಲೋಲುಪತೆ ಹೋಗುವುದೇನೋ ಎಂದು ಅವರು ಅಭಿಪ್ರಾಯಪಟ್ಟಿರಬಹುದು. ವಾಸ್ತವ್ಯವಾಗಿ ನೋಡಿದರೆ ಪ್ರಜರನ್ನು ನಪುಂಸಕರನ್ನಾಗಿ ಮಾಡುವುದು. ಆಹಾರ ವಿಹಾರಾದಿಗಳಲ್ಲಿ ನಿಯಮವಿಲ್ಲದಿದ್ದರೆ, ಬಹಳವಾಗಿ ರತಿಸಿದರೆ ದುಸ್ಸಂತಾನವಾಗುವುದು. ಪ್ರಕೃತಿಸಿದ್ಧವಾದ ಆಹಾರದಲ್ಲಿ ಕಾಮೋದ್ರೇಕವಾಗಲಿ ವಿಷಯಲೋಲುಪತೆಯಾಗಲಿ ಇರುವುದಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಅದು ಸತಿಪತಿಗಳ ಇಚ್ಛೆಯಿಂದುಂಟಾಗತಕ್ಕದ್ದು. ಬಾಕಿವೇಳೆಯಲ್ಲಿ ಅದರ ಪ್ರಸಕ್ತಿಯೇ ಇರುವುದಿಲ್ಲ. ಮನುಷ್ಯರ ಕ್ಷೇಮವನ್ನೂ ದೇಶದ ಸೌಭಾಗ್ಯವನ್ನೂ ಕೋರತಕ್ಕವರಾರೂ ಇದು ವಾಂಛನೀಯವಲ್ಲವೆಂದು ಹೇಳಲಾರರು. ಕಂದಮೂಲಗಳನ್ನು ತಿನ್ನುತ್ತಿದ್ದ ಋಷಿಪುಂಗವರಲ್ಲಿ ಬಹಳ ಮಂದಿ ಗೃಹಸ್ಥರಾಗಿಯೇ ಇದ್ದರು. ಅವರು ನಿರ್ವೀರ್ಯರಾಗಿದ್ದರೆಂದು ಹೇಳುವುದಕ್ಕಿಂತ ಹಾಸ್ಯಾಸ್ಪದವಾದುದು ಬೇರೊಂದಿಲ್ಲ. ಆದರೆ ಒಂದು ವಿಷಯವನ್ನು ಗಮನಿಸಬೇಕಾಗಿದೆ. ಸಂತಾನಾಪೇಕ್ಷೆಯಿರುವ ಸ್ತ್ರೀಪುರುಷರಿಬ್ಬರೂ ಈ ಆಹಾರವನ್ನು ಅವಲಂಬಿಸುವುದು ಅವಶ್ಯಕವು. ಈ ಆಹಾರದಿಂದ ಶರೀರದಲ್ಲಿರುವ ಟಿಸ್ಯುಗಳ ನಿರ್ಮಾಣವೇ ಬದಲಾಯಿಸುವುದು. ಅಂದರೆ ಸತಿಪತಿಗಳಿಬ್ಬರೂ ಸತ್ಸಂತಾನವನ್ನು ಪಡೆಯಲು ಒಂದೇ ವಿಧವಾದ ಶರೀರ ನಿರ್ಮಾಣವನ್ನು ಹೊಂದಿರುವುದು ಅವಶ್ಯಕವು.

ಈ ಆಹಾರಾಭ್ಯಾಸದಿಂದ ಅವಾಂತರಫಲವಾಗಿ ಅನೇಕ ಸುಗುಣಗಳು ಕೂಡ ಉಂಟಾಗುವುವು. ದುರ್ವ್ಯಸನವು ಕಡಿಮೆಯಾಗುವುದು. ಕಾಫಿ, ಟಿ, ಸಿಗರೇಟು, ಬೀಡಿ ಇವುಗಳ ಸೇವನೆಯು ತಪ್ಪಿಹೋಗುವುದು. ಧರ್ಮಜೀವನದಲ್ಲಿ ಆಸಕ್ತಿ ಹುಟ್ಟುವುದು. ದಯೆ, ಸತ್ಯ, ಶೌಚಾದಿಗಳ ಮೇಲೆ ಅಭಿಲಾಷೆಯಾಗುವುದು, ಮಾಂಸಭಕ್ಷಣ ತಪ್ಪುವುದು, ಶಾಂತಿಯೂ, ಪ್ರೀತಿಯೂ ಹೆಚ್ಚುವುವು. ಈಚೆಗೆ ಇಂಗ್ಲೆಂಡಿನಲ್ಲಿ ಒಬ್ಬ ಡಾಕ್ಟರು ಉಪನ್ಯಾಸಮಾಡುವಾಗ್ಗೆ ಆಯುಧವಿಸರ್ಜನಕ್ಕೂ ಯುದ್ಧಭೀತಿಯ ನಿರ್ಮೂಲನಕ್ಕೂ ಮುಖ್ಯವಾದ ಉಪಾಯವು ಅಡಿಗೆಯವರಿಗೆ ಹೊಸಪಾಕಗಳನ್ನು ಮಾಡುವುದನ್ನು ಕಲಿಸುವುದೇ ಎಂದು ಹೇಳಿದನು. ಮಾಂಸವನ್ನು ತಿನ್ನುವುದರಿಂದಲೇ ಕಾಮಕ್ರೋಧಗಳು ಹುಟ್ಟಿ ಯುದ್ಧವನ್ನು ತಂದೊಡ್ಡುವುವೆಂದು ಆತನ ಅಭಿಪ್ರಾಯ. ಈ ವಿಷಯವಾಗಿ ಬೆಕ್ಕುಗಳನ್ನು ಪರೀಕ್ಷಿಸಿದಲ್ಲಿ ಸಾತ್ವಿಕಾಹಾರದ ಮೇಲೆ ಬೆಳೆಯುವ ಬೆಕ್ಕುಗಳು ತಮ್ಮ ಆಹಾರವಾದ ಇಲಿಗಳನ್ನು ನೋಡಿ ಅವುಗಳನ್ನು ಕೊಲ್ಲುವುದಿಲ್ಲವೆಂದು ಒಬ್ಬ ಶಾಸ್ತ್ರಜ್ಞನು ಬರೆದಿರುತ್ತಾನೆ.

ಪ್ರಕೃತಿಸಿದ್ಧವಾದ ಆಹಾರಪದಾರ್ಥಗಳೊಡನೆ ಬೇಯಿಸಿದ ಆಹಾರವನ್ನು ಬೆರಸಿ ತಿನ್ನಬಹುದೆ? ಎಂಬ ಪ್ರಶ್ನೆಗೆ ತಿನ್ನಕೂಡದೆಂದು ಕೆಲವರು ಬರೆದಿರುತ್ತಾರೆ. ತಿನ್ನಬೇಕೆಂಬುದು ಮತ್ತೆ ಕೆಲರಭಿಪ್ರಾಯವು. ಈ ಯೂರೋಪಿನಲ್ಲಿ ... ಪ್ರಕೃತಿಸಿದ್ಧವಾದ ಆಹಾರಪದಾರ್ಥಗಳನ್ನು ಹೆಚ್ಚಾಗಿ ಸೇವಿಸಬೇಕೆಂದು ... ಪ್ರಚಾರವನ್ನು ಮಾಡುತ್ತಿರುವರು. ಅನೇಕರು ಒಂದು ಹೊತ್ತು ಸ್ವಭಾವಸಿದ್ಧವಾದ ಆಹಾರವನ್ನೂ ಇನ್ನೊಂದು ಹೊತ್ತು ...

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿರಿ

ಗರ್ಭಧಾರಣಾ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆವಿಗುರಿ ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. ೧೬

ಕೆಗೆದುಕೊಳ್ಳುವರು. ಕೆಲ ಪ್ರಸಿದ್ಧ ಡಾಕ್ಟರುಗಳು ಈ ಅಭಿಪ್ರಾಯವನ್ನು ಅನುಮೋದಿಸಿರುತ್ತಾರೆ. [illegible] ... ವೆಂದು ಬರೆಯುತ್ತದೆ. ಇದು ವಾಸ್ತವಕ್ಕು ಸವಾಲಾಗುವುದು.

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರ ವಾದಿಗಳಲ್ಲ [illegible] ... —ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ [illegible]

ಮ|| ರಾಮಯ್ಯರವರಿಗೆ ನಮ್ಮ ಕಂಟ್ರೋಲ್ ಮೆಂಟ್ ಎಂಬ ಲೇಖನದಲ್ಲಿ ತಪ್ಪು ತಿದ್ದುಪಡಿ.

ಈಚೆ ದ ತಾ|| 25 ನೆಯ ಮೈಸೂರು ಸ್ಟಾರ್ ಪತ್ರಿಕೆಯ 5 ನೇ ಪೇಜು 1 ನೇ ಕಾಲಮ್ಮಿನ ಕೆಳಗಿನಿಂದ 32 ನೇ ಲೈನಿನಲ್ಲಿ - ಕರೆಯಲ್ಲಿ 3500 ರೂ. [illegible] 35,000 ರೂ. [illegible] ಎಂದು ಓದಿಕೊಳ್ಳಬೇಕು. —ಸ್ಟಾರ್.

ಜಗದ್ಗುರುಗಳವರ ಅಡ್ಡಪಲ್ಲಕ್ಕೀ ಮಹೋತ್ಸವ.

ರಾಣೇಬೆನ್ನೂರು ತಾಲ್ಲೂಕು [illegible] ... ತಾ|| 19-7-32ನೇ ದಿವಸ [illegible] ... ತಾ|| 22-7-32 ನೇ ದಿವಸ [illegible] ... ತಾ|| 24-7-32ರ [illegible] ... ತಾ|| 25-7-32 ರಲ್ಲಿ [illegible]

ವೀರಶೈವ ಮಹಾಸಭೆಯವರು ಜೀರ್ಣೋದ್ಧಾರ ಮಾಡುವರೆ?

ಶ್ರೀ ಕೈಲಾಸದಿಂದ ಪ್ರಸಿದ್ಧಿಯಾಗಿರುವ [illegible] ... ಕ್ಷೇತ್ರದಲ್ಲಿ ಸುಮಾರು 30 ವರ್ಷ [illegible] ... ಒಡೆಸು ಹುಟ್ಟ ಚಂದಾ ವಸೂಲ್ ಮೊದಲಾದ್ದೆಲ್ಲಾ ನಿಂತುಹೋಯಿತು. ಈ ಮಠಕ್ಕಾಗಿ ಮಾಡಿದ್ದ ಶಾಲೆಕ್ಕ ಮಠವು ಈಡಾಗಿರುತ್ತೆ. ಸಂಘದವರು ಮೇಲ್ಕಂಡ ಮಠವನ್ನು ಅಸ್ವಾಧ್ಯಾಂತ ಮಾಡುವಂತೆ ಕಾಣುತ್ತದೆ. ಮಠವು ಶೈಲೇಂದ್ರ ಹಾಲ್ ಎಂಬ ಪ್ರಶಸ್ತಿಯು ದಿಗ್ ದೇಶವೆಲ್ಲಾ ತುಂಬಿತುಳುಕಾಡುತ್ತಿತ್ತು. ಇಂಥಾ ಪ್ರಖ್ಯಾತಿಗೆ ಬಂದ ಮಠವು 1924 ನೇ ಇಸವಿಯಲ್ಲಿಂಟಾದ ಪ್ರವಾಹದ ಅನಾಹುತಕ್ಕೆ ಸಿಕ್ಕಿ ನೆಲಸಮನಾಯಿತು. ಆದರೂ ಈವರೆಗೆ ಸ್ಥಳದ [illegible] ಗಮನಕ್ಕೆ ಬರಲಿಲ್ಲ. ಅದ್ದರಿಂದ ಈ ಮಠದ ಮೇಲಿರುವ ಸಾಲವನ್ನು ತೀರಿಸಿ ಜೀರ್ಣೋದ್ಧಾರ ಮಾಡಿ ಪರಸ್ಥಳದ ವೀರಶೈವ ಯಾತ್ರಾರ್ಥಿಗಳ ವಸತಿಗೆ ಸೌಕರ್ಯ ಕಲ್ಪಿಸಿಕೊಡುವ ಮಹಾಸಭೆಗೆ ಶ್ರೀ ಮುರುಘೇಂದ್ರ ಮಹಾಸ್ವಾಮಿಯು ಸನ್ಮಂಗಳವನ್ನು ಮಾಡಲೆಂದು ಪ್ರಾರ್ಥಿಸುವ ಸ್ಥಳನಿವಾಸಿ.

ಶ್ರೀ ಪಗಡದಿನ್ನಿ ಚಂದ್ರಶೇಖರಶಾಸ್ತ್ರಿಗಳವರಿಗೆ ಉತ್ತರ.

ಶ್ರೀ ಪಗಡದಿನ್ನಿ ಚಂದ್ರಶೇಖರಶಾಸ್ತ್ರಿಗಳವರ ಸನ್ನಿಧಿಗೆ—ಯಾದಗಿರಿ.

ನಾವು ತಾ|| 19-7-1932 ನೆಯ ದಿವಸ ಶ್ರೀ ಬಸವರಾಜಶಾಸ್ತ್ರಿಗಳವರ (ಯಾದಗಿರಿ ಶಂಕರಶಾಲೇಜ) ಮುಖಾಂತರ ಕಳುಹಿಸಿದ "ವೀರಶೈವ ತತ್ವ ಪ್ರಚಾರಕ ಸಂಘದವರಿಗೆ ಆಮಂತ್ರಣವು" ಎಂಬ ಲೇಖನ ಮುಟ್ಟಿತು. [illegible]

ಈ ತಮ್ಮ ಮಹಾಭಿಪ್ರಾಯವನ್ನು ಹೃದಯಪೂರ್ವಕ ಅಭಿನಂದಿಸುತ್ತೇನೆ. ಈ ವಿಷಯದಲ್ಲಿ ನನ್ನ ಅಭಿಪ್ರಾಯವೇನೆಂದರೆ:—

(1) ವೀರಶೈವ ತತ್ವಪ್ರಚಾರಕ್ಕೋಸ್ಕರ ಯೋಗ್ಯರಾದ ನ್ಯಾಯ [illegible]

(2) [illegible]

(3) [illegible]

[illegible]

- ವರ್ತಮಾನ ಪತ್ರಗಳಲ್ಲಿ ಸ್ವೇಚ್ಛಾ ಉತ್ತರ ಪ್ರತ್ಯುತ್ತರಗಳನ್ನು "ಪ್ರಕಟಿಸಿ ಪಂತಾಗುತ್ತಿರಲಿಲ್ಲವೇ?

ಆದುದರಿಂದಲೇ ಈ ಪ್ರಕಾರ ಪ್ರತ್ಯೇಕವಾಗಿ ಬರೆದಿದ್ದೇನೆ.

ಆಲಮಟ್ಟಿ, 26-7-32. } ತಮ್ಮ ವಿಧೇಯ, ಹರ್ಡೇಕರ ಮಂಜಪ್ಪ.

ಶ್ರಾವಣಮಾಸೋತ್ಸವ.

ಶ್ರೀ ಮ. ನಿ. ಜ. ಮುರುಘಾರಾಜೇಂದ್ರ ಫ್ರೀ ಬೋರ್ಡಿಂಗ ಧಾರವಾಡ ಈ ಸಂಸ್ಥೆಯ ಶ್ರೀಶಿವಯೋಗಾಶ್ರಮದಲ್ಲಿ ಪ್ರತಿ ವರ್ಷ ಪದ್ಧತಿಯಂತೆ ಶ್ರಾವಣ ಶು|| ೧ ಬುಧವಾರದಿಂದ ಶು|| ೧೫ ರವಿವಾರದ (ತಾ|| 3-8-32 ರಿಂದ 14ರ) ವರೆಗೆ ಪ್ರಾತಃಕಾಲ ಶ್ರೀಮಹಾ ತಪಸ್ವಿಗಳವರ ಪಾದಕ್ಕೆ ರುದ್ರಾಭಿಷೇಕವೂ, ಅನಂತರ ಗಣಾರಾಧನೆಯೂ ನಡೆಯುವುದು, ಸಾಯಂಕಾಲ 5 ರಿಂದ 6½ ಘಂಟೆವರೆಗೆ ವೇ|| ಶಿವಪ್ಪಯ್ಯನವರು ಅವಾಲ ಓರೇಮಠ ಹುಬ್ಬಳ್ಳಿ ಇವರಿಂದ ಪುರಾಣಪಠಣವು ಶ್ರಾವಣಮಾಸ ಪೂರೈಸುವವರೆಗೆ ಶ್ರೀ ಶಿವಯೋಗೀಶ್ವರ ಸಂಸ್ಕೃತಕಾಲೇಜದಲ್ಲಿ ನಡೆಯುವವು. ಶ್ರಾವಣ ಶು|| ೭ ಸೋಮವಾರ ಮುಂಜಾನೆ 9½ ಘಂಟೆಗೆ ದೀಕ್ಷಾ ಉಪನಯನವೂ ಶ್ರಾವಣ ಶು|| ೧೩ ಶನಿವಾರ ಸಂಜೇ 7 ರಿಂದ 9 ಘಂಟೆವರೆಗೆ ಉತ್ಸವ ಮೂರ್ತಿಯ ಉತ್ಸವವೂ ಶು|| ೧೫ ರವಿವಾರ ಸಂಜೆ 3 ಘಂಟೆಗೆ ಶ್ರೀಮಹಾ ಶಿವಯೋಗಿಗಳವರ ಭಾವಚಿತ್ರದೊಡನೆ ರಥೋತ್ಸವವೂ ಭಜನೆ ಕೀರ್ತನ ವಗೈರೆಯೊಡನೆ ತಾ|| 15 ರಿಂದ ತಾ|| 19-8-1932 ವರೆಗೆ ಕುಸ್ತಿ ಹಾಗು ಪಂದಾಟಗಳೂ, ಉಪನ್ಯಾಸ ಕೀರ್ತನೆ ವಗೈರೆ ಜರಗುತ್ತವೆ. ಈ ಉತ್ಸವದ ಖರ್ಚು ಬೋರ್ಡಿಂಗ ಸಂಸ್ಥೆಯಿಂದ ವಹಿಸಲ್ಪಡದೆ ಸರ್ವಭಕ್ತಾದಿಗಳಿಂದ ವಹಿಸಲ್ಪಡುತ್ತದೆ. ಕಾರಣ ಸರ್ವರೂ ಆಗಮಿಸಿ ಈ ಸತ್ಕಾರ್ಯಗಳಲ್ಲಿ ಭಾಗಿಗಳಾಗಿ ಶ್ರೀಮಹಾತಪಸ್ವಿಗಳವರ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ

ಎಲ್ಲಪ್ಪಾ ಮಾಸ್ತರ ಗದಗ, ಚೇರಮನ್.

ನಾರಿನವೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ. ನಾರಿನವರು ಜರೂರ ತರಿಸಿ ಕೊಳ್ಳಿರಿ. ಕಿ. ೧| ರೂ. [illegible] ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

15 M. C

ಜಯಚಾಮೇಂದ್ರ ಸಚಿವ

ಅಹೋ! ಮಹಾಜನಾಃ!!

[illegible] ... ವರ್ಧಿನೀತಿ ಸುಪ್ರಸಿದ್ಧಾ ಬಭೂವ ಚಾಮುಂಡೀದೇವೀ ಇತಿಚ ವಿಖ್ಯಾತಾಭೂತ್ ತಸ್ಯಾಃ ವರ್ಣನೆ ತಸ್ಯಾಃ ಸ್ವರೂಪವರ್ಣನಂ ಕ್ರಮಕ್ರಮಶಃ ಕರೋಮಿ.

ಸ್ವಾಮಿದಯಾಸಾಗರಭೀಷ್ಮಾರ್ಯಃ

ಪ್ರಕಟನೆ.

ಧಾರವಾಡ ಲಿಂಗಾಯತ ಎಜ್ಯುಕೇಶನ್ ಅಸೋಸಿಯೇಶನ್ನದ ವಾಙ್ಮಯ ಶಾಖೆಯವರು.

೧. ಶ್ರೀ ಬಸವಣ್ಣನವರ ವಚನಗಳು. ಷಡಕ್ಷರದೇವಕೃತ.

೨. ಕವಿಕರಣರಸಾಯನ.

ಈ ಗ್ರಂಥಗಳನ್ನು ಪರಿಶೋಧಿಸಿ ಮುದ್ರಿಸಿ ಪ್ರಕಟಿಸುವ ಕಾರ್ಯವನ್ನು ಕೈಕೊಂಡಿದ್ದಾರೆ. ಅದಕ್ಕಾಗಿ ಯಾವ ಮಹನೀಯರಲ್ಲಾದರೂ ಮೇಲ್ಕಂಡ ಗ್ರಂಥಗಳ ಕೈಬರಹದ ಅಥವಾ ತಾಡವಾಲೆಯ ಪ್ರತಿಗಳು ಇದ್ದುದಾದರೆ ಅವುಗಳನ್ನು ಕೆಳಗೆ ಕಾಣಿಸಿದ ವಿಳಾಸಕ್ಕೆ ಆದಷ್ಟು ಬೇಗನೆ ದಯವಿಟ್ಟು ಕಳುಹಬೇಕೆಂದು ಬಿನ್ನಹ. ಪರಿಶೋಧನೆಯ ಕಾರ್ಯ ಮುಗಿದ ಕೂಡಲೆ ಅವರವರ ಗ್ರಂಥಗಳನ್ನು ಅವರವರಿಗೆ ತಿರುಗಿ ಕಳುಹಿಸಿಕೊಡಲಾಗುವದು. ಈ ಗ್ರಂಥಗಳ ಹಳೇ ಪ್ರತಿಗಳು ಯಾರಲ್ಲಿಯಾದರೂ ಇದ್ದ ಸಂಗತಿಯನ್ನು ದಯವಿಟ್ಟು ತಿಳುಹಿಸಿದಲ್ಲಿ ವಾಙ್ಮಯ ಶಾಖೆಯವರು ಉಪಕೃತರಾಗುವರು.

ಎಸ್. ಎಸ್. ಮಳೀಮಠ,
ಲಾಯಿಬ್ರೇರಿಯನ್
ಲಿಂಗಾಯತ ಎಜ್ಯುಕೇಶನ್ ಅಸೋಸಿಯೇಶನ್ನರ
ವಾಙ್ಮಯಶಾಖೆ, ಧಾರವಾಡ.

೧೯೩೨ ನೆಯ ಇಸವಿ ಆಗಸ್ಟ ತಾ|| ೧ ರಿಂದ ಆಗಸ್ಟ ತಾ|| ೭ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ ಅಂಗಿರಸನಾಮಸಂವತ್ಸರದ ಆಷಾಢ ಬಹುಳ ಚತುರ್ದಶಿಯಿಂದ ಶ್ರಾವಣ ಶುದ್ಧ ಪಂಚಮಿ ವರೆಗಿನ ಪಂಚಾಂಗ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕರ್ಕ ಮಾಸ
1	ಸೋಮ	ಚತು	22-37	ಪುನ	20-53	17
2	[1] ಮಂಗಳ	ಅಮಾ	21-27	ಪುಷ್ಯ	22-20	18
3	ಬುಧ	ಪಾಡ್ಯ	20-42	ಆಶ್ಲೇ	22-35	19
4	ಗುರು	ಬಿದಿ	17-52	ಮಖ	21-36	20
5	[2] ಶುಕ್ರ	ತದಿ	14-8	ಹುಬ್ಬ	19-44	21
6	[3] ಶನಿ	ಚೌತಿ	9-27	ಉತ್ತ	16-54	22
7	[4] ಭಾನು	ಪ-ಷ	4-8-54-32	ಹಸ್ತ	13-22	23

(1) ಭೀಮಾಮಾವಾಸ್ಯಾ, ಮಳೆನಕ್ಷತ್ರ-ಆಶ್ಲೇಷ ೧ ನೆಯಪಾದ. (2) ಮಳೆನಕ್ಷತ್ರ-ಆಶ್ಲೇಷ ೨ ನೆಯಪಾದ. (3) ಸ್ವಾವಣಶನಿವಾರ. (4) ನಾಗ ಪಂಚಮಿ.

ಮೈಸೂರು: ಶ್ರೀ. [illegible]

REG. N. O. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮುಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪತ್ರಿಕೃಪ್ತ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮುಂಚೆತ್ತೀಯಂಸದಾಪೂರೆಗೆ ಗೌರೀತಾನುಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೨ ನೆಯ ಇಸವಿ ಆಗಸ್ಟ ತಾರೀಖು ೮ ನೆಯ ಸೋಮವಾರ [ಸಂಚಿಕೆ ೩೨

1932 ನೆಯ ಇಸವಿಯ ಮೈಸೂರು ದಸರಾ ವಸ್ತುಪ್ರದರ್ಶನ.

ಇಡೀ ಭರತಖಂಡದಲ್ಲೆಲ್ಲಾ ನಿಮ್ಮ ವಸ್ತುಗಳಿಗೆ ಗಿರಾಕಿಯನ್ನು ಪಡೆಯುವ ಅಭಿಲಾಷೆಯು ನಿಮಗಿದೆಯೆ?

ದಸರಾ ಕಾಲದಲ್ಲಿ ಭರತಖಂಡದ ಸಮಸ್ತ ಪ್ರಾಂತಗಳಿಂದಲೂ ಧನಿಕರಾದ ಜನರು ಗುಂಪು ಗುಂಪಾಗಿ ಮೈಸೂರು ನಗರಕ್ಕೆ ಬರುತ್ತಾರೆ. ಅವರು ನಿಮ್ಮ ವಸ್ತುಗಳನ್ನು ಕೊಳ್ಳುವ ಭರವಸೆಯು ವಿಶೇಷವಾಗಿದೆ.

ಅವರು ನಿಮ್ಮ ಸರಕುಗಳನ್ನು 1932 ನೆಯ ಇಸವಿ ಅಕ್ಟೋಬರು 1 ರ ಲಾಗಾಯಿತು 15 ನೆಯ ತಾರೀಖಿನವರೆಗೂ ನಡೆಯುವ ಮೈಸೂರು ದಸರಾ ವಸು ಪ್ರದರ್ಶನದಲ್ಲಿ ಆಜಮಾಯಿಷಿಮಾಡಿ ನೋಡುವುದಕ್ಕೆ ಅವಕಾಶಕೊಡಿ.

ಪ್ರದರ್ಶಕರಿಗೆ ಸಮಸ್ತ ಸೌಕರ್ಯಗಳನ್ನೂ ಒದಗಿಸಲಾಗುವುದು.

ಪ್ರದರ್ಶನಕ್ಕೆ ಸಂಬಂಧಪಟ್ಟಒಂದು ಕೈಪಿಡಿಯನ್ನು ಪ್ರಕಟಿಸುತ್ತೇವೆ. ಇದಕ್ಕೆ ಹಿಂದಣ ವರುಷಗಳಂತೆಯೇ ಅತ್ಯಧಿಕವಾಗಿ ಅದರ ಪ್ರತಿಗಳು ಮಾರಾಟವಾಗುವುವು. ಅದರಲ್ಲಿ ಕೆಲವು ಜಾಹಿರಾತುಗಳಿಗೆ ಮಾತ್ರವೇ ಸ್ಥಳವಿರುತ್ತದೆ.

"ಪ್ರಾಸ್ಪೆಕ್ಟಸ್" ಎಂಬ ಪ್ರಸಿದ್ಧಪತ್ರಿಕೆಗಾಗಿಯೂ ಜಾಹಿರಾತು ಪ್ರಕಟಣೆಯ ದರಗಳು ಮುಂತಾದವುಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

[50—6] ಸೆಕ್ರೆಟರಿ, ಮೈಸೂರು ದಸರಾ ಎಗ್ಜಿಬಿಷನ್ ಕಮಿಟಿ,
ಅಠಾರಾಕಚೇರಿ, ಬೆಂಗಳೂರು.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮ [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಸ್ಟರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, [illegible] ... ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, [illegible] ... ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, [illegible] ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

ಎಲ್ಲ ಬಗ್ಗೆಯ ಸೆರಗು, ಮುಟ್ಟುಬಿಟ್ಟು ಆಗುವದು [illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

ಪತ್ತಾ ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ. ಎಂ. ಎಸ್. ಎಂ.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹುಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—[illegible]—೦	೦—[illegible]—೦
ಚಾರುಶೀಲೆಚರಿತ್ರೆ	೦—[illegible]—೦	೦—೧೦—೦
ಹರಿಕಾಶಿ	೦—[illegible]—೦	೦—[illegible]—೦
ವ್ರತಪಂಚಕ	೦—[illegible]—೦	೦—[illegible]—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೫—೦	[illegible]—೧೪—೦
ಸಟೀಕ ಕರ್ತೃಟೀಕತಬ್ಧಮಂಜರಿ	೦—೫—೦	೦—೧೪—೦
ಸಟೀಕ ಶತಕತ್ರಯ	೧—೦—೦	೧—೬—೦

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು [illegible] ... ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ [illegible]

(Registerd Trade Mark)

[illegible]

ವಿಳಾಸ—ಗುರುಬಸವ ಅಂಡ್ ಕಂಪನಿ [illegible]

[೫—೬] [illegible]

ತೆಗೆದುಕೊಳ್ಳುವರು. ಕೆಲ ಪ್ರಸಿದ್ಧ ಡಾಕ್ಟರುಗಳು ಈ ಅಭಿಪ್ರಾಯವನ್ನು ಅನುಮೋದಿಸಿರುತ್ತಾರೆ. ಪ್ರಕೃತಿಸಿದ್ಧವಾದ ಆಹಾರದಲ್ಲಿರುವ ಜೀವನೂ ಕ್ಷಾರದ್ರವ್ಯವೂ ಬೇಂದ ಆಹಾರದಲ್ಲಿರುವ ದೋಷವನ್ನೂ ಹೋಗಲಾಡಿಸವು ವೆಂದು ಬರೆಯಲ್ಪಡುತ್ತಿದೆ. ಇದು ಶಾಸ್ತ್ರಸಮ್ಮತವಾಗಿರುವುದು.

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ಸ್ಪಷ್ಟವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಪಷ್ಟಾಕ್ಷರಗಳಿಂದ ಬರೆಯಲ್ಪಟ್ಟವಾಗಿಯೂ, ಇರಬೇಕೆಂದೂ ಬುಧವಾರ ಗುರುವಾರದೊಳಗೆ ನಮ್ಮ ಕೈಸೇರುವಂತೆ ಕಳುಹಲ್ಪಡಬೇಕೆಂದು, ಈ ನಿಬಂಧನೆಗೆ ವಿರುದ್ಧವಾದ ಲೇಖಗಳು [illegible] ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದ್ದಾಗ್ಯೂ ಲೇಖಕರು [illegible] ತಮಗೆ ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ [illegible] ಅಸ್ಪಷ್ಟವಾಗಿ ಬರೆದು ನಮಗೆ [illegible] ಬರೆಯಲು ಬೇಡವಾಗುತ್ತದೆ. ಆದುಕಾರಣ ಇನ್ನುಮೇಲೆ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು [illegible] ಕೃದು.—ಸಂ.

ಮ|| ರಾಮಯ್ಯರ್‌ರವರಿಗೆ ಪಬ್ಲಿಕ್ ಎಂಟರ್‌ಟೇನ್‌ಮೆಂಟ್ ಎಂಬ ಲೇಖನದಲ್ಲಿ ತಪ್ಪು ತಿದ್ದುವಿಕೆ.

ಕಳೆದ ತಾ|| 25 ನೆಯ ಮೈಸೂರು ಸ್ಟಾರ್ ಪತ್ರಿಕೆಯ 5 ನೇ ಪೇಜು 1 ನೇ ಕಾಲಮ್ಮಿನ ಕೆಳಗಿನಿಂದ 32 ನೇ ಲೈನಿನಲ್ಲಿ - ಕೆರೆಯಲ್ಲಿ 3500 ರೂ. ಗಳನ್ನು ಹೂಳಿಸಿಟ್ಟಿರುವ - ಎಂಬ ವಾಕ್ಯವನ್ನು - ಅವರುಗಳೆಲ್ಲರೂ ನರ ಕಾವಧಿ ಸ್ಮರಿಸಿಕೊಳ್ಳುವಂತೆ ಮಾಡಿರುವ ಮತ್ತು ದೊಡ್ಡ ಕೆರೆಯಲ್ಲಿ 35,000 ರೂ. ಗಳನ್ನು ಹೂಳಿಸಿಟ್ಟಿರುವ - ಉಪಕಾರಸ್ಮರಣೆಗಾಗಿ ಎಂದು ಓದಿಕೊಳ್ಳಬೇಕು. ಅಡ್ಮೈರರ್.

ಜಗದಾಚಾರ್ಯರ ಅಡ್ಡಪಲ್ಲಕ್ಕೀ ಮಹೋತ್ಸವ.

ರಾಣೀಬೆನ್ನೂರು ತಾಲ್ಲೂಕು ಅಸುಂಡೀ ಗ್ರಾಮದ ವೀರಶೈವರು ಜಗದಾಚಾರ್ಯ ಸ್ವಾಮಿ ಶ್ರೀ ವಿರೂಪಾಕ್ಷ ಒಡೆಯರನ್ನು ತಮ್ಮ ಗ್ರಾಮಕ್ಕೆ ತಾ|| 19-7-32ನೇ ದಿವಸ ದಯಮಾಡಿಸಿಕೊಂಡು ಅತಿವೈಭವದಿಂದ 8 ದಿವಸ ಮುಕ್ಕಾಂ ಮಾಡಿಸಿದರು. ಆ ಊರ ಗೌಡಮನೆತನದವರೇ ಮೊದಲಾದವರು ಅತಿಭಕ್ತಿಯಿಂದ ಗುರುಪಾದಪೂಜಾದಿಗಳನ್ನೊಪ್ಪಿಸಿ ರಾಜಸಿಸ್ಥ ಸಭೆಯನ್ನು ಮಾಡಿ ಸ್ವಾಮಿಗಳಿಂದಲೂ, ಸಂಸ್ಥಾನದ ಕಾರಭಾರಿ ಅಜ್ಜಯ್ಯಶಾಸ್ತ್ರಿಗಳಿಂದಲೂ ಇತರೇ ಜನಾಂಗದಿಂದಲೂ ಈಗಿನ ಪರಿಸ್ಥಿತಿ ಹಾಗೂ ರಾಜನಿಷ್ಠೆ ಮೊದಲಾದ ಬೋಧಿತ ವಿಷಯಗಳನ್ನು ಸರ್ವಜನಾಂಗವು ಕೇಳಿ ರಾಜನಿಷ್ಠೆಯ ಠರಾವುಗಳನ್ನು ಪಾಸುಮಾಡಿಕೊಂಡರು. ಹಾಗೂ ಅದೇ ಗ್ರಾಮದಲ್ಲಿ ತಾ|| 22-7-32 ನೇ ದಿವಸ ತರುಣಸಂಘವೆಂಬುವದನ್ನು ಸನ್ನಿಧಿಯ ಹಸ್ತದಿಂದ ಸ್ಥಾಪಿಸಿಕೊಂಡು ಅವರೆಲ್ಲರೂ 1 ದಿವಸ ಅಂದರೆ ತಾ|| 24-7-32ರಲ್ಲಿ ಸಭೆಕೂಡಿಸಿ ಸನ್ನಿಧಿಯ ಸಮಕ್ಷಮದಲ್ಲಿ ತರುಣಸಂಘದ ಸೆಕ್ರೆಟರಿ ಈಶ್ವರಪ್ಪ ಕುಬಸದ ಎಂಬವರೇ ಮೊದಲಾದವರು ರಾಜನಿಷ್ಠೆಪರವಾದ ಠರಾವುಗಳನ್ನು ಪಾಸುಮಾಡಿದರು. ಇದೇ ಸಮಯದಲ್ಲಿ ಅಸುಂಡಿ ಗ್ರಾಮದ ಪ್ರಮುಖಜನರೊಂದಿಗೆ ಮ|| ಪ್ರಸಿದ್ಧ ಕೆಂಚನಗೌಡರ ಮುಕ್ಕಳಾದ ಚನಬಸವನಗೌಡ ಎಂಬವರು ತಾ|| 25-7-32 ರಲ್ಲಿ ಗ್ರಾಮವನ್ನು ತಳಿರು ತೋರಣಗಳಿಂದಲಂಕರಿಸಿ ಅಡ್ಡಪಲ್ಲಕ್ಕಿ ಉತ್ಸವದ ಬಿನ್ನಹನಂಮಾಡಿ ಅತಿವೈಭವದಿಂದ ಸ್ವಾಮಿಸೇವೆಗೈದರು. ಓರ್ವ ಪ್ರತ್ಯಕ್ಷದರ್ಶಿ.

ವೀರಶೈವ ಮಹನೀಯರು ಜೀರ್ಣೋದ್ಧಾರ ಮಾಡುವರೆ?

ಭೂ ಕೈಲಾಸವೆಂದು ಪ್ರಸಿದ್ಧಿಯಾಗಿರುವ ನಂಜನಗೂಡು ಮಹಾಕ್ಷೇತ್ರದಲ್ಲಿ ಸುಮಾರು 30 ಮನೆ ವೀರಶೈವರು ಒಂದು ಸಂಘವನ್ನೇರ್ಪಡಿಸಿಕೊಂಡು ಚಂದಾ ಮೂಲಕ ಕೆಲವು ನೋಟುಗಳನ್ನು ಶೇಖರಿಸಿ ಗೌರೀಘಟ್ಟದ ಬೀದಿಯಲ್ಲಿ ಸಂಘಕ್ಕಾಗಿ ಒಂದು ಮನೆಯನ್ನು ಖರೀದಿ ಮಾಡಿ ಕೆಲವರ ಹೆಸರಿಗೆ ಬರಿಸಿಕೊಂಡು, ಕ್ರಯದ ನೋಟುಗಳಿಗಾಗಿ ಸ್ವಲ್ಪ ಸಾಲವನ್ನು ಸಹ ಮಾಡಿ, ಮನೆ ರಿಪೇರಿ ವಗೈರೆ ಮಾಡಿಸಿ ಮುರುಘೇಂದ್ರ ಹಾಲ್ ಎಂಬದಾಗಿ ಮಠ ಸ್ಥಾಪನೆಯನ್ನು ಮಾಡಿದರು. ಅಲ್ಲದೆ ಪರಸ್ಥಳದಿಂದ ಈ ಕ್ಷೇತ್ರಕ್ಕೆ ಬರುವ ವೀರಶೈವ ಮಹಾಜನಗಳು ಮಠದಲ್ಲಿಳಿಯಲು ಅನುಕೂಲಪಡಿಸಿಕೊಟ್ಟರು. ಕೆಲವು ಕಾಲ ತಿಂಗಳಿಗೊಂದಾವರ್ತಿ ಚಂದಾ ಎತ್ತುವದು, ಲಗ್ನ ವಗೈರೆ ಶುಭಕಾರ್ಯಗಳಲ್ಲಿ ಸದರಿ ಹಾಲಿಗೋಸ್ಕರ ಏರ್ಪಡಿಸಿದ್ದ ನೋಟುಗಳನ್ನು ವಸೂಲ್ ಮಾಡುವದು ಇವೇ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದ ಹಾಗೆ ಸಂಘದಲ್ಲಿ ಅಕಸ್ಮಾತ್ ಒಡಕು ಹುಟ್ಟಿ ಚಂದಾ ವಸೂಲ್ ಮೊದಲಾದ್ದೆಲ್ಲಾ ನಿಂತುಹೋಯಿತು. ಈ ಮಠಕ್ಕಾಗಿ ಮಾಡಿದ್ದ ಸಾಲಕ್ಕೆ ಮಠವು ಈಡಾಗಿರುತ್ತೆ. ಸಂಘದವರು ಮೇಲ್ಕಂಡ ಮಠವನ್ನು ಅನ್ಯಾಕ್ರಾಂತ ಮಾಡುವಂತೆ ಕಾಣುತ್ತದೆ. ಮುರುಘೇಂದ್ರ ಹಾಲ್ ಎಂಬ ಪ್ರಖ್ಯಾತಿಯು ದಿಗ್ ದೇಶವೆಲ್ಲಾ ತುಂಬಿತುಳುಕಾಡುತ್ತಿತ್ತು. ಇಂಥಾ ಪ್ರಖ್ಯಾತಿಗೆ ಬಂದ ಮಠವು 1924 ನೇ ಇಸವಿಯಲ್ಲುಂಟಾದ ಪ್ರವಾಹದ ಅನಾಹುತಕ್ಕೆ ಸಿಕ್ಕಿ ನೆಲಸಮವಾಯಿತು. ಆದರೂ ಈವರೆಗೆ ಸ್ಥಳದ ಮಹನೀಯರ ಗಮನಕ್ಕೆ ಬರಲಿಲ್ಲ. ಆದ್ದರಿಂದ ಈ ಮಠದ ಮೇಲಿರುವ ಸಾಲವನ್ನು ತೀರಿಸಿ ಜೀರ್ಣೋದ್ಧಾರ ಮಾಡಿ ಪರಸ್ಥಳದ ವೀರಶೈವ ಯಾತ್ರಾರ್ಥಿಗಳ ವಸತಿಗೆ ಸೌಕರ್ಯ ಕಲ್ಪಿಸಿಕೊಡಬೇಕೆಂದು ಮಹನೀಯರಿಗೆ ಶ್ರೀ ಮುರುಘೇಂದ್ರ ಮಹಾಸ್ವಾಮಿಯವರು ಸನ್ಮಂಗಳವನ್ನು ಮಾಡಲೆಂದು ಪ್ರಾರ್ಥಿಸುವ ಸ್ಥಳನಿವಾಸಿ.

ಶ್ರೀ ಪಗಡದಿನ್ನಿ ಚಂದ್ರಶೇಖರಶಾಸ್ತ್ರಿಗಳವರಿಗೆ ಉತ್ತರ.

ಶ್ರೀ ಪಗಡದಿನ್ನಿ ಚಂದ್ರಶೇಖರಶಾಸ್ತ್ರಿಗಳವರ ಸನ್ನಿಧಿಗೆ—ಯಾದಗಿರಿ.

ತಾವು ತಾ|| 19-7-1932 ನೆಯ ದಿವಸ ಶ್ರೀ ಬಸವರಾಜಶಾಸ್ತ್ರಿಗಳವರ (ಯಾದಗಿರಿ ಶಂಕರಕಾಲೇಜ) ಮುಖಾಂತರ ಕಳುಹಿಸಿದ - ವೀರಶೈವ ತತ್ತ್ವಪ್ರಚಾರಕ ಸಂಘದವರಿಗೆ ಆಮಂತ್ರಣವು - ಎಂಬ ಲೇಖನ ಮುಟ್ಟಿತು. ಅದನ್ನು ತಮ್ಮ ಇಷ್ಟದಂತೆ ಶರಣಸಂದೇಶ ಪತ್ರಿಕೆಯಲ್ಲಿ ಪ್ರಕಟಿಸುವ ಮುಂಚೆ ಈ ಕೆಳಗಿನ ಸಂಗತಿಗಳನ್ನು ತಮ್ಮಿಂದ ತಿಳಿದುಕೊಳ್ಳುವದು ಅಗತ್ಯವೆಂದು ತೋರಿದುದರಿಂದ ಬರೆದುಕೊಂಡಿದ್ದೇನೆ.

ತಾವು ವೀರಶೈವ ತತ್ತ್ವನಿರ್ಣಯದ ಸಲುವಾಗಿ ಇಷ್ಟೆಲ್ಲಾ ಶ್ರಮವನ್ನೂ ವೆಚ್ಚವನ್ನೂ ಮಾಡಲು ಸಿದ್ಧರಾಗಿರುವುದು ಅತ್ಯಂತ ಸುತ್ಯವಾದುದಾಗಿದೆ. ಈ ತಮ್ಮ ಮತಾಭಿಮಾನವನ್ನು ಹೃದಯಪೂರ್ವಕ ಅಭಿನಂದಿಸುತ್ತೇನೆ. ಈ ವಿಷಯದಲ್ಲಿ ನನ್ನ ಅಭಿಪ್ರಾಯವೇನೆಂದರೆ :—

(1) ವೀರಶೈವ ತತ್ತ್ವನಿರ್ಣಯಕ್ಕೋಸ್ಕರ ಯೋಗ್ಯರಾದ ನ್ಯಾಯಾಧೀಶರಲ್ಲಿ ಸಂಘದವರು ತಮ್ಮ ಅಭಿಪ್ರಾಯವನ್ನು ಪ್ರತಿಪಾದಿಸಲು ಯಾವಾಗಲೂ ಸಿದ್ಧರಾಗಿದ್ದಾರೆ.

(2) ತಾವು ಬರೆದಂತೆ ಸಿದ್ಧಾಂತಶಿಖಾಮಣಿ ಮೊದಲಾದ ಸಂಸ್ಕೃತ ಮತಗ್ರಂಥಗಳು ಮತ್ತು ಶ್ರೀಬಸವಾದಿ ಪ್ರಮಥರ ವಚನಗಳು ಸಂಘದವರಿಗೂ ಪ್ರಮಾಣ ಗ್ರಂಥಗಳೇ ಆಗಿವೆ !

(3) ತಾವು ಬರೆದ ಸ್ಥಳಗಳಲ್ಲಿ ಗುಲಬರ್ಗಾ ಸ್ಥಳವೇ ಅನುಕೂಲವಾದುದಾಗಿದೆ.

ಈ ಮೂರು ಸಂಗತಿಗಳೇನೋ ಉಭಯಪಂಗಡದವರಿಗೂ ಒಪ್ಪಿಗೆಯಾದವುಗಳೇ ಸರಿ. ಆದರೆ ಪಂಚರನ್ನಾರಿಸುವ ಪದ್ಧತಿ ಮತ್ತು ನ್ಯಾಯಾಧೀಶರನ್ನಾರಿಸುವರೀತಿಗಳು ಮಾತ್ರ ಯುಕ್ತವಾದವುಗಳಾಗಿ ತೋರುವುದಿಲ್ಲ.

ಈ ವಿಷಯದಲ್ಲಿ ತೀರ್ಮಾನಮಾಡುವ ನ್ಯಾಯಾಧೀಶರನ್ನಾರಿಸುವುದೇ ಅತ್ಯಂತ ಮುಖ್ಯವಾದುದಾಗಿದೆ. ಈ ವಿಷಯದಲ್ಲಿ ತಾವು ಈ ಪ್ರಕಾರ ತಿಳಿಸಿದ್ದೀರಿ.

- ಕೊಡಿದವರಲ್ಲಿ ಸರ್ವಸಂಮತಿಯಿಂದ ಆರಿಸಲ್ಪಟ್ಟವರೇ ಅಧ್ಯಕ್ಷರು -

ಇಂತಹ ಮಹತ್ವದ ವಿಷಯವನ್ನು ತೀರ್ಮಾನಮಾಡಲು ಬೇಕಾಗುವ ನ್ಯಾಯಾಧೀಶರನ್ನು ಮುಂಚೆಯೇ ಆರಿಸಿಕೊಳ್ಳಬೇಕಲ್ಲದೆ ಬಂದವರಲ್ಲಿಯೇ ಒಬ್ಬರನ್ನು ಆರಿಸಿಕೊಳ್ಳುವುದು ತುಂಬಾ ಅಸಂಗತವು. ಸಭೆಗೆ ಅಂಥ ಸಮರ್ಥರು ಬಾರದಿದ್ದರೆ ಅಥವಾ ಬಂದವರಲ್ಲಿ ಆರಿಸಬೇಕಾದರೆ ಸರ್ವಸಮ್ಮತವಾಗದೆ ಭಿನ್ನಾಭಿಪ್ರಾಯವುಂಟಾದರೆ ಕೂಡಿದ್ದು ವ್ಯರ್ಥವಾಗುವುದು. [illegible] ಭಿನ್ನಾಭಿಪ್ರಾಯಗಳುಂಟಾಗಿ ವ್ಯರ್ಥ ಸಾಹಸ ಮಾಡಿದಂತಾಗಬಾರದು. ಆದಕಾರಣ ಯಾವ ಪಂಗಡಕ್ಕೂ ಸಂಬಂಧಿಸದೆ ಮತ್ತು ಸಮಾಜಕ್ಕೇನೇ ಮುಖ್ಯ ಸಂಸ್ಥೆಯಾಗಿರತಕ್ಕ ವೀರಶೈವ ಮಹಾಸಭೆಯ ಧಾರವಾಡ ಸ್ವಾಗತ ಸಂಘದವರು ಮೂರು ಜನ ನ್ಯಾಯಾಧೀಶರನ್ನು ಆರಿಸಿಕೊಡಬೇಕು. ವೀರಶೈವ ತತ್ತ್ವಪ್ರಚಾರಕ ಸಂಘದಿಂದ ನಾಲ್ಕು ಜನರನ್ನೂ ನಿಮ್ಮ ಪಕ್ಷದಿಂದ ನಾಲ್ಕು ಜನರನ್ನೂ ಪಂಚರನ್ನಾಗಿ ಗೊತ್ತುಮಾಡಿಕೊಡಬೇಕು. ಈ ಪ್ರಕಾರ 8 ಜನರ ಸಲಹೆಯಿಂದ 3 ಜನ ನ್ಯಾಯಾಧೀಶರು ಬಹುಮತದಿಂದ ಮಾಡುವ ತೀರ್ಮಾನಕ್ಕೆ ತತ್ತ್ವಪ್ರಚಾರಕ ಸಂಘದವರು ಒಪ್ಪಬೇಕು ಮತ್ತು ನಿಮ್ಮ ಪಕ್ಷದವರೂ ಒಪ್ಪಬೇಕು ಇದಕ್ಕೆ ತಾವೂ ಒಪ್ಪುವಿರೆಂದೇ ನಂಬಿದ್ದೇನೆ. ತಮ್ಮ ಒಪ್ಪಿಗೆಬಂದ ಕೂಡಲೇ ಉಭಯ ಪಕ್ಷದವರೂ ಸ್ವಾಗತ ಸಂಘದವರಿಗೆ ವಿಜ್ಞಾಪಿಸಿಕೊಳ್ಳೋಣ.

ಈ ವಾದವನ್ನು ಕೇವಲ ನಿಮ್ಮೊಬ್ಬರ ಒಪ್ಪಿಗೆಗಾಗಿಯೇ ? ಅಥವಾ - ಪಂಚಾಚಾರ್ಯ - ಇಲ್ಲವೆ - ಗುರುವರ್ಗದ ಪಂಗಡ - ವೆಂದು ಹೇಳುತ್ತಿರುವ ಪಂಗಡದ ಒಪ್ಪಿಗೆಗಾಗಿಯೇ ? ತಿಳಿಸೋಣವಾಗಲಿ. ಈ ವಾದದಲ್ಲಾಗುವ ತೀರ್ಮಾನವನ್ನು ಹೇಗೆ ವೀರಶೈವ ತತ್ತ್ವಪ್ರಚಾರಕ ಸಂಘದವರು ಒಪ್ಪಬೇಕೋ ಹಾಗೆಯೇ ಪಂಚಾಚಾರ್ಯ ಪಂಗಡದವರೂ ಒಪ್ಪಲು ಸಿದ್ಧರಿದ್ದರೇನೇ ಈ ಪ್ರಕಾರ ನ್ಯಾಯಾಧೀಶರನ್ನು ನಿಯಮಿಸಿ ನಿರ್ಣಯವನ್ನು ಮಾಡಬೇಕಾಗುವುದು. ಕೇವಲ ನಿಮ್ಮೊಬ್ಬರ ಒಪ್ಪಿಗೆಗಾಗಿಯೇ ಇಷ್ಟೆಲ್ಲಾ ಸಿದ್ಧತೆಗಳೇಕೆ ? ಸಮಾಜದಲ್ಲುಂಟಾಗಿರುವ ಈ ಕ್ಷೋಭೆಯು ಸಂಪೂರ್ಣ ನಿವಾರಣೆಯಾಗುವಂತಿದ್ದರೆ ಮಾತ್ರ ಈ ವಿಧವಾದ ಪ್ರಯತ್ನವನ್ನು ಮಾಡಬೇಕಲ್ಲವೇ ? ನಿಮ್ಮೊಬ್ಬರ ಶಂಕಾಸಮಾಧಾನಗಳಿಗೆ ಲೇಖನ ಮೂಲಕವಾಗಲಿ ಅಥವಾ ಅವಶ್ಯಕವಿದ್ದರೆ ಒಬ್ಬೊಬ್ಬ ಪಂಡಿತರ ಮೂಲಕ ಪ್ರತ್ಯಕ್ಷ ವಾದದಿಂದಾಗಲಿ ಈ ವಿಷಯವನ್ನು ಚರ್ಚಿಸಲು ಕೂಡಾ ಯಾವ ಅಭ್ಯಂತರವೂ ಇಲ್ಲ. ಆದುದರಿಂದ ತಾವು ಈ ಎಲ್ಲ ಸಂಗತಿಗಳನ್ನು ನಿಷ್ಪಕ್ಷಪಾತವಾಗಿ ಯೋಚಿಸಿ ತಮ್ಮ ಅಭಿಪ್ರಾಯವನ್ನು ತಿಳಿಸುವಿರೆಂದು ನಂಬಿದ್ದೇನೆ.

ತಮ್ಮ ಅಭಿಪ್ರಾಯದಂತೆ ತಮ್ಮ ಲೇಖನವನ್ನು ಶರಣ ಸಂದೇಶ ಪತ್ರಿಕೆಯಲ್ಲಿ ಪ್ರಕಟಿಸಿದರೂ ಅದರಡಿಯಲ್ಲಿಯೇ ಇದೇ ಪ್ರಕಾರ ನಾನು ತಮಗೆ ಅರಿಕೆಮಾಡಿಕೊಳ್ಳುತ್ತಿದ್ದೆನು. ಇದರಿಂದ ತಾವು ಬರೆದಂತೆಯೇ ವೃಥಾ - ವರ್ತಮಾನ ಪತ್ರಗಳಲ್ಲಿ ಸ್ವೇಚ್ಛಾ ಉತ್ತರ ಪ್ರತ್ಯುತ್ತರಗಳನ್ನು - ಪ್ರಕಟಿಸಿದಂತಾಗುತ್ತಿರಲಿಲ್ಲವೇ ?

ಆದುದರಿಂದಲೇ ಈ ಪ್ರಕಾರ ಪ್ರತ್ಯೇಕವಾಗಿ ಬರೆದಿದ್ದೇನೆ.

ಆಲಮಟ್ಟಿ, 26-7-32. } ತಮ್ಮ ವಿಧೇಯ, ಹರ್ಡೇಕರ ಮಂಜಪ್ಪ.

ಶ್ರಾವಣಮಾಸೋತ್ಸವ.

ಶ್ರೀ ಮ. ನಿ. ಜ. ಮುರುಘರಾಜೇಂದ್ರ ಫ್ರೀ ಬೋರ್ಡಿಂಗ ಧಾರವಾಡ ಈ ಸಂಸ್ಥೆಯ ಶ್ರೀಶಿವಯೋಗಾಶ್ರಮದಲ್ಲಿ ಪ್ರತಿ ವರ್ಷ ಪದ್ಧತಿಯಂತೆ ಶ್ರಾವಣ ಶು|| ೧ ಬುಧವಾರದಿಂದ ಶು|| ೧೩ ರವಿವಾರದ (ತಾ|| 3-8-32 ರಿಂದ 14ರ) ವರೆಗೆ ಪ್ರಾತಃಕಾಲ ಶ್ರೀಮಹಾ ತಪಸ್ವಿಗಳವರ ಪಾದಕ್ಕೆ ರುದ್ರಾಭಿಷೇಕವೂ, ಅನಂತರ ಗಣಾರಾಧನೆಯೂ ನಡೆಯುವುದು, ಸಾಯಂಕಾಲ 5 ರಿಂದ 6½ ಘಂಟೆವರೆಗೆ ವೇ|| ಶಿವಪ್ಪಯ್ಯನವರು ಅನವಾಲ ಹಿರೇಮಠ ಹುಬ್ಬಳ್ಳಿ ಇವರಿಂದ ಪುರಾಣಪಠಣವು ಶ್ರಾವಣಮಾಸ ಪೂರೈಸುವವರೆಗೆ ಶ್ರೀ ಶಿವಯೋಗೀಶ್ವರ ಸಂಸ್ಕೃತಕಾಲೇಜದಲ್ಲಿ ನಡೆಯುವವು. ಶ್ರಾವಣ ಶು|| ೭ ಸೋಮವಾರ ಮುಂಜಾನೆ 9½ ಘಂಟೆಗೆ ದೀಕ್ಷಾ ಉಪನಯನವೂ ಶ್ರಾವಣ ಶು|| ೧೨ ಶನಿವಾರ ಸಂಜೆ 7 ರಿಂದ 9 ಘಂಟೆವರೆಗೆ ಉತ್ಸವ ಮೂರ್ತಿಯ ಉತ್ಸವವೂ ಶು|| ೧೩ ರವಿವಾರ ಸಂಜೆ 3 ಘಂಟೆಗೆ ಶ್ರೀಮಹಾ ಶಿವಯೋಗಿಗಳವರ ಭಾವಚಿತ್ರದೊಡನೆ ರಥೋತ್ಸವವೂ ಭಜನೆ ಕೀರ್ತನ ವಗೈರೆಯೊಡನೆ ತಾ|| 15 ರಿಂದ ತಾ|| 19-8-1932 ವರೆಗೆ ಕುಸ್ತಿ ಹಾಗು ಪಂದಾಟಗಳೂ, ಉಪನ್ಯಾಸ ಕೀರ್ತನೆ ವಗೈರೆ ಜರಗುತ್ತವೆ. ಈ ಉತ್ಸವದ ಖರ್ಚು ಬೋರ್ಡಿಂಗ ಸಂಸ್ಥೆಯಿಂದ ವಹಿಸಲ್ಪಡದೆ ಸರ್ವಭಕ್ತಾದಿಗಳಿಂದ ವಹಿಸಲ್ಪಡುತ್ತದೆ. ಕಾರಣ ಸರ್ವರೂ ಆಗಮಿಸಿ ಈ ಸತ್ಕಾರ್ಯಗಳಲ್ಲಿ ಭಾಗಿಗಳಾಗಿ ಶ್ರೀಮಹಾತಪಸ್ವಿಗಳವರ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ

ಎಲ್ಲಪ್ಪಾ ಮಾಸ್ತರ ಗದಗ, ಚೇರಮನ್.

ನಾರಿನವಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ. ನಾರಿನವರು ಜರೂರ ತರಿಸಿಕೊಳ್ಳಿರಿ. ಕಿ. ೧| ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

15 M. C

ಜಯಚಾಮೇಂದ್ರ ಸಚಿವಃ

ಅಹೋ ! ಮಹಾಜನಾಃ !!

ಮಾತೃಭಾಷಾಯಾಂ ವಚನವಾಕ್ಯತರಂಗ ಲೇಖನಸ್ಯ ಅಭಾವಾತ್ ದೇಶೇಸ್ಮಿನ್ ಭಾಷಾ ಅಮಾಚಂದ್ರ ಇವ ಕಾಂತಿಪ್ರದಾ ಬಭೂವ-ಮಾತೃಭಾಷಾ ಪ್ರಾಚೀನಭಾಷಾ ಭಾರತದೇಶೇಸ್ಮಿನ್ ತ್ರಿಂಶದ್ಯುತ್ತರ ಶತಸಂಖ್ಯಾಕಭಾಷಾ ಮಾತೃಭಾಷಾಯಾಃ ಗರ್ಭಸಾಗರೇಸಂಭವಾಃ-ವೇದಾಷ್ಟ ಪುರಾಣಾಷ್ಟ ಮಾತೃಭಾಷಾಯಾಂ ವಿರಚಿತಾಃ-ಪದ್ಯಕಾವ್ಯಸ್ಯಾಬಲ್ಯಾತ್ ಆಧುನಿಕಾನಾಂವಾಚತುಂ ಕಷ್ಟಮೇವ-ಕರ್ತೃಕರ್ಮ ಕ್ರಿಯಾಪದಪ್ರಯೋಗೇಣ ಕ್ರಮಾಲಂಕಾರಮನುಸೃತ್ಯ—ಯಥಾಕರ್ನಾಟಕಭಾಷಾಪ್ರಕಾಶಮಾನಾ ಯಥಾ ಹೊಣಭಾಷಾ ಪ್ರಕಾಶಮಾನಾ ತಥಾವಿಧಾನೇನ ಮಾತೃಭಾಷಾಯಾಂ ವಚನವಾಕ್ಯತರಂಗ ಲೇಖನಮುಖಾತ್ಸತ್ಯಥಾಃ ಪ್ರಚಾರಂಕೃತಯದಿ ಆಧುನಿಕಬಾಲಕಾಃ ವಾಚಿತಾದಭಿರುಚಿಪರಾಃ ಭವಂತಿ-ತದಹಂಕರ್ತುಂ ಪ್ರಯತ್ನಂಕರೋಮಿ.

ಚಾಮುಂಡೀಶ ಸುಪ್ರಸಿದ್ಧದೇವೀ, ದ್ವಾಪರಯುಗೇ ಕಂಸಮರ್ದನಾಯ ಶ್ರೀಕೃಷ್ಣಸ್ಯ ಸಹಾಯಾರ್ಥಂ ನಂದಗೋಪಸ್ಯ ಪತ್ನೀ ಯಶೋದಾದೇವ್ಯಾಃ ಗರ್ಭಸಾಗರೇ ಮಾನುಷಾಕಾರೇಣ ಸಂಜಾತಾ ಶ್ರೀ ಕೃಷ್ಣಃ ದೇವಕೀದೇವ್ಯಾಃ ಗರ್ಭಸಮುದ್ರೇ ಸಂಜಾತಃ ವಸುದೇವಃ ಭಗವದಾಜ್ಞಯಾ, ಸ್ವಗೃಹೇ ಸಂಜಾತ ಕೃಷ್ಣಂ ಹಸ್ತೆ ಉತ್ಥಾಯ ರಾತ್ರೌ, ಯಮುನಾನದೀಂ ತರಿತುಂ ಪ್ರಯತ್ನಾದ್ನಂದ ಗೋಪಸ್ಯಗೃಹಂ ಪ್ರವಿಶ್ಯ ತತ್ರ ಯಶೋದಾದೇವ್ಯಾಃ ಸಮೀಪೆ ಸ್ಥಿತ್ವಾ ತತ್ರಸ್ಥ ಮಾಯಾಮಾನುಷಪುರ್ಗಿಂ ಉತ್ಥಾಯ ಸ್ವಗೃಹಮಾಗತಃ ಕಂಸಃ ಸಂಹಾರಂಕರ್ತುಂ ಪ್ರಯತ್ನೆ, ಗಗನಮಾಶ್ರಿತ್ಯ, ತ್ವಾಂಹಂತುಂ ಸಂಜಾತವಾನ್, ನಂದಗೋಕುಲೆ ಪ್ರವರ್ಧಮಾನಃ-ಅಹಂ ಮಹಾಬಲಪರ್ವತೇ ಪ್ರವಾಸಂಕೃತ ಮಹಿಷಾಸುರಸ್ಯ ಸಂಹಾರಾರ್ಥಂ ಅವತಾರಂಕೃತದುರ್ಗೀ-ತತ್ರಗತೋಹಂ ಇತ್ಯುಕ್ತ್ವಾ, ಅತ್ರಾಗತಾ ಸಪ್ತಮಾತೃಕಾಯಾಂ ಏಕಾಭೂತ್ವಾ ಚಾಮುಂಡಾ ಇತಿ ಸುಪ್ರಸಿದ್ಧಾ ಬಭೂವ-ತತ್ಪರ್ವತಮಪಿ ಚಾಮುಂಡಿ ಬೆಟ್ಟ, ಇತಿ ಕರ್ನಾಟಕ ಭಾಷಾಯಾಂ ಪ್ರಸಿದ್ಧಮಭೂತ್-ದೇವೀ ಮಹಿಷಾಸುರಮರ್ದಿನೀತಿ ಸುಪ್ರಸಿದ್ಧಾ ಬಭೂವ ಚಾಮುಂಡೀದೇವೀ ಇತಿಚ ವಿಖ್ಯಾತಾಭೂತ್ ತಸ್ಯಾಃ ವರ್ಣನೆ ತಸ್ಯಾಃ ಸ್ವರೂಪವರ್ಣನಂ ಕ್ರಮಕ್ರಮಶಃ ಕರೋಮಿ.

ಸ್ವಾಮಿದಯಾಸಾಗರಭೀಷ್ಮಾರ್ಯ್ಯಃ

ಪ್ರಕಟನೆ.

ಧಾರವಾಡ ಲಿಂಗಾಯತ ಎಜ್ಯುಕೇಷನ್ ಅಸೋಸಿಯೇಶನ್ನದ ವಾಙ್ಮಯ ಶಾಖೆಯವರು.

೧. ಶ್ರೀ ಬಸವಣ್ಣನವರ ವಚನಗಳು. ಷಡಕ್ಷರದೇವಕೃತ.

೨. ಕವಿಕರಣರಸಾಯನ.

ಈ ಗ್ರಂಥಗಳನ್ನು ಪರಿಶೋಧಿಸಿ ಮುದ್ರಿಸಿ ಪ್ರಕಟಿಸುವ ಕಾರ್ಯವನ್ನು ಕೈಕೊಂಡಿದ್ದಾರೆ. ಅದಕ್ಕಾಗಿ ಯಾವ ಮಹನೀಯರಲ್ಲಾದರೂ ಮೇಲ್ಕಂಡ ಗ್ರಂಥಗಳ ಕೈಬರಹದ ಅಥವಾ ತಾಡವಾಲೆಯ ಪ್ರತಿಗಳು ಇದ್ದುದಾದರೆ ಅವುಗಳನ್ನು ಕೆಳಗೆ ಕಾಣಿಸಿದ ವಿಳಾಸಕ್ಕೆ ಆದಷ್ಟು ಬೇಗನೆ ದಯವಿಟ್ಟು ಕಳುಹಬೇಕೆಂದು ಬಿನ್ನಹ. ಪರಿಶೋಧನೆಯ ಕಾರ್ಯ ಮುಗಿದ ಕೂಡಲೆ ಅವರವರ ಗ್ರಂಥಗಳನ್ನು ಅವರವರಿಗೆ ತಿರುಗಿ ಕಳುಹಿಸಿಕೊಡಲಾಗುವದು. ಈ ಗ್ರಂಥಗಳ ಹಳೇ ಪ್ರತಿಗಳು ಯಾರಲ್ಲಿಯಾದರೂ ಇದ್ದ ಸಂಗತಿಯನ್ನು ದಯವಿಟ್ಟು ತಿಳುಹಿಸಿದಲ್ಲಿ ವಾಙ್ಮಯ ಶಾಖೆಯವರು ಉಪಕೃತರಾಗುವರು.

ಎಸ್. ಎಸ್. ಮಳೀಮಠ,
ಲಾಯಿಬ್ರೇರಿಯನ್
ಲಿಂಗಾಯತ ಎಜ್ಯುಕೇಷನ್ ಅಸೋಸಿಯೇಷನ್ನರ ವಾಙ್ಮಯಶಾಖೆ, ಧಾರವಾಡ.

೧೯೩೨ ನೆಯ ಇಸವಿ ಆಗಸ್ಟ ತಾ|| ೧ ರಿಂದ ಆಗಸ್ಟ ತಾ|| ೭ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ ಅಂಗಿರಸನಾಮಸಂವತ್ಸರದ ಆಷಾಢ ಬಹುಳ ಚತುರ್ದಶಿಯಿಂದ ಶ್ರಾವಣ ಶುದ್ಧ ಪಂಚಮಿ ವರೆಗಿನ ಪಂಚಾಂಗ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕರ್ಕ ಮಾಸ
1	ಸೋಮ	ಚತು	22-37	ಪುನ	20-53	17
2	[1] ಮಂಗಳ	ಅಮಾ	21-27	ಪುಷ್ಯ	22-20	18
3	ಬುಧ	ಪಾಡ್ಯ	20-42	ಆಶ್ಲೇ	22-35	19
4	ಗುರು	ಬಿದಿ	17-52	ಮಘ	21-36	20
5	[2] ಶುಕ್ರ	ತದಿ	14-8	ಪುಬ್ಬ	19-44	21
6	[3] ಶನಿ	ಚೌತಿ	9-27	ಉತ್ತ	16-54	22
7	[4] ಭಾನು	ಪ-ಷ	4-8-54-32	ಹಸ್ತ	13-33	23

(1) ಭೀಮಾಮಾವಾಸ್ಯಾ. ಮಳೆನಕ್ಷತ್ರ-ಆಶ್ಲೇಷ ೧ ನೆಯಪಾದ. (2) ಮಳೆನಕ್ಷತ್ರ-ಆಶ್ಲೇಷ ೨ ನೆಯಪಾದ. (3) ಶ್ರಾವಣಶನಿವಾರ. (4) ಗರುಡ ಪಂಚಮಿ.

ಮೈಸೂರು : ಶ್ರೀ. [illegible] ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG. N. O. M. 184

ಮೈಸೂರ್ ಸ್ಟಾರ್.

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕ್ಕತಾವತಾರಾ ಪತ್ರಜ್ಞ ಸಹೃತ್ಯ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತೀಳಿಯಂಸದಾಪೂರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸ್ ೧೯೩೨ ನೆಯ ಇಸವಿ ಆಗಸ್ಟ್ ತಾರೀಖು ೮ ನೆಯ ಸೋಮವಾರ [ಸಂಚಿಕೆ ೩೨

1932 ನೆಯ ಇಸವಿಯ ಮೈಸೂರು ದಸರಾ ವಸ್ತುಪ್ರದರ್ಶನ.

ಇಡೀ ಭರತಖಂಡದಲ್ಲೆಲ್ಲಾ ನಿಮ್ಮ ವಸ್ತುಗಳಿಗೆ ಗಿರಾಕಿಯನ್ನು ಪಡೆಯುವ ಅಭಿಲಾಷೆಯು ನಿಮಗಿದೆಯೆ?

ದಸರಾ ಕಾಲದಲ್ಲಿ ಭರತಖಂಡದ ಸಮಸ್ತ ಪ್ರಾಂತಗಳಿಂದಲೂ ಧನಿಕರಾದ ಜನರು ಗುಂಪು ಗುಂಪಾಗಿ ಮೈಸೂರು ನಗರಕ್ಕೆ ಬರುತ್ತಾರೆ. ಅವರು ನಿಮ್ಮ ವಸ್ತುಗಳನ್ನು ಕೊಳ್ಳುವ ಭರವಸೆಯು ವಿಶೇಷವಾಗಿದೆ.

ಅವರು ನಿಮ್ಮ ಸರಕುಗಳನ್ನು 1932 ನೆಯ ಇಸವಿ ಅಕ್ಟೋಬರು 1 ರ ಲಾಗಾಯಿತು 15 ನೆಯ ತಾರೀಖಿನವರೆಗೂ ನಡೆಯುವ ಮೈಸೂರು ದಸರಾ ವಸು ಪ್ರದರ್ಶನದಲ್ಲಿ ಅಜಮಾಯಿಷಿಮಾಡಿ ನೋಡುವುದಕ್ಕೆ ಅವಕಾಶಕೊಡಿ.

ಪ್ರದರ್ಶಕರಿಗೆ ಸಮಸ್ತ ಸೌಕರ್ಯಗಳನ್ನೂ ಒದಗಿಸಲಾಗುವುದು.

ಪ್ರದರ್ಶನಕ್ಕೆ ಸಂಬಂಧಪಟ್ಟಒಂದು ಕೈಪಿಡಿಯನ್ನು ಪ್ರಕಟಿಸುತ್ತೇವೆ. ಇದಕ್ಕೆ ಹಿಂದಣ ವರುಷಗಳಂತೆಯೇ ಅತ್ಯಧಿಕವಾಗಿ ಅದರ ಪ್ರತಿಗಳು ಮಾರಾಟವಾಗುವುವು. ಅದರಲ್ಲಿ ಕೆಲವು ಜಾಹಿರಾತುಗಳಿಗೆ ಮಾತ್ರವೇ ಸ್ಥಳವಿರುತ್ತದೆ.

"ಪ್ರಾಸ್ಪೆಕ್ಟಸ್" ಎಂಬ ಪ್ರಸಿದ್ಧಪತ್ರಿಕೆಗಾಗಿಯೂ ಜಾಹಿರಾತು ಪ್ರಕಟಣೆಯ ದರಗಳು ಮುಂತಾದವುಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

[50—6] ಸೆಕ್ರೆಟರಿ, ಮೈಸೂರು ದಸರಾ ಎಗ್ಜಿಬಿಷನ್ ಕಮಿಟಿ,
ಅಠಾರಾಕಚೇರಿ, ಬೆಂಗಳೂರು.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರಾನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲ್ಪಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ.	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ.	೦—೮—೦	೦—೧೪—೦
ಷಟ್ಸ್ಥಲ [illegible]	೦—[illegible]—೦	೦—[illegible]—೦
ಚಾರುಶೀಲೆಚರಿತ್ರೆ	೦—[illegible]—೦	೦—[illegible]—೦
[illegible]	[illegible]	[illegible]
ನೃಪತುಂಗ[illegible]	[illegible]	[illegible]
ಗುರುಶಂಕರರೇತ್ರ್ವರ[illegible]	೦—೧—೦	೦—[illegible]—೦
ಬಸವೇಶ್ವರವಚನ	೦—[illegible]—೦	೦—೧೨—೦
ಸಟೀಕ ಕರ್ನಾಟಕಶಬ್ದಮಂಜರಿ	೦—[illegible]—೦	೦—೧೨—೦
ಸಟೀಕ ಶತಕತ್ರಯ	೦—೦—೧	೧—[illegible]—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕದ. [ಸ್ಟರ | ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮೀದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವ, ಇದ್ದೆ ಕಡಿಮೆಬರೋಣ, ಯಾವದೇಶರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭವು, ಶರೀರ ತರುಣರಂತೆ ಕಾಮಿಚ್ಛಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತನ್ನ ಕೂಶ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. [illegible] ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೪೦ ತೊಲಿಯ ಒಂದು ಡಬ್ಬಿಗೆ ೫| ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, [illegible] ಹೆಸರು ಮತ್ತು ಲಕ್ಷಣ ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಟ್ಟಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ [illegible] ಮುಟ್ಟಿಟ್ಟು ಆಗೋಣ, ಮುಟ್ಟಿಟ್ಟು ಆಗುವ ಕಾಲಕ್ಕೆ ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, [illegible] ಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. [illegible] ೪೦ ವರ್ಷದ ಸ್ತ್ರೀಯರಿಗಾದರೂ [illegible] ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

ಪತ್ತಾ ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ. ಎಂ. ಎಸ್. ಎಂ.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು [illegible] ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು [illegible]

(Registerd Trade Mark)

[illegible]

ವಿಳಾಸ—ಗುರುಬಸವ ಅಂಡ್ ಕಂಪೆನಿ [illegible]

[illegible]

MYSORE CITY MUNICIPALITY.

Applications are invited (to reach the undersigned not later than 15th August 1932) from qualified Sub-Assistant Surgeons for Inoculation Duty against Plague for about three months. Salary Rs. 50 + 10 per mensem.

M. G. SRINIVASA PEIDPETT,
Health Officer,
Mysore City.

Dated 6th August 1932.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಆಗಸ್ಟ್ ತಾ|| ೮ ನೆಯ ಸೋಮವಾರ.

WHAT ABOUT FEDERATION?

The Indians are not infrequently accused as suffering from diarrhea of words and constipation of action, and, the simpletons that they are, they grow into such a belief with the natural trait they possess for minimising their own work and exaggerating that of foreigners. If the history of further constitutional reforms since the appointment of the Simon Commission is read aright, we believe, that that desease is not peculiar to Indians and, if anything, it can be applied to our British friends in a much greater degree. For the last four years talking has commenced on the future of India and numerous venus are being provided time after time for the production of sound and words, for, it is not only the spoken words that are plenty, but the written ones also. The very abundance of the speeches made on this question of Indian Swaraj and the numerous bulky reports that are turned out during the various stages of a varying character, is something astounding and we honestly believe, the world would not have seen such a volume in the case of any other constitution—making. After the Simon Commission Report and its auxiliary central committee of Sir Shanker Nair which took nearly two years came the Round Table Conference with its Sub-Committees. There was also the Butler Committee to consider the certain questions of Indian States only. The various reports of the first and second R. T. C. are bulky enough. At the end of the two sessions of the R. T. C. it was found necessary to appoint three more committees manned exclusively by Britishers to work in India. The three committees have sent up their reports, the last being of the now famous Davidson Committee. The Consultative Committee which was intended to co-ordinate the work of these three committees has been hibernating all these days. Meantime, the controversy has begun over Sir Samuel Hoare's new procedure and that is now preoccupying the minds of the people in India. With all the bewildering literature and the changing developments, we wonder what exactly the situation is. The Federation which appeared so prominently on the horizon is now receding further and further, and the last of the reports of Davidson Committee has dealt the heaviest blow to the idea of Federation. That the Indian States offered themselves readily to join the Federation was a great thing, but we fear that with the novel principles which the Davidson Committee has adumberated in certain respects even willing Indian States may start reconsidering their earlier decisions about joining the Federation. For instance, our own State, Mysore, which was the first to subscribe to the idea of Federation and which was greatly responsible for influencing the opinion of other States, may have lost much of its original enthusiasm. Mysore would be inclined to state to the British Parliament, that if it wants Mysore to join the Federation with the payment of the subsidy, and the badge of inferiority it signifies in relation to other Federal units of British India and of some other States it would not be eager to do so and would prefer to await the constitution of Federation and the attitude of the latter towards this question of subsidy. In fact, the very delay in decesion about the constitution is creating numerous obstacles and allowing new problems to crop up which could properly be the subject matter of decision by the new Government. Meanwhile, what good-will was generated at the R. T. C. is getting lost and feelings are becoming more and more embittered. Delay is dangerous and we trust that the British will realise the wisdom of acting in time.

WATER SUPPLY IN MYSORE

When the Municipal Council is energetically canvassing the public to introduce flushing latrines and many rate-payers are inclined to take up the idea the Water Supply Department is acting very tardily and sufficient co-operation is not forth coming from that direction. In fact the water supply section must be only too eager to co-operate in all such progressive schemes of the Municipal Council. We learn that the applications for water connections are not disposed of quickly with consequent hardship to the rate-payers. We hope no such room for complaints will be given in future.

ಫೆಡರಲ್ ಪರಿಣಾಮವೇನು?

ಭಾರತೀಯರು ಮಾತಿನ ಅತಿಸಾರದಿಂದಲೂ ಕಾರ್ಯದ ಮಲಬದ್ಧತೆಯಿಂದಲೂ ನರಳುತ್ತಿರುವರೆಂದು ಪದೇ ಪದೇ ದೂಷಿಸಲ್ಪಡುತ್ತಿರುವರು. ಸಾಮಾನ್ಯವಾಗಿ ಸ್ವಕಾರ್ಯವನ್ನು ದೊಡ್ಡದಾಗಿ ಹೇಳಿಕೊಳ್ಳದೆ ಅನ್ಯದೇಶೀಯರ ಕಾರ್ಯಗಳನ್ನು ಉತ್ಪ್ರೇಕ್ಷಿಸಿ ಹೇಳುವುದು ಮುಗ್ಧರಾದ ಇವರ ಸ್ವಭಾವಗುಣವಾಗಿದೆ. ಸೈಮನ್ ಕಮಿಷನ್ನು ಏರ್ಪಾಟಾದುದರಿಂದೀಚೆಗೆ ನಡೆದಿರುವ ರಾಜಕೀಯ ಸುಧಾರಣೆಯ ಚರಿತ್ರೆಯನ್ನು ಸರಿಯಾಗಿ ಓದಿದರೆ, ಮೇಲ್ಕಂಡ ವ್ಯಾಧಿಯು ಭಾರತೀಯರಿಗೆ ಸ್ವಭಾವಜನ್ಯವಲ್ಲವೆಂದೂ, ಅದು ಬ್ರಿಟಿಷಿನವರಿಗೆ ವಿಶೇಷವಾಗಿ ಸ್ವಭಾವಜನ್ಯವಾಗಿರುತ್ತದೆಂದೂ ವ್ಯಕ್ತವಾಗುತ್ತವೆ. ಕಳೆದ ನಾಲ್ಕು ವರ್ಷಗಳಿಂದಲೂ ಭಾರತದ ಭಾವಿ ಪರಿಣಾಮವನ್ನು ಕುರಿತು ಮಾತುಕತೆಗಳು ನಡೆಯುತ್ತಿರುವುವಲ್ಲದೆ ವಚನರೂಪವಾಗಿಯೂ ಲೇಖನ ಮೂಲಕವಾಗಿಯೂ ಅಕ್ಷೋತ್ತರಗಳು ಕೊಡಲ್ಪಡುತ್ತಿವೆ. ಭಾರತ ಸ್ವರಾಜ್ಯ ಸಮಸ್ಯೆ ವಿಚಾರವಾಗಿ ಮಾಡಲ್ಪಟ್ಟ ಅಪರಿಮಿತಭಾಷಣಗಳೂ, ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಸ್ವರೂಪಗಳಲ್ಲಿ ಮಾಡಲ್ಪಟ್ಟ ಅನೇಕ ದೊಡ್ಡ ದೊಡ್ಡ ವರದಿಗಳೂ ಆಶ್ಚರ್ಯಕರವಾಗಿವೆ ಮತ್ತು ಇತರ ವಿಧವಾದ ರಾಜಕೀಯ ಸುಧಾರಣೆಗಳ ವಿಚಾರವಾಗಿ ಇಷ್ಟು ಅಗಾಧವಾದ ವರದಿಯು ಮಾಡಲ್ಪಟ್ಟಿರುವುದನ್ನು ಲೋಕವು ನೋಡಿಯೇ ಇಲ್ಲ. ಸೈಮನ್ ಕಮಿಷನ್ನಿನ ಮತ್ತು ಇದರ ಸಹಾಯಕ್ಕಾಗೇ ಏರ್ಪಟ್ಟಿದ್ದ ಸರ್ ಶಂಕರನ್ ನಾಯರ್‌ರವರ ಸೆಂಟ್ರಲ್ ಕಮಿಟಿಯ ವರದಿಗಳು ಪ್ರಕಟವಾದ ೨ ವರ್ಷಗಳ ತರುವಾಯ ರೌಂಡುಟೇಬಿಲು ಕಾನ್ಫರೆನ್ಸೂ ಅದರ ಉಪಸಭೆಗಳೂ ಹುಟ್ಟಿದುವು. ಭಾರತ ದೇಶೀಯ ಸಂಸ್ಥಾನಗಳಿಗೆ ಸಂಬಂಧಪಟ್ಟ ಕೆಲ ಸಮಸ್ಯೆಗಳನ್ನು ಪರ್ಯಾಲೋಚಿಸುವುದಕ್ಕಾಗಿ ಬಟ್ಲರ್ ಕಮಿಟಿಯು ಸಹ ಹುಟ್ಟಿತು. ಮೊದಲನೆಯ ಮತ್ತು ಎರಡನೆಯ ರೌಂಡು ಟೇಬಿಲ್ ಸಭೆಗಳ ಅನೇಕ ವರದಿಗಳು ಬಹಳ ದೊಡ್ಡವಾಗಿವೆ. ಎರಡನೆಯವೇಳೆ ನೆರೆದಿದ್ದ ರೌಂಡುಟೇಬಿಲ್ ಸಭಾಂತ್ಯದಲ್ಲಿ ಭಾರತದೇಶಕ್ಕೆ ಸ್ವತಃ ಬಂದು ವಿಚಾರಿಸುವುದಕ್ಕಾಗಿ ಬರೇ ಬ್ರಿಟಿಷರಿಂದ ಕೂಡಿದ 3 ಕಮಿಟಿಗಳು ನಿಯಮಿಸಲ್ಪಟ್ಟುವು. ಅವು ಇಲ್ಲಿಗೆ ಬಂದು ತಮ್ಮ ಕೆಲಸವನ್ನು ಪೂರೈಸಿಕೊಂಡು ಹೋಗಿ ತಮ್ಮ ವರದಿಗಳನ್ನು ಪ್ರಕಟಿಸಿರುತ್ತವೆ. ಈ ಮೂರು ಕಮಿಟಿಗಳ ಕೆಲಸವನ್ನು ಪರಿಶೀಲಿಸಿ ತಕ್ಕ ಸಲಹೆಯನ್ನು ಕೊಡಲು ನಿಯಮಿತವಾಗಿರುವ ಕನ್ಸಲ್ಟೇಟಿವ್ ಕಮಿಟಿಯು ಚಳಿಯಿಂದ ನಿಂದ್ರಿಸುತ್ತಿರುವುದು ಈ ಮಧ್ಯೆ ಭಾರತ ಮಂತ್ರಿಗಳಾದ ಸರ್ ಸ್ಯಾಮ್ಯುಯಲ್ ಹೋರ್‌ರವರ ಭಿನ್ನಾಭಿಪ್ರಾಯವು ಪ್ರಕಟವಾಗಿ ಭಾರತೀಯರ ಮನಸ್ಸನ್ನು ಕೆಡಿಸಿರುತ್ತದೆ. ಪ್ರಕಟನೆಗಳು ದಿಗಿಲನ್ನುಂಟುಮಾಡತಕ್ಕವಾಗಿದ್ದಾಗ್ಯೂ, ಸುಧಾರಣೆಯ ರೀತಿಯು ಬದಲಾಯಿಸುತ್ತಿದ್ದಾಗ್ಯೂ ವಾಸ್ತವ್ಯವಾದ ಪರಿಸ್ಥಿತಿಯೇನೆಂಬುದು ಗೊತ್ತಾಗದಿರುವುದು ಆಶ್ಚರ್ಯವು. ಬಹಳ ಪ್ರಾಮುಖ್ಯವಾಗಿದ್ದ ಫೆಡರೇಷನ್ನು ಈಗ ಹಿಂದು ಹಿಂದಕ್ಕೆ ಸರಿಯುತ್ತಿರುವುದಲ್ಲದೆ ಡೇವಿಡ್‌ಸನ್ ಕಮಿಟಿಯವರು ಅದು ತಲೆಯೆತ್ತದಂತೆ ಬಲವಾದ ಪೆಟ್ಟನ್ನು ಹಾಕಿರುತ್ತಾರೆ. ಭಾರತ ದೇಶೀಯ ಸಂಸ್ಥಾನಗಳು ಈ ಫೆಡರೇಷನ್ನಿನಲ್ಲಿ ಸೇರಲೊಪ್ಪಿ ಸಿದ್ಧವಾಗಿದ್ದುವು. ಆದರೆ ಡೇವಿಡ್‌ಸನ್ ಕಮಿಟಿಯವರು ಕೆಲ ಸಂದರ್ಭಗಳಲ್ಲಿ ಹೇಳಿರುವ ವಿಚಿತ್ರ ವಿಧಾನದಿಂದ ಇಷ್ಟಪಟ್ಟಿದ್ದ ಸಂಸ್ಥಾನಗಳು ಕೂಡ ಫೆಡರೇಷನ್ನಿನಲ್ಲಿ ಸೇರಬೇಕೆ ಬೇಡವೆ ಎಂದು ಪುನರಾಲೋಚಿಸಲುಪಕ್ರಮಿಸಿರುತ್ತವೆ. ಇದಕ್ಕೆ ನಿದರ್ಶನವಾಗಿ, ಈ ಫೆಡರೇಷನ್ನಿಗೆ ಸೇರಲು ಎಲ್ಲವಕ್ಕಿಂತಲ್ಲೂ ಮೊದಲು ಸಮ್ಮತಿಸಿದ ಮತ್ತು ಇತರ ಸಂಸ್ಥಾನಗಳೂ ಸೇರುವಂತೆ ಬಹಳ ಪ್ರೋತ್ಸಾಹಿಸಿ ಪ್ರಯತ್ನಿಸಿದ ನಮ್ಮ ಮೈಸೂರು ಸಂಸ್ಥಾನಕ್ಕೆ ಮೊದಲಿದ್ದ ಉತ್ಸಾಹವು ಈಗ ಮಾಯವಾಗಿರುತ್ತದೆ ಕಪ್ಪವನ್ನು ಸಲ್ಲಿಸುತ್ತ ಮತ್ತು ಬ್ರಿಟಿಷ್ ಇಂಡ್ಯಾದ ಇತರ ಫೆಡರಲ್ ಭಾಗಗಳಿಗೂ, ದೇಶೀಯ ಸಂಸ್ಥಾನಗಳಿಗೂ ತಾನು ಕೀಳೆಂದು ಹೇಳಿಸಿಕೊಳ್ಳುತ್ತ ಮೈಸೂರು ಸಂಸ್ಥಾನವು ಫೆಡರೇಷನ್ನಿಗೆ ಸೇರಬೇಕೆಂದು ಬ್ರಿಟಿಷ್ ಪಾರ್ಲಿಮೆಂಟಿನವರು ಅಪೇಕ್ಷಿಸುವುದಾದರೆ, ಹಾಗೆ ಸೇರಲು ತನಗಿಷ್ಟವಿಲ್ಲವೆಂದೂ, ಫೆಡರೇಷನ್ನು ರಚನೆಯಾಗುವವರೆಗೂ, ಪೊಗದಿಯ ವಿಚಾರದಲ್ಲಿ ಅದರ ಮನೋಭಾವವು ವ್ಯಕ್ತವಾಗುವವರೆಗೂ ತಾನು ನಿರೀಕ್ಷಿಸಿಕೊಂಡಿರುವುದೆಂದೂ ನಮ್ಮ ಸಂಸ್ಥಾನವು ಪಾರ್ಲಿಮೆಂಟಿಗೆ ತಿಳಿಸಬೇಕಾಗಿ ಬರುವುದು. ರಾಜ್ಯಾಂಗ ರಚನೆಯ ವಿಚಾರವು ಇತ್ಯರ್ಥವಾಗುವಲ್ಲಿ ಕಾಲಹರಣವಾಗುತ್ತಿರುವುದರಿಂದಲೇ ಅನೇಕ ತೊಡಕುಗಳೂ, ನೂತನ ಪ್ರಭುತ್ವದವರಿಂದ ಬಗೆಹರಿಸಲ್ಪಡಬೇಕಾದಂತಹ ಹೊಸ ಸಮಸ್ಯೆಗಳೂ ಹುಟ್ಟಲು ಅವಕಾಶವಾಗಿರುತ್ತದೆ. ಈ ಮಧ್ಯೆ ರೌಂಡುಟೇಬಿಲು ವಿಚಾರವಾಗಿದ್ದ ಸದಭಿಪ್ರಾಯವು ಮಾಯವಾಗಿ ಮನಃಕ್ಲೇಶವು ವಿಶೇಷವಾಗಿ ಹೆಚ್ಚುತ್ತಿರುವುದು. ಆಲಸ್ಯವು ಮಹಾನರ್ಥಕಾರಿಯಾದುದರಿಂದ ಬ್ರಿಟಿಷರು ಸಕಾಲದಲ್ಲಿ ವಿವೇಕದಿಂದ ವರ್ತಿಸುವರೆಂದು ನಂಬಿ ನಿರೀಕ್ಷಿಸುತ್ತೇವೆ.

ರಾಜಧಾನಿಯಲ್ಲಿ ನೀರಿನ ಸರಬರಾಯಿ

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನವರು ಮನೆಗಳ ಕಕಸ್ಸಿನಲ್ಲಿ ಜಲಮಲವು ನೀರಿನ ಸಹಾಯದಿಂದ ತಾನಾಗಿ ಬಚ್ಚಲಿಗೆ ಕೊಚ್ಚಿಹೋಗುವ ಕ್ರಮವನ್ನು ಅನುಸರಿಸಬೇಕೆಂದು ಪ್ರಜೆಗಳಿಗೆ ಬೋಧಿಸುತ್ತಿರುವುದರ ಮೇರಿಗೆ ಅನೇಕ ಕಂದಾಯದಾರರು ನೂರಾರು ರೂಪಾಯಿಗಳನ್ನು ವೆಚ್ಚಮಾಡಿ ಕಕಸನ್ನು ನೂತನ ವಿಧಾನದಲ್ಲಿ ಕಟ್ಟಿಸಿಯೂ ಕಟ್ಟಿಸುವವರಾಗಿಯೂ ಇರುವರು, ಆದರೆ ನೀರನ್ನೊದಗಿಸುವ ಶಾಖೆಯವರು ಮಾತ್ರ ಸಾಕಷ್ಟು ನೀರನ್ನೊದಗಿಸುವ ಏರ್ಪಾಟನ್ನು ಮಾಡಿ ಮ್ಯುನಿಸಿಪಲ್ ಕೌನ್ಸಿಲಿನವರ ಪ್ರಯತ್ನವು ಸಫಲವಾಗಲು ಸಹಕರಿಸದಿರುವುದು ಬಹಳ ಶೋಚನೀಯವಾಗಿರುತ್ತದೆ. ಜನಾರೋಗ್ಯ ಕಾರ್ಯಗಳಲ್ಲಿ ಮುಖ್ಯವಾದ ಈ ಕಕಸ್ಸಿನ ಸುಧಾರಣೆಯ ಕ್ರಮವು ಸಫಲವಾಗುವಲ್ಲಿ ಮ್ಯುನಿಸಿಪಾಲಿಟಿಯವರೊಡನೆ ಸಹಕರಿಸಲು ಕುತೂಹಲವುಳ್ಳವರಾಗಿರುವುದು ಅತ್ಯಾವಶ್ಯಕವು. ಕಕಸ್ಸಿಗೆ ನೀರನ್ನು ಕೊಡಬೇಕೆಂದು ಬರೆದುಕೊಂಡಿರುವ ಅನೇಕ ಅರ್ಜಿಗಳು ಇನ್ನೂ ಸಫಲವಾಗದೆ ಕಂದಾಯದಾರರಿಗೆ ಬಹಳ ತೊಂದರೆಯಾಗಿರುತ್ತದೆಂದು ಕೇಳುತ್ತೇವಾದುದರಿಂದ, ಇತಃಪರ ಇಂತಹ ದೂರಿಗೆ ನೀರಿನ ಶಾಖೆಯವರು ಅವಕಾಶಕೊಡುವುದಿಲ್ಲವೆಂದು ನಿರೀಕ್ಷಿಸುತ್ತೇವೆ.

ಸ್ತ್ರೀ ವೈಮಾನಿಕ ಪ್ರಪಂಚ ಯಾತ್ರೆ

ಮಿಡ್ನಾಪುರ ಡಿಸ್ಟ್ರಿಕ್ಟಿಗೆ ಸೇರಿದ ನಂದಿ ಗ್ರಾಮವಾಸಿ ತಿಲೋಕ ಮಜುಂದಾರ್‌ರವರ ಮಗಳು ಕುಮಾರಿ ಸೇವಾರಾಣಿ ಎಂಬ ಬಂಗಾಳಿ ಯುವತಿಯು ಆಕಾಶ ವಿಮಾನದಲ್ಲಿ ಪ್ರಪಂಚ ಯಾತ್ರೆಯನ್ನು ಮಾಡಲು ನಿಶ್ಚಯಿಸಿರುವಳು.

ಪಿನ್ಷನ್ ಪಡೆದ ಸಬ್ ಜಡ್ಜಿ ಮತ್ತು ಮೆಜಿಸ್ಟ್ರೇಟು ಗಳು ವಕೀಲಿ ವೃತ್ತಿಯನ್ನವಲಂಬಿಸಬಾರದು.

ಪಿನ್ಷನ್ ತೆಗೆದುಕೊಂಡು ಉದ್ಯೋಗದಿಂದ ನಿವೃತ್ತರಾಗುವ ಸಬ್‌ಜಡ್ಜಿಗಳೂ, ಮೆಜಿಸ್ಟ್ರೇಟರುಗಳೂ ವಕೀಲವೃತ್ತಿಯನ್ನವಲಂಬಿಸದಂತೆ ಅಪ್ಪಣೆಯಾಗಬೇಕೆಂದು ನಾಗಪುರದ ಹೈಕೋರ್ಟು ವಕೀಲರುಗಳ ಸಂಘದವರು ಹೋಂ ಮೆಂಬರಿಗೆ ಬಿನ್ನೈಸಿಕೊಂಡುದರ ಮೇಲೆ, ವಿಜ್ಞಾಪನೆಯನ್ನು ಆಲೋಚಿಸುವುದಾಗಿ ಮೆಂಬರು ಉತ್ತರವಿತ್ತರು.

ಪ್ರಸಿದ್ಧ ಧನಿಕನ ಮರಣ

ಕಲಕತ್ತಾದಲ್ಲಿ ಪ್ರಸಿದ್ಧ ಧನಿಕನೂ ಕುದುರೆ ಪಂದ್ಯದಲ್ಲಿ ಆಸಕ್ತನೂ ಆಗಿದ್ದ ಪಿಲ್ಲಿಂಗ್‌ಫೋರ್ಡ್ ಎಂಬಾತನು ಕಳೆದ ತಾ|| 28 ರಲ್ಲಿ ತನ್ನ ಸ್ನಾನದ ಮನೆಯೊಳಗೆ ಕುರ್ಚಿಯ ಮೇಲೆ ಕುಳಿತುಕೊಂಡು ಗುಂಡಿನಿಂದ ಮುಖಕ್ಕೆ ಹೊಡೆದುಕೊಂಡು ಮೃತನಾದನು. ಇವನಿಗೆ 70 ವರ್ಷ ವಯಸ್ಸಾಗಿದ್ದಿತು. ಈತ ತನ್ನ 10 ಲಕ್ಷ ರೂ. ಬೆಲೆಯ ಆಸ್ತಿಯನ್ನು ತಂಗಿಯ ಮಗನಿಗೆ ಸಲ್ಲುವಂತೆ ಬರೆದಿಟ್ಟಿದ್ದನು.

೨೫,೦೦೦ ರೂ ನ ಅಫೀಮು

25,000 ರೂ. ಬೆಲೆಯ ಅಫೀಮನ್ನು ಲೈಸೆನ್ಸಿಲ್ಲದೆ ಇಟ್ಟುಕೊಂಡಿದ್ದುದಕ್ಕಾಗಿ ಪಾಜಾದಿಬೀಬಿಯೂ, ಆಕೆಯ ಮೂವರು ಮಕ್ಕಳೂ, ಬೇರೆ ಇಬ್ಬರು ಸ್ತ್ರೀಯರೂ ಕಲಕತ್ತಾ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು ಪಾಜಾದಿ ಮತ್ತು ಆಕೆಯ ಇಬ್ಬರು ಮಕ್ಕಳು 20,000 ರೂ. ಹೊಣೆಯ ಮೇಲೂ, ಉಳಿದವರು 2000 ರೂ. ಹೊಣೆಯ ಮೇಲೂ ಬಿಡಲ್ಪಟ್ಟರು.

ದೇವದಾಸ ಗಾಂಧಿಯವರ ಬಿಡುಗಡೆ

ದೇವದಾಸ ಗಾಂಧಿಯವರು ೨ ತಿಂಗಳಿಂದಲೂ ಅಸ್ವಸ್ಥರಾಗಿರುವುದರಿಂದ ಡಾಕ್ಟರ ಪರೀಕ್ಷೆಯು ನಡೆದು ಯಾವ ಷರತ್ತೂ ಇಲ್ಲದೆ ಕಳೆದ ತಾ|| 31 ರಲ್ಲಿ ಕಾರಾಗೃಹ ಬಂಧನದಿಂದ ಬಿಡಲ್ಪಟ್ಟರು. ಇವರು ಇನ್ನೂ 1 ತಿಂಗಳಕಾಲ ಬಂಧನದಲ್ಲಿರಬೇಕಾಗಿದ್ದಿತು. ಇವರಿಗೆ ವಿಷಮಸೀತ ಜ್ವರ ಬರುತಲಿದ್ದು ಈಗ ಗುಣವಾಗಿರುವುದಾದರೂ ಸಂಪೂರ್ಣಾರೋಗ್ಯವುಂಟಾಗಿಲ್ಲ. ಇವರು ಚಿಕಿತ್ಸೆಗಾಗಿ ಕಾಶಿಗೆ ಹೋಗಿ ಶಿವಪ್ರಸಾದಗುಪ್ತರ ಮನೆಯಲ್ಲಿಳಿದುಕೊಂಡಿರುವರು.

ನಿಜಾಂ ಕುಮಾರರ ಯೂರೋಪು ಪ್ರಯಾಣ

ಹೈದರಾಬಾದು ಸಂಸ್ಥಾನಧಿಪತಿಗಳಾದ ನೈಜಾಂರವರ ಪುತ್ರರೀರ್ವರೂ ತಮ್ಮ ಪತ್ನಿಯರ ಸಮೇತ ದೇಹಾರೋಗ್ಯ ನಿಮಿತ್ತವಾಗಿ ಬೆಂಗಳೂರಿಗೆ ಬಂದು ಕೆಲ ಕಾಲದವರೆಗಿದ್ದರಷ್ಟೆ. ಜ್ಯೇಷ್ಠಪುತ್ರರಾದ ಯುವರಾಜರ ದೇಹಸ್ಥಿತಿಯು ಇನ್ನೂ ಅನುಕೂಲವಾಗದಿರುವ ಪ್ರಯುಕ್ತ ವೈದ್ಯರ ಅಭಿಪ್ರಾಯದಂತೆ ಪತ್ನೀಕರಾಗಿ ಯೂರೋಪಿಗೆ ಕೂಡಲೇ ಪ್ರಯಾಣಮಾಡಿ ಬರುವ ನವಂಬರಿನಲ್ಲಿ ಸ್ವದೇಶಕ್ಕೆ ಬರುವವರಾಗಿರುವರು. ಇವರ ಸಹೋದರ ದಂಪತಿಗಳು ಬರುವ ಆಗಸ್ಟ್ ತಿಂಗಳಲ್ಲಿ ಯೂರೋಪಿಗೆ ಪ್ರಯಾಣಮಾಡಿ ನವಂಬರಿನಲ್ಲಿ ಹಿಂದಿರುಗಿ ಬರುವರು.

ನಿರಪರಾಧಿಹತ್ಯವು ಮಹಾಪಾಪವು

ಪೆಶಾವರು ಸಿವಿಲ್ ಸರ್ಜನರಾಗಿದ್ದ ಕ್ಯಾಪ್ಟನ್ ಕೋಲ್‌ಸ್ಟ್ರೀಂರವರ ಕೊಲೆಯ ವಿಚಾರದಲ್ಲಿ ಜಮಿಯತುಲ ಉಲ್ಮಾರವರು ತಮ್ಮ ಅಸಮಾಧಾನವನ್ನು ಈ ಪ್ರಕಾರವಾಗಿ ಪ್ರಕಟಿಸಿರುತ್ತಾರೆ.—"ಈ ಹತ್ಯವನ್ನು ನಾನು ಬಹಳ ಕಠಿಣವಾಗಿ ಖಂಡಿಸುತ್ತೇನೆ. ನಿರಾಪರಾಧಿಯನ್ನು ಕೊಲ್ಲುವುದು ಮಹಾಪಾಪವೆಂದು ಖುರಾನಿನಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವುದನ್ನು ಮಹಮ್ಮದೀಯ ಯುವಕರೆಲ್ಲರೂ ಚೆನ್ನಾಗಿ ಗ್ರಹಿಸಬೇಕು. ಇಂತಹ ಕಾರ್ಯವನ್ನು ಮಾಡತಕ್ಕವನು ಮಹಾನೀಚ, ವಂಚಕ ಮತ್ತು ನರಹಂತಕ, ಯುದ್ಧ ಸಮಯದಲ್ಲಿ ಸಹ ಯುದ್ಧಮಾಡಲಾರದವರನ್ನೂ, ಶಿಶುಗಳನ್ನೂ, ಮಕ್ಕಳನ್ನೂ, ಸ್ತ್ರೀಯರನ್ನೂ, ವೃದ್ಧರನ್ನೂ ಕೊಲ್ಲಕೂಡದೆಂದು ಖುರಾನಿನಲ್ಲಿ ಹೇಳಲ್ಪಟ್ಟಿದೆ. ಹೀಗಿರುವಾಗ್ಗೆ ಜನೋಪಕಾರಿಯಾದ ವೈದ್ಯನನ್ನು ಕೊಲ್ಲುವುದು ಘೋರ ಪಾಪವು. ಕೋಲ್ಡ್‌ಸ್ಟ್ರೀಂರವನ್ನು ಕೊಲೆ ಮಾಡಿದ ಮನುಷ್ಯನು ಕೋರ್ಟಿನಲ್ಲಿ ತಿಳಿಸಿರುವ ಕಾರಣಗಳೆಲ್ಲ ನಿರಾಧಾರವಾದುವು. ಆದುದರಿಂದ ಸರಹದ್ದು ರಾಷ್ಟ್ರದ ಯುವಕರು ಇಂತಹ ದುಷ್ಕಾರ್ಯವನ್ನು ಮಾಡಬಾರದೆಂದು ನಾನು ಎಚ್ಚರಿಸುತ್ತೇನೆ"

ಬೋಲಿವಿಯಾ-ಪೆರುಗ್ವೆ ಯುದ್ಧ

ದಕ್ಷಿಣ ಅಮೇರಿಕೆಯಲ್ಲಿ ಬೊಲಿವಿಯ, ಪರ್ಗ್ವೆ ಅರ್ಜೆಂಟೈನ್ ಮತ್ತು ಉರ್ಗ್ವೆ ಇವುಗಳು ನೆರೆ ದೇಶಗಳಾಗಿರುತ್ತವೆ. ಇವುಗಳಲ್ಲಿ ಬೊಲೀವಿಯಾ ಪೆರ್ಗ್ವೆ ದೇಶಗಳಿಗೆ ಚಾಕೊ ಎಂಬ ಪ್ರಾಂತ್ಯದ ವಿಚಾರದಲ್ಲಿ ಮನಸ್ಪರ್ಧೆಯುಂಟಾಗಿ ಯುದ್ಧವಾಗುವ ಸಂಭವವನ್ನು ಕಂಡು ಪೆರುಗ್ವೆ ದೇಶವು ತಮ್ಮುಭಯ ದೇಶಗಳ ಕಲಹವನ್ನು ಬಗೆಹರಿಸುವಂತೆ ನಾನಾರಾಷ್ಟ್ರಗಳ ಸಂಘಾಧ್ಯಕ್ಷರಿಗೆ ಬಿನ್ನೈಸಿಕೊಂಡಿತು. ಅದರಮೇಲೆ ಈ ಸಂಘದವರು ಬೋಲಿವಿಯಾದೇಶದ ಅಭಿಪ್ರಾಯವನ್ನು ಕೇಳಿರುವಲ್ಲಿ, ಒಡಂಬಡಿಕೆಗೆ ತಾನೊಪ್ಪುವುದಿಲ್ಲವೆಂದೂ ಅವಶ್ಯವಾದಲ್ಲಿ ಕಡೆಯವರೆಗೂ ಯುದ್ಧಮಾಡಿ, ಉಭಯ ದೇಶದ ವ್ಯವಹಾರವನ್ನು ಪರಿಷ್ಕರಿಸಿಕೊಳ್ಳುತ್ತೇನೆಂದೂ ಸಂಘದವರಿಗೆ ತಿಳಿಸಿಬಿಟ್ಟಿತು. ಇದರ ಮನೋಗತವನ್ನು ಸಂಘದವರು ಇಂಗ್ಲೆಂಡು ಫ್ರಾನ್ಸು, ಜರ್ಮನಿ, ಇಟಲಿ, ಸ್ಪೇನು ಮೊದಲಾದ ದೇಶಗಳಿಗೆ ತಿಳಿಸಿರುವುದಾಗಿ ವರ್ತಮಾನವಿದೆ. ಚಾಕೊ ಅಡವಿಯಲ್ಲಿ ಉಭಯರಿಗೂ ಯುದ್ಧವಾಗುತ್ತಿದೆ. ಅರ್ಜನ್ಟೈನ್ ದೇಶದ ಸೇನೆಯು ತಾಟಸ್ಥ್ಯರಕ್ಷಣೆಗಾಗಿ ಬೋಲಿವಿಯಾ ಸರಹದ್ದಿಗೆ ಹೋಗಿರುವುದು. ಪೆರುಗ್ವೆಯಲ್ಲಿ ಪುರುಷರಲ್ಲದೆ ಸ್ತ್ರೀಯರು ಸಹ ದೇಶರಕ್ಷಣೆಗಾಗಿ ಸೇನೆಯಲ್ಲಿ ಸೇರುತ್ತಿರುವರು. ಬೊಲಿವಿಯಾದ ಆಕಾಶ ವಿಮಾನಗಳು ಚಿಕಾಗೊ ಅಡವಿಯಲ್ಲಿ ಸಿಡಿಮದ್ದುಗಳನ್ನು ಹಾಕುತ್ತಿರುವುವು.

ಸಾಂಘಿಕ ಪ್ರಾತಿನಿಧ್ಯವೂ ಒಡ್ವೈಯರ ಅಭಿಪ್ರಾಯವೂ

ಸಾಂಘಿಕ ಪ್ರಾತಿನಿಧ್ಯ ಸಮಸ್ಯ ವಿಚಾರದಲ್ಲಿ ತಮ್ಮಭಿಪ್ರಾಯವನ್ನು ಸರ್ ಮೈಕೇಲು ಒಡ್ವೈಯರು ಈ ಪ್ರಕಾರವಾಗಿ ಮಾರ್ನಿಂಗ್ ಪೋಸ್ಟ್ ಪತ್ರಿಕೆಯಲ್ಲಿ ಪ್ರಕಟಿಸಿರುವರು:—"ಪಂಜಾಬು ಶಾಸನಸಭೆಯಲ್ಲಿ ಮಹಮ್ಮದೀಯರು ಅಪೇಕ್ಷಿಸುವ ಮೇರಿಗೆ ಅವರ ಜನ ಸಂಖ್ಯಾನುಗುಣವಾಗಿ ಹೆಚ್ಚು ಮಂದಿ ಪ್ರತಿನಿಧಿಗಳಿರಬೇಕು. ಸಿಕ್ಕರು ಮಹಾಯೋಧರೂ, ಈವರೆಗೂ ದೊರತನದವರಿಗೆ ಬಹಳ ಸಹಾಯಮಾಡಿರುವವರೂ ಆಗಿರುವುದರಿಂದ ಅವರಿಗೆ ಪ್ರತ್ಯೇಕ ಸ್ಥಾನಗಳ (ವೆಯಿಟೇಜು) ನ್ನು ಕೊಡಬೇಕು. ಬ್ರಿಟಿಷ್‌ನವರಲ್ಲಿ ಪ್ರಭುತ್ವೋದ್ಯೋಗಿಗಳಿಗೆ 100 ಕ್ಕೆ 15, 20 ಮಂದಿ ಪ್ರತಿನಿಧಿಗಳಿರಬೇಕು. ಶಾಸನ ಸಭೆಯಲ್ಲಿ ಅಧಿಕ ಸಂಖ್ಯಾಕ ಪ್ರತಿನಿಧಿಗಳಿರುವ ಪಕ್ಷದವರು ತಮ್ಮ ಅಧಿಕಾರವನ್ನು ದುರ್ವಿನಿಯೋಗ ಮಾಡದಂತೆ ನೋಡಿಕೊಳ್ಳಲಿಕ್ಕೂ, ಬ್ರಿಟಿಷರ ಸಂಪ್ರದಾಯವನ್ನು ಕಾಪಾಡಲಿಕ್ಕೂ, ಬ್ರಿಟಿಷರ ಲಾಭವನ್ನು ಗಮನಿಸಲಿಕ್ಕೂ ಬ್ರಿಟಿಷ್ ಉದ್ಯೋಗಿಗಳು ಕೂಡ ಶಾಸನಸಭೆಯಲ್ಲಿ ಮುಖ್ಯವಾಗಿರಬೇಕು. ಶಾಸನಸಭೆಗಳಲ್ಲಿ ಬ್ರಿಟಿಷ್ ಉದ್ಯೋಗಿಗಳ ಪ್ರತಿನಿಧಿಗಳು ಬ್ರಿಟನ್ ದೇಶಕ್ಕೆಲ್ಲ ಪ್ರತಿನಿಧಿಗಳು ಆಗಿರುವರಲ್ಲದೆ ಬರೇ ಇಂಡ್ಯಾದಲ್ಲಿರುವ ಬ್ರಿಟಿಷಿನವರಿಗೆ ಮಾತ್ರ ಪ್ರತಿನಿಧಿಗಳಾಗಿರುವವರಲ್ಲ. ಸಾಂಘಿಕ ಪ್ರಾತಿನಿಧ್ಯವು ಪಾಶ್ಚಾತ್ಯ ಪ್ರಜಾಸತ್ತಾತ್ಮಕಕ್ಕೆ ವಿರೋಧವು. ಇದನ್ನು ಏರ್ಪಡಿಸಿದಲ್ಲಿ ಭಾರತ ರಾಜಕೀಯ ನಾಯಕರುಗಳಲ್ಲಿ ಕೆಲರ ಅಭಿಪ್ರಾಯಕ್ಕೆ ವಿರೋಧವುಂಟಾಗುವುದು. ಆದುದರಿಂದಲೇ ಈ ಸಾಂಘಿಕ ಪ್ರಾತಿನಿಧ್ಯ ಸಮಸ್ಯ ಪರಿಷ್ಕರಿಸಲ್ಪಡಲಿಲ್ಲ."

ಬಂಗಾಳ ರಾಷ್ಟ್ರ ಪುನರ್ನಿರ್ಮಾಣ

ಬಂಗಾಳೀ ಭಾಷೆಯನ್ನಾಡತಕ್ಕ ಜನರಿರುವ ಪ್ರಾಂತಗಳೆಲ್ಲ ಬಂಗಾಳಾ ರಾಷ್ಟ್ರಕ್ಕೆ ಈಗ ಸೇರಿಸಲ್ಪಟ್ಟಿಲ್ಲ. ಆದುದರಿಂದ ಅಂತಹ ಪ್ರಾಂತಗಳನ್ನೆಲ್ಲ ಬಂಗಾಳ ರಾಷ್ಟ್ರಕ್ಕೆ ಸೇರಿಸಿ ಬಂಗಾಳ ರಾಷ್ಟ್ರವನ್ನು ಪುನರ್ನಿರ್ಮಾಣ ಮಾಡಬೇಕೆಂಬ ಬಗೆಗೆ ಬಂಗಾಳ ಶಾಸನ ಸಭೆಯ ಮೆಂಬರಾದ ಎನ್. ಕೆ. ಬಾಸುಯವರು ಒಂದು ತೀರ್ಮಾನವನ್ನುಪಪಾದಿಸಿದರು. ಆದರೆ ಮಹಮ್ಮದೀಯ ಮೆಂಬರುಗಳು ಈ ತೀರ್ಮಾನವನ್ನು ಪ್ರತಿಘಟಿಸಿದರು. ನೆರೆಹೊರೆ ರಾಷ್ಟ್ರಗಳಲ್ಲಿ ಸೇರಿರುವ ಕೆಲ ಪ್ರಾಂತಗಳನ್ನು ಬಂಗಾಳ ರಾಜಧಾನಿಗೆ ಹೊಸದಾಗಿ ಸೇರಿಸುವುದರಿಂದ ರಾಜಧಾನಿಯ (ಕಲಕತ್ತಾದ) ಲ್ಲಿರುವ ಜನ ಸಂಖ್ಯೆಯು ವೃದ್ಧಿಯಾಗಿ ಮಹಮ್ಮದೀಯರ ಸಂಖ್ಯೆಗಿಂತ ಹಿಂದುಗಳ ಸಂಖ್ಯೆಯು ಹೆಚ್ಚುವುದು. ಅಂದರೆ ಅಂತಹ ರಾಷ್ಟ್ರೀಯ ಪುನರ್ನಿರ್ಮಾಣವು ಕೆಲಸಕ್ಕೆ ಬಾರದೆಂಬ ಅಭಿಪ್ರಾಯ ಸೂಚಕವಾಗಿ ಮಹಮ್ಮದೀಯರು ಭಾಷಣಮಾಡಿದರು. ಸದ್ಯದಲ್ಲಿ ಬಂಗಾಳ ರಾಷ್ಟ್ರ ನಿರ್ಮಾಣವು ಸರಿಯಾಗಿಲ್ಲವೆಂಬ ಮಾತು ನಿಜವಾಗಿರುವುದಾದರೂ ಈ ತರುಣದಲ್ಲಿ ರಾಷ್ಟ್ರೀಯ ಪುನರ್ನಿರ್ಮಾಣಕ್ಕೆ ಪ್ರಯತ್ನಿಸುವುದು ನೂತನ ರಾಜಕೀಯ ಸಂಸ್ಕರಣಗಳಿಗೆ ಭಂಗಕರವೆಂದೂ ಅಪ್ರಶಸ್ತವೆಂದೂ ಪ್ರಭುತ್ವದ ಮೆಂಬರು ಹೇಳಿದರು. ಇದರ ಮೇಲೆ ತೀರ್ಮಾನವು ಓಟಿಗೆ ಹಾಕಲ್ಪಡುವಲ್ಲಿ 41 ಮಂದಿ ಅನುಕೂಲವಾಗಿಯೂ 60 ಮಂದಿ ಪ್ರತಿಕೂಲವಾಗಿಯೂ ಓಟನ್ನು ಕೊಟ್ಟರು. ಇದರಿಂದ ಬಾಸುಯವರ ತೀರ್ಮಾನವು ಬಿದ್ದುಹೋಯಿತು.

ಮದ್ರಾಸು ಹೈಕೋರ್ಟು ತೀರ್ಪು

ಹಿಂದು ಲಾ: ದಾಸೀಪುತ್ರನ ಹಕ್ಕು:—ಹಿಂದು ಲಾ ಪ್ರಕಾರ ಶೂದ್ರರಲ್ಲಿ ದಾಸೀ ಪುತ್ರನಿಗೆ ಅಂದರೆ ಮಡಗಿಕೊಂಡವಳ ಮಗನಿಗೆ ವಾರಸತ್ವ ಹಕ್ಕುಂಟು. ಒಬ್ಬ ಮನುಷ್ಯನು ಸತ್ತುಹೋದಾಗ್ಗೆ ಅವನಿಗೆ ಮಡಗಿಕೊಂಡವಳ ಮಗನೂ, ಮದುವೆಯಾದ ಹೆಂಡತಿಯೂ ಇದ್ದರು. ಮಡಗಿಕೊಂಡವಳ ಮಗ ತಂದೆಯಾಸ್ತಿಯಲ್ಲಿ ಅರ್ಧ ಭಾಗವನ್ನೂ ಮದುವೆಯಾದ ಹೆಂಡತಿಯು ಉಳಿದ ಅರ್ಧ ಭಾಗವನ್ನೂ ಹಂಚಿಕೊಂಡರು. ಕೆಲಕಾಲಾನಂತರ ಹೆಂಡತಿಯೂ ಸತ್ತುಹೋದಳು. ಆಕೆಗೆ ಮಗಳ ಮಗನಿದ್ದನು. ಆಗ ಆಕೆಯ ಅರ್ಧ ಭಾಗದ ಆಸ್ತಿಯು ಮಗಳ ಮಗನಿಗೆ ಸಲ್ಲಬೇಕೆ ಅಥವಾ ಅದರಲ್ಲಿ ಅರ್ಧ ಭಾಗವು ಮಡಗಿಕೊಂಡವಳ ಮಗನಿಗೂ ಬರಬೇಕೆ ಎಂಬ ವಿಚಾರವಾಗಿ ಹೈಕೋರ್ಟಿನಲ್ಲಿ ವಿವಾದ ನಡೆದು ದಾಸೀಪುತ್ರನು ಲಾ ಪ್ರಕಾರವಾಗಿ ಮೊದಲೇ ತನ್ನ ಅರ್ಧಭಾಗದ ಆಸ್ತಿಯನ್ನು ತೆಗೆದುಕೊಂಡಿರುವುದರಿಂದ ಪುನಃ ಭಾಗ ಪಡೆಯಲು ಹಕ್ಕಿಲ್ಲವೆಂದೂ ಆ ಅರ್ಧ ಭಾಗವು ಹೆಂಡತಿಯ ಮಗಳ ಮಗನಿಗೆ ಸಲ್ಲತಕ್ಕದೆಂದೂ ತೀರ್ಮಾನಿಸಲ್ಪಟ್ಟಿತು. ದಾಸೀಪುತ್ರನು ತನ್ನ ತಂದೆಯಾಸ್ತಿಯಲ್ಲಿ ಅರ್ಧ ಭಾಗಕ್ಕೆ ಹಕ್ಕುದಾರನಾಗಿದ್ದಾನೆ, ಆದರೆ ತಂದೆಯು ಲಗ್ನವಾದ ಹೆಂಡತಿಗೆ ಬಂದ ಆಸ್ತಿಗೆ ಹಕ್ಕುದಾರನಲ್ಲ. ಇದಕ್ಕೆ 32 ಮ. ಲಾ. ಟೈ. 249 ನೇ ತೀರ್ಪು ಆಧಾರವಾಗಿ ತೆಗೆದುಕೊಳ್ಳಲ್ಪಟ್ಟಿದೆ.

ಶಿಥಿಲವಾದ ದೇವಾಲಯದ ಆಸ್ತಿಯಮೇಲೆ ದೇವಾದಾಯ ಬೋರ್ಡಿಗೆ ಹಕ್ಕುಂಟೆ?—ಕೊಂಚ ಆಸ್ತಿಯು ಯಾವುದೋ ಒಂದು ದೇವಸ್ಥಾನದ ಹೆಸರಿನ ಮೇಲೆ ಬಹುಕಾಲದ ಹಿಂದೆ ಬರೆಯಲ್ಪಟ್ಟಿದ್ದಿತು. ಆ ದೇವಸ್ಥಾನವು ಶಿಥಿಲವಾಗಿ ಅದರ ಗುರ್ತು ಸಹ ಇಲ್ಲದಂತಾಯಿತು. ಅದರ ಹೆಸರಿನಲ್ಲಿರುವ ಆಸ್ತಿಯನ್ನು ಒಂದು ಕುಟುಂಬದವರು ಸ್ವಂತ ಆಸ್ತಿಯಂತೆ ಅನುಭವಿಸಿಕೊಂಡು ಬರುತ್ತಿರುವರಾದರೂ, ಅದು ದೇವಸ್ಥಾನದ ಆಸ್ತಿಯೆಂದು ಕರೆಯಲ್ಪಡುತ್ತಿರುವುದು. ಈ ಆಸ್ತಿಯನ್ನು ಕಾಪಾಡಲು ಮದ್ರಾಸು ಹಿಂದು ದೇವಾದಾಯ ಬೋರ್ಡಿನವರಿಗೆ ಅಧಿಕಾರವುಂಟೆ? ಎಂಬ ವಿಚಾರವಾಗಿ ವಿವಾದವು ನಡೆದು ಅದರ ಮೇಲೆ ಬೋರ್ಡಿನವರಿಗೆ ಯಾವ ಅಧಿಕಾರವೂ ಇಲ್ಲವೆಂದು ಮತ್ತು ಮದ್ರಾಸು ದೇವಾದಾಯ ಶಾಸನವು ಅಂತಹ ಆಸ್ತಿಗೆ ವರ್ತಿಸುವುದಿಲ್ಲವೆಂದು ಹೈಕೋರ್ಟಿನವರು ತೀರ್ಪು ಕೊಟ್ಟಿರುವರು.

ಒಳದೇಶದ ವೃತ್ತಾಂತಗಳು

ಮಂಡ್ಯದ ಸಬ್‌ಡಿವಿಜನ್ ಆಫೀಸರಾದ ಮ|| ಆರ್. ಎ. ನರಸಿಂಹಯ್ಯಂಗಾರ್ಯರು ಹಿರೋಡೆಗೆ ಬಂದಿದ್ದಾಗ್ಗೆ ಅಲ್ಲಿಯ ಬೆಟ್ಟಕ್ಕೆ ಹೋಗಿದ್ದು ಬಿಡಾರಕ್ಕೆ ಹಿಂದಿರುಗಿಬರಲಿಲ್ಲವಾಗಿ ಜನರು ತಡಕುತ್ತಿರುವುದಾಗಿ ಕಳೆದವಾರ ಸ್ಟಾರ್ ಪತ್ರಿಕೆಯಲ್ಲಿ ತಿಳಿಸಿದ್ದೆವಷ್ಟೆ. ಇವರು ಬೆಟ್ಟದಿಂದಿದು ಬರುತ್ತಿರುವಾಗ ಕಾಲುಜಾರಿ ಕೆಳಗಡೆ ಇದ್ದ ಕೆರೆಗೆ ಬಿದ್ದು ಮೃತರಾದರೆಂದು ವರದಿಯಾಗಿದೆ. ಇವರು ಬಹಳ ದಕ್ಷತೆಯಿಂದಲೂ ನಿಷ್ಪಕ್ಷಪಾತೆಯಿಂದಲೂ ಕೆಲಸಮಾಡಿ ಪ್ರಭುಪ್ರಜೆಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಕುಟುಂಬಕ್ಕೆ ದುಃಖಸಮಾಧಾನವನ್ನೂ ಕೋರುತ್ತೇವೆ.

ಕಳೆದ ಮಾರ್ಚಿ ತಿಂಗಳಲ್ಲಿ ಏರ್ಪಾಟಾದ ರಾಜಧಾನಿಯ ಮಕ್ಕಳ ಪ್ರದರ್ಶನದ ಕಮಿಟಿಯವರಿಗೆ ಕಳೆದ ಜುಲೈ ತಿಂಗಳಲ್ಲಿ ಲಂಡನ್ನಿನೊಳಗೆ ಜರುಗಿದ ಸಾಮ್ರಾಜ್ಯ ಮಕ್ಕಳ ಪ್ರದರ್ಶನದ ಸ್ಪರ್ಧೆಯಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆಲ್ಲ ಎರಡನೆಯದಾದ ಬಹುಮಾನವು ದೊರಕಿರುದು ಬಹಳ ಪ್ರಶಂಸನೀಯವೂ ಸಂಸ್ಥಾನಕ್ಕೇ ಗೌರವ ಪ್ರದವೂ ಆಗಿರುತ್ತದೆ. ಮುಂದೆ ನಡೆಯುವ ಇಂತಹ ಪ್ರದರ್ಶನಗಳ ಸ್ಪರ್ಧೆಯಲ್ಲಿ ನಮ್ಮ ಮಕ್ಕಳ ಪ್ರದರ್ಶನ ಕಮಿಟಿಯವರಿಗೆ ಪ್ರಥಮ ಬಹುಮಾನವು ದೊರೆತು ಅತಿಶಯವಾದ ಗೌರವವುಂಟಾಗಲೆಂದು ಆಶಿಸುತ್ತೇವೆ.

ಕಳೆದವಾರ ದಿವಾನರವರು ದೊಡ್ಡಬಳ್ಳಾಪುರಕ್ಕೆ ಹೋಗಿದ್ದು ಊರನ್ನು ಪರಾಮರ್ಶಿಸಿಕೊಂಡು ಬಂದರಲ್ಲದೆ ಬೆಂಗಳೂರು ವಿಶ್ವೇಶ್ವರಪುರದಲ್ಲಿರುವ ಒಕ್ಕಲಿಗರ ಸಂಘವನ್ನೂ ಮುದ್ರಣಾಲಯವನ್ನೂ, ಚಾಮರಾಜಪೇಟೆಯಲ್ಲಿರುವ ಶ್ರೀ ಶಾರದಾ ಸ್ತ್ರೀ ಸಮಾಜವನ್ನೂ ಪರಾಮರ್ಶಿಸಿಕೊಂಡು ಬಂದರು. ಆ ವೇಳೆಯಲ್ಲಿ ಶಾರದಾ ಸ್ತ್ರೀ ಸಮಾಜದವರೊಪ್ಪಿಸಿದ ಬಿನ್ನವತ್ತಳೆಯೂ ಅದಕ್ಕೆ ದಿವಾನರು ಅಪ್ಪಣೆಕೊಡಿಸಿದ ಉತ್ತರವೂ ಈ ಪತ್ರಿಕೆಯ ಬೇರೆಕಡೆ ಮುದ್ರಿಸಲ್ಪಟ್ಟಿರುತ್ತವೆ. ದಿವಾನರವರ ಉತ್ತರವು ಬಹಳ ಹಿತೋಪದೇಶಕರವಾಗಿಯೂ, ಪ್ರೋತ್ಸಾಹಕರವಾಗಿಯೂ ಇರುತ್ತದೆ.

ನೆನ್ನೆಯದಿವಸ ಸಾಯಂಕಾಲ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾದ ಮ|| ಬಿ. ಟಿ. ಕೇಶವಯ್ಯಂಗಾರ್ಯರು ಮ್ಯುನಿಸಿಪಲ್ ಕೌನ್ಸಿಲರುಗಳನ್ನು ರಾಜಧಾನಿಯಿಂದ 9 ಮೈಲು ದೂರದಲ್ಲಿರುವ ಇಲವಾಲದ ರೆಸಿಡೆನ್ಸಿ ಬಂಗಲೆಗೆ ಬರಮಾಡಿಕೊಂಡು ಉಪಾಹಾರದಿಂದಲೂ ಸಂತೋಷ ಸಲ್ಲಾಪಗಳಿಂದಲೂ ಸತ್ಕರಿಸಿದರು. ಸಂತೋಷಕೂಟಕ್ಕೆ 5-6 ಮಂದಿ ಕೌನ್ಸಿಲರುಗಳು ವಿನಾ ಉಳಿದವರೆಲ್ಲರು ಮತ್ತು ಡಿ|| ಜಡ್ಜಿಯವರಾದ ಮ|| ಶಂಕರನಾರಾಯಣರಾಯರು ಬಂದಿದ್ದು ಮ|| ಕೇಶವಯ್ಯಂಗಾರ್ಯರ ಪ್ರೀತಿಪುರಸ್ಸರವಾದ ಸತ್ಕಾರದಿಂದಲೂ, ಸರಸಸಲ್ಲಾಪಗಳಿಂದಲೂ ಸಂತುಷ್ಟರಾಗಿ ಅವರನ್ನು ವಂದಿಸಿ ತೆರಳಿದರು.

ರಾಜಧಾನಿಯಲ್ಲಿ ಮೋಡವಾಡುತ್ತಿದ್ದು ಆಗಾಗ್ಗೆ ತುಂತುರು ಮಳೆ ಬರುತ್ತಿದೆ. ಪ್ಲೇಗು ಮರಣವು ಅಲ್ಲೊಂದಿಲ್ಲೊಂದು ಆಗುತ್ತ ಅದರ ಸಂಖ್ಯೆಯು ಹೆಚ್ಚುವುದಾಗಿ ತೋರುತ್ತದೆ. ಮ್ಯುನಿಸಿಪಲ್ ಕೌನ್ಸಿಲಿನ ಹೊಸ ಪ್ರೆಸಿಡೆಂಟರು ಪ್ರತಿಯೊಂದು ಮೊಹಲ್ಲಾದಲ್ಲಿ ಅಲ್ಲಿಯ ಕೌನ್ಸಿಲರುಗಳ ಸಮೇತ ಸಂಚರಿಸಿ ನಿವಾಸಿಗಳ ಆರೋಗ್ಯಭಾಗ್ಯವನ್ನೂ ಸ್ಥಳದ ನೈರ್ಮಲ್ಯವನ್ನೂ ಕಣ್ಣಾರ ನೋಡಿ ಕೇಳಿ ತಿಳಿದುಕೊಳ್ಳುತ್ತಿರುವರು. ಈರೀತಿ ಕೌನ್ಸಿಲರುಗಳ ಸಮೇತ ಸಂಚಾರಹೊರಟು ಸ್ಥಳದ ಮತ್ತು ಜನರ ಸ್ಥಿತಿಗತಿಗಳನ್ನು ವಿಚಾರಿಸಲು ಹಿಂದಿನ ಪ್ರೆಸಿಡೆಂಟರುಗಳಲ್ಲಿ ಯಾರೂ ಪ್ರಯತ್ನಿಸಿರಲಿಲ್ಲ. ಇದರಿಂದ ಪ್ರೆಸಿಡೆಂಟರಲ್ಲೂ ಕೌನ್ಸಿಲರುಗಳಲ್ಲೂ ಪರಸ್ಪರ ಪ್ರೀತಿವಿಶ್ವಾಸಗಳುಂಟಾಗಿ ಪೌರಕಾರ್ಯವು ಸುಲಲಿತವಾಗಿ ನಡೆದು ಕಂದಾಯದಾರರಿಗೆ ಪ್ರಯೋಜನವಾಗಲು ಅವಕಾಶವಾಗುವುದೆಂದು ನಿರೀಕ್ಷಿಸುತ್ತೇವೆ.

ಹಾಸನದ ಸಬ್ ಡಿವಿಜನ್ ಆಫೀಸರಾದ ಮ|| ಜಿ. ಮಲ್ಲಿಕಾರ್ಜುನಯ್ಯನವರ ಜ್ಯೇಷ್ಠ ಪುತ್ರ ಮ|| ಜಿ. ಸಾಂಬಶಿವಯ್ಯ, ಬಿ. ಎ., ಯವರು ಅಮೇರಿಕೆಯಲ್ಲಿ ಎಲೆಕ್ಟ್ರಿಕ್ ಇಂಜನಿಯರಿಂಗ್ ಪರೀಕ್ಷೆಗೋದಿ ಪ್ರಶಸ್ತಿಯನ್ನು ಪಡೆದು ಬರಲು ಬರುವ ಭಾನುವಾರ ಕೊಲೊಂಬದಲ್ಲಿ ಹಡಗನ್ನು ಹತ್ತಿ ಪ್ರಯಾಣಮಾಡುವರು ಮತ್ತು ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಯುದ್ಯೋಗದಲ್ಲಿರುವ ಮ|| ಯಲೆ ಅಪ್ಪಾಜಿ, ಬಿ.ಎ., ಎಂ.ಬಿ.ಬಿ.ಎಸ್., ರವರು ಪ್ರೌಢ ವೈದ್ಯ ವಿದ್ಯಾಭ್ಯಾಸವನ್ನುಮಾಡಿ ಪ್ರಶಸ್ತಿಯನ್ನುಪಡೆದು ಬರಲು ಬರುವ ತಾ|| 17 ರಲ್ಲಿ ಸೀಮೆಗೆ ಪ್ರಯಾಣಮಾಡುವರು. ಈ ಉಭಯ ವೀರಕೈವ ತರುಣರು ಸುಖವಾಗಿ ಪ್ರಯಾಣಮಾಡಿ ತಮ್ಮ ನಿರ್ದಿಷ್ಟ ಸ್ಥಾನಗಳನ್ನು ತಲುಪಿ ವಿದ್ಯಾವ್ಯಾಸಂಗವನ್ನು ಪೂರೈಸಿ ಘನತರವಾದ ಪ್ರಶಸ್ತಿಗಳನ್ನು ಪಡೆದುಕೊಂಡು ಬರುವವರಾಗಲೆಂದು ಹರಸುತ್ತೇವೆ.

ಶಿವಮೊಗ್ಗೆಯಲ್ಲಿ ಸಬ್‌ಜಡ್ಜಿಯವರಾಗಿದ್ದ ಮ|| ಎಸ್. ಎ. ವೈದ್ಯೇಶ್ವರ ಅಯ್ಯರ್‌ರವರು ಈ ತಾ|| 8 ರಿಂದ 2 ವರ್ಷಗಳವರೆಗೆ ರಜವನ್ನು ಪಡೆದುಕೊಂಡು ಅನಂತರ ಉದ್ಯೋಗದಿಂದ ನಿವೃತ್ತರಾಗುವ ಪ್ರಯುಕ್ತ ಸಬ್‌ಜಡ್ಜಿಯವರಾದ ಮ|| ಸಿ. ಅಬ್ದುಲ್‌ಗನ್ನಿಯವರು ಶಿವಮೊಗ್ಗ ಸಬ್ ಜಡ್ಜಿಯವರಾಗಿಯೂ, ಹಾಸನದ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟ್ ಮ|| ಎಸ್. ಆರ್. ರಾಮಸ್ವಾಮಿ ಅಯ್ಯರ್‌ರವರು ರಾಜಧಾನಿಯ ಸಬ್‌ಜಡ್ಜಿಯವರಾಗಿಯೂ, ಬೆಂಗಳೂರಿನ 1 ನೇ ಮುನ್ಸೀಫರಾದ ಮ|| ಎ. ಸುಂದರರಾಜಾರಾಯರು ಹಾಸನದ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಾಗಿಯೂ, ತುಮಕೂರಿನ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಾದ ಮ|| ಎಂ.ಎನ್. ಸುಬ್ಬಣ್ಣನವರು ಬೆಂಗಳೂರಿನ 1 ನೇ ಮುನ್ಸೀಫರಾಗಿಯೂ, ರಾಜಧಾನಿಯ 2 ನೇ ಮುನ್ಸೀಫರಾದ ಮ|| ಆರ್. ಪುಟ್ಟರಾಜ ಅರಸಿನವರು ತುಮಕೂರಿನ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ ವಿಶೇಷವಾಗಿ ಲೇವಾದೇವಿಯನ್ನು ಮಾಡುತ್ತಿರುವ ಮುಲ್ತಾನಿ ಪರಶುರಾಮಸೇಟರು ಕಳೆದ 1929 ನೆಯ ಇಸವಿಯಲ್ಲಿ ತಮ್ಮಲ್ಲಿದ್ದ 100 ರೂ. ನ ಅರ್ಧ ನೋಟನ್ನು ಮದ್ರಾಸಿನಲ್ಲಿರುವ ಕರೆನ್ಸಿ ಆಫೀಸಿಗೆ ಕಳುಹಿಸಿಕೊಟ್ಟು ಉಳಿದ ಅರ್ಧ ನೋಟು ಗೈರ್ಹಾಜರಿಬಂದಿದೆಯಾದುದರಿಂದ ಪೂರ್ತಿ ಮೊಬಲಗನ್ನು ಕೊಡಬೇಕೆಂದು ಕೇಳಿದ್ದರು. ಈ ಅರ್ಧ ನೋಟಿನ ಇನ್ನೊಂದು ಭಾಗವನ್ನು ಇದಕ್ಕೆ 1 ವರ್ಷಕ್ಕೆ ಮೊದಲೇ ಚನ್ನಪಟ್ಟಣದ ಮುಸಲ್ಮಾನರು ಕಳುಹಿಸಿಕೊಟ್ಟು ಹಣವನ್ನು ಪಡೆದುಕೊಂಡಿದ್ದುದರಮೇಲೆ ಕರೆನ್ಸಿ ಆಫೀಸಿನವರಿಗೆ ಅನುಮಾನಹುಟ್ಟಿ ಇದರ ವಿಚಾರಣೆಯನ್ನು ನಡೆಸಲು ನಮ್ಮ ಪ್ರಭುತ್ವದವರಿಗೆ ತಿಳಿಸಿದರು. ಇಲ್ಲಿಯ ಪೋಲೀಸಿನವರು ಸೇಟರನ್ನು ಹಿಡಿದು ಸಿಟಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರಲಾಗಿ ಈ ವಿವಾದವು ದೀರ್ಘಕಾಲ ನಡೆದು ಕಳೆದ ಶನಿವಾರ ಸೇಟರಿಗೆ 2000 ರೂ. ಜುಲ್ಮಾನೆಯೂ, 6 ತಿಂಗಳ ಕಠಿಣ ಸಜವೂ ವಿಧಿಸಲ್ಪಟ್ಟುವು. ಆ ಕೂಡಲೆ ಸೇಟರು ಮೈಸೂರು ಸೆಷನ್ಸು ಕೋರ್ಟಿಗೆ ಅಪೀಲು ಅರ್ಜಿಯನ್ನು ಹಾಕಿ 5000 ರೂ. ಹೊಣೆಯನ್ನು ಕೊಟ್ಟು ಬಿಡಿಸಿಕೊಂಡು ಬಂದರು. ಈ ಅಪೀಲಿನ ಪರಿಣಾಮವನ್ನು ಜನರು ಬಹಳ ಕುತೂಹಲದಿಂದ ನಿರೀಕ್ಷಿಸುತ್ತಿರುವರು.

ಕೊಡಗಿನ ರಾಜಕೀಯ ಭವಿಷ್ಯತ್ತನ್ನು ಕುರಿತು ಶ್ರೀಮತಿ ಡಿ. ಸಾಕಮ್ಮನವರು "ಹಿಂದೂ" ಪತ್ರಿಕೆಗೆ ಕೊಟ್ಟ ಅಭಿಪ್ರಾಯ.

ಕೊಡಗಿನ ರಾಜಕೀಯ ಭವಿಷ್ಯತ್ತು ಹೇಗಿರಬೇಕೆಂಬುದನ್ನು ಕುರಿತು ಈ ದೇಶದ ಜನರು ಕೆಲವು ಕಾಲದಿಂದಲೇ ಯೋಚಿಸುತ್ತಿದ್ದಾರೆ. ಆದರೆ ಈ ಬಾಬಿನಲ್ಲಿ ಸ್ಥಳೀಯ ಸರಕಾರದ ಅಭಿಪ್ರಾಯವನ್ನು ಇಂಡಿಯಾ ಸರಕಾರವು ಈಗ ಕೇಳಿರುವುದರಿಂದ ಜನರೆಲ್ಲರೂ ಈ ವಿಷಯವಾಗಿ ಕೂಡಲೇ ಆಲೋಚಿಸಿ ತೀರ್ಮಾನಿಸಿಕೊಳ್ಳತಕ್ಕ ವಿಷಯವಾಗಿದೆ. ತಮ್ಮ ಅಭಿಪ್ರಾಯಗಳನ್ನು ಕೊಡಬೇಕೆಂತ ಕೇಳಲ್ಪಟ್ಟ ವಿವಿಧ ಸಾರ್ವಜನಿಕ ಸಂಘಗಳ ಪೈಕಿ—ಇವು, ಮದ್ರಾಸಿಗೆ ಸೇರಿಸಬೇಕೆಂತ ಕೇಳಿದೆಯೆಂಬುದೂ, ಈ ಐದರಲ್ಲಿ ಒಂದು ಪ್ರಾಯಬಂದ ಪ್ರತಿಯೊಬ್ಬನಿಗೂ ಚುನಾವಣೆಯ ಹಕ್ಕು ಕೊಟ್ಟು ಸಂಪೂರ್ಣ ಪ್ರಜಾಜವಾಬ್ದಾರಿ ಸರಕಾರ ಪದ್ಧತಿಯನ್ನು ಕೊಟ್ಟರೆ ಕೊಡಗು ಪ್ರತ್ಯೇಕವಾಗಿಯೇ ಇರಬಹುದೆಂದೂ, ಇದು ಅಧಿಕಾರಿಗಳಿಗೆ ಒಪ್ಪಿಗೆಯಾಗಿದ್ದರೆ

1931 ರಲ್ಲಿ ನಡೆದ ಮೈಸೂರು ಸೀಮೆಯ ಜನಪರಿಗಣತಿ.

1881 ರಿಂದ ಜನ ಸಂಖ್ಯೆಯಲ್ಲಿ ಹೆಚ್ಚುಕಡಿಮೆಯಾಗಿರುವುದು.

ಡಿಸ್ಟ್ರಿಕ್ಟು ಅಥವಾ ಸಂಸ್ಥಾನ—	ಜನ						ಹೆಚ್ಚು ಕಡಿಮೆ, ಹೆಚ್ಚಿನ ಗುರ್ತು (+) ಕಡಿಮೆಯ ಗುರ್ತು (—)					
	1931	1921	1911	1901	1891	1881	1921 ರಿಂದ 1931	1911 ರಿಂದ 1921	1901 ರಿಂದ 1911	1891 ರಿಂದ 1901	1881 ರಿಂದ 1891	1881ರಿಂದ1931 ರ ವರೆಗೆ ಹೆಚ್ಚು
ಬೆಂಗಳೂರು ದಂಡು ಸೇರಿ ಸಂಸ್ಥಾನ	6,557,302	5,978,892	5,806,193	5,539,399	4,943,604	4,186,188	+ 578,410	+ 172,699	+ 266,794	+ 595,795	+ 757,416	+2,371,11[illegible]
,, ಬಿಟ್ಟು ,,	6,423,189	5,859,952	5,705,359	5,449,800	4,843,523	4,092,648	+ 563,237	+ 154,593	+ 2[illegible]5,559	+ 606,277	+ 750,875	+2,330,54[illegible]
ಬೆಂಗಳೂರು ಸಿಟಿ	172,357	118,556	88,651	69,447	80,285	62,317	+ 53,801	+ 29,905	+ 19,204	—10,838	+ 17,968	+ 110,0[illegible]
,, ಡಿಸ್ಟ್ರಿಕ್ಟು	908,056	788,379	759,522	720,217	622,545	523,750	+ 119,677	+ 28,857	+ 39,305	+ 97,672	+ 98,795	+ 384 3[illegible]
ಕೋಲಾರ ಗೋಲ್ಡ್ ಫೀಲ್ಡ್ಸ್ (ಪಟ್ಟಣ)	85,103	87,682	83,743	70,874	24,111	....	—2,579	+ 3,939	+ 12,869	+ 46,763	+ 24,111	+ 85,10[illegible]
,, ಡಿಸ್ಟ್ರಿಕ್ಟು	763,934	704,657	696,410	652,726	567,002	481,191	+ 59,277	+ 8,247	+ 43,684	+ 85,724	+ 85 811	+ 282,74[illegible]
ತುಮಕೂರು ,,	861,405	773,122	735,346	670 377	572,978	447,053	+ 88,283	+ 37,776	+ 64,969	+ 97,399	+ 125,925	+ 414,35[illegible]
ಮೈಸೂರು ಪಟ್ಟಣ	107,142	83,951	71,306	68,111	74,048	60,292	+ 23,191	+ 12,645	+ 3,195	—5,937	+ 13,756	+ 46,85[illegible]
,, ಡಿಸ್ಟ್ರಿಕ್ಟು	1,403,984	1,319,368	1,270,765	1,227,061	1,107,766	972,366	+ 84,616	+ 48,603	+ 43,704	+ 119,295	+ 135,400	+ 431,61[illegible]
ಚಿತ್ರದುರ್ಗ ,,	656,569	574,179	564,243	511,062	424,899	318,534	+ 82,390	+ 9,936	+ 53,181	+ 86,163	+ 106,365	+ 338,0[illegible]
ಹಾಸನ ,,	596,937	583,960	580,200	568,919	511,975	428,344	+ 12,977	+ 3,760	+ 11,281	+ 56,944	+ 83,631	+ 168,5[illegible]
ಕಡೂರು ,,	347,715	333,536	338,457	359,270	328,918	291,377	+ 14,177	—4,919	—20,813	+ 30,352	+ 37,541	+ 56,33[illegible]
ಶಿವಮೊಗ್ಗ ,,	519,987	492,560	516,716	531,736	528,996	507,424	+ 27,427	—24,156	—15,020	+ 2,740	+ 21,572	+ 12,56[illegible]
ಬೆಂಗಳೂರು ದಂಡು	134,113	118,940	100,834	89,599	100,081	93,540	+ 15,173	+ 18,106	+ 11,235	—10,482	+ 6,541	+ 40,57[illegible]

ಮದ್ರಾಸಿಗೆ ಸೇರಿಯಾದರೂ ಪ್ರಜಾತಂತ್ರ (ಅಂದರೆ ರೈತರಿಂದಲೇ ಆಳಲ್ಪಡುವ) ಸರಕಾರ ಪದ್ಧತಿಯನ್ನು ಪಡೆಯಬೇಕೆಂದೂ ಅಭಿಪ್ರಾಯಕೊಟ್ಟಿರುವುದಾಗಿ ತಿಳಿಯುತ್ತೇನೆ. ಮದ್ರಾಸಿಗೆ ಸೇರಬೇಕೆಂತ ಕೇಳದೆ ಇರುವ ಎರಡು ಸಭೆಗಳ ಪೈಕಿ ಒಂದು ಯೂರೋಪಿಯನ್ ಪ್ಲಾಂಟರುಗಳ ಸಂಘವಾಗಿದೆ.

ಕೊಡಗು ಪ್ರತ್ಯೇಕವಾಗಿರುವುದು ಸಾಧ್ಯವಿಲ್ಲವೆಂದೂ ಮತ್ತು ಕೊಡಗಿನ ಮುಂದಿನ ಜನಾಂಗದ ಕ್ಷೇಮವನ್ನೆಣಿಸಿದರೂ ಕೊಡಗು ಪ್ರತ್ಯೇಕವಾಗಿರುವುದು ಒಳ್ಳೇದಲ್ಲವೆಂದೂ ನನ್ನ ಅಭಿಪ್ರಾಯವಾಗಿದೆ. ಕೊಡಗು ಪ್ರತ್ಯೇಕವಾಗಿರುವುದು ಯಾಕೆ ಸಾಧ್ಯವಲ್ಲ ಮತ್ತು ಯಾಕೆ ಆಗಬಾರದೆಂಬದರ ಕುರಿತು ತಪಶೀಲ್ ವಿವರವನ್ನು ಇಲ್ಲಿ ಕೊಡಬೇಕಾಗಿಲ್ಲ. ಕೊಡಗಿನ ಸರಕಾರದ ಆದಾಯವನ್ನು ನೋಡಿದರೆ ಪ್ರಜಾತಂತ್ರ ಸರಕಾರ ಪದ್ಧತಿಯನ್ನು ನಡಿಸಲು ಸಾಧ್ಯವಿಲ್ಲ. ಕೊಡಗಿನ ಸರಕಾರದ ಉತ್ಪತ್ತಿಗಳಲ್ಲಿ ಮುಖ್ಯವಾದದ್ದು ಎರಡು, ಗಂಧ ಮತ್ತು ಸಾಮಾನುಪದಾರ್ಥಗಳ ಉತ್ಪತ್ತಿ. ಇವೆರಡು ಕಾಲಕ್ರಮೇಣ ಕಡಿಮೆಯಾಗುತ್ತಲೇ ಬರುವಲ್ಲಿ ಸಂಶಯವಿಲ್ಲ. ಆಗ ದೇಶೋನ್ನತಿಗೆ ಬೇಕಾದ ಇಲಾಖೆಗಳನ್ನು ಹೊಸದಾಗಿ ಪ್ರಾರಂಭಿಸುವುದಾಗಲೀ, ನಡಿಸುವುದಾಗಲೀ ಹಾಗಿರಲಿ, ದಿನ ಚರ್ಯೆದ ಆಡಳಿತವನ್ನು ನಡಿಸಲಿಕ್ಕೆ ಬೇಕಾದ ಹಣವೇ ಇಲ್ಲವಾಗುತ್ತದೆ. ಟೆಕ್ನಿಕಲ್ ಇಲಾಖೆಗಳಲ್ಲಿ ಎಕ್ಸ್‌ಪರ್ಟ್‌ಗಳ ಸಹಾಯವಿಲ್ಲದೆ ಎಷ್ಟು ಕಾಲ ತಳ್ಳಬಹುದು; ಮದ್ರಾಸಿನ ಟೆಕ್ನಿಕಲ್ ಮತ್ತು ಆರ್ಟ್ಸ್ ಕಾಲೇಜುಗಳಿಗೆ ಕೊಡಗಿನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕಾದರೆ ವಿನೇನು ಶರತ್ತುಗಳನ್ನು ಇಟ್ಟಾರು ಎಂಬದು ಇನ್ನೂ ...

ಕೊಡಗಿನ ಆಯಿಲನ್ಸರು ಇಲ್ಲದ ದಿನವಿರಲಾರದು. ಕೃಷಿ ಇಲಾಖೆಯಲ್ಲಿ ಎಕ್ಸ್‌ಪರ್ಟ್‌ಗಳ ಸಹಾಯವನ್ನು ಕೊಡಗಿನ ಸರ್ಕಾರವು ಮೈಸೂರು ಸರ್ಕಾರದಿಂದ ಪಡೆಯುತ್ತಲಿದೆ. ಮೈಸೂರು ಸರ್ಕಾರವು ನಡಿಸುವ ಕಾಫಿಪರೀಕ್ಷಾ ಕ್ಷೇತ್ರಕ್ಕೆ ಪ್ಲಾಂಟರ್ಸ್ ಅಸೋಸಿಯೇಶನ್ನಿನಿಂದ ಧನಸಹಾಯ ಹೊಂದುತ್ತದೆ. ಪ್ಲಾಂಟರ್ಸ್ ಅಸೋಸಿಯೇಶನಿಗೆ ಈ ಬಗ್ಗೆ ಕೊಡಗಿನ ಸರ್ಕಾರವು ಹಣ ...

NOTICE

A Holstein Bull and a Scindi Bull are at stud at the Rayankere Palace Dairy Farm, Mysore, the rates being Rs. 5 and Rs. 2 respectively. Both bulls are of good milk pedigree.

Dr. McIsaac
Manager,
Rayankere Dairy Farm.

ಪತ್ರವ್ಯವಹಾರ

ಪತ್ರವ್ಯವಹಾರದ ಲೇಖಕರಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಸದ್ವರ್ಗಗಳ ಉತ್ಪತ್ತಿ.

ಪಿತೃವಾತ್ಸಲ್ಯಶೀಲರಾಗಿದ್ದಾರೆ. ಅಗರ್ಭ ಶ್ರೀಮಂತರಾದ ಈ ಮಹಾಶಯರು ತಮ್ಮ ಮನೆತನದ ಕಾರ್ಯಭಾರಗಳನ್ನು ವಹಿಸಿಕೊಂಡಾಗಿನಿಂದಲೂ ಅನೇಕ ಬಡವರ ಲಗ್ನ, ದೀಕ್ಷಾಸಂಸ್ಕಾರವೇ ಮೊದಲಾದ ಸತ್ಕಾರ್ಯಗಳನ್ನು ಸಹ ತಮ್ಮ ...

ಧರ್ಮಸತ್ರ ಮಹಾಶಯರ ಹಿತಭಾವಿ,

ಗದಗಿನವರಾದ ಅಂದಾನಪ್ಪ, ದಾವಣಗೆರಿ.

ಡೇವಿಡ್ಸನ್ ಕಮಿಟಿಯ ವರದಿ.

(ತಾ|| 1 ರ ಸಂಚಿಕೆಯಿಂದ ಮುಂದುವರಿದುದು)

ಪೋಸ್ಟು—ಟೆಲಿಗ್ರಾಫು

ಕರೆನ್ಸಿ

ಇತರ ವಿಧವಾದ ಸುಂಕಗಳು

ಸಾರಾಂಶ

ವರದಿಯಲ್ಲಿ ಮೂರರಿಂದ 8 ನೆಯ ಪ್ರಕರಣದವರೆಗೆ ಸಂಸ್ಥಾನಗಳು ಅನುಸರಿಸಿಕೊಳ್ಳಬೇಕಾದ ಮತ್ತು ಕೊಡಬೇಕಾದ ಸಂದರ್ಭಗಳನ್ನೆಲ್ಲ ವಿವರಿಸಿ ...

ಫೆಡರೇಷನ್ನಿನಲ್ಲಿ ಸೇರಿದರೆ ಶಿಫಾರ್ಸು ಪ್ರವರ್ತಿಸುವುದು

ಸಂಸ್ಥಾನಗಳಿಗೆ ನಿರ್ಬಂಧವಿಲ್ಲ

ಫೆಡರೇಷನ್ನಿನ ಅವಶ್ಯಕತೆ

ಸಂಸ್ಥಾನಗಳ ಭಿನ್ನ ಮರ್ಯಾದೆಗಳು

ಲಾಭಾಲಾಭಗಳ ಹಂಚಿಕೆಯನ್ನು ಸಮಗೊಳಿಸುವುದು ಅಸಾಧ್ಯ

... ಸೌಕರ್ಯವನ್ನನುಭವಿಸುತ್ತಿರುವರು. ವಿದೇಶಗಳಿಂದ ತರಿಗಬಂದರೆ ಇವರು ಯಾವ ಸುಂಕವನ್ನೂ ಕೊಡಬೇಕಾದುದಿಲ್ಲ. ಈ ಸೌಕರ್ಯವು ಕೊಡದೆ ಇದ್ದೇ ತೀರಬೇಕೆಂದೂ ರಾಷ್ಟ್ರಗಳ ಗೌರ್ನರುಗಳಿಗೂ ಈ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದೂ ಕಮಿಟಿಯವರು ಸೂಚಿಸಿರುತ್ತಾರೆ.

... ವಿಚಾರದ ವಿನಾ ಇತರ ವಿಚಾರಗಳಲ್ಲಿ ಫೆಡರಲ್ ಪ್ರಭುತ್ವಕ್ಕೆ ಅಧೀನವಾಗಿರುವುದಿಲ್ಲ. ಒಂದು ಸಮ್ರಾಟ ಅಧಿಕಾರಕ್ಕೆ ಅಧೀನವಾಗಿರುವುದರ ವಿನಾ ಇತರ ಎಲ್ಲ ವಿಷಯಗಳಲ್ಲೆಲ್ಲ ಈ ಸಂಸ್ಥಾನಾಧೀಶ್ವರರು ಪೂರ್ಣಾಧಿಕಾರಿಗಳಾಗಿರುವರು.

ಇದರಿಂದ ಫೆಡರೇಷನ್ನಿಗೆ ಸಾಮಾನ್ಯವಾಗಿ ಪರ್ತಿಸುವ ಸಮಸ್ಯೆ ... ದಲ್ಲಿ ಸಿದ್ಧಿ ಸಲಾರದು. ಈ ವಿಷಯವನ್ನು ಅರಿತುಕೊಳ್ಳದಿರುವುದರಿಂದ ಪ್ರಯೋಜನವಿಲ್ಲ.

ಕೆಲ ಉದಾಹರಣೆಗಳು

ಶಿಫಾರ್ಸಿನಿಂದ ಫೆಡರಲ್ ಆಯವ್ಯಯಕ್ಕೆ ನಷ್ಟ

ಮಕ್ಕಳಿದ್ದರೆ ಮನೆ ಚಂದ.

ಮಕ್ಕಳಿಗೆಂದು | ಚಿಂತಿಸಬೇಡಿರಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಫಲಪ್ರದ ಆವಿಗುರಿ ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. ೨೮

ಕೆಲ ಕೆಲ ಸಂಸ್ಥಾನಗಳು ಫೆಡರೇಷನ್ನಿಗೆ ಯಾವ ವಿಧದಿಂದಲೂ ಆದಾಯವನ್ನು ತೋರಿಸದೆಯೇ ತಮಗೆ ಬಿಟ್ಟುಕೊಟ್ಟಿರುವುದರಿಂದ ಲಾಭವನ್ನು ಹೊಂದುತ್ತಿರುವರು. ನಮ್ಮ ಶಿಫಾರಸಿನಿಂದ ಫೆಡರಲ್‌ಪ್ರಭುತ್ವಕ್ಕೆ ಹೊಸ ಖರ್ಚು ಬೀಳುವುದು, ಇದು ಸುಮಾರು 1 ಕೋಟಿ ರೂ. ಆಗಬಹುದು. ವಿನಾಯತಿಯನ್ನು ಅನುಭವಿಸುವ ಸಂಸ್ಥಾನಗಳಿಗೆ ಕಪ್ಪವು ತಪ್ಪಿಸಲ್ಪಡುವುದಿಲ್ಲ. ನಾವು ವಿನಾಯತಿಯ ವಿಚಾರವಾಗಿ ಮಾಡುವ ಶಿಫಾರಸನ್ನು ಅಂಗೀಕರಿಸಿದರೆ ಫೆಡರಲ್‌ಪ್ರಭುತ್ವಕ್ಕೆ ಈ ವ್ಯಯಭಾರವು ಸ್ವಲ್ಪ ಕಡಿಮೆಯಾಗುವುದು.

ಒಂದೇ ವಿಧವಾಗಿ ಎಲ್ಲಾ ಸಂಸ್ಥಾನಗಳಿಗೂ ವಿಧಿಸುವುದು ಸಾಧ್ಯವಲ್ಲವೆಂದು ರೌಂಡುಟೇಬಲ್ ಸಭೆಯವರು ತಿಳಿಸಿದ್ದರು. 70 ಲಕ್ಷದ ವಾರ್ಷಿಕ ಕಪ್ಪವನ್ನು ತೆಗೆದುಬಿಡಬೇಕೆಂದೇ ಅವರು ಸೂಚಿಸಿರುವರು. ಹತ್ತುಭೂಮಿಗಾಗಿ ಸಮವಾದಲ್ಲಿ ಸ್ವಲ್ಪವನ್ನಾದರೂ ಕೊಡಬೇಕಾಗುವುದೆಂದು ಸಹ ಅವರು ಊಹಿಸಿದ್ದರು. ಸಂಸ್ಥಾನಗಳು ಫೆಡರೇಷನ್ನಿನಲ್ಲಿ ಸೇರಿದ್ದರೆ ಫೆಡರಲ್‌ಪ್ರಭುತ್ವದ ಈ ವ್ಯಯವನ್ನು ಅವು ಕೂಡ ಹಂಚಿಕೊಳ್ಳಬೇಕಾಗುವುದು. ಅಷ್ಟೇ ಅಲ್ಲದೆ ಖರ್ಚು ಜಾಸ್ತಿಯಾಗಿರುವ ರಾಷ್ಟ್ರಗಳಿಗೆ ಫೆಡರಲ್‌ಪ್ರಭುತ್ವವು ಮಾಡುವ ಸಹಾಯದಲ್ಲಿ ಸಂಸ್ಥಾನಗಳು ಭಾಗಸ್ಥರಾಗಿರುತ್ತವೆ. ವಿನಾಯತಿಯನ್ನು ಅನುಭವಿಸುತ್ತಿರುವ ಸಂಸ್ಥಾನಗಳು ಖರ್ಚು ಹೆಚ್ಚಾಗಿರುವ ರಾಷ್ಟ್ರಗಳ ತರಗತಿಗೆ ಸೇರುವುವು.

ಆದರೆ ಎಷ್ಟು ಮಾಡಿದರೂ ಬ್ರಿಟಿಷ್ ಇಂಡ್ಯಾಕ್ಕೇ ಕೊಂಚ ನಷ್ಟವಾಗುವುದು. ಆಗ್ಗೂ ಸಂಸ್ಥಾನಗಳ ಪ್ರವೇಶವು ಕೇವಲ ಹಣಕ್ಕಾಗಿ ಬಿಟ್ಟುಬಿಡಲ್ಪಡತಕ್ಕದ್ದಲ್ಲ. ಹಣವು ಮುಖ್ಯವಲ್ಲವೆಂದು ಹೇಳಿಲ್ಲ. ಇತರ ಕಾರಣಗಳು ಮುಖ್ಯವು. ಇವನ್ನು ಊಹಿಸಿಯೇ ಅಂಗೀಕಾರವೆಂದು ಯೋಚಿಸಿರುತ್ತೇವೆ.

ಬೆಂಗಳೂರು ಶಾರದಾ ಸ್ತ್ರೀ ಸಮಾಜದವರು ದಿವಾನರವರಿಗೆ ಒಪ್ಪಿಸಿದ ವಿಜ್ಞಾಪನಾಪತ್ರಿಕೆ.

ಮೈಸೂರುಸಂಸ್ಥಾನದ ದಿವಾನ್ ಸಾಹೇಬರವರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್ ಸಾಹೇಬರವರ ಸಮ್ಮುಖದಲ್ಲಿ:—

ಬೆಂಗಳೂರು ಚಾಮರಾಜಪೇಟೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಶಾರದಾ ಸ್ತ್ರೀ ಸಮಾಜದ ಪರವಾಗಿ ಕೆಲವು ಅಂಶಗಳನ್ನು ತಮ್ಮ ಅವಗಾಹನೆಗೆ ತರಬೇಕೆಂದು ಕುತೂಹಲವುಳ್ಳವರಾಗಿದ್ದೇವೆ.

ತಾವು ರಾಜಕೀಯ ಕಾರ್ಯಗೌರವಗಳಲ್ಲಿ ನಿರತರಾಗಿದ್ದರೂ ಕೂಡ ಈ ನಮ್ಮ ಸಮಾಜದ ಮೇಲೆ ಸಂಪೂರ್ಣಾಭಿಮಾನವಿಟ್ಟು ಈ ಸಮಾಜದ ಕಾರ್ಯಕಲಾಪಗಳನ್ನು ಪರಾಂಬರಿಸುವದಕ್ಕೋಸ್ಕರ ಈ ದಿವಸ ದಯಮಾಡಿಸಿದ್ದಕ್ಕಾಗಿ ನಾವು ತಮಗೆ ತುಂಬಾ ಕೃತಜ್ಞರಾಗಿದ್ದೇವೆ.

ಈ ಸಮಾಜವು 1913 ನೇ ಇಸವಿಯಲ್ಲಿ ಸ್ಥಾಪಿತವಾಗಿ ಅನೇಕ ಪ್ರೌಢ ಮಹಿಳೆಯರಿಗೂ ಮತ್ತು ಬಾಲಕಿಯರಿಗೂ ಅಮೂಲ್ಯವಾದ ಸೇವೆಯನ್ನು ಮಾಡಿ ತನ್ಮೂಲಕ ದೇಶಸೇವೆಯನ್ನು ಮಾಡಿರುವುದು ಮತ್ತು ಈಗ ಮಾಡುತ್ತಿರುವದು ತಮ್ಮ ಚಿತ್ತಕ್ಕೆ ವೇದ್ಯವೇ ಇದೆ.

ಈ ಸಮಾಜವು ಮೈಸೂರು ಸೊಸೈಟೀಸ್ ರೆಗ್ಯುಲೇಷನ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. ಹಾಲಿ ಈ ಸಮಾಜದ ಕಟ್ಟಡದ ಜಾಗವು ಮ್ಯುನಿಸಿಪಾಲಿಟಿಯವರ ಶಿಫಾರಸಿನಮೇಲೆ ನಮ್ಮ ಘನಸರಕಾರದವರು 1918 ನೇ ಇಸವಿಯಲ್ಲಿ ಮುಫತ್ತಾಗಿ ದಯಪಾಲಿಸಿದರು. ಈ ಕಟ್ಟಡವನ್ನು ಕಟ್ಟುವುದಕ್ಕೆ ನಮ್ಮ ಮಹಾಮಾತೃ ಶ್ರೀ ವಾಣೀವಿಲಾಸ ಸನ್ನಿಧಾನ ಸಿ. ಐ. ಅವರು ಆದಿಯಾಗಿ ಅನೇಕ ಮಹನೀಯರು ಮತ್ತು ಮಹಿಳೆಯರು ತಮ್ಮ ಉದಾರ ಆಶ್ರಯವನ್ನು ಕೊಟ್ಟಿರುತ್ತಾರೆ. ಈ ಕಟ್ಟಡಕ್ಕೆ ಈಗ 20,000 ರೂ. ಗಳು ಖರ್ಚಾಗಿರುತ್ತವೆ. ಆದರೂ ಕಟ್ಟಡದ ಕೆಲಸವು ಇನ್ನೂ ಪೂರ್ತಿಯಾಗಿಲ್ಲವೆಂದು ತಮ್ಮ ಗೋಚರಕ್ಕೆ ಬಂದಿರುವುದರಲ್ಲಿ ಸಂದೇಹವಿಲ್ಲ. ಈ ಸಮಾಜದಲ್ಲಿ ಕೈಗಾರಿಕೆ ಕೆಲಸಗಳೂ, ನೇಯಿಗೆ ಕೆಲಸಗಳೂ, ಚಿತ್ರದ ಕೆಲಸಗಳೂ, ಹೊಲಿಗೆ ಕೆಲಸಗಳೂ, ಕಸೂತಿ ಕೆಲಸಗಳೂ ವಿದ್ಯಾಭ್ಯಾಸದ ತರಗತಿಗಳೂ, ವಾಚನಾಲಯವೂ, ಪುಸ್ತಕಭಂಡಾರವೂ, ವ್ಯಾಯಾಮಕ್ಕೆ ಬ್ಯಾಡ್ ಮಿಂಟನ್ ಮೊದಲಾದ ಅನುಕೂಲ್ಯಗಳೂ ಏರ್ಪಡಿಸಲ್ಪಟ್ಟಿವೆ.

ಈ ಮೇಲ್ಕಂಡ ಕಾರ್ಯಭಾಗಗಳೂ ಅಲ್ಲದೆ ನಮ್ಮ ಸಮಾಜದಲ್ಲಿ ಉಪನ್ಯಾಸಗಳೂ, ಉತ್ಸವಕೂಟಗಳೂ ಮತ್ತು ಸಂತೋಷಕೂಟಗಳೂ ನೆರವೇರಿಸಲ್ಪಡುವವು. ಆರೋಗ್ಯ, ಮಕ್ಕಳ ಸಂರಕ್ಷಣೆ, ಸ್ತ್ರೀಯರ ಸಮಾಜೋದ್ಧಾರಣೆ, ಜೀವನಚರಿತೆಗಳು ಮುಂತಾದ ವಿಷಯಗಳನ್ನೂ ಕುರಿತು ಉಪನ್ಯಾಸಗಳು ಜರುಗುವುವು ಮತ್ತು ಶ್ರೀಮನ್ಮಹಾರಾಜರವರ ವರ್ಧಂತಿ, ಗಣೇಶನವರಾತ್ರಿ, ಸರಸ್ವತಿಪೂಜೆ, ಶ್ರೀರಾಮನವಮಿ, ಬಸವಜಯಂತಿ ಮುಂತಾದ ಉತ್ಸವದಿನಗಳಲ್ಲಿ ಸ್ತ್ರೀಯರ ಕೂಟಗಳನ್ನು ಸಾಂಗವಾಗಿ ನೆರವೇರಿಸುವೆವು ಮತ್ತು ಸಮಾಜದ ವಿದ್ಯಮಾನಗಳು ಸ್ತ್ರೀಯರಿಗೆ ಹೆಚ್ಚಾಗಿ ತಿಳಿದುಬರುವುದಕ್ಕೂ ಮತ್ತು ಅವರಲ್ಲಿ ಸೌಹಾರ್ದ ಮೈತ್ರೀಭಾವಗಳು ಅಭಿವೃದ್ಧಿಗೊಳ್ಳುವುದಕ್ಕೂ "ಸೋಷಿಯಲ್ ಗ್ಯಾದರಿಂಗ್" ಎಂಬ ಸಂತೋಷಕೂಟಗಳನ್ನು ನೆರವೇರಿಸುತ್ತಿರುವೆವು.

ಈ ಏರ್ಪಾಡುಗಳಿಂದ ಮಹಿಳೆಯರಿಗೂ ಬಾಲಕಿಯರಿಗೂ ಉತ್ತಮೋತ್ತಮವಾದ ಸಹಾಯವು ದೊರೆಯುತ್ತಲಿದೆ. ಮಹಿಳೆಯರನ್ನು ಪ್ರೋತ್ಸಾಹಿಸುವುದಕ್ಕೂ ಬಡವಿಧವೆಯರಿಗೆ ಜೀವನೋಪಾಯವನ್ನು ಕಲ್ಪಿಸಿಕೊಡುವುದಕ್ಕೂ ಮಾಹೆಯಾನಾ 2 ರೂ. ನಿಂದ 5 ರೂ. ವರೆಗೆ ಸ್ಕಾಲರ್‌ಷಿಪ್‌ಗಳನ್ನು ಕೊಡುತ್ತೇವೆ.

ಭೂಮಂಡಲದ ಎಲ್ಲಾ ಭಾಗಗಳಲ್ಲಿಯೂ ಸ್ತ್ರೀಯರು ಮುಂದುವರಿಯುತ್ತಿರುವ ಈ ಕಾಲದಲ್ಲಿ ನಮ್ಮ ಭಾರತ ಮಹಿಳೆಯರ ಮುಖ್ಯವಾಗಿ ಮಾದರಿ ಮೈಸೂರಿನ ಮಹಿಳೆಯರ ಅಭ್ಯುದಯಕ್ಕೆ ಇನ್ನೂ ಅನೇಕ ಏರ್ಪಾಡುಗಳು ಆಗಬೇಕಾಗಿವೆ.

ನಮ್ಮ ವಿದ್ಯಾತರಗತಿಗಳೂ ಮತ್ತು ಕೈಗಾರಿಕೆ ತರಗತಿಗಳೂ ಇನ್ನೂ ಹೆಚ್ಚು ಜನರಿಗೆ ಪ್ರಯೋಜನವಾಗುವಹಾಗೆ ವಿಸ್ತರಿಸಲ್ಪಡಬೇಕಾಗಿವೆ. ನಮ್ಮ ಘನಸರಕಾರದವರು ಈಗ ಮಾಹೆಯಾನ 70 ರೂ. ಗಳನ್ನು ಕೈಗಾರಿಕೆ ತರಗತಿಗಳಿಗಾಗಿ ದಯಪಾಲಿಸುತ್ತಿರುವರು. ಈ ಕಟ್ಟಡಕ್ಕೆ ಮೇಲೆ ಹೇಳಿದಂತೆ ಇನ್ನೂ ಹಲವು ರಿಪೇರಿ ಕೆಲಸಗಳು ನಡೆಯಬೇಕಾಗಿರುವುದು. ಕೆಲ ಮಂದಿ ಅನಾಥೆಯರೂ ಮತ್ತು ಸಹಾಯಶೂನ್ಯರೂ ಆದ ಸ್ತ್ರೀಯರಿಗೂ ಒಂದು ಬೋರ್ಡಿಂಗ್ ವಿದ್ಯಾರ್ಥಿನಿಲಯವನ್ನು ಏರ್ಪಡಿಸಿ ಅವರ ವಿದ್ಯಾಭ್ಯಾಸಕ್ಕೂ ಮತ್ತು ಕೈಗಾರಿಕೆ ಕಸಬುಗಳ ವ್ಯಾಸಂಗಕ್ಕೂ ಏರ್ಪಾಡುಮಾಡಬೇಕೆಂದು ಉದ್ದೇಶಿಸಿದ್ದೇವೆ ಮತ್ತು ನಮ್ಮ ಪುಸ್ತಕಭಂಡಾರವನ್ನೂ ವಾಚನಾಲಯವನ್ನೂ ಇನ್ನೂ ವೃದ್ಧಿಪಡಿಸಬೇಕೆಂದು ಸಂಕಲ್ಪಿಸಿದ್ದೇವೆ. ಈ ಪ್ರಯೋಜನಕರವಾದ ಏರ್ಪಾಡುಗಳಿಗೆಲ್ಲಾ ದ್ರವ್ಯಾನುಕೂಲವು ಬೇಕಾಗಿದೆ. ನಮ್ಮ ಮೆಂಬರುಗಳ ಚಂದಾ ಹಣದಿಂದಲೂ ಮತ್ತು ಡೊನೇಷನ್ ರೂಪವಾಗಿ ಬರುವ ಸಹಾಯ ದ್ರವ್ಯದಿಂದಲೂ ಈಗ ಬರುತ್ತಿರುವ ಆದಾಯವು ಈಗಿನ ಖರ್ಚುಗಳಿಗೆ ಸಾಲದು. ಬೆಂಗಳೂರಿನ ಮಹನೀಯರೂ ಮತ್ತು ಮಹಿಳೆಯರೂ ಸಹ ಈಗಾಗಲೇ ಈ ಕಟ್ಟಡಕ್ಕೋಸ್ಕರ ಯಥೇಚ್ಛವಾಗಿ ಸಹಾಯಮಾಡಿದ್ದಾರೆ. ನಾವು ಸ್ವಪ್ರಯತ್ನದಿಂದ ಇಷ್ಟು ಕೆಲಸವನ್ನು ಮಾಡಿ ನಮ್ಮ ಶ್ರದ್ಧೆಯನ್ನೂ ಕುತೂಹಲವನ್ನೂ ತೋರಿಸಿದ್ದೇವೆ. ಆದಕಾರಣ ಘನಸರ್ಕಾರದವರು ನಾವು ಮಾಡಬೇಕೆಂದಿರುವ ಮುಂದಿನ ಅಭಿವೃದ್ಧಿ ಕಾರ್ಯಗಳಿಗೆ ಬೆಂಬಲವನ್ನು ಕೊಟ್ಟು ದ್ರವ್ಯಸಹಾಯವನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇವೆ.

ತಾವು ತುಂಬಾ ವಿಶ್ವಾಸವಿಟ್ಟು ನಮ್ಮ ಸಮಾಜಕ್ಕೆ ದಯಮಾಡಿಸಿ ಬೇಸರಗೊಳ್ಳದೆ ನಮ್ಮ ಮನವಿಯನ್ನು ಕೇಳಿ ತಮ್ಮ ಸ್ವಭಾವವಾದ ಸಹೃದಯತೆ, ತಾಳ್ಮೆ ಮತ್ತು ಪ್ರಸನ್ನತೆಗಳನ್ನು ಪ್ರದರ್ಶಿಸಿ ನಮ್ಮನ್ನು ಸಂತೋಷಪಡಿಸಿದುದಕ್ಕಾಗಿ ನಾವು ಮತ್ತೊಮ್ಮೆ ದೀರ್ಘವಾದ ವಂದನೆಗಳನ್ನು ಸಮರ್ಪಿಸುತ್ತೇವೆ.

ತಮ್ಮ ವಿಧೇಯರಾದ

ಶಾರದಾ ಸ್ತ್ರೀ ಸಮಾಜದ ಪ್ರೆಸಿಡೆಂಟರು ಮತ್ತು ಮೆಂಬರುಗಳು.

ಶಾರದಾ ಸ್ತ್ರೀ ಸಮಾಜದವರು ಒಪ್ಪಿಸಿದ ಬಿನ್ನವತ್ತಳೆಗೆ ಉತ್ತರವಾಗಿ ದಿವಾನರವರು ಅಪ್ಪಣೆ ಕೊಡಿಸಿದ ಭಾಷಣ.

(1932ನೆಯ ಇಸವಿ ಆಗಸ್ಟು 3ನೆಯ ತಾರೀಖು.)

ಲೇಡಿ ಪುಟ್ಟಣ್ಣಶೆಟ್ಟರವರೇ, ಮಹಾಶಯರೇ, ಮತ್ತು ಮಹಿಳೆಯರೇ—

ನಿಮ್ಮ ಸಮಾಜವನ್ನು ನೋಡುವುದಕ್ಕಾಗಿ ನಾನು ಬಹಳ ಸಂತೋಷದಿಂದ ಬಂದೆನು. ಇಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳನ್ನು ನೋಡಿ ನನ್ನ ಮನಸ್ಸಿಗೆ ವಿಶೇಷ ಆನಂದವುಂಟಾಗಿದೆ. ನಿಮ್ಮ ಬಿನ್ನವತ್ತಳೆಯಲ್ಲಿ ನನ್ನ ವಿಷಯವಾಗಿ ಸೂಚಿಸಿರುವ ಸವಿಮಾತುಗಳಿಗಾಗಿ ನಾನು ಬಹಳ ಕೃತಜ್ಞನಾಗಿದ್ದೇನೆ.

ನಮ್ಮ ದೇಶದಲ್ಲಿ ಸ್ತ್ರೀ ವಿದ್ಯಾಭ್ಯಾಸವೇನೋ ತಕ್ಕಮಟ್ಟಿಗೆ ಮುಂದುವರಿದಿದೆ. ಆದರೂ, ಸ್ತ್ರೀಯರ ಏಳ್ಗೆಗಾಗಿ ನಡೆಯುತ್ತಿರುವ ಪ್ರಯತ್ನಗಳಿಗೆ ಎಷ್ಟುಮಟ್ಟಿನ ಪ್ರೋತ್ಸಾಹವು ಮಹಾಜನರಿಂದ ದೊರೆಯಬೇಕೋ ಅಷ್ಟುಮಟ್ಟಿನ ಪ್ರೋತ್ಸಾಹವು ಇನ್ನೂ ದೊರೆಯುತ್ತಾ ಇಲ್ಲ. ಸ್ತ್ರೀಯರ ಏಳಿಗೆಗಾಗಿ ಶ್ರದ್ಧೆಯಿಂದ ಕೆಲಸಮಾಡುವವರ ಸಂಖ್ಯೆಯೂ ಬಹಳ ಹೆಚ್ಚಾಗಿಲ್ಲ. ಈ ಬಗೆಯ ಸ್ಥಿತಿಯಲ್ಲಿಯೂ, ಈ ಸಮಾಜವನ್ನು ಕಳೆದ ಹತ್ತೊಂಬತ್ತು ವರುಷಗಳಿಂದಲೂ ನಡೆಯಿಸಿಕೊಂಡು ಬಂದು ಅದನ್ನು ಅಭಿವೃದ್ಧಿಸ್ಥಿತಿಗೆ ತಂದಿರುವುದು ಅಭಿನಂದನಕ್ಕೆ ಯೋಗ್ಯವಾದ ಅಂಶವೇ ಸರಿ. ಇದರಿಂದ ನಮ್ಮ ದೇಶದ ಮಹಿಳೆಯರ ಪುರೋಭಿವೃದ್ಧಿಗೆ ದೊಡ್ಡ ಸಹಾಯವೆನ್ನಲು ಅಡ್ಡಿಯಿಲ್ಲ. ಲೇಡಿ ಪುಟ್ಟಣ್ಣಶೆಟ್ಟರವರ ಉತ್ಸಾಹವೂ ಸಾಮರ್ಥ್ಯವೂ, ಇದಕ್ಕೆ ಬಹುಮಟ್ಟಿಗೆ ಕಾರಣವೆನ್ನಬಹುದಾಗಿದೆ.

ಈ ಸಮಾಜದಲ್ಲಿ ಕೈಗಾರಿಕೆಯ ಕೆಲಸಗಳೂ, ನೇಯಿಗೆ ಕೆಲಸಗಳೂ, ಚಿತ್ರದ ಕೆಲಸಗಳೂ, ಹೊಲಿಗೆ ಕೆಲಸಗಳೂ, ಕಸೂತಿ ಕೆಲಸಗಳೂ, ನಡೆಯುತ್ತಿರುವುದು ನನಗೆ ಬಹಳ ಸಂತೋಷಕರವಾಗಿದೆ. ಬಡವರಾದವರು ಹಣವನ್ನು ಸಂಪಾದಿಸುವುದಕ್ಕಾಗಿ ಇವುಗಳನ್ನು ಕಲಿತರೆ, ಹಣಗಾರರಾದವರು ಜೀವನದ ಸೊಗಸಿಗಾಗಿ ಇವುಗಳನ್ನು ಕಲಿಯಬಹುದಾಗಿದೆ. ಮನೆಯ ಒಡತಿಯೇ ತನ್ನ ಕೌಶಲದಿಂದ ಮನಸ್ಸಿಟ್ಟು ಅಂದವಾದ ನಾನಾ ಸಾಮಾನುಗಳನ್ನೂ ರಚಿಸಿ ಮನೆಯನ್ನು ಅಲಂಕರಿಸಿದರೆ, ಅದರಿಂದ ಜೀವನವು ಎಷ್ಟು ರಮಣೀಯವಾಗುವುದು ನೋಡಿ! ಇಂಥ ಸನ್ನಿವೇಶದಲ್ಲಿ ತಮ್ಮ ಹೆಂಗುಸರೇ ತಂತಮ್ಮ ಜೀವನದ ಬೆಳಕೆಂದು ಜನಗಳು ಆನಂದಪಡುವರು. ಬಡವರ ಹೆಂಗಸರು ಈ ರೀತಿ ಮಾಡಿದರೆ, ಹಣ ಸಂಪಾದನೆಗೂ ಸಹಾಯವಾಗುವುದು. ಸಂಸಾರವನ್ನು ನಿರ್ವಹಿಸುವುದರಲ್ಲಿ ಹೀಗೆ ತಮಗೆ ನೆರವಾದ ಹೆಂಗುಸರ ಸಹಾಯವನ್ನು ಕಂಡು ಯಾವ ಗಂಡಸು ತಾನೆ ಉಲ್ಲಾಸಪಡುವುದಿಲ್ಲ? ಹೆಂಗುಸರು ಸಾಮಾನುಗಳನ್ನು ಮಾಡಿ ಮಾರಿ, ಅದರಿಂದ ಹಣವನ್ನು ಗಳಿಸುವುದು ಮಾನಕ್ಕೆ ಕಡಿಮೆಯೆಂದು ಭಾವಿಸುವವರೂ ಕೆಲವರಿರಬಹುದು. ಅಂಥವರು ಬಳಕೆಗೆ ಬೇಕಾದ ಮಕ್ಕಳ ಉಡುಪುಗಳು, ಕಸೂತಿಯ ಚೌಕಗಳು, ಸಣ್ಣಪುಟ್ಟ ಮರದ ಸಾಮಾನುಗಳು, ಚಿತ್ರದ ತಟ್ಟೆ, ಬಟ್ಟೆ, ಮುಂತಾದುವುಗಳು, ಇವುಗಳನ್ನೆಲ್ಲಾ ತಾವೇ ಒದಗಿಸಿಕೊಳ್ಳಬಹುದು. ಆ ರೀತಿ ಮಾಡಿದರೆ ಮನೆಯಿಂದ ಹೊರಗೆ ಹೊರಟುಹೋಗುತ್ತಿದ್ದ ಹಣವು ಮನೆಗೇ ಉಳಿಯುವುದು. ಅದೂ ಒಂದು ವಿಧದಲ್ಲಿ ಹಣ ಸಂಪಾದನೆಯೇ ತಾನೆ? ಅಂತೂ, ಯಾವ ದೃಷ್ಟಿಯಿಂದ ಹೇಗೇ ನೋಡಿದರೂ ಕೂಡ, ನೀವು ಇಲ್ಲಿ ಮಾಡಿರುವ ಏರ್ಪಾಡುಗಳು ಬಹಳ ಪ್ರಯೋಜನಕರವಾಗಿವೆ.

ಇಲ್ಲಿ ವಿದ್ಯಾಭ್ಯಾಸದ ತರಗತಿಗಳೂ, ವಾಚನಾಲಯವೂ, ಪುಸ್ತಕ ಭಂಡಾರವೂ ಇರುವುದರ ಜೊತೆಗೆ, ಅಂಗಸಾಧನೆಯ ಅನುಕೂಲಗಳೂ ಏರ್ಪಟ್ಟಿರುವುದು ಶ್ಲಾಘ್ಯವಾಗಿದೆ. ಮನಸ್ಸೂ, ದೇಹವೂ, ಎರಡೂ ಬೆಳೆಯಲು ಇದರಿಂದ ಸಹಾಯವಾಗುತ್ತದೆ. ಉಪನ್ಯಾಸಗಳು, ಉತ್ಸವಕೂಟಗಳು, ಮತಸ್ಥಾಪಕರ ಜಯಂತಿಗಳು, ಇವುಗಳು ನಡೆಯುವುದೂ ಉತ್ತಮವಾದ ಏರ್ಪಾಡೇ ಸರಿ. ಇವುಗಳೂ, ಸಂತೋಷಕೂಟಗಳೂ, ಎಷ್ಟು ಹೆಚ್ಚಾಗಿ ನಡೆದರೆ ಅಷ್ಟು ಹೆಚ್ಚು ಪ್ರಯೋಜನವುಂಟು. ಆದರೆ, ಅವುಗಳ ಪ್ರಯೋಜನವು ಹೆಚ್ಚು ಹೆಚ್ಚು ಮಂದಿಗಳಿಗೆ ದೊರೆಯಲನುಕೂಲಿಸುವಂತೆ ಸಾಧ್ಯವಾದಷ್ಟು ಹೆಚ್ಚು ಮಂದಿಗಳನ್ನು ಅವಕ್ಕೆ ಬರಮಾಡಬೇಕು. ಇವುಗಳೆಲ್ಲಾ ಆದಷ್ಟುಮಟ್ಟಿಗೂ ದೇಶಭಾಷೆಯಾದ ಕನ್ನಡ ಭಾಷೆಯಲ್ಲೇ ನಡೆಯುತ್ತವೆಯೆಂದು ನಂಬಿದ್ದೇನೆ. ಜನರು ಕನ್ನಡದ ಪುಸ್ತಕಗಳನ್ನೂ, ಕನ್ನಡದ ಪತ್ರಿಕೆಗಳನ್ನೂ ಹೆಚ್ಚುಹೆಚ್ಚಾಗಿ ಓದುವ ಅಭಿರುಚಿಯನ್ನು ಹುಟ್ಟಿಸಿ, ಕನ್ನಡ ಭಾಷೆಯನ್ನು ಬಂಗಾಳಿ ಮರಾಠಿ ತೆಲುಗು ತಮಿಳು ಮಲೆಯಾಳಿ ಮುಂತಾದುವುಗಳಿರುವ ಮಟ್ಟಕ್ಕೇ ಏರಿಸಿ ಅಭಿವೃದ್ಧಿಸ್ಥಿತಿಗೆ ತರುವ ಕಾರ್ಯವು ಪುರುಷರಿಗಿಂತಲೂ ಹೆಚ್ಚಾಗಿ ಸ್ತ್ರೀಯರಿಂದಲೇ ನಡೆಯುವುದು ಸಾಧ್ಯವಿದೆ. ಕನ್ನಡ ಗ್ರಂಥಗಳು, ಪತ್ರಿಕೆಗಳು, ಮುಂತಾದುವುಗಳಿಗೆ ತಕ್ಕಷ್ಟು ಉತ್ತೇಜನವು ದೊರೆಯದೆ ಇರುವುದಕ್ಕೂ, ದೇಶದಲ್ಲಿ ಸಂಸ್ಕೃತಿಯ ಮಟ್ಟವು ಬೇಗಬೇಗ ಹೆಚ್ಚದೆ ಇರುವುದಕ್ಕೂ, ಓದುವವರ ಸಂಖ್ಯೆಯ ಕಡಿಮೆಯಾಗಿರುವುದೇ ಕಾರಣವಾಗಿದೆ. ಸ್ತ್ರೀಯರು ಮನಸ್ಸು ಮಾಡಿದರೆ, ಈ ನ್ಯೂನತೆಯು ಪರಿಹಾರವಾಗುವ ಭಾಗದಲ್ಲಿ ಬಹಳ ಸಹಾಯವಾಗುವುದು ಸಾಧ್ಯ. ಸಾಹಿತ್ಯದಂತೆಯೇ ಸಂಗೀತವು ಮುಂಗಕ್ಕೆ ಬರುವ ಭಾಗದಲ್ಲೂ ಹೆಂಗಸರು ಬಹುವಾಗಿ ಕೆಲಸಮಾಡಬಹುದಾಗಿದೆ. ಸಂಗೀತ ಸಾಹಿತ್ಯಗಳೆರಡಕ್ಕೂ ಹೆಂಗಸಾದ ಸರಸ್ವತಿಯೇ ಅಧಿದೇವತೆಯೆಂದು ಹೇಳಿರುವುದಕ್ಕೆ ವಿಶೇಷ ಕಾರಣವಿರಬೇಕಲ್ಲವೆ?

ಇಲ್ಲಿ ನಡೆಯುತ್ತಿರುವ ಕಾರ್ಯಗಳೆಲ್ಲಾ ಸ್ವಪ್ರಯತ್ನದಿಂದಲೇ ನಡೆಯುತ್ತವೆಯೆಂಬುದನ್ನು ಕೇಳಿ, ನನಗೆ ವಿಶೇಷ ಹರ್ಷವುಂಟಾಯಿತು. ಮುಂದೆ ನಡೆಯಬೇಕಾಗಿರುವ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದವರು ದ್ರವ್ಯಸಹಾಯ ಮಾಡಬೇಕೆಂದು ಕೋರಿದ್ದೀರಿ. ಇಂಥ ಅಭಿವೃದ್ಧಿ ಕಾರ್ಯಗಳಿಗೆ ದ್ರವ್ಯಸಹಾಯಮಾಡಬೇಕಾದುದು ಯುಕ್ತವಾದರೂ, ಈಗ ಸರ್ಕಾರದವರಲ್ಲಿ ತಕ್ಕಷ್ಟು ಹಣದ ಅನುಕೂಲತೆಯು ಇಲ್ಲದಿರುವುದಕ್ಕಾಗಿ ವಿಷಾದಿಸಬೇಕಾಗಿದೆ. ಆದಕಾರಣ, ಈ ಸಂಸ್ಥೆಗೆ ಅವಶ್ಯಕವಾದಷ್ಟು ಹಣವಾಗಲಿ, ಅಥವಾ ಯುಕ್ತವಾದಷ್ಟು ಹಣವಾಗಲಿ, ಸರ್ಕಾರದವರಿಂದ ದೊರೆಯುವುದು ಸಾಧ್ಯವಾಗದೆ ಇರಬಹುದು. ಹೀಗೆಂದ ಮಾತ್ರವೇ ಸರ್ಕಾರದವರಿಗೆ ಈ ಪ್ರಯತ್ನಗಳಲ್ಲಿ ಸಹಾನುಭೂತಿಯಿಲ್ಲವೆಂದು ಅರ್ಥವಲ್ಲ. ಅವರಿಗೆ ವಿಶೇಷ ಸಹಾನುಭೂತಿಯು ಖಂಡಿತವಾಗಿಯೂ ಉಂಟು. ಅವರಿಗೆ ಸಾಧ್ಯವೆಂಬಷ್ಟು ಧನಸಹಾಯವನ್ನು ಅವರು ಅವಶ್ಯವಾಗಿ ಮಾಡುವರು.

ಆದಾಗ್ಗೂ, ಈ ವಿಚಾರಗಳಲ್ಲಿ ಸ್ವಪ್ರಯತ್ನದ ಅವಲಂಬನದಿಂದಲೂ, ಉತ್ಸಾಹದೇವಿಯ ಆರಾಧನೆಯಿಂದಲೂ, ಕಾರ್ಯಸಾಧನೆಯಾಗಬೇಕು. ಸರ್ಕಾರದವರ ಸಹಾಯದಿಂದಲೇ ಆಗಲಿ, ಅಥವಾ ಇತರರ ಸಹಾಯದಿಂದಲೇ ಆಗಲಿ, ಅಷ್ಟರಿಂದಲೇ ನೆರವೇರುವ ಕಾರ್ಯಸಾಧನೆಯು ವಿಶೇಷ ಹೆಚ್ಚಾಗಿರಲಾರದು. ಈ ವಿಚಾರಗಳಲ್ಲಿ ಹಣವೇನೋ ಅಗತ್ಯವಾಗಿ ಬೇಕೇ ಬೇಕು. ಆದರೂ ಕೆಲವು ಗುಣಗಳು ಹಣಕ್ಕಿಂತಲೂ ಹೆಚ್ಚಾಗಿ ಸಹಾಯಕವಾಗಿರುವುವು. ಉತ್ಸಾಹ, ಶ್ರದ್ಧೆ, ಏಕನಿಷ್ಠೆ, ಸೌಹಾರ್ದ, ಸ್ನೇಹಪರತೆ, ಇವುಗಳೇ ಆ ಗುಣಗಳು. ಅವುಗಳಿಂದ ಜನ ಸಹಾಯವೂ, ಧನ ಸಹಾಯವೂ, ತಾವಾಗಿಯೇ ಒದಗುವುವು. ಕೆಲಸದಲ್ಲಿ ಪ್ರೀತಿಯನ್ನಿಟ್ಟುಕೊಂಡು ಸ್ನೇಹಪರರಾಗಿ ವರ್ತಿಸುವ ಗುಣಶಾಲಿಗಳ ಕಾರ್ಯಸಾಧನೆಯು ಸುಸೂತ್ರವಾಗಿ ಮುಂದೆ ಸಾಗುವುದು.

ನಿಮ್ಮ ಶಾರದಾ ಸ್ತ್ರೀ ಸಮಾಜದ ಕಾರ್ಯಕಲಾಪಗಳು ಇನ್ನೂ ಚೆನ್ನಾಗಿ ಮುಂದುವರಿದು, ಮಹಿಳೆಯರಿಗೆ ಉಪಕಾರವಾಗಲೆಂದು ಹಾರೈಸುವೆನು. ನಿಮ್ಮ ಬಿನ್ನವತ್ತಳೆಯಲ್ಲಿ ನನ್ನ ವಿಷಯವಾಗಿ ಸೂಚಿಸಿರುವ ಮಧುರ ವಚನಗಳಿಗಾಗಿ ಮತ್ತೊಮ್ಮೆ ನನ್ನ ಕೃತಜ್ಞತೆಯನ್ನು ಸೂಚಿಸುವೆನು. ಲೇಡಿ ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ಈ ಸಮಾಜವು ದಿನೇ ದಿನೇ ವೃದ್ಧಿಹೊಂದಿ, ಮಹಿಳೆಯರ ಸೇವೆಯನ್ನು ಇನ್ನೂ ಅತಿಶಯವಾಗಿ ಮಾಡುವಂತಾಗಲೆಂದು ಭಗವಂತನನ್ನು ಪ್ರಾರ್ಥಿಸುವೆನು.

ಶ್ರೀ ವೀರಶೈವ ಸಮಾಜೋನ್ನತಿಯ ಸಂಘ, ಚಳ್ಳಕೆರೆ.

ಈ ಸಂಘವು ಚಳ್ಳಕೆರೆಯಲ್ಲಿ ಸ್ಥಾಪಿತವಾಗಿ ಇಂದಿಗೆ 1 ವರ್ಷವಾಗುತ್ತ ಬಂದಿತು. ಈ ಸಂಘದ ಉದ್ದೇಶ ಮತ್ತು ಪುರೋಭಿವೃದ್ಧಿಗಳನ್ನು ಕುರಿತು ತಕ್ಕ ಏರ್ಪಾಟುಗಳು ನಡೆಯಬೇಕಾದದ್ದು ಅತ್ಯಾವಶ್ಯಕವಿರುವದರಿಂದ ದಯವಿಟ್ಟು ಈ ಸಂಘದ ಮೆಂಬರುಗಳೂ ಪೋಷಕರೂ ಸಂಘದ ಪುರೋಭಿವೃದ್ಧಿಯನ್ನು ಅಪೇಕ್ಷಿಸುವ ಸಕಲ ವೀರಶೈವ ಮಹನೀಯರೂ ಸದರಿ ಚಳ್ಳಕೆರೆ ಟೌನಿನಲ್ಲಿ ಇದೇ ತಾ|| 15 ನೇ ಸೋಮವಾರ ನಡೆಯುವ ಜನರಲ್ ಮೀಟಿಂಗಿಗೆ ದಯಮಾಡಿಸಬೇಕಾಗಿ ಕೋರಿದೆ.

ಎಚ್. ಎಸ್. ಬಸಪ್ಪ, ಸೆಕ್ರೆಟರಿ.

ಸೊಲ್ಲಾಪುರದ ಶ್ರೀಮದ್ವೀರಶೈವ ವಾರದ ಸಂಸ್ಕೃತಪಾಠಶಾಲೆಗೆ ಬರತಕ್ಕ ವಿದ್ಯಾರ್ಥಿಗಳಿಗೆ

ಇದರ ಮೂಲಕ ಸಮಸ್ತ ಜನಕ್ಕೆ ತಿಳಿಯಪಡಿಸುವದೇನೆಂದರೆ—ಈಗ ಸದ್ಯಕ್ಕೆ ನಮ್ಮ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಪ್ರತಿ ವರ್ಷಕ್ಕಿಂತಲೂ ಹೆಚ್ಚಾಗಿರೋಣದರಿಂದ ಇನ್ನು ಮುಂದೆ ಬರುವ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವದಕ್ಕೆ ತೊಂದರೆಯಾಗುತ್ತದೆ. ತಥಾಪಿ, ಇಲ್ಲಿಯೇ (ಸೊಲ್ಲಾಪುರದಲ್ಲಿ) ಓದಲಭಿಲಾಷಿಸಿ ಬರಲಿಚ್ಛಿಸುವ ವಿದ್ಯಾರ್ಥಿಗಳು ಈ ಕೆಳಗೆ ಕಾಣಿಸಿದ ನಿಯಮಬದ್ಧರಾಗತಕ್ಕವರಿದ್ದರೆ ಬರಬಹುದು.

ನಿಯಮಗಳ ವಿವರ:—

(1) ಇದೇ ವರ್ಷವೇ ಕಲ್ಕತ್ತಾ ಸಂಸ್ಕೃತ ಅಸೋಸಿಯೇಸನದ ಪರೀಕ್ಷೆಗಳಿಗೆ ಕೂಡ್ರಬೇಕು ಮತ್ತು ಕೊಡಬೇಕು. (2) ಇಲ್ಲಿಗೆ ಬರಲಿಚ್ಛಿಸುವ ವಿದ್ಯಾರ್ಥಿಗಳು ತಮ್ಮ ವರ್ತನದ ಬಗ್ಗೆ ಸ್ವಗ್ರಾಮದ ಪ್ರಮುಖ ಜನರ ಅಥವಾ ಯಾವ ಪಾಠಶಾಲೆಯಿಂದ ಬಿಟ್ಟು ಬಿಟ್ಟು ಬರುವರೋ ಆ ಶಾಲಾಧ್ಯಾಪಕರ ಯೋಗ್ಯ ಶಿಫಾರಸ ಪತ್ರಗಳನ್ನು ತರಬೇಕು. (3) ವಿದ್ಯಾರ್ಥಿಗಳು ತಾವು ಬರುವದಕ್ಕಿಂತಲೂ ಮೊದಲು ಪಾಠಶಾಲೆಯಲ್ಲಿ ತಮ್ಮ ಪ್ರವೇಶಕ್ಕೋಸ್ಕರ ಪತ್ರವ್ಯವಹಾರಮಾಡಿ ಅಧ್ಯಾಪಕರ ಸಮ್ಮತಿಸಿಕ್ಕಿದರೆ ಬರಬಹುದು. ಪತ್ರವ್ಯವಹಾರಮಾಡದೆ ಹಾಗೆ ಬಂದ ವಿದ್ಯಾರ್ಥಿಗಳನ್ನು ಇಟ್ಟುಕೊಳ್ಳಲಾಗದೆಂದು ಸರ್ವರಿಗೂ ಎಚ್ಚರಿಸುತ್ತೇವೆ.

ಮ್ಯಾನೇಜರ್, ಮಲ್ಲಿಕಾರ್ಜುನಪ್ಪ ಅಪ್ಪಾರಾವ ಪಾಟೀಲ,
ವಾರದ ಸಂಸ್ಕೃತಪಾಠಶಾಲಾ, ಸೊಲ್ಲಾಪುರ ಸಿಟಿ.

ನಾರಿನವಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರ ತರಿಸಿಕೊಳ್ಳಿರಿ. ಕಿ ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ಪ್ಪಿ. ಎಸ್. ಕಾಸಸೆ, ಮಿರಜ.

16 M. C

೧೯೩೨ ನೆಯ ಇಸವಿ ಆಗಸ್ಟು ತಾ|| ೮ರಿಂದ ಆಗಸ್ಟು ತಾ|| ೧೪ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ ಅಂಗಿರಸನಾಮಸಂವತ್ಸರದ ಶ್ರಾವಣ ಶುದ್ಧ ಸಪ್ತಮಿಯಿಂದ ಶ್ರಾವಣ ಶುದ್ಧ ತ್ರಯೋದಶಿ ವರೆಗಿನ ಪಂಚಾಂಗ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕರ್ಕ ಮಾಸ
8	ಸೋಮ	ಸಪ್ತ	51-27	ಚಿತ್ತ	9-39	24
9	[1] ಮಂಗಳ	ಅಷ್ಟ	46-10	ಸ್ವಾತಿ	6-31	25
10	ಬುಧ	ನವ	40-2	ವಿ-ಉ	1-20-55-52	26
11	ಗುರು	ದಶ	34-12	ಜ್ಯೇಷ್ಠ	53-26	27
12	[2] ಶುಕ್ರ	ಏಕಾ	29-2	ಮೂಲ	50-24	28
13	[3] ಶನಿ	ದ್ವಾದ	24-20	ಪೂಷಾ	47-52	29
14	ಭಾನು	ತ್ರಯೋ	20-40	ಉಷಾ	46-36	30

(1) ಮಂಗಳಗೌರೀವ್ರತ, ಮಳೆನಕ್ಷತ್ರ ಅಶ್ಲೇಷ ೩ ನೆಯಪಾದ. (2) ವರಮಹಾಲಕ್ಷ್ಮೀವ್ರತ. ಮಳೆನಕ್ಷತ್ರ ಅಶ್ಲೇಷ ೪ ನೆಯಪಾದ. (3) ಶ್ರಾವಣ ಶನಿವಾರ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG. N. O. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಫಕ್ಷಾವಶಾರಾ ಪಕ್ಷ್ಮಜಪಕ್ಷ್ಮಕ್ಷ ತೋಷರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂಮಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿರೆಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಬ್ರಿಟ್ರಿಂಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆ ೧೯೩೨ ನೆಯ ಇಸವಿ ಅಗಸ್ಟು ತಾರೀಖು ೧೫ ನೆಯ ಸೋಮವಾರ [ಸಂಚಿಕೆ ೩೩

1932 ನೆಯ ಇಸವಿಯ ಮೈಸೂರು ದಸರಾ ವಸ್ತುಪ್ರದರ್ಶನ.

ಇಡೀ ಭರತಖಂಡದಲ್ಲೆಲ್ಲಾ ನಿಮ್ಮ ವಸ್ತುಗಳಿಗೆ ಗಿರಾಕಿಯನ್ನು ಪಡೆಯುವ ಅಭಿಲಾಷೆಯು ನಿಮಗಿದೆಯೆ?

ದಸರಾ ಕಾಲದಲ್ಲಿ ಭರತಖಂಡದ ಸಮಸ್ತ ಪ್ರಾಂತಗಳಿಂದಲೂ ಧನಿಕರಾದ ಜನರು ಗುಂಪು ಗುಂಪಾಗಿ ಮೈಸೂರು ನಗರಕ್ಕೆ ಬರುತ್ತಾರೆ. ಅವರು ನಿಮ್ಮ ವಸ್ತುಗಳನ್ನು ಕೊಳ್ಳುವ ಭರವಸೆಯು ವಿಶೇಷವಾಗಿದೆ.

ಅವರು ನಿಮ್ಮ ಸರಕುಗಳನ್ನು 1932 ನೆಯ ಇಸವಿ ಅಕ್ಟೋಬರು 1 ರ ಲಾಗಾಯಿತು 15 ನೆಯ ತಾರೀಖಿನವರೆಗೂ ನಡೆಯುವ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಅಜಮಾಯಿಷಿಮಾಡಿ ನೋಡುವುದಕ್ಕೆ ಅವಕಾಶಕೊಡಿ.

ಪ್ರದರ್ಶಕರಿಗೆ ಸಮಸ್ತ ಸೌಕರ್ಯಗಳನ್ನೂ ಒದಗಿಸಲಾಗುವುದು.

ಪ್ರದರ್ಶನಕ್ಕೆ ಸಂಬಂಧಪಟ್ಟಒಂದು ಕೈಪಿಡಿಯನ್ನು ಪ್ರಕಟಿಸುತ್ತೇವೆ. ಇದಕ್ಕೆ ಹಿಂದಣ ವರುಷಗಳಂತೆಯೇ ಅತ್ಯಧಿಕವಾಗಿ ಅದರ ಪ್ರತಿಗಳು ಮಾರಾಟವಾಗುವುವು. ಅದರಲ್ಲಿ ಕೆಲವು ಜಾಹಿರಾತುಗಳಿಗೆ ಮಾತ್ರವೇ ಸ್ಥಳವಿರುತ್ತದೆ.

"ಪ್ರಾಸ್ಪೆಕ್ಟಸ್" ಎಂಬ ಪ್ರಸಿದ್ಧಪತ್ರಿಕೆಗಾಗಿಯೂ ಜಾಹಿರಾತು ಪ್ರಕಟಣೆಯ ದರಗಳು ಮುಂತಾದವುಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಸೆಕ್ರೆಟರಿ, ಮೈಸೂರು ದಸರಾ ಎಗ್ಜಿಬಿಷನ್ ಕಮಿಟಿ,
ಅಠಾರಾಕಚೇರಿ, ಬೆಂಗಳೂರು.

[50—7]

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹುಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ೦.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಚಿತ್ರ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿಹಾಸ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರನವಚನ	೦—೮—೦	೦—೧೩—೦
ಸಚಿತ್ರ ಕರ್ನಾಟಕಕಲ್ಪಮಂಜರಿ	೦—೮—೦	೦—೧೩—೦
ಸಚಿತ್ರ ಶತಕತ್ರಯ	೧—೦—೦	೧—೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಯಲ್ಲಿಯ ಪ್ರಸಿದ್ಧ ವೈದ್ಯ ಕಾಸಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಸ್ವರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಡ್ಲ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶವಾಗದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವ, ಕಿಡ್ನಿ ಕಡಿಮೆಬರೋಣ, ಯಾವದೇಶರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ಶರೀರದ ತರುಣರಂತೆ ಕಾಯಿಬ್ಬಾ ಆಗುತ್ತದೆ. ಕೌಚಿಕ್ಕ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೪೪ ಗೋಲಿಯ ಒಂದು ಡಬ್ಬಿಗೆ ೫। ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೩೨ ವನಸ್ಪತಿಗಳ ಹೆಸರು ಮತ್ತು ಬಳ್ಳೀಸು ಪಾಕದ ತೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೇ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಡಿಚಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಡಿಚಿಟ್ಟು ಆಗೋಣ, ಮುಡಿಚಿಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಪ್ಪಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಅಷ್ಟಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ಗೋಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ತೀವ್ರ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ ಮತ್ತು ಬಡತನಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಧಾತುಂಕ್ಷ ಬಂದಿ ಮತ್ತವಪ್ಪೋ, ಇಂಥ ಬೇರೆ ಕಾರಣದಿಂದ ಸಂತತಿ ಇಚ್ಛಾ ಯಾರಿಗೆ ತೀರಿರುತ್ತದೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. [illegible] ಸಂಸಾರ ಸುಖದಲ್ಲಿಯೂ ವಿಷಯ ಹಾನಿಯಾಗದೆ ವೇಳೆ ವೇಳೆಗೆ ಮುಡಿಚಿಟ್ಟು ಆಗುವದು ಸುರು ಇದ್ದು ಗರ್ಭಧಾರಣ ಬಂದು ಹೋಗುವದು. ಹಿಂದಿನಿಂದ ಔಷಧಿ ಸುರು ಆಗುವದಿಲ್ಲ ಹೀಗೆ ಸವಿಸ್ತರ ಅದೆ. ಪೂರ್ಣವಿಚಾರ ಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣವಾಗಿ ಒಂದು ಡಬ್ಬಿಗೆ ೭ ರೂ. ಟ. ಖ. ೮ ಆಣೆ. [illegible] ಪತ್ರ ಸಾಮಾ. [illegible]

ಪತ್ತಾ ಮಾಡಾಳ:—ವೈದ್ಯ ಪ್ಪಿ. ಎಸ್. ಕಾಸಸೆ, ಮು. ಪೋ. ಮಿರಜ. ಎಂ. ಎಸ್. ಎಂ.

[16—34]

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು [illegible]

[illegible]

ಮತ್ತು ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜ್ ೮ ಆಣೆ.

[illegible]

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
ಪೋ. ಬಾ. ನಂ. ೧, ಹುಬ್ಬಳ್ಳಿ.

[10—40]

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಆಗಸ್ಟ್ ತಾ|| ೧೫ ನೆಯ ಸೋಮವಾರ.

"DISSENSIONS IN THE CAPITAL"

Under the striking title of "Dissensions in the Capital" our Bangalore contemporary the *Daily Post* has written a leader in its issue of the 11th instant in defence of Mr. T. G. Rama Iyer the ex-President of the Mysore City Municipal Council and what is still more important from its point of view, in condemnation of the So-called communal unrest in the Capital. Either for pure ignorance or for sheer mischief we have not come across another article in any paper to compare to the one in question. As for the contents of the article which we will presently examine the poor editor of the Daily Post—perhaps a well-meaning credible foreigner—may not be responsible in the slightest as is even evident from his reference to an un-named authority. Journalistic courtesy demands that either the editor should give the authority he depends upon for information or he must make the information his own and take the responsibility for the facts and comments thereon. Here the editor of the *Daily Post* neither discloses his authority nor takes the responsibility for the contents. What we do blame our contemporary for is his swallowing the ludicrous piece of information about dissensions and communal bitterness in the Capital and writing a homily about the same. Let us see the precious facts. The first thing is that information has reached the journal that "attempts are being made both in the press and elsewhere in Mysore to cripple the past and present efforts of Mr. T. G. Rama Iyer to carry out the policy so dear to the hearts of both His Highness and the Dewan of Mysore to improve the sanitation of the Mysore capital and to beautify that city by all possible means." In the first place, we would like a professor of English to explain what our English contemporary means by the expression, attempts to cripple the past efforts of Mr. Iyer. We can only think of crippling the present efforts and those "obstructionists" in the words of Daily Post are according to it performing the impossible, namely, crippling the past efforts of Mr. Iyer. As regards crippling the present efforts of Mr. Iyer all that we can say is that since 14th of July 1932 he is enjoying his leave, and he is not making any efforts (to our knowledge of course) to improve sanitation in Mysore or beautify it. That privilege has fallen on Mr. B. T. Kesava Iengar Mr. Iyer's successor—one who has had the best of welcome in the city. In short, the past efforts of Mr. Iyer cannot be crippled and there are no present efforts of his to be crippled. This is not all that is wrong with this opening sentence quoted above. Why should the editor, (we may be forgiven for taking the editor to task when he may not be the real author of it) introduce the names of His Highness the Maharaja and the Dewan Sahib into this controversy? The Municipal Council is a self Governing body by statute and why seek to prejudice the minds of the most constitutional ruler in our land and his trusted minister by making out that Mr. Iyer was prevented from carrying out their wishes by the "obstructionists." There cannot be a baser libel than this statement on a people who are most loyal and who have always stood for co-operation and put the interests of the State befor all else. Could the Daily Post or its good authority point out one single instance when the obstructionists have sought to cripple the efforts of Mr. Iyer? What is that which was dear to His Highness or Dewan Sahib which the obstructionists have turned down? Not one instance is there during all these years when the Council or any part of it could be accused of such a conduct. In fact, from our experience in the Municipal Council which is much longer than Mr. Iyer's tenure we can assert that Mr. Iyer or any of this henchmen cannot point out to any incident of such a nature. The Daily Post is a big ignoramus when it speaks of Mr. Iyer being wilfully obstructed in his efforts to carry on the good work of sanitary and other improvements. We have already said that Mr. Iyer is holidaying and is not engaged in making such efforts. But allowing for wrong expression, may we not ask what were those efforts and what the obstruction? The Daily Post would have done a signal service if it had quoted one single instance and then preached columnful of homilies. Later on the Daily Post quotes its good authority which leaves it no choice it appears, and that is that it was "made impossible for Mr. Rama Iyer to carry out the wishes of H. H. the Maharaja and the Dewan Saheb" and this notwithstanding the fact that he had large majorities in both the Municipality and the Trust Board. As we have already stated this is a libel which we cannot let go unchallenged. It is a perfect travesty of truth. To take umbrage for one's incapacity or inefficiency or disinclination under such a cover is to say the least ignoble, quite apart from its being absolutely untrue. Our space is limited and we can only conclude our reply to the mischievous article, evidently inspired, in our next issue, when we will examine the prevalence of communal dissensions in the capital, the philanthropic manifestations of Mr. Iyer, the majorities in the Council and the Board and other matters noted in the article.

WATER SUPPLY IN MYSORE

Since our note about certain grievances in connection with the water supply in the City we hear that things are being looked into properly by the authorities concerned and such of them as there may be are only incidental to the working of a department like that. It was certainly not our idea to criticise the department, and we are glad to find that there is every effort made to co-operate with the Municipal Council in the matter of introducing flushing arrangements and in giving other facilities to the rate-payers.

ಡೇಲಿ ಪೋಸ್ಟಿನ ಅಜ್ಞಪ್ರಲಾಪ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾಗಿದ್ದ ಮ|| ಟಿ. ಜಿ. ರಾಮಯ್ಯರ್‌ರವರು ಶ್ರೀಮನ್ಮಹಾರಾಜರವರಿಗೂ ಸಚಿವಶ್ರೇಷ್ಠರಿಗೂ ಅತ್ಯಂತ ಪ್ರಿಯವಾಗಿರುವ ರಾಜಧಾನಿಯ ಆರೋಗ್ಯ ಮತ್ತು ಅಲಂಕಾರಾಭಿವೃದ್ಧಿ ಕಾರ್ಯಗಳನ್ನು ನೆರವೇರಿಸುವಲ್ಲಿ ಕೆಲ ಮ್ಯುನಿಸಿಪಲ್ ಕೌನ್ಸಿಲರುಗಳು ಅಡಚಣೆಮಾಡಿಯೂ ಮಾಡುತ್ತಲೂ ಇರುವರಲ್ಲದೆ ಜಾತಿ ಮತವೈಷಮ್ಯವನ್ನುಂಟುಮಾಡಿ ಬೆಳಸುತ್ತಿರುವರೆಂದು ಮೊದಲಾಗಿ ಯಾರೋ ಅನಾಮಧೇಯರು ತಮಗೆ ತಿಳಿಹಿರುವುದರ ಆಧಾರದಮೇಲೆ ಅಜ್ಞಪ್ರಲಾಪವನ್ನು ಮಾಡಿರುವರು. ಈ ಲೇಖನವನ್ನು ಸಕಾರಣವಾಗಿ ಖಂಡಿಸಿ ನಮ್ಮ ಮುಂದಣ ಸಂಚಿಕೆಯಲ್ಲಿ ಬರೆಯುವೆವು.

ದೇವದಾಸ ಗಾಂಧಿಯವರ ಆರೋಗ್ಯ

ಮಹಾತ್ಮರ ಕುಮಾರ ದೇವದಾಸ ಗಾಂಧಿಯವರು ಅನಾರೋಗ್ಯ ದೆಶೆಯಿಂದ ಈಚೆಗೆ ಕಾರಾಗೃಹ ಬಂಧನ ವಿಮುಕ್ತರಾದರಷ್ಟೆ. ಇವರು ದೇಶೀಯ ಹೋಮಪತಿ ವೈದ್ಯರ ಚಿಕಿತ್ಸೆಯಲ್ಲಿದ್ದು ತಕ್ಕಮಟ್ಟಿಗೆ ಗುಣವನ್ನುಹೊಂದಿ ಕೊಂಚ ಕೊಂಚವಾಗಿ ತಿರುಗಾಡುವಷ್ಟು ಚೈತನ್ಯವನ್ನು ಹೊಂದಿರುತ್ತಾರೆ.

ಗಂಡನನ್ನು ಕೊಂದ ಹೆಂಡತಿಗೆ ದ್ವೀಪಾಂತರ ಶಿಕ್ಷೆ

ದಕ್ಷಿಣಮಲಬಾರು ಡಿ|| ಕಕೋಟ ಗ್ರಾಮದಲ್ಲಿ ಒಬ್ಬ ಹೆಂಗುಸು ತನಗೆ ಕೆಲ ಮಕ್ಕಳಿದ್ದಾಗ್ಯೂ ತನ್ನ ಗಂಡನು ಬೇರೊಬ್ಬ ಸ್ತ್ರೀಯನ್ನು ಮದುವೆ ಮಾಡಿಕೊಳ್ಳಲೆತ್ನಿಸಿದುದರಿಂದ ಕುಪಿತಳಾಗಿ ತನ್ನ ಗಂಡನನ್ನು ಕೊಂದುಬಿಟ್ಟಳು. ಇದಕ್ಕಾಗಿ ಅವಳಿಗೆ ಯಾವಜ್ಜೀವ ದ್ವೀಪಾಂತರವಾಸಶಿಕ್ಷೆ ವಿಧಿಸಲ್ಪಟ್ಟಿತು.

ಪೆಷಾವರದಲ್ಲಿ ಪ್ರವಾಹದನಾಹುತ

ಈಚೆಗೆ ಆದ ವಿಶೇಷ ಮಳೆಯಿಂದ ಡೇರಾ ಇಸ್ಮಾಯಿಲ್ ಖಾನ್ ಡಿಸ್ಟ್ರಿಕ್ಟಿನ ಪರ್ವತ ಪ್ರದೇಶದಲ್ಲಿರುವ ನದಿಗಳಲ್ಲಿ ಪ್ರವಾಹವು ಬಂದು ಗ್ರಾರ್ಮಡ ಎಂಬ ಗ್ರಾಮವು ನೀರಿನಲ್ಲಿ ಮುಳುಗಿ ಹೋಗಿ 100 ರ ಮೇಲೆಯೇ ಮನೆಗಳು ನಾಶವಾದುವು ಮತ್ತು 500 ಜನರಿಗೆ ನಿಲ್ಲಲು ನೆರಳಿಲ್ಲದಂತಾಗಿರುವುದಲ್ಲದೆ ಪೈರಿಗೂ ದನಕರುಗಳಿಗೂ ಅಪಾರ ನಷ್ಟ ಸಂಭವಿಸಿರುತ್ತದೆ.

ವಲ್ಲಭಭಾಯಿ ಪಟೇಲರ ಕುಮಾರ್ತಿ ೨೪ ಘಂಟೆಯಲ್ಲಿ ಪಟ್ಟಣವನ್ನು ಬಿಡಬೇಕು

ವಲ್ಲಭಭಾಯಿಪಟೇಲರ ಕುಮಾರ್ತಿ ಕನ್ಯಾ ಮಣಿ ಬೇಬೆ ಪಟೇಲರವರು ಗುಜರಾತ್ ಕಾಂಗ್ರೆಸ್ ಕಮಿಟಿಯ ಸಂಬಂಧವನ್ನು ಬಿಟ್ಟುಬಿಡಬೇಕೆಂದೂ, ಶಾಸನ ನಿರೋಧ ಕಾರ್ಯದಲ್ಲಿ ಭಾಗಿಯಾಗಿರಕೂಡದೆಂದೂ, 24 ಘಂಟೆಯೊಳಗೆ ಅಲಹಬಾದು ಪಟ್ಟಣವನ್ನು ಬಿಟ್ಟು ಕೈರಾ ಡಿಸ್ಟ್ರಿಕ್ಟಿನಲ್ಲಿರುವ ಕರ್ಮಸದ ಎಂಬ ಸ್ವಗ್ರಾಮಕ್ಕೆ ಹೋಗಿರಬೇಕೆಂದೂ ಡಿ|| ಮೆಜಿಸ್ಟ್ರೇಟರು ಅಪ್ಪಣೆ ಮಾಡಿರುತ್ತಾರೆ.

ಪತ್ನಿಯನ್ನು ಕೊಂದ ಪತಿಗೆ ದ್ವೀಪಾಂತರ ಶಿಕ್ಷೆ

ಬೊಂಬಾಯಿ ಪಟ್ಟಣದಲ್ಲಿ ದೊಡ್ಡ ಶ್ರೀಮಂತರಾಗಿಯೂ ಬೊಂಬಾಯಿ ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ಈವರೆಗೆ ಮೆಂಬರಾಗಿಯೂ ಇದ್ದ ರಾಮಚಂದ್ರ ಶಂಕರಯುರ್ವಾಣಿಯವರು ಹೆಂಡತಿಯನ್ನು ಕೊಂದ ಅಪರಾಧಕ್ಕಾಗಿ ಸೆಷನ್ಸು ಜಡ್ಜಿಯವರಿಂದ ಮರಣಾವಧಿ ದ್ವೀಪಾಂತರವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟದರಮೇಲೆ ಹೈಕೋರ್ಟಿಗೆ ಅಪೀಲನ್ನು ಮಾಡಿರುತ್ತಾರೆ. ಅಲ್ಲಿಯ ಜಡ್ಜಿಗಳು ಅಪೀಲನ್ನು ಅಂಗೀಕರಿಸಿ ಮರಣದಂಡನೆಯನ್ನೇಕೆ ವಿಧಿಸಬಾರದೆಂದು ಅಪರಾಧಿಯನ್ನು ಕೇಳಿರುವರು.

ವರ್ತಕನ ಮೇಲೆ ಹಗೆ ಸಾಧಿಸಿದುದು

ಒಬ್ಬ ವರ್ತಕನೂ ದೊಡ್ಡ ಧನಿಕನೂ ಆದ ವರ್ತಕನ ಮೇಲೆ ಹಗೆಯನ್ನು ಸಾಧಿಸಲು ವರ್ತಕನು ಊರಿನಲ್ಲಿಲ್ಲದಿದ್ದ ಸಮಯದಲ್ಲಿ ರಾತ್ರಿ ವೇಳೆ ಆತನ ಮನೆಗೆ ಹಂತಕರು ನುಗ್ಗಿ ವರ್ತಕನ ತಾಯಿಯ ಹೊಟ್ಟೆ ಮೊದಲಾದ ಸ್ಥಳಗಳನ್ನು ಕತ್ತಿಯಿಂದ ತಿವಿದು ಆಕೆಯನ್ನು ಕೊಂದರು. ಈ ರಾಕ್ಷಸ ಕೃತ್ಯವನ್ನು ನೋಡಲಾರದೆ ವರ್ತಕನ ಹೆಂಡತಿಯು ಮೂರ್ಛೆಹೊಂದಿ ಹಾಗೆಯೇ ಮೃತಳಾದಳು. ಅವನ ಮಗಳು ಕೊಂಚ ಗಾಯವನ್ನು ಹೊಂದಿ ತಪ್ಪಿಸಿಕೊಂಡು ಬಂದು ಪೊಲೀಸಿನವರಿಗೆ ನಡೆದ ಸಂಗತಿಯನ್ನು ತಿಳಸಿದಳು. ಪೊಲೀಸರು ಸಂಗತಿಯನ್ನು ವಿಚಾರಿಸುತ್ತಿರುವರು.

ಜೀವನೋಪಾಧಿ ಇಲ್ಲದ್ದಕ್ಕಾಗಿ ಶಿಕ್ಷೆ

20 ದಿವಸಗಳ ಹಿಂದೆ ಲಾಹೂರು ರೈಲ್ವೆ ಸ್ಟೇಷನ್ನಿನಲ್ಲಿ ಇಬ್ಬರು ಯುವಕರನ್ನು ಪೊಲೀಸಿನವರು ಸೆರೆಹಿಡಿದು ಜೀವನೋಪಾಧಿಯಿಲ್ಲದುದಕ್ಕಾಗಿ ಇವರುಗಳು ಎಂತಹ ನೀಚಕೃತ್ಯವನ್ನಾದರೂ ಮಾಡುವರೆಂಬ ಆರೋಪಣೆಯ ಮೇಲೆ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದ್ದರು. ಮೆಜಿಸ್ಟ್ರೇಟರು ಅಪರಾಧಿಗಳ ವಿಚಾರಣೆಯನ್ನುಮಾಡಿ ಅವರಿಬ್ಬರೂ 1 ವರ್ಷಕಾಲದವರೆಗೆ 1000 ರೂ. ಹೊಣೆಯನ್ನು ಕೊಡಬೇಕು, ಇಲ್ಲವಾದರೆ 1 ವರ್ಷ ಸಾದಾ ಸಜವನ್ನನುಭವಿಸಬೇಕು ಎಂದು ಅಪ್ಪಣೆ ಮಾಡಿದರು.

ನಂಬಿಕೆದ್ರೋಹಕ್ಕಾಗಿ ಶಿಕ್ಷೆ

ಅಂಗಸಾಧನೆಯಲ್ಲಿ ಪ್ರಖ್ಯಾತರಾದ ರಾಮಮೂರ್ತಿಯವರು ಕೆಲ ತಿಂಗಳ ಹಿಂದೆ ಮಹೇವ ಎಂಬ ಜಹಗೀರಿನ ರಾಜರ ಅತಿಥಿಗಳಾಗಿ ಹೋಗಿದ್ದಾಗ್ಗೆ ತಾವು ರಾಜರಲ್ಲಿಟ್ಟಿದ್ದ 50,000 ರೂ. ಬೆಲೆ ಬಾಳುವ ಬಹುಮಾನ ಪದಕಗಳನ್ನೂ ಆಭರಣಗಳನ್ನೂ ಹಿಂದಿರುಗಿ ಕೇಳುವಲ್ಲಿ ರಾಜರು ಕೊಡಲು ತಿರಸ್ಕರಿಸಿಬಿಟ್ಟರೆಂದು ಅವರಮೇಲೆ ಸಬ್ ಡಿವಿಜನಲ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿದ್ದರು. ಅದರಮೇಲೆ 7 ತಿಂಗಳಕಾಲ ವಿಚಾರಣೆಯು ನಡೆದು, ಈ ಕೇಸಿನಲ್ಲಿ ಹೆಚ್ಚು ಶಿಕ್ಷೆಯನ್ನು ವಿಧಿಸುವುದು ನ್ಯಾಯ ಸಮ್ಮತವಾಗಿರುವ ಪ್ರಯುಕ್ತ ಅದನ್ನು ವಿಧಿಸಲು ನನಗಧಿಕಾರವಿಲ್ಲವಾಗಿ ಆ ಅಧಿಕಾರವುಳ್ಳ ಸೆಷನ್ನಿಗೆ ಕಳುಹಿಸಿರುತ್ತೇನೆಂದು ಮೆಜಿಸ್ಟ್ರೇಟರು ಬರೆದು ಕಳುಹಿದರು. ಆ|| ಸೆಷನ್ಸು ಜಡ್ಜಿಯವರು ವಿಚಾರಿಸಿ ರಾಜರಿಗೆ 6 ತಿಂಗಳ ಕಠಿಣ ಸಜ ಮತ್ತು 15,000 ರೂ. ಜುಲ್ಮಾನೆ ವಿಧಿಸಲಾಗಿ ರಾಜರು ಸೆಷನ್ಸ್ ಕೋರ್ಟಿಗೆ ಅಪೀಲು ಮಾಡಿರುತ್ತಾರೆ.

ಕುಸ್ತಿ ಪಂದ್ಯದಲ್ಲಿ ಒಬ್ಬನು ಸತ್ತನು

ಬರ್ದವಾನ್ ಡಿ|| ಹರಿಹರಪುರ ಗ್ರಾಮದೊಳಗೆ ಕಳೆದ ಜುಲೈ ತಾ|| 3 ರಲ್ಲಿ ಈ ಡಿಸ್ಟ್ರಿಕ್ಟಿನಲ್ಲೆಲ್ಲ ದೊಡ್ಡ ಪೈಲ್ವಾನನೆಂದು ಪ್ರಸಿದ್ಧನಾಗಿದ್ದ ರಂಜನ್‌ಬಾಗ್ದಿ ಎಂಬವನಿಗೂ ಹಸೇನ್ ಖಾನನಿಗೂ ಬಹಳ ಜಿದ್ದಿನಿಂದ ಕುಸ್ತಿಯಾಗುತ್ತದೆಂದು ಡಂಗುರ ಹೊಡೆಸಲ್ಪಟ್ಟಿದ್ದುದರಿಂದ ನೆರೆ ಗ್ರಾಮಗಳಿಂದೆಲ್ಲ ಸಾವಿರಾರು ಜನರು ನೋಡಲು ಬಂದು ಸೇರಿದ್ದು ಕಣ್ಣುರೆಪ್ಪೆ ಹೊಡೆಯದೆ ಕುಸ್ತಿಯನ್ನು ನೋಡುತ್ತಿದ್ದರು. ಕುಸ್ತಿಯು ಆಗುತ್ತಿರುವಾಗ್ಗೆ ರಂಜನ್ ಎಂಬವನು ಹಸೇನನಿಂದ ಮೇಲಕ್ಕೆ ತ್ತಲ್ಪಟ್ಟು ಕೆಳಕ್ಕೆ ಕೆಡವಲ್ಪಟ್ಟನು. ರಂಜನ್ನಿನ ಕುತ್ತಿಗೆಯಲ್ಲಿ ಅಪಾಯಕರವಾದ ಪೆಟ್ಟುಗಳು ಬಿದ್ದುದರ ಮೇಲೆ ಆ ಗ್ರಾಮದಲ್ಲಿ ಕೈ ಚಿಕಿತ್ಸೆ ನಡೆದು ಕಡೆಯಲ್ಲಿ ಅವನು ಕಲಕತ್ತಾ ಆಸ್ಪತ್ರೆಗೆ ಸಾಗಿಸಲ್ಪಟ್ಟ ಕೊಂಚಹೊತ್ತಿನಮೇಲೆ ಸತ್ತುಹೋದನು.

ಮಗುವಿನ ಮರಣಕ್ಕಾಗಿ ತಾಯಿ ತಂದೆಗಳ ಆತ್ಮಹತ್ಯೆ.

ಆಡಿಮಾಸೋತ್ಸವಕ್ಕಾಗಿ ಒಬ್ಬ ಶ್ರೀಮಂತ ನಗರ್‌ಶೆಟ್ಟಿಯೂ ಅವನ ಹೆಂಡತಿಯೂ 2 ವರ್ಷದ ಹೆಣ್ಣುಮಗುವಿನ ಸಮೇತ ಶಂಕರ್ ಕೋಯಿಲ್ ಎಂಬಲ್ಲಿಗೆ ಬಂದಿದ್ದರು. ಕಳೆದ ಸೋಮವಾರ ಸಾಯಂಕಾಲ ಶೆಟ್ಟಿಯ ಹೆಂಡತಿಯು ತನ್ನ ಮಗುವಿಗೆ ಬೇಕಾದಷ್ಟು ಆಭರಣಗಳನ್ನಿಟ್ಟು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಗುಡಿಯೊಳಗೆ ಕುಳಿತಿದ್ದ ಒಬ್ಬ ಅರ್ಚಕನ ವಶಕ್ಕೆ ಮಗುವನ್ನು ಕೊಟ್ಟು ತಾನು ಪ್ರಾಕಾರದೊಳಗೆ ಪ್ರದಕ್ಷಿಣೆ ಮಾಡುತ್ತಿರುವಾಗ್ಗೆ 1–2 ನೆಯ ವೇಳೆ ಆ ಅರ್ಚಕನ ಬಳಿ ಮಗುವಿದ್ದುದನ್ನು ಕಂಡು 3 ನೆಯ ವೇಳೆ ಪ್ರದಕ್ಷಿಣೆಯನ್ನು ಪೂರೈಸಿಕೊಂಡು ಬಂದು ನೋಡುವಲ್ಲಿ ಅರ್ಚಕನೂ ಮಗುವೂ ಅಲ್ಲಿಲ್ಲದಿದ್ದುದನ್ನು ಕಂಡು ದಿಗಿಲುಬಿದ್ದು ದೇವಸ್ಥಾನದೊಳಗೆಲ್ಲ ತಡಕಿ ನಿರಾಶಳಾಗಿ ಹೊರಗೆ ಕೊಳದಲ್ಲಿ ಮಗುವಿನ ಆಭರಣವು ಅಪಹರಿಸಲ್ಪಟ್ಟು ಅದರ ಶವವು ತೇಲುತ್ತಿರುವುದೆಂದು ಕೇಳಿ ದಿಗಲುಬಿದ್ದು ಓಡಿಬಂದು ಅದು ತನ್ನ ಮಗುವಿನದೆಂದು ಅರಿತು ಅತ್ಯಂತವಾಗಿ ರೋದಿಸಿ ಕಡೆಯಲ್ಲಿ ಅದೇ ಕೊಳದೊಳಗೆ ಬಿದ್ದು ಆತ್ಮಹತ್ಯ ಮಾಡಿಕೊಂಡಳು. ಹೊರಗೆ ಹೋಗಿದ್ದ ಈಕೆಯ ಗಂಡನು ಮನೆಗೆ ಬಂದು ಹೆಂಡತಿಯು ಮಗುವಿನ ಸಮೇತ ದೇವಸ್ಥಾನಕ್ಕೆ ಹೋಗಿರುವುದನ್ನು ತಿಳಿದು ದೇವಸ್ಥಾನಕ್ಕೆ ಬಂದು ಅವರಿಬ್ಬರೂ ಸತ್ತಿರುವುದನ್ನು ನೋಡಿ ದಿಗ್ಭ್ರಾಂತನಾಗಿ ತಾನೂ ಕೊಳದೊಳಗೆ ಬಿದ್ದು ಪ್ರಾಣಹತ್ಯ ಮಾಡಿಕೊಂಡನು. ಹೆಣಗಳು ಕೊಳದಿಂದ ಸಾಗಿಸಲ್ಪಟ್ಟು ಕೊಳವು ಪರಿಶುದ್ಧಿಗೊಳಿಸಲ್ಪಡುವವರೆಗೂ ದೇವರ ಪೂಜೆಯು ನಿಲ್ಲಿಸಲ್ಪಟ್ಟಿದ್ದಿತು. ಕೆಲ ಅರ್ಚಕರು ಅನುಮಾನದ ಮೇಲೆ ಸೆರೆಹಿಡಿಯಲ್ಪಟ್ಟಿರುವರು.

ಮಿತವಾದ ನಾಯಕರ ಪ್ರಕಟನೆ

"ಕಳೆದ ಜೂನ್ ತಾ|| 27 ರಲ್ಲಿ ಇಂಡ್ಯಾ ಮಂತ್ರಿಗಳು ಪ್ರಕಟಿಸಿದ ಕಾರ್ಯಕ್ರಮವು ರೌಂಡುಟೇಬಿಲು ಪದ್ಧತಿಗೆ ತೀರ ವಿರುದ್ಧವಾಗಿರುವ ಪ್ರಯುಕ್ತ ನಾವು ಇದನ್ನು ಸಮ್ಮತಿಸಲಾರೆವು. ಮುಂದಣ ರಾಜ್ಯಾಂಗ ವಿಧಾನವನ್ನು ಕುರಿತು ಇಂಡ್ಯಾ ಮತ್ತು ಇಂಗ್ಲೆಂಡು ದೇಶಗಳ ಪ್ರತಿನಿಧಿಗಳು ಕೂಡಿ ಚರ್ಚಿಸಿದಾಗ್ಗೆ ಭಾರತೀಯರಿಗೆ ಸಮಾನ ಗೌರವವಿರಬೇಕೆಂದು ಗೊತ್ತುಮಾಡಿದ ನಿಯಮವು ಈಗ ತೊಲಗಿಸಲ್ಪಟ್ಟಿದೆ. ಈ ಎರಡು ದೇಶಗಳ ಪ್ರತಿನಿಧಿಗಳಿಗೂ ನಡೆದ ಒಡಂಬಡಿಕೆಯನ್ನನುಸರಿಸಿ ಬಿಲ್ಲು ತಯಾರಿಸಲ್ಪಡಬೇಕೆಂಬ ನಿಯಮವು ಸಹ ತಪ್ಪಿಸಲ್ಪಟ್ಟಿದೆ. ಈ ಎರಡು ಆಶಯಗಳಿಂದಲೇ ರೌಂಡುಟೇಬಿಲು ಸಭೆಯೇರ್ಪಾಟಾದುದು. ಸಾವಕಾಶವಾಗದಂತೆ ಮಾಡುವಲ್ಲಿ ಸಹ ಈ ಎರಡು ಆಶಯಗಳನ್ನು ಸುಲಭವಾಗಿ ಅನುಸರಿಸಬಹುದು. ಪಾರ್ಲಿಮೆಂಟಿನವರ ಸರ್ವಾಧಿಕಾರಕ್ಕೆ ರೌಂಡುಟೇಬಿಲು ಸಭೆಯು ಹೇಗೆ ವಿರೋಧವಾಗುವುದೆಂಬುದನ್ನು ನಾವು ತಿಳಿಯಲಾರದೆ ಹೋದೆವು. ಆದುದರಿಂದ ಪುನಃ ರೌಂಡುಟೇಬಿಲು ಪದ್ಧತಿಯನ್ನನುಸರಿಸುವವರೆಗೆ ದೊರೆತನದವರು ಆಹ್ವಾನಿಸಿದರು ಕೂಡ ಭಾರತ ಪ್ರತಿನಿಧಿಗಳಾರೂ ಸಂಸ್ಕರಣ ವಿಷಯದಲ್ಲಿ ದೊರೆತನದವರಿಗೆ ಸಹಾಯ ಮಾಡಕೂಡದು ಮತ್ತು ಸಹಕರಿಸಲಾಗದು ಎಂಬುದೇ ನಮ್ಮ ದೃಢಸಂಕಲ್ಪವಾಗಿದೆ" ಎಂದು ಮಿತವಾದ ನಾಯಕರುಗಳು ಪ್ರಕಟಿಸಿರುತ್ತಾರೆ. ಈ ಪ್ರಕಟನ ಪತ್ರಿಕೆಗೆ ರೈ|| ಆ|| ವಿ. ಎಸ್. ಶ್ರೀನಿವಾಸಶಾಸ್ತ್ರಿ, ಸರ್ ಸಯದ್ ಆಲಿ ಇಮಾಂ, ಸರ್ ತೇಜ್‌ಬಹದ್ದೂರ್ ಸಪ್ರೂ, ರಾಯ ರಾಜೇಶ್ವರ ಬಲಿ, ರಾಜಾ ಸರ್ ರಾಂ ಪಾಲಸಿಂಗ್, ಸರ್ ಕವಾಸ್ಜೀ ಜಹಂಗೀರ್, ಸರ್ ಫಿರೋಜ್‌ಷಾ ಸೇತ್ನಾ, ಪೂನಾ ಮ್ಯುನಿಸಿಪಲ್ ಮೇಯರು ಡಾಕ್ಟರ್ ನಾಯುಡು, ಕುಂಜ್ರು, ದೇವಧರ್, ಎಂ. ಆರ್. ಜಯಕರ್, ಸಯದ್ ಆಲಿ ಇಮಾಂ ಮೊದಲಾದ ನಾಯಕರುಗಳು ರುಜು ಮಾಡಿರುತ್ತಾರೆ.

ಇಂಡ್ಯಾ ದೊರೆತನದವರ ಪ್ರಕಟನೆ

ಬ್ರಿಟಿಷ್ ದೊರೆತನದವರು ಕೂಡಲೆ ಸಾಂಘಿಕ ಸಮಸ್ಯೆಯ ಪರಿಷ್ಕಾರವನ್ನು ಪ್ರಕಟಿಸುವರು. ಹಿಂದುಗಳು, ಮಹಮ್ಮದೀಯರುಗಳು, ಸಿಕ್ಕರುಗಳು ಮೊದಲಾದ ವಿವಿಧ ಸಂಘಗಳವರಿಗೆ ರಾಷ್ಟ್ರೀಯ ಶಾಸನ ಸಭೆಗಳಲ್ಲಿ ಎಷ್ಟೆಷ್ಟು ಸ್ಥಾನಗಳಿರಬೇಕೆಂಬುದು ಈ ಪ್ರಕಟನೆಯಲ್ಲಿ ವಿವರಿಸಲ್ಪಡುವುದು. ಅಭ್ಯರ್ಥಿಗಳನ್ನು ಆರಿಸುವುದು, ಕೆಲ ಸಂಘದವರಿಗೆ ಪ್ರತ್ಯೇಕ ಸ್ಥಾನಗಳನ್ನೇರ್ಪಡಿಸುವುದು, ಪ್ರತ್ಯೇಕ ನಿಯೋಜಕ ವರ್ಗಗಳು ಮೊದಲಾದ ವಿಷಯಗಳ ಸಂಬಂಧವಾಗಿ ನಿರ್ಣಯಗಳು ಕೂಡ ಈ ಪರಿಷ್ಕಾರದಲ್ಲಿರುವವಲ್ಲದೆ ಹೊಸ ರಾಜ್ಯಾಂಗ ವಿಧಾನದಲ್ಲಿ ಆಯಾಸಂಘಗಳು ಬೇರೆಬೇರೆ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಶಾಸನ ಸಭೆಗಳಿಗೆ ಆರಿಸಲ್ಪಡುವ ಪ್ರತಿನಿಧಿಗಳ ಸಂಖ್ಯೆಯನ್ನು ನಿರ್ಣಯಿಸಿರುವುದೇ ಮುಖ್ಯ ವಿಷಯವಾಗಿರುವುದು. ಇಂಡ್ಯಾ ದೇಶವು ಬಹಳ ವಿಶಾಲವಾಗಿದೆ. ಪ್ರಜೆಗಳಲ್ಲಿ ಅನೇಕ ಜಾತಿಗಳು ಮತಗಳು ವಿಜ್ಞಾನಗಳು ಮೊದಲಾದವು ಇರುತ್ತವೆ. ಆದುದರಿಂದ ಪ್ರಜಾಪರಿಪಾಲನದಲ್ಲಿ ಅಲ್ಪ ಸಂಖ್ಯಾಕರಿಗೆ ತಕ್ಕ ರಕ್ಷಣೆಯಿರಬೇಕು. ಈ ಸಮಸ್ಯೆಯನ್ನು ಪರಿಷ್ಕರಿಸಲು ಬ್ರಿಟಿಷ್ ದೊರೆತನದವರಿಗೆಷ್ಟು ಮಾತ್ರಕ್ಕೂ ಇಷ್ಟವಿಲ್ಲ. ಇದನ್ನು ವಿವಿಧ ಸಂಘದವರೇ ಪರಿಷ್ಕರಿಸಿಕೊಳ್ಳತಕ್ಕದೆಂದು ದೊರೆತನದವರು ಕೋರಿದರು. ಆದರೆ ಅವರು ಆ ರೀತಿ ಮಾಡಲಿಲ್ಲವಾಗಿ ದೊರೆತನದವರೇ ಇದನ್ನು ಪರಿಷ್ಕರಿಸಲು ಕೈಕೊಂಡರು. ಆದುದರಿಂದ ಈಗ ಇಂಡ್ಯಾದಲ್ಲಿ ಯಾವ ಸಂಘದವರು ಕೂಡ ಇದನ್ನು ತಿರಸ್ಕರಿಸಲಾಗದು. ಇದರಿಂದ ಎಲ್ಲ ಪಕ್ಷದವರಿಗೂ ಸಂತೃಪ್ತಿಯುಂಟಾಗುವುದು ಅಸಂಭವವು. ಇದನ್ನು ದೊರೆತನದವರು ಯಾವ ಭಾವದಿಂದ ಪರಿಷ್ಕರಿಸಿರುವರೋ ಆ ಭಾವದಿಂದಲೇ ಎಲ್ಲ ಸಂಘದವರೂ ಇದನ್ನು ಅನುಮೋದಿಸಬೇಕಾಗಿದೆ. "ಹೊಸ ಬಿಲ್ಲು ಅನುಮೋದಿಸಲ್ಪಡುವಲ್ಲಿ ವಿವಿಧ ಸಂಘದವರು ಶಂತಮ್ಮೊ ಅಂಗೀಕರಿಸಬೇಕೆಂದು ವಿಧಾನದಲ್ಲಿ ಸಿದ್ಧಪಡಿಸಿದರೆ, ಅದು ಈ ಪರಿಷ್ಕಾರಕ್ಕೆ ಭಿನ್ನವಾಗಿದ್ದರೂ ಅದನ್ನು ಅಂಗೀಕರಿಸುವೆವು" ಎಂದು ಇಂಡ್ಯಾ ಮಂತ್ರಿಯವರು ತಿಳಿಸಿರುವರು. ಅದನ್ನು ಇಂಡ್ಯಾ ದೊರೆತನದವರು ಪ್ರಕಟಿಸಿರುತ್ತಾರೆ.

ಒಳದೇಶದ ವೃತ್ತಾಂತಗಳು

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯಲ್ಲಿ $1\frac{1}{2}$ ಅಂಗುಲದವರೆಗೆ ಮಳೆಯಾಯಿತು ಮತ್ತು ಇನ್ನೂ ಆಗುವ ಚಿಹ್ನೆಯಿದೆ. ಇದರಿಂದ ವಾಯುಮಂಡಲವು ತಕ್ಕಮಟ್ಟಿಗೆ ತಂಪಾಗಿರುವುದು.

ಟಿ. ನರಸೀಪುರ ತಾ|| ತಿರುಮಕೂಡ್ಲಿಗೂ ಸೋಸಲೆಗೂ ಮಧ್ಯೆ ಕಾವೇರಿ ನದಿಗೆ ಅಡ್ಡವಾಗಿ ಕಟ್ಟಲ್ಪಟ್ಟಿರುವ ಸೇತುವೆಗೆ ಶ್ರೀಕೃಷ್ಣರಾಜೇಂದ್ರ ಸೇತುವೆ ಎಂದು ನಾಮಕರಣ ಮಾಡಲು ಮತ್ತು ಅದರ ಆರಂಭೋತ್ಸವವನ್ನು ತಮ್ಮ ಅಮೃತ ಹಸ್ತದಿಂದ ಇದೇ ತಾ|| 29 ರಲ್ಲಿ ನೆರವೇರಿಸಲು ಶ್ರೀಮನ್ಮಹಾರಾಜರವರು ಸಮ್ಮತಿಸಿರುವುದಾಗಿ ತಿಳಿಯುತ್ತೇವೆ.

ಬೇಗೂರಿನಲ್ಲಿ ಮ|| ಅಣ್ಣಯ್ಯಪ್ಪನವರಿಂದ ನೂತನವಾಗಿ ಕಟ್ಟಿಸಲ್ಪಟ್ಟಿರುವ ಆಸ್ಪತ್ರೆಯ ಮಂದಿರದ ಪ್ರವೇಶೋತ್ಸವವನ್ನು ಕಳೆದ ಗುರುವಾರ ದಿವಾನ್ ಸಾಹೇಬರವರು ನೆರವೇರಿಸಿದಾಗ್ಗೆ ಧರ್ಮಕರ್ತರ ಪರೋಪಕಾರ ಬುದ್ಧಿ, ಈ ಆಸ್ಪತ್ರೆಯಿಂದ ಗ್ರಾಮಸ್ತರಿಗಾಗುವ ಪ್ರಯೋಜನ, ಗ್ರಾಮನೈರ್ಮಲ್ಯ, ರೋಗ ಬಾರದಂತೆ ಮಾಡಿಕೊಂಡು ಆಸ್ಪತ್ರೆಯ ಆವಶ್ಯಕತೆಯನ್ನು ತಪ್ಪಿಸುವುದು ಇತ್ಯಾದಿ ವಿಷಯಗಳನ್ನು ಕುರಿತು ಅವರು ಮಾಡಿರುವ ಅಮೋಘವಾದ ಭಾಷಣವು ಬೇರೆಕಡೆ ಮುದ್ರಿಸಲ್ಪಟ್ಟಿದೆ.

ಬೆಂಗಳೂರು ಸಿಟಿಯಲ್ಲಿರುವ ಶ್ರೀ|| ಸರ್ಪಭೂಷಣ ಸ್ವಾಮಿಯವರ ಮಠದ ಅಧಿಕಾರಿಗಳಾಗಿ ಶ್ರೀಮಜ್ಜಗದ್ಗುರು ಮುರುಘ ರಾಜೇಂದ್ರ ಮಹಾ ಸ್ವಾಮಿಗಳಿಂದ ನಿಯಮಿಸಲ್ಪಟ್ಟ ವೇ|| ಶ್ರೀ ಮಹಾದೇವ ಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವವು ಕಳೆದ ಶುಕ್ರವಾರ ಮಹಾ ವೈಭವದಿಂದ ನೆರವೇರಿತು. ಬೆಂಗಳೂರು ದಂಡು, ಅಲಸೂರು, ಸಿಟಿ ಮತ್ತು ಪರಸ್ಥಳಗಳ ವೀರಶೈವರು 1000 ಕ್ಕೆ ಮೇಲ್ಪಟ್ಟು ಉತ್ಸವದಲ್ಲಿ ಸೇರಿದ್ದರು. ಈ ನೂತನ ಶ್ರೀಗಳು ಕಾಶಿಯಲ್ಲಿ ವ್ಯಾಸಂಗ ಮಾಡಿ ಮಹಾ ಪಂಡಿತರಾಗಿರುವುದರಿಂದ ಮಹಾ ಮಹಿಮರೂ ವಿದ್ವಾಂಸರೂ ಆಗಿದ್ದ ಶ್ರೀ ಸರ್ಪಭೂಷಣ ಸ್ವಾಮಿಯವರ ಮಠಕ್ಕೆ ತಕ್ಕವರಾಗಿರುತ್ತಾರೆ.

ರಾಜಧಾನಿಯ ಧರ್ಮಪ್ರಕಾಶ ಸಾಹುಕಾರ್ ಡಿ. ಬನುಮಯ್ಯನವರಿಗೆ ರಾವ್ ಬಹದ್ದೂರ್ ಪ್ರಶಸ್ತಿಯೂ, ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ವೈಸ್ ಪ್ರೆಸಿಡೆಂಟ್ ಮ|| ಎಂ. ರಾಮಸ್ವಾಮಿಯವರಿಗೆ ರಾವ್ ಸಾಹೆಬ್ ಪ್ರಶಸ್ತಿಯೂ, ಮ|| ಡಬ್ಲ್ಯು ಎಚ್. ಥಿಯೋಬಾಲ್ಡ್‌ರವರ ಪತ್ನಿಗೆ ಕೈಸರ್ ಹಿಂದ್ ಪದಕವೂ ಲಭ್ಯವಾದುದರಿಂದ ತಮ್ಮಗಳಿಗುಂಟಾದ ಸಂತೋಷ ಸೂಚಕವಾಗಿ ನಂಜನಗೂಡಿನ ನಿವಾಸಿಗಳು ಮೇಲ್ಕಂಡ ಬಹುಮಾನಿತರುಗಳನ್ನು ನೆನ್ನೆಯ ದಿವಸ ಅಲ್ಲಿಗೆ ಬರಮಾಡಿಕೊಂಡು ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರಾದ ಮ|| ಕೆ. ಶಂಕರ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಅಭಿನಂದನ ಪತ್ರಿಕೆಯನ್ನೊಪ್ಪಿಸಿ ಸನ್ಮಾನಿಸಿದರು.

ಶ್ರೀಮನ್ಮಹಾರಾಜರವರ ರಜತಮಹೋತ್ಸವ ದಿನದ ಜ್ಞಾಪಕಾರ್ಥವಾಗಿ ಅರಮನೆಯ ಎಲ್ಲ ಶಾಖೆಗಳ ಉದ್ಯೋಗಸ್ತರುಗಳು ಕಳೆದ 3–4 ವರ್ಷಗಳಿಂದಲೂ ಚಂದಾ ಹಣವನ್ನು ಕೂಡಿಸಿ ಪರಸ್ಥಳಕ್ಕೆ ಹೋಗಿ ವನಭೋಜನಾದಿಗಳಿಂದ ವಿನೋದವಾಗಿ ಕಾಲಕಳೆದುಕೊಂಡು ಬರುತ್ತಿರುವರು. ಅದರಂತೆ ಕಳೆದ ಸೋಮವಾರ 150–200 ಮಂದಿಗಳು ನಂಜನಗೂಡಿಗೆ ಹೋಗಿ ಅಲ್ಲಿಯ ಅರಮನೆಯಲ್ಲಿ ಸುಖಭೋಜನಾನಂತರ ವಿನೋದದಿಂದ ಸಾಯಂಕಾಲದವರೆಗೆ ಕಾಲಹರಣಮಾಡಿ ಶ್ರೀಮನ್ಮಹಾರಾಜರವರ ಗುಣಕಥನ ಮತ್ತು ಶ್ರೇಯಃ ಪ್ರಾರ್ಥನೆಗಳನ್ನು ಮಾಡಿ ಹಿಂದಿರುಗಿದರು. ಈ ಸಂತೋಷಕೂಟದ ವೆಚ್ಚಕ್ಕಾಗಿ ಶ್ರೀಮನ್ಮಹಾರಾಜರವರಿಂದ 100 ರೂಪಾಯಿಗಳು ದಯಪಾಲಿಸಲ್ಪಟ್ಟುದಾಗಿ ತಿಳಿಯಬರುತ್ತದೆ.

NOTICE

A Holstein Bull and a Scindi Bul are at stud at the Rayankere Palace Dairy Farm, Mysore, the rates being Rs. 5 and Rs. 2 respectively. Both bulls are of good milk pedigree.

[3—2]

Dr. McIsaac,
Manager,
Rayankere Dairy Farm.

ಬೇಗೂರು ಡಿಸ್ಪೆನ್ಸರಿ ಕಟ್ಟಡದ ಪ್ರವೇಶ ಮಹೋತ್ಸವವನ್ನು ನೆರವೇರಿಸುವಾಗ್ಗೆ ದಿವಾನ್ ಸಾಹೇಬರವರು ಮಾಡಿದ ಭಾಷಣ.

(1932ನೆಯ ಇಸವಿ ಆಗಸ್ಟ್ 11ನೆಯ ತಾರೀಖು ಗುರುವಾರ.)

ಶ್ರೀಮಾನ್ ಅಣ್ಣಯ್ಯಪ್ಪನವರೇ, ಮತ್ತು ಬೇಗೂರು ಗ್ರಾಮ ಪಂಚಾಯತಿ ಸದಸ್ಯರೇ:—

ಈ ಊರಿನ ಡಿಸ್ಪೆನ್ಸರಿ ಕಟ್ಟಡದ ಪ್ರವೇಶ ಮಹೋತ್ಸವವನ್ನು ನೆರವೇರಿಸುವುದು ನನಗೆ ಬಹಳ ಸಂತೋಷಕರವಾಗಿದೆ. ಈ ಕಟ್ಟಡಕ್ಕಾಗಿ ಶ್ರೀಮಾನ್ ಪಟೇಲ್ ಅಣ್ಣಯ್ಯಪ್ಪನವರು 5,500 ರೂಪಾಯಿಗಳ ಭಾರಿ ಮೊತ್ತವನ್ನು ಕೊಟ್ಟು ಸಹಾಯ ಮಾಡಿದ್ದಾರೆ. ಗ್ರಾಮಪಂಚಾಯತಿಯವರು ನಿವೇಶನಕ್ಕಾಗಿ 250 ರೂಪಾಯಿಗಳನ್ನು ಕೊಟ್ಟಿದ್ದಾರೆ. ಕಟ್ಟಡವನ್ನು ಕಟ್ಟುವ ಸಂಬಂಧದಲ್ಲಿ ಗ್ರಾಮಸ್ಥರು 250 ರೂಪಾಯಿಗಳ ಕೆಲಸವನ್ನು ಮಾಡಿದ್ದಾರೆ. ಹೀಗೆ, ಇತರರಿಂದ ಹಣವೇನನ್ನೂ ಪಡೆಯದೆ, ಇಲ್ಲಿಯವರೇ ಈ ಕಟ್ಟಡವನ್ನು ಕಟ್ಟಿಸಿ ಸಿದ್ಧಪಡಿಸಿಕೊಟ್ಟಿರುತ್ತಾರೆ. ಈ ವಿಷಯವನ್ನು ನೆನಪಿಗೆ ತಂದುಕೊಂಡರಂತೂ, ನನ್ನ ಸಂತೋಷವು ಮತ್ತೂ ಹೆಚ್ಚಾಗುತ್ತದೆ.

ಇವರಿಂದ ಈ ಊರಿನಲ್ಲಿ ದೊಡ್ಡದೊಂದು ಕೆಲಸವು ನೆರವೇರಿದಂತಾಯಿತು. ನಿಮ್ಮ ಈ ಕೆಲಸವನ್ನು ನೋಡಿ, ಮೆಚ್ಚಿಕೆಯಿಂದ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಶ್ರೀಮಾನ್ ಪಟೇಲ್ ಅಣ್ಣಯ್ಯಪ್ಪನವರಿಂದ ಈ ಊರಿಗೆ ಬಹಳ ಉಪಕಾರವಾಗಿದೆ. ಅವರು ಈ ಊರಿನವರಿಗೆ ತಂದೆಯಂತಿದ್ದಾರೆ. ಜನರಿಗೆ ಒಳ್ಳೆಯದನ್ನು ಮಾಡಬೇಕೆಂಬ ಘನವಾದ ಉದ್ದೇಶದಿಂದ ಕೂಡಿ ತ್ಯಾಗವನ್ನು ತೋರಿಸುವವರು, ಇಂಥವರು ಒಬ್ಬರಿದ್ದರೂ ಅವರ ಮುಂದಾಳುತನದಲ್ಲಿ ಬಹಳ ಆಶ್ಚರ್ಯಕರವಾಗಿ ಕೆಲಸವನ್ನು ಸಾಧಿಸಬಹುದು. ದೊಡ್ಡಬಳ್ಳಾಪುರದಲ್ಲಿರುವ ಲೋಕಸೇವಾನಿರತ ಡಿ. ಕೊಂಗಾಡಿಯಪ್ಪನವರೂ ಇಂಥ ಮತ್ತೊಬ್ಬ ದೊಡ್ಡ ಮನುಷ್ಯರು. ಅವರು ತಮ್ಮ ಊರಿಗೂ, ತಮ್ಮ ದೇಶಬಾಂಧವರಿಗೂ, ಶಾಶ್ವತವಾಗಿ ಪ್ರಯೋಜನಕರವಾಗಿರುವ ರೀತಿಯಲ್ಲಿ ಸೇವೆಯನ್ನು ಒಪ್ಪಿಸಿದ್ದಾರೆ. ಇಂಥ ಮಹನೀಯರುಗಳ ಸಂಖ್ಯೆಯು ಮತ್ತಷ್ಟು ಹೆಚ್ಚಲೆಂಬುದೇ ನನ್ನ ಹಾರೈಕೆ. ಅವರ ಸಂಖ್ಯೆಯು ಹೆಚ್ಚಿದರೆ, ನಮ್ಮ ಸಂಸ್ಥಾನದ ನಾನಾ ಊರುಗಳೂ ಸುಖಕ್ಕೂ ಶಾಂತಿಗೂ ವಾಸಸ್ಥಾನವೆನಿಸುವಂತಾಗುತ್ತದೆ; ಜನರು ಬಹಳ ನೆಮ್ಮದಿಯಾಗಿರುತ್ತಾರೆ.

ನಿಮ್ಮ ಊರಿನಲ್ಲಿ ಡಿಸ್ಪೆನ್ಸರಿಗಾಗಿ ಇಷ್ಟು ಸೊಗಸಾದ ಕಟ್ಟಡವು ದೊರೆತಿರುವುದು ಸಂತೋಷಕರವಾದ ಸಂಗತಿ. ಆದಾಗ್ಯೂ, ನಾನೇನೋ ಈ ಡಿಸ್ಪೆನ್ಸರಿಯೇ ನಿಮಗೆ ಬೇಕಾಗಿಲ್ಲದ ಸ್ಥಿತಿಯು ಒದಗಬೇಕೆಂದು ಆಶಿಸುತ್ತೇನೆ. ಕೊನೆಯಪಕ್ಷ, ಬಹುಮಟ್ಟಿಗೆ ಅದು ಬೇಕಾಗಿಲ್ಲದಂತಾದರೂ ಆಗಲೆಂದು ಹಾರೈಸುತ್ತೇನೆ. ನನ್ನ ಅಭಿಪ್ರಾಯವನ್ನು ಸ್ವಲ್ಪ ವಿಶದವಾಗಿ ವಿವರಿಸುವುದು ಉತ್ತಮವೆಂದು ತೋರುತ್ತದೆ. ನೀವುಗಳು ಕೆಲವು ಏರ್ಪಾಡುಗಳನ್ನು ಮಾಡಿಕೊಂಡರೆ, ಈ ಊರಿನಲ್ಲಿ ಯಾರಿಗೂ ರೋಗವೇ ಬರದೇ ಇರುವಷ್ಟು ಮಟ್ಟಿಗೆ ಆರೋಗ್ಯದಿಂದಿರಬಹುದು. ಆಗ್ಗೆ, ಇಲ್ಲಿ ಔಷಧವನ್ನು ತೆಗೆದುಕೊಳ್ಳುವವರೇ ಇರುವುದಿಲ್ಲ. ರೋಗವೇ ಇಲ್ಲದ ಮೇಲೆ, ಔಷಧವೇ ಬೇಕಿಲ್ಲ. ರೋಗವು ಬಂದಮೇಲೆ ವಾಸಿಮಾಡುವುದಕ್ಕಿಂತಲೂ, ರೋಗವೇ ಬರದಂತೆ ತಪ್ಪಿಸುವುದು ಬಹಳ ಸುಲಭ. ರೋಗಗಳು ಬರದಂತೆ ಕಾಪಾಡಿಕೊಳ್ಳುವ ಉಪಾಯಗಳಂತೂ ಅತಿ ಸುಲಭವಾಗಿವೆ. ನೀವು ಶುದ್ಧವಾದ ಕುಡಿಯುವ ನೀರನ್ನು ಒದಗಿಸಿಕೊಳ್ಳಬೇಕು. ಹೊಂಡಗಳಲ್ಲಿಯೂ, ಗುಂಡಿಗಳಲ್ಲಿಯೂ, ಕೊಳಕು ನೀರು ನಿಂತು ಸೊಳ್ಳೆಗಳ ಪಡೆಯು ಹೆಚ್ಚುವುದಕ್ಕೆ ಅವಕಾಶವಿಲ್ಲದಂತೆ ನೋಡಿಕೊಳ್ಳಬೇಕು. ಬಚ್ಚಲು ನೀರೂ, ಇತರ ಕೊಳಕಿನ ಪದಾರ್ಥಗಳೂ, ಆರೋಗ್ಯಕ್ಕೆ ಕುಂದಕವಿಲ್ಲದಂತೆ ದೂರವಾಗಿ ಸಾಗಿ ಹೋಗುವ ಹಾಗೆ ನೀವು ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳಬೇಕು. ಮಕ್ಕಳಿಗೆ ದೇವಿ ಹಾಕಿಸಬೇಕು. ಇಲಿಗಳನ್ನು ನಾಶಪಡಿಸಬೇಕು. ಪ್ಲೇಗು ರೋಗವೇನಾದರೂ ತಲೆಹಾಕುವ ಸೂಚನೆಯು ತೋರಿದೊಡನೆಯೇ ಇನಾಕ್ಯುಲೇಷನ್ ಮಾಡಿಸಿಕೊಳ್ಳಬೇಕು. ನೀವುಗಳು ಇಷ್ಟು ಕೆಲಸಮಾಡಿದರೆ ಸಾಕು. ನಿಮ್ಮಲ್ಲಿ ಯಾರಿಗೂ ರೋಗವೇ ಬರುವುದಿಲ್ಲ. ಆಗ್ಗೆ ಈ ಡಿಸ್ಪೆನ್ಸರಿಯ ಡಾಕ್ಟರು ಔಷಧ ಕೊಡುವುದಕ್ಕೆ ರೋಗಿಗಳೇ ಇಲ್ಲದಂತಾಗುವುದು. ಅವರು ತಮಗೆ ಕೆಲಸವೇ ಇಲ್ಲವಾಯಿತೆಂದು ಯೋಚಿಸಿ ಯೋಚಿಸಿ, ತಮಗೆ ಮತ್ತೆಲ್ಲಿಗಾದರೂ ವರ್ಗಮಾಡಬೇಕೆಂದು ಮೇಲಿನ ಅಧಿಕಾರಿಗಳಿಗೆ ತಿಳಿಸಬೇಕಾಗಬಹುದು! ನಾವಾಗಿಯೇ ರೋಗವನ್ನು ತಂದುಕೊಂಡು, ಆಮೇಲೆ ಅವುಗಳನ್ನು ಗುಣಪಡಿಸಿಕೊಳ್ಳುವ ಪ್ರಯತ್ನಮಾಡಿ ಪಾಡುಪಡುವುದೇ ಪದ್ಧತಿ ಬಿದ್ದುಹೋಗಿದೆ. ಇದು ಸ್ವಲ್ಪವೂ ಸರಿಯಲ್ಲ. ನಮಗೆ ರೋಗಗಳೇ ಬರದ ಹಾಗೆ ತಕ್ಕ ಎಚ್ಚರಿಕೆಯಿಂದಿದ್ದು ಸರಿಯಾದ ಏರ್ಪಾಡುಗಳನ್ನು ಮಾಡಿಕೊಳ್ಳುವುದೇ ವಿವೇಕದ ದಾರಿ. ನೂರಾರು ಮಂದಿಗಳಿಗೆ ಕಾಲರಾ ಜಾಡ್ಯವು ಬರದಂತೆ ನೋಡಿಕೊಳ್ಳುವುದು ಕೂಡ ಒಬ್ಬರಿಗೆ ಕಾಲರಾ ಜಾಡ್ಯವನ್ನು ಗುಣಮಾಡುವುದಕ್ಕಿಂತಲೂ ಬಹಳ ಸುಲಭ.

ನೀವುಗಳು ನೆರವೇರಿಸಬೇಕೆಂದು ನಾನು ತಿಳಿಸಿರುವ ಏರ್ಪಾಡುಗಳು ಬಹಳವಾಗಿವೆಯೆಂದು ನಿಮಗೆ ತೋರಬಹುದು. ಆದರೂ, ನಿಜವಾಗಿ ನೋಡಿದರೆ ಹಾಗಿಲ್ಲ. ಅವುಗಳನ್ನು ನೀವೆಲ್ಲರೂ ನಡೆಸಲೇಬಹುದು. ಖಂಡಿತವಾಗಿಯೂ ಅವು ನಿಮ್ಮ ಶಕ್ತಿಗೆ ಮೀರಿಲ್ಲ. ನಿಮ್ಮಲ್ಲಿರುವ ಉತ್ಸಾಹಕ್ಕೂ, ಶ್ರದ್ಧೆಗೂ, ಈ ಡಿಸ್ಪೆನ್ಸರಿಯ ಕಟ್ಟಡವೇ ನಿದರ್ಶನವಾಗಿದೆ. ಇದೇ ಭಾವನೆಗಳಿಂದ ಕೂಡಿ ನೀವುಗಳು ಕೆಲಸ ಮಾಡಿದರೆ, ನಾನು ಸೂಚಿಸಿರುವುದಕ್ಕಿಂತಲೂ ಇನ್ನೂ ಹೆಚ್ಚಿನ ಕೆಲಸಗಳನ್ನೂ ನೀವುಗಳು ನೆರವೇರಿಸಬಲ್ಲಿರಿ. ನನಗೆ ಕೇವಲ ಪ್ರೀತಿಪಾತ್ರರಾದ ದೇಶಬಾಂಧವರಾಗಿರುವ ನೀವುಗಳು ಈ ಭಾಗದಲ್ಲಿ ನಡೆಯಿಸುವ ಪ್ರಯತ್ನಗಳಿಗೆ ನನ್ನಿಂದ ಸಾಧ್ಯವಿರುವ ಸಹಾಯವನ್ನೆಲ್ಲಾ ನಾನು ಮಾಡುವೆನು. ಈ ವಿಷಯದಲ್ಲಿ ನೀವುಗಳು ಸಂಪೂರ್ಣವಾಗಿ ಭರವಸೆಯನ್ನಿಡಬಹುದು.

ನಾನೇನೋ ಒಂದು ದೊಡ್ಡದಾದ ಸ್ಥಾನದಲ್ಲಿರುವಂತೆ ಭಾವಿಸಿ ನಿಮ್ಮೆಲ್ಲರಿಗೂ ಉಪದೇಶ ಮಾಡಬೇಕೆಂಬ ಭಾವನೆಯಿಂದ ಮಾತನಾಡುತ್ತಿರುವೆನೆಂದು ತಿಳಿಯಬೇಡಿ. ನಾನು ಹಾಗೆ ಮಾಡುತ್ತಿಲ್ಲ. ನಾನು ನಿಮ್ಮವನೇ ಎಂದೂ, ನಿಮ್ಮ ಪ್ರಯತ್ನಗಳೆಲ್ಲಕ್ಕೂ ಸಾಧ್ಯವಿರುವ ರೀತಿಗಳಲ್ಲೆಲ್ಲಾ ಸಹಾಯಮಾಡುವುದಕ್ಕಾಗಿ ಆಶಿಸುತ್ತಿರುವವನೆಂದೂ, ನೀವು ಭಾವಿಸಬೇಕು. ನಾನು ನಿಮ್ಮ ಸುಖವೇ ನನ್ನ ಸುಖವೆಂದೂ, ನಿಮ್ಮ ಸಂತೋಷವೇ ನನ್ನ ಸಂತೋಷವೆಂದೂ ಭಾವಿಸಿರುವೆನು. ನಿಮ್ಮ ಆಶೋತ್ತರಗಳೂ, ನಿಮ್ಮ ಕಾರ್ಯಗಳೂ ನೆರವೇರಲು ನನ್ನಿಂದ ಸಾಧ್ಯವಿರುವ ಸಹಾಯಗಳನ್ನೆಲ್ಲಾ ಮಾಡಲು ನಾನು ಸಿದ್ಧವಾಗಿರುವೆನು. ಶ್ರೀಮನ್ಮಹಾರಾಜರವರ ಪ್ರಜೆಗಳ ಏಳಿಗೆಯನ್ನೇ ನಾನು ಬಯಸುತ್ತಿರುವೆನು.

ಮಹಾಶಯರೇ! ನಿಮ್ಮ ವಿಜ್ಞಾಪನಾಪತ್ರಿಕೆಯಲ್ಲಿ ನೀವು ಕೆಲವು ಅಂಶಗಳನ್ನು ಸೂಚಿಸಿರುವುದು ಸರಿಯಷ್ಟೆ. ಅವುಗಳ ವಿಚಾರವಾಗಿ ಆಯಾ ಇಲಾಖೆಯವರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕಾಗಿದೆ. ಅವುಗಳನ್ನು ಆರೀತಿ ಅವರ ಅಭಿಪ್ರಾಯಕ್ಕಾಗಿ ಕಳುಹಿಸಲಾಗಿದೆ. ಅವರುಗಳ ಅಭಿಪ್ರಾಯವು ತಿಳಿದ ಬಳಿಕ, ಅವುಗಳ ವಿಚಾರದಲ್ಲಿ ಯಾವ ಯಾವ ಸಹಾಯಗಳನ್ನು ಮಾಡುವುದು ಸಾಧ್ಯವೆಂಬುದನ್ನು ಸರ್ಕಾರದವರು ಪರ್ಯಾಲೋಚಿಸಬೇಕಾಗಿದೆ. ಅಂತೂ, ಅವುಗಳ ವಿಚಾರದಲ್ಲಿ, ಸರ್ಕಾರದವರು ತಮಗೆ ಸಾಧ್ಯವೆಂದು ಕಂಡ ಸಹಾಯವನ್ನೆಲ್ಲಾ ಅವಶ್ಯವಾಗಿ ಮಾಡುವರು.

ನೀವು ತೋರಿಸಿರುವ ಆದರ ವಿಶ್ವಾಸಗಳಿಗಾಗಿ ಮತ್ತೊಂದು ಸಲ ನನ್ನ ವಂದನೆಗಳನ್ನು ಒಪ್ಪಿಸುವೆನು. ಈ ಡಿಸ್ಪೆನ್ಸರಿಯಿಂದ ಈ ಊರಿನವರಿಗೂ, ನೆರೆಹೊರೆಯ ಗ್ರಾಮಗಳವರಿಗೂ, ವಿಶೇಷ ಸಹಾಯವು ದೊರೆಯಲೆಂದೂ, ಈ ಊರು ದಿನ ದಿನವೂ ಏಳಿಗೆಯಾಗಲೆಂದೂ, ಹಾರೈಸುವೆನು.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಆಗಸ್ಟ್ ತಾ॥ ೧೫ ನೆಯ ಸೋಮವಾರ.

"DISSENSIONS IN THE CAPITAL"

Under the striking title of "Dissensions in the Capital" our Bangalore contemporary the *Daily Post* has written a leader in its issue of the 11th instant in defence of Mr. T. G. Rama Iyer the ex-President of the Mysore City Municipal Council and what is still more important from its point of view, in condemnation of the So-called communal unrest in the Capital. Either for pure ignorance or for sheer mischief we have not come across another article in any paper to compare to the one in question. As for the contents of the article which we will presently examine the poor editor of the Daily Post—perhaps a well-meaning credible foreigner—may not be responsible in the slightest as is even evident from his reference to an un-named authority. Journalistic courtesy demands that either the editor should give the authority he depends upon for information or he must make the information his own and take the responsibility for the facts and comments thereon. Here the editor of the *Daily Post* neither discloses his authority nor takes the responsibility for the contents. What we do blame our contemporary for is his swallowing the ludicrous piece of information about dissensions and communal bitterness in the Capital and writing a homily about the same. Let us see the precious facts. The first thing is that information has reached the journal that "attempts are being made both in the press and elsewhere in Mysore to cripple the past and present efforts of Mr. T. G. Rama Iyer to carry out the policy so dear to the hearts of both His Highness and the Dewan of Mysore to improve the sanitation of the Mysore capital and to beautify that city by all possible means." In the first place, we would like a professor of English to explain what our English contemporary means by the expression, attempts to cripple the past efforts of Mr. Iyer. We can only think of crippling the present efforts and those "obstructionists" in the words of Daily Post are according to it performing the impossible, namely, crippling the past efforts of Mr. Iyer. As regards crippling the present efforts of Mr. Iyer all that we can say is that since 14th of July 1932 he is enjoying his leave, and he is not making any efforts (to our knowledge of course) to improve sanitation in Mysore or beautify it. That privilege has fallen on Mr. B. T. Kesava Iengar Mr. Iyer's successor—one who has had the best of welcome in the city. In short, the past efforts of Mr. Iyer cannot be crippled and there are no present efforts of his to be crippled. This is not all that is wrong with this opening sentence quoted above. Why should the editor, (we may be forgiven for taking the editor to task when he may not be the real author of it) introduce the names of His Highness the Maharaja and the Dewan Sahib into this controversy? The Municipal Council is a self Governing body by statute and why seek to prejudice the minds of the most constitutional ruler in our land and his trusted minister by making out that Mr. Iyer was prevented from carrying out their wishes by the "obstructionists." There cannot be a baser libel than this statement on a people who are most loyal and who have always stood for co-operation and put the interests of the State befor all else. Could the Daily Post or its good authority point out one single instance when the obstructionists have sought to cripple the efforts of Mr. Iyer? What is that which was dear to His Highness or Dewan Sahib which the obstructionists have turned down? Not one instance is there during all these years when the Council or any part of it could be accused of such a conduct. In fact, from our experience in the Municipal Council which is much longer than Mr. Iyer's tenure we can assert that Mr. Iyer or any of this henchmen cannot point out to any incident of such a nature. The Daily Post is a big ignoramus when it speaks of Mr. Iyer being wilfully obstructed in his efforts to carry on the good work of sanitary and other improvements. We have already said that Mr. Iyer is holidaying and is not engaged in making such efforts. But allowing for wrong expression, may we not ask what were those efforts and what the obstruction? The Daily Post would have done a signal service if it had quoted one single instance and then preached columnful of homilies. Later on the Daily Post quotes its good authority which leaves it no choice it appears, and that is that it was "made impossible for Mr. Rama Iyer to carry out the wishes of H. H. the Maharaja and the Dewan Saheb" and this notwithstanding the fact that he had large majorities in both the Municipality and the Trust Board. As we have already stated this is a libel which we cannot let go unchallenged. It is a perfect travesty of truth. To take umbrage for one's incapacity or inefficiency or disinclination under such a cover is to say the least ignoble, quite apart from its being absolutely untrue. Our space is limited and we can only conclude our reply to the mischievous article, evidently inspired, in our next issue, when we will examine the prevalence of communal dissensions in the capital, the philanthropic manifestations of Mr. Iyer, the majorities in the Council and the Board and other matters noted in the article.

WATER SUPPLY IN MYSORE

Since our note about certain grievances in connection with the water supply in the City we hear that things are being looked into properly by the authorities concerned and such of them as there may be are only incidental to the working of a department like that. It was certainly not our idea to criticise the department, and we are glad to find that there is every effort made to co-operate with the Municipal Council in the matter of introducing flushing arrangements and in giving other facilities to the rate-payers.

ಡೇಲಿ ಪೋಸ್ಟಿನ ಅಜ್ಞಪ್ರಲಾಪ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾಗಿದ್ದ ಮ॥ ಟಿ. ಜಿ. ರಾಮಯ್ಯರ್‌ರವರು ಶ್ರೀಮನ್ಮಹಾರಾಜರವರಿಗೂ ಸಚಿವಶ್ರೇಷ್ಠರಿಗೂ ಅತ್ಯಂತ ಪ್ರಿಯವಾಗಿರುವ ರಾಜಧಾನಿಯ ಆರೋಗ್ಯ ಮತ್ತು ಅಲಂಕಾರಾಭಿವೃದ್ಧಿ ಕಾರ್ಯಗಳನ್ನು ನೆರವೇರಿಸುವಲ್ಲಿ ಕೆಲ ಮ್ಯುನಿಸಿಪಲ್ ಕೌನ್ಸಿಲರುಗಳು ಅಡಚಣೆಮಾಡಿಯೂ ಮಾಡುತ್ತಲೂ ಇರುವರಲ್ಲದೆ ಜಾತಿಮತವೈಷಮ್ಯವನ್ನುಂಟುಮಾಡಿ ಬೆಳಸುತ್ತಿರುವರೆಂದು ಮೊದಲಾಗಿ ಯಾರೋ ಅನಾಮಧೇಯರು ತಮಗೆ ತಿಳಿಸಿರುವುದರ ಆಧಾರದಮೇಲೆ ಅಜ್ಞಪ್ರಲಾಪವನ್ನು ಮಾಡಿರುವರು. ಈ ಲೇಖವನ್ನು ಸಕಾರಣವಾಗಿ ಖಂಡಿಸಿ ನಮ್ಮ ಮುಂದಣ ಸಂಚಿಕೆಯಲ್ಲಿ ಬರೆಯುವೆವು.

ದೇವದಾಸ ಗಾಂಧಿಯವರ ಆರೋಗ್ಯ

ಮಹಾತ್ಮರ ಕುಮಾರ ದೇವದಾಸ ಗಾಂಧಿಯವರು ಅನಾರೋಗ್ಯ ದೆಸೆಯಿಂದ ಈಚೆಗೆ ಕಾರಾಗೃಹ ಬಂಧನ ವಿಮುಕ್ತರಾದರಷ್ಟೆ. ಇವರು ದೇಶೀಯ ಹೋಮಪತಿ ವೈದ್ಯರ ಚಿಕಿತ್ಸೆಯಲ್ಲಿದ್ದು ತಕ್ಕಮಟ್ಟಿಗೆ ಗುಣವನ್ನುಹೊಂದಿ ಕೊಂಚ ಕೊಂಚವಾಗಿ ತಿರುಗಾಡುವಷ್ಟು ಚೈತನ್ಯವನ್ನು ಹೊಂದಿರುತ್ತಾರೆ.

ಗಂಡನನ್ನು ಕೊಂದ ಹೆಂಡಿತಿಗೆ ದ್ವೀಪಾಂತರ ಶಿಕ್ಷೆ

ದಕ್ಷಿಣಮಲಬಾರು ಡಿ॥ ಕಕೋಟ ಗ್ರಾಮದಲ್ಲಿ ಒಬ್ಬ ಹೆಂಗುಸು ತನಗೆ ಕೆಲ ಮಕ್ಕಳಿದ್ದಾಗ್ಯೂ ತನ್ನ ಗಂಡನು ಬೇರೊಬ್ಬ ಸ್ತ್ರೀಯನ್ನು ಮದುವೆ ಮಾಡಿಕೊಳ್ಳಲೆತ್ನಿಸಿದುದರಿಂದ ಕುಪಿತಳಾಗಿ ತನ್ನ ಗಂಡನನ್ನು ಕೊಂದುಬಿಟ್ಟಳು. ಇದಕ್ಕಾಗಿ ಅವಳಿಗೆ ಯಾವಜ್ಜೀವ ದ್ವೀಪಾಂತರವಾಸಶಿಕ್ಷೆ ವಿಧಿಸಲ್ಪಟ್ಟಿತು.

ಪೆಷಾವರನಲ್ಲಿ ಪ್ರವಾಹದನಾಹುತ

ಈಚೆಗೆ ಆದ ವಿಶೇಷ ಮಳೆಯಿಂದ ಡೇರಾ ಇಸ್ಮಾಯಿಲ್ ಖಾನ್ ಡಿಸ್ಟ್ರಿಕ್ಟಿನ ಪರ್ವತ ಪ್ರದೇಶದಲ್ಲಿರುವ ನದಿಗಳಲ್ಲಿ ಪ್ರವಾಹವು ಬಂದು ಗ್ರಾಮರ್ಡ ಎಂಬ ಗ್ರಾಮವು ನೀರಿನಲ್ಲಿ ಮುಳುಗಿಹೋಗಿ 100 ರ ಮೇಲೆಯೇ ಮನೆಗಳು ನಾಶವಾದುವು ಮತ್ತು 500 ಜನರಿಗೆ ನಿಲ್ಲಲು ನೆರಳಿಲ್ಲದಂತಾಗಿರುವುದಲ್ಲದೆ ವೈರಿಗೂ ದನಕರುಗಳಿಗೂ ಅಪಾರ ನಷ್ಟ ಸಂಭವಿಸಿರುತ್ತದೆ.

ವಲ್ಲಭಬೇನರು ೨೪ ಘಂಟೆಯಲ್ಲಿ ಪ್ರಯಾಗವನ್ನು ಬಿಡಬೇಕು

ವಲ್ಲಭಭಾಯಿಪಟೇಲರ ಕುಮಾರ್ತಿ ಕನ್ಯಾ ಮಣಿ ಬೇನ್ ಪಟೇಲರವರು ಗುಜರಾತ್ ಕಾಂಗ್ರೆಸ್ ಕಮಿಟಿಯ ಸಂಬಂಧವನ್ನು ಬಿಟ್ಟುಬಿಡಬೇಕೆಂದೂ, ಶಾಸನ ನಿರೋಧ ಕಾರ್ಯದಲ್ಲಿ ಭಾಗಿಯಾಗಿರಕೂಡದೆಂದೂ, 24 ಘಂಟೆಯೊಳಗೆ ಅಲಹಬಾದು ಪಟ್ಟಣವನ್ನು ಬಿಟ್ಟು ಕೈರಾ ಡಿಸ್ಟ್ರಿಕ್ಟಿನಲ್ಲಿರುವ ಕರ್ಮಸದ ಎಂಬ ಸ್ವಗ್ರಾಮಕ್ಕೆ ಹೋಗಿರಬೇಕೆಂದೂ ಡಿ॥ ಮೆಜಿಸ್ಟ್ರೇಟರು ಅಪ್ಪಣೆ ಮಾಡಿರುತ್ತಾರೆ.

ಪತ್ನಿಯನ್ನು ಕೊಂದ ಪತಿಗೆ ದ್ವೀಪಾಂತರ ಶಿಕ್ಷೆ

ಬೊಂಬಾಯಿ ಪಟ್ಟಣದಲ್ಲಿ ದೊಡ್ಡ ಶ್ರೀಮಂತರಾಗಿಯೂ ಬೊಂಬಾಯಿ ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ಈವರೆಗೆ ಮೆಂಬರಾಗಿಯೂ ಇದ್ದ ರಾಮಚಂದ್ರ ಶಂಕರಯುರ್‌ಮ್ಹಾಣೆಯವರು ಹೆಂಡಿತಿಯನ್ನು ಕೊಂದ ಅಪರಾಧಕ್ಕಾಗಿ ಸೆಷನ್ಸು ಜಡ್ಜಿಯವರಿಂದ ಮರಣಾವಧಿ ದ್ವೀಪಾಂತರವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟುದರಮೇಲೆ ಹೈಕೋರ್ಟಿಗೆ ಅಪೀಲನ್ನು ಮಾಡಿರುತ್ತಾರೆ. ಅಲ್ಲಿಯ ಜಡ್ಜಿಗಳು ಅಪೀಲನ್ನು ಅಂಗೀಕರಿಸಿ ಮರಣದಂಡನೆಯನ್ನೇಕೆ ವಿಧಿಸಬಾರದೆಂದು ಅಪರಾಧಿಯನ್ನು ಕೇಳಿರುವರು.

ವರ್ತಕನ ಮೇಲೆ ಹಗೆ ಸಾಧಿಸಿದುದು

ಬಜ್ಜಿವರ್ತಕನೂ ದೊಡ್ಡ ಧನಿಕನೂ ಆದ ವರ್ತಕನ ಮೇಲೆ ಹಗೆಯನ್ನು ಸಾಧಿಸಲು ವರ್ತಕನು ಊರಿನಲ್ಲಿಲ್ಲದಿದ್ದ ಸಮಯದಲ್ಲಿ ರಾತ್ರಿ ವೇಳೆ ಆತನ ಮನೆಗೆ ಹಂತಕರು ನುಗ್ಗಿ ವರ್ತಕನ ತಾಯಿಯ ಹೊಟ್ಟೆ ಮೊದಲಾದ ಸ್ಥಳಗಳನ್ನು ಕತ್ತಿಯಿಂದ ತಿವಿದು ಆಕೆಯನ್ನು ಕೊಂದರು. ಈ ರಾಕ್ಷಸ ಕೃತ್ಯವನ್ನು ನೋಡಲಾರದೆ ವರ್ತಕನ ಹೆಂಡಿತಿಯು ಮೂರ್ಛೆಹೊಂದಿ ಹಾಗೆಯೇ ಮೃತಳಾದಳು. ಅವನ ಮಗಳು ಕೊಂಚ ಗಾಯವನ್ನು ಹೊಂದಿ ತಪ್ಪಿಸಿಕೊಂಡು ಬಂದು ಪೋಲೀಸಿನವರಿಗೆ ನಡೆದ ಸಂಗತಿಯನ್ನು ತಿಳಿಸಿದಳು. ಪೋಲೀಸರು ಸಂಗತಿಯನ್ನು ವಿಚಾರಿಸುತ್ತಿರುವರು.

ಜೀವನೋಪಾಧಿ ಇಲ್ಲದ್ದಕ್ಕಾಗಿ ಶಿಕ್ಷೆ

20 ದಿವಸಗಳ ಹಿಂದೆ ಲಾಹೂರು ರೈಲ್ವೆ ಸ್ಟೇಷನ್ನಿನಲ್ಲಿ ಇಬ್ಬರು ಯುವಕರನ್ನು ಪೋಲೀಸಿನವರು ಸೆರೆಹಿಡಿದು ಜೀವನೋಪಾಧಿಯಿಲ್ಲದುದಕ್ಕಾಗಿ ಇವರುಗಳು ಎಂತಹ ನೀಚಕೃತ್ಯವನ್ನಾದರೂ ಮಾಡುವರೆಂಬ ಆರೋಪಣೆಯ ಮೇಲೆ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದ್ದರು. ಮೆಜಿಸ್ಟ್ರೇಟರು ಅಪರಾಧಿಗಳ ವಿಚಾರಣೆಯನ್ನುಮಾಡಿ ಅವರಿಬ್ಬರೂ 1 ವರ್ಷಕಾಲದವರೆಗೆ 1000 ರೂ. ಹೊಣೆಯನ್ನು ಕೊಡಬೇಕು, ಇಲ್ಲವಾದರೆ 1 ವರ್ಷ ಸಾದಾ ಸಜವನ್ನನುಭವಿಸಬೇಕು ಎಂದು ಅಪ್ಪಣೆ ಮಾಡಿದರು.

ನಂಬಿಕೆದ್ರೋಹಕ್ಕಾಗಿ ಶಿಕ್ಷೆ

ಅಂಗಸಾಧನೆಯಲ್ಲಿ ಪ್ರಖ್ಯಾತರಾದ ರಾಮಮೂರ್ತಿಯವರು ಕೆಲ ತಿಂಗಳ ಹಿಂದೆ ಮಹೇವ ಎಂಬ ಜಹಗೀರಿನ ರಾಜರ ಅತಿಥಿಗಳಾಗಿ ಹೋಗಿದ್ದಾಗ್ಗೆ ತಾವು ರಾಜರಲ್ಲಿಟ್ಟಿದ್ದ 50,000 ರೂ. ಬೆಲೆ ಬಾಳುವ ಬಹುಮಾನ ಪದಕಗಳನ್ನೂ ಆಭರಣಗಳನ್ನೂ ಹಿಂದಿರುಗಿ ಕೇಳುವಲ್ಲಿ ರಾಜರು ಕೊಡಲು ತಿರಸ್ಕರಿಸಿಬಿಟ್ಟರೆಂದು ಅವರಮೇಲೆ ಸಬ್ ಡಿವಿಜನಲ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿದ್ದರು. ಅದರಮೇಲೆ 7 ತಿಂಗಳಕಾಲ ವಿಚಾರಣೆಯು ನಡೆದು, ಈ ಕೇಸಿನಲ್ಲಿ ಹೆಚ್ಚು ಶಿಕ್ಷೆಯನ್ನು ವಿಧಿಸುವುದು ನ್ಯಾಯ ಸಮ್ಮತವಾಗಿರುವ ಪ್ರಯುಕ್ತ ಅದನ್ನು ವಿಧಿಸಲು ನನಗಧಿಕಾರವಿಲ್ಲವಾಗಿ ಆ ಅಧಿಕಾರವುಳ್ಳ ಸೆಷನ್ನಿಗೆ ಕಳುಹಿಸಿರುತ್ತೇನೆಂದು ಮೆಜಿಸ್ಟ್ರೇಟರು ಬರೆದು ಕಳುಹಿದರು. ಅ॥ ಸೆಷನ್ಸು ಜಡ್ಜಿಯವರು ವಿಚಾರಿಸಿ ರಾಜರಿಗೆ 6 ತಿಂಗಳ ಕಠಿಣ ಸಜ ಮತ್ತು 15,000 ರೂ. ಜುಲ್ಮಾನೆ ವಿಧಿಸಲಾಗಿ ರಾಜರು ಸೆಷನ್ಸ್ ಕೋರ್ಟಿಗೆ ಅಪೀಲು ಮಾಡಿರುತ್ತಾರೆ.

ಕುಸ್ತಿ ಪಂದ್ಯದಲ್ಲಿ ಒಬ್ಬನು ಸತ್ತನು

ಬರ್ದವಾನ್ ಡಿ॥ ಹರಿಹರಪುರ ಗ್ರಾಮದೊಳಗೆ ಕಳೆದ ಜುಲೈ ತಾ॥ 3 ರಲ್ಲಿ ಈ ಡಿಸ್ಟ್ರಿಕ್ಟಿನಲ್ಲೆಲ್ಲ ದೊಡ್ಡ ಪೈಲ್ವಾನನೆಂದು ಪ್ರಸಿದ್ಧನಾಗಿದ್ದ ರಂಜನ್‌ಬಾಗ್ಡಿ ಎಂಬವನಿಗೂ ಹಸೇನ್ ಬಾವನಿಗೂ ಬಹಳ ಜಿದ್ದಿನಿಂದ ಕುಸ್ತಿಯಾಗುತ್ತದೆಂದು ಡಂಗುರ ಹೊಡೆಸಲ್ಪಟ್ಟಿದ್ದುದರಿಂದ ನೆರೆ ಗ್ರಾಮಗಳಿಂದೆಲ್ಲ ಸಾವಿರಾರು ಜನರು ನೋಡಲು ಬಂದು ಸೇರಿದ್ದು ಕಣ್ಣುರೆಪ್ಪೆ ಹೊಡೆಯದೆ ಕುಸ್ತಿಯನ್ನು ನೋಡುತ್ತಿದ್ದರು. ಕುಸ್ತಿಯು ಆಗುತ್ತಿರುವಾಗ್ಗೆ ರಂಜನ್ ಎಂಬವನು ಹಸೇನಿನಿಂದ ಮೇಲಕ್ಕೆತ್ತಲ್ಪಟ್ಟು ಕೆಳಕ್ಕೆ ಕೆಡವಲ್ಪಟ್ಟನು. ರಂಜನ್ನಿನ ಕುತ್ತಿಗೆಯಲ್ಲಿ ಅಪಾಯಕರವಾದ ಪೆಟ್ಟುಗಳು ಬಿದ್ದುದರ ಮೇಲೆ ಆ ಗ್ರಾಮದಲ್ಲಿ ಕೈ ಚಿಕಿತ್ಸೆ ನಡೆದು ಕಡೆಯಲ್ಲಿ ಅವನು ಕಲಕತ್ತಾ ಆಸ್ಪತ್ರೆಗೆ ಸಾಗಿಸಲ್ಪಟ್ಟ ಕೊಂಚಹೊತ್ತಿನಮೇಲೆ ಸತ್ತುಹೋದನು.

ಮಗುವಿನ ಮರಣಕ್ಕಾಗಿ ತಾಯಿ ತಂದೆಗಳ ಆತ್ಮಹತ್ಯೆ.

ಆಡಿಮಾಸೋತ್ಸವಕ್ಕಾಗಿ ಒಬ್ಬ ಶ್ರೀಮಂತ ನಗರ್ತಶೆಟ್ಟಿಯೂ ಅವನ ಹೆಂಡಿತಿಯೂ 2 ವರ್ಷದ ಹೆಣ್ಣುಮಗುವಿನ ಸಮೇತ ಶಂಕರನ್ ಕೋಯಿಲ್ ಎಂಬಲ್ಲಿಗೆ ಬಂದಿದ್ದರು. ಕಳೆದ ಸೋಮವಾರ ಸಾಯಂಕಾಲ ಶೆಟ್ಟಿಯ ಹೆಂಡಿತಿಯು ತನ್ನ

ಮಗುವಿಗೆ ಬೇಕಾದಷ್ಟು ಆಭರಣಗಳನ್ನಿಟ್ಟು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಗುಡಿಯೊಳಗೆ ಕುಳಿತಿದ್ದ ಒಬ್ಬ ಅರ್ಚಕನ ವಶಕ್ಕೆ ಮಗುವನ್ನು ಕೊಟ್ಟು ತಾನು ಪ್ರಾಕಾರದೊಳಗೆ ಪ್ರದಕ್ಷಣೆ ಮಾಡುತ್ತಿರುವಾಗ್ಗೆ 1-2 ನೆಯ ವೇಳೆ ಆ ಅರ್ಚಕನ ಬಳಿ ಮಗುವಿದ್ದುದನ್ನು ಕಂಡು 3 ನೆಯ ವೇಳೆ ಪ್ರದಕ್ಷಣೆಯನ್ನು ಪೂರೈಸಿಕೊಂಡು ಬಂದು ನೋಡುವಲ್ಲಿ ಅರ್ಚಕನೂ ಮಗುವೂ ಅಲ್ಲಿಲ್ಲದಿದ್ದುದನ್ನು ಕಂಡು ದಿಗಿಲುಬಿದ್ದು ದೇವಸ್ಥಾನದೊಳಗೆಲ್ಲ ತಡಕಿ ನಿರಾಶಳಾಗಿ ಹೊರಗೆ ಕೊಳದಲ್ಲಿ ಮಗುವಿನ ಆಭರಣವು ಅಪಹರಿಸಲ್ಪಟ್ಟು ಅದರ ಶವವು ತೇಲುತ್ತಿರುವುದೆಂದು ಕೇಳಿ ದಿಗಿಲುಬಿದ್ದು ಓಡಿಬಂದು ಅದು ತನ್ನ ಮಗುವಿನದೆಂದು ಅರಿತು ಅತ್ಯಂತವಾಗಿ ರೋದಿಸಿ ಕಡೆಯಲ್ಲಿ ಅದೇ ಕೊಳದೊಳಗೆ ಬಿದ್ದು ಆತ್ಮಹತ್ಯ ಮಾಡಿಕೊಂಡಳು. ಹೊರಗೆ ಹೋಗಿದ್ದ ಈಕೆಯ ಗಂಡನು ಮನೆಗೆ ಬಂದು ಹೆಂಡತಿಯು ಮಗುವಿನ ಸಮೇತ ದೇವಸ್ಥಾನಕ್ಕೆ ಹೋಗಿರುವುದನ್ನು ತಿಳಿದು ದೇವಸ್ಥಾನಕ್ಕೆ ಬಂದು ಅವರಿಬ್ಬರೂ ಸತ್ತಿರುವುದನ್ನು ನೋಡಿ ದಿಗ್ಭ್ರಾಂತನಾಗಿ ತಾನೂ ಕೊಳದೊಳಗೆ ಬಿದ್ದು ಪ್ರಾಣಹತ್ಯ ಮಾಡಿಕೊಂಡನು. ಹೆಣಗಳು ಕೊಳದಿಂದ ಸಾಗಿಸಲ್ಪಟ್ಟು ಕೊಳವು ಪರಿಶುದ್ಧಿಗೊಳಿಸಲ್ಪಡುವವರೆಗೂ ದೇವರ ಪೂಜೆಯು ನಿಲ್ಲಿಸಲ್ಪಟ್ಟಿದ್ದಿತು. ಕೆಲ ಅರ್ಚಕರು ಅನುಮಾನದ ಮೇಲೆ ಸೆರೆಹಿಡಿಯಲ್ಪಟ್ಟಿರುವರು.

ಮಿತವಾದ ನಾಯಕರ ಪ್ರಕಟನೆ

"ಕಳೆದ ಜೂನ್ ತಾ॥ 27 ರಲ್ಲಿ ಇಂಡ್ಯಾ ಮಂತ್ರಿಗಳು ಪ್ರಕಟಿಸಿದ ಕಾರ್ಯಕ್ರಮವು ರೌಂಡುಟೇಬಿಲು ಪದ್ಧತಿಗೆ ತೀರ ವಿರುದ್ಧವಾಗಿರುವ ಪ್ರಯುಕ್ತ ನಾವು ಇದನ್ನು ಸಮ್ಮತಿಸಲಾರೆವು. ಮುಂದಣ ರಾಜ್ಯಾಂಗ ವಿಧಾನವನ್ನು ಕುರಿತು ಇಂಡ್ಯಾ ಮತ್ತು ಇಂಗ್ಲೆಂಡು ದೇಶಗಳ ಪ್ರತಿನಿಧಿಗಳು ಕೂಡಿ ಚರ್ಚಿಸಿದಾಗ್ಗೆ ಭಾರತೀಯರಿಗೆ ಸಮಾನ ಗೌರವವಿರಬೇಕೆಂದು ಗೊತ್ತುಮಾಡಿದ ನಿಯಮವು ಈಗ ತೊಲಗಿಸಲ್ಪಟ್ಟಿದೆ. ಈ ಎರಡು ದೇಶಗಳ ಪ್ರತಿನಿಧಿಗಳಿಗೂ ನಡೆದ ಒಡಂಬಡಿಕೆಯನ್ನನುಸರಿಸಿ ಬಿಲ್ಲು ತಯಾರಿಸಲ್ಪಡಬೇಕೆಂಬ ನಿಯಮವು ಸಹ ತಪ್ಪಿಸಲ್ಪಟ್ಟಿದೆ. ಈ ಎರಡು ಆಶಯಗಳಿಂದಲೇ ರೌಂಡುಟೇಬಿಲು ಸಭೆಯೇರ್ಪಾಟಾದುದು. ಸಾವಕಾಶವಾಗದಂತೆ ಮಾಡುವಲ್ಲಿ ಸಹ ಈ ಎರಡು ಆಶಯಗಳನ್ನು ಸುಲಭವಾಗಿ ಅನುಸರಿಸಬಹುದು. ಪಾರ್ಲಿಮೆಂಟಿನವರ ಸರ್ವಾಧಿಕಾರಕ್ಕೆ ರೌಂಡುಟೇಬಿಲು ಸಭೆಯು ಹೇಗೆ ವಿರೋಧವಾಗುವುದೆಂಬುದನ್ನು ನಾವು ತಿಳಿಯಲಾರದೆ ಹೋದೆವು. ಆದುದರಿಂದ ಪುನಃ ರೌಂಡುಟೇಬಿಲು ಪದ್ಧತಿಯನ್ನನುಸರಿಸುವವರೆಗೆ ದೊರೆತನದವರು ಆಹ್ವಾನಿಸಿದರು ಕೂಡ ಭಾರತ ಪ್ರತಿನಿಧಿಗಳಾರೂ ಸಂಸ್ಕರಣ ವಿಷಯದಲ್ಲಿ ದೊರೆತನದವರಿಗೆ ಸಹಾಯ ಮಾಡಕೂಡದು ಮತ್ತು ಸಹಕರಿಸಲಾಗದು ಎಂಬುದೇ ನಮ್ಮ ದೃಢಸಂಕಲ್ಪವಾಗಿದೆ" ಎಂದು ಮಿತವಾದ ನಾಯಕರುಗಳು ಪ್ರಕಟಿಸಿರುತ್ತಾರೆ. ಈ ಪ್ರಕಟನ ಪತ್ರಿಕೆಗೆ ರೈ॥ ಅ॥ ವಿ. ಎಸ್. ಶ್ರೀನಿವಾಸಶಾಸ್ತ್ರಿ, ಸರ್ ಸಯದ್ ಅಲಿ ಇಮಾಂ, ಸರ್ ತೇಜ್‌ಬಹದ್ದೂರ್ ಸಪ್ರೂ, ರಾಯ ರಾಜೇಶ್ವರ ಬಲಿ, ರಾಜಾ ಸರ್ ರಾಂ ಪಾಲಸಿಂಗ್, ಸರ್ ಕವಾಸ್ಜೀ ಜಹಂಗೀರ್, ಸರ್ ಫಿರೋಜ್‌ಷಾ ಸೇಠ್ನಾ, ಪೂನಾ ಮ್ಯುನಿಸಿಪಲ್ ಮೆಯರು ಡಾಕ್ಟರ್ ನಾಯಡು, ಕುಂಜ್ರು, ದೇವಧರ್, ಎಂ. ಆರ್. ಜಯಕರ್, ಸಯದ್ ಅಲಿ ಇಮಾಂ ಮೊದಲಾದ ನಾಯಕರುಗಳು ರುಜು ಮಾಡಿರುತ್ತಾರೆ.

ಇಂಡ್ಯಾ ದೊರತನದವರ ಪ್ರಕಟನೆ

ಬ್ರಿಟಿಷ್ ದೊರತನದವರು ಕೂಡಲೆ ಸಾಂಘಿಕ ಸಮಸ್ಯೆಯ ಪರಿಷ್ಕಾರವನ್ನು ಪ್ರಕಟಿಸುವರು. ಹಿಂದುಗಳು, ಮಹಮ್ಮದೀಯರುಗಳು, ಸಿಕ್ಕರುಗಳು ಮೊದಲಾದ ವಿವಿಧ ಸಂಘಗಳವರಿಗೆ ರಾಷ್ಟ್ರೀಯ ಶಾಸನ ಸಭೆಗಳಲ್ಲಿ ಎಷ್ಟೆಷ್ಟು ಸ್ಥಾನಗಳಿರಬೇಕೆಂಬುದು ಈ ಪ್ರಕಟನೆಯಲ್ಲಿ ವಿವರಿಸಲ್ಪಡುವುದು. ಅಭ್ಯರ್ಥಿಗಳನ್ನು ಆರಿಸುವುದು, ಕೆಲ ಸಂಘದವರಿಗೆ ಪ್ರತ್ಯೇಕ ಸ್ಥಾನಗಳನ್ನೇರ್ಪಡಿಸುವುದು, ಪ್ರತ್ಯೇಕ ನಿಯೋಜಕ ವರ್ಗಗಳು ಮೊದಲಾದ ವಿಷಯಗಳ ಸಂಬಂಧವಾಗಿ ನಿರ್ಣಯಗಳು ಕೂಡ ಈ ಪರಿಷ್ಕಾರದಲ್ಲಿರುವವಲ್ಲದೆ ಹೊಸ ರಾಜ್ಯಾಂಗ ವಿಧಾನದಲ್ಲಿ ಆಯಾಸಂಘಗಳು ಬೇರೆಬೇರೆ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಶಾಸನ ಸಭೆಗಳಿಗೆ ಆರಿಸಲ್ಪಡುವ ಪ್ರತಿನಿಧಿಗಳ ಸಂಖ್ಯೆಯನ್ನು ನಿರ್ಣಯಿಸಿರುವುದೇ ಮುಖ್ಯ ವಿಷಯವಾಗಿರುವುದು. ಇಂಡ್ಯಾ ದೇಶವು ಬಹಳ ವಿಶಾಲವಾಗಿದೆ. ಪ್ರಜೆಗಳಲ್ಲಿ ಅನೇಕ ಜಾತಿಗಳು ಮತಗಳು ವಿಜ್ಞಾನಗಳು ಮೊದಲಾದವು ಇರುತ್ತವೆ. ಆದುದರಿಂದ ಪ್ರಜಾಪರಿಪಾಲನದಲ್ಲಿ ಅಲ್ಪ ಸಂಖ್ಯಾಕರಿಗೆ ತಕ್ಕ ರಕ್ಷಣೆಯಿರಬೇಕು. ಈ ಸಮಸ್ಯೆಯನ್ನು ಪರಿಷ್ಕರಿಸಲು ಬ್ರಿಟಿಷ್ ದೊರೆತನದವರಿಗೆಷ್ಟು ಮಾತ್ರಕ್ಕೂ ಇಷ್ಟವಿಲ್ಲ. ಇದನ್ನು ವಿವಿಧ ಸಂಘದವರೇ ಪರಿಷ್ಕರಿಸಿಕೊಳ್ಳತಕ್ಕುದೆಂದು ದೊರೆತನದವರು ಕೋರಿದರು. ಆದರೆ ಅವರು ಆ ರೀತಿ ಮಾಡಲಿಲ್ಲವಾಗಿ ದೊರೆತನದವರೇ ಇದನ್ನು ಪರಿಷ್ಕರಿಸಲು ಕೈಕೊಂಡರು. ಆದುದರಿಂದ ಈಗ ಇಂಡ್ಯಾದಲ್ಲಿ ಯಾವ ಸಂಘದವರು ಕೂಡ ಇದನ್ನು ತಿರಸ್ಕರಿಸಲಾಗದು. ಇದರಿಂದ ಎಲ್ಲ ಪಕ್ಷದವರಿಗೂ ಸಂತೃಪ್ತಿಯುಂಟಾಗುವುದು ಅಸಂಭವವು. ಇದನ್ನು ದೊರೆತನದವರು ಯಾವ ಭಾವದಿಂದ ಪರಿಷ್ಕರಿಸಿರುವರೋ ಆ ಭಾವದಿಂದಲೇ ಎಲ್ಲ ಸಂಘದವರೂ ಇದನ್ನು ಅನುಮೋದಿಸಬೇಕಾಗಿದೆ. "ಹೊಸ ಬಿಲ್ಲು ಅನುಮೋದಿಸಲ್ಪಡುವಲ್ಲಿ ವಿವಿಧ ಸಂಘದವರು ತಂತಮ್ಮೊಳಗೆ ಅಂಗೀಕರಿಸಬೇಕೆಂದು ವಿಧಾನದಲ್ಲಿ ಸಿದ್ಧಪಡಿಸಿದರೆ, ಅದು ಈ ಪರಿಷ್ಕಾರಕ್ಕೆ ಭಿನ್ನವಾಗಿದ್ದರೂ ಅದನ್ನು ಅಂಗೀಕರಿಸುವೆವು" ಎಂದು ಇಂಡ್ಯಾ ಮಂತ್ರಿಯವರು ತಿಳಿಸಿರುವರು. ಅದನ್ನು ಇಂಡ್ಯಾ ದೊರೆತನದವರು ಪ್ರಕಟಿಸಿರುತ್ತಾರೆ.

ಒಳದೇಶದ ವೃತ್ತಾಂತಗಳು

ಕಳೆದ ಶನಿವಾರ ಸಾಯಂಕಾಲ ರಾಜಧಾನಿಯಲ್ಲಿ 1½ ಅಂಗುಲದವರೆಗೆ ಮಳೆಯಾಯಿತು ಮತ್ತು ಇನ್ನೂ ಆಗುವ ಚಿಹ್ನೆಯಿದೆ. ಇದರಿಂದ ವಾಯುಮಂಡಲವು ತಕ್ಕಮಟ್ಟಿಗೆ ತಂಪಾಗಿರುವುದು.

ಟಿ. ನರಸೀಪುರ ತಾ॥ ತಿರುಮಕೂಡ್ಲಿಗೂ ಸೋಸಲೆಗೂ ಮಧ್ಯೆ ಕಾವೇರಿ ನದಿಗೆ ಅಡ್ಡವಾಗಿ ಕಟ್ಟಲ್ಪಟ್ಟಿರುವ ಸೇತುವೆಗೆ ಶ್ರೀಕೃಷ್ಣರಾಜೇಂದ್ರ ಸೇತುವೆ ಎಂದು ನಾಮಕರಣ ಮಾಡಲು ಮತ್ತು ಅದರ ಆರಂಭೋತ್ಸವವನ್ನು ತಮ್ಮ ಅಮೃತ ಹಸ್ತದಿಂದ ಇದೇ ತಾ॥ 29 ರಲ್ಲಿ ನೆರವೇರಿಸಲು ಶ್ರೀಮನ್ಮಹಾರಾಜರವರು ಸಮ್ಮತಿಸಿರುವುದಾಗಿ ತಿಳಿಯುತ್ತೇವೆ.

ಬೇಗೂರಿನಲ್ಲಿ ಮ॥ ಅಣ್ಣಯ್ಯಪ್ಪನವರಿಂದ ನೂತನವಾಗಿ ಕಟ್ಟಿಸಲ್ಪಟ್ಟಿರುವ ಆಸ್ಪತ್ರೆಯ ಮಂದಿರದ ಪ್ರವೇಶೋತ್ಸವವನ್ನು ಕಳೆದ ಗುರುವಾರ ದಿವಾನ್ ಸಾಹೇಬರವರು ನೆರವೇರಿಸಿದಾಗ್ಗೆ ಧರ್ಮಕರ್ತರ ಪರೋಪಕಾರ ಬುದ್ಧಿ, ಈ ಆಸ್ಪತ್ರೆಯಿಂದ ಗ್ರಾಮಸ್ಥರಿಗಾಗುವ ಪ್ರಯೋಜನ, ಗ್ರಾಮನೈರ್ಮಲ್ಯ, ರೋಗ ಬಾರದಂತೆ ಮಾಡಿಕೊಂಡು ಆಸ್ಪತ್ರೆಯ ಆವಶ್ಯಕತೆಯನ್ನು ತಪ್ಪಿಸುವುದು ಇತ್ಯಾದಿ ವಿಷಯಗಳನ್ನು ಕುರಿತು ಅವರು ಮಾಡಿರುವ ಅಮೋಘವಾದ ಭಾಷಣವು ಬೇರೆಕಡೆ ಮುದ್ರಿಸಲ್ಪಟ್ಟಿದೆ.

ಬೆಂಗಳೂರು ಸಿಟಿಯಲ್ಲಿರುವ ಶ್ರೀ॥ ಸರ್ಪಭೂಷಣ ಸ್ವಾಮಿಯವರ ಮಠದ ಅಧಿಕಾರಿಗಳಾಗಿ ಶ್ರೀಮಜ್ಜಗದ್ಗುರು ಮುರುಘರಾಜೇಂದ್ರ ಮಹಾ ಸ್ವಾಮಿಗಳಿಂದ ನಿಯಮಿಸಲ್ಪಟ್ಟ ವೇ॥ ಶ್ರೀ ಮಹಾದೇವ ಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವವು ಕಳೆದ ಶುಕ್ರವಾರ ಮಹಾ ವೈಭವದಿಂದ ನೆರವೇರಿತು. ಬೆಂಗಳೂರು ದಂಡು, ಅಲಸೂರು, ಸಿಟಿ ಮತ್ತು ಪರಸ್ಥಳಗಳ ವೀರಶೈವರು 1000 ಕ್ಕೆ ಮೇಲ್ಪಟ್ಟು ಉತ್ಸವದಲ್ಲಿ ಸೇರಿದ್ದರು. ಈ ನೂತನ ಶ್ರೀಗಳು ಕಾಶಿಯಲ್ಲಿ ವ್ಯಾಸಂಗ ಮಾಡಿ ಮಹಾ ಪಂಡಿತರಾಗಿರುವುದರಿಂದ ಮಹಾ ಮಹಿಮರೂ ವಿದ್ವಾಂಸರೂ ಆಗಿದ್ದ ಶ್ರೀ ಸರ್ಪಭೂಷಣ ಸ್ವಾಮಿಯವರ ಮಠಕ್ಕೆ ತಕ್ಕವರಾಗಿರುತ್ತಾರೆ.

ರಾಜಧಾನಿಯ ಧರ್ಮಪ್ರಕಾಶ ಸಾಹುಕಾರ್ ಡಿ. ಬನುಮಯ್ಯನವರಿಗೆ ರಾವ್ ಬಹದ್ದೂರ್ ಪ್ರಶಸ್ತಿಯೂ, ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ವೈಸ್ ಪ್ರೆಸಿಡೆಂಟ್ ಮ॥ ಎಂ. ರಾಮಸ್ವಾಮಿಯವರಿಗೆ ರಾವ್ ಸಾಹೆಬ್ ಪ್ರಶಸ್ತಿಯೂ, ಮ॥ ಡಬ್ಲ್ಯು. ಎಚ್. ಥಿಯೋಬಾಲ್ಡ್‌ರವರ ಪತ್ನಿಗೆ ಕೈಸರ್ ಹಿಂದ್ ಪದಕವೂ ಲಭ್ಯವಾದುದರಿಂದ ತಮ್ಮಗಳಿಗುಂಟಾದ ಸಂತೋಷ ಸೂಚಕವಾಗಿ ನಂಜನಗೂಡಿನ ನಿವಾಸಿಗಳು ಮೇಲ್ಕಂಡ ಬಹುಮಾನಿತರುಗಳನ್ನು ನೆನ್ನೆಯ ದಿವಸ ಅಲ್ಲಿಗೆ ಬರಮಾಡಿಕೊಂಡು ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರಾದ ಮ॥ ಕೆ. ಶಂಕರನಾರಾಯಣರಾಯರ ಅಧ್ಯಕ್ಷತೆಯಲ್ಲಿ ಅಭಿನಂದನ ಪತ್ರಿಕೆಯನ್ನೊಪ್ಪಿಸಿ ಸನ್ಮಾನಿಸಿದರು.

ಶ್ರೀಮನ್ಮಹಾರಾಜರವರ ರಜತಮಹೋತ್ಸವ ದಿನದ ಜ್ಞಾಪಕಾರ್ಥವಾಗಿ ಅರಮನೆಯ ಎಲ್ಲ ಶಾಖೆಗಳ ಉದ್ಯೋಗಸ್ತರುಗಳು ಕಳೆದ 3-4 ವರ್ಷಗಳಿಂದಲೂ ಚಂದಾ ಹಣವನ್ನು ಕೂಡಿಸಿ ಪರಸ್ಥಳಕ್ಕೆ ಹೋಗಿ ವನಭೋಜನಾದಿಗಳಿಂದ ವಿನೋದವಾಗಿ ಕಾಲಕಳೆದುಕೊಂಡು ಬರುತ್ತಿರುವರು. ಅದರಂತೆ ಕಳೆದ ಸೋಮವಾರ 150-200 ಮಂದಿಗಳು ನಂಜನಗೂಡಿಗೆ ಹೋಗಿ ಅಲ್ಲಿಯ ಅರಮನೆಯಲ್ಲಿ ಸುಖಭೋಜನಾನಂತರ ವಿನೋದದಿಂದ ಸಾಯಂಕಾಲದವರೆಗೆ ಕಾಲಹರಣಮಾಡಿ ಶ್ರೀಮನ್ಮಹಾರಾಜರವರ ಗುಣಕಥನ ಮತ್ತು ಶ್ರೇಯಃ ಪ್ರಾರ್ಥನೆಗಳನ್ನು ಮಾಡಿ ಹಿಂದಿರುಗಿದರು. ಈ ಸಂತೋಷಕೂಟದ ವೆಚ್ಚಕ್ಕಾಗಿ ಶ್ರೀಮನ್ಮಹಾರಾಜರವರಿಂದ 100 ರೂಪಾಯಿಗಳು ದಯಪಾಲಿಸಲ್ಪಟ್ಟುದಾಗಿ ತಿಳಿಯಬರುತ್ತದೆ.

NOTICE

A Holstein Bull and a Scindi Bul are at stud at the Rayankere Palace Dairy Farm, Mysore, the rates being Rs. 5 and Rs. 2 respectively. Both bulls are of good milk pedigree.

[3—2] Dr. MCISAAC,
Manager,
Rayankere Dairy Farm.

ಬೇಗೂರು ಡಿಸ್ಪೆನ್ಸರಿ ಕಟ್ಟಡದ ಪ್ರವೇಶ ಮಹೋತ್ಸವವನ್ನು ನೆರವೇರಿಸುವಾಗ್ಗೆ ದಿವಾನ್ ಸಾಹೇಬರವರು ಮಾಡಿದ ಭಾಷಣ.

(1932ನೆಯ ಇಸವಿ ಆಗಸ್ಟ್ 11ನೆಯ ತಾರೀಖು ಗುರುವಾರ.)

ಶ್ರೀಮಾನ್ ಅಣ್ಣಯ್ಯಪ್ಪನವರೇ, ಮತ್ತು ಬೇಗೂರು ಗ್ರಾಮ ಪಂಚಾಯತಿ ಸದಸ್ಯರೇ:—

ಈ ಊರಿನ ಡಿಸ್ಪೆನ್ಸರಿ ಕಟ್ಟಡದ ಪ್ರವೇಶ ಮಹೋತ್ಸವವನ್ನು ನೆರವೇರಿಸುವುದು ನನಗೆ ಬಹಳ ಸಂತೋಷಕರವಾಗಿದೆ. ಈ ಕಟ್ಟಡಕ್ಕಾಗಿ ಶ್ರೀಮಾನ್ ಪಟೇಲ್ ಅಣ್ಣಯ್ಯಪ್ಪನವರು 5,500 ರೂಪಾಯಿಗಳ ಭಾರಿ ಮೊತ್ತವನ್ನು ಕೊಟ್ಟು ಸಹಾಯ ಮಾಡಿದ್ದಾರೆ. ಗ್ರಾಮಪಂಚಾಯಿತಿಯವರು ನಿವೇಶನಕ್ಕಾಗಿ 250 ರೂಪಾಯಿಗಳನ್ನು ಕೊಟ್ಟಿದ್ದಾರೆ. ಕಟ್ಟಡವನ್ನು ಕಟ್ಟುವ ಸಂಬಂಧದಲ್ಲಿ ಗ್ರಾಮಸ್ಥರು 250 ರೂಪಾಯಿಗಳ ಕೆಲಸವನ್ನು ಮಾಡಿದ್ದಾರೆ. ಹೀಗೆ, ಇತರರಿಂದ ಹಣವೇನನ್ನೂ ಪಡೆಯದೆ, ಇಲ್ಲಿಯವರೇ ಈ ಕಟ್ಟಡವನ್ನು ಕಟ್ಟಿಸಿ ಸಿದ್ಧಪಡಿಸಿಕೊಟ್ಟಿರುತ್ತಾರೆ. ಈ ವಿಷಯವನ್ನು ನೆನಪಿಗೆ ತಂದುಕೊಂಡರಂತೂ, ನನ್ನ ಸಂತೋಷವು ಮತ್ತೂ ಹೆಚ್ಚಾಗುತ್ತದೆ.

ಇದರಿಂದ ಈ ಊರಿನಲ್ಲಿ ದೊಡ್ಡದೊಂದು ಕೆಲಸವು ನೆರವೇರಿದಂತಾಯಿತು. ನಿಮ್ಮ ಈ ಕೆಲಸವನ್ನು ನೋಡಿ, ಮೆಚ್ಚಿಕೆಯಿಂದ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಶ್ರೀಮಾನ್ ಪಟೇಲ್ ಅಣ್ಣಯ್ಯಪ್ಪನವರಿಂದ ಈ ಊರಿಗೆ ಬಹಳ ಉಪಕಾರವಾಗಿದೆ. ಅವರು ಈ ಊರಿನವರಿಗೆ ತಂದೆಯಂತಿದ್ದಾರೆ. ಜನರಿಗೆ ಒಳ್ಳೆಯದನ್ನು ಮಾಡಬೇಕೆಂಬ ಘನವಾದ ಉದ್ದೇಶದಿಂದ ಕೂಡಿ ತ್ಯಾಗವನ್ನು ತೋರಿಸುವವರು, ಇಂಥವರು ಒಬ್ಬರಿದ್ದರೂ ಅವರ ಮುಂದಾಳುತನದಲ್ಲಿ ಬಹಳ ಆಶ್ಚರ್ಯಕರವಾಗಿ ಕೆಲಸವನ್ನು ಸಾಧಿಸಬಹುದು. ದೊಡ್ಡಬಳ್ಳಾಪುರದಲ್ಲಿರುವ ಲೋಕಸೇವಾನಿರತ ಡಿ. ಕೊಂಗಾಡಿಯಪ್ಪನವರೂ ಇಂಥ ಮತ್ತೊಬ್ಬ ದೊಡ್ಡ ಮನುಷ್ಯರು. ಅವರು ತಮ್ಮ ಊರಿಗೂ, ತಮ್ಮ ದೇಶಬಾಂಧವರಿಗೂ, ಶಾಶ್ವತವಾಗಿ ಪ್ರಯೋಜನಕರವಾಗಿರುವ ರೀತಿಯಲ್ಲಿ ಸೇವೆಯನ್ನು ಒಪ್ಪಿಸಿದ್ದಾರೆ. ಇಂಥ ಮಹನೀಯರುಗಳ ಸಂಖ್ಯೆಯು ಮತ್ತಷ್ಟು ಹೆಚ್ಚಲೆಂಬುದೇ ನನ್ನ ಹಾರೈಕೆ. ಅವರ ಸಂಖ್ಯೆಯು ಹೆಚ್ಚಿದರೆ, ನಮ್ಮ ಸಂಸ್ಥಾನದ ನಾನಾ ಊರುಗಳೂ ಸುಖಕ್ಕೂ ಶಾಂತಿಗೂ ವಾಸಸ್ಥಾನವೆನಿಸುವಂತಾಗುತ್ತವೆ; ಜನರು ಬಹಳ ನೆಮ್ಮದಿಯಾಗಿರುತ್ತಾರೆ.

ನಿಮ್ಮ ಊರಿನಲ್ಲಿ ಡಿಸ್ಪೆನ್ಸರಿಗಾಗಿ ಇಷ್ಟು ಸೊಗಸಾದ ಕಟ್ಟಡವು ದೊರೆತಿರುವುದು ಸಂತೋಷಕರವಾದ ಸಂಗತಿ. ಆದಾಗ್ಯೂ, ನಾನೇನೋ ಈ ಡಿಸ್ಪೆನ್ಸರಿಯೇ ನಿಮಗೆ ಬೇಕಾಗಿಲ್ಲದ ಸ್ಥಿತಿಯು ಒದಗಬೇಕೆಂದು ಆಶೆಪಡುತ್ತೇನೆ. ಕೊನೆಯಪಕ್ಷ, ಬಹುಮಟ್ಟಿಗೆ ಅದು ಬೇಕಾಗಿಲ್ಲದಂತಾದರೂ ಆಗಲೆಂದು ಹಾರೈಸುತ್ತೇನೆ. ನನ್ನ ಅಭಿಪ್ರಾಯವನ್ನು ಸ್ವಲ್ಪ ವಿಶದವಾಗಿ ವಿವರಿಸುವುದು ಉತ್ತಮವೆಂದು ತೋರುತ್ತದೆ. ನೀವುಗಳು ಕೆಲವು ಏರ್ಪಾಡುಗಳನ್ನು ಮಾಡಿಕೊಂಡರೆ, ಈ ಊರಿನಲ್ಲಿ ಯಾರಿಗೂ ರೋಗವೇ ಬರದೇ ಇರುವಷ್ಟು ಮಟ್ಟಿಗೆ ಆರೋಗ್ಯದಿಂದಿರಬಹುದು. ಆಗ್ಗೆ, ಇಲ್ಲಿ ಔಷಧವನ್ನು ತೆಗೆದುಕೊಳ್ಳುವವರೇ ಇರುವುದಿಲ್ಲ. ರೋಗವೇ ಇಲ್ಲದ ಮೇಲೆ, ಔಷಧವೇ ಬೇಕಿಲ್ಲ. ರೋಗವು ಬಂದಮೇಲೆ ವಾಸಿಮಾಡುವುದಕ್ಕಿಂತಲೂ, ರೋಗವೇ ಬರದಂತೆ ತಪ್ಪಿಸುವುದು ಬಹಳ ಸುಲಭ. ರೋಗಗಳು ಬರದಂತೆ ಕಾಪಾಡಿಕೊಳ್ಳುವ ಉಪಾಯಗಳಂತೂ ಅತಿ ಸುಲಭವಾಗಿವೆ. ನೀವು ಶುದ್ಧವಾದ ಕುಡಿಯುವ ನೀರನ್ನು ಒದಗಿಸಿಕೊಳ್ಳಬೇಕು. ಹೊಂಡಗಳಲ್ಲಿಯೂ, ಗುಂಡಿಗಳಲ್ಲಿಯೂ, ಕೊಳಕು ನೀರು ನಿಂತು ಸೊಳ್ಳೆಗಳ ಪಡೆಯು ಹೆಚ್ಚುವುದಕ್ಕೆ ಅವಕಾಶವಿಲ್ಲದಂತೆ ನೋಡಿಕೊಳ್ಳಬೇಕು, ಬಚ್ಚಲು ನೀರೂ, ಇತರ ಕೊಳಕಿನ ಪದಾರ್ಥಗಳೂ, ಆರೋಗ್ಯಕ್ಕೆ ತೊಂದರೆಯಿಲ್ಲದಂತೆ ದೂರವಾಗಿ ಸಾಗಿ ಹೋಗುವ ಹಾಗೆ ನೀವು ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳಬೇಕು. ಮಕ್ಕಳಿಗೆ ದೇವಿ ಹಾಕಿಸಬೇಕು. ಇಲಿಗಳನ್ನು ನಾಶಪಡಿಸಬೇಕು. ಪ್ಲೇಗು ರೋಗವೇನಾದರೂ ತಲೆಹಾಕುವ ಸೂಚನೆಯು ತೋರಿದೊಡನೆಯೇ ಇನಾಕ್ಯುಲೇಷನ್ ಮಾಡಿಸಿಕೊಳ್ಳಬೇಕು. ನೀವುಗಳು ಇಷ್ಟು ಕೆಲಸಮಾಡಿದರೆ ಸಾಕು. ನಿಮ್ಮಲ್ಲಿ ಯಾರಿಗೂ ರೋಗವೇ ಬರುವುದಿಲ್ಲ. ಆಗ್ಗೆ ಈ ಡಿಸ್ಪೆನ್ಸರಿಯ ಡಾಕ್ಟರು ಔಷಧ ಕೊಡುವುದಕ್ಕೆ ರೋಗಿಗಳೇ ಇಲ್ಲದಂತಾಗುವುದು. ಅವರು ತಮಗೆ ಕೆಲಸವೇ ಇಲ್ಲವಾಯಿತೆಂದು ಯೋಚಿಸಿ ಯೋಚಿಸಿ, ತಮಗೆ ಮತ್ತೆಲ್ಲಿಗಾದರೂ ವರ್ಗಮಾಡಬೇಕೆಂದು ಮೇಲಿನ ಅಧಿಕಾರಿಗಳಿಗೆ ಅರ್ಜಿ ಬೇಕಾಗಬಹುದು! ನಾವಾಗಿಯೇ ರೋಗವನ್ನು ತಂದುಕೊಂಡು, ಆಮೇಲೆ ಅವುಗಳನ್ನು ಗುಣಪಡಿಸಿಕೊಳ್ಳುವ ಪ್ರಯತ್ನಮಾಡಿ ಪಾಡುಪಡುವುದೇ ಪದ್ಧತಿ ಬಿದ್ದುಹೋಗಿದೆ. ಇದು ಸ್ವಲ್ಪವೂ ಸರಿಯಲ್ಲ. ನಮಗೆ ರೋಗಗಳೇ ಬರದ ಹಾಗೆ ತಕ್ಕ ಎಚ್ಚರಿಕೆಯಿಂದಿದ್ದು ಸರಿಯಾದ ಏರ್ಪಾಡುಗಳನ್ನು ಮಾಡಿಕೊಳ್ಳುವುದೇ ವಿವೇಕದ ದಾರಿ. ನೂರಾರು ಮಂದಿಗಳಿಗೆ ಕಾಲರಾ ಜಾಡ್ಯವು ಬರದಂತೆ ನೋಡಿಕೊಳ್ಳುವುದು ಕೂಡ ಒಬ್ಬರಿಗೆ ಕಾಲರಾ ಜಾಡ್ಯವನ್ನು ಗುಣಮಾಡುವುದಕ್ಕಿಂತಲೂ ಬಹಳ ಸುಲಭ.

ನೀವುಗಳು ನೆರವೇರಿಸಬೇಕೆಂದು ನಾನು ತಿಳಿಸಿರುವ ಏರ್ಪಾಡುಗಳು ಬಹಳವಾಗಿವೆಯೆಂದು ನಿಮಗೆ ತೋರಬಹುದು. ಆದರೂ, ನಿಜವಾಗಿ ನೋಡಿದರೆ ಹಾಗಿಲ್ಲ. ಅವುಗಳನ್ನು ನೀವೆಲ್ಲರೂ ನಡೆಸಲೇಬಹುದು. ಖಂಡಿತವಾಗಿಯೂ ಅವು ನಿಮ್ಮ ಶಕ್ತಿಗೆ ಮೀರಿಲ್ಲ. ನಿಮ್ಮಲ್ಲಿರುವ ಉತ್ಸಾಹಕ್ಕೂ, ಶ್ರದ್ಧೆಗೂ, ಈ ಡಿಸ್ಪೆನ್ಸರಿಯ ಕಟ್ಟಡವೇ ನಿದರ್ಶನವಾಗಿದೆ. ಇದೇ ಭಾವನೆಗಳಿಂದ ಕೂಡಿ ನೀವುಗಳು ಕೆಲಸ ಮಾಡಿದರೆ, ನಾನು ಸೂಚಿಸಿರುವುದಕ್ಕಿಂತಲೂ ಇನ್ನೂ ಹೆಚ್ಚಿನ ಕೆಲಸಗಳನ್ನೂ ನೀವುಗಳು ನೆರವೇರಿಸಬಲ್ಲಿರಿ. ನನಗೆ ಕೇವಲ ಪ್ರೀತಿಪಾತ್ರರಾದ ದೇಶಬಾಂಧವರಾಗಿರುವ ನೀವುಗಳು ಈ ಭಾಗದಲ್ಲಿ ನಡೆಯಿಸುವ ಪ್ರಯತ್ನಗಳಿಗೆ ನನ್ನಿಂದ ಸಾಧ್ಯವಿರುವ ಸಹಾಯವನ್ನೆಲ್ಲಾ ನಾನು ಮಾಡುವೆನು. ಈ ವಿಷಯದಲ್ಲಿ ನೀವುಗಳು ಸಂಪೂರ್ಣವಾಗಿ ಭರವಸೆಯನ್ನಿಡಬಹುದು.

ನಾನೇನೋ ಒಂದು ದೊಡ್ಡದಾದ ಸ್ಥಾನದಲ್ಲಿರುವಂತೆ ಭಾವಿಸಿ ನಿಮ್ಮಲ್ಲಿಗೂ ಉಪದೇಶ ಮಾಡಬೇಕೆಂಬ ಭಾವನೆಯಿಂದ ಮಾತನಾಡುತ್ತಿರುವನೆಂದು ತಿಳಿಯಬೇಡಿ. ನಾನು ಹಾಗೆ ಮಾಡುತ್ತಿಲ್ಲ. ನಾನು ನಿಮ್ಮವನೇ ಎಂದೂ, ನಿಮ್ಮ ಪ್ರಯತ್ನಗಳಿಗೆಲ್ಲಕ್ಕೂ ಸಾಧ್ಯವಿರುವ ರೀತಿಗಳಲ್ಲೆಲ್ಲಾ ಸಹಾಯಮಾಡುವುದಕ್ಕಾಗಿ ಆಶೆಪಡುತ್ತಿರುವವನೆಂದೂ, ನೀವು ಭಾವಿಸಬೇಕು. ನಾನು ನಿಮ್ಮ ಸುಖವೇ ನನ್ನ ಸುಖವೆಂದೂ, ನಿಮ್ಮ ಸಂತೋಷವೇ ನನ್ನ ಸಂತೋಷವೆಂದೂ ಭಾವಿಸಿರುವೆನು. ನಿಮ್ಮ ಆಶೋತ್ತರಗಳೂ, ನಿಮ್ಮ ಕಾರ್ಯಗಳೂ ನೆರವೇರಲು ನನ್ನಿಂದ ಸಾಧ್ಯವಿರುವ ಸಹಾಯಗಳನ್ನೆಲ್ಲಾ ಮಾಡಲು ನಾನು ಸಿದ್ಧವಾಗಿರುವೆನು. ಶ್ರೀಮನ್ಮಹಾರಾಜರವರ ಪ್ರಜೆಗಳ ಏಳಿಗೆಯನ್ನೇ ನಾನು ಬಯಸುತ್ತಿರುವೆನು.

ಮಹಾಶಯರೇ! ನಿಮ್ಮ ವಿಜ್ಞಾಪನಾಪತ್ರಿಕೆಯಲ್ಲಿ ನೀವು ಕೆಲವು ಅಂಶಗಳನ್ನು ಸೂಚಿಸಿರುವುದು ಸರಿಯಷ್ಟೆ. ಅವುಗಳ ವಿಚಾರವಾಗಿ ಆಯಾ ಇಲಾಖೆಯವರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕಾಗಿದೆ. ಅವುಗಳನ್ನು ಆರೀತಿ ಅವರ ಅಭಿಪ್ರಾಯಕ್ಕಾಗಿ ಕಳುಹಿಸಲಾಗಿದೆ. ಅವರುಗಳ ಅಭಿಪ್ರಾಯವು ತಿಳಿದ ಬಳಿಕ, ಅವುಗಳ ವಿಚಾರದಲ್ಲಿ ಯಾವ ಯಾವ ಸಹಾಯಗಳನ್ನು ಮಾಡುವುದು ಸಾಧ್ಯವೆಂಬುದನ್ನು ಸರ್ಕಾರದವರು ಪರ್ಯಾಲೋಚಿಸಬೇಕಾಗಿದೆ. ಅಂತೂ, ಅವುಗಳ ವಿಚಾರದಲ್ಲಿ, ಸರ್ಕಾರದವರು ತಮಗೆ ಸಾಧ್ಯವೆಂದು ಕಂಡ ಸಹಾಯವನ್ನೆಲ್ಲಾ ಅವಶ್ಯವಾಗಿ ಮಾಡುವರು.

ನೀವು ತೋರಿಸಿರುವ ಆದರ ವಿಶ್ವಾಸಗಳಿಗಾಗಿ ಮತ್ತೊಂದು ಸಲ ನನ್ನ ವಂದನೆಗಳನ್ನು ಒಪ್ಪಿಸುವೆನು. ಈ ಡಿಸ್ಪೆನ್ಸರಿಯಿಂದ ಈ ಊರಿನವರಿಗೂ, ನೆರೆಹೊರೆಯ ಗ್ರಾಮಗಳವರಿಗೂ, ವಿಶೇಷ ಸಹಾಯವು ದೊರೆಯಲೆಂದೂ, ಈ ಊರು ದಿನ ದಿನವೂ ಏಳಿಗೆಯಾಗಲೆಂದೂ, ಹಾರೈಸುವೆನು.

ಜಪ್ತಿಯಿಂದ ನೋಟಿಸ

ವಾದಿ ಶ್ರೀ. ವಿ. ಪಟ್ಟದ ಸ್ವಾಮಿಗಳು ಮುತ್ತಿನ ಕಂತಿ ಮಠ ಸಾಕೀನ ಆಲೂರ ತಾ॥ ಹಾನಗಲ್ಲ ಜಿ॥ ಧಾರವಾಡ ಇವರಿಂದಾ (1) ಗಂಗಾಧರಯ್ಯಾ (2) ಮುತ್ತಿನಕಂತಯ್ಯಾ (3) ಚನಬಸಯ್ಯಾ ಚನ್ನ ಗುರುಶಿದ್ದಯ್ಯಾ, ಮುತ್ತಿನ ಕಂತಿ ಮಠ ಸಾ॥ ಆಲೂರ ತಾ॥ ಹಾನಗಲ್ಲ ಈ ಮೂರು ಮಂದಿ ಪ್ರತಿವಾದಿಗಳ ನಡುವೆ ಹಾವೇರಿ ಕೋರ್ಟಿನ ಅಂ॥ ನಂ॥ 507/21 ವ 366/22 ಇದರ ಮೇಲೆ ಧಾರವಾಡ ಡಿ॥ ಕೋರ್ಟಿನ ಅಪೀಲ ನಂ. 7/24 ಈ ನಂಬರುಗಳ ಠರಾವುಗಳ ಮೇಲೆ ಹಾವೇರಿ ಕೋರ್ಟಿನ ಅಂ॥ ನಂ. 749/24 ಧಾರವಾಡ ಡಿ॥ ಕೋರ್ಟಿನ ಅಪೀಲ ನಂ. 39/27 ನೇದ್ದರಲ್ಲಿ ಈ ಮುತ್ತಿನ ಕಂತಿ ಮಠವು ಪಟ್ಟದ ಮಠವಿದ್ದು ಈ ಮಠಕ್ಕೆ ಈ ವಾದಿಯು ಪಟ್ಟಾಧ್ಯಕ್ಷ ಆಗಿರುತ್ತಾರೆ. ಈ ಮಠಕ್ಕೆ ಈ ಮಠದ ಶಿಷ್ಯರಿಂದಾ ಬರತಕ್ಕ ತಪ್ಪು ಕಾಣಿಕೆ ಹಕ್ಕುಬಾಬುಗಳನ್ನು ವಸೂಲ ತೆಗೆದುಕೊಳ್ಳುವ ಹಕ್ಕು ಈ ವಾದಿಗೆ ಇರುತ್ತದೆ. ಮುತ್ತಿನ ಕಂತಿ ಮಠದ ಹೆಸರು ಹೇಳತಕ್ಕ ಶಿಷ್ಯರಿಂದಾ ಈ ಪ್ರತಿವಾದಿಗಳು ಯಾವ ಬಾಬುಗಳನ್ನು ವಸೂಲಮಾಡಬಾರದೆಂತಾ, ಮಠದ ನಿಮಿತ್ತ ವಹಿವಾಟ ವಗೈರೆ ವಿಷಯಗಳಲ್ಲಿ ವಾದಿಗೆ ಹರಕತ ಮಾಡಬಾರದೆಂತಾ 1928 ನೇ ಇಸ್ವಿಯಲ್ಲಿ ಕೋರ್ಟಿನಿಂದಾ ನಿರಂತರ ತಾಕೀದು ಹುಕುಂ ಆಗಿದ್ದು 1 ನೇ ಗಂಗಾಧರಯ್ಯನು ಈ ಹಿಂದೆ ಮಠದ ಮ್ಯಾನೇಜರನಾತೆಯಿಂದಾ ವಹಿವಾಟ ಮಾಡಿದ ಶಿಷ್ಯರ ವಂಶಾವಳಿಯ ಕಾಗದ ಪತ್ರಗಳನ್ನು ತನ್ನ ಹತ್ತಿರ ಇಟ್ಟುಕೊಂಡು ಕೋರ್ಟಿನ ಹುಕುಮಿನ ವಿರುದ್ಧ ಗೈರಕಾಯಿದೆಶೀರ ನಮಗೆ ಗೊತ್ತಾಗದಂತೆ ಶಿಷ್ಯರಿಂದ ಬರತಕ್ಕ ಕಾಣಿಕೆ ವಸೂಲಮಾಡತಾ ಇದ್ದಾನೆಂತಾ ಕೇಳುತ್ತೇವೆ. ಕಾರಣ ಯಾರಾದರು ಶಿಷ್ಯರು ಸದರಿಯವನ ಹತ್ತಿರ ಇದ್ದ ಕಾಗದ ಪತ್ರಗಳನ್ನು ಜಪ್ತುಮಾಡಿಸಬೇಕು ಹಾಗೂ ಕಾಣಿಕೆ ವಗೈರೆ ಕೊಡಬಾರದು ಮತ್ತು ನಿಮ್ಮ ಕಡೆಗೆ ಕಾಣಿಕೆ ಕೇಳಲಿಕ್ಕೆ ಬಂದರೂ ಈ ಎಲ್ಲ ವಿಷಯಕ್ಕೆ ನಮಗೆ ತಿಳಿಸಿರಿ. ಈ ಪ್ರತಿ ವಾದಿಗಳನ್ನು ಮಠದಿಂದಾ ಹೊರಗೆ ಹಾಕಿರುತ್ತದೆ ತಿಳಿಯಿರಿ. ತಾ॥ 17-7-1932 ಇಸ್ವಿ.

ಸಹಿ ದ॥ ಖುದ್ದ.

ಶ್ರೀ. ವಿ. ಪಟ್ಟದ ಸ್ವಾಮಿಗಳು.

ಪತ್ರವ್ಯವಹಾರ

ಪತ್ರವ್ಯವಹಾರಕಾರ ಲೇಖಕರಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬುದನ್ನು ತಿಳಿಯಬೇಕು.—ಸಂಪಾದಕ.

ಚಾಮರಾಜನಗರ ತಾಲ್ಲೂಕಿನ ಉಡಿಗಾಲ.

ಈಶ್ವರನು ಸಾರಥಿಯಂತೆ !

ವೇ॥ ಚಂದ್ರಶೇಖರಶಾಸ್ತ್ರಿಗಳವರ ವಾಗಾಡಂಬರ.

ಪಗಡದಿನ್ನಿ ವಿರಕ್ತಮಠೀಯ ಚಂದ್ರಶೇಖರಶಾಸ್ತ್ರಿಗಳ ವಿಚಿತ್ರ ಪಾಂಡಿತ್ಯ.

ಯಾದಗಿರಿ ಶಂಕರಕಾಲೇಜಿನ ಪರಿಸ್ಥಿತಿಯು.

ಮಹಾಶಯರೆ, ಯಾದಗಿರಿಯಲ್ಲಿ ಧರ್ಮವೀರ ಶಂಕರಪ್ಪ ಸಜ್ಜನಶೆಟ್ಟಿ ಎಂಬ ಸನ್ಮಾನ್ಯರು ತಮ್ಮ ಸ್ವಂತ ಸಂಪಾದಿಸಿದ್ದ 1 ಲಕ್ಷ ರೂ. ಅರ್ಪಿಸಿ ಒಂದು ಟ್ರಸ್ಟ ರಚಿಸಿ 1 ಸಂಸ್ಕೃತ ಕಾಲೇಜನ್ನು “ ಶಿವಾಂ ವೀರಶೈವ ಶಂಕರ ಸಂಸ್ಕೃತ ಕಾಲೇಜ ” ಎಂಬ ಹೆಸರಿನಿಂದ ಸ್ಥಾಪಿಸಿರುವದು ಸರ್ವರಿಗೂ ಗೋಚರವಿದೆಯಷ್ಟೆ. ಈ ಕಾಲೇಜಿನ ವ್ಯವಸ್ಥೆಯ ದೆಸೆಯಿಂದ 12 ಜನ ಮೆಂಬರರು ಕೆಳಗೆ ಬರೆದ ಪ್ರಕಾರ ನಿಯುಕ್ತರಾಗಿರುತ್ತಾರೆ.

ಭಾರತ ರಾಜಕೀಯದೃಶ್ಯ.

ಮಕ್ಕಳಿದ್ದರೆ ಮನೆ ಚಂದ.

ಮಕ್ಕಳಿಗೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸ ಬೇಡಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆವಿಗುರಿ. ೯ ಗುಳಿಗೆಗಳ ಕಿ. ೧ ರೂಪಾಯಿ. ಟ. ಖ. ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. 17

ಸಾಮಾನ್ಯವಾಗಿ ಎಲ್ಲರೂ ಉತ್ತಮ ರೀತಿಯಿಂದ ಜೀವಿಸುತ್ತಾರೆ. ಅನ್ಯಾಯ ಅಬಾಧನೆಗಳಿಂದ ರಾಜನು ಪ್ರಜೆಗಳನ್ನು ಹಿಂಸೆ ಪಡಿಸುವುದಿಲ್ಲ. ಅವರು ಸುಖವಾಗಿ ಐಶ್ವರ್ಯವಂತರಾಗಿ ಬಾಳುವುದನ್ನು ನೋಡಿ ಅವರ ಸಂಪತ್ತನ್ನು ಕಿತ್ತುಕೊಳ್ಳುವುದೂ ಇಲ್ಲ.

ಕರ್ನಲ್ ಫುಲ್ಲರ್ಟನ್ ಎಂಬಾತನು ಹೈದರಾಲಿ ಆಡಳಿತೆಯ ಬಗ್ಗೆ ಹೀಗೆ ಹೇಳುತ್ತಾನೆ:—ಕೈಗಾರಿಕೆಯವನೂ ವರ್ತಕನೂ ಅಭಿವೃದ್ಧಿಹೊಂದುತ್ತಿದ್ದರು. ವ್ಯವಸಾಯವು ಉನ್ನತಸ್ಥಿತಿಯಲ್ಲಿತ್ತು. ಹೊಸ ಕೈಗಾರಿಕೆಗಳು ಹುಟ್ಟಿ ಸಂಪತ್ತು ದೇಶದೊಳಕ್ಕೆ ಹರಿದುಬರುತ್ತಿತ್ತು. ಕಂದಾಯದ ಅಧಿಕಾರಿಗಳ ಅಲ್ಪ ಅಪರಾಧಕ್ಕೆ ಅತ್ಯಂತ ಕಠಿಣ ಶಿಕ್ಷೆಯಾಗುತ್ತಿತ್ತು. ಬಂಗಾಳದ ಬಗ್ಗೆ ಹಾವೆಲ್ ಎಂಬಾತನು ಹೀಗೆ ಹೇಳುತ್ತಾನೆ:—

ಇಲ್ಲಿ ಜನರ ಆಸ್ತಿ ಸ್ವಾತಂತ್ರ್ಯಗಳು ನಿರಾತಂಕವಾದವುಗಳು. ಪ್ರಯಾಣಿಕನು ಸಾಮಾನಿನಲ್ಲಿ ಇಲ್ಲದಿರಲಿ ಸರ್ಕಾರದ ರಕ್ಷಣೆಗೆ ಒಳಪಡುತ್ತಾನೆ. ಅವನಿಗೆ ರಕ್ಷಕರನ್ನು ಯಾವ ಖರ್ಚು ಇಲ್ಲದೆ ಸ್ಥಳದಿಂದ ಸ್ಥಳಕ್ಕೆ ಸರ್ಕಾರವು ಒದಗಿಸಿಕೊಡುತ್ತದೆ. ಹಣದ ಚೀಲವಾಗಲಿ ಆವೊಳ್ಳಿನವುಗಳಾಗಲಿ ಕಳೆದುಹೋದರೆ ಅವನ್ನು ಪಡೆಯುವ ಮನುಷ್ಯನು 1 ಮರಕ್ಕೆ ತೂಗಹಾಕಿ ಸಮೀಪದ ಕಾವಲುಗಾರನಿಗೆ ತಿಳಿವಳಿಕೆ ಕೊಡುತ್ತಾನೆ.

ಮರಟಾದೇಶದ ಬಗ್ಗೆ ಆಂಕಟಿಲ್ ಡುಪೆರೊನ್ ಎಂಬಾತನು 1762 ರಲ್ಲಿ ಹೀಗೆ ಬರೆಯುತ್ತಾನೆ:—ಸೂರತ್ತಿನಿಂದ ಘಟ್ಟಗಳನ್ನು ಬೆಳಿಗ್ಗೆ 10 ಘಂಟೆಗೆ ಹಾದು ಹೋದೆನು. ಆಗ ಮರಾಟ ಸೀಮೆಯನ್ನು ಹೊಕ್ಕೆನು. ಸೃಷ್ಟಿಯು ಇನ್ನೂ ಬಾಲ್ಯಾಯಸದೆ ಯುದ್ಧ ಪ್ರಾಂಗಣತೆಯೂ ಗೊತ್ತಿಲ್ಲದಿರುವ ಸುವರ್ಣಯುಗದ ಸಾರ್ಥಕ ಸೌಖ್ಯಗಳ ಮಧ್ಯೆ ನಾನಿದ್ದಂತೆ ಭಾವಿಸಿಕೊಂಡೆನು. ಜನರು ಹಸನ್ಮುಖಿಗಳೂ ಚೈತನ್ಯಶಾಲಿಗಳೂ ಒಳ್ಳೇ ಆರೋಗ್ಯವಂತರೂ ಆಗಿದ್ದರು. ಅಪರಿಮಿತ ಆತಿಥ್ಯವು ಒಂದು ಸಾರ್ವತ್ರಿಕ ಗುಣವಾಗಿತ್ತು. ಪ್ರತಿಬಾಗಿಲೂ ತೆರೆದಿತ್ತು. ಗೆಳೆಯರಿಗೂ ನೆರೆಹೊರೆಯವರಿಗೂ ಪರಸ್ಥಳದವರಿಗೂ ಅವರು ಹೊಕ್ಕಲ್ಲಿ ಒಂದೇ ಸಮನಾಗಿ ಸ್ವಾಗತವಿತ್ತು.

ಮೇಜರ್ ಸಾಹೇಬರು ಟಿಪ್ಪುಸುಲ್ತಾನನ ಆಡಳಿತೆಯ ಬಗ್ಗೆ ಹೇಳುವುದರ ಸಾರಾಂಶವಿದು:—ಪರದೇಶದ ಮೂಲಕ ಪ್ರಯಾಣಮಾಡುವ ಮನುಷ್ಯನಿಗೆ ಅದು ಚೆನ್ನಾಗಿ ಉತ್ತು ಬಿತ್ತಲ್ಪಟ್ಟು ಕಷ್ಟಪಟ್ಟು ಕೆಲಸಮಾಡುವ ನಿವಾಸಿಗಳುಳ್ಳದಾಗಿ ಹೊಸದಾಗಿ ಪಟ್ಟಣಗಳು ಸ್ಥಾಪಿತವಾಗಿ ವ್ಯಾಪಾರ ವಿಸ್ತರಿಸುತ್ತಿರುವನ್ನು ತೋರಿಸುವಂತೆ ಊರುಗಳು ಅಭಿವೃದ್ಧಿಯಾಗಿ ಪ್ರತಿಯೊಂದೂ ಏಳಿಗೆ ಹೊಂದುತ್ತಿರುವುದು ಕಂಡುಬಂದರೆ ಅವನು ಸಹಜವಾಗಿ ಆ ಪ್ರಭುತ್ವವಿಧಾನವು ಜನರಿಗೆ ಅನುಗುಣವಾದುದೆಂದು ನಿರ್ಧರಿಸುತ್ತಾನೆ. ಟಿಪ್ಪುವಿನ ಪ್ರಭುತ್ವದ ಚಿತ್ರವೇ ಇದು. ಟಿಪ್ಪುವಿನ ರಾಜ್ಯದ ಈ ಬಗೆಯ ಅಭಿವೃದ್ಧಿಯು ಈತನ ಕಾಲದಲ್ಲೇ ಆಗಲಿ ಹೈದರಾಲಿ ಕಾಲದಲ್ಲೇ ಆಗಲಿ ಉಂಟಾದುದಲ್ಲ. ಇವರಿಬ್ಬರೂ ಆಳಿದುದು 50 ವರ್ಷಗಳಿಗಿಂತ ಹೆಚ್ಚಿರಲಿಲ್ಲ. ಈ ಅಭಿವೃದ್ಧಿಗೆ ತಳಹದಿಯು ಹಿಂದು ಯದುವಂಶದ ಅರಸರಿಂದ ಹಾಕಲ್ಪಟ್ಟಿತ್ತು.

ಟಿಪ್ಪುವಿನ ಕಾಲಕ್ಕೆ ಮೈಸೂರು ದೇಶವು ಉತ್ತರಕ್ಕೆ ಕೃಷ್ಣಾನದಿಯಿಂದ ದಕ್ಷಿಣಕ್ಕೆ ಮದ್ರಾಸು ಪ್ರಾಂತ್ಯದ ಅನೇಕ ಭಾಗಗಳವರೆಗೆ ಹಬ್ಬಿತ್ತು. ಮೇಲಿನ ಆಡಳಿತ ವರ್ಣನೆಯಿಂದ ಸರಿಸುಮಾರಾಗಿ ದಕ್ಷಿಣ ಹಿಂದೂಸ್ಥಾನವು ಎಷ್ಟು ಸುಖಮಯವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

ಸ್ಕ್ರಾಫ್ಟನ್ ಎಂಬಾತನು ಬ್ರಿಟಿಷರು ಬಂಗಾಳವನ್ನು ಆಕ್ರಮಿಸುವ ತತ್ಪೂರ್ವದಲ್ಲಿದ್ದ ಸ್ಥಿತಿಯನ್ನು ಈ ರೀತಿ ವರ್ಣಿಸುತ್ತಾನೆ:— ಅಲಿವರ್ದಿಖಾನನು ಅಧಿಕಾರವನ್ನು ವಹಿಸಿದಾಗ ಬಂಗಾಳದ ಸ್ಥಿತಿಯು ಹೀಗಿತ್ತು. ಆತನ ಆಳ್ವಿಕೆಯಲ್ಲಿ ದೇಶವು ಸುಧಾರಿಸಿತು. ಯೋಗ್ಯತೆ ಮತ್ತು ಒಳ್ಳೇನಡತೆ ಇವುಗಳೇ ಆತನ ಕೃಪೆ ಪಡೆಯುವ ಸಾಧನಗಳು. ಮಂತ್ರಿಗಳನ್ನು ಚುನಾಯಿಸುವುದರಲ್ಲಿಯೂ ಉನ್ನತದರ್ಜೆಯ ಸೈನಿಕ ಮತ್ತು ಸಾಮಾನ್ಯ ಅಧಿಪತ್ಯಕ್ಕೆ ನೇಮಿಸುವುದರಲ್ಲಿಯೂ ಹಿಂದುಗಳನ್ನು ಮುಸಲ್ಮಾನರೊಂದಿಗೆ ಸಮಾನ ಭಾವದಿಂದ ಕಾಣುತ್ತಿದ್ದನು. ಕಂದಾಯದ ಹಣವು ದೂರದಿರುವ ದೆಹಲಿ ಬೊಕ್ಕಸಕ್ಕೆ ಸೇರಿಸಲ್ಪಡುವುದಕ್ಕೆ ಪ್ರತಿಯಾಗಿ ಆಯಾಸ್ಥಳದಲ್ಲೇ ವೆಚ್ಚ ಮಾಡಲ್ಪಡುತ್ತಿತ್ತು.

ಮಾಳವದ ಬಗ್ಗೆ ಸರ್ ಜಾನ್ ಮಾಲ್ಕಂ ಹೇಳುವುದಿದು:— ದರೋಡೆಕೋರರ ತಾಂಡಗಳ ಆಕ್ರಮಣದಿಂದ ಅದು ಹಾಳಾದ ಸ್ಥಿತಿಯಲ್ಲಿ ಕಂಡೆನು. ಆದಾಗ್ಯೂ ಆ ಕಾಲದಲ್ಲಿ ಪಟ್ಟಣಗಳಲ್ಲಿ ಭಾರಿ ದುಡ್ಡಿನ ಲೇವಾದೇವಿಯು ಎಡೆಬಿಡದೆ ನಡೆಯುತ್ತಿದ್ದುದನ್ನು ಕಂಡು ನನಗೆ ಆಶ್ಚರ್ಯವಾಯಿತು. ಈ ಪಟ್ಟಣಗಳಲ್ಲಿ ಬಡ್ಡಿಖಾತೆ ವ್ಯವಹಾರಿಕರು ಬಹು ಅಭಿವೃದ್ಧಿಸ್ಥಿತಿಯಲ್ಲಿದ್ದರು. ಮಾಲು ಈ ಪ್ರಾಂತ್ಯದ ಮೂಲಕ ಬಹಳ ಹೆಚ್ಚಾಗಿ ಹಾದು ಹೋಗುತ್ತಿತ್ತು. ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿರುವ ಜೀವವಿಮಾ ಕಾರ್ಯಾಲಯಗಳು ತಮ್ಮ ಕಾರ್ಯಗಳನ್ನೆಂದೂ ನಿಲ್ಲಿಸಿದ್ದಿಲ್ಲ. ಇಲ್ಲಿ ನಮ್ಮ ಪ್ರತ್ಯಕ್ಷ ಆಳ್ವಿಕೆಯು ಅವರ ಪೂರ್ವದ ರಾಜಪುತ್ರರ ಆಳ್ವಿಕೆಯ ಪುನಃಸ್ಥಾಪನೆಗಿಂತ ಹೆಚ್ಚಾಗಿ ಅವರ ವ್ಯಾಪಾರ ವ್ಯವಸಾಯಗಳನ್ನು ಅಭಿವೃದ್ಧಿಪಡಿಸಬಲ್ಲುದೆಂದು ನಾನು ನಂಬುವುದಿಲ್ಲ. ಸಮೃದ್ಧಿಯಾಗಿದ್ದ ಇಂತಹ ಪ್ರದೇಶವನ್ನು ತಾವು ವಶಪಡಿಸಿಕೊಂಡ ಮೇಲೆ ಬ್ರಿಟಿಷರು ಹೇಗೆ ಅವನ್ನು ಆಳಿಕೊಂಡು ಬಂದಿರುವರೆಂಬುದನ್ನು ನೋಡೋಣ.

1770 ರಿಂದ 1900 ರವರೆಗೆ ಅಂದರೆ 130 ವರ್ಷಗಳಲ್ಲಿ 22 ಸಾರಿ ಕ್ಷಾಮ ಬಿತ್ತು 1880 ರ ಕ್ಷಾಮ ಸಮಿತಿ ಪ್ರಕಾರ 18 ಸಾರಿ, 1880 ರ ಅನಂತರ 4 ಸಾರಿ 1770 ರಲ್ಲಿ ಬಂಗಾಳದಲ್ಲಿ ಕ್ಷಾಮಬಿದ್ದು 1,00,00,000 ಜನರು ಸತ್ತರು. 1783 ರಲ್ಲಿ ಮದ್ರಾಸಿನಲ್ಲಿ. 1784 ರಲ್ಲಿ ಅಯೋಧ್ಯ ಪ್ರಾಂತ್ಯಗಳಲ್ಲಿ, 1792 ರಲ್ಲಿ ಬೊಂಬಾಯಿ ಮತ್ತು ಮದ್ರಾಸುಗಳಲ್ಲಿ, 1803 ಬೊಂಬಾಯಿನಲ್ಲಿ, 1804 ರಲ್ಲಿ ಮದ್ರಾಸಿನಲ್ಲಿ, 1833 ರಲ್ಲಿ ಪುನಃ ಇಲ್ಲೇ ಕ್ಷಾಮಬಿದ್ದು ಗುಂಟೂರು ಜಿಲ್ಲೆಯಲ್ಲಿ 5,00,000 ಕ್ಕೆ 2,00,000 ಜನರು ಸತ್ತರು. ಹೆಣಗಳನ್ನು ಹೂಳುವರಿಲ್ಲದ ಮದ್ರಾಸು, ಮಚಲಿಪಟ್ಟಣ ಮತ್ತು ನೆಲ್ಲೂರು ಸುತ್ತುಮುತ್ತಲು ಬಿದ್ದಿದ್ದವು. 1837 ರಲ್ಲಿ ಉತ್ತರ ದೇಶದಲ್ಲಿ ಕ್ಷಾಮಬಿದ್ದು 8,00,000 ಮರಣಗಳಾದವು. ಇದನ್ನು ಕ್ಷಾಮ ಸಮಿತಿಯವರು ಬಹಳ ಕಡಿಮೆಯೆಂದು ಹೇಳಿರುವರು. ಪುನಃ ಮದ್ರಾಸಿನಲ್ಲಿ 1854 ರಲ್ಲಿ, ಉತ್ತರದೇಶದಲ್ಲಿ 1860 ರಲ್ಲಿ 2,00,000 ಜನರು ಸತ್ತರು, 1864 ರಲ್ಲಿ 10,000,00 ಜನರು ಒರಿಸ್ಸದಲ್ಲೂ 4,50,000 ಜನರು ಮದ್ರಾಸಿನಲ್ಲೂ ಸತ್ತರು. 1869 ರಲ್ಲಿ ಉತ್ತರದೇಶದಲ್ಲಿ 12,00,000 ಮರಣಗಳಾದವು 1874 ರಲ್ಲಿ ಬಂಗಾಳದಲ್ಲಿ 10,00,000 ಜನರಿಗೆ ಸಹಾಯದೊರಕಿ ಪ್ರಾಣಗಳು ಉಳಿಸಲ್ಪಟ್ಟವು.

1877ರಲ್ಲಿ ಮದ್ರಾಸಿನಲ್ಲಿ 52,50,000 ಮರಣಗಳು, 1878 ರಲ್ಲಿ ಉತ್ತರದೇಶದಲ್ಲಿ 1,25,000 ಮರಣಗಳು, 1889 ರಲ್ಲಿ ಮದ್ರಾಸು ಮತ್ತು ಒರಿಸ್ಸಗಳಲ್ಲಿ, 1893 ಮದ್ರಾಸು ಬಂಗಾಳ ರಾಜಪುಟಾಣಗಳಲ್ಲಿ 1896-1897 ರಲ್ಲಿ ಉತ್ತರದೇಶ ಬಂಗಾಳ ಮದ್ರಾಸು ಬೊಂಬಾಯಿಗಳಲ್ಲಿ ಮರಣಸಂಖ್ಯೆ ತಿಳಿದಿಲ್ಲ, 40,00,000 ಜನರಿಗೆಸಹಾಯ ಸಿಕ್ಕಿತು. 1899-1900 ರಲ್ಲಿ ಉತ್ತರದೇಶ ಮಧ್ಯಪ್ರಾಂತ್ಯ ಬೊಂಬಾಯಿಗಳಲ್ಲಿ 65,00,000 ಜನರಿಗೆ ಸಹಾಯ ಮಾಡಲ್ಪಟ್ಟಿತು. ಹೆಚ್ಚಿನ ಬರವೆಂದರೆ ಇದೇ 1918 ರಲ್ಲಿ ಉಂಟಾದ ಕ್ಷಾಮ ಮತ್ತು ಇನ್ಫ್ಲುಯೆಂಜರೋಗದಿಂದ ಇಡಿ ಇಂಡಿಯಾ ದೇಶದಲ್ಲೆಲ್ಲಾ 5,00,00,000 ಜನರು ಸತ್ತರು.

ಆಸ್ಥಾನವಿದ್ವಾನ್ ಶ್ರೀಮಾನ್ ವೇದಮೂರ್ತಿ ಬಿ. ಎಂ. ತ್ರ್ಯಂಬಿಕ ಸಿದ್ಧಲಿಂಗಶಾಸ್ತ್ರಿಗಳವರೂ ಅವರ ದಿಗ್ದರ್ಶನ ಕಾವ್ಯವಿಮರ್ಶೆಯೂ.

(ಲೇಖಕ—ವೇ|| ಎಚ್. ಗೋಪಾಲಕೃಷ್ಣಮಾಚಾರ್ಯ, ಕರ್ಣಾಟಕ ಪಂಡಿತರು, ಟ್ರೇನಿಂಗ್ ಕಾಲೇಜು, ಮೈಸೂರು.)

ದಿಗ್ದರ್ಶನಂ.

(ಜುಲೈ ತಾ|| 25ರ ಸಂಚಿಕೆಯಿಂದ ಮುಂದುವರಿದುದು.)

೨೭

ನವನೀತಪ್ರಚುರೋಕ್ತಿ ಕರ್ಣ ಚೆಲನಾವ್ಯಾಪಾರಚಾತುರ್ಯನಂ | ಭವದುದಾತ್ತವಿಚಾರವಿಂಪ್ರಕೃತಿಕೋಶಾಮಾತ್ಯದುರ್ಗೌಘಸ || ತ್ಸವಯೋಧಾಮ್ಯರಶಕ್ತಿಯುಕ್ತಬಲಮುಂಸಾರ್ಥಂದುಪಾರ್ಶ್ವಂದುತೋ | ರುವನಾತ್ಮೀಯುದಿವೀಕಸಂತತಿಯನಾ ಕೃಷ್ಣಕ್ಷಮಾವಲ್ಲಭಂ ||

ಶ್ರೀಕೃಷ್ಣಭೂಪತಿಯು ಉತ್ತಮವಾದ ನೀತಿಯಿಂದಕೂಡಿರುವ ಮಾತುಗಳು ಕೆಲಸನಡೆಯಿಸುವಿಕೆಯ ಚಾತುರ್ಯದಿಂದ ಉಂಟಾಗಿರುವ ಶ್ರೇಷ್ಠವಾದ ವಿಮರ್ಶಾಶಕ್ತಿಯಿಂದ ಪ್ರಜೆ, ಭಂಡಾರ, ಮಂತ್ರಿ, ಕೋಟೆ, ಶ್ರೇಷ್ಠನಾದ ಸ್ನೇಹಿತ, ಅತ್ಯಧಿಕವಾದ ಶಕ್ತಿಯಿಂದ ಕೂಡಿರುವ ಸೈನ್ಯವನ್ನು ಪರೀಕ್ಷಿಸುವಾಗ ತನ್ನಲ್ಲಿರುವ ಗುಣದೋಷಗ್ರಹಣರೂಪವಾದ ಅಸದೃಶಶಕ್ತಿಯನ್ನು ಪ್ರಕಟಪಡಿಸುವಂಥವನು ಆಗುತ್ತಾನೆ.

ಶ್ರೀಕೃಷ್ಣಭೂಪತಿಯು ಉತ್ತಮವಾದ ಪ್ರಭುಶಕ್ತಿಯಿಂದ ಪ್ರಕಾಶಿಸುತ್ತಾನೆ. ರಾಜ್ಯದಲ್ಲಿರುವ ಪ್ರತಿಯೊಂದು ಇಲಾಖೆಯ ಪರೀಕ್ಷಣದಲ್ಲೂ ಸಂಪೂರ್ಣ ನಿಪುಣತೆಯನ್ನು ಪಡೆದಿರುತ್ತಾನೆ. ಉತ್ತಮವಾದ ಸಪ್ತಾಂಗವು ಶ್ರೀಮನ್ಮಹಾರಾಜರವರಲ್ಲಿದೆ ಎಂದು ತಾತ್ಪರ್ಯ.

೨೮

ಸಿರಿಯತವರ್ಮನೆಯರಿವಿನ |
ಗರುಡಿಯು ಮುಕ್ತಿಪದ ಬೀಡದೆನೆನಡೆನುಡಿಯಾ ||
ಗರಮಧಟಿನ ಗವಿಬೆಣ್ಣಿನ |
ನೆರೆಯುರೆಯೊರಲಿಂಬುಮೆನೆಸೆವಮೈಸೂರ್ನಗರಂ ||

ಈ ಮಹಾಪ್ರಭುವಿನ ರಾಜಧಾನಿಯಾದ ಆ ಮೈಸೂರು ನಗರವಾದರೋ... ಮಹಾಲಕ್ಷ್ಮಿಯ ಜನ್ಮಸ್ಥಾನವಾಗಿದೆ (ಸಕಲ ವಿಧವಾದ ಸಂಪತ್ತೂ ತುಂಬಿದೆ). ಜ್ಞಾನದ ವ್ಯಾಯಾಮಶಾಲೆಯಾಗಿದೆ (ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳಲು ಅನುಕೂಲ ಹೆಚ್ಚಾಗಿದೆ). ಸಂತೋಷವು ವಾಸಮಾಡುವ ಸ್ಥಳವು (ಜನಗಳು ಸಂತೋಷವಾಗಿ ಬದುಕುವುದಕ್ಕೆ ಸಹಕಾರಿಯಾಗಿದೆ). ಸರಿಯಾದ ನಡತೆ ಯುಕ್ತವಾದ ಮಾತು ಇವೆರಡಕ್ಕೂ ಆಶ್ರಯಭೂತವಾಗಿದೆ (ಇಲ್ಲಿನ ಜನಗಳು ನಡೆನುಡಿಗಳಲ್ಲಿ ಒಂದೇ ಸಮನಾಗಿದ್ದಾರೆ). ಪರಾಕ್ರಮವು ವಾಸಮಾಡುವ ಸ್ಥಳವಾಗಿದೆ (ಇಲ್ಲಿ ಪರಾಕ್ರಮವುಳ್ಳ ಅನೇಕ ಕ್ಷತ್ರಿಯರು ವಾಸವಾಗಿದ್ದಾರೆ). ಬಿನ್ನಣದಿಂದ ಪೂರ್ಣವಾಗಿದೆ (ಗೌರವಸ್ಥರು ಬಹುಮಂದಿ ಇದ್ದಾರೆ). ಉತ್ತಮವಾದ ಸ್ನೇಹ ಆಶ್ರಯ ಇವುಗಳಿಗೆ ಗಣಿಯಾಗಿದೆ (ಉತ್ತಮವಾದ ಮಿತ್ರಲಕ್ಷಣವುಳ್ಳ ಬಹುಮಂದಿ ಇದ್ದಾರೆ).

೨೯

ಪಡೆವಳದೂಸಿಗನುರೆಪೂ |
ವಡಿಗಂಗೋಳಾಯ್ತುಕೊಟ್ಟವಳಮಣಿಚಟ್ಟಂ ||
ಪಡಿಯರನಡುವಳಗಂದಿಗ |
ನೆಡೆಗೊಂಡೆಸೆದಿರ್ಪರಡಸಿಗಂ ಪೊಂಬರದಂ ||

ಸೇನಾಪತಿ, ವಸ್ತ್ರವ್ಯಾಪಾರಿ, ಹೂವಾಡಿಗ, ಅಶ್ವಾರೂಢ, ಪಶುಪಾಲಕ, ರತ್ನಪರೀಕ್ಷಕ, ದ್ವಾರಪಾಲಕ, ಪಾಕದಲ್ಲಿ ನಿಪುಣ, ಸುಗಂಧವ್ಯಾಪಾರಿ, ನಾಪಿತ, ಸುವರ್ಣವ್ಯಾಪಾರಿ ಇವರೇ ಮುಂತಾದವರಿಂದ ಕೂಡಿಕೊಂಡು ಪ್ರಕಾಶಿಸುತ್ತದೆ (ಈ ನಗರದಲ್ಲಿ ಉತ್ತಮಗುಣಗಳಿಂದ ಭೂಷಿತರಾದ ಅನೇಕ ರಾಜಕೀಯ ಪುರುಷರೂ, ಅನೇಕ ಕುಶಲವಿದ್ಯೆಗಳಲ್ಲಿ ನಿಪುಣರಾದವರೂ ಅಪರಿಮಿತವಾಗಿದ್ದಾರೆ).

೩೦

ಮತ್ತಮಾವಿಜಯದಶಮಿಯೊಳ್, ಅಲ್ಲದೆ ವಿಜಯದಶಮಿಯ ದಿನದಲ್ಲಿ ಯಾದರೋ—

ಧೀರರಸನ್ಮುತಕವಿತಾ |
ಪಾರರ ನಯವಿದರಮಂಡಳಿಕಮನ್ನೆಯರಾ ||
ಶೂರರ ಸಚಿವರ ತತಪರಿ |
ವಾರಂ ಪುಗುತಿರ್ಪುದಂದರಮನೆಯಂ ||

ಧೈರ್ಯಶಾಲಿಗಳ ಉತ್ತಮರಾದ ಕವಿಗಳ ನೀತಿಶಾಸ್ತ್ರಜ್ಞರ ಮಂಡಳಿಕರ (ಜಹಗೀರ್‌ದಾರರ) ಮರ್ಯಾದೆಯುಳ್ಳವರ ಯುದ್ಧದಲ್ಲಿ ಪರಿಶ್ರಮವುಳ್ಳವರ ಮಂತ್ರಿಗಳೇ ಮುಂತಾದವರ ಅಧಿಕ ಸಂಖ್ಯೆಯ ಪರಿಜನವು ಅರಮನೆಯನ್ನು ಪ್ರವೇಶಿಸುತ್ತಿದೆ. ಇದು ನೋಡುವುದಕ್ಕೆ ಬಹಳ ಮನೋಹರವಾಗಿದೆ.

೩೧

ತ್ರಿವಿಧಶ್ಲಾಘ್ಯತಶಕ್ತಿ ಸಂಜನಿತಸರ್ವೋದ್ಧಾರಕಾರ್ಯಕ್ರಮೋ | ದ್ಭವದುದ್ಯತ್ಪರಕೀರ್ತಿಯೋಷಿದುರುನಾಟ್ಯಾಲೋಕನಾಸಕ್ತಿಯಿಂ || ದವನೀಶರ್ಯ ಧರ್ಮವಿಶ್ರುತರುಮೇಳ್ತಂದಂದಬಿಂದೀಕ್ಷಿಸು | ತ್ತವರೆಲ್ಲರ್ನಲವಿಂದ ಕೀರ್ತನದಿನಂ ಕೊಂಡಾಡುವರ್ ಭೂಪನಂ ||

ಸುಪ್ರಸಿದ್ಧರಾದ ರಾಜರಲ್ಲಿ ಸಹಜವಾಗಿರುವ ತ್ರಿವಿಧಶಕ್ತಿಗಳಿಂದ ಎಲ್ಲವನ್ನೂ ಅಭಿವೃದ್ಧಿಪಡಿಸತಕ್ಕ ಕಾರ್ಯಗಳ ಸುಕ್ರಮದಿಂದುಂಟಾದ ಶ್ರೇಷ್ಠವಾದ ಕೀರ್ತಿಯೆಂಬ ರಮಣಿಯ ಅಮೋಘವಾದ ನರ್ತನವನ್ನು ನೋಡಬೇಕೆಂಬ ಆಸಕ್ತಿಯಿಂದ ನೀತಿಯಿಂದಲೂ ಧರ್ಮಬುದ್ಧಿಯಿಂದಲೂ ಪ್ರಸಿದ್ಧರಾದ ಭರತಖಂಡದ ಇತರ ರಾಜರೂ ಒಂದು ಉಚಿತವಾದ ರೀತಿಯಲ್ಲಿ ನೋಡಿ ತಿಳಿಯುತ್ತಾ ಅವರೆಲ್ಲರೂ ಪ್ರೀತಿಯಿಂದ ನಮ್ಮ ಪ್ರಭುವನ್ನು ನಿತ್ಯವೂ ಸ್ತುತಿಸುವರು (ಮೈಸೂರು ರಾಜ್ಯವು ಹಿಂದುಸ್ಥಾನದ ಎಲ್ಲ ಆಶ್ರಿತ ರಾಜ್ಯಗಳಲ್ಲೂ ಗಣ್ಯವಾದುದು. ಅದರಂತೆಯೇ ಇಲ್ಲಿನ ಶ್ರೀಮನ್ಮಹಾರಾಜರವರೂ ಸುಗುಣಗಳಿಂದ ಯುಕ್ತರಾಗಿ ಗೌರವಕ್ಕೆ ಸಂಪೂರ್ಣವಾಗಿಯೂ ಅರ್ಹರು ಎಂದರೆ, ಎಲ್ಲಾ ಭಾಗಗಳಲ್ಲೂ ಇತರ ರಾಜರಿಗೆ ಆದರ್ಶಪ್ರಾಯರು ಎಂದು ತಾತ್ಪರ್ಯ. ಪ್ರಭುಶಕ್ತಿ, ಮಂತ್ರಶಕ್ತಿ, ಉತ್ಸಾಹಶಕ್ತಿ ಇವುಗಳಿಗೆ ತ್ರಿವಿಧಶಕ್ತಿಗಳೆಂದು ಹೆಸರು).

೩೨

ಅಲರಿಚನಡಪಿನ ಹಂಸಂ | ಕಲಶಜನುರೆಪೀರ್ದಶರಧಿಯುಂ ಬಾಳ್ನೋಟವಾ || ನೆಲೆಗರೆಯೊಂತಿಂಗದಿರಂ | ವಿಲಸಿತಕೃಷ್ಣೇಂದ್ರ ಕೀರ್ತಿಗಂ ಪಾಂಗಲ್ಲಂ ||

ಕಮಲಭವನಾದ ಚತುರ್ಮುಖನು ಸಂಚಾರಕಾಲದಲ್ಲಿ ಹತ್ತುವ ಹಂಸವೂ, ಕ್ಷೀರಸಮುದ್ರವೂ, ರಾಹುವಿನಿಂದ ನುಂಗಲ್ಪಡುವ ಅಸ್ಥಿರವಾದ ಕಳಂಕವನ್ನು ಹೊಂದಿರುವ ಪೂರ್ಣಚಂದ್ರನೂ, ಯಶಸ್ಸಿನಿಂದ ಪ್ರಕಾಶಮಾನವಾಗಿರುವ ಶ್ರೀ ಕೃಷ್ಣರಾಜೇಂದ್ರನ ಕೀರ್ತಿಗೆ ಎಂದಿಗೂ ಸಾಟಿಯಾಗಲಾರರು (ಬ್ರಹ್ಮ ವಾಹನವಾದ ಹಂಸದ ಬಿಳುಪು ಬಣ್ಣಕ್ಕಿಂತಲೂ, ಕ್ಷೀರಸಮುದ್ರದ ಶುಕ್ಲವರ್ಣಕ್ಕಿಂತಲೂ, ಪೂರ್ಣಚಂದ್ರನ ಧಾವಳ್ಯಕ್ಕಿಂತಲೂ, ಶ್ರೀಮತ್ ಕೃಷ್ಣರಾಜ ಪ್ರಭುಗಳ ಕೀರ್ತಿಯು ಅತಿಶಯ ಧವಳವಾದುದೆಂದು ತಾತ್ಪರ್ಯ). —

ಗದ್ಯ—ಮತ್ತಮಾಶೈವಸ್ಲೋರ್ವೀಶಪತಿಯ ಕರ್ಣಾಟರಾಜ್ಯಂ, ಶೈವನಂತನುಪಮವಿಭೂತಿವಿಲಸಿತಮುಂ, ಜೈನನಂತಳ್ಳುಪೇತದಿಙ್ಮಯಮಭಾಸುರಮುಂ, ವೈಷ್ಣವನಂತುರುತರನಾಮಶೋಭಿಯುಂ, ಬೌದ್ಧನಂತಾದ್ಯತಾದ್ವಯವಾದಿಯುಮೆನಿಸಿ, ವೀರಭದ್ರಬಲಭದ್ರಮುಂ, ಸಮಂತಭದ್ರಮುಮಾಗಿಸಿ ದಿರ್ದಂತುಮಲ್ಲದೆಯುಂ,

ಅಲ್ಲದೆ ಶ್ರೀಕೃಷ್ಣಭೂಪತಿಯ ಕರ್ನಾಟ ರಾಜ್ಯವು (ಕನ್ನಡ ದೇಶವು) (ಶೈವನಂತುರು.........) ಶಿವಭಕ್ತನು ಅಸದೃಶ ವಿಭೂತಿಯಿಂದ ಪ್ರಕಾಶಮಾನನು, ಹಾಗೆ ಕನ್ನಡ ದೇಶವು ಅಸದೃಶವಾದ ಸಂಪತ್ತಿನಿಂದ ಮನೋಹರವಾದುದೂ, (ಜೈನನಂ) ಜೈನ ಮತದವನು ಆಶ್ರಯಿಸಿರತಕ್ಕ ದಿಗ್ ವ್ರತದಿಂದ ಮನೋಹರನಾದವನು, ಹಾಗೆ ಇದು (ಕನ್ನಡ ದೇಶವು) ಹೊಂದಲ್ಪಟ್ಟ ಎಲ್ಲೆಯಿಂದ ಕೂಡಿರುವುದಾದುದರಿಂದ ಮನೋಹರವಾದುದೂ, (ಹೆಚ್ಚು ವಿಸ್ತಾರವಾಗಿದೆ). (ವೈಷ್ಣವ) ವಿಷ್ಣುಭಕ್ತನು ಶ್ರೇಷ್ಠವಾದ ಊರ್ಧ್ವಪುಂಡ್ರಗಳಿಂದ ಪ್ರಕಾಶಿಸತಕ್ಕವನು, ಇದು ಹಾಗೆ ಶ್ರೇಷ್ಠವಾದ ಪ್ರಸಿದ್ಧಿಯಿಂದ (ಒಳ್ಳೆಯ ಹೆಸರು) ಮನೋಹರವಾದುದೂ, (ಬೌದ್ಧ....) ಬುದ್ಧಮತದವನು ಸ್ವೀಕರಿಸಲ್ಪಟ್ಟ ಅದ್ವಯವಾದವುಳ್ಳವನು, ಇದು ಹಾಗೆ ಸ್ವೀಕರಿಸಲ್ಪಟ್ಟ ಅದ್ವಯವಾದವುಳ್ಳುದೂ (ಎಂದರೆ, ತನಗೆ ಸಮನಾದ ಅಥವಾ ಹೆಚ್ಚಾದ ಮತ್ತೊಂದು ದೇಶವನ್ನು ಹೊಂದಿಲ್ಲ) ಇದಕ್ಕೆ ಸಮನಾದ ಅಥವಾ ಹೆಚ್ಚಾದ ಉತ್ತಮವಾದ ರಾಜ್ಯ ಮತ್ತೊಂದಿಲ್ಲವೆನಿಸಿಕೊಂಡೂ (ವೀರಭದ್ರ....) ವೀರಭದ್ರ ಬಲಭದ್ರರುಳ್ಳುದೂ, ಹಾಗೆ ಇದು ವೀರ್ಯವತ್ತಾದ ಮಂಗಳಕರವಾದ ಸೈನ್ಯದಿಂದ ದೃಢವಾದುದೂ (ಸುಖಕರವಾದುದೂ,) (ಸಮಂತಭದ್ರ....) ಸಮಂತಭದ್ರನೆಂಬ ಜೈನ ಮಹರ್ಷಿಯಿಂದ ಯುಕ್ತವಾದುದೂ, ಹಾಗೆ ಇದು ಎಲ್ಲ ಭಾಗಗಳಲ್ಲೂ ಮಂಗಳಕರವಾದುದು ಆಗಿತ್ತು. ಅಷ್ಟೇ ಅಲ್ಲದೆ—

೩೩

ಅನಕದುಂದುಭಿಸುತ ಬಲಂತತಗೋಕುಲಮಲ್ಲವುಂಡರೀ | ಕಾನುಗತೋದ್ಧ್ರಭಾಂಗವೆನಿಸಿರ್ದಮನೀರಧಿಯಲ್ಲಮಾಬುಧಾ || ನೂನಕವಿಸ್ಥಿತಂ ಸುರಪಥಸ್ಥಲಮಲ್ಲಮೆನಿಪ್ಪಮರ್ಯಾದೆಯಿಂ | ಮಾನಿತಮಾದುದಲ್ತೆವರಕೃಷ್ಣನರೇಂದ್ರನ ರಾಜ್ಯಮಾಗಳುಂ ||

ವಿಸ್ತಾರವಾದ ಗೋಕುಲವೆಂಬ ಪುಣ್ಯಕ್ಷೇತ್ರವು ವಸುದೇವನಿಂದ ಹೊಗಳಲ್ಪಟ್ಟ ಬಲರಾಮಯುಕ್ತವಾದುದು. ನಮ್ಮ ಪ್ರಭುಗಳು ಆಳುವ ದೇಶವು ತಮಟೆಗಳಿಂದಲೂ ದೊಡ್ಡ ನಗಾರಿಗಳಿಂದಲೂ ಯುಕ್ತವಾದ ಸೈನ್ಯವುಳ್ಳುದು. ಆದುದರಿಂದಲೇ ವಿಸ್ತಾರವಾದ ಗೋಕುಲವಲ್ಲ. ಸೈನ್ಯವು ಉತ್ತಮವಾದ ರಣಭೇರಿಗಳಿಂದ ಯುಕ್ತವಾದುದು. ಸಮುದ್ರವು ಬೆಳ್ದಾವರೆಗಳಿಂದ ಅನುಸರಿಸಲ್ಪಟ್ಟ ಶ್ರೇಷ್ಠವಾದ ಚಕ್ರವಾಕಪಕ್ಷಿಗಳಿಂದ ಯುಕ್ತವಾದುದು. ಈ ರಾಜ್ಯವಾದರೋ ಬೆಳ್ಗೊಡೆಗಳಿಂದ (ಶ್ವೇತಛತ್ರಗಳಿಂದ) ಅನುಸರಿಸಲ್ಪಟ್ಟ ಶ್ರೇಷ್ಠವಾದ ತೇರುಗಳಿಂದಲೂ ಉತ್ತಮವಾದ ಚಕ್ರಾಯುಧಗಳಿಂದಲೂ ಯುಕ್ತವಾದುದು. ಆದುದರಿಂದಲೇ ಇದು ಸಮುದ್ರವಲ್ಲ. ಆಕಾಶಪ್ರದೇಶವು ಸುಪ್ರಸಿದ್ಧ ಬುಧಗ್ರಹದಿಂದಲೂ ಉತ್ತಮವಾದ ಶುಕ್ರಗ್ರಹದಿಂದಲೂ ಇರುವ ಸ್ಥಿತಿಯುಳ್ಳುದು. ಇದು ಉತ್ತಮರಾದ ವಿದ್ವಾಂಸರಿಂದಲೂ ಕವಿಗಳಿಂದಲೂ ಸ್ಥಿತಿಯುಳ್ಳುದು. ಆದಕಾರಣದಿಂದಲೇ ಆಕಾಶಪ್ರದೇಶವಲ್ಲವೆನಿಸಿಕೊಂಡಿರುವ ದೊಡ್ಡತನದಿಂದ ಶ್ರೇಷ್ಠನಾದ ಶ್ರೀಕೃಷ್ಣಪ್ರಭುವಿನ ರಾಜ್ಯವು ಯಾವಾಗಲೂ ಮರ್ಯಾದೆಯಿಂದ ಯುಕ್ತವಾದುದಾಗಿದೆಯಲ್ಲವೆ (ಇಲ್ಲಿ ಸುಪ್ರಸಿದ್ಧ ಗೋಕುಲದ ಲಕ್ಷಣವೂ, ಸಮುದ್ರಲಕ್ಷಣವೂ, ಆಕಾಶದ ಲಕ್ಷಣವೂ ಇದೆ. ಆದರೂ ಮೇಲೆ ಹೇಳಿದ ಹೆಸರುಗಳಿಂದ ಕೂಡಿಲ್ಲ) ಎಂದರೆ ಇಲ್ಲಿ ಮೇಲೆ ಹೇಳಿದ ಮೂರು ಸ್ಥಳಗಳ ಗುಣಗಳಿವೆ.

ಸಶೇಷ.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರ ತರಿಸಿಕೊಳ್ಳಿರಿ. ಕಿ. ೧| ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

17 M. C

೧೯೩೨ ನೆಯ ಇಸವಿ ಆಗಸ್ಟ ತಾ|| ೧೫ರಿಂದ ಆಗಸ್ಟ ತಾ|| ೨೧ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ ಆಂಗಿರಸನಾಮಸಂವತ್ಸರದ ಶ್ರಾವಣ ಶುದ್ಧ ಚತುರ್ದಶಿಯಿಂದ ಶ್ರಾವಣ ಬಹುಳ ಪಂಚಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶಕ ಸಿಂಹ
15	[1] ಸೋಮ	ಚತು	17-50	ಶ್ರವ	45-57	31
16	[2] ಮಂಗಳ	ಪೌರ್ಣ	16-18	ಧನಿ	46-51	1
17	ಬುಧ	ಪಾಡ್ಯ	15-52	ಶತ	48-44	2
18	ಗುರು	ಬಿದಿ	16-48	ಪೂಭಾ	52-6	3
19	[3] ಶುಕ್ರ	ತದಿ	18-55	ಉಭಾ	56-34	4
20	[4] ಶನಿ	ಚೌತಿ	22-15	ರೇವ	60	5
21	ಭಾನು	ಪಂಚ	26-26	ರೇವ	2-16	6

(1) ಋಗುಪಾಕರ್ಮ. (2) ಯಜುರುಪಾಕರ್ಮ, ಮಂಗಳಗೌರೀವ್ರತ. (3) ಮಳೆನಕ್ಷತ್ರ-ಮಖ ೨ ನೇಪಾದ. (4) ಶ್ರಾವಣಶನಿವಾರ.

ಮೈಸೂರು: ಮೈ. ಐರವಾಕಿಲ್ಯತಿಯವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG. N. O. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹೀಶೂರಪುರೀಶಾರ ಪರಮಾಧೀಶಮಾಮುಂಚುಕೃತಾ | ಭಾನತ್ಪತ್ರತಾವಾತಾ ಜಿಸ್ಯಕ್ಷಪತ್ರ ಹೋರ್ಜಾರಾಜಯ್ |
ಶ್ರೀಮತ್ಕೃಷ್ಣಪಾಲನಸ್ಯ ಮಹಾರಾಜೋಲಸ್ಯಾಜ್ಞಯಾ | ಸ್ಟೇನಸುಪತ್ರಮೀಚಾ ಮಾಕರ ಸಾಧ್ಯ ಸ್ಮಾಲಾಂಬರಿಯ |
ಸೀಮಾತೀರ್ಥಯತ್ಪತ್ರಾಪವಿಭೂಸ ಸದ್ಯತ್ಯತಮಾರಾಸ್ಸುಂ | ಪ್ರೇಮಂಚತ್ತಿಕೆಯುಂಪತ್ರೂರೀಗೆ ಗೌರೀಶಾಂತ್ರಿಣ್ಣುಯಾ |

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೩-೮-೦] [ಬಿಡಿಪ್ರತಿಗೆ ೦-೧-೦]

[ಸಂಪುಟ ೪೫] ಮೈಸೂರು ಸ್ಟಾರ್ ನೇ ೧೯೩೨ ನೆಯ ಇಸವಿ ಆಗಸ್ಟು ತಾರೀಖು ೨೨ ನೆಯ ಸೋಮವಾರ [ಸಂಚಿಕೆ ೩೪

1932 ನೆಯ ಇಸವಿಯ ಮೈಸೂರು ದಸರಾ ವಸ್ತುಪ್ರದರ್ಶನ.

ಇಡೀ ಭರತಖಂಡದಲ್ಲೆಲ್ಲಾ ನಿಮ್ಮ ವಸ್ತುಗಳಿಗೆ ಗಿರಾಕಿಯನ್ನು ಪಡೆಯುವ ಅಭಿಲಾಷೆಯು ನಿಮಗಿದೆಯೆ?

ದಸರಾ ಕಾಲದಲ್ಲಿ ಭರತಖಂಡದ ಸಮಸ್ತ ಪ್ರಾಂತಗಳಿಂದಲೂ ಧನಿಕರಾದ ಜನರು ಗುಂಪು ಗುಂಪಾಗಿ ಮೈಸೂರು ನಗರಕ್ಕೆ ಬರುತ್ತಾರೆ. ಅವರು ನಿಮ್ಮ ವಸ್ತುಗಳನ್ನು ಕೊಳ್ಳುವ ಭರವಸೆಯು ವಿಶೇಷವಾಗಿದೆ.

ಅವರು ನಿಮ್ಮ ಸರಕುಗಳನ್ನು 1932 ನೆಯ ಇಸವಿ ಅಕ್ಟೋಬರು 1 ರ ಲಾಗಾಯಿತು 15 ನೆಯ ತಾರೀಖಿನವರೆಗೂ ನಡೆಯುವ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಅಜಮಾಯಿಷಿಮಾಡಿ ನೋಡುವುದಕ್ಕೆ ಅವಕಾಶಕೊಡಿ.

ಪ್ರದರ್ಶಕರಿಗೆ ಸಮಸ್ತ ಸೌಕರ್ಯಗಳನ್ನೂ ಒದಗಿಸಲಾಗುವುದು.

ಪ್ರದರ್ಶನಕ್ಕೆ ಸಂಬಂಧಪಟ್ಟಒಂದು ಕೈಪಿಡಿಯನ್ನು ಪ್ರಕಟಿಸುತ್ತೇವೆ. ಇದಕ್ಕೆ ಹಿಂದಣ ವರುಷಗಳಂತೆಯೇ ಅತ್ಯಧಿಕವಾಗಿ ಅದರ ಪ್ರತಿಗಳು ಮಾರಾಟವಾಗುವುವು. ಅದರಲ್ಲ ಕೆಲವು ಜಾಹಿರಾತುಗಳಿಗೆ ಮಾತ್ರವೇ ಸ್ಥಳವಿರುತ್ತದೆ.

"ಪ್ರಾಸ್ಪೆಕ್ಟಸ್" ಎಂಬ ಪ್ರಸಿದ್ಧಪತ್ರಿಕೆಗಾಗಿಯೂ ಜಾಹಿರಾತು ಪ್ರಕಟಣೆಯ ದರಗಳು ಮುಂತಾದವುಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

[೩೪—೮] ಸೆಕ್ರೆಟರಿ, ಮೈಸೂರು ದಸರಾ ಎಗ್ಜಿಬಿಷನ್ ಕಮಿಟಿ,
ಅಠಾರಾಕಚೇರಿ, ಬೆಂಗಳೂರು.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಕರಾಗಿ ಕ್ಷೀಣರಾಗ ಬೇಡಿರಿ.	ಧಾತುಪುಷ್ಟಿಕರ ಪುತ್ರ ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕದ. [ಪ್ಪರ	ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಮೂತ್ರಪ್ರಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಡಿಲ, ವಕ್ರತಾ, ಕಾಮದರ್ಶನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪಮಾರ, ಗರ್ಮೀದೋಷ, ಅಶಕ್ತಿ, ಶಿರಸ್ತಾಂಭ, ನಡು, ಬೆನ್ನುನೋವು, ನಿದ್ರೆ ಕಡಿಮೆಬರೋಣ, ಜೀವಧಾತುರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, [illegible] ಕರಣೀತ ಕರುಣಕಂತ ಕಾಮಬುದ್ಧಿ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ವರಶಕ್ತಿ ಮತ್ತು ತಮ್ಮ ಕೂಡ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಕ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ಕಡಿಮೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ಗೋಲಿಯ ಒಂದು ಡಬ್ಬಿಗೆ ೩| ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, [illegible] ಹೆಸರು ಮತ್ತು ಬಳ್ಳೇಸು ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೇ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಟ್ಟುಬಿಟ್ಟು ಆಗುವದು ಅತಿಯಾಗುವದು, ಹೆಚ್ಚು ಕಡಿಮೆ ಗಂಟುಗಂಟು ಮುಟ್ಟುಬಿಟ್ಟು ಆಗೋಣ, ಮುಟ್ಟುಬಿಟ್ಟು ಆಗುವ ಕಾಲಕ್ಕೆ, ಹೊಟ್ಟೆಯಲ್ಲಿ ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ಸೊಂಟದಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, [illegible] ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. [illegible] ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ಗೋಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[೫೦—೫೨]

ಪತ್ತಾ, ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ. ಎಂ. ಎಸ್. ಎಂ.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳುಳ್ಳ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಸ್ವಲ್ಪಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ
ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಚಿತ್ರ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಪಾರುಪತ್ಯಶಾಸ್ತ್ರ	೦—೫—೦	೦—೧೦—೦
ಶರಣಾಸ	೦—೪—೦	೦—೯—೦
ತ್ರಿಶತಪಂಚಕ	೦—೪—೦	೦—೯—೦
ಗುರುಕಂಠರೇಶ್ವರಚರಿತ	೦—೧—೦	೦—೬—೦
ಬಸವೇಶ್ವರವಚನ	೦—೭—೦	೦—೧೨—೦
ಸಚಿತ್ರ ಶರಣಲೀಲಾಮಂಜರಿ	೦—೭—೦	೦—೧೨—೦
ಸಚಿತ್ರ ಶತಕತ್ರಯ	೧—೦—೦	೧—೬—೦

ಡಾಕ್ಟರ್ ಜೀ. ವೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು [illegible]

(Registerd Trade Mark)

[illegible]

[೩೦—೫೦] [illegible]

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಆಗಸ್ಟ್ ತಾ|| ೨೨ ನೆಯ ಸೋಮವಾರ

"*DISSENSIONS IN THE CAPITAL*"

II

We wish to conclude our remarks about the leading article of the *Daily Post* under the above caption. In our last we showed how the so-called wilful obstruction to Mr. T. G. Rama Iyer's efforts to improve Mysore City was as much a "degenerate myth" as some other things were. To day we wish to point out that the other allegations made in the article are no less so. One of the main charges hurled is that there are "activities which may tend to the production of communal unrest in the State, and over and above that, there was an "attempt to put obstacles in the way of that improved sanitation which is the dearest ambition of the Ruler and his Dewan" and it would appear that the *Daily Post* had hesitated to believe that things were as bad as was stated but its authority was good and hence no choice. Is it not enough if we say in reply that these hare-brained ideas can only be entertained by either a man in the moon or one who deserves to inhabit the nether regions. Whoever has been able to discover communal unrest in this beautiful City? What a "mishievous criminally mischievous"—to use the *Daily Post's* own expression—it is to make such a reckless and irresponsible statement. We challenge the journal to quote one such instance. It would appear that Mr. Rama Iyer was handicapped in such efforts in spite ofhis "large majorities in both the Municipality and Trust Board." This is indeed amusing, apart from the significance of his possessing majorities in a local self-governing institution where there ought to be no room for such majorities and minorities, more especially when an official presides over the same. Does it not arouse the curiosity of any reader to know how the large majority was defeated by the small minority and what those propositions are. Where we wonder does the Trust Board come in. There is another precious statement, again it appears based on good authority, that is, that Mr. Rama Iyer is by way of being a philanthropist and he offered to construct flushing arrangements for latrines etc., at his own cost and to receive repayment in easy instalments and even this generous offer was turned down by the malcontents! Hats off to the generous offer! But may we know when and where was this offer made and turned down. May we inform our contemporary that this precious offer is known only to it and to none else in the Municipal Council, and that such an offer was never turned down by any body? Shall we let out a few samples of the philanthropic acts of Mr. Iyer. Is it not a fact that when even clerks and other poor people subscribed more than a rupee each and when others subscribed 5, 10, 20 and so on for the purse to Sangeetha Vidwan Vasudevacharya, this generous patron of music and himself a musician, Mr. Iyer subscribed a maginificent sum of Re. 1 and, what is more, presided over the meeting to honour the musician. May we also state that he has paid as yet only about 1/30 of what he has subscribed for the Brahimin Anathalaya years ago. Perhaps the *Daily Post* does not know that Mr. Iyer once subscribed Rs. 25 for Sangeetha Vidwan Bidaram Krishanappa's Ramamandiram and when asked to pay the same said that there were two kinds of subscriptions one to give a lead for others to pay but not meant to be paid and the other to pay actually and that his subscription was of the former class and hence he could not pay. These are only a few of the monuments of his charity. We would also like to know why there should have been a reference to some incident about some threatening of the life of late Mr. M. L. Vardhamaniah, unless it be the mischievous desire to bring about ill-feeling between Hindus and Muslims. Far from assuaging any such feeling, even it it can be imagined to exist, such statements are sure to breed ill-will between communities. It is only a diabolical instinct that can refer to an unfounded rumour of over 12 years to stir up class hatred. We are sorry that the *Daily Post* should have fallen a prey to such machinations, for we know that so far as its own motives go they are above board. We have no desire to pursue this unpleasant topic. In fact, we had decided to forget the past so for as Mr. Rama Iyer's regime as President was concerned. We would have no objection if the *Dail Post* or a hundred other journals had sang the praises of Mr. Iyer with reference to what he actually did. But we certainly cannot take lying down the insinuations and attacks against a section of the loyal citizens of the city, trying to make out that they came in the way of the desires of His Highness which the Ex-President was for translating into practice. This method of working on the minds of the ruling powers is an old game and we are sorry we have to expose the dirty trick. We do hope that our worthy contemporary of Bangalore will refrain from treading on such dangerous grounds and will not place its trust in future in such dangerous authorities as the one on whose information it has based the article.

ರಾಜಧಾನಿಯಲ್ಲಿ ಮತವೈಷಮ್ಯ.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ಪ್ರೆಸಿಡೆಂಟರಾಗಿದ್ದ ಮ|| ಟಿ. ಜಿ. ರಾಮಯ್ಯರ್‌ರವರ ಬಹಾವಣೆಗಾಗಿ "ರಾಜಧಾನಿಯಲ್ಲಿ ಮತವೈಷಮ್ಯ" ಎಂಬ ಶೀರ್ಷಿಕದಿಂದ ಇದೇ ತಾ|| 11 ರ ಬೆಂಗಳೂರು ಡೇಲಿ ಪೋಸ್ಟ್ ಪತ್ರಿಕೆಯಲ್ಲಿ ಒಂದು ಅಗ್ರಲೇಖನವು ಬರೆಯಲ್ಪಟ್ಟಿರುತ್ತದೆ ಅದರಲ್ಲಿ ರಾಜಧಾನಿಯೊಳಗೆ ಮತವೈಷಮ್ಯವೇರ್ಪಟ್ಟಿರುವುದೆಂದು ಹೇಳಿ ಅದನ್ನು ಖಂಡಿಸಿರುವುದಂತೂ ಬಹಳ ಪ್ರಾಮುಖ್ಯವಾಗಿರುವುದು. ಇದಕ್ಕೆ ಸದೃಶವಾದ ಲೇಖನವು ತಿಳಿಗೇಡಿತನದಿಂದಾಗಲಿ ದುರುದ್ದೇಶದಿಂದಾಗಲಿ ಈವರೆಗೆ ಯಾವ ಪತ್ರಿಕೆಯಲ್ಲೂ ಬರೆಯಲ್ಪಟ್ಟಿರುವುದನ್ನು ನಾವು ನೋಡಿಲ್ಲ. ಈ ಲೇಖನವು ವಿಶ್ವಸನೀಯರಾದವರಿಂದ ತಿಳಿದುಬಂದ ವಿಷಯಗಳ ಆಧಾರದ ಮೇಲೆ ಬರೆಯಲ್ಪಟ್ಟಿರುತ್ತದೆಂದು ಹೇಳಲ್ಪಟ್ಟಿರುವುದರಿಂದ, ಇದಕ್ಕೆ ಅನ್ಯದೇಶೀಯರಾದ ಸಂಪಾದಕರು ಲೇಶಮಾತ್ರವೂ ಹೊಣೆಯಲ್ಲವೆಂದು ಹೇಳಬಹುದು. ಆದರೆ ತಾವು ಯಾರ ಮಾತಿನ ಮೇಲೆ ಆಧಾರಪಟ್ಟು ಬರೆದಿರುವರೊ ಅವರ ಹೆಸರನ್ನು ತಿಳಿಸುವುದು ಅಥವಾ ಅದು ಸ್ವಂತವೆಂದು ತಿಳಿದು ಅದರಲ್ಲಿ ಕಂಡ ಗುಣದೋಷಗಳ ವಿಮರ್ಶೆಯ ಉತ್ತರವಾದಿತ್ವವನ್ನು ತಾವೇ ವಹಿಸಿಕೊಳ್ಳುವುದು ಪತ್ರಿಕಾ ಸಂಪಾದಕರ ಧರ್ಮವಾಗಿರುತ್ತದೆ. ಆದರೂ ಡೇಲಿ ಪೋಸ್ಟ್ ಪತ್ರಿಕೆಯು ತನಗೆ ವಿಷಯಗಳನ್ನು ಸಂಗ್ರಹಿಸಿಕೊಟ್ಟವರ ಹೆಸರನ್ನೂ ತಿಳಿಸಿಲ್ಲ, ಅದರ ಜವಾಬ್ದಾರಿಯನ್ನೂ ವಹಿಸಿಲ್ಲ. ರಾಜಧಾನಿಯಲ್ಲಿ ಕಚ್ಚಾಟವೂ ಮತವೈಷಮ್ಯವೂ ಉಂಟಾಗಿರುತ್ತವೆಂಬ ನಗೆಗೇಡಾದ ಸಂಗತಿಯನ್ನು ನಂಬಿ ಉಪದೇಶಪರವಾದ ಲೇಖನವನ್ನು ಬರೆದಿರುವುದಕ್ಕಾಗಿ ಈ ಪತ್ರಿಕೆಯನ್ನು ನಾವು ನಿಂದಿಸಬೇಕಾಗಿದೆ. ಈ ಪತ್ರಿಕೆಗೆ ತಿಳಿದುಬಂದಿರುವ ವಿಷಯಗಳನ್ನು ಪರಿಶೀಲಿಸೋಣ. ಮ|| ಟಿ. ಜಿ. ರಾಮಯ್ಯರ್‌ರವರು ಸರ್ವಪ್ರಯತ್ನದಿಂದಲೂ ಹಿಂದೆ ಮಾಡಿರುವ ಮತ್ತು ಈಗ ಮಾಡುತ್ತಿರುವ ಶ್ರೀಮನ್ಮಹಾರಾಜರವರಿಗೂ, ಸಚಿವಶ್ರೇಷ್ಠರಿಗೂ ಪ್ರಿಯ ತಮಗಳಾದ ರಾಜಧಾನಿಯ ಆರೋಗ್ಯ ಶೃಂಗಾರಾಭಿವೃದ್ಧಿ ಕಾರ್ಯಗಳಲ್ಲಿ ಪ್ರತಿಬಂಧಕವು ವೃತ್ತಪತ್ರಿಕೆಯ ಮೂಲಕವಾಗಿಯೂ, ಬೇರೆ ವಿಧವಾಗಿಯೂ ಕಲ್ಪಿಸಲ್ಪಡುತ್ತಿರುವುದಾಗಿ ಪತ್ರಿಕೆಯ ತಿಳುವಳಿಕೆಗೆ ಬಂದಿರುತ್ತದೆಂಬುದು ಮೊದಲನೆಯ ಅಂಶವಾಗಿದೆ. ಮ|| ಅಯ್ಯರ್‌ರವರ ಹಿಂದಿನ ಕಾರ್ಯಗಳಿಗೆ ಈಗ ಪ್ರತಿಬಂಧಕವು ಕಲ್ಪಿಸಲ್ಪಡುತ್ತಿದೆ ಎಂದು ಆಂಗ್ಲೇಯರಾದ ಸಂಪಾದಕರು ಬರೆದಿರುವುದರ ಅರ್ಥವನ್ನು ಭಾಷಾಪಂಡಿತರು ವಿವರಿಸಬೇಕಾಗಿದೆ. ಹಿಂದೆ ನಡೆದಕಾರ್ಯಗಳಿಗೆ ಈಗ ಪ್ರತಿಬಂಧಕ ಕಲ್ಪಿಸಲ್ಪಡುವುದು ಅಸಂಭವವೂ, ಈಗ ನಡೆಯುವ ಕಾರ್ಯಗಳಿಗೆ ಪ್ರತಿಬಂಧಕ ಕಲ್ಪಿಸಲ್ಪಡುವುದು ಸಂಭವವೂ ಆಗಿರುತ್ತದೆ. ಆದರೆ ಮ|| ಅಯ್ಯರ್‌ರವರು 1932 ನೆಯ ಜುಲೈ ತಾ|| 14 ರಲ್ಲೇ ಉದ್ಯೋಗವನ್ನು ಬಿಟ್ಟು ಹೋದುದರಿಂದ ಅವರು ರಾಜಧಾನಿಯ ಆರೋಗ್ಯ ಶೃಂಗಾರಾಭಿವೃದ್ಧಿ ಕಾರ್ಯವಾವುದನ್ನೂ (ನಾವು ತಿಳಿದಮಟ್ಟಿಗೆ) ಮಾಡುತ್ತಿಲ್ಲ. ಈ ಕಾರ್ಯವು ಮ|| ಅಯ್ಯರ್‌ರವರ ಬದಲಿಗೆ ಪ್ರೆಸಿಡೆಂಟರಾಗಿ ಬಂದಿರುವ ಮತ್ತು ಪೌರೇಯರಿಂದ ಅತ್ಯಕ್ಕೃಷ್ಟವಾಗಿ ಸುಸ್ವಾಗತಿಸಲ್ಪಟ್ಟವರಾಗಿರುವ ಮ|| ಬಿ. ಟಿ. ಕೇಶವಯ್ಯಂಗಾರ್ಯರ ಪಾಲಿಗೆ ಬಂದಿರುತ್ತದೆ. ಅಂದರೆ ಮ|| ಅಯ್ಯರ್‌ರವರ ಹಿಂದಿನ ಕಾರ್ಯವನ್ನು ಈಗ ಅಡ್ಡಿಪಡಿಸಲಾಗುವುದಿಲ್ಲ ಮತ್ತು ಅಡ್ಡಿಪಡಿಸಲು ಈಗಿನ ಕಾರ್ಯವಾವುದೂ ಇಲ್ಲ. ಮೇಲಿನ ವಾಕ್ಯದಲ್ಲಿ ಶಬ್ದದೋಷವಿರುವುದು ಮಾತ್ರವಲ್ಲದೆ ಚರ್ಚಾಸ್ಪದವಾದ ವಿಷಯದಲ್ಲಿ ಶ್ರೀಮನ್ಮಹಾರಾಜರವರ ಮತ್ತು ದಿವಾನ್ ಸಾಹೇಬರ ಹೆಸರುಗಳನ್ನು ಏತಕ್ಕಾಗಿ ಸಂಪಾದಕರು (ಇದರ ನಿಜವಾದ ಕರ್ತರು ತಾವಲ್ಲವೆಂದು ಹೇಳುವಾಗ್ಗೆ ಅವರನ್ನು ನಿಂದಿಸುವುದಕ್ಕಾಗಿ ಅವರ ಕ್ಷಮೆಯನ್ನು ಕೋರುತ್ತೇವೆ) ಸೂಚಿಸಬೇಕು? ವಿಧಿಪೂರ್ವಕವಾಗಿ ಮ್ಯುನಿಸಿಪಲ್ ಕೌನ್ಸಿಲು ಸ್ವತಂತ್ರಾಡಳಿತದ ಸಂಸ್ಥೆಯಾಗಿರುವಾಗ್ಗೆ, ನ್ಯಾಯಸಂಮತವಾಗಿ ರಾಜ್ಯಭಾರ ಮಾಡುತ್ತಿರುವ ಪ್ರಭುಗಳ ಮತ್ತು ಅವರ ಪೂರ್ಣ ವಿಶ್ವಾಸಕ್ಕೆ ಪಾತ್ರರಾದ ದಿವಾನರ ಇಚ್ಛಾನುಸಾರ ಮ|| ಟಿ. ಜಿ. ರಾಮಯ್ಯರ್‌ರವರು ಮಾಡುವ ಕೆಲಸವು ಅಸಂತುಷ್ಟರುಗಳಿಂದ ಅಡ್ಡಿಪಡಿಸಲ್ಪಡುತ್ತದೆಂದು ಹೇಳಿ ಉಭಯರುಗಳ ಮನಸ್ಸನ್ನು ಕೆಡಿಸಲೇಕೆತ್ನಿಸಬೇಕು? ಪರಮರಾಜಭಕ್ತರಾಗಿಯೂ, ಯಾವಾಗಲೂ ಸಹಕರಿಸಲು ಸನ್ನದ್ಧರಾಗಿಯೂ, ಎಲ್ಲಕ್ಕಿಂತಲೂ ಸಂಸ್ಥಾನಕ್ಷೇಮವನ್ನು ಪ್ರಾಮುಖ್ಯವಾಗಿ ಗಣಿಸುವವರಾಗಿಯೂ ಇರುವ ಜನರ ಮೇಲೆ ಇಂತಹ ದೋಷಾರೋಪಣೆಮಾಡುವುದಕ್ಕಿಂತಲೂ ಜಘನ್ಯವಾದ ಅಪರಾಧವು ಬೇರೊಂದಿಲ್ಲ. ಮ|| ಅಯ್ಯರ್‌ರವರ ಪ್ರಯತ್ನವನ್ನು ಅಸಂತುಷ್ಟರು ಅಡ್ಡಿಪಡಿಸಿದ ಒಂದು ಸಂದರ್ಭವನ್ನಾದರೂ ಡೇಲಿ ಪೋಸ್ಟ್ ಪತ್ರಿಕೆಯಾಗಲಿ, ಅದಕ್ಕೆ ಸಂಗತಿಯನ್ನು ತಿಳಿಸಿದವರಾಗಲಿ ತೋರಿಸಬಲ್ಲರೆ? ಶ್ರೀಮನ್ಮಹಾರಾಜರವರಿಗಾಗಲಿ ದಿವಾನ್ ಸಾಹೇಬರಿಗಾಗಲಿ ಪ್ರಿಯವಾಗಿರುವುದನ್ನು ಅಸಂತುಷ್ಟರು ಅಡ್ಡಿಪಡಿಸಿರುವುದಾವುದು? ಇಷ್ಟು ವರ್ಷಗಳಲ್ಲಿ ಒಟ್ಟು ಕೌನ್ಸಿಲಾಗಲಿ ಅದರ ಒಂದು ಭಾಗವಾಗಲಿ ಇಂತಹ ಅಪವಾದಕ್ಕೆ ಯಾವ ಸಂದರ್ಭದಲ್ಲೂ ಗುರಿಯಾಗಿಲ್ಲ. ಮ|| ಅಯ್ಯರ್‌ರವರು ಪ್ರೆಸಿಡೆಂಟರಾಗಿದ್ದ ಕಾಲಕ್ಕಿಂತಲೂ ಬಹಳ ಹಿಂದಿನಕಾಲದಿಂದಲೂ ನಮಗುಂಟಾಗಿರುವ ಕೌನ್ಸಿಲಿನ ಅನುಭವದಿಂದ ಇಂತಹ ನಿಂದಾಸ್ಪದವಾದ ಸಂದರ್ಭವು ನಡೆದಿರುವುದೆಂದು ಮ|| ಅಯ್ಯರ್‌ರವರಾಗಲಿ ಅವರ ಪರಿಚರರಾಗಲಿ ತೋರಿಸಿಕೊಡಲಾರರೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಆರೋಗ್ಯ ಮತ್ತು ಇತರ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಪ್ರಯತ್ನದಲ್ಲಿ ಮ|| ಅಯ್ಯರ್‌ರವರಿಗೆ ಮನಃಪೂರ್ವಕವಾಗಿ ಪ್ರತಿಬಂಧಕವು ಕಲ್ಪಿಸಲ್ಪಟ್ಟಿತೆಂದು ಹೇಳುವುದು ಡೇಲಿಪೋಸ್ಟ್ ಪತ್ರಿಕೆಯ ಮಹಾ ಮೌಢ್ಯವೇ ಸರಿ. ಮ|| ಅಯ್ಯರ್‌ರವರು ಈಗ ಅಂತಹ ಕಾರ್ಯಗಳಲ್ಲಿ ಉದ್ಯುಕ್ತರಾಗಿರದೆ ರಜಾದಮೇಲಿರುತ್ತಾರೆಂದು ಮೊದಲೇ ತಿಳಿಸಿರುತ್ತೇವೆ. ಸುಳ್ಳು ಸಂಗತಿಯ ಪ್ರಕಾರ ಅವರುಮಾಡಿದ ಪ್ರಯತ್ನಗಳೇನು ಮತ್ತು ಅವುಗಳಿಗಾದ ಪ್ರತಿಬಂಧಕಗಳಾಗುವುವು ಎಂದು ಕೇಳಬಹುದಲ್ಲವೆ? ಡೇಲಿಪೋಸ್ಟ್‌ಪತ್ರಿಕೆಯು ಇಂತಹ ಒಂದು ಸಂದರ್ಭವನ್ನಾದರೂ ತಿಳಿಸಿ ಉಪದೇಶಪರವಾದ ಲೇಖನಗಳನ್ನು ಬರೆದಿದ್ದರೆ ಉಪಕಾರವಾಗುತ್ತಿದ್ದಿತು. ಮ್ಯುನಿಸಿಪಾಲಿಟಿಯಲ್ಲೂ ಟ್ರಸ್ಟ್ ಬೋರ್ಡಿನಲ್ಲೂ ಮೆಜಾರಿಟಿ ಇದ್ದಾಗ್ಯೂ ಶ್ರೀಮನ್ಮಹಾರಾಜರವರ ಮತ್ತು ದಿವಾನರ ಅಭೀಷ್ಟವನ್ನು ಮ|| ರಾಮಯ್ಯರ್‌ರವರು ನೆರವೇರಿಸಲು ದುಸ್ಸಾಧ್ಯವಾಗಿ ಮಾಡಲ್ಪಟ್ಟಿತೆಂದು ವಿಶ್ವಸನೀಯವಾಗಿ ತಿಳಿದುಬಂದಿರುತ್ತದೆಂದು ಈ ಪತ್ರಿಕೆಯು ಹೇಳಿರುತ್ತದೆ. ಇದು ನಾವು ಹಿಂದೆ ಹೇಳಿರುವಂತೆ ಬಹಳ ಅಪಮಾನಕರವಾಗಿರುವುದರಿಂದ ಇದನ್ನು ನಾವು ಖಂಡಿಸದಿರಲಾಗುವುದಿಲ್ಲ. ಇದು ಹಾಸ್ಯಾಸ್ಪದವಾದ ಯಥಾರ್ಥವಾಗಿದೆ. ಒಬ್ಬನ ಅಸಮರ್ಥತೆಯನ್ನಾಗಲಿ ಉಪೇಕ್ಷೆಯನ್ನಾಗಲಿ ಮೇಲ್ಕಂಡ ರೀತಿಯಲ್ಲಿ ಮುಚ್ಚಲು ಪ್ರಯತ್ನಿಸುವುದು ಬಹಳ ನೀಚಕೃತ್ಯವು. ಜಾತಿ ವೈಷಮ್ಯವುಂಟಾಗಿರುತ್ತದೆಂಬ ವಿಚಾರವಾಗಿ ಮುಂದೆ ಪ್ರಸ್ತಾಪಿಸುವೆವು.

ಬಿಹಾರು ವಕೀಲರ ಸನ್ನದು ಕಿತ್ತುಕೊಳ್ಳಲ್ಪಟ್ಟಿತು

ಬಾಲಸೂರು ವಕೀಲರುಗಳಾದ ಬಾಬು ಗೋಕುಲನಾಥದೇವ, ಬಾಬು ಕ್ರಿಯಾನಾಥ ಸರ್ಕಾರ ಈ ಉಭಯರು ಕಾಂಗ್ರೆಸು ಉದ್ಯಮದಲ್ಲಿ ಸೇರಿ ಜೈಲಿಗೆ ಹೋದುದರಿಂದ ಮೊದಲನೆಯವರ ಸನ್ನದು ಎಂದೆಂದಿಗೂ ಎರಡನೆಯವರದು 7 ವರ್ಷಗಳ ವರೆಗೂ ಕಿತ್ತುಕೊಳ್ಳಲ್ಪಟ್ಟುವು.

ಅಸಾಮಿನಲ್ಲಿ ಭೂಕಂಪದಿಂದಾದ ಮರಣ

ಕಳೆದ ತಾ|| 14 ರ ಬೆಳಗಿನ 10-8 ಗಂಟೆಗೆ ಅಸಾಮಿನಲ್ಲಿ ಭಯಂಕರವಾದ ಭೂಕಂಪವು 1 ನಿಮಿಷಮಾತ್ರವಾಯಿತು. ಇದರಿಂದ ಆ ಡಿಸ್ಟ್ರಿಕ್ಟಿನ ಜನರಿಗೆಲ್ಲ ಮಹಾಭಯವುಂಟಾಯಿತಲ್ಲದೆ ಅನೇಕ ಮನೆಗಳು ನಾಶವಾದುವು ಮತ್ತು ಅನೇಕರು ಸತ್ತರೆಂದೂ ಕೆಲವರು ಸ್ಮೃತಿತಪ್ಪಿದ್ದರೆಂದೂ ತಿಳಿಯಬಂದಿದೆ.

ಹೊಸ ಮೋಟಾರು ಬಂಡಿಯ ನಿರ್ಮಾಣ

ಅತ್ಯಂತ ವೇಗವಾಗಿ ಹೋಗುವ ಗೋಲ್ಡೆನ್‌ಯಾರೋ ಎಂಬ ಒಂದು ಹೊಸ ಮಾದರಿಯ ಮೋಟಾರು ಬಂಡಿಯನ್ನು ನಿರ್ಮಾಣಮಾಡುವ ಪ್ರಯತ್ನ ನಡೆದಿರುತ್ತದೆ. ಇದು ಘಂಟೆಯೊಂದಕ್ಕೆ 258 ಮೈಲುಗಳಿಗೆ ಕಡಿಮೆಯಿಲ್ಲದೆ 300 ಮೈಲುಗಳ ದೂರ ಓಡುವುದಂತೆ ಮತ್ತು 1933 ನೆಯ ಮಾರ್ಚಿ ತಿಂಗಳೊಳಗೆ ಸಿದ್ಧವಾಗುವುದಂತೆ.

ಒಬ್ಬ ಹೆಂಗುಸು ೩ ಮಕ್ಕಳನ್ನು ಹೆತ್ತಳು

ಸಿಕಿಂದರಾಬಾದಿನಲ್ಲಿ ಕೂಲಿ ಕೆಲಸದಿಂದ ಜೀವಿಸುವ ಒಬ್ಬ ಹೆಂಗುಸು ಕೆಲ ದಿವಸಗಳ ಹಿಂದೆ ಸ್ತ್ರೀಯರ ಆಸ್ಪತ್ರೆಯಲ್ಲಿ ಎರಡು ಗಂಡು ಮಕ್ಕಳನ್ನೂ, ಒಂದು ಹೆಣ್ಣು ಮಗುವನ್ನೂ ಹೆತ್ತಳು. ಆಕೆಯೂ ಮಕ್ಕಳೂ ಸುರಕ್ಷಿತವಾಗಿರುತ್ತಾರೆ. ಆಕೆಗೆ ಸಹಾಯಮಾಡಬೇಕೆಂದು ಆಸ್ಪತ್ರೆಯಧಿಕಾರಿಯು ರೆಸಿಡೆಂಟರಿಗೆ ಬರೆದಿರುತ್ತಾರೆ.

ಬೆತ್ತಲೆ ಬೈರಾಗಿಗಳ ಉತ್ಸವ

ನಾಶಿಕದಲ್ಲಿ ಸಾವಿರಾರು ಬೆತ್ತಲೆ ಬೈರಾಗಿಗಳ ಉತ್ಸವವು ಕಳೆದವಾರ ಬಹಳ ವಿಜೃಂಭಣೆಯಿಂದ ಜರುಗಿತು. ಈ ಉತ್ಸವ ವಿಚಾರವಾಗಿ ಬೈರಾಗಿಗಳೊಳಗೆ ವೈಮನಸ್ಯ ಹುಟ್ಟಿ ಎರಡು ಪಕ್ಷಗಳಾಗಿದ್ದುದರಿಂದ ಉತ್ಸವ ಸಮಯದಲ್ಲಿ ಮಹಾಗೊಂದಲವಾಗಬಹುದೆಂಬ ನಿರೀಕ್ಷೆಯಿದ್ದುದರ ಮೇಲೆ ಪೋಲೀಸೇರ್ಪಾಟು ಬಹಳ ಪ್ರಬಲವಾಗಿ ಮಾಡಲ್ಪಟ್ಟಿದ್ದಿತು. ಆದರೆ ಅಂತಹದೇನೂ ಇಲ್ಲದೆ ಉತ್ಸವವು ಬಹಳ ಶಾಂತವಾಗಿ ನಡೆದಿತು.

ರೈಲು ಬಂಡಿಯಲ್ಲಿ ಸಾಯುಧ ಸುಲಿಗೆ

ಕಳೆದ ಸೋಮವಾರ ಬೆಳಗಿನಜಾವದಲ್ಲಿ ಡಾಕಾಪಟ್ಟಣವನ್ನು ಬಿಟ್ಟು ಹೊರಟ ರೈಲು ಬಂಡಿಯಲ್ಲಿ ಪ್ರಯಾಣಮಾಡುತ್ತಿದ್ದವರಲ್ಲಿ ನರೇಂದ್ರಚಂದ್ರವಾಣಿಕ್ಯ ಎಂಬವನು ಡಾಕಾದಲ್ಲಿ ಭಂಗಾರವನ್ನು ಮಾರಿ 8000 ರೂ. ಗಳನ್ನು ತನ್ನ ಊರಿಗೆ ತೆಗೆದುಕೊಂಡು ಹೋಗುತ್ತಿದ್ದನು. ಅವನ ಜತೆಯಲ್ಲಿ ಪ್ರಯಾಣ ಮಾಡುತ್ತಿದ್ದ ಐವರು ಯುವಕರು ತಮ್ಮಲ್ಲಿದ್ದ ಪಿಸ್ತೋಲನ್ನು ತೋರಿಸಿ ವರ್ತಕನಲ್ಲಿದ್ದ 8000 ರೂ. ಗಳನ್ನು ಸುಲಿದುಕೊಂಡು ಅಪಾಯ ಸೂಚಕ ಸರಪಳಿಯನ್ನೆಳೆದು ಬಂಡಿಯು ನಿಂತಕೂಡಲೆ ಬಂಡಿಯಿಂದ ಹೊರಕ್ಕೆ ದುಮುಕಿ ಪಲಾಯನವಾದರು.

ಸುಭಾಷ ಚಂದ್ರಬೋಸರ ದೇಹಸ್ಥಿತಿ

ಬೋಸರವರ ಸ್ವಂತ ವೈದ್ಯರುಗಳಾದ ಡಾಕ್ಟರ್ ಬಿ. ಧನರಾಯ್‌ರವರೂ, ಡಾಕ್ಟರ್ ನೀಲರತ್ನ ಸರ್ಕಾರರವರೂ ಮದರಾಸಿಗೆ ಬಂದು ಬೋಸರವರ ಶರೀರ ಸ್ಥಿತಿಯನ್ನು ಪರೀಕ್ಷಿಸಲು ಇಂಡ್ಯಾ ದೊರತನದವರ ಅನುಮತಿಯು ಕೊಡಲ್ಪಟ್ಟಿರುವುದರಿಂದ ಅವರು ಈ ವಾರ ಮದ್ರಾಸಿಗೆ ಬರುವುದಾಗಿ ತಿಳಿಯಬರುತ್ತದೆ. ಬೋಸರವರು ಮದರಾಸು ಜೈಲಿನಲ್ಲಿರುತ್ತಾರೆ. ಮದರಾಸು ಜನರಲ್ ಆಸ್ಪತ್ರೆಯಲ್ಲಿ ನಡೆದ ಎಕ್ಸರೆ ಪರೀಕ್ಷೆಯ ವರದಿಯು ಆ ಆಸ್ಪತ್ರೆಯ ಸೂಪರಿಂಟೆಂಡೆಂಟರಿಂದ 1-2 ದಿನಗಳಲ್ಲಿ ಇಂಡ್ಯಾ ಪ್ರಭುತ್ವದವರಿಗೆ ಕಳುಹಲ್ಪಡುವುದು. "ಬೋಸರವರಿಗೆ ಕ್ಷಯರೋಗವಿರುವ ಚಿಹ್ನೆ ಕಂಡುಬಂದಿದೆ. ಅವರನ್ನು ತಕ್ಕ ಕ್ಷಯರೋಗಾಸ್ಪತ್ರೆಗೆ ಕಳುಹಬೇಕು. ಹಾಗಿಲ್ಲದಿದ್ದಲ್ಲಿ ಬೇರೊಂದು ಆಸ್ಪತ್ರೆಯಲ್ಲಾದರೂ ಇರಿಸಬೇಕು." ಎಂದು ಎಕ್ಸರೆ ಪರೀಕ್ಷೆ ಮಾಡಿದವರು ಸೂಚಿಸಿರುತ್ತಾರಂತೆ.

ಲಂಡನ್ನಿನಲ್ಲಿ ಉಷ್ಣಾಧಿಕ್ಯವು

ಲಂಡನ್ ನಗರದಲ್ಲಿ ಕೆಲ ದಿವಸಗಳ ಕೆಳಗೆ ಹೆಚ್ಚಿದ್ದ ಉಷ್ಣಾಧಿಕ್ಯವು ಶಾಂತವಾಗಿದ್ದಿತು. ಈಗ ಮರಳಿ ಕಳೆದ 21 ವರ್ಷಗಳಿಂದೀಚೆಗೆಂದೂ ಇಲ್ಲದಿದ್ದಷ್ಟು ಉಷ್ಣವು ಹೆಚ್ಚಾಗಿರುವುದು. ಲಂಡನ್ ನಗರದ ಮಧ್ಯಭಾಗದಲ್ಲಿ 95 ಡಿಗ್ರಿವರೆಗೆ ಉಷ್ಣವಿರುವುದಾಗಿಯೂ, ಇಷ್ಟು ಉಷ್ಣಾಧಿಕ್ಯವು 1911 ನೇ ಆಗಸ್ಟ್ ತಾ|| 9 ರಲ್ಲಿದ್ದುದಾಗಿಯೂ, ಗ್ರೀನಿಚ್ಚಿನಲ್ಲಿ 1911ನೆಯ ಆಗಸ್ಟ್ ತಾ|| 9 ರಲ್ಲಿದ್ದುದಕ್ಕಿಂತ 1 ಡಿಗ್ರಿ ಹೆಚ್ಚಿರುವುದಾಗಿಯೂ ತಿಳಿಯಬರುತ್ತದೆ. ಲಂಡನ್ ಪಟ್ಟಣದಲ್ಲಿ ಉಷ್ಣವು ಮಿತಿಮೀರಿರುವುದರಿಂದ ಇಂಗ್ಲೆಂಡು ಬ್ಯಾಂಕಿನ ಗುಮಾಸ್ತರುಗಳು ಬರೇ ಷರಟುಗಳನ್ನು ಧರಿಸಿಕೊಂಡು ಕೆಲಸಮಾಡಲು ಅಧಿಕಾರಿಗಳು ಅನುಮತಿಯನ್ನಿತ್ತಿರುವರು. ಸ್ನಾನಮಾಡುವ ಸರೋವರಗಳು ಜನರಿಂದ ನಿಬಿಡಿತವಾಗಿವೆ. ಅವರು ಬಿಸಿಲಿನ ತಾಪವನ್ನು ಸಹಿಸಲಾರದೆ ಆ ಸ್ಥಳವನ್ನು ಬಿಟ್ಟುಬರುತ್ತಿಲ್ಲವಂತೆ. ರಾತ್ರಿ ವೇಳೆಯಲ್ಲೂ ಚಳಿಯಾಗುವುದಿಲ್ಲವೆಂದೂ, ಕೆಲವರು ಬಿಸಿಲಿನ ತಾಪ ಸಹಿಸದೆ ಮೂರ್ಛೆ ಹೊಂದಿದರೆಂದೂ ಮತ್ತೆ ಕೆಲರು ಸತ್ತರೆಂದೂ ವರ್ತಮಾನವಿದೆ.

ಸಾಂಘಿಕ ಸಮಸ್ಯಾಪರಿಷ್ಕಾರ ಪ್ರಕಟನೆ

ಭಾರತ ಸಾಂಘಿಕ ಅಂದರೆ ಕೋಮುವಾರು ಪ್ರಾತಿನಿಧ್ಯ ಸಮಸ್ಯಾಪರಿಷ್ಕಾರವು ಕಳೆದ ತಾ|| 17 ರಲ್ಲಿ ಇಂಗ್ಲೆಂಡಿನಲ್ಲೂ ಇಂಡ್ಯಾದಲ್ಲೂ ಒಂದೇವೇಳೆಗೆ ಪ್ರಕಟಿಸಲ್ಪಟ್ಟಿತು. ಇದರ ಮತ್ತು ಇದರ ಮೇಲೆ ಮುಖ್ಯ ಮಂತ್ರಿಗಳು ಕೊಟ್ಟ ಸಮಾಧಾನದ ಕನ್ನಡ ಅನುವಾದವು ಈ ಪತ್ರಿಕೆಯ ಬೇರೊಂದೆಡೆಯಲ್ಲಿ ಸಮಗ್ರವಾಗಿ ಮುದ್ರಿಸಲ್ಪಟ್ಟಿದೆ. ಈ ಪರಿಷ್ಕಾರದ ವಿಚಾರವಾಗಿ ಬಹುಮಂದಿ ಆಂಗ್ಲೇಯರಿಗೂ ಕೆಲ ಮಹಮ್ಮದೀಯರಿಗೂ ಸಮಾಧಾನವಾಗಿರುತ್ತಾದರೂ ವಿಚಾರಪರರಾದ ಕೆಲ ಆಂಗ್ಲೇಯರು ಈ ಪರಿಷ್ಕಾರ ವಿಚಾರವಾಗಿ ಸಂಮತಾಸಂಮತಗಳನ್ನು ಆಂಗ್ಲ ಮತ್ತು ಭಾರತ ನಾಯಕರುಗಳು ವ್ಯಕ್ತಪಡಿಸುತ್ತಿರುವರು. ಈ ಪರಿಷ್ಕಾರದಿಂದ ಕೋಮುವಾರು ಮನಸ್ಪರ್ಧೆಯು ಮತ್ತಷ್ಟು ಹೆಚ್ಚುವುದೇ ಹೊರತು ಬ್ರಿಟಿಷ್ ಪ್ರಭುತ್ವದವರು ನಿರೀಕ್ಷಿಸುವಂತೆ ಪರಸ್ಪರ ಸಮಾಧಾನ ವುಂಟಾಗುವ ಸಂಭವವಿಲ್ಲ. ಈ ವಿಚಾರದಲ್ಲಿ ಬ್ರಿಟಿಷ್ ಲೇಬರು ಪಾರ್ಟಿಯ ನಾಯಕರಾದ ಲಾನ್ಸುಬರಿಯವರು ಈ ಪ್ರಕಾರ ಅಭಿಪ್ರಾಯಪಟ್ಟಿರುವರು:—"ಪ್ರಧಾನ ಮಂತ್ರಿಗಳೂ ಇತರ ಮಂತ್ರಿಗಳೂ ಬಹಳ ಒಳ್ಳೆಯ ಉದ್ದೇಶವುಳ್ಳವರಾಗಿರುತ್ತಾರೆಂದು ಮನಃಪೂರ್ವಕವಾಗಿ ಹೇಳುತ್ತೇನೆ. ಆದರೆ ಇದು ಬಹಳ ಕಠಿಣ ಪ್ರಶ್ನೆಯಾದುದರಿಂದ ಭಾರತೀಯರು ಸಂಪೂರ್ಣವಾಗಿ ಸಹಕರಿಸಿ ಅನುಮೋದಿಸದಿದ್ದರೆ ಈ ಸಮಸ್ಯೆಯು ಹೇಗೆ ಪರಿಷ್ಕಾರವಾಗುತ್ತದೊ ತಿಳಿಯದವನಾಗಿರುತ್ತೇನೆ. ಇದರಲ್ಲಿ ಬಹಳ ಪ್ರಬಲವಾದ ಅಕ್ಷೇಪಗಳಿರುತ್ತವೆಂದು ಎಲ್ಲ ಪಕ್ಷದವರೂ ಒಪ್ಪಿಕೊಂಡಿರುವುದರಿಂದಲೇ ವಿದೇಶೀಯರು ಮಾಡಿದ ನಿರ್ಣಯವನ್ನು ಭಾರತೀಯರು ಒಪ್ಪಿಕೊಳ್ಳುವರೆಂದು ನಾನು ಊಹಿಸಲಾರದವನಾಗಿರುತ್ತಾನೆ. ಅತ್ಯಧಿಕ ಸಂಖ್ಯಾಕರ ಪರವಾಗಿ ಮಾತಾಡಲು ಅಧಿಕಾರವುಳ್ಳವರಲ್ಲಿ ಅನೇಕರು ಜೈಲಿನಲ್ಲಿರುತ್ತಾರೆ. ಉಳಿದವರು ಪ್ರಭುತ್ವದವರನ್ನು ಪ್ರತಿಭಟಿಸುತ್ತಿರುವರು. ಈ ಸ್ಥಿತಿಯಲ್ಲಿ ದೊರೆತನದವರು ಮೊದಲು ಎಲ್ಲ ಪಕ್ಷದವರನ್ನೂ ಕೂಡಿಸಿಕೊಂಡು ಬರಬೇಕು. ಪುನಃ ಮೊದಲಿನ ಸಾಮರಸ್ಯವನ್ನು ಸಂಪೂರ್ಣವಾಗಿ ಉಂಟುಮಾಡಬೇಕು. ಈ ವೇಳೆ ಪುನಃ ರೌಂಡುಟೇಬಿಲು ಸಭೆಯನ್ನೂ ಜರುಗಿಸಬೇಕು. ಆ ಸಭೆಗೆ ಹಿಂದಿನಂತೆ ಹೆಚ್ಚು ಮಂದಿಯನ್ನು ಆಹ್ವಾನಿಸದಿದ್ದರೂ ಎಲ್ಲ ಪಕ್ಷದವರನ್ನೂ ಕರೆಯಬೇಕು. ಕಾಂಗ್ರೆಸು ಮುಖಂಡರನ್ನೂ ಮುಖ್ಯವಾಗಿ ಗಾಂಧಿಯವರನ್ನೂ ಅವರ ಮಿತ್ರರುಗಳನ್ನೂ ಆಹ್ವಾನಿಸಬೇಕು. ಅವರೆಲ್ಲರೂ ಬಂದು ಕೇಂದ್ರ ಪ್ರಭುತ್ವ ಬಾಧ್ಯತೆಯನ್ನು ನಿರ್ಣಯಿಸಬೇಕು."

ಒಳದೇಶದ ವೃತ್ತಾಂತಗಳು

ಬೆಂಗಳೂರು ಡಿ|| ನೆಲಮಂಗಲದ ಟವರ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ಡಿನವರು ಹೊಸದಾಗಿ ಕಟ್ಟಿಸಿತ್ತಿರುವ ಸ್ವಂತ ಕಟ್ಟಡದ ಶಂಕುಸ್ಥಾಪನೋತ್ಸವವು ಈ ತಾ|| 26 ನೆಯ ಶುಕ್ರವಾರ ಸಂಸ್ಥಾನದ ಕೋ-ಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರರಾದ ಮ|| ಕೆ. ಎಚ್. ರಾಮಯ್ಯ, ಬಿ.ಎ., ಬಾರ್-ಅಟ್-ಲಾ ಇವರಿಂದ ನೆರವೇರಿಸಲ್ಪಡುವುದು.

ರಾಜಧಾನಿಯ ಮ|| ಮುಲ್ತಾನಿ ಪರಶುರಾಮಶೆಟ್ಟರು ತಮಗೆ ಸಿಟಿ ಮೆಜಿಸ್ಟ್ರೇಟರು ವಿಧಿಸಿರುವ ಶಿಕ್ಷೆಯಮೇಲೆ ಮೈಸೂರು ಡಿವಿಜನ್ ಸೆಷನ್ಸ್ ಕೋರ್ಟಿನಲ್ಲಿ ಮಾಡಿರುವ ಅಪೀಲು ವಿಚಾರಣೆಯು ಈ ತಾ|| 24 ರಲ್ಲಿ ನಡೆಯುವುದು. ಮದ್ರಾಸಿನ ಪ್ರಸಿದ್ಧ ಲಾಯರಾದ ಮಿ|| ನ್ಯೂಜೆಂಟ್‌ಗ್ರಾಂಟ್‌ರವರು ಆ ದಿವಸ ಬಂದು ಮ|| ಶೆಟ್ಟರಪರ ವಾದಿಸುವರೆಂದು ತಿಳಿಯುತ್ತೇವೆ.

ತಿರುಮಕೂಡ್ಲು ನರಸೀಪುರದ ಹತ್ತಿರ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಲ್ಪಟ್ಟಿರುವ ನೂತನ ಸೇತುವೆಯ ಆರಂಭೋತ್ಸವವು ಬರುವ ಸೋಮವಾರ ಸಾಯಂಕಾಲ 5 ಘಂಟೆಗೆ ಶ್ರೀಮನ್ಮಹಾರಾಜರವರಿಂದ ನಡೆಸಲ್ಪಡುವುದು. ಈ ಮಹೋತ್ಸವಕ್ಕಾಗಿ ತಕ್ಕೇರ್ಪಾಟನ್ನು ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡುತ್ತಿರುವರಲ್ಲದೆ ಈ ನೂತನ ಸೇತುವೆಯಿಂದ ಪ್ರಜೆಗಳಿಗಾದ ಪ್ರಯೋಜನವನ್ನೂ ನರಸೀಪುರಕ್ಕೆ ಸೇತುವೆಯನ್ನು ಕಟ್ಟಿಸಬೇಕಾದ ಆವಶ್ಯಕತೆಯನ್ನೂ ಸೂಚಿಸಿ ಒಂದು ವಿಜ್ಞಾಪನಾಪತ್ರಿಕೆಯನ್ನು ಮಹಾಸ್ವಾಮಿಯವರಿಗೊಪ್ಪಿಸತಕ್ಕವರಾಗಿರುತ್ತಾರೆ.

ರಾಜಧಾನಿಯ ದೊಡ್ಡಪೇಟೆ ಪೋಲೀಸು ಸ್ಟೇಷನ್ನಿನ ಸಮೀಪದಲ್ಲಿ ಮಣಿಮಂದಿರವೆಂಬ ಗೃಹದಲ್ಲಿ ವಾಸಮಾಡಿಕೊಂಡಿರುವ ತಿರುಮಲಯ್ಯಂಗಾರ್ ಎಂಬವರು ಯಂತ್ರಮಂತ್ರಗಳಿಂದ ದೆವ್ವಬಿಡಿಸುವುದು ರೋಗಗಳನ್ನು ವಾಸಿಮಾಡುವುದು ಇತ್ಯಾದಿ ಕಾರ್ಯಗಳಿಂದ ಜೀವಿಸುತ್ತಿರುವರು. ಇವರು ಕೋಲಾರದ ಗಣಿಗಳಲ್ಲಿ ಹೆಲ್ತಾಫೀಸರಾಗಿರುವ ಮ|| ರಾಮಚಂದ್ರರಾಯರ ಮಗಳಿಗೆ ಯಾರೋ ಮಾಟಮಾಡಿಸಿರುವುದನ್ನು ತಮ್ಮ ಮಂತ್ರಶಕ್ತಿಯಿಂದ ಬಿಡಿಸಿ ಗುಣಪಡಿಸುತ್ತೇನೆಂದು ಹೇಳಿ 300 ರೂ. ಬೆಲೆ ಬಾಳುವ ಭಂಗಾರದ ಬಳೆ ಅಡ್ಡಿಗೆ ಮೊದಲಾದ ಆಭರಣಗಳನ್ನು ತೆಗೆದುಕೊಂಡು ಕಾಲಹರಣಮಾಡುತ್ತ ಬಂದುದರಮೇಲೆ ಮ|| ರಾಯರು ಅನುಮಾನಪಟ್ಟು ಪೋಲೀಸಿಗೆ ತಿಳಿಸಿದರು. ಪೋಲೀಸಿನವರು ಮಂತ್ರವಾದಿ ಅಯ್ಯಂಗಾರ್ಯರನ್ನು ಸೆರೆಹಿಡಿದು, ಅವರು ಮಾರ್ವಾಡಿಯಲ್ಲಿ ನಗಗಳನ್ನು ಅಡವುಮಡಗಿರುವುದನ್ನು ಗೊತ್ತುಮಾಡಿ ಅಪರಾಧಿಯನ್ನು ವಿಚಾರಣೆಗೆ ಗುರಿಪಡಿಸಿರುತ್ತಾರೆ.

ಚನ್ನಪಟ್ಟಣದಲ್ಲಿ ವಿದ್ಯುದ್ದೀಪಾರಂಭೋತ್ಸವವನ್ನು ನೆರವೇರಿಸಲು ದಿವಾನರವರು ದಯೆಮಾಡಿಸಿದ್ದಾಗ್ಗೆ, ಆ ಊರಿನಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿರುವಪ್ರಯುಕ್ತ ಮಳೂರು ನದಿಯಿಂದ ಯಂತ್ರದ ಮೂಲಕ ನೀರನ್ನೊದಗಿಸುವುದಕ್ಕಾಗಿ ತಗಲುವ ಖರ್ಚಿನಲ್ಲಿ ಅರ್ಧ ಮೊಬಲಗನ್ನು ಜನರಿಂದ ಚಂದಾ ಎತ್ತಿಕೊಡುತ್ತೇವೆಂದು ಮ್ಯುನಿಸಿಪಾಲಿಟಿಯವರು ವಾಗ್ದಾನಮಾಡಿದ್ದರು. ಆ ವಾಗ್ದಾನವನ್ನು ನೆರವೇರಿಸಿ ನೀರನ್ನು ಪಡೆಯುವುದಕ್ಕಾಗಿ ಮ|| ಗಳಾದ ದವಲತ್‌ಖಾನ್ ಸಾಹೇಬರು, ಮಂತಾಜ್‌ರವರು, ಅಬ್ದುಲ್ ಖುದುಸ್ ಸಾಹೇಬರು, ರಾಮಚಂದ್ರರಾಯರು ಮೊದಲಾದ ಮ್ಯುನಿಸಿಪಲ್ ಕೌನ್ಸಿಲರುಗಳು ಪುರಜನರಿಂದ ಚಂದಾ ಹಣವನ್ನು ಬಹಳ ಉತ್ಸಾಹದಿಂದಲೂ ಶ್ರದ್ಧೆಯಿಂದಲೂ ಎತ್ತುತ್ತಿರುವರೆಂದು ತಿಳುಹಲು ಸಂತೋಷವಾಗುತ್ತದೆ. ಇವರುಗಳು ತಾವು ಕೈಕೊಂಡಿರುವ ಈ ಜೀವನಾಧಾರ ಕಾರ್ಯವನ್ನು ಸಾಂಗಗೊಳಿಸಿ ಪುರಜನರ ವಂದನೆಗೆ ಪಾತ್ರರಾಗಲೆಂದು ಕೋರುತ್ತೇವೆ.

ಕಳೆದ ತಾ|| 21 ನೆಯ ಭಾನುವಾರ ಸಾಯಂಕಾಲ ರಾಜಧಾನಿಯ ಇಲವಾಲದ ರೋಡಿನಲ್ಲಿರುವ ನಲ್ಲಪ್ಪನ ಪೋಲೀಸು ಠಾಣಾ ಬಳಿ ದೀಪವಿಲ್ಲದೆ ಬಂಡಿಯನ್ನು ಹೊಡೆಯುತ್ತಿದ್ದ ಹಳ್ಳಿಯವನನ್ನು ಪೋಲೀಸರು ಹಿಡಿದುಕೊಂಡು ಮೂರ್ಛೆಹೋಗುವವರೆಗೆ ಅವನನ್ನು ಹೊಡೆದು ಹಿಂಸಿಸುತ್ತಿದ್ದುದನ್ನು ನೋಡುತ್ತಿದ್ದ ಜನರಲ್ಲಿ ಮಹಾರಾಜಾಕಾಲೇಜಿನ ಬಿ.ಎ., ಆನರ್ಸ್ ತರಗತಿಯ ವಿದ್ಯಾರ್ಥಿ ಮ|| ಸಿದ್ದೇಗೌಡರು ಕನಿಕರಪಟ್ಟು ಹಳ್ಳಿಯವನನ್ನು ಹೊಡೆಯಬೇಡಿ, ಅವನ ಅಪರಾಧಕ್ಕಾಗಿ ಮೆಜಿಸ್ಟ್ರೇಟರ ಶಿಕ್ಷೆಗೆ ಗುರಿಮಾಡಿ ಎಂದು ಹೇಳಿದರು. ಇದು ಪೋಲೀಸಿನವರಿಗೆ ಸಹನವಾಗದೆ ಸಿದ್ದೇಗೌಡರನ್ನು ಗದ್ದರಿಸಲಾಗಿ ಪರಸ್ಪರ ವಾಗ್ವಾದ ನಡೆಯಿತು. ಆ ಸಮಯದಲ್ಲಿ ಅಲ್ಲಿದ್ದ ಡಿ|| ಪೋಲೀಸು ಸೂಪರಿಂಟೆಂಡೆಂಟರು ಮ|| ಸಿದ್ದೇಗೌಡರನ್ನು ಲಾಕಪ್ಪಿನಲ್ಲಿಡುವಂತೆ ದೇವರಾಜ ಪೋಲೀಸು ಸ್ಟೇಷನ್ನಿನ ಇನ್ಸ್‌ಪೆಕ್ಟರಿಗೆ ಹೇಳಲು ಅವರು ಅದೇರೀತಿ ಗೌಡರನ್ನು ಲಾಕಪ್ಪಿನಲ್ಲಿಟ್ಟರು. ಅಲ್ಲಿ ಅವರಿಗೆ ಚೆನ್ನಾಗಿ ಪ್ರಹರವಾದುದನ್ನು ಅವರ ಜತೆಗಾರರು ತಿಳಿದು ಅಡ್ವೊಕೇಟ್ ಮ|| ಎಚ್. ಸಿ. ದಾಸಪ್ಪನವರಿಗೆ ತಿಳಿಸಿದರು. ಅವರು ಬಂದು ಗೌಡರನ್ನು ನೋಡಿ, ನಡೆದ ಸಂಗತಿಯನ್ನೆಲ್ಲ ಅವರಿಂದ ತಿಳಿದುಕೊಂಡು ಕಾಲೇಜು ಪ್ರಿನ್ಸಿಪಾಲರಾದ ಮಿ|| ರೋಲೋ ಯವರಿಗೂ, ಪ್ರೊಫೆಸರುಗಳಾದ ಮಿ|| ವಾಡಿಯ ಮತ್ತು ಮಿ|| ಡಿಸೋಜಾ ಇವರುಗಳಿಗೂ ತಿಳಿಸುವಂತೆ ಹುಡುಗರನ್ನು ಕಳುಹಿಸಿ ತಾವು ಡಿ|| ಪೋಲೀಸು ಸೂಪರಿಂಟೆಂಡೆಂಟರ ಮನೆಗೆ ಹೋಗಿ ನಡೆದ ಸಂಗತಿಯನ್ನು ಅವರಿಗೆ ಹೇಳಿ ಅವರನ್ನು ದೇವರಾಜ ಪೋಲೀಸು ಸ್ಟೇಷನ್ನಿಗೆ ಕರೆದುಕೊಂಡು ಬಂದರು. ಡಿ|| ಪೋ|| ಸೂ|| ರವರು ಅಲ್ಲಿದ್ದ ಪೋಲೀಸಿನವರ ವಿಚಾರಣೆಯಿಂದ ಗೌಡರನ್ನು ಇಬ್ಬರು ಕಾನಿಸ್ಟೇಬಲುಗಳು ಹೊಡೆದು ಹಿಂಸಿಸಿದರೆಂಬುದನ್ನು ತಿಳಿದುಕೊಂಡು ವಿದ್ಯಾರ್ಥಿ ಗೌಡರನ್ನು ಸೆರೆಯಿಂದ ಬಿಡಿಸಿ ಕಳುಹಿದರು. ಈ ಅತ್ಯಾಚಾರವನ್ನು ನಡೆಸಿದುದಕ್ಕಾಗಿ ಪತ್ರಿಕಾ ಮುಖದಲ್ಲಿ ಪ್ರತಿಭಟನೆಯನ್ನು ಕೇಳಿದ್ದಲ್ಲಿ ಮುಂದಿನ ಕ್ರಮವನ್ನು ಜರುಗಿಸುವುದಾಗಿ ಪೋಲೀಸು ಇನ್ಸ್‌ಪೆಕ್ಟರಿಗೆ ಗೌಡರು ತೋರಿಸನ್ನು ಕೊಟ್ಟಿರುವುದಾಗಿಯೂ, ತಮ್ಮ ಕಾಯಕದಲ್ಲಿ ಅಡ್ಡಿಪಡಿಸಿದರೆಂಬ ಅಪರಾಧಕ್ಕಾಗಿ ಗೌಡರ ಮೇಲೆ ಪೋಲೀಸಿನವರು ಕೇಸುಮಾಡಿರುವುದಾಗಿಯೂ ಕೇಳುತ್ತೇವೆ.

DISSENSIONS IN THE CAPITAL

(FROM THE DAILY POST, BANGALORE, 11-8-1932)

Information reachcs us to the effect that attempts are being made, both in the press and elsewhere in Mysore to cripple the past and present efforts of Mr. T. G. Rama Iyer to carry out the policy so dear to the hearts of both His Highness and the Dewan of Mysore, to improve the sanitation of the Mysore capital and to beautify that city by all possible means. It is said, moreover, that the attitude taken up by certain well known residents and by at least one press journal tends to foment communal bitterness, an evil from which it is common knowledge that Mysore has, hitherto, been singularly and most happily free. According to our information, Mr. Rama Iyer, who was President of the Municipality for four years, was in the Government Secretariat, Bangalore for several years and has been in the capital itself for the last ten years, where he has acted in several capacities, including those of City Magistrate, Deputy Commissioner of the Mysore District and Chairman of the Trust Board, is being wilfully obstructed in his efforts to carry on the good work of sanitary and other improvements, and it has been falsely asserted that he is unpopular.

Now independently of the condemnation which all obstructionists must incur—destructive critics do absolutely no good but on the other hand a great deal of harm—we cannot too strongly denounce any activities which may tend to the production of communal unrest in the State. We do not for a moment believe that such activities will be crowned with success in the extreme sense—the communities in Mysore are in too good accord for that—but it is conceivable that a certain amount of friction may be caused, and that the perfect understanding that prevails may deteriorate in consequence. And that would be a result to be most deeply deplored. Over and above this, it is mischievous, not to say criminally mischievous, to attempt to put any obstacles in the way of that improved sanitation which is the dearest ambition of the Ruler, and his Dewan, not in the capital only but throughout the State, to the limits of the most remote village. In sober fact, we have hesitated to believe that things were as bad as was stated, but our authority is good and we have little choice in the matter. It is said that it was "made impossible for Mr. Rama Iyer to carry out the wishes of H. H. the Mrharaja and the Dewan Saheb," notwithstanding the fact that he and we can only say that we cannot understand such an attitude on the part of any good Mysorean.

We do not propose to go into the reputed causes for the alleged friction which is said to prevail, althougo we are aware of them, at least by hearsay, but we put it to the public of Mysore and of the State generally whether the thing is worthy while—whether it is even worthy in loyal Mysoreans—to indulge their petty likes and dislikes at the expense of the good of the State in general. We understand—and again our authority is good—that Mr. Rama Iyer is by way of being a philanthropist, and that he offered to construct flushing arrangements for latrines, etc, at his own cost and to receive repayment therefor in easy instalments, but that even this generous offer was turned down by the malcontents. It is even asserted that sewage water is deliberately turned into the public streets in defiance of the bye-laws, and if this be true it is obvious that very little consideration or thought is shown for the wellbeing of the population of the Ruler's capital, or for that capital itself. Such matters as anonymous letters threatening the life of the late Mr. Vardhanuaiah and others are mentioned as having been in evidence in the past, and it is said that on one occasion a riot threatened in the capital. We can only earnestly appeal to all Mysoreans, and especially to residents of the capital to see that a period is put to these things. Mysore State represents an oasis of peace—communal and otherwise—in the great troubled continent of India. In heaven's name, let it remain so, and do not stir up passions which are more easily excited than allayed.

1931 ರಲ್ಲಿ ನಡೆದ ಮೈಸೂರು ಸೀಮೆಯ ಜನಪರಿಗಣತಿ.

1881 ರಿಂದ ಜನ ಸಂಖ್ಯೆಯಲ್ಲಿ ಹೆಚ್ಚು ಕಡಿಮೆಯಾಗಿರುವುದು.

ಡಿಸ್ಟ್ರಿಕ್ಟ್ ಅಥವಾ ಸಂಸ್ಥಾನ—	ಪುರುಷರು						ಸ್ತ್ರೀಯರು					
	1931	1921	1911	1901	1891	1881	1931	1921	1911	1901	1891	1881
ಬೆಂಗಳೂರು ದಂಡು ಸೇರಿ ಸಂಸ್ಥಾನ	3,353,963	3,047,117	2,934,621	2,797,024	2,483,451	2,085,842	3,203,339	2,931,775	2,871,572	2,742,275	2,460,153	2,100,346
,, ಬಿಟ್ಟು ,,	3,284,554	2,985,541	2,882,869	2,751,902	2,433,262	2,038,865	3,138,635	2,874,411	2,822.490	2,697,898	2,410,261	2,053,780
ಬೆಂಗಳೂರು ಸಿಟಿ	91,680	63,911	45,997	35,964	40,873	30,950	80,677	54,645	42,654	33,483	39,412	31,367
,, ಡಿಸ್ಟ್ರಿಕ್ಟ್	461,905	399,872	382,726	360,826	308,382	258,054	446,151	388,507	376,796	359,391	314,163	265,696
ಕೋಲಾರ ಗೋಲ್ಡ್ ಫೀಲ್ಡ್ (ಪಟ್ಟಣ)	45,051	47,487	46,521	39,810	13,323	....	40,052	40,195	37,222	31,064	10,788	....
,, ಡಿಸ್ಟ್ರಿಕ್ಟ್	389,262	357,474	349,825	327,873	284,374	238,164	374,672	347,183	346,585	324,853	282,628	243,027
ತುಮಕೂರು ,,	439,144	394,897	372,030	337,626	287,062	220,987	422.261	378,225	363,316	332,751	285,916	226,066
ಮೈಸೂರು ಪಟ್ಟಣ	56,772	43,783	36,112	34,328	36 691	28,979	50,370	40,168	35,194	33,783	37,357	31,313
,, ಡಿಸ್ಟ್ರಿಕ್ಟ್	703,838	659,148	629,516	606,822	544,046	476,227	700,146	660,220	641,249	620,239	563,720	496,139
ಚಿತ್ರದುರ್ಗ ,,	336,786	294,955	287,030	259,979	215,230	160,426	319,783	279,224	277,213	251,083	209,669	158,108
ಹಾಸನ ,,	300,746	292,249	287 360	283 043	253,554	210,588	296,191	291,711	292,840	285,876	258,431	217,756
ಕಡೂರು ,,	184,389	174,615	177,074	188,373	173 340	151,284	163,326	158,923	161,383	170,897	155,578	140,093
ಶಿವಮೊಗ್ಗ ,,	274,981	257,150	268 678	277,258	276,387	263,206	245,006	235,410	248,098	254,478	252,609	244,218
ಬೆಂಗಳೂರು ದಂಡು	69,409	61,576	51,752	45,122	50,189	46,977	64,704	57,364	49,082	44,477	49,892	46,563

NOTICE

A Holstein Bull and a Scindi Bull are at stud at the Rayankere Palace Dairy Farm, Mysore, the rates being Rs. 5 and Rs. 2 respectively. Both bulls are of good milk pedigree.

[3—3]

Dr. McIsaac,
Manager,
Rayankere Dairy Farm.

ಡಾ॥ ಅಪ್ಪಾಜಿಯವರಿಗೆ ಜಗದ್ಗುರುಗಳ ಆಶೀರ್ವಾದ

ಇದೇ ಆಗಸ್ಟ್ ತಾ॥ 27 ನೆಯ ಭಾನುವಾರ ಡಾಕ್ಟರ್ ಎ. ಅಪ್ಪಾಜಿ ಬಿ.ಎ., ಎಂ. ಬಿ., ಬಿ. ಎಸ್., ರವರು ಮೈಸೂರು ಪ್ರಭುತ್ವದವರ ಶಿಕ್ಷಣವೃತ್ತಿಯನ್ನು ಪಡೆದು ಪರದೇಶದಲ್ಲಿ ಉನ್ನತ ಪ್ರೌಢವಿದ್ಯಾಭ್ಯಾಸವನ್ನು ಮಾಡಿ ಪ್ರಶಸ್ತಿಗಳನ್ನು ಪಡೆದು ಬರಲು ಇದೇ ಆಗಸ್ಟ್ ತಾ॥ 27 ನೆಯ ಶನಿವಾರ ಬೊಂಬಾಯಿನಲ್ಲಿ ಹಡಗನ್ನು ಹತ್ತಿ ಸೀಮೆಗೆ ಪ್ರಯಾಣಮಾಡುವರು. ಈ ವಿಚಾರವನ್ನು ತಿಳಿದು ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಯವರ ದಿವ್ಯಸನ್ನಿಧಿಯಿಂದ ಈ ಕೆಳಗೆ ಕಂಡ ಆಶೀರ್ವಾದಪತ್ರವು ದಯಪಾಲಿಸಲ್ಪಟ್ಟಿದೆ:—

ಮಹಾಸನ್ನಿಧಿ ಕೃಪಾಪಾತ್ರರಾದ ಬೆಂಗಳೂರು ರಾವ್‌ಬಹದ್ದೂರ್ ಕೈ॥ ಎಲಿ ಮಲ್ಲಪ್ಪಶೆಟ್ಟರ ಪೌತ್ರರು [illegible] ಶೆಟ್ಟರಿಗೆ ತ್ರಿಸಂಧ್ಯಾ ಸಮಯ ಸ್ಮರಣಾಶೀರ್ವಾದ. ತದನಂತರ

ನಿಮ್ಮ ಜ್ಯೇಷ್ಠಸುಪುತ್ರರಾದ ಡಾ॥ ಅಪ್ಪಾಜಪ್ಪನವರು ಮೈಸೂರು ವಿಶ್ವವಿದ್ಯಾಲಯದ ಬಿ.ಎ., ಪರೀಕ್ಷೆಯ 2 ನೇ ತರಗತಿಯಲ್ಲಿ ಉತ್ತೀರ್ಣರಾಗಿ ಮೈಸೂರು ಸರ್ಕಾರದಿಂದ ಸ್ಕಾಲರ್‌ಷಿಪ್ಪನ್ನು ಪಡೆದು ಕಲಕತ್ತಾದಲ್ಲಿ 6 ವರ್ಷಕಾಲ ಅಭ್ಯಾಸಮಾಡಿ ಎಂ. ಬಿ., ಬಿ. ಎಸ್. ಪ್ರಶಸ್ತಿಯನ್ನೂ ಸುವರ್ಣ ಪದಕವನ್ನೂ ಪಡೆದುಕೊಂಡು ಬಂದು ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಲೆಕ್ಚರರಾಗಿ ನಿಯಮಿಸಲ್ಪಟ್ಟಿದ್ದು ಈಗ ಪರದೇಶಗಳಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಮಾಡಿಬರಲು ಪ್ರಭುತ್ವದವರು ಸ್ಕಾಲರ್‌ಷಿಪ್ಪನ್ನು ಕೊಟ್ಟು ಕಳುಹಿಸುವರೆಂದೂ, ಇದೇ ತಾ॥ 27 ರಲ್ಲಿ ಬೊಂಬಾಯಿನಲ್ಲಿ ಹಡಗನ್ನು ಹತ್ತಿ ಪ್ರಯಾಣಮಾಡುವರೆಂದೂ ತಿಳಿದು ಸನ್ನಿಧಾನಕ್ಕೆ ತುಂಬಾ ಸಂತೋಷವಾಗಿರತ್ತದೆ. ಅಪ್ಪಾಜಪ್ಪನವರ ವಿದ್ಯಾಭ್ಯಾಸಕ್ಕೆ ಮೈಸೂರು ಸರ್ಕಾರದವರೇ ತುಂಬಾ ಸಹಾಯಕರಾಗಿರುವುದರಿಂದ ಇವರು ಮುಂದೆ ದೊಡ್ಡ ಪದವೀಧರರಾಗುತ್ತಾರೆಂಬುದರಲ್ಲಿ ಸಂಶಯವಿಲ್ಲ. ಕೈ॥ ರಾ॥ ಬ॥ ಎಲಿ ಮಲ್ಲಪ್ಪಶೆಟ್ಟರ ಗೌರವಪ್ರತಿಷ್ಠೆಗಳನ್ನು ಪಡೆಯುವುದಕ್ಕೆ ಇವರು ಅರ್ಹರಾಗಲೆಂದೂ, ಇವರ ಪರದೇಶ ಪ್ರಯಾಣವು ಸುಖಕರವಾಗಿರಲೆಂದೂ, ಇವರು ವಿದ್ಯಾಭ್ಯಾಸಂಗವನ್ನು ಪೂರೈಸಿಕೊಂಡು ಘನತರವಾದ ಪ್ರಶಸ್ತಿಗಳನ್ನು ಹೊಂದಿ ಸ್ವದೇಶಕ್ಕೆ ಸುರಕ್ಷಿತವಾಗಿ ಬಂದು ದೊಡ್ಡ ಉದ್ಯೋಗಗಳನ್ನು ಪಡೆದು ದೀರ್ಘಕಾಲ ಬಾಳಲೆಂದೂ ಆಶೀರ್ವದಿಸಲಾಗಿದೆ.

ಅಹಿಂಸೆ.

(ಟಾಲಸ್ಟಾಯಿಯವರಿಂದ.)

50 ವರ್ಷಗಳ ಹಿಂದೆ ಲಾಯಿಡ್ ಗಾರಿಸನ್‌ರವರು ಅಹಿಂಸಾ ಸಿದ್ಧಾಂತವನ್ನು ಪ್ರಕಟಿಸುತ್ತಿದ್ದಾಗ್ಗೆ ಬಹಳ ಜನರಿಗೆ ಅದು ಕಂಟಕಪ್ರಾಯವಾಗಿದ್ದಿತು. ಇದೇ ವಿಷಯವನ್ನು ಕುರಿತು 'ಬಾಲಿಡಿ' ಮಾಡಿದ ವಿರಾಮವಿಲ್ಲದ 50 ವರ್ಷಗಳ ಪರಿಶ್ರಮವು ಕೂಡ ಅಂತಹ ಅನಾದರಣೆಯನ್ನು ಹೊಂದಿತು. ಅಹಿಂಸೆಯನ್ನು ಕುರಿತು ಈಗೀಗ ಅಮೆರಿಕೆಯ ಲೇಖಕರು ವ್ಯಕ್ತಪಡಿಸುತ್ತಿರುವ ಅನುಕೂಲಾಭಿಪ್ರಾಯವನ್ನು ಕುರಿತು ಓದಲು ನನಗೆ ಬಹಳ ಸಂತೋಷವಾಗುತ್ತಿದೆ.

ಮಾನವ ಕೋಟಿಗೆಲ್ಲ ಅಹಿಂಸೆಯೇ ಧರ್ಮವೆಂದು ವಿಧಿಸುವಲ್ಲಿ ನನಗೆ ನಂಬಿಕೆಯಿಲ್ಲ ಎಂದು ಹಿಗ್ಗಿನ್ಸನ್‌ರವರು ಹೇಳುತ್ತಾರೆ. 'ಅಹಿಂಸಾ ಸಿದ್ಧಾಂತವನ್ನು ಜೀವಿತಕ್ಕೆ ಅನುವರ್ತಿಸುವಂತೆ ಮಾಡುವ ಕಾಲವು ಇನ್ನೂ ಪ್ರಾಪ್ತವಾಗಿಲ್ಲ' ಎಂದು ಮಾರ್ಟಿನ್‌ರವರು ತಿಳಿಯುತ್ತಾರೆ. 'ಅಹಿಂಸೆಯನ್ನು ಜೀವಿತದಲ್ಲಿ ಅಭ್ಯಾಸಕ್ಕೆ ತರುವುದು ಹೇಗೆಂಬುದನ್ನು ತಿಳಿದುಕೊಂಡಾಗಲೇ ನಾವು ಆ ಸಿದ್ಧಾಂತದಲ್ಲಿ ನಿಜವಾದ ವಿಶ್ವಾಸವನ್ನು ತೋರಿಸಿದವರಾಗುವೆವು' ಎಂಬುದು ಜೆ. ಡಿ. [illegible]ರವರ ಅಭಿಪ್ರಾಯ. 'ಇನ್ನು ಕೆಲಕಾಲ ಕಳೆಯುವವರೆಗೂ ಅಹಿಂಸಾ ಧರ್ಮವನ್ನು ಸಂಪೂರ್ಣವಾಗಿ ಆಚರಣೆಗೆ ತರುವುದು ಸಂಭವವಲ್ಲ' ಎಂದು ಲಿವರ್‌ಮೋರ್ ಪತ್ನಿಯ ಅಭಿಪ್ರಾಯ.

ಮೇಲಿನ ಅಭಿಪ್ರಾಯಗಳೆಲ್ಲ 'ಅಹಿಂಸಾ ಧರ್ಮವು ಮಾನವರೆಲ್ಲರಿಂದಲೂ ಅನುಷ್ಠಾನಕ್ಕೆ ತರಲ್ಪಟ್ಟರೆ ಪರ್ಯವಸಾನವೇನಾಗುವುದು?' ಎಂಬ ಪ್ರಶ್ನೆಯಾಗಿ ಪರಿಣಮಿಸುತ್ತಿರುವವು. ಆದರೆ ಈ ಧರ್ಮವನ್ನು ಅವಲಂಬಿಸುವಂತೆ ಪ್ರತಿಯೊಬ್ಬನನ್ನೂ ನಿರ್ಬಂಧಪಡಿಸುವುದು ಅಸಂಭವವೆಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಹಾಗೊಂದುವೇಳೆ ಎಲ್ಲರನ್ನೂ ನಿರ್ಬಂಧಪಡಿಸಬೇಕೆಂದಿಟ್ಟುಕೊಂಡರೂ, ಅಂತಹ ನಿರ್ಬಂಧ ಚರ್ಯವು ಅಹಿಂಸೆಯ ಮೂಲತತ್ತ್ವಕ್ಕೇ ಸಂಪೂರ್ಣವಾಗಿ ವಿರುದ್ಧವೆಂದು ಸಹ ತಿಳಿದುಕೊಳ್ಳಬೇಕು. ಅಹಿಂಸಾ ವ್ರತವು ಯಾವಾಗಲೂ ಮಾನವಕೋಟಿಗೆಲ್ಲ ಅಮೋಘವಾದ ಧರ್ಮಶಾಸನವಾಗುವುದಿಲ್ಲವೆ ಎಂಬುದು ಕ್ರಿಸ್ತ ಮಹಾತ್ಮನ ಪ್ರಶ್ನೆಯಲ್ಲವೇ ಅಲ್ಲ. ಮನುಷ್ಯ ಜನ್ಮವೆತ್ತಿದ ಪ್ರತಿ ವ್ಯಕ್ತಿಯೂ ಭಗವದಿಚ್ಛೆಯನ್ನು ಪರಿಪಾಲಿಸಿದಲ್ಲಿ ಬಂಧವಿಮುಕ್ತನಾಗಲು ನೆರವೇರಿಸಬೇಕಾದ ವಿಧಿಕರ್ತವ್ಯವು ಇಲ್ಲವೇ ಎಂಬುದೇ ಪ್ರಶ್ನೆ. 'ನೀವೆಲ್ಲರೂ ಭಗವಂತನ ಕೋಪಕ್ಕೂ ಶಿಕ್ಷೆಗೂ ಹೆದರಿ ಕೆಲ ಕೆಲ ನಿಬಂಧನೆಗಳನ್ನು ಅನುಸರಿಸಿ ನಡೆದರೆ ಸುಖವನ್ನು ಪಡೆಯುವಿರಿ' ಎಂದು ಪ್ರತಿಯೊಬ್ಬನಿಗೂ ಪ್ರತ್ಯೇಕ ನಿಬಂಧನೆಯನ್ನು ಮಾಡುತ್ತದೆ ಕ್ರೈಸ್ತಧರ್ಮವು. ಪ್ರಪಂಚಕ್ಕೂ ನಮಗೂ ಮಧ್ಯೆ ಯಾವ ಸಂಬಂಧವಿದೆ ಎಂಬುದನ್ನು ನಮಗೆ ತಿಳಿಸಿ, ಆ ಸಂಬಂಧವನ್ನು ತಿಳಿದುಕೊಂಡು ಬದುಕುವುದರ ಮೂಲಕ ಯಾವ ಪರ್ಯವಸಾನವುಂಟಾಗುತ್ತದೆಂಬುದನ್ನು ಅದು ಸೂಚಿಸುವುದು. ನಮ್ಮ ಜೀವಿತವು ನಮ್ಮ ಸ್ವಂತ ಸ್ವತ್ತಾಗಲಿ, ನಮಗೂ ನಮ್ಮ ಬಂಧುಗಳಿಗೂ ಪ್ರಾಪಂಚಿಕ ಸುಖವನ್ನು ಕೊಡುವುದೇ ಜೀವಿತದ ಪರಮಾರ್ಥವೆಂದಾಗಲಿ ತಿಳಿದುಕೊಂಡು ಸ್ವಾರ್ಥಪರರಾಗಿರುವವರೆಗೆ ನಮ್ಮ ಜೀವಿತವು ಸಂಪೂರ್ಣವಾಗಿ ನಿರರ್ಥಕವು. ಕ್ರೈಸ್ತಧರ್ಮವು ಈ ಸತ್ಯವನ್ನೇ ಮನುಷ್ಯರೊಳಗೆ ಪ್ರತಿಯೊಬ್ಬನಿಗೂ ಹೇಳುತ್ತಿದೆ. ಪ್ರಪಂಚ ಸುಖವೇ ಪರಮಾವಧಿ ಎಂದು ಹೇಳಿಕೊಂಡಿದ್ದರೆ ಅದೆಂದಿಗೂ ನಮಗೆ ಲಭ್ಯವಾಗುವುದಿಲ್ಲ. ಏಕೆಂದರೆ (1) ಮನುಷ್ಯರು ವಿಷಯಭೋಗಕ್ಕಾಗಿ ಪ್ರಯತ್ನಪಡುತ್ತಿರುವರು. ಅಂದರೆ ಒಬ್ಬನ ಲಾಭವು ಇತರರಿಗೆ ನಷ್ಟವಾಗಿಯೇ ಪರಿಣಮಿಸುವುದು. ಹೀಗೆಯೇ ಪ್ರತಿಯೊಬ್ಬನೂ ತನಗೆ ಲಭಿಸುವ ಸುಖಕ್ಕಾಗಿ ಪ್ರಯತ್ನಿಸುವುದರಲ್ಲಿ ಅನಾವಶ್ಯಕಗಳಾದ ಎಷ್ಟೋ ಕಷ್ಟಗಳು ಸಂಭವಿಸದೆ ಇರುವುದಿಲ್ಲ (2) ಒಬ್ಬೊಬ್ಬನಿಗೆ ಕೊಂಚ ಸುಖಪ್ರಾಪ್ತಿಯಾದರೂ, ಅದು ಸಾಲುವುದಿಲ್ಲವಾದುದರಿಂದ ಇನ್ನೂ ಹೆಚ್ಚಾಗಿ ಲಭಿಸಬೇಕೆಂಬ ದುರಾಶೆಯು ಹೆಚ್ಚುವುದರಿಂದ ತಾನು ಮಾಡುವ ವ್ಯರ್ಥವಾದ ಪ್ರಯತ್ನಗಳಿಗೆ ಹದ್ದೇ ಇರುವುದಿಲ್ಲ (3) ಇದರಿಂದ ವಯಸ್ಸು ಗಳಿಸಿದ ಮೇಲೆ ವೃದ್ಧಾಪ್ಯದಲ್ಲಿ ಶರೀರದಲ್ಲಿ ಅಸ್ವಸ್ಥತೆಯೂ ಮರಣವೂ ಸಂಭವಿಸುವುದರಿಂದಲೂ ಇನ್ನೂ ಇಂತಹ ಸುಖವು ಶಾಶ್ವತವಾಗಿ ನಿಲ್ಲುವುದಿಲ್ಲವೆಂಬ ನಿರಾಶೆಯೂ ಹುಟ್ಟುವವು.

ಇದರಿಂದಲೇ ಯಾರೇ ಆಗಲಿ ತನಗೆ ಕೊಡಲ್ಪಟ್ಟಿರುವ ಜೀವಿತವು ತನ್ನ ಸುಖಸಂಪಾದನೆಗಾಗಿಯೂ, ತಾನು ಇತರರಿಗೆ ಐಹಿಕ ಸಂಪತ್ತನ್ನು ಸಂಪಾದಿಸಿಡುವುದಕ್ಕಾಗಿಯೂ ವಿನಿಯೋಗಿಸಲ್ಪತಕ್ಕದ್ದಲ್ಲವೆಂದು ಹೇಳುವುದರಲ್ಲಿ ಅರ್ಥವೇನೂ ಕಂಡುಬರುವುದಿಲ್ಲ. ಈ ಜೀವಿತದ ಮೇಲೆ ನಮಗೆ ಸ್ವಂತ ಹಕ್ಕೇನೂ ಇರುವುದಿಲ್ಲ. ನಾವು ಯಾವನಿಂದ ಅದನ್ನು ಸಂಪಾದಿಸಿದೆವೋ ಅದು ಅವನದೇ ಆಗಿರುವುದು. ಅಂದರೆ ಅವನ ಇಷ್ಟವಾವುದೆಂದು ತಿಳಿದುಕೊಂಡು ಅದನ್ನು ನೆರವೇರಿಸುವುದೇ ನಮ್ಮ ಪರಮಾವಧಿಯಲ್ಲದೆ ಐಹಿಕ ಸುಖಸಂಪತ್ತುಗಳನ್ನು ಹೊಂದುವುದಲ್ಲ. ಇಂತಹ ಉನ್ನತ ವಿಶ್ವಾಸವನ್ನು ಹೊಂದಿರುವುದರಲ್ಲಿ ನಮ್ಮ ಜನ್ಮಕ್ಕೆ ಸಾರ್ಥಕತೆಯುಂಟು. ನಾವು ಮಾಡುವ ಸಮಸ್ತ ಕಾರ್ಯಗಳಲ್ಲೂ ಸನ್ಮಾರ್ಗವನ್ನು ಕಾಣಿಸುವಂತೆ ಮಾಡುವುದು ಈ ವಿಶ್ವಾಸವೇ. ಈ ನಂಬಿಕೆಯನ್ನು ಸ್ಥಿರಪಡಿಸಿದಲ್ಲಿ ಬಾಧೆಗಾಗಲಿ ನಿರಾಶೆಗಾಗಲಿ ಅವಕಾಶವೆಷ್ಟು ಮಾತ್ರಕ್ಕೂ ಇಲ್ಲ. ಸ್ವಾರ್ಥಪರತ್ವವನ್ನೇ ಜೀವಿತೋದ್ದೇಶವನ್ನಾಗಿ ಮಾಡಿಕೊಂಡಲ್ಲಿ ಎಂದೂ ಇಲ್ಲದ ಬಾಧೆಯೂ, ನಿರಾಶೆಯೂ ಆ ಕೂಡಲೆ ನಮಗೆ ಪ್ರಾಪ್ತವಾಗದೆ ಇರುವುದಿಲ್ಲ.

'ಈ ಮಹಾಪ್ರಪಂಚವೂ ಅದರೊಳಗೆ ನಾನೂ ಈಶ್ವರೇಚ್ಛೆಯಿಂದಲೇ ಸೃಷ್ಟಿಸಲ್ಪಟ್ಟಿರುವೆವು. ಸೃಷ್ಟಿಯ ಆದ್ಯಂತವೆಲ್ಲವೂ ನಾನು ತಿಳಿದುಕೊಳ್ಳುವಂತಹದಲ್ಲ. ಅದರ ಅನಂತತ್ವವು ನನ್ನ ಆಲೋಚನೆಗೆ ಹತ್ತುವುದಿಲ್ಲ. ನನಗೆ ಅದರಲ್ಲಿರುವ ಸ್ಥಾನವನ್ನು ಕೂಡ ನಾನು ಸಂಪೂರ್ಣವಾಗಿ ತಿಳಿದುಕೊಳ್ಳಲಾರೆ. ಆದಾಗ್ಯೂ ನನಗೊಂದು ವಿಷಯವು ಮಾತ್ರ ಸ್ಪಷ್ಟವಾಗಿ ಗೊತ್ತಾಗುತ್ತದೆ. ನನ್ನನ್ನು ಇಲ್ಲಿಗೆ ಕಳುಹಿದ ಭಗವಂತನು ನನಗೇರ್ಪಡಿಸಿದ ವಿಧಿಕೃತ್ಯವಾವುದೂ ನನಗೆ ತಿಳಿಯದೆಂಬುದು ನಿಶ್ಚಯವು. ಮೂರು ಮಾರ್ಗಗಳ ಮೂಲಕ ನನಗೀ ಧರ್ಮವು ಸುಬೋಧವಾಗುತ್ತಿದೆ. (1) ನನಗೆ ಹೊದಲು ಗಳಿಸಿದ ಮಹಾತ್ಮರುಗಳೆಲ್ಲರ ಅನುಭವಜ್ಞಾನ (2) ಭಗವತ್ಪ್ರಸಾದ ಹೇತುವಾದ ಜ್ಞಾನ (3) ನನ್ನ ಮನಸ್ಸಿನಲ್ಲಿ ಹಾಕಿರುವ ಆತ್ಮಕ [illegible].

'ಇತರರು ನನಗಾಗಿ ಯಾವರೀತಿ ವರ್ತಿಸಬೇಕೆಂದು ನಾನು ಕೋರುತ್ತೇನೊ ಆ ರೀತಿ ನಾನೂ ಅವರೊಡನೆ ವರ್ತಿಸಬೇಕು' ಎಂಬುದೇ ನಮಗೆ ಹಿಂದೆ ಗತಿಸಿದ ಯುಗಪುರುಷರೆಲ್ಲರೂ ಏರ್ಪಡಿಸಿದ ಧರ್ಮವಿಧಾನವು.

ಮನುಷ್ಯರೆಲ್ಲರೂ ಮೇಲಿನ ಮಾರ್ಗವನ್ನನುಸರಿಸಿ ನಡೆದಾಗಲೇ ಯಥಾರ್ಥವಾದ ಸುಖವನ್ನು ಪಡೆಯುವವರಾಗುವರೆಂದು ನನ್ನಲ್ಲಿರುವ ಹೇತುಜ್ಞಾನವು ನನಗೆ ಹೇಳುತ್ತಿದೆ.

ಅಂತಹ ಉತ್ಕೃಷ್ಟ ನಿಯಮಗಳಿಂದ ಸಂಪೂರ್ಣಪರಿಣತ ಭಾವವನ್ನು ಕೋರುವ ಪ್ರೇಮತತ್ತ್ವವನ್ನು ನಾನೆಂದಿಗೆ ಸಾಧಿಸುತ್ತೇನೋ ಅಂದಿಗೆ ನನ್ನ ಮನಸ್ಸಿಗೆ ನಿಜವಾದ ಶಾಂತಿಯೂ ಸುಖವೂ ಪ್ರಾಪ್ತವಾಗುತ್ತವೆ. ಅವುಗಳಿಂದಲೇ ನಾನು ಹೇಗೆ ಸಂಚರಿಸಬೇಕೊ, ಎಂತಹ ಕಾರ್ಯಾಚರಣೆಗಾಗಿ ನನ್ನ ಜೀವಿತವು ಉದ್ದೇಶಪಟ್ಟಿರುವುದೋ ಎಂಬುದು ನನಗೆ ಪ್ರತ್ಯಕ್ಷವಾದಲ್ಲೂ ಗೊತ್ತಾಗುತ್ತದೆ.

ಮನುಷ್ಯರುಗಳಲ್ಲೇ ಅಲ್ಲದೆ ಸಮಸ್ತ ಜೀವರಾಶಿಗಳಲ್ಲೂ ದ್ವೇಷವನ್ನೂ ಹೋರಾಟವನ್ನೂ ಅಡಗಿಸಿ ಉತ್ತಮವಾದ ಪರಸ್ಪರ ಸ್ನೇಹವನ್ನೂ ಪ್ರೇಮವನ್ನೂ ನೆಲಗೊಳಿಸುವುದೇ ಧರ್ಮನಿರ್ವಹಣವೆಂಬುದರ ಸರಿಯಾದ ಅರ್ಥವು.

ಪೂರ್ವದಲ್ಲಿ ಹೀಬ್ರೂ ಪ್ರವರ್ತಕನು ಸೂಚಿಸಿದ ಸತ್ಯ ರಾಜ್ಯವನ್ನು ಪ್ರತಿಷ್ಠಿಸುವ ಪ್ರಯತ್ನವೇ ಅದು. ಆತ ಹೇಳಿರುವುದೇನೆಂದರೆ— 'ಮನುಷ್ಯರೆಲ್ಲರೂ ಸತ್ಯವನ್ನೇ ನಂಬಿಕೊಂಡು ಬದುಕುವುದಕ್ಕಾಗಿ, ಮರಣ ಹೇತುವಾದ ಆಯುಧಗಳನ್ನೆಲ್ಲ ನಾಶಮಾಡಿ ಪೈರನ್ನು ಕೊಯ್ಯುವ ಕುಡುಗೋಲುಗಳನ್ನಾಗಿ ಮಾಡಿಕೊಳ್ಳಬೇಕು. ಯುದ್ಧ ಮಾಡುವ ಕತ್ತಿಗಳನ್ನು ಕಾಯಿಸಿ ನೇಗಲ ಗುಳಗಳನ್ನಾಗಿ ಮಾಡಿಕೊಳ್ಳಬೇಕು. ಸಿಂಹವು ಮೇಕೆ ಮರಿಗಳೊಡನೆ ಸ್ನೇಹದಿಂದ ಇರಬೇಕು. ಆದುದರಿಂದ ಧರ್ಮದಲ್ಲಿ ಆಸಕ್ತಿಯುಳ್ಳ ಪ್ರತಿ ವ್ಯಕ್ತಿಯೂ ಯಾವಾಗ ಕೆಲಸಮಾಡಬೇಕು, ತಾನು ಮಾಡುವ ಕೆಲಸಗಳಲ್ಲಿ ಒಳ್ಳೆಯವಾವು ಕೆಟ್ಟವಾವು ಎಂಬುದನ್ನು ತಿಳಿದುಕೊಳ್ಳುತ್ತಿರಬೇಕು. ಅವನು ಯಾವಾಗಲೂ ಈಶ್ವರ ರಾಜ್ಯವನ್ನು ಈ ಪ್ರಪಂಚದಲ್ಲಿ ಪ್ರತಿಷ್ಠಿಸಿ ಒಳ್ಳೆಯ ಕಾರ್ಯಮಾಡುವುದರಲ್ಲೇ ನಿರತನಾಗಿರುವನೆಂದು ಹೇಳುವಲ್ಲಿ ಸಂದೇಹವಿಲ್ಲ. ಈ ಪ್ರಕಾರವಾಗಿ ಮನುಷ್ಯನ ಆತ್ಮದ ಅಂತರಾಶಯಗಳಿಗೂ ಹೊರಗಡೆ ಏರ್ಪಡಿಸಿಕೊಳ್ಳುವ ಜೀವಿತಗಳಿಗೂ ಐಕ್ಯತೆಯುಂಟಾಗುವುದು.

ಕ್ರೈಸ್ತ ಧರ್ಮ ಪ್ರಕಾರ ಮಾನವನೆಂದರೆ ಈಶ್ವರನ ಸೇವಕನೆಂದರ್ಥವು. ಯಜಮಾನನ ಸಂಕಲ್ಪವೇನೆಂಬುದನ್ನು ಸೇವಕನು ಪೂರ್ತಿಯಾಗಿ ತಿಳಿದುಕೊಳ್ಳುವುದಿಲ್ಲ. ತನಗೆ ನಿಯಮಿಸಲ್ಪಟ್ಟ ಸದ್ಯದ ಕಾರ್ಯವು ಮಾತ್ರ ಅವನಿಗೆ ತಿಳಿದಿರುವುದು. ಯಾವ ಕಾರ್ಯವನ್ನು ಮುಖ್ಯವಾಗಿ ಮಾಡಬೇಕೋ ಕಾರ್ಯಸಿದ್ಧಿಗೆ ವಿಘಾತವಾದ ಯಾವ ಕಾರ್ಯವನ್ನು ಮಾಡಬಾರದೊ ಎಂಬುದನ್ನು ಯಜಮಾನನು ಸೇವಕನಿಗೆ ತಿಳಿಸುತ್ತಿರಬೇಕು. ಇನ್ನು ಉಳಿದ ವಿಷಯಗಳಲ್ಲಿ ಸೇವಕನಿಗೆ ಸಂಪೂರ್ಣವಾದ ಸ್ವೇಚ್ಛೆಯುಂಟು. ಧರ್ಮಜೀವನದ ಪಾರಮಾರ್ಥ್ಯವು ಇಷ್ಟು ಸ್ಪಷ್ಟವಾಗಿ ಪ್ರತಿಯೊಬ್ಬನಿಗೂ ತಿಳಿದರೂ ಮನುಷ್ಯರ ನಡವಳಿಕೆಯಲ್ಲಿ ಮುಖ್ಯವಾಗಿ ನಾವೇನನ್ನು ನೋಡುತ್ತಿದ್ದೇವೆ? ಸಮಯಾಸಮಯಗಳಲ್ಲಿ ಭಗವಂತನ ಧರ್ಮಶಾಸನವನ್ನೂ, ನಮ್ಮ ಹೇತುಜ್ಞಾನವನ್ನೂ ಬಿಟ್ಟು ಅದಕ್ಕೆ ವಿರುದ್ಧವಾಗಿ ನಡೆಯುವುದೇ ಪರಮಕರ್ತವ್ಯವೆಂದು ಬೋಧಿಸುವ ಎಷ್ಟೋ ಮಂದಿಗಳನ್ನು ನೋಡುತ್ತಿದ್ದೇವೆ. ಪ್ರತಿ ವಿಷಯದಲ್ಲೂ ಧರ್ಮವೆಂದು ಮೂಗಿಗೆ ನೇರವಾಗಿ ನಡೆದಲ್ಲಿ ಅನೇಕ ತೊಂದರೆಗಳಿಗೆ ಸಿಕ್ಕಬೇಕಾಗುವುದು. ಆದುದರಿಂದ ಸಮಯಾನುಕೂಲವಾಗಿ ಧರ್ಮನಿಯಮಗಳನ್ನುಲ್ಲಂಘಿಸದಿರಲಾಗುವುದಿಲ್ಲವೆಂದು ಕೆಲವರು ವಾದಿಸುತ್ತಾರೆ.

ಸಾಂಘಿಕ ಸಮಸ್ಯಾಪರಿಷ್ಕಾರ

ಬ್ರಿಟಿಷ್ ಸರಕಾರದವರ ಪ್ರಕಟನೆ

ಬ್ರಿಟನ್ನಿನ ಪ್ರಧಾನ ಮಂತ್ರಿ ಮೆಕ್ಡೊನಾಲ್ಡ್‌ರವರು ಸಾಂಘಿಕ (ಜಾತಿವಾರು ಪ್ರಾತಿನಿಧ್ಯ) ಸಮಸ್ಯಾಪರಿಷ್ಕಾರವನ್ನು ಈ ಕೆಳಗೆ ಹೇಳಿರುವ ಪ್ರಕಾರ ಮಾಡಿರುತ್ತಾರೆ:—

1. ಎರಡನೆಯ ರೌಂಡುಟೇಬಲು ಸಭೆಯು ಮುಕ್ತಾಯದ ವೇಳೆಯಲ್ಲಿ ಬ್ರಿಟಿಷ್ ಪ್ರಭುತ್ವದ ಪರವಾಗಿ ಡಿಸೆಂಬರು ತಾ॥ 1 ರಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿಗಳು ಮಾಡಿದ ಪ್ರಕಟನೆಯಲ್ಲಿ ಸಾಂಘಿಕ ಸಮಸ್ಯಾ ವಿಷಯವಾಗಿ ರೌಂಡುಟೇಬಲು ಸಭೆಯಲ್ಲಿ [illegible] ಸಂಘದವರಲ್ಲೇ [illegible] ತಾತ್ಕಾಲಿಕವಾಗಿ ಒಂದು ಪರಿಷ್ಕಾರವನ್ನು ಮಾಡುವರೆಂದೂ, ಹೊಸ ರಾಜ್ಯಾಂಗ ವಿಧಾನ ಪ್ರಾರಂಭಕ್ಕೆ ಸಾಂಘಿಕ ಪ್ರಕಟ ಸಮಸ್ಯೆಯು ಅಡ್ಡ ಬರದಂತೆ ಮಾಡುವರೆಂದೂ ಸ್ಪಷ್ಟೀಕರಿಸಲ್ಪಟ್ಟಿತು. ಆ [illegible].

2. [illegible] ಸಂಘಗಳು ಸಾಂಘಿಕ ಸಮಸ್ಯಾ ಪರಿಷ್ಕಾರ [illegible] ಹೊಸ ರಾಜ್ಯಾಂಗ [illegible] ಮಾರ್ಚಿ ತಾ॥ 10 ರಲ್ಲಿ [illegible]

[illegible] ಹೊಸ ರಾಜ್ಯಾಂಗ ವಿಧಾನದಲ್ಲಿ ಮೈನಾರಿಟಿಗಳ (ಅಲ್ಪ ಸಂಖ್ಯಾತರ) ಸಮಸ್ಯೆಯಲ್ಲಿ ಕೆಲ ಮುಖ್ಯ ವಿಷಯಗಳನ್ನು [illegible] ಹೊಸ ರಾಜ್ಯಾಂಗ ನಿರ್ಮಾಣದಲ್ಲಿ [illegible] ಆಗುವುದಿಲ್ಲವೆಂದು ಈಗ ಆಂಗ್ಲ ಪ್ರಭುತ್ವದವರು ತಿಳಿಯುತ್ತಾರೆ.

ಯಾವ ಷರತ್ತಿನ ಮೇಲೆ ಪರಿಷ್ಕಾರವಾಗುವುದು?

3. ಜಾಯಿಂಟ್ ಸೆಲೆಕ್ಟ್ ಕಮಿಟಿಯು [illegible] ಭಾರತ ರಾಜ್ಯಾಂಗ ವಿಧಾನಕ್ಕೆ ಸಂಬಂಧಿಸಿದ [illegible] ಈ ಕೆಳಗೆ ಹೇಳಲ್ಪಟ್ಟಿರುವ ಪರಿಷ್ಕಾರವನ್ನು ಅನುಷ್ಠಾನಕ್ಕೆ ತರಬೇಕೆಂದು ಯೋಚಿಸಿರುತ್ತಾರೆ. ಸದ್ಯದಲ್ಲಿ ರಾಷ್ಟ್ರೀಯ ಶಾಸನ ಸಭೆಗಳಲ್ಲಿರಬೇಕಾದ ಪ್ರಾತಿನಿಧ್ಯ ವಿಷಯ ಮಾತ್ರ ಪರಿಷ್ಕರಿಸಲ್ಪಡುವುದು. ಕೆಳಗಡೆ 20 ನೆಯ ಪ್ಯಾರಾದಲ್ಲಿ ಹೇಳಿರುವ ಕಾರಣಗಳಿಂದ ಭಾರತ ಶಾಸನ ಸಭೆಯಲ್ಲಿರಬೇಕಾದ ಪ್ರಾತಿನಿಧ್ಯ ವಿಚಾರವು ಮುಂದೆ ಮಾಡಲ್ಪಡುವುದು. ನಮ್ಮ ಪರಿಷ್ಕಾರ ವಿಧಾನವನ್ನು ಹೀಗೆ ಕಡಿಮೆಮಾಡುವುದರಿಂದ ರಾಜ್ಯಾಂಗ ವಿಧಾನ ನಿರ್ಮಾಣಕ್ಕೆ ಸಂಬಂಧಿಸಿದ ಅನೇಕ ಇತರ ಮುಖ್ಯ ವಿಷಯಗಳ ಮೇಲೆ ನಿರ್ಣಯವನ್ನು ಮಾಡಬೇಕಾಗಿರುತ್ತದೆಂದು ಗ್ರಹಿಸಬೇಕಾಗಿ ಅರ್ಥವಾಗುತ್ತದೆ. ಆದುದರಿಂದ ವಿವಿಧ ಸಂಘಗಳವರಿಗೆ ಪ್ರಾತಿನಿಧ್ಯವನ್ನು ಕೊಡುವ ಪದ್ಧತಿಯನ್ನೂ ಮೆಂಬರುಗಳ ಸಂಖ್ಯೆಯನ್ನೂ ತಿಳಿಸಿದನಂತರ ಇತರ ಸಾಂಘಿಕ ಸಮಸ್ಯೆಗಳ ವಿಚಾರವಾಗಿ ಆಯಾ ಸಂಘಗಳು ತಂತಮ್ಮೊಳಗೆ ಏಕಾಭಿಪ್ರಾಯಕ್ಕೆ ಬರುವವೆಂಬ ಆಶೆಯಿಂದ ಈ ನಿರ್ಣಯಗಳು ಮಾಡಲ್ಪಟ್ಟಿರುತ್ತವೆ.

4. ಈ ನಿರ್ಣಯಗಳನ್ನು ಬದಲಾಯಿಸುವ ವಿಚಾರವಾಗಿ ಮಾಡಲ್ಪಡುವ ಆಲೋಚನೆಯಲ್ಲಿ ಬ್ರಿಟಿಷ್ ಪ್ರಭುತ್ವದವರು ಎಷ್ಟು ಮಾತ್ರಕ್ಕೂ ಭಾಗಿಗಳಾಗುವುದಿಲ್ಲವೆಂದು ಆಂಗ್ಲ ಪ್ರಭುತ್ವದವರು ಸ್ಪಷ್ಟೀಕರಿಸಿರುತ್ತಾರೆ. ಎಲ್ಲ ಪಾರ್ಟಿಯವರೂ ಏಕವಾಗಿ ಕೋರಿದುದನ್ನು ಬದಲಾಯಿಸಲು ಯಾವ ಆರ್ಜಿಯನ್ನಾಗಲಿ ಆಲೋಚಿಸುವುದಿಲ್ಲವೆಂದು ಸಹ ಸ್ಪಷ್ಟೀಕರಿಸುತ್ತಾರೆ. ಆದುದರಿಂದ ವಿವಿಧ ಸಂಘದವರು ಒಟ್ಟುಗೂಡಿ ಏಕಾಭಿಪ್ರಾಯದಿಂದ ಒಂದು ಪರಿಷ್ಕಾರ ಕ್ರಮವನ್ನು ಸಿದ್ಧಗೊಳಿಸುವಲ್ಲಿ ಆತಂಕಪಡಿಸುವ ಉದ್ದೇಶವೇನೂ ಪ್ರಭುತ್ವದವರಿಗಿರುವುದಿಲ್ಲ. ಆದುದರಿಂದ ಸಮಸ್ತ ಭಾರತ ವಿಷಯವಾಗಿಯೇ ಆಗಲಿ ಕೆಲ ಕೆಲ ರಾಷ್ಟ್ರಗಳ ವಿಷಯವಾಗಿಯೇ ಆಗಲಿ ಪರಿಷ್ಕಾರವು ಪರಸ್ಪರವಾಗಿ ವಿವಿಧ ಸಂಘಗಳ ಅಂಗೀಕಾರವನ್ನು ಪಡೆದಿದ್ದರೆ ಈ ಪ್ರಣಾಳಿಕೆಗೆ ಬದಲು ವಿವಿಧ ಸಂಘಗಳಿಗೆ ಅಂಗೀಕಾರವಾಗಿರುವ ಪ್ರಣಾಳಿಕೆಯನ್ನೇ ಅನುಮೋದಿಸತಕ್ಕದಾಗಿರುತ್ತದೆಂದು ಪಾರ್ಲಿಮೆಂಟ್ ಸಭೆಯವರಿಗೆ ಬ್ರಿಟಿಷ್ ಪ್ರಭುತ್ವದವರು ಶಿಫಾರಸು ಮಾಡಿದರು.

ಪರಿಷ್ಕಾರದ ಮುಖ್ಯ ಲಕ್ಷಣಗಳು

5. ಗೌರ್ನರವರ ರಾಷ್ಟ್ರಗಳ ಶಾಸನ ಸಭೆಗಳಲ್ಲೂ, ಶಿಷ್ಟ ಸಭೆಗಳ ರತಕ್ಕ ಕಡೆ ಪ್ರಜಾಪ್ರತಿನಿಧಿಸಭೆಗಳಲ್ಲೂ ಮೆಂಬರುಗಳ ಸ್ಥಾನವು 24 ನೆಯ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ಇರುವುದು,

6. ಮಹಮ್ಮದೀಯ, ಐರೋಪಿಯ, ಸಿಕ್ಖ ಸಭ್ಯತ್ವಕ್ಕೆ ಚುನಾವಣೆಯು ಪ್ರತ್ಯೇಕ ನಿಯೋಜಕ ವರ್ಗದ ಮೂಲಕ ನಡೆಯಬೇಕು.

10 ವರ್ಷಗಳ ಅನಂತರ ಈ ಏರ್ಪಾಟನ್ನು ಬದಲಾಯಿಸಲು ರಾಜ್ಯಾಂಗ ವಿಧಾನಗಳಲ್ಲಿ ಏರ್ಪಾಟು (ವಿವಿಧ ಸಂಘದವರ ಸಮ್ಮತಿಯಿಂದ) ಮಾಡಲ್ಪಡುವುದು. ವಿವಿಧ ಸಂಘದವರ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ತಕ್ಕೇರ್ಪಾಟುಗಳು ಮಾಡಲ್ಪಡುವುವು.

7. ಮಹಮ್ಮದೀಯ, ಸಿಕ್ಖ, ಭಾರತ, ಕ್ರೈಸ್ತ, ಆಂಗ್ಲೋ ಹಿಂದು, ಐರೋಪಿಯನ್ ನಿಯೋಜಕ ವರ್ಗಗಳಲ್ಲಿ ಓಟು ಕೊಡುವವರೆಲ್ಲರೂ ಸಾಮಾನ್ಯ ನಿಯೋಜಕ ವರ್ಗಗಳಲ್ಲಿ ಓಟುಕೊಡತಕ್ಕವರಾಗಿರುತ್ತಾರೆ.

8. ಬೊಂಬಾಯಿನಲ್ಲಿ ಕೆಲ ಗೊತ್ತಾದ ಪ್ಲೂರಲ್-ಮೆಂಬರು ಸಾಮಾನ್ಯ ನಿಯೋಜಕ ವರ್ಗಗಳಲ್ಲಿ ಮಹಾರಾಷ್ಟ್ರರಿಗೆ 7 ಸ್ಥಾನಗಳು ಪ್ರತ್ಯೇಕಿಸಲ್ಪಡುವುವು.

9. ನಿಮ್ನ ಜಾತಿಗಳಲ್ಲಿ ಓಟುಳ್ಳವರು ಸಾಮಾನ್ಯ ನಿಯೋಜಕ ವರ್ಗಗಳಲ್ಲೇ ಓಟು ಕೊಡುವರು. ಈ ಒಂದು ಮಾರ್ಗದಿಂದ ನಿಮ್ನ ಜಾತಿಗಳಿಗೆ ತಕ್ಕ ಪ್ರಾತಿನಿಧ್ಯವು ದೊರಕುವುದಿಲ್ಲವಾದುದರಿಂದ ಕೆಳಗೆ 24 ನೇ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ಅವರಿಗೆ ಪ್ರತ್ಯೇಕ ಕೆಲ ಸ್ಥಾನಗಳು ಕೊಡಲ್ಪಡುವುವು. ಈ ಸ್ಥಾನಗಳಿಗೆ ಒಂದು ನಿಮ್ನಜಾತಿಯ ಓಟರುಗಳು ಮಾತ್ರವೇ ಮೆಂಬರುಗಳನ್ನು ಚುನಾಯಿಸುತ್ತಿದ್ದರು. ಈ ವಿಧವಾಗಿ ಓಟುಮಾಡತಕ್ಕವರು ಸಾಮಾನ್ಯ ನಿಯೋಜಕ ವರ್ಗಗಳಲ್ಲಿ ಕೂಡ ಓಟನ್ನು ಕೊಡುವ ಅಧಿಕಾರವಿರುವುದು. ನಿಮ್ನಜಾತಿಯವರು ಬಹಳ ಹೆಚ್ಚಾಗಿರುವ ಕಡೆಗಳಲ್ಲಿ ಮಾತ್ರವೇ ಇಂತಹ ಏರ್ಪಾಟುಮಾಡಲ್ಪಡುವುದು. ಮದ್ರಾಸಿನಲ್ಲಿ ವಿನ ರಾಷ್ಟ್ರದಲ್ಲೆಲ್ಲ ಅವರು ನಿಯೋಜಕ ವರ್ಗವಾಗಿರಕೂಡದೆಂದು ಉದ್ದೇಶಿಸಲ್ಪಟ್ಟಿದೆ. ಬಂಗಾಳಾದೇಶದಲ್ಲಿ ಕೆಲ ಸಾಮಾನ್ಯ ನಿಯೋಜಕ ವರ್ಗಗಳ ಓಟರುಗಳಲ್ಲಿ ಬಹುಭಾಗವು ನಿಮ್ನ ಜಾತಿಯವರಿಗೆ ಸೇರಬೇಕಾಗಿ ತೋರುತ್ತದೆ. ಆದುದರಿಂದ ವಿಚಾರಣೆಯು ನಡೆಯುವವರೆಗೆ ಆ ರಾಷ್ಟ್ರಗಳಲ್ಲಿ ನಿಮ್ನ ಜಾತಿಯವರು ಪ್ರತ್ಯೇಕ ನಿಯೋಜಕ ವರ್ಗಗಳಿಂದ ಚುನಾಯಿಸಲ್ಪಡಬೇಕಾದ ಮೆಂಬರುಗಳ ಸಂಖ್ಯೆಯು ನಿರ್ಣಯಿಸಲ್ಪಟ್ಟಿಲ್ಲ. ಬಂಗಾಳಾ ಶಾಸನ ಸಭೆಯಲ್ಲಿ ನಿಮ್ನ ಜಾತಿಯವರಿಗೆ 10 ಸ್ಥಾನಗಳಿಗಿಂತ ಕಡಿಮೆ ಇರಕೂಡದೆಂಬುದು ನಮ್ಮುದ್ದೇಶವು.

ಪ್ರತ್ಯೇಕ ನಿಮ್ನ ಜಾತಿಯವರ ನಿಯೋಜಕ ವರ್ಗಗಳಲ್ಲಿ ಓಟುಕೊಡುವ ಹಕ್ಕುಳ್ಳವರಾರೆಂಬುದು ಇನ್ನೂ ನಿಶ್ಚಯಿಸಲ್ಪಟ್ಟಿಲ್ಲ. ಫ್ರಾಂಚೈಜ್ ಕಮಿಟಿಯವರ ವರದಿಯಲ್ಲಿ ವಿವರಿಸಲ್ಪಟ್ಟಿರುವ ಸೂತ್ರಗಳ ಮೇಲೆ ಅವು ಆಧಾರಪಟ್ಟುಕೊಂಡಿವೆ. ಉತ್ತರ ಹಿಂದುಸ್ಥಾನದ ಕೆಲ ರಾಷ್ಟ್ರಗಳಲ್ಲಿ ಕೆಲ ಬದಲಾವಣೆಗಳಾಗುವುದು ಅಗತ್ಯವು.

ಇತರ ಮೈನಾರಿಟಿಗಳು

ಕೆಲಕಾಲದ ಮೇಲೆ ಈ ಪ್ರತ್ಯೇಕ ನಿಮ್ನ ಜಾತಿ ನಿಯೋಜಕ ವರ್ಗಗಳು ಅನಗತ್ಯವೆಂದು ಆಂಗ್ಲ ಪ್ರಭುತ್ವದವರು ತಿಳಿಯುತ್ತಾರೆ. ಆದಾರವಾಗಿ ಕೂಡ ಇಪ್ಪತ್ತು ಅಧಿಕಾರದ ಮೂಲಕ ಅವು ಈ ಮಧ್ಯೆ [illegible] 20 ವರ್ಷಗಳ ಮೇಲೆ ಅವು [illegible] ಉದ್ದೇಶಿಸಲ್ಪಟ್ಟಿದೆ.

10. ಭಾರತ ಕ್ರೈಸ್ತರ ಸ್ಥಾನಗಳಿಗೆ ಪ್ರತ್ಯೇಕ ನಿಯೋಜಕ ವರ್ಗಗಳ ದ್ವಾರಾ ಚುನಾವಣೆಯು ನಡೆಯುವುದು. ರಾಷ್ಟ್ರದ ಕ್ರೈಸ್ತರೆಲ್ಲರೂ ಒಟ್ಟುಗೂಡಿ ಚುನಾಯಿಸುವ ಪದ್ಧತಿಯು [illegible] ಇರುವಂತೆ ತೋರುತ್ತದೆ. ಅಂದರೆ ರಾಷ್ಟ್ರದ ಒಂದೆರಡು ಪ್ರತ್ಯೇಕ ಪ್ರದೇಶಗಳಲ್ಲಿ ಮಾತ್ರವೇ ಈ ನಿಯೋಜಕ ವರ್ಗಗಳು ಏರ್ಪಡುವುವು. ಈ ನಿಯೋಜಕ ವರ್ಗಗಳಿಗೆ ದೂರವಾಗಿರುವ ಭಾರತ ಕ್ರೈಸ್ತರು ಸಾಮಾನ್ಯ ನಿಯೋಜಕ ವರ್ಗಗಳಲ್ಲಿ ಓಟು ಮಾಡುವರು. ಬಿಹಾರು ಒರಿಸ್ಸಾ ರಾಷ್ಟ್ರದಲ್ಲಿ ಭಾರತ ಕ್ರೈಸ್ತರ ಸಂಖ್ಯೆಯಲ್ಲಿ ಹೆಚ್ಚು ಭಾಗದವರು ಆದಿವಾಸಿಗಳಾದ ಬೆಟ್ಟ ಜಾತಿಯವರಾಗಿರುವುದರಿಂದ ಅಲ್ಲಿಯ ಏರ್ಪಾಟುಗಳು ಬೇರೆ ವಿಧವಾಗಿ ಇರಬೇಕಾಗುತ್ತವೆ.

ಆಂಗ್ಲೋ ಹಿಂದುಗಳು

11. ಆಂಗ್ಲೋಹಿಂದುಗಳು ಪ್ರತ್ಯೇಕ ಪ್ರತ್ಯೇಕ ಸಾಂಘಿಕ ನಿಯೋಜಕ ವರ್ಗಗಳ ದ್ವಾರಾ ಮೆಂಬರುಗಳನ್ನು ಚುನಾಯಿಸುವರು. ಇವರ ನಿಯೋಜಕ ವರ್ಗವು ರಾಷ್ಟ್ರದಲ್ಲೆಲ್ಲಾ ಇರುವುದು. ಅಂಚೆಯ ದ್ವಾರಾ ಇವರ ಓಟನ್ನು ಕೊಡುತ್ತಿದ್ದರು. ಆದರೆ ಈ ವಿಷಯವಾಗಿ ತಡೆಯ ತೀರ್ಮಾನವೇನೂ ಜರುಗಲಿಲ್ಲ.

12. ಹಿಂದುಳಿದಿರುವ ಜಾತಿಯವರೆಷ್ಟು ಮಂದಿಯನ್ನು ಚುನಾಯಿಸಿಕೊಳ್ಳಬೇಕೆಂಬ ವಿಷಯವು ಇನ್ನೂ ವಿಚಾರಣೆಯಲ್ಲಿದೆ. ಈ ಪಂಗಡದವರಿಗೆ ಕೊಡಲ್ಪಟ್ಟಿರುವ ಸ್ಥಾನಗಳು ತಾತ್ಕಾಲಿಕವೆಂದು ತಿಳಿಯತಕ್ಕದು.

ಸ್ತ್ರೀಯರ ಪ್ರಾತಿನಿಧ್ಯ

13. ಹೊಸ ಶಾಸನ ಸಭೆಗಳಲ್ಲಿ ಕೆಲಮಂದಿ ಸ್ತ್ರೀಯರಿರುವುದು ಬಹಳ ಮುಖ್ಯವೆಂದು ಬ್ರಿಟಿಷ್ ಪ್ರಭುತ್ವದವರು ಭಾವಿಸಿರುತ್ತಾರೆ. ಮೊದಲಾಗಿ ಸ್ತ್ರೀಯರಿಗೆ ಕೆಲ ಸ್ಥಾನಗಳು ಪ್ರತ್ಯೇಕಿಸಲ್ಪಡದ ಹೊರತು ಅವರಿಗೆ ತಕ್ಕ ಪ್ರಾತಿನಿಧ್ಯವು ಬರುವುದಿಲ್ಲವೆಂದು ಅವರು ತಿಳಿದಿರುತ್ತಾರೆ. ಅಲ್ಲದೆ ಒಂದೇ ಸಂಘಕ್ಕೆ ಸೇರಿದ ಸ್ತ್ರೀಯರು ಹೆಚ್ಚಾಗಿ ಶಾಸನ ಸಭೆಗಳಿಗೆ ಚುನಾಯಿಸಲ್ಪಡಕೂಡದೆಂದೂ, ವಿವಿಧ ಸಂಘದವರು ಚುನಾಯಿಸಲ್ಪಡಬೇಕೆಂದೂ ಅವರು ತಿಳಿಸುತ್ತಾರೆ. ಆದುದರಿಂದ ಪ್ರತ್ಯೇಕ ಸಾಂಘಿಕ ನಿಯೋಜಕ ವರ್ಗಗಳು ಏರ್ಪಡಿಸಲ್ಪಟ್ಟವೆ. ಕೆಳಗೆ 24 ನೆಯ ಪ್ಯಾರಾದಲ್ಲಿ ಹೇಳಲ್ಪಟ್ಟಿರುವ ಪ್ರಕಾರ ವಿವಿಧ ಸಂಘಗಳಿಗೆ ಪ್ರಾತಿನಿಧ್ಯವು ಕಲ್ಪಿಸಲ್ಪಟ್ಟಿದೆ.

ಇತರರು

14. ಕಾರ್ಮಿಕರಿಗೆ ಗೊತ್ತುಮಾಡಲ್ಪಟ್ಟಿರುವ ಸ್ಥಾನಗಳಿಗೆ ಚುನಾವಣೆಯು ಸಾಂಘಿಕ ಪದ್ಧತಿಯ ಮೇಲೆ ಆಧಾರಪಡುವುದಿಲ್ಲ. ಚುನಾವಣೆಯ ಸಂಬಂಧವಾಗಿ ಏರ್ಪಾಟುಗಳು ಇನ್ನೂ ನಿರ್ಣಯಿಸಲ್ಪಡಬೇಕಾಗಿವೆ. ಆದರೆ, ಫ್ರಾಂಚೈಜು ಕಮಿಟಿಯವರಿಂದ ಶಿಫಾರಸು ಮಾಡಲ್ಪಟ್ಟಿರುವ ಪ್ರಕಾರ ಲೇಬರು ನಿಯೋಜಕ ವರ್ಗಗಳು ಕೊಂಚಮಟ್ಟಿಗೆ ಟ್ರೇಡ್ ಯೂನಿಯನ್ ನಿಯೋಜಕವರ್ಗಗಳಾಗಿಯೂ, ಇನ್ನು ಕೊಂಚಮಟ್ಟಿಗೆ ಪ್ರತ್ಯೇಕ ನಿಯೋಜಕ ವರ್ಗಗಳಾಗಿಯೂ ಇರುವವು.

15. ವಾಣಿಜ್ಯ, ಪರಿಶ್ರಮಗಳು, ಮೈನಿಂಗು (ಗಣಿಗಳು), ಟಿ ತೋಟ ಇವುಗಳ ಪ್ರಾತಿನಿಧ್ಯವು ಚೇಂಬರ್ ಆಫ್ ಕಾಮರ್ಸ್ ಮೊದಲಾದ ಸಂಘಗಳ ದ್ವಾರ ಇರುವುದು. ಇನ್ನೂ ವಿಚಾರಣೆ ನಡೆದ ವಿನಾ ಇವುಗಳ ಸಂಬಂಧವಾದ ಏರ್ಪಾಟುಗಳು ನಿರ್ಣಯಿಸಲ್ಪಡಲಾಗುವುದಿಲ್ಲ.

16. ಭೂಸ್ವಾಮಿಗಳ ಪ್ರತಿನಿಧಿಗಳು ಪ್ರತ್ಯೇಕ ಭೂಸ್ವಾಮಿಗಳ ನಿಯೋಜಕ ವರ್ಗಗಳಿಂದ ಚುನಾಯಿಸಲ್ಪಡುವರು.

17. ವಿಶ್ವವಿದ್ಯಾಲಯ ಪ್ರತಿನಿಧಿಗಳು ಹೇಗೆ ಚುನಾಯಿಸಲ್ಪಡಬೇಕೆಂಬ ವಿಷಯವು ಇನ್ನೂ ವಿಚಾರಣೆಯಲ್ಲಿರುತ್ತದೆ.

18. ಪ್ರಾತಿನಿಧ್ಯಗಳಿಗೆ ಸಂಬಂಧಿಸಿದ ನಾನಾ ವಿಷಯಗಳನ್ನು ನಿರ್ಣಯಿಸುವಲ್ಲಿ ಬ್ರಿಟಿಷ್ ಪ್ರಭುತ್ವದವರು ವಿವರಿಸಲಿಚ್ಛಿಸುವುದು ಅಸಂಭವವೆಂದು ತಿಳಿಯುತ್ತಾರೆ. ಆದಾಗ್ಯೂ ನಿಯೋಜಕ ವರ್ಗಗಳು ನಿರ್ಣಯಿಸಲ್ಪಡತಕ್ಕವಾಗಿವೆ. ಈ ಕಾರ್ಯವು ಸಾಧ್ಯವಾದಮಟ್ಟಿಗೂ ಜಾಗ್ರತೆಯಲ್ಲೇ ಭಾರತದೇಶದಲ್ಲಿ ಜರುಗಬೇಕೆಂಬುದು ಅವರುದ್ದೇಶವು.

ಮೆಂಬರುಗಳ ಸಂಖ್ಯೆಯೊಳಗೆ ಅಲ್ಲಲ್ಲಿ ಕೊಂಚ ವ್ಯತ್ಯಾಸವು ಮಾಡಲ್ಪಡಬೇಕಾಗಿದೆ. ಈ ವ್ಯತ್ಯಾಸವನ್ನು ಮಾಡುವ ಅಧಿಕಾರವು ಆಂಗ್ಲ ಪ್ರಭುತ್ವದವರಿಗಿರುವುದು. ಆದರೆ, ವಿವಿಧ ಸಂಘಗಳಿಗೆ ದಾಮಾಷಾದಲ್ಲಿ ವ್ಯತ್ಯಾಸವು ಹೆಚ್ಚಾಗಿರಲು ಅವರು ಅಂಗೀಕರಿಸುವುದಿಲ್ಲ. ಬಂಗಾಳ, ಪಂಜಾಬು ವಿಷಯವಾಗಿ ಇದರಲ್ಲಿ ನಿರ್ಣಯಿಸಲ್ಪಟ್ಟಿರುವ ಸಂಖ್ಯೆಗಳ ವ್ಯತ್ಯಾಸವೇನೂ ಮಾಡಲ್ಪಡುವುದಿಲ್ಲ.

ಎರಡನೆಯ ಶಾಸನ ಸಭೆ

19. ರಾಷ್ಟ್ರಗಳ ಎರಡನೆಯ ಶಾಸನ ಸಭೆಗಳ ವಿಷಯವಾಗಿ ರಾಜ್ಯಾಂಗ ಚರ್ಚೆಯೊಳಗೆ ಹೆಚ್ಚು ಪ್ರಾಮುಖ್ಯತೆ ಕೊಡಲಿಲ್ಲ. ಈ ವಿಷಯವು ಇನ್ನೂ ಚರ್ಚಿಸಲ್ಪಡಬೇಕಾಗಿದೆ. ಯಾವ ರಾಷ್ಟ್ರದಲ್ಲಿ ಎರಡನೆಯ ಶಾಸನ ಸಭೆಯಿರಬೇಕು, ಆ ಸಭೆಯಲ್ಲೆಷ್ಟು ಮೆಂಬರುಗಳಿರಬೇಕು, ಹೇಗೆ ಚುನಾಯಿಸಲ್ಪಡಬೇಕು ಎಂಬ ವಿಷಯವು ಇನ್ನೂ ಚರ್ಚಿಸಲ್ಪಟ್ಟು ನಿರ್ಣಯಿಸಲ್ಪಡಬೇಕಾಗಿದೆ.

ಕೆಳಗಿನ ಶಾಸನಸಭೆಯಲ್ಲಿ ವಿವಿಧ ಸಂಘಗಳಿಗಿರತಕ್ಕ ದಾಮಾಷಾಯನ್ನು ಭಂಗಪಡಿಸುವ ಪದ್ಧತಿಯಾವುದೂ ಮೇಲಿನ ಶಾಸನ ಸಭೆಯಲ್ಲಿರಕೂಡದೆಂಬುದು ಬ್ರಿಟಿಷ್ ಪ್ರಭುತ್ವದವರ ಉದ್ದೇಶವು.

ಭಾರತ ಶಾಸನ ಸಭೆ

20. ಭಾರತ ಶಾಸನ ಸಭೆಗಳಲ್ಲಿ ಎಷ್ಟು ಮಂದಿ ಮೆಂಬರುಗಳಿರಬೇಕು, ಅವರು ಹೇಗೆ ಚುನಾಯಿಸಲ್ಪಡಬೇಕು ಎಂಬ ವಿಷಯವಾಗಿ ಈಗ ಆಂಗ್ಲ ಪ್ರಭುತ್ವದವರು ನಿರ್ಣಯಿಸಲಾರರು. ಏಕೆಂದರೆ, ಭಾರತ ಸಂಸ್ಥಾನಗಳು ಸಹ ಪ್ರತಿನಿಧಿಗಳನ್ನು ಕಳುಹಬೇಕಾಗಿದೆ. ಸಂಸ್ಥಾನಗಳು ಎಷ್ಟು ಮಂದಿಯನ್ನು ಕಳುಹಬೇಕು, ಬ್ರಿಟಿಷ್ ಇಂಡ್ಯಾದ ರಾಷ್ಟ್ರಗಳೆಷ್ಟು ಮಂದಿಗಳನ್ನು ಕಳುಹಬೇಕು ಎಂಬ ವಿಚಾರವು ಇನ್ನೂ ಚರ್ಚಿಸಲ್ಪಡುತ್ತಿದೆ. ಆ ಸಭೆಯಲ್ಲಿ ಬೇರೆ ಸಂಘಗಳ ಪ್ರಾತಿನಿಧ್ಯ [illegible] ನಿರ್ಣಯಿಸಲ್ಪಡುವುದು.

ಸಿಂಧು ವಿಭಾಗ

21. ರಾಷ್ಟ್ರಗಳ ಜತೆಗೆ [illegible] ಪ್ರತ್ಯೇಕ ರಾಷ್ಟ್ರವನ್ನಾಗಿ ಮಾಡಬೇಕೆಂದು ಬ್ರಿಟಿಷ್ ಪ್ರಭುತ್ವದವರು ಇದಕ್ಕೆ ಮೊದಲೇ ಅಂಗೀಕರಿಸಿದ್ದರು. [illegible] ಸಂದರ್ಭದಲ್ಲಿ ಈ ರಾಷ್ಟ್ರದ [illegible]. ಅಂದರೆ ಬೊಂಬಾಯಿ ರಾಷ್ಟ್ರದಲ್ಲಿ [illegible] ಪ್ರತ್ಯೇಕವಾಗಿಯೂ, ಬೊಂಬಾಯಿ ಸಿಂಧು ರಾಷ್ಟ್ರೀಯ [illegible] ಲೆಕ್ಕಗಳನ್ನು [illegible] ಬ್ರಿಟಿಷ್ ಪ್ರಭುತ್ವದವರು ಅಭಿಪ್ರಾಯಪಡುತ್ತಾರೆ.

22. ಬಿಹಾರು, ಒರಿಸ್ಸಾ ರಾಷ್ಟ್ರಕ್ಕೆ [illegible] ಪ್ರತ್ಯೇಕ ರಾಷ್ಟ್ರಕ್ಕೆ ಸಂಬಂಧಿಸಿರುತ್ತದೆ. ಒರಿಸ್ಸಾವನ್ನು ಪ್ರತ್ಯೇಕ ರಾಷ್ಟ್ರವನ್ನಾಗಿ ಮಾಡುವ ವಿಚಾರವು ಆಲೋಚನೆಯಲ್ಲಿದೆ.

23. 24 ನೆಯ ಪ್ಯಾರಾದಲ್ಲಿ ಮಧ್ಯರಾಷ್ಟ್ರಗಳ ಶಾಸನ ಸಭೆಯ ವಿಷಯವಾಗಿ ಹೇಳಲ್ಪಟ್ಟಿದೆ. ಇದರಿಂದ ಮುಂದಿನ ಭಾರತರಾಜ್ಯಾಂಗ ವಿಧಾನಗಳಲ್ಲಿ ಬೀರಾರನ್ನು ಕುರಿತು ಅಂತ್ಯ ನಿರ್ಣಯವು ಮಾಡಲ್ಪಟ್ಟಿರುವುದೆಂದು ಸಂಶಯ ಪಡಬಾರದು.

ವಿವಿಧ ರಾಷ್ಟ್ರಗಳ ಶಾಸನ ಸಭೆಗಳಲ್ಲಿರಬೇಕಾದ ಸ್ಥಾನನಿರ್ಣಯ.

24. ರಾಷ್ಟ್ರೀಯ ಶಾಸನ ಸಭೆಗಳಲ್ಲಿರಬೇಕಾದ ಸ್ಥಾನಗಳು ಈ ಕೆಳಗೆ ಕೊಡಲ್ಪಟ್ಟಿರುವ ಪ್ರಕಾರ ಹಂಚಲ್ಪಟ್ಟಿವೆ:—

ಮದರಾಸು—215

ಜನರಲ್-128 ಪುರುಷರು, 6 ಸ್ತ್ರೀಯರು	134
ನಿಮ್ನಜಾತಿಗಳು	18
ಹಿಂದುಳಿದಿರುವ ಪ್ರಾಂತಗಳಿಗೆ	1
ಮಹಮ್ಮದೀಯರು 28 ಪುರುಷರು, 1 ಸ್ತ್ರೀ	29
ದೇಶೀಯ ಕ್ರೈಸ್ತರು 8 ಪುರುಷರು, 1 ಸ್ತ್ರೀ	9
ಆಂಗ್ಲೋ ಇಂಡಿಯನರು	2
ಯೂರೋಪಿಯನರು	3
ವಾಣಿಜ್ಯ, ಪರಿಶ್ರಮಗಳು, ಗಣಿಗಳು, ತೋಟಗಳು	6
ಭೂಸ್ವಾಮಿಗಳು	6
ವಿಶ್ವವಿದ್ಯಾಲಯ	1
ಕಾರ್ಮಿಕರು	6
	215

ಬೊಂಬಾಯಿ-ಸಿಂಧು—200

ಜನರಲ್-92 ಪುರುಷರು, 5 ಸ್ತ್ರೀಯರು	97
ನಿಮ್ನಜಾತಿಯವರು	10
ಹಿಂದುಳಿದ ಪ್ರಾಂತಗಳು	1
ಮಹಮ್ಮದೀಯರು 62 ಪುರುಷರು, 1 ಸ್ತ್ರೀ	63
ದೇಶೀಯ ಕ್ರೈಸ್ತರು	3
ಆಂಗ್ಲೋ ಇಂಡಿಯನರು	2
ಯೂರೋಪಿಯನರು	4
ವಾಣಿಜ್ಯ ಮೊದಲಾದವು	8
ಭೂಸ್ವಾಮಿಗಳು	2
ವಿಶ್ವವಿದ್ಯಾಲಯ	1
ಕಾರ್ಮಿಕರು	8
	200

ಬಂಗಾಳ—250

ಜನರಲ್-78 ಪುರುಷರು, 2 ಸ್ತ್ರೀಯರು	80
ಮಹಮ್ಮದೀಯರು 117 ಪುರುಷರು, 2 ಸ್ತ್ರೀ	119
ಆಂಗ್ಲೋ ಇಂಡಿಯನರು 3 ಪುರುಷರು 1 ಸ್ತ್ರೀ	4
ದೇಶೀಯ ಕ್ರೈಸ್ತರು	2
ಯೂರೋಪಿಯನರು	11
ವಾಣಿಜ್ಯ ವಗೈರೆ	19
ಭೂಸ್ವಾಮಿಗಳು	5
ವಿಶ್ವವಿದ್ಯಾಲಯ	2
ಕಾರ್ಮಿಕರು	8
	250

ಸಂಯುಕ್ತರಾಷ್ಟ್ರಗಳು 228

ಜನರಲ್ 128 ಪುರುಷರು, 4 ಸ್ತ್ರೀಯರು	132
ನಿಮ್ನಜಾತಿಯವರು	12
ಮಹಮ್ಮದೀಯರು 64 ಪುರುಷರು 2 ಸ್ತ್ರೀಯರು	66
ದೇಶೀಯ ಕ್ರೈಸ್ತರು	2
ಆಂಗ್ಲೋ ಇಂಡಿಯನರು	1
ಯೂರೋಪಿಯನರು	2
ವಾಣಿಜ್ಯ	3
ಭೂಸ್ವಾಮಿಗಳು	6
ವಿಶ್ವವಿದ್ಯಾಲಯ	1
ಕಾರ್ಮಿಕರು	3
	228

ಪಂಜಾಬು—175

ಜನರಲ್ 43 ಪುರುಷರು, 1 ಸ್ತ್ರೀ	43
ಸಿಕ್ಕರು 31 ಪುರುಷರು, 1 ಸ್ತ್ರೀ	32
ಮಹಮ್ಮದೀಯರು 84 ಪುರುಷರು, 2 ಸ್ತ್ರೀಯರು	86
ದೇಶೀಯ ಕ್ರೈಸ್ತರು	2
ಆಂಗ್ಲೋ ಇಂಡಿಯನರು	1
ಯೂರೋಪಿಯನರು	1
ವಾಣಿಜ್ಯ	1
ಭೂಸ್ವಾಮಿಗಳು	5
ವಿಶ್ವವಿದ್ಯಾಲಯ	1
ಕಾರ್ಮಿಕರು	3
	175

ಬಿಹಾರು-ಒರಿಸ್ಸಾ, 175

ಜನರಲ್ 86 ಪುರುಷರು, 3 ಸ್ತ್ರೀಯರು	89
ನಿಮ್ನ	7

ಮಕ್ಕಳಿದ್ದರೆ ಮನೆ ಚಂದ.

ಬಂಜೆತನದಿಂದ ಮುಕ್ತರಾಗುವಿರಿ

ಮುಕ್ತಿ ಚೆಂಡು | ಗರ್ಭಧಾರಣ ಸಂಜೀವಿನಿ | ಚೀಟಿನ ಬೆಲೆ

ಈ ನಮ್ಮ ಅನುಭವಿಕ ಔಷಧ ಮೂರು ಸಾರಿ ಋತುಸ್ನಾನ ಆಗುವವರೆಗೆ ಪ್ರತಿ ಸಾರಿ ಮೂರು ಮೂರು ದಿವಸ ತಿನ್ನಬೇಕು [illegible] ೯ ಗುಳಿಗೆಗಳಿಗೆ ರೂ. ೩ [illegible]

ಪತ್ತೆ—ವೈದ್ಯ ವಿ. ಎಸ್. [illegible] ಮೈಸೂರು. M. C. 18

ಹಿಂದೆಬಿದ್ದಿರುವ ಪ್ರಾಂತಗಳು	8
ಮಹಮ್ಮದೀಯರು 41 ಪುರುಷರು, 1 ಸ್ತ್ರೀ	42
ದೇಶೀಯ ಕ್ರೈಸ್ತರು	2
ಆಂಗ್ಲೋ ಇಂಡಿಯನರು	1
ಯೂರೋಪಿಯನರು	2
ವಾಣಿಜ್ಯ	4
ಭೂಸ್ವಾಮಿಗಳು	5
ವಿಶ್ವವಿದ್ಯಾಲಯ	1
ಕಾರ್ಮಿಕರು	4
	175

ಮಧ್ಯರಾಷ್ಟ್ರಗಳು-ಬೀರಾರು—112

ಜನರಲ್ 74 ಪು. 3 ಸ್ತ್ರೀ.	77
ನಿಮ್ನ	10
ಹಿಂದೆ ಬಿದ್ದಿರುವ ಪ್ರಾಂತಗಳು	1
ಮಹಮ್ಮದೀಯರು	14
ಆಂಗ್ಲೋ ಇಂಡಿಯನರು	1
ಯೂರೋಪಿಯನರು	1
ವಾಣಿಜ್ಯ	2
ಭೂಸ್ವಾಮಿಗಳು	3
ವಿಶ್ವವಿದ್ಯಾಲಯ	1
ಕಾರ್ಮಿಕರು	2
	112

ಆಸಾಮು—104

ಜನರಲ್ 43 ಪು. 1 ಸ್ತ್ರೀ.	44
ನಿಮ್ನ	4
ಹಿಂದೆ ಬಿದ್ದಿರುವ ಪ್ರಾಂತಗಳು	9
ಮಹಮ್ಮದೀಯರು	34
ದೇಶೀಯ ಕ್ರೈಸ್ತರು	1
ಯೂರೋಪಿಯನರು	1
ವಾಣಿಜ್ಯ	11
ಕಾರ್ಮಿಕ	4
	108

ಸರಹದ್ದು ರಾಷ್ಟ್ರ—50

ಜನರಲ್	9
ಸಿಕ್ಖರು	3
ಮಹಮ್ಮದೀಯರು	36
ಭೂಸ್ವಾಮಿಗಳು	2
	50

ಸಿಂಧು—60

ಜನರಲ್ 18 ಪು. 1 ಸ್ತ್ರೀ.	19
ಮಹಮ್ಮದೀಯರು 33 ಪು. 1 ಸ್ತ್ರೀ.	34
ಯೂರೋಪಿಯನರು	2
ವಾಣಿಜ್ಯ	2
ಭೂಸ್ವಾಮಿಗಳು	2
ಕಾರ್ಮಿಕರು	1
	60

ಸಿಂಧು ರಾಷ್ಟ್ರವಿಲ್ಲದೆ ಬರೀ ಬೊಂಬಾಯಿ—175

ಜನರಲ್ 104 ಪು. 5 ಸ್ತ್ರೀ.	109
ನಿಮ್ನ	10
ಹಿಂದೆ ಬಿದ್ದಿರುವ ಪ್ರಾಂತಗಳು	1
ಮಹಮ್ಮದೀಯ 29 ಪು. 1 ಸ್ತ್ರೀ.	30
ದೇಶೀಯ ಕ್ರೈಸ್ತರು	3
ಆಂಗ್ಲೋ ಇಂಡಿಯನರು	2
ಯೂರೋಪಿಯನರು	3
ವಾಣಿಜ್ಯ	7
ಭೂಸ್ವಾಮಿಗಳು	2
ವಿಶ್ವವಿದ್ಯಾಲಯ	1
ಕಾರ್ಮಿಕರು	7
	175

ವಾಣಿಜ್ಯ, ಪರಿಶ್ರಮ, ಗಣಿ, ತೋಟ ಈ ಸಂಸ್ಥೆಗಳ ಪ್ರತಿನಿಧಿಗಳನ್ನು ಯೂರೋಪಿಯನರು ಚುನಾಯಿಸಬೇಕೆ ಇಂಡಿಯನರು ಚುನಾಯಿಸಬೇಕೆ ಎಂಬ ವಿಷಯವನ್ನು ನಿರ್ಧರಿಸಲಿಲ್ಲ. ಆದುದರಿಂದ ಈ ಸಂಸ್ಥೆಗಳ ಪ್ರತಿನಿಧಿಗಳಲ್ಲಿ ಎಷ್ಟು ಮಂದಿ ಯೂರೋಪಿಯನರೂ ಇಂಡಿಯನರೂ ಇರಬೇಕೆಂದು ನಿರ್ಧರಿಸಿ ಹೇಳಲಾಗುವುದಿಲ್ಲ. ಆದರೂ ಈರೀತಿಯಾಗಿರಬಹುದು.

ರಾಷ್ಟ್ರ	ಯೂ.	ಇಂ.	ಮು.
ಮದರಾಸು	4	2	6
ಬೊಂಬಾಯಿ-ಸಿಂಧು	5	3	8
ಬಂಗಾಳ	14	5	19
ಸಂಯುಕ್ತ ರಾಷ್ಟ್ರಗಳು	2	1	3
ಪಂಜಾಬು		1	1
ಬಿಹಾರು-ಒರಿಸ್ಸಾ	2	2	4
ಮಧ್ಯರಾಷ್ಟ್ರ-ಬೀರಾರು	1	1	2
ಆಸಾಮು	8	3	11
ಸಿಂಧು	1	1	2
ಬೊಂಬಾಯಿ ಪ್ರತ್ಯೇಕವಾಗಿ	4	3	7

ಬೊಂಬಾಯಿನಲ್ಲಿ ಮಹಾರಾಷ್ಟ್ರರು

ಬೊಂಬಾಯಿ ಜನರಲ್ ಸ್ಥಾನಗಳಲ್ಲಿ ಸಿಂಧುವನ್ನು ಬೇರ್ಪಡಿಸಿದರೂ ಬಿಟ್ಟರೂ 8 ಸ್ಥಾನಗಳು ಮಹಾರಾಷ್ಟ್ರಗಳಿಗೆ ಪ್ರತ್ಯೇಕಿಸಲ್ಪಡುವುದು.

ಬಂಗಾಳಾ ನಿಮ್ನಜಾತಿಯವರು

ನಿಮ್ನ ಜಾತಿಯವರ ಸಂಖ್ಯೆ 10 ಕ್ಕಿಂತ ಹೆಚ್ಚಾಗಿರುವುದಿಲ್ಲ. ಜನರಲ್ ಸ್ಥಾನಗಳು 80 ರಲ್ಲಿ 10 ಸ್ಥಾನಗಳು ನಿಮ್ನ ಜಾತಿಯವರಿಗೆ ಪ್ರತ್ಯೇಕಿಸಲ್ಪಡುವುವು. ಉಳಿದ 70 ಜನರಲ್ ಸ್ಥಾನಗಳಾಗಿರುತ್ತವೆ.

ಪಂಜಾಬಿನಲ್ಲಿ ಭೂಸ್ವಾಮಿಗಳು

ಈ ಸ್ಥಾನಗಳಲ್ಲಿ ಒಂದು ಜಮೀನ್ದಾರರಿಗೆ ಕಾದಿಡಲ್ಪಡುವುದು. ಭೂಸ್ವಾಮಿಗಳ ಸ್ಥಾನಗಳಲ್ಲಿ 4 ಸ್ಥಾನಗಳಿಗೆ ಬೇರೆಯವರನ್ನು ಸಮ್ಮಿಶ್ರ ನಿಯೋ[illegible]

ಜಕ ವರ್ಗದವರು ಚುನಾಯಿಸುವರು. ಅವರಲ್ಲಿ 1 ಹಿಂದು, 1 ಸಿಖ್, 2 ಮಹಮ್ಮದೀಯರುಗಳಿರುವರು.

ಆಸಾಮಿನಲ್ಲಿ ಸ್ತ್ರೀಯರು

ಆಸಾಮಿನಲ್ಲಿ 1 ಸ್ತ್ರೀ ಸ್ಥಾನವಿರುವುದು. ಅದಕ್ಕೆ ಶಿಲ್ಲಾಂಗಿನ ಸಾಂಘಿಕೇತರ ನಿಯೋಜಕ ವರ್ಗದವರು ಚುನಾಯಿಸುವರು.

ಮೆಕ್ಡೊನಾಲ್ಡರವರ ಸಮಾಧಾನ ಪ್ರಕಟನೆ

ಭಾರತ ದೇಶದಲ್ಲಿ ಸಾಂಘಿಕ ಸಮಸ್ಯೆಯನ್ನು ಕುರಿತು ಬ್ರಿಟಿಷ್ ದೊರತನದವರು ಈ ದಿವಸ ಅತ್ಯಂತ ಮುಖ್ಯತಮವಾದ ಪ್ರಕಟಣೆಯನ್ನು ಮಾಡುವರು. ಆದುದರಿಂದ ನಾನು ಬರೀ ಮುಖ್ಯ ಮಂತ್ರಿ ಮಾತ್ರವಾಗಿಲ್ಲದೆ ಭಾರತ ಮಿತ್ರನಾಗಿಯೇ ಕಳೆದ 2 ವರ್ಷಗಳಿಂದಲೂ ಅಲ್ಪ ಸಂಖ್ಯಾಕರ ಸಮಸ್ಯೆಯನ್ನು ಕುರಿತು ಬಹಳ ಶ್ರದ್ಧೆಯನ್ನು ವಹಿಸಿರುವುದರಿಂದಲೇ ಈ ಪರಿಷ್ಕಾರವನ್ನು ಕುರಿತು ನಾನು ಒಂದೆರಡು ವಿಷಯಗಳನ್ನು ತಿಳಿಸಲಿಚ್ಛಿಸುತ್ತೇನೆ.

ಭಾರತ ದೇಶದ ಸಾಂಘಿಕ ವಿಷಯಗಳಲ್ಲಿ ಪ್ರವೇಶಿಸಬೇಕೆಂಬ ಅಭಿಪ್ರಾಯವು ನಮಗೆಷ್ಟು ಮಾತ್ರಕ್ಕೂ ಇರುವುದಿಲ್ಲ. ಇದನ್ನು ಭಾರತೀಯರೇ ಪರಿಷ್ಕರಿಸಿಕೊಳ್ಳುವಂತೆ ನಾನು ಮೊದಲನೆಯ ರೌಂಡುಟೇಬಲು ಸಭೆಯಲ್ಲೂ ಎರಡನೆಯ ಶಾಸನ ಸಭೆಯಲ್ಲೂ ಬಹಳ ಪ್ರಯತ್ನಿಸಿದೆನು. ನಾವು ಈ ಸಮಸ್ಯೆಯನ್ನು ಪರಿಷ್ಕರಿಸಲು ಪ್ರಯತ್ನಿಸಿದ್ದಲ್ಲಿ ಪ್ರತಿ ಸಂಘದವರೂ ತಮ್ಮ ಕೋರಿಕೆಯನ್ನನುಸರಿಸಿ ಅದನ್ನು ವಿಮರ್ಶಿಸುವರೆಂದು ನಾನು ಮೊದಲೇ ತಿಳಿದಿದ್ದೆನು. ಆದರೆ ಒಟ್ಟಿನ ಮೇಲೆ ದೇಶದ ಲಾಭವನ್ನೇ ಗಮನಿಸಬೇಕೆಂಬ ವಿಷಯವನ್ನು ಎಲ್ಲಾ ಸಂಘದವರು ಕೂಡ ಗ್ರಹಿಸಿರುವರೆಂದು ನಾನು ನಂಬುತ್ತೇನೆ. ಬ್ರಿಟಿಷ್ ಕಾಮನ್ಸ್ ವೆಲ್ತಿನಲ್ಲಿ ಇಂಡ್ಯಾಕ್ಕೆ ನೂತನ ಸ್ಥಾನವನ್ನು ಕೊಡುವುದಕ್ಕಾಗಿ ಏರ್ಪಾಟು ಮಾಡಲ್ಪಡುತ್ತಿರುವ ರಾಜ್ಯಾಂಗ ವಿಧಾನವನ್ನು ನೆರವೇರಿಸುವಲ್ಲಿ ಎಲ್ಲರೂ ಒಟ್ಟುಗೂಡಿ ಕೆಲಸ ಮಾಡಬೇಕಾಗಿದೆ.

ಎಲ್ಲರೂ ಅಂಗೀಕರಿಸಿದರೆ ಈ ಪರಿಷ್ಕಾರವನ್ನು ಬದಲಾಯಿಸಲಾಗುವುದು

ಸಾಂಘಿಕ ಸಮಸ್ಯೆಯನ್ನು ಭಾರತೀಯರು ತಂತಮ್ಮೊಳಗೇ ಬಗೆಹರಿಸಿಕೊಳ್ಳಲಾರದೆ ಹೋದುದರಿಂದ ರಾಜ್ಯಾಂಗ ವಿಧಾನವನ್ನು ನಿರ್ಮಿಸಲು ನಿರೋಧವುಂಟಾಗಿದೆ. ಆದರಿಂದ ವಿಧಿಯಿಲ್ಲದೆ ಬ್ರಿಟಿಷ್ ದೊರೆತನದವರು ಇದನ್ನು ಪರಿಷ್ಕರಿಸಲೆತ್ನಿಸಿದರು. ಇದನ್ನು ಪರಿಷ್ಕರಿಸಬೇಕೆಂದು ರೌಂಡು ಟೇಬಲು ಸಭೆಗೆ ಬಂದ ಎಲ್ಲಾ ಪಕ್ಷಗಳ ಪ್ರತಿನಿಧಿಗಳೂ ನನ್ನನ್ನು ಸಂಪೂರ್ಣವಾಗಿ ಕೋರಿದರು. ಅದರ ಮೇಲೆ ನಾನು ಆ ಸಭೆಯಲ್ಲಿ ವಾಗ್ದಾನವಾಡಿದೆನು. ತರುವಾಯ ಪಾರ್ಲಿಮೆಂಟಿನವರು ಕೂಡ ಅನುಮೋದಿಸಿದರು. ಆದರಿಂದ ದೊರೆತನದವರು ಈ ಪರಿಷ್ಕಾರವನ್ನು ಈ ದಿವಸ ಪ್ರಕಟಿಸುವವರಾದರು. ಇದಕ್ಕಿಂತಲೂ ಒಳ್ಳೇ ವಿಧಾನವನ್ನು ವಿವಿಧ ಸಂಘಗಳವರು ಇಷ್ಟರೊಳಗೆ ನಿರ್ಣಯಿಸಿದ್ದರೆ ತಪ್ಪಿಲ್ಲದಿದ್ದ ಪಕ್ಷದಲ್ಲಿ ಈ ವಿಧಾನವನ್ನು ಕಾಲಕ್ರಮೇಣ ಪಾರ್ಲಿಮೆಂಟ್ ಸಭೆಯಲ್ಲಿ ಉಪಾದಿಸಬೇಕೆಂದು ದೊರೆತನದವರು ಉದ್ದೇಶಿಸಿದ್ದರು.

ಯಾವಾಗಲಾದರು ವಿವಿಧ ಸಂಘಗಳವರೊಳಗೆ ಪರಸ್ಪರ ಅಂಗೀಕಾರವುಂಟಾದಲ್ಲಿ ನಾನು ಬಹಳವಾಗಿ ಸಂತೋಷಿಸುವೆನು. ಆದರೆ ಅಂತಹ ರಾಯಬಾರವನ್ನು ನಡೆಸುವುದರಿಂದ ಪ್ರಯೋಜನವೇನೂ ಆಗುವುದಿಲ್ಲವೆಂಬ ಭರವಸೆಯು ಹಿಂದಿನ ಅನುಭವದಿಂದ ದೊರೆತನದವರಿಗುಂಟಾಗಿರುವುದರಿಂದಲೇ ಅವರು ಅಂತಹ ರಾಯಬಾರವನ್ನು ಕಲ್ಪಿಸಲೆತ್ನಿಸುವುದಿಲ್ಲ. ಆದರೆ ಒಂದು ರಾಷ್ಟ್ರವನ್ನು ಕುರಿತಾಗಲಿ, ಅನೇಕ ರಾಷ್ಟ್ರಗಳನ್ನು ಕುರಿತಾಗಲಿ, ಭಾರತ ದೇಶವನ್ನೆಲ್ಲ ಕುರಿತಾಗಲಿ ಎಲ್ಲಾ ಸಂಘಗಳವರೂ ಏಕೀಭವಿಸಿ ಒಂದು ನಿರ್ಣಯವನ್ನು ಮಾಡುವುದಾದರೆ ಈ ಪರಿಷ್ಕಾರಕ್ಕೆ ಬದಲಾಗಿ ಅದನ್ನು ಉಪಪಾದಿಸಲು ದೊರೆತನದವರು ಸಿದ್ಧರಾಗಿಯೇ ಇರುವರು.

ಪ್ರತ್ಯೇಕ ನಿಯೋಜಕವರ್ಗಗಳ ಅವಶ್ಯಕತೆ

ರಾಷ್ಟ್ರಗಳಲ್ಲಿ ಅಲ್ಪಸಂಖ್ಯಾಕ ಸಂಘಗಳು ತಮ್ಮ ಹಕ್ಕುಗಳನ್ನು ಕಾಪಾಡಿಕೊಳ್ಳಲು ಪ್ರತ್ಯೇಕ ನಿಯೋಜಕ ವರ್ಗಗಳು ಮುಖ್ಯತಮವೆಂದು ಭಾವಿಸಿರುತಾರೆ. ಅನೇಕ ವರ್ಷಗಳಿಂದ ಪ್ರತ್ಯೇಕ ನಿಯೋಜಕ ವರ್ಗಗಳು ಏರ್ಪಟ್ಟು ಕೆಲಸಮಾಡುತ್ತಿವೆ. ರಾಜ್ಯಾಂಗಸಂಸ್ಕರಣ ಮಾಡಲ್ಪಟ್ಟ ಪ್ರತಿಸಾರಿಯೂ ಪ್ರತ್ಯೇಕ ನಿಯೋಜಕ ವರ್ಗಗಳು ಪರಿಗಣಿಸಲ್ಪಡುತ್ತಲಿದ್ದುವು.

ಈಗಲೂ ಅಲ್ಪಸಂಖ್ಯಾಕ ಸಂಘಗಳವರು ಪ್ರತ್ಯೇಕ ನಿಯೋಜಕ ವರ್ಗಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಿರುವುದರಿಂದ ಸಮಷ್ಟಿ ನಿಯೋಜಕವರ್ಗಗಳೇ ಇರಬೇಕೆಂದು ದೊರೆತನದವರು ಮುಖ್ಯವಾಗಿ ಕೋರುತ್ತಿದ್ದರು ಕೂಡ ಪ್ರತ್ಯೇಕ ನಿಯೋಜಕವರ್ಗಗಳನ್ನು ರದ್ದುಪಡಿಸಲು ಅವಕಾಶವಾಗಲಿಲ್ಲ. ಪ್ರತ್ಯೇಕ ನಿಯೋಜಕವರ್ಗಗಳು ಇದಕ್ಕೆ ಮೊದಲೇ ಏರ್ಪಡಿಸಲ್ಪಡಲುಂಟಾದ ಕಾರಣವನ್ನು ಕುರಿತು ನಾನು ಈಗ ಆಲೋಚಿಸಲಿಚ್ಛಿಸುವುದಿಲ್ಲ. ಅದು ಅನಾವಶ್ಯಕವು. ಇನ್ನು ಮೇಲೆ ಪ್ರತ್ಯೇಕ ರಕ್ಷಣವಿಧಾನದಲ್ಲಿ ಕೆಲಸವಿಲ್ಲದ ದೊಡ್ಡ ಸಂಘಗಳವರೂ, ಚಿಕ್ಕ ಸಂಘಗಳವರೂ ಸ್ನೇಹಭಾವದಿಂದ ಸೇರಿ ಶಾಂತಿಯಿಂದ ಕೆಲಸಮಾಡಬೇಕೆಂದು ನಾನು ಕೋರುತ್ತೇನೆ. ಈ ಮಧ್ಯೆ ದೊರೆತನದವರ ಪ್ರತ್ಯೇಕ ಆಧುನಿಕ ಪ್ರಾತಿನಿಧ್ಯ ವಿಧಾನವನ್ನೇ ಕಾಪಾಡಬೇಕಾಗಿರುತ್ತದೆ.

ನಿಮ್ನಜಾತಿಯವರ ಪರಿಸ್ಥಿತಿ

ನಿಮ್ನಜಾತಿಯವರು ಹೆಚ್ಚು ಸಂಖ್ಯೆಯಿಂದಿರುವ ರಾಷ್ಟ್ರಗಳ ಶಾಸನ ಸಭೆಗಳಲ್ಲಿ ಅವರಿಗೆ ವಿಶ್ವಾಸಪಾತ್ರರಾದವರೇ ಪ್ರತಿನಿಧಿಗಳಾಗಿರಬೇಕಲ್ಲದೆ ಶಾಶ್ವತವಾಗಿ ನಿಮ್ನಜಾತಿಯೊಂದು ಏರ್ಪಡಿಸಲ್ಪಡಕೂಡದು. ಆದುದರಿಂದ ನಿಮ್ನಜಾತಿಯವರು ಹಿಂದು ಸಮಷ್ಟಿವರ್ಗಗಳಲ್ಲೇ ಓಟು ಕೊಡುವರು. ಆ ಪ್ರಕಾರವಾಗಿ ಚುನಾಯಿಸಲ್ಪಟ್ಟ ಪ್ರತಿನಿಧಿಯು ನಿಮ್ನಜಾತಿಯಲ್ಲಿ ತನಗಿರುವ ಬಾಧ್ಯತೆಯನ್ನು ಗುರ್ತಿಸುವನು. ಆದರೆ 20 ವರ್ಷಗಳವರೆಗೆ ನಿಮ್ನಜಾತಿ ಓಟರುಗಳು ಹೆಚ್ಚಾಗಿರುವ ಸ್ಥಳಗಳಲ್ಲಿ ಪ್ರತ್ಯೇಕ ನಿಯೋಜಕವರ್ಗಗಳು ಕೂಡ ಇರುವವು. ಅವರು ಕೆಲವರನ್ನು ಆರಿಸಿಕೊಳ್ಳುವರು. ಇದರಿಂದ ನಿಮ್ನಜಾತಿಯವರಲ್ಲಿ ಕೆಲ ಮಂದಿ ಎರಡುವೇಳೆ ಓಟನ್ನು ಕೊಡಲು ಅವಕಾಶವಾಗುವುದಲ್ಲದೆ ಈಗಿನ ಸ್ಥಿತಿಯಲ್ಲಿ ಅವರ ಸ್ಥಿತಿಯನ್ನು ವೃದ್ಧಿಗೊಳಿಸಲಿಕ್ಕೂ ಅವರ ಹಕ್ಕನ್ನು ಕಾಪಾಡಲಿಕ್ಕೂ ಇದು ಅವಶ್ಯಕವೇ ಆಗುವುದು.

ಸ್ತ್ರೀಯರ ಹಕ್ಕುಗಳು

ಈಚೆಗೆ ಕೆಲ ವರ್ಷಗಳಿಂದಲೂ ಇಂಡ್ಯಾದಲ್ಲಿ ಸ್ತ್ರೀಯರ ಉದ್ಯಮವು ಪ್ರಧಾನೋದ್ಯಮಗಳಲ್ಲೊಂದಾಗೇರ್ಪಟ್ಟಿದೆ. ಇಂಡ್ಯಾದಲ್ಲಿ ಸ್ತ್ರೀಯರು ಹೆಚ್ಚು ವಿದ್ಯೆಯನ್ನು ಕಲಿತು ಹೆಚ್ಚು ಯೋಗ್ಯತೆಯನ್ನು ಪಡೆಯುವವರೆಗೂ ಇಂಡ್ಯಾ ದೇಶವು ಪಡೆಯಲಪೇಕ್ಷಿಸುವ ಸ್ಥಾನವನ್ನು ಹೊಂದಲಾರದು. ಸ್ತ್ರೀಯರಿಗೆ ಪ್ರತ್ಯೇಕ (ಕಮ್ಮಿಯಲ್ಲ) ಪ್ರಾತಿನಿಧ್ಯಕೊಡಲು ಬಹಳ ಪ್ರಬಲವಾದ ಆಕ್ಷೇಪ[illegible] ಗಳಿರುತ್ತವೆ. ಆದುದರಿಂದ ಸ್ತ್ರೀಯರಿಗೆ ಪ್ರತ್ಯೇಕ ಸ್ಥಾನಗಳನ್ನು [illegible] ಬೇಕು. ಎಲ್ಲಾ ಸಂಘಗಳಲ್ಲೂ ಸ್ತ್ರೀಯರಿಗೆ ಸ್ಥಾನವಿರಬೇಕು. [illegible] ಮಾರ್ಗವಿಲ್ಲ.

ಸದ್ಯದಲ್ಲಿ ಭಾರತದೇಶದಲ್ಲೇರ್ಪಟ್ಟ ಸ್ಥಿತಿಯ ಸಂಬಂಧವಾಗಿ ವಿವಿಧ ಸಂಘಗಳಲ್ಲಿ ಸಂಘರ್ಷಣವುಂಟಾದುದರಿಂದ [illegible] ಬೇಕೆಂಬ ನಿಷ್ಕಪಟವಾದ ಉದ್ದೇಶದಿಂದಲೇ ಈ ಪರಿಷ್ಕಾರವು ಮಾಡಲ್ಪಟ್ಟಿದೆ. ಆದುದರಿಂದ ಈಗ ಇದು ಯಾವ ಸಂಘದವರಿಗೆ ಸಂಪೂರ್ಣವಾದ ತೃಪ್ತಿಯನ್ನುಂಟುಮಾಡಲಾರದು. ಈ ಕಾರಣದಿಂದ ಇದು ನೂತನಶಾಸನದಲ್ಲಿ ಕೆಲಸ ನಡೆಯಲು ಸಾಧನಭೂತವಾಗಲಾರದು. ಈ ಸಮಸ್ಯೆಯನ್ನು ಪರಿಷ್ಕರಿಸಲು ಭಾರತೀಯರು ಅನೇಕವೇಳೆ ಪ್ರಯತ್ನಿಸಿ ವಿಫಲರಾದ ವಿಷಯವನ್ನು ಮರೆಯಬಾರದು.

ಇದನ್ನು ಭಾರತೀಯರೇ ಪರಿಷ್ಕರಿಸಬಲ್ಲರು. ಹೊಸ ರಾಜ್ಯಾಂಗ ವಿಧಾನವನ್ನು ಪೂರೈಸಗೊಳಿಸಲು ಇನ್ನೂ ಬಹಳ ವಿಷಯಗಳನ್ನು ಪರಿಷ್ಕರಿಸಬೇಕಾಗಿರುತ್ತದೆ. ಆದರೆ ಅವನ್ನು ಪರಿಷ್ಕರಿಸಲು ಇದುವರೆಗೆ ಸಾಂಘಿಕ ವಿವಾದಗಳಿಂದ ವಿರೋಧಹುಟ್ಟಿದೆ. ಈಗೀ ಪರಿಷ್ಕಾರದಿಂದ ಆ ನಿರೋಧವು ಹೋಗುವುದೆಂದು ದೊರೆತನದವರು ನಂಬುತ್ತಾರೆ. ಹೊಸ ರಾಜ್ಯಾಂಗವಿಧಾನವು ನೆರವೇರಲು ವಿವಿಧ ಸಂಘಗಳವರು ಸದ್ಭಾವದಿಂದ ಸಹಕರಿಸಿದರೆ ಮುಖ್ಯಾವಶ್ಯಕವಾದ ವಿಷಯಗಳನ್ನು ಈ ವಿಷಮ ಸಮಯದಲ್ಲಿ ವಿವಿಧ ಸಂಘಗಳ ನಾಯಕರುಗಳೆಲ್ಲರೂ ಗ್ರಹಿಸಬೇಕು" ಎಂದು ಮೆಕ್ಡೊನಾಲ್ಡರವರು ಪ್ರಕಟಿಸಿರುತ್ತಾರೆ.

ವಾರ್ಷಿಕೋತ್ಸವಗಳು.

ಪ್ರತಿ ವರ್ಷದ ಪದ್ಧತಿಯಂತೆ ಕಳೆದ ತಾ|| 5 ನೆಯ ಶುಕ್ರವಾರ ಬ್ಯಾಡಗಿಯಲ್ಲಿರುವ ಶ್ರೀ ಶಿವಯೋಗೀಶ್ವರ ವೀರಶೈವ ಬೋರ್ಡಿಂಗಿನ 7 ನೇ ವರ್ಷದ ಉತ್ಸವವೂ ಶ್ರೀ ಲಿಂಗರಾಜ ವಾಚನಾಲಯದ 11 ನೆಯ ವರ್ಷದ ಉತ್ಸವವೂ ಬಹು ವಿಜೃಂಭಣೆಯಿಂದ ನೆರವೇರಿದುವು. ಈ 2 ಸಭೆಗಳ ಅಧ್ಯಕ್ಷಸ್ಥಾನವನ್ನು ಶ್ರೀಯುತ ಕಬ್ಬೂರ ದಾನಪ್ಪನವರೇ ವಹಿಸಿದ್ದರು ಮ|| ಸೊ. ಚಿ. ಜೋಶಿ, ಇಂಡೀಮಠ ಇವರ ಭಾಷಣಗಳಾದುವು. ಸಂಸ್ಥೆಗಳ ಕಾರ್ಯಕಾರೀ ಮಂಡಲದ ಸ್ಥಳಗಳಲ್ಲಿ ವಿಶೇಷ ಬದಲಾವಣೆಗಳೇನೂ ಆಗಲಿಲ್ಲ. ಭಾಷಣಕಾರರಿಂದ ಅಧ್ಯಕ್ಷ ಮಹನೀಯರ ನಿಜವಾದ ಗುಣಾನುವರ್ಣನೆಯು ಮಾಡಲ್ಪಟ್ಟಿತು. ರು. ಫ. ಸಂಶಿಣ್ಣನವರ ಸೆಕ್ರೆಟರಿ,

ಶ್ರೀ ಲಿಂಗರಾಜ ವಾಚನಾಲಯ.

11 ನೆಯ ಅಖಿಲ ಶ್ರೀಮದ್ವೀರಶೈವ ಮಹಾಸಭೆಯ ಶಿಕ್ಷಣ ಸಂಸ್ಥಾ ಕಮಿಟಿ ಇವರಿಂದ ಪ್ರಕಟಿಸಲ್ಪಟ್ಟ

ನೋಟೀಸು.

ಈ ಸಾರೆ ಧಾರವಾಡದಲ್ಲಿ ಡಿಸಂಬರ್ ತಿಂಗಳಲ್ಲಿ 11 ನೇ ಅಖಿಲ ಶ್ರೀಮದ್ವೀರಶೈವ ಮಹಾಸಭೆಯು ಕೂಡುವದಿದ್ದು ಆ ಕಾಲಕ್ಕೆ ವೀರಶೈವ ಶಿಕ್ಷಣ ಸಂಸ್ಥೆಗಳ ಸಮಿತಿಯನ್ನು ಕೂಡಿಸುವ ಯೋಜನೆಯನ್ನು ಮಾಡಿದ್ದು ಅದರಲ್ಲಿ ವೀರಶೈವ ಶಿಕ್ಷಣ ಮತ್ತು ಶಿಕ್ಷಣ ಸಂಸ್ಥೆಗಳ ಸಂಬಂಧವಾಗಿ ವಿಚಾರಿಸತಕ್ಕದ್ದದೆ. ಕಾರಣ ಪ್ರತಿಯೊಂದು ವೀರಶೈವ ಶಿಕ್ಷಣ ಸಂಸ್ಥೆಯವರು ಚರ್ಚಿಸತಕ್ಕ ವಿಷಯಗಳೇನಾದರೂ ಇದ್ದರೆ ಅವುಗಳನ್ನು ಮತ್ತು ತಮ್ಮ ಸಂಸ್ಥೆಯ ಪೂರ್ಣ ಹೆಸರು ವಿಳಾಸಗಳನ್ನು ನಮಗೆ ಸೆಪ್ಟಂಬರ್ ತಾ|| 15 ರೊಳಗಾಗಿ ತಿಳಿಸಬೇಕೆಂದು ವಿನಂತಿ ಇದೆ. ಮುಂದಿನ ಕಾರ್ಯಕ್ರಮವನ್ನು ಸಕಾಲದಲ್ಲಿ ತಿಳಿಸುತ್ತೇವೆ. ಎಸ್.ಎಸ್. ಬಸವನಾಳ್,

ಗೌರವ ಕಾರ್ಯದರ್ಶಿ ಶಿಕ್ಷಣ ಸಂಸ್ಥಾ ಕಮಿಟಿ
ಶ್ರೀಮದ್ವೀರಶೈವ ಮಹಾಸಭಾ, ಧಾರವಾಡ.

ನಾರಿನವಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರ ತರಿಸಿಕೊಳ್ಳಿರಿ. ಕಿ. ೧| ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

18 M. C

೧೯೩೨ ನೆಯ ಇಸವಿ ಆಗಸ್ಟ್ ತಾ|| ೨೨ರಿಂದ ಆಗಸ್ಟ್ ತಾ|| ೨೮ರ ವರೆಗೆ ಸಲ್ಲುವ ಶಾಲಿವಾಹನಶಕೆ ೧೮೫೪ನೆಯ ಅಂಗಿರಸನಾಮಸಂವತ್ಸರದ ಶ್ರಾವಣ ಬಹುಳ ಷಷ್ಠಿಯಿಂದ ಶ್ರಾವಣ ಬಹುಳ ದ್ವಾದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸಿಂಹ ಮಾಸ
22	ಸೋಮ	ಷಷ್ಠಿ	31-30	ಅಶ್ವಿ	8-44	7
23	[1] ಮಂಗಳ	ಸಪ್ತ	36-27	ಭರ	14-55	8
24	[2] ಬುಧ	ಅಷ್ಟ	41-2[illegible]	ಕೃತ್ತಿ	12-24	9
25	ಗುರು	ನವ	45-51	ರೋಹಿ	27-26	10
26	[3] ಶುಕ್ರ	ದಶ	49-21	ಮೃಗ	32-41	11
27	[4] ಶನಿ	ಏಕಾ	51-44	ಆರ್ದ್ರಾ	36-56	12
28	ಭಾನು	ದ್ವಾದ	52-53	ಪುನ	39-59	13

(1) ಜನ್ಮಾಷ್ಟಮಿ, ಮಂಗಳಗೌರೀವ್ರತ, ಮಳೆನಕ್ಷತ್ರ-ಮಘ ೪ ನೆಯ ಪಾದ. (2) ಕೃಷ್ಣ ಜಯಂತಿ. (3) ಮಳೆನಕ್ಷತ್ರ-ಮಘ ೪ ನೆಯ ಪಾದ. (4) ಶ್ರಾವಣಶನಿವಾರ.

ಮೈಸೂರು : ವೈ. [illegible] ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG. N. O. M. 918

ಮೈಸೂರ್ ಸ್ಟಾರ್.

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ವೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ೧೯೩೨ ನೆಯ ಇಸವಿ ಆಗಸ್ಟ್ ತಾರೀಖು ೨೯ ನೆಯ ಸೋಮವಾರ [ಸಂಚಿಕೆ ೩೫

1932 ನೆಯ ಇಸವಿಯ ಮೈಸೂರು ದಸರಾ ವಸ್ತುಪ್ರದರ್ಶನ.

ಇಡೀ ಭರತಖಂಡದಲ್ಲೆಲ್ಲಾ ನಿಮ್ಮ ವಸ್ತುಗಳಿಗೆ ಗಿರಾಕಿಯನ್ನು ಪಡೆಯುವ ಅಭಿಲಾಷೆಯು ನಿಮಗಿದೆಯೆ?

ದಸರಾ ಕಾಲದಲ್ಲಿ ಭರತಖಂಡದ ಸಮಸ್ತ ಪ್ರಾಂತಗಳಿಂದಲೂ ಧನಿಕರಾದ ಜನರು ಗುಂಪು ಗುಂಪಾಗಿ ಮೈಸೂರು ನಗರಕ್ಕೆ ಬರುತ್ತಾರೆ. ಅವರು ನಿಮ್ಮ ವಸ್ತುಗಳನ್ನು ಕೊಳ್ಳುವ ಭರವಸೆಯು ವಿಶೇಷವಾಗಿದೆ.

ಅವರು ನಿಮ್ಮ ಸರಕುಗಳನ್ನು 1932 ನೆಯ ಇಸವಿ ಅಕ್ಟೋಬರು 1 ರ ಲಾಗಾಯಿತು 15 ನೆಯ ತಾರೀಖಿನವರೆಗೂ ನಡೆಯುವ ಮೈಸೂರು ದಸರಾ ವಸು ಪ್ರದರ್ಶನದಲ್ಲಿ ಅಜಮಾಯಿಷಿಮಾಡಿ ನೋಡುವುದಕ್ಕೆ ಅವಕಾಶಕೊಡಿ.

ಪ್ರದರ್ಶಕರಿಗೆ ಸಮಸ್ತ ಸೌಕರ್ಯಗಳನ್ನೂ ಒದಗಿಸಲಾಗುವುದು.

ಪ್ರದರ್ಶನಕ್ಕೆ ಸಂಬಂಧಪಟ್ಟಒಂದು ಕೈಪಿಡಿಯನ್ನು ಪ್ರಕಟಿಸುತ್ತೇವೆ. ಇದಕ್ಕೆ ಹಿಂದಣ ವರುಷಗಳಂತೆಯೇ ಅತ್ಯಧಿಕವಾಗಿ ಅದರ ಪ್ರತಿಗಳು ಮಾರಾಟವಾಗುವುವು. ಅದರಲ್ಲಿ ಕೆಲವು ಜಾಹಿರಾತುಗಳಿಗೆ ಮಾತ್ರವೇ ಸ್ಥಳವಿರುತ್ತದೆ.

"ಪ್ರಾಸ್ಪೆಕ್ಟಸ್" ಎಂಬ ಪ್ರಸಿದ್ಧಪತ್ರಿಕೆಗಾಗಿಯೂ ಜಾಹಿರಾತು ಪ್ರಕಟಣೆಯ ದರಗಳು ಮುಂತಾದವುಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

[60—9] ಸೆಕ್ರೆಟರಿ, ಮೈಸೂರು ದಸರಾ ಎಗ್ಸಿಬಿಷನ್ ಕಮಿಟಿ,
ಅಠಾರಾಕಚೇರಿ, ಬೆಂಗಳೂರು.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕದ. [ಸ್ಟರ	ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಡ್ಲ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು, ನಿದ್ದೆ ಕಡಿಮೆ, ಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ಶರತರೀತ ತರುಣರಂತೆ ಕಾಮಿಜಾ ಆಗುತ್ತದೆ. ಕಾಂತಿ, ಸಂತೋಷ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ಗೋಲಿಯ ಒಂದು ಡಬ್ಬಿಗೆ ೩| ರೂಪಾಯಿ. ಟಪಾಲು ಖರ್ಚ ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಉಳಿದ ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಇದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣ ಚೂರ್ಣ.

ಎಲ್ಲ ಬಗ್ಗೆದ ಸೆರಗು, ಮುಟ್ಟಾಗುವದು ಅನಿಯಮಿತತನ, ಹೆಚ್ಚು ಕಡಿಮೆ ಹೊಟ್ಟೆ ನೋವು ಮುಟ್ಟಾಗೋಣ, ಮುಟ್ಟಾಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, [illegible] ಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತದೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ಗೋಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

ಪತ್ತಾ ಹೋಲಸೇಲ :—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ. ಎಂ. ಎಸ್. ಎಂ.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಸಚಿತ್ರ ವೀರಶೈವ ವಿವಾಹವಿಧಿ।	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾಮುಂಡೇಶ್ವರೀ[illegible]	೦—೫—೦	೦—೧೦—೦
ಹರಿಹಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರ[illegible]	೦—೧—೦	೦—೬—೦
ಬಸವೇಶ್ವರವಚನ	೦—೩—೦	೦—೧೩—೦
ಸಚಿತ್ರ ಕರ್ನಾಟಕ[illegible]	೦—೮—೦	೦—೧೩—೦
ಸಚಿತ್ರ ಶತಕತ್ರಯ	೧—೦—೦	೧—೬—೦

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು [illegible] ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ [illegible]



(Registerd Trade Mark)

[illegible]

[illegible]—[illegible]

ಸೂಚನೆ.

ಬರುವ ಶನಿವಾರ ಭಾನುವಾರ ಗೌರೀ ಗಣೇಶನ ಹಬ್ಬದ ಪ್ರಯುಕ್ತ ತಾ॥ 5-9-32 ರ ಸ್ಟಾರ್ ಪತ್ರಿಕೆಯು ಪ್ರಕಟವಾಗುವುದಿಲ್ಲ—ಸಂ.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಆಗಸ್ಟ್ ತಾ॥ ೨೯ ನೆಯ ಸೋಮವಾರ.

Mr. RAMA IYER AGAIN

Our remarks on the mischievous editorial of the *Daily Post* about the so-called obstruction of some communalists to the efforts of Mr. T. G. Rama Iyer as Municipal President and exposure of some of his philanthropic monuments have upset the mind evidently of the real author of the previous editorial under the caption "Dissensions in the Capital." The dissensions in the capital were shown to be so much of a degenerate myth as also the other claims which was made on behalf of Mr. Iyer. We also said that if the writer had confined himself to a panegyric of Mr. Iyer achievements without trotting out the communal obstruction and blaming some of the councillors whose experience in Municipal work and services for the Municipality have been infinitely greater than that of the President who had come afresh, we would have no cause to complain and we would have let the flatterer alone severely. But when he tried to sling mud at others and wanted to make out that the failure of Mr. Iyer in carrying out the improvements in the city was due to the communal obstruction we could not let go that piece of heresy unchallenged. In a reply which is "contributed" to the *Daily Post* of the 24th August a laboured attempt has been made to reply to our remarks. Instead of making vague generalisations we wish the contributor to have taken any particular portion of our remarks and answered it even as we did the original article. We pointed out the accuracy of the language of the previous article. Here comes another. It would appear that "the machinations of a section of the Council supported by a local communal paper—evident our good selves—have been *thwarting!* the lasting good that Mr. Iyer has done. We wonder how this feat could be done. It might please him to call our remarks base imputations and perverted conclusions and say that he does not want to answer them. Our only claim is that he dare not answer them and we challenge him to do that. We do not grudge the contributor in the slightest his encomiums to Mr. Iyer but we suppose that in every one of the achievements put to Mr. Iyer's credit the councillors one and all have had their contribution. We may be forgiven if we say that the question of compulsory daily conservancy was being agitated for by the councillors for a long time even prior to Mr. Iyer assuming presidentship. Every body knows where the inspiration for tarring roads came from and the Government gave a loan of Rs. 2 lakhs for the purpose. As for its open spaces and lovely parks we can only say that it is madness to ascribe them to Mr. Iyer. We would like to know which are the open spaces and lovely parks which he opened. The only one park going in the name of late Sir M. Kantaraj Urs for the use of gosha ladies and children was neglected by Mr. Iyer and there was a lot of complaint about it. As regards the 'compost' manufacture the contributor himself says the scientists pointed the way. As regards the administrative side of it, it is common knowledge that Mr. Iyer's attempt to have it done in the Sewage Farm so close to the town resulted in a hue and cry and even the Member of Government had to run up to set matters aright. So much is talked about the income of Sewage Farm. But who cannot realise that what is being realised now is due to the good work done by the Horticultural Department in preparing the lands and making them fit for cultivation. Further, we wonder whether the public at large are aware of the fact that nearly Rs. 12,000 of the income shown is on account of grass supplied to the Municipal bullocks. The writer when he insists upon stating that there has been obstruction by a section has not the goodness to quote one single instance to substantiate that "base imputation." There has been perfect co-operation in all the good measures intended for the good of the city. There has been wholesome corrective in all cases of real harm done to the interests of rate-payers. The writer traces the origin of the so called schism which does not exist and ascribes it to the prosecution of a Municipal Councillor who it would appear did not observe the sanitary rules. The writer should be ashamed to say that he did not observe the sanitary rules when the judicial finding has gone to show that the prosecution is a "degenerate myth." The attempt to harm an innocent councillor has miserably failed, and that, in spite of the stupendous efforts of seeking transfer from one court to another swearing to affidavits engaging one vakil over another and incurring an expenditure from the rate-payers contribution out of all proportion to the needs of the case. The writer laments over the opposition to record the valuable services of Mr. Iyer. Will he just answer why they did not oppose in the case of Mr. N. Madhava Rao or Mr. C. S. Kuppuswamy Iengar. Could it be said that they displayed any communal bias in the one case while they did not in the other? "As you sow so will you reap." The whole relationship is one of reciprocity. There is no reason why one should claim the privilege of abusing his power and not taking its consequences. We hope this will give a quietus to the contributor so that every one may forget the past and get on with the work before us.

Sri Krishnarajendra Mills, Ltd.

The General Meeting of Sri Krishnarajendra Mills, Ltd., Mysore was held on the 13th August 1932 when the Report of the Directors was placed before the share-holders. The whole year's working showed a loss of Rs. 1,65,254 which comprised of a payment of Rs. 1,35,994 towords interest alone. The provision for depreciation amounted to Rs. 1,31,390, which we believe must have gone towards renewals and replacements. It was evident that the change in the management had resulted in a perceptible improvement in the working of the Mills. There is every hope that the next year will show a decided progress and we are fairly certain that they will see the profit side after a long period of years of losses. It would appear that the purchase of cotton by the General Manager during a favourable time has resulted in substantial advantage. He seems to have secured efficient agents outside the State and there is excellent demand for the underwear manufactured by the Mills. Possibly one of the lines of development would be to introduce weaving also and it would be just as well if the question is seriously examined. We congratulate the management on the progress they have showe so far and we hope that they will continue thn work with unabated zeal and place the Mills on a thoroughly sound and profitable footing.

ರಾಜಧಾನಿಯಲ್ಲಿ ಮತವೈಷಮ್ಯ.

(೨)

ಮ॥ ಟಿ. ಜಿ. ರಾಮಯ್ಯರ್‌ರವರು ರಾಜಧಾನಿಯನ್ನು ಅಭಿವೃದ್ಧಿಪಡಿಸುವುದರಲ್ಲಿ ಪ್ರತಿಬಂಧಕವು ಮನಃಪೂರ್ವಕವಾಗಿ ಕಲ್ಪಿಸಲ್ಪಟ್ಟಿತೆಂಬುದು ಇತರ ವಿಚಾರಗಳಂತೆಯೇ ಜಘನ್ಯವಾದ ಅನೃತವೆಂದು ನಮ್ಮ ಕಳೆದ ಸಂಚಿಕೆಯಲ್ಲಿ ಹೇಳಿರುತ್ತೇವೆ. ಶ್ರೀಮನ್ಮಹಾರಾಜರವರಿಗೂ ಅವರ ಸಚಿವ ಶ್ರೇಷ್ಠರಿಗೂ ಪ್ರಿಯತಮವಾದ ಪುರಾಭಿವೃದ್ಧಿ ಕಾರ್ಯಗಳಲ್ಲಿ ಪ್ರತಿಬಂಧಕ ಕಲ್ಪಿಸಲ್ಪಟ್ಟಿತೆಂಬುದು ಸುಳ್ಳಾಗಿರುವಂತೆ ರಾಜಧಾನಿಯಲ್ಲಿ ಮತಕಲಹವು ಹುಟ್ಟಿಸಲ್ಪಟ್ಟು ಬೆಳೆಸಲ್ಪಡುತ್ತಿದೆ ಎಂಬುದೂ ಹೇಯವಾದ ಸುಳ್ಳೆಂದು ಈಗ ತೋರಿಸಿಕೊಡತಕ್ಕವರಾಗಿದ್ದೇವೆ "ರಾಜಧಾನಿಯ ಸ್ಥಿತಿಯು ಇಷ್ಟು ವಿಷಮವಾಗಿರುತ್ತದೆಂಬುದನ್ನು ನಾವು ನಂಬುತ್ತಿರಲಿಲ್ಲ, ಆದರೆ ಬಹಳ ನಂಬಲರ್ಹರಾದವರಿಂದ ತಿಳಿದು ಬಂದಿರುವ ಪ್ರಯುಕ್ತ ನಾವು ನಂಬಬೇಕಾಗಿರುತ್ತದೆ" ಎಂದು ಡೇಲಿಪೋಸ್ಟ್ ಪತ್ರಿಕೆಯು ಬರೆದಿರುತ್ತದೆ. ಇಂತಹ ಅಭಿಪ್ರಾಯವು ಚಂದ್ರಮಂಡಲದಲ್ಲಾಗಲಿ ಪಾತಾಳದಲ್ಲಾಗಲಿ ವಾಸಮಾಡತಕ್ಕವರ ವಿನಾ ಇತರರಿಗೆ ಹೊಳೆಯುವುದಿಲ್ಲ. ರಾಜಧಾನಿಯಲ್ಲಿ ಮತವೈಷಮ್ಯವಿರುವುದನ್ನು ಕಂಡು ಹಿಡಿದಿರುವವರಾರು ? ಇಂತಹ ವಿಚಾರ ಶೂನ್ಯವೂ ಬೇಜವಾಬ್ದಾರಿಯೂ ಆದ ಲೇಖನವನ್ನು ಬರೆಯುವುದು ಡೇಲಿ ಪೋಸ್ಟ್ ಪತ್ರಿಕೆಯು ಹೇಳಿರುವಂತೆ ಮಹಾ ಅಪರಾಧವಾಗಿರುತ್ತದೆ. ಈ ಪತ್ರಿಕೆಗೆ ಅಂತಹ ಎದೆಗಾರಿಕೆಯಿದ್ದರೆ ಮತವೈಷಮ್ಯವಿರುವುದಕ್ಕೆ ಒಂದು ನಿದರ್ಶನವನ್ನಾದರೂ ಕೊಡಲಿ, ನೋಡೋಣ. ಮ್ಯುನಿಸಿಪಲ್ ಕೌನ್ಸಿಲಿನಲ್ಲೂ, ಟ್ರಸ್ಟ್ ಬೋರ್ಡಿನಲ್ಲೂ ಮ॥ ರಾಮಯ್ಯರ್‌ರವರಿಗೆ ಹೆಚ್ಚು ಮೆಜಾರಿಟಿಯಿದ್ದರೂ ಅವರ ಕಾರ್ಯನಿರ್ವಾಹದಲ್ಲಿ ಪ್ರತಿಬಂಧಕವಿದ್ದಿತೆಂದು ಹೇಳಲ್ಪಟ್ಟಿದೆ. ಸ್ವತಂತ್ರಾಡಳಿತದ ಸ್ಥಾನಿಕ ಸಂಸ್ಥೆಗಳಲ್ಲಿ ಅದರಲ್ಲೂ ಸರ್ಕಾರಿಯಧಿಕಾರಿಯ ಆಧಿಪತ್ಯದಲ್ಲಿ ಮೆಜಾರಿಟಿ ಮೈನಾರಿಟಿ ತಾರತಮ್ಯಕ್ಕೆ ಅವಕಾಶ ವಿರಳವಾದದಾಗಿದ್ದರೂ, ಅವರು ಮೆಜಾರಿಟಿಯನ್ನು ಏರ್ಪಡಿಸಿಕೊಂಡಿದ್ದಾಗ್ಯೂ ಅವರ ಕಾರ್ಯಗಳು ಮೈನಾರಿಟಿಯವರಿಂದ ಪ್ರತಿಬಂಧಕ ಪಡಿಸಲ್ಪಡುತ್ತಿದ್ದಿತೆಂಬುದು ಎಂತಹವನಿಗಾದರೂ ಜೋಜಿಗವನ್ನುಂಟುಮಾಡದೆ ಇರುವುದಿಲ್ಲ. ಮ॥ ರಾಮಯ್ಯರ್‌ರವರು ಬಹಳ ಧರ್ಮಿಷ್ಟರಾಗಿರುವುದರಿಂದ ಕಕಸುಗಳನ್ನು ತಮ್ಮ ಸ್ವಂತ ದುಡ್ಡಿನಿಂದ ಕಟ್ಟಿಸಿಕೊಟ್ಟು ವೆಚ್ಚದ ಮೊಬಲಗನ್ನು ಬಹಳ ಸುಲಭ ಕಂತಿನಮೇಲೆ ತೆಗೆದುಕೊಳ್ಳುತ್ತೇವೆಂದು ಹೇಳಿದಾಗ್ಯೂ ಅಸಂತುಷ್ಟರು ಅವಕಾಶಕೊಡಲಿಲ್ಲವೆಂದು ಬಹಳ ಭರವಸೆಯಿಂದ ತಿಳಿದುಬಂದಿರುವುದಾಗಿ ಈ ಪತ್ರಿಕೆಯು ಬರೆದಿರುತ್ತದೆ. ಇಂತಹ ಉದಾರ ಧರ್ಮಬುದ್ಧಿಗಾಗಿ ತಲೆಯಮೇಲಿನ ಟೊಪ್ಪಿಗೆಯನ್ನು ತೆಗೆದು ವಂದಿಸಬೇಕು ! ಆದರೆ ಮ॥ ಅಯ್ಯರ್‌ರವರು ಎಲ್ಲಿ ಯಾವಾಗ ಮಾಡಿದ ವಾಗ್ದಾನವು ಮಣ್ಣು ಗೂಡಿಸಲ್ಪಟ್ಟಿತೆಂಬುದನ್ನು ತಿಳಿಯಲ್ಲಿಚ್ಛಿಸುತ್ತೇವೆ. ಇಂತಹ ಧರ್ಮೌದಾರ್ಯ ವಾಗ್ದಾನವು ಮಾಡಲ್ಪಟ್ಟುದು ಮತ್ತು ಅದು ಪ್ರತಿಭಟಿಸಲ್ಪಟ್ಟುದು ಈ ಪತ್ರಿಕೆಯ ವಿನಾ ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ಮತ್ತಾರಿಗೂ ಗೋಚರವಾಗಲಿಲ್ಲವೆಂದು ಅದಕ್ಕೆ ನಾವು ತಿಳಿಯ ಹೇಳಬಹುದಲ್ಲವೆ ? ಮ॥ ರಾಮಯ್ಯರ್‌ರವರು ಬಹಳ ಧರ್ಮಿಷ್ಠರೆಂದು ಈ ಪತ್ರಿಕೆಯು ಹೊಗಳಿರುವುದೆಷ್ಟರಮಟ್ಟಿಗೆ ನಿಜವೆಂಬುದನ್ನು ವಿಮರ್ಶಿಸೋಣ. ಸಂಗೀತ ಶಾಸ್ತ್ರರತ್ನ ವಾಸುದೇವಾಚಾರ್ಯರಿಗೆ ಬಹುಮಾನಮಾಡಲು ತಮ್ಮ ಅಧ್ಯಕ್ಷತೆಯಲ್ಲೇರ್ಪಟ್ಟಿದ್ದ ಸಭೆಯಲ್ಲಿ ಬಡ ಸಂಬಳಗಾರರು ಸಹ 1 ರೂ. ಗಿಂತ ಹೆಚ್ಚಾಗಿಯೂ, ಕೆಲರು 5, 10, 20 ರಂತೆಯೂ ಚಂದಾದ್ರವ್ಯವನ್ನು ಕೊಟ್ಟಿರುವಾಗ್ಗೆ ಸಂಗೀತಗಾರರ ಪ್ರೋತ್ಸಾಹಕರೂ ಸ್ವತಃ ಸಂಗೀತಗಾರರೂ ಆದ ಮ॥ ಅಯ್ಯರ್‌ರವರು 1 ರೂ. ಚಂದಾಕೊಟ್ಟರು ಮತ್ತು ಕೆಲ ವರ್ಷಗಳ ಹಿಂದೆ ಬ್ರಾಹ್ಮಣ ಅನಾಥಾಲಯಕ್ಕೆ 30 ರೂ. ವಾಗ್ದಾನ ಮಾಡಿದ್ದು 1 ರೂ. ಯನ್ನು ಕೊಟ್ಟರು, ಅಲ್ಲದೆ ಬಿಡಾರಕೃಷ್ಣಪ್ಪನವರ ರಾಮಮಂದಿರಕ್ಕೆ ಸಹಾಯದ್ರವ್ಯವನ್ನೆತ್ತುವ ಪಟ್ಟಿಯಲ್ಲಿ 25 ರೂ. ಗಳನ್ನು ಬರೆದು ಅದನ್ನು ಕೇಳಲಿಕ್ಕೆ ಬಂದವರಿಗೆ, ಇತರರು ಕೊಡುವಂತೆ ಪ್ರೋತ್ಸಾಹಿಸುವುದಕ್ಕಾಗಿ ಚಂದಾಪಟ್ಟಿಯಲ್ಲಿ ಬರೆದುದರ ವಿನಾ ವಾಸ್ತವ್ಯವಾಗಿ ಕೊಡುವುದಕ್ಕಲ್ಲವೆಂದು ಹೇಳಿ ಏನನ್ನೂ ಕೊಡಲಿಲ್ಲ. ಈ ವಿಚಾರವು, ಪಾಪ ! ಡೇಲಿಪೋಸ್ಟ್ ಪತ್ರಿಕೆಗೆ ತಿಳಿಯದು. ಮ॥ ಅಯ್ಯರ್‌ರವರ ಇಂತಹ ಧರ್ಮೌದಾರ್ಯ ಕಾರ್ಯಗಳೆಷ್ಟೋ ಇವೆ ! ಕೈ॥ ಎಂ ಎಲ್. ವರ್ಧಮಾನಯ್ಯನವರಿಗೆ ಪ್ರಾಣಾಪಾಯಕರವಾದ ಸಂದರ್ಭವು ಪ್ರಾಪ್ತವಾಗಿದ್ದಿತೆಂದು ಪ್ರಕೃತ ಸಂದರ್ಭದಲ್ಲಿ ಸೂಚಿಸಿರುವುದು, ಹಿಂದು ಮಹಮ್ಮದೀಯ ಮತೀಯರಲ್ಲಿ ಪರಸ್ಪರ ಮನಸ್ತಾಪವನ್ನು ಹುಟ್ಟಿಸಬೇಕೆಂಬ ದುಷ್ಟ ಹೇತುವಿನಿಂದಲ್ಲದೆ ಮತ್ತೆ ಬೇರೆ ಇಲ್ಲವು. ಅಂತಹ ಮನಃಬೇದವುಂಟಾಗಿರಲಿಲ್ಲ. ಒಂದುವೇಳೆ ಉಂಟಾಗಿದ್ದರೂ ಅದನ್ನು ಈಗ ಸೂಚಿಸುವುದರಿಂದ ಪರಸ್ಪರ ವೈಷಮ್ಯ ಹುಟ್ಟಿ ಪ್ರಬಲಿಸುವುದು ಖಂಡಿತ. 12 ವರ್ಷಗಳ ಹಿಂದೆ ನಡೆದಿತೆಂದು ಹೇಳುವ ನಿರಾಧಾರವಾದ ಸಂದರ್ಭವನ್ನು ಮತವೈಷಮ್ಯವನ್ನು ಹುಟ್ಟಿಸುವ ಉದ್ದೇಶದಿಂದ ಬರೆಯುವುದು ಪೈಶಾಚಕೃತ್ಯವೇ ಸರಿ. ಈ ಡೇಲಿಪೋಸ್ಟು ಪತ್ರಿಕೆಯು ತನಗೆ ವಿಷಯವನ್ನು ಸಂಗ್ರಹಿಸಿಕೊಟ್ಟವರ ಕುತಂತ್ರಕ್ಕೆ ವಶವಾದುದಕ್ಕಾಗಿ ಚಿಂತಿಸುತ್ತೇವೆ. ಈ ಅಪ್ರಿಯವಾದ ವಿಷಯವನ್ನು ಪುನಃ ಪುನಃ ಎತ್ತಲು ನಮಗಿಷ್ಟವಿಲ್ಲ ಮತ್ತು ಮ॥ ರಾಮಯ್ಯರ್‌ರವರು ಕೌನ್ಸಿಲಿನ ಅಧ್ಯಕ್ಷರಾಗಿದ್ದು ಮಾಡಿದ ಕಾರ್ಯಕಲಾಪಗಳನ್ನು ಮರೆತುಬಿಡಲು ನಿರ್ಧರಿಸಿದ್ದೆವು. ಮ॥ ರಾಮಯ್ಯರ್‌ರವರು ನಿಜವಾಗಿ ಮಾಡಿದ ಕಾರ್ಯವನ್ನು ಡೇಲಿ ಪೋಸ್ಟಾಗಲಿ ನೂರಾರು ಇತರ ಪತ್ರಿಕೆಗಳಾಗಲಿ ಪ್ರಶಂಸಿಸಿ ಬರೆದಿದ್ದಲ್ಲಿ ಯಾರ ಆಕ್ಷೇಪವೂ ಇರುತ್ತಿರಲಿಲ್ಲ. ಆದರೆ ಶ್ರೀಮನ್ಮಹಾರಾಜರವರಿಗೆ ಪ್ರಿಯವಾದ ಕಾರ್ಯಗಳನ್ನು ಮ॥ ರಾಮಯ್ಯರ್‌ರವರು ನೆರವೇರಿಸುವಲ್ಲಿ ಅಡ್ಡಿಪಡಿಸಿದರೆಂದು ಪರಮರಾಜಭಕ್ತರಾದ ಕೆಲ ಕೌನ್ಸಿಲರುಗಳ ಮೇಲೆ ದೋಷಾರೋಪಣೆಮಾಡಿ ಅವರನ್ನು ಖಂಡಿಸಿರುವುದನ್ನು ಸಹಿಸಿಕೊಂಡಿರಲಾರೆವು. ಈರೀತಿಯಾಗಿ ಪ್ರಭುತ್ವದವರ ಮನಸ್ಸನ್ನು ಕೆಡಿಸುವ ದುಷ್ಟ ಚಾಳಿಯು ಬಹುಕಾಲದಿಂದಲೂ ನಡೆದು ಬಂದಿರುತ್ತದೆ. ಈ ಕುತಂತ್ರವನ್ನ ಬಹಿರಂಗಪಡಿಸಬೇಕಾಗಿ ಬಂದುದಕ್ಕೋಸ್ಕರ ಚಿಂತಿಸುತ್ತೇವೆ.

ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಮೈಸೂರು ಸಂಸ್ಥಾನದ ವೃತ್ತಪತ್ರಿಕಾ ಸಂಪಾದಕರ ಸಂಘದ ಪೋಷಣೆಗೆ ಶ್ರೀಮನ್ಮಹಾರಾಜರವರಿಂದ ೫೦೦ ರೂಪಾಯಿಗಳು ದಯಪಾಲಿಸಲ್ಪಟ್ಟಿರುತ್ತವೆ ! ಇದರ ಆರಂಭೋತ್ಸವ ಶ್ರೀಮದ್ಯುವರಾಜರವರಿಂದ ಜರುಗಿಸಲ್ಪಟ್ಟಿತು.

ಬೊಂಬಾಯಿನಲ್ಲಿ ಇಬ್ಬರು ವರ್ತಕರ ಆತ್ಮಹತ್ಯೆ

ಬೊಂಬಾಯಿ ನಗರದಲ್ಲಿ ಇಬ್ಬರು ಹಿಂದು ವರ್ತಕರುಗಳು ವ್ಯಾಪಾರನಷ್ಟ ಮತ್ತು ಅನಾರೋಗ್ಯ ದೆಶೆಯಿಂದ ಆತ್ಮಹತ್ಯ ಮಾಡಿಕೊಂಡರು. ಇವರಲ್ಲೊಬ್ಬನು ಮನೆಯ ಮಹಡಿಯ ಮೇಲಿಂದ ಕೆಳಕ್ಕೆ ಬಿದ್ದೂ, ಇನ್ನೊಬ್ಬನು ಸಮುದ್ರಕ್ಕೆ ಬಿದ್ದೂ ಸತ್ತುಹೋದರು.

ವಿ. ಜೆ. ಪಟೇಲರು

ಯುದ್ಧ ಬಹಿಷ್ಕರಣ ಸಭೆಗೆ ಹೊರಡುವುದರ ಮುಂಚಿತವಾಗಿ ಈರೀತಿ ಹೇಳಿದರು—"ಭಾರತದೇಶದಲ್ಲಿ ೨ ವರ್ಷಗಳಿಂದಲೂ ಯುದ್ಧವು ನಡೆಯುತ್ತಲೇ ಇದೆ. ಪರದೇಶೀಯರಿಂದ ಲಕ್ಷಾಂತರ ಪ್ರಜೆಗಳು ನಿಗ್ರಹಿಸಲ್ಪಡುತ್ತಿರುವವರೆಗೂ ಆಯುಧವಿಸರ್ಜನೆಯಾಗಲಿ, ಯುದ್ಧವಿಲ್ಲದಂತೆ ಮಾಡುವುದೇ ಆಗಲಿ ಸಾಧ್ಯವಿಲ್ಲವು."

ಒಬ್ಬ ಕಾಂಪೌಂಡರಿನ ಆತ್ಮಹತ್ಯ

ಎಲ್ಲೂರು ಸರ್ಕಾರಿ ಆಸ್ಪತ್ರೆಯಲ್ಲಿ ಕಾಂಪೌಂಡರಾಗಿದ್ದ ಟಿ. ವಿ. ಪ್ರಸಾದ್ ಎಂಬಾತನು ವಿಷಪಾನಮಾಡಿ ಮೃತನಾದನು. ಇವನು ಅಂತ್ಯಾವಸ್ಥೆಯಲ್ಲಿರುವಾಗ್ಗೆ ಮೆಜಿಸ್ಟ್ರೇಟರು ಬಂದು ಅವನ ವಾಜ್ಮೂಲವನ್ನು ಬರೆದುಕೊಳ್ಳುವಾಗ್ಗೆ ಖಾಯಂ ಅಲ್ಲದ ತನ್ನ ಕೆಲಸವು ಶೀಘ್ರದಲ್ಲೇ ತಪ್ಪಿಹೋಗುವುದರಿಂದ ತನ್ನ ಜೀವನಕ್ಕೆ ಮಾರ್ಗವಿಲ್ಲದಂತಾಗುವ ಪ್ರಯುಕ್ತ ವಿಷಪಾನಮಾಡಿದೆನೆಂದು ಹೇಳಿದನಂತೆ.

ಡಾ॥ ಕಿಚ್ಲುಯವರಿಗೆ ಕಠಿಣಸಜ

ಅಂಬಾಲಾ ಲಾಹೋರು ಡಿವಿಜನ್ನುಗಳಿಗೆ ಪ್ರವೇಶಿಸಕೂಡದೆಂಬ ಆಜ್ಞೋಲಂಘನಕ್ಕಾಗಿ ಭಾರತ ಕಾಂಗ್ರೆಸಿನ ಅಧ್ಯಕ್ಷರಾದ ಡಾಕ್ಟರ್ ಸೈಫುದೀನ್ ಕಿಚ್ಲುಯವರಿಗೆ ಅಮೃತಸರದ ಮೆಜಿಸ್ಟ್ರೇಟರು ೨ ವರ್ಷ ಕಠಿಣಸಜವನ್ನೂ 250 ರೂ. ಅರ್ಥದಂಡವನ್ನೂ ಇದು ಕೊಡಲ್ಪಡದಿದ್ದಲ್ಲಿ ಮತ್ತೆ 6 ತಿಂಗಳ ಸಜವನ್ನೂ ವಿಧಿಸಿದರು. ಡಾಕ್ಟರ ವಶದಲ್ಲಿದ್ದ 100 ರೂ. ನೋಟು ಆ ಕೂಡಲೆ ವಶಮಾಡಿಕೊಳ್ಳಲ್ಪಟ್ಟಿತು. ಇವರಿಗೆ ಎ ತರಗತಿ ಕೊಡಲ್ಪಟ್ಟಿದೆ.

ಕಾಡಾನೆಯ ಹಿಂಡು ಇಬ್ಬರನ್ನು ಕೊಂದುವು

೨ ವಾರಗಳ ಹಿಂದೆ ಆಸಾಮಿಗೆ ಸೇರಿದ ಒಂದು ಗ್ರಾಮದಲ್ಲಿ ಕಾಡಾನೆಗಳ ಹಿಂಡು ಒಂದು ಹೊಲಕ್ಕೆ ನುಗ್ಗಿ ಬೆಳೆಯನ್ನು ನಾಶಪಡಿಸುತ್ತಿರುವುದನ್ನು ಕಾವಲುಗಾರನು ಕಂಡು ಪಂಜಿನ ಸಹಾಯದಿಂದ ಅವನ್ನು ಓಡಿಸಲೆತ್ನಿಸಿದನು. ಆನೆಗಳು ಅವನನ್ನು ಹಿಡಿದು ಕೊಂದುಹಾಕಿದುವು. ಈ ವಿಚಾರವು ಗ್ರಾಮಕ್ಕೆ ತಿಳಿದು ಪೋಲೀಸಿನವರೋಡಿಬಂದು ಗುಂಡುಗಳ ಶಬ್ದದಿಂದ ಆನೆಗಳನ್ನೋಡಿಸಲು ಪ್ರಯತ್ನಿಸಿದರು. ಅವು ಒಬ್ಬ ಪೋಲೀಸನನ್ನು ಹಿಡಿದು ಎತ್ತಿಕೊಂಡು ಹೋಗಿ ತುಳಿದು ಸಾಯಿಸಿಬಿಟ್ಟು ಅಷ್ಟಕ್ಕೆ ತೃಪ್ತವಾಗದೆ ಗ್ರಾಮಕ್ಕೆ ನುಗ್ಗಿ ಸ್ಕೂಲು ಕಟ್ಟಡವನ್ನೂ ಒಂದಂಗಡಿಯನ್ನೂ ನಾಶಮಾಡಿ ಇಬ್ಬರು ಮನುಷ್ಯರಿಗೆ ಪ್ರಾಣಾಪಾಯವನ್ನುಂಟುಮಾಡಿದುವು.

ನೇಪಾಳದ ಸೇನಾನಾಯಕನ ಮೃತಿ

ನೇಪಾಳ ಸಂಸ್ಥಾನದ ಸೇನೆಗೆ ಮುಖ್ಯ ಸೇನಾನಿಯಾಗಿಯೂ, ಸಂಸ್ಥಾನದ ಕಾರ್ಯನಿರ್ವಾಹಕ ಸಭೆಯ ಮೆಂಬರಾಗಿಯೂ ಇದ್ದ ಸುಪ್ರದೀಪ್ತಮಾನ್ಯ ವೀರಧರ್ಮ ಷಂಷೇರುಜಂಗು ಬಹದ್ದೂರ್‌ರವರು ಕಳೆದ ಗುರುವಾರ ಕಲ್ಕತ್ತಾದಲ್ಲಿ ಮೃತರಾದರು. ದುಃಖಪ್ರದರ್ಶನಾರ್ಥವಾಗಿ ಕೋಟೆಯ ಕೊತ್ತಲಿನಿಂದ ಗುಂಡುಗಳು ಹಾರಿಸಲ್ಪಟ್ಟು ಸರ್ಕಾರಿ ಕಟ್ಟಡಗಳ ಮೇಲಿರುವ ಧ್ವಜಗಳು ಇಳಿಸಲ್ಪಟ್ಟಿದ್ದುವು. ಇವರಿಗೆ 59 ವರ್ಷ ವಯಸ್ಸಾಗಿದ್ದಿತು. ಈಗಿರುವ ಮಹಾರಾಜರ ಅಣ್ಣನ ಜ್ಯೇಷ್ಠಪುತ್ರರಿವರು. ಇವರ ಅಂತ್ಯ ಕ್ರಿಯೆಯು ಹಿಂದು ಧರ್ಮಶಾಸ್ತ್ರಪ್ರಕಾರ ನೆರವೇರಿಸಲ್ಪಟ್ಟಿತು. ಗೌರ್ನರವರ ಪ್ರತಿನಿಧಿಯಾಗಿ ಸೈನಿಕಾಧಿಕಾರಿ ಕರ್ನಲ್ ಬಟ್ಲರ್‌ರವರು ಅಂತ್ಯಕ್ರಿಯೆಗೆ ಹೋಗಿದ್ದರು.

ಓಡಿಹೋದವನನ್ನು ಹಿಡಿದಲ್ಲಿ ೨೫೦ ರೂ. ಬಹುಮಾನ

ಸಿ. ನಾಗರತ್ನ ಮೊದಲಿಯಾರರ ಮಗ ಸಿ ಎನ್. ಲಕ್ಷ್ಮೀಕಾಂತ ಮೊದಲಿಯಾರ್ ಎಂಬ ಯುವಕನು ಫೋರ್ಜರಿ ಮಾಡಿದನೆಂಬ ಅಪರಾಧಕ್ಕಾಗಿ ಅವನಮೇಲೆ ಮದ್ರಾಸು ಹೈಕೋರ್ಟು ಸೆಷನ್ಸ್ ವಿಚಾರಣೆ ನಡೆಯುತ್ತಿರುವಾಗ್ಗೆ ಅವನು ತಾ॥ 20 ರಲ್ಲಿ ತಪ್ಪಿಸಿಕೊಂಡುಹೋದನು. ಇವನನ್ನು ಹಿಡಿದುಕೊಟ್ಟವರಿಗೆ ಅಥವಾ ಇವನ ಜಾಡನ್ನು ತಿಳಿಸಿದವರಿಗೆ 250 ರೂ. ಗಳನ್ನು ಬಹುಮಾನಿಸುವುದಾಗಿ ಪೋಲೀಸು ಕಮಿಷನರು ಪ್ರಕಟಿಸಿರುತ್ತಾರೆ. ಇವನ ವಯಸ್ಸು 30, ಎತ್ತರ 5 ಅಡಿ 3 ಅಂಗುಲ, ಗೋದುವೆ ಬಣ್ಣ, ತಲೆ ಕ್ರಾಪ್ ಮಾಡಿಸಿಕೊಂಡು ಮೀಸೆ ಗಡ್ಡಗಳನ್ನು ನುಣ್ಣಗೆ ಬೋಳಿಸಿರುತ್ತಾನೆ, ಕೂದಲು ಕೊಂಚ ನರತಿದೆ. ಇವನಿಗೆ ಜಾಮೀನಾಗಿದ್ದವರಿಂದ 1000 ರೂ. ಗಳು ವಸೂಲ್ಮಾಡಲ್ಪಟ್ಟವು.

ಅಭಯಂಕರರ ದೇಹಸ್ಥಿತಿ

ಮ॥ ಎಂ. ವಿ. ಅಭಯಂಕರ್‌ರವರು ಅಸ್ವಸ್ಥತೆಗಾಗಿ ಕಾರಾಗೃಹಬಂಧನದಿಂದ ಬಿಡಲ್ಪಟ್ಟರಷ್ಟೆ. "ಶಿಕ್ಷೆಯ ಕಾಲಾವಧಿಯೊಳಗೆ ನೀವು ಬಿಡಲ್ಪಟ್ಟಿರುವುದರಿಂದ ಸಸಗೂ, ವಲ್ಲಭಭಾಯಿಯವರಿಗೂ, ಮಹಾತ್ಮರ ದೇಹಾಯರಿಗೂ ಬಹಳ ಭಯವೂ ಕುತೂಹಲವೂ ಉಂಟಾಗಿರುವ ಪ್ರಯುಕ್ತ ನಿಮಗೆ ಯಾವಾಗಲಿಂದ ಯಾವ ಕಾಯಿಲೆ ಪ್ರಾಪ್ತವಾಗಿದೆ ಮತ್ತು ಅದರ ಸ್ವಭಾವವೇನು ? ಇತ್ಯಾದಿ ವಿಷಯಗಳನ್ನು ಕೂಡಲೇ ತಿಳುಹಬೇಕು" ಎಂದು ಮಹಾತ್ಮರು ಅಭಯಂಕರರಿಗೆ ಕಾಗದವನ್ನು ಬರೆದಿದ್ದರು. ಅದಕ್ಕೆ ಅಭಯಂಕರರು ಉತ್ತರ ಕೊಟ್ಟಿರುವುದರಲ್ಲಿ "ನನ್ನ ಕ್ಷೇಮ ವಿಚಾರಣೆಗಾಗಿ ತಮ್ಮಗಳನ್ನು ಬಹಳವಾಗಿ ವಂದಿಸುತ್ತೇನೆ. ದೈವಾನುಗ್ರಹದಿಂದಲೂ ತಮ್ಮಗಳ ಆಶೀರ್ವಾದದಿಂದಲೂ ಗುಣವಾಗುವ ಭರವಸೆಯುಂಟು" ಎಂದು ತಿಳಿಸಿ ಡಾ॥ ಖಾರೆಯವರು ಮಾಡಿರುವ ಪರೀಕ್ಷಾಫಲದ ವರದಿಯ ನಕಲನ್ನು ಕಳುಹಿಸಿ ಕೊಟ್ಟಿರುವರು.

ಗತಿಸಿದ ಗಂಡನಿಗಾಗಿ ದೀಕ್ಷೆ

ಒಬ್ಬ ಹಿಂದು ಸ್ತ್ರೀಯು ತನ್ನ ಪತಿಯ ವಿಯೋಗಕ್ಕಾಗಿ ಕಡುತರವಾದ ದೀಕ್ಷೆಯನ್ನು ವಹಿಸಿರುವಳು. ಈಕೆಯು ಪ್ರಾಪಂಚಿಕ ಸುಖದಾಸೆಯನ್ನು ತೊರೆದು ಪತಿಯ ಪಾದಾರವಿಂದವನ್ನು ಸೇರಲು ನಿರಾಹಾರವೇನೂ ಇಲ್ಲದೆ ಗಾಳಿ ಬಿಸಲು ಮಳೆಗೆ ಹೆದರದೆ ಹೊಲದಲ್ಲಿ ಕಳೆದ 4 ವಾರಗಳಿಂದಲೂ ನಿಂತುಕೊಂಡಿರುತ್ತಾಳೆ. ಎಷ್ಟೋ ಜನರು ಬಂದು ನೋಡಿ ಕನಿಕರಪಟ್ಟು ಎಷ್ಟುವಿಧವಾಗಿ ಹೇಳಿದರೂ ಆಹಾರವನ್ನು ತೆಗೆದುಕೊಳ್ಳದೆಯೂ, ಕೂತುಕೊಳ್ಳದೆಯೂ ಇರುವುದರಿಂದ ಕಳೆದ ತಾ॥ 20 ರಲ್ಲಿ ಸ್ಮೃತಿತಪ್ಪಿ ಬಿದ್ದುಹೋದಳು. ಈಕೆಯನ್ನು ಪರಮಾಶ್ಚರ್ಯದಿಂದ ನೋಡುತ್ತಿದ್ದ ಊರಿನ ಜನರು, ಹಾಸಿಗೆಯ ಮೇಲೆ ಮಲಗಿಸಿದರು. ಕೊಂಚಹೊತ್ತಿನಮೇಲೆ ಆಕೆಯು ಚೇತರಿಸಿಕೊಂಡು ಯಥಾಪ್ರಕಾರ ಎದ್ದುನಿಂತುಕೊಂಡಳು. ಇಷ್ಟು ನಿಶ್ಚೈತನ್ಯವಾಗಿದ್ದರೂ ಆಕೆಯು ಆಹಾರವನ್ನು ತೆಗೆದುಕೊಳ್ಳಲಿಷ್ಟಪಡುವುದಿಲ್ಲ. ಇದಲ್ಲವೆ ನಿಜವಾದ ಪತಿಭಕ್ತಿ !

ಕಾರಾಗೃಹದಲ್ಲಿ ಮಹಾತ್ಮರ ಆಹಾರ

ಮಹಾತ್ಮರು ಕೆಲಕಾಲದಿಂದ ತ್ಯಜಿಸಿದ್ದ ಆಡಿನ ಹಾಲು ಸೇವನೆಯನ್ನು ಈಗ ಪುನಃ ಆರಂಭಿಸಿರುವರಲ್ಲದೆ ಉಪ್ಪನ್ನು ತ್ಯಜಿಸಿ ಸಪ್ಪೆ ರೊಟ್ಟಿಯನ್ನೂ, ನೀರಿನಲ್ಲಿ ನೆನೆಸಿದ ಖರ್ಜೂರವನ್ನೂ, ಅರೆದ ಬಾದಾಮಿಯನ್ನೂ ಭುಂಜಿಸುತ್ತಿರುವರು. ಇದರಿಂದ ಅವರ ಶರೀರ ತೂಕವು 94 ಪೌಂಡಿನಿಂದ 82 ಪೌಂಡಿಗಿಳಿದಿದ್ದು ಈಗೀಗ ಹೆಚ್ಚಲುಪಕ್ರಮಿಸಿದೆ. ಮಹಾತ್ಮರು ಓದುವುದರಲ್ಲಿಯೂ, ಹೊಲಿಗೆ ಯಂತ್ರದ ಮಾದರಿಯಲ್ಲಿ ನೂತನವಾಗಿ ತಯಾರಿಸಲ್ಪಟ್ಟಿರುವ ರಾಟೆಯಿಂದ ನೂಲು ತೆಗೆಯುವುದರಲ್ಲಿಯೂ ಕಾಲಹರಣ ಮಾಡುತ್ತಿರುವುದಾಗಿ ಯರವಾಡ ಜೈಲಿನ ವರದಿಯಿಂದ ತಿಳಿದುಬಂದಿದೆ. ಮಹಾತ್ಮರ ಪತ್ರವ್ಯವಹಾರದ ಪರಮಾಣವು ಕೊಂಚವೂ ಕಡಿಮೆಯಾಗಿಲ್ಲ. ಅಮೇರಿಕೆಯಿಂದ ವಿಚಿತ್ರಪ್ರಶ್ನ ಪ್ರವಾಹವು ಬರುತ್ತಲೇ ಇದೆ. ಬಹಳ ದೂರದೇಶಗಳಲ್ಲಿರುವ ತಮ್ಮ ಮಿತ್ರರಿಗೂ ಪ್ರೋತ್ಸಾಹಕರಿಗೂ ಉತ್ತರಗಳನ್ನು ಕೊಡುವುದು ಮಹಾತ್ಮರಿಗೆ ಬಹಳ ಸಂತೋಷಕರವಾಗಿರುವುದು.

ಪತ್ನಿ ಪತಿಯರ ವಿಪರೀತಾನುರಾಗ

ಬರ್ಮಾದ ಉತ್ತರಭಾಗದಲ್ಲಿ ಕಾಂತ ಎಂಬ ಗ್ರಾಮದೊಳಗೆ ಒಬ್ಬನು ಮಲೇರಿಯಾ ರೋಗಪೀಡಿತನಾಗಿ ಎಷ್ಟು ಔಷಧವನ್ನು ಸೇವಿಸಿದಾಗ್ಯೂ ಗುಣವಾಗಲಿಲ್ಲ. ಇವನ ಪತ್ನಿ ಚೈನಾದೇಶದವಳು. ಆಕೆಗೆ ಮೂಢನಂಬಿಕೆಯು ಹೆಚ್ಚು. ರೋಗಿಗೆ ಆಪ್ತಬಂಧುವಾರಾದರೂ ತನ್ನ ಶರೀರದಿಂದ ಕೊಂಚ ಮಾಂಸವನ್ನು ತೆಗೆದು ಬೇಯಿಸಿ ರೋಗಿಗೆ ಕೊಟ್ಟಲ್ಲಿ ರೋಗವು ನಿವಾರಣೆಯಾಗುವುದೆಂಬ ನಂಬಿಕೆಯು ಚೈನಾದೇಶದವರಿಗುಂಟು. ಅದರಂತೆಯೇ ಈ ಚೈನಾ ಯುವತಿಗೂ ನಂಬಿಕೆಯಿದ್ದುದರಿಂದ ತನ್ನ ಎದೆಯನ್ನು ಕೊಂಚ ಕುಯಿದು ಸ್ವಲ್ಪ ಮಾಂಸವನ್ನು ತೆಗೆದುಕೊಂಡು ಅದನ್ನು ಚೆನ್ನಾಗಿ ಬೇಯಿಸಿ ಪಲ್ಯಮಾಡಿ ಗಂಡನಿಗೆ ಉಣಬಡಿಸಿದಳು. ಗಂಡನು ಊಟಮಾಡುವಾಗ್ಗೆ ಅನುಮಾನಿಸಿ ಅದರ ನಿಜಸ್ಥಿತಿಯನ್ನು ಕೇಳಿ ತಿಳಿದುಕೊಂಡು ಎದೆಯಲ್ಲಿ ಇನ್ನೂ ರಕ್ತಸುರಿಯುತ್ತಿದ್ದುದನ್ನು ನೋಡಿ ಕೂಡಲೆ ಆಸ್ಪತ್ರೆಗೆ ಕರೆದುಕೊಂಡುಹೋಗಿ ಚಿಕಿತ್ಸೆಮಾಡಿಸಿದನು. ಪೋಲೀಸಿನವರು ಆಕೆಯಮೇಲೆ ಆತ್ಮಹತ್ಯದೋಷವನ್ನು ಹೊರಿಸಿ ವಿಚಾರಣೆಗೆ ಗುರಿಮಾಡಲು, ಆಕೆಯು ತನಗೆ ಅಂತಹ ಕೆಟ್ಟ ಉದ್ದೇಶವೇನೂ ಇಲ್ಲವೆಂದೂ, ಗಂಡನ ರೋಗನಿವಾರಣೆಗಾಗಿ ಹಾಗೆ ಮಾಡಿದೆನೆಂದೂ ಹೇಳಿದಳು.

ಒಳದೇಶದ ವೃತ್ತಾಂತಗಳು

ಕೊಡಗಿನ ಜಯಪ್ಪ ಎಂಬ ಯುವಕನು ತನ್ನ ಹೆಂಡತಿಯನ್ನು ತನ್ನ ಅನುಮತಿಯಿಲ್ಲದೆ ಮಾವ ಕರೆದುಕೊಂಡುಹೋದುದರ ಮೇಲೆ ಖೇದಗೊಂಡು ಹೊಡೆದುಕೊಂಡನು. ಅದರಿಂದ ಪ್ರಾಣಾಪಾಯವಾಗಲು ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಗೆ ತರಲ್ಪಟ್ಟು ಚಿಕಿತ್ಸೆ ಮಾಡಲ್ಪಟ್ಟಾಗ್ಯೂ ಗುಣಹೊಂದದೆ ಕಳೆದ ಬುಧವಾರ ಮೃತನಾದನು.

ರಾಜಧಾನಿಯ ತುಳಸಿ ತೋಟದ ಮಠದಲ್ಲಿ ವಾಸವಾಗಿರುವ ಪೀತಾಂಬರದಾಸನ ಹೆಂಡತಿಯು ಕಳೆದ ಮಾರ್ಚಿ ತಿಂಗಳಲ್ಲಿ ಬಹಿಷ್ಟೆಯಾಗಿ ಮಠದ ಕೈಸಾಲೆಯಲ್ಲಿ ಮಲಗಿದ್ದಾಗ್ಗೆ ಅದೇ ಕೈಸಾಲೆಯಲ್ಲಿ ಮಲಗುತ್ತಿದ್ದ ಕೃಷ್ಣ ಎಂಬ ಯುವಕನು ಆಕೆಯನ್ನು ಕರೆದುಕೊಂಡು ಹೋದನೆಂಬ ಅಪರಾಧಕ್ಕಾಗಿ ಸಿಟಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದನು. ಸಾಕ್ಷಿ ವಿಚಾರಣೆಯಿಂದ ಅಪರಾಧವು ಸ್ಥಿರಪಡಲಿಲ್ಲವಾಗಿ ಯುವಕನು ಬಿಡಲ್ಪಟ್ಟನು.

ರಾಜಧಾನಿಯ ಮುಖ್ತಾರ್ ಪರಶುರಾಮಶೆಟ್ಟರು ತಮಗೆ [illegible] ಮೋಸದ ಸಂಬಂಧದಲ್ಲಿ ವಿಧಿಸಲ್ಪಟ್ಟಿರುವ [illegible] ಮತ್ತು [illegible] ದಂಡದ ಮೇಲೆ ಮೈಸೂರು ಡಿವಿಜನ್ ಸೆಷನ್ಸು ಕೋರ್ಟಿನಲ್ಲಿ ಮಾಡಿರುವ ಅಪೀಲಿನ ವಿಚಾರಣೆಯು ಕಳೆದ ತಾ॥ 26 ರಲ್ಲಿ [illegible] ಬೆಂಗಳೂರಿನ ಬ್ಯಾರಿಸ್ಟರ್ ಮ॥ ಸ್ವಾಮಿನಾಥ ಗ್ರಾಮಣಿಯವರು [illegible] ವಾದಿಸಲು ಬರುವುದಿಲ್ಲವೆಂದು ತಿಳಿಸಿದುದರ ಮೇಲೆ ಬರುವ ತಾ॥ ೨೨ ಕ್ಕೆ ಮುಂದುವರಿಸಲ್ಪಟ್ಟಿತು. ಆಗ ಅಪರಾಧಿಪರ ಯಾರು ವಕೀಲಿಯನ್ನು ವಹಿಸುವರೊ ನೋಡಬೇಕು.

ಮೈಸೂರು ಡಿವಿಜನ್ ಎಕ್ಸಿಕ್ಯುಟಿವ್ ಇಂಜನಿಯರಾದ ಮ॥ ಕೆ. ನಾರಾಯಣಯ್ಯಂಗಾರ್ಯರ ತಮ್ಮ ಮ॥ ಕೆ. ಶ್ರೀನಿವಾಸಯ್ಯಂಗಾರ್ಯರು ತಮ್ಮ ಅಣ್ಣನವರ ಮನೆಯಲ್ಲಿದ್ದ ತಮ್ಮ ಸಹೋದರಿ ಜಾನಕಮ್ಮನು ಕಳೆದ ಅಕ್ಟೋಬರ್ ತಿಂಗಳಲ್ಲಿ ನಗದು 4000 ರೂಪಾಯಿಗಳನ್ನೂ ಇತರ ಬೆಲೆಯ ಪದಾರ್ಥಗಳನ್ನೂ ತೆಗೆದುಕೊಂಡುಹೋಗಿರುವುದಾಗಿ ಈಚೆಗೆ ತಿಳಿದು ಬಂದಿತೆಂದು ರಾಜಧಾನಿಯ ಪೋಲೀಸಿನವರಿಗೆ ತಿಳಿಸಿದುದರ ಮೇಲೆ ಮತ್ತು ಇವರ ಅಣ್ಣನವರು ಅದನ್ನು ಪುಷ್ಟೀಕರಿಸಿದುದರ ಮೇಲೆ ಪೋಲೀಸಿನವರು ಜಾನಕಮ್ಮನನ್ನು ಹಿಡಿದು ಅವರಲ್ಲಿದ್ದ ಮೇಲ್ಕಂಡ ಹಣವನ್ನೂ ಪದಾರ್ಥಗಳನ್ನೂ ತಮ್ಮ ವಶಪಡಿಸಿಕೊಂಡರು.

ಶ್ರೀಮನ್ಮಹಾರಾಜರವರು ಮೈಸೂರು ಡಿ॥ ಬೋರ್ಡಿನವರ ಪ್ರಾರ್ಥನೆಯಂತೆ ಈ ಸಾಯಂಕಾಲ 5 ಘಂಟೆಯಲ್ಲಿ ತಿರುಮಕೂಡ್ಲಿನ ಬಳಿ ಕಾವೇರೀ ನದಿಯ ಮೇಲೆ ನೂತನವಾಗಿ ಕಟ್ಟಲ್ಪಟ್ಟಿರುವ ಸೇತುವೆಯ ಆರಂಭೋತ್ಸವವನ್ನು ನೆರವೇರಿಸಿದರು. ಆ ವೇಳೆಯಲ್ಲಿ ಡಿ॥ ಬೋರ್ಡಿನ ಪರವಾಗಿ ಅದರ ಪ್ರೆಸಿಡೆಂಟರಾದ ಮ॥ ಬಿ. ಎಸ್. ಪುಟ್ಟಸ್ವಾಮಿಯವರು ವಿಜ್ಞಾಪನಾ ಪತ್ರಿಕೆಯನ್ನು ಓದಿ ರಜತ ಪೆಟ್ಟಿಗೆಯಲ್ಲಿಟ್ಟು (ಅದು ಬೇರೆ ಕಡೆ ಮುದ್ರಿಸಲ್ಪಟ್ಟಿದೆ). ಮಹಾಸ್ವಾಮಿಯವರಿಗೊಪ್ಪಿಸಿದರು. ಅದಕ್ಕೆ ಮಹಾಪ್ರಭುಗಳು ಸದುತ್ತರವನ್ನು ದಯಪಾಲಿಸಿದರು. ಈ ಉತ್ಸವಕ್ಕಾಗಿ ನೆನ್ನೆಯ ದಿವಸ ದಯಮಾಡಿದ ದಿವಾನರು ಬುಧವಾರ ಓರೋಡೆ ಮಾರ್ಗವಾಗಿ ಬೆಂಗಳೂರಿಗೆ ಹಿಂದಿರುಗುವುದಾಗಿ ಕೇಳುತ್ತೇವೆ !

ಪರದೇಶಗಳಿಂದ ರೇಷ್ಮೆಯೂ, ರೇಷ್ಮೆ ಬಟ್ಟೆಗಳೂ ಯಥೇಚ್ಛವಾಗಿ ಭಾರತದೇಶಕ್ಕೆ ಕಳುಹಲ್ಪಟ್ಟು ಹಿಂದೆ ಎಂದೂ ಇಲ್ಲದಿದ್ದಷ್ಟು ಕಡಿಮೆ ಬೆಲೆಗೆ ಮಾರಲ್ಪಡುತ್ತಿರುವುದರಿಂದ ಈ ದೇಶದ ರೇಷ್ಮೆ ಮತ್ತು ರೇಷ್ಮೆ ಬಟ್ಟೆಗಳ ವಿಕ್ರಯಕ್ಕೆ ಬಹಳ ಅಡಚಣೆಯಾಗಿ ತನ್ಮೂಲಕ ವ್ಯವಸಾಯಗಾರರಿಗೂ ಕೈಗಾರಿಕೆಯವರಿಗೂ ಬಹಳ ನಷ್ಟ ಕಷ್ಟಗಳು ಸಂಭವಿಸುತ್ತಿರುವುದರಿಂದ ಮುಂದೆ ಭಾರತ ರೇಷ್ಮೆಯ ವ್ಯವಸಾಯವೇ ನಿರ್ನಾಮವಾಗುವ ಸಂಭವವಿರುತ್ತದೆ. ಆದುದರಿಂದ ಪರದೇಶಗಳಿಂದ ರೇಷ್ಮೆಯು ಈ ದೇಶಕ್ಕೆ ಬಂದು ಪೈಪೋಟಿ ಮಾಡದಂತೆ ತಡೆಯುವಹಾಗೆ ಇಂಡ್ಯಾ ಪ್ರಭುತ್ವದವರನ್ನು ಪ್ರಾರ್ಥಿಸಿಕೊಳ್ಳಬೇಕಾಗಿ ಬೆಂಗಳೂರಲ್ಲಿರುವ ಮೈಸೂರು ಚೇಂಬರ್ ಆಫ್ ಕಾಮರ್ಸಿನವರು ತಮ್ಮ ಸಭೆಯಲ್ಲಿ ನಿರ್ಧರಿಸಿರುತ್ತಾರೆ.

ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು ಸಿದ್ಧಗೊಳಿಸಿರುವ ಬಾಲ್ಯ ವಿವಾಹ ನಿರೋಧಕ ಶಾಸನದ ಆವಶ್ಯಕತೆಯನ್ನು ಪರ್ಯಾಲೋಚಿಸುವುದಕ್ಕಾಗಿ ಕಳೆದ ತಾ॥ 21 ನೆಯ ಭಾನುವಾರ ಬೆಂಗಳೂರು ಪುರನಿವಾಸಿಗಳು ವೆಂಕಟರಮಣಶೆಟ್ಟರ ಸತ್ರದೊಳಗೆ ರಿಟೈರ್ಡ್ ಸೆಷನ್ಸು ಜಡ್ಜಿಯರಾದ ಮ॥ ಬಿ. ಆರ್. ಕೃಷ್ಣಮಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. 14 ವರ್ಷದೊಳಗಿರುವ ಬಾಲೆಯರಿಗೂ 18 ವರ್ಷದೊಳಗಿರುವ ಬಾಲಕರಿಗೂ ವಿವಾಹವಾಗುವುದರಿಂದ ಸಂಭವಿಸುವ ಅನರ್ಥವನ್ನು, ಇದರ ನಿರೋಧಕ ಶಾಸನವನ್ನು ಅನುಷ್ಠಾನಕ್ಕೆ ತರುವುದರ ಆವಶ್ಯಕತೆಯನ್ನೂ ಕುರಿತು ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿಯವರೂ, ವೇ॥ ಭಾಸ್ಕರಪಂತ್ ಸುಬ್ಬನರಸಿಂಹಶಾಸ್ತ್ರಿಗಳೂ ಯುಕ್ತಿಯುಕ್ತವಾಗಿಯೂ ಶಾಸ್ತ್ರ ಸಮ್ಮತವಾಗಿಯೂ ಸಮರ್ಥಿಸಿ ಉಜ್ವಲ ಭಾಷಣಗಳನ್ನು ಮಾಡಿದರು. ಇದನ್ನು ಅಧ್ಯಕ್ಷರು ತಮ್ಮ ಉಪಸಂಹಾರ ಭಾಷಣದಲ್ಲಿ ಪುಷ್ಟೀಕರಿಸಿದರು. ಈ ನಿರೋಧಕ ಶಾಸನವನ್ನು ಅನುಷ್ಠಾನಕ್ಕೆ ತರುವುದನ್ನು ವಿರೋಧಿಸಿ ಮಾತನಾಡಲು ಅವಕಾಶಕೊಡಲ್ಪಟ್ಟಿದ್ದಿತಂತೆ.

ಭಾರತ ದೇಶೀಯ ಸಂಸ್ಥಾನಗಳ ವಿಚಾರಣೆಗಾಗಿ ನಿಯಮಿಸಲ್ಪಟ್ಟಿದ್ದ ಡೇವಿಡ್‌ಸನ್ ಕಮಿಟಿಯವರು ನಮ್ಮ ಮೈಸೂರು ಸಂಸ್ಥಾನವು ಬ್ರಿಟಿಷ್ ಪ್ರಭುತ್ವಕ್ಕೆ ಪ್ರತಿ ವರ್ಷದಲ್ಲೂ ಸಲ್ಲಿಸುತ್ತಿರುವ ಪೊಗದಿಯನ್ನು ಮನ್ನಿಸುವ ಮತ್ತು ಅವರಿಗೆ ವಹಿಸಿಕೊಟ್ಟಿರುವ ಬೆಂಗಳೂರು ದಂಡು ಪ್ರದೇಶವನ್ನು ಸಂಸ್ಥಾನಕ್ಕೆ ಬಿಟ್ಟುಕೊಡುವ ವಿಚಾರವಾಗಿ ಒಂದು ಚಕಾರ ಶಬ್ದವನ್ನು ತಮ್ಮ ಕಮಿಟಿಯ ವರದಿಯಲ್ಲಿ ಮಾಡದಿರುವುದರಿಂದ ಸಂಸ್ಥಾನದ ಪ್ರಜೆಗಳಿಗುಂಟಾಗಿರುವ ಆಶಾಭಂಗವನ್ನೂ ಅಸಮಾಧಾನವನ್ನೂ ದೇಶದ ಎಲ್ಲಾ ಭಾಗಗಳಲ್ಲೂ ಬಹಿರಂಗ ಸಭೆಗಳ ಮೂಲಕ ವ್ಯಕ್ತಪಡಿಸಲು ತಕ್ಕ ಪ್ರಯತ್ನ ಮಾಡುವುದಕ್ಕಾಗಿ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಕೆ. ಟಿ. ಸಿ. ಐ. ಇ., ಯವರಿಂದಲೂ ಮ॥ ಗಳಾದ ಕೆ. ಆರ್. ಶ್ರೀನಿವಾಸಯ್ಯಂಗಾರ್. ಬಿ. ಕೆ. ಗರುಡಾಚಾರ್, ಎ. ಸುಬ್ರಾಮಶೆಟ್ಟಿ, ಡಿ. ವಿ. ಗುಂಡಪ್ಪ ಮೊದಲಾದ ದೊಡ್ಡ ಮನುಷ್ಯರುಗಳಿಂದಲೂ ಕೂಡಿದ ಒಂದು ಸಮಿತಿಯೇರ್ಪಟ್ಟಿರುತ್ತದೆ. ಇವರು ಬರುವ ತಿಂಗಳ ಎರಡನೆಯ ವಾರದಲ್ಲಿ ಬೆಂಗಳೂರಿನೊಳಗೆ ಒಂದು ಮಹಾಸಭೆಯನ್ನು ನಡೆಸುವವರಾಗಿರುವರು. ಇದರಂತೆ ರಾಜಧಾನಿಯ ನಿವಾಸಿಗಳು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲು ಒಂದು ಸಭೆಯನ್ನು ಮಾಡುವುದುತ್ತಮವಲ್ಲವೆ ?

ಈಗ್ಗೆ 15-20 ದಿವಸಗಳ ಹಿಂದೆ ರಾಜಧಾನಿಯ ಸಂತೆ ಬೀದಿಯಲ್ಲಿ ಧರ್ಮಪ್ರಕಾಶ ರಾವ್ ಬಹದ್ದೂರ್ ಡಿ. ಬನುಮಯ್ಯನವರ ಮನೆ ಎದುರಿಗಿರುವ ಬೊಮ್ಮಯ್ಯನವರ ಸತ್ರದಲ್ಲಿ ನಾರಾಯಣಶಾಸ್ತ್ರಿ ಎಂಬವರು ಬಹಳ ವಿಜೃಂಭಣೆಯಿಂದ ಸಪ್ತಾಹವನ್ನು ನಡೆಸುತ್ತ, ನಿತ್ಯದಲ್ಲೂ ಲಾಡು ಚಿರೋಟಿ ಸಮಾರಾಧನೆಯಿಂದ ನೂರಾರು ಬ್ರಾಹ್ಮಣರನ್ನು ತೃಪ್ತಿಪಡಿಸುತ್ತಿದ್ದುದರ ಮೇಲೆ ಇವರ ಭಕ್ತಿಗೂ ಔದಾರ್ಯಕ್ಕೂ ಮೆಚ್ಚಿ ಎಲ್ಲಾ ಜಾತಿಯ ಸ್ತ್ರೀ ಪುರುಷರೂ ಧನಧಾನ್ಯಗಳನ್ನು ಸಹಾಯಮಾಡುತ್ತಿದ್ದರಲ್ಲದೆ ಸಪ್ತಾಹದ ವೇಳೆಯಲ್ಲಿ ಬಂದು ದೇವತಾರಾಧನೆಯನ್ನು ನೋಡಿ ತೃಪ್ತರಾಗಿ ಶಾಸ್ತ್ರಿಗಳನ್ನು ನಾನಾವಿಧದಿಂದ ಸ್ತೋತ್ರಮಾಡಿ ಹೋಗುತ್ತಿದ್ದರು. ಹೀಗೆ ಶಾಸ್ತ್ರಿಗಳ ಪ್ರಭಾವವು ಹಬ್ಬಿಹರಡುತ್ತಿರುವಾಗ್ಗೆ ಕಾರ್ವಾರದ ಪೋಲೀಸಿನವರು ಕಳೆದ ತಾ॥ 14 ರಲ್ಲಿ ಶಾಸ್ತ್ರಿಗಳ ಭಾವಚಿತ್ರ ಸಮೇತ ರಾಜಧಾನಿಗೆ ಬಂದು ಇಲ್ಲಿಯ ಪೋಲೀಸಿನವರ ಸಹಾಯದಿಂದ ಸತ್ರಕ್ಕೆ ಹೋಗಿ ಶಾಸ್ತ್ರಿಗಳನ್ನು ದಸ್ತಗಿರಿ ಮಾಡಿ, ಸ್ಥಳಪರಿಶೋಧನೆಯಿಂದ ಒಳ್ಳೇ ಉಡುಪುಗಳು ಭಾರೀ ಶಾಲುಗಳು ಸಾಬೂನು ಪೆಟ್ಟಿಗೆಗಳು ಮುಖಕ್ಷೌರದ ಕತ್ತಿಗಳು ಸಿಗರೇಟುಗಳು ಮೊದಲಾದ ಪದಾರ್ಥಗಳಿಂದಲ್ಪಟ್ಟಿದ್ದ 4 ಪೆಟ್ಟಿಗೆಗಳನ್ನು ಸ್ವಾಧೀನಪಡಿಸಿಕೊಂಡರು. ಕಾರ್ವಾರ ಡಿಸ್ಟ್ರಿಕ್ಟ್ ಪೋಲೀಸು ಸೂಪರಿಂಟೆಂಡೆಂಟರ ಆಫೀಸಿನ ಕ್ಲಾರ್ಕ್ ಆಗಿರುವ ಶಂಕರರಾವ್ ಎಂಬವರ ಹೆಂಡತಿಗೆ ಸಪ್ತಾಹ ಮಾಡಿದರೆ ಪುತ್ರೋತ್ಸವಾಗುತ್ತದೆಂಬ ಆಶೆ ಹುಟ್ಟಿಸಿ ಆಕೆಯ ಮೈಮೇಲಿನ ಆಭರಣಗಳನ್ನೆಲ್ಲ ದೇವರಿಗಿಡಬೇಕೆಂದು ಹೇಳಿ ಒಂದು ಪೆಟ್ಟಿಗೆಯಲ್ಲಿರಿಸಿಕೊಂಡು ಸಪ್ತಾಹವನ್ನು ನಡೆಸುತ್ತಿದ್ದು ಒಂದು ರಾತ್ರಿ ಆ ಪೆಟ್ಟಿಗೆಯಲ್ಲಿದ್ದ ಆಭರಣಗಳನ್ನೆಲ್ಲ ತೆಗೆದುಕೊಂಡು ಅವುಗಳ ಪ್ರತಿಯಾಗಿ ಮಂಗಳೂರು ಹಂಚಿನ ಚೂರುಗಳನ್ನು ತುಂಬಿಟ್ಟು ಪಲಾಯನವಾಗಿ ದಾವಣಗೆರೆಗೂ ಅಲ್ಲಿಂದ ಬೆಂಗಳೂರಿಗೂ ಬಂದು ಅಲ್ಲಿ ೫೦೦ ರೂ. ಗಳಿಗೆ ನಗಗಳನ್ನು ಮಾರಿ ಮೈಸೂರಿಗೆ ಬಂದನು. ನಾರಾಯಣ ಶಾಸ್ತ್ರಿ, ಉರ್ಫ್ ನಾರಾಯಣ ಮಹಾರಾಜ ಉರ್ಫ್ [illegible] ಮಹಾರಾಜ ಎಂದು ಹೆಸರಿಟ್ಟುಕೊಂಡಿದ್ದ ಈ ಮೋಸಗಾರನು [illegible]

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜ ಸರ್ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ., ಜಿ. ಬಿ. ಇ., ಯವರ ದಿವ್ಯ ಸನ್ನಿಧಿಯಲ್ಲಿ ರಾಜಭಕ್ತ್ಯಯುತರಾದ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಸದಸ್ಯರುಗಳು ಭಕ್ತಿಪುರಸ್ಸರವಾಗಿ ಒಪ್ಪಿಸಿದ ವಿಜ್ಞಾಪನಾ ಪತ್ರಿಕೆ.

ಮಹಾಸ್ವಾಮಿ,

ತ್ರಿವೇಣೀ ಸಂಗಮವೆಂದು ಪ್ರಸಿದ್ಧಿಗೊಂಡಿರುವ ಈ ಪವಿತ್ರ ಕ್ಷೇತ್ರಕ್ಕೆ ಮಹಾಸ್ವಾಮಿಯವರು ದಯಮಾಡಿಸಿ ನಮಗೆ ಮಂಗಳದರ್ಶನವನ್ನಿತ್ತ ಈ ಸುಸಮಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಮತ್ತು ಸದಸ್ಯರುಗಳಾದ ನಾವು ಮಹಾಸ್ವಾಮಿಯವರಿಗೆ ಸುಸ್ವಾಗತವನ್ನು ಬಯಸಿ ರಾಜಭಕ್ತಿಪೂರ್ವಕವಾದ ವಂದನೆಗಳನ್ನರ್ಪಿಸಲು ಅಪ್ಪಣೆಯನ್ನು ಬೇಡುತ್ತೇವೆ ಮಹಾಸ್ವಾಮಿ. ಇಂದಿಗೆ ಆರು ವರ್ಷಗಳ ಹಿಂದೆ ಮಹಾಸ್ವಾಮಿಯವರು ನಂಜನಗೂಡು-ಚಾಮರಾಜನಗರ ರೈಲ್ವೆಯ ಪ್ರಾರಂಭೋತ್ಸವವನ್ನು ನೆರವೇರಿಸುವುದರ ಮೂಲಕ ಈ ನಮ್ಮ ಬೋರ್ಡನ್ನು ಗೌರವಿಸಿದ್ದ ಆ ಸುಯೋಗವು ನಮಗೆ ಮರಳಿ ಈ ದಿವಸ ಲಭಿಸಿರುತ್ತದೆ. ಅಂದಿನಿಂದೀಚೆಗೆ ಡಿಸ್ಟ್ರಿಕ್ಟ್ ಬೋರ್ಡಿನ ರಚನೆಯು ಬಹಳ ಮಾರ್ಪಟ್ಟು ಮಹಾಸ್ವಾಮಿಯವರೂ, ಮಹಾಸ್ವಾಮಿಯವರ ಘನಸರ್ಕಾರದವರೂ ಖಾಸಗಿ ಪ್ರೆಸಿಡೆಂಟ್ ಮತ್ತು ಸದಸ್ಯರುಗಳಲ್ಲಿ ಇಟ್ಟಿರುವ ಉದಾರವಾದ ನಂಬಿಕೆಗೆ ನಾವು ಸಂಪೂರ್ಣಾರ್ಹರೆಂದೆನಿಸಿಕೊಳ್ಳುವಂತಹ ಸ್ಥಿತಿಯಲ್ಲಿರುತ್ತೇವೆಂಬುವುದನ್ನು ಮಹಾ ಸನ್ನಿಧಾನದಲ್ಲಿ ಈ ದಿವಸ ಅರಿಕೆಮಾಡಿಕೊಳ್ಳಲು ನಮಗೆ ತುಂಬಾ ಸಂತೋಷವಾಗಿದೆ. ಈ ತಿರುಮಕೂಡ್ಲು ನರಸೀಪುರದ ಬಳಿ ಕಾವೇರೀ ನದಿಯ ಮೇಲೆ ಕಟ್ಟಿರುವ ಈ ಸೇತುವೆಯ ಪ್ರಾರಂಭೋತ್ಸವವನ್ನು ನೆರವೇರಿಸಬೇಕೆಂಬ ನಮ್ಮ ವಿನಯಪೂರ್ವಕವಾದ ಅರಿಕೆಯನ್ನು ಮಹಾಸ್ವಾಮಿಯವರು ಅತ್ಯಂತ ಉದಾರ ಮನಸ್ಸಿನಿಂದ ಅಂಗೀಕರಿಸಿ ಇಲ್ಲಿಗೆ ದಯಮಾಡಿಸಿದುದು ನಮಗೆ ತುಂಬಾ ಉತ್ಸಾಹದಾಯಕವಾಗಿರುವುದಲ್ಲದೆ ರಾಜಭಕ್ತಿಯುತರಾದ ಈ ಡಿಸ್ಟ್ರಿಕ್ಟಿನ ಪ್ರಜೆಗಳಿಗೆ ನಾವು ಇತೋಪ್ಯತಿಶಯವಾಗಿ ಉಪಯುಕ್ತ ಕಾರ್ಯಗಳನ್ನು ಕೈಗೊಳ್ಳುವಂತೆ ಉತ್ತೇಜನವನ್ನುಂಟುಮಾಡಿರುತ್ತದೆ, ಮಹಾಸ್ವಾಮಿ.

ಈ ದಿವಸ ಮಹಾಸ್ವಾಮಿಯವರ ಅಮೃತ ಹಸ್ತಗಳಿಂದ ತೆರೆಯಲ್ಪಡುವ ಈ ಸೇತುವೆಯು ಕಾವೇರೀ ನದಿಯ ಪಾತ್ರದ ಮೇಲೆ 2½ ಫರ್ಲಾಂಗು, ಒಟ್ಟಿನಲ್ಲಿ 6½ ಫರ್ಲಾಂಗು ಉದ್ದಳತೆಯುಳ್ಳದ್ದಾಗಿ ನಮ್ಮ ಸಂಸ್ಥಾನದಲ್ಲೆಲ್ಲಾ ದೊಡ್ಡದಾದ ಕಟ್ಟಡದ ಸೇತುವೆಯಾಗಿರುತ್ತದೆ. ಈ ಸೇತುವೆಯು ಸಂಪೂರ್ಣವಾದುದರಿಂದ ನಮಗೆ ಬಹುಕಾಲದಿಂದಿದ್ದ ಕೊರತೆಯು ನಿವಾರಣೆಯಾಗಿರುವುದು. ಕಾವೇರೀ ಮತ್ತು ಕಪಿಲಾ ನದಿಗಳಿಗೆ ಸೇತುವೆಗಳನ್ನು ಟಿ. ನರಸೀಪುರದ ಬಳಿ ಕಟ್ಟಿಸಲು ಪ್ರಜಾಪ್ರತಿನಿಧಿ ಸಭೆಯವರು 1917 ನೇ ವರುಷದಲ್ಲಿ ಒಪ್ಪಿದುದರ ಮೇಲೆ ಆಗಿನ ಅಂದಾಜು ಪ್ರಕಾರ ಎರಡು ಸೇತುವೆಗಳಿಗೂ ನಾಲ್ಕು ಲಕ್ಷ ರೂಪಾಯಿಗಳು ತಗಲಬಹುದಾಗಿಯೂ, ಇದರ ಪೈಕಿ ಮಹಾಸ್ವಾಮಿಯವರ ಘನ ಸರ್ಕಾರದವರು ಎರಡು ಲಕ್ಷ ರೂಪಾಯಿಗಳನ್ನು ದಯಪಾಲಿಸುವಂತೆಯೂ ಉಳಿದ ಎರಡು ಲಕ್ಷ ರೂಪಾಯಿಗಳನ್ನು ಈ ತಾಲ್ಲೂಕಿನ ಪ್ರಜೆಗಳು ಒದಗಿಸುವಂತೆಯೂ ತೀರ್ಮಾನವಾಯಿತು. ಆದರೆ ತಾಲ್ಲೂಕಿನವರು ಈ ಭಾರವನ್ನು ವಹಿಸಲು ಅಶಕ್ತರಾದುದರಿಂದ ಡಿಸ್ಟ್ರಿಕ್ಟ್ ಬೋರ್ಡಿನವರು ಅವಶ್ಯಕವಾದ ದ್ರವ್ಯ ಸಹಾಯ ಮಾಡಲು ಮುಂದುವರಿದರು. ಕಾರಣಾಂತರದಿಂದ ಈ ಕಾರ್ಯವನ್ನು ಕೈಗೊಳ್ಳಲು 1928 ರ ವರೆಗೂ ಸಾಧ್ಯವಾಗದ ಈಚೆಗೆ ಆರು ಲಕ್ಷ ರೂಪಾಯಿಗಳನ್ನು ಮುಟ್ಟಿಸಿ ಕೆಲಸವು ಪೂರ್ತಿಗೊಳಿಸಲ್ಪಟ್ಟಿದೆ. ಇದಕ್ಕಾಗಿ ನಾವು ಈಗಾಗಲೇ ಎರಡು ಲಕ್ಷದ ಎಂಬತ್ತೊಂಭತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತೇವೆ, ಮಹಾಸ್ವಾಮಿ.

ಸೇತುವೆಯ ಕೆಲಸದಲ್ಲಿ ಹೆಚ್ಚು ಶ್ರಮವನ್ನೂ ಮುತುವರ್ಜಿಯನ್ನೂ ವಹಿಸಿದ ಇಂಜನಿಯರಿಂಗ್ ಇಲಾಖೆಯವರಿಗೂ ಅದರಲ್ಲಿಯೂ ತಮ್ಮ ಅಮೂಲ್ಯವಾದ ಕಾರ್ಯಕುಶಲತೆಯ ಸಲಹೆಗಳನ್ನು ಕೊಟ್ಟ ಛೀಫ್ ಇಂಜನಿಯರುಗಳಿಗೂ ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ಅಭಿನಂದನೆಗಳನ್ನು ಅರ್ಪಿಸಲು ಸಂತೋಷಿಸುತಾರೆ. ಈ ಸೇತುವೆಯ ನಿರ್ಮಾಣದಲ್ಲಿ ಕಂಟ್ರಾಕ್ಟರ್ ರವರಾದ ಶ್ರೀ|| ಬಿ. ಮುನಿವೆಂಕಟಪ್ಪನವರು ತೋರಿಸಿದ ಉತ್ಸಾಹವೂ ಸಾಹಸವೂ ಸ್ತೋತ್ರಾರ್ಹವಾದುವು, ಮಹಾಸ್ವಾಮಿ.

ಈ ಸೇತುವೆಯು ಪೂರ್ತಿಗೊಂಡುದರಿಂದ ಸಂಚಾರಕ್ಕೂ ಡಿಸ್ಟ್ರಿಕ್ಟಿನ ವ್ಯಾಪಾರಾಭಿವೃದ್ಧಿಗೂ ವಿಶೇಷ ಸೌಕರ್ಯಗಳು ಲಭಿಸಿರುವುವಲ್ಲದೆ ಮಳವಳ್ಳಿ, ಶಿವನಸಮುದ್ರ, ತಲಕಾಡೇ ಮೊದಲಾದ ಸ್ಥಳಗಳು ರಾಜಧಾನಿಗೆ ಸಮೀಪವಾಗುವಂತಾಯಿತು. ಮಳೆಗಾಲದಲ್ಲಿ ಈ ನದೀ ಪ್ರವಾಹದಿಂದ ಈ ಪ್ರಾಂತ್ಯದ ಜನರಿಗೆ ಉಂಟಾಗುತ್ತಿದ್ದ ಅನೇಕ ತೊಂದರೆಗಳು ನಿವಾರಣೆಯಾಗಿರುವುವಲ್ಲದೆ ಇನ್ನು ಮುಂದೆ ಹೆಚ್ಚಿಗೆ ಕೃಷಿ ವಾಣಿಜ್ಯ ಸುಸ್ಥಿತಿಯನ್ನು ಈ ಸೇತುವೆಯು ಕಲ್ಪಿಸುತ್ತಿರುವುದರಲ್ಲಿ ಸಂಶಯವಿಲ್ಲ, ಮಹಾಸ್ವಾಮಿ.

ಇಷ್ಟು ಸೌಕರ್ಯಗಳಾದರೂ ಆದಿಯಲ್ಲಿ ಎರಡು ಸೇತುವೆಗಳೂ ಆಗಬೇಕೆಂದು ಮಾಡಿದ್ದ ಸಂಕಲ್ಪವು ಅರ್ಧ ಮಾತ್ರ ನೆರವೇರಿತೇ ಹೊರತು ಸಂಪೂರ್ಣವಾಗಿ ಈಡೇರಲಿಲ್ಲವಲ್ಲಾ ಎಂಬ ಕೊರತೆ ಮಾತ್ರ ನಮ್ಮನ್ನು ಬಾಧಿಸುತ್ತಿದೆ ಎಂದು ಅರಿಕೆಮಾಡಿಕೊಳ್ಳಲು ನಾವು ತುಂಬಾ ಸಂಕೋಚಪಡುತ್ತೇವೆ. ಕಾವೇರೀ ನದಿಗೆ ಸೇತುವೆಯಾದರೂ ನರಸೀಪುರದ ಸ್ಥಾನವೈಚಿತ್ರ್ಯದಿಂದ ರಾಜಧಾನಿಗೂ, ನರಸೀಪುರಕ್ಕೂ ತಿರುಮಕೂಡ್ಲಿನ ಮಾರ್ಗವಾಗಿ ನಡೆಯಬೇಕಾದ ಸಂಚಾರ ಸಮಸ್ಯೆಯು ಪೂರ್ತಿಯಾದಂತಾಗಲಿಲ್ಲವಾಗಿ ರಾಜಧಾನಿಯಿಂದ ಕೊಳ್ಳೇಗಾಲ, ಚಾಮರಾಜನಗರ, ಸತ್ಯಮಂಗಲ ಮತ್ತು ನಮ್ಮ ಡಿಸ್ಟ್ರಿಕ್ಟಿನಲ್ಲೆಲ್ಲಾ ದೊಡ್ಡ ಸಂತೆ ನೆರೆಯತಕ್ಕ ಸ್ಥಳವಾದ ಸಂತೇಮರಹಳ್ಳಿ ಇವುಗಳಿಗೆ ನೇರವಾಗಿ ಹೋಗುವಂತೆ ಅನುಕೂಲಿಸುವುದಕ್ಕೋಸ್ಕರ ಕಪಿಲಾ ನದಿಗೂ ಸೇತುವೆ ಕಟ್ಟುವುದು ಅತ್ಯಾವಶ್ಯಕವಾಗಿರುತ್ತದೆ. ಮಹಾಸ್ವಾಮಿಯವರ ಘನಸರ್ಕಾರದವರು ಈ ಕಾರ್ಯಕ್ಕೆ ತಮ್ಮ ಭಾಗದ ಸಹಾಯದ್ರವ್ಯವನ್ನು ದಯಮಾಡಿ ಅಪ್ಪಣೆ ಕೊಡಿಸುವುದಾದರೆ ನಮ್ಮ ಭಾಗದ ವೆಚ್ಚವನ್ನು ವಹಿಸಲು ನಾವು ಸಿದ್ಧರಾಗಿದ್ದೇವೆಂದು ಅತಿವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇವೆ. ಕಪಿಲಾ ನದಿಯ ಸೇತುವೆಯ ಕೆಲಸವು ಕೈಗೊಳ್ಳಲ್ಪಡುವುದಕ್ಕೆ ಕಾಲವಿಳಂಬವಾಗಲಾರದೆಂಬ ಭರವಸೆಯನ್ನು ಅಪ್ಪಣೆ ಕೊಡಿಸಬೇಕೆಂದು ಬೇಡಿಕೊಳ್ಳುತ್ತೇವೆ, ಮಹಾಸ್ವಾಮಿ.

ಇಂಥಾ ಸೇತುವೆಗಳ ಅಭಾವದಿಂದ ನಾನಾ ಭಾಗದ ಪ್ರಜೆಗಳು ಸೌಲಭ್ಯದಿಂದ ನಾಗರೀಕತೆ ಸಂಸ್ಕೃತಿಗಳನ್ನು ಹೊಂದಲು ಅವಕಾಶವಿರುವುದಿಲ್ಲವೆಂಬುವುದನ್ನರಿತು ಈ ಬಗೆಯ ಕೊರತೆಯನ್ನು ತಪ್ಪಿಸಿ ಪ್ರಯಾಣ ಸೌಕರ್ಯಗಳನ್ನು ಕಲ್ಪಿಸಲು ಡಿಸ್ಟ್ರಿಕ್ಟ್ ಅವಧಿಯಲ್ಲಿ ಸಾಧ್ಯವಾದಷ್ಟು ಸೇತುವೆಗಳನ್ನು ಹೆಚ್ಚಿಸುವುದೇ ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನ ಪರಮ ಧ್ಯೇಯವಾಗಿರುತ್ತದೆ. ಆ ಧ್ಯೇಯವನ್ನನುಸರಿಸಿಯೇ ಅಕ್ಕಿಹೆಬ್ಬಾಳಿನ ಹತ್ತಿರ ಹೇಮಾವತೀ ನದಿಯ ಸೇತುವೆಗೆ ಡಿಸ್ಟ್ರಿಕ್ಟ್ ಬೋರ್ಡಿನವರು ದ್ರವ್ಯ ಸಹಾಯಮಾಡುತ್ತಿದ್ದಾರೆ. ಈ ಕೆಲಸವು ಇಷ್ಟರಲ್ಲೇ ಪೂರ್ತಿಗೊಳ್ಳುವುದರಲ್ಲಿದೆ. ಪ್ರಜೋಪಯುಕ್ತವಾದ ಇಂಥಾ ಮಹಾಕಾರ್ಯಗಳನ್ನು ಕೈಗೊಳ್ಳುವುದರಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಇರುವ ತೀವ್ರವಾದ ಆಸಕ್ತಿಯೂ ಉತ್ಸಾಹವೂ ಪ್ರತ್ಯಕ್ಷದಲ್ಲಿ ಒದಗಿರುವ ಹಣಕಾಸಿನ ಮುಗ್ಗಟ್ಟಿನ ದೆಸೆಯಿಂದ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ. ಮಹಾಸ್ವಾಮಿಯವರ ಘನಸರ್ಕಾರದವರು ನಮಗೆ ಅವಿಚ್ಛಿನ್ನವಾಗಿ ದಯಪಾಲಿಸುತ್ತಿರುವ ಉದಾರ ಪ್ರೋತ್ಸಾಹಗಳಿಂದ ಆರ್ಥಿಕ ಸ್ಥಿತಿಯು ಸುಧಾರಿಸಿದೊಡನೆ, ಹೆಚ್ಚು ಕಾರ್ಯಭಾರಗಳನ್ನು ನಡೆಸುವವರಾಗುತ್ತೇವೆಂಬ ಭರವಸೆಯು ಇರುತ್ತದೆ, ಮಹಾಸ್ವಾಮಿ.

ಕಾವೇರೀ ನದಿಯ ಮೇಲೆ ಕಟ್ಟಿರುವ ಈ ಸೇತುವೆಯ ಪ್ರಾರಂಭೋತ್ಸವವನ್ನು ಮಹಾಪ್ರಭುಗಳ ಅಮೃತ ಹಸ್ತಗಳಿಂದ ನೆರವೇರಿಸಬೇಕೆಂದು ನಮ್ರತೆಯಿಂದ ಪ್ರಾರ್ಥಿಸುತ್ತೇವೆ, ಮಹಾಸ್ವಾಮಿ. ಈ ಸುಸಮಯದಲ್ಲೇ ಮಹಾಸನ್ನಿಧಾನದಲ್ಲಿ ಮತ್ತೊಂದು ಪ್ರಾರ್ಥನೆಯನ್ನು ಮಾಡಿಕೊಳ್ಳದೆ ಇರಲಾರೆವು. ಈ ಸೇತುವೆಗೆ ಮಹಾಸ್ವಾಮಿಯವರ ಪವಿತ್ರನಾಮವನ್ನಿಡಲು ಅನುಜ್ಞೆಯನ್ನು ದಯಪಾಲಿಸಬೇಕೆಂದು ಬೇಡುತ್ತೇವೆ. ಹೃತ್ಪೂರ್ವಕವಾದ ನಮ್ಮ ಪ್ರಾರ್ಥನೆಯನ್ನು ಮಹಾಸ್ವಾಮಿಯವರು ಉದಾರ ಮನಸ್ಸಿನಿಂದ ಅಂಗೀಕರಿಸುವುದಾದರೆ, ಈ ಶ್ರೀ ಕೃಷ್ಣರಾಜೇಂದ್ರ ಸೇತುವೆಯು ಮುಂದೆ ನಮಗೂ ನಮ್ಮ ಮುಂದಿನ ಜನಾಂಗಕ್ಕೂ ಪೀಳಿಗೆ ಪೀಳಿಗೆಯಾಗಿ ಮಹಾಸ್ವಾಮಿಯವರ ಉಜ್ವಲಪ್ರಜಾನುರಾಗವನ್ನೂ ನಿರುಪಮವಾದ ಆಳ್ವಿಕೆಯನ್ನೂ ಚಿರಸ್ಮರಣೀಯವಾಗುವಂತೆ ಮಾಡಲನುವಾಗುವುದು, ಮಹಾಸ್ವಾಮಿ.

ಈ ಕ್ಷೇತ್ರದಲ್ಲಿ ಮೂರ್ತೀಭವಿಸಿರುವ ಅಗಸ್ತ್ಯೇಶ್ವರಸ್ವಾಮಿಯು ಮಹಾಸ್ವಾಮಿಯವರಿಗೂ ರಾಜಕುಟುಂಬಕ್ಕೂ ದೀರ್ಘಾಯುರಾರೋಗ್ಯಗಳನ್ನು ದಯಪಾಲಿಸಲೆಂದು ಅನನ್ಯಭಾವದಿಂದ ಸರ್ವದಾ ಪ್ರಾರ್ಥಿಸುತ್ತಿರುವ,

ತಮ್ಮ ನಮ್ರ ಪ್ರಜೆಗಳಾದ
ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್ ಮತ್ತು ಸದಸ್ಯರುಗಳು.

ತಿರುಮಕೂಡ್ಲು,
ತಾ|| 29-8-1932.

ಅಖಿಲವೀರಶೈವ ಪಂಡಿತಮಂಡಲದ ನಿಯಮಾವಳಿ.

ಅಧ್ಯಕ್ಷ — ಶ್ರೀ ಸಂ. ಚಂದ್ರಶೇಖರಶಾಸ್ತ್ರಿ ನ್ಯಾಯತೀರ್ಥ ಛತ್ರದಹಳ್ಳಿ.
ಗೌರವಕಾರ್ಯದರ್ಶಿ — ಶ್ರೀ ವಿರೂಪಾಕ್ಷಶಾಸ್ತ್ರಿ ಸಾಹಿತ್ಯಾಚಾರ್ಯ, ರೋಣ.
ಕಾರ್ಯದರ್ಶಿ — ಶ್ರೀ ರಾಜಶೇಖರಶಾಸ್ತ್ರಿ ಕಾವ್ಯತೀರ್ಥ ಮಲ್ಲಾಪುರ.
ಕೋಶಾಧ್ಯಕ್ಷ — ಶ್ರೀ ಬಸವರಾಜಶಾಸ್ತ್ರಿ ಮಾಗಳ.

ವಿನಂತಿ

ಪಂಡಿತಮಂಡಲವು ಧಾರವಾಡದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳ ಬೋರ್ಡಿಂಗಿನಲ್ಲಿ ಜರುಗಿದ 63 ಪುರಾತನರ ಪೂಜಾಕಾಲದಲ್ಲಿ ಸ್ಥಾಪಿತವಾದದ್ದು ಬಹುಜನರಿಗೆ ಗೊತ್ತಿರಬಹುದು. ಇದು ಯಾವ ಪಕ್ಷಕ್ಕೂ ಸೇರಿದ್ದಲ್ಲ. ಸದ್ಯ ಪ್ರಚಲಿತವಾಗಿರುವ ಯಾವ ಪಕ್ಷಗಳ ವಾದಗಳನ್ನೂ ನಿಷ್ಪಕ್ಷಪಾತದಿಂದ ಪರಿಶೀಲಿಸಿ ಸಲಿಕ್ಕೆ ತೊಡಗದೆ ಪ್ರಾಚೀನ ಪ್ರಾಮಾಣಿಕ ಗ್ರಂಥಗಳನ್ನು ಕನ್ನಡ ಟೀಕೆ ಟಿಪ್ಪಣೆಗಳಿಂದ ಬರೆಯಿಸಿ ಪ್ರಕಟಿಸುವುದೇ ಸದ್ಯ ಇದರ ಧ್ಯೇಯವಾಗಿದೆ. ಮುಂದೆ ವಾದಾತ್ಮಕ ವಿಷಯಗಳನ್ನು ಚರ್ಚಿಸಿ, ಬಹುಮತದಂತೆ ನಿರ್ಣಯಿಸಿ ಪ್ರಕಟಿಸುವದು.

ಇದರ ನಿಯಮಗಳು

1. ಈ ಮಂಡಲಿಯ ಉದ್ದೇಶವನ್ನು ನೆರವೇರಿಸಲು 1 ಮಹಾಮಂಡಲ ಮತ್ತು 1 ಕಾರ್ಯನಿರ್ವಾಹಕಮಂಡಲ ಎಂಬದಾಗಿ 2 ಇರಬೇಕು.

2. (ಮಹಾಮಂಡಲ) ಜನರಲ್ ಕಮಿಟಿ ಈ ಮಂಡಲಕ್ಕೆ ಸದಸ್ಯರಾದವರೆಲ್ಲರೂ ಮಹಾಮಂಡಲದಲ್ಲಿರಬೇಕು.

3. ಮಹಾಮಂಡಲವು ಪ್ರತಿ ವರ್ಷ ವೈಶಾಖಮಾಸದಲ್ಲಿ ಅನುಕೂಲವಾದ ಸ್ಥಳದಲ್ಲಿ ಸೇರಿ ಮುಂದಿನ ವರ್ಷದ ಕಾರ್ಯಗಳನ್ನು ಗೊತ್ತುಪಡಿಸಬೇಕು.

4. ಮಹಾಮಂಡಲದ ಸಭೆಗೆ ಒಟ್ಟು ಸದಸ್ಯರಲ್ಲಿ 3 ನೆಯ 1 ಭಾಗದಷ್ಟಾದರೂ ಸದಸ್ಯರು ಸೇರಿದರೇನೆ ಕಾರ್ಯವು ನಡೆಯಬೇಕು. ಇಲ್ಲವಾದರೆ ಮತ್ತೊಂದುಸಾರೆ ಸೇರಿ ಎಲ್ಲ ಸದಸ್ಯರಿಗೂ ತಿಳಿಸಿ ಅನಂತರ ಬಂದಷ್ಟು ಸದಸ್ಯರಿಂದಲೇ ಕಾರ್ಯಸಾಗಿಸಬಹುದು.

5. ಈ ಮಂಡಲದ 4 ನೆಯ 1 ಭಾಗದಷ್ಟು ಸದಸ್ಯರು ಮಹಾಮಂಡಲವನ್ನು ಕೂಡಿಸಬೇಕೆಂದು ಕಾರ್ಯನಿರ್ವಾಹಕ ಮಂಡಲಕ್ಕೆ ತಿಳಿಸಿದರೆ ವರ್ಷದ ಮಧ್ಯಕಾಲದಲ್ಲಾದರೂ ಮಹಾಮಂಡಲ ಕೂಡಿಸಿ ಮೇಲಣ ಕ್ರಮವನ್ನನುಸರಿಸಿ ಕಾರ್ಯನಡೆಸಬಹುದು.

(ಕಾರ್ಯನಿರ್ವಾಹಕ ಮಂಡಲ) ಮ್ಯಾನೇಜಿಂಗ ಕಮಿಟಿ

6. ಮಹಾಮಂಡಲದಲ್ಲಿ ತೀರ್ಮಾನವಾದ ಕಾರ್ಯಗಳನ್ನು ನಡೆಸಲು 9 ಜನರದೊಂದು ಕಾರ್ಯನಿರ್ವಾಹಕ ಮಂಡಲವು ಬಹುಮತದಂತೆಯೇ ಏರ್ಪಡಬೇಕು.

7. ಈ ಕಾರ್ಯನಿರ್ವಾಹಕ ಮಂಡಲಕ್ಕೆ ಒಬ್ಬ ಪ್ರಮುಖರು, ಪಂಡಿತಮಂಡಲಿಯ ಕಾರ್ಯದರ್ಶಿಗಳೇ ಕಾರ್ಯದರ್ಶಿಗಳಾಗಿಯೂ ಇರಬೇಕು, ಇವರೆಲ್ಲರ ಸಂಖ್ಯೆಯು 7 ಕ್ಕಿಂತ ಹೆಚ್ಚಿರತಕ್ಕದ್ದು.

8. ಕಾರ್ಯನಿರ್ವಾಹಕ ಮಂಡಲವು ವರ್ಷದಲ್ಲಿ ಮೂರಾವರ್ತಿಯಾದರೂ ಸೇರಬೇಕು. ಈ ಮಂಡಲದ 4 ಸದಸ್ಯರು ಕೂಡಿದರೆ ಕಾರ್ಯಸಾಗಿಸಲು ಅಡ್ಡಿ ಇಲ್ಲ.

9. ಕಾರ್ಯನಿರ್ವಾಹಕ ಮಂಡಲದವರು ತಮ್ಮ ಕಾರ್ಯ ನಡೆಸಲು ಬೇಕಾಗುವ ಆಯವ್ಯಯ ಪತ್ರಿಕೆಗಳನ್ನು ಸಿದ್ಧಗೊಳಿಸಿ ಮಹಾಮಂಡಲದಲ್ಲಿಡಬೇಕು.

10. ಮಹಾಮಂಡಲ ಮತ್ತು ಕಾರ್ಯನಿವಾಹಕ ಮಂಡಲಗಳಲ್ಲಿ ನಡೆದ ಕಾರ್ಯಗಳನ್ನು ಈ ಮಂಡಲದವರು ಆಗಾಗ್ಗೆ ಪತ್ರಿಕೆಗಳಲ್ಲಿ ಪ್ರಕಟಿಸಿ ವಾರ್ಷಿಕ ವರದಿಯನ್ನು ಪ್ರತ್ಯೇಕವಾಗಿ ಪ್ರಕಟಿಸಬೇಕು.

11. ಮಹಾಮಂಡಲದ ವಾರ್ಷಿಕ ಸಮ್ಮೇಲನ ಕೂಡುವ ಒಂದು ತಿಂಗಳ ಮುಂಚೆ ಅಲ್ಲಿ ಚರ್ಚೆಯಾಗತಕ್ಕ ಸಂಗತಿಗಳನ್ನು ಈ ಕಾರ್ಯನಿರ್ವಾಹಕ ಮಂಡಲದವರು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿ ಅನ್ಯಮಹಾಶಯರ ಸೂಚನೆ ಮತ್ತು ಸಲಹೆಗಳು ಬರಲು ಅನುಕೂಲ ಪಡಿಸಬೇಕು.

ಕಾರ್ಯಕ್ರಮವು.

12. ಮಂಡಲದಿಂದ ವರ್ಷಕ್ಕೆ ಒಂದಾದರೂ ವೀರಶೈವಮತ ಗ್ರಂಥವು ಪ್ರಕಟವಾಗಬೇಕು. ಆದರೆ ಅದು ಯಾವದಾದರೊಂದು ಪ್ರಾಚೀನವಾಗಿ ಮತ್ತು ಈ ವರೆಗೆ ಪ್ರಕಟವಾಗದೆ ಇರತಕ್ಕ ಗ್ರಂಥವಾಗಿರಬೇಕು. ಆದರೆ ಅದು ಹೊಸಗನ್ನಡದಲ್ಲಿ ಟೀಕೆ ಟಿಪ್ಪಣಿ ವಿವರಣೆಗಳುಳ್ಳದ್ದಾಗಿರಬೇಕು.

13. ಮಹಾಮಂಡಲ ಸದಸ್ಯರಲ್ಲಿ ವರ್ಷಕ್ಕೆ ಮೂರು ಜನರಾದರೂ ಮೂರುವಾರವಾದರೂ ಗ್ರಾಮಗಳಿಗೆ ಹೋಗಿ ಉಚಿತವಾಗಿ ಮಂಡಲದ ತತ್ವಕ್ಕೆ ವಿರೋಧಬಾರದಂತೆ ಧರ್ಮೋಪದೇಶ ಮಾಡತಕ್ಕದ್ದು.

14. ಪಂಡಿತ ಮಂಡಲಕ್ಕೆ ಉದ್ದೇಶ ನಿಯಮಗಳಿಗನುಸಾರವಾಗಿ ಮಂಡಲದವರು ಒಳನಿಯಮಗಳನ್ನು ಮಾಡಿಕೊಳ್ಳಬೇಕು.

15. ವೀರಶೈವ ಪುಸ್ತಕಭಾಂಡಾರವನ್ನು (ಮುದ್ರಿತವಾದ ಮುದ್ರಿತವಾಗದಿರುವ ಧರ್ಮಗ್ರಂಥಗಳನ್ನು) ಸಂಗ್ರಹಿಸತಕ್ಕದ್ದು.

ಈ ವರ್ಷದ ಕಾರ್ಯಕ್ರಮ.

ಸೂಚನಾ:— ಈ ವರ್ಷದೊಳಗಾಗಿ ಕ್ರಿಯಾಸಾರದ ಮೊದಲನೆ ಅಧ್ಯಾಯವನ್ನು ಕನ್ನಡ ಟೀಕೆ ಟಿಪ್ಪಣಿಯಿಂದ ಕೂಡಿ ಮುದ್ರಿಸಬೇಕೆಂದು ತಾ|| 17-7-32ನೇ ಜನರಲ್ ಕಮಿಟಿಯಿಂದ ಠರಾವಾಗಿರುವದು. ಇದನ್ನು ಬರೆಯಲಪೇಕ್ಷೆಯುಳ್ಳ ಮಹಾಶಯರು ಮುಂಚೆಯೇ ನಮಗೆ ತಿಳಿಯಿಸದೇ ಕಲ್ಲದೆ ಮುಂದಿನಯುಗಾದಿಯೊಳಗಾಗಿ ಬರೆದದ್ದನ್ನು ಕಮಿಟಿಗೆ ಕಳಿಸಬೇಕೆಂದು ವಿನಂತಿ.

ಅಧ್ಯಕ್ಷ, ಅ. ವೀ. ಪಂಡಿತಮಂಡಲ
ಸಂ. ಚಂದ್ರಶೇಖರಶಾಸ್ತ್ರಿಗಳು
ಛತ್ರದಹಳ್ಳಿ, ನ್ಯಾಯತೀರ್ಥ.

ಧಾರವಾಡ,
ತಾ|| 20-7-1932

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖಕರಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು — ಸಂಪಾದಕ.

ತಿರಸ್ಕೃತ ಲೇಖ.

ಡಿಸ್ಟ್ರಿಕ್ಟ್ ನಾರ್ಮಲ್ ಸ್ಕೂಲು ಉಪಾಧ್ಯಾಯರ ಸಂಘ, ಚಿತ್ರದುರ್ಗ — ಈ ಸಂಘದ ಲೇಖಗಳು ಸ್ಪಷ್ಟವಾಗಿದ್ದ ಹೊರತು ಪ್ರಕಟಿಸಲ್ಪಡಲು ಸಾಧ್ಯವಿಲ್ಲ — ಸಂ.

ಈಶ್ವರನು ಸಾರಥಿಯಂತೆ!

ಈ ಶಿರೋನಾಮೆಯ ಪ್ರಕಟನೆಯು ಹೋದವಾರದ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದುದು ಸರ್ವಶ್ರುತವಿರುವದಷ್ಟೆ. 1932 ನೆಯ ಆಗಸ್ಟ ತಾ|| 20 ರಲ್ಲಿ ಕಾರಣಾಂತರದಿಂದ ವಿಚಾರಣೆಯು ನಡೆಯದೆ ಸೆಪ್ಟಂಬರ್ ತಾ|| 14 ಕ್ಕೆ ಮುಂದುವರಿಸಲ್ಪಟ್ಟಿದೆ. ಸದರಿ ವಾಯಿದೆಗೆ ಸಾಕ್ಷಿವಿಚಾರಣೆಯು ನಡೆದೇ ತೀರುವದು. ಆದ್ದರಿಂದ ಅಭಿಮಾನಶಾಲಿಗಳಾದ ವೀರಶೈವ ಪಂಡಿತರುಗಳೂ ವಕೀಲರುಗಳೂ 1 ದಿವಸ ಮುಂಚಿತವಾಗಿ ರಾಯಚೂರ ಮೊಕ್ಕಾಮಿಗೆ ಆಗಮಿಸಿ ಸಾಕ್ಷಿಯ ಪಾಟಿಸವಾಲುಗಳು ಮುಂತಾದ್ದನ್ನು ಮಾಡುವದರಲ್ಲಿ ಸಹಾಯಮಾಡಬೇಕಾಗಿ ಪ್ರಾರ್ಥಿಸುತ್ತೇವೆ.

ಮಾನ್ವಿಯ ಸಮಸ್ತ ವೀರಶೈವ ದೈವದವರಿಗಾಗಿ,
ಹೊ|| ವೀರಭದ್ರಪ್ಪ, ದ|| ಹೊತನಾಳು ವೀರಭದ್ರಪ್ಪ,
ಹ|| ಸೂಗಪ್ಪ ಮತ್ತು ಶಂಭುಲಿಂಗಯ್ಯ.

ವೈಶ್ಯ ಯತಿವರ್ಯರ ನಿರ್ಯಾಣ

ಶ್ರೀ ಆರ್ಯವೈಶ್ಯ ಯತಿವರ್ಯರಾದ ಶ್ರೀಧರ ತೀರ್ಥಸ್ವಾಮಿಗಳವರು ಬೆಂಗಳೂರಿನಿಂದ ತುಮಕೂರು ಡಿ|| ಶಿರಾಕ್ಕೆ ದಯಮಾಡಿಸಿ ದೇಹಾಲಸ್ಯದಿಂದ ಮ|| ಶಿರಾ ಕೆ. ಪಿ. ನಂಜಪ್ಪಶೆಟ್ಟರವರ ಉಪಚಾರದಲ್ಲಿದ್ದು ಇದೇ ತಾ|| 5-8-32 ನೇ ಶುಕ್ರವಾರ ರಾತ್ರಿ 9 ಘಂಟೆಗೆ ಶಿವಸಾನ್ನಿಧ್ಯವನ್ನು ಹೊಂದಿದರು. ಮ|| ಕೆ. ಪಿ. ನಂಜಪ್ಪಶೆಟ್ಟರು ಬೆಂಗಳೂರಿನಿಂದ ತಮ್ಮ ಮತ ಪುರೋಹಿತರಾದ ವೇ|| ಶ್ರೀನಿವಾಸಗುಪ್ತರವರನ್ನು ಬರಮಾಡಿಕೊಂಡು ಶ್ರೀಗಳವರ ಸಮಾಧಿ ಸಂಸ್ಕಾರವನ್ನು ವೇದೋಕ್ತವಾಗಿ ನಡಿಸಿದ್ದಲ್ಲದೆ ಶ್ರೀಗಳವರ ಆರಾಧನೆಯನ್ನು ನಾಲ್ಕು ದಿನ ಅಂದರೆ ತಾ|| 16 ನೇ ಮಂಗಳವಾರ ಸಾಧುಗಳಿಗೂ, ತಾ|| 17 ನೇ ಬುಧವಾರ ಬ್ರಾಹ್ಮಣರಿಗೂ, ತಾ|| 18 ನೇ ಗುರುವಾರ ಆರ್ಯವೈಶ್ಯ ಮಂಡಲಿಯವರಿಗೂ ತಾ|| 19 ನೇ ಶುಕ್ರವಾರ ಇತರಾದಿಗಳಿಗೂ ಆರಾಧನೆಯನ್ನು ನಡಿಸಿ ಪರಮ ಪದವಿಯನ್ನು ಹೊಂದಿದ ಶ್ರೀಗಳ ಆತ್ಮಕ್ಕೆ ಶಾಂತಿಯನ್ನು ಉಂಟು ಮಾಡಿರುತ್ತಾರೆ. ಶ್ರೀ ಯತಿಗಳ ಆಶ್ರಮ ಧರ್ಮಕ್ಕೆ ಲೋಪವಿಲ್ಲದಂತೆ ಅಂತ್ಯ ಸಂಸ್ಕಾರಗಳನ್ನು ವಿಧಿವತ್ತಾಗಿ ನಡೆಸಿದ ಮ|| ಕೆ. ಪಿ. ನಂಜಪ್ಪಶೆಟ್ಟರವರಿಗೆ ದಯಾಮಯನಾದ ಭಗವಂತನು ಸಕಲ ಸಂಪದಭಿವೃದ್ಧಿಯನ್ನು ಕೊಟ್ಟು ಕಾಪಾಡಲೆಂದು ಹಾರೈಸುತ್ತೇನೆ.

ಪುಟ್ಟರಂಗಪ್ಪ, ಶ್ಯಾಮಿದಿಗೆರೆ.

ಗೋರಿಬಿದನೂರು ತಾ|| ಗ್ರಾಮಪಂಚಾಯತಿಗಳ ಕಾರ್ಯಕಲಾಪಗಳು.

ಗೋರಿಬಿದನೂರು ತಾ|| ಚಂದಬಂದೂರು ಗ್ರಾಮ ಪಂಚಾಯತಿ ಮಂದಿರದ ಪ್ರವೇಶೋತ್ಸವವು ತಾ|| 22-8-32 ನೇ ಸೋಮವಾರ ದಿನ 3 ಘಂಟೆ ಸಮಯದಲ್ಲಿ ಮೈಸೂರು ಸೀಮೆಯ ರೆವಿನ್ಯೂ ಕಮಿಷನರ್ ಮ|| ಎಸ್. ಪಿ. ರಾಜಗೋಪಾಲಚಾರಿ, ಬಿ. ಎ., ಬಿ. ಎಲ್., ಇವರಿಂದ ನೆರವೇರಿಸಲ್ಪಟ್ಟಿತು. ಇದಕ್ಕಾಗಿ ಗ್ರಾಮಮಂದಿರವು ಬಲುಸೊಗಸಾಗಿ ಅಲಂಕಾರ ಮಾಡಲ್ಪಟ್ಟು ಮಂದಿರದ ಮುಂಭಾಗದಲ್ಲಿ ಹಾಕಿದ್ದ ಹಸುರುವಾಣಿ ಚಪ್ಪರದ ಬಳಿ ಪಂಚಾಯತಿ ಅಧ್ಯಕ್ಷರಾದ ಮ|| ಎಳೆನರಸಪ್ಪನವರು, ಗ್ರಾಮಪಂಚಾಯತಿ ಅಧ್ಯಕ್ಷರುಗಳ ಸಂಘದ ಗೌರವಕಾರ್ಯದರ್ಶಿ ಮ|| ಆರ್. ಪಿ. ರಾಜಣ್ಣನವರು ಮತ್ತು ಕೋಲಾರ ಡಿ|| ಬೋರ್ಡು ಪ್ರೆಸಿಡೆಂಟ್ ಮ|| ಎಲ್. ವೇಮಾರೆಡ್ಡಿಯವರು ಮಂಗಳವಾದ್ಯಗಳೊಡನೆ ರೆ|| ಕಮಿಷನರನ್ನು ಇದಿರುಗೊಂಡು ಸ್ವಾಗತವನ್ನು ಬಯಸಿದನಂತರ ರೆ|| ಕಮಿಷನರು ಅಧ್ಯಕ್ಷಸ್ಥಾನವನ್ನಲಂಕರಿಸಿ ಈ ತಾಲ್ಲೂಕಿನ ಗ್ರಾಮ ಪಂಚಾಯತಿಗಳಲ್ಲಿ ನಡೆದಿರತಕ್ಕ ಕಾರ್ಯಕಲಾಪಗಳನ್ನು ಸಾವಧಾನಚಿತ್ತದಿಂದ ಲಾಲಿಸಿ ಮಂದಿರದ ಪ್ರವೇಶೋತ್ಸವವನ್ನು ನಡೆಸಿದ ನಂತರ ಎಲ್. ವೇಮಾರೆಡ್ಡಿಯವರು ಗ್ರಾಮೋನ್ನತಿಗೆ ಡಿ|| ಬೋರ್ಡು ಮತ್ತು ಗ್ರಾಮಪಂಚಾಯತಿಗಳು ಒಗ್ಗಟ್ಟಿನಿಂದ ಕೆಲಸ ಮಾಡಬೇಕೆಂದೂ, ಈ ಡಿ|| ನಲ್ಲಿ ಪಂಚಾಯತಿಗಳ ಪುರೋಭಿವೃದ್ಧಿಗೋಸ್ಕರ ಅತ್ಯಂತ ಉತ್ಸಾಹದಿಂದ ಕೆಲಸಮಾಡುತ್ತಿರುವ ಡಿಸ್ಟ್ರಿಕ್ಟ್ ಅಧಿಕಾರಿಗಳಾದ ಮ|| ಎ. ವಿ. ರಾಮನಾಥನ್ ರವರ ಆಡಳಿತದಲ್ಲಿ ಗ್ರಾಮಗಳು ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಯನ್ನೈದುತ್ತಿರುವವೆಂದೂ ಹೇಳಿದರು. ಗ್ರಾಮ ಪಂಚಾಯತಿ ಮಾಸಪತ್ರಿಕೆಯ ಸಂಪಾದಕರಾದ ಮ|| ಎಸ್. ಸೀತಾರಾಮಯ್ಯನವರು ಪಂಚಾಯತಿಗಳ ವಿಚಾರದಲ್ಲಿ ಸ್ವಾರಸ್ಯವಾದ ಭಾಷಣವನ್ನು ಮಾಡಿದ ಮೇಲೆ ಅಧ್ಯಕ್ಷರು ಪಂಚಾಯತಿ ಮೆಂಬರುಗಳಿಗೆ ಬುದ್ಧಿವಾದಗಳನ್ನು ಹೇಳಿ ಅನೇಕ ಪಂಚಾಯತಿಗಳು ಚೆನ್ನಾಗಿ ಕೆಲಸಮಾಡಿರುವುದು ಸಂತೋಷಪ್ರದವೆಂದು ಹೇಳಿದರು. ತರುವಾಯ ಮ|| ಆರ್. ಪಿ. ರಾಜಣ್ಣನವರು ಸಂಘದ ಪರವಾಗಿ ಅಧ್ಯಕ್ಷರಿಗೆ ವಂದನೆಯನ್ನರ್ಪಿಸಿ ಆಳುವ ಮಹಾಸ್ವಾಮಿಯವರ ದೀರ್ಘಾಯುರಾರೋಗ್ಯವನ್ನು ಬಯಸಿದರು. ಆರೋಗ್ಯದ ಇಲಾಖೆಯ ಮ|| ಕೆ. ಸೀತಾರಾಮಯ್ಯನವರಿಂದ ಆರೋಗ್ಯ ಸಂಬಂಧವಾದ ಚಲನ ಚಿತ್ರಗಳು ಪ್ರದರ್ಶಿಸಲ್ಪಟ್ಟವು.

ಪ್ರತ್ಯಕ್ಷದರ್ಶಿ.

ದೈವಭಕ್ತಿ.

ಶಿವಮೊಗ್ಗ ಟವನ್ ದುರ್ಗಿಗುಡಿವಾಸಿಗಳಾದ ಹುಲಿಕೆರೆ ರುದ್ರಪ್ಪನವರ ಮಗ ನಂಜಪ್ಪನವರು ತಾ|| 10-6-32 ರಲ್ಲಿ ಶಿವಾಧೀನರಾದರು. ಇವರು ಚಿಕ್ಕ ವಯಸ್ಸಿನವರಾಗಿದ್ದರೂ ಶಿವಭಕ್ತರಾಗಿಯೂ, ಮಕ್ಕಳಿಲ್ಲವೆಂಬ ಕಾರಣದಿಂದ ತಮ್ಮ ವ್ಯಾಪಾರಾದಿ [illegible] ಈಶ್ವರಸೇವಾಪರತರಾಗಿಯೂ ಇದ್ದರು. ತಮ್ಮ [illegible] ತಾ|| 31-5-32 ರಲ್ಲೇ ತಮ್ಮ [illegible] ಕೊಂಡು • ನನಗೆ [illegible] ಆಸ್ತಿಯಲ್ಲಿ [illegible] ಮನೆಯಲ್ಲಿರುವ ಕೊಡಗೆ ಈ ಲಕ್ಷ್ಮೀಶ್ವರದ ಮಲ್ಲಪ್ಪನವರಲ್ಲಿರುವ 4,000 ರೂ. ಬೇಲೂರಿನ ರೇವಪ್ಪನವರಲ್ಲಿರುವ 1,000 ರೂ. ಒಟ್ಟು 5,000 ರೂ. ಗಳಲ್ಲಿ 1,500 ರೂ. ಗಳನ್ನು ಬೇಲೂರಿನಲ್ಲಿರುವ ನನ್ನ ಮನೆದೇವರು ಶ್ರೀ ಮಲ್ಲಿಕಾರ್ಜುನಸ್ವಾಮಿ ಸೇವೆಗೂ, 1,500 ರೂ. ಗಳನ್ನು ಚನ್ನಗಿರಿ ಶ್ರೀ ಶಿವಲಿಂಗಸ್ವಾಮಿಗಳವರ ಗದ್ದುಗೆಯ ಸೇವೆಗೂ ಸಲ್ಲಿಸಿ ಉಳಿದ 2,000 ರೂ. ಗಳ ಬಡ್ಡಿಯಿಂದ ನನ್ನ ಪತ್ನಿಯು ಜೀವನ ನಡಿಸಿಕೊಂಡು ಬಂದು ಆಕೆಯ ಮರಣಾನಂತರ ಆ 2,000 ರೂ. ಗಳನ್ನು ಮಾವಿನಹಳ್ಳಿ ಶ್ರೀ ವೀರಭದ್ರೇಶ್ವರಸ್ವಾಮಿಯ ಸೇವೆಗೆ ಸಲ್ಲಿಸತಕ್ಕದ್ದು ಮತ್ತು ನನ್ನ ಮನೆ ವಗೈರೆ ಇತರ ಸ್ಥಿರಚರಾಸ್ತಿಗಳು ನನ್ನ ಹೆಂಡತಿಯು ಮೃತಪಟ್ಟನಂತರ ನನ್ನ ವಾರಸುದಾರರಿಗೆ ಸಲ್ಲತಕ್ಕದ್ದು. ಈ ಮೇಲಿನ ಧರ್ಮಕಾರ್ಯಗಳನ್ನು ಸಾಂಗವಾಗಿ ನಡಿಸತಕ್ಕ ಬಗ್ಗೆ ನನ್ನ ಬಂಧುಗಳಾದ ಬೇಲೂರು ಹುಲಿಕೆರೆ ಹಾಲಪ್ಪನವರು (ಯಜಮಾನರು), ಹುಲಿಕೆರೆ ನಂಜಪ್ಪನವರು ಹುಲಿಕೆರೆ ರೇವಪ್ಪನವರು, ಶಿವಮೊಗ್ಗವಾಸಿ ಹುಲಿಕೆರೆ ಶಾಂತಪ್ಪನವರು (ಮೃತರ ಖಾಸ ತಮ್ಮ) ಹುಲಿಕೆರೆ ವೀರಪ್ಪನವರು ಮತ್ತು ಹೊದಿಗ್ಗೆರೆ ಲಕ್ಷ್ಮೇಶ್ವರದ ಮಲ್ಲಪ್ಪನವರು ಇವರುಗಳನ್ನು ಮೆಂಬರುಗಳನ್ನಾಗಿ ನೇಮಿಸಿರುತ್ತೇನೆ " ಎಂದು ವಿಲ್ ಬರೆಸಿರುತ್ತಾರೆ. ಈ ಮನೆತನದಲ್ಲಿ ಈರೀತಿ ಧರ್ಮಕಾರ್ಯಗಳನ್ನು ಮಾಡಿದವರು ಇವರೇ ಮೊದಲನೆಯವರಾಗಿ ಸತ್ಕೀರ್ತಿಯನ್ನು ಸಂಪಾದಿಸಿದರು. ಈ ಪುಣ್ಯಪುರುಷರು ಈರೀತಿಯಾಗಿ ತಮ್ಮ ಆಸ್ತಿಯನ್ನು ಧರ್ಮಕ್ಕಾಗಿ ವಿನಿಯೋಗಿಸಲು ಬಿಟ್ಟುಕೊಟ್ಟಿದ್ದರೂ ವಿಲ್ ಚಾಲಕರುಗಳು ಈ ವಿಚಾರದಲ್ಲಿ ಇದುವರೆಗೂ ಏನನ್ನೂ ಮಾಡಿದಂತೆ ಕಂಡುಬರುವದಿಲ್ಲವಾದ ಸಂಗತಿ ಬಹಳ ಶೋಚನೀಯವಾಗಿದೆ. ಈಗಲಾದರೂ ಮೇಲ್ಕಂಡ ವಿಲ್ಲಿನ ಚಾಲಕರುಗಳು ಈ ವಿಚಾರದಲ್ಲಿ ಗಮನಕೊಟ್ಟು ಧರ್ಮಕರ್ತರ ಇಷ್ಟದಂತೆ ಸುವ್ಯವಸ್ಥೆ ಮಾಡಿ ಅವರ ಆತ್ಮಕ್ಕೆ ಶಾಂತಿಯನ್ನು ಉಂಟುಮಾಡುವರಾಗಿ ನಂಬಿರುತ್ತೇನೆ. ಧರ್ಮಕರ್ತರ ಪತ್ನಿಯವರಾದ ಬಸವಮ್ಮನವರು ಈ ಧರ್ಮವಿಚಾರಕ್ಕೆ ಪೂರ್ಣಗಮನವಿತ್ತು ವಿಲ್ ಚಾಲಕರುಗಳಿಗೆ ತಕ್ಕ ಪ್ರೋತ್ಸಾಹಕೊಟ್ಟು ತಮ್ಮ ಪತಿಯವರ ಧರ್ಮಕಾರ್ಯಗಳು ಸಾಂಗವಾಗಿ ನಡಿಯುವಂತೆ ತಕ್ಕ ಏರ್ಪಾಟು ಮಾಡಿಸಿ ತಾವು ಧರ್ಮಾತ್ಮರ ಧರ್ಮಪತ್ನಿ ಎಂಬ ಗೌರವಕ್ಕೆ ಪಾತ್ರರಾಗುವರಾಗಿ ನಂಬಿರುತ್ತೇನೆ.

ಧರ್ಮಕಾರ್ಯಾಭಿಮಾನಿ.

[illegible] — 29-8-1932. [illegible]-35. [illegible] 45. [illegible]-5.

ಬೆಂಗಳೂರಿನ ಶ್ರೀ ಸರ್ಪಭೂಷಣ ಶಿವಯೋಗೀಶ್ವರಮಠದ ಅಧಿಕಾರಮಹೋತ್ಸವವು.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು ಚಿನ್ಮೂಲಾದ್ರಿ ಬೃಹನ್ಮಠ ಮಹಾಸಂಸ್ಥಾನದ ಅಧಿಕಾರಕ್ಕೂ ಆಡಳಿತೆಗೂ ಒಳಪಟ್ಟ ಇಲ್ಲಿಯ ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠಕ್ಕೆ ಕಾಶಿಯಲ್ಲಿ 10-12 ವರ್ಷಗಳವರೆಗೆ ಅಭ್ಯಾಸಮಾಡಿ ನ್ಯಾಯ, ವೇದಾಂತ, ಸಾಂಖ್ಯ, ಸಾಹಿತ್ಯಾದಿ ಶಾಸ್ತ್ರಗಳಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಪಡೆದು ಬಂದು ಧಾರವಾಡ ಹಾವೇರಿಪೇಟೆಯ ಶ್ರೀಜಗದ್ಗುರು ಮುರುಘರಾಜ ಸಂಸ್ಕೃತಪಾಠಶಾಲೆಯಲ್ಲಿ 2-3 ವರ್ಷಗಳವರೆಗೆ ಅಧ್ಯಾಪಕತ್ವವನ್ನು ವಹಿಸಿ ಆ ಪಾಠಶಾಲೆಯನ್ನು ಕಾಲೇಜಸ್ವರೂಪಕ್ಕೆ ತಂದುಕೊಟ್ಟು ಮುಂದೆ ಅದೇ ಜಿಲ್ಹೆಯ ಸವದತ್ತಿ ತಾಲ್ಲೂಕಿನ ಮುನವಳ್ಳಿ ಗ್ರಾಮದಲ್ಲಿ ಮಲಾಪಹಾರಿ ನದಿಯ ದಂಡೆಯಮೇಲೆ ಗುರುಕುಲವನ್ನು ಸ್ಥಾಪಿಸಿ 2 ವರ್ಷಗಳಿಂದಲೂ ಸಂಸ್ಕೃತ ಹಾಗೂ ವಚನವಿದ್ಯಾ ವಾಙ್ಮಯದ ಸೇವೆಯನ್ನು ಮಾಡುತ್ತಿದ್ದ ಪಂ|| ಶ್ರೀ ಮಹಾದೇವಸ್ವಾಮಿಗಳು ಮುಮ್ಮಾಪುರ ಇವರನ್ನು ಬೆಂಗಳೂರಿನ ಶ್ರೀ ಬಸವಲಿಂಗದೇವರ ಮತ್ತು ಸಕಲ ಸದ್ಭಕ್ತರ ಪ್ರಾರ್ಥನೆಯ ಮೇರೆಗೆ ಶ್ರೀ ಜಗದ್ಗುರು ಮಹಾಸನ್ನಿಧಿಯ ಅನುಗ್ರಹದ ಒಪ್ಪಿಗೆಯಿಂದ ಸರ್ಪಭೂಷಣ ಶಿವಯೋಗೀಶ್ವರ ಮಠಕ್ಕೆ ಇದೇ ಶ್ರಾವಣ ಶುದ್ಧ ಏಕಾದಶಿ ಶುಕ್ರವಾರ ಅಧಿಕಾರಿಗಳನ್ನಾಗಿ ನಿಯಮಿಸಿದರು. ಸದರಿ ಪಂ|| ಶ್ರೀ ಮಹಾದೇವಸ್ವಾಮಿಗಳಿಗೆ ವಿರಕ್ತಾಶ್ರಮಕ್ಕುಚಿತವಾದ ಅನುಗ್ರಹ ಉಪದೇಶ ಮುಂತಾದ ಕಾರ್ಯಗಳು ಶ್ರೀ ಜಗದ್ಗುರು ಮುರುಘರಾಜ ಮಹಾಸ್ವಾಮಿ ಸನ್ನಿಧಿಯಿಂದಲೇ ಚಿತ್ರದುರ್ಗದ ಬೃಹನ್ಮಠದಲ್ಲಿ ಶ್ರಾವಣ ಶು|| ೮ ರಿಂದ 4 ದಿವಸಗಳವರೆಗೆ ಸಕ್ರಮವಾಗಿ ಜರುಗಿದುವು. ಅನಂತರ ಗುರುವಾರ ಸಾಯಂಕಾಲ ಚಿತ್ರದುರ್ಗದಿಂದ ಹೊರಟು ಶುಕ್ರವಾರ ಬೆಳಗೆ ಶ್ರೀ ಮಹಾದೇವಸ್ವಾಮಿಗಳು ಪಂ|| ಗುರುಸಿದ್ಧಶಾಸ್ತ್ರಿಗಳು ಪುರಾಣಮಠ ಸಾಹಿತ್ಯಾಚಾರ್ಯ ಜಗದ್ಗುರು ಸಂಸ್ಥಾನದ ಮ್ಯಾನೇಜರಾದ ರುದ್ರಾರಾಧ್ಯರು ಚರಂತಿಮಠ ಬಳಿಚೋಳ ಇನ್ನು ಅನೇಕ ತಮ್ಮ ಶಿಷ್ಯಸಮುದಾಯದೊಡನೆ ಬೆಂಗಳೂರಿಗೆ ದಯಮಾಡಿಸಿದರು. ಆಗ ಬೆಂಗಳೂರಿನ ಯಾವತ್ತು ಮಠದ ಮೂರ್ತಿಗಳೂ ದೈವದವರೂ ಕೂಡಿ ಸದರಿ ಸ್ವಾಮಿಗಳನ್ನು ಬಾಜಾಭಜಂತ್ರಿ ಛಡಿ ಮುಂತಾದ ಸಂಭ್ರಮದೊಡನೆ ಮೋಟಾರಿನಲ್ಲಿ ಉತ್ಸವಪೂರ್ವಕವಾಗಿ ಶ್ರೀ ಸರ್ಪಭೂಷಣಸ್ವಾಮಿಗಳ ಮಠಕ್ಕೆ ಕರೆದುಕೊಂಡು ಬಂದರು. ಆಮೇಲೆ ಶ್ರೀ ಮಹಾಸಂಸ್ಥಾನದಿಂದ ಬೆಂಗಳೂರುಪೇಟೆ ಸಮಸ್ತ ವೀರಶೈವ ಜನಾಂಗದವರಿಗೆ ಆಶೀರ್ವದಿಸಲ್ಪಟ್ಟ ನಿರೂಪವನ್ನು ಮಹಾಸಂಸ್ಥಾನದ ಮ್ಯಾನೇಜರು ಶ್ರೀ ರುದ್ರಾರಾಧ್ಯರು ಚರಂತಿಮಠ ಬಳಿಚೋಳ ಇವರು ಸಮಸ್ತರಿಗೂ ಗ್ರಾಹ್ಯವಾಗುವಂತೆ ಓದಿ ಹೇಳಿದರು. ಮಧ್ಯಾಹ್ನ 12 ಘಂಟೆಗೆ ಗಣಾರಾಧನೆಯ ಕಾರ್ಯವು ಪ್ರಾರಂಭವಾಗಿ 4 ಘಂಟೆಗೆ ಪೂರೈಸಿದನಂತರ ಸಾಯಂಕಾಲ 5 ಘಂಟೆಗೆ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಮಠದ ಬೈಲಿನೊಳಗೆ ಭವ್ಯವಾದ ಮಂಟಪದಲ್ಲಿ ಸಭೆಸೇರಿತು. ಸಭೆಗೆ ಊರೊಳಗಿನ ಯಾವತ್ತು ಮಠಗಳ ಮೂರ್ತಿಗಳೂ, ಗುರುವರ್ಗದವರೂ, ಸದ್ಭಕ್ತರೂ, ದೇಶದ ಶೆಟ್ಟರೂ, ಯಜಮಾನರೂ, ಸರ್ಕಾರಿ ಅಧಿಕಾರಿಗಳೂ ಆಗಮಿಸಿದ್ದರು. ಪ್ರಾರಂಭದಲ್ಲಿ ಮಠದ ಪಾಠಶಾಲೆಯ ವೈದಿಕ ವಿದ್ಯಾರ್ಥಿಗಳಿಂದ ಮಂಗಲಕಾರ್ಯವು ಪೂರೈಸಿದನಂತರ ಪಂ|| ಗುರುಸಿದ್ಧಶಾಸ್ತ್ರಿಗಳು ಸಾಹಿತ್ಯಾಚಾರ್ಯ ಹಿರೇಗುಂದಿ ಇವರು ಶ್ರೀ ಮಹಾದೇವಸ್ವಾಮಿಗಳವರ ವಿದ್ಯಾವ್ಯಾಸಂಗವನ್ನೂ, ಸಮಾಜ ಸೇವೆಯನ್ನೂ, ನಿಜವೈರಾಗ್ಯವನ್ನೂ ಕುರಿತು ಸರ್ವರಿಗೂ ತಿಳಿಯಹೇಳಿದಮೇಲೆ, ಮುನವಳ್ಳಿಯಿಂದ ಸ್ವಾಮಿಗಳ ಜತೆಯಲ್ಲಿಯೇ ಬಂದ ಮ|| ಲಕ್ಷ್ಮಪ್ಪ ಎಲಿಗಾರ, ಬಿ.ಎ., ಇವರು ಶಿವಶರಣರ ತತ್ವದಮೇಲೆ ಸಭೆಯ ಜನರೆಲ್ಲ ಬೆರಗಾಗುವಂತೆ ಒಳ್ಳೇ ವಿದ್ವತ್ಪೂರ್ಣವಾದ ಭಾಷಣವನ್ನು ಮಾಡಿದರು. ಬಳಿಕ ಸದರಿ ಮಠದ ನೂತನಾಧಿಕಾರಿಗಳಾದ ಶ್ರೀ ಮಹಾದೇವಸ್ವಾಮಿಗಳವರು ಅದೇ ವಿಷಯದಲ್ಲಿ ತಮ್ಮ ಅಮೋಘವಾಣಿಯಿಂದ ಸರ್ವರೂ ಆನಂದಪಡುವಂತೆ ಉಪನ್ಯಾಸವನ್ನು ಮಾಡಿದರು. ಕಡೆಯಲ್ಲಿ ಅಧ್ಯಕ್ಷರಾದ ದಿವಾನ್‌ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು ಒಳ್ಳೇ ಆನಂದದಿಂದ ಇಂಥ ವಿದ್ವಾಂಸರನ್ನು ನಮ್ಮ ಸರ್ಪಭೂಷಣಸ್ವಾಮಿಗಳ ಮಠಕ್ಕೆ ಅಧಿಕಾರಿಗಳನ್ನಾಗಿ ಮಾಡಿ ಕಳುಹಿಸಿಕೊಟ್ಟ ಚಿತ್ರದುರ್ಗದ ಶ್ರೀ ಜಗದ್ಗುರು ಮಹಾಸನ್ನಿಧಾನಕ್ಕೂ ಶ್ರೀ ಬಸವಲಿಂಗದೇವರಿಗೂ ನೂತನಾಧಿಕಾರಿಗಳಾದ ಶ್ರೀ ಮಹಾದೇವಸ್ವಾಮಿಗಳಿಗೂ ಅಭಿನಂದನೆಗಳನ್ನು ಅರ್ಪಿಸಿ ಈ ಕಾರ್ಯದಲ್ಲಿ ಭಾಗಿಗಳಾಗಿದ್ದ ಬೆಂಗಳೂರಿನ ಮುಖಂಡರುಗಳ ಅಭಿಮಾನವನ್ನು ಶ್ಲಾಘಿಸಿದರು. ತರುವಾಯ ಶ್ರೀ ಬಸವಲಿಂಗಸ್ವಾಮಿಗಳು ಶ್ರೀ ಜಗದ್ಗುರು ಮಹಾಸನ್ನಿಧಿಯ ಆಶೀರ್ವಾದದಿಂದ ಈ ಕಾರ್ಯವು ನಿರ್ವಿಘ್ನವಾಗಿ ಸಾಂಗವಾದದ್ದಕ್ಕೆ ಕೃತಜ್ಞತೆಯನ್ನೂ ಆನಂದವನ್ನೂ ವ್ಯಕ್ತಪಡಿಸಿ ಸಭೆಗೆ ಬಂದವರೆಲ್ಲರ ಆಭಾರವನ್ನು ಮನ್ನಿಸಿ ತಾಂಬೂಲಾದಿಗಳಿಂದ ಸಮಸ್ತರನ್ನೂ ಸತ್ಕರಿಸಿ ಕಳುಹಿದರು.

ಓರ್ವ ಪ್ರತ್ಯಕ್ಷದರ್ಶಿ.

ಬಸವೇಶ್ವರನ ವಚನಗಳು, ಹೇಗೆ ಪ್ರಿಂಟಾಗಬೇಕು ?

(ಲೇ— ಚಂದ್ರಶೇಖರಶಾಸ್ತ್ರಿ ವ್ಯಾಕರಣತೀರ್ಥ, ಪ್ರಿನ್ಸಿಪಾಲ ಗಂಗಾಧರ ಸಂಸ್ಕೃತ ಕಾಲೇಜು, ಹುಬ್ಬಳ್ಳಿ.)

ಧಾರವಾಡದ ಲಿಂಗಾಯತ ಲಿಟರರಿ ಕಮಿಟಿಯವರು ಈಗ ಬಸವೇಶ್ವರನ ವಚನಗಳನ್ನು ಪ್ರಿಂಟುಮಾಡಿಸುತ್ತೇವೆ, ಪುರಾತನ ಪ್ರತಿಗಳಿದ್ದವರು ಕಳಿಸಿಕೊಡಬೇಕೆಂದು ವರ್ತಮಾನಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ. ಈ ಮೊದಲು ಬಸವೇಶ್ವರನ ವಚನಗಳನ್ನು ಶ್ರೀಯುತ ಹಳಕಟ್ಟಿ ವಕೀಲರು ಎರಡನೆಯ ಆವರ್ತಿ ಪ್ರಸಿದ್ಧಪಡಿಸಿರುತ್ತಾರೆ. ಆ ಪ್ರತಿಯಲ್ಲಿ ಕೆಲವು ದೋಷಗಳು ಸಿಕ್ಕುವುವೇನೋ ನಿಜ. ಆದರೆ ಹಳಕಟ್ಟಿ ವಕೀಲರು ವಚನವಾಙ್ಮಯದ ಸಲುವಾಗಿ ಮಾಡುತ್ತಿರುವ ಪರಿಶ್ರಮವು ಸಮಾಜ ಬಾಂಧವರಿಂದ ಹೊಗಳಿಸಿಕೊಳ್ಳಲಿಕ್ಕೆ ಯೋಗ್ಯವಾದದ್ದಾಗಿದೆ. ಈಗ ಧಾರವಾಡದವರು ಹೇಗೆ ಪ್ರಿಂಟು ಮಾಡಿಸುತ್ತಾರೆಂಬುದು ಅವರ ಪ್ರಕಟನೆಯಲ್ಲಿ ವ್ಯಕ್ತಪಡಿಸಲ್ಪಟ್ಟಿಲ್ಲ. ಈ ವಿಷಯದಲ್ಲಿ ನನಗೆ ಕೆಲವು ಸೂಚನೆಗಳು ಹೊಳೆದ ಕಾರಣ ಅವುಗಳನ್ನು ಸಮಾಜದವರ ಮುಂದಿಡುವೆನು. ಕೇವಲ ಮೂಲ ಪ್ರತಿಯನ್ನೇ ಪ್ರಿಂಟು ಮಾಡಿಸಿದರೆ ಅನೇಕ ಜನರಿಗೆ ಉಪಯೋಗವು ಬೀಳುವದೇ ಇಲ್ಲ. ಇನ್ನು ವಿಶ್ವವಿದ್ಯಾಲಯಕ್ಕೆ ಉಪಯೋಗವಾಗಬೇಕೆಂಬ ಉದ್ದೇಶದಿಂದ ಮೂಲವನ್ನು ಪ್ರಿಂಟುಮಾಡಿಸಿದರೂ ಹೆಚ್ಚಿಗೆ ಪ್ರಯೋಜನವಾಗಲಾರದು. ಲೋಕಮಾನ್ಯ ಟಿಳಕರವರು ಗೀತಾರಹಸ್ಯವನ್ನು ಬರೆದಿರುವ ಪದ್ಧತಿಯನ್ನನುಸರಿಸಿ ಬಸವೇಶ್ವರನ ವಚನಗಳನ್ನು ಬರೆದರೆ ಬಹಳ ಉಪಯೋಗವಾಗುತ್ತದೆ. ಗೀತೆಯಲ್ಲಿ ಕರ್ಮಯೋಗವು ಅಧಿಕವಾಗಿರುವಂತೆ ಬಸವಣ್ಣನವರ ವಚನಗಳಲ್ಲಿ ಎಲ್ಲಾ ಯೋಗಗಳೂ ಅಧಿಕವಾಗಿರುತ್ತವೆ. ವಚನಗಳೆಂದರೆ ಕನ್ನಡನಾಡಿನ ಉಪನಿಷತ್ತುಗಳೆಂದು ರಾವಬಹದ್ದೂರ್ ನರಸಿಂಹಾಚಾರ್ಯರು ಹೇಳಿದ ಮೇಲೆ ಬೇರೆಯವರ ಸರ್ಟಿಫಿಕೇಟು ಬೇಕಾಗಿರುವದಿಲ್ಲ. ಇಂತಹ ಕನ್ನಡ ಉಪನಿಷತ್ತುಗಳಲ್ಲಿ ಬಸವೇಶ್ವರನ ವಚನವು ಮೇಲಾದ ರತ್ನದಂತಿರುತ್ತದೆ. ಬಸವೇಶ್ವರನ ಒಂದು ವಚನವನ್ನು ತೆಗೆದುಕೊಂಡು ನೋಡೋಣ— "ದಯವೇ ಧರ್ಮದ ಮೂಲವಯ್ಯಾ" ಎಂದು ಬಸವಣ್ಣನವರು ಅಂದಿರುತ್ತಾರೆ. ಇದಕ್ಕೆ ಸರಿಯಾಗಿ ಉತ್ತರಹಿಂದುಸ್ಥಾನದಲ್ಲಿ ಪ್ರಸಿದ್ಧರಾಗಿ ಹೋಗಿರುವ ತುಲಸೀದಾಸರು "ದಯಾಧರ್ಮಕೋ ಮೂಲಹೈ" ಎಂದು ತಮ್ಮ ಉಕ್ತಿಯಲ್ಲಿ ಹೇಳಿರುವರು. ಇದರಂತೆಯೇ ಬಸವಣ್ಣನವರ ಮೇಲಿನ ವಚನಕ್ಕೆ ಸರಿಯಾಗಿ ಕಬೀರದಾಸರು ಏನಂದಿರುವರು ? ಬೈಬಲ್ಲಿನಲ್ಲಿ ಈ ವಚನಕ್ಕೆ ಸರಿಯಾದ ಉಕ್ತಿಗಳಿರುವವೇ ? ಕುರಾಣದಲ್ಲಿ ಮಹಮ್ಮದ ಪೈಗಂಬರರು ಹೇಳಿರುವದು ಬಸವೇಶ್ವರನ ವಾಕ್ಯಕ್ಕೆ ಸರಿಯಾದ ವಾಕ್ಯವುಂಟೆ ? ಪುರಾಣಗಳಲ್ಲಿಯೂ ಈ ತರಹದ ಉದಾಹರಣೆಗಳಿರುತ್ತವೆಯೋ ? ಗೀತೆಗಳಲ್ಲಿ ಈ ವಾಕ್ಯಕ್ಕೆ ಸರಿಯಾದ ವಾಕ್ಯವುಂಟೆ ? ಹೀಗೆಯೇ ಬುದ್ಧ, ನಾನಕ್, ಮಹಾವೀರ, ರಾಮದಾಸ, ಕನಕದಾಸ ಮೊದಲಾದ ಭಾರತದೇಶದ ಮಹಿಮಾಶಾಲಿಗಳ ವಾಕ್ಯಗಳನ್ನೂ ಪಾಶ್ಚಿಮಾತ್ಯರ ಪಂಡಿತರ ಗಳ ವಾಕ್ಯಗಳನ್ನೂ ತುಲನಾತ್ಮಕ ಬುದ್ಧಿಯಿಂದ ಶೋಧಿಸಿ ಬಸವೇಶ್ವರನ ವಚನಗಳನ್ನು ಪ್ರಸಿದ್ಧಪಡಿಸಿದರೆ ಆತನ ಕೀರ್ತಿಯು ಅಖಂಡ ಭೂಮಂಡಲದಲ್ಲಿ ಹಬ್ಬುವದು. ಆತನ ಒಂದು ಸಾವಿರ ವಚನಗಳಿರುತ್ತವೆಯಷ್ಟೆ. ಆ ಎಲ್ಲಾ ವಚನಗಳಿಗೆ ಎಲ್ಲಾ ಮಹಾತ್ಮರ ವಾಕ್ಯಗಳು ಹೊಂದದೆ ಇದ್ದರೂ ಯಾವ ಯಾವ ವಚನಗಳಿಗೆ ಯಾರ ಯಾರ ವಾಕ್ಯಗಳು ಹೊಂದುತ್ತವೆಯೋ ಅವುಗಳನ್ನೆಲ್ಲಾ ಪರಿಶೀಲಿಸಿ ಗೀತಾರಹಸ್ಯದಂತೆ ಒಂದು ಉದ್ಗ್ರಂಥವನ್ನು ಹೊಂದಿಸಿದರೇನೇ ಬಸವೇಶ್ವರನ ಯೋಗ್ಯತೆಗೆ ಸರಿಯಾಗುತ್ತದೆ. ಆದರೆ ಸೂಚನೆಯನ್ನು ಮಾಡುವದೇನೋ ಹಗುರವಾದ ಕೆಲಸವು. ಕಾರ್ಯವುಮಾತ್ರ ಅವ್ಯವಹಾರ್ಯವು ಕಷ್ಟವೂ ಆದದ್ದೆಂದು ಕೆಲವರು ಹೇಳಬಹುದು. ಆದರೆ ಧಾರವಾಡದ ಲಿಟರರಿ ಕಮಿಟಿಯಲ್ಲಿ ಎಲ್ಲರೂ ವಿದ್ವಾಂಸರೇ ಇರುತ್ತಾರೆ. ಪ್ರಯತ್ನಪಟ್ಟರೆ ಇದು ಅಸಾಧ್ಯವಾದ ಕಾರ್ಯವೇನೂ ಅಲ್ಲ. ಇಂದಿಗೆ ಆಗದಿದ್ದರೆ ಇನ್ನು ನಾಲ್ಕು ವರ್ಷಗಳಾಗಲಿ ಆಗಬಹುದು. ಆದರೆ ಇದಕ್ಕೆ ಅನೇಕ ಜನ ಪಂಡಿತರ ಸಹಾಯವೂ ಹೇರಳ ದ್ರವ್ಯವೂ ಬೇಕು. ಇತ್ತೀಚಿಗಾಗಿ ವೀರಶೈವ ಸಮಾಜದಲ್ಲಿ ವಿದ್ವಾಂಸರಾದರೂ ಹೆಚ್ಚಿಗೆ ಆಗಲಿಕ್ಕೆ ಹತ್ತಿರುತ್ತಾರೆ. ಎಲ್ಲಾ ತರಹದ ಸಹಾಯವೂ ಆಗಬಹುದಾಗಿದೆ. ಯೋಗ್ಯ ಕಾರ್ಯವನ್ನು ಮಾಡಿದರೆ ವೀರಶೈವ ಸಮಾಜದಲ್ಲಿ ದುಡ್ಡಿನ ಕೊರತೆಯಾಗಲಾರದೆಂದು ಲೇಖಕನ ದೃಢವಾದ ನಂಬಿಕೆಯು ಇರುತ್ತದೆ. ಮನುಷ್ಯನು ತನ್ನ ಮನಸ್ಸಿನಲ್ಲಿ ಬಂದ ವಿಚಾರಗಳನ್ನು ಜನತೆಯ ಮುಂದಿಡಬೇಕೆಂದು ಓರ್ವ ಆಂಗ್ಲ ಕವೀಶ್ವರನು ಹೇಳಿರುವನು. ನನಗೆ ತಿಳಿದ ಈ ಸೂಚನೆಯನ್ನು ಧಾರವಾಡದ ಲಿಟರರಿ ಕಮಿಟಿಯವರಿಗೂ ಸಮಾಜಬಾಂಧವರಿಗೂ ತಿಳಿಸಿರುವೆನು. ಬುದ್ಧಿಶಾಲಿಗಳಾದವರು ಶಾಂತಮನಸ್ಸಿನಿಂದ ವಿಚಾರಿಸಬೇಕು.

ವೀರಾಗಮವು ಬೇಕು.

ಹುಬ್ಬಳ್ಳಿ ಗಂಗಾಧರ ಸಂಸ್ಕೃತ ಕಾಲೇಜಿನ ಕಾರ್ಯಕ್ರಮಗಳಲ್ಲಿ ವಚನಗಳ ಮತ್ತು ಆಗಮಗಳ ಪ್ರಚಾರವು ಒಂದಾಗಿರುತ್ತದಷ್ಟೇ. ಈಗಣವು ವೀರಾಗಮದ ಉತ್ತರಭಾಗ "ವೀರಮಾಹೇಶ್ವರ ತಂತ್ರ" ವೆಂಬುದನ್ನು ಪ್ರಿಂಟುಮಾಡಿಸಬೇಕೆಂದು ಮಾಡಿದೇವೆ. ನಮಗೆ ಈವರೆಗೆ ಬರೆದ ಮೂರು ಪ್ರತಿಗಳು ದೊರೆತಿರುತ್ತವೆ.

1. ಐದುಪಟಲ ಕನ್ನಡ ಟೀಕಾಸಹಿತ ಇರುತ್ತದೆ. ಈ ಪ್ರತಿಯು ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರಸ್ವಾಮಿಗಳಿಂದ ದೊರೆತಿದೆ.

2. ಆರುಪಟಲ ಮೂಲಪ್ರತಿಯು ಬಾಲಬೋಧಲಿಪಿ ಇದ್ದು ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಬೃಹನ್ಮಠದ ಲೈಬ್ರರಿಯಿಂದ ಸಿಕ್ಕಿದೆ.

3. ಹತ್ತುಪಟಲ ಕರ್ನಾಟಕ ಟೀಕೆಯಿಂದ ಕೂಡಿ ತಾಳ ಓಲಿಯ ಗರಿಯಲ್ಲಿ ಬರೆದಿದೆ. ಬಹು ಪುರಾತನ ಪ್ರತಿಯು ಇರುತ್ತದೆ. ಇದು ಶಿವಯೋಗಮಂದಿರದ ಪುಸ್ತಕಾಲಯದಲ್ಲಿದ್ದದ್ದು ಹಾವೇರಿ ಶ್ರೀಮನ್ನಿರಂಜನ ಶಿವಬಸವಮಹಾಸ್ವಾಮಿಗಳವರ ಕಡೆಯಿಂದ ಸಿಕ್ಕಿದೆ. ಹೀಗೆ ಮೂರು ಪ್ರತಿಗಳು ದೊರೆತಿವೆ. ಇನ್ನು ಕೆಲವು ಪ್ರತಿಗಳು ಬೇಕಾಗಿವೆ. ಇದು ಮಹತ್ವದ ಗ್ರಂಥವಾದ್ದರಿಂದ ಅನೇಕ ಪ್ರತಿಗಳನ್ನು ತುಲನಾತ್ಮಕದೃಷ್ಟಿಯಿಂದ ನೋಡಿ ಪ್ರಿಂಟುಮಾಡಿಸಬೇಕಾಗಿದೆ. ಆದ್ದರಿಂದ ಈ ಪುಸ್ತಕ ವೀರಾಗಮದ ವೀರಮಾಹೇಶ್ವರತಂತ್ರ ಇದ್ದ ವೀರಶೈವಬಂಧುಗಳು ದಯಮಾಡಿ ನಮಗೆ ಕಳಿಸಬೇಕೆಂದು ವಿನಂತಿಯುಂಟು. ಆಗಮಗಳು ವೀರಶೈವಮತದ ಮುಖ್ಯ ಗ್ರಂಥಗಳು ಇದ್ದು ಅವುಗಳನ್ನೇ ನಾವು ಪ್ರಿಂಟುಮಾಡಿಸದೆ ಇದ್ದರೆ ನಮ್ಮ ಮತದ ತತ್ವಗಳು ತಿಳಿಯುವದು ಹೇಗೆ ? ಈ ಗ್ರಂಥದಲ್ಲಿ ಅನೇಕ ಮಹತ್ವದ ವಿಷಯಗಳು ಇರುತ್ತವೆ. ಹುಳದಬಾಯಿಗೆ ತುತ್ತು ಮಾಡಿ ಹಾಳುಮಾಡುವದಕ್ಕಿಂತ ಪ್ರಕಟಿಸಲಿಕ್ಕೆ ಸಹಾಯಮಾಡುವದು ಬಹಳ ಉಪಕಾರವಾದ ಕೆಲಸವಲ್ಲವೆ ? ಆದ್ದರಿಂದ ಎಲ್ಲಾ ವೀರಶೈವಬಾಂಧವರೂ ಇತ್ತ ಲಕ್ಷ್ಯವನ್ನು ಕೊಡತಕ್ಕದ್ದು. ಪ್ರಿಂಟಾದ ಮೇಲೆ ಅವರವರ ಪ್ರತಿಗಳನ್ನು ತಿರುಗಿ ಕೊಡುತ್ತೇವಲ್ಲದೆ ಅವರ ಕೂಡ ಪ್ರಿಂಟಾದ ಪ್ರತಿಯನ್ನೂ ಕಳಿಸುತ್ತೇವೆ.

ಭಾರತ ರಾಜಕೀಯದೃಶ್ಯ

(ಲೇ— ಕಣಕುಪ್ಪಿ ಗುರುಪಾದಪ್ಪ ಶ್ರೀ ಜಯದೇವ ಪ್ರೆಸ್, ದಾವಣಗೆರೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

(ಮುದ್ರಣ ದೋಷದ ಹೋದವಾರ ತಾ|| 20-4-31 ಎಂದು ಇರಬೇಕಾದುದು ತಾ|| 20-4-32 ಎಂದು ಇರುವುದನ್ನು ತಿದ್ದಿಕೊಳ್ಳಬೇಕು.)

ಒಂದು ದೇಶದ ಅಥವಾ ಜನಾಂಗದ ಸುಖಮಯ ಇಲ್ಲವೆ ದುಃಖಮಯ ಸ್ಥಿತಿಯನ್ನು ತಿಳಿಯಬೇಕಾದರೆ, ಮರಣ ಸಂಖ್ಯೆಯು ಮುಖ್ಯವಾದ ಹೆಗ್ಗುರುತಾಗಿರುವುದು. ಹಿಂದೆ ತೋರಿಸಿದ ಹಿಂದುಸ್ಥಾನದ ಅಪಾರ ಮತ್ತು ಭಯಂಕರ ಮರಣ ಸಂಖ್ಯೆಗಳಿಂದ ನಮಗೆ ತೋಚುವುದೇನು ? ಜಗತ್ತಿನ ರಾಷ್ಟ್ರಗಳಲ್ಲೆಲ್ಲ ನಮ್ಮ ಹಣೆಬರಹವೇ ಹೀಗಿರಬಹುದೆ ? ಇಲ್ಲಿನ ವಾಯುಗುಣವು ಜನಾಭಿವೃದ್ಧಿಗೆ ಸಹಜವಾಗಿ ಅಹಿತಕಾರಿಯಾಗಿರಬಹುದೆ ? ಹಾಗಿದ್ದರೆ ನಾಗರಿಕತೆಯ ಶಿಖರವನ್ನೇರಿ ಬಾಳಿದ ಅಂಗ, ವಂಗ, ಕಳಿಂಗ, ಗಾಂಧಾರ, ಮಗಧ, ಮೌರ್ಯ ಮೊದಲಾದ ಪ್ರಾಚೀನ ಹಿಂದು ಬೌದ್ಧ ಸಾಮ್ರಾಜ್ಯಗಳೂ ಇತ್ತೀಚಿನ ಮೊಗಲ, ಪಠಾಣ್, ಲೂಡಿ ಮೊದಲಾದ ಇಸ್ಲಾಮಿ ರಾಜ್ಯಗಳೂ ಇಲ್ಲಿ ಸ್ಥಾಪಿತವಾಗಿ ಖ್ಯಾತಿಪಡೆಯುತ್ತಿರಲಿಲ್ಲ. ಮೊದಲನೆಯ ಮುಸಲ್ಮಾನ ಚರಿತ್ರಕಾರನಾದ ಫೆರಿಷ್ಟನೆಂಬಾತನು ಈ ದೇಶದಲ್ಲಿ 60 ಕೋಟಿ ಹಿಂದುಗಳಿದ್ದರೆಂದು ತಿಳಿಸುತ್ತಾನೆ. ವಾಯುಗುಣವು ಅಹಿತಕಾರಿಯಾಗಿದ್ದರೆ ಇಂತಹ ಭಾರಿ ಜನಸಂಖ್ಯೆಯು ವಾಸಿಸಲು ಸಾಧ್ಯವಾಗುತ್ತಿರಲಿಲ್ಲ. ಇದಾವುದೊಂದೂ ಇರದೆ ಇಲ್ಲಿನ ಜನರು ಸ್ವಾಭಾವಿಕವಾಗಿ ಮೈಗಳ್ಳರಾಗಿ ತಮ್ಮ ಹೊಟ್ಟೆಬಟ್ಟೆಗಳಿಗೆ ಸಂಪಾದಿಸಿಕೊಳ್ಳಲಾರದೆ ಹಸಿವಿನಿಂದ ಬಳಲಿ ಸಾಯುತ್ತಿರಬಹುದೆ ? ಇಲ್ಲಿನ ಕೈಗಾರಿಕೆ ವ್ಯಾಪಾರೋದ್ಯೋಗ ಸಾಂಪತ್ತಿಕ ಸ್ಥಿತಿಯ ಬಗ್ಗೆ ಈ ಹಿಂದೆ ಮಾಡಿದ ಪ್ರಸ್ತಾಪದಿಂದ ಇದೂ ಕಾರಣವಾಗಲಾರದು. ಅಲ್ಲದೆ ಭಾರಿ ಕಂದಾಯ ಕೊಡುತ್ತಿದ್ದಿಲ್ಲ. (ಇಂಗ್ಲೆಂಡು ತನ್ನ ವಾರ್ಷಿಕ ಆದಾಯದಲ್ಲಿ ಶೇಕಡ 8½ ಯಷ್ಟು ಕೊಟ್ಟರೆ ಹಿಂದುಸ್ಥಾನವು ಶೇಕಡ 22 ರಷ್ಟು ಕೊಡುತ್ತದೆ).

ಅಂದಮೇಲೆ ಮೇಲಿನವುಗಳಾವುವೂ ಈ ದೇಶದ ದುರ್ಗತಿಗೆ ಕಾರಣಗಳಾಗಿರದೆ ಅದರ ಉನ್ನತಿಗೆ ಕಾರಣಗಳಾಗಿದ್ದಾಗ್ಗೂ ಅದರ ಅವನತಿಗೆ ಕಾರಣವೇನು ?

ಪ್ರಭುತ್ವವು ರಾಷ್ಟ್ರದ ಪ್ರದರ್ಶನರೂಪ. ಪ್ರಜೆಗಳು ಪ್ರಭುತ್ವಕ್ಕೆ ಜೀವಾಳ. ಸಾರ್ವತ್ರಿಕ ಜೀವನದ ನಾನಾ ಬಾಬುಗಳನ್ನು ನಡೆಸಿಕೊಂಡು ಹೋಗಲು ಅನುಕೂಲಿಸುವಂತೆ ಪ್ರಭುತ್ವಕ್ಕೆ ಪ್ರಜೆಗಳು ಕಂದಾಯಕೌಳಿಗೆಗಳ ಮೂಲಕ ಸಹಾಯ ಮಾಡುತ್ತಾರೆ. ಈ ಬಗೆಯ ಪರಸ್ಪರ ಅವಲಂಬನ ಕಾರ್ಯದಿಂದ ರಾಷ್ಟ್ರವು ತುಂಬರಿಯುತ್ತದೆ. ರಾಷ್ಟ್ರದ ಇಂತಹ ಕಾರ್ಯಕ್ಕೆ ಪ್ರಜಾಪ್ರಭುಗಳಿಬ್ಬರೂ ಒಮ್ಮನಸ್ಸಿನಿಂದ ಕೈಗೂಡಿಸಿದರೆ ಮಾತ್ರವೇ ರಾಷ್ಟ್ರಾಭಿವೃದ್ಧಿಯು ಸಾಧ್ಯವೆಂದು ಬೇರೆ ಹೇಳಬೇಕಾಗಿಲ್ಲ. ಇಬ್ಬರಲ್ಲಿ ಒಬ್ಬರು ಕೈಗೂಡದಿದ್ದರೆ ಇಲ್ಲವೆ ಅಲಕ್ಷ್ಯ ಅಸಡ್ಡೆಭಾವದಿಂದಿದ್ದರೆ ಅಭಿವೃದ್ಧಿಯು ಕುಂಠಿತವೆಂಬುದು ಸ್ವತಸ್ಸಿದ್ಧವಾದ ಮಾತು. ಹಿಂದುಸ್ಥಾನದ ಅಧಿಕ ಮರಣ ಸಂಖ್ಯೆಯ ಕಾರಣವು ಇರುವುದಿಲ್ಲಿಯೇ, ಅಂದರೆ ಇಲ್ಲಿನ ಪ್ರಭುತ್ವದವರು ಒಂದಲ್ಲದಿದ್ದರೆ ಇನ್ನೊಂದು ರೀತಿಯಿಂದ ಅಧಿಕ ತೆರಿಗೆಯನ್ನು ಜನರ ಮೇಲೆ ಹೊರಿಸಿದ್ದಾರೆ. ಇದನ್ನು ಸಹಿಸಿಕೊಂಡು ತಮ್ಮ ಹೊಟ್ಟೆ ಬಟ್ಟೆಗಳನ್ನು ನೋಡಿಕೊಳ್ಳುವುದು ಅವರಿಗೆ ಅಸಾಧ್ಯವಾದುದಾಗಿದೆ. ಸಮುದ್ರ, ಹೊಳೆ, ಕೆರೆ ಮೊದಲಾದ ಜನೋಪಯೋಗ್ಯವಾದ ಸ್ಥಾನಗಳಿಂದ ಸೂರ್ಯನು ಬೇಸಿಗೆಯಲ್ಲಿ ನೀರನ್ನು ಆವಿಯ ಮೂಲಕ ಸೆಳೆದುಕೊಂಡು ಮಳೆಗಾಲದಲ್ಲಿ ಜನರಿಗೆ ಹಿಂತಿರುಗಿ ಕೊಟ್ಟು ಲೋಕ ಕಲ್ಯಾಣಮಾಡುತ್ತಾನೆ. ಹೀಗೆಯೇ ಪ್ರಭುಗಳು ಪ್ರಜೆಗಳಿಂದ ಎತ್ತಿದ ತೆರಿಗೆಗಳು ಅವರಿಗೆ ಹಿಂತಿರುಗುವಂತೆ ಏರ್ಪಡಿಸಿದರೆ ರಾಷ್ಟ್ರದ ಕಲ್ಯಾಣವಾಗುವುದು. ಹೀಗೆ ಮಾಡದಿದ್ದರೆ ಅಭಿವೃದ್ಧಿಯು ಹೇಗಾಗಬೇಕು ? ನಮ್ಮ ಬ್ರಿಟಿಷ್ ಪ್ರಭುಗಳು ನಮ್ಮಿಂದ ಎತ್ತಿದ ತೆರಿಗೆಯನ್ನು ಹೇಗೆ ವಿನಿಯೋಗ ಮಾಡುತ್ತಾರೆಂಬುದನ್ನು ತಿಳಿದರೆ ಈ ವಿಷಯವು ಸ್ಪಷ್ಟವಾದೀತಲ್ಲವೆ ?

ಸಾಮಾನ್ಯ ಸಭೆಯವರು (House of Commons) ಅಪ್ಪಣೆ ಮಾಡಿದ ಪ್ರಕಾರ 1900 ರಲ್ಲಿ ತಯಾರಿಸಿದ ಈ ದೇಶದ ಸರ್ಕಾರದ ಖರ್ಚು.

ನೌಕರರು	ಸಂಬಳ
13,178 ಯೂರೋಪಿಯನರು	8,77,14,431 ರೂ.
3,030 ಯುರೇಷಿಯನರು	72,95,086 ,,
11,554 ಭಾರತೀಯರು	2,55,54,313 ,,

ಇವರೆಲ್ಲ ವರ್ಷಕ್ಕೆ 1,000 ರೂ. ಮೇಲೆ ಸಂಬಳ ತೆಗೆದುಕೊಳ್ಳುವವರು. ಕಡಿಮೆ ಸಂಬಳದ ನೌಕರರ ಬಗ್ಗೆ ಇಲ್ಲಿ ಪ್ರಸ್ತಾಪವಿಲ್ಲ.

[illegible]

[illegible]	[illegible] ರೂ.
[illegible]	[illegible] ,,
[illegible]	[illegible] ,,

ಮಕ್ಕಳಿದ್ದರೆ ಮನೆ ಚೆಂದ.

ಮಕ್ಕಳಿಲ್ಲೆಂದು | ಚಿಂತಿಸ ಬೇಡಿರಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣ ಸಂಜೀವಿನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆವಿರಿ. ೯ ಗುಳಿಗೆಗಳ ೩. ೩ ರೂಪಾಯಿ. ಟ. ಖ. ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾಖಂಡಕಿ, ಮಿರಜ M. C. ೫

ವಿಶ್ರಾಂತಿ (ಪಿಂಚೆನ್) ಭರತಖಂಡದಲ್ಲಿ ಯೂರೋಪಿಯನರಿಗೂ ಯೂರೋಪಿಯನರಿಗೂ ಸೇರಿ	33,38,882	ರೂ.
ಭಾರತೀಯರಿಗೆ	59,81,824	,,
ಇಂಗ್ಲೆಂಡಿನಲ್ಲಿ ಯೂರೋಪಿಯನರಿಗೆ ಪಿಂಚೆನ್	5,56,60,173	ರೂ.
ಕ್ರೈಸ್ತರ ಗುರುಗಳಿಗೆ		
ಕಲಕತ್ತ ಬಿಷಪ್ಪರಿಗೆ	45,980	ರೂ.
ಮದ್ರಾಸು ,,	25,000	,,
ಬೊಂಬಾಯಿ ,,	25,000	,,

ಲಾಹೋರು, ಲಕ್ನೊ, ನಾಗಪುರ ಮತ್ತು ರಂಗೂನು ಬಿಷಪ್ಪಗಳು ಮೊದಲು 5 ವರ್ಷಗಳವರೆಗೆ ವರ್ಷಕ್ಕೆ 10,200 ರೂ. ಗಳಂತೆ ತೆಗೆದುಕೊಂಡು ಆಮೇಲೆ 12,000 ರೂ. ಗಳಂತೆ ತೆಗೆದುಕೊಳ್ಳುತ್ತಾರೆ.

ನಮ್ಮ ದೇಶದಲ್ಲಿ ಆಗುವ ಅಧಿಕ ಅನ್ಯಾಯವಾದ ಈ ಬಗೆಯ ಖರ್ಚನ್ನು ಸಹಿಸಿಕೊಳ್ಳುವುದಲ್ಲದೆ ಪರದೇಶಗಳಲ್ಲಿ ಸಾಮ್ರಾಜ್ಯ ಸರ್ಕಾರದವರು ಮಾಡುವ ಖರ್ಚನ್ನು ನಾವು ವಹಿಸಬೇಕಾಗಿದೆ. ಇದನ್ನು ಬ್ರಿಟಿಷರ ಪರ ವಾದಿಗಳಾಗಿದ್ದ ಸುರೇಂದ್ರನಾಥ ಬೆನರ್ಜಿಯವರು ತಮ್ಮ ಕಾಂಗ್ರೆಸ್ ಅಧ್ಯಕ್ಷೋಪನ್ಯಾಸದಲ್ಲಿ ಪ್ರಸ್ತಾಪಿಸಿ ಅದನ್ನು ಚೆನ್ನಾಗಿ ಖಂಡಿಸಿದ್ದಾರೆ.

ಇಂಡಿಯ ಕಛೇರಿ ಕಟ್ಟಡಕ್ಕೆ	85,00,000	ರೂ.
ವಸಾಹತು ಕಛೇರಿ ,,	1,70,000	,,

ಇಲ್ಲಿ ಸೋ'ಿರ ಇಂಡಿಯಾದ ಕಛೇರಿಯನ್ನು ಇಂಡಿಯಾ ದೇಶವೇ ತನ್ನ ಸ್ವಂತ ಖರ್ಚಿನಿಂದ ಕಟ್ಟಿಸಬೇಕು. ಬ್ರಿಟಿಷರಾಗಲಿ ವಸಾಹತುಗಳಾಗಲಿ ಏನೂ ಸಹಾಯ ಮಾಡುವುದು ಬೇಡ. ವಸಾಹತು ಕಛೇರಿಯನ್ನು ಕಟ್ಟಿಸಲು ಇಂಡಿಯಾ ದೇಶವು 1,70,000 ರೂ. ಕೊಡಬೇಕು. ಬ್ರಿಟಿಷರು 6,97,000 ರೂ. ಕೊಡುತ್ತಾರೆ.

ಚೀನದಲ್ಲಿ ಬ್ರಿಟಿಷರಿಟ್ಟಿದ್ದ ರಾಯಭಾರಕ್ಕೆ	21,25,000	ರೂ.
ಪರ್ಷ್ಯಾದಲ್ಲಿ ,,	1,19,000	,,
ಬಾಗ್ದಾದಿನಲ್ಲಿ ಆಲೋಚನಾಮಂಡಳಿಗೆ	1,72,360	,,

ಇಷ್ಟು ಹಣವನ್ನು ಹಿಂದುದೇಶ ಕೊಡಬೇಕು.

1860 ರಲ್ಲಿ ಟರ್ಕಿ ಸುಲ್ತಾನನನ್ನು ಬ್ರಿಟಿಷ್ ಸರ್ಕಾರದವರು ಲಂಡನಿಗೆ ಆಮಂತ್ರಿಸಿ ಹಿಂದುಸ್ಥಾನದ ಖರ್ಚಿನಿಂದ ಆತನಿಗೆ ಮೇಜವಾನಿಗೆ ಮಾಡಿಸಿರುವರು.

ಹೀಗೆ ಹಿಂದುಸ್ಥಾನದ ದುಡ್ಡು ಖರ್ಚಾಗಿ ಹೋದರೆ ಇಲ್ಲಿನ ಜನರ ವಿದ್ಯೆ ಆರೋಗ್ಯ ವ್ಯಾಪಾರೋದ್ಯೋಗಗಳಿಗೆ ಸಹಾಯಮಾಡಲು ದುಡ್ಡೆಲ್ಲಿಂದ ಬಂದೀತು?

ಶ್ರೀಮದ್ಭಕ್ತಿವಿಶಿಷ್ಟಾದ್ವೈತ ವೀರಶೈವ ಮತಸ್ಥಾಪನಾಚಾರ್ಯ ಶ್ರೀ ಹಿಮವತ್ಕೇದಾರ ಜಗದ್ಗುರು ಕೈಲಾಸಲಿಂಗ ಶಿವಾಚಾರ್ಯ ಭಗವತ್ಪಾದರ ಸನ್ನಿಧಾನದಿಂದ.

ಶ್ರೀ ಗುರು ಪೀಠಾಧಿಪತಿಗಳಿಗೆ ಶುಭಾಶೀ॥ ಪೂರ್ವಕ ಅಪ್ಪಣೆ ಕೊಡಿಸುವದೇನೆಂದರೆ—ಶ್ರೀ ಸನ್ನಿಧಾನವು ದಕ್ಷಿಣ ಭಾರತಕ್ಕೆ ಸನಾತನ ಧರ್ಮೋಪದೇಶ ಮತ್ತು ಶ್ರೀಗುರು ಪೀಠದ ಧಾರ್ಮಿಕಕರ ಗ್ರಹಣಕ್ಕಾಗಿ ಶ್ರೀ ಹಿಮಗಿರಿಯಿಂದ ಸಾಕ್ಷಾತ್ ಶ್ರೀ ಕೈಲಾಸನಾಥಾವತಾರಿಗಳಾಗಿ ದಯಮಾಡಿಸಿರುವದಾಗಿರುತ್ತೆ. ಸದ್ಯ: ಮೈಸೂರಿನ ಆರ್. ಎಮ್. ವಾಡಿಯ ಸ್ಟೇಷನದ ಹತ್ತಿರ ರಾಪೂರ ಮುಕ್ಕಾಮಿನಲ್ಲಿ ಪ್ರತಿನಿತ್ಯ ಶ್ರೀ ರುದ್ರ, ನಮಕ, ಚಮಕ, ಪುರುಷಸೂಕ್ತ, ಶ್ರೀ ಮೃತ್ಯುಂಜಯಾದಿ ವೈದಿಕಮಂತ್ರಾಭಿಷೇಕ, ಶ್ರೀ ಶಿವಮಂತ್ರಾದಿ ಪುರಸ್ಸರಣ ಪೂರ್ವಕ ಜಪಹೋಮಾನುಷ್ಠಾನವು ನಿರ್ವಿಘ್ನವಾಗಿ ನಡೆಯುತ್ತಲಿದ್ದು ಸೈಜಾಂ ಸದ್ಭಕ್ತರು ಶ್ರೀ ಜಗದಾಚಾರ್ಯರ ಪ್ರವಚನೋಪದೇಶೋಪನ್ಯಾಸ ಪುರಾಣಾದಿಗಳನ್ನು ಕೇಳಿ ಧನ್ಯರಾಗುತ್ತಲಿರುವರು. ಶ್ರೀ ಸನ್ನಿಧಾನದವರು ಸರ್ವದಾ ಶ್ರೀ ಶಿವಭಕ್ತಿ ಶ್ರೀ ಗುರುಸೇವಾದಿ ಸನಾತನಾಚಾರ ಪದ್ಧತಿಯನ್ನೇ ಬೋಧಿಸುತ್ತಿರುವರು. ಶ್ರೀ ಶ್ರಾವಣ ಪೂಜಾ ಪ್ರಯುಕ್ತ ವಿನಾಯಕೇಶ್ವರ ಗಣಾರಾಧನೆಯು ಭಾದ್ರಪದ ಶು॥ ೫ (ತಾ॥ 5-9-32) ಸೋಮವಾರ ನಡೆಯುವದು. ಚತುರ್ಥಿಯ ದಿವಸ ಶ್ರೀ ಗಣೇಶ ಪೂಜೋತ್ಸವವು ವೈಭವದಿಂದ ನಡೆಯುವದು. ಆದ್ದರಿಂದ ಶ್ರೀ ಜಗದ್ಗುರು ಸನ್ನಿಧಿಯ ಸಂದರ್ಶನ ಸದಿಷ್ಟಾರ್ಥಾದಿಗಳಲ್ಲಿ ಅಪೇಕ್ಷೆಯುಳ್ಳವರು ಬಂದು ಶ್ರೀ ಕೃಪಾಶೀರ್ವಾದಕ್ಕೆ ಪಾತ್ರರಾಗತಕ್ಕದ್ದು.

ಅವಶ್ಯ ಸೂಚನೆಯು—ಭಾದ್ರಪದ ಶು॥ ೬ (ತಾ॥ 6-9-32) ಶ್ರೀ ಜಗದ್ಗುರು ಮಹಾ ಸನ್ನಿಧಾನದ ಶ್ರೀ ಚರಣ ಸಮರ್ಚನವು ಸಹಸ್ರ ಬಿಲ್ವಧಾರಣ ಪೂರ್ವಕ ಅತ್ಯಂತ ವೈಭವದಿಂದ ನಡೆಯುವದು. ಶ್ರೀ ತೀರ್ಥ ಪ್ರಸಾದವನ್ನು ಸೇವಿಸಿ ಧನ್ಯರಾಗಬೇಕಾಗಿ ಸೂಚಿಸಿದ್ದಾಗಿದೆ.

ಮುಕ್ಕಾಂ.ರಾಪೂರು.

ಶ್ರೀ ಜಗದ್ಗುರು ಕೇದಾರ
ಸಂಸ್ಥಾನ ಸರ್ವಾಧಿಕಾರಿಗಳು.

ಬೇಡಿಕೆ.

ಮೈಸೂರು ದೇಶದಲ್ಲಿ ಬಲಗೈ, ಎಡಗೈ ಜನರೆಂದು ಸುಮಾರು ಹನ್ನೆರಡು ಲಕ್ಷ ಪ್ರಜೆಗಳು ಹಿಂದುಗಳಲ್ಲಿ ಅಸ್ಪೃಶ್ಯರು, ಅಂತ್ಯಜರು ಎಂದೆನ್ನಿಸಿಕೊಂಡು ಬಲು ಹೀನಸ್ಥಿತಿಯಲ್ಲಿ ಜೀವಿಸುತ್ತಿರುವುದನ್ನು ನೋಡಿ ನಮ್ಮನ್ನಾಳುವ ಶ್ರೀಮನ್ಮಹಾರಾಜರವರೂ, ಅವರ ಘನ ಸರ್ಕಾರದವರೂ ಅಸ್ಪೃಶ್ಯನಿವಾರಣೆ ಮಹಡಲೋಸುಗ ಭಾಷಾನುಸಾರವಾಗಿ ಆದಿಕರ್ನಾಟಕರೆಂದೂ ಆದಿದ್ರಾವಿಡರೆಂದೂ ಹೆಸರಿಟ್ಟು ಗೌರವಿಸಿದ್ದಲ್ಲದೆ ಪ್ರತ್ಯೇಕ ಪಾಠಶಾಲೆಗಳಲ್ಲಿ ಇವರ ಮಕ್ಕಳು ಓದುವುದಕ್ಕಿಂತಲೂ ಉತ್ತಮರಸ್ಕೂಲಿನಲ್ಲಿ ಉತ್ತಮರ ಜೊತೆಯಲ್ಲಿದ್ದು ಓದುವುದುತ್ತಮವೆಂತ ಕಟ್ಟಪ್ಪಣೆಮಾಡಿ ಜಾರಿಯಲ್ಲಿ ತಂದರು. ವಿಲೇಜು ಪಂಚಾಯತಿ, ಮ್ಯುನಿಸಿಪಾಲಿಟಿ, ಡಿಸ್ಟ್ರಿಕ್ಟು ಬೋರ್ಡು, ಪ್ರಜಾಪ್ರತಿನಿಧಿಸಭೆ, ನ್ಯಾಯವಿಧಾಯಕಸಭೆ ಮೊದಲಾದುವುಗಳಲ್ಲಿ ಎಲ್ಲರ ಜೊತೆಯಲ್ಲಿದ್ದುಕೊಂಡು ಕೆಲಸಮಾಡುವ ಅವಕಾಶಾನುಕೂಲ್ಯಗಳನ್ನು ಕಲ್ಪಿಸಿಕೊಟ್ಟಿರುತ್ತಾರೆ ಮತ್ತು ಇವರಲ್ಲನೇಕರಿಗೆ ಎಲ್ಲಾ ಸರ್ಕಾರೀ ಇಲಾಖೆಗಳಲ್ಲಿಯೂ ನೌಕರಿಗಳನ್ನು ಕೊಟ್ಟು ಬಿ. ಎ ಪರೀಕ್ಷೆಯಲ್ಲಿ ತೇರ್ಗಡೆಯಾದವರೊಬ್ಬರಿಗೆ ಅಮಲ್‌ದಾರಿ ಹುದ್ದೆ ಸಹಾ ಕೊಟ್ಟಿರುತ್ತಾರೆ. ಆದಿಕರ್ನಾಟಕರಲ್ಲಿ ವಿವೇಕವನ್ನು ಹೆಚ್ಚಿಸಿ ದುಷ್ಟಪದ್ಧತಿಗಳನ್ನು ತಪ್ಪಿಸಲು ಉಪನ್ಯಾಸಕರನ್ನು ನೇಮಿಸಿದ್ದಾರೆ ಇವರು ಬಡತನದಲ್ಲಿರುವುದನ್ನು ಕಂಡು ಭೂದಾನವನ್ನು ಮಾಡಿಯೂ, ಮಾಡುತ್ತಲೂ ಇದ್ದಾರೆ.

ಈ ರೀತಿಯಾಗಿ ಅಸ್ಪೃಶ್ಯತಾ ನಿವಾರಣೆ ಮಾಡುತ್ತಿದ್ದಾಗ್ಯೂ ಆದಿಕರ್ನಾಟಕರಲ್ಲಿ ಕೆಲವರು ಮೇಲ್ಕಂಡ ಸಂಗತಿಗಳನ್ನೆಲ್ಲಾ ಅರಿತುಕೊಳ್ಳದೆ ದುಡುಕಿ ಪರಮತಸ್ಥರ ಬಲ್ಲಿದಮಾತಿಗೆ ಬೆರಗಾಗಿ, ಮುಂದೆ ಅವರು ಅನುಭವಿಸಬಹುದಾದ ಕಷ್ಟಪರಂಪರೆಗಳನ್ನಾಲೋಚಿಸದೆ, ಹಣವಾಸೆಗೂ, [illegible] ಸುಖವಾಸೆಗೂ, ಮುಸ್ಲಿಂ ಕೊಂಡು ಜೊತೆಯಲ್ಲಿ ಕರೆದ್ಯಸಿಕೊಳ್ಳುವ [illegible] ಬರಹ [illegible] ಮರುಳಾಗಿ ಪರಮತಾವಲಂಬಿಗಳಾಗುತ್ತಿರುವುದು ಬಹು [illegible]. ಅದ್ದರಿಂದ ಪರಿಶೀಲಿಸಿ [illegible]

ವನ್ನವಲಂಬಿಸಿದರೆ ನಿಮಗೆ ಬೇಕಾದ ನೌಕರಿಗಳನ್ನು ಕೊಡುತ್ತೇವೆಂತಲೂ, ದ್ರವ್ಯಸಹಾಯಮಾಡುತ್ತೇವೆಂತಲೂ, ವಿವಾಹಮಾಡುತ್ತೇವೆಂತಲೂ ಕೊಡಬಾರದ ಆಸೆಗಳನ್ನು ತೋರಿಸಿದಲ್ಲಿ ಇಂಥಾ ನಿಮ್ಮ ಸಹಾಯವು ಹಿಂದೂ ಮಹಾಜನರ ಅಥವಾ ನಮ್ಮ ಸರ್ಕಾರದ ಮೂಲಕವೇ ಬಂದಿಲ್ಲವಾದ್ದರಿಂದ ನೀವು ಅವರಲ್ಲಿಗೆ ಹೋಗಿರಿ, ನಮ್ಮಲ್ಲಿಗೆ ಬರಲೇಬೇಡಿರಿ ಎಂದು ಹೇಳಿ ಕಳುಹಿಸಬೇಕಾಗಿ ಬೇಡುತ್ತೇವೆ. ಈ ರೀತಿ ಆ ಪರಕೀಯರಿಗೆ ಸಮಾಧಾನ ಹೇಳುವುದನ್ನು ತಿಳಿಯದೆ ಈಗಾಗಲೇ ಅನೇಕರು ದುಡುಕಿ ಆಶಾಪಾಶಗಳಿಗೆ ಸಿಕ್ಕಿ ಪರಮತವನ್ನವಲಂಬಿಸಿ, ಅಲ್ಲಿನ ಕಷ್ಟಗಳನ್ನು ಸಹಿಸಲಾರದೆ ಪುನಃ ವಾಪಸ್ಸು ತಮ್ಮ ಮತಕ್ಕೇನೇ ಬರುತ್ತಿರುತ್ತಾರೆಂಬುದನ್ನೂ ಈ ಮೂಲಕ ಆದಿಕರ್ನಾಟಕರೂ ಆದಿದ್ರಾವಿಡರೂ ಆದ ನಿಮಗೆ ತಿಳುವಳಿಕೆ ಕೊಟ್ಟು ಎಚ್ಚರಗೊಳಿಸುತ್ತೇವೆ. ಎಡಗೈ ಬಲಗೈ ಎಂದು ತಂತಮ್ಮಲ್ಲಿ ಜಗಳವಾಡದೆ ಪರಸ್ಪರ ಪ್ರೇಮಭಾವದಿಂದ ಎಲ್ಲಾ ಶುಭಕಾರ್ಯಗಳನ್ನೂ ಮೆರವಣಿಗೆ ವಗೈರೆ ಉತ್ಸವಾದಿಗಳನ್ನೂ ನೆರವೇರಿಸಿಕೊಳ್ಳುತ್ತಾ ಹಿಂದು ಧರ್ಮದ ಮಕ್ಕಳಾಗಬೇಕೆಂದು ಮತ್ತೊಮ್ಮೆ ಬೇಡಿಕೊಳ್ಳುತ್ತೇವೆ.

ಉತ್ತಮಕುಲದವರಾದ ಕೆಲವು ಹಿಂದುಗಳು ಆದಿಕರ್ನಾಟಕರನ್ನು ಮೇಲಕ್ಕೆತ್ತುವುದರಲ್ಲಿ ಸರ್ಕಾರದವರೊಡನೆ ಸಹಕರಿಸುವುದಕ್ಕೆ ಬದಲು ಆ ತತ್ತ್ವಗಳನ್ನು ಮೂಲೆಗೊತ್ತುವ ಪ್ರಯತ್ನಗಳನ್ನೇ ಮಾಡುತ್ತಿರುವದು ಶೋಚನೀಯವಾಗಿರುತ್ತದೆ. ಅಂತಹವರಿಗೆ ಮುಂದಾಲೋಚನೆ ಮತ್ತು ಮುಂದೆ ರಾಜ್ಯಾಂಗರಚನೆಯಲ್ಲಿ ಆಶಾಭಂಗರಾಗಿ ಬಹು ಪಶ್ಚಾತ್ತಾಪಪಡುತ್ತಾರೆಂತಲೂ ಎಚ್ಚರಗೊಳಿಸಿ ಇನ್ನಾದರೂ ಆದಿಕರ್ನಾಟಕರನ್ನೆತ್ತುವುದರಲ್ಲಿ ಸರ್ಕಾರದವರೊಡನೆ ಸಹಕರಿಸುವುದರ ಜೊತೆಗೆ ತಾವು ಸಹ ಅಸ್ಪೃಶ್ಯತಾ ನಿವಾರಣೆಯಲ್ಲಿ ಮುಂದಾಳಾಗಿದ್ದುಕೊಂಡು ಆ ದೀನಜನರು ಪರಮತಕ್ಕೆ ಹೋಗದಂತೆ ನೋಡಿಕೊಳ್ಳಬೇಕೆಂತಲೂ ಬೇಡಿಕೊಳ್ಳುತ್ತೇವೆ. ತದ್ವತ್ ಆದಿಕರ್ನಾಟಕರನ್ನುದ್ಧರಿಸುವುದರಲ್ಲಿ ಪೂಜ್ಯರಾದ ಎಲ್ಲಾ ಪೀಠ ಮತ್ತು ಮಠಾಧಿಪತಿಗಳು ಸರ್ಕಾರದವರಿಗೆ ಮತ್ತಷ್ಟು ಬೆಂಬಲವನ್ನೂ, ಶಿಷ್ಯಮಂಡಳಿಗೆ ಪ್ರೋತ್ಸಾಹವನ್ನೂ ಕೊಡುತ್ತಾ, ಅಸ್ಪೃಶ್ಯತಾನಿವಾರಣೆಯಲ್ಲಿ ಎಲ್ಲರೂ ಶ್ರದ್ಧೆ ವಹಿಸದೆ ಇದ್ದಪಕ್ಷದಲ್ಲಿ, ಆ ಜನರು ದುಡುಕಿ ತಿಳುವಳಿಕೆಯಿಲ್ಲದೆ ಪರಮತಾವಲಂಬಿಗಳಾದರೆ ಹಿಂದುಮತವು ಬಲಹೀನವಾಗಿ ರಾಜ್ಯಾಂಗರಚನೆಯಲ್ಲಿ ಬಹು ತೊಂದರೆಪಡಬೇಕಾದೀತೆನ್ನುವದನ್ನು ಮರೆಯಬಾರದೆಂಬುದನ್ನು ಎಲ್ಲರ ಗಮನಕ್ಕೆ ತಂದು, ಪೂರ್ವದಲ್ಲಿ ಅನೇಕಜನ ಅಸ್ಪೃಶ್ಯರು ಸ್ಪೃಶ್ಯರಾದ್ದಲ್ಲದೆ ಪೂಜಾರ್ಹರಾಗಿರುವ ಸಂಗತಿ ಉದಾಹರಣೆಮೂಲಕ ಜ್ಞಾಪಕಕ್ಕೆ ತಂದುಕೊಟ್ಟು ಆದಿಕರ್ನಾಟಕರನ್ನು ಸ್ಪೃಶ್ಯರನ್ನಾಗಿ ಮಾಡುವ ದೇಶೋದ್ಧಾರಕ ಮಹಾ ಜನರ ಪ್ರಯತ್ನಗಳಿಗೆ ಬೆಂಬಲವನ್ನು ಕೊಟ್ಟು ಆದಿಕರ್ನಾಟಕರಿಗೆ ಹಿಂದು ಸನಾತನ ಧರ್ಮಬೋಧೆಯ ಸದ್ವಿದ್ಯಾ ಪ್ರೋತ್ಸಾಹವನ್ನಿತ್ತು ಉದ್ಧಾರಮಾಡಬೇಕಾಗಿ ಜಗದ್ಗುರುಗಳೆಂಬ ಬಿರುದಾಂಕಿತರಾದ ಎಲ್ಲಾ ಪೀಠಾಧಿಕಾರಿಗಳ ಅಡಿದಾವರೆಗಳಲ್ಲಿ ಅಡ್ಡಬಿದ್ದು ಬೇಡಿಕೊಳ್ಳುತ್ತೇವೆ.

ತಾ॥ 14-8-1932	ಈರೀತಿ ಬೇಡುವ,
ಚಿತ್ರದುರ್ಗ.	ಹಿಂದುಮತದ ಸೇವಾನುಸೇವಕರಾದ
	ಆದಿಕರ್ನಾಟಕರು
ಆಟದ ಪೆನ್ನಯ್ಯ,	ರಾಮಲಿಂಗಂ,
ಚಿತ್ರದುರ್ಗ ಡಿ॥ ಬೋ॥ ಮೆಂಬರು.	ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮೆಂಬರು.

ಸರ್ಕಾರ ಮತ್ತು ಕಂಪೆನಿಗಳ

ಸಾಲ ಮತ್ತು ಷೇರ್ ಮಾರ್ಕೆಟ್ ದರಗಳು

ಇಂಡಿಯನ ಸರ್ಕಾರವು 1940—43 ರ ಸಾಲವನ್ನು 17—8—32 ರಿಂದ 31—8—32 ರ ವರೆಗೆ ತೆಗೆದುಕೊಳ್ಳುತ್ತಿದ್ದಾರೆ. 100 ರೂ. ಗೆ 98 ರೂಪಾಯಿ ಕೊಡಬೇಕು.

ಸರ್ಕಾರದ ಸಾಲ ಪತ್ರಗಳ ಬೆಲೆ

ಇಂಡಿಯಾ ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳದ್ದು)

ಶೇಕಡ ಬಡ್ಡಿ	$3\frac{1}{2}$ (............)	ಪತ್ರದ ಬೆಲೆ	68—12—0
,, ,,	4 (1931—36)	....	96— 5—0
,, ,,	4 (1934—37)	....	95— 7—0
,, ,,	4 (1960—70)	....	79— 4—0
,, ,,	$4\frac{1}{2}$ (1934)	....	99— 5—0
,, ,,	$4\frac{1}{2}$ (1955—60)	....	90— 0—0
,, ,,	5 (1929—47)	....	97—10—0
,, ,,	5 (1935)	....	100— 1—0
,, ,,	5 (1939—44)	....	98— 4—0
,, ,,	6 (1933—36)	....	101— 9—0
,, ,,	$6\frac{1}{2}$ (1935)	....	104— 2—0
,, ,,	$5\frac{1}{2}$ (1938—40)	....	101— 7—0
(ಆದಾಯ ತೆರಿಗೆ ಇಲ್ಲದ್ದು)			
,, ,,	5 (1933)	....	101— 5—0
,, ,,	5 (1945—55)	....	104—10—0

ಮೈಸೂರು ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳದ್ದು)

ಶೇಕಡ ಬಡ್ಡಿ	5 (1929—44)	....	95— 0—0
(ಆದಾಯ ತೆರಿಗೆ ಇಲ್ಲದ್ದು)			
,, ,,	$6\frac{1}{2}$ (1941—51)	....	111— 0—0
,, ,,	$6\frac{1}{4}$ (1940)	....	107— 8—0
,, ,,	$5\frac{1}{2}$ (1938)	....	103— 0—0
,, ,,	5 (1955)	....	100— 8—0
ಶಿವಮೊಗ್ಗ ರೈಲ್ವೆ	....	....	83— 8—0
ಚಿತ್ರದುರ್ಗ ರೈಲ್ವೆ	....	....	83— 4—0

ಕಂಪೆನಿಗಳ ಷೇರುಗಳ ಬೆಲೆ

ಬ್ಯಾಂಕುಗಳಲ್ಲಿ

ಇಂಪೀರಿಯಲ್ ಎ್. ಪಿ.	500 ರೂ. ಷೇರಿಗೆ	1153—0—0	ರೂ. ಬೆಲೆ
,, ಕಾಂಟ್.	125 ,,	284—0—0	,,
ಇಂಡಿಯಾ	50 ,,	80—0—0	,,
ಮೈಸೂರು	100 ,,	194—0—0	,,
ಬೆಂಗಳೂರು	10 ,,	10—0—0	,,
ಇಂಡಸ್ಟ್ರಿಯಲ್	25 ,,	8—0—0	,,
[illegible]	10 ,,	5—0—0	,,
[illegible]	50 ,,	50—0—0	,,
ಎ್. ಎಂ. ಎಸ್. ಪಿ.	10 ,,	10—0—0	,,
[illegible]		ನಾಮಿನಲ್	

ಇತರ ಬ್ಯಾಂಕುಗಳಲ್ಲಿ

ಬಿ. ಪಿ. ರೈಲ್ವೆ	25 ರೂ. ಷೇರಿಗೆ, ...	12—8—0	ರೂ. ಬೆಲೆ
ಬೆಂಗಳೂರು ಪ್ರೆಸ್	100 ,, ...	80—0—0	,,
ಬಾರ್ಟರ್ಸ್ (ಅ)	10 ,, ...	7—8—0	,,
,, (ಪ್ರಿ)	10 ,, ...	5—0—0	,,
ಸ್ಪೆನ್ಸರ್ಸ್	....	80—0—0	,,
ಬ್ರಿಟೀಸ್ (ಅ)	100 ,, ...	88—0—0	,,
(ಪ್ರಿ)	100 ,, ...	86—0—0	,,
ಟೈಲ್ ಅಂಡ್ ಪಾಟರೀಸ್		ನಾಮಿನಲ್	
ಪ್ರೀಮಿಯರ್	....	ಡಿಟ್ಟೋ.	
ಟಾಟಾ ಹೈಡ್ರೋ (ಅ)	....	29—0—0	,,
,, (ಪ್ರಿ)	....	109—0—0	,,
ಟಾಟಾ ಐರನ್ (ಅ)	....	24—0—0	,,
,, (ಡೆ)	....	228—0—0	,,
,, (1)	....	118—0—0	,,
,, (2)	....	40—0—0	,,
ಶ್ರೀ ಕೃಷ್ಣ		ನಾಮಿನಲ್.	

ಇನ್‌ಷೂರೆನ್ಸು ಕಂಪೆನಿಯಲ್ಲಿ

ಏಷಿಯಾಟಿಕ್	5 ರೂ. ಷೇರಿಗೆ	5—2—0	ರೂ. ಬೆಲೆ
ಓರಿಯಂಟಲ್	500 ,, ...	1976—0—0	,,
ರಿಲೇಯನ್ಸ್	100 ,,	96—0—0	,,

ಡಿಬೆಂಚರುಗಳು

ಕೋಲಾರ	100 ರೂ ಡಿಬೆಂಚರಿಗೆ	88— 8—0	ರೂ. ಬೆಲೆ
ಮೈಸೂರು	100 ,, ...	103—12—0	,,
ತುಮಕೂರು	100 ,, ...	104— 0—0	,,
ಹಾಸನ	100 ,, ...	93— 0—0	,,

ಮಿಲ್ಲುಗಳಲ್ಲಿ

ಬೆಂಗಳೂರು	100 ರೂ. ಗೆ	65—8—0	ರೂ. ಬೆಲೆ
ಬಿಂಕಿಂಗ್ಹಾಂ	100 ,, ...	114—0—0	,,
ಗೋಕಾಕ್	100 ,, ...	113—0—0	,,
ಕೈಸರ್‌ಹಿಂದ್	$2\frac{1}{2}$,, ...	1—4—0	,,
ಮಿನೆರ್ವಾ	100 ,, ...	42—8—0	,,
ಮಹಾರಾಜ	100 ,, ...	102—0—0	,,
ಮಹಾಲಕ್ಷ್ಮಿ		ನಾಮಿನಲ್	
ಕೃಷ್ಣರಾಜೇಂದ್ರ	25 ,, ...	5—8—0	,,

ಗಣಿಗಳಲ್ಲಿ

ಪಾಲಘಾಟ್ ಷಿಲಿಂಗ್	10 ಕ್ಕೆ	0—11—0	ಬೆಲೆ
ಚಾಂಪಿಯನ್	,, 10 ,, ...	0—14—0	,,
ಮೈಸೂರು	,, 10 ,, ...	0—11— $3\frac{1}{2}$	,,
ನಂದೀದುರ್ಗ	,, 10 ,, ...	0—27— 2	,,
ಊರಿಗಾಂ	,, 10 ,, ...	0— 6— 2	,,
ಪೆನಿನ್ಸುಲರ್	,, 10 ,, ...	ನಾಮಿನಲ್	
ಶಿವಮೊಗ್ಗ	,,	ನಾಮಿನಲ್	

ಎಂ. ನಂಜಪ್ಪ, ಜಹಗೀರ್‌ದಾರ್,
ಷೇರ್, ಸ್ಟಾಕ್ ಮತ್ತು ಜನರಲ್ ಬ್ರೋಕರ್,
181. ಕ್ಯಾವಲ್ರಿ ರೋಡು, ಬೆಂಗಳೂರು.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ. ನಾರಿನವರು ಜರೂರ ತರಿಸಿಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.
ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.
19 M. C

೧೯೩೨ ನೆಯ ಇಸವಿ ಆಗಸ್ಟ್ ತಾ॥ ೨೯ರಿಂದ ಸೆಪ್ಟಂಬರ್ ತಾ॥ ೪ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ನೆಯ ಅಂಗಿರಸನಾಮಸಂವತ್ಸರದ ಶ್ರಾವಣ ಬಹುಳ ತ್ರಯೋದಶಿಯಿಂದ ಭಾದ್ರಪದ ಶುದ್ಧ ಚೌತಿ ವರೆಗಿನ ಪಂಚಾಂಗ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸಿಂಹ ಮಾಸ
29	ಸೋಮ	ತ್ರಯೋ	52-23	ಪುಷ್ಯ	41-31	14
30	[1]ಮಂಗಳ	ಚತು	50-51	ಆಶ್ಲೇ	41-56	15
31	ಬುಧ	ಅಮಾ	48-17	ಮಖ	41-33	16
1	ಗುರು	ಪಾಡ್ಯ	44-37	ಪುಬ್ಬ	39-34	17
2	[2]ಶುಕ್ರ	ಬಿದಿ	39-53	ಉತ್ತ	36-00	18
3	[3]ಶನಿ	ತದಿ	34-36	ಹಸ್ತ	33-49	19
4	[4]ಭಾನು	ಚೌತಿ	28-53	ಚಿತ್ತ	29-59	20

(1). ಮಂಗಳಗೌರೀವ್ರತ, [illegible] ೧ [illegible] (2) [illegible] ೨ [illegible] (3) [illegible] (4) [illegible]

[illegible]

REG N. O. M. 124

ಮೈಸೂರ್ ಸ್ಟಾರ್.

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಾಧಿಗತರಾಜನಂಡಲಹಿತೈಷಾ । ಘನಪಥಕೃತಾವತಾರಾ ಪತ್ರಜ್ಞಸಹೃತ್ಯ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚೆತ್ತಿಲೆಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಂಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೨ ನೆಯ ಇಸವಿ ಸೆಪ್ಟಂಬರ್ ತಾರೀಖು ೧೨ ನೆಯ ಸೋಮವಾರ [ಸಂಚಿಕೆ ೩೭

MYSORE RAILWAYS.

AUCTION SALE NOTICE.

[50 – 10] [3—1]

In accordance with Section 40 of the Mysore Railways Regulation No. 4 of 1894, all unclaimed and lost property articles in possession of the Railway Administration over six months old, will be disposed off by public auction on Sunday the 25th September 1932 from 9 A. M, in the Mysore Station premises by the Railway Auctioneer.

1. The list of such articles may be seen in the lost property office, Mysore.
2. The Auctioneer does not bind himself to accept the highest or any bid at all and it is open to him to cancel the auction for reasons found sufficient by him.
3. The highest bidder whose bid is accepted should pay the full amount soon after the auction is closed and must arrange to remove the articles immediately, failing which they will be reauctioned at his risk.

Traffic Manager's Office,
Mysore,
Dated 25th August 1932.

A. A. KHAN,
Traffic Manager.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇಂ.
ವೀರಶೈವ ಶಿವಪೂಜಾವಿಧಿ।	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿ।	೦— ೮—೦	೦—೧೪—೦
ಷಟ್ಸ್ಥಲವಿದ್ಯಾ	೦— ೪—೦	೦— ೯—೦
ಚಾರುಶೀಲಚರಿತ್ರೆ	೦— ೫—೦	೦—೧೦—೦
ಪರಿಹಾಸ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ಗುರುಕಂಠಲಿಂಗೇಶ್ವರಶತಕ	೦— ೧—೦	೦— ೬—೦
ಬಸವೇಶ್ವರವಚನ	೦— ೭—೦	೦—೧೩—೦
ಸಟೀಕ ಕಲ್ಯಾಣಿಕಲ್ಪಮಂಜರಿ	೦— ೫—೦	೦—೧೩—೦
ಸಟೀಕ ಶತಕತ್ರಯ	೧— ೦—೦	೧— ೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕದ. [ಸ್ಟರ	ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದಪನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವ, ನಿದ್ದೆ ಕಡಿಮೆ ಬರೋಣ, ಯೌವನದೇಶರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಆವಿಡಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೪೪ ತೊಲಿಯ ಒಂದು ಡಬ್ಬಿಗೆ ೫। ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳಸುವ ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಆದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ

ಎಲ್ಲ ಬಗ್ಗೆಯ ಸೆರಗು, ಮುಟ್ಟಿಚಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಟ್ಟಿಚಿಟ್ಟು ಆಗೋಣ, ಮುಟ್ಟಿಚಿಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಪ್ಪಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಅಷ್ಟಕಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಔಷಧಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ತೀವ್ರ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ ಮತ್ತು ಬಡತನಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ [illegible] ಇಂಥ ಬೇರೆ ಕಾರಣದಿಂದ ಸಂತತಿ ಇಚ್ಛಾ ಯಾರಿಗೆ ಇರಿರುತ್ತದೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. [illegible] ಇಟ್ಟು ಮುಟ್ಟಿಚಿಟ್ಟು ಆಗುವದು ಶುರು ಇದ್ದು ಗರ್ಭಧಾರಣ ಬಂದು ಹೋಗುವದು. [illegible] ಶುರು ಆಗುವದಿಲ್ಲ ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರ ಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣದಾ ಒಂದು ಡಬ್ಬಿಗೆ ೩ ರೂ. ಟ. ಖ. ೮ ಆಣೆ. ಮತ್ತು [illegible] ೪ ನೇ ದಿವಸ ೩೦ [illegible] ತಿನ್ನಬೇಕು. [illegible] ದಿವಸದಿಂದ ಮುಂದಿನ ೧, ಗುಳಿಗೆ [illegible] ೧, ಗುಳಿಗೆ ರಾತ್ರಿ ಊಟವಾದ ಅನಂತರ ೧ ಗುಳಿಗೆ ತಣ್ಣನೆ ನೀರಿನ ಕೂಡ ನುಂಗಬೇಕು. ಪಥ್ಯ ಸಾದಾ. [illegible] ಔಷಧ [illegible]

[illegible]

ಪತ್ತೆ ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ ಮು. ಪೋ. ಮಿರಜ ಎಂ. ಎಸ್. ಎಂ.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕೆಂಪುಡಬ್ಬಿಯಲ್ಲಿಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು

(Registerd Trade Mark)

ಸಲಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—[illegible] ಶೀ, [illegible], [illegible] ರೋಗಗಳು, [illegible] ಸರ್ವ ವ್ಯಾಧಿಗಳು, [illegible] ದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ [illegible] ಈ ವ್ಯಾಧಿಗಳನ್ನು ಸ್ವಸ್ಥ ಪಡಿಸಿ [illegible] ಹೆಚ್ಚು ಮಾಡುತ್ತದೆ. [illegible] ನ ಸಾಧಾರಣ ನಶ್ಯದ ಬದಲು ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು [illegible] ಎಲ್ಲರೂ [illegible]. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ [illegible] ಗಿಸುತ್ತಾರೆ. ಮಾದರಿ [illegible] ಕಳುಹಿಸಲಾಗುವುದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೬—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. [illegible]

[illegible] ಹೆಸರನ್ನೂ, ಅಡ್ರೆಸ್ಸನ್ನೂ [illegible]

ವಿಳಾಸ—ಗುರುಬಸವ ಅಂಡ್ ಕಂಪೆನಿ [illegible],
[10—3] [illegible]

RAYANKERE PALACE DAIRY FARM, MYSORE.

Bull calves, a good half-bred bull and some bullocks for sale.

Apply to :—
DR. MCISAAC,
Manager.

[3—1]

ಮೈಸೂರು ಸ್ಟಾರ್.

೧೯೩೦ನೇ ಇಸವಿ ಸೆಪ್ಟಂಬರ್ ತಾ|| ೧೫ನೆಯ ಸೋಮವಾರ.

ರೌಂಡುಟೇಬಲು ಸಭೆ.

ಎರಡನೆಯವೇಳೆ ಲಂಡನ್ ನಗರದಲ್ಲಿ ನೆರೆದಿದ್ದ ರೌಂಡು ಟೇಬಲು ಸಭೆಯಲ್ಲಿ, ಭಾರತದೇಶಕ್ಕೆ ಸ್ವತಃ ಸೋಗಿ ದೇಶೀಯ ಸಂಸ್ಥಾನಗಳು, ಆರ್ಥಿಕ ಮತ್ತು ಚುನಾವಣೆ ಇವುಗಳಿಗೆ ಸಂಬಂಧಪಟ್ಟ ಸಮಸ್ಯೆಯನ್ನು ಬಗೆಹರಿಸಲು ಮೂರು ಕಮಿಟಿಗಳನ್ನೂ ವೈಸ್ರಾಯರ ಅಧಿಪತ್ಯದಲ್ಲಿ ಒಂದು ಸಲಹೆ ಕಮಿಟಿಯನ್ನೂ ಪ್ರಧಾನಮಂತ್ರಿಗಳೇರ್ಪಡಿಸಿ, ಭಾರತ ರಾಜ್ಯಾಂಗ ರಚನೆಯ ಸಂಪೂರ್ಣ ವಿಧಾನವನ್ನು ಕಡೆಯಲ್ಲಿ ಪುನರ್ವಿಮರ್ಶಿಸಿ ನಿರ್ಧರಿಸಲು ರೌಂಡುಟೇಬಲು ಸಭೆಯು ಪುನಃ ಸಮಾವೇಶವಾಗಬೇಕೆಂದು ಹೇಳಿದ್ದರು. ಆದರೆ, ರೌಂಡುಟೇಬಲು ಸಭೆಗಳ ಸೂಚನೆಗಳನ್ನನುಸರಿಸಿ ರಾಜ್ಯಾಂಗ ನಿರ್ಮಾಣ ವಿಧಾನವನ್ನು ಕಾಮನ್ಸ್ ಮತ್ತು ಲಾರ್ಡ್ಸ್ ಸಭೆಗಳಿಂದ ಚುನಾಯಿಸಲ್ಪಟ್ಟ ಮೆಂಬರುಗಳಿಂದ ಕೂಡಿದ ಸಂಯುಕ್ತ ಕಮಿಟಿಯವರು ಕೆಲ ಭಾರತೀಯರನ್ನು ಲಂಡನ್ನಿಗೆ ಬರಮಾಡಿಕೊಂಡು ಅವರುಗಳ ಕೂಡ ಆಲೋಚಿಸಿ ನಿರ್ಧರಿಸುವರೆಂದು ಭಾರತ ಮಂತ್ರಿಗಳು ಪ್ರಕಟಿಸಿ ರೌಂಡುಟೇಬಲು ಸಭೆಯು ಮೂರನೆಯವೇಳೆ ಕೂಡಲವಕಾಶವಿಲ್ಲದಂತೆ ಮಾಡಿದುದರ ಮೇಲೆ, ಭಾರತ ಪ್ರಭುತ್ವದವರಿಗೂ ಮಹಾತ್ಮರಿಗೂ ಸಂಧಿಯನ್ನು ಕುದುರಿಸುವಲ್ಲಿ ಮತ್ತು ಶಾಂತಿ ಸಮಾಧಾನಗಳನ್ನೇರ್ಪಡಿಸುವಲ್ಲಿ ಪ್ರಭುತ್ವದವರೊಡನೆ ಸಹಕರಿಸುತ್ತಿದ್ದ ಮಿತವಾದ ನಾಯಕರುಗಳಾದ ಸಪ್ರು ಜಯಕರರು ವೈಸ್ರಾಯರಾಧಿಪತ್ಯದಲ್ಲೇರ್ಪಟ್ಟಿರುವ ಆಲೋಚನ ಕಮಿಟಿಯ ಸಭ್ಯತ್ವವನ್ನು ತ್ಯಜಿಸಿಬಿಟ್ಟು ತಮ್ಮ ಅಸಮಾಧಾನವನ್ನು ವ್ಯಕ್ತಗೊಳಿಸಿದರು. ಭಾರತದೇಶದ ಹಿತಚಿಂತಕರಾದ ಆಂಗ್ಲನಾಯಕರುಗಳೂ, ಪತ್ರಿಕೆಗಳೂ ಭಾರತ ಮಂತ್ರಿಗಳ ನೂತನ ವಿಧಾನಕ್ರಮವನ್ನು ಖಂಡಿಸಿ ಟೀಕೆ ಮಾಡಿರುತ್ತವೆ ಈರೀತಿ ಪ್ರಭುತ್ವದ ಹಿತಚಿಂತಕರೂ, ಸಹಕಾರರೂ ಆದವರು ಪ್ರಕ್ಷುಬ್ಧರಾದುದನ್ನು ಕಂಡು ವೈಸ್ರಾಯರು ಕಳೆದ ಮಂಗಳವಾರ ಸಿಮ್ಲಾದಲ್ಲಿ ಜರುಗಿದ ಭಾರತಶಾಸನ ಸಭಾರಂಭಭಾಷಣದಲ್ಲಿ ಕೆಲ ಸಮಾಧಾನೋಕ್ತಿಗಳನ್ನು ಆಡಿರುವರು. ಅದರಲ್ಲಿ "ಭಾರತ ಮಂತ್ರಿಯವರು ಸೂಚಿಸಿರುವ ಸಭೆಯು ನವಂಬರ್ ತಿಂಗಳ ಮಧ್ಯದಲ್ಲಿ ನಡೆಯುವುದು ಈ ಸಭೆಗೆ ಬ್ರಿಟಿಷ್ ಇಂಡ್ಯಾದಿಂದಲೂ, ದೇಶೀಯ ಸಂಸ್ಥಾನಗಳಿಂದಲೂ ಕೆಲ ಪ್ರತಿನಿಧಿಗಳನ್ನು ಬ್ರಿಟಿಷ್ ಪ್ರಭುತ್ವದವರು ಆಹ್ವಾನಿಸುವರು. ಈ ಸಭೆಗೆ ಹೋಗತಕ್ಕ ಪ್ರತಿನಿಧಿಗಳು ರೌಂಡುಟೇಬಲ್ ಸಭೆಯ ಮೆಂಬರುಗಳ ಮರ್ಯಾದೆಯನ್ನು ಹೊಂದುವರು. ಆದರೆ ಈಗ ಚರ್ಚಿಸಲ್ಪಡಬೇಕಾದ ಸ್ಥಿತಿಗತಿಗಳಿಗೆ ಸಂಬಂಧಪಟ್ಟ ಅಂಶಗಳು ಹೆಚ್ಚಾಗಿಲ್ಲದಿರುವುದರಿಂದ ಜಾಗ್ರತೆಯಲ್ಲಿ, ಗೊತ್ತಾದ ಕಾರ್ಯಕ್ರಮಾನುಸಾರವಾಗಿ ಸಮಾಲೋಚನೆಯನ್ನು ನಡೆಸುವರು. ಆದುದರಿಂದ ಬಹಿರಂಗಸಭೆ ನಡೆಯುವುದಿಲ್ಲ. ಎಲ್ಲ ವಿಷಯಗಳಮೇಲೆ ಸಮಾಧಾನವು ಕುದುರಿದರೆ ಎಲ್ಲದರಮೇಲಿನ ಸಮಾಧಾನವನ್ನನುಮೋದಿಸುವರು. ಅನಂತರ ಪ್ರಭುತ್ವದವರು ತಮ್ಮ ಶಿಫಾರ್ಸನ್ನು ಮೇಲೆ ಹೇಳಿದ ಸಮಾಧಾನದೊಡನೆ ಜಾಯಿಂಟುಪಾರ್ಲಿಮೆಂಟು ಕಮಿಟಿಗೆ ಸಮರ್ಪಿಸುವರು. ನಾನು ಈ ದೇಶದಲ್ಲಿ ಬಹಳ ವರ್ಷಗಳಿಂದ ಸುಖವಾಗಿ ಕಾಲಕಳೆದೆನು ಮತ್ತು ದೇಶಾಭ್ಯುದಯಕ್ಕಾಗಿ ಎಷ್ಟೋ ಪಾಟುಪಟ್ಟಿರುವೆನು. ಬ್ರಿಟಿಷ ಮತ್ತು ಭಾರತ ಜನರಿಗೆ ದೇವರೇ ಸಮಾಗಮವನ್ನುಂಟುಮಾಡಿದನು. ನಮಗೆ ಭೇದವೂ ಹೋರಾಟಗಳು ಇಲ್ಲದೆ ಇರಲಿಲ್ಲ, ಆದರೆ ಈ ಸಮಾಗಮದಿಂದ ಶಾಸನಬದ್ಧರಾದ ಪ್ರಜೆಗಳಿಗೆ ಶಾಂತಿ ಸ್ವಾತಂತ್ರ್ಯಗಳು ಪ್ರಾಪ್ತವಾಗಿರುತ್ತವೆ ಮತ್ತು ದೇಶಾಭ್ಯುದಯವುಂಟಾಗಿದೆ. ಇನ್ನೂ ಮಾಡಬೇಕಾಗಿರುವುದು ಬಹಳ ಇರುವುದು. ನಾನು 20 ವರ್ಷಗಳ ಹಿಂದೆ ಬೊಂಬಾಯಿಗೆ ಗೌರ್ನರಾಗಿ ಬಂದಾಗ್ಗೆ ಎಲ್ಲರ ಸಹಾಯವನ್ನು ಕೋರಿದ್ದೆನಲ್ಲದೆ 18 ತಿಂಗಳ ಹಿಂದೆ ವೈಸ್ರಾಯಿಯಾಗಿ ಬಂದಾಗಲೂ ಅಂತಹ ಸಹಾಯವನ್ನು ಕೋರಿದೆನು ಈ ದಿವಸ ಸಹ ಅದೇ ರೀತಿಯಾಗಿ ಎಲ್ಲರೂ ಸಹಕರಿಸಬೇಕೆಂದು ತ್ರಿಕರಣಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುತ್ತೇನೆ. ಬ್ರಿಟಿಷ್ ಪ್ರಭುತ್ವವೊಂದೇ ಆಗಲಿ ಭಾರತ ಪ್ರಭುತ್ವವೊಂದೇ ಆಗಲಿ ನೂತನ ಸಂಸ್ಕರಣಗಳನ್ನು ವಿಜಯಶಾಲಿಯಾಗಿ ಮಾಡಲಾರದು. ಭಾರತದೇಶಪ್ರಜೆಗಳೂ ಸಂಸ್ಥಾನಾಧೀಶ್ವರರುಗಳೂ ಸಹಕರಿಸಿದರೇನೆಯೇ ಈ ಮಹಾಕಾರ್ಯವು ಸಿದ್ಧಿಸುವುದು. ಅದುಕಾರಣ ನಾವುಗಳು ವೈಮನಸ್ಯವನ್ನೂ, ಅನುಮಾನವನ್ನೂ ದೂರೀಕರಿಸೋಣ. ಸಾಂಘಿಕ ದ್ವೇಷವನ್ನು ಸಾಧ್ಯವಾದಮಟ್ಟಿಗೆ ಕೂಡಲೆ ಮರೆತುಬಿಡೋಣ. ಭಾರತದೇಶವು ಇತರ ದೇಶಗಳ ಮಧ್ಯೆ ತನಗೆ ಅರ್ಹವಾದ ಸ್ಥಾನವನ್ನು ಹೊಂದಲು ಅತ್ಯಾವಶ್ಯಕವಾದ ಜಾತೀಯ ಭಾವವನ್ನು ಹುಟ್ಟಿಸುವುದಕ್ಕಾಗಿ ಸಂಯುಕ್ತಕಾರ್ಯದಲ್ಲಿ ಉದ್ಯುಕ್ತರಾಗೋಣ. ಆಶಾಪೂರಿತವಾದ ಈ ವಾಕ್ಯಗಳಿಂದ ಶಾಸನಸಭೆಯ ಮೆಂಬರುಗಳನ್ನು ಪ್ರಾರ್ಥಿಸುತ್ತೇನೆ ಅವರ ಪ್ರಯತ್ನವು ನನ್ನ ದೇಶಕ್ಕೂ ಪ್ರಜೆಗಳಿಗೂ ಶ್ರೇಯಸ್ಕರವಾಗಿರುವಂತೆ ಅನುಗ್ರಹಿಸಲೆಂದು ಈಶ್ವರನನ್ನು ಬೇಡುತ್ತೇನೆ" ಎಂದು ವೈಸ್ರಾಯರು ಹೇಳಿರುವರು. ಮುಳಿಸಿಕೊಂಡಿದ್ದ ಸಪ್ರುಜಯಕರ್ ಪ್ರಭೃತಿಗಳನ್ನು ಸಮಾಧಾನಗೊಳಿಸಿ ಅವರುಗಳು ರಾಜ್ಯಾಂಗನಿರ್ಮಾಣ ಕಾರ್ಯದಲ್ಲಿ ಸಹಕರಿಸುವಂತೆ ಮಾಡುವುದಕ್ಕಾಗಿ ಮೇಲ್ಕಂಡ ಸಮಾಧಾನೋಕ್ತಿಗಳನ್ನಾಡಿರುವರೆಂಬ ದೂರಿಗೆ ಅವಕಾಶ ಕೊಡದೆ ಬರುವ ನವಂಬರ್ ತಿಂಗಳಲ್ಲಿ ಜರುಗುವ ಸಭೆಯಲ್ಲಿ ಭಾರತ ಮಂತ್ರಿಯಾದಿಯಾಗಿ ಬ್ರಿಟಿಷ್ ಅಧಿಕಾರಿಗಳೂ ಸಂಯುಕ್ತ ಪಾರ್ಲಿಮೆಂಟ್ ಮೆಂಬರುಗಳ ಕಮಿಟಿಯವರೂ ರಾಜ್ಯಾಂಗ ನಿರ್ಮಾಣ ಕಾರ್ಯವನ್ನು ನಿಷ್ಕಾಪಟ್ಯದಿಂದ ನೆರವೇರಿಸಿ ಭಾರತದೇಶದ ಕಲ್ಯಾಣದಲ್ಲಿ ನೆರವಾಗುವಂತೆ ವೈಸ್ರಾಯರು ತಮ್ಮ ಬುದ್ಧಿ ಸಾಹಸಗಳನ್ನು ವಿನಿಯೋಗಿಸಿ ಭಾರತೀಯರ ಚಿರಕೃತಜ್ಞತೆಗೆ ಪಾತ್ರರಾಗುವಂತೆ ಮಾಡುವವರಾಗಲೆಂದು ಆಶಿಸುತ್ತೇವೆ.

ಬೊಂಬಾಯಿನಲ್ಲಿ ಗಣಪತಿ ಉತ್ಸವ

ಬೊಂಬಾಯಿನಲ್ಲಿ ಶ್ರೀ ಗಣಪತಿಗೆ ಶಿವಾಜಿ ಮಹಾರಾಜನ ವೇಷವು ಹಾಕಲ್ಪಟ್ಟು ಉತ್ಸವವು ಬಹಳ ವೈಭವದಿಂದಲೂ ನಿರ್ವಿಘ್ನದಿಂದಲೂ ನಡೆಸಲ್ಪಟ್ಟಿತು.

ಹರಿಹರಪುರದಲ್ಲಿ ಸಿಡಿಲಿನ ಅನಾಹುತ

ಕಳೆದ ತಾ|| 24 ರ ಮಧ್ಯಾಹ್ನ 3 ಘಂಟೆಯಲ್ಲಿ ಹರಿಹರಪುರಕ್ಕೆ ಸೇರಿದ ಹಾಲ್ಮುತ್ತೂರು ಬಳಿ 80 ದನಕರುಗಳು ಮಳೆಗಾಗಿ ಒಂದು ಮರದ ಕೆಳಗೆ ನಿಂತಿರುವಾಗ್ಗೆ ಸಿಡಿಲುಬಡಿದು ತತ್ಕ್ಷಣವೇ 47 ರಾಸುಗಳು ಸತ್ತುಹೋದವು ಮತ್ತು ಅಪಾಯವನ್ನು ಹೊಂದಿದ್ದ ರಾಸುಗಳಲ್ಲಿ ಈಚೆಗೆ 2 ಸತ್ತವು. ಎಂತಹ ಅನಾಹುತ!

ವಿಸ್ಕಿ (ಮದ್ಯ) ಈ ವರ್ಷ ತಯಾರಿಸಲ್ಪಡುವುದಿಲ್ಲ

ಸ್ಕಾಟ್ಲೆಂಡಿನಲ್ಲಿ ವಿಸ್ಕಿ ಎಂಬ ಮದ್ಯದ ಮೇಲಿನ ಸುಂಕವು ಹೆಚ್ಚಿಸಲ್ಪಟ್ಟುದರಿಂದ ವಿಸ್ಕಿ ಮದ್ಯವನ್ನು ಬಟ್ಟಿ ಇಳಿಸುವ 91 ಕಾರ್ಯಾಲಯಗಳಲ್ಲಿ 78 ಕಾರ್ಯಾಲಯಗಳು ಕೆಲಸವನ್ನು ನಿಲ್ಲಿಸಿಬಿಟ್ಟಿರುತ್ತವಂತೆ. ಈ ವಿಸ್ಕಿ ಮದ್ಯವನ್ನು ಮಾಡಲು, ಗ್ಯಾಲನ್ನಿಗೆ 3 ರೂ. ಆಗುತ್ತದಂತೆ. ಆದರೆ 1 ಗ್ಯಾಲನ್ ವಿಸ್ಕಿಯ ಮೇಲೆ 61-10-0 ರೂ. ಸುಂಕ ವಿಧಿಸಲ್ಪಟ್ಟಿದೆಯಂತೆ.

ಕುಸ್ತಿಪಂದ್ಯದಲ್ಲಿ ಕಲಹ

ದಿಲ್ಲಿಯ ಸಮೀಪದಲ್ಲಿರುವ ಆಲಿಪುರ ಬೆಲ್ರಾಗ್ರಾಮದಲ್ಲಿ ಪ್ರತಿ ವರ್ಷವೂ ನಡೆಯುವ ಜಾತ್ರೆಯಲ್ಲಿ ಕುಸ್ತಿಗಳು ಪಂದ್ಯದ ಮೇಲೆ ಆಗುವವು. ಅದರಂತೆ ಈ ಸಲವೂ ಕುಸ್ತಿಪಂದ್ಯವು ನಡೆದಿತು, ಆಗ ಯಾವ ಗೊಂದಲವೂ ಇಲ್ಲದೆ ಸಾಯಂಕಾಲದ ಮೇಲೆ ಎರಡು ಪಕ್ಷದವರಿಗೆ ಮುಷ್ಟಿಯುದ್ಧವಾಗಿ 16 ಮಂದಿಗೆ ಪೂರಾ ಪೆಟ್ಟುಬಿದ್ದು ಒಬ್ಬ ಮೃತನಾದನು ಮತ್ತೆ ಮೂವರು ಪ್ರಾಣಾಪಾಯಸ್ಥಿತಿಯಲ್ಲಿರುವರು.

ಇಂಡೋ-ಬ್ರಿಟಿಷ್ ಹತ್ತಿ ವ್ಯಾಪಾರ

ಭಾರತದೇಶದ ಹತ್ತಿಯು ಲಂಕಾಷೈರಿನಲ್ಲಿ ವಿಶೇಷವಾಗಿ ವಿಕ್ರಯವಾಗುವಂತೆ ಮಾಡಿದ ಹೊರತು ಇಂಡ್ಯಾದಲ್ಲಿ ಬ್ರಿಟಿಷರ ವಸ್ತ್ರಗಳು ಹೆಚ್ಚಾಗಿ ವಿಕ್ರಯವಾಗುವಂತೆ ಮಾಡಲಾಗುವುದಿಲ್ಲವೆಂದು ಅಟ್ಟಾವ ಸಭೆಗೆ ಹೋಗಿದ್ದ ಭಾರತ ಪ್ರತಿನಿಧಿಗಳು ವ್ಯಕ್ತಪಡಿಸಿದರಂತೆ. ಲಾಂಕಾಷೈರಿನವರು ತಮ್ಮ ಸದ್ಭಾವನನ್ನು ನಿದರ್ಶಿಸುವುದಕ್ಕಾಗಿ ಭಾರತದೇಶದ ಹತ್ತಿಯನ್ನು ವಿಶೇಷವಾಗಿ ತರಿಸಿಕೊಳ್ಳಬೇಕಾಗಿದೆ ಎಂದು ಹೇಳಿದರು.

ಪ್ರಿವಿಕೌನ್ಸಿಲಿಗೆ ಪ್ರದ್ಯೋತಕುಮಾರನ ಅಪೀಲು

ಡಾಕಾ ಡಿಸ್ಟ್ರಿಕ್ಟು ಮೆಜಿಸ್ಟ್ರೇಟರನ್ನು ಕೊಂದುದಕ್ಕಾಗಿ ಮರಣದಂಡನೆ ವಿಧಿಸಲ್ಪಟ್ಟಿರುವ ಪ್ರದ್ಯೋತಕುಮಾರ ಭಟ್ಟಾಚಾರ್ಯನು ಹೈಕೋರ್ಟಿಗೆ ಮಾಡಿದ್ದ ಅಪೀಲಿನಲ್ಲಿ ಮರಣದಂಡನೆಯು ಸ್ಥಿರಗೊಳಿಸಲ್ಪಟ್ಟುದರಮೇಲೆ ಪ್ರಿವಿಕೌನ್ಸಿಲಿಗೆ ಅಪೀಲನ್ನು ಮಾಡುವವನಾಗಿರುತ್ತಾನೆ. ಇದಕ್ಕಾಗಿ ಈ 17 ರ ವರೆಗೆ ಅವಧಿಯು ಕೊಡಲ್ಪಟ್ಟು ಅವರೆಗೂ ವಧೆಯು ನಿಲ್ಲಿಸಲ್ಪಟ್ಟಿರಬೇಕಾಗಿ ಜುಡಿಷಿಯಲ್ ಶಾಖಾ ಸೆಕ್ರೆಟರಿಯವರು ಅಪ್ಪಣೆಮಾಡಿರುತ್ತಾರೆ.

ಬಾಣಬಿರುಸುಗಳ ಅನಾಹುತ

ಕಳೆದ ತಾ|| 3ನೆಯ ಮಂಗಳವಾರ ಅಹಮದಾಬಾದಿನಲ್ಲಿ ಒಂದು ಮನೆಯೊಳಗೆ ಬಾಣಬಿರುಸುಗಳು ಮಾಡಲ್ಪಡುತ್ತಿರುವಾಗ್ಗೆ ಸಿಡಿದು ಮನೆಯು ಹೊತ್ತಿಕೊಂಡುರಿದುಹೋಯಿತು. ಒಳಗಿದ್ದ 13 ಮಂದಿ ಹೆಂಗುಸರೂ, ಒಬ್ಬ ಗಂಡುಸೂ ಜ್ವಾಲೆಯಲ್ಲಿ ಸಿಕ್ಕಿ ಸುಟ್ಟುಹೋದರು. ಆ ಕೂಡಲೆ ಪೋಲೀಸಿನವರು ಬಂದು ಸುಟ್ಟುಹೋಗಿದ್ದವರನ್ನು ಹೊರಕ್ಕೆ ತೆಗೆಸಿ ನೋಡುವಲ್ಲಿ ಪ್ರಾಣಾಪಾಯಸ್ಥಿತಿಯಲ್ಲಿದ್ದ ಒಬ್ಬ ಹೆಂಗುಸಿನ ವಿನಾ ಉಳಿದವರೆಲ್ಲರೂ ಮೃತರಾಗಿದ್ದರು. ಆ ಹೆಂಗುಸು ಕೂಡಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟಳು.

ಉದ್ದವಾದ ಹೆಂಗಸು ಕುಳ್ಳಾದುದು

ವೃದ್ಧೆಯಾದ 60 ವರ್ಷ ವಯಸ್ಸಿನ ಆಂಗ್ಲ ಸ್ತ್ರೀಯೋರ್ವಳು ಅನಿರೀಕ್ಷಿತವಾಗಿ ಕುಳ್ಳಾಗುತ್ತ ಬಂದಳು. ಅವಳ ಮುಖದಲ್ಲಿ ಎಳೆಯ ಚಿಹ್ನೆ ಕಾಣಿಸಿಕೊಂಡಿತು. ಹೀಗೆ ಆ ಸ್ತ್ರೀಯ ಶರೀರವು ವ್ಯತ್ಯಾಸವಾದುದನ್ನು ನೋಡಿ ಡಾಕ್ಟರುಗಳು ಸಂಶಯಗೊಂಡು ಪರೀಕ್ಷಿಸುವಲ್ಲಿ ಒಂದು ವಿಧವಾದ ವ್ಯಾಧಿಯು ಪ್ರಾಪ್ತವಾಗಿ ಮೂಳೆಗಳೆಲ್ಲ ಸವೆದು ಹೋಗುತ್ತಿರುವುದರಿಂದ ಆಕೃತಿಯು ಸಣ್ಣಗಾಗುತ್ತ ಬರುತ್ತಿದೆ ಎಂದು ಗೊತ್ತುಮಾಡಿದರು. ಈ ರೋಗದಿಂದ ಆ ಹೆಂಗುಸಿನ ದೇಹವು 10 ವರ್ಷದ ಬಾಲೆಯಂತೆ ತೋರುವವರೆಗೂ ಕುಗ್ಗಿ ಕಡೆಗೆ ಆಕೆಯು ಮೃತಳಾದಳು.

ದೇಶೀಯ ರಾಜರೊಡನೆ ವೈಸ್ರಾಯರಾಲೋಚನೆ

ಫೆಡರೇಷನ್ ಸಂಸ್ಥಾನಾಧಿಪತಿಗಳ ರಾಜ್ಯಾಧಿಕಾರ ವಿಚಾರವನ್ನು ಕುರಿತು ಆಲೋಚಿಸುವುದಕ್ಕಾಗಿ ವೈಸ್ರಾಯರು ಈ ತಾ|| 20 ನೆಯ ಮಂಗಳವಾರ ಸಿಮ್ಲಾ ಪಟ್ಟಣದಲ್ಲಿ ಒಂದು ಸಭೆಯನ್ನು ನಡೆಸಲು ಗೊತ್ತುಮಾಡಿರುತ್ತಾರೆ. ಈ ಸಭೆಗೆ ನವನಗರ, ಧೋಲ್ಪುರ, ಪನ್ನ, ಬಿಕನೀರು, ಪಾಟಿಯಾಲ, ಅಲ್ವಾರು, ಬರೋಡ, ಕಾಶ್ಮೀರ, ಮೈಸೂರು, ಹೈದರಾಬಾದು, ಇಂದೂರು, ಟ್ರಾವನ್ಕೂರು, ಉದಯಪುರ, ಜೈಪುರ, ರೀವಾ ಸಂಸ್ಥಾನಗಳ ಮಹಾರಾಜರುಗಳೂ, ಭೂಪಾಲ ನವಾಬರೂ, ಸಾಂಗ್ಲಿ ಮತ್ತು ಸರಿಲಾ ರಾಜರೂ ಜಾಲ್ವಾರ ರಾಣಾಯವರೂ ಈ ಆಲೋಚನಾ ಸಭೆಗೆ ಆಹ್ವಾನಿಸಲ್ಪಟ್ಟಿರುವರು.

ಮಾನವಾಕೃತಿಯಂತ್ರ

ಬ್ರಿಟನ್ ದೇಶಸ್ಥನಾದ ವಿಜ್ಞಾನ ಶಾಸ್ತ್ರಜ್ಞನೊಬ್ಬನು 14 ವರ್ಷಗಳ ಕಾಲ ಬಹಳ ಪ್ರಯಾಸಪಟ್ಟು 90,000 ರೂಪಾಯಿಗಳ ವೆಚ್ಚದಿಂದ ಮಾನವಾಕೃತಿಯಲ್ಲಿ ಒಂದು ಉಕ್ಕಿನ ಯಂತ್ರವನ್ನು ನಿರ್ಮಿಸಿರುವನು. ಇದರ ಮುಖ ಮಾತ್ರ ಭಯಂಕರ ಸ್ವರೂಪದಲ್ಲಿದ್ದು ಉಳಿದ ಅವಯವಗಳೆಲ್ಲ ಮನುಷ್ಯನ ಅವಯವಗಳಂತೆಯೇ ಇರುತ್ತವೆ. ಈ ಯಂತ್ರವು ಹಾಡುತ್ತದೆ, ನಗುತ್ತದೆ, ಯಾರಕೂಡವಾದರೂ ಸಂಭಾಷಿಸುತ್ತದೆ, ಆದರೆ ಯಾರಾದರೂ ಅಸಭ್ಯವಾದ ಮತ್ತು ತೊಡಕಾದ ಪ್ರಶ್ನೆಗಳನ್ನು ಕೇಳಿದರೆ ಉತ್ತರವನ್ನು ಕೊಡುವುದಿಲ್ಲ. ಇಷ್ಟೇ ಅಲ್ಲದೆ ಯಾರಾದರು ಘಂಟೆಯೆಷ್ಟೆಂದು ಕೇಳಿದರೆ ಘಂಟೆಯನ್ನು ಸರಿಯಾಗಿ ಹೇಳುತ್ತದೆ, ಯಾರಕೂಡಲಾದರೂ ಅರ್ಧಘಂಟೆ ಕಾಲ ಕುಸ್ತಿಮಾಡುತ್ತದೆ, ವರ್ತಮಾನ ಪತ್ರಿಕೆಗಳನ್ನೋದುತ್ತದೆ. ಈ ಅದ್ಭುತ ಯಂತ್ರ ನಿರ್ಮಾಣದಿಂದ ವಿಜ್ಞಾನ ಶಾಸ್ತ್ರ ಪ್ರಭಾವವೆಷ್ಟೆಂಬುದು ವ್ಯಕ್ತವಾಗುತ್ತದೆ.

ಸತೀ ಸಹಗಮನ ಪ್ರೋತ್ಸಾಹ ನಿರೋಧ

ಅಲಹಬಾದು ಡಿ|| ಹೋಗಲು ಎಂಬ ಗ್ರಾಮದಲ್ಲಿ ಓರ್ವ ಯುವತಿಯು ಪತಿ ವಿಯೋಗದುಃಖವನ್ನು ಸಹಿಸಲಾರದೆ ಕಳೆದ ತಾ|| 29 ರಲ್ಲಿ ಸಹಗಮನಮಾಡಲೆತ್ನಿಸಿದಳು. ಇದನ್ನು ನೋಡಲು ಅನೇಕರು ನೆರೆದಿದ್ದರು. ಪೋಲೀಸಿನವರು ಸಹಗಮನಮಾಡಲು ಅಡ್ಡಿಪಡಿಸಿದುದರಮೇಲೆ ಆಕೆಯು ಮನೆಗೆ ಹೋದಳು. ಒಬ್ಬ ಸಬ್ ಇನ್ಸ್ಪೆಕ್ಟರೂ 14 ಪೋಲೀಸಿನವರೂ ಹೊರತಾಗಿ ಉಳಿದ ಜನರು ಹೊರಟುಹೋದರು. ತಾ|| 30ರಲ್ಲಿ ಜನರು ಪುನಃ ಒಂದು ಗುಂಪುಸೇರಿ ಆಕೆಯ ದರ್ಶನಮಾಡುತ್ತೇವೆಂದು ಹೇಳಿದರು. ಗ್ರಾಮದ ಪಟೇಲನು ಹೊರಟುಹೋಗುವಂತೆ ಜನರನ್ನು ಕೇಳಿಕೊಂಡನು. ಆದರೆ ಜನರು ಹೋಗದೆ ಆ ವಿತಂತುವು ಸಹಗಮನಮಾಡುವುದಕ್ಕೆ ಸಹಾಯ ಮಾಡಲೆತ್ನಿಸಿ ಆಕೆಯನ್ನೆತ್ತಿಕೊಂಡು ಹೋಗಲು ಮತ್ತು ಆಕೆಯ ಮನೆಯನ್ನು ಬೆಂಕಿಯಿಂದ ಹೊತ್ತಿಸಲು ಪ್ರಯತ್ನಪಡಲಾಗಿ ಪೋಲೀಸಿನವರು ಗತ್ಯಂತರವಿಲ್ಲದೆ ತುಪಾಕಿಗಳನ್ನು ಹಾರಿಸಲಾಗಿ 4 ಮಂದಿ ಮೃತರಾಗಿ 7 ಮಂದಿ ಅಪಾಯವನ್ನು ಹೊಂದಿದರು.

ಸುಭಾಷಚಂದ್ರರವರ ದೇಹಸ್ಥಿತಿ

ಸುಭಾಷಚಂದ್ರಬೋಸ್‌ರವರ ಸ್ವಂತ ವೈದ್ಯರುಗಳಾದ ಡಾ|| ಬಿದನರಾಯರವರೂ, ಡಾ|| ನೀಲರತ್ನ ಸರಕಾರರವರೂ ಮದ್ರಾಸಿಗೆ ಬಂದು ಪ್ರಭುತ್ವಪರ ಇಬ್ಬರು ಡಾಕ್ಟರುಗಳ ಸಮೇತ ಬೋಸ್‌ರವರ ಶರೀರ ಪರೀಕ್ಷೆಯನ್ನು ಮಾಡಿ "ಸುಭಾಷಚಂದ್ರಬೋಸ್‌ರವರು ಮಾಂಡಲೆಯ ಕಾರಾಗೃಹದಲ್ಲಿದ್ದಾಗ್ಗೆ ಮೊದಲನೆಯಸಾರಿ ಮೇಲಿನ ನಾಳದಲ್ಲಿ ಕ್ಷಯ ಕ್ರಿಮಿಗಳು ಕಂಡುಬಂದುವು. ಅವು ಈಗ ಎರಡನೆಯಸಾರಿ ಪುನಃ ಕಾಣಿಸಿಕೊಂಡಿರುವುವಾದುದರಿಂದ ಅವರ ಆರೋಗ್ಯವು ಕೆಟ್ಟಿದೆ. ಇವರು ಒಂದು ಕಡೆ ನಿರ್ಬಂಧದಲ್ಲಿರುವುದೆ ಇದಕ್ಕೆ ಕಾರಣವು. ಆದುದರಿಂದ ಉತ್ತರ ಹಿಂದುಸ್ಥಾನದಲ್ಲಿ ಪ್ರಸಿದ್ಧವಾಗಿರುವ ಆರೋಗ್ಯ ಸ್ಥಳಕ್ಕೆ ಇವರನ್ನು ಕಳಿಸಬೇಕು. ಇಲ್ಲವಾದಲ್ಲಿ ಇವರು ಸ್ವಿಟ್ಜರ್ಲೆಂಡಿಗೆ ಹೋಗಲು ಸೌಕರ್ಯವನ್ನು ಕಲ್ಪಿಸಿಕೊಡಬೇಕು" ಎಂದು ನಾಲ್ವರು ಡಾಕ್ಟರುಗಳೂ ಒಟ್ಟುಗೂಡಿ ವರದಿಯನ್ನು ಮಾಡಿರುತ್ತಾರೆ. ಈ ವರದಿಯ ಸಂಗತಿಗಳನ್ನು ಮದರಾಸು ಪ್ರಭುತ್ವದವರು ಭಾರತಪ್ರಭುತ್ವದವರಿಗೆ ಕಳುಹಿಸಿಕೊಟ್ಟಿರುವರು. ಭಾರತಪ್ರಭುತ್ವದವರ ಅಪ್ಪಣೆಯು ನಿರೀಕ್ಷಿಸಲ್ಪಟ್ಟಿದೆ.

ಹಾವು ಹಸುವಿನ ಕೆಚ್ಚಲಿನಿಂದ ಹಾಲನ್ನು ಕುಡಿಯುವುದು

ಇಂಗ್ಲೆಂಡು-ವೇಲ್ಸಿಗೆ ಸೇರಿದ ವಾರ್ಸ್‌ಸ್ಟರ್ ಪ್ರಾಂತ್ಯದ ಜಾಪೀಕ್ಸ್ವಾರ್ಸ್ ಎಂಬಾತನು ಸಾಕುತ್ತಿದ್ದ ಹಸುವಿನ ಕರು

ಸತ್ತು ಹೋಗಿದ್ದಿತು. ಹೀಗಿದ್ದರೂ ಹಸುವು ಮೇಯಲಿಕ್ಕೆ ಹೋಗಿ ಮನೆಗೆ ಹಿಂದಿರುಗಿ ಬಂದಾಗ್ಗೆ ಕೆಚ್ಚಲು ಬಹಳವಾಗಿ ಬತ್ತಿಹೋಗಿರುವುದನ್ನು ಕಂಡು ಸಂಶಯಪಟ್ಟು ಒಂದು ದಿವಸ ಮೇಯಲಿಕ್ಕೆ ಹೋಗಿದ್ದ ಹಸುವಿನ ಸಂಗಡ ಮನೆಗೆ ಬರುತ್ತಿರುವ ಮಾರ್ಗದಲ್ಲಿ ಒಂದು ಕಾಳಿಂಗಸರ್ಪವು ಹಸುವಿನ ಕಾಲುಗಳಿಗೆ ಸುತ್ತಿಕೊಂಡು ಕೆಚ್ಚಲಿನಿಂದ ಹಾಲನ್ನು ಕುಡಿಯುತ್ತಿದ್ದುದನ್ನು ನೋಡಿ ಹಾವನ್ನು ಕೊಂದುಹಾಕಿ ಅದರ ಕಳೇಬರವನ್ನು ಒಂದು ಕೋಲಿನಿಂದ ಹಿಡಿದುಕೊಂಡು ಬರುತ್ತಿದ್ದನು. ಸತ್ತ ಹಾವು ಹಸುವಿನ ದೃಷ್ಟಿಗೆ ಬೀಳಲು ಅದು ಹಾವನ್ನು ತನ್ನ ಕರುವನ್ನು ನೆಕ್ಕುವಂತೆ ನೆಕ್ಕುತ್ತ ಬಂದಿತು. ಇನ್ನೊಂದು ವೇಳೆ ಹೀಗೆ ಹಾಲನ್ನು ಕುಡಿಯುತ್ತಿದ್ದ ಹಾವನ್ನು ಕೊಂದು ಹಸುವನ್ನು ಬೇರೊಬ್ಬನಿಗೆ ಮಾರಿದನು. ಅದನ್ನು ಕೊಂಡವನು ಹಸುವಿನ ಕೊಟ್ಟಿಗೆಗೆ ಹಾವುಗಳು ಬಾರದಂತೆ ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದಾನಂತೆ. ಅಜ್ಜಿ ಕಥೆಯಲ್ಲಿ ಕೇಳುತ್ತಿದ್ದುದೆಲ್ಲ ಈಗ ನಿದರ್ಶನಕ್ಕೆ ಬರುತ್ತಿದೆ.

ಶನಿ ಬೃಹಸ್ಪತಿ ಗ್ರಹಗಳ ಪ್ರಭಾವ

ಹತ್ತಿ ಬೆಳ್ಳಿ ವ್ಯಾಪಾರ ಮಾಡುವ ವರ್ತಕನ ಗುಮಾಸ್ತನು ಸಾಹುಕಾರನ ಹಣದಲ್ಲಿ 18,000 ರೂ. ಗಳನ್ನು ಅಪಹರಿಸಿಬಿಟ್ಟನು. ಇವನು ತನ್ನ ತಪ್ಪಿಗೆ ತಾನು ಬಾಧ್ಯನಲ್ಲವೆಂದೂ ಉಚ್ಚಸ್ಥಾನಗಳಲ್ಲಿರುವ ತನ್ನ ಶನಿ ಗ್ರಹವೂ, 8 ನೇ ರಾಶಿಯಲ್ಲಿರುವ ಬೃಹಸ್ಪತಿಯೂ ಅದಕ್ಕೆ ಕಾರಣರೆಂದೂ ತನಗೆ ಜೂಜಿನಲ್ಲೂ ಕುದುರೆ ಪಂದ್ಯದಲ್ಲೂ ಗ್ರಹಬಲವು ಕಡಿಮೆಯಾಗಿದ್ದುದರಿಂದ ವಿಶೇಷ ನಷ್ಟಸಂಭವಿಸಿತಾದುದರಿಂದ ತನ್ನನ್ನು ಕ್ಷಮಿಸಬೇಕೆಂದೂ "ನಾನು ಮುಂದಣ ಜನ್ಮದಲ್ಲಿ ನಿಮ್ಮ ಮಗನಾಗಿಯೋ ಮನೆಯಾಳಾಗಿಯೋ ಹುಟ್ಟಿ ನಿಮ್ಮ ಋಣವನ್ನು ತೀರಿಸುತ್ತೇನೆ" ಎಂದೂ ಯಜಮಾನನಿಗೆ ಕಾಗದ ಬರೆದಿದ್ದನು. ಯಜಮಾನನು ಗುಮಾಸ್ತನಮೇಲೆ ಫಿರ್ಯಾದುಮಾಡಲು ಗುಮಾಸ್ತನು ತನ್ನ ತಪ್ಪನ್ನೊಪ್ಪಿಕೊಂಡನಲ್ಲದೆ "ಅವನ ಗ್ರಹಗಳಷ್ಟು ಕಾಠಿಣ್ಯವನ್ನು ತಾವು ತೋರಿಸಲಾಗದು" ಎಂದು ಅಪರಾಧಿಯ ಲಾಯರು ಕೋರ್ಟಿನಲ್ಲಿ ನುಡಿದನು. ಮೆಜಿಸ್ಟ್ರೇಟರು ಈ ವಿಪರೀತ ವೇದಾಂತಕ್ಕೆ ಗಮನಕೊಡದೆ ಅಪರಾಧಿಗೆ 1 ವರ್ಷ ಕಠಿಣಸಜಾ ಮತ್ತು 1,000 ರೂ. ಜುಲ್ಮಾನೆ ವಿಧಿಸಿದರು. ಶನಿಗ್ರಹದಿಂದುಂಟಾದ ಶಿಕ್ಷೆಯು 7 ಸಂವತ್ಸರವಾದರೆ ಮೆಜಿಸ್ಟ್ರೇಟರ ಶಿಕ್ಷೆಯು 1 ಸಂವತ್ಸರ.

ವಿಶ್ವಭಾರತಿಯೂ ರವೀಂದ್ರಕವೀಂದ್ರರೂ

ಕವೀಂದ್ರರಾದ ರವೀಂದ್ರರಿಂದ ಸ್ಥಾಪಿತವಾಗಿ ಲೋಕಪ್ರಸಿದ್ಧವಾಗಿರುವ ವಿಶ್ವಭಾರತಿಯಲ್ಲಿ ಅಧ್ಯಾಪಕರಾಗಿರುವ ಕಾಳೀನಾಥ ಮೋಹನಘೋಷರವರು ಹೋದತಿಂಗಳು ಮದ್ರಾಸು ಪಟ್ಟಣಕ್ಕೆ ಬಂದಿದ್ದಾಗ್ಗೆ "ವಿಶ್ವಭಾರತಿ ಮತ್ತು ರವೀಂದ್ರನಾಥ ಠಾಕೂರು" ಎಂಬ ವಿಷಯದ ಮೇಲೆ ಮದ್ರಾಸಿನ ಅಡ್ವೊಕೇಟು ಜನರಲ್‌ರವರಾದ ಮ|| ಅಲ್ಲಾಡಿ ಕೃಷ್ಣಸ್ವಾಮಯ್ಯರ್‌ರವರ ಅಧ್ಯಕ್ಷತೆಯಲ್ಲಿ ಉಪನ್ಯಾಸವನ್ನು ಮಾಡಿ ಶಾಂತಿನಿಕೇತನದಲ್ಲಿ ಕೊಡಲ್ಪಡುವ ಶಿಕ್ಷಣಕ್ರಮವನ್ನು ತೋರಿಸುವ ಚಿತ್ರಗಳನ್ನು ಮ್ಯಾಜಿಕ್‌ಲ್ಯಾಂಟರಿನ ಮೂಲಕ ಪ್ರದರ್ಶಿಸಿ, ಈ ಸಂಸ್ಥೆಯನ್ನು ಜಯಪ್ರದವಾಗಿ ನಡೆಸಲು ಪ್ರಜೆಗಳ ಸಹಾಯವು ಅವಶ್ಯವೆಂದು ಹೇಳಿದರು. ತರುವಾಯ ಅಧ್ಯಕ್ಷರಾದ ಮ|| ಅಲ್ಲಾಡಿ ಕೃಷ್ಣಸ್ವಾಮಿಯವರು ಉಪಸಂಹಾರಭಾಷಣ ಮಾಡುವಾಗ್ಗೆ "ಪ್ರಪಂಚದಲ್ಲಿ ಶಾಂತಿ, ಸೌಭ್ರಾತೃತ್ವ ಸಂದೇಶಗಳಿಗೆ ಭಾರತದೇಶವು ತೌರುಮನೆಯು. ಪರಸ್ಪರ ಸಂಗ್ರಾಮದಿಂದಲೂ, ವಿದ್ವೇಷದಿಂದಲೂ ಬೆಂದು ಬೆಂಡಾಗಿರುವ ಪ್ರಪಂಚವನ್ನುದ್ಧರಿಸಲು ಈ ಸಂದೇಶವೇ ತಾರಕಮಂತ್ರವು. ಪ್ರಪಂಚದ ಎಲ್ಲ ಜಾತಿಯ ಮೇಧಾವಿಗಳನ್ನೂ ಈ ವಿಶ್ವಭಾರತಿಗೆ ಆಕರ್ಷಿಸಿ ಭಾರತದೇಶವು ಪ್ರಪಂಚಕ್ಕೆ ತನ್ನ ಸಂದೇಶವನ್ನು ತಿಳಿಸುತ್ತಿದೆ. ರವೀಂದ್ರರು ಗಾಂಧಿ ಮಹಾಪುರುಷರಂತೆ ಒಂದು ರಾಷ್ಟ್ರಕ್ಕೆ ಸೇರಿದವರಲ್ಲ. ಇವರು ಒಂದು ದೇಶಕ್ಕೆ ಸೇರಿದವರೆಂದು ಹೇಳುವವರು ಮಹಾ ಅಪರಾಧವನ್ನು ಮಾಡಿದವರಾಗುವರು. ಅವರು ಮಾನವ ಜಾತಿಯನ್ನೇ ಉದ್ಧರಿಸುವುದಕ್ಕಾಗಿ ಜನ್ಮಿಸಿದ ಪುರುಷರಾಗಿರುವುದರಿಂದಲೇ ಅವರು ಪ್ರಪಂಚಕ್ಕೆಲ್ಲ ಸೇರಿದವರಾಗಿರುತ್ತಾರೆ. ಜಿನೀವಾದಲ್ಲಾಗಲಿ ಮತ್ತಿನ್ನೆಲ್ಲಾಗಲಿ ಜರುಗುವ ನಾನಾ ಜಾತಿ ಸಭೆಗಳು ಸಾಧಿಸಲಾರದ ಪ್ರಪಂಚಶಾಂತಿಯನ್ನು ಈ ಮಹಾಪುರುಷರು ಸ್ಥಾಪಿಸುವವರಾಗಿರುತ್ತಾರೆ. ಅಚಿರಕಾಲದಲ್ಲೇ ಭಾರತದೇಶವು ಪುನಃ ಪ್ರಪಂಚದೆಲ್ಲ ಜಾತಿಗಳ ನಾಯಕತ್ವವನ್ನು ವಹಿಸಿ ಶಾಂತಿಯನ್ನು ಸ್ಥಾಪಿಸುವದು" ಎಂದು ಹೇಳಿದರು.

ಜನ ಸಂಖ್ಯಾಭಿವೃದ್ಧಿ ನಿರೋಧ

ಬೆಜವಾಡದ ರಾಮಕೃಷ್ಣ ವಿದ್ಯಾರ್ಥಿನಿಲಯದಲ್ಲಿ ಸರ್ ವಿ. ರಾಮೇಶಂರವರು ಜನಸಂಖ್ಯಾಭಿವೃದ್ಧಿಯನ್ನು ತಡೆಯುವ ವಿಚಾರವಾಗಿ ಉಪನ್ಯಾಸಮಾಡುವಾಗ್ಗೆ ಹೀಗೆ ಹೇಳಿದರು :— "ಪ್ರಜೆಗಳು ಗೊತ್ತುಗುರಿಯಿಲ್ಲದೆ ಮಕ್ಕಳನ್ನು ಪಡೆಯುತ್ತ ಬಂದರೆ ಕೊಂಚ ಕಾಲದಲ್ಲಿ ಪ್ರಪಂಚದೊಳಗೆ ವಾಸಮಾಡಲು ಸ್ಥಳ ದೊರಕುವುದು ಕಷ್ಟವಾಗುವುದು. ಆದುದರಿಂದ ತಂದೆ ತಾಯಿಗಳು ಸಾಧ್ಯವಾದಮಟ್ಟಿಗೂ ಕಡಿಮೆ ಸಂತತಿಯನ್ನು ಪಡೆಯಲು ಪ್ರಯತ್ನಿಸುವುದು ಆವಶ್ಯಕವು. ಎಲ್ಲ ದೇಶಗಳಿಗಿಂತಲೂ ಚೈನಾದೇಶದಲ್ಲಿ ಸಂತಾನಾಭಿವೃದ್ಧಿಯು ಅತಿಯಾಗಿರುವುದು. ಅದಕ್ಕೆರಡನೆಯದು ನಮ್ಮ ಭಾರತದೇಶವು. ಚೈನಾದಲ್ಲಿ ತಂದೆತಾಯಿಗಳು ಮಕ್ಕಳನ್ನು ಸಾಕಲಾರದೆ ಕೊಂಚ ಹಣಕ್ಕೆ ಅವನ್ನು ಮಾರಿಬಿಡುವರು, ಅಲ್ಲದೆ ಆಗಾಗ್ಗೆ ನದಿಯಲ್ಲಿ ಬಿಸಾಡುತ್ತಿರುವರು. ಚೈನಾದೇಶದಲ್ಲಿ ಕ್ಷಾಮನಿವಾರಣೆಗೆ ತಕ್ಕ ಏರ್ಪಾಟೇನೂ ಇರುವುದಿಲ್ಲವಾದುದರಿಂದ ಅಲ್ಲಿ ಜನರು ಕ್ಷಾಮಕಾಲದೊಳಗೆ ಪಡಬಾರದಷ್ಟು ಕಷ್ಟವನ್ನೆಲ್ಲ ಪಡುವರು. ನಮ್ಮ ಭಾರತದೇಶದಲ್ಲೂ ಪ್ರಜೆಗಳು ಮಕ್ಕಳನ್ನು ಹೆಚ್ಚಾಗಿ ಪಡೆಯುತ್ತಿದ್ದರೆ ಈ ವಿಚಾರದಲ್ಲಿ ನಮ್ಮ ದೇಶವೂ ಚೈನಾದೇಶಸ್ಥಿತಿಗೆ ಬರುವುದು 1911-21 ಸಂವತ್ಸರಗಳ ಮಧ್ಯಕಾಲದಲ್ಲಿ ನಮ್ಮ ದೇಶದ ಜನ ಸಂಖ್ಯಾಭಿವೃದ್ಧಿಯು ಬಹಳ ಕಡಿಮೆಯಾಗಿಯೇ ಇದ್ದಿತು. ಇದಕ್ಕೆ ನಮ್ಮ ಪ್ರಜೆಗಳು ಸಂತಾನನಿಗ್ರಹಮಾಡುವುದು ಕಾರಣವಾಗಿರದೆ ಇನ್‌ಫ್ಲೂಯೆಂಜರೋಗವು ಅತ್ಯುಲ್ಬಣವಾಗಿದ್ದುದರಿಂದ ಲಕ್ಷಾಂತರ ಪ್ರಜೆಗಳು ಮರಣಹೊಂದಿದರು. ಪ್ರಪಂಚದಲ್ಲಿ ಪ್ರಕೃತಿಯೇ ಜನಸಂಖ್ಯಾನುಸಾರವಾಗಿ ಆರ್ಥಿಕಸ್ಥಿತಿಯನ್ನು ಸರಿಪಡಿಸುವುದೆಂದು ಕೆಲರು ಹೇಳುತ್ತಾರೆ. ಈ ಅಭಿಪ್ರಾಯವು ಪೂರ್ವಕಾಲಕ್ಕೆ ಸರಿಯಾಗಿದ್ದಿತು. ಅಗ್ನಿ ಯುದ್ಧ, ಕ್ಷಾಮ, ಸಾಂಕ್ರಾಮಿಕರೋಗ ಇತ್ಯಾದಿ ಉಪಟಳಗಳು ಪ್ರಬಲವಾಗಿದ್ದುದರಿಂದ ಜನಸಂಖ್ಯೆಯು ಬಹಳ ಕಡಿಮೆಯಾಗುತ್ತಿದ್ದಿತು; ಮಾನವಜಾತಿಯು ಕಡಿಮೆಯಾಗದಿರುವುದಕ್ಕಾಗಿ ಸಂತಾನಾಭಿವೃದ್ಧಿಗೊಳಿಸುವುದು ಅತ್ಯಾವಶ್ಯಕವಾಗಿದ್ದಿತು. ಆದರೆ ಪ್ರಕೃತಕಾಲದಲ್ಲಿ ಪ್ರಜೆಗಳು ಅಂಟುಜಾಡ್ಯವನ್ನು ಅಣಗಿಸಲು ಪ್ರಯತ್ನಿಸುತ್ತಿರುವರು. ಯುದ್ಧವು ಇನ್ನುಮೇಲೆ ನಡೆಯದಿರಲು ಪ್ರಯತ್ನಿಸಲ್ಪಡುತ್ತಿದೆ. ಅದುಕಾರಣ ಈಗ ಪ್ರಪಂಚದ ಆರ್ಥಿಕ ಸ್ಥಿತಿಗನುಸಾರವಾಗಿ ಜನಸಂಖ್ಯೆಯನ್ನು ತಗ್ಗಿಸಲು ಪ್ರಕೃತಿಯು ಸಹಾಯ ಮಾಡಲಾರದಾದುದರಿಂದ ಪ್ರಜೆಗಳೇ ಸಂತಾನಾಭಿವೃದ್ಧಿ ನಿರೋಧಕಾರ್ಯವನ್ನು ನಿರ್ವಹಿಸಬೇಕಾಗಿದೆ. ಈಗಿನ ಆರ್ಥಿಕ ದುಸ್ಥಿತಿಯಲ್ಲಿ ಪ್ರಜೆಗಳು ತಮ್ಮ ಸಂತಾನಾಭಿವೃದ್ಧಿಯನ್ನು ತಡೆಯಲು ಪ್ರಯತ್ನಿಸಬೇಕಾದುದು ಅಗತ್ಯವು."

ಒಳದೇಶದ ವೃತ್ತಾಂತಗಳು.

ಕಳೆದ ಸೋಮವಾರ ಶ್ರೀಮನ್ಮಹಾರಾಜರವರ ಸ್ವಾರಿಯು ಮಿತಪರಿವಾರದೊಡನೆ ಪೂನಾ ಪಟ್ಟಣಕ್ಕೆ ಚಿತ್ತೈಸಿತು. ಅಲ್ಲಿ ಈ ತಾ|| 20-22 ರ ವರೆಗಿದ್ದು ಬರುವುದಾಗಿ ತಿಳಿಯಬರುತ್ತದೆ.

ರಾಜಧಾನಿಯಲ್ಲಿರುವ ಲಾಯರುಗಳಲ್ಲಿ ಹಳಬರಾಗಿಯೂ ಹೆಸರ್ವಡೆದವರಾಗಿಯೂ ಇದ್ದ ಮ|| ಕೆ. ಚಂದ್ರಶೇಖರಯ್ಯ, ಬಿ. ಎ., ಬಿ. ಎಲ್., ರವರು ಆಜನ್ಮಸಿದ್ಧವಾದ ಉಬ್ಬಸ ರೋಗದಿಂದ ನರಳುತ್ತಿದ್ದು ಕಳೆದ ತಾ|| 31 ನೆಯ ಬುಧವಾರ ಬೆಳಗ್ಗೆ ಕೈಲಾಸವಾಸಿಗಳಾದರೆಂದು ತಿಳುಹಲು ವಿಷಾದವಾಗುತ್ತದೆ. ಇವರಿಗೆ 70 ವರ್ಷ ವಯಸ್ಸಾಗಿದ್ದಿತು ಮತ್ತು ವಿವಾಹಿತಳಾದ ಒಬ್ಬ ಮಗಳೂ, ಪತ್ನಿಯೂ ಇರುವರು. ಮೃತರ ಆತ್ಮಕ್ಕೆ ಶಾಂತಿಯನ್ನೂ, ವಿಯೋಗ ದುಃಖಿತರಿಗೆ ಸಮಾಧಾನವನ್ನೂ ಕೋರುತ್ತೇವೆ.

ಮೈಸೂರು ವಿಶ್ವವಿದ್ಯಾನಿಲಯದ ಪಟ್ಟಪ್ರದಾನೋತ್ಸವವು ಬರುವ ಅಕ್ಟೋಬರ್ ತಾ|| 19 ನೆಯ ಬುಧವಾರ ಪ್ರಾತಃಕಾಲ 9 ಘಂಟೆಗೆ ರಾಜಧಾನಿಯ ಜಗನ್ಮೋಹನ ಪ್ರಾಸದದ ಸಭಾಂಗಣದಲ್ಲಿ ನಡೆಯುವುದು. ಮದ್ರಾಸು ಹೈಕೋರ್ಟಿನ ರಿಟೈರ್ಡ್ ಜಡ್ಜಿಯವರಾದ ಸರ್ ಸಿ. ವಿ. ಕುಮಾರಸ್ವಾಮಿ ಶಾಸ್ತ್ರಿ, ಕೆಟಿ, ಯವರು ಪಟ್ಟಭದ್ರರುಗಳಿಗೆ ಉಪದೇಶಪರವಾದ ಭಾಷಣವನ್ನು ಮಾಡುವರು.

ಮಹಾರಾಜರವರ ಕಾಲೇಜಿನ ಹಿಂದಣ ವಿದ್ಯಾರ್ಥಿಗಳ ಸಂಘದವರು ಕಾಲೇಜಿನ ಜನ್ಮದಿನೋತ್ಸವವನ್ನು ಬರುವ ಅಕ್ಟೋಬರ್ ತಾ|| 18 ರಲ್ಲಿ ನಡೆಸಲು ನಿಶ್ಚಯಿಸಿ, ಇದರ ಅಧ್ಯಕ್ಷತೆಯನ್ನು ವಹಿಸಲು ಅಣ್ಣಾಮಲೈ ವಿಶ್ವವಿದ್ಯಾನಿಲಯದ ವೈಸ್-ಛಾನ್ಸಲರಾದ ಮ|| ಎಸ್. ರಂಗನಾಥಂರವರನ್ನು ಪ್ರಾರ್ಥಿಸಿರುತ್ತಾರೆ. ಮ|| ರಂಗನಾಥಂರವರು ಮಹಾರಾಜರ ಕಾಲೇಜಿನ ವಿದ್ಯಾರ್ಥಿಗಳಾಗಿದ್ದರಂತೆ.

ರಾಜಧಾನಿಯಲ್ಲಿ ಸಬ್ ಜಡ್ಜಿಯರಾಗಿದ್ದು ಶಿವಮೊಗ್ಗೆಗೆ ವರ್ಗಾವಣೆಯಾಗಿ ಹೋಗಿರುವ ಮ|| ಅಬ್ದುಲ್ ಗನ್ನಿಯವರನ್ನು ಕಳೆದ ತಾ|| 2 ರಲ್ಲಿ ರಾಜಧಾನಿಯ ಲಾಯರು ಸಂಘದವರು ಬರಮಾಡಿಕೊಂಡು ಉಪಾಹಾರದಿಂದ ಸತ್ಕರಿಸಿ ತಮ್ಮ ಪ್ರೀತಿ ವಿಶ್ವಾಸಗಳನ್ನು ಪ್ರದರ್ಶಿಸಿದರಲ್ಲದೆ ಈ ಸಂಘದ ಪ್ರೆಸಿಡೆಂಟರಾದ ಮ|| ಸಿ. ನರಸಿಂಹಯ್ಯನವರು ಮ|| ಗನ್ನಿಯವರ ಗುಣಕಥನವನ್ನು ಮಾಡಿದರು. ಅತಿಥಿಗಳು ಕಾಲೋಚಿತವಾದ ಭಾಷಣದಿಂದ ತಮ್ಮ ಸಂತೋಷವನ್ನು ಸೂಚಿಸಿದರು.

ದಿವಾನ್ ಸರ್ ಮಿರ್ಜ ಎಂ. ಇಸ್ಮೈಲ್ ರವರು ನಮ್ಮ ಪ್ರಭುತ್ವ ಪ್ರತಿನಿಧಿಯಾಗಿ, ಲಂಡನ್ ನಗರದೊಳಗೆ ಬರುವ ನವಂಬರ್ ತಿಂಗಳಲ್ಲಿ ಜರುಗುವ ಮೂರನೆಯ ರೌಂಡು ಟೇಬಲು ಸಭೆಗೆ ಆಹ್ವಾನಿಸಲ್ಪಟ್ಟಿರುವುದಾಗಿಯೂ, ಇವರು ಅಕ್ಟೋಬರ್ ತಿಂಗಳ ಕಡೆಯ ವಾರದಲ್ಲಿ ಸೀಮೆಗೆ ಪ್ರಯಾಣ ಮಾಡುವುದಾಗಿಯೂ, ಈ ತಾ|| 20 ರಲ್ಲಿ ಸಿಮ್ಲಾದೊಳಗೆ ವೈಸ್ರಾಯರ ಅಧ್ಯಕ್ಷತೆಯಲ್ಲಿ ನಡೆಯುವ ನರೇಂದ್ರರ ಸಭೆಗೆ ನಮ್ಮ ಶ್ರೀಮನ್ಮಹಾರಾಜರವರ ಪರವಾಗಿ ಈ ತಾ||15ರಲ್ಲಿ ಹೊರಡುವುದಾಗಿಯೂ ತಿಳಿಯುತ್ತೇವೆ.

ಸಂಸ್ಥಾನದ ಹೊಗದಿಯನ್ನು ತಪ್ಪಿಸುವ ಮತ್ತು ಡಂಪು ಪ್ರವೇಶವನ್ನು ಬಿಟ್ಟುಕೊಡುವ ವಿಚಾರದಲ್ಲಿ ಡೇವಿಡ್‌ಸನ್ ಕಮಿಟಿಯ ನಿವೇದಿಕೆಯನ್ನು ಖಂಡಿಸಿ ಇವೆರಡು ಕಾರ್ಯಗಳನ್ನು ನೆರವೇರಿಸಿ ಕೊಡುವಂತೆ ಬ್ರಿಟಿಷ್ ಪ್ರಭುತ್ವದವರನ್ನು ಪ್ರಾರ್ಥಿಸಿಕೊಳ್ಳುವುದಕ್ಕಾಗಿ ಸಂಸ್ಥಾನದ ಪ್ರಜೆಗಳ ಮುಖಂಡರುಗಳ ಪ್ರಚಂಡಸಭೆಯು ನೆನ್ನೆಯ ದಿವಸ ಸಾಯಂಕಾಲ ಬೆಂಗಳೂರು ಸಿಟಿ ಲಾಲ್‌ಬಾಗಿನ ಆಲ್ಬರ್ಟ್ ವಿಕ್ಟರ್ ಹಾಲಿನೊಳಗೆ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿ, ಕೆಟಿ. ಸಿ ಐ ಇ., ಯವರ ಅಧ್ಯಕ್ಷತೆಯಲ್ಲಿ ಸೇರಿದ್ದು ಕೆಲ ನಿರ್ಧಾರಗಳು ಮಾಡಲ್ಪಟ್ಟುವು.

ಬೆಂಗಳೂರು ಡಿ|| ಅನೆಕಲ್ಲು ಗ್ರಾಮದ ಕೆರೆಯೇರಿಯಮೇಲೆ ಒಂದು ಮೋಟಾರು ಲಾರಿಯು ಹೆಂಡದ ಪೀಪಾಯಿಗಳನ್ನಿಟ್ಟುಕೊಂಡು 6 ಮಂದಿ ಕೂಲಿಯವರನ್ನು ಕುಳ್ಳಿರಿಸಿಕೊಂಡು ಬರುತ್ತಿರುವಾಗ್ಗೆ, ಡ್ರೈವರು ಆಯತಪ್ಪಿ ಕೆಳಗೆ ಬಿದ್ದು ಬಿಟ್ಟನಲ್ಲದೆ 6 ಮಂದಿ ಕೂಲಿಗಳೂ ಬಿದ್ದುಬಿಟ್ಟರು. ಅವರ ಮೇಲೆ ಹೆಂಡದ ಪೀಪಾಯಿಗಳು ಬಿದ್ದವು. ಇದರಿಂದ ಇಬ್ಬರು ಕೂಡಲೆ ಮೃತರಾದರು, ಉಳಿದವರು ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆ ಹೊಂದುತ್ತಿರುವವರಲ್ಲಿ ಒಬ್ಬ ಹುಡುಗನು ಸತ್ತುಹೋದನು ಮತ್ತು ಡ್ರೈವರು ಪ್ರಾಣಾಪಾಯಸ್ಥಿತಿಯಲ್ಲಿರುವನು.

ರಾಜಧಾನಿಯಲ್ಲಿ ನಡೆಯುವ ದಸರಾ ವಸ್ತುಪ್ರದರ್ಶನದಲ್ಲಿ ಚಿಲ್ಲರೆಯಾಗಿ ಮಾರಾಟವಾಗುವ ಪದಾರ್ಥಗಳ ಮೇಲೆ ಸುಂಕ ವಿಧಿಸಲ್ಪಡುವುದಿಲ್ಲವೆಂದೂ, ಸ್ತ್ರೀಯರಿಂದ ಮಾಡಲ್ಪಟ್ಟು ಈ ವರೆಗೆ ಪ್ರದರ್ಶಿಸಲ್ಪಡುತ್ತಿರುವ ಸ್ತ್ರೀ ಪುರುಷರ ಮತ್ತು ಮಕ್ಕಳ ಉಡುಗೆಗಳು, ಕಸೂತಿ ಕೆಲಸಗಳು, ಕಸ್ತೂರಿಗಳು, ಹೆಣಿಗೆಯ ಕೆಲಸಗಳು, ಜರಿ ಕೆಲಸಗಳು, ಮಣಿ ಕೆಲಸಗಳು, ಚಾಪೆ, ಜಂಖಾನ, ದಿಂಬು, ಕೈ ಚೀಲಗಳೇ ಮೊದಲಾಗಿ ಅನೇಕ ಸಾಮಗ್ರಿಗಳು ಈ ತಾ|| 14 ರಿಂದ 24 ರ ವರೆಗೆ ಸ್ವೀಕರಿಸಲ್ಪಟ್ಟು ಬಾಡಿಗೆಯಿಲ್ಲದೆ ಪ್ರದರ್ಶಿಸಲ್ಪಡುವುವೆಂದೂ ಪ್ರದರ್ಶನದ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ರಾಜಧಾನಿಯಲ್ಲಿ ಬರೀ ಗಾಳಿ ಬೀಸುತ್ತ ಮೋಡವಾಗುತ್ತಿರುವುದರ ವಿನಾ ಮಳೆಯಿಲ್ಲವು. ಇದರಿಂದ ರಾಗಿ ಪೈರಿಗೂ ಹುರುಳಿ ಬಿತ್ತನೆಗೂ ಬಹಳ ತೊಂದರೆಯಾಗಿರುತ್ತದೆ. ಮಂಡಿ, ಚಾಮರಾಜಪೇಟೆ, ನಜರಬಾದು ಮೊದಲಾದ ಸ್ಥಳಗಳಲ್ಲಿ ಪ್ಲೇಗು ರೋಗವು ಕಾಣಿಸಿಕೊಂಡು ಆಗಾಗ್ಗೆ ಮರಣಗಳಾಗುತ್ತಿವೆ. ಈ ವೇಳೆ ಗೆಡ್ಡೆಯು ಕಾಣಿಸಿಕೊಳ್ಳದೆ ವ್ಯಾಧಿಯು ಪ್ರಾಪ್ತವಾದ 24 ಘಂಟೆಯೊಳಗೆ ಮರಣ ಸಂಭವಿಸುವುದಾಗಿ ಕೇಳುತ್ತೇವೆ. ಮ್ಯುನಿಸಿಪಾಲಿಟಿಯ ಆರೋಗ್ಯ ಶಾಖೆಯವರು ಜನರಿಗೆ ಇನಾಕ್ಯುಲೇಷನ್ ಮಾಡಿಸಲೇರ್ಪಡಿಸಿರುವರು. ರೋಗವು ಉಲ್ಬಣವಾಗುವ ಶಂಕೆಯಿರುವುದರಿಂದ ಜನರು ತಾತ್ಸಾರ ತಿರಸ್ಕಾರಗಳನ್ನು ಮಾಡದೆ ಇನಾಕ್ಯುಲೇಷನ್ ಮಾಡಿಸಿಕೊಂಡು ಪ್ರಾಣರಕ್ಷಣೆ ಮಾಡಿಕೊಳ್ಳುವವರಾಗಬೇಕೆಂದೂ, ಹೆಲ್ತ್ ಆಫೀಸರು ಸ್ವತಃ ರೋಗ ಪ್ರಾಪ್ತವಾಗಿರುವ ಕಡೆಗಳಲ್ಲಿ ಸಂಚರಿಸಿ ಹೆಚ್ಚು ಶುಚೀಕರಣಕ್ಕೆ ತಕ್ಕೇರ್ಪಾಡನ್ನು ಮಾಡುವವರಾಗಿರಬೇಕೆಂದೂ ಸೂಚಿಸುತ್ತೇವೆ.

ತಮ್ಮ ಯಾದವ ಕುಲಸ್ಥರ ಮನೆಗಳಲ್ಲಿ ನಡೆಯುವ ತಾಂಬೂಲ ಮರ್ಯಾದೆಗಳು ತಮಗೆ ಕೊಡಲ್ಪಡದಂತೆ ಚಿಕ್ಕಪುಟ್ಟಯ್ಯ ಮತ್ತು ಇವರು ಅಡ್ಡಿಪಡಿಸಿ ತಮಗೆ ಅವಮರ್ಯಾದೆಯನ್ನು ಪಡಿಸಿರುತ್ತಾರೆಂದು ಇಂಡಿಯನ್ ಪೀನಲ್ ಕೋಡಿನ 500 ನೆಯ ಸೆಕ್ಷನ್ ಪ್ರಕಾರ ಅವರುಗಳ ಮೇಲೆ ಕಟಾಂ ದಾಸಪ್ಪನ ಮಕ್ಕಳು ಡಿ. ಪುಟ್ಟಯ್ಯ ಮತ್ತು ಡಿ. ಕೃಷ್ಣಯ್ಯ ಎಂಬವರು ಮೈಸೂರು ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಮಾಡಿದ್ದರು. ಮೆಜಿಸ್ಟ್ರೇಟರಾದ ಮ|| ಡಿ. ಸುಬ್ರಾಯಪ್ಪ, ಬಿ.ಎ., ಬಿ.ಎಲ್., ರವರು ಕೇಸಿನ ವಿದ್ಯಮಾನವನ್ನು ಚೆನ್ನಾಗಿ ವಿಚಾರಿಸಿ ತಿಳಿದುಕೊಂಡು, ಕುಲದ ಕಟ್ಟಲೆಯನ್ನು ಮೀರಿ ನಡೆದುದಕ್ಕಾಗಿ ಕುಲದಿಂದ ಬಹಿಷ್ಕೃತನಾದವನ ಮನೆಯ ಮದುವೆಗೆ ಫಿರ್ಯಾದಿಗಳು ಹೋಗಿದ್ದುದರಿಂದ ಕುಲದ ಮರ್ಯಾದೆಯು ಅವರಿಗೆ ಸಲ್ಲಕೂಡದೆಂದು ಅಪರಾಧಿಗಳು ಹೇಳಿರುವುದು ತಮ್ಮ ಮತ್ತು ತಮ್ಮ ಕುಲದ ಮರ್ಯಾದೆಯನ್ನು ಕಾಪಾಡುವ ಸದುದ್ದೇಶಪೂರ್ವಕವಾಗಿರುವುದರಿಂದ ಅಪರಾಧವಾಗಿರುವುದಿಲ್ಲವೆಂದು ತೀರ್ಮಾನಿಸಿ ಅಪರಾಧಿಗಳನ್ನು ನಿರ್ದೋಷಿಗಳನ್ನಾಗಿ ಮಾಡಿದರು.

ಬೆಂಗಳೂರು ಡಿ|| ತಿಪ್ಪಗೊಂಡನ ಹಳ್ಳಿ ಜಲಾಶಯ ನಿರ್ಮಾಣದ ಮೇಲ್ವಿಚಾರಕರಾಗಿದ್ದ ಗತಿಸಿದ ಎಕ್ಸಿಕ್ಯುಟಿವ್ ಇಂಜಿನಿಯರ್ ಮ|| ವೆಂಕಟಸುಬ್ಬರಾಯರು ಲಂಚವನ್ನು ತೆಗೆದುಕೊಂಡರೆಂದು ಮ|| ವಿದ್ಯಾಭೂಷಣ ವಿ. ಎಸ್. ಸಂಜೀವರಾಯರು ಯಾವುದೋ ಉಪನ್ಯಾಸವನ್ನು ಮಾಡುವಾಗ ಹೇಳಿದರೆಂಬ ಅಪರಾಧಕ್ಕಾಗಿ ಬೆಂಗಳೂರು ಡಿ|| ಮೆಜಿಸ್ಟ್ರೇಟರಿಂದ 3 ತಿಂಗಳು ಸಾದಾ ಸಜ ಮತ್ತು 500 ರೂ. ಅರ್ಥದಂಡ ವಿಧಿಸಲ್ಪಟ್ಟುದರ ಮೇಲೆ ಬೆಂಗಳೂರು ಸೆಷನ್ಸ್ ಕೋರ್ಟಿಗೆ ಅಪೀಲುಮಾಡಿದ್ದರು. ಸೆಷನ್ಸ್ ಜಡ್ಜಿಯವರಾದ ಮ|| ಶ್ರೀನಿವಾಸ ರಾಘವಾಚಾರ್ಯರು ಫಿರ್ಯಾದಿ ಅಪರಾಧಿಗಳ ಪರ ವಕೀಲರುಗಳ ವಾದ ಪ್ರತಿವಾದಗಳನ್ನು ಕೇಳಿ, ಅಪರಾಧಿಯು ಉಪನ್ಯಾಸ ವೇಳೆಯಲ್ಲಿ ಅಪ್ರಕೃತವಾಗಿ ಇಲ್ಲದ ಸಲ್ಲದ ದೋಷಾರೋಪಣೆಯಿಂದ ಫಿರ್ಯಾದಿಗೆ ಮನೋವ್ಯಥೆಯನ್ನುಂಟುಮಾಡಿದ ಪ್ರಯುಕ್ತ ಫಿರ್ಯಾಧಿಯು ಕೊರಗಿ ಮೃತರಾದರೆಂದೂ, ಈ ದೋಷಾರೋಪಣೆಯನ್ನು ಸಿದ್ಧಪಡಿಸಲಿಲ್ಲವೆಂದೂ, ತನ್ನ ಅನುಚಿತವರ್ತನಕ್ಕಾಗಿ ಪಶ್ಚಾತ್ತಾಪವನ್ನು ವ್ಯಕ್ತಪಡಿಸಲಿಲ್ಲವೆಂದೂ ಹೇಳಿ ಅರ್ಥದಂಡವನ್ನು ಮನ್ನಿಸಿ ಸಾದಾ ಸಜಾ ಶಿಕ್ಷೆಯನ್ನು ಸ್ಥಿರಗೊಳಿಸಿದರು.

ನಮ್ಮ ಸಂಸ್ಥಾನದ ಕೈಗಾರಿಕೆ ಮತ್ತು ವಾಣಿಜ್ಯಶಾಖೆಯ ಮೂಲಕವಾಗಿ ಸಕ್ಕರೆಯ ಕಾರ್ಖಾನೆಯನ್ನು ಸ್ಥಾಪಿಸಲು ಸಂಯುಕ್ತ ಪ್ರಾಂತಗಳಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ ನಡೆಯುವ ಕಾರ್ಯಕ್ರಮವನ್ನು ತಿಳಿದುಕೊಂಡು ಬರಲು ಈ ಶಾಖೆಯ ಡೈರೆಕ್ಟರಾದ ಮ|| ಎನ್. ರಾಮರಾಯರು ಸಂಯುಕ್ತ ಪ್ರಾಂತಗಳಿಗೆ ಹೋಗಿದ್ದು ಬಂದರು. ಈ ಸಕ್ಕರೆಯ ಕಾರ್ಖಾನೆಯ ಸ್ಥಾಪನೆಯನ್ನು ನಿರ್ಧರಿಸಲು ಈ ದಿವಸ ಫೈನಾನ್ಸ್ ಮತ್ತು ಟ್ಯಾಕ್ಸೇಷನ್ ಕಮಿಟಿಯವರು ಬೆಂಗಳೂರಿನಲ್ಲಿ ಸಮಾವಿಷ್ಟರಾಗುವುದಾಗಿ ಕೇಳುತ್ತೇವೆ. ನಮ್ಮ ಸೀಮೆಯಲ್ಲಿ ಕಬ್ಬಿನ ವ್ಯವಸಾಯವು ವಿಶೇಷವಾಗಿ ಆಗುತ್ತಿರುವುದಲ್ಲದೆ ಹೊಸದಾಗಿ ಆಗಿರುವ ಇರ್ವಿನ್ ನಾಲೆ ಕೆಳಗಿನ ಭೂಮಿಗಳಲ್ಲೂ ಹೇರಳವಾಗಿ ಆಗುವ ನಿರೀಕ್ಷಣೆಯಿದೆ. ಆದರೆ ಸಕ್ಕರೆಯ ಕಾರ್ಖಾನೆಯ ಸ್ಥಾಪನೆಯಿಂದ ತಕ್ಕ ಪ್ರಯೋಜನವಾಗುತ್ತದೆ ಎಂಬಂಶವನ್ನು ಮಾತ್ರ ಪ್ರಭುತ್ವದವರೂ ಕಮಿಟಿಯವರೂ ಚೆನ್ನಾಗಿ ಪರಿಶೀಲಿಸಿ ನಿರ್ಧರಿಸುವುದು ಶ್ರೇಯಸ್ಕರವು. ಹಾಗಿಲ್ಲದಿದ್ದರೆ ಬರೀ ದೊಡ್ಡಸ್ತಿಕೆಗಾಗಿ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯನ್ನು ದೂರದೃಷ್ಟಿಯಿಲ್ಲದೆ ಸ್ಥಾಪಿಸಿ ಕಣ್ಣು ಬಾಯಿ ಬಿಡುತ್ತಿರುವಂತಾಗುವುದರಲ್ಲಿ ಸಂಶಯವಿಲ್ಲ.

ಶ್ರೀ ಕೃಷ್ಣರಾಜೇಂದ್ರ ಸೇತುವೆ

ಮೆಲ್ಕಂಡ ಸೇತುವೆಯ ಆರಂಭೋತ್ಸವವನ್ನು ನೆರವೇರಿಸುವಾಗ್ಗೆ ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಸಂಸ್ಥಾನದ ಚೀಫ್ ಇಂಜನಿಯರ್ ಮ|| ಎಂ. ಜಿ. ರಂಗಯ್ಯನವರು ಅರಿಕೆ ಮಾಡಿದ್ದು.

ತಿರುಮಕೂಡಲು ನರಸೀಪುರವು ಮೈಸೂರು ನಗರದ ಪೂರ್ವದಿಕ್ಕಿಗೆ ಸುಮಾರು 21 ಮೈಲಿಗಳ ದೂರದಲ್ಲಿ ಕಾವೇರೀ ಕಪಿಲಾ ನದಿಗಳ ಸಂಗಮಸ್ಥಾನದಲ್ಲಿದೆ. ಮೈಸೂರು ಸಂಸ್ಥಾನದಲ್ಲಿಯೂ, ಅದರ ಹೊರಗಡೆಯೂ ಇರತಕ್ಕ ಅನೇಕ ಮುಖ್ಯ ಪಟ್ಟಣಗಳಿಗೆ ತಿರುಮಕೂಡಲು ನರಸೀಪುರದಿಂದ ರಸ್ತೆಗಳು ಏರ್ಪಟ್ಟಿವೆ. ನದಿಗಳಲ್ಲಿ ಪ್ರವಾಹವು ಬಂದ ಕಾಲದಲ್ಲಿ ವರುಷದಲ್ಲಿ ಕೆಲವು ತಿಂಗಳುಗಳ ಕಾಲ ಅವುಗಳನ್ನು ದಾಟುವುದಕ್ಕಾಗುವುದಿಲ್ಲ. ಆಗ್ಗೆ ದೋಣಿಗಳಲ್ಲಿ ಅವುಗಳನ್ನು ದಾಟುವುದು ಕೂಡ ಅಸಾಧ್ಯವಾಗಿರುತ್ತದೆ.

ಸೇತುವೆ ಕಟ್ಟುವ ಯೋಚನೆ

ಈ ಸ್ಥಳದಲ್ಲಿ ಕಾವೇರೀ ನದಿಗೂ ಕಪಿಲಾ ನದಿಗೂ ಸೇತುವೆಗಳನ್ನು ಕಟ್ಟಬೇಕೆಂಬುದಾಗಿ ಕಳೆದ ಅನೇಕ ವರುಷಗಳಿಂದಲೂ ಅರಿಕೆಗಳು ಬಂದಿದ್ದವು. ಈ ವಿಚಾರವನ್ನು ಸರ್ಕಾರದವರು ಬಹುಕಾಲ ಪರ್ಯಾಲೋಚಿಸಿದರು. ಕೊನೆಗೆ ಈ ಸೇತುವೆಗಳನ್ನು ಕಟ್ಟಬಹುದೆಂದು 1918 ನೆಯ [illegible] ಸರ್ಕಾರದವರು ಅಪ್ಪಣೆಮಾಡಿದರು. ಅದರೂ ಸೇತುವೆಗಳನ್ನು ಕಟ್ಟುವುದಕ್ಕಾಗಿ ಪ್ರಶಸ್ತವಾದ ಸ್ಥಳಗಳನ್ನು ಗೊತ್ತುಮಾಡುವುದಕ್ಕೆ [illegible] ಹಿಡಿಯಿತು. ಅಲ್ಲದೆ ಒಡನೆಯೇ ಕೆಲಸವನ್ನು ಪ್ರಾರಂಭಿಸುವುದಕ್ಕೆ ದ್ರವ್ಯಾನುಕೂಲತೆಯೂ ಇರಲಿಲ್ಲ. ಕೊನೆಗೆ 1927 ನೆಯ [illegible] ತಿಂಗಳಲ್ಲಿ ಈ ಸೇತುವೆಗಳನ್ನು ಕಟ್ಟುವುದಕ್ಕಾಗಿ [illegible] [illegible]

ಮೈಸೂರು ಡಿಸ್ಟ್ರಿಕ್ಟು ಬೋರ್ಡಿನವರು ಒಪ್ಪಿಕೊಂಡರು. ಆದರೆ ಈ ಎರಡು ಸೇತುವೆಗಳ ನಿರ್ಮಾಣಕ್ಕೂ ಏಕಕಾಲದಲ್ಲಿ ಹಣವನ್ನು ಒದಗಿಸುವುದು ಸಾಧ್ಯವಿಲ್ಲವೆಂದು ಕಂಡುಬಂದಿತು. ಆದಕಾರಣ ವೆಚ್ಚದ ಅಂದಾಜು 6 ಲಕ್ಷ 38 ಸಾವಿರ ರೂಪಾಯಿಗಳೆಂದು ಲೆಕ್ಕಾಚಾರವಾಗಿದ್ದ ಕಾವೇರೀ ನದಿಯ ಈ ಸೇತುವೆಯನ್ನೇ ಮೊದಲು ಕಟ್ಟಿಸಬೇಕೆಂದು ಡಿಸ್ಟ್ರಿಕ್ಟು ಬೋರ್ಡಿನವರು ಕೋರಿದ ಪ್ರಕಾರವೇ ತೀರ್ಮಾನಿಸಲಾಯಿತು. ಕಲ್ಲಿನ ಕೆಲಸವನ್ನೂ, ಉಕ್ಕಿನ ಕೆಲಸವನ್ನೂ, ಎರಡನ್ನೂ ಸೇರಿಸಿ ಈ ಸೇತುವೆಯನ್ನು ಕಟ್ಟಲಾಗಿದೆ. ನದೀ ಪಾತ್ರದಲ್ಲಿಯೂ, ನದಿಯ ದಡಗಳ ಬಳಿಯಲ್ಲಿಯೂ ಇರುವ ಕಂಬಗಳನ್ನು ಕಲ್ಲುಗಳಿಂದಲೂ ಗಾರೆಯಿಂದಲೂ ಕಟ್ಟಲಾಗಿದೆ. ಆ ಕಂಬಗಳ ಮೇಲೆ ಉಕ್ಕಿನ ತೊಲೆ ಚೌಕಟ್ಟುಗಳನ್ನು ಜೋಡಣೆಗೊಳಿಸಿ ಅವುಗಳ ಮೇಲೆ ಸಂಚಾರ ಮಾರ್ಗವನ್ನು ಏರ್ಪಡಿಸಲಾಗಿದೆ.

ಸೇತುವೆಯ ಕಾಮಗಾರಿ.

ಸೇತುವೆಯ ಕೆಲಸವನ್ನು ಶೀಘ್ರವಾಗಿ ಮುಗಿಸುವುದಕ್ಕೆ ಅನುಕೂಲವಾಗಲೆಂಬ ಉದ್ದೇಶದಿಂದ ಇಲ್ಲಿಗೇ ಪ್ರತ್ಯೇಕವಾಗಿ ಒಂದು ಸಬ್-ಡಿವಿಜನನ್ನು ಏರ್ಪಡಿಸಲಾಯಿತು. ಸೇತುವೆ ಕಾಮಗಾರಿಯ ಕೆಲಸವನ್ನು ಮೈಸೂರು ನಗರದಲ್ಲಿರುವ ಕಂಟ್ರಾಕ್ಟುದಾರರು ಮೆಸ್ಸರ್ಸ್ ಎಂ. ನಾರಾಯಣಸ್ವಾಮಿ ಅಂಡ್ ಸನ್ಸ್ ಇವರಿಗೆ ವಹಿಸಲಾಯಿತು. 1928 ನೆಯ ಇಸವಿ ನವಂಬರು ತಿಂಗಳಲ್ಲಿ ಕಾಮಗಾರಿಯು ಪ್ರಾರಂಭವಾಯಿತು. 1929 ನೆಯ ಇಸವಿ ಜೂನ್ ತಿಂಗಳಿನಲ್ಲಿ ನದಿಯ ಪ್ರವಾಹವು ಬರುವುದರೊಳಗಾಗಿ ಹೊಳೆಯ ಮಧ್ಯದ ಎರಡು ಕಂಬಗಳು ಮತ್ತು ಬಲದಡದ ಬಳಿಯ ಕಂಬ ಇವುಗಳನ್ನು ಕಟ್ಟಿಸಲಾಯಿತು. ಅಲ್ಲಿಂದ ಮುಂದೆ 1929 ನೆಯ ಇಸವಿ ಡಿಸೆಂಬರು ತಿಂಗಳಿನಿಂದ 1930 ನೆಯ ಇಸವಿ ಜೂನ್ ತಿಂಗಳ ವರೆಗೆ ಮತ್ತೆ ಕಾಮಗಾರಿಯು ನಡೆದು ಮತ್ತೆ ಆರು ಕಂಬಗಳ ಕೆಲಸವು ಪೂರ್ತಿಯಾಯಿತು. ಸೇತುವೆಗೆ ಬೇಕಾದ ಉಕ್ಕಿನ ಸಾಮಾನುಗಳನ್ನು ಕಳುಹಿಸುವಂತೆ ಬೊಂಬಾಯಿ ನಗರದ ಮೆಸ್ಸರ್ಸ್ ರಿಚರ್ಡ್ಸನ್ ಅಂಡ್ ಕ್ರುಡ್ಡಾಸ್ ಕಂಪೆನಿಯವರಿಗೆ ಬರೆಯಲಾಯಿತು. 1930 ನೆಯ ಇಸವಿ ಜೂನ್ ತಿಂಗಳಿನಲ್ಲಿ ಅವು ಇಲ್ಲಿಗೆ ಬಂದು ತಲುಪಿದವು. ಆ ಬಳಿಕ ಮಳೆಗಾಲವು ಕಳೆಯುವ ವರೆಗೂ ಉಕ್ಕಿನ ಸಾಮಾನುಗಳನ್ನು ಜೋಡಣೆಗೊಳಿಸುವ ಕಾರ್ಯಕ್ಕೆ ಗಮನಕೊಟ್ಟವು. ಮಳೆಗಾಲವು ಕಳೆದ ಮೇಲೆ 1930 ನೆಯ ಇಸವಿ ನವಂಬರು ತಿಂಗಳಿನಿಂದ 1931 ನೆಯ ಇಸವಿಯ ಜೂನ್ ತಿಂಗಳಿನ ಹೊತ್ತಿಗೆ ಎಡಭಾಗದ ದಡದ ಕಂಬದ ಕೆಲಸ ಮತ್ತು ಇತರ ನಾಲ್ಕು ಕಂಬಗಳ ಕೆಲಸ ಇವುಗಳ ಹೊರತು ಉಳಿದ ಕಾಮಗಾರಿಯೆಲ್ಲಾ ಸರಿಸುಮಾರಾಗಿ ಪೂರ್ತಿಯಾಯಿತು. ಉಕ್ಕಿನ ತೊಲೆ ಚೌಕಟ್ಟುಗಳನ್ನು ಜೋಡಣೆಗೊಳಿಸುವ ಕೆಲಸವನ್ನು ಬಲಗಡೆಯಿಂದ ಎಂದರೆ ಮೈಸೂರಿನ ಕಡೆಯಿಂದ ಪ್ರಾರಂಭಿಸಿ ಎಂಟು "ಕಣ್ಣು" ಗಳ ಅಂತರದ ವರೆಗೂ ಅದನ್ನು ಪೂರ್ತಿಗೊಳಿಸಲಾಯಿತು. ಆ ವೇಳೆಗೆ ಮಳೆಗಾಲವು ಬಂದುದರಿಂದ 1931 ನೆಯ ಇಸವಿ ನವಂಬರು ತಿಂಗಳಿನ ವರೆಗೂ ಕೆಲಸವನ್ನು ನಿಲ್ಲಿಸಿದ್ದು ಮತ್ತೆ ಅದನ್ನು ಮುಂದುವರಿಸಲಾಯಿತು. ಸೇತುವೆಯ ಕೆಲಸವು ಮುಗಿದು ಈಗ್ಗೆ ಕೆಲವು ದಿನಗಳ ಹಿಂದೆ ಮಾತ್ರವೇ ಅದು ಸಂಚಾರ ಯೋಗ್ಯವೆನಿಸಿ ಸಿದ್ಧವಾಯಿತು.

ಸೇತುವೆಯ ಲಕ್ಷಣವೂ ಅದರ ಖರ್ಚೂ.

ಕೆಲವು ವಿಚಾರಗಳಲ್ಲಿ ಈ ಸೇತುವೆಯು ಗಮನಾರ್ಹವಾಗಿದೆ. ಇದರಷ್ಟು ಉದ್ದವಾದ ಸೇತುವೆಯು ಮೈಸೂರು ಸಂಸ್ಥಾನದಲ್ಲಿ ಇದುವರೆಗೂ ನಿರ್ಮಾಣವಾಗಿರಲಿಲ್ಲ. ಸೇತುವೆಯು ಒಂದು ದಡದ ಕೊನೆಯಿಂದ ಮತ್ತೊಂದು ದಡದ ಕೊನೆಯ ವರೆಗೆ 1,434 ಅಡಿಗಳಷ್ಟು ಉದ್ದವಾಗಿದೆ. ಎಂಬತ್ತು ಎಂಬತ್ತು ಅಡಿಗಳ ಅಂತರವುಳ್ಳ 16 "ಕಣ್ಣು" ಗಳೂ, ಅರವತ್ತು ಅಡಿಗಳ ಅಂತರವುಳ್ಳ ಒಂದು "ಕಣ್ಣು" ಇದರಲ್ಲಿವೆ. ಈ ಸೇತುವೆಗಾಗಿ ಉಪಯೋಗಿಸಿರತಕ್ಕ "ಬಾಲ್ಟಿಮೋರ್" ಮಾದರಿಯ ಉಕ್ಕಿನ ಜೋಡಣೆಯನ್ನು ಮೈಸೂರು ಸಂಸ್ಥಾನದಲ್ಲಿ ಕಟ್ಟಿರುವ ಮತ್ತಾವ ಸೇತುವೆಗೂ ಉಪಯೋಗಿಸಿಲ್ಲ. ಕಂಬಗಳಿಗೆ ತಳಹದಿಯನ್ನು ಅಗೆದು ಅವುಗಳನ್ನು ಕಟ್ಟುವಾಗ ಹೊಳೆಯ ನೀರು ಆ ಸ್ಥಳಕ್ಕೆ ನುಗ್ಗದಂತೆ ಸುತ್ತಲೂ ಅಡ್ಡಗಟ್ಟೆಯನ್ನು ಹಾಕುವುದಕ್ಕೆ ಬದಲಾಗಿ ಉಕ್ಕಿನ ಹಾಳೆಗಳನ್ನು ಉಪಯೋಗಿಸಿದುದೂ ಇದೇ ಮೊದಲು. ಕಂಟ್ರಾಕ್ಟುದಾರರು ಈ ನೂತನ ವಿಧಾನವನ್ನನುಸರಿಸಿ ಕೆಲಸಮಾಡಿದರು. ಆದುದರಿಂದಲೇ ಇಷ್ಟು ದೊಡ್ಡ ನದಿಯಲ್ಲಿ ಈ ತಳಹದಿ ಮುಂತಾದ ಕೆಲಸವನ್ನು ವರುಷದಲ್ಲಿ ಐದಾರು ತಿಂಗಳ ಕಾಲ ಮಾತ್ರವೇ ನಡೆಸುತ್ತಿದ್ದು ಮೂರು ವರುಷಗಳ ಅವಧಿಯಲ್ಲಿ ಪೂರ್ತಿಗೊಳಿಸಲು ಸಾಧ್ಯವಾಯಿತು. ಕೆಲವು ಕಡೆಗಳಲ್ಲಂತೂ ತಳಹದಿಗೆ ಬಂಡೆಯು ಸಿಕ್ಕಬೇಕಾದರೆ ಮರಳನ್ನೂ, ಜೇಡಿಯ ಮಣ್ಣನ್ನೂ ನದೀ ಪಾತ್ರದ ಮಟ್ಟದಿಂದ ಕೆಳಕ್ಕೆ 27 ಅಡಿಗಳ ಆಳದ ವರೆಗೆ ತೋಡಬೇಕಾಗಿದ್ದಿತು. ಆದಕಾರಣ ಈ ನೂತನ ವಿಧಾನವನ್ನು ಅನುಸರಿಸದೆಹೋಗಿದ್ದರೆ ಇಷ್ಟು ಶೀಘ್ರವಾಗಿ ಸೇತುವೆಯನ್ನು ಕಟ್ಟುವುದು ಅಸಾಧ್ಯವಾಗುತ್ತಿದ್ದಿತೆಂದೇ ಹೇಳಬಹುದಾಗಿದೆ:— ಈ ಸೇತುವೆಯ ಕೆಲಸಕ್ಕೆ ಒಟ್ಟು ಆರು ಲಕ್ಷ ರೂಪಾಯಿಗಳು ವೆಚ್ಚವಾದವು ಎಂದರೆ ಮಂಜೂರಾಗಿದ್ದ ಅಂದಾಜು ವೆಚ್ಚಕ್ಕಿಂತಲೂ ಸುಮಾರು ಹತ್ತರಲ್ಲೊಂದು ಭಾಗ ವೆಚ್ಚವು ಹೆಚ್ಚಾದಂತಾಯಿತು. ಒಟ್ಟಿನಲ್ಲಿ ನದೀ ಪಾತ್ರದಲ್ಲಿ ಪ್ರತಿನೂರು ಚದರ ಅಡಿಯ ಸೇತುವೆ ಪ್ರದೇಶಕ್ಕೆ 2,040 ರೂಪಾಯಿಗಳಂತೆ ಮುಟ್ಟಿದಂತಾಯಿತು. ಇಂಥಾ ಇತರ ಭಾರಿ ನದಿಗಳ ವಿಷಯದಲ್ಲಿ ಸೇತುವೆಯನ್ನು ಕಟ್ಟಲು ವೆಚ್ಚವಾಗಿರುವ ಹಣದೊಡನೆ ಇದನ್ನು ಹೋಲಿಸಿದರೆ ಇಲ್ಲಿ ನಡೆದಿರುವ ವೆಚ್ಚವು ಯುಕ್ತಪ್ರಮಾಣದಲ್ಲೇ ಇದೆಯೆಂದು ಭಾವಿಸಬಹುದಾಗಿದೆ.

ಸೇತುವೆಯ ಪ್ರಯೋಜನ.

ಮೈಸೂರು ನಗರಕ್ಕೂ, ಮದರಾಸ್ ಅಧಿಪತ್ಯದಲ್ಲಿ ಗಣನೀಯವಾದ ಮುಖ್ಯ ಪ್ರದೇಶಕ್ಕೂ ಈ ಸೇತುವೆಯಿಂದ ಸಂಚಾರ ಸೌಲಭ್ಯವು ಇನ್ನು ಮುಂದೆ ನಿರಬಾಧಿತವಾಗಿ ದೊರೆಯುವುದಾಗಿದೆ. ಬೆಳಕವಾಡಿಯ ಸಮೀಪದಲ್ಲಿ ಇದೇ ಕಾವೇರೀ ನದಿಗೆ ಶಿವನಸಮುದ್ರದಿಂದ ಕೆಲವು ಮೈಲಿಗಳ ದೂರದಲ್ಲಿ ಮದರಾಸು ಸರ್ಕಾರದವರು ಈಚೆಗೆ ಒಂದು ಸೇತುವೆಯನ್ನು ಕಟ್ಟಿಸಿದಾರೆ. ಇವೆರಡು ಸೇತುವೆಗಳ ಸಹಾಯದಿಂದ ಇನ್ನು ಮುಂದೆ ಕೊಯಮತ್ತೂರು ಮತ್ತು ತಾಲ್ಲೂಕು ಜಿಲ್ಲೆಗಳ ನಾನಾ ವ್ಯಾಪಾರ ಸ್ಥಳಗಳಿಗೂ ಹೋಗಿಬರಲು ಬಹಳ ಅನುಕೂಲವಾಗುತ್ತದೆ. ಮೈಸೂರು ಸಂಸ್ಥಾನಕ್ಕೆ ಬರತಕ್ಕ ಪ್ರಯಾಣಿಕರು ಮೈಸೂರಿಗೆ ಹೋಗುವಾಗಲೇ ಆಗಲಿ ಅಥವಾ ಮೈಸೂರಿನಿಂದ ಹಿಂತಿರುಗುವಾಗಲೇ ಆಗಲಿ ಶಿವನಸಮುದ್ರದ ಕಾವೇರೀ ಜಲಪಾತವನ್ನೂ, ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ಯಂತ್ರಾಲಯವನ್ನೂ ಇನ್ನು ಮುಂದೆ ಬಹು ಸುಲಭವಾಗಿ ನೋಡಿಕೊಂಡು ಬರಬಹುದು. ಈ ಸೇತುವೆಯನ್ನು ಕಟ್ಟುವುದರಲ್ಲಿ ಕಂಟ್ರಾಕ್ಟುದಾರರು ಉತ್ಸಾಹದಿಂದ ಕೆಲಸಮಾಡಿ ಈ ಕಾರ್ಯದಲ್ಲಿ ಅಧುನಿಕ ಸಾಧನಗಳನ್ನೆಲ್ಲಾ ಉಪಯೋಗಿಸಿ ಬಹು ಶೀಘ್ರವಾಗಿ ಸೇತುವೆಯನ್ನು ಕಟ್ಟಿ ಸಿದ್ಧಗೊಳಿಸಿರುವುದಕ್ಕಾಗಿ ಅವರು ಶ್ಲಾಘನೆಗೆ ಪಾತ್ರರಾಗಿದ್ದಾರೆ.

ಶ್ರೀಮನ್ಮಹಾರಾಜರವರ ಪ್ರತ್ಯುತ್ತರ.

"ಮಹಾಶಯರೇ, ನಮ್ಮ ವಿಷಯದಲ್ಲಿ ನಿಮಗಿರುವ ಭಕ್ತಿವಿಶ್ವಾಸಗಳನ್ನು ವ್ಯಕ್ತಗೊಳಿಸತಕ್ಕ ಈ ವಿಜ್ಞಾಪನಾ ಪತ್ರಿಕೆಯನ್ನು ಆದರದಿಂದ ಸ್ವೀಕರಿಸುತ್ತೇವೆ. ನೀವುಗಳು ಪ್ರದರ್ಶಿಸಿರುವ ಪ್ರೀತಿಶ್ರದ್ಧೆಗಳು ನಮಗೆ ವಿಶೇಷ ಸಂತೋಷವನ್ನುಂಟುಮಾಡಿವೆ. ಈ ದಿವಸದ ಉತ್ಸವದಲ್ಲಿ ಭಾಗಿಗಳಾಗುವುದು ನಮಗೆ ಕೇವಲ ಹರ್ಷದಾಯಕವೆನಿಸಿದೆ. ಈ ನೂತನ ಸೇತುವೆ ನಮ್ಮ ಸಂಸ್ಥಾನದ ಈ ಪ್ರದೇಶಕ್ಕೂ, ಮದರಾಸು ಪ್ರಾಂತದ ನಾನಾ ಭಾಗಗಳಿಗೂ ಸಂಚಾರ ಸೌಲಭ್ಯವನ್ನು ಹೆಚ್ಚಿಸುವುದಾಗಿದೆ. ಶಿವನಸಮುದ್ರದಿಂದ ಮೈಸೂರು ನಗರಕ್ಕೆ ಹೋಗುವುದಕ್ಕೂ ಸಹ ಇದರ ದೆಸೆಯಿಂದ ಇನ್ನು ಮುಂದೆ ಮತ್ತಷ್ಟು ಸಮೀಪವಾದ ಮಾರ್ಗವು ದೊರೆಯುವ ಅನುಕೂಲ್ಯವುಂಟು.

"ಮೋಟಾರು ವಾಹನವು ನಿರ್ಮಿತವಾದುದರಿಂದ ಸಂಚಾರ ಸಾಧನಗಳು ಆಶ್ಚರ್ಯಕರವಾದ ರೀತಿಯಲ್ಲಿ ಮಾರ್ಪಟ್ಟು ರೂಪುಗೊಳ್ಳಲು ಕಾರಣವಾಯಿತು. ಅದರ ಪರಿಣಾಮವಾಗಿ ಯಾವುದೊಂದು ದೇಶದ ಅರ್ಥಿಕೋನ್ನತಿಗೇ ಆಗಲಿ ಸಂಚಾರ ಮಾರ್ಗಗಳ ಸುವ್ಯವಸ್ಥೆಯು ಅತಿ ಮುಖ್ಯವಾದ ಸಾಧನಗಳಲ್ಲೊಂದೆನಿಸುವ ಸ್ಥಿತಿಯುಂಟಾಗಿದೆ. ಆದಕಾರಣ ಸರ್ಕಾರದವರೂ, ಡಿಸ್ಟ್ರಿಕ್ಟು ಬೋರ್ಡು ಮುಂತಾದ ಸ್ಥಳೀಯ ಸಂಸ್ಥೆಗಳವರೂ ಸಂಚಾರ ಮಾರ್ಗಗಳು ಸುಗಮವಾಗಿರುವಂತೆ ತಕ್ಕ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಇನ್ನು ಮುಂದೆ ಇತೋಪ್ಯಧಿಕವಾಗಿ ಗಮನಕೊಡಬೇಕಾದುದು ಅವಶ್ಯಕವಾಗುತ್ತದೆ. ಅವಶ್ಯಕಂಡ ಸ್ಥಳಗಳಲ್ಲಿ ಸೇತು ನಿರ್ಮಾಣ ಮಾಡುವುದೂ ಸಹ ಅಂಗಭೂತವಾಗಿ ಈ ಏರ್ಪಾಡುಗಳಲ್ಲಿ ಸೇರಿದೆಯೆಂಬುದು ನಮ್ಮ ಆಶಯವಾಗಿದೆ. ಹೀಗೆ ಸೇತುಗಳನ್ನೂ, ಸುಗಮವಾದ ಸಂಚಾರ ಮಾರ್ಗಗಳನ್ನೂ ಏರ್ಪಡಿಸಿ ಅಲ್ಲಿಗೇ ತಪ್ಪಿಸಬಾರದು ಪೂರ್ಣಫಲವು ಲಭಿಸುವಂತಿಲ್ಲ. ಅವುಗಳು ಏಕಪ್ರಕಾರವಾಗಿ ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಲೂ ಬೇಕು. ಹೀಗೆ ಮಾಡುವುದು ಕಾರ್ಯತಃ ಸಾಧ್ಯವೇ ಎಂಬುದು ಬಹು ಮುಖ್ಯ ವಿಚಾರವೇ ಸರಿ. ಕಪಿಲಾ ನದಿಗೂ ಸಹ ಇದೇ ರೀತಿಯಲ್ಲಿ ಸೇತು ನಿರ್ಮಾಣವಾಗಬೇಕಾದುದು ಅತ್ಯಾವಶ್ಯಕವೆಂಬ ಅಂಶವು ನಮ್ಮಂತೆಯೇ ನಿಮಗೂ ವಿದಿತವಾಗಿದೆ. ಅದೂ ಸಹ ಸಾಧ್ಯವಾದಷ್ಟು ಶೀಘ್ರದಲ್ಲೇ ನಿರ್ಮಿತವಾಗಲೆಂದು ಹಾರೈಸುತ್ತೇವೆ. ಸದ್ಯದಲ್ಲಿ ನಾವು ಇಷ್ಟನ್ನು ಮಾತ್ರವೇ ತಿಳಿಸಲಿಚ್ಛಿಸುವೆವು.

"ಈ ಡಿಸ್ಟ್ರಿಕ್ಟು ಬೋರ್ಡಿನವರು ಮೈಸೂರು ಡಿಸ್ಟ್ರಿಕ್ಟಿನಲ್ಲಿ ನೂತನ ಸೇತು ನಿರ್ಮಾಣ ಕಾರ್ಯದಲ್ಲಿ ಪ್ರದರ್ಶಿಸಿರುವ ಶ್ರದ್ಧೆಯೂ ಉತ್ಸಾಹವೂ ಶ್ಲಾಘನೀಯವಾಗಿವೆ. ಈ ದೊಡ್ಡ ಸೇತುವು ಸಮಗ್ರವಾಗಿ ಪೂರ್ಣವಾಯಿತು. ಅಕ್ಕಿಹೆಬ್ಬಾಳಿನ ಬಳಿಯಲ್ಲಿ ಮತ್ತೊಂದು ಸೇತುವಿನ ನಿರ್ಮಾಣ ಕಾರ್ಯವು ನಡೆಯುತ್ತಿದೆ. ಕಪಿಲಾ ನದಿಗೆ ದೊಡ್ಡ ಸೇತುವನ್ನು ನಿರ್ಮಿಸಬೇಕೆಂಬ ವಿಚಾರವು ಪರ್ಯಾಲೋಚನೆಯಲ್ಲಿದೆ. ಆರೀತಿ ಪರ್ಯಾಲೋಚನೆಯಲ್ಲಿರುವ ಸೇತುವು ನಿರ್ಮಾಣವಾದಲ್ಲಿ ಸೇತು ಬಂಧನ ಸಂಬಂಧವಾಗಿ ಈ ಡಿಸ್ಟ್ರಿಕ್ಟು ಬೋರ್ಡಿನವರು ತಮ್ಮ ಮಹತ್ತರವಾದ ಕಾರ್ಯಸಾಧನೆಯಿಂದ ಕೃತಾರ್ಥರಾದುದಾಗಿ ಭಾವಿಸಿ ಸಂತೋಷಿಸಬಹುದಾಗಿದೆ. ಇಷ್ಟು ಅಧಿಕತರವಾದ ಕಾರ್ಯಸಾಧನೆಯು ಅಭಿನಂದನಾರ್ಹವೆನ್ನಲು ಲೇಶಮಾತ್ರವೂ ಸಂಶಯವಿಲ್ಲ.

"ನಿಮ್ಮ ಕಾರ್ಯಕಲಾಪಗಳಲ್ಲೊಂದಾದ ಈ ಸೇತು ನಿರ್ಮಾಣ ಸಂಬಂಧದಲ್ಲಿ ನಮಗೆ ತೀವ್ರಾಸಕ್ತಿಯುಂಟೆಂಬುದನ್ನು ತಿಳಿಸಲು ಈ ಸಮಯವು ದೊರೆತುದಕ್ಕಾಗಿ ಸಂತೋಷಿಸುವೆವು. ಈ ಸೇತುವಿಗೆ ನಮ್ಮ ನಾಮಾಂಕಿತವನ್ನಿಡುವುದಕ್ಕೆ ಅನುಜ್ಞೆಯಾಗಬೇಕೆಂದು ಪ್ರಾರ್ಥಿಸಿರುವಿರಿ. ಈ ಪ್ರಾರ್ಥನೆಗೆ ಪ್ರೇರಕವಾದ ನಿಮ್ಮ ಮನೋಭಾವವನ್ನು ಮೆಚ್ಚಿ ಈ ವಿಚಾರದಲ್ಲಿ ಸಂತೋಷದಿಂದ ಅನುಜ್ಞೆಯನ್ನು ಕೊಟ್ಟಿರುವೆವು. ಈ ನೂತನ ಸೇತುವೆ ಮೇಲೆ ಇಂದಿನಿಂದ ಸಂಚಾರವು ಪ್ರಾರಂಭವಾಗಲೆಂದು ವಿಶೇಷ ಸಂತೋಷದಿಂದ ಅಪ್ಪಣೆಯನ್ನು ಕೊಡುತ್ತೇವೆ. ಮಹತ್ತರವಾದ ಈ ಉದ್ಯಮವನ್ನು ಕೈಗೊಂಡು ಸಾಂಗವಾಗಿ ಪೂರ್ತಿಗೊಳಿಸಿರುವುದಕ್ಕಾಗಿ ಮೈಸೂರು ಡಿಸ್ಟ್ರಿಕ್ಟು ಬೋರ್ಡಿನ ಅಧ್ಯಕ್ಷರನ್ನೂ, ಸದಸ್ಯರುಗಳನ್ನೂ ಅಭಿನಂದಿಸುವೆವು. ಈ ಪ್ರಾಂತದ ಸಕಲ ಸುಖಸಂಪತ್ತುಗಳ ಅಭಿವೃದ್ಧಿಗೂ ಈ ಸೇತುವು ಕಾರಣವಾಗುವಂತೆ ಅನುಗ್ರಹಿಸಲೆಂದು ಭಗವಂತನನ್ನು ಪ್ರಾರ್ಥಿಸುವೆವು."

ಬೆಂಗಳೂರು ನಾಯಿಂದ ಯುವಜನ ಸೇವಾ ಸಂಘದ ಮಹಾಸಭೆ.

ಕಳೆದ ಆಗಸ್ಟ್ ತಾ|| 21 ನೆಯ ಭಾನುವಾರ ಮೇಲ್ಕಂಡ ಸಂಘದ ಮಹಾಸಭೆಯು ಬೆಂಗಳೂರು ನರಸಿಂಹರಾಜ ಸರ್ಕಲ್ಲಿನಲ್ಲಿರುವ ಮುನಿವೆಂಕಟಪ್ಪನವರ ಸತ್ರದಲ್ಲಿ ಸಂಗೀತವಿದ್ವಾನ್ ಮುನಿವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಸಂಘದ ಆವಶ್ಯಕತೆ, ಐಕಮತ್ಯ, ವಿದ್ಯಾಭಿವೃದ್ಧಿ ಇತ್ಯಾದಿ ವಿಷಯಗಳ ಮೇಲೆ ಕೆಲರು ಉಪನ್ಯಾಸಗಳನ್ನು ಮಾಡಿ ಕುಲದ ಪ್ರತಿಯೊಬ್ಬನೂ ವಿದ್ಯಾಭಿವೃದ್ಧಿ ವಿಚಾರದಲ್ಲಿ ಬಹಳ ಶ್ರದ್ಧಾಭಿಮಾನಗಳಿಂದ ಕೆಲಸಮಾಡಬೇಕೆಂದು ಹೇಳಿದರು. ಅನಂತರ ನಾಯಿಂದಮತ ಪ್ರಾಶಸ್ತ್ಯವನ್ನೂ ಅದರ ಈಗಿನ ಅವನತಿಯ ನಿವಾರಣೋಪಾಯವನ್ನೂ ಕುರಿತು ಈ ಸಂಘದ ಸೆಕ್ರೆಟರಿಯವರಾದ ಮ|| ಲಕ್ಷ್ಮಣದಾಸ್, ಎ. ಡಿ. ಡಿ. ಎಸ್. ಎಂ., ರವರು ಮಾಡಿದ ಭಾಷಣದ ಮುಖ್ಯಾಂಶವು:—

ಈ ಕಾಲದಲ್ಲಿ ಪ್ರತಿಯೊಂದು ಕುಲದವರೂ ತಮ್ಮ ಕುಲಾಭಿವೃದ್ಧಿಗಾಗಿ ಬೇಕಾದ ಪ್ರಯತ್ನಗಳನ್ನು ಮಾಡಿ ಮುಂದುವರಿಯುತ್ತಿರುವುದನ್ನು ನಾವು ಕಣ್ಣಾರ ನೋಡಿಯೂ ನಾವು ನಮ್ಮ ಕುಲಾಭಿವೃದ್ಧಿಗೆ ಯಾವ ಪ್ರಯತ್ನವನ್ನೂ ಮಾಡದೆ ಸುಮ್ಮನೆ ಇರುವುದು ಧರ್ಮವಲ್ಲ. ಆದುದರಿಂದ ನಾವು ಐಕಮತ್ಯದಿಂದ ಸೇರಿ ಸಹಾಯವನ್ನಭಿವೃದ್ಧಿಗೆ ತರಲು ತಕ್ಕ ಪ್ರಯತ್ನವನ್ನು ಕೂಡಲೆ ಮಾಡಬೇಕು. ಹಾಗೆ ಪ್ರಯತ್ನಿಸದಿದ್ದಲ್ಲಿ ನಮ್ಮ ಪವಿತ್ರ ಜಾತಿಯು ಹೀನಸ್ಥಿತಿಗೆ ಬಂದು ಇತರ ಜಾತಿಗಳಿಗಿಂತ ಹಿಂದೆ ಬಿದ್ದಿರಬೇಕಾಗುವುದಲ್ಲದೆ ಬಹಳ ಅಗೌರವಸ್ಥಿತಿಗೆ ಬರುವುದು. ಪೂರ್ವದಲ್ಲಿ ನಮ್ಮ ವಂಶಜರಾದ ಮಹಿಗಳೂ, ಪಂಡಿತರುಗಳೂ, ಗಾನವಿದ್ಯಾವಂತರುಗಳೂ ಎಷ್ಟೋ ಮಂದಿ ಇದ್ದು ಪ್ರಖ್ಯಾತರಾಗಿದ್ದರು. ಶ್ರೀ ಜಗನ್ನಾಥದಲ್ಲಿ ಆ ಪ್ರಸಿದ್ಧ ಜಗನ್ನಾಥ ದೇವರ ಪೂಜಾರಿಗಳು ನಮ್ಮವರೇ ಆಗಿರುತ್ತಾರೆ. ಇವರು ಸ್ವಾಮಿಯ ನೈವೇದನಿಗೆ ಮಾಡುವ ಅನ್ನವನ್ನು ಮಹಾಪ್ರಸಾದವನ್ನಾಗಿ ಸಮಸ್ತ ಜಾತಿಯ ಯಾತ್ರಿಕರೂ ಸ್ವೀಕರಿಸುತ್ತಿರುವುದನ್ನು ನಾವು ಕೇಳಿಯೂ ನೋಡಿಯೂ ಇರುತ್ತೇವೆ. ಬಂಗಾಳದೇಶದಲ್ಲಿ ಕವಿರಾಜರೆಂದು ಪ್ರಸಿದ್ಧರಾಗಿರುವ ಕಾವ್ಯಕ್ಕರು ನಮ್ಮ ಜಾತಿಗೆ ಸೇರಿದವರಾಗಿರುತ್ತಾರೆ. ಆದುದರಿಂದ ಪೂರ್ವದ ಪವಿತ್ರತೆಯನ್ನು ದಿಗ್ಭಿನ್ನವನ್ನು ತಿಳಿದುಕೊಂಡು ಇಂಥಾ ಪವಿತ್ರ ಕುಲದವರಾದ ನಾವು ಈಗ ಹೀನಸ್ಥಿತಿಯಲ್ಲಿರುವುದು ಉಚಿತವೆ ಎಂಬುದನ್ನು ನೀವೇ ಆಲೋಚಿಸಬೇಕು. ನಮ್ಮ ಜಾತಿಯವರನೇಕರು ಪೂರ್ವದಲ್ಲಿ ಪ್ರಸಿದ್ಧ ಆಯುರ್ವೇದ ಪಂಡಿತರಾಗಿಯೂ ಗಾನವಿಶಾರದರಾಗಿಯೂ ಕಲಾತ್ಮಮಾಡತಕ್ಕವರಾಗಿಯೂ, ಶಿಲ್ಪಶಾಸ್ತ್ರಜ್ಞರಾಗಿಯೂ ಇದ್ದರಲ್ಲದೆ ಈಗಲೂ ಇರುತ್ತಾರೆ. ಹೀಗೆ ಪ್ರಸಿದ್ಧರಾಗಿದ್ದವರ ಕೆಲ ಹೆಸರುಗಳನ್ನು ನಿಮಗೆ ತಿಳಿಸುತ್ತೇನೆ. ಸಾಮವೇದವನ್ನು ಬರೆದ ಸವಿತ ಮಹಷಿಯೂ, ಯಜುರ್ವೇದವನ್ನು ಬರೆದ ವಾಯು ಮಹಷಿಯೂ, ಚರಕನೆಂಬ ಆಯುರ್ವೇದ ಗ್ರಂಥಕರ್ತನಾದ ಚರಕಾಚಾರ್ಯನೂ, ಛಂದಶಾಸ್ತ್ರವನ್ನು ಬರೆದ ಪಿಂಗಳಾಚಾರ್ಯನೂ, ಛಂದಮಾಲವನ್ನು ಬರೆದ ಶ್ರೀವತ್ಸನೂ, ಛಂದೋಗಪರಿ ಸಂಭಾಷಣವನ್ನು ಬರೆದ ಛಂದೋಗಚಾರ್ಯನೂ, ಅನಂತಭಾಷ್ಯದಲ್ಲಿ ಕಿರುಬೆಣಕಿನಂಥ ಭಾಷ್ಯವನ್ನು ಬರೆದ ಹಂಸಮರ್ದನನೆಂಬ ರಾಜನ ಮಂತ್ರಿಯಾದ ಮಾಣಿಕ್ಯವಚೀಶನೂ, ಪದ್ಮಾಪುರದಲ್ಲಿ ಪ್ರಖ್ಯಾತ ಕವಿಯಾಗಿದ್ದು ತೆಲುಗು ವೈದ್ಯ ಚಿಂತಾಮಣಿ ಕರ್ಮವಿಪಾಕವನ್ನು ರಚಿಸಿದ ಬೇಮುವೆಕೊಂಡ ಕೇಶವ ಕವಿಯೇ ಮೊದಲಾಗಿ ಪ್ರಖ್ಯಾತಪುರುಷರೆಷ್ಟೋ ಮಂದಿಯಿದ್ದರು. ಈಗ ನಾವುಗಳಾದರೋ ವಿಜ್ಞಾನಶೂನ್ಯರಾಗಿಯೂ, ಗೌರವಹೀನರಾಗಿಯೂ ಇರುತ್ತೇವೆ. ನಮಗೆ ವಂಶಪಾರಂಪರ್ಯವಾಗಿ ಬಂದಿರುವ ವೈದ್ಯವೃತ್ತಿಯನ್ನೂ, ಗಾನಶಾಸ್ತ್ರವನ್ನೂ ಉಪೇಕ್ಷಿಸಿರುತ್ತೇವೆ. ಇದಕ್ಕೆಲ್ಲ ನಮ್ಮ ವಿದ್ಯಾಹೀನತೆಯೇ ಕಾರಣವು. ನಾವು ಮೊದಲಿನಂತೆ ವಿದ್ಯಾವಂತರಾಗಿದ್ದರೆ ನಮ್ಮ ಜಾತಿಯು ಎಲ್ಲರಂತೆ ಪ್ರಖ್ಯಾತಿಯನ್ನು ಹೊಂದಿ ಗೌರವಿಸಲ್ಪಟ್ಟು ಪೂಜಿಸಲ್ಪಡುತ್ತಿದ್ದಿತು. ವಿದ್ಯೆಯಿಲ್ಲದಿರುವುದರಿಂದಲೇ ನಮ್ಮ ವಂಶವು ಅಗೌರವವನ್ನು ಹೊಂದಿ ಹೀನಸ್ಥಿತಿಗೆ ಬಂದಿರುತ್ತದೆ. ವಿದ್ಯೆಯಿಲ್ಲದಿರುವುದರಿಂದ ನಮ್ಮಲ್ಲಿ ಕೆಲ ದುರಾಚಾರವು ನೆಲೆಗೊಂಡಿರುವುದು. ಅದನ್ನು ನಿರ್ಮೂಲಗೊಳಿಸಲಿಕ್ಕೆ ನಾವೆಲ್ಲರೂ ತಕ್ಕ ಪ್ರಯತ್ನವನ್ನು ಮಾಡಬೇಕು. ಹಾಗಿಲ್ಲದಿದ್ದರೆ ನಾವು ಇನ್ನೂ ಅಧೋಗತಿಗಿಳಿಯುವುದು ಖಂಡಿತ. ಉತ್ತರ ಹಿಂದುಸ್ಥಾನದಲ್ಲಿ ನಮ್ಮ ಕುಲದವರು ಅಖಿಲಭಾರತ ನಾಯಿಂದ ಬ್ರಾಹ್ಮಣ ಮಹಾಸಭೆಯನ್ನು ಸ್ಥಾಪಿಸಿ ಅದರ ಮೂಲಕ ಕುಲಾಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ನಾಯಿಂದ ಬ್ರಾಹ್ಮಣ ಎಂಬ ಒಂದು ಪಕ್ಷಪತ್ರಿಕೆಯನ್ನು ಸಹ ಹೊರಡಿಸುತ್ತಿರುವರು. ಇದಕ್ಕೆಲ್ಲ ಪಂಡಿತ ರೇವತೀಪ್ರಸಾದ ಶರ್ಮ ಎಂ. ಆರ್. ಎ. ಸಿ., ಲಂಡನ್ ರವರೇ ಕಾರಣಭೂತರಾಗಿರುತ್ತಾರೆ. ಇವರು ನಮ್ಮ ಜಾತಿಯ ಗೌರವಪ್ರತಿಷ್ಠೆಗಳನ್ನು ಸ್ಥಾಪಿಸಲು ಬಹಳ ವ್ಯಯವನ್ನೂ ಪ್ರಯಾಸವನ್ನೂ ವಹಿಸಿರುವರು. ಅದ್ದರಿಂದ ಇತರರ ಮೇಲೆ ಆಧಾರಪಟ್ಟು ಕೊಂಡಿರದೆ ನಮ್ಮಭಿವೃದ್ಧಿ ಕಾರ್ಯಗಳನ್ನು ನಾವೇ ಮಾಡಿಕೊಳ್ಳುವುದು ಅತ್ಯಾವಶ್ಯಕವು. ಇದಕ್ಕೆ ನಮ್ಮವರು ತಂತಮ್ಮಲ್ಲಿ ಕಲಹಮಾಡದೆ ಎಲ್ಲರೂ ಐಕಮತ್ಯದಿಂದಲೂ ಅಭಿಮಾನದಿಂದಲೂ ಕೆಲಸಮಾಡಿ ನಮ್ಮ ನ್ಯೂನತೆಗಳನ್ನೂ ಹೀನಸ್ಥಿತಿಯನ್ನೂ ಹೋಗಲಾಡಿಸಿಕೊಳ್ಳಬೇಕು. ಆಯುರ್ವೇದ ಪಾಂಡಿತ್ಯದಲ್ಲೂ, ಸಂಗೀತಶಾಸ್ತ್ರದಲ್ಲೂ, ಶಿಲ್ಪಶಾಸ್ತ್ರದಲ್ಲೂ ಹೆಸರ್ಗೊಂಡಿದ್ದ ನಮ್ಮ ಜಾತಿಯು ಈಗ ಯಾವ ದುಸ್ಥಿತಿಯಲ್ಲಿರುತ್ತದೆಂಬುದನ್ನು ತಿಳಿದುಕೊಂಡು ಬಾಲಬಾಲೆಯರ ವಿದ್ಯಾಭಿವೃದ್ಧಿಗಾಗಿಯೂ ನಮ್ಮ ಜಾತಿಯ ಪೂರ್ವೋನ್ನತಿಗಾಗಿಯೂ ಎಲ್ಲರೂ ಏಕಮತ್ಯದಿಂದ ಉಚಿತಮಾರ್ಗದಲ್ಲಿ ಪ್ರಯತ್ನಿಸಬೇಕಾಗಿದೆ. ಪ್ರಸಿದ್ಧವಾದ ಮೈಸೂರು ಸಂಸ್ಥಾನದಲ್ಲಿ ನಮ್ಮ ಜಾತಿಯವರ ಸಂಖ್ಯೆಯು ಹೆಚ್ಚಾಗಿದ್ದರೂ ಸಮಾಜಾಭಿವೃದ್ಧಿಗಾಗಿ ಒಂದು ಸಂಘವಿಲ್ಲದಿರುವುದು ಪರಮಾಶ್ಚರ್ಯವು. ದೇವರ ದಯೆಯಿಂದ ಆಲಸೂರಿನ ಮ|| ಮುನಿವೆಂಕಟಪ್ಪನವರು 20,000 ರೂ. ವೆಚ್ಚದಿಂದ ಒಂದು ಸತ್ರವನ್ನು ಕಟ್ಟಿಸಿರುತ್ತಾರೆ, ಅಲ್ಲದೆ ನಮ್ಮ ಜಾತಿಯ ಯುವಜನ ಸಂಘಕ್ಕೆ ಬೇಕಾದ ದ್ರವ್ಯ ಸಹಾಯವನ್ನೂ ಜನ ಸಹಾಯವನ್ನೂ ಮಾಡಲು ನಿಶ್ಚಯಿಸಿರುತ್ತಾರೆ. ಆದುದರಿಂದ ಈ ಸುಸಮಯವನ್ನು ನಾವು ಕಳೆದುಕೊಳ್ಳದೆ ನಾವೆಲ್ಲರೂ ಏಕೀಭವಿಸಿ ನಮ್ಮ ಕುಲವನ್ನು ಅಭಿವೃದ್ಧಿಗೆ ತರಬೇಕು. ಹಾಗೆ ಮಾಡದಿದ್ದಲ್ಲಿ ಅವರು ಮಾಡಿರುವ ದ್ರವ್ಯ ವ್ಯಯವು ನಿರರ್ಥಕವಾಗುವುದು. ನಮ್ಮ ಕುಲವೃತ್ತಿಯು ಬಹಳ ಹೀನವೆಂದು ಅನೇಕರು ತಿಳಿದಿರುತ್ತಾರೆ. ಅದು ಶುದ್ಧ ತಪ್ಪು. ನಮ್ಮ ಜಾತಿಗಿರುವ ಗೌರವವೂ ಕೀರ್ತಿಯೂ ನಷ್ಟವಾಗುವುದಕ್ಕೂ ಇರುವುದಿಲ್ಲ. ನಮ್ಮ ಜಾತಿವೃತ್ತಿಯಾದ ಕ್ಷೌರಕರ್ಮವು ಬಹಳ ಪವಿತ್ರವಾದುದು. ನಾಯಿಂದೇವ ಮೊದಲಾದ ಪವಿತ್ರ ಮಹರ್ಷಿಗಳು ಈ ಕ್ಷೌರಕರ್ಮವನ್ನು ಆಚರಿಸಿರುವಂತೆ ವೇದಗಳಲ್ಲಿ ಹೇಳಲ್ಪಟ್ಟಿದೆ. ಇಂತಹ ಪವಿತ್ರ ಕರ್ಮವನ್ನು ಮಾಡುವ ನಮ್ಮ ಜಾತಿಯ ಶ್ರೇಷ್ಠತ್ವವೆಂತಹದೆಂಬುದನ್ನು ನೀವೇ ಆಲೋಚಿಸಿ. ಇದಕ್ಕೆ ಕೆಲ ವೇದವಾಕ್ಯಗಳ ಆಧಾರವನ್ನು ಕೊಡುವೆನು:—

ಶ್ಲೋಕ—ದಾಸನಾಪಿತ ಗೋಪಾಲ ಕುಲಮಿತ್ರಾರ್ಧಸೀರಿಣಃ | ಏತೇ ಶೂದ್ರೇಷುಭೋಜ್ಯಾನ್ನಾಯಶ್ಚಾತ್ಮಾನಂನಿವೇದಯೇತ್ ‖ ಎಂದು ವ್ಯಾಸಸ್ಮೃತಿ 3 ನೇ ಅಧ್ಯಾಯದ 5 ನೇ ಶ್ಲೋಕ. 18 ನೆಯ ಪಜ್ಜ. 466 ನೆಯ ಪುಟದಲ್ಲಿ ಹೇಳಲ್ಪಟ್ಟಿರುವ ಮೇಲ್ಕಂಡ ಶ್ಲೋಕದಲ್ಲಿ ನಮ್ಮ ನಾಯಿಂದ ಜಾತಿಯವರಲ್ಲಿ ಊಟಮಾಡುವುದು ದೂಷ್ಯವಲ್ಲವೆಂದು ಬರೆಯಲ್ಪಟ್ಟಿದೆ.

ಶ್ಲೋ|| ಅರ್ಧಿಕಃಕುಲಮಿತ್ರಂಚಗೋಪಾಲದಾಸನಾಪಿತೌ | ಏತೇ ಶೂದ್ರೇಷುಭೋಜ್ಯಾನ್ನಾಯಶ್ಚಾತ್ಮಾನಂನಿವೇದಯೇತ್ ‖ ಎಂದು ಮನುಸ್ಮೃತಿ 6 ನೇ ಅಧ್ಯಾಯ, 3 ನೆಯ ಶ್ಲೋಕ 72 ನೆಯ ಪಜ್ಜ 352 ನೆಯ ಪುಟದಲ್ಲಿರುವ ಮೇಲ್ಕಂಡ ಶ್ಲೋಕದಲ್ಲಿ ಹೇಳಲ್ಪಟ್ಟಿದೆ. ವ್ಯವಸಾಯಮಾಡುವವರೂ, ಕುಲಮಿತ್ರರೂ, ಗೊಲ್ಲರೂ, ದಾಸರೂ, ಕ್ಷೌರಿಕರೂ ಮುಖ್ಯ ಸೇವಕರು ಅಂದರೆ ಇವರ ಮನೆಗಳಲ್ಲಿ ಊಟಮಾಡಬಹುದೆಂಬುದು ಈ ಶ್ಲೋಕದ ಅರ್ಥ.

ಶ್ಲೋ|| ನಾಪಿತಾನ್ವಯಮಿತ್ರಾರ್ಧ-ಸಿರಿಣೋದಾಸಗೋಪಿಕಾಃ | ಶೂದ್ರಾಣಾಮಪ್ಯಮಿಷಾಂತು-ಭುಕ್ತ್ವಾನ್ನಂನೈವದುಷ್ಯತಿ ‖ ಅಂದರೆ ಶೂದ್ರರಾದ ಕ್ಷೌರಿಕರು, ಕುಲಮಿತ್ರರು, ಕೃಷಿಕರು, ಗೊಲ್ಲರು ಇವರುಗಳ ಮನೆಗಳಲ್ಲಿ ಬ್ರಾಹ್ಮಣರು ಊಟಮಾಡುವುದು ದೋಷವಲ್ಲವು ಎಂದು ವ್ಯಾಸಸಂಹಿತೆಯಲ್ಲಿ 4 ನೇ ಅಧ್ಯಾಯ, 253 ನೆಯ ಶ್ಲೋಕ. 153 ನೆಯ ಪುಟದಲ್ಲಿ ಹೇಳಲ್ಪಟ್ಟಿದೆ.

ಶ್ಲೋ|| ಶೂದ್ರೇಷು ದಾಸಗೋಪಾಲಕುಲಮಿತ್ರಾರ್ಧಸೀರಿಣಃ | ಭೋಜ್ಯಾನ್ನಾನಾಪಿತಶ್ಚೈವಯಶ್ಚಾತ್ಮಾನಂನಿವೇದಯೇತ್ ‖ ಅಂದರೆ ಶೂದ್ರರಲ್ಲಿ ಮುಖ್ಯ ಸೇವಕರಾದ ದಾಸ, ಗೋಪಾಲ, ಕುಲಮಿತ್ರ, ಕರ್ಷಕ, ಕ್ಷೌರಿಕ, ಆತ್ಮಾರ್ಪಣಮಾಡತಕ್ಕವರು ಅಂದರೆ ಇವರ ಕೈಯಲ್ಲಿ ಬ್ರಾಹ್ಮಣನು ಊಟಮಾಡಬಹುದು ಎಂದು ಯಾಜ್ಞವಲ್ಕ್ಯ, ಪರಾಶರಸ್ಮೃತಿ 11ನೆಯ ಅಧ್ಯಾಯ 21 ನೆಯ ಶ್ಲೋಕ ವಿಷ್ಣುಸ್ಮೃತಿ 57 ನೆಯ ಅಧ್ಯಾಯ 7 ನೆಯ ಪಜ್ಜ 225 ನೆಯ ಪುಟದಲ್ಲಿ ಹೇಳಲ್ಪಟ್ಟಿದೆ. ಈಗಿನ ಬ್ರಾಹ್ಮಣರು ಅವರೊಡನೆ ನಿಸ್ಸಂಶಯವಾಗಿಯೂ ನಿರಾತಂಕವಾಗಿಯೂ ಭೋಜನಮಾಡಬೇಕೆಂದಿರುವುದು. ಇದರಿಂದ ನಮ್ಮ ಜಾತಿಯವರ ಮನೆಗಳಲ್ಲಿ ಎಲ್ಲರೂ ಊಟಮಾಡಬಹುದೆಂದೂ, ಕ್ಷೌರಿಕರು ಉತ್ತಮಜಾತಿಯವರೆಂದೂ, ವ್ಯಕ್ತವಾಗುತ್ತದೆ. ಇನ್ನುಮೇಲಾದರೂ ಪ್ರತಿಯೊಂದು ಗ್ರಾಮದಲ್ಲೂ ನಮ್ಮವರು ಸಂಘವನ್ನೇ ಸ್ಥಾಪಿಸಿಕೊಂಡು, ಕುಲಾಭಿವೃದ್ಧಿ ಸಾಧಕವಾದ ಕಾರ್ಯಗಳನ್ನು ಮಾಡಿ ಕೀರ್ತಿವಂತರಾಗುವರೆಂದು ನಿರೀಕ್ಷಿಸುತ್ತೇನೆ. ಡಾಕ್ಟರ್ ರೇವತೀಪ್ರಸಾದ ಶರ್ಮರವರು ಬಹಳ ವ್ಯಯಮಾಡಿ ಪ್ರಯಾಸಪಟ್ಟು ಇಂಡಿಯಾ ಪ್ರಭುತ್ವದವರಲ್ಲಿ ಕಾದಾಡಿ ಇನ್ನು ಮುಂದೆ ನಮ್ಮ ಜಾತಿಯವರು "ನಾಯಿಂದ ಬ್ರಾಹ್ಮಣರು" ಎಂದು ಜನಗಣತಿಯಲ್ಲಿ ಬರೆಯುವಂತೆ ಅಪ್ಪಣೆಮಾಡಿರುತ್ತಾರಲ್ಲದೆ ಈ ಜಾತಿಯ ಗೌರವಪ್ರತಿಷ್ಠೆಗಳಿಗಾಗಿ ಬಹಳ ಪ್ರಯಾಸಪಡುತ್ತಿದ್ದಾರೆ. ನಮ್ಮ ದೇಶದಲ್ಲಿ ಬೇರೆ ಬೇರೆ ಹೆಸರಿನಿಂದ ಅನೇಕ ಶಾಖೆಗಳಿದ್ದು ಒಬ್ಬರನ್ನೊಬ್ಬರು ಭಿನ್ನಭಾವದಿಂದ ನೋಡುವರು. ಹಾಗೆ ಮಾಡದೆ ಒಂದೇ ಮನೆಯವರಂತೆ ಎಲ್ಲರೂ ಒಂದಾಗಿ ಸಂಘೀಭವಿಸಿ ಜಾತಿ ಸೇವೆಮಾಡಿ ಕೀರ್ತಿಯನ್ನು ತರತಕ್ಕದ್ದು. ಅಖಿಲಭಾರತ ನಾಯಿಂದ ಬ್ರಾಹ್ಮಣ ಮಹಾಸಭೆಯವರ ಅಭಿಪ್ರಾಯ [illegible] ಹೆಸರಿನಿಂದ ಕರೆಯಲ್ಪಡಬೇಕು. ಯಾವ [illegible] ವರೋ ಆ ಜಾತಿಯ ಹೆಸರನ್ನು [illegible] ಮತ್ತು ತಮ್ಮ ಜಾತಿಸೇವೆ ಮಾಡಬೇಕು. [illegible]

ಬರುವ ದಸರಾ ಪ್ರಜಾಪ್ರತಿನಿಧಿಸಭೆಯಲ್ಲಿ ಚರ್ಚಿಸಲು ಚಿಕ್ಕಮಗಳೂರು ಬಿ. ಪಿ. ಬಸಪ್ಪಶೆಟ್ಟರು ಕೆಳಗೆ ಕಂಡ ನಿರ್ಣಯ, ಅರಿಕೆ ಮತ್ತು ಪ್ರಶ್ನೆಗಳನ್ನು ಕಳುಹಿಸಿದ್ದಾರೆ.

(1) ಮೈಸೂರಲ್ಲಿರುವ ಸರ್ಕಾರಿ ಸಂಸ್ಕೃತಕಾಲೇಜಿಗೆ ಎಲ್ಲರನ್ನೂ ಸೇರಿಸಬೇಕೆಂದು ಈ ಸಭೆಯು ಶ್ರೀಮನ್ಮಹಾರಾಜಾ ಸರ್ಕಾರದವರಿಗೆ ಶಿಫಾರಸು ಮಾಡುತ್ತದೆ.

(2) ಮೈಸೂರು ದೇಶದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೆಚ್ಚು ಪ್ರಚಾರಮಾಡುವ ಸಂಭವದಲ್ಲಿ ಒದಗಬಹುದಾದ ಎಲ್ಲಾ ಖರ್ಚನ್ನೂ ಡಿಸ್ಟ್ರಿಕ್ಟು ಬೋರ್ಡಿನವರ ಮೇಲೆ ಹಾಕದೆ ಸರ್ಕಾರದವರೇ ಅದನ್ನು ವಹಿಸಬೇಕಾಗಿ ಈ ಸಭೆಯು ಶ್ರೀಮನ್ಮಹಾರಾಜ ಸರ್ಕಾರದವರಿಗೆ ಶಿಫಾರಸು ಮಾಡುತ್ತದೆ.

ಘನಸರ್ಕಾರದವರು ಈ ಕೆಳಗೆ ಕಾಣಿಸಿದ ವಿಷಯಗಳನ್ನು ತೀರ್ಮಾನಿಸುವರೇ ?

(*a*) ಕಡೂರು ತಾಲ್ಲೂಕು ಯಗಟಿ ಗ್ರಾಮದಲ್ಲಿ ಶ್ರೀ ಮಲ್ಲಿಕಾರ್ಜುನಸ್ವಾಮಿಯ ಪೂಜಾ ಸಂಬಂಧದಲ್ಲಿ ಸ್ಮಾರ್ತರಿಗು ಮತ್ತು ವೀರಶೈವರಿಗು ವ್ಯಾಜ್ಯವಾಗಿದ್ದು ಯಾವಾಗ ? ಇದಕ್ಕೆ ಕಾರಣಗಳೇನು ?

(*b*) ಆದಿಯಿಂದಲೂ ಈ ದೇವರನ್ನು ಪೂಜೆಮಾಡುತ್ತಿದ್ದವರು ಯಾವ ಪಂಗಡಕ್ಕೆ ಸೇರಿದವರು ? ಈಗ ಅವರನ್ನು ಬದಲಾಯಿಸಲು ಕಾರಣವೇನು ?

(*c*) ವರ್ಷವೆಲ್ಲಾ ವೀರಶೈವ ಪೂಜಾರಿಯು ದೇವರನ್ನು ಪೂಜೆಮಾಡಿ ವರ್ಷಾಂತ್ಯದಲ್ಲಿ ಉತ್ಸವಕ್ಕೆ ಮೂರ್ತಿಯನ್ನು ಹೊರಡಿಸುವಾಗ ಈ ವೀರಶೈವ ಪೂಜಾರಿಯು ಗರ್ಭಗುಡಿಗೆ ಪ್ರವೇಶಮಾಡಲು ಅವಕಾಶವಿಲ್ಲದೆ ಇರುವುದು ಮತ್ತು ಸ್ಮಾರ್ತ ಪೂಜಾರಿಯು ಆ ದಿವಸ ಮಾತ್ರ ಒಳಗೆ ಪ್ರವೇಶಿಸಿ ಅಭಿಷೇಕ ಪೂಜೆ ವಗೈರೆ ಮಾಡುತ್ತಿರುವುದು ನಿಜವೇ ?

(*d*) ಮೇಲ್ಕಂಡ ವ್ಯಾಜ್ಯದಲ್ಲಿ ಸರ್ಕಾರದವರು ಹೊರಡಿಸಿರುವ ಆರ್ಡರನ್ನು ಸರ್ಕಾರದವರು ಸಭೆಯ ಮುಂದಿಡುವರೇ ?

(1) ಮದ್ರಾಸಿನಲ್ಲಿರುವ ಹಾಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೀನಿಯರ್ ಇಂಟರ್ಮೀಡಿಯಟ್ ಪರೀಕ್ಷೆಯಲ್ಲಿ ಗ್ರೂಪ್ ಸಿಸ್ಟಂ ಪದ್ಧತಿಯನ್ನು ಇಡಿಸಿಕೊಡುವಂತೆ ಮಾಡಬೇಕಾಗಿ ಪ್ರಾರ್ಥನೆ.

(2) ಸೀನಿಯರ್ ಇಂಟರ್ಮೀಡಿಯಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ವಿದ್ಯಾರ್ಥಿಗಳಿಗೆ 6 ತಿಂಗಳಿಗೊಮ್ಮೆ ಪರೀಕ್ಷೆ ಕಟ್ಟುವಂತೆ ಅನುಕೂಲವನ್ನು ಕಲ್ಪಿಸಿಕೊಡಬೇಕಾಗಿ ಪ್ರಾರ್ಥನೆ.

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂಪಾದಕ.

ಹೋಲೀಕೆರೆ ನಂಜಪ್ಪನವರ ವಿಲ್ಲು.

ತಾ|| 29-8-32 ನೇ ಸ್ಟಾರ್ ಪತ್ರಿಕೆಯ 4 ನೇ ಪುಟದಲ್ಲಿ ಪ್ರಾರಂಭವಾಗಿ 5 ನೇ ಪುಟದಲ್ಲಿ ಅಂತ್ಯವಾಗಿರುವ ದೈವಭಕ್ತಿ ಎಂಬ ಸಿರೋಲೇಖನದಲ್ಲಿ ವಿವರಿಸಿರುವ ನನ್ನ ಗಂಡ ಗತಿಸಿದ ನಂಜಪ್ಪನವರು ಮೊದಲು ತಾ|| 31-5-32 ರಲ್ಲಿ ಬರೆದಿದ್ದ ವಿಲ್ಲನ್ನು ಕ್ಯಾನ್ಸಲ್ ಮಾಡಿ ಪುನಃ ತಾ|| 8-6-32 ರಲ್ಲಿ ಮತ್ತೊಂದು ವಿಲ್ಲನ್ನು ಮ|| ಹೋದಿಗ್ಗೆರೆ ಲಕ್ಷ್ಮೀಶ್ವರದ ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಬರೆಸಿ ಸದರಿ ವಿಲ್ಲು ಪ್ರಕಾರ ಯಾವತ್ತಿನಷ್ಟು ಧರ್ಮಕಾರ್ಯಗಳನ್ನು ಹೊ|| ಮಲ್ಲಪ್ಪನವರೇ ತಮ್ಮ ಮರಣಾಂತರ ನಡಸಬೇಕಾಗಿ ವಿಲ್ಲು ಬರೆಸಿ ತಾ|| 16-6-32 ರಲ್ಲಿ ಶಿವಾಧೀನವಾದರು. ಮೃತರ ಉತ್ತರಕ್ರಿಯಾದಿಗಳು ವಿಧಿವತ್ತಾಗಿ ನಡೆಯಲ್ಪಟ್ಟವಲ್ಲದೆ ಮೃತರ ಸದ್ಗತಿಯ ಬಗ್ಗೆ ಮುಂದೆ ಮಾಡಬೇಕಾದ ಧರ್ಮಕಾರ್ಯಗಳು ಸಾಂಗವಾಗಿ ಆಯಾಯ ಕಾಲವರಿತು ನಡಸಲ್ಪಡುತ್ತೆಂಬ ವಿಷಯ ಈ ಮೂಲಕ ಸಮಸ್ತರಿಗೂ ವಿಜ್ಞಾಪಿಸಿಕೊಂಡಿರುತ್ತೇನೆ.

ಶಿವಮೊಗ್ಗ ಹೋಲೀಕೆರೆ ನಂಜಪ್ಪನವರ ಧರ್ಮಪತ್ನಿ, ಬಸಮ್ಮ.

ಆದವಾಸಿ ಸಮಾಚಾರ.

ಈ ಗ್ರಾಮದಲ್ಲಿ ನೀರಿಲ್ಲದೆ ಉಂಟಾಗಿದ್ದ ಕಷ್ಟವು ಮಳೆಬಂದು ನಿವಾರಣೆಯಾಯಿತು. ಇದರಿಂದ ಬಡಬಗ್ಗರ ಜೀವನಕ್ಕೆ ಮಾರ್ಗವಾಯಿತಲ್ಲದೆ ಅರಳೆ ಧಾರಣೆ 60 ರೂ. ಇದ್ದದು 102 ವರೆಗೇರಿಕೊಂಡು ಕೊಳ್ಳುವವರಿಗೆ ಆದಾಯಬರುವಂತಾಗಿ ಎಲ್ಲರಿಗೂ ಸಂತೋಷವಾಗಿದೆ. ಇಲ್ಲಿ ರೋಗಾದಿಗಳೇನೂ ಇಲ್ಲ. ಆದರೆ ಈಚೆಗೆ ಮಳೆಯಿಲ್ಲ, ಬಿಸಿಲಿನ ತಾಪ ಹೆಚ್ಚಾಗಿದೆ. ಬಿರುಗಾಳಿಯು ತೀಕ್ಷ್ಣವಾಗಿ ಬೀಸುವದರಿಂದ ಕೋಳಿಗಳು ಹೆಚ್ಚಾಗಿ ಸಾಯುತ್ತಿವೆ. ಪೈರುಗಳು ಚೆನ್ನಾಗಿರುತ್ತವೆ, ಆದರೆ ಕೂಡಲೆ ಮಳೆಯಾಗಬೇಕಾಗಿರುತ್ತದೆ. ಇಲ್ಲಿ ಮುನಿಸಿಪಲ್ ಪ್ರೆಸಿಡೆಂಟರೂ ಹೆಲ್ತಾಫೀಸರೂ ಊರಿನಲ್ಲಿ ಶಿರುಗಾಡಿ ಬೀದಿಗಳನ್ನು ಚೊಕ್ಕಟವಾಗಿಡಿಸಿರುತ್ತಾರೆ. ಆಸ್ಪತ್ರೆಗೆ ಈಗ ಬಂದಿರುವ ಡಾಕ್ಟರು ಬಹಳ ಶ್ರದ್ಧೆಯಿಂದಲೂ ಪ್ರೀತಿಯಿಂದಲೂ ರೋಗಿಗಳಿಗೆ ಔಷಧೋಪಚಾರವನ್ನು ಮಾಡುತ್ತಿರುವುದರಿಂದ ದಿನವಹಿ ಬರತಕ್ಕ ಜನರ ಸಂಖ್ಯೆಯು 700 ವರೆಗೆ ಹೆಚ್ಚಿದೆ. ಇಂಥಾ ಗುಣಾಢ್ಯ ಡಾಕ್ಟರು ದೊರಕಿರುವುದು ಗ್ರಾಮದವರ ಪುಣ್ಯವೆಂದು ಜನರು ಹೊಗಳುತ್ತಿರುವರು. ಗ್ರಾಮದ ಪೇಟೆಯಲ್ಲಿರುವ ಶ್ರೀ ವಿರಭದ್ರಸ್ವಾಮಿ ದೇವಸ್ಥಾನದಲ್ಲಿ ಶಿವಪುರಾಣಶ್ರವಣಕ್ಕೇರ್ಪಾಟಾಗಿರುತ್ತದೆ. ಗ್ರಾಮಸ್ಥರ ಈ ವಿಧವಾದ ದೈವಭಕ್ತಿಯಿಂದ ಕಾಲ ಕಾಲಕ್ಕೆ ಸಾಕಾದಷ್ಟು ಮಳೆ ಬೆಳೆಯಾಗಿ ಸುಭಿಕ್ಷವಾಗಿರುವುದೆಂದು ನಿರೀಕ್ಷಿಸುತ್ತೇನೆ.

ಸ್ಥಳವಾಸಿ.

ಉತ್ತರಾಧಿಕಾರಕ್ಕೆ ವಟು ಚುನಾವಣೆ.

ಕೋಲಾರ ಡಿ|| ಬಾಗೆಪಲ್ಲಿ ತಾ|| ಗೂಳೂರಲ್ಲಿರುವ ಶ್ರೀಮನ್ನಿಜಗುಣಮೂರ್ತಿ ಸಂಸ್ಥಾನ ಮಠವು ನಮ್ಮ ವೀರಶೈವಮತದ ಪಂಚಪೀಠಗಳಲ್ಲಿ ಒಂದಾಗಿರುತ್ತದೆ. ಕಳೆದ ಶ್ರಾವಣ ಶು|| ಪೌರ್ಣಮಿ ದಿವಸ ಆದ್ಯಗುರುಗಳ ಆರಾಧನೆಯು ಮಾಮೂಲಿನಂತೆ ನಡೆದಿತು. ಈ ಪೀಠಾಧಿಪತಿಗಳಾದ ಪಂಡಿತಾರಾಧ್ಯರ ಅಪ್ಪಣೆಯಮೇರಿಗೆ ಅವರ ಉತ್ತರಾಧಿಕಾರಕ್ಕೆ ವಟು ಚುನಾವಣೆ ಮಾಡಲು ಅನೇಕ ಶಿಷ್ಯರುಗಳಿಂದ ಕೂಡಿದ ಒಂದು ಸಭೆಯು ಬ|| ಪಾಡ್ಯಮಿಯಲ್ಲಿ ಜರುಗಿ ಬಂದಿದ್ದ ಪಂಡಿತಾರಾಧ್ಯ ವಟುಗಳ ಪೈಕಿ ಎಂ. ಜಿ. ನಂಜುಂಡಾರಾಧ್ಯ ಗುಂಡ್ಲಹಳ್ಳಿ, ತೊಗರಿಘಟ್ಟದ ಮಠದ ಕರಿಬಸವಾರಾಧ್ಯ, ಡಿಪೋ ಮಠದ ಗಂಗಾಧರಾರಾಧ್ಯ, ಯಲಚಿಗೆರೆ ಮಠದ ಗುರುನಂಜಾರಾಧ್ಯ, ಸದರಿ ಮಠದ ಜಯರುದ್ರಾರಾಧ್ಯ ಈ ವಟುಗಳನ್ನು ಶ್ರೀ ಸ್ವಾಮಿಯವರ ಮತ್ತು ಸಭಿಯರ ಒಪ್ಪಿಗೆಮೇರೆ ಚುನಾಯಿಸಿ ಈ ವಟುಗಳಿಗೆ ಈ ಲಾಗಾಯತು ಸಂಸ್ಥಾನದವರೇ ವಿದ್ಯಾಭ್ಯಾಸಮಾಡಿಸಿ ಅವರುಗಳ ಪೈಕಿ ಉತ್ತೀರ್ಣರಾದ ಒಬ್ಬ ವಟುವಿಗೆ ಪೀಠಾಧಿಕಾರ ಮಾಡಬೇಕೆಂಬದಾಗಿ ತೀರ್ಮಾನವಾಯಿತು. ಇವರ ವಿದ್ಯಾಭ್ಯಾಸಕ್ಕಾಗಿ ಇದೇ ಸಂಸ್ಥಾನದಲ್ಲಿ ಶ್ರೀ ಸ್ವಾಮಿಯವರು ಕಟ್ಟಿಸಿರುವ ಪಾಠಶಾಲಾ ಕಟ್ಟಡದಲ್ಲಿ ಇನ್ನೂ ಬರತಕ್ಕ ವಟುಗಳನ್ನು ಸೇರಿಸಿಕೊಂಡು ವಿದ್ಯಾಭ್ಯಾಸಮಾಡಿಸಬಹುದೆಂತಲೂ ಮೇಲೆ ನಮೂದಿಸಿರುವ ವಟುಗಳಿಗೆ ಮಾತ್ರ ಸಂಸ್ಥಾನದ ಸ್ವಂತ ಖರ್ಚಿನಿಂದಲೂ ಬಾಕಿ ಬರತಕ್ಕ ವಟುಗಳಿಗೆ ವಿದ್ಯಾಫಂಡನ್ನು ಏರ್ಪಾಟುಮಾಡಿ ಸದರಿ ಫಂಡಿನಿಂದ ಅನ್ನೋದಕಗಳನ್ನು ಮಾತ್ರ ನಡೆಸುವಂತೆ ಸಹ ತೀರ್ಮಾನವಾಯಿತು. ಈ ವಿದ್ಯಾಭ್ಯಾಸಕ್ಕಾಗಿ ಆಗುವ ಖರ್ಚುಗಳನ್ನು ಪಂಡಿತಾರಾಧ್ಯರೂ ಇನ್ನೂ ಅನೇಕ ಮಹನೀಯರುಗಳೂ ಉದಾರಭಾವವನ್ನು ವಹಿಸಿ ಈ ಫಂಡಿಗೆ ಸಹಾಯಮಾಡಿ ಈ ಪಾಠಶಾಲೆಯನ್ನು ಅಭಿವೃದ್ಧಿಸ್ಥಿತಿಗೆ ತರುವರೆಂದು ನಂಬಿದ್ದೇನೆ ಮತ್ತು ಹಾಲಿ ಸಂಸ್ಥಾನದ ಸರ್ವಾಧಿಕಾರಿಗಳಾದ ಎಂ. ರುದ್ರಶಾಸ್ತ್ರಿಗಳವರು ತುಂಬಾ ಮುತುವರ್ಜಿವಹಿಸಿ ಫಂಡನ್ನು ಅಭಿವೃದ್ಧಿಪಡಿಸಿ ಪಾಠಶಾಲೆಯನ್ನು ಶ್ರೇಯೋಭಿವೃದ್ಧಿಗೆ ತರುತ್ತಾರೆಂದು ನಂಬಿದೆ. ಮೀಟಿಂಗಿನಲ್ಲಿ ಯಲಚಿಗೆರೆ ವೇ|| ಮಠದ ಗಂಗಾಧರಶಾಸ್ತ್ರಿ ಶಿವಕಥಾದಾಸರಿಂದ ಮಾರ್ಕಂಡೇಯ ಮತ್ತು ಗಿರಿಜಾಕಲ್ಯಾಣ ಕಥೆಗಳನ್ನೂ ಸಂಗೀತಕಚೇರಿಯನ್ನೂ ಮಾಡಿಸಿ ಶ್ರೀ ವೀರಭದ್ರದೇವರ ಉತ್ಸವಾದಿಗಳನ್ನು ಅತಿ ಸಂಭ್ರಮದಿಂದಲೂ ಬ್ಯಾಂಡು ಕಳಾರೆಟ್ ವಾದ್ಯಗಳಿಂದಲೂ ನೆರವೇರಿಸಿ ಗಂಧಪುಷ್ಪ ತಾಂಬೂಲಾದಿಗಳಿಂದ ಸಭಿಕರನ್ನು ತೃಪ್ತಿಗೊಳಿಸಿ ಶ್ರೀ ಗುರುಗಳಿಂದ ಆಶೀರ್ವಾದಪಡೆದು ಶ್ರೀಮನ್ಮಹಾರಾಜರ ಶ್ರೇಯಃಪ್ರಾರ್ಥನೆಯಿಂದ ಸಭಾಬರಖಾಸ್ತು ಮಾಡಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಶ್ರಾವಣಮಾಸದ ಪೂಜಾವಿಯೋಗವು

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀಮದನಂತಪುರದ ಮುರುಘಾಮಠದ ಶ್ರೀಸಚ್ಚಿದಾನಂದ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಶ್ರಾವಣಮಾಸದ ಪೂಜೆಯು ಪದ್ಧತಿ ಪ್ರಕಾರ ಕಳೆದ ಶ್ರಾವಣ ಶು|| ೧ ಆರಭ್ಯ ಮಾಸಾಂತ್ಯದ ವರೆವಿಗೂ ಗಣಾರಾಧನೆ, ಶಿವಭಜನೆ, ಶಿವಕೀರ್ತನೆ, ಸಂಗೀತಾದಿ ವಾದ್ಯವೈಭವಗಳೊಡನೆ ಬಹು ವಿಜೃಂಭಣೆಯಿಂದ ಸಾಂಗವಾಗಿ ಜರುಗಿತು. ೧ ನೇ ಸೋಮವಾರ ಮ|| ಗಳಾದ ಹೊನ್ನಾಳಿ ತಾ|| ನೇಮತಿ ಗದ್ದಿಗಪ್ಪನವರ ಸಿದ್ಧಲಿಂಗಪ್ಪನವರ ಪುತ್ರ ಸಿದ್ಧಬಸಪ್ಪನವರು, ನೇಮತಿ ಮೊರವಣಗಿ ವೀರಪ್ಪನವರು ಇವರ ತಮ್ಮ ಮುರಿಗೆಪ್ಪನವರು, ಭದ್ರಾವತಿ ಸಜ್ಜನರ ಮಲ್ಲಪ್ಪಶೆಟ್ಟರು ಇವರುಗಳ ಸೇವೆಯೂ, ೨ ನೇ ಸೋಮವಾರ ಮ|| ಗಳಾದ ಅನಂತಪುರದ ಪೇಟೆಶೆಟ್ಟರು ಶಿವಪ್ಪನವರು, ಇವರ ತಮ್ಮ ಮುದ್ದಪ್ಪನವರು, ಅನಂತಪುರದ ದುಗ್ಗಾಣಿ ಚನ್ನಪ್ಪಶೆಟ್ಟರು ಇವರುಗಳ ಸೇವೆಯೂ, ೩ ನೇ ಸೋಮವಾರ ಮ|| ಗಳಾದ ಕಾಫಿ ಪ್ಲಾಂಟರ್ ಸಿ. ಪಿ. ಬಸವೇಗೌಡರ ಸೇವೆಯೂ, ೪ ನೇ ಸೋಮವಾರ ಮ|| ಕುಣೇ ಹೊಸೂರು ಪ|| ನಾಗಲಿಂಗಪ್ಪಗೌಡರಿಂದ ಇದೇ ಗ್ರಾಮದ ಕೈಲಾಸವಾಸಿ ರುದ್ರಪ್ಪಯ್ಯನವರ ಆತ್ಮಶಾಂತ್ಯರ್ಥವಾಗಿ ನಡೆಯಿಸಿದ ಸೇವಾಸತ್ಕಾರವೂ, ಬ|| ೩೦ ಅಮಾವಾಸ್ಯೆ ಬುಧವಾರ ಮ|| ಸಾ|| ಸಾಗರದ ಗೊಜ್ಜುನೂರು ಚನ್ನಪ್ಪಶೆಟ್ಟರ ಸೇವಾಸತ್ಕಾರವೂ. ಈ ಪ್ರಕಾರ ಮೇಲ್ಕಂಡ ಭಕ್ತಮಹಾಶಯರಿಂದ ಮಹಾಪೂಜಾನಂತರ ಗಣಾರಾಧನೆಯೂ ಅತಿಥಿ ಅಭ್ಯಾಗತರಿಗು ಸಹ ಆನಂದವಾಗಿ ನಡೆಯಿಸಲ್ಪಟ್ಟವು. ಈ ಮಾಸಾಂತ್ಯದವರೆಗೂ ವೇ|| ಕೂಡಿಗೇರಿ ಹಂಚಿನಮಠದ ಸಿದ್ಧಾರಾಧ್ಯರವರಿಂದ ವೇದಾಧ್ಯಯನ, ರಾಜೋಪಚಾರ ಸಹಸ್ರ ಬಿಲ್ವಾರ್ಚನೆ ಮೊದಲಾದ ವೈದಿಕ ಕರ್ಮವು ವಿಧ್ಯುಕ್ತವಾಗಿ ನಡೆಸಲ್ಪಟ್ಟಿತು. ಪ್ರತಿ ಸೋಮವಾರವೂ ವ|| ಶಾನಭೋಗ ಏಕಾಂಬರೇಶ್ವರಭಟ್ಟರವರಿಂದ ಭಕ್ತಿಪುರಸ್ಸರವಾದ ಶಿವಕೀರ್ತನೆಯು ಸಭಿಕರಿಗೆ ಆನಂದವಾಗುವಂತೆ ಮಾಡಲ್ಪಟ್ಟಿತು. ಈ ಮಧ್ಯೆ ೩ ನೇ ಸೋಮವಾರ ವೇ|| ಶಿವಕಥಾಪಂಡಿತ ನಂಜುಂಡಾರಾಧ್ಯಶಾಸ್ತ್ರಿ, ಹುಣಸಘಟ್ಟದ ಹಿರೇಮಠ ಇವರುಗಳಿಂದ ಪಂಡಿತ ಪಾಮರರಿಗೂ ಆನಂದವಾಗುವಂತೆ ಬಹುಸ್ವಾರಸ್ಯವಾಗಿ ಶಿವಕೀರ್ತನೆಯು ಮಾಡಲ್ಪಟ್ಟಿತು. ಈ ಪ್ರಾಂತ್ಯದ ಭಕ್ತಮಹಾಶಯರು ಯಥಾಶಕ್ತಿ ಸೇವಾ ಸಮರ್ಪಿಸಿ ಮಹಾಸನ್ನಿಧಿಯ ದರ್ಶನಾಶೀರ್ವಾದಕ್ಕೆ ಪಾತ್ರರಾಗುತ್ತಿದ್ದರು. ವೇ|| ಗ್ರಾಮದ ಮಠದ ಜುಮ್ಮನ ಬಸವಯ್ಯನವರ ಪೋಷಕರಾದ ಸದರಿ ಗ್ರಾಮದ ಪ್ರಮಥ ಪುಂಗವ ಶ್ರೀ ಬಸವೇಶ್ವರ ಭಜನಾ ಸಂಘದ ಬಾಲಕರ ಸಂಗೀತಾದಿಗಳಿಂದ ಯುಕ್ತವಾದ ಶಿವಭಜನೆಯು ಬಹು ಇಂಪಾಗಿ ನಡೆಯಿತು. ಹೊಸನಗರ ತಾ|| ನಗರವಾಸಿಗಳಾದ ವರ್ತಕ ಮ|| ತೋಟಪ್ಪಶೆಟ್ಟರು ತಮ್ಮ ಭಕ್ತಿಪೂರ್ವಕವಾದ ವಾಗ್ದಾನದ ಮೇರಿಗೆ ೧೦೧ ತೊಲ ಬೆಳ್ಳಿಯನ್ನೂ ಚಾಮರಗಳ ಬಗ್ಗೆ ಶಿವಾರ್ಪಿತವಾಗಿ ಸಮರ್ಪಿಸಿ ಮಹಾ ಸನ್ನಿಧಿಯ ಕೃಪಾಶೀರ್ವಾದಕ್ಕೆ ಪಾತ್ರರಾದರು. ಈ ಸಮಾರಂಭೋತ್ಸವದ ಉಸ್ತುವಾರಿ ಬಗ್ಗೆ ಮೈಸೂರು ಸರ್ಕಾರದಿಂದ ಒಬ್ಬ ಕಾನ್ಸ್ಟೇಬಲ್ಲನ್ನು ಮಾಸಾಂತ್ಯದವರೆಗೂ ದಯಪಾಲಿಸೋಣವಾಗಿತ್ತು. ಪ್ರತಿ ನಿತ್ಯವೂ ಮಂಗಲ ನಂತರ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ಮುಕ್ತಾಯಗೊಳಿಸಲ್ಪಡುತ್ತಿತ್ತು.

ಮುರಘಾ ಮಠದ ಏಜಂಟ್‌ದಾರ್ ಚನ್ನಬಸವದೇವರು.

ಬೇಲೂರು ತಾ|| ಕೋಗೋಡಿನಲ್ಲಿ ಸಂತೋಷಕೂಟ.

ಈ ಗ್ರಾಮಕ್ಕೆ ಸಮೀಪದಲ್ಲಿರುವ ಹಾಗೇನಹಳ್ಳಿ ಆಸ್ಪತ್ರೆಯಲ್ಲಿ ಮೆಡಿಕಲ್ ಆಫೀಸರಾಗಿದ್ದ ಡಾಕ್ಟರ್ ಶ್ರೀನಿವಾಸಲು ನಾಯುಡುರವರ ಸರ್ಕಾರಿ ಕೆಲಸದಲ್ಲಿ ಪ್ರಾರ್ಥಿಸಿ ಗುಜರಾಯಿಸಿಕೊಂಡ ಅರ್ಜಿಗಳು, ದಿನಗ್ರಾಮದ [illegible] ನಿಷ್ಪ್ರಯೋಜನವಾಗಿ ಡಾ|| ನಾಯುಡುರವರಿಗೆ ಕೋಲಾರ ಡಿ|| ಬಂಗಾರಪೇಟೆಗೆ ವರ್ಗವಾದ ಪ್ರಯುಕ್ತ "ಇವರಲ್ಲಿ ತಮಗಿದ್ದ ಪ್ರೀತಿ ವಿಶ್ವಾಸಗಳನ್ನು ವ್ಯಕ್ತಪಡಿಸಲು, ತಾ|| 22-8-32 ನೇ ಸೋಮವಾರ ಸರ್ವರೂ ದಯಮಾಡಿಸಬೇಕೆಂದು ಗ್ರಾಮ ನಿವಾಸಿಗಳ ಪರವಾಗಿ ಕಾಫಿ ಪ್ಲಾಂಟರ್ ಕೋಗೋಡು ಪಟೇಲ್ ಮಲ್ಲೇಗೌಡರವರು ಆಹ್ವಾನ ಪತ್ರಿಕೆಗಳನ್ನು ಕಳುಹಿಸಿದ್ದರು. ಸಕಾಲಕ್ಕೆ ಸರಿಯಾಗಿ ಸ್ವಾಗತ ಮಂಡಲಿಯವರು ಮಂಗಳವಾದ್ಯಗಳೊಡನೆ ಡಾ|| ಶ್ರೀನಿವಾಸಲು ನಾಯುಡುರವರನ್ನೂ, ಅವರ ಜಾಗಕ್ಕೆ ಬಂದಿರತಕ್ಕ ಹೊಸ ಡಾಕ್ಟರ್ ಅಬ್ದುಲ್ ಹಕ್ ಕಲೀಲ್‌ರವರನ್ನೂ ಕರೆತಂದು ತೋರಣ ಪತಾಕೆಗಳಿಂದ ಅಲಂಕೃತವಾದ ತಮ್ಮ ದಿವ್ಯ ಮಂದಿರಕ್ಕೆ ಬರಮಾಡಿಕೊಂಡು ಡಾ|| ಎಂ. ಆರ್. ಕಲೀಲ್‌ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಪ್ರಾರಂಭಿಸಿದರು. ಆಸುಪಾಸು ಗ್ರಾಮಾಂತರಗಳಿಂದಲೂ, ಹಾಸನ, ಚಿಕ್ಕಮಗಳೂರು ಮುಂತಾಗಿ ದೂರ ಪ್ರದೇಶಗಳಿಂದಲೂ ಕಾಫಿ ಪ್ಲಾಂಟರುಗಳು, ಸ್ಕೂಲ್ ಮಾಸ್ಟರುಗಳು, ಬಾಲಕ ಬಾಲಕಿಯರುಗಳು, ವರ್ತಕರುಗಳೇ ಆದಿಯಾಗಿ ಅನೇಕ ಹಿಂದು ಮತ್ತು ಮಹಮದೀಯ ದೊಡ್ಡ ಮನುಷ್ಯರುಗಳು ದಯಮಾಡಿಸಿ ಈ ಸಭೆಯನ್ನು ಅಲಂಕರಿಸಿದ್ದರು. ಈ ಪ್ರಾಂತ್ಯಕ್ಕೆ ಇದೇ ಮೊದಲನೆಯ ಸಂತೋಷಕೂಟವಾಗಿ ತಿಳಿಯಬರುತ್ತದೆ. ಅಧ್ಯಕ್ಷರ ಪ್ರಥಮ ಭಾಷಣದೊಂದಿಗೆ ದೇವತಾ ಪ್ರಾರ್ಥನೆಯೂ, ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯೂ ಜರುಗಿದವು. ಮ|| ಗಳಾದ ಕಾಫಿ ಪ್ಲಾಂಟರ್ ಬಿ. ಎಂ. ದ್ಯಾವೇಗೌಡರೂ, ಕೋಗೋಡು ಸ್ಕೂಲ್ ಮಾಸ್ಟರ್ ಜಿ. ಟಿ. ದಾಸಪ್ಪನವರೂ, ಚೀಕನಹಳ್ಳಿ ಸ್ಕೂಲ್ ಮಾ|| ಟಿ. ಕೆ. ಪುಟ್ಟೇಗೌಡರೂ, ಕೋಗೋಡು ರೈಟರ್ ಹೆಚ್. ಸಿ. ರುದ್ರಪ್ಪನವರೂ ತಮ್ಮ ತನುಮನಧನಗಳನ್ನು ಅರ್ಪಿಸಿ, ಈಗ್ಗೆ 3 ವರ್ಷ 8 ತಿಂಗಳುಗಳಿಂದಲೂ, ದೇಶಸೇವೆಯಲ್ಲಿ ನಿರತರಾಗಿದ್ದ ಡಾ|| ನಾಯುಡುರವರ ಅಗಲಿಕೆಯಿಂದುಂಟಾದ ದುಃಖವನ್ನು ಸೂಚಿಸಿ ಅವರ ಅಮೋಘವಾದ ದಿವ್ಯ ಗುಣಕಥನವನ್ನೂ, ಚಿರಕಾಲಸ್ಮರಣೀಯವಾದ ಪರೋಪಕಾರವನ್ನೂ ಬಣ್ಣಿಸಿ, ಬಹು ದೀರ್ಘಕಾಲ ಬಹಳ ಸ್ವಾರಸ್ಯವಾಗಿ, ವಿಷಯಗರ್ಭಿತವಾದ ಉಪನ್ಯಾಸಗಳನ್ನು ಮಾಡಿದರು. ಸಭಿಕರ ಇಷ್ಟದಂತೆ, ಗಂಧ ಪುಷ್ಪ ತಾಂಬೂಲಗಳ ಸಹಿತವಾದ ಬಹುಮಾನಗಳೂ, ಭಿನ್ನವತ್ತಲೆಯೂ, ಕಾಫಿ ಪ್ಲಾಂಟರ್ ಕೋ|| ಪ|| ಮಲ್ಲೇಗೌಡರವರಿಂದ ಡಾ|| ನಾಯುಡುರವರಿಗೆ ಅರ್ಪಿಸಲ್ಪಟ್ಟವು.

ಅನಂತರ ಡಾ|| ನಾಯುಡುರವರು, ಮೊದಲಿನಿಂದಲೂ ತಮಗೂ ಮಲೆನಾಡಿನ ಜನರಾದ ನಮಗೂ ಉಂಟಾದ ಪ್ರೀತಿ ವಿಶ್ವಾಸಗಳನ್ನು ವ್ಯಕ್ತಪಡಿಸಿ, ಉಪನ್ಯಾಸಗಳನ್ನು ಮಾಡಿದವರನ್ನು ಶ್ಲಾಘಿಸಿ, ಡಾ|| ಎಂ. ಆರ್. ಕಲೀಲ್‌ರವರ ಮತ್ತು ತಮ್ಮ ವಿದ್ಯಾಭ್ಯಾಸ, ಸ್ನೇಹ ಮೊದಲಾದುವುಗಳನ್ನೂ, ಅವರ ಅಮೋಘವಾದ ಕಾರ್ಯ ಸಾಹಸಕ್ಕೆ ವರ್ಗವಾದ ಸ್ಥಳದವರಿಂದ ಅವರು ಪಡೆದಿರುವ ಬಿರುದಾವಳಿಗಳನ್ನೂ ಸೂಚಿಸಿ ಪ|| ಮಲ್ಲೇಗೌಡರವರ ಸ್ತೋತ್ರಾರ್ಹವಾದ ಸಂತೋಷಕೂಟಕ್ಕೆ ಆನಂದಪರವಶರಾದ ವಿಚಾರದಲ್ಲಿ ಗಂಭೀರವಾಗಿ ಉಪನ್ಯಾಸಮಾಡಿ ಸಭಿಕರನ್ನು ಆನಂದಗೊಳಿಸಿದರು. ಅಧ್ಯಕ್ಷರು ತಮಗುಂಟಾದ ಆನಂದವನ್ನು ಸೂಚಿಸಿ ಗ್ರಾಮನಿವಾಸಿಗಳ ಸಾಹಸ ಕಾರ್ಯಗಳಿಗೆ ಸಂತೋಷಪಟ್ಟ ವಿಷಯದಲ್ಲಿಯೂ, ಮಲೆನಾಡಿಗರಾದರೂ, ಸಭೆಯಲ್ಲಿ ಮುಂದರಿದು ಉಪನ್ಯಾಸಗಳನ್ನು ಮಾಡಿದವರ ಧೈರ್ಯ ಸಾಹಸಗಳ ವಿಷಯದಲ್ಲಿಯೂ ಬಹು ಶ್ಲಾಘ್ಯವಾಗಿ ಉಪನ್ಯಾಸಮಾಡಿ ಸಭಿಕರನ್ನು ಆನಂದಪಡಿಸಿದರು. ತದನಂತರ ಪಟೇಲ್ ಮಲ್ಲೇಗೌಡರವರು ಸರ್ವರಿಗೂ ಏರ್ಪಡಿಸಿದ್ದ ಅಲ್ಪಾಹಾರಗಳು ಸ್ವೀಕರಿಸಲ್ಪಟ್ಟವು. ಅನಂತರ ಮ|| ಸಿ. ಜಿ. ರಾಮಚಂದ್ರಾಚಾರ್ ಮತ್ತು ಬಿ. ಭೈರಪ್ಪನವರಿಂದ ನಡೆಸಿದ "ಸುಭದ್ರಾ ಪರಿಣಯ" ಎಂಬ ಹರಿಕಥೆಯೂ ಮತ್ತು ಇದೇ ಗ್ರಾಮದ ಮಹರಾಷ್ಟ್ರಿಯಲ್ಲೋಜಿ ಎಂಬಾತನಿಂದ ತಾಳ ಮೃದಂಗ ಸಮೇತವಾಗಿ ನಡೆಸಲ್ಪಟ್ಟ ದಶಾವತಾರದ ಚಿತ್ರಕೇತು ಮಹಾರಾಜನ ಕಥೆಯು ನೋಟಕರ ಮನಸ್ಸಿಗೆ ಪರಮಾಹ್ಲಾದವನ್ನುಂಟುಮಾಡಿದುವು ಮತ್ತು ಡಾ|| ನಾಯುಡುರವರಿಂದ ಬಹುಮಾನಗಳು ಸಹ ಕೊಡಲ್ಪಟ್ಟವು. ಇದಾದ ಬಳಿಕ ಸಭಿಕರೆಲ್ಲರಿಗೂ ಫಲಪುಷ್ಪ ತಾಂಬೂಲಾದಿಗಳೂ, ಡಾ|| ಗಳಿಗೆ ಹಾರ ತುರಾಯಿಗಳೂ ಹಂಚಲ್ಪಟ್ಟು, ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯಿಂದಲೂ, ಮಂಗಳಾಚರಣೆಯಿಂದಲೂ, ಸಭೆಯು ಭರಖಾಸ್ತಾಗಿ ಮಂಗಳವಾದ್ಯಗಳಿಂದ ಅತಿಥಿಗಳನ್ನು ಸಾಗಕಳುಹಿಸಿದರು.

ಪ್ರತ್ಯಕ್ಷದರ್ಶಿ.

ಆಕ್ಷೇಪಕರ ಪ್ರಲಾಪಗಳಿಗುತ್ತರ.

ತಾ|| 25-7-1932 ರ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ "ವೀರಶೈವ ತತ್ವಪ್ರಚಾರಕ ಸಂಘದವರಿಗೆ ಅನುಮಂತ್ರಣವು" ಎಂಬ ಲೇಖನವನ್ನು ಬರೆದೆವು. ಅದಕ್ಕೆ ತಾ|| 1-8-32 ರ ಸ್ಟಾರ್ ಪತ್ರಿಕೆಯಲ್ಲಿ ಸದರಿ ಸಂಘದ ಕಾರ್ಯದರ್ಶಿಗಳಾದ ಮಂಜಪ್ಪನವರು ಸಭೆಯ ಕಾರ್ಯಕ್ಕೆ ಒಪ್ಪಿ ಪಂಚರು ಮತ್ತು ನ್ಯಾಯಾಧೀಶರು ಇವರನ್ನು ಆರಿಸುವ ಬಗ್ಗೆ ನ್ಯಾಯಾಧೀಶರನ್ನು ಮುಂಚಿತವಾಗಿ ಆರಿಸಿಕೊಳ್ಳಬೇಕಲ್ಲದೆ ಬಂದವರಲ್ಲಿಯೇ ಒಬ್ಬರನ್ನಾರಿಸುವದು ಅಸಂಗತವು. ಆದಕಾರಣ ಸಮಾಜಕ್ಕೆ ಮುಖ್ಯ ಸಂಸ್ಥೆಯಾಗಿರತಕ್ಕ ವೀರಶೈವಮಹಾಸಭೆಯ ಧಾರವಾಡ ಸ್ವಾಗತಸಂಘದವರು 3 ಜನ ನ್ಯಾಯಾಧೀಶರನ್ನಾರಿಸಿ ಕೊಡಬೇಕು ಎಂದು ಅಭಿಪ್ರಾಯಪಟ್ಟಿರುವರು. ನ್ಯಾಯಾಧೀಶರನ್ನು ಮುಂಚೆಯೇ ಆರಿಸಬೇಕೆನ್ನುವದು ಯುಕ್ತವೆ ? ಆದರೆ ಈ ಕಾರ್ಯವನ್ನು ಸ್ವಾಗತ ಸಂಘದವರಿಗೆ ವಹಿಸುವದು ಮಾತ್ರ ತುಂಬಾ ಅಸಂಗತವು. ಏಕೆಂದರೆ, ನಾನಾ ಪ್ರಾಂತದ ವೀರಶೈವ ಪ್ರಮುಖ ಮುಖಂಡರಿಂದ ಸಮ್ಮಿಲಿತವಾದ ಮಹಾಸಭೆಯು ಸಮಾಜಕ್ಕೆ ಮುಖ್ಯ ಸಂಸ್ಥೆಯಾಗಬಹುದಲ್ಲದೆ ಏಕಪ್ರಾಂತೀಯರಿಂದ ಯುಕ್ತವಾದ ಸ್ವಾಗತಸಂಘವು ಸಮಾಜಕ್ಕೆ ಹೇಗೆ ಮುಖ್ಯ ಸಂಸ್ಥೆಯಾದೀತು ? ಇಂಥಾದಕ್ಕೆ ಸಮಾಜವನ್ನೇ ಅಲ್ಲೋಲಕಲ್ಲೋಲ ಮಾಡುವ ಈ ವಾದದಲ್ಲಿ ನ್ಯಾಯಾಧೀಶರನ್ನಾರಿಸುವ ಅಧಿಕಾರ ಎಲ್ಲಿಯದು ? ವೇದೋಪನಿಷದಾಗಮಾದಿಗಳಲ್ಲಿ ಅಡಕವಾಗಿರುವ ವೀರಶೈವ ತತ್ವವನ್ನು ನಿರ್ಧರಿಸಬೇಕಾದರೆ, ಸಂಪೂರ್ಣವಾಗಿ ಸಂಸ್ಕೃತದಲ್ಲಿ ಪಾಂಡಿತ್ಯವುಳ್ಳ ನ್ಯಾಯಾಧೀಶರು ಬೇಕಾಗುವರು. ಇಂಥವರನ್ನು ವಾದಿ ಪ್ರತಿವಾದಿಗಳೇ ನಿರ್ಣಯಿಸಬಹುದಲ್ಲದೆ ಮೂರನೆಯವರಾದ ಸ್ವಾಗತಸಂಘದವರು ನಿರ್ಧರಿಸುವದು ಶಕ್ಯವು ಅಲ್ಲ. ಈ ಸಂಘದವರು [illegible] ದಲ್ಲಿ ಪ್ರತಿವಾದಿ [illegible] ಎಂಬುದು ಒಪ್ಪಿತವೇ. ಪರಸ್ತು [illegible] ಮುಂದೆ ಮಾಡುವದು ಯೋಗ್ಯವು ಅಲ್ಲ. [illegible]

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು | ಚಿಂತಿಸಬೇಡಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣ ಸಂಜೀವಿನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರಿ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆವಿಗುರಿ ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. ೩೦

ನಾಗರಿಕತ್ವದಿಂದುಟಾಗಿಯೋ ಕೂಡಿದವರಲ್ಲಿ ಯೋಗ್ಯರಾದವರನ್ನಾರಿಸ ಬೇಕೆಂದು ಬರೆದಿದ್ದೆವು. ಇದೂ ಸಹ ಒಪ್ಪಿಲ್ಲದಿದ್ದರೆ ಮುಂಚಿತವಾಗಿಯೇ ಅರಿಸಬಹುದು. - ಈ ವಾದವು ನಿಮ್ಮೊಬ್ಬರ ಒಪ್ಪಿಗೆಗಾಗಿಯೋ, ಇತ್ಯಾದಿ 2 ನೇ ಪ್ರಲಾಪವು. ನಿಮ್ಮೊಬ್ಬರ ಒಪ್ಪಿಗೆಗಾಗಿಯೇ ಈ ಕಾರ್ಯ ಮಾಡುವ ದಾದರೆ ನಿಮ್ಮನ್ನು ನಮ್ಮಲ್ಲಿಗೆ ಬರಮಾಡಿಕೊಂಡಾಗಲಿ ನಾವೇ ನಿಮ್ಮಲ್ಲಿಗೆ [illegible]

ಯೆಡನೆ ಏತತ್ವ ಜಾತಿಯು ಇರುವ ಹಾಗೆ ಬ್ರಾಹ್ಮಣಾದಿಗಳಲ್ಲಿ ಮನುಷ್ಯತ್ವ ಜಾತಿಯೊಡನೆ ಬ್ರಾಹ್ಮಣತ್ವಾದಿ ಜಾತಿಗಳೂ ಇರುತ್ತವೆ ಕೊಡವೆಂಬುದು ಸಾಮಾನ್ಯವಾಗಿಯೂ, ಬಂಗಾರದ ಕೊಡ, ಬೆಳ್ಳಿಯ ಕೊಡ ಇತ್ಯಾದಿಗಳು ವಿಶೇಷವಾಗಿಯೂ ಹೇಗೆ ವ್ಯವಹಾರಾರ್ಹಗಳಾಗಿರುವವೋ ಹಾಗೆಯೇ ಮನುಷ್ಯ ಎಂಬುದು ಸಾಮಾನ್ಯ ವಾಚಕವಾಗಿಯೂ, ಬ್ರಾಹ್ಮಣಾದಿಗಳು [illegible]

[illegible]

ನಮ್ಮನ್ನು ಮನಸ್ಸೀ ನಿಂದಿಸಿದರೂ ನಾವು ಉತ್ತರವನ್ನು ಬರೆಯುವದಿಲ್ಲ. ಇದೊಂದು ಸಾರೆ ವಾಚಕರ ಅವಗಾಹನೆಗಾಗಿ ಬರೆಯೋಣವಾಗಿದೆ.

ಚಂದ್ರಶೇಖರ ಶಾಸ್ತ್ರಿಗಳು ಬೆನ್ನೂರ,

ಹಗರಿಬೊಮ್ಮನಹಳ್ಳಿ ತಾಲ್ಲೂಕು, ಮುಕ್ಕಾಂ ಕಂಪ್ಲಿ, ಜಿಲ್ಲಾ ಬಳ್ಳಾರಿ.

ಸರ್ಕಾರ ಮತ್ತು ಕಂಪೆನಿಗಳ

ಸಾಲ ಮತ್ತು ಷೇರ್ ಮಾರ್ಕೆಟ್ ದರಗಳು

ಇಂಡಿಯಾ ಸರ್ಕಾರವು 1940—43 ರ ಸಾಲವನ್ನು 17—8—32 ರಿಂದ 31—8—32 ರ ವರೆಗೆ ತೆಗೆದುಕೊಳ್ಳುತ್ತಿದ್ದಾರೆ. 100 ರೂ. ಗೆ 98 ರೂಪಾಯಿ ಕೊಡಬೇಕು.

ಸರ್ಕಾರದ ಸಾಲ ಪತ್ರಗಳ ಬೆಲೆ

ಇಂಡಿಯಾ ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳದ್ದು)

ಶೇಕಡ ಬಡ್ಡಿ	3½ (............)	ಪತ್ರದ ಬೆಲೆ	68—8—0
,, ,,	4 (1931—36)	....	96—9—0
,, ,,	4 (1934—37)	....	95—5—0
,, ,,	4 (1960—70)	....	68—10—0
,, ,,	4½ (1934)	....	99—9—0
,, ,,	4½ (1955—60)	....	89—3—0
,, ,,	5 (1929—47)	....	98—3—0
,, ,,	5 (1935)	....	100—5—0
,, ,,	5 (1939—44)	....	98—6—0
,, ,,	6 (1933—36)	....	101—8—0
,, ,,	6½ (1935)	....	104—5—0
,, ,,	5½ (1938—40)	....	102—2—0

(ಆದಾಯ ತೆರಿಗೆ ಇಲ್ಲದ್ದು)

,, ,,	5 (1933)	....	101—3—0
,, ,,	5 (1945—55)	....	104—10—0

ಮೈಸೂರು ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳದ್ದು)

ಶೇಕಡ ಬಡ್ಡಿ	5 (1929—44)	....	95—5—0

(ಆದಾಯ ತೆರಿಗೆ ಇಲ್ಲದ್ದು)

,, ,,	6½ (1941—51)	....	110—0—0
,, ,,	6¼ (194)	....	107—8—0
,, ,,	5½ (1938)	....	103—4—0
,, ,,	5 (1955)	....	100—12—0
ಶಿವಮೊಗ್ಗ ರೈಲ್ವೆ	....	....	84—4—0
ಚಿತ್ರದುರ್ಗ ರೈಲ್ವೆ	....	....	84—3—0

ಕಂಪೆನಿಗಳ ಷೇರುಗಳ ಬೆಲೆ

ಬ್ಯಾಂಕುಗಳಲ್ಲಿ

ಇಂಪೀರಿಯಲ್ ಎಫ್. ಪಿ.	500 ರೂ. ಷೇರಿಗೆ	1163—0—0	ರೂ. ಬೆಲೆ
,, ಕಾಂಟ್.	125 ,,	287—0—0	,,
ಇಂಡಿಯನ್	50 ,,	88—12—0	,,
ಮೈಸೂರು	100 ,,	134—8—0	,,
ಬೆಂಗಳೂರು	10 ,,	10—0—0	,,
ಇಂಡಸ್ಟ್ರಿಯಲ್	25 ,,	9—0—0	,,
ದೇವಾಂಗ	10 ,,	6—0—0	,,
ವೈಶ್ಯ	50 ,,	50—0—0	,,
ಎಸ್. ಎಂ. ಎಸ್. ಎ.	10 ,,	10—0—0	,,
ವರ್ಧಮಾನ		ನಾಮಿನಲ್	

ಇತರ ಬ್ಯಾಂಕುಗಳಲ್ಲಿ

ಬಿ. ಪಿ. ರೈಲ್ವೆ	25 ರೂ. ಷೇರಿಗೆ, ...	14—2—0	ರೂ. ಬೆಲೆ
ಬೆಂಗಳೂರು ಪ್ರೆಸ್	100 ,, ...	84—0—0	,,
ಬಾರ್ಟನ್ ಸನ್ (ಆ)	10 ,, ...	7—8—0	,,
,, (ಪ್ರಿ)	10 ,, ...	6—0—0	,,
ಸ್ಪೆನ್ಸರ್ಸ್	....	86—0—0	,,
ಬಿನ್ನಿ ಮಿಲ್ಸ್ (ಆ)	100 ,, ...	82—8—0	,,
(ಪ್ರಿ)	100 ,, ...	81—4—0	,,
ಟೈಲ್ ಅಂಡ್ ಕ್ಲೇವರ್ಕ್ಸ್		ನಾಮಿನಲ್	
ಪ್ರೀಮಿಯರ್	....	ಡಿಟೋ.	
ತಾತಾ ಹೈಡ್ರೋ (ಆ)	....	130—0—0	,,
,, (ಪ್ರಿ)	....	107—1—0	,,
ತಾತಾ ಐರನ್ (ಆ)	....	27—0—0	,,
,, (ಡೆ)	....	225—0—0	,,
,, (1)	....	113—0—0	,,
,, (2)	....	45—0—0	,,
ಶ್ರೀ ಕೃಷ್ಣ		ನಾಮಿನಲ್.	

ಇನ್ಷೂರೆನ್ಸು ಕಂಪೆನಿಯಲ್ಲಿ

ಏಷಿಯಾಟಿಕ್	5 ರೂ. ಷೇರಿಗೆ	5—2—0	ರೂ. ಬೆಲೆ
ಓರಿಯಂಟಲ್	500 ,, ...	1942—0—0	,,
ರಿಲೇಯನ್ಸ್	100 ,,	96—0—0	,,

ಡಿಬೆಂಚರುಗಳು

ಕೋಲಾರ	100 ರೂ. ಡಿಬೆಂಚರಿಗೆ	89—8—0	ರೂ. ಬೆಲೆ
ಮೈಸೂರು	100 ,, ...	104—4—0	,,
ತುಮಕೂರು	100 ,, ...	103—4—0	,,
ಹಾಸನ	100 ,, ...	95—0—0	,,

ಮಿಲ್ಲುಗಳಲ್ಲಿ

ಬೆಂಗಳೂರು	100 ರೂ. ಗೆ	75—0—0	ರೂ. ಬೆಲೆ
ಬಂಕಿಂಗ್ಹಾಂ	100 ,, ...	152—0—0	,,
ಗೋಕಾಕ್	100 ,, ...	112—0—0	,,
ಕೈಸರ್‌ಹಿಂದ್	2½ ,, ...	1—4—0	,,
ಮಿನೆರ್ವಾ	100 ,, ...	42—8—0	,,
ಮಹಾರಾಜ	100 ,, ...	91—8—0	,,
ಮಹಾಲಕ್ಷ್ಮಿ		ನಾಮಿನಲ್	
ಕೃಷ್ಣರಾಜೇಂದ್ರ	25 ,, ...	6—0—0	,,

ಗಣಿಗಳಲ್ಲಿ

ಬಾಲಘಾಟ್ ಷಿಲಿಂಗ್	10 ಕ್ಕೆ	0—11—2	ಬೆಲೆ
ಚಾಂಪಿಯನ್ ,,	10 ,, ...	0—14—1½	,,
ಮೈಸೂರು ,,	10 ,, ...	0—13—4	,,
ನಂದೀದುರ್ಗ ,,	10 ,, ...	0—27—2	,,
ಉರಿಗಾಂ ,,	10 ,, ...	0—16—2½	,,
ಪೆನಿನ್ಸುಲರ್ ,,	10 ,, ...	ನಾಮಿನಲ್	
ಶಿವಮೊಗ್ಗ ,,		ನಾಮಿನಲ್	

ಎಂ. ನಂಜಪ್ಪ, ಜಹಗೀರ್‌ದಾರ್,

ಷೇರ್, ಸ್ಟಾಕ್ ಮತ್ತು ಜನರಲ್ ಬ್ರೋಕರ್.

181. ಕ್ಯಾನಲ್ ರೋಡು, ಬೆಂಗಳೂರು.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ ೧। ರೂ ಟ. ಖ. ೫ ಆಣೆ

ಪತ್ತಾ—ವೈದ್ಯ ಪಿ. ಎಸ್. ಕಾಪಸೆ, ಮಿರಜ

19 M. C.

೧೯೩೨ ನೆಯ ಇಸವಿ ಸೆಪ್ಟಂಬರ್ ತಾ॥ ೧೨ ರಿಂದ ಸೆಪ್ಟಂಬರ್ ತಾ॥ ೧೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಭಾದ್ರಪದ ಶುದ್ಧ ತ್ರಯೋದಶಿಯಿಂದ ಭಾದ್ರಪದ ಬಹುಳ ಚೌತಿ ವರೆಗಿನ ಪಂಚಾಂಗ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸಿಂಹ ಮಾಸ
12	(1) ಸೋಮ	ತ್ರಯೋ	46-41	ಶ್ರವ	5-34	14
13	(2) ಮಂಗಳ	ಚತು	46-10	ಧನಿ	5-58	15
14	(3) ಬುಧ	ಪೌರ್ಣ	47-14	ಶತ	7-47	16
15	(4) ಗುರು	ಪಾಡ್ಯ	49 18	ಪುಭಾ	10-44	17
16	(5) ಶುಕ್ರ	ಬಿದಿ	52-48	ಉಭಾ	14-55	18
17	ಶನಿ	ತದಿ	56-59	ರೇವ	20-4	19
18	ಭಾನು	ಚೌತಿ	60	ಅಶ್ವಿ	26-6	20

(1) ಮಳೆನಕ್ಷತ್ರ-ಉತ್ತರೆ ೧ ನೆಯ ಪಾದ. (2) ಅನಂತಪದ್ಮನಾಭ ವ್ರತ. (3) ಉಮಾಮಹೇಶ್ವರವ್ರತ, ಚಂದ್ರಗ್ರಹಣ, ರಾತ್ರಿ ಘಂಟೆ 12-40ಕ್ಕೆ ಹಿಡಿದು 4-14ಕ್ಕೆ ಬಿಡುವುದು. (4) ಮಹಾಲಯಪಕ್ಷಾರಂಬ. (5) ಮಳೆನಕ್ಷತ್ರ-ಉತ್ತರೆ ೨ ನೆಯ ಪಾದ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

M. 124.

ಮೈಸೂರ್ ಸ್ಟಾರ್

Supplement to this Issue

ಈ ಜಾಹಿರಾತನ್ನು ಸಂಪೂರ್ಣವಾಗಿ ಓದಿ ನಿಮ್ಮ ಆಪ್ತಮಿತ್ರರಲ್ಲಿ ಪ್ರಚಾರಪಡಿಸಿರಿ.

ಸಮಸ್ತರ ಪ್ರತಿಮಾಸದ ಫಲ, ಮತ್ತು ಸರ್ವಜನೋಪಕರ ವಿಷಯಗಳಿಂದೊಳ್ಳಕ್ಕಾಗಿ ಬಹು ಶೋಧನೆಯಿಂದ ಬರೆಯಲ್ಪಟ್ಟು ಅನೇಕಾನೇಕ ಸರ್ಟಿಫಿಕೇಟುಗಳನ್ನು ಪಡೆದ

ಹರಪುರಿ ಸುಪ್ರಸಿದ್ಧ ತೆಗ್ಗಿನಮಠದ ಶ್ರೀಮುಖ ಸಂ। ಸಿದ್ಧಾಂತ ಫಲ ಪಂಚಾಂಗ.

ಹರಪುರದೊಳ್ ನೆರೆಶೋಭಿಪ । ವರತೆಗ್ಗಿನಮಠದ ಜನವೀರಾಧಿ ವಿಬುಧರ್ ॥ ವಿರಚಿಸಿಹ ಪಂಚಾಂಗಮಿದು । ಧರೆಯೊಳ್ ತಾಂ ಮೆರೆಯುತಿಹುದು ಬಹುವತ್ಸರದಿಂ ॥೧॥

ದಪ್ಪವಾದ ಕಾಗದ ! ಅಂದವಾದ ಮುದ್ರಣ ! ಈ ಪಂಚಾಂಗವನ್ನು ತರಿಸಿ ಓದಿನೋಡಿ ಚನ್ನಾಗಿಲ್ಲದಿದ್ದರೆ ವಾಪಸ್ಸುಮಾಡಿರಿ. ಕ್ರಯ ಪ್ರತಿ ೧ಕ್ಕೆ ರೂ. ೦—೩—೦

ಈ ಪಂಚಾಂಗದಲ್ಲಿ ತಿಥಿ, ವಾರ, ನಕ್ಷತ್ರ, ಯೋಗ, ಕರಣ, ಗ್ರಹಚಾರಾದಿ ಘಟಿಕಾದಿಗಳು, ಅಮೃತ ಸಿದ್ಧಾದಿಯೋಗಗಳು, ಇಂಗ್ಲೀಷು, ಹಿಂದುಸ್ಥಾನಿ ತೇದಿಗಳು, ಸರ್ವಮತದವರ ವ್ರತಗಳು, ಜಯಂತಿಗಳು, ಹಬ್ಬಗಳು, ಉತ್ಸವಗಳು, ಏಕಾದಶಿ ನಿರ್ಣಯ, ರಾಜಾದಿ ನವನಾಯಕರ ಫಲ, ಉಪನಾಯಕರ ವಿಚಾರ, ಪ್ರತಿದೇಶದಲ್ಲಿ ಉಂಟಾಗುವ ಮಳೆ, ಬೆಳೆ, ರೋಗ, ನಿರೋಗ, ಸುಭಿಕ್ಷ, ದುರ್ಭಿಕ್ಷ ವಿಚಾರ, ಗುರು, ಶನಿಗಳ ರಾಶಿ ಸಂಚಾರ ಫಲ, ವರ್ಷಕುಂಡಲಿ, ಜಗಲ್ಲಗ್ನ ಕುಂಡಲಿಗಳ ವಿಚಾರ, ವರ್ಷ ಧಾನ್ಯಾದಿಗಳ ನಿರ್ಣಯ, ಗುರು ಶುಕ್ರರ ಅಸ್ತಕಾಲ ನಿರ್ಣಯ, [illegible] ನರಣ, ಋತು ಅರಿಷ್ಟ ವಿಚಾರ, ಶ್ರೀ ಶಿವಲಿಖಿತಚಕ್ರ, ಚಂದ್ರಬಲ, ತಾರಾಬಲ ಕ್ರಮ, ರೋಗಪ್ರಾಪ್ತಿ ನಕ್ಷತ್ರಫಲ, ಸರ್ವ ಮುಹೂರ್ತಗಳ ವಿಚಾರ, ಅಂಗಚಲನ ಫಲ, ಸ್ವರಶಾಸ್ತ್ರ, ಗೃಹ ಆಯ, ಧನ ಋಣಾದಿಗಳನ್ನು ತೆಗೆಯುವ ಕ್ರಮ, ಇತ್ಯಾದ್ಯುಪಯುಕ್ತವಾದ ಅನೇಕಾನೇಕ ವಿಷಯಗಳನ್ನು ಇತರ ಮತ್ತಾವ ಪಂಚಾಂಗವನ್ನಾಗಲಿ, ಜ್ಯೋತಿಷ್ಯರನ್ನಾಗಲಿ ಬಯಸದಂತೆ ಪ್ರತಿಯೊಬ್ಬರಿಗೂ ತಿಳಿಯುವ ಹಾಗೆ ವಚನ ರೂಪವಾಗಿ ಬರೆದಿರುತ್ತೆ. ಈ ಪಂಚಾಂಗಗಳ ಹಣವು ಧರ್ಮಾರ್ಥ ಜ್ಯೋತಿಷ್ಯ ಪಾಠಶಾಲೆಗೆ ಉಪಯೋಗಿಸಲ್ಪಡುವುದರಿಂದ ಕರ್ನಾಟಕ ವಿದ್ಯಾಭಿಮಾನಿಗಳು ಈ ಪಂಚಾಂಗಗಳನ್ನು ತರಿಸಿಕೊಂಡು ಸಹಾಯ ಮಾಡಬೇಕೆಂದು ಪ್ರಾರ್ಥನೆ.

ಪಂಚಾಂಗದ ಬಹುಮಾನಗಳು.

[illegible] ಅಪೇಕ್ಷಕರಿಗೆ ಕ್ರಯ ಪ್ರತಿ ೧ಕ್ಕೆ ೩ ಆಣೆಗಿಂತಲೂ ಕಡಿಮೆ ಬೀಳುವುದಿಲ್ಲ. ಈ ಪಂಚಾಂಗಗಳಿಗಿಂತಲೂ ಕಡಿಮೆ ಕಳುಹಿಸುವದಿಲ್ಲವೆಂಬ ಅಂಶವನ್ನು ವಾಚಕರು ಮರೆಯಬಾರದು. ಕ್ರಯ ಪ್ರತಿ ೧ಕ್ಕೆ ೦-೩-೦.

ಪಂಚಾಂಗ ದೊರೆಯುವ ಪತ್ತೆ:—

ಮೇನೇಜರ್, ಭಾರತ ಜ್ಯೋತಿಷ್ಯ ವೈದ್ಯಾಲಯ, ಹರಪನಹಳ್ಳಿ, (ಜಿಲ್ಲಾ ಬಳ್ಳಾರಿ.)

ಶಕೆ ೧೮೫೧ ರಲ್ಲು ನಾಸಿಕದಲ್ಲಿ ಜರುಗಿದ ೧೯ನೇ ನಿಖಿಲ ಭಾರತೀಯ ವೈದ್ಯಸಮ್ಮೇಲನದವರಿಂದ ಪ್ರಶಸ್ತಿಪತ್ರಿಕೆಯನ್ನು ಪಡೆದ

ಬಹು ಜನ ಪಂಡಿತರಿಂದಲೂ, ಪತ್ರಿಕಾಕರ್ತರಿಂದಲೂ ಶ್ಲಾಘಿಸಲ್ಪಟ್ಟ ಈ ಗ್ರಂಥವನ್ನು ತರಿಸಿ ಓದಿನೋಡಿ ಚನ್ನಾಗಿಲ್ಲದಿದ್ದರೆ ವಾಪಸ್ಸುಮಾಡಿರಿ.

ಕುಟುಂಬ ಸಂಜೀವಿನಿ ಕಲ್ಪ ! ಷೋಡಶ (೧೬) ಶಾಸ್ತ್ರಗಳ ಮರ್ಮಗಳನ್ನು ಚಿಕ್ಕಚಿಕ್ಕ ಬಾಲಕರಿಗೂ ಸಹ ತಿಳಿಯುವಂತೆ ಬರೆಯಲ್ಪಟ್ಟ ಲೋಕೋಪಕಾರಕಲ್ಪತರು !!

ಸುಸಮಯ ಬಿಡಬೇಡಿ.

೫೦೦ ರೂಪಾಯಿ ಬಹುಮಾನ!

ರಹಸ್ಯಬೋಧಾಮೃತವೆಂಬ ವಿದ್ಯಾಗುರು ಭಾಗ ೧.

(ದ್ವಿತೀಯಮುದ್ರಣ)

ಕ್ರಯ ಪ್ರತಿ ೧ಕ್ಕೆ ರೂ. ೨-೦-೦ ಟ. ಖ. ಪ್ರತ್ಯೇಕ.

ಈ ಗ್ರಂಥದಲ್ಲಿ ರುದ್ರಯಾಮಳ, ನಾಗಾರ್ಜುನಾದಿ ತಂತ್ರಗಳಲ್ಲಿ ಹೇಳಿರುವ ಅದೃಶ್ಯ, ಜಲಸ್ತಂಭನ, ಅಗ್ನಿಸ್ತಂಭನ, ದೃಷ್ಟಿ ಬಂಧನ, ವಶೀಕರಣ, ಇಂದ್ರಜಾಲವಿದ್ಯೆಗಳು, ಅಮೆರಿಕ, ಜರ್ಮನಿಗಾರಡಿ ವಿದ್ಯೆಗಳು, ಹಸ್ತಲಾಘವ, ಕರ್ಣಲಾಘವ, ನಾಸಿಕಲಾಘವಾದಿ ಅನೇಕಾನೇಕ ಚಮತ್ಕಾರಗಳನ್ನೊಳಗೊಂಡು ಪಂಡಿತಪಾಮರರಿಗಾನಂದವನ್ನುಂಟುಮಾಡುವ ಕೌತುಕರಹಸ್ಯ, ಎಂಥಾ ವಿದ್ಯಾವಿಹೀನನಾದರು ಅಭ್ಯಾಸ ಮಾಡಿ ಕೀರ್ತಿಯನ್ನು ಪಡೆಯುವಂತೆ ಬೋಧಿಸುವ ಸರ್ವ ವಿದ್ಯಪ್ರದಾಯಕವೆಂಬ ಸುಹೃದ್ವಿದ್ಯಾರಹಸ್ಯ, [illegible]

ರಾಮಯ್ಯ ಬಿ.ಎ., ಯವರು, ಬೆಂಗಳೂರು ಹಯಗ್ರೀವ ಜೋತಿಷ್ಯಾಲಯದ ಅಧ್ಯಾಪಕರಾದ ಬಿ. ಎಸ್. ರಂಗಸ್ವಾಮಯ್ಯಂಗಾರ್‌ರವರು, ಹರಿಹರದ ಆಯುರ್ವೇದ ವಿದ್ವಾನ್ ಕಡಬಗೆರೆ ಶಾಂತವೀರಶಾಸ್ತ್ರಿಗಳು, ಬೈಲಹೊಂಗಲದ ಚನ್ನಪ್ಪ, ಮಲ್ಲಪ್ಪ ಚಿಕ್ಕೋಡಿಯವರು, ಯಡತೊರೆ ಸ್ಪೆಷಲ್ ಸಿರಸ್ತೆದಾರ್ ಡಿ. ವಿ. ಕೃಷ್ಣರಾಯರು, ಹಗರಗಟ್ಟಿ ಸ್ಪೇಶನ್‌ಮಾಸ್ತರು, ಶ್ರೀ ಕೃಷ್ಣಾಚಾರ್ಯರು, ಕಲಕತ್ತಾ 2-5 ನಾಲಂಗರ್ಡೀ, ಬೌಬಜಾರಿನಲ್ಲಿರುವ ಮಾಕಂ ತಿಮ್ಮಯ್ಯಸೆಟ್ಟರು, ಬಾಗಲಕೋಟೆ, ಬಿ.ಎ.,ಎಲ್.ಎಲ್.ಬಿ., ವಕೀಲು [illegible]

ಈ ಗ್ರಂಥದ ವಿಷಯವಾಗಿ ಯೋಗ್ಯತಾ ಪತ್ರಿಕೆಗಳನ್ನು ಕೊಟ್ಟ ಪಂಡಿತರು ಪತ್ರಿಕಾಕರ್ತರು ಮತ್ತು ಇತರ ಸಭ್ಯರು.

ಬೆಂಗಳೂರು ಪ್ರಜಾಮಿತ್ರ, ಮೈಸೂರು ಸತ್ಯವಾದಿ ಪತ್ರಿಕಾಕರ್ತರು, ಶ್ರೀ ಜಗದ್ಗುರು ಕೇದಾರ ಸಂಸ್ಥಾನದ ಸರ್ವಾಧಿಕಾರಿಗಳಾದ ಸಿರ್ಸಿ ಸಿದ್ಧರಾಮಸ್ವಾಮಿಗಳು, ಆಪವಾನಿ ಬಿ. ಸುಂದರಶಾಸ್ತ್ರಿಗಳು, ಬ್ಯಾಡಗಿ ಹಿರೇಮಠದ ಸಿದ್ಧಾಂತಿ ಅನ್ನದಾನ ಶಾಸ್ತ್ರಿಗಳು, ಬೆಂಗಳೂರು ಗೌರ್ನಮೆಂಟು ಕೊಲಿಜಿಯೇಟ್ ಹೈಸ್ಕೂಲು ಪಂಡಿತರು, ಎಂ. ಕೃಷ್ಣಪ್ಪನವರು, ಅನೇಕ ಗ್ರಂಥಗಳನ್ನು ಬರೆದಿರುವ ಯಂ. ವಿ. ರಂಗರಾಯರು, ಜಿ. ಶೀತಾ [illegible]

ಗ್ರಂಥ ದೊರೆಯುವ ಪತ್ತೆ:— ಕ್ರಯ ಪ್ರತಿ ೧ಕ್ಕೆ ರೂ. ೨—೦—೦ ಟಿ.ಖ.ಪ್ರತ್ಯೇಕ.

ಮೇನೇಜರ್, ಭಾರತ ಜ್ಯೋತಿಷ್ಯ ವೈದ್ಯಾಲಯ,

ಹರಪನಹಳ್ಳಿ, (ಜಿಲ್ಲಾ ಬಳ್ಳಾರಿ)

ಎಷ್ಟೋಕಾಲ ಒಬ್ಬರ ಆಶ್ರಯವನ್ನು ಮಾಡಿದರೂ ದೊರೆಯದಂಥ ಮರ್ಮವಿಷಯಗಳನ್ನೊಳಗೊಂಡು ಸುಖಸೌಭಾಗ್ಯನಿಧಿ ಆಗಿ ರಂಜಿಸುತ್ತ ಶಕ ೧೮೫೧ ರಲ್ಲಿ ನಾಸಿಕದಲ್ಲಿ ಜರುಗಿದ ೧೯ನೇ ನಿಖಿಲ ಭಾರತೀಯ ವೈದ್ಯಸಮ್ಮೇಲನದವರಿಂದ ಪ್ರಶಸ್ತಿಪತ್ರಿಕೆಯನ್ನು ಪಡೆದ ಅನೇಕಾನೇಕ ಮಹಾತ್ಮರಿಂದ ಕೊಂಡಾಡಲ್ಪಟ್ಟ

ಕಲಿಕಾಲ ಕಲ್ಪತರು ! ಸಂಸಾರದುಃಖ ಮುಕ್ತ ಕಾಮಧೇನು !!

ರಹಸ್ಯಬೋಧಾಮೃತವೆಂಬ ವಿದ್ಯಾಗುರು ಭಾಗ ೨.

ಸುಸಮಯವನ್ನು ಬಿಡಬೇಡಿ ! ೫೦೦ ರೂಪಾಯಿಗಳು ಬಹುಮಾನ !! ಅಂದವಾದ ಮುದ್ರಣ !!

ಈ ಗ್ರಂಥದಲ್ಲಿರುವ ಒಂದೊಂದು ವಿಷಯಕ್ಕಾಗಿ ಎಷ್ಟು ಬೆಲೆ ಕೊಟ್ಟರೂ ಅಲ್ಪವೇ, ಬಡವರೇ ಮೊದಲಾದ ಸರ್ವರು ತರಿಸಿಕೊಂಡು ಇದರ ಪ್ರಯೋಜನವನ್ನು ಹೊಂದಲೆಂಬ ದೆಶೆಯಿಂದ ಕ್ರಯವನ್ನು ತೀರ ಕಡಿಮೆ ಇಟ್ಟಿರುತ್ತೆ. ಕ್ರಯ ಪ್ರತಿ ೧ಕ್ಕೆ ರೂ. ೨—೦—೦ ಟ. ಖ. ಪ್ರತ್ಯೇಕ.

ಈ ಗ್ರಂಥದಲ್ಲಿ ಇದುವರೆವಿಗೂ ಯಾರು ಪ್ರಚಾರ ಮಾಡದೆ ಗೋಪ್ಯವಾಗಿದ್ದ ವಾಂಛಿತ್ಯ ಮರ್ಮ ಅರ್ಥಾತ್ ಕಾಮಶಾಸ್ತ್ರವನ್ನು ಆದಿಯಿಂದ ಅಂತ್ಯದವರೆಗೂ ಸವಿಸ್ತಾರವಾಗಿ ಆಲಿಂಗನ, ಚುಂಬನ, ಕೂಟಾದಿ ಮರ್ಮಗಳನ್ನು ಸಹ ಮರೆಮಾಚದೆ ಬರೆಯಲ್ಪಟ್ಟ ರತಿರಹಸ್ಯವನ್ನು, ಅನೇಕಾನೇಕ ದೇವತಾದಿ ಉಪಾಸನ ಕ್ರಮಗಳನ್ನು [illegible]

ಗ್ರಹರಹಸ್ಯವನ್ನು, ಬಹುಜನ ಋಷಿಗಳಿಂದ ಈ ಕಾಲದಲ್ಲಿ ತಪ್ಪದೆ ಫಲಾನುಭವವನ್ನು ಕೊಡುತ್ತಿರುವುದೆಂದು ಕೊಂಡಾಡಲ್ಪಟ್ಟ ತಾಜಿಕ ಜ್ಯೋತಿಷ್ಯ ರಹಸ್ಯವನ್ನು, ಸರ್ವವಿಧ ಪ್ರಶ್ನ ಫಲಿತಾಂಶಗಳನ್ನು ಸುಲಭವಾಗಿ ಬೋಧಿಸುವ [illegible]

[illegible]

2

ಈ ಗ್ರಂಥವು ಎಷ್ಟು ಪ್ರಯೋಜನಕಾರಿ ಎಂಬುದನ್ನು ಈ ಕೆಳಗೆ ಬರೆದಿರುವ ಒಂದೆರಡು ಸರ್ಟಿಫಿಕೇಟುಗಳನ್ನು ನೋಡಿರಿ.

ಯೋಗ್ಯತಾ ಪತ್ರಿಕೆಗಳು.

ಮಹಾಶಯರೇ!

ತಮ್ಮಿಂದ ಕಳುಹಿಸಲ್ಪಟ್ಟ ೩ನೇ ಭಾಗ ವಿದ್ಯಾಗುರು ಗ್ರಂಥವು ತಲ್ಪಿ ಎಲ್ಲಾ ವಿಷಯಗಳು ತಿಳಿದವಾಯಿತು. ಅದರೆ ತಾವು ಈ ಕಾಲಕ್ಕೆ ಗುರುಭಾವವನ್ನು ಹೊಂದಿ ಈಶ್ವರಾಂಶದಂತೆ ಕೊಂಡಾಡಿಸಿಕೊಳ್ಳುವ ಗ್ರಂಥವು ಬಹಳ ಚೆನ್ನಾಗಿರುತ್ತದೆ. ಬಹು ಸಾಹಸಪಟ್ಟು ಮಾಡಿರುವ ನಿಮ್ಮ ಗ್ರಂಥವು ಸರ್ವ ಸಮ್ಮತವಾಗಿ ಬಹುಜನಗಳ ಸಂತೋಷಕ್ಕೆ ಪಾತ್ರವಾಗಿರುತ್ತದೆ. ದಯವಿಟ್ಟು ೪ನೇ ಭಾಗಕ್ಕೆ ಕೂಡ್ಲೆ ಏರ್ಪಾಟುಮಾಡಿ ನಿಮ್ಮ ಕೀರ್ತಿಯನ್ನು ಜಗದ್ವಿಖ್ಯಾತವಾಗುವಂತೆ ವಿಶದಪಡಿಸಬೇಕಾಗಿ ಪ್ರಾರ್ಥನೆ.

(Sd.) ಜ್ಯೋತಿಷ್ಯದ ಯಸ್. ತಮ್ಮಯ್ಯ, ಹೊಸಕೆರೆ, ಹೆಬ್ಬೂರು ಪೋಸ್ಟು, ತಾ॥ 7-12-27.

TRUE COPY.

ಭಾರತ ಜ್ಯೋತಿಷ್ಯ ವೈದ್ಯಾಲಯದ ಮೇನೇಜರವರ ಸನ್ನಿಧಿಗೆ— ನಿಮ್ಮ ಕಂಪನಿಯಿಂದ ತರಿಸಿದ ವಿದ್ಯಾಗುರು ಭಾಗ ೩ನೇ ಮತ್ತು ವಿಭವ ಸಂ॥ ರದ ಪಂಚಾಂಗವನ್ನು ಸಹ ನೋಡಿದೆ. ಬಹಳ ಚೆನ್ನಾಗಿರುತ್ತದೆ. ಕಾಯಿಲೆಯನ್ನು ಆಪ್ಪೆ ಔಷಧವನ್ನು ಸಹ ಪರೀಕ್ಷೆಮಾಡಿ ನೋಡಿದೆ. ನಮ್ಮ ತಮ್ಮನಿಗೆ ನೇಹ ಸಂಬಂಧ ಕಾಯಿಲೆ ಆಗಿತ್ತು. ನಿಮ್ಮ ವಿದ್ಯಾಗುರು ಗ್ರಂಥದ ೩ನೇ ಭಾಗದಲ್ಲಿ ಬರೆದ ಪ್ರಕಾರ ಈಗ ಗುಣವಾಗಿರುತ್ತಾನೆ. ನಿಮ್ಮ ಪಂಚಾಗವನ್ನು ಸಣ್ಣ ಹುಡುಗರು ಸಹ ನೋಡಿಕೊಳ್ಳುವಂತೆಯೂ, ಮುನಸ್ಸಿನಲ್ಲಿರುವದನ್ನು ತಿಳಿದುಕೊಳ್ಳುವದಕ್ಕೆ ನಿಮ್ಮ ಪಂಚಾಂಗ ಬಹಳ ಅನುಕೂಲವಾಗಿರುತ್ತೆ. ಮತ್ತು ಕಾಗದ ತಲುಪುತ್ತಲೇ ಅಪೇಕ್ಷೆಯಂತೆ ಸಾಮಾನುಗಳನ್ನು ಕಳುಹಿಸುತ್ತಾ ಇರುವುದು ತುಂಬಾ ಸಂತೋಷವಾಗಿರುತ್ತೆ.

(Sd.) ಕೆ. ವೆಂಕಟರಮಣಭಟ್ಟ, ಕೆ. ನಾಗಭಟ್ಟ,

ಹರಿಹರಪುರ, ತಾ॥ 18—2—28.

TRUE COPY.

ಇದೇ ರೀತಿ ಅನೇಕಾನೇಕ ಸರ್ಟಿಫಿಕೇಟುಗಳು ಬಂದಿರುತ್ತವೆ. ತಮ್ಮಗಳ ಅವಗಾಹನೆಕ್ಕಾಗಿ ಒಂದೆರಡು ಸರ್ಟಿಫಿಕೇಟುಗಳನ್ನು ಮಾತ್ರ ಇಲ್ಲಿ ಬರೆದಿರುತ್ತೆ. ಸ್ಥಲ ಸಂಕೋಚದಿಂದ ಯಾವತ್ತು ಸರ್ಟಿಫಿಕೇಟುಗಳನ್ನು ಬರೆಯಲು ಅವಕಾಶವಿಲ್ಲ.

ಜೀವದ ಗುಟ್ಟು! ಸುಖಜೀವನ! — ೧೦೦೦ ರೂಪಾಯಿ ಬಹುಮಾನ! — ಭಾಗ್ಯದ ಸೊತ್ತು! ವಂಶಪಾವನ!

ಶಾಸ್ತ್ರ ಅನುಭವ ಸಂಗ್ರಹವೆಂಬ

ಜೀವರತ್ನಪ್ರದೀಪಿಕೆ.

ತಂದೆಯು ಮಕ್ಕಳಿಗೂ ಸಹ ಹೇಳದೆ ಇರತಕ್ಕ ಅನುಭವ ಕಂಡ ಮರ್ಮವಿಷಯಗಳನ್ನೇ ಒಳಗೊಂಡಿರುತ್ತೆ. ಈ ಗ್ರಂಥದಲ್ಲಿರುವ ವಿಷಯಗಳು ಅನುಭವವಾದವುಗಳಲ್ಲವೆಂದು ವ್ಯಕ್ತಪಡಿಸುವವರಿಗೆ ಒಂದು ಸಾವಿರ ರೂಪಾಯಿ ಬಹುಮಾನ ಕೊಡಲ್ಪಡುತ್ತೆ. ಕೇವಲ ಲೋಕೋಪಕಾರಕ್ಕಾಗಿ ಪ್ರಚಾರಿಸಲ್ಪಟ್ಟಿರುವುದರಿಂದ ಕ್ರಯವನ್ನು ತೀರ ಕಡಿಮೆ ಇಟ್ಟಿರುತ್ತೆ. ಕ್ರಯ ಪ್ರತಿ ೧ಕ್ಕೆ ರೂ. ೨—೮—೦ ಟ. ಕ. ಪ್ರತ್ಯೇಕ

ಈ ಗ್ರಂಥದ ಜ್ಯೋತಿಷ್ಯ, ಪ್ರಶ್ನೆ, ಮುಹೂರ್ತ, ಯಂತ್ರ, ಮಂತ್ರ ರಹಸ್ಯದಲ್ಲಿ ಗ್ರಹಗಳ ಬಲಾಬಲ ತಾರತಮ್ಯ ವಿಚಾರ, ವಿವಾಹಮುಹೂರ್ತವನ್ನು ನಿರ್ಣಯಿಸುವುದಕ್ಕೆ ಬೇಕಾದ ಸಲಹೆಗಳು, ವಿವಾಹ ಲಗ್ನ ಪತ್ರಿಕೆಕ್ರಮ, ವಿವಾಹ ಪ್ರಶ್ನೆ, ಕನ್ಯಾ, ವರಲಾಭ ಪ್ರಶ್ನೆಗಳು, ಕನ್ಯಾ, ವರಲಾಭಕ್ಕೆ ಮಾಡುವ ಕ್ರಮ, ಸುರತಪ್ರಶ್ನೆ, ದಂಪತಿಗಳಲ್ಲಿ ಪ್ರೀತಿ ಹುಟ್ಟುವದಕ್ಕಾಗಿ ಮಾಡುವ ಕ್ರಮ, ಕಾಮಕಲಾಪ್ರಶ್ನೆ, ... ಪ್ರಶ್ನೆ, ಜಲಪ್ರಶ್ನೆ, ವೈರುಪ್ರಶ್ನೆ, ಪಶುನಷ್ಟಪ್ರಶ್ನೆ, ಈ ಗ್ರಾಮದಿಂದ ಸುಖವೋ, ಕಷ್ಟವೋ, ಜೀವಕಪ್ರಶ್ನೆ, ಭೂಗತದ್ರವ್ಯಪ್ರಶ್ನೆ, ಮಾತಾಪಿತೃ ಆಯುಷ್ಯಪ್ರಶ್ನೆ, ಪಶುಕ್ರಯಪ್ರಶ್ನೆ, ಗೃಹದೋಷಪ್ರಶ್ನೆ, ಸಂತಾನಪ್ರಶ್ನೆ, ಸ್ತ್ರೀಪುರುಷ ಜನನಪ್ರಶ್ನೆ, ಗರ್ಭಪ್ರಶ್ನೆ, ಲಕ್ಕೋಟಿ ಪ್ರಶ್ನೆ, ರೋಗಪ್ರಶ್ನೆ, ಬೇಂಟೆಪ್ರಶ್ನೆ, ಕನ್ಯಾವರಪ್ರಶ್ನೆ, ಚೋರಪ್ರಶ್ನೆ, ಪರೀಕ್ಷಪಾಸು ವಿಷಯಪ್ರಶ್ನೆ, ವ್ಯವಹಾರಪ್ರಶ್ನೆ, ಪೂರಿಗೆ ಹೋದವರ ಪ್ರಶ್ನೆ, ...

ಸಾಮುದ್ರಿಕರಹಸ್ಯದಲ್ಲಿ:— ...

ಅನುಭವ ವೈದ್ಯರಹಸ್ಯದಲ್ಲಿ:— ...

ಕುಂಡಲಿರಹಸ್ಯದಲ್ಲಿ:— ...

ಶಕುನಶಾಸ್ತ್ರರಹಸ್ಯದಲ್ಲಿ:— ...

... ರಲ್ಲಿ ಅನುಭವವಿಲ್ಲದ ಔಷಧ ಒಂದಾದರೂ ಇರುವುದಿಲ್ಲ.

ವಾಚಕಮಹಾಶಯರೇ! ಹೆಚ್ಚು ಹೇಳುವದೇನದೆ? ಈ ಗ್ರಂಥದಲ್ಲಿ ತಂದೆಯು ಮಕ್ಕಳಿಗೂ ಸಹ ಹೇಳದಂಥ ಅನುಭವ ವಿಷಯಗಳನ್ನೇ ಬರೆದಿರುತ್ತೆ. ಗ್ರಂಥವನ್ನು ನೋಡಿದಮಾತ್ರದಿಂದಲೇ ತಿಳಿಯುವುದಲ್ಲದೆ ಮರ್ಮಗಳನ್ನು ಬಯಲಿಗಿಟ್ಟದ್ದಕ್ಕಾಗಿ ಕೊಂಡಾಡದೆ ಇರಲಾರಿರಿ. ಕೇವಲ ಒಂದೇ ಒಂದು ಅನುಭವದ ವಿಷಯಕ್ಕಾಗಿ ಎಷ್ಟು ಪ್ರಯಾಸಪಡಬೇಕಾಗುತ್ತದೆಂಬುವುದನ್ನು ತಾವೇ ಯೋಚಿಸಿರಿ.

ಕ್ರಯ ಪ್ರತಿ ೧ಕ್ಕೆ ರೂ. ೨—೮—೦. ಟ. ಕ. ಪ್ರತ್ಯೇಕ.

ಪತ್ತೆ:—**ಮೇನೇಜರ್, ಭಾರತ ಜ್ಯೋತಿಷ್ಯ ವೈದ್ಯಾಲಯ,**

ಹರಪನಹಳ್ಳಿ (ಜಿಲ್ಲಾ ಬಳ್ಳಾರಿ.)

... ಪ್ರಿಂಟಿಂಗ್ ವರ್ಕ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

REG NO. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆ ೧೯೩೨ ನೆಯ ಇಸವಿ ಸೆಪ್ಟಂಬರ್ ತಾರೀಖು ೧೯ ನೆಯ ಸೋಮವಾರ [ಸಂಚಿಕೆ ೩೮

MYSORE RAILWAYS.
AUCTION SALE NOTICE.

[50—11] [3—2]

In accordance with Section 40 of the Mysore Railways Regulation No. 4 of 1894, all unclaimed and lost property articles in possession of the Railway Administration over six months old, will be disposed off by public auction on Sunday the 25th September 1932 from 9 A. M. in the Mysore Station premises by the Railway Auctioneer.

1. The list of such articles may be seen in the lost property office, Mysore.
2. The Auctioneer does not bind himself to accept the highest or any bid at all and it is open to him to cancel the auction for reasons found sufficient by him.
3. The highest bidder whose bid is accepted should pay the full amount soon after the auction is closed and must arrange to remove the articles immediately, failing which they will be reauctioned at his risk.

Traffic Manager's Office, Mysore, Dated 25th August 1932.

A. A. KHAN, *Traffic Manager.*

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲಪ್ತಕಾಲದಲ್ಲಿ ಬಹುಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇಂ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಚನ	೦—೪—೦	೦—೯—೦
ಚಾರುಶೀಲಚರಿತ್ರೆ	೦—೩—೦	೦—೧೦—೦
ಹರಿಹರ	೦—೪—೦	೦—೯—೦
ವೃಷಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಸಟೀಕ ಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ

ವಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ. | **ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ** ರಜಿ] ವಜ್ರಾಂಗ ಸುಂದರಪಾಕದ. [ಸ್ಪರ | ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ... ಮೊದಲಾದ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ... ಇದರಿಂದ ಪುರುಷರ ವೀರ್ಯಶುದ್ಧಿಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲಾ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ... ಟಪಾಲು ಖರ್ಚು ೧೨ ಆಣೆ. ... ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

...

ಸಂತತಿ ಪ್ರತಿಬಂಧಕ ಗುಳಿಗೆಗಳು.

...

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಸ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ... ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ...

...

RAYANKERE PALACE DAIRY FARM MYSORE.

Bull calves, a good half-bred bull and some bullocks for sale.

Apply to :—
DR. MCISAAC,
[3—2] *Manager.*

ಮೈಸೂರು ಸ್ಟಾರ್.

೧೯೩೨ನೇ ಇಸವಿ ಸೆಪ್ಟಂಬರ್ ತಾ|| ೧೯ನೆಯ ಸೋಮವಾರ.

MYSORE SUBSIDY

The All-State meeting held at the Lalbagh, Bangalore on the 11th September to protest against the findings of the Davidson Committee under the presidency of Dewan Bahadur Sir K. P. Puttannachetty was a splendid success. Leading men from all parts of the State, members of Legislative Council, Representative Assembly, District Boards and retired officials, representing all schools of political thought, all castes and communities, men and women had gathered. Never before had such a large and representative gathering met. It showed that the whole of the people of Mysore had felt the injustice of continuing the levy of the subsidy from Mysore. Sir K. P. Puttannachetty delivered a long, comprehensive and exhaustive address, about the immediate abolition of the subsidy, the retrocession of the Civil and Military Station and the attempt to fix a cash value to the free carriage of official postal correspondence. The finding of the Davidson Committee that the levy of subsidy was not of a feudal character and that it should be abolished in the course of twenty years after joining federation was subject to a bitter and strong criticism. We would like to treat Lord Sankey of the Federal Structure Sub-Committee a better authority on the question whether the levy is of a feudal character or not. That Committee has laid it down that it is so and there is no meaning in the Davidson Committee now saying it is not so. Besides, there was no necessity to say that they were anything other than feudal in their character. So far as Mysore is concerned it is not only on the general ground that there should be no place for a levy of this kind in a federation where all units have to join on equal status that it claims the immediate abolition but on other grounds as well. Mysore has to pay one third of the total contribution made by the Indian States in the shape of subsidy. Mysore Durbar has been urging its abolition for a very long time, without reference to the idea of federation which has only loomed large since the first R. T. C. A few of these considerations are in the words of Sir K. P. P. Chetty. "These are the progressive character of the Mysore administration; its needs and necessities, its pre-eminent position among the Indian States *inter se* and the incompatability of such pre-eminence with the payment of an anachronistic tribute which connotes inferiority of a kind falling to its people, the desirability of securing Mysore's adhesion to the federation scheme" and also the tremendous disparity between what Mysore has to pay and what other States 197 in number have to pay. We may add the Davidson Committee have not taken note of the other implications of States joining the Indian Federation. To take into consideration only two of the most important issues. There is the question of pre-federation debt amounting to more than Rs. 1000 crores, the burden of liquidating which will have to be shared by the States as well after federation is brought into being without any compensatory advantages. There is the other question of pension charges of the Central Government where there will be a new liability on the federating States. There is yet another important reason which we wish to advance. The Davidson Committee want to make out as also the Percy Committee that the financial burden of the new Federal Government will not permit of foregoing immediately the revenue in the shape of tributes. According to the standard federal budget which the Percy Committee have framed they provide for a surplus of Rs. 4.50 crores. We would like to ask why then should they insist on Rs. 72 lakhs of tributes. They could just as well forego this revenue odious and iniquitous in every respect and provide for a smaller surplus. We are sorry to find that the Davidson Committee have totally failed to realise these implications. We must also say that they have been over anxious to help States which have ceded areas where as their claims strong as they may be could never be so strong as Mysore's. At the Lalbagh Meeting there was also a resolution about joining All-India Federation on a just and equitable basis. Every one wants Federation and every one was unanimous in appreciating the part played by Sir Mirza M. Ismail, Dewan of Mysore who it was that laboured hard for the cause of Federation. We hope that the protest meeting of Lalbagh will strengthen the hands of Sir Mirza in his untiring efforts to get rid of subsidy.

MAHATMA GANDHI'S FAST.

To-morrow Mahatma Gandhi is taking the fateful step of fasting to death in the cause of the biggest curse in India—the unhappy untouchables. The consequences cannot be foreseen. The issue is that seperate electorates for the depressed classes which the Premier has given in his award should go as they tend to split up Hindus. Mahatma than whom there certainly is no greater friend of the depressed classes in India is for joint electorates with reservation of seats. Mr. Macdonald has still left the way open for an agreed settlement between the depressed classes and other Hindus. It is now for India to rise to the occasion. It would be well to recognise that if we do not agree between ourselves the blame for the self immolation of Mahatma will be on ourselves. Already signs are appearing of a speedy settlement. Temples and wells reserved for other Hindus are being thrown open to the depressed classes. It is a wonderful transformation that is going on in India—all due to the magnetic and mighty influence of that frail figure behind the prison bars. We hope that the better conscience of the Hindu world will rise above the petty superstitions and prejudices and will rise to the call which the vow of Mahatma demands. We join the rest of India in praying that the vow of Mahatma may not be allowed to proceed for even a day and that they would present an agreed unanimous solution of the problem before the dawn of to-morrow.

VICEROY'S ANNOUNCEMENT

The latest utterance on the question of Future Reforms is that of His Excellency the Viceroy's speech in the Legislative Assembly. The public are aware how the political events drifted on from bad to worse since the winding up of the Second Session of the R.T.C. The speech of Sir Samuel Hoare, the Secretary of State for India in July last precipitated a first class political crisis in India so much so that many leading liberals condemned the new procedure and showed unmistakable signs of non-co-operating with the further stages of constitution-building. This led to the stiffening of the political out-look and added to this, the communal award caused an unprecedented disappointment both to the Hindus and to the Sikhs as also a large section of liberal minded Muslims. All this created such an uneasiness in the mind of Indian political world that faith in the British sincerety was shaken to its foundations. In such a gloomy atmosphere in the political horizon this speech of His Excellency introduces a ray of hope. That His Excellency's speech is simple in its composition and sincere in its utterance no one need doubt. But the crux of the problem is whether it satisfies the hungering thirst of the awakened India for full fledged Dominion Status. The speech is certainly a departure an agreeble departure—from that of Sir Samuel Hoare. For, it enunciates that the miniature Round Table Conference that is to be summoned in November will have equality of status with the British side of the committee and that efforts will be made to arrive at an agreement on which specific recommendations will be made to the Parliment along with the Government proposals. So far His Excellency's speech inspires confidence. But ambiguity in the other part of his speech as to the fixed agenda that will be placed before the third R. T. C. and the vagueness as to the responsibility at the Centre have still left many doubting the usefulness of the conference. This could well have been expressed clearly. That the Session will not be open to the public is another feature which strengthens the doubt that is already there. No doubt the Government is anxious to secure the co-operation of the liberals in the further stages of the drafting of the constitution and this certainly ought to have set the Government on its guard to make its intentions clear. We are sorry to observe that whetting of the sword against the Congress—the only representative and active organisation in the country is the worst feature of His Excellency's speech and it is hear that Lord Wellingdon has yielded to the diehard pressure. It does not betoken well of the future nor is it worth while to draw swords against the Congress at this critical history of the country, when the co-operation of all is most needed in framing and working of the new constitution. However, we ardently desire that wise counsels may yet prevail and save the country from political choas and economic distress. Let England discern India's throbbing pulse for political emancipation and ere long India will certainly be a grateful partner in the British Common Wealth.

ಮೈಸೂರು ಪೊಗದಿಯು.

ಈ ಪೊಗದಿಯು ಪ್ರಕೃತ ಸಂದರ್ಭದಲ್ಲಿ ನಮ್ಮ ಸಂಸ್ಥಾನಕ್ಕೆಷ್ಟು ಅನ್ಯಾಯವೂ ಭಾರವೂ ಆಗಿರುವುದೆಂಬುದನ್ನೂ, ಭಾರತ ಪ್ರಭುತ್ವದವರಿಗೆ ಬಿಟ್ಟುಕೊಟ್ಟಿರುವ ಬೆಂಗಳೂರು ದಂಡು ಪ್ರದೇಶದ ಆಡಳಿತವು ನಮ್ಮ ಪ್ರಭುತ್ವದವರಿಗೆ ಬರಬೇಕಾದ ಆವಶ್ಯಕತೆಯನ್ನೂ ಕುರಿತು ಹಿಂದೆ ಪ್ರಸ್ತಾಪಿಸಿರುವೆವಷ್ಟೆ. ಈ ಪೊಗದಿಯ ವಿಚಾರದಲ್ಲಿ ಡೇವಿಡ್ ಸನ್ ಕಮಿಟಿಯವರು ಪಟ್ಟಿರುವ ಅಭಿಪ್ರಾಯವನ್ನು ನಿರೋಧಿಸಲು ಸಂಸ್ಥಾನದ ಪ್ರಮುಖರ ಪ್ರಚಂಡ ಮಹಾಸಭೆಯು ರಾಜ ಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಕೆಟಿ, ಸಿ ಐ. ಇ., ಯವರ ಅಧ್ಯಕ್ಷತೆಯಲ್ಲಿ ಕಳೆದ ತಾ|| 11 ನೆಯ ಭಾನುವಾರ ಬೆಂಗಳೂರು ಲಾಲಬಾಗಿನೊಳಗೆ ನೆರೆದಿದ್ದಿತು. ಈ ಸಭೆಗೆ ಸಂಸ್ಥಾನದ ಎಲ್ಲಾ ಕಡೆಗಳಿಂದಲೂ ನ್ಯಾಯವಿಧಾಯಕ ಮತ್ತು ಪ್ರಜಾಪ್ರತಿನಿಧಿ ಸಭೆಗಳು, ಡಿಸ್ಟ್ರಿಕ್ಟ್ ಬೋರ್ಡುಗಳು ಮ್ಯುನಿಸಿಪಾಲಿಟಿಗಳು ಇತ್ಯಾದಿ ಸಂಸ್ಥೆಗಳ ಎಲ್ಲ ವರ್ಣದ ಮೆಂಬರುಗಳೂ ಪ್ರಸಿದ್ಧ ವಕೀಲರುಗಳೂ, ರಿಟೈರ್ಡ್ ಅಧಿಕಾರಿಗಳೂ, ವರ್ತಕರುಗಳೂ ಬಂದಿದ್ದರು. ಅಧ್ಯಕ್ಷ ಮಹಾಶಯರು ಈ ಪೊಗದಿಯ ಪೂರ್ವೋತ್ತರ ವಿಚಾರವನ್ನೂ, ಇದು ಈಗ ಸಂಪೂರ್ಣ ನಿವಾರಣೆಯಾಗಿ ದಂಡು ಪ್ರದೇಶದ ಆಡಳಿತವು ನಮ್ಮ ಪ್ರಭುತ್ವದವರ ವಶವಾಗಬೇಕಾದ ಆವಶ್ಯಕತೆಯನ್ನೂ ಕುರಿತು ಬಹಳ ದೀರ್ಘವಾಗಿಯೂ, ಯುಕ್ತಿಯುಕ್ತವಾಗಿಯೂ, ಹೃದಯಂಗಮವಾಗಿಯೂ ಭಾಷಣಮಾಡಿದ ಮೇಲೆ ಅದೇ ವಿಚಾರವನ್ನು ಕೆಲ ಪ್ರಮುಖರು ಪುಷ್ಟೀಕರಿಸಿ ಭಾಷಣಮಾಡಿದರು. ತರುವಾಯ ಮೈಸೂರು ಪ್ರಭುತ್ವದವರು ಬಹುಕಾಲದಿಂದಲೂ ಪ್ರಯತ್ನಿಸುತ್ತಿರುವ ಈ ಪೊಗದಿಯನ್ನು ಕೂಡಲೆ ಸಂಪೂರ್ಣವಾಗಿ ತೊಲಗಿಸುವಂತೆ ಪ್ರಾರ್ಥಿಸಿಕೊಳ್ಳಬೇಕೆಂದೂ, ನಮ್ಮ ಸಂಸ್ಥಾನವು ತನ್ನ ಅಂತಸ್ತಿಗೂ ಗೌರವಕ್ಕೂ ತಕ್ಕ ಸ್ಥಾನವನ್ನು ಪಡೆದು ಸಂಯುಕ್ತ ರಾಜ್ಯಾಂಗಕ್ಕೆ ಸೇರುವುದು ಸಮಸ್ತರಿಗೂ ಇಷ್ಟವೆಂದೂ ನಿರ್ಧರಿಸಲ್ಪಟ್ಟಿತು. ಈ ಪೊಗದಿಯನ್ನು ತೊಲಗಿಸುವ ವಿಚಾರದಲ್ಲಿ ಸರ್ ಮಿರ್ಜಯವರು ಮಾಡುತ್ತಿರುವ ಅಸಮಸಾಹಸಕ್ಕೆ ಮೇಲ್ಕಂಡ ನಿರ್ಧಾರವು ಪುಷ್ಟಿಕರವಾಗಿರುವುದೆಂದು ನಿರೀಕ್ಷಿಸುತ್ತೇವೆ.

ಮಹಾತ್ಮರ ಪ್ರಾಯೋಪವೇಶ ದೀಕ್ಷಾ

ನಿಮ್ನಜಾತಿಯವರಿಗೆ ಪ್ರತ್ಯೇಕ ನಿಯೋಜಕ ವರ್ಗಗಳನ್ನೇರ್ಪಡಿಸಿರುವ ವಿಚಾರದಲ್ಲಿ ಮಹಾತ್ಮರಿಗೂ, ಭಾರತದೇಶ ಮಂತ್ರಿ ಮತ್ತು ಬ್ರಿಟನ್ನು ಪ್ರಧಾನ ಮಂತ್ರಿ ಇವರುಗಳಿಗೂ ನಡೆದಿರುವ ಉತ್ತರ ಪ್ರತ್ಯುತ್ತರಗಳು ಸಮಗ್ರವಾಗಿ ಈ ಪತ್ರಿಕೆಯ ಬೇರೊಂದುಕಡೆಯಲ್ಲಿ ಪ್ರಕಟಿಸಲ್ಪಟ್ಟಿವೆ. ಮುಖ್ಯ ಮಂತ್ರಿ ಮೆಕ್ಡೊನಾಲ್ಡರವರಿಂದ ಪ್ರಸಾದಿಸಲ್ಪಟ್ಟಿರುವ ಪ್ರತ್ಯೇಕ ನಿಯೋಜಕ ವರ್ಗದೇರ್ಪಾಟಿನಿಂದ ಅಸ್ಪೃಶ್ಯ ಜನರು ಹಿಂದು ಸಮಾಜದಿಂದ ದೂರೀಕರಿಸಲ್ಪಡುವರಾದಪ್ರಯುಕ್ತ ಈ ಏರ್ಪಾಟು ತೊಲಗುವುದಕ್ಕಾಗಿ ಅಸ್ಪೃಶ್ಯತಾ ನಿವಾರಣೆಗೆ ಕಂಕಣ ಬದ್ಧರಾಗಿರುವ ಮಹಾತ್ಮರು ಪ್ರಾಯೋಪವೇಶ ವ್ರತವನ್ನು ನಾಳೆಯ ದಿವಸ ಪ್ರಾರಂಭಿಸಲು ಸಂಕಲ್ಪಿಸಿರುವರು. ಮಹಾತ್ಮರ ಈ ಸಂಕಲ್ಪವು ಪ್ರಪಂಚದಲ್ಲೆಲ್ಲ ಕಳವಳವನ್ನುಂಟುಮಾಡಿದೆ. ಈ ಪ್ರತ್ಯೇಕ ನಿಯೋಜಕದೇರ್ಪಾಟನ್ನು ಹಿಂದುಗಳಲ್ಲಿ ಇತರ ವರ್ಣದವರೂ ಅಸ್ಪೃಶ್ಯರೂ ಪರಸ್ಪರ ಒಡಂಬಡಿಕೆಯಿಂದ ಸಮಾಧಾನಮಾಡಿಕೊಂಡಹೊರತು ಬದಲಾಯಿಸಲಾಗುವುದಿಲ್ಲವೆಂದು ಮೆಕ್ಡೊನಾಲ್ಡರವರು ಖಚಿತವಾಗಿ ಹೇಳಿರುವುದರಿಂದಲೂ, ಹಿಂದು ಸಮಾಜದ ವಿಭಜನಕ್ಕೆ ಹೇತುವಾದ ಮತ್ತು ಅಸ್ಪೃಶ್ಯರ ಸಾಂಘಿಕಾಭಿವೃದ್ಧಿಗೆ ಕುಠಾರ ಪ್ರಾಯವಾದ ಪ್ರತ್ಯೇಕ ನಿಯೋಜಕದೇರ್ಪಾಟು ನಿವಾರಣೆಮಾದ ಹೊರತು ತಮ್ಮ ಪ್ರಾಯೋಪವೇಶದೀಕ್ಷೆಯನ್ನು ಬಿಡುವುದಿಲ್ಲವೆಂದು ಮಹಾತ್ಮರು ಹಟಹಿಡಿದಿರುವುದರಿಂದಲೂ, ಅಗ್ರವರ್ಣದವರೆಂದು ಹೇಳಿಕೊಳ್ಳುವ ಹಿಂದುಗಳು ಅಸ್ಪೃಶ್ಯರಲ್ಲಿಟ್ಟಿರುವ ನೀಚಭಾವವನ್ನು ಬಿಟ್ಟು ಅವರು ಶಾಸನ ಸಭೆಗಳಲ್ಲಿ ಹೆಚ್ಚು ಪ್ರಾತಿನಿಧ್ಯಗಳನ್ನು ಪಡಿಯಲಿಕ್ಕೆ ಮತ್ತು ದೇವಾಲಯ, ಪಾಠಶಾಲೆ, ಕೆರೆ, ಭಾವಿ, ರಸ್ತೆ ಮೊದಲಾದ ಸಾರ್ವಜನಿಕ ಸಂಸ್ಥೆಗಳ ಪ್ರವೇಶಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟು ಘೋರತಮವಾದ ದೀಕ್ಷೆಯಿಂದ ಮಹಾತ್ಮರನ್ನು ಬಿಡಿಸಿ, ಅವರ ಸಂಕಲ್ಪದಿಂದ ಸಂಘಟಿಸುವ ಮಹಾನರ್ಥದಿಂದಲೂ, ಪಾಪದಿಂದಲೂ ಪಾರಾಗುವುದು ಪರಮ ಧರ್ಮವಾಗಿರುತ್ತದೆ. ಆದುದರಿಂದಲೇ ಭಾರತ ದೇಶದ ಬೊಂಬಾಯಿ ಕಲಕತ್ತಾ ಕಾಶಿ ಮೊದಲಾದ ಪಟ್ಟಣಗಳಲ್ಲಿ ಹಿಂದುಗಳು ಅಸ್ಪೃಶ್ಯತಾ ನಿವಾರಣೆಯನ್ನು ಮಾಡಲು ಸಂಕಲ್ಪಿಸಿರುತ್ತಾರೆ ಮತ್ತು ಈ ದಿವಸ ಸಾಯಂಕಾಲ ಅಗ್ರವರ್ಣದ ಹಿಂದುಗಳು ಅಸ್ಪೃಶ್ಯರೊಡನೆ ಒಂದೇ ಕಡೆ ಸ್ನಾನಮಾಡಿ ದೇವಾಲಯಗಳಿಗೆ ಹೋಗಿ ಮಹಾತ್ಮರು ಪ್ರಾಯೋಪವೇಶದೀಕ್ಷೆಯನ್ನು ಬಿಟ್ಟು ದೀರ್ಘ ಜೀವಿಗಳಾಗಿರುವಂತೆ ಅನುಗ್ರಹಿಸಬೇಕೆಂದು ದೇವರನ್ನು ಪ್ರಾರ್ಥಿಸಬೇಕೆಂದು ಪ್ರಕಟಿಸಿರುತ್ತಾರೆ. ಇದರಂತೆ ಸಮಸ್ತರೂ ಏಕಮತ್ಯದಿಂದ ಅಸ್ಪೃಶ್ಯತಾ ನಿವಾರಣೋಪಾಯವನ್ನು ನಾಳೆಯೊಳಗಾಗಿ ಕೈಕೊಂಡು ಮಹಾತ್ಮರ ದೀಕ್ಷೆಯು ಒಂದು ದಿನವಾದರೂ ನಡೆಯಲು ಅವಕಾಶವನ್ನು ಕೊಡಲಾಗದೆಂದು ಸಮಸ್ತರೊಡನೆ ನಾವು ಪ್ರಾರ್ಥಿಸುತ್ತೇವೆ.

ಮಹಾತ್ಮರಿಗೆ ಶುಭಕಾಲ

ಈ ಸೆಪ್ಟಂಬರ್ ತಾ|| 18 ರಿಂದ ಶುಭಕಾಲ ಪ್ರಾರಂಭವಾಗಿದೆ. ಈ ತಾ|| 28 ಕ್ಕೆ ಶುಭಗ್ರಹಗಳೆಲ್ಲ ಒಟ್ಟಿಗೆ ಸೇರುವುದರಿಂದ ಆ ಲಾಗಾಯತು ಭಾರತದೇಶದಲ್ಲೂ ಇತರ ದೇಶಗಳಲ್ಲೂ ಮಹಾತ್ಮರ ಅಧಿಕಾರವು ಚೆನ್ನಾಗಿ ಕೆಲಸಮಾಡುವುದು. ಈವರೆಗೂ ಮಹಾತ್ಮರಿಗೆ ಪ್ರತಿಕೂಲವಾಗಿದ್ದ ಗ್ರಹಗಳೆಲ್ಲ ನಿವಾರಣೆಯಾಗುವುದರಿಂದ ಈ ದೇಶದಲ್ಲಿ ನಡೆಯುತ್ತಿರುವ ಹೋರಾಟವು ಗೌರವದಿಂದ ಪರ್ಯವಸಾನವಾಗುವುದು. ಈಗ ಮಹಾತ್ಮರ ಜಾತಕಪ್ರಕಾರ ಬೃಹಸ್ಪತಿಯು ಏಕಾದಶಸ್ಥಾನದಲ್ಲಿರುತ್ತಾನೆ ಅಲ್ಲದೆ ಶನಿಯ ಪ್ರಾಬಲ್ಯವು ಬಹಳ ಕಡಿಮೆಯಾಗುವುದು ಎಂದು ಲಕ್ನೋ ಜೋಯಿಸರಾದ ಡಾಕ್ಟರ್ ಲಕ್ಷ್ಮಣಸ್ವಾಮಿಯವರು ಭವಿಷ್ಯವನ್ನು ನುಡಿದಿರುತ್ತಾರೆ.

ಅಖಿಲನಾಯಕರ ಸಭೆ

ಈ ತಾ|| 20 ರಲ್ಲಿ ಮಹಾತ್ಮರು ಉಪವಾಸವ್ರತವನ್ನು ಆರಂಭಿಸಿ ಪ್ರಾಣತ್ಯಾಗಮಾಡಲು ಸಂಕಲ್ಪಿಸಿರುವುದರಿಂದ ಅದಕ್ಕೆ ಅವಕಾಶವಾಗದಿರಲು ತಕ್ಕುಪಾಯಗಳನ್ನು ಪರ್ಯಾಲೋಚಿಸುವುದಕ್ಕಾಗಿ ಅಖಿಲಭಾರತ ನಾಯಕರ ಮಹಾಸಭೆಯನ್ನು ಡಿಲ್ಲಿ ಪಟ್ಟಣದಲ್ಲಿ ಈ ದಿವಸ ನಡೆಸಲು ಪಂಡಿತ ಮದನಮೋಹನ ಮಾಲವ್ಯರವರು ನಿಶ್ಚಯಿಸಿದ್ದರು. ಆದರೆ ಈ ಸಭೆಯನ್ನು ನೆರಿಸಲು ದಿಲ್ಲಿಗಿಂತ ಬೊಂಬಾಯಿ ಪಟ್ಟಣವು ಅನುಕೂಲ ಸ್ಥಳವಾಗಿರುವುದೆಂದು ಅನೇಕ ನಾಯಕರುಗಳು ಮಾಲವ್ಯರವರಿಗೆ ತಿಳುಹಿದುದರಮೇಲೆ ಈ ಮಹಾಸಭೆಯನ್ನು ಬೊಂಬಾಯಿಯಲ್ಲಿರುವ ಬಿರ್ಲಾ ಹೌಸ್ ಎಂಬ ಮಂದಿರದಲ್ಲಿ ಜರುಗಿಸಲು ನಿರ್ಧರಿಸಿ, ಎಲ್ಲರೂ ಬೊಂಬಾಯಿಗೆ ಬರಬೇಕೆಂದೂ, ಒಂದೊವನೆ ತಮಗೆ ತಿಳುಹಬೇಕೆಂದೂ ಮಾಲವ್ಯರವರು ಪ್ರಕಟಿಸಿರುತ್ತಾರೆ.

ಇಂಡ್ಯಾ ಲೀಗಿನವರು ಹೋರ್‌ರವರಿಗೆ ಕೊಟ್ಟ ತಂತಿ

ಈಗ ಇಂಡ್ಯಾದಲ್ಲಿ ಸಂಚರಿಸುತ್ತಿರುವ ಲಂಡನ್ ಇಂಡ್ಯಾ ಲೀಗಿನ ಪ್ರತಿನಿಧಿಗಳು ಸದ್ಯದಲ್ಲಿ ಕಲಕತ್ತಾದಲ್ಲಿರುವರು. ಇವರು ಹಿಂದುದೇಶ ಪರಿಸ್ಥಿತಿಯ ವಿಚಾರವಾಗಿ ಈ ಪ್ರಕಾರ ತಂತಿಯ ಮೂಲಕ ಇಂಡ್ಯಾ ಮಂತ್ರಿಗಳಿಗೆ ತಿಳಿಸಿರುವರು :—

ಕಾಂಗ್ರೆಸಿನವರೊಡನೆ ಯಾವ ಅಡ್ಡಿಯಿಲ್ಲದೆ ಆಲೋಚನೆಯನ್ನು ಕಾರ್ಯಭಾರವನ್ನು ನಡಿಸಲಿಕ್ಕಾಗಿ ಮಹಾತ್ಮರೇ ಮೊದಲಾದವರನ್ನೆಲ್ಲ ಕೂಡಲೇ ಬಂಧನದಿಂದ ಬಿಡಬೇಕಾಗಿ ಕೋರುತ್ತೇವೆ. ನಾವು ಗ್ರಾಮಗಳಲ್ಲೂ, ಔದ್ಯೋಗಿಕ ಸ್ಥಲಗಳಲ್ಲೂ, ಅಸ್ಪೃಶ್ಯರು ವಾಸಿಸುವ ಪ್ರದೇಶಗಳಲ್ಲೂ ಸಂಚರಿಸಿ ಸಾಮಾನ್ಯ ಪ್ರಜೆಗಳ ಅಭಿಪ್ರಾಯಗಳನ್ನು ಚೆನ್ನಾಗಿ ವಿಚಾರಿಸಿ ತಿಳಿದುಕೊಂಡಿರುತ್ತೇವೆ. ಅಸ್ಪೃಶ್ಯರೂ ಮಿಲ್ಲುಗಳಲ್ಲಿ ಕೆಲಸಮಾಡುವವರು ಮೊದಲಾಗಿ ಕೈಗಾರಿಕೆಯವರೂ ಸಾಮಾನ್ಯ ಪ್ರಜೆಗಳೂ ಮಹಾತ್ಮರ ನಾಯಕತ್ವವನ್ನು ಕೋರುತ್ತಾರೆ. ಬ್ರಿಟಿಷ್ ದೊರೆತನದವರು ಮಾಡಿದ ಕೋಮುವಾರು ಸಮಸ್ಯಾ ಪರಿಷ್ಕಾರದಿಂದುಂಟಾಗುವ ಮಹಾ ಪ್ರಮಾದವನ್ನು ತಪ್ಪಿಸುವುದಕ್ಕಾಗಿ ಅವರು ಅದನ್ನು ತತ್‌ಕ್ಷಣವೇ ಸರಿಪಡಿಸಬೇಕು. ಇಲ್ಲವಾದಲ್ಲಿ ಅಂದರೆ ಮಹಾತ್ಮರು ಮೃತರಾದರೆ ಅದಕ್ಕೆ ನೀವೂ ಬ್ರಿಟನು ದೊರೆತನದವರೂ ಸಂಪೂರ್ಣವಾಗಿ ಬಾಧ್ಯರಾಗುವಿರಿ. ಭಾರತ ದೇಶೀಯರು ಶಾಂತಿಭಾವವನ್ನೂ ಬ್ರಿಟಿಷರಲ್ಲಿ ಸ್ನೇಹಭಾವವನ್ನೂ ಹೊಂದಿರುವಂತೆ ಮಾಡಲು ಮಹಾತ್ಮರಿಗಿಂತ ಸಮರ್ಥರಾದವರು ಬೇರೊಬ್ಬರಿಲ್ಲ.

ಅಸ್ಪೃಶ್ಯರಿಗೆ ದೇವಾಲಯ ಬಾಗಿಲುಗಳು ತೆರೆಯಲ್ಪಡಬೇಕು.

ರಾಮನಾಥ ಛಟರ್ಜಿ, ಜೆ ಎನ್. ಬಾಸು, ತುಲಸಿ ಗೋಸ್ವಾಮಿ, ಶ್ರೀಮತಿ ಸರಲಾದೇವಿ ಚೌದೂರಾಣಿ ಸೇನಗುಪ್ತರ ಪತ್ನಿ ಮತ್ತೆ 30 ಮಂದಿ ವಂಗರಾಷ್ಟ್ರ ನಾಯಕರುಗಳ ಹಸ್ತಾಕ್ಷರಗಳಿಂದ ಮುಂದಣ ಬಿನ್ನಪವು ಪ್ರಕಟಿಸಲ್ಪಟ್ಟಿದೆ:—

ಮಹಾತ್ಮರ ಉಪವಾಸವ್ರತದಿಂದ ಪ್ರಾಣತ್ಯಾಗಮಾಡುವ ಸಂಕಲ್ಪವು ನಾಗರಿಕ ಪ್ರಪಂಚವನ್ನೆಲ್ಲ ಘಾಬರಿಗೊಳಿಸಿದೆ. ಮಹಾತ್ಮರ ಸಂಕಲ್ಪವು ಮಕ್ಡೊನಾಲ್ಡರವರ ಪರಿಷ್ಕಾರದಲ್ಲಿರುವ ದುರುದ್ದೇಶವನ್ನು ವ್ಯಕ್ತಗೊಳಿಸುತ್ತದೆ. ಅಷ್ಟೇ ಅಲ್ಲದೆ ಹಿಂದು ಸಮಾಜವನ್ನು ಅಗ್ನಿಪರೀಕ್ಷೆಗೆ ಗುರಿಮಾಡಿರುತ್ತದೆ. ಆದುದರಿಂದ ಮಹಾತ್ಮರ ಸಂಕಲ್ಪವು ಬ್ರಿಟಿಷ್ ಪ್ರಭುತ್ವದವರನ್ನುದ್ದೇಶಿಸಿ ಮಾಡಲ್ಪಟ್ಟುದಲ್ಲವೆಂದೂ, ಹಿಂದು ಸಮಾಜದ ಮೇಲ್ಮೆಗಾಗಿ ಮಾಡಲ್ಪಟ್ಟುದೆಂದೂ ಅರಿತುಕೊಳ್ಳಬೇಕು. ವಂಗರಾಷ್ಟ್ರವು ಚೈತನ್ಯ ಸ್ವರೂಪರಾದ ಚಿತ್ತರಂಜನದಾಸರು ಮೊದಲಾದ ಮಹಾಶಯರಿಗೆ ಜನ್ಮಸ್ಥಾನವು, ಅಸ್ಪೃಶ್ಯರನ್ನು ಹಿಂದು ಮತದಿಂದ ಪ್ರತ್ಯೇಕಿಸುವ ಏರ್ಪಾಟನ್ನು ಕೊನೆಗಾಣಿಸಲು ವಂಗರಾಷ್ಟ್ರವು ಮಾರ್ಗದರ್ಶಕವಾಗಿರಬೇಕು. ಆದುದರಿಂದ ಎಲ್ಲ ದೇವಾಲಯಗಳ ಧರ್ಮದರ್ಶಿಗಳು ತಮ್ಮ ದೇವಾಲಯಗಳಿಗೆ ಅಸ್ಪೃಶ್ಯರನ್ನು ಪ್ರವೇಶಗೊಳಿಸಬೇಕೆಂದು ಪ್ರಾರ್ಥಿಸುತ್ತೇವೆ. ಹಿಂದು ಸಮಾಜವನ್ನು ಈ ವಿಧವಾಗಿ ಪವಿತ್ರಗೊಳಿಸಲು ಸೆಪ್ಟಂಬರ್ 20 ನೆಯ ತಾರೀಕಿಗಿಂತ ಪವಿತ್ರ ದಿನವು ಬೇರೊಂದಿಲ್ಲ.

ಕಾಶಿಯಲ್ಲಿ ಹಿಂದು ಮಹಾಸಭೆ

ಕಳೆದ ಗುರುವಾರ ರಾತ್ರಿ ಕಾಶಿ ಕ್ಷೇತ್ರದ ಹಿಂದುಗಳು ಟವನ್ ಹಾಲಿನಲ್ಲಿ ಸಂಪೂರ್ಣಾನಂದರವರ ಅಧ್ಯಕ್ಷತೆಯಲ್ಲಿ ಪ್ರಚಂಡಸಭೆ ಸೇರಿದ್ದರು. ಪಂಡಿತ ಮದನಮೋಹನ ಮಾಲವ್ಯರವರೂ, ಬಾಬ ಭಗವಾನ್ ದಾಸರವರೂ, ಬಾಬು ರಾಜೇಂದ್ರ ಪ್ರಸಾದರವರೂ ಗಂಭೀರೋಪನ್ಯಾಸಗಳನ್ನು ಮಾಡಿದರು. ಹಿಂದುಮತದಿಂದ ನಿಮ್ನ ಜನರನ್ನು ಬಿಟ್ಟುಕೊಡದಿರಲು ಸಂಯುಕ್ತ ನಿಯೋಜಕವರ್ಗದವರು ಸಮ್ಮತಿಸಿ ನಿಮ್ನ ಜನರಿಗೆ ಅವರಪೇಕ್ಷಿಸಿದಷ್ಟು ಪ್ರಾತಿನಿಧ್ಯಗಳನ್ನು ಕೊಟ್ಟು ಮಹಾತ್ಮರ ಪ್ರಾಣರಕ್ಷಣೆ ಮಾಡಬೇಕೆಂದು ತೀರ್ಮಾನಿಸಲ್ಪಟ್ಟಿತು. ಈ ಕಾರ್ಯಕ್ಕೆ ಮಹಾತ್ಮರ ಸಹಾಯವು ಅಗತ್ಯವಾಗಿರುವುದರಿಂದ ಪ್ರಭುತ್ವದವರು ಅದಕ್ಕೆ ಅವಕಾಶವನ್ನು ಕೊಡಬೇಕೆಂದು ಕೋರಲ್ಪಟ್ಟಿತು. ನಿಮ್ನ ಜನರಿಗೆ ಈಗಿರುವ ಕಷ್ಟಗಳನ್ನು ಕೂಡಲೆ ತೊಲಗಿಸಿ ಅವರ ಸಾಂಘಿಕ ಆರ್ಥಿಕ, ನೈತಿಕ ಉದ್ಧಾರಕ್ಕೆ ಸಂಪೂರ್ಣವಾಗಿ ಪ್ರಯತ್ನಿಸಬೇಕೆಂದು ಹಿಂದುಗಳೆಲ್ಲರೂ ಪ್ರಾರ್ಥಿಸಲ್ಪಟ್ಟರೂ, ಈಗಲೂ ನಿಮ್ನ ಜನರು ಎಲ್ಲ ಬಾವಿಗಳಿಗೂ, ರಸ್ತೆಗಳಿಗೂ, ಪಾಠಶಾಲೆಗಳಿಗೂ ಪ್ರವೇಶಿಸಲು ಅವಕಾಶವಿಲ್ಲವಾದುದರಿಂದ ಕೂಡಲೆ ಅವರ ಪ್ರವೇಶಕ್ಕೆ ಅವಕಾಶ ಕಲ್ಪಿಸಲ್ಪಡಬೇಕೆಂದೂ, ದೇವಸ್ಥಾನಗಳಲ್ಲಿ ದೇವರ ದರ್ಶನಕ್ಕೆ ಆತುರಪಡುತ್ತಿರುವ ನಿಮ್ನ ಜಾತಿಯವರಿಗೆ ಹಿಂದುಗಳು ಕೂಡಲೆ ದರ್ಶನಕ್ಕೇರ್ಪಡಿಸುವುದು ಹಿಂದಗಳ ಧರ್ಮವೆಂದೂ ನಿರ್ಧರಿಸಲ್ಪಟ್ಟಿತು. ಈ ಸಭೆಯಲ್ಲಿ ನಿಮ್ನ ಜಾತಿಯ ನಾಯಕರುಗಳೂ ಇದ್ದು ಉಪನ್ಯಾಸಗಳನ್ನು ಮಾಡಿದರು. ಮಹಾತ್ಮರು ನಿಮ್ನ ಜನರಿಗಾಗಿ ಮಾಡುತ್ತಿರುವ ಸೇವೆಯನ್ನು ಬಹು ವಿಧವಾಗಿ ಪ್ರಶಂಸಿಸಿ ನಿಮ್ನ ಜನರ ಶ್ರೇಯೋಭಿವೃದ್ಧಿಗಾದರೂ ಮಹಾತ್ಮರು ಕೆಲ ದಿವಸಗಳ ವರೆಗೆ ತಮ್ಮ ಉಪವಾಸ ವ್ರತವನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸಿದರು.

ಮಹಾತ್ಮರ ಬಂಧವಿಮೋಚನೆ.

ದೊರೆತನದವರು ಮಾಡಿರುವ ಕೋಮುವಾರು ಪ್ರಾತಿನಿಧ್ಯ ಸಮಸ್ಯೆಯ ಪರಿಷ್ಕಾರದಿಂದ ತಮಗುಂಟಾಗಿರುವ ಅಸಮಾಧಾನವನ್ನು ವ್ಯಕ್ತಗೊಳಿಸಲು ಈ ತಾ|| 20 ರಿಂದ ಉಪವಾಸ ವ್ರತವನ್ನಾರಂಭಿಸಿ ಪ್ರಾಣತ್ಯಾಗಮಾಡಲು ಗಾಂಧಿಯವರು ನಿಶ್ಚಯಿಸಿರುವರಾದುದರಿಂದ ಗಾಂಧಿಯವರು ಎರವಾಡ ಜೈಲಿನಿಂದ ಬಿಡಲ್ಪಡುವರು. "ನನ್ನನ್ನು ನಿರ್ಬಂಧಗೊಳಿಸಿರುವುದಕ್ಕಾಗಿ ನಾನು ಈ ವ್ರತವನ್ನು ಆಚರಿಸುವುದಿಲ್ಲ. ನನ್ನನ್ನು ಬಿಡಬೇಕೆಂಬ ಕೋರಿಕೆಯಿಂದ ಈ ವ್ರತವನ್ನು ಕೈಕೊಳ್ಳುವುದಿಲ್ಲ. ಶಾಸನೋಲ್ಲಂಘನವನ್ನು ಅಡಗಿಸುವುದಕ್ಕಾಗಿ ದೊರೆತನದವರು ಅವಲಂಬಿಸಿರುವ ಪದ್ಧತಿಗಳಿಂದ ತನಗುಂಟಾಗಿರುವ ಅಸಮ್ಮತಿಯನ್ನು ತಿಳುಹಲು ಕೂಡ ನಾನು ಈ ವ್ರತವನ್ನು ಹಿಡಿಯುವುದಿಲ್ಲ" ಎಂದು ಗಾಂಧಿಯವರು ಪ್ರಧಾನ ಮಂತ್ರಿಗಳಿಗೆ ಬರೆದಿರುವ ಕಾಗದದಿಂದ ಸ್ಪಷ್ಟವಾಗುತ್ತದೆ. ಗಾಂಧಿಯವರು ಉಪವಾಸ ವ್ರತವನ್ನು ಆರಂಭಿಸುವುದರಿಂದ ಅವರನ್ನು ಜೈಲಿನಿಂದ ಅನುಕೂಲವಾದ ಒಂದು ಸ್ಥಳಕ್ಕಾಗಲಿ ಒಂದು ಮನೆಗಾಗಲಿ ಬದಲಾಯಿಸಬೇಕೆಂದು ದೊರೆತನದವರು ನಿಶ್ಚಯಿಸಿರುವರು. ಅವರು ಆ ಸ್ಥಳವನ್ನು ಬಿಟ್ಟು ಹೋಗಕೂಡದೆಂಬ ಆಜ್ಞೆಯು ಮಾತ್ರ ಅಲ್ಲಿ ಅವರಿಗೆ ತಿಳುಹುವಂತೆ ಸದ್ಯದಲ್ಲಿ ನಿಶ್ಚಯಿಸಲ್ಪಟ್ಟಿದೆ. ಅದಕ್ಕಿಂತಲೂ ಹೆಚ್ಚಾಗಿ ನಿರೋಧವನ್ನು ವಿಧಿಸಬೇಕಾದ ಅಗತ್ಯವುಂಟಾಗದಿರಲೆಂದು ದೊರೆತನದವರು ಕೋರುತ್ತಾರೆ. ಗಾಂಧಿಯವರಿಗೆ ಇಷ್ಟು ಸ್ವಾತಂತ್ರ್ಯವು ಕೊಡಲ್ಪಟ್ಟಮೇಲೆ ಗಾಂಧಿಯವರು ಪುನಃ ಶಾಸನೋಲ್ಲಂಘನವನ್ನು ವೃದ್ಧಿಗೊಳಿಸಲಿಕ್ಕಾಗಲಿ, ದೊರೆತನದವರಿಗೆ ಪ್ರತಿಕೂಲವಾದ ಮತ್ತೊಂದು ಕಾರ್ಯವನ್ನು ನಡೆಸಲಿಕ್ಕಾಗಲಿ ಲಾ ಆರ್ಡರನ್ನು ಭಂಗಪಡಿಸಲಿಕ್ಕಾಗಲಿ ಪ್ರಯತ್ನಿಸಿದರೆ ತಕ್ಕೇರ್ಪಾಟನ್ನು ಆಗ್ಗೆ ದೊರೆತನದವರು ಪುನಃ ಮಾಡಬೇಕಾಗುವುದು ಎಂದು ಇಂಡ್ಯಾ ಮಂತ್ರಿಯವರೂ, ಇಂಡ್ಯಾ ಪ್ರಭುತ್ವದವರೂ ಪ್ರಕಟಿಸಿರುತ್ತಾರೆ.

ದಸರಾ ಮಹೋತ್ಸವ

(ಅಂಗೀರಸನಾಮಸಂವತ್ಸರದ ಆಶ್ವಯುಜ ಶುದ್ಧ)

ಅಕ್ಟೋಬರ್ 1932

1 ನೇ ಶನಿವಾರ—ಪ್ರಾತಃಕಾಲ $8\frac{1}{4}$ ಘಂಟೆಗೆ ಶ್ರೀಮನ್ಮಹಾರಾಜರವರು ಸಿಂಹಾಸನಾರೋಹಣವನ್ನು ಬೆಳಸುತ್ತಾರೆ. ದಿವಾನರಿಂದಲೂ, ಖಾಸಾ ಭಾವಮೈದುನರಿಂದಲೂ ಕೌನ್ಸಿಲರುಗಳಿಂದಲೂ, ಸರದಾರರುಗಳಿಂದಲೂ ಮತ್ತು ಮುಖ್ಯವಾದ ಅರಸುಗಳಿಂದಲೂ ನಜರ್. ಸಾಯಂಕಾಲ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆಬಳಿಗೆ ಬಿಜಮಾಡುವುದು. 7 ಘಂಟೆಗೆ ದರ್ಬಾರ್. ಸಿವಿಲ್ ಆಫೀಸರುಗಳಿಂದಲೂ ಮತ್ತು ಅರಸುಗಳು ವಗೈರೆ ದರ್ಬಾರಿಗಳಿಂದಲೂ ನಜರ್.

2 ನೇ ಭಾನುವಾರ—ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆಬಳಿಗೆ ಬಿಜಮಾಡುವುದು. ಸಾಯಂಕಾಲ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆಬಳಿಗೆ ಬಿಜಮಾಡುವುದು. 7 ಘಂಟೆಗೆ ದರ್ಬಾರ್. ಮಿಲಿಟರಿ ಆಫೀಸರುಗಳಿಂದಲೂ ಮತ್ತು ಪೊಲೀಸ್ ಆಫೀಸರುಗಳಿಂದಲೂ ನಜರ್.

3 ನೇ ಸೋಮವಾರ 4 ನೇ ಮಂಗಳವಾರ 5 ನೇ ಬುಧವಾರ 6 ನೇ ಗುರುವಾರ 7 ನೇ ಶುಕ್ರವಾರ	ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆಬಳಿಗೆ ಬಿಜಮಾಡುವುದು. ಸಾಯಂಕಾಲ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆಬಳಿಗೆ ಬಿಜಮಾಡುವುದು. 7 ಘಂಟೆಗೆ ದರ್ಬಾರ್.

8 ನೇ ಶನಿವಾರ—ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆ, ಪಟ್ಟದ ಕುದುರೆ ಮತ್ತು ಆಯುಧ ಕೆರೆ ಬಳಿಗೆ ಬಿಟ್ಟು ಅನಂತರ 9 ಘಂಟೆಗೆ ಹಿಂದಕ್ಕೆ ಬಿಜಮಾಡುವುದು. ಅನಂತರ ಆಯುಧ, ಗಜಾಶ್ವಾದಿಗಳ ಪೂಜೆ. ಸಾಯಂಕಾಲ 7 ಘಂಟೆಗೆ ದರ್ಬಾರ್ (ಯೂರೋಪಿಯನ್ ಗೆಸ್ಟ್ಸ್).

9 ನೇ ಭಾನುವಾರ—ಪ್ರಾತಃಕಾಲ $6\frac{1}{2}$ ಘಂಟೆಗೆ ಆಯುಧ, ಗಜಾಶ್ವ ಬನ್ನೀಮಂಟಪಕ್ಕೆ ಬಿಜಮಾಡುವುದು. ಅನಂತರ ಜಟ್ಟೀ ಕಾಳಗ. ಸಾಯಂಕಾಲ 4 ಘಂಟೆಗೆ ಜಂಬೂಸವಾರಿ.

10 ನೇ ಸೋಮವಾರ—ಸಾಯಂಕಾಲ $7\frac{1}{2}$ ಘಂಟೆಗೆ ದರ್ಬಾರ್. ಸೆಜ್ಜೆ ದರ್ಬಾರುಗಳಲ್ಲಿ ನಜರನ್ನು ಒಪ್ಪಿಸದೆ ಇರುವ ಸಿವಿಲ್, ಮಿಲಿಟರಿ ಮತ್ತು ಪೊಲೀಸ್ ಆಫೀಸರುಗಳಿಂದಲೂ ಮತ್ತು ಪ್ರಜಾಪ್ರತಿನಿಧಿಗಳಿಂದಲೂ ನಜರ್.

11 ನೇ ಮಂಗಳವಾರ—ಸಾಯಂಕಾಲ $7\frac{1}{2}$ ಘಂಟೆಗೆ ದರ್ಬಾರ್.

ಮಹಾತ್ಮರು ಇಂಡ್ಯಾ ಮಂತ್ರಿಗೆ ಬರೆದ ಕಾಗದ

ಈವರೆಗೆ ಈ ವಿಷಯವು ಬಹಳ ಗೋಪ್ಯವಾಗಿದ್ದಿತು.

1932 ನೆಯ ಮಾರ್ಚಿ ತಾ|| 11 ರಲ್ಲಿ ಎರವಾಡ ಜೈಲಿನಿಂದ ಮಹಾತ್ಮ ಗಾಂಧಿಯವರು ಇಂಡ್ಯಾ ಮಂತ್ರಿಯವರಾದ ಸರ್ ಸ್ಯಾಮುಯಲ್ ಹೋರ್ ರವರಿಗೆ ಬರೆದ ಪತ್ರ.

ರೌಂಡು ಟೇಬಲು ಸಭೆಯಲ್ಲಿ ಅಲ್ಪಸಂಖ್ಯಾತರ ಹಕ್ಕುಗಳ ವಿಚಾರವಾಗಿ ಅವರ ಪ್ರತಿನಿಧಿಗಳು ವಾದಮಾಡಿದಾಗ ಆ ವಿಷಯವನ್ನು ಕುರಿತು ನಾನು ನನ್ನ ಅಭಿಪ್ರಾಯವನ್ನು ತಿಳಿಸಿ ಕಡೆಗೆ "ನಿಮ್ನ ಜಾತಿಗಳಿಗೆ ಪ್ರತ್ಯೇಕ ನಿಯೋಜಕ ವರ್ಗಗಳನ್ನು ಏರ್ಪಡಿಸದಂತೆ ಮಾಡುವುದಕ್ಕಾಗಿ ನಾನು ನನ್ನ ಪ್ರಾಣವನ್ನು ಕೂಡ ಅರ್ಪಿಸಿರುವೆನು" ಎಂದು ಹೇಳಿದ್ದೆನು. ಇದು ನಿಮಗೆ ಜ್ಞಾಪಕವಿರಬಹುದು. ತಾತ್ಕಾಲಿಕೋದ್ರೇಕದಿಂದಾಗಲಿ ಅಭಿಪ್ರಾಯವನ್ನು ಖಂಡಿತವಾಗಿ ತಿಳಿಸಲು ಅತ್ಯುತ್ಕರ್ಷದಿಂದಾಗಲಿ ನಾನು ಹಾಗೆ ಹೇಳಲಿಲ್ಲ. ನನ್ನ ಪ್ರಾಣವನ್ನು ಅರ್ಪಿಸಿಯಾದರೂ ಇದನ್ನು ನಿರೋಧಿಸದೆ ಬಿಡಕೂಡದೆಂಬ ದೃಢ ಸಂಕಲ್ಪದಿಂದಲೇ ನಾನು ಹಾಗೆ ಹೇಳಿದ್ದೆನು.

ಅದರಿಂದ ನಾನು ಇಂಡ್ಯಾಕ್ಕೆ ಬಂದಮೇಲೆ ಪ್ರತ್ಯೇಕ ನಿಯೋಜಕ ವರ್ಗಗಳ ವಿಚಾರದಲ್ಲಿ ಪ್ರಜೆಗಳ ಪ್ರತಿಕೂಲ ಅಭಿಪ್ರಾಯವು ಹುಟ್ಟುವಂತೆ ಪ್ರಯತ್ನಿಸಬೇಕೆಂದು ಉದ್ದೇಶಿಸಿದ್ದೆನು. ಕನಿಷ್ಠ ಪಕ್ಷ ಅಸ್ಪೃಶ್ಯರಿಗಾದರೂ ಪ್ರತ್ಯೇಕ ನಿಯೋಜಕ ವರ್ಗಗಳನ್ನು ಕೊಡದಿರುವಂತೆ ಪ್ರಚಾರಗೊಳಿಸಲೆತ್ನಿಸಿದ್ದೆನು, ಆದರೆ ಅದು ಹಾಗೆ ನಡೆಯಲಿಲ್ಲ.

ನನಗೆ ಜೈಲಿನಲ್ಲಿ ವರ್ತಮಾನ ಪತ್ರಿಕೆಗಳು ಕೊಡಲ್ಪಡುತ್ತಿದ್ದುದರಿಂದ ಬ್ರಿಟನು ದೊರೆತನದವರು ಯಾವ ನಿಮಿಷದಲ್ಲಾದರೂ ಸಾಂಘಿಕ ಸಮಸ್ಯೆಯ ವಿಷಯಕವಾದ ಪರಿಷ್ಕಾರವನ್ನು ಪ್ರಕಟಿಸುವರೆಂದು ನಾನು ಆ ಪತ್ರಿಕೆಗಳ ಮೂಲಕ ತಿಳಿದುಕೊಂಡೆನು. ಅಸ್ಪೃಶ್ಯರಿಗೆ ಪ್ರತ್ಯೇಕ ನಿಯೋಜಕ ವರ್ಗಗಳನ್ನೇರ್ಪಡಿಸುವುದರಿಂದ ನಾನು ಮಾಡಿದ ಪ್ರತಿಜ್ಞೆಯನ್ನು ನೆರವೇರಿಸಲಿಕ್ಕೆ ತಕ್ಕ ಅವಕಾಶವನ್ನು ಅಗ ಅವಲಂಬಿಸುತ್ತೇನೆಂದು [illegible] ಯೋಚಿಸಿದ್ದೆನಾದರೂ ನನ್ನ ಅಭಿಪ್ರಾಯವನ್ನು [illegible] ದೊರೆತನದವರಿಗೆ ತಿಳಿಸದೆ ಇರುವುದು ನ್ಯಾಯವಲ್ಲವೆಂದು ನಾನು ಈಗ ಆಲೋಚಿಸಿದೆನು. ಆಕಾರಣ ನನ್ನ ಪ್ರತಿಜ್ಞೆಯಲ್ಲಿ [illegible] ಪ್ರಾಯವು ದೊರೆತನದವರಿಗೆ ಹುಟ್ಟಿರುವುದು [illegible].

ಅಸ್ಪೃಶ್ಯರಿಗೆ ಪ್ರತ್ಯೇಕ ನಿಯೋಜಕ ವರ್ಗ[illegible] [illegible] ಅಭ್ಯಂತರವಿಲ್ಲ [illegible] ನಾನು [illegible]

ತಿಳಿಸಿರುತ್ತೇನೆ. ಆದುದರಿಂದ ಅವೆಲ್ಲವನ್ನೂ ನಾನು ಪುನಃ ಇಲ್ಲಿ ಬರೆಯ ಬೇಕಾದ ಅಗತ್ಯವಿಲ್ಲ.

ನಾನು ಸಹ ಅಸ್ಪೃಶ್ಯನೆಂದೇ ಭಾವಿಸಿರುವೆನು

[illegible]

ಯಾವ ಭಾರತದೇಶವನ್ನು ಕುರಿತು ನಿರಂತರವಾಗಿ ಆಸ್ಪತೆಯನ್ನಿಡುತ್ತಿರುವುದನ್ನೂ, ಅವನ್ನು ನಿರ್ಮೂಲಗೊಳಿಸುವುದಕ್ಕೆ ಆ ದಾರುಣವಾದ ಮಾರಣ ಶಕ್ತಿಯನ್ನು ಪ್ರಯೋಗಿಸುತ್ತಿರುವುದನ್ನೂ ಕೇಳಿದರೆ ನನ್ನ ಮನಸ್ಸು ದಹಿಸಿ ಹೋದಂತಾಗುತ್ತದೆ. ಇದು ಎಷ್ಟು ಮಾತ್ರವೂ ಶ್ಲಾಘನೀಯವಾಗದು.

[illegible]

ಜಾಹೀರ ನೋಟೀಸು

[illegible]

ದೇಶಾಯಿಯೂ ನನ್ನ ಹತ್ತಿರವಿರುವುದರಿಂದ ಅವರಿಬ್ಬರಿಗೆ ಮಾತ್ರ ಈ ವಿಷಯವು ತಿಳಿದಿರುತ್ತದೆ. ಈ ಲೇಖವನ್ನು ನಿಮಗಿಷ್ಟವಾದ ರೀತಿಯಲ್ಲಿ ನೀವು ವಿನಿಯೋಗಿಸಬಹುದು" ಎಂದು ಮಹಾತ್ಮರು ಬರೆದಿರುವರು.

ಸರ್ ಸಾಮ್ಯುಯಲ್ ಹೋರ್ ರವರ ಉತ್ತರ

1932 ನೆಯ ಮಾರ್ಚಿ ತಾ|| 11 ರಲ್ಲಿ ಮಹಾತ್ಮರು ಬರೆದ ಕಾಗದಕ್ಕೆ ಏಪ್ರಿಲ್ ತಾ|| 13 ರಲ್ಲಿ ಹೋರ್‌ರವರು ಈ ಕೆಳಗೆ ಕಂಡ ಉತ್ತರವನ್ನು ಬರೆದಿರುತ್ತಾರೆ:—

ನಿಮ್ಮ ಜಾತಿಯವರಿಗೆ ಪ್ರತ್ಯೇಕ ನಿಯೋಜಕ ವರ್ಗದೇರ್ಪಾಟಿನ ವಿಚಾರವಾಗಿ ನಿಮ್ಮ ನಿಶ್ಚಿತಾಭಿಪ್ರಾಯವನ್ನು ನಾನು ನಿಮ್ಮ ಲೇಖದಿಂದ ಸಂಪೂರ್ಣವಾಗಿ ತಿಳಿದುಕೊಂಡೆನು. ಈ ಅಂಶವೊಂದರ ಅರ್ಹತೆಯ ವಿಚಾರದಲ್ಲಿ ಮಾತ್ರವೇ ನಾವು ಪರಿಷ್ಕರಿಸಬೇಕಾಗಿದ್ದಿತು. ಲೋಥಿಯನ್ ಕಮಿಟಿಯವರ ಸಂಚಾರವು ಇನ್ನೂ ಪೂರ್ತಿಯಾಗಿಲ್ಲವಾದುದರಿಂದ ಅವರ ವರದಿಯು ಸೇರಲು ಇನ್ನೂ ಕೆಲ ವಾರಗಳು ಆಗುವುವು. ಆಗ ಅವರ ವರದಿಯಲ್ಲಿರುವ ಸೂಚನೆಗಳನ್ನು ಕುರಿತು ನಾನು ಬಹಳ ಶ್ರದ್ಧೆಯಿಂದ ಯೋಚಿಸಬೇಕಾಗಿರುವುದು. ಆಗ ನೀವೂ ನಿಮ್ಮ ಪಕ್ಷದವರೂ ತಿಳಿಸಿರುವ ಅಭಿಪ್ರಾಯಗಳನ್ನು ಸಹ ಕುರಿತು ನಾನು ಯೋಚಿಸುವೆನು. ನೀವೇ ನನ್ನ ಸ್ಥಾನದಲ್ಲಿದ್ದರೆ ನೀವು ಕೂಡ ನನ್ನ ಪದ್ಧತಿಯನ್ನು ಅನುಸರಿಸುತ್ತಿದ್ದಿರಿ. ಲೋಥಿಯನ್ ಕಮಿಟಿಯವರ ವರದಿಯು ನಿಮಗೆ ಸೇರಿದಮೇಲೆ ನೀವು ಅದನ್ನು ಚೆನ್ನಾಗಿ ಯೋಚಿಸಬೇಕು. ಎರಡು ಪಕ್ಷದವರೂ ಈ ವಿಷಯವಾಗಿ ತಿಳಿಸಿದ ಅಭಿಪ್ರಾಯಗಳನ್ನು ಕೂಡ ನೀವು ಶ್ರದ್ಧೆಯಿಂದ ಗಮನಿಸಬೇಕು. ಇದಕ್ಕಿಂತಲೂ ಹೆಚ್ಚಾಗಿ ನಾನು ಯಾವ ವಿಷಯವನ್ನೂ ಬರೆಯಲಾರೆ.

ಆರ್ಡಿನೆನ್ಸನ್ನು ಕುರಿತು ಇದುವರೆಗೆ ರಹಸ್ಯವಾಗಿ ನಿಮಗೆ ಹೇಳಿರುವುದಕ್ಕಿಂತ ಹೆಚ್ಚಾಗಿ ನಾನು ಈಗೇನನ್ನೂ ಹೇಳಲಾರೆ. [illegible]

[illegible] ದೊರತನದವರು ಬಹಳ ಶ್ರದ್ಧೆಯಿಂದ ನೋಡಿಕೊಳ್ಳುತ್ತಲೇ ಇರುವರು. ಲಾ ಆರ್ಡರುಗಳನ್ನು ಕಾಪಾಡಲಿಕ್ಕೂ, ದೌರ್ಜನ್ಯ ಪಕ್ಷದವರಿಂದ ನಮ್ಮ ಉದ್ಯೋಗಸ್ಥರುಗಳ ಪ್ರಾಣಗಳಿಗೂ, ಇತರ ಪ್ರಜೆಗಳ ಪ್ರಾಣಗಳಿಗೂ ಅಪಾಯ ಸಂಭವಿಸದಂತೆ ಕಾಪಾಡಲಿಕ್ಕೂ ಯಾವ ಕಾಲದವರೆಗೆ ಈ ಆರ್ಡಿನೆನ್ಸುಗಳು ಜಾರಿಯಲ್ಲಿರಬೇಕಾಗಿರುವುದೋ ಅಲ್ಲಿಯವರೆಗೆ ಮಾತ್ರ ಇವು ಜಾರಿಯಲ್ಲಿರಿಸಲ್ಪಡುವುವು" ಎಂದು ಇಂಡ್ಯಾ ಮಂತ್ರಿಗಳು ಬರೆದಿರುವರು.

II

ಮಹಾತ್ಮರು ಮೆಕ್ಡೊನಾಲ್ಡ್‌ರವರಿಗೆ ಬರೆದ ಕಾಗದ

ತಾ|| 18-8-1932

ನಾನು ಮಾರ್ಚಿ ತಾ|| 11 ರಲ್ಲಿ ಹೋರ್‌ರವರ ಹೆಸರಿಗೆ ಬರೆದ ಕಾಗದವನ್ನು ಅವರು ನಿಮಗೂ ಮಂತ್ರಿ ವರ್ಗದವರಿಗೂ ತೋರಿಸಿರಬೇಕೆಂದು ನಾನು ತಿಳಿದುಕೊಂಡಿರುವೆನು. ಈಗ ನಾನು ಬರೆಯುವ ವಿಷಯವನ್ನು ಕೂಡ ಆ ಲೇಖದ ಭಾಗವನ್ನಾಗಿಯೇ ನೀವು ಭಾವಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ.

ಅಲ್ಪ ಸಂಖ್ಯಾಕರ ಪ್ರಾರ್ಥನೆಯಮೇಲೆ ಬ್ರಿಟಿಷ್ ದೊರತನದವರ ನಿರ್ಣಯವನ್ನು ನಾನು ಓದಿದೆನು. 1931 ನೇ ನವಂಬರ್ ತಾ|| 13 ರಲ್ಲಿ ಲಂಡನ್ನಿನ ಸೆಂಟ್‌ಜೇಂಸ್ ಅರಮನೆಯೊಳಗೆ ರೌಂಡುಟೇಬಲ್ ಸಭೆಯಲ್ಲಿ ಅಲ್ಪಸಂಖ್ಯಾಕರ ಸಂಘದ ವಿಚಾರವಾಗಿ ನಾನು ಮಾಡಿದ ಪ್ರಕಟನೆಯನ್ನು ನಾನು 1932 ನೆಯ ಮಾರ್ಚಿ ತಾ|| 11 ರಲ್ಲಿ ಹೋರ್‌ರವರಿಗೆ ಬರೆದ ಕಾಗದವನ್ನನುಸರಿಸಿ ನಾನು ಈ ನಿರ್ಣಯವನ್ನು ಪ್ರತಿಭಟಿಸುವುದಕ್ಕಾಗಿ ನನ್ನ ಪ್ರಾಣವನ್ನೇ ಅರ್ಪಿಸಲು ನಿಶ್ಚಯಿಸಿರುವೆನು.

ನಾನು ಅದಕ್ಕಾಗಿ ಉಪವಾಸ ವ್ರತವನ್ನು ಆರಂಭಿಸುವೆನು. [illegible]

ಗೃಹಕೃತ್ಯದ ನೋಟೀಸು.

[illegible]

ತಾ|| 10-9-1932.

[illegible]

ಬೇಕೆಂದು ನಾನು ನಿಮ್ಮನ್ನು ಪ್ರಾರ್ಥಿಸುತ್ತೇನೆ. ನಾನು ಕಾರಾಗೃಹ ನಿಬಂಧನೆಗಳನ್ನು ಸರಿಯಾಗಿ ಅನುಸರಿಸುವೆನು. ಈ ಕಾಗದದ ವಿಚಾರವಾಗಿ ವಲ್ಲಭಭಾಯಿಯವರು ಮತ್ತು ದೇಶಾಯಿಯವರು ವಿನಾ ಮತ್ತಾರಿಗೂ ತಿಳಿಸಿಲ್ಲ. ಆದರೆ ನನ್ನ ಕಾಗದವನ್ನು ಓದುವುದರಿಂದ ಪ್ರಜೆಗಳ ಅಭಿಪ್ರಾಯವು ಬದಲಾಯಿಸುವುದಿಲ್ಲವೆಂಬ ಆಶಯದಿಂದ ಇದನ್ನು ಜಾಗ್ರತೆಯಲ್ಲಿ ಪ್ರಕಟಿಸಬೇಕೆಂದು ನಾನು ನಿಮ್ಮನ್ನು ಕೋರುತ್ತೇನೆ.

ನಾನು ಹೀಗೆ ನಿರ್ಣಯಿಸಬೇಕಾಗಿ ಬಂದುದಕ್ಕೋಸ್ಕರ ಬಹಳ ವಿಷಾದಿಸುತ್ತೇನೆ. ಆದರೆ ನಾನು ಮತ ಧರ್ಮವನ್ನು ಅನುಸರಿಸುವವನಾನುದುದರಿಂದ ನನಗೆ ಗತ್ಯಂತರವಿಲ್ಲ. ದೊರತನದವರಿಗೆ ತೊಂದರೆಯಾಗದಿರುವುದಕ್ಕೆ ಅವರು ನನ್ನನ್ನು ಬಿಡುಗಡೆಮಾಡಿಸಿದರೂ ಅಸ್ಪೃಶ್ಯರ ಚುನಾವಣೆಯ ಸಮಸ್ಯೆಯ ಪರಿಷ್ಕಾರವು ಸುಧಾರಿಸಲ್ಪಡದಿದ್ದರೆ ನಾನು ಉಪವಾಸಗಳನ್ನು ಮಾಡಲೇಬೇಕಾಗಿದೆ. ನಾನು ನಿಮ್ಮ ನಿರ್ಣಯವನ್ನು ಪ್ರತಿಭಟಿಸಲಿಕ್ಕೆ ಈಗ ನನಗೆ ಬೇರೊಂದುಪಾಯವಿಲ್ಲ. ಗೌರವವಿರುದ್ಧವಾದ ಸಾಧನಗಳನ್ನು ಬಿಟ್ಟು ಪಡೆಯಬೇಕೆಂಬ ಅಭಿಪ್ರಾಯವು ನನಗೆಷ್ಟು ಮಾತ್ರಕ್ಕೂ ಇಲ್ಲ.

ನಾನು ತಪ್ಪುತಿಳಿವಿಕೆಯಿಂದ ನಿಶ್ಚಯಿಸಿರಬಹುದು. ನಾನು ಭ್ರಾಂತನಾಗಿರಬಹುದು. ಹಾಗಾದರೆ ಅಸ್ಪೃಶ್ಯರಿಗೆ ಪ್ರತ್ಯೇಕ ನಿಯೋಜಕ ವರ್ಗ [illegible]

ಮೆಕ್ಡೊನಾಲ್ಡ್‌ರವರು ಮಹಾತ್ಮರಿಗೆ ಬರೆದುತ್ತರ

ತಾ|| 8-9-1932

[illegible]

ವರೆಗೆ ಹಿಂದು ನಿಯೋಜಕ ವರ್ಗಗಳಲ್ಲೊಂದು ಭಾಗವಾಗಿದ್ದು ಕೆಲ ಪ್ರತ್ಯೇಕ ನಿಯೋಜಕ ವರ್ಗಗಳಿಂದ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿಕೊಳ್ಳುವುದು ಈಗಿನ ಪರಿಸ್ಥಿತಿಯಲ್ಲಿ ಅವರಿಗೆ ಅಗತ್ಯವೆಂದು ನಾನು ನಿಶ್ಚಯಿಸಿರುವೆನು. ಸಮಸ್ತ ನಿಯೋಜಕ ವರ್ಗಕ್ಕೆ ಸೇರಿದವರಿಗಿರುವಂತೆ ಅಸ್ಪೃಶ್ಯರಿಗೆ ಓಟಿಂಗು ಹಕ್ಕಿರುವುದು. ಇದಕ್ಕೆ ಸರಿಯಾದ ಪ್ರತ್ಯೇಕ [illegible]

[illegible] ಪ್ರತ್ಯೇಕ ನಿಯೋಜಕ ವರ್ಗದಲ್ಲೂ ಓಟು ಕೊಡಬಹುದು; ಅಭ್ಯರ್ಥಿಗಳಾಗಿ ನಿಲ್ಲಬಹುದು. ಈ ಸೌಲಭ್ಯವು ಅಸ್ಪೃಶ್ಯರಿಗೆ ಮಾತ್ರ ಕೊಡಲ್ಪಟ್ಟಿದೆ ಹೊರತು ಮತ್ತಾರಿಗೂ ಇಲ್ಲ. ಮಹಮ್ಮದೀಯರಿಗೆ ಜನ ಸಂಖ್ಯೆಯ ಮೇಲೆ ಕೆಲ ರಾಷ್ಟ್ರಗಳಲ್ಲಿ ವೈಟೇಜ್ ಕೊಡಲ್ಪಟ್ಟಿದೆ. ಪ್ರತ್ಯೇಕ ನಿಯೋಜಕ ವರ್ಗದಿಂದ ಚುನಾಯಿಸಲ್ಪಡುವ ಸಂಖ್ಯೆಯು ಬಹಳ [illegible]

[illegible]

ನೀವು ಒಂದುಸಾರಿ ದೊರತನದವರ ಪ್ರಕಟನೆಯನ್ನು ಆದ್ಯಂತವಾಗಿ ಪರಿಶೀಲಿಸಬೇಕೆಂದು ಕೋರುತ್ತೇನೆ. ಆಗ ನೀವು ವ್ರತವನ್ನು ಹಿಡಿಯುವುದು ನ್ಯಾಯವೇ ಅಲ್ಲವೇ ಎಂಬ ವಿಷಯವನ್ನು ಕುರಿತು ಆತ್ಮವಿಮರ್ಶೆಯನ್ನು ಮಾಡಬೇಕೆಂದು ಇಚ್ಛಿಸುತ್ತೇನೆ ಎಂದು ಮೆಕ್ಡೊನಾಲ್ಡ್‌ರವರು ಮಹಾತ್ಮರಿಗೆ ಬರೆದರು.

ಮಹಾತ್ಮರು ಮೆಕ್ಡೊನಾಲ್ಡ್‌ರವರಿಗೆ ಬರೆದ ೨ ನೆಯ ಪತ್ರ

1932 ನೆಯ ಸೆಪ್ಟಂಬರ್ ತಾರೀಖು 9:— ನೀವು ನಿಷ್ಕಪಟದಿಂದ ಬರೆದಿರುತ್ತೀರಿ. ದೊಡ್ಡದಾದ ತಂತಿವಾರ್ತೆಯು ಈ ದಿವಸ ತಲುಪಿತು. ನಿಮಗೆ ವಂದನೆಗಳು. ನಾನು ಅವಲಂಬಿಸಬೇಕೆಂದಿರುವ ಉಪವಾಸವ್ರತವನ್ನು ಕುರಿತು ನೀವು ಮಾಡಿರುವ ಆಕ್ಷೇಪವು ಈವರೆಗೆಂದೂ ನನ್ನ ಮನಸ್ಸಿಗೆ ತಟ್ಟಿರಲಿಲ್ಲ. ನಾನೇ ಅಸ್ಪೃಶ್ಯರಿಗೆ ಪ್ರತಿನಿಧಿಯೆಂದು ಹೇಳಿಕೊಳ್ಳುವುದರಿಂದ ಅವರಿಗೆ ನಷ್ಟವನ್ನುಂಟುಮಾಡಲು ನಾನು ಉಪವಾಸ ವ್ರತವನ್ನು ಕೈಗೊಳ್ಳುವೆನೆಂದು ನೀವು ವ್ಯಾಖ್ಯಾನ ಮಾಡಿರುವಿರಿ. ನಾನು ಸಾಯುವವರೆಗೂ ಉಪವಾಸ ವ್ರತವನ್ನು ಆಚರಿಸುವೆನೆಂದು ತಿಳಿಸುವುದರಿಂದ ನನಗೆ ಯಾವ ಸ್ವಾರ್ಥಪಂಕೆಯನ್ನು ಆರೋಪಿಸಲು ಅವಕಾಶವಿಲ್ಲವೆಂದು. ನಾನು [illegible]

ಭಾರತ ರಾಜಕೀಯದೃಷ್ಟಿ

(ಲೇ—ಕಣಕುಪ್ಪಿ ಗುರುಸಾವಪ್ಪ ಶ್ರೀ ಜಯದೇವ ಪ್ರೆಸ್, ದಾವಣಗೆರೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಈ ದೇಶದ ಹುಟ್ಟುವಳಿಯಲ್ಲಿ ಬಹುಭಾಗವು ಸೈನಿಕರಿಗೆ ಅದರಲ್ಲೂ ಬ್ರಿಟಿಷ್ ಸೈನಿಕರಿಗೆ ಬ್ರಿಟನ್ ದೇಶದಲ್ಲಿ ಖರ್ಚಾಗಿ ಹೋಗುತ್ತಲಿದೆ. ಬೇರೆ ಬೇರೆ ದೇಶದವರು ಈ ಭಾಗದಲ್ಲಿ ಮಾಡುವ ಖರ್ಚನ್ನೂ ಹಿಂದೂಸ್ಥಾನದ ಖರ್ಚಿನೊಡನೆ ಹೋಲಿಸಿ ನೋಡಿದರೆ ಈ ವಿಷಯವು ಸ್ಪಷ್ಟವಾಗುವುದು.

1922

1	2	3	4	5	6
ದೇಶ	ಒಟ್ಟು ಉತ್ಪತ್ತಿ	ಒಟ್ಟು ಖರ್ಚು	ಸೈನ್ಯ ಖರ್ಚು	2 ರಲ್ಲಿ 3 ರ ಶೇಕಡ	2 ರಲ್ಲಿ 4 ರ ಶೇಕಡ
ಅಂಕಿಗಳು ದಶಲಕ್ಷಗಳಲ್ಲಿ					
ಇಂಡಿಯ ರೂ.	1332 2	1423.9	919.0	70 7	63 8
ಬ್ರಿಟಿಷ್ ದ್ವೀಪಗಳು ,,	1426.9	1195.4	642.0	45.0	53.7
ಫ್ರಾನ್ಸ್ ಫ್ರಾಂಕುಗಳು	22450 9	24932.0	5027 4	22 4	20.0
ಅಮೇರಿಕ ಡಾಲರು	3345 18	3143.41	1201 44	35.9	38 2

ಬಂಗಾಳ ದಂಗೆಯಿಂದಲೂ ಸೈನ್ಯವನ್ನು ಹೆಚ್ಚಿಸಿ ಅದಕ್ಕಾಗಿ ಬಹಳ ಹಣ ಖರ್ಚುಮಾಡುತ್ತ ಬಂದಿರುವುದು ಈ ಕೆಳಗಣ ಅಂಕಿಗಳಿಂದ ತಿಳಿಯ ಬಹುದು.

ಕಾಲ	ಸೈನ್ಯ	ಖರ್ಚು	
ಬ. ದಂಗೆ 1857	2,40,000	11	ಕೋಟಿ
1864	ಕಡಿಮೆ ಸೈನ್ಯ	14	,,
1884	18900	17	,,
1895-96		20	,,
1913-14		31	,,
1922-23		73	,,

ಹೀಗೆ ಸೈನ್ಯದ ಖರ್ಚು ಹೆಚ್ಚುತ್ತ [illegible]

1834-1894 ರ ವರೆಗೆ ಅಂದರೆ 60 ವರ್ಷಗಳಲ್ಲಿ 34 ವರ್ಷಗಳವರೆಗೆ ಆಯವ್ಯಯ (Budget) ಹಣದಲ್ಲಿ 83 ಕೋಟಿ ರೂ. ಗಳು ಕಡಿಮೆಯಾಗಿ 26 ವರ್ಷಗಳವರೆಗೆ 42 ಕೋಟಿ ರೂ. ಹೆಚ್ಚಾಗಿದೆ. 83 ಕೋಟಿ ರೂಗಳಲ್ಲಿ 42 ಕೋಟಿ ರೂ. ಕಳೆದರೆ 41 ಕೋಟಿ ರೂ. ಒಟ್ಟಿನಲ್ಲಿ ಕಡಿಮೆ ಬೀಳುತ್ತದೆ, ಇದನ್ನು 60 ವರ್ಷಗಳಿಗೆ ಹಂಚಿದರೆ ವರ್ಷಕ್ಕೆ 65 ಲಕ್ಷ ರೂ. ಕಡಿಮೆ ಆಯವ್ಯಯಪತ್ರದಲ್ಲಿ ಬದ್ದಂತಾಯಿತು. 60 ವರ್ಷಗಳಿಂದ ಹತ್ತುವರೆಗಿಂತಲೂ ಖರ್ಚು ಹೆಚ್ಚಾಗುತ್ತ ಬಂದಿರುವುದು ಇಂಡಿಯಾ ದೇಶವು ಇಂಗ್ಲೆಂಡಿನ ಅಧೀನರಾಜ್ಯ. ಆದುದರಿಂದ ಹಿಂದೆ ಹೇಳಿರುವಂತೆ ಬಹುಮಂದಿ ಅಂಗ್ಲೇಯ ಸೌಕರರನ್ನೂ ಸೈನಿಕರನ್ನೂ ಇಟ್ಟುಕೊಳ್ಳಲೇ ಬೇಕು. 1911 ರಲ್ಲಿ ಸೈನಿಕರು 80,891 ಇದ್ದರು. [illegible] 1930 ರಲ್ಲಿ 13,800 ಅಂಗ್ಲೇಯ ಸೈನಿಕರು ಇಲ್ಲಿಗೆ ಬಂದರು. 12,000 ಸೈನಿಕರು [illegible]

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿರಿ

ಗರ್ಭಧಾರಣ ಸಂಜೀವಿನಿ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆವಿಗುರಿ ೯ ಗುಳಿಗೆಗಳ ೧. ೩ ರೂಪಾಯಿ. ಟ. ಖ. ೫ ಆಣೆ

ವೈದ್ಯ—ಕೃಷ್ಣ ಶ್ರೀ. ಎಸ್. ಕಾಜಳೆ. ಮಿರಜ M. C.

ಹೀಗೆ ನಮ್ಮ ದೇಶದಿಂದ ಹೊರಗೆ ಹೋಗಿ ನಮಗೆ ಶಾಶ್ವತವಾದ ನಷ್ಟವನ್ನುಂಟುಮಾಡುತ್ತಿರುವ ದ್ರವ್ಯದ ಲೆಖ್ಖವನ್ನು ಕೆ. ಟಿ. ಷಹ ಎಂಬ ಅರ್ಥಶಾಸ್ತ್ರಜ್ಞರು ಬಹು ಚೆನ್ನಾಗಿ ತೋರಿಸಿದ್ದಾರೆ:—

ಇಂಗ್ಲೆಂಡಿಗೆ ಸಂಬಳ ಪಿಂಚಿಣಿ ರೂಪಗಳಲ್ಲಿ ರೂ	50 ಕೋಟಿ.
ಈ ದೇಶದಲ್ಲಿರುವ ಪರದೇಶದ ಬಂಡವಾಳದ ಮೇಲೆ ಬಡ್ಡಿ	60 ಕೋಟಿ.
ಪರದೇಶದ ಕಂಪನಿಗಳಿಗೆ ನಾವು ಕೊಡುವ ಹಾಸಲು ಹಡಗು ಹತ್ತುವ ಮತ್ತು ಮಾಲು ಸಾಗಿಸುವ ಬಗ್ಗೆ	41.63 ಕೋಟಿ.
ಬ್ಯಾಂಕುಗಳಿಗೆ ಕೊಡುವ ದಲ್ಲಾಲಿ	15 ಕೋಟಿ.
ಪರದೇಶೀಯರು ವ್ಯಾಪಾರೋದ್ಯೋಗಗಳಿಂದ ಇಲ್ಲಿ ಪಡೆಯುವ ನಫೆ.	53.25 ಕೋಟಿ.
ಒಟ್ಟು	219 88

ಅಥವ ಒಟ್ಟು 220 ಕೋಟಿಯೆಂದು ಹೇಳಬಹುದು

ಯುದ್ಧದಿಂದೀಚೆಗೆ ದೇಶದ ಮುಖಂಡರು ಪತ್ರಿಕೆ ಉಪನ್ಯಾಸ ಬಹಿಷ್ಕಾರಗಳ ಮೂಲಕ ದೇಶದ ಸರ್ವಾಧಿಕಾರವನ್ನು ಪರದೇಶಿಯರಿಂದ ಪಡೆಯಲು ಮೊದಲಿಗಿಂತಲೂ ಹೆಚ್ಚಾಗಿ ಆಂದೋಳನ ಮಾಡುತ್ತಿರುವುದು ಸರಿಯಷ್ಟೆ. ದೇಶಾದೇಶದ ಭಾರಿ ದುಬಾರಿ ಖರ್ಚಿನ ಸಂಗತಿಯೊಂದು ಇನ್ನೂ ಉಳಿದವುಗಳೊಡನೆ ಈ ಆಂದೋಳನ ಕಾರ್ಯಸಾಧನೆಗೆ ಸಹಕಾರಿಯಾಗಿರುವುದು. ಇದರ ಪರಿಣಾಮವಾಗಿ ಸರ್ಕಾರದವರ ರೀತಿ ನೀತಿಗಳಲ್ಲಿ ಯಾವ ಉತ್ತಮ ಬದಲಾವಣೆಯಾಗದೆ ಇನ್ನೂ ಖರ್ಚು ಹೆಚ್ಚುತ್ತ ಹೋಗುತ್ತಿದೆಯೆಂದು ಈ ಕೆಳಗಣ ಪಟ್ಟಿಯಿಂದ ತಿಳಿಯಬರುವುದು.

	ಸೈನ್ಯಾಧಿಕಾರಿಗಳು 1913—14	1922—23	ಹೆಚ್ಚಳ	ಸಾಮಾನ್ಯಾಧಿಕಾರಿಗಳು 1913—14	1922—23	ಹೆಚ್ಚಳ
ಸಂಬಳ ರೂ.	12,13,75000	23679000	11541000	5853700	11070000	6123000
ವಿದೇಶ ಸಂಬಳ ಕಟ್ಟವ ಭತ್ಯ ರೂ.	846000	1192000	346000	422000	1625000	1203000
ನಷ್ಟ ಭರ್ತಿ ಭತ್ಯ ರೂ.	14000	14000	....	1351000	2993000	1642000
ಮನೆ ಬಾಡಿಗೆ ರೂ.	8000	17000	168000	542000	1408000	866000
ಪ್ರಯಾಣ ಭತ್ಯ ರೂ.	3059000	7001000	3942000	3505000	6987000	3488000
ಬೇರೆ ಭತ್ಯ ರೂ.	1505000	1383500	1243000	3151000	4649000	1498000
ಒಟ್ಟು ರೂ.	13454000	26997200	13541800	6751200	13752000	7001000

ಹಾಸಿಗೆ ಇದ್ದಷ್ಟು ಕಾಲು ಚಾಚು ಎಂಬ ನಾಣ್ಣುಡಿಯು ವ್ಯಕ್ತಿಯ ಹಿತಕ್ಕೆ ಸಹಕಾರಿಯಾಗಿರುವಂತೆ ಜನಸಮೂಹಗಳ ಹಿತಕ್ಕೂ ಸಹಕಾರಿಯಾಗಿರುತ್ತದೆ. ಪ್ರಭುತ್ವವು ಅಶೇಷ ಜನಸಮೂಹದ ಕಾರ್ಯನಿರ್ವಾಹಕ ಸಂಸ್ಥೆಯಾಗಿರುವುದು. ಆದಾಯ ನೋಡಿ ಖರ್ಚುಮಾಡದೆ ರಾಜ್ಯಭಾರವನ್ನು ಹೇಗೆ ನಮ್ಮ ದೇಶದ ಸರ್ಕಾರದವರು ನಡಿಸುತ್ತ ಬಂದಿರುವರೆಂಬುದನ್ನು ಈ ವೇಳೆ ತೋರಿಸಲಾಗಿದೆ. ಇದರ ಪರಿಣಾಮವಾಗಿ ಸರ್ಕಾರಕ್ಕೆ ಅಧಿಕ ಅತ್ಯಧಿಕ ಸಾಲವಾಗಿರುವ ರೀತಿಯನ್ನು ಮುಂದೆ ತಿಳಿಸಲಾಗುತ್ತದೆ.

1792 ರಲ್ಲಿ ಸರ್ಕಾರಕ್ಕೆ ಸಾಲ 7 ದಶಲಕ್ಷವಿತ್ತು. 1799 ರಲ್ಲಿ 10 ದಶಲಕ್ಷವಾಯಿತು. ಲಾರ್ಡ ವೆಲ್ಲೆಸ್ಲಿಯ ಯುದ್ಧಗಳಿಂದ 1805 ರಲ್ಲಿ 21 ದಶಲಕ್ಷವಾಯಿತು. 1829 ರಲ್ಲಿ 30 ದಶಲಕ್ಷವಾಯಿತು. 1844-45 ರಲ್ಲಿ 43½ ದಶಲಕ್ಷವಾಯಿತು. ಅಫ್ಗನ್ ಯುದ್ಧಗಳ ಭಾರಿ ಖರ್ಚಿನಿಂದ ಇಷ್ಟು ಭಾರಿ ಸಾಲವಾಯಿತು. ಈ ಯುದ್ಧಗಳು ಬ್ರಿಟಿಷ್ ರಾಜ್ಯ ವಿಸ್ತರಣೆಗಾಗಿ ನಡೆದವುಗಳಾದರೂ ಈ ಸಂಬಂಧವಾದ ಖರ್ಚನ್ನೆಲ್ಲ ಇಂಗ್ಲೆಂಡು ವಹಿಸದೆ 15 ದಶಲಕ್ಷವನ್ನು ಮಾತ್ರವೇ ವಹಿಸಿತು. ಸಿಂಧು ದೇಶವನ್ನು ಬ್ರಿಟಿಷ್ ಇಂಡಿಯಾಕ್ಕೆ ಸೇರಿಸಿಕೊಳ್ಳುವ ಬಗ್ಗೆ ತಗಲಿದ ಖರ್ಚು ಹಾರ್ಡಿಂಜ್ ಮತ್ತು ಡಾಲ್‌ಹೌಸಿ ಇವರುಗಳು ನಡೆಸಿದ ಪಂಜಾಬು ಯುದ್ಧಗಳಿಂದುಂಟಾದ ಖರ್ಚು ಸೇರಿ 1850-51 ರಲ್ಲಿ 55 ದಶಲಕ್ಷಗಳಿಗೇರಿತು. 1857 ರಲ್ಲಿ ನಡೆದ ಬಂಗಾಳ ದಂಗೆಯಿಂದ ಮತ್ತೆ 10 ದಶಲಕ್ಷ ಹೆಚ್ಚಾಯಿತು. 1858 ಕ್ಕೆ 69½ ದಶಲಕ್ಷವಾಗಿತ್ತು. ಪ್ರಸಾಪಕ್ಷೇನ ಈ ದಂಗೆಯ ಬಗ್ಗೆ ಟೆಕ್ಕಿ ಎಂಬ ದೊಡ್ಡ ಚರಿತ್ರಕಾರರು ಹೇಳಿರುವ ಮಾತನ್ನು ಇಲ್ಲಿ ಹೇಳುವುದು ಅಪ್ರಾಸಂಗಿಕವಾಗಲಾರದಷ್ಟೆ. ಜಗತ್ತಿನಲ್ಲಿ ನ್ಯಾಯವಾದ ದಂಗೆಯ ಉದಾಹರಣೆ ಯಾವುದಾದರೂ ಇದ್ದರೆ ಆಕಳು ಹಂದಿಗಳ ಕೊಬ್ಬಿನಿಂದ ಸವರಲ್ಪಟ್ಟ ತೋಟಗಳಿಗೆ ಹೇಸಿ ಹಿಂದೂ ಮುಸಲ್ಮಾನ ಸೈನಿಕರು ಎಬ್ಬಿಸಿದ ದಂಗೆಯೇ ಅದಾಗಿರುವುದು. ತಪ್ಪು ಮಾಡಿದವರು ಬ್ರಿಟಿಷ್ ಅಧಿಕಾರಿಗಳು. ಆದರೆ ಹಿಂದೂಸ್ಥಾನವು ಖರ್ಚುಕೊಟ್ಟಿತು. 1850 ಕ್ಕೆ ಮುಂಚೆ ಈ ದೇಶದಲ್ಲಿ ಲೋಹ ಮಾರ್ಗಗಳೇ (ರೈಲ್ವೆ) ಇರಲಿಲ್ಲ. ಬ್ರಿಟಿಷ್ ಹಣವಂತರು ಇಲ್ಲಿನ ಸಾರ್ವಜನಿಕ ಕಾಮಗಾರಿ ಕೆಲಸಕ್ಕೆ ದುಡ್ಡು ಹಾಕಲಾರಂಭಿಸಿರಲಿಲ್ಲ. ಆದುದರಿಂದ ಇಲ್ಲಿಯವರೆಗೂ (1850) ಸರ್ಕಾರದವರು ಮಾಡಿದ್ದ ಸಾಲವು ನಷ್ಟಕಾರಿಯಾದ ಸಾಲವೇ ಹೊರತು ಉತ್ಪತ್ತಿದಾಯಕವೆಂದು ತಿಳಿಯಲಾಗದು. ಇಂಡಿಯಾ ರಾಜ್ಯವು ಈಸ್ಟ್ ಇಂಡಿಯಾ ಕಂಪೆನಿಯಿಂದ ಬ್ರಿಟಿಷ್ ರಾಜರಿಗೆ ವರ್ಗಾಯಿಸಲ್ಪಟ್ಟಾಗ ಇಲ್ಲಿಯೂ ಇಂಗ್ಲೆಂಡಿನಲ್ಲಿಯೂ ಆ ಕಂಪೆನಿಯು ಮಾಡಿದ ಸಾಲವೂ ಹಾಕಿದ ಬಂಡವಾಳದ ಮೇಲಿನ ಲಾಭಾಂಶವೂ ಹಿಂದುಸ್ಥಾನದ ಹುಟ್ಟುವಳಿಯ ಮೇಲೆ ಹೇರಲ್ಪಟ್ಟವು. ಇಲ್ಲಿಯವರೆಗೂ ಕಂಪೆನಿಯ ಬಂಡವಾಳದ ಮೇಲೆ ಹಿಂದುಸ್ಥಾನವು ಕೊಟ್ಟ ವಾರ್ಷಿಕ ಬಡ್ಡಿಯು ಶಾಶ್ವತವಾಗಿ ಮಾಡಲ್ಪಟ್ಟಿತು. ಜಗತ್ತಿನ ಚರಿತ್ರೆಯಲ್ಲಿಯೇ ಇಂತಹ ಉದಾಹರಣೆ ಬೇರೊಂದು ಸಿಕ್ಕಬಹುದೇ!

1860 ರ ಹೊತ್ತಿಗೆ ಸಾಲವು 100 ದಶಲಕ್ಷ ಪೌಂಡುಗಳಿಗೇರಿತ್ತು. 1913-14 ರಲ್ಲಿ £ 30,73,91,121 ಆಗಿತ್ತು. ಇಷ್ಟು ಸಾಲವೆಲ್ಲವೂ ಒಂದು ವ್ಯಾಪಾರಿ ಲೇವಾದೇವಿಯಂತಿರುವುದು; ಇದರಿಂದ ಹಿಂದುಸ್ಥಾನವು ಉತ್ಪತ್ತಿದಾಯಕವಾದ ಕಾಮಗಾರಿ ಕೆಲಸಗಳ ರೂಪದಲ್ಲಿ ಪ್ರತಿಫಲವನ್ನು ಪಡೆಯುತ್ತಿರುವುದು ಎಂಬ ವಾದ ಒಂದುಂಟು. ನೋಡುತ್ತಲೇ ಇದರಲ್ಲೇನೂ ಹುರುಳೇ ಇಲ್ಲವೆಂಬುದು ಕಂಡುಬರುವುದು. ಭರತಖಂಡವನ್ನು ಇಂಗ್ಲಿಷಿನವರು ಗೆದ್ದುದು ಬಹು ವಿಚಿತ್ರಕರವಾಗಿರುವುದು. ಮೊದಲಿನಿಂದ ಕೊನೆಯವರೆಗೂ ಇವರು ಗೆಲ್ಲುವುದರಲ್ಲಿ ಒಂದು ಕಾಸೂ ಖರ್ಚುಮಾಡಿಲ್ಲ. ಹಿಂದುಸ್ಥಾನದ ದುಡ್ಡಿನಿಂದ ಹಿಂದುಸ್ಥಾನದ ರಕ್ತದಿಂದ ಬ್ರಿಟಿಷರು ಹಿಂದುಸ್ಥಾನವನ್ನು ಗೆದ್ದಿರುವರು! ಅಲ್ಲದೆ ವ್ಯಾಪಾರ ವಿಸ್ತರಣೆ ಶೋಧನೆ ಮೊದಲಾದವುಗಳಿಗಾಗಿ ಏಷ್ಯಾದಲ್ಲಿ ಇವರು ಗೆದ್ದ ರಾಷ್ಟ್ರಗಳೆಲ್ಲವೂ ಹಿಂದುಸ್ಥಾನದ ಖರ್ಚಿನಿಂದಲೇ ಗೆಲ್ಲಲ್ಪಟ್ಟಿರುತ್ತವೆ. ಈ ಸಂಬಂಧವಾದ ಲಾಭಗಳೆಲ್ಲವೂ ಸ್ವಲ್ಪ ಹೆಚ್ಚು ಕಡಿಮೆ ಬ್ರಿಟಿಷರ ಜೇಬುಗಳಿಗೇ ಬಿದ್ದಿವೆ. ಖರ್ಚು ನಷ್ಟಗಳೂ ಹಿಂದುಸ್ಥಾನದ ಪಾಲಿಗೆ ಬಂದಿವೆ.

ಈ ಬಗೆಯ ಅನ್ಯಾಯ ಅಧಿಕ ಆಳಿಕೆ ವಿಧಾನದ ಖರ್ಚಿನಿಂದ ಭಾರತೀಯರು ಹೊರಲಾಗದ ತೆರಿಗೆಯನ್ನು ಹೊರಬೇಕಾಯಿತು. ಇಂತಹ ತೆರಿಗೆಯ ಬಹು ಭಾಗವು ಪರದೇಶದಲ್ಲಿ ಖರ್ಚಾಗಿ ಈ ದೇಶೀಯರಿಗೆ ಯಾವ ರೂಪದಲ್ಲಿಯೂ ಹಿಂತಿರುಗುವಂತಿಲ್ಲ. ಕೆಳೆದುಳಿದ ಅಲ್ಪಾಂಶದ ತೆರಿಗೆಯಿಂದ ಅಪಾರವಾದ ಭರತಖಂಡದ ನಿವಾಸಿಗಳ ಆರೋಗ್ಯ ವಿದ್ಯೆ ಕೈಗಾರಿಕೆ ವ್ಯಾಪಾರ ನಾಗರಿಕತೆಯ ಸೌಕರ್ಯಗಳು ಹೇಗೆ ದೊರೆಯಬೇಕು? ಅನುಕೂಲವೇ ಮೇಲೆ ಹೇಳಿದ ಸೌಕರ್ಯಗಳನ್ನುಳ್ಳ ಇಂಗ್ಲೆಂಡಿನಲ್ಲಿ ಜನರ ಸರಾಸರಿ ವಯಸ್ಸು 54 ವರ್ಷಗಳಾದರೆ ಅವುಗಳೊಂದೂ ತಕ್ಕಷ್ಟಿಲ್ಲದ ಇಂಡಿಯಾದಲ್ಲಿ 23.5 ವರ್ಷಗಳು. ಇಲ್ಲಿನ ಜನರ ಸರಾಸರಿ ವಯಸ್ಸಾಗಿರುವುದು. ಚಿಕಿತ್ಸೆಯಿಂದ ಗುಣಹೊಂದುವಂತಹ 50-60 ಲಕ್ಷ ಜನರು ನಾನಾರೋಗಗಳಿಗೆ ತುತ್ತಾಗಿ ಪ್ರತಿವರ್ಷವೂ ಸಾಯುವರು.

ಸರ್ ವಿಲಿಯಂ ಹಂಟರ್ ಎಂಬ ಗಣನೀಯ ಲೇಖಕ ಮತ್ತು ಚರಿತ್ರಕಾರನು ನಮ್ಮ ಬಡತನದ ಬಗ್ಗೆ ಮಾತನಾಡುತ್ತ ಹಿಂದುಸ್ಥಾನದ 4,00,00,000 ಜನರು ತಮ್ಮ ಹಸಿವನ್ನು ತೃಪ್ತಿಪಡಿಸಿಕೊಳ್ಳಲು ಎಂದೂ ಶಕ್ತರಾಗಿಲ್ಲ ಎಂದು ಹೇಳಿರುವರು.

ಹಿಂದುಸ್ಥಾನದ 10,00,00,000 ಜನರಿಗೆ ವರ್ಷಕ್ಕೆ ತಲೆಗೆ 5 ಸಿ. ಗಿಂತ ಹೆಚ್ಚಾಗಿ ಆದಾಯವಿಲ್ಲವೆಂದು ಕ್ರಿಶ್ಚಿಯನ್ ಪತ್ರಿಕೆಯಾದ ಇಂಡಿಯನ್ ವಿಟನೆಸ್ ಎಂಬುದು ಬರೆಯುತ್ತದೆ.

ಹೀಗೆ ಸರ್ಕಾರದ ದುಂದು ಖರ್ಚಿನಿಂದ ಜನರ ಮೇಲೆ ತೆರಿಗೆ ಹೆಚ್ಚಬೇಕು ಅಲ್ಲದೆ ಸರ್ಕಾರದ ಸಾಲವೂ ಏರುತ್ತ ಹೋಗಬೇಕು. ಇಷ್ಟಾದರೂ ಬಡತನದಿಂದ ಜನರು ಹೊಟ್ಟೆಬಟ್ಟೆಗಿಲ್ಲದೆ ಅಪಮೃತ್ಯುವಿಗೆ ತುತ್ತಾಗಬೇಕು. 1909-10 ರಿಂದ 1919-20 ರ ವರೆಗೆ ಕಂದಾಯವು ತಲೆಗೆ ಸರಾಸರಿ 41 ಆಣೆಗಳಿಂದ 73 ಆಣೆಗಳಿಗೆ ಏರಿದೆ. ಈ ನಡುವೆ ಸರಾಸರಿ ವಾರ್ಷಿಕ ಆದಾಯವು ತಲೆಗೆ 35 ರೂ. ಸರ್ಕಾರದ ಸಾಲವೂ ಈ ಮಧ್ಯೆ £ 290 ದಶಲಕ್ಷಗಳಿಂದ £ 465 ದಶಲಕ್ಷಗಳಿಗೆ ಏರಿತು.

ಸರ್ಕಾರ ಮತ್ತು ಕಂಪೆನಿಗಳ

ಸಾಲ ಮತ್ತು ಷೇರ ಮಾರ್ಕೆಟ್ ದರಗಳು

ಇಂಡಿಯಾ ಸರ್ಕಾರವು 1940—43 ರ ಸಾಲವನ್ನು 17—8—32 ರಿಂದ 31—8—32 ರ ವರೆಗೆ ತೆಗೆದುಕೊಳ್ಳುತ್ತಿದ್ದಾರೆ 100 ರೂ. ಗೆ 98 ರೂಪಾಯಿ ಕೊಡಬೇಕು.

ಸರ್ಕಾರದ ಸಾಲ ಪತ್ರಗಳ ಬೆಲೆ

ಇಂಡಿಯಾ ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳದ್ದು)

ಶೇಕಡ ಬಡ್ಡಿ 3½ (............)	ಪತ್ರದ ಬೆಲೆ	68—8—0
,, ,, 4 (1931—36)	....	96—9—0
,, ,, 4 (1934—37)	....	95—5—0
,, ,, 4 (1960—70)	....	68—10—0
,, ,, 4½ (1934)	....	99—9—0
,, ,, 4½ (1955—60)	....	89—3—0
,, ,, 5 (1929—47)	....	98—3—0
,, ,, 5 (1935)	....	100—5—0
,, ,, 5 (1939—44)	....	98—6—0
,, ,, 6 (1933—36)	....	101—8—0
,, ,, 6½ (1935)	....	104—5—0
,, ,, 5½ (1938—40)	....	102—2—0
(ಆದಾಯ ತೆರಿಗೆ ಇಲ್ಲದ್ದು)		
,, ,, 5 (1933)	....	101—3—0
,, ,, 5 (1945—55)	....	104—10—0

ಮೈಸೂರು ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳದ್ದು)

ಶೇಕಡ ಬಡ್ಡಿ 5 (1929—44)	....	95—5—0
(ಆದಾಯ ತೆರಿಗೆ ಇಲ್ಲದ್ದು)		
,, ,, 6½ (1941—51)	....	110—0—0
,, ,, 6¼ (1940)	....	107—8—0
,, ,, 5½ (1938)	....	103—4—0
,, ,, 5 (1955)	....	100—12—0
ಶಿವಮೊಗ್ಗ ರೈಲ್ವೆ	....	84—4—0
ಚಿತ್ರದುರ್ಗ ರೈಲ್ವೆ ...	....	84—3—0

ಕಂಪೆನಿಗಳ ಷೇರುಗಳ ಬೆಲೆ

ಬ್ಯಾಂಕುಗಳಲ್ಲಿ

ಇಂಪೀರಿಯಲ್ ಎಫ್. ಪಿ.	500 ರೂ. ಷೇರಿಗೆ	1163—0—0	ರೂ. ಬೆಲೆ
,, ಕಾಂಟ್.	125 ,,	287—0—0	,,
ಇಂಡಿಯಾ	50 ,,	88—12—0	,,
ಮೈಸೂರು	100 ,,	194—8—0	,,
ಬೆಂಗಳೂರು	10 ,,	10—0—0	,,
ಇಂಡಸ್ಟ್ರಿಯಲ್	25 ,,	9—0—0	,,
ದೇವಾಂಗ	10 ,,	6—0—0	,,
ವೈಶ್ಯ	50 ,,	50—0—0	,,
ಎಸ್ ಎಂ ಎಸ್. ಎ.	10 ,,	10—0—0	,,
ವಾದ್ಯಾರ್ಣಿ		ನಾಮಿನಲ್	

ಇತರ ಬ್ಯಾಂಕುಗಳಲ್ಲಿ

ಬಿ. ಸಿ. ರೈಲ್ವೆ	25 ರೂ. ಷೇರಿಗೆ, ...	14—2—6	ರೂ. ಬೆಲೆ
ಬೆಂಗಳೂರು ಪ್ರೆಸ್ 100 ,,	....	84—0—0	,,
ಬಾರ್ಟನ್‌ಸನ್ (ಆ) 10 ,,	....	7—8—0	,,
,, (ಪಿ) 10 ,,	....	6—0—0	,,
ಸ್ಪೆನ್ಸರ್ಸ್	....	86—0—0	,,
ಬಿನ್ನಿಮಿಲ್ಸ್ (ಆ) 100 ,,	....	82—8—0	,,
(ಪ್ರಿ) 100 ,,	....	81—4—0	,,
ಟೈಲ್ ಅಂಡ್ ಕ್ಲೇವರ್ಕ್ಸ್		ನಾಮಿನಲ್	
ಪ್ರೀಮಿಯರ್	....	ಡಿಟೋ.	
ತಾತಾ ಹೈಡ್ರೋ (ಆ)	....	130—0—0	,,
,, (ಪ್ರಿ)	....	107—12—0	,,
ತಾತಾ ಐರನ್ (ಆ)	....	27—0—0	,,
,, (ಡೆ)	....	225—0—0	,,
,, (1)	....	113—0—0	,,
,, (2)	....	45—0—0	,,
ಶ್ರೀ ಕೃಷ್ಣ		ನಾಮಿನಲ್	

ಇನ್ಷೂರೆನ್ಸು ಕಂಪೆನಿಯಲ್ಲಿ

ಏಸಿಯಾಟಿಕ್	5 ರೂ. ಷೇರಿಗೆ	5—2—0	ರೂ. ಬೆಲೆ
ಓರಿಯಂಟಲ್	500 ,, ...	1942—0—0	,,
ರಿಲೇಯನ್ಸ್	100 ,,	96—0—0	,,

ಡಿಬೆಂಚರುಗಳು

ಕೋಲಾರ	100 ರೂ ಡಿಬೆಂಚರಿಗೆ	89—8—0	ರೂ. ಬೆಲೆ
ಮೈಸೂರು	100 ,, ...	104—4—0	,,
ತುಮಕೂರು	100 ,, ...	103—4—0	,,
ಹಾಸನ	100 ,, ...	95—0—0	,,

ಮಿಲ್ಲುಗಳಲ್ಲಿ

ಬೆಂಗಳೂರು	100 ರೂ. ಗೆ	75—0—0	ರೂ. ಬೆಲೆ
ಬಂಕಿಂಗ್ಯಾಂ	100 ,, ...	152—0—0	,,
ಗೋಕಾಕ್	100 ,, ...	112—0—0	,,
ಕೈಸರ್‌ಹಿಂದ್	2½ ,, ...	1—4—0	,,
ಮಿನೆರ್ವಾ	100 ,, ...	42—8—0	,,
ಮಹಾರಾಜ	100 ,, ...	91—8—0	,,
ಮಹಾಲಕ್ಷ್ಮಿ		ನಾಮಿನಲ್	
ಕೃಷ್ಣರಾಜೇಂದ್ರ	25 ,, ...	6—0—0	,,

ಗಣಿಗಳಲ್ಲಿ

ಬಾಲಘಾಟ್ ಸಿಲಿಂಗ್	10 ಕ್ಕೆ	0—11—2	ಬೆಲೆ
ಚಾಂಪಿಯನ್	,, 10 ,, ...	0—14—1½	,,
ಮೈಸೂರು	,, 10 ,, ...	0—13—4	,,
ನಂದೀದುರ್ಗ	,, 10 ,, ...	0—27—2	,,
ಉರಿಗಾಂ	,, 10 ,, ...	0—16—2½	,,
ಪೆನಿನ್ಸುಲರ್	,, 10 ,, ...	ನಾಮಿನಲ್	
ಶಿವಮೊಗ್ಗ	,,	ನಾಮಿನಲ್	

ಎಂ. ನಂಜಪ್ಪ, ಜಹಗೀರ್‌ದಾರ್,
ಷೇರ್, ಸ್ಟಾಕ್ ಮತ್ತು ಜನರಲ್ ಬ್ರೋಕರ್.
181. ಕ್ಯಾವಲ್ರಿ ರೋಡು, ಬೆಂಗಳೂರು.

ನಾಲಿನ ಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾಲಿನವರು ಜರೂರತರಿಸಿ ಕೊಳ್ಳಿರಿ. ಕಿ ೧। ರೂ. ಟ. ಖ. ೫ ಆಣೆ.

ಪತ್ತಾ ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

21 M. C

೧೯೩೨ ನೆಯ ಇಸವಿ ಸೆಪ್ಟಂಬರ್ ತಾ|| ೧೯ ರಿಂದ ಸೆಪ್ಟಂಬರ್ ತಾ|| ೨೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಭಾದ್ರಪದ ಬಹುಳ ಚೌತಿಯಿಂದ ಭಾದ್ರಪದ ಬಹುಳ ದಶಮಿ ವರೆಗಿನ ಪಂಚಾಂಗ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕನ್ಯಾ ಮಾಸ
19	[1] ಸೋಮ	ಚೌತಿ	2-15	ಭರ	32-33	4
20	ಮಂಗಳ	ಪಂಚ	7-21	ಕೃತ್ತಿ	39-2	5
21	ಬುಧ	ಷಷ್ಠಿ	12-28	ರೋಹಿ	45-22	6
22	ಗುರು	ಸಪ್ತ	16-51	ಮೃಗ	50-48	7
23	[2] ಶುಕ್ರ	ಅಷ್ಟ	20-23	ಆರ್ದ್ರಾ	55-24	8
24	ಶನಿ	ನವ	22-44	ಪುನ	58-36	9
25	ಭಾನು	ದಶ	23-58	ಪುಷ್ಯ	60	10

(1) ಮಳೆನಕ್ಷತ್ರ-ಉತ್ತರ ೩ ನೆಯ ಪಾದ. (2) ಮಳೆನಕ್ಷತ್ರ-ಉತ್ತರ ೪ ನೆಯ ಪಾದ.

ಮೈಸೂರು: ವೈ. ಹಿರಣ್ಣಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿತ ಪ್ರಕಟಿಸಲ್ಪಟ್ಟಿತು.

REG NO. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕ್ಕತಾವತಾರಾ ಪತ್ರಿಕಾ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚಿತ್ರಿಲೆಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆ ೧೯೩೨ ನೆಯ ಇಸವಿ ಸೆಪ್ಟಂಬರ್ ತಾರೀಖು ೨೬ ನೆಯ ಸೋಮವಾರ [ಸಂಚಿಕೆ ೩೯

MYSORE RAILWAYS.

AUCTION SALE NOTICE.

[50—12] [3—3]

In accordance with Section 40 of the Mysore Railways Regulation No. 4 of 1894, all unclaimed and lost property articles in possession of the Railway Administration over six months old, will be disposed off by public auction on Sunday the 25th September 1932 from 9 A. M. in the Mysore Station premises by the Railway Auctioneer.

1. The list of such articles may be seen in the lost property office, Mysore.
2. The Auctioneer does not bind himself to accept the highest or any bid at all and it is open to him to cancel the auction for reasons found sufficient by him.
3. The highest bidder whose bid is accepted should pay the full amount soon after the auction is closed and must arrange to remove the articles immediately, failing which they will be reauctioned at his risk.

Traffic Manager's Office, Mysore, Dated 25th August 1932.

A. A. KHAN,
Traffic Manager.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ
ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿಧಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹಂಪಾಸಿ	೦—೪—೦	೦—೯—೦
ನೃತ್ಯಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೬—೦	೦—೧೨—೦
ಸಟೀಕ ಕರ್ನಾಟಕಪಟ್ಟ ಮಂಜರಿ	೦—೮—೦	೦—೧೪—೦
ಸಟೀಕ ಶತಕತ್ರಯ	೧—೦—೦	೧—೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಸ್ಟರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು, ನಿದ್ದೆ ಕಡಿಮೆ ಬರೋದು, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ. ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮಿಚ್ಛಾ ಆಗುತ್ತದೆ. ಕೌಟಿಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತನ್ನ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೪೪ ತೊಲಿಯ ಒಂದು ಡಬ್ಬಿಗೆ ೩। ರೂಪಾಯಿ. ಟಪಾಲು ಖರ್ಚು ೧೩ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳಸುವ ಪಾಕದ ಕೂಡ ತಿಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೇ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಟ್ಟುಬಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ ಗಂಟುಗಂಟು ಮುಟ್ಟುಬಿಟ್ಟು ಆಗೋದು, ಮುಟ್ಟುಬಿಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋದು, ಎದೆ ಹಾರೋದು, ಉಷ್ಣತಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋದು, ಗರ್ಭಪಾತವಾಗೋದು, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ಕಿರಿದು ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋದಾಗುವದಿಲ್ಲ ಮತ್ತು ಬಡತನಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಜೆತನವೋ, ಇಂಥ ಬೇರೆ ಕಾರಣದಿಂದ ಸಂತತಿ ಇಚ್ಛಾ ಯಾರಿಗೆ ಇರುತ್ತದೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. ಶರೀರದಲ್ಲಿಯೂ ಸಂಸಾರ ಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆ ವೇಳೆಗೆ ಮುಟ್ಟುಬಿಟ್ಟು ಆಗುವದು ಸುರು ಇದ್ದು ಗರ್ಭಧಾರಣ ಬಂದು ಬೀಳುವದು. ಹಿಂದಿನಿಂದ ದಿನುಮಾಡಿದರೂ ಸುರು ಆಗುವದಿಲ್ಲ ಹೀಗೆ ಸತಂತ್ರ ಅದೆ. ಪೂರ್ಣವಿಚಾರ ಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ ಒಂದು ಡಬ್ಬಿಗೆ ೬ ರೂ. ಟ. ಖ. ೮ ಆಣೆ. ಮತ್ತು ಕಡೆಗಾದ ೪ ನೇ ದಿವಸ ೨೦ ಗುಳಿಗೆ ತಿನ್ನಿಸ ಕೂಡ ಕಾಡಿಯಬೇಕು. ೫ ನೇ ದಿವಸದಿಂದ ಮುಂಜಾನೆ ೧, ಗುಳಿಗೆ ಮಧ್ಯಾಹ್ನಕ್ಕೆ ೧, ಗುಳಿಗೆ ರಾತ್ರಿ ಊಟವಾದ ಅನಂತರ ೧ ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ. ಕೆಳಗೆ ನಮ್ಮ ಕಡೆಗೆ ಇರುವ ಖಾತ್ರೀ ಔಷಧಗಳ ಲಿಸ್ಟನ್ನು ತರಿಸಿಕೊಳ್ಳಿರಿ. [20—20]

ಪತ್ತಾ ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ ಮು. ಪೋ. ಮಿರಜ ಎಂ. ಎಸ್. ಎಂ

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು

(Registerd Trade Mark)

ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—ಶೀತ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಚಿಟಿಕೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದ ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕಸಟ್ಟೆ ಕಳುಹಿಸಲಾಗುವದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನು, ಅಡ್ರೆಸ್ಸನ್ನು, ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[೫—೬] ಪೋ. ಬಾ. ೫೫೦, ಮದರಾಸು.

RAYANKERE PALACE DAIRY FARM, MYSORE.

Bull calves, a good half-bred bull and some bullocks for sale.

Apply to:—
DR. MCISAAC,
Manager.

[3—3]

ಮೈಸೂರು ಸ್ಟಾರ್.

೧೯೩೨ನೇ ಇಸವಿ ಸೆಪ್ಟೆಂಬರ್ ತಾ|| ೨೬ನೆಯ ಸೋಮವಾರ.

A MEMORABLE AGREEMENT

Mahatma Gandhi's vow has achieved a miracle. On the one hand, the immediate objective of getting rid of separate electorates for depressed classes has been achieved. Dr. Ambedkar, the protagonist of separate electorates has abandoned it in favour of what everybody should consider a far more favourable scheme to the depressed classes. In place of 91 seats in the various legislatures which were reserved for them, they have now nearly 150 seats through reservation of seats in joint electorates. On the other hand—and this we consider of far wider and greater significance—the status of depressed classes every where has improved. The ban of untouchability has gone in many places and is in the act of being lifted in other places. Verily it is a miracle how the whole country is getting transformed. What could not be achieved in the course of thousands of years is being achieved in course of a few weeks and days. It sounds strange that a single individual from behind the prison bars should work this marvellous change in the mind of a whole nation. No piece of legislation or edict of a power could have brought about this marvel of a change. The force of the *tapasya* of the Mahatma is such that it is far more effective than the whole machinery of an administration. We are indeed blessed in living at such times. **We just hear the glad news of Mahatma breaking the fast on the withrawal of the award so far as it relates to the depressed classes by the Premier. We express our deep thankfulness to the Almighty for the result that has been achieved, and our sincere congratulations to all thoes peacemakers—for they are blessed—who worked hard towards the end and offer our heartfelt prayers to God that He may give strength to Mahatma and longlife to redeem this ancient land politically and socially.**

ಲೋಕೋತ್ತರವಾದ ಒಪ್ಪಂದ

ಅಸ್ಪೃಶ್ಯರಿಗಾಗಿ ಪ್ರತ್ಯೇಕ ನಿಯೋಜಕ ವರ್ಗವನ್ನೇರ್ಪಡಿಸಿರುವುದರಿಂದ ಅವರು ಹಿಂದೂ ಮತದಿಂದಲೇ ದೂರೀಕರಿಸಲ್ಪಟ್ಟಂತಾಗುವುದು, ಇದು ಅಸ್ಪೃಶ್ಯತಾ ನಿವಾರಣೆಗಾಗಿ ತಾವು ಮಾಡಿರುವ ಸಂಕಲ್ಪಕ್ಕೆ ಭಂಗಕಾರಿಯಾಗಿರುವುದರಿಂದ ಇದನ್ನು ತೊಲಗಿಸಲು ಮಹಾತ್ಮರು ಕಳೆದ ತಾ|| 20 ರಲ್ಲಿ ಪ್ರಾಯೋಪವೇಶ ದೀಕ್ಷೆಯನ್ನು ಕೈಕೊಂಡು ನಡೆಸುತ್ತಿರುವರು. ಈಗಿನ ಮನುಷ್ಯ ವರ್ಗಕ್ಕೇ ಅಸಾಧ್ಯವಾದ ಈ ಕಠಿಣ ದೀಕ್ಷೆಯ ಪ್ರಭಾವವು ಭಾರತೀಯರಲ್ಲಿ ಸಮಸ್ತ ಜಾತಿ ಮತದವರಿಗೂ ರಾಜಕೀಯ ಪಕ್ಷದವರಿಗೂ ದಿಗ್ಭ್ರಾಂತಿಯನ್ನೂ, ಕಳವಳವನ್ನೂ ಉಂಟುಮಾಡಿದೆ. ಇದಕ್ಕಾಗಿ ಪಂಡಿತ ಮದನಮೋಹನ ಮಾಲವ್ಯರವರೇ ಮೊದಲಾಗಿ ಭಾರತ ದೇಶ ನಾಯಕರುಗಳು ಕಾಶಿ, ಕಲಕತ್ತ, ಪ್ರಯಾಗ, ಬೊಂಬಾಯಿ, ಮದ್ರಾಸು ಮೊದಲಾದ ಪಟ್ಟಣಗಳಲ್ಲಿ ದೇವಾಲಯಗಳಿಗೆ ಅಸ್ಪೃಶ್ಯರ ಪ್ರವೇಶಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟು ಅವರ ಸಂಗಡ ತಾವುಗಳೂ ಸೇರಿ ಮಹಾತ್ಮರ ಸಂಕಲ್ಪ ಸಿದ್ಧಿಯನ್ನು ಕೋರಿದುದಲ್ಲದೆ ಶ್ರೇಯಃ ಪ್ರಾರ್ಥನೆಯನ್ನೂ ಮಾಡಿದರು. ಕೆಲವೆಡೆಗಳಲ್ಲಿ ಸಹಪಙ್ತಿ ಭೋಜನ ಸಹ ನಡೆದಿತು. ಅಸ್ಪೃಶ್ಯರ ಪ್ರತ್ಯೇಕ ನಿಯೋಜಕ ವರ್ಗದೇರ್ಪಾಟಿಗೆ ಕಾರಣಭೂತರಾದ ಡಾಕ್ಟರ್ ಅಂಬಡೇಕರು ತಮ್ಮ ಹಟವನ್ನು ಬಿಟ್ಟು ನಿಮ್ಮ ಜನರಿಗೆ ಪ್ರತ್ಯೇಕ ನಿಯೋಜಕ ವರ್ಗಕ್ಕಿಂತಲೂ ಹೆಚ್ಚು ಪ್ರಯೋಜನಕರವಾದ ಮತ್ತು ಮಹಾತ್ಮರಿಗೆ ಹಿತಕರವಾದ ಮಾರ್ಗವನ್ನವಲಂಬಿಸಲು ಸಮ್ಮತಿಸಿರುವುದು ಅತ್ಯಂತ ಸಂತೋಷಪ್ರದವೂ ಆಪತ್ತು ನಿವಾರಕವೂ ಆಗಿರುತ್ತದೆ. ಪ್ರತ್ಯೇಕ ಚುನಾವಣೆಯ ವಿಧಾನದಲ್ಲಿ ನಿಮ್ಮ ಜನಗಳಿಗೆ ಬೇರೆ ಬೇರೆ ಶಾಸನ ಸಭೆಗಳಲ್ಲಿ ಒಟ್ಟು 91 ಸ್ಥಾನಗಳು ಕಾದಿರಿಸಲ್ಪಡಬೇಕಾಗಿದ್ದುದು ಈ ಸಮಷ್ಟಿ ಚುನಾವಣೆಯೇರ್ಪಾಟಿನಿಂದ ಅವರುಗಳಿಗೆ 150 ಸ್ಥಾನಗಳು ಕಾದಿರಿಸಲ್ಪಡುವುವು. ಈ ವಿಧಾನದಿಂದ ನಿಮ್ಮ ವರ್ಗದವರ ಸ್ಥಿತಿಯು ಎಲ್ಲದರಲ್ಲೂ ಉತ್ತಮವಾಗುವುದರಲ್ಲಿ ಅಭ್ಯಂತರವಿಲ್ಲ. ಅಸ್ಪೃಶ್ಯತಾ ನಿವಾರಣೆಗಾರಂಭವಾಗಿದೆ. ಭಾರತದೇಶದ ಈ ವಿಧವಾದ ಪರಿವರ್ತನಕ್ಕೆ ಮಹಾತ್ಮರು ಈಗ ಹಾಕಿರುವ ಪಾವಾಣವೇ ಕಾರಣವು. ಸಾವಿರಾರು ವರ್ಷಗಳಿಂದಲೂ ಸಾಧ್ಯವಾಗದಿದ್ದಂತಹ ಕಾರ್ಯವು ಈಗ ಒಂದು ವಾರದೊಳಗಾಗಿ ಸಿದ್ಧಿಸುವುದರಲ್ಲಿದೆ. ಕಾರಾಗೃಹದೊಳಗೆ ಕಬ್ಬಿನದ ಪಂಜರದೊಳಗಿರುವ ಆ ಶುಷ್ಕದೇಹದ ಒಂದು ವ್ಯಕ್ತಿಯು ತಪಶ್ಚರ್ಯದಿಂದ ಭಾರತ ಜನಾಂಗದ ಮನೋವೃತ್ತಿಯೇ ಬದಲಾಯಿಸಿರುವುದು ಏನು ಸಾಮಾನ್ಯವೇ ಮತ್ತು ಇತರರಿಗೆ ಸಾಧ್ಯವೇ? ಈ ಅದ್ಭುತಪರಿವರ್ತನವು ಯಾವ ಶಾಸನದಿಂದಾಗಲಿ ರಾಜಾಜ್ಞೆಯಿಂದಾಗಲಿ ಸಾಧ್ಯವಾಗುತ್ತಿರಲಿಲ್ಲ. ಮಹಾತ್ಮರ ತಪಶ್ಶಕ್ತಿಯು ರಾಜ್ಯಾಡಳಿತದ ಯಂತ್ರಶಕ್ತಿಯನ್ನು ಮೀರಿದುದಾಗಿದೆ. ಇಂತಹ ಕಾಲದಲ್ಲಿ ಜೀವಿಸಿರುವ ನಾವುಗಳೇ ಧನ್ಯರು. ಡಾ|| ಅಂಬೇಡಕರು ಸಮಷ್ಟಿ ನಿಯೋಜಕವರ್ಗದೇರ್ಪಾಟಿಗೆ ಸಮ್ಮತಿಸಿರುವುದರಿಂದ ಬ್ರಿಟನ್ನಿನ ಪ್ರಧಾನ ಮಂತ್ರಿಗಳಾದ ಮಿ|| ಮೆಕ್ಡೊನಾಲ್ಡ್‌ರವರು ನಿಮ್ಮ ಜನಗಳಿಗಾಗಿ ಕಲ್ಪಿಸಿರುವ ಪ್ರತ್ಯೇಕ ನಿಯೋಜಕ ವರ್ಗದೇರ್ಪಾಟನ್ನು ತಪ್ಪಿಸಿಬಿಡಲು ಬ್ರಿಟನ್ನಿನ ಮುಖ್ಯ ಮಂತ್ರಿಗಳೊಪ್ಪಿಕೊಂಡುದರಮೇಲೆ ಮಹಾತ್ಮರು ಈ ದಿವಸ ಉಪವಾಸವ್ರತವನ್ನು ಬಿಟ್ಟು ಆಹಾರವನ್ನು ತೆಗೆದುಕೊಂಡರೆಂಬ ಸುವಾರ್ತೆಯು ಈಗತಾನೆ ತಿಳಿದುಬಂದಿರುತ್ತದೆ. ಮಹಾತ್ಮರಿಗೆ ಪ್ರಾಣಗಂಡವಾಗಿದ್ದ ಸಮಸ್ಯೆಯು ಪರಿಹಾರವಾಗುವಂತೆ ಅನುಗ್ರಹಿಸಿದುದಕ್ಕಾಗಿ ಆ ಸರ್ವಶಕ್ತನಾದ ಭಗವಂತನಿಗೆ ನಮ್ಮ ಭಕ್ತಿಪೂರ್ವಕವಾದ ವಂದನೆಗಳನ್ನರ್ಪಿಸಿ, ಸರ್ವ ಸಾಹಸದಿಂದ ಈ ಸಮಾಧಾನವನ್ನು ಕುದುರಿಸಿದ ಮಹನೀಯರುಗಳನ್ನು ಅಭಿನಂದಿಸುತ್ತೇವಲ್ಲದೆ, ಈ ಪ್ರಾಚೀನ ಭಾರತ ದೇಶವನ್ನು ರಾಜಕೀಯ ಮತ್ತು ಸಾಂಘಿಕ ನಿರ್ಬಂಧ ಶೃಂಖಲದಿಂದ ವಿಮುಕ್ತಗೊಳಿಸಲಿಕ್ಕಾಗಿ ಮಹಾತ್ಮರಿಗೆ ದೀರ್ಘಾಯುರಾರೋಗ್ಯವನ್ನು ಅನುಗ್ರಹಿಸಲೆಂದು ಆ ಪರಮಾತ್ಮನನ್ನು ಅನನ್ಯಭಾವದಿಂದ ಬೇಡುತ್ತೇವೆ.

ಆಲಿಯವರು ಅಮೇರಿಕೆಗೆ ಹೋಗುವರು

ಸೌಕತಾಲಿಯವರು ಬರುವ ಅಕ್ಟೋಬರ್ ತಾ|| 6 ರಲ್ಲಿ ಅಮೇರಿಕೆಗೆ ಪ್ರಯಾಣಮಾಡಿ ದೇಹವಿಶ್ರಾಂತಿಗಾಗಿ ದೇಶಾಟನೆಯನ್ನು ಮಾಡುತ್ತ ಕೆಲ ಉಪನ್ಯಾಸಗಳನ್ನು ಮಾಡಲು ಯೋಚಿಸಿರುತ್ತಾರೆ.

ದಾಸರವರ ಪುತ್ರಿಗೆ ಮಹಾತ್ಮರ ತಂತೀವಾರ್ತೆ

ದೇಶಬಂಧು ದಾಸರವರ ಪುತ್ರಿ ಅಪರ್ಣಾದೇವಿಯವರಿಗೆ ಮಹಾತ್ಮರಿಂದ ಈ ಪ್ರಕಾರವಾಗಿ ತಂತಿವಾರ್ತೆ ಕೊಡಲ್ಪಟ್ಟಿದೆ. "ನೀವು ಕಳುಹಿದ ತಂತಿ ವರ್ತಮಾನಕ್ಕಾಗಿ ವಂದಿಸುವೆನು. ನನ್ನ ಸೇವೆಯು ಇನ್ನೂ ನಡೆಯಬೇಕಾಗಿದ್ದಲ್ಲಿ ಪರಮೇಶ್ವರನು ನನ್ನ ಈ ಕಷ್ಟವನ್ನು ಕಡಿಮೆ ಮಾಡುವನು"

ದೇಶಕ್ಕಾಗಿ ಆತ್ಮಹತ್ಯ

ಮಹಾತ್ಮರು ಉಪವಾಸ ವ್ರತವನ್ನು ಆರಂಭಿಸಿದ ತಾ|| 20 ರಲ್ಲಿ ಬೊಂಬಾಯಿನೊಳಗೆ ಶಂಕರ ಗಣಪತಿ ಎಂಬವನು ಉಪವಾಸವನ್ನು ಮಾಡಿ ಕಡೆಯಲ್ಲಿ ಅಫೀಮನ್ನು ತಿಂದು ಆತ್ಮಹತ್ಯಮಾಡಿಕೊಂಡನು. ಮನುಷ್ಯ ಕೋಟಿಗೆ ಪ್ರಾಪ್ತವಾಗಿರುವ ಕಷ್ಟವನ್ನು ನೋಡಿ ಸಹಿಸಲಾರದೆ ಪ್ರಾಣಹತ್ಯ ಮಾಡಿಕೊಳ್ಳುವುದಾಗಿ ಬರೆದಿಟ್ಟಿದ್ದನಂತೆ. ಇದರಿಂದ ಮನುಷ್ಯರ ಕಷ್ಟ ನಿವಾರಣೆಯಾದಂತಾಯಿತೆ!

ಐರ್ಲೆಂಡಿನಲ್ಲಿ ಕಾಸ್‌ಗ್ರೇವರ ಸೆರೆ

ಹಿಂದೆ ಈ ದೇಶದ ಪ್ರೆಸಿಡೆಂಟರಾಗಿದ್ದ ಕಾಸ್‌ಗ್ರೇವ್‌ರವರು ಈಗ ಅಧ್ಯಕ್ಷರಾಗಿರುವ ಡಿವೇಲೆರಾಯವರ ಪ್ರಭುತ್ವಕ್ಕೆ ಪ್ರತಿಕಕ್ಷಿಯಾಗಿರುತ್ತಾರೆ. ಇವರು ಜಿನೀವಾಕ್ಕೆ ಡಿವೆಲೆರವರು ಹೋಗಿರುವಾಗ್ಗೆ ಪ್ರಭುತ್ವವನ್ನು ಬಹಳ ಕಠಿಣವಾಗಿ ಖಂಡಿಸಿ ಭಾಷಣ ಮಾಡಿದುದಕ್ಕಾಗಿ ಇವರನ್ನು ಸೆರೆಹಿಡಿಯಬೇಕೆಂದು ಡಿವೆಲೆರವರ ಪ್ರತಿಯಾಗಿ ಪ್ರೆಸಿಡೆಂಟರವರ ಕೆಲಸವನ್ನು ನೋಡುತ್ತಿರುವವರು ಮಂತ್ರಿವರ್ಗದವರೂ ಪರ್ಯಾಲೋಚಿಸುವರಂತೆ.

ಮಹಾತ್ಮರ ದೀಕ್ಷಾವಿಸರ್ಜನೆ

ಮಹಾತ್ಮರ ಸಮ್ಮುಖದಲ್ಲಿ ಸರ್ವಪಕ್ಷ ನಾಯಕರುಗಳೊಳಗೆ ಸಮಾಧಾನವು ಕುದುರಿ ತತ್ಸಂಬಂಧವಾಗಿ ಕಾಗದ ಪತ್ರಗಳು ಇಂದು ನಡೆದಲ್ಲಿ ಮಹಾತ್ಮರು ತಮ್ಮ ದೀಕ್ಷೆಯನ್ನು ಇಂದು ಅಥವಾ ನಾಳೆ ವಿಸರ್ಜಿಸುವವರಾಗಿರುವರೆಂದು ತಿಳಿಯಬಂದಿದೆ. ಈ ದಿವಸ ಭಾರತ ದೇಶದಲ್ಲೆಲ್ಲ ದೇಶಹಿತಾರ್ಥವಾಗಿ ಪ್ರಾರ್ಥನೆಗಳು ನಡೆಸಲ್ಪಡಬೇಕೆಂದು ರಾಜಗೋಪಾಲಾಚಾರ್ಯರು ಭಾರತೀಯರನ್ನು ಕೋರಿರುತ್ತಾರೆ.

ಪ್ರಧಾನ ಮಂತ್ರಿಯವರ ಮಗಳ ವಿವಾಹ

ಗ್ರೇಟ್ ಬ್ರಿಟನ್ನಿನ ಪ್ರಧಾನ ಮಂತ್ರಿಗಳಾದ ರಾಂಸೆ ಮೆಕ್ಡೊನಾಲ್ಡ್‌ರವರು ತಮ್ಮ ಎರಡನೆಯ ಕುಮಾರ್ತಿ ಜೋನ್ ಕನ್ಯೆಯನ್ನು ಡಾಕ್ಟರ್ ಅಲಾಸ್ಟೇಯರ್ ಮ್ಯಾಕ್‌ಕರ್‌ರವರಿಗೆ ಕೊಟ್ಟು ವಿವಾಹವನ್ನು ಮಾಡಿದರು. 450 ಅತಿಥಿಗಳು ಆಹ್ವಾನಿಸಲ್ಪಟ್ಟಿದ್ದರು. ಜೋನ್ ಕನ್ಯೆಯು ವೈದ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ದಂಪತಿಗಳು ಎಡಿನ್‌ಬರೊ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಿದ್ದುದರ ಮೇಲೆ ಪರಸ್ಪರ ಅನುರಾಗವುಂಟಾಗಿದ್ದರು. ಈಗವರು ಪುನಸ್ಸಂಧಾನಕ್ಕಾಗಿ ಎಲ್ಲಿಗೊ ಹೋಗಿರುತ್ತಾರೆ.

ಅಸ್ಪೃಶ್ಯರೂ ಅಗ್ರವರ್ಣದವರೂ ಕೂಡಿ ಯಜ್ಞಮಾಡಿದರು

ರತ್ನಗಿರಿಯಲ್ಲಿ ಎಲ್ಲ ವರ್ಣದವರೂ ಸೇರಿ ಪತಿತಪಾವನ ಮಂದಿರದೊಳಗೆ ಒಂದು ಯಜ್ಞವನ್ನು ಮಾಡಿದರು. ಈ ಯಜ್ಞದಲ್ಲಿ ಒಬ್ಬ ಕಲಾಸಿಯವನು, ಒಬ್ಬ ಮಾದಿಗರವನು ಒಬ್ಬ ಮಹರು ಕುಲದವನು, ಒಬ್ಬ ವೈಶ್ಯನು, ಒಬ್ಬ ಮಹಾರಾಷ್ಟ್ರನು ಸಮನಾಗಿ ಕುಳಿತು ಹೋಮವನ್ನು ಮಾಡುತ್ತ ಯಜ್ಞವನ್ನು ಜರುಗಿಸಿದರು. ಕೊಲ್ಹಾಪುರದ ಒಬ್ಬ ಮಹಾರಾಷ್ಟ್ರ ಪಂಡಿತನು ವೇದ ಮಂತ್ರವನ್ನು ಹೇಳುತ್ತಿದ್ದನು. ವಿನಾಯಕದಾಮೋದರ ಸಾವಾರಕರವರು ಅಧ್ವರ್ಯರಾಗಿದ್ದರು. ಹಿಂದುಗಳೆಲ್ಲರೂ ಕರ್ಮ ಕಾಂಡಗಳೆಲ್ಲೆಲ್ಲ ಸಮಾನ ಭಾವದಿಂದ ವರ್ತಿಸುವಲ್ಲಿ ಐಕ್ಯಭಾವದಿಂದಿರಬೇಕೆಂದು ಉಪನ್ಯಾಸಮಾಡಿದರು.

ವೈಸ್ರಾಯರ ಮತ್ತು ದೇಶೀಯ ರಾಜರ ಸಭೆ

ಭಾರತ ದೇಶೀಯ ಸಂಸ್ಥಾನಗಳು ಫೆಡರಲ್ ಪ್ರಭುತ್ವಕ್ಕೆ ಸೇರುವ ವಿಚಾರದಲ್ಲಿ ಅವುಗಳ ರಾಜರ ಅಭಿಪ್ರಾಯವನ್ನು ತಿಳಿಯಲು ವೈಸ್ರಾಯರು ಕಳೆದ ಸೋಮವಾರ ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಸಿಮ್ಲಾದೊಳಗೆ ನಡೆಸಿದರು. ಈ ಸಭೆಗೆ ಅನೇಕ ರಾಜರುಗಳೂ ಕೆಲವರ ಪ್ರತಿನಿಧಿಗಳೂ ಆಹ್ವಾನಿಸಲ್ಪಟ್ಟಿದ್ದರು. ವೈಸ್ರಾಯರು ಫೆಡರಲ್ ಪ್ರಭುತ್ವಕ್ಕೆ ದೇಶೀಯ ಸಂಸ್ಥಾನಗಳು ಸೇರುವ ವಿಚಾರವಾಗಿ ದೀರ್ಘವಾದ ಭಾಷಣವನ್ನು ಮಾಡಿ ಸಂಸ್ಥಾನಾಧಿಪತಿಗಳಿಗೆ ಫೆಡರಲ್ ಪ್ರಭುತ್ವದಲ್ಲಿ ತಮಗಿರಬೇಕಾದ ಸ್ಥಾನವನ್ನು ಗೊತ್ತುಮಾಡಿ ತಿಳಿಸಬೇಕೆಂದು ಹೇಳಿದರು. ಅದರ ಮೇಲೆ ರಾಜರುಗಳು ಪರ್ಯಾಲೋಚಿಸಿ, ಬ್ರಿಟಿಷ್ ಇಂಡ್ಯಾಕ್ಕೂ ದೇಶೀಯ ಸಂಸ್ಥಾನಗಳಿಗೂ ಎಷ್ಟು ಸ್ಥಾನಗಳಿರಬೇಕೆಂದು ಇನ್ನೂ ಗೊತ್ತಾಗಿಲ್ಲವಾದುದರಿಂದ ಯಾವ ಸಭೆಗಳಲ್ಲಿ ತಮಗೆಷ್ಟೆಷ್ಟು ಸ್ಥಾನಗಳಿರಬೇಕೆಂಬುದನ್ನು ನಿರ್ಣಯಿಸಲು ಸಾಧ್ಯವಿಲ್ಲವೆಂದು ವೈಸ್ರಾಯರಿಗೆ ತಿಳಿಸಿದುದಾಗಿ ಪ್ರಕಟವಾಗಿದೆ.

ಮಹಾತ್ಮರಿಗೆ ರವೀಂದ್ರರ ತಂತಿ

ಭಾರತ ದೇಶದಲ್ಲಿ ಏಕಭಾವವನ್ನೂ ಸಾಂಘಿಕ ಸೌಷ್ಠವವನ್ನೂ ಉಂಟುಮಾಡಲು ಅಮೂಲ್ಯವಾದ ನಿಮ್ಮ ಪ್ರಾಣವನ್ನು ನೀವು ಸಮರ್ಪಿಸುವುದು ಅತ್ಯಂತ ಪ್ರಶಂಸನೀಯವು. ಇದರಿಂದ ದೊರತನದವರ ಮನೋಭಾವವು ಬದಲಾಯಿಸುವುದೊ ಇಲ್ಲವೊ ಹೇಳಲಾಗುವುದಿಲ್ಲವಾದರೂ, ನಮ್ಮ ದೇಶೀಯರೊಳಗೆ ವಿಶೇಷಾನುಕೂಲ ಫಲವುಂಟಾಗುವುದರಲ್ಲಿ ಅಭ್ಯಂತರವಿಲ್ಲ. ಈ ಮಹಾ ತ್ಯಾಗದಿಂದ ನಮ್ಮ ದೇಶೀಯರಿಗೆ ಹೃದಯಪರಿವರ್ತನವು ತಪ್ಪದೆ ಉಂಟಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಅಮೂಲ್ಯವಾದ ನಿಮ್ಮ ಪ್ರಾಣವನ್ನು ನೀವು ತ್ಯಜಿಸುವ ದುಸ್ಥಿತಿಯು ಪ್ರಾಪ್ತವಾಗುವಷ್ಟರಮಟ್ಟಿಗೆ ದೇಶೀಯರು ಕಠಿನಮನಸ್ಕರಾಗಿರುವುದಿಲ್ಲವೆಂದು ನಾನು ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ದುಃಖಪೂರಿತ ಮನಸ್ಕನಾದ ನಾನು ಭಕ್ತಿಯಿಂದಲೂ ಪ್ರೇಮದಿಂದಲೂ ಘನವಾದ ನಿಮ್ಮ ತಪಶ್ಚರ್ಯವನ್ನು ನಿರೀಕ್ಷಿಸುತ್ತಿರುವೆನು" ಎಂದು ಕವಿ ಸಾರ್ವಭೌಮರಾದ ರವೀಂದ್ರರು ಮಹಾತ್ಮರಿಗೆ ತಂತಿಯ ದ್ವಾರ ತಿಳಿಸಿರುತ್ತಾರೆ.

ಶ್ರೀಮತೀ ವಾಸಂತಿದೇವಿಯರ ವಿಜ್ಞಾಪನೆ

ಚಿತ್ತರಂಜನದಾಸರವರ ಪತ್ನಿ ಶ್ರೀಮತಿ ವಾಸಂತೀದೇವಿಯರು ಮಹಾತ್ಮರ ಶುಶ್ರೂಷೆಗಾಗಿ ಎರವಾಡ ಜೈಲಿಗೆ ಹೊರಡುವಾಗ್ಗೆ ಬಂಗಾಳಾ ದೇಶೀಯರಲ್ಲಿ ಈ ಪ್ರಕಾರವಾಗಿ ವಿಜ್ಞಾಪಿಸಿಕೊಂಡಿರುವರು :—ಬಂಗಾಳದಲ್ಲಿ ಪ್ರಜಾರಾಧಕರೆಲ್ಲರೂ ಬದ್ಧರಾಗಿರುತ್ತಾರೆ. ಈಗ ಮಹಾತ್ಮರ ಆಹ್ವಾನವು ಬಂದಿರುತ್ತದೆ. ಅಧಃಪತಿತನ ಪುನರುದ್ಧಾರ ಮಹಾಕಾರ್ಯವು ಕೂಡಲೆ ನಡೆಸಲ್ಪಡಬೇಕಾಗಿದೆ. ಚೈತನ್ಯರು, ರಾಮಮೋಹನರಾಯರು, ವಿವೇಕಾನಂದಸ್ವಾಮಿಯವರು ಇವರುಗಳ ಪಾದಧೂಳಿಯಿಂದ ಪವಿತ್ರವಾಗಿರುವ ವಂಗದೇಶವು ಮಹಾತ್ಮರ ಆಹ್ವಾನಕ್ಕೆ ಕೂಡಲೆ ಕಾರ್ಯರೂಪವಾದ ಉತ್ತರವನ್ನು ಕೊಡಬೇಕಾಗಿದೆ. ಕವಿ ಸಾರ್ವಭೌಮ ರವೀಂದ್ರರು ಮಾಡಬೇಕಾದ ಕಾರ್ಯವನ್ನು ನಿರ್ದೇಶಿಸಿರುತ್ತಾರೆ. ಅಸ್ಪೃಶ್ಯರಿಗೆ ಆಗಲೇ ಮಹೋದಯವಾಗಿದೆ. ವಂಗದೇಶದಲ್ಲಿ ಅಸ್ಪೃಶ್ಯತೆಯು ನಾಮಾವಶೇಷವಾಗಬೇಕು. ಅಕ್ಟೋಬರು ತಾ|| 7 ರಲ್ಲಿ ನಡೆಯುವ ದುರ್ಗಾಪೂಜೆಯ ದಿವಸ ಬಂಗಾಳದ ಪ್ರತಿಯೊಂದು ಪಟ್ಟಣ ಗ್ರಾಮಗಳಲ್ಲೂ ದುರ್ಗಾದೇವಸ್ಥಾನದಲ್ಲೂ ಹಿಂದುಗಳೆಲ್ಲರೂ ಉತ್ತಮ ಕನಿಷ್ಠ ವರ್ಣದವರೆಂಬ ಭೇದವಿಲ್ಲದೇ ಕೂಡಿ ಹಿಂದುಗಳೆಲ್ಲರೂ ಸಮಾನರೆಂದು ಖಂಡಿತವಾಗಿ ಸಾರಬೇಕು. ಅಸ್ಪೃಶ್ಯರು ದೇವಾಲಯ, ಬಾವಿ ಮೊದಲಾದವುಗಳಿಗೆ ಪ್ರವೇಶಿಸಲು ಅವಕಾಶ ಕಲ್ಪಿಸಲ್ಪಡಬೇಕು.

ಅಮೆರಿಕೆಯವರಿಗೆ ಮಹಾತ್ಮರ ಸಂದೇಶ

ಅಮೆರಿಕೆಯ ಸ್ನೇಹಿತನೊಬ್ಬನು ಮಹಾತ್ಮರಿಗೆ ಈ ಪ್ರಕಾರವಾಗಿ ತಂತಿಯನ್ನು ಕೊಟ್ಟಿದ್ದನು :—" ಅಮೆರಿಕೆಯವರು ...ಮ್ಮ ಮಹತ್ತ್ವವನ್ನೂ, ಅಂತರಾತ್ಮ ಪ್ರೇರಣೆಯನ್ನೂ ಗೌರವಿ...ತ್ತಿದ್ದರಾದರೂ ನೀವು ಹಿಡಿದಿರುವ ಉಪವಾಸ ವ್ರತವನ್ನು ...ಳ ದಿಗ್ಭ್ರಾಂತರಾಗಿರುತ್ತಾರೆ. ಆದುದರಿಂದ ಇಲ್ಲಿಯವರಿಗೆಲ್ಲ ...ಷ್ಟವಾಗಿ ತಿಳಿಯುವಂತೆ ಒಂದು ಸಂದೇಶವನ್ನು ಕಳುಹಿಸು...ಡುವಿರಾ? ನಿಮ್ಮ ಜನರಿಗೆ ಹೆಚ್ಚು ಪ್ರಾತಿನಿಧ್ಯಕೊಟ್ಟಲ್ಲಿ ...ಮ್ಮಾಕ್ಷೇಪವೇನೂ ಇಲ್ಲವೆಂದು ಮೆಕ್ಡೊನಾಲ್ಡರವರಿಗೆ ಬರೆದಿ...ರಿ. ಇದನ್ನು ನೀವು ಹೇಗೆ ಸಂಪಾದಿಸುವಿರಿ? ನಿಮ್ಮ ...ನರ ನಾಯಕರೊಡನೆ ಪ್ರಸ್ತಾಪಿಸಿರುವಿರಾ? ಅವರೆಷ್ಟರ ...ಟ್ಟಿಗೆ ಸಮ್ಮತಿಸಿರುವರು? ಭಾರತ ಜಾತೀಯೋದ್ಯಮಕ್ಕೆ ...ಮುಖ್ಯ ನಾಯಕರಾಗಿರುವ ನೀವು ಸ್ವಪರಿಪಾಲನವು ಸಮೀಪ...ವಾಗುವ ಸಮಯದಲ್ಲಿ ದೇಹವನ್ನು ತ್ಯಜಿಸುವುದರಿಂದ ...ರತ ಜಾತೀಯತೆಯೇ ಮಣ್ಣು ಪಾಲಾಗುವುದೆಂಬುದನ್ನು ...ಮೆರಿಕೆಯವರು ಗ್ರಹಿಸಿಕೊಳ್ಳಲಾರರು. ಭಾರತ ದೇಶಕ್ಕೆಲ್ಲ ...ಪ್ರತಿನಿಧಿಯೆಂದೂ, ಹಿಂದು, ಮಹಮ್ಮದೀಯ, ಕ್ರೈಸ್ತ, ...ರ್ಸಿ ಮೊದಲಾದವರುಗಳ ಹಕ್ಕನ್ನು ಸಮಾನವಾಗಿ ನೋಡು...ನೆಂದೂ, ಭಾರತ ದೇಶಕ್ಕಾಗಿಯೇ ಪ್ರಾಣಬಿಡುತ್ತೇನೆಂದೂ ...ವು ಹೇಳಿದ್ದಿರಿ. ಆದರೆ ಈ ಮಧ್ಯೆ ಒಂದು ಜಾತಿಯವರ...ಗಿ ಪ್ರಾಣಬಿಡಲೆತ್ನಿಸಿರುವುದು ಸರಿಯೆ? ನಿಮ್ಮ ಅಭಿಪ್ರಾ...ಯವನ್ನು ಇಂಗ್ಲೆಂಡು, ಅಮೆರಿಕೆ ಮೊದಲಾದ ದೇಶಗಳಲ್ಲಿ ...ಪ್ರಕಟಿಸಲು ಪ್ರಯತ್ನಮಾಡುತ್ತಿರುವೆನಾದುದರಿಂದ ನಿಮ್ಮುತ್ತ...ರವನ್ನೇ ಇದಿರು ನೋಡುತ್ತಿದ್ದೇನೆ."

ಡಿವೆಲೆರಾ ಮತ್ತು ಗಾಂಧಿ ವಿಚಿತ್ರ ಪುರುಷರು

"ಈ ವಿಚಿತ್ರ ಪುರುಷರು ವಿಚಿತ್ರ ಕಾರ್ಯಗಳನ್ನು ಮಾಡು...ರುವುದರಿಂದ ಪ್ರಪಂಚ ಪರಿಪಾಲನವು ಬಹಳ ಕಷ್ಟವಾಗುತ್ತಿದೆ. ...ವಿಚಿತ್ರ ಪುರುಷರುಗಳು ಪರಿಪಾಲನ ಕ್ರಮವನ್ನೂ ಹೇತು...ವನ್ನೂ ಸ್ತಂಭನಗೊಳಿಸುತ್ತಿರುವರು. ಇಂತಹವರೊಡನೆ ...ಹೇತುಕವಾದ ಸಂಬಂಧವನ್ನು ಹೊಂದುವುದು ದುರ್ಘಟ...ವಾಗಿರುತ್ತದೆ. ಡಿವೆಲೆರವರು ನಮಗೆ ಬಹಳ ಅಹಿತಕರಸ್ಥಿತಿಯ...ನ್ನುಂಟುಮಾಡಿದರು. ನಾವು ಅವರೊಡನೆ ನ್ಯಾಯಬದ್ಧವಾಗಿ ...ನಡಿಸಲೆತ್ನಿಸಿದೆವು. ಯಾವುದು ನ್ಯಾಯವಾದ ಒಡಂಬಡಿಕೆ...ಯೆಂದು ನಾವು ತಿಳಿದಿದ್ದೆವೊ ಅದನ್ನು ಭಂಗಪಡಿಸಲು ಅನು...ಕೂಲವಾದ ವಾದವನ್ನೇ ಅವರು ಪದೇ ಪದೇ ಮಾಡುತ್ತಿದ್ದರು. ...ಐರ್ಲೆಂಡು ಪ್ರಜೆಗಳಿಗೆ ಅನ್ನ ಬಟ್ಟೆಗಳು ದೊರಕದಂತೆ ...ಮಾಡಿ ಅವರನ್ನು ದಾರಿದ್ರ್ಯ ಸ್ಥಿತಿಗೆ ತಂದು ಇದರಿಂದ ನಮ್ಮ...ನ್ನು ಅಪಖ್ಯಾತಿಗೆ ಗುರಿಮಾಡಬೇಕೆಂದು ಡಿವೆಲೆರವರು ಪ್ರಯ...ತ್ನಿಸುತ್ತಿದ್ದಾರೆ. ಗಾಂಧಿಯವರು ಉಪವಾಸ ವ್ರತವನ್ನು ಹಿಡಿದು ...ಪ್ರಾಣತ್ಯಾಗಮಾಡಲು ಸಂಕಲ್ಪಿಸಿರುವರು. ಆಂಗ್ಲೇಯನು ...ಪರೋಪಕಾರನಿರತನಾಗಿರುವುದರಿಂದ ಈ ಸ್ಥಿತಿಯು ಆತನಿಗೆ ...ಬಹಳ ಕಷ್ಟಕರವಾಗಿರುವುದು. ತನ್ನ ಮರಣಾವಧಿ ಗಾಂಧಿಯ...ವರು ಅಸ್ಪೃಶ್ಯರಿಗಾಗಿ ಪಾಟುಪಡುತ್ತಿರುವರೆಂಬ ಕಾರಣದ ...ಮೇಲೆ ಆಂಗ್ಲೇಯರು ಅಸ್ಪೃಶ್ಯರಿಗೆ ಸ್ವಲ್ಪ ಉಪಕಾರಮಾಡಿದು...ದರಮೇಲೆ ಗಾಂಧಿಯವರು ತಮ್ಮ ಪ್ರಾಣವನ್ನು ಬಿಡಲೆತ್ನಿಸಿರು...ವರು. ಇಂತಹ ಮನುಷ್ಯರುಗಳೊಡನೆ ನಾವು ಹೇಗೆ ಕೆಲಸ ...ಮಾಡಬೇಕೆಂಬುದು ನನಗೆ ತೋರುವುದಿಲ್ಲ. ಆದುದರಿಂದ ...ನೀವೇ ಈ ಸಮಸ್ಯವನ್ನು ಪರಿಷ್ಕರಿಸಬೇಕೆಂದು ಗಾಂಧಿಯವ...ರನ್ನು ಕೋರಿರುವಲ್ಲಿ ಅದು ತಮ್ಮ ಕೈಲಾಗುವುದಿಲ್ಲವೆಂದು ...ಅವರು ಹೇಳಿದರು. ಇಂತಹ ಸ್ಥಿತಿಯಲ್ಲಿ ನಾವು ತಗ್ಗಿ ನಡೆದರೆ ...ಕಡೆಗೆ ಇದರ ಪರ್ಯವಸಾನವೇನಾಗುವುದು ?" ಎಂದು ಜೆ. ಎ. ...ಸ್ಯಾಂಡರ್ಸ್‌ರವರು ಲಂಡನ್ನಿನ ನ್ಯೂಸ್ ಕ್ರಾನಿಕಲ್ ಪತ್ರಿಕೆಯಲ್ಲಿ ...ಪ್ರಕಟಿಸಿರುತ್ತಾರೆ.

ಮಹಾತ್ಮರ ಉತ್ತರ

ನಿಮ್ಮ ಲೇಖಕ್ಕಾಗಿ ವಂದಿಸುತ್ತೇನೆ. ಅಮೆರಿಕೆಯವರು ...ನ್ನ ಅಭಿಪ್ರಾಯವನ್ನು ತಿಳಿದುಕೊಳ್ಳದಿರುವುದರಲ್ಲಿ ಆಶ್ಚರ್ಯ...ವಿಲ್ಲ. ಪ್ರಪಂಚವು ದಿಗ್ಭ್ರಮೆ ಹೊಂದುವಂತೆ ವರ್ತಿಸುವುದು ...ನ್ನ ದುರದೃಷ್ಟವೊ ಅದೃಷ್ಟವೊ ನನಗೆ ತಿಳಿಯದು. ಹೊಸ ...ಪ್ರಯೋಗಗಳಾಗಲಿ, ಹಳೆಯವಾದರೂ ಹೊಸ ವಿಧಾನವನ್ನು ...ಅವಲಂಬಿಸಿರುವವಾಗಲಿ ಆಶ್ಚರ್ಯವನ್ನುಂಟುಮಾಡುವುದು ಸಹಜ...ವಾಗಿಯೇ ಇದೆ. ಮರ್ಯಾದೆಯಿಂದ ನಾನು ಪ್ರಭುತ್ವದವರಿಗೆ ...ಬರೆದ ಕಾಗದದಲ್ಲಿ ಪ್ರಸ್ತುತ ವಿಷಯವನ್ನು ತಿಳಿಸಿದ್ದೆನು. ...ಜೈಲು ನಿಬಂಧನೆಯ ಪ್ರಕಾರ ಹೊರಗಿನ ಪ್ರಪಂಚಕ್ಕೆ ತಿಳಿಸ...ಬಾರದೆಂದುದರಿಂದ ನಾನು ಆ ರೀತಿ ಮಾಡಿದೆನು. ಈಗ ನಡೆಯುತ್ತಿ...ರುವ ಸಮಾಧಾನದಿಂದ ಅಸ್ಪೃಶ್ಯರಿಗೆ ಬ್ರಿಟಿಷ್ ನಿರ್ಣಯಕ್ಕಿಂತ ...ಹೆಚ್ಚು ಪ್ರಾತಿನಿಧ್ಯವು ಸಿಕ್ಕುವುದು. ಅಸ್ಪೃಶ್ಯರಲ್ಲನೇಕರು ...ನನ್ನಂತೆಯೇ ಅಭಿಪ್ರಾಯಪಟ್ಟಿರುತ್ತಾರೆಂದು ನಾನು ತಿಳಿದೇ ...ಈ ಉಪವಾಸ ವ್ರತವನ್ನಾರಂಭಿಸಿರುವೆನು. ಅಸ್ಪೃಶ್ಯನಾಯಕ...ರಲ್ಲಿ ಅನೇಕರು ನನ್ನ ಮನೋಭಾವವನ್ನು ಪುಷ್ಟೀಕರಿಸುತ್ತಿ...ರುವರು. ನಿಮ್ಮ ಜನರ ನಾಯಕರೊಡನೆ ಸಾಧ್ಯವಾದ ಮಟ್ಟಿ...ಗೆ ನನ್ನ ನಿಯಮಕ್ಕೆ ಭಂಗಬಾರದಂತೆ ಒಪ್ಪಂದಮಾಡಲು ...ಪ್ರಯತ್ನಿಸುತ್ತಿರುವೆನು. ನಿಮ್ಮ ಜನನಾಯಕರುಗಳಿಗಿಂತ ...ನಾನೇ ಆ ಜನ್ಮದಲ್ಲಿರುವ ಕಷ್ಟನಷ್ಟಗಳನ್ನು ಅರಿತುಕೊಂಡಿರು...ವೆನೆಂದು ಹೇಳಿದಲ್ಲಿ ಅಹಂಕಾರವೆಂದು ತಿಳಿಯಬಾರದು.

ಜನ್ಮತಃ ನಾನು ಸವರ್ಣನಾಗಿದ್ದರೂ ಇಚ್ಛಾಮಾತ್ರದಿಂದ ...ವರ್ಷಗಳಿಂದಲೂ ಅವರ್ಣನಾಗಿಯೇ ಇರುತ್ತೇನೆ. ನನ್ನ ...ರಾಜಕೀಯವೆಲ್ಲವೂ ಮತದಿಂದುಂಟಾದುದೆಂದು ಅಮೆರಿಕೆಯ...ವರು ತಿಳಿದುಕೊಳ್ಳಬೇಕು. ನಾನು ಉಪವಾಸ ಮಾಡಿ ಸಾಯ...ಬೇಕೆಂಬುದು ದೇವರ ಇಚ್ಛೆಯಾಗಿದ್ದಲ್ಲಿ ನನ್ನ ರಾಜಕೀಯ ನಾಯಕತ್ವವು ಕೂಡ ಹೋಗಲೇಬೇಕು. ನನ್ನ ತ್ಯಾಗದಿಂದ ಜಾತೀಯತೆಯು ಮತ್ತಿಷ್ಟು ಬಲಪಡುವುದಲ್ಲದೆ ನಾಶವಾಗುವುದಿಲ್ಲ. ಭಾರತೀಯರು ನನ್ನ ಸಂಕಲ್ಪವು ಸರಿಯೆಂದೊಪ್ಪಿಕೊಂಡಿರುತ್ತಾರೆ. ನನ್ನೀ ತಪಸ್ಸಿನಿಂದ ನಿಜವಾದ ಸ್ವಪರಿಪಾಲನವು ಸಮೀಪಗತವಾಗುವುದಲ್ಲದೆ ದೂರವಾಗುವುದಿಲ್ಲ. ದೇಹವಾಗಲಿ ಮನಸ್ಸಾಗಲಿ ಚಲಿಸದೆಯೇ ನಾನು ಈ ಉಪವಾಸ ವ್ರತವನ್ನು ಸಫಲಗೊಳಿಸಿದಲ್ಲಿ ಜಾತೀಯತೆಗೆ ಇತೋಪ್ಯಧಿಕ ಬಲ ಬರುವುದು. ಆದುದರಿಂದ ನಾನು ಉಪವಾಸಮಾಡುತ್ತ ಪ್ರಾಣವನ್ನುಳಿಸಿಕೊಂಡಿರುವ ಪ್ರತಿ ದಿನದಲ್ಲೂ ಸ್ವರಾಜ್ಯವನ್ನು ಸಮೀಪಗತವನ್ನಾಗಿ ಮಾಡುವೆನು. ಅಸ್ಪೃಶ್ಯತಾ ವಿಷಯದಲ್ಲಿ ನಾನು ಸಾಯಲು ಸಿದ್ಧನಾಗುವುದು ಭಾರತ ದೇಶಕ್ಕೆಲ್ಲ ಶ್ರೇಯಸ್ಸನ್ನು ಕೋರುವುದಕ್ಕಾಗಲ್ಲದೆ ಅನ್ಯಥಾ ಅಲ್ಲವು. ಅಸ್ಪೃಶ್ಯತಾ ನಿರ್ಮೂಲನವು ಸ್ವರಾಜ್ಯ ಸಂಪಾದನೆಯಲ್ಲಿ ಮುಖ್ಯಾಂಶವಾಗಿರುತ್ತದೆ. ಎಷ್ಟು ನೀಚನಾಗಿದ್ದರೂ, ಪಾಪಿಯಾಗಿದ್ದರೂ ಸ್ವರಾಜ್ಯವೆಂಬ ದಿವ್ಯೌಷಧವನ್ನು ಸೇವಿಸಿದರೆ ಅಭಿವೃದ್ಧಿ ಹೊಂದುವಂತೆ ಮಾಡಬೇಕೆಂಬುದೇ ನನ್ನ ಆಶಯವು. ನನ್ನ ಮತತತ್ತ್ವವು ಅಖಂಡವು. ಆದರೆ ಬಹಳ ವ್ಯಾಪಕವಾಗಿರುವ ಹಿಂದುಮತಕ್ಕಾಗಿ ನಾನು ನನ್ನ ಧರ್ಮವನ್ನು ನಂಬೇಂಸುತ್ತೇನಾದರೂ ಸ್ವಮತಕ್ಕೆ ನ್ಯಾಯತಪ್ಪದವನಾಗುವುದು ನಿಶ್ಚಯವು. ನನ್ನ ತ್ಯಾಗದಿಂದ ಮಾನವಕೋಟಿಯು ಅಸ್ಪೃಶ್ಯತಾ ಪಾಪದಿಂದ ವಿಮೋಚನವಾಗುವುದು. ಅಮೆರಿಕೆಯವರು ನನಗೆ ಬಹಳ ಸಹಾನುಭೂತಿಯನ್ನು ತೋರಿಸಿರುತ್ತಾರೆ. ಈಗಲೂ ಅವರು ನನ್ನ ತ್ಯಾಗತತ್ತ್ವವನ್ನು ಅರಿತುಕೊಂಡರೆ, ಅದರಿಂದ ಅವರಿಗೆ ವಿಶ್ವಾಸವು ಹುಟ್ಟಿದರೆ ಪ್ರಪಂಚಾಭಿಪ್ರಾಯವು ಇದಕ್ಕನುಕೂಲವಾಗುವುದು. ಪ್ರಪಂಚದ ಯಾವುದೂ ಒಂದು ಭಾಗಕ್ಕೆ ಅನ್ವಯಿಸುವ ವಿಷಯವೇ ಆಗಿದ್ದರೂ ನನ್ನ ತ್ಯಾಗಾರ್ಥವು ಪ್ರಪಂಚವೆಲ್ಲ ಶ್ರದ್ಧೆ ವಹಿಸುವಂತೆ ಮಾಡತಕ್ಕುದಾಗಿದೆ. ನನ್ನ ಜೀವಿತಾಂಶವನ್ನು ಯಾವ ರೀತಿಯಿಂದಲಾದರೂ ತಿಳಿದಿರುವವರು ನಾನು ಯಾವ ವ್ಯಕ್ತಿಗಾಗಲಿ ದೇಶಕ್ಕಾಗಲಿ ಹಾನಿಯನ್ನುಂಟುಮಾಡತಕ್ಕವನಲ್ಲವೆಂದು ನಂಬಿರುತ್ತಾರೆ. ನನ್ನ ಜಾತೀಯತೆಯೇ ಆಗಲಿ ಮತವಾಗಲಿ ಯಾರನ್ನೂ ಬಹಿಷ್ಕರಿಸುವುದಲ್ಲ; ಎಲ್ಲರನ್ನೂ ಒಟ್ಟಿಗೆ ಸೇರಿಸಿಕೊಳ್ಳುವುದು. ನಾನು ಮಾಡುವುದೆಲ್ಲ ನಿರ್ದೋಷವೆಂದು ನಾನು ಹೇಳಲಾರೆ. ಮಹಾಪ್ರಮಾದಗಳನ್ನು ಮಾಡಿರುತ್ತೇನೆಂದೇ ನಾನು ತಿಳಿದಿರುವೆನು. ಈಗಲೂ ಯಾವ ವ್ಯಕ್ತಿಗಾಗಲಿ ದೇಶಕ್ಕಾಗಲಿ ಯಾವ ಪ್ರಾಣಿಗಾಗಲಿ ದ್ವೇಷವನ್ನು ತೋರಿಸತಕ್ಕವನಲ್ಲ. ಅಂತಹ ಮನಸ್ಸೇ ನನಗಿಲ್ಲವು ಇತಿ ಗಾಂಧಿ.

ಒಳದೇಶದ ವೃತ್ತಾಂತಗಳು

ಮೈಸೂರು ಪ್ರಜಾಪಕ್ಷದ ಮೂರನೆಯ ಮಹಾಸಭೆಯು ತುಮಕೂರಿನಲ್ಲಿ ಮ|| ಕೆಂಪಹೊನ್ನಯ್ಯನವರ ಆಹ್ವಾನದ ಮೇಲೆ ಬರುವ ನವಂಬರ್ ತಿಂಗಳಿನೊಳಗೆ ನಡೆಸಲ್ಪಡುವುದಾಗಿ ತಿಳಿಯುತ್ತೇವೆ.

ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರಾದ ಮ|| ಹೆಬ್ಬಕರವರಿಗೆ ಹಕ್ಕಿನ ರಜವು ಕೊಡಲ್ಪಟ್ಟು ಅದು ಕಳೆದನಂತರ ಅವರು ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಡುವುದಾಗಿ ಗಾಳಿ ವರ್ತಮಾನವಿದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾಧಿವೇಶನವು ಬರುವ ಅಕ್ಟೋಬರ್ ತಾ|| 10 ನೆಯ ಸೋಮವಾರ ಮಧ್ಯಾಹ್ನ 12 ಘಂಟೆಗೆ ರಾಜಧಾನಿಯ ಜಗನ್ಮೋಹನ ಪ್ರಾಸಾದದ ಸಭಾಂಗಣದೊಳಗೆ ದಿವಾನರವರ ಅಧ್ಯಕ್ಷತೆಯಲ್ಲಿ ಆರಂಭವಾಗಿ ಪ್ರಾಯಶಃ 1 ವಾರದವರೆಗೆ ನಡೆಯುವುದು.

ಮದ್ದೂರು ಒಕ್ಕಲಿಗರ ಹಾಸ್ಟಲಿನ ಕಮಿಟಿಯವರು ತಮ್ಮ ಹಾಸ್ಟಲು ಸ್ಥಾಪನೆಗಾಗಿ ಸೋಮನಹಳ್ಳಿಯಲ್ಲಿರುವ ವಿಶಾಲವಾದ ಟ್ರಾವಲರ್ಸ್ ಬಂಗಲೆಯನ್ನು ಪ್ರಭುತ್ವದವರಿಂದ ಕ್ರಯಕ್ಕೆ ಪಡೆದುಕೊಂಡು ಅದರ ಆರಂಭೋತ್ಸವವನ್ನು ದಿವಾನ್ ಸರ್ ಮಿರ್ಜಯವರ ಹಸ್ತದಿಂದ ಈ ತಾ|| 30 ನೆಯ ಶುಕ್ರವಾರ ನೆರವೇರಿಸಲು ನಿಶ್ಚಯಿಸಿರುತ್ತಾರೆ.

ರಾಜಧಾನಿಯಲ್ಲಿ ಮಳೆಯಿಲ್ಲದೆ ಬಿಸಿಲಿನ ತಾಪವು ಹೆಚ್ಚಾಗಿರುವುದಾದರೂ ಬೆಳಗಿನ ವೇಳೆ ಹಿಮವು ಬೀಳುತ್ತಿರುವುದರಿಂದ ಚಳಿಯು ಹೆಚ್ಚಾಗಿರುತ್ತದೆ. ಇದರಿಂದ ನ್ಯುಮೋನಿಯಾರೋಗವು ತಲೆದೋರುವುದಲ್ಲದೆ ಪ್ಲೇಗುರೋಗವು ಪ್ರಬಲವಾಗುತ್ತಿದೆ. ಮಳೆಯಿಲ್ಲದೆ ರಾಗಿ ಪೈರು ಒಣಗುತ್ತಿರುವುದಕ್ಕಾಗಿ ರೈತರು ಚಿಂತಿಸುತ್ತ ಆಕಾಶವನ್ನೇ ನೋಡುತ್ತಿರುವರು.

ಮಹಾತ್ಮರ ಉಪವಾಸ ವ್ರತಾರಂಭ ದಿವಸವಾದ ಕಳೆದ ಸೋಮವಾರ ಬೆಂಗಳೂರಿನಲ್ಲಿರುವ ಶ್ರೀ ಕನ್ಯಕಾಪರಮೇಶ್ವರೀ ಮತ್ತೆ ಕೆಲ ದೇವಸ್ಥಾನಗಳಿಗೆ ಅಸ್ಪೃಶ್ಯರ ಪ್ರವೇಶಕ್ಕೆ ಅವಕಾಶ ಕೊಡಲ್ಪಟ್ಟಿದ್ದಿತು. ರಾಜಧಾನಿಯಲ್ಲಿ ಮಾತ್ರ ಯಾವ ದೇವಸ್ಥಾನಕ್ಕೂ ಪ್ರವೇಶಿಸಲು ಅಸ್ಪೃಶ್ಯರು ಪ್ರಯತ್ನಿಸಲಿಲ್ಲ, ಆದರೆ ನಂಜನಗೂಡಿನಲ್ಲಿ ಅವರ ಪ್ರವೇಶಕ್ಕೆ ಅಡ್ಡಿ ಪಡಿಸಿದುದರಮೇಲೆ ಕೊಂಚ ಗೊಂದಲವಾಯಿತೆಂದು ವರ್ತಮಾನ ಹರಡಿದೆ. ಇದರ ನಿಜಾಂಶವಿನ್ನೂ ವ್ಯಕ್ತವಾಗಿಲ್ಲ.

ರಾಜಧಾನಿಯ ವರ್ತಕ ಮಂಡಲಿಗೆ ಕಿರೀಟಪ್ರಾಯರೂ, ದಾನಶೂರರೂ, ಪ್ರಭುಪ್ರಜಾಸನ್ಮಾನಿತರೂ, ಆರೋಗ್ಯವೃದ್ಧಕರೂ, ಜಾತಿಪ್ರಿಯರೂ ಆಗಿದ್ದ ಧರ್ಮಪ್ರಕಾಶ ರಾವ್ ಬಹದ್ದೂರ್ ಡಿ. ಬನುಮಯ್ಯನವರು ಪ್ಲೇಗುರೋಗಗ್ರಸ್ತರಾಗಿ ಈ ಸಾಯಂಕಾಲ ಕೈಲಾಸವಾಸಿಗಳಾದರೆಂದು ತಿಳುಹಲು ಅತ್ಯಂತ ಖೇದವಾಗುತ್ತದೆ. ಈ ಪುಣ್ಯಪುರುಷರ ಆತ್ಮಕ್ಕೆ ಶಾಂತಿಯನ್ನೂ ಅವರ ಪುತ್ರರುಗಳಿಗೂ ಬಂಧುಗಳಿಗೂ ದುಃಖ ಸಮಾಧಾನವನ್ನೂ ಕೋರುತ್ತೇವೆ.

ಪೊಲೀಸು ಸೂಪರಿಂಟೆಂಡೆಂಟರುಗಳಾದ ಮ|| ಎ. ಸಿ. ಮರಿಯಪ್ಪನವರು ಶಿವಮೊಗ್ಗ ಡಿ|| ಇಂದ ಬೆಂಗಳೂರು ಡಿಸ್ಟ್ರಿಕ್ಟಿಗೂ, ಮ|| ಎ. ದ್ವಾರಕಾನಾಥ್‌ರವರು ಹಾಸನ ಡಿ|| ಇಂದ ಶಿವಮೊಗ್ಗ ಡಿ|| ಗೂ, ಮ|| ಎಚ್. ಸಿದ್ಧರಾಜ ಅರಸಿನವರು ಫ್ರೆಂಚ್‌ರಾಕ್ಸ್ ಸರ್ಕಲ್ಲಿನಿಂದ ಹಾಸನ ಡಿ|| ಗೂ ವರ್ಗಾಯಿಸಲ್ಪಟ್ಟು ರಜದಮೇಲಿರುವ ಅಸಿಸ್ಟೆಂಟ್ ಕಮಿಷನರು ಮ|| ಆರ್. ತಮ್ಮಾಜಿರಾಯರು ಫ್ರೆಂಚ್‌ರಾಕ್ಸ್ ಸರ್ಕಲ್ಲಿನ ಪೊ|| ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಕಳೆದ ತಾ|| 17 ನೆಯ ಶನಿವಾರ ಸಾಯಂಕಾಲ ರಾಜಧಾನಿಯ ಟೌನ್ ಹಾಲಿನೊಳಗೆ ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮ|| ಬಿ. ಕೇಶವಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಕ್ಷಯರೋಗ ಚಿಕಿತ್ಸಾ ನಿಪುಣರಾದ ಮದ್ರಾಸಿನ ಡಾ|| ಸಿ. ಮುತ್ತಯ್ಯನವರು ಕ್ಷಯರೋಗೋತ್ಪತ್ತಿಯ ಕಾರಣ, ಲಕ್ಷಣ ಮತ್ತು ನಿವಾರಣೋಪಾಯಗಳನ್ನೂ, ಆರೋಗ್ಯ ವಿಚಾರವನ್ನೂ, ಮಿಲ್ಲಿನಲ್ಲಿ ನುಣುಪಾಗಿ ತಯಾರಾಗುವ ಅಕ್ಕಿಯಿಂದ ಉಂಟಾಗತಕ್ಕ ಕೆಡಕನ್ನೂ, ಈ ಅಕ್ಕಿಯನ್ನು ತ್ಯಜಿಸಬೇಕಾದ ಆವಶ್ಯಕತೆಯನ್ನೂ ಕುರಿತು ಬಹಳ ಸರಸವಾಗಿಯೂ ಶ್ಲಾಘ್ಯವಾಗಿಯೂ ಉಪನ್ಯಾಸ ಮಾಡಿದರು.

ರಾಜಧಾನಿಯ ವಾಣೀವಿಲಾಸ ರೋಡಿನಲ್ಲಿರುವ ಮ|| ರಾ|| ಕ್ಯಾತನಹಳ್ಳಿ ಸಿದ್ಧಲಿಂಗಯ್ಯನವರ ವೀರಶೈವ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳು ಶ್ರೀ ಗಣಪತಿ ಮಹೋತ್ಸವವನ್ನು ಕಳೆದ ತಾ|| 22 ರಲ್ಲಿ ಸಂಗೀತ ವಿದ್ವಾನ್ ಮ|| ಸದಾಶಿವಪ್ಪನವರ ಮತ್ತು ಮ|| ಮನಮೋಹನ ಹಿಂದ್ರರವರ ಸಂಗೀತದಿಂದಲೂ, ತಾ|| 23 ರಲ್ಲಿ ಬ್ರ|| ಶ್ರೀ|| ಶಿವಕಥಾ ಪಂಡಿತ ಸಿಂಹ ಶಿರೋಮಣಿ ಶಿವಯ್ಯಶಾಸ್ತ್ರಿಗಳವರಿಂದ ಚೊಕ್ಕನಯನಾರರವರ ಕಥಾಕಾಲಕ್ಷೇಪದಿಂದಲೂ ತಾ|| 24 ರಲ್ಲಿ ಪಾಠಶಾಲಾ ವಿದ್ಯಾರ್ಥಿಗಳ ಉಪನ್ಯಾಸಗಳಿಂದಲೂ ನೆರವೇರಿಸಿ ತಮ್ಮ ದೈವಭಕ್ತಿಯನ್ನು ಪ್ರದರ್ಶಿಸಿದರು.

ಕಳೆದ ತಾ|| 11 ನೆಯ ಭಾನುವಾರ ಚನ್ನಪಟ್ಟಣದಲ್ಲಿ ಗಣಪತಿಯನ್ನು ಉತ್ಸವಪೂರ್ವಕವಾಗಿ ಕೆರೆಗೆ ತೆಗೆದುಕೊಂಡು ಹೋಗುತ್ತಿದ್ದಾಗ್ಗೆ ಹಿಂದು ಮಹಮ್ಮದೀಯರಿಗೆ ಕಲಹ ನಡೆದು ಪರಸ್ಪರ ವೈಷಮ್ಯವುಂಟಾಗಿರುವುದರಮೇಲೆ ಪೊಲೀಸು ಇ|| ಜನರಲ್‌ರವರು ಕೆಲ ರಿಜರ್ವ್ ಪೊಲೀಸಿನವರನ್ನು ಕರೆದುಕೊಂಡು ಚನ್ನಪಟ್ಟಣಕ್ಕೆ ಹೋಗಿದ್ದರೆಂದು ಬೆಂಗಳೂರಿನ ವೀರಕೇಸರಿ ಮತ್ತು ಬೊಂಬಾಯಿನ ಟೈಮ್ಸ್ ಆಫ್ ಇಂಡ್ಯಾ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಚನ್ನಪಟ್ಟಣದಲ್ಲಿ ಯಾವ ಗೊಂದಲವೂ ನಡೆಯಲಿಲ್ಲವೆಂದೂ ರಿಜರ್ವ್ ಪೊಲೀಸಿನವರು ಅಲ್ಲಿಗೆ ಹೋಗಿರಲಿಲ್ಲವೆಂದೂ ಪಬ್ಲಿಸಿಟಿ ಆಫೀಸರು ಪ್ರಕಟಿಸಿರುತ್ತಾರೆ.

ರಾಜಧಾನಿಯ ದೊಡ್ಡಪೇಟೆ ಗೋಳೂರು ಸುಬ್ಬಣ್ಣನವರ ಬೀದಿಯಲ್ಲಿರುವ ಚಿಲ್ಲರೆಯಂಗಡಿ ಮ|| ಎಂ. ಎನ್. ವೀರಣ್ಣನವರು ಕಳೆದ ಸೋಮವಾರ ರಾತ್ರಿ ಶ್ರೀ ಗಣಪತಿಯ ಮಂಗಳಾರತ್ಯುತ್ಸವವನ್ನೂ, ಅಭಿನವ ವಾಲ್ಮೀಕಿ ಹರಿಕಥಾ ಕೇಸರಿ ವೇ|| ಬ್ರ|| ಶ್ರೀ|| ಪುಟ್ಟಣ್ಣಭಾಗವತರಿಂದ ಸತಿ ಸುಲೋಚನಾ ಕಥಾಕಾಲಕ್ಷೇಪವನ್ನೂ ನಡೆಯಿಸಿ ಆಹ್ವಾನಿತರಾಗಿದ್ದ ನೂರಾರು ದೊಡ್ಡಮನುಷ್ಯರುಗಳನ್ನು ಗಂಧ ಪುಷ್ಪ ತಾಂಬೂಲ ಮತ್ತು ಸ್ವಾಮಿ ಪ್ರಸಾದ ವಿನಿಯೋಗದಿಂದ ಸತ್ಕರಿಸಿದರಲ್ಲದೆ ಮೂರನೆಯ ದಿನ ನೂರಾರು ಬಡಬಗ್ಗರಿಗೆ ಯಥೇಚ್ಛವಾಗಿ ಅನ್ನದಾನವನ್ನು ಮಾಡಿ ತಮಗಿರುವ ಸ್ವಾಮಿಭಕ್ತಿಯನ್ನೂ ಬಡವರ ಮೇಲಿರುವ ದಯಾಪರತೆಯನ್ನೂ ವ್ಯಕ್ತಪಡಿಸಿದರು.

ರಾಜಧಾನಿಯ ಇರ್ವಿನ್ ರೋಡಿನಲ್ಲಿರುವ ಮ|| ಮೇಸ್ತ್ರಿ ತಿಮ್ಮಯ್ಯಾಚಾರ್ಯರ ಕುಮಾರರು ಮ|| ಕಂಟ್ರಾಕ್ಟರ್ ಯಾಲಕ್ಕಾಚಾರ್ಯರು ಸ್ವಗೃಹದಲ್ಲಿ ಕಳೆದ ಶನಿವಾರ ಸಾಯಂಕಾಲ 5 ರಿಂದ ರಾತ್ರಿ 9 ಘಂಟೆಯವರೆಗೆ ಶ್ರೀ ಗಣಪತಿ ಮಂಗಳಾರತಿಯನ್ನೂ ಮ|| ಗಳಾದ ಮಾಯಗೌಡರ ಭಾರತಪಠನ ಮತ್ತು ಲಿಂಗಣ್ಣನವರ ವ್ಯಾಖ್ಯಾನಗಳಿಂದಲೂ, ಶ್ರೀಮತಿ ಕಮಲಾಂಬಾಳ್‌ರವರ ಸಂಗೀತ, ವಿದ್ವಾನ್ ಎ. ಕೆ. ಸುಬ್ಬರಾಯರ ಕೊಳಲು, ಆಸ್ಥಾನ ವಿದ್ವಾನ್ ಶಿವರುದ್ರಪ್ಪನವರ ಪಿಟೀಲು ಮತ್ತು ವಿದ್ವಾನ್ ಮೂಗಯ್ಯನವರ ಮೃದಂಗವಾದನಗಳಿಂದಲೂ ಬಹಳ ವಿಜೃಂಭಣೆಯಿಂದ ನಡೆಯಿಸಿ ಆಹೂತರಾಗಿದ್ದ ನೂರಾರು ದೊಡ್ಡಮನುಷ್ಯರುಗಳನ್ನು ಉಪಾಹಾರದಿಂದಲೂ ಗಂಧ ಪುಷ್ಪ ತಾಂಬೂಲ ಮತ್ತು ಸ್ವಾಮಿ ಪ್ರಸಾದ ವಿನಿಯೋಗದಿಂದಲೂ ಸತ್ಕರಿಸಿದರು.

ಮ|| ಗಾಂಧಿಯವರ ಮನೋಭಾವ

(ಸಿ. ಎಫ್. ಆಂಡ್ರೂಸ್‌ರವರಿಂದ.)

ಭಾರತ ದೇಶದಲ್ಲಿ ವ್ಯಾಪ್ತವಾಗಿರುವ ದಾರಿದ್ರ್ಯವು ರಾಜಕೀಯದೊಳನದ ರಹಸ್ಯವಾಗಿರುತ್ತದೆ. ಲಂಡನ್ನಿನಲ್ಲಿ ಜರುಗಿದ ರೌಂಡುಟೇಬಲು ಕಾನ್ಫರೆನ್ಸಿನಲ್ಲಿ ಈ ವಿಷಯವನ್ನು ಕುರಿತು ಪ್ರಸ್ತಾಪಿಸಿದವರು ಮಹಾತ್ಮರೊಬ್ಬರೇ. ಪರಮ ದರಿದ್ರರ ಪ್ರತಿನಿಧಿಯಾಗಿ ತಾವು ಆ ಸಭೆಗೆ ಬರುತ್ತಿರುವುದಾಗಿ ಮಹಾತ್ಮರು ಹೇಳಿದರು. ಭಾರತೀಯರಲ್ಲಿ ಅಗಣಿತ ಸಂಖ್ಯಾಕರು ಹಳ್ಳಿಹಳ್ಳಿ ಗುಡಿಸಲುಗಳಲ್ಲಿ ಹಳ್ಳಿಗರು ಅನುಭವಿಸುತ್ತಿರುವ ದಾರಿದ್ರ್ಯದ ...

ಹೀನವಾಗಿರುವುದೆಂದೂ ತಿಳಿಸಿದರು. ಈ ವಿಧವಾಗಿ ಮಾನವಜಾತಿಯಲ್ಲಿ ೩ ಭಾಗದ ಜನರು ಭಾರತದೇಶದ ಹಳ್ಳಿಗಳೊಳಗೆ ದರಿದ್ರಾವಸ್ಥೆಯಲ್ಲಿರುತ್ತಾರೆ.

ಮಹಾತ್ಮರ ಮಾತಿನಲ್ಲಿ ಕೊಂಚವೂ ಅತಿಶಯೋಕ್ತಿಯಿಲ್ಲವು. ಏಕೆಂದರೆ, ಭಾರತದೇಶದ ದರಿದ್ರರಲ್ಲಿ ಮಹಾತ್ಮರು ಒಬ್ಬರಾಗಿ ಸೇರಿಕೊಂಡಿರುವರು. ಅವರು ಅಸ್ಪೃಶ್ಯರಲ್ಲಿ ಸೇರಿಕೊಂಡಿರುತ್ತಾರೆಂದು ಹೇಳಬಹುದು. ಅವರ ಆಹಾರ, ವೇಷ, ನಡವಳಿಕೆಗಳು ದರಿದ್ರರಿಗೂ ಮಹಾತ್ಮರಿಗೂ ಇರುವ ಸನ್ನಿಹಿತತ್ವವನ್ನು ವ್ಯಕ್ತಗೊಳಿಸುತ್ತವೆ. ಇತರರು ಶ್ರಮವಿಲ್ಲದ ರೀತಿಯಲ್ಲಿ ಪ್ರಯಾಣಮಾಡುತ್ತಿರುವಾಗ್ಗೆ ಮಹಾತ್ಮರು ಮಾತ್ರ ದರಿದ್ರರಂತೆ ಮೂರನೆಯ ತರಗತಿಯ ಬಂಡಿಯಲ್ಲಿ ಅತ್ಯಂತ ಕಷ್ಟವನ್ನನುಭವಿಸುತ್ತ ಪ್ರಯಾಣ ಮಾಡುವರು. ಈ ವಿಧವಾಗಿ ಇವರು ಸಂತೋಷದಿಂದ ಕಷ್ಟಜೀವಿಯಾಗಿರುತ್ತಾರೆ. ಒಂದು ಕಾಲದಲ್ಲಿ ಮಹಾತ್ಮರು ಐಶ್ವರ್ಯವಂತರಾಗಿದ್ದರು ಮತ್ತು ಸರ್ವ ಸೌಖ್ಯವನ್ನನುಭವಿಸುತ್ತಿದ್ದರು. ಆದರೆ ದರಿದ್ರರಿಗಾಗಿ ಸಕಲೈಶ್ವರ್ಯವನ್ನೂ ಸೌಖ್ಯವನ್ನೂ ತ್ಯಜಿಸಿಬಿಟ್ಟರು. ಬಹಳ ದುರ್ಬಲರಾದವರು ತೋರಿಸುತ್ತಿರುವ ಸಹನೆಯೂ, ಉತ್ಸಾಹವೂ ನೋಡುವವರಿಗೆ ಪರಮಾಶ್ಚರ್ಯವನ್ನುಂಟು ಮಾಡುತ್ತವೆ. ನನಗೀವಿಚಾರದಲ್ಲಿ ಸ್ವಲ್ಪ ಅನುಭವವಿರುತ್ತದೆ. ನಾನು ಇವರೊಡನೆ ಕೆಲ ಸಂದರ್ಭಗಳಲ್ಲಿ ಪ್ರಯಾಣಮಾಡಿರುತ್ತೇನೆ. ನಾನು ಮಾತ್ರವಲ್ಲದೆ ಯುವಕರೂ ಬಲಿಷ್ಠರೂ ಪ್ರಯಾಣದ ಶ್ರಮವನ್ನು ಸಹಿಸಲಾರೆವು. ಆದರೆ ಮಹಾತ್ಮರು ಮಾತ್ರ ಒಂದು ನಿಮಿಷವಾದರೂ ಕಾಲಹರಣಮಾಡದೆ ಪಟ್ಟಾಗಿ ಕಾರ್ಯಕ್ರಮವನ್ನು ಕೊನೆಸಾಗಿಸತಕ್ಕವರಾಗಿರುತ್ತಾರೆ.

ದರಿದ್ರರ ದುಸ್ಥಿತಿ

ಇಂದು ಚೈನಾದೇಶದಲ್ಲೂ ಭಾರತದೇಶದಲ್ಲೂ ರೈತರ ಅವಸ್ಥೆಯು ದುರ್ಭರವಾಗಿರುವುದರಿಂದಲೇ ವಿಪ್ಲವವುಂಟಾಗಬಹುದೆಂಬ ಭಯಹುಟ್ಟುತ್ತಿದೆ. ಪ್ರಪಂಚದಲ್ಲೆಲ್ಲಾ ವರ್ತನವು ಕೆಟ್ಟುಹೋಗಿರುವುದರಿಂದಲೇ ಯುರೋಪುಖಂಡಕ್ಕೆ ಕಷ್ಟಸಂಭವಿಸಿರುವುದು. ಪ್ರಪಂಚ ಪರಿಸ್ಥಿತಿಯು ಸಮಾಧಾನಕರವಾಗಿರುವಾಗಲೇ ಏಷ್ಯಾಖಂಡದಲ್ಲಿ ಲಕ್ಷೋಪಲಕ್ಷ ಪ್ರಜೆಗಳು ಬಹಳ ಕಷ್ಟದಿಂದ ಜೀವಿಸುತ್ತಿದ್ದರು. ಇನ್ನು ಈಗವರು ಬದುಕುವುದೇ ಕಷ್ಟವಾಗಿದೆ. ಚೈನಾದಲ್ಲಿ ರೈತರು ಸೋವಿಯಟ್ ಪದ್ಧತಿಯನ್ನನುಸರಿಸಿ ಭೂಸ್ವಾಮಿಗಳನ್ನು ಓಡಿಸಿಬಿಟ್ಟು ಅವರ ಭೂಮಿಗಳನ್ನು ಹಂಚಿಕೊಳ್ಳುತ್ತಿರುವರು. ಭಾರತದೇಶದಲ್ಲೆಲ್ಲಿ ನೋಡಿದರೂ ದಾರಿದ್ರ್ಯವೂ ದುಃಖವೂ ವ್ಯಾಪಿಸಿರುತ್ತದೆ.

ಈ ವಿಧವಾದ ದಾರಿದ್ರ್ಯದಲ್ಲಿ ಮುಳುಗಿರುವವರಿಗೆ ರೌಂಡುಟೇಬಲು ಸಭೆಯಲ್ಲಿ ಚರ್ಚಿಸಲ್ಪಡುತ್ತಿದ್ದ ಕ್ಲಿಷ್ಟವಾದ ವಿಷಯಗಳನ್ನು ಕುರಿತು ವಿವರಿಸಿ ಹೇಳುವುದು ನಿಷ್ಪ್ರಯೋಜನವು. ನಾನು ಲಂಡನ್ನಿನಲ್ಲಿ ಮಹಾತ್ಮರ ಜತೆಯಲ್ಲಿದ್ದಾಗ್ಗೆ ಸೆಂಟ್‌ಜೇಮ್ಸ್ ಅರಮನೆಯಲ್ಲಿ ನಡೆಯುತ್ತಿದ್ದ ಚರ್ಚೆಗಳು ಬರೀ ಬೂಟಾಟಿಕೆಯವೆಂದು ಅವರು ಹೇಳುತ್ತಿದ್ದರು. ಲಂಡನ್ನಿನ ಉತ್ತರದ ಕಡೆಯ ಭಾಗಕ್ಕೆ ಬಂದು ದರಿದ್ರರ ಮಧ್ಯೆ ಇದ್ದಾಗಲೇ ಅವರಿಗೆ ಯಥಾರ್ಥವು ಗೋಚರವಾಯಿತೆಂದು ಮಹಾತ್ಮರು ಎಷ್ಟೋ ಸಂದರ್ಭಗಳಲ್ಲಿ ನನಗೆ ಹೇಳಿರುತ್ತಾರೆ.

ಮಹಾತ್ಮರು ಪ್ರವರ್ತಕರಾಗಿ ಮಾತನಾಡಿದರು

ಕಳೆದ ವರ್ಷ ರೌಂಡುಟೇಬಲು ಮಹಾಸಭೆಯಲ್ಲಿ ಮಹಾತ್ಮರು ಮಾಡಿದ ಉಪನ್ಯಾಸಗಳು ಪ್ರಕಟವಾಗಿರುವುದರ ಭಾವವನ್ನು ಅನೇಕರು ಗ್ರಹಿಸಲಾರದೆ ಹೋದರು. ಮಹಾತ್ಮರ ಭಾವವು ಒಂದು ರೀತಿಯಾಗಿದ್ದಿತು ; ಇತರ ಭಾವವು ಮತ್ತೊಂದು ರೀತಿಯಾಗಿದ್ದಿತು. ಇತರ ಪ್ರತಿನಿಧಿಗಳು ಆರ್ಥಿಕ ವಿಚಾರದಲ್ಲಿರಬೇಕಾದ ಸಂರಕ್ಷಣೆಯನ್ನು ಕುರಿತು ಮಾತನಾಡುತ್ತಿದ್ದರು. ಆದರೆ ಮಹಾತ್ಮರು ಮಾತ್ರ ಹಳ್ಳಿಗರನ್ನು ಕೊಂಪರೆಪಡಿಸುತ್ತಿರುವ ವಿಧಾನವನ್ನು ವಿವರಿಸುತ್ತಿದ್ದರು. ಭಾರತ ಪ್ರಭುತ್ವದವರು ದಿಲ್ಲಿಯಲ್ಲಿ ವಿಶಾಲಭವನವನ್ನು ಕಟ್ಟಿಸಿ ಅಧಿಕ ಹಣವನ್ನು ಪ್ರಜೆರಿಂದ ತೆಗೆದುಕೊಂಡು ದರಿದ್ರರಾದ ಭಾರತೀಯರನ್ನು ಕಂಗೆಡಿಸುತ್ತಿದ್ದಾರೆಂದು ಅವರು ಎಷ್ಟೋ ಸಂದರ್ಭಗಳಲ್ಲಿ ಹೇಳಿದರು. ಗಾದಾ ಬಟ್ಟೆಯನ್ನು ಧರಿಸಿರುವ ಮಹಾತ್ಮರು ಒಬ್ಬ ಪ್ರವರ್ತಕನಂತೆಯೇ ಮಾತನಾಡಿದರು. ನಾವು ರಾಜಕೀಯಲಾಭವನ್ನು ಲಕ್ಷ್ಯದಲ್ಲಿಟ್ಟುಕೊಂಡು ರಾಜಕೀಯನೇತ್ರರಂತೆ ಅವರಿಗೆ ಪ್ರತ್ಯುತ್ತರವನ್ನು ಕೊಟ್ಟೆವು. ನೈತಿಕ ಬಲವುಳ್ಳ ಮಹಾತ್ಮರನ್ನು ನಾವು ಯಾವವಿಧದಲ್ಲೂ ಪ್ರತಿಭಟಿಸಲಾಗುವುದಿಲ್ಲ. ಸುಲಭವಾಗಿ ಅವರನ್ನು ನಮ್ಮ ಕಡೆಗೆ ತಿರುಗಿಸಿಕೊಳ್ಳಲು ಸಾಧನವೇನು ? ಅತಿವಾದಿಯೆಂದೂ, ರಾಜೀಪದ್ಧತಿಗೊಪ್ಪುವುದಿಲ್ಲವೆಂದೂ ಪ್ರತೀತಿಯುಂಟಾಗಿದ್ದರೂ ನಿಜವಾಗಿ ಉತ್ಕೃಷ್ಟಪುರುಷರಾದ ಪಂಡಿತ ಜವಹಾರಿಲಾಲರವರನ್ನು ಯಾವ ವಿಧದಿಂದಲಾದರೂ ಆಕರ್ಷಿಸಬಹುದು.

ಬರೀ ರಾಜಕೀಯಲಾಭದಿಂದ ಮಹಾತ್ಮರನ್ನು ಆಕರ್ಷಿಸಲಾಗುವುದಿಲ್ಲ. ಭಾರತದೇಶದಲ್ಲಿ ಗ್ರಾಮಸ್ಥರ ಬಡತನವನ್ನು ತಗ್ಗಿಸಲು ನಾವು ಅಂಗೀಕರಿಸಿದರೆ ಇವರು ವಶರಾಗುವರು. ಮಹಾತ್ಮರು ತಮ್ಮ ಕಾರ್ಯವನ್ನು ಕೊನೆಗಾಣಿಸುವಲ್ಲಿ ತಮ್ಮ ಮಾತಿಗೆ ಪ್ರತಿಯಿಲ್ಲದ ರೀತಿಯಲ್ಲಿ ಕಾರ್ಯಗಳನ್ನು ಮಾಡುತ್ತಿದ್ದ ದಿನಗಳಲ್ಲಿ ಕೂಡ ತಮ್ಮ ಖದ್ದರು ಕಾರ್ಯಕ್ರಮವನ್ನೂ ಮದ್ಯಪಾನ ನಿಷೇಧವಿಧಾನವನ್ನೂ ಪ್ರಭುತ್ವದವರು ಅಂಗೀಕರಿಸಿದ ಸಂಧಿಯನ್ನೂ ಕಡುಮರಿಸಿಕೊಳ್ಳಲು ಸಂಸಿದ್ಧರಾಗಿದ್ದಂತೆ ತಿಳಿಸಿದರು. ಒಂದುವೇಳೆ ಇಂತಹ ರಾಯಬಾರವನ್ನು ಭಾರತಪ್ರಭುತ್ವದವರಿಗೆ ತಿಳಿಸಿದ್ದೆನು. ಆದರೆ ಖಾದೀಪ್ರಸಾರವು ಲಾಂಕಷೈರು ಸೀಗೆಯ ಪರಿಶ್ರಮವನ್ನು ನಿರ್ಮೂಲನಗೊಳಿಸುವುದೆಂಬ ಭಯದಮೇಲೆ ಭಾರತಪ್ರಭುತ್ವದವರು ಇದಕ್ಕೊಪ್ಪಲಿಲ್ಲ. ಆದರೆ ಈಗ ಲಾಂಕಾಷೈರಿನವರು ತಮ್ಮ ಆಶಯವನ್ನು ಬಿಟ್ಟಿರುವರು. ಆದರೂ ಪ್ರಭುತ್ವದವರು ಖದ್ದರು ವಿಷಯದಲ್ಲಿ ಮಹಾತ್ಮರ ಸೂಚನೆಗಳನ್ನು ಪೂರ್ತಿಯಾಗಿ ಅಂಗೀಕರಿಸದಿದ್ದುದು ವಿಷಾದಕರವು. ಈ ವಿಷಯದಲ್ಲಿ ಮಹಾತ್ಮರ ಸೂಚನೆಯನ್ನು ಅಂಗೀಕರಿಸುವುದು ತಮ್ಮ ಪ್ರತಿಷ್ಠೆಗೆ ಭಂಗವೆಂದು ಇವರು ತಿಳಿದಿರುವುದಾಗಿ ತೋರುತ್ತದೆ.

ಕಾಂಗ್ರೆಸಿನವರೊಡನೆ ರಾಯಬಾರವನ್ನು ನಡೆಸದ ಹೊರತು ಭಾರತದೇಶದ ಸಮಸ್ಯೆಯು ಪರಿಷ್ಕಾರವಾಗುವುದಿಲ್ಲವೆಂದು ತಿಳಿದುಕೊಳ್ಳಬೇಕು. ಕಾಂಗ್ರೆಸಿನವರೊಡನೆ ರಾಯಬಾರವು ನಡೆಸಲ್ಪಡಬೇಕಾದರೆ ರಾಜಕೀಯ ವಿಷಯಗಳನ್ನು ಬಿಟ್ಟು ಆರ್ಥಿಕ ವಿಷಯವನ್ನು ಗುರ್ತಿಸಿ ಮುಖ್ಯವಾಗಿ ಆಲೋಚಿಸುವುದು ಆವಶ್ಯಕವು. ಕಾಂಗ್ರೆಸು ನಾಯಕರಲ್ಲಿ ಮುಖ್ಯರಾದ ಮಹಾತ್ಮರು, ಜವಹಾರಿಲಾಲರು, ವಲ್ಲಭಭಾಯಿ ಪಟೇಲರು, ಡಾಕ್ಟರ್ ಅನ್ಸಾರಿಯವರು ರಾಜಕೀಯ ಲಾಭಕ್ಕಿಂತ ಹಳ್ಳಿಗರ ದಾರಿದ್ರ್ಯವನ್ನು ಹೋಗಲಾಡಿಸುವುದೇ ಮುಖ್ಯವೆಂದು ತಿಳಿದಿರುವರು. ಕಾಂಗ್ರೆಸು ನಾಯಕರು ದರಿದ್ರರಿಗೋಸ್ಕರ ಪ್ರಯತ್ನಪಟ್ಟು ಕಾರಾಗೃಹಕ್ಕೆ ಹೋಗಿರುವರು. ದರಿದ್ರರು ಕಾಂಗ್ರೆಸು ನಾಯಕರನ್ನು ಪ್ರೀತಿಸಿ ಗೌರವಿಸುತ್ತಾರೆ. ಆದುದರಿಂದ ಕಾಂಗ್ರೆಸಿನವರೊಡನೆ ರಾಯಬಾರವು ನಡೆಯಬೇಕಾಗಿರುವುದು ಭಾರತ ಸಮಸ್ಯಾ ಪರಿಷ್ಕಾರಕ್ಕಲ್ಲವೆ ಅಷ್ಟೇ ಅಲ್ಲದೆ ಭಾರತದೇಶದ ಎಲ್ಲ ಪಕ್ಷದವರೂ ದೇಶಸೇವೆಮಾಡಿ ಕಾರಾಗೃಹಗಳಿಗೆ ಹೋದವರನ್ನು ಗೌರವಿಸುವರು. ಆದುದರಿಂದ ಕಾಂಗ್ರೆಸು ಕಾರ್ಯಕ್ರಮವನ್ನು ಕೆಲರು ಅಂಗೀಕರಿಸದಿದ್ದರೂ ಎಲ್ಲರೂ ಕಾಂಗ್ರೆಸಿನವರನ್ನು ಗೌರವಿಸದೆ ಇರಲಿಕ್ಕಿಲ್ಲ. ಮಿತವಾದಿಗಳು ಕೂಡ ಪ್ರಭುತ್ವ ಸಂಬಂಧವನ್ನು ಬಿಟ್ಟುಬಿಡುತ್ತಿರುವರು. ಆದುದರಿಂದ ನಿರೋಧವಿಧಾನಗಳಿಂದ ಪ್ರಭುತ್ವದವರು ಕಾಂಗ್ರೆಸಿಗೆ ಬಲವನ್ನುಂಟು ಮಾಡುತ್ತಿರುವರೆಂದೂ ಪಾಲಕರಿಗೂ ಪಾಲ್ಯರಿಗೂ ಹುಟ್ಟಿರುವ ಮನಸ್ತಾಪವನ್ನು ಹುಚ್ಚುಚ್ಚು ದೊಡ್ಡದಕ್ಕಾಗಿ ಮಾಡುತ್ತಿದ್ದಾರೆಂದೂ ತಿಳಿದುಕೊಳ್ಳಬೇಕು.

ಅಹಿಂಸೆ.

(ಬೋಲಸ್ಸ್ಯಾ ಯುಯುವರಿಂದ.)

(ಆಗಸ್ಟ್ ತಾ|| ೨೬ ರ ಸಂಚಿಕೆಯಿಂದ ಮುಂದುವರಿದುದು.)

ಸಮಸ್ತ ಭೂತಗಳನ್ನೂ ತನ್ನಂತೆಯೇ ಭಾವಿಸುವುದೂ, ಮನುಷ್ಯರಲ್ಲಿ ಪರಸ್ಪರ ಪ್ರೇಮವನ್ನೂ, ಸಮಷ್ಟಿಭಾವವನ್ನೂ ಶಕ್ತಿವಂಚನೆಯಿಲ್ಲದೆ ತೋರಿಸುವುದೂ ಪರಮೋತ್ಕೃಷ್ಟ ಧರ್ಮವೆಂದು ನೂರಾರು ವರ್ಷಗಳಿಂದಲೂ ನಡೆದುಕೊಂಡು ಬಂದಿರುವ ಮತ ಸಂಪ್ರದಾಯಗಳೇ ಅಲ್ಲದೆ ನಮ್ಮ ಹೇತು ಜ್ಞಾನವೂ ಹೃದಯವೂ ಸಾಕ್ಷ್ಯ ಕೊಡುತ್ತಿರುವವು. ಆದರೆ ದೂರ ದೃಷ್ಟಿಯಿಲ್ಲದ ಮನುಷ್ಯರಲ್ಲಿ ಅಂತಹ ಸಮಷ್ಟಿಭಾವವು ನೆಲಸಲು ಇನ್ನೂ ಕಾಲವು ಪರಿಪಕ್ವವಾಗಿಲ್ಲ. ಆದುದರಿಂದ ಅಂತಹ ಕಾಲ ಬರುವವರೆಗೂ ದೌರ್ಜನ್ಯ ಪದ್ಧತಿಗಳೇ ಅಂದರೆ ಕಾರಾಗೃಹಶಿಕ್ಷೆ, ಮರಣದಂಡನೆ ಮೊದಲಾದವುಗಳೇ ಶರಣ್ಯಗಳಾಗಿ ಕಂಡುಬರುವುವು. ಇದು ಬರೀ ಭ್ರಮೆ. ಈ ದಿವಸ ಹುಟ್ಟಿ ನಾಳೆ ಸಾಯುವವನು ಸಹಿತ ತಾನು ಬದುಕಿರುವ ಒಂದು ದಿನವಾದರೂ ಪ್ರಪಂಚಕ್ಕಾಗಿ ಹುಟ್ಟಿದ ಧರ್ಮಶಾಸನವೊಂದನ್ನಾದರೂ ಅನುಸರಿಸಿ ನಡೆದುಕೊಳ್ಳದಿರಲಾಗುವುದಿಲ್ಲ. ಆದರೆ ತಾನು ಏನುಮಾಡುತ್ತೇನೆಂದು ಪರೀಕ್ಷಿಸಿ ನೋಡುವುದಿಲ್ಲ. ತನಗೆ ಮಾತ್ರವೇ ಅಲ್ಲದೆ ಮನುಷ್ಯರೆಲ್ಲರಿಗೂ ಕ್ಷೇಮಕರವಾದ ನೀತಿ ಮಾರ್ಗವು ತನಗೆ ತಿಳಿಯುವುದೆಂದೂ, ಆವಶ್ಯಕವಿದ್ದಂತೆ ತಾತ್ಕಾಲಿಕವಾಗಿ ಧರ್ಮವನ್ನು ಒತ್ತಟ್ಟಿಗಿಟ್ಟು ದೌರ್ಜನ್ಯಪದ್ಧತಿಗಳನ್ನವಲಂಬಿಸುವುದು ತಪ್ಪಲ್ಲವೆಂದೂ ಹೇಳುತ್ತಿರುವನು. ಧರ್ಮವೀರರ ಹತ್ಯೆ, ಮತಕಕ್ಷಿಗೆ ಸಂಬಂಧಿಸಿದ ಚಿತ್ರವಧೆ, ವಿಪ್ಲವಕಾರರು ನಡೆಸುವ ಪಶುಹತ್ಯೆ, ಪ್ರಭುತ್ವಾಧಿಕಾರಿಗಳು ಮಾಡುವ ಘೋರ ಪ್ರಜಾ ಸಂಹಾರ ಇತ್ಯಾದಿ ಅನರ್ಥಗಳೆಲ್ಲ ಅಹಂಕಾರದಿಂದ ಹುಟ್ಟಿದ ಸಿದ್ಧಾಂತಗಳಿಂದಲೇ ಉಂಟಾಗುವವೆಂದು ಸ್ಪಷ್ಟವಾಗಿ ಕಂಡುಬಂದರೂ ದೌರ್ಜನ್ಯವನ್ನೇ ಸಮರ್ಥಿಸಲು ಆವನೆತ್ನಿಸುವನು. ಹೀಗೆ ಒಬ್ಬರಮೇಲೊಬ್ಬರು ಹಗೆಯನ್ನು ತೀರಿಸಿಕೊಳ್ಳಲು ಸಂಕಲ್ಪಸಿದ್ಧವಾದ ಎರಡು ಶತ್ರು ಪಕ್ಷಗಳು ನಮ್ಮ ಕಣ್ಣಿದಿರಿಗೇ ನಿಂತಿರುತ್ತವೆ. "ಲಾ ಆರ್ಡರು" ಅಂದರೆ ಧರ್ಮರಕ್ಷಣ ಪಕ್ಷವು ವಿಪ್ಲವ ಪಕ್ಷದ ಮೇಲೂ, ವಿಪ್ಲವಪಕ್ಷವು ಲಾ ಆರ್ಡರ್ ಪಕ್ಷದಮೇಲೂ ಧ್ವಜವೆತ್ತಿ ಯಾವಾಗೆಂದರೆ ಆಗ ಇದಿರ್ಗೊಂಡು ಕಾದಾಡಲು ಸಿದ್ಧವಾಗಿರುತ್ತವೆ. ಹೀಗೆಯೇ ಆಂಗ್ಲೇಯರು ಅಮೆರಿಕೆಯವರ ಮೇಲೂ, ಅಮೆರಿಕೆಯವರು ಆಂಗ್ಲೇಯರಮೇಲೂ, ಜರ್ಮನರು ಆಂಗ್ಲೇಯರಮೇಲೂ, ಆಂಗ್ಲೇಯರು ಜರ್ಮನರಮೇಲೂ, ಒಬ್ಬರಿಬ್ಬರು ಅಥವಾ ಇಬ್ಬರು ಮೂವರು ಒಟ್ಟಿಗೆ ಮಿತ್ರ ಮಂಡಲಿಯಾಗಿ ಸೇರಿಕೊಂಡು ಇತರ ಜಾತಿಯವರ ಮೇಲೆ ಧ್ವಜವನ್ನೆತ್ತಿ ರಣರಂಗಕ್ಕಿಳಿಯುವರು.

ದೇವರು ಕೊಟ್ಟಿರುವ ಸ್ಥಿರವಾದ ರಾಜಮಾರ್ಗವನ್ನು ಬಿಟ್ಟು, ಅಸ್ಥಿರವೂ, ಅಸಂಗತವೂ, ಮನುಷ್ಯ ಕಲ್ಪಿತವೂ ಆದ ಈ ಕೃತ್ರಿಮ ಮಾರ್ಗವನ್ನು ಕ್ರೈಸ್ತ ಭಕ್ತನು ಪ್ರವೇಶಿಸಲು ನ್ಯಾಯವಾದ ಕಾರಣವೇನೂ ಕಂಡುಬರುವುದಿಲ್ಲ. ಅನುಭವಸಿದ್ಧವಾದ ಧರ್ಮ ಮಾರ್ಗದಲ್ಲಿ ನಡೆಯಲು ಅಭ್ಯಾಸವುಳ್ಳವನು ಈ ಕೃತ್ರಿಮ ಪದ್ಧತಿಗಳಿಗೆ ವಶನಾಗಿ ಕೆಲಸ ಮಾಡುವುದು ಅಸಂಭವವು. ಅಂತಹ ಸಧರ್ಮಿಯ ಹೇತು ಜ್ಞಾನವನ್ನೂ, ಮನಸ್ಸನ್ನೂ ಈ ದೌರ್ಜನ್ಯ ಕಾರ್ಯಗಳ ಕಡೆ ಒಂದಾವೃತ್ತಿ ತಿರುಗಿಸಬಹುದು. ಒಂದು ಎಳೇ ಮಗುವನ್ನು ಹಿಂಸಿಸುವುದೂ, ಕೊಲ್ಲುವುದೂ ಸಾಧಾರಣವಾಗಿ ಯಾರಿಗೂ ಮನಸೊಪ್ಪದು. ಒಂದು ಶಿಶುಹತ್ಯದ ಮೂಲಕ ಸಾವಿರಾರು ಮನುಷ್ಯರ ಪ್ರಾಣವನ್ನು ಕಾಪಾಡಬಹುದೆಂದು ದೃಢಪಡಿಸಿದಾಗ್ಯೂ ಅಂತಹ ಕಾರ್ಯವನ್ನು ಮಾತ್ರ ಯಾರೂ ಮಾಡುವುದಿಲ್ಲ. ಅಂತೆಯೇ ಧನಲುಬ್ಧನಾಗಿ ಬದುಕಲು ಪಾಟುಪಡುವವನಿಗೆ ಕೆಲ ಕೆಲ ಕೆಲಸಗಳನ್ನು ಮಾಡಲು ಹೃದಯವು ಬಿಡದುಕೊಳ್ಳುವುದು. ಪ್ರಾಣದಂಡನವನ್ನು ವಿಧಿಸುವ ಕೋರ್ಟು ವಿಚಾರಣೆಯಲ್ಲಾಗಲಿ, ಯುದ್ಧಕ್ಕೆ ದಾರಿತೋರಿಸುವ ರಾಜಕೀಯ ಚರ್ಚೆಯಲ್ಲಾಗಲಿ, ಬರೀ ಯುದ್ಧಸನ್ನಾಹದಲ್ಲಾಗಲಿ ಭಾಗಿಯಾಗಲು ಸನ್ಮಾರ್ಗನಾರೂ ಸಮ್ಮತಿಸುವುದಿಲ್ಲ. ಆತನಿಗೆ ಅಸಹ್ಯವು ಹೇತು ಜ್ಞಾನ ಸಂಬಂಧವಾದ ತರ್ಕ ವಿಚಾರದಿಂದಲೇ ಏರ್ಪಟ್ಟದ್ದಲ್ಲವು. ಆ ಕೆಲಸವನ್ನು ತಾನು ಮಾಡಲಿಲ್ಲವೆಂದೂ, ಮಾಡಬಾರದೆಂದೂ ಸ್ವಭಾವಸಿದ್ಧವಾಗಿಯೇ ಅವನಿಗೆ ಗೊತ್ತಾಗುವುದು. ಶಾರೀರಕವಾಗಿ ಕೆಲ ಕಾರ್ಯಗಳನ್ನು ನೆರವೇರಿಸುವುದು ಹೇಗೆ ಅಸಂಭವವೋ ಹಾಗೆ ನೀತಿ ವಿಷಯಗಳಲ್ಲು ಕೂಡ ಕೆಲ ಕಾರ್ಯಗಳನ್ನು ಮಾಡುವುದು ಕಷ್ಟ. ಒಬ್ಬನು ಒಂದು ದೊಡ್ಡ ಬೆಟ್ಟವನ್ನು ಕೈಯಿಂದ ಮೇಲಕ್ಕೆತ್ತುವುದು ಹೇಗೆ ಅಸಂಭವವೋ ಹಾಗೆ ದಯಾಗುಣವುಳ್ಳವನು ಶಿಶುವಿನ ಪ್ರಾಣವನ್ನು ತೆಗೆಯುವುದು ಕೂಡ ಅಸಂಭವವು. ಅದೇ ವಿಧವಾಗಿ ಧರ್ಮಪರಾಯಣನಾದ ಯಾವ ಕ್ರೈಸ್ತನೂ ದೌರ್ಜನ್ಯ ಕಾರ್ಯದಲ್ಲಿ ಯಾವ ವಿಧದಲ್ಲೂ ಪ್ರವೃತ್ತನಾಗುವುದಿಲ್ಲ. ಅವನಿದಿರಿಗೆ ಅವನೀತಿ ಕಾರ್ಯದಿಂದುಂಟಾಗುವ ಪ್ರಯೋಜನವನ್ನು ಕುರಿತು ನಾವು ಎಷ್ಟು ಯುಕ್ತಿಯುಕ್ತವಾಗಿ ಹೊಗಳಿದರೇನು ಪ್ರಯೋಜನ ? ಆ ವಾದಗಳನ್ನು ಆತ ಎಷ್ಟು ಮಾತ್ರಕ್ಕೂ ಒಪ್ಪುವುದಿಲ್ಲ.

"ಪ್ರೇಮಸಿದ್ಧಾಂತವನ್ನೂ, ಅದನ್ನು ಅವಲಂಬಿಸಿರುವ ಅಹಿಂಸಾ ಸಿದ್ಧಾಂತವನ್ನೂ ಅನುಸರಿಸುವುದರಿಂದುಂಟಾಗುವ ಕಷ್ಟ ನಿಷ್ಠುರಗಳನ್ನೂ ನಷ್ಟವನ್ನೂ ಕಣ್ಣಾರ ನೋಡಿಕೊಂಡು ನಾವು ಸುಮ್ಮನಿರಬೇಕೆ ? ಒಬ್ಬ ದುಷ್ಟನು ಒಂದು ಮಗುವನ್ನು ಕೊಲ್ಲುವನು ನಮ್ಮ ಕಣ್ಣಿಗೆ ಬಿದ್ದಾಗ ನಾವೇನನ್ನು ಮಾಡಬೇಕು ? ಕೊಡಲಿ ಆ ಹಂತಕನನ್ನು ಕೊಂದ ವಿನಾ ಮಗುವನ್ನು ಕಾಪಾಡಲಾರನೆಂಬ ಅಧೈರ್ಯ ಹುಟ್ಟಿದಾಗ ನಾವು ಮಾಡತಕ್ಕದ್ದೇನು ? ಎಂದು ಕೆಲರು ಕೇಳುವರು.

ಇಂತಹ ಪ್ರಶ್ನೆ ಹುಟ್ಟಿದಾಗ ಮಗುವನ್ನು ಕಾಪಾಡುವುದಕ್ಕಾಗಿ ಹಂತಕನನ್ನು ಕೊಲ್ಲಬೇಕೆಂದು ಕೂಡಲೆ ನಮಗೆ ನಮ್ಮ ಮನಸ್ಸೇ ಉತ್ತರವನ್ನು ಕೊಡುವುದು. ಮಗುವಿನ ಪ್ರಾಣಸಂರಕ್ಷಣೆ ಮಾಡುವುದು ಅಗತ್ಯವುಂಟಾದಾಗ ಮಾತ್ರವಲ್ಲ, ನೆರೆ ರಾಜ್ಯವು ತನ್ನ ಸರಹದ್ದನ್ನು ಒತ್ತರಿಸಿ ನಮ್ಮ ರಾಜ್ಯದಲ್ಲಿ ಕೆಲ ಭಾಗವನ್ನು ಆಕ್ರಮಿಸಿದಾಗಲು ಕೂಡ ದೌರ್ಜನ್ಯವೇ ತಕ್ಕ ಪ್ರತಿಕ್ರಿಯೆಯೆಂದು ಹೇಳುತ್ತೇವೆ. ಯಾವ ಮಾರ್ಗಸ್ಥನಾದರೂ ನಮ್ಮ ತೋಟದ ಹಣ್ಣನ್ನು ಕದ್ದಾಗಲೂ ಅವನಿಗೆ ಬುದ್ಧಿ ಕಲಿಸಲು ದೌರ್ಜನ್ಯವೇ ತಕ್ಕುಪಾಯವೆಂದು ಖಂಡಿತವಾಗಿ ಹೇಳುತ್ತೇವೆ. ಇಷ್ಟು ನಿಸ್ಸಂದೇಹವಾಗಿ ನಾವು ಯಾವಾಗೆಂದರೆ ಆವಾಗ ದೌರ್ಜನ್ಯವನ್ನೇ ಸಮರ್ಥಿಸಲಿಕ್ಕೆ ಕಾರಣವೇನು ? ಯಾವಾಗಲೂ ಪ್ರತಿ ಸಣ್ಣ ಕಾರ್ಯದಲ್ಲೂ ನೀವು ದೌರ್ಜನ್ಯವನ್ನು ನಡೆಸುತ್ತಿರುವುದೇ ಇದಕ್ಕೆ ಕಾರಣವು. ಸಶೇಷ.

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂಪಾದಕ.

ರಾಜಧಾನಿಯ ಪ್ರಸನ್ನ ನಂಜುಂಡೇಶ್ವರನದೊಂದು ಪಕ್ಷಪಾತ ಮತ್ತು ಕೀಟಲೆ.

ಬೆಂಕಿಯು ಬೇರೆ ಬೇರೆ ಭಾಷೆಗಳ ಬೇರೆ ಬೇರೆ ಶಬ್ದಗಳಿಂದ ಕರೆಯಲ್ಪಟ್ಟರೂ ವಸ್ತುತಃ ಅದರ ಉಷ್ಣಗುಣವು ಬದಲಾಯಿಸದೆ ಅದು ಹೇಗೆ ಎಲ್ಲರಲ್ಲಿಯೂ ಏಕರೂಪವಾಗಿರುವುದೋ ಹಾಗೆಯೇ ದೇವರಿಗೆ ಬೇರೆ ಬೇರೆ ಭಾಷೆಗಳಲ್ಲಿ ಮತ್ತು ಮತಗಳಲ್ಲಿ ಬೇರೆ ಬೇರೆ ಹೆಸರುಗಳಿದ್ದರೂ ದೇವರೊಬ್ಬನೇ ಎಂದೂ, ಅವನಿಗೆ ಒಬ್ಬನು ಹೆಚ್ಚು ಒಬ್ಬನು ಕಡಿಮೆಯೆಂಬ ಭೇದಭಾವವಿಲ್ಲದೆ ಅವನು ಸರ್ವಸಮದೃಷ್ಟಿಯುಳ್ಳವನೆಂದೂ ಮನುಷ್ಯರು ಮಾಡುವ ಸಕಲ ಕಾರ್ಯಕಲಾಪಗಳೂ ದೇವರ ಪ್ರೇರಣೆಯಿಂದಾಗುವುವೆಂದೂ "ತೇನ ವಿನಾ ತೃಣಮಪಿ ನ ಚಲತಿ—ಅವನಿಲ್ಲದೆ ಹುಲ್ಲೂ ಅಲ್ಲಾಡುವುದಿಲ್ಲ" ಎಂದೂ ಸಕಲ ವೇದ ಶಾಸ್ತ್ರ ಶ್ರುತಿ ಸ್ಮೃತಿ ಪುರಾಣೇತಿಹಾಸಗಳು ಘಂಟಾಘೋಷವಾಗಿ ಹೇಳುತ್ತಿವೆಯಷ್ಟೆ. ಅಂದಮೇಲೆ ಪ್ರಸನ್ನನಂಜುಂಡೇಶ್ವರನೆಂಬ ಹೆಸರಿನಿಂದ ಕರೆಯಲ್ಪಡುವ ಎಲೈ ದೇವನೆ ! ನಿನಗೆ ಒಂದು ಪಂಗಡದವರಲ್ಲಿ ಪಕ್ಷಪಾತವೂ ಅಭಿಮಾನವೂ ಬೇರೆ ಪಂಗಡದವರಲ್ಲಿ ಪಕ್ಷಪಾತರಾಹಿತ್ಯವೂ ನಿರಭಿಮಾನವೂ ಏಕೆ ? ಸುಮ್ಮನಿದ್ದವನಿಗೆ ಇಂತಹ ಕೆಲಸವನ್ನು ಮಾಡೆಂದು ಪ್ರೇರೇಪಿಸಿ ಬಳಿಕ ಅವನಿಗೆ ಕೆಡಕನ್ನು ಮಾಡುವುದು ನಿನ್ನ ಕೀಟಲೆಯಲ್ಲವೇ ? ಕೊರಲ್ಕೊಯ್ಯತನವಲ್ಲವೇ ?

ಎಲೈ ಪ್ರಸನ್ನನಂಜುಂಡೇಶ್ವರನೆ ! ಹಾಗೆ ನಾನೇನು ಮಾಡಿದೆನೆಂದು ವಿಯೋ ? ಇದೋ ಹೇಳುತ್ತೇನೆ ಕೇಳು,—ರಾಜಧಾನಿಯ ಸಂತೇಪೇಟೆಯಲ್ಲಿ ನಿನ್ನದೊಂದು ಆಲಯವಿರುವುದಷ್ಟೆ ? ಅಲ್ಲಿ ಈಗ್ಗೆ ಕೆಲವು ದಿನಗಳ ಹಿಂದೆ ಸುಪ್ರಸಿದ್ಧ ಭಾರತವಾಚಕರಾದ ಮ|| ಮಾಯಿಗೌಡರು (ಒಕ್ಕಲಿಗರು) ಭಾರತ ಪಠನವನ್ನು ಮಾಡುತ್ತಿದ್ದುದುಂಟೋ ? ನೀನಿಲ್ಲದೆ ಹುಲ್ಲು ಅಲ್ಲಾಡುವುದಿಲ್ಲವೆಂದೂ ಮನುಷ್ಯನು ಮಾಡುವ ಎಲ್ಲಾ ಕೆಲಸಗಳಿಗೂ ನೀನು ಪ್ರೇರಕನೆಂದೂ ಹೇಳಿದಮೇಲೆ ಅವರು ನಿನ್ನ ಆಲಯದಲ್ಲಿ ಭಾರತವನ್ನು ಪಠಿಸುವಂತೆ ಪ್ರೇರಣೆಮಾಡಿದವನು ನೀನು ತಾನೆ ? ಬಳಿಕ ಅಲ್ಲಿಗೆ ಹೋಗಿ ಉತ್ತಮರೆಂದು ಹೇಳಿಕೊಳ್ಳುವ ಜನರನ್ನು ಬೆನ್ನುಪಟ್ಟಿ ಎಳೆದು ಮುಜರಾಯಿ ಇಲಾಖೆಗೆ ಸೇರಿದ ಈ ದೇವಾಲಯದಲ್ಲಿ ಬ್ರಾಹ್ಮಣರಲ್ಲದ ಇತರರಾರೂ ಪಠನಮಾಡಕೂಡದೆಂದು ಅವರಿಂದ ಆಂದೋಲನವನ್ನು ಮಾಡಿಸಿ ಅವರ ಕೈವಾಡವೇ ಪ್ರಬಲವಾಗಿರುವ ಸರ್ಕಾರದಿಂದ ಹಾಗೆ ಸರ್ಕ್ಯುಲಾರನ್ನು ಹೊರಡಿಸುವಂತೆ ಆ ಬ್ರಾಹ್ಮಣರನ್ನೂ ಸರ್ಕಾರದವರನ್ನೂ ಪ್ರೇರೇಪಿಸಿದವನೂ ನೀನು ತಾನೆ ? ಏನಯ್ಯಾ ? ಬ್ರಾಹ್ಮಣರಲ್ಲಿ ಅಷ್ಟೊಂದು ಪಕ್ಷಪಾತವೇ ನಿನಗೆ ? ಬ್ರಾಹ್ಮಣೇತರರಲ್ಲಿ ಇಷ್ಟೊಂದು ದ್ವೇಷವೇ ? ಹಾಗಾದರೆ ನಿನ್ನ ಸರ್ವಸಮದೃಷ್ಟಿತ್ವವೂ ನಿಷ್ಪಕ್ಷಪಾತತ್ವವೂ ಎಲ್ಲಿ ಉಳಿದುವು ?

ಸರ್ವತಂತ್ರಸ್ವತಂತ್ರನಾದ ನೀನು ಇತ್ತ ಗೌಡರನ್ನು ಓದುವಂತೆ ಪ್ರೇರೇಪಿಸಿ ಅತ್ತ ಹೋಗಿ ಬ್ರಾಹ್ಮಣರಿಗೂ, ಸರ್ಕಾರದವರಿಗೂ ಚಾಡಿಯನ್ನು ಹೇಳಿ ಓದದಂತೆ ಅಡ್ಡಿಮಾಡಲು ಅವರನ್ನು ಪ್ರೇರೇಪಿಸಿ ಕೀಟಲೆಯನ್ನು ಮಾಡಿದೆಯಲ್ಲ ! ಇದು ನ್ಯಾಯವೇ ? ಇದು ನಿನ್ನ ಕೊರಲ್ಕೊಯ್ಯತನವಲ್ಲವೇ ? ಹೀಗಾದರೆ ಹೇಗಯ್ಯಾ ನಿನ್ನನ್ನು ನಂಬುವುದು ? ಸರ್ವೇಶ್ವರನೂ ಪರಮಪವಿತ್ರನೂ ಆದ ನಿನ್ನಲ್ಲಿಯೂ ಇಂತಹ ಪಕ್ಷಪಾತವೂ ಮೋಸಗಾರಿಕೆಯೂ ಇರುತ್ತವೆಂದ ಮೇಲೆ ಶ್ರೇಷ್ಠನೆಂದು ಯಾರನ್ನು ಅನ್ನಬೇಕು ? ನಿಕೃಷ್ಟನೆಂದು ಯಾರನ್ನು ಅನ್ನಬೇಕು ? "ಗುಣಾಃ ಪೂಜಾಸ್ಥಾನಂ ಗುಣಿಷು ನಚ ಲಿಂಗಂ ನಚ ವಯಃ" ಎನ್ನುವ ಮಾತು ನಿಜವೆನ್ನುವುದಾದರೆ ಶ್ರೇಷ್ಠರಾರು ? ನಿಕೃಷ್ಟರಾರು ? ಸರ್ವಜ್ಞನಾದ ನೀನೇ ನೋಡು. ಕಲಿಮಹಿಮೆಯಿಂದ ನಿನ್ನಲ್ಲಿಯೂ ಇಂತಹ ದುರ್ಗುಣಗಳು ಮನೆಮಾಡಿಕೊಂಡಿರುವುವೆಂದು ನೀನು ಹೇಳುವುದಾದರೆ ಸರ್ಕಾರದ ನಮ್ಮ ದುಡ್ಡಿನಿಂದ ನಿನಗೆ ವಿನಿಯೋಗವೇಕೆ ? ನಮ್ಮ ಸೇವೆಯೇಕೆ ? ನಿನಗೆ ಆತ್ಮಗೌರವವಿಲ್ಲವೇ ? ನಾಚಿಕೆಯಿಲ್ಲವೇ ?

ಬ್ರಾಹ್ಮಣೇತರ ಮಹಾಶಯರೆ ! ಈ ಮೇಲಿನ ಕಥನದಿಂದ ನೀವುಗಳು ಸ್ಮೃತಿಪಥದಲ್ಲಿಟ್ಟುಕೊಳ್ಳಬೇಕಾದ ಒಂದು ಮುಖ್ಯಾಂಶವಿರುವುದು. ಅದಾವುದೆನ್ನುವಿರೋ ? ನೀವುಗಳು ಕೆಲರು ಬ್ರಾಹ್ಮಣರೇ ಶ್ರೇಷ್ಠರೆಂದೂ, ಸ್ವರ್ಗಮೋಕ್ಷಗಳನ್ನು ಕೈನೀಡಿಕೊಡಬಲ್ಲವರೆಂದೂ, ಬುದ್ಧಿವೈಭವದಲ್ಲಿ ಬೃಹಸ್ಪತಿಗಳೆಂದೂ, ಅವರ ವಿಚಕ್ಷಣೆಯೂ ಸಾಮರ್ಥ್ಯವೂ ಬೇರೆಯವರಿಗೆ ಬಾರದವೆಂದೂ ತಿಳಿದು "ಭಿಕ್ಷಾಂ ದೇಹಿ" ಎಂದು ಅವರ ಹಿಂದೆ ಓಡಾಡುತ್ತಿರುವಿರಷ್ಟೆ. ಅವರು ನಿಮ್ಮನ್ನು ಏನೆಂದು ತಿಳಿಯುತ್ತಾರೆ ಬಲ್ಲಿರೋ ? ಅವರು ನಿಮ್ಮನ್ನು ನಿಕೃಷ್ಟರೆಂದೂ ಶುದ್ಧ ಶುಂಠರೆಂದೂ (ಎಲೆ ಸಿಂಬೆಗಳೆಂದೂ) ಅಂಧಶ್ರದ್ಧೆಯುಳ್ಳವರೆಂದೂ ಬಲುಬೇಗ ತಮ್ಮ ಬಲೆಗೆ ಬೀಳುವವರೆಂದೂ ತಿಳಿಯುತ್ತಾರೆ. ಅಂದಮೇಲೆ ನೀವೂ ವಿದ್ಯಾ ಬುದ್ಧಿ ಕುಶಲತೆಗಳಲ್ಲಿ ಹೋರಾಡಿ ಮುಂದುವರಿದು ನಿಮ್ಮ ಆತ್ಮಗೌರವವನ್ನು ಕಾಪಾಡಿಕೊಳ್ಳಬೇಡವೇ ?

ಭಾರತದ ಸ್ವಾತಂತ್ರ್ಯ ಪ್ರಾಪ್ತಿಗೆ ಭೇದಭಾವಗಳನ್ನು ಬಿಟ್ಟು ಎಲ್ಲರೂ ಒಂದಾಗಬೇಕೆಂದೂ, ಅಸ್ಪೃಶ್ಯತೆಯನ್ನು ಕೊಡೆದುಹಾಕಬೇಕೆಂದೂ ಈ ಮುಂದುವರಿದ ಪಂಗಡದವರು ಬೇರೆಯವರಿಗೆ ಉಪದೇಶಮಾಡುತ್ತಿರುವುದೆಲ್ಲಿ ? ಸ್ವಾರ್ಥದಲ್ಲಿಯೂ ಇವರು ಕೂರ್ಮಮುಖದಂತೆ ತೋರಿಸುತ್ತಿರುವ ಅಂತರ್ನಿಗೂಢವಾದ ಸಂಕುಚಿತಭಾವವೆಲ್ಲಿ ? ಇದನ್ನು ನೋಡಿದರೆ ಇವರ ಪರೋಪದೇಶಪಾಂಡಿತ್ಯವು ಚೆನ್ನಾಗಿ ವ್ಯಕ್ತವಾಗುವುದು. ಇಂತಹ ಸಂಕುಚಿತಭಾವವೂ, ವಂಚನೆಯೂ ಭಾರತದೇಶದಿಂದ ನಿರ್ಮೂಲವಾದ ಹೊರತು ಇದು ಸ್ವಾತಂತ್ರ್ಯ ಪ್ರಾಪ್ತಿಗೆ ಅರ್ಹವಲ್ಲವೆಂಬ ಅಂಶವನ್ನು ಮಹಾತ್ಮ ಗಾಂಧಿಯವರು ಉಪವಾಸರೂಪವಾದ ಹಠಯೋಗವನ್ನು ಕೈಕೊಳ್ಳುವುದಕ್ಕಿಂತ ಮೊದಲು ಪರ್ಯಾಲೋಚಿಸಿದ್ದರೆ ಚೆನ್ನಾಗಿರುತ್ತಿದ್ದಿತೆನ್ನಿಸುತ್ತದೆ.

ನಾಚಿಕರೆ ! ಈ ಲೇಖನವನ್ನು ಬ್ರಹ್ಮದ್ವೇಷದಿಂದ ಬರೆದು ಅವರ ತಾಪಕ್ಕೆ ಗುರಿಯಾಗಬೇಕೆಂಬ ಉದ್ದೇಶವೂ ಇಲ್ಲ, ಪಂಗಡಗಳಲ್ಲಿ ಪರಸ್ಪರ ವೈಷಮ್ಯವನ್ನು ಬಿತ್ತಿ ಬೆಳೆಯಬೇಕೆಂಬ ಉದ್ದೇಶವೂ ಇಲ್ಲ. ಆದರೆ ಅವರ ಕೀಟಲೆಗಳನ್ನು ನೋಡುತ್ತಿದ್ದ ಬಹುಕಾಲದ ಆ ಅನುಭವವೂ ಪ್ರಕೃತ ಪರಿಸ್ಥಿತಿಯಿಂದ ಉದ್ಬೋಧಿತನಾಗಿ ಈ ಲೇಖನವನ್ನು ಬರೆಯಿಸಿದೆ. ಇಂತಹ ಕೆಲವು ನಿದರ್ಶನಗಳನ್ನು ಕ್ರಮಶಃ ಕೊಡುತ್ತ ಹೋಗುವೆನು.

ದೇಶಹಿತೈಷಿ.

ಮೈಸೂರು ಕುಂಚಿಟಿಗರ ಶ್ರೀರಾಮಮಂದಿರದವರ ಉಪವಾಸ

ರಾಜಧಾನಿಯ ಸಂತೆಪೇಟೆಯಲ್ಲಿರುವ ಕುಂಚಿಟಿಗರ ರಾಮಮಂದಿರದ ಭಕ್ತಮಂಡಲಿಯವರು ದೈವಸಂಭೂತರಾದ ಮಹಾತ್ಮಾಜಿಯವರು ತಮ್ಮ ಇಷ್ಟಾರ್ಥಸಿದ್ಧಿಗೋಸ್ಕರ ಮಹಾ ಉಪವಾಸವ್ರತವನ್ನು ಆರಂಭಿಸಿದ್ದಕ್ಕಾಗಿಯೂ, ಮಹಾತ್ಮಾಜಿಯವರ ಶ್ರೇಯೋಭಿವೃದ್ಧಿಗಾಗಿಯೂ ಇದೇ ತಾ|| 20 ರಲ್ಲಿ ಉಪವಾಸವನ್ನು ಮಾಡಿ ಮೇಲ್ಕಂಡ ಮಂದಿರದಲ್ಲಿ ಸಾಯಂಕಾಲ ಗೋಧೂಳಿ ನಕ್ಷತ್ರದಲ್ಲಿ ಮ|| ಎಂ. ಜಿ ಅಲಪ್ಪನವರ ಮತ್ತು ಮ|| ಬಿ. ಕಾಳಿಂಗಪ್ಪನವರ ಸಹಾಯದಿಂದ ಶ್ರೀಗಣಪತಿಸ್ವಾಮಿಯವರ ಮತ್ತು ಶ್ರೀಸತ್ಯನಾರಾಯಣಸ್ವಾಮಿಯವರ ವ್ರತವನ್ನು ವಿಧಿವತ್ತಾಗಿ ಆಚರಿಸಿ ರಾತ್ರಿಯೆಲ್ಲಾ ಕೀರ್ತನರೂಪದಿಂದ ಭಗವಂತನನ್ನು ಧ್ಯಾನಮಾಡಿ ಜಾಗರಣೆಮಾಡಿ ಬೆಳಗಿನ ಝಾವ ೪ ಘಂಟೆಗೆ ಸರಿಯಾಗಿ ಎಲ್ಲರೂ ಖಾದಿ ಉಡುಪಿನಿಂದ ಮಹಾತ್ಮಾಜಿಯವರ ಭಾವಚಿತ್ರವನ್ನು ಉತ್ಸವ ಪೂರ್ವಕವಾಗಿ ಮೆರೆಯಿಸಿ ಮಹಾತ್ಮಾಜಿಯವರು ಆಚರಿಸಿರುವ ಮಹಾ ಉಪವಾಸವ್ರತಕ್ಕೆ ಭಗವಂತನು ಸಹಾಯ ಮಾಡಲೆಂದು ಜಯಘೋಷದೊಡನೆ ಮುಕ್ತಾಯಗೊಳಿಸಿದುದು ತುಂಬಾ ಸಂತೋಷಪ್ರದವಾದಿತೆ. ಇದರಂತೆಯೇ ಭಾರತೀಯರೆಲ್ಲರೂ ಮಹಾತ್ಮಾಜಿಯವರು ಕೈಗೊಂಡಿರುವ ಆಗಾಧವಾದ ವ್ರತಕ್ಕೆ ಮತ್ತು ಮನುಷ್ಯಮಾತ್ರದವರಿಗೆ ಅಸದಳವಾದ ಈ ಮಹಾ ವ್ರತಕ್ಕೆ ಶ್ರೀರಾಮನು ಸಹಾಯ ಮಾಡಲೆಂದು ಸದಾ ಕಾಲದಲ್ಲಿ ಪ್ರಾರ್ಥನೆ ಮಾಡಬೇಕೆಂಬುದೇ ಅಲ್ಪನ ಕೋರಿಕೆ.

ಪ್ರತ್ಯಕ್ಷದರ್ಶಿ.

ಪುರಾಣಶ್ರವಣ ಸಮಾಪ್ತಿ.

ಹೊನ್ನಾಳಿ ತಾ|| ಪಂಚಗ್ರಾಮದಲ್ಲಿ ಕಳೆದ ಶ್ರಾವಣ ಶುದ್ಧ ೧ರಿಂದ ೩೦ ರ ವರೆಗೆ ಶ್ರೀ ಚರಪಟ್ಟಾಧ್ಯಕ್ಷರ ನೂತನ ಮಠದಲ್ಲಿ ಶ್ರೀ ಬಸವೇಶ್ವರ ಮಹಾ ಪುರಾಣವು ಹೊನ್ನಾಳಿ ಹಿರೇಕಲ್ಮಠದ ಸ್ಥಿರಪಟ್ಟಾಧ್ಯಕ್ಷ ಶ್ರೀ ಚನ್ನರಾಜ ದೇಶಿಕೇಂದ್ರ ಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ವೇ|| ಪಂ. ಮುದೇನೂರ ರಾ|| ಮಳೆಮಠದ ಹೊಳಿಬಸವಶಾಸ್ತ್ರಿಗಳಿಂದ ಸಂಗೀತ ವಿದ್ವಾನ್ ವೇ|| ಮುರೋಳದ ಮಠದ ಸದಾಶಿವಾರ್ಯರ ಗಾನ, ರಾಣೇಬೆನ್ನೂರು ಬಿ. ಮಲ್ಲಿಕಾರ್ಜುನಪ್ಪನ ತಬಲವಾದ್ಯ ಇವುಗಳೊಡನೆ ಸುತ್ರಾವ್ಯವಾಗಿ ನಡೆಯಿಸಲ್ಪಟ್ಟು ಅಂತ್ಯಕ್ಕೆ ಸುಪ್ರಸಿದ್ಧವಾದ ಇಲ್ಲಿಯ ಶ್ರೀ ರುದ್ರದೇವರ ರುದ್ರಾಭಿಷೇಕ ಮಹಾಗಣಾರಾಧನೆಯೊಡನೆ ಪೂರೈಸಲ್ಪಟ್ಟಿತು. ಈ ಕಾರ್ಯವನ್ನು ಇಲ್ಲಿಯ ಶ್ರೀ ಚರಮೂರ್ತಿಗಳೇ ತಮ್ಮ ಪ್ರಮುಖ ಶಿಷ್ಯರು ಮ|| ಗಳಾದ ಹೆಚ್. ಹನುಮಪ್ಪಗೌಡರು, ನಾರಾಯಣಪ್ಪಗೌಡರು, ಸ್ಕೂಲ್‌ಮಾಸ್ಟರ್ ಸಿ. ಗಡ್ಲಪ್ಪ, ಗಡೇಕಟ್ಟೆ ರುದ್ರಪ್ಪಗೌಡರು, ಚಿನ್ನಿಕಟ್ಟೆ ಶಿವಪ್ಪನವರು, ಗೋಪಗೊಂಡನಹಳ್ಳಿ ಸಿದ್ಧಪ್ಪನವರು, ಪರುವದ ರುದ್ರಪ್ಪನವರು, ದುರಗದ ಚನ್ನಪ್ಪನವರು, ಹೊನ್ನಾಳಿ ಚನ್ನವೀರಪ್ಪನವರು ವಗೈರೆಯವರೊಡನೆ ಅವಿಶ್ರಾಂತಶ್ರಮವನ್ನು ವಹಿಸಿ ನಿರ್ವಿಘ್ನವಾಗಿ ಪೂರೈಸಿದರು. ಶ್ರೀ ಚರಮೂರ್ತಿಗಳು 8-10 ವರ್ಷಗಳವರೆಗೂ ಶಿವಯೋಗಮಂದಿರದಲ್ಲಿ ಸುಶಿಕ್ಷಿತರಾಗಿ ಹೊನ್ನಾಳಿ ಹಿರೇಕಲ್ಮಠದಲ್ಲಿ ಈ ಗ್ರಾಮದ ಮಠದ ಪಟ್ಟಾಧಿಕಾರವನ್ನು ವಹಿಸಿ ನಿರಾಧಾರವಾದ ಈ ಮಠವನ್ನು ಅಭಿವೃದ್ಧಿಗೆ ತಂದು ಈ ಅಲ್ಪವಯಸ್ಸಿನಲ್ಲೇ ಈ ಪ್ರದೇಶದಲ್ಲಿ ಅಖಿಲ ಗುರುತಂಡಕ್ಕೆಲ್ಲ ಮೇಲ್ಪಂಕ್ತಿಯೆನಿಸಿ ಈ ಘನ ಕಾರ್ಯವನ್ನು ನಡೆಯಿಸಿದ ಈ ಮಹಾನುಭಾವರು ಕ್ರಿಯಾಸಿದ್ಧರಿರುವರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಮಹಾಶಯರಿಗೆ ಇತೋಪ್ಯಧಿಕ ಸಾಮಾಜಿಕ ಕಾರ್ಯವನ್ನು ಮಾಡಲು ಪರಮೇಶ್ವರನು ಆಯುರಾರೋಗ್ಯ ಸಂಪತ್ತನ್ನೀಯಲೆಂದು ಬೇಡುವ ಓರ್ವ ಪ್ರತ್ಯಕ್ಷದರ್ಶಿ.

ಶ್ರಾವಣಮಾಸದ ಪೂಜಾಸಮಾರಂಭ

ಶಿಕಾರಿಪುರ ತಾ|| ಶಿರಾಳಕೊಪ್ಪದಲ್ಲಿ ಮೈಸೂರು ಮಹಾರಾಜರವರಾದ ಮುಂಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರಿಂದ ಮಂಜೂರು ಮಾಡಲ್ಪಟ್ಟ ಸರ್ಕಾರದ ಸರ್ವ ಇನಾಮತಿ ಜಮೀನುಳ್ಳ ವಿರಕ್ತ ಮಠವಿರುತ್ತದೆ. ಈ ವಿರಕ್ತಮಠದ ಮಹಾಸ್ವಾಮಿಗಳು ರುದ್ರಮುನಿ ಒಡೆಯರವರು ನಡೆಸಿದ ಮಹಾಲಿಂಗ ಪೂಜಾಕಾರ್ಯಕ್ರಮ—ಕಳೆದ ಶ್ರಾವಣ ಶು|| ೧ ರಿಂದ ಭಾದ್ರಪದ ಶು|| ೪ ವರೆಗೆ ವಾರ್ಷಿಕ ಪದ್ಧತಿ ಪ್ರಕಾರ ಪ್ರತಿ ದಿವಸ ಪ್ರಾತಃಕಾಲಕ್ಕೆ ಶಿವಭಜನ 9 ಘಂಟೆಯಿಂದ ಶ್ರೀಗಳವರ ಮಂಗಲಸ್ನಾನ ಅಲ್ಲಿಂದ ೩ ಘಂಟೆಯವರೆಗೆ ಮಹಾಲಿಂಗ ಪೂಜೆ ಈ ಕಾರ್ಯಗಳು ಸಕಲ ವಾದ್ಯಘೋಷದಿಂದಲೂ ಶ್ರೀ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆ ದೀಪೋತ್ಸವಾದಿಗಳಿಂದಲೂ ವಿಧಿವತ್ತಾಗಿ ಜರುಗುತ್ತಿದ್ದವಲ್ಲದೆ ಶ್ರೀಗಳವರ ಪಾದಪೂಜೆಯೂ ಪಾದೋದಕ ಪ್ರಸಾದ ಸೇವನೆಯೂ ನಡೆಯುತ್ತಿದ್ದವು. ಇದಕ್ಕಾಗಿ ಸ್ಥಳ ಪರಸ್ಥಳದ ಪಟ್ಟಚರ ಮೂರ್ತಿಗಳೂ, ಮಹೇಶ್ವರರೂ, ಭಕ್ತರೂ ಕೂಡುತ್ತಿದ್ದರು. ಈ ಪೂಜಾ ಸಮಾರಂಭ ಕಾಲದಲ್ಲಿ ಪ್ರತಿ ದಿವಸವೂ ಇದೇ ಶಿರಾಳಕೊಪ್ಪದ ಸದ್ಭಕ್ತರು ಒಬ್ಬೊಬ್ಬರೇ ಒಂದೊಂದು ದಿವಸ ಆರಾಧನೆಯನ್ನು ಕೈಕೊಂಡು ನಡಿಸುತ್ತಿದ್ದರು, ಸಾಯಂಕಾಲದಲ್ಲಿ ಗೊಗ್ಗಿಹಳ್ಳಿ ಸಂಸ್ಥಾನ್ ಮಠದ ಸೋಮನಾಥ ಶಾಸ್ತ್ರಿಗಳವರಿಂದ ಬಸವೇಶ್ವರ ವಚನವೂ ಶಿವಾನುಭವವೂ ಹೇಳಲ್ಪಡುತ್ತಿದ್ದುವು. ಇದೇ ಗ್ರಾಮದ ಬಸವೇಶ್ವರ ದೇವರ ಉತ್ಸವ ಮೂರ್ತಿಯನ್ನು ಆಂದೋಲಿಕೋತ್ಸವದಿಂದ ಪದ್ಧತಿ ಪ್ರಕಾರ ಸದ್ರಿ ವಿರಕ್ತಮಠಕ್ಕೆ ಬಿಜಯಂಗೈಸಿ ಮೂರು ದಿವಸ ರುದ್ರಾಭಿಷೇಕವನ್ನು ನಡಿಸಿ ಪುನಃ ಉತ್ಸವದೊಡನೆ ದೇವಸ್ಥಾನಕ್ಕೆ ಕಳುಹಿಸೋಣವಾಯಿತು. ಈ ದೇವಸ್ಥಾನದಲ್ಲೇ ಸದರಿ ಶಾಸ್ತ್ರಿಗಳವರಿಂದ ಶಿವಕೀರ್ತನೆಯೂ ನಡೆಯಿತು. ಇದಕ್ಕಾಗಿ ಸ್ಥಳ ಪರಸ್ಥಳದ ಭಜನಾ ಸಂಘದವರೂ ಪ್ರೇಕ್ಷಕರನೇಕರು ಸಹ ಸೇರಿದ್ದರು. ಈ ಮಹಾಕಾರ್ಯ ನಡೆಯುವ ಕಾಲದಲ್ಲಿ ಭಕ್ತಮಹೇಶ್ವರರ ದೀಕ್ಷೆಯೂ ಒಂದು ವಿವಾಹವೂ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟವು. ಶ್ರೀಮನ್‌ಮಹಾರಾಜರವರು ಈ ಮಠಕ್ಕೆ ಸರ್ವ ಇನಾಂ ಭೂಮಿಯನ್ನು ಕೊಟ್ಟಿರುವದರಿಂದ ಅವರ ವಂಶಪಾರಂಪರ್ಯವಾಗಿ ಶ್ರೇಯಸ್ಸು ದೊರಕಲೆಂದು ಶ್ರೀ ಮಹಾದೇವನನ್ನು ಪ್ರಾರ್ಥಿಸುತ್ತೇನೆ.

ಒಬ್ಬ ಪ್ರೇಕ್ಷಕ.

ಧರ್ಮ ವೇದವಿದ್ಯಾಶಾಲೆಯ ವಾರ್ಷಿಕೋತ್ಸವ.

ಬೆಂಗಳೂರು ನಗರದ ಚಿಕ್ಕಪೇಟೆಯಲ್ಲಿರುವ ಶ್ರೀ|| ಕೈ|| ಗೌಡರ ವೀರಭದ್ರಪ್ಪನವರ ಧರ್ಮ ವೇದವಿದ್ಯಾಶಾಲೆಯ ವಾರ್ಷಿಕೋತ್ಸವವೂ ಶ್ರೀ ವಿದ್ಯಾಗಣಪತಿಯ ಮಂಗಳಾರತಿಯೂ ಮ|| ಡಿ. ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಕಳೆದ ಮಂಗಳವಾರ ಸಾಯಂಕಾಲ ನಡೆದುವು. ಗಣಪತಿಯ ಹೂವಿನ ಮಂಟಪವು ವಿದ್ಯುದ್ದೀಪಗಳಿಂದ ನೋಡಲು ಮನೋಹರವಾಗಿದ್ದಿತು. ಬೆಂಗಳೂರು ನಗರದ ಮತ್ತು ಪರಸ್ಥಳಗಳ ಅನೇಕ ದೊಡ್ಡ ಮನುಷ್ಯರು ನೆರೆದಿದ್ದರು. ಮಂಗಳವಾದ್ಯ, ವೇದಘೋಷಗಳಾದನಂತರ ಕರ್ನಾಟಕ ಸಾಹಿತ್ಯದಲ್ಲಿ ಪ್ರಸಿದ್ಧರೂ, ಬೆಂಗಳೂರಿನ ನಾರ್ಮಲ್ ಹೈ ಸ್ಕೂಲಿನ ಹೆಡ್ಮಾಸ್ಟರೂ ಆದ ಮ|| ಎಂ. ಆರ್. ಶ್ರೀನಿವಾಸಮೂರ್ತಿ ಬಿ.ಎ. ಯವರು "ಪ್ರಭು ದೇವರು" ಎಂಬ ವಿಷಯದಲ್ಲಿ ಅಮೋಘವಾದ ಭಾಷಣಮಾಡಿದರು. ಪ್ರಭು ದೇವರ ವಿಷಯದಲ್ಲಿ ಅವರ ವಿವೇಚನೆಯು ದೊಡ್ಡದು. ಅವರು ಪ್ರಭು ದೇವರನ್ನು ಅವರ ವಚನಗಳಿಂದ ಚಿತ್ರಿಸಿ ಅವರ ಚಿತ್ರವನ್ನು ಕಣ್ಣಿಗೆ ಕಟ್ಟಿದಂತೆ ಮಾಡಿದರು. ಅವರ ಹೃದಯ ವೈಶಾಲ್ಯವನ್ನು ಶ್ಲಾಘಿಸಿದರು. ಒಟ್ಟಿನಲ್ಲಿ ಅವರ ವಿಚಾರದಲ್ಲಿ ಜನಸಾಮಾನ್ಯಕ್ಕೆ ತಿಳಿಯದಾದ ಅನೇಕ ವಿಷಯಗಳನ್ನು ತಿಳಿಸಿದರು. ಬಳಿಕ ಪಾಠಶಾಲೆಯ ವರದಿಯೋದಲ್ಪಟ್ಟಿತು. ಪಾಠಶಾಲೆಯಲ್ಲಿ ಈಗ ೩ ತರಗತಿಗಳಿವೆಯೆಂದೂ ಒಟ್ಟು 30 ಮಂದಿ ವಿದ್ಯಾರ್ಥಿಗಳಿರುವರೆಂದೂ ಪಾಠಶಾಲೆಯು ದಿನೇದಿನೇ ಮುಂದುವರಿಯುತ್ತಿರುವುದೆಂದೂ ವರದಿಯಿಂದ ವ್ಯಕ್ತವಾಗುತ್ತದೆ. ಇದಾದನಂತರ ಬೆಂಗಳೂರು ವೀರಶೈವ ಸಂಸ್ಕೃತ ವಿದ್ಯಾರ್ಥಿ ಸಂಘದ ವರದಿಯನ್ನು ಆ ಸಂಘದ ಕಾರ್ಯದರ್ಶಿಗಳು ಓದಿದರು. ಮ|| ಟಿ ಎಚ್. ಚೆನ್ನಪ್ಪನವರೇ ಆ ಸಂಘದ ಅಧ್ಯಕ್ಷರು. ಆಮೇಲೆ "ಕೈ|| ವೀರಭದ್ರಪ್ಪನವರ ಸಂಕ್ಷಿಪ್ತ ಜೀವನ ಚರಿತ್ರೆ" ಮತ್ತು "ಮಗು ಮುದುಕರ ಮುಂದಾಳು ಗಾಂಧಿ" ಎಂಬ ಮನೋಹರವಾದ ಪುಸ್ತಕ ಕೆಗಳೂ ಓದಲ್ಪಟ್ಟವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ "ಸಕಲ ಧರ್ಮಗಳಿಗೆ ಆಧಾರಭೂತಗಳಾದ ವೇದಗಳ ಅಧ್ಯಯನ ಮತ್ತು ಮಂತ್ರಗಳ ಅರ್ಥವನ್ನು ತಿಳಿಯುವ ಆವಶ್ಯಕತೆ" ಯ ವಿಚಾರದಲ್ಲಿ ಸ್ವಾರಸ್ಯವಾಗಿ ಭಾಷಣಮಾಡಿದನಂತರ ಮಂಗಳಾರತಿ, ರಾಜಾಶೀರ್ವಾದಗಳು ನಡೆದವು. ಬೆಂಗಳೂರಿನ ಗ್ರಂಥಿಗೆ ಅಂಗಡಿ ಮ|| ಎಸ್. ವೀರಭದ್ರಪ್ಪನವರ ಪುತ್ರಿ 8 ವರ್ಷದ ಶ್ರೀಮತಿ|| ಮುದ್ದಮ್ಮನವರ ಸಂಗೀತವೂ ನಡೆಯಿತು. ಈ ಸಮಾರಂಭಕ್ಕೆ ಮ|| ಬಿ. ಎಂ. ಶ್ರೀಕಂಠಯ್ಯ ಎಂ. ಎ., ಬಿ. ಎಲ್., ರವರೇ ಮೊದಲಾಗಿ ಅನೇಕ ದೊಡ್ಡ ಮನುಷ್ಯರು ದಯಮಾಡಿಸಿದ್ದರು. ಒಟ್ಟಿನಲ್ಲಿ ಕೈ|| ವೀರಭದ್ರಪ್ಪನವರ ಶ್ರೇಷ್ಠಪುತ್ರರಾದ ಮ|| ರುದ್ರಪ್ಪನವರು ತಂದೆಯವರ ಧರ್ಮಕಾರ್ಯವನ್ನು ಮುಂದುವರಿಸುತ್ತ, ವೈದಿಕ ವಿದ್ಯೆಗೆ ತ್ರಿಕರಣಪೂರ್ವಕವಾಗಿ ಸೇವೆಯನ್ನು ಸಲ್ಲಿಸುತ್ತಿರುವುದು ಶ್ಲಾಘನೀಯವೂ ಮಾರ್ಗದರ್ಶಕವೂ ಆಗಿರುತ್ತದೆ. ಇಂತಹವರಿಂದಲೇ ಸಮಾಜ ಉದ್ಧಾರವಾಗಬೇಕಾಗಿದೆ.

ಓರ್ವ, ಸಮಾಜ ಬಂಧು.

೧೧ ನೇ ಅಖಿಲ ಶ್ರೀಮದ್ವೀರಶೈವ ಮಹಾಸಭಾ ಧಾರವಾಡ

ತಾ|| 17-9-32 ನೇ ದಿವಸ ಶನಿವಾರ ಸಾಯಂಕಾಲ 4 ಘಂಟೆಗೆ ಲಿಂಗಾಯತ ಟ್ರೇನಿಂಗ್ ಹಾಲಿನಲ್ಲಿ ಮಾಡಿದ ಶ್ರೀಮದ್ವೀರಶೈವ ಮಹಾಸಭೆಯ ಮ್ಯಾನೇಜಿಂಗ್ ಕಮಿಟಿಯ ಸಭೆಯಲ್ಲಿ ಪಾಸಾದ ಠರಾವುಗಳು :—

ಉಪ ಕಮಿಟಿಗಳು

ಠರಾವು ನಂ. 1—ಮಹಿಳಾ ಪರಿಷತ್ತಿನ ಕಮಿಟಿ ಮೆಂಬರರು—ಮ|| ಗಳಾದ 1. ಎಸ್. ಎಸ್. ಬಸವನಾಳ ಮಾಸ್ತರ, 2. ಎಮ್. ಎಸ್. ಕೇಸರಿ ವಕೀಲರು, 3. ಎಸ್.ಎಸ್. ಮಳೀಮಠ ವಕೀಲರು, 4. ಜಿ. ಎಚ್. ದಿರ್ಜಿ ವಕೀಲರು ಹುಬ್ಬಳ್ಳಿ.

ಈ ಕಮಿಟಿಗೆ ಎಮ್. ಎಸ್. ಕೇಸರಿ ವಕೀಲರು ಸೆಕ್ರೆಟರಿ ಇರತಕ್ಕದ್ದು. ಈ ಕಮಿಟಿಯವರು ಮಹಿಳೇರ ಪರಿಷತ್ತನ್ನು ಏರ್ಪಾಡು ಮಾಡುವುದಕ್ಕೆ ಯಾವತ್ತೂ ವ್ಯವಸ್ಥೆಯನ್ನು ಮಾಡತಕ್ಕದ್ದು. ಇದೇ ಕಮಿಟಿಯವರಿಗೆ ಮಹಿಳೇರ ಪರಿಷತ್ತಿನ ಅಧ್ಯಕ್ಷರನ್ನು ಮತ್ತು ಸ್ವಾಗತ ಕಮಿಟಿಯ ಚೇರ್ಮನ್ನರನ್ನು ಆರಿಸಲಿಕ್ಕೆ ಅಧಿಕಾರ ಕೊಟ್ಟಿರುತ್ತದೆ ಮತ್ತು ಈ ಕಮಿಟಿಯವರಿಗೆ 7 ಜನಕ್ಕಿಂತ ಹೆಚ್ಚಿಗೆ ಆಗದಷ್ಟು ಮೆಂಬರನ್ನು ಕೂಡಿಸಿಕೊಳ್ಳಲಿಕ್ಕೆ ಅಧಿಕಾರ ಕೊಟ್ಟಿರುತ್ತದೆ.

ಠರಾವು ನಂ. 2—ಶಿಕ್ಷಣಸಂಸ್ಥೆಗಳ ಪರಿಷತ್ತಿನ ಕಮಿಟಿ—ಮ||ಗಳಾದ 1. ಎಸ್. ಎಸ್. ಬಸವನಾಳ ಮಾಸ್ತರ, 2. ಬಿ. ಜಿ. ಹಲಕಟ್ಟಿ, 3. ಎಸ್. ವಾಯ್. ಗುಮ್ಮಗೋಳ ಮಾಸ್ತರ, 4. ಎಸ್. ಎಸ್. ಕಟ್ಟಿಮನಿ ಮಾಸ್ತರ ಹುಬ್ಬಳ್ಳಿ, 5. ಶಂಕರ ಶಾಸ್ತ್ರಿಗಳು ಧಾರವಾಡ (ಕರ್ನಾಟಕ ಕಾಲೇಜ) 6. ಚಂದ್ರಶೇಖರ ಶಾಸ್ತ್ರಿಗಳು ಹುಬ್ಬಳ್ಳಿ, 7 ರಾಜಶೇಖರ ಶಾಸ್ತ್ರಿಗಳು ಮುರುಘಾ ಮಠ ಧಾರವಾಡ.

ಈ ಕಮಿಟಿಗೆ ಮ|| ಎಸ್. ವಾಯ್. ಗುಮ್ಮಗೋಳ ಮಾಸ್ತರ ಇವರು ಕಾರ್ಯದರ್ಶಿಗಳು ಇರತಕ್ಕದ್ದು. ಈ ಕಮಿಟಿಯವರಿಗೆ ಒಟ್ಟು 10 ಜನಕ್ಕಿಂತ ಹೆಚ್ಚಿಗೆ ಆಗದಷ್ಟು ಮೆಂಬರನ್ನು ಮಾಡಲಿಕ್ಕೆ ಅಧಿಕಾರ ಕೊಟ್ಟಿರುತ್ತದೆ. ಮತ್ತು ಈ ಪರಿಷತ್ತಿನ ಅಧ್ಯಕ್ಷರನ್ನು ಮತ್ತು ಸ್ವಾಗತ ಕಮಿಟಿಯ ಚೇರಮನ್ನರನ್ನು ಆರಿಸಲಿಕ್ಕೆ ಮತ್ತು ಇತರ ಯಾವತ್ತು ಕೆಲಸ ಮಾಡಲಿಕ್ಕೆ ಅಧಿಕಾರ ಕೊಟ್ಟಿರುತ್ತದೆ.

ಠರಾವು ನಂ. 3—ಕಲಾ ಕೌಶಲ್ಯಗಳ ಪ್ರದರ್ಶನದ ಕಮಿಟಿ—ಮ|| ಗಳಾದ 1. ಡಿ. ಜಿ. ಬಡಿಗೇರ ಮುಂಬಯಿ, 2. ಎಮ್. ವ್ಹಿ. ಮಿಣಜಿಗಿ ಮುಂಬಯಿ, 3. ಕುಡಚೇ ಮಠ ಧಾರವಾಡ, 4 ಪಾಟೀಲ ಆರ್ಟಿಸ್ಟ್, ಸೊಲ್ಲಾಪುರ, 5 ದಾನಪ್ಪ ಹಾಲಭಾವಿ, 6. ಗಣೆಮಾವು ಸಾ|| ಹುಬ್ಬಳ್ಳಿ, 7. ಶ್ರೀ ಶಂಕರಯ್ಯನವರು ಕಿತ್ತೂರ ಧಾರವಾಡ.

ಈ ಕಮಿಟಿಗೆ ಮ|| ಶಂಕರಯ್ಯನವರು ಕಿತ್ತೂರ ಇವರು ಕಾರ್ಯದರ್ಶಿಗಳು ಇರತಕ್ಕದ್ದು. ಈ ಕಮಿಟಿಯವರಿಗೆ ಕಲಾ ಕೌಶಲ್ಯಗಳ ಪ್ರದರ್ಶನದ ಏರ್ಪಾಡು ಮಾಡಲಿಕ್ಕೆ ಯಾವತ್ತು ಅಧಿಕಾರವನ್ನು ಕೊಟ್ಟಿರುತ್ತದೆ.

ಠರಾವು ನಂ. 4—ಸ್ವದೇಶಿ ವಸ್ತು ಪ್ರದರ್ಶನ ಕಮಿಟಿ—ಮ||ಗಳಾದ 1. ಶಂಕರಪ್ಪನವರು ಮಿಣಜಿಗಿ, 2. ಎಸ್. ಬಿ. ಬೆಟಿಗೇರಿ ವಕೀಲರು, 3. ಮಲ್ಲಪ್ಪ ಬಸಲಿಂಗಪ್ಪ ಹೂದೇಮಠ, 4. ಚನ್ನಪ್ಪ ಸಂಗಪ್ಪ ದಂಡಿನ, 5. ಭೀಮನಗೌಡ ಸಂಗನಗೌಡಾ ಪಾಟೀಲ, 6. ಮಲ್ಲೇಶಪ್ಪ ಹೂಲಿ, 7. ಗುರಪ್ಪ ಬಾಗಿ, 8. ಮಲ್ಲೇಶಪ್ಪ ಗುರುಸಿದ್ದಪ್ಪ ತಗಡಿ, 9. ಮುರಿಗಪ್ಪ ಇಂಡಿ.

ಈ ಕಮಿಟಿಗೆ ಮ|| ಶಂಕರಪ್ಪನವರು ಮಿಣಜಿಗಿ ಸೆಕ್ರೆಟರಿ ಇರತಕ್ಕದ್ದು. ಈ ಕಮಿಟಿಯವರಿಗೆ ಸದರ ಪ್ರದರ್ಶನ ಏರ್ಪಾಡು ಮಾಡಲಿಕ್ಕೆ ಯಾವತ್ತು ವ್ಯವಸ್ಥೆಯನ್ನು ಮಾಡಲಿಕ್ಕೆ ಅಧಿಕಾರ ಕೊಟ್ಟಿರುತ್ತದೆ.

ಕರ್ನಾಟಕ ಚೇಂಬರ ಆಫ್ ಕಾಮರ್ಸ ಇವರ 3 ನೇ ಪರಿಷತ್ತನ್ನು ಮಹಾಸಭೆಯ ಕಾಲಕ್ಕೆ ಅದರ ಜೊತೆಗೆ ಕರೆಯುವುದಕ್ಕಾಗಿ ಸದರ ಚೇಂಬರದ ಕಾರ್ಯದರ್ಶಿಗಳಾದ ಮುರಿಗೆಯ್ಯ ಜಂಗಿನ ಇವರ ಪತ್ರಗಳನ್ನು ಓದಿತು. ಮತ್ತು ಸದರ ಪರಿಷತ್ತನ್ನು ಮಹಾಸಭೆಯ ಕಾಲಕ್ಕೆ ಅವರು ನೆರವೇರಿಸಬಹುದೆಂದು ನಿರ್ಣಯಿಸಿತು. ಇದರ ಸಂಬಂಧ ಮುಂದಿನ ವಿಚಾರ ಮಾಡಲಿಕ್ಕೆ ಮ|| ಮೂಗಪ್ಪಣ್ಣ ಸನದಿ ಇವರ ಸಂಗಡ ಸಮಕ್ಷಮ ಸದರ ಚೇಂಬರದ ಕಾರ್ಯದರ್ಶಿಗಳು ಬಂದು ಮಾತಾಡತಕ್ಕದ್ದು.

ಎಂ. ಎಸ್. ಕೇಸರಿ, ಸಿ. ಜಿ. ಹುಂಡೇಕಾರ್,

ಎಸ್. ಎಸ್. ಬಸವನಾಲ್.

ಪಬ್ಲಿಕೇಶನ ಕಮಿಟಿ ಶ್ರೀಮದ್ವೀರಶೈವ ಮಹಾಸಭಾ, ಧಾರವಾಡ.

ಮಕ್ಕಳಿದ್ದರೆಮನೆ ಚೆಂದ.

ಬಂಜೆತನದಿಂದ ಮುಕ್ತರಾಗುವಿರಿ

ಮಕ್ಕಳಿಲ್ಲೆಂದು | ಗರ್ಭಧಾರಣ ಸಂಜೀವನೀ | ಚಿಂತಿಸಬೇಡಿ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರೋತ್ಪತ್ತಿ ಆಗುವುದು ೯ ಗುಳಿಗೆಗಳ ೩. ೧ ರೂಪಾಯಿ. ಟ. ಖ. ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. ೩೩

ಪೌರಸಾಮಾಜಿಕ ಸಂಘಾಧಿವೇಶನವು.

ದಿವಾನ್ ಬಹದ್ದೂರ್, ರಾಜಸಭಾಭೂಷಣ ಸರ್ ಕೆ. ಪಿ. ಪುಟ್ಟಣ್ಣಶೆಟ್ಟಿ, ಕೆಟಿ., ಸಿ.ಐ.ಇ., ಮಹೋದಯರ ದಿವ್ಯ ಸನ್ನಿಧಾನದಲ್ಲಿ ದೊಡ್ಡಬಳ್ಳಾಪುರದ ಪೌರಸಭೆಯವರೂ, ಪುರದ ಮಹಾಜನರೂ ಒಪ್ಪಿಸಿದ ವಿಜ್ಞಾಪನಾಪತ್ರಿಕೆ.

ಮಹಾಶಯರೇ, ಸ್ವದೇಶ ಸೇವೆಯಲ್ಲಿ ಸರ್ಕಾರದ ಪರವಾಗಿಯೂ, ಖಾಸಗೀ ರೀತಿಯಲ್ಲಿಯೂ ತನು-ಮನ-ಧನಗಳನ್ನು ಸವೆಸಿ, ಶ್ರೀಮನ್ಮಹಾರಾಜಾಸಾಹೇಬ್ ಬಹದ್ದೂರ್‌ರವರ ಮತ್ತು ಘನ ಬ್ರಿಟಿಷ್ ಸಾರ್ವಭೌಮರವರ ಕೃಪಾಪಾತ್ರರಾಗಿ ಶ್ರೇಷ್ಠತರವಾದ ಪ್ರಶಸ್ತಿಗಳನ್ನು ಪಡೆದುದಲ್ಲದೆ, ಸಂಸ್ಥಾನದ ಪ್ರಜೆಗಳನ್ನು ಸುಪಥದಲ್ಲಿ ಹೆಜ್ಜೆಯಿಡಿಸುವ ಜನಪದ ಮುಖಂಡರಾಗಿ, ಜನಸಾಮಾನ್ಯದ "ವೃದ್ಧಪಿತಾಮಹ" ರೆನಿಸಿ ಅಪೂರ್ವ ಕ್ರಿಯಾಸಿದ್ಧಿಯುಳ್ಳವರಾದ ತಾವು ಈ ದಿನ ಇಲ್ಲಿಗೆ ಪತ್ನೀಸಮೇತರಾಗಿ ದಯಮಾಡಿಸಿ, ನಮ್ಮಗಳಿಗೆ ತಮ್ಮಗಳ ಸಂದರ್ಶನ ಲಾಭವನ್ನಿತ್ತುದು ನಮ್ಮಗಳ ಪುಣ್ಯೋದಯವೆಂದು ಭಾವಿಸುತ್ತೇವೆ.

ತಾವು ತಮ್ಮ ಕೇವಲ 18ನೆಯ ವರ್ಷದಲ್ಲಿ ನಮ್ಮ ಸರ್ಕಾರದ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಸಾಮಾನ್ಯ ಅಧಿಕಾರಕ್ಕೆ ಸೇರಿ. 8 ವರ್ಷಗಳೊಳಗಾಗಿ ತಮ್ಮ ಶಕ್ತಿ ವಿಶೇಷದಿಂದ ಮೈಸೂರು ಸ್ಟೇಟ್ ರೈಲ್ವೆಗಳ ಟ್ರಾಫಿಕ್ ಮ್ಯಾನೇಜರ್ ಪದವಿಗೆ ಏರಿದಿರಿ. ಅನಂತರ 1886 ರಲ್ಲಿ ಅಸಿಸ್ಟೆಂಟ್ ಕಮಿಷನರಾಗಿಯೂ, 1891 ರಲ್ಲಿ ಪೊಲೀಸ್ ಸೂಪರಿಂಟೆಂಡೆಂಟರಾಗಿಯೂ, 1896 ರಲ್ಲಿ ರೆವಿನ್ಯೂ ಸಬ್‌ಡಿವಿಜನ್ ಆಫೀಸರಾಗಿಯೂ ಇದ್ದು, 1898 ರಲ್ಲಿ ಡೆಪ್ಯುಟಿ ಕಮಿಷನರಾದಿರಿ. ಈ ಪದವಿಯಲ್ಲಿ 8 ವರ್ಷಗಳವರೆಗೆ ಕೆಲಸಮಾಡಿದ ಅನಂತರ ನಮ್ಮ ಶ್ರೀಮನ್ಮಹಾರಾಜರವರ ಅಮಾತ್ಯವರ್ಗದಲ್ಲಿ ಪ್ರಥಮ ಸಚಿವ ಪದವಿಯನ್ನಲಂಕರಿಸಿ, ಅನನ್ಯ ರಾಜನಿಷ್ಠೆಯಿಂದ ದೇಶದ ಸೇವೆಯನ್ನು ಮಾಡಿ, ಪ್ರಭುಗಳ ಮೆಚ್ಚುಗೆಯನ್ನು ಪಡೆದು, ಅಧಿಕಾರದಿಂದ ನಿವೃತ್ತರಾದಿರಿ. ಈ ತೆರನಾಗಿ ತಾವು ತಮ್ಮ ಅಧಿಕಾರಾವಧಿಯಲ್ಲಿ ಒಂದರ ಹಿಂದೆ ಒಂದು ಸೋಪಾನವನ್ನು ಏರುತ್ತಾ ಹೋದ ಭಾಗ್ಯವಿಶೇಷಕ್ಕೆ ತಮ್ಮಲ್ಲಿರುವ ಕಾರ್ಯಶಕ್ತಿ, ಕಾರ್ಯತತ್ಪರತೆ, ಕಾರ್ಯಪಟುತ್ವ, ಕಾರ್ಯದಕ್ಷತೆ ಮೊದಲಾದ ಗುಣವಿಶೇಷಗಳೇ ಕಾರಣಗಳಾದುವು. ತಮ್ಮಲ್ಲಿರುವ ಶಾಂತಿ, ಸಮಾಧಾನ, ಸಹನೆ ಮೊದಲಾದ ಸದ್ಗುಣಗಳು ಅನುಕರಣೀಯವಾದವುಗಳಾಗಿವೆ. ಈರೀತಿ ತಾವು ನಮ್ಮ ಸಂಸ್ಥಾನದಲ್ಲಿ ಸರ್ಕಾರಿ ಅಧಿಕಾರದ ಕೇವಲ ಉನ್ನತಸ್ಥಾನಕ್ಕೆ ಏರಿ, "ಕ್ರಿಯಾಸಿದ್ಧಿಃ ಸತ್ವೇಭವತಿ ಮಹತಾಂ ನೋಪಕರಣೇ" ಎಂಬ ಆರ್ಯೋಕ್ತಿಗೆ ಉದಾಹರಣಪ್ರಾಯರಾಗಿರುತ್ತೀರಲ್ಲದೆ, ಮನುಷ್ಯಮಾತ್ರನು ಸ್ವಪ್ರಯತ್ನದಿಂದ ಮಹತ್ಕಾರ್ಯಗಳನ್ನು ಸಾಧಿಸಬಲ್ಲನೆಂಬುದನ್ನು ಲೋಕಕ್ಕೆ ತೋರಿಸಿಕೊಟ್ಟ ಆದರ್ಶಪುರುಷರಾಗಿರುತ್ತೀರಿ, ಮಹಾಸ್ವಾಮಿ.

ಅಧಿಕಾರದಿಂದ ನಿವೃತ್ತರಾದಮೇಲೆ ತಾವು ಸರ್ವತೋಮುಖವಾದ ಪ್ರಜಾಸೇವೆಯಲ್ಲಿ ಮಗ್ನರಾಗಿ ತತೋಧಿಕವಾದ ಪ್ರಜಾನುರಾಗವನ್ನೂ ಗೌರವಪ್ರತಿಷ್ಠೆಗಳನ್ನೂ ಸಂಪಾದಿಸಿ, ನಮ್ಮ ಸಂಸ್ಥಾನದ ಖಾಸಗೀ ಮುಂದಾಳುಗಳಲ್ಲಿ ಅಗ್ರಪೂಜೆಗೆ ಅರ್ಹರಾಗಿರುತ್ತೀರಿ. ನಮ್ಮ ಸಂಸ್ಥಾನದಲ್ಲಿ ಪ್ರಜೆಗಳ ಪ್ರಯತ್ನದಿಂದಲೂ ಸರ್ಕಾರದ ಆಶ್ರಯದಲ್ಲಿಯೂ ಸಂಸ್ಥಾಪಿತವಾದ ವ್ಯಾಪಾರಿಕ, ಔದ್ಯೋಗಿಕ, ಧಾರ್ಮಿಕ, ನೈತಿಕ ಮತ್ತು ಸಾಮಾಜಿಕ ಸಂಸ್ಥೆಗಳನೇಕಕ್ಕೆ ತಾವು ಅಧ್ಯಕ್ಷರಾಗಿ ಅವುಗಳಿಗೆ ತಮ್ಮ ಬೆಂಬಲವನ್ನು ಕೊಟ್ಟಿರುತ್ತೀರಿ. ಒಂದು ಪರಸ್ಪರ ಸಹಾಯಕ ಸಂಘದ ಮೊದಲ್ಗೊಂಡು ಮೈಸೂರು ವಿಶ್ವವಿದ್ಯಾಲಯದವರೆಗೆ ತಮ್ಮ ಸಂಬಂಧವು ಒಂದಿಲ್ಲೊಂದು ರೀತಿಯಿಂದ ಇಂದೂ ಇದ್ದೇ ಇದೆ. ಈ ವಿವಿಧ ಸಂಸ್ಥೆಗಳಿಂದ ರಾಜಪ್ರಜೆಗಳಿಗೂ, ತನ್ಮೂಲಕ ದೇಶಕ್ಕೂ ಉಂಟಾಗುತ್ತಿರುವ ಅಪಾರವಾದ ಪ್ರಯೋಜನಕ್ಕೆ ತಾವು ಆ ಸಂಸ್ಥೆಗಳಿಗೆ ಕೊಟ್ಟಿರುವ ನೈತಿಕ ಬಲವೇ ಕಾರಣವಾಗಿದೆ. ಈ ಸಂಸ್ಥೆಗಳಿಗಾಗಿ ತಾವು ಇಂದೂ ಹಿಂದಿನಂತೆಯೇ ಉತ್ಸಾಹದಿಂದ ಕೆಲಸ ಮಾಡುತ್ತಿರುವುದು ತರುಣರನ್ನು ಸಹಾ ನಾಚಿಸುವಂತಿದ್ದು, ಅಬಾಲವೃದ್ಧರಿಗೆ ಆದರ್ಶಪ್ರಾಯವಾಗಿದೆ.

ಖಾಸಗೀ ಪೌರಸಭಾಧ್ಯಕ್ಷ ಪದವಿಯ ಮರ್ಯಾದೆಯು ನಮ್ಮ ಸಂಸ್ಥಾನದಲ್ಲಿ ಪ್ರಥಮತಃ ದೊರೆತುದು ತಮಗೇ. ಸರ್ಕಾರದವರು ತಮ್ಮನ್ನು ಬೆಂಗಳೂರಿನ ಪೌರಸಭೆಯ ಖಾಸಗೀ ಅಧ್ಯಕ್ಷರನ್ನಾಗಿ ನಿಯಮಿಸಿದಾಗ ತಾವು ಆ ಅಧ್ಯಕ್ಷ ಪದವಿಯನ್ನಲಂಕರಿಸಿ, ಮ್ಯುನಿಸಿಪಲ್ ಆಡಳಿತವನ್ನು ಸುಪಥಕ್ಕೆ ತಂದಿರಿ. ನಮ್ಮ ಸಂಸ್ಥಾನದ ನಿಯಮ ನಿರ್ಮಾಣ (ಲೆಜಿಸ್ಲೇಟಿವ್) ಸಭೆಗೆ ಸರ್ಕಾರದವರು ತಮ್ಮನ್ನು 25 ವರ್ಷಗಳಿಂದಲೂ ಅವಿಚ್ಛಿನ್ನವಾಗಿ ನಿಯಮಿಸುತ್ತಿದ್ದಾರೆ. ಆದರೂ ತಾವು ಚುನಾಯಿತ ಪ್ರತಿನಿಧಿಯಾಗಿ ಆ ಸಭೆಯ ಸದಸ್ಯರಾಗಬೇಕೆಂಬ ಅಪೇಕ್ಷೆಯಿಂದ ಈ ಹಿಂದೆ ಚುನಾವಣೆಗೆ ನಿಂತಾಗ ಬಹುಮತದಿಂದ ಒಂದನೆಯವರಾಗಿ ಚುನಾಯಿಸಲ್ಪಟ್ಟಿರಿ. ಇದರಿಂದ ತಮ್ಮ ವಿಷಯದಲ್ಲಿ ಪ್ರಜೆಗಳಿಗಿರುವ ಪ್ರೀತಿ ವಿಶ್ವಾಸಗಳೂ, ನಂಬುಗೆಯೂ ವ್ಯಕ್ತವಾಗುತ್ತದೆ.

ಒಟ್ಟಿನಲ್ಲಿ ನಮ್ಮ ಸಂಸ್ಥಾನದ ಪ್ರಜಾ ಸಂಬಂಧವಾದ ಮುಖ್ಯ ರಾಜಕಾರಣವು ತಮ್ಮ ನೇತೃತ್ವದಲ್ಲಿ ನಡೆಸಲ್ಪಡುತ್ತಿರುವುದು. ಅಲ್ಲದೆ ಸರ್ಕಾರದವರಾದರೂ ಮುಖ್ಯ ಮುಖ್ಯ ವಿಚಾರಗಳಲ್ಲಿ ಇಂದೂ ತಮ್ಮ ಸಲಹೆಗಳನ್ನು ಪಡೆಯುತ್ತಿರುವರು. ಇದರಿಂದ ಇತ್ತ ಪ್ರಜಾಮಂಡಲಕ್ಕೂ, ಅತ್ತ ಸರ್ಕಾರಕ್ಕೂ ತಮ್ಮಲ್ಲಿರುವ ಅಧಿಕವಾದ ಗೌರವವು ಸೂಚಿತವಾಗುತ್ತಿರುವುದು.

ದೇಶಸೇವೆಯೇ ಈಶಸೇವೆಯೆಂದು ಭಾವಿಸಿ, ಮೇಲೆ ಕಂಡಂತೆ ದೇಶಹಿತಕ್ಕಾಗಿ ತನು ಮನಗಳನ್ನು ಅರ್ಪಿಸಿರುವ ತಾವು ಧನಾರ್ಪಣೆಯಲ್ಲಿಯೂ ಹಿಂದೆಗೆದಿರುವುದಿಲ್ಲ. ಬೆಂಗಳೂರಿನಲ್ಲಿ ಕಟ್ಟಲ್ಪಡಲಿಕ್ಕಿರುವ ಸಾರ್ವಜನಿಕ ಪೌಂಭವನ, ಸುಪ್ರಸಿದ್ಧವಾದ ವಿಕ್ಟೋರಿಯಾ ಆಸ್ಪತ್ರೆಯ ಬಡಾವಣೆ, ಅಖಿಲ ಭಾರತ ವೀರಶೈವ ಮಹಾಸಭಾ ಚಿರಸ್ಥಾಯಿನಿಧಿ, ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಸಂಘ ಮೊದಲಾದುವುಗಳಿಗೆ ತಾವು ಪಾತ್ರೋಚಿತವಾಗಿ ಉದಾರವಾದ ದಾನಗಳನ್ನು ಮಾಡಿ, ದೇಶದ ಶ್ರೀಮಂತ ಸದ್ಗೃಹಸ್ಥರಿಗೆ ಮಾರ್ಗದರ್ಶಕರಾಗಿರುತ್ತೀರಿ, ಮಹಾಸ್ವಾಮಿ.

ತಾವು ಡೆಪ್ಯುಟಿ ಕಮಿಷನರಾಗಿದ್ದಾಗ ದೊಡ್ಡಬಳ್ಳಾಪುರಕ್ಕೆ ತುಂಬಾ ಸಹಾಯಮಾಡಿರುತ್ತೀರಿ. ಈ ನಮ್ಮ ಊರಿಗೆ ಮೊದಲು ರೈಲ್ವೆಯು ಬಂದುದು ತಮ್ಮ ಕಾಲದಲ್ಲಿಯೇ. ಈ ಊರಿಗೆ ಅನತಿದೂರದಲ್ಲಿರುವ ಸುಪ್ರಸಿದ್ಧ ಯಾತ್ರಾಸ್ಥಳವಾದ ಘಾಟಿ ಸುಬ್ರಹ್ಮಣ್ಯದಲ್ಲಿ ಯಾತ್ರಾರ್ಥಿಗಳ ಮತ್ತು ವ್ಯಾಪಾರಿಗಳ ಸುಖ ಸೌಕರ್ಯಗಳಿಗಾಗಿ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟು, ಅಲ್ಲಿ ನಡೆಯುವ ಎತ್ತಿನ ಪರಿಷೆಯು ಪ್ರಬಲಿಸುವುದಕ್ಕೆ ಸಾಧನಗಳನ್ನು ತಾವು ಏರ್ಪಡಿಸಿದಿರಲ್ಲದೆ, ಅಲ್ಲಿನ ದೇವಾಲಯದ ಅಭಿವೃದ್ಧಿಗೂ ಕಾರಣರಾದಿರಿ. ನಮ್ಮ ಟವನ್ನು ಅಭಿವೃದ್ಧಿ ಹೊಂದಿದುದಕ್ಕೂ, ಇಲ್ಲಿನ ಹೆಂಗಸರ ಮತ್ತು ಗಂಡುಮಕ್ಕಳ ಪಾಠಶಾಲೆಗಳು ಬಡಾವಣೆ ಹೊಂದಿದುದಕ್ಕೂ, ತಾವೇ ಕಾರಣರಾದಿರಿ. ಭಯಂಕರವಾದ ಮೊದಲನೆಯ ಪ್ಲೇಗಿನಲ್ಲಿ ತಾವು ಭಯಂಕರವಾದ [illegible] ಈ ಊರಿಗೆ 15,000 ರೂ. [illegible]

ಪುರಜನರನ್ನು ಕಾಪಾಡಿದ ತಮ್ಮ ಸೌಜನ್ಯವನ್ನು ಹಲಬರು ಇಂದೂ ಸ್ಮರಣೆ ಮಾಡುತ್ತಿದ್ದಾರೆ. ಈ ಕಾರಣಗಳಿಂದ ನಾವುಗಳು ತಮಗೆ ಎಷ್ಟು ಕೃತಜ್ಞರಾಗಿದ್ದರೂ ತೀರದಾಗಿದೆ.

ಈಚೆಗೆ ಈ ಟವನ್ ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ಹೊಂದುತ್ತಾ ಇದೆ. ಮೊದಲಿನ ಮಿಡ್ಲ್‌ಸ್ಕೂಲ್‌ಗಳ ಜತೆಗೆ ಈಗ ಹೈಸ್ಕೂಲ್ ಏರ್ಪಟ್ಟು, ನಮ್ಮ ಮಕ್ಕಳಿಗೆ ಮಾಧ್ಯಮಿಕ ಶಿಕ್ಷಣವು ಇಲ್ಲಿಯೇ ದೊರೆಯುತ್ತಿದೆ. ಟವನಿಗೆ ವಿದ್ಯುಚ್ಛಕ್ತಿಯು ಒದಗಿಸಲ್ಪಟ್ಟು, ತತ್ಸಂಬಂಧವಾದ ಪ್ರಾರಂಭೋತ್ಸವವು ಘನತೆಯಿಂದಿದ ಶ್ರೀಮನ್ಮಹಾರಾಜರವರಿಂದ ಮೊನ್ನೆ ತಾನೆ ನಡೆಯಿತು. ಇನ್ನು ಮುಂದೆ ಈ ವಿದ್ಯುಚ್ಛಕ್ತಿಯನ್ನು ಕೈಗಾರಿಕೆಗಳಿಗೂ ಉಪಯೋಗ ಮಾಡಿಕೊಳ್ಳುವ ಸಂಭವವಿದೆ; ಏಕೆಂದರೆ ಇಲ್ಲಿ 2,000 ದ ವರೆಗೆ ನೇಯುವ ಲಾಳಿಯ (ಸ್ಪಿಂಡಲ್) ಮಗ್ಗಗಳಿರುತ್ತವೆ. ಟವನಿಗೆ ಕುಡಿಯುವ ನೀರನ್ನು ಕೊಳಾಯಿಗಳ ಮೂಲಕ ಒದಗಿಸಲು ತಕ್ಕ ಏರ್ಪಾಡು ನಡೆಯುತ್ತಿದೆ. ಈಗ 4 ಕೊರೆದ ಬಾವಿ (ಬೋರ್ ವೆಲ್) ಗಳು ತಯಾರಾಗಿ, ಮುಂದಿನ ಕಾರ್ಯಕ್ಕಾಗಿ 40,000 ರೂ. ಗಳ ಅಂದಾಜೆಯು ತಯಾರಾಗಿದೆ. ಈ ಬಗ್ಗೆ ಕೆಲವು ಮಂದಿ ಪುರಪ್ರಮುಖರು ಉದಾರವಾಗಿ ದ್ರವ್ಯಸಹಾಯಮಾಡಿರುತ್ತಾರೆ. ಈ ಅಂದಾಜೆಯು ಸರ್ಕಾರದ ಮಂಜೂರಾತಿಯನ್ನು ಪಡೆದು ಬಂದಕೂಡಲೆ ಕಾರ್ಯಾರಂಭವಾಗಿ ದೊಡ್ಡಬಳ್ಳಾಪುರದ "ನೀರಿನ ಸಮಸ್ಯೆ" ಯು ಪೂರ್ತಿಯಾಗುವುದೆಂದು ನಂಬಿರುತ್ತೇವೆ. ಸರ್ವತೋಮುಖವಾದ ಈ ಎಲ್ಲ ಅಭಿವೃದ್ಧಿಗಳಿಗೂ ನಮ್ಮ ದಯಾಳು ದಿವಾನ್ ಸಾಹೇಬರವರೂ, ಡೆಪ್ಯುಟಿ ಕಮಿಷನರ್ ಶ್ರೀಯುತ ಕೆ. ವಿ. ಅನಂತರಾಮನ್, ಬಿ.ಎ., ರವರೂ ಕಾರಣರಾಗಿರುತ್ತಾರೆ. ಈ ಊರಿನಲ್ಲಿ ಈಚೆಗೆ ಮುನಿಸಿಪಲ್ ಪ್ರೆಸಿಡೆಂಟ್ ಕೆಲಸ ಏರ್ಪಟ್ಟಿದೆ. ಈಗಿನ ಮುನಿಸಿಪಲ್ ಪ್ರೆಸಿಡೆಂಟರಾದ ಶ್ರೀಯುತ ಟಿ. ಎನ್. ಮಲ್ಲಪ್ಪ, ಬಿ.ಎ., ಎಲ್.ಎಲ್.ಬಿ., ಯವರು [illegible] ದಕ್ಷತೆಯಿಂದ ಕೆಲಸಮಾಡುತ್ತಿದ್ದಾರೆ. ಅಮಲ್ದಾರ್ ಶ್ರೀಯುತ ವೈ. ಶ್ರೀಕಂಠಯ್ಯನವರು ಟವನ್ ಮತ್ತು ಏರಿಯಾ ಇಂಪ್ರೂವ್‌ಮೆಂಟ್ ವಿಷಯದಲ್ಲಿ ವಹಿಸುತ್ತಿರುವ ಶ್ರಮವು ಅಭಿನಂದನೀಯವಾಗಿದೆ. ಈ ಮೇಲೆ ತಿಳಿಸಿದ ಅಭಿವೃದ್ಧಿ ಪರಂಪರೆಯನ್ನೆಲ್ಲಾ ಕೇಳಿ ತಾವು ಸಂತೋಷಪಡುತ್ತೀರೆಂಬುದನ್ನು ನಾವು ಬಲ್ಲೆವಾಗಿ, ಇವುಗಳನ್ನೆಲ್ಲಾ ಹೇಳಿಕೊಂಡಿರುತ್ತೇವೆ, ಮಹಾಸ್ವಾಮಿ.

ಬೆಂಗಳೂರಿನ ಪೌರಸಾಮಾಜಿಕ ಸಂಘದ ಅಧಿವೇಶನವು ದೊಡ್ಡಬಳ್ಳಾಪುರದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವುದು ಈ ಊರಿನ ನಿವಾಸಿಗಳೆಲ್ಲರಿಗೂ ಅತ್ಯಂತ ಅಭಿಮಾನಾಸ್ಪದವಾದ ಸಂಗತಿಯಾಗಿರುತ್ತದೆ. ತಾವು ಕಳೆದ 13 ವರ್ಷಗಳಿಂದಲೂ ಈ ಸಂಘದ ಅಧ್ಯಕ್ಷರಾಗಿ ಸಾಮಾಜಿಕ ಕ್ಷೇತ್ರದಲ್ಲಿ ಸಂಘವು ನಡೆಸುತ್ತಿರುವ ಕಾರ್ಯಾವಳಿಗಳ ಸೂತ್ರಧಾರಕರಾಗಿರುತ್ತೀರಿ. ಬೆಂಗಳೂರಿನಂತಹ ದೊಡ್ಡ ಔದ್ಯೋಗಿಕ ಕೇಂದ್ರದಲ್ಲಿ ಬಡಮಕ್ಕಳಿಗೆ ಶುದ್ಧವಾದ ಹಾಲನ್ನು ಒದಗಿಸುವುದು, ರಾತ್ರಿ ಪಾಠಶಾಲೆಗಳನ್ನು ಸ್ಥಾಪಿಸಿ, ಕೂಲಿಕಾರರಿಗೆ ವಿದ್ಯಾಭ್ಯಾಸದ ಅವಕಾಶವನ್ನು ಕಲ್ಪಿಸುವುದು, ಅನಕ್ಷರಸ್ಥರಿಗೆ ಆರೋಗ್ಯ ನಿಯಮಗಳನ್ನು ತಿಳಿಯಹೇಳಲು ಚಿತ್ರಸಮೇತವಾದ ಉಪನ್ಯಾಸಗಳನ್ನು ಏರ್ಪಡಿಸುವುದು, ಪತಿತರಾಗಿರುವ ಅಂತ್ಯಜರ ಉದ್ಧಾರಕ್ಕಾಗಿ ಮಾಡುತ್ತಿರುವ ಉದ್ಯಮ—ಈ ಮುಂತಾದ ಈ ಸಂಘದ ಉಪಯುಕ್ತ ಕಾರ್ಯಗಳು ಜಯಪ್ರದವಾಗಿ ನಡೆಯುತ್ತಿರಲು ತಾವೇ ಕಾರಣರೆಂಬುದು ಸರ್ವಜನವಿದಿತವಾಗಿದೆ. ತಾವು ಈ ಸಂಘದ ಅಧ್ಯಕ್ಷಸ್ಥಾನದಿಂದ ಪ್ರತ್ಯವಾಯಗಳನ್ನು ಲಕ್ಷಿಸದೆ ಮಕ್ಕಳ ವಿವಾಹದ ವಯಸ್ಸನ್ನು ಹೆಚ್ಚಿಸಲು ಶಾಸನ ಸಭೆಯಲ್ಲಿ ತಂದಿದ್ದ ಮಸೂದೆಯು ಸದ್ಯದಲ್ಲಿ ಫಲಕಾರಿಯಾಗದೆ ಹೋದಾಗ್ಯೂ ರಾಜಪ್ರಜೆಗಳ ಮನೋವೃತ್ತಿಯು ಮುಖ್ಯವಾದ ಸಾಮಾಜಿಕ ಸುಧಾರಣೆಯ ಕಡೆಗೆ ತಿರುಗುವಂತೆ ಮಾಡಿರುತ್ತದೆ. ಈ ಮಹತ್ಕಾರ್ಯವು ಶೀಘ್ರದಲ್ಲಿಯೇ ಫಲಪ್ರದವಾಗುವುದರಲ್ಲಿ ಸಂದೇಹವಿಲ್ಲ. ತಮ್ಮಂತಹ ಕಾರ್ಯದಕ್ಷರೂ, ಅನುಭವಶಾಲಿಗಳೂ ಆದ ಮಾರ್ಗದರ್ಶಕರನ್ನು ಅಧ್ಯಕ್ಷರನ್ನಾಗಿ ಪಡೆದು ಕೊಂಡಿರುವುದು ಈ ಪೌರಸಾಮಾಜಿಕ ಸಂಘದ ಪುಣ್ಯವಿಶೇಷವಾಗಿದೆ.

ತಮಗೆ ಆಯುರಾರೋಗ್ಯಾಭಿವೃದ್ಧಿಯನ್ನು ಅನುಗ್ರಹಿಸಿ ಮೈಸೂರು ಸಂಸ್ಥಾನವು ತಮ್ಮಿಂದ ಇತೋಪ್ಯತಿಶಯವಾದ ಸೇವೆಯನ್ನು ಕೈಗೊಳ್ಳುವಂತೆ ಮಾಡಲೆಂದು ಕೃತಾಂಜಲಿಬದ್ಧರಾಗಿ ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ, ಮಹಾಸ್ವಾಮಿ.

ಇತಿ

ದೊಡ್ಡಬಳ್ಳಾಪುರದ ನಿವಾಸಿಗಳು.

ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್. ಕೆ. ಪಿ. ಪುಟ್ಟಣ್ಣಶೆಟ್ಟಿ, ಕೆಟಿ., ಸಿ.ಐ.ಇ., ಯವರ ಧರ್ಮಪತ್ನಿಯವರಾದ ಶ್ರೀಮತಿ ಲೇಡಿ ಪಾರ್ವತಮ್ಮನವರ ಸನ್ನಿಧಿಯಲ್ಲಿ ದೊಡ್ಡಬಳ್ಳಾಪುರದ ಮಹಿಳೆಯರು ಒಪ್ಪಿಸಿದ ಬಿನ್ನವತ್ತಳೆಯು.

ಸೋದರಿಯರೇ, ನಮ್ಮ ಸಂಸ್ಥಾನದ ವಿದ್ಯಾವತಿಯರಾದ ನಾಗರಿಕ ಮಹಿಳೆಯರಲ್ಲಿ ಪೂಜ್ಯಸ್ಥಾನವನ್ನು ಪಡೆದಿರುವ ತಮ್ಮನ್ನು ಆದರದಿಂದ ಸನ್ಮಾನಿಸುವ ಸುಯೋಗವು ಇಂದು ದೊರೆತುದು ನಮ್ಮ ಪುಣ್ಯೋದಯವೆಂದು ಭಾವಿಸುತ್ತೇವೆ.

ತಾವು ಅನೇಕ ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಶಾರದಾ ಸ್ತ್ರೀ ಸಮಾಜವೆಂಬ ಹೆಸರಿನಿಂದ ಒಂದು ಮಹಿಳಾ ಸಂಸ್ಥೆಯನ್ನು ಸ್ಥಾಪಿಸಿ, ತನ್ಮೂಲಕ ಮಹಿಳೆಯರ ಉದ್ಧಾರ ಕಾರ್ಯದ ಶ್ರೀಕಾರವನ್ನು ಹಾಕಿದಿರಿ. ಅಂದಿನಿಂದ ತಾವು ಈ ಸಮಾಜದ ಅಧ್ಯಕ್ಷೆಯರಾಗಿದ್ದುಕೊಂಡು, ಅತ್ಯಂತ ವಿಚಕ್ಷಣೆಯಿಂದ ಕಾರ್ಯಕಲಾಪಗಳನ್ನು ನಿರ್ವಹಿಸಿದುದಕ್ಕೆ ಅದರ ಭವ್ಯವಾದ ಮಂದಿರವೇ ಸಾಕ್ಷಿಯಾಗಿದೆ. ಈ ಮಂದಿರದಲ್ಲಿ ನೂಲುವುದು, ನೇಯುವುದು, ಹೊಲಿಗೆ, ಚಿತ್ತದ ಕೆಲಸ, ಕಸೂತಿ ಕೆಲಸ, ಸಂಗೀತ ಮೊದಲಾದ ಕುಶಲ ಕಲಾ ಪಾಠಗಳನ್ನು ಏರ್ಪಡಿಸಿ, ಅನೇಕ ಬಾಲಿಕೆಯರಲ್ಲಿಯೂ ಸ್ತ್ರೀಯರಲ್ಲಿಯೂ ಕಲಾಸ್ಪೃಹೆಯು ಹೆಚ್ಚುವಂತೆ ಮಾಡಿರುತ್ತೀರಿ. ತಮ್ಮ ಉತ್ಸಾಹ, ಆಸಕ್ತಿ, ಕಾರ್ಯಚತುರತೆ ಇತ್ಯಾದಿ ಸದ್ಗುಣಗಳಿಂದ ಈ ಸಮಾಜವು ಸಂಸ್ಥಾನದ ಮುಖ್ಯವಾದ ಸ್ತ್ರೀ ಸಂಸ್ಥೆಗಳಲ್ಲಿ ಮಾನನೀಯವಾದ ಸ್ಥಾನವನ್ನು ಪಡೆದಿರುತ್ತದೆ. ಈಚೆಗೆ ಸಮಾಜದಲ್ಲಿ ಸ್ತ್ರೀಯರಿಗೆ ಆಟಪಾಟಗಳ ಅನುಕೂಲತೆಯನ್ನು ಕಲ್ಪಿಸಿರುವುದು ಅಭಿನಂದನೀಯವಾಗಿದೆ. ಈ ರೀತಿ ಮಹಿಳೆಯರ ಅಭಿವೃದ್ಧಿಗೆ ಸಾಧಕಗಳಾದ ಎಲ್ಲ ವಿಚಾರಗಳನ್ನೂ ತಾವು ಗ್ರಹಿಸಿ ಆಚರಣೆಗೆ ತಂದು ಮಾರ್ಗದರ್ಶಕಿಯರಾಗಿರುತ್ತೀರೆಂದು ಹೇಳಲು ನಾವು ಆನಂದಿಸುತ್ತೇವೆ.

ಮೈಸೂರು ಸಂಸ್ಥಾನದ ಅಖಿಲ ಸ್ತ್ರೀ ಸಮ್ಮೇಳನವು ನಡೆಯಲು ತಾವೇ ಕಾರಣೀಭೂತರಾಗಿ, ತುಂಬಾ ಶ್ರಮವನ್ನು ವಹಿಸಿ, ಇಡೀ ದೇಶದ ಸ್ತ್ರೀ ಸಮುದಾಯದಲ್ಲಿ ಒಂದು ವಿನೂತನ ಜಾಗ್ರತಿಯನ್ನು ಉಂಟುಮಾಡಿರುತ್ತೀರಿ.

ನಿಮ್ಮ ಪತಿವರ್ಯರು ಮಕ್ಕಳ ವಿವಾಹದ ವಯಸ್ಸನ್ನು ಶಾಸನದ ಮೂಲಕ ಹೆಚ್ಚಿಸಬೇಕೆಂದು ಮೈಸೂರು ಶಾಸನ ಸಭೆಯಲ್ಲಿ ತಂದ ಮಸೂದೆಗೆ ನಿಮ್ಮ ಸಂಪೂರ್ಣ ಅವಲಂಬನವು ದೊರೆತುದು, ಲೋಕ ಸೇವೆಯಲ್ಲಿ ನೀವಿಬ್ಬರೂ ಎಷ್ಟುಮಟ್ಟಿಗೆ ಕಂಕಣಬದ್ಧರಾಗಿರುತ್ತೀರೆಂಬುದನ್ನು ಸೂಚಿಸುತ್ತದೆ. ಈ ಸಂಬಂಧವಾಗಿ ನೀವು ಅನೇಕ ಮಹಿಳಾ ಸಮ್ಮೇಳನಗಳನ್ನು ನಡೆಸಿ, ಆ ಮಸೂದೆಗೆ ಮಹಿಳೆಯರ ಅವಲಂಬನವು ದೊರೆಯುವಂತೆ ಮಾಡಿದಿರಿ. ಮೈಸೂರು ಸಂಸ್ಥಾನದ ಅಖಿಲ ಸ್ತ್ರೀ ಸಮ್ಮೇಳನದಲ್ಲಿ ಈ ಸಂಬಂಧವಾಗಿ ಅಂಗೀಕೃತವಾದ ನಿರ್ಣಯವಾದರೂ ನಿಮ್ಮ ಪ್ರಬಲವಾದ ಪ್ರಯತ್ನದ ಫಲವೇ ಸರಿ.

ತಮ್ಮಂತಹ ಆದರ್ಶ ಸ್ತ್ರೀ ರತ್ನವನ್ನು ಸಂದರ್ಶಿಸಿ ಗೌರವಿಸುವ ಅಲಭ್ಯ ಲಾಭವು ನಮಗೆ ದೊರೆತುದಕ್ಕಾಗಿ ನಾವು ತುಂಬಾ ಸಂತೋಷಿಸುತ್ತೇವೆ. ಇದರಿಂದ ದೊಡ್ಡಬಳ್ಳಾಪುರದ ಮಹಿಳೆಯರಲ್ಲಿ ನವಸ್ಫೂರ್ತಿಯು ಜನಿಸಿ, ಇಲ್ಲಿಯೂ ಒಂದು ಸ್ತ್ರೀ ಸಮಾಜವು ಪ್ರಾರಂಭವಾಗುವಂತೆ ಆಶೀರ್ವದಿಸಬೇಕಾಗಿ ಬೇಡುತ್ತೇವೆ.

ತಮಗೂ ತಮ್ಮ ಪತಿದೇವರಿಗೂ ಪರಮೇಶ್ವರನು ಆಯುರಾರೋಗ್ಯೈಶ್ವರ್ಯಾಭಿವೃದ್ಧಿಗಳನ್ನು ಉಂಟುಮಾಡಲೆಂದು ನಾವುಗಳು ಭಗವಂತನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ. ಇತಿ

ದೊಡ್ಡಬಳ್ಳಾಪುರದ ಮಹಿಳೆಯರು.

ಕುಂಚಿಟಿಗರ ಸಂಘ, ಮೈಸೂರು.

ಮೇಲ್ಕಂಡ ಸಂಘದ ಜನರಲ್‌ಬಾಡಿ ಮೀಟಿಂಗು ತಾ॥ 7-10-1932 (ಆಶ್ವಯುಜ ಶುದ್ಧ ಅಷ್ಟಮಿ) ಶುಕ್ರವಾರ ಪ್ರಾತಃಕಾಲ 9 ಘಂಟೆಗೆಸರಿಯಾಗಿ ಮೈಸೂರು ಇಲವಾಲ ರೋಡಿನಲ್ಲಿರುವ ಕುಂಚಿಟಿಗರ ಸಂಘದ ಬಿಲ್ಡಿಂಗ್ ಹಾಲಿನಲ್ಲಿ ನಡೆಯುತ್ತದೆ ಸದರಿ ಮೀಟಿಂಗಿನಲ್ಲಿ ಸಂಘದ ಆಡಿಟ್ ರಿಪೋರ್ಟು, ವರದಿ, ಮೆಂಬರುಗಳ ಚುನಾವಣೆ ಫಂಡು ವಿಚಾರ ಕೆಲ ರೂಲ್ಸು ಬದಲಾವಣೆಯೇ ಮುಂತಾದ ಮುಖ್ಯ ಸಂಗತಿಗಳು ತೀರ್ಮಾನವಾಗಬೇಕಾಗಿರುವುದರಿಂದ ಸಮಸ್ತ ಮತಬಾಂಧವರೂ ತಪ್ಪದೆ ದಯಮಾಡಿಸಬೇಕಾಗಿ ವಿನಂತಿ. ಪರಸ್ಥಳದಿಂದ ಬರತಕ್ಕವರ ಊಟ ಉಪಚಾರಗಳಿಗೆ ತಾ॥ 6-10-32 ರಿಂದ ತಾ॥ 11-10-32 ರ ವರೆಗೆ ವೃದ್ಧಪಿತಾಮಹರಾದ ರಾವ್‌ಬಹದ್ದೂರ್, ಧರ್ಮಪ್ರಕಾಶ ಸಾ॥ ಡಿ. ಬನುಮಯ್ಯನವರು ಏರ್ಪಡಿಸಿರುತ್ತಾರೆ. ಸ್ಥಳವನ್ನೂ ಸಹ ಏರ್ಪಡಿಸಿದೆ. ದಸರಾಮಹೋತ್ಸವದ ದರ್ಶನಲಾಭ ಸಹ ಉಂಟಾಗುವಂತೆ ಮೀಟಿಂಗನ್ನು ಇಡಲಾಗಿದೆ.

ಸೆಕ್ರಿಟರಿಗಳು.

ಎಂ. ಸಿ. ಮಲ್ಲಯ್ಯ, ಎಂ. ಪುಟ್ಟಯ್ಯ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ, ಬೆಂಗಳೂರು.

ಈ ಸಂಘದ ಜನರಲ್ ಕಮಿಟಿಯವರು ನಿರ್ಧರಿಸಿರುವಂತೆ 1932 ನೇ ಅಕ್ಟೋಬರ್ ತಾ॥ 21 ನೇ ಶುಕ್ರವಾರ ಶ್ರೀ ಜಗದ್ಗುರು ಜಯದೇವ ವೀರಶೈವ ವಿದ್ಯಾರ್ಥಿನಿಲಯದಲ್ಲಿ ನೂತನ ಗ್ರಾಜುಯೇಟರನ್ನು ಸತ್ಕರಿಸಬೇಕೆಂದು ಗೊತ್ತಾಗಿದೆ. ಆದುದರಿಂದ ಈ ವರ್ಷ ಎಂ.ಎ., ಎಂ. ಎಸ್‌ಸಿ., ಬಿ.ಎ., ಬಿ.ಎಸ್‌ಸಿ., ಬಿ.ಎಲ್., ಎಲ್.ಎಲ್.ಬಿ., ಮೆಡಿಕಲ್, ಇಂಜನಿಯರಿಂಗ್ ಇತ್ಯಾದಿ ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದಿ, ಪಟ್ಟಾಂಚಿತರಾಗಿರುವ ನಮ್ಮ ಮೈಸೂರು ದೇಶದ ವೀರಶೈವ ವಿದ್ಯಾರ್ಥಿ, ವಿದ್ಯಾರ್ಥಿನಿಯರೆಲ್ಲರೂ ದಯವಿಟ್ಟು ನಾಳೆ ತಿಂಗಳು ತಾ॥ 10 ಕ್ಕೆ ಮೀರದೆ ಈ ಸಂಘದ ಗೌರವ ಕಾರ್ಯದರ್ಶಿಗಳಿಗೆ ತಮ್ಮ ಪೂರ್ತಿಯಾದ ವಿಳಾಸವನ್ನು ತಿಳಿಸಬೇಕಾಗಿ ಪ್ರಾರ್ಥನೆ.

ಎಂ. ನಾಗಪ್ಪ,
ಗೌರವಕಾರ್ಯದರ್ಶಿ.

ಸರ್ಕಾರ ಮತ್ತು ಕಂಪೆನಿಗಳ

ಸಾಲ ಮತ್ತು ಷೇರ್ ಮಾರ್ಕೆಟ್ ದರಗಳು

ಇಂಡಿಯಾ ಸರ್ಕಾರವು 1940—43 ರ ಸಾಲವನ್ನು 17—8—32 ರಿಂದ 31—8—32 ರ ವರೆಗೆ ತೆಗೆದುಕೊಳ್ಳುತ್ತಿದ್ದಾರೆ. 100 ರೂ. ಗೆ 98 ರೂಪಾಯಿ. ಕೊಡಬೇಕು.

ಸರ್ಕಾರದ ಸಾಲ ಪತ್ರಗಳ ಬೆಲೆ

ಇಂಡಿಯಾ ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳದ್ದು)

ಶೇಕಡ ಬಡ್ಡಿ $3\frac{1}{2}$	(............)	ಪತ್ರದ ಬೆಲೆ	68— 8—0
,, ,, 4	(1931—36)	....	96—12—0
,, ,, 4	(1934—37)	....	95—10—0
,, ,, 4	(1960—70)	....	79— 8—0
,, ,, $4\frac{1}{2}$	(1934)	....	99—10—0
,, ,, $4\frac{1}{2}$	(1955—60)	....	89—11—0
,, ,, 5	(1929—47)	....	98— 8—0
,, ,, 5	(1935)	....	100— 4—0
,, ,, 5	(1939—44)	....	98—12—0
,, ,, 6	(1933—36)	....	101— 8—0
,, ,, $6\frac{1}{2}$	(1935)	....	104— 6—0
,, ,, $5\frac{1}{2}$	(1938—40)	....	101—12—0

(ಆದಾಯ ತೆರಿಗೆ ಇಲ್ಲದ್ದು)

,, ,, 5	(1933)	....	101— 5—0
,, ,, 5	(1945—55)	....	104— 6—0

ಮೈಸೂರು ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳದ್ದು)

ಶೇಕಡ ಬಡ್ಡಿ 5	(1929—44)	....	95— 0—0

(ಆದಾಯ ತೆರಿಗೆ ಇಲ್ಲದ್ದು)

,, ,, $6\frac{1}{2}$	(1941—51)	....	110— 0—0
,, ,, $6\frac{1}{4}$	(1940)	....	106—14—0
,, ,, $5\frac{1}{2}$	(1938)	....	102—14—0
,, ,, 5	(1955)	....	100— 0—0
ಶಿವಮೊಗ್ಗ ರೈಲ್ವೆ	....	....	85— 0—0
ಚಿತ್ರದುರ್ಗ ರೈಲ್ವೆ	....	....	84— 6—0

ಕಂಪೆನಿಗಳ ಷೇರುಗಳ ಬೆಲೆ

ಬ್ಯಾಂಕುಗಳಲ್ಲಿ

ಇಂಪೀರಿಯಲ್ ಎಫ್. ಪಿ.	500 ರೂ. ಷೇರಿಗೆ	1180—8—0	ರೂ. ಬೆಲೆ.
,, ಕಾಂಟ್.	125 ,,	283— 0—0	,,
ಇಂಡಿಯನ	.... 50 ,,	88—12—0	,,
ಮೈಸೂರು	.... 100 ,,	193—12—0	,,
ಬೆಂಗಳೂರು	.... 10 ,,	9—14—0	,,
ಇಂಡಸ್ಟ್ರಿಯಲ್	.... 25 ,,	9— 4—0	,,
ದೇವಾಂಗ	.... 10 ,,	6— 4—0	,,
ವೈಶ್ಯ	.... 50 ,,	50— 0—0	,,
ಎಸ್. ಎಂ. ಎಸ್. ಎ.	10 ,,	10— 0—0	,,
ವಾರ್ದಾನಿ	....	ನಾಮಿನಲ್	

ಇತರ ಕ್ಯಾಂಪನಿಗಳಲ್ಲಿ

ಬಿ. ಸಿ. ರೈಲ್ವೆ	25 ರೂ. ಷೇರಿಗೆ, ...	14— 4—0	ರೂ. ಬೆಲೆ
ಬೆಂಗಳೂರು ಪ್ರೆಸ್	100 ,, ...	83— 0—0	,,
ಬಾರ್ಟನ್‌ಸನ್ (ಆ)	10 ,, ...	7— 8—0	,,
,, (ಪಿ)	10 ,, ...	6— 4—0	,,
ಸ್ಪೆನ್ಸರ್ಸ್	....	82— 0—0	,,
ಬ್ರಿವರೀಸ್ (ಆ)	100 ,, ...	84— 8—0	,,
(ಪ್ರಿ)	100 ,, ...	82— 4—0	,,
ಟೈಲ್ ಅಂಡ್ ಕ್ಲೇವರ್ಕ್ಸ್		ನಾಮಿನಲ್	
ಪ್ರೀಮಿಯರ್	....	ಡಿಟೋ.	
ತಾತಾ ಹೈಡ್ರೋ (ಆ)	....	129— 0—0	,,
,, (ಪ್ರಿ)	....	108— 6—0	,,
ತಾತಾ ಐರನ್ (ಆ)	....	25— 4—0	,,
,, (ಡಿ)	....	226— 0—0	,,
,, (1)	....	119— 0—0	,,
,, (2)	....	42— 0—0	,,
ಶ್ರೀ ಕೃಷ್ಣ		ನಾಮಿನಲ್.	

ಇನ್ಷೂರೆನ್ಸು ಕಂಪೆನಿಯಲ್ಲಿ

ಏಷಿಯಾಟಿಕ್	5 ರೂ. ಷೇರಿಗೆ	5— 2—0	ರೂ. ಬೆಲೆ
ಓರಿಯಂಟಲ್	500 ,, ...	1942— 0—0	,,
ರಿಲೇಯನ್ಸ್	100 ,,	95— 0—0	,,

ಡಿಬೆಂಚರುಗಳು

ಕೋಲಾರ	100 ರೂ ಡಿಬೆಂಚರಿಗೆ	99— 2—0	ರೂ. ಬೆಲೆ
ಮೈಸೂರು	100 ,, ...	104— 6—0	,,
ತುಮಕೂರು	100 ,, ...	103—10—0	,,
ಹಾಸನ	100 ,, ...	93— 0—0	,,

ಮಿಲ್ಲುಗಳಲ್ಲಿ

ಬೆಂಗಳೂರು	100 ರೂ. ಗೆ	65— 8—0	ರೂ. ಬೆಲೆ
ಬಂಕಿಂಗ್ಹ್ಯಾಂ	100 ,, ...	151— 4—0	,,
ಗೋಕಾಕ್	100 ,, ...	112— 0—0	,,
ಕೈಸರ್‌ಹಿಂದ್	$2\frac{1}{2}$,, ...	1— 5—0	,,
ಮಿನೆರ್ವಾ	100 ,, ...	42— 8—0	,,
ಮಹಾರಾಜ	100 ,, ...	93— 0—0	,,
ಮಹಾಲಕ್ಷ್ಮಿ		ನಾಮಿನಲ್	
ಕೃಷ್ಣರಾಜೇಂದ್ರ	25 ,, ...	5— 0—0	,,

ಗಣಿಗಳಲ್ಲಿ

ಬಾಲಘಾಟ್ ಷಿಲಿಂಗ್	10 ಕ್ಕೆ	0—11—$1\frac{1}{2}$	ಬೆಲೆ
ಚಾಂಪಿಯನ್	,, 10 ,, ...	0—14—6	,,
ಮೈಸೂರು	,, 10 ,, ...	0—13—3	,,
ನಂದೀದುರ್ಗ	,, 10 ,, ...	0—26—10	,,
ಉರಿಗಾಂ	,, 10 ,, ...	0—15—9	,,
ಪೆನಿನ್ಸುಲರ್	,, 10 ,, ...	ನಾಮಿನಲ್	
ಶಿವಮೊಗ್ಗ	,,	ನಾಮಿನಲ್	

ಎಂ. ನಂಜಪ್ಪ, ಜಹಗೀರ್‌ದಾರ್,

ಷೇರ್, ಸ್ಟಾಕ್ ಮತ್ತು ಜನರಲ್ ಬ್ರೋಕರ್.

181. ಕ್ಯಾವಲ್ರಿ ರೋಡು, ಬೆಂಗಳೂರು.

ನಾರಿನವೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

21 M. C

೧೯೩೨ ನೆಯ ಇಸವಿ ಸೆಪ್ಟಂಬರ್ ತಾ॥ ೨೬ ರಿಂದ ಅಕ್ಟೋಬರ್ ತಾ॥ ೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಆಂಗಿರಸ ನಾಮಸಂವತ್ಸರದ ಭಾದ್ರಪದ ಬಹುಳ ಏಕಾದಶಿಯಿಂದ ಆಶ್ವಯುಜ ಶುದ್ಧ ಬಿದಿಗೆ ವರೆಗಿನ ಪಂಚಾಂಗ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕನ್ಯಾ ಮಾಸ
26	[1] ಸೋಮ	ಏಕಾ	23-50	ಪುಷ್ಯ	0.11	11
27	ಮಂಗಳ	ದ್ವಾದ	26-22	ಆಶ್ಲೇ	0-55	12
28	ಬುಧ	ತ್ರಯೋ	19-47	ಮ-ಪು	0.3058-54	13
29	[2] ಗುರು	ಚತು	16-22	ಉತ್ತ	57-11	14
30	[3] ಶುಕ್ರ	ಅಮಾ	11-46	ಹಸ್ತ	53-42	15
1	[4] ಶನಿ	ಪಾಡ್ಯ	6-39	ಚಿತ್ತ	50-4	16
2	ಭಾನು	ಬಿ-ಉ	1-1-54-10	ಸ್ವಾತಿ	45-54	17

(1) ಮಳೆನಕ್ಷತ್ರ-ಹಸ್ತ ೧ ನೆಯ ಪಾದ. (2) ಮಳೆನಕ್ಷತ್ರ-ಹಸ್ತ ೨ ನೆಯ ಪಾದ. (3) ಮಹಾಲಯಾಮಾವಾಸ್ಯಾ. (4) ನವರಾತ್ರಾರಂಭ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG NO. M. 124.

ಮೈಸೂರ್ ಸ್ಟಾರ್.

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಸೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಶ್ರೀತಾವತಾರಾ ಪತ್ರಿಕಾ ನಕ್ಷತ್ರ ಮೋಹರಾಜೀಯಾತ್ ‖
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ‖
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತೆಲೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ‖

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸಕ ೧೯೩೨ ನೆಯ ಇಸವಿ ಅಕ್ಟೋಬರ್ ತಾರೀಖು ೩ ನೆಯ ಸೋಮವಾರ [ಸಂಚಿಕೆ ४೦

1932 ನೆಯ ಇಸವಿಯ ಮೈಸೂರು ದಸರಾ ವಸ್ತುಪ್ರದರ್ಶನ.

ಇಡೀ ಭರತಖಂಡದಲ್ಲೆಲ್ಲಾ ನಿಮ್ಮ ವಸ್ತುಗಳಿಗೆ ಗಿರಾಕಿಯನ್ನು ಪಡೆಯುವ ಅಭಿಲಾಷೆಯು ನಿಮಗಿದೆಯೆ?

ದಸರಾ ಕಾಲದಲ್ಲಿ ಭರತಖಂಡದ ಸಮಸ್ತ ಪ್ರಾಂತಗಳಿಂದಲೂ ಧನಿಕರಾದ ಜನರು ಗುಂಪು ಗುಂಪಾಗಿ ಮೈಸೂರು ನಗರಕ್ಕೆ ಬರುತ್ತಾರೆ. ಅವರು ನಿಮ್ಮ ವಸ್ತುಗಳನ್ನು ಕೊಳ್ಳುವ ಭರವಸೆಯು ವಿಶೇಷವಾಗಿದೆ.

ಅವರು ನಿಮ್ಮ ಸರಕುಗಳನ್ನು 1932 ನೆಯ ಇಸವಿ ಅಕ್ಟೋಬರು 1 ರ ಲಾಗಾಯಿತು 15 ನೆಯ ತಾರೀಖಿನವರೆಗೂ ನಡೆಯುವ ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಅಜಮಾಯಿಷಿಮಾಡಿ ನೋಡುವುದಕ್ಕೆ ಅವಕಾಶಕೊಡಿ.

ಪ್ರದರ್ಶಕರಿಗೆ ಸಮಸ್ತ ಸೌಕರ್ಯಗಳನ್ನೂ ಒದಗಿಸಲಾಗುವುದು.

ಪ್ರದರ್ಶನಕ್ಕೆ ಸಂಬಂಧಪಟ್ಟಒಂದು ಕೈಪಿಡಿಯನ್ನು ಪ್ರಕಟಿಸುತ್ತೇವೆ. ಇದಕ್ಕೆ ಹಿಂದಣ ವರುಷಗಳಂತೆಯೇ ಅತ್ಯಧಿಕವಾಗಿ ಅದರ ಪ್ರತಿಗಳು ಮಾರಾಟವಾಗುವುವು. ಅವರಲ್ಲಿ ಕೆಲವು ಜಾಹಿರಾತುಗಳಿಗೆ ಮಾತ್ರವೇ ಸ್ಥಳವಿರುತ್ತದೆ.

"ಪ್ರಾಸ್ಪೆಕ್ಟಸ್" ಎಂಬ ಪ್ರಸಿದ್ಧಪತ್ರಿಕೆಗಾಗಿಯೂ ಜಾಹಿರಾತು ಪ್ರಕಟಣೆಯ ದರಗಳು ಮುಂತಾದವುಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

[50—13] ಸೆಕ್ರೆಟರಿ, ಮೈಸೂರು ದಸರಾ ಎಗ್ಜಿಬಿಷನ್ ಕಮಿಟಿ,
ಅಠಾರಾಕಚೇರಿ, ಬೆಂಗಳೂರು.

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ಲಾರ್ಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿ	೦— ೮—೦	೦—೧೪—೦
ಷಟ್ಸ್ಥಲವಿವಾಹ	೦— ೪—೦	೦— ೯—೦
ಚಾರುಶೀಲಚರಿತ್ರೆ	೦— [illegible]—೦	೦—೧೦—೦
ಹರಿಜಾಸಿ	೦— ೪—೦	೦— ೯—೦
ಪ್ರಶಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರವಚನ	೦— ೮—೦	೦—೧೩—೦
ಸಟೀಕ ಕರ್ನಾಟಕಶಬ್ದಮಂಜರಿ	೦— ೮—೦	೦—೧೩—೦
ಸಟೀಕ ಷಟ್‌ಶಾಸ್ತ್ರ	೧— ೦—೦	೧— ೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ४೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗಬೇಡಿರಿ. | **ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ** ರಜಿ] ವಜ್ರಾಂಗ ಸುಂದರಪಾಕದ. [ಸ್ಪರ | ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂತ, ನಡು, ಬೆನ್ನುನೋವು, ಇದ್ದ ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮಜ್ಜಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ತೊಲಿಯ ಒಂದು ಡಬ್ಬಿಗೆ ೫। ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳ್ಳೇಸು ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೇ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಟ್ಟಿಚಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಟ್ಟಿಚಿಟ್ಟು ಆಗೋಣ, ಮುಟ್ಟಿಚಿಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ४೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಪ್ರಕೃತಿ ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ತೀವ್ರ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋದಾಗುವದಿಲ್ಲ ಮತ್ತು [illegible] ಹೆಚ್ಚು ಸಂತತಿಗಳಾಗಿ [illegible] ಮತ್ತು ಯಾವ ಸ್ತ್ರೀಯರಿಗೆ [illegible] ಯಾರಿಗೆ [illegible], ಅವರಿಗೆ ಈ [illegible] ಅದೆ. [illegible] ಮುಟ್ಟಿಚಿಟ್ಟು ಆಗುವದು ಸುರು ಇದ್ದು ಗರ್ಭಧಾರಣ ಬಂದು ಹೋಗುವದು. [illegible] ಸುರು ಆಗುವದಿಲ್ಲ ಹೀಗೆ ಖಾತ್ರಿ ಅದೆ. ಪೂರ್ಣವಿಚಾರ ಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣವಾಗಿ ಒಂದು ಡಬ್ಬಿಗೆ ೬ ರೂ. ಟ. ಖ. ೮ ಆಣೆ. [illegible] ೧, ಗುಳಿಗೆ [illegible] ೧, ಗುಳಿಗೆ ರಾತ್ರಿ [illegible] ಗುಳಿಗೆ [illegible] ನುಂಗಬೇಕು. ಪಥ್ಯ ನಾಹಾ. [illegible] ಪತ್ರಿಕೆ [illegible] ತರಿಸಿಕೊಳ್ಳಿರಿ.

[illegible]

ಪತ್ತಾ ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜ. ಎಂ. ಎಸ್. ಎಂ.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು

(Registerd Trade Mark)

ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥ ಮಾಡುವ ವ್ಯಾಧಿಗಳು ಯಾವವೆಂದರೆ—ಶೀತ, ತಲೆನೋವು, [illegible] ರೋಗಗಳು, ಕಣ್ಣುಗಳಲ್ಲಿ [illegible] ಸರ್ವ ವ್ಯಾಧಿಗಳು, [illegible] ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೮೬ ವ್ಯಾಧಿಗಳನ್ನು ಸ್ವಸ್ಥ ಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚುಮಾಡುತ್ತದೆ. [illegible] ನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯನ್ನು [illegible] ಮಿಶ್ರಮಾಡಿದರೆ ಎಲ್ಲರೂ [illegible], ಇದನ್ನು ಅನೇಕ ಪ್ರಮುಖರು ತಮ್ಮ ಗೃಹದಲ್ಲಿ [illegible] ಉಪಯೋಗಿಸುತ್ತಾರೆ. [illegible]

[illegible] ಕ್ರಯ ರೂ. ೦—೪—೦. ವಿ. ಪಿ. ೦—೯—೦
[illegible] ೧ ಕ್ಕೆ ಕ್ರಯ ರೂ. ೨—೮—೦. ವಿ. ಪಿ. [illegible]

[illegible]

ವಿಳಾಸ—ಗುರುಸ್ವಾಮಿ ಅಂಡ್ ಕಂಪೆನಿ ಲಿಮಿಟೆಡ್,
[30—6] [illegible]

ಪುರಜನರನ್ನು ಕಾಪಾಡಿದ ತಮ್ಮ ಸೌಜನ್ಯವನ್ನು ಹಲಬರು ಇಂದೂ ಸ್ಮರಣ ಮಾಡುತ್ತಿದ್ದಾರೆ. ಈ ಕಾರಣಗಳಿಂದ ನಾವುಗಳು ತಮಗೆ ಎಷ್ಟು ಕೃತಜ್ಞರಾಗಿದ್ದರೂ ತೀರದಾಗಿದೆ.

ಈಚೆಗೆ ಈ ಟವುನ್ ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ಹೊಂದುತ್ತಾ ಇದೆ. ಮೊದಲಿನ ಮಿಡ್ಲ್‌ಸ್ಕೂಲ್‌ಗಳ ಜತೆಗೆ ಈಗ ಹೈಸ್ಕೂಲ್ ಏರ್ಪಟ್ಟು, ನಮ್ಮ ಮಕ್ಕಳಿಗೆ ಮಾಧ್ಯಮಿಕ ಶಿಕ್ಷಣವು ಇಲ್ಲಿಯೇ ದೊರೆಯುತ್ತಿದೆ. ಟವನಿಗೆ ವಿದ್ಯುಚ್ಛಕ್ತಿಯು ಒದಗಿಸಲ್ಪಟ್ಟು, ತತ್ಸಂಬಂಧವಾದ ಪ್ರಾರಂಭೋತ್ಸವವು ಘನತೆಯಿಂದ ಶ್ರೀಮದ್ಯುವರಾಜರವರಿಂದ ಮೊನ್ನೆ ತಾನೆ ನಡೆಯಿತು. ಇನ್ನು ಮುಂದೆ ಈ ವಿದ್ಯುಚ್ಛಕ್ತಿಯನ್ನು ಕೈಗಾರಿಕೆಗಳಿಗೂ ಉಪಯೋಗ ಮಾಡಿಕೊಳ್ಳುವ ಸಂಭವವಿದೆ; ಏಕೆಂದರೆ ಇಲ್ಲಿ 2,000 ದ ವರೆಗೆ ಸಾರುವ ಲಾಳಿಯ (ಸ್ಪಿಂಡಲ್) ಮಗ್ಗಗಳಿರುತ್ತವೆ. ಟವನಿಗೆ ಕುಡಿಯುವ ನೀರನ್ನು ಕೊಳಾಯಿಗಳ ಮೂಲಕ ಒದಗಿಸಲು ತಕ್ಕ ಏರ್ಪಾಡು ನಡೆಯುತ್ತಿದೆ. ಈಗ 4 ಕೊರೆದ ಬಾವಿ (ಬೋರ್ ವೆಲ್)ಗಳು ತಯಾರಾಗಿ, ಮುಂದಿನ ಕಾರ್ಯಕ್ಕಾಗಿ 40,000 ರೂ. ಗಳ ಅಂದಾಜೆಯು ತಯಾರಾಗಿದೆ. ಈ ಬಗ್ಗೆ ಕೆಲವು ಮಂದಿ ಪುರಪ್ರಮುಖರು ಉದಾರವಾಗಿ ದ್ರವ್ಯಸಹಾಯ ಮಾಡಿರುತ್ತಾರೆ. ಈ ಅಂದಾಜೆಯು ಸರ್ಕಾರದ ಮಂಜೂರಾತಿಯನ್ನು ಪಡೆದು ಬೇಗನೆ ಕಾರ್ಯಾರಂಭವಾಗಿ ದೊಡ್ಡಬಳ್ಳಾಪುರದ [illegible] ಪೂರ್ತಿಯಾಗುವುದೆಂದು ನಂಬಿರುತ್ತೇವೆ. ಸರ್ವತೋಮುಖವಾಗಿ ಈ ಎಲ್ಲಾ ಅಭಿವೃದ್ಧಿಗಳಿಗೂ ನಮ್ಮ ದಯಾಳು ದಿವಾನ್ ಸಾಹೇಬರವರೂ, ಡೆಪ್ಯುಟಿ ಕಮಿಷನರ್ ಶ್ರೀಯುತ ಕೆ. ವಿ. ಅನಂತರಾಮನ್, ಬಿ.ಎ., ರವರೂ ಕಾರಣರಾಗಿರುತ್ತಾರೆ. ಈ ಊರಿನಲ್ಲಿ ಈಚೆಗೆ ಮುನ್ಸಿಫ್-ಮ್ಯಾಜಿಸ್ಟ್ರೇಟ್ ಕೋರ್ಟು ಏರ್ಪಟ್ಟಿದೆ. ಈಗಿನ ಮುನ್ಸಿಫ್-ಮ್ಯಾಜಿಸ್ಟ್ರೇಟರಾದ ಶ್ರೀಯುತ ಬಿ. ಎಚ್. ಮಲ್ಲಪ್ಪ, ಬಿ.ಎ., ಎಲ್.ಎಲ್.ಬಿ., ರವರು ನ್ಯಾಯನಿಷ್ಠರಾಗಿ, ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಅಮಲ್ದಾರ್ ಶ್ರೀಯುತ ವೈ. ಶ್ರೀಕಂಠಯ್ಯನವರು ಟವುನ್ ಮತ್ತು ವಿಲೇಜ್ ಇಂಪ್ರೂವ್‌ಮೆಂಟ್ ವಿಷಯದಲ್ಲಿ ವಹಿಸುತ್ತಿರುವ ಶ್ರಮವು ಅಭಿನಂದನೀಯವಾಗಿದೆ. ಈ ವೇಳೆ ತಿಳಿಸಿದ ಅಭಿವೃದ್ಧಿ ಪರಂಪರೆಯನ್ನೆಲ್ಲಾ ಕೇಳಿ ತಾವು ಸಂತೋಷಪಡುತ್ತೀರೆಂಬುದನ್ನು ನಾವು ಬಲ್ಲೆವಾಗಿ, ಇವುಗಳನ್ನೆಲ್ಲಾ ಹೇಳಿಕೊಂಡಿರುತ್ತೇವೆ, ಮಹಾಸ್ವಾಮಿ.

ಬೆಂಗಳೂರಿನ ಪೌರಸಾಮಾಜಿಕ ಸಂಘದ ಆಧೀನತೆಯು ದೊಡ್ಡಬಳ್ಳಾಪುರದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವುದು ಈ ಊರಿನ ನಿವಾಸಿಗಳೆಲ್ಲರಿಗೂ ಅತ್ಯಂತ ಅಭಿಮಾನಾಸ್ಪದವಾದ ಸಂಗತಿಯಾಗಿರುತ್ತದೆ. ತಾವು ಕಳೆದ 13 ವರ್ಷಗಳಿಂದಲೂ ಈ ಸಂಘದ ಅಧ್ಯಕ್ಷರಾಗಿ ಸಾಮಾಜಿಕ ಕ್ಷೇತ್ರದಲ್ಲಿ ಸಂಘವು ನಡೆಸುತ್ತಿರುವ ಕಾರ್ಯಕಲಾಪಗಳ ಸೂತ್ರಧಾರಕರಾಗಿರುತ್ತೀರಿ. ಬೆಂಗಳೂರಿನಂತಹ ದೊಡ್ಡ ವಿದ್ಯಾಕೇಂದ್ರದಲ್ಲಿ ಬಡಮಕ್ಕಳಿಗೆ ಶುದ್ಧವಾದ ಹಾಲನ್ನು ಒದಗಿಸುವುದು, ರಾತ್ರಿ ಪಾಠಶಾಲೆಗಳನ್ನು ಸ್ಥಾಪಿಸಿ, ಕೂಲಿಕಾರರಿಗೆ ವಿದ್ಯಾಭ್ಯಾಸದ ಅವಕಾಶವನ್ನು ಕಲ್ಪಿಸುವುದು, ಅನಕ್ಷರಸ್ಥರಿಗೆ ಆರೋಗ್ಯ ನಿಯಮಗಳನ್ನು ತಿಳಿಯಹೇಳಲು ಚಿತ್ರಸಮೇತವಾದ ಉಪನ್ಯಾಸಗಳನ್ನು ಏರ್ಪಡಿಸುವುದು, ಪತಿತರಾಗಿರುವ ಅಂತ್ಯಜರ ಉದ್ಧಾರಕ್ಕಾಗಿ ಮಾಡುತ್ತಿರುವ ಉದ್ಯಮ — ಈ ಮುಂತಾದ ಈ ಸಂಘದ ಉಪಯುಕ್ತ ಕಾರ್ಯಗಳು ಜಯಪ್ರದವಾಗಿ ನಡೆಯುತ್ತಿರಲು ತಾವೇ ಕಾರಣರೆಂಬುದು ಸರ್ವಜನವಿದಿತವಾಗಿದೆ. ತಾವು ಈ ಸಂಘದ ಅಧ್ಯಕ್ಷಸ್ಥಾನದಿಂದ ಪ್ರತ್ಯವಾಯಗಳನ್ನು ಲಕ್ಷಿಸದೆ ಮಕ್ಕಳ ವಿವಾಹದ ವಯಸ್ಸನ್ನು ಹೆಚ್ಚಿಸಲು ಶಾಸನ ಸಭೆಯಲ್ಲಿ ತಂದಿದ್ದ ಮಸೂದೆಯು ಸದ್ಯದಲ್ಲಿ ಫಲಕಾರಿಯಾಗದೆ ಹೋದಾಗ್ಯೂ ರಾಜಪ್ರಜೆಗಳ ಮನೋವೃತ್ತಿಯು ಮುಖ್ಯವಾದ ಸಾಮಾಜಿಕ ಸುಧಾರಣೆಯ ಕಡೆಗೆ ತಿರುಗುವಂತೆ ಮಾಡಿರುತ್ತದೆ. ಈ ಮಹತ್ಕಾರ್ಯವು ಶೀಘ್ರದಲ್ಲಿಯೇ ಫಲಪ್ರದವಾಗುವುದರಲ್ಲಿ ಸಂದೇಹವಿಲ್ಲ. ತಮ್ಮಂತಹ ಕಾರ್ಯದಕ್ಷರೂ, ಅನುಭವಶಾಲಿಗಳೂ ಆದ ಮಾರ್ಗದರ್ಶಕರನ್ನು ಅಧ್ಯಕ್ಷರನ್ನಾಗಿ ಪಡೆದುಕೊಂಡಿರುವುದು ಈ ಪೌರಸಾಮಾಜಿಕ ಸಂಘದ ಭಾಗ್ಯವಿಶೇಷವಾಗಿದೆ.

ತಮಗೆ ಆಯುರಾರೋಗ್ಯಾಭಿವೃದ್ಧಿಯನ್ನು ಅನುಗ್ರಹಿಸಿ ಮೈಸೂರು ಸಂಸ್ಥಾನವು ತಮ್ಮಿಂದ ಇತೋಪ್ಯತಿಶಯವಾದ ಸೇವೆಯನ್ನು ಕೈಗೊಳ್ಳುವಂತೆ ಮಾಡಲೆಂದು ಕೃತಾಂಜಲಿಬದ್ಧರಾಗಿ ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ, ಮಹಾಸ್ವಾಮಿ.

ಇತಿ

ದೊಡ್ಡಬಳ್ಳಾಪುರದ ನಿವಾಸಿಗಳು.

ದಿವಾನ್ ಬಹದ್ದೂರ್ ರಾಜಸಭಾಭೂಷಣ ಸರ್. ಕೆ. ಪಿ. ಪುಟ್ಟಣ್ಣಶೆಟ್ಟಿ, ಕೆಟಿ., ಸಿ.ಐ.ಇ., ಯವರ ಧರ್ಮಪತ್ನಿಯವರಾದ ಶ್ರೀಮತಿ ಲೇಡಿ ಪಾರ್ವತಮ್ಮನವರ ಸನ್ನಿಧಿಯಲ್ಲಿ ದೊಡ್ಡಬಳ್ಳಾಪುರದ ಮಹಿಳೆಯರು ಒಪ್ಪಿಸಿದ ಬಿನ್ನವತ್ತಳೆಯು.

ಸೋದರೀಮಣೀ, ನಮ್ಮ ಸಂಸ್ಥಾನದ ವಿದ್ಯಾವತಿಯರಾದ ನಾಗರಿಕ ಮಹಿಳೆಯರಲ್ಲಿ ಪೂಜ್ಯಸ್ಥಾನವನ್ನು ಪಡೆದಿರುವ ತಮ್ಮನ್ನು ಆದರದಿಂದ ಸನ್ಮಾನಿಸುವ ಸುಯೋಗವು ಇಂದು ದೊರೆತುದು ನಮ್ಮ ಪುಣ್ಯೋದಯವೆಂದು ಭಾವಿಸುತ್ತೇವೆ.

ತಾವು ಅನೇಕ ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಶಾರದಾ ಸ್ತ್ರೀ ಸಮಾಜವೆಂಬ ಹೆಸರಿನಿಂದ ಒಂದು ಮಹಿಳಾ ಸಂಸ್ಥೆಯನ್ನು ಸ್ಥಾಪಿಸಿ, ತನ್ಮೂಲಕ ಮಹಿಳೆಯರ ಉದ್ಧಾರಕಾರ್ಯದ ಶ್ರೀಕಾರವನ್ನು ಹಾಕಿದಿರಿ. ಅಂದಿನಿಂದ ತಾವು ಈ ಸಮಾಜದ ಅಧ್ಯಕ್ಷೆಯರಾಗಿದ್ದುಕೊಂಡು, ಅತ್ಯಂತ ವಿಚಕ್ಷಣೆಯಿಂದ ಕಾರ್ಯಕಲಾಪಗಳನ್ನು ನಿರ್ವಹಿಸಿರುವುದಕ್ಕೆ ಅದರ ಭವ್ಯವಾದ ಮಂದಿರವೇ ಸಾಕ್ಷಿಯಾಗಿದೆ. ಈ ಮಂದಿರದಲ್ಲಿ ಓದುವುದು, ನೇಯುವುದು, ಹೊಲಿಗೆ, ಚಿತ್ರದ ಕೆಲಸ, ಕಸೂತಿ ಕೆಲಸ, ಸಂಗೀತ ಮೊದಲಾದ ಕುಶಲ ಕಲಾ ಪಾಠಗಳನ್ನು ಏರ್ಪಡಿಸಿ, ಅನೇಕ ಬಾಲಿಕೆಯರಲ್ಲಿಯೂ ಸ್ತ್ರೀಯರಲ್ಲಿಯೂ ಕಲಾಸ್ಫೂರ್ತಿಯು ಹೆಚ್ಚುವಂತೆ ಮಾಡಿರುತ್ತೀರಿ. ತಮ್ಮ ಉತ್ಸಾಹ, ಆಸಕ್ತಿ, ಕಾರ್ಯಚತುರತೆ ಇತ್ಯಾದಿ ಸದ್ಗುಣಗಳಿಂದ ಈ ಸಮಾಜವು ಸಂಸ್ಥಾನದ ಮುಖ್ಯವಾದ ಸ್ತ್ರೀ ಸಂಸ್ಥೆಗಳಲ್ಲಿ ಮಾನನೀಯವಾದ ಸ್ಥಾನವನ್ನು ಪಡೆದಿರುತ್ತದೆ. ಈಚೆಗೆ ಸಮಾಜದಲ್ಲಿ ಸ್ತ್ರೀಯರಿಗೆ ಆಟಪಾಟಗಳ ಅನುಕೂಲತೆಯನ್ನು ಕಲ್ಪಿಸಿರುವುದು ಅಭಿನಂದನೀಯವಾಗಿದೆ. ಈ ರೀತಿ ಮಹಿಳೆಯರ ಅಭಿವೃದ್ಧಿಗೆ ಸಾಧಕಗಳಾದ ಎಲ್ಲಾ ವಿಚಾರಗಳನ್ನು ತಾವು ಗ್ರಹಿಸಿ ಆಚರಣೆಗೆ ತಂದು ಮಾರ್ಗದರ್ಶಕಿಯರಾಗಿರುತ್ತೀರೆಂದು ಹೇಳಲು ನಾವು ಆನಂದಿಸುತ್ತೇವೆ.

ಮೈಸೂರು ಸಂಸ್ಥಾನದ ಅಖಿಲ ಸ್ತ್ರೀ ಸಮ್ಮೇಳನವು ನಡೆಯಲು ತಾವೇ ಕಾರಣೀಭೂತರಾಗಿ, ತುಂಬಾ ಶ್ರಮವನ್ನು ವಹಿಸಿ, ಇಡೀ ದೇಶದ ಸ್ತ್ರೀ ಸಮುದಾಯದಲ್ಲಿ ಒಂದು ವಿನೂತನ ಜಾಗೃತಿಯನ್ನು ಉಂಟುಮಾಡಿರುತ್ತೀರಿ.

ನಿಮ್ಮ ಪತಿವರ್ಯರು ಮಕ್ಕಳ ವಿವಾಹದ ವಯಸ್ಸನ್ನು ಶಾಸನದ ಮೂಲಕ ಹೆಚ್ಚಿಸಬೇಕೆಂದು ಮೈಸೂರು ಶಾಸನ ಸಭೆಯಲ್ಲಿ ತಂದ ಮಸೂದೆಗೆ ನಿಮ್ಮ ಸಂಪೂರ್ಣ ಅವಲಂಬನವು ದೊರೆತುದು, ಲೋಕ ಸೇವೆಯಲ್ಲಿ ತೀವಿಬ್ಬರೂ ಎಷ್ಟುಮಟ್ಟಿಗೆ ಕಂಕಣಬದ್ಧರಾಗಿರುತ್ತೀರೆಂಬುದನ್ನು ಸೂಚಿಸುತ್ತದೆ. ಈ ಸಂಬಂಧವಾಗಿ ನೀವು ಅನೇಕ ಮಹಿಳಾ ಸಮ್ಮೇಳನಗಳನ್ನು ನಡೆಸಿ, ಆ ಮಸೂದೆಗೆ ಮಹಿಳೆಯರ ಅವಲಂಬನವು ದೊರೆಯುವಂತೆ ಮಾಡಿದಿರಿ. ಮೈಸೂರು ಸಂಸ್ಥಾನದ ಅಖಿಲ ಸ್ತ್ರೀ ಸಮ್ಮೇಳನದಲ್ಲಿ ಈ ಸಂಬಂಧವಾಗಿ ಅಂಗೀಕೃತವಾದ ನಿರ್ಣಯವಾದರೂ ನಿಮ್ಮ ಪ್ರಬಲವಾದ ಪ್ರಯತ್ನದ ಫಲವೇ ಸರಿ.

ತಮ್ಮಂತಹ ಆದರ್ಶ ಸ್ತ್ರೀ ರತ್ನವನ್ನು ಸಂದರ್ಶಿಸಿ ಗೌರವಿಸುವ ಅಲಭ್ಯ ಲಾಭವು ನಮಗೆ ದೊರೆತುದಕ್ಕಾಗಿ ನಾವು ತುಂಬಾ ಸಂತೋಷಿಸುತ್ತೇವೆ. ಇದರಿಂದ ದೊಡ್ಡಬಳ್ಳಾಪುರದ ಮಹಿಳೆಯರಲ್ಲಿ ನವಸ್ಫೂರ್ತಿಯು ಜನಿಸಿ, ಇಲ್ಲಿಯೂ ಒಂದು ಸ್ತ್ರೀ ಸಮಾಜವು ಪ್ರಾರಂಭವಾಗುವಂತೆ ಆಶೀರ್ವದಿಸಬೇಕಾಗಿ ಬೇಡುತ್ತೇವೆ.

ತಮಗೂ ತಮ್ಮ ಪತಿದೇವರಿಗೂ ಪರಮೇಶ್ವರನು ಆಯುರಾರೋಗ್ಯೈಶ್ವರ್ಯಾಭಿವೃದ್ಧಿಗಳನ್ನು ಉಂಟುಮಾಡಲೆಂದು ನಾವುಗಳು ಭಗವಂತನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಇತಿ

ದೊಡ್ಡಬಳ್ಳಾಪುರದ ಮಹಿಳೆಯರು.

ಕುಂಚಿಟಿಗರ ಸಂಘ, ಮೈಸೂರು.

ಮೇಲ್ಕಂಡ ಸಂಘದ ಜನರಲ್‌ಬಾಡಿ ಮೀಟಿಂಗು ತಾ॥ 7-10-1932 (ಆಶ್ವಯುಜ ಶುದ್ಧ ಅಷ್ಟಮಿ) ಶುಕ್ರವಾರ ಪ್ರಾತಃಕಾಲ 9 ಘಂಟೆಗೆ ಸರಿಯಾಗಿ ಮೈಸೂರು ಇರ್ವಿನ್ ರೋಡಿನಲ್ಲಿರುವ ಕುಂಚಿಟಿಗರ ಸಂಘದ ಬಿಲ್ಡಿಂಗ್ ಹಾಲಿನಲ್ಲಿ ನಡೆಯುತ್ತದೆ ಸದರಿ ಮೀಟಿಂಗಿನಲ್ಲಿ ಸಂಘದ ಆಡಿಟ್ ರಿಪೋರ್ಟು, ವರದಿ, ಮೆಂಬರುಗಳ ಚುನಾವಣೆ ಫಂಡು ವಿಚಾರ ಕೆಲ ರೂಲ್ಸು ಬದಲಾವಣೆಯೇ ಮುಂತಾದ ಮುಖ್ಯ ಸಂಗತಿಗಳು ತೀರ್ಮಾನವಾಗಬೇಕಾಗಿರುವುದರಿಂದ ಸಮಸ್ತ ಮತಬಾಂಧವರೂ ತಪ್ಪದೆ ದಯಮಾಡಿಸಬೇಕಾಗಿ ವಿನಂತಿ. ಪರಸ್ಥಳದಿಂದ ಬರತಕ್ಕವರ ಊಟ ಉಪಚಾರಗಳಿಗೆ ತಾ॥ 6-10-32 ರಿಂದ ತಾ॥ 11-10-32 ರ ವರೆಗೆ ವೃದ್ಧ ಪಿತಾನುಹರಾದ ರಾವ್‌ಬಹದ್ದೂರ್, ಧರ್ಮಪ್ರಕಾಶ ಸಾ॥ ಡಿ. ಬನುಮಯ್ಯನವರು ಏರ್ಪಡಿಸಿರುತ್ತಾರೆ. ಸ್ಥಳವಸತಿಗೂ ಸಹ ಏರ್ಪಡಿಸಿದೆ. ದಸರಾಮಹೋತ್ಸವದ ದರ್ಶನಲಾಭ ಸಹ ಉಂಟಾಗುವಂತೆ ಮೀಟಿಂಗನ್ನು ಇಡಲಾಗಿದೆ.

ಸೆಕ್ರಟರಿಗಳು.
ಎಂ. ಸಿ. ಮಲ್ಲಯ್ಯ, ಎಂ. ಪುಟ್ಟಯ್ಯ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು ಸಂಘ, ಬೆಂಗಳೂರು.

ಈ ಸಂಘದ ಜನರಲ್ ಕಮಿಟಿಯವರು ನಿರ್ಧರಿಸಿರುವಂತೆ 1932 ನೇ ಅಕ್ಟೋಬರ್ ತಾ॥ 21 ನೇ ಶುಕ್ರವಾರ ಶ್ರೀ ಜಗದ್ಗುರು ಜಯದೇವ ವೀರಶೈವ ವಿದ್ಯಾರ್ಥಿನಿಲಯದಲ್ಲಿ ನೂತನ ಗ್ರಾಜುಯೇಟರನ್ನು ಸತ್ಕರಿಸಬೇಕೆಂದು ಗೊತ್ತಾಗಿದೆ. ಆದುದರಿಂದ ಈ ವರ್ಷ ಎಂ.ಎ., ಎಂ. ಎಸ್ಸಿ., ಬಿ.ಎ., ಬಿ.ಎಸ್ಸಿ., ಬಿ.ಎಲ್., ಎಲ್‌ಎಲ್.ಬಿ., ಮೆಡಿಕಲ್, ಇಂಜನಿಯರಿಂಗ್ ಇತ್ಯಾದಿ ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದಿ, ಪಟ್ಟಾಂಚಿತರಾಗಿರುವ ನಮ್ಮ ಮೈಸೂರು ದೇಶದ ವೀರಶೈವ ವಿದ್ಯಾರ್ಥಿ, ವಿದ್ಯಾರ್ಥಿನಿಯರೆಲ್ಲರೂ ದಯವಿಟ್ಟು ನಾಳೆ ತಿಂಗಳು ತಾ॥ 10 ಕ್ಕೆ ಮೀರದೆ ಈ ಸಂಘದ ಗೌರವ ಕಾರ್ಯದರ್ಶಿಗಳಿಗೆ ತಮ್ಮ ಪೂರ್ತಿಯಾದ ವಿಳಾಸವನ್ನು ತಿಳಿಸಬೇಕಾಗಿ ಪ್ರಾರ್ಥನೆ.

ಎಂ. ನಾಗಪ್ಪ,
ಗೌರವಕಾರ್ಯದರ್ಶಿ.

ಸರ್ಕಾರ ಮತ್ತು ಕಂಪೆನಿಗಳ ಸಾಲ ಮತ್ತು ಷೇರ್ ಮಾರ್ಕೆಟ್ ದರಗಳು

ಇಂಡಿಯಾ ಸರ್ಕಾರವು 1940—43 ರ ಸಾಲವನ್ನು 17—8—32 ರಿಂದ 31—8—32 ರ ವರೆಗೆ ತೆಗೆದುಕೊಳ್ಳುತ್ತಿದ್ದಾರೆ. 100 ರೂ. ಗೆ 98 ರೂಪಾಯಿ ಕೊಡಬೇಕು.

ಸರ್ಕಾರದ ಸಾಲ ಪತ್ರಗಳ ಬೆಲೆ

ಇಂಡಿಯಾ ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳದ್ದು)

ಸೇಕಡ ಬಡ್ಡಿ 3½	(............)	ಪತ್ರದ ಬೆಲೆ	68—8—0
„ „ 4	(1931—36)	....	96—12—0
„ „ 4	(1934—37)	....	95—10—0
„ „ 4	(1960—70)	....	79—8—0
„ „ 4½	(1934)	....	99—10—0
„ „ 4½	(1955—60)	....	89—11—0
„ „ 5	(1929—47)	....	98—8—0
„ „ 5	(1935)	....	100—4—0
„ „ 5	(1939—44)	....	98—12—0
„ „ 6	(1933—36)	....	101—8—0
„ „ 6½	(1935)	....	104—6—0
„ „ 5½	(1938—40)	....	101—12—0

(ಆದಾಯ ತೆರಿಗೆ ಇಲ್ಲದ್ದು)

„ „ 5	(1933)	....	101—5—0
„ „ 5	(1945—55)	....	104—6—0

ಮೈಸೂರು ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳದ್ದು)

ಸೇಕಡ ಬಡ್ಡಿ 5	(1929—44)	....	95—0—0

(ಆದಾಯ ತೆರಿಗೆ ಇಲ್ಲದ್ದು)

„ „ 6½	(1941—51)	....	110—0—0
„ „ 6¼	(1940)	....	106—14—0
„ „ 5½	(1938)	....	102—14—0
„ „ 5	(1955)	....	100—0—0
ಶಿವಮೊಗ್ಗ ರೈಲ್ವೆ	....	....	85—0—0
ಚಿತ್ರದುರ್ಗ ರೈಲ್ವೆ	....	....	84—6—0

ಕಂಪೆನಿಗಳ ಷೇರುಗಳ ಬೆಲೆ

ಬ್ಯಾಂಕುಗಳಲ್ಲಿ

ಇಂಪೀರಿಯಲ್ ಆಫ್. ಐ.	500 ರೂ. ಷೇರಿಗೆ	1180—8—0	ರೂ. ಬೆಲೆ	
„ ಕಾಂಟ್.	125 „	283—0—0	„	
ಇಂಡಿಯನ	.... 50 „	88—12—0	„	
ಮೈಸೂರು	.... 100 „	193—12—0	„	
ಬೆಂಗಳೂರು	.... 10 „	9—14—0	„	
ಇಂಡಸ್ಟ್ರಿಯಲ್	.... 25 „	9—4—0	„	
ದೇವಾಂಗ	.... 10 „	6—4—0	„	
ವೈಶ್ಯ	.... 50 „	50—0—0	„	

ಎಸ್. ಎಂ. ಎಸ್. ಐ.	10 „	10—0—0	„
ವರ್ಧಮಾನ	....	ನಾಮಿನಲ್	

ಇತರ ಬ್ಯಾಂಕುಗಳಲ್ಲಿ

ಬಿ. ಸಿ. ರೈಲ್ವೆ	25 ರೂ. ಷೇರಿಗೆ	....	14—4—0	ರೂ. ಬೆಲೆ
ಬೆಂಗಳೂರು ಪ್ರೆಸ್	100 „	....	83—0—0	„
ಬಾರ್ಟನ್‌ಸನ್ (ಆ)	10 „	....	7—8—0	„
„ (ಪ್ರಿ)	10 „	....	6—4—0	„
ಸ್ಪೆನ್ಸರ್ಸ್	....	....	82—0—0	„
ಬ್ರೂವರೀಸ್ (ಆ)	100 „	....	84—8—0	„
„ (ಪ್ರಿ)	100 „	....	82—4—0	„
ಟೈಲ್ ಅಂಡ್ ಕ್ಲೇವರ್ಕ್ಸ್			ನಾಮಿನಲ್	
ಪ್ರೀಮಿಯರ್	....	....	ಡಿಟೋ.	
ತಾತಾ ಹೈಡ್ರೋ (ಆ)	....	....	129—0—0	„
„ (ಪ್ರಿ)	....	....	108—6—0	„
ತಾತಾ ಐರನ್ (ಆ)	....	....	25—4—0	„
„ (ಡೆ)	....	....	226—0—0	„
„ (1)	....	....	119—0—0	„
„ (2)	....	....	42—0—0	„
ಶ್ರೀ ಕೃಷ್ಣ			ನಾಮಿನಲ್.	

ಇನ್ಷೂರೆನ್ಸು ಕಂಪೆನಿಯಲ್ಲಿ

ಏಷಿಯಾಟಿಕ್	5 ರೂ. ಷೇರಿಗೆ	....	5—2—0	ರೂ. ಬೆಲೆ
ಓರಿಯಂಟಲ್	500 „	....	1942—0—0	„
ರಿಲೇಯನ್ಸ್	100 „		95—0—0	„

ಡಿಬೆಂಚರುಗಳು

ಕೋಲಾರ	100 ರೂ. ಡಿಬೆಂಚರಿಗೆ		99—2—0	ರೂ. ಬೆಲೆ
ಮೈಸೂರು	100 „	....	104—6—0	„
ತುಮಕೂರು	100 „	....	103—10—0	„
ಹಾಸನ	100 „	....	93—0—0	„

ಮಿಲ್ಲುಗಳಲ್ಲಿ

ಬೆಂಗಳೂರು	100 ರೂ. ಗೆ	....	65—8—0	ರೂ. ಬೆಲೆ
ಬಿಂಕಿಂಗ್ಯಾಂ	100 „	....	151—4—0	„
ಗೋಕಾಕ್	100 „	....	112—0—0	„
ಕೈಸರ್‌ಹಿಂದ್	2½ „	....	1—5—0	„
ಮಿನರ್ವಾ	100 „	....	42—8—0	„
ಮಹಾರಾಜ	100 „	....	92—0—0	„
ಮಹಾಲಕ್ಷ್ಮಿ			ನಾಮಿನಲ್	
ಕೃಷ್ಣರಾಜೇಂದ್ರ	25 „	....	5—0—0	„

ಗಣಿಗಳಲ್ಲಿ

ಬಾಲಘಾಟ್ ಷಿಲಿಂಗ್	10 ಕ್ಕೆ	....	0—11—1½	ಬೆಲೆ
ಚಾಂಪಿಯನ್	„ 10 „	....	0—14—6	„
ಮೈಸೂರು	„ 10 „	....	0—13—3	„
ನಂದೀದುರ್ಗ	„ 10 „	....	0—26—10	„
ಉರಿಗಾಂ	„ 10 „	....	0—15—9	„
ಪೆನಿನ್ಸುಲರ್	„ 10 „	....	ನಾಮಿನಲ್	
ಶಿವಮೊಗ್ಗ	„		ನಾಮಿನಲ್	

ಎಂ. ನಂಜಪ್ಪ, ಜಹಗೀರ್‌ದಾರ್,
ಷೇರ್, ಸ್ಟಾಕ್ ಮತ್ತು ಜನರಲ್ ಬ್ರೋಕರ್.
181. ಕ್ಯಾವಲ್ರಿ ರೋಡು, ಬೆಂಗಳೂರು.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

21 M. C

೧೯೩೨ ನೆಯ ಇಸವಿ ಸೆಪ್ಟೆಂಬರ್ ತಾ॥ ೨೬ ರಿಂದ ಅಕ್ಟೋಬರ್ ತಾ॥ ೨ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗೀರಸ ನಾಮಸಂವತ್ಸರದ ಭಾದ್ರಪದ ಬಹುಳ ಏಕಾದಶಿಯಿಂದ ಆಶ್ವಯುಜ ಶುದ್ಧ ಬಿದಿಗೆ ವರೆಗಿನ ಪಂಚಾಂಗ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕನ್ಯಾ ಮಾಸ
26	[1]ಸೋಮ	ಏಕಾ	23-50	ಪುಷ್ಯ	0.11	11
27	ಮಂಗಳ	ದ್ವಾದ	26-22	ಆಶ್ಲೇ	0-55	12
28	ಬುಧ	ತ್ರಯೋ	19-47	ಮ-ಉ	0.3058-54	13
29	[2]ಗುರು	ಚತು	16-22	ಉತ್ತ	57-11	14
30	[3]ಶುಕ್ರ	ಅಮಾ	11-46	ಹಸ್ತ	53-42	15
1	[4]ಶನಿ	ಪಾಡ್ಯ	6-39	ಚಿತ್ತ	50-4	16
2	ಭಾನು	ಬಿ-ಉ	1-1-54-10	ಸ್ವಾತಿ	45-54	17

(1) ಮಳೆನಕ್ಷತ್ರ-ಹಸ್ತ ೧ ನೆಯ ಪಾದ. (2) ಮಳೆನಕ್ಷತ್ರ-ಹಸ್ತ ೨ ನೆಯ ಪಾದ. (3) ಮಹಾಲಯಾಮಾವಾಸ್ಯಾ. (4) ನವರಾತ್ರಾರಂಭ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG NO. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಂಕಜ ನಕ್ಷತ್ರ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನೃತ್ತಮುಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತಿಲಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸರ್ ೧೯೩೨ ನೆಯ ಇಸವಿ ಅಕ್ಟೋಬರ್ ತಾರೀಖು ೩ ನೆಯ ಸೋಮವಾರ [ಸಂಚಿಕೆ ೪೦

1932 ನೆಯ ಇಸವಿಯ ಮೈಸೂರು ದಸರಾ ವಸ್ತುಪ್ರದರ್ಶನ.

ಇಡೀ ಭರತಖಂಡದಲ್ಲೆಲ್ಲಾ ನಿಮ್ಮ ವಸ್ತುಗಳಿಗೆ ಗಿರಾಕಿಯನ್ನು ಪಡೆಯುವ ಅಭಿಲಾಷೆಯು ನಿಮಗಿದೆಯೆ?

ದಸರಾ ಕಾಲದಲ್ಲಿ ಭರತಖಂಡದ ಸಮಸ್ತ ಪ್ರಾಂತಗಳಿಂದಲೂ ಧನಿಕರಾದ ಜನರು ಗುಂಪು ಗುಂಪಾಗಿ ಮೈಸೂರು ನಗರಕ್ಕೆ ಬರುತ್ತಾರೆ. ಅವರು ನಿಮ್ಮ ವಸ್ತುಗಳನ್ನು ಕೊಳ್ಳುವ ಭರವಸೆಯು ವಿಶೇಷವಾಗಿದೆ.

ಅವರು ನಿಮ್ಮ ಸರಕುಗಳನ್ನು **1932** ನೆಯ ಇಸವಿ ಅಕ್ಟೋಬರು **1** ರ ಲಾಗಾಯಿತು **15** ನೆಯ ತಾರೀಖಿನವರೆಗೂ ನಡೆಯುವ ಮೈಸೂರು ದಸರಾ ವಸು ಪ್ರದರ್ಶನದಲ್ಲಿ ಆಜಮಾಯಿಷಿಮಾಡಿ ನೋಡುವುದಕ್ಕೆ ಅವಕಾಶಕೊಡಿ.

ಪ್ರದರ್ಶಕರಿಗೆ ಸಮಸ್ತ ಸೌಕರ್ಯಗಳನ್ನೂ ಒದಗಿಸಲಾಗುವುದು.

ಪ್ರದರ್ಶನಕ್ಕೆ ಸಂಬಂಧಪಟ್ಟ ಒಂದು ಕೈಪಿಡಿಯನ್ನು ಪ್ರಕಟಿಸುತ್ತೇವೆ. ಇದಕ್ಕೆ ಹಿಂದಣ ವರುಷಗಳಂತೆಯೇ ಅತ್ಯಧಿಕವಾಗಿ ಅದರ ಪ್ರತಿಗಳು ಮಾರಾಟವಾಗುವುವು. ಅದರಲ್ಲಿ ಕೆಲವು ಜಾಹಿರಾತುಗಳಿಗೆ ಮಾತ್ರವೇ ಸ್ಥಳವಿರುತ್ತದೆ.

"ಪ್ರಾಸ್ಪೆಕ್ಟಸ್" ಎಂಬ ಪ್ರಸಿದ್ಧಪತ್ರಿಕೆಗಾಗಿಯೂ ಜಾಹಿರಾತು ಪ್ರಕಟಣೆಯ ದರಗಳು ಮುಂತಾದವುಗಳಿಗಾಗಿಯೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

[50—13] ಸೆಕ್ರೆಟರಿ, ಮೈಸೂರು ದಸರಾ ಎಗ್ಜಿಬಿಷನ್ ಕಮಿಟಿ,
ಅಠಾರಾಕಚೇರಿ, ಬೆಂಗಳೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿಷ್ಯ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿಭಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರರೇಶ್ವರಶತಕ	೦—೧—೦	೦—೬—೦
ಬಸವೇಶ್ವರನಜನವ	೦—೮—೦	೦—೧೩—೦
ಸಟೀಕ ಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಸತ್ಯದ ಜಗತ್ತು] **೧೦೦೦ ರೂಪಾಯಿ ಇನಾಮು** [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಸಿಗಾಗಿ ಕ್ಷೀಣರಾಗಬೇಡಿರಿ.	**ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ** ರಜ] ವಜ್ರಾಂಗ ಸುಂದರಪಾಕದ. [ಸ್ವರ	ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವ, ಇದ್ದ ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಚಟ್ಟತನ, ಸ್ತಂಭವು, ತರತರೀತ ತರುಣರಂತೆ ಆಡಬೂದ್ದ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರ ವೀರ್ಯಶುದ್ಧಿಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ಗೋಲಿಯ ಒಂದು ಡಬ್ಬಿಗೆ ೫। ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳಸುವ ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀರೋಗ ನಿವಾರಣೇ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಟ್ಟಿಚಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಟ್ಟಿಚಿಟ್ಟು ಆಗೋಣ, ಮುಟ್ಟಿಚಿಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತಾ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ಗೋಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

[10—10]

ಪತ್ತಾ ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜ. ಎಂ. ಎಸ್. ಎಂ.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು [illegible] ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ [illegible]


(Registerd Trade Mark)

[illegible]

[10—6]

ಮೈಸೂರು ಸ್ಟಾರ್.

೧೯೩೨ನೇ ಇಸವಿ ಅಕ್ಟೋಬರ್ ತಾ|| ೩ನೆಯ ಸೋಮವಾರ.

SUSPENSION OF MOTOR TRAFFIC

The situation that has arisen on the bus-owners stopping the motor services in the State is really acute and distressing. The Government in spite of the protests from the various bus-owners and their associations raised from the 1st July 1932 the rates of road cess to double what they were prior to that. The time that they chose to increase the rate was most inauspicious. The bus-owners were being hit hardest with the worst depression the State has seen. Even with the old rates they were suffering losses on account of the depression. Now with the doubling of the rates they are faced virtually with ruin. The Government has been laying the trouble on the bus-owners themselves, and ascribing it to the cut-throat competition that they have adopted. There may be truth in that statement, but it is only a half-truth. Further, it has been brought about by the policy adopted by Government itself in issuing in the past permits to persons indiscriminately. Even if they had agreed to some extent between themselves, new permits would be given to persons who would upset the arrangement altogether. We are not sure if the Government is viewing this matter with the sympathy that it deserves. No doubt it is a hard thing for the prestige of Government to alter its order once passed. But what the bus-owners are asking it not a reversal of the order. The Dewan Saheb has very generously promised to constitute a special committee to examine the whole question. The bus-owners only want that pending the investigation by the committee, the Government may kindly stay the recovery of the double road cess and recover only at the previous rate. Surely this is not too much for the Government to concede. It is very doubtful if the Government have acquainted themselves with the real situation. If the trouble was merely with the unhealthy competition, it should have existed even prior to the levy of the double road cess. It has not been so. We might also point out that the rates weight most heavily in Mysore State. The highest rates in British India are in Madras, next to which comes Bombay. We are informed that Mysore rates amount to about two and a half times those in Madras. We ask in all humility, whether Government are fair. The Government may say that the roads are getting damaged and they must be maintained. There can be nothing more specious and fallacious than this. It is not only the busses but also the lorries, the motor cars, the bullock-carts etc., that cause the damage and how are they going to assess the exact damage caused by the busses? There are the Mysore Railways—State owned. Government is interested in seeing that its earnings are not affected and suspect that busses are affecting the railway earnings. This is only partially true. While they may take away some traffic they also feed the railways. Besides, the busses have worked a wonder in the State and brought civilisation into touch with the rural backward tracts. The bus is a modern necessity and it should be the duty of Government to provide as much encouragement as possible to this traffic. The drivers, the conductors, the cleaners and the vast army of the hands employed by the bus-owners are without work and without food and with them their families. **Is there not a soul in the Government who will feel the agony of these poor men and help them in this hour of need? We hope that Government will take a long view of things and a larg view and exercise their sympathy which they so often exhibit. There may be arguments for and against. Pending consideration of these arguments let there be ympathy—practical sympathy.**

ಬಸ್‌ಸಂಚಾರ ನಿಂತಿರುತ್ತದೆ.

ಬಸ್ಸುಗಳಮೇಲೆ ವಿಧಿಸಲ್ಪಟ್ಟಿರುವ ದಾರೀತೆರಿಗೆಯು ಹೆಚ್ಚಿಸಲ್ಪಡತಕೂಡದೆಂದು ಅವುಗಳ ಯಜಮಾನರುಗಳು ಮತ್ತು ಇವರುಗಳ ಸಂಘಗಳು ಪ್ರಭುತ್ವದವರಲ್ಲಿ ಮೊರೆಯಿಟ್ಟುಕೊಂಡಾಗ್ಯೂ ಕಳೆದ ಜುಲೈ ತಾ|| 1 ರಿಂದ ದ್ವಿಗುಣಮಾಡಲ್ಪಟ್ಟಿರುವ ಪ್ರಯುಕ್ತ, ಸಂಸ್ಥಾನದ ಎಲ್ಲ ಕಡೆಗಳಲ್ಲೂ ಬಸ್ಸುಗಳ ಸಂಚಾರವು ಇದೇ ತಾ|| 1 ರಿಂದ ನಿಲ್ಲಿಸಲ್ಪಟ್ಟಿರುತ್ತದೆ. ಇದರಿಂದ ಪ್ರಯಾಣಿಕರಿಗೆ ತತ್ರಾಪಿ ರೈಲು ಮಾರ್ಗವಿಲ್ಲದ ಕಡೆಯವರ ಸಂಚಾರಕ್ಕೆ ಬಹಳ ಕಷ್ಟನಷ್ಟಗಳು ಪ್ರಾಪ್ತವಾಗಿರುತ್ತವೆ. ಜನರಿಗುಂಟಾಗಿರುವ ದುಡ್ಡಿನ ತಾಪತ್ರಯದಿಂದ ಬಸ್ಸಿನವರು ನಷ್ಟವನ್ನನುಭವಿಸುತ್ತಿರುವ ವೇಳೆಯಲ್ಲಿ ದಾರೀತೆರಿಗೆಯನ್ನು ಹೆಚ್ಚಿಸಿರುವುದು ಬಹಳ ಅಸಮರ್ಪಕವಾಗಿರುತ್ತದೆ. ಆದರೆ ಸಂಸ್ಥಾನಕ್ಕೆ ಆರ್ಥಿಕ ದುಸ್ಥಿತಿಯು ಪ್ರಾಪ್ತವಾಗಿರುವಾಗ್ಗೆ ರೈಲ್ವೆಯುತ್ಪತ್ತಿಯು ಕಡಿಮೆಯಾಗಿರುವುದರಿಂದ ಬಸ್ಸುಗಳ ಮೇಲಿನ ದಾರೀತೆರಿಗೆಯನ್ನು ನಿರ್ವಾಹವಿಲ್ಲದೆ ಹೆಚ್ಚಿಸಬೇಕಾಗಿ ಬಂದಿತೆಂದೂ, ಈ ತೆರಿಗೆಯನ್ನು ಹೆಚ್ಚಿಸಿದುದರಿಂದ ಅವರುಗಳಿಗೆ ನಷ್ಟಸಂಭವಿಸದೆ ತಂತಮ್ಮೊಳಗೆ ಪೈಪೋಟಿಮಾಡಿ ನಷ್ಟಪಡುತ್ತಿರುವರೆಂದೂ ಪ್ರಭುತ್ವದವರು ವಾದಿಸುತ್ತಿರುವರು. ಪೈಪೋಟಿಯಿಂದ ನಷ್ಟವಾಗುತ್ತದೆಂಬುದು ಅರ್ಧದ ಮಟ್ಟಿಗೆ ನಿಜವಾಗಿರಬಹುದು. ಇದಕ್ಕೆ ಪ್ರಭುತ್ವದವರು ಅಸಮರ್ಥರಾದವರಿಗೆಲ್ಲ ಬಸ್ಸುಗಳನ್ನಿಟ್ಟು ಓಡಿಸಲು ಲೈಸೆನ್ಸು ಕೊಡುವುದು ಕಾರಣವಾಗಿರುತ್ತದೆ. ಪ್ರಭುತ್ವದವರು ಲೈಸೆನ್ಸು ಕೊಡುವಾಗ್ಗೆ ಅರ್ಜಿದಾರರ ಅರ್ಹತೆಯನ್ನು ತಿಳಿದು ಕೊಟ್ಟಿದ್ದಲ್ಲಿ ಕೊರಳ್ಕೊಯ್ಕ ಸ್ಪರ್ಧೆಗೆ ಅವಕಾಶವಾಗುತ್ತಿರಲೇ ಇಲ್ಲ. ಅಂತು ಪ್ರಭುತ್ವದವರು ತೆರಿಗೆಯನ್ನು ತಗ್ಗಿಸುವ ವಿಚಾರವನ್ನು ಸಾನುಭೂತಿಯಿಂದ ಪರಿಗಣಿಸುತ್ತಿರುವರೆಂದು ನಾವು ಹೇಳಲಾರೆವು. ಒಂದುವೇಳೆ ಮಾಡಿದ ಅಪ್ಪಣೆಯನ್ನು ಏಕಾಏಕಿ ತಪ್ಪಿಸುವುದು ಪ್ರಭುತ್ವದ ದರ್ಪಕ್ಕೆ ಕುಂದವೆಂಬುದರಲ್ಲಿ ಸಂಶಯವಿಲ್ಲ. ಆದರೆ ಬಸ್ಸಿನ ಯಜಮಾನರುಗಳು ಸರ್ಕಾರಿಯಪ್ಪಣೆಯನ್ನು ಬದಲಾಯಿಸಬೇಕೆಂದು ಮುಷ್ಕರಮಾಡುತ್ತಿಲ್ಲ. ಈ ದಾರಿತೆರಿಗೆಯನ್ನು ತಗ್ಗಿಸುವ ವಿಚಾರವನ್ನು ಪರ್ಯಾಲೋಚಿಸಲು ಒಂದು ಕಮಿಟಿಯನ್ನೇರ್ಪಡಿಸುವುದಾಗಿ ದಿವಾನರು ಅಪ್ಪಣೆಕೊಡಿಸಿರುತ್ತಾರೆ. ಈ ಕಮಿಟಿಯವರು ತೀರ್ಮಾನಿಸುವವರೆಗೆ ಹೆಚ್ಚು ದಾರೀತೆರಿಗೆಯನ್ನು ತೆಗೆದುಕೊಳ್ಳದೆ ಪೂರ್ವದ ತೆರಿಗೆಯನ್ನು ತೆಗೆದುಕೊಳ್ಳಬೇಕೆಂದು ಬಹಳ ದೈನ್ಯದಿಂದ ಪ್ರಾರ್ಥಿಸುತ್ತಿರುವರು. ಈ ಪ್ರಾರ್ಥನೆಯನ್ನು ನೆರವೇರಿಸಿಕೊಡುವುದೇನೂ ಪ್ರಭುತ್ವದವರಿಗೆ ದೊಡ್ಡದಲ್ಲ. ನಿಜವಾದ ಪರಿಸ್ಥಿತಿಯು ಪ್ರಭುತ್ವದವರಿಗೆ ಮನವರಿಕೆಯಾಗಿರುವುದಿಲ್ಲವೆಂದು ನಾವು ಖಂಡಿತವಾಗಿ ತಿಳಿದಿರುತ್ತೇವೆ. ಅರಿಷ್ಟಕಾರಕಸ್ಪರ್ಧೆಯು ಪ್ರಕೃತಸ್ಥಿತಿಗೆ ಕಾರಣವಾಗಿದ್ದರೆ ದಾರೀತೆರಿಗೆಯು ದ್ವಿಗುಣಮಾಡಲ್ಪಡುವುದಕ್ಕೆ ಮೊದಲೂ ಇರಬೇಕಾಗಿದ್ದಿತು. ಅದು ಹಾಗಿಲ್ಲವು. ನಮ್ಮ ಸಂಸ್ಥಾನದಲ್ಲಿ ವಿಧಿಸಲ್ಪಟ್ಟಿರುವ ತೆರಿಗೆಯ ದರವು ಮಿತಿಮೀರಿದೆ. ಭಾರತದೇಶದಲ್ಲೆಲ್ಲ ಮದ್ರಾಸು ಮತ್ತು ಬೆಂಬಾಯಿಗಳಲ್ಲಿ ವಿಧಿಸಲ್ಪಟ್ಟಿರುವ ತೆರಿಗೆ ಅತ್ಯಧಿಕವಾಗಿರುವುದು. ಆದರೆ ನಮ್ಮ ಸಂಸ್ಥಾನದ ದರವು ಮದ್ರಾಸಿನ ದರಕ್ಕಿಂತ ಎರಡೂವರೆಯಷ್ಟು ಹೆಚ್ಚಾಗಿರುವುದಾಗಿ ತಿಳಿಯುತ್ತೇವೆ. ಈ ಬಸ್ಸುಗಳ ಸಂಚಾರದಿಂದ ಮಾರ್ಗಗಳು ಹಾಳಾಗುತ್ತವೆ, ಇವನ್ನು ಸರಿಪಡಿಸಲು ಬಹಳ ವೆಚ್ಚವಾಗುವುದೆಂದು ಪ್ರಭುತ್ವದವರು ಹೇಳಬಹುದು. ಇವುಗಳ ಸಂಚಾರದಿಂದ ಮಾರ್ಗಗಳು ಕೆಡುವಂತೆಯೇ ಮೋಟಾರುಲಾರಿ, ಕಾರು ಎತ್ತಿನಬಂಡಿ ಮೊದಲಾದ ವಾಹನಗಳ ಸಂಚಾರದಿಂದಲೂ ಮಾರ್ಗಗಳು ಕೆಡುತ್ತವೆ ಆದುದರಿಂದ ಮೋಟಾರುಬಸ್ಸುಗಳ ತೆರಿಗೆಯ ದರವನ್ನು ಹೆಚ್ಚಿಸುವುದು ಯಾವ ನ್ಯಾಯ? ಪ್ರಭುತ್ವದವರಿಂದ ನಡೆಸಲ್ಪಡುತ್ತಿರುವ ರೈಲ್ವೆಗೆ ನಷ್ಟವಾಗದಂತೆ ನೋಡಿಕೊಳ್ಳಬೇಕಾಗಿರುತ್ತದೆ. ಆದರೆ ಬಸ್ಸು ಸಂಚಾರದಿಂದಲೇ ರೈಲ್ವೆಗೆ ನಷ್ಟವಾಗುತ್ತದೆಂದು ಹೇಳಲಾಗುವುದಿಲ್ಲ. ಇವುಗಳಿಂದ ರೈಲ್ವೆಗೂ ಕೊಂಚ ಸಹಾಯವಾಗುವುದು. ಇಷ್ಟೇ ಅಲ್ಲದೆ, ಬಸ್ಸುಗಳ ಸಂಚಾರದಿಂದ ಮೂಲೆಗಳಲ್ಲಿರುವ ಗ್ರಾಮಸ್ಥರುಗಳು ಸರಾಗವಾಗಿ ಪಟ್ಟಣಗಳಿಗೆ ಹೋಗಿಬರಲವಕಾಶವಾಗಿ ಅವರ ನಾಗರಿಕತೆಯು ಹೆಚ್ಚುವಂತಾಯಿತು. ಇದರಿಂದ ಬಸ್ಸಿನ ಪ್ರಯಾಣವು ಜನರಿಗೆ ಅನಿವಾರ್ಯವಾಗಿ ಪರಿಣಮಿಸಿರುತ್ತದೆ. ಅದುಕಾರಣ ಇವುಗಳ ಮೂಲಕವಾದ ಪ್ರಯಾಣಕ್ಕೆ ಸಾಧ್ಯವಾದ ಅನುಕೂಲ್ಯವನ್ನು ಕಲ್ಪಿಸಿಕೊಡುವುದು ಪ್ರಭುತ್ವದವರ ಧರ್ಮವು. ಅಲ್ಲದೆ ಈ ಬಸ್ಸುಗಳ ಸಂಚಾರ ನಿಂತಿರುವುದರಿಂದ ಇವುಗಳನ್ನು ನಡೆಸುವ, ಸರಿಪಡಿಸುವ ಶುಚಿಮಾಡುವ ಮೊದಲಾದ ಕಾರ್ಯಗಳಲ್ಲಿ ನಿಯುಕ್ತರಾಗಿರುವ ಸಾವಿರಾರು ಜನಗೂ, ಅವರ ಕುಟುಂಬದವರೂ ಜೀವನಕ್ಕೆ ಮಾರ್ಗವಿಲ್ಲದೆ ತಪಿಸುವಂತಾಗಿದೆ. ಇವರ ಗೋಳನ್ನು ತಪ್ಪಿಸಿ ಇವರನ್ನುದ್ಧರಿಸತಕ್ಕ ಪ್ರಾಣಿದಯಾಪರರಾಧಿಕಾರಿಗಳೊಬ್ಬರಾದರೂ ಇಲ್ಲವೆ? ಪ್ರಭುತ್ವದವರು ಬಹಳ ದೂರದೃಷ್ಟಿಯಿಂದಲೂ ವಿಶಾಲಹೃದಯದಿಂದಲೂ ಬಸ್ಸಿನವರ ಮೊರೆಯನ್ನು ಆಲಿಸಿ ಸಹಾನುಭೂತಿಯನ್ನು ತೋರಿಸುವರೆಂದು ನಿರೀಕ್ಷಿಸುತ್ತೇವೆ. ಅನುಕೂಲವಾಗಿಯೂ ಪ್ರತಿಕೂಲವಾಗಿಯೂ ವಾದಿಸಲು ಅವಕಾಶವಿರಬಹುದು. ಇವುಗಳ ಪರ್ಯಾಲೋಚನೆಯು ನಡೆಯುವವರೆಗೆ ನಿಜವಾದ ದಯೆಯನ್ನು ತೋರಿಸುವುದು ಅತ್ಯಗತ್ಯವು.

ಭೂಕಂಪದಿಂದಾದ ಅನಾಹುತ

ಬಾಲ್ಕನ್ಸಿನಲ್ಲಿ ಭೂಕಂಪವಾಗಿ 300 ಮಂದಿ ಸತ್ತರು ಮತ್ತು 1000 ಮಂದಿಗೆ ಮೇಲ್ಪಟ್ಟು ಅಪಾಯವನ್ನು ಹೊಂದಿದರು. ಜನರು ಭಯಭ್ರಾಂತರಾಗಿ ಬಾಗಿಲುಗಳನ್ನು ತೆಗೆಯಲಿಕ್ಕಿಲ್ಲದೆ ಕಿಟಕಿಗಳಿಂದ ಹೊರಕ್ಕೆ ಧುಮುಕಿ ದಿಕ್ಕಾಪಾಲಾಗಿ ಓಡುತ್ತಿದ್ದರು. ಅನೇಕರು ಬೀಳುತ್ತಿದ್ದ ತೊಲೆಗಳ ಮತ್ತು ತಾರ್ಸಿಯ ಕೆಳಗೆ ಸಿಕ್ಕಿ ಹತರಾದರು. ಜನರು ಕಂಗೆಟ್ಟು ಅಲೆಯುತ್ತಿರುವುದು ಹೃದಯದ್ರಾವಕ ದೃಶ್ಯವಾಗಿದೆ. ಒಂದು ಸಣ್ಣ ನದಿಯು ಮಾಯವಾಗಿರುವುದಲ್ಲದೆ ಒಂದು ಮೈಲು ಪ್ರದೇಶವು 4 ಅಡಿ ಆಳಕ್ಕೆ ಕುಸಿದುಹೋಗಿದೆ. ಅನೇಕ ಪ್ರಸಿದ್ಧವಾದ ಕಟ್ಟಡಗಳು ನಾಮಾವಶೇಷವಾಗಿವೆ.

ಮಹಾತ್ಮರ ದೀಕ್ಷಾವಿಸರ್ಜನಕ್ಕಾಗಿ ಆಂಡ್ರೂಸ್ ರವರ ಸಂತಸ

"ಪೂನಾ ಒಪ್ಪಂದವನ್ನು ಬ್ರಿಟಿಷು ದೊರತನದವರು ಅನುಮೋದಿಸಿರುವುದೂ ಮಹಾತ್ಮರು ಉಪವಾಸ ವ್ರತವನ್ನು ಬಿಟ್ಟುದೂ ಅತ್ಯಂತ ಸಂತೋಷಪ್ರದ ವಿಷಯಗಳಾಗಿವೆ. ಈ ಶತಮಾನದಲ್ಲಿ ನಡೆದಿರುವ ವಿಷಯಗಳಲ್ಲೆಲ್ಲ ಇದು ದೊಡ್ಡ ವಿಷಯವು. ಭಾರತ ದೇಶದಲ್ಲೆಲ್ಲ ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸುವ ಸೂಚನೆಗಳು ಕಂಡುಬರುತ್ತಿವೆ. ದೊರತನದವರು ಇಷ್ಟು ಚುರುಕಾಗಿ ಕೆಲಸ ಮಾಡುವುದು ಪ್ರಜೆಗಳ ವಿಶ್ವಾಸವನ್ನು ಪಡೆಯಲು ಬಹಳ ಸಹಾಯಕವಾಗುವುದು. ಇದರಿಂದ ಜಾಗ್ರತೆಯಲ್ಲೇ ರೌಂಡುಟೇಬಲ್ ಸಭೆಯು ಪೂರ್ತಿಯಾಗುವುದು. ದೊರತನದವರಿಗೂ ಕಾಂಗ್ರೆಸಿನವರಿಗೂ ಹುಟ್ಟಿರುವ ನಿರರ್ಥಕವಾದ ವಿವಾದವು ಇಷ್ಟರಲ್ಲೇ ಸರಿಹೋಗುದೆಂದು ನಾನು ಕೋರುತ್ತೇನೆ" ಎಂದು ಆಂಡ್ರೂಸ್‌ರವರು ಹೇಳಿರುತ್ತಾರೆ.

ಹಿಂದು ಮಹಮ್ಮದೀಯ ಸಮಸ್ಯೆ

ಅಸ್ಪೃಶ್ಯ ಸಮಸ್ಯೆಯು ಬಹಳ ಶ್ಲಾಘ್ಯವಾಗಿ ಪರಿಷ್ಕರಿಸಲ್ಪಟ್ಟುದರಿಂದ ಇತರ ಸಮಾಜದವರು ಕೂಡ ಈ ಪದ್ಧತಿಯನ್ನೇ ಸಾಮರಸ್ಯವನ್ನುಂಟುಮಾಡಲು ಪ್ರಯತ್ನಿಸಲಿಚ್ಛಿಸುತ್ತೇನೆ. ಭಗವದನುಗ್ರಹದಿಂದ ಸ್ವಲ್ಪ ಕಾಲದಲ್ಲಿಯೇ ನಮ್ಮ ದೇಶದಲ್ಲಿ ಪರಸ್ಪರ ವಿಶ್ವಾಸವೂ, ತ್ಯಾಗಶಕ್ತಿಯೂ, ಏಕೀಭಾವದಲ್ಲಿ ಗಟ್ಟಿಯಾದ ನಂಬಿಕೆಯೂ ಹುಟ್ಟುವುದಾಗಲಿ.

ಹಿಂದುಗಳೂ ಮಹಮ್ಮದೀಯರುಗಳೂ ಈ ಪ್ರಕಾರವಾಗಿ ಸಖ್ಯತ್ವವನ್ನು ಸರಿಪಡಿಸಿಕೊಳ್ಳುವವರಾಗಲಿ. 1920–22 ರಲ್ಲಿ ಮಹಮ್ಮದೀಯರ ವಿಚಾರವಾಗಿ ನನ್ನ ಭಾವವು ಹೇಗಿದ್ದಿತೊ ಇಂದೂ ಹಾಗೆಯೇ ಇರುವುದು. ಆಗ ದಿಲ್ಲಿಯಲ್ಲಿ ನನ್ನ ಜೀವಿತವನ್ನು ಅರ್ಪಿಸಲು ಸಿದ್ಧನಾಗಿದ್ದಂತೆಯೇ ಈಗಲೂ ಅರ್ಪಿಸಲು ಸಿದ್ಧನಾಗಿರುವೆನು. ಈಗ ದೇಶದಲ್ಲಿ ಒಂದು ಹೊಸ ಭಾವವು ಪ್ರಬಲವಾಗಿದೆ. ಆದುದರಿಂದ ಕೂಡಲೆ ಈ ಎರಡು ಸಮಾಜದವರೂ ಮನಃಪೂರ್ವಕವಾಗಿ ಇದಕ್ಕೆ ಪ್ರಯತ್ನಿಸಲಿ. ದೇಶದಲ್ಲಿ ಶಾಶ್ವತ ಶಾಂತಿಯನ್ನೂ ಗಾಢವಾದ ಐಕಮತ್ಯವನ್ನೂ ಇವರುಗಳುಂಟುಮಾಡಬೇಕಾಗಿದೆ. ಹಾಗಾದರೆ ಉಳಿದ ಜಾತಿಯವರು ಕೂಡ ಪ್ರಯತ್ನಿಸುವರು.

ದೊರತನದವರಿಗೂ ಅವರು ನನಗಾಗಿ ನಿಯಮಿಸಿದ ಡಾಕ್ಟರುಗಳಿಗೂ ಬಂದೀಖಾನೆಯಧಿಕಾರಿಗಳಿಗೂ ನಾನು ನನ್ನ ವಂದನೆಗಳನ್ನರ್ಪಿಸುತ್ತೇನೆ. ಅವರು ಎಲ್ಲ ವಿಷಯದಲ್ಲೂ ನನ್ನನ್ನು ಎಚ್ಚರಿಕೆಯಿಂದ ನೋಡಿಕೊಂಡರು, ನನಗೆ ಯಾವ ಕೊರತೆಯಾಗದಂತೆ ಏರ್ಪಡಿಸಿದ್ದರು. ಜೈಲು ಉದ್ಯೋಗಿಗಳು ಬಹಳ ಕಷ್ಟಪಟ್ಟು ಕೆಲಸಮಾಡಬೇಕಾಗಿ ಬಂದರೂ ಅವರು ಸಂತೋಷದಿಂದಲೇ ಕೆಲಸ ಮಾಡಿದರು. ಅದುಕಾರಣ ನಾನು ದೊಡ್ಡ ಉದ್ಯೋಗಿಗಳನ್ನೂ ಚಿಕ್ಕುದ್ಯೋಗಿಗಳನ್ನೂ ವಂದಿಸುತ್ತೇನೆ. ಇಷ್ಟು ಶೀಘ್ರದಲ್ಲಿ ತಮ್ಮ ಸಂತೋಷವನ್ನು ತಿಳುಹಿದುದಕ್ಕಾಗಿ ಬ್ರಿಟಿಷ್ ಮಂತ್ರಿವರ್ಗದವರನ್ನು ಕೂಡ ವಂದಿಸುತ್ತೇನೆ. ಅವರ ಪ್ರಕಟನೆಯನ್ನು ನಾನು ಓದಿದಾಗ ನನಗೆ ಕೆಲ ಸಂಶಯವುಂಟಾಯಿತು. ಮಂತ್ರಿವರ್ಗದವರು ಮಾಡಿದ ಜಾತಿ ಪುರಸ್ಕಾರಕ್ಕೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರ ಅವರು ಸಮ್ಮತಿಸಿದರು. ಇದು ಸಹಜವೇ. ಉಳಿದ ವಿಷಯಗಳನ್ನು ಕೂಡ ಅವರನುಮೋದಿಸಲು ಈಗ ರಾಜಕೀಯ ಸಂಬಂಧವಾದ ಕೆಲ ತೊಡಕಗಳಿರುತ್ತವೆ.

ಫಲರಸ ಸೇವನಾನಂತರ ಮಹಾತ್ಮರ ಪ್ರಕಟನೆ

ಈಶ್ವರ ಪ್ರೇರಣೆಯಿಂದ ಕೈಕೊಂಡ ಉಪವಾಸ ದೀಕ್ಷೆಯನ್ನು ಗುರುದೇವನ (ಕವಿಸಾರ್ವಭೌಮರ) ಸನ್ನಿಧಿಯಲ್ಲಿ ವಿಸರ್ಜಿಸಿದೆನು. ಕುಷ್ಠರೋಗಿಯಾದೊಬ್ಬ ಬಂದಿಯೂ, ಮಹಾಪಂಡಿತರಾದ ಪರಚುರಾಮಶಾಸ್ತ್ರಿಯೂ ಇದಿರುಬದಿರಾಗಿ ಕುಳಿತಿದ್ದರು. ಪ್ರಿಯ ಮಿತ್ರರೂ, ಬಂಧುವರ್ಗದವರೂ ನನ್ನ ಸುತ್ತಲೂ ಸೇರಿದ್ದರು. ರವೀಂದ್ರರು ಬಂಗಾಳಿ ಭಾಷೆಯಲ್ಲಿ ತಾವು ರಚಿಸಿದ ದೇವರ ಪ್ರಾರ್ಥನಾ ಪದ್ಯವನ್ನು ಹಾಡಿದರು. ಅನಂತರ ಪರಚುರಾಮಶಾಸ್ತ್ರಿಗಳು ಉಪನಿಷತ್ತು ಮಂತ್ರವನ್ನು ಓದಿದಮೇಲೆ ನನಗೆ ಬಹಳ ಪ್ರಿಯವಾದ "ವೈಷ್ಣವ ಜನತೋ" ಎಂಬ ಹಾಡನ್ನು ಸರ್ವರೂ ಕೂಡಿ ಹಾಡಿದರು. ಕಳೆದ 10 ದಿವಸಗಳಿಂದಲೂ ದೇಶಗಳಲ್ಲೆಲ್ಲ ನಡೆದ ಅದ್ಭುತಕಾರ್ಯಗಳು ದೇವರ ಮಹಿಮೆಯನ್ನು ಚೆನ್ನಾಗಿ ವ್ಯಕ್ತಪಡಿಸುತ್ತವೆ. ನನ್ನನ್ನು ಆಶೀರ್ವದಿಸಲು ಪ್ರಪಂಚದ ಎಲ್ಲ ದೇಶಗಳಿಂದಲೂ ತಂತಿವಾರ್ತೆಗಳು ಬಂದುದರಮೇಲೆ ನಾನು ಧೈರ್ಯದಿಂದ ದೀಕ್ಷೆಯನ್ನು ಕಡೆಗಾಣಿಸುವವನಾದೆನು. ಈ ಅಗ್ನಿಜ್ವಾಲೆಯು ಒಂದಾವರ್ತಿ ಪ್ರಜ್ವಲಗೊಳಿಸಲ್ಪಟ್ಟಮೇಲೆ ಅದು ಅಸ್ಪೃಶ್ಯತೆಯನ್ನು ನಿರ್ಮೂಲಮಾಡುವವರೆಗೂ ಈ ಅಗ್ನಿಯು ಆರಕೂಡದು. ನಾನು ಜೀವಿಸಿರುವ ಕಾಲದಲ್ಲಿ ಈ ಅಸ್ಪೃಶ್ಯತೆಯು ನಾಶವಾಗಬೇಕೆಂಬುದು ಈಶ್ವರನ ಸಂಕಲ್ಪವು. ಹಾಗಾಗದಿದ್ದಲ್ಲಿ ಇದನ್ನು ಅಣಗಿಸಲು ಪ್ರಾಣವನ್ನರ್ಪಿಸತಕ್ಕವರು ಅನೇಕ ಸಾವಿರಾರು ಮಂದಿಗಳಿರುತ್ತಾರೆಂದು ನಾನು ತಿಳಿದಿರುವೆನು. ಈಗ ನಡೆದಿರುವ ಒಪ್ಪಂದದ ವಿಚಾರವಾಗಿ ಎಲ್ಲರೂ ಸೇರಿ ಬಹಳ ಉದಾರವಾಗಿ ಕೆಲಸ ಮಾಡಿರುತ್ತಾರೆ. ಅಂಬೇಡಕರು, ಶ್ರೀನಿವಾಸರ್‌ರವರುಗಳ ಪಕ್ಷದವರಿಗೂ, ಎಂ.ಸಿ. ರಾಜಾಯವರ ಪಕ್ಷದವರಿಗೂ ನಾನು ಬಹಳ ಕೃತಜ್ಞನಾಗಿರುತ್ತೇನೆ. ಸವರ್ಣ ಹಿಂದುಗಳು ಅನೇಕ ಶತಮಾನಗಳಿಂದಲೂ ಅಸ್ಪೃಶ್ಯರನ್ನು ಬಹಳ ದುಸ್ಥಿತಿಗೀಡುಮಾಡಿರುವುದಕ್ಕಾಗಿ ಸವರ್ಣದವರಿಗೆ ತಕ್ಕ ಶಿಕ್ಷೆ ಮಾಡಬೇಕೆಂಬ ಉದ್ದೇಶವು ಈ ಅಸ್ಪೃಶ್ಯ ನಾಯಕರುಗಳಿಗೆ ಉಂಟಾಗಿದ್ದರೆ ಅವರು ಮೊಂಡಪಟ್ಟನ್ನು ಹಿಡಿಯುತ್ತಿದ್ದರು. ಅವರು ಹಾಗೆ ಮಾಡಿದರೂ ನನಗೆ ಕೋಪಹುಟ್ಟುವುದಿಲ್ಲ. ಸವರ್ಣದವರಿಂದ ಈವರೆಗೆ ಅಸ್ಪೃಶ್ಯರು ಅನುಭವಿಸಿದ ದುರವಸ್ಥೆಗಳಿಗೆ ಈಗ ನಾನು ಈ ಸಂದರ್ಭದಲ್ಲಿ ಪ್ರಾಣಬಿಡುವುದರಿಂದ ಸಂಪೂರ್ಣ ಪ್ರತಿಫಲವುಂಟಾಗುವುದಿಲ್ಲ. ಇದು ಬಹಳ ಸ್ವಲ್ಪ ಮಾತ್ರವಾಗುವುದು. ಆದರೆ ಅಸ್ಪೃಶ್ಯ ನಾಯಕರುಗಳು ಅಂತಹ ಪದ್ಧತಿಯನ್ನು ಅನುಸರಿಸಲಿಲ್ಲ. ಸರ್ವಮತಸಾರವಾದ ಕ್ಷಮಾ ಗುಣವನ್ನೇ ತೋರಿಸಿದರು.

ಇವರು ತೋರಿಸಿದ ಕ್ಷಮೆಗೆ ತಕ್ಕ ರೀತಿಯಲ್ಲಿ ಸವರ್ಣ ನಾಯಕರುಗಳು ಪ್ರವರ್ತಿಸುವವರಾಗಲಿ!

ಈ ಒಪ್ಪಂದವು ಅಸ್ಪೃಶ್ಯತಾ ನಿರ್ಮೂಲನಕ್ಕೆ ಪ್ರಥಮ ಸೋಪಾನ. ಇದರಲ್ಲಿ ರಾಜಕೀಯ ವಿಚಾರವು ಸಂಘ ಸಂಸ್ಕರಣದಲ್ಲೊಂದು ಅಲ್ಪ ವಿಷಯವಾದಾಗ್ಯೂ ಇದು ಬಹಳ ಮುಖ್ಯವೆಂದು ನಾನು ತಿಳಿದಿರುವೆನು. ಸಂಘ ಸಂಸ್ಕರಣ ವಿಚಾರವು ಬಹಳ ದೊಡ್ಡದು. ಹಿಂದು ಸಂಸ್ಕರ್ತರ ಮೇಲೆ ಅದರ ವಿಚಾರವಾಗಿ ಬಹಳ ಶ್ರದ್ಧೆಯಿಂದ ಕಾರ್ಯಭಾಗ ಮಾಡಬೇಕಾಗಿದೆ. ನ್ಯಾಯವಾದ ಕಾಲಪರಿಮಿತಿಯಲ್ಲಿ ಈ ಸಂಸ್ಕಾರಗಳು ಸಂಪೂರ್ಣವಾಗಿ ನೆರವೇರದೆ ಹೋದಲ್ಲಿ ನಾನು ಈ ದೀಕ್ಷೆಯನ್ನು ಈಗ ಪುನಃ ವಹಿಸಬೇಕಾದ ಅಗತ್ಯವು ಈ ದೀಕ್ಷೆಯನ್ನು ನಾನು ಬಿಡುವುದರಿಂದ ನನಗೆ ಉಂಟಾಗುತ್ತದೆಂದು ಸಂಸ್ಕರ್ತರಿಗೂ ಸವರ್ಣದವರಿಗೂ ಸ್ಪಷ್ಟವಾಗಿ ತಿಳಿಸಲಿಚ್ಛಿಸುತ್ತೇನೆ. ನಾನೀಗ ಕಾಲನಿರ್ಣಯವನ್ನು ಮಾಡಲು ಯೋಚಿಸಿಲ್ಲ. ಏಕೆಂದರೆ ಈಶ್ವರ ಪ್ರೇರಣೆಯಿಲ್ಲದೆ ನಾನು ಹೇಗೂ ಮಾಡಲಾರೆ. ಈ ಸ್ವಾತಂತ್ರ್ಯ ಸಂದೇಶವು ದೇಶದಲ್ಲಿರುವ ಎಲ್ಲ ಅಸ್ಪೃಶ್ಯರ ಕುಟೀರಗಳಲ್ಲೆಲ್ಲ ಸಂಪೂರ್ಣವಾಗಿ ವ್ಯಾಪಿಸುವಂತೆ ಮಾಡಬೇಕಲ್ಲದೆ ನಾನು ಪುನಃ ಉಪವಾಸವ್ರತವನ್ನು ಹಿಡಿಯದಿರುವಂತೆ ಮಾಡುವುದಕ್ಕಾಗಿ ಕಾರ್ಯೋತ್ಸಾಹದಿಂದ ಸಂಸ್ಕರಣ ಪರಾಯಣರನ್ನೂ, ಪೂರ್ವಾಚಾರ ಶರಣ್ಯರನ್ನೂ ನಿರ್ಬಂಧಿಸಲಾಗದು. ನಾವು ಕಷ್ಟವನ್ನನುಭವಿಸುತ್ತ ವಿರಾಮವಿಲ್ಲದೆ ಕೆಲಸಮಾಡುವುದರಿಂದಲೇ ಅಜ್ಞಾನವನ್ನೂ ಮೂಢ ನಂಬಿಕೆಯನ್ನೂ ಹೋಗಲಾಡಿಸಬೇಕು. ಅದಕ್ಕೆ ನಿರ್ಬಂಧವು ಎಷ್ಟು ಮಾತ್ರಕ್ಕೂ ಕೆಲಸಕ್ಕೆ ಬರುವುದಿಲ್ಲ.

ನೋಟೀಸು.

ಚಿತ್ರದುರ್ಗದ ಡಿಸ್ಟ್ರಿಕ್ಟ ಬೋರ್ಡ್

ತಾ|| 29-9-1932

ಈ ಕೆಳಗೆ ನಮೂದುಮಾಡಿರುವ ಕಾಂಗಾರಿಗಳನ್ನು ನಡೆಸತಕ್ಕ ಬಗ್ಗೆ ಪ್ರೆಸಿಡೆಂಟರವರ ಆಫೀಸಿನಲ್ಲಿ 29-10-32 ನೇ ಮಧ್ಯಾಹ್ನ 2 ಗಂಟೆಯವರೆಗೂ ಸೀಲ್ಡು ಟೆಂಡರುಗಳನ್ನು ಕೊಡಬಹುದು.

ಪ್ಲಾನ್ ವಗೈರೆ ಇತರ ವಿಷಯಗಳನ್ನು ಕೆಲಸ ನಡೆಯುತ್ತಾಯಿರುವ ಕಾಲಗಳಲ್ಲಿ ಡಿಸ್ಟ್ರಿಕ್ಟ ಬೋರ್ಡ್ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಕಾಂಗಾರಿ ಹೆಸರು	ಡಿಪಾಜಿಟ್ ಮೊಬಲಗು
ಚಿತ್ರದುರ್ಗ ತಾಲ್ಲೂಕು	ರೂ.
(1) ಪಾಳ್ಯ ಭಾವಿ ಸರಿಪಡಿಸುವುದು	200—0—0
ಚಳ್ಳಕೆರೆ ತಾಲ್ಲೂಕು	
(2) ಹೆಗ್ಗೆರೆ ಭಾವಿಯನ್ನು ಸರಿಪಡಿಸುವುದು	100—0—0
ಹಿರಿಯೂರು ತಾಲ್ಲೂಕು	
(3) ಕೋಡಿಹಳ್ಳಿಯಲ್ಲಿ ಗ್ರಾಮಸ್ಥರಿಗೆ ಹೊಸ ಭಾವಿ ಮಾಡುವುದು	100—0—0
ಹೊಳಲಕೆರೆ ತಾಲ್ಲೂಕು	
(4) ಹಿರಿಯಮ್ಮಿಗನೂರು ಭಾವಿ ಸರಿಪಡಿಸುವುದು	100—0—0
(5) ತಾಳ್ಯದ ಭಾವಿ ಸರಿಪಡಿಸುವುದು	100—0—0
(6) ದಾಸಿಕಟ್ಟೆ ಭಾವಿ ಸರಿಪಡಿಸುವುದು	100—0—0
(7) ಹರಿಹರದ ಸಬ್ ತಾಲ್ಲೂಕು ಕೊಂಡಜ್ಜಿ ಆದಿಕರ್ನಾಟಕರ ಭಾವಿ ಕಾಂಗಾರಿಗಳನ್ನು 1933 ನೇ ಏಪ್ರೆಲ್ ಮೊಹೆ ಆಖೈರುವಳಗಾಗಿ ಪೂರೈಸಬೇಕು.	

ಜಿ. ಚಿಕ್ಕಣ್ಣ,
ಪ್ರೆಸಿಡೆಂಟ್,
ಡಿ|| ಬೋ|| ಚಿತ್ರದುರ್ಗ.

ದಸರಾಮಹೋತ್ಸವಾರಂಭ

ಕಳೆದ ಶನಿವಾರ ಬೆಳಗ್ಗೆ ಶ್ರೀಮನ್ಮಹಾರಾಜರವರು ಅಭ್ಯಂಜನಸ್ನಾನ ದೇವತಾರ್ಚನೆಗಳನ್ನು ಪೂರೈಸಿಕೊಂಡು ದಿವ್ಯಾಂಬರಾಭರಣ ವಿಭೂಷಿತರಾಗಿ ೮| ಘಂಟೆಗೆ ಸಭಾಂಗಣಕ್ಕೆ ಚಿತ್ತೈಸಿ ನವಗ್ರಹಮುಖ ವಾಸ್ತು ಪೂಜೆಗಳನ್ನು ವಿಧಿವತ್ತಾಗಿ ನೆರವೇರಿಸಿ ಸಿಂಹಾಸನಪೂಜಾ ಪ್ರದಕ್ಷಿಣಾನಂತರ ಆರೋಹಣ ಮಾಡಿದರು. ನಾನಾ ವಾದ್ಯಗಳು ಘೋರ್ಗರೆದವು. ಚತುರಂಗಸೇನೆಯೂ ಜನಸ್ತೋಮವೂ ಜಯನಿನಾದ ಮಾಡಿದುವು. ಕೋಟೆಯ ಕೊತ್ತಲಿನಿಂದ 21 ಗುಂಡುಗಳು ಹಾರಿಸಲ್ಪಟ್ಟುವು. ಪಟ್ಟದಾನೆ ಕುದುರೆಗಳು ಕೆರೆಯಬಳಿಗೆ ಹೊರಟಮೇಲೆ ಸಕಲ ಸೇನಾ ಮರ್ಯಾದೆಯು ನಡೆದಿತು. ದಿವಾನರು, ಖಾಸಾ ಭಾವಮೈದುನರು ಕೌನ್ಸಿಲರುಗಳು ಸರದಾರರುಗಳು ಕೆಲ ಮುಖ್ಯ ಅರಸರುಗಳು ಇವರುಗಳಿಂದ ನಜರೊಪ್ಪಿಸಲ್ಪಟ್ಟ ನಂತರ ಸಭಿಕರ ಮುಜರೆ ನಡೆದು ಪುಷ್ಪಹಾರ ತಾಂಬೂಲಗಳ ವಿನಿಯೋಗವಾಗಿ ಪಟ್ಟದಾನೆ ಕುದುರೆಗಳು ಅರಮನೆಗೆ ಹಿಂದಿರುಗಿದಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು. ಸಾಯಂಕಾಲ 6 ಘಂಟೆಗೆ ಪಟ್ಟದಾನೆ ಕುದುರೆಗಳು ಸಕಲ ಮರ್ಯಾದೆಯೊಡನೆ ಕೆರೆಬಳಿಗೆ ತೆರಳಿದವು. ರಾತ್ರಿ 7 ಘಂಟೆಗೆ ಶ್ರೀಮನ್ಮಹಾರಾಜರವರು ಯಥಾಮರ್ಯಾದೆಯಿಂದ ಸಿಂಹಾಸನಾರೋಹಣಮಾಡಿದಮೇಲೆ ದರ್ಬಾರಿಗಳ ನಜರು ಮುಜರೆಗಳು ೮|| ಘಂಟೆವರೆಗೂ ನಡೆದುವು. ಪಟ್ಟದಾನೆ ಕುದುರೆಗಳು ಹಿಂದಿರುಗಿ ಬಂದಮೇಲೆ ಪುಷ್ಪ ತಾಂಬೂಲ ವಿನಿಯೋಗವಾಗಿ ಸಭಾವಿಸರ್ಜನೆಯಾಯಿತು. ಅಂದಿನಿಂದ ಶನಿವಾರದವರೆಗೂ ಪ್ರತಿ ರಾತ್ರಿ ದರ್ಬಾರು ನಡೆದು ಭಾನುವಾರ ಜಂಬೂಸವಾರಿ ಹೊರಡುವುದು. ವಿದ್ಯುದ್ದೀಪೋತ್ಸವವು ಕಳೆದ ವರ್ಷಗಳಿಗಿಂತಲೂ ಈ ವೇಳೆ ಅತಿಶಯವಾಗಿರುವುದು. ಅರಮನೆಯೊಳಗೆ ನಡೆಯುವ ಸಂಗೀತವು ಸಭಿಕರಿಗೂ ಹೊರಗಡೆ ನೆರೆದಿರುವ ಪ್ರೇಕ್ಷಕರಿಗೂ ಕೇಳಿಸುವಂತೆ ಲೌಡ್‌ಸ್ಪೀಕರ್ ಎಂಬ ಕೊಳವೆಗಳು ಸಭಾಂಗಣದ ಮುಂಗಡೆಯ ಕಂಬಗಳಿಗೆ ಸಂಬಂಧಿಸಲ್ಪಟ್ಟಿರುವುವು. ಪರಸ್ಥಳಗಳಿಂದ ಜನರು ಬರಲುಪಕ್ರಮವಾಗಿದೆ. ಆದರೆ ಬಸ್ಸುಗಳ ಮುಷ್ಕರದಿಂದ ಪ್ರಯಾಣಿಕರಿಗೆ ತೊಂದರೆಯಾಗಿರುವ ಪ್ರಯುಕ್ತ ಹೆಚ್ಚು ಜನರು ಬರುವುದು ಕೊಂಚ ಸಂಶಯವು.

ಒಳದೇಶದ ವೃತ್ತಾಂತಗಳು

ಹಾಸನದ ಡೆಪ್ಯುಟಿ ಕಮಿಷನರಾದ ಮ|| ಜಿ. ಬಿ. ಹೆಬ್ಲೀಕರವರು ಉದ್ಯೋಗದಿಂದ ನಿವೃತ್ತರಾಗುವುದರ ಪೂರ್ವಭಾವಿಯಾಗಿ 2 ವರ್ಷಗಳವರೆಗೆ ರಜಾಕೊಡಲ್ಪಟ್ಟಿರುವ ಪ್ರಯುಕ್ತ ರಜಾದಮೇಲಿದ್ದ ಮ|| ಟಿ ಜಿ. ರಾಮಯ್ಯರ್‌ರವರು ಹಾಸನದ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರಾಗಿಯೂ ಡಿ|| ಮೆಜಿಸ್ಟ್ರೇಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಮ|| ಸಾಹುಕಾರ್ ಅತ್ತಿಗುಪ್ಪೆ ಸೂರ್ಯನಾರಾಯಣಶೆಟ್ಟರು ದಸರಾ ಮಹೋತ್ಸವಕ್ಕೆ ಬರತಕ್ಕ ತಮ್ಮ ವೈಶ್ಯ ಕುಲದವರ ಭೋಜನಕ್ಕೂ ಜವಳಿ ವರ್ತಕರಾದ ಮ|| ಶ್ರೀನಿವಾಸಯ್ಯನವರು ತಮ್ಮ ದೇವಾಂಗ ಕುಲಸ್ಥರ ಭೋಜನಕ್ಕೂ ಕಳೆದ ಶನಿವಾರದಿಂದ 10-12 ದಿವಸಗಳ ವರೆಗೆ ಉಚಿತವಾದೇರ್ಪಾಟುಗಳನ್ನು ಮಾಡಿರುತ್ತಾರೆಂದು ತಿಳುಹಲು ಸಂತೋಷವಾಗುತ್ತದೆ.

ದಿವಾನರು ಕಳೆದ ಗುರುವಾರ ಬೆಳಗ್ಗೆ ಬೆಂಗಳೂರು ಕೋಟೆಯಲ್ಲಿ ಕಟ್ಟಲ್ಪಡುವ ಸೇಂಟ್‌ಲೂಕ್ಸ್ ಚರ್ಚಿನ ಶಂಕುಸ್ಥಾಪನೆಯನ್ನು ಮಾಡಿ ಶುಕ್ರವಾರ ಮಧ್ಯಾಹ್ನ ಸೋಮನಹಳ್ಳಿಗೆ ಬಂದು ಅಲ್ಲಿ ನಿರ್ಮಿಸಲ್ಪಟ್ಟಿರುವ ಒಕ್ಕಲಿಗರ ಹಾಸ್ಟಲ್ ಕಟ್ಟಡದ ಆರಂಭೋತ್ಸವವನ್ನು ನೆರವೇರಿಸಿ ಸಾಯಂಕಾಲ ರಾಜಧಾನಿಗೆ ದಯಮಾಡಿಸಿದರು. ಈ ಆರಂಭೋತ್ಸವದಲ್ಲಿ ಹಾಸ್ಟಲ್ ಕಮಿಟಿಯವರು ದಿವಾನರಿಗೊಪ್ಪಿಸಿದ ವಿಜ್ಞಾಪನಾ ಪತ್ರಿಕೆಯೂ ದಿವಾನರುತ್ತರವೂ ಈ ಪತ್ರಿಕೆಯ ಬೇರೊಂದುಕಡೆ ಮುದ್ರಿಸಲ್ಪಟ್ಟಿವೆ.

ಮೈಸೂರು ಸಂಸ್ಥಾನದಲ್ಲಿ ಓಡಾಡುವ ಮೋಟಾರು ಬಸ್ಸುಗಳ ಮೇಲೆ ವಿಧಿಸಲ್ಪಟ್ಟಿರುವ ರೋಡು ಸೆಸ್ಸು ದ್ವಿಗುಣಮಾಡಲ್ಪಟ್ಟಿರುವುದಷ್ಟೆ. ಇದರಿಂದ ತಮಗೆ ವಿಶೇಷ ನಷ್ಟಸಂಭವಿಸಿರುತ್ತಾದ ಪ್ರಯುಕ್ತ ಪೂರ್ವದ ದರಕ್ಕೆ ಸೆಸ್ಸನ್ನಿಳಿಸಿಕೊಡಬೇಕೆಂದು ಬಸ್ಸಿನ ಯಜಮಾನರುಗಳು ಪ್ರಭುತ್ವದವರಲ್ಲಿ ವಿಜ್ಞಾಪಿಸಿಕೊಂಡಾಗ್ಯೂ ಏನೂ ಪ್ರಯೋಜನವಾಗಲಿಲ್ಲವಾಗಿ ಶನಿವಾರದಿಂದ ಬಸ್ಸುಗಳ ಓಡಾಟವು ನಿಲ್ಲಿಸಲ್ಪಟ್ಟಿರುತ್ತದೆ. ಈ ಮುಷ್ಕರದಿಂದ ರೈಲಿಲ್ಲದ ಕಡೆ ಜನರ ಪ್ರಯಾಣಕ್ಕೆ ಬಹಳ ಅಡಚಣೆಯೂ ತೊಂದರೆಯೂ ಸಂಭವಿಸಿರುತ್ತಾದುದರಿಂದ ಪ್ರಭುತ್ವದವರು ಚೆನ್ನಾಗಿ ಪರ್ಯಾಲೋಚಿಸಿ ಸೆಸ್ಸನ್ನು ಮೊದಲಿನ ದರಕ್ಕೆ ಇಳಿಸಿಕೊಡುವುದು ಆಗತ್ಯವೆಂದು ಸೂಚಿಸುತ್ತೇವೆ. ಈ ಮುಷ್ಕರದಲ್ಲಿ ಬಸ್ಸಿನವರಿಗೂ ಪೋಲೀಸಿನವರಿಗೂ ಬಡಿದಾಟವಾದಂತೆ ತಿಳಿಯಬರುತ್ತದೆ.

ರಾಜಧಾನಿಯಲ್ಲಿ ಕಳೆದ ಶುಕ್ರವಾರದಿಂದಲೂ ಪ್ರತಿ ರಾತ್ರಿ ಮಳೆಯಾಗುತ್ತಿದೆ. ಇದರಿಂದ ಕೆರೆ ಕಟ್ಟೆಗಳಿಗೆ ನೀರು ತಕ್ಕಮಟ್ಟಿಗೆ ಬಂದಿರುವುದಲ್ಲದೆ ಒಣಗುತ್ತಿದ್ದ ರಾಗಿ ಪೈರು ಚೇತರಿಸಿಕೊಳ್ಳುವಂತಾಯಿತು. ಟವರ್ ಹಾಲಿನ ಉತ್ತರ ದಿಗ್ಭಾಗದಲ್ಲಿ ಎಲ್ಲ ಊರುಗಳಿಗೂ ಹೋಗಿ ಬರುವ ಬಸ್ಸುಗಳು ನಿಂತುಕೊಳ್ಳುವುದು ತಪ್ಪಿಸಲ್ಪಟ್ಟು ನಜರಬಾದಿನ ಆಸ್ಪತ್ರೆ ಪಕ್ಕದಲ್ಲಿ ನಿಲ್ಲುವಂತೆ ಏರ್ಪಡಿಸಲ್ಪಟ್ಟಿರುತ್ತದೆ. ಇದರಿಂದ ಪ್ರಯಾಣಿಕರಿಗೆ ತತ್ರಾಪಿ ಒಂಟಿಯಾಗಿ ಪ್ರಯಾಣಮಾಡುವ ಸ್ತ್ರೀಯರಿಗೆ ಬಹಳ ತೊಂದರೆಯೂ, ದುಬಾರಿ ಟಾಂಗಾಬಾಡಿಗೆಯೂ ಉಂಟಾಗಿರುತ್ತದೆಂದು ಜನರು ಪಶ್ಚಾತ್ತಾಪಪಡುತ್ತಿರುವರು. ಬೆಳಗಿನ 6 ಘಂಟೆಯಿಂದಲೂ ರಾತ್ರಿ 9 ಘಂಟೆಯವರೆಗೆ ಬಸ್ಸುಗಳ ತಿರುಗಾಟದ ಗದ್ದಲವಿದ್ದುದರಿಂದ ಟವರ್ ಹಾಲಿನ ಆವರಣದೊಳಗೆ ಅತ್ತಣಿಂದ ಪ್ರೇಕ್ಷಕ ಜನರೂ ಸೇರಲು ಅವಕಾಶವಿಲ್ಲದಿದ್ದುದು ಈಗ ಅವರಿಗೆ ಅನುಕೂಲವಾಯಿತು.

ಸೋಮನಹಳ್ಳಿಯಲ್ಲಿ ಒಕ್ಕಲಿಗರ ಸಂಗಡದ ವಿದ್ಯಾರ್ಥಿನಿಲಯದ (ಹಾಸ್ಟಲಿನ) ಪ್ರವೇಶಮಹೋತ್ಸವವನ್ನು ನೆರವೇರಿಸುವಾಗ್ಗೆ ಮೈಸೂರು ಸಂಸ್ಥಾನದ ದಿವಾನ್ ಸಾಹೇಬರು ಮಾಡಿದ ಭಾಷಣ.

(1932 ನೆಯ ಇಸವಿ ಸೆಪ್ಟಂಬರ್ 30 ನೆಯ ತಾರೀಖು.)

ಮಹನೀಯರೆ, ಈ ಕಟ್ಟಡವು ಸಿದ್ಧವಾದ ಒಟ್ಟು ಏರ್ಪಾಡಿನಲ್ಲಿ ನನಗೆಷ್ಟು ಆದರವೆಂಬುದನ್ನು ಶ್ರೀಮಾನ್ ಎಸ್. ಸಿ. ಮಲ್ಲಯ್ಯನವರು ಬಲ್ಲರು. ಆದಕಾರಣ, ಈ ದಿನ ಇದರ ಪ್ರವೇಶಮಹೋತ್ಸವವನ್ನು ನೆರವೇರಿಸುವುದು ನನಗೆಷ್ಟು ಸಂತೋಷಕರವಾದ ಕೆಲಸವೆಂಬುದನ್ನು ಬಹುಶಃ ನಿಮಗಿಂತಲೂ ಹೆಚ್ಚಾಗಿ ಅವರು ಮುಂದಟ್ಟು ಮಾಡಿಕೊಳ್ಳಬಲ್ಲರೆಂದು ತೋರುವುದು.

ಜನಗಳಿಗೆ ಉಪಯೋಗವಾಗುವಂತೆ ಖಾಸಗಿ ದೊಡ್ಡ ಮನುಷ್ಯರುಗಳು ನೆರವೇರಿಸುವ ಇಂಥ ಒಳ್ಳೆಯ ಕೆಲಸಗಳು ನಡೆಯುವುದು ನನಗೆ ಬಹಳ ಸಂತೋಷಕರ. ಅವುಗಳ ವಿಚಾರದಲ್ಲಿ ಪೂರ್ಣ ಮನಸ್ಸಿನಿಂದ ಕೂಡಿ ಅದರ ವಿಷ್ಣು ಆಸಕ್ತಿಯನ್ನು ತೋರಿಸುವುದು ನನಗೆ ಆನಂದವನ್ನುಂಟುಮಾಡುವುದೊಂದೇ ಅಲ್ಲ; ಅದು ನನ್ನ ಕರ್ತವ್ಯವೆಂದೂ ನಾನು ಭಾವಿಸಿದ್ದೇನೆ.

ಇಲ್ಲಿ ಒಂದು ಹಾಸ್ಟಲನ್ನೂ, ಒಂದು ಹೈಸ್ಕೂಲನ್ನೂ, ಏರ್ಪಡಿಸಿ ಸ್ಥಾಪಿಸುವ ಯೋಚನೆಯನ್ನು ಮಾಡಿದವರೆಲ್ಲರನ್ನೂ ನಾನು ಅಭಿನಂದಿಸುವೆನು. ಈ ಏರ್ಪಾಡಿನಿಂದ ಮುಂದೆ ಬಹಳ ಪ್ರಯೋಜನವಿದೆ. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ.

ಈ ಹಾಸ್ಟಲಿನ ಜೊತೆಗೆ ನೀವು ಯೋಚಿಸಿರುವಂತೆ ವ್ಯವಸಾಯದ ಕಸುಬನ್ನು ಕೂಡ ಕಲಿಸುವ ಹೈಸ್ಕೂಲಿಗೂ ಏರ್ಪಾಡು ಮಾಡುವ ಭಾಗದಲ್ಲಿ, ನೀವುಗಳು ಮಾಡಿರುವಂತೆ ಇಂಥ ಪ್ರಯತ್ನವನ್ನೇ ಸಂಸ್ಥಾನದಲ್ಲಿ ಮತ್ತೆಲ್ಲಿಯೂ ಯಾರೂ ನಡೆಯಿಸಿಲ್ಲವೆಂದು ಹೇಳಿದರೂ ಹೇಳಬಹುದಾಗಿದೆ. ಈ ರೀತಿ ನಿಮ್ಮಿಂದ ದೊಡ್ಡ ಕೆಲಸವು ನಡೆಯುವುದಾಗಿದೆ. ಈ ಏರ್ಪಾಡಿನಿಂದ ಉತ್ತಮ ಫಲವು ಲಭಿಸುವಂತೆ ಮಾಡುವ ಭಾಗದಲ್ಲಿ ವಿದ್ಯಾಭ್ಯಾಸದ ಇಲಾಖೆಯವರು ನಿಮ್ಮೊಡನೆ ಸಹಕರಿಸಿ ಸಂತೋಷದಿಂದ ಸಹಾಯ ಮಾಡುವರು. ನೀವು ಸ್ಥಾಪಿಸಲು ಯೋಚಿಸಿರುವ ಬಗೆಯ ಹೈಸ್ಕೂಲೂ, ಹಾಸ್ಟಲೂ, ಎರಡೂ ಇರುವುದಕ್ಕೆ ಇದು ಸರಿಯಾದ ಮತ್ತು ಸೊಗಸಾದ ಸ್ಥಳ. ವಿಶಾಲವಾದ ಮತ್ತು ಸುಂದರವಾದ ಕಟ್ಟಡವು ನಿಮಗೆ ಒದಗಿದೆ. ಮೈಸೂರಿನಿಂದ ಬೆಂಗಳೂರಿಗೆ ಹೋಗುವ ದೊಡ್ಡ ರಸ್ತೆಯ ಬಳಿಯಲ್ಲೇ ಈ ಕಟ್ಟಡವಿದೆ. ಪೈರುಪಚ್ಚೆಗಳಿಂದಲೂ ಗಿಡಮರಗಳಿಂದಲೂ ಕೂಡಿ, ಕಣ್ಣಿಗೆ ತಬ್ಬುವಷ್ಟೊದಗಿಸುವ ವಿಸ್ತರವಾದ ಪ್ರದೇಶದ ಮಧ್ಯದಲ್ಲಿ ಈ ಕಟ್ಟಡ. ಇದಕ್ಕೆ ಸಮೀಪದಲ್ಲೇ ಹರಿಯುತ್ತಿರುವ ಮನೋಹರವಾದ ನದಿ. ಪ್ರಕೃತಿ ದೇವಿಯು ಒದಗಿಸಿರುವ ಈ ರಮಣೀಯವಾದ ಸನ್ನಿವೇಶದ ಜೊತೆಗೆ ವಿದ್ಯುಚ್ಛಕ್ತಿಯ ದೀಪಗಳಿಂದ ಕಟ್ಟಡವನ್ನು ಬೆಳಗಿಸುವ ಮತ್ತು ವಿದ್ಯುಚ್ಛಕ್ತಿಯ ಸಹಾಯದಿಂದ ನೀರಾವರಿಗೆ ಪಂಪುಗಳಿಂದ ನೀರೆತ್ತುವ ಅನುಕೂಲವೂ ಇಲ್ಲಿ ಒದಗುವುದಾಗಿದೆ. ಆದಕಾರಣ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಇಂಥ ಸ್ಥಳವನ್ನು ಆರಿಸಿದ್ದಕ್ಕಾಗಿ ನಿಮಗೆ ಅಭಿನಂದನಗಳು ಸಲ್ಲಬೇಕಾಗಿವೆ. ನೀವು ಇದರಿಂದ ಪೂರ್ಣ ಪ್ರಯೋಜನವನ್ನು ಪಡೆಯುವಿರೆಂದು ನಾನು ನಂಬಿದ್ದೇನೆ. ಆದರೆ ಒಂದು ಮಾತು: ಪ್ರಕೃತಿದೇವಿಯು ಎಷ್ಟೇ ಹೆಚ್ಚಿನ ಭಾಗ್ಯಗಳನ್ನು ಬೇಕಾದರೂ ಕೊಟ್ಟಿರಬಹುದು. ಆದರೂ, ಅವುಗಳಿಂದ ಪೂರ್ಣವಾಗಿ ಪ್ರಯೋಜನಗಳನ್ನು ಪಡೆಯುವುದಕ್ಕೆ ಬೇಕಾದ ಮನುಷ್ಯ ಪ್ರಯತ್ನವು ನಡೆಯದೆ ಹೋದರೆ, ಹೆಚ್ಚು ಫಲವೇ ಆಗುವಹಾಗಿಲ್ಲ. ಶ್ರೀಮಾನ್ ಮಲ್ಲಯ್ಯನವರಂಥವರುಗಳು ಕೆಲಸಮಾಡಲು ದೊರೆತಿರುವುದು ನಿಮ್ಮ ಪುಣ್ಯ. ಇವರುಗಳು ಈ ಕಟ್ಟಡಗಳಿಂದ ಆಗಬೇಕಾದುದನ್ನೆಲ್ಲ ಆಗಮಾಡುವರೆಂದು ಖಂಡಿತವಾಗಿ ಹೇಳಬಹುದಾಗಿದೆ. ಇಂಥ ಹಾಸ್ಟಲುಗಳೂ, ಹೈಸ್ಕೂಲುಗಳೂ, ಏರ್ಪಟ್ಟದ್ದು ಸಫಲವಾಗಬೇಕಾದರೆ, ಜನರನ್ನು ಪ್ರೀತಿಯಿಂದ ಸೇರಿಸಿ ಕೆಲಸಮಾಡಿಸುವವರು ಬೇಕು. ಏಕಪ್ರಕಾರವಾಗಿ ಒಂದೇ ಸಮವಾಗಿರುವ ಉತ್ಸಾಹದಿಂದ ಕೂಡಿ ಇತರರಿಗೆ ದಾರಿತೋರಿಸಿ, ವಿವೇಕ ಹೇಳತಕ್ಕವರು ಬೇಕು. ಈ ಗುಣಗಳಿರುವವರ ಸಹಾಯವಿಲ್ಲದೆ ಹೋದರೆ, ಇಂಥ ಸಂಸ್ಥೆಗಳಲ್ಲಿ ಚೈತನ್ಯವೇ ಇಲ್ಲದೆ ಅವು ಕಳೆಗುಂದಿ ಹೋಗುವುವು. ನಿಮಗೆ ಮುಂದಾಳುಗಳಾಗಿ ನಿಂತಿರುವ ಶ್ರೀಮಾನ್ ಮಲ್ಲಯ್ಯನವರಲ್ಲಿಯೂ, ಅವರ ಜೊತೆಯವರಲ್ಲಿಯೂ ಈ ಶ್ರೇಷ್ಠ ಗುಣಗಳಿವೆ. ಆದಕಾರಣ, ನಿಮ್ಮ ಉದ್ದೇಶವು ಸಾಂಗವಾಗಿ ಈಡೇರಲು ಸ್ವಲ್ಪವೂ ಅನುಮಾನವಿಲ್ಲ. ಅವರುಗಳು ದೊಡ್ಡ ಪ್ರಯತ್ನವನ್ನು ಹೂಡಿದ್ದಾರೆ. ಈ ಪ್ರಯತ್ನವು ಸಫಲವಾಗಿ ನೆರವೇರಬೇಕಾದರೆ ಅವರುಗಳು ತಮ್ಮ ಶಕ್ತಿ ಸಾಮರ್ಥ್ಯಗಳನ್ನೆಲ್ಲಾ ವಿನಿಯೋಗಿಸಿ ಕೆಲಸಮಾಡುವುದು ಆವಶ್ಯಕವಾಗುತ್ತದೆ. ನಮ್ಮೆಲ್ಲರಿಗೂ ದೇಶಬಾಂಧವರಾದ ಒಕ್ಕಲಿಗ ಸಂಗಡದ ಕಿರಿಯವರಿಗೆ ಉತ್ತಮವಾದ ವಿದ್ಯಾಭ್ಯಾಸದ ಅನುಕೂಲವನ್ನೊದಗಿಸಿ ಅವರನ್ನು ಮುಂದಕ್ಕೆ ತರುವ ಕೆಲಸದಲ್ಲಿ ತಮ್ಮ ಉತ್ಸಾಹವನ್ನೆಲ್ಲಾ ಉಪಯೋಗಿಸುವುದಕ್ಕೆ ಅವರೆಲ್ಲರಿಗೂ ಒಳ್ಳೆಯದೊಂದು ಅವಕಾಶವು ದೊರೆತಿದೆ. ಅವರುಗಳು ಅದನ್ನು ಸಾರ್ಥಕಪಡಿಸುವ ಭಾಗದಲ್ಲಿ ಲೇಶವೂ ಸಂಶಯವಿಲ್ಲ.

ಕಾಲಕ್ರಮದಲ್ಲಿ ಇದು ಮಾದರಿಯ ಸಂಸ್ಥೆಯಾಗಿ ಪರಿಣಮಿಸುವಂತೆ ಮಾಡುವ ವಿಚಾರದಲ್ಲಿ, ಅವರು ಸಮಸ್ತ ಪ್ರಯತ್ನಗಳನ್ನೂ ನೆರವೇರಿಸಿಯೇ ನೆರವೇರಿಸುವರು. ನಾನು ಇದನ್ನು ದೃಢವಾಗಿ ನಂಬಿದ್ದೇನೆ.

ನಾನು ಪದೇಪದೇ ಈ ಮಾರ್ಗವಾಗಿ ಬರುತ್ತಲೇ ಇರುವೆನು; ಇದು ನಿಮ್ಮೆಲ್ಲರಿಗೂ ತಿಳಿದೇ ಇದೆ. ಈ ಸಂಸ್ಥೆಯು ಹೇಗೆ ಅಭಿವೃದ್ಧಿಯಾಗುತ್ತಿದೆಯೆಂಬುದನ್ನು ಪರಿಶೀಲಿಸುತ್ತ ಬರಲು ನನಗೆ ಇದರಿಂದ ಅನೇಕವಾಗಿ ಅವಕಾಶಗಳು ದೊರೆಯುವುವು. ನನ್ನಿಂದ ಸಾಧ್ಯವಾದಾಗಲೆಲ್ಲ ನಿಮಗೆ ಸಹಾಯ ಮಾಡಬೇಕೆಂಬುದೇ ನನ್ನ ಅಭಿಲಾಷೆ. ಈ ಅಭಿಲಾಷೆಯಿಂದ ಕೂಡಿ ಈ ಸಂಸ್ಥೆಯು ಅಭಿವೃದ್ಧಿಗೆ ಬರುವುದನ್ನೇ ನಾನು ಗಮನವಿಟ್ಟು ಆಸಕ್ತಿಯಿಂದ ನೋಡುತ್ತಿರುವೆನು.

ಮಹಾಶಯರೆ, ನೀವುಗಳು ನನ್ನ ವಿಷಯದಲ್ಲಿ ಸೂಚಿಸಿರುವ ಸವಿನುಡಿಗಳಿಗಾಗಿ ನಿಮಗೆ ವಂದನೆಗಳನ್ನು ಅರ್ಪಿಸುವೆನು. ನಾನು ಗ್ರಾಮಗಳ ಜನರ ಯೋಗಕ್ಷೇಮದಲ್ಲಿ ಆಸಕ್ತಿಯುಳ್ಳವನೆಂದು ನೀವು ಭಾವಿಸಿರುವುದರಿಂದ ನನ್ನ ಮನಸ್ಸಿಗೆ ಬಹು ಸಂತೋಷವಾಯಿತು.

ಗ್ರಾಮಗಳ ಸ್ಥಿತಿಯನ್ನು ಉತ್ತಮಪಡಿಸಬೇಕೆಂಬುದು, ನನ್ನ ಅಧಿಕಾರ ಸಂಬಂಧವಾಗಿ ನಾನು ನೆರವೇರಿಸಬೇಕೆಂದಿರುವ ಒಂದು ಮುಖ್ಯವಾದ ಕರ್ತವ್ಯವಾಗಿದೆ. ನಾನು ನೆರವೇರಿಸಬೇಕೆಂದು ನನಗೆ ಬಹಳ ಆಸೆಯಿರುವ ಮತ್ತೊಂದು ಮುಖ್ಯವಾದ ಕರ್ತವ್ಯವಿದೆ. ಅದನ್ನೂ ಹೇಳಿಯೇ ಬಿಡುತ್ತೇನೆ. ನಮ್ಮೆಲ್ಲರ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಜನಸಂಖ್ಯೆಯು ಕಡಿಮೆಯಾಗಿರುವ ಅಥವಾ ಅಲ್ಪವಾಗಿರುವ ಯಾವ ಪಂಗಡದವರೇ ಆಗಲಿ, ಸರ್ಕಾರದವರ ಗಮನಕ್ಕೆ ಬಂದಿಲ್ಲವೆಂಬ ಭಾವನೆಗೇ ಅವಕಾಶವಿರಕೂಡದು; ಶ್ರೀಮನ್ಮಹಾರಾಜರವರ ರಾಜ್ಯದಲ್ಲಿ ಎಷ್ಟೇ ದೂರವಾಗಿ ಯಾವ ಮೂಲೆಯಲ್ಲೇ ಇರುವ ಪ್ರದೇಶವೇ ಆಗಲಿ ಸರ್ಕಾರದವರ ಅನಾದರಕ್ಕೆ ಗುರಿಯಾಗಿದೆಯೆಂಬ ಭಾವನೆಗೇ ಅವಕಾಶವಿರಕೂಡದು—ಹೀಗೆ ಅವಕಾಶವಿರದಂತೆ ವರ್ತಿಸಬೇಕೆಂಬುದೇ, ನನ್ನ ಮನಸ್ಸಿಗೆ ಮುಖ್ಯವಾಗಿರುವ ಆ ಕರ್ತವ್ಯ. ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಸಮಸ್ತರೂ ತಮ್ಮ ಯೋಗಕ್ಷೇಮಗಳನ್ನು ಸರ್ಕಾರದವರು ಆಸಕ್ತಿಯಿಂದ ನೋಡಿಕೊಳ್ಳುತ್ತಿದ್ದಾರೆಂದೂ, ಮನುಷ್ಯ ಪ್ರಯತ್ನದಲ್ಲಿ ಒಂದು ಸರ್ಕಾರದಿಂದ ಸಾಧ್ಯವಿರುವುದನ್ನೆಲ್ಲಾ ಸರ್ಕಾರದವರು ತಮಗಾಗಿ ಮಾಡುತ್ತಿದ್ದಾರೆಂದೂ, ಭಾವಿಸುವಂತಾಗಬೇಕು. ಅದೇ ನನಗಿರುವ ದೊಡ್ಡ ಆಸೆ.

ಮಹಾಶಯರೆ, ಈ ಹಾಸ್ಟಲಿನ ಪ್ರವೇಶಮಹೋತ್ಸವವು ಇನ್ನು ನೆರವೇರಬಹುದೆಂದು ನಾನು ಸಂತೋಷದಿಂದ ಅನುಜ್ಞೆಯನ್ನು ಕೊಟ್ಟಿರುವೆನು. ಇದು ದಿನದಿನವೂ ಅಭಿವೃದ್ಧಿಗೆ ಬರುವಂತೆಯೂ, ಅದರ ವಿಚಾರದಲ್ಲಿ ನಾವು ನಿರೀಕ್ಷಿಸಿ ಹಾರೈಸುತ್ತಿರುವ ಆಸೆಗಳೆಲ್ಲವೂ ಈಡೇರುವಂತೆಯೂ, ಭಗವಂತನು ಅನುಗ್ರಹಿಸಲೆಂಬುದೇ ನನ್ನ ಪ್ರಾರ್ಥನೆ.

ಮೈಸೂರು ದಿವಾನರಾದ ಅಮೀನ್ ಉಲ್-ಮುಲ್ಕ್ ಶ್ರೀಮಾನ್ ಸರ್ ಮಿರ್ಜ ಇಸ್ಮಯಿಲ್,

ಬಿ.ಎ., ಒ.ಬಿ.ಇ., ಸಿ.ಐ.ಇ., ಕೆಟಿ., ಇವರ ಸನ್ನಿಧಿಯಲ್ಲಿ.

ಮಹಾಶಯರೆ, ಈ ಮದ್ದೂರಿಗೆ ತಮ್ಮ ಸುಖಾಗಮನವನ್ನು ಮದ್ದೂರು ಒಕ್ಕಲಿಗರ ಹಾಸ್ಟಲ್ ಕಮಿಟಿಯವರ ಪರ ನಾವು ಕೃತಜ್ಞತಾಪೂರ್ವಕವಾಗಿ ಬಯಸಿ, ಮದ್ದೂರಿನ ಒಕ್ಕಲಿಗರ

ಮೈಸೂರು ಸ್ಟಾರ್.

೧೯೩೨ನೇ ಇಸವಿ ಅಕ್ಟೋಬರ್ ತಾ|| ೩ನೆಯ ಸೋಮವಾರ.

SUSPENSION OF MOTOR TRAFFIC

The situation that has arisen on the bus-owners stopping the motor services in the State is really acute and distressing. The Government in spite of the protests from the various bus-owners and their associations raised from the 1st July 1932 the rates of road cess to double what they were prior to that. The time that they chose to increase the rate was most inauspicious. The bus-owners were being hit hardest with the worst depression the State has seen. Even with the old rates they were suffering losses on account of the depression. Now with the doubling of the rates they are faced virtually with ruin. The Government has been laying the trouble on the bus-owners themselves, and ascribing it to the cut-throat competition that they have adopted. There may be truth in that statement, but it is only a half-truth. Further, it has been brought about by the policy adopted by Government itself in issuing in the past permits to persons indiscriminately. Even if they had agreed to some extent between themselves, new permits would be given to persons who would upset the arrangement altogether. We are not sure if the Government is viewing this matter with the sympathy that it deserves. No doubt it is a hard thing for the prestige of Government to alter its order once passed. But what the bus-owners are asking it not a reversal of the order. The Dewan Saheb has very generously promised to constitute a special committee to examine the whole question. The bus-owners only want that pending the investigation by the committee, the Government may kindly stay the recovery of the double road cess and recover only at the previous rate. Surely this is not too much for the Government to concede. It is very doubtful if the Government have acquanited themselves with the real situation. If the trouble was merely with the unhealthy competition, it should have existed even prior to the levy of the double road cess. It has not been so. We might also point out that the rates weight most heavily in Mysore State. The highest rates in British India are in Madras, next to which comes Bombay. We are informed that Mysore rates amount to about two and a half times those in Madras. We ask in all humility, whether Government are fair. The Government may say that the roads are getting damaged and they must be maintained. There can be nothing more specious and fallacious than this. It is not only the busses but also the lorries, the motor cars, the bullock-carts etc., that cause the damage and how are they going to assess the exact damage caused by the busses? There are the Mysore Railways—State owned. Government is interested in seeing that its earnings are not affected and suspect that busses are affecting the railway earnings. This is only partially true. While they may take away some traffic they also feed the railways. Besides, the busses have worked a wonder in the State and brought civilisation into touch with the rural backward tracts. The bus is a modern necessity and it should be the duty of Government to provide as much encouragement as possible to this traffic. The drivers, the conductors, the cleaners and the vast army of the hands employed by the bus-owners are without work and without food and with them their families. **Is there not a soul in the Government who will feel the agony of these poor men and help them in this hour of need? We hope that Government will take a long view of things and a larg view and exercise their sympathy which they so often exhibit. There may be arguments for and against. Pending consideration of these arguments let there be ympathy—practical sympathy.**

ಬಸ್‌ಸಂಚಾರ ನಿಂತಿರುತ್ತದೆ.

ಬಸ್ಸುಗಳಮೇಲೆ ವಿಧಿಸಲ್ಪಟ್ಟಿರುವ ದಾರೀತೆರಿಗೆಯು ಹೆಚ್ಚಿಸಲ್ಪಡತಕೂಡದೆಂದು ಅವುಗಳ ಯಜಮಾನರುಗಳು ಮತ್ತು ಇವರುಗಳ ಸಂಘಗಳು ಪ್ರಭುತ್ವದವರಲ್ಲಿ ಮೋರೆಯಿಟ್ಟುಕೊಂಡಾಗ್ಯೂ ಕಳೆದ ಜುಲೈ ತಾ|| 1 ರಿಂದ ದ್ವಿಗುಣಮಾಡಲ್ಪಟ್ಟಿರುವ ಪ್ರಯುಕ್ತ, ಸಂಸ್ಥಾನದ ಎಲ್ಲ ಕಡೆಗಳಲ್ಲೂ ಬಸ್ಸುಗಳ ಸಂಚಾರವು ಇದೇ ತಾ|| 1 ರಿಂದ ನಿಲ್ಲಿಸಲ್ಪಟ್ಟಿರುತ್ತದೆ. ಇದರಿಂದ ಪ್ರಯಾಣಿಕರಿಗೆ ತತ್ರಾಪಿ ರೈಲು ಮಾರ್ಗವಿಲ್ಲದ ಕಡೆಯವರ ಸಂಚಾರಕ್ಕೆ ಬಹಳ ಕಷ್ಟನಷ್ಟಗಳು ಪ್ರಾಪ್ತವಾಗಿರುತ್ತವೆ. ಜನರಿಗುಂಟಾಗಿರುವ ದುಡ್ಡಿನ ತಾಪತ್ರಯದಿಂದ ಬಸ್ಸಿನವರು ನಷ್ಟವನ್ನನುಭವಿಸುತ್ತಿರುವ ವೇಳೆಯಲ್ಲಿ ದಾರೀತೆರಿಗೆಯನ್ನು ಹೆಚ್ಚಿಸಿರುವುದು ಬಹಳ ಅಸಮರ್ಪಕವಾಗಿರುತ್ತದೆ. ಆದರೆ ಸಂಸ್ಥಾನಕ್ಕೆ ಆರ್ಥಿಕ ದುಸ್ಥಿತಿಯು ಪ್ರಾಪ್ತವಾಗಿರುವಾಗ್ಗೆ ರೈಲ್ವೆಯುತ್ಪತ್ತಿಯು ಕಡಿಮೆಯಾಗಿರುವುದರಿಂದ ಬಸ್ಸುಗಳ ಮೇಲಿನ ದಾರೀತೆರಿಗೆಯನ್ನು ನಿರ್ವಾಹವಿಲ್ಲದೆ ಹೆಚ್ಚಿಸಬೇಕಾಗಿ ಬಂದಿತೆಂದೂ, ಈ ತೆರಿಗೆಯನ್ನು ಹೆಚ್ಚಿಸಿದುದರಿಂದ ಅವರುಗಳಿಗೆ ನಷ್ಟಸಂಭವಿಸದೆ ತಂತಮ್ಮೊಳಗೆ ಪೈಪೋಟಿಮಾಡಿ ನಷ್ಟಪಡುತ್ತಿರುವರೆಂದೂ ಪ್ರಭುತ್ವದವರು ವಾದಿಸುತ್ತಿರುವರು. ಪೈಪೋಟಿಯಿಂದ ನಷ್ಟವಾಗುತ್ತದೆಂಬುದು ಅರ್ಧದ ಮಟ್ಟಿಗೆ ನಿಜವಾಗಿರಬಹುದು. ಇದಕ್ಕೆ ಪ್ರಭುತ್ವದವರು ಅಸಮರ್ಥರಾದವರಿಗೆಲ್ಲ ಬಸ್ಸುಗಳನ್ನಿಟ್ಟು ಓಡಿಸಲು ಲೈಸೆನ್ಸು ಕೊಡುವುದು ಕಾರಣವಾಗಿರುತ್ತದೆ. ಪ್ರಭುತ್ವದವರು ಲೈಸೆನ್ಸು ಕೊಡುವಾಗ್ಗೆ ಅರ್ಜಿದಾರರ ಅರ್ಹತೆಯನ್ನು ತಿಳಿದು ಕೊಟ್ಟಿದ್ದಲ್ಲಿ ಕ್ರೂರವಾದ ಸ್ಪರ್ಧೆಗೆ ಅವಕಾಶವಾಗುತ್ತಿರಲೇ ಇಲ್ಲ. ಅಂತು ಪ್ರಭುತ್ವದವರು ತೆರಿಗೆಯನ್ನು ತಗ್ಗಿಸುವ ವಿಚಾರವನ್ನು ಸಾನುಭೂತಿಯಿಂದ ಪರಿಗಣಿಸುತ್ತಿರುವರೆಂದು ನಾವು ಹೇಳಲಾರೆವು. ಒಂದುವೇಳೆ ಮಾಡಿದ ಅಪ್ಪಣೆಯನ್ನು ಏಕಾಏಕಿ ತಪ್ಪಿಸುವುದು ಪ್ರಭುತ್ವದ ದರ್ಪಕ್ಕೆ ಕುಂದವೆಂಬುದರಲ್ಲಿ ಸಂಶಯವಿಲ್ಲ. ಆದರೆ ಬಸ್ಸಿನ ಯಜಮಾನರುಗಳು ಸರ್ಕಾರಿಯಪ್ಪಣೆಯನ್ನು ಬದಲಾಯಿಸಬೇಕೆಂದು ಮುಷ್ಕರಮಾಡುತ್ತಿಲ್ಲ. ಈ ದಾರಿತೆರಿಗೆಯನ್ನು ತಗ್ಗಿಸುವ ವಿಚಾರವನ್ನು ಪರ್ಯಾಲೋಚಿಸಲು ಒಂದು ಕಮಿಟಿಯನ್ನೇರ್ಪಡಿಸುವುದಾಗಿ ದಿವಾನರು ಅಪ್ಪಣೆಕೊಡಿಸಿರುತ್ತಾರೆ. ಈ ಕಮಿಟಿಯವರು ತೀರ್ಮಾನಿಸುವವರೆಗೆ ಹೆಚ್ಚು ದಾರೀತೆರಿಗೆಯನ್ನು ತೆಗೆದುಕೊಳ್ಳದೆ ಪೂರ್ವದ ತೆರಿಗೆಯನ್ನು ತೆಗೆದುಕೊಳ್ಳಬೇಕೆಂದು ಬಹಳ ದೈನ್ಯದಿಂದ ಪ್ರಾರ್ಥಿಸುತ್ತಿರುವರು. ಈ ಪ್ರಾರ್ಥನೆಯನ್ನು ನೆರವೇರಿಸಿಕೊಡುವುದೇನೂ ಪ್ರಭುತ್ವದವರಿಗೆ ದೊಡ್ಡದಲ್ಲ. ನಿಜವಾದ ಪರಿಸ್ಥಿತಿಯು ಪ್ರಭುತ್ವದವರಿಗೆ ಮನವರಿಕೆಯಾಗಿರುವುದಿಲ್ಲವೆಂದು ನಾವು ಖಂಡಿತವಾಗಿ ತಿಳಿದಿರುತ್ತೇವೆ. ಅರಿಷ್ಟಕಾರಕಸ್ಪರ್ಧೆಯು ಪ್ರಕೃತಸ್ಥಿತಿಗೆ ಕಾರಣವಾಗಿದ್ದರೆ ದಾರೀತೆರಿಗೆಯು ದ್ವಿಗುಣಮಾಡಲ್ಪಡುವುದಕ್ಕೆ ಮೊದಲೂ ಇರಬೇಕಾಗಿದ್ದಿತು. ಅದು ಹಾಗಿಲ್ಲವು. ನಮ್ಮ ಸಂಸ್ಥಾನದಲ್ಲಿ ವಿಧಿಸಲ್ಪಟ್ಟಿರುವ ತೆರಿಗೆಯ ದರವು ಮಿತಿಮೀರಿದೆ. ಭಾರತದೇಶದಲ್ಲೆಲ್ಲ ಮದ್ರಾಸು ಮತ್ತು ಬೊಂಬಾಯಿಗಳಲ್ಲಿ ವಿಧಿಸಲ್ಪಟ್ಟಿರುವ ತೆರಿಗೆ ಅತ್ಯಧಿಕವಾಗಿರುವುದು. ಆದರೆ ನಮ್ಮ ಸಂಸ್ಥಾನದ ದರವು ಮದ್ರಾಸಿನ ದರಕ್ಕಿಂತ ಎರಡೂವರೆಯಷ್ಟು ಹೆಚ್ಚಾಗಿರುವುದಾಗಿ ತಿಳಿಯುತ್ತೇವೆ. ಈ ಬಸ್ಸುಗಳ ಸಂಚಾರದಿಂದ ಮಾರ್ಗಗಳು ಹಾಳಾಗುತ್ತವೆ, ಇವನ್ನು ಸರಿಪಡಿಸಲು ಬಹಳ ವೆಚ್ಚವಾಗುವುದೆಂದು ಪ್ರಭುತ್ವದವರು ಹೇಳಬಹುದು. ಇವುಗಳ ಸಂಚಾರದಿಂದ ಮಾರ್ಗಗಳು ಕೆಡುವಂತೆಯೇ ಮೋಟಾರುಲಾರಿ, ಕಾರು ಎತ್ತಿನಬಂಡಿ ಮೊದಲಾದ ವಾಹನಗಳ ಸಂಚಾರದಿಂದಲೂ ಮಾರ್ಗಗಳು ಕೆಡುತ್ತವೆ ಆದುದರಿಂದ ಮೋಟಾರುಬಸ್ಸುಗಳ ತೆರಿಗೆಯ ದರವನ್ನು ಹೆಚ್ಚಿಸುವುದು ಯಾವ ನ್ಯಾಯ? ಪ್ರಭುತ್ವದವರಿಂದ ನಡೆಸಲ್ಪಡುತ್ತಿರುವ ರೈಲ್ವೆಗೆ ನಷ್ಟವಾಗದಂತೆ ನೋಡಿಕೊಳ್ಳಬೇಕಾಗಿರುತ್ತದೆ. ಆದರೆ ಬಸ್ಸು ಸಂಚಾರದಿಂದಲೇ ರೈಲ್ವೆಗೆ ನಷ್ಟವಾಗುತ್ತದೆಂದು ಹೇಳಾಗುವುದಿಲ್ಲ. ಇವುಗಳಿಂದ ರೈಲ್ವೆಗೂ ಕೊಂಚ ಸಹಾಯವಾಗುವುದು. ಇಷ್ಟೇ ಅಲ್ಲದೆ, ಬಸ್ಸುಗಳ ಸಂಚಾರದಿಂದ ಮೂಲೆಗಳಲ್ಲಿರುವ ಗ್ರಾಮಸ್ಥರುಗಳು ಸರಾಗವಾಗಿ ಪಟ್ಟಣಗಳಿಗೆ ಹೋಗಿಬರಲವಕಾಶವಾಗಿ ಅವರ ನಾಗರಿಕತೆಯು ಹೆಚ್ಚುವಂತಾಯಿತು. ಇದರಿಂದ ಬಸ್ಸಿನ ಪ್ರಯಾಣವು ಜನರಿಗೆ ಅನಿವಾರ್ಯವಾಗಿ ಪರಿಣಮಿಸಿರುತ್ತದೆ. ಅದುಕಾರಣ ಇವುಗಳ ಮೂಲಕವಾದ ಪ್ರಯಾಣಕ್ಕೆ ಸಾಧ್ಯವಾದ ಅನುಕೂಲ್ಯವನ್ನು ಕಲ್ಪಿಸಿಕೊಡುವುದು ಪ್ರಭುತ್ವದವರ ಧರ್ಮವು. ಅಲ್ಲದೆ ಈ ಬಸ್ಸುಗಳ ಸಂಚಾರ ನಿಂತಿರುವುದರಿಂದ ಇವುಗಳನ್ನು ನಡೆಸುವ, ಸರಿಪಡಿಸುವ ಶುಚಿಮಾಡುವ ಮೊದಲಾದ ಕಾರ್ಯಗಳಲ್ಲಿ ನಿಯುಕ್ತರಾಗಿರುವ ಸಾವಿರಾರು ಜನರೂ, ಅವರ ಕುಟುಂಬದವರೂ ಜೀವನಕ್ಕೆ ಮಾರ್ಗವಿಲ್ಲದೆ ತಪಿಸುವಂತಾಗಿದೆ. ಇವರ ಗೋಳನ್ನು ತಪ್ಪಿಸಿ ಇವರನ್ನುದ್ಧರಿಸತಕ್ಕ ಪ್ರಾಣಿದಯಾಪರಾಧಿಕಾರಿಯೊಬ್ಬರಾದರೂ ಇಲ್ಲವೆ? ಪ್ರಭುತ್ವದವರು ಬಹಳ ದೂರದೃಷ್ಟಿಯಿಂದಲೂ ವಿಶಾಲಹೃದಯದಿಂದಲೂ ಬಸ್ಸಿನವರ ಮೊರೆಯನ್ನು ಆಲಿಸಿ ಸಹಾನುಭೂತಿಯನ್ನು ತೋರಿಸುವರೆಂದು ನಿರೀಕ್ಷಿಸುತ್ತೇವೆ. ಅನುಕೂಲವಾಗಿಯೂ ಪ್ರತಿಕೂಲವಾಗಿಯೂ ವಾದಿಸಲು ಅವಕಾಶವಿರಬಹುದು. ಇವುಗಳ ಪರ್ಯಾಲೋಚನೆಯು ನಡೆಯುವವರೆಗೆ ನಿಜವಾದ ದಯೆಯನ್ನು ತೋರಿಸುವುದು ಅತ್ಯಗತ್ಯವು.

ಭೂಕಂಪದಿಂದಾದ ಅನಾಹುತ

ಬಾಲ್ಕನ್ಸಿನಲ್ಲಿ ಭೂಕಂಪವಾಗಿ 300 ಮಂದಿ ಸತ್ತರು ಮತ್ತು 1000 ಮಂದಿಗೆ ಮೇಲ್ಪಟ್ಟು ಅಪಾಯವನ್ನು ಹೊಂದಿದರು. ಜನರು ಭಯಭ್ರಾಂತರಾಗಿ ಬಾಗಿಲುಗಳನ್ನು ತೆಗೆಯಲಿಕ್ಕಿಲ್ಲದೆ ಕಿಟಕಿಗಳಿಂದ ಹೊರಕ್ಕೆದುಮಿ ದಿಕ್ಕಾಪಾಲಾಗಿ ಓಡುತ್ತಿದ್ದರು. ಅನೇಕರು ಬೀಳುತ್ತಿದ್ದ ತೊಲೆಗಳ ಮತ್ತು ತಾರ್ಸಿಯ ಕೆಳಗೆ ಸಿಕ್ಕಿ ಹತರಾದರು. ಜನರು ಕಂಗೆಟ್ಟು ಅಲೆಯುತ್ತಿರುವುದು ಹೃದಯದ್ರಾವಕ ದೃಶ್ಯವಾಗಿದೆ. ಒಂದು ಸಣ್ಣ ನದಿಯು ಮಾಯವಾಗಿರುವುದಲ್ಲದೆ ಒಂದು ಮೈಲು ಪ್ರದೇಶವು 4 ಅಡಿ ಆಳಕ್ಕೆ ಕುಸಿದುಹೋಗಿದೆ. ಅನೇಕ ಪ್ರಸಿದ್ಧವಾದ ಕಟ್ಟಡಗಳು ನಾಮಾವಶೇಷವಾಗಿವೆ.

ಮಹಾತ್ಮರ ದೀಕ್ಷಾವಿಸರ್ಜನಕ್ಕಾಗಿ ಆಂಡ್ರೂಸ್ ರವರ ಸಂತಸ

"ಪೂನಾ ಒಪ್ಪಂದವನ್ನು ಬ್ರಿಟಿಷು ದೊರತನದವರು ಅನುಮೋದಿಸಿರುವುದೂ ಮಹಾತ್ಮರು ಉಪವಾಸ ವ್ರತವನ್ನು ಬಿಟ್ಟುದೂ ಅತ್ಯಂತ ಸಂತೋಷಪ್ರದ ವಿಷಯಗಳಾಗಿವೆ. ಈ ಶತಮಾನದಲ್ಲಿ ನಡೆದಿರುವ ವಿಷಯಗಳಲ್ಲೆಲ್ಲ ಇದು ದೊಡ್ಡ ವಿಷಯವು. ಭಾರತ ದೇಶದಲ್ಲೆಲ್ಲ ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸುವ ಸೂಚನೆಗಳು ಕಂಡುಬರುತ್ತಿವೆ. ದೊರತನದವರು ಇಷ್ಟು ಚುರುಕಾಗಿ ಕೆಲಸ ಮಾಡುವುದು ಪ್ರಜೆಗಳ ವಿಶ್ವಾಸವನ್ನು ಪಡೆಯಲು ಬಹಳ ಸಹಾಯಕವಾಗುವುದು. ಇದರಿಂದ ಜಾಗ್ರತೆಯಲ್ಲೇ ರೌಂಡುಟೇಬಲ್ ಸಭೆಯು ಪೂರ್ತಿಯಾಗುವುದು. ದೊರತನದವರಿಗೂ ಕಾಂಗ್ರೆಸಿನವರಿಗೂ ಹುಟ್ಟಿರುವ ನಿರರ್ಥಕವಾದ ವಿವಾದವು ಇಷ್ಟರಲ್ಲೇ ಸರಿಹೋಗುದೆಂದು ನಾನು ಕೋರುತ್ತೇನೆ" ಎಂದು ಆಂಡ್ರೂಸ್‌ರವರು ಹೇಳಿರುತ್ತಾರೆ.

ಹಿಂದು ಮಹಮ್ಮದೀಯ ಸಮಸ್ಯೆ

ಅಸ್ಪೃಶ್ಯ ಸಮಸ್ಯೆಯು ಬಹಳ ಶ್ಲಾಘ್ಯವಾಗಿ ಪರಿಷ್ಕರಿಸಲ್ಪಟ್ಟುದರಿಂದ ಇತರ ಸಮಾಜದವರು ಕೂಡ ಈ ಪದ್ಧತಿಯನ್ನೇ ಸಾಮರಸ್ಯವನ್ನುಂಟುಮಾಡಲು ಪ್ರಯತ್ನಿಸಲಿಚ್ಛಿಸುತ್ತೇನೆ. ಭಗವದನುಗ್ರಹದಿಂದ ಸ್ವಲ್ಪ ಕಾಲದಲ್ಲಿಯೇ ನಮ್ಮ ದೇಶದಲ್ಲಿ ಪರಸ್ಪರ ವಿಶ್ವಾಸವೂ, ತ್ಯಾಗಶಕ್ತಿಯೂ, ಏಕೀಭಾವದಲ್ಲಿ ಗಟ್ಟಿಯಾದ ನಂಬಿಕೆಯೂ ಹುಟ್ಟುವುದಾಗಲಿ.

ಹಿಂದುಗಳೂ ಮಹಮ್ಮದೀಯರುಗಳೂ ಈ ಪ್ರಕಾರವಾಗಿ ಸಖ್ಯತ್ವವನ್ನು ಸರಿಪಡಿಸಿಕೊಳ್ಳುವವರಾಗಲಿ. 1920–22 ರಲ್ಲಿ ಮಹಮ್ಮದೀಯರ ವಿಚಾರವಾಗಿ ನನ್ನ ಭಾವವು ಹೇಗಿದ್ದಿತೊ ಇಂದೂ ಹಾಗೆಯೇ ಇರುವುದು. ಆಗ ದಿಲ್ಲಿಯಲ್ಲಿ ನನ್ನ ಜೀವಿತವನ್ನು ಅರ್ಪಿಸಲು ಸಿದ್ಧನಾಗಿದ್ದಂತೆಯೇ ಈಗಲೂ ಅರ್ಪಿಸಲು ಸಿದ್ಧನಾಗಿರುವೆನು. ಈಗ ದೇಶದಲ್ಲಿ ಒಂದು ಹೊಸ ಭಾವವು ಪ್ರಬಲವಾಗಿದೆ. ಆದುದರಿಂದ ಕೂಡಲೆ ಈ ಎರಡು ಸಮಾಜದವರೂ ಮನಃಪೂರ್ವಕವಾಗಿ ಇದಕ್ಕೆ ಪ್ರಯತ್ನಿಸಲಿ. ದೇಶದಲ್ಲಿ ಶಾಶ್ವತ ಶಾಂತಿಯನ್ನೂ ಗಾಢವಾದ ಏಕಮತ್ಯವನ್ನೂ ಇವರುಗಳುಂಟುಮಾಡಬೇಕಾಗಿದೆ. ಹಾಗಾದರೆ ಉಳಿದ ಜಾತಿಯವರು ಕೂಡ ಪ್ರಯತ್ನಿಸುವರು.

ದೊರತನದವರಿಗೂ ಅವರು ನನಗಾಗಿ ನಿಯಮಿಸಿದ ಡಾಕ್ಟರುಗಳಿಗೂ ಬಂದೀಖಾನೆಯಧಿಕಾರಿಗಳಿಗೂ ನಾನು ನನ್ನ ವಂದನೆಗಳನ್ನರ್ಪಿಸುತ್ತೇನೆ. ಅವರು ಎಲ್ಲ ವಿಷಯದಲ್ಲೂ ನನ್ನನ್ನು ಎಚ್ಚರಿಕೆಯಿಂದ ನೋಡಿಕೊಂಡರು, ನನಗೆ ಯಾವ ಕೊರತೆಯಾಗದಂತೆ ಏರ್ಪಡಿಸಿದ್ದರು. ಜೈಲು ಉದ್ಯೋಗಿಗಳು ಬಹಳ ಕಷ್ಟಪಟ್ಟು ಕೆಲಸಮಾಡಬೇಕಾಗಿ ಬಂದರೂ ಅವರು ಸಂತೋಷದಿಂದಲೇ ಕೆಲಸ ಮಾಡಿದರು. ಅದುಕಾರಣ ನಾನು ದೊಡ್ಡ ಉದ್ಯೋಗಿಗಳನ್ನೂ ಚಿಕ್ಕುದ್ಯೋಗಿಗಳನ್ನೂ ವಂದಿಸುತ್ತೇನೆ. ಇಷ್ಟು ಶೀಘ್ರದಲ್ಲಿ ತಮ್ಮ ಸಂತೋಷವನ್ನು ತಿಳುಹಿದುದಕ್ಕಾಗಿ ಬ್ರಿಟಿಷ್ ಮಂತ್ರಿವರ್ಗದವರನ್ನು ಕೂಡ ವಂದಿಸುತ್ತೇನೆ. ಅವರ ಪ್ರಕಟನೆಯನ್ನು ನಾನು ಓದಿದಾಗ ನನಗೆ ಕೆಲ ಸಂಶಯವುಂಟಾಯಿತು. ಮಂತ್ರಿವರ್ಗದವರು ಮಾಡಿದ ಜಾತಿ ಪರಿಷ್ಕಾರಕ್ಕೆ ಸಂಬಂಧಪಟ್ಟ ವಿಷಯಗಳನ್ನು ಮಾತ್ರ ಅವರು ಸಮ್ಮತಿಸಿದರು. ಇದು ಸಹಜವೇ. ಉಳಿದ ವಿಷಯಗಳನ್ನು ಕೂಡ ಅವರನುಮೋದಿಸಲು ಈಗ ರಾಜಕೀಯ ಸಂಬಂಧವಾದ ಕೆಲ ತೊಡಕಗಳಿರುತ್ತವೆ.

ಫಲರಸ ಸೇವನಾನಂತರ ಮಹಾತ್ಮರ ಪ್ರಕಟನೆ

ಈಶ್ವರ ಪ್ರೇರಣೆಯಿಂದ ಕೈಕೊಂಡ ಉಪವಾಸ ದೀಕ್ಷೆಯನ್ನು ಗುರುದೇವನ (ಕವಿಸಾರ್ವಭೌಮರ) ಸನ್ನಿಧಿಯಲ್ಲಿ ವಿಸರ್ಜಿಸಿದೆನು. ಕುಷ್ಠರೋಗಿಯಾದೊಬ್ಬ ಬಂದಿಯೂ, ಮಹಾಪಂಡಿತರಾದ ಪರಚುರಾಮಾಶಾಸ್ತ್ರಿಯೂ ಇದಿರುಬದಿರಾಗಿ ಕುಳಿತಿದ್ದರು. ಪ್ರಿಯ ಮಿತ್ರರೂ, ಬಂಧುವರ್ಗದವರೂ ನನ್ನ ಸುತ್ತಲೂ ಸೇರಿದ್ದರು. ರವೀಂದ್ರರು ಬಂಗಾಳೀ ಭಾಷೆಯಲ್ಲಿ ತಾವು ರಚಿಸಿದ ದೇವರ ಪ್ರಾರ್ಥನಾ ಪದ್ಯವನ್ನು ಹಾಡಿದರು. ಅನಂತರ ಪರಚುರಾಮಾಶಾಸ್ತ್ರಿಗಳು ಉಪನಿಷತ್ತು ಮಂತ್ರವನ್ನು ಓದಿದಮೇಲೆ ನನಗೆ ಬಹಳ ಪ್ರಿಯವಾದ "ವೈಷ್ಣವ ಜನತೋ" ಎಂಬ ಹಾಡನ್ನು ಸರ್ವರೂ ಕೂಡಿ ಹಾಡಿದರು. ಕಳೆದ 10 ದಿವಸಗಳಿಂದಲೂ ದೇಶಗಳಲ್ಲೆಲ್ಲ ನಡೆದ ಅದ್ಭುತಕಾರ್ಯಗಳು ದೇವರ ಮಹಿಮೆಯನ್ನು ಚೆನ್ನಾಗಿ ವ್ಯಕ್ತಪಡಿಸುತ್ತವೆ. ನನ್ನನ್ನು ಆಶೀರ್ವದಿಸಲು ಪ್ರಪಂಚದ ಎಲ್ಲಾ ದೇಶಗಳಿಂದಲೂ ತಂತಿವಾರ್ತೆಗಳು ಬಂದುದರಮೇಲೆ ಹಿಂದು ಧೈರ್ಯದಿಂದ ನನ್ನ ದೀಕ್ಷೆಯನ್ನು ಕಡೆಗಾಣಿಸುವವನಾದೆನು. ಈ ಅಗ್ನಿಜ್ವಾಲೆಯು ಒಂದಾವರ್ತಿ ಪ್ರಜ್ವಲಗೊಳಿಸಲ್ಪಟ್ಟಮೇಲೆ ಅದು ಅಸ್ಪೃಶ್ಯತೆಯನ್ನು ನಿರ್ಮೂಲಮಾಡುವವರೆಗೂ ಈ ಅಗ್ನಿಯು ಆರಕೂಡದು. ನಾನು ಜೀವಿಸಿರುವ ಕಾಲದಲ್ಲಿ ಈ ಅಸ್ಪೃಶ್ಯತೆಯು ನಾಶವಾಗಬೇಕೆಂಬುದು ಈಶ್ವರನ ಸಂಕಲ್ಪವು. ಹಾಗಾಗದಿದ್ದಲ್ಲಿ ಇದನ್ನು ಅಣಗಿಸಲು ಪ್ರಾಣವನ್ನರ್ಪಿಸತಕ್ಕವರು ಅನೇಕ ಸಾವಿರಾರು ಮಂದಿಗಳಿರುತ್ತಾರೆಂದು ನಾನು ತಿಳಿದಿರುವೆನು. ಈಗ ನಡೆದಿರುವ ಒಪ್ಪಂದದ ವಿಚಾರವಾಗಿ ಎಲ್ಲರೂ ಸೇರಿ ಬಹಳ ಉದಾರವಾಗಿ ಕೆಲಸ ಮಾಡಿರುತ್ತಾರೆ. ಅಂಬೇಡಕರು, ಶ್ರೀನಿವಾಸನ್ ರವರುಗಳ ಪಕ್ಷದವರಿಗೂ, ಎಂ.ಸಿ. ರಾಜಾಯವರ ಪಕ್ಷದವರಿಗೂ ನಾನು ಬಹಳ ಕೃತಜ್ಞನಾಗಿರುತ್ತೇನೆ. ಸವರ್ಣ ಹಿಂದುಗಳು ಅನೇಕ ಶತಮಾನಗಳಿಂದಲೂ ಅಸ್ಪೃಶ್ಯರನ್ನು ಬಹಳ ದುಸ್ಥಿತಿಗೀಡುಮಾಡಿರುವುದಕ್ಕಾಗಿ ಸವರ್ಣದವರಿಗೆ ತಕ್ಕ ಶಿಕ್ಷೆ ಮಾಡಬೇಕೆಂಬ ಉದ್ದೇಶವು ಈ ಅಸ್ಪೃಶ್ಯ ನಾಯಕರುಗಳಿಗೆ ಉಂಟಾಗಿದ್ದರೆ ಅವರು ಮೊಂಡಪಟ್ಟನ್ನು ಹಿಡಿಯುತ್ತಿದ್ದರು. ಅವರು ಹಾಗ ಮಾಡಿದರೂ ನನಗೆ ಕೋಪಹುಟ್ಟುವುದಿಲ್ಲ. ಸವರ್ಣದವರಿಂದ ಈವರೆಗೆ ಅಸ್ಪೃಶ್ಯರು ಅನುಭವಿಸಿದ ದುರವಸ್ಥೆಗಳಿಗೆ ಈಗ ನಾನು ಈ ಸಂದರ್ಭದಲ್ಲಿ ಪ್ರಾಣಬಿಡುವುದರಿಂದ ಸಂಪೂರ್ಣ ಪ್ರತಿಫಲವುಂಟಾಗುವುದಿಲ್ಲ. ಇದು ಬಹಳ ಸ್ವಲ್ಪ ಮಾತ್ರವಾಗುವುದು. ಆದರೆ ಅಸ್ಪೃಶ್ಯ ನಾಯಕರುಗಳು ಅಂತಹ ಪದ್ಧತಿಯನ್ನು ಅನುಸರಿಸಲಿಲ್ಲ. ಸರ್ವಮತಸಾರವಾದ ಕ್ಷಮಾ ಗುಣವನ್ನೇ ತೋರಿಸಿದರು.

ಇವರು ತೋರಿಸಿದ ಕ್ಷಮೆಗೆ ತಕ್ಕ ರೀತಿಯಲ್ಲಿ ಸವರ್ಣ ನಾಯಕರುಗಳು ಪ್ರವರ್ತಿಸುವವರಾಗಲಿ!

ಈ ಒಪ್ಪಂದವು ಅಸ್ಪೃಶ್ಯತಾ ನಿರ್ಮೂಲನಕ್ಕೆ ಪ್ರಥಮ ಸೋಪಾನ. ಇದರಲ್ಲಿ ರಾಜಕೀಯ ವಿಚಾರವು ಸಂಘ ಸಂಸ್ಕರಣದಲ್ಲೊಂದು ಅಲ್ಪ ವಿಷಯವಾದಾಗ್ಯೂ ಇದು ಬಹಳ ಮುಖ್ಯವೆಂದು ನಾನು ತಿಳಿದಿರುವೆನು. ಸಂಘ ಸಂಸ್ಕರಣ ವಿಚಾರವು ಬಹಳ ದೊಡ್ಡದು. ಹಿಂದು ಸಂಸ್ಕರ್ತರ ಮೇಲೆ ಅದರ ವಿಚಾರವಾಗಿ ಬಹಳ ಶ್ರದ್ಧೆಯಿಂದ ಕಾರ್ಯಭಾಗ ಮಾಡಬೇಕಾಗಿದೆ. ನ್ಯಾಯವಾದ ಕಾಲಪರಿಮಿತಿಯಲ್ಲಿ ಈ ಸಂಸ್ಕಾರಗಳು ಸಂಪೂರ್ಣವಾಗಿ ನೆರವೇರದೆ ಹೋದಲ್ಲಿ ನಾನು ಈ ದೀಕ್ಷೆಯನ್ನು ಈಗ ಪುನಃ ವಹಿಸಬೇಕಾದ ಅಗತ್ಯವು ಈ ದೀಕ್ಷೆಯನ್ನು ನಾನು ಬಿಡುವುದರಿಂದ ನನಗೆ ಉಂಟಾಗುತ್ತದೆಂದು ಸಂಸ್ಕರ್ತರಿಗೂ ಸವರ್ಣದವರಿಗೂ ಸ್ಪಷ್ಟವಾಗಿ ತಿಳಿಸಲಿಚ್ಛಿಸುತ್ತೇನೆ. ನಾನೀಗ ಕಾಲನಿರ್ಣಯವನ್ನು ಮಾಡಲು ಯೋಚಿಸಿಲ್ಲ. ಏಕೆಂದರೆ ಈಶ್ವರ ಪ್ರೇರಣೆಯಿಲ್ಲದೆ ನಾನು ಹೇಗೂ ಮಾಡಲಾರೆ. ಈ ಸ್ವಾತಂತ್ರ್ಯ ಸಂದೇಶವು ದೇಶದಲ್ಲಿರುವ ಎಲ್ಲ ಅಸ್ಪೃಶ್ಯರ ಕುಟೀರಗಳಲ್ಲೆಲ್ಲ ಸಂಪೂರ್ಣವಾಗಿ ವ್ಯಾಪಿಸುವಂತೆ ಮಾಡಬೇಕಲ್ಲದೆ ನಾನು ಪುನಃ ಉಪವಾಸವ್ರತವನ್ನು ಹಿಡಿಯದಿರುವಂತೆ ಮಾಡುವುದಕ್ಕಾಗಿ ಕಾರ್ಯೋತ್ಸಾಹದಿಂದ ಸಂಸ್ಕರಣ ಪರಾಯಣರನ್ನೂ, ಪೂರ್ವಾಚಾರ ಶರಣ್ಯರನ್ನೂ ನಿರ್ಬಂಧಿಸಲಾಗದು. ನಾವು ಕಷ್ಟವನ್ನನುಭವಿಸುತ್ತ ವಿರಾಮವಿಲ್ಲದೆ ಕೆಲಸಮಾಡುವುದರಿಂದಲೇ ಅಜ್ಞಾನವನ್ನೂ ಮೂಢ ನಂಬಿಕೆಯನ್ನೂ ಹೋಗಲಾಡಿಸಬೇಕು. ಅದಕ್ಕೆ ನಿರ್ಬಂಧವು ಎಷ್ಟು ಮಾತ್ರಕ್ಕೂ ಕೆಲಸಕ್ಕೆ ಬರುವುದಿಲ್ಲ.

ನೋಟೀಸು.

ಚಿತ್ರದುರ್ಗದ ಡಿಸ್ಟ್ರಿಕ್ಟು ಬೋರ್ಡ್

ತಾ|| 29–9–1932

ಈ ಕೆಳಗೆ ನಮೂದುಮಾಡಿರುವ ಕಾಂಗಾರಿಗಳನ್ನು ನಡೆಸತಕ್ಕ ಬಗ್ಗೆ ಪ್ರೆಸಿಡೆಂಟರವರ ಆಫೀಸಿನಲ್ಲಿ 29–10–32 ನೇ ಮಧ್ಯಾಹ್ನ 2 ಗಂಟೆಯವರೆಗೂ ಸೀಲ್ಡು ಟೆಂಡರುಗಳನ್ನು ಕೊಡಬಹುದು.

ಪ್ಲಾನ್ ವಗೈರೆ ಇತರ ವಿಷಯಗಳನ್ನು ಕೆಲಸ ನಡೆಯುತ್ತಾಯಿರುವ ಕಾಲಗಳಲ್ಲಿ ಡಿಸ್ಟ್ರಿಕ್ಟು ಬೋರ್ಡು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

	ಕಾಂಗಾರಿ ಹೆಸರು	ಡಿಪಾಜಿಟ್ ಮೊಬಲಗು
	ಚಿತ್ರದುರ್ಗ ತಾಲ್ಲೂಕು	ರೂ.
(1)	ಪಾಳ್ಯ ಭಾವಿ ಸರಿಪಡಿಸುವುದು	200—0—0
	ಚಳ್ಳಕೆರೆ ತಾಲ್ಲೂಕು	
(2)	ಹೆಗ್ಗೆರೆ ಭಾವಿಯನ್ನು ಸರಿಪಡಿಸುವುದು	100—0—0
	ಹಿರಿಯೂರು ತಾಲ್ಲೂಕು	
(3)	ಕೋಡಿಹಳ್ಳಿಯಲ್ಲಿ ಗ್ರಾಮಸ್ಥರಿಗೆ ಹೊಸ ಭಾವಿ ಮಾಡುವುದು	100—0—0
	ಹೊಳಲಕೆರೆ ತಾಲ್ಲೂಕು	
(4)	ಹಿರಿಯೆಮ್ಮಿಗನೂರು ಭಾವಿ ಸರಿಪಡಿಸುವುದು	100—0—0
(5)	ತಾಳ್ಯದ ಭಾವಿ ಸರಿಪಡಿಸುವುದು	100—0—0
(6)	ದಾಸಿಕಟ್ಟೆ ಭಾವಿ ಸರಿಪಡಿಸುವುದು	100—0—0
(7)	ಹರಿಹರದ ಸಬ್ ತಾಲ್ಲೂಕು ಕೊಂಡಜ್ಜಿ ಆದಿಕರ್ನಾಟಕರ ಭಾವಿ ಕಾಂಗಾರಿಗಳನ್ನು 1933 ನೇ ಏಪ್ರಿಲ್ ಮೊಹೆ ಆಖೈರುವಳಗಾಗಿ ಪೂರೈಸಬೇಕು.	

ಜಿ. ಚೆನ್ನಪ್ಪ,
ಪ್ರೆಸಿಡೆಂಟ್,
ಡಿ|| ಬೋ|| ಚಿತ್ರದುರ್ಗ.

ದಸರಾವ ಹೋತ್ಸವಾರಂಭ

ಕಳೆದ ಶನಿವಾರ ಬೆಳಗ್ಗೆ ಶ್ರೀಮನ್ಮಹಾರಾಜರವರು ಅಭ್ಯಂಜನಸ್ನಾನ ದೇವತಾರ್ಚನೆಗಳನ್ನು ಪೂರೈಸಿಕೊಂಡು ದಿವ್ಯಾಂಬರಾಭರಣ ವಿಭೂಷಿತರಾಗಿ ೮| ಘಂಟೆಗೆ ಸಭಾಂಗಣಕ್ಕೆ ಚಿತ್ತೈಸಿ ನವಗ್ರಹಮುಖ ವಾಸ್ತು ಪೂಜೆಗಳನ್ನು ವಿಧಿವತ್ತಾಗಿ ನೆರವೇರಿಸಿ ಸಿಂಹಾಸನಪೂಜಾ ಪ್ರದಕ್ಷಿಣಾನಂತರ ಆರೋಹಣ ಮಾಡಿದರು. ನಾನಾ ವಾದ್ಯಗಳು ಭೋರ್ಗರೆದುವು. ಚತುರಂಗಸೇನೆಯೂ ಜನಸ್ತೋಮವೂ ಜಯನಿನಾದ ಮಾಡಿದುವು. ಕೋಟೆಯ ಕೊತ್ತಲಿನಿಂದ 21 ಗುಂಡುಗಳು ಹಾರಿಸಲ್ಪಟ್ಟುವು. ಪಟ್ಟದಾನೆ ಕುದುರೆಗಳು ಕೆರೆಯಬಳಿಗೆ ಹೊರಟಮೇಲೆ ಸಕಲ ಸೇನಾ ಮರ್ಯಾದೆಯು ನಡೆದಿತು. ದಿವಾನರು, ಖಾಸಾ ಭಾವಮೈದುನರು ಕೌನ್ಸಿಲರುಗಳು ಸರದಾರರುಗಳು ಕೆಲ ಮುಖ್ಯ ಅರಸರುಗಳು ಇವರುಗಳಿಂದ ನಜರೊಪ್ಪಿಸಲ್ಪಟ್ಟ ನಂತರ ಸಭಿಕರ ಮುಜರೆ ನಡೆದು ಪುಷ್ಪಹಾರ ತಾಂಬೂಲಗಳ ವಿನಿಯೋಗವಾಗಿ ಪಟ್ಟದಾನೆ ಕುದುರೆಗಳು ಅರಮನೆಗೆ ಹಿಂದಿರುಗಿದಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು. ಸಾಯಂಕಾಲ 6 ಘಂಟೆಗೆ ಪಟ್ಟದಾನೆ ಕುದುರೆಗಳು ಸಕಲ ಮರ್ಯಾದೆಯೊಡನೆ ಕೆರೆಬಳಿಗೆ ತೆರಳಿದವು. ರಾತ್ರಿ 7 ಘಂಟೆಗೆ ಶ್ರೀಮನ್ಮಹಾರಾಜರವರು ಯಥಾಮರ್ಯಾದೆಯಿಂದ ಸಿಂಹಾಸನಾರೋಹಣಮಾಡಿದಮೇಲೆ ದರ್ಬಾರಿಗಳ ನಜರು ಮುಜರೆಗಳು ೮|| ಘಂಟೆವರೆಗೂ ನಡೆದುವು. ಪಟ್ಟದಾನೆ ಕುದುರೆಗಳು ಹಿಂದಿರುಗಿ ಬಂದಮೇಲೆ ಪುಷ್ಪ ತಾಂಬೂಲ ವಿನಿಯೋಗವಾಗಿ ಸಭಾವಿಸರ್ಜನೆಯಾಯಿತು. ಅಂದಿನಿಂದ ಶನಿವಾರದವರೆಗೂ ಪ್ರತಿ ರಾತ್ರಿ ದರ್ಬಾರು ನಡೆದು ಭಾನುವಾರ ಜಂಬೂಸ್ವಾರಿ ಹೊರಡುವುದು. ವಿದ್ಯುದ್ದೀಪೋತ್ಸವವು ಕಳೆದ ವರ್ಷಗಳಿಗಿಂತಲೂ ಈ ವೇಳೆ ಅತಿಶಯವಾಗಿರುವುದು. ಅರಮನೆಯೊಳಗೆ ನಡೆಯುವ ಸಂಗೀತವು ಸಭಿಕರಿಗೂ ಹೊರಗಡೆ ನೆರೆದಿರುವ ಪ್ರೇಕ್ಷಕರಿಗೂ ಕೇಳಿಸುವಂತೆ ಲೌಡ್‌ಸ್ಪೀಕರ್ ಎಂಬ ಕೊಳವೆಗಳು ಸಭಾಂಗಣದ ಮುಂಗಡೆಯ ಕಂಬಗಳಿಗೆ ಸಂಬಂಧಿಸಲ್ಪಟ್ಟಿರುವುವು. ಪರಸ್ಥಳಗಳಿಂದ ಜನರು ಬರಲುಪಕ್ರಮವಾಗಿದೆ. ಆದರೆ ಬಸ್ಸುಗಳ ಮುಷ್ಕರದಿಂದ ಪ್ರಯಾಣಿಕರಿಗೆ ತೊಂದರೆಯಾಗಿರುವ ಪ್ರಯುಕ್ತ ಹೆಚ್ಚು ಜನರು ಬರುವುದು ಕೊಂಚ ಸಂಶಯವು.

ಒಳದೇಶದ ವೃತ್ತಾಂತಗಳು.

ಹಾಸನದ ಡೆಪ್ಯುಟಿ ಕಮಿಷನರಾದ ಮ|| ಜ. ಬ. ಹೆಬ್ಬಿಕರವರು ಉದ್ಯೋಗದಿಂದ ನಿವೃತ್ತರಾಗುವುದರ ಪೂರ್ವಭಾವಿಯಾಗಿ 2 ವರ್ಷಗಳವರೆಗೆ ರಜಾಕೊಡಲ್ಪಟ್ಟಿರುವ ಪ್ರಯುಕ್ತ ರಜಾದಮೇಲಿದ್ದ ಮ|| ಟಿ. ಜ. ರಾಮಯ್ಯರ್‌ರವರು ಹಾಸನದ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಾಗಿಯೂ ಡಿ|| ಮೆಜಿಸ್ಟ್ರೇಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಮ|| ಸಾಹುಕಾರ್ ಅತ್ತಿಗುಪ್ಪೆ ಸೂರ್ಯನಾರಾಯಣಶೆಟ್ಟರು ದಸರಾ ಮಹೋತ್ಸವಕ್ಕೆ ಬರತಕ್ಕ ತಮ್ಮ ವೈಶ್ಯ ಕುಲದವರ ಭೋಜನಕ್ಕೂ ಜವಳಿ ವರ್ತಕರಾದ ಮ|| ಶ್ರೀನಿವಾಸಯ್ಯನವರು ತಮ್ಮ ದೇವಾಂಗ ಕುಲಸ್ಥರ ಭೋಜನಕ್ಕೂ ಕಳೆದ ಶನಿವಾರದಿಂದ 10-12 ದಿವಸಗಳ ವರೆಗೆ ಉಚಿತವಾದೇರ್ಪಾಟುಗಳನ್ನು ಮಾಡಿರುತ್ತಾರೆಂದು ತಿಳುಹಲು ಸಂತೋಷವಾಗುತ್ತದೆ.

ದಿವಾನರು ಕಳೆದ ಗುರುವಾರ ಬೆಳಗ್ಗೆ ಬೆಂಗಳೂರು ಕೋಟೆಯಲ್ಲಿ ಕಟ್ಟಲ್ಪಡುವ ಸೇಂಟ್‌ಲೂಕ್ಸ್ ಚರ್ಚಿನ ಶಂಕುಸ್ಥಾಪನೆಯನ್ನು ಮಾಡಿ ಶುಕ್ರವಾರ ಮಧ್ಯಾಹ್ನ ಸೋಮನಹಳ್ಳಿಗೆ ಬಂದು ಅಲ್ಲಿ ನಿರ್ಮಿಸಲ್ಪಟ್ಟಿರುವ ಒಕ್ಕಲಿಗರ ಹಾಸ್ಟಲ್ ಕಟ್ಟಡದ ಆರಂಭೋತ್ಸವವನ್ನು ನೆರವೇರಿಸಿ ಸಾಯಂಕಾಲ ರಾಜಧಾನಿಗೆ ದಯಮಾಡಿಸಿದರು. ಈ ಆರಂಭೋತ್ಸವದಲ್ಲಿ ಹಾಸ್ಟಲ್ ಕಮಿಟಿಯವರು ದಿವಾನರಿಗೊಪ್ಪಿಸಿದ ವಿಜ್ಞಾಪನಾ ಪತ್ರಿಕೆಯೂ ದಿವಾನರುತ್ತರವೂ ಈ ಪತ್ರಿಕೆಯ ಬೇರೊಂದುಕಡೆ ಮುದ್ರಿಸಲ್ಪಟ್ಟಿವೆ.

ಮೈಸೂರು ಸಂಸ್ಥಾನದಲ್ಲಿ ಓಡಾಡುವ ಮೋಟಾರು ಬಸ್ಸುಗಳ ಮೇಲೆ ವಿಧಿಸಲ್ಪಟ್ಟಿರುವ ರೋಡು ಸೆಸ್ಸು ದ್ವಿಗುಣಮಾಡಲ್ಪಟ್ಟಿರುವುದಷ್ಟೆ. ಇದರಿಂದ ತಮಗೆ ವಿಶೇಷ ನಷ್ಟಸಂಭವಿಸಿರುತ್ತಾದ ಪ್ರಯುಕ್ತ ಪೂರ್ವದ ದರಕ್ಕೆ ಸೆಸ್ಸನ್ನಿಳಿಸಿಕೊಡಬೇಕೆಂದು ಬಸ್ಸಿನ ಯಜಮಾನರುಗಳು ಪ್ರಭುತ್ವದವರಲ್ಲಿ ವಿಜ್ಞಾಪಿಸಿಕೊಂಡಾಗ್ಯೂ ಏನೂ ಪ್ರಯೋಜನವಾಗಲಿಲ್ಲವಾಗಿ ಶನಿವಾರದಿಂದ ಬಸ್ಸುಗಳ ಓಡಾಟವು ನಿಲ್ಲಿಸಲ್ಪಟ್ಟಿರುತ್ತದೆ. ಈ ಮುಷ್ಕರದಿಂದ ರೈಲಿಲ್ಲದ ಕಡೆ ಜನರ ಪ್ರಯಾಣಕ್ಕೆ ಬಹಳ ಅಡಚಣೆಯೂ ತೊಂದರೆಯೂ ಸಂಭವಿಸಿರುತ್ತಾದುದರಿಂದ ಪ್ರಭುತ್ವದವರು ಚೆನ್ನಾಗಿ ಪರ್ಯಾಲೋಚಿಸಿ ಸೆಸ್ಸನ್ನು ಮೊದಲಿನ ದರಕ್ಕೆ ಇಳಿಸಿಕೊಡುವುದು ಅಗತ್ಯವೆಂದು ಸೂಚಿಸುತ್ತೇವೆ. ಈ ಮುಷ್ಕರದಲ್ಲಿ ಬಸ್ಸಿನವರಿಗೂ ಪೋಲೀಸಿನವರಿಗೂ ಬಡಿದಾಟವಾದಂತೆ ತಿಳಿಯಬರುತ್ತದೆ.

ರಾಜಧಾನಿಯಲ್ಲಿ ಕಳೆದ ಶುಕ್ರವಾರದಿಂದಲೂ ಪ್ರತಿ ರಾತ್ರಿ ಮಳೆಯಾಗುತ್ತಿದೆ. ಇದರಿಂದ ಕೆರೆ ಕಟ್ಟೆಗಳಿಗೆ ನೀರು ತಕ್ಕಮಟ್ಟಿಗೆ ಬಂದಿರುವುದಲ್ಲದೆ ಒಣಗುತ್ತಿದ್ದ ರಾಗಿ ಪೈರು ಚೇತರಿಸಿಕೊಳ್ಳುವಂತಾಯಿತು. ಟವನ್ ಹಾಲಿನ ಉತ್ತರ ದಿಗ್ಭಾಗದಲ್ಲಿ ಎಲ್ಲ ಊರುಗಳಿಗೂ ಹೋಗಿ ಬರುವ ಬಸ್ಸುಗಳು ನಿಂತುಕೊಳ್ಳುವುದು ತಪ್ಪಿಸಲ್ಪಟ್ಟು ನಜರಬಾದಿನ ಆಸ್ಪತ್ರೆ ಪಕ್ಕದಲ್ಲಿ ನಿಲ್ಲುವಂತೆ ಏರ್ಪಡಿಸಲ್ಪಟ್ಟಿರುತ್ತದೆ. ಇದರಿಂದ ಪ್ರಯಾಣಿಕರಿಗೆ ತತ್ರಾಪಿ ಒಂಟಿಯಾಗಿ ಪ್ರಯಾಣಮಾಡುವ ಸ್ತ್ರೀಯರಿಗೆ ಬಹಳ ತೊಂದರೆಯೂ, ದುಬಾರಿ ಟಾಂಗಾಬಾಡಿಗೆಯೂ ಉಂಟಾಗಿರುತ್ತದೆಂದು ಜನರು ಪಶ್ಚಾತ್ತಾಪಪಡುತ್ತಿರುವರು. ಬೆಳಗಿನ 6 ಘಂಟೆಯಿಂದಲೂ ರಾತ್ರಿ 9 ಘಂಟೆಯ ವರೆಗೆ ಬಸ್ಸುಗಳ ತಿರುಗಾಟದ ಗದ್ದಲವಿದ್ದುದರಿಂದ ಟವನ್ ಹಾಲಿನ ಆವರಣದೊಳಗೆ ಆತ್ತಣಿಂ ಪೋಕ್ರಿ ಜನರೂ ಸೇರಲು ಅವಕಾಶವಿಲ್ಲದಿದ್ದುದು ಈಗ ಅವರಿಗೆ ಅನುಕೂಲವಾಯಿತು.

ಸೋಮನಹಳ್ಳಿಯಲ್ಲಿ ಒಕ್ಕಲಿಗರ ಸಂಗಡದ ವಿದ್ಯಾರ್ಥಿನಿಲಯದ (ಹಾಸ್ಟಲಿನ) ಪ್ರವೇಶಮಹೋತ್ಸವವನ್ನು ನೆರವೇರಿಸುವಾಗ್ಗೆ ಮೈಸೂರು ಸಂಸ್ಥಾನದ ದಿವಾನ್ ಸಾಹೇಬರು ಮಾಡಿದ ಭಾಷಣ.

(1932 ನೆಯ ಇಸವಿ ಸೆಪ್ಟಂಬರ್ 30 ನೆಯ ತಾರೀಖು.)

ಮಹಾಶಯರೆ, ಈ ಕಟ್ಟಡವು ಸಿದ್ಧವಾದ ಒಟ್ಟು ಏರ್ಪಾಡಿನಲ್ಲಿ ನನಗೆಷ್ಟು ಆದರವೆಂಬುದನ್ನು ಶ್ರೀಮಾನ್ ಎಸ್. ಸಿ. ಮಲ್ಲಯ್ಯನವರು ಬಲ್ಲರು. ಆದಕಾರಣ, ಈ ದಿನ ಇದರ ಪ್ರವೇಶಮಹೋತ್ಸವವನ್ನು ನೆರವೇರಿಸುವುದು ನನಗೆಷ್ಟು ಸಂತೋಷಕರವಾದ ಕೆಲಸವೆಂಬುದನ್ನು ಬಹುಶಃ ನಿಮಗಿಂತಲೂ ಹೆಚ್ಚಾಗಿ ಅವರು ಮುಂದಟ್ಟು ಮಾಡಿಕೊಳ್ಳಬಲ್ಲರೆಂದು ತೋರುವುದು.

ಜನಗಳಿಗೆ ಉಪಯೋಗವಾಗುವಂತೆ ಖಾಸಗಿ ದೊಡ್ಡ ಮನುಷ್ಯರುಗಳು ನೆರವೇರಿಸುವ ಇಂಥ ಒಳ್ಳೆಯ ಕೆಲಸಗಳು ನಡೆಯುವುದು ನನಗೆ ಬಹಳ ಸಂತೋಷಕರ. ಅವುಗಳ ವಿಚಾರದಲ್ಲಿ ಪೂರ್ಣ ಮನಸ್ಸಿನಿಂದ ಕೂಡಿ ಅದರ ವಿಷಯದಲ್ಲಿ ಆಸಕ್ತಿಯನ್ನು ತೋರಿಸುವುದು ನನಗೆ ಆನಂದವನ್ನುಂಟುಮಾಡುವುದರೊಂದೇ ಅಲ್ಲ; ಅದು ನನ್ನ ಕರ್ತವ್ಯವೆಂದೂ ನಾನು ಭಾವಿಸಿದ್ದೇನೆ.

ಇಲ್ಲಿ ಒಂದು ಹಾಸ್ಟಲನ್ನೂ, ಒಂದು ಹೈಸ್ಕೂಲನ್ನೂ, ಎರಡನ್ನೂ ಸ್ಥಾಪಿಸುವ ಯೋಚನೆಯನ್ನು ಮಾಡಿದವರೆಲ್ಲರನ್ನೂ ನಾನು ಅಭಿನಂದಿಸುವೆನು. ಈ ಏರ್ಪಾಡಿನಿಂದ ಮುಂದೆ ಬಹಳ ಪ್ರಯೋಜನವಿದೆ. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ.

ಈ ಹಾಸ್ಟಲಿನ ಜೊತೆಗೆ ನೀವು ಯೋಚಿಸಿರುವಂತೆ ವ್ಯವಸಾಯದ ಕಸುಬನ್ನು ಕೂಡ ಕಲಿಸುವ ಹೈಸ್ಕೂಲಿನ ಏರ್ಪಾಡು ಮಾಡುವ ಭಾಗದಲ್ಲಿ, ನೀವುಗಳು ಮಾಡಿರುವಂತೆ ಇಂಥ ಪ್ರಯತ್ನವನ್ನೇ ಸಂಸ್ಥಾನದಲ್ಲಿ ಮತ್ತೆಲ್ಲಿಯೂ ಯಾರೂ ನಡೆಯಿಸಿಲ್ಲವೆಂದು ಹೇಳಿದರೂ ಹೇಳಬಹುದಾಗಿದೆ. ಈ ರೀತಿ ನಿಮ್ಮಿಂದ ದೊಡ್ಡ ಕೆಲಸವು ನಡೆಯುವುದಾಗಿದೆ. ಈ ಏರ್ಪಾಡಿನಿಂದ ಉತ್ತಮ ಫಲವು ಲಭಿಸುವಂತೆ ಮಾಡುವ ಭಾಗದಲ್ಲಿ ವಿದ್ಯಾಭ್ಯಾಸದ ಇಲಾಖೆಯವರು ನಿಮ್ಮೊಡನೆ ಸಹಕರಿಸಿ ಸಂತೋಷದಿಂದ ಸಹಾಯ ಮಾಡುವರು. ನೀವು ಸ್ಥಾಪಿಸಲು ಯೋಚಿಸಿರುವ ಬಗೆಯ ಹೈಸ್ಕೂಲೂ, ಹಾಸ್ಟಲೂ, ಎರಡೂ ಇರುವುದಕ್ಕೆ ಇದು ಸರಿಯಾದ ಮತ್ತು ಸೊಗಸಾದ ಸ್ಥಳ. ವಿಶಾಲವಾದ ಮತ್ತು ಸುಂದರವಾದ ಕಟ್ಟಡವು ನಿಮಗೆ ಒದಗಿದೆ. ಮೈಸೂರಿನಿಂದ ಬೆಂಗಳೂರಿಗೆ ಹೋಗುವ ದೊಡ್ಡ ರಸ್ತೆಯ ಬಳಿಯಲ್ಲೇ ಈ ಕಟ್ಟಡವಿದೆ. ಪೈರುಪಚ್ಚೆಗಳಿಂದಲೂ ಗಿಡಮರಗಳಿಂದಲೂ ಕೂಡಿ, ಕಣ್ಣಿಗೆ ಹಬ್ಬವನ್ನೊದಗಿಸುವ ವಿಸ್ತರವಾದ ಪ್ರದೇಶದ ಮಧ್ಯದಲ್ಲಿ ಈ ಕಟ್ಟಡ. ಇದಕ್ಕೆ ಸಮೀಪದಲ್ಲೇ ಹರಿಯುತ್ತಿರುವ ಮನೋಹರವಾದ ನದಿ. ಪ್ರಕೃತಿ ದೇವಿಯು ಒದಗಿಸಿರುವ ಈ ರಮಣೀಯವಾದ ಸನ್ನಿವೇಶದ ಜೊತೆಗೆ ವಿದ್ಯುಚ್ಛಕ್ತಿಯ ದೀಪಗಳಿಂದ ಕಟ್ಟಡವನ್ನು ಬೆಳಗಿಸುವ ಮತ್ತು ವಿದ್ಯುಚ್ಛಕ್ತಿಯ ಸಹಾಯದಿಂದ ನೀರಾವರಿಗೆ ಪಂಪುಗಳಿಂದ ನೀರೆತ್ತುವ ಅನುಕೂಲವೂ ಇಲ್ಲಿ ಒದಗುವುದಾಗಿದೆ. ಆದಕಾರಣ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಇಂಥ ಸ್ಥಳವನ್ನು ಆರಿಸಿದ್ದಕ್ಕಾಗಿ ನಿಮಗೆ ಅಭಿನಂದನೆಗಳು ಸಲ್ಲಬೇಕಾಗಿವೆ. ನೀವು ಇದರಿಂದ ಪೂರ್ಣ ಪ್ರಯೋಜನವನ್ನು ಪಡೆಯುವಿರೆಂದು ನಾನು ನಂಬಿದ್ದೇನೆ. ಆದರೆ ಒಂದು ಮಾತು: ಪ್ರಕೃತಿದೇವಿಯು ಎಷ್ಟೇ ಹೆಚ್ಚಿನ ಭಾಗ್ಯಗಳನ್ನು ಬೇಕಾದರೂ ಕೊಟ್ಟಿರಬಹುದು. ಆದರೂ, ಅವುಗಳಿಂದ ಪೂರ್ಣವಾಗಿ ಪ್ರಯೋಜನಗಳನ್ನು ಪಡೆಯುವುದಕ್ಕೆ ಬೇಕಾದ ಮನುಷ್ಯ ಪ್ರಯತ್ನವು ನಡೆಯದೆ ಹೋದರೆ, ಹೆಚ್ಚು ಫಲವೇ ಆಗುವಹಾಗಿಲ್ಲ. ಶ್ರೀಮಾನ್ ಮಲ್ಲಯ್ಯನವರಂಥವರುಗಳು ಕೆಲಸಮಾಡಲು ದೊರೆತಿರುವುದು ನಿಮ್ಮ ಪುಣ್ಯ. ಇವರುಗಳು ಈ ಕಟ್ಟಡಗಳಿಂದ ಆಗಬೇಕಾದುದನ್ನೆಲ್ಲ ಆಗಮಾಡುವರೆಂದು ಖಂಡಿತವಾಗಿ ಹೇಳಬಹುದಾಗಿದೆ. ಇಂಥ ಹಾಸ್ಟಲುಗಳೂ, ಹೈಸ್ಕೂಲುಗಳೂ, ಏರ್ಪಟ್ಟದ್ದು ಸಫಲವಾಗಬೇಕಾದರೆ, ಜನರನ್ನು ಪ್ರೀತಿಯಿಂದ ಸೇರಿಸಿ ಕೆಲಸಮಾಡಿಸುವವರು ಬೇಕು. ಏಕಪ್ರಕಾರವಾಗಿ ಒಂದೇ ಸಮವಾಗಿರುವ ಉತ್ಸಾಹದಿಂದ ಕೂಡಿ ಇತರರಿಗೆ ದಾರಿತೋರಿಸಿ, ವಿವೇಕ ಹೇಳತಕ್ಕವರು ಬೇಕು. ಈ ಗುಣಗಳಿರುವವರ ಸಹಾಯವಿಲ್ಲದೆ ಹೋದರೆ, ಇಂಥ ಸಂಸ್ಥೆಗಳಲ್ಲಿ ಚೈತನ್ಯವೇ ಇಲ್ಲದೆ ಅವು ಕಳೆಗುಂದಿ ಹೋಗುವುವು. ನಿಮಗೆ ಮುಂದಾಳುಗಳಾಗಿ ನಿಂತಿರುವ ಶ್ರೀಮಾನ್ ಮಲ್ಲಯ್ಯನವರಲ್ಲಿಯೂ, ಅವರ ಜೊತೆಯವರಲ್ಲಿಯೂ ಈ ಶ್ರೇಷ್ಠ ಗುಣಗಳಿವೆ. ಆದಕಾರಣ, ನಿಮ್ಮ ಉದ್ದೇಶವು ಸಾಂಗವಾಗಿ ಈಡೇರಲು ಸ್ವಲ್ಪವೂ ಅನುಮಾನವಿಲ್ಲ. ಅವರುಗಳು ದೊಡ್ಡ ಪ್ರಯತ್ನವನ್ನು ಹೂಡಿದ್ದಾರೆ. ಈ ಪ್ರಯತ್ನವು ಸಫಲವಾಗಿ ನೆರವೇರಬೇಕಾದರೆ ಅವರುಗಳು ತಮ್ಮ ಶಕ್ತಿಸಾಮರ್ಥ್ಯಗಳನ್ನೆಲ್ಲಾ ವಿನಿಯೋಗಿಸಿ ಕೆಲಸಮಾಡುವುದು ಆವಶ್ಯಕವಾಗುತ್ತದೆ. ನಮ್ಮೆಲ್ಲರಿಗೂ ದೇಶಬಾಂಧವರಾದ ಒಕ್ಕಲಿಗ ಸಂಗಡದ ಕಿರಿಯವರಿಗೆ ಉತ್ತಮವಾದ ವಿದ್ಯಾಭ್ಯಾಸದ ಅನುಕೂಲವನ್ನೊದಗಿಸಿ ಅವರನ್ನು ಮುಂದಕ್ಕೆ ತರುವ ಕೆಲಸದಲ್ಲಿ ತಮ್ಮ ಉತ್ಸಾಹವನ್ನೆಲ್ಲಾ ಉಪಯೋಗಿಸುವುದಕ್ಕೆ ಅವರೆಲ್ಲರಿಗೂ ಒಳ್ಳೆಯದೊಂದು ಅವಕಾಶವು ದೊರೆತಿದೆ. ಅವರುಗಳು ಅದನ್ನು ಸಾರ್ಥಕಪಡಿಸುವ ಭಾಗದಲ್ಲಿ ಲೇಶವೂ ಸಂಶಯವಿಲ್ಲ.

ಕಾಲಕ್ರಮದಲ್ಲಿ ಇದು ಮಾದರಿಯ ಸಂಸ್ಥೆಯಾಗಿ ಪರಿಣಮಿಸುವಂತೆ ಮಾಡುವ ವಿಚಾರದಲ್ಲಿ, ಅವರು ಸಮಸ್ತ ಪ್ರಯತ್ನಗಳನ್ನೂ ನೆರವೇರಿಸಿಯೇ ನೆರವೇರಿಸುವರು. ನಾನು ಇದನ್ನು ದೃಢವಾಗಿ ನಂಬಿದ್ದೇನೆ.

ನಾನು ಪದೇಪದೇ ಈ ಮಾರ್ಗವಾಗಿ ಬರುತ್ತಲೇ ಇರುವೆನು; ಇದು ನಿಮ್ಮೆಲ್ಲರಿಗೂ ತಿಳಿದೇ ಇದೆ. ಈ ಸಂಸ್ಥೆಯು ಹೇಗೆ ಅಭಿವೃದ್ಧಿಯಾಗುತ್ತಿದೆಯೆಂಬುದನ್ನು ಪರಿಶೀಲಿಸುತ್ತ ಬರಲು ನನಗೆ ಅದರಿಂದ ಅನೇಕವಾಗಿ ಅವಕಾಶಗಳು ದೊರೆಯುವುವು. ನನ್ನಿಂದ ಸಾಧ್ಯವಾದಾಗಲೆಲ್ಲ ನಿಮಗೆ ಸಹಾಯ ಮಾಡಬೇಕೆಂಬುದೇ ನನ್ನ ಅಭಿಲಾಷೆ. ಈ ಅಭಿಲಾಷೆಯಿಂದ ಕೂಡಿ ಈ ಸಂಸ್ಥೆಯು ಅಭಿವೃದ್ಧಿಗೆ ಬರುವುದನ್ನೇ ನಾನು ಗಮನವಿಟ್ಟು ಆಸಕ್ತಿಯಿಂದ ನೋಡುತ್ತಿರುವೆನು.

ಮಹಾಶಯರೆ, ನೀವುಗಳು ನನ್ನ ವಿಷಯದಲ್ಲಿ ಸೂಚಿಸಿರುವ ಸವಿನುಡಿಗಳಿಗಾಗಿ ನಿಮಗೆ ವಂದನೆಗಳನ್ನು ಅರ್ಪಿಸುವೆನು. ನಾನು ಗ್ರಾಮಗಳ ಜನರ ಯೋಗಕ್ಷೇಮದಲ್ಲಿ ಆಸಕ್ತಿಯುಳ್ಳವನೆಂದು ನೀವು ಭಾವಿಸಿರುವುದರಿಂದ ನನ್ನ ಮನಸ್ಸಿಗೆ ಬಹು ಸಂತೋಷವಾಯಿತು.

ಗ್ರಾಮಗಳ ಸ್ಥಿತಿಯನ್ನು ಉತ್ತಮಪಡಿಸಬೇಕೆಂಬುದು, ನನ್ನ ಅಧಿಕಾರ ಸಂಬಂಧವಾಗಿ ನಾನು ನೆರವೇರಿಸಬೇಕೆಂದಿರುವ ಒಂದು ಮುಖ್ಯವಾದ ಕರ್ತವ್ಯವಾಗಿದೆ. ನಾನು ನೆರವೇರಿಸಬೇಕೆಂದು ನನಗೆ ಬಹಳ ಆಸೆಯಿರುವ ಮತ್ತೊಂದು ಮುಖ್ಯವಾದ ಕರ್ತವ್ಯವಿದೆ. ಅದನ್ನೂ ಹೇಳಿಯೇ ಬಿಡುತ್ತೇನೆ. ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಜನಸಂಖ್ಯೆಯು ಕಡಿಮೆಯಾಗಿರುವ ಅಥವಾ ಅಲ್ಪವಾಗಿರುವ ಯಾವ ಪಂಗಡದವರೇ ಆಗಲಿ, ಸರ್ಕಾರದವರ ಗಮನಕ್ಕೆ ಬಂದಿಲ್ಲವೆಂಬ ಭಾವನೆಗೇ ಅವಕಾಶವಿರಕೂಡದು; ಶ್ರೀಮನ್ಮಹಾರಾಜರವರ ರಾಜ್ಯದಲ್ಲಿ ಎಷ್ಟೇ ದೂರವಾಗಿ ಯಾವ ಮೂಲೆಯಲ್ಲೇ ಇರುವ ಪ್ರದೇಶವೇ ಆಗಲಿ ಸರ್ಕಾರದವರ ಅನಾದರಕ್ಕೆ ಗುರಿಯಾಗಿದೆಯೆಂಬ ಭಾವನೆಗೇ ಅವಕಾಶವಿರಕೂಡದು—ಹೀಗೆ ಅವಕಾಶವಿರದಂತೆ ವರ್ತಿಸಬೇಕೆಂಬುದೇ, ನನ್ನ ಮನಸ್ಸಿಗೆ ಮುಖ್ಯವಾಗಿರುವ ಆ ಕರ್ತವ್ಯ. ಶ್ರೀಮನ್ಮಹಾರಾಜರವರ ಪ್ರಜೆಗಳಲ್ಲಿ ಸಮಸ್ತರೂ ತಮ್ಮ ಯೋಗಕ್ಷೇಮಗಳನ್ನು ಸರ್ಕಾರದವರು ಆಸಕ್ತಿಯಿಂದ ನೋಡಿಕೊಳ್ಳುತ್ತಿದ್ದಾರೆಂದೂ, ಮನುಷ್ಯ ಪ್ರಯತ್ನದಲ್ಲಿ ಒಂದು ಸರ್ಕಾರದಿಂದ ಸಾಧ್ಯವಿರುವುದನ್ನೆಲ್ಲಾ ಸರ್ಕಾರದವರು ತಮಗಾಗಿ ಮಾಡುತ್ತಿದ್ದಾರೆಂದೂ, ಭಾವಿಸುವಂತಾಗಬೇಕು. ಅದೇ ನನಗಿರುವ ದೊಡ್ಡ ಆಸೆ.

ಮಹಾಶಯರೆ, ಈ ಹಾಸ್ಟಲಿನ ಪ್ರವೇಶಮಹೋತ್ಸವವು ಇನ್ನು ನೆರವೇರಬಹುದೆಂದು ನಾನು ಸಂತೋಷದಿಂದ ಅನುಜ್ಞೆಯನ್ನು ಕೊಟ್ಟಿರುವೆನು. ಅದು ದಿನದಿನವೂ ಅಭಿವೃದ್ಧಿಗೆ ಬರುವಂತೆಯೂ, ಅದರ ವಿಚಾರದಲ್ಲಿ ನಾವು ನಿರೀಕ್ಷಿಸಿ ಹಾರೈಸುತ್ತಿರುವ ಆಸೆಗಳೆಲ್ಲವೂ ಈಡೇರುವಂತೆಯೂ, ಭಗವಂತನು ಅನುಗ್ರಹಿಸಲೆಂಬುದೇ ನನ್ನ ಪ್ರಾರ್ಥನೆ.

ಮೈಸೂರು ದಿವಾನರಾದ ಅಮೀನ್ ಉಲ್-ಮುಲ್ಕ್ ಶ್ರೀಮಾನ್ ಸರ್ ಮಿರ್ಜ ಇಸ್ಮೈಲ್, ಬಿ.ಎ., ಓ.ಬಿ.ಇ., ಸಿ.ಐ.ಇ., ಕೆಟಿ., ಇವರ ಸನ್ನಿಧಿಯಲ್ಲಿ.

ಮಹಾಶಯರೆ, ಈ ಮದ್ದೂರಿಗೆ ತಮ್ಮ ಸುಖಾಗಮನವನ್ನು ಮದ್ದೂರು ಒಕ್ಕಲಿಗರ ಹಾಸ್ಟಲ್ ಕಮಿಟಿಯವರ ಪರ ನಾನು ಹೃತ್ಪೂರ್ವಕವಾಗಿ ಬಯಸಿ, ಮದ್ದೂರಿನ ಒಕ್ಕಲಿಗರ

ಹಾಸ್ಟಲ್ ಕಟ್ಟಡದ ಪ್ರವೇಶೋತ್ಸವವನ್ನು ನೆರವೇರಿಸಲು ತಾವು ದಯೆಯಿಟ್ಟು ಸಮ್ಮತಿಸಿರುವುದಕ್ಕಾಗಿ ತಮಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸುತ್ತೇನೆ. ತಾವು ನೆರವೇರಿಸಬೇಕಾದ ಕಾರ್ಯಗಳು ಮಹತ್ತರವಾಗಿರುವುವಾದರೂ, ಈ ಶುಭ ಕಾರ್ಯವನ್ನು ತಮ್ಮ ಅಮೃತ ಹಸ್ತದಿಂದಲೇ ನೆರವೇರಿಸಬೇಕೆಂಬ ನಮ್ಮಗಳ ಆಕಾಂಕ್ಷೆಯನ್ನು ಪೂರ್ತಿಗೊಳಿಸಲು ದಯೆಯಿಟ್ಟು ದಯಮಾಡಿಸಿರುವುದು, ಸಂಸ್ಥಾನದ ಗ್ರಾಮಸ್ಥರ ಉದ್ಧಾರ ವಿಚಾರದಲ್ಲಿ ತಮಗಿರುವ ವಿಶೇಷ ಸಹಾನುಭೂತಿಯನ್ನೂ, ಅವರುಗಳ ಕ್ಷೇಮಾಭಿವೃದ್ಧಿಗಳಿಗೆ ಸಾಧಕವಾದ ಪ್ರತಿಯೊಂದು ಕಾರ್ಯದಲ್ಲಿ ಸ್ವಯಮಾಗಿ ಉತ್ತೇಜನ ಕೊಡುವಲ್ಲಿ ತಮಗಿರುವ ಕುತೂಹಲವನ್ನೂ ವ್ಯಕ್ತಪಡಿಸುತ್ತದೆ.

ಮಹಾಶಯರೆ, ಸೋಮನಹಳ್ಳಿಯ ಮುಸಾಫರ್ ಬಂಗಲೆಯನ್ನೂ, ಅದರ ಸುತ್ತಲ ಆವರಣವನ್ನೂ ನಮ್ಮ ಹಾಸ್ಟಲಿನ ಉಪಯೋಗಾರ್ಥವಾಗಿ ಸರಿಯಾದ ಬೆಲೆಗೆ ಉದಾರ ಮನಸ್ಸಿನಿಂದ ವಿಕ್ರಯಿಸಿ ತತ್ಸಂಬಂಧವಾದ ಕಾಗದಪತ್ರಗಳನ್ನು ಶೀಘ್ರದಲ್ಲಿ ನೆರವೇರಿಸಿಕೊಟ್ಟುದಕ್ಕಾಗಿ ಶ್ರೀಮನ್ಮಹಾರಾಜರವರ ಪ್ರಭುತ್ವದವರಿಗೆ ನಮ್ಮ ಅಕುಟಿಲವಾದ ವಂದನೆಯನ್ನು ನಿವೇದಿಸುತ್ತೇವಲ್ಲದೆ ಈ ಸಂದರ್ಭದಲ್ಲಿ ತಾವು ಮೊದಲಿಂದಲೂ ಸ್ವಯಮಾಗಿ ತೋರಿಸುತ್ತಿರುವ ಅಭಿಮಾನವನ್ನು ನಾವು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇವೆ. ಮಹೋನ್ನತ ಪದವಿಯನ್ನೂ ವಿಶೇಷ ಉತ್ತರವಾದಿತ್ವವನ್ನೂ ಹೊಂದಿದ್ದಾಗ್ಯೂ ಪ್ರಜೆಗಳು ಮಾಡುವ ಸಮಾಜಾಭಿವೃದ್ಧಿ ಕಾರ್ಯಗಳನ್ನು ಸಹಾನುಭೂತಿಯಿಂದ ಪರ್ಯಾಲೋಚಿಸಲು ಯಾವಾಗಲೂ ಕುತೂಹಲರಾಗಿದ್ದು ಪ್ರಭುತ್ವದವರ ಉದಾರ ಸಹಾಯವನ್ನು ಪಡೆದು ತಮ್ಮ ಸಹಾನುಭೂತಿಯನ್ನು ಕಾರ್ಯತಃ ವ್ಯಕ್ತಗೊಳಿಸುತ್ತಿರುವ ತಮ್ಮನ್ನು ಅಮಾತ್ಯರನ್ನಾಗಿ ಪಡೆದುಕೊಂಡಿರುವುದು ಸಂಸ್ಥಾನದ ಪ್ರಜೆಗಳ ಅಸಾಧಾರಣವಾದ ಪುಣ್ಯ ವಿಶೇಷವು. ತಮ್ಮ ಕಾಲದಲ್ಲಿ ಪ್ರಜೆಗಳು ಧರ್ಮೌದಾರ್ಯವನ್ನು ವ್ಯಕ್ತಪಡಿಸಲು ಉತ್ತೇಜನಗೊಳಿಸಲ್ಪಡುತ್ತಿರುವಂತೆ ಹಿಂದಿನ ಯಾರ ಆಡಳಿತದಲ್ಲೂ ಇರಲಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸಂಸ್ಥಾನದಲ್ಲಿ ಸಮಾಜಾಭಿವೃದ್ಧಿಗಾಗಿ ಸ್ಥಾಪಿತವಾಗಿರುವ ಪ್ರತಿಯೊಂದು ನೂತನ ಸಂಸ್ಥೆಯೂ ತಾವು ಸ್ವತಃ ವಹಿಸಿರುವ ಅಭಿಮಾನ ಪ್ರದರ್ಶಕವಾಗಿರುತ್ತದೆ.

ಮಹಾಸ್ವಾಮಿ, ಈ ಸಂಸ್ಥೆಯ ಪುರೋಭಿವೃದ್ಧಿ ಸಾಧನೋಪಾಯಗಳನ್ನು ಮುಂದೆ ಕೈಕೊಳ್ಳುವವರಾಗಿರುತ್ತೇವೆ ಮತ್ತು ಅವು ಪ್ರಭುತ್ವದವರಿಗೊಪ್ಪಿಗೆಯಾಗುವುವೆಂದು ನಿರೀಕ್ಷಿಸುತ್ತೇವೆ. ವಿದ್ಯಾರ್ಥಿಗಳು ಉಪಾಧ್ಯಾಯರುಗಳ ಪ್ರತ್ಯಕ್ಷ ಮೇಲ್ವಿಚಾರಣೆಯಲ್ಲಿದ್ದು ಸದ್ವರ್ತನಗಳನ್ನು ಕಲಿತುಕೊಳ್ಳಲನುಕೂಲಿಸುವಂತೆ ಹೈಸ್ಕೂಲು ಸ್ಥಾಪನೆಗೆ ಈ ಹಾಸ್ಟಲು ಕಾರಣಭೂತವಾಗಲೆಂದು ಹಾರೈಸುವೆವು. ಈಗ ಮೂರು ವರ್ಷಕಾಲದಲ್ಲಿ ಮುಗಿಯತಕ್ಕ ಬೋಧೆಯು ಮಿಡ್ಲ್ ಸ್ಕೂಲಿನ ಪ್ರಥಮ ವರ್ಷದಿಂದ ಆರು ವರ್ಷಗಳ ಕಾಲ ನಡೆಯುವುದು ಅತ್ಯಂತ ಮುಖ್ಯವಾದುದೆಂದು ಪಾಶ್ಚಾತ್ಯದೇಶದಂತೆಯೇ ಭಾರತದೇಶದಲ್ಲೂ ಭಾವಿಸಲ್ಪಟ್ಟಿದೆ. ಈ ಭಾವನೆಯನ್ನು ಪ್ರಭುತ್ವದವರೂ ವಿದ್ಯಾಶಾಖೆಯವರೂ ಪುಷ್ಟೀಕರಿಸಿ ಜಾಗ್ರತೆಯಲ್ಲಿ ಅದರ ಫಲಾನುಭವವಾಗುವಂತೆ ಮಾಡುವರೆಂದು ನಿರೀಕ್ಷಿಸುತ್ತೇವೆ.

ಮಹಾಶಯರೆ, ಈ ಹಾಸ್ಟಲನ್ನು ಮಾದರಿ ಹಾಸ್ಟಲನ್ನಾಗಿ ಮಾಡಲು ರೂಲ್ಸು ಪ್ರಕಾರ ಸಾಧ್ಯವಾದ ಸೌಲಭ್ಯಗಳನ್ನೆಲ್ಲ ಕಲ್ಪಿಸಿಕೊಡುವರೆಂಬ ಭರವಸೆಯು ನಮಗೆ ಸಂಪೂರ್ಣವಾಗಿರುವುದು. ಈ ವಿಚಾರದಲ್ಲಿ ನಾವು ಮಾಡಬೇಕಾದ ಕಾರ್ಯವನ್ನು ಕೈಕೊಳ್ಳಲು ಸಿದ್ಧರಾಗಿರುತ್ತೇವೆಂದು ಭರವಸೆಯಿಂದ ಬಿನ್ನೈಸಿಕೊಳ್ಳುತ್ತೇವೆ.

ನಮ್ಮನ್ನಾಳುವ ಶ್ರೀಮನ್ಮಹಾರಾಜರವರಲ್ಲಿ ನಮ್ಮಗಳಿಗಿರುವ ಅಸಾಧಾರಣವಾದ ರಾಜಭಕ್ತಿಯನ್ನು ನಿವೇದಿಸಿ, ಈ ಒಕ್ಕಲಿಗರ ಹಾಸ್ಟಲಿನ ಪ್ರಾರಂಭೋತ್ಸವವನ್ನು ತಮ್ಮ ಅಮೃತ ಹಸ್ತದಿಂದ ನೆರವೇರಿಸಬೇಕೆಂದು ಬೇಡುತ್ತೇವೆ, ಮಹಾಸ್ವಾಮಿ. ಆ ದಯಾಮಯನಾದ ಭಗವಂತನು ತಮಗೆ ದೀರ್ಘಾಯುರಾರೋಗ್ಯ ಸುಖಸಂಪತ್ತುಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುವ,

ತಮ್ಮ ವಿನಮ್ರ ಸೇವಕರಾದ,

ಎಸ್. ಸಿ. ಮಲ್ಲಯ್ಯ, ಸೆಕ್ರಟರಿ ಮತ್ತು

ಮ್ಯಾನೇಜಿಂಗ್ ಕಮಿಟಿಯ ಮೆಂಬರುಗಳು.

ಸರ್ಕಾರ ಮತ್ತು ಕಂಪೆನಿಗಳ

ಸಾಲ ಮತ್ತು ಷೇರ್ ಮಾರ್ಕೆಟ್ ದರಗಳು

ಇಂಡಿಯಾ ಸರ್ಕಾರದ 1940—43 ರ ಸಾಲವನ್ನು 17—8—32 ರಿಂದ 31—8—32 ರ ವರೆಗೆ ತೆಗೆದುಕೊಳ್ಳುತ್ತಾರೆ. 100 ರೂ. ಗೆ 98 ರೂಪಾಯಿ ಕೊಡಬೇಕು.

ಸರ್ಕಾರದ ಸಾಲ ಪತ್ರಗಳ ಬೆಲೆ

ಇಂಡಿಯಾ ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳದ್ದು)

ಶೇಕಡ ಬಡ್ಡಿ $3\frac{1}{2}$ (............)	ಪತ್ರದ ಬೆಲೆ		69—4—0
„ „ 4 (1931—36)	....	....	96—14—0
„ „ 4 (1934—37)	....	....	95—13—0
„ „ 4 (1960—70)	....	....	79—10—0
„ „ $4\frac{1}{2}$ (1934)	....	....	99—8—0
„ „ $4\frac{1}{2}$ (1955—60)	....	....	89—13—0

„ „ 5 (1929—47)	....	....	98—12—0
„ „ 5 (1936)	....	....	100—5—0
„ „ 5 (1939—44)	....	....	98—15—0
„ „ 6 (1933—36)	....	....	101—8—0
„ „ $6\frac{1}{2}$ (1935)	....	....	104—7—0
„ „ $5\frac{1}{2}$ (1938—40)	....	....	101—14—0

(ಆದಾಯ ತೆರಿಗೆ ಇಲ್ಲದ್ದು)

„ „ 5 (1933)	....	....	101—6—0
„ „ 5 (1945—55)	....	....	104—9—0

ಮೈಸೂರು ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳದ್ದು)

ಶೇಕಡ ಬಡ್ಡಿ 5 (1929—44)	....	....	95—0—0

(ಆದಾಯ ತೆರಿಗೆ ಇಲ್ಲದ್ದು)

„ „ $6\frac{1}{2}$ (1941—51)	....	....	110—0—0
„ „ $6\frac{1}{4}$ (1940)	....	....	106—14—0
„ „ $5\frac{1}{2}$ (1938)	....	....	102—14—0
„ „ 5 (1955)	....	....	100—0—0
ಶಿವಮೊಗ್ಗ ರೈಲ್ವೆ	....	....	85—0—0
ಚಿತ್ರದುರ್ಗ ರೈಲ್ವೆ	....	....	84—6—0

ಕಂಪೆನಿಗಳ ಷೇರುಗಳ ಬೆಲೆ

ಬ್ಯಾಂಕುಗಳಲ್ಲಿ

ಇಂಪೀರಿಯಲ್ ಎಫ್. ಪಿ.	500 ರೂ. ಷೇರಿಗೆ	1178—8—0	ರೂ. ಬೆಲೆ
„ ಕಾಂಟ್.	125 „	284—0—0	„
ಇಂಡಿಯಾ	50 „	89—8—0	„
ಮೈಸೂರು	100 „	194—0—0	„
ಬೆಂಗಳೂರು	10 „	9—14—0	„
ಇಂಡಸ್ಟ್ರಿಯಲ್	25 „	8—8—0	„
ದೇವಾಂಗ	10 „	6—8—0	„
ವೈಶ್ಯ	50 „	50—0—0	„
ಎಸ್. ಎಂ. ಎಸ್. ಎ.	10 „	10—0—0	„
ವಾರ್ದಾನಿ		ನಾಮಿನಲ್	

ಇತರ ಬ್ಯಾಂಕುಗಳಲ್ಲಿ

ಬಿ. ಸಿ. ರೈಲ್ವೆ	25 ರೂ. ಷೇರಿಗೆ, ...	14—4—0	ರೂ. ಬೆಲೆ
ಬೆಂಗಳೂರು ಪ್ರೆಸ್	100 „	80—0—0	„
ಬಾರ್ಟನ್‌ಸನ್ (ಆ)	10 „	8—0—0	„
„ (ಪಿ)	10 „	6—0—0	„
ಸ್ಪೆನ್ಸರ್ಸ್	....	81—12—0	„
ಬ್ರೂವರಿಸ್ (ಆ)	100 „	85—8—0	„
(ಪ್ರಿ)	100 „	84—10—0	„
ಟೈಲ್ ಅಂಡ್ ಕ್ಲೇವರ್ಕ್ಸ್		ನಾಮಿನಲ್	
ಪ್ರೀಮಿಯರ್	....	ಡಿಟೋ.	
ಟಾಟಾ ಹೈಡ್ರೋ (ಆ)	....	126—8—0	„
„ (ಪ್ರಿ)	....	106—0—0	„
ಟಾಟಾ ಐರನ್ (ಆ)	....	28—0—0	„
„ (ಡೆ)	....	225—0—0	„
„ (1)	....	119—0—0	„
„ (2)	....	45—0—0	„
ಶ್ರೀ ಕೃಷ್ಣ		ನಾಮಿನಲ್.	

ಇನ್ಷೂರೆನ್ಸು ಕಂಪೆನಿಯಲ್ಲಿ

ಏಷಿಯಾಟಿಕ್	5 ರೂ. ಷೇರಿಗೆ	5—2—0	ರೂ. ಬೆಲೆ
ಓರಿಯಂಟಲ್	500 „	1940—0—0	„
ರಿಲೀಯನ್ಸ್	100 „	94—0—0	„

ಡಿಬೆಂಚರುಗಳು

ಕೋಲಾರ	100 ರೂ. ಡಿಬೆಂಚರಿಗೆ	99—2—0	ರೂ. ಬೆಲೆ
ಮೈಸೂರು	100 „	104—4—0	„
ತುಮಕೂರು	100 „	104—0—0	„
ಹಾಸನ	100 „	93—8—0	„

ಮಿಲ್ಲುಗಳಲ್ಲಿ

ಬೆಂಗಳೂರು	100 ರೂ. ಗೆ	65—12—0	ರೂ. ಬೆಲೆ
ಬಂಕಿಂಗ್ಹ್ಯಾಂ	100 „	114—8—0	„
ಗೋಕಾಕ್	100 „	112—0—0	„
ಕೈಸರ್‌ಹಿಂದ್	$2\frac{1}{2}$ „	1—5—0	„
ಮಿನೆರ್ವಾ	100 „	42—8—0	„
ಮಹಾರಾಜ	100 „	90—12—0	„
ಮಹಾಲಕ್ಷ್ಮಿ		ನಾಮಿನಲ್	
ಕೃಷ್ಣರಾಜೇಂದ್ರ	25 „	5—0—0	„

ಗಣಿಗಳಲ್ಲಿ

ಬಾಲಘಾಟ್ ಷಿಲಿಂಗ್ 10 ಕ್ಕೆ	....	0—12—0	ಬೆಲೆ
ಚಾಂಪಿಯನ್ „ 10 „	....	0—20—$5\frac{1}{2}$	„
ಮೈಸೂರು „ 10 „	....	0—14—0	„
ನಂದೀದುರ್ಗ „ 10 „	....	0—12—6	„
ಊರಿಗಾಂ „ 10 „	....	0—6—7	„
ಪೆನಿನ್ಸುಲರ್ „ 10 „	....	ನಾಮಿನಲ್	
ಶಿವಮೊಗ್ಗ „		ನಾಮಿನಲ್	

ಎಂ. ನಂಜಪ್ಪ, ಜಹಗೀರ್‌ದಾರ್,

ಷೇರ್, ಸ್ಟಾಕ್ ಮತ್ತು ಜನರಲ್ ಬ್ರೋಕರ್,

181. ಕ್ಯಾವಲ್ರಿ ರೋಡು, ಬೆಂಗಳೂರು.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ಅಪ್ರಕಟಿತವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟುವಾಗಿಯೂ, ಇರಬೇಕೆಂದೂ ಬುಧವಾರ ಗುರುವಾರದೊಳಗೆ ನಮ್ಮ ಕೈಸೇರುವಂತೆ ಕಳುಹಲ್ಪಡಬೇಕೆಂದು, ಈ ನಿಬಂಧನೆಗೆ ವಿರುದ್ಧವಾದ ಲೇಖನಗಳು ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದ್ದಾಗ್ಯೂ ಲೇಖಕರು ಲಕ್ಷಿಸದೆ ಬಂಗಿ ತಮಗೆ ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ ಪುಟಗಟ್ಟಲೆ ಅಸ್ಫುಟವಾಗಿ ಬರೆದು ನಮಗೆ ತ್ರಾಸನ್ನು ಕೊಡುತ್ತಿರುವರೆಂದು ಬರೆಯಲು ಖೇದವಾಗುತ್ತದೆ. ಆದುಕಾರಣ ಇತಃಪರ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಮಸ್ತರೂ ಗಮನಿಸತಕ್ಕದು.—ಸಂ.

ದಿವಾನ್ ಸಾಹೇಬರವರಲ್ಲಿ ಮೈಸೂರು ಸಂಸ್ಥಾನದ ಮೋಟಾರ್ ಬಸ್ ಮಾಲೀಕರುಗಳ ಅಹವಾಲ್

ಕಳೆದ ಜುಲೈನಿಂದ ಮೋಟಾರ್ ಬಸ್ಸುಗಳ ಮೇಲೆ ಹಾಕಲ್ಪಟ್ಟಿರುವ ಡಬ್ಬಲ್ ಸೆಸ್ಸನ್ನು ವಜಾಮಾಡಿ ಮಾಮೂಲಿನಂತೆ ರಿಯಾಯಿತಿ ತೋರಿಸುವ ಬಗ್ಗೆ ಪ್ರಾರ್ಥಿಸಿಕೊಳ್ಳಲು ಬೆಂಗಳೂರು ಕಾರ್ಲ್‌ಟನ್ ಬಂಗ್ಲೆಯ ಬಳಿ ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟುಗಳ ಬಸ್ಸು ಮಾಲೀಕರುಗಳು ದಿವಾನ್ ಸಾಹೇಬರವರನ್ನು ಕಾದುಕೊಂಡಿದ್ದರು. ನಿನ್ನಾದಿಂದ ಆಗತಾನೇ ಬಂದ ನಮ್ಮ ಹುಜೂರ್ ದಿವಾನ್ ಸಾಹೇಬರವರು ಮೋಟಾರ್ ಮಾಲೀಕರುಗಳ ಅಹವಾಲನ್ನು ಸಾವಧಾನದಿಂದ ಕೇಳಿ ಉಚಿತವಾದ ಮಾತುಗಳಿಂದ ಸಮಾಧಾನಪಡಿಸಿ 28 ನೇ ತಾರೀಖಿನ ದಿವಸ ಆಫೀಸಿಗೆ ಬರಮಾಡಿಕೊಂಡು, ಅವರ ಅಹವಾಲನ್ನು ಗೌರ್ನಮೆಂಟ್ ಅಧಿಕಾರಿಗಳ ಗಮನಕ್ಕೆ ತಂದುದಲ್ಲದೆ, ಇದಕ್ಕೋಸ್ಕರ ಪ್ರತ್ಯೇಕ ಕಮಿಟಿ ಏರ್ಪಡಿಸುವಂತೆಯೂ, ಅದರಲ್ಲಿ ಬುದ್ಧಿಶಾಲಿಗಳಾದ ಕೆಲವು ಬಸ್ ಮಾಲೀಕರುಗಳನ್ನು ಸಹ ಮೆಂಬರುಗಳನ್ನಾಗಿ ತೆಗೆದುಕೊಳ್ಳುವಂತೆಯೂ ಹೇಳಿ ಬಸ್ಸು ಮಾಲೀಕರುಗಳಿಂದ ಪ್ರಾರ್ಥಿಸಲ್ಪಟ್ಟ ಡಬ್ಬಲ್ ಸೆಸ್ಸನ್ನು ನಾಳೆ ಅಕ್ಟೋಬರ್ ಒಂದನೇ ತಾರೀಖಿನಿಂದ ವಜಾಮಾಡುವ ವಿಷಯವನ್ನು ಪರ್ಯಾಲೋಚಿಸುತ್ತೇವೆಂದು ಭರವಸೆಕೊಟ್ಟಿರುತ್ತಾರೆ. ಇದೇ ವಿಚಾರವಾಗಿ ಮಲಬಾರಿನಲ್ಲಿ ಸರ್ಕಾರದವರು ಮಾಮೂಲ್ ಸೆಸ್ಸನ್ನು ಖಾಯಂಮಾಡಿ ಈಚೆಗೆ ಮಾಡಿದ್ದ ಡಬ್ಬಲ್ ಸೆಸ್ಸನ್ನು ವಜಾಮಾಡಿ ಬಸ್ಸು ಮಾಲೀಕರುಗಳಿಗೆ ರಿಯಾಯಿತಿ ತೋರಿಸಿರುವ ಪ್ರಯುಕ್ತ ನಮ್ಮ ಘನ ಸರಕಾರದವರೂ ಮೇಲ್ಕಂಡ ಡಬ್ಬಲ್ ರೋಡ್ ಸೆಸ್ಸನ್ನು ವಜಾಮಾಡಿ ಬಸ್ ಮಾಲೀಕರುಗಳು ಅನುಭವಿಸುತ್ತಿರುವ ಕಷ್ಟಗಳನ್ನು ನಿವಾರಿಸುತ್ತಾರೆಂದು ನಂಬಿದ್ದೇವೆ.

M. MALLARAJ URS,
Hon. Secretery,
Mysore Dt. Automobile Association

ಬಳ್ಳಾರಿ ಡಿಸ್ಟ್ರಿಕ್ಟು ಬೋರ್ಡು ಅಧ್ಯಕ್ಷತೆ.

ಹೊಸ ಪ್ರಕಟನೆಯ ಮೇರೆಗೆ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಚುನಾವಣೆಯು ಮುಂದೆ ಬರುವ ನವಂಬರು 1 ನೇ ತಾರೀಕಿನಲ್ಲಿ ಜರುಗಬಹುದಾಗಿದೆ.

ಈ ಸ್ಥಾನವು ಕಳೆದ ಹತ್ತು ವರ್ಷಗಳ ಲಾಗಾಯಿತು ಒಂದೇ ವ್ಯಕ್ತಿಯ ಅಧೀನದಲ್ಲಿ ಇರುತ್ತಾ ಬಂದಿದೆ. ಇತರ ಬಹು ಸಂಖ್ಯಾಕ ಜನರಿಗೆ ಅಸಾಧ್ಯ ಪ್ರಕರಣವೆನಿಸಿರುತ್ತದೆ. ಅದೇ ವ್ಯಕ್ತಿಯು ಆ ಸ್ಥಾನವನ್ನು ಪುನಹ ತನ್ನ ಪೂರ್ಣ ಸ್ವತಂತ್ರ ಉಳ್ಳದ್ದಾಗಿ ಮಾಡಿಕೊಳ್ಳುವದಕ್ಕೆ ರಾಜತಂತ್ರಬಲದಿಂದ ಹಲವು ಪ್ರಯತ್ನಮಾಡಬಹುದು. ಬಹು ಸಂಖ್ಯಾಕ ಜಾತಿ ವರ್ಗದವರ ಗತಿ ಹೀಗಾದಮೇಲೆ ಅಲ್ಪ ಸಂಖ್ಯಾಕ ಜನಾಂಗದವರ ಹಕ್ಕು ಬಾಧ್ಯತೆಗಳ ಪಾಡೇನು! ಆದುದರಿಂದ ಸರ್ವ ಜಾತಿ ವರ್ಗದವರಿಗೆ ನ್ಯಾಯ ಮತ್ತು ಸಮಾನತೆಯ ಬಗ್ಗೆ ಮತ್ತೂ ವ್ಯಕ್ತಿ ಸ್ವಾತಂತ್ರತೆ ಆಗದಂತೆ ಭದ್ರಪಡಿಸುವ ಬಗ್ಗೆ ಸ್ಥಾನ ಪರಿಪಾಲನ ಸಂಸ್ಥೆಗಳಲ್ಲೊಂದು ಅಗ್ರಗಣ್ಯ ಸಂಸ್ಥೆಯೆನಿಸಿಕೊಂಡಿರುವ "ಮದ್ರಾಸು ಪುರಪಾಲನ ಸಂಸ್ಥೆಯವರು" ನಿಯೋಜಿಸಿದ ಏರ್ಪಾಟನ್ನು ಅನುಕರಣೆಯಲ್ಲಿ ತರುವುದಾಗಿ ಇದರ ಮೂಲಕ ಸೂಚಿಸುವುದಾಗಿದೆ. ಅಲ್ಲಿ ಬ್ರಾಹ್ಮಣೇತರ ವರ್ಗದವರು ಯಾವಾಗ್ಲೂ ಬಹು ಸಂಖ್ಯಾಕರಾದಾಗ್ಲೂ ಅಧ್ಯಕ್ಷರ ಸ್ಥಾನಕ್ಕೆ ಪ್ರತಿ ಚುನಾವಣೆಯಲ್ಲಿ ತಮ್ಮ ಬ್ರಾಹ್ಮಣೇತರ ವರ್ಗದವರನ್ನೇ ತರಬಹುದಾಗಿದ್ದಾಗ್ಯೂ ವಂತು ಪ್ರಕಾರ ಒಂದು ಜಾತಿಯ ವರ್ಗದವರು ಒಂದೊಂದು ಸಲ ಅಧ್ಯಕ್ಷ ಸ್ಥಾನವನ್ನು ವಹಿಸುವಂತೆಯೂ ಅದರಲ್ಲು ಬಹು ಸಂಖ್ಯಾವರ್ಗದವರಿಗೆ ಮೊದಲನೇ ಸಲವೆಂತಲೂ ಹಿಂದಿನಿಂದ ಅಲ್ಪ ಸಂಖ್ಯವರ್ಗದವರು ಹೀಗೆಂದು ಅವರವರ ಹಕ್ಕು ಸ್ಥಾಪನೆಮಾಡಿರುವರು. ಇದರ ಅನುಕರಣೆಯಿಂದ ಅಲ್ಪ ಸಂಖ್ಯಾಕರಾದ ಬ್ರಾಹ್ಮಣರು, ಮುಸಲ್ಮಾನರು, ಕ್ರಿಶ್ಚಿಯನರು, ಮುಂತಾದ ವರ್ಗದವರು ಕೂಡಾ ವಂತು ಪ್ರಕಾರ ಅಧ್ಯಕ್ಷಸ್ಥಾನಕ್ಕೆ ಭಾಗಿಗಳಾಗಿರುತ್ತಾರೆ. ಇಂಥಾ ಕ್ರಮ ನಿಯೋಜನೆಯಿಂದ ವ್ಯಕ್ತಿ ಸ್ವತಂತ್ರಾಧಿಕಾರವನ್ನು ಬೇಧಿಸಿದಂತಾಗುವುದಲ್ಲದೆ ಅಲ್ಪ ಸಂಖ್ಯಾಕ ವರ್ಗದವರಿಗೆ ಅಧಿಕಾರ ಒದಗಿಸಿದಂತಾಗುವುದು. ಇದರ ಅವಲಂಬನೆಯಿಂದ ನೀವೆಲ್ಲರೂ ಇತರ ಸ್ಥಾನ ಪರಿಪಾಲನ ಸಂಸ್ಥೆಗಳಿಗೆ ಮಾರ್ಗದರ್ಶಕರಾಗುವಿರಿ. ಆದುದರಿಂದ ಈ ಸಾರಿ ಬಳ್ಳಾರಿ ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳಾಗಿರುವ ನೀವುಗಳು ಒಬ್ಬರಿಗೊಬ್ಬರು ಸಹಾನುಭೂತಿಯನ್ನು ತೋರಿಸುತ್ತಾ ಮೇಲೆ ನಿಯೋಜಿಸಿದ ನಿಯೋಜನದ ಮೇರೆಗೆ ಬಹು ಸಂಖ್ಯಾಕರಿಗೂ ಅಲ್ಪ ಸಂಖ್ಯಾಕರಿಗೂ ವಂತಾಪ್ರಕಾರ ಸರ್ವ ಜಾತಿಯವರಿಗೂ ಪದವಿಯನ್ನು ಒದಗಿಸಿಕೊಡುವ ಕ್ರಮವನ್ನು ಏರ್ಪಡಿಸಿಕೊಳ್ಳಬೇಕಾಗಿ ನನ್ನ ಮನಃ ಪೂರ್ವಕವಾದ ವಿನಂತಿ. ಮೆಂಬರುಗಳೆಲ್ಲರೂ ಈಗಿನ ಹರಿತ್ತಿಯ ಮಹತ್ವವನ್ನರಿತು ಸಕಾಲದಲ್ಲಿ ತಮ್ಮ ತಮ್ಮ ಕಾರ್ಯಗಳನ್ನು ... ಗಳನ್ನು ಈ ಕಾರ್ಯ ಸಾಫಲ್ಯಕ್ಕಾಗಿ ವಿನಿಯೋಗಿಸುವರೆಂದು ಆಶಿಸುತ್ತೇನೆ.

ವೀರಮಲ್ಲಪ್ಪ ಹಾ|| ಪೋ|| ಬಳ್ಳಾರಿ.

ಪೋಷಕ ಬೋಧಕ ಸಂಘ.

ಚಿಕ್ಕಮಗಳೂರು ತಾ|| ಆಲೂರು ಪ್ರಿಪರೇಟ್ ಪ್ರೈಮರಿ ಸ್ಕೂಲಿನಲ್ಲಿ ಪೋಷಕ ಬೋಧಕ ಸಂಘದ ಸಭೆಯು ಕಳೆದ ತಾ|| 15 ನೇ ಗುರುವಾರ ಕಡೂರ್ ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್ ಆಫೀಸರ್ ಮ|| ಜಿ. ಎಸ್. ಸುಬ್ಬರಾವ್, ಬಿ. ಎ. ಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಹಿಂದು ಮಹಮ್ಮದೀಯ ಬಾಲಕರ ಪೋಷಕರು ಸುಮಾರು 250 ಮಂದಿಯೂ, ಈ ಶಾಲೆಯ ಮತ್ತು ಉರ್ದು ಮಿಡಲ್ ಪ್ರೈಮರೀ ಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರು 150 ರ ಮೇಲ್ಪಟ್ಟೂ, 13 ಮಂದಿ ಉಪಾಧ್ಯಾಯರುಗಳೂ ಹಾಜರಿದ್ದರು. ಚಿಕ್ಕಮಗಳೂರ್ ಕಾಫಿಪ್ಲಾಂಟರ್ ಆರ್. ಎ. ಮತ್ತು ಡಿ. ಬೋರ್ಡ್ ಮೆಂಬರ್ ಮ|| ಬಾಗಮನೆ ದೇವೇಗೌಡರೂ, ಆಲದೂರ್ ಕಾಫಿ ಪ್ಲಾಂಟರ್ ಮ|| ಕರೀಂ ಮೊಗದುಂಸಾಹೇಬರರೂ ಉಪಾಧ್ಯಕ್ಷರಾಗಿದ್ದರು. ಶಾಲೆಯು ಮಂಟಪ ತೋರಣಾದಿಗಳಿಂದ ವಿಶೇಷ ಅಲಂಕೃತವಾಗಿತ್ತು. ಅಧ್ಯಕ್ಷರವರು ಪೀಠವನ್ನಲಂಕರಿಸಿದ ಕೂಡಲೆ ಶಾಲೆಯ ಬಾಲಕರಿಂದ ದೇವತಾ ಪ್ರಾರ್ಥನೆಯೂ ವಿದ್ಯಾರ್ಥಿಯೊಬ್ಬನಿಂದ ಸಂತೋಷ ಸೂಚಕವಾದ ಚಿಕ್ಕ ಉಪನ್ಯಾಸವೂ ನಡೆದವು. ಬಳಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಮ|| ಎಚ್. ಗೋವಿಂದಪ್ಪನವರು ಹಿಂದಿನ ಸಮ್ಮೇಳನದ ವರದಿಯನ್ನೋದಿ, ಈ ದಿನದ ಕಾರ್ಯಗಳನ್ನು ಸೂಚಿಸಿ, ಈಗಿನ ಅಧ್ಯಕ್ಷರವರೇ ನಮ್ಮ ಸಂಘಕ್ಕೆ ಯಾವಾಗಲೂ ಅಧ್ಯಕ್ಷರಾಗಿ (ಪ್ರೆಸಿಡೆಂಟ್) ದ್ದು ತಮ್ಮ ಘನವಾದ ಅನುಭವಗಳಿಂದ ಸಂಘದ ಕಾರ್ಯಗಳು ಉತ್ತಮ ರೀತಿಯಲ್ಲಿ ನಡೆಯುವಂತೆ ಪ್ರೋತ್ಸಾಹಿಸಿ ಸುವ್ಯವಸ್ಥೆಯಲ್ಲಿ ಕಾಪಾಡಬೇಕೆಂದು ಪ್ರಾರ್ಥಿಸಲಾಗಿ ಸರ್ವರೂ ಸಂತೋಷದಿಂದ ಅನುಮೋದಿಸಿದರು. ತರುವಾಯ ಚುನಾವಣೆ ಪದ್ಧತಿಯಂತೆ ಕಾಫಿಪ್ಲಾಂಟರ್ ಮತ್ತು ಆರ್. ಎ. ಮೆಂಬರ್ ಮ|| ಬಿ. ಪಿ. ಬಸಪ್ಪಶೆಟ್ಟರವರು ಸಂಘದ ವೈಸ್ ಪ್ರೆಸಿಡೆಂಟರಾಗಿಯೂ, ಕಾಫಿ ಪ್ಲಾಂಟರ್ ಮ|| ಸಿ. ಅಣ್ಣೇಗೌಡರವರು ಟ್ರೆಜರರ್ ಆಗಿಯೂ ಪೋಸ್ಟ್‌ಮಾಸ್ಟರ್ ಮ|| ಎ. ಎಂ. ಮಲ್ಲಪ್ಪನವರು ಸೆಕ್ರೆಟರಿಗಳಾಗಿಯೂ ಹೆಡ್‌ಮಾಸ್ಟರ್ ಎಚ್. ಗೋವಿಂದಪ್ಪನವರು ಜಾಯಿಂಟ್ ಸೆಕ್ರೆಟರಿಗಳಾಗಿಯೂ ಅಂಗೀಕರಿಸಲ್ಪಟ್ಟರು. ಬಳಿಕ ಶಾಲೆಯ ವಿದ್ಯಾರ್ಥಿಗಳು, ಪೋಷಕರನ್ನೂ ಬೋಧಕರನ್ನೂ ಎಚ್ಚರಗೊಳಿಸುವಂತೆಯೂ, ಬೋಧಪ್ರದವಾಗಿಯೂ ಇರುವ "ಹಳ್ಳಿಯ ಪಾಠಶಾಲೆ" ಎಂಬ ಅಭಿನಯ (ಡೈಲಾಗ್) ವನ್ನು ಬಹು ಸ್ವಾರಸ್ಯವಾಗಿ ಮಾಡಿ ಸಭಿಕರನ್ನು ಆನಂದಗೊಳಿಸಿದರು. ಮ|| ಗಳಾದ ಬಾಗಮನೆ ದೇವೇಗೌಡರವರೂ, ಕರೀಂ ಮೊಗದುಂಸಾಹೇಬರವರೂ, ಬಿ. ಪಿ. ಬಸಪ್ಪಶೆಟ್ಟರವರೂ, ಬಿ. ಪಿ. ಮಲ್ಲಪ್ಪಶೆಟ್ಟರವರೂ ಹಿಂದೂ ಮಹಮ್ಮದೀಯ ಉಭಯ ಜನಾಂಗಗಳಿಗೂ ತಿಳಿಯುವಂತೆ ಮಕ್ಕಳ ಪೋಷಕರ ಕರ್ತವ್ಯ, ವಿದ್ಯಾ ಪ್ರಾಮುಖ್ಯತೆಗಳನ್ನೂ, ಹಿಂದೂ ಮಹಮ್ಮದೀಯ ಸಹೋದರರು ಏಕಮತ್ಯದಿಂದಲೂ ಅನ್ಯೋನ್ಯದಿಂದಲೂ ನಡೆದುಕೊಳ್ಳುವ ವಿಚಾರವನ್ನೂ ಸಭಿಕರ ಮನಸ್ಸಿಗೆ ನಾಟುವಂತೆ ಭಾಷಣಮಾಡಿದುದಲ್ಲದೆ ಇಲ್ಲಿನ ಪ್ರಜಾಸಂಖ್ಯೆ ವಿದ್ಯಾ ಸೌಕರ್ಯ ಮುಂತಾದ ಹಲವು ಕಾರಣಗಳಿಂದ ಈ ಶಾಲೆಯನ್ನು ಜಾಗ್ರತೆ ಇಂಗ್ಲಿಷ್ ಮಿಡಲ್ ಸ್ಕೂಲನ್ನಾಗಿ ಮಾಡಿಕೊಡಬೇಕೆಂದು ಅಧ್ಯಕ್ಷರನ್ನೂ ಸರ್ಕಾರವನ್ನೂ ಪ್ರಾರ್ಥಿಸಿದರು. ತರುವಾಯ ಅಧ್ಯಕ್ಷರವರು ಯುಕ್ತಿ ಯುಕ್ತವಾಗಿ ಹಲವು ಸದುಪದೇಶಗಳನ್ನು ಮಾಡಿ, ಶಾಲೆಯ ಏಳಿಗೆಗಾಗಿ ಆದಿಯಿಂದಲೂ ಬಹಳ ಶ್ರದ್ಧೆ ವಹಿಸುತ್ತಿರುವ ಮ|| ಕಾಫಿಪ್ಲಾಂಟರ್ ಪುಟ್ಟಣ್ಣಶೆಟ್ಟರವರನ್ನು ಶ್ಲಾಘಿಸಿ ಪೋಷಕ ಬೋಧಕರು ಪರಸ್ಪರ ಅನುರಾಗದಿಂದ ನಡೆದುಕೊಂಡು ಮಾಡಬೇಕಾದ ಕರ್ತವ್ಯಗಳನ್ನೂ ಅಪ್ಪಣೆಕೊಡಿಸಿದರು. ಬಳಿಕ ಶ್ರೀ ವಿಶ್ವೇಶ್ವರನಿಗೆ ಮಹಾಮಂಗಳಾರತಿಯೂ ಅಧ್ಯಕ್ಷರಿಗೂ ಸಭಿಕರಿಗೂ ಗಂಧ ಪುಷ್ಪ ತಾಂಬೂಲಾದಿ ವಿನಿಯೋಗವೂ ಅಧ್ಯಕ್ಷರಿಗೂ ಅತಿಥಿಗಳಿಗೂ ವಂದನಾರ್ಪಣೆಯೂ, ಆಳುವ ಮಹಾಸ್ವಾಮಿಯವರ ಶ್ರೇಯಃ ಪ್ರಾರ್ಥನೆಯೂ ಆದನಂತರ ಅಲಂಕೃತ ಮಂಟಪದಲ್ಲಿ ವಿಶ್ವೇಶ್ವರಸ್ವಾಮಿಯನ್ನು ಬಿಜಯ ಮಾಡಿಸಿ ಭಜನೆ ವಾದ್ಯಘೋಷ ಮೊದಲಾದ ವೈಭವಗಳೊಡನೆ ಗ್ರಾಮದಲ್ಲೆಲ್ಲಾ ಮೆರವಣಿಗೆ ಮತ್ತು ವಿಸರ್ಜನೆಗಳಿಂದ ಸಭೆಯು ಬರಖಾಸ್ತಾಯಿತು.

ಪ್ರತ್ಯಕ್ಷದರ್ಶಿ

ಭಾರತ ರಾಜಕೀಯದೃಶ್ಯ

(ಲೇ—ಕಣಕುಪ್ಪಿ ಗುರುಪಾದಪ್ಪ ಶ್ರೀ ಜಯದೇವ ಪ್ರೆಸ್, ದಾವಣಗೆರೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಹಿಂದುಸ್ಥಾನದ ಅಭಿವೃದ್ಧಿಗೆ ಆತಂಕಗಳೆಂದರೆ ಮುಖ್ಯವಾಗಿ ಪ್ರಭುತ್ವದವರ ಅಸಡ್ಡೆ ಅಲಕ್ಷ್ಯ ಭಾವಗಳೂ, ಇವುಗಳ ಜತೆಗೆ ಜನಗಳ ಜಡ ಸ್ವಭಾವ ಮೂಢ ನಂಬಿಕೆ ಆಚಾರ ವ್ಯವಹಾರ ಅನಂತ ಕಾಲ ವ್ಯತ್ಯಾಸದಿಂದಲೂ ಬದಲಾಯಿಸದೆ ಇರುವ ಪ್ರಾಚೀನ ಸಮಾಜ ರಚನೆ ಇವೇ ಮೊದಲಾದುವುಗಳೂ ಕಾರಣಗಳಾಗಿವೆ. ಈ ಬಗ್ಗೆ ಜನರ ಮನೋಭಾವವನ್ನು ಉತ್ತಮ ಸ್ಥಿತಿಗೆ ಬದಲಾಯಿಸಲು ಜಗತ್ತಿನ ನಾನಾಭಾಗಗಳಲ್ಲಿ ನಡೆಯುತ್ತಿರುವ ದಿಗ್ಭ್ರಮಕ ಘಟನೆಗಳೂ ನೋಟ ನಡವಳಿಕೆಗಳೂ ಬಹುಮಟ್ಟಿಗೆ ಸಹಕಾರಿಗಳಾಗಿರುವುವು. ಆದರೆ, ಇವುಗಳು ಅಪಾರ ವಿದ್ಯಾವಿಹೀನತೆಯಿಂದ ಕೂಡಿದ ಭರತಖಂಡದಂತಹ ನಮ್ಮ ದೇಶದಲ್ಲಿ ಏಕಕಾಲಕ್ಕೇ ಅಷ್ಟೇನು ಬಲವತ್ತರವಾದ ಪರಿಣಾಮವನ್ನುಂಟುಮಾಡಲಾರವು. ಇವುಗಳು ಪುರಾಣ ವೈರಾಗ್ಯ ಪ್ರಸೂತಿ ವೈರಾಗ್ಯ ಸ್ಮಶಾನ ವೈರಾಗ್ಯಗಳಂತೆ ತತ್ಕಾಲದಲ್ಲಿ ಜನರ ಮನದಲ್ಲಿ ಹೋರಾಟವನ್ನುಂಟು ಮಾಡುವುವಾದರೂ ಚಿರಸ್ಥಾಯಿಯಾದ ಉತ್ತಮ ಪರಿಣಾಮವೇನೂ ಅವುಗಳಿಂದ ಉಂಟಾಗಲಾರದು. ಇಂತಹ ಶುಭಕರವಾದ ಪರಿಸ್ಥಿತಿಯನ್ನುಂಟುಮಾಡುವುದು ಪರದೇಶೀಯ ಪ್ರಭುತ್ವದಿಂದಂತು ಸಾಧ್ಯವಿಲ್ಲ. ಜನರ ದಿನಚರಿ ನಡೆನುಡಿ ವ್ಯವಹಾರಗಳ ವಾತಾವರಣದಲ್ಲಿ ಹುಟ್ಟಿ ಬೆಳೆದು ಅವರ ಮನಸ್ಸಿನ ಬಲವನ್ನರಿತು ಅವರನ್ನುದ್ಧರಿಸಲೆತ್ನಿಸುವ ಪ್ರಾಜ್ಞರಾದ ಹಿತೈಷಿಗಳಿಂದೊಡಗೂಡಿದ ದೇಶೀಯ ಪ್ರಭುತ್ವದಿಂದಲೇ ಸಾಧ್ಯ.

ಪ್ರಕೃತಿ ದೇವಿಯು ನಮ್ಮ ಪರಮಪಾವನವಾದ ದೇಶದಲ್ಲಿ ಮನುಷ್ಯವರ್ಗದ ಸುಖಕ್ಕೆ ಬೇಕಾದ ಸೌಲಭ್ಯಗಳನ್ನೆಲ್ಲ ತನ್ನ ಪ್ರಸಾದ ಹಸ್ತದಿಂದ ದಾನಮಾಡಿರುವಳು. ಆಶ್ಚರ್ಯಕರವಾದ ಜಲಪಾತಗಳಲ್ಲಿ ಮಹತ್ತರವಾದ ನದಿ ತಟಾಕಗಳಲ್ಲಿ, ಅನಂತವಾದ ಕಾಡುಗಳಲ್ಲಿ ಅತಿ ಚೋದ್ಯಕರವಾದ ಪರ್ವತ ಪಙ್ಕ್ತಿ ಘಟ್ಟಗಳ ತಡಿಗಳಲ್ಲಿ ಬೀಜದೊಳಗಿನ ವೃಕ್ಷದಂತೆ ಅಪಾರವಾದ ಸಂಪತ್ತು ಅಡಗಿಕೊಂಡಿರುವುದು. ಇದನ್ನು ಪ್ರಯತ್ನ

ವಿಶೇಷದಿಂದ ಹೊರಗೆಳೆದು ಜನಹಿತವನ್ನೆಸಗುವ ಕರ್ತೃತ್ವಶಾಲಿಗಳಿಲ್ಲದೆ ಅವರ ಪ್ರವಾಸದಿಂದ ನಮಗೇನು ಪ್ರಯೋಜನವಾಗುವಂತಿದೆ? ಅಂದರೆ, ಸ್ವರಾಜ್ಯವಿಲ್ಲದೆ ನಮ್ಮಭಿವೃದ್ಧಿಯು ಹೇಗಾಗಬೇಕು? ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಿಳಿದಿರಬೇಕಾದುದು ಅವಶ್ಯಕ. ಸ್ವರಾಜ್ಯವು ಒಂದು ಸಾಧನೆಯೇ ಹೊರತು ಸಾಧ್ಯವೇನೂ ಅಲ್ಲ. ಈ ಬಗೆಯ ಸ್ವರಾಜ್ಯದಿಂದ ಕೇವಲ ಹಿಂದುಳಿದಿದ್ದ ಪೌರ್ವಾತ್ಯ ದೇಶವಾದ ಜಪಾನು ಕಳೆದ ಕಾಲು ಶತಮಾನದಿಂದ ಅಭಿವೃದ್ಧಿ ಹೊಂದುತ್ತಲಿದ್ದು ಜಗತ್ತಿನ ಪ್ರಮುಖ ರಾಷ್ಟ್ರಗಳಲ್ಲೊಂದಾಗಿದೆ. ಇದು ವಿಸ್ತೀರ್ಣದಲ್ಲಿ ನಮ್ಮ ದೇಶದ $\frac{1}{13}$ ಭಾಗ ಇರುವುದು. ಜನ ಸಂಖ್ಯೆಯಾದರೋ $5\frac{1}{2}$ ಕೋಟಿ. ಇಂತಹ ಚಿಕ್ಕ ದೇಶದ ಹುಟ್ಟುವಳಿಯೆಷ್ಟು ಬಲ್ಲಿರಾ? ರೂ. 205 ಕೋಟಿ! ಸರಿ ಸುಮಾರಾಗಿ ಇಷ್ಟೇ ಜನ ಸಂಖ್ಯೆಯನ್ನುಳ್ಳ ($4\frac{1}{2}$ ಕೋಟಿ) ಸಂಯುಕ್ತ ಪ್ರಾಂತ್ಯದಲ್ಲಿ 14 ಕೋಟಿ ರೂ. ಬಂಗಾಳದಲ್ಲಿ 34 ಕೋಟಿ ರೂ. ಹುಟ್ಟುವಳಿ ಇರುವುದು. ಇಷ್ಟು ಅಲ್ಪ ಹುಟ್ಟುವಳಿಯಿಂದ ಜಪಾನಿನ ಮಟ್ಟಕ್ಕೆ ಏರುವುದು ನಮಗೆ ಹೇಗೆ ಸಾಧ್ಯ? ಆದುದರಿಂದ ನಮ್ಮ ಹುಟ್ಟುವಳಿ ಹೆಚ್ಚಬೇಕು; ನಮ್ಮ ಖರ್ಚೂ ಹೆಚ್ಚಬೇಕು. ಪ್ರಜೆಗಳು ಹೆಚ್ಚು ತೆರಿಗೆ ಕೊಡದ ಹೊರತು ಸರ್ಕಾರದ ಹುಟ್ಟುವಳಿ ಹೇಗೆ ಹೆಚ್ಚೀತು? ನಮ್ಮಲ್ಲಿ ಪ್ರತಿಯೊಬ್ಬನೂ ಹಣವಂತನಾಗಿರದಿದ್ದರೆ ಹೆಚ್ಚು ತೆರಿಗೆಗಳನ್ನು ನಾವು ಹೇಗೆ ಕೊಡಲಾದೀತು? ನಮಗೆ ದ್ರವ್ಯೋತ್ಪತ್ತಿ ಮಾಡುವುದು ಗೊತ್ತಿದ್ದರೆ, ಉತ್ಪತ್ತಿಮಾಡಲು ಕೆಲಸ ಮಾಡಬಲ್ಲವಾದರೆ, ಕೆಲಸಮಾಡಲು ನಾವು ಆರೋಗ್ಯವಂತರೂ ಸಾಕಾದಷ್ಟು ಬಲಿಷ್ಠರೂ ಆಗಿದ್ದರೆ ಹೆಚ್ಚು ಐಶ್ವರ್ಯವಂತರು ನಾವಾಗಬಲ್ಲೆವು. ಆದಕಾರಣ ನಮಗೆ ಹೆಚ್ಚುಹೆಚ್ಚಾಗಿ ಉತ್ತಮತರವಾದ ವಿದ್ಯೆ, ಆರೋಗ್ಯ, ವ್ಯವಸಾಯ ಕೈಗಾರಿಕೆಗಳು ಬೇಕು. ಸದ್ಯಕ್ಕೆ ಈ ಅಭಿವೃದ್ಧಿದಾಯಕ ಕಾರ್ಯಗಳಿಗೆ ಹೆಚ್ಚು ಹಣ ಒದಗಿಸಬೇಕಾದರೆ ನಮ್ಮ ಸರ್ಕಾರದ ಆಡಳಿತೆಯ ಖರ್ಚು ಕಡಿಮೆಯಾಗಬೇಕು. ಜಪಾನಿನ ಆಡಳಿತೆಯ ಖರ್ಚಿನ ಕ್ರಮವನ್ನು ನಮ್ಮ ಸರ್ಕಾರದವರು ಅನುಸರಿಸಿದರೆ ಇದು ಸಾಧ್ಯ. ಅಂದರೆ ನಮ್ಮ ದೇಶದ ಅಧಿಕಾರ ಸೂತ್ರವು ನಮ್ಮ ಕೈಸೇರಬೇಕು. ಜಪಾನಿನ ಹುಟ್ಟುವಳಿಯು (1923—24) ರೂ. 205 ಕೋಟಿ ಯೆಂದು ಹಿಂದೆ ಹೇಳಿದೆಯಷ್ಟೆ. ಹಿಂದುಸ್ಥಾನದ ಹುಟ್ಟುವಳಿ (1920—21) ರೂ. 130 ಕೋಟಿಯಾಗಿರುವುದು. ಈ ಎರಡು ದೇಶಗಳ ಅಧಿಕಾರಿಗಳ ಸಂಬಳಗಳು ಅಜಗಜಾಂತರದಷ್ಟು ವ್ಯತ್ಯಾಸವಾಗಿರುವುವು. ಜಪಾನಿನಲ್ಲಿ ಅತಿ ಹೆಚ್ಚಿನ ಅಧಿಕಾರಿಗೆ ವರ್ಷಕ್ಕೆ ರೂ. 18750; ನಮ್ಮಲ್ಲಿ ಅತಿ ಹೆಚ್ಚಿನ ಅಧಿಕಾರಿಗಳಾದ ವೈಸ್‌ರಾಯಿಗಳಿಗೆ ತಿಂಗಳಿಗೆ 20,000.

ಈ ಪಟ್ಟಿಯನ್ನು ನೋಡಿರಿ.

ಇಂಡಿಯ	ಜಪಾನ್
ಅಧಿಕಾರ	
ವರ್ಷದ ಸಂಬಳ	ವರ್ಷದ ಸಂಬಳ
ವೈಸ್‌ರಾಯ್ ರೂ. 2,40,000	ಪ್ರಧಾನ ಮಂತ್ರಿ ರೂ. 18750 (Prime Minister)
ಗವರ್ನರ್ ರೂ. 1,20,000	ಸಂಸ್ಥಾನ ಮಂತ್ರಿ ರೂ. 12000 (Minister of State)
ಮಂತ್ರಿ ರೂ. 60,000	

ಈ ರೀತಿಯಲ್ಲಿ ಆಡಳಿತೆಯ ಖರ್ಚನ್ನು ಕಡಿಮೆಮಾಡಿಕೊಂಡು ಅಭಿವೃದ್ಧಿಕರವಾದ ಬಾಬುಗಳಿಗೆ ಜಪಾನ್ ದೇಶವು ಹೆಚ್ಚಾಗಿ ಖರ್ಚುಮಾಡುತ್ತದೆ. ಈ ದೇಶವು ರೂ. 13 ಕೋಟಿಗಳನ್ನು ವಿದ್ಯೆಗೂ $7\frac{1}{2}$ ಕೋಟಿ ರೂ. ಗಳನ್ನು ವ್ಯವಸಾಯ ವ್ಯಾಪಾರಗಳಿಗೂ ಖರ್ಚುಮಾಡುತ್ತದೆ. ಇಂಡಿಯಾ ದೇಶವು ವಿದ್ಯೆಗೆ 10 ಕೋಟಿ ರೂ. ಗಳನ್ನು ಖರ್ಚುಮಾಡುತ್ತದೆ; ಸೈನ್ಯಕ್ಕೆ ಮಾತ್ರ 62 ಕೋಟಿ ರೂ. ಗಳನ್ನು ಖರ್ಚುಮಾಡುತ್ತದೆ. ಜಪಾನ್ ದೇಶವು ಈ ಬಾಬಿಗೆ 31 ಕೋಟಿ ರೂ. ಖರ್ಚುಮಾಡುತ್ತದೆ.

ಈ ಕಾರಣದಿಂದಲೇ $5\frac{1}{2}$ ಕೋಟಿ ಜನ ಸಂಖ್ಯೆಯುಳ್ಳ ಆ ದೇಶದಲ್ಲಿ 27,000 ಪ್ರಾಥಮಿಕ ಪಾಠಶಾಲೆಗಳಿರುತ್ತವೆ. ಅವುಗಳಲ್ಲಿ 50,00,000 ವಿದ್ಯಾರ್ಥಿಗಳು ಓದುತ್ತಿದ್ದಾರೆ, ಇವುಗಳಲ್ಲದೆ ಮಾಧ್ಯಮಿಕ ಮತ್ತು ಪ್ರೌಢ ವಿದ್ಯಾ ಶಾಲೆಗಳು ಬೇರೆ ಇದ್ದೇ ಇರುವುವು. ಬರೀ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಶೇಕಡ 10 ರಷ್ಟಿರುವರು. ಹಿಂದುಸ್ಥಾನದ ಎಲ್ಲಾ ತರಗತಿಗಳ ಸಂಖ್ಯೆಯು ಶೇಕಡ 3.4 ರಷ್ಟಿರುವುವು. ಇವೆರಡನ್ನೂ ಹೋಲಿಸಿ ನೋಡಿರಿ.

ಜಪಾನ್ ದೇಶವು ಸೈನ್ಯಕ್ಕೆ ಖರ್ಚುಮಾಡುವ 31 ಕೋಟಿ ರೂ. ಗಳು ಹೊರಗೆ ಹೋಗದೆ ಅಲ್ಲಿನ ಜನರಿಗೆ ಹಿಂತಿರುಗುವಂತೆ ಏರ್ಪಾಡಾಗಿದೆ. ಮದ್ದು ತಯಾರಿಸುವ ಗಿರಣಿಗಳೂ ಗುಂಡು ತಯಾರಿಸುವ ಗಿರಣಿಗಳೂ ತುಪಾಕಿ ತಯಾರಿಸುವ ಗಿರಣಿಗಳೂ ಏರ್ಪಟ್ಟು ಲಕ್ಷಾಂತರ ಬಡವರಿಗೆ ಕೂಲಿಯೂ ಹಣವಂತರಿಗೆ ಲಾಭವೂ ಸಿಕ್ಕಿ ಸರ್ಕಾರಕ್ಕೆ ಆದಾಯ ತೆರಿಗೆಯು ಹೆಚ್ಚುತ್ತದೆ. ನಮ್ಮ ಸೈನಿಕರೂ ಅವರ ಅಧಿಕಾರಿಗಳೂ ಭಾರತೀಯರಾಗಿ ಸೈನ್ಯ ಸಾಮಗ್ರಿಗಳಿಗಾಗಿ ನಮ್ಮಲ್ಲಿಯೇ ಗಿರಣಿಗಳನ್ನೇರ್ಪಡಿಸಿಕೊಳ್ಳುವಂತಿದ್ದರೆ ನಮ್ಮ ಯೋಗ್ಯತೆ ಎಂತಹದಿರುತ್ತಿತ್ತು?

ಅಹಿಂಸೆ.

(ಟಾಲಸ್ಟಾಯಿಯವರಿಂದ.)

(ಹಿಂದಿನಸಂಚಿಕೆಯಿಂದ ಮುಂದುವರಿದುದು.)

ಶಿಶುವನ್ನು ಕಾಪಾಡುವುದಕ್ಕಾಗಿ ಕಳ್ಳನನ್ನು ಕೊಲ್ಲಬೇಕೆಂದಿಲ್ಲವೆ! ಆದರೆ ಅದರಲ್ಲಿರುವ ನ್ಯಾಯಾನ್ಯಾಯವನ್ನು ಯೋಚಿಸಬೇಡವೆ? ಈಶ್ವರನ ಅಸ್ತಿತ್ವದಲ್ಲಿ ನಂಬಿಕೆಯು ಇಲ್ಲದ ನಾಸ್ತಿಕನಾದರೂ ಮಗುವನ್ನು ಕಾಪಾಡುವುದಕ್ಕೆ ಕಳ್ಳನನ್ನು ಕೊಲ್ಲಬೇಕೆಂದು ಹೇಗನ್ನುವನು? ಇದರಲ್ಲಿ ಸಹೇತುಕತ್ವವು ಎಷ್ಟುಮಾತ್ರಕ್ಕೂ ಇಲ್ಲ. ಕಳ್ಳನನ್ನು ಕೊಲ್ಲುವುದಕ್ಕಾಗಿ ತಾನು ಮಾಡುವುದು ಕೂಡ ಪ್ರಾಣಹತ್ಯವೇ ಅಲ್ಲವೆ? ತಾನು ಕಳ್ಳನನ್ನು ಕೊಂದವನಾಗುವನೇ ಹೊರತು ಕಳ್ಳನು ವಿಧಿಯಿಂದ ಮಗುವನ್ನು ಕೊಂದನೊ ಬಿಟ್ಟುಬಿಟ್ಟನೊ ಅವನಿಗೇನು ತಿಳಿಯುವುದು? ಕಳ್ಳನ ಮುಂದಣ ಜೀವಿತಕ್ಕಿಂತ ಮಗುವಿನ ಜೀವಿತವೇ ಶ್ರೇಷ್ಠತರವಾದುದೆಂದು ಅವನು ಹೇಗೆ ನಿರ್ಧರಿಸುವನು? ದೇವರ ಇಷ್ಟವೇನೆಂದು ತಿಳಿದುಕೊಂಡು ನಡೆಯಬೇಕೆಂಬ ಕೋರಿಕೆಯೇನೂ ಇಲ್ಲದ ನಾಸ್ತಿಕನು ಮಾತ್ರ ಇಂತಹ ವಿಷಯದಲ್ಲಿ ಯಾವ ಯೋಚನೆಯಿಲ್ಲದೆ ತನ್ನ ಇಷ್ಟಬಂದ ಹಾಗೆ ಸಂಚರಿಸುವನು! ತನ್ನ ಕ್ಷೇಮಕ್ಕೂ ಮನುಷ್ಯಕೋಟಿಯ ಕ್ಷೇಮಕ್ಕೂ ಬೇಕಾದುದು ಮಗುವಿನ ಜೀವಿತವೋ ಕಳ್ಳನ ಜೀವಿತವೊ! ಎಂಬ ಪ್ರಶ್ನೆಗೆ ತಕ್ಕ ಸಮಾಧಾನವನ್ನು ಹೇಳುವುದನ್ನು ಕಲಿತಿರುವುದರ ಮೇಲೆ ತಾನು ಯಾವ ಆಚರಣೆಯನ್ನು ಕೈಕೊಳ್ಳಲು ಅವಕಾಶವಿಲ್ಲದಿರುವುದಷ್ಟೆ. ಮೇಲಿನ ಪ್ರಶ್ನೆಗೆ ಸರಿಯಾದ ಸಮಾಧಾನ ಬರಬೇಕೆಂದಲ್ಲಿ ತಾನು ಸಾಕುತ್ತಿರುವ ಮಗುವಿನ ಭಾವೀ ಜೀವಿತವು ಹೇಗೆ ಪರಿಣಮಿಸುವುದೆಂಬುದು ಈಗಲೇ ತನಗೆ ತಿಳಿದಿರಬೇಕು. ಕಳ್ಳನನ್ನು ಕೊಲ್ಲದೆ ಬಿಟ್ಟರೆ ಮುಂದೆ ಅವನ ಜೀವಿತವು ಹೇಗೆ ಪರಿಣಮಿಸುವುದೆಂಬುದನ್ನು ಸ್ಪಷ್ಟವಾಗಿ ತಿಳಿದಿರಬೇಕು. ಈ ಭವಿಷ್ಯವನ್ನೆಲ್ಲ ಮುಂದಾಗಿ ತಿಳಿದುಕೊಳ್ಳಲು ಯಾರಿಗೆ ಸಾಧ್ಯವು? ಹೀಗಿರುವಾಗ್ಗೆ ಈಶ್ವರನಲ್ಲಿ ನಂಬಿಕೆಯಿಲ್ಲದ ನಾಸ್ತಿಕನು ಸಹ ಮಗುವನ್ನು ಕಾಪಾಡಿ ಕಳ್ಳನನ್ನು ಕೊಲ್ಲುವುದೆನ್ನುವುದು ಸಕಾರಣವಾದವೆನಿಸುವುದಿಲ್ಲ.

ಇನ್ನು ಈಶ್ವರನ ಪ್ರೀತ್ಯರ್ಥವಾಗಿಯೇ ಎಲ್ಲ ಕಾರ್ಯಗಳನ್ನು ನಿರ್ವಹಿಸುವ ಭಕ್ತನ ನಡವಳಿಕೆಯಲ್ಲಿ ಹಿಂಸೆಗೆಷ್ಟು ಮಾತ್ರಕ್ಕೂ ಅವಕಾಶವಿಲ್ಲ. ಕಳ್ಳನು ಎಷ್ಟು ಭೀಕರ ಸ್ವರೂಪನಾಗಿದ್ದರೂ, ಮಗುವಿನ ಮುಖ ಎಷ್ಟು ಮುದ್ದಾಗಿದ್ದರೂ, ಅದರಲ್ಲಿ ಅಮಾನುಷತ್ವವು ಮೂರ್ತಿಭವಿಸಿದ್ದರೂ, ಈಶ್ವರಾಜ್ಞೆಯನ್ನುಲ್ಲಂಘಿಸಲವಕಾಶವಿಲ್ಲವು. ಮಗುವಿಗೆ ಎಷ್ಟು ಹಿಂಸೆಯನ್ನು ಕೊಟ್ಟಿರುತ್ತಾನೊ ಅಷ್ಟು ಹಿಂಸೆಯನ್ನು ಹಂತಕನಿಗೆ ಕೊಡಲು ನಮಗೇನು ಅಧಿಕಾರವಿರುವುದು? ಮಗುವನ್ನು ಹಿಂಸಿಸಬಾರದೆಂದು ಅವನಿಗೆ ವಿವೇಕವನ್ನು ಹೇಳಬಹುದು ಅಥವಾ ಧೈರ್ಯದಿಂದ ಮಗುವಿಗೂ ಹಂತಕನಿಗೂ ಮಧ್ಯ ನಿಂತು ನಮ್ಮ ಪ್ರಾಣವನ್ನಾಹುತಿ ಕೊಡಬಹುದು. ಆದರೆ ಈಶ್ವರನಿಂದನುಗ್ರಹಿಸಲ್ಪಟ್ಟ ಯಾವ ಧರ್ಮವನ್ನು ಅನುಸರಿಸುವುದರಿಂದ ತನ್ನ ಜನ್ಮ ಸಾರ್ಥಕವಾಗುವುದೊ ಆ ಧರ್ಮ ಶಾಸನವನ್ನುಲ್ಲಂಘಿಸಲೆಷ್ಟು ಮಾತ್ರಕ್ಕೂ ಭಕ್ತನಾದವನು ಒಪ್ಪುವುದಿಲ್ಲ. ಕೃತ್ರಿಮವಿದ್ಯಾ ಪದ್ಧತಿಗಳಾಗಲಿ, ನಮ್ಮಲ್ಲಿರುವ ಪಶು ಸ್ವಭಾವವಾಗಲಿ ಹಂತಕನನ್ನು ಶಿಕ್ಷಿಸುವಂತೆ ನಮ್ಮನ್ನು ಪ್ರೋತ್ಸಾಹಿಸಬಹುದು. ಮಗುವಿನ ಪ್ರಾಣವನ್ನು ಕಾಪಾಡುವುದರಲ್ಲೇ ಅಲ್ಲದೆ ನಮ್ಮ ಪ್ರಾಣವನ್ನುಳಿಸಿಕೊಂಡು ಬರುವುದರಲ್ಲೂ ನಮ್ಮ ಹಣದ ಚೀಲವು ಹೋಗದಂತೆ ಅದನ್ನು ಭದ್ರಪಡಿಸಿಕೊಳ್ಳುವುದರಲ್ಲೂ ಕಳ್ಳನನ್ನು ಶಿಕ್ಷಿಸುವುದು ಧರ್ಮವೆಂದು ಪಶುತ್ವವು ನಮಗೆ ಹೇಳುತ್ತಿರುವುದು. ಅಂತಹ ನಮ್ಮ ನಡವಳಿಕೆಯು ನ್ಯಾಯಸಮ್ಮತವಾಗುವುದೇ? ನಮ್ಮಲ್ಲಿ ನಾವು ಹಾಗೆನ್ನುಕೊಳ್ಳುವುದೂ, ಇತರರು ಅನ್ನುವಹಾಗೆ ಮಾಡುವುದೂ ತಪ್ಪೇ.

ವಿದ್ಯೆಯ ಹೆಸರಿನಿಂದಲೂ, ಮತದ ಹೆಸರಿನಿಂದಲೂ ಏರ್ಪಟ್ಟಿರುವ ಸಂಘಗಳಲ್ಲಿ ಮೇಲ್ಮೇಲೆ ಮೆರಗೆಸ್ಸಿದ್ದರೂ, ಮೊದಲುಕಾಲದ ಪಶುಪ್ರಕೃತಿಯು ಮನುಷ್ಯನಲ್ಲಿನ್ನೂ ಬಲವಾಗಿ ಬೇರೂರಿಕೊಂಡಿರುವುದೆಂದೇ ಹೇಳಬೇಕಾಗಿದೆ. ವಿವೇಕವು ಒಳಗಿರಬೇಕಲ್ಲವೆ ಎಂದು ಹೇಳುತ್ತಿದ್ದರೂ, ಮನುಷ್ಯರು ಯಥೇಚ್ಛವಾಗಿ ದೌರ್ಜನ್ಯಕ್ಕೆ ಬಿದ್ದು ಆತ್ಮವಂಚಕರಾಗಿರಲು ಇದೇ ಕಾರಣವು. "ಒಬ್ಬ ಕಳ್ಳನು ಒಂದು ಶಿಶುವನ್ನು ಕೊಲ್ಲಲು ಪ್ರಯತ್ನಿಸುತ್ತಿರುವುದನ್ನು ನೋಡಿ ಕಳ್ಳನನ್ನು ಕೊಂದರೆ ಶಿಶುವನ್ನು ಬದುಕಿಸಬಹುದು. ಅದರಿಂದ ದುಷ್ಟತ್ವವನ್ನು ಪ್ರತಿಘಟಿಸಲು ಒಂದೊಂದು ವೇಳೆ ಹಿಂಸಾಪದ್ಧತಿಯು ಅತ್ಯಾವಶ್ಯಕವಾಗುವುದು" ಎಂದು ಒಬ್ಬನು ಹೇಳುವನು. "ಒಬ್ಬನು ಅಪಾಯಕರ ಸ್ಥಿತಿಯಲ್ಲಿ ಸಿಕ್ಕಿಕೊಂಡಿರುವ ನಾನು ಸುಳ್ಳನ್ನು ಆಡಿದಲ್ಲಿ ಅವನ ಮಾನ ಪ್ರಾಣಗಳನ್ನುಳಿಸಲು ಅವಕಾಶವಾಗುವುದು. ಅಂದರೆ ಒಂದೊಂದು ಸಂದರ್ಭದಲ್ಲಿ ಸುಳ್ಳನ್ನು ಆಡಲೇ ಬೇಕಾಗುವುದು ಎಂದು ಮತ್ತೊಬ್ಬನ ವಾದವು. ಒಬ್ಬನು ಹೊಟ್ಟೆಗಿಲ್ಲದೆ ಕೇಳಿ ತಿಂದರೂ, ಬೇರೆ ಎಲ್ಲಿಯೋ ಕದ್ದು ತಂದು ಹೊಟ್ಟೆಗೆ ಹಾಕಿದ ಹೊರತು ಅವನ ಹಸಿವು ತೀರಲವಕಾಶವಿಲ್ಲದಂತಾಗುವುದು. ಅಂದರೆ ಒಂದೊಂದು ವೇಳೆ ಕದಿಯುವುದೇ ಕರ್ತವ್ಯವೆಂದು ಹೇಳಿ ತನ್ನ ನಡತೆಯನ್ನು ಸಾಧಿಸುವನು.

ನಾನೊಂದು ಕಥೆಯನ್ನು ಓದಿದ್ದೆನು. ಅದರಲ್ಲಿ ಒಬ್ಬ ಸೈನಿಕನು ಲೈಫ್ ಇನ್ಷೂರುಮಾಡಿದ್ದ ತನ್ನ ಮೇಲ್ಪಟ್ಟ ಅಧಿಕಾರಿಯನ್ನು ಸ್ವತಃ ಕೊಂದು ತನ್ನ ಯಜಮಾನನ ಗೌರವವನ್ನೂ ಆತನ ಕುಟುಂಬವನ್ನೂ ಕಾಪಾಡಿದೆನೆಂದು ಹೇಳಿಕೊಂಡಿರುವನು! ಅದರಿಂದ ಒಂದೊಂದು ವೇಳೆ ಕೊಲೆಮಾಡುವುದೇ ನ್ಯಾಯವಾದ ಕರ್ತವ್ಯವೆಂಬುದು ಅವನುದ್ದೇಶವು.

ಇಂತಹ ಬಾಯಿ ವೇದಾಂತದಿಂದ ಗೊತ್ತಾಗುವುದೇನು? ಕದಿಯುವುದು, ಸುಳ್ಳು ಹೇಳುವುದು, ಹತ್ಯಮಾಡುವುದು ಮೊದಲಾದವುಗಳು ಕೆಟ್ಟಕೃತ್ಯಗಳೆಂದು ಸ್ಪಷ್ಟವಾಗಿ ತಿಳಿದಿದ್ದರೂ ತಾವು ಮಾತ್ರ ಅವುಗಳ ಪಾಶಕ್ಕೆ ಬೀಳದಿರಲಿಷ್ಟಪಡದೆ ಬೇಕೆಂದಾಗ ಯಾವುದಾದರೊಂದು ನೆಪವನ್ನು ಹೇಳಿ ಮನುಷ್ಯರು ದೌರ್ಜನ್ಯವನ್ನೇ ನಡೆಸುತ್ತಿರುವುದು ಪರಿಪಾಟಿಯಾಗಿರುತ್ತದೆ. ಈ ಪ್ರಕಾರವಾಗಿ ಕೃತ್ರಿಮದ ಮೂಲಕ ಮಸಿ ಬಳೆದು ಮಾಯಮಾಡುವ ಧರ್ಮ ಸಿದ್ಧಾಂತವು ಈ ಕಾಲದಲ್ಲಿ ಗೋಚರವಾಗುವುದಿಲ್ಲ. ಧರ್ಮವನ್ನು ಆಚರಿಸುವುದರಿಂದಾಗಲಿ ಅತಿಕ್ರಮಿಸುವುದರಿಂದಾಗಲಿ ನಿರ್ಧರಿಸುವುದು ಅಸಂಭವವೆಂಬುದರ ಮೇಲೆ ಕುತಂತ್ರಗಳು ಮಿತಿಮೀರಿ ಪ್ರತಿಸಿದ್ಧಾಂತವನ್ನೂ ಆಕ್ರಮಿಸಿರುತ್ತವೆ. ಆದರೇನು? ಈ ಕುತರ್ಕಗಳೆಷ್ಟಾದರೂ "ನೀನು ಯಾವಾಗಲೂ ಸುಳ್ಳು ಹೇಳಲಾಗದು, ಕದಿಯಬಾರದು, ಹತ್ಯಮಾಡಬಾರದು" ಎಂಬ ಮೂಲ ಸೂತ್ರಗಳ ಅನೋಘತ್ವವನ್ನು ಶಾಶ್ವತವಾಗಿ ಹೋಗಲಾಡಿಸಲಾರವು.

ಅಹಿಂಸಾ ಸಿದ್ಧಾಂತವು ಕೂಡ ಇಂತಹ ಅಳಿಯದ ಧರ್ಮಸೂತ್ರಗಳಲ್ಲೊಂದಾಗಿರುವುದು. ಹಿಂಸಾ ಪದ್ಧತಿಯು ಅಕ್ರಮಪದ್ಧತಿಯೆಂದು ಪ್ರಜೆಗಳು ತಿಳಿದುಕೊಳ್ಳುವರು. ಅಂದರೆ ದೇಹಬಲ ಪ್ರಧಾನವಾದ ಕಠಿನ ರಾಜಶಾಸನವು ಅದರಲ್ಲಿ ಸೇರಿಕೊಂಡರೆ ಏನಾ ಬದಲಾಗುವುದಿಲ್ಲವೆಂದು ಅದನ್ನೇ ಆಶ್ರಯಿಸಿಕೊಂಡು ಎಷ್ಟೋ ಜನರಿರುವರು. ಹಿಂಸಾ ಪದ್ಧತಿಯಿಂದ ಈವರೆಗಾಗಿರುವ ಮತ್ತು ಮುಂದಾಗುವ ಕೆಡಕನ್ನು ನಿರ್ಮೂಲಗೊಳಿಸುವುದರ ಬದಲು ಹಿಂಸೆಯನ್ನು ಸಮರ್ಥಿಸಿ ಪ್ರೋದ್ಬಲಿಸಲಿಕ್ಕೇ ಇವರು ತಮ್ಮ ಯಾವತ್ಶಕ್ತಿಯನ್ನೂ ವಿನಿಯೋಗಿಸುವರು.

"ಯಾವುದು ಹೇಗಿದ್ದರೂ ಸರಿ ಧರ್ಮವಾವುದೆಂದು ಕಂಡುಹಿಡಿದು ಅದನ್ನೇ ನಡೆಸುವನು" ಎಂಬುದೇ ಸರ್ವೋತ್ಕೃಷ್ಟವಾದ ಜ್ಞಾನೋಪದೇಶವು. ಯಾವಾಗಲೂ ತನ್ನ ವಿಧಿಕೃತ್ಯವಾವುದೆಂಬುದು ಮನುಷ್ಯನಿಗೆ ತಿಳಿಯುತ್ತಿರುವುದು. ಆದರೆ ತಾನು ಮಾಡುವ ಕಾರ್ಯಗಳ ಪರ್ಯವಸಾನವೇನೆಂದು ತಿಳಿದುಕೊಳ್ಳಲಾರನು. ವಿಧಿಕೃತ್ಯವಿದೆಂದು ತಿಳಿಯುವುದೂ, ವಿಧಿಮಿಂಚಿದ ಮಾರ್ಗದರ್ಶಕವು ಬೇರೊಂದಿಲ್ಲವೆಂದು ನಂಬಿ ವಿಧಿಯಾಜ್ಞೆಯನ್ನು ಶಿರಸಾವಹಿಸಿ ನೆರವೇರಿಸುವುದೂ ಮಾತ್ರ ನಮ್ಮ ಕೆಲಸ. ನಮ್ಮ ಕೆಲಸದಿಂ ದುಂಟಾಗುವ ಫಲವೆಂತಹದೆಂಬುದು ಎಷ್ಟು ಮಾತ್ರಕ್ಕೂ ಗೊತ್ತಾಗುವುದಿಲ್ಲ.

ಮೇಲೆ ಉದಹರಿಸಿರುವ ಊಹಾ ಪ್ರಪಂಚದ ಕಳ್ಳನಾಗಲಿ, ಶಿಶುವಾಗಲಿ ನಮ್ಮನ್ನು ಯಾವಾಗಲೂ ನೋಡಿಲ್ಲ. ನಾವು ಮುಂದೆ ಯಾವಾಗಲೋ ಮಾಡುವ ಕಾರ್ಯಗಳ ಫಲವು ಹೀಗಿರುವುದೆಂದು ಊಹಿಸಿ ಅಂದಾಜು ಹಾಕುವೆವು. ಇಂತಹ ಮಿಥ್ಯ ಪ್ರಪಂಚದಲ್ಲಿ ತುಳ್ಳಿದವನೆಂಬ ... ಪ್ರಪಂಚದ ಚರಿತ್ರೆಯಲ್ಲಿ ನಡೆಯುವ ಘೋರ ಕೃತ್ಯಗಳಿಗೆಲ್ಲ ಮುಖ್ಯ ಕಾರಣ.

ಮುಖ್ಯವಾದ ಸಂಗತಿ ಇದು: ಮಾನವ ಸಂಘದ ಒಂದು ... ಈ ಶತಮಾನದಲ್ಲಿ ಬಿದ್ದಿತು. ... ಕೊಂಡ ಕ್ರಿಯಾ ...

ಮಕ್ಕಳಿದ್ದರೆಮನೆ ಚಂದ.

ಬಂಜೆತನದಿಂದ ಮುಕ್ತರಾಗುವಿರಿ

ಮಕ್ಕಳಿಲ್ಲೆಂದು | ಚಿಂತಿಸಬೇಡಿ

ಗರ್ಭಧಾರಣಾ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರೋಣಿ ಆವಿಸುರಿ. ೯ ಗುಳಿಗೆಗಳ ೩. ೩ ರೂಪಾಯಿ. ೬. ೩. ೩ ಆಣೆ.

ಪತ್ತೆ—ವೈದ್ಯ ಪಿ. ಎಸ್. ಕಾಪಸೆ. ಮಿರಜ. M. C. ೫೫

[illegible]

ಇರ್ಕ್ಕಿನಾಲಾ ಪ್ರದೇಶದಲ್ಲಿ ಅನುಸರಿಸಬಹುದಾದ ಕಬ್ಬಿನ ವ್ಯವಸಾಯ ಕ್ರಮ.

[illegible]

ವನ್ನಾಗಲಿ ದನದ ಗೊಬ್ಬರವನ್ನಾಗಲಿ ಹಾಕಿ ಸಾಲುಗಳ ಮಧ್ಯೆ ಕಬ್ಬಿನ ಬೇಗಿಲನ್ನು ಹೊಡೆದು ಸಾಲುಗಳನ್ನು ಮುಚ್ಚಬೇಕು. 15 ಅಡಿ ಉದ್ದದ 30 ಸಾಲುಗಳನ್ನು ಮುರಿಮಾಡಿ ನೀರು ಹಾಯಿಸುವದಕ್ಕೆ ಅನುಕೂಲಮಾಡಬೇಕು. ಈ ಕೆಲಸ ಮಾಡುವ ವಿಧಾನವನ್ನು ಶಕೆವನ್ನು ನೋಡಿಯಾದರೂ ತಿಳಿದುಕೊಬಹುದು. ಇಲ್ಲವಾದರೆ ಮಂಡ್ಯದಲ್ಲಿರುವ ವ್ಯವಸಾಯದ ಇಲಾಖಾ ಆಫೀಸಿನಲ್ಲಾಗಲಿ, ಪರೀಕ್ಷಾಕ್ಷೇತ್ರದಲ್ಲಿ ಕೆಲಸಮಾಡಿಸುವ ಅಧಿಕಾರಿಗಳನ್ನಾಗಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಹಿಂಡಿ ಗೊಬ್ಬರವನ್ನು ಎಕರೆಗೆ 80 ಮಣದ ವರಿವಿಗೂ ಹಾಕಬಹುದು. ಹಂದಿ ಗೊಬ್ಬರವನ್ನು ಎಕರೆಗೆ 8-10 ಗಾಡಿಗಳಷ್ಟು ಹಾಕಿದರೆ ಸಾಕು. ಎಕರೆಗೆ 40 ಮಣ ಹಿಂಡಿಯನ್ನು ಹಾಕಿ 6 ಗಾಡಿ ಹಂದಿ ಗೊಬ್ಬರವನ್ನಾಗಲಿ, ಚೆನ್ನಾಗಿ ಕೊಳತ ದನದ ಗೊಬ್ಬರವನ್ನಾಗಲಿ ಉಪಯೋಗಿಸಬಹುದು. ಇಷ್ಟವಿದ್ದವರು ಮೈಸೂರು ಮ್ಯುನಿಸಿಪಾಲಿಟಿಯಿಂದ ತಯಾರಾಗುವ ಕಂಪೋಸ್ಟು ಗೊಬ್ಬರವನ್ನು ಎಕರೆಗೆ 6 ಗಾಡಿಯಂತೆ ಹಾಕಬಹುದು. 1 ಗಾಡಿ ಕಂಪೋಸ್ಟು ಗೊಬ್ಬರದಲ್ಲಿ 4 ಗಾಡಿ ದನದ ಗೊಬ್ಬರದಲ್ಲಿರುವಷ್ಟು ಸಾರ ಇರುವದು.

ಕಂಪೋಸ್ಟು ಗೊಬ್ಬರವನ್ನು ಟನ್ನಿಗೆ 4 ರೂ. ನಂತೆ ಮೈಸೂರಿನಲ್ಲಿ ಮಾರುತ್ತಾರೆ. ರೈಲಿನಲ್ಲಿ ಮಂಡ್ಯಕ್ಕೆ ತರಿಸಿದರೆ ಟನ್ನಿಗೆ 2-2-0 ರೈಲು ಚಾರ್ಜು ಬೀಳುವದು ರೈಲಿನಿಂದ ಮುಂದಕ್ಕೆ ತಮ್ಮ ಗಾಡಿಗಳಲ್ಲೇ ರೈತರು ಸಾಗಿಸಬಹುದು.

ಈರೀತಿಯಾಗಿ 3 ತಿಂಗಳ ಬೆಳೆಯನ್ನು ಏರುಹಾಕಿದನಂತರ ವಾರಕ್ಕೆ ಒಂದೆರಡಾವರ್ತಿ ನೀರನ್ನು ಕಟ್ಟಿಕೊಂಡು ಬೆಳೆಯನ್ನು ಕಿತ್ತು ಪೈರಿಗೆ 12 ತಿಂಗಳಾಗುವವರಿವಿಗೂ ನೋಡಿಕೊಂಡರೆ ಕಟಾವಿಗೆ ಸಿದ್ಧವಾಗುವದು.

ಕಬ್ಬಿನ ಬೆಳೆಗೆ ಸಕಾಲದಲ್ಲಿ ನೀರನ್ನು ಕಟ್ಟುವುದು ಎಷ್ಟು ಅವಶ್ಯಕವೋ ನೀರು ಹೆಚ್ಚಾಗಿ ಜೌಗಾಗದಂತೆ ನೋಡಿಕೊಳ್ಳುವುದೂ ಅಷ್ಟು ಅವಶ್ಯಕ. ಆದ್ದರಿಂದ ಹೆಚ್ಚಾಗಿ ನೀರು ನಿಲ್ಲುವ ಪ್ರದೇಶಗಳಲ್ಲಿ ಅವಶ್ಯಕವಿದ್ದಂತೆ ನೀರು ಬಸಿದು ಹೋಗಲು ಆಳವಾದ ಜಗಳನ್ನು ತೆಗೆಯಬೇಕು.

ಇದೇ ರೀತಿಯಲ್ಲಿ ಹೋದ ಸಾಲಿನಲ್ಲಿ 12 ಎಕರೆ ಕಬ್ಬನ್ನು ಪರಿಕ್ಷಾ [illegible]

[illegible] ಸಕ್ಕರೆಯನ್ನು ಮಾಡಿದರೆ ಹೆಚ್ಚು ಲಾಭವು ಬರುವದಾದ್ದರಿಂದ ಸಕ್ಕರೆ ಕಾರ್ಖಾನೆಯ ಏರ್ಪಾಡುಗಳು ನಡೆಯುತ್ತಿವೆ.

ಹೆಚ್ಚು ವಿಷಯಗಳನ್ನು ಮಂಡ್ಯದ ತಾಲ್ಲೂಕಿನಲ್ಲಿರುವ ವ್ಯವಸಾಯದ ಇಲಾಖಾ ಅಧಿಕಾರಿಗಳನ್ನು ಕೇಳಿ ತಿಳಿದುಕೊಳ್ಳಬಹುದು.

ಅಖಿಲ ಶ್ರೀಮದ್ವೀರಶೈವ ಮಹಿಳಾ ಪರಿಷತ್ ಧಾರವಾಡ.

ಇದೇ ಡಿಸಂಬರ್ ತಿಂಗಳ ಕ್ರಿಸ್‌ಮಸ್ ಸೂಟಿಯಲ್ಲಿ ನೆರೆಯುವ ಅಖಿಲ ಶ್ರೀಮದ್ವೀರಶೈವ ಮಹಾಸಭೆಯ ಕಾಲಕ್ಕೆ ಈ ಮಹಿಳಾ ಪರಿಷತ್ತನ್ನು ಕೂಡಿಸುವದು ಗೊತ್ತಾಗಿದೆ. ಕಾರಣ ಸ್ತ್ರೀಯರ ಏಳಿಗೆಯಲ್ಲಿ ಆಸಕ್ತಿ ಇರುವ ಸ್ತ್ರೀ ಪುರುಷರಿಗೆ ಏನಾದರೂ ತಿಳಿಸುವದು ಅಥವಾ ತಿಳಿದುಕೊಳ್ಳುವದು ಇದ್ದರೆ ಅವರು ಕೆಳಗೆ ನಮೂದ ಮಾಡಿದವರ ಸಂಗಡ ಪತ್ರವ್ಯವಹಾರ ಮಾಡಬಹುದು.

ಪಾರ್ವತಿದೇವಿ ಕೇಸರಿ,
ಅಖಿಲ ಶ್ರೀಮದ್ವೀರಶೈವ ಮಹಿಳಾ ಪರಿಷತ್, ಧಾರವಾಡ.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ. ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

23 M. C

೧೯೩೨ ನೆಯ ಇಸವಿ ಅಕ್ಟೋಬರ್ ತಾ॥ ೩ ರಿಂದ ಅಕ್ಟೋಬರ್ ತಾ॥ ೯ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಆಶ್ವಯುಜ ಶುದ್ಧ ಚೌತಿಯಿಂದ ಆಶ್ವಯುಜ ಶುದ್ಧ ದಶಮಿ ವರೆಗಿನ ಪಂಚಾಂಗ.

ತಾ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕನ್ಯಾ ಮಾಸ
3	[1] ಸೋಮ	ಚೌತಿ	49-1	ವಿಶಾ	41-38	18
4	ಮಂಗಳ	ಪಂಚ	42-58	ಅನೂ	37-27	19
5	ಬುಧ	ಷಷ್ಠಿ	37-16	ಜ್ಯೇಷ್ಠ	33-34	20
6	[2] ಗುರು	ಸಪ್ತ	32-2	ಮೂಲ	30-8	21
7	ಶುಕ್ರ	ಅಷ್ಟ	27-36	ಪೂಷಾ	27-29	22
8	[3] ಶನಿ	ನವ	23-48	ಉಷಾ	25-27	23
9	[4] ಭಾನು	ದಶ	21-13	ಶ್ರವ	24-30	24

(1) ಮಳೆನಕ್ಷತ್ರ-ಹಸ್ತ ೩ ನೆಯ ಪಾದ. (2) ಮಹಾರಾತ್ರಿ, ಸರಸ್ವತಿ ಪೂಜೆ, ಮಳೆನಕ್ಷತ್ರ-ಹಸ್ತ ೪ ನೆಯ ಪಾದ. (3) ಆಯುಧ ಪೂಜೆ [illegible]. (4) ವಿಜಯದಶಮಿ, [illegible].

ಮೈಸೂರು : [illegible]

REG NO. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸ‍ ೧೯೩೨ ನೆಯ ಇಸವಿ ಅಕ್ಟೋಬರ್ ತಾರೀಖು ೧೦ ನೆಯ ಸೋಮವಾರ [ಸಂಚಿಕೆ ೪೧

Insurance in the Mysore State Life Insurance, Public Branch.

Life Insurance is admittedly the best form of investment and the greatest seafeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore.

[50—14] (Sd.) S. SHA MANNA,
Secretary, Insurance Committee.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕರ್ಕ್ಲಿ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ಪ್ರಿ. ಪಿ. ಸೇ.
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦	೦—೧೪—೦
[illegible]	೦—೪—೦	೦—೯—೦
[illegible]	೦—[illegible]—೦	೦—೧೦—೦
[illegible]	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರನಜನನ	೦—೮—೦	೦—೧೩—೦
ಸಟೀಕ [illegible]	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ. | **ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ** ರಜ] ವಜ್ರಾಂಗ ಸುಂದರಪಾಕದ. [ಪ್ಪರ | ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಡ್ಲ, ವಕ್ರತಾ, ನಾಮರ್ದಪನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರಮ, ಗರ್ಮೀದೋಷ, [illegible] [illegible]

ಸ್ತ್ರೀ ರೋಗ ನಿವಾರಣೇ ಚೂರ್ಣ.

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

ಪತ್ತಾ ಮಾಹಕ:—ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜ. ಎಂ. ಎಸ್. ಎಂ.

ಡಾಕ್ಟರ್ ಜೀ. ವೀ. ಯವರ
ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು [illegible] ಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು [illegible]

(Registered Trade Mark)

[illegible]

ವಿಳಾಸ:—ಗುರುಸ್ವಾಮಿ ಅಂಡ್ ಕಂಪೆನಿ ಲಿಮಿಟೆಡ್,
[illegible]

ಮೈಸೂರು ಸ್ಟಾರ್.

೧೯೩೨ನೇ ಇಸವಿ ಅಕ್ಟೋಬರ್ ತಾ|| ೧೦ನೆಯ ಸೋಮವಾರ.

THE MYSORE CO-OPERATIVE CONFERENCE

The Nineteenth Mysore Provincial Co-operative Conference was opened by Amin-ul-Mulk Sir Mirza M. Ismail, Dewan of Mysore on the 5th October 1932. The Dewan Sahib emphasised among others two aspects of the work immediately before the movement. The first is the part which co-operation could play in the uplift of the depressed classes. Their problem had assumed special importance with the voluntary self-immolation which the Mahatma had sought last month. The other problem is the development of the Irwin Canal area. The Dewan Sahib was certain that it was only through co-operation that the development of the area could be brought about. In particular he stressed on the need for sugar cane cultivation and the manufacture of sugar for which the Government was taking all necessary steps. The conference was presided over by Mr. S. P. Rajgopalachari, Revenue Commissioner whose address makes really useful and interesting reading. He has analysed the situation remarkably well. While he was ungrudging in his compliment to the working of the department under the enthusiastic Registrar Mr. K. H. Ramayya for the high place Mysore has taken in co-operative matters in India, he was also conscious of the existing defects, especially in the working of rural primary societies, namely (1) want of proper management resulting in the increase of over-dues, (2) inelasticity and delay in issuing loans to the ryots and (3) the heavy rates of interest charged in many of these societies. Mr. Rajgopalachari suggested certain remedies which are well worth the consideration of the Propagandist Institute and the Department. The first thing is the training of necessary men and effective supervision of the work of the societies both by Department and Supervisiors of the large financing institutions. The second thing is the instituting of proper inquiry at the time of grant of loans and promptness in taking steps as loans fall due. Another very important suggestion is the adoption of the recommendation of the Indian Central Banking Enquiry Committee about the introduction of the normal credit system in the societies. The president wanted the cash—credit system which is in vogue in the Banks to be introduced. The reason is plain. The existing procedure of insisting on an application each time a loan is required is too cumbersome and dilatory and quite unsuited to the villager, in consequence of which he prefers the usual money lender. Once the ryot offers security up to a certain amount, he must be free to operate up to the limit without having recourse to fresh applications. Mr. Rojgopalachari pointed out certain defects in the execution of the decrees which were now hampering the work of societies and he hoped that solutions would be found to overcome them. He pleaded for lowering the rate of interest for housing societies and suggested that the funds to the credit of the Village Panchayets could well be utilised for developing village extensions and improving the housing conditions in the villages. Dealing with industrial co-operation he emphasised the scope for joint action in purchasing raw material machinery and sale of finished product. In particular he wanted co-operation to redeem areca growers who are now in the hands of the midde men. The Conference concluded its deliberations on the 7th October. Much of its valuable time was taken away in discussing the need for a seperate conference by urban societies. Some of the Mysore City co-operators were for holding a separate conference, but wiser counsel prevailed and they arrived at a compramise whereby a sub-committee of the Provincial Conference would meet to send up propositions relating to urban societies and they would be discussed by the conference itself. We are glad that this separatist tendency in co-operation did not succeed. We congratulate the organisers of the conference on the success that attended their efforts.

ಮೈಸೂರು ಸಹಕಾರ ಸಮ್ಮೇಳನ.

ಮೈಸೂರು ಸಂಸ್ಥಾನದ ಸಹಕಾರ ಸಮ್ಮೇಳನದ 19 ನೆಯ ಅಧಿವೇಶನವು ಕಳೆದ ಬುಧವಾರ ರಾಜಧಾನಿಯ ಟರ್ವ್‌ಹಾಲಿನೊಳಗೆ ದಿವಾನ್ ಸರ್ ಮಿರ್ಜ್ ಎಂ. ಇಸ್ಮೈಲ್‌ರವರಿಂದ ಆರಂಭಿಸಲ್ಪಟ್ಟು ರೆವಿನ್ಯೂ ಕಮಿಷನರಾದ ಮ|| ಎಸ್. ಪಿ. ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ 3 ದಿವಸಗಳವರೆಗೆ ಜರುಗಿತು. ದಿವಾನರು ತಮ್ಮಾರಂಭ ಭಾಷಣದಲ್ಲಿ, ಈ ಸಹಕಾರ ಉದ್ಯಮದಲ್ಲಿ ತತ್‌ಕ್ಷಣ ನಡೆಯಬೇಕಾಗಿರುವ 2 ಅತ್ಯಂತ ಪ್ರಾಮುಖ್ಯ ವಿಷಯಗಳನ್ನು ಮುಖ್ಯವಾಗಿ ಒತ್ತಿ ಹೇಳಿದರು. ಅವುಗಳಲ್ಲಿ ಸಹಕಾರದಿಂದ ನಿಮ್ನ ಜನೋದ್ಧಾರವು ಎಷ್ಟರಮಟ್ಟಿಗೆ ಆಗುತ್ತದೆಂಬ ವಿಚಾರವು ಮೊದಲನೆಯ ಸಮಸ್ಯೆಯಾಗಿರುತ್ತದೆ. ಮಹಾತ್ಮರು ಕಳೆದ ತಿಂಗಳು ಕೈಕೊಂಡಿದ್ದ ಉಪವಾಸ ದೀಕ್ಷೆಯಿಂದ ಈ ನಿಮ್ನ ಜನೋದ್ಧಾರ ಸಮಸ್ಯೆಗೆ ಅತ್ಯಂತ ಪ್ರಾಮುಖ್ಯತೆಯುಂಟಾಗಿರುವುದು. ಇರ್ವಿನ್ ನಾಲಾ ಪ್ರದೇಶವನ್ನಭಿವೃದ್ಧಿಗೊಳಿಸುವ ವಿಚಾರವು 2 ನೆಯ ಸಮಸ್ಯೆಯಾಗಿದೆ. ಈ ನಾಲಾ ಪ್ರದೇಶದ ಅಭಿವೃದ್ಧಿಯು ಸಹಕಾರದಿಂದಲೇ ಸಾಧ್ಯವೆಂದು ದಿವಾನರು ಸಂಪೂರ್ಣ ಭರವಸೆಯುಳ್ಳವರಾಗಿರುತ್ತಾರೆ. ಕಬ್ಬಿನ ವ್ಯವಸಾಯವನ್ನಭಿವೃದ್ಧಿಗೊಳಿಸಿ ಸಕ್ಕರೆಯನ್ನು ಮಾಡುವುದು ಅತ್ಯಾವಶ್ಯಕವೆಂದು ಒತ್ತಿ ಹೇಳಿದರು. ಅಧ್ಯಕ್ಷರ ಉಪನ್ಯಾಸವು ಬಹಳ ಉಪಯುಕ್ತವೂ ಸ್ವಾರಸ್ಯವೂ ಆಗಿರುತ್ತದೆ. ಸಹಕಾರ ಪರಿಸ್ಥಿತಿಯನ್ನು ಬಹಳ ಚೆನ್ನಾಗಿ ವಿಭೇದಿಸಿ ಹೇಳಿರುತ್ತಾರೆ. ಸಹಕಾರ ಸಂಘಗಳ ರೆಜಿಸ್ಟ್ರಾರ್‌ರವರಾದ ಮ|| ಕೆ. ಎಚ್. ರಾಮಯ್ಯನವರ ಉತ್ಸಾಹಪೂರಿತವಾದ ಮೇಲ್ವಿಚಾರಣೆಯಲ್ಲಿ ಸಹಕಾರ ಶಾಖೆಯು ಸಹಕಾರ ಕಾರ್ಯನಿರ್ವಾಹದಲ್ಲಿ ಭಾರತ ದೇಶದಲ್ಲೆಲ್ಲ ಉತ್ತಮಸ್ಥಾನವನ್ನು ಪಡೆದಿರುವುದನ್ನು ಶ್ಲಾಘಿಸಿರುವುದರ ಜತೆಗೆ ಅದರ ಕಾರ್ಯಕ್ರಮದಲ್ಲಿರತಕ್ಕ ನ್ಯೂನತೆಗಳನ್ನು ಮುಖ್ಯವಾಗಿ ಗ್ರಾಮಗಳಲ್ಲಿರತಕ್ಕ ಚಿಕ್ಕ ಸಂಘಗಳ ಕಾರ್ಯನಿರ್ವಾಹದಲ್ಲಿ ಅಂದರೆ (1) ಸರಿಯಾದ ಆಡಳಿತವಿಲ್ಲದ್ದರಿಂದ ಸಾಲದ ಬಾಕಿ ಹೆಚ್ಚುತ್ತಿರುವುದು (2) ರೈತರಿಗೆ ಸಾಲಕೊಡತಕ್ಕ ವಿಚಾರದಲ್ಲಿ ತೊಂದರೆಯೂ ಸಾವಕಾಶವೂ ಆಗುತ್ತಿರುವುದು (3) ಅನೇಕ ಸಂಘಗಳಲ್ಲಿ ಬಡ್ಡಿದರವು ಹೆಚ್ಚಾಗಿರುವುದು—ಈ ನ್ಯೂನತೆಗಳನ್ನು ಕುರಿತು ಪ್ರಸ್ತಾಪಿಸಿ ಅವುಗಳ ನಿವಾರಣೋಪಾಯಗಳನ್ನು ತಿಳಿಸಿರುವರು. ಅವನ್ನು ಸಹಕಾರತತ್ತ್ವ ಪ್ರಸಾರಕ ಸಂಸ್ಥೆಯವರು ಮತ್ತು ಸಹಕಾರ ಶಾಖೆಯವರು ಅವಶ್ಯವಾಗಿ ಗಮನಿಸಬೇಕು. ಈ ಕಾರ್ಯನಿರ್ವಾಹದಲ್ಲಿ ಜನರನ್ನು ತರ್ಪೀತುಮಾಡುವುದು ಮತ್ತು ಶಾಖೆಯವರೂ ದೊಡ್ಡದಾಗಿ ಲೇವಾದೇವಿ ಮಾಡುವ ಸಂಘಗಳ ಸೂಪರ್‌ವೈಜರುಗಳೂ ಸಹಕಾರ ಸಂಘಗಳ ಕಾರ್ಯಕಲಾಪಗಳನ್ನು ವಿಚಾರಿಸುವುದು ಮೊದಲನೆಯ ಕರ್ತವ್ಯವಾಗಿದೆ. ಎಲ್ಲ ಸಂದರ್ಭಗಳನ್ನೂ ಚೆನ್ನಾಗಿ ವಿಚಾರಿಸಿ ಸಾಲಕೊಡುವುದು ಮತ್ತು ಕೊಟ್ಟ ಸಾಲವನ್ನು ಸಕಾಲದಲ್ಲಿ ಬರಮಾಡಲು ತಕ್ಕ ಕಾರ್ಯಭಾಗವನ್ನು ನಡೆಸುವುದು ಎರಡನೆಯ ಕರ್ತವ್ಯವಾಗಿದೆ. ಮಿತಿಮೀರದೆ ಕ್ಲುಪ್ತವಾಗಿ ಸಾಲಕೊಡುವ ಪದ್ಧತಿಯನ್ನು ಸಂಘಗಳು ಆಚರಣೆಗೆ ತರಬೇಕೆಂದು ಇಂಡಿಯನ್ ಸೆಂಟ್ರಲ್ ಬ್ಯಾಂಕಿಂಗ್ ಎನ್‌ಕ್ವೈರಿ ಕಮಿಟಿಯವರು ಮಾಡಿರುವ ಶಿಫಾರಸನ್ನು ಸಹ ಸಂಘಗಳು ಅನುಸರಿಸಬೇಕೆಂದು ಸೂಚಿಸಿರುವುದು ಬಹಳ ಪ್ರಾಮುಖ್ಯವಾಗಿದೆ. ಬ್ಯಾಂಕುಗಳಲ್ಲಿ ಆಚರಣೆಯಲ್ಲಿರುವ ಕ್ಯಾಷ್ ಕ್ರೆಡಿಟ್ ಪದ್ಧತಿಯನ್ನು ಸಹಕಾರ ಸಂಘಗಳು ಅನುಸರಿಸಬೇಕೆಂದು ಅಧ್ಯಕ್ಷರು ಹೇಳಿರುವರು. ಸಾಲವನ್ನಪೇಕ್ಷಿಸುವ ಪ್ರತಿಯೊಂದು ವೇಳೆಯಲ್ಲೂ ಅಪ್ಲಿಕೇಷನ್ ಕೊಡಬೇಕೆಂದು ಒತ್ತಾಯಪಡಿಸುವ ಈಗಿನ ಪದ್ಧತಿ ಬಹಳ ಸಾವಕಾಶಕ್ಕೂ ತೊಂದರೆಗೂ ಕಾರಣವಾಗಿರುವುದರಿಂದ ಗ್ರಾಮಸ್ಥರು ಸಾಹುಕಾರರಲ್ಲಿ ಸಾಲವನ್ನು ತೆಗೆದುಕೊಳ್ಳುವುದು ಮೇಲೆಂದು ಭಾವಿಸುವರು. ಆದುದರಿಂದ ಒಂದಾವೃತ್ತಿ ತನ್ನ ಆಸ್ತಿಯನ್ನು ಸಂಘಕ್ಕೀಡುಮಾಡಿ ಸಾಲ ತೆಗೆದುಕೊಂಡಂತಹ ರೈತನು ಪುನಃ ಸಾಲವನ್ನು ತೆಗೆದುಕೊಳ್ಳಲು ಹೊಸದಾಗಿ ಅಪ್ಲಿಕೇಷನ್ ಕೊಡಬೇಕೆಂಬ ನಿರ್ಬಂಧವಿರಕೂಡದು. ಡಿಕ್ರಿಗಳನ್ನು ಜಾರಿಗೆತರುವಲ್ಲಿರತಕ್ಕ ನ್ಯೂನತೆಗಳಿಂದ ಸಂಘಗಳ ಕಾರ್ಯಕ್ಕೆ ಅಡಚಣೆಯಾಗಿರುವ ಭಾಗವನ್ನು ಅಧ್ಯಕ್ಷರು ತೋರಿಸಿಕೊಟ್ಟು ಅವುಗಳ ನಿವಾರಣೋಪಾಯಗಳನ್ನು ಕಂಡುಹಿಡಿಯಬೇಕೆಂದು ಹೇಳಿರುತ್ತಾರೆ. ಮನೆ ಕಟ್ಟಲು ಸಾಲ ಕೊಡತಕ್ಕ ಸೊಸೈಟಿಗಳಿಗೆ ಸಹಾಯಮಾಡುವ ಹಣದ ಮೇಲಿನ ಬಡ್ಡಿದರವನ್ನು ಕಡಿಮೆಮಾಡುವುದು ಅವಶ್ಯಕವೆಂದು ಹೇಳಿ ಗ್ರಾಮಪಂಚಾಯತಿಗಳ ಹಣವು ಗ್ರಾಮಾಭಿವೃದ್ಧಿ ಕಾರ್ಯಗಳಿಗಾಗಿಯೂ, ಗ್ರಾಮಸ್ಥರ ಮನೆಗಳ ಸ್ಥಿತಿಯನ್ನುತ್ತಮಪಡಿಸುವುದಕ್ಕಾಗಿಯೂ ವಿನಿಯೋಗಿಸಲ್ಪಡಬೇಕೆಂದು ಸೂಚಿಸಿರುವರು. ಕೈಗಾರಿಕೆಯ ಸಹಕಾರ ವಿಚಾರವಾಗಿ ಪ್ರಸ್ತಾಪಿಸುವಾಗ್ಗೆ, ಕಚ್ಚಾ ಪದಾರ್ಥಗಳನ್ನೂ ಯಂತ್ರ ಸಾಮಗ್ರಿಗಳನ್ನೂ ಸಂಘಗಳು ಒಟ್ಟಾಗಿ ಸೇರಿ ಕ್ರಯಕ್ಕೆ ಕೊಂಡು ಅವುಗಳಿಂದಾಗತಕ್ಕ ಪದಾರ್ಥಗಳನ್ನು ಒಟ್ಟಾಗಿ ಸೇರಿ ಮಾರುವುದರಿಂದ ಬಹಳ ಪ್ರಯೋಜನವುಂಟೆಂದೂ, ಸಾಹುಕಾರರಲ್ಲಿ ಸಾಲಮಾಡಿ ಸಿಕ್ಕುತ್ತಿರುವ ಅಡಿಕೆ ವ್ಯವಸಾಯಗಾರರನ್ನುದ್ಧರಿಸಲು ಸಹಕಾರವು ಬಹಳ ಅವಶ್ಯಕವೆಂದೂ ಒತ್ತಿ ಹೇಳಿದ್ದಾರೆ. ಈ ಸಂಮೇಳನದ ಅಧಿವೇಶನವು ಕಳೆದ ಶುಕ್ರವಾರ ಮುಕ್ತಾಯಗೊಂಡಿತು. ಪಟ್ಟಣಗಳ ಸಹಕಾರ ಸಂಘಗಳ ಸಮ್ಮೇಳನವು ಪ್ರತ್ಯೇಕವಾಗಿ ನಡೆಯಬೇಕೆಂಬ ಚರ್ಚೆಯಲ್ಲೇ ಸಭೆಯ ವಿಶೇಷಕಾಲವು ಕಳೆದುಹೋಯಿತು. ರಾಜಧಾನಿಯ ಕೆಲ ಸಹಕಾರ ಸಂಘಗಳವರು ಪ್ರತ್ಯೇಕ ಸಮ್ಮೇಳನವನ್ನು ಮಾಡಬೇಕೆಂದು ಬಹಳವಾಗಿ ವಾದಿಸಿದರಾದರೂ ಕಡೆಯಲ್ಲಿ ಮಧ್ಯಸ್ತಿಕೆಯು ನಡೆದು, ಪ್ರಾಂತಿಕ ಸಂಮೇಳನದ ಉಪಸಭೆಯವರು ಸಮಾವಿಷ್ಟರಾಗಿ ಪಟ್ಟಣಗಳ ಸಹಕಾರ ಸಂಘಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಸಂಗ್ರಹಿಸಿ ವಾರ್ಷಿಕಸಭೆಯ ಪರ್ಯಾಲೋಚನೆಗೆ ಕಳುಹಿಸಬೇಕೆಂದು ನಿರ್ಧರಿಸಲ್ಪಟ್ಟಿತು. ಸಹಕಾರ ಸಮ್ಮೇಳನವು ವಿಭಿನ್ನವಾಗಿ ನಡೆಯುವ ಪ್ರಯತ್ನವು ಸಿದ್ಧಿಸದಿದ್ದುದು ಸಂತೋಷಪ್ರದವು. ಈ ಸಮ್ಮೇಳನವು ಜಯಪ್ರದವಾಗಿ ನೆರವೇರಲು ಕಾರಣಭೂತರಾದವರನ್ನು ಅಭಿನಂದಿಸುತ್ತೇವೆ.

ವಿಜಯದಶಮಿ ಉತ್ಸವ

ನವರಾತ್ರಿಯುತ್ಸವವು ಕಳೆದ ಶನಿವಾರ ಪೂರೈಸಿದುದರಿಂದ ಶ್ರೀಮನ್ಮಹಾರಾಜರವರು ಭಾನುವಾರ ಕಂಕಣವಿಸರ್ಜನಾನಂತರ ಮಂಗಳಸ್ನಾನ ದೇವತಾರ್ಚನೆಗಳನ್ನು ಪೂರೈಸಿಕೊಂಡು ವಸ್ತ್ರಾಭರಣಭೂಷಿತರಾಗಿ ಪಟ್ಟದ ಕತ್ತಿ ಪಟ್ಟದಾನೆ ಮತ್ತು ಪಟ್ಟದ ಕುದುರೆಗಳನ್ನು ಆನೆಬಾಗಿಲಿನಲ್ಲಿ ಬೀಳ್ಕೊಟ್ಟು ಸಕಲ ರಾಜಮರ್ಯಾದೆಯಿಂದ ಅವು ಬನ್ನೀಮಂಟಪಕ್ಕೆ ಉತ್ಸವಪೂರ್ವಕವಾಗಿ ಹೊರಟಮೇಲೆ ಜಟ್ಟಿಕಾಳಗವನ್ನು ಪರಾಮರ್ಶಿಸಿ ಸಭೆಯನ್ನು ಮುಕ್ತಾಯಗೊಳಿಸಿ ಅರಮನೆಯೊಳಕ್ಕೆ ಚಿತ್ತೈಸಿದರು. ಮಧ್ಯಾಹ್ನ ಅನೋಘವಾದ ವಸ್ತ್ರಾಭರಣವಿಭೂಷಿತರಾಗಿ ತಮ್ಮಂತೆಯೇ ಅಲಂಕೃತರಾದ ಶ್ರೀ ಜಯಚಾಮರಾಜ ಒಡೆಯರವರನ್ನು ಅಲಂಕೃತವಾದ ಆನೆಯ ಮೇಲಿನ ಭಂಗಾರದ ಅಂಬಾರಿಯೊಳಗೆ ತಮ್ಮ ಎಡಪಾರ್ಶ್ವದಲ್ಲಿ ಕುಳ್ಳಿರಿಸಿಕೊಂಡು 4 ಘಂಟೆಗೆ ಚತುರಂಗಸೇನಾ ಸಮೇತವಾಗಿಯೂ, ರಾಜಬಂಧುಗಳು, ಸರದಾರರುಗಳು, ಅಧಿಕಾರಿಗಳು, ದೊಡ್ಡಮನುಷ್ಯರುಗಳು ಮೊದಲಾದವರೊಡನೆಯೂ, ಉತ್ಸವ ಹೊರಟು ದಾರಿಯುದ್ದಕ್ಕೂ ಕಿಕ್ಕಿರಿದು ನಿಂತಿದ್ದ ಪ್ರೇಕ್ಷಕರಿಗೆ ದರ್ಶನವನ್ನಿತ್ತು ಅವರುಗಳು ಮಾಡುವ ಹರ್ಷಧ್ವನಿಪೂರ್ವಕವಾದ ವಂದನೆಗಳನ್ನು ಅಂಗೀಕರಿಸಿ ಪ್ರತಿಯಾಗಿ ವಂದಿಸಿ ಅಲ್ಲಲ್ಲಿಗೆ ವರ್ತಕರುಗಳೊಪ್ಪಿಸುವ ಪುಷ್ಪಹಾರಗುಚ್ಛಗಳನ್ನು ಸ್ವೀಕರಿಸುತ್ತ ಸಾಯಂಕಾಲ 6–6¼ ಘಂಟೆಗೆ ಬನ್ನಿ ಮಂಟಪವನ್ನು ತಲುಪಿದರು. ಅಲ್ಲಿ ಶಮಿಪೂಜೆಯನ್ನುಮಾಡಿ ಕೊಂಚಕಾಲ ವಿಶ್ರಮಿಸಿಕೊಂಡಿದ್ದು ಉಡಪನ್ನು ಬದಲಾಯಿಸಿ ದಿವ್ಯಾಶ್ವಾರೋಹಣಮಾಡಿ ಬೈಲು ಪ್ರದೇಶದಲ್ಲಿ ನಿರೀಕ್ಷಿಸಿಕೊಂಡಿದ್ದ ಚತುರಂಗ ಸೇನಾವಿನ್ಯಾಸವನ್ನು ಪರಾಮರ್ಶಿಸಿ ರಾತ್ರಿ 8¾–9 ಘಂಟೆಗೆ ಅಂಬಾರಿಯಾರೋಹಣಮಾಡಿ ದಿವಾನರನ್ನು ತಮ್ಮ ಹಿಂಗಡೆ ಕುಳ್ಳಿರಿಸಿಕೊಂಡು ಯಥಾ ಮರ್ಯಾದೆಯಿಂದ ವಿದ್ಯುದ್ದೀಪರಾಜಿಯಲ್ಲಿ ಉತ್ಸವಹೊರಟು ಕೈ|| ಚಾಮರಾಜೇಂದ್ರ ಒಡೆಯರವರ ಪ್ರತಿಮೆಯ ಸಮೀಪಕ್ಕೆ ಬರುವಲ್ಲಿ 10½ ಘಂಟೆಯಾಗಿದ್ದಿತು. ಈ ಮಧ್ಯೆ ಜನರ ಗುಂಪನ್ನು ಚದರಿಸುವಲ್ಲಿ ಪೋಲೀಸ್ ಕಾನ್‌ಸ್ಟೇಬಲಿನ ಲಾಟಿ ಏಟು ಹಿಂದು ಹುಡುಗನಿಗೆ ಬಿದ್ದು ಅಪಾಯವಾಗಿ ಜನರಿಗೂ ಪೋಲೀಸಿನವರಿಗೂ ಹೋರಾಟ ನಡೆಯಿತು. ಅಪಾಯವನ್ನು ಹೊಂದಿದ ಹುಡುಗನನ್ನು ಜನರು ಶ್ರೀಮನ್ಮಹಾರಾಜರವರ ಸಮೀಪಕ್ಕೆ ತಂದು ತೋರಿಸಲು ಪ್ರಯತ್ನಿಸಿದರು. ಅಶ್ವಾರೂಢರಾಗಿ ಮುಂದೆ ಬರುತ್ತಿದ್ದ ಡಿ|| ಮೆಜಿಸ್ಟ್ರೇಟರು ಹುಡುಗನನ್ನು ಹೊಡೆದ ಸಂಗತಿಯನ್ನು ವಿಚಾರಿಸಿ ತಕ್ಕ ಪ್ರತಿಕ್ರಿಯೆಯನ್ನು ಮಾಡುತ್ತೇವೆಂದು ಬಹಳ ವಿಧವಾಗಿ ಸಮಾಧಾನಪಡಿಸಿದಾಗ್ಯೂ, ದಿವಾನರು ಸಹ ಹಿತೋಕ್ತಿಯನ್ನು ಹೇಳಿದಾಗ್ಯೂ ಜನರು ಕೇಳದೆ ಮುಂದೆ ನುಗ್ಗಿಬರಲು ಪ್ರಯತ್ನಿಸಿದುದರಮೇಲೆ ಕುದುರೆ ಸ್ವಾರರುಗಳನ್ನು ಬಿಟ್ಟು ಗುಂಪನ್ನು ಚದರಿಸಬೇಕಾಯಿತು. ಈ ಗೊಂದಲದಲ್ಲಿ ಒಂದಾನೆಯು ಬೆದರಿ ದಿಕ್ಕಾಪಾಲಾಗಿ ಓಡಿತಾದರೂ ಯಾರಿಗೂ ಅಪಾಯವಾಗಲಿಲ್ಲ. ಶ್ರೀಮನ್ಮಹಾರಾಜರವರು ಕುಳಿತಿದ್ದ ಅಂಬಾರಿಯಾನೆಯ ಉಭಯ ಪಾರ್ಶ್ವದಲ್ಲೂ ಎರಡಾನೆಗಳನ್ನೂ ಸುತ್ತಲೂ ಕುದುರೆ ಸ್ವಾರರುಗಳನ್ನೂ ಇಟ್ಟುಕೊಂಡು ಅರಮನೆಯನ್ನು ತಲುಪುವುದಾಯಿತು. ಕೋಟೆಯೊಳಗೆ ನೆರೆದಿದ್ದ ಜನಸ್ತೋಮವು ಹೊರಕ್ಕೆ ಕಳುಹಲ್ಪಟ್ಟು ಸುತ್ತಲೂ ಸೇನೆಯು ಕಾವಲಿಡಲ್ಪಟ್ಟಿದ್ದಿತು. ಆ ಹುಡುಗನ ವಿನಾ ಮತ್ತಾರಿಗೂ ಯಾವ ವಿಧವಾದ ಅಪಾಯವು ಸಂಭವಿಸಲಿಲ್ಲ. ಆದರೆ ಜನರು ಹಿತೋಕ್ತಿಯನ್ನು ಸಹ ಕೇಳದೆ ದುರಾಗ್ರಹದಿಂದ ಗಲಭೆಯನ್ನೆಬ್ಬಿಸಲುದ್ಯುಕ್ತವಾಗಿದ್ದುದು ಶ್ರೀಮನ್ಮಹಾರಾಜರವರ ಮನಸ್ಸಿಗೆ ಅಸಮಾಧಾನವನ್ನೂ ಖೇದವನ್ನೂ ಉಂಟುಮಾಡಿದುದು ಅತ್ಯಂತ ವಿಷಾದಕರವಾಗಿದೆ. ಇಂತಹ ಸನ್ನಿವೇಶವು ಹಿಂದೆ ಯಾವಾಗಲೂ ಸಂಭವಿಸಿರಲಿಲ್ಲ.

ದಿವಾನರ ಭಾಷಣ

ಪ್ರಜಾಪ್ರತಿನಿಧಿ ಸಭೆಯು ಈ ದಿವಸ ಮಧ್ಯಾಹ್ನ ರಾಜಧಾನಿಯ ಜಗನ್ಮೋಹನಪ್ರಾಸಾದ ಸಭಾಂಗಣದೊಳಗೆ ದಿವಾನರವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ದಿವಾನರ ಸಭಾರಂಭ ಭಾಷಣಪುಸ್ತಕವು 74 ಪುಟವಿದ್ದು ದೊಡ್ಡದಾಗಿರುತ್ತದೆ. ಇದರಲ್ಲಿ ಪ್ರಪಂಚದ ಸ್ಥಿತಿಗತಿಗಳು, ಸಂಯುಕ್ತ ರಾಜ್ಯಾಂಗ ವ್ಯವಸ್ಥೆ, ಫರ್ಮ್ ಮತ್ತು ಡಿವಿಷನ್ ಸಮಿತಿಗಳು, ಹೊಗೆದಿ, ಅಂಚೆಯ ಏರ್ಪಾಡುಗಳು, ಬೆಂಗಳೂರು ದಂಡಿನ ವಿಚಾರ ಈ ವಿಷಯಗಳು ಸವಿಸ್ತಾರವಾಗಿ ಪ್ರಸ್ತಾಪಿಸಲ್ಪಟ್ಟಿವೆ. ಈ ಪುಸ್ತಕವು ಈಗತಾನೆ ನಮ್ಮ ಹಸ್ತಗತವಾದುದರಿಂದ ಮ|| ಡಿ. ಬನುಮಯ್ಯನವರ ಮರಣಕ್ಕಾಗಿ ವಿಷಾದವನ್ನು ವ್ಯಕ್ತಗೊಳಿಸಿರುವ ಭಾಗವನ್ನು ಇಲ್ಲಿ ಪ್ರಕಟಿಸಿ ಉಳಿದ ಭಾಗವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು:—

ನಾವು ಈ ದಿನದ ಸಭಾಕಾರ್ಯವನ್ನು ಪ್ರಾರಂಭಿಸುವುದಕ್ಕೆ ಮೊದಲು, ಈ ಸಭೆಯ ಸದಸ್ಯರಾಗಿ ನಮ್ಮೊಡನೆ ಸೇರಿದವರಾಗಿದ್ದು ಈಚೆಗೆ ದಿವಂಗತರಾದ ರಾವ್ ಬಹದ್ದೂರ್ ಧರ್ಮಪ್ರಕಾಶ ಡಿ. ಬನುಮಯ್ಯನವರನ್ನು ಗೌರವಪುರಸ್ಸರವಾಗಿ ಸ್ಮರಿಸಿ, ಅವರ ಮರಣಕ್ಕಾಗಿ ನಮ್ಮ ವಿಷಾದವನ್ನು ವ್ಯಕ್ತಗೊಳಿಸುವುದು ನಮ್ಮ ಅವಶ್ಯ ಕರ್ತವ್ಯವಾಗಿದೆ. ಈ ಕರ್ತವ್ಯದಲ್ಲಿ ತಾವುಗಳೆಲ್ಲರೂ ನನ್ನೊಡನೆ ಭಾಗಿಗಳಾಗಬೇಕೆಂದು ನಾನು ಕೋರುತ್ತೇನೆ. ಅವರು ತಮ್ಮ ಜೀವಮಾನದ ದೀರ್ಘಕಾಲದಲ್ಲಿ ಸಂಸ್ಥಾನದ ಸೇವೆಗಾಗಿ ಮಾಡಿದ ಸಹಾಯಗಳ ವಿವರಗಳನ್ನೆಲ್ಲ ನಾನು ತಮಗೆ ಶ್ರುತಪಡಿಸಬೇಕಾದುದು ಅನಾವಶ್ಯಕ. ಅವರು ಸ್ವಲ್ಪಮಟ್ಟಿಗೆ ಬಡತನದಿಂದಲೇ ಕೂಡಿದ್ದ ಮನೆತನದಲ್ಲಿ ಹುಟ್ಟಿ, ಬಡವರ ಮಧ್ಯದಲ್ಲೇ ಬೆಳೆದು, ಬಡತನದ ಕಷ್ಟಗಳನ್ನು ಕಣ್ಣಾರ ಕಂಡು ಅನುಭವಿಸಿದ್ದರು. ಆದಕಾರಣ ಬಡವರ ತೊಂದರೆಗಳನ್ನು ಕಡಿಮೆ ಮಾಡಲು ಯಾವ ಯಾವ ಸಹಾಯಗಳಾಗಬೇಕೆಂಬುದು ಅವರಿಗೆ ಚೆನ್ನಾಗಿ ಗೊತ್ತಿದ್ದಿತು. ಮುಂದೆ ಅವರು ತಮ್ಮ ಶಕ್ತಿಸಾಮರ್ಥ್ಯಗಳ ಪ್ರಭಾವದಿಂದ ಶ್ರೀಮಂತರಾಗಿ ಹೇರಳವಾಗಿ ಹಣವನ್ನು ಗಳಿಸಿ ಶೇಖರಿಸಿದರು. ಬಡವರಿಗೆ ಅತ್ಯವಶ್ಯವಾಗಿ ನಡೆಯಬೇಕಾದ ಸಹಾಯಗಳೆಂದು ಅವರ ಮನಸ್ಸಿಗೆ ತೋರಿಬಂದ ನಾನಾ ಧರ್ಮಕಾರ್ಯಗಳಿಗೂ ಅವರು ಔದಾರ್ಯದಿಂದಲೂ ವಿವೇಚನೆಯಿಂದಲೂ ಧನಸಹಾಯ ಮಾಡಿದರು. ಹೀಗೆ ಸಹಾಯ ಮಾಡಬೇಕಾದುದು ಅತ್ಯಗತ್ಯವೆಂದು ಅವರು ಭಾವಿಸಿದ್ದ ನಾನಾ ಕಾರ್ಯಗಳಿಗೂ, ಅವರು ತಮ್ಮ ಸಂಪತ್ತಿನ ಹೆಚ್ಚು ಭಾಗವನ್ನೇ ಮುಕ್ತಹಸ್ತದಿಂದ ದಾನಮಾಡಿದರು. ಈ ಮೈಸೂರು ನಗರದಲ್ಲಿ ಜನಜೀವನದ ಎಲ್ಲಾ ಧರ್ಮ ಕಾರ್ಯಗಳಿಗೂ ಅವರಿಂದ ಧನ ಸಹಾಯವು ದೊರೆತಿದೆಯೆನ್ನಬಹುದು. ನಾನಾ ಜೀವನ ದೆಶೆಗಳಲ್ಲಿ ಯಾವುದೊಂದರಲ್ಲಿರುವ ಬಡವರಾದ ಮೈಸೂರು ನಗರ ನಿವಾಸಿಗಳಿಗೂ ಅವರ ಧರ್ಮ ಸಹಾಯವು ತಪ್ಪಿಲ್ಲ. ನಾವುಗಳೆಲ್ಲರೂ ಅವರನ್ನು ಮನಸ್ಸಿನಲ್ಲಿ ಸ್ಮರಿಸಿ ಪ್ರೀತಿಗೌರವಗಳನ್ನರ್ಪಿಸುವುದರಲ್ಲಿಯೂ, ಇವರ ವಿಯೋಗದಿಂದ ಸಂತಪ್ತರಾದ ಇವರ ಕುಟುಂಬದವರಿಗೆ ನಮ್ಮ ಮನಃಪೂರ್ವಕವಾದ ಸಹಾನುಭೂತಿಯನ್ನೂ ಅನುಕಂಪವನ್ನೂ ತಿಳಿಸುವುದರಲ್ಲಿಯೂ, ಈ ಸಭೆಯ ಸದಸ್ಯರೆಲ್ಲರೂ ನನ್ನೊಡನೆ ಭಾಗಿಗಳಾಗುವರೆಂದು ನಾನು ನಂಬಿದ್ದೇನೆ.

ಬಸ್ಸು ಮುಷ್ಕರಕ್ಕೆ ತಾತ್ಕಾಲಿಕ ಪರಿಹಾರ

ಮೈಸೂರು ಸಂಸ್ಥಾನದಲ್ಲಿ ಓಡಾಡುವ ಬಸ್ಸುಗಳ ಮೇಲೆ ವಿಧಿಸಲ್ಪಟ್ಟಿರುವ ದಾರಿ ತೆರಿಗೆಯು ಭಾರತ ದೇಶದಲ್ಲಿ ಇತರ ಕಡೆಗಳಲ್ಲಿ ವಿಧಿಸಲ್ಪಟ್ಟಿರುವುದಕ್ಕಿಂತಲೂ ಅತ್ಯಧಿಕವಾಗಿರುವುದರಿಂದ ಅದನ್ನು ಕಡಿಮೆಮಾಡಿದ ವಿನಾ ಬಸ್ಸುಗಳನ್ನು ಓಡಿಸುವುದಿಲ್ಲವೆಂದು ಅವುಗಳ ಯಜಮಾನರುಗಳು ಕಳೆದ ತಾ|| 1 ರ ಆರಭ್ಯ ಮುಷ್ಕರ ಹಿಡಿದಿದ್ದ ವಿಷಯವನ್ನೂ, ಸಹಿಸಲಶಕ್ಯವಾದ ಈ ಮಿತಿಮೀರಿದ ತೆರಿಗೆಯನ್ನು ಪೂರ್ವದ ದರಕ್ಕಿಳಿಸಬೇಕಾದ ಅಗತ್ಯವನ್ನೂ ಕುರಿತು ಕಳೆದವಾರ ಸ್ಟಾರ್ ಪತ್ರಿಕೆಯಲ್ಲಿ ವಿಸ್ತಾರವಾಗಿ ಪ್ರಸ್ತಾಪಿಸಿರುವೆವಷ್ಟೆ. ರಾಜಧಾನಿಯ ಬಸ್ಸುಗಳ ಯಜಮಾನರು ಸಂಸ್ಥಾನದ ಇತರ ಕಡೆಯ ಬಸ್ಸುಗಳ ಯಜಮಾನರ ಸಹಾಯ ಸಹಾನುಭೂತಿಗಳಿಂದ ಅಡ್ವೊಕೇಟ್ ಮ|| ಎಸ್. ಸಿ. ದಾಸಪ್ಪನವರ ಯಾಜಮಾನ್ಯದಲ್ಲಿ ದಿವಾನರು ಎರಡನೆಯ ಕೌನ್ಸಿಲರು ಮೈಸೂರು ಡೆಪ್ಯುಟಿ ಕಮಿಷನರು ಇವರುಗಳಲ್ಲಿಗೆ ರಾಯಬಾರ ಹೋಗಿದ್ದು ತಮ್ಮ ಕಷ್ಟನಷ್ಟಗಳನ್ನು ತಿಳಿಸಿ ದಾರಿತೆರಿಗೆಯನ್ನು ಕಡಿಮೆಮಾಡಿಕೊಡಬೇಕೆಂದು ಬಿನ್ನೈಸಿಕೊಂಡುದರಮೇಲೆ, ಇನ್ನೊಂದು ತಿಂಗಳವರಿಗೆ ತೆರಿಗೆಯ ಡಿಪಾಜಿಟ್ ಹಣವನ್ನು ಕಟ್ಟದೆ ಬಂಡಿಗಳನ್ನು ಓಡಿಸಬಹುದೆಂದೂ, ಅಷ್ಟರೊಳಗೆ ಈ ತೆರಿಗೆಯನ್ನು ತಗ್ಗಿಸುವುದರ ಸಾಧಕ ಬಾಧಕ ವಿಚಾರವನ್ನು ಪರ್ಯಾಲೋಚಿಸಲೇರ್ಪಡಿಸಲ್ಪಟ್ಟಿರುವ ಕಮಿಟಿಯವರ ವರದಿಯು ಬಂದಮೇಲೆ ಈ ಚರ್ಚಾಂಶವು ಇತ್ಯರ್ಥಗೊಳಿಸಲ್ಪಡುವುದೆಂದೂ ಪ್ರಭುತ್ವದವರು ಅಪ್ಪಣೆಮಾಡಿರುವುದಾಗಿ ತಿಳಿಯುತ್ತೇವೆ. ಅಂತು ಕಳೆದ ಶುಕ್ರವಾರದಿಂದಲೂ ಬಸ್ಸುಗಳು ಮುಷ್ಕರವನ್ನು ಬಿಟ್ಟು ಓಡಾಡಲುಪಕ್ರಮಿಸಿರುತ್ತವೆ. ಈ ಬಸ್ಸುಗಳ ಮುಷ್ಕರದಿಂದ ಈ ವೇಳೆ ದಸರಾಮಹೋತ್ಸವಕ್ಕೆ ಬರತಕ್ಕ ಜನರ ಸಂಖ್ಯೆ ಶಕ್ಯಮಟ್ಟಿಗೆ ಕಡಿಮೆಯಾಯಿತೆಂದು ತೋರುತ್ತದೆ. ಈಗೇರ್ಪಟ್ಟಿರುವ ಕಮಿಟಿಯವರು ನಮ್ಮ ಸಂಸ್ಥಾನದ ಹೊರಗಣ ಯಾವ್ಯಾವ ಪ್ರಭುತ್ವದವರೆಷ್ಟೆಷ್ಟು ದಾರಿ ತೆರಿಗೆಯನ್ನು ವಿಧಿಸಿದ್ದಾರೆಂಬುದನ್ನು ತಿಳಿದುಕೊಂಡು ದುಬಾರಿ ತೆರಿಗೆಯನ್ನು ತಪ್ಪಿಸಿ ನಮ್ಮ ಸಂಸ್ಥಾನದ ಪ್ರಕೃತ ಪರಿಸ್ಥಿತಿಗೆ ಅನುಕೂಲವಾಗಿರುವಂತೆ ದರವನ್ನು ಪ್ರಭುತ್ವದವರಿಗೆ ಸೂಚಿಸುವರೆಂದು ನಂಬಿ ನಿರೀಕ್ಷಿಸುತ್ತೇವೆ.

ಮಹಾತ್ಮರ ದೇಹಸ್ಥಿತಿ

ಎರವಾಡ ಜೈಲಿನಲ್ಲಿರುವ ಮಹಾತ್ಮರ ದೇಹಸ್ಥಿತಿಯು ತೃಪ್ತಿಕರವಾಗಿರುವುದಾದರೂ ಅವರ ದೇಹದ ತೂಕವು 100 ಪೌಂಡಿಗೇರಿದ್ದುದು ಈಗ 99 ಪೌಂಡಿಗೆ ತಗ್ಗಿರುತ್ತದೆ. ಬಾಪೂಜಿಯವರು ಇನ್ನೂ ಮೇಕೆಯ ಹಾಲನ್ನೂ ಹಣ್ಣಿನರಸವನ್ನೂ ಸೇವಿಸುತ್ತಿರುವರು. ಕೊಂಚದೂರ ನಡೆಯಲುಪಕ್ರಮಿಸಿರುತ್ತಾರೆ'' ಎಂದು ಅವರ ಕುಮಾರ ದೇವದಾಸ ಗಾಂಧಿಯವರು ಕಳೆದ ಗುರುವಾರ ತಂದೆಯವರ ದರ್ಶನಮಾಡಿಕೊಂಡು ಬಂದು ತಿಳಿಸಿರುತ್ತಾರೆ.

ಪಂಚಮರೊಡನೆ ಪಂಕ್ತಿ ಭೋಜನ

ಬಂಗಾಳಾ ಪ್ರಾಂತಕ್ಕೆ ಸೇರಿದ ಮದನಪುರದಿಂದ 8 ಮೈಲು ದೂರದಲ್ಲಿರುವ ಕರ್ನಗಲ್ ಎಂಬೂರಿನ ಮಹರಾಯ ದೇವಸ್ಥಾನದೊಳಕ್ಕೆ ಕಳೆದ ಮಂಗಳವಾರ ಪಂಚಮರು ಬರಗೊಡಲ್ಪಟ್ಟಿದ್ದರಲ್ಲದೆ ಈ ಸಂದರ್ಭದಲ್ಲೇರ್ಪಡಿಸಲ್ಪಟ್ಟಿದ್ದ ವಿನೋದಕೂಟದಲ್ಲಿ 30 ಸಾವಿರ ಮಂದಿ ಪಂಚಮರು ಸೇರಿದ್ದರು. ಆಚಾರ್ಯರಾಯಿಯವರು ಈ ಉತ್ಸವದಲ್ಲಿ ಎಷ್ಟೋ ಉತ್ಸಾಹವನ್ನು ಪ್ರದರ್ಶಿಸಿದರು. ಇದರಿಂದ ಆ ಪ್ರಾಂತ್ಯದಲ್ಲಿ ಅಸ್ಪೃಶ್ಯತಾ ದೋಷವು ಸಂಪೂರ್ಣವಾಗಿ ತೊಲಗಿರುತ್ತದೆಂದು ಹೇಳಬಹುದಾಗಿದೆ. ಕಳೆದ ಸೋಮವಾರ ಲಾಹೋರಿನಲ್ಲಿ ಒಬ್ಬ ಗೃಹಸ್ಥನ ಮನೆಯೊಳಗೆ ಪಂಚಮರಾದಿಯಾಗಿ ಎಲ್ಲ ವರ್ಣದ 400 ಮಂದಿ ಒಂದೇ ಪಙ್ಕ್ತಿಯಲ್ಲಿ ಭೋಜನಮಾಡಿದರು.

ಪಾರ್ವತೀದೇವಾಲಯ ವಿಗ್ರಹಗಳ ಅಪಹರಣ

ಪೂನಾದಲ್ಲಿ ಪಾರ್ವತೀ ಬೆಟ್ಟದ ಮೇಲಿರುವ ಪಾರ್ವತೀದೇವಸ್ಥಾನದೊಳಗೆ ಎರಡು ವಾರಗಳ ಹಿಂದೆ ಕಳ್ಳತನವು ನಡೆದಿತು. ಶುಕ್ರವಾರ ಬೆಳಿಗ್ಗೆ ಅರ್ಚಕರು ಎಂದಿನಂತೆ ದೇವಸ್ಥಾನಕ್ಕೆ ಹೋಗಿ ನೋಡುವಲ್ಲಿ ಪಾರ್ವತಿ ಮತ್ತು ವಿಘ್ನೇಶ್ವರ ರಜತವಿಗ್ರಹಗಳು ಮಾಯವಾಗಿದ್ದುವು. ಪಾರ್ವತೀ ವಿಗ್ರಹದ ತೂಕವು 1240 ತೊಲ ಮತ್ತು ವಿಘ್ನೇಶ್ವರ ವಿಗ್ರಹದ ತೂಕ 786 ತೊಲವಿದ್ದು 39,000 ರೂ. ಬೆಲೆ ಬಾಳತಕ್ಕವಾಗಿದ್ದುವು. ಈಗ್ಗೆ 6 ವರ್ಷಗಳ ಹಿಂದೆ ಇದೇ ರೀತಿ ಕಳುವಾಗಿದ್ದಿತಂತೆ. ಈ ಕಳ್ಳತನವಾದನಂತರ ಒಂದು ದೊಡ್ಡ ಮಳೆಯು ಬಂದು ದೇವಸ್ಥಾನದ ಶಿಖರಕ್ಕೆ ಸಿಡಿಲು ಬಡಿದುದರಿಂದ ಆ ಶಿಖರವು ನಾಶವಾಯಿತು. ಇದು ವಿನಾ ಮತ್ತಾವ ನಷ್ಟವೂ ಸಂಭವಿಸಲಿಲ್ಲ.

ಎವರೆಸ್ಟು ಪರ್ವತಾರೋಹಣ

ಬ್ರಿಟಿಷ್ ಸ್ನೈಡರ್ ವೈಮಾನಿಕ ಪಂದ್ಯಕ್ಕೆ ದ್ರವ್ಯ ಸಹಾಯ ಮಾಡಿದ ಹೂಸ್ಟನ್‌ರವರ ಪತ್ನಿಯೇ ಈಗ ಎವರೆಸ್ಟು ಪರ್ವತಾರೋಹಣ ಖರ್ಚನ್ನೆಲ್ಲಾ ವಹಿಸಿಕೊಂಡಿರುವರಂತೆ. ಈ ಪರ್ವತಾರೋಹಣೋದ್ಯಮಕ್ಕೆ ಯುವರಾಜರವರು ಪ್ರೋತ್ಸಾಹಕರಾಗಿರುವುದರಿಂದ ಬ್ರಿಟಿಷ್ ಮಂತ್ರಿವರ್ಗದವರೂ, ಇಂಡ್ಯಾ ಕಾರ್ಯಾಲಯದವರೂ ಬಹಳವಾಗಿ ಸಹಾಯ ಮಾಡುತ್ತಿರುವರು. ಪ್ರಪಂಚದಲ್ಲಿ ಮುಖ್ಯವಾಗಿ ಇಂಡ್ಯಾದಲ್ಲಿ ಬ್ರಿಟಿಷರ ಪ್ರತಿಷ್ಠೆಯನ್ನು ಅಭಿವೃದ್ಧಿಗೊಳಿಸುವುದೂ, ಬ್ರಿಟಿಷ್ ಪ್ರಭುತ್ವದವರು ಎಂತಹ ತೊಂದರೆಗಳು ಸಂಭವಿಸಿದರೂ ಸಹಿಸಬಲ್ಲರೆಂಬುದೂ, ಬ್ರಿಟಿಷರ ಆರ್ಥಿಕಪ್ರತಿಷ್ಠೆಗೆ ಯಾವ ಲೋಪವಿಲ್ಲವೆಂದು ಪ್ರಪಂಚಕ್ಕೆಲ್ಲಾ ತೋರಿಸಬೇಕೆಂಬುದೂ ಈ ಪರ್ವತಾರೋಹಣಕ್ಕೆ ಸಹಾಯ ಮಾಡುವುದರ ಉದ್ದೇಶವಾಗಿರುತ್ತದೆ.

ಎರಡು ತಲೆಗಳ ಮಗು

ತಿರುವಳ್ಳೂರಿಗೆ ಸೇರಿದಂತಿರುವ ತನ್ನೀರಕುಲಮನು ಎಂಬ ಗ್ರಾಮದಲ್ಲಿ ಒಬ್ಬ ರೆಡ್ಡಿ ಹೆಂಗುಸು ಒಂದು ವಿಚಿತ್ರ ಗಂಡು ಮಗುವನ್ನು ಹೆತ್ತಿರುವಳು. ಈಕೆಯೂ ಮಗುವೂ ಆರೋಗ್ಯವಾಗಿರುತ್ತಾರೆ. ಈ ಮಗುವಿನ ಅವಯವಗಳೆಲ್ಲ ಸಲಕ್ಷಣವಾಗಿರುತ್ತವೆ, ಆದರೆ ಅದರ ಹೊಟ್ಟೆಯ ಮೇಲ್ಗಡೆ ಎದೆಯ ಕೆಳಗೆ ಒಂದು ಪುಟ್ಟ ತಲೆಯಿದೆ. ಇದಕ್ಕೆ 2 ಕಣ್ಣುಗಳಿದ್ದು ಮುಚ್ಚಿಕೊಂಡಿವೆ. ಮೂಗು ಬಾಯಿಗಳಿಗೆ ಬದಲಾಗಿ 2 ರಂಧ್ರಗಳಿರುತ್ತವೆ, ಗದ್ದವಿದೆ, ತಲೆಯಮೇಲೆ ಕೂದಲುಗಳಿವೆ, ಭುಜಗಳಿಲ್ಲ, ಆದರೆ ತಲೆಯ ಪಕ್ಕದಲ್ಲಿ 2 ಚಿಕ್ಕ ಕೈಗಳು ನೇತಾಡುತ್ತಿವೆ. ಅಸಲು ಕೈಗಳೆರಡೂ ಸರಿಯಾಗಿವೆ. ಹೊಟ್ಟೆಯ ಮೇಲಿರುವ ತಲೆಯು ಕಂಚಿಕಾಯಿ ಗಾತ್ರವಿದೆ. ಮಗುವು ಸರಿಯಾಗಿ ಅಳುತ್ತದೆ ಮತ್ತು ಹಾಲನ್ನು ಕುಡಿಯುತ್ತದೆ ಎಂದು ಹಿಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಭಾರತ ಆರ್ಡಿನೆನ್ಸ್ ಪರಿಪಾಲನವು ತಪ್ಪಬೇಕು

''ಭಾರತದೇಶದಲ್ಲಿ ಆರ್ಡಿನೆನ್ಸು ಪರಿಪಾಲನವು ತೊಲಗದಿದ್ದಲ್ಲಿ ಕೂಡಲೆ ನೂತನ ರಾಜ್ಯಾಂಗ ವಿಧಾನವನ್ನು ಸ್ಥಾಪಿಸಲು ದೊರತನದವರು ಮಾಡುತ್ತಿರುವ ಪ್ರಯತ್ನವು ನಿಷ್ಫಲವಾಗುವುದು. ಆರ್ಡಿನೆನ್ಸ್ ಪರಿಪಾಲನದಿಂದ ಭಾರತ ದೇಶದ ಪ್ರಜೆಗಳೆಲ್ಲರಿಗೂ ದೊರತನದವರ ಮೇಲಿನ ದ್ವೇಷವು ಅಧಿಕವಾಗುತ್ತಿದೆ. ಈವರೆಗೆ ಅನುಕೂಲರಾಗಿದ್ದವರು ಕೂಡ ಈಗ ಪ್ರತಿಕೂಲರಾಗಿರುತ್ತಾರೆ. ದೊರತನದವರು ಅನೇಕ ವೇಳೆ ಔದಾರ್ಯ ತೋರಿಸಿರುತ್ತಾರೆ. ಅದುಕಾರಣ ಈ ಸಾರಿಯೂ ಹಾಗೆಯೇ ಔದಾರ್ಯವನ್ನು ತೋರಿಸಬೇಕು. ಅದರಿಂದ ಭಾರತೀಯರಿಗೆ ಸದ್ಭಾವವು ಹೆಚ್ಚುವುದೇ ವಿನಾ ವಿಪರೀತ ಭಾವವುಂಟಾಗುವುದಿಲ್ಲ. ಆಗ ಭಾರತ ದೇಶದಲ್ಲಿ ಶಾಂತಿಯು ಸ್ಥಾಪಿತವಾದಲ್ಲಿ ನೂತನ ರಾಜಕೀಯ ವಿಧಾನವು ಕೊಡಗಾಗುವುದು. ದೊರತನದವರಿಗೂ ಕಾಂಗ್ರೆಸಿನವರಿಗೂ ಸಮಾಧಾನವನ್ನುಂಟುಮಾಡಲು ಕಾಂಗ್ರೆಸಿನಿಂದ ಗೌರವಿಸಲ್ಪಡುವವರೆಲ್ಲರೂ ಪ್ರಯತ್ನಿಸಬೇಕು'' ಎಂದು ಸ್ಕಾಟ್ಲೆಂಡು ವಿಷಯಗಳಿಗೆ ಪಾರ್ಲಿಮೆಂಟಿನಲ್ಲಿ ಸ್ಕಾಟಿಷ್ ಮೆಂಬರಾಗಿರುವ ಸ್ಕಾಟ್ಲೆಂಡ್, ಎಂ.ಪಿ. ಯವರಿಗೆ ಬರೆದಿರುತ್ತಾರೆ.

ಮೂರನೆಯ ರೌಂಡುಟೇಬಲು ಸಭೆ

ಬರುವ ನವಂಬರ್ ತಿಂಗಳಿನಲ್ಲಿ ಲಂಡನ್ ಪಟ್ಟಣದೊಳಗೆ ಜರುಗುವ ಮೂರನೆಯ ರೌಂಡುಟೇಬಲ್ ಸಭೆಗೆ ಭಾರತದೇಶದಿಂದ ಆಹ್ವಾನಿಸಲ್ಪಡಬೇಕಾಗಿರುವ ಪ್ರತಿನಿಧಿಗಳ ಹೆಸರನ್ನು ಭಾರತ ದೊರತನದವರು ಭಾರತ ಮಂತ್ರಿಯವರಿಗೆ ಬರೆದು ತಿಳಿಸಿರುವರು. ಈ ಹೆಸರುಗಳ ಪಟ್ಟಿಯು ಪ್ರಾಯಶಃ ಈ ದಿವಸ ಪ್ರಕಟಿಸಲ್ಪಡುವುದಾಗಿ ನಿರೀಕ್ಷಿಸಲ್ಪಟ್ಟಿದೆ ಮತ್ತು ತತ್ಸಂಬಂಧವಾಗಿ ಭಾರತ ಮಂತ್ರಿಯವರಿಗೂ ವೈಸ್ರಾಯರಿಗೂ ತಂತೀವಾರ್ತೆಯು ನಿರಂತರವೂ ನಡೆಯುತ್ತಲೇ ಇದೆ. ಈಗ ಕಳುಹಲ್ಪಟ್ಟಿರುವ ಪಟ್ಟಿಯಲ್ಲಿ ದಿವಾನ್ ಬಹದ್ದೂರ್ ಎ. ರಾಮಸ್ವಾಮಿ ಮೊದಲಿಯಾರರ ಮತ್ತು ಸರ್. ಎ. ಪಿ. ಪತ್ರೋಯವರ ಹೆಸರುಗಳು ಸೇರಿಸಲ್ಪಟ್ಟಿರುವುದಾಗಿಯೂ ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಗಳ ಹೆಸರು ಬಿಡಲ್ಪಟ್ಟಿರುವುದಾಗಿಯೂ, ಸರ್ ತೇಜ್ ಬಹದ್ದೂರ್ ಸಪ್ರೂ ಮತ್ತು ಎಂ. ಆರ್. ಜಯಕರ್‌ರವರ ಪಕ್ಷದವರು ಬಹಳ ಕಡಿಮೆಯಾಗಿರುವುದಾಗಿಯೂ, ಪ್ರತ್ಯೇಕ ನಿಯೋಜಕವರ್ಗಗಳನ್ನೇ ಕೋರುವವರ ಸಂಖ್ಯೆಯು ಹೆಚ್ಚಾಗಿರುವುದಾಗಿಯೂ, ಜಾತೀಯ ನಾಯಕರುಗಳು ಮುಖ್ಯವಾಗಿ ಜಾತೀಯ ಮಹಮ್ಮದೀಯ ನಾಯಕರುಗಳು ಬಿಡಲ್ಪಟ್ಟಿರುವುದಾಗಿಯೂ ತಿಳಿಯಬರುತ್ತದೆ. ಮಹಾತ್ಮರೂ, ಅವರ ಪಕ್ಷಕ್ಕೆ ಸೇರಿದ ಹಿಂದು ಮುಸಲ್ಮಾನರ ನಾಯಕರುಗಳೂ ಕಾರಾಗೃಹಗಳಲ್ಲಿರುವಾಗ್ಗೆ ಈ ಸಭೆಯನ್ನು ನಡೆಯಿಸುವುದು ನಿಷ್ಫಲವೆಂದು ಕಳೆದ ಬುಧವಾರ ಲಾಹೋರಿನೊಳಗೆ ರಾಜಾ ಜಂಗ್‌ಬಹದ್ದೂರ್‌ರವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ತೀರ್ಮಾನಿಸಲ್ಪಟ್ಟಿತು.

ಕಲಿಯುಗದಲ್ಲಿ ಮಹಾದ್ಭುತಕಾರ್ಯ

ಈಗ ಭಾರತದೇಶದಲ್ಲಿ ಸಂಚರಿಸುತ್ತಿರುವ ಪಾರ್ಲಿಮೆಂಟು ಮೆಂಬರಾದ ಎಚ್. ಕೆ. ಹೆಲ್ಸ್‌ರವರು ಈಗ ಭಾರತದೇಶದಲ್ಲಿ ಪರಿವರ್ತನವಾಗುತ್ತಿರುವ ವಿಚಾರವನ್ನು ಕುರಿತು ಹೀಗೆ ಬರೆದಿರುತ್ತಾರೆ:—ಕಲಿಯುಗದಲ್ಲಿ ನಾಗರಿಕರಾದ ಮನುಷ್ಯರು ಈವರೆಗೆ ನೋಡದಿರುವ ಮಹಾದ್ಭುತಕಾರ್ಯಗಳನ್ನು ನಮ್ಮ ಶಕದವರು ಇಂದು ನೋಡುತ್ತಿರುವರು. ಅನೇಕ ಶತಮಾನಗಳಿಂದ ಹಿಂದುಗಳಿಗುಂಟಾಗಿದ್ದ ನಿರ್ಬಂಧಗಳು ಒಬ್ಬ ಮನುಷ್ಯನ ದೃಢಸಂಕಲ್ಪದಿಂದ ಒಂದು ರಾತ್ರಿಯಲ್ಲಿ ಕಣ್ಣುರೆಪ್ಪೆ ಮುಚ್ಚುವುದರೊಳಗಾಗಿ ಬಟ್ಟಬೈಲಾಗಿ ಹೋಯಿತು. ದೊರತನದವರು ಮಾಡಲೆತ್ನಿಸಿ ವಿಫಲವಾದ ಕಾರ್ಯವನ್ನು ಓರ್ವ ಹಿಂದು ವ್ಯಕ್ತಿಯು ಸಾಧಿಸಿದನು. ಪೂನಾದಲ್ಲಿ ಈಚೆಗೆ ಮಾಡಲ್ಪಟ್ಟ ಶಪಥದಿಂದ ಭಾರತದೇಶವೆಲ್ಲವೂ ಮೂಲಾಧಾರದಿಂದ ಕದಲಿಹೋಗಿದೆ, ದೇಶವು ವಿಭ್ರಾಂತವಾಗಿದೆ. ಆ ಭಯಂಕರ ಶಪಥದಿಂದಲೇ ಈ ಮಹಾದ್ಭುತವುಂಟಾಗಿದೆ. ದೇವಾಲಯ ಬಾಗಿಲುಗಳು ಹಿಂದುಗಳೆಲ್ಲರಿಗೂ ಸಂಪೂರ್ಣವಾಗಿ ತೆರೆಯಲ್ಪಟ್ಟಿವೆ. ಜಾತಿಭೇದವು ತೊಲಗಿತು. ಈವರೆಗೆ ದೇವಾಲಯಗಳೊಳಕ್ಕೆ ಹೋಗಿ ಪೂಜೆಮಾಡಬಾರದವರಾಗಿದ್ದವರೆಲ್ಲರೂ ಈಗ ಅಭ್ಯಂತರವಿಲ್ಲದೆಯೇ ಪೂಜೆ ಮಾಡುವಂತಾಗಿರುವುದು. ಪ್ರಪಂಚದಿದಿರಿಗೆ ಭಾರತೀಯರೆಲ್ಲರೂ ಒಂದು ಜನಾಂಗವಾಗೇರ್ಪಟ್ಟು ನಿಲ್ಲುವುದಕ್ಕೆ ಮೊದಲು ಅಂದರೆ ಸ್ವಪರಿಪಾಲನಾಧಿಕಾರವು ವಹಿಸಲ್ಪಡುವುದಕ್ಕೆ ಮೊದಲು ಇದಕ್ಕಿಂತಲೂ ಪ್ರಬಲವಾದ ಮತ್ತೊಂದು ಮಹಾದ್ಭುತವು ನಡೆಯಬೇಕಾಗಿದೆ. ಹಿಂದುಗಳಿಗೂ ಮಹಮ್ಮದೀಯರಿಗೂ ಬಹಳ ಕಾಲದಿಂದಿರುವ ವಿವಾದವು ಹೋಗಬೇಕು. ಇದು ನೆರವೇರಲು ಪುನಃ ಇಂತಹ ಮಹಾತ್ಯಾಗವು ನಡೆಯಬೇಕಾಗಿದೆಯೆ? ಇದನ್ನು ಕೊನೆಮುಟ್ಟಿಸಲು ಮೌಲಾನಾ ಶೌಕತಾಲಿಯವರು ಪುನಃ ಉಪವಾಸ ವ್ರತವನ್ನು ಹಿಡಿಯಬೇಕೆ? ಇದನ್ನೆರವೇರಿಸುವುದು ಅಸಾಧ್ಯ ಕಾರ್ಯವಲ್ಲ. ಇದಕ್ಕಾಗಿ ಕೂಡಲೆ ಒಂದು ಸಭೆಯು ನಡೆಯಬೇಕು. ಆ ಸಭೆಯಲ್ಲಿ ಮಹಮ್ಮದೀಯ ನಾಯಕರುಗಳೂ ಹಿಂದು ನಾಯಕರುಗಳೂ ತಮ್ಮ ತೊಂದರೆಗಳನ್ನು ಸ್ಪಷ್ಟವಾಗಿ ತಿಳಿಸಬೇಕು. ಹಿಂದು ಮಹಮ್ಮದೀಯ ಸಖ್ಯವೇರ್ಪಡುವವರೆಗೆ ಸಭೆಯನ್ನು ನಿಲ್ಲಿಸದಿರಲು ನಾಯಕರುಗಳು ಸಂಕಲ್ಪಿಸಬೇಕು. ಈ ಪ್ರಕಾರವಾಗಿ ಈ ಎರಡನೆಯ ಮಹಾದ್ಭುತವನ್ನು ನಾಯಕರುಗಳು ಉಂಟುಮಾಡಿದರೆ ದೇಶಕ್ಕೆ ಘನತಮವಾದ ಸೇವೆ ಮಾಡಿದವರಾಗುವರು. ಅನೇಕ ಶತಮಾನ ವರ್ಷಗಳಿಂದ ಗೂಢವಾಗಿದ್ದ ಈ ಅಮೌಲ್ಯ ಪ್ರಕೃತಿ ರಹಸ್ಯಗಳು ಈ 20 ನೆಯ ಶತಮಾನದಲ್ಲಿ ಪರಿಶೋಧಕರಿಂದಲೇ ಹೊರಪಡಿಸಲ್ಪಟ್ಟಿತು. ವಿಮಾನ ಸಂಚಾರವು, ವಾಯು ವಾರ್ತೆಯು, ದೂರದಲ್ಲಿರುವವರನ್ನು ನೋಡುವುದು ಮೊದಲಾದವುಗಳೆಲ್ಲ ಸಾಧಿಸಲ್ಪಟ್ಟಿರುತ್ತವೆ. ಹೀಗಿರುವಾಗ್ಗೆ ಒಂದು ದೇಶದಲ್ಲಿರುವ ಎರಡು ಜಾತಿಯವರು ಸಾಮರಸ್ಯ ಸೌಹಾರ್ದಗಳನ್ನು ಹೊಂದಿ ಹಾಯವಾಗಿ ಜೀವಿಸುವಂತಾಗುವುದು ಯಾತಕ್ಕೆ ಅಸಂಭವವು? ಓ ಭಾರತೀಯರುಗಳಿರಾ! ಏಳಿರಿ, ಈ ಮಹಾ ಅವಕಾಶವನ್ನು ಕಳೆದುಕೊಳ್ಳಬೇಡಿ. ಭಾರತೀಯರು ನಿದ್ರಾವಸ್ಥೆಯಲ್ಲಿಲ್ಲ. ಪೂರ್ವಕಾಲದಲ್ಲಿದ್ದ ನಿಮ್ಮ ಮಹೋನ್ನತ ಪದವಿಯನ್ನು ಸರಿಯಾಗಿ ಗುರ್ತಿಸಿರಿ. ನಿಮ್ಮಲ್ಲಿ ಸಹಜವಾಗಿರುವ ಘನತೆಯನ್ನು ತಿಳಿದುಕೊಳ್ಳುವವರಾಗಿ. ಅನಂತರ ಮೊದಲಿಗಿಂತಲೂ ಹೆಚ್ಚಾದ ನಿಮ್ಮ ಖ್ಯಾತಿಯನ್ನು ಪಡೆಯುವಿರಿ. ಅದಕ್ಕೆ ತಕ್ಕ ಸಮಯವು ಈಗ ಪ್ರಾಪ್ತವಾಗಿರುತ್ತದೆ. ಇನ್ನು ಕೈಯಿಂದ ಸ್ಪರ್ಶ ಮಾತ್ರವಾಗಬೇಕು. ಅದಕ್ಕೆ ಯಾರೂ ಮುಂದೆ ಹೆಜ್ಜೆಯಿಡಿರಿ.

DISTRICT BOARD, TUMKUR DISTRICT.

Notice No. C. 694/1930-31 dated 16th Sept. 1932.

It is hereby notified for the information of the public that the undermentioned Musafirkhanas which were under the management of this District Board are closed for the use of the travelling public in pursuance of Government Order No. L. 1342-6/ L. B. 63-31-11 dated 13/22nd August 1932.

1. Bellavi, Tumkur Taluk.
2. Baichapur, Koratagere Taluk.
3. Nagalmadike, Pavagada Taluk.
4. Kibbanahalli, Tiptur Taluk.
5. Huliyurdurga, Kunigal Taluk.
6. Yelladabagi, Gubbi Taluk.
7. Hagalvadi, Gubbi Taluk.
8. Ankasandra, Gubbi Taluk.
9. Nittur, Gubbi Taluk.
10. Gubbi.
11. Urdagere, Tumkur Taluk.
12. Turuvekere. Only one wing is available.

D. S. MALLAPPA,
President, District Board,
Tumkur District.

ನೋಟೀಸು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡು

ತಾ|| 29-9-1932

ಈ ಕೆಳಗೆ ನಮೂದುಮಾಡಿರುವ ಕಾಂಗಾರಿಗಳನ್ನು ನಡೆಸತಕ್ಕ ಬಗ್ಗೆ ಪ್ರೆಸಿಡೆಂಟರವರ ಆಫೀಸಿನಲ್ಲಿ 29-10-32 ನೇ ಮಧ್ಯಾಹ್ನ 2 ಗಂಟೆಯುವರೆಗೂ ಸೀಲ್ಡು ಟೆಂಡರುಗಳನ್ನು ಕೊಡಬಹುದು.

ಪ್ಲಾನ್ ವಗೈರೆ ಇತರ ವಿಷಯಗಳನ್ನು ಕೆಲಸ ನಡೆಯುತ್ತಾಯಿರುವ ಕಾಲಗಳಲ್ಲಿ ಡಿಸ್ಟ್ರಿಕ್ಟು ಬೋರ್ಡು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಕಾಂಗಾರಿ ಹೆಸರು	ಡಿಪಾಜಿಟ್ ಮೊಬಲಗು ರೂ.
ಚಿತ್ರದುರ್ಗ ತಾಲ್ಲೂಕು	
(1) ವಾಕ್ಕ ಭಾವಿ ಸರಿಪಡಿಸುವುದು	200—0—0
ಚಳ್ಳಕೆರೆ ತಾಲ್ಲೂಕು	
(2) ಹೆಗ್ಗೆರೆ ಭಾವಿಯನ್ನು ಸರಿಪಡಿಸುವುದು	100—0—0
ಹಿರಿಯೂರು ತಾಲ್ಲೂಕು	
(3) ಕೋಡಿಹಳ್ಳಿಯಲ್ಲಿ ಗ್ರಾಮಸ್ಥರಿಗೆ ಹೊಸ ಭಾವಿ ಮಾಡುವುದು	100—0—0
ಹೊಳಲಕೆರೆ ತಾಲ್ಲೂಕು	
(4) ಹಿರಿಯೆಮ್ಮಿಗನೂರು ಭಾವಿ ಸರಿಪಡಿಸುವುದು	100—0—0
(5) ತಾಳ್ಯದ ಭಾವಿ ಸರಿಪಡಿಸುವುದು	100—0—0
(6) ದಾಸಿಕಟ್ಟೆ ಭಾವಿ ಸರಿಪಡಿಸುವುದು	100—0—0

(7) ಹರಿಹರದ ಸಬ್ ತಾಲ್ಲೂಕು ಕೊಂಡಜ್ಜಿ ಆದಿಕರ್ನಾಟಕರ ಭಾವಿ ಕಾಂಗಾರಿಗಳನ್ನು 1933 ನೇ ಏಪ್ರಿಲ್ ಮಾಹೆ ಆಖೈರುವಳಗಾಗಿ ಪೂರೈಸಬೇಕು.

ಜಿ. ಚೆನ್ನಪ್ಪ,
ಪ್ರೆಸಿಡೆಂಟ್,
2 ಡಿ|| ಬೋ|| ಚಿತ್ರದುರ್ಗ.

ಸರ್ಕಾರ ಮತ್ತು ಕಂಪೆನಿಗಳ

ಸಾಲ ಮತ್ತು ಷೇರ್ ಮಾರ್ಕೆಟ್ ದರಗಳು

ಇಂಡಿಯಾ ಸರ್ಕಾರವು 1940—43 ರ ಸಾಲವನ್ನು 17—8—32 ರಿಂದ 31—8—32 ರ ವರೆಗೆ ತೆಗೆದುಕೊಳ್ಳುತ್ತಿದ್ದಾರೆ. 100 ರೂ. ಗೆ 98 ರೂಪಾಯಿ ಕೊಡಬೇಕು.

ಸರ್ಕಾರದ ಸಾಲ ಪತ್ರಗಳ ಬೆಲೆ

ಇಂಡಿಯಾ ಸರ್ಕಾರದಲ್ಲಿ

(ಆದಾಯ ತೆರಿಗೆಯುಳ್ಳದ್ದು)

ಕೇಳಿದ ಬಡ್ಡಿ 3½	(............)	ಪತ್ರದ ಬೆಲೆ		70—15—0
" " 4	(1931—36)	....	....	97—1—0
" " 4	(1934—37)	....	....	95—15—0
" " 4	(1960—70)	....	....	80—10—0
" " 4½	(1934)	....	....	99—10—0
" " 4½	(1955—60)	....	....	89—14—0
" " 5	(1929—47)	....	....	99—1—0
" " 5	(1935)	....	....	100—6—0
" " 5	(1939—44)	....	....	99—3—0
" " 6	(1933—36)	....	....	101—10—0
" " 6½	(1935)	....	....	104—9—0
" " 5½	(1938—40)	....	....	102—5—0
(ಆದಾಯ ತೆರಿಗೆ ಇಲ್ಲದ್ದು)				
" " 5	(1933)	....	....	107—0—0
" " 5	(1945—55)	....	....	104—15—0
ಮೈಸೂರು ಸರ್ಕಾರದಲ್ಲಿ				
(ಆದಾಯ ತೆರಿಗೆಯುಳ್ಳದ್ದು)				
ಕೇಳಿದ ಬಡ್ಡಿ 5	(1929—44)	....	....	95—8—0
(ಆದಾಯ ತೆರಿಗೆ ಇಲ್ಲದ್ದು)				
" " 6½	(1941—51)	....	....	110—0—0
" " 6¼	(1940)	....	....	107—4—0
" " 5½	(1938)	....	....	103—6—0
" " 5	(1955)	....	....	101—8—0
ಶಿವಮೊಗ್ಗ ರೈಲ್ವೆ	....	....	....	85—8—0
ಚಿತ್ರದುರ್ಗ ರೈಲ್ವೆ	....	....	....	84—8—0

ಕಂಪೆನಿಗಳ ಷೇರುಗಳ ಬೆಲೆ

ಬ್ಯಾಂಕುಗಳಲ್ಲಿ

ಇಂಪೀರಿಯಲ್ ಎಫ್. ಪಿ.	500 ರೂ. ಷೇರಿಗೆ	1203—0—0	ರೂ. ಬೆಲೆ.
" ಕಾಂಟ್.	125 "	286—0—0	"
ಇಂಡಿಯಾ	50 "	93—4—0	"
ಮೈಸೂರು	100 "	193—0—0	"
ಬೆಂಗಳೂರು	10 "	10—2—0	"
ಇಂಡಸ್ಟ್ರಿಯಲ್	25 "	7—4—0	"
ದೇವಾಂಗ	10 "	6—0—0	"
ವೈಶ್ಯ	50 "	50—0—0	"
ಎಸ್. ಎಂ. ಎಸ್. ಎ.	10 "	10—0—0	"
ವಾದಾಗಿ		ನಾಮಿನಲ್	

ಇತರ ಬ್ಯಾಂಕುಗಳಲ್ಲಿ

ಬಿ. ಸಿ. ರೈಲ್ವೆ	25 ರೂ. ಷೇರಿಗೆ, ...	14—4—0	ರೂ. ಬೆಲೆ
ಬೆಂಗಳೂರು ಪ್ರೆಸ್	100 "	78—0—0	"
ಬಾರ್ಟನ್‌ಸನ್ (ಆ)	10 "	7—10—0	"
" (ಪಿ)	10 "	6—4—0	"
ಸ್ಪೆನ್ಸರ್ಸ್	....	8—0—0	"
ಬಿನ್ನಿ ಮಿಲ್ಸ್ (ಆ)	100 "	85—0—0	"
(ಪ್ರಿ)	100 "	84—0—0	"
ಟೈಲ್ ಅಂಡ್ ಕ್ಲೇವರ್ಕ್ಸ್		ನಾಮಿನಲ್	
ಪ್ರೀಮಿಯರ್	....	ಡಿಟೋ.	
ತಾತಾ ಹೈಡ್ರೋ (ಆ)	....	132—4—0	"
" (ಪ್ರಿ)	....	106—4—0	"
ತಾತಾ ಐರನ್ (ಆ)	....	28—0—0	"
" (ಡೆ)	....	215—0—0	"
" (1)	....	121—0—0	"
" (2)	....	46—0—0	"
ಶ್ರೀ ಕೃಷ್ಣ		ನಾಮಿನಲ್.	

ಇನ್ಷೂರೆನ್ಸು ಕಂಪೆನಿಯಲ್ಲಿ

ಏಸಿಯಾಟಿಕ್	5 ರೂ. ಷೇರಿಗೆ	5—2—0	ರೂ. ಬೆಲೆ
ಓರಿಯಂಟಲ್	500 "	2000—0—0	"
ರಿಲೇಯನ್ಸ್	100 "	93—0—0	"

ಡಿಬೆಂಚರುಗಳು

ಕೋಲಾರ	100 ರೂ. ಡಿಬೆಂಚರಿಗೆ	89—0—0	ರೂ. ಬೆಲೆ
ಮೈಸೂರು	100 "	104—4—0	"
ತುಮಕೂರು	100 "	104—0—0	"
ಹಾಸನ	100 "	94—0—0	"

ಮಿಲ್ಲುಗಳಲ್ಲಿ

ಬೆಂಗಳೂರು	100 ರೂ. ಗೆ	65—14—0	ರೂ. ಬೆಲೆ
ಬಂಕಿಂಗ್ಹ್ಯಾಂ	100 "	114—2—0	"
ಗೋಕಾಕ್	100 "	78—0—0	"
ಕೈಸರ್‌ಹಿಂದ್	2½ "	1—5—0	"
ಮಿನರ್ವಾ	100 "	42—0—0	"
ಮಹಾರಾಜ	100 "	90—6—0	"
ಮಹಾಲಕ್ಷ್ಮಿ		ನಾಮಿನಲ್	
ಕೃಷ್ಣರಾಜೇಂದ್ರ	25 "	5—0—0	"

ಗಣಿಗಳಲ್ಲಿ

ಬಾಲಘಾಟ್ ಷಿಲಿಂಗ್	10 ಕ್ಕೆ	0—12—0	ಬೆಲೆ
ಚಾಂಪಿಯನ್ "	10 "	1—0—5	"
ಮೈಸೂರು "	10 "	0—14—0	"
ನಂದೀದುರ್ಗ "	10 "	1—6—5	"
ಊರಿಗಾಂ "	10 "	1—6—7	"
ಪೆಣಿನ್ಸುಲರ್ "	10 "	ನಾಮಿನಲ್	
ಶಿವಮೊಗ್ಗ "		ನಾಮಿನಲ್	

ಎಂ. ನಂಜಪ್ಪ, ಜಹಗೀರ್‌ದಾರ್,
ಷೇರ್, ಸ್ಟಾಕ್ ಮತ್ತು ಜನರಲ್ ಬ್ರೋಕರ್,
101. ಕ್ಯಾವಲ್ರಿ ರೋಡು, ಬೆಂಗಳೂರು.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಕುಂಚಿಟಿಗರ ಹಾಸ್ಟಲ್, ಮೈಸೂರು.

ರಾವ್ ಬಹದ್ದೂರ್, ಧರ್ಮಪ್ರಕಾಶ, ಸಾಹುಕಾರ್, ಲೇಟ್. ಡಿ. ಬನುಮಯ್ಯನವರು ತಮ್ಮ ಪೂಜ್ಯ ತಂದೆಯವರಾದ ಲೇಟ್ ದೊಡ್ಡಯ್ಯನವರ ಹೆಸರಿನಲ್ಲಿ ನಡೆಸುತ್ತಿದ್ದ ಮೇಲ್ಕಂಡ ಫ್ರೀ, ಹಾಸ್ಟಲ್ ಮಾಮೂಲ್ ಮೇರೆ ತಾ|| 30-9-32 ರಲ್ಲಿ ಮುಚ್ಚಲ್ಪಟ್ಟು ತಾ|| 14-10-32 ರಲ್ಲಿ ತೆರೆಯಬೇಕೆಂದು ಅವರ ಧರ್ಮಪುತ್ರರಾದ ಸಾಹುಕಾರ್, ಡಿ. ಬಿ. ವಿಶ್ವಂಭರಯ್ಯನವರು ತಿಳಿಸಿರುತ್ತಾರಾದ್ದರಿಂದ, ಈ ವಿಷಯವನ್ನು ಈ ಮೂಲಕ ಸರ್ವರ ಅವಗಾಹನೆಗೆ ತರಲು ಸಂತೋಷಿಸುತ್ತೇನೆ. ತಮ್ಮ ತಂದೆಯವರ ಧರ್ಮಕಾರ್ಯಗಳಲ್ಲಿ ಇವರಿಗೆ ಆಸಕ್ತಿಯೂ ಪ್ರೀತಿಯೂ ಇರುವುದನ್ನು ನೋಡಿದರೆ ಮೇಲ್ಕಂಡ ಧರ್ಮಪ್ರಭುಗಳಾದ ಲೇಟ್ ಬನುಮಯ್ಯನವರ ಕೀರ್ತಿಯು ಆಚಂದ್ರಾರ್ಕದಿಗಂತ ವ್ಯಾಪಕವಾಗುತ್ತದೆಂಬುದಕ್ಕೆ ಸಂದೇಹವಿಲ್ಲ. ಆದರೆ ಇಷ್ಟು ಸಣ್ಣ ವಯಸ್ಸಿನಲ್ಲೇ ಇವರಿಗಿಷ್ಟರಮಟ್ಟಿಗೆ ಧರ್ಮ ಕೆಲಸಗಳಲ್ಲಿ ಮನಸ್ಸುಂಟಾಗಿರುವುದನ್ನು ನೋಡಿದರೆ ಕಲಿಯುಗದ (ದಾನಧೀರ ಕರ್ಣ) ನೆಂಬ ಬಿರುದನ್ನೊಪ್ಪುವ ತಮ್ಮ ತಂದೆಯವರ ಉದರದಲ್ಲಿ ಜನಿಸಿದುದಕ್ಕೆ ಸಾರ್ಥಕವಾಯಿತೆಂತಲೇ ಭಾವಿಸಬೇಕು. ಧರ್ಮಪುತ್ರರುಗಳಾದ ಇವರಿಗೂ ಇವರ ಸಹೋದರರಿಗೂ ಇವರ ಹಿರಿಯರಿಗೆ ಲಭಿಸಿರುವ ಅಭೂತಪೂರ್ವವಾದ ಶಾಶ್ವತ ಕೀರ್ತಿಯನ್ನು ಸರ್ವಶಕ್ತನಾದ ಪರಮೇಶ್ವರನು ಅನುಗ್ರಹಿಸಲೆಂದು ಈ ಅಲ್ಪನ ಪ್ರಾರ್ಥನೆ. ಎಂ. ಸಿ. ನರಸಿಂಹಯ್ಯ.

ಕಲ್ಕುಣಿಯಲ್ಲಿ ಪಾರ್ಟಿ ಕಲಹ.

ಮಳವಳ್ಳಿ ತಾಲ್ಲೂಕಿಗೆ ಸೇರಿದ ಕಲ್ಕುಣಿ ಗ್ರಾಮದಲ್ಲಿ ಮುಸಲ್ಮಾನರ ಜನಸಂಖ್ಯೆಯೇ ಹೆಚ್ಚಾಗಿದ್ದು ಸುಮಾರು 200 ವರೆಗೆ ಅವರುಗಳ ಮನೆಗಳಿರುವವು. ಇವರುಗಳಲ್ಲಿ 2 ಪಾರ್ಟಿಗಳೇರ್ಪಟ್ಟು 1 ಪಾರ್ಟಿಯಲ್ಲಿ 15, 20 ಮನೆಗಳು ಮಾತ್ರ ಸೇರಿರುತ್ತವೆ. ಇಲ್ಲಿಯ ಮಸೀದಿ ಖಾಜಿಯು ಚಿಕ್ಕ ಪಾರ್ಟಿಗೆ ಸೇರಿದವರಾಗಿರುತ್ತಾರೆ. ಇವರು ಮಸೀದಿಯಲ್ಲಿ ನಮಾಜು ವಗೈರೆ ನಡಿಸಲು ದೊಡ್ಡ ಪಾರ್ಟಿಯವರೊಪ್ಪದೆ ತಮ್ಮ ಕಡೆಯವನೊಬ್ಬನನ್ನು ನೇಮಿಸಿಕೊಂಡು ನಮಾಜನ್ನು ನಡಿಸಲು ಪ್ರಯತ್ನಪಟ್ಟುದರಮೇಲೆ ಸಣ್ಣ ಪಾರ್ಟಿಯವರು ಮಂಡ್ಯದ ಮುನ್ಸೀಫ್ ಕೋರ್ಟಿನಲ್ಲಿ ದಾವಾ ಮಾಡಿ ಇಂಜಕ್ಷನ್ ಆರ್ಡರನ್ನು ಪಡೆದಿದ್ದರು. ಆದರಮೇಲೆ ಮೈಸೂರು ಸಬ್ ಜಡ್ಜ್ ಕೋರ್ಟಿಗೆ ಅಪೀಲಾಗಿದ್ದು ಮೊದಲಿನ ಖಾಜಿಯಿಂದಲೇ ನಮಾಜು ಕಾರ್ಯ ನಡೆಸಬೇಕೆಂದು ತೀರ್ಮಾನವಾಯಿತು. ಆದರೂ ಕಲಹ ತಪ್ಪದೆ ಇನ್ನೂ ಪ್ರಬಲವಾಗುತ್ತಿದೆ. ಹೋದವಾರ ಚಿಕ್ಕಪಾರ್ಟಿಗೆ ಸೇರಿದ ಮಹಮದ್ ಸಾಬರೆಂಬ ವೃದ್ಧರು ಸತ್ತುಹೋದರು. ಅವರ ಶವವನ್ನು ಅವರ ಕಡೆಯವರು ಕಬರಸ್ತಾನಕ್ಕೆ ತೆಗೆದುಕೊಂಡುಹೋಗಲೆತ್ನಿಸಿದಾಗ ದೊಡ್ಡ ಪಾರ್ಟಿಯವರು ಕಬರ್‌ಸ್ತಾನಕ್ಕೆ ಹೆಣವನ್ನು ತರಕೂಡದೆಂದು ಅಡ್ಡಿಪಡಿಸಿದರು. ಆದರಮೇಲೆ ಅವರ ಕಡೆಯವರು ಮಳವಳ್ಳಿಗೆ ಹೋಗಿ ಅಮಲ್ದಾರರಿಗೂ ಪೊಲೀಸು ಇನ್ಸ್‌ಪೆಕ್ಟರಿಗೂ ವಿದ್ಯಮಾನವನ್ನು ತಿಳಿಸಿ, ನೀವುಗಳು ಬಂದು ದಫನ್ ಮಾಡಿಸಲೇರ್ಪಡಿಸಬೇಕೆಂದು ಹೇಳಿಕೊಂಡು ಮೋಟಾರು ಬಂಡಿಯಲ್ಲಿ ಕಲ್ಕುಣಿಗೆ ಕರೆದುಕೊಂಡುಬಂದರು. ಅಮಲ್ದಾರರೂ ಇನ್ಸ್‌ಪೆಕ್ಟರೂ ದೊಡ್ಡ ಪಾರ್ಟಿಯವರಲ್ಲಿಗೆ ಹೋಗಿ ಹೆಣವನ್ನು ದಫನ್ ಮಾಡಲು ತಡೆಯುವದೇಕೆಂದು ಕೇಳಲಾಗಿ, ನಮ್ಮ ಇದಿರು ಪಾರ್ಟಿಯವರು ಕಬರ್‌ಸ್ತಾನಕ್ಕೆ ಬರಕೂಡದು. ಹೆಣವನ್ನು ನಾವೇ ತೆಗೆದುಕೊಂಡು ಬಂದು ದಫನ್ ಮಾಡುತ್ತೇವೆಂದು ಹೇಳಿದರು. ಅದಕ್ಕೆ ಹೆಣದಕಡೆಯವರೂ ಬಂಧುಗಳೂ ಒಪ್ಪಲಿಲ್ಲವಾಗಿ ಅಮಲ್ದಾರರೂ ಇನ್ಸ್‌ಪೆಕ್ಟರೂ ಏನನ್ನೂ ಮಾಡದೆ ಮಳವಳ್ಳಿಗೆ ಹೊರಟುಹೋಗಲಾಗಿ ಹೆಣದ ಕಡೆಯವರು ಗಗೇಶ್ವರಿಗೆ ವರ್ತಮಾನಕೊಟ್ಟು 60-70 ಜನರನ್ನು ಬರಮಾಡಿಕೊಂಡರು. ಅವರು ಬಂದು ದೊಡ್ಡಪಾರ್ಟಿಯವರಿಗೆಷ್ಟು ಸಮಾಧಾನ ಹೇಳಿದಾಗ್ಯೂ ಕೇಳದೆ, ಎದುರು ಕಕ್ಷಿಯವರು ಯಾರೂ ಬಾರದೆ ನೀವುಗಳೇ ದಫನ್ ಮಾಡಿಬಿಟ್ಟು ಸಮಾಪ್ತಿಸುವೆವೆಂದು ಹೇಳಿ ಮಾರಾಮಾರಿಗೆ ಸಿದ್ಧವಾಗಿದ್ದುದನ್ನು ನೋಡಿ ಗಗೇಶ್ವರಿಯವರು ತಾವುಗಳೇ ಹೆಣವನ್ನು ತಂದು ದಫನ್ ಮಾಡಿದರು. ಆಗ ಕತ್ತಲೆಯಾಗಿದ್ದುದರಿಂದ ಚಿಕ್ಕಪಾರ್ಟಿಯವರೇನಾದರೂ ಕಬರ್‌ಸ್ತಾನಕ್ಕೆ ಬಂದಿರಬಹುದೆಂದು ದೊಡ್ಡಪಾರ್ಟಿಯವರು ಸಾಯುಧರಾಗಿ ದೀಪಗಳನ್ನು ತಂದು ಕಬರಸ್ತಾನದೊಳಗೆಲ್ಲ ತಡಕಿನೋಡಿ ಅವರುಗಳ್ಯಾರೂ ಅಲ್ಲಿರಲಿಲ್ಲವಾಗಿ ತಟಸ್ಥರಾದರು. ಇದರಮೇಲೆ ಉಭಯ ಪಾರ್ಟಿಗಳ ದ್ವೇಷವು ಹೆಚ್ಚುಮೀರುತ್ತಿದೆ. ಚಿಕ್ಕಪಾರ್ಟಿಯವರು ಪ್ರಾಣಭೀತಿಪಟ್ಟು ಕೊಂಡು ತಮ್ಮ ರಕ್ಷಣೆಗೆ ತಕ್ಕ ಬಂದೋಬಸ್ತು ಮಾಡಬೇಕೆಂದು ಮೈಸೂರು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಗೆ ಟೆಲಿಗ್ರಾಫನ್ನು ಕೊಟ್ಟದ್ದಲ್ಲದೆ ಖುದ್ದು ಅರ್ಜಿ ಕೊಟ್ಟು ಹೇಳಿಕೊಂಡುದರಮೇಲೆ ಮಳವಳ್ಳಿ ತಾ|| ಅಮಲ್ದಾರರಿಗೂ ಪೊಲೀಸ್ ಇನ್ಸ್‌ಪೆಕ್ಟರಿಗೂ ತಕ್ಕ ಬಂದೋಬಸ್ತು ಮಾಡುವಂತೆ ಅಪ್ಪಣೆಮಾಡಿರುವುದಾಗಿ ಕೇಳುತ್ತೇನೆ. ತಾಲ್ಲೂಕು ಅಧಿಕಾರಿಗಳು ಆ ದಿವಸ ನಿಂತು ದಫನ್ ಕಾರ್ಯಮಾಡಿಸಿದ್ದರೆ ಇಷ್ಟೊಂದು ಮನಸ್ತಾಪ ಬೆಳೆದು ಪ್ರಾಣಭೀತಿಯುಂಟಾಗಲು ಕಾರಣವಾಗುತ್ತಿರಲಿಲ್ಲ. ಡಿ|| ಮ್ಯಾಜಿಸ್ಟ್ರೇಟರ ಅಪ್ಪಣೆಯಾಗಿರುವದರಮೇಲಾದರೂ ಅಧಿಕಾರಿಗಳು ಮುತವರ್ಜಿವಹಿಸಿ ತಕ್ಕ ಬಂದೋಬಸ್ತು ಮಾಡಿ ದುರ್ಬಲಪಕ್ಷದವರಿಗುಂಟಾಗಿರುವ ಪ್ರಾಣಭೀತಿಯನ್ನು ಹೋಗಲಾಡಿಸುವರೆಂದು ನಿರೀಕ್ಷಿಸಿದೆ. ಸ್ಥಳವಾಸಿ.

ಪ್ರೈಮರಿಬಾಯಿಸ್‌ಸ್ಕೂಲ್ ವಾರ್ಷಿಕೋತ್ಸವ.

ಚಾಮರಾಜನಗರದ ತಾ|| ಸರ್ವಮಾನ್ಯ ತಮ್ಮಡಹಳ್ಳಿ ಪ್ರೈಮರಿ ಬಾಯಿಸ್‌ಸ್ಕೂಲು 6 ನೇ ವಾರ್ಷಿಕೋತ್ಸವವು ಹರವೇ ಹೋ|| ರೇಂಜ್ ಇನ್ಸ್‌ಪೆಕ್ಟರ್ ಮ|| ಜಿ. ಅಶ್ವತ್ಥನಾರಾಯಣಪ್ಪನವರ ಅಧ್ಯಕ್ಷತೆಯಲ್ಲಿ ಕಳೆದ ತಾ|| 20 ರ ಮಧ್ಯಾಹ್ನ 3 ಘಂಟೆಗೆ ಸ್ಕೂಲ್ ಕಟ್ಟಡದೊಳಗೆ ನೆರವೇರಿಸಲ್ಪಟ್ಟಿತು. ಮ|| ಗಳಾದ ಟಿ. ಸೀತಾರಾಮಯ್ಯನವರು, ಶ್ರೀನಿವಾಸಮೂರ್ತಿಯವರು, ಉಡಿಗಾಲದ ಭಕ್ತದ ಮಠದ ಶ್ರೀ|| ಭಕ್ತದಸ್ವಾಮಿಗಳವರು ತಾಲ್ಲೂಕು ಕೆಲವು ಸರ್ಕಾರಿ ಉದ್ಯೋಗಸ್ಥರು ಇತರ ಅನೇಕ ದೊಡ್ಡ ಮನುಷ್ಯರು ಸಹ ದಯಮಾಡಿದ್ದರು. ದೇವರ ಪ್ರಾರ್ಥನೆಯಾದನಂತರ ಸದರಿ ಸ್ಕೂಲ್ ಹೆಡ್ಮಾಸ್ಟರ್ ಮ|| ಚನ್ನಪ್ಪನವರು ಸ್ಕೂಲ್ ರಿಪೋರ್ಟನ್ನು ಓದಿದರು. ಅ|| ಮಾ|| ಎಚ್. ಸಿದ್ದಯ್ಯನವರು, ಗೋವಿಂದ್ವಾಡಿ ಸ್ಕೂಲ್ ಮಾಸ್ಟರ್ ಹೆಚ್.ಬಿ. ಸಿದ್ದಪ್ಪನವರು, ಹೊಮ್ಮದ ಸ್ಕೂಲ್ ಮಾಸ್ಟರ್ ಎಚ್. ಹೊನ್ನಪ್ಪನವರು, ಹಾರ್ಮೋನಿಯಂ ಮೇಕರ್ಸ್ ಅಪ್ಪಾಸಾಮಯ್ಯನವರು, ಪಟೇಲ್ ಚನ್ನಪ್ಪನವರ ಮಕ್ಕಳು ಗುರುನಂಜಪ್ಪನವರುಗಳ ಉಪನ್ಯಾಸವಾದನಂತರ ಮ|| ಟಿ. ಸೀತಾರಾಮಯ್ಯನವರು, ವಿದ್ಯಾಭ್ಯಾಸದ ವಿಚಾರದಲ್ಲಿ ಗ್ರಾಮಸ್ಥರಿಗೆ ಅಭಿರುಚಿಹುಟ್ಟುವಂತೆ ಬಹಳ ಸ್ವಾರಸ್ಯವಾಗಿ ಭಾಷಣ ಮಾಡಿದರು. ಅಧ್ಯಕ್ಷರಾದ ಮ|| ಜಿ. ಅಶ್ವತ್ಥನಾರಾಯಣಪ್ಪನವರು ಗ್ರಾಮಾಭಿವೃದ್ಧಿ ಮತ್ತು ವಿದ್ಯಾಭಿವೃದ್ಧಿ ವಿಚಾರವಾಗಿಯೂ ಉಪನ್ಯಾಸಗಳಿಗೆ

ಪಂಚಾಯಿತಿ ಕಮಿಟಿಯಿಂದ ಧನಸಹಾಯಮಾಡುವ ವಿಚಾರವಾಗಿಯೂ ಭಾಷಣ ಮಾಡಿದರು. ಮ|| ಹಾರ್ಮೋನಿಯಂ ಮೇಕರ್ಸ್ ಅಪ್ಪಾಸಾಮಯ್ಯನವರ ಮತ್ತು ಮ|| ಕಲ್ಯಾಚಾರ್ಯರವರ ಸಂಗೀತವು ನಡೆಯಿತು. ಈ ಗ್ರಾಮದ ವಿಲೇಜ್ ಪಂಚಾಯಿತಿ ಛೇರ್ಮನ್ ಮ|| ಡಿ. ಮುಪ್ಪಾರುಕೃಷ್ಣಪ್ಪನವರು ಅಧ್ಯಕ್ಷರವರಿಗೂ ಸಭಿಕರಿಗೂ ಶ್ರೀ|| ಭಕ್ತದಸ್ವಾಮಿಗಳವರಿಗೂ ಗ್ರಾಮದ ಪರವಾಗಿ ವಂದನೆಯನ್ನರ್ಪಿಸಿ ಹಾಂತುರಾಯಿಗಳನ್ನೊಪ್ಪಿಸಿದರು. ಸದರಿ ಛೇರ್ಮನ್ ಮುಪ್ಪಾರುಕೃಷ್ಣಪ್ಪನವರು ಶಾಲಾ ಅಭಿವೃದ್ಧಿ ವಿಚಾರದಲ್ಲಿ ಹೆಚ್ಚಾಗಿ ಮುತವರ್ಜಿಯನ್ನು ವಹಿಸಿರುವ ವಿಷಯವು ಬಹಳ ಶ್ಲಾಘನೀಯವಾಗಿದೆ. ಫಲಾಹಾರಾನಂತರ ಅಧ್ಯಕ್ಷರವರಿಗೂ ಸಭಿಕರಿಗೂ ಗಂಧಪುಷ್ಪ ತಾಂಬೂಲಗಳ ವಿನಿಯೋಗವಾಗಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ಬರಖಾಸ್ತಾಯಿತು. ವಿದ್ಯಾಭಿಮಾನಿ.

ಮಾಧ್ಯಮಿಕ ಶಾಲೆಯ ಮಾದರಿ ಚರ್ಚಾಸಂಘ.

ಕಳೆದ ಸೆಪ್ಟಂಬರ್ ತಾ|| 24 ನೇ ಶನಿವಾರ ಮಧ್ಯಾಹ್ನ 3 ಘಂಟೆಗೆ ಶಿರಾ ತಾ|| ಬುಕ್ಕಾಪಟ್ಟಣದಲ್ಲಿ ಮೇಲ್ಕಂಡ ಸಂಘದ ತೃತೀಯ ಸಮ್ಮೇಳನವು ನಡೆಯಿತು, ಸೆಕ್ರಟರಿಯವರಾದ ಮಿ|| ಟಿ. ಚೌಡಯ್ಯನವರು ಪುರಪ್ರಮುಖರಿಗೂ ಆಹ್ವಾನವಿತ್ತು ಕರೆಯಿಸಿಕೊಂಡಿದ್ದರು. ಸೆಕ್ರಟರಿಯವರ ಸಲಹೆಯಂತೆ ಸರ್ವಾನುಮೋದನೆಯಿಂದ ಗ್ರಾಮ ಪಂಚಾಯಿತಿ ಛೇರ್‌ಮನ್ನರಾದ, ಶ್ಯಾ|| ಮಿ|| ವೆಂಕಟರಾಮಯ್ಯನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಬಾಲಿಕೆಯರು ಬಹು ಇಂಪಾದ ಧ್ವನಿಯಿಂದ ದೇವತಾ ಪ್ರಾರ್ಥನೆ ಮಾಡಿದರು. ಮಾಧ್ಯಮಿಕ ಶಾಲೆಯ ವಿದ್ಯಾರ್ಥಿನಿ ನರಸಮ್ಮ ಎಂಬ ಹುಡುಗಿಯು "World Wonders" ಎಂಬ ಇಂಗ್ಲಿಷ್ ರೆಸಿಟೇಷನ್ ಹಾಡನ್ನು ಸಮಯೋಚಿತವಾದ ಹಾವಭಾವ ವಿಲಾಸಗಳ ಪ್ರದರ್ಶನದಿಂದ ಬಹಳ ಚೆನ್ನಾಗಿ ಹಾಡಿದಳು. ಪ್ರೇಕ್ಷಕರು ಕರತಾಡನಗಳ ಮೂಲಕ ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ಜಿ. ಅಶ್ವತ್ಥಯ್ಯ ಎಂಬ ವಿದ್ಯಾರ್ಥಿಯು ಓದಿ ಹೇಳಿದ ಪ್ರಬಂಧವು ತುಂಬಾ ಆಕರ್ಷಣೀಯವಾಗಿತ್ತು. ಈ ದಿನದ ಚರ್ಚಾ ವಿಷಯವು ಬಹು ಮುಖ್ಯವಾದುದೆಂದೆಣಿಕೆಯೇ ಇರಬಹುದು. ಪ್ರೇಕ್ಷಕರು ಬಹುಮಂದಿ ನೆರೆದಿದ್ದರು. "ಆಧುನಿಕ ವಿದ್ಯಾಭ್ಯಾಸ ಕ್ರಮವೇ ಅತ್ಯುತ್ತಮವಾದುದು" ಎಂಬುದೇ ಆ ಚರ್ಚಾ ವಿಷಯ. ಮಂತ್ರಿ ಮಂಡಲದ ಇರ್ಕೆಲಗಳಲ್ಲಿ ಬಾಲಕರ ಪರ ಪ್ರಧಾನ ಪಾತ್ರವಹಿಸಿದ್ದ ಮಿ|| ಎಚ್. ನಂಜುಂಡಯ್ಯನವರು ಮತ್ತು ಎಚ್. ನಂಜಪ್ಪನವರು ಬಹು ಸ್ವಾರಸ್ಯವಾಗಿ ವಾದ ವಿವಾದ ನಡೆಸಿದರು. ಅವರು ಬಾಲಕರ ನಿಜವಾದ ಮಾರ್ಗದರ್ಶಕರೇ ಇದ್ದಿರಬಹುದು. ಉಭಯ ಪಕ್ಷದ ಬಾಲಕರೂ ಬಹು ಧೈರ್ಯೋತ್ಸಾಹಗಳಿಂದ ವಾದಮಾಡಿದರು. ಪ್ರೇಕ್ಷಕರ ಪರವಾಗಿ ಹೆ|| ಮಾ|| ರವರು ಪೂರ್ವಕಾಲದ ವಿದ್ಯಾಭ್ಯಾಸ ಕ್ರಮವೇ ಉತ್ತಮವಾಗಿತ್ತೆಂದೂ, ಸೆಕ್ರೆಟರಿಯವರು ಈಗಿನ ಕ್ರಮವೇ ಅತ್ಯುತ್ತಮವೆಂದೂ ಹೇಳಿ ತಮ್ಮ ಅಭಿಪ್ರಾಯಗಳನ್ನು ಸಮರ್ಥಿಸಿದರು. ಅನಂತರ ಅಧ್ಯಕ್ಷರು ಕರತಾಡನಗಳ ಮಧ್ಯೆ ಎದ್ದು ನಿಂತು ತಮ್ಮ ಸ್ವಾಭಾವಿಕವಾದ ಗಂಭೀರವಾಣಿಯಿಂದ ಮಾತನಾಡಿದರು. ಕೊನೆಗೆ "ಆಧುನಿಕ ಕಾಲದ ವಿದ್ಯಾಭ್ಯಾಸ ಕ್ರಮವೇ ಉತ್ತಮವಾದುದು" ಎಂಬುದಕ್ಕೆ ಸರ್ವಾನುಮತಿ ದೊರೆಯಿತು. ಸೆಕ್ರೆಟರಿಯವರು ಊರಿನ ಪ್ರಮುಖರ ಸಹಾಯ ಸಹಾನುಭೂತಿಗಳ ವಿಷಯವಾಗಿ ಮಾತನಾಡುತ್ತ, ಆಹ್ವಾನವನ್ನು ಸ್ವೀಕರಿಸಿ ದಯಮಾಡಿಸಿದ್ದ ಮಹನೀಯರಿಗೆ ಸಂಘದ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು. ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನೆಯೊಂದಿಗೆ ಈ ದಿನದ ಸಭೆಯು ಮುಕ್ತಾಯವಾಯಿತು. ಪ್ರತ್ಯಕ್ಷದರ್ಶಿ.

ವಿನೋದವೂ ದಾನಧರ್ಮದ ಶೀಲವಾಗಿ ಪರಿಣಮಿಸಿತು.

ಮದ್ದೂರು ತಾ|| ಸೋಮನಹಳ್ಳಿ ಬಳಿ ಮ|| ಎಸ್. ಸಿ. ಮಲ್ಲಯ್ಯನವರು "ಪರೋಪಕಾರಾರ್ಥಮಿದಂ ಶರೀರಂ" ಎಂಬ ಆರ್ಯೋಕ್ತಿಯನ್ನನುಸರಿಸಿ ಒಕ್ಕಲಿಗರ ಹಾಸ್ಟಲ್ ಸ್ಥಾಪನೆ ಮೊದಲಾದ ಅನೇಕ ಧರ್ಮಕಾರ್ಯಗಳಲ್ಲಿ ನಿರತರಾಗಿ, ಸದಾ ಜನಾಂಗದ ಮೇಲ್ಮೆಯನ್ನು ಬಯಸುತ್ತಾ ಕೆಲಸ ಮಾಡುತ್ತಿರುವುದು ಸುತ್ತಮುತ್ತಲಿನ ಜನಗಳಲ್ಲಿ ಒಳ್ಳೆಯ ಪರಿಣಾಮವನ್ನುಂಟುಮಾಡುತ್ತಿರುವುದು. ಜನರು ಧರ್ಮಕಾರ್ಯಗಳಿಗಾಗಿ ನಾ ಮುಂದು ತಾ ಮುಂದು, ಎಂದು ನುಗ್ಗುತ್ತಿರುವುದು ಒಂದು ಶುಭ ಸೂಚನೆಯಾಗಿರುತ್ತದೆ. ಕಳೆದ ತಾ|| 5 ರ ಸಾಯಂಕಾಲ ಸುಮಾರು 4 ಗಂಟೆ ಸಮಯದಲ್ಲಿ ಮ|| ಎಸ್. ಸಿ. ಮಲ್ಲಯ್ಯನವರ ವಾಸಾ ತಮ್ಮಂದಿರಾದ ಮ|| ಲಿಂಗೇಗೌಡರವರು ತಮ್ಮ ಸ್ನೇಹಿತರೊಂದಿಗೆ ಕುಳಿತು ಧರ್ಮಸಂಬಂಧ ಪ್ರಸಂಗಮಾಡುತ್ತಿರುವಾಗ್ಗೆ, ಅಲ್ಲಿಯೇ ಕುಳಿತಿದ್ದ ನಾನು ವಿನೋದಕ್ಕಾಗಿ, "ನಿಮ್ಮ ಕೈಯಲ್ಲಿರುವ ಭಂಗಾರದ ಸರಿಗೆಯನ್ನು ವೃಥಾ ಧರಿಸಿರುವುದಕ್ಕೆ ಬದಲಾಗಿ ಅದು ಒಕ್ಕಲಿಗರ ಹಾಸ್ಟಲಿನ ಧರ್ಮಕಾರ್ಯಗಳನ್ನಲಂಕರಿಸಬಾರದೇ" ಎಂದು ಪ್ರಶ್ನೆಮಾಡಿದ ಕೂಡಲೆ ಸದರಿ ಲಿಂಗೇಗೌಡರವರು "ಧರ್ಮವನ್ನವಲಂಬಿಸದ ಈ ಒಡವೆಯಿಂದ ನನಗಾವ ಪ್ರಯೋಜನ" ಎಂದು ಹೇಳಿ ತಮ್ಮ ಮೈಮೇಲೆ ಧರಿಸಿದ್ದ ಸುಮಾರು 120 ರೂ. ಬೆಲೆ ಬಾಳತಕ್ಕ 1 ಸರಿಗೆ ಮತ್ತು 1 ಉಂಗುರ ಇವೆರಡನ್ನು ತೆಗೆದುಕೊಡಲು, ಅಂತಹ ತ್ಯಾಗಬುದ್ಧಿಯನ್ನು ನೋಡಿ, ಅಲ್ಲಿ ಕುಳಿತಿದ್ದ ಮ|| ಗಳಾದ ಓಬೋ ಕೆಂಪೇಗೌಡರು ತಮ್ಮ ಮೈಮೇಲಿದ್ದ ಸುಮಾರು 16 ರೂ. ಬೆಲೆ ಬಾಳತಕ್ಕ 1 ಜತೆ ಹತ್ತಕಡಕು ಮತ್ತು 1 ಜತೆ ಬೆಳ್ಳಿಯ ಬಳೆಗಳನ್ನೂ, ಮರಿಗೆಂಪೇಗೌಡರವರು ತಮ್ಮ ಮೈಮೇಲೆ ಧರಿಸಿದ್ದ ಸುಮಾರು 13 ರೂ. ಬೆಲೆ ಬಾಳತಕ್ಕ 1 ಜತೆ ಚಾವಲಿ ಮತ್ತು 1 ಜತೆ ಬೆಳ್ಳಿಯ ಬಳೆಗಳನ್ನೂ, ಅಬ್ಬೂರು ಚಿಕ್ಕೇಗೌಡರವರು ತಮ್ಮ ಮೈಮೇಲೆ ಧರಿಸಿದ್ದ ಸುಮಾರು 15 ರೂ. ಬೆಲೆ ಬಾಳತಕ್ಕ 1 ಮುರು, 1 ಜತೆ ಚಾವಲಿ ಮತ್ತು 1 ಜತೆ ಬೆಳ್ಳಿಯ ಬಳೆಗಳನ್ನೂ, ಮಾದೇಗೌಡರವರು ತಮ್ಮ ಕೈಯಲ್ಲಿ ಧರಿಸಿದ್ದ ಸುಮಾರು 6 ರೂ. ಬೆಲೆಯ 1 ಜತೆ ಬೆಳ್ಳಿಯ ಬಳೆಗಳನ್ನೂ, ಅಬ್ಬೂರು ಮಲ್ಲೇಗೌಡರ ಕೆಂಪೇಗೌಡರು ತಮ್ಮ ಕೈಯಲ್ಲಿದ್ದ ಸುಮಾರು 3 ರೂ. ನ ಬೆಳ್ಳಿ ಬಳೆಯನ್ನೂ, ಎಸ್. ಸಿ. ಮಲ್ಲಯ್ಯನವರು ಸುಮಾರು 13 ರೂ. ಬೆಲೆಯ 1 ಉಂಗುರವನ್ನೂ, ಮೇಸ್ತ್ರೀ ಕೆಂಪೇಗೌಡರು ಸುಮಾರು 15 ರೂ. ಬೆಲೆಯ 1 ಉಂಗುರವನ್ನೂ ತಂತಮ್ಮ ಕೃಚ್ಛ್ರ ಬಹಳ ಸಂತೋಷದಿಂದ, ಧರ್ಮಕ್ಕಾಗಿ ತೆಗೆದು ಕೊಟ್ಟಿರುತ್ತಾರೆ. "ವಿನೋದಭಾವವೂ ಸಹ ಧರ್ಮವಾಗಿ ಪರಿಣಮಿಸಿ" 1 ಘಂಟೆಯೊಳಗಾಗಿ ಒಟ್ಟು ಸುಮಾರು 200 ರೂ. ಬೆಲೆ ಬಾಳುವ ಒಡವೆಗಳು, ಹಾಸ್ಟಲಿನ ವಿದ್ಯಾರ್ಥಿಗಳ ದೀಪಗಳನ್ನು ಹಾಕಿಸಲು ವಿನಿಯೋಗಿಸಲ್ಪಡತಕ್ಕದ್ದೆಂದು ತಿಳಿಸಿ ಎಸ್. ಸಿ. ಮಲ್ಲಯ್ಯನವರ ವಶಕ್ಕೆ ಒಪ್ಪಿಸಲ್ಪಟ್ಟವು. ಸದರಿ ಧರ್ಮಾತ್ಮರುಗಳ ಮೇಲ್ಪಂಕ್ತಿಯು ಒಕ್ಕಲಿಗರ ಜನಾಂಗಕ್ಕೇ ಒಂದು ಭೂಷಣಪ್ರಾಯವಾಗಿರುತ್ತದೆ. ಅಲ್ಲದೆ ಸೋಮನಹಳ್ಳಿಯೆಂಬುದೇ ಇಂತಹ ಧರ್ಮಾತ್ಮರ ವಾಸದಿಂದ ಪವಿತ್ರಸ್ಥಾನವೆಂದು ಹೆಸರು ಪಡೆಯಲು ಮಾರ್ಗದರ್ಶಕವಾಗಿರುವುದು. ಇತರ ಸುತ್ತುಮುತ್ತಲಿನ ಗ್ರಾಮಗಳ ಮಹಾಜನರು ಸಹ ನಶ್ವರವಾದ ಈ ಪ್ರಪಂಚದ ಸುಖವು ಕ್ಷಣಿಕವೆಂದು ತಿಳಿದು ಧರ್ಮಾತ್ಮರಾಗಿ ಯಶಸ್ವಿಗಳಾಗಿ ಪರಿಣಮಿಸಲೆಂತಲೂ ಮೇಲ್ಕಂಡ ಧರ್ಮಾತ್ಮರುಗಳಿಗೆಲ್ಲಾ ದೇವರು ಚಿರಾಯುರಾರೋಗ್ಯೈಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲೆಂತಲೂ ಪ್ರಾರ್ಥಿಸುವ ಕೆ. ಸಿ. ನಂಜುಂಡಯ್ಯ.

ನೂತನ ಮಸೀತಿಯಾರಂಭೋತ್ಸವ.

ಕಳೆದ ತಾ|| 26 ನೇ ಸೋಮವಾರ ಎಡತೊರೆ ಹೊಸ ಟವನ್ನಿನಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ಮಸೀದಿಯ ಆರಂಭಮಹೋತ್ಸವವು ಈ ನೂತನ ಪಟ್ಟಣದ ಚರಿತ್ರಾಂಶದಲ್ಲಿ ಒಂದು ಬಹು ಮುಖ್ಯವಾದ ಪ್ರಕರಣವೆಂದು ಹೇಳಲು ತುಂಬಾ ಸಂತೋಷವಾಗುತ್ತದೆ. ಈ ಮಸೀದಿಯು ಮೈಸೂರಿನಲ್ಲಿ ನರಸಿಂಹರಾಜ ಬೂಲಿವಾರ್ಡ್ ಬಳಿ ಇರುವ ಹೊಸ ಮಸೀದಿಯ ಮಾದರಿ ಬಹಳ ಅಂದವಾಗಿ ಕಟ್ಟಲ್ಪಟ್ಟಿದೆ. ಇದರ ಆರಂಭ ಮಹೋತ್ಸವಕ್ಕಾಗಿ ಈ ಎಡತೊರೆ ಹೊಸ ಟವನ್ ಫಾರ್ಮೇಷನ್ ಕಮಿಟಿಯವರ ಬಿನ್ನಹದ ಪ್ರಕಾರ ಹಜರತ್ ಮೈಸೂರು ಡೆಪ್ಯುಟೀಕಮಿಷನರ್ ಮ|| ಅಬ್ದುಲ್‌ವಾಜಿದ್, ಬಿ.ಎ., ರವರು ದಯಮಾಡಿಸಿದ್ದರು. ಆ ದಿವಸ ಪ್ರಾತಃಕಾಲದಿಂದ ಮಧ್ಯಾಹ್ನ 2 ಘಂಟೆಯವರೆಗೂ ಸಾವಿರಾರು ಮಹಮ್ಮದೀಯರಿಗೆ ಸಂತೋಷವಾಗಿ ಭೋಜನಾದಿಗಳು ನೆರವೇರಿತು. 5 ಘಂಟೆ ಸಮಯಕ್ಕೆ ಎಲ್ಲರೂ ಮಸೀದಿಗೆ ಬಂದರು. ಖಾಜಿಯವರು ತಳಿರುತೋರಣಗಳಿಂದ ಶೃಂಗರಿಸಲ್ಪಟ್ಟಿದ್ದ ನೂತನ ಮಸೀದಿಯ ಮುಂಭಾಗದಲ್ಲಿ ನೆರೆದಿದ್ದ ಹಿಂದೂ ಮುಸಲ್ಮಾನರ ಮಧ್ಯೆ ಕೊರಾನನ್ನು ಓದಿದನಂತರ ಟವನ್ ಫಾರ್ಮೇಷನ್ ಕಮಿಟಿಯ ಪರವಾಗಿ ಮ|| ಕೆ. ಬಸವರಾಜ ಅರಸಿನವರು ಈ ಮಸೀದಿಯ ಕಟ್ಟಡದ ವಿಷಯವಾಗಿ ಇಂಜನೀಯರ್ ಇಲಾಖೆಯವರು ತೋರಿಸಿದ ಮೆಹನತ್ತು ವಿಚಾರವಾಗಿಯೂ ಅನೇಕ ರಾಜಕಾರ್ಯಗಳಿದ್ದಾಗ್ಯೂ ಹಜರತ್ ಡೆಪ್ಯುಟೀಕಮಿಷನರ್‌ರವರು ಇದಕ್ಕಾಗಿ ಅಭಿಮಾನಪಟ್ಟು ದಯಮಾಡಿಸಿದಕ್ಕಾಗಿಯೂ ಕೃತಜ್ಞತೆಯನ್ನು ತೋರಿಸುವ ಒಂದು ಪತ್ರಿಕೆಯನ್ನು ಓದಿದರು. ಮ|| ಭಾಷ್ಯಾಚಾರ್ಯರೆಂಬ ಬ್ರಾಹ್ಮಣರು ಹಿಂದೂ ಮುಸಲ್ಮಾನರ ಸಹೋದರ ಭಾವವನ್ನು ಕುರಿತು ಬಹಳ ಸ್ವಾರಸ್ಯವಾಗಿ ಅಂಗ್ಲೇಯ ಭಾಷೆಯಲ್ಲಿ ಉಪನ್ಯಾಸಮಾಡಿದರು. ಅನಂತರ ಸ್ಥಳೀಯ ದೊಡ್ಡ ಮನುಷ್ಯರು ಮತ್ತು ಕೃಷ್ಣರಾಜಸಾಗರದ ಇಂಜನೀಯರು ಮತ್ತು ಇತರ ಮುಸಲ್ಮಾನರು ಇವರುಗಳ ಪ್ರಾರ್ಥನೆಯಂತೆ ನೂತನ ಮಸೀದಿಯ ಬಾಗಿಲನ್ನು ತೆರೆದರು. ಆನೇಕ ಜನ ಮುಸಲ್ಮಾನರು ಈ ಪವಿತ್ರವಾದ ನೂತನ ಮಸೀದಿಯಲ್ಲಿ ತಮ್ಮ ಮೊದಲನೆಯ ಸೇವೆಯನ್ನು ಅರ್ಪಿಸಿದರು. ಹಿಂದೂ ಮುಸಲ್ಮಾನರ ಏಕೀಭಾವದ ಚಿಹ್ನೆಯು ಎಲ್ಲರಲ್ಲಿಯೂ ತುಂಬಿತುಳುಕುತ್ತಲಿತ್ತು. ಮ|| ಅಬ್ದುಲ್ ವಾಜಿದ್‌ರವರು ಮುಸಲ್ಮಾನ್ ಬಡಬಗ್ಗರಿಗೆ ವಸ್ತ್ರದಾನವನ್ನು ಮಾಡಿದರು. ಈ ನೂತನ ಪಟ್ಟಣದ ಅಭಿವೃದ್ಧಿಗೆ ಇಲ್ಲಿಯ ರೆವಿನ್ಯು ಸಬ್‌ಡಿವಿಜನ್ ಆಫೀಸರಾದ ಮ|| ಕೆ. ಬಸವರಾಜ ಅರಸಿನವರು, ಅಮಲ್ದಾರ್ ಮ|| ಬಿ. ಲಕ್ಷ್ಮಣರಾಯರು ಮತ್ತು ಅಸಿಸ್ಟೆಂಟ್ ಇಂಜನಿಯರ್ ಮ|| ಬಿ. ಸುಬ್ಬರಾಯರು ತೋರಿಸುತ್ತಿರುವ ಶ್ರದ್ಧೆಯು ತುಂಬಾ ಶ್ಲಾಘನೀಯವಾಗಿದೆ. ಮ|| ಬಸವರಾಜ ಅರಸಿನವರು ಸ್ವಲ್ಪದಿವಸಗಳ ಹಿಂದೆ ಇದೇ ಹೊಸ ಟವನ್ನಿನಲ್ಲಿ ಆದ ನೂತನ 2 ದೇವಾಲಯಗಳ ಪ್ರತಿಷ್ಠಾ ಕಾರ್ಯಕ್ಕಾಗಿ ಉದಾರವಾಗಿ ಧನ ಸಹಾಯಮಾಡಿದ್ದಲ್ಲದೆ ತಮ್ಮ ಸ್ವಂತಕಾರ್ಯಕ್ಕಿಂತಲೂ ಹೆಚ್ಚಾಗಿ ಶ್ರದ್ಧೆಯನ್ನು ತೋರಿಸಿದಂತೆಯೇ ಈ ನೂತನ ಮಸೀದಿಯ ಆರಂಭ ಮಹೋತ್ಸವಕ್ಕೂ ಉದಾರವಾಗಿ ಧನ ಸಹಾಯ ಶ್ರದ್ಧಾಭಕ್ತಿಯನ್ನು ತೋರಿಸಿದ್ದು ಎಲ್ಲರ ಮನಸ್ಸಿಗೂ ಆಹ್ಲಾದಕರವಾಗಿದೆ. ಈ ನೂತನ ಪಟ್ಟಣದ ಅಭಿವೃದ್ಧಿಗೆ ಈ ಸ್ಥಳದ ಮ|| ಬಳೇ ಸಿದ್ದಲಿಂಗಶೆಟ್ಟರು ಸಹ ತಮ್ಮ ಸ್ವಂತ ಕಾರ್ಯಗಳಿಗಿಂತಲೂ ಹೆಚ್ಚಾಗಿ ಉತ್ಸಾಹಸಾಹಸಗಳನ್ನು ತೋರಿಸುತ್ತಿರುವುದು ನಿಜವಾಗಿಯೂ ಸರ್ವರ ಗಣನೆಗೆ ಬಾರದೇ ಇರಲಾರದು. ಘನಸರ್ಕಾರದವರು ಈ ಹೊಸಟವನ್ನಿನ ಅಭಿವೃದ್ಧಿಗಾಗಿ ವಹಿಸಿಕೊಂಡಿರುವ ಶ್ರದ್ಧೆಯಿಂದ ದಿನೇ ದಿನೇ ಉತ್ತಮಸ್ಥಿತಿಗೆ ಬರುತ್ತಿದೆ ಎಂಬುವದು ಎಲ್ಲರಿಗೂ ತಿಳಿದ ವಿಷಯವಾಗಿಯೇ ಇದೆ. ಆದುದರಿಂದ ಸರ್ಕಾರದವರು ಶೀಘ್ರದಲ್ಲಿಯೇ ಈ ಹೊಸ ಟವನ್ನಿಗೆ ವಿದ್ಯುದ್ದೀಪ ಮುನಿಸಿಪಲ್ ಮೆಜಿಸ್ಟ್ರೇಟು ಕೋರ್ಟು ಮತ್ತು ಹೈಸ್ಕೂಲು ದಯಪಾಲಿಸಿದಲ್ಲಿ ಇದು ನಮ್ಮ ಮಾದರಿ ಸಂಸ್ಥಾನದ ಮಾದರಿಯ ಪಟ್ಟಣವೆನ್ನಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಪುರವಾಸಿ.

ಬ್ರಾಹ್ಮಣರಿಗೆ ಮುಡುಪು.

ರಾಜಧಾನಿಯಲ್ಲಿ ಶ್ರೀ ಚಾಮರಾಜೇಂದ್ರ ಒಡೆಯರವರಿಂದ ಸ್ಥಾಪಿತವಾದ ಒಂದು ಸಂಸ್ಕೃತ ಮಹಾಪಾಠಶಾಲೆ (ಕಾಲೇಜು) ಯಿರುವ ವಿಷಯವು ವಾಚಕರಿಗೆ ಹೊಸದಲ್ಲವು. ಇಲ್ಲಿ ಪುಸ್ತಕಭಂಡಾರ ವಿದ್ಯಾರ್ಥಿನಿಲಯ ವಿದ್ಯಾರ್ಥಿವೇತನ ಮೊದಲಾದ ಸಕಲ ಸೌಕರ್ಯಗಳೂ ಕಲ್ಪಿಸಲ್ಪಟ್ಟಿರುತ್ತವೆ. ಖಿಲವಾಗುತ್ತಿರುವ ದೇವಭಾಷೆಯ ಉನ್ನತಿಗಾಗಿ ಮಾಡಿರುವ ಈ ಏರ್ಪಾಟುಗಳೆಲ್ಲವೂ ಸ್ತೋತ್ರಾರ್ಹವಾಗಿರುತ್ತವೆ. ಸರ್ಕಾರದವರು ಈ ಮಹಾ ಪಾಠಶಾಲೆಯ ವೆಚ್ಚಕ್ಕಾಗಿ ಪ್ರತಿ ವರ್ಷವೂ ತಮ್ಮ ಬೊಕ್ಕಸದಿಂದ ಸುಮಾರು 50 ಸಾವಿರ ರೂ. ಗಳನ್ನು ಖರ್ಚುಮಾಡುತ್ತಿರುವುದೂ ಸ್ತೋತ್ರಾರ್ಹವಾಗಿರುತ್ತದೆ. ಆದರೆ ಈ ಸಾರ್ವಜನಿಕ ಪಾಠಶಾಲೆಯಲ್ಲಿ ವೀರಶೈವ, ಜೈನ ಮೊದಲಾದ ಉತ್ತಮವರ್ಗದವರಿಗೂ ಪ್ರವೇಶಕ್ಕವಕಾಶವನ್ನು ಕೊಡದೆ ಬ್ರಾಹ್ಮಣರಿಗೆ ಮಾತ್ರ ಇದು ಮುಡುಪಾಗಿರುವುದು ವಿಷಾದಕರವಾಗಿರುತ್ತದೆ. ವೀರಶೈವ, ಜೈನ ಮೊದಲಾದ ಕೆಲವು ಪಂಗಡದವರು ಪ್ರಾಚೀನಕಾಲದಿಂದಲೂ ಸಂಸ್ಕೃತದಲ್ಲಿ ಮಾಂಸಾಹಾರಾದಿ ದೋಷಗಳಿಲ್ಲದವರು ಮಾಡುತ್ತಿರುವ ವಾದುದುದರಿಂದ ಅವರಿಗೂ ಅವಕಾಶವನ್ನು ಕೊಡಬೇಕಾಗಿದ್ದುದು ನ್ಯಾಯವಾಗಿದ್ದಿತು. ಭಾಷಾಸೇವೆಯಲ್ಲಿ ಅವರು ಮುಂದುವರಿದಿದ್ದರು.

ಸರ್ಕಾರದ ಬೊಕ್ಕಸವೆಂದರೆ ಏಕ್ಯಕರ್ಣಾಟಕವು ಹೇಳುವಂತೆ ಕೋಟಿಗೌಡನ (ಸಕಲ ಪ್ರಜೆಗಳ) ಪ್ರಾಣಾಯುಷಿನ ತಿದಿಯಾಗಿರುತ್ತದೆ. ಅದರ ಬೆಲೆಯಿಂದ ಈ ಪಾಠಶಾಲೆಯ ಜರುಗುತ್ತದೆಂದಮೇಲೆ ಇದರಲ್ಲಿ ಬ್ರಾಹ್ಮಣೇತರರಿಗೆ ಪ್ರವೇಶಕ್ಕವಕಾಶವನ್ನು ಕೊಡದಿರುವುದು ನ್ಯಾಯವೇ? ಬ್ರಾಹ್ಮಣೇತರರ ಪ್ರವೇಶಕ್ಕವಕಾಶವು ಕೊಡಲ್ಪಟ್ಟರೆ ತಾವು ಬಿಟ್ಟುಬಿಡುತ್ತೇವೆಂದು ಬ್ರಾಹ್ಮಣ ವಿದ್ಯಾಂಸರು ಗೊಡ್ಡು ಬೆದರಿಕೆಯನ್ನು ಹಾಕುತ್ತಾರೆನ್ನುವುದು ಸಮಂಜಸವಾದ ಮಾತೇ? ಹಾಗೆ ಅವರು ಹೇಳುವುದು ನಿಜವಾದರೆ ಅದರಿಂದ ಅವರ ಸಂಕುಚಿತಭಾವವು ಹೊರಪಡುವುದಲ್ಲದೆ ಬೇರಲ್ಲದೆ ಪರಿಪಕ್ವಪಾಂಡಿತ್ಯದ ಉದಾರತೆಯನ್ನರಾಗುವುದೇ? ಗೊಡ್ಡು ಬೆದರಿಕೆಗೆ ಬೆದರುವುದಾದರೂ ಅಂಜುಬುರುಕತನವಲ್ಲವೇ?

ಬ್ರಾಹ್ಮಣೇತರರಿಗೆ ವೇದವನ್ನು ಓದುವ ಅಧಿಕಾರವಿಲ್ಲವೆಂದೂ ಅವರು ವೇದವನ್ನು ಕೇಳಿದರೆ ಕಿವಿಗೆ ಸೀಸವನ್ನು ಕರಗಿಸಿ ಹುಯ್ಯಬೇಕೆಂದೂ ಈ ಬ್ರಾಹ್ಮಣರು ಹೇಳುವುದುಂಟಷ್ಟೆ. ಅದೇಕೆ ಅಧಿಕಾರವಿಲ್ಲ? ವೇದವನ್ನೋದಿದ ಬ್ರಾಹ್ಮಣೇತರರು ಪವಿತ್ರರಾಗುವುದರಿಂದಲೋ? ಅಪವಿತ್ರರಾಗುವುದರಿಂದಲೋ? ಪವಿತ್ರರಾಗುವುದರಿಂದಾದರೆ ಹಾಗಾಗುವುದು ಬ್ರಾಹ್ಮಣರಿಗೆ ಸಹನವಿಲ್ಲವೇ? ಅಪವಿತ್ರರಾಗುವುದರಿಂದಾದರೆ ಅವರನ್ನು ಅಪವಿತ್ರರನ್ನಾಗಿ ಮಾಡಿದುದಾವುದು? ವೇದವೇ ತಾನೆ? ಹಾಗೆ ವೇದದಲ್ಲಿ ಅಪವಿತ್ರತೆಯನ್ನು ಆರೋಪಿಸುವವರಿಗೆ ವೇದಾಧ್ಯಯನಾಧಿಕಾರವಿಲ್ಲವೋ ಅಥವಾ ಇತರರಿಗಿಲ್ಲವೋ ಎಂಬುದನ್ನು ವಾಚಕರು ನಿಷ್ಪಕ್ಷಪಾತದಿಂದ ವಿಚಾರಮಾಡಬೇಕಾಗಿದೆ.

ಇನ್ನು ಕಿವಿಗೆ ಸೀಸವನ್ನು ಕರಗಿಸಿ ಹುಯ್ಯುವ ಮಾತು, ಅದೇಕೆ? ವೇದವನ್ನು ಕೇಳಿದ ಕಿವಿಯು ಕಿವುಡಾಯಿತೆಂದೋ? ಅಪವಿತ್ರವಾಯಿತೆಂದೋ? ಪವಿತ್ರವಾಯಿತೆಂದೋ? ಕಿವುಡಾಯಿತೆನ್ನುವುದು ಪ್ರತ್ಯಕ್ಷ ವಿರೋಧ. ಅಲ್ಲದೆ ಹಾಗೆ ಕಿವುಡುಮಾಡುವ ವೇದಕ್ಕೆ ಪಕ್ಷಪಾತವೂ ಇಲ್ಲ. ಬ್ರಾಹ್ಮಣರ ಕಿವಿಯನ್ನೂ ಕಿವುಡುಮಾಡಬಹುದು. ಅಪವಿತ್ರವಾಯಿತೆನ್ನುವುದಾದರೆ ಹಾಗಾದುದು ವೇದಶ್ರವಣದಿಂದ ತಾನೆ? ಹಾಗಾದರೆ ಕಿವಿಯನ್ನು ಅಪವಿತ್ರಮಾಡುವಷ್ಟು ಅಪವಿತ್ರವೇ ವೇದ? ಹಾಗೆ ಹೇಳುವುದು ಮಹಾ ಪಾಪವಲ್ಲವೇ? ಕಿವಿಯು ಪವಿತ್ರವಾಯಿತೆನ್ನುವ ಮೂರನೆಯ ಪಕ್ಷವಾದರೆ ಅದೇಕೆ ಸೀಸವನ್ನು ಕರಗಿಸಿ ಹುಯ್ಯಬೇಕು? ಕಿವಿಯು ಪವಿತ್ರವಾಗುವುದು ಅನಿಷ್ಟವೇ ಬ್ರಾಹ್ಮಣರಿಗೆ? ಇಂಗ್ಲಿಷ್ ಭಾಷೆಯಲ್ಲಿ ಕೂಡ ವೇದಗಳು ಭಾಷಾಂತರಿಸಲ್ಪಟ್ಟಿವೆಯಲ್ಲ! ಬ್ರಾಹ್ಮಣೇತರರಾದ ಆ ಭಾಷಾಂತರ ಕರ್ತರಿಗೂ ಓದಿದವರಿಗೂ ಕೇಳಿದವರಿಗೂ ಏನೇನು ಅನಿಷ್ಟಗಳಾಗಿವೆ? ಹೇಳಬಲ್ಲರೆ ಈ ಬ್ರಾಹ್ಮಣರು? ಅದಕ್ಕೆ ಪರಿಹಾರ—ಪ್ರಾಯಶ್ಚಿತ್ತವನ್ನೇನು ಮಾಡಿದ್ದಾರೆ?

ಅದಿರಲಿ, ವರುಷಕ್ಕೊಮ್ಮೆ ವಿದ್ಯಾಗಣಪತಿಯ ಮಂಗಳಾರತಿಯ ಸಂದರ್ಭದಲ್ಲಿ ಈ ಮಹಾ ಪಾಠಶಾಲೆಯ ಸಭಾಮಂದಿರದಲ್ಲಿ ಬ್ರಾಹ್ಮಣ ವಿದ್ವಾಂಸರು ಉಪನ್ಯಾಸಗಳನ್ನು ಮಾಡುತ್ತಿರುವರಷ್ಟೆ. ಆಗ ಅನೇಕ ವೇದ ವಿಷಯಗಳನ್ನೂ ಉಪನ್ಯಾಸಮಾಡುತ್ತಾರೆ. ಅದನ್ನು ಕೇಳುವುದಕ್ಕೆ ದೊಡ್ಡದಾಗಿ ಆಹ್ವಾನಪತ್ರಿಕೆಯನ್ನೂ ಅಧ್ಯಕ್ಷರು ಕಳುಹಿಸುತ್ತಾರೆ. ಆಹ್ವಾನದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ತಾರತಮ್ಯವಿಲ್ಲ. ಬ್ರಾಹ್ಮಣೇತರರು ವೇದ ವಿಷಯಗಳನ್ನು ಕೇಳಬಾರದೆಂದೂ ಅವರಿಗೆ ಆ ವಿಷಯಗಳನ್ನು ಹೇಳಬಾರದೆಂದೂ ಹೇಳಿದಮೇಲೆ ಈ ಉಪನ್ಯಾಸಗಳ ಮೂಲಕವಾಗಿ ಆ ವಿಷಯಗಳನ್ನು ಕೇಳಬಹುದೋ? ಹೇಳಬಹುದೋ? ಆಗಬಹುದೆಂದರೆ ಅದಾವುದು ಅಪವಾದ ಸೂತ್ರ? ಆಗಬಾರದೆಂದರೆ ದೂರಾಲೋಚನೆಯಿಲ್ಲದೆ ಹಾಗೆ ವಿರೋಧ ಮಾರ್ಗದಲ್ಲಿ ನಡೆದವರು ಪ್ರಾಯಶ್ಚಿತ್ತವನ್ನೇನು ಮಾಡಿಕೊಳ್ಳುವರು?

ಈಸಲದ ಉಪನ್ಯಾಸ ಸಮಾರಂಭದಲ್ಲಿ ಇನ್ನೊಂದು ವಿಶೇಷವೇನೆಂದರೆ, ಬ್ರಾಹ್ಮಣ ಭಕ್ತರಾದ ಬ್ರಾಹ್ಮಣೇತರರು ಉಪನ್ಯಾಸಕರುಗಳಿಗೆ ಪುಷ್ಪಮಾಲೆಯನ್ನು ಹಾಕುತ್ತಿದ್ದುದು. ಬ್ರಾಹ್ಮಣರು ಬ್ರಾಹ್ಮಣೇತರರಲ್ಲಿ ಮೇಲೆ ಹೇಳಿದಂತೆ ವರ್ತಿಸುತ್ತಿರುವಾಗ ಈ ಬ್ರಾಹ್ಮಣೇತರರು ಪುಷ್ಪಮಾಲೆಯನ್ನು ಹಾಕುವುದರಲ್ಲಿ ಯಾವ ಪುರುಷಾರ್ಥವನ್ನು ಕಂಡುಕೊಂಡರೋ ತಿಳಿಯದು. ಸಭಾಮಧ್ಯದಲ್ಲಿ ಹಾರವನ್ನು ಹಾಕುವುದೊಂದು ಗೌರವವೆಂದು ತಿಳಿದರೋ ಅಥವಾ ಎಲ್ಲರ ಕಣ್ಣಿಗೆ ತಾವು ಗೋಚರರಾಗಿ ಪ್ರಸಿದ್ಧ ಪುರುಷರಾಗುವೆವೆಂದು ತಿಳಿದರೋ ಅಥವಾ ಹೀಗೆ ಮಾಡುವುದರಿಂದ ಓಟುಗಳಿನ ಸಮಯದಲ್ಲಿ ಏನಾದರೂ ಪ್ರಯೋಜನವಾಗಬಹುದೆಂದು ತಿಳಿದರೋ ಗೊತ್ತಾಗಲಿಲ್ಲ. ಕೋಳಿಯು ಕೆದಕುವುದು ತನ್ನ ಕಡೆಗೇ ಎಂಬುದು ಇವರಿಗೆ ನೆನಪಿರಲಿ.

ಲೇಖಕನು ಬ್ರಾಹ್ಮಣರ ಅಭಿವೃದ್ಧಿಯನ್ನು ನೋಡಿ ಕರುಬುತ್ತಾನೆಂದು ಯಾರೂ ತಿಳಿಯಬಾರದು. ಈ ಬ್ರಾಹ್ಮಣರು "ಎಲ್ಲರೂ ಒಂದಾಗಬೇಕು, ಅಸ್ಪೃಶ್ಯತೆಯನ್ನು ತೊಡೆದುಬಿಡಬೇಕು" ಇತ್ಯಾದಿಯಾಗಿ ಸತ್ಯಹರಿಶ್ಚಂದ್ರನಂತೆ ಬೇರೆಯವರಿಗೆ ಉಪದೇಶಮಾಡುತ್ತಾರಲ್ಲ! ಬೇರೆಯವರಲ್ಲಿ ಇವರ ನಡಿಯಂತೆ ನಡೆಯುವುದೇ? ಸಹಾನುಭೂತಿಯಿರುವುದೇ? ಎಂಬುದನ್ನು ಸ್ವಲ್ಪಮಟ್ಟಿಗೆ ತೋರಿಸುವುದಕ್ಕಾಗಿ ಬರೆದಲೇಖನಿದು, ಕರುಬುವ ಮಾತಲ್ಲ. ಕೆಲವರು ಬ್ರಾಹ್ಮಣರು "ನಮಗೇನೋ ಸಹಾನುಭೂತಿಯಿದೆ. ಆದರೆ ನಮ್ಮ ಕೆಲವು ಆರ್ಥಡಾಕ್ಸ್‌ಗಳು ಕೇಳುವುದಿಲ್ಲ" ವೆಂಬ ಉಪಚಾರದ ಮಾತುಗಳನ್ನಾಡುವುದುಂಟು. ಅಂಥವರಿಗೆ ನಾನು ಹೇಳುವುದೇನೆಂದರೆ, ನಿಮ್ಮವರನ್ನೇ ನೀವು ದಾರಿಗೆ ತರಲಾಗದಿದ್ದ ಮೇಲೆ ಬೇರೆಯವರಿಗೇಕೆ ಉಪದೇಶ ಮಾಡುತ್ತೀರಿ? ನಿಮ್ಮವರು ನಿಮ್ಮ ಮಾತನ್ನು ಕೇಳಲಿಲ್ಲವೆಂದು ನೀವು ಸತ್ಯಾಗ್ರಹವನ್ನೇನಾದರೂ ಮಾಡಿದಿರೋ? ಇಲ್ಲವೆಂದಮೇಲೆ ಈ ಬಾಹ್ಯಾಡಂಬರವೇಕೆ?

ಬ್ರಾಹ್ಮಣೇತರಸಹೋದರರೇ! ನೀವು ಬ್ರಾಹ್ಮಣರನ್ನು ಕಂಡರೆ ದ್ವೇಷಿಸಬೇಕೆಂದು ಈ ಲೇಖನದ ಉದ್ದೇಶವಲ್ಲ. ಒಬ್ಬರಿಗೊಬ್ಬರು ಪ್ರೀತಿಯಿಂದಿರುವುದು ಸರ್ವೋತ್ತಮ. ಆದರೆ ಬಣ್ಣದ ಮಾತುಗಳಿಗೆ ಮರುಳಾಗಿ ನೀವು ಮೋಸಹೋಗಬಾರದೆಂದು ಈ ಲೇಖನವು ನಿಮ್ಮಗಳಿಗೆ ಎಚ್ಚರಿಕೆಯನ್ನು ಕೊಡುವುದು. "ನೀವೂ ವಿದ್ಯಾ ಬುದ್ಧಿ ಕುಶಲತೆಗಳಲ್ಲಿ ಹೋರಾಡಿ ಮುಂದುವರಿದು ನಿಮ್ಮ ಆತ್ಮಗೌರವವನ್ನು ಕಾಪಾಡಿಕೊಳ್ಳಬೇಕೇ!" ಎಂಬ ಪಲ್ಲವಿಯನ್ನು ಹಾಡಿ ಈ ಎರಡನೆಯ ಲೇಖನವನ್ನು ಮುಗಿಸುವೆನು.

ದೇಶಹಿತೈಷಿ.

ಬೆಂಗಳೂರು ಕೋಟೆಯಲ್ಲಿ ನಿರ್ಮಿತವಾಗುವ ಸೇಂಟ್‌ಲ್ಯೂಕ್ಸ್ ಚರ್ಚಿನ ಅಸ್ತಿಭಾರಶಿಲೆಯನ್ನು ಪ್ರತಿಷ್ಠಿಸುವಾಗ್ಗೆ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಭಾಷಣ.

(1932 ನೆಯ ಇಸವಿ ಸೆಪ್ಟಂಬರ್ 29 ನೆಯ ತಾರೀಖು)

ಇಲ್ಲಿ ಕಟ್ಟುವ ಸೇಂಟ್‌ಲ್ಯೂಕ್ಸ್ ಚರ್ಚಿನ ಹೊಸ ಕಟ್ಟಡದ ಅಸ್ತಿಭಾರ ಶಿಲೆಯನ್ನು ಪ್ರತಿಷ್ಠಿಸುವುದಕ್ಕೆ ನನಗೆ ಆಹ್ವಾನವನ್ನಿತ್ತು ... ಈ ...

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿರಿ

ಗರ್ಭಧಾರಣ ಸಂಜೀವಿನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರಿ ಋತುಸ್ನಾನ ಆಗುವವರೆಗೆ ಪ್ರತಿ ಸಾರಿ ಮೂರು ಮೂರು ದಿವಸ ತಕ್ಕೊಂಡರೆ ಪುತ್ರೋತ್ಪತ್ತಿ ಆಗುವುದು. ೯ ಗುಳಿಗೆಗಳ ಶಿ. ೩ ರೂಪಾಯಿ. ಪೋ. ಖ. ೫ ಆಣೆ

ಪತ್ತೆ—ವೈದ್ಯ ವಿ. ಎಸ್. ಕಾಡನೆ. ಮಿರಜ M. C. ೩

ವಾಗಿ ವಂದನೆಗಳನ್ನು ಸಮರ್ಪಿಸುವೆನು. ಬೆಂಗಳೂರಿನಲ್ಲಿರುವ ಕ್ರೈಸ್ತ ಸಂಘದವರೆಲ್ಲರಿಗೂ ಒಂದು ಹಬ್ಬದಂತಿರುವ ಇಷ್ಟು ಮುಖ್ಯವಾದ ಈ ಉತ್ಸವದಲ್ಲಿ ನಿಮ್ಮೊಡನೆ ಸೇರುವ ಸುಯೋಗವು ಲಭಿಸಿದುದು ನನಗೆ ವಿಶೇಷ ಸಂತೋಷಕರವಾಗಿದೆ.

ನಿಮ್ಮೊಡನೆ ಕೇವಲ ಲೌಕಿಕ ವ್ಯವಹಾರದ ಸಂಬಂಧವು ಮಾತ್ರವೇ ನನಗಿದ್ದಿತು. ಹೀಗಿರುವಲ್ಲಿ ಮತಸಂಬಂಧವಾದ ಈ ದಿನದ ಉತ್ಸವದಲ್ಲಿ ಭಾಗಿಯಾಗುವುದಕ್ಕಾಗಿ ನನಗೆ ಆಹ್ವಾನವನ್ನು ಕಳುಹಿಸಿರುವುದಕ್ಕೆ ಗಾಢತರವೆನಿಸಿ ಮನಮುಟ್ಟುವುದಾಗಿರುವ ಹೃದಯಂಗಮವಾದ ಅರ್ಥ ವಿಶೇಷವೂ ಉಂಟೆಂಬುದು ನನ್ನ ಭಾವನೆಯಾಗಿದೆ. ಆದುದರಿಂದ ಈ ಆಹ್ವಾನವು ಬಂದುದಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಧರ್ಮ ಸ್ವಭಾವವನ್ನೂ, ಧರ್ಮ ಸೂಕ್ಷ್ಮವನ್ನೂ ಅರಿತು ದೈವಭಕ್ತಿಯ ಸವಿಯನ್ನನುಭವಿಸಬೇಕಾದುದೇ ಮತಾಚರಣೆಯ ಸಾರತರವಾದ ತಿರುಳಾಗಿದೆ. ಆದರೆ ಹಲವು ಸಂದರ್ಭಗಳಲ್ಲಿ ಇದರ ಕಡೆಗೆ ಗಮನವನ್ನೇ ಕೊಡದೆ, ಮತಾಚರಣೆಯ ಹೆಸರಿನಲ್ಲಿ ಸಂಕಟವೂ ಪರಹಿಂಸೆಗೆ ಅವಕಾಶವನ್ನು ಕಲ್ಪಿಸಿಕೊಂಡು, ಹಾಗೆ ಮಾಡಿದುದೇ ಯುಕ್ತವೆಂದು ಸಮರ್ಥಿಸುವ ಸನ್ನಿವೇಶಗಳು ನಮ್ಮ ಕಣ್ಣಿಗೆ ಬೀಳುತ್ತವೆ. ಇದು ತೀರ ಅನುಚಿತವೆಂದು ನಾವೆಲ್ಲರೂ ಒಪ್ಪಬೇಕಾಗಿದೆ. ನಾವೆಲ್ಲರೂ ನಮ್ಮ ನಮ್ಮ ಮತಗಳಲ್ಲಿ ಪೂರ್ಣಶ್ರದ್ಧೆಯನ್ನಿಟ್ಟು, ನಮ್ಮ ನಮ್ಮ ಮತಾಚರಣೆಗಳನ್ನು ನೆರವೇರಿಸಬೇಕಾದುದೇನೋ ಯುಕ್ತವೇ ಸರಿ. ಆದರೆ, ನಾವು ಆ ರೀತಿ ಮಾಡುವುದರ ಜೊತೆಗೆ ಇತರ ಮತಗಳವರಿಗೂ ನಮ್ಮಂತೆಯೇ ಮತ ಶ್ರದ್ಧೆಯುಂಟೆಂಬುದನ್ನೂ, ಅವರ ಮತ ತತ್ತ್ವಗಳೂ ಸತ್ಯವೆಂಬುದನ್ನೂ, ಅವರ ಮತ ಧರ್ಮಗಳನ್ನು ನಂಬಿ ತಲೆಮಾರು ತಲೆಮಾರುಗಳಲ್ಲಿಯೂ ಸಾವಿರಾರು ಮಂದಿ ಜನರು ಭಗವಂತನ ನೆಲೆಯನ್ನು ಅರಸಿ ಸದ್ಗತಿಯನ್ನು ಪಡೆದಿದ್ದಾರೆಂಬುದನ್ನೂ, ಅವಶ್ಯವಾಗಿ ಗಮನದಲ್ಲಿಟ್ಟುಕೊಂಡು ಅದಕ್ಕನುಸಾರವಾಗಿ ವರ್ತಿಸಬೇಕು. ದಾರಿಗಳು ಬೇರೆ ಬೇರೆಯಾಗಿದ್ದರೂ ಎಲ್ಲರೂ ಹೋಗಿ ಸೇರಬೇಕೆಂದು ಬಯಸುವ ಪರಮಪದವಾದ ಭಗವಂತನ ದಿವ್ಯಧಾಮವೇನೋ ಒಂದೇ ಒಂದು. ಭಗವಂತನು ಒಬ್ಬನಾದರೂ ಮತಗಳು ಬೇರೆ ಬೇರೆಯಾಗಿರುವುದು ಅದರಿಂದಲೇ.

ಆರಾಧನೆಯ ವಿಧಾನದಲ್ಲಿಯೂ, ಭಾವನೆಯ ಬಗೆಯಲ್ಲಿಯೂ ಬೇರೆ ಬೇರೆಯಾಗಿರುವ ನಾವುಗಳೆಲ್ಲರೂ ಈ ದಿನ ಇಲ್ಲಿ ಸೇರಿದ್ದೇವೆ. ಕೇವಲ ಅನ್ಯಮತ ಸಹಿಷ್ಣುತೆಯಿಂದ ಮಾತ್ರವೇ ನಾವು ತೃಪ್ತರಾಗದೆ, ಅನ್ಯಮತವೂ ಆದರಕ್ಕೆ ಪಾತ್ರವೆಂಬ ಖಚಿತವಾದ ಅಭಿಪ್ರಾಯದಿಂದ ಇಲ್ಲಿ ಸಭೆ ಸೇರಿದ್ದೇವೆ. ಇದೇ ರೀತಿಯಲ್ಲಿ ಭೇದಭಾವಗಳನ್ನೆಲ್ಲ ಮರೆತು ಅಚಲವಾದ ...

...

ಜನರಿಗೆ ಪಾರಮಾರ್ಥಿಕ ಬುದ್ಧಿಯುಂಟಾಗುವಂತೆಯೂ, ಅವರು ಉತ್ತಮವಾದ ಸಂಸ್ಕೃತಿಯನ್ನು ಪಡೆಯುವಂತೆಯೂ, ಅವರು ಸನ್ಮಾರ್ಗವನ್ನವಲಂಬಿಸಿ ಧನ್ಯರಾಗುವಂತೆಯೂ ಮಾಡುವುದಕ್ಕಾಗಿಯೂ ಸಹ, ಭಗವಂತನು ಅನುಗ್ರಹಿಸಿ ಅಳವಡಿಸಿದ ಒಂದು ಸಾಧನವೆನಿಸಿ ಈ ಪವಿತ್ರ ಮಂದಿರವು ಚಿರಕಾಲ ಬಾಳಲೆಂಬುದೇ ನನ್ನ ಪ್ರಾರ್ಥನೆಯಾಗಿದೆ.

ಮೈಸೂರಿನಲ್ಲಿ ನಡೆದ ಹತ್ತೊಂಬತ್ತನೆಯ ಪ್ರಾಂತಿಕ ಸಹಕಾರ ಸಮ್ಮೇಳನವನ್ನು ಪ್ರಾರಂಭಗೊಳಿಸುವುದರಲ್ಲಿ ದಿವಾನರವರು ಮಾಡಿದ ಭಾಷಣ.

1932 ನೆಯ ಇಸವಿ ಅಕ್ಟೋಬರ್ 5 ನೆಯ ತಾರೀಖು.

ಮಹನೀಯರೆ, ಈ ದಿನ ಇಲ್ಲಿಗೆ ಬಂದು ಈ ಸಮ್ಮೇಳನದಲ್ಲಿ ಭಾಗಿಯಾಗುವುದು ನನಗೆ ವಿಶೇಷ ಸಂತೋಷಕರವಾಗಿದೆ.

ಶ್ರೀಮಾನ್ ವೆಂಕಟಕೃಷ್ಣಯ್ಯನವರು ಈಗ ತಾನೇ ನಮಗೆ ತಿಳಿಸಿದ ಸಂಗತಿಗಳನ್ನು ಪರ್ಯಾಲೋಚಿಸಿ ನೋಡಿದರೆ, ಕಳೆದ 1 ವರ್ಷದ ಅವಧಿಯಲ್ಲಿ ಪರಸ್ಪರ ಸಹಾಯ ಸಂಘಗಳ ಕಾರ್ಯಕಲಾಪಗಳು ಎಷ್ಟುಮಟ್ಟಿಗೆ ನಡೆಯಬೇಕಾಗಿದ್ದಿತೋ ಅಷ್ಟುಮಟ್ಟಿಗೆ ನಡೆಯಲು ಕೊರತೆಯುಂಟಾಗಿರುವಂತೆ ತೋರುತ್ತದೆ. ಆಗಾಗ್ಗೆ ಒಂದೊಂದುವೇಳೆ ಈ ಬಗೆಯ ಮುಗ್ಗಟ್ಟಿನ ಸಮಯವು ಉಂಟಾಗುವುದೂ ಬಹುಶಃ ಒಂದು ವಿಧದಲ್ಲಿ ಅನುಕೂಲವೆಂದು ಹೇಳಿದರೂ ಹೇಳಬಹುದು. ಏಕೆಂದರೆ, ಆಗ ಎಷ್ಟರಮಟ್ಟಿಗೆ ಕೆಲಸ ನಡೆದಿದೆ ಎಂಬುದನ್ನೂ ಆಗಿನ ನ್ಯೂನತೆಗಳೇನೆಂಬುದನ್ನೂ ಪರಿಗಣಿಸಿ ಗೊತ್ತುಮಾಡಿ, ಆ ನ್ಯೂನತೆಗಳನ್ನು ಪರಿಹರಿಸುವ ಪ್ರಯತ್ನಮಾಡುವುದಕ್ಕೆ ಇದರಿಂದ ಅವಕಾಶವಾಗುತ್ತದೆ. ಆಯಾ ಕಾಲದಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳ ...

...

ಮಹನೀಯರೇ, ಇನ್ನು ನೀವುಗಳು ಈ ಸಮ್ಮೇಳನದ ಕಾರ್ಯಕಲಾಪಗಳನ್ನು ಪ್ರಾರಂಭಮಾಡಬಹುದೆಂದು ಸಂತೋಷದಿಂದ ಅನುಜ್ಞೆಯನ್ನು ಕೊಟ್ಟಿರುವೆನು. ಈ ಸಮ್ಮೇಳನವು ಸಫಲವಾಗಿ ನೆರವೇರಲೆಂದು ಹಾರೈಸುವೆನು.

ನಾರಿನವೇಳೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

24 M. C

೧೯೩೨ ನೆಯ ಇಸವಿ ಅಕ್ಟೋಬರ್ ತಾ॥ ೧೦ರಿಂದ ಅಕ್ಟೋಬರ್ ತಾ॥ ೧೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಆಶ್ವಯುಜ ಶುದ್ಧ ಏಕಾದಶಿಯಿಂದ ಆಶ್ವಯುಜ ಬಹುಳ ಬಿದಿಗೆ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕನ್ಯಾ ಮಾಸ
10	[1] ಸೋಮ	ಏಕಾ	19-45	ಧನಿ	24-55	18
11	ಮಂಗಳ	ದ್ವಾದ	19-27	ಶತ	26-20	19
12	ಬುಧ	ತ್ರಯೋ	20-20	ಪೂಭಾ	28-48	20
13	[2] ಗುರು	ಚತು	22-44	ಉಭಾ	32-52	21
14	ಶುಕ್ರ	ಪೌರ್ಣ	25-24	ರೇವ	37-47	22
15	ಶನಿ	ಪಾಡ್ಯ	30-30	ಅಶ್ವಿ	43-37	23
16	[3] ಭಾನು	ಬಿದಿ	35-41	ಭರ	50-3	24

(1) ಮಳೆನಕ್ಷತ್ರ-ಚಿತ್ತ ೧ ನೆಯ ಪಾದ. (2) ಶ್ರೀ ಚಾಮುಂಡೇಶ್ವರೀ ರಥ, ಮಳೆನಕ್ಷತ್ರ-ಚಿತ್ತ ೨ ನೆಯ ಪಾದ. (3) ಮಳೆನಕ್ಷತ್ರ-ಚಿತ್ತ ೩ ನೆಯ ಪಾದ.

ಮೈಸೂರು: ಶ್ರೀ. ... ಪ್ರಿಂಟಿಂಗ್ ... ಮುದ್ರಿತವಾಯಿತು.

REG. NO. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [... ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೨ ನೆಯ ಇಸವಿ ಅಕ್ಟೋಬರ್ ತಾರೀಖು ೧೭ ನೆಯ ಸೋಮವಾರ [ಸಂಚಿಕೆ ೪೨

Insurance in the Mysore State Life Insurance, Public Branch.

Life Insurance is admittedly the best form of investment and the greatest seafeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore. (Sd.) S. SHA MANNA,

[50—15] *Secretary, Insurance Committee*

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕ್ರಾಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಸ್ವಲ್ಪಕಾಲದಲ್ಲ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇರಿ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
[illegible]	೦—೪—೦	೦—೯—೦
[illegible]	೦—೫—೦	೦—೧೦—೦
[illegible]	೦—೪—೦	೦—೯—೦
[illegible]	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
[illegible]	೦—೮—೦	೦—೧೩—೦
ಸಟೀಕ [illegible]	೦—೮—೦	೦—೧೩—೦
ಸಟೀಕ [illegible]	೧—೦—೦	೧—೬—೦

೧೦೦೦ ರೂಪಾಯಿ ಇನಾಮು

ಸತ್ಯದ ಜಗತ್ತು] [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಸ್ಟಾರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮೀದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು, ... ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ... ಸ್ತ್ರೀರೋಗನಿವಾರಿಣಿ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ... ೨೧ ದಿವಸ ಸಾಲುವ ... ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ

ಎಲ್ಲ ಬಿಳ್ಳಿದ ಸೆರಗು, ಮುಟ್ಟುನಿಂತು ಆಗುವದು ... ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ... ೨೧ ದಿವಸ ಸಾಲುವ ಪೂರ್ಣಗುಡಿಪ್ಪೆ ... ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

...

ಪತ್ತಾ ಮಾಡುವುದು:—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ ಎಂ. ಎಸ್. ಎಂ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ...

... ಯೋಗ್ಯತಾಪತ್ರಗಳನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ... ರೋಗಗಳು, ... ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ... ವ್ಯಾಧಿಗಳನ್ನು ಸ್ವಸ್ಥಪಡಿಸಿ ... ಹೆಚ್ಚುಮಾಡುತ್ತದೆ. ... ನಶ್ಯದ ಪುಡಿಯಲ್ಲಿ ... ಅನೇಕ ... ಉಪಯೋಗಿಸುತ್ತಾರೆ. ...

ವಿಳಾಸ—ಗುರುಬಸವ ಅಂಡ್ ಕಂಪೆನಿ ...,

[...] ಪೋ. ..., ...

ಮೈಸೂರು ಸ್ಟಾರ್.

೧೯೩೨ನೇ ಇಸವಿ ಅಕ್ಟೋಬರ್ ತಾ|| ೧೭ನೆಯ ಸೋಮವಾರ.

MYSORE ASSEMBLY
THE DEWAN'S ADDRESS

The Dasara Session of the Representative Assembly commenced its sittings on Monday the 10th instant and concluded on the 16th instant after deliberating for six days. The Dewan—President in his address paid a fitting tribute to the memory of late Sahukar Dharmaprakash Rao Bahadur D. Banumiah, who was a member of the Assembly for a long time. It is given to few to earn a tribute of that kind. The entire House joined the Dewan Saheb in standing up in reverential silence for a while. The Dewan made a particular reference to Federation and the reports of the enquiries preliminary to the final discussions at the next R. T. Conference. He complained that the main fault lay with the terms of reference to these committees. The Federal Finance Committee were given wide powers to go into all questions of federal revenue and expenditure and adjustment of past obligations only with relation to the Provinces but not States, the result being that they have not taken into consideration the equities in favour of the States at all, and have taken the present contributions from States as one of the sources of Federal revenue. The Davidson Committee on the other hand were instructed that an ideal scheme of federal finance would be one under which all units including States would contribute on a uniform basis. The Dewan said that their recommendations would only reproduce the worst features of the 1919 reforms. As expected the Dewan Saheb has devoted a portion of the address to the consideration of the payment of subsidy. At the last budget session of the Assembly the Dewan expressed a hope that the Davidson Committee would do justice by Mysore. But he is evidently surprised that having said all things in favour of abolition the Committee have made halting recommendations such as a remission of whatever is in excess of 5 percent of the total revenues for the present and the balance in the course of twenty years and taking into consideration the immunities enjoyed by States by way of postal privileges etc., which should be recovered by with holding the remission proposed to that extent. The Dewan's statements are to our mind irrefutable and telling. He has referred to differential treatment in the case of these exactions. When the net amount of the tributes to rank for effective remission would only be Rs. 30 lakhs, the Dewan could not understand why the Federal Government should victimise a few States for the sake of this small and diminishing sum. He characterised the levy as a source of humuliation and added "Being such a levy and levied in so unfair a proportion, it is an onerous payment which no amount of camonflage can make less odious to those from whom it is exacted." As regards the postal privilege for offiicial correspondenee which the Committee had termed as one of the immunities the Dewan said that that privilege was only in consideration of giving up the local postal system known as anche carried on by Mysore 40 years ago and if they want to put a cash value on the privilege Mysore could well ask for the revival of its own anche system. The Dewan also regretted that the Committee had not made any specific recommendations about the Civil and Military Station although they have not overlooked the anomolous status of the tract as evidenced by its hybrid title. As regards the internal affairs, the Dewan referred to the redistribution of seats of the Assembly and the introduction of the system of proportional representation in electing members from the Assembly to the Council and from the cities of Bangalore and Mysore to the Assembly. **We will refer to other matters which came up for consideration before the Assembly in our next issue.**

ಮೈಸೂರು ಪ್ರಜಾಪ್ರತಿನಿಧಿ ಸಭೆ.

ಈ ಸಭೆಯ ದಸರಾಧಿವೇಶನವು ಕಳೆದ ಸೋಮವಾರ ದಿವಾನರ ಅಧ್ಯಕ್ಷತೆಯಲ್ಲಿ ಆರಂಭಗೊಂಡು ಶನಿವಾರ ಸಾಯಂಕಾಲ ಪರಿಸಮಾಪ್ತಿಗೊಂಡಿತು. ಬಹಳ ಕಾಲದಿಂದ ಈ ಸಭೆಯ ಮೆಂಬರಾಗಿದ್ದ ಕೈ|| ಧರ್ಮಪ್ರಕಾಶ ಡಿ. ಬನುಮಯ್ಯನವರ ಗುಣಪ್ರಶಂಸೆಯನ್ನು ದಿವಾನರು ತಮ್ಮ ಭಾಷಣಾರಂಭದಲ್ಲಿ ಮಾಡಿ ಅವರ ನಿಧನದಿಂದ ಸಭೆಯವರಿಗುಂಟಾದ ಅನುತಾಪವನ್ನು ಪ್ರದರ್ಶಿಸಿದರು. ಈ ವಿಧವಾದ ಪ್ರಶಂಸೆಯು ಎಲ್ಲೋ ಕೆಲವರಿಗೆ ಮಾತ್ರ ಲಭ್ಯವು. ಫೆಡರೇಷನ್ನು ಮತ್ತು ಮುಂದೆ ಜರುಗುವ ರೌಂಡುಟೇಬಲ್ ಸಭೆಯಲ್ಲಿ ಅಂತ್ಯವಾಗಿ ನಡೆಯಲಿಕ್ಕಿರುವ ಚರ್ಚೆಗಳಿಗೆ ಪೀಠಿಕೆಯಾಗಿರುವ ವಿಚಾರಣೆಯ ವರದಿಯನ್ನು ಕುರಿತು ಮುಖ್ಯವಾಗಿ ಪ್ರಸ್ತಾಪಿಸಿರುತ್ತಾರೆ. ಫೆಡರಲ್ ಉತ್ಪತ್ತಿ ಮತ್ತು ಖರ್ಚುಗಳಿಗೆ ಸಂಬಂಧಪಟ್ಟ ವಿಷಯಗಳನ್ನು ವಿಶದವಾಗಿ ವಿಚಾರಿಸಿ ಸಂಸ್ಥಾನಗಳು ಹೊರತಾಗಿ ಪ್ರಾಂತಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಸರಿಪಡಿಸಲು ಫೆಡರಲ್ ಫೈನಾನ್ಸ್ ಕಮಿಟಿಯವರಿಗೆ ವಿಶೇಷಾಧಿಕಾರ ಕೊಡಲ್ಪಟ್ಟಿದ್ದಿತು. ಇದರಿಂದ ಕಮಿಟಿಯವರು, ದೇಶೀಯ ಸಂಸ್ಥಾನಗಳು ಹಿಂದಿನಿಂದ ತೆರುತ್ತಿರುವ ಪೊಗದಿಯು ನ್ಯಾಯವೇ ಅಲ್ಲವೇ ಎಂಬುದನ್ನು ಪರ್ಯಾಲೋಚಿಸದೆಯೇ ಈಗ ದೇಶೀಯ ಸಂಸ್ಥಾನಗಳು ಕೊಡುತ್ತಿರುವ ಪೊಗದಿಯು ಫೆಡರಲುತ್ಪತ್ತಿಯ ಸಾಧನಗಳಲ್ಲೊಂದಾಗಿರುವುದೆಂದು ಅಭಿಪ್ರಾಯಪಟ್ಟಿರುತ್ತಾರೆ. ದೇಶೀಯ ಸಂಸ್ಥಾನಗಳ ಸಮೇತವಾಗಿ ಎಲ್ಲ ಯೂನಿಟ್ಟುಗಳೂ ಯಾವತಾರತಮ್ಯವೂ ಇಲ್ಲದೆ ಒಂದೇ ವಿಧವಾಗಿ ಪೊಗದಿಯನ್ನು ಸಲ್ಲಿಸುವ ಉಪಾಯವನ್ನು ಕಂಡುಹಿಡಿಯುವಂತೆ ಡೇವಿಡ್‌ಸನ್ ಕಮಿಟಿಯವರಿಗೆ ಸೂಚಿಸಲ್ಪಟ್ಟಿದ್ದಿತು. ಈ ಕಮಿಟಿಯವರು ಮಾಡಿರುವ ಶಿಫಾರಸುಗಳಿಂದ 1919 ರಲ್ಲಿ ನಡೆದ ಸುಧಾರಣೆಗಳ ದುಷ್ಟ ಪರಿಣಾಮವು ಮರಳಿಯುಂಟಾಗುವುದೆಂದು ದಿವಾನರು ತಿಳಿಸಿರುವರು. ಸಂಸ್ಥಾನವು ಸಲ್ಲಿಸುತ್ತಿರುವ ಪೊಗದಿಯ ವಿಚಾರವಾಗಿ ದಿವಾನರು ಪ್ರಸ್ತಾಪಿಸಿರುತ್ತಾರೆ. ಡೇವಿಡ್‌ಸನ್ ಕಮಿಟಿಯವರು ಪೊಗದಿಯ ವಿಚಾರದಲ್ಲಿ ನಮ್ಮ ಸಂಸ್ಥಾನಕ್ಕುಂಟಾಗಿರುವ ಅನ್ಯಾಯವನ್ನು ತಪ್ಪಿಸುವರೆಂದು ಕಳೆದ ಬಡ್ಜೆಟ್ ಅಧಿವೇಶನದಲ್ಲಿ ದಿವಾನರು ಹೇಳಿದ್ದರು. ಆದರೆ, ಪೊಗದಿಯನ್ನು ತಪ್ಪಿಸಬೇಕೆಂಬ ವಿಚಾರದಲ್ಲಿ ಬಹಳ ಅನುಕೂಲವಾಗಿ ಹೇಳಿದ್ದರೂ, ಒಟ್ಟು ಉತ್ಪತ್ತಿಯಲ್ಲಿ ಶೇಕಡ 5 ರಷ್ಟಕ್ಕಿಂತ ಹೆಚ್ಚಾಗಿರುವ ಪೊಗದಿಯನ್ನು ಸದ್ಯದಲ್ಲಿ ಬಿಟ್ಟುಕೊಟ್ಟು ಉಳಿದುದನ್ನು 20 ವರ್ಷಗಳಲ್ಲಿ ತಪ್ಪಿಸಬಿಡಬೇಕೆಂದೂ, ಸಂಸ್ಥಾನದ ಸ್ವಂತ ಅಂಚೆಯನ್ನು ಬಿಟ್ಟುಕೊಡುವಾಗ್ಗೆ ಸಂಸ್ಥಾನದ ಕಾಗದ ಪತ್ರಗಳನ್ನು ಉಚಿತವಾಗಿ ಸಾಗಿಸುತ್ತೇವೆಂಬ ಒಡಂಬಡಿಕೆಯು ನಡೆದಿರುವುದಾದರೂ, ಈ ಕಾಗದ ಪತ್ರಗಳ ಸಾಗುವಿಕೆಗಾಗಿ ಬರಬೇಕಾಗಿರುವ ಹಣಕ್ಕೆ ಪೊಗದಿಯನ್ನು ಬಿಟ್ಟುಕೊಡದೆ ಉತ್ತಾರಹಾಕಿಕೊಳ್ಳಬೇಕೆಂದೂ ಕಮಿಟಿಯವರು ಸೂಚಿಸಿರುವುದನ್ನು ನೋಡಿ ದಿವಾನರು ಆಶ್ಚರ್ಯಚಕಿತರಾಗಿರುತ್ತಾರೆ. ಈ ಪೊಗದಿಯ ವಿಚಾರವಾಗಿ ದಿವಾನರು ಹೇಳಿರುವ ಅಂಶಗಳು ತಿರಸ್ಕರಿಸಲ್ಪಡತಕ್ಕವುಗಳಲ್ಲವಾಗಿಯೂ, ಮನಸ್ಸಿಗೆ ಹಿಡಿಯತಕ್ಕವಾಗಿಯೂ ಇರುತ್ತವೆ. ಈ ಬಲಾತ್ಕಾರ ಪೊಗದಿಯ ವಿಚಾರದಲ್ಲೂ ತೋರಿಸುತ್ತಿರುವ ಪಕ್ಷಪಾತವನ್ನು ಕುರಿತು ದಿವಾನರು ಪ್ರಸ್ತಾಪಿಸಿರುವರು. ಬಿಟ್ಟುಕೊಡಲ್ಪಡಬೇಕಾಗಿರುವ ಪೊಗದಿಯು ಏನು ಮೊಬಲಗು 30 ಲಕ್ಷ ರೂ. ಮಾತ್ರವಾಗಿರುವುದಾದರೂ, ಸ್ವಲ್ಪವಾಗಿಯೂ, ಇಳಿತರವಾಗಿಯೂ ಇರುವ ಮೊಬಲಗಿಗಾಗಿ ಕೆಲ ಸಂಸ್ಥಾನಗಳನ್ನು ಫೆಡರಲ್ ಪ್ರಭುತ್ವದವರು ತೊಂದರೆಪಡಿಸುವುದರ ಕಾರಣ ಗೊತ್ತಾಗಲಿಲ್ಲವೆಂದು ದಿವಾನರು ಹೇಳಿರುವರಲ್ಲದೆ ಈ ಪೊಗದಿಯನ್ನು ವಿಧಿಸಿರುವುದು ಬಹಳ ಅವಮಾನಕರವೆಂದೂ, ಅನ್ಯಾಯವಾದ ಪರಿಮಾಣದಲ್ಲಿ ವಿಧಿಸಲ್ಪಟ್ಟಿರುವ ಮತ್ತು ವಿಧಿಸಲ್ಪಡುವ ಪೊಗದಿಯು, ಬಲವಂತದಿಂದ ವಸೂಲ್ಮಾಡಲ್ಪಡುವವರಿಗೆ ಮಹಾ ಅಸಹ್ಯಕರವಾಗಿರುವುದೆಂದೂ ಹೇಳಿರುವರು. ಸಂಸ್ಥಾನದ ಪ್ರಭುತ್ವದವರು ಕಾಗದ ಪತ್ರಗಳನ್ನು ಉಚಿತವಾಗಿ ತಮ್ಮಂಚೆಯ ಮೂಲಕ ಒಯ್ಯುತ್ತೇವೆಂದೊಪ್ಪಿಕೊಂಡಿರುವುದರ ಮೇಲೆ ಸಂಸ್ಥಾನದವರು ನಡಿಸುತ್ತಿದ್ದ ಸ್ವಂತ ಅಂಚೆಯು ಬ್ರಿಟಿಷ್ ಪ್ರಭುತ್ವದವರಿಗೆ ಈಗ್ಗೆ 40 ವರ್ಷಗಳ ಹಿಂದೆ ಬಿಟ್ಟುಕೊಡಲ್ಪಟ್ಟಿತು. ಅಂತಹುದರಲ್ಲಿ ಅವರು ತಮ್ಮಂಚೆಯ ಮೂಲಕ ಸಾಗಿಸುತ್ತಿರುವ ಸಂಸ್ಥಾನ ಪ್ರಭುತ್ವದ ಕಾಗದ ಪತ್ರಗಳಿಗೆ ಹಣವನ್ನು ಕೊಡಬೇಕೆಂದಲ್ಲಿ ನಾವು ಯಥಾಪ್ರಕಾರ ಸ್ವಂತ ಅಂಚೆಯ ಪದ್ಧತಿಯನ್ನೇರ್ಪಡಿಸಿಕೊಳ್ಳುವುದಾಗಿ ಹೇಳಬೇಕಾಗುತ್ತದೆಂದು ದಿವಾನರು ತಿಳಿಸಿರುತ್ತಾರೆ. ಬೆಂಗಳೂರು ದಂಡು ಪ್ರದೇಶವು ಬ್ರಿಟಿಷ ಪ್ರಭುತ್ವಾಡಳಿತಕ್ಕೊಳಪಟ್ಟಿರುವುದು ಅನ್ಯಾಯವೆಂದು ಡೇವಿಡ್‌ಸನ್ ಕಮಿಟಿಯವರು ಅಭಿಪ್ರಾಯಪಟ್ಟಿರುವರಾದರೂ ಅದನ್ನು ನಮ್ಮ ಪ್ರಭುತ್ವಾಡಳಿತಕ್ಕೆ ಬಿಟ್ಟುಕೊಡಬೇಕೆಂದು ಹೇಳದಿರುವುದಕ್ಕಾಗಿ ದಿವಾನರು ತಮ್ಮ ಖೇದವನ್ನು ಸೂಚಿಸಿರುತ್ತಾರೆ. ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳ ಪುನರ್ವಿಂಗಡಿಕೆಯನ್ನೂ, ಪ್ರಜಾಪ್ರತಿನಿಧಿ ಸಭೆಯಿಂದ ನ್ಯಾಯವಿಧಾಯಕ ಸಭೆಗೂ, ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಿಂದ ಪ್ರಜಾಪ್ರತಿನಿಧಿ ಸಭೆಗೂ ಹೊಂದಿಕೆಯಾಗಿ ಮೆಂಬರುಗಳನ್ನು ಚುನಾಯಿಸುವ ನೂತನಕ್ರಮವನ್ನೂ ಕುರಿತು ತಿಳಿಯ ಹೇಳಿದರು. ಸಭೆಯಲ್ಲಿ ಜರುಗಿದ ಇತರ ವಿಷಯಗಳನ್ನು ಕುರಿತು ಮುಂದೆ ಪ್ರಸ್ತಾಪಿಸುವೆವು.

ಅನುತಾಪ ಪ್ರದರ್ಶನ

ಬೊಂಬಾಯಿಯಾಧಿಪತ್ಯದ ವೀರಶೈವರಲ್ಲಿ ಅಗ್ರಗಣ್ಯರೂ ವೃದ್ಧಪಿತಾಮಹರೂ, ಧಾರವಾಡ ವೀರಶೈವ ವಿದ್ಯಾವರ್ಧಕ ಫಂಡು ಸಂಸ್ಥಾಪಕರೂ ಆಗಿದ್ದ ರಾವ್ ಬಹದ್ದೂರ್ ರುದ್ರಗೌಡ ಆರಟಾಳರವರು ಬೆಳಗಾಮಿನಲ್ಲಿರುವ ಸ್ವಗೃಹದಲ್ಲಿ ಕಳೆದ ಮಂಗಳವಾರ ಕೈಲಾಸವಾಸಿಗಳಾದರೆಂದು ತಿಳುಹಲು ಬಹಳ ಖೇದವಾಗುತ್ತದೆ. ಇವರಿಗೆ ಅವಸಾನ ಕಾಲದಲ್ಲಿ 83 ವರ್ಷ ವಯಸ್ಸಾಗಿದ್ದಿತು. ಇವರು ಸಾಮಾನ್ಯ ಗೌಡಕೆ ಮನೆತನದಲ್ಲಿ ಜನಿಸಿ ಆ ಕಾಲಕ್ಕೆ ತಕ್ಕಷ್ಟು ಆಂಗ್ಲ ವಿದ್ಯಾಭ್ಯಾಸವನ್ನು ಮಾಡಿ ಸರ್ಕಾರಿಯುದ್ಯೋಗಕ್ಕೆ ಸೇರಿ ತಮ್ಮ ಬುದ್ಧಿಶಕ್ತಿಯಿಂದ ಡೆಪ್ಯುಟಿ ಕಲೆಕ್ಟರುದ್ಯೋಗಕ್ಕೇರಿ ಬಹಳ ಸಾಮರ್ಥ್ಯದಿಂದಲೂ, ನಿಸ್ಪೃಹತೆಯಿಂದಲೂ, ಜಾಣತನದಿಂದಲೂ, ಉದ್ಯೋಗ ನಿರ್ವಾಹಮಾಡಿ ಪ್ರಭುಪ್ರಜಾಮನ್ನಣೆಗೆ ಪಾತ್ರರಾಗಿ ರಾವ್‌ಬಹದ್ದೂರ್ ಪ್ರಶಸ್ತಿಯನ್ನು ಪಡೆದು ಈಗ್ಗೆ 20 ವರ್ಷಗಳ ಹಿಂದೆ ಉದ್ಯೋಗದಿಂದ ನಿವೃತ್ತರಾಗಿ ಸುಖದಿಂದ ಕಾಲಯಾಪನೆ ಮಾಡುತ್ತಿದ್ದರು. ಇವರು ಸರ್ಕಾರಿಯುದ್ಯೋಗದಲ್ಲಿರುವಾಗ್ಗೆ ಸ್ವಾರ್ಥಪರರಾಗಿರದೆ ವೀರಶೈವ ತರುಣರು ಆಂಗ್ಲ ಭಾಷೆಯಲ್ಲಿ ಪ್ರೌಢವಿದ್ಯಾಭ್ಯಾಸಂಗವನ್ನು ಮಾಡಿ ಪ್ರಶಸ್ತಿಗಳನ್ನು ಪಡೆದು ಸರ್ಕಾರೀ ದೊಡ್ಡ ಉದ್ಯೋಗಗಳನ್ನು ಹೊಂದಲರ್ಹರಾಗುವಂತೆ ಮಾಡುವುದಕ್ಕಾಗಿ ಕೈ|| ಗಿಲಗಂಚಿ ಗುರುಸಿದ್ಧಪ್ಪನವರೊಡನೆ ಸೇರಿ ಲಕ್ಷಾಂತರ ರೂಪಾಯಿಗಳನ್ನು ಶೇಖರಮಾಡಿ ಧಾರವಾಡ ವಿದ್ಯಾವರ್ಧಕ ಫಂಡ್ ಎಂಬ ಧನರಾಶಿಯನ್ನು ಕೂಡಿಸಿ ಅದರ ಸ್ಥಾಪಕರೆನಿಸಿಕೊಂಡರು. ಕೈ|| ಲಿಂಗಪ್ಪ ಚಾಯಪ್ಪ ಸರ್ ದೇಶಾಯಿ ಶಿರಸಂಗಿಕರ ಇವರು ಅಪುತ್ರವಂತರಾಗಿದ್ದುದರಿಂದ ದತ್ತ ಪುತ್ರನನ್ನು ಮಾಡಿಕೊಳ್ಳಬೇಕೆಂದು ಹವಣಿಸುತ್ತಿದ್ದಾಗ್ಗೆ, ದತ್ತಪುತ್ರನು ಸನ್ಮಾರ್ಗನಲ್ಲದಿದ್ದರೆ ಮಹಾಸಂಕಟವು ಪ್ರಾಪ್ತವಾಗುವುದಲ್ಲದೆ ಆಸ್ತಿಯು ಹಾಳಾಗುವುದಾದುದರಿಂದ ವಿದ್ಯಾವಂತರಾದ ಅನೇಕ ಪುತ್ರರನ್ನು ಪಡೆದಲ್ಲಿ ಇಹಪರ ಸುಖಸಾಧನೆಯಾಗಿ ಶಾಶ್ವತ ಕೀರ್ತಿಯುಂಟಾಗುವುದೆಂದು ಬೋಧಿಸಿ, ಪ್ರತಿ ವರ್ಷದಲ್ಲೂ 20-30 ಸಾವಿರ ರೂಪಾಯಿಗಳಿಗೆ ಮೀರಿ ಉತ್ಪನ್ನವುಳ್ಳ ದೇಶಗತಿಯನ್ನು ಸಮಾಜದವರ ಪ್ರೌಢ ವಿದ್ಯಾಭಿವೃದ್ಧಿಗಾಗಿ ಧಾರೆಯನ್ನೆರಿಸಿ ಸಮಾಜದ ಚಿರಕೃತಜ್ಞತೆಗೆ ಪಾತ್ರರಾದರು ಮತ್ತು ಈ ಲೋಕೋತ್ತರವಾದ ದಾನದಿಂದ ಕೈ|| ದೇಶಾಯಿರು ಪ್ರಮಥ ಶ್ರೇಣಿಯಲ್ಲಿ ಸೇರಿ ಪೂಜಾರ್ಹರಾಗಲು ಕಾರಣಭೂತರಾದರು. ಆರಟಾಳರು ಸರ್ಕಾರಿ ಯುದ್ಯೋಗದಲ್ಲಿರುವಾಗ್ಗೆ ಲಂಚಕುಳಿಗಳಿಗೆ ಸಿಂಹ ಪ್ರಾಯರಾಗಿದ್ದರಲ್ಲದೆ ರೈತ ಜನೋಪಕಾರಿಯಾಗಿದ್ದರು. ಇವರು ಮಹಾರಸಿಕರೂ, ಚತುರರೂ, ಲೋಕಾನುಭವಸ್ಥರೂ ಆಗಿದ್ದು ಸ್ವಪರಮತೀಯರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದರು.

ಕೈ|| ಗಂಗಮ್ಮನವರು

ನೈಜಾಂ ಸೀಮೆಗೆ ಸೇರಿದ ಯಾದ್ಗಿರಿಯ ಕೈ|| ಶಂಕರಣ್ಣ ಸಜ್ಜನಶೆಟ್ಟರು ವೀರಶೈವರ ಸಂಸ್ಕೃತ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಒಂದು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ದ್ರವ್ಯವ್ಯಯಮಾಡಿ ಸಂಸ್ಕೃತ ಮಹಾಪಾಠಶಾಲೆಯನ್ನು ಸ್ಥಾಪಿಸಿ ಬಡವಿದ್ಯಾರ್ಥಿಗಳ ಅಶನವಸನಗಳಿಗೂ ಪಂಡಿತರುಗಳ ವೇತನಗಳಿಗೂ ಶಾಶ್ವತವಾದೇರ್ಪಾಟನ್ನು ಮಾಡಿ ಆಚಂದ್ರಾರ್ಕ ಕೀರ್ತಿಯನ್ನು ಪಡೆದು ಶಿವಸಾಯುಜ್ಯವನ್ನು ಹೊಂದಿದರಷ್ಟೆ. ಇವರ ಧರ್ಮಪತ್ನಿಯಾದ ಶ್ರೀಮತಿ ಗಂಗಮ್ಮನವರು ತಮ್ಮ ಪತಿಯವರು ಸ್ಥಾಪಿಸಿದ ಮಹಾಪಾಠಶಾಲೆಯ ಪೋಷಣೆಗೆ 50000 ರೂಪಾಯಿಗಳನ್ನು ದಾನಮಾಡಿ ಸ್ವತಃ ನಡೆಸಿಕೊಂಡು ಬರುತ್ತ ವೀರಶೈವ ಸ್ತ್ರೀ ಪ್ರಪಂಚಕ್ಕೇ ಮಾರ್ಗದರ್ಶಕಿಯಾಗಿದ್ದರು. ಇಂತಹ ಅಸದೃಶ ವಿದ್ಯಾಭಿಮಾನಿಯಾದ ಗಂಗಮ್ಮನವರು ಮಹಾಪಾಠಶಾಲೆಯ ವ್ಯವಸ್ಥಾಪಕ ಸಂಘದವರ ಅನೈಕ್ಯದಿಂದುಂಟಾದ ಮನೋವ್ಯಾಕುಲದಿಂದಲೋ ಮತ್ತಾವ ಕಾರಣದಿಂದಲೋ ಕಳೆದ ತಾ|| 5 ರಲ್ಲಿ ಕೈಲಾಸವಾಸಿಗಳಾದರೆಂದು ತಿಳುಹಲು ಬಹಳ ಖೇದವಾಗುತ್ತದೆ. ವೀರಶೈವ ಸಮಾಜಕ್ಕೆ ಆದರ್ಶಪ್ರಾಯರಾಗಿದ್ದ ಆರಟಾಳರ ಮತ್ತು ಯಾದ್ಗಿರಿ ಗಂಗಮ್ಮನವರ ನಿಧನದಿಂದ ಸಮಾಜಕ್ಕೆ ವಿಶೇಷ ನಷ್ಟವಾಯಿತೆನ್ನುವುದರಲ್ಲಿ ಸಂದೇಹವಿಲ್ಲ. ಈ ಉಭಯರ ಆತ್ಮಕ್ಕೆ ನಿರಂತರ ಶಾಂತಿಯನ್ನೂ ಅವರ ಬಂಧುವರ್ಗಕ್ಕೆ ದುಃಖ ಸಮಾಧಾನವನ್ನೂ ಕೋರುತ್ತೇವೆ.

ವಿಜಯದಶಮಿಯಲ್ಲಾದ ಗಲಭೆ

ವಿಜಯದಶಮಿ ರಾತ್ರಿ ಶ್ರೀಮನ್ಮಹಾರಾಜರವರ ಅಂಬಾರಿಯುತ್ಸವವು ಕೋಟೆಯನ್ನು ಪ್ರವೇಶಿಸುವ ವೇಳೆಯಲ್ಲಿ ನಡೆದ ಗಲಭೆಯಿಂದ ಇದಕ್ಕೆ ಕಾರಣಭೂತನಾದ ಒಬ್ಬ ಹುಡುಗನ ವಿನಾ ಮತ್ತಾರಿಗೂ ಅಪಾಯವಾಗಲಿಲ್ಲವೆಂದು ಕಳೆದ ವಾರ ತಿಳುಹಲ್ಪಟ್ಟಿದ್ದಿತಷ್ಟೆ. ಈಚೆಗೆ ವಿಚಾರಿಸಿದುದರಲ್ಲಿ ಲಾಟಿ ಪ್ರಯೋಗದಿಂದಲೂ ತಿಲಾ ವರ್ಷದಿಂದಲೂ ಅನೇಕರಿಗೆ **ಪೂರಾ ಪೆಟ್ಟುಗಳು ಬಿದ್ದು ರಕ್ತ ಸುರಿದುದಾಗಿಯೂ ಮಹಾಸ್ವಾಮಿಯವರು ಅರಮನೆಯನ್ನು ಸುರಕ್ಷಿತವಾಗಿ ಸೇರಿ ಜನರ ಗುಂಪು ಚದುರಿಹೋಗಿ ಶಾಂತವಾದ ಮೇಲೂ ಅಲ್ಲಲ್ಲಿ ಕುಳಿತಿದ್ದ ಮಲಗಿದ್ದ ಜನರನ್ನು ಪೋಲೀಸಿನವರು ಲಾಟಿ ಪ್ರಯೋಗದಿಂದ ಓಡಾಡಿಸಿದರೆಂದೂ ತಿಳಿಯಬಂದಿದೆ. ನಮ್ಮ ಸಂಸ್ಥಾನದ ಅದರಲ್ಲೂ ರಾಜಧಾನಿಯ ಪ್ರಜೆಗಳು ಅದ್ವಿತೀಯ ಮತ್ತು ಅಕುಟಿಲ ರಾಜಭಕ್ತಿ ಪರಾಯಣರೆಂದೂ, ತಮ್ಮ ಪ್ರಭುಗಳ ಸಂತೋಷಾರ್ಥವಾಗಿ ಪ್ರಾಣಾರ್ಪಣೆಯನ್ನು ಮಾಡಲು ಸಿದ್ಧರಾಗಿರುವರೆಂದೂ ಪ್ರಸಿದ್ಧವಾಗಿರುವುದಲ್ಲದೆ ಶ್ರೀಮನ್ಮಹಾರಾಜರವರಿಗೂ ವೇದ್ಯವಾಗಿದೆ. ಇಂತಹವರು ಪ್ರಜೆಗಳ ಸುಖದುಃಖಗಳೇ ತಮ್ಮ ಸುಖದುಃಖಗಳೆಂದು ಭಾವಿಸಿ ಅವರ ಶ್ರೇಯೋಭಿವೃದ್ಧಿ ಕಾರ್ಯತತ್ಪರರಾಗಿರುವ ರಾಜರ್ಷಿಗಳ ವಿಜಯೋತ್ಸವವನ್ನು ನೋಡಿ ಆನಂದವನ್ನು ಪಡುವ ಸಮಯದಲ್ಲಿ ಕೆಲವರು ಭಯಭ್ರಾಂತರಾಗಿ ಪೋಲೀಸರ ಮೇಲೆ ತಿರುಗಿ ಬೀಳಲು ಅನಿರೀಕ್ಷಿತವಾದ ಸನ್ನಿವೇಶವು ಪ್ರಾಪ್ತವಾಗಿರಬೇಕೆಂದು ತೋರುತ್ತದೆ. ಆ ದಿವಸ ನಡೆದ ಗಲಭೆಯ ಕಾರಣವನ್ನು ಕಂಡುಹಿಡಿಯಲು ಒಂದು ಕಮಿಟಿಯೇರ್ಪಡಿಸಲ್ಪಟ್ಟಿರುವುದಾಗಿಯೂ, ಪೋಲೀಸಿನವರು ಕೆಲ ಜನರಮೇಲೆ ಸಿಟಿ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ವಿವಾದವನ್ನು ಹೂಡಿರುವುದಾಗಿಯೂ ಕೇಳುತ್ತೇವೆ. ಆ ದಿವಸದ ಉತ್ಸವದಲ್ಲಿ ಪೋಲೀಸು ಇನ್‌ಸ್ಪೆಕ್ಟರ್ ಜನರಲ್‌ರವರು ಇದ್ದಿದ್ದರೆ ಗಲಭೆಗೆ ಅವಕಾಶವಾಗುತ್ತಿರಲಿಲ್ಲವೆಂದು ಜನರು ಆಡಿಕೊಳ್ಳುತ್ತಾರೆ. ವಿಚಾರಣೆಯ ಕಮಿಟಿಯವರು ಗಲಭೆಯ ಕಾರಣವನ್ನು ಕಂಡುಹಿಡಿದು ತಪ್ಪಿತಸ್ಥರಾರೆಂಬುದನ್ನು ನಿರ್ದಾಕ್ಷಿಣ್ಯದಿಂದ ನಿರ್ಧರಿಸಿ ತಿಳಿಸುವರೆಂದು ನಂಬಿ ನಿರೀಕ್ಷಿಸುತ್ತೇವೆ.**

ಮಹಾತ್ಮರಾರೋಗ್ಯಾಭಿವೃದ್ಧಿ

ಕಳೆದ ಬುಧವಾರ ದೇವದಾಸ ಗಾಂಧಿಯವರು ಮಹಾತ್ಮರ ದರ್ಶನವನ್ನು ತೆಗೆದುಕೊಂಡು ಬಂದು "ಮಹಾತ್ಮರಿಗೆ ಯಥಾಪ್ರಕಾರ ಆರೋಗ್ಯಸ್ಥಿತಿಯುಂಟಾಗಿದೆ. ಇವರ ದೇಹ ತೂಕವು 100 ಪೌಂಡಿರುವುದು. ಮಹಾತ್ಮರು ಉಲ್ಲಾಸವಾಗಿರುತ್ತಾರೆ" ಎಂದು ತಿಳಿಸಿರುತ್ತಾರೆ.

ಹಿಂದು ಮಹಮ್ಮದೀಯ ವಿವಾಹ

ಆಂಧ್ರ ವಿಶ್ವವಿದ್ಯಾಲಯದ ಉದ್ಯೋಗದಲ್ಲಿರುವ ಹುಮಾಯೂನ್ ಕಬೀರ್, ಬಿ.ಎ., (ಆಕ್ಸ್‌ಫರ್ಡ್) ಇವರು ಕುಮಾರಿ ಶಾಂತಿದಾಸ್, ಎಂ.ಎ., ಇವರನ್ನು ಬ್ರಹ್ಮೋಧರ್ಮದ ಪ್ರಕಾರ ವಿವಾಹಮಾಡಿಕೊಂಡರು. ಕುಮಾರಿ ಶಾಂತಿದಾಸ್‌ರವರು ಕಲಕತ್ತಾ ರಾಜಕೀಯರಂಗದಲ್ಲಿ ಹೆಸರ್ಪಡೆದ ಸ್ತ್ರೀ 1930 ರಲ್ಲಿ ಬಂಗಾಳಾ ಸ್ತ್ರೀ ಸಭೆಗೆ ಕಾರ್ಯದರ್ಶಿನಿಯಾಗಿದ್ದರು. ಡಾ|| ರವೀಂದ್ರ ಟಾಗೂರ್‌ರವರು ದಂಪತಿಗಳನ್ನು ಆಶೀರ್ವದಿಸಿದರು.

ಎಸ್. ಬೋಸ್‌ರವರು ಬಾವಲಿಗೊಯ್ಯಲ್ಪಟ್ಟರು

ಸುಭಾಷ ಚಂದ್ರಬೋಸ್‌ರವರು ಮದ್ರಾಸು ಕಾರಾಗೃಹದಿಂದ ಕಳೆದ ತಾ|| 8 ನೆಯ ಶನಿವಾರ ಸಂಯುಕ್ತರಾಷ್ಟ್ರದಲ್ಲಿರುವ ಬಾವಲೀ ಸ್ಯಾನಿಟೋರಿಯಂ ಎಂಬ ಆರೋಗ್ಯ ವಾಸಸ್ಥಳಕ್ಕೆ ಕರೆದೊಯ್ಯಲ್ಪಟ್ಟರು. ಬೋಸ್‌ರವರು ಮದ್ರಾಸಿನಲ್ಲಿ ರೈಲುಬಂಡಿಯನ್ನು ಹತ್ತುವ ಸಮಯದಲ್ಲಿ ನೋಡಿ ಮಾತನಾಡಿಸಿದಾಗ್ಗೆ "ನನಗಿನ್ನೂ ನಿಶ್ಶಕ್ತಿಯಾಗಿದೆ. ಸಾಯಂಕಾಲದಲ್ಲಿ ಜ್ವರ ಬರುತ್ತಲೇ ಇರುವುದು" ಎಂದು ಬೋಸ್‌ರವರು ಹೇಳಿದುದಾಗಿ ಶ್ರೀಪಾದಶಂಕರರವರು ಬರೆದಿರುತ್ತಾರೆ.

ಅಂಗಡಿ ಮುಚ್ಚುವುದು ಅಪರಾಧವಲ್ಲ

ತನ್ನ ಅಂಗಡಿಯನ್ನು ಮುಚ್ಚಿ ಅಕ್ರಮಸಂಘದ ಕಾರ್ಯಕ್ರಮಕ್ಕೆ ಸಹಾಯಮಾಡಿದರೆಂದು ಬೆಳಗಾಂ ಡಿ|| ಹುಕ್ಕೇರಿ ಗ್ರಾಮದ ಶಿವಲಿಂಗಪ್ಪನವರಿಗೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು 6 ತಿಂಗಳ ಕಠಿಣ ಕಾರಾಗೃಹವಾಸಶಿಕ್ಷೆ ವಿಧಿಸಿದ್ದರು. ಇದರ ಮೇಲೆ ಅಪರಾಧಿಯು ಬೊಂಬಾಯಿ ಹೈಕೋರ್ಟಿಗೆ ಅಪೀಲನ್ನು ಮಾಡಿಕೊಂಡಿರಲಾಗಿ ಅಂಗಡಿಯನ್ನು ಮುಚ್ಚಿದ ಮಾತ್ರಕ್ಕೆ ಅಕ್ರಮ ಸಂಘಕ್ಕೆ ಸಹಾಯಮಾಡಿದಂತಾಗುವುದಿಲ್ಲವೆಂದು ನ್ಯಾಯಮೂರ್ತಿಗಳು ತೀರ್ಮಾನಿಸಿ ಶಿಕ್ಷೆಯನ್ನು ತಪ್ಪಿಸಿಬಿಟ್ಟರು.

ದೊರತನದವರು ಮಹಾತ್ಮರೊಡನೆ ರಾಜಿ ಮಾಡಿಕೊಳ್ಳಬೇಕು

"ಗಾಂಧಿಜೀಯವರೊಡನೆ ರಾಜಿ ಮಾಡಿಕೊಳ್ಳಲು ದೊರತನದವರು ಪುನಃ ಪ್ರಯತ್ನಿಸುವುದು ಅತ್ಯಾವಶ್ಯಕವು. ಬ್ರಿಟಿಷರ ಪರಿಪಾಲನ ವಿಧಾನದಿಂದ ಭಾರತೀಯರಿಗುಂಟಾಗಿರುವ ವಿರುದ್ಧ ಭಾವವು ಬಹಳ ಉಗ್ರಸ್ವರೂಪವನ್ನು ತಾಳಿರುತ್ತದೆ. ದೊರತನದವರು ಕಠಿಣವಿಧಾನದಮೇಲೆ ಆಧಾರಪಟ್ಟುಕೊಂಡಿದ್ದರೆ ಯಾವ ನಿಮಿಷದಲ್ಲಿ ಯಾವ ಮಹೋಪದ್ರವವುಂಟಾಗದೆ ಇರುವುದಿಲ್ಲ. ಆಗ ಪರಿಪಾಲನವರ್ಗವೂ ಆರ್ಥಿಕವರ್ಗವೂ ಸಂಪೂರ್ಣವಾಗಿ ವಿಚ್ಛಿನ್ನವಾಗುವುವು" ಎಂದು ಮಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಬರೆದಿರುತ್ತದೆ.

ಮಹಾತ್ಮರನ್ನು ಕೂಡಲೆ ಬಿಡಬೇಕು

"ಅಲ್ಪ ಸಂಖ್ಯಾತರ ಸಮಸ್ಯೆಯನ್ನು ಪರಿಷ್ಕರಿಸುವ ವಿಚಾರದಲ್ಲಿ ಹಿಂದು ಮಹಮ್ಮದೀಯ ನಾಯಕರುಗಳೊಳಗೆ ರಾಯಬಾರವು ನಡೆಯುತ್ತಿರುವುದೆಂದೂ ಕೇಳಿ ನಮಗೆ ಬಹಳ ಸಂತೋಷವಾಗಿರುತ್ತದೆ. ಭಾರತ ದೇಶದಲ್ಲಿ ಶಾಂತಿಯುತವಾದ ರಾಜಕೀಯಪರಿಸ್ಥಿತಿಯೇರ್ಪಡುವುದೆಂದು ಆಶಿಸುತ್ತೇವೆ. ವಾಣಿಜ್ಯಸ್ಥಿತಿಯು ನೆಟ್ಟಗಾಗಲು ಇದು ಅತ್ಯಾವಶ್ಯಕವು. ಎಲ್ಲ ಪಕ್ಷದವರನ್ನು ಒಟ್ಟುಗೂಡಿಸಿ ಒಪ್ಪಂದವನ್ನು ಮಾಡಲು ಮಹಾತ್ಮರ ವಿನಾ ಮತ್ತಾರಿಗೂ ಸಾಧ್ಯವಿಲ್ಲವಾದುದರಿಂದ ಮಹಾತ್ಮರನ್ನು ಕೂಡಲೆ ಬಂಧಮುಕ್ತರನ್ನಾಗಿ ಮಾಡಬೇಕಾಗಿ ಪ್ರಾರ್ಥಿಸುತ್ತೇವೆ" ಎಂದು ಬೊಂಬಾಯಿನ ಹಿಂದು ವಾಣಿಜ್ಯ ಸಂಘದವರು ವೈಸ್ರಾಯರಿಗೆ ತಂತಿಯನ್ನು ಕೊಟ್ಟಿರುತ್ತಾರೆ.

ಪ್ರತ್ಯೇಕ ನಿಯೋಜಕ ವರ್ಗವನ್ನು ಕ್ರೈಸ್ತರೊಪ್ಪರು

ಕ್ರೈಸ್ತಮತದ ಮಿಷನರಿಗಳೂ, ಉಪಾಧ್ಯಾಯರುಗಳೂ, ಮತಗುರುಗಳೂ ಪತ್ರಿಕಾಸಂಪಾದಕರುಗಳೂ ಪ್ರತ್ಯೇಕ ನಿಯೋಜಕ ವರ್ಗವು ಕ್ರೈಸ್ತರಿಗೆ ಸ್ವಾರ್ಥಪರತ್ವವನ್ನು ವ್ಯಕ್ತಪಡಿಸುವುದಲ್ಲದೆ ಸೇವಾ ಪರತ್ವವನ್ನು ವೃದ್ಧಿಗೊಳಿಸುವುದಿಲ್ಲವೆಂದೂ, ಇದರಿಂದ ದೇಶಸೇವೆ ಮಾಡಲು ಕ್ರೈಸ್ತರಿಗೆ ಅವಕಾಶ ತಪ್ಪುವುದೆಂದೂ, ಕ್ರೈಸ್ತರೊಳಗೆ ಅನೇಕ ತೊಂದರೆಗಳೂ ಅಂತಃಕಲಹಗಳೂ ಉಂಟಾಗುವುವೆಂದೂ, ಅದುಕಾರಣ ಪ್ರತ್ಯೇಕ ನಿಯೋಜಕ ವರ್ಗದೇರ್ಪಾಟು ತಪ್ಪಿ ಸಂಯುಕ್ತ ನಿಯೋಜಕ ವರ್ಗದೇರ್ಪಾಟಾಗುವುದು ಅತ್ಯಾವಶ್ಯಕವೂ ತಮ್ಮೆಲ್ಲರಿಗೂ ಸಮ್ಮತವೂ ಎಂದೂ ತಂತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವರು.

ಡಾ|| ಪಾಟರ್‌ರವರ ಅಭಿಪ್ರಾಯ

ಡಾ|| ಫಾರೆಸ್ಟು ಪಾಟರ್‌ರವರು ನಾಟಿಂಗ್ಯಾಮಿನಲ್ಲಿ ಪೂನಾ ಒಡಂಬಡಿಕೆಯನ್ನು ಕುರಿತು ಉಪನ್ಯಾಸಮಾಡುವಾಗ್ಗೆ "30 ವರ್ಷಗಳಲ್ಲಿ ಅಸ್ಪೃಶ್ಯರಿಗೆ ದೊರತನದವರು ಮಾಡಲಾರದೆ ಹೋದ ಮಹೋಪಕಾರವನ್ನು ಕೆಲ ವಾರಗಳಲ್ಲಿಯೇ ಮಹಾತ್ಮ ಗಾಂಧಿಯವರು ಮಾಡಿರುತ್ತಾರೆ. ಭಾರತ ದೇಶಕ್ಕೆ ತಾವು ಟ್ರಸ್ಟಿಗಳೆಂದು ಆಂಗ್ಲೇಯರಲ್ಲಿ ಕೆಲರು ತಿಳಿದುಕೊಂಡಿರುತ್ತಾರೆ. ಆದರೆ ಟ್ರಸ್ಟಿಗಳು ಕೂಡ ಕೆಲ ಕಾಲಾನಂತರ ತಮ್ಮಧಿಕಾರವನ್ನು ಸ್ವಂತಗಾರರಿಗೆ ಬಿಟ್ಟುಕೊಡಬೇಕಾಗುವುದು. ಭಾರತ ಪ್ರಜೆಗಳು ಇನ್ನೂ ಸ್ವಪರಿಪಾಲನಕ್ಕೆ ಅರ್ಹರಲ್ಲವೆಂದು ತಿಳಿದಿರತಕ್ಕವರು ಈಗ ಭಾರತೀಯರಲ್ಲಿ ಹುಟ್ಟಿರುವ ನೂತನ ಭಾವವನ್ನು ಶ್ರದ್ಧೆಯಿಂದ ಗಮನಿಸಬೇಕು. ಪರಾಧೀನತೆಯನ್ನು ತೊಲಗಿಸಲಿಕ್ಕೆ ಗಟ್ಟಿ ಪ್ರಯತ್ನವನ್ನು ಮಾಡುತ್ತಿದ್ದಾರೆ" ಎಂದು ಹೇಳಿದರು.

ಕೇಂದ್ರದಲ್ಲಿ ಎಷ್ಟುಮಾತ್ರಕ್ಕೂ ಬಾಧ್ಯತೆಯಿರಕೂಡದು

ಸಾಂಘಿಕ ಸಮಸ್ಯಾ ಪರಿಷ್ಕಾರದಲ್ಲಿ ಮುಖ್ಯ ಮಂತ್ರಿ ಮೆಕ್ಡೊನಾಲ್ಡ್‌ರವರು ಸೆಂಟ್ರಲ್ ಅಂದರೆ ಕೇಂದ್ರದಲ್ಲಿ ಬಾಧ್ಯತೆಯಿರಬೇಕೆಂದು ಬರೆಯದಿರುವುದಕ್ಕಾಗಿ ಅವರನ್ನು ನಾನು ಬಹಳವಾಗಿ ವಂದಿಸುತ್ತೇನೆ ಪ್ರಥಮತಃ ರಾಷ್ಟ್ರೀಯ ಸ್ವಪರಿಪಾಲನವನ್ನು ಮಾತ್ರ ಏರ್ಪಡಿಸಬೇಕು. ಕೇಂದ್ರದಲ್ಲಿ ಅಧಿಕಾರವನ್ನು ಕೊಟ್ಟಿದ್ದರೆ ರಕ್ಷಣೆಯನ್ನು ಸರಿಯಾಗಿ ಆಚರಣೆಗೆ ತರಲು ಅವಕಾಶವಾಗುವುದು. ರಾಷ್ಟ್ರೀಯ ಸ್ವಪರಿಪಾಲನದಲ್ಲೂ ಬಹಳ ತೊಂದರೆಗಳಿರುವುದರಿಂದ ಭಾರತ ದೊರೆತನವು ಬ್ರಿಟಿಷ್ ದೊರೆತನಕ್ಕೆ ಅಧೀನವಾಗಿರುವವರೆಗೂ ರಾಷ್ಟ್ರೀಯ ಸ್ವಪರಿಪಾಲನದಿಂದ ಯಾವ ಮಹಾನರ್ಥವೂ ಉಂಟಾಗುವುದಿಲ್ಲವೆಂದು ಲಾರ್ಡ್ ಸಾಲಸ್‌ಬರಿಯವರು ಟೈಂಸ್ ಪತ್ರಿಕೆಯಲ್ಲಿ ಬರೆದಿರುತ್ತಾರೆ.

ವೈದ್ಯಶಾಲೆಗಾಗಿಯೂ ಲಾಟರಿ ಹಾಕಕೂಡದು

ಮಾಂಟಿಕಾರ್ಲೋಯಲ್ಲಿ ಇಂಗ್ಲಿಷು ಆಸ್ಪತ್ರೆಗಳ ಸಹಾಯಾರ್ಥವಾಗಿ ಲಾಟರಿಯೇರ್ಪಡಿಸಲ್ಪಟ್ಟಿರುವುದು. ರೋಗಿಗಳಿಗೂ, ಬಾಧಿತರುಗಳಿಗೂ ಸಹಾಯಮಾಡುವುದು ಸತ್ಕಾರ್ಯವೇ ಆದರೂ ಇಂತಹ ಸತ್ಕಾರ್ಯಕ್ಕಾಗಿಯೂ ಲಾಟರಿಯನ್ನೇರ್ಪಡಿಸಲಾಗದು. ಇದರಿಂದ ಜೂಜನ್ನು ಪ್ರೋತ್ಸಾಹಿಸಿದಂತಾಗುವುದು ಈ ದೇಶದಲ್ಲಿ ಜೂಜಿನಿಂದ ಎಷ್ಟೋ ಕುಟುಂಬಗಳು ಹಾಳಾಗುತ್ತಿವೆ. ಈರೀತಿಯಾಗಿ ಲಾಟರಿಯನ್ನೇರ್ಪಡಿಸಿದರೆ ಬುದ್ಧಿಪೂರ್ವಕವಾಗಿ ಧರ್ಮಕಾರ್ಯಕ್ಕೆ ಸಹಾಯ ಮಾಡತಕ್ಕವರು ಸಹ ಇನ್ನುಮೇಲೆ ಹಾಗೆ ಸಹಾಯ ಮಾಡುವುದಿಲ್ಲ. ಆದುದರಿಂದ ದೊಡ್ಡ ವೈದ್ಯಶಾಲೆಯವರು ಐಶ್ವರ್ಯವಂತರ ಧನಸಹಾಯದ ಮೇಲೆ ಆಧಾರಪಟ್ಟುಕೊಂಡಿರಬೇಕಲ್ಲದೆ ಲಾಟರಿಯ ಮೇಲೆ ಖಂಡಿತವಾಗಿಯೂ ಆಧಾರಪಟ್ಟುಕೊಂಡಿರಕೂಡದು" ಎಂದು ಕಾಂಟರ್‌ಬರೀ ಆರ್ಕಬಿಷಪ್‌ರವರು ಕಾಂಟರ್‌ಬರಿಯಲ್ಲಿ ಜರುಗಿದ ಸಭೆಯಲ್ಲಿ ಹೇಳಿದರು.

ಅಮೇರಿಕೆಯಲ್ಲಿ ರೀಡಿಂಗ್‌ರವರ ಪ್ರಸಾರ

ಭಾರತ ದೇಶದ ವೈಸ್ರಾಯರಾಗಿದ್ದ ಲಾರ್ಡ್ ಇರ್ವಿನ್‌ರವರು ಕೆಲ ತಿಂಗಳ ಹಿಂದೆ ಅಮೇರಿಕೆಗೆ ಹೋಗಿದ್ದು ಇಂಡ್ಯಾದಲ್ಲಿ ಬ್ರಿಟಿಷರ ಪರಿಪಾಲನವನ್ನು ಪ್ರಶಂಸಿಸಿ ಉಪನ್ಯಾಸಗಳನ್ನು ಮಾಡಿದ್ದರು. ಇರ್ವಿನ್‌ರವರ ಹಿಂದೆ ವೈಸ್ರಾಯರಾಗಿದ್ದ ಲಾರ್ಡ್ ರೀಡಿಂಗ್‌ರವರು ಈಗ ಅಮೇರಿಕೆಗೆ ಹೋಗಿ ಬ್ರಿಟಿಷರ ಇಂಡ್ಯಾ ಪರಿಪಾಲನವನ್ನು ಕುರಿತು ಉಪನ್ಯಾಸಮಾಡುತ್ತಿರುವರು. ನ್ಯೂಯಾರ್ಕಿನಲ್ಲಿ ಆಂಗ್ಲಭಾಷೆಯನ್ನು ಆಡುವ ಸಂಘದವರು ರೀಡಿಂಗರವರ ಗೌರವಾರ್ಥವಾಗಿ ಒಂದು ಔತಣವನ್ನು ಮಾಡಿಸಿದರು. ಆ ಸಮಯದಲ್ಲಿ ರೀಡಿಂಗರವರು ಮಾತನಾಡುವಾಗ್ಗೆ "ಇಂಗ್ಲೆಂಡು ಅಮೇರಿಕೆ ದೇಶಗಳ ಸಂಬಂಧವನ್ನು ಬಹಳವಾಗಿ ಪ್ರಶಂಸಿಸಿ ಚರಿತ್ರೆಯಲ್ಲಿ ಎರಡು ದೇಶಗಳ ಆಶಯವೂ ಒಂದೇ ಎಂದು ಹೇಳಿದರು. ಇಂಡ್ಯಾದಲ್ಲಿ ಬ್ರಿಟಿಷಿನವರು ಅವಲಂಬಿಸಿರುವ ಪದ್ಧತಿಯನ್ನು ಅಮೇರಿಕೆಯವರು ಬಲಪಡಿಸಬೇಕೆಂದು ಕೋರುವುದಕ್ಕೆ ಪೀಠಿಕೆಯಾಗಿ ಬ್ರಿಟಿಷ್ ಅಮೇರಿಕೆ ದೇಶಗಳ ಸಂಬಂಧವನ್ನು ಕೊಂಡಾಡಿದರು. **ಭಾರತದೇಶದಲ್ಲಿ ಬ್ರಿಟಿಷರ ಪರಿಪಾಲನವು ಬ್ರಿಟಿಷರ ಚರಿತ್ರೆಯಲ್ಲಿ ಬಹಳ ಪ್ರಖ್ಯಾತವಾಗಿದೆ. ಬ್ರಿಟಿಷಿನವರು ತಮ್ಮ ವಿಧಿಯನ್ನು ಉತ್ಕೃಷ್ಟವಾಗಿಯೂ ಉದಾರವಾಗಿಯೂ ನೆರವೇರಿಸುತ್ತಿರುವರೆಂದು ಹೆಮ್ಮೆಪಡಲು ತಕ್ಕ ಕಾರಣಗಳಿರುತ್ತವೆ" ಎಂದು ತಿಳಿಸಿದರು.**

ವೈಸ್ರಾಯರಿಗೂ ಷೌಕತಾಲಿಯವರಿಗೂ ನಡೆದ ಉತ್ತರ ಪ್ರತ್ಯುತ್ತರ

ಹಿಂದು ಮಹಮ್ಮದೀಯರ ಸಮಸ್ಯೆಯನ್ನು ಪರಿಷ್ಕರಿಸಬೇಕಾಗಿರುವುದರಿಂದ ಮಹಾತ್ಮ ಗಾಂಧಿಯವರನ್ನು ಕಾರಾಗೃಹ ಬಂಧನದಿಂದ ಬಿಟ್ಟುಕೊಡಬೇಕೆಂದೂ, ಒಂದುವೇಳೆ ಆದಾಗದಿದ್ದರೆ ಅವರ ಸಮಕ್ಷಮದಲ್ಲಿ ಪರಿಷ್ಕಾರಪ್ರಯತ್ನ ನಡೆಯಲು ಅವಕಾಶವನ್ನಾದರೂ ಕೊಡಬೇಕೆಂದೂ ಮೌಲಾನಾ ಷೌಕತಾಲಿಯವರು ವೈಸ್ರಾಯರಿಗೆ ತಂತಿಯನ್ನು ಕೊಟ್ಟಿರಲು ವೈಸ್ರಾಯರು ಇದಕ್ಕೆ ಉತ್ತರವನ್ನು ಕೊಡದೆ ನೀವು ಸಕಲ ಮಹಮ್ಮದೀಯರ ಸಮ್ಮತಿಯನ್ನು ಪಡೆಯದೆ ರಾಜೀ ಪ್ರಯತ್ನವನ್ನು ನಡೆಸುವುದು ಸರಿಯಲ್ಲವೆಂದು ತಿಳಿಸಿರುವರು. ಅದರ ಮೇಲೆ "ಇತಃಪರ ಭಾರತ ದೇಶವು ಹಿಂದು ಮಹಮ್ಮದೀಯರ ರಾಜಕೀಯ ಕಲಹವನ್ನಾಗಲಿ ಮತಕಲಹವನ್ನಾಗಲಿ ಪ್ರೋತ್ಸಾಹಿಸುವುದಿಲ್ಲ. ಇವು ದೇಶದ ಕೀರ್ತಿಯನ್ನೂ ಪ್ರಭುತ್ವದ ಕೀರ್ತಿಯನ್ನೂ ಮಲಿನಗೊಳಿಸುವುವು. ಆದುದರಿಂದ ನಾನು ಸಾಹಸಪಟ್ಟು ಲಕ್ನೋದಲ್ಲಿ ಮಹಮ್ಮದೀಯರನ್ನು ಸಮಾವೇಶಗೊಳಿಸುತ್ತೇನೆ, ಆದರೆ ಮಹಾತ್ಮರ ಸಹಾಯವಿಲ್ಲದೆ ಇಂತಹ ಸಮಸ್ಯೆಯನ್ನು ಪರಿಷ್ಕಾರಗೊಳಿಸಲಾಗುವುದಿಲ್ಲ. ಆದುದರಿಂದ ಮಹಾತ್ಮರನ್ನು ಬಿಟ್ಟುಕೊಡಲು ವೈಸ್ರಾಯರು ಸಮ್ಮತಿಸಬೇಕು" ಎಂದು ಷೌಕತಾಲಿಯವರು ವೈಸ್ರಾಯರಿಗೆ ಪುನಃ ತಂತಿಮೂಲಕ ವಿಜ್ಞಾಪಿಸಿಕೊಂಡಿದ್ದರಾದರೂ ಏನೂ ಪ್ರಯೋಜನವಾಗಲಿಲ್ಲ.

ಒಳದೇಶದ ವೃತ್ತಾಂತಗಳು.

ಮಹಾನವಮಿಯುತ್ಸವಕ್ಕೆ ಪರಸ್ಥಳಗಳಿಂದ ಬಂದಿದ್ದ ಜನರೆಲ್ಲರೂ ಸ್ವಸ್ಥಳಗಳಿಗೆ ಹೊರಟು ಹೋದರು. ಚಿತ್ತಾಮಳೆಯು ಚೆನ್ನಾಗಿ ನಡೆಸಿ ಊರಿನ ಕಶ್ಮಲವನ್ನೆಲ್ಲ ಹೋಗಲಾಡಿಸಿ ಸ್ವಚ್ಛಗೊಳಿಸಿತು. ಪ್ಲೇಗುರೋಗದಿಂದ 1.2 ಮರಣಗಳಾಗುತ್ತಿವೆ.

ಮೈಸೂರು ವಿಶ್ವವಿದ್ಯಾನಿಲಯ ಪಟ್ಟಪ್ರದಾನೋತ್ಸವವು ಚಾನ್ಸಲರಾದ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ಈ ಬುಧವಾರ ಬೆಳಗಿನ 9 ಘಂಟೆಗೆ ರಾಜಧಾನಿಯ ಜಗನ್ಮೋಹನಪ್ರಾಸಾದ ಸಭಾಂಗಣದೊಳಗೆ ನಡೆಯುವುದು. ಮದ್ರಾಸಿನ ಸರ್ ಸಿ. ವಿ. ಕುಮಾರಸ್ವಾಮಿಶಾಸ್ತ್ರಿಗಳು ಪಟ್ಟಾಂಚಿತರ ಹಿತಬೋಧಪರಭಾಷಣವನ್ನು ಮಾಡುವರು.

ದಸರಾಮಹೋತ್ಸವಕ್ಕೆ ಅತಿಥಿಗಳಾಗಿ ಸಂಸಾರಸಮೇತ ರಾಜಧಾನಿಗೆ ಬಂದು ಮಹಾರಾಜರವರ ಹೈಸ್ಕೂಲಿನಲ್ಲಿಳಿದುಕೊಂಡಿದ್ದ ನ್ಯಾಯವಿಧಾಯಕ ಸಭೆಯ ಮೆಂಬರು ದಾವಣಗೆರೆ ಅಡ್ವೋಕೇಟ್ ಮ|| ಡಿ. ಎಚ್. ಚಂದ್ರಶೇಖರಯ್ಯನವರ 8 ತಿಂಗಳ ಮಗುವು ಪ್ಲೇಗುರೋಗದಿಂದ ಮೃತವಾಯಿತೆಂದು ಕೇಳಿ ವಿಷಾದಿಸುತ್ತೇವಲ್ಲದೆ ಮ|| ಚಂದ್ರಶೇಖರಯ್ಯದಂಪತಿಗಳಿಗೆ ನಮ್ಮನುತಾಪವನ್ನು ಸೂಚಿಸುತ್ತೇವೆ.

ಮೈಸೂರು ಸೀಮೆಯ ಬಸ್ಸುಗಳಮೇಲೆ ವಿಧಿಸಲ್ಪಟ್ಟಿರುವ ದಾರೀ ಸುಂಕವನ್ನು ಕಡಿಮೆಮಾಡುವ ವಿಚಾರವನ್ನು ಪರಿಷ್ಕರಿಸಲು ಪ್ರಭುತ್ವದವರಿಂದೇರ್ಪಡಿಸಲ್ಪಟ್ಟಿರುವ ಕಮಿಟಿಗೆ ಅಡ್ವೋಕೇಟರುಗಳಾದ ರಾಜಧಾನಿಯ ಮ|| ಎಚ್. ಸಿ. ದಾಸಪ್ಪನವರನ್ನೂ, ತುಮಕೂರಿನ ಮ|| ಕೆ. ರಂಗಯ್ಯಂಗಾರ್ಯರನ್ನೂ ಬಸ್ಸು ಯಜಮಾನರುಗಳ ಪ್ರತಿನಿಧಿಗಳನ್ನಾಗಿ ತೆಗೆದುಕೊಳ್ಳಬೇಕೆಂದು ಪ್ರಭುತ್ವದವರಿಗೆ ಬಸ್ಸುಗಳ ಸಂಘದ ಸೆಕ್ರೆಟರಿಯವರು ಬಿನ್ನೈಸಿಕೊಂಡಿರುವುದಾಗಿ ಕೇಳುತ್ತೇವೆ. ಇದು ಯುಕ್ತವಾದ ಪ್ರಾರ್ಥನೆಯು.

ದಿವಾನ್ ಸಾಹೇಬರು ಕಳೆದ ಗುರುವಾರ ರಾತ್ರಿ ಬೆಂಗಳೂರಿಗೆ ಪ್ರಯಾಣಮಾಡಿ ಅಲ್ಲಿಯ ಕಾರ್ಯವನ್ನು ಆಗಮಾಡಿಕೊಂಡು ನಾಳೆಯ ದಿವಸ ರಾಜಧಾನಿಗೆ ಬಂದು ಬುಧವಾರ ವಿಶ್ವವಿದ್ಯಾನಿಲಯದ ಪಟ್ಟಪ್ರದಾನೋತ್ಸವವನ್ನು ಮುಗಿಸಿಕೊಂಡು ತಾ|| 24ರಲ್ಲಿ ಕೋಲಾರಕ್ಕೆ ದಯಮಾಡಿಸುವರು. ಆ ದಿವಸ ಆ ಊರಿಗೆ ಕುಡಿಯುವ ನೀರನ್ನೊದಗಿಸುವ ಕಾರ್ಯಾರಂಭೋತ್ಸವವನ್ನು ನೆರವೇರಿಸಿ ಸಾಹುಕಾರ್ ವಿ. ಆರ್. ಚಿಕ್ಕಚನ್ನಂಜಪ್ಪ ಶೆಟ್ಟರ ಮನೆಯಲ್ಲಿ ನಡೆಯುವ ಔತಣಸತ್ಕಾರವನ್ನು ಕೈಕೊಂಡು ಬರುವುದಾಗಿಯೂ, ತಾ|| 26-27ರಲ್ಲಿ ಬೊಂಬಾಯಿಗೆ ಪ್ರಯಾಣಮಾಡಿ ತಾ|| 29ರಲ್ಲಿ ಹಡಗನ್ನು ಹತ್ತಿ ಸೀಮೆಗೆ ತೆರಳುವುದಾಗಿಯೂ ತಿಳಿಯಬರುತ್ತದೆ.

ಕಳೆದ ಗುರುವಾರ ಬೆಳಿಗ್ಗೆ ರಾಜಧಾನಿಯ ಚಾಮುಂಡಿ ಬೆಟ್ಟದಮೇಲೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ವಾರ್ಷಿಕ ರಥೋತ್ಸವಕ್ಕಾಗಿ ಶ್ರೀ ಅಮ್ಮನವರ ವಿಗ್ರಹವು ರಥಾರೋಹಣಮಾಡಿಸಲ್ಪಟ್ಟು ಶ್ರೀಮನ್ಮಹಾರಾಜರವರ ಹಸ್ತಸ್ಪರ್ಶದಿಂದ ರಥವು ಕೊಂಚದೂರ ಎಳೆಯಲ್ಪಟ್ಟನಂತರ ಶ್ರೀಮನ್ಮಹಾರಾಜರವರ ಸ್ವಾರಿಯು ಬಂಗಲೆಗೆ ಚಿತ್ತೈಸಿತು. ಇತ್ತಲಾಗಿ ರಥದ ದೂರಿಯು ಮುರಿದುಹೋಗಿ ರಥವು ಚಲಿಸದೆ ನಿಂತುಬಿಟ್ಟಿತು. ದೈವಾಧೀನದಿಂದ ಯಾರಿಗೂ ಯಾವ ಅಪಾಯವಾಗಲಿಲ್ಲ. ಹೋಗಿದ್ದ ಸಾವಿರಾರು ಸ್ಥಳಪರಸ್ಥಳ ಜನರು ಹತಾಶರಾಗಿ ಹಿಂದಿರುಗಿದರು. ಶನಿವಾರ ರಾತ್ರಿ ಬೆಟ್ಟದಮೇಲೆ ದೇವಗೆರೆಯಲ್ಲಿ ಶ್ರೀ ಅಮ್ಮನವರ ತೆಪ್ಪೋತ್ಸವವು ನಾನಾ ಬಣ್ಣಗಳ ವಿದ್ಯುದ್ದೀಪೋತ್ಸವದಿಂದಲೂ ವಾದ್ಯವೈಭವದಿಂದಲೂ ಬಹಳ ವಿಜೃಂಭಣೆಯಿಂದ ನಡೆಯಿತು. ಶ್ರೀಮನ್ಮಹಾರಾಜರವರು ಕೆರೆಬಳಿಗೆ ಚಿತ್ತೈಸಿದ್ದು ದೇವರ ದರ್ಶನ ಮಂಗಳಾರತಿಗಳನ್ನು ಪಡೆದು ಬಡಾರಕ್ಕೆ ದಯಮಾಡಿಸಿದರು. ಜನರು ವಿಶೇಷವಾಗಿ ಹೋಗಿದ್ದ ದೀಪಾಲಂಕಾರಸಮೇತವಾದ ತೆಪ್ಪೋತ್ಸವವನ್ನು ನೋಡಿ ಆನಂದಪಟ್ಟುಕೊಂಡು ಬಂದರು.

ಮ|| ಗಳಾದ ಚಿತ್ರದುರ್ಗ ಮುನ್ಸೀಫ್ ಬಿ. ನಾಗಭೂಷಣರಾವ್, ಬಾರ್-ಆಟ್-ಲಾ ಯವರು 2 ನೇ ಮುನ್ಸೀಫರಾಗಿ ತುಮಕೂರಿಗೂ, ತುಮಕೂರು 2 ನೇ ಮುನ್ಸೀಫರಾದ ಜಿ. ಅಬ್ದುಲ್ ರಹೀಂರವರು 1 ನೇ ಮುನ್ಸೀಫರಾಗಿ ಮೈಸೂರಿಗೂ, ಮೈಸೂರು 1 ನೇ ಮುನ್ಸೀಫರಾದ ಬಿ. ರಾಮಣ್ಣನವರು 1 ನೇ ತರಗತಿ ಮೆಜಿಸ್ಟ್ರೇಟರಾಗಿ ಕ್ಲೋಸ್‌ಪೇಟೆಗೂ, ನಂಜನಗೂಡು ಮುನ್ಸೀಫರಾದ ಯು. ಡಿ. ನಾರಾಯಣಮೂರ್ತಿಯವರು ಮುನ್ಸೀಫರಾಗಿ ಶಿವಮೊಗ್ಗೆಗೂ, ಶಿವಮೊಗ್ಗೆ ಮುನ್ಸೀಫರಾದ ಎಸ್. ಶ್ರೀನಿವಾಸಯ್ಯರವರು ಮುನ್ಸೀಫರಾಗಿ ಚಿತ್ರದುರ್ಗಕ್ಕೂ, ಸಾಗರದ ಮುನ್ಸೀಫರಾದ ಕೆ. ಸಿ. ಲಿಂಗೇಗೌಡರು 2 ನೇ ತ|| ಮೆಜಿಸ್ಟ್ರೇಟರಾಗಿ ತಿಪಟೂರಿಗೂ, ತಿಪಟೂರು 2 ನೇ ತ|| ಮ|| ಎಚ್. ವಿ. ಚಂದ್ರಶೇಖರಯ್ಯನವರು ಮುನ್ಸೀಫರಾಗಿ ಸಾಗರಕ್ಕೂ ವರ್ಗಾಯಿಸಲ್ಪಟ್ಟಿರುತ್ತಾರೆ. ಬಹಳ ಶ್ರದ್ಧೆಯಿಂದಲೂ ದಕ್ಷತೆಯಿಂದಲೂ ನಿಷ್ಪಕ್ಷಪಾತತೆಯಿಂದಲೂ ಕೆಲಸಮಾಡಿ ಪ್ರಜಾಪ್ರಿಯರಾಗಿದ್ದ ಮ|| ಬಿ. ರಾಮಣ್ಣನವರು ವರ್ಗಾಯಿಸಲ್ಪಟ್ಟದ್ದಕ್ಕಾಗಿ ಜನರು ಚಿಂತಿಸುತ್ತಾರೆ. ಅವರ ಬದಲು ಬರುವ ಮ|| ಜಿ. ಅಬ್ದುಲ್ ರಹೀಂರವರು ಬಹಳ ಪ್ರಿಯರೂ ದಕ್ಷರೂ ಆಗಿರುವರೆಂದು ತಿಳಿಯುತ್ತೇವೆ.

ಬಹಳ ಬೆಲೆಯ ನಗಗಳ ಹರಾಜು

ಬೊಂಬಾಯಿ ಹೈ ಕೋರ್ಟು 1932 ನೇ ಇಸವಿ ಒ. ಒ. ಸಿ. ಜೆ. ನಂ. 407 ನೇ ಡಿಕ್ರಿ ಪ್ರಕಾರ ಬಹಳ ಬೆಲೆ ಬಾಳುವ ಕೆಂಪು, ವಜ್ರ, ಪಚ್ಚೆಗಳ ಆಭರಣಗಳು 1932 ನೇ ಅಕ್ಟೋಬರ್ ತಾ॥ 23 ನೇ ಭಾನುವಾರ ಮತ್ತು 24 ನೇ ಸೋಮವಾರ ಬೆಳಿಗ್ಗೆ 12-30 ಘಂಟೆಯಿಂದ ಮೈಸೂರು ದೇವರಾಜ ಮಾರ್ಕೆಟ್ಟಿನ ಉತ್ತರ ದ್ವಾರದ ಮಹಡಿ ಮೇಲಿರುವ ವರ್ತಕರ ಸಂಘದಲ್ಲಿ ಈ ಕೆಳಗೆ ಕಂಡವರಿಂದ ಬಹಿರಂಗವಾಗಿ ಹರಾಜುಮಾಡಲ್ಪಡುತ್ತವೆ. ಇಷ್ಟವುಳ್ಳವರು ಬಂದು ಬಿಡದರಕಾಸ್ತು ಮಾಡಿ ಪಡೆಯಬಹುದು ಮತ್ತು ಹೆಚ್ಚು ವಿಷಯಗಳನ್ನು ಕ್ಯಾಟಲಾಗನ್ನು ನೋಡಿ ತಿಳಿಯಬಹುದು

ನಗಗಳು ತಾ॥ 21 ಮತ್ತು 22 ರ ಬೆಳಿಗ್ಗೆ 10 ರಿಂದ ಸಾಯಂಕಾಲ 6 ಘಂಟೆ ವರೆಗೆ ಪ್ರದರ್ಶಿಸಲ್ಪಡುವುವು.

ಹರಾಜುದಾರರು—

ಓರಾ ಅಂಡ್ ಕೊ (ಕೋಟೆ, ಬೊಂಬಾಯಿ)

ಜಾಹೀರ ವಿನಂತಿ.

ಯಾವತ್ತೂ ವೀರಶೈವ ಮಹಾಶಯರಿಗೆ ವಿನಯಪೂರ್ವಕವಾಗಿ ಭಿನ್ನ ವಿಸುವದೇನೆಂದರೆ:—ಧಾರವಾಡದಲ್ಲಿ ಇದೇ ವರ್ಷ ಡಿಸಂಬರ್ ತಿಂಗಳೊಳಗೆ ಅಖಿಲಭಾರತ ವೀರಶೈವ ಮಹಾಸಭೆಯನ್ನು ಜರುಗಿಸಬೇಕೆಂದು ನಿರ್ಧರಿಸಿರುವರಷ್ಟೇ. ಆ ಕಾಲಕ್ಕೆ ವೀರಶೈವರೊಳಗಿನ ಸ್ತ್ರೀ ಮತ್ತು ಪುರುಷರಿಂದ ತೆಗೆಯಲ್ಪಟ್ಟ ಚಿತ್ರ ಮುಂತಾದವುಗಳ ಪ್ರದರ್ಶನವನ್ನು ಕೂಡಿಸತಕ್ಕದ್ದೆಂದು ನಿರ್ಧರಮಾಡಲ್ಪಟ್ಟಿದೆ. ಆದ್ದರಿಂದ ವೀರಶೈವರೊಳಗಿನ ಜಾಣರಾದ ಚಿತ್ರಕಲೆಯುಳ್ಳವರು ತಮ್ಮ ಕೈಲಿ ಬರೆದ ಪೆನ್ಸಿಲ್ ವಾಟರಕಲರ, ಆಯಿಲ್ ಪೇಂಟ್, ಪೆಸ್ತಲ್ಲ ಮುಂತಾದ ಚಿತ್ರಪಟಗಳನ್ನು ಮತ್ತು ಕತ್ತರಿ, ಚಾಕು, ಉಗುರಿನಿಂದ ಕಾಗದಗಳಲ್ಲಿ ತಯಾರಿಸಲ್ಪಟ್ಟಂಥವುಗಳನ್ನು ಹಾಗೂ ಹೆಣಿಕೆ, ಹೊಲಿಗೆ, ಕಸೂತಿ ಮತ್ತು ಜರದ ಮುಂತಾದ ಯಾವತ್ತು ಕೈಗಾರಿಕೆಯ ಕೆಲಸಗಳನ್ನು ತಾ॥ 15-12-1932 ರೊಳಗಾಗಿ ನಮ್ಮ ವಿಳಾಸಕ್ಕೆ ಮುಟ್ಟುವಂತೆ ಕಳುಹಿಸುವ ಮೆಹರ್ಬಾನಗಿ ಆಗಬೇಕು. ಚಿತ್ರಪಟಗಳು ಹಾಗೂ ಉಳಿದ ಸಾಮಾನುಗಳು ನಮಗೆ ಸುರಕ್ಷಿತವಾಗಿ ಮುಟ್ಟುವಂತೆ ಕಳಿಸುವವರು ಕಾಳಜಿ ತೆಗೆದುಕೊಳ್ಳತಕ್ಕದ್ದು. ತಮ್ಮ ಚಿತ್ರಪಟಗಳನ್ನು ಇಲ್ಲವೆ ಇತರ ಸಾಮಾನುಗಳನ್ನು ಯಾರಾದರೂ ಮಾರಲಿಚ್ಛಿಸುವವರಿದ್ದರೆ ಅದರಂತೆ ಅವುಗಳ ಕ್ರಯಗಳನ್ನು ಬರೆದು ತಿಳಿಸಬೇಕು. ಪ್ರದರ್ಶನ ಕಮಿಟಿಯವರಿಂದ 1, 2, 3 ನೇ ತರಗತಿಯಲ್ಲಿ ಪಾಸುಮಾಡಲ್ಪಟ್ಟಂಥ ಒಡವೆಗಳಿಗೆ ಬಹುಮಾನ, ಸರಟೀಫಿಕೇಟ ಮುಂತಾದವುಗಳನ್ನು ಕೊಡಲಾಗುವದು. ಪ್ರದರ್ಶನದ ಕೆಲಸವು ಮುಗಿದನಂತರ ಕಮಿಟಿಯ ಖರ್ಚಿನಿಂದ ಅವರವರ ಒಡವೆಗಳನ್ನು ತಿರುಗಿ ಕಳಿಸುವ ವ್ಯವಸ್ಥೆ ಮಾಡಲಾಗುವದು.

ಶಂಕರಯ್ಯ ರೇವಣಸಿದ್ಧಯ್ಯಸ್ವಾಮಿ ಶಿಕ್ಷಣ ರು,
ಸೆಕ್ರೆಟರಿ.
ಚಿತ್ರಕಲಾ ಪ್ರದರ್ಶನ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭಾ,
ಧಾರವಾಡ

ಪ್ರಶ್ನೆಗಳಿಗೆ ಉತ್ತರವನ್ನು ಕಳುಹಿಸಿ.

ಧಾರವಾಡದಲ್ಲಿ ಜರುಗುವ 11 ನೇ ಅಖಿಲ ಶ್ರೀಮದ್ವೀರಶೈವ ಮಹಾಸಭೆಯ ಜೊತೆಗೆ ವೀರಶೈವ ಶಿಕ್ಷಣ ಸಂಸ್ಥೆಗಳ ಪರಿಷತ್ತನ್ನು ನಡೆಯಿಸುವ ಯೋಚನೆಯನ್ನು ಮಾಡಿದ್ದೇವೆ. ಕಾರಣ ಆಯಾ ಶಿಕ್ಷಣ ಸಂಸ್ಥೆಯವರು ತಮ್ಮ ಶಿಕ್ಷಣ ಸಂಸ್ಥೆಯ ಪೂರ್ಣ ಹೆಸರು, ವಿಳಾಸ ಮತ್ತು ಚರ್ಚಿಸತಕ್ಕ ವಿಷಯಗಳೇನಾದರೂ ಇದ್ದರೆ ಅವುಗಳನ್ನು ಕಳಿಸಿಕೊಡಬೇಕೆಂದು ಈ ಮೊದಲೇ ಪ್ರಸಿದ್ಧಮಾಡಿದ್ದು ಅದಕ್ಕೆ ಸರಿಯಾಗಿ ಬಹಳ ಸ್ವಲ್ಪ ಸಂಸ್ಥೆಯವರಿಂದ ಉತ್ತರ ಬಂದು ಬಹುಮತದಿಂದ ಶಿಕ್ಷಣ ಸಮ್ಮೇಲನದ ಮುಖ್ಯ ಧ್ಯೇಯವೇನೆಂದು ಕೇಳಿಕೊಂಡದ್ದಕ್ಕಾಗಿ ಪುನಃ ಪ್ರಕಟಿಸಬೇಕಾಯಿತು. ಆದ್ದರಿಂದ ಕೆಳಗೆ ವಿಶದಪಡಿಸಿದ ಧ್ಯೇಯಕ್ಕನುಗುಣವಾಗಿ ನಾವು ಸೂಚಿಸತಕ್ಕ ವಿಷಯಗಳನ್ನು ಮತ್ತು ಕೆಳಗೆ ಬರೆದ ಎಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆದು ಆದಷ್ಟು ತೀವ್ರ ಅಂದರೆ ಅಕ್ಟೋಬರ್ 25 ನೇ ತಾರೀಖಿನೊಳಗಾಗಿ ನಮಗೆ ಕಳಿಸಬೇಕೆಂದು ವಿನಂತಿ ಅದೆ.

ಶಿಕ್ಷಣ ಸಂಸ್ಥೆಗಳ ಸಮ್ಮೇಲನದ ಧ್ಯೇಯ

ಇತ್ತೀಚೆಗೆ ಕರ್ನಾಟಕದಲ್ಲಿ ಇಷ್ಟೇ ಅಲ್ಲದೆ ಹಿಂದುಸ್ಥಾನದ ಆಯಾ ಭಾಗಗಳಲ್ಲಿ ವೀರಶೈವ ಶಿಕ್ಷಣ ಸಂಸ್ಥೆಗಳು ಸ್ಥಾಪಿಸಲ್ಪಟ್ಟು ಪ್ರತ್ಯೇಕವಾಗಿ ಕೆಲಸ ನಡಿಸಿರುತ್ತವೆ. ಅವುಗಳಲ್ಲಿ ಪರಸ್ಪರ ಸಂಬಂಧವಿಲ್ಲದ ಮೂಲಕ ಕೆಲ ಕೆಲವು ಸಂಸ್ಥೆಗಳು ಕೆಲವು ದಿವಸ ನಡೆದು ಸುವ್ಯವಸ್ಥಿತ ಸಾಗದೆ ಮುರಿದು ಮೂಲೆಗೆ ಬಿದ್ದಿರುತ್ತವೆ ಮತ್ತು ಈಗಲೂ ಎಷ್ಟೋ ಸಂಸ್ಥೆಗಳು ಅವುಗಳನ್ನು ಅನುಸರಿಸುತ್ತಲಿವೆ. ಹಾಗಾಗುವದರಿಂದ ಆಯಾ ಸಂಸ್ಥೆಗಳಿಗಷ್ಟೇ ಅಲ್ಲದೆ ಇಡೀ ಸಮಾಜಕ್ಕೇ ಹಾನಿ ತಪ್ಪುತ್ತದೆ ಮತ್ತು ಅಭ್ಯಾಸ ಕ್ರಮದೃಷ್ಟಿಯಿಂದ ನೋಡಿದರೆ ಬೇರೆ ಬೇರೆ ಸಂಸ್ಥೆಯವರು ಬೇರೆ ಬೇರೆಯಾಗಿ ಸಾಗಿಸಿರುತ್ತಾರೆ. ಅವುಗಳನ್ನು ಪರಸ್ಪರ ಸಂಬಂಧವಿಲ್ಲದ ಮೂಲಕ ತಮ್ಮ ಕ್ರಮದಲ್ಲಿಯ ತಪ್ಪನ್ನು ತಿದ್ದಿಕೊಳ್ಳಲಿಕ್ಕೂ ಮತ್ತು ಉತ್ತಮ ಮಾರ್ಗವನ್ನು ಅನುಸರಿಸಲಿಕ್ಕೂ ಆಸ್ಪದವಿಲ್ಲದ ಹಾಗಾಗಿರುತ್ತದೆ. ಆದ್ದರಿಂದ ಇವೆಲ್ಲ ಕೊರತೆಗಳನ್ನು ಪರಿಹರಿಸಿ ವೀರಶೈವರು ಸರ್ವತೋಮುಖ ಅಭಿವೃದ್ಧಿ ಪಡೆಯಬೇಕಾದರೆ ಸಧ್ಯದ ಪರಿಸ್ಥಿತಿಗನುಸಾರವಾಗಿ ಯಾವ ತರದ ಶಿಕ್ಷಣ ಹೊಂದಬೇಕು ಮತ್ತು ಆಯಾ ಶಿಕ್ಷಣ ಸಂಸ್ಥೆಗಳ ಅಡಚಣೆಗಳನ್ನು ಯಾವ ಕ್ರಮದಲ್ಲಿ ನೀಗಿಸಬೇಕು. ಇವೆಲ್ಲ ಸಮ್ಮೇಲನದಲ್ಲಿ ಅವಲೋಕಿಸಿ ಸುಮಾರ್ಗವನ್ನು ಹುಡುಕಿ ಎಲ್ಲ ಸಂಸ್ಥೆಯವರು ಅದನ್ನೇ ಅನುಸರಿಸುವಂತೆ ಪ್ರಯತ್ನಿಸಿ ಸದ್ಯಕ್ಕೆ ಒದಗಿದ ಹಾನಿಗೆ ಬಲಿಬೀಳದೆ ಎಲ್ಲಾ ಸಂಸ್ಥೆಗಳನ್ನು ಜಾಗೃತಗೊಳಿಸುವದೇ ಮುಖ್ಯ ಧ್ಯೇಯವಾಗಿರುತ್ತದೆ.

(1) ಸಂಸ್ಥೆಯ ಹೆಸರು ಸ್ಥಳ ಇತ್ಯಾದಿ. (2) ತಮ್ಮ ಸಂಸ್ಥೆಯ ಆರಂಭದ ತಾರೀಖು. (3) ತಮ್ಮ ಸಂಸ್ಥೆಗೆ ಸಂಬಂಧವಾಗಿ ಇತರ ಉಪಸಂಸ್ಥೆಗಳಿದ್ದರೆ ಅವುಗಳ ಬಗ್ಗೆ ಮಾಹಿತಿ. (4) ಒಟ್ಟು ಸಂಸ್ಥೆಯ ಸಭಾಸದರ ಸಂಖ್ಯೆ (ವರ್ಗಗಳು ಸಹಿತ). (5) ಸಂಸ್ಥೆಯ ಧ್ಯೇಯ (6) ಸಂಸ್ಥೆಯು ಮಾಡುತ್ತಿರುವ ಕಾರ್ಯ. (7) ಸಂಸ್ಥೆಗಳಿಗೆ ಏನಾದರೂ ಕೊರತೆಗಳು ಇರುವವೋ ಹ್ಯಾಗೆ? ಇದ್ದರೆ ಯಾವ್ಯಾವು (8) ಅವುಗಳನ್ನು ನಿವಾರಿಸಲಿಕ್ಕೆ ಏನಾದರೂ ಯೋಚನೆಯನ್ನು ಮಾಡಿರುವರೇ ಹೇಗೆ ಮತ್ತು ಹ್ಯಾಗೆ ಮಾಡಬೇಕೆಂಬ ಬಗ್ಗೆ ನಿಮ್ಮ ಅಭಿಪ್ರಾಯ (9) ನಿಯಮಗಳ ಪ್ರತಿ ಒಂದನ್ನು ಕಳಿಸತಕ್ಕದ್ದು. (10) ರಿಪೋರ್ಟುಗಳು ಹೊರಟಿದ್ದರೆ ಅವುಗಳ ಪ್ರತಿ ಒಂದೊಂದು ದೊರೆತಷ್ಟು ಕಳಿಸಬೇಕು. (11) ಬಿಲ್ಡಿಂಗು, ಮೆಂಬರರಲ್ಲಿ ಮುಖ್ಯರಾದವರ, ದೇಣಿಗಿದಾರರ ಬಗ್ಗೆ ಫೋಟೋಗಳು ಹೆಚ್ಚಿನ ಮಾಹಿತಿ ದೊರೆತರೆ ಅವುಗಳನ್ನು ಕಳಿಸಬೇಕು. (12) ಹೆಚ್ಚಿನ ಮಾಹಿತಿ ಏನಾದರೂ ಇದ್ದರೆ ತಿಳಿಸಬಹುದು.

ಸೂಚನೆ—ಈ ಎಲ್ಲ ಮಾಹಿತಿ ಕೂಡಿಸಿ ಶಕ್ಯವಾದರೆ 'ವೀರಶೈವ ವಿದ್ಯಾಸಾರ' ಎಂಬ ವಿಷಯವನ್ನು ಕುರಿತು ಒಂದು ಪುಸ್ತಕವನ್ನು ಮುದ್ರಿಸಬೇಕೆಂದಿದೆ.

ಎಸ್. ವಾಯ್ ಗುಮಗೋಳ ಸೆಕ್ರೆಟರಿ,
ಶಿಕ್ಷಣ ಸಂಸ್ಥೆ ಕಮಿಟಿ, ವೀರಶೈವ ಮಹಾಸಭಾ ಧಾರವಾಡ.

[ಸೂಚನೆ—ಮಹಾಸಭಾ ಸಂಬಂಧವಾದ ಲೇಖಗಳು ಸ್ಪಷ್ಟವಾಗಿ ಬರೆಯಲ್ಪಟ್ಟ ವಿನಾ ಪ್ರಕಟಿಸಲು ಸಾಧ್ಯವಿಲ—ಸಂ.]

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖಕಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

ದುಃಖ ಪ್ರದರ್ಶನ.

ರಾವ ಬಹಾದ್ದೂರ ರುದ್ರಗೌಡರು ಅರಟಾಳ ಈ ಪಿತಾಮಹರು ದಿವಂಗತರಾದ ಬಗ್ಗೆ ಕಳೆದ ತಾ॥ 10 ನೆಯ ಸೋಮವಾರ ಬ್ಯಾಡಗಿಯ ಶ್ರೀ ಲಿಂಗರಾಜ ವಾಚನಾಲಯದ ವತಿಯಿಂದ ಶ್ರೀಗಳವರ ಮಠದಲ್ಲಿ ಸಾರ್ವಜನಿಕ ದುಃಖ ಪ್ರದರ್ಶನ ಸಭೆಯು ಕೂಡಿಸಲ್ಪಟ್ಟಿತ್ತು. ಶ್ರೀ ರಾಮಕೃಷ್ಣಪ್ಪನವರು ಊರಣಕರ ಇವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮ॥ಗಳಾದ ಕುಲಕರಣಿ, ಮಾ. ಶ್ರೀ. ಕುಲಕರಣಿ, ರಾ. ಫ. ಸಂಕಣ್ಣನವರ ಇವರು, ರಾವ ಬಹಾದ್ದೂರರವರ ಜೀವನ ಚರಿತ್ರ ಸದ್ಗುಣಾದಿಗಳ ಸಂಬಂಧವಿಂದ ಚೆನ್ನಾಗಿ ಭಾಷಣಮಾಡಿದರು. ಬಳಿಕ ಈ ಪಿತಾಮಹರು ಶಿವಾಧೀನರಾದ್ದರಿಂದ ನಮ್ಮೆಲ್ಲರಿಗೂ ಅತ್ಯಂತ ದುಃಖವಾಗಿರುವ ಸಂಗತಿಯನ್ನು ಇವರ ಮನೆತನದವರಿಗೆ ತಿಳಿಸತಕ್ಕದ್ದು. ಹಾಗು ಈ ಮಹನೀಯರ ದೊಡ್ಡ ಭಾವ ಚಿತ್ರವನ್ನು ವಾಚನಾಲಯದಲ್ಲಿ ತೂಗಹಾಕತಕ್ಕದ್ದು ಎಂಬ ಎರಡು ಠರಾವುಗಳನ್ನು ಮೇ॥ ಇಂಡೀ ಮಠ ಇವರು ತಂದರು, ಇದಕ್ಕೆ ಶ್ರೀ. ಎಮ್. ಸಿ. ಶೆಟ್ಟರ ಪ್ರೆಸಿಡೆಂಟ ಮ್ಯುನಿಸಿಪಾಲಿಟಿ ಬ್ಯಾಡಗಿ ಇವರು ಅನುಮೋದನಕೊಟ್ಟರು ಬಳಿಕ ಅದೇ ವಿಷಯವನ್ನೇ ಮ॥ ಗಿಲಗಂಚಿ ಶ್ರೀ ಎಮ್. ಎಸ್. ಯಾದವಾಡ ಇವರು ಪುಷ್ಟೀಕರಿಸಿದರು. ಸರ್ವಾನುಮತದಿಂದ ಠರಾವುಗಳು ಪಾಸುಮಾಡಲ್ಪಟ್ಟವು. ಕೊನೆಗೆ ಸಭಿಕರೆಲ್ಲರೂ ಎದ್ದು ನಿಂತು, ದಿವಂಗತರಾದ ಪಿತಾಮಹರ ಆತ್ಮಕ್ಕೆ ಶಾಂತಿಯನ್ನೀಯಲೆಂದೂ, ಇವರ ಮನೆತನದವರಿಗೆಲ್ಲ ದೀರ್ಘಾಯುರಾರೋಗ್ಯ ಸುಖ ಸಂಪತ್ತುಗಳನ್ನುಂಟುಮಾಡಲೆಂದೂ ಜಗದೀಶ್ವರನನ್ನು ಕುರಿತು ಪ್ರಾರ್ಥಿಸಿದರು.

ರಾ. ಫ. ಸಂಕಣ್ಣನವರ
ಕಾರ್ಯದರ್ಶಿ, ಶ್ರೀ ಲಿಂಗರಾಜ ವಾಚನಾಲಯ

ಗಂಗಾಂಬಿಕೆಯು ಶಂಕರನನ್ನು ಸೇರಿದಳು.

ಈ ಸಾಧ್ವೀಮಣಿಯು ತಾ॥ 5-10-1932 ನೇ ದಿವಸ 4½ ಘಂಟೆಗೆ ಯಾದಗಿರಿಯಲ್ಲಿ ಕೈಲಾಸವಾಸಿಯಾದುದಕ್ಕೆ ನಾವು ಅತ್ಯಂತ ದುಃಖಪಡುತ್ತೇವೆ. ಧರ್ಮವೀರ ಶಂಕರಪ್ಪ ಸಜ್ಜನ ಶೆಟ್ಟಿ ಇವರ ಧರ್ಮಪತ್ನಿಯವರಾದ ಶ್ರೀಮತಿ ಗಂಗಮ್ಮನವರ ಹೆಸರನ್ನು ಅರಿಯದವರು, ಕರ್ನಾಟಕದಲ್ಲಿ ಯಾರೂ ಇರಲಿಕ್ಕಿಲ್ಲ. ಇವರು ತಮ್ಮ ಜೀವಮಾನದಲ್ಲಿ, ಅನೇಕ ಮಹತ್ವದ ಕಾರ್ಯಗಳನ್ನು ಮಾಡಿ ತಮ್ಮ ಹೆಸರು ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಿರುವರು. ಧರ್ಮವೀರ ಶಂಕರಪ್ಪನವರು ಶ್ರೀಮಂತ ಮನೆತನದಲ್ಲಿ ಜನಿಸಿದ್ದರೂ, ತನ್ನ ಪೂರ್ವಸ್ಥಾನವಾದ ಎಲೇರಿ ಗ್ರಾಮವನ್ನು ಬಿಟ್ಟು ಯಾದಗಿರಿಯಲ್ಲಿ ಸ್ವಂತವಾಗಿ ಕಾರ್ಯ ಮಾಡುವದಕ್ಕೆ ಹತ್ತಿದುದರಿಂದ ಈ ದಂಪತಿಗಳು ಆರಂಭದಲ್ಲಿ ಬಹು ಕಷ್ಟಪಟ್ಟು ದುಡಿದರು. ಈ ದಂಪತಿಗಳ ಕಾರ್ಯದಕ್ಷತೆಯಿಂದಲೂ ಚಟುವಟಿಕೆಯಿಂದಲೂ ಇವರ ಸಂಪತ್ತು ದಿನೇದಿನೇ ಹೆಚ್ಚುತ್ತ ನಡೆದಿತು. ಇತ್ತೀಚೆಗೆ ಭರತ ಖಂಡದಲ್ಲಿ ಕುಲ, ಗೋತ್ರ, ಜಾತಿ ಮೊದಲಾದುವನ್ನು ಸಮೂಲವಾಗಿ ನಾಶಮಾಡಬೇಕೆಂಬ ಚಾರ್ವಾಕರು, ಈಶ್ವರನೇ ಇಲ್ಲವೆಂದು ವಾದಿಸುವ ನಾಸ್ತಿಕರು, ಪರಮಾತ್ಮನ ಧ್ಯಾನವೊಂದೇ ಅವಶ್ಯಕವಲ್ಲದೆ ಮೂರ್ತಿ ಪೂಜೆಯು ಅನಾವಶ್ಯಕವೆನ್ನುವ ಆರ್ಯ ಸಮಾಜದವರು, ಇನ್ನೂ ನಾನಾತರದ ಜನರು ತಲೆಯೆತ್ತಿದುದರಿಂದ ಸನಾತನ ಧರ್ಮವು ಅತ್ಯಂತ ಗ್ಲಾನಿಯನ್ನು ಹೊಂದುತ್ತಿದ್ದು, ಅದರಲ್ಲಿಯೂ ವೀರಶೈವರಲ್ಲಿ ವರ್ಣನಾತೀತವಾದ ಹೀನಾವಸ್ಥೆಯಾಗಿದ್ದ ಕಾಲದಲ್ಲಿ ಸನಾತನ ಧರ್ಮ ಪ್ರತಿಪಾದಕವಾದ ಸಂಸ್ಕೃತ ವಿದ್ಯೆಯನ್ನು ಮುಂದಕ್ಕೆ ತರುವದಕ್ಕಾಗಿ, ಶ್ರೀಮತಿಯವರು ತಮ್ಮ ಪತಿಗಳ ತರುವಾಯ ಸ್ವತಃ 50 ಸಾವಿರ ರೂ. ಗಳ ಆಸ್ತಿಯನ್ನು ಸಂಸ್ಕೃತಕಾಲೇಜಿಗೆ ಕೊಟ್ಟು ಧರ್ಮ ಸುಧಾರಕರಲ್ಲಿ ಅಗ್ರಗಣ್ಯೆಯರೆನಿಸಿಕೊಂಡರು. ಆ ಬಗ್ಗೆ ಇವರ ಪ್ರಯತ್ನವು ಅಸಾಧಾರಣವಾಗಿದೆ. ಇಂಥ ಲೋಕೋತ್ತರ ಕಾರ್ಯ ಕಾರಿಣಿಯರಾದ ಸಾಧ್ವಿಯರ ನಿಧನದಿಂದ ಸನಾತನ ಧರ್ಮಾವಲಂಬಿಗಳಾದ ಸಕಲರೂ ಹಳಹಳಿಸದೆ ಇರಲಾರರು. ಕಾಲೇಜಿನಮೇಲೆ ಶ್ರೀಮತಿಯವರ ಪ್ರೇಮವು ಅನುಪಮವಾಗಿತ್ತು. ಕಾಲೇಜು ಸರ್ವಾಂಗಸುಂದರವಾಗಿಯೂ, ಆದರ್ಶಪ್ರಾಯವಾಗಿಯೂ, 5-6 ಜನ ಶಾಸ್ತ್ರಿಗಳಿಂದಲೂ, ನೂರಾರು ವಿದ್ಯಾರ್ಥಿಗಳಿಂದಲೂ ಕೂಡಿರುವದಾಗಿಯೂ ಇದ್ದು ಅವ್ಯಾಹತವಾಗಿ ನಡೆಯಬೇಕೆಂದು, ಶ್ರೀಮತಿಯವರು ಹಗಲಿರುಳು ಪ್ರಯತ್ನಿಸುತ್ತಿದ್ದರು. ಕೂತರೂ ನಿಂತರೂ ಕಾಲೇಜಿನ ವಿಚಾರವೇ ವಿಚಾರವಾಗಿತ್ತು. ಕೆಲವು ದಿನಗಳಿಂದಲೂ, ಕಾಲೇಜಿನ ವ್ಯವಸ್ಥಾಪಕರಾದ 12 ಜನ ಮೆಂಬರರಲ್ಲಿ ಪರಸ್ಪರ ಉಂಟಾದ ಕಲಹಾಗ್ನಿಯಿಂದ ಕಾಲೇಜು ಮ್ಲಾನವಾದದ್ದನ್ನು ಕಂಡು ಚಿಂತಾಕ್ರಾಂತರಾಗಿ ಹಿಂದೆ ಆಗಷ್ಟು ತಿಂಗಳಲ್ಲಿ, ವೀರಶೈವ ಮಹಾಜನಗಳಿಗೆ ಮೆಂಬರರ ಕಲಹಾಗ್ನಿಯ ಸಮಾಧಾನಮಾಡುವ ಬಗ್ಗೆ ವಿಜ್ಞಾಪನೆಮಾಡಿಕೊಂಡಿದ್ದರು. ಅದರ ಬಗ್ಗೆ 2 ತಿಂಗಳಾದರೂ ವೀರಶೈವ ಮುಖಂಡರಿಂದ ಯಾವ ವಿಧವಾದ ಸುಧಾರಣೆಯ ಪ್ರಯತ್ನವು ಮಾಡಲ್ಪಡದಿದ್ದುದಕ್ಕಾಗಿ ವಿಷಾದಪಟ್ಟು ಶ್ರೀಮನ್ನಿಜಾಮ ಸಾಹೇಬರವರ ಉಮೂರ ಮಜಹಬಿ ಕೋರ್ಟಿಗೆ ವಿಜ್ಞಾಪಿಸಿಕೊಂಡರು. ಆ ಕೂಡಲೆ ಸದರಿಯ ಕೋರ್ಟಿನವರು ಖಾಸ ಒಬ್ಬ ದೊಡ್ಡ ಅಧಿಕಾರಿಯನ್ನು ಕಳುಹಿಸಿಕೊಟ್ಟರು. ಆವರು ತಾ॥ 9-9-1932 ಕ್ಕೆ ಸಾಧ್ವಿಮಣಿಗಳ ಮನೆಗೆ ಬಂದು ಶ್ರೀಮತಿ ಗಂಗಮ್ಮನವರ ಮತ್ತು ಅವರ ಪುತ್ರಿ ಶ್ರೀಮತಿ ಕಸ್ತೂರಿಅಮ್ಮನವರ ಜವಾಬಿತೆಗೆದುಕೊಂಡು, ಕಾಲೇಜಿನ ಯಾವ ವಿಷಯಗಳನ್ನೂ ವಿಚಾರಿಸಿಕೊಂಡು ಹೋದರು. 2-3 ತಿಂಗಳಲ್ಲಿಯೇ ಇದರ ಯಾವತ್ತು ವಿಚಾರ ನಡೆದು, ಸುವ್ಯವಸ್ಥೆಯಾಗುವದಿದೆ. ಕಾಲೇಜಿಗೆ ಸದ್ಯಃ ಪ್ರಾಪ್ತವಾಗಿರುವ ಯಾವತ್ತು ವಿಘ್ನಗಳು, ಕೋರ್ಟಿನವರಿಂದ ನಿವಾರಣೆ ಮಾಡಲ್ಪಟ್ಟ ಸಂಗತಿ ತಿಳಿಯುವವರೆಗೂ, ಶ್ರೀಮತಿಯವರು ಜೀವಂತರಾಗಿದ್ದಿದ್ದರೆ, ಕಾಲೇಜಿಗೆ ಇನ್ನೂ ಸಹಾಯದೊರೆಯಬಹುದಾಗಿತ್ತು. ಮೊದಲೇ ಅನ್ಯಕ್ಕವೆಂಬ ಮಹಾರೋಗದಿಂದ ನರಳುತ್ತಿರುವ ಕಾಲೇಜಿಗೆ ಜನನೀ ವಿಯೋಗವಾದುದರಿಂದ ಗಾಯದಮೇಲೆ ಪೆಟ್ಟು ಬಿದ್ದಂತಾಗಿದೆ. ಸತ್ಪಾತ್ರದಾನ ಮಹಾತ್ಮೆಯಿಂದ, 4-8 ವರುಷಗಳಲ್ಲಿ ಶ್ರೀಮತಿಯವರಿಗೆ ಪೂರ್ವದಷ್ಟು ಸಂಪತ್ತು ಪ್ರಾಪ್ತವಾಗಿದ್ದು, ಚಿಕ್ಕವಯಸ್ಸಿನ ಪುತ್ರಿಯಿದ್ದರೂ, ತನ್ನ ಮನೆತನದ ಬಗ್ಗೆ ಕಡೆಯವರೆಗೂ, ಸ್ವಲ್ಪವೂ ವ್ಯಸನಮಾಡಲಿಲ್ಲ; ಕಾಲೇಜಿನ ವ್ಯಸನವೇ ವ್ಯಸನವಾಗಿತ್ತು. ಪ್ರಾಣೋತ್ಕ್ರಮಣವಾಗುವದಕ್ಕಿಂತ 2 ಘಂಟೆ ಮುಂಚಿತವಾಗಿ ಶ್ರೀಮತಿಯವರು, ಯಾರನ್ನೋ ಉದ್ದೇಶಿಸಿ "ನೀನು ಇನ್ನು ಕಾಲೇಜಿಗೆ ಎಷ್ಟು ಕಾಡುವಿಯೋ ಕಾಡು, ನನ್ನ ಪ್ರಾಣವಿರುವವರೆಗೂ, ಭೂಮಿಯಮೇಲೆ ನನ್ನ ಎಲುವುಗಳಿರುವವರೆಗೂ, ನಿನ್ನ ಶಕ್ತಿಯನ್ನು ನೋಡುವೆನು. ಜಯಶಂಕರ, ಜಯಶಂಕರ" ಎಂದು ಸ್ಪಷ್ಟವಾಗಿ ಅಂದರು, ಮುಂದೆ ಮಾತೇ ಇಲ್ಲ. ಇದರ ಮೇಲಿಂದ ಇವರಿಗೆ ಕಾಲೇಜಿನಮೇಲೆ ಎಷ್ಟು ಪ್ರೇಮವಿತ್ತೆಂಬುದು ತಾನೇ ಗೊತ್ತಾಗುತ್ತದೆ. ಪರಂಧಾಮವನ್ನು ಹೊಂದಿದ ವಾರ್ತೆಯು ಶಹರದಲ್ಲಿ ಪ್ರಸಾರವಾದ ಕೂಡಲೆ ನಾನಾ ಮತದ ನಾನಾ ಜಾತಿಯ ಸ್ತ್ರೀಪುರುಷರು, ಆಬಾಲವೃದ್ಧರು ನಾನಾ ವಿಧವಾಗಿ ಮರುಗಿದರು. ತಂಡೋಪತಂಡವಾಗಿ ಜನರು ಬಂದು ಶ್ರೀಮತಿಯವರ ಅಂತಿಮ ದರ್ಶನವನ್ನು ಮಾಡಿಕೊಂಡು ಹೋಗುತ್ತಿದ್ದರು. ದಯಾವಂತರೂ, ಪವಿತ್ರಾತ್ಮರೂ ಆದ ಶ್ರೀಮತಿ ಗಂಗಮ್ಮನವರಿಂದ ಮುಂದೆ ಆಗಬಹುದಾಗಿದ್ದ ಮಹಾತ್ಕಾರ್ಯಗಳು ಅವರ ವಿಯೋಗದಿಂದ ತಟಸ್ಥವಾದುದಕ್ಕಾಗಿ, ಶಂಕರ ಕಾಲೇಜಿಗೇ ಏಕೆ? ಇಡೀ ವೀರಶೈವ ಸಮಾಜಕ್ಕೇ ಅಪಾರವಾದ ಹಾನಿಯಾಗಿದೆ. ಇದರ ಬಗ್ಗೆ ಎಷ್ಟು ದುಃಖಿಸಿದರೂ ತೀರುವಂತಿಲ್ಲ. ಶ್ರೀಮತಿಯವರ ಆತ್ಮಕ್ಕೆ ಶಾಂತಿಯನ್ನೂ, ಅವರ ಪುತ್ರಿಯರ ಮತ್ತು ಸಹೋದರರ ಆತ್ಮಕ್ಕೆ ಸಮಾಧಾನವನ್ನೂ ದಯಪಾಲಿಸಬೇಕೆಂದು ಆ ದಯಾಘನನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ.

ಪ್ರಿನ್ಸಿಪಾಲ, ಎಸ್. ಎಸ್. ಕಾಲೇಜ.

ದುಃಖಪ್ರದರ್ಶನ ಸಭೆ.

ತಾ॥ 2-1-1332 ನೆಯ ದಿವಸ ಯಾದಗಿರಿ ಶಂಕರ ಕಾಲೇಜಿನಲ್ಲಿ ಮವೆ ಹೆಡ್ ಶ್ರೀ ಸೋಮಶೇಖರ ಪಟ್ಟಾಧ್ಯಕ್ಷರವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ನೆರೆದಿದ್ದು ಅದರಲ್ಲಿ ಕಾಲೇಜಿನ ಪ್ರಿನ್ಸಿಪಾಲರಿಂದ ತರಲ್ಪಟ್ಟ 4 ಠರಾವುಗಳು ಸರ್ವಾನುಮತದಿಂದ ಪಾಸುಮಾಡಲ್ಪಟ್ಟವು:—

(1) ಯಾದ್ಗಿರಿ ಕ್ಕೈ॥ ಧರ್ಮವೀರ ಶಂಕರಪ್ಪನವರ ಪತ್ನಿಯವರಾದ ಮಾತೃಶ್ರೀ ಗಂಗಮ್ಮನವರ ವಿಯೋಗವಾದ ಬಗ್ಗೆ ಕಾಲೇಜಿನ ಪ್ರಧಾನಾಧ್ಯಾಪಕರು ಇತರ ಅಧ್ಯಾಪಕರು ಮೆಂಬರರು ವಿದ್ಯಾರ್ಥಿಗಳು ಯಾವತ್ತು ಸಭಾಸದರು ದುಃಖಪ್ರದರ್ಶನವನ್ನು ಮಾಡುತ್ತಾರೆ. (2) ಸಾಧ್ವೀಮಣಿಯವರಿಗೆ ಅಕಾಲದಲ್ಲಿಯೇ ಕೈಲಾಸವಾಸವು ಪ್ರಾಪ್ತವಾದುದರಿಂದಲೂ ಕಾಲೇಜಿನ ವಿಪತ್ತಿನೊಳಗೆ ಶ್ರೀಮತಿಯವರು ಪರಂಧಾಮವನ್ನು ಹೊಂದಿದುದರಿಂದ ಅದರ ವಿಘ್ನಪರಂಪರೆಗಳು ಹೆಚ್ಚಾಗಬಹುದಾದುದರಿಂದಲೂ ಅವರ ಪುತ್ರೀ ಶ್ರೀಮತಿ ಕಸ್ತೂರಿಅಮ್ಮನವರಿಗೂ ಅವರ ಸಹೋದರ ವರ್ಗದವರಿಗೂ ಬಂಧುಬಾಂಧವರಿಗೂ ಉಂಟಾದ ದುಃಖದಲ್ಲಿ ಮೇಲೆ ಕಾಣಿಸಿದ ನಾವೆಲ್ಲರೂ ಪಾಲುಗಾರರಾಗಿರುತ್ತೇವೆ. (3) ಶ್ರೀಮತಿಯವರು ವೀರಶೈವ ಸಮಾಜದಲ್ಲಿ ವಿದ್ಯಾಭಿವೃದ್ಧಿಗಾಗಿ 50 ಸಾವಿರ ರೂ. ಗಳನ್ನು ಕೊಟ್ಟು ಸನಾತನಧರ್ಮವನ್ನು ಪುನರುಜ್ಜೀವನಗೊಳಿಸಿದ್ದಕ್ಕಾಗಿ ನಾವೆಲ್ಲರೂ ಅವರ ಆತ್ಮಕ್ಕೆ ಶಾಂತಿಯನ್ನೂ ಯಾವತ್ತು ಬಂಧುವರ್ಗದವರಿಗೆ ಸಮಾಧಾನವನ್ನೂ ಶ್ರೀ ಪರಮಾತ್ಮನು ದಯಪಾಲಿಸಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ. (4) ಶ್ರೀಮತಿಯವರು ಇದುವರೆಗೂ ಕಾಲೇಜಿನ ಮೇಲೆ ಯಾವ ವಿಧವಾಗಿ ಮಮತೆಯುಳ್ಳವರಾಗಿದ್ದರೊ ಅದೇ ಪ್ರಕಾರ ಅವರ ಪುತ್ರಿಯವರಾದ ಶ್ರೀಮತಿ ಕಸ್ತೂರಿಅಮ್ಮನವರೂ ಕಾಲೇಜಿನ ಅಧ್ಯಾಪಕರ ವಿಷಯದಲ್ಲಿ ಸಹೋದರ ಭಾವವನ್ನೂ, ವಿದ್ಯಾರ್ಥಿಗಳ ವಿಷಯದಲ್ಲಿ ಪುತ್ರವಾತ್ಸಲ್ಯವನ್ನೂ ಸದಾ ಇಡುವವರಾಗಬೇಕೆಂದು ಕೋರುತ್ತೇವೆ.

ಶಿವಕಂಠಸ್ವಾಮಿ, ಭೈರಾಪುರ ಹಿರೇಮಠ
ಶಂಕರ ಸಂಸ್ಕೃತಕಾಲೇಜು, ಯಾದಗಿರಿ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾಧಿವೇಶನದಲ್ಲಿ ದಿವಾನ್ ಸಾಹೇಬರವರು ಅಪ್ಪಣೆಕೊಡಿಸಿದ ಭಾಷಣ.

1932ನೆಯ ಇಸವಿ ಅಕ್ಟೋಬರ್ 10ನೆಯ ತಾರೀಖು.

1 ನೆಯ ಭಾಗ.

ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿರಾ, ಈ ಅಧಿವೇಶನಕ್ಕೆ ತಮ್ಮೆಲ್ಲರನ್ನೂ ಆದರದಿಂದ ಬರಮಾಡಿಕೊಂಡು ಸ್ವಾಗತವನ್ನು ಬಯಸುವ ಗೌರವವು ನನಗೆ ದೊರೆತಿದೆ.

ದಿವಂಗತರಾದ ಮಿ॥ ಬನುಮಯ್ಯನವರು—ನಾವು ಈ ದಿನದ ಸಭಾ ಕಾರ್ಯವನ್ನು ಪ್ರಾರಂಭಿಸುವುದಕ್ಕೆ ಮೊದಲು, ಈ ಸಭೆಯ ಸದಸ್ಯರಾಗಿ ನಮ್ಮೊಡನೆ ಸೇರಿದವರಾಗಿದ್ದು ಈಚೆಗೆ ದಿವಂಗತರಾದ ರಾವ್‌ಬಹದ್ದೂರ್ ಧರ್ಮಪ್ರಕಾಶ ಡಿ. ಬನುಮಯ್ಯನವರನ್ನು ಗೌರವಪುರಸ್ಸರವಾಗಿ, ಸ್ಮರಿಸಿ, ಅವರ ಮರಣಕ್ಕಾಗಿ ನಮ್ಮ ವಿಷಾದವನ್ನು ವ್ಯಕ್ತಗೊಳಿಸುವುದು ನಮ್ಮ ಅವಶ್ಯ ಕರ್ತವ್ಯವಾಗಿದೆ. ಈ ಕರ್ತವ್ಯದಲ್ಲಿ ತಾವುಗಳೆಲ್ಲರೂ ನನ್ನೊಡನೆ ಭಾಗಿಗಳಾಗಬೇಕೆಂದು ನಾನು ಕೋರುತ್ತೇನೆ. ಅವರು ತಮ್ಮ ಜೀವಮಾನದ ದೀರ್ಘಕಾಲದಲ್ಲಿ ಸಂಸ್ಥಾನದ ಸೇವೆಗಾಗಿ ಮಾಡಿದ ಸಹಾಯಗಳ ವಿವರಗಳನ್ನೆಲ್ಲ ನಾನು ತಮಗೆ ಶ್ರುತಪಡಿಸಬೇಕಾದುದು ಅನಾವಶ್ಯಕ. ಅವರು ಸ್ವಲ್ಪ ಮಟ್ಟಿಗೆ ಬಡತನದಿಂದಲೇ ಕೂಡಿದ್ದ ಮನೆತನದಲ್ಲಿ ಹುಟ್ಟಿ, ಬಡವರ ಮಧ್ಯದಲ್ಲೇ ಬೆಳೆದು, ಬಡತನದ ಕಷ್ಟಗಳನ್ನು ಕಣ್ಣಾರ ಕಂಡು ಅನುಭವಿಸಿದ್ದರು. ಆದಕಾರಣ, ಬಡವರ ತೊಂದರೆಗಳನ್ನು ಕಡಿಮೆ ಮಾಡಲು ಯಾವ ಯಾವ ಸಹಾಯಗಳಾಗಬೇಕೆಂಬುದು ಅವರಿಗೆ ಚೆನ್ನಾಗಿ ಗೊತ್ತಿದ್ದಿತು. ಮುಂದೆ ಅವರು ತಮ್ಮ ಶಕ್ತಿಸಾಮರ್ಥ್ಯಗಳ ಪ್ರಭಾವದಿಂದ ಶ್ರೀಮಂತರಾಗಿ ಹೇರಳವಾಗಿ ಹಣವನ್ನು ಗಳಿಸಿ ಶೇಖರಿಸಿದರು. ಬಡವರಿಗೆ ಅತ್ಯವಶ್ಯವಾಗಿ ನಡೆಯಬೇಕಾದ ಸಹಾಯಗಳೆಂದು ಅವರ ಮನಸ್ಸಿಗೆ ತೋರಿಬಂದ ನಾನಾ ಧರ್ಮ ಕಾರ್ಯಗಳಿಗೂ ಅವರು ಔದಾರ್ಯದಿಂದಲೂ ವಿವೇಚನೆಯಿಂದಲೂ ಧನ ಸಹಾಯ ಮಾಡಿದರು. ಹೀಗೆ ಸಹಾಯ ಮಾಡಬೇಕಾದುದು ಅತ್ಯಗತ್ಯವೆಂದು ಅವರು ಭಾವಿಸಿದ್ದ ನಾನಾ ಕಾರ್ಯಗಳಿಗೂ, ಅವರು ತಮ್ಮ ಸಂಪತ್ತಿನ ಹೆಚ್ಚು ಭಾಗವನ್ನೇ ಮುಕ್ತಹಸ್ತದಿಂದ ದಾನಮಾಡಿದರು. ಈ ಮೈಸೂರು ನಗರದಲ್ಲಿ ಜನಜೀವನದ ಎಲ್ಲಾ ಧರ್ಮ ಕಾರ್ಯಗಳಿಗೂ ಅವರಿಂದ ಧನ ಸಹಾಯವು ದೊರೆತಿದೆಯೆನ್ನಬಹುದು. ನಾನಾ ಜೀವನದಶೆಗಳಲ್ಲಿ ಯಾವುದೊಂದರಲ್ಲಿರುವ ಬಡವರಾದ ಮೈಸೂರು ನಗರ ನಿವಾಸಿಗಳಿಗೂ ಅವರ ಧರ್ಮ ಸಹಾಯವು ತಪ್ಪಿಲ್ಲ. ನಾವುಗಳೆಲ್ಲರೂ ಅವರನ್ನು ಮನಸ್ಸಿನಲ್ಲಿ ಸ್ಮರಿಸಿ ಪ್ರೀತಿ ಗೌರವಗಳನ್ನರ್ಪಿಸುವುದರಲ್ಲಿಯೂ, ಇವರ ವಿಯೋಗದಿಂದ ಸಂತಪ್ತರಾದ ಇವರ ಕುಟುಂಬದವರಿಗೆ ನಮ್ಮ ಮನಃಪೂರ್ವಕವಾದ ಸಹಾನುಭೂತಿಯನ್ನೂ ಅನುಕಂಪನವನ್ನೂ ತಿಳಿಸುವುದರಲ್ಲಿಯೂ, ಈ ಸಭೆಯ ಸದಸ್ಯರೆಲ್ಲರೂ ನನ್ನೊಡನೆ ಭಾಗಿಗಳಾಗುವರೆಂದು ನಾನು ನಂಬಿದ್ದೇನೆ.

ಪ್ರಪಂಚದ ಸ್ಥಿತಿಗತಿಗಳು—ಈ ಅಧಿವೇಶನದಲ್ಲಿ ನಾವು ಈಗ ಸಭೆ ಸೇರಿರುವ ಸಮಯವಾದರೂ, ಎಂತಹುದೆಂಬುದನ್ನು ನೋಡಿ ಪ್ರಪಂಚದ ಇತಿಹಾಸದಲ್ಲೇ ಅತಿ ಮುಖ್ಯವಾದ ಅವಧಿಗಳಲ್ಲೊಂದೆಂಬುದಾಗಿ ಪರಿಗಣಿಸಲ್ಪಟ್ಟು ಮುಂದೆ ಎಂದೆಂದಿಗೂ ನೆನಪಿನಲ್ಲಿ ನಿಲ್ಲುವಂತಹುದಾದ ಅವಧಿಗೆ ಸೇರಿದುದಾಗಿರುವ ಸಮಯದಲ್ಲಿ ಈ ಅಧಿವೇಶನವು ನಡೆಯುತ್ತಿದೆ. ಕಳೆದ ವರುಷದಲ್ಲಿ ನಾವು, ಪ್ರಪಂಚವೇ ಘೋರವಾದುದೊಂದು ಆರ್ಥಿಕ ವಿಪತ್ತಿಗೆ ಗ್ರಾಸವಾಗುವುದೋ—ಎಂದು ತೋರುತ್ತಿದ್ದ ದುರವಸ್ಥೆಯ ಪರಿಸ್ಥಿತಿಯಲ್ಲಿದ್ದೆವು. ಜೀವನಕ್ಕೆ ಬೇಕಾದ ಪ್ರತಿಯೊಂದು ಮುಖ್ಯವಸ್ತುವೂ, ಅದಕ್ಕೆ ಗಿರಾಕಿಯಿದ್ದುದಕ್ಕಿಂತಲೂ ತೀರ ಹೆಚ್ಚಿನ ಪ್ರಮಾಣದಲ್ಲಿ ಸಿದ್ಧಗೊಳಿಸಲ್ಪಟ್ಟದ್ದಿತು. ಆದರೆ, ಎಲ್ಲ ವಸ್ತುಗಳೂ ಸಮೃದ್ಧವಾಗಿದ್ದರೂ, ಪ್ರಪಂಚದಲ್ಲೆಲ್ಲ ಅನೇಕ ಕೋಟಿ ಜನರು ಹೊಟ್ಟೆಗಿಲ್ಲದೆ ಪಾಡುಪಡುವ ವಿಚಿತ್ರವಾದ ಪರಿಸ್ಥಿತಿಯೊದಗಿದ್ದಿತು. ಎಲ್ಲಿ ನೋಡಿದರೂ ಹಣಕಾಸಿನ ಮುಗ್ಗಟ್ಟೇ. ವ್ಯಾಪಾರ ಸಂಘಗಳಲ್ಲಿ ಡಿವಿಡೆಂಡುಗಳೆಂಬ ಲಾಭದ ವೊಬಲಗಿನ ಹಂಚಿಕೆಗಳು ನಡೆಯುವುದು ನಿಂತುಹೋಗಿದ್ದಿತು. ಅನೇಕರು ತಾವು ಕೊಡಬೇಕಾದ ಸಾಲಗಳೇ ಮುಂತಾದ ವೊಬಲಗುಗಳನ್ನು ತೀರಿಸಲು ಅಸಮರ್ಥರಾದರು. ವ್ಯಕ್ತಿಗಳ ಮಾತು ಹಾಗಿರಲಿ. ಕೆಲವು ಸರ್ಕಾರಗಳಿಗೂ ಇದೇ ಸ್ಥಿತಿಯೊದಗಿತು. ಕೆಲವು ಸರ್ಕಾರಗಳವರು ತಾವು ಇತರ ಸರ್ಕಾರಗಳಿಗೆ ಕೊಡಬೇಕಾದ ಹಣವನ್ನು ಕೊಡದೆ ನಿರಾಕರಿಸುವವರಾಗಿದ್ದಾರೆಂಬ ವದಂತಿಯೂ ಕೂಡ, ಎಲ್ಲೆಲ್ಲಿಯೂ ಹರಡಿತ್ತು.

ಕಳೆದ ಕೆಲವು ತಿಂಗಳುಗಳಿಂದ ಉಂಟಾಗಿರುವ ಪರಿಸ್ಥಿತಿಯನ್ನು ನೋಡಿದರೆ, ವಿದ್ಯಮಾನಗಳು ಸರ್ವಸಾಧಾರಣವಾದ ಸ್ತಿಮಿತ ಸ್ಥಿತಿಗೆ ಬರುವುದರ ಸೂಚನೆಯು ತಲೆದೋರುತ್ತಿದೆಯೆಂದು ಹೇಳಬಹುದಾಗಿದೆ. ಬ್ರಿಟಿಷ್ ಸರ್ಕಾರದವರೂ ಮತ್ತು ಫ್ರೆಂಚ್ ಸರ್ಕಾರದವರೂ, ಭಾರಿ ಪರಿವರ್ತನದ ಏರ್ಪಾಡುಗಳ ಮೂಲಕ ಬಡ್ಡಿಯಲ್ಲಿ ಅನೇಕ ಕೋಟಿ ರೂ. ತಮಗೆ ಮಿಗುವಂತೆ ಏರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಇಂಡಿಯಾ ಸರ್ಕಾರದವರು ಬಹಳ ಕಡಿಮೆ ಬಡ್ಡಿಯ ದರದಲ್ಲಿ ಹೊಸ ಸಾಲ ಒಂದನ್ನು ಏರ್ಪಡಿಸಿದ್ದಾರೆ. ಹಣವನ್ನು ಠೇವಣಿ ಇಡತಕ್ಕ ಜನರಿಗೆ ತಮ್ಮ ಹಣಕ್ಕೆ ಲೋಪ ಬರುವುದಿಲ್ಲವೆಂಬುದಾಗಿ ಮತ್ತೆ ಪೂರ್ವದಂತೆಯೇ ನಂಬಿಕೆಯುಂಟಾಗುತ್ತಿದೆ. ಧಾರಣೆಗಳು ಏರುವ ಸೂಚನೆಯೂ ಕಂಡು ಬರುತ್ತಿದೆ. ಎಲ್ಲಕ್ಕಿಂತಲೂ ಮುಖ್ಯವಾಗಿ, ಜನಾಂಗಗಳೆಲ್ಲವೂ ಒಟ್ಟಾಗಿ ಸೇರಿರುತ್ತವೆ. ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿದ ನಾನಾ ಭಾಗಗಳ ಪ್ರತಿನಿಧಿಗಳೂ ಅಟ್ಟಾವಾ ನಗರದ ಮಹಾ ಸಮ್ಮೇಳನವನ್ನು ನಡೆಯಿಸಿದುದನ್ನೂ ಅದರ ಫಲಿತಾಂಶಗಳನ್ನೂ ಇದಕ್ಕೆ ನಿದರ್ಶನವಾಗಿ ಹೇಳಬಹುದಾಗಿದೆ. ಜಿನಿವಾ ಪಟ್ಟಣದಲ್ಲಿ ಇತರ ಜನಾಂಗಗಳೊಡನೆ ನಡೆಯುವುದಾಗಿರುವ ಇದೇ ಬಗೆಯ ಸಮ್ಮೇಳನದಿಂದ ಅನೇಕ ಮಹತ್ತರವಾದ ಪ್ರಯೋಜನಗಳು ಲಭಿಸಬಹುದೆಂದು ನಾವು ನಿರೀಕ್ಷಿಸಿದ್ದೇವೆ.

ಸಂಯುಕ್ತ ರಾಜ್ಯಾಂಗ ವ್ಯವಸ್ಥೆ—ಒಟ್ಟು ಪ್ರಪಂಚಕ್ಕೇ ಒದಗಿದ ಈ ದುರವಸ್ಥೆಯು ನಮಗೆ ಕಲಿಸಿರುವ ಉದಾತ್ತ ತತ್ತ್ವವೊಂದಿದೆ. ಅದು ಯಾವುದೆಂಬುದನ್ನು ನಾನು ತಮ್ಮೆಲ್ಲರಿಗೂ ಹೊಸದಾಗಿ ತಿಳಿಸಬೇಕಾದ ಅವಶ್ಯಕತೆಯೇ ಇಲ್ಲ. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಏರ್ಪಡುವುದೊಂದೇ ಈ ಬಗೆಯ ದುರವಸ್ಥೆಗಳ ಪರಿಹಾರಕ್ಕೆ ದಿವ್ಯೌಷಧವೆಂದು, ಒಂದೇ ವಾಕ್ಯದಲ್ಲಿ ಈ ತತ್ತ್ವವನ್ನು ಹೇಳಬಹುದಾಗಿದೆ. ಅತಿ ಶೀಘ್ರವಾಗಿ ಪ್ರಯಾಣಮಾಡುವ ಸಾಧನಗಳು ಏರ್ಪಟ್ಟಿರುವ ಕಾರಣ, ದೂರದೇಶವೆಂಬ ಹೆಸರೇ ಈಗ ಮಾಯವಾಗುತ್ತಿದೆ. ವ್ಯಾಪಾರ ವ್ಯವಹಾರಗಳಲ್ಲಿ ಸಮಾನ ಧರ್ಮಗಳುಳ್ಳವರಿರುವ ಅಹೋರಾತ್ರಗಳೂ, ಹಿತಸಾಧನೆಯ ಬುದ್ಧಿಯೂ, ಅಂತು ರಿಸುತ್ತಿವೆ. ವಾಣಿಜ್ಯ ಸಂಬಂಧವಾದ ಉದ್ಯಮಗಳನ್ನು ಜನರು ಅನ್ಯೋನ್ಯ ಭಾವದಿಂದ ಒಟ್ಟುಗೂಡಿಸುತ್ತಿದ್ದಾರೆ. ಹೀಗೆ ನಡೆಯುತ್ತಿರುವ ಈಗಿನ ಕಾಲದಲ್ಲಿ ಯಾವುದೊಂದು ರಾಷ್ಟ್ರದವರೇ ಆಗಲಿ, ತಮ್ಮ ನೆರೆಹೊರೆಯ ರಾಷ್ಟ್ರಗಳ ಸಹಾಯವನ್ನೇ ಕೋರದೆ, ತಮಗೆ ಅಗತ್ಯವಾದ ಎಲ್ಲಾ ಆವಶ್ಯಕತೆಗಳನ್ನೂ ತಾವೇ ಒದಗಿಸಿಕೊಂಡು, ತಮ್ಮ ಪಾಡಿಗೆ ತಾವೇ ಪ್ರತ್ಯೇಕವಾಗಿರಬೇಕೆಂದು ಪ್ರಯತ್ನಿಸುವುದು ಅಸಾಧ್ಯ ಪ್ರಕರಣವೇ ಸರಿ. ಸರಿಯಾದ ರೀತಿಯಲ್ಲಿ ಈಗ ಕೆಲಸ ನಡೆಯಬೇಕಾದರೆ, ಸರ್ವಸಾಧಾರಣವಾಗಿ ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಸಂಯುಕ್ತ ವ್ಯವಸ್ಥೆಯನ್ನೇರ್ಪಡಿಸಿಕೊಳ್ಳುವುದೊಂದೇ ದಾರಿ. ಫ್ರೆಂಚ್ ಪ್ರೆಸಿಡೆಂಟರಾಗಿದ್ದ ಬ್ರಿಯಾಂಡ್‌ರವರು, ಒಟ್ಟು ಯೂರೋಪುಖಂಡದ ಎಲ್ಲಾ ದೇಶಗಳೂ ಒಟ್ಟುಗೂಡಿ ಸಂಯುಕ್ತ ಸಂಸ್ಥಾನಗಳಾಗಿ ಏರ್ಪಡಬೇಕೆಂಬ ಘನತರವಾದ ವ್ಯವಸ್ಥೆಯನ್ನು ಸೂಚಿಸಿದುದೂ, ಫ್ರಾನ್ಸಿನ ಪ್ರಧಾನ ಸಚಿವರಾದ ಎಡ್ವಾರ್ಡ್ ಹೆರಿಯೋರವರು ಅದೇ ವಿಷಯವನ್ನೇ ಅದ್ಭುತರೀತಿಯಲ್ಲಿ ವಿಶದವಾಗಿ ವಿವರಿಸಿ ಒಂದು ಗ್ರಂಥವನ್ನು ಬರೆದಿರುವುದೂ, ತಮ್ಮೆಲ್ಲರಿಗೂ ತಿಳಿದೇ ಇರಬೇಕೆಂದು ತೋರುತ್ತದೆ. ಈಗ ನಡೆಯುತ್ತಿರುವ ಅನೇಕ ವ್ಯವಹಾರ ಸಂಬಂಧಗಳೂ ಈಗಾಗಲೇ ಸಂಯುಕ್ತ ವ್ಯವಸ್ಥೆಯ ರೂಪವನ್ನವಲಂಬಿಸುತ್ತಿವೆ ಎಂಬುದನ್ನು ಅವರು ಆ ಗ್ರಂಥದಲ್ಲಿ ತೋರ್ಪಡಿಸಿದ್ದಾರೆ. ಇದೀಗ ನನ್ನ ಮನಸ್ಸಿಗೆ ಆ ಗ್ರಂಥದ ಅದ್ಭುತ ಲಕ್ಷಣವೆಂದು ತೋರುತ್ತದೆ ಕೆಲವು ಅಂಶಗಳನ್ನು ನಿದರ್ಶನವಾಗಿ ತೆಗೆದುಕೊಂಡು ಅವರು ಈ ವಿಚಾರವನ್ನು ಬಹು ಚೆನ್ನಾಗಿ ತೋರ್ಪಡಿಸಿದ್ದಾರೆ. ಆ ರೀತಿ ಅವರು ಉದಹರಿಸಿರುವ ಅಂಶಗಳು ಯಾವುವೆಂದರೆ—ಅಂಚೆಯ ವ್ಯವಸ್ಥೆ, ರೈಲ್ವೆಗಳ ಶಿಸ್ತು, "ಟ್ಯಾರಿಫ್" ಎಂಬ ರಕ್ಷಣೆಯ ಸುಂಕಗಳನ್ನು ಬಿಟ್ಟು ಇತರ ಸುಂಕದ ತೆರಿಗೆಗಳ ಶಿಸ್ತುಗಳ ಏಕೀಕರಣ, ತಂತಿಯ ಸಹಾಯವಿಲ್ಲದೆ ವಾರ್ತೆಗಳೇ ಮುಂತಾದುವುಗಳನ್ನು ಕಳುಹಿಸಿ ಪ್ರಚಾರ ಮಾಡುವುದರ ಕ್ರಮ, ವಿಮಾನಗಳ ಸಂಚಾರಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ವಾಯುಮಂಡಲದ ಮೇಲೆ ಜಂಟಿ ಹಕ್ಕೊಟಿಯಿರುವಂತೆ ಮಾಡುವುದಕ್ಕಾಗಿ ನಡೆದಿರುವ ಕಾರ್ಯಕಲಾಪಗಳು, ಕೂಲಿಗಾರರಿಗೂ, ಜನಾರೋಗ್ಯರಕ್ಷಣೆಗೂ, ಹಣದ ಆಡಳಿತಕ್ಕೂ ಮತ್ತು ಸಾಮಾನ್ಯತಃ ಆರ್ಥಿಕ ವಿಚಾರಗಳಿಗೂ, ಸಂಬಂಧಪಟ್ಟ ವಿಚಾರಗಳ ನಾನಾ ಶಿಸ್ತುಗಳ ಏಕೀಕರಣವು ನಡೆಯಬೇಕೆಂಬುದಾಗಿ ಜನರಲ್ಲಿ ಆಸಕ್ತಿಯು ಅಂಕುರಿಸಿ ಅದಕ್ಕನುಸಾರವಾಗಿ ಕೆಲಸ ನಡೆಯುವ ಸೂಚನೆಗಳು ತಲೆದೋರಿರುವುದು—ಇವುಗಳೇ ಅವರು ನಿದರ್ಶನವಾಗಿ ತೆಗೆದುಕೊಂಡಿರುವ ಆ ಅಂಶಗಳು. ಯೂರೋಪು ಖಂಡದ ನಾನಾ ದೇಶಗಳಲ್ಲಿಯೂ ಹರಿಯುವ ಡ್ಯಾನ್ಯೂಬ್ ನದಿಯ ನೀರನ್ನು ಉಪಯೋಗಿಸಿಕೊಳ್ಳುವುದೇ ಮುಂತಾದ ವಿಷಯಗಳಲ್ಲಿ ನಾನಾ ದೇಶಗಳವರೂ ಕಾರ್ಯತಃ ಸಂಯುಕ್ತ ವ್ಯವಸ್ಥೆಗಳ ರೂಪದ ಏರ್ಪಾಡುಗಳನ್ನೇ ಮಾಡಿಕೊಂಡಿರುವುದನ್ನೂ ಅವರು ತಮ್ಮ ಪುಸ್ತಕದಲ್ಲಿ ನಿದರ್ಶನವಾಗಿ ಸೂಚಿಸಿದ್ದಾರೆ. ಯೂರೋಪು ಖಂಡದ ನಾನಾ ದೇಶಗಳಲ್ಲಿಯೂ ಬಗೆಬಗೆಯ ಭಾರಿಭಾರಿ ಕೈಗಾರಿಕೆಗಳು ನಡೆಯುತ್ತಿವೆಯಷ್ಟೆ. ಒಂದೇ ಕೈಗಾರಿಕೆಯು ಅನೇಕ ದೇಶಗಳಲ್ಲಿ ನಡೆಯುತ್ತಿದ್ದರೆ, ಆ ಕೈಗಾರಿಕೆಯ ಕಾರ್ಖಾನೆಗಳವರಲ್ಲಿ ಸ್ಪರ್ಧೆಯು ಹುಟ್ಟಿ ಅನರ್ಥವಾಗುವ ಸಂಭವವುಂಟು. ಅದಕ್ಕೆ ಅವಕಾಶಕೊಡದೆ ಅವರುಗಳು ತಮ್ಮೆಲ್ಲರ ಯೋಗಕ್ಷೇಮವನ್ನೂ ಕಾಪಾಡಿಕೊಳ್ಳುವುದಕ್ಕಾಗಿ ವ್ಯವಸ್ಥೆಯ ಒಪ್ಪಂದಗಳನ್ನು ಮಾಡಿಕೊಂಡು ವರ್ತಿಸಿದರೆ ಎಲ್ಲರಿಗೂ ಅನುಕೂಲವುಂಟು. ಪ್ರತಿಯೊಂದು ಭಾರಿ ಕೈಗಾರಿಕೆಯ ಸಂಬಂಧದಲ್ಲಿಯೂ, ಈಗ ಈ ರೀತಿ "ಕಾರ್ಟೆಲ್" ಎಂಬ ಒಪ್ಪಂದದ ವ್ಯವಸ್ಥೆಯು ಏರ್ಪಟ್ಟಿದೆ. ಈ ರೀತಿ ಒಪ್ಪಂದದ ವ್ಯವಸ್ಥೆಗಳು ನಡೆದಿರುವುದನ್ನು ನೋಡಿದರೆ, ಸಂಯುಕ್ತ ವ್ಯವಸ್ಥೆಯ ಮಾರ್ಗದಲ್ಲಿ ಒಂದೆರಡು ಮಜಲುಗಳ ಪ್ರಯಾಣವು ಸಾಗಿದಂತಾಗಿದೆಯೆನ್ನಬಹುದೆಂದೂ ಫ್ರಾನ್ಸಿನ ಸಚಿವರು ತಮ್ಮ ಗ್ರಂಥದಲ್ಲಿ ಹೇಳಿದ್ದಾರೆ.

ಫ್ರಾನ್ಸಿನ ಪ್ರಧಾನಸಚಿವರು ಬರೆದಿರತಕ್ಕ ಪುಸ್ತಕದಲ್ಲಿರುವ ಈ ಅಂಶಗಳು, ಇಂಡಿಯಾ ದೇಶದಲ್ಲಿ ವಿಶೇಷವಾಗಿ ಈಗ ಚರ್ಚೆಯಲ್ಲಿರುವ ಅನೇಕ ವಿಚಾರಗಳಿಗೂ ಸಹ, ಅನ್ವಯಿಸತಕ್ಕವಾಗಿವೆ. ಒಂದು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಏರ್ಪಡುವುದಕ್ಕೆ ಬೇಕಾದ ಅನೇಕ ಮುಖ್ಯ ಲಕ್ಷಣಗಳೂ ಸಹ, ಈಗ ಇಂಡಿಯಾ ದೇಶದಲ್ಲಿ ಕಾರ್ಯತಃ ಇದ್ದೇ ಇವೆ. ಆದಕಾರಣ, ಅವಕ್ಕೊಂದು ರೂಪವನ್ನು ಕೊಟ್ಟು ಸ್ಫುಟಮಾಡಿ, ಅಚ್ಚುಕಟ್ಟಾದ ಪೂರ್ಣ ಸಂಯುಕ್ತ ವ್ಯವಸ್ಥೆಯನ್ನೇರ್ಪಡಿಸಬೇಕಾದುದು ಆರ್ಥಿಕ ಪ್ರಗತಿ ನಿಯಮಗಳ ದೃಷ್ಟಿಯಿಂದ ಸದ್ಯದಲ್ಲಿ ಅತ್ಯಾವಶ್ಯಕವಾಗಿ ಪರಿಣಮಿಸಿದೆ.

ಪರ್ಸಿ ಮತ್ತು ಡೇವಿಡ್ಸನ್ ಸಮಿತಿಗಳು—ಆದಕಾರಣ, ಇಷ್ಟರಲ್ಲೇ ಇಂಗ್ಲೆಂಡಿನಲ್ಲಿ ಮತ್ತೊಂದು "ರೌಂಡ್‌ಟೇಬಲ್" ಸಮ್ಮೇಳನವು ನಡೆಯುವುದೆಂಬುದಾಗಿ ಬ್ರಿಟಿಷ್ ಸರ್ಕಾರದವರು ತಿಳಿಸಿರುವ ವಾರ್ತೆಯನ್ನು ಕೇಳಿ ನಾವು ಸಂತೋಷಪಡಲೇ ಬೇಕಾಗಿದೆ. ಆದಾಗ್ಯೂ, ಈ ಚರ್ಚೆಗೆ ಪೂರ್ವಭಾವಿಯಾಗಿ ಕೆಲವು ಅಂಶಗಳನ್ನು ಇಂಡಿಯಾ ದೇಶದಲ್ಲಿ ವಿಚಾರಮಾಡಿ ವರದಿಗಳನ್ನು ಒಪ್ಪಿಸುವುದಕ್ಕಾಗಿ ನೇಮಕವಾಗಿದ್ದ 2 ಸಮಿತಿಗಳವರೂ ಒಪ್ಪಿಸಿರುವ ವರದಿಗಳನ್ನು ನೋಡಿ ನಮಗೆ ಆತಂಕವುಂಟಾಗಿದೆಯೆಂಬುದನ್ನೂ ನಾವು ಮರೆಯುವಂತಿಲ್ಲ. ಈ ಸಮಿತಿಗಳನ್ನು ನೇಮಕಮಾಡುವಲ್ಲಿ ಸಮಿತಿಗಳವರ ಪರಿಶೀಲನೆಗೆ ವಹಿಸಿದ್ದ ವಿಷಯಗಳೇ ಪ್ರಥಮತಃ ನಮ್ಮ ಆತಂಕಕ್ಕೆ ಕಾರಣಗಳಾಗಿವೆಯೆಂದು ಹೇಳಬೇಕಾಗಿದೆ. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಶಿಸ್ತು ಏರ್ಪಡುವುದಕ್ಕೆ ಮುಂಚಿನ ಸಾಲಗಳ ವಿಚಾರದಲ್ಲಿ ಯಾವ ಕ್ರಮವನ್ನನುಸರಿಸಬೇಕೆಂಬ ವಿಷಯ, ತೆರಿಗೆಗಳನ್ನು ವಿಧಾಯಕಮಾಡುವ ಅಧಿಕಾರಗಳು, ಹುಟ್ಟುವಳಿಯು ಬರುವ ಹೊಸ ಬಾಬುಗಳ ವಿಷಯ, ತಾತ್ಕಾಲಿಕವಾಗಿ ತೆರಿಗೆಗಳನ್ನು ವಿಧಿಸುವ ವಿಷಯ, ಸಾಲಗಳನ್ನು ಮಾಡುವ ಅಧಿಕಾರ. ಇವುಗಳನ್ನೆಲ್ಲಾ ಕುರಿತು ವಿಚಾರ ಮಾಡಬೇಕೆಂಬುದಾಗಿ ಬಹಳ ಹೆಚ್ಚಿನ ಅಧಿಕಾರವನ್ನು ಪರ್ಸಿ ಸಮಿತಿಯವರಿಗೆ (ಫೆಡರಲ್ ಫೈನಾನ್ಸ್ ಸಮಿತಿಯವರಿಗೆ) ಬ್ರಿಟಿಷ್‌ರ ಸರ್ಕಾರದವರು ವಹಿಸಿದ್ದರು. ಆದರೆ ಸಮಿತಿಯವರು ಹೀಗೆ ಮಾಡುವುದರಲ್ಲಿ ಸಂಯುಕ್ತ ಸರ್ಕಾರಕ್ಕೂ ಮತ್ತು ಪ್ರಾಂತಿಕ ಸರ್ಕಾರಗಳಿಗೂ ಪರಸ್ಪರವಾಗಿ ಸಂಬಂಧಪಡುವಷ್ಟುಮಟ್ಟಿನ ವ್ಯವಹಾರ ವಿಚಾರಗಳಲ್ಲಿ ಮಾತ್ರವೇ ಪ್ರವರ್ತಿಸಿ ವರದಿಯನ್ನೊಪ್ಪಿಸಬೇಕೆಂದು ಗೊತ್ತಾಗಿದ್ದಿತು. ಎಂದರೆ, ಸಂಸ್ಥಾನಗಳ ವಿಚಾರವನ್ನೂ ಪರಿಗಣಿಸಿ ಅವುಗಳೂ ಸೇರುವ ಒಟ್ಟು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಹಣಕಾಸಿನ ಆಡಳಿತದ ಶಿಸ್ತನ್ನೂ ಸಮಗ್ರವಾಗಿ ಸಿದ್ಧಗೊಳಿಸಿ ವರದಿಯನ್ನೊಪ್ಪಿಸುವ ಕೆಲಸವನ್ನು ಆ ಸಮಿತಿಯವರಿಗೆ ವಹಿಸಿರಲಿಲ್ಲ. ಡೇವಿಡ್ಸನ್ ಸಮಿತಿಯವರಿಗಾದರೋ, ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಸೇರತಕ್ಕ ಸರ್ಕಾರಗಳವರೆಲ್ಲರೂ ಏಕರೀತಿಯ ನಿಯಮದಮೇಲೆ ಅದರ ಬೊಕ್ಕಸಕ್ಕೆ ಹಣವನ್ನು ಸಂದಾಯಮಾಡುವ ಕ್ರಮವೇ ಸಂಯುಕ್ತ ವ್ಯವಸ್ಥೆಯ ಏರ್ಪಾಡಿನ ಸರ್ವೋತ್ಕೃಷ್ಟವಾದ ಶಿಸ್ತೆಂದೂ, ಈಗಿರತಕ್ಕ ಕೆಲವು ವಿದ್ಯಮಾನಗಳ ದೆಸೆಯಿಂದ, ಇಂತಹ ಶಿಸ್ತನ್ನು ಜಾರಿಗೊಳಿಸಲು ಯಾವ ಬಗೆಯ ಪರಿಣಾಮವುಂಟಾಗುವುದೆಂಬುದನ್ನು ಕುರಿತು ಪ್ರಸ್ತಾಪಿಸಿ ವರದಿಮಾಡಬೇಕೆಂದೂ, ನಿರೂಪವು ಹೋಗಿದ್ದಿತು. ಅಂತೂ, ಹೀಗಾದುದರ ಫಲವಾಗಿ ಕೇವಲ ಅಸಮಂಜಸವಾದ ಸ್ಥಿತಿಯುಂಟಾಯಿತು. ಏಕೆಂದರೆ, ಅತ್ತ ಪರ್ಸಿ ಸಮಿತಿಯವರು ಸಂಸ್ಥಾನಗಳ ವಿಚಾರವನ್ನೇ ಪರ್ಯಾಲೋಚಿಸದೆ ಕೇವಲ ಬ್ರಿಟಿಷ್ ಇಂಡಿಯಾ ಪ್ರಾಂತಗಳಿಗೂ ಸಂಯುಕ್ತ ಸರ್ಕಾರಕ್ಕೂ ಮಾತ್ರವೇ ಸಂಬಂಧಪಟ್ಟಹಾಗೆ ಹಣದ ಆಡಳಿತವು ಹೇಗೆ ನಡೆಯಬೇಕೆಂಬ ಶಿಸ್ತನ್ನು ಏರ್ಪಡಿಸಿ ವರದಿಮಾಡಿದರು. ಇತ್ತ ಡೇವಿಡ್ಸನ್ ಸಮಿತಿಯವರು ತಮ್ಮ ಅವಗಾಹನೆಗೆ ತರಲ್ಪಟ್ಟ ಯಾವುದೋ ಒಂದು ಬಗೆಯ ಆದರ್ಶಪ್ರಪಂಚದ ಆರ್ಥಿಕ ಧ್ಯೇಯಸಾಧನೆಗೆ ಈಗಿರತಕ್ಕ ಕೆಲವು ವಿದ್ಯಮಾನಗಳ ದೆಸೆಯಿಂದ ಯಾವ ವಿಧದ ಪರಿಣಾಮವುಂಟಾಗುವುದೆಂಬುದನ್ನು ಪರಿಶೀಲಿಸಬೇಕೆಂದು ಗೊತ್ತಾದುದರಿಂದ, ಮತ್ತೊಂದು ಅನನ್ವಯಕ್ಕೆ ಕಾರಣವಾಯಿತು. ಈ ಸಮಿತಿಯವರು ಹಾಗೆ ಮಾಡುವಾಗ್ಗೆ ಸುಟವಾಗಿ 1 ರೂಪಕ್ಕೆ ಬಂದಿದ್ದ ಯಾವುದೊಂದು ಸಂಯುಕ್ತ ವ್ಯವಸ್ಥೆಯ ಮಾದರಿಯನ್ನಾಗಲಿ, ಸರ್ವೋತ್ಕೃಷ್ಟವಾದ ಏರ್ಪಾಡನ್ನಾಗಲಿ, ಅಥವಾ ಸಂಯುಕ್ತವ್ಯವಸ್ಥೆಯ ಸಂಬಂಧದಲ್ಲಿ ಇತರ ಮತ್ತೇನನ್ನಾಗಲಿ, ನಿರ್ದಿಷ್ಟವಾಗಿ ಅವರು ಗಮನದಲ್ಲಿಟ್ಟುಕೊಂಡಿರಲಿಲ್ಲ. ಅವರು ಅಂತಹ ವ್ಯವಸ್ಥೆಯ ಯಾವುದನ್ನೂ ಪರಿಗಣಿಸದೆ ಏನೋ ಒಂದು ವಿಧವಾಗಿ ತಮ್ಮ ಸಲಹೆಗಳನ್ನು ಹೇಳಿ, ಸಂಯುಕ್ತ ಸರ್ಕಾರಕ್ಕೆ ಸೇರಿದ ಸರ್ಕಾರಗಳಿಂದ ಹಂಗಾಮಿಯಾಗಿ ಸ್ವಲ್ಪ ಕಾಲ ಕೆಲವು ಬಾಬುಗಳಲ್ಲಿ ಹಣವು ಹೇಗೆ ಹೇಗೆ ಸಂದಾಯವಾಗಬೇಕೆಂಬುದನ್ನು ಸೂಚಿಸಿದರು. ಆದರೆ, ಹೀಗೆ ಹಣ ಸಂದಾಯವಾಗಬೇಕೆಂಬ ಸಲಹೆಗಳಿಗೂ, ಸರ್ವೋತ್ಕೃಷ್ಟವಾದ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಏರ್ಪಾಡಿಗೂ ಸಂಬಂಧವೇ ಇಲ್ಲ. 1919 ನೆಯ ಇಸವಿಯಲ್ಲಿ ಬ್ರಿಟಿಷ್ ಇಂಡಿಯಾದ ರಾಜಕೀಯ ಸುಧಾರಣೆಗಳ ಏರ್ಪಾಡೆಂದು 1 ಶಿಸ್ತು ಏರ್ಪಟ್ಟಿತಷ್ಟೆ. ಆ ಏರ್ಪಾಡಿನಲ್ಲಿದ್ದ ಪ್ರಬಲ ದೋಷಗಳೇ ಈ ಸಮಿತಿಯವರ ಸಲಹೆಗಳಿಂದಲೂ ಮತ್ತೆ ಒದಗುವಂತಿವೆ. ಈ ಸಮಿತಿಯವರ ಸಲಹೆಗಳಿಂದ ಉಂಟಾಗುವ ಫಲವೆಂದರೆ ಅಷ್ಟು ಮಾತ್ರವೇ ಸರಿ. 1919 ನೆಯ ಇಸವಿಯ ಸುಧಾರಣೆಗಳ ಏರ್ಪಾಡನ್ನು ಯಾರೊಬ್ಬರೂ ಅನುಮೋದಿಸದೆ ಎಲ್ಲರೂ ಅದರಲ್ಲಿದ್ದ ನ್ಯೂನತೆಗಳನ್ನು ಉದ್ಘಾಟಿಸಿದ್ದರು. ಅದರಿಂದ ರಾಜಕೀಯ ವ್ಯವಸ್ಥೆಯ ಅಂಗವಾದ 1 ಭಾಗದವರನ್ನು ಮತ್ತೊಂದು ಭಾಗದವರಮೇಲೆ ಎತ್ತಿಕಟ್ಟಿದಂತಾಗುವುದಕ್ಕೆ ಅವಕಾಶವಿದ್ದಿತು. ಅದೂ ಅಲ್ಲದೆ, ಎಲ್ಲ ಭಾಗಗಳವರೂ ಕೇಂದ್ರಸರ್ಕಾರದವರಲ್ಲಿ ಭಿನ್ನಾಭಿಪ್ರಾಯದಿಂದ ವರ್ತಿಸುವುದಕ್ಕೂ ಅವಕಾಶವಿದ್ದಿತು. ಈಗಿನ ಸಲಹೆಗಳ ಪರಿಣಾಮವೂ ಒಟ್ಟಿನಲ್ಲಿ ಅದೇ ಬಗೆಯದಾಗಿ ಕೇವಲ ಅಸಮಂಜಸವಾದ ಪರಿಸ್ಥಿತಿಯುಂಟಾಗುವುದಕ್ಕೆ ಕಾರಣವಾಗುತ್ತದೆ.

ಈ ಎರಡು ಸಮಿತಿಗಳ ವರದಿಗಳಲ್ಲಿಯೂ ಇರುವ ಸಲಹೆಗಳನ್ನನುಸರಿಸಿ ಕೆಲಸಮಾಡಲು ಉಪಕ್ರಮಿಸುವುದಾದರೆ, ಮೇಲೆ ಹೇಳಿರುವ ಪರಿಣಾಮ ಫಲಗಳೇ ಪ್ರಾಪ್ತವಾದಾವೆಂಬ ದೊಡ್ಡ ಭಯವಿದೆ. ಈ ಸಲಹೆಗಳು ಮೈಸೂರು ಸಂಸ್ಥಾನದ ವಿಷಯದಲ್ಲಿ ಹೇಗೆ ಪರಿಣಾಮವನ್ನುಂಟುಮಾಡುತ್ತವೆಂಬುದನ್ನು ಕುರಿತು ಇನ್ನು ಸಂಕ್ಷೇಪವಾಗಿ ಕೆಲವು ಅಂಶಗಳನ್ನು ತಿಳಿಸುತ್ತೇನೆ.

ಪೊಗದಿ—ಡೇವಿಡ್ಸನ್ ಸಮಿತಿಯವರು ಒಪ್ಪಿಸಿರುವ ವರದಿಯ ಕೆಲವು ಭಾಗಗಳನ್ನು ಓದಿದರೆ, ನಾನಾ ಸಂಸ್ಥಾನಗಳವರೂ ಕೊಡುತ್ತಿರುವ ಪೊಗದಿಯನ್ನು ತೆಗೆದುಹಾಕಬೇಕೆಂಬ ವಿಚಾರವನ್ನು ಅವರು ಅತ್ಯಂತ ಸಮಂಜಸವಾಗಿಯೂ, ಸ್ಪಷ್ಟವಾಗಿಯೂ ವಿಶದೀಕರಿಸಿ ವಿವರಿಸಿರುವುದು ವ್ಯಕ್ತವಾಗುತ್ತದೆ. ಇದನ್ನು ಎಲ್ಲರೂ ಒಪ್ಪಲೇಬೇಕು. ಕೆಲವು ಸಂಗತಿಗಳೆಲ್ಲವನ್ನೂ ಸಮಿತಿಯವರು ಒಪ್ಪಿಕೊಂಡು ನ್ಯಾಯವೆಂದು ಅಂಗೀಕರಿಸಿದ್ದಾರೆ: ಪೊಗದಿಯನ್ನು ಗೊತ್ತುಮಾಡುವುದರಲ್ಲಿ ಒಂದು ಕ್ಲುಪ್ತವಾದ ನಿಯಮವಿಲ್ಲದೆ ಮನಸ್ಸಿಗೆ ಬಂದಂತೆ ಪೊಗದಿಯು ವಿಧಾಯಕವಾಗಿದೆಯೆಂದೂ, ಕೆಲವು ಸಂಸ್ಥಾನಗಳಿಂದ ವಸೂಲಾಗುವ ಪೊಗದಿಯು ಬಹಳ ಹೆಚ್ಚಾಗಿದೆಯೆಂದೂ, ಅನೇಕ ಸಂಸ್ಥಾನಗಳವರಿಂದ ಪೊಗದಿಯೇನೂ ಬರುತ್ತಿಲ್ಲವೆಂದೂ ಸಮಿತಿಯವರು ಸೂಚಿಸಿದ್ದಾರೆ. ಅಲ್ಲದೆ, ಕೆಲವು ಸಂಸ್ಥಾನಗಳು ಮಾತ್ರವೇ ಪೊಗದಿಯನ್ನು ಕೊಡುತ್ತಿರುವುದನ್ನೂ, ಪೊಗದಿಯನ್ನು ಕೊಡುತ್ತಿರುವ ಸಂಸ್ಥಾನಗಳಲ್ಲಿ ಕೂಡ ಪೊಗದಿಯ ಮೊಬಲಗಿನ ವಿಚಾರದಲ್ಲಿ ಅವುಗಳಿಗೆ ಪರಸ್ಪರ ವ್ಯತ್ಯಾಸವಿರುವುದನ್ನೂ ನೋಡಿದರೆ, ಏನೋ ಒಂದು ವಿಧದಲ್ಲಿ ಆಕಸ್ಮಿಕವಾಗಿ ಒದಗಿದ ಐತಿಹಾಸಿಕ ಘಟನೆಗಳ ಸನ್ನಿವೇಶ ಪರಂಪರೆಗಳನ್ನು ಉಪಯೋಗಿಸಿಕೊಂಡುದರಿಂದಲೇ ಮುಖ್ಯವಾಗಿ ಈ ರೀತಿ ಹೆಚ್ಚು ಕಡಿಮೆಗಳನ್ನು ಮಾಡುವುದಕ್ಕೆ ಕಾರಣವಾಯಿತೆಂದೂ ಸಮಿತಿಯವರು ಮನಗಂಡಿದ್ದಾರೆ. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಸಂಸ್ಥಾನಗಳು ಸೇರಿದಮೇಲೆ, ಅವುಗಳು ಅದೇ ವ್ಯವಸ್ಥೆಗೆ ಸೇರಿಯುವ ಇತರ ಪ್ರಾಂತಗಳು ಮುಂತಾದುವುಗಳ ಪ್ರಯೋಜನಕ್ಕಾಗಿ ಈ ರೀತಿ ಪೊಗದಿಯನ್ನು ಕೊಡುತ್ತಲೇ ಬರಬೇಕೆಂಬುದು ಸಂಯುಕ್ತ ರಾಜ್ಯಾಂಗ ವ್ಯವಸ್ಥಾಕ್ರಮಕ್ಕೇ ಸಮಂಜಸವಾದುದಲ್ಲವೆಂದೂ, ಆದಕಾರಣ ಈಗ ಪೊಗದಿಯನ್ನು ಕೊಡುತ್ತಿರುವ ಸಂಸ್ಥಾನಗಳವರು ಸಂಯುಕ್ತ ರಾಜ್ಯಕ್ಕೆ ಅಂಗವಾಗಿ ಸೇರಿದ ಮೇಲೆ, ತಾವು ಪರೋಕ್ಷವಾದ ತೆರಿಗೆಯ ರೂಪದಲ್ಲಿ ಇತರರು ಕೊಡುವಂತೆಯೇ ತಮ್ಮ ತಮ್ಮ ಭಾಗದ ಮೊಬಲಗುಗಳನ್ನು ಸಲ್ಲಿಸುತ್ತಿರುವುದಲ್ಲದೆ ಅದರ ಜೊತೆಗೆ ಈ ವಿಲಕ್ಷಣವಾದ ಪೊಗದಿಯ ಮೊಬಲಗನ್ನೂ ಕೂಡ ಕೊಡುವುದಕ್ಕೆ ಕಾರಣವಿಲ್ಲವೆಂಬುದಾಗಿ ಆ ಸಂಸ್ಥಾನಗಳವರು ಹೇಳುವುದು ನ್ಯಾಯವೆಂದೂ, ಅವರು ಹಾಗೆ ಹೇಳಿಯೂ ಹೇಳುತ್ತಾರೆಂದೂ ಸಹ, ಡೇವಿಡ್ಸನ್ ಸಮಿತಿಯವರು ತಿಳಿಸಿದ್ದಾರೆ.

ಒಂದು ಸಂಯುಕ್ತ ರಾಜ್ಯಾಂಗವ್ಯವಸ್ಥೆಯ ಏರ್ಪಾಡಿನಲ್ಲಿ ಪೊಗದಿಗಳಿಗೆ ಅವಕಾಶವಿಲ್ಲವೆಂದೂ, ಮತ್ತು ಸಂಯುಕ್ತ ರಾಜ್ಯಾಂಗವ್ಯವಸ್ಥೆಯು ಏರ್ಪಟ್ಟ ಕೂಡಲೆ ಪೊಗದಿಯು ಕೊನೆಗಾಣಬೇಕೆಂದೂ, ಸಮಿತಿಯವರು ಯುಕ್ತವಾದ ತೀರ್ಮಾನಕ್ಕೇ ಬಂದಿದ್ದಾರೆ. ಆದರೆ, ಪೊಗದಿಗಳನ್ನು ವಜಾ ಮಾಡುವ ವಿಚಾರದಲ್ಲಿ ಇಷ್ಟನ್ನೆಲ್ಲಾ ಹೇಳಿದ್ದಾಗ್ಯೂ, ಪೊಗದಿಯು ಯಾವಾಗ ಮತ್ತು ಹೇಗೆ ಹೋಗಬೇಕೆಂಬ ವಿಚಾರದಲ್ಲಿ ಮಾತ್ರ, ಸಮಿತಿಯವರು ಸಮಂಜಸವಲ್ಲದ ಸಲಹೆಗಳನ್ನು ಮಾಡಿರುವುದು ಆಶ್ಚರ್ಯಕರವಾಗಿದೆ. ಒಂದು ಸಂಸ್ಥಾನದವರು ಕೊಡುತ್ತಿರುವ ಪೊಗದಿಯು ಹಣದಲ್ಲಿ ಆ ಸಂಸ್ಥಾನದ ವಾರ್ಷಿಕ ಹುಟ್ಟುವಳಿಯ ಶೇಕಡ ಐದರಷ್ಟು ಮೊಬಲಗಿಗೆ ಮೀರಿರುವ ಭಾಗವನ್ನು ಮಾತ್ರ ಕೂಡಲೇ ವಜಾಮಾಡಬೇಕೆಂದೂ, ಮತ್ತು ಉಳಿದ ಮೊಬಲಗನ್ನು ಕಾಲಕ್ರಮೇಣ ಇಪ್ಪತ್ತು ವರುಷಗಳವರೆಗೂ ಹೋಗಬಹುದಾದ ಅವಧಿಯಲ್ಲಿ ವಜಾಮಾಡಬೇಕೆಂದೂ, ಈ ಸಮಿತಿಯವರು ಸಲಹೆ ಮಾಡಿದ್ದಾರೆ. ಇದೂ ಅಲ್ಲದೆ ಕೆಲವು ಸಂಸ್ಥಾನಗಳವರು ಪೊಗದಿಯನ್ನೇ ಕೊಡಬೇಕಾದುದಿಲ್ಲದ ಅನುಭವಿಸುತ್ತಿರುವ [illegible]

ಮಕ್ಕಳಿದ್ದರೆಮನೆ ಚೆಂದ.

ಮಕ್ಕಳಿಲ್ಲೆಂದು | ಚಿಂತಿಸಬೇಡಿರಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರ ಪುತ್ರಿಣಿ ಆವಿಗುರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ M. C. ೨೬

ದುಕೊಂಡು ಬರತಕ್ಕದೆಂದೂ ಈ ಸಮಿತಿಯವರು ಸಲಹೆ ಮಾಡಿರುತ್ತಾರೆ. ಆದರೆ ಪೊಗದಿಯನ್ನು ಕೊಡುತ್ತಿರುವ ಸಂಸ್ಥಾನಗಳ ಅದೇ ಬಗೆಯ ಹಕ್ಕುಗಳ ಮೂಲ್ಯದ ಮೊಬಲಗು ಮಾತ್ರ, ಪೊಗದಿಯಲ್ಲಿ ಕೂಡಲೆ ಕಡಿಮೆ ಮಾಡಬೇಕಾದ ಮೊತ್ತದಲ್ಲಿ ಉತ್ತಾರವಾಗಬೇಕೆಂದೂ ಅಥವಾ ಅದು ಆ ಮೊತ್ತಕ್ಕೇ ಸಮನಾಗಿದ್ದರೆ ಕೂಡಲೆ ಪೊಗದಿಯಲ್ಲೇನನ್ನೂ ಕಡಿಮೆ ಮಾಡಬೇಕಾಗಿಲ್ಲವೆಂದೂ ಸಮಿತಿಯವರು ಸಲಹೆ ಮಾಡಿದ್ದಾರೆ.

ಸಂಸ್ಥಾನಗಳ ಪೈಕಿ ಬಹುಸಂಖ್ಯೆಯ ಸಂಸ್ಥಾನಗಳವರು ಪೊಗದಿಯೇನನ್ನೂ ಕೊಡುತ್ತಿಲ್ಲ ; ಅಥವಾ ಕೊಟ್ಟರೂ ಹೆಸರಿಗೆ ಮಾತ್ರ ಸ್ವಲ್ಪ ಪೊಗದಿಯನ್ನು ಕೊಡುತ್ತಿದ್ದಾರೆ. ಸಮಿತಿಯವರು ಮಾಡಿರುವ ಈ ಸಲಹೆಗಳಿಂದ ಅವರಿಗೆ ಯಾವುದೊಂದು ಬಾಧಕವೂ ಉಂಟಾಗುವಂತಿಲ್ಲ. ಗಣನೀಯವಾದ ರೀತಿಯಲ್ಲಿ ಭಾರಿ ಪೊಗದಿ ಮೊಬಲಗುಗಳನ್ನು ಕೊಡುತ್ತಿದ್ದಾಗ್ಯೂ, ಈ ಮೊಬಲಗಿಗೆ ಪ್ರತ್ಯಾಮ್ನಾಯವೆನಿಸುವುದಕ್ಕಿಂತ ಬಹಳ ಹೆಚ್ಚಿನ ಹಕ್ಕುಗಳನ್ನು ಅನುಭವಿಸುತ್ತಿರುವ ಸಂಸ್ಥಾನಗಳವರೂ ಸಹ, ಈ ಸಲಹೆಗಳಿಂದ ಯಾವುದೊಂದು ತೊಂದರೆಯೆಂದೂ ಹೇಳುವುದಕ್ಕೆ ಕಾರಣವಿಲ್ಲ. ಆದರೆ, ವಿಶೇಷ ಭಾರಿಯಾಗಿ ಪೊಗದಿ ಹಣಗಳನ್ನು ಕೊಡುತ್ತಿದ್ದು ಅವುಗಳಿಗೆ ತಕ್ಕಂತೆ ವಿಶೇಷ ವಿಧದ ಅನುಕೂಲತೆಗಳೇನನ್ನೂ ಪಡೆಯದೆ ಇರುವ ಕೆಲವು ಸಂಸ್ಥಾನಗಳ ವಿಚಾರದಲ್ಲಿ ಮಾತ್ರ, ಸಮಿತಿಯವರ ಸಲಹೆಗಳಿಂದ ಬಾಧಕವುಂಟಾಗುತ್ತದೆ. ಇಂಥ ಸಂಸ್ಥಾನಗಳ ಪೈಕಿ, ಮೊದಲು ಗಮನಕ್ಕೆ ಬರುವಂತಹದಾಗಿರುವ ಸಂಸ್ಥಾನವೆ ನಮ್ಮದು. ಎಲ್ಲಾ ಸಂಸ್ಥಾನಗಳಿಗಿಂತಲೂ ಅತ್ಯಂತ ಹೆಚ್ಚು ದರದಲ್ಲಿ ಪೊಗದಿಯು ಮೈಸೂರು ಸಂಸ್ಥಾನದಿಂದ ಅನ್ಯಾಯವಾಗಿ ಸಂದಾಯವಾಗುತ್ತಿದೆ. ಅಲ್ಲದೆ ಅದಕ್ಕೆ ಪ್ರತಿಯಾಗಿ ಯಾವ ಗಣನೀಯವಾದ ಹಕ್ಕುಗಳಾಗಲಿ ಅಥವಾ ರಿಯಾಯಿತಿಗಳಾಗಲಿ ದೊರೆಯದೆ ಹೋಗಿರುವ ಸಂಸ್ಥಾನವೆಂದರೆ, ಅದು ಮೈಸೂರು ಸಂಸ್ಥಾನವೇ. ಸಂಸ್ಥಾನದಲ್ಲಿ ಕಂಡುಬರುವ ಕೈಗಾರಿಕೆಯ ಅಭಿವೃದ್ಧಿಯನ್ನೂ ಸಾಮಾನ್ಯವಾದ ಇತರ ವಿಚಾರಗಳ ಸಂಬಂಧದ ಅಭಿವೃದ್ಧಿಯನ್ನೂ ನೋಡಿದರೆ, ಯಾವ ಬಗೆಯ ಸಂಯುಕ್ತ ರಾಜ್ಯಭಾರದ ತೆರಿಗೆಯ ಏರ್ಪಾಡೇ ಆಚರಣೆಗೆ ಬಂದರೂ ಕೂಡ, ಮುಂದೆ ಸಂಸ್ಥಾನವು ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ ಅದಕ್ಕನುಸಾರವಾಗಿ ಹೆಚ್ಚಿನ ತೆರಿಗೆಗಳನ್ನು ಸಲ್ಲಿಸಬೇಕಾಗಿ ಬರುವುದೆಂಬುದು, ಸ್ವತಸ್ಸಿದ್ಧವಾಗಿಯೇ ಇದೆ.

ಈಗಿನ ಪರಿಸ್ಥಿತಿಯಲ್ಲಿ ಕಂಡುಬರತಕ್ಕ ಅನ್ಯಾಯ ವಿಧ್ಯಮಾನಗಳು ಪೂರ್ವದಿಂದಲೂ ನಡೆದುಕೊಂಡು ಬಂದಿರತಕ್ಕವುಗಳೆಂಬುದೇನೋ ವಾಸ್ತವವಾಗಿದೆ. ಈ ಅಂಶವನ್ನು ಉಪೇಕ್ಷೆ ಮಾಡುವುದಕ್ಕಾಗುವುದಿಲ್ಲ. ಯಾವ ಸಂಸ್ಥಾನಗಳಲ್ಲಿ ಪೊಗದಿ ಮೊದಲಾದುವುಗಳನ್ನು ವಸೂಲುಮಾಡದೆ, ರಿಯಾಯಿತಿಗಳನ್ನು ತೋರಿಸಲಾಗಿದೆಯೋ ಆ ಸಂಸ್ಥಾನಗಳಿಗೆ ಕೊಟ್ಟಿರುವ ರಿಯಾಯಿತಿಗಳನ್ನು ತಪ್ಪಿಸುವುದಕ್ಕಾಗುವುದೂ ಇಲ್ಲ, ಅವುಗಳನ್ನು ತಪ್ಪಿಸಬೇಕೆಂದು ಯಾರೂ ಸಲಹೆ ಮಾಡುವುದೂ ಇಲ್ಲ. ಆದರೆ ಈ ರಿಯಾಯಿತಿಗಳು ತೋರಿಸಲ್ಪಡದಿರುವ ಇತರ ಸಂಸ್ಥಾನಗಳ ವಿಚಾರದಲ್ಲಿ ಅನ್ಯಾಯವಾದ ಈ ಪೊಗದಿಯ ಹಣವನ್ನು, ಸಂಯುಕ್ತ ಸರ್ಕಾರದವರೂ ಅವರಿಂದ ವಸೂಲುಮಾಡಿಕೊಳ್ಳಬೇಕೆಂಬುದಕ್ಕೆ ಸರ್ವಥಾ ಸರಿಯಾದ ಕಾರಣವೇನೂ ಇಲ್ಲ. ಇಷ್ಟಕ್ಕೂ ಸಮಿತಿಯವರ ಸಲಹೆಯ ಮೇರೆಗೇ ಮಾಫೀಬಿಡಲು ಅರ್ಹವಾಗಿರತಕ್ಕ ಪೊಗದಿಯ ನಿವ್ವಳ ಮೊಬಲಗು 30 ಲಕ್ಷ ರೂ. ಗಳಿಗೆ ಮೀರುವುದಿಲ್ಲ. ಇಷ್ಟು ಸ್ವಲ್ಪವಾಗಿರುವ ಮತ್ತು ಕ್ರಮೇಣ ಕಡಿಮೆಯಾಗುತ್ತ ಬರಬೇಕಾಗಿರುವ ಅಲ್ಪ ಮೊಬಲಗಿಗಾಗಿ ಕೆಲವು ಸಂಸ್ಥಾನಗಳವರನ್ನು ತೊಂದರೆಗೆ ಗುರಿಪಡಿಸುವುದು ಸಂಯುಕ್ತ ಸರ್ಕಾರಕ್ಕೆ ಸರ್ವಥಾ ಉಚಿತವಲ್ಲವೆಂದು ಹೇಳಬಹುದಾಗಿದೆ.

ಪೊಗದಿಯನ್ನು ಕೊಡುವುದು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ನಿಯಮಕ್ಕೆ ಅನನ್ವಯವೆಂಬ ಕಾರಣದ ಮೇಲೆ ಪೊಗದಿಯನ್ನು ತೆಗೆದು ಹಾಕಬೇಕೆನ್ನುವುದಕ್ಕಿಂತಲೂ ಹೆಚ್ಚಾಗಿ ರಾಜಕೀಯವಾಗಿ ನ್ಯಾಯವನ್ನು ದೊರೆಯಿಸಬೇಕೆಂಬ ಕಾರಣಕ್ಕಾಗಿ ಪೊಗದಿಯನ್ನು ತೆಗೆದುಹಾಕುವುದು ಅವಶ್ಯಕ. ಅನೇಕ ಸಂಸ್ಥಾನಗಳ ವಿಷಯದಲ್ಲಿ ಈ ಪೊಗದಿಗಳು ಅಧಿರಾಜರಿಗೆ ಸಲುವಳಿಯಾಗುವ (ಫ್ಯೂಡಲ್) ಸ್ವಭಾವದವುಗಳಲ್ಲವೆಂಬುದನ್ನು ಸಮಿತಿಯವರು ಬಹು ಚೆನ್ನಾಗಿ ತೋರ್ಪಡಿಸಿದ್ದಾರೆ. ಸಮಿತಿಯವರು ಮತ್ತೊಂದು ಅಂಶವನ್ನೂ ಸ್ಪಷ್ಟವಾಗಿ ತಿಳಿಸಿದ್ದರೆ ಚೆನ್ನಾಗಿದ್ದಿತು. ಕೆಲವು ಸಂಸ್ಥಾನಗಳ ವಿಚಾರದಲ್ಲಿ ಈ ಪೊಗದಿಗಳೆಂಬ ಮೊಬಲಗುಗಳು (ಅವುಗಳಿಗೆ ಈಚೆಗೆ ಈ ಪೊಗದಿಯೆಂಬ ಹೆಸರು ಬಂದಿದ್ದರೂ) ಜಯಿಸಿದ ಜನರಮೇಲೆ ಮೊದಲಿನಲ್ಲಿ ಕೇವಲ ಪರಿಹಾರದ್ರವ್ಯದ ರೂಪದಲ್ಲಿ ಹೇರಿದ ಹಣವೇ ಹೊರತು ಮತ್ತೇನೂ ಅಲ್ಲ ; ಈಚೆಗೆ ಈ ಹಣವನ್ನು ಯಾವ ಹೆಸರಿನಿಂದಲೇ ಕರೆದರೂ, ವಾಸ್ತವಸ್ಥಿತಿಯೇನೋ ಇಷ್ಟೆ. ವಾಸ್ತವವಾಗಿ ನೋಡುವುದಾದರೆ, ಈ ಮೊಬಲಗುಗಳೆಂದಿಗೂ ಅಧಿರಾಜರುಗಳಿಗೆ ಸಲುವಳಿಯಾಗುವ (ಫ್ಯೂಡಲ್) ಸ್ವಭಾವದವುಗಳಲ್ಲವೆಂಬುದೇನೋ ನಿಜ. ಆದರೂ ಕೂಡ, ಇವುಗಳು ಯಾವ ಸಂಸ್ಥಾನದ ಜನರಿಂದ ಪಾವತಿಯಾಗಬೇಕೋ ಆ ಜನರು ಇವುಗಳನ್ನು ಪಾವತಿ ಮಾಡುವುದು, ಅವರ ಮನಸ್ಸಿಗೆ ಹೀನಾಯವಾಗತಕ್ಕ ಅಂಶವೇ ಸರಿ.

ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ನಂತರವೂ ಮತ್ತು ಅದಕ್ಕಿಂತ ಮುಂಚಿತವಾಗಿಯೂ, ಪೊಗದಿಗಳನ್ನು ಪಡೆಯುವವರು ಸಾರ್ವಭೌಮರೆಂದು ವಾದಿಸಲ್ಪಟ್ಟಿದೆ " ಪೊಗದಿ " ಎಂಬ ಹೆಸರನ್ನು " ಇಂಡಿಯಾ ದೇಶದ ಸಂಸ್ಥಾನಗಳಿಂದ ಪಾವತಿಯಾಗಬೇಕಾದ ಹಣಗಳು " ಎಂಬುದಾಗಿ ಬದಲಾಯಿಸಿದುದರಿಂದ ಯಾವ ರೀತಿಯಲ್ಲಿ ಸಮಾಧಾನವುಂಟಾಗಲಿಲ್ಲವೋ, ಅದೇ ರೀತಿಯಾಗಿ ಈ ಅಂಶದಿಂದಲೂ ಸಮಾಧಾನವೇನೂ ಆಗುವುದಿಲ್ಲ. ಪೊಗದಿಯನ್ನು ಸಂಯುಕ್ತ ಸರ್ಕಾರದ ಅನುಕೂಲಗಳಿಗಾಗಿ ವಸೂಲುಮಾಡುವುದಾಗಿಲ್ಲದ ಪಕ್ಷದಲ್ಲಿ, ಅದು ಕೂಡಲೆ ನಿಂತುಹೋಗಬೇಕಾಗಿದೆ. ಆದರೆ ಇದು ಸಂಯುಕ್ತ ಸರ್ಕಾರದ ಅನುಕೂಲಗಳಿಗಾಗಿಯೇ ವಸೂಲು ಮಾಡಲ್ಪಡುತ್ತದೆ ; ಮತ್ತು ಇದು ನ್ಯಾಯವಾದ ದಾಮಾಷಾ ಪ್ರಮಾಣದಲ್ಲೂ ಸಹ ವಸೂಲಾಗುವುದಿಲ್ಲ. ಆದುದರಿಂದ, ಇದು ಹೊರಲಾರದಷ್ಟು ಭಾರವಾದ ಹೊರೆಯಾಗಿದೆ. ಇದಕ್ಕೆ ಯಾವ ಬಣ್ಣವನ್ನೇ ಕೊಟ್ಟು ಯಾವ ಯಾವ ರೀತಿಯಲ್ಲಿ ಎಷ್ಟೇ ಸಮುಜಾಯಿಸಿ ಹೇಳಿದಾಗ್ಯೂ, ಅದನ್ನು ಯಾರು ಕೊಡಬೇಕಾಗಿದೆಯೋ ಅವರು ಅದನ್ನು ಸಲ್ಲಿಸಲು ಅವರಿಗೆ ಯಾವ ಸಮಾಧಾನವೂ ಆಗುವಂತಿಲ್ಲ ; ಅವರ ಮನಸ್ಸಿಗೆ ಹೀನಾಯವಾಗುವುದೂ ತಪ್ಪುವಂತಿಲ್ಲ.

ಅಂಚೆಯ ಏರ್ಪಾಡುಗಳು—ಮತ್ತೊಂದು ವಿಷಯದಲ್ಲಿಯೂ ಸಹ, ಡೇವಿಡ್‌ಸನ್ ಸಮಿತಿಯವರ ಸಲಹೆಗಳು ಸಂಸ್ಥಾನದ ಹಣಕಾಸಿನ ವಿಚಾರಕ್ಕೆ ಅನುಕೂಲವಾಗಿಲ್ಲ. ಒಂದು ಸಂಸ್ಥಾನದವರು ಪ್ರತ್ಯೇಕವಾದ ಅಂಚೆಯ ಏರ್ಪಾಡನ್ನು ಆಚರಣೆಗೆ ತಂದುಕೊಂಡಿದ್ದ ಮಾತ್ರವೇ ಅದು ನಗದು ಮೂಲ್ಯವೇನನ್ನೂ ಕಟ್ಟಿಕೊಡಬೇಕಾದ ಹಕ್ಕಲ್ಲವೆಂದು ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಮೈಸೂರು ಸಂಸ್ಥಾನದಲ್ಲಿ ನಡೆದಿರುವಂತೆ ಸಂಸ್ಥಾನದ ಅಂಚೆಯ ಏರ್ಪಾಡಿಗೆ ಬದಲಾಗಿ ಬ್ರಿಟಿಷ್ ಇಂಡಿಯಾದ ಅಂಚೆಯ ಶಿಸ್ತು ಆಚರಣೆಯಲ್ಲಿರುವ ಸಂದರ್ಭಗಳಲ್ಲಿ ಸಮಿತಿಯವರು ಸೂಚಿಸಿರುವ ಅಂಶವೇ ಬೇರೆ. ಸಂಸ್ಥಾನದ ಸರ್ಕಾರಿ ಕಾಗದಪತ್ರಗಳನ್ನು ಅಂಚೆಯ ಹಾಸಲಿಲ್ಲದೆ ಉಚಿತವಾಗಿ ಸಾಗಿಸುವ ಅಲ್ಪವಾದ ಹಕ್ಕನ್ನುಳಿಸಿಕೊಂಡು ಅದಕ್ಕೆ ಪ್ರತಿಯಾಗಿ ಬ್ರಿಟಿಷ್ ಇಂಡಿಯಾದ ಅಂಚೆಯ ಏರ್ಪಾಡು ಇಲ್ಲಿಯೂ ಆಚರಣೆಯಲ್ಲಿರಲು ಹಿಂದೆ ಸಮ್ಮತಿಸಲಾಯಿತು. ಈಗ ಸಮಿತಿಯವರು ಈ ಹಕ್ಕಿಗೂ ಹಣದ ರೂಪದ ಮೂಲ್ಯವುಂಟೆಂದೂ, ಅಂಚೆಯ ಇಲಾಖೆಯವರು ಸ್ಥಳದಿಂದ ಸ್ಥಳಕ್ಕೆ ಸಾಗಿಸುವ ಸಂಸ್ಥಾನದ ಸರ್ಕಾರಿ ಕಾಗದ ಪತ್ರಗಳ ಬಾಬತ್ತು ಹಾಸಲು ಮೊಬಲಗನ್ನು, ಪೊಗದಿಯಲ್ಲಿ ಬಿಟ್ಟುಕೊಡಬೇಕಾದ ಮೊಬಲಗಿನಲ್ಲಿ ಉತ್ತಾರ ಹಾಕಬೇಕೆಂದೂ ಸಲಹೆ ಮಾಡಿದ್ದಾರೆ. ಈ ಅಂಚೆಯ ಸಂಬಂಧವಾಗಿ ಸರ್ಕಾರಿ ಕಾಗದ ಪತ್ರಗಳನ್ನು ಸಾಗಿಸುವ ಹಾಸಲು ಮೊಬಲಗು 5,57,000 ರೂ. ಗಳಂತೆ ! ಅದು ಇಷ್ಟು ಭಾರೀ ಮೊತ್ತವಾಗುವುದೆಂಬುದನ್ನು ನಂಬುವುದೇ ಕಷ್ಟವಾಗಿದೆ. ಈ ಮೊಬಲಗು ಉತ್ತಾರವಾಗಬೇಕಂತೆ. ಈಗ್ಗೆ ಸುಮಾರು ೪೦ ವರ್ಷಗಳಿಗೆ ಹಿಂದಿನವರೆಗೂ ಸಂಸ್ಥಾನದಲ್ಲಿ ಅಂಚೆ ಎಂಬ ಹೆಸರಿನ ಸ್ವಂತ ಏರ್ಪಾಡು ಜಾರಿಯಲ್ಲಿದ್ದುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಏರ್ಪಾಡಿನಲ್ಲಿ ಕೆಲಸವು ಬಹಳ ದಕ್ಷತೆಯಿಂದ ಜರುಗುತ್ತಿದ್ದಿತು. ಆದರೆ ಇಂಡಿಯಾ ಸರ್ಕಾರದವರು ಈ ಏರ್ಪಾಡನ್ನು ತಮಗೆ ವಹಿಸಿಕೊಡಬೇಕೆಂದು ಪದೇಪದೇ ಒತ್ತಾಯಮಾಡಿ ಕೇಳಿದರು. ಸಂಸ್ಥಾನದ ಸರ್ಕಾರಿ ಕಾಗದಪತ್ರಗಳನ್ನು ಯಾವ ವೆಚ್ಚವೂ ಇಲ್ಲದೆ ತಾವು ಸಾಗಿಸುವುದಾಗಿ ಭರವಸೆಯನ್ನೂ ಕೊಟ್ಟರು. ಈ ಅಂಶಗಳ ಪರ್ಯಾಲೋಚನೆಗಳಿಂದ, ಸಂಸ್ಥಾನದವರು ಮನಸ್ಸಿಲ್ಲದಿದ್ದರೂ ತಮ್ಮ ಅಂಚೆ ಕ್ರಮವನ್ನು ಬಿಟ್ಟುಕೊಟ್ಟರು. ಯಾವ ನಿರ್ದಿಷ್ಟವಾದ ಷರತ್ತಿನಮೇಲೆ ಅಂಚೆಯನ್ನು ಬಿಟ್ಟುಕೊಡಲಾಯಿತೋ ಆ ಷರತ್ತೇ ಸಂಸ್ಥಾನದವರಿಗಿರತಕ್ಕ ಪ್ರತಿಫಲ ರೂಪದ ಹಕ್ಕು. ಆದರೆ ಈ ಷರತ್ತನ್ನು ನೆರವೇರಿಸುವುದಕ್ಕೆ ಮಾತ್ರ ಹಣದ ರೂಪದ ಮೂಲ್ಯವುಂಟೆಂದೂ, ಆದರೆ ಅಂಚೆಯ ಇಲಾಖೆಯನ್ನು ನಡೆಯಿಸುವ ಹಕ್ಕಿಗೆ ಮಾತ್ರ ಯಾವ ನಗದು ಮೂಲ್ಯವೂ ಇಲ್ಲವೆಂದೂ ಸಮಿತಿಯವರು ಅಭಿಪ್ರಾಯಪಟ್ಟಿರುವುದರಲ್ಲಿ ಯಾವ ನ್ಯಾಯವೂ ಕಂಡು ಬರುವುದಿಲ್ಲ. ಸಮಿತಿಯವರ ಸಲಹೆಗಳ ಮೇರೆಗೆ, ಹಿಂದಿನ ಒಡಂಬಡಿಕೆಗಳನ್ನು ನಿರಾಕರಿಸಿ ಒತ್ತರಿಸಿದಲ್ಲಿ, ಅಂಚೆಯ ಶಿಸ್ತಿನ ಏಕೀಕರಣಕ್ಕಾಗಿ ಸಂಸ್ಥಾನದವರು ಸ್ವಪ್ರಯೋಜನವನ್ನೂ ತೊರೆದು ತ್ಯಾಗಬುದ್ಧಿಯನ್ನು ತೋರ್ಪಡಿಸಿದುದರ ಪರಿಣಾಮವು ಹೀಗಾದಮೇಲೆ, ಹಿಂದಿದ್ದಂತೆ ಸಂಸ್ಥಾನದವರು ಅಂಚೆಯನ್ನು ನಡೆಯಿಸಿಕೊಳ್ಳುವ ಹಕ್ಕನ್ನೇ ತಮಗೆ ಹಿಂದಕ್ಕೆ ಕೊಡಬೇಕೆಂದು ಕೇಳಬೇಕಾಗುವುದು. ಇದರಿಂದ ನಮಗೆ ಅನುಕೂಲವುಂಟಾಗುವುದರಲ್ಲಿ ಸಂದೇಹವಿಲ್ಲ. ಈಗಿನ ಕಾಲದಲ್ಲಿ ಕಾಗದ ಪತ್ರಗಳ ಓಡಾಟಕ್ಕಾಗಿ ಜನಗಳಿಂದ ಬರತಕ್ಕ ಹಾಸಲಿನ ರೂಪದ ವರಮಾನವು ಸರ್ಕಾರಿ ಕಾಗದಪತ್ರಗಳನ್ನೂ, ಮತ್ತು ಸಾರ್ವಜನಿಕ ಪ್ರತ್ಯವ್ಯವಹಾರಗಳನ್ನೂ ಎರಡನ್ನೂ ಸಾಗಿಸುವುದಕ್ಕೆ ತಗಲುವ ವೆಚ್ಚಕ್ಕೆ ಸಾಕಾಗುವುದು. ಈ ವಿಷಯದಲ್ಲಿ ಸಂಶಯವೇ ಇಲ್ಲ.

ಬೆಂಗಳೂರು ದಂಡಿನ ವಿಚಾರ—ಬೆಂಗಳೂರು ದಂಡಿನ ಪ್ರದೇಶವೆಂಬ ಹೆಸರಿನಿಂದಲೇ ವ್ಯಕ್ತಪಡುವಂತೆ ಈ ಪ್ರದೇಶದ ಆಡಳಿತವು ಸಂಸ್ಥಾನಕ್ಕೆ ಸೇರದಿರುವುದು ಅನನ್ವಯವೆಂಬುದನ್ನು ಸಮಿತಿಯವರು ಉಪೇಕ್ಷಿಸಿಲ್ಲ. ಆದಾಗ್ಯೂ ಸಮಿತಿಯವರು ಬೆಂಗಳೂರು ದಂಡಿನ ಪ್ರದೇಶದ ವಿಷಯದಲ್ಲಿ ಯಾವ ನಿರ್ದಿಷ್ಟವಾದ ಸಲಹೆಗಳನ್ನೂ ಕೊಟ್ಟಿಲ್ಲ. ಈ ಪ್ರದೇಶದ 1 ಭಾಗವನ್ನಾದರೂ ಸಂಸ್ಥಾನಕ್ಕೇ ಹಿಂದಕ್ಕೆ ವಹಿಸುವುದು ನ್ಯಾಯವಲ್ಲವೇ—ಎಂಬ ವಿಚಾರದಲ್ಲಿ ಸಮಿತಿಯವರು ಏನೊಂದನ್ನೂ ನಿರ್ಧರವಾಗಿ ಇತ್ಯರ್ಥಪಡಿಸಿ ಹೇಳದೆ ಹಾಗೆಯೇ ಸೂಚಿಸಿ ಸುಮ್ಮನಾಗಿದ್ದಾರೆ. ಈ ವಿಚಾರದಲ್ಲಿ ಯಾವುದೇ ತೀರ್ಮಾನವಾಗುವುದಾದರೂ, (ಮಿಲಿಟರಿ ಪ್ರದೇಶಗಳೂ ಸೇರಿ) ಬೆಂಗಳೂರು ದಂಡಿನ ಒಟ್ಟು ಪ್ರದೇಶದ ವಿಚಾರದಲ್ಲಿಯೂ ನಮ್ಮ ಸಂಸ್ಥಾನದವರು ಆಯವ್ಯಯಗಳ ಆಡಳಿತದ ಅಧಿಕಾರವನ್ನು ಚಲಾಯಿಸುವುದರಲ್ಲಿ ವಸ್ತುತಃ ಯಾವ ಅಭ್ಯಂತರವೂ ಇಲ್ಲದೆ, ಆರೀತಿ ನಡೆಯಬೇಕೆಂಬುದು ಸಮಿತಿಯವರ ಅಭಿಪ್ರಾಯವಾಗಿದೆ. ಆದರೆ, ಮ್ಯುನಿಸಿಪಲ್ ಹುಟ್ಟುವಳಿಗಳಿಗೆ ತಕ್ಕಂತೆ "ಗ್ರ್ಯಾಂಟ್-ಇನ್-ಏಯ್ಡ್" ಸಹಾಯ ದ್ರವ್ಯವನ್ನು ಸೇರಿಸಿಕೊಡಬೇಕೆಂಬ ಷರತ್ತಿಗೆ ಒಳಪಡಿಸಿ, ಸಮಿತಿಯವರು ಈ ಸಲಹೆಯನ್ನು ಮಾಡಿದ್ದಾರೆ. ಆಯವ್ಯಯಗಳ ಆಡಳಿತದ ಅಧಿಕಾರವೆಂದರೆ, ಅದರ ಜೊತೆಯಲ್ಲಿ ಸ್ವಲ್ಪಮಟ್ಟಿಗೆ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರವ್ಯಾಪ್ತಿಯು ಇದ್ದೇ ಇರಬೇಕು. ಆದರೆ, ಈ ರೀತಿ ಅವಶ್ಯಕವಾಗುವ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರಗಳನ್ನು ಸಂಸ್ಥಾನದವರು ಹೇಗೆ ಚಲಾಯಿಸಬೇಕೆಂಬುದನ್ನು ಮಾತ್ರ ಸಮಿತಿಯವರು ಸೂಚಿಸಿಲ್ಲ.

ಈ ವಿಚಾರವನ್ನು 1 ಸುಲಭವಾದ ಮತ್ತು ಸಮರ್ಪಕವಾದ ರೀತಿಯಲ್ಲಿ ವ್ಯವಸ್ಥೆಗೊಳಿಸಬಹುದಾಗಿದೆ. ಬೆಂಗಳೂರು ದಂಡಿನ ಪ್ರದೇಶದಲ್ಲಿ ಮಿಲಿಟರಿ ಉದ್ದೇಶಗಳಿಗೇ ಅವಶ್ಯವಾಗಿ ಬೇಕಾಗಿರುವ ಭಾಗವನ್ನೇ ಬೇರೆಮಾಡಿ ಆ ಭಾಗವನ್ನು " ಕಂಟೋನ್ಮೆಂಟ್ " ಎಂಬ ಏಕ ಮಿಲಿಟರಿ ಪ್ರದೇಶವನ್ನಾಗಿ ಏರ್ಪಡಿಸಬಹುದು; ಬ್ರಿಟಿಷ್ ಇಂಡಿಯಾದ ಕಂಟೋನ್ಮೆಂಟ್ ಪ್ರದೇಶದ ಆಡಳಿತವನ್ನು ನಡೆಯಿಸುವ ರೀತಿಯಲ್ಲಿಯೇ ಈ ಪ್ರದೇಶದ ಆಡಳಿತವನ್ನೂ ನಡೆಯಿಸಬಹುದು. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಶಿಸ್ತಿನ ಮತ್ತು ಕಾನೂನುಗಳ ಏರ್ಪಾಡು ಬ್ರಿಟಿಷ್ ಇಂಡಿಯಾದ ಪ್ರಾಂತಗಳಿಗೆ ಅನ್ವಯಿಸುವ ರೀತಿಯಲ್ಲೇ ನಮ್ಮ ಸಂಸ್ಥಾನಕ್ಕೂ ಸಹ ಸಂಯುಕ್ತ ವ್ಯವಸ್ಥೆಗೆ ಸಂಬಂಧಪಡುವ ಮಟ್ಟಿಗೆ ಸ್ವತಃ ಅನ್ವಯಿಸುತ್ತದೆ. ಈ ಏರ್ಪಾಡಿನಿಂದ ಚಕ್ರವರ್ತಿ ಸಾರ್ವಭೌಮರಿಗೆ ಇರಬೇಕಾದ ಅಧಿಕಾರಗಳು ಚಕ್ರವರ್ತಿ ಸಾರ್ವಭೌಮರಿಗೂ ಸಂಯುಕ್ತ ಸರ್ಕಾರದವರಿಗೆ ಇರಬೇಕಾದ ಅಧಿಕಾರಗಳು ಸಂಯುಕ್ತ ಸರ್ಕಾರದವರಿಗೂ ಇದ್ದೇ ಇರುವಂತಾಗುತ್ತದೆ. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ಶಿಸ್ತಿಗೆ ಸೇರಿಲ್ಲದ ವಿಚಾರಗಳಲ್ಲಿ ಮಾತ್ರ, ಅವರಿಗೆ ಪ್ರತ್ಯಕ್ಷವಾಗಿ ಯಾವ ನಿಕಟವಾದ ಸಂಬಂಧವೂ ಇಲ್ಲದೆ ಇಂತಹ ವಿಚಾರಗಳಲ್ಲಿ ಸಂಸ್ಥಾನದ ಅಧಿಕಾರವೇ ಅಚ್ಚರಾದ ಅಧಿಕಾರವಾಗಿರುತ್ತದೆ. ಮೇಲೆ ಹೇಳಿದಂತೆ ಬೆಂಗಳೂರು ದಂಡಿನ ಪ್ರದೇಶದಲ್ಲಿ ಏರ್ಪಡುವ ಕಂಟೋನ್ಮೆಂಟ್ ಭಾಗದ ಆಡಳಿತವನ್ನು ಈ ರೀತಿಯಲ್ಲಿ ನಿರ್ವಹಿಸಬಹುದಾಗಿದೆ. ಹೀಗೆ ಮಾಡುವಲ್ಲಿ ಸಂಯುಕ್ತ ಸರ್ಕಾರದವರೂ, ಸಂಯುಕ್ತ ಸರ್ಕಾರಕ್ಕೆ ಸೇರಿದ ಇತರ ಸರ್ಕಾರಗಳವರೂ ಯಾವ ರೀತಿಯಲ್ಲಿ ಕರ್ತವ್ಯಗಳನ್ನು ವಿಭಾಗಮಾಡಿಕೊಂಡು ನಿರ್ವಹಿಸಬಹುದೆಂಬ ವಿಚಾರದಲ್ಲಿ ಅಂಗೀಕೃತವಾದ ನಿಯಮಗಳಿಗನುಸಾರವಾಗಿಯೇ, ಆಗ್ಗೆ ಕಂಟೋನ್ಮೆಂಟ್ ಪ್ರದೇಶದ ಆಡಳಿತವು ನಡೆಯುತ್ತದೆ. ಹೀಗೆ ಆಡಳಿತವು ನಡೆಯುವ ಏರ್ಪಾಡನ್ನು ಬಿಟ್ಟು ಯಾವ ಏರ್ಪಾಡನ್ನು ಮಾಡಿದರೂ, ಏನೋ ಒಂದು ಬಗೆಯ ತೇಪೆಹಾಕಿ ಸಲ್ಲಿಸಿದಂತೆ ಅದು ನಡೆಯುವುದೇ ಹೊರತು, ಅದೆಂದಿಗೂ ನ್ಯೂನತೆಗಳಿಲ್ಲದೆ ತೃಪ್ತಿಕರವಾಗಿರುವುದಿಲ್ಲ.

ಆಯವ್ಯಯಗಳ ವಿಚಾರ—1931-32 ನೆಯ ಸಾಲಿನ ಲೆಕ್ಕಗಳು ಈಗ ಸ್ವಲ್ಪ ಹೆಚ್ಚು ಕಡಿಮೆ ಪೂರ್ತಿಯಾಗಿವೆ. ತಿದ್ದುಪಾಟಾದ ಅಂದಾಜುಗಳ ಮೇರೆಗೆ ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚು ಹುಟ್ಟುವಳಿಯು ಬಂದಿರುವಂತೆಯೂ ಮತ್ತು ತಿದ್ದುಪಾಟಾದ ಅಂದಾಜುಗಳ ಮೇರೆಗೆ ನಡೆಯುವುದಾಗಿ ತೋರಿದ್ದುದಕ್ಕಿಂತಲೂ ಕಡಿಮೆ ವೆಚ್ಚವು ನಡೆದಿರುವಂತೆಯೂ, ಕಂಡುಬಂದಿದೆ. ಗಂಧದ ಎಣ್ಣೆಯ ಬಾಬಿನಹೊರತು ಉಳಿದ ಎಲ್ಲ ಬಾಬುಗಳಲ್ಲಿಯೂ ಹುಟ್ಟುವಳಿಯು ಹೆಚ್ಚಿದೆ. ವಿಶೇಷ ಗಣನೀಯವಾಗಿ ವರಮಾನವು ಹೆಚ್ಚಿರುವಂತೆ ಕಂಡು ಬಂದಿರುವ ಹುಟ್ಟುವಳಿಯ ಬಾಬುಗಳಾವುವೆಂದರೆ—ಭೂಕಂದಾಯ, ರೈಲ್ವೆಗಳು, ಎಕ್ಸೈಜು, ಸ್ಟಾಂಪುಗಳು ಮತ್ತು ವರಮಾನದ ತೆರಿಗೆ, ಇವುಗಳೇ. ಪಬ್ಲಿಕ್ ವರ್ಕ್ಸ್ ಕಾಮಗಾರಿಗಳು ಮತ್ತು ವಿದ್ಯಾಭ್ಯಾಸದ ಇಲಾಖೆಯ ಕಟ್ಟಡಗಳು—ಇವೆರಡೂ ವೆಚ್ಚವು ಕಡಿಮೆಯಾಗಿರುವ ಮುಖ್ಯ ಬಾಬುಗಳು.

ಈ ರೀತಿ ಹುಟ್ಟುವಳಿಯು ಹೆಚ್ಚಾಗಿ ವೆಚ್ಚವು ಕಡಿಮೆಯಾದುದರಿಂದ ದೊರೆತ ಮೊಬಲಗನ್ನು, ಡಿಪ್ರಿಸಿಯೇಷನ್ ಫಂಡುಗಳೆಂಬ ನಾನಾ ಸವೆತ ತುಂಬುವ [illegible] ನಿಧಿಗಳಿಗೆ ಸಲ್ಲಿಸಬೇಕಾಗಿದ್ದ ಕಂಟ್ರಿಬ್ಯೂಷನ್ ಬಾಬುಗಳನ್ನು ಸಲ್ಲಿಸಿ ಆ ನಿಧಿಗಳಲ್ಲಿ ಉಂಟಾಗಿದ್ದ ಕೊರತೆಯನ್ನು ಪರಿಹಾರ ಮಾಡುವುದಕ್ಕಾಗಿ ವಿನಿಯೋಗಿಸಲಾಯಿತು. ಈ ನಿಧಿಗಳಿಗೆ ಒಟ್ಟು 8-93 ಲಕ್ಷ ರೂ. ಗಳಷ್ಟು ಮೊಬಲಗನ್ನು ಕೊಡಬೇಕಾಗಿದ್ದಿತು. 1930-31ನೆಯ ಸಾಲಿನವರೆಗೂ ಈ ನಿಧಿಗಳಿಗೆ ಹಣವನ್ನು ಸಲ್ಲಿಸುತ್ತಾ ಬರಲಾಗಿದ್ದಿತು. ಆದರೆ 1931-32 ನೆಯ ಸಾಲಿನಲ್ಲಿ ಬಡ್ಜೆಟ್ ಅಂದಾಜಿನಲ್ಲಿಯೂ ಮತ್ತು ತಿದ್ದುಪಾಟಾದ ಅಂದಾಜಿನಲ್ಲಿಯೂ ಸಹ, ಹುಟ್ಟುವಳಿಯು ಬಹಳಮಟ್ಟಿಗೆ ಇಳಿದುಹೋಗುವುದಾಗಿ ತೋರಿ ಬಂದಿದ್ದ ಕಾರಣ, ಈ ನಿಧಿಗಳಿಗೆ ಹಣವನ್ನು ಒದಗಿಸಿರಲಿಲ್ಲ. ಹುಟ್ಟುವಳಿಯ ಬಾಬಿನಲ್ಲಿ ಅನವಶ್ಯವಾಗಿ ಹೆಚ್ಚು ಹಣವು ಕಾಣುವುದನ್ನು ತಪ್ಪಿಸುವ ಉದ್ದೇಶದಿಂದ 1931-32 ನೆಯ ಸಾಲಿನ ಅಖೈರು ಲೆಕ್ಕಗಳಲ್ಲಿ ಬಾಬುಗಳನ್ನು ವಿಂಗಡಿಸುವುದರಲ್ಲಿ ಕೂಡ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. IX ಬಡ್ಡಿ, XIII ವಿವಿಧ ಬಾಬುಗಳು. XIXA ಸಂಚಾರ ಮಾರ್ಗಗಳು ಮತ್ತು 11 ಅರಮನೆಯ ಇಲಾಖೆ—ಈ ಬಾಬುಗಳಲ್ಲಿ ಭಾರಿ ವ್ಯತ್ಯಾಸಗಳು ಕಂಡುಬಂದಿರುವುದಕ್ಕೆ ಇದೇ ಕಾರಣ.

ಈ ಕಾರಣಗಳಿಂದ ಈ ವರ್ಷದ ಆಯವ್ಯಯದ ಫಲಿತಾಂಶಗಳಲ್ಲಿ, ಒಟ್ಟು ಹುಟ್ಟುವಳಿಯು 338.19 ಲಕ್ಷ ರೂ. ಗಳೂ ಒಟ್ಟು ವೆಚ್ಚವು 356.40 ಲಕ್ಷ ರೂ. ಗಳೂ ಆಗಿರುವುದಾಗಿ ಕಂಡುಬಂದಿದೆ. ಬಡ್ಜೆಟ್ಟಿನ ಮೇರೆಗೆ 378.76 ಲಕ್ಷ ರೂಪಾಯಿಗಳ ಹುಟ್ಟುವಳಿಯನ್ನೂ 376.84 ಲಕ್ಷ ರೂ. ಗಳ ವೆಚ್ಚವನ್ನೂ ನಿರೀಕ್ಷಿಸಲಾಗಿದ್ದಿತು.

ಬಂಡವಾಳದ ಬಾಬಿನಲ್ಲಿ ವಾಸ್ತವವಾಗಿ ನಡೆದಿರುವ ವೆಚ್ಚವು ತಿದ್ದುಪಾಟಾದ ಅಂದಾಜಿಗಿಂತಲೂ 5.20 ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗಿವೆ. ವಿದ್ಯುಚ್ಛಕ್ತಿಯ ಇಲಾಖೆಯ ಗ್ರ್ಯಾಂಟುಗಳಲ್ಲಿ 2.71 ಲಕ್ಷ ರೂ. ಗಳಷ್ಟು ಮೊಬಲಗೂ ಮತ್ತು ಬೆಂಗಳೂರು ನೀರು ಸರಬರಾಯಿಯ ಹೊಸ ಕಾಮಗಾರಿಗಳ ಗ್ರ್ಯಾಂಟುಗಳಲ್ಲಿ 3 ಲಕ್ಷ ರೂಪಾಯಿಗಳ ಮೊಬಲಗೂ ವೆಚ್ಚವಾಗದೆ ಸರ್ಕಾರಕ್ಕೆ ವಾಪಸಾದುದೇ ಇದಕ್ಕೆ ಮುಖ್ಯಕಾರಣ.

ಚಾಲ್ತಿಸಾಲಿನ ಬಡ್ಜೆಟ್ಟನ್ನು ಸಿದ್ಧಪಡಿಸುವಾಗ್ಗೆ ಹುಟ್ಟುವಳಿಯ ಬಾಬಿನಲ್ಲಿ 1931-32 ನೆಯ ತಿದ್ದುಪಾಟಾದ ಅಂದಾಜಿನ ಲೆಕ್ಕಗಳ ಆಧಾರದಮೇಲೆ ಹುಟ್ಟುವಳಿ ಮೊಬಲಗನ್ನು ಕಾಣಿಸಿ ಬಡ್ಜೆಟ್ಟನ್ನು ತಯಾರಿಸಲಾಯಿತು ಆದರೆ ಗಂಧದ ಎಣ್ಣೆ ಮತ್ತು ರೈಲ್ವೆಗಳ ಬಾಬುಗಳಲ್ಲಿ ಸ್ವಲ್ಪ ಹೆಚ್ಚಿಗೆ ಹುಟ್ಟುವಳಿಯನ್ನು ನಿರೀಕ್ಷಿಸಿ ವೆಚ್ಚವನ್ನು ಅನಿವಾರ್ಯವಾದ ಕೇವಲ ಕನಿಷ್ಠ ಪರಿಮಿತಿಗೆ ಇಳಿಸಲಾಯಿತು. ಇದರಿಂದ ಒಟ್ಟು ಹುಟ್ಟುವಳಿಯು 352.72 ಲಕ್ಷ ರೂ. ಗಳೂ, ಒಟ್ಟು ವೆಚ್ಚವು 362.60 ಲಕ್ಷ ರೂ. ಗಳೂ, ಹುಟ್ಟುವಳಿಗಿಂತ ವೆಚ್ಚವು ಹೆಚ್ಚಿ ಹಣವು ಸಾಲದೆಹೋಗುವ ಕೊರತೆಯು 9.88 ಲಕ್ಷ ರೂ. ಗಳೂ ಆಗಬಹುದೆಂದು ಬಡ್ಜೆಟ್ಟಿನ ಪ್ರಕಾರ ಅಂದಾಜು ಮಾಡಲಾಯಿತು. ಇದುವರೆಗೆ ಬಂದಿರತಕ್ಕ ಹುಟ್ಟುವಳಿಯನ್ನೂ ಮತ್ತು ಇದುವರೆಗೆ ನಡೆದಿರುವ ವೆಚ್ಚವನ್ನೂ ನೋಡಿದರೆ, ಈ ವರ್ಷದ ಹುಟ್ಟುವಳಿಯೂ ವೆಚ್ಚವೂ ಬಡ್ಜೆಟ್ ಅಂದಾಜುಗಳ ಪ್ರಕಾರವೇ ಇರಬಹುದೇ, ಅಥವಾ ಹಾಗಿಲ್ಲದೆ ಬದಲಾವಣೆಯಾಗಬಹುದೇ—ಎಂಬುದನ್ನು ಇಷ್ಟು ಜಾಗ್ರತೆಯಾಗಿ ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಆದಾಗ್ಯೂ, ಬಡ್ಜೆಟ್ಟಿನಲ್ಲಿ ನಿರೀಕ್ಷಿಸಿರುವುದಕ್ಕಿಂತಲೂ ಉತ್ತಮವಾದ ಪರಿಣಾಮವುಂಟಾಗುತ್ತದೆಂಬುದಕ್ಕೆ ತಕ್ಕ ಸೂಚನೆಗಳೇನೋ ಇಲ್ಲದೆ ಹೋಗಿಲ್ಲ. 1931-32 ನೆಯ ಸಾಲಿನಲ್ಲಿ ವರಮಾನಕ್ಕಿಂತಲೂ ವೆಚ್ಚವು ಹೆಚ್ಚಾದುದಕ್ಕೆ ರೈಲ್ವೆಗಳು, ಗಂಧದ ಎಣ್ಣೆ ಮತ್ತು ಎಕ್ಸೈಜು—ಈ ಬಾಬುಗಳಲ್ಲಿ ಹುಟ್ಟುವಳಿಯು ಕಡಿಮೆಯಾದುದೇ ಕಾರಣ. ಈ 3 ಬಾಬುಗಳ ಪೈಕಿ ರೈಲ್ವೆಗಳ ಬಾಬಿನಲ್ಲಿ ಚಾಲ್ತಿಸಾಲಿನಲ್ಲಿ ಹುಟ್ಟುವಳಿಯು ಹೆಚ್ಚಾಗಿ ಬರುವ ಸೂಚನೆಗಳು ಸ್ವಲ್ಪಮಟ್ಟಿಗೆ ಕಂಡುಬರುತ್ತಿವೆ. ಹೆಚ್ಚು ಟ್ರೈನುಗಳನ್ನು ಬಿಡುವುದೂ, ಸಂಚಾರವನ್ನು ಹೆಚ್ಚಿಸುವುದಕ್ಕಾಗಿ ತಕ್ಕ ಏರ್ಪಾಡುಗಳನ್ನು ಕೈಕೊಂಡಿರುವುದೂ ಇದಕ್ಕೆ ಕಾರಣಗಳಾಗಿವೆ. ಎಕ್ಸೈಜು ಬಾಬಿನಿಂದ ಬರತಕ್ಕ ಹುಟ್ಟುವಳಿಯೂ ಕೂಡ ಬಡ್ಜೆಟ್ಟಿನಲ್ಲಿ ನಿರೀಕ್ಷಿಸಿದ್ದಷ್ಟಕ್ಕೆ ಕಡಿಮೆಯಾಗಲಾರದೆಂದು ತೋರುತ್ತದೆ. ಜರ್ಮನಿಯಿಂದ ಯುದ್ಧದ ವೆಚ್ಚದ ಸಲುವಾಗಿ ಕೊಡಲ್ಪಡಬೇಕಾಗಿದ್ದ ಮೊಬಲಗುಗಳ ಬಾಬತ್ತು ಸಂಸ್ಥಾನದ ಪಾಲಿಗೆ ಇಂಡಿಯಾ ಸರ್ಕಾರದವರಿಂದ 98,945 ರೂ. ಗಳು ಪ್ರಸಕ್ತಸಾಲಿನಲ್ಲಿ ಸಂದಾಯವಾದುವು. ಗಂಧದ ಎಣ್ಣೆಯ ಮಾರಾಟವನ್ನು ಹೆಚ್ಚಿಸುವುದಕ್ಕಾಗಿ ತಕ್ಕ ಪ್ರಯತ್ನಗಳನ್ನು ನಡೆಸಿದಾಗ್ಗ್ಯೂ ಸಹ, ಗಂಧದ ಎಣ್ಣೆಯ ಬಾಬಿನಲ್ಲಿ ಹುಟ್ಟುವಳಿಯು ತೃಪ್ತಿಕರವಾಗಿ ಪರಿಣಮಿಸುವಂತಿಲ್ಲ.

ಸಶೇಷ.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

25 M. C

೧೯೩೨ ನೆಯ ಇಸವಿ ಅಕ್ಟೋಬರ್ ತಾ|| ೧೭ರಿಂದ ಅಕ್ಟೋಬರ್ ತಾ|| ೨೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಆಶ್ವಯುಜ ಬಹುಳ ತದಿಗೆಯಿಂದ ಆಶ್ವಯುಜ ಬಹುಳ ನವಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ
17	ಸೋಮ	ತದಿ	40-43	ಕೃತ್ತಿ	56-43	1
18	ಮಂಗಳ	ಚೌತಿ	46-4	ರೋಹಿ	60	2
19	ಬುಧ	ಪಂಚ	50-36	ರೋಹಿ	2-54	3
20	[1] ಗುರು	ಷಷ್ಠಿ	54-29	ಮೃಗ	8-30	4
21	ಶುಕ್ರ	ಸಪ್ತ	56-56	ಆರ್ದ್ರಾ	13-8	5
22	ಶನಿ	ಅಷ್ಟ	58-21	ಪುನ	16-41	6
23	[2] ಭಾನು	ನವ	57-58	ಪುಷ್ಯ	18-56	7

(1) ಮಳೆನಕ್ಷತ್ರ-ಚಿತ್ತ ೪ ನೆಯ ಪಾದ. (2) ಮಳೆನಕ್ಷತ್ರ-ಸ್ವಾತಿ ೧ ನೆಯ ಪಾದ.

ಮೈಸೂರು : ವೈ. ವಿಶಾಲಾಕ್ಷಯ್ಯನವರಿಂದ 'ಸ್ಟಾರ್ ಎಲೆಕ್ಟ್ರಿಕ್' ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG. NO. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಹಿತಕರಾಜಮಂಡಲಶ್ರೀಕೃಪಾ | ಭುವನಚಕ್ರಶಾವನಾರಾ ಪಕ್ಷ್ಮ ಪಕ್ಷ ನೋದರಾಜೇಯರ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾರೋಲುಂಸುಧೀಪುಂಗವ | ಸ್ತೋಮಾಭೀಷ್ಟದಾಲು ಪಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತೀಯಂಸದಾಪೂರಿಗೆ ಗೌರೀಶಾಮಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಸೈಬ್ರಿಂಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ೧೯೩೨ ನೆಯ ಇಸವಿ ಅಕ್ಟೋಬರ್ ತಾರೀಖು ೨೪ ನೆಯ ಸೋಮವಾರ [ಸಂಚಿಕೆ ೪೩

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore.

(Sd.) S. SHA MANNA,
Secretary, Insurance Committee.

[50—16]

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಸ್ಟಾರ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮೀ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ
ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ।	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿ।	೦— ೮—೦	೦—೧೪—೦
ಷಟ್ಸ್ಥಲವಿದ್ಯಾ	೦— ೪—೦	೦— ೯—೦
ಚಾರುಶೀಲಚರಿತ್ರೆ	೦— [illegible]—೦	೦—೧೦—೦
ಹರಿಹಾಸ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರವಚನ	೦— ೮—೦	೦—೧೩—೦
ಸಟೀಕ ಕಲ್ಯಾಣಕಟ್ಟಮಂಜರಿ	೦— ೮—೦	೦—೧೩—೦
ಸಟೀಕ ಶತಕತ್ರಯ	೧— ೦—೦	೧— ೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಸ್ವರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪ್ರಮೇಹ, ಗರ್ಮಿದೋಷ, ಅಶಕ್ತಿ, ಪಿತ್ತಾಂಶ, ನಿದ್ರೆ, ಬೆನ್ನುನೋವು, ಕಡಿಮೆ ಕಾಣುವುದು, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಘಟ್ಟಿತನ, ಸ್ತಂಭನ, [illegible] ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ವರಶಕ್ತಿ ಮತ್ತು ತಮ್ಮ ಹೊಳ ಬೆಳೆಯುತ್ತದೆ. ಇದರಿಂದ [illegible] ಆಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು ? ೨೧ ದಿವಸ ಸಾಲುವ ಪೂರ್ಣಗುಣಪ್ರತ್ಯಯ [illegible] ತೊಲಿಯ ಒಂದು ಡಬ್ಬಿಗೆ ೫। ರೂಪಾಯಿ. ಟಪಾಲು ಖರ್ಚು ೧೫ ಆಣೆ. [illegible] ವನಸ್ಪತಿಗಳ ಹೆಸರು ಮತ್ತು [illegible] ತಿಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀರೋಗ ನಿವಾರಣೇ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಟ್ಟಿನ [illegible] ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. [illegible] ೨೧ ದಿವಸ ಸಾಲುವ ಪೂರ್ಣಗುಣಪ್ರತ್ಯಯ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

[illegible]

ಪತ್ತಾ ಮಾಲಕ :—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ. ಎಂ. ಎಸ್. ಎಂ.

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು [illegible]

(Registerd Trade Mark)

[illegible]

ವಿಳಾಸ—ಗುರುಮೂರ್ತಿ ಅಂಡ್ ಕಂಪೆನಿ ಲಿಮಿಟೆಡ್,

[illegible] , [illegible]

ಮೈಸೂರು ಸ್ಟಾರ್.

೧೯೩೨ನೇ ಇಸವಿ ಅಕ್ಟೋಬರ್ ತಾ|| ೨೪ನೆಯ ಸೋಮವಾರ.

ASSEMBLY DELIBERATIONS

One of the chief defects noticeable in the conduct of the Repersentative Assembly is the extremely short time allotted to non-official business though the business is permitted to be heavy on the agenda. Out of about 200 questions not even 30 or 40 are taken up at each session. Evidently the half hour allotted at the beginning of each day is totally insufficient. Not even one-fourth the number of resulutions are gone through, as even the short period of two days set apart for them get reduced to only one very often. As regards representations on which the rural members are very keen not more than one-tenth of them are taken up. Quite apart from the value of these discussions, which do not seem to affect the course of administration in the slightest, this method of curtailing non-official business while getting through the entire official business even by poaching on non-official days on some occasions is hardly fair or encouraging. This has been a standing complaint and we think that the Government which appoints so many committees could will constitute a committee to go into the question of providing sufficient time to non-official business. This time the offical business was not very heavy. The bill to amend the Co-operation Regulation with a view to introduce safeguards against mismanagement of societies, audit and inspection, attachments before orders and widening the purposes for which Land Mortgage Banks could finance so as to include the improvement and development of lands also was generally welcome by the House and was accepted unanimously. The motion to repeal the Breach of Contract Act was very hotly debated, the main opposition coming from the coffee-planters. But the statement of Srimhti Sakamma, herself one of the most experienced of coffee-planters in favour of the repeal was effective and decisive. The result was that a large majority voted for the repeal. The debate on the non-official bill for the suppression of immoral traffic which was moved by Mr. D. S. Mallappa occupied a whole day and both those in favour and against did their best to win the House to their side. The main object of the bill with which even the oppositionists agreed was to prevent youg girls being seduced into a life of prostitution and to prevent people from making a living by such a trade. Those who opposed did so mostly on the ground that there were already enough provisions in the Indian Penal Code, Municipal Regulation and the Police Regulation to prevent the evil, and that the new bill was only going to put more powers into the hands of the police which may not have the desired result at all. The bill was lost by a narrow majority. One of the questions relating to the right of non-Brahmins to read puranas in a temple in Santhepet, Mysore caused a lot of stir. The Government evaded facing the issue in spite of the utmost heckling by the House. They sheltered themselves under the opinion of the âgamiks who happened to be all Brahmins which was against non-Brahmins reading puranas in temples. We wonder why this progressive Government of ours should not have come to a decision on the matter without much ado. It would have been graceful if they had stated without hesitating that they were not going to countenance such a restriction. We are afraid such restrictions will lead to a lot of trouble in these days when things are moving so fast, when even depressed classes are allowed into temples. Of the non-official resolutions, the one relating to the formation of a committee to review the land revenue policy of the State was passed unanimously. The main idea was that the rates of assessment should not be increased without reference to the legislative body. It was a desriable suggestion but the Government were not favourable as was only to be expected. The resolution for reducing assessment from 12½ per cent to 25 per cent owing to the abnormal fall in prices was also passed unanimously. They have given such a relief in many other parts of India; but our Government was adamantive. Another important resolution was for making legislation to enable men of all communities to go in procession in all public streets irrespective of any mamool. This was only called for in our State as the various restrictions have let to a lot of litigation and done havoc on the people. It is also a measure of barest justice involoving a fundamental right of the subjects. Even here our Government which calls itself progressive was reactionary and was afraid of action, in spite of the House being unanimously in favour of the resolution. The attitude of Government in the matter is much to be regretted. One thing is becoming increasingly evident, that is, that Government is not willing to respond to the progressive reforms, either political or social, and is only good at marking time. The effectiveness of the Assembly which was never much, is only getting less. Either its powers should be increased or it should go. As it is, it is too archaic and unsuited to modern times.

UNIVERSITY CONVOCATION.

Almost the largest number of students since the founding of Mysore University took their degree this year. The Convocation address was delivered by Sir C. V. Kumaraswamy Sastri. It was pitched in the old time style and was hardly audible to even a portion of the Hall. We think that persons selected to address convocations should be possessed of good voice; otherwise the address falls flat and people will not have much patience to read the same later. Sir Sastri emphasised on culture the cultivation of which was one of the main things in University life. He emphasised the remodelling of studies so as to infuse students with high ideals of culture and character. He was against early specialisation. He even suggested that it must begin after B.A., which may not meet with much support. He pleaded for the study of Sanskrit and vernaculars. His plea for not looking down upon Pundits we are afraid, is not going to be heard much. As regards education of women his idea was that as their functions were different so should their education be developed on different lines. He regretted the high cost of education, recalling his own early days when text books were few and not subject to annual changes. He pleaded for love of country and social service. He advised the young men to devote some time each day for the study of religion and philosophy. The address, though traversing on familiar old grounds is worth close reading and contains many useful hints.

ಪ್ರಜಾಪ್ರತಿನಿಧಿಸಭಾ ಕಾರ್ಯಕಲಾಪಗಳು.

ಪ್ರತಿನಿಧಿಗಳಿಂದ ಪ್ರತಿಪಾದಿಸಲ್ಪಡುವ ವಿಷಯಗಳ ಸಂಖ್ಯೆಯು ಅಧಿಕವಾಗಿರುವುದಾದರೂ ಅವುಗಳ ವಿಮರ್ಶೆಗಾಗಿ ಕೊಡಲ್ಪಡುವ ಕಾಲ ವ್ಯವಧಾನವು ಬಹಳ ಕಡಿಮೆಯಾಗಿರುವುದು ಸಭಾ ನಡವಳಿಕೆಯಲ್ಲಿ ದೊಡ್ಡ ಕೊರತೆಯಾಗಿರುವುದು. ಈ ವೇಳೆ ಪ್ರತಿಪಾದಿಸಲ್ಪಟ್ಟಿದ್ದ 200 ವಿಷಯಗಳಲ್ಲಿ 30-40 ವಿಷಯಗಳು ಸಹ ಚರ್ಚೆಗೆ ಬರಲವಕಾಶವಾಗಲಿಲ್ಲ. ಇವುಗಳ ಚರ್ಚೆಗಾಗಿ ಪ್ರತಿ ದಿವಸವು ಗೊತ್ತುಮಾಡಲ್ಪಟ್ಟಿದ್ದ ಅರ್ಧ ಘಂಟೆಯು ಕಾಲವು ಸುತರಾಂ ಸಾಲದುದಾಗಿದ್ದಿತು. ನಿರ್ಧಾರಗಳನ್ನು ಪರ್ಯಾಲೋಚಿಸಲು 2 ದಿವಸಗಳ ಕಾಲ ವಿನಿಯೋಗಿಸಲ್ಪಟ್ಟಿದ್ದಾಗ್ಯೂ ಕಾಲು ಭಾಗವು ಸಹ ನಡೆಯಲು ವ್ಯವಧಾನವಾಗಲಿಲ್ಲ. ಕೋರಿಕೆಗಳ ವಿಚಾರದಲ್ಲಿ ಗ್ರಾಮಾಂತರಗಳ ಮೆಂಬರುಗಳು ವಿಶೇಷ ಕುತೂಹಲವುಳ್ಳವರಾಗಿದ್ದರೂ ಹತ್ತನೆಯೊಂದು ಭಾಗಕ್ಕಿಂತ ಹೆಚ್ಚಾಗಿ ತೆಗೆದುಕೊಳ್ಳಲ್ಪಡಲಿಲ್ಲ. ಮೆಂಬರುಗಳಿಂದ ತರಲ್ಪಡುವ ವಿಷಯಗಳ ಚರ್ಚೆಯು ಬಹಳ ಪ್ರಾಮುಖ್ಯವಾಗಿದ್ದರು ಮತ್ತು ಅದರಿಂದ ಪ್ರಭುತ್ವಕ್ಕೆ ಸಂಬಂಧಪಟ್ಟ ವಿಷಯಗಳ ಪರ್ಯಾಲೋಚನೆಗೆ ಲೇಶವೂ ಪ್ರತಿಬಂಧಕವಿಲ್ಲದಿದ್ದರು, ಅವುಗಳಿಗಾಗಿ ಗೊತ್ತುಮಾಡಲ್ಪಟ್ಟಿರುವ ಕಾಲ ವ್ಯವಧಾನವನ್ನು ಪ್ರಭುತ್ವ ವಿಷಯಗಳ ಪರ್ಯಾಲೋಚನೆಗಾಗಿ ಕಡಿಮೆ ಮಾಡುವುದು ಯುಕ್ತವಾಗಿರುವುದಿಲ್ಲವಲ್ಲದೆ ನಿರುತ್ಸಾಹಕರವಾಗಿದೆ. ಈ ವಿಚಾರದಲ್ಲಿ ದೂರು ನಿರಂತರವಾಗಿರುವುದರಿಂದ ಮೆಂಬರುಗಳಿಂದ ತರಲ್ಪಡುವ ವಿಷಯಗಳ ಪರ್ಯಾಲೋಚನೆಗೆ ಸಾಕಷ್ಟು ಕಾಲ ವ್ಯವಧಾನವನ್ನು ಕಲ್ಪಿಸುವ ಬಗ್ಗೆ ಒಂದು ಸ್ಪೆಷಲ್ ಕಮಿಟಿಯನ್ನು ಪ್ರಭುತ್ವದವರೇರ್ಪಡಿಸುವುದುತ್ತಮವು. ಈ ವೇಳೆ ಪ್ರಭುತ್ವದವರ ಕಾರ್ಯಕಲಾಪವು ವಿಶೇಷವಾಗಿರಲಿಲ್ಲ. ಸಹಕಾರ ಸಂಘಗಳ ಅಕ್ರಮಾಡಳಿತ, ಲೆಖ್ಖ ಪರಿಶೋಧನೆ, ಮೇಲ್ವಿಚಾರಣೆ, ಆರ್ಡರಿಗೆ ಮೊದಲು ಜಪ್ತಿ ಮಾಡುವುದು, ಇವುಗಳ ವಿಚಾರವಾಗಿಯೂ, ಜಮೀನುಗಳಭಿವೃದ್ಧಿಗಾಗಿ ಸಾಲವನ್ನು ಕೊಡಲೇರ್ಪಟ್ಟಿರುವ ಅಡಮಾನ ಬ್ಯಾಂಕುಗಳ ಉದ್ದೇಶಗಳನ್ನು ವಿಸ್ತರಿಸುವುದಕ್ಕಾಗಿಯೂ ತರಲ್ಪಟ್ಟಿದ್ದ ಬಿಲ್ಲು ಸರ್ವಾನುಮತದಿಂದ ಅನುಮೋದಿಸಲ್ಪಟ್ಟಿತು. ಬ್ರೀಚ್ ಆಫ್ ಕಾಂಟ್ರಾಕ್ಟ್ ಆಕ್ಟನ್ನು ತೆಗೆದುಬಿಡಬೇಕೆಂಬ ಬಿಲ್ಲು ಬಹಳ ತೀಕ್ಷ್ಣವಾಗಿ ಚರ್ಚಿಸಲ್ಪಟ್ಟು ಯೂರೋಪಿಯನ್ ಕಾಫಿ ಪ್ಲಾಂಟರುಗಳು ಈ ಆಕ್ಟನ್ನು ತೆಗೆಯಕೂಡದೆಂದು ಬಹಳವಾಗಿ ವಾದಿಸಿದರಾದರೂ, ದೊಡ್ಡ ಕಾಫಿ ತೋಟಗಾರ್ತಿಯರೂ ಅನುಭವಸ್ಥೆಯರೂ ಆದ ಶ್ರೀಮತಿ ಸಾಕಮ್ಮನವರ ಅಭಿಪ್ರಾಯಾನುಸಾರವಾಗಿ ಆಕ್ಟು ತೆಗೆಯಲ್ಪಡಬೇಕೆಂಬ ಬಿಲ್ಲು ಬಹುಮತದಿಂದ ಅನುಮೋದಿತವಾಯಿತು. ಮ|| ಡಿ. ಎಸ್. ಮಲ್ಲಪ್ಪನವರಿಂದ ತರಲ್ಪಟ್ಟಿದ್ದ ವ್ಯಭಿಚಾರ ನಿರೋಧಕ ಬಿಲ್ಲಿನ ವಿಚಾರವಾಗಿ ಅನುಕೂಲ ಪ್ರತಿಕೂಲ ಪಕ್ಷದವರ ವಾದವು ಒಂದು ದಿನವೆಲ್ಲ ಬಹಳ ತೀಕ್ಷ್ಣವಾಗಿ ನಡೆದಿತು. ಚಿಕ್ಕ ಹುಡುಗಿಯರು ವ್ಯಭಿಚಾರವೃತ್ತಿಗೆ ಬಿದ್ದು ಅದರಿಂದ ಜೀವನ ಹೊರೆಯುವಂತೆ ದುರ್ಬೋಧಿಸಲ್ಪಡುವುದನ್ನು ತಪ್ಪಿಸಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲದಿದ್ದಾಗ್ಯೂ, ಈ ಕೃತ್ಯವನ್ನು ತಡೆಯಲು ಪಿನಲ್ ಕೋಡಿನಲ್ಲೂ, ಮ್ಯುನಿಸಿಪಲ್ ಮತ್ತು ಪೊಲೀಸು ರೆಗ್ಯುಲೇಷನ್ನುಗಳಲ್ಲೂ ಅವಕಾಶವು ಕಲ್ಪಿಸಲ್ಪಟ್ಟಿರುವಾಗ್ಗ್ಯೆ. ಹೊಸದಾಗಿ ಒಂದು ವಿಧಿಯನ್ನು ಮಾಡುವುದರಿಂದ ಪೊಲೀಸಿನವರಿಗೆ ಹೆಚ್ಚು ಅಧಿಕಾರವು ಬಂದು ಜನರಿಗೆ ವಿಶೇಷ ತೊಂದರೆಯನ್ನೂ ಕಿರುಕುಳವನ್ನೂ ಉಂಟುಮಾಡಿದಂತಾಗುವುದಲ್ಲದೆ; ದುರ್ಬೋಧಕರ ಸೆರೆಯಿಂದ ಬಿಡಿಸಲ್ಪಟ್ಟ ಹುಡುಗಿಯರಿಗೆ ಪ್ರತ್ಯೇಕ ರಕ್ಷಣಾಲಯಗಳಿಲ್ಲದಿರುವ ಪ್ರಯುಕ್ತ ಅನ್ಯಮತಾವಲಂಬನೆಗೆ ಅವಕಾಶವನ್ನು ಕಲ್ಪಿಸಿದಂತಾಗುವುದರಿಂದ ನೂತನ ಶಾಸನಾವಶ್ಯಕತೆಯಿಲ್ಲವೆಂದು ಬಹುಮತದಿಂದ ಬಿಲ್ಲು ಅನಂಗೀಕೃತವಾಯಿತು. ರಾಜಧಾನಿಯ ಸಂತೇಪೇಟೆ ಶ್ರೀ ಪ್ರಸನ್ನ ನಂಜುಂಡೇಶ್ವರ ದೇವಸ್ಥಾನದಲ್ಲಿ ಬ್ರಾಹ್ಮಣೇತರರು ಪುರಾಣವನ್ನೋದಿದುದರ ಮೇಲೆ ಗೊಂದಲವೆದ್ದು ಮುಜರಾಯಿ ದೇವಸ್ಥಾನಗಳಲ್ಲಿ ಬ್ರಾಹ್ಮಣೇತರರು ಪುರಾಣವನ್ನೋದಕೂಡದೆಂದು ಹೊಸದಾಗಿ ಮಾಡಲ್ಪಟ್ಟಿರುವ ಅಪ್ಪಣೆಯ ವಿಚಾರವಾಗಿ ಸಭೆಯಲ್ಲಿ ಬಹಳ ಖಂಡನೆಯು ನಡೆದಿತಾದರೂ ಪ್ರಭುತ್ವದವರು ತಕ್ಕ ಸಮಾಧಾನವನ್ನು ಕೊಡದೆ, ದೇವಸ್ಥಾನಗಳ ಆಗಮಿಕರ ಅಭಿಪ್ರಾಯವನ್ನನುಸರಿಸಿ ಈ ನಿರ್ಬಂಧ ಕಲ್ಪಿಸಲ್ಪಟ್ಟಿರುವುದಾಗಿ ಹೇಳಿ ಭಾರವನ್ನೆಲ್ಲ ಬ್ರಾಹ್ಮಣ ಆಗಮಿಕರ ತಲೆಯಮೇಲೆ ಹೊರಿಸಿಬಿಟ್ಟು ತಾವು ನುಣುಚಿಕೊಂಡರು. ಈ ನಾಗರಿಕ ಕಾಲದಲ್ಲಿ ಅದರಲ್ಲೂ ಅಸ್ಪೃಶ್ಯರ ದೇವಸ್ಥಾನ ಪ್ರವೇಶಕ್ಕೆ ಅವಕಾಶ ಕಲ್ಪಿಸಲ್ಪಡುತ್ತಿರುವ ಕಾಲದಲ್ಲಿ ಈ ರೀತಿ ಬ್ರಾಹ್ಮಣೇತರರ ಪುರಾಣ ಪಠಣಕ್ಕೆ ವಿರೋಧವನ್ನು ಕಲ್ಪಿಸಿರುವುದು ಬಹಳ ಸುಧಾರಿಸಿದ ನಮ್ಮ ಪ್ರಭುತ್ವದವರಿಗೆ ಅನುಚಿತವೂ ಲಜ್ಜಾಸ್ಪದವೂ ಆಗಿರುತ್ತದೆ. ಇಂತಹ ನಿರ್ಬಂಧಕ್ಕೆ ತಾವೆಡೆಗೊಡುವುದಿಲ್ಲವೆಂದು ಪ್ರಭುತ್ವದವರು ಸಂಕೋಚವಿಲ್ಲದೆ ಹೇಳಿದ್ದರೆ ಅವರಿಗೆ ಭೂಷಣವಾಗಿರುತ್ತಿದ್ದಿತು. ಈ ನಿರ್ಬಂಧವು ಅನರ್ಥಕ್ಕೆ ಕಾರಣವಾಗಿರುವುದೆಂದು ಹೇಳಬೇಕಾಗಿಲ್ಲ. ಭೂಗಂದಾಯವನ್ನು ವಿಧಿಸುವ ರೀತಿಯನ್ನು ಪುನರ್ವಿಮರ್ಶಿಸುವುದಕ್ಕಾಗಿ ಒಂದು ಕಮಿಟಿಯೇರ್ಪಡಿಸಲ್ಪಡಬೇಕೆಂದು ಮೆಂಬರುಗಳು ತಂದಿದ್ದ ರೆಜ್ಯುಲೇಷನ್ನು ಏಕವಾಕ್ಯದಿಂದ ಅನುಮೋದಿತವಾಯಿತು. ಭೂಗಂದಾಯದ ದರವು ನ್ಯಾಯವಿಧಾಯಕ ಸಭೆಯ ಅನುಮೋದನವಿಲ್ಲದೆ ಹೆಚ್ಚಿಸಲ್ಪಡಕೂಡದೆಂಬುದು ಮುಖ್ಯೋದ್ದೇಶವು. ಇದು ವಿಹಿತವಾದ ಸೂಚನೆಯಾಗಿದ್ದಿತಾದರೂ ನಿರೀಕ್ಷಿಸಿದ್ದಂತೆಯೇ ಪ್ರಭುತ್ವದವರಿಗೆ ಮಾತ್ರ ಸಮ್ಮತವಾಗಿರಲಿಲ್ಲ. ಧಾನ್ಯದ ಬೆಲೆಯು ಅತ್ಯಂತ ಕಡಿಮೆಯಾಗಿರುವಪ್ರಯುಕ್ತ ಕಂದಾಯವು ಶೇಕಡ 12½ ಇಂದ 25 ಕ್ಕೆ ಇಳಿಸಲ್ಪಡಬೇಕೆಂಬ ರೆಜ್ಯುಲೇಷನ್ನು ಸರ್ವಾನುಮತದಿಂದ ಪ್ಯಾಸಾಯಿತು. ಭಾರತ ದೇಶದ ಇತರ ಕಡೆಗಳಲ್ಲಿ ಕಂದಾಯವಿಳಿಸಲ್ಪಟ್ಟಿರುವುದಾದರೂ ನಮ್ಮ ಪ್ರಭುತ್ವದವರ ಮನಸ್ಸು ಮಾತ್ರ ಕರಗದೆ ವಜ್ರದಷ್ಟು ಕಠಿಣವಾಗಿದ್ದಿತು. ಇಂತಿಂತಹ ಬೀದಿಗಳಲ್ಲಿ ಇಂತಿಂತಹ ಜಾತಿಯವರು ಉತ್ಸವದಲ್ಲಿ ಹೋಗಬೇಕೆಂಬ ನಿರ್ಬಂಧವಿರುವುದರಿಂದ ಮನುಷ್ಯನ ಸ್ವಭಾವಸಿದ್ಧವಾದ ಹಕ್ಕಿಗೆ ಕುಂದಕವಾಗಿರುವುದಲ್ಲದೆ ಪರಸ್ಪರ ಕಲಹದಿಂದ ಅನರ್ಥಗಳಿಗೆ ಅವಕಾಶವಾಗಿರುತ್ತದೆ. ಅದಪ್ರಯುಕ್ತ ಎಲ್ಲ ರಾಜ ಬೀದಿಗಳಲ್ಲೂ ಎಲ್ಲ ಜಾತಿ ಮತಸ್ಥರೂ ಯಾವ ತಾರತಮ್ಯವೂ ಇಲ್ಲದೆ ಉತ್ಸವದಿಂದ ಹೋಗುವಂತೆ ಮಾಡಬೇಕೆಂಬ ಬಗೆಗೆ ತರಲ್ಪಟ್ಟಿದ್ದ ರೆಜ್ಯುಲೇಷನ್ನಿನ ವಿಚಾರವಾಗಿ ಅನುಕೂಲವಾಗಿಯೂ ಪ್ರತಿಕೂಲವಾಗಿಯೂ ಚರ್ಚೆಗಳು ನಡೆದು ಹೆಚ್ಚು ಸಂಖ್ಯೆಯ ಮೆಂಬರುಗಳು ಸಮ್ಮತಿಸಿದರಾದರೂ ಪ್ರಭುತ್ವದವರ ಅಭಿಪ್ರಾಯವು ಮಾತ್ರ ಅನುಕೂಲವಾಗಿರಲಿಲ್ಲ. ಇದರಿಂದ ಪ್ರಭುತ್ವದವರು ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಗಳನ್ನು ಮಾಡಲಿಷ್ಟವಿಲ್ಲದವರಾಗಿ ಕಾಲದಬ್ಬುವರೆಂದು ವ್ಯಕ್ತವಾಗುತ್ತದೆ. ಪ್ರಜಾಪ್ರತಿನಿಧಿ ಸಭೆಯ ಸತ್ವವು ಹಿಂದೆ ವಿಶೇಷವಾಗಿರಲಿಲ್ಲವಾಗಿದ್ದರೂ ಕ್ರಮೇಣ ಕಡಿಮೆಯಾಗುತ್ತ ಬರುತ್ತಿದೆ. ಇದರ ಅಧಿಕಾರವು ಹೆಚ್ಚಬೇಕು ಇಲ್ಲವೇ ಹೋಗಬೇಕು. ಅದು ಈಗಿರುವ ರೀತಿಯಲ್ಲಿ ನಾಮ ಮಾತ್ರವೂ ಪ್ರಕೃತ ಕಾಲಕ್ಕೆ ಅನುಚಿತವೂ ಆಗಿರುವುದು.

ಮೈಸೂರು ವಸ್ತುಪ್ರದರ್ಶನ

ರಾಜಧಾನಿಯಲ್ಲಿ ದಸರಾಮಹೋತ್ಸವ ಸಂಬಂಧವಾಗಿ ನಡೆಯುವ ಯಾವದ್ಭಾರತವಸ್ತು ಪ್ರದರ್ಶನವು ಈವೇಳೆ 18 ದಿವಸಗಳವರೆಗೆ ನಡೆದಿತು. ಪ್ರೇಕ್ಷಕರ ಸಂಖ್ಯೆಯೂ ಅನುಕೂಲವಾಗಿಯೇ ಇದ್ದಿತು. ಲಕ್ನೋಪ್ರಭುತ್ವ ಕೈಗಾರಿಕೆಯ ಶಾಲೆಯಲ್ಲಿ ಬಹಳ ರಮಣೀಯವೂ ಕೌಶಲ್ಯಪ್ರದರ್ಶಕವೂ ಆದ ನಾನಾ ಬಣ್ಣದ ಚಿತ್ರಗಳಿಂದ ತಯಾರಿಸಲ್ಪಟ್ಟ ತಟ್ಟೆ, ಲೋಟ, ತಂಬಿಗೆ ಪಾಸಾಲೆ ಮೊದಲಾದ ಹಿತ್ತಾಳೆಯ ಪದಾರ್ಥಗಳು ಜನಾಕರ್ಷಣೀಯವಾಗಿದ್ದು ಚೆನ್ನಾಗಿ ಮಾರಾಟವಾದುವು. ಸ್ವದೇಶೀ ಸಾಮಾನು, ಸುಗಂಧದ್ರವ್ಯಗಳು, ಬಣ್ಣದ ಸಾಮಾನುಗಳು, ಸ್ತ್ರೀ ಪುರುಷರು ಉಪಯೋಗಿಸುವ ವಸ್ತ್ರಗಳೂ, ಬಿಸ್ಕತ್ತು ಮೊದಲಾದ ತಿಂಡಿ ಪದಾರ್ಥಗಳೂ, ಇತರ ನಾನಾ ವಿಧ ವಸ್ತುಗಳೂ ಬಂದಿದ್ದುವು. ಇವುಗಳ ಬೆಲೆಯಾಗಲಿ ನಾಜೂಕಾಗಲಿ ಮಾರಾಟಕ್ಕೆ ಕಾರಣವಾಗಿರದೆ ಬರೇ ಸ್ವದೇಶಾಭಿಮಾನವೇ ಮುಖ್ಯ ಕಾರಣವಾಗಿದ್ದಿತು. ಬಂದಿದ್ದ ಪದಾರ್ಥಗಳಿಗೆ ಅವುಗಳ ಯೋಗ್ಯತಾನುಸಾರ ಬೆಳ್ಳಿ ಭಂಗಾರ ಪದಕಗಳೂ ಯೋಗ್ಯತಾ ಪತ್ರಗಳೂ ಎರಡನೆಯ ಕೌನ್ಸಿಲರ್ ಮ|| ಕೆ. ಮಥಾಯ್ ರವರಿಂದ ಕೊಡಲ್ಪಟ್ಟುವು. ಬ್ರೂಕ್‌ಬಾಂಡ್ ಇಂಡ್ಯಾ ಲಿಮಿಟೆಡ್ ಕಂಪೆನಿಯವರು ಪ್ರದರ್ಶಿಸಿದ್ದ ಟಿ ಕಾಫಿಗಳಲ್ಲಿ ದಿಲ್ ಕುಷ್ ಕಾಫಿಯ ಔತ್ಕೃಷ್ಟ್ಯಕ್ಕಾಗಿ ಭಂಗಾರದ ಪದಕವು ಕೊಡಲ್ಪಟ್ಟಿತು. ಪ್ರತಿ ವರ್ಷದಲ್ಲೂ ಈ ವಸ್ತುಪ್ರದರ್ಶನವನ್ನು ನಡೆಸುವುದರಿಂದ ನೂತನ ಪದಾರ್ಥಗಳನ್ನು ಮಾಡಲಿಕ್ಕೆ ವ್ಯವಧಾನವೂ ಅನುಕೂಲವೂ ಇರುವುದಿಲ್ಲವಾದುದರಿಂದ ಹಳೆಯ ಪದಾರ್ಥಗಳೇ ಪ್ರತಿವೇಳೆಯೂ ಪ್ರದರ್ಶಿಸಲ್ಪಡುವುವು. ಅದು ಕಾರಣ 3 ವರ್ಷಕ್ಕೊಮ್ಮೆ ಪ್ರದರ್ಶನವು ನಡೆಸಲ್ಪಡುವುದುದಾದರೆ ಕೈಗಾರಿಕೆಯ ಜನರಿಗೆ ಕುಶಲವಸ್ತುಗಳನ್ನು ಮಾಡಲು ಅವಕಾಶವೂ ಅನುಕೂಲವೂ ಉಂಟಾಗುವುವಲ್ಲದೆ ಪ್ರೇಕ್ಷಕರಿಗೆ ನವೀನವಸ್ತುಗಳನ್ನು ನೋಡಲು ಕುತೂಹಲವೂ ಹುಟ್ಟಿ ಪ್ರದರ್ಶಕರಿಗೆ ಆದಾಯವು ಹೆಚ್ಚುವುದು. ಇದನ್ನು ಪ್ರಭುತ್ವದವರು ಪರ್ಯಾಲೋಚಿಸಬೇಕು.

ಅಖಿಲಭಾರತ ವೀರಶೈವ ಮಹಾಸಭೆ

ಈ ಮಹಾಸಭೆಯ 11 ನೇ ಅಧಿವೇಶನವು ಬರುವ ಡಿಶಂಬರ್ ತಾ|| 28 ನೆಯ ಗುರುವಾರ ಮತ್ತು 29 ನೆಯ ಶುಕ್ರವಾರ ಧಾರವಾಡದಲ್ಲಿರುವ ಲಿಂಗಾಯತ ಟೌನ್‌ಹಾಲಿನಲ್ಲಿ ಜರುಗುವಂತೆ ಈ ಮಹಾಸಭಾಕಾರ್ಯಕಾರಿ ಮಂಡಲಿಯವರಿಂದ ನಿರ್ಧರಿಸಲ್ಪಟ್ಟಿರುವುದಾಗಿ ಈ ಪತ್ರಿಕೆಯ ಬೇರೆ ಕಡೆ ಪ್ರಕಟವಾಗಿರುವ ಪ್ರಸಿದ್ಧ ಪತ್ರಿಕೆಯಿಂದ ವ್ಯಕ್ತವಾಗುತ್ತದೆ. ಈ ಮಹಾಸಭೆಯ ಅಧ್ಯಕ್ಷತೆಯನ್ನು ನವಕರ್ನಾಟಕ ವಾರಪತ್ರಿಕೆಯ ಮತ್ತು ಶಿವಾನುಭವ ಮಾಸಪತ್ರಿಕೆಯ ಸಂಪಾದಕರೂ, ಕರ್ನಾಟಕ ಭಾಷಾ ಸೇವಕರೂ, ಪ್ರಸಾರಕರೂ, ವೀರಶೈವ ಸಮಾಜಾಭಿವೃದ್ಧಿಗಾಗಿ ತ್ರಿಕರಣಪೂರ್ವಕ ಪಾಟುಪಡುತ್ತಿರುವವರೂ, ಅಗೋಚರವಾಗಿದ್ದ ವಚನ ಶಾಸ್ತ್ರವನ್ನು ಸಂಗ್ರಹಿಸಿ ಪ್ರಚುರಪಡಿಸಿಯೂ ಪಡಿಸುತ್ತಲೂ ವೀರಶೈವ ಸಮಾಜಕ್ಕೆ ಮಹೋಪಕಾರವನ್ನು ಮಾಡುತ್ತಿರುವವರೂ, ವೀರಶೈವ ಸಮಾಜವನ್ನು ದಹಿಸುತ್ತಲಿರುವ ಗುರುವಿರಕ್ತ ಕಲಹಾಗ್ನಿಗೆ ಶಿಲ್ಕದೆ ನಿಷ್ಪಕ್ಷಪಾತದಿಂದ ವರ್ತಿಸುವವರೂ, ಆದ ರಾವ್ ಸಾಹೇಬ್ ಹಳಕಟ್ಟಿ, ಬಿ.ಎ., ಎಲ್.ಎಲ್.ಬಿ., ಇವರು ವಹಿಸುವುದರಿಂದ, ಮಹಾಸಭೆಯು ಸುಲಲಿತವಾಗಿಯೂ, ನಿರ್ವಿಘ್ನವಾಗಿಯೂ, ಫಲಪ್ರದವಾಗಿಯೂ ನಡೆಯುವುದೆಂದು ನಿರೀಕ್ಷಿಸುತ್ತೇವೆ.

ಅಂಬೇಡ್ಕರು ಮಹಾತ್ಮರ ದರ್ಶನ ಮಾಡಿದರು

ಕಳೆದ ಸೋಮವಾರ ರಾತ್ರಿ ಡಾಕ್ಟರ್ ಅಂಬೇಡ್ಕರವರು ಪೂನಾ ಎರವಾಡಾ ಜೈಲಿಗೆ ಹೋಗಿ ಮಹಾತ್ಮರ ದರ್ಶನವನ್ನು ತೆಗೆದುಕೊಂಡು ಅಸ್ಪೃಶ್ಯತಾ ನಿರ್ಮೂಲನ ವಿಚಾರವಾಗಿ ಸಂಭಾಷಿಸಿ ಬಂದರು. ಅಂಬೇಡ್ಕರು ರೌಂಡುಟೇಬಲ್ ಸಭೆಗೆ ಆಹ್ವಾನಿಸಲ್ಪಟ್ಟಿರುವುದರಿಂದ ಕೂಡಲೆ ಲಂಡನ್ನಿಗೆ ಪ್ರಯಾಣ ಮಾಡುವರು. ಇವರು ಮಹಾತ್ಮರ ಸಂದರ್ಶನ ಕಾಲದಲ್ಲಿ ನಡೆದ ವಿಚಾರವನ್ನು ಕುರಿತು ಪತ್ರಿಕಾಪ್ರತಿನಿಧಿಯೊಡನೆ ಪ್ರಸ್ತಾವಿಸುವಾಗ್ಗೆ "ಬರೇ ಆಡಂಬರದಿಂದ ಪ್ರಯೋಜನವಿಲ್ಲ. ಅಸ್ಪೃಶ್ಯತಾ ನಿರ್ಮೂಲನ ಸಂಘದವರು ಹರಿಜನರ ಆರ್ಥಿಕಸ್ಥಿತಿಯನ್ನೂ, ವಿದ್ಯಾ ಸೌಕರ್ಯವನ್ನೂ, ಸಾಂಘಿಕ ಮರ್ಯಾದೆಯನ್ನೂ ವೃದ್ಧಿಗೊಳಿಸಲು ಬಲವಾದ ಪ್ರಯತ್ನವನ್ನು ಮಾಡಬೇಕು. ದೇವಾಲಯ ಪ್ರವೇಶವೂ ಸಹಪಂಕ್ತಿ ಭೋಜನವೂ ಬರೇ ಆಡಂಬರದ್ದಾಗಿವೆ. ಹರಿಜನರು ಬಾವಿಗಳನ್ನುಪಯೋಗಿಸಲಿಕ್ಕೂ, ಅವರ ಮಕ್ಕಳು ಪಾಠಶಾಲೆಗಳಿಗೆ ಬರಲಿಕ್ಕೂ ಇರುವ ಅಭ್ಯಂತರವನ್ನು ತಪ್ಪಿಸಲು ಪ್ರಜೆಗಳಲ್ಲಿ ಪ್ರಬಲ ಪ್ರಚಾರವು ಜರುಗಬೇಕು" ಎಂದು ಹೇಳಿದರು.

ಅಸ್ಪೃಶ್ಯರ ಸಹಪಂಕ್ತಿಭೋಜನವು ಐಚ್ಛಿಕ

"ಹರಿಜನರ ಪಂಕ್ತಿಯಲ್ಲಿ ಸೇರಿ ಊಟಮಾಡಬಹುದೆ?" ಎಂದು ಅಲಹಬಾದಿನಿಂದ ಒಬ್ಬರು ಮಹಾತ್ಮರಿಗೆ ಬರೆದಿದ್ದುದಕ್ಕೆ ಮಹಾತ್ಮರು ಈ ಪ್ರಕಾರವಾಗಿ ಉತ್ತರವನ್ನು ಕೊಟ್ಟಿರುವರು:—"ಬ್ರಾಹ್ಮಣರಿಗೆ ಕ್ಷತ್ರಿಯ, ವೈಶ್ಯ ಶೂದ್ರರುಗಳೊಡನೆ ಯಾವ ಸಂಬಂಧವೀಗಿರುವುದೋ ಹರಿಜನರೊಡನೆ ಅದೇ ಸಂಬಂಧವಿರಬೇಕು. ಶೂದ್ರಾದಿಗಳೊಡನೆ ಸಮಾನವಾಗಿ ಹರಿಜನರನ್ನು ಕಾಣಬೇಕು. ಶೂದ್ರರನ್ನು ದೇವಾಲಯದೊಳಕ್ಕೆ ಬರಗೊಡುತ್ತಿರುವಂತೆಯೇ ಹರಿಜನರನ್ನು ದೇವಾಲಯ, ಪಾಠಶಾಲೆ ಮೊದಲಾದ ಬಹಿರಂಗ ಸ್ಥಳಗಳಿಗೆಲ್ಲ ಬರಗೊಡಬೇಕು. ಅಗ್ರವರ್ಣದವರೂ ಹರಿಜನರೂ ಕೂಡಿ ಊಟಮಾಡುವುದು ಅಸ್ಪೃಶ್ಯತಾ ನಿವಾರಣೆಗೆ ಮುಖ್ಯ ವಿಷಯವಲ್ಲ. ಇಷ್ಟವುಳ್ಳವರು ಮಾಡಬಹುದು ಇಲ್ಲದವರು ಬಿಡಬಹುದು. ಹಿಂದುಮತ ಸಂಪ್ರದಾಯವನ್ನನುಸರಿಸಿ ಒಬ್ಬನು ತಾನು ಯಾವಾಗಲೂ ತಿನ್ನುತ್ತಿರುವ ಪದಾರ್ಥವನ್ನು ಇತರರ ಪಂಕ್ತಿಯಲ್ಲಿ ತಿನ್ನುವುದು ದೋಷವಲ್ಲವೆಂದೇ ನಾನು ನಂಬಿರುತ್ತೇನೆ. ಇದು ನನ್ನ ವ್ಯಕ್ತಿಯಭಿಪ್ರಾಯವು."

ಮಿಲ್ಕ್‌ಸ್ ಕನ್ಯೆಯ ಉಪನ್ಯಾಸ

ಈಗ ಭಾರತದೇಶ ಸಂಚಾರಮಾಡುತ್ತಿರುವ ಇಂಡಿಯಾ ಲೀಗು ಪ್ರತಿನಿಧಿಗಳು ದಿಲ್ಲಿಯಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಭೆಗೆ ಹೋಗಿದ್ದವೇಳೆಯಲ್ಲಿ ಅಧ್ಯಕ್ಷರ ಕೋರಿಕೆಯ ಮೇರಿಗೆ ಮಿಲ್ಕ್‌ಸ್ ಕನ್ಯೆಯು ಈ ಪ್ರಕಾರ ಉಪನ್ಯಾಸವನ್ನು ಮಾಡಿದರು:—"ನಾನು ಭಾರತದೇಶಕ್ಕೆ ಬರುತ್ತಲೆ ಉತ್ತಮರಾದ ಭಾರತೀಯರೆಲ್ಲರೂ ಪ್ರಭುತ್ವದವರಲ್ಲಿ ಭಕ್ತಿಯುಳ್ಳವರಾಗಿರುತ್ತಾರೆಂದು ಒಬ್ಬ ಬ್ರಿಟಿಷ್ ಉದ್ಯೋಗಿಯು ಹೇಳಿದರು. ಭಾರತೀಯರೆಲ್ಲರೂ ಜೈಲಿನಲ್ಲಿರುವಾಗ್ಗೆ ಉತ್ತಮರಾದವರನ್ನು ನೋಡುವುದೆಂತು ಎಂದು ನಾನು ಕೇಳಿದೆನು. ನಮ್ಮ ಪರ್ಯಟನದ ಉದ್ದೇಶವೇನೆಂದರೆ—ಆರ್ಡಿನೆನ್ಸು ಜಾರಿಗೆ ತರಲ್ಪಟ್ಟಾರಭ್ಯ ಇಂಡ್ಯಾ ಸಂಬಂಧವಾಗಿ ಸಮಾಚಾರವೇ ಆಂಗ್ಲದೇಶದಲ್ಲಿ ಸರಿಯಾಗಿ ತಿಳಿಯದಂತಾದುದರಮೇಲೆ ಸ್ಥಿತಿಗತಿಗಳನ್ನು ಸ್ವಯಮಾಗಿ ನೋಡಿ ಕೇಳಿ ತಿಳಿದುಕೊಳ್ಳುವುದಕ್ಕಾಗಿ ಬಂದಿರುತ್ತೇವೆ. ಸ್ವದೇಶಕ್ಕೆ ಹೋದಮೇಲೆ ನಿಜ ಸ್ಥಿತಿಗತಿಗಳನ್ನು ಆಂಗ್ಲ ಪ್ರಜೆಗಳಿಗೆ ತಿಳಿಸಿ ಭಾರತೀಯರು ಸ್ವಾತಂತ್ರ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆಂದು ಅವರ ಮನಸ್ಸಿಗೆ ಹಿಂಡಿಯುವಂತೆ ಹೇಳುವೆವು. ಸಂಗತಿಗಳನ್ನೆಲ್ಲ ವಿಶದವಾಗಿ ತಿಳಿಯಹೇಳಿ ಭಾರತೀಯೋದ್ಯಮಕ್ಕೆ ಸಹಾಯಮಾಡಬೇಕೆಂದಿರುತ್ತೇವೆ. ಉತ್ತಮರಾದ ಸ್ತ್ರೀಯರೂ ಪುರುಷರೂ ಬಂದಿಗಳಾಗಿರುವುದರಿಂದ ನಮಗೆ ನಾಚಿಕೆಯಾಗಿರುತ್ತದೆ. ನಿರ್ಬಂಧ ವಿಧಾನದಿಂದ ಒಂದು ಜಾತಿಯು ಮತ್ತೊಂದು ಜಾತಿಯನ್ನು ಹೇಗೆ ಅಣಗಿಸುವುದೋ ನನಗೆ ಬೇರೆ ತಿಳಿಯದು. ಭಾರತ ದೇಶಕ್ಕೂ ಆಂಗ್ಲದೇಶಕ್ಕೂ ಶಾಂತಿಯುಂಟಾಗುವಂತೆ ಪ್ರಯತ್ನಿಸುವೆವು."

ಸರ್ ಇಕ್ಬಲ್‌ರವರ ಅಭಿಪ್ರಾಯ

ಮಹಮ್ಮದ್ ಇಕ್ಬಲ್‌ರವರು ಮೂರನೆಯ ರೌಂಡು ಟೇಬಲ್ ಸಭೆಗೆ ಆಹ್ವಾನಿಸಲ್ಪಟ್ಟಿರುವುದರಿಂದ ಕಳೆದ ಗುರುವಾರ ಬೊಂಬಾಯಿನಲ್ಲಿ ಹಡಗನ್ನು ಹತ್ತಿ ಲಂಡನ್ನಿಗೆ ಪ್ರಯಾಣಮಾಡಿದರು. ಆ ಸಮಯದಲ್ಲಿ ಹಿಂದು ಮಹಮ್ಮದೀಯ ಸಮಸ್ಯೆಯನ್ನು ಕುರಿತು ಈ ಪ್ರಕಾರವಾಗಿ ಹೇಳಿದರು—"ಪ್ರಕೃತ ಸ್ಥಿತಿಯಲ್ಲಿ ಭಾರತ ದೇಶದ ಮಹಮ್ಮದೀಯರು ಪ್ರತ್ಯೇಕ ನಿಯೋಜಕ ವರ್ಗವನ್ನು ಬಿಡರು. ಲಕ್ನೋದಲ್ಲಿ ಮಹಮ್ಮದೀಯ ನಾಯಕರೊಳಗೆ ನಡೆದಿರುವ ಒಡಂಬಡಿಕೆಯು ಜಯಪ್ರದವಾಗಿ ಆಗುವುದೇ ಎಂಬ ಸಂದೇಹವು ನನಗುಂಟಾಗಿದೆ. ಅಖಿಲ ಭಾರತ ಮುಸ್ಲೀಂ ಸಭೆಯವರೂ ಅಖಿಲಭಾರತ ಮುಸ್ಲೀಂ ಸಮಿತಿಯವರೂ ಮಾಡಿರುವ ತೀರ್ಮಾನವನ್ನು ಮಹಮ್ಮದೀಯರುಗಳೆಲ್ಲರೂ ಅನುಮೋದಿಸಿರುತ್ತಾರೆಂದು ನಾನು ನಂಬುತ್ತೇನೆ. ಪ್ರತ್ಯೇಕ ನಿಯೋಜಕವರ್ಗವು ಜಾತೀಯತೆಗೆ ಭಂಗಕರವೆಂದು ಹೇಳುವವರ ವಾದರೀತಿಯನ್ನು ನಾನೊಪ್ಪುವುದಿಲ್ಲ. ಭಾರತ ದೇಶದ ಸ್ಥಿತಿಗತಿಗಳಿಗೂ, ಪಾಶ್ಚಾತ್ಯ ದೇಶಗಳ ಸ್ಥಿತಿಗತಿಗಳಿಗೂ ವ್ಯತ್ಯಾಸವಿರುತ್ತದೆ. ಅಂದರೆ ಅಲ್ಲಿಯ ಪ್ರಜಾಪ್ರತಿನಿಧಿ ಪ್ರಭುತ್ವ ವಿಧಾನವು ಇಲ್ಲಿಗೆ ಉಪಯೋಗವಿಲ್ಲವೆಂದು ಮಹಾತ್ಮರು ಹೇಳಿರುವ ಮಾತನ್ನು ನಾನು ಅಂಗೀಕರಿಸುತ್ತೇನೆ. ಹಿಂದುಗಳೂ ಮಹಮ್ಮದಿಯರೂ ಪರಸ್ಪರ ಇರುವ ಹಕ್ಕುಗಳನ್ನು ಅಂಗೀಕರಿಸಿದಲ್ಲಿ ಭಾರತ ಜಾತೀಯ ಅಭಿವೃದ್ಧಿಯಾಗುವುದೆಂದು ನಾನು ತಿಳಿದಿರುವೆನು. ಹಿಂದುಗಳೂ ಮಹಮ್ಮದೀಯರೂ ಒಡಂಬಡಿಕೆಯನ್ನು ಮಾಡಿಕೊಳ್ಳಲು ಈಗ ತಕ್ಕ ಸಮಯವು ಇನ್ನೂ ಬಂದಿಲ್ಲವೆಂಬುದು ನನ್ನ ಅಭಿಪ್ರಾಯ. ಮಹಮ್ಮದೀಯರೊಳಗೇ ಇಂತಹ ಒಡಂಬಡಿಕೆಯನ್ನು ಕುದುರಿಸಲು ನಾನು ಯಾವಾಗಲೂ ಸಿದ್ಧನಾಗಿರುತ್ತೇನೆ. ಆ ಶುಭದಿವಸವು ಬಂದಲ್ಲಿ ನನ್ನಷ್ಟು ಸಂತೋಷಪಡುವವರು ಮತ್ತಾರೂ ಇಲ್ಲ. ಲಕ್ನೋ ತೀರ್ಮಾನವು ಮಾಡಲ್ಪಟ್ಟಿರುವುದರಿಂದ, ಅವುಗಳ ವಿಚಾರವಾಗಿ ಮೆಜಾರಿಟಿ ಸಂಘಗಳವರು ಯಾವ ಕಾರ್ಯಭಾರವನ್ನು ನಡೆಸುತ್ತಾರೆಯೋ ನೋಡಬೇಕು.

ಒಳದೇಶದ ವೃತ್ತಾಂತಗಳು

ಕೋಲಾರ ಡಿ|| ಮುಳ್ಬಾಗಲಿನ ಮ|| ಎಚ್. ಕೃಷ್ಣಮೂರ್ತ್ಯಾಚಾರ್‌ರವರು ಕಳೆದ ೩೦ ವರ್ಷಗಳಿಂದಲೂ ಪ್ರಜಾಪ್ರತಿನಿಧಿ ಸಭೆಯ ಮೆಂಬರಾಗಿರುವುದರಿಂದ ಅರಮನೆಯ ದರ್ಬಾರಿನಲ್ಲಿ ಖಾಸಾ ಹಾರದ ಮರ್ಯಾದೆಯು ಶ್ರೀಮನ್ಮಹಾರಾಜರವರಿಂದ ಅನುಗ್ರಹಿಸಲ್ಪಟ್ಟಿರುತ್ತದೆ.

ರಾಜಧಾನಿಯ ಮುಲ್ತಾನಿ ಪರಶುರಾಂ ಸೇಟರು ನೋಟಿನ ಸಂಬಂಧವಾಗಿ ಸಿಟಿ ಮೆಜಿಸ್ಟ್ರೇಟರು ವಿಧಿಸಿದ್ದ ಅರ್ಥದಂಡ ಕಾರಾಗೃಹವಾಸ ಶಿಕ್ಷೆಯ ಮೇಲೆ ಮೈಸೂರು ಸೆಷನ್ಸು ಕೋರ್ಟಿಗೆ ಅಪೀಲನ್ನು ಮಾಡಿಕೊಂಡಿದ್ದರು. ಅದರ ಮೇಲೆ ಜಡ್ಜಿಯವರು ಹೊಸದಾಗಿ ಕೆಲ ಸಾಕ್ಷಿಗಳನ್ನು ವಿಚಾರಿಸಿ ಫಿರ್ಯಾದಿ ಅಪರಾಧಿಗಳ ಪರ ವಕೀಲರುಗಳ ಆರ್ಗ್ಯುಮೆಂಟನ್ನು ಕೇಳಿ ಸುಳ್ಳು ಹೇಳಿದ್ದಕ್ಕಾಗಿ 1000 ರೂ. ಜುಲ್ಮಾನೆ ಮತ್ತು 6 ತಿಂಗಳ ಕಠಿಣ ಸಜವೂ ಮೋಸಮಾಡಿದ್ದಕ್ಕಾಗಿ 1000 ರೂ. ಜುಲ್ಮಾನೆ ಮತ್ತು 6 ತಿಂಗಳ ಕಠಿಣ ಸಜವೂ ವಿಧಿಸಲ್ಪಟ್ಟಿದ್ದುದರಲ್ಲಿ ಅರ್ಥದಂಡವನ್ನು ಸ್ಥಿರಗೊಳಿಸಿ ಸಜವನ್ನು 3-3 ತಿಂಗಳಿಗಿಳಿಸಿ ಏಕಕಾಲದಲ್ಲಿ ಅನುಭವಿಸುವಂತೆ ತೀರ್ಮಾನಿಸಿರುವರು. ಇದರ ಮೇಲೆ ಅಪರಾಧಿ ಸೇಟರು ಹೈ ಕೋರ್ಟಿಗೆ ಅಪೀಲನ್ನು ಮಾಡಿ ಹೊಣೆಯಮೇಲೆ ಬಿಡುಗಡೆಯನ್ನು ಹೊಂದಿರುವರು. ಹೈ ಕೋರ್ಟಿನ ತೀರ್ಮಾನವು ಬಹಳ ಕುತೂಹಲದಿಂದ ನಿರೀಕ್ಷಿಸಲ್ಪಟ್ಟಿದೆ.

ರಾಜಧಾನಿಯ ದಸರಾಮಹೋತ್ಸವ ಚರಿತ್ರೆಯಲ್ಲೇ ಈವರೆಗೆ ನಡೆಯದಿದ್ದಂತಹ ಮತ್ತು ಅದ್ವಿತೀಯವೂ ಅಕುಟಿಲವೂ ಆದ ರಾಜಭಕ್ತಿಗೆ ಕಳಂಕಪ್ರಾಯವಾದ ಗಲಭೆಯು ವಿಜಯದಶಮಿ ಉತ್ಸವದಲ್ಲಿ ಯಾರ ದುರದೃಷ್ಟದಿಂದಲೋ ನಡೆದು ಪ್ರಜೆಗಳಿಗೆ ಪೊಲೀಸಿನವರ ಮೇಲೂ, ಅಧಿಕಾರಿಗಳಿಗೆ ಪ್ರಜೆಗಳ ಮೇಲೂ ಅನುಮಾನವುಂಟಾಗಿರುತ್ತದೆ. ಈ ಗಲಭೆಯನ್ನು ವಿಚಾರಿಸಲು ಯಾವ ಕಮಿಟಿಯೂ ನಿಯಮಿಸಲ್ಪಡದೆ ರೆವಿನ್ಯೂ ಕಮಿಷನರ್ ಮ|| ಎಸ್. ಪಿ. ರಾಜಗೋಪಾಲಾಚಾರ್‌ರವರು ಮಾತ್ರ ನಿಯಮಿಸಲ್ಪಟ್ಟಿರುವರು. ಇವರು ಕೃತ್ಯನಡೆದ ನೆರೆಹೊರೆ ಸ್ಥಳಗಳನ್ನು ಸ್ವತಃ ಪರೀಕ್ಷಿಸಿ ತಾವಿಳಿದಿದ್ದ ಶೇಷಾದ್ರಿ ಭವನಕ್ಕೆ ಕೆಲ ಕೆಲ ಅಧಿಕಾರಿಗಳನ್ನೂ ಪುರನಿವಾಸಿಗಳನ್ನೂ ಬರಮಾಡಿಕೊಂಡು ಬಹಳ ರಹಸ್ಯವಾಗಿ ವಾಂಗ್ಮೂಲವನ್ನು ಕೇಳಿ ತಿಳಿದುಕೊಂಡು ಇಷ್ಟರಲ್ಲೇ ತಮ್ಮ ವರದಿಯನ್ನು ಪ್ರಭುತ್ವಕ್ಕೆ ನಿವೇದಿಸುವವರಾಗಿರುವರು. ಮ|| ಆಚಾರ್ಯರು ಯಾರ ಮೇಲೂ ದಯೆದಾಕ್ಷಿಣ್ಯಾಭಿಮಾನಗಳನ್ನು ತೋರಿಸದೆ ತಪ್ಪಿತಸ್ಥರಾರೆಂಬುದನ್ನು ನಿಷ್ಪಕ್ಷಪಾತದಿಂದ ತಿಳಿಸುವರೆಂದು ನಂಬುತ್ತೇವೆ.

ರಿಟೈರ್ಡ್ ಅಮೃತಮಹಲ್ ಸೂಪರಿಂಟೆಂಡೆಂಟರಾದ ಮ|| ಅಬ್ದುಲ್ಲಷರೀಫ್‌ರವರ ಮದುವೆಯಾದ ಹೆಂಡಿತಿ ಅಜಮತ್ ಎಂಬಾಕೆಯು ಜೀವನಾಂಶಕ್ಕಾಗಿ ಮೈಸೂರು ಸಿಟಿ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಗಂಡನಮೇಲೆ ಫಿರ್ಯಾದು ಮಾಡಿದ್ದರು. ಈಕೆಯ ಹೇಳಿಕೆಯೇನೆಂದರೆ—"ನಾನು ಕಾಯಿಲೆಯಾಗಿದ್ದುದರಿಂದ ಕಾಯಿಲೆಯನ್ನು ಗುಣ ಮಾಡಿಕೊಂಡು ಬರುವಂತೆ ಹೇಳಿ ನನ್ನನ್ನು ಮಳವಳ್ಳಿಯಲ್ಲಿರುವ ನನ್ನ ತೌರುಮನೆಗೆ ಕಳುಹಿಸಿಕೊಟ್ಟು, ನನಗೆ ಕಾಯಿಲೆ ಗುಣವಾಗಿದೆ ಕರೆಸಿಕೊಳ್ಳಬೇಕೆಂದು ಅನೇಕ ಕಾಗದಗಳನ್ನು ಬರೆದಾಗ್ಯೂ ನನ್ನನ್ನು ಕರೆಸಿಕೊಳ್ಳಲಿಲ್ಲ. ಅದಕ್ಕಾಗಿ ನನ್ನ ತಂದೆಯು ಪಂಚಾಯತಿಕೆ ಮಾಡಿದುದರಮೇಲೆ ನನ್ನನ್ನು ಕರೆದುಕೊಂಡು ಬರುವಂತೆ ನನ್ನ ತಂದೆಗೆ ಹೇಳಿದರು. ಅದರಂತೆ ನಾನು ಮನೆಗೆ ಬಂದನಂತರ ನನ್ನನ್ನು ಬೇಕಾದಷ್ಟು ಹಿಂಸಿಸಿ ನನ್ನ ನಗಗಳನ್ನೆಲ್ಲ ಕಿತ್ತುಕೊಂಡು ಪುನಃ ತೌರುಮನೆಗೆ ಕಳುಹಿಸಿಬಿಟ್ಟು ಬೇರೊಬ್ಬಳನ್ನು ಮದುವೆಯಾಗಿ ಅವಳ ಕೂಡ ಸಂಸಾರ ಮಾಡುತ್ತಿರುವರು. ನನ್ನ ಗಂಡನಿಗೆ ಪ್ರತಿ ತಿಂಗಳಲ್ಲೂ 150 ರೂ. ಪಿನ್ಷನ್ನು ಬರುತ್ತಿರುವುದಲ್ಲದೆ 60-70 ಸಾವಿರ ರೂಪಾಯಿ ಆಸ್ತಿಯಿರುವುದರಿಂದ ತಿಂಗಳಿಗೆ 50 ರೂ. ನಂತೆ ಜೀವನಾಂಶಕೊಡಿಸಬೇಕು." ಇದಕ್ಕೆ ಇದಿರು ಅರ್ಜಿದಾರರಾದ ಮ|| ಷರೀಫರು ಈಕೆಯ ನಡತೆಯು ಚೆನ್ನಾಗಿರಲಿಲ್ಲ. ಮನೆಯಲ್ಲಿ ಕಲಹ ಮಾಡುತ್ತಿದ್ದುದರಮೇಲೆ 12-6-1930 ರಲ್ಲಿ ತಲಕ್ ಅಂದರೆ ವಿವಾಹವಿಚ್ಛೇದನಮಾಡಿ 3 ತಿಂಗಳ ವರೆಗೆ ಖರ್ಚಿಗೆ 30 ರೂ. ಗಳನ್ನೂ ದಾರೀ ಖರ್ಚನ್ನೂ ಕೊಟ್ಟು ಒಬ್ಬ ಹೆಂಗುಸಿನ ಕೂಡ ಆಕೆಯ ತೌರುಮನೆಗೆ ಕಳುಹಿಸಿದೆನು. ಆಕೆಯನ್ನು ನ್ಯಾಯರೀತಿಯಿಂದ ಬಿಟ್ಟಿರುವುದರಿಂದ ಜೀವನಾಂಶಕ್ಕೆ ಆಕೆಯು ಅರ್ಹಳಲ್ಲವೆಂದು ವಾದಿಸಿದರು. ಅದರ ಮೇಲೆ ಮೆಜಿಸ್ಟ್ರೇಟರು ವಿವಾಹವಿಚ್ಛೇದನವಾಗಿರುವುದು ನಿಜವಾದುದರಿಂದ ಜೀವನಾಂಶ ಸಲ್ಲತಕ್ಕುದಲ್ಲವೆಂದು ನಿರ್ಧರಿಸಿ ಫಿರ್ಯಾದನ್ನು ತಳ್ಳಿಪಡಿಮಾಡಿದರು.

೧೧ ನೇ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭಾ ಧಾರವಾಡ.

ತಾ|| 16-10-32 ನೇ ದಿವಸ 5 ಘಂಟೆಗೆ ಧಾರವಾಡ ಲಿಂಗಾಯತ ಟೌನ್‌ಹಾಲಿನಲ್ಲಿ ಶ್ರೀಮದ್ವೀರಶೈವ ಮಹಾ ಸಭೆಯ ಮ್ಯಾನೇಜಿಂಗ ಕಮಿಟಿಯ ಸಭೆಯಲ್ಲಿ 11 ನೇ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆಯನ್ನು ಡಿಶಂಬರ್ ತಾ|| 28, 29 ನೇ ದಿವಸ ಕರೆಯಲಿಕ್ಕೆ ನಿರ್ಧರಿಸಲ್ಪಟ್ಟಿತು.

ಅಖಿಲಭಾರತ ಶ್ರೀಮದ್ವೀರಶೈವ ಮಹಿಳಾ ಪರಿಷತ್ ಧಾರವಾಡ

ತಾ|| 13-10-32ನೇ ದಿವಸ ಧಾರವಾಡ ಲಿಂಗಾಯತ ಟೌನ್‌ಹಾಲಿನಲ್ಲಿ ಕೂಡಿದ ಅಖಿಲಭಾರತ ಶ್ರೀಮದ್ವೀರಶೈವ ಮಹಿಳಾ ಪರಿಷತ್ತಿನ ಮ್ಯಾನೇಜಿಂಗ ಕಮಿಟಿಯಲ್ಲಿ ಪಾಸಾದ ಠರಾವು:—1. ಅಖಿಲಭಾರತ ಶ್ರೀಮದ್ವೀರಶೈವ ಮಹಿಳಾಪರಿಷತ್ತಿನ ಸ್ವಾಗತಸಂಘದ ಸದಸ್ಯೆಯರಾಗಲು ಪ್ರತಿಯೊಬ್ಬ ಲಿಂಗಾಯತ ಮಹಿಳೆಯು 1 ರೂ. ವರ್ಗಣಿ ಕೊಡತಕ್ಕದ್ದು. ಅದರ 11 ನೇ ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆಯ ಸ್ವಾಗತ ಸಂಘದ ಪ್ರ

ಯೊಬ್ಬ ಮೆಂಬರರಿಗೆ ಮಹಿಳಾ ಪರಿಷತ್ತಿನ ಸದಸ್ಯರ ಟಿಕೇಟು 1 ಪುಕ್ಕಟೆಯಾಗಿ ದೊರೆಯುವದು. ಅದನ್ನು ಅವರು ತಮ್ಮ ಮನೆಯ ಯಾವರೇ ಮಹಿಳೆಯರುಸಲುವಾಗಿ ಉಪಯೋಗಿಸಬಹುದು.

ಎಂ. ಎಸ್. ಕೇಸರಿ, ಸಿ. ಜಿ. ತುಂಡೇಕರ್,
ಎಸ್. ಎಸ್. ಬಸವನಾಳ್. (ಪಬ್ಲಿಸಿಟಿ ಕಮಿಟಿ.)

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

ಪಂಡಿತ ಭಾಲಾಕ್ಷ ಶಾಸ್ತ್ರಿಗಳ ತ್ಯಾಗ.

ಜ್ಞಾನವಯೋವೃದ್ಧರೂ ಸ್ವಕರ್ತವ್ಯ ನಿಷ್ಠರೂ ನಿರಾಡಂಬರರೂ ಆದ ಪಂ॥ ಭಾಲಾಕ್ಷ ಶಾಸ್ತ್ರಿಗಳವರು ಕಾಶೀ ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾ ಸಂಸ್ಥಾನದಲ್ಲಿ ಸುಮಾರು 30-40 ವರ್ಷಗಳಿಂದ ಕಾರ್ಯನಿರ್ವಾಹಕರಾಗಿಯೂ ಆಸ್ಥಾನ ವಿದ್ವಾಂಸರಾಗಿಯೂ ಇದ್ದುದು ವೀರಶೈವ ಸಮಾಜದ ಪಂಡಿತ ವರ್ಗಕ್ಕೂ ಮಹಾಜನಗಳಿಗೂ ಸುಪರಿಚಿತವಷ್ಟೆ! ಅತ್ಯಂತ ಸಂಯಮಿತ ಜೀವನವುಳ್ಳವರಾದುದರಿಂದ ಅವರಿಗೆ ಈಗಿನ ಎಪ್ಪತ್ತು ವರ್ಷದ ವಯಸ್ಸಿನವರಿಗೂ ಅವಿಚ್ಛಿನ್ನವಾದ ಆರೋಗ್ಯಭಾಗ್ಯವು ಲಭಿಸಿದುದು ಪ್ರತ್ಯಕ್ಷವಾಗಿದೆ. ಆದರೆ ಶರೀರ ಧರ್ಮವನ್ನನುಸರಿಸಿ 15 ದಿವಸಗಳ ಹಿಂದೆ ಶ್ರೀ ಶಾಸ್ತ್ರಿಗಳಿಗೆ ಕಾಯಿಲೆಯಾಗಿ ಕೊಂಚ ತೊಂದರೆಯಾಯಿತು, ಪುನಃ 8-10 ದಿವಸಗಳಲ್ಲಿಯೇ ಚೇತರಿಸಿಕೊಂಡು ಹಿಂದಿನಂತೆ ತಮ್ಮ ಯವಕಾಶವನ್ನೆಲ್ಲ ಶಿವಧ್ಯಾನ ಪೂಜಾದಿಗಳಲ್ಲಿಯೇ ಕಳೆಯುತ್ತಿರುವುದು ನಮ್ಮಗಳಿಗೆ ಅತ್ಯಂತ ಸಂತೋಷಪ್ರದವಾಗಿದೆ. ಕಳೆದ ವಿಜಯದಶಮಿಯ ಮಾರನೇ ದಿನ ಮಧ್ಯಾಹ್ನದಲ್ಲಿ ಶ್ರೀ ವಿಶ್ವಾರಾಧ್ಯ ಗುರುಕುಲದ ಸಮಸ್ತ ವಿದ್ಯಾರ್ಥಿಗಳನ್ನು ಕರೆದು ತಮ್ಮಲ್ಲಿರತಕ್ಕ ಬಹಳ ಬೆಲೆ ಬಾಳುವ ಧಾರ್ಮಿಕ ನೈತಿಕ ಸಾಹಿತ್ಯ ಗ್ರಂಥಗಳನ್ನೆಲ್ಲ ಅವರವರ ಅಪೇಕ್ಷೆಯನ್ನನುಸರಿಸಿ ನಿರ್ವಾಜಬುದ್ಧಿಯಿಂದ ಪ್ರದಾನಿಸಿದರೆಂದು ತಿಳಿಸಲು ಮಹಾನಂದವಾಗುತ್ತದೆ. ಶರೀರ ನಶ್ವರತೆಯನ್ನರಿತವರು ಜಗತ್ತಿನಲ್ಲಿ ಬಹಳರಾಗಿದ್ದರೂ ತಾವು ಸ್ವಸ್ಥರಾಗಿರುವಾಗಲೇ ತಮ್ಮ ಮುಖ್ಯ ಸಂಪತ್ತನ್ನು ಇತರರಿಗೆ ಹಂಚತಕ್ಕವರು ದುರ್ಲಭರಷ್ಟೆ! ಶ್ರೀ ಶಾಸ್ತ್ರಿಗಳು ವಿದ್ಯಾವಂತರನ್ನೇ ತಮ್ಮ ಉತ್ತರಾಧಿಕಾರಿಗಳನ್ನಾಗಿ ಭಾವಿಸಿ ಗ್ರಂಥ ಸಮೂಹವನ್ನೆಲ್ಲ ಕೊಟ್ಟು ಇತರರಿಗೆ ಉದಾತ್ತ ಮಾರ್ಗವನ್ನು ಸೂಚಿಸಿದರೆಂಬುದರಲ್ಲಿ ಸಂದೇಹವಿಲ್ಲ. ಈ ತ್ಯಾಗವೊಂದಲ್ಲದೆ ಅವರ ಅನೇಕ ಗುಣಗಳು ಸ್ತೋತ್ರಾರ್ಹಗಳಾಗಿದ್ದರೂ ಪೂಜ್ಯ ಶಾಸ್ತ್ರಿಗಳವರ ಆತ್ಮ ಪ್ರಶಂಸಾವಿಮುಖವಾದ ಸೂಕ್ಷ್ಮ ಸ್ವಭಾವವನ್ನನುಸರಿಸಿ ವಿಸ್ತರಿಸಲು ಶಕ್ತನಲ್ಲವೆಂದು ಗುಣಗ್ರಾಹಿಗಳಲ್ಲಿ ವಿಜ್ಞಾಪಿಸುತ್ತೇನೆ.

ಓರ್ವ ವೀರಶೈವ ವಿದ್ಯಾರ್ಥಿ. ಕಾಶಿ.

ಉಪಕಾರ ಸ್ಮರಣೆ.

ಶ್ರೀ ಜಗದ್ಗುರು ವಿಶ್ವಾರಾಧ್ಯ ಮಹಾ ಸಂಸ್ಥಾನದ ಆಸ್ಥಾನ ವಿದ್ವಾಂಸರಾದ ಪಂ॥ ಭಾಲಾಕ್ಷ ಶಾಸ್ತ್ರಿಗಳು 10-10-32 ರಲ್ಲಿ ನೂರಾರು ರೂಪಾಯಿ ಬೆಲೆಯುಳ್ಳ ತಮ್ಮ ಗ್ರಂಥರತ್ನಗಳನ್ನು ಸಮಸ್ತ ವಿದ್ಯಾರ್ಥಿಗಳಿಗೆ ನಿರ್ವಾಜ ಬುದ್ಧಿಯಿಂದ ಸಮರ್ಪಿಸಿದ ಸಮಾರಂಭದಲ್ಲಿ ನನ್ನಯಪೇಕ್ಷೆಯಂತೆ ಸುಮಾರು 30 ರೂಪಾಯಿ ಬೆಲೆಯಾಗುವ ಅತ್ಯುತ್ತಮಗಳಾದ ಗ್ರಂಥಗಳನ್ನು "ಶೈವ ಭಾರತೀ ಭವನ"ಕ್ಕೆ ಅನುಗ್ರಹಿಸಿ ಮಹೋಪಕಾರಮಾಡಿರುತ್ತಾರೆ. ಇವುಗಳಲ್ಲಿ ಕೆಲವಲಭ್ಯ ಗ್ರಂಥಗಳೂ ಇವೆ. ಶ್ರೀ ಶಾಸ್ತ್ರಿಗಳವರು ನಿರಪೇಕ್ಷಾಬುದ್ಧಿಯಿಂದ ಪ್ರದಾನಿಸಿದ್ದರೂ ಅವರ ಉದಾತ್ತ ವಿಚಾರಗಳಿಂದ ನಮ್ಮಗಾಗಿರುವ ಉಪಕಾರವನ್ನೀಮೂಲಕ ಸಮಾಜಕ್ಕೆ ನಿವೇದಿಸುವುದು ಕರ್ತವ್ಯವೆಂದು ಭಾವಿಸುತ್ತೇನೆ—

ಜಿ. ಮ. ವೀರಭದ್ರಶರ್ಮ,
ಕಾರ್ಯದರ್ಶಿ, ಶೈವ ಭಾರತೀ ಭವನ.

ಬೃಹನ್ಮಠಕ್ಕೆ ಅಸ್ಪೃಶ್ಯರ ಪ್ರವೇಶ.

ಮಹಾತ್ಮನ ಉಪವಾಸ ವ್ರತಕ್ಕೆ ಮಹಾ ಗುರುವಿನ ಆಶೀರ್ವಾದ ಎಂಬ ಹೆಡ್ಡಿಂಗಿನಿಂದ ನಾನು ಪ್ರಕಟಿಸಿದ್ದ ಹಸ್ತ ಪತ್ರಿಕೆಯಲ್ಲಿ ಚಿತ್ರದುರ್ಗದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ತಮ್ಮ ಬೃಹನ್ಮಠಕ್ಕೆ ಅಸ್ಪೃಶ್ಯರು ಪ್ರವೇಶಿಸಲು ಅವಕಾಶವನ್ನಿತ್ತು ಅವರನ್ನು ಪುನೀತರನ್ನಾಗಿ ಅನುಗ್ರಹಿಸಿದರೆಂದು ತಿಳಿಸಿದ್ದೆನು. ಈ ಮಠ ಪ್ರವೇಶಕ್ಕೆ ಅವಕಾಶಕೊಡಲ್ಪಟ್ಟದ್ದುದು ಸುಳ್ಳೆಂದು ಕೆಲರು ವದಂತಿಯನ್ನು ಹುಟ್ಟಿಸಿದ್ದಲ್ಲದೆ ನನಗೂ ಬರೆದಿದ್ದರು. ಅದುದರಿಂದ ಶ್ರೀ ಜಗದ್ಗುರು ಮಹಾ ಸಂಸ್ಥಾನದ ಏಜಂಟರ ಹೆಸರಿನಿಂದ ಪ್ರಕಟವಾಗಿರುವ ಪ್ರಸಿದ್ಧ ಪತ್ರಿಕೆಯನ್ನು ನನ್ನ ಮಾತಿನ ತಥ್ಯಾಂಶಕ್ಕಾಗಿಯೂ ಸಮಸ್ತರ ತಿಳಿವಿಕೆಗಾಗಿಯೂ, ಅನುಮಾನಪರಿಹಾರಕ್ಕಾಗಿಯೂ ಈ ಕೆಳಗೆ ಪ್ರಕಟಿಸಿರುತ್ತೇನೆ.

ಎಸ್. ವಿ. ಹನುಮಂತರಾಜು,
ಸೆಕ್ರೆಟರಿ, ಆದಿಕರ್ನಾಟಕ ಅಸೋಸಿಯೇಷನ್ ಚಿತ್ರದುರ್ಗ ಡಿ॥

ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿನಾಂ.

ಶ್ರೀಮಚ್ಚಿನ್ಮೂಲಾದ್ರಿ ಬೃಹನ್ಮಠ ಮಹಾ ಸಂಸ್ಥಾನದ ಏಜಂಟರ ಆಫೀಸಿನಿಂದ—ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇ

ಸಂಗತಿ:—ಅಸ್ಪೃಶ್ಯರಸಲುವಾಗಿ ತಾ॥ 25-9-1932 ರಲ್ಲಿ ನಡೆದ ಜಾಗರ ಕುರಿತು ಕೆಲವು ಪತ್ರಿಕೆಗಳಲ್ಲಿ ಚಿತ್ರದುರ್ಗದ ಶ್ರೀ॥ ಮಠವು ಯಾವ ಆತಂಕವೂ ಇಲ್ಲದೆ ಅಸ್ಪೃಶ್ಯರಿಗೆ ದರ್ಶನ ಪೂಜಾ ಪುರಸ್ಕಾರಾದಿಗಳಿಗಾಗಿ ತೆರೆಯಲ್ಪಟ್ಟಿತು ವಗೈರೆ ವಿಷಯಗಳನ್ನು ಕೆಲವು ಪತ್ರಿಕೆಗಳಲ್ಲಿ ಪ್ರಕಟಿಸಿರುವುದು ತಿಳಿಯಿತು. ಈ ವಿಚಾರದಲ್ಲಿ ಬಹುಜನರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಬರೆದಿರುವರು, ಇನ್ನು ಒಬ್ಬರು ಮಾತ್ರ ತಮ್ಮ ಅಸಂತೋಷವನ್ನು ಪ್ರಕಟಿಸಿರುತ್ತಾರೆ. ಇವರು ಚೆನ್ನಾಗಿ ವಿಷಯಸ್ಪಷ್ಟತೆಯನ್ನು ಮಾಡಿದಂತೆ ತೋರಲಿಲ್ಲ. ತಾ॥ 25 ರಲ್ಲಿ ಕೆಲವರಿಗೆ ಅಸ್ಪೃಶ್ಯರಾಗಿ ತೋರುವ ಆದಿಕರ್ನಾಟಕ ಜನರು ಶಿವಭಜನೆಮಾಡುತ್ತಾ ಮಠಕ್ಕೆ ಬಂದರು ಈ ಜನಗಳು ಪ್ರತಿಯೊಬ್ಬರು ಭಸ್ಮಧಾರಣೆಮಾಡಿಕೊಂಡಿದ್ದರು. ಈ ಪ್ರಕಾರ ಶಿವಭಜನಾಸಕ್ತಿಯಿಂದ ಬಂದ ಈ ಜನಗಳಿಗೆ ಹಿಂದು ಸಾಮಾನ್ಯ ಜನರು, ಕ್ರಿಶ್ಚಿಯನ್, ಮಹಮ್ಮದೀಯರು, ಬರುವ ಸ್ಥಾನದ ಪರ್ಯಂತ ಇವರನ್ನು ಅವಶ್ಯ ಬಿಡತಕ್ಕದ್ದು ಯುಕ್ತವೆಂದು ತೋರಿ "ಶಿವೇತಿ ಮಂಗಲಂ ನಾಮ | ಯಸ್ಯ ವಾಚಿ ಪ್ರವರ್ತತೇ | ಸಪ್ತಜನ್ಮ ಕೃತಂಪಾಪಂ | ಭಸ್ಮೀಭವತಿ ತಸ್ಯವೈ ||" ಎಂಬ ಉಕ್ತಿಯಂತೆ ಸದರಿಯವರನ್ನು ಸಾಮಾನ್ಯ ಜನರು ಬರುವ ಸ್ಥಾನ ಪರ್ಯಂತ ಬಿಡಲು ಸದರಿಯವರು ಅತ್ಯಂತ ಹರ್ಷಮನಸ್ಕರಾಗಿ ಕಾಯನ್ನು ಹೊಡೆಯುವುದು, ಕರ್ಪೂರ ಹಚ್ಚುವುದು, ವಂದನಾದಿಗಳೊಡನೆ "ಜಯ ನಮಃ ಪಾರ್ವತೀಪತೇ ಹರಹರ ಮಹಾದೇವ" ಎಂದು ಉಚ್ಚಾರಣೆಮಾಡಿ, ನಮಗೆ ಇಷ್ಟರಮಟ್ಟಿಗೆ ಅವಕಾಶಕೊಟ್ಟದ್ದರಿಂದ ನಾವು ಧನ್ಯರಾದೆವೆಂದು ಕೊಂಡಾಡಿ ಪುನಃ ಪುನಃ ಸಾಷ್ಟಾಂಗನೆರಗುತ್ತಲಿರುವ ಸಮಯದಲ್ಲಿ, ಮಹಾಸ್ವಾಮಿಯವರು ಸದರಿಯವರಿಗೆ ಅಪ್ಪಣೆಕೊಡಿಸಿರುವುದೇನೆಂದರೆ—"ನೀವು ಇನ್ನು ಮೇಲೆ ಮಾರಿ ಮಸಣಿ ಮುಂತಾದ ಜಾತ್ರೆಯ ನೆಪದಿಂದ ಕೋಣ, ಕುರಿಗಳನ್ನು ಕಡಿಯುವ ಹಕ್ಕು ನಮಗುಂಟೆಂತ ಸಾಧಿಸುವ ಮೂರ್ಖತನವನ್ನು ಬಿಡಬೇಕು. ಮದ್ಯಪಾನವನ್ನು ಮಾಡಲೇ ಕೂಡದು, ಗೋ ಮಾಂಸವನ್ನು ಹಿಂದೂ ಧರ್ಮದವರು ಯಾರೂ ತಿನ್ನಲೇಕೂಡದು, ವಾರಕ್ಕೆರಡು ಸಾರೆಯಾದರೂ ಸ್ನಾನಮಾಡಬೇಕು ಸ್ವಚ್ಛವಾಗಿರಬೇಕು" ವಗೈರೆ ಅಪ್ಪಣೆಕೊಡಿಸಿದ್ದಕ್ಕೆ ಪ್ರತಿಜ್ಞಾಪೂರ್ವಕ ಒಪ್ಪಿ ಸಾಷ್ಟಾಂಗಮಾಡಿ ಹೊರಟುಹೋಗಿರುತ್ತಾರೆ. ಪ್ರಯುಕ್ತ ಧರ್ಮಾಭಿಮಾನಿಗಳಾದ ನೀವುಗಳಾದರೂ ಸಾಧ್ಯವಾದಮಟ್ಟಿಗೆ ಉಪದೇಶಮಾಡಿ "ಸಾಮಾನ್ಯ ಜನರಿಗೆ ಪ್ರವೇಶಕ್ಕೆ ಅವಕಾಶವಿದ್ದಂತೆ ಸದರಿ ಜನಗಳಿಗೂ ಕೊಡತಕ್ಕದ್ದು ಯಾವತ್ತೂ ಹಿಂದು ಧರ್ಮಗಳಿಗೆ ಯುಕ್ತವಾಗಿದೆ" ಎಂದು ಈ ಮೂಲಕ ಪ್ರಸಿದ್ಧಗೋಳಿಸಲ್ಪಟ್ಟಿದೆ,

ಟಿ. ಜಿ. ಹೊನ್ನಯ್ಯ, ಸಬ್ ಏಜಂಟ್.

ಭಾರತ ರಾಜಕೀಯದೃಶ್ಯ

(ಲೇ—ಕಣಕುಪ್ಪಿ ಗುರುಪಾದಪ್ಪ ಶ್ರೀ ಜಯದೇವ ಪ್ರೆಸ್, ದಾವಣಗೆರೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಇಲ್ಲಿಯವರೆಗೂ ಬ್ರಿಟಿಷರ ರಾಜ್ಯಾಡಳಿತೆಯ ಪೂರ್ವೋತ್ತರ ಸ್ಥಿತಿಯನ್ನು ಮಾದರಿ ರೂಪವಾಗಿ ತಾರತಮ್ಯ ರೀತಿಯಿಂದ ವಿವರಿಸಿದುದಾಯಿತು. ವಿದೇಶೀ ಪ್ರಭುತ್ವದ ಕೆಡಕುಗಳನ್ನು ಸುಧಾರಿಸಿ ಜನರಲ್ಲಿ ಜಾಗ್ರತೆ ಐಕ್ಯಭಾವ ಅಭಿಮಾನ ಸ್ವಾತಂತ್ರ್ಯಾಭಿಲಾಷೆಗಳನ್ನು ಹುಟ್ಟಿಸುವುದರಲ್ಲಿ ತನುಮನಧನಗಳನ್ನು ಧಾರೆಯೆರೆದ ಸಂಸ್ಥೆಗಳನ್ನು ಮತ್ತು ಪುರುಷ ಸಿಂಹಗಳನ್ನು ಕುರಿತು ಈ ಹಿಂದೆಯೇ ಪ್ರಸ್ತಾಪಿಸಿದೆ. ಇವರೆಲ್ಲರ ಕಾರ್ಯಕ್ರಮ ಆಶೋತ್ತರಗಳನ್ನು ರಾಜಕೀಯ ಗುರಿಯಲ್ಲಿ ಕೇಂದ್ರೀಕರಿಸಿಕೊಂಡು ದೇಶದ ಸರ್ವತೋಮುಖವಾದ ಅಭಿವೃದ್ಧಿಯ ಮೂಲಕ ಅದನ್ನು ಪಾರತಂತ್ರ್ಯದಿಂದ ಬಿಡುಗಡೆ ಮಾಡಲು ಹೊರಟಿರುವ ರಾಷ್ಟ್ರೀಯ ಸಭೆಯ ಉತ್ಪತ್ತಿ ಚಲನೆ ಚಟುವಟಿಕೆ ಬೆಳವಣಿಗೆಗಳನ್ನು ಈಗ ಪ್ರಸ್ತಾಪಿಸಲಾಗುವುದು.

ದಯೆ ದಾಕ್ಷಿಣ್ಯ ಪರೋಪಕಾರ ಬುದ್ಧಿ ದೀನಜನಸೇವೆ ಪರೋತ್ಕರ್ಷದಲ್ಲಿ ಸಾನುಭೂತಿ ಸಂತೋಷಗಳು ಯಾವೊಂದು ಜನಾಂಗಕ್ಕೆ ಅಥವಾ ದೇಶಕ್ಕೆ ಮೀಸಲಾಗಿಟ್ಟ ಸೊತ್ತುಗಳಲ್ಲ. ಇವು ಅಂತರಿಕ್ಷದ ವಾಯುವಿನಂತೆ ಸರ್ವ ಜಗತ್ತಿಗೂ ಸೇರಿದವುಗಳಾಗಿರುತ್ತವೆ, ಆದರೆ ಮಾನವ ಜಾತಿಗೆ ಸಹಜವಾದ ಈ ಗುಣಗಳ ಪ್ರಕಾಶವೂ ಪ್ರಯೋಜನವೂ ದೇಶ ಕಾಲಸ್ಥಿತಿ ಸಾಂಪ್ರದಾಯಗಳನ್ನನುಸರಿಸಿರುತ್ತವೆ. ಇಂಗ್ಲೆಂಡಿನಲ್ಲಿ ಕಡು ದೇಶಾಭಿಮಾನಿಗಳೂ ಗಹನ ವಿಚಾರಿಗಳೂ ಆದ ಸ್ಟ್ಯಾನ್ಲೆ ಬ್ಯಾಲ್ಡ್ವಿನ್, ಲಾರ್ಡ್ ರೊನಾಲ್ಡ್ಶೆ, ಚರ್ಚಿಲ್, ಲಾರ್ಡ್ ಪೀಲ್, ಸರ್ ಸ್ಯಾಮುಯಲ್ ಹೋರ್ ಮುಂತಾದವರು ಹಿಂದುಸ್ಥಾನದ ವಿಚಾರದಲ್ಲಿ ಕೇವಲ ಸಂಕುಚಿತ ಮತ್ತು ವಿರೋಧ ಭಾವವುಳ್ಳವರು ಫ್ರಾನ್ಸ್‌ದೇಶದ ಉದ್ಧಾರಕ ಕ್ಲೆಮೆನ್ಸೊರವರು ಜರ್ಮನಿಯ ವೈರಿಗಳು. ಹಿಂದುಸ್ಥಾನದ ಟಿಳಕ ದಾಸ ನೆಹರು ಬೋಸ್ ಪಟೇಲ ಮೊದಲಾದವರ ಉಜ್ವಲದೇಶಾಭಿಮಾನವು ಪರಹಿಂಸಾತ್ಮಕವಿರದೆ ಸ್ವಹಿತಸಾಧಕವಾದುದಾದರೂ ಇವರು ಇಂಗ್ಲೆಂಡಿಗೆ ದ್ರೋಹಿಗಳೆಂದು ಭಾವಿಸಲ್ಪಟ್ಟಿರುವರು. ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಇಡತಕ್ಕ ಈ ಭೇದ ಬುದ್ಧಿಯು ವ್ಯಕ್ತಿ ಇಲ್ಲವೆ ರಾಷ್ಟ್ರ ಎಷ್ಟೇ ನಾಗರಿಕವಿರಲಿ ಅದರಲ್ಲಿ ಬಹು ಸೂಕ್ಷ್ಮ ರೂಪದಲ್ಲಿ ಇದ್ದೇ ಇರುವುದು. ಮನುಷ್ಯನ ಮನ ಮತ್ತು ಮೇದಸ್ಸುಗಳಲ್ಲಿರತಕ್ಕ ವ್ಯತ್ಯಸ್ತವೇ ಇದಕ್ಕೆ ಕಾರಣವು. ಅಂದರೆ ಮೇದಸ್ಸು ಒಪ್ಪಿದುದು ಮನಕ್ಕೊಪ್ಪಿಗೆಯಾಗದಿರುವುದು ಎಂದು ಭಾವವು. ಮನುಷ್ಯನಲ್ಲಿರತಕ್ಕ ಪಕ್ಷಪಾತಲಕ್ಷಣಗಳನ್ನುಳ್ಳ ದುರಾಗ್ರಹ ದುರಾಸೆ ಪರೋತ್ಕರ್ಷಾಸಹನೆಗಳು ಹೆಚ್ಚಾಗಿ ಪ್ರಾದುರ್ಭವಿಸಿ ಅವನಲ್ಲಿರತಕ್ಕ ಉತ್ತಮ ಗುಣಗಳನ್ನು ಮರೆಮಾಡಿ ಅವುಗಳ ಪ್ರಕಾಶವನ್ನು ಅಡ್ಡಿಮಾಡುತ್ತಿರುವುದೇ ಈ ಪರಿಸ್ಥಿತಿಗೆ ಕಾರಣವು. ಇಂತಹ ವಿಷಮಾವಸ್ಥೆಯ ಸೆಳೆತದಿಂದ ಬಿಡಿಸಿಕೊಂಡು ತನ್ನ ಪರಿಪೂರ್ಣತೆಯನ್ನು ಹೊಂದಲು ಮನುಷ್ಯನಿಗೆ ಪೂರ್ಣ ಮನೋಧಾರ್ಢ್ಯವೂ ತ್ಯಾಗ ಬಲವೂ ತ್ಯಾಗಬುದ್ಧಿಯೂ ಕಷ್ಟಸಹಿಷ್ಣುತೆಯೂ ಅವಶ್ಯವು. ಕುಟುಂಬ ಸಮಾಜ ದೇಶ ಜಗತ್ತು ಇವುಗಳ ಉದ್ಧಾರವು ಇಂತಹ ಗುಣಗಳಿಂದಲೇ ಸಾಧ್ಯ.

ಅಮೇರಿಕೆಯ ಸಂಯುಕ್ತ ಸಂಸ್ಥಾನದ ಪ್ರೆಸಿಡೆಂಟ್ ವಿಲ್ಸನ್ ಗ್ಲ್ಯಾಡ್‌ಸ್ಟನ್ ಮಹಾತ್ಮ ಗಾಂಧಿ ರೊಮ್ಯಾಂಡ್ ರೋಲಾಂಡ್ ರವೀಂದ್ರನಾಥ ಠಾಕೂರ ಇವರುಗಳು ಇಂತಹ ಗುಣಮಣಿಗಳಲ್ಲಿ ಕೆಲವರಾಗಿದ್ದಾರೆ. ಮೇಲಿನವರಷ್ಟೇ ಪ್ರಕಾಶಪಡೆಯದಿದ್ದರೂ ಆ ಗುಣಗಳನ್ನುಳ್ಳಾಗಿದ್ದ ಅಲೆನ್ ಆಕ್ಟೇವಿಯನ್ ಹ್ಯೂಮ್ ಎಂಬ ಆಂಗ್ಲೇಯ ಪುಣ್ಯಪುರುಷರು ನಮ್ಮ ರಾಷ್ಟ್ರಸಭೆಯ ಜನಕರು, ಅವರೇ ಸ್ಥಾಪಕರು.

ಇಂಗ್ಲಿಷಿನವರಿಂದ ಭಾರತೀಯರು ಸ್ವರಾಜ್ಯಪಡೆಯಲು ಭಾರತ ರಾಷ್ಟ್ರಸಭೆಯನ್ನು ಸ್ಥಾಪಿಸಿದವರು ಆಂಗ್ಲೇಯರೆಂಬುದು ಈಗಿನ ಪ್ರಕ್ಷುಬ್ಧ ವಾತಾವರಣದಲ್ಲಿ ಬಹು ವಿಲಕ್ಷಣ ವಿಚಿತ್ರವಾಗಿ ಕಾಣಬಹುದು. ಆದಾಗ್ಯೂ ಅದು ಯಥಾರ್ಥವಾದುದೇ ಆಗಿರುವುದು. ಈ ವೈಲಕ್ಷಣ್ಯ ಈ ವೈಚಿತ್ರ್ಯಗಳ ವಿವರಣೆಗಾಗಿಯೇ ಇಂತಹ ಪೀಠಿಕೆಯೊಡನೆ ಈ ಮಹನೀಯರ ಹೆಸರನ್ನು ಎತ್ತಬೇಕಾಯಿತು.

ವಿದುರನು ಬಹಿರಂಗದಲ್ಲಿ ಅಷ್ಟು ಪ್ರಕಾಶ ಪ್ರಖ್ಯಾತಿಗಳನ್ನು ಪಡೆಯದವನೆಂದು, ಸತ್ಯಸಂಧರಾದ ಸಮರ್ಥರಾದ ಪಾಂಡವರಿಗೆ ಆತನು ಮಾಡಿದ ಸಮಯೋಚಿತ ಹಿತಚಿಂತನೆಯ ಕಾರ್ಯವನ್ನು ಅಲ್ಪವಾಗಿಯಾಗಲೀ ಅಸಡ್ಡೆಯಿಂದಲಾಗಲೀ ಎಣಿಸುವುದು ಹೇಗೆ ಅನುಚಿತವೋ ಹೇಗೆ ವಿಶ್ವಾಸಘಾತುಕವೋ ಹಾಗೆಯೇ ಹ್ಯೂಮ್‌ರವರ ಸೇವಾಕಾರ್ಯವನ್ನು ಅಲ್ಲಗಳೆಯುವುದಾಗಲೀ ಅಸಡ್ಡೆಯಿಂದ ಕಾಣುವುದಾಗಲೀ ಅನುಚಿತವು ಮತ್ತು ಅನ್ಯಾಯವು.

ಇವರು ಕಳೆದ ಶತಮಾನದ ಅಂತ್ಯಭಾಗದಲ್ಲಿ ಹಿಂದುಸ್ಥಾನ ಸರಕಾರದ ವ್ಯವಸಾಯ ಶಾಖೆಯ ಕಾರ್ಯದರ್ಶಿಗಳಾಗಿದ್ದರು. ಇಡೀ ಮನುಷ್ಯವರ್ಗದ ಹಿತೈಷಿಗಳಾದ ಇವರಿಗೆ ತಮ್ಮ ಅಧಿಕಾರದಲ್ಲಿ ಉದಾಸೀನ ಹುಟ್ಟಿ ಅದಕ್ಕೆ ರಾಜಿನಾಮೆಕೊಟ್ಟರು. ಆಗಿನ ದೇಶದ ಸ್ಥಿತಿಯಿಂದ ಮುಂದೆ ಭಾರತ ಬ್ರಿಟಿಷ್ ರಾಷ್ಟ್ರಗಳಿಗೆ ಬಹು ವೈಷಮ್ಯಭಾವವು ಬೆಳೆದು ಎರಡಕ್ಕೂ ಅಪಾರವಾದ ನಷ್ಟವುಂಟಾಗುವ ಸಂಭವವನ್ನು ತಪ್ಪಿಸಬೇಕೆಂದು ಇವರ ಆಕಾಂಕ್ಷೆ. ದೇಶದ ರಾಜನೀತಿಜ್ಞರೂ ಮುಖಂಡರೂ ವರ್ಷಕ್ಕೊಮ್ಮೆ ಒಂದುಕಡೆ ಅಧಿಕಾರಿಗಳೊಡನೆ ಬೆರೆತು ಪರಸ್ಪರ ವಿಚಾರ ವಿನಿಮಯದಿಂದ ದೇಶಾಭಿವೃದ್ಧಿಗೆ ಸಹಕಾರಿಯಾದೀತೆಂದು ಇವರ ಆಶೆ. ತಮ್ಮ ಈ ವಿಚಾರಗಳನ್ನು 1884 ರಲ್ಲಿ ಈ ದೇಶಕ್ಕೆ ವೈಸ್‌ರಾಯಿಗಳಾಗಿ ಬಂದಿದ್ದ ಲಾರ್ಡ್ ಡಫರಿನ್‌ರ ಮುಂದೆ ಇಟ್ಟರು. ಸರಳಭಾವದವರೂ ಜನ ಹಿತಚಿಂತಕರೂ ಆಗಿದ್ದ ಈ ಮಹನೀಯರು ಇವುಗಳನ್ನು ದೀರ್ಘವಾಗಿ ಪರ್ಯಾಲೋಚಿಸಿ ಹ್ಯೂಮರವರಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಜನ ಸಾಮಾನ್ಯ ಕಷ್ಟನಷ್ಟ ಆಶೋತ್ತರಗಳೇನೆಂಬುದು ಪ್ರಭುತ್ವದವರಿಗೆ ತಿಳಿಯಲು ಮಾರ್ಗವೇ ಇಲ್ಲ. ಇದರಿಂದ ಸುಧಾರಣೆಯು ಕುಂಠಿತವಾಗಿರುವುದು. ಇಂಗ್ಲೆಂಡಿನಲ್ಲಿ ಸರಕಾರಕ್ಕೆ ಎದುರು ಪಕ್ಷವೊಂದಿರುವಂತೆ ಇಲ್ಲಿಯೂ ಸರಕಾರದ ಕಾರ್ಯಕಲಾಪಗಳ ಗುಣದೋಷಗಳನ್ನು ವಿಮರ್ಶಿಸಲೊಂದು ಸಂಸ್ಥೆಯು ಏರ್ಪಡುವುದು ಪ್ರಯೋಜನಕಾರಿ. ಇದಕ್ಕೆ ಗವರ್ನರಾಗಲೀ ಇನ್ನಿತರ ಅಧಿಕಾರಿಗಳಾಗಲಿ ಅಧ್ಯಕ್ಷರಾಗಕೂಡದು. ಏಕೆಂದರೆ ಅವರೆದುರಿಗೆ ನಿರ್ದಾಕ್ಷಿಣ್ಯವಾಗಿ ಸರ್ಕಾರದ ಮತ್ತು ನೌಕರರ ತಪ್ಪುಗಳನ್ನು ಹೊರಗಿಡುವುದಕ್ಕೂ ಅವುಗಳನ್ನು ಖಂಡಿಸುವುದಕ್ಕೂ ಹಿಂಜರಿಯುವರು. ವರ್ಷಕ್ಕೊಮ್ಮೆ ಈ ಸಂಸ್ಥೆಯು ಸೇರಿ ಸರ್ಕಾರಕ್ಕೆ ಟೀಕೆ ವಿಮರ್ಶೆಗಳನ್ನೊಳಗೊಂಡ ಸಲಹೆಗಳನ್ನು ಕಳುಹಿಸಿಕೊಟ್ಟರೆ ದೇಶಾಭಿವೃದ್ಧಿಗೆ ಬಹು ಸಹಾಯವಾಗುವುದು.

ಇಂತಹ ಅಮೋಘ ಯೋಚನೆಯು ಹ್ಯೂಮ ಮತ್ತು ದೇಶ ಮುಖಂಡರ ಮನಸ್ಸಿಗೆ ಬಂದು ಅದನ್ನು ಕೂಡಲೆ ಆಚರಣೆಗೆ ತರಲಾರಂಭವಾಯಿತು. ನಾನೀದೇಶದಲ್ಲಿರುವವರೆಗೂ ನನ್ನ ಹೆಸರನ್ನು ಈ ಸಂದರ್ಭದಲ್ಲಿ ಎತ್ತಕೂಡದೆಂದು ಲಾರ್ಡ್ ಡಫರಿನ್‌ರವರು ಕಟ್ಟಪ್ಪಣೆಮಾಡಿದ್ದರಿಂದ ಆಗ್ಗೆ ಅವರ ಹೆಸರನ್ನು ಬಚ್ಚಿಟ್ಟರು.

ಮೊದಲು ರಾಷ್ಟ್ರಸಂಘವೆಂದಿದ್ದುದು (National Union) ಆಮೇಲೆ ರಾಷ್ಟ್ರಸಭೆಯೆಂಬ ಹೆಸರನ್ನು ಪಡೆಯಿತು. ಇದು 1885 ನೇ ಡಿಸಂಬರಿನಲ್ಲಿ ಮೊದಲು ಪೂನಾದಲ್ಲಿ ಸೇರಬೇಕೆಂದು ಗೊತ್ತಾಗಿದ್ದುದು ಅಲ್ಲಿ ಮಾರಿಕಾ ಉಪದ್ರವ ದೆಶೆಯಿಂದ ಬೊಂಬಾಯಿಯಲ್ಲಿ ಸೇರಿತು. 72 ಜನ ದೇಶೀಯ ಪ್ರತಿನಿಧಿಗಳು, 30 ಜನ ಸ್ನೇಹಿತರೂ ಹಿತಚಿಂತಕರೂ ಬಂದಿದ್ದರು. ಬಂಗಾಳ ಬಾಬುಗಳಾದ ಉಮೇಶ ಚಂದ್ರ ಬಾನರ್ಜಿಯವರೇ ಅಧ್ಯಕ್ಷರು. ದಾದಭಾಯಿ ನೌರೋಜಿ, ಫಿರೋಜಷಹಮೆಥ, ಎದಿಲ್ಜಿ ವಾಚ, ನಾರಾಯಣಚಂದ್ರವರಕರ, ಜಿ. ಸುಬ್ರಹ್ಮಣ್ಯ ಅಯ್ಯರ, ಪಿ. ಆನಂದಾಚಾರ್ಲು, ಗಂಗಪ್ರಸಾದವರ್ಮ, ನರೇಂದ್ರನಾಥಸೇನ, ಗೋಪಾಲ ಗಣೇಶ ಆಗರ್ಕರ್, ಸೀತಾರಾಂ ಚಿಪ್ಳೂಣಕರ್. ಪಿ. ಕೇಶವಪಿಳ್ಳೆ ಇವರೇ ಮೊದಲಾದವರು ಅಧಿಕಾರಿಗಳ ಭಯ ಬೆದರಿಕೆಗಳಿಗೆ ಸೊಪ್ಪುಹಾಕದೆ ದೇಶಕ್ಕಾಗಿ ಸೇವೆಗೈಯ್ಯಲು ಬಂದಿದ್ದರು. ಅನಧಿಕಾರಿ ರೀತಿಯಿಂದ ಹಿತೈಷಿಗಳಾಗಿ ಬಂದವರಲ್ಲಿ ವಿಲಿಯಂ ವೆಡ್ಡರ್ ಬರ್ನ್, ದಿವಾನ ಬಹದ್ದೂರ್ ರಘುನಾಥರಾವ್ ಮಹದೇವ ಗೋವಿಂದರಾನಡೆ, ರಾಮಕೃಷ್ಣ ಭಂಡಾರಕರ್, ಲಾಲಬೈಜ್ಞನಾಥ ಇವರು ಮುಖ್ಯರು.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾಧಿವೇಶನದಲ್ಲಿ ದಿವಾನ್ ಸಾಹೇಬರವರು ಅಪ್ಪಣೆಕೊಡಿಸಿದ ಭಾಷಣ.

1932ನೆಯ ಇಸವಿ ಅಕ್ಟೋಬರ್ 10ನೆಯ ತಾರೀಖು.

1 ನೆಯ ಭಾಗ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಬಂಡವಾಳದ ವೆಚ್ಚಕ್ಕಾಗಿ ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕ ಮೊಬಲಗನ್ನು ಬಹಳಮಟ್ಟಿಗೆ ಹೆಚ್ಚಿಸಬೇಕಾಗುತ್ತದೆಂದು ಈಗ ಕಂಡುಬಂದಿದೆ. ಏಕೆಂದರೆ, ಕೆಲವು ಜರೂರಾದ ಮತ್ತು ಅತ್ಯಾವಶ್ಯಕವಾದ ಕಾಮಗಾರಿಗಳನ್ನು ಈಗ ನಡೆಸಬೇಕಾಗಿದೆ. ಇವುಗಳನ್ನು ಮುಂದಕ್ಕೆ ತಳ್ಳಿಹಾಕುವ ಹಾಗಿಲ್ಲ. ಬೆಂಗಳೂರು ನೀರು ಸರಬರಾಯಿಯ ಹೊಸ ಕಾಮಗಾರಿಗಳಿಗೆ ಇನ್ನೂ 8.20 ಲಕ್ಷ ರೂ. ಗಳ ಹೆಚ್ಚಿಗೆ ಗ್ರ್ಯಾಂಟು ಅವಶ್ಯಕವಾಗಿರುವುದಾಗಿ ಕಂಡುಬಂದಿದೆ. ಆ ಪೈಕಿ 3 ಲಕ್ಷ ರೂ. ಗಳು ಹೋದವರ್ಷ ವೆಚ್ಚವಾಗದೆ ವಾಪಸಾಗಿ, ಈ ವರ್ಷ ಪುನಃ ಒದಗಿಸಬೇಕಾಗಿರುವ ಮೊಬಲಗಾಗಿದೆ. ಉಳಿದ 5 ಲಕ್ಷ ರೂ. [illegible]

ಅಮೇರಿಕೆಯ ಎಣ್ಣೆ ಕಂಪೆನಿ (ಮದ್ರಾಸು)

[4—1]

ನಮ್ಮ ಕಂಪೆನಿಯ ಸೀಮೆಯೆಣ್ಣೆ, ಪೆಟ್ರೋಲು, ಲೂಬ್ರಿಕೇಟಿಂಗ್ ಎಣ್ಣೆ ಚೆರಬಿ ವಗೈರೆ ಕಲ್ಲರಗು ಪೆಟ್ರೋಲಿಗೆ ಸಂಬಂಧಪಟ್ಟ ಪದಾರ್ಥಗಳನ್ನು ಮಾರಲು ಬೆಂಗಳೂರು ಸಿಟಿ ಅವಿನ್ಯೂ ರೋಡಿನಲ್ಲಿರುವ ಮಾ॥ ಪಿ. ವಿ. ಭದ್ರಪ್ಪನವರನ್ನು ಮೈಸೂರು ಮತ್ತು ಕೊಡಗು ಸೀಮೆಗಳಿಗೆ ಒಟ್ಟು ಏಜಂಟರನ್ನಾಗಿ ನಿಯಮಿಸಿದೆ. ಸಬ್ ಏಜಂಟರಾಗಿರಲಪೇಕ್ಷಿಸುವವರು ಬೆಂಗಳೂರು ಸಿಟಿ ಶ್ರೀ ನರಸಿಂಹರಾಜ ರೋಡಿನಲ್ಲಿರುವ 170-171 ನೇ ನಂಬರಿನ ನಮ್ಮ ಆಫೀಸಿಗೆ ಬರೆದುಕೊಳ್ಳತಕ್ಕದ್ದು.

ದಿ ಅಮೆರಿಕನ್ ಆಯಿಲ್ ಕಂಪೆನಿ.

ಕೆಲಸವೂ ನಡೆಯಬೇಕಾಗಿದೆ. ಇದಕ್ಕಾಗಿ ಸುಮಾರು 3 ಲಕ್ಷ ರೂ. ಗಳನ್ನು ಚಾಲ್ತಿಸಾಲಿನಲ್ಲಿ ವೆಚ್ಚಮಾಡುವುದಕ್ಕಾಗಿ ಮ್ಯುನಿಸಿಪಾಲಿಟಿಯವರಿಗೆ ಕೊಡಬೇಕಾಗಬಹುದು.

ವಿದ್ಯುಚ್ಛಕ್ತಿಯ ಇಲಾಖೆಯವರು ಕೋಲಾರಕ್ಕೆ ವಿದ್ಯುಚ್ಛಕ್ತಿಯ ಪ್ರವಹಿಸತಕ್ಕ (ಟ್ರಾನ್ಸ್‌ಮಿಷನ್) ಲೈನಿನ ಕೆಲವು ಭಾಗಗಳನ್ನೂ ಮತ್ತು ಶಿವನಸಮುದ್ರದಲ್ಲಿ ಕೆಲವು ಟರ್ಬೈನುಗಳನ್ನೂ ತೆಗೆದು ಬೇರೆಹಾಕುವುದಕ್ಕೆ ಮಂಜೂರಾತಿಯನ್ನು ಕೊಡಲಾಗಿದೆ. ಇದಕ್ಕಾಗಿ 4.40 ಲಕ್ಷ ರೂ. ಗಳ ಮೊಬಲಗನ್ನು ಒದಗಿಸಬೇಕಾಗಿದೆ.

ಇಷ್ಟರಲ್ಲೇ ಇರ್ವಿನ್ ನಾಲಾ ಪ್ರದೇಶದಲ್ಲಿ ಭಾರಿ ಪ್ರಮಾಣದಲ್ಲಿ ಕಬ್ಬಿನ ಬೆಳೆಯಾಗಬಹುದೆಂದು ನಿರೀಕ್ಷಿಸಲಾಗಿದೆ. ಆ ಕಬ್ಬನ್ನೂ, ಈಗಾಗಲೇ ಸರ್ಕಾರಿ ಕ್ಷೇತ್ರದಲ್ಲಿ ಬೆಳೆಯಲ್ಪಟ್ಟಿರತಕ್ಕ ಕಬ್ಬನ್ನೂ ಅರೆಯಾಡುವುದಕ್ಕೋಸ್ಕರ ಇರ್ವಿನ್ ನಾಲಾ ಪ್ರದೇಶದಲ್ಲಿ ಒಂದು ಕಬ್ಬಿನಗಾಣದ ಕಾರ್ಖಾನೆಯನ್ನು ಸ್ಥಾಪಿಸುವ ಏರ್ಪಾಡನ್ನು ಸ್ವಲ್ಪವೂ ಕಾಲವಿಳಂಬಮಾಡದೆ ಕೈಕೊಳ್ಳಬೇಕಾಗಿದೆ. ಇದಕ್ಕಾಗಿ 5 ಲಕ್ಷ ರೂ. ಗಳಿಗೆ ಮೇಲ್ಪಟ್ಟು ವೆಚ್ಚವಾಗುವುದಾಗಿ ಅಂದಾಜು ಮಾಡಲ್ಪಟ್ಟಿದೆ.

ಈ ವೆಚ್ಚಗಳಿಗಾಗಿಯೂ ಮತ್ತು ಜರೂರಾದ ಇತರ ವೆಚ್ಚಗಳಿಗಾಗಿಯೂ ಹಣವನ್ನೊದಗಿಸುವುದಕ್ಕೋಸ್ಕರ ಈ ಸಮಯದಲ್ಲಿ, ಸಾಲವನ್ನು ಎತ್ತುವ ಏರ್ಪಾಡನ್ನು ಕೈಕೊಳ್ಳುವುದು ಯುಕ್ತವಾದುದಲ್ಲವೆಂದು ಭಾವಿಸಲಾಗಿದೆ ಆದಕಾರಣ, ಸರ್ಕಾರದ ಹುಟ್ಟುವಳಿಯ ಸಾಧನಗಳನ್ನು ಬಹಳ ಜಾಗರೂಕತೆಯಿಂದ ಉಪಯೋಗಿಸಿ ಇವಕ್ಕೆಲ್ಲಾ ಹಣವನ್ನು ಒದಗಿಸುವುದು ಅವಶ್ಯಕ.

ಕಾಲಸ್ಥಿತಿಗಳು—ಈ ಸಂಸ್ಥಾನದಲ್ಲಿ 1930-31ನೆಯ ಸಾಲಿನಲ್ಲಿ ಬಿದ್ದ ಮಳೆಗಿಂತ 1931-32ನೆಯ ಸಾಲಿನಲ್ಲಿ ಬಿದ್ದ ಮಳೆಯು ಒಟ್ಟಿನಲ್ಲಿ ಸರಾಸರಿ ಸ್ವಲ್ಪ ಹೆಚ್ಚಾಗಿದ್ದಿತು ಬೆಂಗಳೂರು, ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಕೆಲವು ಭಾಗಗಳಲ್ಲಿ ಹೊರತು, ಉಳಿದ ಭಾಗಗಳಲ್ಲೆಲ್ಲಾ ಮಳೆಯು ಯಥೇಷ್ಟವಾಗಿ ಸಕಾಲದಲ್ಲಿ ಸಮರ್ಪಕವಾಗಿ ಬಿದ್ದಿತು.

ಆದರೆ ಪಾವಗಡ, ಸೀರ್ಯ ಮತ್ತು ಮಧುಗಿರಿ ತಾಲ್ಲೂಕುಗಳಲ್ಲಿ ಸ್ವಲ್ಪಮಟ್ಟಿಗೆ ಆತಂಕವುಂಟಾಗಿದ್ದಿತು. ಏಕೆಂದರೆ, ಆ ತಾಲ್ಲೂಕುಗಳಲ್ಲಿ ಅನೇಕ ಕೆರೆಗಳಿಗೆ ಸಾಕಾದಷ್ಟು ನೀರು ಬರಲಿಲ್ಲ. ಆದಕಾರಣ, ಅಲ್ಲಿ ತರೀ ಬೆಳೆಯನ್ನಿಡಲು ಅವಕಾಶವಾಗಲಿಲ್ಲ. ಖುಷ್ಕಿ ಬೆಳೆಯೂ ಕೂಡ ಆಗಲಿಲ್ಲ ಮತ್ತು ಕುಡಿಯುವ ನೀರಿಗಾಗಿಯೂ ದನಕರುಗಳ ಮೇವಿಗಾಗಿಯೂ ತೊಂದರೆಯುಂಟಾಯಿತು. ಕಷ್ಟನಿವಾರಣೆಯ ಕಾಮಗಾರಿಗಳಿಗಾಗಿ 20,000 ರೂ. ವಿಶೇಷ ರೀತಿಯ ಒಂದು ಮೊತ್ತವನ್ನು ಕೊಡಲಾಯಿತು. ಅಲ್ಲದೆ ಈ 3 ತಾಲ್ಲೂಕುಗಳಲ್ಲಿ ಜಮೀನು ಆಬಾದಿಗಾಗಿಯೂ ತಕಾವಿ ಸಾಲಗಳಿಗಾಗಿಯೂ 18,000 ರೂ. ಗಳಷ್ಟು ಗ್ರ್ಯಾಂಟನ್ನು ಕೊಡಲಾಯಿತು. ದನಗಳ ಮೇವಿನ ತೊಂದರೆಯನ್ನು ಪರಿಹರಿಸುವುದಕ್ಕಾಗಿ ಮೇವು ದೊರೆಯುವುದು ಕಷ್ಟವಾಗಿದ್ದ ಪ್ರದೇಶಗಳಲ್ಲಿ ದನಕರುಗಳನ್ನು ಮುಫತಾಗಿ ಮೇಯಿಸಲು ಮನ್ನಾ ಜಂಗಲುಗಳನ್ನು ಬಿಟ್ಟುಕೊಡಲಾಯಿತು ಮತ್ತು ಫಾರೆಸ್ಟು ಇಲಾಖೆಯ ಮೂಲಕ ಅಸಲು ಬೆಲೆಗೆ ಒಣಹುಲ್ಲನ್ನು ಸರಬರಾಯಿ ಮಾಡಲಾಯಿತು. ತಕಾವಿ ಮತ್ತು ಜಮೀನು ಆಬಾದಿನ ಸಾಲಗಳ ಚಾಲ್ತಿ ಕಂತುಗಳ ವಸೂಲಿಯನ್ನು ಸ್ವಲ್ಪಕಾಲ ನಿಲ್ಲಿಸಿ ಮುಂದಕ್ಕೆ ಇಡಲಾಯಿತು.

ಸಾಕಾದಷ್ಟು ನೀರು ಬರದೆ ಇದ್ದ ಕೆರೆಗಳ ಕೆಳಗೆ ಇರುವ, ಅದರಲ್ಲಿಯೂ ಮುಖ್ಯವಾಗಿ ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳ ಕೆರೆಗಳ ಕೆಳಗಿರುವ ಜಮೀನುಗಳ ವಿಷಯದಲ್ಲಿ ತರೀಕಂದಾಯದಲ್ಲಿ ಅರ್ಧವನ್ನು ಮಾಫೀ ಬಿಡಲಾಯಿತು. ಹೀಗೆ ಮಾಫೀ ಬಿಟ್ಟ ಮೊಬಲಗು 38,455 ರೂಪಾಯಿಗಳು.

ಪ್ರಸಕ್ತ ವರ್ಷದಲ್ಲಿ ಕಾಲಸ್ಥಿತಿಗಳು ಅನುಕೂಲವಾಗಿದ್ದುವೆಂಬುದು ಜಮೀನು ಕಂದಾಯವು ಹೆಚ್ಚಾಗಿ ವಸೂಲಾದುದರ ಮೂಲಕ ಕಂಡುಬಂದಿದೆ. ಈ ವಸೂಲಿಯು (ಮಾಫಿಗಳೂ ಸೇರಿ) 134 ಲಕ್ಷ ರೂ. ಗಳಾಯಿತು. ಆದರೆ 1930-31 ನೆಯ ಸಾಲಿನಲ್ಲಿ 116 ಲಕ್ಷ ರೂ. ಗಳ ಮೊಬಲಗು ಮಾತ್ರವೇ ವಸೂಲಾಗಿದ್ದಿತು.

ಚಾಲ್ತಿ ಸಾಲಿನಲ್ಲಿ ಮಲೆನಾಡು ಮತ್ತು ಮೈದಾನ ಪ್ರದೇಶಗಳೆರಡರಲ್ಲಿಯೂ ಮಳೆಯು ಸಾಮಾನ್ಯವಾಗಿ ಸಮರ್ಪಕವಾಗಿದೆ; ಮತ್ತು ಬೆಳೆ ಮಾಡಿರುವ ಫಸಲು ಉತ್ತಮಸ್ಥಿತಿಯಲ್ಲಿರುವಂತೆ ವರದಿಯಾಗಿದೆ.

ರೆವಿನ್ಯೂ—ವೆಚ್ಚವನ್ನು ತಗ್ಗಿಸುವ ಏರ್ಪಾಡಿನ ಸಂಬಂಧದಲ್ಲಿ ರೆವಿನ್ಯೂ ಸರ್ವೆಯ ಸೂಪರಿಂಟೆಂಡೆಂಟರವರ ಪ್ರತ್ಯೇಕವಾದ ಹುದ್ದೆಯನ್ನು ವಜಾಮಾಡಿ, ಸೂಪರಿಂಟೆಂಡೆಂಟರವರ ಹುದ್ದೆಯ ಚಾರ್ಜಿನಲ್ಲಿ ರೆವಿನ್ಯೂ ಕಮಿಷನರವರನ್ನು ಇಡಲಾಯಿತು ಈ ಏರ್ಪಾಡಿನಿಂದ ವಾಸ್ತವಿಕವಾಗಿ ಎಷ್ಟುಮಟ್ಟಿಗೆ ಸಮರ್ಪಕವಾಗಿರುವಂತೆ ಕೆಲಸ ನಡೆಯುವುದೆಂಬುದನ್ನು ನೋಡಬೇಕಾಗಿದೆ. ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಸರ್ವೇ ಆಫೀಸುಗಳನ್ನು ಒಟ್ಟುಗೂಡಿಸಿ, ಒಬ್ಬ ಆಫೀಸರ ಚಾರ್ಜಿನಲ್ಲಿ ಇಡಲಾಗಿದೆ. ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟರ ಹುದ್ದೆಗೆ ಬದಲಾಗಿ, ಸರ್ವೇ ಇಲಾಖೆಯಲ್ಲಿ ಡೆಪ್ಯುಟಿ ಸೂಪರಿಂಟೆಂಡೆಂಟರ ಹುದ್ದೆಯನ್ನು ಮಂಜೂರುಮಾಡಲಾಯಿತು.

ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯಸ್ಥಾನಗಳ ಹಂಚಿಕೆ—ಕಳೆದ ಜುಲೈ ತಿಂಗಳಿನಲ್ಲಿ ಒಂದು ಸಮಿತಿಯನ್ನು ನೇಮಕಮಾಡಿ, ಪ್ರಜಾಪ್ರತಿನಿಧಿ ಸಭೆಯಲ್ಲಿ ಈಗಿರುವ ಸದಸ್ಯಸ್ಥಾನಗಳ ಹಂಚಿಕೆಯನ್ನು ವಿಮರ್ಶಿಸುವಂತೆಯೂ, ಆ ಸಮಿತಿಯವರ ಅಭಿಪ್ರಾಯಕ್ಕಾಗಿ ಒಪ್ಪಿಸಿದ್ದ ಕೆಲವು ಇತರ ವಿಷಯಗಳನ್ನು ಪರಿಶೀಲಿಸುವಂತೆಯೂ ಗೊತ್ತುಮಾಡಲಾಗಿದ್ದಿತಷ್ಟೆ; ಆ ಸಮಿತಿಯವರು ಈಚೆಗೆ ತಮ್ಮ ವರದಿಯನ್ನು ಒಪ್ಪಿಸಿದ್ದಾರೆ. ಒಂದು ತಾಲ್ಲೂಕಿಗೆ ಅಥವಾ ಸಬ್‌ತಾಲ್ಲೂಕಿಗೆ ಕೊಡತಕ್ಕ ಸ್ಥಾನಗಳ ಸಂಖ್ಯೆಯು ಅದರದರ ಜನಸಂಖ್ಯೆಗೆ ಅನುಗುಣವಾಗಿರಬೇಕೆಂದೂ, ಆದರೆ ಮಲೆನಾಡು ತಾಲ್ಲೂಕುಗಳಿಗೆ ಮಾತ್ರ ಈ ನಿಯಮವನ್ನು ಕಟ್ಟುನಿಟ್ಟಾಗಿ ಅನ್ವಯಿಸದೆ ಅಲ್ಲಿ ಜನಸಂಖ್ಯೆಯು ದಾಮಾಷಾ ಮೇರೆಗೆ ಅವಕಾಶವಿರುವ ಸದಸ್ಯರ ಜೊತೆಗೆ ಫಲಾನಾ ಸಂಖ್ಯೆಯ ಸದಸ್ಯರು ಚುನಾವಣೆಯಾಗಲು ಅವಕಾಶವಿರಬೇಕೆಂದೂ, ಆ ಸಮಿತಿಯವರು ಸಲಹೆಮಾಡಿದ್ದಾರೆ. ಮೊಳಕಾಲ್ಮೂರು, ತಾಲ್ಲೂಕು ಈ ಸಂಸ್ಥಾನದ ಕಟ್ಟಕಡೆಯಲ್ಲಿರುವ ಪ್ರಯುಕ್ತ, ಅದಕ್ಕೂ ಸಹ ಈ ರಿಯಾಯಿತಿಯನ್ನು ತೋರಿಸಬೇಕೆಂದೂ ಆ ಸಮಿತಿಯವರು ಸಲಹೆ ಮಾಡಿದ್ದಾರೆ. ವಿಶೇಷೋದ್ದೇಶ ಪಂಗಡಗಳಿಗಾಗಿ ಹಂಚಿಕೊಟ್ಟಿರುವ ಸ್ಥಾನಗಳ ಸಂಖ್ಯೆಯಲ್ಲಿ ಸ್ವಲ್ಪಮಟ್ಟಿಗೆ ಪುನರ್ವ್ಯವಸ್ಥೆಯನ್ನು ಮಾಡಿ ಸರಿಪಡಿಸಬೇಕೆಂದೂ, ಮಹಿಳೆಯರಿಗಾಗಿ ಏರ್ಪಡಿಸಿರುವ ಸ್ಥಾನಗಳನ್ನು 2 ರಿಂದ 4 ಕ್ಕೆ ಹೆಚ್ಚಿಸಬೇಕೆಂದೂ ಸಹ, ಆ ಸಮಿತಿಯವರು ಸಲಹೆ ಮಾಡಿದ್ದಾರೆ. ಇನ್ನು ಅಲ್ಪಸಂಖ್ಯಾತ ಪಂಗಡಗಳ ವಿಷಯ—ಮುಸಲ್ಮಾನರಿಗಾಗಿ ಏರ್ಪಡಿಸಿರುವ ಸ್ಥಾನಗಳನ್ನು 15 ರಿಂದ 18 ಕ್ಕೆ ಹೆಚ್ಚಿಸಬೇಕೆಂದು ಸಮಿತಿಯವರು ಸಲಹೆ ಮಾಡಿದ್ದಾರೆ. ನಿಮ್ನ ತರಗತಿಗಳವರ ಸ್ಥಾನಗಳನ್ನು 6 ರಿಂದ 10ಕ್ಕೆ ಹೆಚ್ಚಿಸಿ ನಾಮಿನೇಷನ್ ಮೂಲಕ ನೇಮಕಮಾಡುವುದಕ್ಕೆ ತಕ್ಕ ಜನರು ದೊರೆಯುವುದಾದರೆ ಹಾಗೆ ಹೆಚ್ಚು ಮಂದಿಗಳು ನೇಮಕವಾಗುವಂತೆ ಏರ್ಪಡಿಸಬೇಕೆಂದೂ, ಸಮಿತಿಯವರು ಸಲಹೆಮಾಡಿದ್ದಾರೆ. ಇತರ ಸಲಹೆಗಳೊಡನೆ ಸಮಿತಿಯವರು ದಾಮಾಷಾ ಪ್ರಾತಿನಿಧ್ಯವಿಚಾರವನ್ನೂ ಸಲಹೆಮಾಡಿದ್ದಾರೆ. ಎಂದರೆ, ವೋಟರುಗಳು ಉಮೇದುವಾರರಿಗೆ ವೋಟುಕೊಡುವಲ್ಲಿ, ಅವರು ಎಷ್ಟು ಮಂದಿಗಳಿಗೆ ವೋಟು ಕೊಡುವರೋ ಅವರಲ್ಲಿ ಮೊಟ್ಟಮೊದಲನೆಯವರಾಗಿ, 2 ನೆಯವರಾಗಿ, ಇತ್ಯಾದಿಯಾಗಿ ಆಯಾ ವೋಟರುಗಳು ಇಷ್ಟಪಡುವ ಪ್ರಾಶಸ್ತ್ಯದ ಅನುಕ್ರಮದಲ್ಲಿ ಯಾವ ಯಾವ ಉಮೇದುವಾರರೇ ಸದಸ್ಯರಾಗುವುದು ಅವರಿಗೆ ಸಮ್ಮತವೆಂಬುದನ್ನೂ ವೋಟು ಕಾಗದದಲ್ಲಿ ಅವರು ಸೂಚಿಸಿರಬೇಕೆಂದು ಗೊತ್ತುಮಾಡಬೇಕೆಂದೂ, ಈರೀತಿ ವೋಟರುಗಳಲ್ಲಿ ಬಹುಭಾಗದವರ ಅಭಿಮತದಂತೆ ಮೊಟ್ಟಮೊದಲನೆಯವರಾಗಿ, 2 ನೆಯವರಾಗಿ, ಮುಂತಾಗಿ ಚುನಾಯಿಸಲ್ಪಡುವವರು ಸದಸ್ಯರಾಗಲು ಕ್ಲುಪ್ತನಿಯಮಗಳ ರೀತ್ಯಾ ಆವಶ್ಯಕವಾದ ವೋಟುಗಳಿಗಿಂತ ಹೆಚ್ಚಾಗಿ ಬಂದಿರುವ ವೋಟುಗಳನ್ನು, ಈ ಪ್ರಾಶಸ್ತ್ಯದ ಅನುಕ್ರಮಕ್ಕೆ ಸೇರಿದವರಾಗಿದ್ದರೂ, ಸದಸ್ಯರಾಗಲು ಆವಶ್ಯಕವಾದಷ್ಟು ಸಂಖ್ಯೆಯ ವೋಟುಗಳು ಬಂದಿಲ್ಲದ ಇತರ ಉಮೇದುವಾರರಿಗೆ ಕ್ಲುಪ್ತನಿಯಮಗಳ ಪ್ರಕಾರ ವರ್ಗಾಯಿಸಿ ಭರ್ತಿಮಾಡಿ ಅವರುಗಳೂ ಚುನಾವಣೆಯಾದಂತೆಯೇ ಭಾವಿಸಿ ಅನುಕೂಲ ಮಾಡಿಕೊಡಬೇಕೆಂದೂ, ಸಮಿತಿಯವರು ಸಲಹೆ ಮಾಡಿದ್ದಾರೆ. ಅಲ್ಲದೆ, ಈ ಬಗೆಯ ಚುನಾವಣೆಯ ಕ್ರಮವನ್ನು ನ್ಯಾಯವಿಧಾಯಕ ಸಭೆಗೆ ಪ್ರಜಾಪ್ರತಿನಿಧಿ ಸಭೆಯಿಂದ ಸದಸ್ಯರನ್ನು ಚುನಾಯಿಸುವುದರಲ್ಲಿಯೂ, ಬೆಂಗಳೂರು ಮತ್ತು ಮೈಸೂರು ಸಿಟಿ ಮ್ಯುನಿಸಿಪಾಲಿಟಿಗಳ ಚುನಾವಣೆ ಸ್ಥಾನಗಳಿಂದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರನ್ನು ಚುನಾಯಿಸುವುದರಲ್ಲಿಯೂ ಆಚರಣೆಗೆ ತರಬೇಕೆಂದೂ ಸಹ, ಸಮಿತಿಯವರು ಇತರ ವಿಷಯಗಳ ಜೊತೆಯಲ್ಲಿ ಸಲಹೆ ಮಾಡಿದ್ದಾರೆ. ಈ ಸಲಹೆಗಳನ್ನು ಸರ್ಕಾರದವರು ಅಂಗೀಕರಿಸಿದ್ದಾರೆ.

ಪಬ್ಲಿಕ್ ವರ್ಕ್ಸ್ ಕಾಮಗಾರಿಗಳು—ಎಲ್ಲಾ ಬಾಬುಗಳೂ ಸೇರಿ ಪಬ್ಲಿಕ್ ವರ್ಕ್ಸ್ ಕಾಮಗಾರಿಗಳ ಒಟ್ಟು ವೆಚ್ಚವು 56,13,723 ರೂ ಗಳು. ಪ್ರಸಕ್ತ ಸಾಲಿನಲ್ಲಿ 9 ಭಾರಿ ನೀರಾವರಿಯ ಕಾಮಗಾರಿಗಳು ನಡೆಯುತ್ತಿದ್ದುವು. 111 ಮೈನರ್ ಕೆರೆಗಳು ಜೀರ್ಣೋದ್ಧಾರ ಮಾಡಲ್ಪಟ್ಟುವು. ಕಟ್ಟಡಗಳ ಬಾಬಿನಲ್ಲಿ, ಪ್ರಸಕ್ತ ಸಾಲಿನಲ್ಲಿ, ಬೆಂಗಳೂರಿನಲ್ಲಿರುವ ಕರ್ನಾಟಕ ಸಾಹಿತ್ಯ ಪರಿಷತ್ತಿನ ಕಟ್ಟಡವೂ, ಮೈಸೂರಿನಲ್ಲಿರುವ ಆಯುರ್ವೇದೀಯ ಕಾಲೇಜು ಕಟ್ಟಡವೂ, ಚಿಕ್ಕಮಗಳೂರಿನಲ್ಲಿರುವ ಜನರಲ್ ಆಸ್ಪತ್ರೆಯ ಮತ್ತು ಜುಬಿಲಿ ಮೆಮೋರಿಯಲ್ ಹಾಲ್ ಕಟ್ಟಡಗಳೂ ಪೂರೈಸಲ್ಪಟ್ಟುವು. ತಿರುಮಕೂಡಲು ನರಸೀಪುರದ ಹತ್ತಿರ ಕಾವೇರೀನದಿಗೆ ಕಟ್ಟುತ್ತಿದ್ದ ಸೇತುವೆಯ ಕಾಮಗಾರಿಯು ಪೂರೈಸಿತು. ಈ ಸೇತುವೆಯ ಮೇಲೆ ಸಂಚಾರ ಸಮಾರಂಭಣಮಹೋತ್ಸವವನ್ನು ಈಚೆಗೆ ಶ್ರೀಮನ್ಮಹಾರಾಜರವರು ಕೃಪೆಯಿಟ್ಟು ನೆರವೇರಿಸಿದರು. 1932 ನೆಯ ಇಸವಿಯ ಜೂನ್ ಆಖೈರಿನವರೆಗೆ ಈ ಕಾಮಗಾರಿಗಾಗಿ ತಗುಲಿದ ಒಟ್ಟು ವೆಚ್ಚವು 5,21,032 ರೂ ಗಳು. ಅಕ್ಕಿಹೆಬ್ಬಾಳಿನ ಸಮೀಪದಲ್ಲಿ ಹೇಮಾವತೀ ನದಿಗೆ ಕಟ್ಟುತ್ತಿರುವ ಸೇತುವೆಯ ಕಾಮಗಾರಿಯ ಕೆಲಸವು ಬಹಳ ಚೆನ್ನಾಗಿ ಮುಂದುವರಿಯುತ್ತಿದೆ.

ಬೆಂಗಳೂರಿಗೆ ನೀರುಸರಬರಾಯಿ ಮಾಡುವುದಕ್ಕಾಗಿ ಕೈಕೊಂಡಿರುವ ಹೊಸ ಏರ್ಪಾಡಿನ ಸಂಬಂಧದಲ್ಲಿ ಪ್ರಸಕ್ತ ವರ್ಷದಲ್ಲಿ 19.64 ಲಕ್ಷ ರೂ. ವೆಚ್ಚ ಮಾಡಿದೆ. 1932 ನೆಯ ಇಸವಿಯ ಜೂನ್ ಆಖೈರಿನವರೆಗೆ ಈ ಕಾಮಗಾರಿಗಾಗಿ 38,30,610 ರೂ. ಒಟ್ಟು ವೆಚ್ಚವು ತಗುಲಿದೆ. ನದಿಯ ಪಾತ್ರದಲ್ಲಿ ಅಣೆಗೆ ಅಸ್ತಿಭಾರವನ್ನು ಹಾಕುವುದರಲ್ಲಿ ಅನೇಕ ತೊಂದರೆಗಳಿದ್ದುವು. ಆ ತೊಂದರೆಗಳನ್ನೆಲ್ಲಾ ನಿವಾರಿಸಿಕೊಂಡು ಕಟ್ಟೆಯನ್ನು ನದಿಯ ಪಾತ್ರದಿಂದ 29 ಅಡಿಗಳ ಎತ್ತರದವರೆಗೆ ಎತ್ತರಿಸಲಾಗಿದೆ. ಪಂಪನ್ನು ಇಡುವ ಕಟ್ಟಡದ ಕೆಲಸವು ಪೂರೈಸಿತು. ನೀರನ್ನು ಶುದ್ಧಿಗೊಳಿಸುವ ಫಿಲ್ಟರುಗಳನ್ನು ಕಟ್ಟುವ ಕೆಲಸವನ್ನು ಪ್ರಾರಂಭಿಸಲಾಯಿತು. ನೀರು ಸಾಗುವ ಕೊಳಾಯಿಗಳನ್ನು ಸುಮಾರು 16 ಮೈಲಿಗಳ ದೂರದವರೆಗೆ ಹಾಕಲಾಗಿದೆ.

ನೀರಾವರಿ ಕಾಮಗಾರಿಗಳು—ಕೃಷ್ಣರಾಜಸಾಗರ ಕಾಮಗಾರಿಗಳನ್ನು ಬಿಟ್ಟು ಈಚೆಗೆ ಪೂರೈಸಲ್ಪಟ್ಟಿರುವ ಅಥವಾ ಇನ್ನೂ ಕಾಮಗಾರಿ ನಡೆಯುತ್ತಿರುವ ಕೆಲವು ಮುಖ್ಯವಾದ ನೀರಾವರಿ ಕಾಮಗಾರಿಗಳ ವಿಚಾರವನ್ನು ಈಗ ಸಂಕ್ಷೇಪವಾಗಿ ಸೂಚಿಸಬಹುದಾಗಿದೆ. 54.86 ಲಕ್ಷ ರೂ. ವೆಚ್ಚ ತಗಲಬಹುದೆಂದು ಅಂದಾಜು ಮಾಡಲ್ಪಟ್ಟಿರುವ 21 ಕೆರೆ ಕಾಮಗಾರಿಗಳು 1926 ನೆಯ ಇಸವಿಯಿಂದ 1932 ನೆಯ ಇಸವಿಯ ವರೆಗಿನ ಅವಧಿಯಲ್ಲಿ ಮಂಜೂರು ಮಾಡಲ್ಪಟ್ಟುವು. 1932 ನೆಯ ಇಸವಿಯ ಜೂನ್ ತಿಂಗಳಿನ ಕೊನೆಯವರೆಗೆ 34.69 ಲಕ್ಷ ರೂ ವೆಚ್ಚವಾಗಿದೆ. ಈ ಕೆರೆಗಳ ಕಾಮಗಾರಿಗಳು ಪೂರೈಸಲ್ಪಟ್ಟರೆ ಇವುಗಳ ಆಸರೆಯಿಂದ ಸುಮಾರು 33,000 ಎಕರೆಗಳಷ್ಟು ವಿಸ್ತೀರ್ಣದ ಜಮೀನಿಗೆ ನೀರಾವರಿ ಬೇಸಾಯಕ್ಕೆ ನೀರು ಒದಗುವುದು. ಈ ಪೈಕಿ 10,000 ಎಕರೆಗಳ ವಿಸ್ತೀರ್ಣದ ಜಮೀನಿನಲ್ಲಿ ಈಗಾಗಲೆ ನೀರಾವರಿ ಸಾಗುವಳಿಯು ನಡೆಯುತ್ತಿದೆ. ಇನ್ನು 5 ವರ್ಷಗಳಲ್ಲಿ ಉಳಿದ 23,000 ಎಕರೆಗಳ ವಿಸ್ತೀರ್ಣದ ಜಮೀನಿನಲ್ಲೂ ಸಹ, ನೀರಾವರಿಯ ಬೇಸಾಯವು ನಡೆಯುವಂತಾಗುತ್ತದೆ. ಮಳೆಯು ಅತಿ ಕಡಿಮೆಯಾಗಿ ಆಗುತ್ತಿರುವ ನಾಗಮಂಗಲ ತಾಲ್ಲೂಕಿನ ವಿಚಾರವನ್ನು ವಿಶೇಷತಃ ಸೂಚಿಸಬಹುದಾಗಿದೆ. ಅಲ್ಲಿ ಅನೇಕ ಹಳೆಯ ಕೆರೆಗಳು ಒಡೆದು ಹೋಗಿದ್ದುವು. ಅವುಗಳ ಜೀರ್ಣೋದ್ಧಾರವೇ ನಡೆದಿರಲಿಲ್ಲ. ಈರೀತಿ ಇದ್ದ ಕೆರೆಗಳು ಈಗ ಜೀರ್ಣೋದ್ಧಾರವಾಗುತ್ತಿವೆ. ಇವುಗಳ ಕಾಮಗಾರಿಗಳು ವಿಶೇಷ ಮುಂದುವರಿದಿವೆ. ಇವುಗಳಲ್ಲಿ ಈ ವರ್ಷ ಸರಿಸುಮಾರಾಗಿ ನೀರು ಭರ್ತಿಯಾಗಿದೆ. ಈ ಕಾಮಗಾರಿಯ ಕೆಲಸಗಳು 1933 ನೆಯ ಇಸವಿಯ ಜೂನ್ ತಿಂಗಳಿನ ಒಳಗಾಗಿ ಪೂರೈಸುವುವು. ಈ ಕೆರೆಗಳಿಂದ ಅಗ್ಗೆ 1,580 ಎಕರೆಗಳಷ್ಟು ವಿಸ್ತೀರ್ಣದ ಜಮೀನಿಗೆ ನೀರಾವರಿ ಬೇಸಾಯಕ್ಕೆ ನೀರು ಒದಗುವುದು. ಸುಮಾರು 100 ವರುಷಗಳಿಂದಲೂ ಈ ಭಾಗಗಳಲ್ಲಿರುವ ರೈತರುಗಳು ಈ ಕೆರೆಗಳಲ್ಲಿ ನೀರು ತುಂಬಿರುವುದನ್ನೇ ನೋಡಿರಲಿಲ್ಲ. ಈಗ ಅವರ ದೀರ್ಘಕಾಲದ ಆಕಾಂಕ್ಷೆಗಳು ನೆರವೇರುವುದನ್ನು ಕಂಡು ಅವರು ಸಂತೋಷಿಸಬಹುದಾಗಿದೆ.

ಈ ಕೆರೆ ಕಾಮಗಾರಿಗಳಿಗಾಗಿ ರೈತರುಗಳು ವಾಗ್ದಾನ ಮಾಡಿರುವ ಕಂಟ್ರಿಬ್ಯೂಷನ್ ಮೊಬಲಗೂ ಮತ್ತು ಬಂಜರು ಜಮೀನುಗಳ ಮಾರಾಟದಿಂದ ಬರುವ ಹಣವೂ ಸೇರಿದರೆ 17.68 ಲಕ್ಷ ರೂ. ಗಳಾಗುವುದೆಂದು ಲೆಕ್ಕಾಚಾರ ಮಾಡಿದೆ. ಆದಕಾರಣ, ಸರ್ಕಾರದವರು ಈ ಕಾಮಗಾರಿಗಳಿಗಾಗಿ ಸುಮಾರು 37 ಲಕ್ಷ ರೂ. ಗಳಿಗಿಂತ ಸ್ವಲ್ಪ ಹೆಚ್ಚಾಗಿ ಕೊಡಬೇಕಾಗುವುದು. ಈ ಜಮೀನುಗಳಿಂದ ಸಾಲಿಯಾನಾ 1.7 ಲಕ್ಷ ರೂ. ಕಂದಾಯವು ದೊರೆಯುವುದೆಂದು ನಿರೀಕ್ಷಿಸಿದೆ. ಈ 21 ಕೆರೆಗಳ ಕಾಮಗಾರಿಗಳಿಗೂ ತಗಲುವ ಒಟ್ಟು ವೆಚ್ಚದಮೇಲೆ ಅಲ್ಲಿಗೆ ಶೇಕಡ 4.5 ರಂತೆ ಸರಾಸರಿ ಪ್ರತಿಫಲವು ದೊರೆತಂತಾಗುವುದು, ಇದು ತೃಪ್ತಿಕರವಾಗಿದೆಯೆನ್ನಬಹುದಾಗಿದೆ.

ಕೃಷ್ಣರಾಜಸಾಗರದ ಕಾಮಗಾರಿಗಳು—ಕೃಷ್ಣರಾಜಸಾಗರದಲ್ಲಿ ಕಟ್ಟಿನ ಮಟ್ಟಕ್ಕಿಂತ ಹೆಚ್ಚು ನೀರು ನಿಂತಾಗ್ಗೆ ತೂಬಿನ ಯಂತ್ರಸಾಧನಗಳ ಬಾಗಿಲುಗಳು ತಾವಾಗಿಯೇ ತೆರೆದು ಹೆಚ್ಚು ನೀರು ಹರಿದುಹೋದ ಬಳಿಕ ಮುಚ್ಚಿಕೊಳ್ಳುವ ತೂಬಿನ ಯಂತ್ರಗಳು ಮತ್ತು ನೀರನ್ನು ಬಿಡುವುದಕ್ಕೂ ಅಥವಾ ತಡೆಯುವುದಕ್ಕೂ ಮರಸುತ್ತಿನ ಬಾಗಿಲುಗಳುಳ್ಳ ತೂಬುಗಳು-ಇವುಗಳ ಸ್ಥಾಪನೆಯ ಕೆಲಸವು ಕಾರ್ಯಕ್ರಮದ ಪಟ್ಟಿಯ ಮೇರೆಗೆ ಜರಗುತ್ತಿದೆ; ಕೆಲವು ಚಿಲ್ಲರೆ ಕಾಮಗಾರಿಗಳೂ ನಡೆಯಬೇಕಾಗಿವೆ. ಇವುಗಳ ಹೊರತು ಕೃಷ್ಣರಾಜಸಾಗರದ ಕಟ್ಟೆಯ ಕೆಲಸವು ವಸ್ತುತಃ ಪೂರೈಸಿದೆಯೆಂದೇ ಹೇಳಬಹುದಾಗಿದೆ. ಈ ಕಾಮಗಾರಿಯು ನಮ್ಮ ಸಂಸ್ಥಾನದಲ್ಲಿ ಕೈಕೊಳ್ಳಲ್ಪಟ್ಟ ಶಿಲ್ಪಕಲೆಯ ಅತ್ಯಂತ ಭಾರಿ ಕಾಮಗಾರಿಯಾಗಿದೆ. ಈ ಜಲಾಶಯದ ನಮೂನೆಯು ಹೇಗಿರಬೇಕೆಂಬುದನ್ನು ನಿರ್ಧರಿಸಿ ಗೊತ್ತುಮಾಡಿದವರೂ ಸಂಸ್ಥಾನದ ಪಬ್ಲಿಕ್ ವರ್ಕ್ಸ್ ಇಲಾಖೆಯ ಇಂಜನಿಯರುಗಳೇ. ಆ ನಮೂನೆಗನುಸಾರವಾಗಿ ಈ ಭಾರಿ ಜಲಾಶಯವನ್ನು ನಿರ್ಮಿಸಿರುವವರೂ ಅವರೇ. ಆದಕಾರಣ, ಈ ಜಲಾಶಯವು ಅವರ ಸಾಮರ್ಥ್ಯಕ್ಕೂ ಬುದ್ಧಿಶಕ್ತಿಗೂ, ಕಾರ್ಯದಕ್ಷತೆಗೂ ಪ್ರತ್ಯಕ್ಷ ಪ್ರಮಾಣವೆನಿಸುವ ದೊಡ್ಡದೊಂದು ಲಾಂಛನದಂತೆ ಶಾಶ್ವತವಾಗಿ ನಿಲ್ಲುವುದಾಗಿದೆ.

ಇರ್ವಿನ್ ನಾಲೆಯ ಸುರಂಗದ ಕೆಲಸಗಳು ಮುಗಿದಿವೆ. ಇರ್ವಿನ್ ನಾಲೆಯ ಮದ್ದೂರು ಶಾಖೆಯಿಂದ 30,000 ಎಕರೆಗಳಷ್ಟು ಜಮೀನಿಗೆ ನೀರುಹಾಯಿಸಲು ಸಾಧ್ಯವಾಗುವಂತೆ ಆ ಶಾಖೆಯ ಕೆಲಸಗಳು ಪೂರೈಸಿವೆ. 63,000 ಎಕರೆಗಳಷ್ಟು ಜಮೀನಿಗೆ ನೀರನ್ನೊದಗಿಸುವುದಕ್ಕಾಗಿ ಏರ್ಪಡುವುದಾಗಿರುವ ಕಾವೇರೀ ಶಾಖೆಯ ಕಾಮಗಾರಿಗಳಿಗೆ ಗ್ರ್ಯಾಂಟುಗಳನ್ನು ಕಡಿಮೆ ಮಾಡಿದ ಪ್ರಯುಕ್ತ, ಆ ಕಾಮಗಾರಿಗಳು ಸ್ವಲ್ಪ ತಾಮಸವಾಗಿ ನಡೆಯಬೇಕಾಗಿವೆ. ಆದರೂ, ಈ ಶಾಖೆಯ ಮೊದಲಿನ 6 ಮೈಲಿಗಳಲ್ಲಿ ಕೆಲಸವು ಸಾಕಾದಷ್ಟು ಮುಂದುವರಿದಿದೆ; ಈಗ ನಡೆಯುತ್ತಿರುವ ಇತರ ಕಾಮಗಾರಿಗಳಿಗೆ ಬಾಧಕವೇನೂ ಇಲ್ಲದಂತೆ ಈಗ ಇದರಿಂದ 4,000 ಎಕರೆಗಳಷ್ಟು ಜಮೀನಿಗೆ ನೀರು ಸರಬರಾಯಿಯಾಗುವುದು. ಇರ್ವಿನ್ ನಾಲಾ ಪ್ರದೇಶದಲ್ಲಿರುವ 10 ಎಕರೆಗಳಲ್ಲಿ ಸಾಕಾದಷ್ಟು ನೀರು ಶೇಖರವಾಗದೆ ತೊಂದರೆಯಾಗಿದ್ದಿತು. ಆ ಕೆರೆಗಳಿಗೂ ಸಹ ಅವಶ್ಯವಾದಷ್ಟು ನೀರನ್ನು ಸರಬರಾಯಿ ಮಾಡಲಾಯಿತು.

ಮದ್ದೂರು ನಾಲೆಯಿಂದ ಕೆರಗೋಡು ಶಾಖೆಯೊಂದನ್ನು ಏರ್ಪಡಿಸುವುದಕ್ಕೆ ಪ್ರಸಕ್ತ ವರ್ಷದಲ್ಲಿ ಮಂಜೂರಾತಿಯನ್ನು ಕೊಡಲಾಯಿತು. ಈ ಶಾಖೆಯು 15 ಮೈಲಿಗಳಷ್ಟು ಉದ್ದವಾಗಿರುತ್ತದೆ; ಇದರಿಂದ 10,000 ಎಕರೆಗಳಿಗೆ ನೀರು ಹಾಯಿಸುವುದಕ್ಕೆ ಅನುಕೂಲವಾಗುತ್ತದೆ. ಪ್ರಸಕ್ತ ವರ್ಷದಲ್ಲಿ ಇರ್ವಿನ್ ನಾಲಾ ಕಾಮಗಾರಿಗಳಿಗಾಗಿ ಒಟ್ಟು 16.35 ಲಕ್ಷ ರೂ. ಗಳ ಮೊಬಲಗು ವೆಚ್ಚವಾಗಿದೆ.

ಇರ್ವಿನ್ ನಾಲೆಯ ಪ್ರದೇಶದಲ್ಲಿ ಒದಗಿಸಿರುವ ನೀರಾವರಿ ಸೌಕರ್ಯಗಳ ಪ್ರಯೋಜನಗಳನ್ನು ರೈತರು ಪಡೆಯುವಂತೆ ಮಾಡುವ ಉದ್ದೇಶದಿಂದ ಸರ್ಕಾರದವರು ಅನೇಕ ರಿಯಾಯಿತಿಗಳನ್ನು ಮಂಜೂರುಮಾಡಿದ್ದಾರೆ. ರೈತರು ಪಾವತಿ ಮಾಡಬೇಕಾದ ಕಂಟ್ರಿಬ್ಯೂಷನ್ ಮೊಬಲಗಿನ ಕಂತುಗಳ ಸಂಖ್ಯೆಯನ್ನು 10 ರಿಂದ 12 ಕ್ಕೆ ಹೆಚ್ಚುಮಾಡಲಾಗಿದೆ. ಕಂಟ್ರಿಬ್ಯೂಷನ್ ಮೊಬಲಗಿನ ಪೈಕಿ, ಪಾವತಿಯಾಗದೆ ಉಳಿದಿರುವ ಕಂತುಗಳಮೇಲೆ ಬಡ್ಡಿಯನ್ನು ವಸೂಲ್ಮಾಡದೆ ಸರ್ಕಾರದವರು ಅದನ್ನು ಬಿಟ್ಟುಕೊಟ್ಟಿದ್ದಾರೆ. ಹಸುರೆಲೆ ಗೊಬ್ಬರದ ಪೈರಿಗೆ 3 ವರುಷಗಳವರೆಗೆ ನೀರನ್ನು ಮುಫತಾಗಿ ಸರಬರಾಯಿ ಮಾಡುವಂತೆ ಮಂಜೂರಾಗಿದೆ ಮತ್ತು ರೈತರು ತಮ್ಮ ಇಷ್ಟಾನುಸಾರ ನಗದು ಕಂಟ್ರಿಬ್ಯೂಷನ್ನಿಗೆ ಪ್ರತಿಯಾಗಿ ನೀರಾವರಿಯಾಗಬಹುದಾದ ಜಮೀನನ್ನೇ ಬಿಟ್ಟುಕೊಡಬಹುದೆಂದೂ ರಿಯಾಯಿತಿಯನ್ನು ತೋರಿಸಲಾಗಿದೆ. ಕಬ್ಬಿನ ಬೆಳೆಯನ್ನೂ ಮತ್ತು ಇತರ ಪೈರುಗಳನ್ನೂ ಇಡಬೇಕೆಂದು ಉದ್ದೇಶಿಸಿರುವ ತಾಕುಗಳಲ್ಲಿ 1 ವರ್ಷ ಬತ್ತವನ್ನು ಬೆಳೆದುಕೊಳ್ಳಬಹುದೆಂದೂ ಅಪ್ಪಣೆಯನ್ನು ಕೊಡಲಾಗಿದೆ. ಮಂಡ್ಯದಲ್ಲಿ 1 ವ್ಯವಸಾಯದ ಡಿಪೋವನ್ನು ಸ್ಥಾಪಿಸಲಾಗಿದೆ. ಜಮೀನು ಅಡಮಾನದ ಬ್ಯಾಂಕಿನ ಕಾರ್ಯಕಲಾಪಗಳು ಮಂಡ್ಯ ಮತ್ತು ಮದ್ದೂರು ತಾಲ್ಲೂಕುಗಳಿಗೂ ಅನ್ವಯಿಸುವಂತೆ ಅಪ್ಪಣೆ ಮಾಡಲಾಗಿದೆ.

ಇರ್ವಿನ್ ನಾಲಾ ಪ್ರದೇಶದಲ್ಲಿ ನೀರಾವರಿಯು ಪೂರ್ತಿಯಾಗಿ ನಡೆಯುವಂತಾದಾಗ್ಗೆ ವರುಷಕ್ಕೆ ಸುಮಾರು 40,000 ಎಕರೆಗಳಷ್ಟು ಜಮೀನಿನಲ್ಲಿ ಕಬ್ಬಿನ ಸಾಗುವಳಿಯಾಗುವುದೆಂದು ನಿರೀಕ್ಷಿಸಲಾಗಿದೆ. ಪ್ರಾರಂಭದಲ್ಲಿಯೇ ಕಬ್ಬಿನ ಬೆಳೆಯು ವಿಶೇಷವಾಗಿ ಆಗುತ್ತದೆ. ಈ ಬೆಳೆಯನ್ನು ಲಾಭದಾಯಕವಾಗಿ ಉಪಯೋಗಿಸಿ, ವ್ಯವಸ್ಥೆಗೊಳಿಸುವುದಕ್ಕಾಗಿ ಈ ಪ್ರದೇಶದಲ್ಲಿ ತಡೆಯದೆ 1 ಸಕ್ಕರೆ ಕಾರ್ಖಾನೆಯನ್ನಾದರೂ ಏರ್ಪಡಿಸಬೇಕಾಗುತ್ತದೆ. ಸಾಧ್ಯವಾದಷ್ಟು ತ್ವರೆಯಾಗಿ 1 ಸಕ್ಕರೆ ಕಾರ್ಖಾನೆಯನ್ನು ಏರ್ಪಡಿಸಬೇಕೆಂಬುದು ಸರ್ಕಾರದವರ ಉದ್ದೇಶ. ಪರದೇಶದಿಂದ ಆಮದಾಗುವ ಸಕ್ಕರೆಯ ಮೇಲೆ ಬಹಳ ಭಾರೀ ಸುಂಕವು ಪಾವತಿಯಾಗುವಂತೆ ಗೊತ್ತುಮಾಡಿ, ಇಂಡಿಯಾ ದೇಶದ ಸಕ್ಕರೆ ಕೈಗಾರಿಕೆಗೆ ಇಂಡಿಯಾ ಸರ್ಕಾರದವರು ಪ್ರೋತ್ಸಾಹವನ್ನೂ, ರಕ್ಷಣೆಯನ್ನೂ ಕಲ್ಪಿಸಿದ್ದಾರೆ. ಆದಕಾರ, ಈ ಅನುಕೂಲದಿಂದಲೂ, ನಾಲಾ ಪ್ರದೇಶದಲ್ಲಿ ಸಾಕಾದಷ್ಟು ಕಬ್ಬು ದೊರೆಯುವ ಭರವಸೆ ಇರುವುದರಿಂದಲೂ ಸಕ್ಕರೆ ಕಾರ್ಖಾನೆಯು ವಿಶೇಷ ಲಾಭದಾಯಕವಾಗಿ ಪರಿಣಮಿಸುವುದೆಂದು ಹೇಳಬಹುದಾಗಿದೆ. ಹೀಗೆ ಇರ್ವಿನ್ ನಾಲಾ ಪ್ರದೇಶದಲ್ಲಿ ಸಕ್ಕರೆ ಕಾರ್ಖಾನೆಯನ್ನು ಏರ್ಪಡಿಸಬೇಕೆಂಬ ವಿಚಾರದಲ್ಲಿ ಸ್ಥಳದ ವರ್ತಕರೂ ವಿಶೇಷವಾಗಿ ಆಸಕ್ತಿಯನ್ನು ಸೂಚಿಸಿದ್ದಾರೆ.

ವಿದ್ಯುಚ್ಛಕ್ತಿಯ ಇಲಾಖೆ—ಈ ಇಲಾಖೆಯ ನಿವ್ವಳ ವರಮಾನವು 38.95 ಲಕ್ಷ ರೂ. ಇದರಲ್ಲಿ ಸವಕಲು ತಿಮ್ಮತ್ತು ಫಂಡಿಗಾಗಿ [illegible] ಬೇಕಾದ ಮೊಬಲಗನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಈ ವರ್ಷ ಮುಂದಾ[illegible] ಮಾಡಲ್ಪಟ್ಟ ಮುಖ್ಯವಾದ ಕಾಮಗಾರಿಗಳ ಪೈಕಿ, ಶಿವನಸಮುದ್ರದಲ್ಲಿ ಏರ್ಪಡಿಸಿದ VIII ನೆಯ ಸ್ಥಾವರವನ್ನು, ಬೆಂಗಳೂರು [illegible] ವಿದ್ಯುಚ್ಛಕ್ತಿಯ ಲೈನುಗಳನ್ನು [illegible]

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು	ಬಂಜೆತನದಿಂದ ಮುಕ್ತರಾಗುವಿರಿ **ಗರ್ಭಧಾರಣ ಸಂಜೀವನೀ**	ಚಿಂತಿಸಬೇಡಿರಿ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗಿವಿರಿ. ೯ ಗುಳಿಗೆಗಳ ೩. ೩ ರೂಪಾಯಿ. ಟ. ಖ. ೫ ಆಣೆ

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ. M. C. 26

ಕಡೆಗೆ ತಿರುಗಿಸಿ ಹಾಕಿಸಿದ ಕಾಮಗಾರಿಗಳನ್ನೂ ನಡೆಸಬಹುದಾಗಿದೆ. ಮೆಟ್ಟೂರಿನಲ್ಲಿರುವ ನಮ್ಮ ವಿದ್ಯುಚ್ಛಕ್ತಿಯ ಸ್ಟೇಷನ್ನಿಂದ ಮದರಾಸು ಅಧಿಪತ್ಯದಲ್ಲಿ ತಾಲ್ಲೂಕುಗಳಿಗೂ, ಈರೋಡಿಗೂ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವುದಕ್ಕಾಗಿ 1931 ನೆಯ ಇಸವಿಯ ನವಂಬರ್ ತಿಂಗಳಿನ ಆದಿಭಾಗದಲ್ಲಿ ತಕ್ಕ ಏರ್ಪಾಡುಗಳನ್ನೂ ಮಾಡಲಾಯಿತು. ವ್ಯವಸಾಯಕ್ಕೆ ಸಾಗುವಳಿಗೆ ನೀರು ಸರಬರಾಯಿ ಮಾಡುವ "ಪಂಪು"ಗಳಿಗೂ ವಿದ್ಯುಚ್ಛಕ್ತಿಯನ್ನು ಕೊಡುವ ಏರ್ಪಾಡನ್ನೂ ಹೊಸ ಹೊಸ ಗ್ರಾಮಗಳಲ್ಲಿ ಆಚರಣೆಗೆ ತರುವುದಕ್ಕಾಗಿ ಪ್ರಯತ್ನವು ಒಂದೇ ಸಮನಾಗಿ ನಡೆಯುತ್ತಿದೆ. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಚಿಕ್ಕಬಳ್ಳಾಪುರ ಮುಂತಾದ ಕೆಲವು ಸ್ಥಳಗಳಿಗೂ, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ದೊಡ್ಡಬಳ್ಳಾಪುರ ಮುಂತಾದ ಕೆಲವು ಸ್ಥಳಗಳಿಗೂ ವಿದ್ಯುಚ್ಛಕ್ತಿಯನ್ನು ಕೊಡುವ ಏರ್ಪಾಡನ್ನು ಮಾಡಲಾಯಿತು. ಹೊಸಕೋಟೆಗೂ ಮತ್ತು ಮುಳಬಾಗಲಿಗೂ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕಾಗಿ ನಡೆಸುವ ಕಾಮಗಾರಿಗಳೂ, ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಸಣ್ಣ ಸ್ಥಾಪನೆಗಳಿಗಾಗಿ ನಡೆಸುವ ಕಾಮಗಾರಿಗಳೂ ಪೂರೈಸುತ್ತಾ ಬಂದಿವೆ. ಮುಳಬಾಗಲಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸುವುದಕ್ಕಾಗಿ ತಯಾರಾದ ಅಂದಾಜನ್ನು ಮಂಜೂರ್ಮಾಡಿದೆ. ದೇವನಹಳ್ಳಿ, ಚಾಮರಾಜನಗರ ಮತ್ತು ಮಾಲೂರು ಟವನುಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ಏರ್ಪಾಡು (ಸ್ಕೀಮು) ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ನೀರನ್ನು ಎತ್ತುವುದಕ್ಕಾಗಿ 78 ಪಂಪುಗಳನ್ನು ಹೊಸದಾಗಿ ಸ್ಥಾಪಿಸಿ ಅವಕ್ಕೆ ವಿದ್ಯುಚ್ಛಕ್ತಿಯನ್ನು ಕೊಡಲಾಯಿತು. ಗ್ರಾಮಗಳಿಗೂ ಚಿಕ್ಕ ಚಿಕ್ಕ ಊರುಗಳಿಗೂ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸುವುದಕ್ಕಾಗಿ ತಕ್ಕ ಏರ್ಪಾಡನ್ನು 6 ವರ್ಷಗಳ ಹಿಂದೆ ಕೈಕೊಳ್ಳಲಾಯಿತಷ್ಟೆ. ಆಗಿನಿಂದೀಚೆಗೆ ಸುಮಾರು 40 ಸ್ಥಳಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಲಾಗಿದೆ.

ಈ ಕೆಲಸಗಳಿಗಾಗಿ ವೆಚ್ಚಮಾಡಿದ ಒಟ್ಟು ಬಂಡವಾಳವು 1932 ನೆಯ ಇಸವಿಯ ಜೂನ್ ಆಖೈರಿನವರೆಗೆ ಸುಮಾರು 15½ ಲಕ್ಷ ರೂ. ಗಳವರೆಗೆ ಆಗಿದೆ. ಈ ಬಂಡವಾಳದ ಹಣದಮೇಲೆ ಬಂದಿರುವ ನಿವ್ವಳ ಉತ್ಪತ್ತಿಯು ನ್ಯಾಯಸಿ. ಎಲ್ಲಾ ಮ್ಯುನಿಸಿಪಾಲಿಟಿಗಳ ವಿಷಯದಲ್ಲಿಯೂ ಖಾತರಿಯಾಗಿದ್ದ ಶೇಕಡಾವಾರಿಗಿಂತಲೂ ಕಡಿಮೆಯಾಗಿದ್ದರೂ, ವಿದ್ಯುಚ್ಛಕ್ತಿಗೆ ಗಿರಾಕಿಯು ಹೆಚ್ಚುತ್ತಾ ಬಂದ ಹಾಗೆಲ್ಲಾ ಈ ಸ್ಥಾಪನೆಗಳಿಂದ ಇನ್ನೂ ಕೆಲವು ವರುಷಗಳೊಳಗಾಗಿಯೇ ಸಾಕಾದಷ್ಟು ವರಮಾನವು ಬರಬಹುದೆಂದು ನಿರೀಕ್ಷಿಸಲು ಕಾರಣವಾಗಿದೆ.

ಪ್ರಸಕ್ತವರ್ಷದಲ್ಲಿ ಕೆಲವು ಟ್ರಾನ್ಸ್‌ಫಾರ್ಮರುಗಳನ್ನು ಅಜಮಾಯಿಷಿಗಾಗಿ ಮಾಡಿಸಲಾಯಿತು. ಅವು ಸರಿಯಾಗಿಯೂ ಮಜಬೂತಾಗಿಯೂ ಇವೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಿ ನೋಡಲಾಗಿ ಅವು ಚೆನ್ನಾಗಿರುವಂತೆ ಕಂಡುಬಂದಿದೆ. ಇದೊಂದು ತೃಪ್ತಿಕರವಾದ ವಿಷಯ. ಈ ಟ್ರಾನ್ಸ್‌ಫಾರ್ಮರುಗಳನ್ನು ಇಲಾಖೆಯವರು ಉಪಯೋಗಿಸುತ್ತಿದ್ದಾರೆ.

ರೈಲ್ವೆಗಳು.—ಮದ್ರಾಸ್ ಮತ್ತು ಸದರನ್ ಮರಾಟಾ ರೈಲ್ವೆ ಕಂಪೆನಿಯವರಿಂದ ಕೆಲಸ ನಡೆಸಲ್ಪಡುತ್ತಿರುವ 271.48 ಮೈಲಿಗಳ ಲೈನುಗಳೂ ಸೇರಿ ಎಲ್ಲಾ ಒಟ್ಟು ಎಂದಿನಂತೆಯೇ 722.39 ಮೈಲಿಗಳ ರೈಲ್ವೆಯೇ ಪ್ರಸಕ್ತ ವರ್ಷದಲ್ಲಿಯೂ ಇದ್ದಿತು.

ರೈಲ್ವೆ ಇಲಾಖೆಯ ಒಟ್ಟು ಸಂಪಾದನೆಯು ಪ್ರಸಕ್ತ ವರ್ಷ 74.29 ಲಕ್ಷ ರೂ. ವರೆಗೆ ಬಂದಿತು. ಕೆಲಸ ನಡೆಸಿದ ವೆಚ್ಚವು ಮದ್ರಾಸ್ ಮತ್ತು ಸದರನ್ ಮರಾಟಾ ರೈಲ್ವೆ ಕಂಪೆನಿಯವರಿಗೂ ಡಿಸ್ಟ್ರಿಕ್ಟು ಬೋರ್ಡುಗಳವರಿಗೂ ಪಾವತಿ ಮಾಡಿದ ಸರ್ಪ್ಲಸ್ ಪಾಲುಗಳೂ ಸೇರಿ 44.87 ಲಕ್ಷ ರೂ. ವರೆಗೆ ಆಯಿತು. ಸವೆತಲು ಕಿಮ್ಮತ್ತು ಭರ್ತಿ ನಿಧಿಗೆ ಕೊಡಬೇಕಾದ ಮೊಬಲಗಿಗಾಗಿ 3.29 ಲಕ್ಷ ರೂ. ತೆಗೆದನಂತರ ರೈಲ್ವೆ ಬಾಬಿನ ನಿವ್ವಳ ಹುಟ್ಟುವಳಿಯು 26.13 ಲಕ್ಷ ರೂ. ಬಂದ ಹಾಗಾಯಿತು. ರೈಲ್ವೆಗಳನ್ನು ಹಾಕಿಸುವುದಕ್ಕಾಗಿ 5.88 ಕೋಟಿ ರೂ. ಬಂಡವಾಳವನ್ನು ಮುಟ್ಟಿಸಿರುವುದು ಸರಿಯಷ್ಟೆ. ಈ ಬಂಡವಾಳದ ಹಣದ ಮೇಲೆ ಶೇಕಡಾ 4.44 ರಂತೆ ಲಾಭವು ಬಂದಂತಾಯಿತು.

ಚಾಮರಾಜನಗರದಿಂದ ಕೊಳ್ಳೇಗಾಲಕ್ಕೆ 22.14 ಮೈಲಿಗಳ ದೂರ ಮೈಸೂರು ಸಂಸ್ಥಾನದವರು ರೈಲ್ವೆಯನ್ನು ಹಾಕಿಸಬಹುದೆಂದು ಇಂಡಿಯಾ ಸರ್ಕಾರದವರು ಅನುಮತಿಯನ್ನು ಕೊಟ್ಟಿದ್ದಾರೆ. ಈ ಲೈನಿಗೆ 15.73 ಲಕ್ಷ ರೂ. ವೆಚ್ಚವಾಗಬಹುದೆಂದು ಅಂದಾಜಾಗಿದೆ. ಈ ಲೈನಿಗೆ ವೆಚ್ಚವಾಗುವ ಬಂಡವಾಳದ ಪೈಕಿ 3 ನೇ 1 ಭಾಗದ ಮೊಬಲಗಿನ ಮೇಲೆ ಬಡ್ಡಿಯನ್ನು ಕೊಡುವುದಾಗಿ ಕೊಯಮುತ್ತೂರು ಜಿಲ್ಲಾ ಬೋರ್ಡಿನವರು ವಾಗ್ದಾನ ಕೊಟ್ಟಿದ್ದಾರೆ.

ಜುಡಿಷಿಯಲ್ ಇಲಾಖೆ.—ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳ ಕೆಲಸವು ಗಣನೀಯವಾದ ರೀತಿಯಲ್ಲಿ ಹೆಚ್ಚಾಗಿದೆ. ಸಿವಿಲ್ ಕೋರ್ಟುಗಳಲ್ಲಿ ದಾಖಲಾದ ದಾವೆಗಳ ಸಂಖ್ಯೆಯು ಶೇಕಡ 9.6 ರಂತೆ ಹೆಚ್ಚಾಗಿದೆ. ಕ್ರಿಮಿನಲ್ ಕೋರ್ಟುಗಳಲ್ಲಿ ವಿಚಾರಣೆಗಾಗಿ ದಾಖಲಾದ ಪಕ್ಷಗಾರರುಗಳ ಸಂಖ್ಯೆಯು ಶೇಕಡ 8.9 ರಂತೆ ಹೆಚ್ಚಾಗಿದೆ. ಬೆಂಗಳೂರಿನಲ್ಲಿರುವ ಅಡಿಷನಲ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟು ಇರತಕ್ಕ ಅವಧಿಯನ್ನು 1933 ನೆಯ ಇಸವಿಯಲ್ಲಿ ಸಿವಿಲ್ ಕೋರ್ಟುಗಳ ಬೇಸಗೆ ರಜಾದಿನಗಳು ಪ್ರಾರಂಭವಾಗುವವರೆಗೂ ಹೆಚ್ಚಿಸಲಾಗಿದೆ. ವೆಚ್ಚವನ್ನು ಕಡಿಮೆಮಾಡುವ ಏರ್ಪಾಡಿಗಾಗಿ ತರೀಕೆರೆಯಲ್ಲಿದ್ದ 2 ನೆಯ ತರಗತಿಯ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ವಜಾಮಾಡಲಾಯಿತು ಮತ್ತು ಹುಣಸೂರಿನಲ್ಲಿರುವ 2 ನೆಯ ತರಗತಿಯ ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಹಂಗಾಮಿಯಾಗಿ ಆ ಸ್ಥಳದಲ್ಲಿರುವ ಮುನ್ಸೀಫರ ಚಾರ್ಜಿನಲ್ಲಿ ಇಡಲಾಗಿದೆ. ಮೊಕದ್ದಮೆಗಳನ್ನು ವಿಚಾರಣೆ ಮಾಡುವುದಕ್ಕಾಗಿ ಮ್ಯಾಜಿಸ್ಟ್ರೇಟರುಗಳು ಸ್ಥಳದಿಂದ ಸ್ಥಳಕ್ಕೆ ಸಂಚಾರಮಾಡುವುದನ್ನು ಕಡಿಮೆ ಮಾಡಬೇಕಾಯಿತು. ಕೆಲವು ಸಿವಿಲ್ ಕೋರ್ಟುಗಳಲ್ಲಿ ಮೇಲಿಂದ ಮೇಲೆ ಬಾಕಿ ಉಳಿಯುತ್ತಿರುವ ಕೆಲಸವನ್ನು ಕಡಿಮೆಮಾಡುವ ಉದ್ದೇಶದಿಂದ ಸಬಾರ್ಡಿನೇಟ್ ಜಡ್ಜಿಗಳು ಮತ್ತು ಮುನ್ಸೀಫರುಗಳ ದರ್ಜೆಯ ಸ್ಪೆಷಲ್ ಮ್ಯಾಜಿಸ್ಟ್ರೇಟರುಗಳಿಗೆ, ಅವರವರ ದರ್ಜೆಗೆ ತಕ್ಕಂತೆ ಸಿವಿಲ್ ಬಾಬಿನ ಕೆಲಸಗಳನ್ನು ಕೊಡಲಾಗಿದೆ. ಕೆಲವು ಬೆಂಚು ಕೋರ್ಟುಗಳಲ್ಲಿ ತೃಪ್ತಿಕರವಾಗಿ ಕೆಲಸವು ನಡೆಯುತ್ತಿರಲಿಲ್ಲವಾದ ಕಾರಣ ಅವುಗಳನ್ನು ತೆಗೆದುಹಾಕಲಾಯಿತು. ಇದರಿಂದ ಸರ್ಕಾರಿ ಸಂಬಳವನ್ನು ಪಡೆಯುತ್ತಿರುವ ಮ್ಯಾಜಿಸ್ಟ್ರೇಟರುಗಳಿಗೆ ಕೆಲಸವು ಹೆಚ್ಚಾಗಿರುವುದೇನೋ ನಿಜ. ಆದರೂ ಆ ಬೆಂಚು ಕೋರ್ಟುಗಳನ್ನು ತೆಗೆದು ಹಾಕಲಾಯಿತು.

ಪೊಲೀಸು ಇಲಾಖೆ.—ಸಂಸ್ಥಾನದಲ್ಲಿರುವ ಪೊಲೀಸು ಶಿಬ್ಬಂದಿಯನ್ನೂ ಮತ್ತು ಪೊಲೀಸು ಶಿಬ್ಬಂದಿಯ ಸ್ಥಳ ಮೊಕ್ಕಾಂಗಳನ್ನೂ ಈಗಿನ ಅವಶ್ಯಕತೆಗಳನ್ನನುಸರಿಸಿ ಪುನಃ ವಿಮರ್ಶಿಸಿ ನೋಡಲಾಯಿತು. ಪೊಲೀಸು ಇಲಾಖೆಯ ಪುನರ್ವ್ಯವಸ್ಥೆಗಾಗಿ ಒಂದು ಏರ್ಪಾಡನ್ನು 1931 ನೆಯ ಇಸವಿ ಸೆಪ್ಟೆಂಬರ್ ತಿಂಗಳಿನ ಲಾಗಾಯಿತು ಮಂಜೂರ್ಮಾಡಲಾಯಿತು. ಈ ಏರ್ಪಾಡಿನ ಫಲಿತಾಂಶವಾಗಿ 63,000 ರೂ. ನಿವ್ವಳ ಮೊಬಲಗು ಮಿಗತಾಯವಾಗಿದೆ. ಈ ಏರ್ಪಾಡನ್ನನುಸರಿಸಿ ಪೊಲೀಸು ಬೀಟ್‌ಪೋಸ್ಟುಗಳ ಮತ್ತು ಸ್ಟೇಷನುಗಳ ಸಂಖ್ಯೆಯನ್ನು ತೀರ ಅವಶ್ಯವಾದ ಕನಿಷ್ಠ ಪರಿಮಿತಿಗೆ ತಗ್ಗಿಸಲಾಯಿತು. ಪ್ರಾಂತಿಕ ರಿಜರ್ವ್ ಪೊಲೀಸು ಶಿಬ್ಬಂದಿಯನ್ನು ಹೆಚ್ಚುಮಾಡಿ, ಪುನರ್ವ್ಯವಸ್ಥೆಗೊಳಿಸಲಾಯಿತು. ಮಂಜೂರಾಗಿರುವ ಬೀಟ್‌ಪೋಸ್ಟುಗಳಿಗೂ ಮತ್ತು ಪೊಲೀಸು ಠಾಣೆಗಳಿಗೂ ಹಂಗಾಮಿಯಾಗಿ ಜನಗಳನ್ನು ಸೇರಿಸಿ

ಕೊಳ್ಳುವ ಪ್ರಮೇಯವು ಬರದಂತೆಯೇ ಅವುಗಳ ಆಡಳಿತವು ನಡೆಯುವ ಹಾಗೆ ಮಾಡುವ ಉದ್ದೇಶದಿಂದ, ಎಲ್ಲಿ ಕೆಲಸವು ಖಾಲಿಯಾದರೆ ಅಲ್ಲಿಗೆ ಹೋಗಿ ಕೆಲಸಮಾಡತಕ್ಕ ರಿಜರ್ವ್ ಶಿಬ್ಬಂದಿಯೊಂದನ್ನು ಏರ್ಪಡಿಸಲಾಯಿತು. ಸಂಸ್ಥಾನದ ಸರ್ಕಾರಿ ಖಜಾನೆಗಳಲ್ಲಿ ಕಾವಲಿರುವ ಕರ್ತವ್ಯವು ಇದುವರೆಗೆ ಪದಾತಿ ಸೈನ್ಯದ ಸಿಪಾಯಿಗಳಿಗೆ ಸೇರಿದ್ದಷ್ಟೆ; ಈ ಕರ್ತವ್ಯವನ್ನು 1932 ನೆಯ ಇಸವಿ ಜನವರಿ ತಿಂಗಳಿನ ಲಾಗಾಯಿತು ಪೊಲೀಸು ಇಲಾಖೆಗೆ ವರ್ಗಾಯಿಸಲಾಯಿತು. ಈ ಉದ್ದೇಶಕ್ಕಾಗಿ ಪೊಲೀಸು ಶಿಬ್ಬಂದಿಯನ್ನು ತಕ್ಕ ರೀತಿಯಲ್ಲಿ ಹೆಚ್ಚುಮಾಡಲಾಗಿದೆ.

ಸೈನ್ಯದ ಇಲಾಖೆ.—ಸೈನ್ಯದಲ್ಲಿ ಸಂಸ್ಥಾನದ ಅಶ್ವಾರೋಹಿಗಳ ಒಂದು ರಿಜಿಮೆಂಟ್ ದಳವೂ, "ಮೈಸೂರು ಹಾರ್ಸ್" ಎಂಬ ಅಶ್ವಸೇನೆಯ ಸ್ಕ್ವಾಡ್ರನ್ ದಳವೂ, ಪದಾತಿ ಸೈನ್ಯದ (ಇನ್‌ಫೆಂಟ್ರಿ) 3 ಪಟಾಲಮುಗಳೂ ಮತ್ತು "1 ಮೆಕ್ಯಾನಿಕಲ್ ಟ್ರಾನ್ಸ್‌ಪೋರ್ಟ್ ಕೋರ್" ಎಂಬ ಸಾಮಾನು ಸಾಗಿಸುವ ಮೋಟಾರುಲಾರಿ ಮುಂತಾದ ಸಾಧನಗಳಿಗೆ ಸಂಬಂಧಪಟ್ಟ ಶಿಬ್ಬಂದಿಯೂ ಇವೆ. ಅಶ್ವಾರೋಹಿಗಳ 2 ರಿಜಿಮೆಂಟುಗಳೂ "ಎ" ತರಗತಿಗೆ ಸೇರಿದವುಗಳಾಗಿವೆ. ಇವುಗಳಿಗೆ ನವೀನ ಕಾಲದ ಆಯುಧಗಳನ್ನು ಒದಗಿಸಲಾಗಿದೆ. ಇವರು ಯುದ್ಧೋದ್ಯೋಗಕ್ಕೆ ಸಿದ್ಧರಾಗಿರುವಂತೆ ಶಿಕ್ಷಣವನ್ನು ಕೊಡಲಾಗಿದೆ. ಪ್ರಸಕ್ತ ವರ್ಷದಲ್ಲಿ ಪದಾತಿ ಸೈನ್ಯದ ಪಟಾಲಮುಗಳನ್ನು (ಇನ್‌ಫೆಂಟ್ರಿ ಬೆಟಾಲಿಯನುಗಳನ್ನು) ಪುನರ್ವ್ಯವಸ್ಥೆ ಮಾಡಲಾಯಿತು. ಖಜಾನೆಗಳ ಕಾವಲು ಕೆಲಸವೇ ಮುಂತಾದ ಸಿವಿಲ್ ಕರ್ತವ್ಯಗಳನ್ನು ಅವರಿಂದ ತಪ್ಪಿಸಲಾಯಿತು. ಅವರಿಗೆ ಸರಿಯಾದ ಶಿಕ್ಷಣವು ದೊರೆತು, ಜರೂರಾದ ಸಂದರ್ಭಗಳಲ್ಲಿ ಈ ಸೇನೆಯವರೂ ಒದಗಲೆಂಬ ಉದ್ದೇಶದಿಂದ ಈ ಸೈನ್ಯದವರು ಕೆಲ ಕೆಲವು ಸ್ಥಳಗಳಲ್ಲಿರುವಂತೆ ನೇಮಕಮಾಡಲಾಗಿದೆ. ಅವರಿಗಿದ್ದ ಸೈನ್ಯ ಸಂಬಂಧವಲ್ಲದ ಕರ್ತವ್ಯಗಳನ್ನು ಪೊಲೀಸಿನವರಿಗೆ ವರ್ಗಾಯಿಸಲಾಯಿತು. ಪುನರ್ವ್ಯವಸ್ಥೆಗೊಳಿಸಲ್ಪಟ್ಟ ಸೈನ್ಯದಲ್ಲಿ ಯುದ್ಧೋದ್ಯೋಗಕ್ಕೆ ಸಿದ್ಧವಾಗಿರುವ 1 ಪಟಾಲಂ, 1 ತರಬೇತು ಪಟಾಲಂ ಮತ್ತು 1 ಗ್ಯಾರಿಸನ್ ಪಟಾಲಂ ಎಂಬುವಾಗಿ 3 ಪಟಾಲಮುಗಳಿವೆ. 1 ನೆಯ ಮತ್ತು 2 ನೆಯ ಪಟಾಲಮುಗಳು ಬೆಂಗಳೂರಿನಲ್ಲಿವೆ. 3 ನೆಯ ಪಟಾಲದಿನ ಕಸಬೆಯು ಮೈಸೂರೆಂದು ಗೊತ್ತುಮಾಡಿದೆ.

ಮೈಸೂರು ವಿಶ್ವವಿದ್ಯಾನಿಲಯ.—ವಿಶ್ವವಿದ್ಯಾನಿಲಯದಲ್ಲಿ ಪ್ರಸಕ್ತ ಸಾಲಿನಲ್ಲಿ ಒಟ್ಟು 2,833 ಮಂದಿ ವಿದ್ಯಾರ್ಥಿಗಳಿದ್ದರು. 1930-31 ನೆಯ ಸಾಲಿನಲ್ಲಿ 2,808 ಮಂದಿ ವಿದ್ಯಾರ್ಥಿಗಳಿದ್ದರು. ಇಂಟರ್‌ಮೀಡಿಯೆಟ್ ಪರೀಕ್ಷೆಯು ಹೊರತು, ಉಳಿದ ಎಲ್ಲಾ ಪರೀಕ್ಷೆಗಳ ಫಲಿತಾಂಶಗಳೂ ಸಮರ್ಪಕವಾಗಿದ್ದುವು. ನಾನಾ ಪರೀಕ್ಷೆಗಳಲ್ಲಿಯೂ ಸೇರಿ 59 ಮಂದಿ ವಿದ್ಯಾರ್ಥಿನಿಯರು ತೇರ್ಗಡೆ ಹೊಂದಿದರು. ಅವರ ಪೈಕಿ ಒಬ್ಬರು ಎಂ. ಬಿ. ಬಿ. ಎಸ್. ಡಿಗ್ರಿಯನ್ನು ಪಡೆದಿರುತ್ತಾರೆ.

ಪ್ರಸಕ್ತ ಸಾಲಿನಲ್ಲಿ 8,000 ರೂ. ಗಳಷ್ಟು ಮೊಬಲಗಿನ ಧರ್ಮಾರ್ಥವಾದ ದ್ರವ್ಯಗಳು (ಎಂಡೋಮೆಂಟುಗಳು) ಹೊಸದಾಗಿ ಅಂಗೀಕರಿಸಲ್ಪಟ್ಟುವು. ಅಲ್ಲಿಗೆ ಎಂಡೋಮೆಂಟುಗಳ ಒಟ್ಟು ಮೌಲ್ಯವು 3,65,120 ರೂ. ಗಳಾದ ಹಾಗಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಬಿ. ಇ. ಡಿಗ್ರಿಯನ್ನು ಮದ್ರಾಸು ಸರ್ಕಾರದವರು, ಮ್ಯುನಿಸಿಪಲ್ ಸಭೆಗಳಿಗೆ ನೇಮಕಮಾಡಿಕೊಳ್ಳುವ ಎಲೆಕ್ಟ್ರಿಕಲ್ ಇಂಜನಿಯರುಗಳಿಗಿರಬೇಕಾದ ಅರ್ಹತೆಯನ್ನಾಗಿ ಅಂಗೀಕರಿಸಿದ್ದಾರೆ. ಎಂ. ಬಿ. ಬಿ. ಎಸ್. ಡಿಗ್ರಿಯೂ ಮತ್ತು ಎಲ್. ಎಂ. ಪಿ. ಡಿಪ್ಲೊಮಾವೂ (ಪ್ರಶಸ್ತಿಯೂ) ಬೊಂಬಾಯಿಯಲ್ಲಿಯೂ ಮತ್ತು ಬಂಗಾಳದಲ್ಲಿಯೂ ಮೆಡಿಕಲ್ ಪ್ರಾಕ್ಟಿಷನರುಗಳನ್ನು ರಿಜಿಸ್ಟರ್ಮಾಡಿಕೊಳ್ಳುವ ಉದ್ದೇಶಗಳಿಗಾಗಿ ಅಂಗೀಕೃತವಾಗಿವೆ. ಎಲ್. ಎಂ. ಪಿ. ಡಿಪ್ಲೊಮಾವು ಮದರಾಸಿನಲ್ಲಿಯೂ ಕೂಡ ಅಂಗೀಕರಿಸಲ್ಪಟ್ಟಿದೆ. ಇಂಡಿಯಾ ದೇಶದ "ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರ್ಸ್" ಎಂಬ ಸಂಸ್ಥೆಯವರಿಂದ ಬಿ. ಇ. ಡಿಗ್ರಿಯು ಅಂಗೀಕೃತವಾಗುವಂತೆ ಮಾಡುವ ವಿಷಯದಲ್ಲಿ ಪತ್ರವ್ಯವಹಾರವು ನಡೆಯುತ್ತಿದೆ.

ವಿದ್ಯಾಭ್ಯಾಸ.—ಪ್ರಾಥಮಿಕ ವಿದ್ಯಾಭ್ಯಾಸದ ಆಡಳಿತವನ್ನು ಡಿಸ್ಟ್ರಿಕ್ಟು ಬೋರ್ಡುಗಳೇ ಮುಂತಾದ ಸ್ಥಳೀಯ ವಿದ್ಯಾಭ್ಯಾಸದ ಅಧಿಕಾರ ಸಂಸ್ಥೆಗಳಿಗೆ ವಹಿಸುವ ಏರ್ಪಾಡನ್ನು 1931 ನೆಯ ಇಸವಿ ಜುಲೈ 1 ನೆಯ ತಾರೀಖಿನ ಲಾಗಾಯಿತು ಜಾರಿಗೆ ತರಲಾಯಿತು. ಸ್ಥಳೀಯ ವಿದ್ಯಾಭ್ಯಾಸದ ಅಧಿಕಾರ ಸಂಸ್ಥೆಯವರ ಹತೋಟಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಸಲುವಾಗಿಯೇ ಪ್ರತ್ಯೇಕ ಇನ್‌ಸ್ಪೆಕ್ಟರುಗಳ ಶಿಬ್ಬಂದಿಯನ್ನು ಒದಗಿಸುವುದಕ್ಕೆ ಹಣದ ಮುಗ್ಗಟ್ಟಿನ ದೆಸೆಯಿಂದ ಸಾಧ್ಯವಾಗಲಿಲ್ಲ. ಆದುದರಿಂದ ಡಿಸ್ಟ್ರಿಕ್ಟು ಎಜುಕೇಷನಲ್ ಆಫೀಸರುಗಳನ್ನೂ ಮತ್ತು ಅಸಿಸ್ಟೆಂಟ್ ಇನ್‌ಸ್ಪೆಕ್ಟರುಗಳನ್ನೂ ಅವರ ಸ್ವಂತ ಕರ್ತವ್ಯಗಳ ಜೊತೆಗೆ "ಎಕ್ಸ್ ಅಫಿಷಿಯೊ" (ಅಧಿಕಾರ ಪ್ರಯುಕ್ತ) ಸ್ಕೂಲು ಬೋರ್ಡು ಆಫೀಸರುಗಳನ್ನಾಗಿ ನೇಮಕ ಮಾಡಲಾಯಿತು. 36 ಇನ್‌ಕಂಪ್ಲೀಟ್ ಮಿಡ್ಲ್ ಸ್ಕೂಲುಗಳನ್ನು ಕಂಪ್ಲೀಟ್ ಮಿಡ್ಲ್ ಸ್ಕೂಲುಗಳನ್ನಾಗಿ ಮಾರ್ಪಡಿಸುವಂತೆ ಹುಕುಂ ಮಾಡಲಾಯಿತು. ಉಳಿದ ಇನ್‌ಕಂಪ್ಲೀಟ್ ಮಿಡ್ಲ್ ಸ್ಕೂಲುಗಳನ್ನು ವಜಾ ಮಾಡಲಾಯಿತು.

ಮಿಡ್ಲ್ ಸ್ಕೂಲುಗಳ ಸಂಖ್ಯೆಯೂ, ಎಲಿಮೆಂಟರಿ ಸ್ಕೂಲುಗಳ ಸಂಖ್ಯೆಯೂ ಮತ್ತು ಅವುಗಳಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳ ಸಂಖ್ಯೆಯೂ ಪ್ರಸಕ್ತ ಸಾಲಿನಲ್ಲಿ ಗಣನೀಯವಾದಷ್ಟು ಮಟ್ಟಿಗೆ ಕಡಿಮೆಯಾದುವು. ಈ ರೀತಿ ಕಡಿಮೆಯಾದುದಕ್ಕೆ ಇನ್‌ಕಂಪ್ಲೀಟ್ ಮಿಡ್ಲ್ ಸ್ಕೂಲುಗಳನ್ನೂ ಮತ್ತು ದೊಡ್ಡವರಿಗಾಗಿ ಏರ್ಪಡಿಸಿದ್ದ ರಾತ್ರಿ ಸ್ಕೂಲುಗಳನ್ನೂ ತೆಗೆದುಹಾಕಿದುದೂ, ಪ್ರೈಮರಿ ಸ್ಕೂಲುಗಳನ್ನು ಒಟ್ಟುಗೂಡಿಸಿದುದೂ, ಸ್ಕೂಲುಗಳಿಗೆ ದಾಖಲಾಗುವ ವಿಷಯದಲ್ಲಿ ಇರತಕ್ಕ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಆಚರಣೆಗೆ ತಂದುದೂ ಮತ್ತು ಎಲ್ಲೆಲ್ಲಿಯೂ ಆವರಿಸಿರುವ ಆರ್ಥಿಕ ದುರವಸ್ಥೆಯ ದೆಸೆಯಿಂದ ವಿದ್ಯಾರ್ಥಿಗಳ ತಂದೆ ತಾಯಿಗಳೂ ಮತ್ತು ರಕ್ಷಕರೂ ಕೆಲವು ಸಂದರ್ಭಗಳಲ್ಲಿ ತಮ್ಮ ಮಕ್ಕಳನ್ನು ಸ್ಕೂಲುಗಳಿಗೆ ಕಳುಹಿಸದೆ ನಿಲ್ಲಿಸಿಕೊಂಡುದೂ ಕಾರಣಗಳಾಗಿವೆ. ವೆಚ್ಚವನ್ನು ಕಡಿಮೆ ಮಾಡುವುದಕ್ಕಾಗಿ ಎಲ್ಲ ವಿದ್ಯಾರ್ಥಿವೇತನಗಳ ಮೊಬಲಗುಗಳನ್ನೂ ಕಡಿಮೆ ಮಾಡಲಾಯಿತು. ಸೆಂಟ್ರಲ್ ಬುಕ್ ಡಿಪೋದಿನ ಆಡಳಿತವು ಇದುವರೆಗೆ ವಿದ್ಯಾಭ್ಯಾಸದ ಇಲಾಖೆಯವರಲ್ಲಿದ್ದಿತಷ್ಟೆ. ಈಗ ಅದನ್ನು ಸರ್ಕಾರಿ ಮುದ್ರಣಾಲಯದ ಸೂಪರಿಂಟೆಂಡೆಂಟರವರ ಹತೋಟಿಗೆ ವಹಿಸಲಾಗಿದೆ.

ವ್ಯವಸಾಯದ ಇಲಾಖೆ.—ಡಿಸ್ಟ್ರಿಕ್ಟುಗಳಲ್ಲಿ ನಿದರ್ಶನ ಕಾರ್ಯವನ್ನು ನಡೆಯಿಸಲು ಡಿಸ್ಟ್ರಿಕ್ಟು ಬೋರ್ಡುಗಳವರು ವ್ಯವಸಾಯದ ಇಲಾಖೆಯವರಿಗೆ ಗ್ರಾಂಟುಗಳನ್ನು ಕೊಡುವರಷ್ಟೆ; ಪ್ರಸಕ್ತಸಾಲಿನಲ್ಲಿ ಕೆಲವು ಡಿಸ್ಟ್ರಿಕ್ಟು ಬೋರ್ಡುಗಳವರು ಈ ಗ್ರಾಂಟುಗಳನ್ನು ಕೊಡುವುದಕ್ಕಾಗಲಿಲ್ಲ. ಆದಕಾರಣ ಡಿಸ್ಟ್ರಿಕ್ಟುಗಳಲ್ಲಿನ ನಿದರ್ಶನ ಕಾರ್ಯಗಳು ಎಂದಿನಂತೆ ನಡೆಯಲು ಸ್ವಲ್ಪ ಮಟ್ಟಿಗೆ ಕುಂದಕವುಂಟಾಯಿತು. ಬೀಜದ ಧಾನ್ಯಗಳನ್ನೂ, ವ್ಯವಸಾಯದ ಮುಟ್ಟುಗಳನ್ನೂ ಮಾರುವುದು ಮುಂತಾದ ಕೆಲಸಗಳಲ್ಲಿ ಉದ್ಯುಕ್ತವಾಗಿದ್ದ ಪರಸ್ಪರ ಸಹಾಯ ಸಂಘಗಳ ಸಂಖ್ಯೆಯು ಕಡಿಮೆಯಾಯಿತು. ಈಗಿನ ಆರ್ಥಿಕ ದುರ್ದೆಸೆಯಿಂದ ವ್ಯವಸಾಯದ ಮುಟ್ಟುಗಳಿಗೆ ಹೆಚ್ಚು ಗಿರಾಕಿಯಿರಲಿಲ್ಲ; ಪ್ರಸಕ್ತ ಸಾಲಿನಲ್ಲಿ 45,014 ರೂ. ಬೆಲೆ ಬಾಳುವ ವ್ಯವಸಾಯದ ಮುಟ್ಟುಗಳು ಮಾರಾಟವಾದುವು; 1930-31 ನೆಯ ಸಾಲಿನಲ್ಲಿ 58,000 ರೂ. ಬೆಲೆ ಬಾಳುವ ವ್ಯವಸಾಯದ ಮುಟ್ಟುಗಳು ಮಾರಾಟವಾಗಿದ್ದುವು ಪಶುಶಾಲೆಯ ಶಾಖೆಯಲ್ಲಿ ತುಮಕೂರು ರೇಂಜನ್ನು ವಜಾಮಾಡಲಾಯಿತು. ಈ ರೇಂಜಿನಲ್ಲಿದ್ದ ಅಮೃತಮಹಲ್ ಮಂದೆಗಳನ್ನು ಇತರ ರೇಂಜುಗಳಿಗೆ ಹಂಚಲಾಯಿತು. ಇದರ ಫಲಿತಾಂಶವಾಗಿ 10,000 ಎಕರೆಗಿಂತಲೂ ಹೆಚ್ಚಾದ ಕಾವಲು ಜಮೀನುಗಳನ್ನು ಸಾಗುವಳಿಗೆ ಕೊಡುವುದಕ್ಕೆ ಅನುಕೂಲವಾಯಿತು.

ಪ್ರಸಕ್ತ ಸಾಲಿನಲ್ಲಿ ಅಂಟುರೋಗಗಳಿಂದ ಮೃತಪಟ್ಟ ದನಕರುಗಳ ಸಂಖ್ಯೆಯು ಕಡಿಮೆಯಾಗಿದ್ದಿತು. ದನಗಳಿಗೆ ದೊಡ್ಡರೋಗವು ತಗಲದಂತೆ ಕಾಪಾಡುವುದಕ್ಕಾಗಿ ಇನಾಕ್ಯುಲೇಷನ್ ಮಾಡಲು ಉಪಯೋಗಿಸುವ "ಸೀರಂ" ರಸವನ್ನು ಸಂಸ್ಥಾನದಲ್ಲಿಯ ಆವಶ್ಯಕತೆಗಳಿಗೂ ಮತ್ತು ಹೈದರಾಬಾದು, ಕೊಡಗು, ಬರೋಡಾ ಮತ್ತು ಕೊಚ್ಚಿ ಮುಂತಾದುವುಗಳಿಗೆ ಮಾರಾಟ ಮಾಡುವುದಕ್ಕೂ, ಬೇಕಾದ ಪ್ರಮಾಣದಲ್ಲಿ ಸೀರಂ ಇನ್‌ಸ್ಟಿಟ್ಯೂಟಿನಲ್ಲಿ ತಯಾರಿಸಲಾಯಿತು; ಪ್ರಸಕ್ತ ಸಾಲಿನಲ್ಲಿ ನಮ್ಮ ಸಂಸ್ಥಾನದಲ್ಲಿ ವಿಶೇಷ ಹೆಚ್ಚಾಗಿ ದೊಡ್ಡರೋಗವು ಕಾಣಿಸಿಕೊಳ್ಳಲಿಲ್ಲವಾದಕಾರಣ, ಈ "ಸೀರಂ" ರಸವನ್ನು ಉಪಯೋಗಿಸತಕ್ಕ ಆವಶ್ಯಕತೆಯು ಇಲ್ಲಿ ಕಡಿಮೆಯಾಗಿದ್ದುದು ಸಂತೋಷಕರವಾದ ವಿಷಯವಾಗಿರುತ್ತದೆ. ಸಂಸ್ಥಾನದ ಹೊರಗಡೆಯಲ್ಲಿರತಕ್ಕ ಸ್ಥಳಗಳಿಗೆ 1930-31 ನೆಯ ಸಾಲಿನಲ್ಲಿ ಸರಬರಾಯಿ ಮಾಡಿದ್ದ ಪ್ರಮಾಣದ ಸುಮಾರು 3 ರಷ್ಟು ಹೆಚ್ಚು ಪ್ರಮಾಣದಲ್ಲಿ ಈ "ಸೀರಂ" ರಸವನ್ನು ಪ್ರಸಕ್ತ ಸಾಲಿನಲ್ಲಿ ಆ ಸ್ಥಳಗಳಿಗೆ ಸರಬರಾಯಿ ಮಾಡಲಾಯಿತು. ಅರ್ಕಾವತಿ ನಾಲಾ ಪ್ರದೇಶದಲ್ಲಿ ಸ್ಥಾಪಿಸಿರತಕ್ಕ ವ್ಯವಸಾಯ ಕ್ಷೇತ್ರದ ಕಾರ್ಯಕಲಾಪಗಳು ಸಮರ್ಪಕವಾಗಿ ಮುಂದುವರಿಯುತ್ತಿವೆ. ಸುಮಾರು 200 ಎಕರೆಗಳಷ್ಟು ಜಮೀನಿನಲ್ಲಿ ಕಬ್ಬನ್ನು ಹಾಕಿದೆ; ಬತ್ತ ಮತ್ತು ಸರದಿಯಲ್ಲಿ ಬೆಳೆಯಬೇಕಾದ ಇತರ ಬೆಳೆಗಳ ವಿಷಯದಲ್ಲಿಯೂ ಸ್ವಲ್ಪಮಟ್ಟಿಗೆ ಕೆಲಸವನ್ನು ನಡೆಸಲಾಯಿತು. ಪ್ರಸಕ್ತ ಸಾಲಿನಲ್ಲಿ ಹೆಚ್ಚಾಳು ಫಾರಮ್ಮಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಲಾಯಿತು ಮತ್ತು ಅಲ್ಲಿರತಕ್ಕ ಯಂತ್ರಗಳ ಪೈಕಿ ಬಹುಭಾಗದವು ಈಗ ವಿದ್ಯುಚ್ಛಕ್ತಿಯ ಸಹಾಯದಿಂದ ನಡೆಯುತ್ತಿವೆ. ದಪ್ಪ ಕಬ್ಬನ್ನು ಬೆಳೆಸುವುದರ ಸಂಬಂಧದಲ್ಲಿ ಒಂದು ಏರ್ಪಾಡನ್ನೂ ಮತ್ತು ಕೆಲವು ದೇಶೀಯ ವಿಷಗಳಲ್ಲಿರುವ ಕ್ರಿಮಿನಾಶಕ ಸ್ವಭಾವದ ಪರಿಶೋಧನೆಯ ಸಂಬಂಧದಲ್ಲಿ ಒಂದು ಏರ್ಪಾಡನ್ನೂ, "ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್" ಸಂಸ್ಥೆಯವರು ದ್ರವ್ಯಸಹಾಯ ಮಾಡಿದರೆ ಇಲ್ಲಿ ನಡೆಯಿಸುವುದಾಗಿ ತಿಳಿಸಿ ಅವರಿಗೆ ಬರೆಯಲಾಗಿದೆ. ಸಶೇಷ.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧| ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

26 M. C

ಬೇಕಾಗಿದಂತ್ತೆ.

ರಾಯಿಚೂರು, ಬಳ್ಳಾರಿ, ಹೈದರಾಬಾದ್, ಹುಬ್ಬಳ್ಳಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸ ಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿರುತ್ತೆ, ಧಾರಾಳವಾದ ಕಮಿಷನ್ ಕೊಡಲಾಗುವದು.

ಯಜಮಾನ್ ಅಂಡ್ ಸನ್,

ರಬ್ಬರ್ ಸ್ಟಾಂಪ್ ಮತ್ತು ಫೋಟೋ ಬ್ಲಾಕುಗಳನ್ನು ತಯಾರಿಸುವವರು.

[2—1] ಚಿಕ್ಕಪೇಟೆ, ಬೆಂಗಳೂರು ಸಿಟಿ.

೧೯೩೨ ನೆಯ ಇಸವಿ ಅಕ್ಟೋಬರ್ ತಾ|| ೨೪ರಿಂದ ಅಕ್ಟೋಬರ್ ತಾ|| ೩೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಆಶ್ವಯುಜ ಬಹುಳ ದಶಮಿಯಿಂದ ಕಾರ್ತಿಕ ಶುದ್ಧ ಪಾಡ್ಯಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ
24	ಸೋಮ	ದಶ	56-53	ಆಶ್ಲೇ	20-0	8
25	ಮಂಗಳ	ಏಕಾ	54-11	ಮಖ	19-47	9
26	[1] ಬುಧ	ದ್ವಾದ	50-38	ಪುಬ್ಬ	18-32	10
27	[2] ಗುರು	ತ್ರಯೋ	46-8	ಉತ್ತ	16-19	11
28	[3] ಶುಕ್ರ	ಚತು	41-2	ಹಸ್ತ	13-23	12
29	[4] ಶನಿ	ಅಮಾ	35-19	ಚಿತ್ತ	9-46	13
30	[5] ಭಾನು	ಪಾಡ್ಯ	29-22	ಸ್ವಾತಿ	5-56	14

(1) ಮಳೆನಕ್ಷತ್ರ-ಸ್ವಾತಿ ೨ ನೆಯ ಪಾದ. (2) ಅಭ್ಯಂಗಸ್ನಾನಂ, (3) ನರಕಚತುರ್ದಶಿ. (4) ಕೇದಾರೇಶ್ವರವ್ರತ. (5) ಕಾಮಧೇನುಪೂಜೆ ಬಲೀಂದ್ರಪೂಜೆ, ದೀಪಾವಳಿ, ಮಳೆನಕ್ಷತ್ರ-ಸ್ವಾತಿ ೩ ನೆಯ ಪಾದ.

ಮೈಸೂರು: ವೈ. ಪಿರಜಾಕ ಯ್ಯನವರಿಂದ ಸ್ಟಾರ್ ಎಲೆಕ್ಟ್ರಿಕ್ ಪ್ರಿಂಟಿಂಗ್ ವರ್ಕ್ಸಿನಲ್ಲಿ ಮುದ್ರಿತವಾಯಿತು.

REG NO. M. 124.

ಮೈಸೂರ್ ಸ್ಟಾರ್.

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಞಸಹೃತ್ತ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಲೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆ ೧೯೩೨ ನೆಯ ಇಸವಿ ಅಕ್ಟೋಬರ್ ತಾರೀಖು ೩೧ ನೆಯ ಸೋಮವಾರ [ಸಂಚಿಕೆ ೪೪

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore.

(Sd.) S. SHA MANNA,
Secretary, Insurance Committee.

[50—17]

ಲಗ್ನಪತ್ರಿಕೆಗಳ

ಮುದ್ರಣಕ್ರಮ.

ನಮ್ಮ ಕರ್ಕ್ ಎಲೆಕ್ಟ್ರಿಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ, ಲಕ್ಷ್ಮೀವೆಂಕಟೇಶ್ವರ, ವೆಂಕಟೇಶ್ವರ ಮೊದಲಾದ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತಕಾಲದಲ್ಲಿ ಬಹು ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿಕೊಡುತ್ತೇವೆ. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರಾಫೀಸು, ಮೈಸೂರು.

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಪರಿಹಾಸ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಸಟೀಕ ಕರ್ಣಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶಬರಶಂಕರವಿಲಾಸ	೧—೦—೦	೧—೬—೦

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು

(Registerd Trade Mark)

ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಗುಣವಾಗುವ ವ್ಯಾಧಿಗಳು ಯಾವವೆಂದರೆ—ಶಿರಶೂಲೆ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಶ್ರೀ ಹೆಚ್ಚುತ್ತಾ ಈ ವ್ಯಾಧಿಗಳನ್ನು ನಿವಾರಿಸಿ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಜೊತೆಗೆ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು, ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕಟ್ಟೆ ಕಳುಹಿಸಲಾಗುವುದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦, ವಿ. ಪಿ. ೦—೯—೦.
ಡಜನ್ ೧ಕ್ಕೆ ಕ್ರಯ ರೂ. ೨—೮—೦, ವಿ. ಪಿ. ಚಾರ್ಜು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಫುಟವಾಗಿ ಬರೆಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[50—9] ಪೋ. ಬಾ. ೫೫೫, ಮದರಾಸು.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ | ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ರಜಿ] ವಜ್ರಾಂಗ ಸುಂದರಪಾಕದ. [ಸ್ವರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಡಿಲ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ಶೀಘ್ರ ವೀರ್ಯಸ್ಖಲನ, ಪ್ರಮೇಹ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವ, ನಿದ್ರೆ ಕಡಿಮೆ ಬರೋದು, ಯಾವದೇ ತರದ ರೋಗದಿಂದ ಎಲ್ಲ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೋತ್ಸಾಹ ಆಗುತ್ತದೆ. ಕಾಂತಿ, ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರವೀರ್ಯಶುದ್ಧಿಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೮೪ ಗೋಲಿಯ ಒಂದು ಡಬ್ಬಿಗೆ ೫| ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಪಥ್ಯ ಇಲ್ಲದ ಕೊಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಆದೆ, ಓದಿಕೊಳ್ಳಿರಿ.

ಸ್ತ್ರೀರೋಗ ನಿವಾರಣೀ ಚೂರ್ಣ

ಎಲ್ಲ ಬಣ್ಣದ ಸೆರಗು, ಮುಟ್ಟಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ ಗಂಟುಗಂಟು ಮುಟ್ಟಚೆಟ್ಟು ಆಗೋದು, ಮುಟ್ಟುಚೆಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋದು, ಎದೆ ಹಾರೋದು, ಉಷ್ಣತೆ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋದು, ಗರ್ಭಪಾತವಾಗೋದು, ಇವೆಲ್ಲ ಸ್ತ್ರೀರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ಗೋಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ಕ್ಷೀಣ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋದಾಗುವದಿಲ್ಲ ಮತ್ತು ಬಡತನಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಗಿ ಹತ್ತುವದೋ, ಇಂಥ ಜೇರಿ ಕಾರಣದಿಂದ ಸಂತತಿ ಇಚ್ಛೆ ಯಾರಿಗೆ ಇರಿರುತ್ತದೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. ಶರೀರದಲ್ಲಿಯೂ ಸಂಸಾರ ಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆ ವೇಳೆಗೆ ಮುಟ್ಟಚೆಟ್ಟು ಆಗುವದು ಶುರು ಇದ್ದು ಗರ್ಭಧಾರಣ ಬಂದು ಹೋಗುವದು. ಹಿಂದಿನಿಂದ ಏನುಮಾಡಿದರೂ ಶುರು ಆಗುವದಿಲ್ಲ ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರ ಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ ಒಂದು ಡಬ್ಬಿಗೆ ೬ ರೂ. ಟ. ಖ. ೮ ಆಣೆ. ಮತ್ತು ಕಡೆಗಾದ ೪ ನೇ ದಿವಸ ೮೦ ಘಂಟೆ ಬೇರಿನ ಕೂಡ ಗುಳಿಗೆ ಬೇಕು. ೫ ನೇ ದಿವಸದಿಂದ ಮುಂಜಾನೆ ೧, ಸಂಜೆಗೆ ಮಧ್ಯಾಹ್ನಕ್ಕೆ ೧, ಸಂಜೆಗೆ ರಾತ್ರಿ ಊಟವಾದ ಅನಂತರ ೧ ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ. ಕೆಲವು ನಮ್ಮ ಕಡೆಗೆ ಇರುವ ಶಾಸ್ತ್ರೀ ಔಷಧಗಳ ಲಿಸ್ಟುಗಳ ತರಿಸಿಕೊಳ್ಳಿರಿ. [50—44]

ಪತ್ತಾ ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ. ಎಂ. ಎಸ್. ಎಂ.

ಮೈಸೂರು ಸ್ಟಾರ್.

೧೯೩೨ನೇ ಇಸವಿ ಅಕ್ಟೋಬರ್ ತಾ|| ೩೧ನೆಯ ಸೋಮವಾರ.

THE THIRD R. T. C.

It is difficult for any one to hope for any thing much from the Third Round Table Conference. It is very little of the first two R. T. Cs. and in fact it is now popularly called a pocket edition of the earlier ones. From the point of view of the political powers that India is to gain it is certainly less encouraging than its predecessors. For one thing the fact that the Congress is out of it is enough to take away much of its utility and helpfulness. Without Mahatma Gandhi it is practically certain that it will not interest India anything more than what the previous ones have done. But possibly there are other matters which though not directly relating to the transfer of power from Britain to India, are yet of vital concern so far as the Federal units are concerned. The Indian States and Mysore in particular have got to settle certain problems of finance and political relasionship with the Federal Government on the one hand and the British Government on the other. The Davidson Committee's findings which the Dewan Saheb referred at considerable length are so reactionery from Mysore point of view that it will tax all the resources of our resourceful Dewan to get a proper and equitable decision at the coming conference. It may be that the British people have already got their bill on their hands and this new Conference is just a formality. But surely there is no room in any bill for archaic anachronisms. First and foremost, we hope, the Dewan Saheb will succeed in getting the Conference to efface the payments of subsidy by various Indian States to the Central Government. It is not very easy we know, but it is just that we trust that will spur our Dewan Saheb to use all his best talent to win over those who may either be opposed which element may be small or be indifferent which element may be large. We are sure that Sir Mirza will also succeed in the question of retrocession of the Civil and Military Station. As regards the setting off the postal immunity enjoyed by Mysore Durbar against any reduction of subsidy as suggested by the Davidson Committee we can fairly be sure that such a suggestion will never commend itself to any but a most calculating man. Of one thing we are certain that if there is any one who can gain the utmost advantage to Mysore at this psychological juncture it is Sir Mirza. We learn he is leaving Bangalore on the 5th morning. We have had occasion to express along with the rest of our countrymen the great contribution Sir Mirza has made to the conception and development of the Federal ideal and to the redress of the disabilities Mysore is suffering under as regards subsidy etc. We do hope that in this last and final act Sir Mirza will make a supreme effort to win as much tangible freedom for India as possible on the one hand and on the other to win for Mysore the advantages we have been striving after for so long.

ಕೆಲ ಮುಜರಾಯಿ ಸತ್ರ ವ್ಯಯಕರ್ತನ

ಸಂಸ್ಥಾನದ ಮುಜರಾಯಿ ಶಾಖಾಡಳಿತಕ್ಕೊಳಪಟ್ಟಿರುವ ಧರ್ಮಸತ್ರಗಳಲ್ಲಿ ಪ್ರಭುತ್ವದ ತಸ್ತೀಕಿನಿಂದ ನಡೆಯುತ್ತಿರುವ ಅನ್ನದಾನವು ಒಂದೇ ವರ್ಗದವರಿಗೆ ಪ್ರಯೋಜನವಾಗುತ್ತಿರುವ ಪ್ರಯುಕ್ತ ಅದು ಸಾರ್ವತ್ರಿಕವಾಗಿ ನಡೆಸಲ್ಪಡಬೇಕು ಅಥವಾ ಸಂಪೂರ್ಣವಾಗಿ ತಪ್ಪಿಸಲ್ಪಡಬೇಕು ಎಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಡುತ್ತಿದ್ದಿತು. ಅದರಮೇಲೆ ಈ ವಿಚಾರವನ್ನು ಪರ್ಯಾಲೋಚಿಸಿ ತಮ್ಮಭಿಪ್ರಾಯವನ್ನು ತಿಳಿಸುವುದಕ್ಕಾಗಿ ಮುಜರಾಯಿ ಕಮಿಷನರ ಅಧ್ಯಕ್ಷತೆಯಲ್ಲಿ ಮ|| ಗಳಾದ ಬೆಂಗಳೂರು ಡಿ|| ಡೆಪ್ಯುಟಿಕಮಿಷನರ್ ಕೆ. ವಿ. ಅನಂತರಾಮನ್ ರವರು, ಮೈಸೂರು ಡಿ|| ಡೆಪ್ಯುಟಿಕಮಿಷನರ್ ಎನ್. ಅಬ್ದುಲ್ ವಾಜಿದ್‌ರವರು, ನ್ಯಾಯವಿಧಾಯಕಸಭೆಯ ಮೆಂಬರುಗಳಾದ ಮೈಸೂರು ಅಡ್ವೊಕೇಟ್ ಎಚ್. ಸಿ. ದಾಸಪ್ಪನವರು ಮತ್ತು ಶಿವಮೊಗ್ಗ ಅಡ್ವೊಕೇಟ್ ಎಚ್. ಸಿದ್ದಯ್ಯನವರು ಇವರುಗಳಿಂದ ಕೂಡಿದ ಒಂದು ಕಮಿಟಿಯೇರ್ಪಡಿಸಲ್ಪಟ್ಟಿದ್ದಿತು. ಈ ಕಮಿಟಿಯವರು ಅನೇಕವೇಳೆ ಸಮಾವಿಷ್ಟರಾಗಿ ಅನ್ನದಾನದ ವಿಚಾರವನ್ನು ಪರ್ಯಾಲೋಚಿಸಿ ತಮ್ಮಭಿಪ್ರಾಯದೊಡನೆ ವರದಿಯನ್ನು ಪ್ರಭುತ್ವದವರಿಗೆ ನಿವೇದಿಸಿರುವರು. ಮುಜರಾಯಿ ಶಾಖೆಯವರ ದ್ರವ್ಯಸಹಾಯದಿಂದ ಸಂಸ್ಥಾನದೊಳಗೂ, ಹೊರಗೂ ಅಂದರೆ (1) ಪಶ್ಚಿಮವಾಹಿನಿಯಲ್ಲಿ ತುಲಾಮಾಸ ಸಂತರ್ಪಣೆ (2) ಬಿಸ್ಲೆಘಟ್ಟದ ಅನ್ನಸತ್ರ (3) ಶ್ರೀರಂಗಪಟ್ಟಣದ ರಂಗಸ್ವಾಮಿ ದೇವಸ್ಥಾನದಲ್ಲಿ ರಾಮಾನುಜಕೂಟ (4) ಹಿಮವದ್ಗೋಪಾಲಬೆಟ್ಟದಮೇಲಿರುವ ಸತ್ರ (5) ಕಾಶಿಯಲ್ಲಿರುವ ಸತ್ರ (6) ದಕ್ಷಿಣ ಕಾನಡಾ ಡಿ|| ಸುಬ್ರಹ್ಮಣ್ಯದಲ್ಲಿ ಬಾರಾಹಜಾರ್ ಸಂತರ್ಪಣೆ (7) ತಿರುಪತಿ ಸತ್ರ (8) ರಾಜಧಾನಿಯ ಶ್ರೀಮನ್ಮಹಾರಾಜರವರ ಸತ್ರ ಇವುಗಳಲ್ಲಿ ನಡೆಯುವ ಅನ್ನದಾನದ ವೆಚ್ಚವನ್ನು ಕಡಿಮೆಮಾಡುವ ವಿಚಾರವನ್ನು ಪರ್ಯಾಲೋಚಿಸುವುದಕ್ಕಾಗಿ 1926 ರಲ್ಲಿ ಒಂದು ಕಮಿಟಿಯು ಪ್ರಭುತ್ವದವರಿಂದೇರ್ಪಡಿಸಲ್ಪಟ್ಟಿದ್ದಿತು. ಆ ಕಮಿಟಿಯವರು ಪರ್ಯಾಲೋಚಿಸಿ, ಈ ಅನ್ನ ಸತ್ರಗಳು ಬಹಳ ದೂರದೇಶಗಳಿಂದ ಬರತಕ್ಕ ಯಾತ್ರಾರ್ಥಿಗಳ ಉಪಯೋಗಕ್ಕಾಗಿ ಬಹಳ ವರ್ಷಗಳ ಹಿಂದೆ ಸ್ಥಾಪಿತವಾಗಿ ನಡೆದುಕೊಂಡು ಬರುತ್ತಿವೆ. ಆದರೆ ಈಚೆಗೆ ರೈಲ್ವೆ ಮತ್ತು ಬಸ್ಸುಗಳ ಪ್ರಯಾಣದ ಸೌಕರ್ಯವೂ, ಹೋಟಲುಗಳ ಊಟದ ಅನುಕೂಲ್ಯವೂ ಏರ್ಪಟ್ಟಿರುವುದರಿಂದ ಸಂಸ್ಥಾನದೊಳಗಿರುವ ಅನ್ನ ಸತ್ರಗಳೆಲ್ಲ ತಪ್ಪಿಸಲ್ಪಡಬೇಕೆಂದೂ, ಕಾಶೀ ಮಹಾಕ್ಷೇತ್ರಕ್ಕೆಣೆಯಾಗಿ ದಕ್ಷಿಣದಲ್ಲಿ ಸುಪ್ರಸಿದ್ಧವಾಗಿರುವ ತಿರುಪತಿಯಲ್ಲಿ ಕಳೆದ 100 ವರ್ಷಗಳಿಂದಲೂ 20,000 ರೂ. ವೆಚ್ಚದಿಂದ ನಡೆಸಲ್ಪಡುತ್ತಿರುವ ಅನ್ನ ಸತ್ರವೂ, ಭಾರತದೇಶದಲ್ಲೆಲ್ಲ ಸುಪ್ರಸಿದ್ಧವಾದ ಕಾಶೀ ಕ್ಷೇತ್ರದಲ್ಲಿ ಹಿಂದು ರಾಜರುಗಳು ಅನ್ನ ಸತ್ರಗಳನ್ನು ಪ್ರಭುತ್ವದ ಬೊಕ್ಕಸಗಳಿಂದ ನಡೆಸುತ್ತಿರುವಂತೆ ನಮ್ಮ ಪ್ರಭುತ್ವದವರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರವರ ಮಲತಾಯಿಯವರಾದ ಚಲುವಾಜಮ್ಮಣ್ಣಿಯವರ ಶ್ರೇಯಃಪ್ರಾರ್ಥನೆಗಾಗಿ ನಡೆಸಲ್ಪಡುತ್ತಿರುವ ಅನ್ನ ಸತ್ರವೂ, 1801 ರಿಂದ ಸುಬ್ರಹ್ಮಣ್ಯದಲ್ಲಿ ಚಂಪಾಷ್ಠಿ ಜಾತ್ರೆಯ ಸಂಬಂಧವಾಗಿ ನಡೆಯುವ 12,000 ಮಂದಿ ಬ್ರಾಹ್ಮಣ ಸಂತರ್ಪಣೆಯು ತಪ್ಪಿಸಲ್ಪಡಬಾರದೆಂದೂ ಅಭಿಪ್ರಾಯಪಟ್ಟಿದ್ದರು. 1931 ರಲ್ಲಿ ಏರ್ಪಟ್ಟಿದ್ದ ಕಮಿಟಿಯವರು ಮೇಲ್ಕಂಡಂಶಗಳನ್ನೆಲ್ಲ ಪರಿಶೀಲಿಸಿ (1) ಪಶ್ಚಿಮವಾಹಿನಿಯ ತುಲಾಮಾಸ ಸಂತರ್ಪಣೆ (2) ಬಿಸ್ಲೆಘಟ್ಟದ ಅನ್ನ ಸತ್ರ (3) ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಸ್ಥಾನದಲ್ಲಿ ನಡೆಯುವ ರಾಮಾನುಜಕೂಟ (4) ಹಿಮವದ್ಗೋಪಾಲಸ್ವಾಮಿ ಬೆಟ್ಟದಲ್ಲಿ ನಡೆಯುವ ಬೈರಾಗಿ ಸದಾಬರ್ತು ಇವುಗಳು ನಿಲ್ಲಿಸಲ್ಪಡಬೇಕೆಂದು ಏಕಾಭಿಪ್ರಾಯಪಟ್ಟಿದ್ದರಮೇಲೂ, ಕಾಶಿ, ತಿರುಪತಿ ಸುಬ್ರಹ್ಮಣ್ಯ ಮತ್ತು ರಾಜಧಾನಿಯಲ್ಲಿರುವ ಅನ್ನ ಸತ್ರಗಳ ವಿಚಾರದಲ್ಲಿ ಭಿನ್ನಾಭಿಪ್ರಾಯ ಪಟ್ಟಿದ್ದರಮೇಲೂ ಪ್ರಭುತ್ವದವರು 1 ರಿಂದ 6 ರ ವರೆಗಿನ ಅನ್ನಸತ್ರಗಳು ತಪ್ಪಿಸಲ್ಪಡಬೇಕೆಂದೂ, ಕಾಶಿ, ತಿರುಪತಿ, ಸುಬ್ರಹ್ಮಣ್ಯಗಳಲ್ಲಿ ಮಾತ್ರ ನಡೆದುಕೊಂಡು ಬರಬೇಕೆಂದೂ, ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾಜರವರ ಸತ್ರದಲ್ಲಿ ನಡೆಯುವ ಅನ್ನದಾನಕ್ಕಾಗಿ ಆಗುತ್ತಿರುವ 19,450 ರೂ. ವೆಚ್ಚವು 10,750 ರೂ. ಗಿಳಿಸಲ್ಪಡಬೇಕೆಂದೂ ಅಪ್ಪಣೆ ಮಾಡಿರುತ್ತಾರೆ. ಈ ಏರ್ಪಾಟಿನಿಂದ ಒಟ್ಟು 13,384 ರೂ. ಉಳಿಯುವುದು. "ಉಚಿತವಾಗಿ ಅನ್ನಹಾಕುವುದರಿಂದ ಸಮಾಜಕ್ಕೂ ವ್ಯಕ್ತಿಗೂ ಕೆಡಕನ್ನು ಮಾಡಿದಂತಾಗುವ ಪ್ರಯುಕ್ತ ಇದನ್ನು ತಪ್ಪಿಸಿದಲ್ಲಿ ನಮ್ಮ ಸಂಸ್ಥಾನವು ಇತರರಿಗೆ ಮಾರ್ಗದರ್ಶಕವಾಗುವುದು. ಅಲ್ಲದೆ ಪುಣ್ಯ ಸಂಪಾದನೆಗಾಗಿ ಕ್ಷೇತ್ರಯಾತ್ರೆ ಮಾಡತಕ್ಕವರು ಪರರ ಧರ್ಮಾವಲಂಬಿಗಳಾಗಿರತಕ್ಕುದು ಶ್ರೇಯಸ್ಕರವಲ್ಲವಾದುದರಿಂದ ಈ ಅನ್ನದಾನವನ್ನು ಸಂಪೂರ್ಣವಾಗಿ ನಿಲ್ಲಿಸಬೇಕು" ಎಂದು ಮ|| ಅಬ್ದುಲ್ ವಾಜಿದ್‌ರವರು ಅಭಿಪ್ರಾಯಪಟ್ಟಿರುತ್ತಾರೆ. ಮ|| ಗಳಾದ ಎಚ್. ಸಿ. ದಾಸಪ್ಪನವರು ಮತ್ತು ಎಚ್. ಸಿದ್ದಯ್ಯನವರು ಕ್ಷೇತ್ರಗಳಲ್ಲಿ ಅನ್ನ ಸತ್ರಗಳನ್ನು ನಡೆಸಿಕೊಂಡು ಬರುವ ವಿಚಾರವಾಗಿ ಭಿನ್ನಾಭಿಪ್ರಾಯ ಪಟ್ಟಿರುವುದರಲ್ಲಿ ಹೀಗೆ ಹೇಳಿರುತ್ತಾರೆ:—

"ಕಾಲಬದಲಾವಣೆಯಾದಂತೆಲ್ಲ ಜನರ ಅಭಿಪ್ರಾಯವೂ ಬದಲಾಯಿಸುತ್ತಿರುವುದಲ್ಲದೆ ಹಿಂದಣ ಅಭಿಪ್ರಾಯವು ನಡೆಸಿಕೊಂಡು ಬರುವುದಿಲ್ಲ. ಹಿಂದಣ ಕಮಿಟಿಯವರ ಅಭಿಪ್ರಾಯವನ್ನು ನಾವು ಅನುಮೋದಿಸುವುದಿಲ್ಲ. ಪ್ರಭುತ್ವದ ವೆಚ್ಚದಿಂದ ಕಾಶಿ, ತಿರುಪತಿ ಮತ್ತು ಸುಬ್ರಹ್ಮಣ್ಯಗಳಲ್ಲಿ ನಡೆಸಲ್ಪಡುವ ಅನ್ನ ಸತ್ರಗಳಲ್ಲಿ ಒಂದು ಜಾತಿಯವರಿಗೆ ಅನ್ನದಾನ ಮಾಡುವುದನ್ನು ವಿವೇಕಿಗಳಾರೂ ಒಪ್ಪರು. ಹೀಗೆ ಒಂದು ಜಾತಿಯವರಿಗೆ ಅನ್ನದಾನಮಾಡುವುದರಿಂದ ಪುಣ್ಯ ಪ್ರಾಪ್ತಿಯಾಗುವುದೆಂದು ಒಂದು ಜಾತಿಯವರಿಂದ ಭಾವಿಸಲ್ಪಟ್ಟಿದ್ದರೂ, ಪ್ರಭುತ್ವದವರು ಪ್ರಜೆಗಳ ದುಡ್ಡಿನಿಂದ ಆ ಪುಣ್ಯ ಸಂಪಾದನೆ ಮಾಡತಕ್ಕುದು ಅವರ ಕರ್ತವ್ಯವಲ್ಲವು. ಈ ಸತ್ರಗಳು ಮೈಸೂರು ಸೀಮೆಯಿಂದ ಹೋಗತಕ್ಕವರ ಪ್ರಯೋಜನಾರ್ಥವಾಗಿದ್ದಲ್ಲಿ ಅದು ಸಾರ್ಥಕವಾಗುವುದಾದರೂ ಬಡ ರೈತರ ಹಣವು ಒಂದು ಪಂಗಡದವರ ಪ್ರಯೋಜನಕ್ಕಾಗಿ ವಿನಿಯೋಗವಾಗುವುದು ಧರ್ಮವಲ್ಲ. ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾಜರವರ ಸತ್ರದ ವಿನಾ ಉಳಿದ ಸತ್ರಗಳು ಬಸ್ಸುಗಳ ಪ್ರಯಾಣದ ಮತ್ತು ಹೋಟಲುಗಳ ಊಟದ ಸೌಕರ್ಯಗಳುಂಟಾಗಿರುವ ಈ ಕಾಲದಲ್ಲಿ ಪ್ರಯಾಣಿಕರಿಗೆ ಪ್ರಯೋಜನಕಾರಿಯಾಗಿಲ್ಲವಾದುದರಿಂದ ತಪ್ಪಿಸಲ್ಪಡಬೇಕೆಂದು ಹಿಂದಣ ಕಮಿಟಿಯವರು ಅಭಿಪ್ರಾಯಪಟ್ಟಿದ್ದರು. ಆ ಸತ್ರಗಳಾದರೂ ಒಂದು ಜಾತಿಯವರಿಗೆ ಮಾತ್ರವಲ್ಲದೆ ಇತರರಿಗೆ ಪ್ರಯೋಜನಕಾರಿಯಾಗಿರಲಿಲ್ಲ. ಕಾಶಿ, ತಿರುಪತಿ ಮತ್ತು ಸುಬ್ರಹ್ಮಣ್ಯ ಈ ಮೂರು ಸ್ಥಳಗಳಲ್ಲಿರತಕ್ಕ ಸತ್ರಗಳು ನಮ್ಮ ಶ್ರೀಮನ್ಮಹಾರಾಜರವರ ಪೂರ್ವಿಕರ ಪುಣ್ಯಪ್ರಾಪ್ತಿಗಾಗಿ ಅವರುಗಳ ಹೆಸರಿನ ಮೇಲೆ ಸ್ಥಾಪಿಸಲ್ಪಟ್ಟು ನಡೆಸಲ್ಪಡುತ್ತಿರುವುದರಿಂದಲೂ, ಇವುಗಳನ್ನು ತಪ್ಪಿಸುವುದರಿಂದ ಅಥವಾ ಇವುಗಳುಪಯೋಗವು ಕಡಿಮೆಮಾಡಲ್ಪಡುವುದರಿಂದ ಹಿಂದು ಪ್ರಪಂಚದಲ್ಲಿ ಮುಖ್ಯವಾಗಿ ಸಂಸ್ಥಾನದ ಹೊರಗಡೆಯಲ್ಲಿ ನಮ್ಮ ಸಂಸ್ಥಾನದ ಕೀರ್ತಿಗೆ ಕಳಂಕಪ್ರಾಪ್ತವಾಗುವುದರಿಂದಲೂ ಅವುಗಳು ನಿಲ್ಲಿಸಲ್ಪಡಕೂಡದೆಂದು ಹಿಂದಣ ಕಮಿಟಿಯವರು ಅಭಿಪ್ರಾಯಪಟ್ಟಿರುತ್ತಾರೆ. ಶ್ರೀಮನ್ಮಹಾರಾಜರವರ ಹಿರಿಯರ ಪುಣ್ಯ ಪ್ರಾಪ್ತಿಗಾಗಿ ಸ್ಥಾಪಿತವಾಗಿರುವ ಸಂಸ್ಥೆಗಳನ್ನು ತಪ್ಪಿಸತಕ್ಕದಲ್ಲವೆಂಬುದನ್ನು ನಾವೂ ಒಪ್ಪುತ್ತೇವಾದರೂ ಅವುಗಳ ಪುಣ್ಯ ಪ್ರಾಪ್ತಿಗಾಗಿಯೇ ಸಂಸ್ಥಾನದೊಳಗಿರುವ ಧರ್ಮಸಂಸ್ಥೆಗಿಂತಲೂ ಹೊರಗಿರುವುವು ಬಹಳ ಪ್ರಾಮುಖ್ಯವಲ್ಲವೆಂದು ನಾವು ಹೇಳದೆ ಇರಲಾರೆವು. ಅಲ್ಲದೆ ಇವುಗಳಿಗಾಗಿ ಆಗುತ್ತಿರುವ ವೆಚ್ಚದ ಮೊಬಲಗನ್ನು ನಿಜವಾಗಿ ಪ್ರಯೋಜನಕಾರಿಯಾಗಿಯೂ ವಿಶೇಷ ಫಲದಾಯಕವಾಗಿಯೂ ಇರತಕ್ಕ ಇತರ ಕಾರ್ಯಗಳಿಗು ಸಹ ವಿನಿಯೋಗಿಸ ಕೂಡದೆಂಬ ಅಭಿಪ್ರಾಯವನ್ನು ನಾವು ಖಂಡಿತವಾಗಿಯೂ ಅನುಮೋದಿಸುವುದಿಲ್ಲ. ಈಗ ತೆಗೆದುಹಾಕಲ್ಪಟ್ಟಿರುವ ಸಂಸ್ಥಾನದೊಳಗಿನ ಸತ್ರಗಳಿಗೆ ಸರಿಸಮಾನವಾದ ಹೊರಗಿನ ಸತ್ರಗಳನ್ನು ತೆಗೆಯಬಾರದಂತಹ ವಿಶೇಷ ಪ್ರಾಶಸ್ತ್ಯವನ್ನಾಗಲಿ ಕೀರ್ತಿಯನ್ನಾಗಲಿ ನಮ್ಮ ರಾಜ ಮನೆತನಕ್ಕುಂಟುಮಾಡಿರುವುದೇನೋ ಈಗ ನಮಗೆ ತಿಳುಹಲ್ಪಟ್ಟಿರುವ ವಿದ್ಯಮಾನಗಳಿಂದ ಕಂಡುಬರುವುದಿಲ್ಲ. ಇಷ್ಟೇ ಅಲ್ಲದೆ ಅವುಗಳನ್ನು ಸಂಸ್ಥಾನದ ಬೊಕ್ಕಸದ ಹಣದಿಂದ ನಡೆಯಿಸಿಕೊಂಡೇ ಬರಬೇಕೆಂದು ಅವುಗಳ ಸ್ಥಾಪನೋದ್ದೇಶದಲ್ಲೇನೂ ಹೇಳಲ್ಪಟ್ಟಿರುವುದಿಲ್ಲ. ಈ ಪ್ರಾಚೀನ ಸಂಸ್ಥೆಗಳಿಗಿಂತಲೂ ಉಪಯುಕ್ತವಾದವುಗಳಿಲ್ಲದಿರುವುದರಿಂದ ಈ ಅನ್ನದಾನ ಸಂಸ್ಥೆಗಳನ್ನು ನಡೆಯಿಸಿಕೊಂಡು ಬರಬೇಕೆಂಬುದು ಸಕಾರಣವಾಗಿಲ್ಲ. ಹಿಂದು ಜನತೆಯಲ್ಲಿ ಸಂಸ್ಥಾನದ ಗೌರವವು ಕಡಿಮೆಯಾಗುತ್ತದೆಂಬುದನ್ನು ನಾವೂ ಒಪ್ಪುವುದಿಲ್ಲ. ಇಂತಹ ಸಂಸ್ಥೆಗಳನ್ನು ನಡೆಯಿಸಿಕೊಂಡು ಬರತಕ್ಕ ಸಂಸ್ಥಾನಾಧಿಪತಿಗಳು ನಮ್ಮ ಸಂಸ್ಥಾನದವರನ್ನು ಹಿಯ್ಯಾಳಿಸುವುದರ ಬದಲು ಮಾರ್ಗದರ್ಶಕರನ್ನಾಗಿಟ್ಟುಕೊಳ್ಳುವರು."

ಮ|| ಅನಂತರಾಮನ್‌ರವರೂ ಕಮಿಟಿಯ ಅಧ್ಯಕ್ಷರೂ 1926 ರ ಕಮಿಟಿಯವರಭಿಪ್ರಾಯವನ್ನನುಮೋದಿಸಿ ಮೇಲ್ಕಂಡ ಮೂರು ಪರಸ್ಥಳಗಳ ಸತ್ರಗಳನ್ನು ನಡೆಯಿಸಿಕೊಂಡು ಬರಬೇಕೆಂದು ಅಭಿಪ್ರಾಯಪಟ್ಟಿರುವರು. ಮ|| ಗಳಾದ ಅಬ್ದುಲ್ ವಾಜಿದ್‌ರವರು, ಎಚ್. ಸಿ. ದಾಸಪ್ಪನವರು ಮತ್ತು ಎಚ್. ಸಿದ್ದಯ್ಯನವರು ಸೂಚಿಸಿರುವ ಪ್ರಕಾರ ಸತ್ರಗಳೆಲ್ಲ ತಪ್ಪಿಸಲ್ಪಟ್ಟಿದ್ದರೆ ಹಿಮವದ್ಗೋಪಾಲಸ್ವಾಮಿ ಬೆಟ್ಟದ ಮೇಲೆ ಬೈರಾಗಿಗಳಿಗೆ ಕೊಡಲ್ಪಡುವ ಅಕ್ಕಿಯ ಖರ್ಚು 118-8-0, ರಾಜಧಾನಿಯಲ್ಲಿರುವ ಮಹಾರಾಜರವರ ಸತ್ರದ ಬಗ್ಗೆ 19450 ರೂ., ಸುಬ್ರಹ್ಮಣ್ಯದಲ್ಲಿ ತುಲಾಮಾಸದ ಖರ್ಚು 2500 ರೂ., ಶ್ರೀರಂಗನಾಥ ದೇವಸ್ಥಾನದ ರಾಮಾನುಜಕೂಟದ ಖರ್ಚು 534 ರೂ., ಬಿಸ್ಲೆ ಘಟ್ಟದಲ್ಲಿ ಬಾರಾಹಜಾರ್ ಸಂತರ್ಪಣೆಯ ಖರ್ಚು 3404 ರೂ. ತಿರುಪತಿ ಸತ್ರದ ಖರ್ಚು 7350 ರೂ., ಕಾಶೀಸತ್ರದ ಖರ್ಚು 2000 ರೂ., ಒಟ್ಟು 35,356½ ರೂ., ಮ|| ಅನಂತರಾಮನ್ನರವರೂ, ಅಧ್ಯಕ್ಷರೂ ಸೂಚಿಸಿರುವ ಪ್ರಕಾರವಾದರೆ 15,306-8-0 ರೂ. ಮಿಗತಾಯವಾಗುತ್ತಿದ್ದಿತು. ಇವೆರಡನ್ನೂ ಬಿಟ್ಟು ಪ್ರಭುತ್ವದವರು ಗೊತ್ತುಮಾಡಿರುವ ಪ್ರಕಾರ 13,384 ರೂ. ಉಳಿಯುವುದು. ಹಾವನ್ನು ಹೊಡೆದು ಹದ್ದಿಗೆ ಹಾಕಬೇಕೆಂಬ ಕಾಲವಿದಾಗಿರದೆ ಪ್ರತಿಯೊಬ್ಬ ಮಾನವನೂ ಉಚ್ಚ ನೀಚ ಭಾವವಿಲ್ಲದೆ ಸರಿಸಮಾನನೆಂದು ಭಾವಿಸಲ್ಪಟ್ಟು ಸ್ಪೃಶ್ಯಾಸ್ಪೃಶ್ಯ ಶಬ್ದ ನಿರ್ಮೂಲ ಮಾಡಲ್ಪಡುತ್ತಿರುವ ಕಾಲವನ್ನನುಸರಿಸಿ, ಸಂಸ್ಥಾನದ ರೈತರು ಕಂದಾಯಕೌಳಿಗೆ ರೂಪವಾಗಿ ಪ್ರಭುತ್ವದ ಬೊಕ್ಕಸಕ್ಕೆ ತುಂಬುತ್ತಿರುವ ಹಣದಿಂದ ಒಂದಾನೊಂದು ಜಾತಿಯವರಿಗೆ ಅನ್ನವನ್ನಿಟ್ಟು ಅವರ ಬೊಜ್ಜನ್ನು ಬೆಳಸುವುದು ಸುಧಾರಣೆಯ ಶಿಖರವನ್ನೇರಿರುವುದೆಂದು ಖ್ಯಾತಿಗೊಂಡಿರುವ ನಮ್ಮ ಮಾದರಿ ಸಂಸ್ಥಾನದ ಕೀರ್ತಿಗೆ ಕಳಂಕವಾದುದರಿಂದ ಒಂದೇ ವರ್ಗಕ್ಕೆ ಪ್ರಯೋಜನಕಾರಿಯಾಗಿರುವ ಅನ್ನ ಸತ್ರಗಳು ತಪ್ಪಿಸಲ್ಪಡಬೇಕು ಇಲ್ಲವೆ ಎಲ್ಲ ವರ್ಣದವರಿಗೂ ಪ್ರಯೋಜನವಾಗುವಂತೆ ಮಾಡಲ್ಪಡಬೇಕೆಂದು ಮ|| ಗಳಾದ ದಾಸಪ್ಪನವರೂ ಸಿದ್ದಯ್ಯನವರೂ ವಾದಿಸಿದುದು ಅವರ ಸರ್ವ ಸಮಾನದೃಷ್ಟಿಯನ್ನೂ, ಪ್ರಸಿದ್ಧ ಕ್ಷೇತ್ರಗಳಲ್ಲಿರುವ ಸತ್ರಗಳನ್ನು ತಪ್ಪಿಸಿದಲ್ಲಿ ಶ್ರೀಮನ್ಮಹಾರಾಜರವರ ಹಿರಿಯರ ಸಂಕಲ್ಪಕ್ಕೂ ಸಂಸ್ಥಾನದ ಗೌರವಕ್ಕೂ ಕುಂದಕ ಬರುತ್ತದೆಂಬ ಹಿಂದಿನ ಕಮಿಟಿಯವರ ಅಭಿಪ್ರಾಯವನ್ನು ಇಬ್ಬರು ಮೆಂಬರುಗಳು ಅನುಮೋದಿಸಿರುವುದು ಅವರ ಸಜಾತ್ಯಭಿಮಾನವನ್ನೂ ವ್ಯಕ್ತಗೊಳಿಸುತ್ತವೆ. ಅನ್ನದಾನದಿಂದ ಕ್ಷಣಿಕ ತೃಪ್ತಿಯಲ್ಲದೆ ನಿರಂತರ ತೃಪ್ತಿಯಾಗುವುದಿಲ್ಲವಾದಪ್ರಯುಕ್ತ ಇದರಿಂದ ಜನರು ಉಂಡಾಡಭಟ್ಟರಾಗಿ ಸೋಮಾರಿಗಳಾಗುತ್ತಾರಾದಪ್ರಯುಕ್ತ ಇದನ್ನು ತಪ್ಪಿಸಿಬಿಡಬೇಕೆಂಬ ಮ|| ವಾಜಿದ್‌ರವರ ಅಭಿಪ್ರಾಯವಾದರೂ ಸಮಂಜಸವಾಗಿದೆ. ಆದರೆ ನಮ್ಮ ಪ್ರಭುತ್ವದವರು ಮಾತ್ರ ಪರಸ್ಥಳಗಳ ಸತ್ರಗಳನ್ನು ತಪ್ಪಿಸಿದಲ್ಲಿ ಧರ್ಮಕರ್ತರ ಉದ್ದೇಶಕ್ಕೂ ಕೀರ್ತಿಗೂ ಭಂಗಬರುತ್ತದೆಂದು ಹಿಂದಣ ಕಮಿಟಿಯವರು ಪಟ್ಟಿರುವ ಅಭಿಪ್ರಾಯವನ್ನು ಅಂತರಿಂಗಕವಾಗಿ ಅನುಮೋದಿಸಿ ಅವುಗಳ ಗೋಜಿಗೆ ಹೋಗಲಿಲ್ಲವೆಂದು ತೋರುತ್ತದೆ. ನಮ್ಮ ಸಂಸ್ಥಾನದ ಗೌರವ ಪ್ರತಿಷ್ಠೆಗಳಿಗೆ ಈ ಅನ್ನ ಸತ್ರಗಳೇ ಕಾರಣವಾಗಿರುವ ಪಕ್ಷದಲ್ಲಿ ಹೇರಳದ್ರವ್ಯ ವ್ಯಯದಿಂದ ಕೀರ್ತಿಪ್ರದವಾದ ಸುಧಾರಣಾಕಾರ್ಯಗಳನ್ನು ಮಾಡಬೇಕಾದ ಆವಶ್ಯಕತೇ ಇರಲಿಲ್ಲ. ಅಂತಹ ಅಭಿಪ್ರಾಯವು ನಮ್ಮ ಪ್ರಭುತ್ವದವರಿಗೆ ನಿಜವಾಗಿಯೂ ಇದ್ದ ಪಕ್ಷದಲ್ಲಿ ಅದು ಬರೀ ಭ್ರಮೆಯೆಂದು ಹೇಳಬೇಕಾಗುವುದು.

ಷೌಕತಾಲಿಯವರ ಲೇಖನಕ್ಕೆ ವೈಸ್ರಾಯರುತ್ತರ

"ಹಿಂದು ಮಹಮ್ಮದೀಯ ಸಿಕ್ಕರ ಸಮಸ್ಯೆಯನ್ನು ಪರಿಷ್ಕರಿಸಲು ನಾನು ಮಾಡುತ್ತಿರುವ ಪ್ರಯತ್ನವನ್ನು ತಮಗೆ ಆಗಾಗ್ಗೆ ತಂತಿಯ ಮೂಲಕ ತಿಳುಹಿಸುತ್ತಿದ್ದೇನೆ. ಪಂಡಿತ ಮದನ ಮೋಹನ ಮಾಲವ್ಯರವರು ಅಸ್ವಸ್ಥರಾಗಿದ್ದರೂ ಈ ವಿಚಾರದಲ್ಲಿ ಬಹಳ ಪ್ರಯಾಸಪಟ್ಟು ಕೃಷಿಮಾಡುತ್ತಿರುವರು. ಅವರ ಕೂಡ ನಾನು ಆಲೋಚಿಸಿರುವುದರಲ್ಲಿ ನಮ್ಮ ರಾಯಭಾರವು ಸಫಲವಾಗಲು ಅನುಕೂಲ ಮಾರ್ಗವನ್ನು ಕಂಡು ಹಿಡಿಯುವುದಾವಶ್ಯಕವೆಂದು ತೋರಿಬಂದಿದೆ. ಈಗ ಎಲ್ಲ ಮತದವರೂ ಅನುಮಾನವನ್ನೂ ಅಪನಂಬಿಕೆಯನ್ನೂ ಬಿಟ್ಟು ಸಿಪ್ಪಾಪಟ್ಟದಿಂದ ಈ ಸಮಸ್ಯೆಯನ್ನು ಪರಿಷ್ಕರಿಸಬೇಕಾಗಿದೆ. ಆದುದರಿಂದ ಇದೇ ತಾ|| 3 ರಲ್ಲಿ ಅಲಹಾಬಾದಿನೊಳಗೆ ಜರಗುವ ಮಹಾಸಭೆಗೆ ಮಹಾತ್ಮರು ಬರಲನುಕೂಲಿಸುವಂತೆ ಅವರನ್ನು ಬಂಧನ ವಿಮುಕ್ತರನ್ನಾಗಿಮಾಡಬೇಕೆಂದು ಮಹಮ್ಮದೀಯರುಗಳಲ್ಲಿ ಬಹು ಸಂಖ್ಯಾಕ ಪಕ್ಷದವರ ಪರವಾಗಿ ನಾನು ವೈಸ್ರಾಯರನ್ನು ಪ್ರಾರ್ಥಿಸುತ್ತೇನೆ. ಈ ಸಂದರ್ಭದಲ್ಲಿ ಹಿಂದುಗಳಿಗೂ ಸಿಕ್ಕರಿಗೂ ಮಹಾತ್ಮರಲ್ಲಿ ವಿಶೇಷ ಗೌರವವಿರುವುದರಿಂದ ಅವರು ಈ ಸಭೆಯಲ್ಲಿದ್ದರೆ ಬಹಳ ಮಟ್ಟಿಗೆ ಅನುಕೂಲವಾಗುತ್ತದೆಂದು ನಾನು ನಂಬಿರುತ್ತೇನೆ. ಈಗ ಮಹಾತ್ಮರನ್ನು ಬಿಡುಗಡೆ ಮಾಡಿದರೆ ವೈಸ್ರಾಯರು ಮಹಮ್ಮದೀಯರಿಗೆ ಮಹೋಪಕಾರ ಮಾಡಿದಂತಾಗುತ್ತದೆ. ಅದಕ್ಕೆ ನಾನು ಕೃತಜ್ಞತಾಪೂರ್ವಕವಾಗಿ ವಂದಿಸುವೆನು. ಇದರಿಂದ ಹಿಂದುಗಳಿಗೂ ಸಿಕ್ಕರಿಗೂ ಬಹಳ ಸಂತೋಷವಾಗುವುದು. ದೇಶದ ನಾನಾ ಮತದವರಲ್ಲಿ ಸಾಮರಸ್ಯವನ್ನುಂಟುಮಾಡಬೇಕೆಂಬುದು ವೈಸ್ರಾಯರ ಮತ್ತು ಬ್ರಿಟಿಷ್ ಉದ್ಯೋಗಿಗಳ ಕೋರಿಕೆಯಾಗಿರುವುದೆಂಬುದು ಇದರ ಮೂಲಕ ಪ್ರಪಂಚಕ್ಕೆಲ್ಲ ಗೋಚರವಾಗುವುದು. ಸತ್ಯಾಗ್ರಹದಿಂದ ದೇಶದಲ್ಲೆಲ್ಲ ಮನಸ್ಪರ್ಧೆಯೂ ಕಷ್ಟಪರಂಪರೆಯೂ ಪ್ರಾಪ್ತವಾಗಿರುವುದರಿಂದ ಅದನ್ನು ತೊಲಗಿಸಬೇಕು ಇಲ್ಲವೆ ತಾತ್ಕಾಲಿಕವಾಗಿ ನಿಲ್ಲಿಸಬೇಕೆಂದು ನಾನು ಮಹಾತ್ಮರನ್ನು ಪ್ರಾರ್ಥಿಸುವೆನು. ನನ್ನ ಮಾತನ್ನು ಅವರು ತಿರಸ್ಕರಿಸುವುದಿಲ್ಲವೆಂಬ ನಂಬಿಕೆಯು ನನಗಿರುತ್ತದೆ. ಅನಂತರ ಕೂಡಲೆ ಬ್ರಿಟಿಷರವರಿಗೂ ಭಾರತೀಯರಿಗೂ ಗೌರವಪ್ರದವಾದ ಸಮಾಧಾನವು ಕುದುರಿಸಲ್ಪಡಲಾಗುವುದು. ಹಾಗೆ ಸಮಾಧಾನವೇರ್ಪಟ್ಟರೆ ಭಾರತದೇಶದಲ್ಲಿ ಶಾಂತಿಯುಂಟಾಗುವುದು ಮತ್ತು ನಾವೆಲ್ಲರೂ ರಾಜ್ಯಾಂಗ ನಿರ್ಮಾಣ ವಿಚಾರದಲ್ಲಿ ಕೃಷಿಮಾಡಲು ಅವಕಾಶವಾಗುವುದು. ದೇಶದಲ್ಲಿ ಮತಕಲಹವೂ, ದ್ವೇಷವೂ ತೊಲಗುವುವು. ನಾನು ಮಹಮ್ಮದೀಯ ಸಂಘಾಭಿವೃದ್ಧಿಗೆ ಅನುಕೂಲವಾಗಿ ನಿರ್ಮಾಣ ವಿಧಾನವನ್ನು ಕೈಕೊಳ್ಳಲು ಅವಕಾಶ ದೊರಕಬೇಕೆಂಬ ಅಭಿಲಾಷೆಯಿಂದ ಈ ಸೂಚನೆಯನ್ನು ಮಾಡಿರುತ್ತೇನಲ್ಲದೆ ಬೇರೆ ಯಾವ ಅಭಿಪ್ರಾಯದಿಂದಲೂ ಅಲ್ಲ. ನಾನು ಯಾರಕೂಡಲೂ ಕಲಹ ಮಾಡಲ್ಲಿಚ್ಛಿಸುವುದಿಲ್ಲವಲ್ಲದೆ ಇತರರು ಮಾಡುವಂತೆಯೂ ಕೋರುವುದಿಲ್ಲ. ಈಗ ದೇಶದಲ್ಲಿ ಶಾಂತಿಯುಂಟಾಗಬೇಕೆಂಬುದು ಸಕಲರ ಕೋರಿಕೆಯಾಗಿರುವುದರಿಂದ ಅದಕ್ಕಾಗಿ ಪ್ರಬಲ ಪ್ರಯತ್ನಮಾಡಬೇಕಾಗಿದೆ. ನಾನು ಸವಿನಯದಿಂದ ಮಾಡಿರುವ ಈ ನನ್ನ ಪ್ರಾರ್ಥನೆಯನ್ನು ವೈಸ್ರಾಯರು ಉಚಿತ ರೀತಿಯಲ್ಲಿ ಪರ್ಯಾಲೋಚಿಸುವರೆಂದೂ, ಈ ಮಧ್ಯೆ ಕಾರಾಗೃಹದಲ್ಲಿರುವ ಮಹಾತ್ಮರೊಡನೆ ಸಂಭಾಷಿಸಲು ಅನುಮತಿಯನ್ನೀಯಬೇಕೆಂದೂ ಪ್ರಾರ್ಥಿಸುತ್ತೇನೆ. ದೇಶದಲ್ಲಿ ನಿಜವಾದ ಶಾಂತಿಯುಂಟಾಗಬೇಕಾದರೆ, ಬ್ರಿಟಿಷ್ ಇಂಡ್ಯಾದವರಿಗೂ ಸಂಸ್ಥಾನಾಧಿಪತಿಗಳಿಗೂ, ಹಿಂದುಗಳಿಗೂ ಮಹಮ್ಮದೀಯರಿಗೂ, ಇತರ ಅಲ್ಪ ಸಂಖ್ಯಾಕ ಸಂಘಗಳವರಿಗೂ ಸಮಾಧಾನವುಂಟಾಗಬೇಕು. ಈ ಭಾರತ ದೇಶಾಭಿವೃದ್ಧಿಗಾಗಿ ಸರ್ವರೂ ಕೃಷಿಮಾಡುತ್ತಿರುವರು. ಆದುದರಿಂದ ಈ ನನ್ನ ಲೇಖನಕ್ಕೆ ವೈಸ್ರಾಯರು ಉತ್ತರವನ್ನು ಕೊಡುವಂತೆ ಏರ್ಪಡಿಸಬೇಕಾಗಿ ಕೋರುತ್ತೇನೆ. ವೈಸ್ರಾಯರು ನನ್ನ ಕೋರಿಕೆಯನ್ನು ಈಡೇರಿಸಿದಲ್ಲಿ ಮಹಾತ್ಮರು ಮೊದಲಾದವರೊಡನೆ ಪ್ರಸ್ತಾವಿಸಲು ಅನುಕೂಲವಾಗುವುದು" ಎಂದು ಷೌಕತಾಲಿಯವರು ವೈಸ್ರಾಯರ ಪ್ರೈವೆಟ್ ಸೆಕ್ರೆಟರಿಯವರಿಗೆ ಬರೆದಿದ್ದರು. ಅದಕ್ಕೆ "ಗಾಂಧಿಯವರು ಸತ್ಯಾಗ್ರಹವನ್ನು ಸಂಪೂರ್ಣವಾಗಿ ವಿರಮಿಸಿದ ಹೊರತು ನಿಮ್ಮ ಕೋರಿಕೆಯನ್ನು ನೆರವೇರಿಸಲಾಗುವುದಿಲ್ಲ" ಎಂದು ಸೆಕ್ರೆಟರಿಯವರುತ್ತರವನ್ನು ಕೊಟ್ಟಿರುತ್ತಾರೆ.

ಷೌಕತಾಲಿಯವರ ಆಶಾಭಂಗ

ಮಹಾತ್ಮರನ್ನು ಬಿಟ್ಟುಕೊಡಬೇಕೆಂದು ನಾನು ವಿನಯದಿಂದ ಪ್ರಾರ್ಥಿಸಿದ್ದಾಗ್ಯೂ ವೈಸ್ರಾಯರು ಅಂಗೀಕರಿಸದಿದ್ದುದಕ್ಕಾಗಿ ನಾನು ವಿಷಾದಿಸುತ್ತೇನೆ. ಮಹಾತ್ಮರ ಸಹಕಾರವು ನನಗೆ ದೊರೆತಿದ್ದಲ್ಲಿ ಯಾರಿಗೂ ಅವಮಾನವಾಗದ ರೀತಿಯಲ್ಲಿ ಶಾಂತಿಯನ್ನುಂಟುಮಾಡಲು ನಾನು ತಕ್ಕ ಪ್ರಯತ್ನಮಾಡುತ್ತಿದ್ದೆ. ಒಳ್ಳೇ ಅಭಿಪ್ರಾಯದಿಂದ ಮಾಡಿದ ಸಮಾಧಾನವು ಶಾಶ್ವತವಾಗಿ ನಿಲ್ಲುವುದು. ವೈಸ್ರಾಯರಿಗೆ ಆಲೋಚನೆಯನ್ನು ಹೇಳತಕ್ಕವರು ವಿವೇಕದಿಂದ ವರ್ತಿಸಲಿಲ್ಲ. ಆದರೂ ನಾನು ಶಕ್ತಿವಂಚನೆಯಿಲ್ಲದೆ ಪ್ರಯತ್ನಿಸುವೆನು. ಗೌರವಪ್ರದವಾಗಿ ಸಮಾಧಾನವಾಗಬೇಕೆಂದು ದೇಶೀಯರೆಲ್ಲರೂ ಕೋರುತ್ತಾರೆ. ಇಂತಹ ಸಂದರ್ಭದಲ್ಲಿ ದೊರತನದವರು ಪ್ರಜೆಗಳ ಸಹಾನುಭೂತಿಯನ್ನು ಕಳೆದುಕೊಳ್ಳುವುದು ತಪ್ಪು. ನಾನು ಸ್ವಾರ್ಥಪರತ್ವದಿಂದ ಕೆಲಸಮಾಡುತ್ತಿಲ್ಲ. ನಾನೊಬ್ಬ ಅಲ್ಪನಾದ ಸೇವಕನು. ಅಲಹಾಬಾದಿನೊಳಗೆ ತಾ|| 3 ರಲ್ಲಿ ನಡೆಯುವ ಸಭೆಯಿಂದ ಅನುಕೂಲವಾಗುವುದೆಂದು ಕಂಡುಬರುತ್ತದೆ. ಪಂಜಾಬಿನಲ್ಲೂ ಸಿಂಧಿನಲ್ಲೂ ಹಿಂದು ಮತ್ತು ಸಿಕ್ಕರುಗಳ ಅಭಿಪ್ರಾಯದಲ್ಲಿ ಒಳ್ಳೆಯ ಬದಲಾವಣೆಯಾಗಿರುವುದು. ಅವರಿಗೆ ನಿಜವಾಗಿ ಸಂಶಯವೇನಾದರೂ ಉಂಟಾಗಿದ್ದರೆ ಮಹಮ್ಮದೀಯರು ಸದ್ಭಾವದಿಂದ ಕೆಲಸಮಾಡಿ ಅದನ್ನು ಹೋಗಲಾಡಿಸಬಲ್ಲರು. ಹೀಗೆ ಹಿಂದು ಮಹಮ್ಮದೀಯ ಸಿಕ್ಕರುಗಳೊಳಗೆ ಸಮಾಧಾನವುಂಟಾದರೆ ಅದರಿಂದ ಬ್ರಿಟಿಷರಿಗೆ ವಿಶೇಷ ಲಾಭವಾಗುವುದು. ಆದುದರಿಂದ ಈಗಲಾದರೂ ಮಹಾತ್ಮರನ್ನು ಬಿಟ್ಟುಕೊಟ್ಟರೆ ಬಹಳ ಪ್ರಯೋಜನವುಂಟು. ಸಮಾಧಾನವುಂಟಾಗಲು ಇದು ಮೊದಲನೆಯ ಕಾರ್ಯವಾದುದರಿಂದ ಬ್ರಿಟಿಷ್ ರಾಜನೀತಿಜ್ಞರು ವಿವೇಕದಿಂದ ಕೃಷಿಮಾಡಬೇಕು. ಬ್ರಿಟಿಷರು ಈ ವಿಚಾರದಲ್ಲಿ ಒಂದು ಹೆಜ್ಜೆ ಮುಂದಿಟ್ಟರೆ ಭಾರತೀಯರು ಐದು ಹೆಜ್ಜೆಗಳನ್ನು ಮುಂದಿಡುವರು. ಆದುದರಿಂದ ದೊರತನದವರು ಪ್ರತಿಷ್ಠೆಗಾಗಿ ಹಿಂಜರಿಯಕೂಡದು. ಪ್ರತಿಷ್ಠೆಯನ್ನೂ ಅಧಿಕಾರವನ್ನೂ ಕೋರುವಲ್ಲಿ ಸಮಾಧಾನವು ಬಹಳ ಸ್ವಲ್ಪವಾಗಿ ತೋರುವುದರಿಂದ ನಿಜವಾಗಿ ಬಲಾಢ್ಯರಾದವರು ಎಂದಿಗೂ ಅವನ್ನು ಲೆಕ್ಕಿಸರು. ಯಾವಾಗಲೂ ಕಲಹಕ್ಕಿಂತ ಸ್ನೇಹವೇ ಶ್ರೇಷ್ಠವು" ಎಂದು ಷೌಕತಾಲಿಯವರು ನುಡಿದಿರುತ್ತಾರೆ. ಮಹಾತ್ಮರನ್ನು ಪರಮ ಶತ್ರುಗಳನ್ನಾಗಿ ಪರಿಗಣಿಸಿ ಅವರನ್ನು ವಾಚಾಮಗೋಚರವಾಗಿ ನಿಂದಿಸುತ್ತಿದ್ದ ಷೌಕತಾಲಿಯವರು ಮಹಾತ್ಮರ ಪ್ರಾಯೋಪವೇಶ ದೀಕ್ಷಾಪ್ರಭಾವದಿಂದ ಈಗ ಪರಮಭಕ್ತರಾಗಿ ಅವರ ಕಾರ್ಯದಲ್ಲಿ ಸಹಕರಿಸಲು ಕಟಿಬದ್ಧರಾಗಿ ಪ್ರಯತ್ನಿಸುತ್ತಿರುವುದು ಶುಭಸೂಚಕವಾಗಿದೆ. ಇವರು ಮಹಮ್ಮದೀಯರಲ್ಲಿ ಪ್ರಬಲ ಪಕ್ಷದ ನಾಯಕರಾಗಿರುವುದರಿಂದ ಇವರ ಹಿಂದು ಮಹಮ್ಮದೀಯ ಸಖ್ಯಪ್ರಯತ್ನವು ಕೈಕೂಡುವುದರಲ್ಲಿ ಅಭ್ಯಂತರವಿಲ್ಲ. ಇಂತಹ ಪ್ರಯತ್ನಕ್ಕೆ ವೈಸ್ರಾಯರುತ್ತೇಜನ ಕೊಡದೆ ಆಲಿಯವರ ಆಶಾಭಂಗವನ್ನುಂಟುಮಾಡುತ್ತಿರುವುದು ಅವರ ಅದೂರ ದೃಷ್ಟಿಯನ್ನು ವ್ಯಕ್ತಪಡಿಸುತ್ತದೆ. ವಿನಾಶಕಾಲಕ್ಕೆ ವಿಪರೀತಬುದ್ಧಿ ಹುಟ್ಟುವುದೆಂಬ ಲೋಕೋಕ್ತಿಯೆಂದಿಗೂ ಸುಳ್ಳಾಗುವುದಿಲ್ಲ.

ಅಸ್ಪೃಶ್ಯತಾ ನಿವಾರಣೆಗಾಗಿ ದ್ರವ್ಯ ಸಹಾಯ

ಅಸ್ಪೃಶ್ಯತಾ ನಿವಾರಣೆ ಮಾಡುವುದಕ್ಕಾಗುಪಯೋಗಿಸಲು ಪಿಠಾಪುರದ ಮಹಾರಾಜರು ರಾವ್‌ಬಹದ್ದೂರ್ ಎಂ. ಸಿ. ರಾಜಾಯವರಿಗೆ 5000 ರೂಪಾಯಿಗಳ ಒಂದು ಚಕ್ಕನ್ನು ಕೊಟ್ಟರು. ಅಖಿಲಭಾರತ ಅಸ್ಪೃಶ್ಯತಾ ನಿರ್ಮೂಲನ ಸಂಘದ ಅಧ್ಯಕ್ಷರಾದ ಜಿ. ಡಿ. ಬಿರ್ಲಾಯವರಿಗೆ ಎಂ. ಸಿ. ರಾಜಾಯವರು ಆ ಚಕ್ಕನ್ನು ಕಳುಹಿಸಿಕೊಟ್ಟಿರುವರು. ಪಿಠಾಪುರದ ಮಹಾರಾಜರು ಸ್ವೇಚ್ಛೆಯಿಂದ ಉದಾರವಾಗಿ ದ್ರವ್ಯಸಹಾಯ ಮಾಡಿದುದಕ್ಕೋಸ್ಕರ ಆ ದೇಶದ ಹರಿಜನರ ಕೃತಜ್ಞತೆಯನ್ನು ಎಂ. ಸಿ. ರಾಜರವರು ತಿಳಿಸಿದರು.

ಹರಿಜನರು

ಮಹಾತ್ಮರ ನಿರ್ವಚನವು—ಅಸ್ಪೃಶ್ಯರಿಗೆ ಮಹಾತ್ಮರು ಹರಿಜನರೆಂದು ನಾಮಕರಣ ಮಾಡಿರುವುದರಮೇಲೆ ದಕ್ಷಿಣ ದೇಶದಲ್ಲಿ ಕೆಲರು ಅಸ್ಪೃಶ್ಯರು, ಆ ಹೆಸರು ವೈಷ್ಣವ ಮತಾವಲಂಬಿಗಳೆಂದು ಮಾತ್ರವೇ ಅರ್ಥಕೊಡುತ್ತದೆಂದು ಆಕ್ಷೇಪಿಸುತ್ತಿರುವರೆಂದು ಮದರಾಸು ಹರಿಜನ ಸಂಘದ ಕಾರ್ಯದರ್ಶಿಯವರು ಮಹಾತ್ಮರಿಗೆ ಬರೆದು ಅವರಭಿಪ್ರಾಯವನ್ನು ಕೇಳಿದ್ದರು. ಅದಕ್ಕೆ ಮಹಾತ್ಮರು "ಹರಿಜನರೆಂಬ ಹೆಸರನ್ನಿಟ್ಟಿರುವುದಕ್ಕಾಗಿ ಆಕ್ಷೇಪಿಸುವುದು ಬಹಳ ವಿಷಾದಕರವಾಗಿದೆ. ಹರಿಜನರೆಂದು ನಾಮಕರಣ ಮಾಡುವಾಗ್ಗೆ ನಾನು ವಿಷ್ಣುವನ್ನಾಗಲಿ ಶಿವನನ್ನಾಗಲಿ ನನ್ನ ಮನಸ್ಸಿನಲ್ಲಿ ಧ್ಯಾನಿಸಿರಲಿಲ್ಲವೆಂದು ನೀವು ಅವರಿಗೆ ತಿಳುಹತಕ್ಕುದು. ಆ ಹೆಸರು ದೇವರ ಸಂಬಂಧವೆಂದು ಮಾತ್ರ ನಾನು ತಿಳಿದಿರುವೆನಲ್ಲದೆ ವಿಷ್ಣು, ಶಿವ, ಬ್ರಹ್ಮ ಮೊದಲಾದ ಹೆಸರುಗಳಲ್ಲಿ ನನಗೆ ಭೇದ ಭಾವವಿಲ್ಲವು. ಎಲ್ಲ ಹೆಸರುಗಳೂ ಒಬ್ಬ ದೇವರ ನಾಮಗಳೇ" ಎಂದು ಉತ್ತರವನ್ನಿತ್ತಿರುವರು.

ಇಂಡ್ಯಾದಲ್ಲಿ ಧನಾಭಾವದಿಂದಲೇ ಆಂದೋಳನವು

"ಇಂಡ್ಯಾದಲ್ಲಿ ಮುಖ್ಯ ಆಹಾರ್ಯ ವಸ್ತುಗಳ ಬೆಲೆಯು ಬಹಳ ಕಡಿಮೆಯಾಗಿರುವುದರಿಂದ ಬ್ರಿಟಿಷರವರ ವ್ಯಾಪಾರಕ್ಕೆ ಬಹಳ ನಷ್ಟ ಉಂಟಾಗುತ್ತಿದೆ. ಈವರೆಗೆ ಇಂಡ್ಯಾ, ಚೈನಾ ದೇಶಗಳಲ್ಲಿ ಬ್ರಿಟಿಷರ ಸರಕುಗಳು ವಿಶೇಷವಾಗಿ ಮಾರಾಟವಾಗುತ್ತಿದ್ದುವು. ಕೆಲ ವರ್ಷಗಳಿಂದ ಮುಖ್ಯವಾಗಿ ಕಳೆದೆರಡು ವರ್ಷಗಳಿಂದ ಆ ದೇಶಗಳಲ್ಲಿ ಧಾನ್ಯಗಳ ಬೆಲೆಯು ಬಹಳ ಮಟ್ಟಿಗೆ ಬಿದ್ದು ಹೋಗಿರುವುದು. ಇದರಿಂದ ಇಂಡ್ಯಾದೇಶದ ರೈತರುಗಳೂ ವರ್ತಕರುಗಳೂ ಧನಹೀನರಾಗಿರುವ ಪ್ರಯುಕ್ತ ಬ್ರಿಟಿಷ್ ವಸ್ತುಗಳನ್ನು ಕೊಳ್ಳಲಾರದವರಾಗಿರುತ್ತಾರೆ. ಇಂಡ್ಯಾದಲ್ಲಿ ದಾರಿದ್ರ್ಯವು ಅತ್ಯಧಿಕವಾಗಿದೆ. ಈ ಕಾರಣದಿಂದಲೇ ರಾಜಕೀಯಾಂದೋಳನವೂ ಬಹಳ ಅಧಿಕವಾಗಿರುತ್ತದೆ. ಆದುದರಿಂದ ಬ್ರಿಟಿಷ್ ಸರಕುಗಳ ಮಾರಾಟವು ಬಹಳವಾಗಿ ಬಿದ್ದು ಹೋಗಿರುವುದು" ಎಂದು ಸರ್ ಸ್ಯಾಮ್ಯುಲ್ ಹೋರ್‌ರವರು ಚೆಲ್ಸಿ ಎಂಬಲ್ಲಿ ಉಪನ್ಯಾಸ ಮಾಡುವಾಗ್ಗೆ ಹೇಳಿದರು. ಭಾರತೀಯರ ಬಡತನವು ಬ್ರಿಟಿಷ್ ಪ್ರಭುತ್ವದವರಿಗೂ, ಅಲ್ಲಿಯ ಪ್ರಜೆಗಳಿಗೂ ಮನವರಿಕೆಯಾಗಿರುವುದು ಸಂತೋಷಪ್ರದವಾಗಿರುತ್ತದೆ, ಆದರೆ ಈಗ ಭಾರತದೇಶದಲ್ಲಿ ಸ್ವರಾಜ್ಯ ಪ್ರಾಪ್ತಿಗಾಗಿ ನಡೆಯುತ್ತಿರುವ ರಾಜಕೀಯಾಂದೋಳನವು ದಾರಿದ್ರ್ಯದೆಶೆಯಿಂದ ನಡೆಯುತ್ತಿರುವುದೆಂದು ಹೇಳಿರುವುದು ಮಾತ್ರ ವಿಷಾದಕರವಾಗಿದೆ.

ಮುಸಲೋನಿಯವರ ಭವಿಷ್ಯ

"ಫಾಸಿಸ್ಟು (ಅಂದರೆ ನಿರಂಕುಶಾಧಿಕಾರ) ಉದ್ಯಮವು ಇನ್ನು ಹತ್ತು ವರ್ಷಗಳೊಳಗೆ ಯೂರೋಪುಖಂಡದಲ್ಲೆಲ್ಲ ವ್ಯಾಪಿಸುವುದು. ಇದು ಪ್ರಜೆಗಳಿಗೆಲ್ಲ ಸಂಬಂಧಪಟ್ಟ ಉದ್ಯಮವು. ಅವಿವೇಕದಿಂದ ಇದರ ವಿಚಾರದಲ್ಲಿ ಪ್ರತಿಕೂಲರಾಗಿದ್ದು ವಿಫಲರಾದವರಿಗೆ ಫಾಸಿಸ್ಟುಗಳು ಔದಾರ್ಯವನ್ನು ತೋರಿಸುವರು. ಫಾಸಿಸ್ಟು ಉದ್ಯಮಗಳಿಗೆ ರಾಜಕೀಯವಾಗಿ ಪ್ರತಿಕೂಲರಾಗಿದ್ದು ಬಂಧನದಲ್ಲಿರುವವರನ್ನೆಲ್ಲ ಬಿಟ್ಟುಬಿಡುವೆವು. ಆದುದರಿಂದ ಇದಕ್ಕೆ ಶತ್ರುಗಳಾಗಿರುವವರು ಈ ಉದ್ಯಮವನ್ನು ಗೌರವಿಸುವವರೆಗೂ ನಾವು ಸೇನೆಯನ್ನು ತಗ್ಗಿಸುವುದಿಲ್ಲ" ಎಂದು ಇಟಲಿ ದೇಶದ ಪ್ರಧಾನ ಮಂತ್ರಿಯವರಾದ ಮುಸಲೋನಿಯವರು ಪ್ರಕಟಿಸಿರುತ್ತಾರೆ. ಪಾಶ್ಚಾತ್ಯದೇಶದಲ್ಲಿ ಈಗಾಗಲೆ ಜರ್ಮನಿಯು ನಿರಂಕುಶಾಧಿಕಾರಕ್ಕೊಳಗಾಗುತ್ತಿದೆ, ಫ್ರಾನ್ಸು ಈ ಮಾರ್ಗವನ್ನು ಅವಲಂಬಿಸುವುದಾಗಿದೆ ಮತ್ತು ಇಂಗ್ಲೆಂಡು ಪಾರ್ಲಿಮೆಂಟು ಸಂಪ್ರದಾಯವನ್ನು ಬಿಟ್ಟು ನಿರಂಕುಶಾಧಿಕಾರಾಭಿಲಾಷೆಯನ್ನು ತೋರಿಸುತ್ತಿದೆ. ಇದರಿಂದ ಮುಸಲೋನಿಯವರು ನುಡಿದಿರುವ ಭವಿಷ್ಯದಂತೆ ಪಾಶ್ಚಾತ್ಯರಾಜ್ಯಗಳೆಲ್ಲ ಕ್ರಮೇಣ ನಿರಂಕುಶಾಧಿಕಾರವನ್ನು ವಹಿಸುವುದರಲ್ಲಿ ಸಂಶಯ ತೋರುವುದಿಲ್ಲ. ಹಾಗಾದಲ್ಲಿ ಪೂರ್ವಾತ್ಯರಾಜ್ಯಗಳು ನಿರಂಕುಶಾಧಿಕಾರಕ್ಕೆ ತೌರುಮನೆಯೆಂದೂ, ಪಾಶ್ಚಾತ್ಯದೇಶಗಳು ಸ್ವಪರಿಪಾಲನಕ್ಕೂ ಸ್ವಾತಂತ್ರ್ಯಕ್ಕೂ ನಿಲಯವೆಂದೂ ಹೇಳಿಕೊಂಡು ಪೂರ್ವಾತ್ಯದೇಶಗಳು ನಿರಂಕುಶಾಧಿಕಾರಕ್ಕೆ ತೌರುಮನೆಯೆಂದು ದೂರುವುದು ತಪ್ಪಿಹೋಗುವುದು.

ಒಳದೇಶದ ವೃತ್ತಾಂತಗಳು

ಬೆಂಗಳೂರಲ್ಲಿರುವ ಸರ್ಕಾರೀ ಸರ್ವ ವಸ್ತುಪ್ರದರ್ಶನಾಲಯಕ್ಕೆ 1931-32 ರಲ್ಲಿ 2,67,757 ಮಂದಿ ಪ್ರೇಕ್ಷಕರೂ, ಅದರ ಹಿಂದಣ ವರ್ಷದಲ್ಲಿ 2,07,028 ಮಂದಿ ಪ್ರೇಕ್ಷಕರೂ ಬಂದಿದ್ದುದಾಗಿ ಅದರ ವರದಿಯಿಂದ ತಿಳಿಯಬರುತ್ತದೆ.

ವಿಜಯದಶಮಿ ಗಲಭೆಯಲ್ಲಿ ಭಾಗಿಗಳಾಗಿದ್ದವರೆಂದು ಅನುಮಾನಿಸಿ 30 ಮಂದಿಯವರೆಗೆ ಪೊಲೀಸನವರಿಂದ ಹಿಡಿಯಲ್ಪಟ್ಟು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುವರಲ್ಲದೆ, ಇತ್ತೀಚೆಗೆ ಲಾಯರು ಗುಮಾಸ್ತರು ಮತ್ತೆ ಕೆಲರು ಹಿಡಿಯಲ್ಪಟ್ಟು ಹೊಣೆಯಮೇಲೆ ಬಿಡಲ್ಪಟ್ಟಿರುತ್ತಾರೆ.

ಸಂಸ್ಥಾನದ ವಿಪನ್ನರ ಸಹಾಯಾರ್ಥವಾಗೇರ್ಪಟ್ಟಿರುವ ಫಂಡಿನ ಮೇಲ್ವಿಚಾರಣೆಯ ಬೋರ್ಡಿಗೆ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಸೆಟ್ಟಿ, ಕಟಿ., ಸಿ. ಐ. ಇ., ಯವರು, ಮ|| ಗಳಾದ ಬಿ. ಕೆ. ಗರುಡಾಚಾರ್ಯರು, ರಾವ್‌ಸಾಹೇಬ್ ಎಚ್. ಚನ್ನಯ್ಯನವರು, ರೆವಿನ್ಯೂ ಕಮಿಷನರು ಮತ್ತು ಚೀಫ್ ಸೆಕ್ರೆಟರಿಯವರು ಮೆಂಬರುಗಳಾಗಿಯೂ, ಅಂಡರ್ ಸೆಕ್ರೆಟರಿಯವರು ಬೋರ್ಡಿನ ಸೆಕ್ರೆಟರಿಯಾಗಿಯೂ ಕಳೆದ ತಾ|| 1 ರಿಂದ 2 ವರ್ಷಗಳವರೆಗೆ ನಿಯಮಿಸಲ್ಪಟ್ಟಿರುವರು.

ನಮ್ಮ ದಿವಾನ್ ಸರ್ ಮಿರ್ಜ ಎಂ. ಇಸ್ಮೈಲ್‌ರವರು ಕಳೆದ ಸೋಮವಾರ ಕೋಲಾರದಲ್ಲಿ ಸಾಹುಕಾರ್ ಚಿಕ್ಕ ಚೆನ್ನಂಜಪ್ಪಶೆಟ್ಟರ ಉದಾರ ಧರ್ಮ ಸಹಾಯದಿಂದ ನಡೆದಿರುವ ಜಲವಸತಿಯೇರ್ಪಾಟಿನಾರಂಭೋತ್ಸವವನ್ನೂ, ಕಳೆದ ಶುಕ್ರವಾರ ಹೊಸಕೋಟೆ ಮತ್ತು ಕೃಷ್ಣರಾಜಪುರ ಗ್ರಾಮಗಳಲ್ಲಿ ವಿದ್ಯುದ್ದೀಪೋತ್ಸವಾರಂಭಸಮಾರಂಭಗಳನ್ನೂ ನೆರವೇರಿಸಿ ಕಾಲೋಚಿತವೂ ಬೋಧಪರವೂ ಆದ ಭಾಷಣಗಳನ್ನು ಮಾಡಿ ಬಂದರಲ್ಲದೆ ಈ ತಾ|| 5 ರಲ್ಲಿ ಬೊಂಬಾಯಿಗೆ ಹೊರಟು ಅಲ್ಲಿಂದ ಹಡಗನ್ನು ಹತ್ತಿ ಸೀಮೆಗೆ ಪ್ರಯಾಣಮಾಡುವರು. ಇವರ ಸಂಕಲ್ಪವು ಅಪೂರ್ವವೂ ಲೋಕೋತ್ತರವೂ ಆದ ರಾಜನೀತಿಜ್ಞತೆಯಿಂದಲೂ ಬುದ್ಧಿಕೌಶಲ್ಯದಿಂದಲೂ ನೆರವೇರಿ ಸಂಸ್ಥಾನಕ್ಕೆ ಶಾಶ್ವತಪ್ರಯೋಜನವೂ ಕೀರ್ತಿಪ್ರತಿಷ್ಠೆಗಳೂ ಪ್ರಾಪ್ತವಾಗಲೆಂದು ಹಾರೈಸುತ್ತೇವೆ

ಬೆಂಗಳೂರು ಡಿ|| ಕ್ಲೋಸ್‌ಪೇಟೆ ತಾ|| ಸುಗ್ಗನಹಳ್ಳಿಯಲ್ಲಿ ಗ್ರಾಮಪಂಚಾಯತಿಯವರ ಪ್ರಯತ್ನದಿಂದೇರ್ಪಟ್ಟಿರುವ ವಿದ್ಯುದ್ದೀಪೋತ್ಸವರಾರಂಭ ಸಮಾರಂಭವು ಬೆಂಗಳೂರು ಡಿ|| ಡೆ|| ಕಮಿಷನರ್ ಮ|| ಕೆ. ವಿ. ಅನಂತರಾಮನ್‌ರವರಿಂದ ಕಳೆದ ಗುರುವಾರ ಸಾಯಂಕಾಲ ನೆರವೇರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಗ್ರಾಮಪಂಚಾಯತಿ ಅಧ್ಯಕ್ಷರಾದ ಮ|| ಎಸ್. ಎಲ್. ಮುದ್ದುಬಸವಯ್ಯನವರೋದಿ ಒಪ್ಪಿಸಿದ ವಿಜ್ಞಾಪನಾಪತ್ರಿಕೆಗೆ ಅಧ್ಯಕ್ಷರು ಉಚಿತವಾದುತ್ತರವನ್ನು ಕೊಟ್ಟು ಸಭಿಕರನ್ನು ಸಂತೋಷಪಡಿಸಿದರು. ಈ ವಿದ್ಯುದ್ದೀಪಗಳಿಂದ ಗ್ರಾಮಸ್ಥರು ತಮ್ಮೂರು ಮತ್ತು ಮನೆಗಳು ಕಂಗೊಳಿಸುವ ಹಾಗೆ ಮಾಡಿಕೊಂಡಿರುವಂತೆಯೇ ತಮ್ಮ ಜೀವನಾಧಾರವಾದ ವ್ಯವಸಾಯ ಕೈಗಾರಿಕೆಗಳನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ಕಂಗೊಳಿಸುವಂತೆ ಮಾಡುವವರಾಗಲೆಂದು ಕೋರುತ್ತೇವೆ.

ರಾಜಧಾನಿಯ ರೈಲ್ವೆಸ್ಟೇಷನ್ನಿಗೂ ಮೆಡಿಕಲ್ ಕಾಲೇಜಿಗೂ ಮಧ್ಯೆ ಇರುವ ಕಟ್ಟಡದೊಳಗೆ ದಸರಾ ಮಹೋತ್ಸವದಲ್ಲಿ ಸರ್ವವಸ್ತು ಪ್ರದರ್ಶನವು ನಡೆಯುವುದಷ್ಟೆ. ಈ ಕಟ್ಟಡವು ಇತರ ವೇಳೆಯಲ್ಲಿ ಬಿಡುವಾಗಿರುವುದರಿಂದ, ತಕ್ಕ ಸ್ಥಳವಸತಿಯಿಲ್ಲದಿರುವ ಮಂಡಿ ಮತ್ತು ಲಷ್ಕರ್ ಮೊಹಲ್ಲಾಗಳ ಮಹಮ್ಮದೀಯ ಬಾಲಿಕಾಪಾಠಶಾಲೆಗಳಿಂದ ಹಿಡಿದು ಟ್ರೇನಿಂಗ್ ಪಾಠಶಾಲೆಯವರೆಗಿನ ತರಗತಿಗಳು ವಸ್ತು ಪ್ರದರ್ಶನದಲ್ಲಿ ನಡೆಯುವಂತೆ ಪ್ರಭುತ್ವದವರಪ್ಪಣೆಯಾಗಿರುವುದರಮೇಲೆ ಈ ಬಾಲಿಕಾ ಪಾಠಶಾಲೆಗಳ ಆರಂಭೋತ್ಸವವು ಈ ದಿವಸ ಪ್ರಾಥಮಿಕ ವಿದ್ಯಾಭ್ಯಾಸದ ಡೈರೆಕ್ಟರಾದ ಮ|| ಎ. ಎಸ್. ಸುಬ್ಬರಾಯರಿಂದ ನಡೆಸಲ್ಪಟ್ಟಿತು. ಈ ಕಟ್ಟಡವನ್ನು ಮಹಮ್ಮದೀಯರ ಬಾಲಿಕಾ ಪಾಠಶಾಲೆಗಳುಪಯೋಗಕ್ಕಾಗಿ ಬಿಟ್ಟುಕೊಟ್ಟಿರುವುದರಿಂದ ಮಹಮ್ಮದೀಯರಿಗುಂಟಾಗಿರುವ ಸಂತೋಷವನ್ನು ನ್ಯಾಯವಿಧಾಯಕ ಸಭಾಮೆಂಬರಾದ ಮ|| ಮಹಮ್ಮದ್‌ಸೇಟರು ತಿಳಿಸಿ ಎಲ್ಲರ ಪರವಾಗಿ ಪ್ರಭುತ್ವದವರಿಗೆ ವಂದನೆಯನ್ನರ್ಪಿಸಿದರು.

ಪತ್ರವ್ಯವಹಾರ.

ಪತ್ರವ್ಯವಹಾರದ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು. ಸಂಪಾದಕ.

ತಪ್ಪು ತಿದ್ದುವಿಕೆ.

ತಾ|| 19-9-1932ನೆಯ ಮೈಸೂರು ಸ್ಟಾರ್ ಪತ್ರಿಕೆಯ 4ನೇ ಪುಟದ 2ನೇ ಕಾಲಂನಲ್ಲಿ ಪ್ರಕಟವಾಗಿರುವ ಜಾಹೀರು ನೋಟೀಸಿನಲ್ಲಿ ಇನಾಮು ಜಮೀನು ಎಕರೆ ೧೯-೬ ಎಂದು ತಪ್ಪು ಬಿದ್ದಿರುವುದನ್ನು ೧೯ ಎಕರೆ ೬ ಗುಂಟೆ ಎಂದು ಓದಿಕೊಳ್ಳತಕ್ಕದ್ದು. ಗೋವಿಂದದೇವಜಿ.

ಅಖಿಲಭಾರತ ಶ್ರೀಮದ್ವೀರಶೈವ ಮಹಿಳಾ ಪರಿಷತ್ ಧಾರವಾಡ.

ಮಹಿಳಾಪರಿಷತ್ತಿನಲ್ಲಿ ಆಸಕ್ತಿಯುಳ್ಳವರು ಮಹಿಳಾಪರಿಷತ್ತಿನಲ್ಲಿ ನಡೆಯಬೇಕಾದ ವಿಷಯಗಳ ಚರ್ಚೆಯ ವಿಷಯವಾಗಿ ಏನಾದರೂ ಸೂಚನೆಗಳನ್ನು ಮಾಡುವದಿದ್ದರೆ ಮಾಡಬೇಕಾಗಿ ವಿನಂತಿ ಇದೆ.

ಸೌ|| ಪಾರ್ವತೀದೇವಿ ಕೇಸರಿ ಸೆಕ್ರೆಟರಿ,
ಅಖಿಲಭಾರತ ಶ್ರೀಮದ್ವೀರಶೈವ ಮಹಿಳಾ ಪರಿಷತ್ ಧಾರವಾಡ.

ಮಹತ್ತರವಾದ ಧರ್ಮ.

ಬೆಂಗಳೂರು ಸಿಟಿಯ ಸುಪ್ರಸಿದ್ಧ ವೀರಶೈವ ಪುರಾತನ ಮನೆತನಗಳಲ್ಲಿ ಒಂದಕ್ಕೆ ಸೇರಿದವರಾದ ದಿಬ್ಬೂರು ರುದ್ರಪ್ಪನವರ ಮ|| ದಿಬ್ಬೂರು ವೀರಪ್ಪನವರು ತಮ್ಮ ವಿಶಿಷ್ಟ ಆಸ್ತಿಯನ್ನು ಒಂದು ವೀರಶೈವ ಮಹಿಳಾಶ್ರಮವನ್ನು ಮಾಡಬೇಕೆಂಬ ಮಹದುದ್ದೇಶಕ್ಕಾಗಿ ಧಾರೆಯೆರೆದಿರುತ್ತಾರೆಂಬ ಅಂಶವು ಇಲ್ಲಿನ ವೀರಶೈವ ಮಹಾಜನರಿಗೆ ತಿಳಿದು ಎಲ್ಲರೂ ತುಂಬಾ ಆನಂದಪರವಶರಾಗಿರುತ್ತಾರೆ. ಮ|| ವೀರಪ್ಪನವರ ಆಸ್ತಿಯು ಸುಮಾರು 60, 70 ಸಾವಿರ ರೂ. ಗಳ ವರೆಗೆ ಇರುತ್ತೆ. ಹಾಲಿ 300 ರೂ. ಬಾಡಿಗೆ ಬರುತ್ತಾ ಇದೆ ಎಂದು ತಿಳಿಯಬರುತ್ತದೆ. ಈ ಬಾಡಿಗೆಯಲ್ಲಿ ತಮ್ಮ ಜೀವನ ನಿರ್ವಾಹಕ್ಕೆ ತಿಂಗಳೊಂದಕ್ಕೆ 80 ರೂ. ಗಳನ್ನು ಮಾತ್ರ ಕೊಡಬೇಕೆಂದೂ, ಉಳಿದುದೆಲ್ಲವನ್ನೂ ತಮ್ಮ ಹಿರಿಯರ ಪುಣ್ಯಪ್ರಾಪ್ತಿಗಾಗಿ ವೀರಶೈವ ಮಹಿಳಾಲಯವೆಂಬ ಧರ್ಮಕಾರ್ಯಕ್ಕೆ ಉಪಯೋಗಿಸಬೇಕೆಂದೂ ಉದ್ದೇಶಪಟ್ಟು, ಆ ಬಗ್ಗೆ ತಕ್ಕ ಕಾಗದಪತ್ರಗಳನ್ನು ಬರೆದು ರಿಜಿಸ್ಟರು ಮಾಡಿಸಿರುತ್ತಾರೆ. ಈ ಆಸ್ತಿಗಳ ಆಡಳಿತಕ್ಕೂ, ಮಹಿಳಾಲಯವನ್ನು ನಿರ್ವಹಿಸುವುದಕ್ಕೂ ಈ ಊರಿನ ಕೆಲವು ಮಂದಿ ಜವಾಬ್ದಾರಿಯುಳ್ಳ ವೀರಶೈವ ದೊಡ್ಡ ಮನುಷ್ಯರುಗಳನ್ನು ಟ್ರಸ್ಟಿಗಳನ್ನಾಗಿ ನಿಯಮಿಸಿರುತ್ತಾರೆ. ಇವರಿಗೆ ಕುಟುಂಬವು, ಸದ್ಯದಲ್ಲಿ ಇಬ್ಬರು ಹೆಣ್ಣು ಮಕ್ಕಳೂ ಇರುತ್ತಾರೆ. ಈ ಮಕ್ಕಳ ಮದುವೆಗೆ ಟ್ರಸ್ಟ್ ಕಮಿಟಿಯವರು ಖರ್ಚು ಮೊಬಲಗನ್ನು ಕೊಡಬೇಕೆಂದೂ, ಮುಂದೆ ಗಂಡು ಮಕ್ಕಳಾದರೆ, ಅವರಿಗೂ ಈಗ ತನಗೆ ಕೊಡುವ ಹಾಗೆ ಮಾಹೆಯಾನಾ 80 ರೂ. ಗಳನ್ನು ಕೊಡುತ್ತಿರಬೇಕೆಂದೂ ಬರೆದಿರುತ್ತಾರೆಂದು ತಿಳಿಯಬರುತ್ತದೆ. ಮ|| ದಿಬ್ಬೂರು ವೀರಪ್ಪನವರು ಇಂಥ ಧರ್ಮಕಾರ್ಯ ಮಾಡುವರೆಂದು ಅನೇಕರು ಎಂದೂ ಕನಸಿನಲ್ಲಿಯೂ ಆಲೋಚಿಸಿರಲಿಲ್ಲ. ಆದರೆ ಅವರನ್ನು ಬಳಹೊಕ್ಕು ಅವರ ಮನೋಗತಿಯನ್ನು ತಿಳಿದಿದ್ದವರಿಗೆ ಇದು ಆಶ್ಚರ್ಯವೇನೂ ಅಲ್ಲ. ಇವರ ಮನೋಗತಿಯೇ ಧರ್ಮಾಸಕ್ತವಾದುದು; ದೈವಭಕ್ತಿಯುಕ್ತವಾದುದು. ಎಡಗೈ ಮಾಡುವ ದಾನ ಬಲಗೈಗೆ ತಿಳಿಯದಂತೆ ಕಾಯುವಂತಹರು. ಇವರು ಒಬ್ಬರ ಕಣ್ಣಿಗೆ ಬೀಳದಂತೆ ಈ ಹಿಂದೆ ಎಷ್ಟೋ ಸತ್ಕಾರ್ಯಗಳನ್ನು ಮಾಡಿರುತ್ತಾರೆ. ಮೊನ್ನೆತಾನೆ ಶ್ರೀ ಸಿದ್ಧಗಂಗಾ ಮಠಕ್ಕೆ ತಮ್ಮ ಒಂದು ಅಂಗಡಿಯನ್ನು ದಾನಮಾಡಿದರು. ಆದರೆ ಈಗ ಇವರು ಮಾಡಿರುವಂಥ ಉದಾರ ದಾನವು ವೀರಶೈವ ಸಮಾಜದಲ್ಲಿ ಈ ಮಹನೀಯರ ಮತ್ತು ಇವರ ಮನೆತನದ ಪುಣ್ಯಸ್ಮೃತಿಯನ್ನು ಆಚಂದ್ರಾರ್ಕವಾಗಿ ಉಳಿಸುವಂತಹುದಾಗಿದೆ. ವೀರಶೈವ ಮಹಿಳೆಯರ ಅಭ್ಯುದಯಕ್ಕೆ ಇಂತಹ ಮಹಿಳಾ ಸಂಸ್ಥೆಯೊಂದು ಸ್ಥಾಪಿತವಾಗುವುದು ಆವಶ್ಯಕವಾಗಿತ್ತು. ಶ್ರೀಯುತ ವೀರಪ್ಪನವರು ತಮ್ಮ ಔದಾರ್ಯದಿಂದ ಈ ಮಹತ್ಕಾರ್ಯವನ್ನು ನೆರವೇರಿಸಿ ವೀರಶೈವ ಸಮಾಜೋದ್ಧಾರಕರಾದ ಶಿರಸಂಗಿ ದೇಶಾಯಿಯವರು, ಗುಬ್ಬಿ ಕೋಟಿದಪ್ಪನವರು, ಯಾದಗಿರಿ ಶಂಕರಪ್ಪನವರು, ಸೊಲಿಬೆ ಕಾಮಪ್ಪನವರು ಈ ವೀರರ ಹಾಗೆ ಗಣ್ಯರಾಗಿರುತ್ತಾರೆ. ಇಂತಹ ಧರ್ಮಾತ್ಮರನ್ನು ತಮ್ಮ ಮಧ್ಯದಲ್ಲಿ ಉಂಟಾಗಿರುವ ಪುಣ್ಯವು ಬೆಂಗಳೂರಿನ ವೀರಶೈವರಿಗೆ ದೊರೆತಿರುತ್ತದೆ. ಈ ಮಹನೀಯರಿಗೆ ಒಂದು ಸತ್ಕಾರಕೂಟವನ್ನು ಏರ್ಪಡಿಸಲು ಬೆಂಗಳೂರಿನ ಪ್ರಮುಖ ವೀರಶೈವರು ಯೋಚಿಸಿಕೊಂಡಿರುವುದಾಗಿ ತಿಳಿಸಲು ಸಂತೋಷಿಸುತ್ತೇನೆ. ಶ್ರೀಯುತ ವೀರಪ್ಪನವರು ಪ್ರಾರಂಭಿಸಿದ ಈ ಧರ್ಮಕಾರ್ಯವು ಯಶಸ್ವಿಯಾಗಿ ನಡೆಯಲೆಂಬುದೇ ಎಲ್ಲರ ಹಾರೈಕೆಯಾಗಿದೆ. ಶ್ರೀಯುತರ ಧರ್ಮಪತ್ನಿಯವರು ಯಾದಗಿರಿ ಶಂಕರಪ್ಪನವರ ಪತ್ನಿಯವರಾದ ಶ್ರೀಮತಿ ಗಂಗಮ್ಮನವರಂತೆ ತಮ್ಮ ಪತಿಯ ಧರ್ಮಕಾರ್ಯದಲ್ಲಿ ಸಹಾಯಕರಾಗಿ ಆದರ್ಶ ಸಾಧ್ವೀಮಣಿಯೆನಿಸಿಕೊಳ್ಳುವರೆಂದು ಮತ್ತು ಈಕೆಯ ಸಹೋದರರಾದ ಈ ವರೆಗೆ ಶ್ರೀಯುತ ವೀರಪ್ಪನವರ ಆಸ್ತಿಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದ ಮ|| ಕೆಂಚಪ್ಪನವರು ತಮ್ಮ ವ್ಯವಹಾರಿಕ ಅನುಭವವನ್ನು ಕೊಟ್ಟು ಟ್ರಸ್ಟಿ ಕಮಿಟಿಯ ಕಾರ್ಯದಲ್ಲಿ ಸಹಾಯಕರಾಗುವ ಕೀರ್ತಿಯನ್ನು ಹೊಂದುವರೆಂದೂ ನಂಬಿರುತ್ತೇನೆ. ಟ್ರಸ್ಟ್ ಕಮಿಟಿಗೆ ನಿಯಮಿತರಾಗಿರುವ ದೊಡ್ಡ ಮನುಷ್ಯರುಗಳವರೂ ಶ್ರೀಯುತ ವೀರಪ್ಪನವರ ಮನಸ್ಸಿನಂತೆ ಕೂಡಲೆ ಕಾರ್ಯಾರಂಭಮಾಡಿ ಅವರ ಹೆಸರನ್ನು ಆಚಂದ್ರಾರ್ಕಸ್ಥಾಯಿಯಾಗಿ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಮಹಾಭಿಮಾನಿ.

ನೀರುನ್ನೊದಗಿಸುವ ಏರ್ಪಾಡಿನಾರಂಭೋತ್ಸವ

ದೊಡ್ಡ ಶ್ರೀಮಂತರೂ, ಕಾಫೀಪ್ಲಾಂಟರೂ, ಮೈಸೂರು ಪ್ರಜಾಪ್ರತಿನಿಧಿ ಸಭೆ, ಡಿಸ್ಟ್ರಿಕ್ಟು ಬೋರ್ಡು, ಮ್ಯುನಿಸಿಪಲ್ ಕೌನ್ಸಿಲುಗಳ ಮೆಂಬರೂ ಆದ ಶ್ರೀಮಾನ್ ವಿ. ಆರ್. ಚಿಕ್ಕಚನ್ನಂಜಪ್ಪ ಶೆಟ್ಟರು ತಮ್ಮ ನಿವಾಸಸ್ಥಳವಾದ ಕೋಲಾರ ಟವನ್ನಿನಲ್ಲಿ ಬಹು ಕಾಲದಿಂದಲೂ ಕುಡಿಯುವ ನೀರಿಗಾಗಿ ಜನರು ಪಡುತ್ತಿದ್ದ ತೊಂದರೆಯನ್ನು ನೋಡಿ ಮರುಗಿ 22½ ಸಾವಿರ ರೂಪಾಯಿಗಳನ್ನು ಸ್ವತಃ ಸಹಾಯಮಾಡಿ ಶುದ್ಧವಾದ ಕುಡಿಯುವ ನೀರು ಕೊಳಾಯಿಗಳ ಮೂಲಕ ಊರಿಗೆ ಒದಗಿಸುವಂತೆ ಮಾಡಿ ಅದರ ಆರಂಭೋತ್ಸವವನ್ನು ದಿವಾನ್ ಸರ್ ಮಿರ್ಜಾ ಯವರಿಂದ ಕಳೆದ ಮಂಗಳವಾರ ಸಾಯಂಕಾಲ ನೆರವೇರಿಸಿದರಲ್ಲದೆ ಅದೇ ರಾತ್ರಿ ತಮ್ಮ ಸುಂದರವಾದ ಗೃಹದಲ್ಲಿ ದಿವಾನರಿಗೂ ಈ ಮುಂದೆ ಹೇಳುವ ದೊಡ್ಡ ಮನುಷ್ಯರುಗಳಿಗೂ ದಿವ್ಯವಾದ ಔತಣವನ್ನು ಶ್ಲಾಘ್ಯತಮವಾಗಿ ಮಾಡಿಸಿ ತಮ್ಮ ಸೌಜನ್ಯವನ್ನೂ ಪರಹಿತಕಾರ್ಯತತ್ಪರತೆಯನ್ನೂ ಪ್ರದರ್ಶಿಸಿದರು. ಈ ಸಮಾರಂಭಗಳಿಗೂ ಮ್ಯುನಿಸಿಪಾಲಿಟಿಯವರು ನಡೆಸಿದ ಉಪಾಹಾರ ಸತ್ಕಾರಕ್ಕೂ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಮ|| ಗಳಾದ ಚೀಫ್ ಕೋರ್ಟು ಜಡ್ಜಿಯವರಾದ ಪಿ. ಮಹಾದೇವಯ್ಯನವರು, ಡೆಪ್ಯುಟಿ ಕಮಿಷನರ್ ಎಂ. ಎ. ರಾಮನಾಥನ್ ರವರು, ಕೊ-ಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರ್ ಕೆ ಎಚ್. ರಾಮಯ್ಯ, ಬ್ಯಾರಿಸ್ಟರ್ ರವರು, ಸ್ಯಾನಿಟರಿ ಕಮಿಷನರ್ ಡಾ|| ಕಸ್ತೂರಿಯವರು, ಹೆಲ್ತ್ ಡೈರೆಕ್ಟರ್ ಡಬ್ಲ್ಯು ಸಿ. ಸ್ವೀಟ್ ದಂಪತಿಗಳು, ಜರ್ಮನಿಯ ಕಮಿಷನರು, ಗಣಿಯ ಮೆಡಿಕಲ್ ಆಫೀಸರ್ ಡಾ|| ಮಂಟೀರಿಯೊಯವರು, ಬೆಂಗಳೂರು ಸಬ್ ಜಡ್ಜಿ ಎಚ್. ಕೆ. ವೀರಬಸವಯ್ಯನವರು, ದಿವಾನರ ಪ್ರೈವೇಟ್ ಸೆಕ್ರೆಟರಿ ಶಿಂಗಾರವೇಲು ಮೊದಲಿಯಾರರು, ವಾಟರ್ ವರ್ಕ್ಸ್ ಚೀಫ್ ಇಂಜನಿಯರ್ ಗರುಡಾಚಾರ್ಯರು, ಕೋಲಾರದ ಎರಡನೇ ಮೆಜಿಸ್ಟ್ರೇಟ್ ನಬಿಯವರು, ಅ|| ಇಂಜನಿಯರ್ ಸಿ. ರಾಮರಾಯರು, ಖಾನ್ ಬಹದ್ದೂರ್ ಅಬ್ಬಾಸ್ ಖಾನ್ ರವರು, ಬೆಂಗಳೂರು ಸಾಹುಕಾರ್ ಪಿ. ಎಂ. ಬಸಪ್ಪನವರು, ಕ್ಯಾಪ್ಟನ್ ವೈ. ವಿ ಅಯ್ಯನವರು, ಸಾಹುಕಾರ್ ಮುಸ್ತಫಾ ಖಾನ್ ರವರು, ಡಿ|| ಬೋರ್ಡು ಪ್ರೆಸಿಡೆಂಟ್ ವೇಮಾರೆಡ್ಡಿಯವರು, ವಾರ್ಡನ್ ರವರು, ಮುನ್ಸೀಫ್ ಸಿ ಎನ್. ಶ್ಯಾಮಯ್ಯಂಗಾರ್ಯರು, 1ನೇ ಮೆಜಿಸ್ಟ್ರೇಟ್ ಎಸ್. ರಾಮಚಂದ್ರರಾಯರು, ವಾಟರ್ ವರ್ಕ್ಸ್ ಇಂಜನೀರ್ ಶ್ರೀನಿವಾಸಯ್ಯಂಗಾರ್ಯರು, ಪ್ಲೀಡರ್ ಕೆ. ಪಟ್ಟಾಭಿರಾಮರಾಯರು, ಅಡ್ವೊಕೇಟ್ ಬಿ. ವೀರಶೆಟ್ಟರು, ಸಾಹುಕಾರ್ ಭಾಷ್ಯಕಾರ್ಲುನಾಯಿಡುರವರು, ಸಾಹುಕಾರ್ ರಾಮಾನಂದ ಶೆಟ್ಟರು, ಪೋಲೀಸ್ ಸೂಪರಿಂಟೆಂಡೆಂಟ್ ಅಬ್ದುಲ್ ರಜಾಕ್ ರವರು, ಕೋಲಾರದ ಮ್ಯುನಿಸಿಪಲ್ ಪ್ರೆಸಿಡೆಂಟರಾಗಿದ್ದ ಅ|| ಕಮಿಷನರ್ ಎ. ಸಿ ನಿರ್ವಾಣಗೌಡರು, ಮು|| ಪ್ರೆಸಿಡೆಂಟ್ ಆರ್. ಎಸ್. ಸೂರಪ್ಪನವರು, ಸಾಹುಕಾರ್ ಎಲೆ ಸಿದ್ಧಲಿಂಗ ಶೆಟ್ಟರು, ಪೆನ್ಷನ್ ಸುಬೇದಾರ್ ಕಲ್ಯಾಣಸಿಂಗ್ ರವರು, ಎಲೆಕ್ಟ್ರಿಕ್ ಸೀನಿಯರ್ ಆಪರೇಟರ್ ಟಿ. ವಿ. ವೀರಪ್ಪನವರು, ಸಾಹುಕಾರ್ ಡಿ. ಎನ್. ಚನ್ನಬಸಪ್ಪನವರು, ಡಿ|| ಎಕ್ಸೈಸ್ ಆಫೀಸರ್ ಚಿಕ್ಕಣ್ಣಶೆಟ್ಟರು, ಡಿ|| ಮೆಡಿಕಲ್ ಆಫೀಸರ್ ಸಿ. ಆರ್. ರಾಜಗೋಪಾಲ್ ರವರು ಇವರುಗಳಲ್ಲದೆ ಇನ್ನೂ ಸ್ಥಳ ಪರಸ್ಥಳಗಳ ನೂರಾರು ದೊಡ್ಡ ಮನುಷ್ಯರುಗಳು ಆಹ್ವಾನಿಸಲ್ಪಟ್ಟಿದ್ದರು. ಅತಿಥಿಗಳೆಲ್ಲರೂ ಸಾಹುಕಾರ್ ಚಿಕ್ಕ ಚನ್ನಂಜಪ್ಪ ಶೆಟ್ಟರ ಪರೋಪಕಾರ ಬುದ್ಧಿಯನ್ನೂ, ಅತಿಥಿ ಸತ್ಕಾರಾತಿಶಯವನ್ನೂ ಕೊಂಡಾಡಿ ಅವರ ಶ್ರೇಯಸ್ಸನ್ನು ಬಯಸಿದರು. ಈ ಸಮಾರಂಭದಲ್ಲಿ ದಿವಾನರಿಗೊಪ್ಪಿಸಲ್ಪಟ್ಟ ವಿಜ್ಞಾಪನಾಪತ್ರಿಕೆಗಳನ್ನೂ ಅವುಗಳಿಗೆ ಅವರಿತ್ತ ಉತ್ತರವನ್ನೂ ಈ ಕೆಳಗೆ ಕೊಟ್ಟಿರುತ್ತೇನೆ.

ಪ್ರತ್ಯಕ್ಷದರ್ಶಿ.

ಮೈಸೂರು ಸಂಸ್ಥಾನದ ಮಂತ್ರಿವರ್ಯರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್, ಸಿ.ಐ.ಇ., ಓ.ಬಿ.ಇ. ಅವರ ದಿವ್ಯಸನ್ನಿಧಿಯಲ್ಲಿ ಕೋಲಾರ ನಿವಾಸಿಯೂ ಮತ್ತು ಪೌರಸಭಾ ಸದಸ್ಯನೂ ಆದ ವಿ. ಆರ್. ಚಿಕ್ಕಚನ್ನಂಜಪ್ಪಶೆಟ್ಟಿಯು ಸುಖಾಗಮನವನ್ನು ಬಯಸಿ ವಿನಯಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುವುದೇನೆಂದರೆ.

ಮಹಾಸ್ವಾಮಿ, ನಮ್ಮ ಸಂಸ್ಥಾನದ ಸಚಿವ ಪದವಿಯನ್ನು ತಾವು ವಹಿಸಿ ಈಗ್ಗೆ ಸುಮಾರು 6 ವರ್ಷಗಳಾಗಿರಬಹುದು. ಈ ಕಾಲದಲ್ಲಿ ತಾವು ತಮ್ಮ ಅಮೋಘ ಬುದ್ಧಿಶಕ್ತಿ, ಸಾಹಸಗಳಿಂದ ಈ ನಮ್ಮ ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ಮಾಡಿರುತ್ತೀರಿ. ಈ ನಮ್ಮ ಹೆಮ್ಮೆಯನ್ನು ಮೇಲಿಂದ ಮೇಲೆ ಹೇಳಿಕೊಳ್ಳಲು ನನಗೆ ಅವಕಾಶ ದೊರಕಿದುದಕ್ಕಾಗಿ ನನ್ನ ಸುಯೋಗವನ್ನು ಕುರಿತು ಆನಂದಪಡುತ್ತೇನೆ. ಅದೇ ರೀತಿಯಲ್ಲಿ ಮಹಾಸ್ವಾಮಿಯವರ ಸಾನ್ನಿಧ್ಯದಲ್ಲಿ ನಿಂತು, ನಮ್ಮನ್ನಾಳುವ ಶ್ರೀಮನ್ಮಹಾರಾಜರವರಲ್ಲಿ ನನಗಿರುವ ರಾಜಭಕ್ತಿ ವಿಶ್ವಾಸವನ್ನು ಅವರಿಗೆ ಸೂಚಿಸಿ ಆ ಮೂಲಕ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು ಬಿನ್ನೈಸಿಕೊಳ್ಳುತ್ತೇನೆ.

ಈ ನಮ್ಮ ಪುರನಿವಾಸಿಗಳಿಗೆ ನೀರಿನ ವಸತಿ ವಿಚಾರದಲ್ಲಿ ಇದ್ದ ಕೊರತೆಯು ಹಲವು ಕಾಲದಿಂದಲೂ ನನ್ನ ಮನಸ್ಸಿಗೆ ಕ್ಲೇಶವನ್ನುಂಟುಮಾಡಿತು. ಈ ಬಗ್ಗೆ ಸಾಧನೋಪಾಯಗಳನ್ನು ಹಲವು ಬಾರಿ ಯೋಚಿಸಿಯೂ ಇದ್ದೆನು. ಆದರೆ ಮಹಾಸ್ವಾಮಿಯವರ ದಿವ್ಯ ಪ್ರಭಾವದಿಂದ ಪ್ರೇರೇಪಿತನಾಗಿ ಆ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ ಈ ಧರ್ಮ ಕಾರ್ಯವನ್ನು ಕೈಗೊಂಡೆನು. ಆದರೆ ನನ್ನ ಅಲ್ಪ ದ್ರವ್ಯಸಹಾಯವನ್ನು ಅಪರಿಮಿತವಾಗಿ ಗಣಿಸಿ ಶ್ರೀಮನ್ಮಹಾರಾಜಾ ಸರ್ಕಾರದವರು ಉದಾರಾಶ್ರಯವನ್ನು ಕೊಟ್ಟು ನನ್ನನ್ನು ಕೃತಕೃತ್ಯನನ್ನಾಗಿ ಮಾಡಿರುವುದಲ್ಲದೆ ಈ ಪುರಜನರ ಕೃತಜ್ಞತೆಗೆ ಸಹ ಪಾತ್ರರಾಗಿರುತ್ತಾರೆ.

ಈ ಧರ್ಮ ಸಂಸ್ಥೆಯನ್ನು ಶಾಶ್ವತಗೊಳಿಸಲು ಪ್ರಾರಂಭೋತ್ಸವವನ್ನು ನೆರವೇರಿಸುವುದಕ್ಕಾಗಿ ದಯಮಾಡಿಸಿರುವ ತಮಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ, ಮತ್ತು ಈ ಧರ್ಮ ಕಾರ್ಯನಿರ್ವಾಹಕ ವಿಚಾರದಲ್ಲಿ ನನಗೆ ಆಗಾಗ್ಗೆ ಸಲಹೆ, ಉತ್ತೇಜನ ಮತ್ತು ಧೈರ್ಯವನ್ನು ಕೊಟ್ಟ ಮಹನೀಯರಾದ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರಾದ ಮ|| ರಾ|| ಶ್ರೀ ಎ. ವಿ. ರಾಮನಾಥನ್ ರವರಿಗೂ, ನಮ್ಮ ಪೌರಸಭೆಯ ಮಾಜಿ ಅಧ್ಯಕ್ಷರಾದ ಮ|| ರಾ|| ಶ್ರೀ ಎ. ಸಿ. ನಿರ್ವಾಣೇಗೌಡರವರಿಗೂ, ಪೌರಸಭೆಯವರಿಗೂ ಮತ್ತು ಇಂಜನಿಯರಿಂಗ್ ಇಲಾಖೆಯವರಿಗೂ ಅನೇಕಾನೇಕ ವಂದನೆಗಳನ್ನು ಅರ್ಪಿಸುತ್ತೇನೆ.

ತಾವು ಪೌರಸಭೆಯ ಪ್ರಾರ್ಥನೆಯಂತೆ ಈ ಶುಭಕಾರ್ಯವನ್ನು ನೆರವೇರಿಸಲು ಇಲ್ಲಿಗೆ ದಯಮಾಡಿಸಿ ಆ ಮೂಲಕ ನನ್ನನ್ನು ಕೃತಾರ್ಥನನ್ನಾಗಿ ಮಾಡಿದುದಕ್ಕಾಗಿ ಮತ್ತೊಮ್ಮೆ ಕೃತಜ್ಞತಾಪೂರ್ವಕವಾಗಿ ವಂದನೆಗಳನ್ನು ಅರ್ಪಿಸುತ್ತೇನೆ.

ನಮ್ಮನ್ನಾಳುವ ಮಹಾಸ್ವಾಮಿಯವರಿಗೂ. ರಾಜವರ್ಗದವರಿಗೂ, ಮಂತ್ರಿವರ್ಯರಾದ ತಮಗೂ, ತಮ್ಮ ಕುಟುಂಬವರ್ಗಕ್ಕೂ ಆಯುರಾರೋಗ್ಯ ಭಾಗ್ಯಗಳನ್ನು ಕೊಟ್ಟು ಕಾಪಾಡಬೇಕೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ, ಮಹಾಸ್ವಾಮಿ.

ಇತಿ,
ತಮ್ಮ ಅತ್ಯಂತ ವಿಧೇಯನಾದ,
ವಿ. ಆರ್. ಚಿಕ್ಕಚನ್ನಂಜಪ್ಪಶೆಟ್ಟಿ.

ಮೈಸೂರು ಸಂಸ್ಥಾನದ ಮಂತ್ರಿವರ್ಯರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್, ಸಿ.ಐ.ಇ., ಓ.ಬಿ.ಇ. ಅವರ ದಿವ್ಯಸನ್ನಿಧಿಯಲ್ಲಿ ಕೋಲಾರದ ಪೌರ ಕಾರ್ಯನಿರ್ವಾಹಕ ಸಭಾ ಸದಸ್ಯರಾದ ನಮ್ಮಗಳ ಅತುಲ ಭಕ್ತಿ ಕೃತಜ್ಞತಾ ಮತ್ತು ಪ್ರಾರ್ಥನಾ ಸಮ್ಮಿಳಿತ ವಂದನಾಪೂರ್ವಕ ಅಭಿವಂದನ ಪತ್ರವನ್ನು ಆನಂದದಿಂದರ್ಪಿಸಲು ದಿವ್ಯ ಸನ್ನಿಧಿಯಲ್ಲಿ ಪ್ರಾರ್ಥಿಸುವೆವು.

ಮಹಾಸ್ವಾಮಿ, ರಾಜ್ಯಸೂತ್ರದ ಕಾರ್ಯ ಗೌರವಗಳು ಅಪಾರವಾಗಿಯೂ ಪ್ರಾಮುಖ್ಯವಾಗಿಯೂ ಇದ್ದಾಗ್ಯೂ ಲೆಕ್ಕಿಸದೆ ಕ್ಷುಲ್ಲಕರಾದ ಪ್ರಜೆಗಳ ಅಲ್ಪವಾದ ಈ ಆಹ್ವಾನವನ್ನು ಮಹತ್ತಾಗಿ ಪರಿಗಣಿಸಿ, ಈ ದಿವಸದ ಕಾರ್ಯ ಗೌರವದಲ್ಲಿ ಅಗ್ರಸ್ಥಾನವನ್ನು ಅಂತಃಕರಣದಿಂದ ಸ್ವೀಕರಿಸಿ ಪ್ರಜಾಹಿತ ಕಾರ್ಯವನ್ನು ನೆರವೇರಿಸಲು, ಇಲ್ಲಿಯವರೆಗೂ ದಯಮಾಡಿಸಿದುದಕ್ಕಾಗಿ ನಮ್ಮೆಲ್ಲರ ಕೃತಜ್ಞತಾಪೂರ್ವಕ ಅಭಿವಂದನೆಗಳನ್ನು ಅರ್ಪಿಸುವೆವು.

ಮಹನೀಯರು ಅವ್ಯಾಜ ಕರುಣಾಮೂರ್ತಿಗಳೆಂಬುದಕ್ಕೆ ಸ್ವಾಮಿಯವರ ಉದಾರ ವರ್ತನವೇ ಸಾಕ್ಷೀಭೂತವಾಗಿದೆ. ಅಲ್ಲದೆ ಮಹಾತ್ಮರು ಪರಹಿತಕ್ಕಾಗಿಯೇ ಜನ್ಮಗ್ರಹಣಮಾಡುವರು. ಅವರ ಜೀವನ ವ್ಯಾಪಾರವೇ ಪ್ರಜಾಹಿತ ಚಿಂತನೆ ಎಂಬುದಕ್ಕೆ ತಮ್ಮ ಘನವಾದ ಉದಾರ ಕೈಂಕರ್ಯವೇ ಆದರ್ಶನೀಯವಾಗಿದೆ. ಸ್ವಸುಖವನ್ನು ಪರಿಗಣಿಸದೆ, ಕಷ್ಟವನ್ನು ಲೆಕ್ಕಿಸದೆ, ದೇಶದ ಮತ್ತು ಸ್ವಾಮಿಹಿತದ ಸಲುವಾಗಿ ಪಾಶ್ಚಾತ್ಯ ದೇಶಗಳಿಗೆ ಪ್ರಯಾಣ ಬೆಳಸಿ ಚಕ್ರಾಧಿಪತಿಗಳ ಆಸ್ಥಾನದಲ್ಲೂ, ಚಕ್ರಗೋಷ್ಠಿಗಳಿರದಲ್ಲೂ ಭಾಗಿಗಳಾಗಿ, ದೇಶ ಹಿತಕ್ಕಾಗಿ ತಾವು ದಿವ್ಯ ಸಲಹೆಗಳನ್ನಿತ್ತು, ಸರ್ವ ವಿಧದಲ್ಲೂ ದೇಶಕ್ಕೆ ಮಂಗಳವನ್ನುಂಟುಮಾಡಿದುದಕ್ಕಾಗಿ ತಮ್ಮಲ್ಲಿ ಪ್ರಜೆಗಳಾದ ನಮ್ಮೆಲ್ಲರ ಅಭಿವಂದನೆಗಳನ್ನು ಅರ್ಪಿಸುವೆವು. ಮುಂದೆ ನಡೆಯಲಿಕ್ಕಿರುವ ತೃತೀಯ ಚಕ್ರಗೋಷ್ಠಿಯಲ್ಲೂ ದೇಶದ ಹಿತಕ್ಕಾಗಿ ಮಂಗಳಕರವಾದ ಸಲಹೆಗಳನ್ನು ಕೊಡಲು ಮತ್ತು ಸ್ವಾಮಿಯವರ ಸದುದ್ದೇಶವು ಸಫಲವಾಗಲು ಭಗವಂತನು ಪೂರ್ಣಾನುಗ್ರಹವನ್ನುಂಟುಮಾಡಲೆಂದು ಪ್ರಾರ್ಥಿಸುವೆವು.

ಈ ನಗರಿಯಲ್ಲಿ ಪ್ರಜಾನುಕೂಲಕ್ಕಾಗಿ ಪೌರಕಾರ್ಯ ಸಭೆಗೆ ನೀರಿನ "ಸ್ಯಾಂಡ್ ಫಿಲ್ಟರ್" ಕಾರ್ಯಕ್ಕಾಗಿ ಆಳುವ ಮಹಾಸ್ವಾಮಿಯವರ ಧರ್ಮ ಸರ್ಕಾರದಿಂದ ದಯಪಾಲಿಸಿದ ಸಾಲದ ಹಣವನ್ನು ಉದಾರಗುಣದಿಂದ ಮನ್ನಿಸಿದುದಕ್ಕಾಗಿ ಕೃತಜ್ಞತಾಪೂರ್ವಕವಾದ ಅಭಿವಂದನೆಗಳನ್ನು ಸಮರ್ಪಿಸುವೆವು.

ಈ ದಿನದ ತಮ್ಮ ಸುಯೋಗದ ಆಗಮನದ ಕಾರ್ಯವು, ವಿದ್ಯುಚ್ಛಕ್ತಿಯ ಜಲಯಂತ್ರದ ಪ್ರಥಮ ಪ್ರಾರಂಭೋತ್ಸವವೆಂಬುದನ್ನು ಹೇಳಬೇಕಾದುದಿಲ್ಲ. ಈ ಮಹತ್ಕಾರ್ಯವು ಇಷ್ಟು ಶೀಘ್ರದಲ್ಲೇ ಪೂರೈಸಿ ನಗರಿಯ ಪ್ರಜೆಗಳಿಗೆ ನಿರ್ಮಲೋದಕವು ದೊರೆಯುವಂತಾದುದು ತಮ್ಮ ಮತ್ತು ಆಳುವ ಮಹಾಸ್ವಾಮಿಯವರ ಧರ್ಮ ಸರ್ಕಾರದ ಉದಾರ ಆಶ್ರಯದಿಂದಲ್ಲದೆ ಮತ್ತೆ ಬೇರೆಯಲ್ಲ.

ಅಮೇರಿಕೆಯ ಎಣ್ಣೆ ಕಂಪೆನಿ (ಮದ್ರಾಸು)

[4—2]

ನಮ್ಮ ಕಂಪೆನಿಯ ಸೀಮೆಯೆಣ್ಣೆ, ಪೆಟ್ರೋಲು, ಲೂಬ್ರಿಕೇಟಿಂಗ್ ಎಣ್ಣೆ ಚರಬಿ ವಗೈರೆ ಕಲ್ಲರಗು ಪೆಟ್ರೋಲಿಗೆ ಸಂಬಂಧಪಟ್ಟ ಪದಾರ್ಥಗಳನ್ನು ಮಾರಲು ಬೆಂಗಳೂರು ಸಿಟಿ ಅವಿನ್ಯೂ ರೋಡಿನಲ್ಲಿರುವ ಮ|| ಪಿ. ವಿ. ಭದ್ರಪ್ಪನವರನ್ನು ಮೈಸೂರು ಮತ್ತು ಕೊಡಗು ಸೀಮೆಗಳಿಗೆ ಒಟ್ಟು ಏಜಂಟರನ್ನಾಗಿ ನಿಯಮಿಸಿದೆ. ಸಬ್ ಏಜಂಟರಾಗಿರಲಿಷ್ಟಪಡುವವರು ಬೆಂಗಳೂರು ಸಿಟಿ ಶ್ರೀ ನರಸಿಂಹರಾಜ ರೋಡಿನಲ್ಲಿರುವ 170-171 ನೇ ನಂಬರಿನ ನಮ್ಮ ಆಫೀಸಿಗೆ ಬರೆದುಕೊಳ್ಳತಕ್ಕದ್ದು.

ದಿ ಅಮೆರಿಕನ್ ಆಯಿಲ್ ಕಂಪೆನಿ.

ಇದೇ ವಿಚಾರದಲ್ಲಿ ಪ್ರಜಾಹಿತಕ್ಕಾಗಿ ತಮ್ಮ ಉದಾರ ಗುಣದಿಂದ ೨೨½ ಸಾವಿರ ರೂ. ಧರ್ಮಾರ್ಥವಾಗಿ ವಿನಿಯೋಗಿಸಿದ ಪ್ರಜಾಬಂಧುಗಳೂ, ದಾತೃಗಳೂ, ಪರಮ ಕರುಣಾಳುಗಳೂ ಆದ ಸಾಹುಕಾರ್ ಮ|| ವಿ. ಆರ್. ಚಿಕ್ಕ ಚೆನ್ನನಂಜಪ್ಪಶೆಟ್ಟರವರಿಗೆ ಈ ನಗರಿಯ ಪ್ರಜೆಗಳೆಲ್ಲರೂ ಚಿರ ಋಣಿಗಳಾಗಿರುವರೆಂಬ ಅಂಶವನ್ನು ಹೇಳಬೇಕಾದುದಿಲ್ಲ. ಭಗವಂತನು ಇವರಿಗೂ, ಇವರ ಕುಟುಂಬವರ್ಗದವರಿಗೂ ಸದಾ ಪರಮಮಂಗಳವನ್ನೀಯಲೆಂದು ಪ್ರಾರ್ಥಿಸುವೆವು.

ಸ್ಯಾನಿಟೇಷನ್ ವಗೈರೆ ವಿಚಾರಗಳಲ್ಲಿ ಬಹಳ ಹೀನಸ್ಥಿತಿಯಲ್ಲಿದ್ದ ಈ ನಮ್ಮ ಕೋಲಾರವು ಆಳುವ ಮಹಾಸ್ವಾಮಿಯವರ ಧರ್ಮ ಸರ್ಕಾರದ ಸಮಯೋಚಿತ ಸಲಹೆ ಮತ್ತು ಸಹಾಯಗಳಿಂದಲೂ, ನಮ್ಮ ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರ್ ಮ|| ಎ. ವಿ. ರಾಮನಾಥನ್ ಸಾಹೇಬರವರ ಮೂಲಕ ಸಾದರಾಗುತ್ತಿದ್ದ ಉತ್ತಮ ಸಲಹೆಗಳಿಂದಲೂ, ನಮ್ಮ ಪೌರಸಭೆಯ ಮಾಜಿ ಅಧ್ಯಕ್ಷರಾದ ಮ|| ಎ. ಸಿ. ನಿರ್ವಾಣೇಗೌಡರವರಿಂದಲೂ ಸ್ಯಾನಿಟೇಷನ್, ಎಕ್ಸ್ಟೆನ್ಷನ್, ವಿದ್ಯುಚ್ಛಕ್ತಿಯ ದೀಪಗಳು ಮುಂತಾದುವುಗಳಿಂದ ಮೊದಲಿಗಿಂತಲೂ ಉತ್ತಮ ಸ್ಥಿತಿಗೆ ಬಂದಿರುವುದೆಂಬ ವಿಚಾರ ಸಂತೋಷದಿಂದ ಸೂಚಿಸುವೆವು. ಈಗ ಒದಗಿರುವ ಆರ್ಥಿಕ ದುಸ್ಥಿತಿಯು ದೈವಸಹಾಯದಿಂದಲೂ, ಧರ್ಮಸರ್ಕಾರದ ಸಹಾಯದಿಂದಲೂ ಪರಿಹಾರವಾಗಿ ಈ ನಗರಿಯು ಇತೋಪ್ಯತಿಶಯವಾಗಿ ವೃದ್ಧಿಹೊಂದುವುದೆಂದು ಧಾರಾಳವಾಗಿ ನಂಬಿರುವೆವು.

ವರವನ್ನು ಕೊಡಲು ಅಮೃತಹಸ್ತದಿಂದ ದೈವವೇ ಪ್ರತ್ಯಕ್ಷವಾಗಿ ನಿಂತಿರಲು ವರವನ್ನು ಬೇಡದಿರುವುದು ನ್ಯಾಯವಲ್ಲ. ಹಾಗೆಯೇ ನಮ್ಮ ಈ ಸ್ವಾಮಿಯವರು ಈ ಸುದಿನ ನಮ್ಮೆದುರಿಗೇ ಅಭಯಹಸ್ತವನ್ನು ನೀಡಿರುವಲ್ಲಿ ನಮ್ಮ ಇಷ್ಟಾರ್ಥವನ್ನು ಬೇಡಲೇ ಬೇಕು; ಪ್ರಕೃತದಲ್ಲಿ ವ್ಯಾಪಾರಾಭಿವೃದ್ಧಿ ಸಹಾನುಭೂತಿಗಳು ಅಧೋಗತಿಯಲ್ಲಿರುವುದರಿಂದ ನಮ್ಮ ಪೌರಸಭೆಯವರ ವರಮಾನವು ಬಹಳ ಮಟ್ಟಿಗೆ ಕಮ್ಮಿಯಾಗಿರುತ್ತೆ. ಆಳುವ ಮಹಾಸ್ವಾಮಿಯವರ ಧರ್ಮಸರ್ಕಾರದವರು ಚನ್ನಪಟ್ಟಣದಲ್ಲಿ ಹಾಕಲ್ಪಟ್ಟ ವಿದ್ಯುಚ್ಛಕ್ತಿಯ ದೀಪಗಳಿಗಾಗಿ ಇಲಾಖೆಗೆ ಕೊಡಬೇಕಾಗಿ ಬಂದ ಬಡ್ಡಿಯನ್ನು ವಜಾ ಮಾಡಿದಂತೆಯೇ ಈ ನಗರಿಯಲ್ಲೂ ನಾವು ಕೊಡಬೇಕಾಗಿರುವ ಭರವಸೆಕೊಟ್ಟಿರುವ ಬಡ್ಡಿಯ ಮೊಬಲಗನ್ನು ದಯಮಾಡಿ ವಜಾ ಮಾಡಿಸಬೇಕೆಂದು ವಿನಯಪೂರ್ವಕ ಪ್ರಾರ್ಥಿಸುವೆವು.

ಈ ಊರಿನಲ್ಲಿ ರೋಗಿಗಳಿಗಾಗಿರುವ ಆಸ್ಪತ್ರೆಯು ಸ್ಥಳಸಂಕೋಚದಿಂದ ತುಂಬಾ ಅನಾನುಕೂಲತೆಗಳಿಗೆ ಒಳಪಟ್ಟಿರುವುದರಿಂದ ಇದನ್ನು ಬಡಾವಣೆ ಮಾಡಿಸಿಕೊಟ್ಟಾಗಲೀ ಅಥವಾ ಮೆಟರ್ನಿಟಿ ವಾರ್ಡ್ ಕಟ್ಟಿಸಿಕೊಟ್ಟಾಗಲೀ ಅನುಕೂಲಪಡಿಸಿ ಕೊಡಬೇಕೆಂದು ಪ್ರಾರ್ಥಿಸುವೆವು.

ಮಹಾಸ್ವಾಮಿಯವರು ಅನುಗ್ರಹಮಾಡಿ ಈ ಸುದಿನದಲ್ಲಿ ಈ ನಗರಿಯ ಪ್ರಜೆಗಳ ಹಿತಕ್ಕೆ ಮಾರ್ಗವಾದ ವಿದ್ಯುಚ್ಛಕ್ತಿಯ ಜಲಯಂತ್ರದ ಪ್ರಥಮ ಪ್ರಾರಂಭೋತ್ಸವವನ್ನು ನೆರವೇರಿಸಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುವೆವು.

ಕರುಣಾಮಯನಾದ ಭಗವಂತನು ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೂ, ಅವರ ಕುಟುಂಬವರ್ಗದವರಿಗೂ, ಅವರ ಮುಖ್ಯ ಅಮಾತ್ಯರಾದ ಈ ನಮ್ಮ ಮಹಾಸ್ವಾಮಿಯವರಿಗೂ, ಇವರ ಕುಟುಂಬವರ್ಗದವರಿಗೂ ಸದಾ ಆಯುರಾರೋಗ್ಯ ಭಾಗ್ಯಗಳನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುವ

ತಮ್ಮ ಅತ್ಯಂತ ವಿಧೇಯರಾದ,
ಕೋಲಾರದ ಪೌರಕಾರ್ಯನಿರ್ವಾಹಕ ಸಭಾಸದಸ್ಯರುಗಳು.

ಉತ್ತರ.

ಕೋಲಾರದಲ್ಲಿ ನೀರು ಸರಬರಾಯಿಗಾಗಿ ಪೂರ್ತಿಗೊಳಿಸಿರುವ ಹೊಸ ಏರ್ಪಾಡಿನ ಸಮಾರಂಭಣ ಮಹೋತ್ಸವವನ್ನು ನೆರವೇರಿಸುವಾಗ್ಗೆ ದಿವಾನ್ ರವರು ಮಾಡಿದ ಭಾಷಣ.

(1932 ನೆಯ ಇಸವಿ ಅಕ್ಟೋಬರ್ 24 ನೆಯ ತಾರೀಖು.)

ಮಹಿಳೆಯರೇ, ಮತ್ತು ಮಹನೀಯರೇ, ಈಗತಾನೆ ಪೂರ್ತಿಯಾಗಿರುವ ನೀರುಸರಬರಾಯಿ ಕಾಮಗಾರಿಗಳಿಂದ ಕೊಳಾಯಿಗಳ ಮೂಲಕ ನೀರು ದೊರೆಯುವ ದಿನವು ಬರುವುದನ್ನು ಈ ಊರಿನವರೆಲ್ಲರೂ ಎಷ್ಟು ಕುತೂಹಲದಿಂದಲೂ, ಎಷ್ಟು ಸಡಗರದಿಂದಲೂ ಎದುರು ನೋಡುತ್ತಿದ್ದರೆಂಬುದನ್ನು ನಾನು ಬಲ್ಲೆನು. ಶುದ್ಧವಾದ ಕುಡಿಯುವ ನೀರು ಸಮೃದ್ಧವಾಗಿ ದೊರೆಯುವ ಅಮೂಲ್ಯವಾದ ಭಾಗ್ಯವನ್ನು ಈ ಊರಿನವರೆಲ್ಲರೂ ಇನ್ನು ಮುಂದೆ ಆನಂದದಿಂದ ಯಥೇಷ್ಟವಾಗಿ ಅನುಭವಿಸಬಹುದಾಗಿದೆ.

ಈಗ ನನಗೆ ಸ್ವಲ್ಪವೂ ವಿರಾಮ ದೊರೆಯದಷ್ಟು ಹೆಚ್ಚಾಗಿ ಕೆಲಸಗಳಿವೆ. ಆದಾಗ್ಯೂ, ಈ ದಿನದಂಥ ಸಂತೋಷಕಾಲದಲ್ಲಿ ನಿಮ್ಮೊಡನೆ ಸೇರುವಂತೆ ದೊರೆತ ಅವಕಾಶವನ್ನು ಉಪಯೋಗಿಸಿಕೊಳ್ಳದೆ ಬಿಡಬಾರದೆಂದು ಭಾವಿಸಿ, ನಾನು ಸಂತೋಷದಿಂದ ಇಲ್ಲಿಗೆ ಬಂದೆನು. ಅಲ್ಲದೆ, ಶ್ರೀಮಾನ್ ಚಿಕ್ಕ ಚೆನ್ನನಂಜಪ್ಪಸೆಟ್ಟಿಯವರು ಈ ಕಾಮಗಾರಿಗಳ ಸಂಬಂಧದಲ್ಲಿ ಉದಾರವಾಗಿ ಹಣವನ್ನು ಕೊಟ್ಟಿರುವುದಕ್ಕೋಸ್ಕರ ಅವರನ್ನು ಅಭಿನಂದಿಸುವುದೂ ಸಹ, ನಾನು ಇಲ್ಲಿಗೆ ಬಂದುದರ ಉದ್ದೇಶವಾಗಿದೆ. ಅವರು ಆ ರೀತಿ ಸಹಾಯ ಮಾಡದೆ ಹೋಗಿದ್ದರೆ, ಈ ಕಾಮಗಾರಿಗಳನ್ನು ನೆರವೇರಿಸುವುದು ಸಾಧ್ಯವಾಗುತ್ತಿದ್ದಿತೇ — ಎಂಬುದು ಸಂದೇಹವಾಗಿದೆ. ಆದುದರಿಂದ, ಪ್ರಜೆಗಳ ಸೇವೆಯಲ್ಲಿ ಆದರವುಳ್ಳವರೂ, ಉದಾರಿಗಳೂ, ಆದ ಇಂಥ ದೊಡ್ಡ ಮನುಷ್ಯರು ಈ ಊರಿನಲ್ಲಿರುವುದಕ್ಕಾಗಿ ಇಲ್ಲಿಯವರೆಲ್ಲರೂ ತಾವೇ ಪುಣ್ಯವಂತರೆಂದು ಸಂತೋಷಿಸಲು ಕಾರಣವುಂಟು. ಶ್ರೀಮಾನ್ ಚಿಕ್ಕ ಚೆನ್ನನಂಜಪ್ಪಸೆಟ್ಟಿಯವರಿಗೆ ಅವರೆಲ್ಲರೂ ನಿರಂತರವೂ ಕೃತಜ್ಞರಾಗಿರುವುದರಲ್ಲಿ ಸಂಶಯವೇ ಇಲ್ಲ. ಇಂಥವರುಗಳು ವಾಸಮಾಡುವ ನಗರದಲ್ಲಿ ಸುಖವೂ ನೆಮ್ಮದಿಯೂ ನೆಲಸಿ ಅಂಥ ನಗರವು ಅಭಿವೃದ್ಧಿಯಾಗುವುದರಲ್ಲಿ ಅನುಮಾನವಿಲ್ಲ. ಶ್ರೀಮಾನ್ ಚಿಕ್ಕ ಚೆನ್ನನಂಜಪ್ಪಸೆಟ್ಟಿಯವರು ಈ ಊರಿಗೆ ಶಾಶ್ವತವಾಗಿ ಪ್ರಯೋಜನಕರವಾಗಿರುವ ದೊಡ್ಡ ಉಪಕಾರವನ್ನು ಮಾಡಿದ್ದಾರೆ. ಜನರು ಇದಕ್ಕಾಗಿ ಚಿರಕಾಲ ಅವರ ಹೆಸರನ್ನು ನೆನಪಿನಲ್ಲಿಟ್ಟುಕೊಂಡು, ಕೃತಜ್ಞತೆಯಿಂದ ಅವರಿಗೆ ಶ್ರೇಯಸ್ಸನ್ನು ಬಯಸುತ್ತಾರೆ.

ಆದರೆ, ಒಂದು ವಿಚಾರದಲ್ಲಿ ಮಾತ್ರ, ನಾನು ನಿಮ್ಮೆಲ್ಲರಿಗೂ ಎಚ್ಚರಿಕೆ ಹೇಳಬೇಕಾಗಿದೆ. ಶುದ್ಧವಾಗಿರುವ ನೀರು ಸಮೃದ್ಧವಾಗಿ ದೊರೆಯುವುದಾಗಿರುವ ಈ ಸಂತೋಷ ಸಮಯದಲ್ಲಿ, ಹೀಗೆಲ್ಲಾ ಎಚ್ಚರಿಕೆ ಹೇಳಬೇಕಾದ ಅವಶ್ಯಕತೆಯೇನೆಂದು, ನಿಮಗೆ ಆಶ್ಚರ್ಯವಾಗಬಹುದು. ನಮ್ಮದು ಪರಿಪೂರ್ಣತೆಯಿಲ್ಲದ ಪ್ರಪಂಚ; ಯಾವ ಸುಖಸಾಧನವೇ ದೊರೆತರೂ, ಅದರೊಡನೆ ಕಷ್ಟದ ಬೀಜಗಳೂ ಅಡಗಿರುತ್ತವೆ. ಅವು ಮೊಳಕೆಯಾಗದಂತೆ ನೋಡಿಕೊಳ್ಳುವುದು ಅವಶ್ಯಕ. ಭಗವಂತನು ಬೆಲ್ಲದೊಡನೆ ಬೇವನ್ನೂ ಬೆರೆಸಿಯೇ ಇರುತ್ತಾನೆ. ಬೇವು ಬೆಲ್ಲಗಳು ವಿಧವಿಧವಾದ ಪ್ರಮಾಣಗಳಲ್ಲಿ ಬೆರೆತಿರುವ ಸನ್ನಿವೇಶಗಳು ನಮ್ಮ ಜೀವನದಲ್ಲಿ ಅನೇಕವೇಳೆ ಒದಗುತ್ತವೆ. ಸಮೃದ್ಧವಾಗಿ ನೀರು ಒದಗಿತೆಂದರೆ, ನೀರನ್ನು ಎಚ್ಚರಿಕೆಯಿಂದ ಉಪಯೋಗಿಸದೆ, ಅಲ್ಲಲ್ಲಿ ಗುಂಡಿಗಟ್ಟಿ ನೀರು ನಿಲ್ಲುವಂತೆ ಜನರು ಅವಕಾಶಕೊಡುವುದುಂಟು. ಹೀಗೆ ಗುಂಡಿಗಳಲ್ಲಿ ನೀರು ನಿಂತರೆ ಸಾಕು, ಸೊಳ್ಳೆಗಳ ಪಡೆಗಳು ವೃದ್ಧಿಯಾಗಿ ಹಾವಳಿಮಾಡಲು ಪ್ರಾರಂಭವಾಗುವುದು. ಸೊಳ್ಳೆಗಳು ಹೆಚ್ಚಿದಂತೆಲ್ಲಾ ಮಲೇರಿಯಾ ಜ್ವರವೂ ಹೆಚ್ಚಿಹೋಗುವುದು ತಿಳಿದೇ ಇದೆ. ಅದಕಾರಣ, ನೀವುಗಳು ಈ ಅಪಾಯಕ್ಕೆ ಅವಕಾಶಕೊಡದೆ ಪಾರಾಗಬೇಕು. ಬೀದಿಗಳೇ ಮುಂತಾದವುಗಳ ಬಳಿಯ ಕೊಳಾಯಿಗಳ ಸಮೀಪದಲ್ಲಾಗಲಿ, ಮನೆಯ ಚರಂಡಿಗಳ ಸಮೀಪದಲ್ಲಾಗಲಿ, ಗುಂಡಿಗಳಾಗಿ ನೀರು ನಿಲ್ಲದಂತೆ, ಜಾಗರೂಕತೆಯಿಂದಿರಬೇಕು. ಈ ಊರಿನಲ್ಲಿ ಹೆಚ್ಚು ನೀರೆಲ್ಲಾ ಸರಿಯಾಗಿ ಹರಿದುಹೋಗುವಂತೆ ಅಚ್ಚುಕಟ್ಟಾಗಿರುವ ಚರಂಡಿ ಮುಂತಾದ ಜಲದಾರಿಗಳ ತೃಪ್ತಿಕರವಾದ ಏರ್ಪಾಡೇನೂ ಇಲ್ಲ. ಆದಕಾರಣ, ಇಲ್ಲಿ ಗುಂಡಿಗಳಾಗಿ ನೀರು ನಿಲ್ಲುವ ಸಂಭವವು ಬಹಳ ಹೆಚ್ಚು. ಆದುದರಿಂದ ನೀವುಗಳು ಅದಕ್ಕೆ ಅವಕಾಶಕೊಡದಂತೆ ಜಾಗರೂಕತೆಯಿಂದಿರಬೇಕಾದುದು ಬಹಳವಾಗಿ ಆವಶ್ಯಕ.

ನೀವು ಬಿನ್ನವತ್ತಳೆಯಲ್ಲಿ ಸೂಚಿಸಿರುವ ಎರಡು ಅರಿಕೆಗಳನ್ನೂ ವಿಚಾರ ಮಾಡಿ ನೋಡಿದೆನು. ಹೆರಿಗೆಯ ವಾರ್ಡನ್ನು ಕಟ್ಟಿಸಿ ಡಿಸ್ಪೆನ್ಸರಿಯನ್ನು ಬಡಾಯಿಸುವ ವಿಷಯ. ಈಗಿನ ಕಟ್ಟಡವು ಬಹಳ ಹಳೆಯದೆಂದೂ, ಅದನ್ನು ಬಡಾವಣೆಮಾಡುವುದಕ್ಕಾಗಿ ಹಣವನ್ನು ವೆಚ್ಚಮಾಡುವುದು ಉಚಿತವಲ್ಲವೆಂದೂ, ತಿಳಿಯಬಂದಿದೆ. ಚಿಕ್ಕದೊಂದು ಹೆರಿಗೆಯ ಆಸ್ಪತ್ರೆಯನ್ನು ಕಟ್ಟಿಸುವುದು ಅದಕ್ಕಿಂತಲೂ ಮೇಲೆಂದು ತೋರುತ್ತದೆ. ಹಾಗೆ ಮಾಡುವುದು ಹೆಚ್ಚು ಪ್ರಯೋಜನಕರವೂ ಹೌದು. ಸುಮಾರು 20,000 ರೂ. ಗಳನ್ನು ವೆಚ್ಚ ಮಾಡಿದರೆ, ಅಚ್ಚುಕಟ್ಟಾಗಿ ಅನುಕೂಲವಾಗಿರುವ ಚಿಕ್ಕದೊಂದು ಆಸ್ಪತ್ರೆಯನ್ನು ಕಟ್ಟಿಸಬಹುದು. ಒಂದೊಂದರಲ್ಲಿಯೂ ಆರಾರು ಮಂದಿಗಳಿಗೆ ಹಾಸಿಗೆಗಳಿರುವ 2 ವಾರ್ಡುಗಳನ್ನೂ, 1 ಹೆರಿಗೆ ವಾರ್ಡನ್ನೂ ಕಟ್ಟಿಸಲು ಅಲ್ಲಿಗೆ ಸರಿಹೋಗುತ್ತದೆ. ಈ ಸಲಹೆಯು ಹಿತವಾಗಿರುವಂತೆ ನಿಮ್ಮ ಮನಸ್ಸಿಗೆ ತೋರುವುದೆಂದು ನಾನು ನಂಬಿದ್ದೇನೆ. ಇಲ್ಲಿಯ ಮ್ಯುನಿಸಿಪಲ್ ಸಭೆಯವರೂ, ಡಿಸ್ಟ್ರಿಕ್ಟ್ ಬೋರ್ಡಿನವರೂ, ಹೊಸ ಆಸ್ಪತ್ರೆಗಾಗಿ ತಕ್ಕಂತೆ ಕಂಟ್ರಿಬ್ಯೂಷನ್ ಹಣವನ್ನು ಕೊಡುವುದಕ್ಕೆ ಒಪ್ಪುವುದಾದರೆ, ಈ ವಿಷಯದಲ್ಲಿ ಸರ್ಕಾರದವರು ಮತ್ತಷ್ಟು ಪರ್ಯಾಲೋಚನೆ ಮಾಡಲು ಸಿದ್ಧವಾಗಿದ್ದಾರೆ.

ಈ ಊರಿಗೆ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸಿದ ಸಂಬಂಧವಾಗಿ ವೆಚ್ಚವಾದ ಮೊತ್ತದ ಮೇಲೆ ಈ ಊರಿನ ಮ್ಯುನಿಸಿಪಾಲಿಟಿಯವರು ಬಡ್ಡಿಯನ್ನು ಖಾತರಿಮಾಡಿಕೊಟ್ಟಿರುವುದು ಸರಿಯಷ್ಟೆ. ಆ ಖಾತರಿಯಂತೆ ಹಣವನ್ನು ಸಲ್ಲಿಸುವ ಜವಾಬ್ದಾರಿಯಿಂದ ವಿನಾಯಿತಿಯನ್ನು ಕೊಡಬೇಕೆಂಬುದು ನಿಮ್ಮ 2 ನೆಯ ಅರಿಕೆಯಾಗಿದೆ. ಇದರ ವಿಷಯದಲ್ಲಿ ನಾನು ಇಲ್ಲಿ ಈ ಕ್ಷಣವೇ ಉತ್ತರಹೇಳಬೇಕೆಂದು ನೀವುಗಳು ನಿರೀಕ್ಷಿಸುವುದಿಲ್ಲವೆಂದು ನಾನು ನಂಬಿದ್ದೇನೆ. ಇದಕ್ಕೆ ಉತ್ತರ ಹೇಳುವುದಕ್ಕೆ ಮೊದಲು 2 ಮುಖ್ಯ ವಿಚಾರಗಳನ್ನು ಬಹಳವಾಗಿ ಯೋಚಿಸಬೇಕಾಗಿದೆ. ಮೊದಲನೆಯದಾಗಿ, ಒಂದು ಮ್ಯುನಿಸಿಪಲ್ ಸಭೆಯ ವಿಷಯದಲ್ಲಿ ವಿನಾಯಿತಿಯನ್ನು ತೋರಿಸಿದರೆ, ಇತರ ಇಂಥ ಮ್ಯುನಿಸಿಪಲ್ ಸಭೆಗಳಿಗೂ ಇದೇ ರಿಯಾಯಿತಿಯನ್ನೇ ತೋರಿಸಬೇಕಾಗಿ ಬರುವುದಿಲ್ಲವೇ — ಎಂಬುದನ್ನು ಯೋಚಿಸಬೇಕಾಗುತ್ತದೆ. 2 ನೆಯದಾಗಿ, ಈ ಅರಿಕೆಯನ್ನು ಸಲ್ಲಿಸುವುದರಿಂದ ಸರ್ಕಾರದ ಹುಟ್ಟುವಳಿಯು ಕಡಿಮೆಯಾಗುವುದನ್ನೂ ಕುರಿತು ಆಲೋಚಿಸಬೇಕಾಗುತ್ತದೆ. ಹೀಗೆ ಈ 2 ಅಂಶಗಳನ್ನೂ ಆಲೋಚಿಸಿ ನೋಡಿದಲ್ಲದೆ, ನಾನು ಈಗಲೇ ಯಾವುದೊಂದನ್ನೂ ನಿರ್ಧರವಾಗಿ ಹೇಳುವಂತಿಲ್ಲ. ಆದಾಗ್ಯೂ, ನಿಮ್ಮ ಈ ಅರಿಕೆಯನ್ನು ಸರ್ಕಾರದವರು ಯುಕ್ತರೀತಿಯಲ್ಲಿ ಪರ್ಯಾಲೋಚಿಸಿ ನೋಡುವರೆಂದೂ, ಸಾಧ್ಯಕಂಡಲ್ಲಿ ಅದನ್ನು ನೆರವೇರಿಸಿಕೊಡುವರೆಂದೂ, ನಾನು ನಿಮ್ಮೆಲ್ಲರಿಗೂ ಭರವಸೆ ಹೇಳುತ್ತೇನೆ.

ಮಹನೀಯರೆ, ನನ್ನ ವಿಚಾರದಲ್ಲಿ ಸೂಚಿಸಿರುವ ಸವಿನುಡಿಗಳಿಗಾಗಿ ನಿಮ್ಮೆಲ್ಲರಿಗೂ ವಂದನೆಗಳನ್ನು ಸಮರ್ಪಿಸುವೆನು. ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜರವರ ಪ್ರತಿನಿಧಿಯಾಗಿ ನಾನು ಹೋಗತಕ್ಕ ಲಂಡನ್ ನಗರದ 3 ನೆಯ "ರೌಂಡ್ ಟೇಬಲ್" ಸಮ್ಮೇಳನದಲ್ಲಿ ನನ್ನ ಪ್ರಯತ್ನಗಳು ಸಫಲವಾಗಿ ನೆರವೇರಬೇಕೆಂದು ಹಾರೈಸಿ ಶುಭವನ್ನು ಕೋರಿರುವುದಕ್ಕಾಗಿ ನಿಮ್ಮೆಲ್ಲರಿಗೂ ಕೃತಜ್ಞನಾಗಿರುವೆನು.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾಧಿವೇಶನದಲ್ಲಿ ದಿವಾನ್ ಸಾಹೇಬರವರು ಅಪ್ಪಣೆಕೊಡಿಸಿದ ಭಾಷಣ.

1932ನೆಯ ಇಸವಿ ಅಕ್ಟೋಬರ್ 10ನೆಯ ತಾರೀಖು.

1 ನೆಯ ಭಾಗ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಭದ್ರಾವತಿ ಕಬ್ಬಿಣದ ಕಾರ್ಖಾನೆ—ಮರದ ಭಟ್ಟಿಯಿಂದ ಇದ್ದಿಲಿನ ಜೊತೆಗೆ ದೊರೆಯುವ ಉಪವಸ್ತುಗಳಿಗೆ ದೊರೆಯುತ್ತಿದ್ದ ಗಿರಾಕಿಯು ಹಿಂದೆ ಯಾವಾಗಲೂ ಇಲ್ಲದಷ್ಟು ಮಟ್ಟಿಗೆ 1931-32 ನೆಯ ಇಸವಿಯಲ್ಲಿ ಕಡಿಮೆಯಾಗಿಹೋಯಿತು. ಅವುಗಳಿಗೆ ಗಿರಾಕಿಯು ದೊರೆಯುವುದೇ ಸುತರಾಂ ಕಷ್ಟವಾಗುದರಿಂದ ಪೂರ್ವಕಾಲದ ವಿಧಾನವನ್ನೇ ಅನುಸರಿಸಿ ಜಂಗಲುಗಳಲ್ಲಿ ಗುಣಿಗಳಲ್ಲಿ ಸೌದೆಯನ್ನು ಸುಟ್ಟು ಇದ್ದಿಲನ್ನು ಸಿದ್ಧಪಡಿಸಿಕೊಳ್ಳಲು ಏರ್ಪಾಡುಗಳನ್ನು ಮಾಡಬೇಕಾಯಿತು. ಆದರೆ ಮಳೆಗಾಲದಲ್ಲಿ ಮಾತ್ರ ಮರದ ಭಟ್ಟಿಯ ಕೆಲಸವು ರೀತ್ಯಾನುಸಾರವಾಗಿ ಕೆಲಸ ನಡೆಯುತ್ತಲೂ, ಅದರಿಂದ ದೊರೆತ ಇದ್ದಿಲನ್ನು ಉಪಯೋಗಿಸಿ, ಮತ್ತೇ ಮತ್ತೇ ಕಬ್ಬಿಣದ ಭಟ್ಟಿಯ ಕೆಲಸವನ್ನು ನಡೆಯುತ್ತಲೂ ಬಂದುದಾಯಿತು. ಬಾರೀ ಪ್ರಮಾಣದಲ್ಲಿ ಕಾಡುಗಳಲ್ಲಿ ಇದ್ದಿಲನ್ನು ತಯಾರಿಸಿದುದು ಇದೇ ಮೊದಲು; ಅದುದರಿಂದ, ಕಾರ್ಖಾನೆಯ ಅವಶ್ಯಕತೆಗಳಿಗೆ ಸ್ವಲ್ಪಮಟ್ಟಿಗೆ ಇದ್ದಿಲು ಸಾಲದೆ ಹೋಯಿತು; ಅಲ್ಲದೆ, ಇದ್ದಿಲನ್ನು ತಯಾರಿಸಲು ತಗಲುತಕ್ಕ ವೆಚ್ಚವನ್ನು ಕೂಡ ಸರಿಯಾದ ಹತೋಟಿಯಲ್ಲಿಟ್ಟುಕೊಳ್ಳಲಾಗಲಿಲ್ಲ. ಬಹಳ ದೂರ ಪ್ರದೇಶದಲ್ಲಿ ಅಲ್ಲಲ್ಲಿ ಇದ್ದಿಲನ್ನು ತಯಾರಿಸಬೇಕಾಯಿತಲ್ಲದೆ, ಇದಕ್ಕಾಗಿ ಬಹಳಮಂದಿ ಕೆಲಸಗಾರರನ್ನೂ ನೇಮಕಮಾಡಿಕೊಳ್ಳಬೇಕಾಯಿತು. ಪ್ರಕೃತ ಸಾಲಿನಲ್ಲಿ ಕಬ್ಬಿಣದ ಭಟ್ಟಿ ಯಂತ್ರದಲ್ಲಿ 2 ತಿಂಗಳುಗಳಿಗಿಂತಲೂ ಹೆಚ್ಚು ಕಾಲ ಕೆಲಸ ನಡೆಸದೆ ಇದ್ದುದರಿಂದ, ತಯಾರಾದ ವಸ್ತುಗಳ ಪ್ರಮಾಣವು ಕೂಡ ಬಹಳ ಕಡಿಮೆಯಾಗಿಯೇ ಇದ್ದಿತು.

ಕೊಳಾಯಿ ಎರಕದ ಕಾರ್ಖಾನೆಯಿಂದ ವರುಷದ ಪೈಕಿ ಬಹುಭಾಗದಲ್ಲಿ ಸಂಪೂರ್ಣವಾಗಿ ಕೆಲಸ ನಡೆದಿರುತ್ತದೆ. ಬೆಂಗಳೂರಿಗೆ ನೀರು ಸರಬರಾಯಿಮಾಡತಕ್ಕ ಸಂಬಂಧದಲ್ಲಿ ಕೈಕೊಂಡಿರತಕ್ಕ ಹೊಸ ಏರ್ಪಾಡಿಗಾಗಿ ಬೇಕಾಗಿದ್ದ ಕೊಳಾಯಿಗಳೆಲ್ಲವನ್ನೂ ಸಕಾಲದಲ್ಲಿ ಎರಕಹೊಯ್ದು ಒದಗಿಸಲಾಯಿತು. ಕೊಳಾಯಿ ವ್ಯಾಪಾರವು ಸಾಮಾನ್ಯವಾಗಿ ಮಟ್ಟುಬಿದ್ದಿರುವುದರಿಂದ, ವರ್ಷದ ಕೊನೆಯ ಭಾಗದಲ್ಲಿ ಈ ಕೊಳಾಯಿಗಳಿಗೆ ಗಿರಾಕಿಯು ಅಷ್ಟು ಹೆಚ್ಚಾಗಿರಲಿಲ್ಲ; ಅಲ್ಲದೆ, ಪೋಟಾಪೋಟಿಯೂ ಕೂಡ ಬಹಳವಾಗಿ ಹೆಚ್ಚಿತು.

ಈ ಕಾರಣಗಳಿಂದ 1931-32 ನೆಯ ಸಾಲಿನಲ್ಲಿ 1.80 ಲಕ್ಷ ರೂ. ನಷ್ಟವುಂಟಾಗಿರುತ್ತದೆ. ಕಾಡುಗಳಲ್ಲಿ ಇದ್ದಿಲನ್ನು ತಯಾರಿಸುವ ವೆಚ್ಚವನ್ನು ಕಡಿಮೆಮಾಡುವುದಕ್ಕೂ ಮತ್ತು ಇನ್ನೂ ಒಳ್ಳೆ ಇದ್ದಿಲು ದೊರೆಯುವಂತೆ ಮಾಡುವುದಕ್ಕೂ, ಏಕಪ್ರಕಾರವಾಗಿ ಪ್ರಯತ್ನಗಳು ನಡೆಯುತ್ತಿವೆ. ಅಲ್ಲದೆ, ಕಾರ್ಖಾನೆಯಲ್ಲಿ ವೆಚ್ಚಗಳನ್ನು ಆದಷ್ಟುಮಟ್ಟಿಗೆ ತಗ್ಗಿಸುವುದಕ್ಕೂ ಮತ್ತು ಕಾರ್ಯವಿಧಾನವನ್ನು ಉತ್ತಮಪಡಿಸುವುದಕ್ಕೂ ಕಾರ್ಖಾನೆಯ ಅಧಿಕಾರಿಗಳು ಗಮನಕೊಡುತ್ತಿದ್ದಾರೆ.

ಕೃಷ್ಣರಾಜೇಂದ್ರ ಗಿರಣೀ ಕಾರ್ಖಾನೆ—ಕಳೆದ ಜುಲೈ ತಿಂಗಳಿನಲ್ಲಿ ಈ ಗಿರಣೀ ಕಾರ್ಖಾನೆಯನ್ನು ಸರ್ಕಾರದವರ ಆಡಳಿತಕ್ಕೆ ವಹಿಸಿಕೊಳ್ಳಲಾಯಿತು. ಆ ಲಾಗಾಯಿತು ಗಿರಣಿಯ ಕೆಲಸವು ಬಹಳ ಉತ್ತಮಸ್ಥಿತಿಗೆ ಬಂದಿರುತ್ತದೆ. ವಸ್ತುಗಳನ್ನು ತಯಾರಿಸುವುದಕ್ಕೆ ತಗಲುವ ವೆಚ್ಚವನ್ನು ಕಡಿಮೆಮಾಡಲಾಗಿದೆ. ತಯಾರಾಗುವ ವಸ್ತುಗಳ ಪರಿಮಾಣವು ಮೊದಲಿಗಿಂತಲೂ ಸ್ವಲ್ಪ ಹೆಚ್ಚು ಕಡಿಮೆ 2 ರಷ್ಟು ಅಧಿಕವಾಗಿದೆ. ಹತ್ತಿಯಿಂದ ತಯಾರಾದ ಬಟ್ಟೆಗಳು ಬಹುಕಾಲದಿಂದ ಶೇಖರವಾಗಿದ್ದುವು. ಈ ದಾಸ್ತಾನು ಬಿಕರಿಮಾಡಲ್ಪಟ್ಟಿತು. ನೂಲುಗಳಿಗೆ ಒಳ್ಳೆ ಗಿರಾಕಿಯು ದೊರೆಯುವಂತೆ ಈಗ ಏರ್ಪಾಡು ಮಾಡಲಾಗಿದೆ. ಈ ಗಿರಣಿ ಕಾರ್ಖಾನೆಯಲ್ಲಿ ನಷ್ಟವುಂಟಾಗುವುದು ಈಗ ನಿಂತುಹೋಗಿದೆ. ಅಲ್ಲದೆ ವರ್ಷವೊಂದಕ್ಕೆ 1¼ ಲಕ್ಷ ರೂ. ಮೇಲ್ಪಟ್ಟು ಕೊಡಬೇಕಾಗುವ ಬಡ್ಡಿಯ ಮೊಬಲಗುಗಳನ್ನು ಕೊಡುವುದಕ್ಕೂ ಮತ್ತು "ಡಿಪ್ರಿಸಿಯೇಷನ್ ಫಂಡ್" ಎಂಬ ಸವೆತಲು ಕಿಮ್ಮತ್ತು ಭರ್ತಿಯ ನಿಧಿಗಾಗಿ ತಕ್ಕಮಟ್ಟಿಗೆ ಹಣವೊದಗಿಸುವುದಕ್ಕೂ ಸಾಧ್ಯವಾಗಿದೆ. ನೆಯ್ಗೆ ಕೈಗಾರಿಕೆಯು ವಿಶೇಷ ಮುಗ್ಗಟ್ಟಿಗೆ ಬಂದಿದ್ದಾಗ್ಯೂ ಸಹ, ಇಷ್ಟುಮಟ್ಟಿನ ಫಲಿತಾಂಶಗಳು ಲಭಿಸಿರುವುದು ತೃಪ್ತಿಕರವಾದ ವಿಷಯವಾಗಿದೆ.

ಗಂಧದ ಎಣ್ಣೆಯ ಕಾರ್ಖಾನೆ—ಪ್ರಬಲವಾದ ಆರ್ಥಿಕ ದುರವಸ್ಥೆಯೊದಗಿರುವ ವರ್ಷದಲ್ಲಿ ಗಂಧ ಮುಂತಾದ ಸೊಗಸಿನ ಅಲಂಕಾರ ವಸ್ತುಗಳನ್ನು ಜನಗಳು ಕೊಂಡುಕೊಳ್ಳುವುದಿಲ್ಲವೆಂಬುದು, ಸ್ವತಸ್ಸಿದ್ಧವಾಗಿಯೇ ಇದೆ. ಆದಕಾರಣ, ಸಾಮಾನ್ಯವಾಗಿ ಇಂತಹ ಪದಾರ್ಥಗಳಿಗೆಲ್ಲ ಈಗ ಗಿರಾಕಿಯು ಕಡಿಮೆಯಾಗಿದೆ. ಗಂಧದ ಎಣ್ಣೆಯೂ ಇವುಗಳಲ್ಲಿ ಒಂದಾಗಿದೆಯೇ ಹೊರತು ಬೇರೆಯಲ್ಲ. ಪ್ರಕೃತ ಸಾಲಿನಲ್ಲಿ 116,854 ಪೌಂಡುಗಳಷ್ಟು ಎಣ್ಣೆಯು ಮಾರಾಟವಾಯಿತು. 1930-31 ನೆಯ ಸಾಲಿನಲ್ಲಿ 155,527 ಪೌಂಡುಗಳಷ್ಟು ಎಣ್ಣೆಯು ಬಿಕರಿಯಾಗಿದ್ದಿತು. ಗಂಧದ ಎಣ್ಣೆಯ ಕಾರ್ಖಾನೆಯ ನಿವ್ವಳ ಹುಟ್ಟುವಳಿಯು ಪ್ರಕೃತ ವರ್ಷದಲ್ಲಿ ಅದರ ಹಿಂದಿನವರುಷದಲ್ಲಿದ್ದುದಕ್ಕಿಂತ 6 ಲಕ್ಷ ರೂ. ಕಡಿಮೆಯಾಗಿರುವುದಾಗಿ ಕಂಡುಬಂದಿದೆ.

ಮೆಡಿಕಲ್ ಇಲಾಖೆ—ಸಾಲಾಖೈರಿನಲ್ಲಿ ಒಟ್ಟು 272 ವೈದ್ಯಸಂಸ್ಥೆಗಳಿದ್ದುವು. ಚಿಕ್ಕಮಗಳೂರಿನಲ್ಲಿ ಮಲ್ಲೇಗೌಡರ ನಾಮಾಂಕಿತದ ಜನರಲ್ ಆಸ್ಪತ್ರೆಯ ಕಟ್ಟಡವೂ ಮತ್ತು ಸಿದ್ಧಲಿಂಗಶೆಟ್ಟಿಯವರ ನಾಮಾಂಕಿತ ಕಣ್ಣಾಸ್ಪತ್ರೆಯ ಕಟ್ಟಡವೂ ಪೂರೈಸಿದುವು. ಈ ಆಸ್ಪತ್ರೆಗಳು ಹೊಸ ಕಟ್ಟಡಗಳಲ್ಲಿ ಪ್ರಾರಂಭಿಸಲ್ಪಟ್ಟುವು. ಈ ಕಟ್ಟಡಗಳ ಪ್ರವೇಶಮಹೋತ್ಸವವನ್ನು ಮೈಸೂರು ಸಂಸ್ಥಾನದ ಶ್ರೀಮದ್ಯುವರಾಜರವರು ನೆರವೇರಿಸಿದರು. ಬೆಂಗಳೂರಿನಲ್ಲಿ ಕಟ್ಟುತ್ತಿರುವ ಹೆರಿಗೆ ಆಸ್ಪತ್ರೆಯ ಹೊಸ ಕಟ್ಟಡದ ಕೆಲಸವು ನಡೆಯುತ್ತಿದೆ. ಶಿವಮೊಗ್ಗೆಯಲ್ಲಿ ಕರ್ನಲ್ ಮ್ಯಾಗ್ರನ್ ರವರ ನಾಮಾಂಕಿತದ ಮೇಲೆ ಕಟ್ಟುತ್ತಿರುವ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ಶ್ರೀಮನ್ಮಹಾರಾಜರವರು ಕೃಪೆಮಾಡಿ ನೆರವೇರಿಸಿದರು.

ಮೆಡಿಕಲ್ ಪ್ರಾಕ್ಟಿಷನರುಗಳ ರಿಜಿಸ್ಟ್ರೇಷನ್ ರೆಗ್ಯುಲೇಷನ್ನಿನ ಮೇರೆಗೆ "ಮೈಸೂರು ಮೆಡಿಕಲ್ ಕೌನ್ಸಿಲ್" ಎಂಬ ಸಂಸ್ಥೆಯು ಏರ್ಪಡಿಸಲ್ಪಟ್ಟಿದೆ. ಈ ಸಂಸ್ಥೆಯವರು ರಚಿಸಿರತಕ್ಕ ಉಪನಿಬಂಧನೆಗಳನ್ನು (ಬೈಲಾಗಳನ್ನು) ಸರ್ಕಾರದವರು ಅನುಮೋದಿಸಿದ್ದಾರೆ. ಇಲಾಖೆಗೆ ಔಷಧಗಳನ್ನೂ ಮತ್ತು ಮೂಲಿಕೆಗಳನ್ನೂ ಕೊಂಡುಕೊಳ್ಳುವುದರಲ್ಲಿ ವೆಚ್ಚವನ್ನು ಕಡಿಮೆ ಮಾಡಬೇಕೆಂಬ ವಿಷಯವು ಈಚೆಗೆ ವಿಶೇಷವಾಗಿ ಪರ್ಯಾಲೋಚನೆಯಲ್ಲಿದೆ. ಸಂಸ್ಥಾನದಲ್ಲಿರುವ ಆಸ್ಪತ್ರೆಗಳಿಗೂ, ಡಿಸ್ಪೆನ್ಸರಿಗಳಿಗೂ ಬೇಕಾಗುವ ಔಷಧ ಸಾರಗಳನ್ನೂ ಮತ್ತು ಟಿಂಚರುಗಳನ್ನೂ ಸ್ಥಳದಲ್ಲೇ ತಯಾರಿಸುವ ಪ್ರಯತ್ನವನ್ನು ಪ್ರಾರಂಭಿಸಲಾಗಿದೆ.

ಜನಾರೋಗ್ಯ ರಕ್ಷಣೆಯ ಇಲಾಖೆ—ನಾನಾ ಮಾರ್ಗಗಳಲ್ಲಿಯೂ ಹಿಂದಿನ ವರುಷಗಳಲ್ಲಿ ನಡೆಯುತ್ತಿದ್ದ ಅಭಿವೃದ್ಧಿ ಕಾರ್ಯಗಳೇ ಪ್ರಕೃತ ವರ್ಷದಲ್ಲಿಯೂ ನಡೆದುಬಂದುವು. ಆದರೆ ಹಣದ ಮುಗ್ಗಟ್ಟಿನಿಂದ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ನೆರವೇರಿಸುವುದಕ್ಕಿಲ್ಲದೆ ಹೋಯಿತು. ಈ ಇಲಾಖೆಯವರು ರಾಕ್ ಫೆಲರ್ ಸಂಸ್ಥೆಯ ಕನ್ಸಲ್ಟೆಂಟರವರ ಸಹಾಯವನ್ನೂ, ಮತ್ತು ಸಲಹೆಗಳನ್ನೂ ಎಂದಿನಂತೆಯೇ ಪ್ರಕೃತ ವರ್ಷದಲ್ಲಿಯೂ ಪಡೆದರು. ಆರೋಗ್ಯ ರಕ್ಷಣೆಗೆ ಸಾಧಕವಾದ ವಿಚಾರಗಳನ್ನು ಜನರಿಗೆ ಬೋಧಿಸುವ ಬ್ಯೂರೋವಿಗೆ ಸೇರಿದಂತೆ ಪ್ರಕೃತ ವರ್ಷದಲ್ಲಿ ಪ್ರಕಟನ ಶಾಖೆಯೊಂದನ್ನು ಏರ್ಪಡಿಸಲಾಯಿತು. ಈ ಬ್ಯೂರೋವಿನ ಕಾರ್ಯಕ್ರಮವನ್ನು ಮುಂದುವರಿಸಲು, "ರಾಕ್ ಫೆಲರ್ ಸಂಸ್ಥೆ" ಯವರು 2 ವರ್ಷಗಳವರೆಗೆ, ಸಹಾಯ ದ್ರವ್ಯವನ್ನು ಕೊಡಲು ಒಪ್ಪಿದ್ದಾರೆ.

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಗೆಂದು

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣ ಸಂಜೀವನೀ

ಚಿಂತಿಸಬೇಡಿರಿ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆವಿಗುರಿ. ೯ ಗುಳಿಗೆಗಳ ೩. ೩ ರೂಪಾಯಿ. ಟ. ಖ. ೫ ಆಣೆ.

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ. M. C. ೫೫

ಚರಂಡಿಗಳ ಮತ್ತು ನಗರ ರಚನೆಯ ಕೆಲಸಗಳನ್ನೂ ಕೈಕೊಂಡು ನಡೆಯುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಜನರ ಆರೋಗ್ಯರಕ್ಷಣೆಯ ಕೆಲಸವನ್ನು ಕೈಕೊಳ್ಳುವುದಕ್ಕಾಗಿ ಮಂಡ್ಯದಲ್ಲಿ ಏರ್ಪಡಿಸಿದ್ದ "ರೂರಲ್ ಹೆಲ್ತ್ ಯೂನಿಟ್" ಸಿಬ್ಬಂದಿಯವರು ನಡೆಯಿಸಿರುವ ಕಾರ್ಯಗಳು ತೃಪ್ತಿಕರವಾಗಿ ನೆರವೇರಿ ಉತ್ಸಾಹಕರವಾಗಿವೆ. ಅದುದರಿಂದ ಸಂಸ್ಥಾನದ ಇತರ ಕಡೆಗಳಲ್ಲಿಯೂ ಇದೇ ಬಗೆಯ ಸಿಬ್ಬಂದಿಯನ್ನು ನೇಮಕಮಾಡುವ ವಿಚಾರವು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಮಲೇರಿಯಾ ಜ್ವರದ ಹಾವಳಿಯನ್ನಡಗಿಸುವುದಕ್ಕಾಗಿ ಮೂಡಗೆರೆ, ನಾಗೇನಹಳ್ಳಿ ಮತ್ತು ಹಿರಿಯೂರು, ಈ ಸ್ಥಳಗಳಲ್ಲಿ ಸ್ಥಾಪಿಸಿರುವ 3 ಮಲೇರಿಯಾ ಸ್ಟೇಷನ್ನುಗಳಲ್ಲಿಯೂ ಮತ್ತು ಬೆಂಗಳೂರು, ಮೈಸೂರು ನಗರಗಳಲ್ಲಿ ಇದೇ ಉದ್ದೇಶದಿಂದ ಕಲ್ಪಿಸಿರುವ ಏರ್ಪಾಡುಗಳ ಮೇರೆಗೂ ಹಿಂದಿನಂತೆಯೇ ಪ್ರಸಕ್ತ ವರ್ಷದಲ್ಲಿಯೂ ಕೆಲಸ ನಡೆಯಿತು. ಈ ಸ್ಟೇಷನ್ನುಗಳಲ್ಲಿ ನಡೆದ ಕಾರ್ಯಕಲಾಪಗಳ ಫಲವಾಗಿ ಅವುಗಳೆಲ್ಲೆಲ್ಲ ಮಲೇರಿಯಾ ಜ್ವರದ ಹಾವಳಿಯು ಕಡಿಮೆಯಾಗಿರುವುದಾಗಿ ವರದಿಯಾಗಿದೆ. ಕೋಲಾರದ ಚಿನ್ನದಗಣಿ ಪ್ರದೇಶ, ನರಸಿಂಹರಾಜಪುರ, ಕೊಪ್ಪ ಮತ್ತು ತುಮಕೂರು, ಈ ಸ್ಥಳಗಳಲ್ಲಿ ಮಲೇರಿಯಾ ಜ್ವರದ ಸಂಬಂಧದಲ್ಲಿ "ಸರ್ವೇ" ಪರಿಶೀಲನೆಗಳು ನಡೆದುವು. ರಾಕ್‌ಫೆಲರ್ ಫೌಂಡೇಷನ್ನಿನವರು ಒಂದು ಫೆಲೋಷಿಪ್ ಏರ್ಪಾಡನ್ನೂ, ಸರ್ಕಾರದವರು ಎರಡು ಫೆಲೋಷಿಪ್ ಏರ್ಪಾಡುಗಳನ್ನೂ ಮಾಡಿದರು.

ಗ್ರಾಮಪಂಚಾಯಿತಿಗಳು—ಈ ಭಾಷಣದ 2ನೆಯ ಭಾಗದಲ್ಲಿ ಕೊಟ್ಟಿರುವ ಲೆಕ್ಕಗಳನ್ನು ನೋಡಿದರೆ, ಗ್ರಾಮಪಂಚಾಯಿತಿಗಳವರು ನಡೆಯಿಸಿರುವ ತೆರಿಗೆ ವಸೂಲಿಯ ಕೆಲಸವು ವಿಶೇಷ ಅಸಮರ್ಪಕವಾಗಿದೆಯೆಂದು ಕಂಡುಬರುತ್ತದೆ. ಆದರೆ, ಇತರ ವಿಚಾರಗಳಲ್ಲಿ ಗ್ರಾಮ ಪಂಚಾಯಿತಿಗಳ ಕಾರ್ಯಕಲಾಪಗಳು ಚೆನ್ನಾಗಿ ನಡೆಯುತ್ತಿವೆ. ಇದಕ್ಕಾಗಿ ನಾನು ಸಂತೋಷಿಸುತ್ತೇನೆ. ಕೆಲವು ಗ್ರಾಮಪಂಚಾಯಿತಿಗಳವರು ಕುಡಿಯುವ ನೀರಿನ ಸೌಕರ್ಯಗಳನ್ನೊದಗಿಸುವುದಕ್ಕಾಗಿಯೂ ಮತ್ತು ತಮ್ಮ ಆಡಳಿತಕ್ಕೊಳಪಟ್ಟಿರುವ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಸ್ವಚ್ಛತೆಯನ್ನು ಉತ್ತಮಪಡಿಸಿ ಊರುಗಳನ್ನು ಚೊಕ್ಕಟವಾಗಿಟ್ಟುಕೊಂಡಿರುವುದಕ್ಕಾಗಿಯೂ ವಿಶೇಷರೀತಿಯ ಏರ್ಪಾಡುಗಳನ್ನು ಕೈಕೊಂಡಿದ್ದಾರೆ. ಗ್ರಾಮಸ್ಥರು ಗ್ರಾಮಾಭಿವೃದ್ಧಿಯ ಕೆಲಸಗಳಲ್ಲಿ ಕಾಮಗಾರಿಯನ್ನು ನಡೆಸುವ ವಿಷಯದಲ್ಲಿ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಗ್ರಾಮನಿವೇಶನಗಳನ್ನು ಚೊಕ್ಕಟವಾಗಿಡುವುದು, ರಸ್ತೆಗಳನ್ನು ಮೇಲ್ಪಡಿಸುವುದು ಮುಂತಾದ ಕೆಲಸಗಳಲ್ಲಿ ಮನಃಪೂರ್ವಕವಾಗಿ ಸಹಾಯಮಾಡಿ ಕಾಮಗಾರಿಗಳನ್ನು ನಡೆಯಿಸುತ್ತಿದ್ದಾರೆ. ಅನೇಕ ಗ್ರಾಮಪಂಚಾಯಿತಿಗಳವರು ಬೀದಿಗಳಲ್ಲಿ ವಿದ್ಯುಚ್ಛಕ್ತಿಯ ದೀಪಗಳನ್ನು ಹಾಕಿಸಿರುತ್ತಾರೆ. ಪ್ರಸಕ್ತ ವರ್ಷದಲ್ಲಿ ಕೆಲವು ಪಂಚಾಯಿತಿಗಳಿಗೆ ಸ್ಕೂಲುಗಳ, ಮುಜರಾಯಿ ಸಂಸ್ಥೆಗಳ, ಕೆರೆಗಳ ಮತ್ತು ಗ್ರಾಮ ಜಂಗಲುಗಳ ಆಡಳಿತವನ್ನು ಒಪ್ಪಿಸಲಾಯಿತು. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಗ್ರಾಮಪಂಚಾಯಿತಿಗಳವರು "ಗ್ರಾಂಟ್-ಇನ್-ಏಡ್" ಸಹಾಯದ್ರವ್ಯವು ಸಲ್ಲುವ ನಿಯಮಗಳಿಗನುಸಾರವಾಗಿ 25 ಪ್ರೈಮರಿ ಸ್ಕೂಲುಗಳನ್ನು ಸ್ಥಾಪಿಸಿದರು. ಉತ್ತಮ ವಿಧದ ನೇಗಿಲುಗಳನ್ನೂ, ಶಾಸ್ತ್ರೀಯವಾದ ಗೊಬ್ಬರಗಳನ್ನೂ ಮತ್ತು ಬೀಜದ ಧಾನ್ಯಗಳನ್ನೂ ಜನರಿಗೆ ವಿಕ್ರಯಿಸುವುದರಲ್ಲಿ ಗ್ರಾಮಪಂಚಾಯಿತಿಗಳಿಂದ ಬಹಳವಾಗಿ ಸಹಾಯವು ದೊರೆಯುತ್ತಿದೆ. ಕೆಲವು ಗ್ರಾಮಪಂಚಾಯಿತಿಗಳವರು ತಮ್ಮಲ್ಲಿ ಶೇಖರವಾಗಿದ್ದ ಹಣವನ್ನು ಶಾಶ್ವತವಾಗಿರುವ ಕೆಲವು ಅಭಿವೃದ್ಧಿ ಕಾರ್ಯಗಳಿಗಾಗಿ ವಿನಿಯೋಗಿಸಿದ್ದಾರೆ. ಹೊಸ ಗ್ರಾಮನಿವೇಶನಗಳನ್ನೂ ಗ್ರಾಮ ಬಡಾವಣೆಗಳನ್ನೂ ಏರ್ಪಡಿಸುವುದು ಮತ್ತು ಗ್ರಾಮದಲ್ಲಿ ಸಭಾಮಂದಿರಗಳನ್ನೂ, ಸ್ಕೂಲು ಕಟ್ಟಡಗಳನ್ನೂ ಮತ್ತು ಡಿಸ್ಪೆನ್ಸರಿ ಕಟ್ಟಡಗಳನ್ನೂ ಕಟ್ಟಿಸುವುದು—ಇವೇ ಮುಂತಾದವುಗಳಿಗಾಗಿ ಅವರು ಆರ್ಜಿತ ಹಣವನ್ನು ವೆಚ್ಚಮಾಡಿದ್ದಾರೆ. ಈಬಗೆಯ ಅಭಿವೃದ್ಧಿಕಾರ್ಯಗಳಿಗೆ ಹಣವನ್ನೊದಗಿಸುವುದಕ್ಕಾಗಿ ಅವಶ್ಯವಾದಲ್ಲಿ ಗ್ರಾಮಪಂಚಾಯಿತಿಗಳವರು ಸಾಲಗಳನ್ನು ತೆಗೆಯುವುದಕ್ಕೆ ಸಾಧ್ಯವಾಗುವಂತೆ ಮಾಡುವುದಕ್ಕೋಸ್ಕರ ಗ್ರಾಮಪಂಚಾಯಿತಿ ರೆಗ್ಯುಲೇಷನನ್ನು ಈಚೆಗೆ ತಿದ್ದುಪಾಟು ಮಾಡಲಾಗಿದೆ.

ಪರಿಸಮಾಪ್ತಿ—ಪ್ರಪಂಚದ ಪರಿಸ್ಥಿತಿಯಲ್ಲೇ ಭಾರಿ ಮಾರ್ಪಾಟುಗಳು ನಡೆದು, ಹಿಂದೆ ಅರ್ಥಶಾಸ್ತ್ರ ನಿಯಮಗಳ 1 ಭಾಗವೆಂದೇ ಅಂಗೀಕೃತವಾಗಿದ್ದ ಅನೇಕ ಅಂಶಗಳು ಈಗ ಶೀಘ್ರವಾಗಿ ಪರಿವರ್ತಿಸಿವೆ. ಮತ್ತೊಮ್ಮೆ ಅವಕ್ಕೆ ಬೆಲೆ ಕೊಡುವ ಪ್ರಸಕ್ತಿಗೇ ಅವಕಾಶವಿಲ್ಲದಂತೆ ಜನರು ಅವುಗಳ ಚರಮಶ್ಲೋಕದೊಡನೆ ಅವುಗಳನ್ನು ಪರಿತ್ಯಜಿಸಿದ್ದಾರೆ. ಅವಕ್ಕೆ ಬದಲಾಗಿ ಅವುಗಳ ಸ್ಥಾನದಲ್ಲಿ, ಅನ್ಯೋನ್ಯ ಭಾವದಿಂದ ಒಬ್ಬರ ಮನಸ್ಸನ್ನು ಮತ್ತೊಬ್ಬರು ಅರಿತುಕೊಳ್ಳುವುದು, ಆದರದಿಂದ ಪರರಲ್ಲಿ ಸಹಿಷ್ಣುತೆಯನ್ನು ತೋರಿಸುವುದು, ಪರಸ್ಪರವಾಗಿ ಸಹಕರಿಸಿ ವರ್ತಿಸಲು ಸಿದ್ಧವಾಗಿರುವ ಮನೋವೃತ್ತಿಯನ್ನು ತೋರಿಸುವುದು, ಹೊಸ ಹೊಸ ವಿಧಾನಗಳನ್ನು ಪರಿಶೀಲಿಸಿ ಅವುಗಳನ್ನೂ ಆಚರಣೆಗೆ ತಂದು ಪರೀಕ್ಷಿಸಿ ನೋಡುವುದು, ಇವೇ ಮೊದಲಾದ ಗುಣಗಳನ್ನು ವೃದ್ಧಿಪಡಿಸಿಕೊಳ್ಳುವುದಕ್ಕೆ ಪ್ರಾರಂಭವಾಗಿದೆ. ಇವುಗಳೇ ಜಗತ್ತಿನ ಉದ್ಧಾರಕ್ಕೆ ಸಾಧಕವಾಗಬೇಕೆಂಬ ಭಾವನೆಯು ಬಲವಾಗುತ್ತಿದೆ. ನಮ್ಮ ದೇಶದಲ್ಲಿಯೂ ಸಹ, ಈಚೆಗೆ ಇದೇ ಬಗೆಯ ಭಾವನೆಯು ನೆಲೆಗೊಂಡು, ಈ ಗುಣಗಳನ್ನು ವೃದ್ಧಿಪಡಿಸಿಕೊಳ್ಳುತ್ತಿರುವುದರ ನಿದರ್ಶನಗಳು ಯಥೇಷ್ಟವಾಗಿ ಕಂಡುಬಂದಿವೆ. ಒಟ್ಟು ಇಂಡಿಯಾದೇಶಕ್ಕೆ ಸಂಯುಕ್ತ ವ್ಯವಸ್ಥೆಯೊಂದು ಏರ್ಪಟ್ಟೇ ತೀರಬೇಕೆಂಬುದನ್ನೂ, ಇಂಡಿಯಾ ದೇಶವು ಅಭಿವೃದ್ಧಿಸ್ಥಿತಿಗೆ ಬಂದು ಅಭ್ಯುದಯ ಹೊಂದಬೇಕಾದರೆ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಏರ್ಪಡಬೇಕಾದುದು ತೀರ ಅವಶ್ಯಕವೆಂಬುದನ್ನೂ, ಸಂಯುಕ್ತ ವ್ಯವಸ್ಥೆಯ ಮುಖ್ಯ ಲಕ್ಷಣಗಳೆನಿಸಿರುವ ಅಂಶಗಳು ಅನೇಕವಾಗಿ ನಮ್ಮ ದೇಶದಲ್ಲಿ ಈಗ ನೆಲೆಗೊಂಡೇ ಇವೆಯೆಂಬುದನ್ನೂ, ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾರೆಂದು ಧಾರಾಳವಾಗಿ ಹೇಳಲೇಬಹುದಾಗಿದೆ. ಏನಿದ್ದರೂ, ಈಗ ಬಹುಮಟ್ಟಿಗೆ ನೆಲೆಗೊಂಡೇ ಇರುವ ಸಂಯುಕ್ತ ವ್ಯವಸ್ಥೆಯನ್ನು ಮತ್ತಷ್ಟು ಸ್ಫುಟಪಡಿಸಿ ಪೂರ್ಣಗೊಳಿಸುವ ಕೆಲಸವು ಮಾತ್ರ ಮುಂದೆ ಅತ್ಯಗತ್ಯವಾಗಿ ಸಾಗತಕ್ಕದಾಗಿದೆ. ಇದಕ್ಕೆ ಪ್ರಥಮ ಪ್ರಯತ್ನವಾಗಿ ಸಂಸ್ಥಾನಗಳ ಅಧೀನತೆಯನ್ನು ತಪ್ಪಿಸಬೇಕು. ಈಗ ಆಚರಣೆಯಲ್ಲಿರುವ ಏರ್ಪಾಡುಗಳ ದೆಸೆಯಿಂದ ಅವುಗಳು ವಸ್ತುತಃ ಬ್ರಿಟಿಷ್ ಇಂಡಿಯಾಕ್ಕೆ ಅಧೀನವಾಗಿವೆ. ಈ ಪರಿಸ್ಥಿತಿಯು ತಪ್ಪುವಂತೆ ಮಾಡುವುದೇ ಸಂಯುಕ್ತ ರಾಷ್ಟ್ರವನ್ನು ಏರ್ಪಡಿಸುವುದರಲ್ಲಿ ಮೊದಲು ನೆರವೇರಬೇಕಾದ ಮುಖ್ಯ ಕಾರ್ಯವೆಂಬುದನ್ನೂ, ಅದೊಂದು ಮಾತ್ರ ನೆರವೇರಿದರೆ ಆ ಬಳಿಕ ಉಳಿದಿರತಕ್ಕವುಗಳೆಲ್ಲಾ ಲೋಕಾನುಭವವೂ ಸೌಹಾರ್ದವೂ ಉಳ್ಳವರು ಸಮರ್ಪಕವಾಗಿ ನೆರವೇರಿಸುವುದು ಸಾಧ್ಯವಿರುವ ಕೆಲಸಗಳೆಂಬುದನ್ನೂ ಸಹ, ಈಗ ಸಾಮಾನ್ಯವಾಗಿ ಎಲ್ಲರೂ ಒಪ್ಪುವರೆಂದೂ ಧಾರಾಳವಾಗಿ ಹೇಳಬಹುದಾಗಿದೆ.

ಒಟ್ಟು ಇಂಡಿಯಾದೇಶಕ್ಕೂ ಒಂದು ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಶೀಘ್ರದಲ್ಲೇ ಏರ್ಪಡದೆ ಹೋಗುವುದಕ್ಕೆ ಯಾವುದೊಂದು ಕಾರಣವೂ ಇರುವುದಾಗಿ ನನ್ನ ಮನಸ್ಸಿಗೇನೋ ತೋರುವುದಿಲ್ಲ. ಆದುದರಿಂದ, ಶೀಘ್ರದಲ್ಲೇ ಅದು ಏರ್ಪಟ್ಟರೆ, ಅದನ್ನು ಸ್ಥಾಪಿಸಿದ ಕೀರ್ತಿಯ ಬಹುಭಾಗವು ಸ್ವದೇಶಾಭಿಮಾನದಿಂದಲೂ ರಾಜನೀತಿ ಕೌಶಲದಿಂದಲೂ ದೂರಾಲೋಚನೆಯಿಂದಲೂ ವರ್ತಿಸಿದ ಸಂಸ್ಥಾನಗಳ ಪ್ರಭುಗಳಿಗೆ ಸಲ್ಲಬೇಕಾಗುತ್ತದೆ. ಪ್ರಥಮದಲ್ಲಿ ಸಂಯುಕ್ತ ವ್ಯವಸ್ಥೆಯು ಏರ್ಪಡುವುದು ತಮಗೆ ಸಮ್ಮತವೆಂಬುದಾಗಿ ತಿಳಿಸಿ, ಅನಂತರ ಮೊದಲನೆಯ "ರೌಂಡ್ ಟೇಬಲ್ ಕಾನ್ಫರೆನ್ಸ್" ಸಮ್ಮೇಳನದಲ್ಲಿ ಯಾವ ಬಗೆಯ ಮನೋಭಾವವನ್ನು ವ್ಯಕ್ತಗೊಳಿಸಿದರೋ ಈಗಲೂ ಅವರಲ್ಲಿ ಅದೇ ಬಗೆಯ ಮನೋಭಾವವೇ ಅಚಲವಾಗಿ ನೆಲೆಗೊಂಡಿದೆ. ಸಂಯುಕ್ತ ವ್ಯವಸ್ಥೆಯು ಏರ್ಪಡಬೇಕೆಂಬ ಇಷ್ಟಾರ್ಥವು ಸಫಲವಾಗಿ ಈಡೇರುವುದಕ್ಕೆ ಅವಶ್ಯವೆನಿಸುವ ತ್ಯಾಗಬುದ್ಧಿಯನ್ನು ಪ್ರದರ್ಶಿಸಿ ಅದಕ್ಕನುಸಾರವಾಗಿ ವರ್ತಿಸಲು ಅವರುಗಳು ಸಿದ್ಧವಾಗಿದ್ದಾರೆ. ಮೊನ್ನೆತಾನೆ ಸಿಮ್ಲಾ ನಗರದಲ್ಲಿ ಜರುಗಿದ ಪ್ರಭುಗಳ ಸಮ್ಮೇಳನದಲ್ಲಿ ನಡೆದ ಚರ್ಚೆಗಳಿಂದ ಈ ಅಂಶಗಳು ಸ್ಪಷ್ಟವಾಗಿ ಗೊತ್ತಾದುವು. ಆದರೆ ಅವರು ತ್ಯಾಗಬುದ್ಧಿಯನ್ನು ತೋರಿಸಬೇಕೆಂದು ನಿರೀಕ್ಷಿಸುವುದರಲ್ಲಿಯೂ, ವಿಚಕ್ಷಣೆಯನ್ನು ತೋರಿಸಿ ಯುಕ್ತವಾದೊಂದು ಪರಿಮಿತಿಯನ್ನಿಟ್ಟುಕೊಂಡು ಆ ರೀತಿ ನಿರೀಕ್ಷಿಸಬೇಕು. ವಾಸ್ತವವಾದ ವ್ಯವಹಾರ ಪ್ರಪಂಚಕ್ಕೆ ದೂರವಾಗಿ ಕೇವಲ ಪುಸ್ತಕ ಪುಟಗಳಲ್ಲಿರುವ ನಿಯಮಗಳನ್ನು ಅನ್ವಯಿಸುತ್ತ ಸರ್ವೋತ್ಕೃಷ್ಟವಾದ ರಾಜ್ಯಾಡಳಿತದ ಶಿಸ್ತನ್ನು ಅಳವಡಿಸಬೇಕೆಂಬ ಉತ್ಸಾಹದಲ್ಲಿ, ಅವರ ಪ್ರಭುಪದವಿಯನ್ನೂ, ಅವಕ್ಕಿರುವ ಅಸಾಧಾರಣ ಸ್ವಭಾವದ ಘನತೆ ಗೌರವಗಳನ್ನೂ ಉಪೇಕ್ಷಿಸಿ, ಅವರ ಸ್ಥಾನ ಮಾನಗಳದೃಷ್ಟಿಯಿಂದ ಅವರಿಗೆ ಹೀನಾಯವಾಗಿ ತೋರುವಷ್ಟು ತ್ಯಾಗವನ್ನು ಅವರಿಂದ ನಿರೀಕ್ಷಿಸುವುದೆಂದಿಗೂ ತರವಲ್ಲ. ಅವರುಗಳೆಲ್ಲರೂ ಪ್ರಾಚೀನ ಕಾಲದ ಘನತರವಾದ ರಾಜಮನೆತನಗಳಿಗೆ ಸೇರಿದವರು. ಭರತಖಂಡದ ಪ್ರಯೋಜನಾರ್ಥವಾಗಿ ಅವರುಗಳು ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅದರಲ್ಲಿಯೂ ಮುಖ್ಯವಾಗಿ ಭರತಖಂಡದ ವೈಶಿಷ್ಟ್ಯಗಳೆಂತಿರುವ ಧ್ಯೇಯಗಳು ಅಟ್ಟಳಿಯದಂತೆ ಅವುಗಳನ್ನುಳಿಸಿ ಸಂರಕ್ಷಿಸಿ, ಭರತಖಂಡದಲ್ಲಿ ಅನೂಚಾನವಾಗಿ ನಡೆದು ಬಂದರಾಜ್ಯಭಾರ ವಿಧಾನಗಳನ್ನು ಕಾಪಾಡಿಕೊಂಡು ಬರುವುದರಲ್ಲಿ, ಅವರುಗಳು ಬಹಳ ಶ್ರಮವನ್ನು ವಹಿಸಿ ಕೆಲಸ ಮಾಡಿದ್ದಾರೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಪ್ರಜಾಸತ್ತಾತ್ಮಕವಾದ ರಾಜ್ಯಾಡಳಿತ ಕ್ರಮವು ಏರ್ಪಡಬೇಕೆಂಬುದರ ಸಂಬಂಧದಲ್ಲಿ, ಪಾಶ್ಚಾತ್ಯ ರಾಜ್ಯಶಾಸ್ತ್ರ ನಿಯಮಗಳಿಗೆ ಬದ್ಧರಾಗಿ ನಡೆಯುವುದಕ್ಕೆ ಅವರು ಎಷ್ಟೇಮಟ್ಟಿಗೆ ಸಮ್ಮತಿಸಿದರೂ ಕೂಡ, ಅವರುಗಳ ಪ್ರಭುಪದವಿಯ ಅಂತಸ್ತು ಬ್ರಿಟಿಷ್ ಇಂಡಿಯಾದ ಪ್ರಾಂತಗಳ ಗವರ್ನರುಗಳು ಪದವಿಯ ಅಂತಸ್ತಿನಂತಲ್ಲವೆಂಬುದನ್ನೂ, ಅದೇ ಬೇರೆಯೆಂಬುದನ್ನೂ, ಅಂಗೀಕರಿಸಿ ವರ್ತಿಸಬೇಕು. ಅಲ್ಲದೆ, ಅವರುಗಳ ವಿಶೇಷ ರೀತಿಯ ಸ್ಥಾನ ಮಾನಗಳಿಗೆ ತಕ್ಕಂತೆ ಅವರಿಗೆ ಗೌರವವಿರುವ ಪರಿಸ್ಥಿತಿಯನ್ನು ಕಲ್ಪಿಸಿ ಅದಕ್ಕೆ ಲೇಶಮಾತ್ರವೂ ಚ್ಯುತಿಯುಂಟಾಗದಂತೆ ನೋಡಿಕೊಳ್ಳಬೇಕಾದುದು ಅವಶ್ಯಕವೆಂಬುದನ್ನೂ ಸಹ ಅದರಂತೆಯೇ ಅಂಗೀಕರಿಸಿ ವರ್ತಿಸಬೇಕು.

ಪ್ರಸಕ್ತ ವರ್ಷದಲ್ಲಿ ನಡೆದ ಕಾರ್ಯಕಲಾಪಗಳನ್ನು ಕುರಿತು ಸಂಕ್ಷೇಪವಾಗಿ ತಮಗೆ ಪ್ರಕಟಪಡಿಸಿರುವ ಈ ಸಾರಾಂಶದಲ್ಲಿ, ಹಣದ ಅನುಕೂಲತೆಯಿಲ್ಲದ ಕಾರಣದಿಂದ ಕೆಲವು ಅಭಿವೃದ್ಧಿ ಕಾರ್ಯಗಳು ಸರಿಯಾಗಿ ನಡೆಯುವುದಕ್ಕಿಲ್ಲದೆ ಸ್ವಲ್ಪಮಟ್ಟಿಗೆ ಮೊಟ್ಟುಬಿದ್ದ ಸಂಗತಿಯನ್ನು ಸೂಚಿಸಿದ್ದೇನೆ. ಅವುಗಳು ಹಾಗೆ ಮೊಟ್ಟುಬಿದ್ದುದೇನೋ ನಿಜ. ಆದರೂ ಒಟ್ಟಿನಮೇಲೆ ಪರಿಗಣಿಸಿ ನೋಡಿದರೆ ಈ ಬಗೆಯ ಆರ್ಥಿಕ ದುರವಸ್ಥೆಯ ಅವಧಿಯಲ್ಲಿ ಕೂಡ, ಇತರ ಅನೇಕ ದೇಶಗಳವಷ್ಟುಮಟ್ಟಿಗೆ ಕಷ್ಟನಷ್ಟಗಳಿಗೆ ಒಳಗಾಗದೆ ಮೈಸೂರು ಸಂಸ್ಥಾನದಲ್ಲಿ ನಾವುಗಳು ಈಗಿನಂತೆ ಪಾರಾದುದಕ್ಕಾಗಿ ಸಂತೋಷಿಸಬೇಕಾಗಿದೆ. ಸ್ವಲ್ಪಮಟ್ಟಿಗೆ ಕ್ಲೇಶಕಾರಣವಾಗುವಂತೆ ವೆಚ್ಚವನ್ನು ತಗ್ಗಿಸುವ ಏರ್ಪಾಡುಗಳನ್ನು ನಾವು ಕೈಕೊಳ್ಳಬೇಕಾಗಿ ಬಂದುದೇನೋ ನಿಜ. ಆದರೆ, ಮೈಸೂರು ಸಂಸ್ಥಾನದಲ್ಲಿ ಹೊಸ ತೆರಿಗೆ ಯಾವುದನ್ನೂ ವಿಧಿಸಬೇಕಾದ ಆವಶ್ಯಕತೆಯೇ ಇಲ್ಲದಂತೆ ನಾವು ಪಾರಾಗಿದ್ದೇವೆ. ಮಳೆಬೆಳೆಗಳು ಯಥೇಷ್ಟವಾಗಿ ನಡೆಸಿದುದರಿಂದಲಂತೂ ನಮಗೆ ಬಹಳ ಸಹಾಯವಾಗಿದೆ. ಅಂತೂ, ಹೆಚ್ಚಿನ ಪ್ರತಿಬಂಧಕವಾವುದೂ ಇಲ್ಲದಂತೆ ಸಾಧಾರಣ ರೀತಿಯಲ್ಲೇ ನಾವು ಭಾರಿ ಭಾರಿ ಬಂಡವಾಳದ ಕಾಮಗಾರಿಗಳನ್ನೂ, ಎಲ್ಲ ಇಲಾಖೆಗಳ ಸಾಮಾನ್ಯ ರೀತಿಯ ಅಭಿವೃದ್ಧಿ ಕಾರ್ಯಗಳನ್ನೂ, ಉಭಯತಾಪಿ ನಡೆಯಿಸಿಕೊಂಡು ಬರುವುದು ಪ್ರಸಕ್ತ ವರ್ಷದಲ್ಲಿ ನಮಗೆ ಸಾಧ್ಯವಾಯಿತು.

ನಾವು ಮುಂದೆ ಚಿರಕಾಲ ಇದೇ ರೀತಿಯಲ್ಲಿ ಪುರೋಭಿವೃದ್ಧಿಯನ್ನು ಸಾಧಿಸುವುದು ಶಕ್ಯವಾದೀತೆಂದು ನಾನು ಹಾರೈಸುತ್ತೇನೆ. ಏಕೆಂದರೆ ಮುಂದೆ ನಡೆಯುವ ರಾಜಕೀಯ ವ್ಯವಸ್ಥೆಯ ಸಂಬಂಧವಾದ ಚರ್ಚೆಗಳಲ್ಲಿ ನಮ್ಮ ಪ್ರಾಬಲ್ಯವು ವಿಶೇಷವಾಗಿ ನಡೆಯುವಂತಹ ಸನ್ನಿವೇಶಗಳು ಒದಗಬಹುದೆಂದು ನನಗೆ ತೋರುತ್ತದೆ. ನಮ್ಮ ಸಂಸ್ಥಾನದ ಪರಿಸ್ಥಿತಿಯು ಬ್ರಿಟಿಷ್ ಇಂಡಿಯಾದ ಪ್ರಾಂತಗಳ ಪರಿಸ್ಥಿತಿಗೂ ಮತ್ತು ಇತರ ಕೆಲವು ಸಂಸ್ಥಾನಗಳ ಪರಿಸ್ಥಿತಿಗೂ ಬಹುತರವಾಗಿ ಮಧ್ಯವರ್ತಿಯೆನಿಸಿ ಅಚ್ಚುಕಟ್ಟಾಗಿದೆ. ಅಷ್ಟೇಕೆ? ಅತ್ತ ಬ್ರಿಟಿಷ್ ಪ್ರಾಂತಗಳಲ್ಲಿ ರೂಢಮೂಲವಾಗಿ ಕಂಡುಬರುವ ಉತ್ತಮ ಲಕ್ಷಣಗಳೂ, ಇತ್ತ ಇತರ ಕೆಲವು ಸಂಸ್ಥಾನಗಳಲ್ಲಿ ಕಂಡುಬರುವ ಉತ್ತಮ ಲಕ್ಷಣಗಳೂ, ಎರಡೂ ನಮ್ಮ ಸಂಸ್ಥಾನದಲ್ಲಿರುವುವೆಂದು, ಸ್ವಪ್ರತಿಷ್ಠೆಯೆಂಬ ಅಪವಾದಕ್ಕೆ ಗುರಿಯಾಗುವ ಭಯವೇ ಇಲ್ಲದೆ ನಾನು ಸೂಚಿಸಬಹುದೆಂದು ತೋರುತ್ತದೆ. ಪ್ರಜೆಗಳ ಯೋಗಕ್ಷೇಮದಲ್ಲಿ ಅವಿಶ್ರಾಂತವಾದ ಆಸಕ್ತಿಯಿಂದಲೂ ಪ್ರಜೆಗಳ ಸುಖಕ್ಕೆ ಸಾಧಕವಾದ ಸಮಸ್ತ ವಿಚಾರಗಳಲ್ಲಿಯೂ ಕೇವಲ ಪರಿಪಕ್ವವಾದ ತಿಳಿವಳಿಕೆಯಿಂದಲೂ ಕೂಡಿ, ಪ್ರಜೆಗಳ ಶ್ರೇಯಸ್ಸೇ ತಮ್ಮ ಶ್ರೇಯಸ್ಸೆಂಬ ಮನೋವೃತ್ತಿಗನುಸಾರವಾಗಿ ಕೇವಲ ವಿಧಿನಿಯಮಬದ್ಧವಾದ ರಾಜ್ಯಭಾರಕ್ರಮವನ್ನನುಸರಿಸಿ, ಈ ವಿಚಾರಗಳಲ್ಲಿ ಸರ್ವರಿಗೂ ಆದರ್ಶಪ್ರಾಯರಾಗಿರುವ ಪ್ರಭುವರ್ಯರನ್ನು ಓಲೈಸಿ ಸೇವಿಸುವ ಸುಕೃತವು ನಮಗೆ ದೊರೆತಿದೆ. ಬ್ರಿಟಿಷ್ ರಾಜ್ಯಭಾರದ ಅತ್ಯುತ್ತಮವಾದ ಅವಧಿಯಲ್ಲಿ ಅವರ ಆಡಳಿತದ ಶಿಸ್ತು ಇತಿಹಾಸ ಸಂಬಂಧವಾದ ಘಟನೆಗಳ ದೆಸೆಯಿಂದ ನಮ್ಮ ಸಂಸ್ಥಾನದಲ್ಲಿ ನೆಲಸಬೇಕಾಗಿ ಬಂದು, ಅದು ಸಂಸ್ಥಾನದ ಸ್ಥಿತಿಗತಿಗಳಿಗೆ ಹೊಂದಿಕೆಯಿಂದ ಬೆಳಗಿ ಅಭಿವೃದ್ಧಿಯಾಗಿದ್ದ ಕಾಲದ ಸತ್ಫಲವಾಗಿ ಲಭಿಸಿದ ರಾಜ್ಯಭಾರಕ್ರಮಕ್ಕೆ ಮತ್ತಷ್ಟು ಒಪ್ಪವಿಟ್ಟು ಪ್ರಶಸ್ತಗೊಳಿಸಿರುವ ಅನುಕೂಲವೂ, ಇದರ ಜೊತೆಗೆ ನಮ್ಮೆಲ್ಲರಿಗೂ ದೊರೆತಿದೆ. ಆದಕಾರಣ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯಲ್ಲಿ ಭಾಗಿಗಳಾಗುವ ಇತರ ಸಂಸ್ಥಾನಗಳ ಸರ್ಕಾರಗಳ ಆಶಯಗಳನ್ನೂ ಬ್ರಿಟಿಷ್ ಪ್ರಾಂತಗಳ ಸರ್ಕಾರಗಳ ಆಶಯಗಳನ್ನೂ ಪರಸ್ಪರವಾಗಿ ಆಯಾ ಪ್ರತಿನಿಧಿಗಳಿಗೆ ತಿಳಿಸಿ ಮನದಟ್ಟುಮಾಡಿಕೊಟ್ಟು, ಅವರಲ್ಲಿ ಪರಸ್ಪರವಾಗಿ ಸ್ನೇಹ ಮಮತೆಗಳನ್ನುಂಟುಮಾಡುವ ದೊಡ್ಡ ಕಾರ್ಯಭಾರವನ್ನು ನಿರ್ವಹಿಸುವುದಕ್ಕೆ ನಮಗೆ ವಿಶೇಷವಿಧದ ಅರ್ಹತೆಯೂ ಅಧಿಕಾರವೂ ಉಂಟೆನ್ನಲು ಅಡ್ಡಿಯಿಲ್ಲ. ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯಲ್ಲಿ ಭಾಗಿಗಳಾಗುವ ಇತರ ಸಂಸ್ಥಾನಗಳವರಿಗೂ, ಬ್ರಿಟಿಷ್ ಪ್ರಾಂತಗಳವರಿಗೂ ಭಿನ್ನಾಭಿಪ್ರಾಯದ ಭೇದಭಾವವೇನಾದರೂ ಉಂಟಾದರೆ, ಆಗ ಪ್ರತಿನಿಧಿಗಳಿಗೆ ಪರಸ್ಪರವಾಗಿ ಸಮಾಧಾನವನ್ನುಂಟುಮಾಡಿ ಆ ಮೂಲಕ ಸಂಯುಕ್ತ ವ್ಯವಸ್ಥೆಯ ಕಾರ್ಯಗಳು ಕೇವಲ ಸುಲಲಿತವಾಗಿಯೂ ಸಫಲವಾಗಿಯೂ ನಡೆಯುವುದಕ್ಕೆ ಸಹಾಯಮಾಡುವ ಭಾಗದಲ್ಲಿ ಮುಂದಾಳುತನವನ್ನು ವಹಿಸುವುದು, ಮೈಸೂರು ಸಂಸ್ಥಾನದವರ ಭಾಗ್ಯಪಟ್ಟಿಯಲ್ಲಿ ವಿಧಿಯು ಅನುಗೊಳಿಸಿರುವ ಅನ್ಯತಕಲ್ಪವಾಗಿರಬಹುದೆಂದು ಹೇಳುವುದು ಯುಕ್ತವೆನಿಸುವುದಿಲ್ಲವೆ?

ಮಿರ್ಜಾ ಎಂ. ಇಸ್ಮಾಯಿಲ್,
ಮೈಸೂರು ಸಂಸ್ಥಾನದ ದಿವಾನ್‌ರವರು

1931ನೇ ಡಿಸೆಂಬರ್ ತಿಂಗಳಿನಲ್ಲಿ ನಡೆದ ಚಿತ್ರದುರ್ಗ ಡಿಸ್ಟ್ರಿಕ್ಟ ಮೊದಲನೇ ವೀರಶೈವ ಕಾನ್ಫರೆನ್ಸಿನ ಜಮಾ ಖರ್ಚು ಲೆಕ್ಕ.

ಖರ್ಚು.	ರೂ. ಆ. ಪೈ.
1. ಹೂ ಗಂಧ	49—13—9
2. ಕಲೆಕ್ಟರ್ ಬಗ್ಗೆ ಆದ ಖರ್ಚು	108—11—0
3. ಸ್ಟಾಂಪ್ ವಗ್ಯೆರೆ	23—10—0
4. ಬಾಡಿಗೆ ವಗ್ಯೆರೆ	4—14—0
5. ಪ್ರಿಂಟ್ ಛಾರ್ಜು	66—0—0
6. ಪಾತ್ರೆಗಳು ಕೊಂಡದ್ದು	84—12—0
7. ವಾಲಂಟರುಗಳಿಗೆ ಒಟ್ಟಿ ವಗ್ಯೆರೆ	41 0—9
8. ಕಟ್ಟಿಗೆ	15—12—0
9. ಕೂಲಿ	37—8—0
10 ಹಾಲು ಮೊಸರು	58—12—9
11. ದೀಪಕ್ಕೆ	13—8—0
12. ಸಂಗೀತ ಮತ್ತು ಬ್ಯಾಂಡ್	27—0—0
13. ದಿನಿಸಿ	482—0—3
14. ಅಡಿಗೆಯವರ ಸಂಬಳ ವಗ್ಯೆರೆ	44—8—0
15. ನೀರಿನವರಿಗೆ	28—8—0
16. ಕಾಗದ ವಗ್ಯೆರೆ	12—5—0
17. ಟೆಲಿಗ್ರಾಂ	1—15—0
18. ಇತರ ಖರ್ಚು	45—5—4
ಒಟ್ಟು	1144—15—10

ಜಮಾ.	ರೂ. ಆ. ಪೈ.
ಚಂದಾ ವಸೂಲಿ	1979—0—0
ಉಳಿದ ಸಾಮಾನು ಮಾರಿ ಬಂದದ್ದು	180—6—0
ಒಟ್ಟು	2159—6—0
ಖರ್ಚು ಜಾತಾ	1144—15—10
ಶಿಲ್ಕು	1014—6—2

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

27 M. C

ಬೇಕಾಗಿರುತ್ತೆ.

ರಾಯಚೂರು, ಬಳ್ಳಾರಿ, ಹೈದರಾಬಾದ್, ಹುಬ್ಬಳ್ಳಿ ಮತ್ತು ಧಾರವಾಡ ಈ ಪ್ರಾಂತ್ಯ ಕೆಲಸ ಮಾಡಲು ಅನುಭವಸ್ಥರಾದ ಮತ್ತು ಯೋಗ್ಯರಾದ ಏಜಂಟರುಗಳು ಬೇಕಾಗಿರುತ್ತೆ, ಧಾರಾಳವಾದ ಕಮಿಷನ್ ಕೊಡಲಾಗುವುದು.

ಯಸುಮಾನ್ ಅಂಡ್ ಸನ್ಸ್,

ರಬ್ಬರ್ ಸ್ಟಾಂಪ್ ಮತ್ತು ಫೋಟೋ ಬ್ಲಾಕುಗಳನ್ನು ತಯಾರಿಸುವವರು.

[2—2] ಚಿಕ್ಕಪೇಟೆ, ಬೆಂಗಳೂರು ಸಿಟಿ.

೧೯೩೨ ನೆಯ ಇಸವಿ ಅಕ್ಟೋಬರ್ ತಾ॥ ೩೧ ರಿಂದ ನವಂಬರ್ ತಾ॥ ೬ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಕಾರ್ತಿಕ ಶುದ್ಧ ಬಿದಿಗೆಯಿಂದ ಕಾರ್ತಿಕ ಶುದ್ಧ ನವಮಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ
31	[1] ಸೋಮ	ಬಿದಿ	23-26	ವಿ-ಅ	1-37-55-48	15
1	ಮಂಗಳ	ತದಿ	17-28	ಜ್ಯೇಷ್ಠ	53-26	16
2	[2] ಬುಧ	ಚೌತಿ	11-49	ಮೂಲ	49-34	17
3	[3] ಗುರು	ಪಂಚ	6-44	ಪೂಷಾ	46-52	18
4	ಶುಕ್ರ	ಷ-ಅ	2-19-55-54	ಉಷಾ	44-44	19
5	[4] ಶನಿ	ಅಷ್ಟ	56-16	ಶ್ರವ	44-0	20
6	[5] ಭಾನು	ನವ	54-11	ಧನಿ	43-28	21

(1) ಕಾರ್ತಿಕ ಸೋಮವಾರ. (2) ಮಳೆನಕ್ಷತ್ರ-ಸ್ವಾತಿ ಆಡೆಯುವಾದ. (3) ಜಯಚಾಮುಂಡಮ್ಮಣ್ಣಿಯವರ ವರ್ಧಂತಿ. (4) ಮಳೆನಕ್ಷತ್ರ-ವಿಶಾಖ ೧ ನೆಯ ಪಾದ. (5) ಮೇಲುಕೋಟೆಯಲ್ಲಿ ರಾಜಮುಡಿ ಉತ್ಸವ.

ಮೈಸೂರು: ಶ್ರೀ. ಜಯಚಾಮರಾಜೇಂದ್ರ ಪ್ರೆಸ್ [illegible] ಮುದ್ರಿತ ಪ್ರಕಟಿತ.

REG NO. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟನಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಚಿಜ್ಞನಕ್ಷತ್ರ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೩-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸ್ ೧೯೩೨ ನೆಯ ಇಸವಿ ನವಂಬರ್ ತಾರೀಖು ೭ ನೆಯ ಸೋಮವಾರ [ಸಂಚಿಕೆ ೪೫

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore.

(Sd.) S. SHA MANNA,
Secretary, Insurance Committee.

[50—18]



[50—1]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಚಿತ್ರ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿಹರ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಸಟೀಕ [illegible] ಮಂಜರಿ	೦—೮—೦	೦—೧೩—೦
ಸಟೀಕ ನವರತ್ನಯ	೦—೦—೦	೦—೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗ ಬೇಡಿರಿ.	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕದ. [ಸ್ಟರ	ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವ, ಇದ್ದ ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೇಚ್ಛಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರವೀರ್ಯಶುದ್ಧಿಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೭೦ ತೊಲಿಯ ಒಂದು ಡಬ್ಬಿಗೆ ೫। ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳ್ಳೇಸು ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೆ ಚೂರ್ಣ.

ಎಲ್ಲ ಬಗ್ಗೆದ ಸೆರಗು, ಮುಡಿಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಡಿಚೆಟ್ಟು ಆಗೋಣ, ಮುಡಿಚೆಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತೆ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತವೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ತೊಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ತೀವ್ರ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸೋಸೋಣವಾಗುವದಿಲ್ಲ ಮತ್ತು ಬಡತನಸ್ಥಿತಿಯಲ್ಲಿ ಹೆಚ್ಚು ಸಂತತಿಗಳಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಜೆತನವೋ, ಇಂಥ ಬೇರೆ ಕಾರಣದಿಂದ ಸಂತತಿ ಬೇಡ ಯಾರಿಗೆ ತೀರಿರುತ್ತದೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. ಶರೀರದಲ್ಲಿಯೂ ಸಂಸಾರ ಸುಖದಲ್ಲಿಯೂ ಏನೂ ಹಾನಿಯಾಗದೆ ವೇಳೆ ವೇಳೆಗೆ ಮುಡಿಚೆಟ್ಟು ಆಗುವದು ಸುರು ಇದ್ದು ಗರ್ಭಧಾರಣ ಬಂದು ಹೋಗುವದು. ಹಿಂದಿನಿಂದ ಏನುಮಾಡಿದರೂ ಸುರು ಆಗುವದಿಲ್ಲ ಹೀಗೆ ಸಶಾಸ್ತ್ರ ಅದೆ. ಪೂರ್ಣವಿಚಾರ ಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ ಒಂದು ಡಬ್ಬಿಗೆ ೬ ರೂ. ಟ. ಖ. ೮ ಆಣೆ. ಮತ್ತು ಕಡೆಗಾದ ೪ ನೇ ದಿವಸ ೬೦ ತೊಲಿ ಕಡಲೆ [illegible]. ೫ ನೇ ದಿವಸದಿಂದ ಮುಂಜಾನೆ ೧, ಗುಳಿಗೆ ಮಧ್ಯಾಹ್ನಕ್ಕೆ ೧, ಗುಳಿಗೆ ರಾತ್ರಿ ಊಟವಾದ ಅನಂತರ ೧ ಗುಳಿಗೆ ತಣ್ಣೀರಿನ ಕೂಡ ನುಂಗಬೇಕು. ಪಥ್ಯ ಸಾದಾ. ಕೆಲವು ನಮ್ಮ ಕಡೆಗೆ ಇರುವ ಖಾತ್ರಿ [illegible] ಪ್ರತಿಗಳ ವ್ಯಾಟಿಯಾಗಿ ತರಿಸಿಕೊಳ್ಳಿರಿ.

[50—45]

ಪತ್ತಾ ಮೊಹರ:—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ. ಎಂ. ಎಸ್. ಎಂ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ—ಶೀತ, ಒಂಟಿತಲೆನೋವು, ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚುಮಾಡುತ್ತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಬದಲು ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದ ಚಿಟಿಕೆಯನ್ನು ಏರಿಸಿದರೆ ಎಲ್ಲವೂ ಪರಿಹಾರವಾಗುವುದು, ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಗಸಟ್ಟೆ ಕಳುಹಿಸಲಾದೀತು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೪—೦
ಡಜನ್ ೧ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೬ ಆಣೆ.

ದಯವಾಡಿ ತಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[50—10] ಪೋ. ಬಾ. ೫೧೦, ಮದರಾಸು.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ನವಂಬರ್ ತಾ|| ೭ ನೆಯ ಸೋಮವಾರ.

ಮೂರನೆಯ ರೌಂಡು ಟೇಬಲ್ ಸಭೆ.

ಮೂರನೆಯ ರೌಂಡು ಟೇಬಲು ಸಭೆಯು ಈ ತಿಂಗಳ ಅಂತ್ಯಭಾಗದಲ್ಲಿ ಲಂಡನ್ ನಗರದೊಳಗೆ ಜರುಗುವುದು. ಈ ಸಭೆಗೆ ಆಹ್ವಾನಿಸಲ್ಪಟ್ಟಿರುವ ಭಾರತ ಸಂಸ್ಥಾನಗಳ ಮತ್ತು ಇತರ ಪ್ರತಿನಿಧಿಗಳು ಆಗಲೇ ಪ್ರಯಾಣಮಾಡಿರುವರು. ನಮ್ಮ ಸಂಸ್ಥಾನದ ಪ್ರತಿನಿಧಿಯಾದ ಸರ್ ಮಿರ್ಜ ಎಂ. ಇಸ್ಮೈಲ್‌ರವರೂ ಮೊನ್ನೆಯದಿವಸ ಬೆಂಗಳೂರಿನಿಂದ ಪ್ರಯಾಣಮಾಡಿದರು. ಈ ಸಭೆಗೆ ಕಾಂಗ್ರೆಸು ದೂರವಾಗಿರುವುದರಿಂದಲೂ ಮಹಾತ್ಮರು ಆಹ್ವಾನಿಸಲ್ಪಡದಿರುವುದರಿಂದಲೂ ಇದರ ಪರಿಸ್ಥಿತಿಯು "ವರನನ್ನು ಬಿಟ್ಟು ಕನ್ಯೆಯು ದಿಬ್ಬಣಕ್ಕೆ ಹೋದಂತೆ" ಇದೆ ಮತ್ತು ಇದರಿಂದ ಭಾರತದೇಶಕ್ಕೆ ಆಗತಕ್ಕ ರಾಜಕೀಯ ಪ್ರಯೋಜನವಾದರೂ ಹಿಂದಣೆರಡು ಸಭೆಗಳಿಗಿಂತಲೂ ಉತ್ತೇಜನಕರವಾಗಿರುವುದಿಲ್ಲ. ಆದರೆ ಬ್ರಿಟಿಷರವರು ಭಾರತ ರಾಜ್ಯಾಧಿಕಾರವನ್ನು ಭಾರತೀಯರಿಗೆ ವಹಿಸಿಕೊಡುವ ವಿಚಾರಕ್ಕೆ ಸಂಬಂಧಪಡದಿರುವ ಬೇರೆ ಕೆಲ ಮುಖ್ಯ ವಿಚಾರಗಳು ಅಂದರೆ ಸಂಯುಕ್ತ ಏಕೈಕ ಪ್ರಭುತ್ವಕ್ಕೆ ಸಂಬಂಧಪಟ್ಟ ವಿಚಾರಗಳು ಪರ್ಯಾಲೋಚಿಸಲ್ಪಡತಕ್ಕವಾಗಿವೆ. ಭಾರತದೇಶೀಯ ಸಂಸ್ಥಾನಗಳು ಅವುಗಳಲ್ಲಿ ಮುಖ್ಯವಾಗಿ ಮೈಸೂರು ಕೆಲ ಆರ್ಥಿಕ ಹಿತಗಳನ್ನೂ, ಒಂದು ಕಡೆ ತಮಗೂ ಸಂಯುಕ್ತ ಪ್ರಭುತ್ವಕ್ಕೂ ಇನ್ನೊಂದು ಕಡೆ ತಮಗೂ ಬ್ರಿಟಿಷ್ ಪ್ರಭುತ್ವಕ್ಕೂ ಇರಬೇಕಾದ ಸಂಬಂಧವನ್ನು ಬಗೆಹರಿಸಿಕೊಳ್ಳಬೇಕಾಗಿದೆ. ನಮ್ಮ ಸಂಸ್ಥಾನವು ಬ್ರಿಟಿಷ್ ಪ್ರಭುತ್ವಕ್ಕೆ ತೆರುತ್ತಿರುವ ಪೊಗದಿಯ ವಿಚಾರವಾಗಿ ಡೇವಿಡ್‌ಸನ್ ಕಮಿಟಿಯವರು ಕೊಟ್ಟಿರುವ ಪ್ರತಿಕೂಲಾಭಿಪ್ರಾಯವನ್ನು ಕುರಿತು ನಮ್ಮ ದಿವಾನರು ಬಹಳ ದೀರ್ಘವಾಗಿ ಹೇಳಿರುತ್ತಾರೆ. ಕಮಿಟಿಯವರ ಈ ವ್ಯತಿರಿಕ್ತಾಭಿಪ್ರಾಯವನ್ನು ಹೋಗಲಾಡಿಸಿ ಯುಕ್ತವೂ ಧರ್ಮವೂ ಆದ ತೀರ್ಮಾನವನ್ನು ಹೊಂದಲು ದಿವಾನರು ರೌಂಡು ಟೇಬಲ್ ಸಭೆಯಲ್ಲಿ ತಮ್ಮ ಬುದ್ಧಿ ಶಕ್ತಿ ಸಾಹಸಗಳನ್ನೆಲ್ಲ ವಿನಿಯೋಗಿಸಬೇಕಾಗಿರುತ್ತದೆ. ಬ್ರಿಟಿಷರು ರಾಜ್ಯಾಂಗ ಸುಧಾರಣಾ ಕ್ರಮವನ್ನು ತಮಗೆ ತಾವೇ ಸಿದ್ಧಪಡಿಸಿಕೊಂಡು ನೆಪಮಾತ್ರಕ್ಕೆ ಈ ಮೂರನೆಯ ಸಭೆಯನ್ನು ಕೂಡಿಸುವವರಾಗಿರುತ್ತಾರೆ. ಆದರೆ ಹಿಂದಿನಿಂದ ಅಕ್ರಮವಾಗಿ ನಡೆದುಕೊಂಡು ಬರುತ್ತಿರುವ ಕಂದಾಚಾರದ ಪದ್ಧತಿಗೆ ಈಗ ಅವರು ಸಿದ್ಧಪಡಿಸಿಕೊಂಡಿರುವ ಸುಧಾರಣಾ ಕ್ರಮದಲ್ಲಿ ಖಂಡಿತವಾಗಿ ಅವಕಾಶವಾಗುವುದಿಲ್ಲ. ಕೇಂದ್ರ ಪ್ರಭುತ್ವಕ್ಕೆ ದೇಶೀಯ ಸಂಸ್ಥಾನಗಳು ಸಲ್ಲಿಸುತ್ತಿರುವ ಪೊಗದಿಯನ್ನು ಈ ಸಭೆಯವರು ಪ್ರಥಮತಃ ತೊಲಗಿಸುವಂತೆ ನಮ್ಮ ದಿವಾನರು ಪ್ರಯತ್ನಿಸಿ ಜಯಶಾಲಿಗಳಾಗುವರೆಂದು ನಾವು ನಿರೀಕ್ಷಿಸುತ್ತೇವೆ. ಇದು ಸುಲಭಸಾಧ್ಯವಾದ ಕೆಲಸವಲ್ಲವಾದರೂ, ಇದಕ್ಕೆ ವಿರುದ್ಧವಾದವರ ಸಂಖ್ಯೆಯು ಹೆಚ್ಚಾಗಿದ್ದರೂ ಅಥವಾ ಕಡಿಮೆಯಾಗಿದ್ದರೂ ನಮ್ಮ ದಿವಾನರು ಪೊಗದಿಯನ್ನು ತೊಲಗಿಸಲು ಮತ್ತು ಬ್ರಿಟಿಷ್ ಪ್ರಭುತ್ವಾಡಳಿತಕ್ಕೆ ವಹಿಸಿಕೊಟ್ಟಿರುವ ದಂಡು ಪ್ರದೇಶವನ್ನು ಬಿಡಿಸಿಕೊಳ್ಳಲು ತಮ್ಮ ಕೈಲಾದ ಸಾಹಸವನ್ನೆಲ್ಲಾ ಮಾಡುವರೆಂಬ ಭರವಸೆಯು ನಮಗೆ ಸಂಪೂರ್ಣವಾಗಿರುತ್ತದೆ. ಮೈಸೂರು ಪ್ರಭುತ್ವದವರು ತಮ್ಮ ಕಾಗದ ಪತ್ರಗಳನ್ನೆಲ್ಲ ಉಚಿತವಾಗಿ, ಬ್ರಿಟಿಷ್ ಪ್ರಭುತ್ವದ ಅಂಚೆಯ ಮೂಲಕ ಸಾಗಿಸುತ್ತಿರುವರಷ್ಟೆ. ಇದಕ್ಕಾಗಿ ಅಂದರೆ ಅಂಚೆಯ ವೆಚ್ಚಕ್ಕಾಗಿ ಮೈಸೂರು ಪ್ರಭುತ್ವದವರಿಂದ ಪ್ರತಿ ವರ್ಷದಲ್ಲೂ ಬರಬೇಕಾದ ೩ ಲಕ್ಷ ಚಿಲ್ಲರೆ ರೂಪಾಯಿಗಳನ್ನು ಬಿಟ್ಟು ಕೊಟ್ಟಿರುವುದರಿಂದ ಪೊಗದಿಯಲ್ಲಿ ಕಡಿಮೆ ಮಾಡಿದಂತೆಯೇ ಆಗಿರುವುದೆಂದು ಡೇವಿಡ್‌ಸನ್ ಕಮಿಟಿಯವರು ಮಾಡಿರುವ ಸೂಚನೆಯನ್ನು ಕಾಸುಕಾಸಿಗೆ ಲೆಖ್ಖ ಮಾಡುವ ಪಿಸುಣನ ವಿನಾ ಮತ್ತಾರೂ ಒಪ್ಪುವುದಿಲ್ಲ. ಮನುಷ್ಯನ ಬುದ್ಧಿ ಶಕ್ತಿಯಿಂದ ಸಾಧಿಸಬೇಕಾಗಿರುವ ಈ ಸನ್ನಿವೇಶದಲ್ಲಿ ನಮ್ಮ ಮೈಸೂರು ಸಂಸ್ಥಾನಕ್ಕೆ ಸಾಧ್ಯವಾದಷ್ಟು ಪ್ರಯೋಜನ ಹೊಂದಲು ಸರ್ ಮಿರ್ಜಾಯವರ ವಿನಾ ಮತ್ತಾರೂ ಸಮರ್ಥರಲ್ಲವೆಂಬುದು ಸಿದ್ಧಾಂತವು. ಫೆಡರಲ್ ತತ್ತ್ವದ ಪ್ರಯೋಜನವನ್ನರಿತುಕೊಂಡು ಅದನ್ನು ಪ್ರಬಲಗೊಳಿಸುವಲ್ಲಿ ಮತ್ತು ನಮ್ಮ ಸಂಸ್ಥಾನವು ಅನ್ಯಾಯವಾಗಿ ಹೊತ್ತಿರುವ ಪೊಗದಿಯ ಭಾರವನ್ನು ತಪ್ಪಿಸುವಲ್ಲಿ ಸರ್ ಮಿರ್ಜಾಯವರು ಮಾಡುತ್ತಿರುವ ಸಾಹಸ ಪ್ರಯತ್ನಗಳನ್ನು ಅನೇಕ ಸಂದರ್ಭಗಳಲ್ಲಿ ನಮ್ಮ ದೇಶೀಯ ಪ್ರಜೆಗಳೊಡನೆ ನಾವು ಪ್ರಶಂಸಿಸಿರುತ್ತೇವೆ. ಭಾರತ ದೇಶಕ್ಕೆ ಸಾಧ್ಯವಾದಷ್ಟು ಸ್ವಾತಂತ್ರ್ಯವನ್ನೂ, ನಮ್ಮ ಸಂಸ್ಥಾನವು ಬಹಳ ಕಾಲದಿಂದ ಅಪೇಕ್ಷಿಸುತ್ತಿರುವ ಸೌಲಭ್ಯಗಳನ್ನೂ ಸರ್ ಮಿರ್ಜಾಯವರು ಈ ಅಂತ್ಯ ಪ್ರಯತ್ನದಲ್ಲಿ ಸಾಧಿಸುವರೆಂದು ನಿರೀಕ್ಷಿಸುತ್ತೇವೆ. ಮೊದಲನೆಯ ರೌಂಡುಟೇಬಲು ಸಭೆಗೆ ಕಾಂಗ್ರೆಸ್ ಪಕ್ಷದವರಿಗೆ ಆಹ್ವಾನವು ಇಲ್ಲದಿದ್ದುದರಿಂದ ಮಹಾತ್ಮರು ಸಭೆಗೆ ಹೋಗಲಿಲ್ಲವಾಗಿ ಆ ಸಭೆಯ ನಡವಳಿಕೆಗಳು ಭಾರತೀಯರಿಂದ ಅಂಗೀಕರಿಸಲ್ಪಡದೆ ನಿಷ್ಪ್ರಯೋಜನವಾದುದರ ಮೇಲೆ ಎರಡನೆಯ ಸಭೆಗೆ ಕಾಂಗ್ರೆಸ್ ಪಕ್ಷವಾಗಿ ಮಹಾತ್ಮರು ಆಹೂತರಾಗಿ ಹೋಗಿದ್ದು ಭಾರತೀಯರ ಇಂಗಿತವನ್ನು ಸಭಿಕರಿಗೆ ಮನದಟ್ಟಾಗುವಂತೆ ತಿಳಿಸಿದರು. ಆದರೆ ಆ ವೇಳೆಯಲ್ಲಿ ಮಹಮ್ಮದೀಯರೊಳಗೆ ಬಹುಸಂಖ್ಯಾತ ಪಕ್ಷದ ನಾಯಕರಾದ ಮೌಲಾನಾ ಮಹಮ್ಮದಾಲಿಯವರೂ, ಅಸ್ಪೃಶ್ಯರ ನಾಯಕರಾದ ಡಾ|| ಅಂಬೇಡಕರವರೂ ಮಹಾತ್ಮರ ಸಂಯುಕ್ತ ನಿಯೋಜಕ ವರ್ಗ ನಿರ್ಣಯಕ್ಕೆ ವಿರುದ್ಧವಾಗಿದ್ದು ಪ್ರತ್ಯೇಕ ನಿಯೋಜಕ ವರ್ಗ ನಿರ್ಣಯಕ್ಕಾಗಿ ಪಟ್ಟುಹಿಡಿದಿದ್ದುದರಿಂದ ಎರಡನೆಯ ಸಭೆಯ ಕಾರ್ಯಕಲಾಪಗಳು ಜಯಪ್ರದವಾಗಲು ಅವಕಾಶವಾಗಲಿಲ್ಲ. ಆದರೆ ಈ ವೇಳೆ ಮಹಾತ್ಮರ ಪ್ರಾಯೋಪವೇಶ ದೀಕ್ಷಾ ಮಹಿಮೆಯಿಂದ ಅಲಿ ಅಂಬೇಡಕರ ಹೃದಯ ಪರಿವರ್ತನವಾಗಿ ಉಭಯರೂ ಮಹಾತ್ಮರಮಿತ್ರರಾಗಿಯೂ ಅನುಯಾಯಿಗಳಾಗಿಯೂ ಪರಿಣಮಿಸಿರುವರು. ಅಲ್ಲದೆ ಅಂಬೇಡಕರು ಸಂಯುಕ್ತ ನಿಯೋಜಕ ವರ್ಗಕ್ಕೊಪ್ಪಿಕೊಂಡುದರಿಂದ ಪ್ರಭುತ್ವದವರು ಅಸ್ಪೃಶ್ಯರಿಗೆ ಕೊಟ್ಟಿದ್ದ ಪ್ರತ್ಯೇಕ ನಿಯೋಜಕ ವರ್ಗದೇರ್ಪಾಟನ್ನು ತಪ್ಪಿಸಿಬಿಟ್ಟರು ಮತ್ತು ಅಲಿಯವರು ಹಿಂದು ಮಹಮ್ಮದೀಯ ಸಿಕ್ಕರ ಸಖ್ಯ ಸಮಾಧಾನಗಳಿಗಾಗಿ ಪಂಡಿತ ಮದನಮೋಹನ ಮಾಲವ್ಯರವರ ಸಹಾಯದಿಂದ ಸಾಹಸಪಡುತ್ತಿರುವರು. ಈ ಶುಭ ಸನ್ನಿವೇಶದಲ್ಲಿ ಮಹಾತ್ಮರು ರೌಂಡುಟೇಬಲ್ ಸಭೆಗೆ ಆಹ್ವಾನಿಸಲ್ಪಟ್ಟಿದ್ದರೆ ರಾಜ್ಯಾಂಗ ನಿರ್ಮಾಣ ಕಾರ್ಯವು ಬ್ರಿಟಿಷ್ ಮತ್ತು ಭಾರತ ಪ್ರಭುತ್ವಗಳಿಗೂ, ಭಾರತ ಪ್ರಜೆಗಳಿಗೂ ಸಮ್ಮತವಾಗಿರುವ ರೀತಿಯಲ್ಲಿ ನಡೆದು ಭಾರತ ದೇಶದಲ್ಲಿ ಈಗ ನಡೆಯುತ್ತಿರುವ ಹೋರಾಟ ಕಿತ್ತಾಟಗಳು ನಿಂತು ಶಾಂತಿಸಮಾಧಾನಗಳೇರ್ಪಡಲು ಅವಕಾಶವಾಗುತ್ತಿದ್ದಿತೆನ್ನುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಇಂತಹ ಸುಸಂಧಿಯನ್ನು ಉಭಯ ಪ್ರಭುತ್ವದವರೂ ಕಳೆದುಕೊಂಡುದಕ್ಕಾಗಿ ಎಷ್ಟು ಚಿಂತಿಸಿದರೂ ಸಾಲದು. ಈಗಲಾದರೂ ಉಭಯ ಪ್ರಭುತ್ವದವರು ಮುಖ್ಯವಾಗಿ ಭಾರತದೇಶ ಪರಿಸ್ಥಿತಿಯನ್ನೂ ಪ್ರಜರ ಮನೋಭಾವವನ್ನೂ ಚೆನ್ನಾಗಿ ಅರಿತವರಾಗಿರುವ ವೈಸ್ರಾಯ ವೆಲಿಂಗ್ಡನ್‌ರವರು ರೌಂಡುಟೇಬಲು ಸಭೆಯ ಕಾರ್ಯಕಲಾಪಗಳಲ್ಲಿ ಮಹಾತ್ಮರು ಭಾಗಿಗಳಾಗುವಂತೆ ಮಾಡಿ ತನ್ಮೂಲಕ ಸಭೆಯ ಜಯಪ್ರಾಪ್ತಿಗೆ ಕಾರಣಭೂತರಾಗಲೆಂದು ಆಶಿಸುತ್ತೇವೆ.

ಬಳ್ಳಾರಿ ಡಿ|| ಬೋರ್ಡು ಅಧ್ಯಕ್ಷರ ಚುನಾವಣೆ

ಬಳ್ಳಾರಿ ಡಿಸ್ಟ್ರಿಕ್ಟು ಬೋರ್ಡಿನ ಅಧ್ಯಕ್ಷರ ಚುನಾವಣೆಯು ಕಳೆದ ಮಂಗಳವಾರ ಡಿಸ್ಟ್ರಿಕ್ಟ್ ಕಲೆಕ್ಟರ್ ಮಿ|| ಎಫ್. ಡಬ್ಲ್ಯು. ಸ್ಟೂಯರ್ಟ್‌ರವರ ಅಧ್ಯಕ್ಷತೆಯಲ್ಲಿ ನಡೆದಿತು. ಕಳೆದ 12 ವರ್ಷಗಳಿಂದಲೂ ಈ ಡಿ|| ಬೋರ್ಡಿನ ಅಧ್ಯಕ್ಷಪದವಿಯನ್ನು ಅನುಭವಿಸುತ್ತಿದ್ದ ದಿವಾನ್‌ಬಹದ್ದೂರ್ ಎಂ. ಗೋಪಾಲಸ್ವಾಮಿ ಮೊದಲಿಯಾರ್, ಬಿ.ಎ., ಬಿ.ಎಲ್., ರವರು ಮತ್ತು ವೀರಶೈವ ತರುಣರೂ ವಿದ್ಯಾವಂತರೂ ಆದ ಮ|| ಪಿಚ್ಚರಡ್ಡಿ ಮಹಾಬಲೇಶ್ವರಪ್ಪನವರು ಅಭ್ಯರ್ಥಿಗಳಾಗಿ ನಿಂತಿದ್ದು ಮ|| ಮೊದಲಿಯಾರರಿಗೆ 22 ಓಟುಗಳೂ ಮ|| ಮಹಾಬಲೇಶ್ವರಪ್ಪನವರಿಗೆ 23 ಓಟುಗಳೂ ಬಂದು ಮ|| ಮಹಾಬಲೇಶ್ವರಪ್ಪನವರು ಕೃತಾರ್ಥರಾದರೆಂದು ತಿಳುಹಲು ಸಂತೋಷವಾಗುತ್ತದೆ. ದಿ|| ಬ|| ಗೋಪಾಲಸ್ವಾಮಿಯವರು ತಂಜಾವೂರು ಬ್ರಾಹ್ಮಣೇತರ ಮಹಾಸಭೆಯ ವಿಫಲವಾದ ಅನಂತರ ಮದ್ರಾಸು ಪ್ರಭುತ್ವದ ಪದವಿಗೆ ಪ್ರಯತ್ನಪಡುತ್ತಿದ್ದರು. ಇವರು ಕರ್ಣಾಟಕ ಪ್ರಾಂತಗಳ ಏಕೀಕರಣಕ್ಕೆ ವಿರೋಧವಾಗಿ ಮೊದಲಿನಿಂದಲೂ ನಡೆದುಕೊಳ್ಳುತ್ತಿದ್ದುದರಿಂದ ಈ ಡಿಸ್ಟ್ರಿಕ್ಟಿನ ಕನ್ನಡಿಗರೆಲ್ಲರೂ ಇವರ ವಿಚಾರದಲ್ಲಿ ಎಚ್ಚೆತ್ತುಕೊಂಡು ಒಕ್ಕಟ್ಟಿನಿಂದ ಪ್ರಯತ್ನಿಸಿ ಇವರಿಗೆ ಈ ಚುನಾವಣೆಯಲ್ಲಿ ಅಪಜಯವನ್ನುಂಟುಮಾಡಿದುದಾಗಿಯೂ, ವಯೋವೃದ್ಧರೂ ವಿದ್ಯಾಪ್ರವರ್ತಕರೂ ಆದ ಮ|| ತೊಗರಿ ವೀರಪ್ಪನವರು ಮತ್ತು ಜಾಗಟಗೇರಿ ವಿರಾಳಮಠದ ವೇ|| ಸಣ್ಣವೀರಪ್ಪಯ್ಯನವರು ಕಳೆದ 3 ತಿಂಗಳಿಂದಲೂ ಅವಿಶ್ರಾಂತ ಶ್ರಮವಹಿಸಿ ಎಲ್ಲ ಗ್ರಾಮಗಳಲ್ಲೂ ಸಂಚರಿಸಿ ಜನರಿಗೆ ಬೋಧೆಯನ್ನು ಮಾಡಿ ಮಹಾಬಲೇಶ್ವರಪ್ಪನವರಿಗೆ ಜಯಸಂಪಾದಿಸಿ ಕೊಟ್ಟರೆಂದೂ ಸ್ಥಳವಾಸಿಯೊಬ್ಬರು ತಿಳಿಸಿರುತ್ತಾರೆ. ಮ|| ಮಹಾಬಲೇಶ್ವರಪ್ಪನವರು ಬಹಳ ಪ್ರಬಲಸ್ಪರ್ಧೆಯಲ್ಲಿ ಉತ್ತೀರ್ಣರಾದುದಕ್ಕಾಗಿ ಅವರನ್ನೂ, ಅವರ ಉತ್ತೀರ್ಣತೆಗೆ ಕಾರಣಭೂತರಾದ ವೇ|| ತೊಗರಿ ವೀರಪ್ಪನವರನ್ನೂ ಮ|| ಜಾಗಟಗೇರಿ ಸಣ್ಣವೀರಪ್ಪಯ್ಯನವರನ್ನೂ ಅಭಿನಂದಿಸಿ, ಮ|| ಮಹಾಬಲೇಶ್ವರಪ್ಪನವರು ಸಮರ್ಥತೆಯಿಂದಲೂ ನಿಷ್ಪಕ್ಷಪಾತದಿಂದಲೂ, ವಿವೇಕದಿಂದಲೂ, ಸೌಹಾರ್ದದಿಂದಲೂ ತಮ್ಮ ಉದ್ಯೋಗವನ್ನು ನಿರ್ವಹಿಸಿ ಪ್ರಜೆಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿ ತಮಗೀಪದವಿಯನ್ನೊದಗಿಸಿಕೊಟ್ಟವರಿಗೂ, ಸ್ವಸಮಾಜದವರಿಗೂ ಸಂತೋಷವನ್ನುಂಟುಮಾಡುವವರಾಗಲೆಂದು ಕೋರುತ್ತೇವೆ.

ವೈಸ್ರಾಯರ ಸಂಚಾರ

ವೈಸ್ರಾಯ ದಂಪತಿಗಳು ಬರುವ ಡಿಸೆಂಬರು ತಾ|| 14 ರಿಂದ 17 ರ ವರೆಗೆ ಬೊಂಬಾಯಿನಲ್ಲಿದ್ದು ಅನಂತರ ನಾಗಪುರದ ಮಾರ್ಗವಾಗಿ ಕಲಕತ್ತಾಕ್ಕೆ ಪ್ರಯಾಣಮಾಡುವರು.

ಕಮಲಾ ನೆಹರೂಯವರ ಅಸ್ವಸ್ಥತೆ ಹೆಚ್ಚಿದೆ

ಸೌಭಾಗ್ಯವತಿ ಕಮಲಾನೆಹರುಯವರಿಗೆ ಅಸ್ವಸ್ಥತೆಯು ಪ್ರಬಲವಾಗಿರುವುದರಿಂದ ಅವರ ಸಮೀಪದಲ್ಲಿದ್ದು ಅವರ ಚಿಕಿತ್ಸೋಪಚಾರವನ್ನು ನೋಡಿಕೊಳ್ಳುವುದಕ್ಕಾಗಿ ಅವರ ಪತಿಯಾದ ಪಂಡಿತ ಜವಹಾರಲಾಲ ನೆಹರುಯವರ ಕಾರಾಗೃಹ ಬಂಧ ವಿಮೋಚನೆ ಮಾಡಬೇಕೆಂದು ಅಸೆಂಬ್ಲಿಯ ಕೆಲ ಮೆಂಬರುಗಳು ದೊರತನದವರನ್ನು ಪ್ರಾರ್ಥಿಸಿದರು.

ಬೋಲಿವಿಯಾ ಪ್ರಜೆಗಳು ತಿರುಗಿಬಿದ್ದಿರುವರು

ಪೆರುಗ್ವೆ ಸೈನ್ಯಕ್ಕೂ ಬೋಲಿವಿಯಾ ಸೈನ್ಯಕ್ಕೂ ನಡೆದ ಯುದ್ಧದಲ್ಲಿ ಬೋಲಿವಿಯಾ ಸೇನೆಯು ಸೋತುಹೋದುದರ ಮೇಲೆ ಪ್ರಜೆಗಳಿಗೆ ಕೋಪ ಹುಟ್ಟಿರುತ್ತದೆ. ಲಾಪೇಜೆಂಬಲ್ಲಿ ಪ್ರಜೆಗಳು ಪಾರ್ಲಿಮೆಂಟು ಮನೆಯ ಹತ್ತಿರ ಬಹಳ ಗಲಭೆಯನ್ನು ನಡೆಯಿಸಿ ಆ ಮನೆಯ ಮೇಲೆ ಕಲ್ಲುಗಳನ್ನೆಸೆದರು. ಇದರಿಂದ ಆ ಮನೆಯ ಕಿಟಕಿ ಬಾಗಿಲುಗಳ ಕನ್ನಡಿಗಳೊಡೆದು ಹೋದುವು.

ರೌಂಡ ಟೇಬಲು ಸಭೆಗೆ ೨ ಲಕ್ಷ ವ್ಯಯ

ಬರುವ ಮೂರನೆಯ ರೌಂಡುಟೇಬಲು ಸಭೆಗೆ ಪ್ರತಿನಿಧಿಗಳು ಹೋಗಿಬರುವುದರ ವೆಚ್ಚವು 2 ಲಕ್ಷ ರೂಪಾಯಿಗಳಾಗುವುದೆಂದೂ, ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳಾಗಿ ಹೋಗುವ ಮಂತ್ರಿಗಳಿಗೆ ಕೂಡ ಭಾರತ ಪ್ರಭುತ್ವದವರೇ ಕೊಡಬೇಕಾಗುವುದೆಂದೂ, ಹಿಂದಣ ಸಾರಿ ಸಂಸ್ಥಾನಗಳೇ ಸ್ವತಃ ವಹಿಸಿಕೊಂಡಿದ್ದುವೆಂದೂ ಅಸೆಂಬ್ಲಿಯ ಆರ್ಥಿಕ ಸಂಘದವರು ತಿಳಿಸಿರುತ್ತಾರೆ.

ದೇವಸ್ಥಾನಗಳಿಗೆ ಅಸ್ಪೃಶ್ಯರ ಪ್ರವೇಶ

ಬರೋಡಾ ಕಾಶ್ಮೀರ ಸಂಸ್ಥಾನಗಳಲ್ಲಿ ಎಲ್ಲ ದೇವಾಲಯಗಳಿಗೆ ಹಿಂದುಗಳೆಲ್ಲರೂ ಯಾವ ಭೇದವೂ ಇಲ್ಲದೆ ಪ್ರವೇಶಗೊಳ್ಳಲ್ಪಡಬೇಕೆಂದು ಅವುಗಳ ಪ್ರಭುತ್ವದಪ್ಪಣೆಯಾಗಿರುತ್ತದೆ. ಮೈಸೂರು ಸಂಸ್ಥಾನವು ಎಲ್ಲ ವಿಚಾರಗಳಲ್ಲೂ ಇತರ ಸಂಸ್ಥಾನಗಳಿಗೆ ಮಾರ್ಗದರ್ಶಕವಾಗುತ್ತಿರುವುದು, ಆದರೆ ಈ ವಿಚಾರದಲ್ಲಿ ಮಾತ್ರ ಮಾರ್ಗದರ್ಶಕವಾಗದಿರುವುದು ಶೋಚನೀಯವಾಗಿರುತ್ತದೆ.

ಭಾರತ ಭಾನುವಾರ

ಇದೇ ನವಂಬರ್ ತಾ|| 20 ನೆಯ ಭಾನುವಾರ ಬ್ರಿಟನ್ನಿನಲ್ಲಿರುವ ಎಲ್ಲ ದೇವಾಲಯಗಳಲ್ಲೂ (ಇಂಡ್ಯಾಸಂಡೆ) ಇಂಡ್ಯಾ ದೇಶಕ್ಕೆ ಕ್ಷೇಮವಾಗಲೆಂದು ಪ್ರಾರ್ಥನೆ ನಡೆಸಲ್ಪಡುವುದು. ಕಾಂಗ್ರೆಸಿನವರೊಡನೆ ದೊರತನದವರು ಸಮಾಧಾನಮಾಡಿಕೊಳ್ಳುವುದು ಬಹಳ ಅಗತ್ಯವು ಎಂಬ ವಿಚಾರವಾಗಿ ಆ ಭಾನುವಾರ ದಿವಸ ಪ್ರತಿಯೊಂದು ಚರ್ಚಿನಲ್ಲೂ ಮತಗುರುಗಳೆಲ್ಲ ಬೋಧಿಸಬೇಕೆಂದು ಸಮಾಧಾನ ವರ್ಗದವರು ಆರ್ಚಿಬಿಷಪ್‌ರವರನ್ನು ಕೋರಿರುವರು. ಇದಕ್ಕೆ ಅನೇಕ ಗುರುಗಳು ಅಂಗೀಕರಿಸಿರುತ್ತಾರೆ.

ಬೊಂಬಾಯಿ ಸಂಸ್ಥಾನಗಳು

ಬೊಂಬಾಯಾಧಿಪತ್ಯಕ್ಕೆ ಸೇರಿರುವ 151 ಸಂಸ್ಥಾನಗಳು ಇಂಡ್ಯಾ ಪ್ರಭುತ್ವದೊಡನೆ ಪ್ರತ್ಯಕ್ಷ ಸಂಬಂಧವನ್ನು ಹೊಂದಬೇಕೆಂದು ಕೋರಿದುದರ ಮೇಲೆ ಈ ವಿಷಯವನ್ನು ಪ್ರತ್ಯಕ್ಷವಾಗಿ ವಿಚಾರಿಸಿ ತಿಳಿದುಕೊಳ್ಳುವುದಕ್ಕಾಗಿ ಲೆಫ್ಟಿನೆಂಟ್ ಕರ್ನಲ್ ಎಚ್. ವಿಲ್ಬರ್ಟ್ ಫೋರ್ಸ್ ಬೆಲ್ಲ್‌ರವರು ನಿಯಮಿಸಲ್ಪಟ್ಟಿರುವರು. ಇವರು ಕಳೆದ ತಾ|| 27 ರಲ್ಲಿ ಬೊಂಬಾಯಿನೊಳಗೆ ಅವರುಗಳ ವಿಚಾರಣೆ ನಡೆಯಿಸಿ ಶನಿವಾರ ಬರೋಡಾಕ್ಕೆ ಪ್ರಯಾಣ ಮಾಡಿದರು. ಅಲ್ಲಿಂದ ಮಾಹಿ, ರೇವಾ ಸಂಸ್ಥಾನಗಳಿಗೆ ಹೋಗುವರು.

ಮಹಾತ್ಮರನ್ನು ನೋಡಲು ಆಲಿಯವರಿಗೆ ಅವಕಾಶವಾಗಲಿಲ್ಲ

"ಭಾನುವಾರ ಅಥವಾ ಸೋಮವಾರ ಮಹಾತ್ಮರನ್ನು ನೋಡಲು ಅಪ್ಪಣೆಯನ್ನು ಕೋರುವೆನು. ಇದಕ್ಕೆ ಮಹಾತ್ಮರು ಸಮ್ಮತಿಸುವರೆಂದು ನಂಬುತ್ತೇನೆ" ಎಂದು ಷೌಕತಾಲಿಯವರು ವೈಸ್ರಾಯರ ಪ್ರೈವೆಟ್ ಸೆಕ್ರೆಟರಿಯವರಿಗೆ ತಂತಿಯನ್ನು ಕೊಟ್ಟಿದ್ದರು. ಅದಕ್ಕೆ "ನಾನು ನಿಮಗೆ ಕಳೆದ ತಾ|| 27 ರಲ್ಲಿ ಕೊಟ್ಟಿದ್ದ ತಂತಿಯಲ್ಲಿ ನೀವು ಮಹಾತ್ಮರನ್ನು ಸಂದರ್ಶಿಸಲು ಸಹ ವೈಸ್ರಾಯರು ಅಂಗೀಕರಿಸುವುದಿಲ್ಲವೆಂದು ನಾನು ಸ್ಪಷ್ಟವಾಗಿ ತಿಳಿಸಿದ್ದೆನು" ಎಂದು ಸೆಕ್ರೆಟರಿಯವರು ಉತ್ತರವನ್ನು ಕೊಟ್ಟಿರುತ್ತಾರೆ.

ಗಾಂಧಿ ಮಹಾತ್ಮರ ನಿರಶನ ದೀಕ್ಷಾ ಪ್ರಭಾವ

"ಇಂಡ್ಯಾದಲ್ಲಿ ಅಸ್ಪೃಶ್ಯರೆಂದು ಕರೆಯಲ್ಪಡುವ 6 ಕೋಟಿ ಮಂದಿ ಪ್ರಜೆಗಳನ್ನು ಅನೇಕ ಶತಮಾನಗಳಿಂದಲೂ ಉತ್ತಮ ವರ್ಣದ ಹಿಂದುಗಳು ಬಹಿಷ್ಕರಿಸಿದ್ದರು. ಈ ವರೆಗೆ ಸಂಘ ಸಂಸ್ಕರ್ತರೆಷ್ಟೋ ಮಂದಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಬಹಳ ಪ್ರಯಾಸಪಟ್ಟರಾದರೂ ಉತ್ತಮ ವರ್ಣದವರು ಕೊಂಚವಾದರೂ ಮಣಿಯಲಿಲ್ಲ. ಆದರೆ ಒಬ್ಬ ಶುಷ್ಕದೇಹಿಯು 6 ದಿವಸ 8 ಘಂಟೆಯಕಾಲ ನಿರಾಹಾರ ದೀಕ್ಷೆಯನ್ನು ಹಿಡಿದುದರಿಂದ ಲೋಕಾಶ್ಚರ್ಯಕರವಾದ ಪರಿಣಾಮವುಂಟಾಗಿದೆ" ಎಂದು ಅಮೇರಿಕೆಯ ಷಿಕಾಗೋ ಪಟ್ಟಣದಲ್ಲಿ ಪ್ರಕಟವಾಗುವ ಒಂದು ದೈನಿಕ ಪತ್ರಿಕೆಯು ಬರೆದಿರುತ್ತದೆ.

ಫಾದರ್ ಎಲ್ವಿನ್‌ರವರ ಅಭಿಪ್ರಾಯ

ಮೊದಲು ಪೂನಾ ಕ್ರಿಸ್ತು ಸೇವಾಸಂಘಕ್ಕೆ ಸೇರಿದ್ದ ಫಾದರ್ ಎಲ್ವಿನ್‌ರವರು ಇಂಗ್ಲೆಂಡಿನಿಂದ ಬೊಂಬಾಯಿಗೆ ಬಂದು ಅಲ್ಲಿಂದ ಮಧ್ಯರಾಷ್ಟ್ರದೊಳಗಿರುವ ತಮ್ಮಾಶ್ರಮಕ್ಕೆ ಹೋಗಿ ಮೊದಲಿನಂತೆಯೇ ಗಾರಡ್ಸು ಎಂಬ ಜಾತಿಯ ಜನರಿಗೆ ಸಹಾಯಮಾಡುತ್ತಿರುವರು. ಇವರು "ಗಾಂಧಿಯವರ ಉಪವಾಸ ವ್ರತದಿಂದ ದೊಡ್ಡ ಬದಲಾವಣೆಯುಂಟಾಗಿರುತ್ತದೆ. ಇದರಿಂದ ಪ್ರಾಚ್ಯ ದೇಶಗಳಲ್ಲಿ ಮಹಾತ್ಮ ಗಾಂಧಿಯವರ ಪ್ರಭಾವವು ಮೊದಲಿಗಿಂತಲೂ ಅತಿಶಯವಾಗಿ ಹೆಚ್ಚಿರುತ್ತದೆಂದು ನಾನು ನಂಬಿರುತ್ತೇನೆ. ಸಮಷ್ಟಿ ನಿಯೋಜಕ ವರ್ಗದಿಂದ ಕ್ರೈಸ್ತರಿಗೆ ಯಾವ ನಷ್ಟವೂ ಆಗುವುದಿಲ್ಲ. ಅವರು ಭಾರತ ದೇಶದಲ್ಲಿ ಇತರ ಜಾತಿಯವರೊಡನೆ ಕೂಡಿಕೊಂಡು ಕೆಲಸಮಾಡಬೇಕಾಗಿದೆ" ಎಂದು ಹೇಳಿದರು.

ಧಾನ್ಯದ ವರ್ತಕರಾದ ಭಾರತೀಯರ ಮತ್ತು ಬ್ರಿಟಿಷರೊಡಂಬಡಿಕೆ

ಬೊಂಬಾಯಿನಲ್ಲಿ ಹತ್ತಿಯ ವ್ಯಾಪಾರಿಗಳಾದ ಬ್ರಿಟಿಷ್ ವರ್ತಕರು ಕಾಂಗ್ರೆಸಿನವರೊಡನೆ ಒಡಂಬಡಿಕೆಯನ್ನು ಮಾಡಿಕೊಂಡು ಬಹಿಷ್ಕಾರ ವಾಂಛೆಯನ್ನು ಬಿಟ್ಟಂತೆಯೇ ಧಾನ್ಯದ ವ್ಯಾಪಾರಿಗಳಾದ ಬ್ರಿಟಿಷಿನವರು ಭಾರತೀಯರೊಡನೆ ಒಡಂಬಡಿಕೆಯನ್ನು ಮಾಡಿಕೊಂಡರು. "ಧಾನ್ಯದ ವ್ಯಾಪಾರಿಗಳಾದ ಭಾರತೀಯರ ಜಾತೀಯಾಶಯದಲ್ಲಿ ನಮಗೆ ಸಂಪೂರ್ಣ ಸಹಾನುಭೂತಿಯಿರುವುದು. ರಾಜಕೀಯ ಶಾಂತಿಯು ತ್ವರ್‍ಯದಲ್ಲೇ ಉಂಟಾಗಲೆಂದು ನಾವೂ ಕೋರುತ್ತೇವೆ. ಇಂತಹ ಸಮಯದಲ್ಲಿ ಮಹಾತ್ಮರು ರಾಜಕೀಯ ರಂಗದಲ್ಲಿರುವುದು ಅತ್ಯವಶ್ಯವು. ಇದಕ್ಕಾಗಿ ನಮ್ಮ ಶಕ್ತಿವಂಚನೆಯಿಲ್ಲದೆ ಪ್ರಯತ್ನಿಸುವೆವು" ಎಂದು ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿದೆ. ಇದಕ್ಕೆ ರಾಲಿ ಬ್ರದರ್ಸ್ ಮತ್ತು ಜೋಸಫ್ ಟ್ರಾವರ್ಸು ಹಸ್ತಾಕ್ಷರಗಳನ್ನು ಬರೆಯಲಿಲ್ಲ.

ದಕ್ಷಿಣಾಫ್ರಿಕೆಯಲ್ಲಿ ನಿರುದ್ಯೋಗಿ ಭಾರತೀಯರಿಗೆ ಸಹಾಯ

ದಕ್ಷಿಣಾಫ್ರಿಕೆಯಲ್ಲಿ ನಿರುದ್ಯೋಗಿಗಳಾಗಿಯೂ, ನಿರಾಧಾರಿಗಳಾಗಿಯೂ ಇರುವ ಯೂರೋಪಿಯನ್ನರ ಸಹಾಯಾರ್ಥವಾಗಿ 50 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಬೇಕೆಂದು ದಕ್ಷಿಣಾಫ್ರಿಕೆಯ ಯೂನಿಯನ್ ಪಾರ್ಲಿಮೆಂಟಿನವರು ನಿರ್ಧರಿಸಿರುವರು. ಆದರೆ ಅಲ್ಲಿ ನಿರುದ್ಯೋಗಿಗಳಾಗಿಯೂ, ನಿರಾಧಾರಿಗಳಾಗಿಯೂ ಇರುವ ಭಾರತೀಯರ ಸಹಾಯಾರ್ಥವಾಗಿ ಯಾವ ಏರ್ಪಾಟೂ ಮಾಡಲ್ಪಟ್ಟಿರುವುದಿಲ್ಲ. ಯೂನಿಯನ್ ಪ್ರಭುತ್ವದವರಿಗೆ ಯೂರೋಪಿಯನ್ನರು ಕಂದಾಯವನ್ನು ಸಲ್ಲಿಸುತ್ತಿರುವಂತೆಯೇ ಭಾರತೀಯರೂ ಸಲ್ಲಿಸುತ್ತಿರುವರು. ಅದುಕಾರಣ ಅಲ್ಲಿಯ ಭಾರತೀಯ ನಿರುದ್ಯೋಗಿಗಳ ಸಹಾಯಾರ್ಥವಾಗಿ ಕೆಲ ಸಾವಿರ ರೂಪಾಯಿಗಳನ್ನು ಕೊಡುವುದು ನ್ಯಾಯವೆಂದು ಆ ಯೂನಿಯನ್ನಿನವರಿಗೆ ಭಾರತ ಪ್ರಭುತ್ವದವರು ಬಿನ್ನವಿಸಿರುವುದಾಗಿ ತಿಳಿಯಬರುತ್ತದೆ.

ಡಾಕ್ಟರ್ ಅನ್ಸಾರಿಯವರ ತಂತೀವಾರ್ತೆ

ಜರ್ಮನಿಗೆ ಸೇರಿದ ಬಾದುನೋಹಿ ಎಂಬಲ್ಲಿಂದ ಕಳೆದ ಅಕ್ಟೋಬರ್ ತಾ|| 11ರಲ್ಲಿ ಡಾಕ್ಟರ್ ಅನ್ಸಾರಿಯವರು ಲಾಲಾ ದೇಶಬಂಧು ಗುಪ್ತರವರಿಗೆ ಒಂದು ತಂತಿಯನ್ನು ಕೊಟ್ಟಿದ್ದರು. ಅದರಲ್ಲಿ "ಈವರೆಗೆ ಇಲ್ಲಿ ನನಗೆ ನಡೆದ ವೈದ್ಯುತ ಚಿಕಿತ್ಸೆಯು ಮುಗಿಯಿತು. ಇಲ್ಲಿ ಡಾಕ್ಟರ್ ಗ್ರಾಂಡ್‌ಪೀಲ್‌ರವರು ಚಿಕಿತ್ಸೆಮಾಡುತ್ತಿರುವರು. ಮನಸ್ಸಿನಲ್ಲಿ ಯಾವ ಯೋಚನೆಯನ್ನೂ ಮಾಡಕೂಡದೆಂದು ಡಾಕ್ಟರು ಹೇಳಿರುತ್ತಾರೆ, ಆದರೆ ಈಗ ಭಾರತ ದೇಶಸ್ಥಿತಿಯ ವಿಚಾರವಾಗಿ ಆಲೋಚಿಸದೆ ಇರುವುದು ನನಗೆ ಬಹಳ ಅಸಂಭವವಾಗಿ ತೋರುತ್ತದೆ. ಅಲಹಾಬಾದು ಸಭೆಯಲ್ಲಿ ಅನುಕೂಲ ಫಲಪ್ರಾಪ್ತಿಯಾಗುವುದೆಂಬ ನಂಬಿಕೆಯು ನನಗೆ ಸಂಪೂರ್ಣವಾಗುಂಟು. ಹಿಂದು ಮಹಮ್ಮದೀಯ ಸಿಕ್ಕರೊಳಗೆ ಸಮಾಧಾನವು ಕುದುರುವಂತೆ ಅನುಗ್ರಹಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ" ಎಂದು ಬರೆಯಲ್ಪಟ್ಟಿದ್ದಿತು. ಹೇಗಾದರೂ ಮಾಡಿ ಸಮಾಧಾನವನ್ನು ಕುದುರಿಸಬೇಕೆಂದು ಅನೇಕ ಮಿತ್ರರುಗಳಿಗೆ ಡಾ|| ಅನ್ಸಾರಿಯವರು ತಂತಿ ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಅಸ್ಪೃಶ್ಯತಾ ನಿರ್ಮೂಲನ ವಿಚಾರದಲ್ಲಿ ಸಂದೇಶ

ಅಸ್ಪೃಶ್ಯತಾ ನಿರ್ಮೂಲನವೆಂದರೆ ಹರಿಜನರೊಡನೆ ಮಿಳಿತರಾಗಿ ಭೋಜನಮಾಡುವುದೂ ಅವರೊಡನೆ ಸಂಬಂಧ ಬಾಂಧವ್ಯಗಳನ್ನು ಬೆಳಸುವುದೂ ಎಂಬುದು ನಿಮ್ಮಭಿಪ್ರಾಯವೆ? ಒಂದು ಜಾತಿಯ ಜನರು ಸತ್ತ ಹಸು ಹಂದಿ ಮೊದಲಾದ ಜಂತುಗಳ ಮಾಂಸವನ್ನುತಿನ್ನುತ್ತಾರೆ. ಇವರುಗಳನ್ನು ದೇವಾಲಯದೊಳಕ್ಕೆ ಬರಗೊಡುವುದರಿಂದ ಇವರು ಈ ನಿಷಿದ್ಧ ಪದ್ಧತಿಯನ್ನು ಬಿಡಬೇಕೆ? ಇವರೊಡನೆ ಉತ್ತಮ ವರ್ಣದವರು ಕಲೆತು ಭೋಜನ ಮಾಡಬೇಕೆ? ಎಂದು ಕುಮುದ ಬಾಂಧವ ಭಟರ್ಜಿಯವರು ಮಹಾತ್ಮರಿಗೆ ಬರೆದಿದ್ದರು. ಅದಕ್ಕೆ "ನಿಮ್ಮ ರಾಷ್ಟ್ರದಲ್ಲಿ ಹರಿಜನರನ್ನು ದೇವಾಲಯಕ್ಕೆ ಬರಗೊಡುತ್ತಿರುವುದಕ್ಕಾಗಿ ನಾನು ಬಹಳವಾಗಿ ಸಂತೋಷಿಸುತ್ತೇನೆ. ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸಲಿಕ್ಕೆ ಅವರೊಡನೆ ಕಲೆತು ಭೋಜನಮಾಡುವುದೂ, ಅವರೊಡನೆ ಸಂಬಂಧ ಬಾಂಧವ್ಯಗಳನ್ನು ಬೆಳಸುವುದೂ ಆವಶ್ಯಕವಲ್ಲವು. ಇಷ್ಟಪಡುವವರು ಹಾಗೆ ಮಾಡಬಹುದು. ಎಲ್ಲ ವಿಷಯದಲ್ಲೂ ಹಿಂದುಗಳಲ್ಲಿ ಎಲ್ಲ ವರ್ಣದವರಿಗೂ ಇರುವ ಗೌರವವು ಹರಿಜನರಿಗು ಕೂಡ ಇರಬೇಕು" ಎಂದು ಮಹಾತ್ಮರು ಭಟರ್ಜಿಯವರಿಗುತ್ತರವನ್ನು ಕೊಟ್ಟಿರುವರು.

ಅಖಿಲ ಪಕ್ಷನಾಯಕರ ಸಭೆ

ಹಿಂದು ಮಹಮ್ಮದೀಯ ಸಿಕ್ಕರುಗಳೊಳಗೆ ಸಮಾಧಾನವನ್ನು ಕುದುರಿಸಲು ಮೌಲಾನಾ ಷೌಕತಾಲಿಯವರು ಅಖಿಲ ಪಕ್ಷನಾಯಕರ ಸಭೆಯನ್ನು ಕಳೆದ ತಾ|| 3 ರಲ್ಲಿ ಅಲಹಾಬಾದಿನೊಳಗೆ ಕರೆದಿದ್ದರು. ಈ ಸಭೆಯವರು ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ಚರ್ಚಿಸಿ ಸಮಾಧಾನವೇರ್ಪಡತಕ್ಕ ವಿಧಾನವನ್ನು ಕಂಡುಹಿಡಿಯಲು ಒಂದುಪಸಭೆಯನ್ನೇರ್ಪಡಿಸಿದರು. ಇವರು ಪ್ರತಿನಿತ್ಯದಲ್ಲೂ ಸಮಾವಿಷ್ಟರಾಗಿ ಹಿಂದು ಮಹಮ್ಮದೀಯ ಸಿಕ್ಕರುಗಳ ಅಭಿಪ್ರಾಯಾಶೋತ್ತರಗಳನ್ನು ಕೇಳಿ ತಿಳಿದುಕೊಳ್ಳುತ್ತಿರುವರು. ಸರ್ಕಾರಿಯುದ್ಯೋಗಗಳಿಗೆ ಶೇಕಡ 50 ಮಂದಿ ನಾಮಕರಣದ ಮೂಲಕವೂ, 50 ಮಂದಿ ಸ್ಪರ್ಧೆಯ ಮೂಲಕವೂ ಸೇರಿಸಲ್ಪಡಬೇಕೆಂದು ಸಿಕ್ಕರು ಮತ್ತು ಮಹಮ್ಮದೀಯರು; ರಾಷ್ಟ್ರೀಯ ಶಾಖೆಗಳ ಉದ್ಯೋಗಗಳಿಗೆ ಶೇಕಡ 33 ಮಂದಿ ನಾಮಕರಣದ ಮೂಲಕವೂ, 67 ಮಂದಿ ಸ್ಪರ್ಧೆಯ ಮೂಲಕವೂ ಸೇರಿಸಲ್ಪಡಬೇಕೆಂದು ಮತ್ತು ಇಂಪೀರಿಯಲ್ ಉದ್ಯೋಗಗಳಿಗೆ ಶೇಕಡ 75 ಮಂದಿ ನಾಮಕರಣದ ಮೂಲಕವೂ 25 ಮಂದಿ ಸ್ಪರ್ಧೆಯ ಮೂಲಕವೂ ಸೇರಿಸಲ್ಪಡಬೇಕೆಂದು ದೇಶೀಯ ಕ್ರೈಸ್ತರು ಕೋರಿರುವುದಾಗಿ ತಿಳಿಯಬಂದಿದೆ. ಬಾಕಿ ವಿಚಾರಗಳು ಇನ್ನೂ ಚರ್ಚೆಯಲ್ಲೇ ಇರುತ್ತವೆ. ಈ ಸಖ್ಯಸಮಾಧಾನ ಸಭೆಯು ಜಯಪ್ರದವಾಗಿ ನಡೆಯಲೆಂದು ಅನೇಕ ಪ್ರಾರ್ಥನೆಗಳು ನಡೆದೂ ನಡೆಯುತ್ತಲೂ ಇವೆ.

ಮದ್ರಾಸು ಮಂತ್ರಿವರ್ಗ ಬದಲಾವಣೆ

ಮದ್ರಾಸು ಪ್ರಭುತ್ವದಲ್ಲಿ ದಿವಾನ್ ಬಹದ್ದೂರ್ ಮುನಿಸ್ವಾಮಿನಾಯಡುಯವರು ಮುಖ್ಯಮಂತ್ರಿಯಾಗಿಯೂ, ಪಿ. ಟಿ. ರಾಜನ್ ಮತ್ತು ದಿ|| ಬ|| ಎನ್. ಕುಮಾರಸ್ವಾಮಿ ರೆಡ್ಡಿಯವರು ಉಪಮಂತ್ರಿಗಳಾಗಿಯೂ ಇದ್ದು ಅಭಿಪ್ರಾಯ ಭೇದದಿಂದ ಮೂವರೂ ಮಂತ್ರಿ ಪದವಿಯಿಂದ ನಿವೃತ್ತರಾದರು. ಇವರೆಲ್ಲರೂ ಜಸ್ಟಿಸ್ ಪಕ್ಷಕ್ಕೆ ಸೇರಿದವರು. ಬೊಬ್ಬಿಲಿ ರಾಜರು ಪ್ರಧಾನಮಂತ್ರಿಯಾಗಿಯೂ, ಮೊದಲಿದ್ದ ಪಿ. ಟಿ. ರಾಜನ್‌ರವರು ಮತ್ತು ದಿ|| ಬ|| ಕುಮಾರಸ್ವಾಮಿ ರೆಡ್ಡಿಯವರು ಮಂತ್ರಿಗಳಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ. ಜಸ್ಟಿಸ್ ಪಕ್ಷದವರಾದ ತಮ್ಮೊಳಗೆ ಭಿನ್ನಾಭಿಪ್ರಾಯ ಹುಟ್ಟಿದುದರಿಂದ ಮಂತ್ರಿ ಪದವಿಗಳನ್ನು ತ್ಯಜಿಸಿದ ಮೂವರು ತಮ್ಮ ಪಕ್ಷದಲ್ಲಿ ಒಡಕ ಹುಟ್ಟದಿರುವುದಕ್ಕಾಗಿಯೂ ಪಕ್ಷದ ಧ್ಯೇಯವನ್ನು ಕಾಪಾಡುವುದಕ್ಕಾಗಿಯೂ ಪುನಃ ಮಂತ್ರಿ ಪದವಿಯನ್ನು ತಮ್ಮಲ್ಲಾರೂ ಸ್ವೀಕರಿಸಬಾರದೆಂದು ನಿರ್ಧರಿಸಿಕೊಂಡಿದ್ದಾಗ್ಯೂ ಪಿ. ಟಿ. ರಾಜನ್‌ರವರೂ, ದಿ. ಬ. ಕುಮಾರಸ್ವಾಮಿ ರಡ್ಡಿಯವರೂ ಮಂತ್ರಿ ಪದವಿಗಳನ್ನು ಅಂಗೀಕರಿಸಿದುದರಿಂದಲೂ, ಧನಾಢ್ಯರ ಪಕ್ಷಾಭಿಮಾನಿಗಳಾದ ಬೊಬ್ಬಿಲಿರಾಜರು ಮುಖ್ಯ ಮಂತ್ರಿಯಾಗಿರುವುದರಿಂದಲೂ ಪ್ರಜಾಪಕ್ಷವೊಂದನ್ನೇರ್ಪಡಿಸಿ ಜಾತಿ ತಾರತಮ್ಯವಿಲ್ಲದೆ ಬ್ರಾಹ್ಮಣರಾದಿಯಾಗಿ ಸರ್ವರನ್ನೂ ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ಪ್ರಜಾಹಿತ ಸಾಧನೆಗೆ ಕೆಲಸಮಾಡಬೇಕೆಂದು ನಿರ್ಧರಿಸಿ ಮುಖ್ಯ ಮಂತ್ರಿ ಪದವಿಯಿಂದ ನಿವೃತ್ತರಾದ ದಿ|| ಬ|| ಮುನಿಸ್ವಾಮಿ ನಾಯಡುಯವರು ಅದರ ಅಧ್ಯಕ್ಷತೆಯನ್ನು ವಹಿಸಿರುವರು. ಬಹಳ ಕಾಲದಿಂದಲೂ ಬ್ರಾಹ್ಮಣೇತರರ ಹಿತಸಾಧನೆಗಾಗಿ ಪಾಟುಪಡುತ್ತ ಮಂತ್ರಿ ಮಂಡಲಕ್ಕೆ ತಮ್ಮ ಪಕ್ಷದವರೇ ನಿಯಮಿಸಲ್ಪಡುವಷ್ಟು ಪ್ರಾಬಲ್ಯವನ್ನು ಹೊಂದಿದ್ದ ಜಸ್ಟಿಸ್ ಪಕ್ಷದಲ್ಲಿ ಈ ರೀತಿ ಒಡಕು ಹುಟ್ಟಿದುದು ವಿಷಾದಕರವು. ಈ ನೂತನ ಪಕ್ಷದೇರ್ಪಾಟಿನಿಂದ ಜಸ್ಟಿಸ್ ಪಕ್ಷವು ಅಳಿಯುವುದೋ ಉಳಿದು ಪ್ರಬಲವಾಗುವುದೋ ನೋಡಬೇಕು.

ಬ್ರಿಟಿಷ್ ಲೇಬರ್‌ಪಕ್ಷದ ಪ್ರತಿನಿಧಿಗಳು

ರೌಂಡುಟೇಬಲ್ ಸಭೆಗೆ ಹೋಗುವುದಿಲ್ಲ

"ಕಾಂಗ್ರೆಸ್ ಪಕ್ಷದವರನ್ನು ರೌಂಡುಟೇಬಲ್ ಸಭೆಗೆ ದೊರತನದವರು ಆಹ್ವಾನಿಸಿಲ್ಲವಾದುದರಿಂದ, ಆಹ್ವಾನಿಸಲ್ಪಟ್ಟಿರುವ ಲೇಬರುಪಕ್ಷದ ಪ್ರತಿನಿಧಿಗಳು ಈ ಸಭೆಗೆ ಹೋಗಕೂಡದೆಂದು ನಿರ್ಧರಿಸಿದೆ. ನಮ್ಮ ಪಾರ್ಟಿಯವರೆಲ್ಲರೂ ಆಹ್ವಾನಿಸಲ್ಪಡಲಿಲ್ಲವೆಂಬುದರಮೇಲೆ ನಾವು ಈ ರೀತಿ ನಿರ್ಧರಿಸಿರುವುದಿಲ್ಲ. ಈ ಸಭೆಯಲ್ಲಿ ಭಾರತ ಪ್ರತಿನಿಧಿಗಳಿಗೂ ಬ್ರಿಟಿಷ್ ಪ್ರತಿನಿಧಿಗಳಿಗೂ ಸಮಾಧಾನವು ಕುದುರುವುದಿಲ್ಲವಾದುದರಿಂದ ನಾವು ಅದನ್ನು ನಿರೋಧಿಸಬೇಕೆಂದು ಯೋಚಿಸಿರುವುದಿಲ್ಲ. ಆದರೆ ಭಾರತೀಯರ ಪಕ್ಷವಾಗಿ ಮಾತನಾಡಲು ಅಧಿಕಾರವುಳ್ಳ ಪಾರ್ಟಿಯವರು ಈ ಸಭೆಯಲ್ಲಿರುವುದಿಲ್ಲವಾದುದರಿಂದ ಉಳಿದವರು ಮಾಡುವ ಸೂಚನೆಗಳನ್ನು ಕುರಿತು ಈಗಿನ ಸ್ಥಿತಿಯಲ್ಲಿ ನಾವು ಯಾವ ಜವಾಬ್ದಾರಿಯನ್ನೂ ವಹಿಸತಕ್ಕವರಾಗಿಲ್ಲ. ಕನ್ಸರ್ವೆಟಿವರ ಅಭಿಪ್ರಾಯವು ಕೇವಲ ಪ್ರತಿಕೂಲವಾಗಿರುವುದರಿಂದ ಈ ಸಭೆಯಿಂದ ಯಾವ ಲಾಭವೂ ಆಗುವುದಿಲ್ಲವೆಂದೇ ತೋರುತ್ತದೆ. ಈಗ ನಾವು ತಟಸ್ಥರಾಗಿದ್ದರೆ ಕಡೆಯಲ್ಲಿ ನಮಗೆ ಬಲವು ಹೆಚ್ಚಾಗಿರುವುದು. ನಾವು ಈಗ ಈ ಸಭೆಯನ್ನು ಬಹಿಷ್ಕರಿಸಿದರೂ ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿಯಲ್ಲಿ ನಮ್ಮ ಪ್ರತಿನಿಧಿಗಳಿರಲು ಯಾವ ಅಭ್ಯಂತರವೂ ಇರುವುದಿಲ್ಲ. ಆ ಕಮಿಟಿಯಲ್ಲಿ ಕೂಡ ಕನ್ಸರ್ವೆಟಿವ್ ಪಕ್ಷದವರೇ ಬಹಳ ಹೆಚ್ಚಾಗಿರುವರೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಈಗಾಗಲೇ ನಿಶ್ಚಯಿಸಿರುವ ವಿಧಾನವನ್ನು ಭಾರತ ಪ್ರತಿನಿಧಿಗಳಿಗೆ ತಿಳಿಸಿ ಇದನ್ನು ನೀವು ಅನುಮೋದಿಸುತ್ತಿರಾ ಇಲ್ಲವೆ, ಯಾವುದೋ ಒಂದನ್ನು ಹೇಳಿ ಎಂದು ದೊರತನದವರು ಕೇಳುವರೆಂದು ನಾವು ತಿಳಿದಿಲ್ಲ. ಆದರೆ ಮಂತ್ರಿಗಳ ಅಭಿಪ್ರಾಯದಲ್ಲಿ ಬಹಳ ಪ್ರತಿಕೂಲವು ಈವರೆಗೆ ಕಂಡುಬಂದಿದೆ. ಗಾಂಧಿ ಮಹಾತ್ಮರ ಬಿಡುಗಡೆಯನ್ನೂ, ಆರ್ಡಿನೆನ್ಸುಗಳ ರದ್ದುಪಡಿಸುವುದನ್ನೂ ಕುರಿತು ದೊರತನದವರು ಮೊಂಡತನದಿಂದಿರುವುದರಿಂದ ರೌಂಡುಟೇಬಲು ಸಭೆಯಿಂದ ಯಾವ ಪ್ರಯೋಜನವೂ ಉಂಟಾಗುವುದಿಲ್ಲವೆಂದು ನಾವು ಊಹಿಸಿರುತ್ತೇವೆ" ಎಂದು ಜಾರ್ಜ್ ಲಾನ್ಸ್‌ಬರೀಯವರು ಹೇಳಿರುತ್ತಾರೆ.

ಅಧಿಕಾರಿಗಳ ಬದಲಾವಣೆ.

ದಿವಾನರಾದ ಅಮೀನ್-ಉಲ್-ಮುಲ್ಕ್ ಸರ್ ಮಿರ್ಜ ಎಂ. ಇಸ್ಮೈಲ್ ಕೆಟಿ., ಸಿ. ಐ. ಇ., ಒ. ಬಿ. ಇ., ಯವರು ರೌಂಡುಟೇಬಲ್ ಸಭೆಗೆ ಪ್ರತಿನಿಧಿಯಾಗಿ ಹೋಗಲು ಹೆಚ್ಚುಕಟ್ಟಳೆಯ ಉದ್ಯೋಗದ ಮೇಲೆ ನಿಯಮಿಸಲ್ಪಟ್ಟಿರುವುದರಿಂದ 1 ನೆಯ ಕೌನ್ಸಿಲರ್ ರಾಜಕಾರ್ಯಪ್ರಸಕ್ತ ದಿವಾನ್ ಬಹದ್ದೂರ್ ಮ|| ಎಂ. ಎನ್. ಕೃಷ್ಣರಾವ್, ಬಿ.ಎ., ಯವರು ಅಫಿಸಿಯೇಟಿಂಗ್ ದಿವಾನರಾಗಿಯೂ (2) ಎರಡನೆಯ ಕೌನ್ಸಿಲರ್ ರಾಜಮಂತ್ರಪ್ರವೀಣ ಮ|| ಕೆ. ಮಥಾನ್, ಬಿ.ಎ., ಯವರು ಅಫಿಸಿಯೇಟಿಂಗ್ 1ನೆಯ ಕೌನ್ಸಿಲರಾಗಿಯೂ (3) ರೆವಿನ್ಯೂ ಕಮಿಷನರ್ ಮ|| ಎಸ್. ಪಿ. ರಾಜಗೋಪಾಲಾಚಾರಿ, ಬಿ.ಎ., ಬಿ.ಎಲ್., ರವರು ಅಫಿಸಿಯೇಟಿಂಗ್ 2 ನೇ ಕೌನ್ಸಿಲರಾಗಿಯೂ ಶ್ರೀಮನ್ಮಹಾರಾಜರವರಿಂದ ನಿಯಮಿಸಲ್ಪಟ್ಟಿರುತ್ತಾರೆ. ಅಲ್ಲದೆ ಎಕ್ಸೈಸ್ ಕಮಿಷನರ್ ಮ|| ಎಸ್. ಹಿರಿಯಣ್ಣಯ್ಯ, ಎಂ.ಎ., ಬಿಎಲ್., ರವರು ಆಕ್ಟಿಂಗ್ ರೆವಿನ್ಯೂ ಕಮಿಷನರಾಗಿಯೂ, ಡೆವಲೆಪ್‌ಮೆಂಟ್ ಶಾಖೆಯ ಸೆಕ್ರೆಟರಿ ಮ|| ಡಿ. ಶ್ರೀನಿವಾಸಯ್ಯಂಗಾರ್, ಬಿ.ಎ., ಯವರು ಆಕ್ಟಿಂಗ್ ಎಕ್ಸೈಸ್ ಕಮಿಷನರಾಗಿಯೂ, ಮೈಸೂರು ಡಿ|| ಡೆಪ್ಯುಟಿಕಮಿಷನರ್ ಮ|| ಎಸ್. ಅಬ್ದುಲ್‌ವಾಜಿದ್, ಬಿ.ಎ., ಯವರು ಆಕ್ಟಿಂಗ್ ಡೆವಲೆಪ್‌ಮೆಂಟ್ ಶಾಖಾ ಸೆಕ್ರೆಟರಿಯಾಗಿಯೂ, ಕಡೂರ್ ಡಿ|| ಡೆಪ್ಯುಟಿಕಮಿಷನರ್ ಮ|| ಸಿ. ಎಸ್. ಕುಪ್ಪಸ್ವಾಮಯ್ಯಂಗಾರ್‌ರವರು ಮೈಸೂರು ಡಿ|| ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮ|| ಸುಂದರರಾಜಯ್ಯಂಗಾರ್, ಬಿ.ಎ, ಯವರು ಕಡೂರು ಡಿ|| ಆಕ್ಟಿಂಗ್ ಡೆಪ್ಯುಟಿ ಕಮಿಷನರಾಗಿಯೂ, ಚೀಫ್‌ಸೆಕ್ರೆಟರಿ ಮ|| ಎನ್. ಮಾಧವರಾವ್, ಬಿ.ಎ.,ಬಿ.ಎಲ್., ರವರು ಮತ್ತು ದಿವಾನರ ಪ್ರೈವೆಟ್ ಸೆಕ್ರೆಟರಿ ಮ|| ಟಿ. ಶಿಂಗಾರವೇಲು ಮೊದಲಿಯಾರ್, ಬಿ.ಎ.,ಬಿ.ಎಲ್.,ರವರು ದಿವಾನರ ಕೂಡ ಸೀಮೆಗೆ ಹೆಚ್ಚುಕಟ್ಟಳೆಯ ಕೆಲಸದ ಮೇಲೆ ಹೋಗುವುದರಿಂದ ಮ|| ಗಳಾದ ಜನರಲ್ ಸೆಕ್ರೆಟರಿ ಆರ್. ರಂಗರಾವ್ ಬಿ. ಎ., ಬಿ. ಎಲ್., ರವರು ಆಕ್ಟಿಂಗ್ ಚೀಫ್ ಸೆಕ್ರೆಟರಿಯವರಾಗಿಯೂ, ತುಮಕೂರು ಡಿ|| ಡೆ|| ಕಮಿಷನರ್ ಎಚ್. ವಿ. ರಾಮಸ್ವಾಮಿ, ಎಂ. ಎ., ಬಿ. ಎಲ್., ರವರು ಆಕ್ಟಿಂಗ್ ಜನರಲ್ ಸೆಕ್ರೆಟರಿಯವರಾಗಿಯೂ ಬೆಂಗಳೂರು ಸಿಟಿ ಮಜಿಸ್ಟ್ರೇಟ್ ಟಿ. ಎ. ಅಬ್ದುಲ್‌ಖಾದರ್, ಬಿ. ಎ., ಯವರು ತುಮಕೂರು ಡಿ|| ಆಕ್ಟಿಂಗ್ ಡೆಪ್ಯುಟಿ ಕಮಿಷನರಾಗಿಯೂ, ಮೋಟಾರ್ ಟ್ರಾನ್ಸ್‌ಪೋರ್ಟ್ ಕಮಿಟಿ ಸೆಕ್ರೆಟರಿ ಎಸ್. ನಾರಾಯಣರಾವ್, ಬಿ. ಎ., ಯವರು ಬೆಂಗಳೂರು ಸಿಟಿ ಮಜಿಸ್ಟ್ರೇಟರಾಗಿಯೂ, ಚನ್ನಪಟ್ಟಣ ತಾ|| ಅಮಲ್ದಾರ್ ಕೆ. ವಿ. ರಾಮನಾಥಯ್ಯ, ಎಂ. ಎ., ಯವರು ಮೋಟಾರ್ ಟ್ರಾನ್ಸ್‌ಪೋರ್ಟ್ ಕಮಿಟಿ ಸೆಕ್ರೆಟರಿಯವರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಮೈಸೂರು ಡಿ|| ಪೊಲೀಸು ಸೂಪರಿಂಟೆಂಡೆಂಟರಾದ ಮ|| ಆರ್. ರಾಮಚಂದ್ರರಾವ್ ಘೋರ್ಪಡೆ, ಬಿ. ಎ., ಯವರು ಚಿತ್ರದುರ್ಗ ಡಿ|| ಟ್ರೆಜರಿ ಆಫೀಸರಾಗಿಯೂ ಬೆಂಗಳೂರು ಡಿ|| ಪೊ|| ಸೂಪರಿಂಟೆಂಡೆಂಟರಾದ ಮ|| ಎಂ. ಸಿ. ಮರಿಯಪ್ಪನವರು ಮೈಸೂರು ಡಿ|| ಪೊ|| ಸೂಪರಿಂಟೆಂಡೆಂಟರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ಒಳದೇಶದ ವೃತ್ತಾಂತಗಳು.

ಸೀಮೆಗೆ ದಯಮಾಡಿಸಿರುವ ನಮ್ಮ ಶ್ರೀಮದ್ಯುವರಾಜರವರು ಈ ತಾ|| 15-16 ರಲ್ಲಿ ಹಿಂದಿರುಗಿ ಬರುವುದಾಗಿ ವರ್ತಮಾನವಿದೆ.

ಬೆಂಗಳೂರು ದಂಡಿನಲ್ಲಿ ಸ್ಯಾಪರ್ಸ್ ಮತ್ತು ಮೈನರ್ಸ್ ಸಾರ್ಜಂಟ್ ಆಗಿದ್ದ 28 ವರ್ಷ ವಯಸ್ಸಿನ ಯೂರೋಪಿಯನ್ನು ಮೈದಾನದಲ್ಲಿ ಮದ್ದಿಗೆ ಬೆಂಕಿಯನ್ನು ಹೊತ್ತಿಸುತ್ತಿರುವಾಗ್ಗೆ ಮದ್ದು ಹೊತ್ತಿಕೊಂಡು ಅತನನ್ನು 17 ಅಡಿ ಎತ್ತರದ ವರೆಗೆ ಮೇಲಕ್ಕೆ ಹಾರಿಸಿಬಿಟ್ಟಿತು. ಅವನು ಅಲ್ಲಿಂದ ಬಿದ್ದು ಹತನಾದನು.

ದಿವಾನ್ ಸರ್ ಮಿರ್ಜಾ ಇಸ್ಮೈಲ್‌ರವರು ಕಳೆದ ಗುರುವಾರ ರಾಜಧಾನಿಗೆ ಬಂದು ಶ್ರೀಮನ್ಮಹಾರಾಜರವರ ದರ್ಶನ ಸಂಭಾಷಣಗಳನ್ನು ಮಾಡಿಕೊಂಡು ಬೆಂಗಳೂರಿಗೆ ಹಿಂದಿರುಗಿ ಮೊನ್ನೆಯ ದಿವಸ ಗುಂಟುಕಲ್ ಮಾರ್ಗವಾಗಿ ಬೊಂಬಾಯಿಗೆ ಪ್ರಯಾಣಮಾಡಿದರು ಮತ್ತು ಅಲ್ಲಿಂದ ಇಂದೋ ನಾಳೆಯೋ ಹಡಗನ್ನು ಹತ್ತಿ ಸೀಮೆಗೆ ತೆರಳುವರು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರಾಗಿ ನಾಮಕರಣ ಮಾಡಲ್ಪಟ್ಟಿದ್ದ ಸಿಸ್ಟರ್ ಈಥರ್ ಎಂ. ಟಾಂಕಿನ್‌ಸನ್‌ರವರು ಸೀಮೆಗೆ ಹೋಗುವುದಕ್ಕಾಗಿ ಕೌನ್ಸಿಲರ ಸ್ಥಾನವನ್ನು ಬಿಟ್ಟುದರಿಂದ ಅವರ ಬದಲು ಮಹಾರಾಣಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಶ್ರೀ ಕೆ. ಡಿ. ರುಕ್ಮಿಣಿ ಅಮ್ಮನವರು ಕೌನ್ಸಿಲರಾಗಿ ಪ್ರಭುತ್ವದವರಿಂದ ನಾಮಕರಣ ಮಾಡಲ್ಪಟ್ಟಿರುತ್ತಾರೆ.

ಕಳೆದ ವಿಜಯದಶಮಿ ರಾತ್ರಿ ಶ್ರೀಮನ್ಮಹಾರಾಜರವರ ಉತ್ಸವವು ಹಿಂದಿರುಗಿ ಬರುವ ವೇಳೆಯಲ್ಲಿ ಎ. ಎನ್. ಸತ್ಯನಾರಾಯಣರಾವ್, ರಾಮಸೇತು, ಕೃಷ್ಣ ಮತ್ತು ಗೋಪಾಲಶೆಟ್ಟಿ ಎಂಬವರು ಒಬ್ಬ ಮುಸಲ್ಮಾನರ ಹುಡುಗನ ಟಾಂಗಾಬಂಡಿಯನ್ನು ವಶಪಡಿಸಿಕೊಂಡು ಅದನ್ನು ತಡೆಯಲು ಬಂದ ಹುಡುಗನನ್ನು ಹೊಡೆದು ಗಾಯಪಡಿಸಿ ಬಾಡಿಗೆಯನ್ನು ಗೊತ್ತುಮಾಡದೆ ತೆಗೆದುಕೊಂಡು ಹೋದರೆಂಬ ಅಪರಾಧಕ್ಕಾಗಿ ಪೊಲೀಸಿನವರಿಂದ ಮೈಸೂರು ಸಿಟಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾರೆ. ಕಳೆದ ಗುರುವಾರ ಫಿರ್ಯಾದಿಪರ ಟಾಂಗಾಬಂಡಿಯ ಹುಡುಗನ ಮತ್ತು ಅವನ ಬಂಡಿಯ ಯಜಮಾನನ ವಿಚಾರಣೆಯು ನಡೆದು ಮುಂದುವರಿಸಲ್ಪಟ್ಟಿದೆ.

ಗತಿಸಿದ ಎಕ್ಸಿಕ್ಯುಟಿವ್ ಇಂಜನಿಯರ್ ವೆಂಕಟಸುಬ್ಬರಾಯರನ್ನು ದೂಷಿಸಿ ಅವಮಾನಪಡಿಸಿದುದಕ್ಕಾಗಿ ಪತ್ರಿಕಾ ಲೇಖಕರಾದ ಮ|| ವಿ. ಎಸ್. ಸಂಜೀವರಾಯರಿಗೆ ಬೆಂಗಳೂರು ಡಿ|| ಮೆಜಿಸ್ಟ್ರೇಟರು 3 ತಿಂಗಳ ಕಾರಾಗೃಹವಾಸವನ್ನೂ 500 ರೂ. ದಂಡವನ್ನೂ ವಿಧಿಸಿದ್ದರು. ಅದರ ಮೇಲೆ ಬೆಂಗಳೂರು ಡಿವಿಜನ್ ಸೆಷನ್ಸ್ ಕೋರ್ಟಿಗೆ ಅಪೀಲಾಗಿದ್ದುದರ ಅರ್ಥದಂಡವು ತಪ್ಪಿಸಲ್ಪಟ್ಟು ಕಾರಾಗೃಹವಾಸವು ಸ್ಥಿರಗೊಳಿಸಲ್ಪಟ್ಟಿದ್ದಿತು. ಹೈಕೋರ್ಟು ಅಪೀಲಿನಲ್ಲಿ ಜಸ್ಟಿಸ್ ಎಂ. ರಾಮಚಂದ್ರರಾಯರು ಅಪರಾಧಿಗೆ ವಯಸ್ಸಾಗಿರುವುದೆಂಬುದರ ಮೇಲೆ ಕಾರಾಗೃಹವಾಸ ಶಿಕ್ಷೆಯನ್ನು ತಪ್ಪಿಸಿ 300 ರೂ. ಅರ್ಥದಂಡವನ್ನು ವಿಧಿಸಿ, ಇದನ್ನು ಕೊಡಲು ತಪ್ಪಿದಲ್ಲಿ 1 ತಿಂಗಳ ಸಾದಾ ಸಜವನ್ನನುಭವಿಸಬೇಕೆಂದು ಅಪ್ಪಣೆಮಾಡಿದರು.

ರಾಜಧಾನಿಯ ದೇವರಾಜಮೊಹಲ್ಲಾ ಮ್ಯುನಿಸಿಪಲ್ ಕೌನ್ಸಿಲರಾಗಿದ್ದ ರಾವ್‌ಬಹದ್ದೂರ್ ಧರ್ಮಪ್ರಕಾಶ ಸಾಹುಕಾರ್ ಡಿ. ಬನುಮಯ್ಯನವರ ನಿಧನದಿಂದ ಅವರ ಸ್ಥಾನವು ಬರಿದಾಗಿರುವ ಪ್ರಯುಕ್ತ ಚುನಾವಣೆಯು ಬರುವ ಡಿಸೆಂಬರ್ ತಾ|| 3 ನೆಯ ಶನಿವಾರ ಬೆಳಗಿನ 8 ರಿಂದ 11 ಘಂಟೆಯವರೆಗೂ, ಮಧ್ಯಾಹ್ನ 3 ರಿಂದ ಸಾಯಂಕಾಲ 6 ಘಂಟೆಯ ವರೆಗೂ ಮ್ಯುನಿಸಿಪಲ್ ದೇವರಾಜ ಪ್ರೈಮರಿ ಬಾಯ್ಸ್ ಸ್ಕೂಲಿನಲ್ಲಿ ನಡೆಯುವುದಾಗಿಯೂ, ಉಮೇದುವಾರರಾಗತಕ್ಕವರು ಈ ತಾ|| 26 ರೊಳಗೆ ತಮ್ಮ ಉಮೇದ್ವಾರಿಯ ಪತ್ರಿಕೆಯನ್ನು ಪ್ರೆಸಿಡೆಂಟರಿಗೆ ಕಳುಹಿಸಬೇಕೆಂದೂ ಪ್ರಕಟವಾಗಿದೆ.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ನವಂಬರ್ ತಾ|| ೭ ನೆಯ ಸೋಮವಾರ.

ಮೂರನೆಯ ರೌಂಡು ಟೇಬಲ್ ಸಭೆ.

ಮೂರನೆಯ ರೌಂಡು ಟೇಬಲು ಸಭೆಯು ಈ ತಿಂಗಳ ಅಂತ್ಯಭಾಗದಲ್ಲಿ ಲಂಡನ್ ನಗರದೊಳಗೆ ಜರುಗುವುದು. ಈ ಸಭೆಗೆ ಆಹ್ವಾನಿಸಲ್ಪಟ್ಟಿರುವ ಭಾರತ ಸಂಸ್ಥಾನಗಳ ಮತ್ತು ಇತರ ಪ್ರತಿನಿಧಿಗಳು ಆಗಲೇ ಪ್ರಯಾಣಮಾಡಿರುವರು. ನಮ್ಮ ಸಂಸ್ಥಾನದ ಪ್ರತಿನಿಧಿಯಾದ ಸರ್ ಮಿರ್ಜ್ ಎಂ. ಇಸ್ಮೈಲ್‌ರವರೂ ಮೊನ್ನೆಯದಿವಸ ಬೆಂಗಳೂರಿನಿಂದ ಪ್ರಯಾಣಮಾಡಿದರು. ಈ ಸಭೆಗೆ ಕಾಂಗ್ರೆಸು ದೂರವಾಗಿರುವುದರಿಂದಲೂ ಮಹಾತ್ಮರು ಆಹ್ವಾನಿಸಲ್ಪಡದಿರುವುದರಿಂದಲೂ ಇದರ ಪರಿಸ್ಥಿತಿಯು "ವರನನ್ನು ಬಿಟ್ಟು ಕನ್ಯೆಯು ದಿಬ್ಬಣಕ್ಕೆ ಹೋದಂತೆ" ಇದೆ ಮತ್ತು ಇದರಿಂದ ಭಾರತದೇಶಕ್ಕೆ ಆಗತಕ್ಕ ರಾಜಕೀಯ ಪ್ರಯೋಜನವಾದರೂ ಹಿಂದಣೆರಡು ಸಭೆಗಳಿಗಿಂತಲೂ ಉತ್ತೇಜನಕರವಾಗಿರುವುದಿಲ್ಲ. ಆದರೆ ಬ್ರಿಟಿಷನವರು ಭಾರತ ರಾಜ್ಯಾಧಿಕಾರವನ್ನು ಭಾರತೀಯರಿಗೆ ವಹಿಸಿಕೊಡುವ ವಿಚಾರಕ್ಕೆ ಸಂಬಂಧಪಡದಿರುವ ಬೇರೆ ಕೆಲ ಮುಖ್ಯ ವಿಚಾರಗಳು ಅಂದರೆ ಸಂಯುಕ್ತ ಏಕೈಕ ಪ್ರಭುತ್ವಕ್ಕೆ ಸಂಬಂಧಪಟ್ಟ ವಿಚಾರಗಳು ಸರ್ವಾಲೋಚಿಸಲ್ಪಡತಕ್ಕವಾಗಿವೆ. ಭಾರತದೇಶೀಯ ಸಂಸ್ಥಾನಗಳು ಅವುಗಳಲ್ಲಿ ಮುಖ್ಯವಾಗಿ ಮೈಸೂರು ಕೆಲ ಆರ್ಥಿಕ ಸಮಸ್ಯೆಗಳನ್ನೂ, ಒಂದು ಕಡೆ ತಮಗೂ ಸಂಯುಕ್ತ ಪ್ರಭುತ್ವಕ್ಕೂ ಇನ್ನೊಂದು ಕಡೆ ತಮಗೂ ಬ್ರಿಟಿಷ್ ಪ್ರಭುತ್ವಕ್ಕೂ ಇರಬೇಕಾದ ಸಂಬಂಧವನ್ನು ಬಗೆಹರಿಸಿಕೊಳ್ಳಬೇಕಾಗಿದೆ. ನಮ್ಮ ಸಂಸ್ಥಾನವು ಬ್ರಿಟಿಷ್‌ಪ್ರಭುತ್ವಕ್ಕೆ ತೆರುತ್ತಿರುವ ಪೊಗದಿಯ ವಿಚಾರವಾಗಿ ಡೇವಿಡ್‌ಸನ್ ಕಮಿಟಿಯವರು ಕೊಟ್ಟಿರುವ ಪ್ರತಿಕೂಲಾಭಿಪ್ರಾಯವನ್ನು ಕುರಿತು ನಮ್ಮ ದಿವಾನರು ಬಹಳ ದೀರ್ಘವಾಗಿ ಹೇಳಿರುತ್ತಾರೆ. ಕಮಿಟಿಯವರ ಈ ವ್ಯತಿರಿಕ್ತಾಭಿಪ್ರಾಯವನ್ನು ಹೋಗಲಾಡಿಸಿ ಯುಕ್ತವೂ ಧರ್ಮವೂ ಆದ ತೀರ್ಮಾನವನ್ನು ಹೊಂದಲು ದಿವಾನರು ರೌಂಡು ಟೇಬಲ್ ಸಭೆಯಲ್ಲಿ ತಮ್ಮ ಬುದ್ಧಿ ಶಕ್ತಿ ಸಾಹಸಗಳನ್ನೆಲ್ಲ ವಿನಿಯೋಗಿಸಬೇಕಾಗಿರುತ್ತದೆ. ಬ್ರಿಟಿಷರು ರಾಜ್ಯಾಂಗ ಸುಧಾರಣಾಕ್ರಮವನ್ನು ತಮಗೆ ತಾವೇ ಸಿದ್ಧಪಡಿಸಿಕೊಂಡು ನೆಪಮಾತ್ರಕ್ಕೆ ಈ ಮೂರನೆಯ ಸಭೆಯನ್ನು ಕೂಡಿಸುವವರಾಗಿರುತ್ತಾರೆ. ಆದರೆ ಹಿಂದಿನಿಂದ ಅಕ್ರಮವಾಗಿ ನಡೆದುಕೊಂಡು ಬರುತ್ತಿರುವ ಕಂದಾಚಾರದ ಪದ್ಧತಿಗೆ ಈಗ ಅವರು ಸಿದ್ಧಪಡಿಸಿಕೊಂಡಿರುವ ಸುಧಾರಣಾ ಕ್ರಮದಲ್ಲಿ ಖಂಡಿತವಾಗಿ ಅವಕಾಶವಾಗುವುದಿಲ್ಲ. ಕೇಂದ್ರ ಪ್ರಭುತ್ವಕ್ಕೆ ದೇಶೀಯ ಸಂಸ್ಥಾನಗಳು ಸಲ್ಲಿಸುತ್ತಿರುವ ಪೊಗದಿಯನ್ನು ಈ ಸಭೆಯವರು ಪ್ರಥಮತಃ ತೊಲಗಿಸುವಂತೆ ನಮ್ಮ ದಿವಾನರು ಪ್ರಯತ್ನಿಸಿ ಜಯಶಾಲಿಗಳಾಗುವರೆಂದು ನಾವು ನಿರೀಕ್ಷಿಸುತ್ತೇವೆ. ಇದು ಸುಲಭಸಾಧ್ಯವಾದ ಕೆಲಸವಲ್ಲವಾದರೂ, ಇದಕ್ಕೆ ವಿರುದ್ಧವಾದವರ ಸಂಖ್ಯೆಯು ಹೆಚ್ಚಾಗಿದ್ದರೂ ಅಥವಾ ಕಡಿಮೆಯಾಗಿದ್ದರೂ ನಮ್ಮ ದಿವಾನರು ಪೊಗದಿಯನ್ನು ತೊಲಗಿಸಲು ಮತ್ತು ಬ್ರಿಟಿಷ್ ಪ್ರಭುತ್ವಾಡಳಿತಕ್ಕೆ ವಹಿಸಿಕೊಟ್ಟಿರುವ ದಂಡು ಪ್ರದೇಶವನ್ನು ಬಿಡಿಸಿಕೊಳ್ಳಲು ತಮ್ಮ ಕೈಲಾದ ಸಾಹಸವನ್ನೆಲ್ಲಾ ಮಾಡುವರೆಂಬ ಭರವಸೆಯು ನಮಗೆ ಸಂಪೂರ್ಣವಾಗಿರುತ್ತದೆ. ಮೈಸೂರು ಪ್ರಭುತ್ವದವರು ತಮ್ಮ ಕಾಗದ ಪತ್ರಗಳನ್ನೆಲ್ಲ ಉಚಿತವಾಗಿ, ಬ್ರಿಟಿಷ್ ಪ್ರಭುತ್ವದ ಅಂಚೆಯ ಮೂಲಕ ಸಾಗಿಸುತ್ತಿರುವರಷ್ಟೆ. ಇದಕ್ಕಾಗಿ ಅಂದರೆ ಅಂಚೆಯ ವೆಚ್ಚಕ್ಕಾಗಿ ಮೈಸೂರು ಪ್ರಭುತ್ವದವರಿಂದ ಪ್ರತಿ ವರ್ಷದಲ್ಲೂ ಬರಬೇಕಾದ ೩ ಲಕ್ಷ ಚಿಲ್ಲರೆ ರೂಪಾಯಿಗಳನ್ನು ಬಿಟ್ಟುಕೊಟ್ಟಿರುವುದರಿಂದ ಪೊಗದಿಯಲ್ಲಿ ಕಡಿಮೆ ಮಾಡಿದಂತೆಯೇ ಆಗಿರುವುದೆಂದು ಡೇವಿಡ್‌ಸನ್ ಕಮಿಟಿಯವರು ಮಾಡಿರುವ ಸೂಚನೆಯನ್ನು ಕಾಸುಕಾಸಿಗೆ ಲೆಖ್ಖಮಾಡುವ ಪಿಸುಣನ ವಿನಾ ಮತ್ತಾರೂ ಒಪ್ಪುವುದಿಲ್ಲ. ಮನುಷ್ಯನ ಬುದ್ಧಿ ಶಕ್ತಿಯಿಂದ ಸಾಧಿಸಬೇಕಾಗಿರುವ ಈ ಸನ್ನಿವೇಶದಲ್ಲಿ ನಮ್ಮ ಮೈಸೂರು ಸಂಸ್ಥಾನಕ್ಕೆ ಸಾಧ್ಯವಾದಷ್ಟು ಪ್ರಯೋಜನ ಹೊಂದಲು ಸರ್ ಮಿರ್ಜಯವರ ವಿನಾ ಮತ್ತಾರೂ ಸಮರ್ಥರಲ್ಲವೆಂಬುದು ಸಿದ್ಧಾಂತವು. ಫೆಡರಲ್ ತತ್ತ್ವದ ಪ್ರಯೋಜನವನ್ನರಿತುಕೊಂಡು ಅದನ್ನು ಪ್ರಬಲಗೊಳಿಸುವಲ್ಲಿ ಮತ್ತು ನಮ್ಮ ಸಂಸ್ಥಾನವು ಅನ್ಯಾಯವಾಗಿ ಹೊತ್ತಿರುವ ಪೊಗದಿಯ ಭಾರವನ್ನು ತಪ್ಪಿಸುವಲ್ಲಿ ಸರ್ ಮಿರ್ಜಯವರು ಮಾಡುತ್ತಿರುವ ಸಾಹಸ ಪ್ರಯತ್ನಗಳನ್ನು ಅನೇಕ ಸಂದರ್ಭಗಳಲ್ಲಿ ನಮ್ಮ ದೇಶೀಯ ಪ್ರಜೆಗಳೊಡನೆ ನಾವು ಪ್ರಶಂಸಿಸಿರುತ್ತೇವೆ. ಭಾರತ ದೇಶಕ್ಕೆ ಸಾಧ್ಯವಾದಷ್ಟು ಸ್ವಾತಂತ್ರ್ಯವನ್ನೂ, ನಮ್ಮ ಸಂಸ್ಥಾನವು ಬಹಳ ಕಾಲದಿಂದ ಆಶಿಸುತ್ತಿರುವ ಸೌಲಭ್ಯಗಳನ್ನೂ ಸರ್ ಮಿರ್ಜಯವರು ಈ ಅಂತ್ಯಪ್ರಯತ್ನದಲ್ಲಿ ಸಾಧಿಸುವರೆಂದು ನಿರೀಕ್ಷಿಸುತ್ತೇವೆ. ಮೊದಲನೆಯ ರೌಂಡುಟೇಬಲು ಸಭೆಗೆ ಕಾಂಗ್ರೆಸ್ ಪಕ್ಷದವರಿಗೆ ಆಹ್ವಾನವು ಇಲ್ಲದಿದ್ದುದರಿಂದ ಮಹಾತ್ಮರು ಸಭೆಗೆ ಹೋಗಲಿಲ್ಲವಾಗಿ ಆ ಸಭೆಯ ನಡವಳಿಕೆಗಳು ಭಾರತೀಯರಿಂದ ಅಂಗೀಕರಿಸಲ್ಪಡದೆ ನಿಷ್ಪ್ರಯೋಜನವಾದುದರ ಮೇಲೆ ಎರಡನೆಯ ಸಭೆಗೆ ಕಾಂಗ್ರೆಸ್ ಪಕ್ಷವಾಗಿ ಮಹಾತ್ಮರು ಆಹೂತರಾಗಿ ಹೋಗಿದ್ದು ಭಾರತೀಯರ ಇಂಗಿತವನ್ನು ಸಭಿಕರಿಗೆ ಮನದಟ್ಟಾಗುವಂತೆ ತಿಳಿಸಿದರು. ಆದರೆ ಆ ವೇಳೆಯಲ್ಲಿ ಮಹಮ್ಮದೀಯರೊಳಗೆ ಬಹುಸಂಖ್ಯಾಕ ಪಕ್ಷದ ನಾಯಕರಾದ ಮೌಲಾನಾ ಮಹಮ್ಮದಾಲಿಯವರೂ, ಅಸ್ಪೃಶ್ಯರ ನಾಯಕರಾದ ಡಾ|| ಅಂಬೇಡಕರವರೂ ಮಹಾತ್ಮರ ಸಂಯುಕ್ತ ನಿಯೋಜಕ ವರ್ಗ ನಿರ್ಣಯಕ್ಕೆ ವಿರುದ್ಧವಾಗಿದ್ದು ಪ್ರತ್ಯೇಕ ನಿಯೋಜಕ ವರ್ಗ ನಿರ್ಣಯಕ್ಕಾಗಿ ಪಟ್ಟುಹಿಡಿದಿದ್ದುದರಿಂದ ಎರಡನೆಯ ಸಭೆಯ ಕಾರ್ಯಕಲಾಪಗಳು ಜಯಪ್ರದವಾಗಲು ಅವಕಾಶವಾಗಲಿಲ್ಲ. ಆದರೆ ಈ ವೇಳೆ ಮಹಾತ್ಮರ ಪ್ರಾಯೋಪವೇಶ ದೀಕ್ಷಾ ಮಹಿಮೆಯಿಂದ ಆಲಿ ಅಂಬೇಡಕರ ಹೃದಯ ಪರಿವರ್ತನವಾಗಿ ಉಭಯರೂ ಮಹಾತ್ಮರಮಿತ್ರರಾಗಿಯೂ ಅನುಯಾಯಿಗಳಾಗಿಯೂ ಪರಿಣಮಿಸಿರುವರು. ಅಲ್ಲದೆ ಅಂಬೇಡಕರು ಸಂಯುಕ್ತ ನಿಯೋಜಕ ವರ್ಗಕ್ಕೊಪ್ಪಿಕೊಂಡುದರಿಂದ ಪ್ರಭುತ್ವದವರು ಅಸ್ಪೃಶ್ಯರಿಗೆ ಕೊಟ್ಟಿದ್ದ ಪ್ರತ್ಯೇಕ ನಿಯೋಜಕ ವರ್ಗದೇರ್ಪಾಟನ್ನು ತಪ್ಪಿಸಿಬಿಟ್ಟರು ಮತ್ತು ಆಲಿಯವರು ಹಿಂದು ಮಹಮ್ಮದೀಯ ಸಿಕ್ಕರ ಸಖ್ಯ ಸಮಾಧಾನಗಳಿಗಾಗಿ ಪಂಡಿತ ಮದನಮೋಹನ ಮಾಲವ್ಯರವರ ಸಹಾಯದಿಂದ ಸಾಹಸಪಡುತ್ತಿರುವರು. ಈ ಶುಭ ಸನ್ನಿವೇಶದಲ್ಲಿ ಮಹಾತ್ಮರು ರೌಂಡುಟೇಬಲ್ ಸಭೆಗೆ ಆಹ್ವಾನಿಸಲ್ಪಟ್ಟಿದ್ದರೆ ರಾಜ್ಯಾಂಗ ನಿರ್ಮಾಣ ಕಾರ್ಯವು ಬ್ರಿಟಿಷ್ ಮತ್ತು ಭಾರತ ಪ್ರಭುತ್ವಗಳಿಗೂ, ಭಾರತ ಪ್ರಜೆಗಳಿಗೂ ಸಮ್ಮತವಾಗಿರುವ ರೀತಿಯಲ್ಲಿ ನಡೆದು ಭಾರತ ದೇಶದಲ್ಲಿ ಈಗ ನಡೆಯುತ್ತಿರುವ ಹೋರಾಟ ಕಿತ್ತಾಟಗಳು ನಿಂತು ಶಾಂತಿಸಮಾಧಾನಗಳೇರ್ಪಡಲು ಅವಕಾಶವಾಗುತ್ತಿದ್ದಿತೆನ್ನುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಇಂತಹ ಸುಸಂಧಿಯನ್ನು ಉಭಯ ಪ್ರಭುತ್ವದವರೂ ಕಳೆದುಕೊಂಡುದಕ್ಕಾಗಿ ಎಷ್ಟು ಚಿಂತಿಸಿದರೂ ಸಾಲದು. ಈಗಲಾದರೂ ಉಭಯ ಪ್ರಭುತ್ವದವರು ಮುಖ್ಯವಾಗಿ ಭಾರತದೇಶ ಪರಿಸ್ಥಿತಿಯನ್ನೂ ಪ್ರಜರ ಮನೋಭಾವವನ್ನೂ ಚೆನ್ನಾಗಿ ಅರಿತವರಾಗಿರುವ ವೈಸ್ರಾಯ ವೆಲಿಂಗ್‌ಡನ್‌ರವರು ರೌಂಡುಟೇಬಲು ಸಭೆಯ ಕಾರ್ಯಕಲಾಪಗಳಲ್ಲಿ ಮಹಾತ್ಮರು ಭಾಗಿಗಳಾಗುವಂತೆ ಮಾಡಿ ತನ್ಮೂಲಕ ಸಭೆಯ ಜಯಪ್ರಾಪ್ತಿಗೆ ಕಾರಣಭೂತರಾಗಲೆಂದು ಆಶಿಸುತ್ತೇವೆ.

ಬಳ್ಳಾರಿ ಡಿ|| ಬೋರ್ಡ್ ಅಧ್ಯಕ್ಷರ ಚುನಾವಣೆ

ಬಳ್ಳಾರಿ ಡಿಸ್ಟ್ರಿಕ್ಟು ಬೋರ್ಡಿನ ಅಧ್ಯಕ್ಷರ ಚುನಾವಣೆಯು ಕಳೆದ ಮಂಗಳವಾರ ಡಿಸ್ಟ್ರಿಕ್ಟ್ ಕಲೆಕ್ಟರ್ ಮಿ|| ಎಫ್. ಡಬ್ಲ್ಯು. ಸ್ಟ್ಯೂಯರ್ಟ್‌ರವರ ಅಧ್ಯಕ್ಷತೆಯಲ್ಲಿ ನಡೆದಿತು. ಕಳೆದ 12 ವರ್ಷಗಳಿಂದಲೂ ಈ ಡಿ|| ಬೋರ್ಡಿನ ಅಧ್ಯಕ್ಷಪದವಿಯನ್ನು ಅನುಭವಿಸುತ್ತಿದ್ದ ದಿವಾನ್‌ಬಹದ್ದೂರ್ ಎಂ. ಗೋಪಾಲಸ್ವಾಮಿ ಮೊದಲಿಯಾರ್, ಬಿ.ಎ., ಬಿ.ಎಲ್., ರವರು ಮತ್ತು ವೀರಶೈವ ತರುಣರೂ ವಿದ್ಯಾವಂತರೂ ಆದ ಮ|| ಪಿಚ್ಚರಡ್ಡಿ ಮಹಾಬಲೇಶ್ವರಪ್ಪನವರು ಅಭ್ಯರ್ಥಿಗಳಾಗಿ ನಿಂತಿದ್ದು ಮ|| ಮೊದಲಿಯಾರರಿಗೆ 22 ಓಟುಗಳೂ ಮ|| ಮಹಾಬಲೇಶ್ವರಪ್ಪನವರಿಗೆ 23 ಓಟುಗಳೂ ಬಂದು ಮ|| ಮಹಾಬಲೇಶ್ವರಪ್ಪನವರು ಕೃತಾರ್ಥರಾದರೆಂದು ತಿಳುಹಲು ಸಂತೋಷವಾಗುತ್ತದೆ. ದಿ|| ಬ|| ಗೋಪಾಲಸ್ವಾಮಿಯವರು ತಂಜಾವೂರು ಬ್ರಾಹ್ಮಣೇತರ ಮಹಾಸಭೆಯ ವಿಪ್ಲವವಾದ ಅನಂತರ ಮದ್ರಾಸು ಪ್ರಭುತ್ವದ ಪದವಿಗೆ ಪ್ರಯತ್ನಪಡುತ್ತಿದ್ದರು. ಇವರು ಕರ್ನಾಟಕ ಪ್ರಾಂತಗಳ ಏಕೀಕರಣಕ್ಕೆ ವಿರೋಧವಾಗಿ ಮೊದಲಿನಿಂದಲೂ ನಡೆದುಕೊಳ್ಳುತ್ತಿದ್ದುದರಿಂದ ಈ ಡಿಸ್ಟ್ರಿಕ್ಟಿನ ಕನ್ನಡಿಗರೆಲ್ಲರೂ ಇವರ ವಿಚಾರದಲ್ಲಿ ಎಚ್ಚೆತ್ತುಕೊಂಡು ಒಕ್ಕಟ್ಟಿನಿಂದ ಪ್ರಯತ್ನಿಸಿ ಇವರಿಗೆ ಈ ಚುನಾವಣೆಯಲ್ಲಿ ಅಪಜಯವನ್ನುಂಟುಮಾಡಿದುದಾಗಿಯೂ, ವಯೋವೃದ್ಧರೂ ವಿದ್ಯಾಪ್ರವರ್ತಕರೂ ಆದ ಮ|| ತೊಗರಿ ವೀರಪ್ಪನವರು ಮತ್ತು ಜಾಗಟಗೇರಿ ವಿರಾಳಮಠದ ವೇ|| ಸಣ್ಣವೀರಪ್ಪಯ್ಯನವರು ಕಳೆದ 3 ತಿಂಗಳಿಂದಲೂ ಅವಿಶ್ರಾಂತ ಶ್ರಮವಹಿಸಿ ಎಲ್ಲ ಗ್ರಾಮಗಳಲ್ಲೂ ಸಂಚರಿಸಿ ಜನರಿಗೆ ಬೋಧೆಯನ್ನು ಮಾಡಿ ಮಹಾಬಲೇಶ್ವರಪ್ಪನವರಿಗೆ ಜಯಸಂಪಾದಿಸಿ ಕೊಟ್ಟರೆಂದೂ ಸ್ಥಳವಾಸಿಯೊಬ್ಬರು ತಿಳಿಸಿರುತ್ತಾರೆ. ಮ|| ಮಹಾಬಲೇಶ್ವರಪ್ಪನವರು ಬಹಳ ಪ್ರಬಲಸ್ಪರ್ಧೆಯಲ್ಲಿ ಉತ್ತೀರ್ಣರಾದುದಕ್ಕಾಗಿ ಅವರನ್ನೂ, ಅವರ ಉತ್ತೀರ್ಣತೆಗೆ ಕಾರಣಭೂತರಾದ ವೇ|| ತೊಗರಿ ವೀರಪ್ಪನವರನ್ನೂ ಮ|| ಜಾಗಟಗೇರಿ ಸಣ್ಣವೀರಪ್ಪಯ್ಯನವರನ್ನೂ ಅಭಿನಂದಿಸಿ, ಮ|| ಮಹಾಬಲೇಶ್ವರಪ್ಪನವರು ಸಮರ್ಥತೆಯಿಂದಲೂ ನಿಷ್ಪಕ್ಷಪಾತದಿಂದಲೂ, ವಿವೇಕದಿಂದಲೂ, ಸೌಹಾರ್ದದಿಂದಲೂ ತಮ್ಮುದ್ಯೋಗವನ್ನು ನಿರ್ವಹಿಸಿ ಪ್ರಜೆಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿ ತಮಗೀಪದವಿಯನ್ನೊದಗಿಸಿಕೊಟ್ಟವರಿಗೂ, ಸ್ವಸಮಾಜದವರಿಗೂ ಸಂತೋಷವನ್ನುಂಟುಮಾಡುವವರಾಗಲೆಂದು ಕೋರುತ್ತೇವೆ.

ವೈಸ್ರಾಯರ ಸಂಚಾರ

ವೈಸ್ರಾಯ ದಂಪತಿಗಳು ಬರುವ ಡಿಸೆಂಬರು ತಾ|| 14 ರಿಂದ 17 ರ ವರೆಗೆ ಬೊಂಬಾಯಿನಲ್ಲಿದ್ದು ಅನಂತರ ನಾಗಪುರದ ಮಾರ್ಗವಾಗಿ ಕಲಕತ್ತಾಕ್ಕೆ ಪ್ರಯಾಣಮಾಡುವರು.

ಕಮಲಾ ನೆಹ್ರೂಯವರ ಅಸ್ವಸ್ಥತೆ ಹೆಚ್ಚಿದೆ

ಸೌಭಾಗ್ಯವತಿ ಕಮಲಾನೆಹರುಯವರಿಗೆ ಅಸ್ವಸ್ಥತೆಯು ಪ್ರಬಲವಾಗಿರುವುದರಿಂದ ಅವರ ಸಮೀಪದಲ್ಲಿದ್ದು ಅವರ ಚಿಕಿತ್ಸೋಪಚಾರವನ್ನು ನೋಡಿಕೊಳ್ಳುವುದಕ್ಕಾಗಿ ಅವರ ಪತಿಯಾದ ಪಂಡಿತ ಜವಹಾರಲಾಲ ನೆಹರುಯವರ ಕಾರಾಗೃಹಬಂಧ ವಿಮೋಚನೆ ಮಾಡಬೇಕೆಂದು ಅಸೆಂಬ್ಲಿಯ ಕೆಲ ಮೆಂಬರುಗಳು ದೊರತನದವರನ್ನು ಪ್ರಾರ್ಥಿಸಿದರು.

ಬೋಲಿವಿಯಾ ಪ್ರಜೆಗಳು ತಿರುಗಿಬಿದ್ದಿರುವರು

ಪೆರುಗ್ವೆ ಸೈನ್ಯಕ್ಕೂ ಬೋಲಿವಿಯಾ ಸೈನ್ಯಕ್ಕೂ ನಡೆದ ಯುದ್ಧದಲ್ಲಿ ಬೋಲಿವಿಯಾ ಸೇನೆಯು ಸೋತುಹೋದುದರ ಮೇಲೆ ಪ್ರಜೆಗಳಿಗೆ ಕೋಪ ಹುಟ್ಟಿರುತ್ತದೆ. ಲಾಪೇಜೆಂಬಲ್ಲಿ ಪ್ರಜೆಗಳು ಪಾರ್ಲಿಮೆಂಟು ಮನೆಯ ಹತ್ತಿರ ಬಹಳ ಗಲಭೆಯನ್ನು ನಡೆಯಿಸಿ ಆ ಮನೆಯ ಮೇಲೆ ಕಲ್ಲುಗಳನ್ನೆಸೆದರು. ಇದರಿಂದ ಆ ಮನೆಯ ಕಿಟಕಿ ಬಾಗಿಲುಗಳ ಕನ್ನಡಿಗಳೊಡೆದು ಹೋದುವು.

ರೌಂಡ ಟೇಬಲು ಸಭೆಗೆ ೨ ಲಕ್ಷ ವ್ಯಯ

ಬರುವ ಮೂರನೆಯ ರೌಂಡುಟೇಬಲು ಸಭೆಗೆ ಪ್ರತಿನಿಧಿಗಳು ಹೋಗಿಬರುವುದರ ವೆಚ್ಚವು 2 ಲಕ್ಷ ರೂಪಾಯಿಗಳಾಗುವುದೆಂದೂ, ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳಾಗಿ ಹೋಗುವ ಮಂತ್ರಿಗಳಿಗೆ ಕೂಡ ಭಾರತ ಪ್ರಭುತ್ವದವರೇ ಕೊಡಬೇಕಾಗುವುದೆಂದೂ, ಹಿಂದಣ ಸಾರಿ ಸಂಸ್ಥಾನಗಳೇ ಸ್ವತಃ ವಹಿಸಿಕೊಂಡಿದ್ದುವೆಂದೂ ಅಸೆಂಬ್ಲಿಯ ಆರ್ಥಿಕ ಸಂಘದವರು ತಿಳಿಸಿರುತ್ತಾರೆ.

ದೇವಸ್ಥಾನಗಳಿಗೆ ಅಸ್ಪೃಶ್ಯರ ಪ್ರವೇಶ

ಬರೋಡಾ ಕಾಶ್ಮೀರ ಸಂಸ್ಥಾನಗಳಲ್ಲಿ ಎಲ್ಲ ದೇವಾಲಯಗಳಿಗೆ ಹಿಂದುಗಳೆಲ್ಲರೂ ಯಾವ ಭೇದವೂ ಇಲ್ಲದೆ ಪ್ರವೇಶಗೊಳಿಸಲ್ಪಡಬೇಕೆಂದು ಅವುಗಳ ಪ್ರಭುತ್ವದಪ್ಪಣೆಯಾಗಿರುತ್ತದೆ. ಮೈಸೂರು ಸಂಸ್ಥಾನವು ಎಲ್ಲ ವಿಚಾರಗಳಲ್ಲೂ ಇತರ ಸಂಸ್ಥಾನಗಳಿಗೆ ಮಾರ್ಗದರ್ಶಕವಾಗುತ್ತಿರುವುದು, ಆದರೆ ಈ ವಿಚಾರದಲ್ಲಿ ಮಾತ್ರ ಮಾರ್ಗದರ್ಶಕವಾಗದಿರುವುದು ಶೋಚನೀಯವಾಗಿರುತ್ತದೆ.

ಭಾರತ ಭಾನುವಾರ

ಇದೇ ನವಂಬರ್ ತಾ|| 20 ನೆಯ ಭಾನುವಾರ ಬ್ರಿಟನ್ನಿನಲ್ಲಿರುವ ಎಲ್ಲ ದೇವಾಲಯಗಳಲ್ಲೂ (ಇಂಡ್ಯಾಸಂಡೆ) ಇಂಡ್ಯಾ ದೇಶಕ್ಕೆ ಕ್ಷೇಮವಾಗಲೆಂದು ಪ್ರಾರ್ಥನೆ ನಡೆಸಲ್ಪಡುವುದು. ಕಾಂಗ್ರೆಸಿನವರೊಡನೆ ದೊರತನದವರು ಸಮಾಧಾನಮಾಡಿಕೊಳ್ಳುವುದು ಬಹಳ ಅಗತ್ಯವು ಎಂಬ ವಿಚಾರವಾಗಿ ಆ ಭಾನುವಾರ ದಿವಸ ಪ್ರತಿಯೊಂದು ಚರ್ಚಿನಲ್ಲೂ ಮತಗುರುಗಳೆಲ್ಲ ಬೋಧಿಸಬೇಕೆಂದು ಸಮಾಧಾನ ವರ್ಗದವರು ಆರ್ಚಿಬಿಷಪ್‌ರವರನ್ನು ಕೋರಿರುವರು. ಇದಕ್ಕೆ ಅನೇಕ ಗುರುಗಳು ಅಂಗೀಕರಿಸಿರುತ್ತಾರೆ.

ಬೊಂಬಾಯಿ ಸಂಸ್ಥಾನಗಳು

ಬೊಂಬಾಯಾಧಿಪತ್ಯಕ್ಕೆ ಸೇರಿರುವ 151 ಸಂಸ್ಥಾನಗಳು ಇಂಡ್ಯಾ ಪ್ರಭುತ್ವದೊಡನೆ ಪ್ರತ್ಯಕ್ಷ ಸಂಬಂಧವನ್ನು ಹೊಂದಬೇಕೆಂದು ಕೋರಿದುದರ ಮೇಲೆ ಈ ವಿಷಯವನ್ನು ಪ್ರತ್ಯಕ್ಷವಾಗಿ ವಿಚಾರಿಸಿ ತಿಳಿದುಕೊಳ್ಳುವುದಕ್ಕಾಗಿ ಲೆಫ್ಟಿನೆಂಟ್ ಕರ್ನಲ್ ಎಚ್. ವಿಲ್ಬರ್ಟ್ ಫೋರ್ಸ್ ಬೆಲ್ಲರ್‌ರವರು ನಿಯಮಿಸಲ್ಪಟ್ಟಿರುವರು. ಇವರು ಕಳೆದ ತಾ|| 27 ರಲ್ಲಿ ಬೊಂಬಾಯಿನೊಳಗೆ ಅವರುಗಳ ವಿಚಾರಣೆ ನಡೆಯಿಸಿ ಶನಿವಾರ ಬರೋಡಾಕ್ಕೆ ಪ್ರಯಾಣ ಮಾಡಿದರು. ಅಲ್ಲಿಂದ ಮಾಹಿ, ರೇವಾ ಸಂಸ್ಥಾನಗಳಿಗೆ ಹೋಗುವರು.

ಮಹಾತ್ಮರನ್ನು ನೋಡಲು ಆಲಿಯವರಿಗೆ ಅವಕಾಶವಾಗಲಿಲ್ಲ

"ಭಾನುವಾರ ಅಥವಾ ಸೋಮವಾರ ಮಹಾತ್ಮರನ್ನು ನೋಡಲು ಅಪ್ಪಣೆಯನ್ನು ಕೋರುವೆನು. ಇದಕ್ಕೆ ಮಹಾತ್ಮರು ಸಮ್ಮತಿಸುವರೆಂದು ನಂಬುತ್ತೇನೆ" ಎಂದು ಷೌಕತಾಲಿಯವರು ವೈಸ್ರಾಯರ ಪ್ರೈವೆಟ್ ಸೆಕ್ರೆಟರಿಯವರಿಗೆ ತಂತಿಯನ್ನು ಕೊಟ್ಟಿದ್ದರು. ಅದಕ್ಕೆ "ನಾನು ನಿಮಗೆ ಕಳೆದ ತಾ|| 27 ರಲ್ಲಿ ಕೊಟ್ಟಿದ್ದ ತಂತಿಯಲ್ಲಿ ನೀವು ಮಹಾತ್ಮರನ್ನು ಸಂದರ್ಶಿಸಲು ಸಹ ವೈಸ್ರಾಯರು ಅಂಗೀಕರಿಸುವುದಿಲ್ಲವೆಂದು ನಾನು ಸ್ಪಷ್ಟವಾಗಿ ತಿಳಿಸಿದ್ದೆನು" ಎಂದು ಸೆಕ್ರೆಟರಿಯವರು ಉತ್ತರವನ್ನು ಕೊಟ್ಟಿರುತ್ತಾರೆ.

ಗಾಂಧಿ ಮಹಾತ್ಮರ ನಿರಶನ ದೀಕ್ಷಾ ಪ್ರಭಾವ

"ಇಂಡ್ಯಾದಲ್ಲಿ ಅಸ್ಪೃಶ್ಯರೆಂದು ಕರೆಯಲ್ಪಡುವ 6 ಕೋಟಿ ಮಂದಿ ಪ್ರಜೆಗಳನ್ನು ಅನೇಕ ಶತಮಾನಗಳಿಂದಲೂ ಉತ್ತಮ ವರ್ಣದ ಹಿಂದುಗಳು ಬಹಿಷ್ಕರಿಸಿದ್ದರು. ಈ ವರೆಗೆ ಸಂಘ ಸಂಸ್ಕರ್ತರೆಷ್ಟೋ ಮಂದಿ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಬಹಳ ಪ್ರಯಾಸಪಟ್ಟರಾದರೂ ಉತ್ತಮ ವರ್ಣದವರು ಕೊಂಚವಾದರೂ ಮಣಿಯಲಿಲ್ಲ. ಆದರೆ ಒಬ್ಬ ಶುಷ್ಕದೇಹಿಯು 6 ದಿವಸ 8 ಘಂಟೆಯಕಾಲ ನಿರಾಹಾರ ದೀಕ್ಷೆಯನ್ನು ಹಿಡಿದುದರಿಂದ ಲೋಕಾಶ್ಚರ್ಯಕರವಾದ ಪರಿಣಾಮವುಂಟಾಗಿದೆ" ಎಂದು ಅಮೇರಿಕೆಯ ಚಿಕಾಗೋ ಪಟ್ಟಣದಲ್ಲಿ ಪ್ರಕಟವಾಗುವ ಒಂದು ದೈನಿಕ ಪತ್ರಿಕೆಯು ಬರೆದಿರುತ್ತದೆ.

ಫಾದರ್ ಎಲ್ವಿನ್‌ರವರ ಅಭಿಪ್ರಾಯ

ಮೊದಲು ಪೂನಾ ಕ್ರಿಸ್ತು ಸೇವಾಸಂಘಕ್ಕೆ ಸೇರಿದ್ದ ಫಾದರ್ ಎಲ್ವಿನ್‌ರವರು ಇಂಗ್ಲೆಂಡಿನಿಂದ ಬೊಂಬಾಯಿಗೆ ಬಂದು ಅಲ್ಲಿಂದ ಮಧ್ಯರಾಷ್ಟ್ರದೊಳಗಿರುವ ತಮ್ಮಾಶ್ರಮಕ್ಕೆ ಹೋಗಿ ಮೊದಲಿನಂತೆಯೇ ಗಾರದ್ದು ಎಂಬ ಜಾತಿಯ ಜನರಿಗೆ ಸಹಾಯಮಾಡುತ್ತಿರುವರು. ಇವರು "ಗಾಂಧಿಯವರ ಉಪವಾಸವ್ರತದಿಂದ ದೊಡ್ಡ ಬದಲಾವಣೆಯುಂಟಾಗಿರುತ್ತದೆ. ಇದರಿಂದ ಪ್ರಾಚ್ಯ ದೇಶಗಳಲ್ಲಿ ಮಹಾತ್ಮ ಗಾಂಧಿಯವರ ಪ್ರಭಾವವು ಮೊದಲಿಗಿಂತಲೂ ಅತಿಶಯವಾಗಿ ಹೆಚ್ಚಿರುತ್ತದೆಂದು ನಾನು ನಂಬಿರುತ್ತೇನೆ. ಸಮಷ್ಟಿ ನಿಯೋಜಕ ವರ್ಗದಿಂದ ಕ್ರೈಸ್ತರಿಗೆ ಯಾವ ನಷ್ಟವೂ ಆಗುವುದಿಲ್ಲ. ಅವರು ಭಾರತ ದೇಶದಲ್ಲಿ ಇತರ ಜಾತಿಯವರೊಡನೆ ಕೂಡಿಕೊಂಡು ಕೆಲಸಮಾಡಬೇಕಾಗಿದೆ" ಎಂದು ಹೇಳಿದರು.

ಧಾನ್ಯದ ವರ್ತಕರಾದ ಭಾರತೀಯರ ಮತ್ತು ಬ್ರಿಟಿಷರೊಡಂಬಡಿಕೆ

ಬೊಂಬಾಯಿನಲ್ಲಿ ಹತ್ತಿಯ ವ್ಯಾಪಾರಿಗಳಾದ ಬ್ರಿಟಿಷ್ ವರ್ತಕರು ಕಾಂಗ್ರೆಸಿನವರೊಡನೆ ಒಡಂಬಡಿಕೆಯನ್ನು ಮಾಡಿಕೊಂಡು ಬಹಿಷ್ಕಾರ ವಾಂಛೆಯನ್ನು ಬಿಟ್ಟಂತೆಯೇ ಧಾನ್ಯದ ವ್ಯಾಪಾರಿಗಳಾದ ಬ್ರಿಟಿಷಿನವರು ಭಾರತೀಯರೊಡನೆ ಒಡಂಬಡಿಕೆಯನ್ನು ಮಾಡಿಕೊಂಡರು. "ಧಾನ್ಯದ ವ್ಯಾಪಾರಿಗಳಾದ ಭಾರತೀಯರ ಜಾತೀಯಾಶಯದಲ್ಲಿ ನಮಗೆ ಸಂಪೂರ್ಣ ಸಹಾನುಭೂತಿಯಿರುವುದು. ರಾಜಕೀಯ ಶಾಂತಿಯು ತ್ವರ್ಯದಲ್ಲೇ ಉಂಟಾಗಲೆಂದು ನಾವೂ ಕೋರುತ್ತೇವೆ. ಇಂತಹ ಸಮಯದಲ್ಲಿ ಮಹಾತ್ಮರು ರಾಜಕೀಯ ರಂಗದಲ್ಲಿರುವುದು ಅತ್ಯವಶ್ಯವು. ಇದಕ್ಕಾಗಿ ನಮ್ಮ ಶಕ್ತಿವಂಚನೆಯಿಲ್ಲದೆ ಪ್ರಯತ್ನಿಸುವೆವು" ಎಂದು ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿದೆ. ಇದಕ್ಕೆ ರಾಲಿ ಬ್ರದರ್ಸ್ ಮತ್ತು ಜೋಸೆಫ್ ಟ್ರಾವರ್ಸು ಹಸ್ತಾಕ್ಷರಗಳನ್ನು ಬರೆಯಲಿಲ್ಲ.

ದಕ್ಷಿಣಾಫ್ರಿಕೆಯಲ್ಲಿ ನಿರುದ್ಯೋಗಿ ಭಾರತೀಯರಿಗೆ ಸಹಾಯ

ದಕ್ಷಿಣಾಫ್ರಿಕೆಯಲ್ಲಿ ನಿರುದ್ಯೋಗಿಗಳಾಗಿಯೂ, ನಿರಾಧಾರಿಗಳಾಗಿಯೂ ಇರುವ ಯೂರೋಪಿಯನ್ನರ ಸಹಾಯಾರ್ಥವಾಗಿ 50 ಲಕ್ಷ ರೂಪಾಯಿಗಳನ್ನು ವಿನಿಯೋಗಿಸಬೇಕೆಂದು ದಕ್ಷಿಣಾಫ್ರಿಕೆಯ ಯೂನಿಯನ್ ಪಾರ್ಲಿಮೆಂಟಿನವರು ನಿರ್ಧರಿಸಿರುವರು. ಆದರೆ ಅಲ್ಲಿ ನಿರುದ್ಯೋಗಿಗಳಾಗಿಯೂ, ನಿರಾಧಾರಿಗಳಾಗಿಯೂ ಇರುವ ಭಾರತೀಯರ ಸಹಾಯಾರ್ಥವಾಗಿ ಯಾವ ಏರ್ಪಾಟೂ ಮಾಡಲ್ಪಟ್ಟಿರುವುದಿಲ್ಲ. ಯೂನಿಯನ್ ಪ್ರಭುತ್ವದವರಿಗೆ ಯೂರೋಪಿಯನ್ನರು ಕಂದಾಯವನ್ನು ಸಲ್ಲಿಸುತ್ತಿರುವಂತೆಯೇ ಭಾರತೀಯರೂ ಸಲ್ಲಿಸುತ್ತಿರುವರು. ಅದುಕಾರಣ ಅಲ್ಲಿಯ ಭಾರತೀಯ ನಿರುದ್ಯೋಗಿಗಳ ಸಹಾಯಾರ್ಥವಾಗಿ ಕೆಲ ಸಾವಿರ ರೂಪಾಯಿಗಳನ್ನು ಕೊಡುವುದು ನ್ಯಾಯವೆಂದು ಆ ಯೂನಿಯನ್ನಿನವರಿಗೆ ಭಾರತ ಪ್ರಭುತ್ವದವರು ಬಿನ್ನವಿಸಿರುವುದಾಗಿ ತಿಳಿಯಬರುತ್ತದೆ.

ಡಾಕ್ಟರ್ ಅನ್ಸಾರಿಯವರ ತಂತೀವಾರ್ತೆ

ಜರ್ಮನಿಗೆ ಸೇರಿದ ಬಾದುನೋಹಿ ಎಂಬಲ್ಲಿಂದ ಕಳೆದ ಅಕ್ಟೋಬರ್ ತಾ|| 11ರಲ್ಲಿ ಡಾಕ್ಟರ್ ಅನ್ಸಾರಿಯವರು ಲಾಲಾ ದೇಶಬಂಧು ಗುಪ್ತರವರಿಗೆ ಒಂದು ತಂತಿಯನ್ನು ಕೊಟ್ಟಿದ್ದರು. ಅದರಲ್ಲಿ "ಈವರೆಗೆ ಇಲ್ಲಿ ನನಗೆ ನಡೆದ ವೈದ್ಯುತ ಚಿಕಿತ್ಸೆಯು ಮುಗಿಯಿತು. ಇಲ್ಲಿ ಡಾಕ್ಟರ್ ಗ್ರಾಂಡ್‌ಪೇಲ್‌ರವರು ಚಿಕಿತ್ಸೆಮಾಡುತ್ತಿರುವರು. ಮನಸ್ಸಿನಲ್ಲಿ ಯಾವ ಯೋಚನೆಯನ್ನೂ ಮಾಡಕೂಡದೆಂದು ಡಾಕ್ಟರು ಹೇಳಿರುತ್ತಾರೆ, ಆದರೆ ಈಗ ಭಾರತ ದೇಶಸ್ಥಿತಿಯ ವಿಚಾರವಾಗಿ ಆಲೋಚಿಸದೆ ಇರುವುದು ನನಗೆ ಬಹಳ ಅಸಂಭವವಾಗಿ ತೋರುತ್ತದೆ. ಅಲಹಾಬಾದು ಸಭೆಯಲ್ಲಿ ಅನುಕೂಲ ಫಲಪ್ರಾಪ್ತಿಯಾಗುವುದೆಂಬ ನಂಬಿಕೆಯು ನನಗೆ ಸಂಪೂರ್ಣವಾಗುಂಟು. ಹಿಂದು ಮಹಮ್ಮದೀಯ ಸಿಕ್ಕರೊಳಗೆ ಸಮಾಧಾನವು ಕುದುರುವಂತೆ ಅನುಗ್ರಹಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ" ಎಂದು ಬರೆಯಲ್ಪಟ್ಟಿದ್ದಿತು. ಹೇಗಾದರೂ ಮಾಡಿ ಸಮಾಧಾನವನ್ನು ಕುದರಿಸಬೇಕೆಂದು ಅನೇಕ ಮಿತ್ರರುಗಳಿಗೆ ಡಾ|| ಅನ್ಸಾರಿಯವರು ತಂತಿ ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಅಸ್ಪೃಶ್ಯತಾ ನಿರ್ಮೂಲನ ವಿಚಾರದಲ್ಲಿ ಸಂದೇಶ

ಅಸ್ಪೃಶ್ಯತಾ ನಿರ್ಮೂಲನವೆಂದರೆ ಹರಿಜನರೊಡನೆ ಮಿಳಿತರಾಗಿ ಭೋಜನಮಾಡುವುದೂ ಅವರೊಡನೆ ಸಂಬಂಧ ಬಾಂಧವ್ಯಗಳನ್ನು ಬೆಳಸುವುದೂ ಎಂಬುದು ನಿಮ್ಮಭಿಪ್ರಾಯವೆ? ಒಂದು ಜಾತಿಯ ಜನರು ಸತ್ತ ಹಸು ಹಂದಿ ಮೊದಲಾದ ಜಂತುಗಳ ಮಾಂಸವನ್ನು ತಿನ್ನುತ್ತಾರೆ. ಇವರುಗಳನ್ನು ದೇವಾಲಯದೊಳಕ್ಕೆ ಬರುಗೊಡುವುದರಿಂದ ಇವರು ಈ ನಿಷಿದ್ಧ ಪದ್ಧತಿಯನ್ನು ಬಿಡಬೇಕೆ? ಇವರೊಡನೆ ಉತ್ತಮ ವರ್ಣದವರು ಕಲೆತು ಭೋಜನ ಮಾಡಬೇಕೆ? ಎಂದು ಕುಮುದ ಬಾಂಧವ ಭಟರ್ಜಿಯವರು ಮಹಾತ್ಮರಿಗೆ ಬರೆದಿದ್ದರು. ಅದಕ್ಕೆ "ನಿಮ್ಮ ರಾಷ್ಟ್ರದಲ್ಲಿ ಹರಿಜನರನ್ನು ದೇವಾಲಯಕ್ಕೆ ಬರಗೊಡುತ್ತಿರುವುದಕ್ಕಾಗಿ ನಾನು ಬಹಳವಾಗಿ ಸಂತೋಷಿಸುತ್ತೇನೆ. ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸಲಿಕ್ಕೆ ಅವರೊಡನೆ ಕಲೆತು ಭೋಜನಮಾಡುವುದೂ, ಅವರೊಡನೆ ಸಂಬಂಧ ಬಾಂಧವ್ಯಗಳನ್ನು ಬೆಳಸುವುದೂ ಆವಶ್ಯಕವಲ್ಲವು. ಇಷ್ಟಪಡುವವರು ಹಾಗೆ ಮಾಡಬಹುದು. ಎಲ್ಲ ವಿಷಯದಲ್ಲೂ ಹಿಂದುಗಳಲ್ಲಿ ಎಲ್ಲ ವರ್ಣದವರಿಗೂ ಇರುವ ಗೌರವವು ಹರಿಜನರಿಗೂ ಕೂಡ ಇರಬೇಕು" ಎಂದು ಮಹಾತ್ಮರು ಭಟರ್ಜಿಯವರಿಗುತ್ತರವನ್ನು ಕೊಟ್ಟಿರುವರು.

ಅಖಿಲ ಪಕ್ಷನಾಯಕರ ಸಭೆ

ಹಿಂದು ಮಹಮ್ಮದೀಯ ಸಿಕ್ಕರುಗಳೊಳಗೆ ಸಮಾಧಾನವನ್ನು ಕುದುರಿಸಲು ಮೌಲಾನಾ ಷೌಕತಾಲಿಯವರು ಅಖಿಲ ಪಕ್ಷನಾಯಕರ ಸಭೆಯನ್ನು ಕಳೆದ ತಾ|| 3 ರಲ್ಲಿ ಅಲಹಾಬಾದಿನೊಳಗೆ ಕರೆದಿದ್ದರು. ಈ ಸಭೆಯವರು ಎಲ್ಲ ವಿಷಯಗಳನ್ನೂ ಕೂಲಂಕಷವಾಗಿ ಚರ್ಚಿಸಿ ಸಮಾಧಾನವೇರ್ಪಡತಕ್ಕ ವಿಧಾನವನ್ನು ಕಂಡುಹಿಡಿಯಲು ಒಂದುಪಸಭೆಯನ್ನೇರ್ಪಡಿಸಿದರು. ಇವರು ಪ್ರತಿನಿತ್ಯದಲ್ಲೂ ಸವಿಸ್ತಾರವಾಗಿ ಹಿಂದು ಮಹಮ್ಮದೀಯ ಸಿಕ್ಕರುಗಳ ಅಭಿಪ್ರಾಯಾಕ್ಷೇತ್ರಗಳನ್ನು ಕೇಳಿ ತಿಳಿದುಕೊಳ್ಳುತ್ತಿರುವರು. ಸರ್ಕಾರಿಯುದ್ಯೋಗಗಳಿಗೆ ಶೇಕಡ 50 ಮಂದಿ ನಾಮಕರಣದ ಮೂಲಕವೂ, 50 ಮಂದಿ ಸ್ಪರ್ಧೆಯ ಮೂಲಕವೂ ಸೇರಿಸಲ್ಪಡಬೇಕೆಂದು ಸಿಕ್ಕರು ಮತ್ತು ಮಹಮ್ಮದೀಯರು; ರಾಷ್ಟ್ರೀಯ ಶಾಖೆಗಳ ಉದ್ಯೋಗಗಳಿಗೆ ಶೇಕಡ 33 ಮಂದಿ ನಾಮಕರಣದ ಮೂಲಕವೂ, 67 ಮಂದಿ ಸ್ಪರ್ಧೆಯ ಮೂಲಕವೂ ಸೇರಿಸಲ್ಪಡಬೇಕೆಂದು ಮತ್ತು ಇಂಪೀರಿಯಲ್ ಉದ್ಯೋಗಗಳಿಗೆ ಶೇಕಡ 75 ಮಂದಿ ನಾಮಕರಣದ ಮೂಲಕವೂ 25 ಮಂದಿ ಸ್ಪರ್ಧೆಯ ಮೂಲಕವೂ ಸೇರಿಸಲ್ಪಡಬೇಕೆಂದು ದೇಶೀಯ ಕ್ರೈಸ್ತರು ಕೋರಿರುವುದಾಗಿ ತಿಳಿಯಬಂದಿದೆ. ಬಾಕಿ ವಿಚಾರಗಳು ಇನ್ನೂ ಚರ್ಚೆಯಲ್ಲೇ ಇರುತ್ತವೆ. ಈ ಸಖ್ಯಸಮಾಧಾನ ಸಭೆಯು ಜಯಪ್ರದವಾಗಿ ನಡೆಯಲೆಂದು ಅನೇಕ ಪ್ರಾರ್ಥನೆಗಳು ನಡೆದೂ ನಡೆಯುತ್ತಲೂ ಇವೆ.

ಮದ್ರಾಸು ಮಂತ್ರಿವರ್ಗ ಬದಲಾವಣೆ

ಮದ್ರಾಸು ಪ್ರಭುತ್ವದಲ್ಲಿ ದಿವಾನ್ ಬಹದ್ದೂರ್ ಮುನಿಸ್ವಾಮಿನಾಯಡುಯವರು ಮುಖ್ಯಮಂತ್ರಿಯಾಗಿಯೂ, ಪಿ. ಟಿ. ರಾಜನ್ ಮತ್ತು ದಿ|| ಬ|| ಎಸ್. ಕುಮಾರಸ್ವಾಮಿ ರೆಡ್ಡಿಯವರು ಉಪಮಂತ್ರಿಗಳಾಗಿಯೂ ಇದ್ದು ಅಭಿಪ್ರಾಯ ಭೇದದಿಂದ ಮೂವರೂ ಮಂತ್ರಿ ಪದವಿಯಿಂದ ನಿವೃತ್ತರಾದರು. ಇವರೆಲ್ಲರೂ ಜಸ್ಟಿಸ್ ಪಕ್ಷಕ್ಕೆ ಸೇರಿದವರು. ಬೊಬ್ಬಿಲಿ ರಾಜರು ಪ್ರಧಾನಮಂತ್ರಿಯಾಗಿಯೂ, ಮೊದಲಿದ್ದ ಪಿ. ಟಿ. ರಾಜನ್‌ರವರು ಮತ್ತು ದಿ|| ಬ|| ಕುಮಾರಸ್ವಾಮಿ ರೆಡ್ಡಿಯವರು ಮಂತ್ರಿಗಳಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ. ಜಸ್ಟಿಸ್ ಪಕ್ಷದವರಾದ ತಮ್ಮೊಳಗೆ ಭಿನ್ನಾಭಿಪ್ರಾಯ ಹುಟ್ಟಿದುದರಿಂದ ಮಂತ್ರಿ ಪದವಿಗಳನ್ನು ತ್ಯಜಿಸಿದ ಮೂವರು ತಮ್ಮ ಪಕ್ಷದಲ್ಲಿ ಒಡಕ ಹುಟ್ಟದಿರುವುದಕ್ಕಾಗಿಯೂ ಪಕ್ಷದ ಧ್ಯೇಯವನ್ನು ಕಾಪಾಡುವುದಕ್ಕಾಗಿಯೂ ಪುನಃ ಮಂತ್ರಿ ಪದವಿಯನ್ನು ತಮ್ಮಲ್ಲಾರೂ ಸ್ವೀಕರಿಸಬಾರದೆಂದು ನಿರ್ಧರಿಸಿಕೊಂಡಿದ್ದಾಗ್ಯೂ ಪಿ. ಟಿ. ರಾಜನ್‌ರವರೂ, ದಿ. ಬ. ಕುಮಾರಸ್ವಾಮಿ ರಡ್ಡಿಯವರೂ ಮಂತ್ರಿ ಪದವಿಗಳನ್ನು ಅಂಗೀಕರಿಸಿದುದರಿಂದಲೂ, ಧನಾಢ್ಯರ ಪಕ್ಷಾಭಿಮಾನಿಗಳಾದ ಬೊಬ್ಬಿಲಿರಾಜರು ಮುಖ್ಯ ಮಂತ್ರಿಯಾಗಿರುವುದರಿಂದಲೂ ಪ್ರಜಾಪಕ್ಷವೊಂದನ್ನೇರ್ಪಡಿಸಿ ಜಾತಿ ತಾರತಮ್ಯವಿಲ್ಲದೆ ಬ್ರಾಹ್ಮಣರಾದಿಯಾಗಿ ಸರ್ವರನ್ನೂ ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ಪ್ರಜಾಹಿತ ಸಾಧನೆಗೆ ಕೆಲಸಮಾಡಬೇಕೆಂದು ನಿರ್ಧರಿಸಿ ಮುಖ್ಯ ಮಂತ್ರಿ ಪದವಿಯಿಂದ ನಿವೃತ್ತರಾದ ದಿ|| ಬ|| ಮುನಿಸ್ವಾಮಿ ನಾಯಡುಯವರು ಅದರ ಅಧ್ಯಕ್ಷತೆಯನ್ನು ವಹಿಸಿರುವರು. ಬಹಳ ಕಾಲದಿಂದಲೂ ಬ್ರಾಹ್ಮಣೇತರರ ಹಿತಸಾಧನೆಗಾಗಿ ಪಾಟುಪಡುತ್ತ ಮಂತ್ರಿ ಮಂಡಲಕ್ಕೆ ತಮ್ಮ ಪಕ್ಷದವರೇ ನಿಯಮಿಸಲ್ಪಡುವಷ್ಟು ಪ್ರಾಬಲ್ಯವನ್ನು ಹೊಂದಿದ್ದ ಜಸ್ಟಿಸ್ ಪಕ್ಷದಲ್ಲಿ ಈ ರೀತಿ ಒಡಕು ಹುಟ್ಟಿದುದು ವಿಷಾದಕರವು. ಈ ನೂತನ ಪಕ್ಷದೇರ್ಪಾಟಿನಿಂದ ಜಸ್ಟಿಸ್ ಪಕ್ಷವು ಅಳಿಯುವುದೋ ಉಳಿದು ಪ್ರಬಲವಾಗುವುದೋ ನೋಡಬೇಕು.

ಬ್ರಿಟಿಷ್ ಲೇಬರ್‌ಪಕ್ಷದ ಪ್ರತಿನಿಧಿಗಳು ರೌಂಡುಟೇಬಲ್ ಸಭೆಗೆ ಹೋಗುವುದಿಲ್ಲ

"ಕಾಂಗ್ರೆಸ್ ಪಕ್ಷದವರನ್ನು ರೌಂಡುಟೇಬಲ್ ಸಭೆಗೆ ದೊರತನದವರು ಆಹ್ವಾನಿಸಿಲ್ಲವಾದುದರಿಂದ, ಆಹ್ವಾನಿಸಲ್ಪಟ್ಟಿರುವ ಲೇಬರುಪಕ್ಷದ ಪ್ರತಿನಿಧಿಗಳು ಈ ಸಭೆಗೆ ಹೋಗಕೂಡದೆಂದು ನಿರ್ಧರಿಸಿದೆ. ನಮ್ಮ ಪಾರ್ಟಿಯವರೆಲ್ಲರೂ ಆಹ್ವಾನಿಸಲ್ಪಡಲಿಲ್ಲವೆಂಬುದರಮೇಲೆ ನಾವು ಈ ರೀತಿ ನಿರ್ಧರಿಸಿರುವುದಿಲ್ಲ. ಈ ಸಭೆಯಲ್ಲಿ ಭಾರತ ಪ್ರತಿನಿಧಿಗಳಿಗೂ ಬ್ರಿಟಿಷ್ ಪ್ರತಿನಿಧಿಗಳಿಗೂ ಸಮಾಧಾನವು ಕುದುರುವುದಿಲ್ಲವಾದುದರಿಂದ ನಾವು ಅದನ್ನು ನಿರೋಧಿಸಬೇಕೆಂದು ಯೋಚಿಸಿರುವುದಿಲ್ಲ. ಆದರೆ ಭಾರತೀಯರ ಪಕ್ಷವಾಗಿ ಮಾತನಾಡಲು ಅಧಿಕಾರವುಳ್ಳ ಪಾರ್ಟಿಯವರು ಈ ಸಭೆಯಲ್ಲಿರುವುದಿಲ್ಲವಾದುದರಿಂದ ಉಳಿದವರು ಮಾಡುವ ಸೂಚನೆಗಳನ್ನು ಕುರಿತು ಈಗಿನ ಸ್ಥಿತಿಯಲ್ಲಿ ನಾವು ಯಾವ ಜವಾಬ್ದಾರಿಯನ್ನೂ ವಹಿಸತಕ್ಕವರಾಗಿಲ್ಲ. ಕನ್ಸರ್ವೇಟಿವರ ಅಭಿಪ್ರಾಯವು ಕೇವಲ ಪ್ರತಿಕೂಲವಾಗಿರುವುದರಿಂದ ಈ ಸಭೆಯಿಂದ ಯಾವ ಲಾಭವೂ ಆಗುವುದಿಲ್ಲವೆಂದೇ ತೋರುತ್ತದೆ. ಈಗ ನಾವು ತಟಸ್ಥರಾಗಿದ್ದರೆ ಕಡೆಯಲ್ಲಿ ನಮಗೆ ಬಲವು ಹೆಚ್ಚಾಗಿರುವುದು. ನಾವು ಈಗ ಈ ಸಭೆಯನ್ನು ಬಹಿಷ್ಕರಿಸಿದರೂ ಜಾಯಿಂಟ್ ಪಾರ್ಲಿಮೆಂಟು ಕಮಿಟಿಯಲ್ಲಿ ನಮ್ಮ ಪ್ರತಿನಿಧಿಗಳಿರಲು ಯಾವ ಅಭ್ಯಂತರವೂ ಇರುವುದಿಲ್ಲ. ಆ ಕಮಿಟಿಯಲ್ಲಿ ಕೂಡ ಕನ್ಸರ್ವೇಟಿವ್ ಪಕ್ಷದವರೇ ಬಹಳ ಹೆಚ್ಚಾಗಿರುವರೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಈಗಾಗಲೇ ನಿಶ್ಚಯಿಸಿರುವ ವಿಧಾನವನ್ನು ಭಾರತ ಪ್ರತಿನಿಧಿಗಳಿಗೆ ತಿಳಿಸಿ ಇದನ್ನು ನೀವು ಅನುಮೋದಿಸುತ್ತಿರಾ ಇಲ್ಲವೆ, ಯಾವುದೋ ಒಂದನ್ನು ಹೇಳಿ ಎಂದು ದೊರತನದವರು ಕೇಳುವರೆಂದು ನಾವು ತಿಳಿದಿಲ್ಲ. ಆದರೆ ಮಂತ್ರಿಗಳ ಅಭಿಪ್ರಾಯದಲ್ಲಿ ಬಹಳ ಪ್ರತಿಕೂಲವು ಈವರೆಗೆ ಕಂಡುಬಂದಿದೆ. ಗಾಂಧಿ ಮಹಾತ್ಮರ ಬಿಡುಗಡೆಯನ್ನೂ, ಆರ್ಡಿನೆನ್ಸುಗಳ ರದ್ದುಪಡಿಸುವುದನ್ನೂ ಕುರಿತು ದೊರತನದವರು ಮೊಂಡತನದಿಂದಿರುವುದರಿಂದ ರೌಂಡುಟೇಬಲು ಸಭೆಯಿಂದ ಯಾವ ಪ್ರಯೋಜನವೂ ಉಂಟಾಗುವುದಿಲ್ಲವೆಂದು ನಾವು ಊಹಿಸಿರುತ್ತೇವೆ" ಎಂದು ಜಾರ್ಜ್ ಲಾನ್ಸ್‌ಬರಿಯವರು ಹೇಳಿರುತ್ತಾರೆ.

ಅಧಿಕಾರಿಗಳ ಬದಲಾವಣೆ.

ದಿವಾನರಾದ ಅಮಿನ್-ಉಲ್-ಮುಲ್ಕ್, ಸರ್ ಮಿರ್ಜ ಎಂ. ಇಸ್ಮೈಲ್ ಕೆಟಿ., ಸಿ. ಐ. ಇ., ಒ. ಬಿ. ಇ., ಯವರು ರೌಂಡುಟೇಬಲ್ ಸಭೆಗೆ ಪ್ರತಿನಿಧಿಯಾಗಿ ಹೋಗಲು ಹೆಚ್ಚುಕಟ್ಟಳೆಯ ಉದ್ಯೋಗದ ಮೇಲೆ ನಿಯಮಿಸಲ್ಪಟ್ಟಿರುವುದರಿಂದ 1 ನೆಯ ಕೌನ್ಸಿಲರ್ ರಾಜಕಾರ್ಯಪ್ರಸಕ್ತ ದಿವಾನ್ ಬಹದ್ದೂರ್ ಮ|| ಎಂ. ಎನ್. ಕೃಷ್ಣರಾವ್, ಬಿ.ಎ., ಯವರು ಅಫಿಸಿಯೇಟಿಂಗ್ ದಿವಾನರಾಗಿಯೂ (2) ಎರಡನೆಯ ಕೌನ್ಸಿಲರ್ ರಾಜಮಂತ್ರಪ್ರವೀಣ ಮ|| ಕೆ. ಮೆಥಾನ್, ಬಿ.ಎ., ಯವರು ಅಫಿಸಿಯೇಟಿಂಗ್ 1ನೆಯ ಕೌನ್ಸಿಲರಾಗಿಯೂ (3) ರೆವಿನ್ಯೂ ಕಮಿಷನರ್ ಮ|| ಎಸ್. ಪಿ. ರಾಜಗೋಪಾಲಾಚಾರಿ, ಬಿ.ಎ., ಬಿ.ಎಲ್., ರವರು ಅಫಿಸಿಯೇಟಿಂಗ್ 2 ನೇ ಕೌನ್ಸಿಲರಾಗಿಯೂ ಶ್ರೀಮನ್ಮಹಾರಾಜರವರಿಂದ ನಿಯಮಿಸಲ್ಪಟ್ಟಿರುತ್ತಾರೆ. ಅಲ್ಲದೆ ಎಕ್ಸೈಸ್ ಕಮಿಷನರ್ ಮ|| ಎಸ್. ಹಿರಿಯಣ್ಣಯ್ಯ, ಎಂ.ಎ., ಬಿಎಲ್., ರವರು ಆಕ್ಟಿಂಗ್ ರೆವಿನ್ಯೂ ಕಮಿಷನರಾಗಿಯೂ, ಡೆವಲಪ್‌ಮೆಂಟ್ ಶಾಖೆಯ ಸೆಕ್ರೆಟರಿ ಮ|| ಡಿ. ಶ್ರೀನಿವಾಸಯ್ಯಂಗಾರ್, ಬಿ.ಎ., ಯವರು ಆಕ್ಟಿಂಗ್ ಎಕ್ಸೈಸ್ ಕಮಿಷನರಾಗಿಯೂ, ಮೈಸೂರು ಡಿ|| ಡೆಪ್ಯುಟಿಕಮಿಷನರ್ ಮ|| ಎಸ್. ಅಬ್ದುಲ್‌ವಾಜಿದ್, ಬಿ.ಎ., ಯವರು ಆಕ್ಟಿಂಗ್ ಡೆವಲಪ್‌ಮೆಂಟ್ ಶಾಖಾ ಸೆಕ್ರೆಟರಿಯಾಗಿಯೂ, ಕಡೂರ್ ಡಿ|| ಡೆಪ್ಯುಟಿಕಮಿಷನರ್ ಮ|| ಸಿ. ಎಸ್. ಕುಪ್ಪಸ್ವಾಮಯ್ಯಂಗಾರ್‌ರವರು ಮೈಸೂರು ಡಿ|| ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮ|| ಸುಂದರರಾಜಯ್ಯಂಗಾರ್, ಬಿ.ಎ., ಯವರು ಕಡೂರು ಡಿ|| ಆಕ್ಟಿಂಗ್ ಡೆಪ್ಯುಟಿ ಕಮಿಷನರಾಗಿಯೂ, ಚೀಫ್‌ಸೆಕ್ರೆಟರಿ ಮ|| ಎನ್. ಮಾಧವರಾವ್, ಬಿ.ಎ.,ಬಿ.ಎಲ್., ರವರು ಮತ್ತು ದಿವಾನರ ಪ್ರೈವೆಟ್ ಸೆಕ್ರೆಟರಿ ಮ|| ಟಿ. ಶಿಂಗಾರವೇಲು ಮೊದಲಿಯಾರ್, ಬಿ.ಎ.,ಬಿ.ಎಲ್.,ರವರು ದಿವಾನರ ಕೂಡ ಸೀಮೆಗೆ ಹೆಚ್ಚು ಕಟ್ಟಳೆಯ ಕೆಲಸದ ಮೇಲೆ ಹೋಗುವುದರಿಂದ ಮ|| ಗಳಾದ ಜನರಲ್ ಸೆಕ್ರೆಟರಿ ಆರ್. ರಂಗರಾವ್ ಬಿ. ಎ., ಬಿ. ಎಲ್., ರವರು ಆಕ್ಟಿಂಗ್ ಚೀಫ್ ಸೆಕ್ರೆಟರಿಯವರಾಗಿಯೂ, ತುಮಕೂರು ಡಿ|| ಡೆ|| ಕಮಿಷನರ್ ಎಚ್. ವಿ. ರಾಮಸ್ವಾಮಿ, ಎಂ. ಎ., ಬಿ. ಎಲ್., ರವರು ಆಕ್ಟಿಂಗ್ ಜನರಲ್ ಸೆಕ್ರೆಟರಿಯವರಾಗಿಯೂ ಬೆಂಗಳೂರು ಸಿಟಿ ಮೆಜಿಸ್ಟ್ರೇಟ್ ಟಿ. ಎ. ಅಬ್ದುಲ್‌ಖಾದರ್, ಬಿ. ಎ., ಯವರು ತುಮಕೂರು ಡಿ|| ಆಕ್ಟಿಂಗ್ ಡಿಪ್ಯುಟಿ ಕಮಿಷನರಾಗಿಯೂ, ಮೋಟಾರ್ ಟ್ರಾನ್ಸ್‌ಪೋರ್ಟ್ ಕಮಿಟಿ ಸೆಕ್ರೆಟರಿ ಎಸ್. ನಾರಾಯಣರಾವ್, ಬಿ. ಎ., ಯವರು ಬೆಂಗಳೂರು ಸಿಟಿ ಮೆಜಿಸ್ಟ್ರೇಟರಾಗಿಯೂ, ಚನ್ನಪಟ್ಟಣ ತಾ|| ಅಮಲ್ದಾರ್ ಕೆ. ವಿ. ರಾಮನಾಥಯ್ಯ, ಎಂ. ಎ., ಯವರು ಮೋಟಾರ್ ಟ್ರಾನ್ಸ್‌ಪೋರ್ಟ್ ಕಮಿಟಿ ಸೆಕ್ರೆಟರಿಯವರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಮೈಸೂರು ಡಿ|| ಪೊಲೀಸು ಸೂಪರಿಂಟೆಂಡೆಂಟರಾದ ಮ|| ಆರ್. ರಾಮಚಂದ್ರರಾವ್ ಘೋರ್ಪಡೆ, ಬಿ. ಎ., ಯವರು ಚಿತ್ರದುರ್ಗ ಡಿ|| ಟ್ರಜರಿ ಆಫೀಸರಾಗಿಯೂ ಬೆಂಗಳೂರು ಡಿ|| ಪೊ|| ಸೂಪರಿಂಟೆಂಡೆಂಟರಾದ ಮ|| ಎಂ. ಸಿ. ಮರಿಯಪ್ಪನವರು ಮೈಸೂರು ಡಿ|| ಪೊ|| ಸೂಪರಿಂಟೆಂಡೆಂಟರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ಒಳದೇಶದ ವೃತ್ತಾಂತಗಳು.

ಸೀಮೆಗೆ ದಯಮಾಡಿಸಿರುವ ನಮ್ಮ ಶ್ರೀಮದ್ಯುವರಾಜರವರು ಈ ತಾ|| 15-16 ರಲ್ಲಿ ಹಿಂದಿರುಗಿ ಬರುವುದಾಗಿ ವರ್ತಮಾನವಿದೆ.

ಬೆಂಗಳೂರು ದಂಡಿನಲ್ಲಿ ಸ್ಯಾಪರ್ಸ್ ಮತ್ತು ಮೈನರ್ಸ್ ಸಾರ್ಜಂಟ್ ಆಗಿದ್ದ 28 ವರ್ಷ ವಯಸ್ಸಿನ ಯೂರೋಪಿಯನ್ನು ಮೈದಾನದಲ್ಲಿ ಮದ್ದಿಗೆ ಬೆಂಕಿಯನ್ನು ಹೊತ್ತಿಸುತ್ತಿರುವಾಗ್ಗೆ ಮದ್ದು ಹೊತ್ತಿಕೊಂಡು ಅತನನ್ನು 17 ಅಡಿ ಎತ್ತರದ ವರೆಗೆ ಮೇಲಕ್ಕೆ ಹಾರಿಸಿಬಿಟ್ಟಿತು. ಅವನು ಅಲ್ಲಿಂದ ಬಿದ್ದು ಹತನಾದನು.

ದಿವಾನ್ ಸರ್ ಮಿರ್ಜಾ ಇಸ್ಮೈಲ್‌ರವರು ಕಳೆದ ಗುರುವಾರ ರಾಜಧಾನಿಗೆ ಬಂದು ಶ್ರೀಮನ್ಮಹಾರಾಜರವರ ದರ್ಶನ ಸಂಭಾಷಣೆಗಳನ್ನು ಮಾಡಿಕೊಂಡು ಬೆಂಗಳೂರಿಗೆ ಹಿಂದಿರುಗಿ ಮೊನ್ನೆಯ ದಿವಸ ಗುಂತುಕಲ್ ಮಾರ್ಗವಾಗಿ ಬೊಂಬಾಯಿಗೆ ಪ್ರಯಾಣಮಾಡಿದರು ಮತ್ತು ಅಲ್ಲಿಂದ ಇಂದೋ ನಾಳೆಯೋ ಹಡಗನ್ನು ಹತ್ತಿ ಸೀಮೆಗೆ ತೆರಳುವರು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರಾಗಿ ನಾಮಕರಣ ಮಾಡಲ್ಪಟ್ಟಿದ್ದ ಸಿಸ್ಟರ್ ಈಥರ್ ಎಂ. ಟಾಂಕಿನ್‌ಸನ್‌ರವರು ಸೀಮೆಗೆ ಹೋಗುವುದಕ್ಕಾಗಿ ಕೌನ್ಸಿಲರ ಸ್ಥಾನವನ್ನು ಬಿಟ್ಟುದರಿಂದ ಅವರ ಬದಲು ಮಹಾರಾಣಿ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಶ್ರೀ ಕೆ. ಡಿ. ರುಕ್ಮಿಣಿ ಅಮ್ಮನವರು ಕೌನ್ಸಿಲರಾಗಿ ಪ್ರಭುತ್ವದವರಿಂದ ನಾಮಕರಣ ಮಾಡಲ್ಪಟ್ಟಿರುತ್ತಾರೆ.

ಕಳೆದ ವಿಜಯದಶಮಿ ರಾತ್ರಿ ಶ್ರೀಮನ್ಮಹಾರಾಜರವರ ಉತ್ಸವವು ಹಿಂದಿರುಗಿ ಬರುವ ವೇಳೆಯಲ್ಲಿ ಎ. ಎನ್. ಸೂರ್ಯನಾರಾಯಣರಾವ್, ರಾಮಸೇತು, ಕೃಷ್ಣ ಮತ್ತು ಗೋಪಾಲಶೆಟ್ಟಿ ಎಂಬವರು ಒಬ್ಬ ಮುಸಲ್ಮಾನರ ಹುಡುಗನ ಟಾಂಗಾಬಂಡಿಯನ್ನು ವಶಪಡಿಸಿಕೊಂಡು ಅದನ್ನು ತಡೆಯಲು ಬಂದ ಹುಡುಗನನ್ನು ಹೊಡೆದು ಗಾಯಪಡಿಸಿ ಬಾಡಿಗೆಯನ್ನು ಗೊತ್ತುಮಾಡದೆ ತೆಗೆದುಕೊಂಡು ಹೋದರೆಂಬ ಅಪರಾಧಕ್ಕಾಗಿ ಪೊಲೀಸಿನವರಿಂದ ಮೈಸೂರು ಸಿಟಿ ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾರೆ. ಕಳೆದ ಗುರುವಾರ ಫಿರ್ಯಾದಿಪರ ಟಾಂಗಾಬಂಡಿಯ ಹುಡುಗನ ಮತ್ತು ಅವನ ಬಂಡಿಯ ಯಜಮಾನನ ವಿಚಾರಣೆಯು ನಡೆದು ಮುಂದುವರಿಸಲ್ಪಟ್ಟಿದೆ.

ಗತಿಸಿದ ಎಕ್ಸಿಕ್ಯುಟಿವ್ ಇಂಜನಿಯರ್ ವೆಂಕಟಸುಬ್ಬರಾಯರನ್ನು ದೂಷಿಸಿ ಅವಮಾನಪಡಿಸಿದುದಕ್ಕಾಗಿ ಪತ್ರಿಕಾ ಲೇಖಕರಾದ ಮ|| ವಿ. ಎಸ್. ಸಂಜೀವರಾಯರಿಗೆ ಬೆಂಗಳೂರು ಡಿ|| ಮೆಜಿಸ್ಟ್ರೇಟರು 3 ತಿಂಗಳ ಕಾರಾಗೃಹವಾಸವನ್ನೂ 500 ರೂ. ದಂಡವನ್ನೂ ವಿಧಿಸಿದ್ದರು. ಅದರ ಮೇಲೆ ಬೆಂಗಳೂರು ಡಿವಿಜನ್ ಸೆಷನ್ಸ್ ಕೋರ್ಟಿಗೆ ಅಪೀಲಾಗಿದ್ದುದರ ಅರ್ಥದಂಡವು ತಪ್ಪಿಸಲ್ಪಟ್ಟು ಕಾರಾಗೃಹವಾಸವು ಸ್ಥಿರಗೊಳಿಸಲ್ಪಟ್ಟಿದ್ದಿತು. ಹೈಕೋರ್ಟ್ ಅಪೀಲಿನಲ್ಲಿ ಜಸ್ಟಿಸ್ ಎಂ. ರಾಮಚಂದ್ರರಾಯರು ಅಪರಾಧಿಗೆ ವಯಸ್ಸಾಗಿರುವುದೆಂಬುದರ ಮೇಲೆ ಕಾರಾಗೃಹವಾಸ ಶಿಕ್ಷೆಯನ್ನು ತಪ್ಪಿಸಿ 300 ರೂ. ಅರ್ಥದಂಡವನ್ನು ವಿಧಿಸಿ, ಇದನ್ನು ಕೊಡಲು ತಪ್ಪಿದಲ್ಲಿ 1 ತಿಂಗಳ ಸಾದಾ ಕಜವನ್ನನುಭವಿಸಬೇಕೆಂದು ಅಪ್ಪಣೆಮಾಡಿದರು.

ರಾಜಧಾನಿಯ ದೇವರಾಜಮೊಹಲ್ಲ ಮ್ಯುನಿಸಿಪಲ್ ಕೌನ್ಸಿಲರಾಗಿದ್ದ ರಾವ್‌ಬಹದ್ದೂರ್ ಧರ್ಮಪ್ರಕಾಶ ಸಾಹುಕಾರ್ ಡಿ. ಬನುಮಯ್ಯನವರ ನಿಧನದಿಂದ ಅವರ ಸ್ಥಾನವು ಬರಿದಾಗಿರುವ ಪ್ರಯುಕ್ತ ಚೇರೊಬ್ಬರ ಚುನಾವಣೆಯು ಬರುವ ಡಿಸೆಂಬರ್ ತಾ|| 3 ನೆಯ ಶನಿವಾರ ಬೆಳಗಿನ 8 ರಿಂದ 11 ಘಂಟೆಯವರೆಗೂ, ಮಧ್ಯಾಹ್ನ 3 ರಿಂದ ಸಾಯಂಕಾಲ 6 ಘಂಟೆಯ ವರೆಗೂ ಮ್ಯುನಿಸಿಪಲ್ ದೇವರಾಜ ಪ್ರೈಮರಿ ಬಾಯ್ಸ್ ಸ್ಕೂಲಿನಲ್ಲಿ ನಡೆಯುವುದಾಗಿಯೂ, ಉಮೇದುವಾರರಾಗಬೇಕೆನ್ನುವವರು ಈ ತಾ|| 26 ರೊಳಗೆ ತಮ್ಮ ಉಮೇದುವಾರಿಕೆಯ ಪತ್ರಿಕೆಯನ್ನು ಪ್ರೆಸಿಡೆಂಟರಿಗೆ ಕಳುಹಿಸಬೇಕೆಂದೂ ಪ್ರಕಟವಾಗಿದೆ.

ಸ್ಪೇಯಿನುರಾಜ್ಯದ ಪರಿಸ್ಥಿತಿ.

ಅಲ್ಫೋನ್ಸೋ ದೊರೆಯ ರಾಜ್ಯಭ್ರಷ್ಟತೆಯೂ ನೂತನ ಪ್ರಜಾಪರಿಪಾಲನವೂ

ಪ್ರಜಾಪ್ರಾತಿನಿಧ್ಯ ಪರಿಪಾಲನವೂ, ಪ್ರೆಸಿಡೆಂಟ್ ಅಜಾನನ ಕಾರ್ಯಕ್ರಮವೂ.

ರಾಜಕೀಯ ವಿಪ್ಲವವೂ ಪ್ರಜಾಪ್ರಾತಿನಿಧ್ಯ ಸಂಸ್ಥೆಗಳ ಪಟುತ್ವವೂ

... ದರಾದರೂ ನಿಜವಾಗಿ ಆ ಮೂಲ ಸಂಸ್ಕಾರಕ್ಕೆ ಸಂಸಿದ್ಧರಾಗಿರುವಂತೆ ತಿಳಿಯಬರುತ್ತದೆ. ಇದರಿಂದ, ಅಜಾನಾ ಮಂತ್ರಿಮಂಡಲದವರು ಸಾಮರ್ಥ್ಯದಿಂದ ದೇಶಪರಿಪಾಲನವನ್ನು ಅಭಿವೃದ್ಧಿಗೆ ತರುತ್ತಾರೆಂದೇ ವ್ಯಕ್ತವಾಗುತ್ತದೆ.

ಸ್ವೀಕಾರ

ಶ್ರೀ|| ವೀರಸಂಗಪ್ಪನವರ ಅಗ್ರತಾಂಬೂಲಸಂಭಾವನೆಯ ಬಗೆಗೆ ಈ ಕೆಳಗೆ ಕಂಡ ವಿವಾಹ ಮೊದಲಾದ ಶುಭಕಾರ್ಯಗಳಲ್ಲೂ ಇತರ ಸಂದರ್ಭಗಳಲ್ಲೂ ತೆಗೆದು ಕಳುಹಲ್ಪಟ್ಟ ಮೊಬಲಗನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ—ಸಂ.

ನರಸಿಂಹರಾಜಪುರದ ಮ|| ಇಂಗ್ಲಗೊಂದಿ ಸಿ. ಶಾಂತಪ್ಪಶೆಟ್ಟರ 80 ನೆಯ ವರ್ಷದ ಶಾಂತಿಯುತ್ಸವ ಸಮಾರಂಭದಲ್ಲಿ 2 ರೂ. ಗಳು ಇಂಗಳಗೊಂದಿ ಮ|| ಸಿ. ಚಂದ್ರಶೇಖರಪ್ಪನವರಿಂದ.

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ವಿವಾಹಾದಿ ಶುಭಕಾರ್ಯಗಳಿಗೆ ಅಪ್ರಶಸ್ತಕಾಲ.

ಮುಂದೆ ಬರುವ ಶ್ರೀಮುಖ ಸಂವತ್ಸರದ ಚೈತ್ರ ವೈಶಾಖ ಮಾಸ ...

ನೆಲಮಂಗಲ ಟವುನ್ನಿನ ವಿದ್ಯಾಭ್ಯಾಸ ವಿಚಾರ.

... ಇಲಾಖಾ ಅಧಿಕಾರಿಗಳು ಅವರನ್ನು ವರ್ಗಾಯಿಸಿದಲ್ಲಿ ಅವರಿಗೆ ಅನುಕೂಲ ಮಾಡಿಕೊಟ್ಟಂತೆಯೂ, ಪಾಠಶಾಲೆಯ ಅಭಿವೃದ್ಧಿಯನ್ನು ಬಯಸಿದಂತೆಯೂ ಆಗುತ್ತದೆ.

ಎಂ. ಅಬ್ದುಲ್ ಅಜೀಜ್‌ಷರೀಫ್
ಆ|| ಬೆಂಚ್ ಮ್ಯಾಜಿಸ್ಟ್ರೇಟ್, ನೆಲಮಂಗಲ.

ಶೋಕಸಭೆಯು.

ಕಾಶೀ ಶ್ರೀ ಜಯದೇವ ಗುರುಕುಲದಲ್ಲಿ ತಾ|| 26-10-32 ನೇ ಮಧ್ಯಾಹ್ನಕ್ಕೆ ಸಭೆಯು ನೆರೆದು ಕೈಲಾಸವಾಸವಂಗೈದ ಅರಟಾಳ ಸಾಹೇಬರ ಹಾಗೂ ಗಂಗಮ್ಮನವರ ಮತ್ತು ರಕ್ಕಸಗಿ ದೇಸಾಯಿಯವರ ಬಗ್ಗೆ ಕೆಳಗೆ ಕಂಡಂತೆ ಶೋಕಪ್ರಸ್ತಾವಗಳು ಓದಲ್ಪಟ್ಟು ಅವರ ಆತ್ಮಶಾಂತಿಗಾಗಿ ಪುರಾತನ ನಾಮಪಾಠವು ಓದಲ್ಪಟ್ಟಿತು. ಸಮಾಜದಲ್ಲಿ ಮುಂದಾಳುಗಳಾದವರು ಮುಂದಿನ ಸಂತತಿಗೆ ತಾಯಿ ತಂದೆಗಳಂತೆಯೇ ಮಾನ್ಯರು. ಅವರ ಕಾರ್ಯಗಳ ಫಲವು ಸಮಾಜದವರ ನಾಡಿನಾಡಿಗಳಲ್ಲಿ ಸೇರಿರುವದು. ಅವರು ಮಾಡಿದ ಕಾರ್ಯಗಳು ನಮ್ಮನ್ನು ಉಜ್ವಲಸ್ಥಿತಿಗೆ ಒಯ್ಯುವವು. ಅವರೆಲ್ಲರೂ ಏಳಿಗೆಯನ್ನು ಹೊಂದಿರುವದರಿಂದ ಈಗಿನ ಸಣ್ಣ ಸಂತತಿಯು ಸ್ವಾರ್ಥತ್ಯಾಗ, ಸಮಾಜಸೇವೆಗಳಲ್ಲಿ ಏಳಿಗೆಯನ್ನು ಹೊಂದುತ್ತಿರುವದು. ಮುಂತಾಗಿ ನಾಲ್ಕು ಜನರು ಹೇಳಿ ತಮ್ಮ ಕರ್ತವ್ಯವನ್ನು ಸ್ಮರಣಮಾಡಿಕೊಂಡು ದುಃಖಾಶ್ರುಗಳೊಡನೆ ಸಭೆಯನ್ನು ನೆರವೇರಿಸಿದರು. ಪ್ರಸ್ತಾವನೆಗಳು—

ಈ ಸುಧಾರಣೆಯ ಯುಗದಲ್ಲಿ ವೀರಶೈವ ಸಮಾಜ ಸುಧಾರಣೆ ಮಾಡುವದನ್ನೇ ತಮ್ಮ ಕರ್ತವ್ಯವನ್ನಾಗಿಟ್ಟುಕೊಂಡು ಸಮಾಜದಲ್ಲಿ ದೊಡ್ಡಧಿಕಾರ ಪಡೆದವರಾಗಿ ರಾಜ ನಿಷ್ಠೆಯನ್ನು, ಶಿರಸಂಗಿ ಫಂಡು ಮತ್ತು ಧಾರವಾಡ ಲಿಂಗಾಯತ ಫಂಡುಗಳನ್ನು ಸ್ಥಾಪಿಸಿ ಸಮಾಜದೇಳಿಗೆಯನ್ನು ಒಂದು ...

ಅಮೇರಿಕೆಯ ಎಣ್ಣೆ ಕಂಪೆನಿ (ಮದ್ರಾಸು)

[4—3]

ನಮ್ಮ ಕಂಪೆನಿಯ ಸೀಮೆಯೆಣ್ಣೆ, ಪೆಟ್ರೋಲು, ಲೂಬ್ರಿಕೇಟಿಂಗ್ ಎಣ್ಣೆ ಚರಬಿ ವಗೈರೆ ಕಲ್ಲರಗು ಪೆಟ್ರೋಲಿಗೆ ಸಂಬಂಧಪಟ್ಟ ಪದಾರ್ಥಗಳನ್ನು ಮಾರಲು ಬೆಂಗಳೂರು ಸಿಟಿ ಅವಿನ್ಯೂ ರೋಡಿನಲ್ಲಿರುವ ಮ|| ಪಿ. ವಿ. ಭದ್ರಪ್ಪನವರನ್ನು ಮೈಸೂರು ಮತ್ತು ಕೊಡಗು ಸೀಮೆಗಳಿಗೆ ಒಟ್ಟು ಏಜಂಟರನ್ನಾಗಿ ನಿಯಮಿಸಿದೆ. ಸಬ್ ಏಜಂಟರಾಗಿರಲಿಷ್ಟಪಡುವವರು ಬೆಂಗಳೂರು ಸಿಟಿ ಶ್ರೀ ನರಸಿಂಹರಾಜ ರೋಡಿನಲ್ಲಿರುವ 170-171 ನೇ ನಂಬರಿನ ನಮ್ಮ ಆಫೀಸಿಗೆ ಬರೆದುಕೊಳ್ಳತಕ್ಕದ್ದು.

ದಿ ಅಮೆರಿಕನ್ ಆಯಿಲ್ ಕಂಪೆನಿ.

ನಂಜನಗೂಡಿನಲ್ಲಿ ಯಾತ್ರಾರ್ಥಿಗಳಿಗಿರತಕ್ಕ ತೊಂದರೆ.

... ದಂತೆ ಆ ಬಸವಗಳಿಗೆ ದೇವಸ್ಥಾನದ ಖರ್ಚಿನಿಂದ ಮೇವನ್ನು ಹಾಕಿಸುವುದು ಅತ್ಯಾವಶ್ಯಕವು. ಮೇಲ್ಕಂಡ ತೊಂದರೆಗಳನ್ನು ಅಧಿಕಾರಿಗಳು ನಿವಾರಿಸಿ ಯಾತ್ರಿಕರ ವಂದನೆಗಳಿಗೆ ಪಾತ್ರರಾಗುವರೆಂದು ನಂಬುತ್ತೇನೆ. ಅಲ್ಲದೆ ವೀರಶೈವರೇ ಆದಿಯಾಗಿ ಉತ್ತಮವರ್ಗದವರು ಸಹ ಗರ್ಭಾಂಕಣಕ್ಕೆ ಹೋಗಲು ಅವಕಾಶವಿಲ್ಲದಿರುವುದರಿಂದ ಅವರು ದೂರದಲ್ಲಿ ನಿಂತು ವಿಧವಾ ಸ್ತ್ರೀಯರ ಬೋಳುಮಂಡೆಗಳನ್ನು ದರ್ಶನಮಾಡಿ ಬರಬೇಕಾಗಿರುತ್ತದೆ. ಅಸ್ಪೃಶ್ಯರನ್ನು ದೇವರದರ್ಶನಕ್ಕಾಗಿ ದೇವಸ್ಥಾನದೊಳಕ್ಕೆ ಬಿಡಬೇಕೆಂಬ ಚಳವಳಿಯು ಸರ್ವತ್ರ ನಡೆಯುತ್ತಿರುವುದಲ್ಲದೆ, ಹಾಗೆ ಅವ ...

ಉಪಾಧ್ಯಾಯರುಗಳ ಮಹಾಸಮ್ಮೇಳನ.

... ಸಹಾಯ ಧನವನ್ನು ಕಳುಹಿಸಿ, ಕೈಕೊಂಡಿರುವ ಈ ಮಹಾಕಾರ್ಯಕ್ಕೆ ಬೆಂಬಲವನ್ನು ಕೊಡಬೇಕಾಗಿ ಈ ಮೂಲಕ ಮತ್ತೊಂದಾವೃತ್ತಿ ಪ್ರಾರ್ಥಿಸಿದೆ.

ಸುದರ್ಶನಯ್ಯಂಗಾರ್, ಜನರಲ್ ಸೆಕ್ರೆಟರಿ.

ಮಹೋದಯರೇ, ತ್ವರೆಮಾಡಿರಿ.

ಈಗ ಭಾರತಭೂಮಿಯ ಎಲ್ಲ ಭಾಗದಲ್ಲೂ ಅಸ್ಪೃಶ್ಯರನ್ನು ಸ್ಪೃಶ್ಯರನ್ನಾಗಿ ಮಾಡಿದೆವೆಂಬ ಬ್ರಾಹ್ಮಣರ ಬೊಬ್ಬಾಟಿಕೆಯು ಎದ್ದಿದ್ದು ಇವರು ...

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು	ಬಂಜೆತನದಿಂದ ಮುಕ್ತರಾಗುವಿರಿ **ಗರ್ಭಧಾರಣ ಸಂಜೀವನೀ**	ಚಿಂತಿಸಬೇಡಿರಿ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆವಿಗುರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ.

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ. M. C. ೩೮

ವೀರಶೈವಮತಾಶ್ರಿತ ವೀರಘಂಟೆ ಮಡಿವಾಳರ ದ್ವಿತೀಯ ಸಭಾ ಮೂವಲಿ.

ಈ ಮಡಿವಾಳರ ಪ್ರಾಂತಿಕ ಸಭೆಯು ಮೂವಲಿಯಲ್ಲಿ ಅಕ್ಟೋಬರ್ ತಾ|| 1, 2, 3, 4 ಈ ದಿವಸಗಳಲ್ಲಿ ಕೂಡಿದ್ದಿತು. ಈ ಸಭೆಗೆ ಬೀಗಿಸೀವೆ, ತವನಂದಿ, ಸೊರಬ, ಸಾಲೂರು, ಚಿಟ್ಟೂರು, ಉಡುಗಣೆ, ಬಂದ್ಗಿ ಮುಂತಾದ ಸೀಮೆಯ ಕಟ್ಟೆಕಸ್ತೆ ಗೌಡ ಬುದ್ಧಿವಂತ ಬಳಗದವರೇ ಆದಿಯಾಗಿ ಸುಮಾರು 300 ಜನ ಮತ್ತು ಶ್ರೀಮನ್ಮಹಾ ಗೌರಿಕೇರಿ ಸಂಸ್ಥಾನದ ವೇ|| ಚೆನ್ನಬಸಯ್ಯನವರು, ಸಾರೆಕೊಪ್ಪ ಮಠದ ವೇ|| ಚೆನ್ನಬಸಯ್ಯನವರು, ದಾವಣಗೇರಿ ಸಾಲಿಮಠದ ವೇ|| ತೋಟಪ್ಪಯ್ಯನವರು, ಮ|| ಗಳಾದ ಮೂವಲಿ ಗ್ರಾಮದ ಮಲ್ಲಪ್ಪಗೌಡರು, ಭಂಗಾರಪ್ಪಗೌಡರು, ಚೆನ್ನಬಸಪ್ಪಗೌಡರು, ಮಲಕಪ್ಪಗೌಡರು, ಶಾಂತವೀರಪ್ಪಗೌಡರು ಪಾಟೀಲ ಪಂಚಾಕ್ಷರಪ್ಪಗೌಡರು ಅಲ್ಲದೆ ಮೂವಲಿ ಸೈಯದ್ ಹಜರತ್ ಸಾಹೇಬರು ಮತ್ತು ಛಲವಾದಿ ಗೌಡಬಸಪ್ಪ ಇನ್ನೂ ಮುಂತಾದ ಅನೇಕ ಪ್ರಮುಖ ಜನರು ದೂರ ದೂರದಿಂದ ಬಂದಿದ್ದರು. ಈ ಸಭೆಯವರೆಲ್ಲರ ಅನುಮೋದನದಿಂದ ಶ್ರೀಮನ್ಮಹಾ ಕ್ಯಾಸನೂರು ಸಂಸ್ಥಾನದ ಪಂಡಿತ ಗುರುಬಸವ ಶಿವಾಚಾರ್ಯ ಮಹಾಸ್ವಾಮಿಗಳವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಲು ಮಂಗಲಗೀತದೊಡನೆ ಜಯಘೋಷ ನಡೆದು ಸಭಾಕಾರ್ಯ ಪ್ರಾರಂಭವಾಯಿತು. ಅಧ್ಯಕ್ಷ ಪೂಜ್ಯಪಾದರವರು ಮಡಿವಾಳ ಮತಾಚಾರ ಮಹೋತ್ಪತ್ತಿ ಮಡಿವಾಳ ಮಾಚಿದೇವನ ಅವತಾರ ಸ್ಥಳೀಯ ಪ್ರಮುಖರಿಂದ ಗ್ರಾಮಾಭಿವೃದ್ಧಿ ವಿಚಾರ ಮಠದ ಮುಂದಿನ ಸುಧಾರಣೆ ಮೊದಲಾದವುಗಳ ಮೇಲೆ ದೃಷ್ಟಾಂತಗಳಿಂದಲೂ ಅನೇಕ ಗ್ರಂಥಾಧಾರದಿಂದಲೂ ಬೋಧಿಸಿದರು. ಗೌರಿಕೇರಿ ಸಂಸ್ಥಾನ ಮಠದ ವೇ|| ಚೆನ್ನಬಸಯ್ಯನವರು ಮಠಸುಧಾರಣೆ, ಸಂಘಶಕ್ತಿ ಇವುಗಳ ವಿಷಯವಾಗಿಯೂ ಈಸೂರು ಮಾಸ್ತರ ಹನುಮಂತಪ್ಪ ಮಡಿವಾಳ ಮಾಚಿದೇವನ ಸ್ಮಾರಕ ವಿಗ್ರಹಸ್ಥಾಪನದ ವಿಷಯವಾಗಿಯೂ, ಕೊಂಡ್ಲಿ ರಾಮಪ್ಪ ತೆರದ ವಿಷಯವಾಗಿಯೂ, ಮೂವಲಿ ಪರಸಪ್ಪನು ಒಬ್ಬರಿಗೆ ನಿಶ್ಚಯಿಸಿದ ಕನ್ಯೆಯನ್ನು ಮತ್ತೊಬ್ಬರಿಗೆ ಕೊಡತಕ್ಕೂಡದೆಂಬ ವಿಚಾರವಾಗಿಯೂ, ಗೋವಿಂದಪ್ಪ ಲಗ್ನಕಾಲದಲ್ಲಿ ಉಡುಗೆ ಮಾಡುವ ವಿಷಯದಲ್ಲಿಯೂ, ಬುದ್ದಪ್ಪನು ಅನುಚಿತವನ್ನುಂಟುಮಾಡುವ ಪ್ರಾಣಿಗಳನ್ನು ಸಾಕಬಾರದೆಂಬ ವಿಷಯವಾಗಿಯೂ, ದಫೇದಾರ ಮಂಜಪ್ಪ ರಿಟೈರ್ಡ್ ಗುರುವರ್ಗದವರಿಂದ ಕರ್ಮಗಳನ್ನು ಮಾಡಿಸಿಕೊಳ್ಳುವ ಬಗ್ಗೆಯೂ ಬಹು ಸ್ವಾರಸ್ಯವಾಗಿ ಭಾಷಣಮಾಡಿದರು ಅನಂತರ ಈ ಮಠದ ಉನ್ನತಿಯ ಬಗ್ಗೆ ಸರ್ವಾನುಮತದಿಂದ ಈ ಕೆಳಗೆ ಕಂಡ ಠರಾವುಗಳು ಪಾಸಾದವು :—

(1) ಒಂದನೇ ಸಭೆಯಲ್ಲಿ ಪಾಸಾದ ಶುಭಶೋಭನ ಕಾರ್ಯಗಳಲ್ಲಿ ಮದ್ಯ ಮಾಂಸ ಸ್ವೀಕರಿಸಕೂಡದೆಂಬ ಠರಾವನ್ನು ಜಾರಿಗೆ ತರತಕ್ಕದ್ದು. (2) ಕರವನ್ನು ಅದು ವರಹದ ಮೇಲೆ ತೆಗೆದುಕೊಳ್ಳಕೂಡದು. (3) ಲಗ್ನವಾಗುವ ಕನ್ನೆಗೆ ಮಂಗಲದಾಗೀನೆಗಳ ಶಿವಾಯ ಬೇರೆ ದಾಗೀನೆ ಕೇಳಕೂಡದು. (4) ವಿವಾಹಕಾಲದಲ್ಲಿ ಮದಮಕ್ಕಳಿಗೆ ದ್ರವ್ಯರೂಪವಾದ ಉಡುಗೆರೆಯನ್ನು ಮಾಡಬೇಕು. ಬಂಧುಬಾಂಧವರಿಗೆ ಕಾರ್ಯಸ್ಥರು ಯಾವ ತರದ ಉಡುಗೆರೆಯನ್ನೂ ಮಾಡಬಾರದು (5) ಸರ್ವಸಮ್ಮತವಾದ ಸ್ಥಳದಲ್ಲಿ ಮಡಿವಾಳ ಮಾಚಿದೇವನ ಗುಡಿಯನ್ನು ಕಟ್ಟತಕ್ಕದ್ದು. (6) ಒಬ್ಬನಿಗೆ ವಚನವನ್ನು ಕೊಟ್ಟ ಕನ್ನೆಯನ್ನು ಮತ್ತೊಬ್ಬನಿಗೆ ಸಕಾರಣವಿಲ್ಲದೇ ಕೊಟ್ಟಲ್ಲಿ ಸಮಾಜದವರ ಅಭಿಪ್ರಾಯದಂತೆ ಗುರುಶಿಕ್ಷೆಗೆ ಒಳಪಡತಕ್ಕದ್ದು. (7) ಅನುಚಿತವನ್ನುಂಟುಮಾಡುವ ಕೋಳಿ, ಹಂದಿ ವಗೈರೇ ಪ್ರಾಣಿಗಳನ್ನು ಖಂಡಿತ ಸಾಕಬಾರದು. (8) ಮಕ್ಕಳಾಗುವುದರೊಳಗಾಗಿ ಗಂಡ ಸತ್ತರೆ ಎರಡನೇ ಲಗ್ನಮಾಡಬೇಕು. ಅನಂತರ ಶ್ರೀಮದಾಚಾರ್ಯರ ಜಯಘೋಷದೊಡನೆ ಸಭೆಯು ಬರಕಾಸ್ತಾಗಿ ಅಧ್ಯಕ್ಷ ಶ್ರೀಯವರಿಂದ ಮೈಸೂರು ಸ್ಟಾರಿನಭಿವೃದ್ಧಿ ಬಗ್ಗೆ 1 ರೂ. ತೆಗೆಸಲ್ಪಟ್ಟು ಗಂಧ ತಾಂಬೂಲ ಹಂಚಲ್ಪಟ್ಟು ಸರ್ವರೂ ಗುರುಗಳಾಶೀರ್ವಾದಕ್ಕೆ ಪಾತ್ರರಾಗಿ ತಮ್ಮ ತಮ್ಮ ನಿವಾಸಸ್ಥಾನಕ್ಕೆ ತೆರಳಿದರು.

ಸಮಾಜಬಾಂಧವ ಪರಸಪ್ಪ.

ಛಲವಾದೀಮತದ ದ್ವಿತೀಯ ಪ್ರಾಂತಿಕ ಸಭಾ.

ಈ ಸಭೆಯು ಸೊರಬದ ತಾ|| ಸಂಸ್ಥಾನ ಗೌರೀಕೆರೆ ಮಠದಲ್ಲಿ ಕಳೆದ ಅಕ್ಟೋಬರ್ ತಾ|| 17 ರಿಂದ 20 ರ ವರೆಗೆ ನೆರೆಯಿತು. ಇಲ್ಲಿಗೆ ಕೆಳದಿ ಕ್ಯಾಸನೂರು ಜಂಬೂರು, ಅಂಡಿ, ಚಿಟ್ಟೂರು, ಚಾಟಿ, ಜಡೆ, ಆನವಟ್ಟಿ, ದ್ಯಾವಳ್ಳಿ, ತವನಂದಿ ಹಳೇಸೊರಬ ಚಂದ್ರಗುತ್ತಿ ಮುಂತಾದ ಸೀಮೆಯ ಕಟ್ಟೆಶೆಟ್ಟಿಗೌಡರು ಬುದ್ಧಿವಂತರು ಸರ್ವ ಬಳಗಸ್ತರಾದಿಯಾಗಿ ಸುಮಾರು 200-250 ಜನರಿಗೆ ಮೇಲ್ಪಟ್ಟು ಛಲವಾದೀ ಜನರು ಸೇರಿದ್ದರು. ಅಲ್ಲದೆ. ಮೂವಲಿ ಮಡಿವಾಳರ ಪರಸಪ್ಪ, ಮ. ಮೂವಲಿ ಸೈಯದ್ ಹಜರತ್ ಸಾಹೇಬರು ಆನವಟ್ಟಿ ಸೇಕ್‌ಬುಡನ್ ಸಾಹೇಬರು ವಗೈರೆ ಅನೇಕ ಜನರು ಬಂದಿದ್ದರು. ಸರ್ವಾನುಮತದಿಂದ ಶ್ರೀಮನ್ಮಹಾ ಕ್ಯಾಸನೂರ ಸಂಸ್ಥಾನದ ಪಂಡಿತ ಶ್ರೀ ಗುರುಬಸವ ಶಿವಾಚಾರ್ಯ ಮಹಾಸ್ವಾಮಿಗಳವರು ಅಧ್ಯಕ್ಷಸ್ಥಾನವನ್ನು ಶ್ರೀಮನ್ಮಹಾಗೌರೀಕೆರೆ ಸಂಸ್ಥಾನದ ಶ್ರೀ ವೀರರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಉಪಾಧ್ಯಕ್ಷಸ್ಥಾನವನ್ನು ಅಲಂಕರಿಸಿದ ಒಡನೆ ಶಿವ್ಯರ ಜಯಘೋಷವಾಯಿತು. ಅನಂತರ ಕೆಳದಿ ಸ್ಕೂಲ ಮಾಸ್ತರ್ ಮಹಲಿಂಗಪ್ಪ, ಹಳ್ಳಿಕೊಪ್ಪದ ಈರಪ್ಪ ಇವರುಗಳು ಮಂಗಳ ಗೀತವನ್ನು ಹಾಡಿದರು. ಅಧ್ಯಕ್ಷರು ಶ್ರೀಮಹಾಪೂಜ್ಯಪಾದರು ಛಲವಂತನ ಉತ್ಪತ್ತಿ ಛಲವಾದೀ ಮತದವರು ನಡಿಯತಕ್ಕ ಆಚಾರ ವಿಚಾರಗಳನ್ನು ಮತ್ತು ಗುರುವರ್ಗದ ಜಂಗಮರಿಂದ ಇವರು ಹೊಂದಬೇಕಾದ ಉನ್ನತಿಯ ವಿಷಯವನ್ನು ಇವರು ವೀರಶೈವ ಮತಶ್ರಿತರೆಂಬುದನ್ನು ವಾತುಲಾಗಮ ಬಿಜ್ಜಳನೃಪರವ ಮೊದಲಾದ ಗ್ರಂಥಗಳ ಆಧಾರದೊಡನೆ ಸರ್ವರಿಗೂ ಪ್ರತಿ ಬಿಂಬಿಸುವಂತೆ ಸಾವಧಾನದಿಂದ ಅಪ್ಪಣೆ ಕೊಡಿಸಿದರು. ಮರುದಿನ ಸಭೆಯು ಪ್ರಾರಂಭವಾಗಲು ಗೌರೀಕೆರೆ ಸಂಸ್ಥಾನ ಮಠದ ಶ್ರೀ ಪೂಜ್ಯ ಮಹಾಸ್ವಾಮಿಗಳವರು ಭಸ್ಮಧಾರಣ ಗುರುಭಕ್ತಿ ಮೊದಲಾದ ಮಠಸುಧಾರಣ ವಿಷಯದಲ್ಲಿಯೂ ಇವರಿಗೆ ಮುಖ್ಯವಾದ ಹುಟ್ಟು ಸರಪಳಿ ಘಂಟೆ ಮೊದಲಾದವುಗಳ ಉತ್ಪತ್ತಿ ವಿಷಯದಲ್ಲಿಯೂ ಬಹು ಸ್ವಾರಸ್ಯವಾಗಿ ಎಲ್ಲರಿಗೂ ತಿಳಿಯುವಂತೆ ಉಪದೇಶಿಸಿದರು. ಅನಂತರ ಗೌರೀಕೆರೆ ಸಂಸ್ಥಾನ ಮಠದ ಶ್ರೀ|| ವೇ|| ಚೆನ್ನಬಸವಯ್ಯನವರು ಸಂಘಶಕ್ತಿ, ವಿದ್ಯೆ ಮತ್ತು ನಡತೆ ಸುಶಿಕ್ಷೆ ಇವುಗಳ ಮಹತ್ವದ ವಿಚಾರವಾಗಿ ಎಲ್ಲರೂ ಆನಂದಿಸುವಂತೆ ಯೋಗ್ಯ ನಿದರ್ಶನಗಳೊಡನೆ ಉಪನ್ಯಾಸ ಮಾಡಿದರು. ಮಧ್ಯಾಹ್ನಾನಂತರ ಪುನಹ ಸಭೆ ಸೇರಿ ಕೆಳದಿ ಸ್ಕೂಲ್ ಮಾಸ್ತರ್ ಛಲವಾದೀ ಮಹಲಿಂಗನು ಗುರು ವಿಷಯವಾಗಿಯೂ, ಜಂಬೂರ ಬರಮಪ್ಪನು ಮದ್ಯಪಾನದ ವಿಷಯವಾಗಿಯೂ, ಹೊರಬೈಲ ಸ್ಕೂಲ್ ಮಾಸ್ತರ್ ಲಿಂಗಪ್ಪನು ದಾಗೀನೇಗಳ ಪರಿಮಿತಿಯ ವಿಚಾರವಾಗಿಯೂ, ಹಳ್ಳಿಕೊಪ್ಪದ ಲಿಂಗಪ್ಪನು ಮತ್ತು ಕಟ್ಟಿದ ಬಸವಿಯರಿಗೆ ಲಗ್ನಮಾಡಬೇಕೆಂಬ ವಿಷಯವಾಗಿಯೂ, ಶಿರಾಳಕೊಪ್ಪದ ಛಲವಾದೀ ಹಾಲಪ್ಪನು ಗೃಹಸ್ವಚ್ಛತೆ ಸ್ತ್ರೀ ಸುಧಾರಣೆಗಳ ವಿಷಯವಾಗಿಯೂ ತುಮರಿಕೊಪ್ಪದ ಕೊಲ್ಲಾರಪ್ಪನವರು ವಿದ್ಯೆಯ ವಿಷಯದಲ್ಲಿಯೂ ಸರಳವಾಗಿ ಭಾಷಣಮಾಡಿದರು. ಮಾರನೇಯ ದಿನ ಅನೇಕ ವಿಷಯಗಳು ಚರ್ಚಿಸಲ್ಪಟ್ಟು ಬಹುಮತದಿಂದ ಪಾಸಾದ ಠರಾವುಗಳು :

(1) ಮದ್ಯಪಾನವನ್ನು ಬಿಟ್ಟುಬಿಡಬೇಕು. (2) ವಿವಾಹ ಮುಂತಾದ ಶುಭಕಾರ್ಯಗಳನ್ನು ಗುರುವರ್ಗದ ಜಂಗಮರಿಂದಲೇ ಮಾಡಿಸಬೇಕು. (3) ಸೂಳೆಯರನ್ನು ಬಿಡಬಾರದು, ಮತ್ತು ಕಟ್ಟಿದ ಸೂಳೆಯರನ್ನು ಲಗ್ನಮಾಡತಕ್ಕದ್ದು. (4) ಮಕ್ಕಳತಹದ ಸೂಳೆಯರನ್ನು ಗಾಂಧರ್ವ ವಿವಾಹ ಮಾಡತಕ್ಕದ್ದು. (5) ಗಂಡಸತ್ತ ವಿಧವೆಯರನ್ನು ಜಾತಿಯ ಧರ್ಮದ ಪ್ರಕಾರ ಶಾಲಿಯುಳ್ಳವರನ್ನೇ ಮಾಡತಕ್ಕದ್ದು. ಹಾಗಿಲ್ಲದೆ ಗಂಡನ ಹೆಸರಿನ ಮೇಲೆ ಇರುತ್ತೇನೆಂದು ಪ್ರತಿಜ್ಞೆಮಾಡಿದಲ್ಲಿ ಬಳೆ, ಹುವ್ವು ಮತ್ತು ಕರಿ ಸೀರೆಗಳನ್ನು ಅವರು ತ್ಯಜಿಸತಕ್ಕದ್ದು. ಈ ಬಗ್ಗೆ ಇವರ ರಕ್ಷಣೆಯ ಕರ್ತರಿಂದ ಮುಚ್ಚಳಿಕೆಯನ್ನು ಬರೆಯಿಸತಕ್ಕದ್ದು. (6) ವಿವಾಹ ಕಾರ್ಯಗಳಲ್ಲಿ ಮದಮಕ್ಕಳಿಗೆ ದ್ರವ್ಯರೂಪವಾದ ಉಡುಗೆರೆಯನ್ನು ಮಾಡಬೇಕು. ಕಾರ್ಯಸ್ಥರು ಬಂಧುಬಳಗದವರಿಗೆ ಉಡುಗೆರೆಯನ್ನು ಮಾಡಬಾರದು. (7) ವಿವಾಹ ಮಾಡುವ ಕನ್ನೆಗೆ ಮಾಂಗಲ್ಯ ದಾಗೀನೇಗಳ ಶಿವಾಯಿ ಬೇರೆ ದಾಗೀನೆಗಳನ್ನು ಇಷ್ಟೇ ಇಡಬೇಕೆಂದು ನಿರ್ಬಂಧ ಮಾಡಕೂಡದು. (8) ಮುದ್ರಿ ಛಲವಾದಿಯು ಸ್ನಾನವಿಲ್ಲದೆ ಭೋಜನಮಾಡಬಾರದು. 4 ನೆಯ ದಿವಸ ಶ್ರೀಮಹಾಸಂಸ್ಥಾನದ ಅಧಿಕಾರಸ್ಥಾನದಲ್ಲಿ ಸದರಿ ಮತಾಚಾರಗಳ ವ್ಯತ್ಯಾಸದ ವಿಚಾರಣೆಯು ನಡೆದು ದಂಡಖಂಡನೆಯು ವಿಧಿಸಲ್ಪಟ್ಟ ಅನಂತರ ಮೈಸೂರು ಸ್ಟಾರಿನ ಅಭಿವೃದ್ಧಿಗೆ ಅಧ್ಯಕ್ಷರ ಅಪ್ಪಣೆಯ ಪ್ರಕಾರ 2 ರೂ. ತೆಗೆಯಿಸಲ್ಪಟ್ಟು ಶ್ರೀಮನ್ಮಹಾರಾಜರವರ ಯುವರಾಜರವರ ಮತ್ತು ಜಯಚಾಮರಾಜ ಒಡೆಯರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ಬರಕಾಸ್ತಾಗಲು ಸರ್ವರೂ ಮಂಗಲಗೀತವನ್ನು ಹಾಡಿ ಶ್ರೀಗುರು ಆಶೀರ್ವಾದಕ್ಕೆ ಪಾತ್ರರಾದರು.

ಓರ್ವ ಛಲವಾದೀ ಮತಾಭಿಮಾನಿ.

[ನೇಲ್ಕಂಡ 3 ರೂಪಾಯಿಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ—ಸಂ.]

ಕ್ಲೋಸ್‌ಪೇಟೆ ತಾಲ್ಲೂಕ್ ಸುಗ್ಗನಹಳ್ಳಿ ಎಲೆಕ್ಟ್ರಿಕ್ ಮತ್ತು ವಿಲೇಜ್ ಹಾಲ್ ಇವುಗಳ ಪ್ರಾರಂಭೋತ್ಸವ.

ಈ ಸಮಾರಂಭವು ತಾ|| 27-10-32 ನೇ ಗುರುವಾರ ಸಾಯಂಕಾಲ 6 ಘಂಟೆಗೆ ಬೆಂಗಳೂರು ಜಿಲ್ಲಾಧಿಕಾರಿಗಳಾದಂಥ ಶ್ರೀಯುತ ಕೆ. ವಿ. ಅನಂತರಾಮನ್, ಬಿ.ಎ. ಯವರಿಂದ ನೆರವೇರಿಸಲ್ಪಟ್ಟಿತು. ಈ ಮಹೋತ್ಸವಕ್ಕೆ ಬೆಂ|| ಡಿ|| ಬೋ|| ಪ್ರೆಸಿಡೆಂಟ್ ಶ್ರೀ ವಿ. ವೆಂಕಟಪ್ಪನವರು, ಕಾನಕಾನಹಳ್ಳಿ ಎಲೆಕ್ಟ್ರಿಕ್ ಸೂಪರಿಂಟೆಂಡೆಂಟ್ ಶ್ರೀ ಎಸ್. ಬಿ. ಅಯ್ಯಂಗಾರ್ರವರು, ಬೆಂ|| ಡಿ|| ಎ|| ಆಫೀಸರ್ ಕೆ. ಟಿ. ಸುದರ್ಶನಯ್ಯಂಗಾರ್, ಬಿ.ಎ. ಯವರು, ಕ್ಲೋಸ್ಪೇಟೆ ಸಬ್ ಡಿ|| ಆಫೀಸರ್ ಶ್ರೀ ಜಿ. ಬಿ. ಮಲ್ಲಾರಾಧ್ಯ, ಎಂ.ಎ. ಯವರು, ಕ್ಲೋ|| ಮ್ಯಾ|| ಸಾಹೇಬರವರು, ಚನ್ನಪಟ್ಟಣದ ಫೋ|| ಅ|| ಸೂ|| ಸಾಹೇಬರವರು, ಕ್ಲೋ|| ತಾ|| ಅಮಲ್ದಾರ್ ಸಿ. ರಾಮರಾವ್, ಬಿ.ಎ. ಯವರು, ತಾ|| ಫೋ|| ಇನ್ಸ್‌ಪೆಕ್ಟರ್‌ರವರು ಮುಂತಾದ ಸರ್ಕಾರಿ ಅಧಿಕಾರಿಗಳು ಮತ್ತು ಈ ಡಿಸ್ಟ್ರಿಕ್ಟ್ ಆರ್. ಎ. ಮೆಂಬರುಗಳು, ಬೆಂ|| ಡಿ|| ಬೋ|| ಮೆಂಬರುಗಳು, ಪಂಚಾಯಿತಿಯ ಛೇರ್ಮೆನ್ನರುಗಳು ಮತ್ತು ಮೆಂಬರುಗಳು, ಅಕ್ಕಪಕ್ಕದ ಗ್ರಾಮಗಳ ಖಾಸಗಿ ದೊಡ್ಡ ಮನುಷ್ಯರುಗಳು ಸೇರಿ 1500 ಜನಗಳವರಿಗು, ತಳಿರುತೋರಣಗಳಿಂದಲೂ, ವಿದ್ಯುತ್ ದೀಪಗಳಿಂದಲೂ ಅಲಂಕೃತವಾದ ಚಪ್ಪರದ ಮಧ್ಯೆ ನೆರೆದಿದ್ದರು. ಕಾರ್ಯಕ್ರಮದ ಪ್ರಕಾರ ಬಾಲಿಕಾ ಪಾಠಶಾಲೆಯ ಹೆಣ್ಣು ಮಕ್ಕಳುಗಳಿಂದ ದೇವರ ಪ್ರಾರ್ಥನೆಯು ನಡೆಸಲ್ಪಟ್ಟಮೇಲೆ ಪಂಚಾಯಿತಿ ಛೇರ್ಮೆನ್ನರವರಾದ ಮ|| ಎಸ್. ಎಲ್. ಮುದ್ದುಬಸವಯ್ಯನವರು ಗ್ರಾಮ ಪಂಚಾಯಿತಿ ಸದಸ್ಯರುಗಳ ಪರವಾಗಿ ಬಿನ್ನವತ್ತಳೆಯನ್ನು ಓದಿದರು. ತರುವಾಯ ಅಧ್ಯಕ್ಷರು ತಮ್ಮ ಅಮೃತ ಹಸ್ತದಿಂದ ವಿದ್ಯುದ್ದೀಪಗಳನ್ನು ಹತ್ತಿಸಿ ಈ ದೀಪಗಳಿಂದ ಜನಗಳಿಗೆ ಆಗತಕ್ಕ ಅನುಕೂಲತೆಯ ವಿಚಾರವಾಗಿಯೂ, ಈ ವಿದ್ಯುತ್ಶಕ್ತಿಯ ಸಹಾಯದಿಂದ ಈ ಗ್ರಾಮದಲ್ಲಿ ತೆಗೆದುಕೊಂಡಿರತಕ್ಕ 8 ಇರಗೇಷನ್ ಪಂಪುಗಳ ಸಹಾಯದಿಂದ ಮಾಡಬೇಕಾದ ವ್ಯವಸಾಯದ ವಿಷಯವಾಗಿಯೂ, ಈ ಪಂಚಾಯತಿಯವರು ಮಾಡಿರತಕ್ಕ ಕಾರ್ಯಕಲಾಪಗಳ ವಿಚಾರವಾಗಿಯೂ ಅಮೋಘವಾದ ಭಾಷಣವನ್ನುಮಾಡಿ ಗ್ರಾಮದ ಮ|| ರಾ|| ಮಾಜೀ ಪಟೇಲ್ ಚನ್ನಿಗಪ್ಪನವರ ದ್ರವ್ಯ ಸಹಾಯದಿಂದ ಕಟ್ಟಿಸಲ್ಪಟ್ಟಿರತಕ್ಕ ಹೊಸ ವಿಲೇಜ್ ಹಾಲ್ ಪ್ರವೇಶೋತ್ಸವವನ್ನೂ ನೆರವೇರಿಸಿದರು. ಕ್ಲೋಸ್‌ಪೇಟೆ ಅಡ್ವೋಕೇಟರಾದ ಮ|| ಟಿ. ಮಾದಯ್ಯಗೌಡ, ಬಿ.ಎ., ಬಿ.ಎಲ್. ರವರು ಗ್ರಾಮದ ಪರವಾಗಿ ಅಧ್ಯಕ್ಷರಿಗೂ ಸಭಿಕರಿಗೂ ವಂದನೆಯನ್ನರ್ಪಿಸಿದರು. ಅನಂತರ ಗಂಧ, ಪುಷ್ಪ ತಾಂಬೂಲ ವಿನಿಯೋಗವಾಗಿ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಿಂದ ಸಭೆಯು ಮುಕ್ತಾಯವಾಯಿತು.

ಸ್ಥಳವಾಸಿ.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರಾದ ಶ್ರೀಯುತ ಕೆ. ವಿ. ಅನಂತರಾಮನ್, ಬಿ.ಎ. ಅವರ ದಿವ್ಯ ಸನ್ನಿಧಿಯಲ್ಲಿ ಕ್ಲೋಸ್‌ಪೇಟೆ ತಾಲ್ಲೂಕು ಸುಗ್ಗನಹಳ್ಳಿ ಗ್ರಾಮ ಪಂಚಾಯಿತಿಯ ಸದಸ್ಯರು ವಿನಯಪೂರ್ವಕವಾಗಿ ಒಪ್ಪಿಸಿದ ಅಭಿನಂದನ ಪತ್ರಿಕೆ.

ಮಹಾಸ್ವಾಮಿ, ನಮ್ಮ ಈ ಗ್ರಾಮ ಪಂಚಾಯಿತಿಯಲ್ಲಿ “ವಿದ್ಯುಚ್ಛಕ್ತಿಯ ದೀಪೋತ್ಸವವು” ಮತ್ತು “ವಿಲೇಜ್ ಹಾಲ್” (ಗ್ರಾಮ ಮಂದಿರ) ಕಟ್ಟಡದ ಪ್ರವೇಶೋತ್ಸವವು ತಮ್ಮ ಅಮೃತ ಹಸ್ತದಿಂದ ನೆರವೇರಿಸಲ್ಪಡುವ ಈ ಅವಕಾಶವು ನಮಗೆ ದೊರೆತಿರುವುದು ನಮ್ಮ ಭಾಗ್ಯೋದಯವೆಂದು ಭಾವಿಸುತ್ತೇವೆ. ತಾವು ನಮ್ಮ ಬಡ ಗ್ರಾಮ ಪಂಚಾಯಿತಿಯ ಇಂದಿನ ಉತ್ಸವಕ್ಕೆ ಕೇವಲ ಅಭಿಮಾನವಿಟ್ಟು ಜಿಲ್ಲಾ ಆಡಳಿತದ ಕಾರ್ಯಗಳು ಎಷ್ಟೇ ಇದ್ದಾಗ್ಯೂ ಬಿಟ್ಟು ಅವಕಾಶಮಾಡಿಕೊಂಡು ಇಷ್ಟು ದೂರ ದಯಮಾಡಿಸಿರುವುದು ತಮಗೆ ಗ್ರಾಮ ಪುನರುಜ್ಜೀವನ ಕಾರ್ಯದಲ್ಲಿರುವ ಶ್ರದ್ಧಾಶಕ್ತಿಯನ್ನೂ, ಗ್ರಾಮಾಂತರವಾಸಿಗಳ ಮೇಲೆ ತಮಗೆ ಅಂತರ್ಯಾಮಿಯಾಗಿರತಕ್ಕ ಅಸದೃಶವಾದ ಅಭಿಮಾನವನ್ನೂ ವ್ಯಕ್ತಗೊಳಿಸುತ್ತದೆ.

ನಮ್ಮ ಪಂಚಾಯಿತಿ ಸ್ಥಾಪಿಸಲ್ಪಟ್ಟು 6 ವರ್ಷಗಳಾದವು. 12 ಜನ ಖಾಸಗಿ ಸದಸ್ಯರು ಇರುತ್ತಾರೆ. ಈ ಗ್ರಾಮದಲ್ಲಿ 330 ಮನೆಗಳು, 1,507 ಪ್ರಜಾ ಸಂಖ್ಯೆ ಇರುತ್ತದೆ. ಎಲ್ಲಾ ಬಾಬುಗಳಿಂದಲೂ ವರ್ಷಂಪ್ರತಿಯಲ್ಲಿಯೂ ಆದಾಯವು 560 ರೂಪಾಯಿಗಳು ಆಗಿರುತ್ತದೆ.

ನಮ್ಮ ಗ್ರಾಮಕ್ಕೆ ಘನ ಸರ್ಕಾರದವರು ವಿದ್ಯಾ ಪ್ರೋತ್ಸಾಹಕ್ಕಾಗಿ ಒಂದು ಪ್ರಾಥಮಿಕ, ಒಂದು ಮಾಧ್ಯಮಿಕ ಮತ್ತು ಒಂದು ಬಾಲಿಕಾ ಪಾಠಶಾಲೆಯನ್ನು ಏರ್ಪಡಿಸಿಕೊಟ್ಟಿರುತ್ತಾರೆ.

ಈ ಪಂಚಾಯಿತಿಯ ಆದಾಯಕ್ಕೆ ಅನುಗುಣವಾಗಿ ಗ್ರಾಮ ನೈರ್ಮಲ್ಯ ಕೆಲಸಕ್ಕೆ ಹೆಚ್ಚು ಗಮನಕೊಟ್ಟುಕೊಂಡು ನಮ್ಮ ಊರಿಗೆ ಅವಶ್ಯಕವಾದ ಗ್ರಾಮಾಭಿವೃದ್ಧಿ ಕೆಲಸ ಕಾರ್ಯಗಳನ್ನು ವಾರಗಟ್ಟಲೆ ಕೆಲಸಗಳಿಂದ ಮಾಡಿಕೊಳ್ಳುತ್ತಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಗ್ರಾಮಕ್ಕೆ ಅತಿ ಜರೂರಾಗಿ ಆಗಬೇಕಾಗಿರುವ ಕೆಲವು ವಿಷಯಗಳನ್ನು ತಮ್ಮಲ್ಲಿ ವಿಜ್ಞಾಪಿಸಿಕೊಳ್ಳುತ್ತೇವೆ.

ಮಾಯಗಾನಹಳ್ಳಿಯಿಂದ ಸುಗ್ಗನಹಳ್ಳಿ ಮಾರ್ಗವಾಗಿ ಮಾಗಡಿ ರಸ್ತೆಗೆ ಸೇರತಕ್ಕ ಡಿಸ್ಟ್ರಿಕ್ಟ್ ಬೋರ್ಡಿನ ರಸ್ತೆಯು ಅರ್ಧಾಂಶವಾಗಿ ನಿಂತುಹೋಗಿರುತ್ತದೆ. ಇದರಿಂದ ಜನರಿಗೂ ಮತ್ತು ವ್ಯಾಪಾರಸ್ಥರಿಗೂ ತುಂಬಾ ತೊಂದರೆಯಾಗಿರುತ್ತದೆ ; ಆದ್ದರಿಂದ ಈ ರಸ್ತೆಯನ್ನು ಪೂರ್ತಿಗೊಳಿಸುವುದು ಅವಶ್ಯಕವಾಗಿದೆ.

ಈ ಗ್ರಾಮವು ಕ್ಲೋಸ್‌ಪೇಟೆಗೆ 8 ಮೈಲಿ ಫಾಸಲೆಯಲ್ಲಿದ್ದು ಸುಮಾರು 20-30 ಹಳ್ಳಿಗಳ ಮಧ್ಯದಲ್ಲಿರುವುದರಿಂದ ಈ ಗ್ರಾಮಕ್ಕೆ ಒಂದು ಆಯುರ್ವೇದ ವೈದ್ಯಶಾಲೆ ಮತ್ತು ಸೂಲಗಿತ್ತಿಯ ಸಹಾಯವನ್ನು ಒದಗಿಸಿಕೊಟ್ಟು ನಮ್ಮಗಳಿಗೆ ಇರುವ ಮಹತ್ತರವಾದ ಕಷ್ಟವನ್ನು ಪರಿಹರಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

ಈ ಗ್ರಾಮದಲ್ಲಿ ರೇಷ್ಮೆ ವ್ಯವಸಾಯವು ರೈತರ ಮುಖ್ಯ ಉಪಕಸಬು ಆಗಿರುವುದರಿಂದ ಇದರ ವಿಚಾರದಲ್ಲಿ ಹೆಚ್ಚಿಗೆ ತಿಳುವಳಿಕೆಯನ್ನು ಹೊಂದತಕ್ಕ ಬಗ್ಗೆ ರೇಷ್ಮೆ ಫಾರಂ ಯಾ “ಏಡೆಡ್ ಗ್ರೈನೇಜ್” ಎಂಬ ವ್ಯವಸಾಯ ಕ್ಷೇತ್ರವನ್ನು ಸ್ಥಾಪಿಸಬೇಕಾದ್ದು ಅಗತ್ಯವಾಗಿದೆ.

ಈ ಗ್ರಾಮಕ್ಕೆ ಒಂದು ಬ್ರಾಂಚ್ ಪೋಸ್ಟ್ ಆಫೀಸ್ ಮೈಸೂರು ಸೀಮೆಯ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೈರೆಕ್ಟರ್ ಸಾಹೇಬರವರ ತಾ|| 21-1-32 ನೇ ಸಿ ಎಲ್. 1365/29-30 ನೇ ಮಧ್ಯಂಮೆಮೋದಿನಲ್ಲಿ ಮಂಜೂರ್ಮಾಡಿಕೊಟ್ಟು ಇದುವರೆಗೂ ಜಾರಿಗೆ ಕೊಡದೆ ನಿಲ್ಲಿಸಿರುವುದರಿಂದ ನಮಗೆ ತುಂಬಾ ತೊಂದರೆಯಾಗಿರುತ್ತೆ ; ಆದ್ದರಿಂದ ಜಾಗ್ರತೆ ಜಾರಿಗೆ ತರುವಂತೆ ಮಾಡಿಸಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

ನಮ್ಮ ಗ್ರಾಮಕ್ಕೆ ಅನೇಕವೇಳೆ ದಯಮಾಡಿಸಿ ನಮ್ಮ ಕಷ್ಟ ನಿಷ್ಠುರಗಳನ್ನು ಅರಿತು ಈ ಗ್ರಾಮಕ್ಕೆ ವಿದ್ಯುಚ್ಛಕ್ತಿಯ ಸಹಾಯವು ಕ್ಷಿಪ್ರವಾಗಿ ಪ್ರಾಪ್ತವಾಗುವಂತೆ ಮಾಡಿಕೊಟ್ಟ ಕಾನ್‌ಕಾನ್‌ಹಳ್ಳಿ ಎಲೆಕ್ಟ್ರಿಕ್ ಸೂಪರಿಂಟೆಂಡೆಂಟರಾದ ಶ್ರೀಯುತ ಎಸ್. ಬಿ. ಅಯ್ಯಂಗಾರ್ರವರಿಗೆ ನಾವು ತುಂಬಾ ಕೃತಜ್ಞರಾಗಿರುತ್ತೇವೆ.

ಸದ್ಯದಲ್ಲಿ ಗ್ರಾಮದ ಬೀದಿಗಳಿಗೆ 12 ದೀಪಗಳನ್ನೂ, ಇದಲ್ಲದೆ ಖಾಸಗಿ ಜನರ 30 ಮನೆಗಳಿಗೂ, ವ್ಯವಸಾಯಕ್ಕಾಗಿ 8 ಪಂಪುಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ.

ನಮ್ಮ ಗ್ರಾಮಕ್ಕೆ ಒಂದು “ವಿಲೇಜ್ ಹಾಲ್” ಕಟ್ಟಡವನ್ನು ತಯಾರಿಸುವಂತೆ ಉದಾರ ಮನಸ್ಸಿನಿಂದ 700 ರೂಪಾಯಿಗಳ ಧನಸಹಾಯ ಮಾಡಿದ ಈ ಗ್ರಾಮದ ಮಾಜಿ ಪಟೇಲ್ ಮ|| ರಾ|| ಚೆನ್ನಿಗಪ್ಪನವರಿಗೂ ಮತ್ತು 500 ರೂಪಾಯಿಗಳ ಗ್ರಾಂಟನ್ನು ಮಂಜೂರ್ಮಾಡಿದ ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನವರಿಗೂ, ಮುಖ್ಯವಾಗಿ ಬೋರ್ಡಿನ ಅಧ್ಯಕ್ಷರವರಾದ ಶ್ರೀಯುತ ವಿ. ವೆಂಕಟಪ್ಪನವರಿಗೂ ನಾವು ತುಂಬಾ ಕೃತಜ್ಞರಾಗಿರುತ್ತೇವೆ.

ಮಹಸ್ವಾಮಿಯವರು ಈ ಗ್ರಾಮ ನಿವಾಸಿಗಳಮೇಲೆ ಸಂಪೂರ್ಣ ಕಟಾಕ್ಷವಿಟ್ಟು ತಮ್ಮ ಅಮೃತ ಹಸ್ತದಿಂದ ಈ ದಿನದ ದೀಪೋತ್ಸವವನ್ನೂ ಅಲ್ಲದೆ “ವಿಲೇಜ್ ಹಾಲ್” ಪ್ರವೇಶೋತ್ಸವವನ್ನೂ ನೆರವೇರಿಸಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡಬೇಕೆಂದು ಅತ್ಯಾದರದಿಂದ ಬೇಡಿಕೊಳ್ಳುತ್ತೇವೆ. ಈ ಉತ್ಸವ ವೈಭವವನ್ನು ನೆರವೇರಿಸಿದ್ದಕ್ಕಾಗಿ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ.

ಈ ಸುಸಮಯದಲ್ಲಿ ನಮ್ಮನ್ನಾಳುವ ಮಹಾಸ್ವಾಮಿಯವರಾದ ಶ್ರೀಮನ್ ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ., ಜಿ.ಬಿ.ಇ. ಯವರ ಮಹಾಸನ್ನಿಧಾನದಲ್ಲಿ ಗ್ರಾಮಾಂತರವಾಸಿಗಳಾದ ನಮ್ಮೆಲ್ಲರ ರಾಜಭಕ್ತಿಪೂರ್ವಕವಾದ ಕೃತಜ್ಞತೆಯನ್ನು ಸಮರ್ಪಿಸುತ್ತೇವೆ.

ಕರುಣಾಮಯನಾದ ಪರಮಾತ್ಮನು ತಮಗೂ ತಮ್ಮ ಕುಟುಂಬ ವರ್ಗದವರಿಗೂ ಆಯುರಾರೋಗ್ಯಾದಿ ಸುಖಸಂಪತ್ತುಗಳನ್ನೂ, ತಮಗೆ ಕ್ಷಿಪ್ರದಲ್ಲಿಯೇ ಇನ್ನೂ ಹೆಚ್ಚಿನ ಅಧಿಕಾರ ಗೌರವವನ್ನೂ ಒದಗಿಸಿಕೊಟ್ಟು ಸಮಸ್ತ ಸನ್ಮಂಗಳವನ್ನುಂಟುಮಾಡಲೆಂದು ಹೃದಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ. ಮಹಾಸ್ವಾಮಿ.

ಇತಿ, ತಮ್ಮ ಆಜ್ಞಾನುವರ್ತಿಗಳಾದ,
ಸುಗ್ಗನಹಳ್ಳಿ ಗ್ರಾಮ ಪಂಚಾಯಿತಿಯ ಸದಸ್ಯರು.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.
ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.
28 M. C

೧೯೩೨ ನೆಯ ಇಸವಿ ನವಂಬರ್ ತಾ|| ೭ ರಿಂದ ನವಂಬರ್ ತಾ|| ೧೩ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಕಾರ್ತಿಕ ಶುದ್ಧ ದಶಮಿಯಿಂದ ಕಾರ್ತಿಕ ಶುದ್ಧ ಪೌರ್ಣಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ಮಾಸ
7	[1] ಸೋಮ	ದಶ	54-7	ಶತ	44-40	22
8	ಮಂಗಳ	ಏಕಾ	55-7	ಪೂಭಾ	46-55	23
9	[2] ಬುಧ	ದ್ವಾದ	57-46	ಉಭಾ	50-43	24
10	[3] ಗುರು	ತ್ರಯೋ	60	ರೇವ	55-19	25
11	ಶುಕ್ರ	ತ್ರಯೋ	1-46	ಅಶ್ವಿ	60	26
12	[4] ಶನಿ	ಚತು	6-16	ಅಶ್ವಿ	1-26	27
13	[5] ಭಾನು	ಪೌರ್ಣ	11-22	ಭರ	7-41	28

(1) ಕಾರ್ತಿಕ ಸೋಮವಾರ. (2) ಉತ್ಥಾನದ್ವಾದಶಿ, ತುಳಸೀವೃಂದಾವನೋತ್ಸವ, ಮಳೆನಕ್ಷತ್ರ-ವಿಶಾಖೆ ೨ ನೆಯ ಪಾದ. (3) ಉತ್ಥಾನದ್ವಾದಶಿ ಲಕ್ಷದೀಪ. (4) ಜಯಲಕ್ಷ್ಮಮ್ಮಣ್ಣೀಯವರ ವರ್ಧಂತಿ, ಮಳೆನಕ್ಷತ್ರ-ವಿಶಾಖೆ ೩ ನೆಯ ಪಾದ. (5) ಧರ್ಮಸ್ಥಳದಲ್ಲಿ ದೀಪೋತ್ಸವ.

ಮೈಸೂರು : ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಎಸ್ಸಿಕ್ ... ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

REG NO. M. 134.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗಶರಾಜಮಂಡಲಚೈತ್ಯಾ | ಘನಪಥಕ್ರಾವತಾರಾ ಪಕ್ಷ್ಮ ಸಹಸ್ತ್ರ ತೋಷರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲುಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ಶಾಶ್ವತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೆತ್ತೆಳೆಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆ೯ ೧೯೩೨ ನೆಯ ಇಸವಿ ನವಂಬರ್ ತಾರೀಖು ೧೪ ನೆಯ ಸೋಮವಾರ [ಸಂಚಿಕೆ ೪೬

Insurance in the Mysore State Life Insurance, Public Branch.

Life Insurance is admittedly the best form of investment and the greatest seafeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore.

(Sd.) S. SHA MANNA,
Secretary, Insurance Committee.

[50—19]

[50—2]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರನವಚನ	೦—೮—೦	೦—೧೩—೦
ಸಟೀಕ ಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಸ್ಟರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಡ್ಡು, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮೀದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವ, ಶಿಕ್ಷೆ ಕಡಿಮೆಬರೋಣ, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀ ತರುಣರಂತೆ ಶಾಮಿಚಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರವೀರ್ಯಶುದ್ಧಿಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು ? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೪೨ ಗೋಲಿಯ ಒಂದು ಡಬ್ಬಿಗೆ ೫। ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಅಳ್ಳೇಸು ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

ಎಲ್ಲ ಬಿಳ್ಳದ ಸೆರಗು, ಮುಟ್ಟಿಚಿಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆ ಗಂಟುಗಂಟು ಮುಟ್ಟಿಚಿಟ್ಟು ಆಗೋಣ, ಮುಟ್ಟಿಚಿಟ್ಟು ಆಗುವ ಕಾಲಕ್ಕೆ, ಹೊಟ್ಟೆಲು ಹಿಂದುಗಡೆ, ಕಿಬ್ಬಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋಣ, ಎದೆ ಹಾರೋಣ, ಉಷ್ಣತೆ, ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋಣ, ಗರ್ಭಪಾತವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಪಾತ್ರಿಯಿಂದ ಸಂತತಿಯಾಗುತ್ತದೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ಗೋಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ಹಾಳಾಗಿ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಆ ತೀವ್ರ ಅದೆ ಮತ್ತು ಪ್ರಸೂತಿ ಕಷ್ಟವಲ್ಲ ... [illegible]

ಪತ್ತಾ ಮಾಲಕ :—ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜ. ಎಂ. ಎಸ್. ಎಂ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು ನಕಲಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಗುಣ ಮಾಡುವ ವ್ಯಾಧಿಗಳು ಯಾವವೆಂದರೆ—ಶಿರ ಶೂಲೆ, ಒಂಟಿತಲೆನೋವು ತಲೆಯಲ್ಲಿನ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ... ಮೇಲ್ಪಟ್ಟ ಈ ವ್ಯಾಧಿಗಳನ್ನೂ ... ಹೆಚ್ಚು ಮಾಡುತ್ತದೆ.

... ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ... ಪರಿಮಳವಾಗುವುದು, ... ಗುಣವಾಗುತ್ತದೆ. ...

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦
ಡಜನ್ ೧ ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಚಾರ್ಜು ೮ ಆಣೆ.

ದಯವಿಟ್ಟು ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯ ಹಾಗೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[೫—೩] ಪೋ. ಬಾ. ೫೧೦, ಮದರಾಸು.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ನವಂಬರ್ ತಾ|| ೧೪ ನೆಯ ಸೋಮವಾರ.

ಲಾರ್ಡ್ ಶಾಂಕಿಯವರ ಅಭಿಪ್ರಾಯ.

ದೌರ್ಜನ್ಯದಿಂದಲೂ, ಅಸಹಾಕಾರದಿಂದಲೂ ಅನರ್ಥವಾಗುವುದಲ್ಲದೆ ಕಾರ್ಯಸಿದ್ಧಿಯಾಗುವುದಿಲ್ಲ. ಕಾರ್ಯಸಿದ್ಧಿಗೆ ಸತ್ಯಾಗ್ರಹವೊಂದೇ ಸಾಧನವೆಂಬುದು ಮಹಾತ್ಮ ಗಾಂಧಿಯವರ ತತ್ತ್ವವು. ಅವರ ಈ ಸತ್ಯಾಗ್ರಹತತ್ತ್ವಸಾಧನದಿಂದಲೇ ಭಾರತೀಯರ ಸ್ವರಾಜ್ಯ ಸಾಧನಪ್ರಯತ್ನದಲ್ಲುಂಟಾಗಬಹುದಾಗಿದ್ದ ಮಹಾನರ್ಥಗಳು ತಪ್ಪಿ ಶತ್ರುಗಳು ಮಿತ್ರರಾಗಿ ಸಹಕರಿಸುವಂತಾಗಿರುವುದು ಮತ್ತು ಜಗತ್ತೇ ವಿಸ್ಮಯಗೊಂಡಿರುವುದು. ಇಂತಹ ಲೋಕವಿಸ್ಮಯಕರವಾದ ಮತ್ತು ಅಘಟನಕಾರ್ಯಸಿದ್ಧಿಕರವಾದ ಸತ್ಯಾಗ್ರಹವು ಭಾರತೀಯರ ಆಕಾಂಕ್ಷೆಯಾದ ಸ್ವರಾಜ್ಯವನ್ನು ಬ್ರಿಟಿಷರು ಪ್ರಸಾದಿಸುವುದಕ್ಕೆ ಅಡ್ಡಿಯಾಗಿರುತ್ತದೆಂದು ಲಾರ್ಡ್ ಶಾಂಕೆಯವರು ಭಾವಿಸಿ, ಮಹಾತ್ಮರು ಸತ್ಯಾಗ್ರಹವನ್ನು ಬಿಟ್ಟು ಪ್ರಭುತ್ವದವರೊಡನೆ ಸಹಕರಿಸಿದರೆ ಅನುಕೂಲವಾಗುವುದೆಂದು ಅಭಿಪ್ರಾಯಪಟ್ಟು ಒಂದು ಲೇಖವನ್ನು ಲೇಬರ್ ಪಕ್ಷದ ಪತ್ರಿಕೆಗೆ ಬರೆದಿರುತ್ತಾರೆ. ಅದರಲ್ಲಿ ಅವರು ಮುಖ್ಯವಾಗಿ ಹೇಳಿರುವುದಿಷ್ಟೆ. "ಭಾರತೀಯರಲ್ಲಿ ಏಕಮತ್ಯವನ್ನುಂಟುಮಾಡಲು ಎಲ್ಲರೂ ಪ್ರಯತ್ನಿಸುವುದರಿಂದ ಭಾರತ ರಾಜ್ಯಾಂಗ ಸಮಸ್ಯೆಯು ಪರಿಷ್ಕಾರವಾಗುವುದಲ್ಲದೆ ಮನುಷ್ಯರಲ್ಲಿ ಭೇದವನ್ನುಂಟುಮಾಡುವುದರಿಂದ ಎಂದಿಗೂ ಪರಿಷ್ಕಾರವಾಗುವುದಿಲ್ಲ. ಶಾಂತಿಸ್ಥಾಪನೆಯು ಅತ್ಯಾವಶ್ಯಕವು. ಈ ಶಾಂತಿಸ್ಥಾಪನದಲ್ಲಿ ಜನರು ಸಹಕರಿಸದಿದ್ದರೆ ಯುದ್ಧೋಪಕರಣಗಳಾದ ವಿಮಾನಗಳು, ಟಾಂಕುಗಳು ಮೊದಲಾದವುಗಳು ಸಾಧನಗಳಾಗಬೇಕಾಗುತ್ತವೆ. ಫೆಡರೇಷನ್ನಿನ ಏರ್ಪಾಟಿಗೆ ಪ್ರಯತ್ನವು ನಡೆಯುತ್ತಿರುವುದಿಷ್ಟೆ. ಇದು ಭಾರತ ಪ್ರಜೆಗಳೆಲ್ಲರೂ ಏಕೀಭವಿಸಲು ಅಂಗೀಕರಿಸಿದ ವಿನಾ ಸಾಧ್ಯವಲ್ಲ. ಈಗ ದೇಶದ ವಿಷಮ ಪರಿಸ್ಥಿತಿಯು ಬದಲಾಯಿಸಿ ಶಾಂತಿಸ್ಥಾಪನವಾಗುವಂತೆ ಪ್ರಯತ್ನಿಸಲು ಮಹಾತ್ಮರಿಗೆ ಅವಕಾಶವಿರುತ್ತದೆ. ಶಾಸನೋಲ್ಲಂಘನವು ಮಹಾ ಭಯಂಕರವಾದ ಸಾಧನವು. ಅದು ವ್ಯಕ್ತಿಗಳನ್ನು ನಾಶಪಡಿಸುವುದಲ್ಲದೆ ಸಕ್ರಮವಾದ ಪ್ರಭುತ್ವವನ್ನೂ ನಾಗರಿಕ ಸಂಘಗಳನ್ನೂ ಹಾಳ್ಮಾಡುವುದು. ಆದುಕಾರಣ ಮಹಾತ್ಮರು ಸತ್ಯಾಗ್ರಹವನ್ನು ಬಿಡಲೂ, ಕಾಂಗ್ರೆಸಿನವರು ದೊರತನದವರೊಡನೆ ಸಹಕರಿಸಲೂ ಅಂಗೀಕರಿಸಿದರೆ ವಿಷಮಪರಿಸ್ಥಿತಿಯು ನಿವಾರಣೆಯಾಗಿ ಅನುಕೂಲವಾಗುವುದು. ಮಹಾತ್ಮರು ದೃಢ ಸಂಕಲ್ಪದವರೆಂದೂ, ಮಹಾ ಸ್ವದೇಶಾಭಿಮಾನಿಗಳೆಂದೂ, ಪ್ರಪಂಚದ ಎಲ್ಲ ಜನರಲ್ಲೂ ಮತ ಜಾತಿಯವರಲ್ಲೂ ಪ್ರೇಮವುಳ್ಳವರೆಂದೂ, ತಮ್ಮುನ್ನತಾಶಯವನ್ನು ಸಾಧಿಸುವಲ್ಲಿ ಸಾಮರ್ಥ್ಯವುಳ್ಳವರೆಂದೂ ಅವರ ಜೀವನಚರಿತ್ರೆಯಿಂದ ವ್ಯಕ್ತವಾಗುತ್ತದೆ. ಇಂತಹ ಅದ್ಭುತ ಶಕ್ತಿಯನ್ನು, ಮಹಾತ್ಮರು ಸತ್ಯಾಗ್ರಹವನ್ನು ತ್ಯಜಿಸಿ ಭಾರತೀಯರೆಲ್ಲರೂ ತಮ್ಮಿಷ್ಟಾರ್ಥ ಸಿದ್ಧಿಗಾಗಿ ಏಕೀಭವಿಸುವ ವಿಚಾರದಲ್ಲಿ ವಿನಿಯೋಗಿಸಿದರೆ ತತ್ಫಲ ಪ್ರಾಪ್ತಿಯಲ್ಲಿ ನನಗೆ ಯಾವ ಭಯವೂ ತೋರುವುದಿಲ್ಲ. ಭಾರತೀಯರ ನ್ಯಾಯವಾದ ಕೋರಿಕೆಯ ಪ್ರಾಪ್ತಿಗಾಗಿ ಅನುಕೂಲವಾದ ನಿರ್ಣಯಗಳನ್ನು ಮಾಡುವ ಬಗೆಗೆ ಪ್ರಬಲ ಪ್ರಯತ್ನವು ನಡೆಯಬೇಕಾಗಿದೆ. ಈ ವಿಷಯದಲ್ಲಿ ಆಲಸ್ಯವಾದಷ್ಟೂ ಭಾರತೀಯರಿಗೆ ಅಸಂತೃಪ್ತಿಯುಂಟಾಗುವುದು ಸಹಜವಾಗಿರುವುದು. ಕಾಗದದ ಮೇಲೆ ಯಾವುದೋ ಒಂದು ವಿಧಾನವನ್ನು ಬರೆಯುವುದು ಸುಲಭವು, ಆದರೆ ಅದು ಆಚರಣ ಸಾಧ್ಯವಾಗಿರುವ ರೀತಿಯಲ್ಲಿರಬೇಕಾದುದರಿಂದ ಚೆನ್ನಾಗಿ ಪರ್ಯಾಲೋಚಿಸಲ್ಪಡಬೇಕಾಗಿದೆ. ಹೀಗೆ ಆಚರಣ ಸಾಧ್ಯವಾದ ಫೆಡರಲ್ ಪ್ರಭುತ್ವವನ್ನೇ ರ್ಪಡಿಸಲು ದೊರತನದವರು ಪರ್ಯಾಲೋಚಿಸುತ್ತಿರುವರು. ಆದರಿಂದ ಭಾರತ ದೇಶದ ಎಲ್ಲ ಮತ ಜಾತಿಯ ಪ್ರಜೆಗಳಿಗೂ, ಪ್ರತ್ಯೇಕ ಸಂಘಗಳಿಗೂ ಸಂಪೂರ್ಣವಾದ ನ್ಯಾಯವುಂಟಾಗಬೇಕಾಗಿರುವುದರಿಂದ ಬಹಳ ದೀರ್ಘವಾಗಿ ಆಲೋಚಿಸಲ್ಪಡುತ್ತಿದೆ. ಭಾರತೀಯರಲ್ಲಿ ಏಕಾಭಿಪ್ರಾಯವುಂಟಾದರೆ ಇದು ಸಾಧ್ಯವಾಗುವುದು. ಕಳೆದ ಐದು ವರ್ಷಗಳಿಂದೀಚೆ ಸಮಾಧಾನವನ್ನುಂಟುಮಾಡಲು ನಾವು ಇಲ್ಲಿ ಸಹಕಾರ ಸಮಾಲೋಚನೆಗಳ ಮೂಲಕ ಅಂಗೀಕಾರಕ್ಕಾಗಿ ಪ್ರಯತ್ನಿಸುತ್ತಿರುವಲ್ಲಿ, ಇತರರು ಸತ್ಯಾಗ್ರಹದ ಮೂಲಕ ಕಾರ್ಯ ಸಿದ್ಧಿಯನ್ನು ಹೊಂದಲು ಪ್ರಯತ್ನಿಸುತ್ತಿರುವರು. ಇದರಿಂದ ನಮ್ಮ ಪ್ರಯತ್ನವು ಬಹಳ ಕಷ್ಟಕರವಾಗಿರುತ್ತದೆ" ಎಂದು ಶಾಂಕೆಯವರು ಬರೆದಿರುತ್ತಾರೆ. ಯಾವ ಸತ್ಯಾಗ್ರಹವು ಬ್ರಿಟಿಷರ ಶಾಂತಿಸ್ಥಾಪನ ಪ್ರಯತ್ನಕ್ಕೆ ವಿಘ್ನವಾಗಿರುತ್ತದೆಂದು ಲಾರ್ಡ್ ಶಾಂಕೆಯವರು ಹೇಳಿರುತ್ತಾರೊ ಆ ಸತ್ಯಾಗ್ರಹವೇ ಪ್ರಭುತ್ವದವರ ನಿರ್ಬಂಧ ವಿಧಾನಗಳಿಂದ ಆಗತಕ್ಕ ದುಷ್ಟ ಪರಿಣಾಮಗಳಿಗೆ ಪ್ರತಿಬಂಧಕವಾಗಿರುವುದು. ಪ್ರಭುತ್ವದವರು ನಿರ್ಬಂಧ ವಿಧಾನಗಳನ್ನು ತಪ್ಪಿಸಿದಲ್ಲಿ ತಾವು ಸತ್ಯಾಗ್ರಹವನ್ನು ಬಿಡುತ್ತೇವೆಂದು ಮಹಾತ್ಮರು ಘಂಟಾಘೋಷವಾಗಿ ಹೇಳಿರುತ್ತಾರೆ. ಮೊದಲು ಸತ್ಯಾಗ್ರಹವನ್ನು ಬಿಟ್ಟರೆ ಅನಂತರ ನಿರ್ಬಂಧ ವಿಧಾನಗಳು ತಪ್ಪಿಸಲ್ಪಡುವುವೆಂದು ಪ್ರಭುತ್ವದವರು ತಿಳಿಸಿರುತ್ತಾರೆ. ಇದು "ಹುಚ್ಚು ಬಿಟ್ಟಹೊರತು ಹೆಣ್ಣನ್ನು ಕೊಡುವುದಿಲ್ಲ, ಹೆಣ್ಣನ್ನು ಕೊಟ್ಟಹೊರತು ಹುಚ್ಚು ಬಿಡುವುದಿಲ್ಲ" ಎಂಬ ಗಾದೆಗನುಸಾರವಾಗಿದೆ. ಮಹಾತ್ಮರ ಮಹಿಮಾತಿಶಯವನ್ನರಿತುಕೊಂಡಿರುವ ಮತ್ತು ಭಾರತೀಯರ ಹಿತಸಾಧಕರೆಂದು ವಿಜೃಂಭಿಸುತ್ತಿರುವ ಲಾರ್ಡ್ ಶಾಂಕಿಯವರೇ ಆದಿಯಾಗಿ ಬ್ರಿಟಿಷ್ ಮುಖಂಡರುಗಳು, ನಿರ್ಬಂಧ ವಿಧಾನಗಳನ್ನು ಮೌನಸಿಕ ಮಾಡಿಸಿ ತನ್ಮೂಲಕ ಸತ್ಯಾಗ್ರಹವು ವಿರಮಿಸಲು ಅವಕಾಶವನ್ನು ಕಲ್ಪಿಸಿಕೊಟ್ಟು ಭಾರತ ರಾಜ್ಯಾಂಗ ನಿರ್ಮಾಣ ವಿಧಾನವು ಭಾರತೀಯರ ಇಷ್ಟಾರ್ಥಸಿದ್ಧಿಗೆ ಅನುಕೂಲವಾಗಿರುವಂತೆ ಪ್ರಯತ್ನಿಸಿ ತಮ್ಮ ನಿಷ್ಕಪಟವಾದ ಸಹಾನುಭೂತಿಯನ್ನು ವ್ಯಕ್ತಗೊಳಿಸುವವರಾಗಲೆಂದು ಕೋರುತ್ತೇವೆ.

ಮೈಸೂರು ವಿಪನ್ನರ ಸಹಾಯಕ ಫಂಡು

ಸಂಸ್ಥಾನದಲ್ಲಿ ಅಗ್ನಿಯನಾಹುತ ಇತ್ಯಾದಿ ಕಾರಣಗಳಿಂದ ವಿಪನ್ನರಾದವರ ಸಹಾಯಾರ್ಥವಾಗಿ ಒಂದು ಫಂಡೂ, ಅದರ ಆಡಳಿತಕ್ಕಾಗಿ ಟ್ರಸ್ಟಿಗಳ ಒಂದು ಬೋರ್ಡೂ 1927 ನೆಯ ಏಪ್ರಿಲ್ ತಿಂಗಳಲ್ಲಿ ಪ್ರಭುತ್ವದವರಿಂದೇರ್ಪಡಿಸಲ್ಪಟ್ಟು ಸರ್. ಕೆ. ಪಿ. ಪುಟ್ಟಣ್ಣಶೆಟ್ಟರು ಅದರ ಅಧ್ಯಕ್ಷರಾಗಿಯೂ, ಮ|| ಬಿ. ಕೆ. ಗರುಡಾಚಾರ್ಯರು, ರಾವ್‌ಬಹದ್ದೂರ್ ಎಚ್. ಎಸ್. ನಂಜುಂಡಯ್ಯನವರು ಮತ್ತು ಚೀಫ್ ಸೆಕ್ರೆಟರಿಯವರು ಮೆಂಬರುಗಳಾಗಿಯೂ ನಿಯಮಿಸಲ್ಪಟ್ಟರು. ಈ ಫಂಡಿನ ಆರಂಭದಲ್ಲಿ 73,500 ರೂ. ಗಳಿದ್ದುವು. ಅಗ್ನಿ ಮೊದಲಾದವುಗಳಿಂದುಂಟಾಗುವ ಅನಾಹುತಗಳ ವಿಚಾರವೂ, ಅವುಗಳಿಗಾಗಿ ವಿಪನ್ನರಾದವರಿಗೆ ಆಗಬೇಕಾದ ಸಹಾಯವೂ ತಿಳಿದಬಂದ ಕೂಡಲೆ ಬೋರ್ಡಿನವರು ಕೊಂಚವೂ ತಡವಿಲ್ಲದೆ ಆವಶ್ಯಕವಾದ ಸಹಾಯ ದ್ರವ್ಯವನ್ನು ಕಳುಹಿಸಿಕೊಟ್ಟಿರುತ್ತಾರೆ. 1927 ನೆಯ ಏಪ್ರಿಲ್ ತಿಂಗಳಿಂದ 1932 ನೆಯ ಜುಲೈ ತಿಂಗಳ ವರೆಗೆ 3460 ರೂ. ಗಳು ಅಗ್ನಿಯನಾಹುತದಿಂದ ವಿಪನ್ನರಾದವರಿಗೆ ಕೊಡಲ್ಪಟ್ಟವು. 1932 ನೆಯ ಜುಲೈ ತಿಂಗಳ ಕಡೆಯ ವರೆಗೆ ಈ ಫಂಡಿನಲ್ಲಿ ರೂ. 90763-3-11 ಇದ್ದಿತು. ಈ ಹಣವು ಮೈಸೂರು ಬ್ಯಾಂಕಿನಲ್ಲಿಡಲ್ಪಟ್ಟಿದೆ. ಡೆಪ್ಯುಟಿ ಕಮಿಷನರುಗಳು ತಂತಮ್ಮ ಡಿಸ್ಟ್ರಿಕ್ಟುಗಳಲ್ಲಿ ನಡೆದ ಅನಾಹುತಗಳಿಂದ ವಿಪನ್ನರಾದವರ ವಿಚಾರವನ್ನು ಬೋರ್ಡಿನವರಿಗೆ ಕೂಡಲೆ ತಿಳಿಸಿ ಸಹಾಯವನ್ನು ದೊರಕಿಸಬೇಕಾಗಿ ಪ್ರಭುತ್ವದವರಿಂದ ಕೋರಲ್ಪಟ್ಟಿರುತ್ತಾರೆ.

ಸಿ. ಎಸ್. ದೊರಸ್ವಾಮಯ್ಯರ್‌ರವರ ನಿಧನ

ನಮ್ಮ ಸಂಸ್ಥಾನದ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದ ಮ|| ಸಿ. ಎಸ್. ದೊರಸ್ವಾಮಯ್ಯರ್, ಬಿ.ಎ., ಬಿ.ಎಲ್., ರವರು ಕಳೆದ ಶನಿವಾರ ಕೋರ್ಟಿಗೆ ಬಂದು ಸಾಯಂಕಾಲದವರೆಗೆ ಕೆಲಸ ಮಾಡುತ್ತಿದ್ದು ಕೊಂಚ ಹೊಟ್ಟೆನೊಯ್ಯುತ್ತದೆಂದು ಹೇಳಿ ಮನೆಗೆ ಹೋದಮೇಲೆ 1-2 ವೇಳೆ ಬರೇ ರಕ್ತ ವಾಂತಿಯಾಗಿ ವೈದ್ಯರು ಚಿಕಿತ್ಸೆ ಮಾಡಿದಾಗ್ಯೂ ಗುಣ ಹೊಂದದೆ ವಿಧಿವಶರಾದರೆಂದು ತಿಳುಹಲು ಅತ್ಯಂತ ವಿಷಾದವಾಗುತ್ತದೆ. ಇವರಿಗೆ ಕೆಲಕಾಲದಿಂದ ದೇಹಾಲಸ್ಯವಾಗಿದ್ದಿತಾದರೂ ಮರಣವು ಇಷ್ಟು ಆಕಸ್ಮಿಕವಾಗಿ ಸಂಭವಿಸುತ್ತದೆಂದು ಯಾರಿಗೂ ತೋರಿರಲಿಲ್ಲ. ಇವರು ಒಳ್ಳೇ ನ್ಯಾಯ ವಿಮರ್ಶಕರೂ ಸಮರ್ಥರೂ ಆಗಿದ್ದು ರಾಜಧರ್ಮ ಪ್ರವೀಣರೆಂಬ ಪ್ರಶಸ್ತಿಯನ್ನು ಪ್ರಭುವರ್ಯರಿಂದ ಪಡೆದು ಸನ್ಮಾನ್ಯರಾಗಿದ್ದರು. ಮೃತರ ಆತ್ಮಕ್ಕೆ ಶಾಂತಿಯನ್ನೂ ಕುಟುಂಬಕ್ಕೆ ದುಃಖ ಸಮಾಧಾನವನ್ನೂ ಕೋರುತ್ತೇವೆ. ದುಃಖ ಪ್ರದರ್ಶನಾರ್ಥವಾಗಿ ಸಂಸ್ಥಾನದ ಕೋರ್ಟುಗಳೆಲ್ಲ ಈ ದಿವಸ ಮುಚ್ಚಲ್ಪಟ್ಟಿದ್ದುವು

ವೈಸ್ರಾಯರ ದೇಹಾರೋಗ್ಯ

ವೈಸ್ರಾಯರಿಗೆ ಜ್ವರ ಬರುತ್ತಿದ್ದುದರಮೇಲೆ ಅವರು ಯಾವ ಕೆಲಸವನ್ನೂ ಮಾಡದೆ ಮನೆಯಲ್ಲಿದ್ದರು. ಈಗ ವೈದ್ಯರ ಚಿಕಿತ್ಸೆಯಿಂದ ಗುಣಮುಖವಾಗಿರುವುದಲ್ಲದೆ ರಾತ್ರಿ ವೇಳೆ ಸುಖವಾಗಿ ನಿದ್ರೆಮಾಡುವರೆಂದು ತಿಳಿಯಬಂದಿದೆ.

ರೂಜುವೆಲ್ಟ್‌ರವರು ಅಧ್ಯಕ್ಷರಾದರು

ರೂಜುವೆಲ್ಟ್‌ರವರು ಅಮೇರಿಕಾ ದೇಶದ ಅಧ್ಯಕ್ಷರಾಗಿ ಆರಿಸಲ್ಪಟ್ಟುದರಿಂದ ಪ್ರಪಂಚಕ್ಕೆಲ್ಲ ಲಾಭವಾಗುವುದೆಂದು ಅಮೇರಿಕೆಯ ಪ್ರತಿನಿಧಿಯಾಗಿ ಆಯುಧ ವಿಸರ್ಜನ ಸಭೆಗೆ ಹೋಗಿರುವ ನಾರ್ಮನ್ ಡೇವಿಸ್‌ರವರು ಹೇಳಿದರು.

ಪ್ರಚಂಡ ಸುಂಟರ ಗಾಳಿ

ಗಂಟೆಗೆ 200 ಮೈಲುಗಳ ವೇಗದಿಂದ ಸುಂಟರಗಾಳಿ ಬೀಸಿ ಕುಂಭೀಪಾತವಾಗಿ ಮಳೆ ಸುರಿದಿತು. ಇದರಿಂದ ಅಮೇರಿಕೆಯ ನ್ಯೂವಿತಾ ಎಂಬಲ್ಲಿ ಮನೆಗಳೆಲ್ಲ ಬಿದ್ದು 25 ಮಂದಿ ಹತರಾದರು ಮತ್ತು ಕಮಾಗ್ವೀ ಎಂಬೂರಿನಲ್ಲಿ 300 ಮಂದಿ ಸತ್ತುಹೋದುದಾಗಿ ಊಹಿಸಲ್ಪಟ್ಟಿದೆ.

ಡಿವೆಲೆರಾಯವರಿಗೆ ವಾರಸತ್ವವು

ಬ್ರಿಟನ್ನಿನಲ್ಲಿದ್ದ 73 ವರ್ಷ ವಯಸ್ಸಿನ ಮೇರೀ ಪಿಟಿಜ್ ಪ್ಯಾಟ್ರಿಕ್ ಕನ್ನೆ ಎಂಬಾಕೆಯು ಮೃತಳಾದಳು. ಈಕೆಯು 76000 ರೂಪಾಯಿ ಬೆಲೆ ಬಾಳುವ ತನ್ನ ನಗನಾಣ್ಯಗಳೇ ಮೊದಲಾಗಿ ಆಸ್ತಿಯೆಲ್ಲವೂ ಡಿವೆಲಿರಾಯವರಿಗೆ ಸೇರಬೇಕೆಂದು ಮೃತ್ಯು ಪತ್ರದಲ್ಲಿ ಬರೆದಿದ್ದಳು. ಈಗ ಬರ್ಲಿನ್ನಿನಲ್ಲಿರುವ ಆಕೆಯ ಸಹೋದರನು ಅಕ್ಕನ ಆಸ್ತಿಯು ತನಗೆ ಬರಬೇಕೆಂದೂ ಡಿವೆಲಿರಾಯವರು ತಮಗೆ ಬರಬೇಕೆಂದೂ ವಾದಿಸುತ್ತಿರುವರು.

ನದಿಯಲ್ಲಿ ಮೊಸಳೆಗಳ ಹಾವಳಿ

ಕ್ವಿಲಾಂಡಿ ಹತ್ತಿರ ನಾಟೀರಿ ನದಿಯಲ್ಲಿ ಒಂದು ಮನುಷ್ಯನ ತಲೆ ಬುರುಡೆಯು ತೇಲುತ್ತಿದ್ದುದು ಪೊಲೀಸರಿಗೆ ತಿಳಿದು ಅವರು ಬಂದು ಅದನ್ನು ತೆಗೆಯಿಸಿ ವಿಚಾರಣೆ ನಡೆಸಿದುದರ ಮೇಲೆ ಆ ನದಿಯಲ್ಲಿ ಮೊಸಳೆಗಳು ಬಹಳವಾಗಿರುವುದಾಗಿಯೂ, 14 ವರ್ಷದ ತಿಯ್ಯಾ ಜಾತಿಯ ಹುಡುಗಿಯು ನದಿಯಬಳಿ ಮೇಯುತ್ತಿದ್ದ ಹಸುವನ್ನು ಹೊಡೆದುಕೊಂಡು ಬರಲಿಕ್ಕೆ ಹೋದವಳು ಮಾಯವಾದಳೆಂದೂ, ಆ ಬುರುಡೆಯು ಅವಳದಾಗಿರಬೇಕೆಂದೂ ತಿಳಿಯಬಂದಿತು.

ನ್ಯೂಯಾರ್ಕಿನ ಥಾಕರವರ ಮೈಸೂರು ಪ್ರವಾಸ

ಹಿಂದೆ ನ್ಯೂಯಾರ್ಕಿನಲ್ಲಿ ಮೇಯರಾಗಿದ್ದ ಥಾಕರ್‌ರವರು ಅಕ್ಟೋಬರ್ ತಿಂಗಳಲ್ಲಿ ಯೂರೋಪಾ ಎಂಬ ಹಡಗಿನಲ್ಲಿ ನಮ್ಮ ಯುವರಾಜರ ಸಂಗಡ ಪ್ರಯಾಣ ಮಾಡುವಾಗ್ಗೆ ಪರಸ್ಪರ ಪರಿಚಯವಾಯಿತು. ಈ ಥಾಕರ್‌ರವರು ನ್ಯೂಯಾರ್ಕಿನಿಂದ ಕಾರೀಪ್ ಗ್ರಾಡಿ ಎಂಬ ಹಡಗಿನಲ್ಲಿ ಯೂರೋಪಿಗೆ ಪ್ರಯಾಣ ಮಾಡಿರುವರು. ಇವರು ಅಲ್ಲಿಂದ ಇಂಡ್ಯಾಕ್ಕೆ ಹೊರಟು ಮೈಸೂರಿಗೂ ಬಂದು ನಮ್ಮ ಯುವರಾಜರ ಅತಿಥಿಗಳಾಗಿರುವರೆಂದು ತಿಳಿಯಬರುತ್ತದೆ.

ಪಾರಿವಾಳಗಳ ಸೇನೆ

ಇಟಲೀ ರಾಜರಾದ ವಿಕ್ಟರ್‌ರವರ ಜನ್ಮದಿನೋತ್ಸವದ ದಿವಸ 9000 ಸೈನಿಕರ ಅಂಗವಿನ್ಯಾಸನ ನಡೆದಿತು. ಮುಸಲೋನಿಯವರು ಇದನ್ನು ಪರಿಶೀಲಿಸಿದರು. ಆ ವೇಳೆಯಲ್ಲಿ ಮೋಟಾರು ಲಾರಿಗಳಿಂದ ಹೊರಕ್ಕೆ ಬಿಡಲ್ಪಟ್ಟ ಪಾರಿವಾಳಗಳ ಸೇನೆಯಲ್ಲಿ ಸಾವಿರಾರು ಪಕ್ಷಿಗಳು ಮುಸಲೋನಿಯವರ ತಲೆಯ ಮೇಲೆ ಎಗರಿದುವು. ಅದನ್ನು ನೋಡಿ ಅವರಿಗೆ ನಗೆ ಬಂದಿತು. ಬಂದೂಕಗಳನ್ನು ಹಿಡಿದು ಸೈನಿಕರು ಹೋಗುವಂತೆಯೇ ಈ ಪಾರಿವಾಳಗಳೂ ಬಂದೂಕಗಳನ್ನು ಹಿಡಿದುಕೊಂಡು ಹೋದವಂತೆ.

ಮಹಾತ್ಮರ ಬಿಡುಗಡೆಗೆ ಸ್ಪೆಂಡರ ಸೂಚನೆ

ಅಸ್ಪೃಶ್ಯತಾ ನಿವಾರಣೆಯ ಕಡೆಗೆ ಮಹಾತ್ಮರು ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಲು ಅವರನ್ನು ಕಾರಾಗೃಹ ಬಂಧನದಿಂದ ಬಿಡುವುದು ಬಹಳ ಅಗತ್ಯವೆಂದೂ, ರೌಂಡು ಟೇಬಲು ಸಮಾವೇಶಕ್ಕೆ ಅನುಕೂಲ ವಾತಾವರಣವನ್ನುಂಟುಮಾಡಲಿಕ್ಕೆ ಇದಕ್ಕಿಂತಲೂ ಅನುಕೂಲ ಮಾರ್ಗವು ಬೇರೊಂದಿಲ್ಲವೆಂದೂ ಪತ್ರಿಕಾ ನಿರ್ವಹಣದಲ್ಲಿ ಪ್ರಸಿದ್ಧರಾದ ಜೆ. ಸ್ಪೆಂಡರ್‌ರವರು ನ್ಯೂಸ್ ಕ್ರಾನಿಕಲ್ ಎಂಬ ಪತ್ರಿಕೆಯಲ್ಲಿ ಬರೆದಿರುತ್ತಾರೆ. ಇದೇ ರೀತಿ ದೂರದೃಷ್ಟಿಯುಳ್ಳ ಬ್ರಿಟಿಷ್ ಪ್ರಮುಖರನೇಕರು ಅಭಿಪ್ರಾಯಪಟ್ಟಿರುವರು.

ಪರದೇಶದ ಉಪ್ಪಿನಮೇಲಿನ ಸುಂಕ

ಕಸ್ಟಂ ಡ್ಯೂಟಿ ಕಲೆಕ್ಟರವರು ಪರದೇಶಗಳಿಂದ ಬರುವ ಉಪ್ಪಿನ ಮೇಲಿನ ಸುಂಕವನ್ನು ಹೆಚ್ಚಿಸುವುದನ್ನು ಕುರಿತು ವರ್ತಕರ ಅಭಿಪ್ರಾಯವನ್ನು ಕೇಳಿರುವಾಗ್ಗೆ, ಉಪ್ಪಿನ ದೊಡ್ಡ ವರ್ತಕರಾದ ರಾಯಿ ಜ್ಞಾನೇಂದ್ರನಾಥ ಡಿ. ಬಹದ್ದೂರ್ ಅಂಡ್ ಸನ್ಸ್‌ರವರ ಪ್ರತಿನಿಧಿಗಳು. "ಪರದೇಶದ ಉಪ್ಪಿಗೆ ಗಿರಾಕಿಯಿಲ್ಲದಿರುವುದರಿಂದ ಕೆಲ ತಿಂಗಳಿಂದಲೂ ಅದರ ಬೆಲೆಯು 100 ಮಣಕ್ಕೆ 48 ರಿಂದ 42 ರೂ. ಗಳಿಗಿಳಿದು ಹೋಗಿದೆ. ಭಾರತ ದೇಶದ ಉಪ್ಪಿನ ಸಂಗಡ ಪರದೇಶದ ಉಪ್ಪು ಪೋಟಿಗೆ ನಿಲ್ಲುವುದಿಲ್ಲ. ಏಡನ್ನಿನ ಪೈಪೋಟಿ ಹೆಚ್ಚಾಗಿರುವುದರಿಂದ ಭಾರತ ದೇಶದ ಉಪ್ಪನ್ನು ಹಡಗಿನಿಂದ ವಿಶೇಷವಾಗಿ ವಿಕ್ರಯಿಸಲು ಸಾಧ್ಯವಿಲ್ಲ" ಎಂದು ಹೇಳಿರುತ್ತಾರೆ.

ನಾಸಿಕದ ಪುಷ್ಕರಣಿಯಲ್ಲಿ ಹರಿಜನರು ಸ್ನಾನ ಮಾಡಕೂಡದು

ನಾಸಿಕದ ಪುಷ್ಕರಣಿಯಲ್ಲಿ ಹರಿಜನರು ಸ್ನಾನಮಾಡಕೂಡದೆಂದು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಕಟ್ಟಪ್ಪಣೆ ಮಾಡಿರುವರು, ಇದರ ಮೇಲೆ ನಾಸಿಕ ದೇವಾಲಯ ಪ್ರವೇಶ ಸತ್ಯಾಗ್ರಹ ಸಂಘದ ಕಾರ್ಯದರ್ಶಿಯು ಬೊಂಬಾಯಿ ಹೈ ಕೋರ್ಟಿಗೆ ಅಪೀಲನ್ನು ಮಾಡಿಕೊಂಡಿರಲು "ಹರಿಜನರು ಪುಷ್ಕರಣಿಯಲ್ಲಿ ಸ್ನಾನಮಾಡಲು ಸನಾತರು ಅಭ್ಯಂತರಪಡಿಸುತ್ತಾರಾದುದರಿಂದ ಹರಿಜನರು ಅಲ್ಲಿ ಸ್ನಾನಮಾಡಿದರೆ ದೊಂಬಿ ನಡೆದು ಪ್ರಜಾನೆಮ್ಮದಿಗೆ ಭಂಗವಾಗುತ್ತದೆಂಬುದರ ಮೇಲೆ ನಿರ್ಬಂಧದ ಅಪ್ಪಣೆ ಮಾಡಿರುತ್ತಾರೆ. ಆ ಪುಷ್ಕರಣಿಯು ಬಹಿರಂಗ ಸ್ಥಳವೆಂದು ಹರಿಜನರು ಸಿವಿಲ್ ಕೋರ್ಟಿನಲ್ಲಿ ವಿವಾದ ನಡೆಯಿಸಿ ತಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳತಕ್ಕದು" ಎಂದು ಹೈ ಕೋರ್ಟಿನವರು ತೀರ್ಮಾನಿಸಿರುತ್ತಾರೆ.

ಕೆಂಟರ್‌ಬರೀ ಆರ್ಚ್ ಬಿಷಪ್ಪರ ಪ್ರಕಟನೆ

ಹಿಂದೆ ನಡೆದ ರೌಂಡುಟೇಬಲು ಸಭೆಯು ಪ್ರಜೆಗಳ ದೃಷ್ಟಿಯನ್ನು ಆಕರ್ಷಿಸಿದ್ದಂತೆ ಈ ವೇಳೆ ನಡೆಯುವ ಸಭೆಯು ಪ್ರಜೆಗಳ ಲಕ್ಷ್ಯವನ್ನು ಆಕರ್ಷಿಸಿರುವುದಿಲ್ಲವಾದರೂ ಅದರಲ್ಲಿ ಚರ್ಚಿಸಲ್ಪಡುವ ವಿಷಯಗಳ ಪ್ರಾಮುಖ್ಯತೆಯೇನೂ ಕಡಿಮೆಯಾಗಿಲ್ಲ. ಬಿಲ್ಲನ್ನು ಪಾರ್ಲಿಮೆಂಟು ಸಭೆಯಲ್ಲಿ ಉಪಪಾದಿಸಬೇಕಾದ ಸಮಯವು ಸಮೀಪವಾಗುತ್ತಿದ್ದರೂ ಸಂದಿಗ್ಧ ವಿಷಯಗಳ ಪರಿಷ್ಕಾರವಾಗಿರುವುದಿಲ್ಲ. ಇದು ಬಹಳ ಮುಖ್ಯವೂ ಕಠಿಣವೂ ಆದ ಸಮಸ್ಯೆಯಾಗಿರುವುದರಿಂದ ಇದರಲ್ಲಿ ಭಾಗಿಗಳಾಗುವವರೆಲ್ಲರಿಗೂ ಈಶ್ವರನು ಒಳ್ಳೆಯ ಬುದ್ಧಿ ಪ್ರೇರಣೆಮಾಡುವಂತೆ

ಸಮಸ್ತರೂ ಮನೆಗಳಲ್ಲೂ, ದೇವಾಲಯಗಳಲ್ಲೂ ದೇವರನ್ನು ಪ್ರಾರ್ಥಿಸಬೇಕು" ಎಂದು ಕಾಂಟರ ಬರೀ ಆರ್ಚ್‌ಬಿಷಪ್ಪರವರು ಪ್ರಕಟಿಸಿರುತ್ತಾರೆ.

ಅಂಡಮಾನ್ ದ್ವೀಪಗಳಿಗೆ ಕಳುಹಲ್ಪಡುವುದು

ಬಂಗಾಳಾ ಕಾರಾಗೃಹದಿಂದ ನೂರು ಮಂದಿ ಸ್ತ್ರೀ ಪುರುಷರುಗಳು ಕಳುಹಲ್ಪಡುವರೆಂದೂ, ಸ್ತ್ರೀಯರನ್ನು ಕಳುಹುದು ಬಹಳ ಅನ್ಯಾಯವೆಂದೂ, ಇದರಿಂದ ಜನಗಳ ಮನಸ್ಸು ಕೆಟ್ಟು ಅನರ್ಥಸಂಭವಿಸುವುದೆಂದೂ ಆ ದೇಶದ ಪತ್ರಿಕೆಗಳು ಖಂಡಿಸಿ ಬರೆಯುತ್ತಿವೆ. ಈ ದ್ವೀಪವಾಸವು ಅನಾರೋಗ್ಯಕರವೆಂದೂ, ಅಲ್ಲಿಗೆ ಬಂದಿಗಳನ್ನು ಕಳುಹಿಸಕೂಡದೆಂದೂ ಕಾರಾಗೃಹ ವಿಚಾರಣ ಸಂಘದವರು ಅಭಿಪ್ರಾಯಪಟ್ಟಿದ್ದರು. ಆದರೆ ಅಂಡಮಾನ್ ದ್ವೀಪಗಳಲ್ಲಿ ಪೂರ್ವಸ್ಥಿತಿಯಾಗಿಲ್ಲವೆಂದು ಭಾರತ ಮಂತ್ರಿಗಳು ಸಮಾಧಾನ ಹೇಳುತ್ತಿರುವರು. ಇಂತಹ ಅನಾರೋಗ್ಯ ಸ್ಥಳಕ್ಕೆ ಪುರುಷ ಬಂದಿಗಳನ್ನು ಕಳುಹಿಸುವುದೇ ಯುಕ್ತವಲ್ಲವಾಗಿರುವಾಗ್ಗೆ ಸ್ತ್ರೀ ಬಂದಿಗಳನ್ನು ಕಳುಹಿಸುವುದು ಶುದ್ಧ ಅಸಂಗತವೆಂಬುದು ಮಂತ್ರಿಗಳ ಮನಸ್ಸಿಗೆ ತೋಚದೆ ಹೋದುದು ಆಶ್ಚರ್ಯವು.

ಸೆಷನ್ಸು ಜಡ್ಜರಿಗೆ ಬಿಳೀ ಕೈಚೀಲದ ಬಹುಮಾನ

ಕೃಷ್ಣ ಡಿಸ್ಟ್ರಿಕ್ಟಿನ ಸೆಷನ್ಸು ಜಡ್ಜಿಯವರಿಗೆ ಪಬ್ಲಿಕ್ ಪ್ರಾಸೆಕ್ಯೂಟರು ಕಳೆದ ಮಂಗಳವಾರ ಒಂದು ಜತೆ ಬಿಳೀ ಕೈ ಚೀಲವನ್ನು ಬಹುಮಾನಿಸಿದರು. ಆ ಸಂದರ್ಭದಲ್ಲಿ ಭಾಷಣ ಮಾಡುವಾಗ್ಗೆ "ಸೆಷನ್ಸ್ ಜಡ್ಜಿಯವರ, ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಮತ್ತು ಡಿಸ್ಟ್ರಿಕ್ಟ್ ಪೊಲೀಸು ಸೂಪರಿಂಟೆಂಡೆಂಟರ ಪ್ರಯತ್ನ ವಿಶೇಷದಿಂದ ನವಂಬರ್ ತಿಂಗಳಲ್ಲಿ ಒಂದಾದರೂ ಸೆಷನ್ಸು ಮೊಖದ್ದಮೆಯಿಲ್ಲದಿರುವುದರಿಂದ ನನ್ನ ಕೃತಜ್ಞತಾ ಪೂರ್ವಕವಾದ ಸಂತೋಷಪ್ರದರ್ಶನಾರ್ಥವಾಗಿ ಈ ಬಿಳೀ ಕೈ ಚೀಲಗಳನ್ನು ನಿಮಗೊಪ್ಪಿಸಿರುತ್ತೇನೆ. ಈಗ್ಗೆ ಮೂರು ವರ್ಷಗಳ ಹಿಂದೆ ಹೀಗೆಯೇ ಒಂದು ತಿಂಗಳಲ್ಲಿ ಸೆಷನ್ಸು ಕೇಸು ಇಲ್ಲದಿದ್ದುದರಿಂದ ಆಗ ಸೆಷನ್ಸು ಜಡ್ಜಿಯಾಗಿದ್ದವರಿಗೆ ಕೈ ಚೀಲಗಳನ್ನೊಪ್ಪಿಸುವ ಗೌರವವು ನನಗೆ ಲಭ್ಯವಾಗಿದ್ದಿತು" ಎಂದು ಹೇಳಿದರು. ಸೆಷನ್ಸು ಜಡ್ಜಿಯವರು "ನವಂಬರ್ ತಿಂಗಳಲ್ಲಿ ಸೆಷನ್ಸು ಮೊಖದ್ದಮೆಯಿಲ್ಲದಿರುವುದು ಸಂತೋಷಪ್ರದವಾಗಿದೆ. ಪಬ್ಲಿಕ್ ಪ್ರಾಸೆಕ್ಯೂಟರು ಕೈ ಚೀಲಗಳನ್ನು ಬಹುಮಾನಿಸಿದುದಕ್ಕಾಗಿ ಅವರನ್ನು ನಾನು ವಂದಿಸುತ್ತೇನೆ. ಸೆಷನ್ಸು ಕೇಸು ಇಲ್ಲದಿರುವಾಗ್ಗೆ ಷರೀಫನು ಜಡ್ಜಿಗೆ ಬಿಳೀ ಕೈ ಚೀಲಗಳನ್ನೊಪ್ಪಿಸುವುದು ವಾಡಿಕೆಯಾಗಿರುತ್ತದೆಂದು ವಾರ್ಟನ್‌ರವರ ಗ್ರಂಥದಿಂದ ವ್ಯಕ್ತವಾಗುತ್ತದೆ. ಆದರೆ ಈ ಪದ್ಧತಿ ಯಾವಾಗಾರಂಭವಾಯಿತೆಂಬುದು ಗೊತ್ತಾಗುವುದಿಲ್ಲ" ಎಂದು ಜಡ್ಜಿಯವರು ತಮ್ಮುತ್ತರದಲ್ಲಿ ತಿಳಿಸಿದರು.

ಎವರೆಸ್ಟ್ ಶಿಖರಾರೋಹಣ

ಹಿಮವತ್ಪರ್ವತದ ಶಿಖರಗಳಲ್ಲಿ ಅತ್ಯುನ್ನತವಾದ ಎವರೆಸ್ಟ್ ಶಿಖರವನ್ನು ವಾಯುವಿಮಾನದ ಮೂಲಕ ಆರೋಹಣ ಮಾಡುವ ಪ್ರಯತ್ನ ನಡೆಯುತ್ತಿದೆ. ತತ್ಸಂಬಂಧವಾಗಿ ಪಾರ್ಲಿಮೆಂಟು ಮೆಂಬರಾದ ಲಾರ್ಡ್ ಕ್ಲೈಡೆಸ್ಡೇಲ್ ಎಂಬವರು ಇಂಗ್ಲೆಂಡಿನಲ್ಲಿ ಒಂದು ಬಹಿರಂಗ ಸಭೆಯೊಳಗೆ ಭಾಷಣ ಮಾಡುವಾಗ್ಗೆ ಈ ಪ್ರಕಾರವಾಗಿ ಹೇಳಿದರು: "ಈ ಶಿಖರಾರೋಹಣ ಪ್ರಯತ್ನವು ಜಯಪ್ರದವಾಗಿ ನಡೆದರೆ ಭಾರತ ದೇಶದಲ್ಲಿ ಒಳ್ಳೇ ಖ್ಯಾತಿಯೂ ಪ್ರಯೋಜನವೂ ಉಂಟಾಗುವುವು. ಇದರಿಂದ ಬ್ರಿಟನ್ ದೇಶವು ಅಧೋಗತಿಗಿಳಿಯುತ್ತಿದೆ ಎಂಬ ಅಪಪ್ರಥೆಯು ತಪ್ಪಿ ಬ್ರಿಟನ್ನು ನವೀನ ಸ್ವರೂಪವನ್ನು ತಾಳಿ ಉನ್ನತ ಸ್ಥಿತಿಗೆ ಬರುತ್ತಿರುವುದೆಂದು ಸ್ಥಾಪಿತವಾಗುವುದು. ನಮ್ಮ ಜನಾಂಗಕ್ಕೆ ಪೌರುಷವೂ ಚಟವಟಿಕೆಯೂ ಇನ್ನೂ ಹೆಚ್ಚಾಗಿರುತ್ತವೆಂದೂ, ನಾವು ಧೈರ್ಯಸಾಹಸಗಳಿಂದ ಎತಂಹ ತೊಂದರೆಗಳಿಂದಲಾದರೂ ಪಾರಾಗುವೆವೆಂದೂ ಭಾರತೀಯರಿಗೆ ವ್ಯಕ್ತವಾಗುವುದು. ಬ್ರಿಟಿಷರ ಗೌರವಪ್ರತಿಷ್ಠೆಗಳನ್ನು ಪ್ರಪಂಚದಲ್ಲೆಲ್ಲ ಮುಖ್ಯವಾಗಿ ಭಾರತದೇಶದಲ್ಲಿ ಹೆಚ್ಚಿಸಬೇಕೆಂಬುದೇ ಈ ಶಿಖರಾರೋಹಣ ಪ್ರಯತ್ನದ ಮುಖ್ಯೋದ್ದೇಶವಾಗಿರುತ್ತದೆ. ಅಮೇರಿಕೆಯವರು ಉತ್ತರ ದಕ್ಷಿಣ ಧ್ರುವಗಳನ್ನು ಆಕಾಶಯಾನದ ಮೂಲಕ ದಾಟಿರುತ್ತಾರೆ. ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಸಮುದ್ರಗಳು ಸಹ ದಾಟಲ್ಪಟ್ಟಿರುತ್ತವೆ. ಪ್ರಪಂಚದಲ್ಲೆಲ್ಲ ಬಹಳ ಪ್ರಾಮುಖ್ಯವಾಗಿರುವ ಎವರೆಸ್ಟ್ ಪರ್ವತವು ಮಾತ್ರ ಈ ವರೆಗೆ ದಾಟಲ್ಪಟ್ಟಿಲ್ಲವಾದುದರಿಂದ ಅದನ್ನು ದಾಟುವುದು ಬಹಳ ಆವಶ್ಯಕವೂ ಖ್ಯಾತಿಪ್ರದವೂ ಆಗಿರುವುದು."

ಮಹಾತ್ಮರ ನಿರಶನ ದೀಕ್ಷೆಗೆ ಪ್ರತಿಕೂಲ ನಿರಶನ ದೀಕ್ಷೆ

ಹರಿಜನರನ್ನು ದೇವಾಲಯಗಳಿಗೆ ಬರಗೊಡದಿರುವುದಕ್ಕಾಗಿ ನಿರಶನ ದೀಕ್ಷೆಯನ್ನು ಹಿಡಿಯುವುದರಿಂದ ಪ್ರಜೆಗಳನ್ನು ನಿರ್ಬಂಧಪಡಿಸಿದಂತಾಗುವುದೆಂಬುದು ನನ್ನ ಅಭಿಪ್ರಾಯವೆಂದು ಹಿಂದೆ ಸರ್ವೆಂಟ್ಸ್ ಆಫ್ ಇಂಡ್ಯಾ ಸಂಘದ ಮೆಂಬರಾಗಿದ್ದ ದೇಶೀಯ ಕ್ರೈಸ್ತ ಎಸ್. ಎಂ. ಮೈಕೇಲರವರು ಮಹಾತ್ಮರಿಗೆ ಅನೇಕ ಕಾಗದಗಳನ್ನು ಬರೆದಿರುವರು. ಅಲ್ಲದೆ ಗುರುವಾಯ್ಯೂರು ದೇವಾಲಯ ಪ್ರವೇಶಕ್ಕೆ ಹರಿಜನರ ಅವಕಾಶ ಕೊಡಲ್ಪಡದಿದ್ದಲ್ಲಿ ಕೇಳಪ್ಪನ ಸಂಗಡ ತಾವೂ ಬರುವ ಜನವರಿ ತಾ|| 2 ರಿಂದ ನಿರಶನ ವ್ರತವನ್ನು ಹಿಡಿಯುತ್ತೇವೆಂದು ಮಹಾತ್ಮರು ಪ್ರಕಟಿಸಿದುದರಮೇಲೆ ಮೈಕೇಲರವರು ಮಹಾತ್ಮರಿಗೆ ಈ ಪ್ರಕಾರವಾಗಿ ಬರೆದು ತಿಳಿಸಿರುತ್ತಾರೆ:— "ಹರಿಜನರನ್ನು ಅಸ್ಪೃಶ್ಯರೆಂದು ಕರೆಯುವುದೂ, ಅವರನ್ನು ನೀಚಸ್ಥಿತಿಗೆ ಗುರಿಮಾಡುವುದೂ ಅನುಚಿತವು. ಆದುದರಿಂದ ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸಲೇಬೇಕು. ಆದರೆ ಹರಿಜನರನ್ನು ದೇವಸ್ಥಾನಗಳಿಗೆ ಬಿಡದಿರುವುದಕ್ಕಾಗಿ ನಿರಶನ ದೀಕ್ಷೆಯನ್ನು ತಾಳುವುದರಿಂದ ಮಾತ್ರ ಪೂರ್ವಾಚಾರ ಪರಾಯಣರನ್ನು ನಿರ್ಬಂಧಪಡಿಸಿದಂತಾಗುವುದು. ಏಕೆಂದರೆ, ತಮ್ಮ ನಂಬಿಕೆಯ ಮೇರೆಗೂ, ಅಂತರಾತ್ಮ ಬೋಧೆಯಮೇರೆಗೂ ನಡೆದುಕೊಳ್ಳುವುದಕ್ಕೆ ಎಲ್ಲರಿಗೂ ಸಮಾನವಾದ ಹಕ್ಕಿರುತ್ತದೆ. ಅದಕ್ಕೆ ಪ್ರತಿಕೂಲವಾಗಿ ನೀವು ಪುನಃ ನಿರಶನ ವ್ರತಹಿಡಿಯುವುದಾದರೆ ಅದಕ್ಕೆ ವಿರೋಧವಾಗಿ ಅಂದರೆ ಸನಾತರಿಗಿರುವ ಅಪ್ರತಿಹತವಾದ ಹಕ್ಕನ್ನು ಕಾಪಾಡುವುದಕ್ಕಾಗಿ ನಾನು ನಿರಶನ ವ್ರತವನ್ನು ಹಿಡಿಯಬೇಕಾಗುವುದು."

ಒಳದೇಶದ ವೃತ್ತಾಂತಗಳು

ಮೈಸೂರು ಶಾಸನ ಸಭಾದಿವೇಶನವು ಬರುವ ಡಿಸೆಂಬರ್ ತಾ|| 14 ನೆಯ ಬುಧವಾರ ಮಧ್ಯಾಹ್ನ 12 ಘಂಟೆಗೆ ಬೆಂಗಳೂರು ಪಬ್ಲಿಕ್ ಆಫೀಸು ಕಟ್ಟಡದ ಸಭಾಂಗಣದಲ್ಲಿ ನಡೆಯಲು ಗೊತ್ತಾಗಿರುವುದು.

ಕಾಶೀ ಕ್ಷೇತ್ರದಲ್ಲಿ ಪ್ರಸಿದ್ಧ ಪಟ್ಟು ಪಟ್ಟಾವಳಿ ವಸ್ತ್ರ ವ್ಯಾಪಾರಿಗಳಾದ ಮ|| ಎಸ್. ಯು. ನಾರಾಯಣಾಚಾರ್ಯ ಅಂಡ್ ಕಂಪೆನಿಯವರು ಕಡಗೋಲು ಗೋಪಾಲಕೃಷ್ಣನ ಸುಂದರಭಾವಚಿತ್ರದೊಡನೆ ಮುದ್ರಣ ಮಾಡಿಸಿರುವ 1933ನೆಯ ವರ್ಷದ ಕ್ಯಾಲೆಂಡರನ್ನು ಪ್ರೀತಿಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.

ಸಂಸ್ಥಾನದ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಯನ್ನು ನೆರವೇರಿಸಲು ಮತ್ತು ಸಭಾ ಮೆಂಬರುಗಳು ಇಳಿದುಕೊಳ್ಳಲು ಸ್ವಂತವಾಗಿ ಒಂದು ಮಂದಿರವನ್ನು ರಾಜಧಾನಿಯ ಸಂಸ್ಕೃತ ಮಹಾ ಪಾಠಶಾಲೆಯ ದಕ್ಷಿಣದಲ್ಲಿ ಲಕ್ಷ್ಮೀ ನಾಟಕ ಮಂದಿರವಿರುವ ಸ್ಥಾನದಲ್ಲಿ ಕಟ್ಟಬೇಕೆಂದು ಕಳೆದ ದಸರಾ ಮಹೋತ್ಸವದಲ್ಲಿ ನಡೆದ ಮಹಾ ಸಭಾದಿವೇಶನದಲ್ಲಿ ನಿರ್ಧರಿಸಿದ್ದರು. ಅದರ ಪ್ರಕಾರ ಕಟ್ಟಡದಾರಂಭ ಪ್ರಯತ್ನವು ನಡೆಯುತ್ತಿದೆ.

ಮೈಸೂರು ಇಂಜನಿಯರುಗಳ ಸಂಘದ ರಜತೋತ್ಸವವು ಇದೇ ಗುರುವಾರ ಮಧ್ಯಾಹ್ನ 12 ಘಂಟೆಗೆ ಬೆಂಗಳೂರು ಸರ್ಕಾರಿ ಸಾಬೂನು ಕಾರ್ಯಾಲಯದೊಳಗೆ ಆಫಿಸಿಯೇಟಿಂಗ್ ದಿವಾನ್ ರಾಜಕಾರ್ಯ ಪ್ರಸಕ್ತ ದಿವಾನ್ ಬಹದ್ದೂರ್ ಮ|| ಎಂ. ಎನ್. ಕೃಷ್ಣರಾಯರಿಂದ ಆರಂಭಗೊಳಿಸಲ್ಪಟ್ಟು ಚೀಫ್ ಇಂಜನಿಯರ್ ಮ|| ರಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆದಿತು. ಈ ಸಂಘದ ರಜತೋತ್ಸವವು ನಡೆದಂತೆ ಮುಂದೆ ಸುವರ್ಣೋತ್ಸವವೂ ನಡೆಯಲೆಂದು ಕೋರುತ್ತೇವೆ.

ಬರೋಡ, ಕಾಶ್ಮೀರ ಮೊದಲಾದ ದೇಶೀಯ ಸಂಸ್ಥಾನಗಳ ಪ್ರಭುತ್ವದವರು ತಮ್ಮ ಮುಜರಾಯಿ ಆಡಳಿತಕ್ಕೊಳಪಟ್ಟಿರುವ ದೇವಸ್ಥಾನಗಳಿಗೆ ಹರಿಜನರು ಪ್ರವೇಶಿಸಬಹುದೆಂದು ಅಪ್ಪಣೆ ಮಾಡಿರುವಂತೆ ಮೈಸೂರು ಪ್ರಭುತ್ವದ ಮುಜರಾಯಿ ಆಡಳಿತಕ್ಕೊಳಪಟ್ಟಿರುವ ದೇವಸ್ಥಾನಗಳಿಗೆ ಹರಿಜನರು ಬರುವಂತೆ ಅಪ್ಪಣೆಯಾಗಬೇಕೆಂದೂ, ಇದರಿಂದ ಮಹಾಸ್ವಾಮಿಯವರ ಪ್ರಜಾವರ್ಗದಲ್ಲಿ ಭ್ರಾತೃಭಾವವೂ ಸಮಾನತ್ವವೂ ಉಂಟಾಗಲಿಕ್ಕೂ ಗೋರಕ್ಷಣೆಯಾಗಲಿಕ್ಕೂ ಅವಕಾಶವಾಗುತ್ತದೆಂದೂ ಶ್ರೀಮನ್ಮಹಾರಾಜರವರಿಗೆ ದಾವಣಗೆರೆಯ ಪ್ರಾಣಿದಯಾ ಪ್ರಸಾರಕ ಸಂಘದವರು ತಂತಿಯ ದ್ವಾರ ಬಿನ್ನೈಸಿಕೊಂಡಿರುವುದಾಗಿ ತಿಳಿಯುತ್ತೇವೆ.

ರಿಟೈರ್ಡ್ ಸಬ್ ಜಡ್ಜಿಯವರಾದ ರಾವ್‌ಸಾಹೇಬ್ ಎಚ್. ಚೆನ್ನಯ್ಯನವರು ತಮ್ಮ ಜ್ಯೇಷ್ಠ ಪುತ್ರಿ ಚಿ|| ಸೌ|| ಲಕ್ಷ್ಮಮ್ಮ, ಬಿ.ಎ., ಎಲ್.ಟಿ., ಯವರನ್ನು ನಂಜನಗೂಡು ಸಾಹುಕಾರ್ ಮ|| ಪಿ. ಪಾಪಣ್ಣನವರ ದ್ವಿತೀಯ ಪುತ್ರ ಮ|| ಪಿ. ಕೃಷ್ಣಪ್ಪ, ಬಿ.ಎ., ಯವರಿಗೆ ಕೊಟ್ಟು ವಿವಾಹಮಹೋತ್ಸವವನ್ನು ಇದೇ ಬುಧವಾರ ಬೆಳಿಗ್ಗೆ ಬೆಂಗಳೂರು ಲಾಲ್‌ಬಾಗಿನಲ್ಲಿರುವ ಬಂಗಲೆಯಲ್ಲಿ ನೆರವೇರಿಸಲು ನಿಶ್ಚಯಿಸಿರುವರು. ವಧುವು ಬೆಂಗಳೂರು ವಾಣೀವಿಲಾಸ ಹೈಸ್ಕೂಲಿನಲ್ಲಿ ಸಹಾಯೋಪಾಧ್ಯಾಯನಿಯರಾಗಿರುತ್ತಾರೆ. ವರ ಪೂನಾದಲ್ಲಿ ಎಲ್.ಎಲ್.ಬಿ. ಪರೀಕ್ಷೆಗೆ ವ್ಯಾಸಂಗಮಾಡುತ್ತಿದ್ದಾರೆ. ಹೀಗೆ ವಿದ್ಯೆಯಲ್ಲೂ, ಗೌರವದಲ್ಲೂ ಅನುಕೂಲವಾಗಿರುವ ದಾಂಪತ್ಯವು ಹಿಂದುಳಿದವರಲ್ಲಿ ದೊರಕುವುದು ಬಹಳ ಅಪೂರ್ವವು. ಈ ನೂತನ ದಂಪತಿಗಳಿಗೆ ದೀರ್ಘಾಯುರಾರೋಗ್ಯಸಂಪದಭಿವೃದ್ಧಿಯಾಗಲೆಂದು ಹರಸುತ್ತೇವೆ.

ಯಡತೊರೆಯ ಪುರಾಭಿವೃದ್ಧಿ ಕಾರ್ಯದಲ್ಲಿ ಮುಂದಾಳಾಗಿದ್ದು ಸಾವಿರಾರು ರೂಪಾಯಿಗಳ ವೆಚ್ಚದಿಂದ ವಿಶಾಲವಾದ ಗೃಹವನ್ನು ಕಟ್ಟಿಸಿ ಇತರರಿಗೆ ಮಾರ್ಗದರ್ಶಕರಾಗಿ ಪ್ರಭುತ್ವದವರ ಮೆಚ್ಚಿಕೆಗೆ ಪಾತ್ರರಾಗಿರುವ ಸಾಹುಕಾರ್ ಮ|| ಬಳಿ ಸಿದ್ಧಲಿಂಗಶೆಟ್ಟರು ಒಂದು ಹೆರಿಗೆಯ ಆಸ್ಪತ್ರೆಯನ್ನು 10,000 ರೂಪಾಯಿಗಳ ವೆಚ್ಚದಿಂದ ಕಟ್ಟಿಸಿಕೊಡಲು ದಿವಾನರಲ್ಲೊಪ್ಪಿ ಕೂಡಲೆ ಕಟ್ಟಡಕ್ಕೆ ಆರಂಭಿಸಬೇಕೆಂದು ಕೇಳಿದುದರ ಮೇಲೆ ಯೋಗ್ಯವಾದ ಸ್ಥಳವನ್ನು ಗೊತ್ತುಮಾಡಿ ಕಾರ್ಯಾರಂಭಮಾಡಬೇಕೆಂದು ದಿವಾನರು ಚೀಫ್ ಇಂಜನಿಯರಿಗೆ ತಿಳಿಸಿರುತ್ತಾರೆಂದೂ, ಯಡತೊರೆ ತಾ|| ಕಸಬಾ ಹೋಬಳಿ ಚೌಕಹಳ್ಳಿಯ ಮ|| ಸಾಹುಕಾರ್ ಚಿಕ್ಕನಂಜುಂಡಶೆಟ್ಟರು ಯಡತೊರೆಯಲ್ಲಿ 10000 ರೂ. ವೆಚ್ಚದಿಂದ ಹೈಸ್ಕೂಲು ಕಟ್ಟಡವನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಡುವುದಾಗಿ ಬೆಟ್ಟದಪುರದ ಶ್ರೀಮನ್ನಿರಂಜನ ಚಿಕ್ಕವೀರದೇಶಿಕೇಂದ್ರಸ್ವಾಮಿಗಳ ಮತ್ತು ಮ|| ಗಳಾದ ಸಿದ್ಧಲಿಂಗಶೆಟ್ಟರು, ಭದ್ರಶೆಟ್ಟರು, ವೈ. ಎನ್. ನಂಜುಂಡಶೆಟ್ಟರು, ರಾವಂದೂರು ವೀರಪ್ಪನವರು ಮತ್ತೆ ಕೆಲ ದೊಡ್ಡಮನುಷ್ಯರುಗಳ ಸಮಕ್ಷಮದಲ್ಲಿ ವಾಗ್ದಾನ ಮಾಡಿರುತ್ತಾರೆಂದೂ ತಿಳಿದು ಉಭಯ ಧರ್ಮಾತ್ಮರುಗಳನ್ನು ಅಭಿನಂದಿಸಿ ಅವರುಗಳಿಷ್ಟಾರ್ಥವು ಜಾಗ್ರತೆ ನೆರವೇರಲೆಂದು ಕೋರುತ್ತೇವೆ.

ಪ್ರಕಟಣೆ.

ಮೈಸೂರು ಸಂಸ್ಥಾನದ ಮಹಾಜನರಲ್ಲಿ ಬಂದೂಕಗಳು, ರಿವಾಲ್ವರುಗಳು, ಮುಂತಾದುವುಗಳು ಎಷ್ಟಿವೆಯೆಂಬುದನ್ನು ಎಣಿಕೆಯಿಂದ ಲೆಕ್ಕಮಾಡುವುದಕ್ಕಾಗಿ ಅವುಗಳ ಖಾನೇಷುಮಾರಿ ಲೆಕ್ಕವನ್ನು 31-12-1932 ಕ್ಕೆ ಮುಂಚಿತವಾಗಿ ಸಂಗ್ರಹಿಸಬೇಕೆಂದು ಗೊತ್ತಾಗಿದೆ. 1932ನೆಯ ಇಸವಿ ಅಕ್ಟೋಬರು 20 ನೆಯ ತಾರೀಖಿನ ಕನ್ನಡ ಗೆಜೆಟ್ಟಿನಲ್ಲಿ ಪ್ರಕಟವಾಗಿರುವ 27-9-1932/3-10-1932 ಮರ್ಕುಂ ಪಿ. 1911-ಪಿ. ಓ. ಎಲ್. 30-32-7 ನೆಯ ನಂಬರು ಇಸ್ತಿಹಾರ್ನಾಮೆಯಲ್ಲಿ ಸರ್ಕಾರದವರು ಈ ವಿಷಯವಾಗಿ ತಪಸೀಲು ವಿವರಗಳನ್ನು ಕುರಿತು ಹುಕುಂ ಮಾಡಿದ್ದಾರೆ. ಬಂದೂಕ, ರಿವಾಲ್ವರು, ಮುಂತಾದುವುಗಳ ಕರಾರ್ವಾಕಾ ಲೆಕ್ಕಗಳು ಬೇಕಾಗಿವೆ. ಈಗ ಲೈಸೆನ್ಸನ್ನು ಪಡೆಯದಿರುವವರು ಕೂಡ ಯಾವ ಬಗೆಯ ಅನುಮಾನವೂ ಇಲ್ಲದೆ ಧಾರಾಳವಾಗಿ ತಮ್ಮ ಬಂದೂಕು ಮುಂತಾದುವುಗಳ ವಿಚಾರವನ್ನು ತಿಳಿಸುವಂತೆ ಮಾಡುವುದಕ್ಕಾಗಿ ಸರ್ಕಾರದವರು ಕೆಲವು ರಿಯಾಯಿತಿಗಳನ್ನು ತೋರಿಸುವಂತೆ ಅಪ್ಪಣೆಮಾಡಿದ್ದಾರೆ:—(1) ಈಗ ಲೈಸೆನ್ಸು ಪಡೆಯದೆ ಇರತಕ್ಕವರು 30-11-1932 ಮರ್ಕುಂ ಅಥವಾ ಅದಕ್ಕೆ ಮುಂಚೆ ಒಂದು ಪೊಲೀಸು ಸ್ಟೇಷನ್ನಿಗೆ ತಮ್ಮಲ್ಲಿರುವ ಬಂದೂಕ ಮುಂತಾದುವನ್ನು ಒಪ್ಪಿಸಿದರೆ ಅಥವಾ ಅವುಗಳ ವಿಚಾರವನ್ನು ಬೆಂಗಳೂರಿನಲ್ಲಿರುವ ಪೊಲೀಸು ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಅಥವಾ ತಮ್ಮ ಡಿಸ್ಟ್ರಿಕ್ಟು ಡೆಪ್ಯುಟಿಕಮಿಷನರವರಿಗೆ ತಿಳಿಸಿದರೆ, ಅವರನ್ನು ಪ್ರಾಸಿಕ್ಯೂಷನ್ ಮಾಡುವುದಿಲ್ಲ. (2) ಅಂಥವರುಗಳು ತಮಗೆ ಲೈಸೆನ್ಸ್ ಕೊಡಬೇಕೆಂದು 30-11-1932 ಮರ್ಕುಂ ಅಥವಾ ಆ ಮುಂಚೆ ಕೇಳಿದಲ್ಲಿ, ಆಯಾ ಸಂದರ್ಭದ ಯೋಗ್ಯತಾಪಕ್ಷದ ಮೇಲೆ ಪರಿಶೀಲಿಸಿ ಲೈಸೆನ್ಸ್ ಕೊಡಲಾಗುವುದು. ಲೈಸೆನ್ಸ್ ಕೊಟ್ಟಲ್ಲಿ ಹಿಂದಣ ಬಾಕಿಯೇನನ್ನೂ ವಸೂಲುಮಾಡುವುದಿಲ್ಲ. ಚಾಲ್ತಿ ಸಾಲಿನ ಹಣವನ್ನು ಮಾತ್ರ ಕೇಳಲಾಗುವುದು. (3) ಲೈಸೆನ್ಸ್ ಕೇಳಲು ಇಷ್ಟಪಡದ ಜನರ ಅಥವಾ ಲೈಸೆನ್ಸ್ ಕೊಡದೇ ಇರುವಂಥ ಜನರ ಬಂದೂಕ ಮುಂತಾದುವುಗಳನ್ನು ಅವರು ಮೊದಲೇ ಅತ್ಯಂತ ಸಮೀಪವಾದ ಪೊಲೀಸ್ ಸ್ಟೇಷನ್ನಿಗೆ ಒಪ್ಪಿಸಿಲ್ಲದಿದ್ದಲ್ಲಿ ಆ ರೀತಿ ಮಾಡಬೇಕೆಂದು ವಿಧಿಸಲಾಗುವುದು. 30-11-1932 ಮರ್ಕುಂ ಅಥವಾ ಆ ಮುಂಚೆ ಒಪ್ಪಿಸಿದವುಗಳ ವಿಚಾರದಲ್ಲಿ ಲೈಸೆನ್ಸ್ ಕೊಡದೆ ಹೋದುವುಗಳನ್ನು ಮಾರಿ, ಬಂದ ಹಣವನ್ನು ಆಯಾ ಜನರಿಗೆ ಕೊಡಲಾಗುವುದು.

1932 ನೆಯ ಇಸವಿ ನವಂಬರ್ ತಿಂಗಳಿನ 30 ನೆಯ ತಾರೀಖಿನ ತರುವಾಯ ಯಾವ ಮನುಷ್ಯನೇ ಆಗಲಿ ತಾನು ಲೈಸೆನ್ಸ್ ಪಡೆಯಬೇಕಾದುದು ನಿಬಂಧನೆಗಳ ಪ್ರಕಾರ ಆವಶ್ಯಕವಾಗಿರುವಂಥ ಬಂದೂಕ ಮುಂತಾದುವುಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದಾಗಿ ಕಂಡುಬಂದರೆ, ಆತನು ಪ್ರಾಸಿಕ್ಯೂಷನ್ ವ್ಯವಹರಣೆಗೆ ಗುರಿಯಾಗಬೇಕಾಗುವುದು. ಆದರೆ ತಾನು ಮೈಸೂರು ಸಂಸ್ಥಾನದಲ್ಲಿಲ್ಲದೆ ಇದ್ದ ಕಾರಣದಿಂದ ಅಥವಾ ಮತ್ತಾವುದಾದರೂ ಸಮರ್ಪಕವಾದ ಕಾರಣದಿಂದ ಈಗಿನ ಹುಕುಂ ಪ್ರಕಾರ ನಡೆಯಲು ತಪ್ಪಿದ ಮನುಷ್ಯನ ವಿಷಯದಲ್ಲಿ ಈ ವಾಯಿದೆಯನ್ನು ಹೆಚ್ಚಿಸಿಕೊಡಲಾಗುವುದು.

ಎಚ್. ವಿ. ರಾಮಸ್ವಾಮಿ,
ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರ್.

ಅಸ್ಪೃಶ್ಯತಾ ನಿರ್ಮೂಲನಕ್ಕೆ ಮಹಾತ್ಮರ ಪ್ರಚಾರ

ಮಹಾತ್ಮರ ಮೊದಲನೆಯ ಪ್ರಕಟಣೆ

ತಾ|| 5-11-1932.

ನಾನು ಉಪವಾಸ ವ್ರತವನ್ನು ಬಿಟ್ಟಮೇಲೆ ಅಸ್ಪೃಶ್ಯತಾ ನಿರ್ಮೂಲನ ವಿಚಾರವಾಗಿ ಚರ್ಚಿಸಬೇಕೆಂದಿದ್ದ ವಿಷಯಗಳೆಲ್ಲ ನನ್ನ ಸ್ವಾಧೀನದಲ್ಲಿಲ್ಲದಿದ್ದುದರಿಂದ ನಾನು ಅವ ಚರ್ಚಿಸಲು ಅವಕಾಶವಾಗಲಿಲ್ಲ. ಈ ವಿಚಾರದಲ್ಲಿ ಬಹಿರಂಗವಾಗಿ ಪ್ರಚಾರಮಾಡಲು ದೊರತನದವರು ನನಗೆ ಅನುಮತಿಯನ್ನು ಕೊಟ್ಟಿರುತ್ತಾರೆ. ಎರವಾಡ ಒಡಂಬಡಿಕೆಯನ್ನು [illegible] ಅನೇಕರು ನನಗೆ ಕಾಗದಗಳನ್ನು ಬರೆಯುತ್ತಿದ್ದಾರೆ. ಈ ವಿಚಾರದಲ್ಲಿ ನನ್ನ ಸಲಹೆಯನ್ನು ಕೋರಿ ಬೇರೆ ಅನೇಕ ಮಂದಿ ಬರೆದಿರುತ್ತಾರೆ. ಅಸ್ಪೃಶ್ಯತಾ ನಿರ್ಮೂಲನ ಪ್ರಯತ್ನದಿಂದುಂಟಾಗುತ್ತಿರುವ [illegible] ಗಳನ್ನು ಕುರಿತು ಇನ್ನು ಕೆಲ ಜನರು ಬರೆದಿರುತ್ತಾರೆ. [illegible] ನಾನು ಈ [illegible] ಕೊಡಲು [illegible].

ನಾನು ಮರಳಿ ಉಪವಾಸ ದೀಕ್ಷೆ ಹಿಡಿಯಬೇಕಾಗುವುದೆ ?

• ನಿರಶನ ದೀಕ್ಷೆಯನ್ನು ಹಿಡಿಯುವುದು ಕೂಡ ಒಂದು ವಿಧವಾಗಿ ನಿರ್ಬಂಧವೇ ಆಗುವುದರಿಂದ ನೀವು ನಿರಶನ ದೀಕ್ಷೆಯನ್ನು ಹಿಡಿಯಕೂಡದು. ಈ ವರೆಗೆ ಹಾಗೆ ನಡೆದಿದ್ದರೆ ಇನ್ನು ಮೇಲೆ ಪುನಃ ನೀವು ಉಪವಾಸ ವ್ರತವನ್ನು ಹಿಡಿಯಕೂಡದು • ಎಂದು ಕೆಲರು ಬರೆದಿರುತ್ತಾರೆ. • ಈ ವಿಷಯದಲ್ಲಿ ಉಪವಾಸ ವ್ರತ ಹಿಡಿಯಲು ಹಿಂದು ಮತದಲ್ಲಾಗಲಿ ಮತ್ತಾವ ಮತದಲ್ಲಾಗಲಿ ಯಾವ ನಿದರ್ಶನವೂ ಕಂಡುಬರುವುದಿಲ್ಲ • ಎಂದು ಬೇರೆ ಕೆಲರು ಬರೆದಿರುವರು.

ನಾನು ಮತವಿಷಯಕವಾದ ಆಧಾರಗಳನ್ನು ಕುರಿತು ಈಗ ಚರ್ಚಿಸುವುದಿಲ್ಲ. ಈಶ್ವರನ ಪ್ರೇರಣೆಯಿಂದಲೇ ನಾನು ಈವರೆಗೆ ಉಪವಾಸ ವ್ರತವನ್ನು ಹಿಡಿದೆನು. ಪುನಃ ಈಶ್ವರ ಪ್ರೇರಣೆಯಾದರೆ ನಾನು ವ್ರತವನ್ನು ಹಿಡಿಯುವೆನು. ಅಸ್ಪೃಶ್ಯತ್ವವನ್ನು ನಿರ್ಮೂಲನಮಾಡಬೇಕೆಂಬ ಸಂಕಲ್ಪವೇ ನನ್ನ ಉಪವಾಸ ವ್ರತಕ್ಕೆ ಕಾರಣ ಅದುಕಾರಣ ಈ ವಿಚಾರದಲ್ಲಿ ನನಗೆ ಯಾವ ಸ್ವಾತಂತ್ರ್ಯವೂ ಇರುವುದಿಲ್ಲ. ಜಾತಿಯ ಸಮಸ್ಯೆಯ ವಿಚಾರದಲ್ಲಿ ಬ್ರಿಟಿಷು ಮಂತ್ರಿ ಮಂಡಲದವರು ಮಾಡಿದ ಪರಿಷ್ಕಾರದಿಂದ ನನ್ನ ಜೀವಿತದಲ್ಲಿ ಇಂತಹ ವಿಷಮಸ್ಥಿತಿಯುಂಟಾಯಿತು ಬ್ರಿಟಿಷು ದೊರೆತನದವರು ಮಾಡಿರುವ ಪರಿಷ್ಕಾರದಲ್ಲಿ ಹರಿಜನರ ಪ್ರಾತಿನಿಧ್ಯ ಸಂಬಂಧವಾದ ಭಾಗವನ್ನು ಅವರು ಬದಲಾಯಿಸಿರುವುದರಲ್ಲಿ ಅದು ಮುಗಿದಿಲ್ಲವು. ಇದು ಮೊದಲನೆಯ ಕೆಲಸ. ಒಂದು ಅದ್ಭುತಶಕ್ತಿಯು ದೇಶದಲ್ಲೆಲ್ಲ ವ್ಯಾಪಿಸಿ ಬರೇ ರಾಜಕೀಯವಾದ ಪರಿಷ್ಕಾರವನ್ನು ಬದಲಾಯಿಸುವುದು ಮಾತ್ರವಾಗಿಲ್ಲ. ಅದರಲ್ಲಿ ಮಹಾ ಸಂಕಲ್ಪವು ಅಡಗಿರುವುದು. ಆದರೆ ನಾವು ಅದನ್ನು ಗ್ರಹಿಸದೆ ಹೋಗಬಹುದು. ಆ ಮಹಾ ಸಂಕಲ್ಪವನ್ನು ಪ್ರಜೆಗಳು ತತ್ಕ್ಷಣವೇ ಗ್ರಹಿಸಿಕೊಂಡು ಅದಕ್ಕೆ ತಲೆಬಗ್ಗಿಸಿದರು.

ದೇಶಸಂಚಾರ, ಸಭೆ, ಪ್ರಮಾಣಗಳು

ಈ ಕಾಲದಲ್ಲಿ ಪ್ರಜೆಗಳೊಳಗೆ ನಮ್ಮ ದೇಶದಲ್ಲೆಲ್ಲ ಅನೇಕ ವೇಳೆ ಸಂಚಾರ ಮಾಡುವುದರಲ್ಲೂ, ಅನೇಕ ಗ್ರಾಮಗಳಿಗೆ ಹೋಗುವುದರಲ್ಲೂ ಅನೇಕ ಲಕ್ಷ ಜನರೊಡನೆ ಮಿಶ್ರವಾಗುವುದರಲ್ಲೂ ನನ್ನಹಾಗೆ ಹೆಚ್ಚಾಗಿ ಕೃಷಿಮಾಡಿದವರಾರೂ ಇಲ್ಲವೆಂದು ನಾನು ತಿಳಿದಿರುತ್ತೇನೆ. ಸವರ್ಣದವರಿಗೂ ಹರಿಜನರಿಗೂ, ಒಂದು ಮತದವರಿಗೂ ಬೇರೊಂದು ಮತದವರಿಗೂ ಯಾವ ಭೇದವನ್ನೂ ನಾನು ನೋಡಲಿಲ್ಲ. ನಾನು ಅನೇಕ ವೇಳೆ ಅವರ ದೇಶಭಾಷೆಯಲ್ಲೇ ಅಸ್ಪೃಶ್ಯತೆಯನ್ನು ಕಠಿಣವಾಗಿ ನಿಂದಿಸಿ ಉಪನ್ಯಾಸಗಳನ್ನು ಮಾಡಿದ್ದೆನು. ಅದು ಹಿಂದುಮತಕ್ಕೆ ಕಳಂಕವೆಂದು ನಾನು ಸ್ಪಷ್ಟವಾಗಿ ತಿಳಿಸಿದ್ದೆನು. ಇಂತಹ ಬಹಿರಂಗ ಸಭೆಗಳೂ ಇಷ್ಟಾಗೋಷ್ಠಿ ಸಭೆಗಳೂ ಅನೇಕ ರಾಷ್ಟ್ರಗಳಲ್ಲಿ ಅನೇಕವಾಗಿ ನಡೆದಿರುತ್ತವೆ. ಆ ಸಭೆಗಳಲ್ಲಿ ನಾನು ಹೀಗೆ ಕಠಿಣವಾಗಿ ಅಸ್ಪೃಶ್ಯತೆಯನ್ನು ಖಂಡಿಸಿದಾಗ್ಗೆ ಯಾರೂ ಯಾವ ಆಕ್ಷೇಪಣೆಯನ್ನೂ ಮಾಡಲಿಲ್ಲ. ಹಾಗೆ ಮಾಡಲ್ಪಟ್ಟಿದ್ದ ಆಕ್ಷೇಪಗಳಾದರೂ ಬಹಳ ಸ್ವಲ್ಪವೇ ಆಗಿದ್ದುವು. ಆ ಸಭೆಗಳಲ್ಲಿ ಅಸ್ಪೃಶ್ಯತೆಯನ್ನು ಖಂಡಿಸುವ ತೀರ್ಮಾನಗಳು ಮಾಡಲ್ಪಟ್ಟವು. ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸಲಿಕ್ಕೆ ಕೆಲ ಸಹಸ್ರ ಮಂದಿಗಳು ಪ್ರಮಾಣವನ್ನು ಸಹ ಮಾಡಿದರು. ತಮ್ಮ ಪ್ರಮಾಣವನ್ನು ನೆರವೇರಿಸಲು ತಕ್ಕ ಧೈರ್ಯ ಸಾಹಸಗಳನ್ನು ಅನುಗ್ರಹಿಸುವಂತೆ ಈಶ್ವರನನ್ನು ಪ್ರಾರ್ಥಿಸುವಲ್ಲಿ ಕೆಲರು ದೇವರ ಮೇಲೆ ಆಣೆಯನ್ನು ಸಹ ಇಟ್ಟುಕೊಂಡರು ಇವರನ್ನು ಕುರಿತೇ ನಾನು ಉಪವಾಸ ವ್ರತವನ್ನು ಹಿಡಿದುದು. ಅವರಿಗೆ ನನ್ನಲ್ಲಿರುವ ಅವ್ಯಾಜ ಪ್ರೇಮದಿಂದಲೇ 5 ದಿವಸಗಳಲ್ಲಿ ಮಹಾ ಬದಲಾವಣೆಯು ದೇಶದಲ್ಲೆಲ್ಲ ಉಂಟಾಯಿತು. ಅದರ ಫಲವಾಗಿ ಎರವಾಡಾ ಒಡಂಬಡಿಕೆಯು ಜರುಗಿದುದು.

ಎರವಾಡ ಒಡಂಬಡಿಕೆಯನ್ನು ಪೂರ್ತಿಯಾಗಿ ನೆರವೇರಿಸಬೇಕು

ನನ್ನಲ್ಲಿಂತಹ ಅವ್ಯಾಜ ಪ್ರೇಮವುಳ್ಳ ಪ್ರಜೆಗಳು ಎರವಾಡ ಒಡಂಬಡಿಕೆಯನ್ನು ಸಂಪೂರ್ಣಗೊಳಿಸದೆ ಹೋದಲ್ಲಿ ಅವರ ವಿಷಯವಾಗಿಯೇ ನಾನು ಪುನಃ ನಿರಶನ ದೀಕ್ಷೆಯನ್ನು ಕೈಕೊಳ್ಳುವೆನು. ಈಗ ಈ ವಿಚಾರದಲ್ಲಿ ದೊರತನದವರಿಗೆ ಯಾವ ಸಂಬಂಧವೂ ಇಲ್ಲ. ಅವರು ನೆರವೇರಿಸಬೇಕಾಗಿದ್ದ ಭಾಗವನ್ನು ಅವರು ಕೂಡಲೇ ನೆರವೇರಿಸಿಬಿಟ್ಟರು. ಎರವಾಡ ಒಡಂಬಡಿಕೆಯ ಷರತ್ತುಗಳಲ್ಲಿ ಅನೇಕ ಷರತ್ತುಗಳನ್ನು ಉತ್ತಮ ವರ್ಣದ ಹಿಂದುಗಳು ಕೂಡ ನೆರವೇರಿಸಿರುವರು.

ಹರಿಜನರನ್ನು ಸೋದರಭಾವದಿಂದ ನೋಡಬೇಕು

ಹರಿಜನರನ್ನು ನೀವು ನಿಮ್ಮ ಸಹೋದರರಂತೆಯೇ ಕಾಣಬೇಕು. ಮನಃಪೂರ್ವಕವಾದ ಪ್ರೇಮದಿಂದ ಅವರನ್ನು ಆಲಂಗಿಸಬೇಕು. ಅವರನ್ನು ನಿಮ್ಮ ದೇವಸ್ಥಾನಗಳಿಗೂ, ನಿಮ್ಮ ಮನೆಗಳಿಗೂ ಬರಗೊಡಬೇಕು. ಹಳ್ಳಿಗಳಲ್ಲಿ ವಾಸಮಾಡುವ ಹರಿಜನರು ಇಂದಿಗೆ ತಮ್ಮ ಅಂಟು ಸಂಪೂರ್ಣವಾಗಿ ಹೋಗಿರುತ್ತದೆಂದು ಭಾವಿಸಲು ತಕ್ಕ ರೀತಿಯಲ್ಲಿ ಸವರ್ಣದವರು ಅವರ ವಿಚಾರದಲ್ಲಿ ಪ್ರವರ್ತಿಸಬೇಕು. ಹಳ್ಳಿಗಳಲ್ಲಿ ಇತರ ವರ್ಣದವರುಗಳಿಗಿಂತ ಯಾವ ವಿಚಾರದಲ್ಲೂ ಕಡಿಮೆಯಿಲ್ಲ, ಇತರರಂತೆಯೇ ನಾವು ಕೂಡ ದೇವಸ್ಥಾನಗಳಿಗೆ ಹೋಗಿ ದೇವರ ದರ್ಶನ ಮಾಡುವೆವು, ಉಳಿದವರಿಗಿರುವ ಹಕ್ಕುಗಳೆಲ್ಲವೂ ನಮಗೂ ಉಂಟಾಗಿವೆ ಎಂದು ಹರಿಜನರು ನಿಸ್ಸಂಶಯವಾಗಿ ತಿಳಿದುಕೊಳ್ಳಲು ತಕ್ಕ ನಂಬಿಕೆಯನ್ನು ಸವರ್ಣದವರು ಅವರಿಗುಂಟುಮಾಡಿಕೊಡಬೇಕು.

ಇಲ್ಲದಿದ್ದರೆ ನಾನು ಜೀವಿಸಿರಬಹುದೆ ?

ಇವು ಒಡಂಬಡಿಕೆಯ ಷರತ್ತುಗಳಲ್ಲಿ ಬಹಳ ಮುಖ್ಯವಾದುವು. ಇವನ್ನು ಸವರ್ಣರು ನೆರವೇರಿಸದೆ ಹೋದರೆ ನಾನು ಜೀವಿಸಿರಬಹುದೆ ? ನಾನು ದೇವರ ಮುಖವನ್ನೂ ಮನುಷ್ಯರ ಮುಖವನ್ನೂ ನೋಡಲಿಕ್ಕಾದೀತೆ ? • ಒಡಂಬಡಿಕೆಯ ಷರತ್ತುಗಳನ್ನು ಸವರ್ಣರು ಸಂಪೂರ್ಣವಾಗಿ ನೆರವೇರಿಸಲು ನನ್ನನ್ನು ನೀವು ಹೊಣೆಯಾಗಿ ಇಟ್ಟುಕೊಳ್ಳಬಹುದು • ಎಂದು ಸಹ ನಾನು ಹರಿಜನರ ನಾಯಕರಾದ ಡಾಕ್ಟರ್ ಅಂಬೇಡಕರು, ರಾವುಬಹದ್ದೂರ್ ಎಂ. ಸಿ. ರಾಜಾಯವರು ಮೊದಲಾದವರಿಗೆ ಹೇಳಿರುತ್ತೇನೆ.

ನಾನು ಪುನಃ ಉಪವಾಸವ್ರತವನ್ನು ಹಿಡಿಯಬೇಕಾಗಿ ಬಂದಲ್ಲಿ ಅದು ಪ್ರತಿಕೂಲರನ್ನು ನಿರ್ಬಂಧಿಸುವುದಕ್ಕಾಗಲ್ಲವು. ನನಗೆ ಸಹಕಾರಿಗಳಾಗಿರುವವರೂ, ದೇವರ ಸಾಕ್ಷಿಯಾಗಿ ಪ್ರಮಾಣಮಾಡಿರುವವರೂ ತಮ್ಮ ಧರ್ಮವನ್ನು ನೆರವೇರಿಸುವಂತೆ ಪ್ರೋತ್ಸಾಹಪಡಿಸುವ ಉದ್ದೇಶದಿಂದಲೇ ಹಾಗೆ ಮಾಡಲ್ಪಡುವುದು. ಏಕೆಂದರೆ—ಅವರು ಮಾಡಿದ ಪ್ರಮಾಣವನ್ನು ಉಲ್ಲಂಘಿಸಿದವರಾಗುವುದರಿಂದ ಅವರು ತಾವು ಹಿಂದುಗಳೆಂದು ಹೇಳಿಕೊಳ್ಳಲು ಅರ್ಹರಾಗುವುದಿಲ್ಲ. ಅವರು ಮತವು ಬರೇ ಮೋಸವೇ ಆಗುವುದರಿಂದ ಆ ಸ್ಥಿತಿಯಲ್ಲಿ ಜೀವಿಸಿರಲು ಲೇಶಮಾತ್ರ ನನಗಿಷ್ಟವಿರುವುದಿಲ್ಲ. ಅದುದರಿಂದ ಅಸ್ಪೃಶ್ಯತಾ ನಿರ್ಮೂಲನಕ್ಕೆ ಪ್ರತಿಕೂಲರಾಗಿರುವವರು ನಿರಶನದೀಕ್ಷೆಯನ್ನು ಕುರಿತು ಯಾವ ಆಲೋಚನೆಯನ್ನೂ ಮಾಡಬೇಕಾದುದಿಲ್ಲ. ಅಸ್ಪೃಶ್ಯತಾ ನಿರ್ಮೂಲನ ಸಂಬಂಧವಾಗಿ ಕಾಂಗ್ರೆಸ್ ಪ್ರಚಾರದಲ್ಲಿ ನನ್ನ ಪಕ್ಷವಾಗಿಯೂ ಕಾಂಗ್ರೆಸು ಪಕ್ಷವಾಗಿಯೂ ಇರುತ್ತಾರೆಂದು ನಾನು ನಂಬಲು ಅವಕಾಶವನ್ನುಂಟುಮಾಡಿದ ಪನ್ನಂತೆಯೇ ದೇಶಸೇವಕರಾದ ಲಕ್ಷಾಂತರ ಭಾರತೀಯರು ಕೂಡ ಪುನಃ ಆಲೋಚಿಸಿದಾಗ್ಗೆ ಅಸ್ಪೃಶ್ಯತೆಯನ್ನು ಅನುಸರಿಸುವುದು ಅವಶ್ಯಕವೆಂದೇ ತಿಳಿಯುವುದಾದರೆ ಅಸ್ಪೃಶ್ಯತೆಯು ಭಗವಂತನಿಗೂ ಮನುಷ್ಯನಿಗೂ ಅಪಚಾರವಲ್ಲವೆಂದು ಅವರು ನಂಬಿದರೆ ಅವರು ಕೂಡ ನನ್ನ ನಿರಶನ ದೀಕ್ಷೆಯ ವಿಚಾರವಾಗಿ ಆಲೋಚಿಸಬೇಕಾದ ಅವಶ್ಯವಿಲ್ಲ.

ನಿರಶನ ದೀಕ್ಷೆಯು ಬಹಳ ಪ್ರಾಚೀನವಾದ ಸದಾಚಾರವು

ತನ್ನ ಆತ್ಮಶುದ್ಧಿಗಾಗಿಯೂ, ಇತರ ಆತ್ಮಶುದ್ಧಿಗಾಗಿಯೂ ನಿರಶನ ದೀಕ್ಷೆಯನ್ನು ಹಿಡಿಯುವುದು ಸದಾಚಾರವೆಂದೂ ಅನಾದಿಕಾಲದಿಂದ ನಡೆದುಬಂದಿರುವುದೆಂದೂ ನಾನು ನಂಬಿರುತ್ತೇನೆ. ಈ ನಂಬಿಕೆಯು ಸರಿಯಾಗಿರಲಿ ಇಲ್ಲದಿರಲಿ ನಾನು ಅದರಲ್ಲಿ ದೋಷವನ್ನು ಕಂಡು ಹಿಡಿಯುವವರೆಗೂ ಆ ನಂಬಿಕೆಯು ನನಗೆ ತಪ್ಪುವುದಿಲ್ಲ.

ಸವರ್ಣ ಹಿಂದುಗಳು ಬುದ್ಧಿಪೂರ್ವಕವಾಗಿ ಒಡಂಬಡಿಕೆಯ ಷರತ್ತುಗಳನ್ನು ತಿರಸ್ಕರಿಸಿದರೆ ಆ ಒಡಂಬಡಿಕೆಯು ನಿಷ್ಫಲವಾದರೆ ಆಗಮಾತ್ರ ನಾನು ಪುನಃ ನಿರಶನ ದೀಕ್ಷಾಬದ್ಧನಾಗುವೆನು. ಆಗಲಾದರೂ ನನ್ನ ಮನೋನಿಲಯದಲ್ಲಿ ವಾಸಮಾಡುವ ಭಗವಂತನ ಪ್ರೇರಣೆಯು ನನಗೆ ಆದರೇನೆಯೇ ನಾನು ನಿರಶನ ವ್ರತವನ್ನು ಹಿಡಿಯುವೆನು. ಸವರ್ಣ ಹಿಂದುಗಳು ಎರವಾಡ ಒಡಂಬಡಿಕೆಯನ್ನುಲ್ಲಂಘಿಸಿದಲ್ಲಿ ಅವರು ಹಿಂದು ಮತಕ್ಕೆ ದ್ರೋಹವನ್ನಾಡಿದವರಾಗುವರು. ಅಂತಹ ಸ್ಥಿತಿಯನ್ನು ಕಣ್ಣಾರ ನೋಡಲು ನಾನು ಜೀವಿಸಿರಲಿಷ್ಟಪಡುವುದಿಲ್ಲ.

ಗುರುವಯ್ಯೂರು ದೇವಾಲಯ ಪ್ರವೇಶ

ಗುರುವಯ್ಯೂರು ದೇವಸ್ಥಾನದೊಳಕ್ಕೆ ಹರಿಜನರನ್ನು ಬರಗೊಡದಿದ್ದುದರ ಮೇಲೆ ಕೇಲಪ್ಪನವರು ದೇವಸ್ಥಾನದಿದಿರಿಗೆ ಕಠಿಣವಾದ ಉಪವಾಸ ವ್ರತವನ್ನು ಹಿಡಿದಿದ್ದರು. ಇದರಿಂದ ಅವರು ಸಾಯುವ ಸ್ಥಿತಿಯು ಸಹ ಉಂಟಾಗಿದ್ದಿತು. ಆಗ ಮೂರು ತಿಂಗಳುಗಳವರೆಗೆ ಉಪವಾಸ ವ್ರತವನ್ನು ಬಿಡಬೇಕೆಂದು ನಾನು ಕೋರಲಾಗಿ ಅವರು ಅದರಂತೆಯೇ ನಡೆದುಕೊಂಡರು. ಆದರೆ 1933 ನೆಯ ಜನವರಿ ತಾ॥ 1 ರಲ್ಲಾಗಲಿ ಆ ದೇವಾಲಯದೊಳಕ್ಕೆ ಹರಿಜನರನ್ನು ಬಿಡದಿದ್ದರೆ ಕೇಲಪ್ಪನವರು ಪುನಃ ನಿರಶನ ದೀಕ್ಷೆಯನ್ನು ಕೈಕೊಳ್ಳಬೇಕಾಗುವುದಲ್ಲದೆ ನಾನು ಅವರಂತೆಯೇ ನಿರಶನ ದೀಕ್ಷೆಯನ್ನು ವಹಿಸಬೇಕಾಗುತ್ತದೆ. ಆದುದರಿಂದ ಈ ವಿಷಯದಲ್ಲಿ ನನ್ನ ವಿಚಾರವಾಗಿ ದೇಶಸೇವಕರು ಮನೋವ್ಯಥೆಯನ್ನು ಪಡಬೇಕಾದ ಅವಶ್ಯವಿಲ್ಲ. ದೇಶೀಯರೆಲ್ಲರೂ ಮನಃಪೂರ್ವಕವಾಗಿ ಬಿಗಿಪಟ್ಟಿನಿಂದ ಕೆಲಸ ಮಾಡಿದರೆ ಇದರ ಆವಶ್ಯಕತೆಯುಂಟಾಗುವುದೇ ಇಲ್ಲ.

ಊಟವೂ, ಸಂಬಂಧವೂ

ಅಸ್ಪೃಶ್ಯತಾ ನಿರ್ಮೂಲನಕ್ಕೆ ಅವರೊಡನೆ ಕೂಡಿ ಊಟ ಮಾಡುವುದೂ ಅವರ ಸಂಬಂಧವನ್ನು ಬೆಳೆಸುವುದೂ ಅನವಸರವೆಂದೇ ನನ್ನ ಅಭಿಪ್ರಾಯವು. ಸವರ್ಣದವರಲ್ಲಿರುವ ಪದ್ಧತಿಗಳೇ ಹರಿಜನರಿಗೂ ಅನ್ವಯಿಸುವುವು. ಆದುದರಿಂದ ಅಸ್ಪೃಶ್ಯತಾ ನಿವಾರಣೆಗಾಗಿ ಕೆಲಸಮಾಡತಕ್ಕವರೆಲ್ಲ ಸವರ್ಣದವರೊಡನೆ ಮಿಳಿತರಾಗಿ ಭೋಜನ ಮಾಡಬೇಕೆಂದೂ ಅವರೊಡನೆ ಸಂಬಂಧವನ್ನು ಬೆಳಸಬೇಕೆಂದೂ ಬೋಧಿಸಬೇಕಾದ ಬಾಧ್ಯತೆಯಿಲ್ಲ. ಆದರೆ ಈ ಮಿಶ್ರ ಭೋಜನವೂ ಮಿಶ್ರ ವಿವಾಹವೂ ಕೂಡಲೆ ಜರುಗುವುವೆಂದು ನನಗೆ ತೋರುತ್ತದೆ. ಭೋಜನ ಮತ್ತು ವಿವಾಹ ಸಂಬಂಧವಾದ ನಿರೋಧಗಳು ಹಿಂದುಮತಕ್ಕೆ ಸಂಬಂಧಪಟ್ಟವಲ್ಲ. ಇದು ಜಾತಿಗೆ ಸಂಬಂಧಪಟ್ಟ ನಿಯಮಗಳು. ಜಾತಿಯು ಭೇದಿಸುವ ದುರವಸ್ಥೆಯುಂಟಾದಾಗ ಜಾತಿ ರಕ್ಷಣೆಗಾಗಿ ಇಂತಹ ನಿಯಮಗಳುಂಟಾಗಿರಬೇಕು. ಈ ನಿಯಮಗಳು ಕಾಲಕ್ರಮೇಣ ಸಡಿಲವಾಗುತ್ತ ಬಂದಿವೆ. ಇವುಗಳಿಗೆ ಇಲ್ಲದ ಸಲ್ಲದ ಪ್ರಾಧಾನ್ಯವನ್ನು ಕೊಡುವುದರಿಂದ ಸಾಮಾನ್ಯ ಪ್ರಜೆಗಳ ದೃಷ್ಟಿಯು ಪ್ರಧಾನ ವಿಷಯಗಳ ಮೇಲೆ ಬೀಳದೆ ಪ್ರಾಧಾನ್ಯವಿಲ್ಲದ ವಿಷಯಗಳಲ್ಲಿ ನಾಟಿರುತ್ತದೆ. ಆದುದರಿಂದ ಹಿಂದುಗಳೂ ಇತರ ಮತದವರೂ ಹರಿಜನರೆಲ್ಲರೊಡನೆ ಕಲೆತು ಊಟಮಾಡಲು ಏರ್ಪಡಿಸಿದ ಕೂಟಗಳಲ್ಲಿ ಮನಃಪೂರ್ವಕವಾಗಿ ಭಾಗಿಗಳಾಗಲಿಷ್ಟಪಡುವವರು ಆ ರೀತಿ ಮಾಡುವುದು ನನಗೆ ಬಹಳ ಸಮ್ಮತವು. ಅದು ಬಹಳ ಲಾಭಕರವಾಗಿದ್ದರೂ ಬಹಳ ಒಳ್ಳೆಯದಾಗಿದ್ದರೂ ಈಗ ಅಸ್ಪೃಶ್ಯತಾ ನಿರ್ಮೂಲನಕ್ಕಾಗಿ ದೇಶದಲ್ಲೆಲ್ಲ ಪ್ರಚಾರಮಾಡುತ್ತಿರುವವರಾರೂ ಈ ಮಿಶ್ರ ಭೋಜನ ವಿಚಾರವಾಗಿಯೂ ಮಿಶ್ರ ವಿವಾಹ ವಿಚಾರವಾಗಿಯೂ ಬೋಧಿಸಬೇಕಾದ ಅಗತ್ಯವಿರುವುದಿಲ್ಲ.

ಅಸ್ಪೃಶ್ಯತ್ವವು ಹಿಂದು ಮತಕ್ಕೆ ಕಳಂಕಪ್ರಾಯವಾಗಿರುತ್ತದೆ. ಭೋಜನ ವಿವಾಹ ನಿಯಮಗಳು ಸಂಘಾಭಿವೃದ್ಧಿಯನ್ನು ನಿರೋಧಿಸುತ್ತವೆ. ಆದರೆ ಅಸ್ಪೃಶ್ಯತ್ವದಿಂದುಂಟಾಗುವ ಹಾನಿಗೂ, ಭೋಜನ ವಿವಾಹ ನಿಯಮಗಳಿಂದುಂಟಾಗುವ ನಷ್ಟಕ್ಕೂ ಇರುವ ವಿಶೇಷವಾದ ಭೇದವನ್ನು ಎಲ್ಲರೂ ಸರಿಯಾಗಿ ತಿಳಿದುಕೊಳ್ಳಬೇಕು. ಆದುದರಿಂದ ಈಗ ಅಸ್ಪೃಶ್ಯತಾ ನಿರ್ಮೂಲನಕ್ಕಾಗಿ ಮಾತ್ರ ಆತ್ಯಧಿಕ ಬೋಧೆಯು ನಡೆಯಬೇಕಾಗಿರುವುದಲ್ಲದೆ ಭೋಜನ ವಿವಾಹ ನಿಯಮಗಳನ್ನು ತೊಲಗಿಸುವ ವಿಚಾರದಲ್ಲಿ ಯಾರೂ ಪ್ರಯತ್ನಿಸಲು ಆಗತ್ಯವಿಲ್ಲ. ಇವೆರಡನ್ನೂ ಒಟ್ಟುಗೂಡಿಸಿದಲ್ಲಿ ಅಸ್ಪೃಶ್ಯತಾ ನಿರ್ಮೂಲನಕ್ಕೂ ತೊಂದರೆಯುಂಟಾಗುವುದು. ಅಷ್ಟೇ ಅಲ್ಲದೆ ಸವರ್ಣದವರು ಅಸ್ಪೃಶ್ಯರೊಡನೆ ಕಲೆತು ಊಟಮಾಡಬೇಕು, ಅವರೊಡನೆ ಸಂಬಂಧ ಬೆಳಸಬೇಕು ಎಂಬ ವಿಚಾರವಾಗಿ ಅವರಿಗೆ ಬೋಧಿಸಿರುವುದಿಲ್ಲ. ಇದಕ್ಕೊಪ್ಪಿ ಅವರು ಪ್ರಮಾಣ ಮಾಡಿರುವುದಿಲ್ಲ. ಅಸ್ಪೃಶ್ಯತಾ ನಿರ್ಮೂಲನವನ್ನು ಕುರಿತು ಮಾತ್ರ ಅವರಿಗೆ ಬೋಧಿಸಲ್ಪಟ್ಟಿತು. ಅವರೇ ಈ ವಿಷಯದಲ್ಲಿ ಮಾತ್ರ ಪ್ರಮಾಣ ಮಾಡಿರುತ್ತಾರೆ. ಆದುದರಿಂದ ಈಗ ಆಕಸ್ಮಿಕವಾಗಿ ಭೋಜನ ವಿವಾಹ ವಿಷಯವನ್ನು ಕೂಡ ತಂದೊಡ್ಡಿದರೆ ಜನ ಸಾಮಾನ್ಯರಿಗೆ ನಾವು ದ್ರೋಹಮಾಡಿದವರಾಗುವೆವು. ಇಷ್ಟವುಳ್ಳವರು ಹರಿಜನರೊಡನೆ ಕಲೆತು ಊಟಮಾಡಬಹುದು, ಅವರೊಡನೆ ವಿವಾಹ ಸಂಬಂಧವನ್ನು ಬೆಳಸಬಹುದು. ಆದರೆ ಆ ವಿಚಾರವಾಗಿ ಯಾವ ಬೋಧೆಯೂ ನಡೆಯಬೇಕಾದ ಅಗತ್ಯವಿಲ್ಲ.

ಸನಾತರು ಆಗ್ರಹದಿಂದ ಬರೆದ ಲೇಖನಗಳು

ಸನಾತರೆಂದು ಹೇಳಿಕೊಳ್ಳುವ ಕೆಲರು ನನಗೆ ಬಹಳ ಸಿಟ್ಟಿನಿಂದ ಕಾಗದಗಳನ್ನು ಬರೆದಿರುತ್ತಾರೆ.

• ಹಿಂದು ಮತದಲ್ಲಿ ಅಸ್ಪೃಶ್ಯತೆಯು ಮುಖ್ಯತಮವು • ಎಂದು ಕೆಲರು ಬರೆದಿರುವರು • ನೀವು ಹಿಂದು ಮತದ್ವೇಷಿ • ಎಂದು ಮತ್ತೆ ಕೆಲರು • ನೀವು ಕ್ರೈಸ್ತ ಮತ್ತು ಮಹಮ್ಮದೀಯ ಮತಗಳನ್ನನುಸರಿಸಿ ಅಸ್ಪೃಶ್ಯತೆಯನ್ನು ತೊಲಗಿಸಲು ಪ್ರಯತ್ನಿಸುತ್ತಿದ್ದೀರಿ • ಎಂದು ಬೇರೆ ಕೆಲರು ಬರೆದಿರುವದಲ್ಲದೆ ಅಸ್ಪೃಶ್ಯತೆಯನ್ನು ಕೆಲರು ಸಮರ್ಥಿಸುವ ಶಾಸ್ತ್ರ ಪ್ರಮಾಣಗಳನ್ನು ಬರೆದಿರುವರು. ಅವರೆಲ್ಲರಿಗೂ ಈ ಸಂದೇಶದಲ್ಲೇ ಪ್ರತ್ಯುತ್ತರವನ್ನು ಕೊಡಲಿಚ್ಛಿಸಿರುತ್ತೇನೆ.

ನಾನೂ ಸನಾತನೀ

ನಾನೂ ಸನಾತನಿಯಾಗಿರುವೆನು. [illegible] ನಾನು ಅವರೊಡನೆ [illegible]

ನೋಟೀಸ್.

ವೀರಾಜಪೇಟೆ ಮುನಿಸೀಪ್ ಕೋರ್ಟಿನಲ್ಲಿ.

O. S. No. 104 of 1932.

ವಾದಿ—ಮಾಪಿಳ್ಳೆ ಕೊಳ್ಳರಕಲ್ ಹಸನ್ ಅಮ್ಮತ್ತಿ.

ಪ್ರತಿವಾದಿ—ಚಾಮರಾಜನಗರ ತಾಲ್ಲೋಕು ಮಾರ್ಹಳ್ಳಿ ಹೋಬಳಿ ಕಮಾರ್‌ವಾಡಿ ಗ್ರಾಮದ ಶಿವಾಚಾರದ ಹಂಪಯ್ಯಶೆಟ್ಟರ ಮಗ ಸಿದ್ದಪ್ಪಶೆಟ್ಟಿ.

ಪ್ರತಿವಾದಿಯ ಬಾಬತು ಅಂಮತ್ತಿಯಲ್ಲಿರುವ ಸ್ಥಿರ ಸೊತ್ತನ್ನು ಮೇಲ್ಕಂಡ ವಾದಿಗೆ ವಿಕ್ರಯಿಸುವುದಾಗಿ ಒಪ್ಪಂದ ಮಾಡಿ ಬರಕೊಟ್ಟ ಕರಾರು ಶರತ್ತುಗಳನ್ನು ಆಗಮಾಡಿಸುವ ಬಗ್ಗೆ ವಾದಿಯು ಫೈಲುಮಾಡಿದ ಮೇಲ್ಕಂಡ ಮೊಖದ್ದಮ್ಮವು ತಾ|| 6-12-1932 ಕ್ಕೆ ಹೀಯರಿಂಗು ಇಡಲ್ಪಟ್ಟಿರುತ್ತೆ. ಸದರಿ ದಿನ ಪ್ರತಿವಾದಿಯು ಮೇಲ್ಕಂಡ ಕೋರ್ಟಿಗೆ ಹಾಜರಾಗದಿದ್ದಲ್ಲಿ ಸದರಿ ಮೊಖದ್ದಮ್ಮವು ಪ್ರತಿವಾದಿಯ ಮೇಲೆ ಡಿಕ್ರಿ ಮಾಡಲ್ಪಡುವುದು.

ವೀರಾಜಪೇಟೆ, ತಾ|| 6-11-1932.

A. K KRISHNAIYA, Vakil for Plantiff.

ತುಂಕೂರು ಡಿಸ್ಟ್ರಿಕ್ಟ ಬೋರ್ಡ್

ನೋಟೀಸು

ತಾರೀಖು 5-11-1932.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :-

ಇದರಡಿ ಕಂಡ ಸಂತೆಗಳಲ್ಲಿ 1-1-1933 ರ ಲಾಗಾಯಿತು 30-6-1933 ರ ವರೆಗೆ ಸುಂಕ ವಸೂಲ್ಮಾಡುವ ಹಕ್ಕನ್ನು ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಹರಾಜು ತಾರೀಖು ಮತ್ತು ಸ್ಥಳ ಆಯಾಯ ಸಂತೆಗಳ ಎದುರಿಗೆ ನಮೂದಿಸಿರುತ್ತೆ. ಹರಾಜು ಷರತ್ತುಗಳು ಮತ್ತು ವಸೂಲ್ಮಾಡಬೇಕಾದ ಸುಂಕದ ದರದ ಪಟ್ಟಿಯನ್ನೊಳಗೊಂಡ ಇಸ್ತಿಹಾರ್ನಾಮೆಯನ್ನು ತುಂಕೂರು ಡಿ|| ಬೋರ್ಡು ಆಫೀಸಿನಲ್ಲಿ ಪಡಿಯಬಹುದು.

ತಾಲ್ಲೂಕು	ಸಂತೆ ನಡೆಯುವ ಸ್ಥಳ	ಹರಾಜು ತಾರೀಖು	ಹರಾಜು ನಡಿಯುವ ಸ್ಥಳ
1. ಗುಬ್ಬಿ	ಕಡಬ	28-11-1932	ಕಡಬ ಮುಸಾಫರ್ ಖಾನೆ
ಡಿಟೊ	ದಂಡಿನಶಿವರ	ಡಿಟೋ	ಡಿಟೋ
2. ಮಧುಗಿರಿ	ಬಡವನಹಳ್ಳಿ	30-11-1932	ಬಡವನಹಳ್ಳಿ ಟಿ ಬಿ.
3 ಸಿರಾ.	ಚಿಕ್ಕನಹಳ್ಳಿ	29-11-1932	ಕಳ್ಳಂಬೆಳ್ಳ ಟಿ. ಬಿ.

ಡಿ. ಎಸ್. ಮಲ್ಲಪ್ಪ,
ಪ್ರೆಸಿಡೆಂಟ್.

ಅಮೇರಿಕೆಯ ಎಣ್ಣೆ ಕಂಪೆನಿ (ಮದ್ರಾಸು)

[4—4]

ನಮ್ಮ ಕಂಪೆನಿಯ ಸೀಮೆಯೆಣ್ಣೆ, ಪೆಟ್ರೋಲು, ಲೂಬ್ರಿಕೇಟಿಂಗ್ ಎಣ್ಣೆ ಚರಬಿ ವಗೈರೆ ಕಲ್ಲರಗು ಪೆಟ್ರೋಲಿಗೆ ಸಂಬಂಧಪಟ್ಟ ಪದಾರ್ಥಗಳನ್ನು ಮಾರಲು ಬೆಂಗಳೂರು ಸಿಟಿ ಅವಿನ್ಯೂ ರೋಡಿನಲ್ಲಿರುವ ಮ॥ ಪಿ. ವಿ. ಭದ್ರಪ್ಪನವರನ್ನು ಮೈಸೂರು ಮತ್ತು ಕೊಡಗು ಸೀಮೆಗಳಿಗೆ ಒಟ್ಟು ಏಜಂಟರನ್ನಾಗಿ ನಿಯಮಿಸಿದೆ. ಸಬ್ ಏಜಂಟರಾಗಿರಲಿಷ್ಟಪಡುವವರು ಬೆಂಗಳೂರು ಸಿಟಿ ಶ್ರೀ ನರಸಿಂಹರಾಜ ರೋಡಿನಲ್ಲಿರುವ 170-171 ನೇ ನಂಬರಿನ ನಮ್ಮ ಆಫೀಸಿಗೆ ಬರೆದುಕೊಳ್ಳತಕ್ಕದ್ದು.

ದಿ ಅಮೆರಿಕನ್ ಆಯಿಲ್ ಕಂಪೆನಿ.

ದಲ್ಲಿ ಬರೆಯಲ್ಪಟ್ಟ ವೇದಗಳ ಮೇಲೂ, ವೇದಾನುಸಾರವಾಗಿರುವ ಗ್ರಂಥಗಳ ಮೇಲೂ ಆಧಾರಪಟ್ಟಿರುವುದೇ ಸನಾತನ ಧರ್ಮವು, ಈಶ್ವರನಂತೆಯೇ ವೇದಗಳೂ ಅನಾದಿಯಾಗಿರುವುವು ಹಿಂದು ಮತವು ಕೂಡ ಅಂತಹುದೇ. ಈಗ ಮುದ್ರಿತವಾಗಿರುವ ನಾಲ್ಕು ವೇದಗಳೂ ಅಖಂಡವಾದ ವೇದಜಾಲದ ಒಂದು ಅಲ್ಪ ಭಾಗ ಮಾತ್ರವಾಗಿರುವುವು. ಋಷಿನವರು ಮಧ್ಯೆ ಮಧ್ಯೆ ತಮ್ಮ ಜ್ಞಾನಶಕ್ತಿಯನ್ನನುಸರಿಸಿ ಕೆಲ ಭಾಗಗಳನ್ನು ಚತುರ್ವೇದಗಳಲ್ಲೂ ಸೇರಿಸುತ್ತ ಬಂದರು.

ಭಗವದ್ಗೀತೆ, ಜೀವಿತ ಧರ್ಮ.

ಅಲ್ಲಿಂದ ಮುಂದೆ ಗೀತಾಚಾರ್ಯರು ಪ್ರಪಂಚದಲ್ಲಿ ಅವತರಿಸಿದರು. ಅವರು ಹಿಂದು ಮತ ಸಾರವನ್ನು ವೇದಾಂತ ಪರವಾಗಿ ಲೋಕಕ್ಕೆ ತಿಳಿಸಿದರು. ಅದು ಎಲ್ಲರಿಗೂ ಸುಲಭವಾಗಿ ಬೋಧೆಯಾಗುವುದೆಂದು ಗೀತಾಚಾರ್ಯರು ಗ್ರಹಿಸಿದ್ದರು. ಈ ಭಗವದ್ಗೀತೆಯನ್ನು ಎಲ್ಲರೂ ಓದಬಹುದು. ಉಳಿದ ಅಖಂಡ ವೇದಶಾಸ್ತ್ರಗಳೆಲ್ಲ ನಾಶವಾಗಿ ಹೋದಾಗ್ಯೂ ಈ ಭಗವದ್ಗೀತೆಯೊಳಗಿನ 700 ಶ್ಲೋಕಗಳು ಮಾತ್ರ ಉಳಿದಿರುವುದರಿಂದ ಹಿಂದು ಮತವೆಂದರೇನೆಂಬುದನ್ನು ಎಲ್ಲರೂ ಸುಲಭವಾಗಿ ಗ್ರಹಿಸುವವರಾಗಿರುವರು. ನಾನು 40 ವರ್ಷಗಳಿಂದಲೂ ಭಗವದ್ಗೀತೆಯ ಬೋಧೆಯನ್ನನುಸರಿಸಿಯೇ ನನ್ನ ಜೀವಿತ ಧರ್ಮವನ್ನು ನೆರವೇರಿಸಲು ಪ್ರಯತ್ನಿಸುತ್ತಿದ್ದೇನೆ. ಆದುದರಿಂದ ನಾನೂ ಹೊಸಬನೇ. ಗೀತೆಯಲ್ಲಿಯ ಮುಖ್ಯವಾದ ಸಿದ್ಧಾಂತಗಳಿಗೆ ವಿರುದ್ಧಗಳಾದವುಗಳಷ್ಟನ್ನೂ ನಾನು ತಿರಸ್ಕರಿಸಿರುವೆನು.

ಬೈಬಲು, ಖುರಾನು ಮೊದಲಾದ ಮತ ಗ್ರಂಥಗಳನ್ನು ಓದುವ ಪುಣ್ಯವು ನನಗುಂಟಾಗಿರುವುದು. ಯಾವ ಭಕ್ತಿಯಿಂದ ನಾನು ಗೀತೆಯನ್ನು ಓದಿರುವೆನೋ ಅದೇ ಭಕ್ತಿಯಿಂದಲೇ ಇತರ ಮತ ಗ್ರಂಥಗಳನ್ನು ಕೂಡ ಓದಿರುವೆನು. ನಾನು ಹಾಗೆ ಭಕ್ತಿಪೂರ್ವಕವಾಗಿ ಆ ಗ್ರಂಥಗಳನ್ನು ಕೂಡ ಓದುವುದರಿಂದಲೇ ನನಗೆ ಗೀತೆಯಲ್ಲಿರುವ ಗೌರವ ಬುದ್ಧಿಯು ಮತ್ತಷ್ಟು ಹೆಚ್ಚಾಯಿತು. ಆ ಗ್ರಂಥಗಳನ್ನು ಓದಿದುದರಿಂದ ನನಗೆ ವಿಶಾಲಭಾವವು ಹುಟ್ಟಿರುತ್ತದೆ. ಅದರಿಂದ ನನ್ನ ಹಿಂದು ಮತವು ಕೂಡ ವಿಶಾಲವಾಗಿರುತ್ತದೆ. ಜರಾಸ್ಟರು, ಜೀಸಸು, ಮಹಮ್ಮದ್ ಮೊದಲಾದ ಪ್ರವರ್ತಕರ ಜೀವಿತಗಳನ್ನು ಓದುವುದರಿಂದ ಗೀತೆಯಲ್ಲಿ ಬಹಳ ಭಾಗಗಳು ನನಗೀಗ ಚೆನ್ನಾಗಿ ಬೋಧೆಯಾಗಿರುತ್ತವೆ. ಆದುದರಿಂದ ಸನಾತನವೆಂಬ ಹೆಸರಿನಿಂದ ನನಗೀಗ ಆಕ್ರೋಶದಿಂದ ಕಾಗದಗಳನ್ನು ಬರೆದಿರುವವರ ಲೇಖವು ನನಗೀಗ ಉಪಶಾಂತಿಕರವಾಗಿಯೇ ಇರುತ್ತದೆ. ಹಿಂದು ಮತವು ಇತರ ಮತ ಧರ್ಮಗಳನ್ನು ಸಹಿಸುವುದು ಮಾತ್ರವಲ್ಲದೆ ಅವನ್ನು ತನ್ನಲ್ಲಿ ಸೇರಿಸಿಕೊಳ್ಳಲು ಸಹ ಸಮರ್ಥವಾಗಿರುತ್ತದೆ. ಗೀತೆಯಲ್ಲೂ ಅಸ್ಪೃಶ್ಯತೆಯನ್ನು ಕುರಿತು ಹೇಳಲ್ಪಟ್ಟಿರುವುದಿಲ್ಲ.

ಎಲ್ಲರೂ ಜೀವನವನ್ನು ಭಗವಂತನನ್ನಾಗಿಯೇ ಮಾಡುವರು. ಅವರೆಲ್ಲರೂ ಪುನಃ ಭಗವಂತನನ್ನೇ ಸೇರುವರು, ಸನಾತನ ಧರ್ಮಕ್ಕೆ ಮುಖ್ಯವಾದುದು ಅಂತಶ್ಶುದ್ಧಿಯಲ್ಲದೆ ಬಾಹ್ಯಶಕ್ತಿಯಲ್ಲವು. ಶರೀರವು ಆತ್ಮವು ಮನಸ್ಸುಗಳೆಲ್ಲ ಭಗವಂತನಲ್ಲಿ ಲೀನವಾಗಬೇಕು ಎಂದು ಭಗವದ್ಗೀತೆಯು ದಿವ್ಯವಾಕ್ಕಿನಲ್ಲಿ ಬೋಧಿಸಿರುವ ಅಮೂಲ್ಯ ವಿಷಯಗಳು ನನ್ನ ಮನಸ್ಸೆಂಬ ಹಲಗೆಯ ಮೇಲೆ ಶಾಶ್ವತವಾಗಿ ಬರೆಯಲ್ಪಟ್ಟಿವೆ. ನನ್ನ ಹೇತುವಾದಕ್ಕೆ ಸಂತೃಪ್ತಿಯುಂಟಾಗಿದೆ. ನನ್ನ ಮನಸ್ಸಿಗೆ ಆನಂದವಾಗಿರುತ್ತದೆ ಗೀತೆಯಲ್ಲಿರುವ ಬೋಧೆಗಳು ಅಮೃತವಾಕ್ಯಗಳಾಗಿಯೂ ಅವಿ ದಿವ್ಯವಾಣಿಯಾಗಿಯೂ ಇರುತ್ತವೆ. ಇಂತಹ ಗೀತಾ ಸಾರವನ್ನು ತಿಳಿದುಕೊಂಡ ಮೇಲೆಯೇ ನಾನು ಪ್ರಜೆಗಳ ಮಧ್ಯೆ ನಿಂತು ಕೋಟ್ಯಂತರ ಜನರಿಗೆ ಬೋಧಿಸಿದೆನು. ಅವರು ನನ್ನ ಮಾತನ್ನು ಆಲಿಸಿದರು. ನಾನು ಗುಪ್ತ ವ್ಯಕ್ತಿಯೆಂದಾಗಲಿ ರಾಜಕೀಯ ಸಂಪನ್ನನೆಂದಾಗಲಿ ತಿಳಿದು ಅವರು ನನ್ನನ್ನು ಪೂಜಿಸಲಿಲ್ಲ. ನಾನು ತಮ್ಮಲ್ಲೊಬ್ಬನೆಂದೂ, ತಮ್ಮ ಕಾಲದವನೆಂದೂ ಅವರು ಕೂಡಲೆ ನಂಬಿ ನನ್ನ ಮಾತುಗಳಿಗೆ ಕಿವಿಗೊಟ್ಟರು. ಕಾಲಕ್ರಮೇಣ ನನ್ನ ನಂಬಿಕೆಯು ಮತ್ತಷ್ಟು ಸ್ಥಿರವಾಯಿತು. ನಾನು ಸನಾತನ ಧರ್ಮಾನುಸಾರಿಯೆಂದು ನಂಬುವಲ್ಲಿ ನಾನು ತಪ್ಪನ್ನೆಸಗಿರುವುದಿಲ್ಲ. ಭಗವದಿಷ್ಟವಿದ್ದರೆ ನನ್ನ ಮರಣದಲ್ಲಿ ನಾನು ಅದನ್ನು ಸ್ಥಿರಪಡಿಸಲು ಕೂಡ ಆತನು ಅವಕಾಶವನ್ನುಂಟು ಮಾಡುವನು.

ಎರವಾಡ ಜೈಲು, 4-11-32.

ಎಂ. ಕೆ. ಗಾಂಧಿ

ಮಹಾತ್ಮರ ಎರಡನೆಯ ಪ್ರಕಟನೆ.

ಹರಿಜನರು ಸವರ್ಣಹಿಂದುಗಳೊಡನೆ ಸಮಾನರಾಗುವುದಕ್ಕೆ ಮೊದಲು ಅದಕ್ಕೆ ಅವರು ತಕ್ಕವರಾಗಿಯೇ ಇರಬೇಕೆಂದೂ, ತಮ್ಮ ದುರಾಚಾರಗಳನ್ನೆಲ್ಲ ಬಿಡಬೇಕೆಂದೂ ಸತ್ತ ಪ್ರಾಣಿಯ ಮಾಂಸವನ್ನು ತಿನ್ನುವುದನ್ನು ಬಿಡಬೇಕೆಂದೂ ವಿದ್ಯಾಧಿಕರಾದವರೊಬ್ಬರು ಬರೆದಿರುತ್ತಾರೆ. ಕಲಾಸಿಯವರೂ ಮಾದಿಗರೂ ಅಶುಭ್ರವಾದ ಮತವೃತ್ತಿಗಳನ್ನು ಬಿಟ್ಟುಬಿಡಬೇಕೆಂದು ಬೇರೊಬ್ಬರು ಬರೆದಿರುವರು. ಹರಿಜನರಲ್ಲಿ ವ್ಯಾಪಿಸಿರುವ ದುರಾಚಾರಕ್ಕೆಲ್ಲ ತಾವೇ ಬಾಧ್ಯರೆಂಬ ವಿಷಯವನ್ನು ಸವರ್ಣಹಿಂದು ವಿಮರ್ಶಕರು ಕೂಗುತ್ತಿರುವರು. ಶುಭ್ರವಾಗಿರಲು ಬೇಕಾದ ಸೌಕರ್ಯಗಳು ಚತುರ್ವರ್ಣದವರು ಅಸ್ಪೃಶ್ಯರಿಗೆ ಇಲ್ಲದಂತೆ ಮಾಡಿರುತ್ತಾರೆ. ಅವರು ಶುಭ್ರವಾಗಿರಬೇಕೆಂದು ಪ್ರೋತ್ಸಾಹವನ್ನು ಸಹ ಮಾಡದಿರುತ್ತಾರೆ.

ಕಲಾಸಿ ಕೆಲಸವೂ ಜೋಡನ್ನು ಹೊಲಿಯುವುದೂ ಅಶುಭ್ರವೇ?

ಕಲಾಸಿ ಕೆಲಸವೂ, ಚರ್ಮವನ್ನು ನುಣ್ಣಗೆ ಮಾಡಿ ಜೋಡು ಹೊಲಿಯುವ ಕೆಲಸವೂ ನಾನು ಹೇಳುವಂತೆ ಅನೇಕ ಕೆಲಸಗಳಂತೆಯೇ ಅಶುಭ್ರವೆಂದಿಗೂ ಅಲ್ಲ. ಈ ಕಸವೆರಡೂ ಅನೇಕ ಇತರ ಕಸಬುಗಳಂತೆಯೇ ಅಪರಿಶುಭ್ರವಾಗುವಂತೆ ಮಾಡಲ್ಪಡುತ್ತಿವೆ ಎಂದು ಮಾತ್ರ ಅಂಗೀಕರಿಸಬಹುದು. ಇದೂ ಮೇಲಿನ ವರ್ಣದವರ ಅಹಂಭಾವಯುವಾದ ಉದಾಸೀನದಿಂದಲೂ, ಕ್ಷಮಿಸಲವಕಾಶವಿಲ್ಲದಿರುವ ಅಶ್ರದ್ಧೆಯಿಂದಲೂ ಉಂಟಾಗಿರುತ್ತದೆ. ಕಲಾಸಿ ಕೆಲಸವೂ ತೊಗಲನ್ನು ನುಣ್ಣಗೆ ಮಾಡುವುದೂ ಶುಭ್ರವಾಗಿಯೂ ಆರೋಗ್ಯಕರವಾಗಿಯೂ ಮಾಡಲ್ಪಡಬಹುದೆಂದು ಸ್ವಾನುಭವದಿಂದ ನನಗೆ ಗೊತ್ತಿದೆ. ಮಕ್ಕಳ ಶಾಯಖಾನೆಯನ್ನು ತಾಯಿದೀರು ತೆಗೆಯುತ್ತಿಲ್ಲವೆ? ನೂತನ ವೈದ್ಯಶಾಸ್ತ್ರ ವಿದ್ಯಾರ್ಥಿಗಳೆಲ್ಲರೂ ಶವಗಳ ಚರ್ಮವನ್ನು ತೆಗೆಯುವುದರಿಂದ ಅವರು ಮಾದಿಗರ ಕೆಲಸ ಮಾಡುವವರೆಂದು ಹೇಳಬೇಕಾಗುತ್ತದೆ. ಈ ಎರಡು ಕೆಲಸಗಳೂ ಬಹಳ ಪವಿತ್ರವೆಂದು ನಾವು ತಿಳಿಯಬೇಕು. ನಮ್ಮ ತಾಯಿದೀರೂ ನಮ್ಮ ವೈದ್ಯರೂ ಮಾಡುವ ಪವಿತ್ರ ಕಾರ್ಯದಂತೆಯೇ ಉಪಯೋಗವಾದ ಕಾರ್ಯದಂತೆಯೇ ಕಲಾಸಿ ಕೆಲಸವೂ ಮಾದಿಗರ ಕೆಲಸವೂ ಪವಿತ್ರವಾಗಿರುತ್ತವೆಂದು ನಾನು ಅಂಕೆ ಮಾಡುತ್ತೇನೆ.

ಪಾಪಗಳಿಗೆ ಪ್ರಾಯಶ್ಚಿತ್ತವು

ತಾವು ಹೆಚ್ಚೆಂದೂ ಹರಿಜನರು ಕಡಿಮೆಯೆಂದೂ ಮನಸ್ಸಿನಲ್ಲಿ ಭಾವಿಸಿಕೊಂಡು ಹರಿಜನರಿಗೆ ಯಾವ ವರವನ್ನೂ ಕೊಡುವುದಿಲ್ಲವೆಂದು ತಿಳಿದುಕೊಂಡಲ್ಲಿ ಅಪರಾಧವನ್ನು ಮಾಡಿದವರಾಗುತ್ತೇವೆ. ಈಗ ಚತುರ್ವರ್ಣದವರು ಮಾಡಬೇಕಾಗಿರುವುದು, ಅನೇಕ ತರಹದಿಂದಲೂ ಶತಾಬ್ದಗಳಿಂದಲೂ ಅಸ್ಪೃಶ್ಯರಿಗೆ ಮಾಡಿರುವ ಅಪರಾಧಗಳಿಗೆ ಪರಿಹಾರವಾಗಿರುವುದು. ಅವರ ಈಗಿನ ಸ್ಥಿತಿಯಲ್ಲಿ ಹರಿಜನರು ಅವುಗಳನ್ನು ಸ್ವೀಕರಿಸಿದಲ್ಲಿ ಪೂರ್ವಾಚಾರಗಳಿಗೆಲ್ಲ ತಕ್ಕ ಪ್ರಾಯಶ್ಚಿತ್ತವಾಗಿರುವುದು. ಚತುರ್ವರ್ಣದವರು ಈಗ ಮಾಡುವ ಸೇವೆಯನ್ನು ಸಂತೋಷದಿಂದ ಹರಿಜನರು ಅಂಗೀಕರಿಸುವುದು ಕುಪ್ರತನವನ್ನು ಪ್ರೋತ್ಸಾಹಪಡಿಸಿದಂತಾಗುವುದು ನಿಶ್ಚಯವು ನಾಲ್ಕು ವರ್ಣದವರು ತಮ್ಮ ಸೌಕರ್ಯಕ್ಕಾಗಿಯೂ, ಸುಖಕ್ಕಾಗಿಯೂ ಹರಿಜನರ ಪಾರಿಶುದ್ಧಿಗಾಗಿ ನೀರನ್ನು ಹಾಕುವರು.

ಹರಿಜನರಿಗೆ ನಾವು ಮಾಡಿರುವ ಅನ್ಯಾಯವು

ಹರಿಜನರಿಗೆ ನಾವು ಮಾಡಿರುವ ಅನ್ಯಾಯಗಳನ್ನೆಲ್ಲ ಜ್ಞಾಪಿಸಿಕೊಳ್ಳುವುದು ಯುಕ್ತವು. ಈ ಜಾತಿಯ ಜನರು ಕುಷ್ಠ ರೋಗಿಗಳಂತೆ ಕಾಣಲ್ಪಡುತ್ತಿರುವರು. ಆರ್ಥಿಕ ವಿಚಾರದಲ್ಲಿ ಹೆಂಗುಸರಿಗಿಂತಲೂ ಅಧಮ ಸ್ಥಿತಿಯಲ್ಲಿರುತ್ತಾರೆ. ಮತ ವಿಚಾರದಲ್ಲಿ ಈಶ್ವರನಿರುವನೆಂದು ಭಾವಿಸಲ್ಪಟ್ಟಿರುವ ಸ್ಥಳಕ್ಕೆ ಅವರನ್ನು ಬರಗೊಡುವುದಿಲ್ಲ. ನಾಲ್ಕು ವರ್ಣದವರೂ ತಿರುಗಾಡುವ ಮಾರ್ಗಗಳಲ್ಲೂ ನಾಲ್ಕು ವರ್ಣದ ಹುಡುಗರು ಓದುವ ಪಾಠಶಾಲೆಗಳು, ನೀರನ್ನುಪಯೋಗಿಸುವ ಭಾವಿಗಳು, ಕೊಳಾಯಿಗಳು, ಉಪವನಗಳು, ಆಸ್ಪತ್ರೆಗಳು ಇವೇ ಮೊದಲಾದ ಬಹಿರಂಗ ಸ್ಥಳಗಳಲ್ಲಿ ಅಸ್ಪೃಶ್ಯರು ಸಮಾನರಾಗಿ ಕಾಣಲ್ಪಡುತ್ತಿಲ್ಲ. ಕೆಲ ಸ್ಥಳಗಳಲ್ಲಿ ಅಸ್ಪೃಶ್ಯರು ಸಮೀಪಕ್ಕೆ ಬರುವುದು ಸಹ ಅಪರಾಧವೇ ಮತ್ತೆ ಕೆಲವು ಸ್ಥಳಗಳಲ್ಲಿ ನಾಲ್ಕು ವರ್ಣದವರಿಗೆ ಸೋಂಕುವುದು ಸಹ ಅಪರಾಧವೇ. ಪಟ್ಟಣಗಳಲ್ಲೂ ಹಳ್ಳಿಗಳಲ್ಲೂ ಬಹಳ ಅನಾರೋಗ್ಯಕರವಾದ ಸ್ಥಳಗಳಲ್ಲಿ ಅವರು ವಾಸಮಾಡಬೇಕು. ಅಲ್ಲಿ ಅವರಿಗೆ ತಕ್ಕ ಸೇವೆ ಮಾಡತಕ್ಕವರಿರುವುದಿಲ್ಲ. ಇತರರಿಗೆ ಮಾಡುವಂತೆ ಚತುರ್ವರ್ಣದ ವೈದ್ಯರು ಅವರಿಗೆ ಔಷಧೋಪಚಾರವನ್ನು ಮಾಡುವುದಿಲ್ಲ. ಅವರ ಮೊಖದ್ದಮೆಗಳನ್ನು ಲಾಯರುಗಳು ನಡೆಸುವುದಿಲ್ಲ. ಅವರ ಮನೆಗಳಲ್ಲಿ ನಡೆಯುವ ಶುಭಾಶುಭ ಕಾರ್ಯಗಳಲ್ಲಿ ಬ್ರಾಹ್ಮಣ ಪುರೋಹಿತರು ಪೌರೋಹಿತ್ಯವನ್ನು ಮಾಡುವುದಿಲ್ಲ. ಇಂತಹ ಸ್ಥಿತಿಯಲ್ಲಿ ಅವರು ಬದುಕಿರುವುದು ಆಶ್ಚರ್ಯವು. ಅವರಿನ್ನೂ ಹಿಂದುಗಳಾಗಿರುವುದು ಮತ್ತಷ್ಟು ಆಶ್ಚರ್ಯವೇ. ತಮ್ಮನ್ನು ಹೀನಸ್ಥಿತಿಯಲ್ಲಿಟ್ಟಿರುವವರ ಮೇಲೆ ಹಿಂದಿರುಗಿ ಬೀಳಲು ಅವರಿಗೆ ಶಕ್ತಿಸಾಲದು. ಎರವಾಡಾ ಒಡಂಬಡಿಕೆಯಿಂದ ಗೊತ್ತಾಗುವ ಅರ್ಥವನ್ನೆಲ್ಲ ಪ್ರಚಾರಕರು ಚೆನ್ನಾಗಿ ತಿಳಿದುಕೊಳ್ಳುವುದಕ್ಕಾಗಿ ಈ ಮಹಾಪಚಾರಗಳನ್ನೂ, ನಮಗೆಲ್ಲ ನಾಚಿಕೆಯನ್ನುಂಟುಮಾಡುವ ವಿಷಯಗಳನ್ನೂ ಮೇಲೆ ವಿವರವಾಗಿ ತಿಳಿಸಿರುವೆನು. ಇಂತಹ ಸ್ಥಿತಿಯಲ್ಲಿರುವವರನ್ನು ಉದ್ಧಾರಮಾಡಿ ಹಿಂದು ಮತವನ್ನು ನಿಷ್ಕಲ್ಮಷಗೊಳಿಸಿ ಹಿಂದು ಮತವನ್ನೂ. ಅದಕ್ಕೆ ಸೇರಿರುವ ಎಲ್ಲಾ ಜಾತಿಗಳನ್ನೂ ಪುನೀತವನ್ನಾಗಿ ಮಾಡಲು ನಿರಂತರ ಕೃಷಿ ಮಾಡಬೇಕಾಗಿದೆ. ನಾನು ಉಪವಾಸವನ್ನು ಮಾಡುತ್ತಿರುವ ಕಾಲದಲ್ಲಿ ಪ್ರಜೆಗಳು ತೋರಿಸಿದ ಅಭಿಮಾನವು ನಾಲ್ಕು ವರ್ಣದವರ ನಿಜವಾದ ಪಶ್ಚಾತ್ತಾಪವನ್ನು ತೋರಿಸುವುದಾಗಿದ್ದರೆ ಭಯಪಡಬೇಕಾದುದೇನೂ ಇರುವುದಿಲ್ಲ. ಪ್ರತಿಯೊಬ್ಬ ಹರಿಜನ ಜಾಗ್ರತೆಯಲ್ಲೇ ಸ್ವಾತಂತ್ರ್ಯೋತ್ಸಾಹವನ್ನು ಹೊಂದುವನು.

ಗ್ರಾಮಗಳಲ್ಲಿ ಪ್ರಚಾರ

ಆದರೆ ಈ ಉತ್ಸಾಹವುಂಟಾಗುವುದಕ್ಕೆ ಮೊದಲು ಸ್ವಾತಂತ್ರ್ಯ ಸಂದೇಶವು ಪ್ರತಿಯೊಂದು ಹಳ್ಳಿಗೂ ವ್ಯಾಪಿಸಬೇಕು. ಪಟ್ಟಣಗಳಿಗಿಂತ ಹಳ್ಳಿಗಳಲ್ಲಿ ಕೆಲಸಮಾಡುವುದು ಬಹಳ ಕಷ್ಟವು. ಪಟ್ಟಣಗಳಲ್ಲಿ ಪ್ರಜಾಭಿಪ್ರಾಯವನ್ನು ಜಾಗ್ರತೆಯಲ್ಲಿ ತಿಳಿದುಕೊಳ್ಳಬಹುದು, ಆದರೆ ಗ್ರಾಮಗಳಲ್ಲಿ ಹಾಗಾಗುವುದಿಲ್ಲ. ಈಗ ಅಖಿಲ ಭಾರತ ಅಸ್ಪೃಶ್ಯತಾ ನಿವಾರಕ ಸಂಘವೇರ್ಪಟ್ಟಿರುತ್ತದೆ. ಅದರಿಂದ ಪ್ರಚಾರಕರು ಆ ಸಂಘದಲ್ಲಿ ಸೇರಿ ಕೆಲಸಮಾಡಲವಕಾಶವಾಯಿತು.

ಅಂಬೇಡಕರ ಕೋರಿಕೆ

ಕಷ್ಟಪಡುವವರಿಗಿಂತಲೂ ತಮಗೆ ಹೆಚ್ಚಾಗಿ ತಿಳಿಯುತ್ತದೆಂದು ಈವರೆಗೆ ಸಂಸ್ಕರ್ತರು ತಿಳಿದುಕೊಂಡಿದ್ದರು. ಈ ತಪ್ಪಿತವನ್ನು ಇನ್ನು ಮುಂದೆಯೂ ಸಂಸ್ಕರ್ತರು ಮಾಡದವರಾಗಲಿ ! ಹರಿಜನರ ಆಶಯವೇನು. ಅವರನ್ನು ತೃಪ್ತಿಪಡಿಸುವುದು ಹೇಗೆಂಬುದನ್ನು ಹರಿಜನರ ಪ್ರತಿನಿಧಿಗಳನ್ನು ಕೇಳಿ ತಿಳಿದುಕೊಳ್ಳಬೇಕೆಂದು ನಿಮ್ಮ ಪ್ರಚಾರಕರಿಗೆ ಹೇಳಬೇಕು. ಎಲ್ಲರೂ ಸೇರಿ ವಿನೋದ ಕೂಟವನ್ನು ನಡೆಸುವುದು ನೋಡುವುದಕ್ಕೆ ಚೆನ್ನಾಗಿಯೇ ಇರುತ್ತದೆ. ಆದರೆ ಇವನ್ನು ಆವಶ್ಯಕವಾದುದಕ್ಕಿಂತ ಹೆಚ್ಚಾಗಿ ಮಾಡಲು ಅವಕಾಶವುಂಟು. ತಾವು ಹರಿಜನರಿಗಿಂತಲೂ ಅಧಿಕವೆಂದೂ ಹರಿಜನರ ವಿಚಾರದಲ್ಲಿ ತಾವು ಯಾವುದೋ ಅಭಿಮಾನವನ್ನು ತೋರಿಸುತ್ತಿದ್ದೇವೆಂದೂ ಸವರ್ಣದವರು ತಿಳಿದುಕೊಳ್ಳಲು ಇದರಲ್ಲಿ ಅವಕಾಶವುಂಟು. ಈ ಕೂಟಗಳಿಗೆ ನಾನು ಹೋಗುವುದಿಲ್ಲ. ಹಿಂದು ಸಂಘಗಳಲ್ಲಿ ಸಾಧಾರಣವಾಗಿ ನಡೆಯುವ ಕಾರ್ಯಗಳಿಗೆ ನಮ್ಮನ್ನು ಕರೆಯುವುದು ಗೌರವಪ್ರದವಾಗಿರುವುದು. ಗಡಿಬಿಡಿಯು ನಮಗೆ ಬೇಕಾಗಿಲ್ಲ. ದೇವಾಲಯ ಪ್ರವೇಶವು ಆಗತ್ಯವಾಗಿದ್ದರೂ ಕೆಲ ಕಾಲದ ವರೆಗೆ ಅದಕ್ಕಾಗಿ ನಿರೀಕ್ಷಿಸಬಹುದು. ಅಸ್ಪೃಶ್ಯರ ಆರ್ಥಿಕಸ್ಥಿತಿಯನ್ನುತ್ತಮಗೊಳಿಸುವುದೂ, ಅವರನ್ನು ಗೌರವದಿಂದ ಕಾಣುವುದೂ ಅತ್ಯಾವಶ್ಯಕವು.

ಸ್ವಾನುಭವದಿಂದ ತಿಳಿದುಕೊಂಡಿರುವ ಅಂಬೇಡಕರು ನನ್ನೊಡನೆ ಹೇಳಿರುವ ಘೋರ ವಿಷಯಗಳನ್ನೆಲ್ಲ ಇಲ್ಲಿ ಬರೆಯಲಾಗದು. ಅವರು ಹೇಳಿದ ಮಾತಿನ ಯಥಾರ್ಥವು ನನ್ನ ಮನಸ್ಸಿಗೆ ಚೆನ್ನಾಗಿ ಹಿಡಿದಿರುತ್ತದೆ. ವಾಚಕರಿಗೂ ಇದು ಗೊತ್ತಾಗುವುದೆಂದು ನೆನಸುತ್ತೇನೆ.

ಸಂಸ್ಕರಣ ಪದ್ಧತಿಗಳು

ಸಂಸ್ಕಾರಗಳು ಅವಲಂಬಿಸಲ್ಪಡುವ ಪದ್ಧತಿಗಳನ್ನು ಕುರಿತು ಕೆಲ ಸೂಚನೆಗಳು ನನಗೆ ಬಂದಿರುತ್ತವೆ. ಒಂದು ಕೀರ್ತಿಶೇಷರಾದ ಸ್ವಾಮಿ ಶ್ರದ್ಧಾನಂದರವರು ಹೇಳತಕ್ಕದು. ಅದಾವುದೆಂದರೆ, ಪ್ರತಿ ಹಿಂದುವೂ ತನ್ನ ಮನೆಯಲ್ಲಿ ಒಬ್ಬ ಅಸ್ಪೃಶ್ಯನನ್ನು ಇಟ್ಟುಕೊಂಡು ಅವನನ್ನು ತನ್ನ ಕುಟುಂಬಿಗಳಲ್ಲಿ ಒಬ್ಬನಂತೆ ತಿಳಿಯಬೇಕು. ಎರಡನೆಯದು, ಭಾರತ ದೇಶಕ್ಷೇಮಾಭಿಲಾಷಿಯೂ ಹಿಂದುವಲ್ಲದವನೂ ಆದ ಸ್ನೇಹಿತನೊಬ್ಬನು ತಿಳಿಸಿದ ಸೂಚನೆಯು. ಅದೇನೆಂದರೆ, ಸಂಪನ್ನನಾದ ಪ್ರತಿಯೊಬ್ಬ ಹಿಂದುವು ಒಬ್ಬ ಅಸ್ಪೃಶ್ಯ ಪುರುಷನಿಗಾಗಲಿ ಸ್ತ್ರೀಗಾಗಲಿ ಹೆಚ್ಚು ವಿದ್ಯೆಯನ್ನು ಕಲಿಸಿ ಹರಿಜನ ಸಂಘ ಸೇವಕರನ್ನಾಗಿ ಮಾಡುವುದು, ಇವೆರಡೂ ಒಳ್ಳೆಯ ಸೂಚನೆಗಳೇ. ಇವನ್ನು ವಿಚಾರಿಸಿ ಅನುಸರಿಸಬೇಕು. ಒಳ್ಳೆಯ ಸೂಚನೆಯನ್ನು ಕೊಡುವವರೆಲ್ಲರೂ ಹೊಸದಾಗಿ ಸ್ಥಾಪಿತವಾಗಿರುವ ಸಂಘಕ್ಕೆ ತಮ್ಮ ಸೂಚನೆಗಳನ್ನು ತಿಳಿಸಬೇಕು. ಲೇಖಕರು ನನಗಿರುವ ತೊಂದರೆಯನ್ನು ವಿಚಾರಿಸಬೇಕು. ಜೈಲಿನಲ್ಲಿದ್ದುಕೊಂಡು ಸಂಘದವರಿಗೂ ಪ್ರಜೆಗಳಿಗೂ ಸಲಹೆಯನ್ನು ಕೊಡತಕ್ಕವನು ಮಾತ್ರವಲ್ಲದೆ ಕಾರ್ಯಾಚರಣೆಯಲ್ಲಿ ಭಾಗಿಯಾಗತಕ್ಕವನಲ್ಲ. ಅಲ್ಲದೆ ಸಂಗತಿಗಳನ್ನೆಲ್ಲ ತಿಳಿಯದೆ ಹೋಗುವುದರಿಂದಲೂ, ತಿಳಿದ ಸಂಗತಿಗಳು ಸರಿಯವುಗಳಾಗುವುದರಿಂದಲೂ ಅವನ್ನು ಕಾಲಾನುಸಾರವಾಗಿ ಬದಲಾಯಿಸಿಕೊಳ್ಳಬೇಕಾಗಿರುತ್ತದೆಂದು ವಾಚಕರು ಗ್ರಹಿಸಬೇಕು.

ಒಬ್ಬ ಲೇಖಕರ ಅಭ್ಯಂತರ

ಹಳೇ ಪುರಾಣವಾಗಿದ್ದರೂ ಒಬ್ಬ ಲೇಖಕರು ತಿಳಿಸಿದ ಅಭ್ಯಂತರವನ್ನು ಕುರಿತು ಇಲ್ಲಿ ಒಂದು ಮಾತನಾಡುವೆನು. ಈ ವಿಷಯವು ಪತ್ರಿಕೆಗಳಲ್ಲಿ ಕೂಡ ಪ್ರಕಟವಾಗಿರುತ್ತದೆ. ಪೂನಾ ಒಡಂಬಡಿಕೆಯೊಳಗಿನ ರಾಜಕೀಯ ಭಾಗದಿಂದ ನಮಗುಂಟಾದ ಲಾಭವೇನೆಂದು ಅವರು ಕೇಳಿರುವರು. ಪ್ರಧಾನ ಮಂತ್ರಿಯು ನಿರ್ಣಯದಲ್ಲಿ ಕೊಟ್ಟಿರುವುದರೊಳಗೆ ಅಸ್ಪೃಶ್ಯರಿಗೆ ಹೆಚ್ಚಾಗಿ ಲಭಿಸಿರುವುದು ಎಂದು ಅವರು ಹೇಳಿರುತ್ತಾರೆ. ಹೌದು ಇದಿಯೋ ಲಾಭವು. ಹರಿಜನರಿಗೆ ಅನ್ನಕ್ಕೆ ಬದಲು ಸುಣ್ಣವು ದೊರಕಿರುವುದೆಂದು ನಾನು ಪ್ರಧಾನ ಮಂತ್ರಿಗಳ ನಿರ್ಣಯವನ್ನು ಪ್ರತಿಭಟಿಸಿರುತ್ತೇನೆ. ಪೂನಾ ಒಡಂಬಡಿಕೆಯು ಅನ್ನರಾಶಿಯಲ್ಲಿ ಕೆಲ ತುತ್ತುಗಳು ಕೊಡಲ್ಪಟ್ಟವೆ. ಹಿಂದುಗಳಿಗೆ ಪ್ರತ್ಯೇಕಿಸಲ್ಪಟ್ಟಿರುವ ಸ್ಥಾನಗಳೆಲ್ಲ ಹರಿಜನರಿಗೆ ದೊರಕಿದ್ದರೆ ಮೂಂಜಿಯವರೊಡನೆ ನಾನೂ ಸಂತೋಷಪಡುತ್ತಿದ್ದೆನು. ಚತುರ್ವರ್ಣದವರಿಗೂ ಹಿಂದುಮತಕ್ಕೂ ಇದು ಬಹಳ ಲಾಭಕರವಾಗಿರುವುದು. ಅಸ್ಪೃಶ್ಯರು ಚತುರ್ವರ್ಣದವರಲ್ಲೂ, ಚತುರ್ವರ್ಣದವರು ಅಸ್ಪೃಶ್ಯರಲ್ಲೂ ಸಂಪೂರ್ಣವಾಗಿ ಮಿಳಿತವಾಗಬೇಕೆಂದು ನಾನು ಕೋರಿದ್ದೆನು. ಈಗಲೂ ಅದನ್ನು ಕೋರುತ್ತೇನೆ. ಅಣಗಿಸಬಲ್ಲವರು ಅಣಗಿಸಲ್ಪಡುವವರಿಗೆಷ್ಟು ಹೆಚ್ಚಾಗಿ ಕೊಟ್ಟರೆ ಅವರಿಗಷ್ಟು ಲಾಭವೆಂಬುದು ನನ್ನಭಿಪ್ರಾಯವು. ಇದು ಇನ್ನು ಮೇಲೆ ತಿಳಿಯಬೇಕಾದ ವಿಷಯವಲ್ಲದೆ ಮರೆಯತಕ್ಕದಲ್ಲ. ವಾಯಿದೆ ಗತಿಸಿದ ಸಾಲವನ್ನೆಲ್ಲ ಸಲ್ಲಿಸಿದಲ್ಲಿ ಲಾಭವು ಅವರಿಗೆ (ಸವರ್ಣರಿಗೆ) ಆಗುವುದು. ಚಾತುರ್ವರ್ಣದವರು ಇಷ್ಟು ನಮ್ರತೆಯಲ್ಲಿ ಇಷ್ಟು ಋಜುಮಾರ್ಗದಲ್ಲಿ, ಇಷ್ಟು ಮತಾವೇಶದಲ್ಲಿ ಈ ಸಮಸ್ಯೆಯನ್ನು ಪರಿಷ್ಕರಿಸಿದ ಹೊರತು ಒಡಂಬಡಿಕೆಯಲ್ಲಿ ಉಳಿದಿರುವ ಭಾಗವು ನಿರಶನ ವ್ರತವಾರದಲ್ಲಿ ಹಿಂದು ಸಂಘವನ್ನು ಆವರಿಸಿರುವ ಭಾಗದಿಂದ ಪೂರ್ತಿಗೊಳಿಸಲ್ಪಡುವುದು.

ಸಂಸ್ಥಾನಾಧಿಪತಿಗಳಿಗೆ ಅಭಿನಂದನ

ಹರಿಜನರ ದೇವಸ್ಥಾನ ಪ್ರವೇಶಕ್ಕೆ ಅವಕಾಶವನ್ನುಂಟುಮಾಡಿ ಇತರ ವಿಧದಿಂದ ಅಸ್ಪೃಶ್ಯತೆಯನ್ನು ತಮ್ಮ ಸಂಸ್ಥಾನಗಳಿಂದ ತೊಲಗಿಸಿದ ಸಂಸ್ಥಾನಾಧಿಪತಿಗಳಿಗೆ ಅಭಿನಂದನವನ್ನು ಅರ್ಪಿಸುತ್ತೇನೆ. ಹೀಗೆ ಮಾಡುವುದರಲ್ಲಿ ತಮ್ಮ ಪಕ್ಷವಾಗಿಯೂ ಪ್ರಜಾಪಕ್ಷವಾಗಿಯೂ ಮಾಡಿರುವ ಪೂರ್ವಪಾಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಿದರೆಂದು ಧೈರದಿಂದ ಹೇಳುವೆನು. ಆಯಾ ಸಂಸ್ಥಾನಗಳಲ್ಲಿ ವಾಸಿಸುವ ಪ್ರಜೆಗಳು ತಮ್ಮ ರಾಜರ ಪ್ರಕಟನೆಯನ್ನನುಸರಿಸಲಿಲ್ಲವೆಂದೂ, ಹಿಂದು ಸಂಘಕ್ಕೆ ಬಹಿಷ್ಕೃತರನ್ನಾಗಿ ತಮ್ಮನ್ನು ಇಷ್ಟು ಕಾಲದವರೆಗೆ ಕಾಣುತ್ತ ಬಾಧಿಸುತ್ತಿದ್ದರೆಂದೂ ಅಸ್ಪೃಶ್ಯರು ಭಾವಿಸದಂತೆ ಇವರು ಮಾಡುವರೆಂದೂ ನಾನು ಕೋರುತ್ತೇನೆ. ಅಸ್ಪೃಶ್ಯತೆಯು ಮಹಾ ಘೋರಪಾಪಕ್ಕೆ ಅತ್ಯಂತ ಸನ್ನಿಹಿತವಾಗಿರುವುದರಿಂದ ಅದರ ಗೊತ್ತಾದ ಹದ್ದನ್ನು ದಾಟಿ ಯಾವದ್ಭಾರತ ಜಾತಿಯ ತಳಹದಿಯನ್ನು ಕದಲಿಸಿದ ವಿಷಯವು ನಮಗಿನ್ನೂ ಸರಿಯಾಗಿ ತಿಳಿಯದುದಾಗಿದೆ. ನನ್ನ ಮುಟ್ಟಕೂಡದೆಂಬ ಭಾವವು ಭೂನಭೋಂತರಾಳವನ್ನೂ ವ್ಯಾಪಿಸಿರುತ್ತದೆ. ಆದುದರಿಂದ ಈ ಗದ್ದಲುಗಳು ಹುಟ್ಟುತ್ತಲೆ ನಾಶಪಡಿಸಲ್ಪಟ್ಟರೆ ಮತಮತಕ್ಕೂ, ಜಾತಿ ಜಾತಿಗೂ ಇರುವ ಭೇದವನ್ನು ನಾವು ಜಾಗ್ರತೆಯಲ್ಲೇ ಮರೆತು ಹಿಂದುಗಳೆಲ್ಲರೂ ಒಂದೇ, ಅವರನ್ನು ವಿಭಾಗಿಸಲು ಅವಕಾಶವಿಲ್ಲವೆಂದು ತಿಳಿದು, ಹಾಗೆಯೇ ಮಹಮ್ಮದೀಯರೂ, ಸಿಕ್ಕರೂ, ಪಾರಿಸೀಕರೂ, ಯೂಧರೂ ಕ್ರೈಸ್ತರೂ ಒಂದೇ ದೊಡ್ಡಮರದ ಶಾಖೆಗಳಲ್ಲದೆ ಬೇರೆಯಲ್ಲವೆಂದು ನಾವು ತಿಳಿದುಕೊಳುವೆವು. ಅಸ್ಪೃಶ್ಯತೆಯನ್ನು ಪ್ರತಿಭಟಿಸಲು ನಾವು ನಡೆಸುತ್ತಿರುವ ಉದ್ಯಮದ ತತ್ತ್ವವೂ ಇದೇ ಆಗಿರುತ್ತದೆಂದು ನೀವು ಗ್ರಹಿಸುವರೆಂದು ತಿಳಿಯುತ್ತೇನೆ. ಮತಾವೇಶದಿಂದ, ಅಕುಂಠಿತ ವಿಶ್ವಾಸದಿಂದ ಈ ಉದ್ಯಮವನ್ನು ನಾವು ನಡೆಸಿದಲ್ಲಿ ಇದು ನಮಗೆ ಗೊತ್ತಾಗುವುದು.

ಗಾಂಧಿ.

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು — ಸಂಪಾದಕ.

ಓರ್ವ ವಕೀಲರ ಈಜುವ ಸಾಮರ್ಥ್ಯವು

ಕಳೆದ ತಾ॥ 31 ನೇ ಸೋಮವಾರ ಪ್ರಾತಃಕಾಲ ಸುಮಾರು 11 ಘಂಟೆಯ ಸಮಯದಲ್ಲಿ ಬಳ್ಳಾರಿ ವಕೀಲರಾದ ಮ॥ ಟಿ. ಎಚ್. ಎಂ. ಸದಾಕ್ಷರಯ್ಯನವರು, ಎಂ. ಎ., ಬಿ. ಎಲ್., ಇವರು ಕೋರ್ಟಿನ ಕೆಲಸಕ್ಕಾಗಿ ಹರಪನಹಳ್ಳಿ ಗ್ರಾಮಕ್ಕೆ ಹೋಗಿದ್ದಾಗ್ಗೆ ಅಲ್ಲಿ ತುಂಬಿ ತುಳುಕುತ್ತಲಿರುವ ಹಿರೇಕೆರೆಯಲ್ಲಿ ಈಜಾಡುತ್ತ ಒಂದು ಸುತ್ತು ತಿರಿಗಿ ಕೆರೆಯನ್ನು ಉದ್ದವಾಗಿಯೂ ಅಡ್ಡವಾಗಿಯೂ ದಾಟಿ ಪುನಃ ವಾಪಸು ತಿರಿಗಿ ತಮ್ಮ [illegible] ವನ್ನು ಸೇರಿದರು. ಸದರಿ ಕೆರೆಯು ಈ ವರ್ಷದ ಅದ್ಭುತ ಮಳೆಯಿಂದ ತುಂಬಿ ಸುಮಾರು 1 1/4 ಮೈಲು ಉದ್ದ 3/4 ಮೈಲು [illegible] ವಿಸ್ತರಿಸಿರುವ ನೀರುಳ್ಳದ್ದಾಗಿರುವದರಿಂದ ಆ ಅಲ್ಪಕಾಲವಾದ 2 ತಾಸುಗಳಲ್ಲಿ ಸದರಿ ವಕೀಲರು 5 ಮೈಲು ಪ್ರಮಾಣ [illegible] ಈಜಿ ತಮ್ಮ ಅಂಗಸಾಮರ್ಥ್ಯ ಧೈರ್ಯ ಸ್ಥೈರ್ಯ ಸಾಹಸಗಳನ್ನು ತೋರಿಸಿ [illegible] ಜನರಿಗೆ ಆಶ್ಚರ್ಯವನ್ನುಂಟುಮಾಡಿದರು. ಇವರು ಪ್ರತಿ [illegible]

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು | ಚಿಂತಿಸಬೇಡಿರಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗುವಿರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ.

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ. M. C. ೨೦

ಜರುಗುತ್ತಲಿರುವ ಅಖಿಲ ಹಿಂದು ದೇಶ ಕಲ್ಪತ್ತ ಈಜುವ ಪಂದೆಗೆ ಸೇರಿ ತಮ್ಮ ಸಾಹಸವನ್ನು ವ್ಯಕ್ತಪಡಿಸಿ ಈಜುವ ಪಂದ್ಯದಲ್ಲಿ ದಕ್ಷಿಣ ಹಿಂದು ದೇಶಕ್ಕೆ ಯಶಸ್ಸು ತರಲೆಂದು ಹಾರೈಸುತ್ತೇನೆ. ಓರ್ವ ಸುದ್ದಿಗಾರ.

31-32 ನೇ ಸಾಲಿನ ವಾರ್ಷಿಕೋತ್ಸವ

ಅರಕಲಗೂಡು ಟವರ್ ಆರ್ಯ ವೈಶ್ಯ ಕೋ-ಅಪರೇಟಿವ್ ಸೊಸೈಟಿ ಲಿಮಿಟೆಡ್ಡಿನ 1931-32 ನೇ ಸಾಲಿನ ವಾರ್ಷಿಕೋತ್ಸವವು ಮ|| ಅರಕಲಗೂಡು ಎ. ವಿ. ಸೂರ್ಯನಾರಾಯಣಶೆಟ್ಟರು ಅಂಡ್ ಬ್ರದರ್ಸ್‌ರವರ ಛತ್ರದಲ್ಲಿ ತಾ|| 1-11-32 ನೇ ಸಾಯಂಕಾಲ ಅತಿ ವಿಜೃಂಭಣೆಯಿಂದ ಪ್ರಾರಂಭವಾಯಿತು. ಪ್ರೆಸಿಡೆಂಟ್ ಮ|| ಎ. ವಿ. ಸೂರ್ಯನಾರಾಯಣಶೆಟ್ಟರವರ ಕೋರಿಕೆಯಂತೆ ತಾಲ್ಲೂಕು ಅಮಲ್ದಾರ್ ಮ|| ಸುಬ್ಬರಾವ್ ಬಿ. ಎ, ಯವರು ಅಗ್ರಾಸನವಹಿಸಿದ್ದರು. ಸ್ಥಳದ ಮಹನೀಯರುಗಳು ಅಲ್ಲದೆ ಹೊಳೇನರಸೀಪುರದ ಸರ್ಕಲ್ ಇನ್ಸ್‌ಪೆಕ್ಟರ್ ಮ|| ತಿರುನಾರಾಯಣೈಯಂಗಾರ್ರು ವ್ಯವಸಾಯದ ಇನ್ಸ್‌ಪೆಕ್ಟರ್ ಮ|| ನಾರಾಯಣಾಚಾರ್ರು ದಯಮಾಡಿದ್ದರು. 31-32 ನೇ ಸಾಲಿಗೆ ರೂ. 442-4-7 ಸೈ ನಿವ್ವಳಲಾಭದಲ್ಲಿ ಶೇಕಡಾ 7 ರಂತೆ ಬಡ್ಡಿ ಹಂಚಿಕೆ ಶೇಕಡಾ 15 ರಂತೆ ವಿದ್ಯಾಭ್ಯಾಸದ ಫಂಡು ಕೊಡಲು ಠರಾವಾಯಿತು. ಈ ಸೊಸೈಟಿಯ ಮೆಂಬರುಗಳೆಲ್ಲರೂ ಸೊಸೈಟಿಯ ವಿಚಾರದಲ್ಲಿ ಉತ್ಸಾಹಶಾಲಿಗಳಾಗಿ ಸೊಸೈಟಿ ಏಳಿಗೆಗೆ ಅನುಗುಣವಾದ ಸಬ್ಜೆಕ್ಟುಗಳನ್ನು ಚರ್ಚೆಗೆ ತಂದರು. ಚರ್ಚೆಗಳೆಲ್ಲ ಸಮಂಜಸವಾಗಿ ತೀರ್ಮಾನವಾದವು. ಮಧ್ಯೆ ಮಧ್ಯೆ ಹೆಚ್ಚು ಭಿನ್ನಾಭಿಪ್ರಾಯಗಳು ಬಂದಾಗ್ಯೂ ಪ್ರೆಸಿಡೆಂಟರಾದ ಮ|| ಎ. ವಿ. ಸೂರ್ಯನಾರಾಯಣಶೆಟ್ಟರವರ ಸಂಘದ ಕಾರ್ಯಗಳನ್ನು ನಡೆಸುವ ದೀರ್ಘಕಾಲದ ಅನುಭವದಿಂದ ಇವರು ಮೆಂಬರುಗಳಿಗೆ ಸಮಾಧಾನ ಕೊಟ್ಟದ್ದರಿಂದಲೂ ಮತ್ತು ಇಲಾಖಾ ಇನ್ಸ್‌ಪೆಕ್ಟರು ತಕ್ಕ ಸಲಹೆಯನ್ನು ಕೊಟ್ಟದ್ದರಿಂದಲೂ ಎಲ್ಲಾ ಸಬ್ಜೆಕ್ಟುಗಳೂ ಏಕವಾಕ್ಯತೆಯಿಂದಲೇ ತೀರ್ಮಾನವಾದವು. ಯಾವ ಗಲಭೆ ಇಲ್ಲದೆ ಜಾಗ್ರತೆಯಲ್ಲಿಯೇ ವಿಷಯಗಳೆಲ್ಲವೂ ಚರ್ಚಿಸಲ್ಪಟ್ಟು ಮೀಟಿಂಗು ಕೊನೆಸಾದ್ದಕ್ಕೆ ಡೈರೆಕ್ಟರವರು ತಮ್ಮ ಸಂತೋಷವನ್ನು ಸೂಚಿಸಿದರು. ಸಬ್ಜೆಕ್ಟುಗಳು ಕೊನೆಸಾದನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಮಾಡಿ ಡೈರೆಕ್ಟರವರಿಗು ಮತ್ತು ನೆರೆದಿದ್ದ ಮಹನೀಯರುಗಳಿಗು ವಂದನೆಗಳನ್ನು ಅರ್ಪಿಸಿ ಮೀಟಿಂಗು ಮುಕ್ತಾಯ ಮಾಡಲಾಯಿತು.

ಜ್ಞಾನಶೆಟ್ಟಿ ಉ. ನಾಗೈಶೆಟ್ಟಿ, ಸೆಕ್ರೆಟರಿ.

ನೆಲಮಂಗಲದ ಸುದ್ದಿಗಳು

ಸಮಸ್ತ ವಿದ್ವನ್ಮಂಡಲಿಯಲ್ಲಿ ವಿನಂತಿ.

ಸ್ಮಾರಕವು.

ಪ್ರಸಿದ್ಧ ಪತ್ರಿಕೆ.

ಅಧ್ಯಕ್ಷರು.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ. ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ವಿರಜ.

29 M. C

೧೯೩೨ ನೆಯ ಇಸವಿ ನವಂಬರ್ ತಾ|| ೧೪ ರಿಂದ ನವಂಬರ್ ತಾ|| ೨೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಕಾರ್ತಿಕ ಬಹುಳ ಪಾಡ್ಯಮಿಯಿಂದ ಕಾರ್ತಿಕ ಬಹುಳ ಸಪ್ತಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತುಲಾ ವೃಶ್ಚಿ
14	[1]ಸೋಮ	ಪಾಡ್ಯ	16-46	ಕೃತ್ತಿ	14-15	29
15	[2]ಮಂಗಳ	ಬಿದಿ	21-55	ರೋಹಿ	20-34	1
16	ಬುಧ	ತದಿ	26-33	ಮೃಗ	26-25	2
17	ಗುರು	ಚೌತಿ	30-4	ಆದ್ರ್ರಾ	31-15	3
18	ಶುಕ್ರ	ಪಂಚ	32-46	ಪುನ	35-14	4
19	[3]ಶನಿ	ಷಷ್ಠಿ	33-47	ಪುಷ್ಯ	37-37	5
20	ಭಾನು	ಸಪ್ತ	33-54	ಅಶ್ಲೇ	39-9	6

(1) ಕಾರ್ತಿಕ ಸೋಮವಾರ. (2) ನಂಜನಗೂಡಿನಲ್ಲಿ ಅಶ್ವಾರೋಹಣೋತ್ಸವ, ಮಳೆನಕ್ಷತ್ರ-ವಿಶಾಖೆ ೪ ಹಿಡಿದು. (3) ಮಳೆನಕ್ಷತ್ರ-ಅನೂರಾಧ ೧ ಹಿಡಿದು.

REG NO. M. 194.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸ್ ೧೯೩೨ ನೆಯ ಇಸವಿ ನವಂಬರ್ ತಾರೀಖು ೨೧ ನೆಯ ಸೋಮವಾರ [ಸಂಚಿಕೆ ೪೭

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore.

(Sd.) S. SHA MANNA,
Secretary, Insurance Committee.

[60—20]

ಚಿಕ್ಕಪೇಟೆ ಬೆಂಗಳೂರು ಸಿಟಿ

[60—3]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ವಿರಜಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಸ್ಪರ

ಡಾಕ್ಟರ್ ಜೀ. ಟೀ. ಯವರ

ಸುಗಂಧ ನಶ್ಯದ ಪುಡಿ.

(Registered Trade Mark)

ಸ್ತ್ರೀ ರೋಗ ನಿವಾರಣೇ ಚೂರ್ಣ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಪತ್ತಾ ಹೇಳುವ:—ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ವಿರಜ. ಎಂ. ಎಸ್. ಎಂ.

[60—13]

ಮೈಸೂರು ಸ್ಟಾರ್.

೧೯೩೨ನೇ ಇಸವಿ ನವಂಬರ್ ತಾ|| ೨೧ ನೆಯ ಸೋಮವಾರ.

THE ALLAHABAD SETTLEMENT

The situation in which the Unity Conference was convened under the presidency of that veteran statesman Mr. Vijiyaraghavachariar of South India, at Allahabad was not very hopeful. Every one had misgivings about the turn it may take at any time during the progress of the conference. The unavoidable departure of Maulana Shaukat Ali from the conference and the refusal of Sir Mohamed Yakub and his adherents to attend, rendered the situation critical. Under such auspices the conference began to work out an agreement satisfactory to the Hindus, Muslims and the Sikhs. It will be remembered that all previous attempts at Hindu–Muslim rapproachment had failed and obstacles in the way of amicable settlement were not few, especially in view of some of the leaders of both the communities having departed to attend the third R. T. C. The old adage "darkest hour is before the dawn" was true of the atmosphere in which the conference began to evolve a formula acceptable to the Hindus, Muslims and the Sikhs alike. There gathered threatening clouds of dead-lock, failure and disagreement during the discussion of some of the ticklish questions in the Committee of the Unity Conference. Thanks, to the patriotic efforts and untiring zeal of the aged President Mr. Vijayaraghavachariar, Pandit Malaviyaji, Abdul Kalam Azad and others, a satisfactory settlement has been reached on all the points affecting the relationship between the two communities on 17th evening, the full text of which is released to the press. It is most gratifying that the agreement is unanimous and the feelings of the leaders throughout this momentous session of eighteen days, have been cordial. It is really very happy that success has at last attended the strenuous efforts of the Uuity Committee and this, we believe, will ensure permanent cordiality, mutual good will and trust between the two great communities, thus laying a surer foundation for the growth of United India. This ensured other minor questions solve themselves and pave the way for the speedy emancipation of Indian Nation from the thraldom of foreign bureacracy. In this connection we are compelled to observe that immediate steps should be taken to get the agreement ratified by every section of the Nation. If it is adopted whole heartedly by All India, the Communal Award which had become an inevitable alternative in the absence of an agreement, will have to be modified in the light of the memorable agreement now reached. It is also necessary that the R. T. C. delegates of both the communities should take their stand on the agreement and fight out the salvation of their motherland. Coming now to the details of the settlement, the main provisions are:–firstly that adequate protection is guaranteed to the culture, language, script, education and the practice and personal laws of the communities in the constitution; secondly that provincial autonomy and responsibility in the centre—with safeguards for a period of ten years shown to be demonstrably in the interest of India; thirdly the powers of Provincial **Governments being scheduled exhaustively, questions of doubt to be settled by the Supreme Court; fourthly that the Army and the Judiciary to be open to all the communities selection being made on merit alone; fifthly that Judiciary must be separated from the Executive and the recruitment to the service being made by a Public Service Commission creating equal opportunities to all. Other important items of the decisions are the separation of Sind as a Governor's province with safeguards for the Hindus in that province, reservation of 51 percent of seats to the Muslims both in Bengal and Punjab and 32% in the Central Legislature. It is also agreed that the method of election should be through joint electorates, but for the next ten years the method of election being the modified form of Mohamed Ali's formula. All this, which had hitherto baffled the efforts of so many, is no small achievement of the Conference. In conclusion we heartily congratulate all those patriotic men who laboured hard in the cause of Unity, on the successful consummation of their efforts in solving India's most difficult and knotty problem.**

CONGRATULATIONS

We offer our hearty and sincere congratulations to Mr. Justice P. Mahadeviah on his elevation as Chief Justice of the Hihg Court of Mysore and to Mr. K. Shankaranarayana Rao on his being raised to the High Court as Puisne Judge. Mr. P. Mahadeviah has by dint of honest, conscientious and able work proved himself worthy of the high trust now reposed in him by His Highness the Maharaja of Mysore. It is not often that the highest Judicial office in the land is secured to a member of the unprivileged communities and we think that it is a matter in which the country as a whole feels justly proud. We have no doubt that Mr. Mahadeviah will prove a great success in the high office even as many of his predecessors have been. Mr. K. Shankaranarayana Rao, in fact deserved the present elevation much earlier. His bright academic career, his long experience at the Bar and his success as a District and Sessions Judge along with his innate courtesy all fit him supremely for the task he is called upon to discharge. We wish both these officers every success.

ಅಲಹಾಬಾದು ತೀರ್ಮಾನ

ಹಿಂದು ಮಹಮ್ಮದೀಯ ಮತ್ತು ಸಿಕ್ಕರುಗಳಲ್ಲಿ ಐಕಮತ್ಯವನ್ನುಂಟುಮಾಡಬೇಕೆಂಬುದ್ದೇಶದಿಂದ ಮೌಲಾನಾ ಶೌಕತಾಲಿಯವರೂ ಪಂಡಿತ ಮದನಮೋಹನ ಮಾಳವಿಯವರೂ ಬಹಳ ಪ್ರಯಾಸಪಟ್ಟು ಮೂರು ಮತದವರ ನಾಯಕರುಗಳ ಸಭೆಯನ್ನು ವಯೋವೃದ್ಧರೂ, ರಾಜಕೀಯ ವಿಚಾರದಲ್ಲಿ ನುರುಗಿದವರೂ ಆದ ಶಾಸ್ತ್ರದ ಮ|| ವಿಜಯರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ ಅಲಹಾಬಾದಿನೊಳಗೆ ಇದೇ ತಾ|| 3 ರಲ್ಲಿ ಕೂಡಿಸಿದರು. ಹಿಂದು ಮಹಮ್ಮದೀಯರ ಐಕಮತ್ಯವೂ ಸಂಯುಕ್ತ ನಿಯೋಜಕ ವರ್ಗದೇರ್ಪಾಟೂ ಭಾರತ ಸ್ವರಾಜ್ಯಸಾಧನೆಗೆ ಮುಖ್ಯವೆಂದು ಮನಗೊಂಡು ಈ ಸಖ್ಯ ಸಮ್ಮೇಳನಕ್ಕೆ ಪ್ರಯತ್ನಿಸಿದ ಮೌಲಾನಾ ಶೌಕತಾಲಿಯವರು ಪರದೇಶ ಪ್ರಯಾಣಮಾಡಿದುದರಿಂದಲೂ, ಸರ್ ಮಹಮ್ಮದ್ ಯಾಕೂಬ್‌ರವರೂ ಅವರ ಅನುಯಾಯಿಗಳೂ ಆಹ್ವಾನವನ್ನು ತಿರಸ್ಕರಿಸಿದುದರಿಂದಲೂ, ಕೆಲ ನಾಯಕರುಗಳು ಬಿಗಿಪಟ್ಟಿನಲ್ಲಿದ್ದುದರಿಂದಲೂ ಸಭೆಯ ಸದುದ್ದೇಶವು ನೆರವೇರಲಾರದೆಂಬ ಶಂಕೆಯುಂಟಾಗಿದ್ದಿತು. ಆದರೆ ಪಂಡಿತ ಮಾಳವ್ಯರವರು ಅಬ್ದುಲ್‌ಕಾಲಂ ಅಜಾದ್ ಮೊದಲಾದ ಪ್ರಮುಖರ ಮತ್ತು ಅಧ್ಯಕ್ಷರ ಕಾಲೋಚಿತವಾದ ಸಲಹೆಯಿಂದಲೂ ಪ್ರಯತ್ನವಿಶೇಷದಿಂದಲೂ ನಾಯಕ ಸಭಿಕರುಗಳು ಭಿನ್ನಾಭಿಪ್ರಾಯಗಳನ್ನು ಬಿಟ್ಟು ಐಕಮತ್ಯ ಪ್ರಯತ್ನಕ್ಕೊಪ್ಪಿಕೊಂಡುದರಮೇಲೆ ಪರಸ್ಪರ ಸಮಾಧಾನ ಕ್ರಮಗಳನ್ನು ಆಲೋಚಿಸಿ ನಿರ್ಧರಿಸಲು ಒಂದು ಕಮಿಟಿಯೇರ್ಪಡಿಸಲ್ಪಟ್ಟಿತು. ಈ ಕಮಿಟಿಯವರು 18 ದಿವಸಗಳವರೆಗೆ ಸಮಾವಿಷ್ಟರಾಗಿ ಸಮಸ್ತ ವಿಷಯಗಳನ್ನೂ ಚರ್ಚಿಸಿ ಹಿಂದು ಮಹಮ್ಮದೀಯ ಸಿಕ್ಕರುಗಳಿಗೆ ಒಪ್ಪಿತವಾಗಿರುವ ರೀತಿಯಲ್ಲಿ ತೀರ್ಮಾನಿಸಿ ತಮ್ಮ ಕಾರ್ಯವನ್ನು ತಾ|| 17 ರ ಸಾಯಂಕಾಲದಲ್ಲಿ ಮುಗಿಸಿದರು. ಈ ಕಮಿಟಿಯ ಸೆಕ್ರೆಟರಿಯವರಾದ ಪಂಡಿತ ಗೋವಿಂದ ಮಾಳವ್ಯರವರು "ಭಾರತದೇಶದಲ್ಲಿ ನಾನಾ ಮತದವರೊಳಗೆ ಕೆಲ ವರ್ಷಗಳಿಂದಲೂ ಭೇದಭಾವವು ಹುಟ್ಟಲು ಕಾರಣವಾಗಿದ್ದ ಎಲ್ಲ ವಿಷಯಗಳಲ್ಲೂ, ಐಕಮತ್ಯ ಕಮಿಟಿಯವರು 17 ದಿನಗಳವರೆಗೆ ಚರ್ಚೆ ನಡೆಸಿದಮೇಲೆ ಏಕಾಭಿಪ್ರಾಯವುಂಟಾದುದು ಮಹಾಸಂತೋಷಪ್ರದವು. ಈ ಸಂತೋಷಕ್ಕೆ ಪಾರವೇ ಇಲ್ಲ. ಐಕಮತ್ಯ ಕುದರಲು 160 ಘಂಟೆಗಳಕಾಲ ಚರ್ಚೆ ನಡೆದುದರ ಮೇಲಿಂದ ವಿಷಯಗಳು ಎಷ್ಟು ಕ್ಲಿಷ್ಟವಾಗಿದ್ದುವೆಂಬುದು ವ್ಯಕ್ತವಾಗುತ್ತದೆ. ಪಂಜಾಬು, ಬಂಗಾಳ, ಸಿಂಧು ರಾಷ್ಟ್ರಗಳ ವಿಷಯದಲ್ಲೂ, ಸಂಯುಕ್ತ ನಿಯೋಜಕವರ್ಗದ ವಿಷಯದಲ್ಲೂ ಸಭಿಕರು ಏಕಾಭಿಪ್ರಾಯಕ್ಕೆ ಬಂದರು. ತಮಗೆ ಕೊಡಲ್ಪಟ್ಟ ರಕ್ಷಣೆಗಳಿಂದ ಮೈನಾರಟಿಯವರು ತೃಪ್ತಿಪಟ್ಟುಕೊಂಡರು. ಅವರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದುದರಿಂದ ಮೆಜಾರಟಿಯವರಿಗೂ ಸಂತೋಷವಾಯಿತು" ಎಂದು ಪ್ರಕಟಿಸಿರುವರು.

ಇದುವರೆಗೆ ಮಾಡಲ್ಪಟ್ಟ ಪ್ರಯತ್ನಗಳಿಂದ ಸಾಧ್ಯವಾಗದಿದ್ದ ಹಿಂದು ಮಹಮ್ಮದೀಯರ ಐಕಮತ್ಯವು ಕುದುರಿದುದೂ, ಇದರಿಂದ ಭಾರತ ಮಂತ್ರಿಗಳ ಪ್ರಿಯತಮವಾದ ಪ್ರತ್ಯೇಕ ನಿಯೋಜಕ ವರ್ಗದೇರ್ಪಾಟು ಮಣ್ಣುಗೂಡಿದುದೂ, ಭಿನ್ನಮತದವರ ಭಿನ್ನಭಾವಗಳನ್ನು ಪ್ರಸ್ಫುಟಗೊಳಿಸಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುತ್ತಿದ್ದ ಬ್ರಿಟಿಷ್ ಪ್ರಭುತ್ವದವರ ಭೇದೋಪಾಯವು ಸಾಗದಂತಾದುದೂ, ಭಾರತ ಜಾತೀಯತಾ ಭಾವವು ಹುಟ್ಟಿ ವೃದ್ಧಿಯಾಗಿ ಬಾಧ್ಯತಾಯುತ ಪ್ರಭುತ್ವವೇರ್ಪಡಲವಕಾಶವಾದುದೂ ಮಹಾನಂದದಾಯಕವಾಗಿರುತ್ತದೆ. ಇಂತಹ ಸಂತೋಷಪ್ರದವಾದ ಐಕಮತ್ಯ ಸಮ್ಮೇಳನವನ್ನು ಕೂಡಿಸಿ ಜಯಪ್ರದವಾಗಿ ನಡೆಸಿದ ಮ|| ವಿಜಯ ರಾಘವಾಚಾರ್ಯ, ಮಾಳವ್ಯ ಪ್ರಭೃತಿಗಳನ್ನು ಅಭಿನಂದಿಸುತ್ತೇವೆ ಮತ್ತು ಈ ತೀರ್ಮಾನವು ಭಾರತೀಯರೆಲ್ಲರಿಂದಲೂ ಅನುಮೋದಿತವಾಗಿ ಬ್ರಿಟಿಷರಿಗೆ ವಿಸ್ಮಯವನ್ನೂ ಕಳವಳವನ್ನೂ ಉಂಟುಮಾಡುವುದೆಂದು ನಿರೀಕ್ಷಿಸುತ್ತೇವೆ.

ರೌಂಡುಟೇಬಲು ಸಭಾರಂಭ

ಮೂರನೆಯ ರೌಂಡುಟೇಬಲು ಸಭೆಯು ಕಳೆದ ಗುರುವಾರ ಲಂಡನ್ ಪಟ್ಟಣದ ಪಾರ್ಲಿಮೆಂಟು ಭವನದೊಳಗೆ ಪ್ರಧಾನಾಮಾತ್ಯರಾದ ಮೆಕ್ಡೋನಾಲ್ಡರವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಆ ದಿವಸ ಅಧ್ಯಕ್ಷರು ಉಪಚಾರೋಕ್ತಿಯಿಂದ ಪ್ರತಿನಿಧಿಗಳನ್ನು ಸುಸ್ವಾಗತಿಸಿ "ಸಭೆಯಲ್ಲಿ ಜರುಗುವ ಕಾರ್ಯಗಳಿಂದ ಎಲ್ಲರಿಗೂ ಸಂತೃಪ್ತಿಯುಂಟಾಗುವುದೆಂದು ನಾನು ನಂಬುತ್ತೇನೆ. ನಮ್ಮಗಳ ಪರಸ್ಪರಾಭಿಪ್ರಾಯಗಳೆಲ್ಲ ನಮ್ಮೆಲ್ಲರಿಗೂ ಚೆನ್ನಾಗಿ ತಿಳಿದಿರುವುದರಿಂದ ಕಾಲಹರಣವಾಗದಂತೆ ಮುಖ್ಯ ವಿಚಾರಗಳನ್ನು ಕುರಿತು ಮಾತ್ರ ನಾವು ಚರ್ಚಿಸಬೇಕಾಗಿದೆ. ಕ್ರಿಸ್ತಮಸ್ ಹಬ್ಬದೊಳಗೆ ಈ ಸಭೆಯನ್ನು ಮುಗಿಸಲು ಬೇಕಾದಷ್ಟು ಅವಕಾಶವಿರುವುದು. ನಾನು ಪ್ರತಿದಿವಸವೂ ಸಭೆಗೆ ಬರಲವಕಾಶವಿಲ್ಲದಿರುವುದರಿಂದ ಪ್ರಭುತ್ವ ಪ್ರತಿನಿಧಿಗಳು ಈ ಸಭೆಯಲ್ಲಿ ತಿಳಿಸುವ ಅಭಿಪ್ರಾಯಗಳನ್ನೆಲ್ಲ ನಾನೂ ಮಂತ್ರಿವರ್ಗದವರೂ ಸೇರಿ ನಿರ್ಣಯಿಸದೆವೆಂದೇ ನೀವು ನಂಬತಕ್ಕದು. ಇದು ನೆರವೇರಲು ದೊರತನದವರು ಸರ್ವವಿಧದಲ್ಲೂ ಸಹಾಯಮಾಡುವರು" ಎಂದು ಭಾಷಣ ಮಾಡಿದರು. ಅನಂತರ ಹಿಜ್‌ಹೈನಸ್ ಆಗಾಖಾನರವರು ಪ್ರತಿನಿಧಿಗಳ ಪರವಾಗಿ ಅಧ್ಯಕ್ಷ ಮಂತ್ರಿಗಳನ್ನು ವಂದಿಸಿ "ಹೇಗಾದರೂ ವಿಜಯವನ್ನು ಹೊಂದಬೇಕೆಂಬ ದೃಢಸಂಕಲ್ಪದಿಂದ ಈ ಸಭೆಗೆ ಬಂದಿರುತ್ತೇನೆ. ಈ ಸಭಾಕಾರ್ಯವು ಕ್ರಿಸ್ತಮಸ್ ಹಬ್ಬದೊಳಗೆ ಪೂರೈಸಿ ಭಾರತೀಯರಲ್ಲಿ ನ್ಯಾಯವಾದ ಕೋರಿಕೆಯುಳ್ಳವರಿಗೆ ಸಂತೃಪ್ತಿಕರವಾಗಿ ರಾಜ್ಯಾಂಗವಿಧಾನವು ನಿರ್ಮಿಸಲ್ಪಡುವುದೆಂದು ನಂಬುತ್ತೇನೆ" ಎಂದು ಹೇಳಿದರು. ಈವರೆಗೆ ಸಂಪೂರ್ಣವಾಗಿ ಚರ್ಚಿಸಲ್ಪಡದ ವಿಷಯಗಳುಮಾತ್ರ ಚರ್ಚಿಸಲ್ಪಡುವವು. ಡಿಸಂಬರ್ ತಾ|| 20 ರೊಳಗೆ ಮುಗಿದರೆ ರಾಜ್ಯಾಂಗ ವಿಧಾನವನ್ನು ದೊರತನದವರು ಸಿದ್ಧಪಡಿಸುವರು. ಇದನ್ನು ಪಾರ್ಲಿಮೆಂಟಿನಲ್ಲಿ ಪರ್ಯಾಲೋಚಿಸಲನುಕೂಲವಾಗುವುದು. ಒಂದೊಂದು ವಿಷಯವನ್ನು ಒಂದೊಂದು ದಿವಸ ಚರ್ಚಿಸಲು ಏರ್ಪಡಿಸಬೇಕು. ಇತ್ಯಾದಿಯಾಗಿ ಭಾರತ ಮಂತ್ರಿಯವರು ಉಪನ್ಯಾಸಮಾಡಿದರು. ಕಾರ್ಯಕ್ರಮವು:—(1) ಲೋಧಿಯನ್ ಕಮಿಟಿ ವರದಿ, ಚುನಾವಣೆಯ ಪದ್ಧತಿ, ಎರಡು ಫೆಡರಲ್ ಶಾಸನಸಭೆಗಳ ಮೆಂಬರುಗಳ ಸಂಖ್ಯೆ. (2) ಫೆಡರಲ್ ಪ್ರಭುತ್ವಕ್ಕೂ ರಾಷ್ಟ್ರೀಯ ಪ್ರಭುತ್ವಕ್ಕೂ ಪರಿಪಾಲನ ವಿಚಾರದಲ್ಲಿರಬೇಕಾದ ಸಂಬಂಧ. (3) ಗೌರ್ನರ್ ಜನರಲ್ಲಿಗೂ ಗೌರ್ನರುಗಳಿಗೂ ಪ್ರತ್ಯೇಕಾಧಿಕಾರ. (4) ಆರ್ಥಿಕ ಮತ್ತು ವಾಣಿಜ್ಯ ವಿಷಯಗಳಲ್ಲಿ ರಕ್ಷಣೆ. (5) ದೇಶರಕ್ಷಣೆಗೆ ಸಂಬಂಧಪಟ್ಟ ಆರ್ಥಿಕ ವಿಚಾರ. (6) ಫೆಡರಲ್ ಆರ್ಥಿಕ ಸಂಸ್ಥಾನಗಳ ಸಂಘದ ವರದಿ, ಫೆಡರಲ್ ಆರ್ಥಿಕ ಸಂಘದ ವರದಿ. (7) ಮುಖ್ಯ ಹಕ್ಕುಗಳು. (8) ಭಾರತ ಶಾಸನ ಸಭೆಗಳಿಗೂ ಪಾರ್ಲಿಮೆಂಟಿಗೂ ಇರುವ ಅಧಿಕಾರಗಳು. (9) ಸಂಸ್ಥಾನಾಧಿಪತಿಗಳ ರಾಜ್ಯಾಧಿಕಾರ. ಈ ವಿಚಾರಗಳು ಪರ್ಯಾಲೋಚಿಸಲ್ಪಟ್ಟು ಕಡೆಯಲ್ಲಿ ಅಂಗೀಕರಿಸಲ್ಪಡುವುವು.

ಅಭಿನಂದನ

ಮೈಸೂರು ಹೈಕೋರ್ಟು ಜಡ್ಜಿಯವರಾದ ಮ|| ಪಿ. ಮಹಾದೇವಯ್ಯ, ಬಿ.ಎ., ಬಿ.ಎಲ್., ರವರು ಅಫಿಷಿಯೇಟಿಂಗ್ ಚೀಫ್ ಜಡ್ಜಿಯವರಾಗಿಯೂ, ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರಾಗಿದ್ದ ಮ|| ಕೆ. ಶಂಕರನಾರಾಯಣರಾವ್, ಬಿ.ಎ., ಬಿ.ಎಲ್., ರವರು ಚೀಫ್ ಕೋರ್ಟಿನ ಆಕ್ಟಿಂಗ್ ಜಡ್ಜಿಯವರಾಗಿಯೂ ಶ್ರೀಮನ್ಮಹಾರಾಜರವರಿಂದ ನಿಯಮಿಸಲ್ಪಟ್ಟಿರುವುದಕ್ಕಾಗಿ ಈ ಉಭಯ ನ್ಯಾಯಾಧೀಶರುಗಳನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ ಮತ್ತು ಹಿಂದುಳಿದ ವರ್ಗದವರಿಗೆ ಅಲಭ್ಯವಾಗಿದ್ದ ಪ್ರಧಾನ ನ್ಯಾಯಮೂರ್ತಿ ಸ್ಥಾನವನ್ನು ಈಗ ಅನುಗ್ರಹಿಸಿದುದಕ್ಕಾಗಿ ಪ್ರಭುವರ್ಯರನ್ನು ವಂದಿಸುತ್ತೇವೆ. ಈ ನ್ಯಾಯಮೂರ್ತಿಗಳ ನ್ಯಾಯಶಾಸ್ತ್ರ ನಿಪುಣತೆಯೂ, ಕಾರ್ಯಾಸಕ್ತಿಯೂ, ನಿಸ್ಪೃಹತೆಯೂ ನಿಷ್ಪಕ್ಷಪಾತತೆಯೂ ಉನ್ನತಿಗೆ ಕಾರಣಗಳಾಗಿರುತ್ತವೆ. ಈ ಉಭಯರಿಗೂ ದೀರ್ಘಾಯುರಾರೋಗ್ಯಾಭಿವೃದ್ಧಿಯನ್ನು ಪರಮೇಶ್ವರನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಮೆಕ್ಡೋನಾಲ್ಡರವರ ರಾಜೀನಾಮೆ

ಬ್ರಿಟನ್ನಿನ ಮುಖ್ಯ ಅಮಾತ್ಯರಾದ ಮೆಕ್ಡೋನಾಲ್ಡರವರು ಕಣ್ಬೇನೆಯಿಂದ ಬಹಳ ತಾಪತ್ರಯಪಡುತ್ತಿದ್ದುದರ ಮೇಲೆ ಚಿಕಿತ್ಸೆಯನ್ನು ಮಾಡಿಸಿಕೊಂಡು ಉದ್ಯೋಗವನ್ನು ನಡೆಸುತ್ತಿರುವರಾದರೂ ಕಾರ್ಯಭಾರದಿಂದಲೋ, ದೇಹಾಲಸ್ಯದಿಂದಲೋ ಉದ್ಯೋಗದಿಂದ ನಿವೃತ್ತರಾಗುವರೆಂದು ಕೆಲ ಆಂಗ್ಲಪತ್ರಿಕೆಗಳಲ್ಲಿ ಪ್ರಕಟವಾಗಿದ್ದುದು ನಿರಾಧಾರವೆಂದು ರೂಟರ್ ವಾರ್ತೆಯಿಂದ ತಿಳಿಯಬರುತ್ತದೆ.

ರಾಧಾ ದೇವಿಯವರ ಮರಣ

ಕೀರ್ತಿಶೇಷರಾದ ಲಾಲಾಲಜಪತರಾಯರವರ ಧರ್ಮಪತ್ನಿ ಶ್ರೀಮತಿ ರಾಧಾದೇವಿಯವರು ಜ್ವರರೋಗ ಪೀಡಿತರಾಗಿದ್ದು ಕಳೆದ ಗುರುವಾರ ಪರಲೋಕಯಾತ್ರೆಯನ್ನು ಮಾಡಿದರು. ಇವರಿಗೆ 64 ವರ್ಷವಯಸ್ಸಾಗಿದ್ದಿತು. ಇವರು ತಮ್ಮ ಪತಿಯವರ ವಾರ್ಷಿಕ ಸ್ಮರಣೋತ್ಸವ ದಿವಸ ಪತಿ ಸಾನ್ನಿಧ್ಯವನ್ನು ಹೊಂದಿದುದು ಜನರಿಗೆ ಆಶ್ಚರ್ಯವನ್ನುಂಟುಮಾಡಿರುತ್ತದೆ. ಇವರ ಶವಸಂಸ್ಕಾರವನ್ನು ಊರ ಜನರು ಬಹಳ ಭಕ್ತಿವೈಭವಗಳಿಂದ ನಡಿಸಿದರು.

ಲಾರ್ಡ್ ಲಾಯಿಡ್‌ರವರ ಶಂಕೆ

ಭಾರತ ದೇಶಕ್ಕೆ ಸ್ವಾತಂತ್ರ್ಯವು ಕೊಡಲ್ಪಟ್ಟಲ್ಲಿ ಪ್ರಜೆಗಳು ದುಃಖಸಾಗರದಲ್ಲಿ ಮುಳಗಬೇಕಾಗುತ್ತದೆಂದೂ, ಫೆಡರೇಷನ್ನಿನಿಂದ ಕೆಲ ದೇಶೀಯ ಸಂಸ್ಥಾನಾಧಿಪತಿಗಳ ನಡವಳಿಕೆಯು ಮತ್ತಷ್ಟು ಕಠಿಣವಾಗುತ್ತದೆಂದೂ ಅಹೋರಾತ್ರಿ ಭಾರತೀಯರ ಅಶ್ರೇಯಸ್ಸನ್ನೇ ಕೋರುತ್ತಿರುವ ಚರ್ಚಿಲ್‌ರವರ ಪಕ್ಷಕ್ಕೆ ಸೇರಿದ ಲಾಯಿಡ್‌ರವರು ಶಂಕಿಸುತ್ತಾರೆ. ಇಂತಹ ಹಿತ ಶತ್ರುಗಳ ಸಂಖ್ಯೆಯು ಹೆಚ್ಚಾಗಿರುವಾಗ್ಗೆ ಭಾರತೀಯರ ಇಷ್ಟಾರ್ಥಸಿದ್ಧಿಯು ಎಷ್ಟರಮಟ್ಟಿಗಾಗಬಹುದು!

ವಾಟ್ಸನ್‌ರವರನ್ನು ಕೊಲ್ಲಲೆತ್ನಿಸಿದವರಿಗೆ ಶಿಕ್ಷೆ

ಸರ್ ವಾಟ್ಸನ್‌ರವರನ್ನು ಕೊಲ್ಲಲು ಪ್ರಯತ್ನಿಸಿದ್ದ 6 ಮಂದಿಗಳ ವಿಚಾರಣೆಯಲ್ಲಿ ಸುನೀಲು ಚಟರ್ಜಿಗೆ ದ್ವೀಪಾಂತರವಾಸ ಶಿಕ್ಷೆಯೂ, ನೋದರಂಜನ ಬೋಸನಿಗೆ 10 ವರ್ಷ, ಅಮರಚಂದ್ರ ಘೋಷ್‌ನಿಗೆ 2 ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆಯೂ ಆಲಿಪುರದ ಪ್ರತ್ಯೇಕ ಜಡ್ಜಿ ಟಿ. ಎಚ್. ಎಲ್ಲಿಸನ್‌ರವರಿಂದ ವಿಧಿಸಲ್ಪಟ್ಟು ಅವನಿದತ್ತ, ಪರ್ಣಕುಮಾರದಾಸ, ವಿನಾಕ್ಷ ಭಕ್ಷಿ ಇವರುಗಳು ಬಿಡಲ್ಪಟ್ಟರು. ಅಪರಾಧಿಗಳು ಶಿಕ್ಷೆಯನ್ನು ಬಹಳ ಉಲ್ಲಾಸದಿಂದ ಅಂಗೀಕರಿಸಿದರು.

ಸೌ|| ಕಮಲಾ ನೆಹರುಯವರ ಅಸ್ವಸ್ಥತೆ

ಪಂಡಿತ ಜವಹಾರಿಲಾಲರ ಪತ್ನಿ ಸೌ|| ಕಮಲ ನೆಹರುಯವರಿಗೆ ಹೃದ್ರೋಗವು ಪ್ರಬಲವಾಗಿರುವುದರಿಂದ ಕಳೆದ ಮಂಗಳವಾರ ಅವರು ಬಹಳವಾಗಿ ಬಾಧೆಪಟ್ಟರು. ಆದರಮೇಲೆ ಡಾಕ್ಟರುಗಳಾದ ಅಟಲ್, ಬಿ. ಸಿ. ರಾಯಿ, ಜೋರಜಬಿಹಾರಿ ಇವರುಗಳು ಆಕೆಯವರನ್ನು ಕಲಕತ್ತಾಕ್ಕೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಬೇಕೆಂದು ಅಭಿಪ್ರಾಯಪಟ್ಟುದರ ಮೇಲೆ ಆಕೆಯವರು ತಮ್ಮ ತಾಯಿ ಮತ್ತು ಡಾಕ್ಟರ್ ಅಟಲ್‌ರವರೊಡನೆ ಕಲಕತ್ತಾಕ್ಕೆ ಹೋಗಿರುವರು. ಕಲಕತ್ತಾದಲ್ಲೂ ಹೃದ್ರೋಗವನ್ನು ಪರೀಕ್ಷಿಸಲು ತಕ್ಕ ಸಲಕರಣೆಗಳಿಲ್ಲವಂತೆ.

ತುಫಾನಿನಿಂದ ಪಟ್ಟಣ ನಾಶವಾಯಿತು

ದಕ್ಷಿಣ ಅಮೇರಿಕೆಯ ಪಶ್ಚಿಮಕ್ಕೆ ಪೆಸಿಫಿಕ್ ಸಾಗರದಲ್ಲಿರುವ ಸಾಂತಕ್ರೂಜ್ ದ್ವೀಪದಲ್ಲಿ ತುಫಾನೆದ್ದು 2500 ಜನರು ಹತರಾದರು ಮತ್ತು ಪಟ್ಟಣವು ನಾಶವಾಗಿ ವಾಸಕ್ಕೆ ಯೋಗ್ಯವಾಗಿಲ್ಲದಿರುವುದರಿಂದ ಪುನಃ ನಿರ್ಮಿಸಲ್ಪಡಬೇಕಾಗಿದೆ. ಉಳಿದಿರುವ ಜನರ ಆರೋಗ್ಯರಕ್ಷಣೆಗಾಗಿ ಸತ್ತವರನ್ನು ಸುಡಬೇಕಾಗಿಬಂದಿತು. ಜಮೈಕಾದಿಂದ 150 ಮೈಲುಗಳ ದೂರದಲ್ಲಿರುವ ಬ್ರಿಟಿಷರ ಲಿಟ್ಲ್‌ಕೇಮಾನ್ ದ್ವೀಪವು ಬಿರುಗಾಳಿಯಿಂದ ನಾಶವಾಗಿ 60 ಮಂದಿ ಸತ್ತರು ಅನೇಕರು ಅಪಾಯವನ್ನು ಹೊಂದಿರುವರು. ಈ ಬಿರುಗಾಳಿಯಿಂದಲೂ ತುಫಾನಿನಿಂದಲೂ ಕಬ್ಬಿನ ಬೆಳೆಯು ಶೇಕಡ 40 ರಂತೆ ನಾಶವಾಗಿ 50 ಲಕ್ಷ ಡಾಲರ್ ಹಣವು ನಷ್ಟವಾಗಿರುತ್ತದೆ.

ಐರ್ಲೆಂಡು ರೈತರಿಗೆ ಡಿವೆಲಿರಾಯವರ ವಾಗ್ದಾನ

ಭೂಗಂದಾಯವನ್ನು ಐರ್ಲೆಂಡು ಕೊಡುವುದು ನ್ಯಾಯವಲ್ಲವೆಂದೂ, ಈ ವಿಚಾರವನ್ನು ನಿರ್ಣಯಿಸಲಿಕ್ಕಾಗಿ ಒಂದು ನಿಷ್ಪಕ್ಷಪಾತವಾದ ಕಮಿಟಿಯೇರ್ಪಡಿಸಬೇಕೆಂದೂ ಡಿವೆಲಿರಾಯವರು ಹಟಹಿಡಿದು ಹೋರಾಡುತ್ತಿರುವುದರಮೇಲೆ, ಬ್ರಿಟಿಷಿನವರು ಆಗ್ರಹಗೊಂಡು ಐರ್ಲೆಂಡಿನಿಂದ ತಮ್ಮಲ್ಲಿಗೆ ಬರುವ ಪದಾರ್ಥಗಳ ಮೇಲೆ ಪ್ರತ್ಯೇಕ ಸುಂಕವನ್ನು ವಿಧಿಸಿರುತ್ತಾರೆ. ಇದರಿಂದ ಐರ್ಲೆಂಡಿನ ರೈತರುಗಳಿಗೆ ಬಹಳ ಕಷ್ಟಪ್ರಾಪ್ತವಾದುದರಮೇಲೆ ಕಂದಾಯವನ್ನು ಕೊಡಲಾಗುವುದಿಲ್ಲವೆಂದು ರೈತರು ಮೊರೆಯಿಟ್ಟುಕೊಳ್ಳಲಾಗಿ, ಡಿವೆಲಿರಾಯವರು ಕನಿಕರಪಟ್ಟು ರೈತರು ಕೊಡಬೇಕಾದ ಕಂದಾಯದಲ್ಲಿ ಬಹುಭಾಗವನ್ನು ಬಿಟ್ಟುಕೊಡುವುದಾಗಿ ವಾಗ್ದಾನ ಮಾಡಿದರು. ಇದರಿಂದ ರೈತರುಗಳಿಗೆ ಉಪಶಾಂತಿಯಾಗಿ ಸಂತೋಷವುಂಟಾಗಿರುವುದು.

ಚಂಡಾಲರಾರು ?

"ನಿಮ್ಮ ಜಾತಿಯವರು ದೇವಾಲಯದೊಳಕ್ಕೆ ಬರಲು ಆಗಮ ಸೂತ್ರಗಳು ಅಂಗೀಕರಿಸುವುದಿಲ್ಲವೆಂಬ ವಿಷಯವನ್ನು ಖಂಡಿಸಿ ಪೂರ್ವ ಪಕ್ಷವನ್ನು ಮಾಡಲು ಇಲ್ಲಿಯ ಸಾಧಾರಣ ಆರ್ಯ ಸಮಾಜದ ಪರವಾಗಿ ನಾನು ವಾದಿಸುವೆನು. ಈಗಿರುವ ನಿಮ್ಮ ಜಾತಿಯವರು ನಮ್ಮ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವ ಚಂಡಾಲರಲ್ಲವೆಂದೂ, ಇವರೆಲ್ಲರೂ ನಾಮ ಸೈನಿಕ ಕ್ಷತ್ರಿಯರೆಂದೂ ನಾನು ಸಿದ್ಧಾಂತಪಡಿಸುತ್ತೇನೆ. ಆದುದರಿಂದ ಇವರನ್ನು ದೇವಾಲಯಗಳಿಗೆ ಬರಗೊಡದಿರುವುದರಿಂದುಂಟಾಗಿರುವ ನಷ್ಟ ಪರಿಹಾರಕ್ಕಾಗಿ ನಿಮ್ಮ ಮೇಲೆ ದಾವಾಮಾಡುತ್ತೇನೆ" ಎಂದು ಸಿಕಂದ್ರಾಬಾದಿನ ಸಾಧಾರಣ ಆರ್ಯ ಸಮಾಜದ ಕಾರ್ಯದರ್ಶಿ ಸಾದಕ ಸಿದ್ಧಾಂತಾನಂದ ಎಂದು ಹೆಸರಿಟ್ಟುಕೊಂಡಿರುವ ಬಾಜೇ ಕೃಷ್ಣರಾವ್, ಬಿ. ಎ., ಬಿ. ಎಲ್., ರವರು ಕಲ್ಲಿಕೋಟೆಯ ಜಾಮರಿನ್ ರವರಿಗೆ ತಂತಿ ಮೂಲಕ ತಿಳಿಸಿರುತ್ತಾರೆ.

ಬೊಂಬಾಯಿನಲ್ಲಿ ಬೆಂಕಿಯ ಅನಾಹುತ

ಬೊಂಬಾಯಿ ಪಟ್ಟಣದ ಕಾಲ್ಬಾದೇವಿ ರೋಡಿನಲ್ಲಿ ಎರಡಂತಸ್ತಿನ ಒಂದು ಮನೆಯ ಕೆಳಗಡೆಯಂಗಡಿಗೆ ಬೆಂಕಿಬಿದ್ದು ಮನೆಯು ಹೊತ್ತಿಕೊಂಡಿತು ಒಳಗಿದ್ದ ಜನರು ಹೊಗೆಯನ್ನು ಕಂಡಕೂಡಲೆ ಹೊರಕ್ಕೆ ಓಡಿಹೋದರು. ಆದರೆ ಒಬ್ಬ ಹೆಂಗುಸು ಮಾತ್ರ ಸಾವಕಾಶಮಾಡಲಾಗಿ ನಾಲ್ಕು ದಿಕ್ಕಿನಿಂದಲೂ ಜ್ವಾಲೆಯು ವ್ಯಾಪಿಸಿಕೊಂಡು ಬಂದುದರ ಮೇಲೆ ತಪ್ಪಿಸಿಕೊಂಡು ಹೋಗಲೆತ್ನವಿಲ್ಲದೆ ಜ್ವಾಲೆಗೆ ಸಿಕ್ಕಿ ಮೃತಳಾದಳು. 7 ಫೈರು ಇಂಜನ್ನುಗಳು ಬಂದು ಅರ್ಧ ಘಂಟೆಯವರೆಗೆ ನೀರನ್ನು ಹುಯಿದುದರ ಮೇಲೆ ಜ್ವಾಲೆಯು ಶಮನವಾಯಿತು. ಮಹಡಿಯ ಕೆಲಭಾಗವು ಸುಟ್ಟುಹೋಯಿತು. ಇದರಿಂದ 50,000 ರೂ. ವರೆಗೆ ನಷ್ಟವಾಗಿರಬೇಕೆಂದೂಹಿಸಲ್ಪಟ್ಟಿದೆ. ಬೆಂಕಿಯನ್ನಾರಿಸುವ ಯಂತ್ರದ ಕೆಲಸಗಾರರಲ್ಲೊಬ್ಬನು ಪ್ರಮಾದದಿಂದ ಸತ್ತುಹೋದನು. ಮನೆಯಲ್ಲಿದ್ದವರನ್ನು ಸಾಗಿಸಲಿಕ್ಕೆ ಬರುತ್ತಿದ್ದ ಬಂಡಿಯು ನೀರನ್ನಾರಿಸುವ ಯಂತ್ರಕ್ಕೆ ತಾಕು ಬಡಿದುದರಿಂದ ಒಬ್ಬ ಯಂತ್ರದವನು ಸತ್ತನು. ಒಟ್ಟು 3 ಮರಣಗಳಾದವು.

ಜಪಾನಿನಲ್ಲಿ ಜಲಪ್ರಳಯ

ಜಪಾನ್ ದೇಶದ ರಾಜಧಾನಿಯಾದ ಟೋಕಿಯೋ ಪಟ್ಟಣದಲ್ಲಿ ವಿಪರೀತ ಮಳೆಸುರಿದು ಸಮುದ್ರವು ಉಕ್ಕಿ 100 ಮಂದಿ ಸತ್ತರು ಮತ್ತು 40,000 ಮನೆಗಳು ನಷ್ಟವಾದುವು. ಅನೇಕ ಕಡೆ ಬೆಟ್ಟಗಳ ಮೇಲಿಂದ ಪಾಷಾಣಗಳು ಜಾರಿಬಿದ್ದಿರುತ್ತವೆ. ಸಮುದ್ರ ತೀರದಲ್ಲಿರುವ ಎಲ್ಲ ಗ್ರಾಮಗಳಲ್ಲೂ ಬಹಳ ನಷ್ಟ ಸಂಭವಿಸಿರುವುದರಿಂದ ಜನರು ಭಯಗ್ರಸ್ತರಾಗಿರುತ್ತಾರೆ. ಈ ಪ್ರಳಯವು ಟೋಕಿಯೋದಲ್ಲಿ ಮಾತ್ರವಲ್ಲದೆ ಸಮುದ್ರ ತೀರದಲ್ಲೆಲ್ಲ ಸಂಭವಿಸಿರುವುದು. ತಂತಿಯ ಕಂಭಗಳು ಬಿದ್ದುಹೋಗಿರುತ್ತವೆ. 2000 ಟನ್ನು ತೂಕವಿರುವ ಸ್ಟೀಮರು ತುಫಾನಿನ ಹೊಡತದಿಂದ ಒಂದು ಬಂಡೆಗೆ ತಾಕಲಾಗಿ ಆದರೊಳಗಿದ್ದ 30 ಮಂದಿ ನಾವಿಕರಲ್ಲಿ 21 ಮಂದಿ ಮೃತರಾದರು, ಉಳಿದ 9 ಮಂದಿ ಸಂರಕ್ಷಿಸಲ್ಪಟ್ಟರು. ಟೋಕಿಯೊ ಪಟ್ಟಣಕ್ಕೆ ಸೇರಿದ ಒಂದು ಗ್ರಾಮವು ಬೆಂಕಿಯಿಂದ ಹೊತ್ತಿಕೊಳ್ಳಲಾಗಿ ಅದರಲ್ಲಿದ್ದ 800 ಮನೆಗಳು ನಾಶವಾದುವು. ಟೋಕಿಯೊದಲ್ಲಿ ಜಲಪ್ರಳಯವಾಗಿರಲಿಲ್ಲವೆಂದೂ, ಇಂತಹ ಪ್ರಳಯವು ಜಪಾನಿನಲ್ಲೇ 1917 ರಿಂದೀಚೆಗೆ ಆಗಿರಲಿಲ್ಲನೆಂದೂ, ಯೊಕೋಹಾಮಕ್ಕೆ ಬಹಳ ನಷ್ಟ ಸಂಭವಿಸಿರುವುದೆಂದೂ, 35,000 ಜನರು ವಾಸಕ್ಕೆ ಮನೆಯಿಲ್ಲದೆ ಕಷ್ಟಪಡುತ್ತಿರುವರೆಂದೂ, ಒಟ್ಟಿನಲ್ಲಿ ದೇಶಕ್ಕೆ ವಿಶೇಷ ನಷ್ಟವಾಗಿರಬೇಕೆಂದೂ ತಿಳಿಯಬರುತ್ತದೆ.

ಕೈ|| ದೊರಸ್ವಾಮಿ ಅಯ್ಯರ್‌ರವರ ಪ್ರಶಂಸೆ

ಮೈಸೂರು ಹೈಕೋರ್ಟು ಪ್ರಧಾನ ನ್ಯಾಯಮೂರ್ತಿ ರಾಜಧರ್ಮಪ್ರವೀಣ ಮ|| ಸಿ. ಎಸ್. ದೊರಸ್ವಾಮಿ ಅಯ್ಯರ್ ಬಿ.ಎ., ಬಿ.ಎಲ್., ರವರು 1932ನೆಯ ನವಂಬರ್ ತಾ|| 12 ನೇ ಶನಿವಾರ ಸಾಯಂಕಾಲ ಆಕಸ್ಮಾತ್ ವಿಧಿವಶರಾದುದರಿಂದುಂಟಾದ ನಷ್ಟವು ಪ್ರಭುತ್ವದ ಕಡತದಲ್ಲಿ ಈ ಪ್ರಕಾರವಾಗಿ ಉಲ್ಲೇಖಿಸಲ್ಪಡಬೇಕೆಂದು ಶ್ರೀಮನ್ಮಹಾರಾಜರವರ ಅಭಿಮತವಾಗಿರುತ್ತದೆ.

ಕೈ|| ಮ|| ದೊರಸ್ವಾಮಿ ಅಯ್ಯರ್‌ರವರು ಮೈಸೂರು ಚೀಫ್ ಕೋರ್ಟು ಅಡ್ವೊಕೇಟರಾಗಿದ್ದು ಕೆಲ ವರ್ಷಗಳಕಾಲ ವಕೀಲಿಯನ್ನು ಸಫಲವಾಗಿ ನಡೆಸಿದುದರಮೇಲೆ 1910 ನೆಯ ಫೆಬ್ರವರಿಯಲ್ಲಿ ಬೆಂಗಳೂರು ಡಿವಿಜನ್ ಪಬ್ಲಿಕ್ ಪ್ರಾಸಿಕ್ಯೂಟರಾಗಿಯೂ, 1 ವರ್ಷಕಾಲಾನಂತರ ಗೌರ್ನಮೆಂಟ್ ಅಡ್ವೊಕೇಟರಾಗಿಯೂ ನಿಯಮಿಸಲ್ಪಟ್ಟು ಆ ಉದ್ಯೋಗವನ್ನು 9 ವರ್ಷಗಳವರೆಗೆ ಬಹಳ ಸಮರ್ಥತೆಯಿಂದ ನಿರ್ವಹಿಸಿದರು. 1919 ನೆಯ ಜನವರಿಯಲ್ಲಿ ಚೀಫ್ ಕೋರ್ಟಿನಲ್ಲಿ 1 ವರ್ಷದವರೆಗೆ ಆಕ್ಟಿಂಗ್ ಜಡ್ಜಿಯರಾಗಿದ್ದು 1925 ನೆಯ ಜುಲೈ ತಿಂಗಳಲ್ಲಿ ಚೀಫ್ ಕೋರ್ಟಿನ ಜಡ್ಜಿಯರಾಗಿ ನಿಯಮಿಸಲ್ಪಟ್ಟು 2 ವರ್ಷಗಳ ಅನಂತರ ಚೀಫ್ ಜಡ್ಜಿಯವರಾಗಿ ಮಾಡಲ್ಪಟ್ಟರು. ಇವರು ತಮ್ಮ ನ್ಯಾಯ ವ್ಯವಹರಣೆಯಲ್ಲಿ ಅಪಾರವಾದ ಬುದ್ಧಿಯನ್ನೂ ನ್ಯಾಯವಿಮರ್ಶನಾ ನೈಪುಣ್ಯವನ್ನೂ ಉದ್ಯೋಗ ನಿರ್ವಾಹಶಕ್ತಿಯನ್ನೂ ವ್ಯಕ್ತಪಡಿಸಿದರು. ಇವರ ಚಮತ್ಕಾರಗುಣವು ಜನಾಕರ್ಷಣೀಯವಾಗಿದ್ದಿತು. ಇವರು ನ್ಯಾಯಶಾಖೆಯಲ್ಲಿ ಮಾಡಿದ ಉತ್ಕೃಷ್ಟ ಸೇವೆಗೆ ಮೆಚ್ಚಿ ಶ್ರೀಮನ್ಮಹಾರಾಜರವರು ಇವರಿಗೆ 1928 ನೆಯ ದಸರಾ ದರ್ಬಾರಿನಲ್ಲಿ "ರಾಜಧರ್ಮಪ್ರವೀಣ" ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು. ಶ್ರೀಮನ್ಮಹಾರಾಜರವರು ತಮ್ಮ ಸಹಾನುಭೂತಿಯನ್ನು ಕೈ|| ದೊರಸ್ವಾಮಿಅಯ್ಯರ್‌ರವರ ವಿಯೋಗದುಃಖಕ್ಕೆ ಪಾತ್ರರಾದ ಅವರ ಕುಟುಂಬಕ್ಕೆ ತಿಳುಹಲಿಚ್ಛಿಸುತ್ತಾರೆ.

ಒಳದೇಶದ ವೃತ್ತಾಂತಗಳು

ಕಳೆದ ತಾ|| 10 ರಲ್ಲಿ ಬೊಂಬಾಯಿಗೆ ಸೀಮೆಯಿಂದ ದಯಮಾಡಿಸಿದ ಶ್ರೀಮದ್ಯುವರಾಜರವರು ಕಳೆದ ಶುಕ್ರವಾರ ಪ್ರಾತಃಕಾಲ ರಾಜಧಾನಿಯನ್ನು ಸುರಕ್ಷಿತವಾಗಿ ತಲುಪಿದರು.

ರಾಜಧಾನಿಯ ವೈಶ್ಯಮಂಡಲಿಯವರು ಪದ್ಧತಿಯ ಪ್ರಕಾರ ಧಾತ್ರಿಹವನವನ್ನು ನೆನ್ನೆಯದಿವಸ ಕಾರಂಜಿಕೆರೆಯೇರಿಯ ಕೆಳಗಿರುವ ಆಂಜನೇಯ ದೇವಸ್ಥಾನದ ಉದ್ಯಾನದಲ್ಲಿ ಬಹಳ ಔದಾರ್ಯದಿಂದಲೂ ಉತ್ಸಾಹದಿಂದಲೂ ದಿವ್ಯಭಕ್ಷ್ಯ ಭೋಜ್ಯಾದಿಗಳಿಂದಲೂ ನೆರವೇರಿಸಿದರು.

ರಾಜಧಾನಿಯ ದೇವರಾಜ ಮೊಹಲ್ಲ ಮ್ಯುನಿಸಿಪಲ್ ಕೌನ್ಸಿಲರುಗಳಲ್ಲಿ ಬಿಡುವಾಗಿರುವ ಒಂದು ಸ್ಥಾನದ ಚುನಾವಣೆಗೆ ಮ|| ಗಳಾದ ಚಿಕ್ಕವೀರಣ್ಣನವರ ರೈಸ್‌ಮಿಲ್ಲಿನ ಎಂ. ಸಿ. ತಮ್ಮಯ್ಯನವರೂ, ರಾಜರಾಜೇಶ್ವರೀ ಹಾಲಿನ ಯಜಮಾನರಾದ ಮ|| ಯು. ಎಲ್. ರಾಮಚಂದ್ರರಾಯರೂ ಉಮೇದುವಾರರುಗಳಾಗಿ ನಿಂತಿರುತ್ತಾರೆ.

ಕಳೆದ ಶನಿವಾರ ರಾಜಧಾನಿಯ ಕುಂಚಿಟಿಗರ ಸಂಘದ ನಿಲಯದಲ್ಲಿ ಕೈ|| ರಾವ್‌ಬಹದ್ದೂರ್ ಧರ್ಮಪ್ರಕಾಶ ಡಿ. ಬನುಮಯ್ಯನವರ, ಧರ್ಮಪರಾಯಣಿ ಶ್ರೀಮತಿ ಆಲಮ್ಮನವರ ಮತ್ತು ನಂಜನಗೂಡಿನ ಶ್ರೀಮತಿ ತಿಮ್ಮಮ್ಮನವರ ಭಾವಚಿತ್ರಗಳ ಅನಾವರಣಮಹೋತ್ಸವವು ಡೆಪ್ಯುಟಿಕಮಿಷನರ್ ಮ|| ಸಿ. ಎಸ್. ಕುಪ್ಪಸ್ವಾಮಯ್ಯಂಗಾರ್ಯರಿಂದ ನಡೆಸಲ್ಪಟ್ಟಿತು.

ಯಡತೊರೆಯ ಸಾಹುಕಾರ್ ಮ|| ಬಳೆ ಸಿದ್ಧಲಿಂಗಶೆಟ್ಟರು ಆಚೆ ವಾರದಲ್ಲಿ ಖಾಸಬಂಗಲೆಯೊಳಗೆ ಶ್ರೀಮನ್ಮಹಾರಾಜರವರ ದರ್ಶನಕ್ಕೆ ಅಪ್ಪಣೆಯನ್ನು ಪಡೆದು ಹೋಗಿದ್ದು ಹೊಸ ಯಡತೊರೆ ಪಟ್ಟಣದ ಆರಂಭೋತ್ಸವವನ್ನು ಮಹಾಸ್ವಾಮಿಯವರ ಅಮೃತ ಹಸ್ತದಿಂದ ನೆರವೇರಿಸಬೇಕೆಂದು ಪುರನಿವಾಸಿಗಳ ಪರವಾಗಿ ಬೇಡಿಕೊಂಡುದರ ಮೇಲೆ ಬರುವ ಡಿಶಂಬರ್ ತಿಂಗಳಲ್ಲಿ ನೆರವೇರಿಸಲು ಪ್ರಭುಗಳು ಸಮ್ಮತಿಸಿರುತ್ತಾರೆಂದು ಕೇಳುತ್ತೇವೆ.

ಅಖಿಲ ಕರ್ಣಾಟಕ ಸಾಹಿತ್ಯ ಸಮ್ಮೇಳನವನ್ನು ಈ ವರ್ಷ ಕೊಡಗು ಪ್ರಾಂತದವರು ತಮ್ಮ ರಾಜಧಾನಿಯಾದ ಮಡಕೇರಿಯಲ್ಲಿ ನಡೆಯಿಸಬೇಕೆಂದು ಸಂಕಲ್ಪಿಸಿ ಅದಕ್ಕಾಗಿ ಒಂದು ಸ್ವಾಗತ ಮಂಡಲಿಯನ್ನು ನಿಯಮಿಸಿಕೊಂಡು ಕನ್ನಡ ಪಂಡಿತರುಗಳ ಮತ್ತು ಅಭಿಮಾನಿಗಳ ಸಹಾಯಸಹಾನುಭೂತಿಗಳನ್ನು ಕೋರಿರುತ್ತಾರೆ. ಈ ನಮ್ಮ ನೆರೆನಾಡಿನ ಕನ್ನಡ ಭಾಷಾಭಿಮಾನಿಗಳ ಪ್ರಯತ್ನವು ಯಶಸ್ವಿಯಾಗಿ ನಡೆದು ಅವರುಗಳು ಕೃತಕೃತ್ಯರಾಗುವಂತೆ ಸಾಹಿತ್ಯಸಮ್ಮೇಳನಾಭಿಮಾನಿಗಳು ಸಹಕರಿಸುವರೆಂದು ನಿರೀಕ್ಷಿಸುತ್ತೇವೆ.

ರಾಜಧಾನಿಯ ಲಾಯರುಗಳ ಸಂಘದವರು ಮ|| ಕೆ. ಶಂಕರನಾರಾಯಣರಾಯರನ್ನು ಬರಮಾಡಿಕೊಂಡು ನೆನ್ನೆಯ ದಿವಸ ಶ್ರೀ ಚಾಮುಂಡೇಶ್ವರೀ ಬೆಟ್ಟದ ಮೇಲೆ ದಿವ್ಯವಾದ ಔತಣದಿಂದಲೂ ಸಂಗೀತ ಶ್ರವಣದಿಂದಲೂ ಸತ್ಕರಿಸಿ ಅವರಿಗೆ ಮೈಸೂರು ಚೀಫ್ ಕೋರ್ಟು ಜಡ್ಜಿಯ ಪದವಿಯು ಲಭ್ಯವಾದುದರಿಂದ ತಮಗುಂಟಾದ ಆನಂದಾತಿಶಯವನ್ನು ಪ್ರದರ್ಶಿಸಿ ಅವರ ಗುಣಪ್ರಶಂಸೆ ಮಾಡಿದರು. ಅತಿಥಿಗಳಾದ ಮ|| ಶಂಕರನಾರಾಯಣರಾಯರು ತಮಗಾದ ಸತ್ಕಾರಕ್ಕಾಗಿ ಕಾಲೋಚಿತವಾದ ಭಾಷಣದಿಂದ ಲಾಯರು ಸಂಘದವರನ್ನು ವಂದಿಸಿದರು.

ಅಖಿಲಭಾರತ ತತ್ತ್ವವಿಚಾರ ಮಹಾಸಭೆಯ 8 ನೆಯ ಅಧಿಶನವು ಬರುವ ಡಿಸೆಂಬರು ತಾ|| 19 ನೆಯ ಸೋಮವಾರ ರಾಜಧಾನಿಯ ಜಗನ್ಮೋಹನ ಪ್ರಾಸಾದದ ಸಭಾಂಗಣದೊಳಗೆ ಶ್ರೀಮನ್ಮಹಾರಾಜರವರಿಂದ ಆರಂಭಿಸಲ್ಪಟ್ಟು 3 ದಿವಸಗಳವರೆಗೆ ನಡೆಯುವುದು. ಈ ಮಹಾಸಭೆಗೆ ಭಾರತ ದೇಶದ ಎಲ್ಲ ಕಡೆಯಿಂದಲೂ ಪ್ರತಿನಿಧಿಗಳೂ ಪ್ರೇಕ್ಷಕರೂ ಬರುವರು. ಇವರ ಸ್ವಾಗತಕ್ಕಾಗಿ ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರಾದ ಡಾ|| ಮೆಟ್ಕಾಫ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಂಘವೇರ್ಪಟ್ಟಿರುತ್ತದೆ. ಇದಕ್ಕೆ ಮ|| ಎ. ಸುಬ್ರಹ್ಮಣ್ಯಯ್ಯರ್‌ರವರು ಮತ್ತು ಪ್ರೊಫೆಸರ್ ವಿ|| ಎ. ಆರ್. ವಾಡಿಯಾರವರು ಸೆಕ್ರೆಟರಿಗಳಾಗಿರುತ್ತಾರೆ.

ರಾಜಧಾನಿಯ ರೈಲ್ವೆ ವರ್ಕ್‌ಷಾಪಿನಲ್ಲಿ ಕೆಲಸ ಮಾಡುತ್ತಿದ್ದ ಮಧ್ಯ ವಯಸ್ಸಿನ ಒಬ್ಬ ಹಿಂದು ಕಳೆದವಾರ ದೊಡ್ಡಕೆರೆಯೇರಿಯ ಮೇಲಿರುವ ಕಲ್ಲಿನ ಮಂಟಪದಲ್ಲಿ ಸತ್ತು ಬಿದ್ದಿದ್ದನು. ಈ ಸಂಗತಿಯನ್ನು ಪೋಲೀಸಿನವರು ತಿಳಿದು ಸ್ಥಳಕ್ಕೆ ಹೋಗಿ ಶವದ ಮುಖ ಮೊದಲಾದ ಭಾಗಗಳು ಮುಚ್ಚಲ್ಪಟ್ಟಿದ್ದುದನ್ನು ನೋಡಿ ಅನುಮಾನಪಟ್ಟುಕೊಂಡು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಶವವನ್ನು ಸಾಗಿಸಿದರು. ಅಲ್ಲಿ ಡಾಕ್ಟರು ಪರೀಕ್ಷಿಸಿ, ವಿಷಪ್ರಯೋಗದಿಂದ ಮರಣವಾಗಿರುವುದಾಗಿ ಅಭಿಪ್ರಾಯಪಟ್ಟಿರುವರೆಂದೂ, ಪೋಲೀಸಿನವರು ವಿಚಾರಿಸಿದುದರಲ್ಲಿ ಸತ್ತವನಿಗೆ ಜೀವವಿಮೆ ಬಾಬತು 2000 ರೂ. ಬಂದಿದ್ದುದನ್ನು ಅಪಹರಿಸುವುದಕ್ಕಾಗಿ ಅವನ ಜತೆಗಾರರಲ್ಲಾರೊ ಅವನಿಗೆ ವಿಷಪ್ರಯೋಗಮಾಡಿ ಅವನು ಸತ್ತುಹೋದಮೇಲೆ ಅವನ ಶವವನ್ನು ಕೆರೆಯೇರಿಯ ಮೇಲಿನ ಮಂಟಪಕ್ಕೆ ತಂದು ಮುಖಮುಚ್ಚಿ ಮಲಗಿಸಿ ಪಲಾಯನವಾಗಿರುವುದಾಗಿ ತಿಳಿದು ಬಂದಿರುತ್ತದೆಂದೂ, ಪೋಲೀಸರು ಅನುಮಾನದ ಮೇಲೆ ಕೆಲವರನ್ನು ಸೆರೆಹಿಡಿದಿರುವರೆಂದೂ ಕೇಳುತ್ತೇವೆ.

ಅಸ್ಪೃಶ್ಯರ ವಿಚಾರದಲ್ಲಿ ಸನಾತನಧರ್ಮಪರರ ಸಂಕಲ್ಪವು

ಪಂಚಮರು ಹಿಂದುಮತವನ್ನು ಬಿಟ್ಟು ಹೋಗುವುದು ಸನಾತನ ಧರ್ಮಿಗಳಿಗಿಷ್ಟವಿಲ್ಲ. ಮೊದಲಿನಿಂದಲೂ ನಮ್ಮ ದೇವತೆಗಳನ್ನೇ ಪೂಜಿಸುತ್ತ ನಮ್ಮ ಮತದವರಿಂದಲೇ ಬಹಳ ವಿಧವಾಗಿ ಉಪಕಾರವನ್ನು ಹೊಂದುತ್ತಿರುವ ಪಂಚಮಾದಿಗಳು ಈಗ ನಮ್ಮನ್ನು ಬಿಟ್ಟು ಹೋಗಲಿಕ್ಕೆ ನ್ಯಾಯವಾದ ಕಾರಣವೇನೂ ಇರುವುದಿಲ್ಲ. ನಂನಮ್ಮೊಳಗೆ ಪರಸ್ಪರ ಕಲಹವನ್ನು ಹುಟ್ಟಿಸಿ ಅದರ ಮೂಲಕ ರಾಜ್ಯಾಡಳಿತವನ್ನು ಸಾಗಿಸುತ್ತಿರುವ ಅಂಗ್ಲೇಯರ ಬೋಧೆಯಿಂದಲೂ, ಅವರಬೋಧೆಗೂ ಪಾಶ್ಚಾತ್ಯವಾಸನೆಗೂ ವಶರಾಗಿರುವ ಸ್ವದೇಶೀಯ ನಾಗರಿಕರ ಬೋಧೆಯಿಂದಲೂ ಅವರುಗಳೊಳಗೆ ಕೆಲರಲ್ಲಿ ಈ ಉದ್ದೇಶವು ಅಂಕುರಿಸುತ್ತಿದೆ. ಇದು ರಾಜನೀತಿಯೊಳಗೆ ಭೇದೋಪಾಯವು. ಅದನ್ನು ಅವರವಲಂಬಿಸಿರುತ್ತಾರೆ. ಅವರನ್ನು ನಾವು ಆಕ್ಷೇಪಿಸಲು ಕಾರಣವಿಲ್ಲ. ನಾವು ಮಾತ್ರ ಜಾಗರೂಕರಾಗಿರಬೇಕು. ಸನಾತನ ಧರ್ಮಿಗಳು ದ್ವೇಷಭಾವದಿಂದ ಪಂಚಮರನ್ನು ದೂರವಾಗಿಟ್ಟಿರುವುದು ನ್ಯಾಯವಲ್ಲವೆಂದು ಮಧ್ಯಸ್ಥಗಾರರು ಹೇಳಬಹುದು. ಪಂಚಮಾದಿಗಳು ನಮ್ಮ ಮತದವರೇ. ಬ್ರಾಹ್ಮಣ ಸ್ತ್ರೀಯಲ್ಲಿ ಶೂದ್ರನಿಗೆ ಹುಟ್ಟಿದವರು ಚಂಡಾಲರೆಂದು ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಪ್ರತಿಲೋಮರು ಸಂಕರಜಾತಿಗಳೊಳಗೆ ಕಡೇ ಜಾತಿಯವರು. ಇವರು ಅವರನ್ನು ಕೊಂಚದೂರವಾಗಿಡಬೇಕೆಂದೂ, ಇವರು ಪ್ರತಿ ಲೋಮಜಾತಿಗಳೊಳಗೆ ಕಡೇ ಜಾತಿಯವರೆಂದೂ, ಅವರನ್ನು ಸಮೀಪಿಸಿದುದಾದರೆ, ಸ್ನಾನಮಾಡಿ ಹೊಸದಾಗಿ ಜನಿವಾರವನ್ನು ಹಾಕಿಕೊಂಡು ಗಾಯತ್ರೀ ಜಪಾದಿಗಳನ್ನು ಮಾಡಬೇಕೆಂದು ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. …

… ನಡೆಸಿದಲ್ಲಿ ಅದಕ್ಕೆ ಸ್ವರಾಜ್ಯ ವಾದಿಗಳೇ ಜವಾಬ್ದಾರರಾಗುವರು. ಇಂತಹ ತೊಂದರೆಗಳುಂಟಾಗದಂತೆ ಧರ್ಮ ರಕ್ಷಕನಾದ ಪರಮೇಶ್ವರನೂ ಅವನ ರೂಪಾದ ದೊರತನದವರೂ ಸನಾತನ ಧರ್ಮಪರರನ್ನು ರಕ್ಷಿಸಬೇಕೆಂಬುದೇ ಸನಾತನ ಧರ್ಮಿಗಳ ಅಭಿಪ್ರಾಯವು. ಆ. ಪ.

ಭಾರತ ರಾಜಕೀಯದೃಶ್ಯ

(ಲೇ—ಕಣಕುಪ್ಪಿ ಗುರುಪಾದಪ್ಪ ಶ್ರೀ ಜಯದೇವ ಪ್ರೆಸ್, ದಾವಣಗೆರೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಈ ಸಂಸ್ಥೆಯ ಆರಂಭ ದೆಸೆಯಲ್ಲಿ ಹ್ಯೂಂರವರು ಕಾರ್ಯದರ್ಶಿಗಳಾಗಿದ್ದು ವರ್ಷ ವರ್ಷವೂ ಇದು ತಪ್ಪದೆ ಸೇರುವಂತೆ ಏರ್ಪಡಿಸುವುದರಲ್ಲಿ ಕೊಡಗಿ ಅದನ್ನೊಂದು ಸುವ್ಯವಸ್ಥಿತ ಅವಸ್ಥೆಗೆ ತಂದರು. ಸುಮಾರು 25 ವರ್ಷಗಳ ವರೆಗೆ ಆಡಳಿತದ ಗುಣದೋಷಗಳನ್ನು ವಿಮರ್ಶಿಸಿ ಪ್ರಭುತ್ವದವರಿಗೆ ಸಲಹೆಗಳನ್ನು ಕೊಡುವುದರಲ್ಲಿಯೇ ಇದು ತೊಡಗಿತು. ನ್ಯಾಯ ಶಾಖೆಯ ಮತ್ತು ಕಾರ್ಯನಿರ್ವಾಹಕ ಕರ್ತವ್ಯಗಳನ್ನು ವಿಭಾಗಿಸುವುದು, ಸೈನ್ಯದ ಖರ್ಚನ್ನು ಕಡಿಮೆಮಾಡುವುದು, ಶಾಸನ ಸಭೆಗಳ ಸುಧಾರಣೆ, ಪಂಚಾಯತರ ಮೂಲಕ ವಿಚಾರಣೆ, ಲಂಡನ್ನಿನಲ್ಲಿರುವ ಇಂಡಿಯ ಕಛೇರಿಯ ಉಚ್ಚಾಟನೆ, ಐ. ಸಿ. ಎಸ್. ಪರೀಕ್ಷೆಯನ್ನು ಇಂಗ್ಲೆಂಡು ಮತ್ತು ಇಂಡಿಯಾಗಳಲ್ಲಿ ಏಕಕಾಲದಲ್ಲಿಯೇ ನಡೆಸುವ ಏರ್ಪಾಡು, ಸೈನ್ಯ ಶಾಖೆಗೆ ದೇಶೀಯರನ್ನು ಸೇರಿಸುವುದು ಮತ್ತು ಅವರನ್ನು ತರಪೇತು ಮಾಡಲು ಸೈನ್ಯ ವಿದ್ಯಾಲಯಗಳನ್ನು ಸ್ಥಾಪಿಸುವುದು, ಆಯುಧ ಶಾಸನ ರಹಿತಪಡಿಸುವುದು, ದಕ್ಷಿಣ ಆಫ್ರಿಕದಲ್ಲಿನ ಭಾರತೀಯರ ಕಷ್ಟನಿವಾರಣೋಪಾಯ, ಉಪ್ಪಿನ ತೆರಿಗೆ, ಪ್ರೌಢ ಮತ್ತು ಪ್ರಾಥಮಿಕ ವಿದ್ಯಾಪ್ರೋತ್ಸಾಹ, ನಾಟು ಸೋದರರ ಗಡೀಪಾರು ಖಂಡನೆ, ಭರತಖಂಡದ ಬಡತನ ನಿವಾರಣೋಪಾಯ, ಪ್ರತ್ಯೇಕ ಚುನಾವಣೆ ಇವೇ ಮೊದಲಾದ ಅಂಶಗಳ ಬಗ್ಗೆ ಪ್ರಭುತ್ವದವರಿಗೆ ಪ್ರಾರ್ಥನಾ ಮೂಲಕ ಸೂಚನೆಕೊಡುವುದೇ ಇದರ ಕಾರ್ಯವಾಗಿದ್ದಿತು. ಇವುಗಳಲ್ಲಿ ಕೆಲವನ್ನು ಕುರಿತು ಸಂದರ್ಭಾನುಸಾರ ಈ ಹಿಂದೆಯೇ ಪ್ರಸ್ತಾವಿಸಿದೆ. ಉಳಿದವುಗಳ ವಿಚಾರದಲ್ಲಿ ಕೆಲಮಟ್ಟಿಗೆ ಇಲ್ಲಿ ತಿಳಿಸಲಾಗುವುದು.

ನ್ಯಾಯ ಶಾಖೆ ಮತ್ತು ಕಾರ್ಯನಿರ್ವಾಹಕ ಕರ್ತವ್ಯಗಳನ್ನು ನೆರವೇರಿಸಲು ಒಬ್ಬ ಅಧಿಕಾರಿಯೇ ಇರುತ್ತಾನೆ. ಉದಾಹರಣೆಗಾಗಿ ಜಿಲ್ಲಾಧಿಕಾರಿಗಳನ್ನು ತೆಗೆದುಕೊಳ್ಳೋಣ. ಇವರು ಏಕಕಾಲದಲ್ಲಿಯೇ ಪೋಲೀಸ್ ಅಧಿಕಾರಿಗಳೂ ದಂಡಾಧಿಕಾರಿಗಳೂ ಆಗಿರುತ್ತಾರೆ. ಒಬ್ಬರೇ ಒಂದು ಕಡೆ ಪೋಲೀಸು ಅಧಿಕಾರಿಗಳಾಗಿ ಅಪರಾಧಿ ಶೋಧನೆ ರುಜುವಾತಿಗೆ ಏರ್ಪಡಿಸುವುದು ಇನ್ನೊಂದು ಕಡೆ ಅವನ ವಿಚಾರಣೆ ತೀರ್ಪುಗಳಿಗಾಗಿ ನ್ಯಾಯಾಧೀಶನಾಗಿ ಕುಳಿತುಕೊಳ್ಳುವುದು ಇದರಿಂದ ಅಪರಾಧಿಗೆ ನ್ಯಾಯ ದೊರೆಯುವುದು ಹೇಗೆ ಸಾಧ್ಯವಾದೀತು? ಪಿರ್ಯಾದಿಯೇ ನ್ಯಾಯಾಧೀಶನಾಗಿ ಅಪರಾಧಿಗೆ ಪಕ್ಷಪಾತವಿಲ್ಲದ ಮನಸ್ಸಿನಿಂದ ತೀರ್ಪುಕೊಡುವುದು ಅಸಂಭವ. ಇದರಿಂದ ಅಪರಾಧಿಗೆ ಬಹು ಅನ್ಯಾಯ ಮಾಡಿದಂತಾಗುತ್ತದೆಯಾದುದರಿಂದ ಮೇಲೆ ಹೇಳಿದ ಎರಡು ಕರ್ತವ್ಯಗಳಿಗೂ ಬೇರೆ ಬೇರೆ ಅಧಿಕಾರಿಗಳನ್ನು ನಿಯಮಿಸಿರೆಂದು ರಾಷ್ಟ್ರ ಸಭೆಯು ಬಹುಕಾಲದಿಂದಲೂ ವಿಜ್ಞಾಪಿಸಿಕೊಳ್ಳುತ್ತ ಬಂದಿರುವುದು. ಈ ಏರ್ಪಾಡಿನಿಂದ ದುಪ್ಪಟ್ಟು ಖರ್ಚು ಬರುತ್ತದೆಂದು ಪ್ರಭುತ್ವದವರು ಹೇಳುತ್ತ ಬಂದಿರುತ್ತಾರೆ. ಇಂಡಿಯಾ ಸರಕಾರದ ಸೇವೆಯಲ್ಲಿ …

… (Special Magistrates) …

… (Trial by Jury) …

… ಕಡೆಯ ತೀರ್ಮಾನಕ್ಕೂ ಒಳಪಟ್ಟಿರತಕ್ಕದ್ದು. ಈ ವಿಷಯಗಳನ್ನೊಳಗೊಂಡು ಆ ಮಸೂದೆಯು ಏರ್ಪಟ್ಟಿತು. ಇದಕ್ಕೆ ಮುಖ್ಯವಾದ ಆಕ್ಷೇಪಣೆಯೆಂದರೆ ನಮ್ಮ ದೇಶೀಯರ ಪ್ರಾತಿನಿಧ್ಯಕ್ಕೆ ಎಳ್ಳಷ್ಟೂ ಅವಕಾಶವಿಲ್ಲದಿರುವುದೇ ಆಗಿರುತ್ತದೆ. ಇದೇ ಅಭಿಪ್ರಾಯವನ್ನೇ ಎದುರು ಪಕ್ಷದ ಮುಖಂಡರಾಗಿದ್ದ ಡಿಸ್ರೇಲಿಯವರು ವ್ಯಕ್ತಪಡಿಸಿ ಜನರ ಕಷ್ಟನಷ್ಟಗಳ ಪರಿಹಾರಕ್ಕೆ ಸಾಧನೋಪಾಯವೇ ಇಲ್ಲವಾದುದರಿಂದ ಅಂಗ್ಲೇಯರ ರಕ್ಷಣೆಯು ಇದನ್ನು ಒದಗಿಸಿಕೊಡಲೇಬೇಕೆಂದು ಅವರು ಹೇಳಿದರು. ಇದೇ …

ಶಾಸನ ಸಭೆಗಳ ಉದಯ

… (Secretary of State) … (House of Commons) … (Secretary of State) … (House of commons) …

ಬಿ. ಎಲ್. ಕಾಡಾದಿಯವರ ವೀರಶೈವ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೋತ್ಸವ.

…

ಗೌರ್ನರ್‌ಗೊಪ್ಪಿಸಲ್ಪಟ್ಟ ವಿನೀತ ಪತ್ರಿಕೆ.

ಮಹಾಸ್ವಾಮಿ ಗೌರ್ನರ್ ಸಾಹೇಬರೆ, …

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಗ್ಗೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ತೃಪ್ತಿ ಆವಿಗುರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ.

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆ. ಮಿರಜ. M. C. ೩೦

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದು.—ಸಂಪಾದಕ.

ಶ್ರೀಯುತ ಇಂ. ನಿ. ಶಾಂತಪ್ಪಶೆಟ್ಟರ ಧರ್ಮಪ್ರಶಂಸನಾ ಮತ್ತು 80 ನೆಯ ವರ್ಷದ ಶಾಂತಿಮಹೋತ್ಸವ.

ಸದಾ ಗುರುಲಿಂಗ ಜಂಗಮಸೇವಾಧುರಂಧರರೂ, ಪರೋಪಕಾರನಿರತರೂ, ದೊಡ್ಡ ಆಡಳಿತಕ್ಕೊಳಪಟ್ಟವರೂ ಬಹುಜನ ಪ್ರೇಮಪಾತ್ರರೂ ಪ್ರಸಿದ್ಧ ಪುರುಷರೂ ಸತ್ಕ್ರಿಯಾ ಜ್ಞಾನಸಂಪನ್ನರೂ ಆದ ನರಸಿಂಹರಾಜಪುರದ (ಯಡೇಹಳ್ಳಿ) ಮ|| ಶಾಂತಪ್ಪಶೆಟ್ಟರವರು ಕಳೆದ ಆಶ್ವಯುಜ ಬ|| ೧೧ ...

ಆದರ್ಶಪ್ರಾಯರಾದ ಜಗದ್ಗುರುಗಳು.

ಅಸ್ಪೃಶ್ಯತಾನಿವಾರಣೆ ಮತ್ತು ಪ್ರಾಣಿದಯೆಯ ವಿಷಯವಾಗಿ ಉಪದೇಶ.

ಮಾತೃಭೂಮಿಯಾದ ನಮ್ಮ ಭರತ ಖಂಡದಲ್ಲಿ ದಿನ ದಿನಕ್ಕೂ ಗೋವಧೆಯು ಹೆಚ್ಚುಗುತ್ತಾ ನಡೆಯುತ್ತಿರುವುದು ಅತ್ಯಂತ ದುಃಖದ ಸಂಗತಿಯಾಗಿದೆ. ಈ ಗೋವಧೆಯನ್ನು ನಿಲ್ಲಿಸಲು ಅನೇಕ ಮಾರ್ಗಗಳಿರುವುವು. ಅವುಗಳಲ್ಲಿ ಅಸ್ಪೃಶ್ಯತಾನಿವಾರಣೆಯು ಒಂದಾಗಿದೆ. ನಾವು ಅಸ್ಪೃಶ್ಯತೆಯನ್ನು ತೊಲಗಿಸಿ ಅವರನ್ನು ಸ್ಪೃಶ್ಯರೆಂಬ ಭಾವನೆಯಿಂದ ಕಂಡಲ್ಲಿ ಅವರು ತಮ್ಮಲ್ಲಿರುವ ದುರಭ್ಯಾಸಗಳನ್ನೆಲ್ಲಾ ಬಿಟ್ಟುಬಿಡುವುದರಲ್ಲಿ ಸಂದೇಹವಿಲ್ಲ. ಈರೀತಿಯಾಗಿ ನಾವು ಕಾಣುವುದರಿಂದ ಅವರು ಗೋವಧೆಯಂತಹ ಪಾಪಕಾರ್ಯವನ್ನು ನಿಲ್ಲಿಸಿ ನಮ್ಮಂತೆಯೇ ಗೋಪೂಜ್ಯಬುದ್ಧಿಯುಳ್ಳವರಾಗುವುದರಲ್ಲಿ ...

... ಗಳನ್ನೆಲ್ಲಾ ಬಿಟ್ಟು ಅಭಿವೃದ್ಧಿಗೆ ಬರಲೆಂದೂ, ಇತರ ಧರ್ಮಗುರುಗಳೂ ಮೇಲ್ಕಂಡ ಮಹಸ್ವಾಮಿಗಳ ಮಾರ್ಗವನ್ನು ಅನುಸರಿಸಿ ಈ ಮೂಲಕ ಗೋರಕ್ಷಣಾಕಾರ್ಯವು ಸುಲಲಿತವಾಗಿ ನಡೆಯುವಂತೆ ಪ್ರೋತ್ಸಾಹಿಸಲೆಂದೂ ಪ್ರಾರ್ಥಿಸುವೆವು.

ದಾವಣಗೆರೆ, ತಾ|| 10-11-32. } ಕಾರ್ಯದರ್ಶಿ, ಪ್ರಾಣಿದಯಾ ಜ್ಞಾನಪ್ರಸಾರಕ ಸಂಘ.

ನಾರಿನವಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ. ನಾರಿನವರು ಜರೂರತರಿಸಿಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ವಿರಜ.

29 M. C

೧೯೩೨ ನೆಯ ಇಸವಿ ನವಂಬರ್ ತಾ|| ೨೧ ರಿಂದ ನವಂಬರ ತಾ|| ೨೭ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಕಾರ್ತಿಕ ಬಹುಳ ಅಷ್ಟಮಿಯಿಂದ ಕಾರ್ತಿಕ ಬಹುಳ ಚತುರ್ದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿಕ ಮಾಸ
21	(1) ಸೋಮ	ಅಷ್ಟ	32-25	ಮಘ	39-7	7
22	(2) ಮಂಗಳ	ನವ	30-0	ಪುಬ್ಬ	38-10	8
23	ಬುಧ	ದಶ	26-21	ಉತ್ತ	36-1	9
24	ಗುರು	ಏಕಾ	22-4	ಹಸ್ತ	33-18	10
25	(3) ಶುಕ್ರ	ದ್ವಾದ	16-56	ಚಿತ್ತ	35-14	11
62	ಶನಿ	ತ್ರಯೋ	11-26	ಸ್ವಾತಿ	25-52	12
27	ಭಾನು	ಚ-ಅ	5-34-54-4	ವಿಶಾ	21-40	13

(1) ಕಾರ್ತಿಕ ಸೋಮವಾರ. (2) ಮಳೆನಕ್ಷತ್ರ-ಅನೂರಾಧ ೨ ನೆಯ ಪಾದ. (3) ಮಳೆನಕ್ಷತ್ರ-ಅನೂರಾಧ ೪ ನೆಯಪಾದ.

ಮೈಸೂರು : ಶ್ರೀ. ವಿರೂಪಾಕ್ಷ ... ಪ್ರಿಂಟಿಂಗ್ ವರ್ಕ್ಸ್ ... ಮುದ್ರಿತ ಪ್ರಕಟಿಸಲ್ಪಟ್ಟಿತು.

REG NO. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆ ೧೯೩೨ ನೆಯ ಇಸವಿ ನವಂಬರ್ ತಾರೀಖು ೨೮ ನೆಯ ಸೋಮವಾರ [ಸಂಚಿಕೆ ೪೮

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore. (Sd.) S. SHA MANNA,
Secretary, Insurance Committee.

[60—21]



[60—4]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇರಿ.
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸಿ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರನಜನನ	೦—೮—೦	೦—೧೩—೦
ಸಟೀಕ ಕಲ್ಯಾಣಕಟ್ಟಪಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ವಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಕ್ಯಾಗಿ ಕ್ಷೀಣರಾಗ ಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ | ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ರಜಿ] ವಜ್ರಾಂಗ ಸುಂದರಪಾಕದ. [ಸ್ವರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಡ್ಡಿ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಅಶಕ್ತತೆ, ಪಿತ್ತಾಂಶ, ನಡ, ಬೆನ್ನುನೋವು, ... ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ, ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ... ಶರೀರ ... ಆಗುತ್ತದೆ. ... ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ... ಬೆಳೆಯುತ್ತದೆ. ... ೨೧ ದಿವಸ ಸಾಲುವ ... ರೂಪಾಯಿ. ... ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

ಎಲ್ಲ ಬಗ್ಗೆಯ ಸೆರಗು, ಮುಟ್ಟಿಚಿಟ್ಟು ... ೨೧ ದಿವಸ ಸಾಲುವ ... ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

... ಪೂರ್ತಿ ವಿಳಾಸ ಬರೆದು ಕೇಳಿರಿ. [60—48]

ಪತ್ತಾ ಮಾಲಕ:—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ವಿರಜ ಎಂ. ಎಸ್. ಎಂ

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ... ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು ... ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥ ಮಾಡುವ ವ್ಯಾಧಿಗಳು ಯಾವವೆಂದರೆ—...

(Registerd Trade Mark)

... [60—19] ...

ಎದುರು ಪುಟದ ಮೊದಲ ಅಂಕಣ ಮತ್ತು ಗೌರವರ ಉತ್ತರ. ...

ಮೈಸೂರು ಸ್ಟಾರ್.

೧೯೩೨ ನೇ ಇಸವಿ ನವಂಬರ್ ತಾ|| ೨೮ ನೆಯ ಸೋಮವಾರ.

ALLAHABAD CONFERENCE AND AFTER

We had referred to, in our last issue, to the agreement reached at by the Unity Conference and its acceptance by the leaders of the Hindus, Muslims and the Sikhs. It is gratifying also to note that Moulana Shaukat Ali and Dr. Ansari representing two schools of thought among the Muslims, have given their hearty approval to the settlement. It is true that the reported agreement has yet to be endorsed in a plenary session of both the Hindus, Muslims and the Sikhs. It is most unwise and unpatriotic that efforts should be made at this critical juncture in the history of India to repudiate such an agreement without giving a chance of its acceptance at the hands of the proposed All-parties Conference. One such wrong step is that of the meeting convened by Sir Mahomed Yakub and others of his out-look. Hasty resolutions have been passed repudiating the agreement as being injurious to the Muslim interests. If the press reports are correct, we gather that others of different thinking were given no chance whatever to place their views in support of the Allahabad agreement. Thus one need not attach much importance to those out-bursts of communal rancour and attempts at mischievous propoganda. We also smell that some unseen hand is at the back of this move to widen the gulf that had been so wisely bridged at Allahabad. It is regrettable also that the R. T. C. delegates are reticent over the agreement and have not taken this opportunity to support the agreement and get it endorsed by the Cabinet. It requires all the resources of statesman-ship when the constitution making is on the anvil, to get the conclusions of the Unity Conference, embodied in the constitution. We earnestly hope that the R. T. C. delegates will rise to the occasion and save the country from the throes of communal upheaval.

ಅಲಹಾಬಾದು ತೀರ್ಮಾನಾ ನಂತರ

ಅಲಹಾಬಾದಿನಲ್ಲಿ ನೆರೆದಿದ್ದ ಹಿಂದು ಮಹಮ್ಮದೀಯ ಸಿಕ್ಕರುಗಳ ಸಖ್ಯ ಸಮ್ಮೇಳನದಲ್ಲಾದ ತೀರ್ಮಾನವು ಸರ್ವಸಮ್ಮತವೂ ಆಹ್ಲಾದಕರವೂ ಆಗಿರುವುದರಿಂದ ಈ ಸಮ್ಮೇಳನವನ್ನು ಸೇರಿಸಲು ಪ್ರಯತ್ನಪಟ್ಟ ಮೌಲಾನಾ ಷೌಕತಾಲಿಯವರಿಗೂ, ಪಂಡಿತ ಮದನಮೋಹನ ಮಾಳವ್ಯರವರಿಗೂ, ಭಿನ್ನಮತದವರ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಿ ಸರ್ವಸಮ್ಮತವಾದ ತೀರ್ಮಾನವನ್ನು ಮಾಡಲು ತಮ್ಮ ದೀರ್ಘರಾಜಕೀಯಾನುಭವವನ್ನೂ, ಚಾತುರ್ಯವನ್ನೂ ವ್ಯಕ್ತಪಡಿಸಿದ ಮ|| ವಿಜಯ ರಾಘವಾಚಾರ್ಯ ಪ್ರಭೃತಿಗಳಿಗೂ ಎಲ್ಲ ವರ್ಗಗಳ ನಾಯಕರುಗಳಿಂದಲೂ, ಸಂಘಗಳವರಿಂದಲೂ, ಭಾರತ ಹಿತಚಿಂತಕರ ಐರೋಪ್ಯರುಗಳಿಂದಲೂ ಧನ್ಯವಾದಗಳು ಅರ್ಪಿಸಲ್ಪಟ್ಟವು. ಸಮ್ಮೇಳನವು ನಡೆಯುತ್ತಿರುವ ವೇಳೆಯಲ್ಲಿ ಅನಿವಾರ್ಯ ಕಾರ್ಯ ಗೌರವದಿಂದ ಸೀಮೆಗೆ ಪ್ರಯಾಣಮಾಡಿದ ಷೌಕತಾಲಿಯವರು ತಾವು ಸಾಹಸಪಟ್ಟು ಏರ್ಪಡಿಸಿದ ಸಖ್ಯ ಸಮ್ಮೇಳನವು ಜಯಪ್ರದವಾಗಿ ನಡೆದು ಅನುಕೂಲವಾದ ತೀರ್ಮಾನವಾಗಿರುವುದು ತಮಗೂ ತಮ್ಮ ಪಕ್ಷಕ್ಕೆ ಸೇರಿದ ಬಹು ಸಂಖ್ಯಾಕ ಮಹಮ್ಮದೀಯರಿಗೂ ಮಹಾ ಸಂತೋಷ ಪ್ರದವಾಗಿರುವುದೆಂದೂ, ಭಾರತೀಯರ ಸ್ವರಾಜ್ಯಸಾಧನ ಪ್ರಯತ್ನಕ್ಕೆ ಅನುಕೂಲವಾಗಿರುವುದೆಂದೂ ತಿಳಿಸಿರುವರಲ್ಲದೆ, ಡಾಕ್ಟರ್ ಅನ್ಸಾರಿಯವರೂ ಈ ತೀರ್ಮಾನದಿಂದ ತಮಗುಂಟಾಗಿರುವ ಸಂತೋಷವನ್ನು ಸೂಚಿಸಿರುವರು. ಈ ಉಭಯರೂ ಈ ತೀರ್ಮಾನವು ಭಾರತೀಯರೆಲ್ಲರಿಂದಲೂ ಅನುಮೋದಿಸಲ್ಪಡುವುದೆಂದು ಆಶಿಸುತ್ತಾರೆ. ಆದರೆ ಸರ್ ಮಹಮುದ್‌ಯಾಕೂಬ್‌ರವರೂ ಅವರ ಅಭಿಪ್ರಾಯಾನುಮೋದಕರೂ ಬೇರೊಂದು ಸಭೆಯನ್ನು ನಡೆಯಿಸಿ ಅಲಹಾಬಾದು ತೀರ್ಮಾನವನ್ನು ಸಮರ್ಥಿಸಿ ಮಾತನಾಡುವವರಿಗೆ ಅವಕಾಶವನ್ನು ಕೊಡದೆ ಅದನ್ನು ಖಂಡಿಸಿದುದಲ್ಲದೆ ತಾವು ಸಮ್ಮತಿಸುವುದಿಲ್ಲವೆಂದು ನಿರ್ಧಾರಮಾಡಿ ಆ ತೀರ್ಮಾನವು ಬರುವ ಡಿಸೆಂಬರು ತಿಂಗಳಲ್ಲಿ ನಡೆಯುವ ಸರ್ವಪಕ್ಷ ಸಮ್ಮೇಳನದಲ್ಲಿ ಅನುಮೋದಿತವಾಗದಂತೆ ಮಾಡಲು ಸಾಹಸಪಡುತ್ತಿರುವುದು ಬಹಳ ಶೋಚನೀಯವಾಗಿರುತ್ತದೆ. ಇಂತಹ ವಿಘ್ನಸಂತೋಷಿಗಳ ಮತವೈಷಮ್ಯಸಾಧನ ಪ್ರಯತ್ನಕ್ಕೆ ವಿವೇಕಿಗಳಾರೂ ಗಮನಕೊಡುವುದಿಲ್ಲ. ಈ ದುಷ್ಟಪ್ರಯತ್ನವನ್ನು ಕೆಲ ಸ್ವಾರ್ಥಪರರು ಪ್ರೋತ್ಸಾಹಿಸಿ ಹಿಂದು ಮಹಮ್ಮದೀಯರ ಸಖ್ಯಪ್ರಯತ್ನವು ನಿರರ್ಥಕವಾಗಿ ಮನಸ್ತಾಪವು ಪ್ರಬಲಿಸುವಂತೆ ಮಾಡುತ್ತಿರುವುದಾಗಿ ತಿಳಿಯಬರುತ್ತದೆ. ರೌಂಡುಟೇಬಲುಸಭೆಗೆ ಹೋಗಿರತಕ್ಕ ಪ್ರತಿನಿಧಿಗಳು ಅಲಹಾಬಾದು ತೀರ್ಮಾನದ ವಿಚಾರದಲ್ಲಿ ಚಕಾರಶಬ್ದವನ್ನು ಸಹ ನುಡಿಯದೆ ಮತ್ತು ಇದನ್ನು ಮಂತ್ರಿಮಂಡಲದವರು ಅನುಮೋದಿಸುವಂತೆ ಮಾಡಲು ಯಾವ ಪ್ರಯತ್ನವನ್ನೂ ನಡೆಸದೆ ಮೌನರಾಗಿರುವುದು ಸಹ ಖೇದಕರವಾಗಿದೆ. ರಾಜ್ಯಾಂಗರಚನೆಯಲ್ಲಿ ಅಲಹಾಬಾದು ಸಖ್ಯಸಮ್ಮೇಳನದೊಳಗಾದ ತೀರ್ಮಾನಾಂಶಗಳೂ ಗರ್ಭಿತವಾಗುವಂತೆ ರಾಜ್ಯಾಂಗರಚನೆಯವೇಳೆಯಲ್ಲಿ ಮಂತ್ರಿಮಂಡಲದವರನ್ನೊಡಂಬಡಿಸಲು ರಾಜನೀತಿ ಪ್ರೌಢಿಮೆಗೆ ತಕ್ಕ ಉಪಾಯಗಳನ್ನೆಲ್ಲ ವಿನಿಯೋಗಿಸಬೇಕಾಗಿರುವುದು. ಆದುದರಿಂದ ರೌಂಡುಟೇಬಲು ಸಭೆಯ ಭಾರತ ಪ್ರತಿನಿಧಿಗಳು ಎಚ್ಚೆತ್ತುಕೊಂಡು ಭಾರತದೇಶವನ್ನು ಮತ ವೈಷಮ್ಯದಿಂದುಂಟಾಗಿರುವ ಅನೈಕ್ಯ ಸಂಕಟದಿಂದ ಪಾರಮಾಡಲು ಸಹಾಸಪಡುವರೆಂದು ನಿರೀಕ್ಷಿಸುತ್ತೇವೆ. ಅಲಹಾಬಾದು ತೀರ್ಮಾನಾನುಮೋದನಕ್ಕಾಗಿ ಸರ್ವಪಕ್ಷಸಮ್ಮೇಳನವು ಬರುವ ಡಿಸೆಂಬರು ತಾ|| 3ರಲ್ಲಿ ನಡೆಯಬೇಕೆಂದಿದ್ದುದು, ತಪ್ಪಿ ಕೆಲರ ಕೋರಿಕೆಯ ಪ್ರಕಾರ ಡಿಸೆಂಬರು ತಾ|| 13 ರಲ್ಲಿ ನಡೆಯಲು ಗೊತ್ತಾಗಿರುವುದು.

ಜಗದ್ಗುರು ಶಂಕರಾಚಾರ್ಯರೂ ಅಸ್ಪೃಶ್ಯತೆಯೂ

ಕುಂಭಕೋಣದ ಶ್ರೀ ಜಗದ್ಗುರು ಶಂಕರಾಚಾರ್ಯರು ಅಸ್ಪೃಶ್ಯತೆಯು ಇದ್ದೇ ತೀರಬೇಕೆಂಬ ಬಗೆಗೆ ಶಾಸ್ತ್ರಾಧಾರವನ್ನು ಉದಹರಿಸಿ ಒಂದು ದೀರ್ಘವಾದ ಲೇಖನವನ್ನು ಮಹಾತ್ಮರಿಗೆ ಬರೆದಿರುವುದಾಗಿ ತಿಳಿಯಬರುತ್ತದೆ.

ಬಿಳೀ ಆನೆ

ತಿರುವಾಂಕೂರು ಸಂಸ್ಥಾನದ ಕಾಡುಗಳೊಂದರಲ್ಲಿ ಬಿಳೀ ಆನೆಯು ಕಾಣಿಸಿಕೊಂಡಿತೆಂದು ಅಟವಿ ಶಾಖೆಯವರು ಪ್ರಭುತ್ವದವರಿಗೆ ತಿಳಿಸಿದುದರ ಮೇಲೆ ಅದನ್ನು ಕೊಲ್ಲದೆ ಸಾಹಸಪಟ್ಟು ಅದನ್ನು ಹಿಡಿಯಬೇಕೆಂದು ಅಪ್ಪಣೆಮಾಡಿರುವುದಾಗಿ ಪ್ರಕಟವಾಗಿದೆ.

ಸಂಸ್ಥಾನಾಧೀಶರಿಗೆ ಬ್ರಿಟಿಷರ ಸಂಬಂಧವು ಮುಖ್ಯ

ಕಳೆದ ತಾ|| 14ರಲ್ಲಿ ಲಂಡನ್ನಿನ ಪಾರ್ಲಿಮೆಂಟು ಭವನದಲ್ಲಿ ನೆರೆದಿದ್ದ ಕನ್ಸರ್ವೇಟಿವ್ ಇಂಡ್ಯಾ ಕಮಿಟಿಯವರ ಸಭೆಯಲ್ಲಿ ನವನಗರದ ಮಹಾರಾಜರು ಫೆಡರೇಷನ್ ಕುರಿತು ಭಾಷಣ ಮಾಡುವಾಗ್ಗೆ "ಭಾರತದೇಶೀಯ ಸಂಸ್ಥಾನಾಧಿಪತಿಗಳಿಗೆ ಸಮಯೋಚಿತವಾದ ರಕ್ಷಣಗಳು ಶಾಸನದಲ್ಲಿ ಸೇರಿಸಲ್ಪಟ್ಟರೆ ಮಾತ್ರ ಅವರುಗಳು ಫೆಡರೇಷನ್ನಿಗೆ ಅಂಗೀಕರಿಸುವರು" ಎಂದು ಹೇಳಿದರು.

ರೈಲ್ವೆಯನಾಹುತ

ಗ್ರೇಟ್ ಬ್ರಿಟನ್ನಿಗೆ ಸೇರಿದ ವಾಟ್‌ಫೋರ್ಡ್ ಎಂಬಲ್ಲಿ ಕೂಲಿ ಆಳುಗಳು ರೈಲು ಮಾರ್ಗವನ್ನು ಸರಿಪಡಿಸುತ್ತಿರುವಾಗ್ಗೆ ಇಂಜನ್ನಿನ ಹೊಗೆಯು ಬೈಲಿನಲ್ಲಿ ಆವರಿಸಿಕೊಂಡಿದ್ದುದರಿಂದ ಇನ್ನೊಂದು ಬಂಡಿಯು ರಭಸವಾಗಿ ಬರುತಿದ್ದುದು ಕೆಲಸಗಾರರಿಗೆ ಕಾಣಿಸಲಿಲ್ಲವಾಗಿ ಅವರುಗಳಲ್ಲಿ ಕೆಲರು ಬಂಡಿಗೆ ಸಿಕ್ಕಿ 5 ಮಂದಿ ತುಂಡುತುಂಡಾಗಿ ಕತ್ತರಿಸಿ ಹೋದರು; ಉಳಿದವರು ಪೂರಾ ಅಪಾಯವನ್ನು ಹೊಂದಿದರು.

ಆರ್. ಟಿ. ಸಭಿಕರಿಗೆ ಔತಣ

ರೌಂಡುಟೇಬಲು ಸಭಿಕರುಗಳಿಗೆ ಲಂಕಾಸ್ಟರು ಭವನದಲ್ಲಿ ಪ್ರಭುತ್ವದವರಿಂದ ಔತಣವು ಮಾಡಿಸಲ್ಪಟ್ಟಿತು. ಈ ಔತಣಕ್ಕೆ ಮಂತ್ರಿಮಂಡಲದವರು ರಾಜನೀತಿ ವಿಶಾರದರು, ನಾನಾ ಸಂಘಗಳ ನಾಯಕರು, ವಿದ್ಯಾ ಪಂಡಿತರು, ಮತ ಗುರುಗಳು ಮೊದಲಾದವರು 1000 ಮಂದಿ ವರೆಗೆ ಆಹ್ವಾನಿಸಲ್ಪಟ್ಟಿದ್ದರು. ಈ ಅತಿಥಿಗಳನ್ನೆಲ್ಲ ಮುಖ್ಯ ಮಂತ್ರಿ ಮೆಕ್ಡೊನಾಲ್ಡ್‌ರವರು ಸ್ವಯಮಾಗಿ ಸನ್ಮಾನಿಸಿ ಮಾತನಾಡಿಸಿದರು.

ಅಸ್ಪೃಶ್ಯರ ದೇವಾಲಯ ಪ್ರವೇಶ

ಹಂಡಾಲರೆಂದು ಕರೆಯಲ್ಪಡುತ್ತಿರುವ ಜಾತಿಯವರು ಅಸ್ಪೃಶ್ಯರೆಂಬುದು ಅಶಾಸ್ತ್ರೀಯವೆಂದೂ, ಅವರು ದೇವಾಲಯಗಳಿಗೆ ಬರುವುದು ಶಾಸ್ತ್ರಸಮ್ಮತವೆಂದೂ ಬಂಕುಪಲ್ಲಿ ಮಲ್ಲಿಯ ಶಾಸ್ತ್ರಿಗಳು ಪ್ರಕಟಿಸಿರುವರು. ಈ ವಿಷಯವನ್ನು ಸಿದ್ಧಾಂತಪಡಿಸಲು ಪಂಡಿತರ ಸಭೆಯನ್ನು ಸೇರಿಸಬೇಕೆಂದು ಅವರೂ ಮತ್ತೆ ಬೇರೆಯವರೂ ಕೋರುತ್ತಿದ್ದಾರೆ. ಈ ಸಭೆಯನ್ನು ಸೇರಿಸಿ ಚರ್ಚಿಸಲು ನಿಬಂಧನೆಗಳೇನೆಂಬುದನ್ನು ದಯೆಯಿಟ್ಟು ಶಾಸ್ತ್ರಿಗಳು ತಿಳಿಸಬೇಕೆಂದು ಸ್ವಧರ್ಮ ಸ್ವರಾಜ್ಯ ಸಭೆಯ ಸೆಕ್ರೆಟರಿ ಮಾರ್ಕಂಡೇಯ ಶರ್ಮರವರು ಬರೆದಿರುತ್ತಾರೆ.

ಮಹಾತ್ಮರ ಆಹಾರ

"ನಾನು ಈಗ ಕಂಡವನ್ನು ಬೆಳಸತಕ್ಕ ಪದಾರ್ಥಗಳನ್ನೂ ಪುಷ್ಟಿಯನ್ನುಂಟುಮಾಡತಕ್ಕ ಪದಾರ್ಥ (ಟಾನಿಕ್ಕು) ಗಳನ್ನೂ ಸೇವಿಸುವುದಿಲ್ಲ. ಮೇಕೆ ಹಾಲು, ಹೊಟ್ಟುಸಮೇತವಾದ ಗೋಧಿರೊಟ್ಟಿ, ನೀರಿನಲ್ಲಿ ನೆನೆ ಹಾಕಿದ ಖರ್ಜೂರ, ಬೆಯಿಸಿದ ಟೊಮಾಟೊ, ಕಿತ್ತಲೆಹಣ್ಣು ಇವುಗಳನ್ನು ಮಾತ್ರ ಸೇವಿಸುತ್ತಿದ್ದೇನೆ. ರೊಟ್ಟಿಯಿಂದಲೂ ಹಾಲಿನಿಂದಲೂ ಕೊಂಚ ಮಾಂಸವರ್ಧಕ ಪದಾರ್ಥವು ನನಗೆ ಲಭಿಸುತ್ತಿದೆ" ಎಂದು ಮಹಾತ್ಮರು ಒಬ್ಬ ಸ್ನೇಹಿತರಿಗೆ ಬರೆದಿರುತ್ತಾರೆ.

ತೆಂಗಲೆ ವಡಘಲೆಯುವರ ವಿವಾದ

ವಡಘಲೆಯವರು ತಿರುಪ್ಪಕ್ಕುಲಿ ದೇವಸ್ಥಾನದಲ್ಲಿ ದೇವರ ಮುಂದೆ ಪಾಂಡಪಟನನ್ನು ಬಿಟ್ಟಾಗಲಿ, ತಾವು(ತೆಂಗಲೆಯವರು) ಹೇಳುವುದರ ಬದಲಾಗಿ ಬೇರೆ ಪ್ರಬಂಧವನ್ನ ಅಥವ ಸ್ತೋತ್ರಗಳನ್ನ ಹೇಳಿಯಾಗಲಿ ತಾವು (ತೆಂಗಲೆಯವರು) ಮಾಡುವ ಅಧ್ಯಪಾಕಕ್ಕೆ ಅಡ್ಡಿ ಪಡಿಸದಂತೆ ತಾತ್ಕಾಲಿಕ ತಡೆಯಾರ್ಡರನ್ನು ಮಾಡಬೇಕೆಂದು ತಿರುಪ್ಪಕ್ಕುಲಿಯ ತೆಂಗಲೆ ಶ್ರೀವೈಷ್ಣವ ಬ್ರಾಹ್ಮಣರು ಕಂಚಿಯ ಸಬ್-ಮೇಜಿಸ್ಟ್ರೇಟರ ಕೋರ್ಟಿನಲ್ಲಿ ವಿವಾದವನ್ನು ಹೂಡಿರುವುದರ ಮೇಲೆ ವಡಘಲೆಯವರು ತೆಂಗಲೆಯವರನ್ನು ಅಡ್ಡಿಪಡಿಸಕೂಡದೆಂದೂ, ಪೊಲೀಸಿನವರು ತೆಂಗಲೆಯವರಿಗೆ ಅಡಚಣೆಯಾಗದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದೂ ಮೆಜಿಸ್ಟ್ರೇಟರು ಅಪ್ಪಣೆ ಮಾಡಿರುತ್ತಾರೆ.

ಅಸ್ಪೃಶ್ಯರಿಗೆ ಕಾಫಿ ಹೋಟಲು

ತುತ್ತುಕುಡಿ ಮ್ಯುನಿಸಿಪಾಲಿಟಿಗೆ ಸೇರಿದ ಯಾವ ಕಾಫಿ ಕ್ಲಬ್ಬಿನಲ್ಲಾಗಲಿ ಕ್ಷೌರದಂಗಡಿಗಳಲ್ಲಾಗಲಿ ಅಸ್ಪೃಶ್ಯರಿಗೆ ಪೃಥಕ್ಕಾಗಿ ಪ್ರತ್ಯೇಕ ಏರ್ಪಾಟನ್ನು ಮಾಡಿದಲ್ಲಿ ಆ ಕಾಫಿ ಹೋಟಲುಗಳಿಗೂ ಕ್ಷೌರದಂಗಡಿಗಳಿಗೂ ಮ್ಯುನಿಸಿಪಾಲಿಟಿಯವರು ಲೈಸೆನ್ಸು ಕೊಡಲಾಗದೆಂದು ಮ್ಯುನಿಸಿಪಲ್ ಕೌನ್ಸಿಲಿನಲ್ಲಿ ನಿಮ್ನ ಜಾತಿಯವರ ಪ್ರತಿನಿಧಿಯಾಗಿರುವ ಎಲ್. ದೊರಸ್ವಾಮಿಯವರು ಒಂದು ತೀರ್ಮಾನವನ್ನು ಪ್ರತಿಪಾದಿಸಬೇಕೆಂದು ಕೋರಿದುದರ ಮೇಲೆ ಅವರ ಪರವಾಗಿ ಮತ್ತೊಬ್ಬ ಕೌನ್ಸಿಲರು ಅದನ್ನು ಪ್ರತಿಪಾದಿಸಿದರು. ಈ ಭೇದವು ಮ್ಯುನಿಸಿಪಾಲಿಟಿಗೆ ಸೇರಿದ ಯಾವ ಹೋಟಲಿನಲ್ಲೂ ನಡೆಯುತ್ತಿಲ್ಲವೆಂದು ಒಬ್ಬ ಮೆಂಬರು ಹೇಳಿದ ಮೇಲೆ ಆ ತೀರ್ಮಾನವು ಅನುಮೋದಿತವಾಯಿತು.

ಮಹಾತ್ಮ ಗಾಂಧಿಯವರ ಜಾತಕ ಫಲ

ಶುಕ್ಲ ಸಂವತ್ಸರದ ಭಾದ್ರಪದ ಬಹುಳ ದ್ವಾದಶಿ ಶನಿವಾರ ಸೂರ್ಯೋದಯಾದಿ ಘಟಿಕಾ 56-0 ಗೆ ಸಲ್ಲುವ ಮಘಾ ನಕ್ಷತ್ರ 4 ನೆಯ ಪಾದ ಸಿಂಹ ಲಗ್ನದಲ್ಲಿ ಮಹಾತ್ಮರ ಜನನ ಕಾಲವೆಂದು ನಿರ್ಧರಿಸಿ ಪೀಠಾಪುರದ ಭಾರತಿ ತೀರ್ಥೋಪಾಧ್ಯಾಯ ವಡಲಿ ಸೀತಾರಾಮಯ್ಯನವರು ಜನನ ಕುಂಡಲಿಯನ್ನು ಹಾಕಿ ತಾತ್ಕಾಲಿಕ ಗ್ರಹಚಾರವನ್ನು ಗುಣಿಸಿ ಫಲವನ್ನು ಪ್ರಕಟಿಸಿರುವುದರಲ್ಲಿ, 1932 ನೆಯ ಡಿಸೆಂಬರು ತಾ|| 14 ರ ಮೇಲೆ ಮಹಾತ್ಮರ ಆರೋಗ್ಯ ವೃದ್ಧಿಯಾಗಿ ಸಂಕಲ್ಪವು ಸಿದ್ಧಿಸುವುದು, 1933 ನೆಯ ಜನವರಿ ತಿಂಗಳು ಕಳೆದ ಮೇಲೆ ರಾಜಕೀಯ ವಿಚಾರದಲ್ಲಿ ಜಯವಾಗಲು ತಕ್ಕೇರ್ಪಾಟು ನಡೆಯುವುದು ಎಂದು ತಿಳಿಸಿರುತ್ತಾರೆ. ಈ ಭವಿಷ್ಯದ ತಥ್ಯಾಂಶವು ಮುಂದೆ ವ್ಯಕ್ತವಾಗಬೇಕಾಗಿದೆ.

ರೌಂಡುಟೇಬಲು ಸಭೆ

ರೌಂಡುಟೇಬಲು ಸಭೆಯು ಕಳೆದ ತಾ|| 23 ರಲ್ಲಿ ಸಮಾವಿಷ್ಟವಾಗಿದ್ದು ರಾಷ್ಟ್ರಗಳಿಗೂ ಕೇಂದ್ರಸ್ಥಾನಕ್ಕೂ ಇರಬೇಕಾದ ಪರಸ್ಪರ ಸಂಬಂಧದ ವಿಚಾರವಾಗಿ ದೀರ್ಘ ಚರ್ಚೆಯು ನಡೆದು ಭಿನ್ನಾಭಿಪ್ರಾಯಗಳು ಉಂಟಾದುದರ ಮೇಲೆ ಈ ವಿಚಾರವನ್ನು ಚೆನ್ನಾಗಿ ಪರಿಷ್ಕರಿಸಿ ತಮ್ಮಭಿಪ್ರಾಯದೊಡನೆ ನಿವೇದಿಕೆಯನ್ನು ಸಮರ್ಪಿಸುವುದಕ್ಕಾಗಿ ಲಾರ್ಡು ಶಾಂಕೀಯವರ ಅಧ್ಯಕ್ಷತೆಯಲ್ಲಿ ಒಂದುಪಸಂಘವೇರ್ಪಡಿಸಲ್ಪಟ್ಟು ಸಪ್ರೂ, ಜಾಫರುಲ್ಲ, ಪಾತ್ರೊ, ಹೈದರಿ, ಮನೂಬಾಯಿ ಮೆಹತ ಮತ್ತು ಬಟ್ಲರ್ ಇವರುಗಳು ಮೆಂಬರುಗಳಾಗಿ ನಿಯಮಿಸಲ್ಪಟ್ಟಿರುವರು. ಇವರು ತಮ್ಮ ವರದಿಯನ್ನು ನಾಳೆಯ ದಿವಸ ಸಮರ್ಪಿಸಿದ ಮೇಲೆ ರೌಂಡುಟೇಬಲು ಸಭೆಗೂಡುವುದು. ಸಂಸ್ಥಾನಾಧಿಪತಿಗಳಿಗೆ ಸಂಬಂಧಪಟ್ಟ ಮತ್ತು ಬೇರೆ ಕೆಲ ವಿಚಾರಗಳಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯಗಳನ್ನು ಪರ್ಯಾಲೋಚಿಸಿ ವರದಿ ಮಾಡಲು ಬೇರೆ ಕೆಲ ಉಪ ಸಭೆಗಳೇರ್ಪಟ್ಟಿರುವುವು.

ಶಾರದಾ ಶಾಸನೋಲ್ಲಂಘನಕ್ಕಾಗಿ ಶಿಕ್ಷೆ

ಶಾರದಾ ಶಾಸನ ನಿರ್ಬಂಧಕ್ಕೆ ಸಿಕ್ಕರಬಾರದೆಂದು 17 ವರ್ಷದ ಮಗನಿಗೆ ಟಾನಾ ಎಂಬೂರಿನ ವಾಸಸ್ಥನೊಬ್ಬನು ಪೋರ್ಚುಗೀಸು ರಾಜ್ಯಕ್ಕೆ ಸೇರಿದ ಸಿಲ್ವಾಸ ಎಂಬ ಗ್ರಾಮಕ್ಕೆ ಹೋಗಿ ಮದುವೆ ಮಾಡಿಕೊಂಡು ಬಂದನು. ಇದಕ್ಕಾಗಿ ತಂದೆ ಮತ್ತು ಮಗನ ಮೇಲೆ ಟಾನಾ ಡಿಸ್ಟ್ರಿಕ್ಟು ಮೆಜಿಸ್ಟ್ರೇಟರಲ್ಲಿ ವಿವಾದವು ನಡೆದು, ಪೋರ್ಚುಗೀಸು ರಾಜ್ಯದಲ್ಲಿ ವಿವಾಹ ನಡೆದಿದ್ದರೂ ಅಪರಾಧಿಗಳು ಬ್ರಿಟಿಷ್ ಪ್ರಜೆಗಳಾದುದರಿಂದ ತಪ್ಪಿತಸ್ಥರೆಂದು ನಿರ್ಧರಿಸಲ್ಪಟ್ಟು ತಲಾ 200 ರೂಪಾಯಿಗಳ ದಂಡ ವಿಧಿಸಲ್ಪಟ್ಟರು. ಇದರ ಮೇಲೆ ಅಪರಾಧಿಗಳು ಟಾನಾ ಸೆಷನ್ಸು ಜಡ್ಜಿಯವರಲ್ಲಿ ಅಪೀಲನ್ನು ಮಾಡಿಕೊಂಡಿರಲಾಗಿ ಅಪರಾಧಿಗಳು ದೋಷಿಗಳಾಗಿರುತ್ತಾರೆಂದು ಆ ಜಡ್ಜಿಯು ಅಭಿಪ್ರಾಯಪಟ್ಟು ತಂದೆಯ ದಂಡವನ್ನು 50 ರೂ. ಗೂ ಮಗನ ದಂಡವನ್ನು 25 ರೂ ಗೂ ಇಳಿಸಿದರು. ರಾಮೇಶ್ವರಕ್ಕೆ ಹೋದರೂ ಶನಿಕಾಟ ತಪ್ಪದು!

ಪರ್ವತವು ಯಾವಾಗ ಕದಲುವುದು?

ಕಾರ್ತಿಕ ಬಹುಳ 30 ಅಮಾವಾಸ್ಯ ಭಾನುವಾರ ದೊಡ್ಡ ಬಿರುಗಾಳಿ ಮಳೆ ಬಂದು ಪರ್ವತಗಳು ಕದಲುವುವೆಂದೂ, ಭೂಮಿಯೆಲ್ಲ ಸಮುದ್ರಮಯವಾಗುವುದೆಂದೂ, ಭೂಕಂಪಗಳಾಗುವುವೆಂದೂ, ಅನೇಕ ಉಪದ್ರವಗಳುಂಟಾಗುವುವೆಂದೂ, ಭೂಮಿಯಲ್ಲಿ ಅಡಗಿಕೊಂಡು ಪ್ರಾಣಗಳನ್ನುಳಿಸಿಕೊಳ್ಳಬೇಕೆಂದೂ ಕೆಲ ಸಿದ್ಧಾಂತಿಗಳು ಬರೆದಿರುವುದರಿಂದ ಪ್ರಳಯವಾಗುತ್ತದೆಂದು ಪ್ರಜೆಗಳು ಭಯಗ್ರಸ್ತರಾಗಿದ್ದರು. 20-10-32ರಲ್ಲಿ ಗುರುತುಕ್ರಾಂತಾರ್ಧದಲ್ಲಿ ಗುರು ಹಸ್ತನಾಗುವುದರಿಂದ ಪ್ರಸಿದ್ಧನಾದ ಮಹಾಪುರುಷನು ಸತ್ತುಹೋಗುವನೆಂದು ಬರೆದಿದ್ದ ವಿಷಯವು ಎಷ್ಟರಮಟ್ಟಿಗೆ ನಿಜವಾಗಿದ್ದಿತೊ ಈ ವಿಚಾರವೂ ಅಷ್ಟರಮಟ್ಟಿಗೆ ನಿಜವಾಗಿದ್ದಿತು. ಇಂತಹ ದಿನ ಚರ್ಯಗಳನ್ನು ನಂಬಿ ಅನೇಕ ಮಂದಿ ಮೋಸಹೋಗಿರುತ್ತಾರೆ. ಅಮಾವಾಸ್ಯ ದಿವಸ ಇರುವ ಗ್ರಹ ಸಂಪುಟದ ಪ್ರಕಾರ ಯಾವ ವಿಧವಾದ ಉಪದ್ರವವಾಗುವುದಿಲ್ಲವೆಂದು ಎಲ್ಲರೂ ನಿರ್ಭಯವಾಗಿರಬೇಕು. ಮಾಘ ಫಾಲ್ಗುಣ ಮಾಸಗಳಲ್ಲಿ ರಾಜ್ಯಭಂಗವಾಗುವುದೆಂದು ಬರೆದಿರುವ ಸಂಗತಿಯು ನಿಜವಲ್ಲ ಎಂದು ಬೆಜವಾಡದ ಪ್ರೊ. ಕೆ. ಎಸ್. ಸಿಂಗ್ ಠಾಕೂರ್ ಎಂಬವರು ಪ್ರಕಟಿಸಿದ್ದರು.

ಅಸ್ಪೃಶ್ಯರ ಗುರುವಯ್ಯೂರು ದೇವಾಲಯ ಪ್ರವೇಶ

ಸವರ್ಣ ಹಿಂದುಗಳೇ ಗುರುವಯ್ಯೂರು ದೇವಾಲಯವನ್ನು ಪ್ರವೇಶಿಸಲು ಅರ್ಹರೆಂಬುದೂ, ಅವರಿಗಾಗಿಯೇ ಜಾಮೊರಿನರವರು ದೇವಾಲಯದ ಧರ್ಮಕರ್ತರಾಗಿರುವರೆಂಬುದೂ ಜಾಮರಿನ್ನರವರ ವಾದವಾಗಿರುತ್ತದೆ. ಹಾಗಿದ್ದರೆ ಸವರ್ಣದವರಾದ ಹಿಂದುಗಳ ಇಷ್ಟ ಪ್ರಕಾರವೇ ಅವರು ಧರ್ಮಾಧಿಕಾರವನ್ನು ನಡೆಯಿಸಬೇಕು. ಆದುದರಿಂದ ಸವರ್ಣದ ಹಿಂದುಗಳೆಲ್ಲರ ಅಭಿಪ್ರಾಯವನ್ನು ತಿಳಿಯಲು ಒಂದು ಪಂಚಾಯತಿಯೇರ್ಪಾಟಾಗಬೇಕಾಗಿದೆ. ಹಾಗಲ್ಲದೆ ಸವರ್ಣದವರಾದ ಹಿಂದುಗಳಿಗೆ ಜವಾಬದಾರಿಯನ್ನು ವಹಿಸಬೇಕಾದ ಅವಶ್ಯಕತೆಯಿಲ್ಲದೆ ಜಾಮರಿನ್ನರ ಇಚ್ಛಾನುಸಾರ ಅಧಿಕಾರವನ್ನು ನಡೆಯಿಸಬಹುದೆಂದೂ, ಆ ದೇವಸ್ಥಾನವು ಅವರ ಸ್ವಂತ ಸ್ವತ್ತೆಂದೂ, ಅವರ ಅನುಮತಿಯಿಲ್ಲದೆ ಸವರ್ಣದ ಹಿಂದುಗಳು ಸಹ ದೇವಾಲಯವನ್ನು ಪ್ರವೇಶಿಸಕೂಡದೆಂದೂ ನಿರ್ಧರವಾದರೆ ನಾವು ಈ ಪ್ರವೇಶ ಕಾರ್ಯವನ್ನು ಬಿಟ್ಟುಬಿಡಬೇಕು. ನಾವು ಅಪಮಾನಿತರಾದವೆಂದು ಭಾವಿಸದೆ ಒಪ್ಪಿಕೊಳ್ಳಬೇಕು. ಅಲ್ಲಿನ ಸಂಗತಿ ಸಂದರ್ಭಗಳೆಲ್ಲ ಹೇಗಿವೆ ಎಂದು ಗೊತ್ತುಮಾಡಿ ತಿಳಿಸುವುದು ಎಂದು ಮಹಾತ್ಮರು ಕಲ್ಲಿಕೋಟೆಯಲ್ಲಿರುವ ಪತ್ರಿಕಾ ಸುದ್ದಿಗಾರರಿಗೆ ಬರೆದಿರುತ್ತಾರೆ.

ಮಹಾತ್ಮರು ಶಾಂಕಿಯವರಿಗೆ ಬರೆದುತ್ತರ

"ನಾನು ಸ್ವಭಾವವಾಗಿ ಸಹಕಾರಕ್ಕೋಸ್ಕರ ಪೇಚಾಡುತ್ತಿದ್ದೇನೆ. ಪ್ರಜೆಗಳಿಗಿಷ್ಟವಿಲ್ಲದಿದ್ದರೂ ಅವರು ಅಟಾವಾ ಒಡಂಬಡಿಕೆಯನ್ನು ಅನುಮೋದಿಸುವಂತೆ ದೊರತನದವರು ಬಲವಂತ ಪಡಿಸುವುದು, ಪ್ರಜೆಗಳ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಅಣಗಿಸುವುದು, ನ್ಯಾಯಸಮ್ಮತವಾಗಿ ಮಾಡಲ್ಪಟ್ಟ ಭಯಂಕರ ವಿಧಾನಗಳನ್ನು ಸ್ಥಿರಪಡಿಸುವುದು ಮೊದಲಾದ ಕಾರ್ಯಗಳನ್ನು ನೋಡಿದರೆ ರಾಜ್ಯಾಧಿಕಾರವನ್ನು ನಿಜವಾಗಿ ಪ್ರಜೆಗಳಿಗೆ ದೊರತನದವರು ಕೊಡಲಿಷ್ಟವುಳ್ಳವರಾಗಿರುವರೆಂದು ನಂಬಲು ಯಾವ ಕಾರಣವೂ ತೋರುವುದಿಲ್ಲ. ದೊರತನದವರು ನಿರ್ಬಂಧ ವಿಧಾನವನ್ನು ಅವಲಂಬಿಸುವುದರಿಂದ ಪ್ರಜೆಗಳ ನೀತಿಯನ್ನು ಸಂಪೂರ್ಣವಾಗಿ ಹಾಳ್ಮಾಡುವರು. ನನಗೆ ಸತ್ಯಾಗ್ರಹದಲ್ಲಿ ಪೂರ್ಣ ನಂಬಿಕೆ ಇರುತ್ತದೆ. ನಾನು ಅದನ್ನು ನಿಲ್ಲಿಸಿ ಬಿಟ್ಟರೂ ದೊರತನದವರು ಪ್ರಜೆಗಳನ್ನು ಭಯಗೊಳಿಸುವ ಚರ್ಯವನ್ನವಲಂಬಿಸಲು ಯಾವ ನಿರೋಧವೂ ಉಂಟಾಗುವುದಿಲ್ಲ. ಶಾಂಕೀಯವರ ಧೈರ್ಯಕ್ಕಾಗಿಯೂ ಕಾರ್ಯದೀಕ್ಷೆಗಾಗಿಯೂ ಅವರಲ್ಲಿ ನನಗೆ ಬಹಳ ಗೌರವವಿರುತ್ತದೆ. ದೊರತನದವರು ಮನಸ್ಸು ನಿಶ್ಚಯವಾಗಿ ಬದಲಾಯಿಸಿರುವುದೆಂದು ಅವರು ಸ್ಪಷ್ಟಪಡಿಸುವುದಾದರೆ ನಾನು ಅವರ ಜೇಬಿನಲ್ಲೇ ಇರುವೆನು" ಎಂದು ಮಹಾತ್ಮರು ಶಾಂಕೀಯವರಿಗೆ ಕೊಟ್ಟುತ್ತರದಲ್ಲಿ ತಿಳಿಸಿರುತ್ತಾರೆ.

ಮಹಾತ್ಮರಿಗೆ ಸ್ವಧರ್ಮ ಸ್ವರಾಜ್ಯ ಸಂಘದವರ ಲೇಖನ

ಅಸ್ಪೃಶ್ಯತಾನಿವಾರಣೆಯ ವಿಚಾರವಾಗಿ ನೀವು ಮಾಡುತ್ತಿರುವ ಪ್ರಕಟಣೆಗಳಲ್ಲೆಲ್ಲ ಅಸ್ಪೃಶ್ಯತೆಯನ್ನು ಪುರಸ್ಕರಿಸುವುದು ಭಗವದ್ಗೀತೆಗೆ ವಿರುದ್ಧವೆಂದು ಹೇಳುತ್ತಿರುವಿರಿ. ಅಸ್ಪೃಶ್ಯತೆಯು ಭಗವದ್ಗೀತೆಗೆ ವಿರುದ್ಧವೆಂದು ನೀವು ನಿಮ್ಮ ಕಡೆಯ ವಿದ್ವಾಂಸರುಗಳನ್ನು ಕಳುಹಿಸಿ ಸಭೆಯಲ್ಲಿ ಅಸ್ಪೃಶ್ಯತೆಯು ಭಗವದ್ಗೀತೆಗೆ ವಿರುದ್ಧವೆಂದು ಸಾಧಿಸಿ ಸನಾತನ ಧರ್ಮಪರರನ್ನು ಒಡಂಬಡಿಸಿದಲ್ಲಿ ನಿಮ್ಮ ಪ್ರಚಾರಕ್ಕೆ ನಮ್ಮ ಸಂಘವು ಅಡ್ಡಿ ಬರುವುದಿಲ್ಲ. ಹಾಗಲ್ಲದೆ ನಿಮ್ಮ ಪಂಡಿತರುಗಳು ಸಿದ್ಧಾಂತಪಡಿಸದೆಹೋದಲ್ಲಿ ಸನಾತನ ಧರ್ಮಕ್ಕೆ ವಿರೋಧವಿಲ್ಲದಂತೆ ನಿಮ್ಮ ಪ್ರಚಾರ ಕಾರ್ಯವನ್ನು ಸುಪಡಿಸಿಕೊಳ್ಳಬೇಕು. ಅಂತಹ ಸಭೆಯನ್ನು ಮಾಡಲಿಕ್ಕೆತ್ನವಿಲ್ಲವಾದರೆ ನಿಮ್ಮಲ್ಲಿಗೆ ಬಂದು ನಿಮ್ಮೊಡನೆ ಮಾತನಾಡಲಿಕ್ಕೆ ನಮಗವಕಾಶವನ್ನು ಕೊಡಬೇಕು. ನಿಮ್ಮ ಸಿದ್ಧಾಂತ ಭಗವದ್ಗೀತೆಗೆ ಸಮ್ಮತವೆಂದು ನೀವು ಒಡಂಬಡಿಸಿದಲ್ಲಿ ನಾವು ನಿಮಗೆ ವಿರುದ್ಧವಾಗಿ ಯಾವ ಪ್ರಚಾರವನ್ನೂ ಮಾಡುವುದಿಲ್ಲ. ಉಭಯರ ಚರ್ಚೆಯನ್ನು ಸಮಗ್ರವಾಗಿ ಪ್ರಕಟಿಸಲು ಏರ್ಪಾಟು ಮಾಡಬೇಕೆಂದು ಮಹಾತ್ಮರನ್ನು ಕೇಳಿಕೊಂಡಿದ್ದುದಕ್ಕೆ ಆ ವಿಚಾರವಾಗಿ ಸಂಪೂರ್ಣವಾಗಿ ಉತ್ತರವನ್ನು ಕೊಡದೆ ಸನಾತರು ಬಂದಲ್ಲಿ ಅವರ ಕೂಡ ಮಾತನಾಡಲು ನಾನು ಸಂತೋಷಿಸುತ್ತೇನೆ ಎಂದು ಮಹಾತ್ಮರು ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ. ನಾವು ಕೋರಿರುವ ವಿಷಯವನ್ನು ಮಹಾತ್ಮರು ಅಂಗೀಕರಿಸದಲ್ಲಿ ಅವರೊಡನೆ ಮಾಡುವ ಸಂಭಾಷಣವು ಉಭಯ ಪಕ್ಷದವರಿಗೂ ಅನುಕೂಲವಾಗಿರುವುದೇ ವಿನಾ ಸುಮ್ಮನೆ ಹೋಗಿ ಮಾತನಾಡಿಕೊಂಡು ಬರುವುದರಿಂದ ಯಾವ ಪ್ರಯೋಜನವೂ ಇರುವುದಿಲ್ಲ" ಎಂದು ಸ್ವಧರ್ಮ ಸ್ವರಾಜ್ಯ ಸಂಘದವರು ಮಹಾತ್ಮರಿಗೆ ಬರೆದಿರುತ್ತಾರೆ.

ಇಂಡ್ಯಾ ಇಂಗ್ಲೆಂಡು ಸಖ್ಯ

ಪಾರ್ಲಿಮೆಂಟಿನಲ್ಲಿ ಕನ್ಸರ್ವೇಟಿವ್ ಪಕ್ಷದ ಮೆಂಬರಾಗಿರುವ ಮತ್ತು ಮಹಾದ್ಭುತ ಶಕ್ತಿಯುಳ್ಳವರೆಂದು ಭಾವಿಸಲ್ಪಟ್ಟಿರುವ ಎಚ್. ಕೆ. ಹೇಲ್ಸ್‌ರವರು ಭಾರತದೇಶಕ್ಕೆ ಬಂದು ಎಲ್ಲ ಕಡೆಯೂ ಸಂಚರಿಸಿ ಇಲ್ಲಿನ ಜನರ ಸ್ಥಿತಿಗತಿಗಳನ್ನೂ ಆಶೋತ್ತರವನ್ನೂ ಪ್ರತ್ಯಕ್ಷವಾಗಿ ನೋಡಿ ಕೇಳಿ ತಿಳಿದುಕೊಂಡು ಮರಳಿ ಸ್ವದೇಶಕ್ಕೆ ಈ ವಾರದಲ್ಲಿ ಹೊರಡುವವರಾಗಿರುತ್ತಾರೆ. ಇವರು ಈ ಮಧ್ಯೆ ಮಹಾತ್ಮರಿಗೆ ಒಂದು ಲೇಖನವನ್ನು ಬರೆದು ಅದರಲ್ಲಿ "ಭಾರತ ಸಮಸ್ಯಾ ಪರಿಷ್ಕಾರ ವಿಚಾರವಾಗಿ ನೀವು ಪಾರ್ಲಿಮೆಂಟಿನವರಿಗೇನಾದರೂ ಸಂದೇಶವನ್ನು ಕಳುಹುವುದಾದರೆ ನಾನು ಅದನ್ನು ಸಂತೋಷದಿಂದೊಪ್ಪಿಸುವೆನು. ಈಗುಂಟಾಗಿರುವ ಭೇದವನ್ನು ಹೋಗಲಾಡಿಸಿ ಪುನಃ ತೃಪ್ತಿಕರವಾದ ಸಮಾಧಾನವನ್ನುಂಟುಮಾಡಬಲ್ಲವರು ನಿಮ್ಮ ವಿನಾ ಮತ್ತೊಬ್ಬರಿಲ್ಲವು. ಅಂತಹ ಸಮಾಧಾನವು ಕುದುರಿದರೆ ಭಾರತ ದೇಶದಲ್ಲಿ ಸಂಪದ್ಯುಕ್ತವಾದ ನೂತನ ಶಕವಾರಂಭವಾಗುವುದು. ಕಾಂಗ್ರೆಸಿನವರಾರೂ ಮೂರನೆ ರೌಂಡು ಟೇಬಲು ಸಭೆಯಲ್ಲಿ ಭಾಗಿಗಳಾಗದಿರುವುದು ಬಹಳ ಸಂತಾಪಕರವು. ಲಂಡನ್ನಿನಲ್ಲಿ ಏನಾದರೂ ಒಡಂಬಡಿಕೆಯು ಕುದುರಿದರೂ ಕಾಂಗ್ರೆಸಿನವರ ಸಹಕಾರವು ದೊರಕಿದ ಹೊರತು ಅದು ಸರಿಯಾಗಿ ನೆರವೇರುವುದಿಲ್ಲ. ನೀವು ಭಾರತ ದೇಶದ ಮುಂದಣ ಕಲ್ಯಾಣವನ್ನು ಮನಃಪೂರ್ವಕವಾಗಿ ಕೋರುತ್ತಿರುವರೆಂಬುದರಲ್ಲಿ ತಿಲಾಂಶವೂ ಸಂಶಯವಿಲ್ಲ. ಆದುದರಿಂದ ಅಂತಹ ಅನುಕೂಲ ಫಲವನ್ನುಂಟುಮಾಡಲು ನೀವು ಇನ್ನೂ ಹೆಚ್ಚಾಗಿ ಸ್ವಾರ್ಥತ್ಯಾಗಮಾಡುತ್ತೀರೆಂದು ನಾನು ನಂಬಿರುತ್ತೇನೆ. ನಾನು ಪ್ರತ್ಯಕ್ಷವಾಗಿ ತಮ್ಮನ್ನು ಸಂದರ್ಶಿಸಿದ್ದರೆ ನನಗೆ ಮಹಾನಂದವಾಗುತ್ತಿದ್ದಿತು. ಆದರೆ ನನಗಂತಹ ಪುಣ್ಯಪ್ರಾಪ್ತಿಯಿಲ್ಲವು. ನೀವು ರೌಂಡು ಟೇಬಲು ಸಭೆಯಲ್ಲಿ ಭಾಗಿಗಳಾಗಿದ್ದ ಹೊರತು ಈ ಸಮಸ್ಯಾಪರಿಷ್ಕಾರವೆಂದಿಗೂ ಆಗುವುದಿಲ್ಲ. ಭಾರತದೇಶ ಚರಿತ್ರೆಯಲ್ಲಿ ಮುಖ್ಯತಮವಾದ ಈ ಭಾಗದಲ್ಲಿ ಅಪಾರವಾದ ನಿಮ್ಮ ಧೀಶಕ್ತಿಯನ್ನುಪಯೋಗಪಡಿಸಲಿಕ್ಕಿಲ್ಲವಾಗಿರುವುದಕ್ಕಾಗಿ ನಾನೂ ಬಹಳವಾಗಿ ಚಿಂತಿಸುತ್ತೇನೆ. ನನ್ನಂತೆಯೇ ಅನೇಕ ಕೋಟಿ ಪ್ರಜೆಗಳು ಕೂಡ ಚಿಂತಿಸುತ್ತಿದ್ದಾರೆ" ಎಂದು ತಿಳಿಸಿರುವರು.

ಗುಲಾಬ್ ಚಂದ್‌ರವರ ದೋಷವಿಮುಕ್ತತೆ

ವಾಲ್‌ಚಂದ್ ಹೀರಾಚಂದ್‌ರವರ ಸಹೋದರ ಗುಲಾಬ್ ಚಂದ್ ಹೀರಾಚಂದರವರು ಕಳೆದ ಜನವರಿ ತಿಂಗಳಿನಲ್ಲಿ ಆರ್ಡಿನೆನ್ಸು ಪ್ರಕಾರ ಸೆರೆಹಿಡಿಯಲ್ಪಟ್ಟು ಬಿಜಾಪುರದ ಜೈಲಿನಲ್ಲಿಡಲ್ಪಟ್ಟಿದ್ದರು. ಇವರು ಬಂಧನದಿಂದ ಬಿಡಲ್ಪಡಬೇಕೆಂದೂ, ಬಿಡಲ್ಪಟ್ಟ 18 ಘಂಟೆಯೊಳಗೆ ಪೊಲೀಸಿನವರಲ್ಲಿಗೆ ಬಂದು ಕಾಣಿಸಿಕೊಳ್ಳಬೇಕೆಂದೂ, ಡಿಸ್ಟ್ರಿಕ್ಟು ಮೆಜಿಸ್ಟ್ರೇಟರ ಅಪ್ಪಣೆಯಿಲ್ಲದೆ ಸೊಲ್ಲಾಪುರವನ್ನು ಪ್ರವೇಶಿಸ ಕೂಡದೆಂದೂ ಸೊಲ್ಲಾಪುರದ ಡಿ|| ಮೆಜಿಸ್ಟ್ರೇಟರು ಫೆಬ್ರವರಿ ತಾ|| 25 ರಲ್ಲಿ ಅಪ್ಪಣೆ ಮಾಡಿದರು. ಇದಾದ ಒಂದು ವಾರದಲ್ಲಿ ಗುಲಾಬ್‌ಚಂದರವರು ಬಿಡಲ್ಪಟ್ಟರು. ಇದಕ್ಕೆ ಮೊದಲೇ ಅಪರಾಧಿಯು ಡಿ|| ಮೆಜಿಸ್ಟ್ರೇಟರ ಅನುಮತಿಯನ್ನು ಪಡೆದು ಬೊಂಬಾಯಿಗೆ ಹೋಗಿ ಅಸ್ವಸ್ಥಳಾಗಿದ್ದ ತಮ್ಮ ಮಗಳನ್ನು ನೋಡಿಕೊಂಡು ಹಿಂದಿರುಗಿ ಬರುವಾಗ್ಗೆ ಮಾರ್ಗದಲ್ಲಿ ಸೊಲ್ಲಾಪುರದ ಸ್ಟೇಷನ್ನಿನ ಹತ್ತಿರ, ಅಪರಾಧಿಯು ತಮ್ಮ ಬಂಗಲೆಗೆ ಬಂದು ತಮ್ಮನ್ನು ಕಾಣಬೇಕೆಂದು ಡಿ|| ಮೆಜಿಸ್ಟ್ರೇಟರು ಮಾಡಿದ್ದ ಅಪ್ಪಣೆಯು ತೋರಿಸಲ್ಪಟ್ಟುದರ ಮೇಲೆ ಅಪರಾಧಿಯು ಡಿ|| ಮೆಜಿಸ್ಟ್ರೇಟರ ಬಂಗಲಿಗೆ ಹೋಗಿ ಅವರನ್ನು ನೋಡಿದರು. ಅಷ್ಟರಲ್ಲಿ ಇವರನ್ನು ಪೊಲೀಸರು ಸೆರೆ ಹಿಡಿದು ಮೆಜಿಸ್ಟ್ರೇಟರ ವಿಚಾರಣೆಗೆ ಗುರಿಪಡಿಸಲು ಆರ್ಡಿನೆನ್ಸು 21 ನೆಯ ಸೆಕ್ಷನ್ ಪ್ರಕಾರ 18 ತಿಂಗಳ ಕಠಿಣ ಸಜ ಮತ್ತು 22,000 ರೂ. ಜುಲ್ಮಾನೆ ವಿಧಿಸಲ್ಪಟ್ಟರು. ಅದರ ಮೇಲೆ ಅಪರಾಧಿಯು ಸೆಷನ್ಸು ಕೋರ್ಟಿಗೆ ಅಪೀಲು ಮಾಡಿಕೊಳ್ಳಲಾಗಿ ಜುಲ್ಮಾನೆಯು 12,000 ಕ್ಕಿಳಿಸಲ್ಪಟ್ಟಿತು. ಇದರಮೇಲೆ ಬೊಂಬಾಯಿ ಹೈಕೋರ್ಟಿಗೆ ಅಪೀಲುಮಾಡಿರಲಾಗಿ ಇಬ್ಬರು ನ್ಯಾಯಮೂರ್ತಿಗಳು ಅಪರಾಧಿ ಕಡೆಯ ವಕೀಲರ ವಾದವನ್ನು ಕೇಳಿ, ಅಪರಾಧಿಯು ಡಿ|| ಮೆಜಿಸ್ಟ್ರೇಟರ ಅಪ್ಪಣೆಯ ಪ್ರಕಾರ ಸೊಲ್ಲಾಪುರವನ್ನು ಪ್ರವೇಶಿಸಿದುದು ತಪ್ಪಲ್ಲವೆಂದು ನಿರ್ಧರಿಸಿ ದೋಷಮುಕ್ತರನ್ನಾಗಿ ಮಾಡಿದರು.

ಒಳದೇಶದ ವೃತ್ತಾಂತಗಳು

ಒಂದನೆಯ ಕೌನ್ಸಿಲರಾದ ರಾಜಮಂತ್ರ ಪ್ರವೀಣ ಮ|| ಕೆ. ಮೆಥ್ಯೂರವರ ಪುತ್ರಿ ಮಿಸ್ ಎಂ. ಮೆಥ್ಯೂ, ಬಿ.ಎ., ಬಿ.ಎಸ್‌ಸಿ., (ಲಂಡನ್) ರವರು 1 ವರ್ಷ ಕಾಲ ಪ್ರಬೋಷನ್ನಿನ ಮೇಲೆ ಮೈಸೂರು ಮಹಾರಾಣಿಯವರ ಕಾಲೇಜಿನಲ್ಲಿ ಜಂತ್ರಿಯ ಅಸಿಸ್ಟೆಂಟ್ ಪ್ರಫೆಸರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಬರುವ ಡಿಸೆಂಬರು ತಾ|| 4 ನೆಯ ಭಾನುವಾರ ಸಾಯಂಕಾಲ ಅರಕಲಗೂಡಿನಲ್ಲಿ ಡಿಸ್ಟ್ರಿಕ್ಟು ಬೋರ್ಡಿನವರ ಪ್ರೋತ್ಸಾಹದಿಂದ ನಡೆಯುವ ದನಗಳ ಪ್ರದರ್ಶನದಲ್ಲಿ ಉತ್ತಮವಾದ ರಾಸುಗಳಿಗೆ ಬಹುಮಾನಗಳು ಹಾಸನ ಡಿ|| ಡೆಪ್ಯುಟಿಕಮಿಷನರ್ ಮ|| ಟಿ. ಜಿ. ರಾಮಯ್ಯರ್‌ರವರಿಂದ ಹಂಚಲ್ಪಡುವುವು.

ಬೆಂಗಳೂರು ಸ್ಮಾಲ್‌ಕಾಜ್ ಕೋರ್ಟು ಸಬ್ ಜಡ್ಜಿಯವರಾಗಿದ್ದ ಮ|| ಸಿ. ನಾರಾಯಣಸ್ವಾಮಿ ನಾಯಡು, ಬಿ.ಎ., ಬಿ. ಎಲ್. ರವರು ಮೈಸೂರಿನ ಆಕ್ಟಿಂಗ್ ಡಿಸ್ಟ್ರಿಕ್ಟು ಮತ್ತು ಸೆಷನ್ಸು ಜಡ್ಜಿಯವರಾಗಿಯೂ, ಫಸ್ಟ್ ಗ್ರೇಡ್ ಮುನ್ಸೀಫರಾದ ಮ|| ಜೆ. ಕೃಷ್ಣಮೂರ್ತಿ, ಬಿ.ಎ., ಎಲ್‌ಎಲ್.ಬಿ. ಯವರು ಬೆಂಗಳೂರು ಸ್ಮಾಲ್‌ಕಾಜ್ ಕೋರ್ಟು ಆಕ್ಟಿಂಗ್ ಸಬ್ ಜಡ್ಜಿಯವರಾಗಿಯೂ ನಿಯಮಿಸಲ್ಪಟ್ಟಿರುವರು.

ಮೈಸೂರು ಸಂಸ್ಥಾನದ ಪ್ರಾಥಮಿಕ ಪಾಠಶಾಲೆಗಳ ಉಪಾಧ್ಯಾಯರ ಸಮ್ಮೇಳನವು ಬೆಂಗಳೂರು ನಗರದೊಳಗೆ ಬರುವ ಡಿಸೆಂಬರ್ ತಾ|| 20-21 ಮತ್ತು 22 ರ ಬದಲು ತಾ|| 21, 22 ಮತ್ತು 23 ರಲ್ಲಿ ನಡೆಯಲು ಗೊತ್ತಾಗಿರುತ್ತದೆಂದೂ ಶೃಂಗೇರಿ ಜಗದ್ಗುರುಗಳು ಈ ಸಮ್ಮೇಳನವು ಜಯಪ್ರದವಾಗಿ ನಡೆಯಲೆಂದು ಆಶೀರ್ವದಿಸಿ ಇದರ ವೆಚ್ಚಕ್ಕಾಗಿ ದ್ರವ್ಯ ಸಹಾಯವನ್ನು ಅನುಗ್ರಹಿಸಿರುತ್ತಾರೆಂದೂ ಸಮ್ಮೇಳನದ ಸೆಕ್ರೆಟರಿಯವರು ತಿಳಿಸಿರುತ್ತಾರೆ.

ಟಿ. ನರಸೀಪುರ ತಾ|| ಬನ್ನೂರು ಸಮೀಪದಲ್ಲಿರುವ ರಂಗಸಮುದ್ರದಲ್ಲಿ ಒಂದು ಭೂಮಿಯ ಸ್ವಾಧೀನದ ವಿಚಾರವಾಗಿ ಹಿಂದುಗಳೂ ಮಹಮ್ಮದೀಯರೂ ಪರಸ್ಪರ ಕಲಹ ಮಾಡಿ ಮಚ್ಚು ಕುಡಲುಗಳಿಂದ ಹೊಡೆದಾಡಿದರು. ಇದರಿಂದ 5-6 ಮಹಮ್ಮದೀಯರಿಗೂ 2-3 ಹಿಂದುಗಳಿಗೂ ಮೈಯೆಲ್ಲಾ ಗಾಯಗಳಾಗಿ ಅವರೆಲ್ಲರೂ ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಹೊಂದುತ್ತಿರುವುದಾಗಿಯೂ ಈ ಕಲಹಕ್ಕೆ ಸೇರಿದ್ದವರಲ್ಲಿ ಕೆಲವರು ಪಲಾಯನವಾಗಿರುವುದಾಗಿಯೂ ಕೇಳುತ್ತೇವೆ.

ಹಾಸನ ಡಿ|| ಅರಕಲಗೂಡು ತಾ|| ರಾಮನಾಥಪುರದಲ್ಲಿ ಪದ್ಧತಿಯ ಪ್ರಕಾರ ಸುಬ್ರಾಯನ ಷಷ್ಠಿ ದಿವಸ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಯ ರಥೋತ್ಸವ ನಡೆಯುವಾಗ್ಗೆ ಆರ್ಯ ವೈಶ್ಯ ಮಹಾಜನರ ಅಭಿವೃದ್ಧಿಗಾಗಿ ವೈಶ್ಯಾ ಕಾನ್ಫರೆನ್ಸು ಬರುವ ಡಿಸೆಂಬರು ತಾ|| 2 ರಿಂದ 6 ರ ವರೆಗೆ ಶ್ರೀ ಬ್ರಹ್ಮತಂತ್ರ ಪರಕಾಲ ಸ್ವಾಮಿಯವರ ಮಠದವರು ಕೃಪೆಯಿಟ್ಟು ಬಿಟ್ಟುಕೊಟ್ಟಿರುವ ಸತ್ರದಲ್ಲಿ ಜರುಗುತ್ತಾದುದರಿಂದ ವೈಶ್ಯ ಕುಲಾಭಿಮಾನಿಗಳು ಆ ಕಾಲಕ್ಕೆ ದಯಮಾಡಿಸಬೇಕೆಂದೂ, ಬರತಕ್ಕವರ ವಾಸಕ್ಕೂ ಊಟಕ್ಕೂ ಉಚಿತವಾದೇರ್ಪಾಟು ಮಾಡಲ್ಪಟ್ಟಿರುವುದೆಂದೂ ಅರಕಲಗೂಡಿನ ಮ|| ಎಸ್. ಕೃಷ್ಣಸ್ವಾಮಿಯವರು ತಿಳಿಸಿರುತ್ತಾರೆ.

ರಾಜಧಾನಿಯ ಕ್ಷಯರೋಗದ ಆಸ್ಪತ್ರೆಯಲ್ಲಿ ಬನುಮಯ್ಯನವರ ವಾರ್ಡಿನಲ್ಲಿರಲು ಪ್ರತಿ ರೋಗಿಯೂ ದಿನವೊಂದಕ್ಕೆ 2 ರೂ. ನಂತೆಯೂ, ಪ್ರತ್ಯೇಕ ವಾರ್ಡಿನಲ್ಲಿರಲು 4 ರೂ. ನಂತೆಯೂ ಕೊಡಬೇಕಾಗಿದ್ದಿತು. ಈಗ ಬನುಮಯ್ಯ ವಾರ್ಡಿಗೆ 1 ರೂ. ನಂತೆಯೂ ಪ್ರತ್ಯೇಕ ವಾರ್ಡಿಗೆ 2 ರೂ. ನಂತೆಯೂ ಕೊಡಬೇಕೆಂದು ಪ್ರಭುತ್ವದವರಿಂದ ವಿಧಾಯಕ ಮಾಡಲ್ಪಟ್ಟಿದೆ. ಇದರಿಂದ ಮಧ್ಯ ತರಗತಿಯ ರೋಗಿಗಳಿಗೆ ತಕ್ಕಮಟ್ಟಿಗೆ ಉಪಕಾರವಾಯಿತೆಂದು ಹೇಳಬಹುದು. ಆದರೆ ಈ ಆಸ್ಪತ್ರೆಯ ಯಾವ ವಾರ್ಡಿನಲ್ಲೂ ಸ್ಥಳ ಸಿಕ್ಕುವುದು ಬಹಳ ಪ್ರಯಾಸವಾಗಿದೆ, ಇದು ನಿವಾರಣೆಯಾದಲ್ಲಿ ರೋಗಿಗಳಿಗೆ ಮಹೋಪಕಾರವೂ, ಆಸ್ಪತ್ರೆಯ ಸ್ಥಾಪನೋದ್ದೇಶ ಸಾರ್ಥಕವೂ ಆಗುವುದರಲ್ಲಿ ಅಭ್ಯಂತರವಿಲ್ಲ.

ವಿದ್ಯಾಭೂಷಣ ಮ|| ವಿ. ಎಸ್. ಸಂಜೀವರಾಯರು ಬೆಂಗಳೂರು ಸೆಷನ್ಸು ಜಡ್ಜಿಯವರ ಅಪೀಲು ತೀರ್ಮಾನದಮೇಲೆ ಹೈಕೋರ್ಟಿಗೆ ಅಪೀಲು ಮಾಡಿಕೊಂಡಿದ್ದ ಅಪೀಲ್‌ನಲ್ಲಿ ಕಾರಾಗೃಹವಾಸ ಶಿಕ್ಷೆಯು ತಪ್ಪಿಸಲ್ಪಟ್ಟು 300 ರೂ. ಅರ್ಥದಂಡವು ಸ್ಥಿರಗೊಳಿಸಲ್ಪಟ್ಟಿದ್ದಿತು. ಈ ಅರ್ಥ ದಂಡವನ್ನು ಮನ್ನಿಸಬೇಕೆಂದೂ ಒಂದುವೇಳೆ ಇದು ಸಾಧ್ಯವಾಗದಿದ್ದಲ್ಲಿ ಹಾಗೆ ಮಾಡಲು ಪ್ರಭುತ್ವದವರಿಗೆ ಶಿಫಾರಸ್ಸನ್ನು ಮಾಡಬೇಕೆಂದೂ ಮ|| ಸಂಜೀವರಾಯರು ಹೈಕೋರ್ಟಿಗೆ ಬಿನ್ನೈಸಿಕೊಂಡಿದ್ದುದರಮೇಲೆ ಮೊದಲು ಈ ಅಪೀಲು ವಿವಾದವನ್ನು ತೀರ್ಮಾನಿಸಿದ ಜಸ್ಟಿಸ್ ಮ|| ರಾಮಚಂದ್ರರಾಯರು ತಾವು ಮೊದಲು ಮಾಡಿರುವ ತೀರ್ಮಾನವನ್ನು ಬದಲಾಯಿಸಲು ಅವಕಾಶವಿಲ್ಲವೆಂದು ಬಿನ್ನಪವನ್ನು ತಿರಸ್ಕರಿಸಿಬಿಟ್ಟರು.

ಅರಮನೆಯ ಇಂಗ್ಲೀಷು ಬ್ಯಾಂಡು ಮಾಸ್ಟರಾಗಿದ್ದ ಡೆಫ್ರಿಸ್ ಎಂಬವರು ಚರ್ಚ್ ರೋಡಿನ ಮೇಲ್ಗಡೆ ಅಮಲ್ದಾರ್ ದಾವೂದ್ ಖಾನ್ ರೋಡು, ಬೆಂಗಳೂರು-ನೀಲ್ಗಿರಿ ರೋಡು ಮತ್ತು ಚರ್ಚ್ ರೋಡುಗಳು ಕೂಡುವ ಸ್ಥಳದಲ್ಲಿ ಮಿ|| ಡೆಫ್ರಿಸ್‌ರವರ ಬಂಗಲಿಗೆ ಒತ್ತರಿಸಿಕೊಂಡಿರುವ ಸರ್ಕಲ್ಲಿಗೆ, ಇಂಗ್ಲಿಷ್ ಮತ್ತು ಇಂಡ್ಯಾ ಸಂಗೀತಗಳನ್ನು ಮಿಶ್ರಮಾಡಿ ಬಹಳ ಹೆಸರುವಾಸಿಯನ್ನು ಡೆಫ್ರಿಸ್‌ರವರು ಪಡೆದಿದ್ದುದರಿಂದ ಅವರ ಹೆಸರನ್ನಿಡಬೇಕೆಂದು ಮ್ಯು|| ಕೌನ್ಸಿಲರು ಮಿ|| ಡಬ್ಲ್ಯು. ಎಚ್. ಥಿಯೋಬಾಲ್ಡ್‌ರವರು ಒಂದು ಸೂಚನೆಯನ್ನು ತಂದು ಬಹಳ ಸಾಹಸಪಡುತ್ತಿದ್ದರು. ಇವರು ಅಂಥಾ ಪ್ರಖ್ಯಾತ ಪುರುಷರಾಗಿರದೆ ಅರಮನೆಯಲ್ಲಿ ಸಾಮಾನ್ಯ ನೌಕರರಾಗಿದ್ದುದರಿಂದ ಸರ್ಕಲ್ಲಿಗೆ ಅವರ ಹೆಸರನ್ನಿಡಕೂಡದೆಂದು ಚರ್ಚೆಯು ನಡೆಯುತ್ತಿದ್ದು ಇದೇ ತಾ|| 26 ನೆಯ ಶನಿವಾರ ನಡೆದ ಕೌನ್ಸಿಲ್ ಮೀಟಿಂಗಿನಲ್ಲಿ ಸರ್ಕಲ್ಲಿಗೆ ಡೆಫ್ರಿಸ್‌ರವರ ಹೆಸರನ್ನಿಡುವಷ್ಟು ಪ್ರಖ್ಯಾತ ಪುರುಷರಾಗಿ ಡೆಫ್ರಿಸ್‌ರವರಿರದೆ ಸಾಮಾನ್ಯರಾಗಿದ್ದರೆಂದು ಅರಮನೆಯ ಪರವಾಗಿ ಪ್ರತಿನಿಧಿಗಳಾಗಿರುವ ಮ|| ಎ. ರಾಮರಾಯರು ವಾದಿಸಿದುದರ ಮೇಲೆ ಮಿ|| ಥಿಯೋಬಾಲ್ಡ್‌ರವರು ತಮ್ಮ ಸೂಚನೆಯನ್ನು ಹಿಂದಕ್ಕೆ ತೆಗೆದುಕೊಂಡರು.

ಪತ್ರವ್ಯವಹಾರ

ಪತ್ರವ್ಯವಹಾರಕರ ಲೇಖಕರಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು — ಸಂಪಾದಕ.

ಬೊಂಬಾಯಿನ ವೀರಶೈವಸಮಾಜ.

ಇದೇ ತಾ|| 17 ನೆಯ ಗುರುವಾರ ಬೊಂಬಾಯಿನಗರದ ವೀರಶೈವ ಸಮಾಜದವರ ವತಿಯಿಂದ ದೇವಕರ ಭವನದೊಳಗೆ ಬೊಂಬಾಯಿ ಡಿವಿಜನ್ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ರ್‍ಯಾಂಗಲರ್ ಡಿ. ಸಿ. ಪಾವಟೆಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯು ನಡೆದು ಸೊಲ್ಲಾಪುರದಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ತಮ್ಮ ತಂದೆಯವರಾದ ಬಿ. ಎನ್. ಕಾಡಾದಿಯವರ ಸ್ಮಾರಕವಾಗಿ ಕಟ್ಟುವುದಕ್ಕಾಗಿಯೂ, ಅದರ ಪೋಷಣೆಗಾಗಿಯೂ 60,000 ರೂ.ಗಳನ್ನು ಕೊಟ್ಟಿರುವ ಮ|| ಎನ್. ಬಿ. ಕಾಡಾದಿಯವರ ಔದಾರ್ಯವನ್ನು ಮ|| ಗಳಾದ ಅಡ್ವೊಕೇಟ್ ನೊಕಾಸಿ, ಜಿ. ಬಿ. ಯವರು, ಜೀರಿಗೆಯವರು, ಅಂದಲೋಕರು, ಸಾದಾದಿಯವರು, ಭಟ್ಟರ್‌ರವರು, ಮೊದಲಾದವರು ಶ್ಲಾಘಿಸಿ ಮತ್ತು ಇತರರು ಈ ವಿದ್ಯಾಭಿಮಾನಿಗಳ ಅನುಕರಣ ಮಾಡಬೇಕೆಂದು ಭಾಷಣಗಳನ್ನು ಮಾಡಿ ಧರ್ಮಕರ್ತರನ್ನು ಅಭಿನಂದಿಸಿದರು.

ಪ್ರತ್ಯಕ್ಷದರ್ಶಿ.

ಕರ್ನಾಟಕ ಸಾಹಿತ್ಯ ಸಮ್ಮೇಲನವು.

ಈ ವರ್ಷದ ಕನ್ನಡ ಸಾಹಿತ್ಯ ಸಮ್ಮೇಲನವನ್ನು ಧಾರವಾಡದಲ್ಲಿ ಕೂಡುವ ವೀರಶೈವ ಮಹಾಸಭೆಯವರು ಮಾಡಬೇಕೆಂದು ಕೆಲವರು ಸೂಚನೆಯನ್ನು ಮಾಡುತ್ತಾರೆ. ಇದು ಬಹಳ ಯೋಗ್ಯವಾದ ಸೂಚನೆಯು. ಯಾಕಂದರೆ ವೀರಶೈವ ಮಹಾಸಭೆಯು ಕಾಲಕ್ಕೆ ಶಿಕ್ಷಣ ಪರಿಷತ್, ಮಹಿಳಾ ಪರಿಷತ್, ಚಿತ್ರಕಲಾಪ್ರದರ್ಶನ, ವ್ಯಾಪಾರಿಗಳ ಸಭೆ, ವೀರಶೈವ ಪಂಡಿತಮಂಡಲ, ತರುಣ ಸಮ್ಮೇಲನ ಮೊದಲಾದವು ಆತ್ಯಾವಶ್ಯಕವಿರುತ್ತವೆ. ವೀರಶೈವರು ಕನ್ನಡಿಗರು, ಕನ್ನಡವೆಂದರೆ ವೀರಶೈವರು, ವೀರಶೈವರೆಂದರೆ ಕನ್ನಡಿಗರು ಎಂದು ನಾವು ಅಭಿಮಾನ ಪಡುತ್ತೇವೆ. ಅಭಿಮಾನಕ್ಕೆ ಸರಿಯಾಗಿ ಕಾರ್ಯವನ್ನು ಮಾಡಬೇಕಾಗುತ್ತದೆ. ಸಾಹಿತ್ಯ ಸಮ್ಮೇಲನದಲ್ಲಿ ಭಾಗವನ್ನು ತೆಗೆದುಕೊಂಡ ವೀರಶೈವರು ಬಹಳ ಕಡಿಮೆಯೆಂದು ಹೇಳಲಿಕ್ಕೆ ವಿಷಾದವಾಗುತ್ತದೆ. ವೀರಶೈವರ ವಾಙ್ಮಯವು ಕನ್ನಡವೆಂದಮೇಲೆ ಪ್ರತಿಯೊಬ್ಬನು ಆ ಭಾಷೆಯ ಸಲುವಾಗಿ ಪ್ರಯತ್ನವನ್ನು ಮಾಡಲೇ ಬೇಕಾಗುತ್ತದೆ. ಅದ್ದರಿಂದ ಮಹಾಸಭೆಯ ಕಾಲಕ್ಕೆ ಸಾಹಿತ್ಯ ಸಮ್ಮೇಲನವನ್ನು ಮಾಡಿದರೆ ಎಲ್ಲಾ ಪ್ರಾಂತದ ಸಾಹಿತ್ಯ ಪಂಡಿತರಿಗೂ, ಸಭೆಗೆ ಬಂದ ವೀರಶೈವ ಪ್ರಮುಖರಿಗೂ ಪರಸ್ಪರ ವಿಚಾರವಿನಿಮಯವಾಗಿ ಒಳ್ಳೇ ಲಾಭವಾಗುವದರಲ್ಲಿ ಸಂದೇಹವಿಲ್ಲ. ಹೆಚ್ಚು ಸಭೆಗಳಾದಷ್ಟು ಮಹಾಸಭೆಗೆ ಗೌರವವೇ ಇರುತ್ತದೆ. ಯಾರು ಮಾಡತಕ್ಕವರೆಂದು ಉದಾಶೀನತೆಯನ್ನು ತಾಳಿದರೆ ಅವನಿಂದ ಯಾವ ಕೆಲಸವಾಗುವದಿಲ್ಲ. ಅದ್ದರಿಂದ ಮಹಾಸಭೆಯ ಮುಖಂಡರು ವಿಚಾರಮಾಡಿ ಬೇಗನೆ ಸಾಹಿತ್ಯ ಸಮ್ಮೇಲನವನ್ನು ಮಾಡಬೇಕೆಂದು ನನ್ನ ಸೂಚನೆಯು.

ಚಂದ್ರಶೇಖರಶಾಸ್ತ್ರಿ,
ವ್ಯಾಕರಣತೀರ್ಥ ಗಂಗಾಧರಕಾಲೇಜು.

ವೀರಶೈವ ಮಹಾಸಭೆಯು.

(ಲೇ. ಚಂದ್ರಶೇಖರ ಶಾಸ್ತ್ರೀ ವ್ಯಾಕರಣತೀರ್ಥ, ಪ್ರಿನ್ಸಿಪಾಲ, ಗಂಗಾಧರ ಸಂಸ್ಕೃತ ಕಾಲೇಜು, ಹುಬ್ಬಳ್ಳಿ.)

ವೀರಶೈವ ಮಹಾಸಭೆಯು ನೆರೆಯುವಕಾಲಾವಧಿಯು ಒಂದೇ ತಿಂಗಳು ಉಳಿದರೂ ಇನ್ನೂ ಅಧ್ಯಕ್ಷರ ಚರ್ಚೆಯೇ ನಡೆದಿರುವದು ವೀರಶೈವರ ದಕ್ಷತೆಯ ವಿಹೀನತೆಯನ್ನು ಚೆನ್ನಾಗಿ ವ್ಯಕ್ತಮಾಡುತ್ತದೆ. ಯಾವ ಕಾರ್ಯದಲ್ಲಿಯೇ ಆಗಲಿ ಇವರಲ್ಲಿಯ ಮತ್ಯೈಕ್ಯತೆಯೇ ಇಲ್ಲವೆಂದಮೇಲೆ ಇದರಿಂದ ಮಹತ್ತರಗಳಾದ ಕಾರ್ಯಗಳಾಗುವದೆಂತಿದ್ದಿಗಿರಲಿ, ಸಮಾಜಕ್ಕೆ ಹಾನಿಯೇ ಆಗುವದು. 35 ಲಕ್ಷ ಜನರುಳ್ಳ ಲಿಂಗಾಯತರಿಗೆ ಮೊನ್ನೆ ಅಲಹಾಬಾದಿನಲ್ಲಿ ನಡೆದ ಐಕ್ಯ ಪರಿಷತ್ತಿನಲ್ಲಿ ದಿಲ್ಲಿಯ ಅಸೆಂಬ್ಲಿಯೊಳಗೆ 14 ಜನ ಮೆಂಬರರಬೇಕೆಂದು ನಿಷ್ಕರ್ಷೆಯಾಗಿದೆ. ಅಷ್ಟೇ ಜನ ಸಂಖ್ಯೆಯುಳ್ಳ ವೀರಶೈವರಿಗಷ್ಟೇ ಸ್ಥಾನಗಳೆಂಬುದನ್ನು ವಾಚಕರೇ ಗಣಿತಮಾಡಲಿ. ಇದು ಯಾವದರ ಫಲವು? ಸ್ವಾರ್ಥ ಸಾಧಕರು ಸಮಾಜದಲ್ಲಿ ಇಲ್ಲದ ಗಲಭೆಗಳನ್ನೆಬ್ಬಿಸಿ ಅನೈಕ್ಯದ ದಾರಿಯನ್ನು ಹಿಡಿಸಿದ್ದರ ಫಲವು. ಅದ್ದರಿಂದ ವೀರಶೈವ ಮಹಾಸಭೆಯನ್ನು ಕೂಡಿಸಿ ಸ್ವಲ್ಪಮಟ್ಟಿಗಾದರೂ ಸಮಾಜದ ಕಾರ್ಯಗಳನ್ನು ಮಾಡಿ ಯೋಗ್ಯ ಉಪಾಯಗಳನ್ನು ಹುಡುಕುವದು ಪ್ರತಿಯೊಬ್ಬ ಲಿಂಗಾಂಗಿಯ ಕರ್ತವ್ಯಕರ್ಮವಾಗಿರುತ್ತದೆ. ವೀರಶೈವ ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿಯವರು ಶ್ರೀ ಹಳಕಟ್ಟಿ ವಕೀಲರನ್ನು ಅಧ್ಯಕ್ಷರನ್ನಾಗಿ ಆರಿಸಿರುವರು. ಆದರೆ ಕೆಲವರು ಇದರ ಮೇಲೆ ಟೀಕೆಯನ್ನು ಮಾಡಿ ಸುಮ್ಮನೆ ಗೊಂದಲವನ್ನೆಬ್ಬಿಸಲಿಕ್ಕೆ ಹತ್ತಿರುವರು. 6 ವರ್ಷಗಳಿಂದ ಮಹಾಸಭೆಯು ಮೂಲೆಗೆ ಬಿದ್ದಿದೆ. ಅದನ್ನು ಹೇಗಾದರೂ ಮಾಡಿ ಪುನಃ ಪ್ರಾರಂಭಮಾಡುವುದು ಯೋಗ್ಯವಿರುತ್ತದೆ. ಪ್ರತಿವರ್ಷ ಮಹಾಸಭೆಯು ನಡೆಯಲಿಕ್ಕೆ ಹತ್ತಿದರೆ ಮಹಾರಾಷ್ಟ್ರ ಪ್ರಾಂತದವರಾಗಲೀ ತೆಲಗು ದೇಶದವರಾಗಲೀ ಅಧ್ಯಕ್ಷರಾಗಲಿಕ್ಕೆ ಸಮಯವು ಸಿಗುತ್ತದೆ. ಲೇಖಕನ ಸರ್ಕಿಯೂ ಈಡೇರಬಹುದಾಗಿದೆ. ಈ ವರ್ಷ ಹಳಕಟ್ಟಿಯವರೇ ಯೋಗ್ಯರಿರುತ್ತಾರೆ. ಸಮಾಜದಲ್ಲಿ ಅವರು ಅನೇಕ ಕಾರ್ಯಗಳನ್ನು ಮಾಡಿಯೂ ಮಾಡುತ್ತಲೂ ಇರುತ್ತಾರೆ. ಗುಣೈಕ ಪಕ್ಷಪಾತಕೆಯಿಂದ ನೋಡಿದರೆ ಸದ್ಯಕ್ಕೆ ಸಮಾಜದಲ್ಲಿ ಅವರಷ್ಟು ಕೆಲಸವನ್ನು ಮಾಡಿದವರು ಸಿಕ್ಕುವುದಿಲ್ಲ. ದೋಷೈಕದೃಷ್ಟಿಯು ಮಾತು ಬೇರೆ. ಕೇವಲ ಶ್ರೀಮಂತರೂ ದೊಡ್ಡ ಅಧಿಕಾರಿಗಳೂ ಆಗಿದ್ದ ಮಾತ್ರಕ್ಕೆ ಮಹಾಸಭೆಯ ಅಧ್ಯಕ್ಷತೆಯು ಸಿಕ್ಕಲಾರದು. ಯಾರು ಸಮಾಜ ಸೇವೆಯನ್ನು ಮಾಡುತ್ತಾರೆಯೋ ಅವರಿಗೆ ಮಾತ್ರ ಆ ಸ್ಥಾನವು ದೊರೆಯತಕ್ಕದ್ದು. ಅಧ್ಯಕ್ಷ ಪದವಿಯು ಗೌರವದ ಸ್ಥಾನವೆಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಒಂದು ತಪ್ಪೇ ಸರಿ. ಒಂದು ವರ್ಷದ ವರೆಗೆ ಅಧ್ಯಕ್ಷರಾದವರು ಸಮಾಜ ಸೇವೆಯನ್ನು ಮಾಡಬೇಕಾಗುತ್ತದೆ. ಅರ್ಥಾತ್ ಸಭೆಯಲ್ಲಾದ ವಿಷಯಗಳನ್ನು ಅಮಲಿನಲ್ಲಿ ತರಲಿಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಅಧ್ಯಕ್ಷರಾಗಿದ್ದು ಸಭೆಯು ಮುಗಿದ ಕೂಡಲೇ ಮಹಾಸಭೆಯನ್ನು ಮರೆಯತಕ್ಕ ಅಧ್ಯಕ್ಷರು ಬೇಡ. ಈ ವರ್ಷ ಹೊಸ ಘಟನೆಯನ್ನು ಸಿದ್ಧಮಾಡಿ ಮುಂದೆ ಸಮಾಜವನ್ನು ಯೋಗ್ಯ ಮಾರ್ಗಕ್ಕೆ ಹಚ್ಚುವಂತಹ ಮುಖಂಡರು ನಮ್ಮ ಸಮಾಜಕ್ಕೆ ಬೇಕಾಗಿರುತ್ತದೆ. ಅದ್ದರಿಂದ ಸ್ವಾಗತ ಸಂಘದವರು ಪೂರಾ ಆಲೋಚಿಸಿ ಹಳಕಟ್ಟಿಯವರನ್ನೇ ಆರಿಸುವುದು ಯೋಗ್ಯವಿರುತ್ತದೆ. ಮಹಾಸಭೆಯಿಂದ ಏನೂ ಆಗಿಲ್ಲವೆಂದು ಹೊಲಿಯನ್ನೆಬ್ಬಿಸುವುದಕ್ಕಿಂತ ಮುಂದೆ ಬಂದು ಕಾರ್ಯಮಾಡುವದು ಮೇಲಾದ ಕೆಲಸವು. ಸ್ವಲ್ಪೇ ದಿವಸಗಳುಳಿದುದರಿಂದ ಮಹಾಸಭೆಯ ಚಾಲಕರು ಮಹಾರಾಷ್ಟ್ರ ಅಂಧ್ರ ಮೊದಲಾದ ಪ್ರಾಂತದ ಜನಗಳಿಗೂ ಆಯಾಯ ಭಾಷೆಗಳಲ್ಲಿ ಹಸ್ತಪತ್ರಿಕೆಗಳ ಮೂಲಕವಾಗಿಯೂ ಪ್ರಕಟಿಸಬೇಕಲ್ಲದೆ ಮಹಾಸಭೆಯು ಒಳ್ಳೇ ಯಶಸ್ವಿಯಾಗುವಂತೆ ಮಾಡಬೇಕಾಗಿದೆ. ಇಲ್ಲದಿದ್ದರೆ ವೀರಶೈವ ಸಮಾಜದ ಅಳಿದುಳಿದ ಸಕಲ ಸಮಾಜವು ನಾಶವಾಗಲಿಕ್ಕೆ ಹತ್ತುವದು. ಪ್ರತಿಯೊಬ್ಬ ಲಿಂಗಾಂಗಿಯು ಸಮಾಜಾಭಿಮಾನವನ್ನು ತಾಳಿ ಕಾರ್ಯವನ್ನು ಮಾಡಬೇಕಲ್ಲದೆ ಸ್ವಾರ್ಥದ ಕಡೆಗೆ ಲಕ್ಷ್ಯವನ್ನು ಕೊಟ್ಟು ಸಮಾಜದ ಘಾತಕ ಕಾರ್ಯಗಳನ್ನು ಮಾಡಲಿಕ್ಕೆ ಹತ್ತಬಾರದು. ವೀರಶೈವರು ಒಂದೇ ಎಂಬುವ ಭಾವನೆಯು ಬಾರದ ಹೊರತು ಉಳಿದ ಸಮಾಜಗಳ ಮಾಲಿಕೆಯಲ್ಲಿ ನಮ್ಮ ಸಮಾಜವು ಬರಲಾರದು. ಅದ್ದರಿಂದ ಪ್ರತಿಯೊಬ್ಬನೂ ಈ ವರ್ಷದ ಮಹಾಸಭೆಯು ಯಶಸ್ವಿಯಾಗಲಿಕ್ಕೆ ಪ್ರಯತ್ನವನ್ನು ಮಾಡಬೇಕು.

ಅಸ್ಪೃಶ್ಯೋದ್ಧಾರ.

(ಲೇ—ಗುರುಸಿದ್ಧಶಾಸ್ತ್ರಿ, ಪುರಾಣಿಕಮಠ, ಸಾಹಿತ್ಯಾಚಾರ್ಯ)

ಮಹಾತ್ಮರ ಮೊನ್ನಿನ ಉಪವಾಸ ವ್ರತವು ಫಲಕಾರಿಯಾಗಿ ಪೂರೈಸಿದ ಅನಂತರ ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಅಸ್ಪೃಶ್ಯರ ಸುಧಾರಣೆಯ ಕಾರ್ಯವು ಒಳ್ಳೇ ಒತ್ತರದಿಂದ ಸಾಗಿರುವ ಸಂಗತಿಯು ವೃತ್ತಪತ್ರಿಕೆಗಳ ಮುಖಾಂತರ ಸರ್ವರ ನಿದರ್ಶನಕ್ಕೆ ಬರಹತ್ತಿರುವುದು ಸರಿಯಷ್ಟೆ. ಇಂಥ ಯುಗಪರಿವರ್ತನೆಯ ಕಾಲದಲ್ಲಿ ಸಹ ನಾವು ಶ್ರೇಷ್ಠ ವರ್ಣದವರೂ, ಸನಾತನ ಧರ್ಮ ಪರಾಯಣರೂ ಎಂದು ಡಂಭವನ್ನು ಕೊಚ್ಚಿಕೊಳ್ಳುವ, ಹಲ ಕೆಲವು ಪಂಡಿತಂಮನ್ಯಕರ್ಮಠ ಸಂಕುಚಿತ ಹೃದಯೋ ಜನರು ಹಳ್ಳಿಹಳ್ಳಿಗಳಲ್ಲಿ ಅಯ್ಯೋ! ಅನಾಚಾರ, ಅತ್ಯಾಚಾರ, ಧರ್ಮಸಾಂಕರ್ಯವೆಂಬದಾಗಿ ಮನಬಂದಂತೆ ಗುರುಗುಟ್ಟುತ್ತ ಮುಗ್ಧರೂ, ಸರಳಹೃದಯರೂ ಆದ ಅಜ್ಞ ಜನರ ಮನಸ್ಸಿನಲ್ಲಿ ಬೇರೆ ಬೇರೆ ಪ್ರಕಾರದ ದುರ್ಭಾವನೆಯನ್ನು ಹುಟ್ಟಿಸಹತ್ತಿರುವರೆಂದು ತಿಳಿದುಬರುತ್ತದೆ. ಕೇವಲ ಸ್ವಪ್ರತಿಷ್ಠಾಪ್ರಿಯರೂ, ಅಸೂಯಾಂಧರೂ ಆದ ಇಂಥ ಜನಗಳ ಮಾತಿಗೆ ಮರುಳಾಗಿ ಈಶ್ವರಪ್ರೇರಿತವಾದ ಈ ಪತಿತೋದ್ಧಾರ ಕಾರ್ಯದಲ್ಲಿ ಉದಾಸೀನ ಮನಸ್ಕರಾಗಿ ಕುಳಿತುಕೊಳ್ಳತಕ್ಕವರು ಇಹಪರಗಳೆರಡನ್ನೂ ಕಳೆದುಕೊಂಡು ಜನರ ಅಪಹಾಸ್ಯಕ್ಕೆ ಗುರಿಯಾಗುವುದು ಮಾತ್ರ ಖಂಡಿತವು.

ಹಿಂದುಗಳಲ್ಲಿ ಒಳ್ಳೇ ಶ್ರೇಷ್ಠವರ್ಣದವರೂ ಪರಮಪವಿತ್ರವಂಶದವರೂ ಸುಪ್ರಸಿದ್ಧ ಮನೆತನದವರೂ ಹಿಂದು ಮುಖಂಡರೂ ಸನಾತನ ಧರ್ಮ ಪರಾಯಣರೂ ಆದ ಪಂ. ಮದನಮೋಹನ ಮಾಲವಿಯರೇ ಮೊದಲಾಗಿ ಮಹಾವಿಭೂತಿಗಳು ಲೋಕ ಕಲ್ಯಾಣಕ್ಕಾಗಿ ಟೊಂಕಕಟ್ಟಿ ನಿಂತು ಶ್ರುತಿ ಸ್ಮೃತ್ಯಾಗಮ ಪ್ರತಿಪಾದಿತವಾದ ಈ ಪವಿತ್ರ ಪತಿತೋದ್ಧಾರ ಕಾರ್ಯವನ್ನು ಕೈಕೊಂಡಿರುವ ಸಂದರ್ಭದಲ್ಲಿ ಇದನ್ನು ವಿರೋಧಿಸುವ ಕೂಪ ಮಂಡೂಕಗಳು ಮನುಷ್ಯಗಣನೆಗೇ ಸಂಬಂಧಪಟ್ಟವರಲ್ಲವೆಂದು ಹೇಳಬೇಕು. ಇಂಥವರಿಗೆ ಉಚ್ಚ ವರ್ಣದವರೆಂಬ ತಕ್ಕ ಮಾತು ಒಳ್ಳೇ ತುಚ್ಛವೇಸರಿ. ಕರ್ಮ ಹೊಲೆಯನಿಗಿಂತ ಹುಟ್ಟು ಹೊಲೆಯನುತ್ತಮನು ಎಂಬಂತೆ ಎಲ್ಲ ಉಚ್ಚನೀಚ ಸಮಾಜಗಳಲ್ಲಿಯೂ ಪ್ರತ್ಯಕ್ಷಾ ಪ್ರತ್ಯಕ್ಷ ನೀತಿಯಿಂದ ಆಚಾರ, ವಿಚಾರ, ವ್ಯವಹಾರ ಮುಂತಾದುವುಗಳಲ್ಲಿ ಕೆಟ್ಟ ಹೊಲೆತನದಿಂದ ಜೀವಿತವನ್ನು ಸಾಗಿಸುವ ಎಷ್ಟೋ ಜನರಿಗೆ ಸಮಾಜವು ಯಾವ ನಿಯಮ ನಿರ್ಬಂಧಗಳನ್ನು ಕಲ್ಪಿಸದೇ ಇರುವಾಗ ಹುಟ್ಟು ಹೊಲೆಯರಾಗಿದ್ದರೂ ಹಗಲಿರುಳೂ ಹಿಂದು ದೇವತೆಗಳನ್ನು ನೆನೆಯುತ್ತ ಹಿಂದುಗಳ ಸೇವೆಯನ್ನೇ ಮಾಡುತ್ತ ಹಿಂದು ಸಮಾಜಕ್ಕೆ ನೆಲಲಿನಂತೆ ಬೆನ್ನುಹತ್ತಿ ಬಂತಕ್ಕ ಜನಾಂಗವನ್ನು ಕನಿಕರವಿಲ್ಲದೆ ಖಂಡತುಂಡಾಗಿ ಕತ್ತರಿಸಿ ಬಿಸುಡುವದು ಎಂಥ ಕೃತಘ್ನತನವು!

ಪಾಪಗಳನ್ನು ತಿರಸ್ಕರಿಸು, ಪರಂತು ಪಾಪಿಗಳನ್ನು ಮಾತ್ರ ಕರುಣೆಯಿಂದ ರಕ್ಷಿಸು ಎಂಬ ಅಭಿಪ್ರಾಯದ ಅನೇಕ ಶ್ರುತಿ, ಸ್ಮೃತಿ ವಚನ ಪುರಾಣಾದಿ ಪ್ರಮಾಣಗಳು ದೊರೆಯುವವು. ನಾವು ದೇವ ಮಂದಿರಗಳಲ್ಲಿ ಹೊಕ್ಕು ಪರಮಾತ್ಮನನ್ನು (ಜಡಮೂರ್ತಿಯನ್ನು) ದೀನದಯಾಳು! ಪತಿತ ಪಾವನ! ಪತಿತೋದ್ಧಾರಕ! ಮುಂತಾಗಿ ಅನೇಕ ವಿಶೇಷಣಗಳಿಂದ ಗಂಟಲು ಹರಿಯುವಂತೆ ಕೂಗಿಕೊಳುವೆವು. ಪರಂತು ಆಯಾ ವಿಶೇಷಣಗಳನ್ನು ಸಾರ್ಥಕಗೊಳಿಸುವ ಕಾರ್ಯದುರಂಧರರಾದ ಮಹಾತ್ಮರ ವಿಷಯದಲ್ಲಿ ಮಾತ್ರ ಆಕ್ಷೇಪಕತೆಗೆದುಕೊಳ್ಳುವದೆಂದರೆ ಎಂಥ ಅವಿವೇಕತನದ ಸಂಗತಿಯು! ಇದೆಲ್ಲವನ್ನು ಬಹುಸೂಕ್ಷ್ಮವಾಗಿ ಪರಿಶೀಲಿಸಿ, ಶ್ರೀಮಜ್ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರು ಕಾಲಚಕ್ರಕ್ಕನುಗುಣವಾಗಿ ನ್ಯಾಯವೂ ಶಾಸ್ತ್ರಸಮ್ಮತವೂ, ಆದ ಈ ಅದಿಕರ್ನಾಟಿಗರ ಸುಧಾರಣೆಯ ವಿಷಯವನ್ನು ಮುಂಜಾಗ್ರತೆಯಾಗಿ ಕೈಕೊಂಡರೆ ಒಳ್ಳೇ ಸ್ತುತ್ಯವೂ, ಅನುಕರಣೀಯವೂ, ಹಿಂದು ಸಮಾಜಕ್ಕೆ ಸಂತೋಷದಾಯಕವೂ ಆಗುತ್ತದೆ. ಸದರಿ ಜಗದ್ಗುರುಗಳು ಈಗಾಗಲೆ ಬಹುಭಾಗದ ಜನರ ಪ್ರಾರ್ಥನೆಯ ಮೇರಿಗೆ ಅಲ್ಪಪ್ರಮಾಣದಿಂದ ಈ ಪವಿತ್ರಕಾರ್ಯವನ್ನು ಕೈಕೊಂಡಿರುವ ಸಂಗತಿಯು ವೃತ್ತಪತ್ರಿಕೆಗಳ ಮುಖಾಂತರ ನಿದರ್ಶನಕ್ಕೆ ಬಂದಿರುವದು. ಇನ್ನು ಮೇಲೆ ಇದಕ್ಕಿಂತಲೂ ಹೆಚ್ಚಾಗಿ ಈ ವಿಷಯದ ಕಡೆಗೆ ಗಮನಕೊಡಿಸಬೇಕಾಗಿ ಮಹಾ ಸನ್ನಿಧಾನದಲ್ಲಿ ಪ್ರಾರ್ಥಿಸಿಕೊಳ್ಳದೆ ಇರಲಾರೆವು. ಅದರಂತೆ ಶ್ರೀ ಶಂಕರಾಚಾರ್ಯ, ಮಧ್ವಾಚಾರ್ಯ ಮೊದಲಾದ ಪ್ರತಿಷ್ಠಿತ ಮಠಾಧ್ಯಕ್ಷರು, ಸನಾತ ಧರ್ಮಪ್ರವರ್ತಕರೂ ಪರಮ ಪವಿತ್ರವೂ ಅವಶ್ಯಕವೂ ಆದ ಈ ಕಾರ್ಯವನ್ನು ಶೀಘ್ರವಾಗಿ ಕೈಕೊಂಡು ಹಿಂದು ಧರ್ಮ ಸಂರಕ್ಷಣೆಯ ಕೀರ್ತಿಗೆ ಪಾತ್ರರಾಗಬೇಕೆಂಬದಾಗಿ ಸೂಚಿಸುವೆವು. ಸಂಕುಚಿತಹೃದಯರಾದ ಹಿಂದುಗಳೇ! ಇನ್ನಾದರೂ ಎಚ್ಚರಾಗಿರಿ. ಗಾಢಾಂಧಕಾರವಾದ ಗುಹೆಯನ್ನು ಬಿಟ್ಟು ಪ್ರಕಾಶಮಯ ಪ್ರಪಂಚದಲ್ಲಿ ನಿಮ್ಮ ವಿಚಾರಗಳನ್ನು ಹಂಬಿಡಿರಿ. "ಯದ್ಯಪಿಶುದ್ಧಂ ಲೋಕವಿರುದ್ಧಂ ನಾಕರಣೀಯಂ | ನಾಚರಣೀಯಂ" ಎಂಬ ನೀತಿವಾಕ್ಯವನ್ನಾದರೂ ಮನದಲ್ಲಿ ಭಾವಿಸಿ. ಅಸ್ಪೃಶ್ಯೋದ್ಧಾರ ಕಾರ್ಯದಲ್ಲಿ ಮುಂದಾಗಿ ಧಾವಿಸಿರಿ, ಇದೇ ನಮ್ಮ ಕೊನೆಯ ಸವಿನಯ ಸೂಚನೆಯು.

ಓಂ, ಶಾಂತಿಃ, ಶಾಂತಿಃ, ಶಾಂತಿಃ.

ಶ್ರೀಮನ್ಮಹಾರಾಜರವರ ಸಂಸ್ಕೃತಪಾಠಶಾಲೆಯ ಪಾಂಚರಾತ್ರಾಗಮ ತರಗತಿ.

ಸ್ವಾಮಿ, ಸುಮಾರು ಹತ್ತು ವರುಷಗಳ ಹಿಂದೆ ಮೇಲ್ಕಂಡ ಆಗಮ ತರಗತಿ ಏರ್ಪಾಡಾಯಿತು. ಇದರ ಉದ್ದೇಶವೇನೆಂದರೆ—ಮೈಸೂರು ದೇಶದ ದೇವಾಲಯಗಳಲ್ಲಿ ಲಕ್ಷಾಂತರ ರೂಪಾಯಿಗಳ ಖರ್ಚನ್ನು ಇಟ್ಟು ರಾಜ್ಯಕ್ಷೇಮಕ್ಕೋಸ್ಕರ ನಡೆಸುತ್ತಿರುವ ಪೂಜಾದಿಗಳ ವೈಖರಿಯು ಹೆಚ್ಚಿ ಅದರ ಸರಿಯಾದ ಫಲ ಉಂಟಾಗಲಿ ಎಂಬುವದಾಗಿಯೂ, ಈ ಫಲವು "ಅರ್ಚಕಸ್ಯ ತಪೋಯೋಗಾತ್ ಅರ್ಚನಸ್ಯಾತಿಶಾಯನಾತ್ | ಅಭಿರೂಪ್ಯಾಚ್ಚ ಬಿಂಬಸ್ಯ ಹರಿಸ್ಸಾನ್ನಿಧ್ಯಮೃಚ್ಛತಿ ||" ಎಂಬ ವಾಕ್ಯವನ್ನು ಅನುಸರಿಸಿ ಪೂಜಕರ ತಪೋಮಹಿಮೆಯಿಂದಲೇ ಉಂಟಾಗಬೇಕಾಗಿರುವದರಿಂದ ಇವರ ಸಂತತಿಯವರನ್ನು ಸಂಪೂರ್ಣ ವಿದ್ಯಾವಂತರನ್ನಾಗಿ ಮಾಡುವ ಸದುದ್ದೇಶದಿಂದಲೇ ಈ ತರಗತಿ ಏರ್ಪಡಿಸಲ್ಪಟ್ಟಿತು. ಆದರೆ ಯಾವ ಉದ್ದೇಶದಿಂದ ಈ ತರಗತಿ ಏರ್ಪಟ್ಟಿತೋ ಅದಕ್ಕೆ ವಿರುದ್ಧವಾಗಿ ಅರ್ಚಕಸಂತತಿಯವರಲ್ಲದ ಮಂಡ್ಯಂ ಐಯ್ಯಂಗಾರ್‍ರು, ಕೋಲೀಯ ಶ್ರೀವೈಷ್ಣವರು, ಮಾಧ್ವಬ್ರಾಹ್ಮಣರು, ಪರಿಚಾರಕರ ಸಂತತಿಯವರು ಮೊದಲಾದ ಕೇವಲ ಹೆಚ್ಚಿನ ಸ್ಕಾಲರ್‌ಷಿಪ್ಪಿಗೋಸ್ಕರವೇ ಓದತಕ್ಕವರಿಗೆ ಅನುಕೂಲವಾಯಿತೇ ವಿನಾ ಮೈಸೂರು ದೇಶದಲ್ಲಿ ಪ್ರಸಿದ್ಧವಾದ ಬೇಲೂರು, ಮೇಲ್ಕೋಟೆ, ಶ್ರೀರಂಗಪಟ್ಟಣ, ಮೈಸೂರು ಮೊದಲಾದ ದೇವಸ್ಥಾನಗಳ ಅರ್ಚಕಬಾಲಕರಿಗೆ ವಿದ್ಯಾಪ್ರಯೋಜನವಾಗದೆ ಯಥಾಪ್ರಕಾರ ಅವರು ವಿದ್ಯಾವಿಹೀನರಾಗಿಯೇ ಇರುವಂತೆ ಆಗಿದೆ. ಮೇಲ್ಕಂಡ ಆಗಮತರಗತಿಗೆ ಇದುವರೆಗೆ ಸಾವಿರಾರು ರೂಪಾಯಿಗಳು ಖರ್ಚಾಗಿವೆ. ಇನ್ನೂ ಸಾವಿರಾರು ರೂಪಾಯಿಗಳು ಖರ್ಚಾಗುವದರಲ್ಲಿವೆ. ಪ್ರಯೋಜನವಾದರೂ ಕೆಲವು ಅಗ್ಗದ ಪ್ಯಾಸುಗಳು ಅಂದರೆ ಸರಸ್ವತೀ ಪ್ರಸನ್ನತೆಯುಳ್ಳ ಸರ್ಟಿಫಿಕೇಟುಗಳು ಮಾತ್ರ ಇತರರಿಗೆ ಪ್ರಭುಗಳವರ ಕೈಯಲ್ಲಿ ಬಹುಮಾನ ತೆಗೆದುಕೊಳ್ಳುವ ಭಾಗ್ಯ. ನಿರ್ಭಾಗ್ಯರಾದ ಪಾಂಚರಾತ್ರಿಕರಿಗಾದರೋ ಆ ಭಾಗ್ಯವಿಲ್ಲ. ಯಾತಕೆಂದರೆ, ನಾಲ್ಕು ಶಾಸ್ತ್ರದಲ್ಲಾದರೂ ಪರೀಕ್ಷೆ ಕೊಡಬಹುದು, ಪಾಂಚರಾತ್ರಶಾಸ್ತ್ರದಲ್ಲಿ ಕೊಡಲು ಆಗುವದಿಲ್ಲ. ಯಾತಕ್ಕೆಂದರೆ ಈ ಶಾಸ್ತ್ರಗ್ರಂಥಗಳನ್ನು ಅನೇಕರು ನೋಡಿಯೇ ಇಲ್ಲ ಮತ್ತು ಅವರಿಗೆ ದೊರಕುವಂತೆ ಇಲ್ಲ. ದೊರಕಿದರೂ ಅನೇಕರಿಗೆ ಅದರ ಪಾಂಡಿತ್ಯವೂ ಇರುವದಿಲ್ಲ. ನಾನು ಇದನ್ನು ಬೇಕಾದರೆ ಸಮಯ ಬಂದಾಗ ರುಜುವಾತುಮಾಡಿಕೊಡುತ್ತೇನೆ. ಕೆಲವು ದಿವಸಗಳಲ್ಲಿ ಆರ್ಯಸಮಾಜದವರು ಟೌನ್‌ಹಾಲಿನಲ್ಲಿ ಪಬ್ಲಿಕ್ ಲೆಕ್ಚರ್ ಕೊಡುವಾಗ್ಗೆ ಪ್ರಪಂಚದ ಧರ್ಮರಾಜ್ಯಗಳಲ್ಲಿ ಒಂದಾದ ಆ ಗೋಪಾಲ ಭೂಪಾಲರ ಪರ್ಯಂತವಾಗಿ ಅನುಷ್ಠಿಸಲ್ಪಡುತ್ತಲಿರುವ ಪುರಾತನಕಾಲದಿಂದಲೂ ನಡೆದು ಬಂದಿರುವ ಶ್ರೇಷ್ಠವಾದ ವಿಗ್ರಹಪೂಜೆಯ ಧರ್ಮವನ್ನು ತುಚ್ಛವಾಗಿ ದೂಷಿಸಿ ಕಲ್ಲು, ಮಣ್ಣು ಪೂಜೆಮಾಡಿ ಕೆಟ್ಟುಹೋಗಬೇಡಿಯೆಂದು ಹೇಳುತ್ತಿರುವದನ್ನು ಪಾಠಶಾಲಾ ಆಗಮ ಪಂಡಿತರು ಕೇಳಿ ತಟಸ್ಥರಾಗಿರುವದು ಆಶ್ಚರ್ಯವನ್ನುಂಟುಮಾಡಿದೆ. ಪ್ರಕೃತ ಸರ್ಕಾರದಲ್ಲಿ ಹಣದ ಮುಗ್ಗಟ್ಟು ಸ್ಥಾನೆ ಉಂಟಾಗಿರುವ ಒಂದುಕಡೆಯಲ್ಲಿ ರಿಟ್ರೆಂಚ್‌ಮೆಂಟ್ ಇನ್ನೊಂದುಕಡೆ ನಿಷ್ಪ್ರಯೋಜನವಾದ ಕೇವಲ ಪಾಠಶಾಲೆಯ ಖ್ಯಾತಿಗೆ ಮಾತ್ರವೆ ಸಹಕಾರಿಯಾದ ಅರ್ಚಕರ ಹೆಸರು ಇಟ್ಟು ಪ್ರಾಚೀನಾರ್ಚಕಸಂತತಿಯವರಿಗೆ ಯಾವ ಪ್ರಯೋಜನವೂ ಆಗಿಲ್ಲದ ಈ ದುಂದುವೆಚ್ಚವನ್ನು ಮಾಡುವದು ಕ್ಷೇಮವಲ್ಲ. ಈ ತರಗತಿಯ ಉಪಾಧ್ಯಾಯರುಗಳಿಗೆ ಪಾಂಚರಾತ್ರಾಗಮ ತರಗತಿಗೆ ಪ್ರೌಢಪಾಠವನ್ನು ಹೇಳುವಷ್ಟು ಆಗಮಶಾಸ್ತ್ರಪರಿಶ್ರಮವಿಲ್ಲ. ಇವರನ್ನ ಪರಸ್ಥಳಕ್ಕೆ ಕಳುಹಿಸಿ ಪ್ರಾಕ್ಟಿಕಲ್ ಟ್ರೇನಿಂಗ್ ಮಾಡಿಸಿದ್ದಾಯಿತು. ಇವರು ಹೋಗಿದ್ದ ಸ್ಥಳಗಳಲ್ಲಿನ ಅರ್ಚಕರನ್ನು ವಿಚಾರಿಸುವಲ್ಲಿ ಇವರಿಗೆ ಯಾವ ಪ್ರಯೋಜನವೂ ಆಗಲಿಲ್ಲವೆಂದು ತಿಳಿದು ಬಂದಿದೆ. ಅಲ್ಲದೆ ಇವರಿಗೆ ತಕ್ಕ ಉಪದೇಶವನ್ನು ಕೊಡುವ ಅರ್ಚಕಪಂಡಿತರು ಅಲ್ಲಲ್ಲಿ ದೊರಕಲಿಲ್ಲವೆಂದು ತಿಳಿದುಬಂದಿದೆ. ಇವರ ಪರಿಶ್ರಮದ ರಿಪೋರ್ಟು ರಹಸ್ಯವಾಗಿರುವುದು, ಇತರರಿಗೆ ತಿಳಿಯುವಂತೆ ಇಲ್ಲ. ಇವರಿಗೂ ಇವರನ್ನ ತರಪೇತು ಮಾಡುವವರಿಗೂ ದುಬಾರಿ ಸಂಬಳ ಸಲ್ಲುತ್ತಿದೆ. ಇದು ಹೇಗಾದರೂ ಇರಲಿ, ಈಗ ಪಾಠಪ್ರವಚನಗಳಾದರೂ ಸರಿಯಾಗಿ ನಡೆಯುತ್ತಿದೆಯೋ ಅಂದರೆ ಹಿಂದಿನ ಕರ್ಕ್ಯಲಂನಲ್ಲಿ ಇದ್ದ ಗ್ರಂಥಗಳನ್ನು ತೆಗೆದು ನಿಷ್ಪ್ರಯೋಜನವಾದ ಆಳ್ವಾರ್ ಮೊದಲಾದ ಆಧುನಿಕರ ವೈಭವವನ್ನು ಒಳಗೊಂಡು ಅಲ್ಪಸ್ವಲ್ಪ ಸಮಯಾಚಾರವಿಷಯವನ್ನು ಮಾತ್ರ ಪ್ರತಿಪಾದಿಸುವ ಪರಾಶರಸಂಹಿತೆಯನ್ನು ಟೆಕ್ಸ್ಟ್ ಆಗಿ ಇಟ್ಟು ಪಾಠಗಳನ್ನು ಸುಲಭಮಾಡಿಕೊಂಡು ಇದ್ದಾರೆ. ಪಾಂಚರಾತ್ರಶಾಸ್ತ್ರವು ಒಂದುವರೆ ಕೋಟಿ ಗ್ರಂಥವುಳ್ಳದ್ದಾಗಿ 220 ಸಂಹಿತೆಯನ್ನು ಒಳಗೊಂಡಿದೆ. ಇದರಲ್ಲಿ ಯಾವದಾದರೂ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರಯೋಜನಕರವಾದ ಸಂಹಿತೆಗಳನ್ನೂ ಅವುಗಳ ವ್ಯಾಖ್ಯಾನಗಳನ್ನೂ ಪಾಠ ಹೇಳದೆ ಒಂದೆರಡು ಆಗಮಪ್ರಾಮಾಣ್ಯ ರಕ್ಷಗ್ರಂಥಗಳನ್ನು ವರ್ಷಾಂತದ ವರೆಗೂ ಪಾಠಹೇಳುವದರಿಂದ ಕಾಲಕಳೆಯುವದೇ ವಿನಾ ವಿದ್ಯಾರ್ಥಿಗಳಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಹಿಂದಿನ ಕರ್ಕ್ಯಲಂನಂತೆ ವ್ಯಾಖ್ಯಾನಸಮೇತವಾದ ಸಂಹಿತೆಯಾಗಲೀ ಭೂಷಣಲಕ್ಷಣ ವಿಗ್ರಹಲಕ್ಷಣ ಗ್ರಂಥವಾಗಲೀ ಪಾಠಹೇಳಲ್ಪಡುವದಿಲ್ಲ. ಪಾಠಪ್ರವಚನದ ಕೊರತೆಯ ವಿಚಾರವಾಗಿ ಪ್ರಿನ್ಸಿಪಾಲ್‌ರವರಿಗೆ ಅರ್ಜಿಕೊಟ್ಟರೂ ಯಾವ ವ್ಯವಸ್ಥೆ ಇಲ್ಲದೆ ಇದೆಯೆಂದು ವರ್ತಮಾನ. ವಿಚಾರಮಾಡಿದ್ದಲ್ಲಿ ಈಗ ಪರೀಕ್ಷೆ ಕೊಟ್ಟವರಲ್ಲಿ ಕೂಡ ಆಗಮಶಾಸ್ತ್ರದ ಒಂದು ಅಧ್ಯಾಯಕ್ಕಾದರೂ ಅರ್ಥಮಾಡುವಷ್ಟು ಪಾಂಡಿತ್ಯ ಇರುವದಿಲ್ಲವೆಂದು ತೋರುತ್ತೆ. ಅಂತೂ ಪಂಡಿತಪರೀಕ್ಷೆ ಯೇನೋ ಕೊಟ್ಟಿದ್ದಾರೆ. ಶಾಸ್ತ್ರೀಯವಾದ ಪೂಜಾವಿಧಾನ ಪುಣ್ಯಾಹ ಅಗ್ನಿಕಾರ್ಯ ತಿಳಿದಿರುವಂತೆ ಕಾಣುವದಿಲ್ಲ. ಹಿಂದೆ ಇವರ ಪರೀಕ್ಷೆ ನಡೆಯುವ ಕಾಲದಲ್ಲಿ ಒಬ್ಬ ಪರೀಕ್ಷಕರು ಇದೇ ಅಭಿಪ್ರಾಯಪಟ್ಟಿದ್ದಾರೆ. ಮುಂದೆ ಹೀಗೆಯೇ ನಿಷ್ಪ್ರಯೋಜನವಾಗಿ ನಡೆಯುತ್ತಿದ್ದರೆ ಸರ್ಕಾರದ ಹಣವು ವ್ಯರ್ಥವಾಗುವದ್ದರಿಂದ ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರುಗಳೂ, ಪ್ರಜಾಪ್ರತಿನಿಧಿ ಸಭೆಯವರೂ ಇದನ್ನು ತಮ್ಮ ತಮ್ಮ ಸಭೆಯಲ್ಲಿ ವಿಚಾರಕ್ಕೆ ತಂದು ಈ ನಿಷ್ಪ್ರಯೋಜನವಾದ ದುಂದುಖರ್ಚನ್ನು ವಜಾಮಾಡಿಸಿ ಈ ಮೊಬಲಗನ್ನು ಬೇರೆ ಯಾವದಾದರೂ ಪ್ರಜೆಗಳ ಉಪಯೋಗಕಾರ್ಯಕ್ಕೆ ಉಪಯೋಗಿಸುವಂತೆ ಮಾಡುವರೆಂದು ನಂಬಿದ್ದೇನೆ.

ಸರ್ಕಾರದ ಹಿತಚಿಂತಕ.

ವೀರಶೈವ ಮಹಾಸಭೆ

ಹುಬ್ಬಳ್ಳಿಯ "ಲೋಕಮತ" ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಗುಂಡಪ್ಪಾ ಸಿದ್ಧರಾಮಪ್ಪ ಶಾಬಾದಿ, ಮೊರಟಗಿಯವರು ಮಹಾಸಭೆಯ ಅಧ್ಯಕ್ಷಸ್ಥಾನವನ್ನು ಈ ಸಾರೆ ಯಾರಿಗೆ ಕೊಡಬೇಕೆಂಬ ವಿಷಯವಾಗಿ ಒಂದು ಲೇಖನವನ್ನು ಬರೆದು ತಮ್ಮ ಅಭಿಪ್ರಾಯವನ್ನು ಹೊರಗೆಡಹಿರುವರು. ಈ ಲೇಖದಲ್ಲಿ ಮೊದಲು ಅವರು ಇಂದಿನ "ಇಕ್ಕಟ್ಟಿನ ಬಿಕ್ಕಟ್ಟಿನ" ಪರಿಸ್ಥಿತಿಯನ್ನು ಕುರಿತು ವಿವರಿಸಿ, ಪ್ರಕೃತದ ಮಹಾಸಭೆಯ ಅಧ್ಯಕ್ಷರು ಎಂತಹ ದಕ್ಷರಿರಬೇಕೆಂಬುದನ್ನು ತೀರ್ಮಾನಿಸಿ, ವಿಜಾಪುರದ ರಾವ್‌ಸಾಹೇಬ್ ಪಿ. ಜಿ. ಹಳಕಟ್ಟಿಯವರ ಹೆಸರನ್ನು ಸೂಚಿಸಿರುತ್ತಾರಲ್ಲದೆ, ಈ ಮಹನೀಯರು ಇದುವರೆಗೆ ಮಾಡಿರುವ ಸಮಾಜಸೇವೆಯನ್ನು ಹದಿನಾರು ಅಂಕೆಗಳನ್ನು ಹಾಕಿ ಬೇರೆ ಬೇರೆಯಾಗಿ ವಿವರಿಸಿರುತ್ತಾರೆ. ಅವುಗಳೆಲ್ಲವನ್ನೂ ಇಲ್ಲಿಯೂ ವಿವರಿಸುತ್ತ ಕೊಡುವುದು ಚರ್ವಿತಚರ್ವಣವಾಗುವುದು.

ಮೇಲ್ಕಂಡ ಲೇಖದೊಳಗೆ 1 ರಿಂದ 12 ರ ವರೆಗಿನ ಅಂಕೆಗಳಲ್ಲಿ ಕಾಣಿಸಿರುವ ವಿಷಯಗಳು ಸಮಾಜ ಮುಖಂಡರೆನಿಸಿಕೊಂಡಿರುವ ಯಾವನಾದರೊಬ್ಬ ವ್ಯಕ್ತಿಯು ಮಾಡತಕ್ಕ ಕಾರ್ಯಗಳಾಗಿವೆಯೇ ವಿನಾ, ಅವುಗಳಲ್ಲಿ ಅಂತಹ ವಿಶೇಷವೇನೂ ತೋರುವುದಿಲ್ಲ. ಅಖಿಲ ವೀರಶೈವ ಸಮಾಜದ ಏಕಮಾತ್ರ ಕೇಂದ್ರಸಂಸ್ಥೆಯಾದ ವೀರಶೈವ ಮಹಾಸಭೆಯ ಅಧ್ಯಕ್ಷಪದವಿಯ ಸನ್ಮಾನವು ದೊರೆಯಬೇಕಾದರೆ ಆ ವ್ಯಕ್ತಿಯಲ್ಲಿ ಏನಾದರೊಂದು ವೈಶಿಷ್ಟ್ಯ ಗುಣವಿರಬೇಕು; ಆತನಿಂದ ವಿಶಿಷ್ಟವಾದ ಸಮಾಜಸೇವೆಯೊಂದು ನಡೆದಿರಬೇಕು. ಹಾಗಿದ್ದರೆ ಮಾತ್ರ ಆ ವ್ಯಕ್ತಿಗೊಂದು ಸನ್ಮಾನ, ಮಹಾಸಭೆಗೊಂದು ಭೂಷಣ, ಸಮಾಜಕ್ಕೊಂದು ಕಲ್ಯಾಣ. ಶ್ರೀಯುತ ಹಳಕಟ್ಟಿಯವರ ಇಂತಹ ವೈಶಿಷ್ಟ್ಯಯುಕ್ತವಾದ ಕಾರ್ಯಗಳನ್ನು ಆ ಲೇಖಕರು ಈ ಕೆಳಗೆ ಕಂಡಂತೆ ನಮೂದಿಸಿರುವರು :—

ಇವೀಗ ಶ್ರೀಯುತ ಹಳಕಟ್ಟಿಯವರ ಖಚಿತವಾದ ಸಮಾಜಸೇವೆ, ವಿಶಿಷ್ಟವಾದ ಸೇವೆ. ಈ ಭಾಗದಲ್ಲಿ ಶ್ರೀಯುತ ಹಳಕಟ್ಟಿಯವರು ಮಾಡಿರುವಷ್ಟು ಸೇವೆಯನ್ನು ಸಮಾಜದಲ್ಲಿ ಮತ್ತಾರೂ ಮಾಡಿಯೇ ಇಲ್ಲವೆಂದು ಹೇಳಿದ್ದಲ್ಲಿ [illegible] ಅತಿಶಯೋಕ್ತಿಯಾಗುವುದಿಲ್ಲವೆಂದು ನನ್ನ ಅಭಿಪ್ರಾಯ. ವೀರಶೈವರಲ್ಲಿ ಅನೇಕ ಮಂದಿ ಸಾಹಿತಿಗಳಿದ್ದಾರೆ! ಅನೇಕ ಮಂದಿ ಶಾಸನಕಾರರಿದ್ದಾರೆ! ಅನೇಕ ಮಂದಿ............ಇದ್ದಾರೆ. ಆದರೆ ಶ್ರೀಯುತ ಹಳಕಟ್ಟಿಯವರು ಕೈಹಾಕಿರುವ ಕಾರ್ಯಕ್ಕೆ ಪುರಾತನ ವೀರಶೈವ ಗ್ರಂಥಗಳ ಪ್ರಚಾರಕ್ಕೆ ಹಿಂದೆ ಕೈಹಾಕಿದ್ದವರು ಇಬ್ಬರೇ. ಒಬ್ಬರು ಕೈ|| ವಾರದಮಲ್ಲಪ್ಪನವರು ಮತ್ತೊಬ್ಬರು ಕೈ|| ವೀರಸಂಗಪ್ಪನವರು. ಈ ಸಾಹಿತ್ಯ ಪ್ರಚಾರದಲ್ಲೂ ಶ್ರೀಯುತ ಹಳಕಟ್ಟಿಯವರು ಕೈಹಾಕಿರುವ ಭಾಗವು ಪುರಾತನವಾದರೂ ನೂತನವಾದುದು. ವಚನಶಾಸ್ತ್ರಗಳ ಪ್ರಚಾರ ಕಾರ್ಯಕ್ಕೆ ಇಂದಿನವರೆಗೆ ಯಾರೂ ಕೈಹಾಕಿರಲಿಲ್ಲವೆಂದೇ ಹೇಳಬಹುದು. ಈ ಭಾಗದಲ್ಲಿ ಶ್ರೀಯುತ ಹಳಕಟ್ಟಿಯವರ ಶ್ರಮಸಾಹಸಗಳು ಅಭಿನಂದನೀಯಗಳೇ ಸರಿ. ಇಂದಿನ ಈ ಅಂದೋಳನದಲ್ಲಿ ಶ್ರೀ ಬಸವೇಶ್ವರನ ತತ್ತ್ವವು ಗಾಳಿಗೆ ತೂರಿಹೋಗಬೇಕಿತ್ತು. ಹಾಗಾಗದಿರಲಿಕ್ಕೆ ಆ ತತ್ತ್ವದ ಸತ್ಯತೆಯೂ ನಿತ್ಯತೆಯೂ ಪಾರಮಾರ್ಥಿಕ ಕಾರಣಗಳು ನಿಜ; ಶ್ರೀಯುತ ಹಳಕಟ್ಟಿಯವರು ಶ್ರೀ ಬಸವೇಶ್ವರ ಮೊದಲಾದ ಮಹನೀಯರ ವಚನಶಾಸ್ತ್ರಗಳನ್ನು ಪ್ರಕಟಮಾಡಿ ವೀರಶೈವ ಜಗತ್ತಿನಲ್ಲಿ ಒಂದು ಮಹತ್ಪರಿಣಾಮವನ್ನುಂಟುಮಾಡಿದರು. ಈ ತೆರನಾದ ಸೇವೆಯು ಈ ಮಹನೀಯರಿಂದ ಬೇಕಾದಷ್ಟು ನಡೆದಿರುವುದು. ಅದನ್ನೆಲ್ಲ ಸವಿಸ್ತಾರವಾಗಿ ವರ್ಣಿಸುವುದು ಈ ಲೇಖದ ಉದ್ದೇಶವಲ್ಲ.

ಶ್ರೀಯುತ ಹಳಕಟ್ಟಿಯವರು ಅಧ್ಯಕ್ಷಪದವಿಗೆ ಸರ್ವವಿಧದಲ್ಲಿಯೂ ಅರ್ಹರು. ಇವರ ಸಮಾಜಸೇವೆಗೆ ಬಹುಮಾನವಾಗಿ ಸಮಾಜವು ಮತ್ತೇನ್ನೂ ಕೊಡದಿದ್ದರೂ ಈ ಮಹಾಸಭೆಯ ಅಧ್ಯಕ್ಷ ಪದವಿಯನ್ನು ಕೊಟ್ಟರೆ ಅದೊಂದು ಭೂಷಣವೇ ಸರಿ; ಅಥವಾ ಆ ಮಾನ್ಯ ಅಧ್ಯಕ್ಷಸ್ಥಾನಕ್ಕೆ ಸಮಾಜದವರು ಈ ಮಹನೀಯರನ್ನು ತರುವುದು ಭೂಷಣಪ್ರಾಯವೇ ಸರಿ. ಹೇಗಾದರೂ ಇಂಥ ಆ ಸ್ಥಾನಕ್ಕೆ ಅವರು ಅರ್ಹರೇ ಸರಿ.

ಅಧ್ಯಕ್ಷರ ಚುನಾವಣೆ ವಿಷಯದಲ್ಲಿ ಮಹಾಸಭೆಯ ಸ್ವಾಗತ ಸಂಘದವರು ಈವರೆಗೆ ಕೈಹಾಕಿದಂತೆ ಕಾಣುವುದಿಲ್ಲ. ಧಾರ್ವಾಡದ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ಅಲ್ಲಿನ ಎಲ್ಲ ಜನರ ಬುದ್ಧಿಯೂ ಕೇಂದ್ರೀಕೃತವಾಗಿರುವಂತೆ ತೋರುತ್ತದೆ. ಸ್ಟ್ಯಾಂಡಿಂಗ್ ಕಮಿಟಿಯವರು ಮಾತ್ರ ಶ್ರೀಯುತ ಹಳಕಟ್ಟಿಯವರ ಹೆಸರನ್ನೇ ಮುಂದಿಟ್ಟಿರುತ್ತಾರೆಂದು ತಿಳಿಯುತ್ತದೆ. ಅವರ ಚುನಾವಣೆಗೆ ಸ್ವಾಗತ ಸಂಘದವರು ಬದ್ಧರಾಗಲಿ, ಇಲ್ಲದಿರಲಿ, ಈ ಚುನಾವಣೆಯು ಮಾತ್ರ ಸೂಕ್ತವಾದುದೆಂದು ಬಹುಜನರ ಅಭಿಪ್ರಾಯವಿದೆ. ಡಿ|| ಬೋರ್ಡು ಚುನಾವಣೆಯ ವಿಷಯವು ಇಷ್ಟರಲ್ಲಿ ಮುಗಿದಿರಬಹುದಾದ್ದರಿಂದ ಸ್ವಾಗತ ಸಂಘದವರು ಈ ಭಾಗದಲ್ಲಿ ತೀವ್ರ ಪ್ರಯತ್ನಗಳನ್ನು ನಡೆಸಬೇಕಾಗಿ ಕೋರುತ್ತೇನೆ.

ಟಿ. ಎನ್. ಚೆನ್ನಪ್ಪ,
ಮಾಡಲ್ ಮುದ್ರಾಕ್ಷರಶಾಲಾ, ಬೆಂಗಳೂರು ಸಿಟಿ.

ಪತಿತ ಸ್ತ್ರೀಯರ ಉದ್ಧಾರ — ೧

(ಶ್ರೀ|| ಹೊಸಹಳ್ಳಿ ಕೆ. ವೀರಣ್ಣಗೌಡರಿಂದ.)

ಪೀಠಿಕೆ

ಮೈಸೂರು ಸಂಸ್ಥಾನದಲ್ಲಿ ಕಾನೂನಿನ ಸಹಾಯದಿಂದ ವ್ಯಭಿಚಾರ ವೃತ್ತಿಯನ್ನು ತಪ್ಪಿಸಿ, ಪತಿತ ಸ್ತ್ರೀಯರನ್ನು ಉದ್ಧರಿಸಲು ಶ್ರೀ ಡಿ. ಎಸ್. ಮಲ್ಲಪ್ಪನವರು ಮಾಡುತ್ತಿರುವ ಪ್ರಯತ್ನವು ಸುತ್ತ್ಯಾರ್ಹವಾದುದು. ಈ ಸಂಬಂಧವಾಗಿ ಶ್ರೀ ಮಲ್ಲಪ್ಪನವರು ತಂದಿರುವ ಮಸೂದೆಯು ಮೊನ್ನೆ ನಡೆದ ಪ್ರತಿನಿಧಿ ಸಭೆಯ ದಸರ ಅಧಿವೇಶನದಲ್ಲಿ ಒಂದು ದಿನವೆಲ್ಲಾ ಬಹಳ ಸ್ವಾರಸ್ಯವೂ ತೀಕ್ಷ್ಣವೂ ಆದ ಚರ್ಚೆಗೆ ಒಳಗಾಗಿತ್ತು. ಚರ್ಚೆಯು ಅಂತ್ಯದಲ್ಲಿ ಸಭಿಕರ ಅಭಿಪ್ರಾಯವನ್ನು ಲೆಕ್ಕಿಸುವಾಗ ಈ ಮಸೂದೆಯನ್ನು ಒಪ್ಪಿದವರಿಗಿಂತಲೂ ಒಪ್ಪದವರ ಸಂಖ್ಯೆ ಸ್ವಲ್ಪ ಹೆಚ್ಚಾಗಿದ್ದುದರಿಂದ ಪ್ರತಿನಿಧಿ ಸಭೆಯಲ್ಲಿ ಮಸೂದೆಯೇನೋ ಬಿದ್ದುಹೋಯಿತು. ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸಬೇಕಾಗಿರುವ ಪ್ರತಿಯೊಂದು ಮಸೂದೆಯ ಮೇಲೂ ಪ್ರತಿನಿಧಿಸಭೆಯವರು ತಮ್ಮಭಿಪ್ರಾಯವನ್ನು ಸೂಚಿಸಲು ಅವಕಾಶ ಕೊಡಬೇಕೆಂಬ ನಿಬಂಧನೆಯಿದೆಯೇ ಹೊರತು, ಪ್ರತಿನಿಧಿಸಭೆಯವರು ನಿರಾಕರಿಸಿದ ಮಸೂದೆಯನ್ನು ನ್ಯಾಯವಿಧಾಯಕಸಭೆಯ ಮುಂದೆ ಚರ್ಚೆಗೆ ತರಕೂಡದೆಂಬ ನಿರ್ಬಂಧವೇನೂ ಇಲ್ಲ. ಆದುದರಿಂದ ಶ್ರೀ|| ಮಲ್ಲಪ್ಪನವರು ತಂದಿರುವ ವ್ಯಭಿಚಾರ ನಿರೋಧ ಮಸೂದೆಗೆ ಪ್ರತಿನಿಧಿಸಭೆಯವರ ಒಪ್ಪಿಗೆ ದೊರೆಯದಿದ್ದರೂ, ಅದು ಬರುವ ಡಿಸೆಂಬರ್ ತಾ|| 12 ರಿಂದ ಪ್ರಾರಂಭವಾಗುವ ನ್ಯಾಯವಿಧಾಯಕಸಭೆಯ ಅಧಿವೇಶನದಲ್ಲಿ ಚರ್ಚೆಗೆ ಬಂದೇ ಬರುವುದಾಗಿದೆ.

ವ್ಯಭಿಚಾರವೃತ್ತಿಯು ಕೇವಲ ಹೇಯವಾದುದೆಂದು ಎಲ್ಲರೂ ಒಪ್ಪುವರು. ಇಂತಹ ನೀಚಕಸುಬನ್ನು ಮೂಲೋತ್ಪಾಟನ ಮಾಡಿ, ತಿಳಿದೋ ತಿಳಿಯದೇಯೋ, ಕಾರಣಾಂತರಗಳಿಂದ ಈ ನಿಂದ್ಯವಾದ ವೃತ್ತಿಯನ್ನು ಅವಲಂಬಿಸಿರುವ ಪತಿತ ಸ್ತ್ರೀಯರನ್ನು ಉದ್ಧರಿಸಿ, ಮುಂದೆ ಈ ಪಾತಕದ ಬಾಣಿಗೆ ನೂಕಲ್ಪಡುವುದಕ್ಕಿರುವ ಏನೂ ತಿಳಿಯದ ಎಳೆಪ್ರಾಯದ ಹುಡುಗಿಯರನ್ನು ರಕ್ಷಿಸುವ ಪ್ರಯತ್ನಕ್ಕೆ ಎಲ್ಲರೂ ಸಹಾಯಮಾಡತಕ್ಕದ್ದೇ ಸರಿ. ಆದರೆ ಕಾನೂನಿನ ಮೂಲಕ ವ್ಯಭಿಚಾರವೃತ್ತಿಯನ್ನು ನಿರೋಧಿಸುವುದು ಸಾಧ್ಯವೆ? ಸಾಧುವೆ? ಎಷ್ಟರಮಟ್ಟಿಗೆ, ಯಾವ ಯಾವ ಮಾರ್ಗಗಳಿಂದ ತಪ್ಪಿಸಬಹುದು? ಈ ಕಸುಬಿನಿಂದ ಜನರು ಕೆಡದಿರಬೇಕಾದರೆ ಇನ್ನು ಯಾವ ಯಾವ ಪ್ರಯತ್ನಗಳನ್ನು ಕೈಗೊಳ್ಳಬೇಕು? ಇವೇ ಮೊದಲಾದ ವಿಷಯಗಳನ್ನು ಕುರಿತು ಆಲೋಚಿಸುವುದು ಅವಶ್ಯವಾಗಿದೆ. ಒಂದು ರೋಗವನ್ನು ವಾಸಿಮಾಡಬೇಕಾದರೆ ಆ ರೋಗ ಬಂದುದರ ಕಾರಣಗಳನ್ನು ಕಂಡು ಹಿಡಿಯಬೇಕಾಗಿರುವಂತೆಯೇ ವ್ಯಭಿಚಾರವೃತ್ತಿಯನ್ನು ತಪ್ಪಿಸಲು ಪ್ರಯತ್ನಿಸುವಾಗ ಈ ವೃತ್ತಿಯು ಹೇಗೆ, ಏಕೆ ಆಚರಣೆಗೆ ಬಂತೆಂಬುದನ್ನು ತಿಳಿದುಕೊಳ್ಳುವುದೂ ಅತ್ಯವಾಗಿದೆ. ಏಕೆಂದರೆ, ವ್ಯಭಿಚಾರವೃತ್ತಿಯ ನಿರೋಧ ಪ್ರಯತ್ನವು ಸುತ್ತ್ಯವಾದುದಾದರೂ ಈ ಕಾರ್ಯವು ಮೇಲೆ ಮೇಲೆ ಕಾಣುವಷ್ಟು ಸುಲಭವಾದುದಲ್ಲ. ಇದು ಪರಸ್ಪರ ಸಂಬಂಧವುಳ್ಳ ಅನೇಕ ತೊಡಕಾದ ವಿಷಯಗಳನ್ನೊಳಗೊಂಡಿರುವ ಸಮಸ್ಯೆಯಾಗಿದೆ. ಮಾನವ ಸ್ವಭಾವವಾದ ಕರುಣೆಯ ಉತ್ಸಾಹದಿಂದ ಹುರಿಗೊಂಡು ಆತುರದಿಂದ ಈ ಕೆಲಸ ಮಾಡಲು ಪ್ರಯತ್ನಿಸಿದರೆ, ಪ್ರಯತ್ನವು ವಿಫಲವಾಗುವುದು ಮಾತ್ರವೇ ಅಲ್ಲದೆ, ಅನಿರೀಕ್ಷಿತವಾದ ಅನೇಕ ಕೆಡಕುಗಳೂ ಉಂಟಾಗಬಹುದು. ಮೇಲೆ ಕಾಣಿಸಿರುವ ಪ್ರಶ್ನೆಗಳಿಗೆ ಸಂಬಂಧಿಸಿದ ಕೆಲವು ಸಂಗತಿಗಳನ್ನು ಮಹಾಜನರ ಹಾಗೂ ನ್ಯಾಯವಿಧಾಯಕರ ಗಮನಕ್ಕೆ ತರುವುದೇ ಈ ಲೇಖನ ಮಾಲೆಯ ಉದ್ದೇಶವಾಗಿದೆ.

ವ್ಯಭಿಚಾರವೃತ್ತಿಗೆ ಕಾರಣ

ವ್ಯಭಿಚಾರಕ್ಕಿಂತಲೂ ವ್ಯಭಿಚಾರವೃತ್ತಿಯು ಈಚಿನದು. ವ್ಯಭಿಚಾರವು ಪ್ರಪಂಚದ ಆದಿಯಿಂದಲೂ ಇದೆ ಮತ್ತು ಪ್ರಪಂಚವು ಇರುವವರೆಗೂ ಇರುತ್ತದೆ. ಪ್ರಪಂಚದಲ್ಲಿ ವ್ಯಭಿಚಾರವನ್ನು ತಪ್ಪಿಸುವುದು ಅಸಾಧ್ಯ. ಆದರೆ ವ್ಯಭಿಚಾರವೃತ್ತಿಯ ವಿಚಾರವೇ ಬೇರೆ. ಈ ನೀಚಕಸುಬಿನ ಮೂಲವನ್ನು ನಾವು ಸಕಾರಣವಾಗಿ ಊಹಿಸಬಹುದು. ವ್ಯಭಿಚಾರವು ಒಂದು ವೃತ್ತಿಯಾಗಿ ಪರಿಣಮಿಸುವುದಕ್ಕೆ ದೇವದಾಸಿ ಪದ್ಧತಿಯು ಬಹುಮಟ್ಟಿಗೆ ಕಾರಣವಾಗಿದೆಯೆಂದು ಹೇಳಬಹುದು.

ದೇವದಾಸಿ ಪದ್ಧತಿಯಾದರೂ ಹಿಂದುಸಮಾಜದಲ್ಲಿ ಅಂಗೀಕಾರವನ್ನು ಪಡೆದಿರುವುದು ಮಾತ್ರವೇ ಅಲ್ಲದೆ ಮನ್ನಣೆಯನ್ನೂ ಹೊಂದಿರತಕ್ಕ ಒಂದು ಪದ್ಧತಿಯಾಗಿದೆ. ಏಕಪತ್ನಿವ್ರತ, ಪತಿವ್ರತಾಧರ್ಮ ಮುಂತಾದ ಉತ್ತಮ ಧ್ಯೇಯಗಳಿಗೆ ಆದರ್ಶಪ್ರಾಯವಾಗಿರುವ ಹಿಂದು ಸಮಾಜದಲ್ಲಿ ದೇವದಾಸಿ ಪದ್ಧತಿಯಂತಹ ಅಧರ್ಮ ಸಂಸ್ಥೆಯು ಬೇರೂರಿರುವುದು ಮೂಗಿನ ಮೇಲೆ ಬೆರಳನ್ನಿಡಿಸುತ್ತದೆ. ಆದರೆ ದೇವದಾಸಿ ಪದ್ಧತಿಯು ಹಿಂದು ಸಮಾಜದಲ್ಲಿ ಆಚರಣೆಗೆ ಬರುವುದಕ್ಕೆ ಆ ಕಾಲದಲ್ಲಿದ್ದ ಅವಶ್ಯಕತೆ, ಆಗ ಈ ಪದ್ಧತಿಯ ಸ್ವಭಾವ ಇವೇ ಮೊದಲಾದುವುಗಳನ್ನು ನೋಡುವುದಾದರೆ ಆಗ ಇದು ಈಗಿನಷ್ಟು ಅಧೋಗತಿಯಲ್ಲಿರಲಿಲ್ಲವೆಂದೂ ಇದು ಯಾವ ಕಾರಣದಿಂದ ಪ್ರಾರಂಭಿಸಲ್ಪಟ್ಟಿತೋ ಆ ಕಾರಣವಾಗಲಿ, ಅವಶ್ಯಕತೆಯಾಗಲಿ ಈಗಿಲ್ಲದಿರುವುದರಿಂದ ಈ ಪದ್ಧತಿಯು ಈಗಿನ ಹೀನಾಯವಾದ ಸ್ಥಿತಿಗೆ ಇಳಿದಿದೆಯೆಂದೂ ಗೊತ್ತಾಗುವುದು.

ದೇವದಾಸಿ ಪದ್ಧತಿಗೆ ಕಾರಣ

ಬೌದ್ಧ ಮತವು ಪ್ರಬಲಕ್ಕೆ ಬಂದಹಾಗೆಲ್ಲಾ, ಅಶೋಕ ಚಕ್ರವರ್ತಿಯೇ ಮೊದಲಾದ ಬೌದ್ಧ ಮತಾವಲಂಬಿಗಳಾದ ರಾಜ ಮಹಾರಾಜರುಗಳು ಆ ಮತದ ತತ್ತ್ವಗಳನ್ನು ತಂತಮ್ಮ ಪ್ರಜೆಗಳು ಕಡ್ಡಾಯವಾಗಿ ಆಚರಣೆಗೆ ತರಬೇಕೆಂದು ಒತ್ತಾಯಪಡಿಸಿದಹಾಗೆಲ್ಲಾ, ಬೌದ್ಧ ಮತದ ಶ್ರೇಷ್ಠ ತತ್ತ್ವಗಳು ಜನರ ಮನಸ್ಸಿನ ಮೇಲೆ ಹೆಚ್ಚು ಹೆಚ್ಚಾಗಿ ಪರಿಣಾಮವನ್ನುಂಟುಮಾಡುತ್ತ ಬಂದಹಾಗೆಲ್ಲ, ಸರ್ವ ಸಾಮಾನ್ಯವಾಗಿ ಜನರು ಪ್ರಾಪಂಚಿಕ ವ್ಯಾಪಾರಗಳನ್ನು ಉದಾಸೀನಮಾಡಿ, ವಿಷಯ ಲೋಲುಪತೆಗಳನ್ನು ಮರೆತು ಪಾರಮಾರ್ಥಿಕ ವಿಚಾರಗಳಲ್ಲಿ ಹೆಚ್ಚು ಹೆಚ್ಚಾಗಿ ಮಗ್ನರಾಗುತ್ತ ಬಂದರು. ಕಾಲಕ್ರಮದಲ್ಲಿ ಜನಸಾಮಾನ್ಯರು ಸಹ ತ್ಯಾಗಿಗಳೂ ಯೋಗಿಗಳೂ ಆಗಿ ಕಡೆಗೆ ಪ್ರಪಂಚವು ಮುಂದುವರಿಯುವುದಕ್ಕೆ ಅಗತ್ಯವಾದ ಪ್ರಜೋತ್ಪತ್ತಿಯು ಕೂಡ ಕಡಿಮೆಯಾಗಬಹುದೆಂಬ ಸಂಶಯವು ಮುಂದಾಲೋಚನೆವುಳ್ಳವರ ಮನಸ್ಸಿನಲ್ಲಿ ಹೊಳೆಯುವಮಟ್ಟಿಗೂ ಜನಸಾಮಾನ್ಯರಲ್ಲಿ ವೈರಾಗ್ಯವು ಬೆಳೆಯಿತು. ಇದು ಚರಿತ್ರೆಯ ಅಂಶವಾಗಿದೆ. ಪೀಳಿಗೆಯಿಲ್ಲದೆ ದೇಶವೇ ನಾಶಹೊಂದಬಹುದೆಂಬ ಯೋಚನೆಗೆ ಸಿಕ್ಕಿದವರು ಜನರಲ್ಲಿ ಪ್ರಾಪಂಚಿಕ ವ್ಯಾಮೋಹಗಳೂ ವಿಷಯಲೋಲುಪ್ತಿಗಳೂ ಬೇರೂರುವಂತೆ ಮಾಡುವುದಕ್ಕೆ ಪ್ರಬಲವಾದ ಪ್ರಯತ್ನಗಳನ್ನು ಕೈಕೊಂಡರು.

ಸ್ತ್ರೀವಿಲಾಸದ ಕಡೆಗೆ ಮನಸ್ಸನ್ನೆಳೆಯುವ ವಿವಿಧ ಪುಸ್ತಕಗಳೂ ಚಿತ್ರಪಟಗಳೂ ಆ ಕಾಲದಲ್ಲಿ ಹೆಚ್ಚಾಗಿ ಪ್ರಚುರಗೊಂಡುವು. ಆಗಲೇ ದೇವದಾಸಿ ಪದ್ಧತಿಯೂ ಸಮಾಜದಲ್ಲಿ ಒಂದು ವಿಧವಾದ ಅಂಗೀಕಾರ ಮತ್ತು ಗೌರವಗಳನ್ನು ಪಡೆದು ಹೆಚ್ಚಾಗಿ ಆಚರಣೆಗೆ ಬಂದಿತೆಂದು ಹೇಳಬಹುದು. ವಿಧಾತನ ಸೃಷ್ಟಿಯಲ್ಲಿ ಮನುಷ್ಯನನ್ನು ಆಕರ್ಷಿಸುವ ಒಂದು ವಸ್ತುವೆಂದರೆ ಸ್ತ್ರೀಯು. ಪ್ರಾಯದ ಚಲುವೆ ಹೆಣ್ಣೊಬ್ಬಳನ್ನು ನೋಡಿದರೆ ಕೆಲವರ ಮನಸ್ಸು ಚಲಿಸುವುದು. ಹಾಗೂ ಅಂತಹವಳು ಇಂಚರದಿಂದ ಹಾಡುತ್ತ ಹಾವಭಾವಗಳಿಂದ ನರ್ತಿಸಿದರೆ ಬಹುಮಂದಿ ಆಕರ್ಷಿಸಲ್ಪಡುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಸ್ತ್ರೀ, ಸಂಗೀತ, ನರ್ತನ ಇವು ಮೂರರಲ್ಲಿ ಒಂದೊಂದೇ ಮಾನವನನ್ನು ಬೇಕಾದಷ್ಟು ಆಕರ್ಷಿಸಬಲ್ಲವುಗಳಾಗಿರುವಲ್ಲಿ, ಇವು ಮೂರರ ಸಮ್ಮೇಳನದಿಂದಾಗುವ ಪರಿಣಾಮವನ್ನು ವಿವರಿಸಬೇಕಾಗಿಲ್ಲ. ಈ ಮೂರರ ವಿಷಯದಲ್ಲೂ ನಮ್ಮಲ್ಲಿ ಮೊದಲಿಂದಲೂ ಪೂಜ್ಯಭಾವನೆಯಿದೆಯೆಂಬುದು ಪುರಾಣಗಳಿಂದ ವ್ಯಕ್ತವಾಗುತ್ತದೆ. ಸ್ತ್ರೀಯು ಪುರುಷನ ಅರ್ಧಾಂಗಿ; ಆತನ ಪ್ರಾಣ. ಆಕೆಯೇ ಪ್ರಕೃತಿ. ಸಂಗೀತ ಮತ್ತು ಭರತಶಾಸ್ತ್ರಗಳೂ ಪುರಾಣಪ್ರಸಿದ್ಧವಾಗಿವೆ. ಸ್ವಯಂವಾಣಿಯೇ ಕೈಯಲ್ಲಿ ವೀಣೆಯನ್ನು ಹಿಡಿದು ಸಂಗೀತ ಕಲೆಗಿರುವ ಪ್ರಾಶಸ್ತ್ಯವನ್ನು ಹೆಚ್ಚಿಸಿರುವಳು. ನಾರದ, ತುಂಬುರರಂತಹ ಯೋಗಿಗಳು ಸಂಗೀತ ವಿದ್ವಾಂಸರು. ಸಾಕ್ಷಾತ್ ಈಶ್ವರನು ನಟರಾಜನೆಂದು ಪ್ರಸಿದ್ಧನಾಗಿರುವನು. ಇಂದ್ರ ಸಭೆಯಲ್ಲಿ ಅಪ್ಸರೆಯರೆಂಬ ನರ್ತಕಿಯರು ತಮ್ಮ ಸಂಗೀತ ನರ್ತನಗಳಿಂದ ಇಂದ್ರ ಸಭೆಗೆ ಬಂದ ಅತಿಥಿ ಅಭ್ಯಾಗತರನ್ನು ಆಮೋದಗೊಳಿಸುತ್ತಿದ್ದರು.

ಹೀಗೆ ಸಂಗೀತ ಮತ್ತು ಭರತಶಾಸ್ತ್ರಗಳಿಗೆ ದೊರೆತಿರುವ ಮನ್ನಣೆ, ಈ ಕಲೆಗಳನ್ನಭ್ಯಸಿಸಿರುವ ಸುಂದರ ತರುಣಿಯರು ಜನರ ಮನಸ್ಸನ್ನಾಕರ್ಷಿಸಬಲ್ಲರೆಂಬ ದೃಢನಂಬಿಕೆ, ಇವುಗಳು ಭಾರತಭೂಮಿಯಲ್ಲಿ ಜನಸಾಮಾನ್ಯರೆಲ್ಲರು ಯೋಗಿಗಳಾಗುತ್ತಿದ್ದ ಸಮಯದಲ್ಲಿ ಅವರು ಭೋಗಿಗಳಾಗುವಂತೆ ಮಾಡುವುದಕ್ಕಾಗಿ ಆಗಿನ ಕಾಲದಲ್ಲಿ ಜನಸಂದಣಿಯ ಸ್ಥಳಗಳಾದ ದೇವಸ್ಥಾನ, ರಾಜಾಸ್ಥಾನ, ಶುಭಶೋಭನ ಸಮಯಗಳಲ್ಲಿ ನಡೆಯುವ ಸಭೆಗಳು ಇವೇ ಮೊದಲಾದ ಸಾರ್ವಜನಿಕ ಸ್ಥಳಗಳಲ್ಲಿ ಕಲಾಕೋವಿದೆಯರಾದ ನರ್ತಕಿಯರು ಅಥವಾ ದೇವದಾಸಿಯರಿಗೆ ಮನ್ನಣೆದೊರೆಯುವಂತೆ ಮಾಡಿದುವು. ದೇವದಾಸಿಯರಿಗೆ ಸಮಾಜದಲ್ಲಿ, ದೇವಸ್ಥಾನಗಳಲ್ಲಿ, ಗುರುಮಠಗಳಲ್ಲಿ ಮತ್ತು ರಾಜಾಸ್ಥಾನಗಳಲ್ಲಿ ಅಂಗೀಕಾರ ಪುರಸ್ಕಾರಗಳು ಸಿಕ್ಕಿ, ದೇವದಾಸಿ ಪದ್ಧತಿಯು ಹೆಚ್ಚಾಗಿ ಆಚರಣೆಗೆ ಬರುವುದಕ್ಕೆ ಅವಕಾಶವಾಯಿತು.

ದೇವದಾಸಿ ಪದ್ಧತಿ

ದೇವದಾಸಿ ಪದ್ಧತಿಯ ನಿಯಮನಿಬಂಧನೆಗಳಾದರೂ ಉತ್ತಮವಾಗಿಯೇ ಇದ್ದುವು. ಒಳ್ಳೇ ರೂಪವತಿಯೂ ಚಟುವಟಿಕೆಯುಳ್ಳವಳೂ ಆದ ಹುಡುಗಿಯೇ ದೇವದಾಸಿಯಾಗಲು ಯೋಗ್ಯಳೆಂದು ಪರಿಗಣಿಸಲ್ಪಡುತ್ತಿತ್ತು. ಆಕೆಯು ಸಾಮಾನ್ಯ ವಿದ್ಯಾಬುದ್ಧಿಯ ಜತೆಗೆ ಸಂಗೀತ ಮತ್ತು ಭರತಶಾಸ್ತ್ರಗಳಲ್ಲಿ ಪಾಂಡಿತ್ಯಸಂಪಾದಿಸಬೇಕಾಗಿತ್ತು. ಅವಳ ಪಾಂಡಿತ್ಯವು ಸಾರ್ವಜನಿಕ ಸಭೆಯಲ್ಲಿ ಪರೀಕ್ಷಿಸಲ್ಪಟ್ಟು ಮೆಚ್ಚಿಗೆಪಡೆದ ಹೊರತು ಆಕೆಯು ಸಭಾಯೋಗ್ಯಳಾಗುತ್ತಿರಲಿಲ್ಲ. ಅಂತಹ ಪ್ರದರ್ಶನ ಸಭೆಗೆ ಗೆಜ್ಜೆ ಪೂಜೆಯೆಂದು ಹೆಸರು. ಗೆಜ್ಜೆ ಪೂಜೆಯ ಕಾಲದಲ್ಲಿ ದೇಶ, ಪಾಳು, ಗುಡಿ, ಕಟ್ಟೆಮನೆಗಳ ಯಜಮಾನರು, ಶೃಂಗೇರಿ ಮಠದ ಪ್ರತಿನಿಧಿ, ಗೌಡ, ಶಾನುಭೋಗ ಮೊದಲಾದವರೂ ಸ್ಥಳದ ಪಂಡಿತರು, ರಸಿಕರು, ದೊಡ್ಡಮನುಷ್ಯರು ಇವರೆಲ್ಲರೂ ಸಭೆ ಸೇರಿ ಆಕೆಯ ವಿದ್ಯೆ, ಕುಶಲತೆಗಳ ಪ್ರದರ್ಶನವನ್ನು ನೋಡಿ, ಆಕೆಯು ನಿಜವಾದ ಅರ್ಹತೆಯನ್ನು ಸಂಪಾದಿಸಿದ್ದರೆ, ಆಕೆಯು ಸಭಾಯೋಗ್ಯಳೆಂದು ತಮ್ಮಭಿಪ್ರಾಯವನ್ನು ಸೂಚಿಸುತ್ತಿದ್ದರು. ಗುರುಮಠದ ಪ್ರತಿನಿಧಿಯೇ ಸಭಿಕರೆಲ್ಲರಿಂದಲೂ ಮುಟ್ಟಲ್ಪಟ್ಟ ಗೆಜ್ಜೆಸರವನ್ನು ಆಗಕೆ ಕೊಟ್ಟು ಆಕೆಯಿಂದ ಕೆಲವು ಪ್ರಮಾಣ ವಚನಗಳನ್ನು ತೆಗೆದುಕೊಳ್ಳುತ್ತಿದ್ದರು. ಪತಿವ್ರತಾ ಧರ್ಮವನ್ನು ರಕ್ಷಿಸಿಕೊಂಡು ದೇವದಾಸಿ ವೃತ್ತಿಗೆ ಯಾವ ವಿಧದಲ್ಲೂ ಕಳಂಕ ಬರದಂತೆ ನಡೆದುಕೊಂಡು ತನ್ನ ಕರ್ತವ್ಯಕರ್ಮಗಳನ್ನು ಮಾಡುವುದು ಆಕೆಯು ಸಭಿಕರಿಗೆ ಕೊಡುತ್ತಿದ್ದ ಪ್ರಮಾಣ ವಚನಗಳಲ್ಲಿ ಅತಿ ಮುಖ್ಯವಾದುದಾಗಿದೆ. ದೇವಸ್ಥಾನಗಳಲ್ಲಿ ಮೊದಲನೇ ಮಂಗಳಾರತಿ ಆಕೆಯಿಂದಲೇ ಆಗಬೇಕು; ಉತ್ಸವ ಕಾಲಗಳಲ್ಲಿ ದೇವರ ಮುಂದೆ ಆಕೆ ಮರ್ಯಾದಾರ್ಥವಾಗಿ ಹೋಗಬೇಕು; ಇವೇ ಮೊದಲಾದುವು ಆಕೆಯ ಕರ್ತವ್ಯಗಳಲ್ಲಿ ಕೆಲವಾಗಿದ್ದುವು. ಇದಕ್ಕಾಗಿ ಆಕೆಗೆ ದೇವಸ್ಥಾನದಿಂದ ಕೊಡಗೆ, ಮಿರಾಸಿಗಳು ಸಲ್ಲುತ್ತಿದ್ದುವು.

ಅಲ್ಲದೆ ಆಕೆಯು ರಾಜಸ್ಥಾನಗಳಿಗೆ ಹೋಗಿ ತನ್ನ ವಿದ್ಯಾಪ್ರದರ್ಶನದಿಂದ ರಾಜನನ್ನೂ ಆಸ್ಥಾನದ ಪಂಡಿತರು, ಕವಿಗಳು ಮೊದಲಾದವರನ್ನೂ ಮೆಚ್ಚಿಸಿ ಪಾರಿತೋಷಿಕಗಳನ್ನೂ ಪಡೆಯುತ್ತಿದ್ದಳು. ಅರಮನೆಗಳಿಂದಲೂ ದೇವದಾಸಿಯರಿಗೆ ಮಾನ್ಯ, ಮಿರಾಸಿಗಳು ಬರುತ್ತಿದ್ದುವು ಮತ್ತು ತನ್ನ ಮನೆಗೆ ಬಂದ ರಸಿಕ ಜನರನ್ನೂ ವಿದ್ವನ್ಮಣಿಗಳನ್ನೂ ಆಕೆ ಸಂಗೀತ, ನರ್ತನ, ಪಗಡೆ, ಚದುರಂಗಗಳ ಆಟ, ಸಂಭಾಷಣೆ ಇವುಗಳಿಂದ ಸಂತೋಷಗೊಳಿಸಿ, ಅವರಿಗೆ ಗಂಧ, ತಾಂಬೂಲಗಳನ್ನು ಕೊಟ್ಟು ಅವರಿಂದ ಬಹುಮಾನ ಪಡೆಯುತ್ತಿದ್ದಳು. ಮದುವೆ ಮುಂತಾದ ಶುಭಸಮಯಗಳಲ್ಲಿ ಜರುಗುತ್ತಿದ್ದ ಸಭೆಗಳಿಗೂ ಆಕೆಯು ಆಹ್ವಾನಿಸಲ್ಪಡುತ್ತಿದ್ದಳು. ಹೀಗೆಲ್ಲಾ ಇದ್ದರೂ ಆಕೆಯು ವ್ಯಭಿಚಾರದೋಷಕ್ಕೆ ಗುರಿಯಾಗುತ್ತಿರಲಿಲ್ಲ. ವ್ಯಭಿಚಾರಮಾಡಕೂಡದೆಂಬ ಕಟ್ಟಿದ್ದಿತು. ಆ ಕಟ್ಟನ್ನು ಅತಿಕ್ರಮಿಸಿ ನಡೆದು, ವ್ಯಭಿಚಾರ ದೋಷಕ್ಕೆ ಒಳಗಾದವಳನ್ನು ಶ್ರೀ ಮಠದವರು ಬಹಿಷ್ಕಾರಕ್ಕೆ ಗುರಿಪಡಿಸುತ್ತಿದ್ದರು. ಬಹಿಷ್ಕಾರಹೊಂದಿದ ದೇವದಾಸಿಯು ಪುನಃ ಗೆಜ್ಜೆ ಕಟ್ಟುವ ಹಾಗಿರಲಿಲ್ಲ. ದೇವಸ್ಥಾನ, ರಾಜಾಸ್ಥಾನ, ಬಹಿರಂಗಸಭೆ ಮುಂತಾದ ಯಾವ ಕಡೆಗೂ ಆಕೆಯನ್ನು ಸೇರಿಸುತ್ತಿರಲಿಲ್ಲ. ಆಕೆಯು ಸಮಾಜಕ್ಕೇ ಬಾಹಿರಳು. ಅಷ್ಟೇ ಅಲ್ಲ. ಅವಳ ಸಹವಾಸ ಮಾಡಿದವರೂ ಬಹಿಷ್ಕಾರಕ್ಕೆ ಗುರಿಯಾಗುತ್ತಿದ್ದರು. ದೇವಸ್ಥಾನ,ಗುರುಮಠ,ರಾಜಾಸ್ಥಾನ,ಸಮಾಜ ಇವುಗಳಲ್ಲಿ ದೇವದಾಸಿಯ ಸ್ಥಾನಮಾನಗಳು ಮೇಲ್ಕಂಡಂತೆ ಇದ್ದುದರಿಂದಲೇ ಆಕೆಯೊಡನೆ ಸಾಮಾನ್ಯರೀತಿಯಿಂದ ವ್ಯವಹರಿಸುವುದು ಪಾಪವೆಂದಾಗಲಿ ಅಪಮಾನವೆಂದಾಗಲಿ ಯಾರೂ ಭಾವಿಸಿರಲಿಲ್ಲ. ಅಲ್ಲದೆ ಆಗಿನ ಕಾಲದ ದೇವದಾಸಿಯರು ಕೇವಲ ಸಂಗೀತ, ಭರತಶಾಸ್ತ್ರಗಳಲ್ಲಿ ಮಾತ್ರವೇ ಪಂಡಿತರಾಗಿರದೆ, ಅನೇಕರು ಕವಿತಾಶಕ್ತಿಯುಳ್ಳವರಾಗಿಯೂ ಇದ್ದರು. ಆದುದರಿಂದಲೇ ಪಂಡಿತರು, ವಿದ್ವಂಮಣಿಗಳು, ಕವಿಗಳು, ರಾಜರು, ಇವರೆಲ್ಲರೂ ದೇವದಾಸಿಗೆ ತಮ್ಮ ಮಧ್ಯೆ ಒಂದು ಯೋಗ್ಯಸ್ಥಾನವನ್ನು ಕೊಟ್ಟು, ಆಕೆಯೊಡನೆ ಯೋಗ್ಯರೀತಿಯಿಂದ ವರ್ತಿಸುತ್ತ ಧಾರಾಳವಾಗಿ ಮಿಳಿತರಾಗುತ್ತಿದ್ದರು.

ವಿದ್ಯಾವತಿಯೂ ಕಲಾವತಿಯೂ, ರಸಿಕಳೂ, ಸುಂದರಿಯೂ, ತರುಣಿಯೂ ಆದವಳು, ಹಾಗೂ ಪಂಡಿತರು, ವಿದ್ವನ್ಮಣಿಗಳು, ಕವಿಗಳು, ರಸಿಕರು, ರಾಜರು ಮುಂತಾದವರಿಂದ ಕೂಡಿದ ಸಭೆಗಳಲ್ಲೂ ಜನಸಂದಣಿಯ ಸ್ಥಳಗಳಲ್ಲೂ ಹೆಚ್ಚಾಗಿ ಸೇರುತ್ತಿದ್ದವಳು, ಅಂತಹ ಜನರು ತನ್ನ ಮನೆಗೆ ಧಾರಾಳವಾಗಿ ಬರಲು ಅವಕಾಶಕೊಡುತ್ತಿದ್ದವಳು ದೇವದಾಸಿಯೆನಿಸಿಕೊಂಡ ವೇಶ್ಯೆಯು ಪತಿವ್ರತಾ ಧರ್ಮವನ್ನು ರಕ್ಷಿಸಿಕೊಂಡಿರಬೇಕಾಗಿತ್ತೆನ್ನುವುದು ಕೇವಲ ಅಸಂಬದ್ಧವಾಗಿ ಕಾಣುವುದು. ಆದರೆ ದೇವದಾಸಿಯಾದವಳು ಪತಿವ್ರತೆಯಾಗಿದ್ದುಕೊಂಡು ಮಾನ ಮರ್ಯಾದೆಯಿಂದ ಜೀವಿಸುವುದಕ್ಕೆ ತಕ್ಕ ಅವಕಾಶಗಳಿದ್ದುವು.

ಪ್ರತಿಯೊಬ್ಬ ದೇವದಾಸಿಯೂ ತಾನು ಸೇವೆಮಾಡುತ್ತಿದ್ದ ದೇವರನ್ನೇ ಪತಿಯನ್ನಾಗಿ ವರಿಸಿ ಆತನ ಹೆಸರಿನ ಮೇಲೆ ತಾಳಿ ಅಥವ ಮಾಂಗಲ್ಯ ಧಾರಣೆ ಮಾಡಿಕೊಳ್ಳುತ್ತಿದ್ದಳು. ಭಗವಂತನ ಸೇವೆಗಾಗಿ ತನ್ನನ್ನೇ ಅರ್ಪಿಸಿ ಆತನನ್ನೇ ಪತಿಯನ್ನಾಗಿ ವರಿಸುತ್ತಿದ್ದುದರಿಂದಲೇ ದೇವದಾಸಿಯಾದವಳಿಗೆ ನಿತ್ಯ ಸುಮಂಗಲೆಯೆಂಬ ಹೆಸರು ಬಂದಿದೆ. ದೇವದಾಸಿಯಾದವಳು ತನ್ನ ಕಾಮೇಚ್ಛೆಯನ್ನು ಪೂರ್ತಿಮಾಡಿಕೊಳ್ಳುವುದಕ್ಕೆ ಅವಕಾಶವಿತ್ತು ಅಂದರೆ, ಕೆಲವು ಗೊತ್ತಾದ ಗುಣಗಳುಳ್ಳ ಪುರುಷನೊಬ್ಬನನ್ನು ಆಕೆ ತನ್ನ ಜೀವಮಾನ ಪರ್ಯಂತ ತನ್ನ ಪುರುಷನನ್ನಾಗಿ ಪರಿಗ್ರಹಿಸಿ ಆತನಲ್ಲಿ ಪತಿಭಾವದಿಂದ ಕೂಡಿ ಪತಿವ್ರತೆಯಾಗಿ ಬಾಳಬೇಕಾಗಿತ್ತು. ಅಂತಹ ಪುರುಷನಿಗೆ ರಕ್ಷಕನೆಂದು ಹೆಸರು.

ಯಾರು ಬೇಕಾದರೂ ರಕ್ಷಕರಾಗಲು ಅವಕಾಶವಿರುತ್ತಿರಲಿಲ್ಲ. ರಕ್ಷಕನಾಗತಕ್ಕವನು ಮುಖ್ಯವಾಗಿ ವಿಧುರ ಅಥವ ಹೆಂಡತಿ ಸತ್ತವನಾಗಿರಬೇಕು. ಇಲ್ಲವಾದರೆ ಆತನ ಸಂಸಾರ ಸುಖವು ಕೆಡುತ್ತಿತ್ತು. ಆ ಮೇಲೆ ಅವನು ವಿದ್ಯಾವತಿಯೂ ಕಲಾವತಿಯೂ ರಸಿಕಳೂ ಆದ ಸುಂದರ ತರುಣಿಯೊಬ್ಬಳ ಸರ್ವಾಪೇಕ್ಷೆಗಳನ್ನೂ ಪೂರೈಸಿಕೊಡುವವನಾಗಬೇಕಾದ್ದರಿಂದ ರಕ್ಷಕನಾಗುವವನು ಸುಂದರನೂ, ಶ್ರೀಮಂತನೂ, ಪ್ರಾಯಸಮರ್ಥನೂ, ವಿದ್ವಾಂಸನೂ, ರಸಿಕನೂ ಆಗಿರಬೇಕು ಮತ್ತು ಉತ್ತಮ ವರ್ಣಕ್ಕೆ ಸೇರಿದವನಾಗಬೇಕು. ಇಂತಹ ಗುಣಗಳುಳ್ಳ ಪುರುಷನನ್ನು ದೇವದಾಸಿಯಾದವಳು ಆರಿಸಿಕೊಂಡು ಆತನನ್ನು ತನ್ನ ರಕ್ಷಕನನ್ನಾಗಿ ಅಂಗೀಕರಿಸಿ, ಆತನೊಡನೆ ಭೋಗಲಾಲಸೆಗಳನ್ನು ಪಡೆದು, ಪತಿಭಾವನೆಯಿಂದ ವರ್ತಿಸಿ, ಪತಿವ್ರತೆಯಾಗಿ ತನ್ನ ಕರ್ತವ್ಯ ಧರ್ಮಗಳನ್ನು ನೆರವೇರಿಸಬೇಕಾಗಿತ್ತು. ತನ್ನ ವೃತ್ತಿಗಾಗಿ ಕೊಡಲ್ಪಟ್ಟಿದ್ದ ಕೊಡಗೆ, ಮಿರಾಸಿಗಳು, ತನಗೆ ಸಭೆಗಳಲ್ಲಿ ದೊರೆಯುತ್ತಿದ್ದ ಪಾರಿತೋಷಕಗಳೂ, ತನ್ನ ಮನೆಯಲ್ಲಿ ಸಿಕ್ಕುತ್ತಿದ್ದ ಬಹುಮಾನಗಳೂ, ತನ್ನ ರಕ್ಷಕನಿಂದ ದೊರೆಯುತ್ತಿದ್ದ ಹಣ ಇವುಗಳೆಲ್ಲವೂ ಆಕೆಯ ನಿತ್ಯತೃಪ್ತಿಯಿಂದ ಸುಖ ಮತ್ತು ಸತ್ಯವಾದ ಜೀವನ ನಡೆಸಲು ಸಹಾಯಕವಾಗಿದ್ದುವು. ರಕ್ಷಕನಾದವನು ಆಕೆಯ ನ್ಯಾಯವಾದ ಕರ್ತವ್ಯಕಾರ್ಯದಲ್ಲಿ ಅಡ್ಡಿ ಬರಕೂಡದಾಗಿತ್ತು. ಹೀಗೆ ಆಗಿನ ಕಾಲದಲ್ಲಿ ದೇವದಾಸಿ ಪದ್ಧತಿಯು ಆಚರಣೆಯಲ್ಲಿತ್ತು.

ದೇವದಾಸಿ ಪದ್ಧತಿಯ ಹೀನಸ್ಥಿತಿ

ಅಷ್ಟು ಉತ್ತಮವಾದ ಧ್ಯೇಯಗಳಿಂದಲೂ ಕಟ್ಟುನಿಟ್ಟುಗಳಿಂದಲೂ ಕೂಡಿದ್ದ ದೇವದಾಸಿ ಪದ್ಧತಿಯು ಕಾಲಕ್ರಮದಲ್ಲಿ ಅಧೋಗತಿಗಿಳಿದುದಕ್ಕೆ ಕಾರಣಗಳು ಹೇರಳವಾಗಿವೆ. ಯಾವ ಉದ್ದೇಶ ಸಾಧನೆಗಾಗಿ ಮತ್ತು ಯಾವ ಕಾರಣಗಳಿಂದ ಈ ಪದ್ಧತಿಯು ದೇವಸ್ಥಾನ, ಗುರುಮಠ, ರಾಜ

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರೀಕೆ ಆವಿಗುರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ೬ ಖ. ೫ ಆಣೆ.

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸಿಮಿರಣಿ. M. C. ೩

ಸಕ್ತಿ, ಸನಾಜ ಇವುಗಳಲ್ಲೆಲ್ಲಾ ಪ್ರತಿಷ್ಠೆಯನ್ನು ಪಡೆದಿತ್ತು, ಆ ಅದ್ವೀ ತವು ವರ್ಷಗಳು ಕಳೆದ ಹಾಗೆಲ್ಲಾ ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚಾಗಿ ಸಾಧಿಸಲ್ಪಟ್ಟು, ಆ ಕಾರಣಗಳು ಮಾಯವಾಗುತ್ತ ಬಂದುವು. ಯಾರ ಆಶ್ರಯದಲ್ಲಿ ದೇವದಾಸಿಯರು ಮಾನ ಮರ್ಯಾದೆಗಳನ್ನು ರಕ್ಷಿಸಿಕೊಳ್ಳ ಬಹುದಾಗಿತ್ತೋ, ಯಾರ ಕೃಪೆಯಿಂದ ಅವರು ತಮ್ಮ ಜೀವಿತವನ್ನು ನೆಮ್ಮದಿಯಾಗಿ ಸಾಗಿಸಬಹುದಾಗಿತ್ತೋ ಅಂತಹವರು ಅಂದರೆ ದೇವಸ್ಥಾನಗಳ ಪಾರುಪತ್ಯಗಾರ ಪೂಜಾರಿಗಳೂ, ಗುರುಮಠದ ಪ್ರತಿನಿಧಿಗಳಾದ ಪುರೋಹಿತರೇ ಮೊದಲಾದವರೂ, ರಾಜರೂ, ರಾಜಾಸ್ಥಾನದಲ್ಲಿ ಸ್ಥಾನ ಮಾನಗಳನ್ನು ಪಡೆದಿದ್ದ ಇತರರೂ ದೇವದಾಸಿಯರು ತಮ್ಮ ಪಾತಿವ್ರತ್ಯವನ್ನುಳಿಸಿಕೊಳ್ಳಲಾಗದಂತೆ ವರ್ತಿಸಿದರು. ಇದು ಬೇಲಿಯೆದ್ದು ಹೊಲ ಮೇದಂತಾಯಿತು. ಯತ್ನವಿಲ್ಲದೆ ದೇವದಾಸಿಯರು ತಮ್ಮ ರಕ್ಷಕರಾಗಿದ್ದವರಿಗೆ ಮೋಸಮಾಡಬೇಕಾಯಿತು. ಇವರ ವ್ಯಭಿಚಾರದೋಷಕ್ಕೆ ವಿಧಿತವಾಗಿದ್ದ ಶಿಕ್ಷೆಗೆ ಇವರು ಗುರಿಪಡಿಸಲ್ಪಡುತ್ತಿರಲಿಲ್ಲ. ಏಕೆಂದರೆ, ಇವರನ್ನು ಶಿಕ್ಷೆಗೆ ಗುರಿಪಡಿಸಬಲ್ಲವರಾಗಿದ್ದವರೇ ಇವರನ್ನು ತಪ್ಪು ದಾರಿಗೆ ಎಳೆದವರಾದರು. ದೇವದಾಸಿಯರನ್ನು ಶಿಷ್ಯೆಯರನ್ನಾಗಿ ಅಂಗೀಕರಿಸಿ ಇವರಿಂದ ಕಾಣಿಕೆಗಳನ್ನು ತೆಗೆದುಕೊಳ್ಳುತ್ತಿದ್ದವರು ಇವರಿಗೆ ಸದುಪದೇಶವನ್ನು ಕೊಡದೆ, ಇವರ ಕರ್ತವ್ಯ ಧರ್ಮವನ್ನು ಇವರಿಗೆ ಬೋಧಿಸದೆ, ಇವರ ನೈತಿಕ ಮಾನಸಿಕ ಬೆಳವಣಿಗೆಗೆ ವಿಚಾರವಾಗಿ ತಾವು ನೆರವೇರಿಸಬೇಕಾಗಿದ್ದ ಕರ್ತವ್ಯವನ್ನು ಮಾಡದೆ ಇವರನ್ನು ಉದಾಸೀನವಾಗಿ ಕಂಡರು. ಆದರೂ ಕಾಣಿಕೆಯ ವಿಷಯದಲ್ಲಿ ಮಾತ್ರ ಇನ್ನೂ ಸಲೀಸಾಗಿ ತೆಗೆದುಕೊಳ್ಳುತ್ತಿರುವರು! ಪಾಪಪುಣ್ಯ ಭೀತಿಯನ್ನು ತನಗೆ ತಿಳಿಸುವವರಿಲ್ಲದೆ ಹೋದುದರಿಂದಲೂ, ಯಾವಕಡೆ ನೋಡಿದರೂ ತನ್ನನ್ನು ದುರಾಚಾರಕ್ಕೆಳೆಯುವವರೇ ಹೆಚ್ಚಾದುದರಿಂದಲೂ ದೇವದಾಸಿಯರು ಸಹ ಸ್ತ್ರೀ ಸ್ವಭಾವವನ್ನವಾದ ಚಪಲತೆಗೆ ಒಳಗಾಗಿ ದುರಾಚಾರಕ್ಕೆ ಮನಕೊಟ್ಟರು. ದಿನ ಕಳೆದ ಹಾಗೆಲ್ಲಾ ಅವರಲ್ಲಿ ವ್ಯಭಿಚಾರವು ವೃದ್ಧಿಯಾಯಿತು.

ಯಾವಾಗ ದೇವದಾಸಿಯರು ಮನಬಂದವರಿಗೆಲ್ಲಾ ತಮ್ಮನ್ನು ದಿನವೂ ವಿಕ್ರಯಿಸಿಕೊಳ್ಳುತ್ತ ಬಂದರೋ, ಆಗಲೇ ಅವರಿಗಿದ್ದ ಗೌರವವು ಹೋಯಿತು. ದೇವದಾಸಿಯರ ಮನೆಗೆ ಹೋಗಿ ಬಂದರೆ ... ಬರುವುದೂ ಅವರೊಡನೆ ಸಂಭಾಷಿಸುವುದೂ ಹೇಯವಾದುದಲ್ಲವೆಂಬ ಭಾವನೆಯು ಅಳಿಸಿಹೋಗಿ, ಅವರ ಸಂಬಂಧವಾದ ಪ್ರತಿಯೊಂದು ಕಾರ್ಯವೂ ಆಕ್ಷೇಪಣೀಯವಾದುದಾಗಿ ಪರಿಣಮಿಸಿತು. ಆದರೂ ದೇವಸ್ಥಾನಗಳಲ್ಲಿ ಇವರು ಸೇವೆ ಮಾಡುವುದು, ಅರಮನೆಗೆ ಇವರನ್ನು ಕರೆಸಿಕೊಳ್ಳುವುದು, ಶುಭಶೋಭನಗಳಲ್ಲಿ ಇವರ ನರ್ತನ ಮಾಡಿಸುವುದು ಇವೆಲ್ಲಾ ಈಚೀಚಿನವರೆಗೂ ತಕ್ಕಮಟ್ಟಿಗಾದರೂ ನಡೆದುಕೊಂಡೇ ಬರುತ್ತಿದ್ದುವು. ನಮ್ಮ ಸಂಸ್ಥಾನದಲ್ಲಿ ಕಾಲು ಶತಮಾನದಿಂದೀಚೆಗೆ ಮಾತ್ರ ದೇವದಾಸಿಯರನ್ನು ದೇವಸ್ಥಾನಗಳಿಂದ ತೆಗೆದುಬಿಟ್ಟರು. ದಕ್ಷಿಣ ಹಿಂದುಸ್ಥಾನದ ಕೆಲವು ಪ್ರಸಿದ್ಧ ದೇವಸ್ಥಾನಗಳಲ್ಲಿ ಈಗಲೂ ದೇವದಾಸಿಗಳಿದ್ದೇ ಇರುವರು. ಅರಮನೆಯಲ್ಲಿ ನಡೆಯುವ ಕೆಲವು ಮಂಗಳ ಕಾರ್ಯಗಳಿಗೂ ಸಮಾಜದಲ್ಲಿ ಜರಗುವ ಕೆಲವು ಶುಭ ಸಮಯಗಳಲ್ಲೂ ಇವರನ್ನು ಈಗಲೂ ಕರೆಸುವುದು ವಾಡಿಕೆಯಾಗಿದ್ದರೂ ಈ ಸ್ಥಳಗಳಲ್ಲೆಲ್ಲಾ ಇವರ ಓಡಾಟವು ಬಹಳ ಕಡಿಮೆಯಾಗಿದೆಯೆಂದೇ ಹೇಳಬೇಕು. ಹೀಗೆ ಇವರ ಸಂಬಂಧವಾಗಿ ಈಚೀಚೆಗೆ ತುಚ್ಛ ಭಾವನೆ ಉಂಟಾಗುವುದಕ್ಕೆ ಇವರು ನಡತೆಗೆಟ್ಟುದೇ ಕಾರಣವಾಗಿದೆ.

ನೀತಿಬಾಹಿರರಾದುದರ ಜತೆಗೆ ದೇವದಾಸಿಯರು ತಮ್ಮ ಕುಲ ಕಸಬನ್ನು ಅಂದರೆ ಸಂಗೀತ ಮತ್ತು ಭರತ ಶಾಸ್ತ್ರಗಳ ಅಭ್ಯಾಸವನ್ನೂ ಮೂಲೆಗೊತ್ತರಿಸುತ್ತ ಬಂದರು. ಈ ಕಲೆಗಳ ಅಲ್ಪಸ್ವಲ್ಪ ಅಭ್ಯಾಸವಿದ್ದವರು ಸಹ ನಿತ್ಯವೂ ತಮ್ಮ ದೇಹ ವಿಕ್ರಯದಿಂದ ಜೀವಿಸಿಕೊಂಡಿರುವುದೇ ತಮ್ಮ ಮುಖ್ಯ ಕುಲ ಕಸುಬೆಂದು ಭಾವಿಸತೊಡಗಿದರು. ಇದಕ್ಕೆ ಸರಿಯಾಗಿ ದೇವಸ್ಥಾನಗಳಿಂದ ಇವರಿಗೆ ಸಲ್ಲುತ್ತಿದ್ದ ಮಾನ್ಯ, ಮಿರಾಸೆಗಳು ನಿಂತು ಹೋದುವು.

ಕಾಲಕ್ರಮದಲ್ಲಿ, ಅನ್ಯದೇಶೀಯರ ಸಂಪರ್ಕದಿಂದ ಅವರ ನಾಗರೀಕತೆಗಳೂ ಕಸಬುಗಳೂ ನಮ್ಮಲ್ಲಿ ಆಚರಣೆಗೆ ಬಂದುದರಿಂದಲೂ, ಜನಸಾಂದ್ರತೆ, ಆರ್ಥಿಕ ದುಸ್ಥಿತಿ ಇವುಗಳಿಂದಲೂ ಉಂಟಾದ ಪರಿಣಾಮವಾಗಿ ಅನೇಕರು, ದೇವದಾಸಿಯರ ಪಂಗಡಕ್ಕೆ ಸೇರಿದವರೂ, ವ್ಯಭಿಚಾರವನ್ನು ಒಂದು ವೃತ್ತಿಯನ್ನಾಗಿಟ್ಟುಕೊಂಡು ಜೀವಿಸತೊಡಗಿದರು. ಈಗ ನಮ್ಮ ಸಂಸ್ಥಾನದಲ್ಲೇ ಮೈಸೂರು, ಬೆಂಗಳೂರು, ತುಮಕೂರು, ಕೋಲಾರ, ಶಿವಮೊಗ್ಗ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವ್ಯಭಿಚಾರ ವೃತ್ತಿಯಿಂದ ಜೀವಿಸುತ್ತಿರುವ ಪತಿತ ಸ್ತ್ರೀಯರ ಸಂಖ್ಯೆ ಶೇಕಡ ಹತ್ತು ಮಂದಿಯು ಸಹ ಗೆಜ್ಜೆ ಕಟ್ಟಿದವರು ಅಂದರೆ ದೇವದಾಸಿ ಪಂಗಡಗಳಿಗೆ ಸೇರಿದವರಾಗಿಲ್ಲ. ಅಂತು ಹೀಗೆ ಕಾರಣಾಂತರಗಳಿಂದ ಈ ದುರಾಚಾರವು ನಮ್ಮ ದೇಶದಲ್ಲಿ ಆಚರಣೆಗೆ ಬಂದು ಅನೇಕ ಯುವತಿ ಯುವಕರನ್ನೂ ಸಂಸಾರಗಳನ್ನೂ ಹಾಳುಮಾಡುತ್ತಿದೆ.

ಲಿಂಗಧಾರಣ ಚಂದ್ರಿಕೆಯ ಕನ್ನಡ ಭಾಷಾಂತರ.

(ಲೇ—ಸ್ವಾಮಿ ವಿರೂಪಾಕ್ಷ ಒಡೆಯರು.)

ಲೇಖಾಂಕ ೧.

ಇದರ ಉಪೋದ್ಘಾತವನ್ನು ಹಿಂದೆಯೇ ಪ್ರಕಟಿಸಿದ್ದು ಈಗ ಭಾಷಾಂತರವನ್ನು ಪ್ರಸಿದ್ಧಿಸುವೆವು.

ಇಷ್ಟ, ಪ್ರಾಣ, ಭಾವ ಎಂದು ಲಿಂಗವು ಉಪಾಸನಾರ್ಥವಾಗಿ ಮೂರು ಪ್ರಕಾರ - ಜೀವ ಮುಖ್ಯ ಪ್ರಾಣಲಿಂಗಾನ್ನೇತಿಚೇನ್ನೋಪಾಸಾತ್ರೈವಿಧ್ಯಾತ್ " ಎಂದು ಬ್ರಹ್ಮಸೂತ್ರದಲ್ಲಿ ಹೇಳಿದಂತೆ ವಿಭಾಗಿಸಲ್ಪಟ್ಟಿದ್ದು ವೇದೋಪನಿಷತ್ತುಗಳಲ್ಲಿ ನಾಶ್ರ ಬಾಹ್ಯಾಭ್ಯಂತರವೆಂದು ಎರಡು ವಿಧವಾಗಿ ಸಾಮಾನ್ಯತಃ ತೋರಿಸಲ್ಪಟ್ಟಿರುವದು. ಆದರೆ ಆ ಪ್ರುತಿ ಪ್ರಾಮಾಣ್ಯದ ಪ್ರಾಬಲ್ಯವನ್ನು ಮನಸ್ಸಿನಲ್ಲಿ ತಂದು ಲಿಂಗಧಾರಣ ವಿಷಯವು ವೇದೋಪನಿಷತ್ತುಗಳಲ್ಲಿಯೂ ಹೇಳಿರುವದೆಂದು ತೋರಿಸುವದಕ್ಕಾಗಿ ನಂದಿಕೇಶ್ವರ ಪಂಡಿತರು ಕೈವಲ್ಯೋಪನಿಷತ್ತಿನಲ್ಲಿ ಹೇಳಿರುವ " ಪಹರಂ ವಿಪಾಪ್ಮಂ ವರವೇಶ್ಮಭೂತಂಯತ್ ಪುಂಡರೀಕಂಪುರಮಧ್ಯಸಂಸ್ಥಂ ತತ್ರಾಪಿ ದಹ್ರಂಗಗನಂ ವಿಶೋಕಸ್ತಸ್ಮಿನ್ಯದಂತಸ್ತದುಪಾಸಿತವ್ಯಂ ||" (ಕೈವಲ್ಯೋಪನಿಷತ್) ಎಂಬ ಮಂತ್ರವನ್ನು ಪೂರ್ವಪಕ್ಷವಾಗಿ ಅಂಗೀಕರಿಸಿ ಅಂಗುಷ್ಠ ಮಾತ್ರಪರಿಮಿತವಾಗಿಯೂ, ಚಿತ್ತಚಾಂಚಲ್ಯಕ್ಕೆ ಕಾರಣೀಭೂತಗಳಾದ ಸಾಂಸಾರಿಕವಾಸನೆಗಳನ್ನು ನಿಗ್ರಹಮಾಡುವದಕ್ಕೆ ಅನುಕೂಲಸ್ಥಾನವಾದ್ದರಿಂದ ಪರಿಶುದ್ಧವಾಗಿಯೂ ಮತ್ತು ಪರಾತ್ಪರನಾದ ಪರಮಾತ್ಮನ ಪ್ರಾಪ್ತಿಸ್ಥಾನವಾಗಿಯೂ ಹಾಗೂ ಉಪಾಸನಾಸ್ಥಲವಾಗಿಯೂ ಇರುವದರಿಂದ ಗೃಹರೂಪವೆನಿಸುವ ವಸ್ತು ದೇಹಮಧ್ಯದಲ್ಲಿ ಅಷ್ಟದಲ ವಿಶಿಷ್ಟ ಹೃದಯಕಮಲವೆಂಬ ಅಲ್ಪ ಪ್ರದೇಶದಲ್ಲಿ ನಿರ್ಮಲಿಸಂತೆ ಅನುಭವ ಸ್ವರೂಪವಾಗಿಯೂ ಇರುವ ನಿರ್ವಿಕಾರ ಬ್ರಹ್ಮಸ್ವರೂಪವೇ ಉಪಾಸ್ಯವಾದದ್ದೆಂಬುದಾಗಿ ಪ್ರತಿಪಾದಿಸಿ ಅಂಥಾ ಬ್ರಹ್ಮವನ್ನೇ ಯಾವಾಗಲೂ ಧ್ಯಾನಿಸತಕ್ಕದೆಂಬದಾಗಿ ಹೇಳುವ ಉಪನಿಷನ್ಮಂತ್ರವನ್ನೇ ಅಭ್ಯಂತರಲಿಂಗ ಸ್ವರೂಪಬೋಧಕತ್ವದಿಂದಂಗೀಕರಿಸಿ ಉಪಾಸನಾ ಸಿದ್ಧಿಯನ್ನೇ ತೋರಿಸಿ ಮುಂದೆ ಅಂಥಾ ಅಭ್ಯಂತರ ಲಿಂಗಸ್ವರೂಪವು ಬಾಹ್ಯದಲ್ಲಿ ಹ್ಯಾಗೆ ಯಾವ ರೀತಿಯಿಂದ ಪೂಜಿಸತಕ್ಕದ್ದೆಂಬ ಮತೋಭಯುಕ್ತಿಯಿಂದ ಮಾಡಿಕೊಂಡು ಅದರ ವಿಷಯವಾಗಿ " ಯೋವೇದಾದೌಸ್ವರಃ ಪ್ರೋಕ್ತೋವೇದಾಂತೇಚ ಪ್ರತಿಷ್ಠಿತಃ | ತಸ್ಯಪ್ರಕೃತಿಲೀನಸ್ಯಯಃ ಪರಃ ಸ ಮಹೇಶ್ವರಃ " ಎಂಬ ಮಾಂಡುಕ್ಯೋಪನಿಷದ್ವಾಕ್ಯದಲ್ಲಿ ಸಾಕ್ಷಾತ್ ಪರಮೇಶ್ವರಣಾರ್ಥಿತವಾದ ವೇದಗಳಲ್ಲಿ ಯಾವ ಪ್ರಣವರೂಪವಾದ ಓಂಕಾರ ಶಬ್ದವು ಹೇಳಲ್ಪಟ್ಟಿರುವದೋ ಅದೇ ಓಂ ಎಂಬ ಅಕ್ಷರವು ಪರಮಾತ್ಮನ ಧ್ಯಾನದಲ್ಲಿ ಮನಸ್ಸನ್ನು ಮಗ್ನಮಾಡಲಿಕ್ಕೆ ಅರ್ಹವಾದದ್ದೆಂಬದಾಗಿ ದೃಢೀಕರಿಸಲ್ಪಟ್ಟಿರುವದು. ಇಷ್ಟೇ ಅಲ್ಲದೆ ಅಂಥಾ ಬ್ರಹ್ಮವು ಆಕಾಶದಂತೆ ಹ್ಯಾಗೆ ನಿರ್ಮಲವಾಗಿರುತ್ತದೆಂದು ತೋರಿಸುವ ವಿಚಾರದಲ್ಲಿ ಅವಿಕಾರಪ್ರಕೃತಿಯೆನಿಸಿದ ಮೂಲಮಾಯಾ ಸ್ವರೂಪದಲ್ಲಿ ವಿರಾಡ್, ಹಿರಣ್ಯಗರ್ಭ ವ್ಯಾಕೃತಿಗಳನ್ನು ಅಕಾರ, ಉಕಾರ, ಮಕಾರ ಎಂಬ ಅಕ್ಷರತ್ರಯಗಳಿಂದ ಯೋಜಿತವಾದ ಓಂಕಾರ ಪ್ರಣವದಲ್ಲಿ ಧ್ಯಾನಿಸಿ ನಾದ ಬಿಂದು ಕಲೆಗಳಲ್ಲಿ ಲೀನವಮಾಡಿಕೊಳ್ಳುವದೇ ಗಗನದಂತಿರುವ ಪರಾತ್ಪರ ವಸ್ತುವಿನ ಸಂದರ್ಶನವೆಂದು ಹೇಳಿಸಿಕೊಳ್ಳಲ್ಪಡುತ್ತಿದ್ದು ಅದಕ್ಕೇನೇ ಮಹೇಶ್ವರನೆನ್ನುವರು. ಅದರಂತೆ ಕೋಶದಲ್ಲಿಯೂ " ಶಿವಃಶೂಲೀಮಹೇಶ್ವರಃ " ಮಹೇಶ್ವರನೆಂಬ ಹೆಸರು ಶಿವನಿಗೇನೇ ನಿಯತವಾಗಿ ಉಪಯೋಗಿಸಲ್ಪಟ್ಟಿದ್ದು ಆ ಶಿವ ಶಬ್ದವಾಚ್ಯ ಮಹೇಶ್ವರ ವಸ್ತುವೇ ಪೂಜನೀಯವಾದದ್ದೆಂದು " ಯೋವೇದಾದೌಸ್ವರಃ ಪ್ರೋಕ್ತಃ " ಎಂಬ ಮಾಂಡುಕ್ಯೋಪನಿಷತ್ತಿನಲ್ಲಿ ವಿಧಾನಮಾಡಿರುವದೆಂದು ಚಂದ್ರಿಕಾಕಾರರು ಉಪಾಸ್ಯವಸ್ತುವನ್ನು ಮೊದಲು ನಿರ್ದೇಶಮಾಡಿ ಅನಂತರ ಉಪಾಸನೆಯನ್ನು ಬೋಧಿಸಿರುವರು. ಆದರೆ ಇದರಲ್ಲಿ ಕೆಲವರು ಉಪಾಸನೆಯನ್ನು ಮೊದಲು ಹೇಳಿ ಅನಂತರ ಉಪಾಸ್ಯವಸ್ತುವನ್ನು ನಿರ್ದೇಶಮಾಡಬೇಕಾಗಿತ್ತೆಂದು ಹೇಳುವರು. ಅದು ವಿಹಿತವಾಗಿಲ್ಲ. ಯಾಕೆಂದರೆ, ಮೊದಲು ಮನೆ ಕಟ್ಟದೇ ಮನೆಯಲ್ಲಿ ಪ್ರವೇಶ ಮಾಡುವ ಸಂಗತಿಯನ್ನು ಹೇಳುವ ಹಾಸ್ಯಕ್ಕೆ ಈಡಾದಂತೆ ಆಗುವದೆಂದು ತಿಳಿದು ಚಂದ್ರಿಕಾಕಾರರು ಮೊದಲು ದೇವತಾತ್ವವನ್ನು ಅಂದರೆ ಬ್ರಹ್ಮತ್ವವನ್ನು ನಿರ್ದೇಶಿಸಿ ಸಂಪ್ರದಾಯ ಪದ್ಧತಿಗನುಸರಿಸಿ ಆ ಬ್ರಹ್ಮಬೋಧಕ ಮಹೇಶ್ವರ ಶಬ್ದವೇನು ಶಿವವಾಚಕವೋ, ವಿಷ್ಣು ವಾಚಕವೋ ಎಂಬ ಮಾನಸಿಕ ಸಂದೇಹವುಳ್ಳವರಾಗಿ ಮಹೇಶ್ವರ ಶಬ್ದವು ಕೇವಲ ಶಿವ ವಾಚಕತ್ವದಲ್ಲಿಯೇ ನಿಯತವಾಗಿರುವದೆಂದು ಶಾಸ್ತ್ರ ಪ್ರಮಾಣಪೂರ್ವಕ ದೃಢೀಕರಿಸಿರುವರು.

ಇನ್ನು ಉಪಾಸ್ಯವಸ್ತುವು ಎಂಥಾ ಗುಣಸ್ವರೂಪಗಳಿಂದ ಬೋಧಕವೆಂಬುವದು ಉಪಾಸಕನಿಗೆ ಜ್ಞಾನವಾಗದ ವಿನಾ ಹ್ಯಾಗೆ ಉಪಾಸ್ಯವಸ್ತುವನ್ನು ಉಪಾಸನೆ ಮಾಡಬೇಕೆಂಬುವದು ತಿಳಿಯದಿದ್ದರೆ ಉಪಾಸನೆಯು (ಪೂಜೆಯು) ಘಟಿಸಲಾರದು. ಹ್ಯಾಗೆಂದರೆ, ರೋಗಿಯು ತನ್ನ ರೋಗವನ್ನು ಪರೀಕ್ಷೆಮಾಡಿಸದೇ ಔಷಧವನ್ನು ತೆಗೆದುಕೊಳ್ಳಲಾರನೋ ಹಾಗೆ ಶಿವ ವಿಷ್ಣು ಎಂಬ ಸಾಂಪ್ರದಾಯಿಕ ಪದ್ಧತಿಯಂತೆ ಆಗಲೀ ಅಥವಾ ಸುಗುಣ, ನಿರ್ಗುಣವೆಂಬ ತಾತ್ತ್ವಿಕ ವಿಚಾರದಂತೆ ಆಗಲೀ ತತ್ತ್ವಸ್ವರೂಪ ಲಕ್ಷಣಗಳಲ್ಲಿ ಅಳವಡದ ಹೊರತು ತತ್ಪೂಜೆಯು ನಿಸ್ಸಂದೇಹವಾಗಿ ಘಟಿಸಲಾರದು. ಯಾಕೆಂದರೆ, ಒರೇ ಬ್ರಹ್ಮವೆಂದಾಕ್ಷಣಕ್ಕೆ ಸಾಂಪ್ರದಾಯಿಕರು ಶಿವನಿಗೂ ಬ್ರಹ್ಮವೆಂದಂದಿರುವರು, ಹಾಗೂ ವಿಷ್ಣುವಿಗೂ ಬ್ರಹ್ಮವೆಂದಂದಿರುವರು. ಆದರೆ ವೇದೋಪನಿಷತ್ತುಗಳಲ್ಲಿ ಭೇದವನ್ನೆಣಿಸದಿದ್ದರೂ ಸಾಂಪ್ರದಾಯಿಕರಂತೆ ತತ್ತತ್ಪೂಜೋಪಚಾರಾದಿಗಳು ಭಿನ್ನವಾಗಿರುವದರಿಂದ ತಮಗಿಷ್ಟವಾದ ಸಾಂಪ್ರದಾಯಿಕ ವಸ್ತುವನ್ನು ಹಾಗೂ ತದ್ಬೋಧಕ ಶಬ್ದಗಳನ್ನು ನಿರ್ದೇಶ ಮಾಡುವದು ನ್ಯಾಯವಾದ್ದರಿಂದ ಅದರಂತೆ ಚಂದ್ರಿಕಾಕಾರರು ಶಿವ ಸಿದ್ಧಾಂತ ನಿರ್ಮಾಣಕ್ಕಾಗಿ ಮೊದಲು ವೇದಮಂತ್ರಗಳಲ್ಲಿ ಹೇಳಿರುವ ಬ್ರಹ್ಮಾದಿ ಶಬ್ದಗಳನ್ನು ಶಿವನಲ್ಲಿ ಜೋಡಿಸಿ ವೇದವು ಶಿವೋಪಾಸನೆಯನ್ನೇ ಹೇಳಿರುವದೆಂದು ಸ್ಥಿರಪಡಿಸಿರುವರು.

ಇನ್ನು ಆ ಪರಶಿವನ ಶ್ರೇಷ್ಠವಾದ ಗುಣಸ್ವರೂಪಗಳು ಎಂಥವುಗಳೆಂಬ ವಿಚಾರದಲ್ಲಿ " ಋತಂ ಸತ್ಯಂ ಪರಂ ಬ್ರಹ್ಮಪುರುಷಂ ಕೃಷ್ಣಪಿಂಗಲಂ | ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯ ವೈನಮೋನಮಃ ||" ಇತ್ಯಾದಿ ಮಂತ್ರಗಳಿಂದ ಶಿವನ ಅಸಾಧಾರಣ ಗುಣವಿಶೇಷಗಳನ್ನು ನಿರ್ದೇಶಿಸಿರುವರು. ಹ್ಯಾಗೆಂದರೆ, ಶಿವನು ತ್ರಿಕಾಲದಲ್ಲಿಯೂ ಅಬಾಧಿತನೆಂದು ತೋರಿಸಲೋಸುಗ ಶ್ರುತಿಯಲ್ಲಿ ಪಾರಮಾರ್ಥಿಕ ತತ್ತ್ವವಿಚಾರದಿಂದ ಶಿವನಿಗೆ ಋತ ಅಂದರೆ ಸರ್ವವ್ಯಾಪಿ ಎಂಬದಾಗಿಯೂ ಮತ್ತು ವ್ಯಾವಹಾರಿಕ ರೀತಿಯಿಂದ ಹಿರಣ್ಯಗರ್ಭತ್ವಾದಿ ಸ್ವರೂಪದಿಂದ ಜಗತ್ಕರ್ತನೆಂಬದಾಗಿಯೂ ತೋರಿಸುವದಕ್ಕಾಗಿ ಬಾಹ್ಯದಲ್ಲಿ ಒಂದೇ ಅರ್ಥದ್ಯೋತಕವಾದ ಋತ, ಸತ್ಯ ಎಂಬ ಎರಡು ಶಬ್ದಗಳನ್ನೇ ದ್ವಿವಿಧಾರ್ಥಬೋಧಕ್ಕಾಗಿ ಶ್ರುತಿಯಲ್ಲಿ ನಿರ್ದೇಶಿಸಿದ್ದು ಅಂಥಾ ಪರಶಿವವಸ್ತುವೇ ಭಕ್ತವಾತ್ಸಲ್ಯದಿಂದ ಭಕ್ತಾನುಗ್ರಹಕ್ಕಾಗಿ ಉಮಾಮಹೇಶ್ವರಾತ್ಮಕ ತ್ರಿನೇತ್ರತ್ವಾದಿ ಪುರುಷ ರೂಪವನ್ನು ಧರಿಸುವನು ಮತ್ತು ಶರೀರದಲ್ಲಿ ಪ್ರಕೃತಿ, ಪರಶಿವದ್ಯೋತಕವಾದ ಎರಡು ವರ್ಣಗಳ ಸಂಯೋಗದಿಂದ ಊರ್ಧ್ವರೇತವುಳ್ಳವನಾಗಿ ವಿಶ್ವಸ್ವರೂಪನಾಗುವನು, ಅಂಥಾ ಪರಶಿವನಿಗೆ ನಮಸ್ಕಾರವಿರಲಿ. ಎಂಬೀ ಶ್ರುತಿ ವಾಕ್ಯದಿಂದ ಶಿವತತ್ತ್ವಸ್ವರೂಪವು ಇದೇ ಎಂದು ತಿಳಿಯಲ್ಪಡುವದಾಗಿ ಸಿದ್ಧಾಂತಿಸಿ ಈ ಪರಶಿವನೇ ದಹರವಿದ್ಯಾದಿಗಳಿಗೆ ಅಧಿಷ್ಠಾನಭೂತನೆಂದು ನಿರ್ಣಯಿಸಿರುವರು. ಆದರೆ ಮುಂದೆ ಅದೇ ಉಪನಿಷತ್ತಿನಲ್ಲಿ ಹೇಳಿರುವ " ಸಹಸ್ರಶೀರ್ಷಂದೇವಂ ವಿಶ್ವಾಕ್ಷಂ ವಿಶ್ವಶಂಭುವಂ | ವಿಶ್ವಂ ನಾರಾಯಣಂ ದೇವಮಕ್ಷರಂ ಪರಮಂ ಪ್ರಭುಂ || ಹೃತ್ಪುಂಡರೀಕಂ ವಿರಜಂ ವಿಶುದ್ಧಂ ವಿಚಿಂತಮಧ್ಯೇ ವಿಶದಂ ವಿಶೋಕಂ | ಅಚಿಂತ್ಯಮವ್ಯಕ್ತಮನಂತರೂಪಂ ಶಿವಂ ಪ್ರಶಾಂತಮಮೃತಂ ಬ್ರಹ್ಮಯೋನಿಂ || ತದಾದಿಮಧ್ಯಾಂತವಿಹೀನಮೇಕಂ ವಿಭುಂಚಿದಾನಂದಮರೂಪಮದ್ಭುತಂ | ಉಮಾಸಹಾಯಂ ಪರಮೇಶ್ವರಂ ಪ್ರಭುಂತ್ರಿಲೋಚನಂ ನೀಲಕಂಠಂ ಪ್ರಶಾಂತಂ || (ಕೈವಲ್ಯೋಪನಿಷತ್) ಎಂಬ ಛಾಂದೋಗ್ಯೋಪನಿಷನ್ಮಂತ್ರದಲ್ಲಿ ಸಹಸ್ರಶೀರ್ಷತ್ವಾದಿ ಲಕ್ಷಣಗಳು ನಾರಾಯಣನಿಗೆ ಹೇಳಲ್ಪಟ್ಟಿದ್ದು ಅಂಥಾ ಅಸಾಧಾರಣ ಗುಣವಿಶಿಷ್ಟನಾದ ನಾರಾಯಣನಿಗೇನೇ ದಹರೋಪಾಸನೋಪಾಸ್ಯತ್ವವು ಯಾಕಾಗಲಿಕ್ಕಿಲ್ಲ? ಎಂಬ ಸಂದೇಹದಲ್ಲಿ ತೊಡಕಿ ಶಿವನೇ ದಹರ ವಿದ್ಯಾದಿಗಳಿಗೆ ಅಧಿಷ್ಠಾನನೇ ಹೊರತು ನಾರಾಯಣಾದಿಗಳಲ್ಲವೆಂಬದಾಗಿ ಬಹುಸ್ವಾರಸ್ಯದಿಂದ ನಿರ್ಣಯಿಸಿರುವರು. ಹ್ಯಾಗೆಂದರೆ, " ಹೃತ್ಪುಂಡರೀಕಂ ವಿರಜಂವಿಶುದ್ಧಂ " ಇತ್ಯಾದಿ ಕೈವಲ್ಯೋಪನಿಷನ್ಮಂತ್ರದಿಂದ ಹೃತ್ಕಮಲ ಮಧ್ಯದಲ್ಲಿ ರಾಗದ್ವೇಷಾದಿ ರಜೋವಿಕಾರಶೂನ್ಯನೂ ಉತ್ಪತ್ತಿ, ಪರಿಣತಿ, ವಿನಾಶ ಮೊದಲಾದ ಭೌತಿಕ ಷಡ್ವಿಕಾರಗಳಿಂದ ನಿರ್ಲಿಪ್ತನೂ ಆದ ಪರಶಿವನನ್ನೇ ಧ್ಯಾನಿಸತಕ್ಕದ್ದು ಎಂಬದಾಗಿ ಹೇಳಿ ಮುಂದೆ ಹಾಗೆಯೇ ನಿರ್ಮಲಜ್ಯೋತಿಸ್ವರೂಪನೂ, ಶೋಕಶಯಾದಿ ಚಿಂತಾಶೂನ್ಯನೂ ಪರಿಮಿತಿಗೆ ಸಿಲುಕದವನೂ " ಅಜ್ಞಾನೇನಾವೃತಂಜ್ಞಾನಂತೇನ ಮುಹ್ಯಂತಿಜಂತವಃ " ಎಂಬ ಗೀತಾವಾಕ್ಯದಂತೆ ಅಜ್ಞಾನದಿಂದಾವೃತವಾದ ಜೀವರಾಶಿಗೆ ಅಪ್ರಕಟಿತನೂ, ವಿಶ್ವರೂಪಿಯೂ, ಅವಿನಾಶಿಸ್ವರೂಪಿಯೂ, ನಿತ್ಯಮಂಗಳನೂ, ನಿರ್ವಾಣನಿತ್ಯತ್ವಾದಿ ಗುಣಗಳಿಂದ ದ್ಯೋತಕನೂ ವೇದಗಳ ಆವಿರ್ಭಾವಕ್ಕೆ ಕಾರಣೀಭೂತನೂ ಆದ ಶಿವನನ್ನೇ ಧ್ಯಾನಿಸತಕ್ಕದ್ದು, ಹಾಗೂ ಆ ಶಿವನು ಆದಿಮಧ್ಯಾಂತಗಳಿಂದ ರಹಿತನೂ, ಅಂದರೆ ನಿರಾಕಾರನೂ ಅದ್ವಿತೀಯನೂ ಸರ್ವವ್ಯಾಪಕನೂ ಚಿದಾನಂದಾದಿ ಲಕ್ಷಣವುಳ್ಳವನೂ, ಆಶ್ಚರ್ಯ ಜನಕನೂ, ಜಗನ್ಮಾತೆಯಾದ ಪಾರ್ವತೀ ಸಹಿತನೂ, ತ್ರಿಲೋಚನ, ನೀಲಕಂಠ, ನಿಶ್ಚಲತ್ವಾದಿ ಗುಣಸ್ವರೂಪಗಳಿಂದ ಕೂಡಿದ್ದು ಅಂಥಾ ಪರಮೇಶ್ವರನನ್ನೇ ಹೃತ್ಕಮಲ ಮಧ್ಯದಲ್ಲಿ ಧ್ಯಾನಿಸತಕ್ಕದ್ದೆಂಬ ಕೈವಲ್ಯೋಪನಿಷದ್ವಾಕ್ಯದಿಂದಲೂ ಶಿವನೇ ದಹರೋಪಾಸನೋಪಾಸ್ಯತ್ವಕ್ಕೆ ಅರ್ಹನೆಂದು ಸಿದ್ಧಮಾಡಿರುವರು.

ಆರ್ಯ ವಿದ್ಯಾಶಾಲೆಯ ಹಳೇ ವಿದ್ಯಾರ್ಥಿಗಳ ಸಂಘ

ಬೆಂಗಳೂರು ಬಳೇಪೇಟೆಯಲ್ಲಿರುವ ಆರ್ಯ ವಿದ್ಯಾಶಾಲೆಯಲ್ಲಿ ಹಿಂದೆ ಓದಿದ ವಿದ್ಯಾರ್ಥಿಗಳೂ, ಹಿಂದಿದ್ದ ಮತ್ತು ಈಗಿರುವ ಉಪಾಧ್ಯಾಯರುಗಳೂ, ತುಲ್ಯಂತ ಸಂಘದ ಸದಸ್ಯರಾಗಬೇಕೆಂದು ಸಂಘದ ಕಾರ್ಯನಿರ್ವಾಹಕ ಮಂಡಳಿಯ ಕೋರಿಕೆ. ಶಾಲೆಯಲ್ಲಿ ಹಿಂದೆ ಓದಿದ ವಿದ್ಯಾರ್ಥಿಗಳೂ, ಹಿಂದಿದ್ದ ಮತ್ತು ಈಗಿರುವ ಉಪಾಧ್ಯಾಯರುಗಳೂ ತಮ್ಮ ತಮ್ಮ ಚಂದಾ ಹಣವನ್ನು ಕಾರ್ಯದರ್ಶಿಯವರಿಗಾಗಲೀ, ಖಜಾಂಚಿಯವರಿಗಾಗಲೀ ಸ್ವತಃ ಕೊಟ್ಟು, ಅಥವಾ ಮಣಿ ಆರ್ಡರ್ ಮೂಲಕ ಕಳುಹಿಸಿ ಸದಸ್ಯರಾಗತಕ್ಕದ್ದು. ರಶೀತಿಯು ಹಣ ತಲುಪಿದ ಮೇಲೆ ಕಳುಹಿಸಲ್ಪಡುತ್ತದೆ. ಚಂದಾ ಹಣವು ವಿದ್ಯಾರ್ಥಿದೆಶೆಯಲ್ಲಿರುವವರಿಗೆ 1 ವರ್ಷಕ್ಕೆ ಅರ್ಧರೂಪಾಯಿಗೆ ಕಡಿಮೆಯಿಲ್ಲದೆಯೂ, ಇತರರಿಗೆ 1 ರೂ. ಗೆ ಕಡಿಮೆಯಿಲ್ಲದೆಯೂ ಗೊತ್ತುಮಾಡಲ್ಪಟ್ಟಿದೆ. ಆಮರಣಾಂತ ಸದಸ್ಯರಾಗಲಿಚ್ಛಿಸುವವರು ಒಟ್ಟಿಗೆ 25 ರೂ. ಗಳನ್ನು ಕೊಡತಕ್ಕದ್ದು. ಈ ಕೋರಿಕೆಯು ನಿಷ್ಫಲವಾಗುವುದಿಲ್ಲವೆಂದು ಕಾರ್ಯದರ್ಶಿಗಳು ದೃಢವಾಗಿ ನಂಬಿದ್ದಾರೆ.

ಆರ್ಯ ವಿದ್ಯಾಶಾಲೆ, ತಾ|| 16-11-32. } ಕೆ. ಆರ್. ಶಂಕರನಾರಾಯಣವಾರ್, ಗೌರವ ಕಾರ್ಯದರ್ಶಿ.

ಪ್ರಕಟಣೆ.

ಬರುವ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆಯತಕ್ಕ ಪ್ರಾಥಮಿಕ ಮತ್ತು ಮಾಧ್ಯಮಿಕ ಪಾಠಶಾಲೆಗಳ ಉಪಾಧ್ಯಾಯರ ಮಹಾ ಸಮ್ಮೇಳನಕ್ಕೆ ಸಹಾಯ ದ್ರವ್ಯವನ್ನೂ ಪ್ರತಿನಿಧಿಗಳ ಹಣವನ್ನೂ ಕಳುಹಿಸುವ ವಿಷಯದಲ್ಲಿ ಗೊತ್ತುಮಾಡಲ್ಪಟ್ಟಿದ್ದ ಅವಧಿಯನ್ನು ನವಂಬರ್ ತಾ|| 15 ರಿಂದ ಬರುವ ಡಿಸೆಂಬರ್ ತಾ|| 15 ರ ವರೆಗೂ ಹೆಚ್ಚಿಸಬೇಕೆಂಬದಾಗಿ ಅನೇಕ ಉಪಾಧ್ಯಾಯ ಸಂಘಗಳ ಕಾರ್ಯದರ್ಶಿಗಳೂ, ಪಾಠಶಾಲೆಗಳ ಮುಖ್ಯೋಪಾಧ್ಯಾಯರುಗಳೂ ಕೇಳಿಕೊಂಡಿರುವುದರಿಂದ ಸದರಿ ಅವಧಿಯನ್ನು ಅವಶ್ಯದಂತೆ ಡಿಸೆಂಬರ್ ತಾ|| 15 ರ ವರೆಗೂ ಹೆಚ್ಚಿಸಿದೆ.

ಬರುವ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನೊಳಗೆ ಸೇರುವ ಈ ಉಪಾಧ್ಯಾಯರ ಸಮ್ಮೇಳನಕ್ಕೆ ಹಣವನ್ನು ಚಂದಾ ದ್ರವ್ಯವನ್ನೆತ್ತಲು ಮ|| ಗಣಪ (1) ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಮುಖ್ಯೋಪಾಧ್ಯಾಯರಾದ ಜ. ಕೆ. ತಿಮ್ಮಣಾಚಾರ್ಯರು (2) ಬೆಂಗಳೂರು ಸಿಟಿ ಕೋಟೆ ಹೈಸ್ಕೂಲು ಹೆಡ್‌ಮಾಸ್ಟರ್ ಕೆ. ಶ್ರೀನಿವಾಸರಾವ್ (3) ಡಿಟೋ ಹೈಸ್ಕೂಲು ಸಹಾಯೋಪಾಧ್ಯಾಯರು ರಾಘವೇಂದ್ರಾಚಾರ್ಯರು (4) ಬೆಂಗಳೂರು ಸಿಟಿ ಕೋಟೆ ಮಿಡ್ಲ್ ಸ್ಕೂಲು ಸಹಾಯೋಪಾಧ್ಯಾಯರು ವೆಂಕೋಬಾಚಾರ್ಯ ಇವರುಗಳಿಗೆ ಅಧಿಕಾರ ಕೊಡಲ್ಪಟ್ಟಿದೆ.

M. C. SUBBAPPA,
ಜನರಲ್ ಸೆಕ್ರೆಟರಿ.

ನಾರಿನವೇಳೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿಕೊಳ್ಳಿರಿ. ಕಿ. ೧| ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

31 M. C

ಪ್ರಕಟಣೆ.

ವಿಜಾಪುರ - ಶಿವಾನುಭವ ಗ್ರಂಥಮಾಲೆ " ವೀರಶೈವ ತತ್ತ್ವಗ್ರಂಥಗಳ ಬ್ರಾಂಚ ಡಿಪೋ ಮೈಸೂರು ಪ್ರಾಂತದವರೆಲ್ಲರಿಗೂ ಅನುಕೂಲವಾಗಲೆಂಬ ಉದ್ದೇಶದಿಂದ ಬೆಂಗಳೂರಿನಲ್ಲಿ ಏರ್ಪಡಿಸಿರುತ್ತೆ. ಬೇಕಾದವರು ಅಲ್ಲಿಂದಲೇ ಮೂಲ ಕಿಮ್ಮತ್ತಿಗೆ ತರಿಸಿಕೊಳ್ಳಬಹುದು.

ಅಡ್ರೆಸ್ಸು :—ಕೆ. ನಾಗಪ್ಪ, ಬಿ. ವಿಶ್ವನಾಥಪ್ಪ. ಶ್ರೀ ಸರ್ಪಭೂಷಣ ಶಿವಯೋಗಿಗಳ ಮಠ, ಅಣ್ಣಮ್ಮದೇವರ ಗುಡಿ ಬೀದಿ, ಬೆಂಗಳೂರು ಸಿಟಿ.

[12—1] ಮತ್ತು ಹಿತಚಿಂತಕ ಪ್ರಿಂಟಿಂಗ್ ಪ್ರೆಸ್, ವಿಜಾಪುರ.

೧೯೩೨ ನೆಯ ಇಸವಿ ನವಂಬರ್ ತಾ|| ೨೮ ರಿಂದ ಡಿಸೆಂಬರ್ ತಾ|| ೪ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಆಂಗಿರಸ ನಾಮಸಂವತ್ಸರದ ಮಾರ್ಗಶಿರ ಶುದ್ಧ ಪಾಡ್ಯಮಿಯಿಂದ ಮಾರ್ಗಶಿರ ಶುದ್ಧ ಸಪ್ತಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿಕ ಮಾಸ
28	[1] ಸೋಮ	ಪಾಡ್ಯ	53-40	ಅನೂ	17-26	14
29	[2] ಮಂಗಳ	ಬಿದಿ	48-2	ಜ್ಯೇಷ್ಠ	13-28	15
30	ಬುಧ	ತದಿ	43-4	ಮೂಲ	9-50	16
1	ಗುರು	ಚೌತಿ	38-48	ಪೂಷಾ	6-47	17
2	[3] ಶುಕ್ರ	ಪಂಚಮಿ	35-16	ಉಷಾ	4-29	18
3	[4] ಶನಿ	ಷಷ್ಠಿ	32-56	ಶ್ರವ	3-7	19
4	ಭಾನು	ಸಪ್ತ	31-30	ಧನಿ	2-39	20

(1) ಮಳೆನಕ್ಷತ್ರ-ಅನೂರಾಧ ೪ ನೆಯಪಾದ. (3) [illegible] (3) ಮಳೆನಕ್ಷತ್ರ-ಜ್ಯೇಷ್ಠ ೧ ನೆಯ ಪಾದ. (4) [illegible]

ಮೈಸೂರು : ಶ್ರೀ. [illegible]

REG NO. M. 124.

ಮ್ಯಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮುಧಿಗತರಾಜಮಂಡಲಹಿತ್ಯೈಷಾ | ಘನಪಥಕೃತಾವತಾರಾ ಪಶ್ಯತ್ವ ನಕ್ಷತ್ರ ನೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಚೈತ್ರಿಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧—೧೦—೦] [ಪರಸ್ಥಳದವರಿಗೆ ೨—೮—೦] [ಲೈಬ್ರರಿಗೆ ೩—೮—೦]

ಸಂಪುಟ ೪೫] ಮ್ಯಸೂರು ಸ್ಟಾರ್ ಸ ೧೯೩೨ ನೆಯ ಇಸವಿ ಡಿಸೆಂಬರ್ ತಾರೀಖು ೫ ನೆಯ ಸೋಮವಾರ [ಸಂಚಿಕೆ ೪೮

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore.

(Sd.) S. SHAMANNA,
Secretary, Insurance Committee.

[50—22]

[50—5]

ಮ್ಯಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ. ಪಿ. ಸೇ.
ವೀರಶೈವ ಶಿವಪೂಜಾವಿಧಿಃ	೦—೧೨—೦	೧— ೨—೦
ಸಟೀಕ ವೀರಶೈವ ವಿವಾಹವಿಧಿಃ	೦— ೮—೦	೦—೧೪—೦
ಷಟ್ಸ್ಥಲವಿದ್ಯಾ	೦— ೪—೦	೦— ೯—೦
ಚಾರುಶೀಲೆಚರಿತ್ರೆ	೦— ೫—೦	೦—೧೦—೦
ಹರಿದಾಸಿ	೦— ೪—೦	೦— ೯—೦
ವ್ರತಪಂಚಕ	೦— ೪—೦	೦— ೯—೦
ಗುರುಶಂಕರೇಶ್ವರಶತಕ	೦— ೧—೦	೦— ೬—೦
ಬಸವೇಶ್ವರನಷ್ಟ್ರವಾ	೦— ೮—೦	೦—೧೩—೦
ಸಟೀಕ ಕರ್ಣಾಟದರೂಪಂಜರಿ	೦— ೮—೦	೦—೧೩—೦
ಸಟೀಕ ಶಬ್ದಮಣಿ	೧— ೦—೦	೧— ೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಸ್ವರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಡ್ಲವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವ, ನಿದ್ದೆ ಕಡಿಮೆಬರೋದು, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ. ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರೀತ ತರುಣರಂತೆ ಕಾಮೆಚ್ಛಾ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೪೨ ಗೋಲಿಯ ಒಂದು ಡಬ್ಬಿಗೆ ೩| ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಬಳ್ಳೀಸು ಪಾಕದ ಕೂಡ ತಳೆಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೀ ಚೂರ್ಣ.

ಎಲ್ಲ ಬಿಳ್ಳದ ಸೆರಗು, ಮುಟ್ಟಿಕಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಟ್ಟಿಕಟ್ಟು ಆಗೋದು, ಮುಟ್ಟಿಕಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋದು, ಎದೆ ಹಾರೋದು, ಉಷ್ಣತೀ ಜೀರ್ಣಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋದು, ಗರ್ಭಪಾತವಾಗೋದು, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಿಂದ ಸಂತತಿಯಾಗುತ್ತದೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ಗೋಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ತೀವ್ರ ಅದೆ ಮತ್ತು ಪ್ರಸೂತಿ ಕಷ್ಟವನ್ನು [illegible]

[50—49]

ಪತ್ತಾ ಮಾಲಕ :—ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ ಎಂ. ಎಸ್. ಎಂ

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು ಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. [illegible]



[illegible]

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[50—14] [illegible]

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಡಿಸೆಂಬರ್ ತಾ॥ ೫ ನೆಯ ಸೋಮವಾರ.

R. T. C. AT WORK

The personnel of the Third R. T. C. is such that there is not likelihood of much controversial discussion on any point. In fact, even though there are points on which there are divergent views held by the Indian members and the British members, the former seem to be putting forth a weak and mild fight, and even then, the ideas are expressed in a very vague and non-committal manner. The impression on the whole, seems to be that the British side is having mostly its own way, though it does not give an indication of abandoning the principles it subscribed to in the past. They are not going back over Federation, provincial autonomy and responsibility in the centre. The latter are now engaging the attention of the Conference and the discussion on the question of safeguards is extremely interesting. We had heard in the past only about safeguards in the centre, and none about provinces. But we have started hearing about safeguards in the provinces also and the Indian members are listening to it without any protest other than merely stating that it ought not to be such as to take away the autonomous character of provincial government. The British side of which the chief spokesman is Lord Reading is trotting out the old theory that powers must be given to the Governor-General to carry out effectively the responsibilities entrusted to him and he must have the power of issuing ordinances with or without the agreement of the ministers, an idea which even Lord Irwin seems to favour. It would appear that safeguards relating to finance and commercial discrimination are to be considered by a separate sub-committee. But other safeguards covering a very large field indeed, such as, minorities, services, defence, external and political relations and responsibility as to safety and tranquillity, are to be considered by the Conference itself. It looks as though the question of safeguards seems to absolutely drown the other questions and the more the concentration on that question, the more do the matters requiring safeguards arise, with the result that there will hardly [illegible] subject worth the name which will no[illegible]ide safe from the British point of view [illegible]guards. It would be indeed a curio[illegible]ce of a statute which is going to embody all these safeguards and what is worse, such a statute will only be a fruitful source of friction in any administration. The eagerness to be courteous is so great that there is hardly a speaker on the Indian side who does not display his supreme anxiety to stand by the safeguards. There is only one pleasing feature in the whole affair and, that is, the amount of unanimity between the Princes and the British Indian members on the one hand, and the Hindu and the Muslim members on the other. We really do not know what we are going to get in the end. We are anxious that this mountain of labour is not going to bring forth either the proverbial mouse or something of hybrid. We hope that by the time the Conference closes, which from the bookings of passage does not seem to prolong much, they will have evolved a scheme which if not meeting the more progressive section of Indians will at least contain the substance of self-Government and will be workable in practice.

ರೌಂಡುಟೇಬಲು ಸಭೆ

ಈಗ ಲಂಡನ್ ನಗರದಲ್ಲಿ ನಡೆಯುತ್ತಿರುವ ರೌಂಡುಟೇಬಲು ಸಭೆಯೊಳಗೆ ಯಾವ ವಿಷಯವನ್ನೂ ಖಂಡಿತವಾಗಿ ಚರ್ಚಿಸತಕ್ಕ ಸದಸ್ಯರುಗಳಾರೂ ಇರುವುದಿಲ್ಲ. ಭಾರತ ಮತ್ತು ಬ್ರಿಟಿಷ್ ಪ್ರತಿನಿಧಿಗಳ ಭಿನ್ನಾಭಿಪ್ರಾಯಕ್ಕೆ ಆಕರವಾದ ವಿಷಯಗಳನ್ನು ಸಹ ಭಾರತೀಯ ಮೆಂಬರುಗಳು ಬಹಳ ಸೌಮ್ಯವಾಗಿ ವಾದಿಸುತ್ತಿರುವಂತೆಯೂ, ಹೀಗೆ ವಾದಿಸುವುದರಲ್ಲೂ ತಮ್ಮ ಅಭಿಪ್ರಾಯವನ್ನು ಅನಿಶ್ಚಿತವಾದ ಮತ್ತು ಯಾವುದಕ್ಕೂ ಸಿಕ್ಕದ ರೀತಿಯಲ್ಲಿ ತಿಳಿಸುತ್ತಿರುವಂತೆಯೂ ಕಂಡುಬರುತ್ತದೆ. ಒಟ್ಟಿನಲ್ಲಿ ಬ್ರಿಟಿಷ್ ಪಕ್ಷದವರು ಹಿಂದೆ ತಾವು ಅವಲಂಬಿಸಿದ ತತ್ತ್ವವನ್ನು ಬಿಡುವ ಚಿಹ್ನೆಯನ್ನು ತೋರುತ್ತಿಲ್ಲವಾದರೂ, ತಮ್ಮ ಮಾರ್ಗವನ್ನೇ ಅವಲಂಬಿಸುತ್ತಿರುವಂತೆ ತೋರುತ್ತದೆ. ಅವರು ಫೆಡರಲ್, ಪ್ರಾಂತಿಕ ಸ್ವತಂತ್ರಾಧಿಕಾರ ಮತ್ತು ಕೇಂದ್ರದಲ್ಲಿ ಜವಾಬ್ದಾರಿ ಈ ವಿಷಯಗಳನ್ನು ಬಿಟ್ಟು ಚರ್ಚಿಸತಕ್ಕವರಾಗಿಲ್ಲ. ಬ್ರಿಟಿಷ್ ಮೆಂಬರುಗಳು ರಕ್ಷಣೆಯ ಸಮಸ್ಯೆಯ ಸಂಬಂಧವಾಗಿ ನಡೆಸುತ್ತಿರುವ ಚರ್ಚೆಯು ಬಹಳ ಸ್ವಾರಸ್ಯವಾಗಿರುವುದು. ಕೇಂದ್ರ ಪ್ರಭುತ್ವಕ್ಕೆ ಮಾತ್ರ ರಕ್ಷಣಾಧಿಕಾರ ವಿರಬೇಕೆಂದು ಹಿಂದೆ ವಾದಿಸುತ್ತಿದ್ದುದನ್ನು ಕೇಳಿದ್ದೆವು, ಆದರೆ ಈಗ ಪ್ರಾಂತಿಕ ಪ್ರಭುತ್ವಗಳಿಗೂ ಇರಬೇಕೆಂದು ವಾದಿಸುತ್ತಿರುವುದನ್ನು ಕೇಳಿ ಮತ್ತು ಭಾರತೀಯ ಮೆಂಬರುಗಳು ಪ್ರಾಂತಿಕ ಪ್ರಭುತ್ವಗಳ ಸ್ವತಂತ್ರಾಧಿಕಾರಕ್ಕೆ ಭಂಗಬರಕೂಡದೆಂದು ವಾದಿಸುವುದರ ವಿನಾ ಬ್ರಿಟಿಷ್ ಮೆಂಬರುಗಳ ವಾದವನ್ನು ಖಂಡಿಸದೆ ಮೌನವಾಗಿರುವುದನ್ನು ನೋಡಿ ಆಶ್ಚರ್ಯಪಡಬೇಕಾಗಿದೆ. ಗೌರ್ನರ್ ಜನರಲ್‌ರವರು ತಮಗೆ ಕೊಡಲ್ಪಟ್ಟಿರುವ ಜವಾಬ್ದಾರಿಯಧಿಕಾರವನ್ನು ಫಲಪ್ರದವಾಗಿ ವಿನಿಯೋಗಿಸಲು ಮತ್ತು ನಿರ್ಬಂಧ ವಿಧಾನಗಳನ್ನು ಮಂತ್ರಿಗಳು ಸಮ್ಮತಿಸಲಿ ಸಮ್ಮತಿಸದಿರಲಿ ಪ್ರಯೋಗಿಸಲು ತಕ್ಕ ಅವಕಾಶವು ಕಲ್ಪಿಸಲ್ಪಡಬೇಕೆಂದು ಲಾರ್ಡ್‌ರೀಡಿಂಗ್‌ರವರು ಮುಖಂಡರಾಗಿರುವ ಬ್ರಿಟಿಷ್ ಪಕ್ಷದ ಮೆಂಬರುಗಳು ವಾದಿಸುತ್ತಿರುವರು. ಲಾರ್ಡ್ ಇರ್ವಿನ್‌ರವರು ಸಹ ಇದೇ ಅಭಿಪ್ರಾಯವುಳ್ಳವರಾಗಿರುವಂತೆ ತೋರುವುದು. ಆರ್ಥಿಕ ಮತ್ತು ವಾಣಿಜ್ಯ ವಿಚಾರದಲ್ಲಿ ಇರಬೇಕಾದ ರಕ್ಷಣೆಯ ವಿಷಯವು ಪ್ರತ್ಯೇಕ ಉಪ ಕಮಿಟಿಯವರಿಂದ ಪರ್ಯಾಲೋಚಿಸಲ್ಪಡಬೇಕಾಗಿರುವುದೆಂದು ತೋರುತ್ತದೆ. ಮೈನಾರಿಟಿಗಳು, ಸರ್ಕಾರಿಯುದ್ಯೋಗಗಳು, ಬಚಾವಣೆ, ಹೊರಗಣ ರಾಜಕೀಯ ಸಂಬಂಧಗಳು, ನೆಮ್ಮದಿ ಮತ್ತು ಸಮಾಧಾನ ವಿಚಾರದಲ್ಲಿರಬೇಕಾದ ಜವಾಬ್ದಾರಿ ಇತ್ಯಾದಿ ಮಹತ್ವ ವಿಷಯಗಳನ್ನೊಳಕೊಂಡಿರುವ ರಕ್ಷಣೆಯ ವಿಚಾರವು ಸಭೆಯವರಿಂದಲೇ ಪರಿಷ್ಕರಿಸಲ್ಪಡಬೇಕಾಗಿವೆ. ಈ ರಕ್ಷಣೆಯ ಸಮಸ್ಯೆಯು ಇತರ ಸಮಸ್ಯೆಗಳನ್ನೆಲ್ಲ ಸಂಪೂರ್ಣವಾಗಿ ಮರೆಸಿಬಿಟ್ಟಿರುವಂತೆ ತೋರುತ್ತದೆ. ಈ ಸಮಸ್ಯೆಗೆಷ್ಟು ಹೆಚ್ಚಾಗಿ ಗಮನಕೊಡಲ್ಪಡುವುದೊ ಅಷ್ಟು ಹೆಚ್ಚಾಗಿ ರಕ್ಷಣೆಗೆ ಸಂಬಂಧಪಟ್ಟ ವಿಷಯಗಳು ಹುಟ್ಟುತ್ತವೆ. ರಕ್ಷಣೆಯ ವಿಚಾರದಲ್ಲಿ ಬ್ರಿಟಿಷರು ಅಭಿಪ್ರಾಯಪಡುವಷ್ಟು ಕ್ಷೇಮವು ಅದರಿಂದುಂಟಾಗುವುದಿಲ್ಲ. ಅದು ಯಾವ ಆಡಳಿತದಲ್ಲಾಗಲಿ ತಿಕ್ಕಾಟವನ್ನು ಹುಟ್ಟಿಸತಕ್ಕ ಒಂದು ವಿಜಾತೀಯವಾದ ಶಾಸನವಾಗಿ ಮಾತ್ರ ಇರುವುದು. ರಕ್ಷಣೆಯ ವಿಚಾರವಾಗಿ ಹೋರಾಡಲು ಅಪಾರವಾದ ಕುತೂಹಲವಿರುತ್ತದೆಂದು ವ್ಯಕ್ತಪಡಿಸುವ ಆತುರತೆಯು ಭಾರತೀಯರ ಪಕ್ಷದ ಪರವಾಗಿಮಾತನಾಡುವ ಪ್ರತಿಯೊಬ್ಬರಿಗೂ ಸಂಪೂರ್ಣವಾಗಿರುತ್ತದೆ. ಈ ವಿಚಾರದಲ್ಲೆಲ್ಲ ಒಂದು ಕಡೆ ದೇಶೀಯ ರಾಜರಿಗೂ ಬ್ರಿಟಿಷ್ ಇಂಡ್ಯಾ ಪ್ರತಿನಿಧಿಗಳಿಗೂ, ಇನ್ನೊಂದು ಕಡೆ ಹಿಂದು ಮತ್ತು ಮಹಮ್ಮದೀಯ ಮೆಂಬರುಗಳಿಗೂ ಏಕಮತ್ಯವುಂಟಾಗಿರುವುದು ಸಂತೋಷಪ್ರದವು. ಇದರಿಂದ ಕಡೆಯಲ್ಲಿ ಯಾವ ಫಲಪ್ರಾಪ್ತಿಯಾಗುವುದೊ ನಮಗೆ ತಿಳಿಯದು. ಈ ಉಭಯರ ಮಹಾಪ್ರಯತ್ನವು ಪರ್ವತವನ್ನಗೆದು ಇಲಿ ಸುಂಡವನ್ನು ಹಿಡಿದಂತೆ ಪರಿಣಮಿಸದಿರಲೆಂದೂ, ಬಹಳ ದೀರ್ಘವಾಗಿ ನಡೆಯುವುದಿಲ್ಲವೆಂದು ತೋರುವ ಸಭೆಯು ಪೂರೈಸುವುದರೊಳಗಾಗಿ, ಭಾರತೀಯ ಪ್ರಾಗತಿಕಪಕ್ಷದವರನ್ನು ತೃಪ್ತಿಗೊಳಿಸುವಂತಹುದಲ್ಲವಾದರೂ ಅನುಷ್ಠೇಯವಾದ ಸ್ವರಾಜ್ಯವನ್ನಾದರೂ ಪಡೆಯುವಂತಹ ಉಪಾಯವು ಗೊತ್ತುಮಾಡಲ್ಪಡುವುದೆಂದು ನಿರೀಕ್ಷಿಸುತ್ತೇವೆ.

ಎರಡೂವರೆ ಕೋಟಿ ರೂ. ಭಂಗಾರ ಹಡಗೇರಿತು

ಬೊಂಬಾಯಿ ರೇವೆಯಲ್ಲಿ ಪ್ರೆಸಿಡೆಂಟ್ ಹಾರಿಸನ್ ಎಂಬ ಹಡಗಿನ ಮೂಲಕ ಕಳೆದ ಶುಕ್ರವಾರ ಅಮೇರಿಕೆಗೆ 2,51,30,565 ರೂ ಬೆಲೆಯ ಭಂಗಾರವು ಕಳುಹಲ್ಪಟ್ಟಿತು. ಇಷ್ಟು ಹೆಚ್ಚು ಬೆಲೆಯ ಭಂಗಾರವು ಈ ವರೆಗೆಂದೂ ಒಂದಾವರ್ತಿಗೆ ಕಳುಹಲ್ಪಟ್ಟಿರಲಿಲ್ಲ. ಚಿನ್ನದ ಬೆಲೆ ಇಳಿದು ಹೋಗುತ್ತದೆಂಬ ಭಯದಿಂದ ಹೆಚ್ಚು ಬೆಲೆಗೆ ಶೀಘ್ರದಲ್ಲೇ ವಿಕ್ರಯಿಸಬೇಕೆಂದು ಜನರು ಆತುರಪಟ್ಟು ಮಾರುತ್ತಿರುವುದು ಇದಕ್ಕೆ ಕಾರಣವು. ಭಂಗಾರವನ್ನು ಸಾಗಿಸಲು 15 ದಿವಸಗಳಿಗೊಂದಾವರ್ತಿ ತಪ್ಪದೆ ಸ್ಟೀಮರು ಹೊರಡಲೇರ್ಪಾಟಾಗಿದೆ.

ಅಲಹಾಬಾದು ಸಭೆಗಳು

ಡಿಸೆಂಬರು ತಾ॥ 3 ರಲ್ಲಿ ನಡೆಯಬೇಕಾಗಿದ್ದ ಉಪಸಂಘ ಸಭೆಯು ತಾ॥ 10 ರಲ್ಲೂ, ತಾ॥ 4 ರಲ್ಲಿ ನಡೆಯಬೇಕಾಗಿದ್ದ ಹಿಂದು ಮಹಮ್ಮದೀಯ ಸಿಕ್ಕುನಾಯಕರ ಸಭೆಯು ತಾ॥ 11-12 ರಲ್ಲೂ ಸರ್ವಪಕ್ಷನಾಯಕರ ಸಭೆಯು ತಾ॥ 14 ರಲ್ಲೂ ಅಲಹಾಬಾದಿನೊಳಗೆ ಜರುಗುವುವೆಂದು ಕಾರ್ಯದರ್ಶಿ ಗೋವಿಂದ ಮಾಳವ್ಯರವರು ಪ್ರಕಟಿಸಿರುತ್ತಾರೆ. ಬ್ರಿಟನ್ನಿನ ಮುಖ್ಯಮಂತ್ರಿಯವರ ಸಾಂಘಿಕ ಸಮಸ್ಯಾಪರಿಹಾರದಿಂದ ಹಿಂದು ಮಹಮ್ಮದೀಯ ಸಿಕ್ಕರುಗಳಲ್ಲಿ ಆರಿಗೂ ಸಮಾಧಾನವುಂಟಾಗಿರುವುದಿಲ್ಲವಾದುದರಿಂದ ಭಾರತೀಯರೆಲ್ಲರೂ ಒಟ್ಟುಗೂಡಿ ದೇಶಾಭ್ಯುದಯಕ್ಕೆ ಪ್ರಯತ್ನಿಸಬೇಕಾಗಿರುವ ಪ್ರಯುಕ್ತ ತಾ॥ 14 ರಲ್ಲಿ ನಡೆಯುವ ಈ ಸರ್ವಪಕ್ಷನಾಯಕರ ಸಭೆಗೆ ಸಮಸ್ತರೂ ಬರಬೇಕೆಂದು ಪಂಡಿತ ಮಾಳವ್ಯರವರು ಕೋರಿರುತ್ತಾರೆ.

ಪೌನಿನ ದರ ಇಳಿದಿತು

ಸವರನ್ನಿನ ದರ 20 ಷಿಲ್ಲಿಂಗಿನಿಂದ 13 ಷಿಲ್ಲಿಂಗು 14 ಪೆನ್ನಿಗಳಿದ್ದುದು ಈಗ 12 ಷಿಲ್ಲಿಂಗು 11 ಪೆನ್ನಿಗಳಿಗಿಳಿದಿರುತ್ತದೆ. ಇಷ್ಟರಮಟ್ಟಿಗೆ ಸವರನ್ನಿನ ಬೆಲೆಯು ಈವರೆಗಿಳಿದಿರಲಿಲ್ಲ. ಇದಕ್ಕೂ ರೂಪಾಯಿಗೂ ಗೊತ್ತಾದ ಬೆಲೆ ಏರ್ಪಡುವುದರಲ್ಲಿ ಬಹಳ ನಷ್ಟ ಸಂಭವಿಸುತ್ತದೆ. ಅಮೆರಿಕೆಯವರಿಗೆ ಇಂಗ್ಲೆಂಡು ಇದೇ ತಾ॥ 15 ರಲ್ಲಿ ಋಣವನ್ನು ಸಲ್ಲಿಸಬೇಕಾಗಿ ಗೊತ್ತಾಗಿರುವುದು. ಈ ಮೊಬಲಗು ಸವರನ್ ರೂಪದಲ್ಲಿ ಕೊಡಬೇಕಾಗಿದೆ. ಇದಕ್ಕೆ ಮೊದಲಿದ್ದ ದರ ಪ್ರಕಾರ 1,91,10,000 ಸವರನ್ನು (36,30,90,000 ರೂ.)ಗಳನ್ನು ಕೊಡಬೇಕಾಗಿದ್ದಿತು. ಈಗಿಳಿದುಹೋಗಿರುವ ದರದ ಪ್ರಕಾರ 3,01,97,000 ಸವರನ್ನು (57,37,43,000ರೂ.)ಗಳನ್ನು ಕೊಡಬೇಕಾಗಿರುವುದು. ಇದರಿಂದ ಇಂಗ್ಲೆಂಡಿಗೆ ಭಾರವು ಅತ್ಯಧಿಕವಾಯಿತು.

ನಾವು ಕೂಪ ಕೂರ್ಮದಂತಿರುವೆವು

ನಾಗಪುರ ವಿಶ್ವವಿದ್ಯಾನಿಲಯ ಪಟ್ಟಪ್ರದಾನೋತ್ಸವ ಸಮಯದಲ್ಲಿ ಆಚಾರ್ಯ ಡಾಕ್ಟರ್ ಸರ್ ಪಿ. ಸಿ. ರೇಯವರು ಪಟ್ಟಾಂಚಿತರಿಗೆ ಹಿತಬೋಧೆ ಮಾಡುವಾಗ್ಗೆ "ಹಿಂದು ಮತದಲ್ಲಿ ವರ್ಣವಿಭೇದವು ಪರಿಶ್ರಮಾಭಿವೃದ್ಧಿಯನ್ನೂ ಸಮಾಜ ಶ್ರೇಯಸ್ಸನ್ನೂ ಹಾಳ್ಮಾಡುತ್ತದೆ. ಅನ್ಯದೇಶೀಯರೆಲ್ಲರೂ ವಿವಿಧ ಕಲೆಗಳಲ್ಲಿ ನಿತ್ಯವೂ ಅಭಿವೃದ್ಧಿಯನ್ನು ಹೊಂದುತ್ತಿರುವರು. ನಾವು ನಮ್ಮಭಿವೃದ್ಧಿಯನ್ನು ಲಕ್ಷಿಸುವುದಿಲ್ಲ. ಕ್ಷೌರಿಕರು ವೈದ್ಯವನ್ನು ಮಾಡುವ ಮತ್ತು ಅಜ್ಞಾನಿಗಳಾದ ಕಾಡುಜನರು ವೃಕ್ಷಶಾಸ್ತ್ರವನ್ನು ಕಲಿಯುವ ಸ್ಥಿತಿಗೆ ಬಂದಿರುತ್ತದೆ. ನಾವು ಕೂಪ ಕೂರ್ಮದಂತಿದ್ದುಕೊಂಡು ಆನಂದಪಡುತ್ತಿದ್ದೇವೆ. ಪಾಶ್ಚಾತ್ಯರೆಲ್ಲರೂ ವಿದ್ಯಾಕೌಶಲ್ಯವನ್ನು ಹೊಂದುತ್ತಿರುವರು. ಅವರೊಡನೆ ನಾವು ಹೋಲಿಸಿಕೊಂಡರೆ ನಾವು ಎಷ್ಟು ಅಧೋಗತಿಯಲ್ಲಿದ್ದೇವೆಂಬುದು ವಿಶದವಾಗುವುದು. ಭಾರತ ದೇಶವು 100 ವರ್ಷಗಳಲ್ಲಿ ಹೊಂದಲಾರದ ಅಭಿವೃದ್ಧಿಯನ್ನು ಜಪಾನ್ ದೇಶವು 50 ವರ್ಷಗಳಲ್ಲಿ ಹೊಂದಿರುತ್ತದೆ. ಜಪಾನ್ ದೇಶೀಯರು ತಮ್ಮ ನಿಮ್ನಜಾತಿಯವರನ್ನುದ್ಧರಿಸಿ ಬಹಳ ಆಶ್ಚರ್ಯಕರವಾಗಿ ಅತ್ಯಂತ ಶೀಘ್ರದಲ್ಲಿಯೇ ಅತ್ಯುನ್ನತಸ್ಥಿತಿಗೆ ತಂದು ದೇಶದ ಸೌಭಾಗ್ಯಕ್ಕೆ ಮಾರ್ಗ ಮಾಡಿಕೊಟ್ಟರು. ನಾವು ಅಸ್ಪೃಶ್ಯತಾ ನಿರ್ಮೂಲನ ಮಾಡಲಾರದೆ ಹಿಂದು ಮಹಮ್ಮದೀಯರ ಸಖ್ಯವನ್ನು ಕುದುರಿಸಲಾರದೆ ತಹತಹ ಪಡುತ್ತಿದ್ದೇವೆ. ಬಂಗಾಳಾ ಬಾಬುಗಳೂ, ಮಹಾರಾಷ್ಟ್ರ ಚಿತ್ಪಾವನರೂ, ಮದರಾಸು ಅಯ್ಯರ್‌ರವರೂ, ಅಯ್ಯಂಗಾರ್ರೂ ತಮ್ಮ ಸ್ವಭಾವವನ್ನು ಬಿಡತಕ್ಕವರಲ್ಲ. ವರ್ತಕರು ಯಾವಾಗಲೂ ಇಷ್ಟಾರ್ಥಸಾಧನದಲ್ಲೇ ಇರುವರು. ಬುದ್ಧಿ ಕುಶಲರಾದ ಹಿಂದುಗಳು, ಹೈಕೋರ್ಟು ಜಡ್ಜಿಗಳು, ಅಮಲ್ದಾರರುಗಳು, ಟೈಪಿಸ್ಟುಗಳು ಇತ್ಯಾದಿಯಾಗಿದ್ದ ಮಾತ್ರಕ್ಕೆ ಹಿಂದುಗಳ ಸೌಭಾಗ್ಯವು ಲಭಿಸುವುದಿಲ್ಲ. ಸರ್ ತಾತಾರವರಂತಹ ಪ್ರಮುಖರ ಮುಖಾಂತರ ಹಿಂದುದೇಶವು ಅಭಿವೃದ್ಧಿಗೆ ಬರಬೇಕಾಗಿದೆ" ಎಂದು ಹೇಳಿದರು.

ಗುರುವಯ್ಯೂರು ದೇವಾಲಯ ಪ್ರವೇಶಕ್ಕೆ ಪ್ರಜೆಗಳ ಓಟು

"ಈಗ ಗುರುವಯ್ಯೂರು ದೇವಾಲಯದೊಳಕ್ಕೆ ಹರಿಜನರು ಬರುವ ವಿಚಾರದಲ್ಲಿ ಸನಾತನ ಧರ್ಮಿಗಳು ಆತಂಕವನ್ನೊಡ್ಡಿ ಚರ್ಚೆಯನ್ನಡಿಸುತ್ತಿರುವರಷ್ಟೆ. ಈ ಅಸ್ಪೃಶ್ಯರ ದೇವಾಲಯ ಪ್ರವೇಶವಿಚಾರದಲ್ಲಿ ಪ್ರಜೆಗಳೆಲ್ಲರ ಓಟನ್ನು ತೆಗೆದುಕೊಳ್ಳಬೇಕು. ಹಾಗೆ ಅವರು ಪ್ರವೇಶಿಸಲಾಗದೆಂಬ ಬಗೆಗೆ ಹೆಚ್ಚು ಓಟುಗಳು ಬಂದಲ್ಲಿ ನಾನು ನಿರಶನ ವ್ರತವನ್ನು ಹಿಡಿಯುವುದಿಲ್ಲ. ಪ್ರಜೆಗಳೆಲ್ಲರೂ ಇದಕ್ಕೆ ಅನುಕೂಲರಾಗಿರುತ್ತಾರೆಂದು ನನಗೆ ಗೊತ್ತಿದೆ. ಓಟನ್ನು ತೆಗೆದುಕೊಳ್ಳಲೇರ್ಪಡುವ ಸಂಘದಲ್ಲಿ ನನ್ನ ಕಡೆಯೊಬ್ಬ ಪ್ರತಿನಿಧಿಯೂ ಸನಾತನ ಧರ್ಮಿಗಳ ಕಡೆಯ ಪ್ರತಿನಿಧಿಯೊಬ್ಬನೂ ಇರಬೇಕು. ಈ ಸಂಘದವರು ಮಾಡುವ ನಿರ್ಣಯಕ್ಕೆ ನಾನೂ ಬದ್ಧನಾಗಿರುವೆನು, ಅವರೂ ಬದ್ಧರಾಗಿರಬೇಕು" ಎಂದು ಕಳೆದ ತಾ॥ 27ರಲ್ಲಿ ಮಹಾತ್ಮರು ಪ್ರಕಟಿಸಿದರು. ಬೊಂಬಾಯಿ ರಾಷ್ಟ್ರದ ಹರಿಜನ ಸಂಘಾಧ್ಯಕ್ಷರೂ ಸೆಕ್ರೆಟರಿಯೂ ಕಳೆದ ತಾ॥ 26 ನೆಯ ಶನಿವಾರ ಮಹಾತ್ಮರ ಸಂದರ್ಶನಕ್ಕೆ ಬಂದಿದ್ದರು. ಮಹಾತ್ಮರು ನಿರಶನ ವ್ರತವನ್ನು ಹಿಡಿದಿದ್ದಾಗ್ಗೆ ಕುಳಿತಿದ್ದ ಮಾವಿನ ಮರದ ಕೆಳಗೆ ಕುಳಿತುಕೊಂಡು ಬಂದವರೊಡನೆ ಸಂಭಾಷಿಸಲು ಜೈಲಿನ ಅಧಿಕಾರಿಗಳು ಸಮ್ಮತಿಸಿದರು. ಅಸ್ಪೃಶ್ಯತಾ ನಿವಾರಣೆಯ ವಿಚಾರವಾಗಿ ಮಹಾತ್ಮರೊಡನೆ ಪ್ರಸ್ತಾಪಿಸಲು ಬಹು ಜನರು ಬರುತ್ತಿರುವುದರಿಂದ ಜೈಲಿನೊಳಗಿನ ಕೊಠಡಿಯಲ್ಲಿ ಸ್ಥಳಸಾಲುವುದಿಲ್ಲವಾದುದರಿಂದ ಮರದ ಕೆಳಗೆ ಕುಳಿತು ಮಾತನಾಡಲೇರ್ಪಾಟಾಗಿರುವುದು. ಮಹಾತ್ಮರು ಮಹಾದೇವ ದೇಶಾಯಿಯವರೊಡನೆ ಮಧ್ಯಾಹ್ನ 12 ಘಂಟೆಗೆ ತಮ್ಮ ಕೊಠಡಿಗಳನ್ನು ಬಿಟ್ಟು ಮರದಡಿಗೆ ಬಂದು 20 ನಿಮಿಷಗಳವರೆಗೆ ನಿದ್ರಿಸಿ ಅನಂತರ ಸಾಯಂಕಾಲ 5 ಘಂಟೆಯವರೆಗೆ ನೋಡಲಿಚ್ಛಿಸುವ ಜನರನ್ನು ಬರಮಾಡಿಕೊಂಡು ಅವರ ಕೂಡ ಮಾತನಾಡಿ ತಮ್ಮ ಕೊಠಡಿಗಳಿಗೆ ಹೋಗುವರು. ಬೊಂಬಾಯಿ ಸ್ತ್ರೀ ಸಂಘದವರು ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆ, ದೇವಾಲಯ ಪ್ರವೇಶ ವಿಚಾರವಾಗಿ ಪ್ರಜೆಗಳೆಲ್ಲರಿಂದ ಓಟನ್ನು ತೆಗೆದುಕೊಳ್ಳಬೇಕೆಂದು ಅವರು ಅಪೇಕ್ಷಿಸುವುದಾಗಿ ಮಥುರಾದಾಸ್‌ರವರು ಹೇಳಿದರು. "ಪ್ರತಿ ರಾಷ್ಟ್ರದಲ್ಲೂ ರಾಷ್ಟ್ರೀಯ ಹರಿಜನ ಸಂಘದವರು ಈ ಪದ್ಧತಿಯನ್ನು ಅವಲಂಬಿಸಿದ ಸವರ್ಣ ಹಿಂದುಗಳಲ್ಲಿ ಹೆಚ್ಚು ಸಂಖ್ಯೆಯವರ ಅಭಿಪ್ರಾಯವು ಲೋಕಕ್ಕೆ ಗೊತ್ತಾಗುವುದು. ದೊಡ್ಡ ಪಂಡಿತರುಗಳನ್ನು ಬರಮಾಡಿ ಶಾಸ್ತ್ರಪ್ರಮಾಣಸಮೇತವಾಗಿ ಅವರಭಿಪ್ರಾಯಗಳನ್ನು ತೆಗೆದುಕೊಳ್ಳಬೇಕು. ವಿದ್ಯಾವಿಷಯದಲ್ಲಿ ಅವರಿಗೆಷ್ಟರಮಟ್ಟಿಗೆ ಅರ್ಹತೆಯಿರುತ್ತದೆಂಬ ಬಗೆಗೆ ಹರಿಜನರ ಗಣತಿಯನ್ನು ಮಾಡಿಸಬೇಕು. ಹರಿಜನರಲ್ಲಿ ವಯಸ್ಸಾದವರು ಓದಲು ರಾತ್ರಿ ಪಾಠಶಾಲೆಗಳೇರ್ಪಾಟಾಗಬೇಕು. ಹರಿಜನರ ಬಾಲಕ ಬಾಲಿಕೆಯರು ಹೆಚ್ಚು ವಿದ್ಯೆಯನ್ನು ಕಲಿಯಲು ಅವರುಗಳನ್ನು ಪ್ರೋತ್ಸಾಹಿಸಲು ಅವರುಗಳಿಗೆ ವಿದ್ಯಾರ್ಥಿವೇತನಗಳನ್ನು ಕೊಡಬೇಕು. ವಿದ್ಯಾರ್ಥಿವೇತನಗಳನ್ನು ಪಡೆದು ಹೆಚ್ಚು ವಿದ್ಯೆಯನ್ನು ಕಲಿತವರೆಲ್ಲರೂ ಮೊದಲು ಎರಡು ವರ್ಷಗಳವರೆಗೆ ಹರಿಜನ ಸಂಘೋದ್ಧರಣಕ್ಕಾಗಿ ಕೆಲಸ ಮಾಡುತ್ತೇವೆಂದು ಅವರುಗಳಿಂದ ಬರೆಯಿಸಿಕೊಳ್ಳಬೇಕು" ಎಂದು ಮಹಾತ್ಮರು ತಿಳಿಸಿರುತ್ತಾರೆ.

ಅಮೇರಿಕೆಗೆ ಬ್ರಿಟಿಷರ ಬೇಡಿಕೆ

ಬ್ರಿಟಿಷರು ಅಮೇರಿಕೆಗೆ ಈ ತಾ॥ 15 ರಲ್ಲಿ ಕೊಡಬೇಕಾಗಿರುವ ಋಣವನ್ನು ತೀರಿಸಲು ತಮಗಿರುವ ಅಶಕ್ತತೆಯನ್ನು ವಿವರಿಸಿ ಗಡುವನ್ನು ಹೆಚ್ಚಿಸಬೇಕೆಂದು ಕೋರಿ ಬರೆದಿರುವ ಲೇಖವನ್ನು ಅಮೇರಿಕೆಯ ರಾಯಭಾರಿ ವಶಕ್ಕೆ ಈ ತಾ॥ 1 ರಲ್ಲಿ ಒಪ್ಪಿಸಿದರು. ಅದರಲ್ಲಿ ಹೀಗೆ ಬರೆಯಲ್ಪಟ್ಟಿದೆ—ಪ್ರಪಂಚದಲ್ಲುಂಟಾಗಿರುವ ಆರ್ಥಿಕದುಸ್ಥಿತಿಗೆ ಯುದ್ಧ ಋಣಗಳೂ, ಯುದ್ಧ ನಷ್ಟ ಪರಿಹಾರಗಳೂ ಮುಖ್ಯ ಕಾರಣಗಳಾಗಿವೆ. ಈಗ ಯುದ್ಧ ಋಣವನ್ನು ಸಲ್ಲಿಸಲು ಒತ್ತಾಯಪಡಿಸಲ್ಪಟ್ಟಲ್ಲಿ ಪ್ರಕೃತ ದುಸ್ಥಿತಿಯು ಮತ್ತಷ್ಟು ಹೆಚ್ಚುವುದು. ಈ ಸಾಲಗಳು ವಸ್ತುರೂಪವಾಗಿ ಕೊಡಲ್ಪಟ್ಟವಲ್ಲದೆ ಧನರೂಪವಾಗಿ ಕೊಡಲ್ಪಟ್ಟವಲ್ಲ. ಅಮೇರಿಕೆಯವರು ಮಿತ್ರ ಮಂಡಲಿಯವರಿಗೆ ಕಳುಹಿದ ಸರಕುಗಳ ಬೆಲೆ 20550 ಲಕ್ಷ ಪೌನು (390450 ಲಕ್ಷ ರೂ.) ಗಳು ಆಗುವುದು. ಬ್ರಿಟಿಷಿನವರು ಯೂರೋಪ್ ಖಂಡದ ನಾನಾ ದೇಶಗಳಿಗೆ ಕಳುಹಿಸಿದ ಸರಕುಗಳ ಬೆಲೆ 16000 ಲಕ್ಷ ಪೌನು (304000 ಲಕ್ಷ ರೂ.) ಗಳಾಗುವುದು. ಫ್ರಾನ್ಸಿನವರು ಇತರ ದೇಶಗಳಿಗೆ ಕಳುಹಿಸಿದ ಸರಕಿನ ಬೆಲೆ 4600 ಪೌನು (87400 ಲಕ್ಷ ರೂ.) ಗಳಾಗುವುದು. ಅಮೇರಿಕೆಯವರು ಯೂರೋಪುಖಂಡದವರಿಗೆ ಬಹಳ ಹಣವನ್ನು ಸಾಲವಾಗಿ ಕೊಟ್ಟುದರಿಂದ ಬ್ರಿಟನ್ ಮೊದಲಾದ ದೇಶದವರು ತಾತ್ಕಾಲಿಕವಾಗಿ ಯುದ್ಧ ಋಣವನ್ನೂ ನಷ್ಟ ಪರಿಹಾರವನ್ನೂ ಕೊಡಲವಕಾಶವಾಯಿತು. ಆದರೆ ಆರ್ಥಿಕ ದುಸ್ಥಿತಿಯುಂಟಾಗಲು ಹಣವನ್ನು ಸಹಾಯಮಾಡಿದವರು ತಮ್ಮ ಹಣವನ್ನು ಹಿಂದಕ್ಕೆ ತೆಗೆದುಬಿಟ್ಟುದರಿಂದ ದೇಶದಲ್ಲಿ ಬಹಳ ಭಯಂಕರ ಸ್ಥಿತಿಯುಂಟಾಗಿದೆ. ಇದರಿಂದ ಧನಾಢ್ಯರು ತಮ್ಮ ಹಣವನ್ನು ಪ್ರಭುತ್ವದವರಿಗೆ ಕೊಡಲು ಭಯಪಟ್ಟುಕೊಂಡಿರುವರು. ನಾಣ್ಯದ ಬೆಲೆಯು ಸಹ ನಿಲುಗಡೆಯಲ್ಲಿಲ್ಲ. ಇದನ್ನು ಪರಿಶೀಲಿಸಿ ಸರಿಪಡಿಸಲು ಮಾಡಿದ ಏರ್ಪಾಟಿನಿಂದ ಸ್ಥಿತಿಯು ಮತ್ತೂ ಅಧ್ವಾನವಾಗಿದೆ. ಆದುದರಿಂದ ಈ ಋಣಗಳನ್ನು ಕಾಲಕ್ರಮೇಣ ಸರಕುಗಳ ಮೂಲಕವೇ ತೀರಿಸಬೇಕಾಗಿರುತ್ತದೆ. "ಸಾಲ ಕೊಡಬೇಕಾದವರು ತಮ್ಮ ಆರ್ಥಿಕ ದುಸ್ಥಿತಿಯನ್ನೂ, ನಂಬಿಕೆಯನ್ನೂ ಸರಿಪಡಿಸಿಕೊಳ್ಳಲು ಅವಕಾಶಕೊಡಲ್ಪಡಬೇಕು. ಸಾಲ ಕೊಟ್ಟವರು ಬಲವಂತಪಡಿಸಿ ಕೆಲ ಲಕ್ಷಗಳನ್ನು ವಸೂಲ್ಮಾಡುವುದರಿಂದ ಪ್ರಪಂಚದಲ್ಲಿ ಆರ್ಥಿಕ ಸ್ಥಿತಿಯು ಇನ್ನೂ ಹೆಚ್ಚಾಗಿ ಕೆಡುವುದರಿಂದ ಅದು ಸರಿಯಾದ ಮಾರ್ಗವಲ್ಲ" ಎಂದು ಅಮೇರಿಕೆಯ ವಿದೇಶಾಂಗ ಮಂತ್ರಿಯು 1925 ರಲ್ಲಿ ತನ್ನ ನಿವೇದಿಕೆಯೊಳಗೆ ಬರೆದಿರುತ್ತಾರೆ. ಎಲ್ಲ ರಾಜ್ಯದವರೂ ಮುಖ್ಯವಾಗಿ ಅಮೇರಿಕೆ ಮತ್ತು ಗ್ರೇಟ್ ಬ್ರಿಟನ್ ಪ್ರಭುತ್ವದವರು ಸೇರಿ ಆರ್ಥಿಕ ರಾಜಕೀಯ ದುಸ್ಥಿತಿಯುಂಟಾಗದಂತೆ ಮಾಡಬೇಕಾಗಿದೆ. ಅಮೇರಿಕೆಯು ಕೊಟ್ಟಿರುವ ಋಣದಲ್ಲಿ 4340 ಲಕ್ಷ ಪೌನುಗಳನ್ನು ವಸೂಲ್ಮಾಡಿರುತ್ತದೆ. ಬ್ರಿಟನ್ನಿನವರು ಕೊಟ್ಟಿರುವ ಸಾಲದಲ್ಲಿ ಏನೂ ವಸೂಲಾಗಿಲ್ಲ. ಅಮೇರಿಕೆಯವರಿಗೆ ಕೊಡಲ್ಪಟ್ಟಿರುವುದರಲ್ಲಿ ಶೇಕಡ 80 ರಷ್ಟು ಬ್ರಿಟನ್ನಿನವರಿಂದಲೇ ಕೊಡಲ್ಪಟ್ಟಿದೆ. ಈಗ ಅವರು ಶೇಕಡ 40 ರಷ್ಟು ಕೊಡಬೇಕಾಗಿದೆ. ಈ ಸಾಲವು ಸರಕುಗಳ ದ್ವಾರ ಕೊಡಲ್ಪಟ್ಟಿರುವುದರಿಂದ ಮತ್ತು ಆಗಿನ ಬೆಲೆಯ ದರವು ಈಗಿರುವುದರೆಡರಷ್ಟಿದ್ದುದರಿಂದ ಈಗಿನ ದರದಂತೆ ತೀರಿಸಬೇಕಾಗಿದೆ. ನಮಗೆ ಕೊಡಬೇಕಾಗಿರುವವರು ಹಣ ಕೊಟ್ಟ ಹೊರತು ನಿಮಗೆ ಕೊಡಲವಕಾಶವಿಲ್ಲ. ಡಿಸೆಂಬರಿನಲ್ಲಿ ನಾವು ಕೊಡಬೇಕಾಗಿರುವ ಮೊಬಲಿಗೆ ತಕ್ಕಷ್ಟು ಹಣವು ವಿದೇಶೀಯ ಎಕ್ಸ್‌ಚೇಂಜ್ ನಿಧಿಯಲ್ಲಿಲ್ಲ. ಭಂಗಾರದ ರೂಪದಲ್ಲಿ ಕೊಡಲು ಸಾಧ್ಯವಿಲ್ಲದವೇಳೆ ಇಂಗ್ಲೆಂಡು ತನ್ನ ಬಾಕಿಯನ್ನು ಮೂಲ ಧನದಿಂದಲೇ ಕೊಡಬೇಕಾಗಿದೆಯೇ ವಿನಾ ಬೇರೆ ಮಾರ್ಗವಿಲ್ಲ. ಬ್ಯಾಂಕಿನಲ್ಲಿರುವ ಮೂಲಧನವೂ ಕಡಿಮೆಯಾಗಿದೆ. ಡಿಸೆಂಬರು ವಾಯಿದೆಯನ್ನು ಮುಂದಕ್ಕೆ ಹಾಕಿದರೆ ಪ್ರಪಂಚದ ಆರ್ಥಿಕ ದುಸ್ಥಿತಿ ನೆಟ್ಟಗಾಗುವ ಭರವಸೆಯಿರುತ್ತದೆ. ಆದ್ದರಿಂದ ವಾಯಿದೆಯನ್ನು ಮುಂದಕ್ಕೆ ಹಾಕಲು ತಕ್ಕೇರ್ಪಾಟನ್ನು ಮಾಡಲು ಆಲೋಚಿಸಬೇಕಾಗಿ ಕೋರುತ್ತೇವೆ" ಎಂದು ಬ್ರಿಟನ್ ದೊರತನದವರು ಅಮೇರಿಕೆಯ ದೊರತನದವರಿಗೆ ಬರೆದಿರುತ್ತಾರೆ. ಫ್ರೆಂಚಿನವರು ಋಣವನ್ನು ಈಗ ತೀರಿಸಲಾರೆವೆಂದು ಮಾತ್ರ ಅಮೆರಿಕೆಗೆ ಬರೆದು ತಿಳಿಸಿರುವರು. ಈ ಬಿನ್ನಹವನ್ನು ಕೇಳಿ ಅಮೆರಿಕೆಯವರು ಋಣದ ವಾಯಿದೆಯನ್ನು ಮುಂದುವರಿಸುವುದಾಗಲಿ, ಋಣವನ್ನು ಬಿಟ್ಟು ಕೊಡುವುದಾಗಲಿ, ಕಡಿಮೆಮಾಡುವುದಾಗಲಿ ಸಾಧ್ಯವಿಲ್ಲವೆಂದು ಪ್ರೆಸಿಡೆಂಟ್ ಹೂವರ್‌ರಾದಿಯಾಗಿ ಮಂತ್ರಿಗಳೆಲ್ಲರೂ ಅಭಿಪ್ರಾಯಪಟ್ಟಿರುತ್ತಾರೆಂದು ಈಚಿನ ವರ್ತಮಾನದಿಂದ ತಿಳಿಯಬರುತ್ತದೆ. ಇದು ನಿಜವಾಗಿದ್ದಲ್ಲಿ ಬ್ರಿಟನ್ನಿನವರೂ ಫ್ರಾನ್ಸಿನವರೂ ಋಣಮುಕ್ತರಾಗಲೇನು ಉಪಾಯವನ್ನು ಹುಡುಕುವರೋ ನೋಡಬೇಕು.

ಒಳದೇಶದ ವೃತ್ತಾಂತಗಳು.

ಕಳೆದ ವಾರ ಬೊಂಬಾಯಿಗೆ ಚಿಕಿತ್ಸಿದ ಶ್ರೀಮದ್ಯುವರಾಜರವರ ಸ್ವಾರಿಯು ಇಷ್ಟರಲ್ಲೇ ಹಿಂದಿರುಗುವುದಾಗಿ ತಿಳಿಯಬರುತ್ತದೆ.

ಗುಬ್ಬಿ ಶ್ರೀ ಚನ್ನಬಸವೇಶ್ವರ ಕೃಪಾಪೋಷಿತ ನಾಟಕ ಮಂಡಲಿಯವರು ತಿರುಚಿನಾಪಲ್ಲಿಯಲ್ಲಿ ತಮ್ಮ ಪ್ರಸಿದ್ಧ ನಾಟಕಗಳನ್ನು ಪ್ರದರ್ಶಿಸಲು ಹೋಗಿರುತ್ತಾರೆ.

ಈ ದಿವಸ ಮಧ್ಯಾಹ್ನ ಬೋರ್ಬಂಡ್ ಸಂಸ್ಥಾನದ ಮಹಾರಾಜರು ರಾಜಧಾನಿಗೆ ಬಂದು ಗೌರ್ನಮೆಂಟ್ ಹೌಸಿನಲ್ಲಿಳಿದುಕೊಂಡಿರುವರು. ಮರ್ಯಾದಾರ್ಥವಾಗಿ 13 ಗುಂಡುಗಳು ಹಾರಿಸಲ್ಪಟ್ಟುವು.

ರಾಜಧಾನಿಯ ದೇವರಾಜನೊಹಲ್ಲ ಮ್ಯುನಿಸಿಪಲ್ ಕೌನ್ಸಿಲರ ಉಪ ಚುನಾವಣೆಗೆ ಅಭ್ಯರ್ಥಿಗಳಾಗಿ ನಿಂತಿದ್ದ ಮ॥ ಎಂ. ಸಿ. ತಮ್ಮಯ್ಯನವರು ಪ್ರತಿಸ್ಪರ್ಧೆಯಿಲ್ಲದೆ ಚುನಾಯಿತರಾದರೆಂದು ತಿಳುಹಲು ಸಂತೋಷವಾಗುತ್ತದೆ. ಇದಕ್ಕಾಗಿ ಮ॥ ತಮ್ಮಯ್ಯನವರನ್ನು ನಾವು ಅಭಿನಂದಿಸುತ್ತೇವೆ.

ವಿದ್ಯಾಭೂಷಣ ಮ॥ ವಿ. ಎಸ್. ಸಂಜೀವರಾಯರಿಗೆ ಮಾನನಷ್ಟದ ವಿವಾದದಲ್ಲಿ ಹೈಕೋರ್ಟಿನವರಿಂದ ಸ್ಥಿರಗೊಳಿಸಲ್ಪಟ್ಟ 300 ರೂ. ದಂಡವನ್ನು ಅವರು ಸಲ್ಲಿಸಲಿಲ್ಲವಾಗಿ ಕಳೆದ ಬುಧವಾರ ಸ್ವಗೃಹದಲ್ಲಿ ಪೋಲೀಸರಿಂದ ಸೆರೆಹಿಡಿಯಲ್ಪಟ್ಟು ಸೆಂಟ್ರಲ್ ಜೈಲಿಗೆ ಸಾಗಿಸಲ್ಪಟ್ಟರು.

ಅಖಿಲಭಾರತ ಶ್ರೀಮದ್ವೀರಶೈವ ಮಹಿಳಾ ಪರಿಷತ್ತು ಧಾರವಾಡದಲ್ಲಿ ಇದೇ ಡಿಸೆಂಬರು ತಾ॥ 30 ನೆಯ ಶುಕ್ರವಾರ ಬೆಳಗಿನ 8 ರಿಂದ 11 ಘಂಟೆಯವರೆಗೂ ಮಧ್ಯಾಹ್ನ 2½ ರಿಂದ ಸಾಯಂಕಾಲ 6 ಘಂಟೆಯವರೆಗೂ ಕೂಡುವುದಾದುದರಿಂದ ಅಭಿಮಾನಶಾಲಿಗಳೆಲ್ಲರೂ ದಯಮಾಡಿ ಪರಿಷತ್ತು ಯಶಸ್ವಿಯಾಗುವಂತೆ ಮಾಡಬೇಕೆಂದೂ, (1) ಸ್ತ್ರೀ ಶಿಕ್ಷಣ (2) ಸ್ತ್ರೀಯರ ಹಕ್ಕುಗಳು (3) ಸ್ತ್ರೀಯರ ಆಸ್ತಿಯ ವಿಷಯಗಳು (4) ಬಾಲಕ ಬಾಲಿಕೆಯರ ವಿದ್ಯಾಭ್ಯಾಸ (5) ಹೆರಿಗೆಯ ಸೌಕರ್ಯಗಳು (6) ಸ್ತ್ರೀಯರ ಉನ್ನತಿಗೆ ಸಂಬಂಧಿಸಿದ ವಿಷಯಗಳು ಚರ್ಚಿಸಲ್ಪಡುವುವೆಂದೂ ಈ ಪರಿಷತ್ತಿನ ಸೆಕ್ರೆಟರಿಗಳಾದ ಸೌ॥ ಪಾರ್ವತೀದೇವಿ ಕೇಸರಿ ಮತ್ತು ಮ॥ ಎಂ. ಎಸ್. ಕೇಸರಿ ಇವರುಗಳು ತಿಳಿಸಿರುತ್ತಾರೆ.

ಬೆಂಗಳೂರು ಸಿಟಿಯಲ್ಲಿ ಪ್ರಸಿದ್ಧ ವೀರಶೈವ ವರ್ತಕರುಗಳಾದ ಮ॥ ಕಂಬಿ ರೇವಪ್ಪ ಶಿವಪ್ಪ ಇವರುಗಳು ಹೊಸತರಗಿನಪೇಟೆಯಲ್ಲಿಟ್ಟಿರುವ ರೈಸ್ ಮಿಲ್ಲಿನಲ್ಲಿ ಮ॥ ರೇವಪ್ಪನವರ ಕುಮಾರರಾದ ಕೆ. ಆರ್. ಸಿದ್ಧರಾಮಪ್ಪನವರು ಯಂತ್ರಗಳನ್ನು ಪರೀಕ್ಷಿಸುತ್ತಿರುವಾಗ್ಗೆ ಅವರುಟ್ಟಿದ್ದ ಪಂಚೆಯು ಬೆಲ್ಟಿಗೆ ಸಿಕ್ಕಿ ಅವರ ದೇಹವು ಯಂತ್ರದೊಳಕ್ಕೆಳೆಯಲ್ಪಟ್ಟು ಕೂಡಲೆ ಮೃತರಾದರೆಂದು ತಿಳುಹಲು ಬಹಳ ವ್ಯಸನವಾಗುತ್ತದೆ. ಅವರು ಸಿಕ್ಕಿಬಿದ್ದುದನ್ನು ಕಂಡು ಯಂತ್ರವನ್ನು ನಿಲ್ಲಿಸಿ ಅವರನ್ನುಳಿಸಲು ಸಾಹಸಪಟ್ಟಾಗ್ಗೂ ಸಾರ್ಥಕವಾಗಲಿಲ್ಲವಂತೆ. ಮ॥ ರೇವಪ್ಪನವರಿಗೆ ಯುವಕ ಕುಮಾರನ ವಿಯೋಗದುಃಖಪ್ರಾಪ್ತವಾದುದಕ್ಕಾಗಿ ನಮ್ಮನುತಾಪವನ್ನು ಸೂಚಿಸಿ ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ತಂದೆತಾಯಿ ಬಂಧುಗಳಿಗೆ ದುಃಖ ಸಮಾಧಾನವನ್ನೂ ಕೋರುತ್ತೇವೆ.

ಹರಿಜನರಿಗೆ ಮಹಾತ್ಮರ ಹಿತೋಪದೇಶ.

ಹರಿಜನರಲ್ಲಿ ಪ್ರಚಾರ

(1) ಸದ್ಯಃ ಸ್ಥಿತಿಯಲ್ಲಿ ಹರಿಜನ ಮುಖಂಡರು ತಮ್ಮ ಸಂಘದಲ್ಲಿ ಸಾಧ್ಯವಾದಮಟ್ಟಿಗೂ ಸುಧಾರಣೆ ಮಾಡುವುದು ಅವರುಗಳ ಕರ್ತವ್ಯವು. ಹರಿಜನರಿಗೆ ಶುಭ್ರವಾಗಿರುವುದನ್ನೂ ಪರಿಶುದ್ಧವಾಗಿರುವುದನ್ನೂ ಆರೋಗ್ಯಶಾಸ್ತ್ರಾನುಸಾರವಾಗಿ ಬೋಧಿಸಬೇಕು.

(2) ಚರ್ಮವನ್ನು ಹದಮಾಡುವುದು, ಪಾಯಿಖಾನೆ ಗುಡಿಸುವುದು ಮೊದಲಾದ ಕೆಲಸಗಳನ್ನು ಮಾಡಬೇಕಾಗಿರುವವರಿಗೆ ಆ ಕೆಲಸಗಳನ್ನು ಹೇಳಿಕೊಡಬೇಕು.

(3) ಸತ್ತುಹೋದ ಜಂತುಗಳ ಮಾಂಸವನ್ನೂ ದನಗಳ ಮಾಂಸವನ್ನೂ ತಿನ್ನಬಾರದೆಂದು ಒತ್ತಿ ಹೇಳಬೇಕು. ಮಾಂಸವನ್ನು ತಿನ್ನದಿರುವುದು ಉತ್ತಮ ಪದ್ಧತಿ, ಆದರೆ ಅದನ್ನು ಬಿಡಲಿಷ್ಟವಿಲ್ಲದವರು ಕನಿಷ್ಠ ಪಕ್ಷ ಸತ್ತುಹೋದ ಜಂತುಗಳ ಮತ್ತು ಎತ್ತು ಹಸುಗಳ ಮಾಂಸವನ್ನು ಸಂಪೂರ್ಣವಾಗಿ ಬಿಡಬೇಕು.

(4) ಹೆಂಡಸಾರಾಯಿಗಳನ್ನು ಕುಡಿಯದ ಹಾಗೆ ಬೋಧಿಸಬೇಕು.

(5) ಸ್ಕೂಲುಗಳಿಗೆ ಹೋಗತಕ್ಕ ಮಕ್ಕಳನ್ನು ಸ್ಕೂಲಿಗೆ ಕಳುಹಿಸುವಂತೆ ಬೋಧಿಸಬೇಕು ಮತ್ತು ರಾತ್ರಿ ಸ್ಕೂಲಿಗೆ ಹೋಗತಕ್ಕವರಿದ್ದರೆ ದೊಡ್ಡವರು ರಾತ್ರಿವೇಳೆ ಸ್ಕೂಲುಗಳಿಗೆ ಹೋಗುವಂತೆ ಹೇಳಬೇಕು.

(6) ಹರಿಜನರಲ್ಲಿ ಹೊಲೆಯ ಮಾದಿಗ ಕಲಾಸಿ ಮೊದಲಾದವರು ಒಬ್ಬರನ್ನೊಬ್ಬರು ನೀಚವಾಗಿ ಕಾಣದೆ ಸಮಾನವಾಗಿರಬೇಕು ಅಂದರೆ ಹರಿಜನರಲ್ಲಿ ಉಚ್ಚನೀಚ ಭೇದವಿರಕೂಡದು.

ನಿತ್ಯವೂ ಸ್ನಾನಮಾಡಬೇಕು

ನಮ್ಮ ದೇಶದಲ್ಲಿ ಪ್ರತಿಯೊಬ್ಬ ಗಂಡುಸು, ಹೆಂಗುಸು ಕೂಸು ಆದಿಯಾಗಿ ಸರ್ವರೂ ಪ್ರತಿ ನಿತ್ಯದಲ್ಲೂ ಒಂದುವೇಳೆಯಾದರೂ ತಪ್ಪದೆ ಸ್ನಾನಮಾಡಬೇಕು. ಯಾವಾಗಲೂ ಮಡೀ ಬಟ್ಟೆಗಳನ್ನೇ ಧರಿಸಬೇಕು. ಹರಿಜನರು ವಾಸಮಾಡುವ ಕಡೆ ಸ್ನಾನಮಾಡಲು ತಕ್ಕ ಅನುಕೂಲವಿರುವುದಿಲ್ಲ. ಇತರ ವರ್ಣದವರುಪಯೋಗಿಸುವ ಕೆರೆ ಭಾವಿಗಳಲ್ಲಿ ಹರಿಜನರು ಸ್ನಾನ ಮಾಡಲು ಇತರರೊಪ್ಪುವುದಿಲ್ಲ. ಹರಿಜನರಲ್ಲಿ ಬಹಳ ಮಂದಿ ಬಡವರಾಗಿರುವುದರಿಂದ ಹೆಚ್ಚು ಬಟ್ಟೆಗಳನ್ನು ಕೊಂಡುಕೊಳ್ಳಲಾರರು.

ಒಂದು ದೊಡ್ಡ ಚೆಂಬಿನಷ್ಟು ಪರಿಶುದ್ಧ ನೀರಿದ್ದರೆ ಮೈಯನ್ನು ಶುಭ್ರವಾಗಿ ತೊಳೆದುಕೊಳ್ಳಬಹುದು. ಒಂದು ಸಣ್ಣ ಬಟ್ಟೆಯನ್ನು ಆ ನೀರಿನಲ್ಲಿ ಅದ್ದಿ ಶರೀರವನ್ನೆಲ್ಲ ಚೆನ್ನಾಗಿ ತಿಕ್ಕಿ ಅನಂತರ ಇನ್ನೊಂದು ಬಟ್ಟೆಯಿಂದ ಒರಸಿಕೊಳ್ಳಬೇಕು. ನಿತ್ಯದಲ್ಲೂ ಈ ಪ್ರಕಾರವಾಗಿ ಸ್ನಾನಮಾಡುವವರಿಗೆ ಬಟ್ಟೆಗಳು ಹೆಚ್ಚಾಗಿಲ್ಲದಿದ್ದರೂ ಒಂದೇ ಬಟ್ಟೆಯನ್ನು ನೀರಿನಲ್ಲದ್ದಿ ಅದರಿಂದ ತಲೆ ಮೈಗಳನ್ನು ತಿಕ್ಕಿ ಅನಂತರ ಅದನ್ನು ಹಿಂಡಿ ಅದರಿಂದಲೇ ಮೈಯನ್ನೊರಸಿಕೊಳ್ಳುವುದು. ನಮ್ಮ ದೇಶದಲ್ಲಿ ಅನೇಕ ಮಂದಿ ಈ ರೀತಿ ತುಂಡುಬಟ್ಟೆಗಳಿಂದ ಮೈಯನ್ನೊರಸಿಕೊಳ್ಳುವರು. ಈ ವಿಚಾರವು ಹೊಸದೇನೂ ಅಲ್ಲದಿದ್ದರೂ ಪ್ರಚಾರಕರ ತಿಳಿವಿಕೆಗಾಗಿ ಇಲ್ಲಿ ಕೊಟ್ಟಿದೆ. ಪಾರಿಶುದ್ಧ್ಯಕ್ಕೆ ಮುಖ್ಯವಾದ ಈ ಸ್ವಲ್ಪ ವಿಷಯವನ್ನು ದೊಡ್ಡ ಪರೀಕ್ಷೆಗಳನ್ನು ಕೊಟ್ಟಿರುವವರು ಸಹ ಗ್ರಹಿಸಿರುವುದಿಲ್ಲ.

ಕಕಸ್ಸನ್ನು ಗುಡಿಸುವುದು

ಹೊಸಪದ್ಧತಿಯ ಮೇಲೆ ಕಕಸ್ಸನ್ನು ಶುದ್ಧಿಗೊಳಿಸಲು ಬುದ್ಧಿಹೀನರೂ ಸ್ವಾರ್ಥಪರರೂ ಆದ ಸವರ್ಣದವರು ಬಹಳ ಅಭ್ಯಂತರ ಪಡಿಸುವರು. ಪಾಯಿಖಾನೆಯನ್ನು ಗುಡಿಸಲು ಬಹಳ ಅಸಹ್ಯವಾಗಿರುವುದು. ಇದಕ್ಕೆ ಅಸ್ಪೃಶ್ಯತೆಯೇ ಕಾರಣ. ಕಕಸ್ಸು ಬಹಳ ಕತ್ತಲೆಯಾಗಿರುವುದು. ಅದರೊಳಕ್ಕೆ ಗಾಳಿಬರುವುದಿಲ್ಲ. ಆದುದರಿಂದ ಅದನ್ನು ಚೆನ್ನಾಗಿಯೂ ಶುಚಿಯಾಗಿಯೂ ಗುಡಿಸಲೆತ್ನವಿಲ್ಲ. ಇಂತಹ ಕಕಸ್ಸಿನೊಳಕ್ಕೆ ಪ್ರತಿದಿನವೂ ಹೋಗಿಬರುವುದು ನರಕಕ್ಕೆ ಹೋಗಿ ಬಂದಂತಾಗುವುದು. ಇದಕ್ಕೆ ಮೂಢನಂಬಿಕೆಯೇ ಕಾರಣವಾಗಿದೆ. ಕಲಾಸಿಯವರು ಸಂಪೂರ್ಣವಾಗಿ ಶುಚಿಮಾಡಲು ಮೂಢನಂಬಿಕೆಯಿರುವವರೊಪ್ಪುವುದಿಲ್ಲ. ನಮ್ಮ ದೇಶವು ಉಷ್ಣದೇಶವಾದುದರಿಂದ ಸ್ವಲ್ಪಮಟ್ಟಿಗೆ ಅದು ಸಹಾಯಕವಾಗಿದೆ. ಹಾಗಿಲ್ಲದಿದ್ದರೆ ನಮ್ಮ ದೇಶದಲ್ಲಿ ಮರಣ ಸಂಖ್ಯೆಯು ಬಹಳವಾಗಿ ಹೆಚ್ಚುತ್ತಿದ್ದಿತು. ಇಂತಹ ಕಕಸ್ಸನ್ನು ಶುಚಿಮಾಡಬೇಕಾಗಿರುವ ಹರಿಜನರು ಕಕಸನ್ನು ಗುಡಿಸಿದ ಕೂಡಲೆ ಪ್ರತಿನಿತ್ಯವೂ ಸ್ನಾನಮಾಡಬೇಕು. ಅವರು ಗುಡಿಸಲು ಈಗ ಸ್ವಲ್ಪ ಮೊಟ್ಟೆ ಕಡ್ಡಿಯನ್ನುಪಯೋಗಿಸುವರು, ಅದು ಸರಿಯಲ್ಲವಾದುದರಿಂದ ಅವರು ಆ ಕಡ್ಡಿಯನ್ನು ಹೆಚ್ಚಾಗುಪಯೋಗಿಸಬೇಕು. ಈ ಕಕಸ್ಸು ಗುಡಿಸುವ ಕೆಲಸದಲ್ಲಿ ನನಗೆ ಚೆನ್ನಾಗಿ ಪ್ರವೀಣತೆಯಿರುವುದರಿಂದ ನಾನು ಖರ್ಚಿಲ್ಲದೆ ಬಹಳ ಸುಲಭ ರೀತಿಯಿಂದ ಮಾಡುವುದನ್ನು ಹೇಳಿಕೊಡಬಲ್ಲೆ. ಅದು ಸುಲಭವಾಗಿರುವುದಲ್ಲದೆ ಬಹಳ ಉತ್ಕೃಷ್ಟವಾಗಿದೆ. ಇದಕ್ಕೆ ಗ್ರಾಮವಾಸಿಗಳೂ ಪಟ್ಟಣವಾಸಿಗಳೂ ಸಹಾಯ ಮಾಡಬೇಕು. ಈ ಕೆಲಸಮಾಡುವವರು ಗ್ರಾಮ ಶುಚೀಕರ್ಣದ ವಿಚಾರವಾಗಿ ಬರೆಯಲ್ಪಟ್ಟಿರುವ ಪುಸ್ತಕಗಳನ್ನು ಓದಿ ತಿಳಿದುಕೊಳ್ಳುವುದುತ್ತಮ. ಕಕಸ್ಸು ಗುಡಿಸುವಾಗ್ಗೆ ಬೇರೆ ಬಟ್ಟೆಯನ್ನು ಧರಿಸಬೇಕಲ್ಲದೆ ಇವನ್ನು ಮನೆ ಯಜಮಾನನಾಗಲಿ ಕೆಲ ಜನರೊಟ್ಟಿಗೆ ಕೂಡಿ ಆಗಲಿ ಒದಗಿಸಿಕೊಡಬೇಕು.

ಚಕ್ಕಳವನ್ನು ಹದಮಾಡುವುದು

ನಮ್ಮ ದೇಶದಲ್ಲಿ ಚಕ್ಕಳವನ್ನು ಹದಮಾಡುವವರಿಗೆ ಆ ಕೆಲಸವನ್ನು ಚೊಕ್ಕಟವಾಗಿ ಮಾಡುವ ರೀತಿ ತಿಳಿಯದು. ಸತ್ತ ಪ್ರಾಣಿಗಳ ಚರ್ಮವನ್ನು ಚೊಕ್ಕಟಮಾಡಿ ಹದಕೊಡುವುದು ನವೀನ ಮಾರ್ಗದಲ್ಲಿ ಪರದೇಶಗಳೊಳಗೆ ಮಾಡಲ್ಪಡುತ್ತಿದೆ. ನಮ್ಮ ದೇಶದಲ್ಲಿ ಸತ್ತಪ್ರಾಣಿಗಳ ಚರ್ಮವನ್ನು ಸುಲಿದು ತೊಳೆದು ಶುಭ್ರವಾಗಿ ಮಾಡುವವರ ವೃತ್ತಿಯು ಬಹಳ ಮುಖ್ಯವಾಗಿರುವುದಾದರೂ ಸವರ್ಣದವರು ಈ ಕೆಲಸವನ್ನು ಮಾಡುವವರನ್ನು ಬಹಳ ನೀಚವಾಗಿ ಕಂಡು ದೂರಮಾಡಿರುತ್ತಾರೆ. ಈ ಕಾರಣದಿಂದ ಈ ವೃತಿಯವರಿಗೆ ಹೊಸ ಪದ್ಧತಿಯು ತಿಳಿಯಲವಕಾಶವಿಲ್ಲವಾಗಿದೆ ಮತ್ತು ಅವರು ಹದಮಾಡುವ ಚರ್ಮವು ಉತ್ಕೃಷ್ಟವಾಗಿರದೆ ಕಿರಿದಾಗಿರುವುದರಿಂದ ಕೋಟ್ಯಂತರ ರೂಪಾಯಿಗಳು ನಮ್ಮ ದೇಶಕ್ಕೆ ನಷ್ಟವಾಗುತ್ತಿದೆ. ಗತಿಸಿದ ಮಧುಸೂದನದಾಸರವರು ಈ ಕೆಲಸದಲ್ಲಿ ಬಹಳ ಪ್ರವೀಣರಾಗಿದ್ದರು. ಸವರ್ಣದವರು ದುರಭಿಮಾನದಿಂದಲೂ ಮೂಢನಂಬಿಕೆಯಿಂದಲೂ ಈ ಮುಖ್ಯತಮವಾದ ವ್ಯಾಪಾರವನ್ನೂ ಇದರ ವ್ಯಾಪಾರಗಾರರನ್ನೂ ಖಂಡಿಸುತ್ತಿರುವುದರಿಂದ ಪ್ರತಿ ವರ್ಷದಲ್ಲೂ ಕೋಟ್ಯಂತರ ರೂಪಾಯಿಗಳ ನಷ್ಟವಾಗುತ್ತಿರುವುದೆಂದು ಲೆಕ್ಕಮಾಡಿ ಪ್ರಕಟಿಸಿರುತ್ತಾರೆ. ಈ ಕೆಲಸವನ್ನು ಹೊಸ ರೀತಿಯಲ್ಲಿ ಮಾಡುವುದನ್ನು ಸಾಧ್ಯವಾದ ಮಟ್ಟಿಗೆ ಹರಿಜನರಿಗೆ ಬೋಧಿಸಬೇಕು.

ಸವರ್ಣದವರು ಹರಿಜನರಿಗೆ ಎಂಜಲನ್ನು ಹಾಕುವುದು

ಸವರ್ಣದವರಲ್ಲಿ ಬಹಳ ಮಂದಿ ತಾವು ತಿಂದು ಮಿಕ್ಕ ಎಂಜಲು ಪದಾರ್ಥಗಳನ್ನು ದೂರವಾಗಿ ನಿಂತು ಬೀದಿಯಲ್ಲಿ ತಿರಿಕೆಯವರ ಮುಂದೆ ಬಿಸಾಡುವರು. ಇದು ಬಹಳ ನೀಚವೂ ಕ್ರೂರವೂ ಆದ ನಡವಳಿಕೆ. ಅವರು ತಿಂದು ಮಿಕ್ಕ ಎಂಜಲನ್ನು ಬಿಸಾಡುವುದರಿಂದ ಅದನ್ನು ಹರಿಜನರು ಎಷ್ಟು ಮಾತ್ರಕ್ಕೂ ತಿನ್ನಬಾರದು. ನಮ್ಮ ದೇಶದಲ್ಲಿ ಅನೇಕ ಶತಮಾನಗಳಿಂದ ದಾರಿದ್ರ್ಯವು ಹೆಚ್ಚಾಗಿರುವ ಪ್ರಯುಕ್ತ ಸವರ್ಣದವರು ಬೀದಿಯಲ್ಲಿ ಬಿಸಾಡುವ ಎಂಜಲು ಪದಾರ್ಥಗಳನ್ನು ತಿರುಪೆಯವರು ಅಸಹ್ಯವಿಲ್ಲದೆ ತಿನ್ನುತ್ತಿರುವರು. ಐಶ್ವರ್ಯವಂತರೂ ಮಧ್ಯ ತರಗತಿಯವರೂ ರುಚಿಕರವಾದ ಪದಾರ್ಥಗಳನ್ನು ತಿಂದು ಮಿಕ್ಕುದನ್ನು ಬಿಸಾಡುವುದರಿಂದ ಬಡವರು ನಾಲಿಗೆಯ ರುಚಿಗಾಗಿ ಅದನ್ನು ತಿನ್ನುವರು. ಕಲಾಸಿಯವರ ಮಕ್ಕಳು ಒಂದು ಮಠದಲ್ಲೋದುತ್ತಿದ್ದರು. ಎಂಜಲನ್ನು ತಿನ್ನಬಾರದು, ಮನೆಯಲ್ಲಿ ದೊರೆಯುವ ರೊಟ್ಟಿಯನ್ನು ತಿನ್ನಬೇಕೆಂದು ಉಪಾಧ್ಯಾಯರು ಬೋಧಿಸಿದುದರ ಮೇಲೆ ಆ ಮಕ್ಕಳು ಎಂಜಲು

ತಿನ್ನುವುದನ್ನು ಬಿಟ್ಟರು. ಅದರಮೇಲೆ ಆ ಮಕ್ಕಳ ತಂದೆ ತಾಯಿಗಳಾದ ಕಲಾಸಿಯವರು ಮಕ್ಕಳನ್ನು ಶಾಲೆಗೆ ಕಳುಹಿಸುವುದನ್ನು ಬಿಟ್ಟರು.

ಆಹಾರನಿಯಮ

ಚರ್ಮವನ್ನು ಹದಮಾಡತಕ್ಕವರು ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನಕೂಡದು. ನಾನು ಶಾಕಾಹಾರಿಯಾದುದರಿಂದ ಯಾವ ಮಾಂಸವನ್ನೂ ತಿನ್ನಕೂಡದೆಂಬುದು ನನ್ನ ಅಭಿಪ್ರಾಯವು. ಅನೇಕರು ವರ್ಜಿಸಿರುತ್ತಾರೆ. ಹಾಗೆ ಮಾಡಲಿಷ್ಟವುಳ್ಳವರು ಸತ್ತ ಜಂತುಗಳ ಮಾಂಸವನ್ನು ಹಸು ಎತ್ತುಗಳ ಮಾಂಸವನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕು. ಹಿಂದುಗಳಲ್ಲಿ ಅನೇಕ ವರ್ಣದವರು ಇವುಗಳನ್ನು ಸಂಪೂರ್ಣವಾಗಿ ವರ್ಜಿಸಿರುತ್ತಾರೆ. ಸತ್ತ ಜಂತುಗಳ ಮಾಂಸಾಹಾರವು ಬಹಳ ಅನಾರೋಗ್ಯಕರವು. ಸತ್ತುಹೋದ ಜಂತುಗಳನ್ನು ಸಾಗಿಸಲು ಗ್ರಾಮಸ್ಥರು ಹರಿಜನರಿಗೆ ಬೇರೆ ಕೂಲಿಕೊಡುವುದಿಲ್ಲ. ಆ ಜಂತುವಿನ ಮಾಂಸವನ್ನು ತಿನ್ನಬೇಕೆನ್ನುವರು. ಅವರು ಹಾಗೆ ತಿನ್ನದೆ ಹೋದಲ್ಲಿ ಪ್ರತ್ಯೇಕವಾಗಿ ಕೂಲಿಕೊಡಬೇಕಾಗುತ್ತದೆಂಬ ಶಂಕೆಯಿಂದ ಅವರು ಹಾಗೆ ನಿರ್ಬಂಧಪಡಿಸುವರಲ್ಲದೆ ತಿನ್ನಬಹುದೆಂದು ಸಹ ಹೇಳುವರು ಎಂದು ನನ್ನ ಕೂಡ ಡಾ|| ಅಂಬೇಡ್ಕರವರು ಹೇಳಿದರು. ಯಾವುದು ಹೇಗಿದ್ದರೂ ಹರಿಜನರು ಇದನ್ನು ಖಂಡಿತವಾಗಿ ಬಿಡಬೇಕು. ಹಾಗೆ ಮಾಡಿದರೆ ಹರಿಜನರ ವಿಚಾರವಾಗಿ ಗೌರವಬುದ್ಧಿ ಹುಟ್ಟುವುದು. ಆಗ ಅಸ್ಪೃಶ್ಯತಾ ನಿವಾರಣೆಯ ಕಾರ್ಯವು ಬಹಳ ಸುಲಲಿತವಾಗಿ ನಡೆಯುವುದು.

ನಿರ್ಮಾಣ ವಿಧಾನ

ಹರಿಜನರು ತಮ್ಮೊಳಗಿರುವ ಭೇದವನ್ನು ಮೊದಲು ಬಿಡಬೇಕು. ಮಾದಿಗರು ಕಡಿಮೆಯೆಂದ ಹೊಲೆಯರೂ, ಹೊಲೆಯರು ತಮಗಿಂತಲೂ ಕನಿಷ್ಠರೆಂದು ಮಾದಿಗರೂ ತಿಳಿಯಕೂಡದು. ಹರಿಜನರಲ್ಲಿ ಯಾವ ಕುಲಭೇದವೂ ಇರಬಾರದು. ಸವರ್ಣ ಹಿಂದುಗಳು ಹರಿಜನರಿಗೆ ಸಮಾನ ಗೌರವವನ್ನು ತೋರಿಸಬೇಕೆಂಬುದಕ್ಕೆ ಮೊದಲು ಹರಿಜನರಲ್ಲಿರುವ ಕುಲಭೇದವು ತೊಲಗಬೇಕು. ಇದು ಹರಿಜನರ ನಾಯಕರು ಮುಖ್ಯವಾಗಿ ಮಾಡಬೇಕಾದ ಬಹಳ ಕಷ್ಟಕಾರ್ಯವಾಗಿರುವ ಪ್ರಯುಕ್ತ ಇದು ಭಗವನ್ನಿಯಾಮಕಕಾರ್ಯವೆಂದು ನಂಬಿ ಮಾಡಿದರೆ ಅವರಿಗೆ ತಕ್ಕ ಧೈರ್ಯವೂ ವಿಶ್ವಾಸವೂ ಲಭಿಸುವವು. ಇಂತಹ ವಿಚಾರದಲ್ಲಿ ಕೆಲಸಮಾಡುವವರು ಸ್ವಾರ್ಥರಹಿತರಾಗಿಯೂ ಪರಿಶುದ್ಧ ವರ್ತನೆಯುಳ್ಳವರಾಗಿಯೂ ಇರುವುದು ಬಹಳ ಮುಖ್ಯವು. ಹರಿಜನ ಸಂಘೋದ್ಧರಣದಲ್ಲಿ ನಿರತರಾದ ಹರಿಜನ ನಾಯಕರಿಗೆ ಸಹಾಯವಾಗಿರಲು ನಾನು ಈ ನಿರ್ಮಾಣ ವಿಧಾನವನ್ನು ಸೂಚಿಸಿರುತ್ತೇನೆ ಇದರಿಂದ ಎಲ್ಲರಿಗೂ ತೃಪ್ತಿಯಾಗುವುದೆಂದು ನಂಬುತ್ತೇನೆ. ಈ ಕಾರ್ಯದಲ್ಲಿ ಅವರು ತಮ್ಮ ಕಾಲವನ್ನೂ, ಶಕ್ತಿಯನ್ನೂ ಸಂಪೂರ್ಣವಾಗಿ ವಿನಿಯೋಗಿಸಲಿಕ್ಕೆ ವಿಶೇಷ ಅವಕಾಶವಿರುವುದು.

ಹರಿಜನರು ನಿರಶನದೀಕ್ಷೆಯನ್ನೂ ಸತ್ಯಾಗ್ರಹವನ್ನೂ ಅವಲಂಬಿಸಲಾಗದು

ಸದ್ಯದಲ್ಲಿ ಹರಿಜನ ನಾಯಕರಾರೂ ನಿರಶನದೀಕ್ಷೆಯನ್ನು ಹಿಡಿಯಕೂಡದು. ಸತ್ಯಾಗ್ರಹವನ್ನು ಕೂಡ ಅವಲಂಬಿಸಕೂಡದು. ಇದು ಸವರ್ಣ ಹಿಂದುಗಳಿಗೆ ಪರೀಕ್ಷೆ ಕಾಲವಾದುದರಿಂದ ಅಸ್ಪೃಶ್ಯತಾ ನಿರ್ಮೂಲನಕ್ಕೆ ಸವರ್ಣದವರು ಮಾಡುವ ಕೆಲಸಗಳನ್ನು ಹರಿಜನರು ಬಹಳ ಶಾಂತಿಯಿಂದ ಗಮನಿಸುತ್ತಿರಬೇಕು. ಹರಿಜನರು ಸವರ್ಣದವರೊಡನೆ ಕಲಹ ಮಾಡಕೂಡದು. ಅವರು ಯಾವಾಗಲೂ ಸ್ವಗೌರವವನ್ನೂ ವಿನಯವನ್ನೂ ಉಳ್ಳವರಾಗಿರಬೇಕು. ಈಗಿವು ಬಹಳ ಆವಶ್ಯಕವು. ಮತವನ್ನು ಳಿಸಿಕೊಳ್ಳುವುದಕ್ಕಾಗಿ ನಮ್ಮನ್ನು ಬಾಧಿಸುವವರಿಗೆ ನಾವು ದೌರ್ಜನ್ಯವನ್ನು ತೋರಿಸಬಾರದು. ನಾವು ಕಷ್ಟಕ್ಕೆ ಗುರಿಯಾಗಿಯೇ ಕಾರ್ಯಸಿದ್ಧಿಯನ್ನು ಹೊಂದಬೇಕು. ಬಲವಂತದಿಂದ ಹರಿಜನರು ಬಹಳ ಸೌಕರ್ಯವನ್ನು ಹೊಂದಿದರೂ, ಸವರ್ಣದವರಿಗೆ ಸದಭಿಪ್ರಾಯವನ್ನು ಹುಟ್ಟಿಸುವುದರಿಂದ ಅಂತಹ ಸೌಕರ್ಯವನ್ನು ಹೊಂದುವುದು ಬಹಳ ಗೌರವಪ್ರದವು. ಈಗ ಸವರ್ಣದವರೊಳಗೆ ಹರಿಜನರ ಸ್ಥಿತಿಯನ್ನುತ್ತಮಗೊಳಿಸುವ ಅಭಿಪ್ರಾಯವುಳ್ಳವರು ಲಕ್ಷಾವಧಿಯಿರುತ್ತಾರೆ. ಈವರೆಗೆ ಸವರ್ಣದವರಿಂದ ಹರಿಜನರಿಗಾದ ಅನ್ಯಾಯವನ್ನು ಇವರೆಲ್ಲರೂ ಚೆನ್ನಾಗಿ ಗ್ರಹಿಸಿಕೊಂಡಿರುವವರಾದುದರಿಂದ ಈ ಅನ್ಯಾಯಗಳನ್ನು ನಿವಾರಿಸಲು ಇವರು ತಮ್ಮ ಶಕ್ತಿಯನ್ನೆಲ್ಲ ಉಪಯೋಗಿಸುತ್ತಿದ್ದಾರೆ. "ತಮ್ಮ ಪಕ್ಷವು ನ್ಯಾಯವಾದ ಕಷ್ಟಗಳನ್ನು ಅನುಭವಿಸುವುದರಿಂದಲೇ ತಮಗೆ ಜಯವಾಗುವುದು" ಎಂಬ ದೃಢ ನಂಬಿಕೆಯನ್ನು ಹರಿಜನರು ಮುಖ್ಯವಾಗಿ ಉಳ್ಳವರಾಗಿರಬೇಕು. ಈ ವಿಷಯದಲ್ಲಿ ನಮ್ಮ ಕರ್ತವ್ಯವೇನೆಂದು ಸವರ್ಣದವರಲ್ಲಿ ಕೆಲರು ನನಗೆ ಬರೆದು ಕೇಳಿರುವರು" ಎಂದು ಮಹಾತ್ಮರು ಎರವಾಡ ಕಾರಾಗೃಹದಿಂದ ಬರೆದಿರುತ್ತಾರೆ.

ಅಖಿಲ ಭಾರತ ಶ್ರೀಮದ್ವೀರಶೈವ ಮಹಾಸಭೆ

ಇದರ ನಿಯಮಗಳು

(ಲೇ.—ಡಿ. ಎಚ್. ಚಂದ್ರಶೇಖರಯ್ಯ, ಅಡ್ವೋಕೇಟ್ ಮತ್ತು ನ್ಯಾಯ ವಿಧಾಯಕ ಸಭೆಯ ಮೆಂಬರು, ದಾವಣಗೆರೆ.)

ಈ ಮೇಲಿನ ಶಿರೋನಾಮೆಯಲ್ಲಿ ಧಾರವಾಡದ 11 ನೇ ಅ. ಭಾ. ವೀರಶೈವ ಮಹಾಸಭೆಯ ಸ್ವಾಗತ ಸಂಘಾಧ್ಯಕ್ಷರು ಒಂದು ಪ್ರಕಟಣೆಯನ್ನು ಹೊರಗೆಡವಿ ಈ ವಿಚಾರದಲ್ಲಿ ಮಹಾಜನರ ಸೂಚನೆಗಳನ್ನು ಕೇಳಿರುತ್ತಾರೆ. ಮಹಾಸಭೆಯ ಕಾರ್ಯಕ್ರಮಗಳನ್ನು ವಿಧಿನಿಯಮಗಳಿಗೊಳಪಡಿಸುವ ಸದುದ್ದೇಶದಿಂದ ಸ್ವಾಗತ ಸಂಘದವರು ಪಟ್ಟಿರುವ ಶ್ರಮಕ್ಕಾಗಿ ತುಂಬಾ ವಂದನಾರ್ಹರಾಗಿರುತ್ತಾರೆ. ಆದರೆ ಈ ನಿಯಮಗಳು ಮಹಾಸಭೆಯ ಅಂಗೀಕಾರವನ್ನು ಪಡೆದು ದೃಢಮೂಲವಾಗಬೇಕಾಗಿರುವುದರಿಂದ ಮಹಾಸಭೆಯು ವಿಷಯ ಚರ್ಚೆಗೆ ಸೇರುವುದಕ್ಕಿಂತ ಮುಂಚಿತವಾಗಿ ಈ ನಿಯಮಗಳನ್ನೆಲ್ಲಾ ಕೂಲಂಕಷವಾಗಿ ಪರ್ಯಾಲೋಚಿಸಿ ಸರ್ವಸಮ್ಮತವಾದ ತೀರ್ಮಾನಕ್ಕೆ ಬರುವುದು ಯುಕ್ತವೆಂದು ತೋರುತ್ತದೆ. ಈ ಕಾರ್ಯವನ್ನು ಮಹಾಸಭೆಯ ವಿಷಯ ನಿಯಾಮಕ ಕಮಿಟಿಗಾಗಲಿ ಅಥವಾ ಮಹಾಸಭೆಯಿಂದ ಆರಿಸಲ್ಪಟ್ಟ ನಾನಾ ಪ್ರಾಂತ್ಯಗಳ ಪ್ರತಿನಿಧಿಗಳಿಂದ ಕೂಡಿದ ಒಂದು ಪ್ರತ್ಯೇಕ ಕಮಿಟಿಗಾಗಲಿ ವಹಿಸುವುದು ಉತ್ತಮವಾದ ಏರ್ಪಾಡಾಗಿರುತ್ತೆ.

ಈಗ ಪ್ರಕಟಿಸಿರುವ ನಿಯಮಗಳ ವಿಷಯದಲ್ಲಿ ಎಲ್ಲಾ ಸೂಚನೆಗಳನ್ನು ಕೊಡಲು ಸಾಧ್ಯವಾಗಲಾರದಾದರೂ ಮುಖ್ಯಾಂಶಗಳ ಬಗ್ಗೆ ಸ್ವಾಗತ ಸಂಘದವರ ಮತ್ತು ಇತರ ಮಹಾಜನರ ಗಮನವನ್ನು ಆಕರ್ಷಿಸಬೇಕಾದುದು ಅಗತ್ಯವೆಂದು ಭಾವಿಸುತ್ತೇನೆ. (1) ಮಹಾಸಭೆಯ ಉದ್ದೇಶ ವಿವರಣೆಯು ಸ್ಪಷ್ಟವಾಗಿಯೂ ಮತ್ತು ನಿರ್ಧರವಾಗಿಯೂ ಇಲ್ಲ. ಇದರಿಂದ ಸಂದೇಹಕ್ಕೂ ಮತ್ತು ವಿಪರೀತಾರ್ಥಕ್ಕೂ ಅವಕಾಶವಾಗುವಂತಿದೆ. ವೀರಶೈವ ಜನಾಂಗಕ್ಕೆಲ್ಲಾ ಅನ್ವಯಿಸುವ ಧ್ಯೇಯಗಳೇನೆಂಬುದನ್ನು ನಿರ್ಧರಿಸಿಕೊಂಡು ಅವುಗಳನ್ನು ಮಹಾಸಭೆಯ ಉದ್ದೇಶದಲ್ಲಿ ಸೇರ್ಪಡೆ ಮಾಡುವುದು ಉತ್ತಮವಾಗಿ ಕಾಣುತ್ತೆ. (2) ಸಾಮಾನ್ಯ ಸದಸ್ಯರ ವಾರ್ಷಿಕ ವರ್ಗಣಿಯು 4 ಆಣೆಗಿಂತ ಹೆಚ್ಚಾಗಿರಕೂಡದು. ಈ ಭಾಗದಲ್ಲಿ ಅಖಿಲಭಾರತ ರಾಷ್ಟ್ರಸಭೆಯ ಉದಾಹರಣೆಯನ್ನು ಗುರಿಯಾಗಿಟ್ಟುಕೊಳ್ಳುವದು ಫಲದಾಯಕವಾಗಿರುತ್ತೆ. (3) ಮಹಾಸಭೆಯ ಮಧ್ಯವರ್ತಿ ಕಾರ್ಯಕಾರಿ ಮಂಡಲಕ್ಕೆ ಧಾರವಾಡವು ಮುಖ್ಯಸ್ಥಳವಾಗಿರಬೇಕೆಂದು ಸೂಚಿಸಿರುವ ಅಭಿಪ್ರಾಯವು ಒಪ್ಪತಕ್ಕದ್ದಾಗಿರುವದಿಲ್ಲ. ಅಲ್ಲದೆ ಈ ಮಂಡಲಕ್ಕೆ ಸ್ವಾಗತ ಸಂಘಾಧ್ಯಕ್ಷರು ಉಪಾಧ್ಯಕ್ಷರಾಗಿರಬೇಕೆಂಬ ಸಲಹೆಯ ಆವಶ್ಯಕತೆಯು ಮನಸ್ಸಿಗೆ ಹಿಡಿಯುವದಾಗಿಲ್ಲ. ರಾಷ್ಟ್ರ ಮಹಾಸಭೆಯು ಅನುಸರಿಸುತ್ತಿರುವ ಪ್ರಕಾರ ಸಭಾಧ್ಯಕ್ಷರು ಇರುವ ಕಡೆ ಈ ಮಂಡಳಿಯು ಮುಖ್ಯಸ್ಥಳವಿದ್ದು ಮಿಕ್ಕವರೆಲ್ಲರೂ ಅವರಿಗೆ ಸಹಾಯಕರಾಗಿರಬೇಕಾದುದು ಸೂಕ್ತವಾಗಿರುತ್ತೆ.

ಮಹಾಸಭೆಯ ಧನನಿಧಿಗಳ ಬಗ್ಗೆ ಸೂಚಿಸಿರುವ ನಿಯಮಗಳು ತುಂಬಾ ಮಹತ್ವದವುಗಳಾಗಿರುತ್ತವೆ. ಮಹಾಸಭೆಯ ಧನನಿಧಿಗಳಲ್ಲೊಂದಾದ ಚಿರಸ್ಥಾಯಿ ಫಂಡಿನಲ್ಲಿ ಆಶ್ರಯದಾತರಿಂದ ಬಂದ ಹಣವು ಮಾತ್ರ ಸೇರ್ಪಡೆಯಾದರೆ ಸಾಕಾಗಿರುತ್ತೆ. ಕಾರಣವೇನೆಂದರೆ:—ಈ ಫಂಡು ಈ ಗಾಗಲೇ ತಕ್ಕಷ್ಟು ಮಟ್ಟಿಗೆ ಬೆಳೆದಿರುವದರಿಂದ ಸಣ್ಣಪುಟ್ಟ ದ್ರವ್ಯಗಳ ಆವಶ್ಯಕತೆಯೇನೂ ಇಲ್ಲ. ಅಲ್ಲದೆ ಮಹಾಸಭೆಯ ನಿರ್ಣಯಗಳನ್ನು ತೀವ್ರವಾಗಿ ಜಾರಿಗೆ ತರಲು ಬಳಿಕೆ ಫಂಡಿನ ಅವಶ್ಯಕತೆಯು ಹೇರಳವಾಗಿರುತ್ತೆ. ಆದ್ದರಿಂದ ಸನ್ಮಾನ್ಯ ಆಜೀವ ಸದಸ್ಯರಿಂದ ಬಂದ ಹಣವನ್ನು ಬಳಿಕೆ ಫಂಡಿನಲ್ಲಿಯೇ ಸೇರಿಸುವುದು ಹೆಚ್ಚು ಪ್ರಯೋಜನಕಾರಿಯಾಗುವದರಲ್ಲಿ ಸಂದೇಹವಿಲ್ಲ. ಇದಲ್ಲದೆ ಚಿರಸ್ಥಾಯಿ ಫಂಡಿನ ಆಡಳಿತವನ್ನು ಮಧ್ಯವರ್ತಿ ಮಂಡಲಕ್ಕೆ ವಹಿಸಬೇಕೆಂಬ ಸಲಹೆಯು ಕೂಡ ಸರ್ವ ಸಮರ್ಪಕವಾಗಿಲ್ಲವೆಂದೆಣಿಸುತ್ತೇನೆ. ಈ ಫಂಡಿನ ಆಡಳಿತಕ್ಕಾಗಿ ಮೊದಲಿನಿಂದಲೂ ಒಂದು ಜವಾಬ್ದಾರಿ ಸಂಸ್ಥೆಯು ಸ್ಥಾಪಿತವಾಗಿರುವಂಶವು ಸರ್ವವಿದಿತವಾಗಿರುವುದಷ್ಟೆ ಈ ಸಂಸ್ಥೆಯ ರಚನೆಯಲ್ಲಿ ಕೆಲವು ಕುಂದುಕೊರತೆಗಳಿರಬಹುದು. ಮಹಾಸಭೆಯು ಕ್ರಮವಾಗಿ ನಡೆಯಲು ಈ ಸಂಸ್ಥೆಯು ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳದೆ ಕರ್ತವ್ಯಶೂನ್ಯತೆಯನ್ನು ತೋರಿಸಿರಬಹುದು. ಆದರೆ ಹಣವನ್ನು ಮಾತ್ರ ತುಂಬಾ ವ್ಯವಸ್ಥೆಯಿಂದ ಕಾದುಕೊಂಡು ಬಂದಿರುವದಲ್ಲದೆ ಮಹಾಸಭೆಯನ್ನು ನೆರೆಯಿಸಲು ಮುಂದಾಳಾಗಿ ಬಂದವರಿಗೆ ನಿರ್ವಂಚನೆಯಿಂದ ಧನಸಹಾಯವನ್ನು ಮಾಡಿರುತ್ತದೆ. ಹೀಗಿರುತ್ತಾ ಈ ಸಂಸ್ಥೆಯನ್ನು ಸಂಪೂರ್ಣವಾಗಿ ಅಲಕ್ಷಿಸಿರುವುದರ ಕಾರಣವೇನೋ ತಿಳಿಯದು. ಮುಂದಾದರೂ ಚಿರಸ್ಥಾಯಿ ಫಂಡಿನ ವ್ಯವಸ್ಥೆಯು ಪ್ರತ್ಯೇಕವಾದ ಸಂಸ್ಥೆಯ ಅಧಿಕಾರಕ್ಕೊಳಪಟ್ಟಿರುವದೇ ಸೂಕ್ತವಾದ ಏರ್ಪಾಡಾಗಿರುತ್ತದೆ. ಕಾರಣವೇನೆಂದರೆ:—ಈ ಫಂಡು ಯಾವ ಕಾರಣದಿಂದಲೂ ಮಹಾಸಭೆಯ ಗೊಂದಲಗಳಿಗೆ ಸಿಗದಂತಿರಲವಕಾಶವಾಗುತ್ತೆ, ಅಲ್ಲದೆ ಮಹಾಸಭೆಯು ಕಾರಣಾಂತರಗಳಿಂದ ನಿಲ್ಲುವ ಸಂಭವದಲ್ಲಿ ತಕ್ಕ ಕಾರ್ಯಭಾಗವನ್ನು ವಹಿಸಿಕೊಳ್ಳಲು ಒಂದು ಆವಶ್ಯಕವಾದ ರಕ್ಷಣಮಾರ್ಗವೆಂದೆನಿಸಿಕೊಳ್ಳುವ ಏರ್ಪಾಡಾಗಿರುತ್ತೆ. ಈ ಫಂಡಿನ ದಾತೃಗಳೇ ಈ ಸಂಸ್ಥೆಯಲ್ಲಿ ಸೇರಿರುವದರಿಂದ ಹಣದ ಭದ್ರತೆಗೆ ಲೋಪವೇ ಇರುವದಿಲ್ಲ. ಅಲ್ಲದೆ ಈ ಸಂಸ್ಥೆಯು ಮಹಾಸಭಾಚಾಲನೆಗೆ ಅವಶ್ಯ ಬೀಳುವ ಮೊಬಲಗನ್ನು ಮಂಜೂರ್ಮಾಡುವ ಒಂದೇ ಒಂದು ಕರ್ತವ್ಯವನ್ನು ಸಾಮಾನ್ಯವಾಗಿ ನಿರ್ವಹಿಸಬೇಕಾಗಿರುವದರಿಂದ ಇದರ ಆಡಳಿತಕ್ಕೆ ಪ್ರವೀಣರ ಅಗತ್ಯವು ಕೂಡ ಇರುವದಿಲ್ಲ. ಈ ಎಲ್ಲಾ ಕಾರಣಗಳಿಂದ ಚಿರಸ್ಥಾಯಿ ಫಂಡಿನ ಸಂಸ್ಥೆಯು ಪ್ರತ್ಯೇಕವಾಗಿರುವುದೇ ಅತ್ಯುತ್ತಮವಾದ ಏರ್ಪಾಡೆಂಬುದು ಹೊಳೆಯದಿರಲಾರದು.

ಮಹಾಸಭೆಯ ಅಧ್ಯಕ್ಷರನ್ನು ಚುನಾಯಿಸುವ ಬಗ್ಗೆ ಸೂಚಿಸಿರುವ ಪದ್ಧತಿಯು ಸರಿದೋರುವದಿಲ್ಲ. ನಾನಾಪ್ರಾಂತ್ಯಗಳಿಂದ ಬರತಕ್ಕ ಸೂಚನೆಗಳ ಆಧಾರದಮೇಲೆ ಬಹುಮತದಿಂದ ಅಧ್ಯಕ್ಷರನ್ನು ಆರಿಸಿಕೊಳ್ಳುವ ಏರ್ಪಾಡನ್ನು ಮಾಡಿದರೆ ಯೋಗ್ಯವೆನಿಸುತ್ತದೆ.

ಮೇಲ್ಕಂಡ ಕೆಲವು ಸೂಚನೆಗಳನ್ನು ಮಹಾಜನರ ಅವಗಾಹನೆಗೆ ತಂದಿರುತ್ತೇನೆ. ಈ ಲೇಖನದ ಆರಂಭದಲ್ಲಿಯೇ ತಿಳಿಸಿರುವ ಪ್ರಕಾರ ಒಂದು ಚಿಕ್ಕ ಕಮಿಟಿಯಲ್ಲಿ ಎಲ್ಲಾ ವಿಷಯಗಳನ್ನು ಕುರಿತು ಚರ್ಚಿಸಿ ಒಂದು ಸಮಾಧಾನಕರವಾದ ತೀರ್ಮಾನಕ್ಕೆ ಬಂದು ಮಹಾಸಭೆಯ ಅಪ್ಪೈರು ಮಂಜೂರಾತಿಯನ್ನು ಪಡೆಯುವುದು ಸರ್ವಮಾನ್ಯವಾಗಿರುತ್ತೆಂದು ಒತ್ತಿಹೇಳಿ ಈ ಲೇಖನವನ್ನು ಪೂರೈಸುತ್ತೇನೆ.

ಪತ್ರವ್ಯವಹಾರ.

ಪತ್ರವ್ಯವಹಾರಕರ ಲೇಖಕರಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು.—ಸಂಪಾದಕ.

ಶಿವಕೀರ್ತನ ಸಮ್ಮೇಳನವು ಮತ್ತು ವೀರಶೈವ ಮಹಾಸಭೆಯು.

ಮಹನೀಯರೇ, ನಮ್ಮ ಭರತಖಂಡವು ಯುಗಯುಗಾಂತರಗಳಿಂದಲೂ ಮಹಾಪುರುಷರ ಲೀಲಾಕ್ಷೇತ್ರವಾಗಿರುವುದು. ಪುಣ್ಯ ಭೂಮಿಯಾದ ಈ ದೇಶದಲ್ಲಿ ಮಹಾತ್ಮರನೇಕ ಮಂದಿ ಅವತರಿಸಿ ಭಗವನ್ನಾಮ ಸಂಕೀರ್ತನ ವೈಭವವನ್ನು ಸೂರೆಗೊಂಡಿರುತ್ತಾರೆ. ತಾವನುಭವಿಸಿದ ಕೀರ್ತನಾನಂದವನ್ನು ಮಾನವಸಮೂಹದ ಉಜ್ಜೀವನಾರ್ಥವಾಗಿ ಅನೇಕ ಕೀರ್ತನೆಗಳನ್ನು ಸ್ವರ ಸಾಹಿತ್ಯಸಂಪನ್ನವಾದ ವೃತ್ತ ಗೀತಾದಿ ರೂಪವಾಗಿ ಸಂಸ್ಕೃತ, ಹಿಂದಿ, ಬಂಗಾಳಿ, ಮರಾಠಿ, ಗುಜರಾತಿ, ಕರ್ನಾಟಕ, ಆಂಧ್ರ, ದ್ರಾವಿಡಾದಿ ಅನೇಕ ಭಾಷೆಗಳಲ್ಲಿ ವಿರಚಿಸಿ ಮಾನವಕೋಟಿಗೆ ಜ್ಞಾನದಾನವನ್ನು ಮಾಡಿರುತ್ತಾರೆ. ಜ್ಞಾನಸಂಪನ್ನರಾದ ಇಂತಹ ಮಹಾತ್ಮರು ಕನ್ನಡ ದೇಶದಲ್ಲಿಯೂ ಅವತರಿಸಿ ಸಂಗೀತ ಸಾಹಿತ್ಯ ವಿದ್ಯಾಸಂಪನ್ನರಾಗಿ ಭಕ್ತಿ, ಜ್ಞಾನ, ವೈರಾಗ್ಯಗಳೆಂಬ ತಮ್ಮ ಸ್ವಾನುಭವವನ್ನು ಕೀರ್ತನ ರೂಪವಾಗಿ ಪ್ರಕಾಶಗೊಳಿಸಿರುತ್ತಾರೆ. ಅಂದಮೇಲೆ ಮಹಾಸಭೆಯ ಕಾರ್ಯಕಲಾಪಗಳು ಜಗತ್ತಿನ ಮುಂದೆ ಪ್ರಕಾಶಿಸುವಂತೆ ಮಾಡಬೇಕಾಗಿದ್ದರೆ ಮಹಾಜನಗಳ ಅಭಿಪ್ರಾಯದಂತೆ ಸುಶಿಕ್ಷಿತರೂ ಆಚಾರವಂತರೂ ದೈವಭಕ್ತರೂ ಆದ ಕೀರ್ತನಕಾರರೂ ಬೇಕು. ಇಂತಹ ಕೀರ್ತನಕಾರರಿಂದ ಜನರ ಮನಸ್ಸಿನಮೇಲೆ ಯಾವ ಪರಿಣಾಮವಾಗಬೇಕೆಂಬ ಆವಶ್ಯಕತೆಯನ್ನು ಮುಂದುವರಿಸುವಂತೆ ಮಾಡುವುದಾದರೆ ಕೀರ್ತನಕಾರರನ್ನೆಲ್ಲಾ ಒಂದು ಕಡೆ ಒಟ್ಟುಗೂಡಿಸಿ ಒಂದು ಸಮ್ಮೇಳನವನ್ನು ನಡೆಸುವುದು ಅತ್ಯುತ್ತಮವಾಗಿರುತ್ತದೆ. ಈ ರೀತಿ ಮಾಡಲು ಮಹಾಸಭೆಯು ಒಂದಂಗವಾಗಿರುವುದು. ಪ್ರತ್ಯೇಕವಾಗಿ ಈ ಕಾರ್ಯ ಮಾಡುವುದಕ್ಕಿಂತಲೂ ನಮ್ಮ ಮಹಾಸಭೆಯಲ್ಲಿ ನಡೆಯಿತೆಂದರೆ ಆವಾಗ್ಗೆ ಸಮ್ಮೇಳನ ಕಾರ್ಯವನ್ನು ಪ್ರಾಂತವಾರ ಸಮಯೋಚಿತವಾಗಿ ನಡೆಯಿಸಬಹುದು. ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ, ಹಿಂದೆ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಹಿಂದು ಕರ್ನಾಟಕ ಪರಿಷತ್ತು ಕೂಡಿದಾಗ್ಗೆ ಕೀರ್ತನ ಸಮ್ಮೇಳನ, ಗಾಯನ ಸಮ್ಮೇಳನ, ಕವಿ ಸಮ್ಮೇಳನ, ಆಯುರ್ವೇದ ಸಮ್ಮೇಳನ ಮೊದಲಾದವುಗಳು ಜರುಗಿದುವು. ಅಲ್ಲದೆ ಬೆಂಗಳೂರು ಪ್ರಜಾ ಪ್ರಮುಖಮಂಡಲಿಯವರು ಸೇರಿ 1920 ನೆಯ ಜುಲೈ ತಾ|| 24 ನೆಯ ಭಾನುವಾರ ಮೊದಲನೆಯ ಕರ್ನಾಟಕ ಕೀರ್ತನ ಸಮ್ಮೇಳನವನ್ನು ಜರಗಿಸಿದರು. ಮೈಸೂರು ಸಂಸ್ಥಾನದ ಅರಮನೆಯ ಮುಜರಾಯಿ ಬಕ್ಷಿಯವರಾದ ಶ್ರೀಮಾನ್ ಎಚ್. ಲಿಂಗರಾಜ ಅರಸರವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ಮಹಾಜನಗಳು ದ್ವಿತೀಯ ಸಮ್ಮೇಳನವನ್ನು ನಡೆಯಿಸಿದರು. ಈ ಪ್ರಕಾರ ಕೀರ್ತನ ಸಮ್ಮೇಳನಗಳಿಂದ ಮತಾಂತರದವರು ಜಾಗ್ರತಗೊಳ್ಳುತ್ತಿರುವರು. ಈ ವಿಷಯದಲ್ಲಿ ವೀರಶೈವರು ಮಾತ್ರ ಇಂದುಳಿದಿರುವರು. ಆದಕಾರಣ ಈಗ ನಡೆಯಬೇಕೆಂದಿರುವ ಅಖಿಲ ಭಾರತ 11 ನೆಯ ವೀರಶೈವ ಮಹಾಸಭೆಯಲ್ಲಿ ನನ್ನ ಕೋರಿಕೆಯಂತೆ ವೀರಶೈವ ಪ್ರಥಮ ಕೀರ್ತನ ಸಮ್ಮೇಳನವನ್ನು ನಡೆಯಿಸುವ ಹಾಗೆ ಸ್ವಾಗತ ಮಂಡಳಿಯವರು ನಿರ್ಧರಿಸಿ ಕೂಡಲೆ ವರ್ತಮಾನ ಪತ್ರಿಕೆಗಳಲ್ಲಿ ಪ್ರಚುರಪಡಿಸಿ ಸರ್ವಕೀರ್ತನಕಾರರು ಆಗಮಿಸುವಂತೆ ಮಾಡಿ ಕೀರ್ತನ ಸಮ್ಮೇಳನ ಮುಖಾಂತರ ಕೀರ್ತನಾನಂದವನ್ನು ಹೊಂದಿ ಕೀರ್ತಿಯನ್ನು ಪಡೆಯುವರಾಗಲೆಂದು ಪ್ರಾರ್ಥಿಸುತ್ತೇನೆ.

ಕೀರ್ತನಾಲಂಕಾರ ಶ್ರೀ ಪಂಡಿತ ವೇ|| ಜಿ. ನಂಜುಂಡಾರಾಧ್ಯ,
ಹುಣಸೀಗಟ್ಟದ ಮಠ, ಮೊಕ್ಕಾಂ ಬೀರೂರು.

ಹೊಳೆಹೊನ್ನೂರು ಪಟ್ಟಾಧ್ಯಕ್ಷರ ನಿಧನ.

ಹೊಳೆಹೊನ್ನೂರು ಪುರಾಣಮಠದ ಪಟ್ಟಾಧ್ಯಕ್ಷ ಚಂದ್ರಶೇಖರಸ್ವಾಮಿಗಳು ಕಳೆದ ಮಂಗಳವಾರ ಕೈಲಾಸವಾಸಿಗಳಾದರು. ಇವರು ಇತ್ತೀಚೆಗೆ ದೇಹಾಲಸ್ಯದಿಂದ ಮೌನಾವಸ್ಥೆಯಲ್ಲಿದ್ದರೂ ಯೌವನ ಅಪರವಯಸ್ಸಿನಲ್ಲಿ ಗುರುಸ್ಥಲ ಪಟ್ಟಸ್ಥಲ ಚಳವಳಿಯಲ್ಲಿ ಒಬ್ಬ ಮುಖಂಡರಾಗಿ ಸಮಾಜದ ಸದ್ಯಃಸ್ಥಿತಿಗೆ ಕೊಂಚಮಟ್ಟಿಗೆ ಉತ್ತರವಾದಿಗಳಾಗಿದ್ದರು. ಅಷ್ಟೇ ಅಲ್ಲದೆ ಈ ದುರ್ಬೀಜವನ್ನು ಬಿತ್ತುವುದರ ಆರಂಭದಲ್ಲಿ ಕಂಕಣಕಟ್ಟಿಕೊಂಡಿದ್ದರೆಂದೇ ಹೇಳಬೇಕು. ಶ್ರೀಮನ್ನಿರಂಜನಮೂರ್ತಿಗಳಾದ ಅನಂತಪುರದ ಲಿಂಗಸ್ವಾಮಿಗಳಲ್ಲಿಯೂ ಗುರುಬಸವಸ್ವಾಮಿಗಳಲ್ಲಿಯೂ ಬಹುಕಾಲ ಸೇವಾಧುರೀಣರಾಗಿದ್ದರು. ಹೆಬ್ಬಾಳು ವಿರಕ್ತಮಠದ ಮೂರ್ತಿಗಳೇ ಇವರಿಗೆ ಉಪದೇಶ ಗುರುಗಳಾಗಿದ್ದರು. ಸಮಯಭೇದಗಳ ವೈಷಮ್ಯದ ಕಾಲದಲ್ಲಿ ಇವರು ಶ್ರೀಮನ್ನಿರಂಜನ ಹಾನಗಲ್ಲು ಕುಮಾರಸ್ವಾಮಿಗಳ ಪಟ್ಟಶಿಷ್ಯರಾಗಿ ಕೆಲಸ ಮಾಡಿದುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಇವರು ಕೆಲವು ದಿವಸ ದುರ್ಗದ ಸ್ವಾಮಿಗಳಲ್ಲಿಯೂ ಬಹು ಭಕ್ತಿಯಿಂದ ಸೇವಾಧುರೀಣರಾಗಿದ್ದರು. ಹೀಗೆ ಇವರು ಆದಿಯಿಂದಲೂ ವಿರಕ್ತರ ಆಶ್ರಯ ಆವಾಸಗಳಲ್ಲಿ ಬೆಳೆದಿದ್ದರೂ ಅವರ ವಿರುದ್ಧ ಚಳುವಳಿಗೆ ಮೂಲಕಾರಣರಾದರು. ಜಂಗಮಖಂಡೆ ಪ್ರಮುಖಖಂಡೆ ಗುರುಖಂಡೆಗಳ ಫಲವೆಂತಹುದೆಂಬುದನ್ನು ಈ ಪಟ್ಟಾಧ್ಯಕ್ಷರ ಕಳೆದ ನಾಲ್ಕಾರು ವರ್ಷಗಳ ದೇಹಾಲಸ್ಯದ ಪರಿಯನ್ನು ಬಲ್ಲವರಿಗೆ ಗೊತ್ತು. ಇವರು ಪಟ್ಟ ದುಃಖೋತ್ಕ್ರಮವೂ ಉಚ್ಚರಿಸುತ್ತಿದ್ದ ಪಶ್ಚಾತ್ತಾಪಕರ ಮಾತುಗಳೂ ಅವರ ಹೃದಯವೇದನೆಯನ್ನು ವ್ಯಕ್ತಗೊಳಿಸುತ್ತಿದ್ದುವು. ಚಳುವಳಿಯಲ್ಲಿ ಇವರೊಡನೆ ಸೇರಿ ಕೆಲಸ ಮಾಡುತ್ತಿದ್ದ ಅನೇಕ ಮಹಾಶಯರೂ ಏನಾದರೂ ಇವರ ವೃದ್ಧಾಪ್ಯದ ದೇಹಾಲಸ್ಯದೆಶೆಯಲ್ಲಿ ಸಹಾಯಕರಾಗದೆ ಬೇಸರಪಟ್ಟುಕೊಂಡು ದೂರವಾಗಿದ್ದ ಇವರ ತಮ್ಮ ಮತ್ತು ತಮ್ಮನ ಮಕ್ಕಳೇ ಕಟ್ಟಕಡೆಯ ಕಾಲಕ್ಕೆ ಪೋಷಕರಾದರು. 3 ವರ್ಷಗಳಿಂದಲೂ ತಮ್ಮ ಬಂಧುವರ್ಗ ಪೋಷಣೆಯಲ್ಲಿಯೇ ಇದ್ದರು. ಪ್ರಮಥ ಭಕ್ತರಾರೂ ಪ್ರಮಥದ್ವೇಷಿಗಳಾದ ಈ ಪಟ್ಟಾಧ್ಯಕ್ಷರ ಬಗ್ಗೆ ಸಹಾನುಭೂತಿಯುಳ್ಳವರಾಗಿರಲಿಲ್ಲ. ಇವರ ಅವಸಾನ ಕಾಲದಲ್ಲಿ ಇವರ ಆಲೋಚನೆ ಸಾಹಸವರ್ಚಸ್ಸಿನ ಪ್ರಯೋಜನ ಪಡೆದವರೆಲ್ಲರೂ ಪೋಷಿಸದೆ ಬಿಟ್ಟುಬಿಟ್ಟರು. ಇವರ ಬಂಧುವರ್ಗದವರ ಪ್ರಾರ್ಥನೆಯಂತೆ ದಾವಣಗೆರೆ ದೈವದವರು ಇವರ ದುಷ್ಟ ಚಳುವಳಿ ಕಾರ್ಯಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಇವರ ಸಮಾಧಿ ಕಾರ್ಯಗಳಿಗೆ ನೆರವಾಗಿ ಸಾಂಗಗೊಳಿಸಿದರು. ಪಶ್ಚಾತ್ತಾಪಕ್ಕೆ ಪರಶಿವನೇ ಪರಿಹಾರವನ್ನಿಟ್ಟಿರುವಾಗ ಆತನ ಭಕ್ತರೇತಕ್ಕದನ್ನು ಬಳಸಬಾರದು? ಶ್ರೀಮನ್ನಿರಂಜನ ವಿರಕ್ತ ಗುರುಶಾಂತದೇವರಿಂದಲೇ ಸಮಾಧಿಕ್ರಿಯಾ ಕಾರ್ಯಗಳು ವಿಧ್ಯುಕ್ತವಾಗಿ ಜರುಗಿದವು. ಊರಲ್ಲೆಲ್ಲ ಮೆರವಣಿಗೆಯಿಂದ ಇವರ ಕಳೇಬರವು ಸಮಾಧಿಗೆ ಒಯ್ಯಲ್ಪಟ್ಟಿತು. ಭಕ್ತಾದಿಗಳೆಲ್ಲರೂ ಆದಿವಸ 9 ಘಂಟೆಯವರೆಗೂ ಗ್ಯಾಸುದೀಪಗಳ ಬೆಳಕಿನಲ್ಲಿ ಸಮಾಧಿ ಕಾರ್ಯವನ್ನು ಮುಗಿಸಿ ಹಿಂತಿರುಗಿದರು. ಸಮಾಧಿಗೆ ಇವರ ಹಿಂದಣ ಪಟ್ಟಶಿಷ್ಯರಾರೂ ಬರಲಿಲ್ಲ. ಇವರ ಸಮಾಜಘಾತುಕ ಕಾರ್ಯಕ್ಕಾಗಿ ಇವರ ಬಗ್ಗೆ ಬೇಸರವಾಗಿದ್ದವರು ಬಂದಿದ್ದರು! ಇದೇನು ಸೃಷ್ಟಿವೈಚಿತ್ರ್ಯವೋ? ಪರಮೇಶ್ವರ ಲೀಲೆಯೋ? ಏನೇ ಆಗಲಿ ದಾವಣಗೆರೆ ದೈವದವರು ತಮ್ಮ ಉದಾರಗುಣ ತೋರಿಸಿದುದು ಇವರ ಪ್ರಮಥ ಭಕ್ತಿಗೆ ಭೂಷಣವೆಂದು ಯಾರು ಹೇಳಲಿಕ್ಕಿಲ್ಲ?

ಓರ್ವ ಭಕ್ತ.

ಪತಿತ ಸ್ತ್ರೀಯರ ಉದ್ಧಾರ ೨

(ಶ್ರೀ|| ಹೊಸಹಳ್ಳಿ ಕೆ. ವೀರಣ್ಣ ಗೌಡರಿಂದ)

ವ್ಯಭಿಚಾರ ವೃತ್ತಿಗೆ ದೇವದಾಸಿ ಪದ್ಧತಿಯು ಹೇಗೆ ಕಾರಣವಾಯಿತೆಂಬುದನ್ನೂ, ಪ್ರಾರಂಭದಲ್ಲಿ ದೇವದಾಸಿ ಪದ್ಧತಿಯ ಉತ್ತಮವಾದ ಧ್ಯೇಯ ಮತ್ತು ನಿಯಮಗಳನ್ನೂ, ಕಾಲಕ್ರಮದಲ್ಲಿ ಆ ಪದ್ಧತಿಯು ಹೇಗೆ ಅಧೋಗತಿಗಿಳಿದು, ಈಗ ಅದರಿಂದ ಯಾವ ಪರಿಣಾಮ ಉಂಟಾಗಿದೆಯೆಂಬುದನ್ನೂ ಈ ಲೇಖನ ಮಾಲೆಯ ಮೊದಲನೆ ಲೇಖನದಲ್ಲಿ ಸ್ಥೂಲವಾಗಿ ಚರ್ಚಿಸಿರುವೆನು. ದೇವದಾಸಿ ಪದ್ಧತಿಯ ಅಧಮ ರೂಪಾಂತರವಾದ ವ್ಯಭಿಚಾರ ವೃತ್ತಿಯು ಈಗ ಸಮಾಜದಲ್ಲಿ ವ್ಯಾಪಿಸಿರುವುದಕ್ಕೆ ಕಾರಣಗಳನ್ನು ಈ ಲೇಖನದಲ್ಲಿ ಚರ್ಚಿಸುವೆನು.

ವ್ಯಭಿಚಾರ ವೃತ್ತಿಯು ಹೇಗೆ ಬೇರೂರಿದೆ

ವ್ಯಭಿಚಾರ ವೃತ್ತಿಯು ಪ್ರಪಂಚದ ಬೇರೆ ಕಡೆಗಳಂತೆಯೇ ನಮ್ಮ ದೇಶದಲ್ಲೂ ಬಲವಾಗಿ ಬೇರೂರಿರುವುದು ಮಾತ್ರವೇ ಅಲ್ಲದೆ ದಿನದಿನಕ್ಕೂ ಅಭಿವೃದ್ಧಿಯಾಗುತ್ತಿದೆಯೆಂಬುದರಲ್ಲಿ ಸಂದೇಹವಿಲ್ಲ. ಈ ಸ್ಥಿತಿಗೆ ಕಾರಣಗಳು ನಾನಾಬಗೆಯಾಗಿವೆ.

ಪಾಶ್ಚಾತ್ಯರೊಡನೆ ನಮ್ಮ ಸಂಪರ್ಕವು ಹೆಚ್ಚಿದ ಹಾಗೆಲ್ಲಾ ಅವರ ನಾಗರೀಕತೆ, ಕೈಗಾರಿಕೆಗಳು ಇವೆಲ್ಲಾ ನಮ್ಮ ದೇಶದಲ್ಲೂ ಹರಡುತ್ತ ಬಂದುವು. ರೈಲ್ವೆಯಿಂದ ಒಂದು ಪ್ರದೇಶದ ಜನರು ಮತ್ತೊಂದು ಪ್ರದೇಶಕ್ಕೆ ಸುಲಭ ಖರ್ಚಿನಿಂದ ಬೇಗ ಹೋಗುವುದಕ್ಕೆ ಅವಕಾಶವಾಯಿತು. ಆಯಾ ಪ್ರಾಂತದ ಜನರು ತಮ್ಮ ಹೊಟ್ಟೆ ಬಟ್ಟೆಗಳಿಗೂ ಸಾಮಾನ್ಯ ಜೀವನಕ್ಕೂ ಅಗತ್ಯವಾದ ಪದಾರ್ಥಗಳನ್ನು ಆಯಾ ಪ್ರಾಂತದಲ್ಲೇ ಹುಟ್ಟಿಸಿಕೊಳ್ಳುವಂತಹ ಕೈಕಸುಬುಗಳು ಮಾಯವಾಗಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅನೇಕ ಬಗೆಯ ಗಿರಣಿಗಳೂ ಕಾರ್ಖಾನೆಗಳೂ ಸ್ಥಾಪಿತವಾದುವು. ಇಂತಹ ಸ್ಥಳಗಳಿಗೆ ನಾನಾ ಪ್ರಾಂತಗಳ ಜನರು ಹೊಟ್ಟೆಹೊರೆದುಕೊಳ್ಳುವುದಕ್ಕಾಗಿ ಬಂದು ಸೇರಿದರು. ಪಟ್ಟಣಗಳು ಬೆಳೆದ ಹಾಗೆಲ್ಲಾ ಜನರ ಹಣ, ಆರೋಗ್ಯ ಕೆಲವು ವೇಳೆ ಪ್ರಾಣಗಳನ್ನು ಹಾಳುಮಾಡುವುದಕ್ಕೆ ಅವಕಾಶವಾಗುವ ಆಕರ್ಷಣೆಗಳು ಪ್ರಚಾರಕ್ಕೆ ಬಂದುವು. ಜನಸಂದಣಿಯು ಹೆಚ್ಚಿದ ಕಡೆ ದುರ್ನಡತೆಯು ತಲೆಹಾಕಿತು. ಅವಿದ್ಯಾವಂತರೂ ಪಾಪಪುಣ್ಯಗಳ ಜ್ಞಾನ ಅಥವ ಭಯವಿಲ್ಲದವರೂ, ಪಶುಗಳಂತೆ ದುಡಿಯುವವರೂ ಸೇರಿದ ಕಡೆ ದುರ್ನಡತೆ ತಪ್ಪುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಜನರ ಅಜ್ಞಾನದ ಜತೆಗೆ ಬಡತನ, ನಿರುದ್ಯೋಗ, ಅಲ್ಪ ಸಂಪಾದನೆ ಇವುಗಳೂ ಸೇರಿಕೊಂಡು ವ್ಯಭಿಚಾರವು ಒಂದು ವೃತ್ತಿಯಾಗಿ ಪರಿಣಮಿಸುವುದಕ್ಕೆ ಸಹಾಯಕವಾದವು.

ಭರತಖಂಡವು ಬಡತನಕ್ಕೆ ತವರೂರುಯೆಂಬುದು ಈಗಂತೂ ಜಗತ್ಪ್ರಸಿದ್ಧವಾಗಿದೆ. ಅನೇಕರಿಗೆ ವರ್ಷಾದ್ಯಂತದಲ್ಲೆಲ್ಲಾ ದಿನಕ್ಕೆ ಎರಡು ಹೊತ್ತು ಹೊಟ್ಟೆತುಂಬ ಊಟ ಸಿಕ್ಕುವಹಾಗಿಲ್ಲ. ದಿನಕ್ಕೊಂದು ಊಟ ಅದೂ ಅರ್ಧಹೊಟ್ಟೆತುಂಬುವಷ್ಟು ಸಿಕ್ಕಿದರೆ ಎಷ್ಟೋ ಮಂದಿ ತೃಪ್ತರಾಗುತ್ತಾರೆ. ಛಳಿಗಾಲದಲ್ಲೂ ಕೂಡ ಮೈತುಂಬ ಹೊದೆಯಲು ಮುಕ್ಕಾಲು ಭಾಗ ಜನರಿಗೆ ಅವಕಾಶವಿಲ್ಲ. ಇನ್ನು ವಾಸಸ್ಥಳವಂತೂ ಬಹುಮಂದಿಗೆ ಇಲ್ಲವೇ ಇಲ್ಲ. ಅಂಗಡಿಗಳ ಕೈಸಾಲೆ, ಮಾರ್ಕೆಟ್ಟಿನ ಅಂಗಳ, ಸಾರ್ವಜನಿಕ ಕಟ್ಟಡಗಳ ಹೊರಭಾಗ, ಹಳ್ಳಿಗಳಲ್ಲಿ ಗೌಡರ ಮನೆಗಳ ಜಗತಿಗಳು ಇವೇ ಲಕ್ಷಾಂತರ ಜನರ ವಾಸಸ್ಥಳ. ಹೀಗೆ ಅನ್ನ ಬಟ್ಟೆಗಳಿಗೆ ಗತಿಯಿಲ್ಲದೆ ನಿಲ್ಲುವುದಕ್ಕೆ ತನ್ನದೆಂದು ಕರೆಯಲು ಸ್ಥಳವಿಲ್ಲದೆ ಇರುವ ಜನರು ಹೆಂಡಿರುಮಕ್ಕಳನ್ನು ಕಟ್ಟಿಕೊಳ್ಳುವುದು ಅಸಾಧ್ಯ. ಇಂತಹ ಜನರೆಲ್ಲರೂ ವ್ಯಾಗಳ್ಳರೆಂದು ಹೇಳುವುದಕ್ಕಾಗುವುದಿಲ್ಲ. ಇಂತಹವರಲ್ಲಿ ಶೇಕಡ 90 ಮಂದಿಯಾದರೂ ಕಷ್ಟಪಟ್ಟು ಕೆಲಸಮಾಡುವುದಕ್ಕೆ ಸಿದ್ಧರಾಗಿದ್ದಾರೆ. ಆದರೆ ಅವರ ಮಾನ ಪ್ರಾಣಗಳಿಗೆ ಹಾನಿತಪ್ಪಿದ ರೀತಿಯಲ್ಲಿ ಅವರಿಂದ ಕೆಲಸ ತೆಗೆದುಕೊಂಡು ಅವರು ಸಾಮಾನ್ಯ ಮಾನವರಂತೆ ಜೀವಿಸುವ ಮಟ್ಟಿಗಾದರೂ ಸಮಾಜವಾಗಲೀ ಸರ್ಕಾರವಾಗಲೀ ತಕ್ಕ ಏರ್ಪಾಡು ಮಾಡಿರುವುದಿಲ್ಲ. ನಿರುದ್ಯೋಗದ ಹಾವಳಿ ವರ್ಣಿಸಲಸದಳವಾಗಿದೆ.

ಉದ್ಯೋಗಗಳೆನಿಸಿಕೊಂಡಿರುವ ಕೂಲಿಯವರ ಸ್ಥಿತಿಗತಿಗಳಾದರೂ ನಿರುದ್ಯೋಗಿಗಳ ಸ್ಥಿತಿಗತಿಗಳಿಗಿಂತ ಉತ್ತಮವಾಗಿಲ್ಲ. ಕೂಲಿಯವರಲ್ಲಿ ಬಹುಮಂದಿ ಕೇವಲ ತಮ್ಮ ಹೊಟ್ಟೆಹೊರೆದುಕೊಳ್ಳುವುದಕ್ಕಾಗಿ ತಮ್ಮ ಸ್ಥಳ ಮನೆಗಳನ್ನು ಬಿಟ್ಟು ಬಂದವರಾಗಿರುತ್ತಾರೆ. ತಾವು ಕೆಲಸಮಾಡುವ ಸ್ಥಳಗಳಲ್ಲಿ ಶಾಶ್ವತವಾಗಿ ನೆಲೆಸಬೇಕೆಂಬುದೇ ಇವರಲ್ಲನೇಕರ ಮನಸ್ಸಿಗೆ ಹೊಳೆದಿರುವುದಿಲ್ಲ. ಒಂದು ವೇಳೆ ಹಾಗೆ ಸಂಸಾರಿಗಳಾಗಿ ಬಾಳಬೇಕೆಂದರೂ ಸಂಸಾರದ ಭಾರ ಹೊತ್ತು ನಡೆಸುವಷ್ಟು ಸಂಪಾದನೆಯಾಗಲೀ ಇತರ ಅನುಕೂಲಗಳಾಗಲಿ ಇವರಿಗಿರುವುದಿಲ್ಲ. ಕಣ್ಣ ಹೆಚ್ಚು ದೊರೆಯುವುದೂ ಕಷ್ಟ. ಹಾಗೂ ಸಂಸಾರಿಗಳಾದರೆ ಅಂತಹವರ ಕಷ್ಟಗಳನ್ನು ಕಣ್ಣಾರೆ ಕಂಡರಿಯಬೇಕೇ ಹೊರತು ವರ್ಣಿಸುವುದಸಾಧ್ಯ. ಬೆಂಗಳೂರು ನಗರದ ಗಿರಣಿಗಳಲ್ಲಿ ಕೆಲಸಮಾಡುವ ಕೂಲಿಗಾರರ ಸಂಸಾರಗಳ ಅವಸ್ಥೆಯನ್ನು ನೋಡಿರುವವರಿಗೆ ಇದು ಚೆನ್ನಾಗಿ ಮನವರಿಕೆಯಾಗುತ್ತದೆ. ಬಡ ಕೂಲಿಯವರು ತಮ್ಮ ಅಲ್ಪ ಸಂಪಾದನೆಯಲ್ಲೇ ಸಂಸಾರ ನಿರ್ವಹಿಸಿಕೊಳ್ಳಲಾರದವರಾಗಿರುವುದಕ್ಕೆ ಪಟ್ಟಣಗಳಲ್ಲಿ ಬೇರೂರಿರುವ ನಾಗರೀಕತೆ, ಆಕರ್ಷಣೆಗಳು ಇವೆಲ್ಲಾ ಅಡ್ಡಿಯಾಗಿವೆ. ಉಸಿರಾಡುವುದಕ್ಕೂ ವಿರಾಮವಿಲ್ಲದಷ್ಟು ಕಷ್ಟಪಟ್ಟು ದುಡಿದ ಅವರ ಹಣದಲ್ಲಿ ಬಹುಭಾಗವು ಕಲ್ಲಿನ ಅಂಗಡಿಗೂ, ಸಿನಿಮಾಗಳಿಗೂ, ಫಳಕಿನ ಬಟ್ಟೆಗಳಿಗೂ ಹೋಗಿಬಿಡುವುದು. ಇನ್ನವರು ತಮ್ಮ ಮತ್ತು ತಮ್ಮ ಹೆಂಡಿರು ಮಕ್ಕಳ ಅನ್ನ ಬಟ್ಟೆಗಳಿಗೆ ಹಣ ಒದಗಿಸುವುದೆಂತು? ಕೂಲಿಯವರ ಹೃದಯಭೇದಕವಾದ ಸ್ಥಿತಿಯನ್ನು ಉತ್ತಮಗೊಳಿಸಲು ಸರಿಯಾದವರು ಪ್ರಯತ್ನಿಸಿಲ್ಲ; ಪ್ರಯತ್ನಿಸಿರುವವರಿಗೆ ಪ್ರೋತ್ಸಾಹವಿಲ್ಲ. ಅಂತಹ ಸಂಸ್ಥೆಗಳಿಗೆ ನಾನಾಬಗೆಯ ಕಂಟಕಗಳು ಒದಗುತ್ತಿವೆ.

ಕೇವಲ ಕೂಲಿಯವರು ಅಥವ ನಿರುದ್ಯೋಗಿಗಳಾದ ಬಡವರು ಮಾತ್ರ ಮದುವೆ ಮಾಡಿಕೊಂಡು ಸಂಸಾರಿಗಳಾಗಿ ಜೀವಿಸಲು ಯತ್ನವಿಲ್ಲದವರಾಗಿದ್ದಾರೆಂದು ಭಾವಿಸಲಾಗದು. ಸಣ್ಣ ಪುಟ್ಟ ನೌಕರಿಗಳಿಗೆ ಸೇರಿಕೊಂಡಿರುವ ಮಧ್ಯಮ ತರಗತಿಯ ಯುವಕರೂ, ದೊಡ್ಡ ದೊಡ್ಡ ವಿದ್ಯಾಶಾಲೆಗಳಲ್ಲಿರುವ ಪ್ರಾಯಸಮರ್ಥರಾದ ವಿದ್ಯಾರ್ಥಿಗಳೂ ಕಾರಣಾಂತರಗಳಿಂದ ಕೆಲವು ವರ್ಷಗಳು ಅಂದರೆ ವಿವಾಹ ವಯಸ್ಕರಾದಮೇಲೂ ಸ್ವಲ್ಪ ಕಾಲ ಅವಿವಾಹಿತರಾಗಿಯೇ ಉಳಿಯಬೇಕಾಗವುದು. ಇಲ್ಲಿ ನಾನು ಯಾರೊಬ್ಬರ ಅಥವ ಒಟ್ಟು ಯಾವುದೊಂದು ಪಂಗಡದ ನಡತೆಯನ್ನು ವಿಮರ್ಶಿಸುತ್ತಿಲ್ಲ. ಒಂದು ಪ್ರಾಮುಖ್ಯವೂ ತೊಡಕಿನದೂ ಆದ ವಿಷಯವನ್ನು ಕುರಿತು ಚರ್ಚಿಸುವಾಗ ಅದಕ್ಕೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸಂಬಂಧಿಸಿದ ಅನೇಕ ಸತ್ಯಾಂಶಗಳನ್ನು ಹೊರಗೆಡಹುವುದು ಆವಶ್ಯಕವಾಗಿದೆ. ಆದುದರಿಂದ ನಾನಿಲ್ಲಿ ತಿಳಿಸುವ ನಿಜವೆಂಬ ಕಹಿ ಗುಳಿಗೆಗಳನ್ನು ನುಂಗುವಾಗ ಕೆಲವರು ಜಿಗುಪ್ಸೆಪಟ್ಟುಕೊಳ್ಳಬಹುದು. ಅಂತಹ ಮನೋಭಾವನೆಗೆ ನಾನು ಉದ್ದೇಶಪೂರ್ವಕವಾಗಿ ಅವಕಾಶಕೊಟ್ಟೆನೆಂದು ಯಾರೂ ಭಾವಿಸದಿರಬೇಕಾಗಿ ಅಪೇಕ್ಷಿಸುತ್ತೇನೆ. ಅಲ್ಲದೆ ನಾನು ಮೇಲೆ ಹೇಳಿರುವ ಪಂಗಡಗಳಿಗೆ ಸೇರಿದವರೆಲ್ಲರೂ ಹಾಗೆಯೇ ಇರುತ್ತಾರೆಂಬುದೂ ನನ್ನ ಭಾವನೆಯಲ್ಲ. ಅಲ್ಪ ಸಂಬಳದ ಹಂಗಾಮಿ ನೌಕರಿಗೆ ಸೇರಿಕೊಂಡಿರುವ ಯುವಕರು ತಮ್ಮ ಸ್ಥಿತಿಗತಿಗಳು ಉತ್ತಮವಾಗುವವರೆಗೆ ಸಂಸಾರಿಗಳಾಗಲು ಆತುರಪಡುವುದಿಲ್ಲ. ವಿದ್ಯಾರ್ಥಿಗಳಾದವರು ಸ್ವತಃ ಸಂಸಾರವನ್ನು ಸುಖವಾಗಿ ಸಾಕುವಷ್ಟು ಸಂಪಾದಿಸುವವರೆಗೂ ವಿವಾಹಮಾಡಿಕೊಳ್ಳಬಾರದೆಂದು ಹೇಳುವವರು ಮಾತ್ರವೇ ಅಲ್ಲದೆ ಜಿತೇಂದ್ರಿಯರಾಗಿರಲಾರದೆ ಉನ್ಮಾದಾವಸ್ಥೆಯುಂಟಾದವರು ತಾತ್ಕಾಲಿಕವಾಗಿ ತಮ್ಮ ಕಾಮೇಚ್ಛೆಯನ್ನು ಪೂರೈಸಿಕೊಂಡು, ಆದಾಗ ಕೂಡಲೆ ಆ ವಿಷಯವನ್ನೇ ಮರೆತು ತಮ್ಮ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ಕಡೆಗೆ ತಮ್ಮ ಮನಸ್ಸು ಕೊಡಬೇಕೆಂದು ಉಪದೇಶಮಾಡುವ ಬೋಧಕರೂ ನಮ್ಮಲ್ಲಿಲ್ಲದೆ ಇಲ್ಲ. ಹೀಗೆ ಕಾರಣಾಂತರಗಳಿಂದ ಬಡವರು ಮತ್ತು ಮಧ್ಯಮ ತರಗತಿಯವರು ಇವರಲ್ಲಿ ಬಹುಮಂದಿ ಅವಿವಾಹಿತರಾಗಿರುವರು. ಇಂತಹವರೆಲ್ಲರೂ ಬ್ರಹ್ಮಚಾರಿಗಳಾಗಿ ಅಥವ ಸನ್ಯಾಸಿಗಳಾಗಿ ಇರುತ್ತಾರೆಂದು ನಂಬುವುದಾಗಲೀ ಅಪೇಕ್ಷಿಸುವುದಾಗಲೀ ಹುಚ್ಚುತನ. ಎಲ್ಲೋ ಅಲ್ಪ ಸ್ವಲ್ಪ ಮಂದಿ ತಮ್ಮ ಇಂದ್ರಿಯಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿರಬಹುದು. ಉಳಿದವರು ತಮ್ಮ ವಯೋಧರ್ಮ, ತಾವಿರುವ ವಾತಾವರಣ ಇವುಗಳ ಬೆಳೆಯಿಂದ ತಮ್ಮ ಕಾಮೇಚ್ಛೆಯನ್ನು ಪೂರೈಸಿಕೊಳ್ಳುವುದಕ್ಕಾಗಿ ಹಂಗಾಮಿ ಸಂಬಂಧಗಳನ್ನು ಕಲ್ಪಿಸಿಕೊಂಡೇ ಇರುತ್ತಾರೆ. ಇದು ಎಲ್ಲರಿಗೂ ತಿಳಿದಿರುವ ಗುಟ್ಟಾದ ವಿಷಯ. ಅನುಕೂಲ ಅಥವ ಅವಕಾಶಗಳಿಲ್ಲದ ಕಾರಣಗಳಿಂದ ಏಕಾಂಗಿಗಳಾಗಿರುವವರು ಎಂದಾದರೊಂದು ಸಾರಿಯಾದರೂ ತಮ್ಮ ಕಾಮೇಚ್ಛೆಯನ್ನು ಪೂರೈಸಿಕೊಳ್ಳುವುದಕ್ಕೆ ಯಾವುದಾದರೊಂದು ಮಾರ್ಗವಿಲ್ಲದಿದ್ದರೆ ಸಂಸಾರಿಗಳ ಹೆಂಗುಸರು ಮಾನಮರ್ಯಾದೆಗಳನ್ನುಳಿಸಿಕೊಂಡು ನೆಮ್ಮದಿಯಿಂದ ಬಾಳುವುದು ದುಸ್ತರವಾಗುತ್ತದೆ. ಹಾಗೂನಿನಿಂದ ಈ ಬಗೆಯ ಮಾರ್ಗಗಳನ್ನು ಮುಚ್ಚುವುದು ಸಮಾಜಕ್ಕೆ ಒಂದು ದೊಡ್ಡ ಕೇಡಕನ್ನೇ ಉಂಟುಮಾಡಿದಂತಾಗುತ್ತದೆ.

ಅನುಕೂಲ ಮತ್ತು ಅವಕಾಶವಿಲ್ಲದೆ ಒಬ್ಬಂಟಿಗರಾಗಿ ವಾಸಿಸುವವರಿಂದ ಮಾತ್ರವೇ ವ್ಯಭಿಚಾರ ವೃತ್ತಿಯು ನಮ್ಮ ಸಮಾಜದಲ್ಲಿ ಬೇರೂರಿದೆಯೆಂದಾಗಲೀ ಅದಕ್ಕೆ ಉತ್ತೇಜನ ದೊರೆಯುತ್ತದೆಯೆಂದಾಗಲೀ ಭಾವಿಸಲಾಗದು. ದೇವರ ಕೃಪೆಗೆ ಪಾತ್ರರಾಗಿ ಹುಟ್ಟಿರುವ ಶ್ರೀಮಂತರು ಕೆಲವರಲ್ಲಿ ಪರಸ್ತ್ರೀಸಂಗ ಅಥವ ವ್ಯಭಿಚಾರವು ಒಂದು ಭೋಗಕಾರ್ಯವಾಗಿದೆ. ಉಳಿದ ಪಂಗಡಗಳವರಂತೆ ಈ ಪಂಗಡಕ್ಕೆ ಸೇರಿದವರಿಗೆ ಇಂತಹ ಕಾರ್ಯಮಾಡುವುದಕ್ಕೆ ಅಗತ್ಯವಿಲ್ಲ. ಆದರೂ ಅಭ್ಯಾಸವಾಗಿಬಿಟ್ಟಿದೆ. ಅವರ ಸಿರಿತನದ ಅರ್ಧ ಭಾಗವಾದರೂ ಅವರ ಈ ಬಗೆಯ ತೃಪ್ತಿಗಾಗಿ ವೆಚ್ಚವಾಗುತ್ತಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಕೇವಲ ಪುರುಷರ ಅಗತ್ಯ ಅಥವ ಅಭ್ಯಾಸಗಳ ದೆಸೆಯಿಂದ ಮಾತ್ರವೇ ವ್ಯಭಿಚಾರ ವೃತ್ತಿಯು ಹರಡಿದೆಯೆಂದು ತಿಳಿಯಬಾರದು. ಕೆಲವು ತರಗತಿಗಳಿಗೆ ಸೇರಿದ ಹೆಂಗುಸರಿಗೆ ಈ ವೃತ್ತಿಯು ಅಗತ್ಯವಾಗಿಯೂ ಕೆಲವು ತರಗತಿಯವರಿಗೆ ಅನುಕೂಲವಾಗಿಯೂ ಪರಿಣಮಿಸಿದೆ. ಗಿರಣಿಗಳಲ್ಲೂ ಕಾರ್ಖಾನೆಗಳಲ್ಲೂ ಕೆಲಸಮಾಡುವ ಅನೇಕ ಯುವತಿಯರು ಅಲ್ಲಿ ಮೇಲ್ವಿಚಾರಣೆಗಾಗಿ ನೇಮಿಸಲ್ಪಟ್ಟಿರುವ ಕೆಲವರ ಬಲೆಗೆ ಬೀಳದಿರುವುದು ಅಸಾಧ್ಯ, ಮತ್ತೆ ಕೆಲವು ಹುಡುಗಿಯರು ತಮ್ಮ ಅನ್ನ ಬಟ್ಟೆಗಳಿಗೇ ಕಷ್ಟಪಡುತ್ತಿರುವ ಗಂಡುಸರನ್ನು ಮದುವೆಯಾಗಿ ಹೊಟ್ಟೆಬಟ್ಟೆಗಳಿಗಿಲ್ಲದೆ ನಿರ್ಬಂಧಗಳಿಗೊಳಗಾಗಿ ನಿರಂತರ ಕಷ್ಟಪಡುವುದಕ್ಕಿಂತ ತಮಗೆ ಇಷ್ಟಬಂದವನೊಡನೆ ಸಂಬದ್ಧರಾಗಿ ಸ್ವಲ್ಪಕಾಲ ವಾಸಿಸುತ್ತ ಅಥವಾ ದಿನವೂ ತಮ್ಮ ಮಾನವಿಕ್ರಯದಿಂದ ಜೀವಿಸುತ್ತ ಸ್ವತಂತ್ರವಾಗಿ ಕಾಲಕಳೆಯುವುದೇ ಮೇಲೆಂದು ಭಾವಿಸುತ್ತಾರೆ. ಇನ್ನು ಕೆಲವರು ತಮ್ಮ ಜೀವನಕ್ಕೆ ಬೇರೆ ಮಾರ್ಗಕಾಣದೆ ಈ ವೃತ್ತಿಯನ್ನು ಅವಲಂಬಿಸುತ್ತಾರೆ. ಬಹುಮಂದಿ ಸ್ತ್ರೀಯರನ್ನು ಕೈಹಿಡಿದು ಕಾಪಾಡುವಂತಹ ಪುರುಷರು ಸಿಕ್ಕುವುದಿಲ್ಲ. ಇನ್ನು ಕೆಲವರು ತಮಗಿಂತ ಉತ್ತಮರಾದ ಜನರ ಆಸರೆಗೆ ತೊಡಗಿಕೊಳ್ಳಲು ಸುಖಜೀವನವನ್ನು ನಡೆಸಬೇಕಾದರೆ ವ್ಯಭಿಚಾರ ವೃತ್ತಿಯಿಂದಲ್ಲದೆ ಅನ್ಯಮಾರ್ಗದಲ್ಲಿ ಸಿಕ್ಕಲಾರದೆಂದು ತಿಳಿದು ಈ ಹಾದಿಗೆ ಬೀಳುವರು. ಹಲವರು ತಮ್ಮ ತಾಯಿತಂದೆಗಳ ಜೀವನ ಸಾಕುವುದಕ್ಕಾಗಿ ಈ ವೃತ್ತಿಯನ್ನು ಕೈಕೊಳ್ಳುವರು. ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿ ಮುಂದೆ ಯೋಗ್ಯರೀತಿ ಜೀವನಕ್ಕೆ ಮಾರ್ಗಮಾಡಿಕೊಳ್ಳುವುದಕ್ಕಾಗಿ ಸಹ್ಯಕ್ಕೆ ವ್ಯಭಿಚಾರವನ್ನು ಒಂದು ವೃತ್ತಿಯನ್ನಾಗಿ ಇಟ್ಟುಕೊಂಡಿರುವ ಸ್ತ್ರೀಯರೂ ನಮ್ಮಲ್ಲಿಲ್ಲದೆಯಿಲ್ಲ. ಅಯೋಗ್ಯರನ್ನೂ ಅಶಕ್ತರನ್ನೂ ವಿವಾಹಮಾಡಿಕೊಂಡ ತಪ್ಪಿಗಾಗಿ, ಜೀವನ ನಡೆಸಲು ದಿಕ್ಕುಕಾಣದೆ ಹಲವರು ಈ ದಾರಿಗೆ ಬೀಳುವರು. ಬೀಳ ಪುರುಷರ ನಾತಿಗೆ ಮರುಳಾಗಿ ಕಡೆಗವರಿಂದ ತಿರಸ್ಕೃತರಾದವರೊಬ್ಬರೋ ಮುಂದಿ ಈ ವೃತ್ತಿಯಿಂದಲ್ಲದೆ ಜೀವನಕ್ಕೆ ದಾರಿ ಕಾಣದವರಾಗಿದ್ದಾರೆ.

ಮೇಲೆ ತಿಳಿಸಿರುವ ಮತ್ತು ಅಂತಹ ಅನೇಕ ಕಾರಣಗಳಿಂದ ವ್ಯಭಿಚಾರವೃತ್ತಿಯು ನಮ್ಮ ದೇಶದಲ್ಲಿ ಹಬ್ಬಿರುವುದನ್ನು ಯಾವ ಮೂಲಕವಾಗಿಯೂ ಬೇರಿಂದಲೂ ಕಿತ್ತೆಸೆಯಲು ಸಾಧ್ಯವಿಲ್ಲ ಮತ್ತು ಸಾಧುವೂ ಅಲ್ಲ. ವ್ಯಭಿಚಾರದಂತಹ ಹೇಯವಾದ ವೃತ್ತಿಯು ಹೋಗಲೇಬೇಕೆಂದು ವಾದಿಸುವ ಪಾಪಿಗಳೂ ಈ ಕಾಲದಲ್ಲಿ ನಮ್ಮಲ್ಲಿಲ್ಲದಿಲ್ಲ ಎಂದು ಕೆಲವರು ನನ್ನಲ್ಲಿ ಅಸತ್ಯತೆಯನ್ನು ತೋರಬಹುದು, ಮತ್ತೆ ಕೆಲವರು ನನ್ನ ವಾದಕ್ಕಾಗಿ ಮರುಕಗೊಳ್ಳಬಹುದು; ಇನ್ನೂ ಕೆಲವರು ವಿವಿಧ ಆಕ್ಷೇಪಣೆಗಳನ್ನು ಮಾಡಬಹುದು. ಆದರೂ ನಾವು ವಾಸ್ತವಾಂಶಗಳನ್ನು ಕಣ್ಣುತೆರೆದು ನೋಡಬೇಕಾಗಿದೆಯೇ ಹೊರತು ಅನರ್ಥಕಲ್ಪನೆಯ ಊಹಾಪ್ರಪಂಚದಲ್ಲಿ ಕೇಳಾಡಿದರೆ ಸಾಲದು. ಬಡತರು ಮತ್ತು ಮಧ್ಯಮ ತರಗತಿಗಳಿಗೆ ಸೇರಿದ ಕೆಲವರಿಗೆ ಈ ವೃತ್ತಿಯುಂತಹದೊಂದು ದಾರಿಯಿಲ್ಲದಿದ್ದರೆ ಸಂಸಾರಿಗಳು ನೆಮ್ಮದಿಯಿಂದ ಇರಲಾಗುವುದಿಲ್ಲ. ಈ ದಾರಿಯಲ್ಲಿ ಬೀಳಬೇಕಾಗಿಲ್ಲದಿರುವ ಶ್ರೀಮಂತ ತರಗತಿಯವರು ಯಾವ ಬಾನನ್ನಾದರೂ ತಪ್ಪಿಸಿಕೊಳ್ಳಬಲ್ಲರು. ಅಂದಮೇಲೆ ಬಾನೂನು ಹಾಗೂ ಶ್ರೀ ಮಲ್ಲಪ್ಪನವರು ತಂದಿರುವ ಮಸೂದೆಯಂತಹ ಬಾನೂನು ಈ ಕೇಡುಕನ್ನು ಎಷ್ಟರಮಟ್ಟಿಗೆ ತಾನೇ ನಿವಾರಿಸಬಲ್ಲದು? ಈ ವಿಚಾರವನ್ನು ಮುಂದಿನ ಲೇಖನದಲ್ಲಿ ಚರ್ಚಿಸುವೆನು.

ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆ.

ಇದರ ನಿಯಮಗಳು.

(1) ಹೆಸರು —ಈ ಸಂಸ್ಥೆಯ ಹೆಸರು ಅಖಿಲಭಾರತ ಶ್ರೀಮದ್ವೀರಶೈವ ಮಹಾಸಭೆ ಎಂದು ಇರುವುದು.

(2) ಉದ್ದೇಶ:—ಈ ಸಂಸ್ಥೆಯ ಉದ್ದೇಶವು ವೀರಶೈವ ಜನಾಂಗದ ಉತ್ಕರ್ಷವನ್ನು ಎಲ್ಲ ಬಗೆಯಿಂದ ಮಾಡತಕ್ಕದ್ದಿರುವುದು.

(3) ಸದಸ್ಯರು:—ಈ ಸಂಸ್ಥೆಯಲ್ಲಿ (1) ಆಶ್ರಯದಾತರು (2) ಸನ್ಮಾನ್ಯ ಆಜೀವ ಸದಸ್ಯರು (3) ಸಾಮಾನ್ಯ ಸದಸ್ಯರು ಎಂದು ಮೂರು ವರ್ಗದ ಸದಸ್ಯರು ಇರುವರು. ಇವರೆಲ್ಲರು ವೀರಶೈವರಾಗಿರತಕ್ಕದ್ದು.

(ಅ) 1000—ಅಥವಾ ಅದಕ್ಕೂ ಹೆಚ್ಚು ರೂಪಾಯಿಗಳನ್ನು ಕೊಟ್ಟವರು ಆಶ್ರಯದಾತರಾಗುವರು. ಇವರು ಮಹಾಸಭೆಯ ಆಜೀವ ಸದಸ್ಯರೆಂದು ಇವರಿಗೆ ಮಹಾಸಭೆಯಲ್ಲಿ ಮತಕೊಡುವ ಅಧಿಕಾರವಿದೆ. ಹಾಗೂ ಮಹಾಸಭೆಯಲ್ಲಿ ಇವರಿಗೆ ಯೋಗ್ಯ ಸ್ಥಳವು ಕಾದಿಡಲ್ಪಡುವುದು.

(ಬ) 100—ಅಥವಾ ಅದಕ್ಕೂ ಹೆಚ್ಚು ರೂ. ಗಳನ್ನು ಕೊಟ್ಟವರು ಮಹಾಸಭೆಯ ಸನ್ಮಾನ್ಯ ಆಜೀವ ಸದಸ್ಯರಾಗುವರು. ಇವರಿಗೆ ಮಹಾಸಭೆಯಲ್ಲಿ ಮತಕೊಡುವ ಅಧಿಕಾರವಿರುವದು.

(ಕ) 1 ರೂಪಾಯಿ ವಾರ್ಷಿಕ ವರ್ಗಣಿಯನ್ನು ಕೊಟ್ಟಂಥ ಪ್ರತಿಯೊಬ್ಬ ಸ್ತ್ರೀ ಪುರುಷರು ಸಾಮಾನ್ಯ ಸದಸ್ಯರಾಗುವರು. ಇವರಿಗೆ ಮಹಾಸಭೆಯಲ್ಲಿ ಮತಕೊಡುವ ಅಧಿಕಾರವಿಲ್ಲ. ಆದರೆ ಈ ನಿಯಮಗಳ 10 ನೇ ಕಲಮಿನ ಪ್ರಕಾರ ಮಹಾಸಭೆಯ ಪ್ರತಿನಿಧಿಗಳನ್ನು (Delegates) ಆರಿಸುವ ಮತ್ತು ಪ್ರಾಂತಿಕ ಕಾರ್ಯಕಾರೀ ಮಂಡಲದ ಸದಸ್ಯರನ್ನು ಆರಿಸುವ ಅಧಿಕಾರವಿರುವದು.

ಸೂಚನೆ:—ಈ ಒಳಗಾಗಿ ಮೇಲ್ಕಂಡ ತರಗತಿಗಳ ಪ್ರಕಾರ ಹಣ ಕೊಟ್ಟವರು ಆಯಾ ತರಗತಿಯ ಸದಸ್ಯರೆಂದು ತಿಳಿಯತಕ್ಕದ್ದು.

(4) ಮಹಾಸಭೆಯ ಕಾರ್ಯಕಾರೀ ಮಂಡಲಗಳು

ಮಹಾಸಭೆಗೆ ಮಧ್ಯವರ್ತಿ ಕಾರ್ಯಕಾರೀ ಮಂಡಲವು ಮತ್ತು ೯ ಪ್ರಾಂತಿಕ ಕಾರ್ಯಕಾರೀ ಮಂಡಲಗಳು ಇರತಕ್ಕದ್ದು. ಅವುಗಳ ವಿವರವು ಕೆಳಗೆ ಕಾಣಿಸಿದ ಪ್ರಕಾರ:—

ಮಂಡಲದ ಹೆಸರು	ಮುಖ್ಯಸ್ಥಳ	ಸದಸ್ಯರಸಂಖ್ಯೆ
1 ಮಧ್ಯವರ್ತಿ ಕಾರ್ಯಕಾರಿ ಮಂಡಲವು	ಧಾರವಾಡ	30 (ಚೇರಮನ್ ಮತ್ತು ವ್ಹಾಯಿಸ ಚೇರಮನ್‌ರನ್ನು ಬಿಟ್ಟು)
ಪ್ರಾಂತಿಕ ಮಂಡಲಗಳು		
1. ಮುಂಬೈ ದಕ್ಷಿಣಕರ್ನಾಟಕ (ಧಾರವಾಡ, ವಿಜಾಪುರ, ಬೆಳಗಾವಿ, ಕಾರವಾರ ಜಿಲ್ಲೆಗಳು)	ಧಾರವಾಡ	15
2. ಮುಂಬೈ ಉತ್ತರ ಕರ್ನಾಟಕ (ಸೊಲ್ಲಾಪುರ, ಬಾರ್ಶಿ ಭಾಗಗಳು)	ಸೊಲ್ಲಾಪುರ	20
3. ಮುಂಬೈ ಮಹಾರಾಷ್ಟ್ರ (ಸತಾರಾ, ಪುಣೆ, ಠಾಣೆ, ಅಲಿಬಾಗ ಮತ್ತು ಮುಂಬಯಿ ಶಹರ)	ಮುಂಬೈ	20
4. ಮೈಸೂರು (ಮೈಸೂರ ಸಂಸ್ಥಾನ)	ಬೆಂಗಳೂರು	20
5. ಕೊಡಗು (ಸಂಸ್ಥಾನ)	ಮಡಿಕೇರಿ	10
6. ಮದ್ರಾಸ (ಮದ್ರಾಸ ಇಲಾಖೆ)	ಬಳ್ಳಾರಿ	15
7. ನಿಜಾಮ ಇಲಾಖೆ (ನಿಜಾಮ ಇಲಾಖೆ)	ಕಲಬುರ್ಗಿ	20
8. ವರ್‍ಹಾಡ ಮತ್ತು ಮಧ್ಯಪ್ರಾಂತ	ಅಮರಾವತಿ	15
9. ಮುಂಬೈ ಇಲಾಖೆ ಯೊಳಗಿನ ಸಂಸ್ಥಾನಗಳು (ಬಿಟ್ಟು)	ಸಾಂಗಲಿ	10

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು | ಚಿಂತಿಸಬೇಡಿರಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆವಿರಿ. ೯ ಗುಳಿಗೆಗಳ ೩. ೩ ರೂಪಾಯಿ. ೫. ೩. ೫ ಆಣೆ.

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸಿಮಿರಜ. M. C. 32

(5) ಮಧ್ಯವರ್ತಿ ಕಾರ್ಯಕಾರೀ ಮಂಡಲದ ಮತ್ತು ಪ್ರಾಂತಿಕ ಮಂಡಲಗಳ ಮೊದಲಿನ ಸದಸ್ಯರನ್ನು ಮಹಾಸಭೆಯವರು ಈ ಅಧಿವೇಶನದಲ್ಲಿ ನೇಮಿಸತಕ್ಕದ್ದು. ಮುಂದೆ ಪ್ರತಿ ವರ್ಷ ಮಧ್ಯವರ್ತಿ ಮಂಡಲದ ಸದಸ್ಯರನ್ನು ಮಹಾಸಭೆಯ ಅಧಿವೇಶನದಲ್ಲಿಯೇ ಆರಿಸತಕ್ಕದ್ದು. ಪ್ರಾಂತಿಕ ಕಾರ್ಯಕಾರೀ ಮಂಡಲದ ಸದಸ್ಯರನ್ನು ಆಯಾ ಪ್ರಾಂತದ ಮಹಾಸಭೆಯ ಸದಸ್ಯರು ಮಹಾಸಭೆಯ ಅಧಿವೇಶನಕ್ಕಿಂತ 2 ತಿಂಗಳು ಮೊದಲು ಆರಿಸಿ, ಅವರ ಹೆಸರುಗಳನ್ನು ಮಧ್ಯವರ್ತಿ ಕಾರ್ಯಕಾರೀ ಮಂಡಲಕ್ಕೆ ತಿಳಿಸತಕ್ಕದ್ದು. ಇವರ ಹೆಸರನ್ನು ಮಹಾಸಭೆಯಲ್ಲಿ ಪ್ರಕಟಮಾಡಿದನಂತರ ಇವರು ಅಧಿಕಾರಾರೂಢರಾಗುವರು.

(6) ಮಧ್ಯವರ್ತಿ ಕಾರ್ಯಕಾರೀ ಮಂಡಲದ ಸದಸ್ಯರು ಕೆಳಗಿನ ಪ್ರಮಾಣದಿಂದ ಆರಿಸಲ್ಪಡತಕ್ಕದ್ದು.

(1) ಮುಂಬಯಿ ದಕ್ಷಿಣ ಕರ್ನಾಟಕ 7 (2) ಮುಂಬಯಿ ಉತ್ತರ ಕರ್ನಾಟಕ 3 (3) ಮುಂಬಯಿ ಮಹಾರಾಷ್ಟ್ರ 4 (4) ಮೈಸೂರು ಸಂಸ್ಥಾನ 4 (5) ಕೊಡಗು 1 (6) ಮದ್ರಾಸು ಇಲಾಖೆ 3 (7) ನಿಜಾಮ ಇಲಾಖೆ 4 (8) ವರ್ಹಾಡ ಮತ್ತು ಮಧ್ಯಪ್ರಾಂತ 2 (9) ಮುಂಬಯಿ ಇಲಾಖೆಯೊಳಗಿನ ಸಂಸ್ಥಾನಗಳು 2. ಒಟ್ಟು 30.

(7) ಮಹಾಸಭೆಯ ಅಧಿವೇಶನದ ಅಧ್ಯಕ್ಷರು ಮುಂದಿನ ಅಧಿವೇಶನದವರೆಗೆ ಮಧ್ಯವರ್ತಿ ಕಾರ್ಯಕಾರೀ ಮಂಡಲದ ಅಧ್ಯಕ್ಷರು (ಚೇರ್ಮನ್ನರು) ಇರತಕ್ಕದ್ದು. ಸ್ವಾಗತ ಮಂಡಲದ ಚೇರ್ಮನ್ನರು ಅದರ ಉಪಾಧ್ಯಕ್ಷರು (ವ್ಹಾಯಿಸ ಚೇರ್ಮನ್ನರು) ಇರತಕ್ಕದ್ದು. ಈ ಮಂಡಲದವರು ತಮ್ಮೊಳಗೆ ಒಬ್ಬ ಸೆಕ್ರೆಟರಿಯನ್ನೂ, ಇಬ್ಬರು ಜಾಯಿಂಟ ಸೆಕ್ರೆಟರಿಗಳನ್ನೂ, ಒಬ್ಬ ಕೋಶಾಧ್ಯಕ್ಷರನ್ನೂ ಆರಿಸಿಕೊಳ್ಳತಕ್ಕದ್ದು.

(8) ಪ್ರಾಂತಿಕ ಕಾರ್ಯಕಾರೀ ಮಂಡಲದವರು ತಮ್ಮ ತಮ್ಮ ಮಂಡಲಕ್ಕೆ ಒಬ್ಬ ಚೇರ್ಮನ್ನರನ್ನೂ, ಒಬ್ಬ ಅಥವಾ ಇಬ್ಬರು ಸೆಕ್ರೆಟರಿಗಳನ್ನೂ ತಮ್ಮ ತಮ್ಮ ಮಂಡಲದ ಸದಸ್ಯರಲ್ಲಿಯೇ ಆರಿಸಿಕೊಳ್ಳತಕ್ಕದ್ದು. ಪ್ರಾಂತಿಕ ಮಂಡಲದವರು ಜಿಲ್ಹಾ ಮಂಡಲಗಳನ್ನೂ, ಜಿಲ್ಹಾ ಮಂಡಲದವರು ತಾಲ್ಲೂಕು ಮಂಡಲಗಳನ್ನೂ ಇದೇ ರೀತಿಯಾಗಿ ನೇಮಿಸುವಂತೆ ವ್ಯವಸ್ಥೆ ಮಾಡತಕ್ಕದ್ದು. ಆಯಾ ಮಂಡಲಗಳ ಸದಸ್ಯರ ಸಂಖ್ಯೆಗಳನ್ನು ಅವರೇ ನೇಮಿಸತಕ್ಕದ್ದು.

(9) ಮಹಾಸಭೆಯ ಧನನಿಧಿಗಳು ಎರಡು ಪ್ರಕಾರವಾಗಿ ಇರುವವು—

(1) ಚಿರಸ್ಥಾಯಿ ಫಂಡು. (2) ಬಳಿಕೆಯ ಫಂಡು.

3 ನೇ ಕಲಮಿನ ಪ್ರಕಾರ ಮಹಾಸಭೆಯ ಆಶ್ರಯದಾತರಿಂದಲೂ, ಸನ್ಮಾನ್ಯ ಆಜೀವ ಸದಸ್ಯರಿಂದಲೂ ಬಂದ ಹಣವು ಮಹಾಸಭೆಯ ಚಿರಸ್ಥಾಯಿ ಫಂಡು ಎನಿಸಿಕೊಳ್ಳುವದು. ಉಳಿದ ಸದಸ್ಯರಿಂದಲೂ, ಬೇರೆ ರೀತಿಯಾಗಿಯೂ ಬಂದ ಹಣವೆ ಬಳಿಕೆಯ ಫಂಡು ಎನಿಸಿಕೊಳ್ಳುವದು.

(10) ಚಿರಸ್ಥಾಯಿ ಫಂಡಿನ ಆಡಳಿತವು ಮಧ್ಯವರ್ತಿ ಮಂಡಲದ ವ್ಯವಸ್ಥೆಗೆ ಒಳಪಟ್ಟಿರತಕ್ಕದ್ದು.

(11) ಈ ಫಂಡಿನ ಮೂಲ ಧನವನ್ನು ಯಾವದೊಂದು ಕಾರ್ಯಕ್ಕೆ ವಿನಿಯೋಗಿಸದೆ ಮಧ್ಯವರ್ತಿ ಕಾರ್ಯಕಾರೀ ಮಂಡಲದ ತೀರ್ಮಾನದಂತೆ ಸರಕಾರೀ ಅಥವಾ ಸಹಕಾರೀ (ಕೋ-ಆಪರೇಟಿವ್ಹ) ಬ್ಯಾಂಕುಗಳಲ್ಲಿ ಇಡಬಹುದು, ಅಥವಾ ಸರಕಾರೀ ಅಥವಾ ಸಹಕಾರೀ (ಕೋ-ಆಪರೇಟಿವ್ಹ) ಸೆಕ್ಯುರಿಟಿಗಳನ್ನು ಕೊಳ್ಳಬಹುದು. ಈ ಫಂಡಿನ ವಾರ್ಷಿಕ ಬಡ್ಡಿಯನ್ನು ಅಥವಾ ಅದರ ಭಾಗವನ್ನು ಮಧ್ಯವರ್ತಿ ಕಾರ್ಯಕಾರೀ ಮಂಡಲದವರು ಮಹಾಸಭೆಯ ಅಧಿವೇಶನದ ವೆಚ್ಚಕ್ಕಾಗಿ ಮಹಾಸಭೆಯನ್ನು ನೆರವೇರಿಸುವ ಸ್ವಾಗತ ಮಂಡಲಿಯ ವಶಕ್ಕೆ ಕೊಡತಕ್ಕದ್ದು. ಬಡ್ಡಿಯಲ್ಲಿ ಏನಾದರೂ ಉಳಿದರೆ ಅದನ್ನು ಚಿರಸ್ಥಾಯಿ ಫಂಡಿನ ಮೂಲಕ ಧನದಲ್ಲಿ ಸೇರಿಸುತ್ತ ಹೋಗಬೇಕು.

(12) ಬಳಿಕೆಯ ಫಂಡನ್ನು ಆಯಾ ಪ್ರಾಂತಿಕ ಕಾರ್ಯಕಾರೀ ಮಂಡಲದವರು ತಮ್ಮ ಪ್ರಾಂತದ ಸಭಾಸದರಿಂದ ವಸೂಲ ಮಾಡತಕ್ಕದ್ದು. ಆಯಾ ಪ್ರಾಂತದ ಬಳಿಕೆಯ ಫಂಡುಗಳು ಆಯಾ ಪ್ರಾಂತದ ಪ್ರಾಂತಿಕ ಕಾರ್ಯಕಾರೀ ಮಂಡಲದ ಆಡಳಿತದಲ್ಲಿ ಇರತಕ್ಕದ್ದು. ಈ ಮಂಡಲಗಳು ತಮ್ಮ ಫಂಡಿನ $\frac{3}{4}$ ಭಾಗವನ್ನು ಮಹಾಸಭೆಯ ನಿರ್ಣಯಗಳನ್ನು ನಡೆವಳಿಕೆಯಲ್ಲಿ ತರಲಿಕ್ಕೂ ಮಹಾಸಭೆಯ ಉದ್ದೇಶಕ್ಕನುಸರಿಸಿ ಇತರ ಪ್ರಚಾರ ಕಾರ್ಯಕ್ಕೂ ವೆಚ್ಚಮಾಡಲಿಕ್ಕೆ ಇಟ್ಟುಕೊಂಡು, ಉಳಿದ $\frac{1}{4}$ ಭಾಗವನ್ನು ಮಧ್ಯವರ್ತಿ ಕಾರ್ಯಕಾರೀ ಮಂಡಲಕ್ಕೆ ಕೊಡತಕ್ಕದ್ದು. ಹೀಗೆ ಯಾವತ್ತು ಪ್ರಾಂತಿಕ ಕಾರ್ಯಕಾರೀ ಮಂಡಲಗಳಿಂದ ಬಂದ ಹಣವನ್ನೂ 22ನೇ ನಿಯಮದ ಪ್ರಕಾರ ಸ್ವಾಗತ ಮಂಡಲದಿಂದ ಬಂದ ಹಣವನ್ನು ಈಗ ಸ್ಟ್ಯಾಂಡಿಂಗ ಕಮಿಟಿಯವರ ವಶದಲ್ಲಿರುವ ಹಣವನ್ನೂ, ಧಾರವಾಡ ಲಿಂಗಾಯತ ಎಜ್ಯುಕೇಶನ್ ಅಸೋಸಿಯೇಶನ್ನದವರಿಗೆ ಸಾಲವೆಂದು ಕೊಟ್ಟ ಹಣವನ್ನು ಬಳಿಕೆಯ ಫಂಡೆಂದು ತಿಳಿದುಕೊಂಡು ಮಧ್ಯವರ್ತಿ ಕಾರ್ಯಕಾರೀ ಮಂಡಲದವರು ಮಹಾಸಭೆಯ ಉದ್ದೇಶಕ್ಕನುಸಾರವಾಗಿ ಉಪಯೋಗಿಸತಕ್ಕದ್ದು.

(13) ಪ್ರಾಂತಿಕ ಕಾರ್ಯಕಾರೀ ಮಂಡಲದವರು ತಾವು ಮಾಡಿದ ಕಾರ್ಯದ ವಿವರವನ್ನು (ರಿಪೋರ್ಟನ್ನು) ಮತ್ತು ತಮ್ಮ ಲೆಖ್ಖಪತ್ರಗಳ ತಖ್ತೆಗಳನ್ನು ಆಡಿಟರರ ರಿಪೋರ್ಟಿನೊಂದಿಗೆ ಪ್ರತಿ ವರ್ಷ ಮಧ್ಯವರ್ತಿ ಕಾರ್ಯಕಾರೀ ಮಂಡಲದವರಿಗೆ ಒಪ್ಪಿಸತಕ್ಕದ್ದು. ಇವುಗಳನ್ನು ಮತ್ತು ತಾವು ಮಾಡಿದ ಕಾರ್ಯದ ವಿವರವನ್ನು ತಮ್ಮ ಲೆಖ್ಖಪತ್ರ ಮತ್ತು ಆಡಿಟರರ ರಿಪೋರ್ಟ ಸಹಿತವಾಗಿ ಮಹಾಸಭೆಯ ಅಧಿವೇಶನದೊಳಗಾಗಿ ಮಧ್ಯವರ್ತಿ ಕಾರ್ಯಕಾರೀ ಮಂಡಲದವರು ಪ್ರಕಟಿಸತಕ್ಕದ್ದು.

(14) ಮಧ್ಯವರ್ತಿ ಕಾರ್ಯಕಾರೀ ಮಂಡಲವು ಮಹಾಸಭೆಯ ಅಧಿವೇಶನವು ಪ್ರತಿವರ್ಷ ಯಾವದಾದರೊಂದು ಸ್ಥಳದಲ್ಲಿ ಜರುಗುವಂತೆ ವ್ಯವಸ್ಥೆ ಮಾಡತಕ್ಕದ್ದು. ಮಹಾಸಭೆಯ ಅಧಿವೇಶನವು ಎಲ್ಲಿ ಕೂಡತಕ್ಕದ್ದೆಂಬದನ್ನು ಆಯಾ ಸ್ಥಳಗಳ ಅನುಕೂಲಿಕ ಪರಿಸ್ಥಿತಿಗಳನ್ನು ನೋಡಿಕೊಂಡು ಮಧ್ಯವರ್ತಿ ಕಮಿಟಿಯವರೇ ನಿರ್ಣಯಿಸತಕ್ಕದ್ದು.

(15) ಮಹಾಸಭೆಯ ಅಧಿವೇಶನವು ಯಾವ ಸ್ಥಳದಲ್ಲಿ ನಡೆಯತಕ್ಕದ್ದಿರುವದೋ ಅಲ್ಲಿಯ ಅಧಿವೇಶನದ ಸಲುವಾಗಿ ಒಟ್ಟು ಖರ್ಚು ಎಷ್ಟಾಗುವದೆಂಬದರ ಬಗ್ಗೆ ಅಲ್ಲಿಯ ಸ್ವಾಗತ ಮಂಡಲದವರಿಂದ (ರಿಪೋರ್ಟ) ವರದಿ ತರಿಸಿಕೊಂಡು ಚಿರಸ್ಥಾಯಿ ಫಂಡಿನ ಉತ್ಪನ್ನದೊಳಗಿಂದ ಯೋಗ್ಯ ಹಣವನ್ನು ಮಂಜೂರು ಮಾಡಿಕೊಡತಕ್ಕದ್ದು.

(16) ಈ ಮಂಡಲದವರು ಮಹಾಸಭೆಯಲ್ಲಿ ಪಾಸಾದ ನಿರ್ಣಯಗಳನ್ನು ಪ್ರಾಂತಿಕ ಕಾರ್ಯಕಾರೀ ಮಂಡಲದವರಿಂದ ಪ್ರಚಾರದಲ್ಲಿ ತರಿಸಬೇಕು.

(17) ಮಹಾಸಭೆಯ ಅಧಿವೇಶನವು ಮುಗಿದನಂತರ ಅದರ ಚಾಲಕರ ಕಡೆಯಿಂದ ಆ ಬಗ್ಗೆ ರಿಪೋರ್ಟ ಮತ್ತು ಲೆಖ್ಖಪತ್ರಗಳನ್ನು 3 ತಿಂಗಳೊಳಗಾಗಿ ಪ್ರಕಟವಾಗುವಂತೆ ಮಾಡತಕ್ಕದ್ದು.

(18) ಪ್ರಾಂತಿಕ ಕಾರ್ಯಕಾರೀ ಮಂಡಲಗಳ ಕರ್ತವ್ಯಗಳು :—

ಈ ಮಂಡಲದವರು ಮಹಾಸಭೆಯ ಎಲ್ಲ ತರಗತಿಗಳ ಸದಸ್ಯರಿಂದ ಹೆಚ್ಚಿಸಲಿಕ್ಕೆ ಪ್ರಯತ್ನ ಮಾಡತಕ್ಕದ್ದು ಮತ್ತು ಅವರಿಂದ ದೇಣಿಗೆಯನ್ನು ಅಥವಾ ವರ್ಗಣಿಯನ್ನು ಎತ್ತತಕ್ಕದ್ದು ಮತ್ತು ಆಶ್ರಯದಾತರ ಮತ್ತು ಸನ್ಮಾನ್ಯ ಸಜೀವ ಸದಸ್ಯರ ದೇಣಿಗೆ ಹಣವನ್ನು ಚಿರಸ್ಥಾಯಿ ಫಂಡಿಗೆ ಆಗಿಂದಾಗ ಕೂಡಿಸುವದಕ್ಕಾಗಿ ಮಧ್ಯವರ್ತಿ ಕಾರ್ಯಕಾರೀ ಮಂಡಲದ ಸೆಕ್ರೆಟರಿಯವರ ಕಡೆಗೆ ಕಳಿಸತಕ್ಕದ್ದು. ಬೇರೆ ದೇಣಿಗೆಯ ಹಣ ಮತ್ತು ವಾರ್ಷಿಕ ವರ್ಗಣಿಯ ಹಣದ $\frac{3}{4}$ ಭಾಗವನ್ನು ತಾವು ಇಟ್ಟುಕೊಂಡು ಉಳಿದ $\frac{1}{4}$ ಭಾಗವನ್ನು ಮಧ್ಯವರ್ತಿ ಕಾರ್ಯಕಾರೀ ಮಂಡಲಿಯ ಸೆಕ್ರೆಟರಿಯವರ ಕಡೆಗೆ ಕಳಿಸತಕ್ಕದ್ದು.

(19) (ಅ) ಮಹಾಸಭೆಯ ಅಧಿವೇಶನಕ್ಕೆ ಆಯಾಯ ಪ್ರಾಂತಿಕ ಕಾರ್ಯಕಾರೀ ಮಂಡಲದವರು ಸಾಮಾನ್ಯ ಹಾಗೂ ಸನ್ಮಾನ್ಯ ಆಜೀವ ಸದಸ್ಯರಿಂದ ಪ್ರತಿನಿಧಿಗಳನ್ನು ಆರಿಸಿ ಅವರ ಹೆಸರುಗಳನ್ನು ವರ್ಕಿಂಗ ಕಮಿಟಿಯ ಸೆಕ್ರೆಟರಿಯವರ ಕಡೆಗೆ ಅಧಿವೇಶನದ 1 ತಿಂಗಳ ಮುಂಚೆ ಕಳಿಸತಕ್ಕದ್ದು. (ಬ) ಮತ್ತು ಮುಂದಿನ ವರ್ಷದ ಆ ಪ್ರಾಂತಿಕ ಕಮಿಟಿಯ ಸದಸ್ಯರನ್ನು ಮಹಾಸಭೆಯ ಸಾಮಾನ್ಯ ಮತ್ತು ಸನ್ಮಾನ್ಯ ಆಜೀವ ಸದಸ್ಯರಿಂದ ಆರಿಸಿ ಅಧಿವೇಶನದ 1 ತಿಂಗಳ ಮುಂಚೆ ಕಳಿಸತಕ್ಕದ್ದು.

(20) ಮಹಾಸಭೆಯಲ್ಲಿ ಆದ ನಿರ್ಣಯಗಳನ್ನು ತಮ್ಮ ಕಮಿಟಿಯ ಮುಖಾಂತರವಾಗಲಿ, ಅಥವಾ ಜಿಲ್ಹಾ ಮತ್ತು ತಾಲ್ಲೂಕು ಕಮಿಟಿಗಳ ಮುಖಾಂತರವಾಗಲಿ 16 ನೇ ಕಲಮಿನ ಅನ್ವಯ ಜಾರಿಯಲ್ಲಿ ತರತಕ್ಕದ್ದು.

(21) ತಮ್ಮ ಆಡಳಿತದಲ್ಲಿದ್ದ ಬಳಿಕೆಯ ಫಂಡಿನ ಲೆಖ್ಖವನ್ನು ಇಟ್ಟು ಮಧ್ಯವರ್ತಿ ಮಂಡಲದವರ ಕಡೆಗೆ ಮಹಾಸಭೆಯ ಅಧಿವೇಶನಕ್ಕಿಂತ 1 ತಿಂಗಳ ಮೊದಲು ಆಯವ್ಯಯದ ಪತ್ರಿಕೆಯನ್ನು ಕಳಿಸತಕ್ಕದ್ದು.

(22) ಮಹಾಸಭೆಯ ಅಧಿವೇಶನವನ್ನು ಜರುಗಿಸಲಿಚ್ಛಿಸುವವರು ತಮ್ಮ ಜಿಲ್ಲೆಯ ಪ್ರಮುಖ ಜನರ ಒಪ್ಪಿಗೆಯಿಂದ ಒಂದು ವರ್ಕಿಂಗ ಕಮಿಟಿಯನ್ನು ನೇಮಿಸಿಕೊಂಡು ಆ ಕಮಿಟಿಯ ಮುಖಾಂತರ ಅಧಿವೇಶನದ ಸಂಬಂಧ ಎಲ್ಲ ಕಾರ್ಯಗಳನ್ನು ನಡಿಸತಕ್ಕದ್ದು. ಈ ಮಂಡಲದವರು ಒಬ್ಬ ಚೇರ್ಮನ್ನರನ್ನೂ ಮತ್ತು ತಮಗೆ ಬೇಕಾಗುವಷ್ಟು ಸೆಕ್ರೆಟರಿಗಳನ್ನೂ ಮತ್ತು ಸಬ ಕಮಿಟಿಗಳನ್ನೂ ಆರಿಸಿಕೊಳ್ಳತಕ್ಕದ್ದು. ಆದಷ್ಟು ತೀವ್ರ ಸ್ವಾಗತ ಕಮಿಟಿಯನ್ನು ಮಾಡಿ, ವರ್ಕಿಂಗ ಕಮಿಟಿಯನ್ನು ಸ್ವಾಗತ ಮಂಡಲವಾದನಂತರ ರದ್ದು ಮಾಡತಕ್ಕದ್ದು. ಆ ಜಿಲ್ಲೆಯ ಪ್ರಮುಖ ಜನರೇ ಮಹಾಸಭೆಯ ಸ್ವಾಗತ ಮಂಡಲದ ಸದಸ್ಯರನ್ನೂ, ಅದರ ಚೇರ್ಮನ್ನರನ್ನೂ ಆರಿಸತಕ್ಕದ್ದು. ಆ ಜಿಲ್ಲೆಯ ಸನ್ಮಾನ್ಯ ಆಜೀವ ಸದಸ್ಯರೆಲ್ಲಾ ಸ್ವಾಗತ ಮಂಡಲದ ಸದಸ್ಯರಿರತಕ್ಕದ್ದು. ಇವರು ಏನೂ ದೇಣಿಗೆಯನ್ನು ಕೊಡತಕ್ಕದ್ದಿರುವದಿಲ್ಲ. ಸ್ವಾಗತ ಮಂಡಲದ ಉಳಿದ ಸದಸ್ಯರು ಪ್ರತಿಯೊಬ್ಬರು 10 ರೂ. ಅಥವಾ ಅದಕ್ಕೂ ಹೆಚ್ಚಾದ ದೇಣಿಗೆಯನ್ನು ಕೊಡತಕ್ಕದ್ದು.

(23) ಸ್ವಾಗತ ಕಮಿಟಿಯವರು ಮಧ್ಯವರ್ತಿ ಕಾರ್ಯಕಾರೀ ಮಂಡಲದ ಒಪ್ಪಿಗೆಯಿಂದ (1) ಮಹಾಸಭೆಯ ಅಧ್ಯಕ್ಷರನ್ನು ಆರಿಸತಕ್ಕದ್ದು. ಮತ್ತು (2) ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(24) ಅಧಿವೇಶನದ ವೆಚ್ಚಕ್ಕೆ ಚಿರಸ್ಥಾಯೀ ಫಂಡಿನಿಂದ ದೊರೆತ ಹಣವನ್ನೂ ಸ್ವಾಗತ ಕಮಿಟಿಯ ಸದಸ್ಯರ, ಪ್ರತಿನಿಧಿಗಳ (Delegates) ಪ್ರೇಕ್ಷಕರ ಕಡೆಯಿಂದ ಬಂದ ಹಣವನ್ನೂ ಉಪಯೋಗಿಸತಕ್ಕದ್ದು.

(25) ಮಹಾಸಭೆಯ ಅಧಿವೇಶನವು ತೀರಿದ 1 ತಿಂಗಳ ಒಳಗಾಗಿ ತಮ್ಮ ಆಯವ್ಯಯಗಳ ಲೆಖ್ಖವನ್ನು ವರ್ಕಿಂಗ್ ಕಮಿಟಿಯವರು ಮಧ್ಯವರ್ತಿ ಕಾರ್ಯಕಾರೀ ಮಂಡಲಕ್ಕೆ ಒಪ್ಪಿಸತಕ್ಕದ್ದು, ಮತ್ತು ಖರ್ಚು ಹೋಗಲಾಗಿ ಉಳಿದ ಹಣವನ್ನು ಅವರ ಕಡೆಗೇ ಕಳಿಸತಕ್ಕದ್ದು.

(26) ಆಶ್ರಯದಾತರು ಮತ್ತು ಆಜೀವ ಸನ್ಮಾನ್ಯ ಸದಸ್ಯರು ಆಯಾ ಪ್ರಾಂತಗಳಿಂದ ಮಹಾಸಭೆಗೆ ಪ್ರತಿನಿಧಿಗಳೆಂದು ತಿಳಿಯತಕ್ಕದ್ದು. ಇವರು ಪ್ರತಿನಿಧಿಗಳು ಕೊಡಬೇಕಾದ ಫೀ ಕೊಡಬೇಕಾಗುವದಿಲ್ಲ. ಉಳಿದ ಪ್ರತಿನಿಧಿಗಳು ಒಬ್ಬರು 5 ರೂ. ಫೀ ಕೊಡಬೇಕಾಗುವದು. ಪ್ರೇಕ್ಷಕರು 2 ರೂ. ಫೀ ಕೊಡಬೇಕಾಗುವದು.

(27) ತಾಲ್ಲೂಕಾ ಮತ್ತು ಜಿಲ್ಹಾ ಕಮಿಟಿಗಳು—8 ನೇ ನೇಮದ ಪ್ರಕಾರ ಉಂಟಾದ ತಾಲ್ಲೂಕ ಮತ್ತು ಜಿಲ್ಹಾ ಕಮಿಟಿಯವರು ವರ್ಗಣಿಯನ್ನು ಕೂಡಿಸಿ ಆಗಿಂದಾಗ್ಗೆ ಪ್ರಾಂತಿಕ ಕಮಿಟಿಯ ಕಡೆಗೆ ಹಣವನ್ನು ಮತ್ತು ತಿಂಗಳಿಗೊಮ್ಮೆ ತಮ್ಮ ಕೆಲಸದ ಮತ್ತು ಆಯವ್ಯಯದ ಪತ್ರಿಕೆಯನ್ನು ಕಳಿಸತಕ್ಕದ್ದು. ಮತ್ತು ಆಯಾಯ ತಾಲ್ಲೂಕ ಮತ್ತು ಜಿಲ್ಹಾ ಕಮಿಟಿಗಳಿಗೆ ಅದರ ವೆಚ್ಚಕ್ಕಾಗಿ ಬೇಕಾಗಬಹುದೆಂದು ಪ್ರಾಂತಿಕ ಕಮಿಟಿಯವರು ನಿರ್ಣಯಿಸಿದ ಮೇರೆಗೆ ಆ ಆ ಕಮಿಟಿಯವರು ವೆಚ್ಚಮಾಡತಕ್ಕದ್ದು.

(28) ಲೆಖ್ಖಪತ್ರ ತಪಾಸಣೆ (Audit)—(ಅ) ಮಧ್ಯವರ್ತಿ ಕಮಿಟಿಯ ಲೆಖ್ಖ ತಪಾಸಣೆಯ ಬಗ್ಗೆ ಮಹಾಸಭೆಯಲ್ಲಿ ಆಡಿಟರನ್ನು ನೇಮಿಸತಕ್ಕದ್ದು. ಮುಂದಿನ ಸಭೆಯ ವರೆಗೆ ಅವರೇ ಕಾಯಂ ಇರತಕ್ಕದ್ದು. ಪ್ರಾಂತಿಕ ಕಮಿಟಿಯ ಲೆಖ್ಖ ತಪಾಸಣೆಯ ಬಗ್ಗೆ ಮಧ್ಯವರ್ತಿ ಕಮಿಟಿಯವರು ಪ್ರತಿವರ್ಷ ಆಡಿಟರನ್ನು ನೇಮಿಸತಕ್ಕದ್ದು. (ಬ) ಮಧ್ಯವರ್ತಿ ಕಮಿಟಿಯ ಹಾಗೂ ಪ್ರಾಂತಿಕ ಕಮಿಟಿಗಳ ಆಯವ್ಯಯದ ಲೆಖ್ಖಪತ್ರಗಳನ್ನು ಆಡಿಟರರ ಮುಖಾಂತರ ಪ್ರತಿ ಮೂರು ತಿಂಗಳಿಗೆ ತಪಾಸ ಮಾಡಿಸತಕ್ಕದ್ದು.

(29) ಯಾವದೇ ಕಮಿಟಿಯವರ ತಮ್ಮ ಕಡೆಗೆ ಯಾವದೇ ರೂಪದಿಂದ ಬಂದ ಹಣವನ್ನು ಆಗಿಂದಾಗ್ಗೆ 11 ನೇ ನಿಯಮಕ್ಕನುಸರಿಸಿ ಸರಕಾರೀ ಅಥವಾ ಸಹಕಾರೀ (ಕೋ-ಆಪರೇಟೀವ್) ಬ್ಯಾಂಕುಗಳಲ್ಲಿ ಇರತಕ್ಕದ್ದು. ಖಾಸಗೀ ರೀತಿಯಿಂದ ಯಾರ ಕಡೆಗೂ ಇಡತಕ್ಕದ್ದಲ್ಲ. ಆದರೆ ತಮ್ಮ ಕಮಿಟಿಯ ಅಗತ್ಯದ ಖರ್ಚಿಗಾಗಿ ಅದರ ಚೇರಮನ್‌ರು 20 ರೂ. ಗಳವರೆಗೆ ಇಟ್ಟುಕೊಳ್ಳಬಹುದು.

(30) ಪ್ರತಿಯೊಂದು ಕಮಿಟಿಯ ಲೆಖ್ಖಪತ್ರಗಳನ್ನು ಇಡುವ ಜವಾಬದಾರಿಯು ಚೇರಮನ್ ಮತ್ತು ಸೆಕ್ರೆಟರಿ ಇಬ್ಬರದು ಇರುತ್ತದೆ.

ಸಾಮಾನ್ಯ ನಿಯಮಗಳು.

(31) ಪ್ರತ್ಯೇಕ ಮಂಡಲದ ಅಥವಾ ಕಮಿಟಿಯ ಸಭೆಯಲ್ಲಿ ಕನಿಷ್ಠ ಪಕ್ಷಕ್ಕೆ $\frac{1}{4}$ ಸದಸ್ಯರು ಹಾಜರಾದರೆ ಸಭೆಯ ಕೆಲಸವನ್ನು ಜರುಗಿಸಲಿಕ್ಕೆ ಅಡ್ಡಿ ಇಲ್ಲ. ಇಷ್ಟು ಜನರು ಹಾಜರ ಇಲ್ಲದಿದ್ದರೆ ಸಭೆಯನ್ನು ನಿಯಮಿತ ತಾರೀಖಿಗೆ ಮುಂದುವರಿಸಬೇಕು. ಆ ತಾರೀಖಿಗೆ ಹಾಜರಿದ್ದ ಸದಸ್ಯರು ಸಭೆಯ ಕೆಲಸವನ್ನು ಜರುಗಿಸಬೇಕು.

(32) ಮಹಾಸಭೆಯಲ್ಲಿ (1) ಆಶ್ರಯದಾತರು (2) ಸನ್ಮಾನ್ಯ ಆಜೀವ ಸದಸ್ಯರು ಹಾಗೂ (3) ಪ್ರತಿನಿಧಿ ಇವರಿಗೆ ಮಾತ್ರ ಮತಕೊಡುವ ಅಧಿಕಾರವಿರುತ್ತದೆ. ಯಾವತ್ತು ಮಂಡಲಗಳ ಅಥವಾ ಕಮಿಟಿಗಳ ಸದಸ್ಯರಿಗೆ ಪ್ರತಿಯೊಬ್ಬರಿಗೆ ಒಂದು ಮತವಿರುವದು. ಸಭೆಗಳಲ್ಲಿ ಭಿನ್ನ ಅಭಿಪ್ರಾಯಗಳಿಗೆ ಸಮಾನ ಸಂಖ್ಯೆಗಳ ಮತಗಳು ಬಂದಾಗ ಅಧ್ಯಕ್ಷರಿಗೆ ಅಥವಾ ಚೇರಮನ್‌ರಿಗೆ ಹೆಚ್ಚಿನ ಒಂದು ಮತ (Casting Vote) ಕೊಡುವ ಅಧಿಕಾರವಿರಬೇಕು.

(33) ಪ್ರತ್ಯೇಕ ಮಂಡಲದ ಅಥವಾ ಕಮಿಟಿಯವರು ತಮ್ಮ ಕಾರ್ಯಗಳನ್ನು ಜರುಗಿಸಲಿಕ್ಕೆ ಈ ನಿಯಮಗಳಿಗೆ ವಿರೋಧ ಬಾರದ ಹಾಗೆ ಪೋಟ ನಿಯಮಗಳನ್ನು ಮಾಡಿಕೊಳ್ಳಬಹುದು.

(34) ಪ್ರತ್ಯೇಕ ಮಂಡಲವು ಅಥವಾ ಕಮಿಟಿಯು ಕಾರ್ಯನಿರ್ವಾಹಕ್ಕಾಗಿ ಕನಿಷ್ಠ ಪಕ್ಷಕ್ಕೆ ಮೂರು ತಿಂಗಳಿಗೆ ಒಂದು ಸಾರೆಯಾದರೂ ಸಭೆಯನ್ನು ನೆರೆಯಿಸತಕ್ಕದ್ದು.

(35) ಮೇಲಿನ ನಿಯಮಗಳಲ್ಲಿ ಹೆಚ್ಚು ಕಡಿಮೆ ಮಾಡುವ ಅಧಿಕಾರವು ಮಹಾಸಭೆಗೆ ಇರುವದು. ಜಿ. ಆರ್. ನಲವಡಿ

ಸ್ವಾಗತ ಸಂಘಾಧ್ಯಕ್ಷರು, 11ನೇ ಅ. ಭಾ. ವೀರಶೈವ ಮಹಾಸಭೆ, ಧಾರವಾಡ.

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ.

೧೮ ನೆಯ ಅಧಿವೇಶನ.

ಪ್ರಕಟಣೆ ೪

ಬರುವ ಡಿಸೆಂಬರ್ ತಿಂಗಳ ಕಡೆಯವಾರದಲ್ಲಿ ಮಡಿಕೇರಿಯಲ್ಲಿ ಜರಗತಕ್ಕ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧಿವೇಶನದ ಮುಂದೆ ಸಾಹಿತ್ಯ ಸಂಬಂಧವಾಗಿ ಪ್ರಬಂಧಗಳನ್ನು ಓದಲೂ ತತ್ಸಂಬಂಧವಾದ ಠರಾವುಗಳನ್ನು ತರಲೂ ಇಷ್ಟವಿರುವ ಸಾಹಿತ್ಯಾಭಿಮಾನಿಗಳು ತಂತಮ್ಮ ಪ್ರಬಂಧಗಳನ್ನೂ ಠರಾವುಗಳನ್ನೂ ತಾ|| 15-12-1932 ರೊಳಗೆ ಶ್ರೀ ಒಡ್ಡಮನೆ ಅಪ್ಪಾರಾವ ಶಾಸ್ತ್ರಿ, ಸಾಹಿತ್ಯ ಕಮಿಟಿಯ ಕಾರ್ಯದರ್ಶಿ, ಹೈಸ್ಕೂಲು, ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಿ ಕೊಡಬೇಕಾಗಿ ಈ ಮೂಲಕ ವಿಜ್ಞಾಪಿಸಿಕೊಳ್ಳಲಾಗಿದೆ. ಪ್ರಬಂಧಗಳನ್ನು ಅಧಿವೇಶನದ ಮುಂದೆ ಓದಲು ಬಿಡುವ ಹಕ್ಕೂ ಅವುಗಳನ್ನು ಲೇಖಕ ಕರ್ತೃಗಳಿಗೆ ಮರಳಿಸುವ ಹಕ್ಕೂ ವಿಷಯನಿಯಾಮಕ ಮಂಡಲದ ಕೈಯಲ್ಲಿರುತ್ತದೆ.

ಮೇಲೆ ನಮೂದಿಸಿದ ತಾರೀಖಿನೊಳಗೆ ತಪ್ಪದೆ ಪ್ರಬಂಧಗಳನ್ನಾಗಲೀ ಠರಾವುಗಳನ್ನಾಗಲೀ ರವಾನಿಸಿಕೊಡಬೇಕಾಗಿ ವಿನಂತಿ.

ಮಡಕೇರಿ, ಕ. ಸಾ. ಪ. ಸ್ವಾ.

ಮಂಡಲ, ಶಕ ೧೮೫೪, ಜಂಟಿಕಾರ್ಯದರ್ಶಿಗಳು.

ಕಾರ್ತಿಕ ಬಹುಳ ಸಪ್ತಮಿ.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ. ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ

32 M. C

ಪ್ರಕಟಣೆ.

ವಿಜಾಪುರ "ಶಿವಾನುಭವ ಗ್ರಂಥಮಾಲೆ" ವೀರಶೈವ ತತ್ವಗ್ರಂಥಗಳ ಬ್ರ್ಯಾಂಚ ಡಿಪೊ ಮೈಸೂರು ಪ್ರಾಂತದವರೆಲ್ಲರಿಗೂ ಅನುಕೂಲವಾಗಲೆಂಬ ಉದ್ದೇಶದಿಂದ ಬೆಂಗಳೂರಿನಲ್ಲಿ ಏರ್ಪಡಿಸಿರುತ್ತೆ. ಬೇಕಾದವರು ಅಲ್ಲಿಂದಲೇ ಮೂಲ ಕಿಮ್ಮತ್ತಿಗೆ ತರಿಸಿಕೊಳ್ಳಬಹುದು.

ಅಡ್ರೆಸ್ಸು :—ಕೆ. ನಾಗಪ್ಪ, ಬ. ವಿಶ್ವನಾಥಪ್ಪ, ಶ್ರೀ ಸರ್ಪಭೂಷಣ ಶಿವಯೋಗಿಗಳ ಮಠ, ಅಣ್ಣಮ್ಮದೇವರ ಗುಡಿ ಬೀದಿ, ಬೆಂಗಳೂರು ಸಿಟಿ.

[12—2] ಮತ್ತು ಹಿತಚಿಂತಕ ಪ್ರಿಂಟಿಂಗ್ ಪ್ರೆಸ್, ವಿಜಾಪುರ.

೧೯೩೨ ನೆಯ ಇಸವಿ ಡಿಸೆಂಬರ್ ತಾ|| ೫ ರಿಂದ ಡಿಸೆಂಬರ್ ತಾ|| ೧೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಮಾರ್ಗಶಿರ ಶುದ್ಧ ಅಷ್ಟಮಿಯಿಂದ ಮಾರ್ಗಶಿರ ಶುದ್ಧ ಚತುರ್ದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿಕ ಮಾಸ
5	[1] ಸೋಮ	ಅಷ್ಟ	31-39	ಶತ	3-41	21
6	ಮಂಗಳ	ನವ	32-57	ಪೂಭಾ	6-48	22
7	ಬುಧ	ದಶ	35-23	ಉಭಾ	9-7	23
8	[2] ಗುರು	ಏಕಾ	39-13	ರೇವ	13-19	24
9	[3] ಶುಕ್ರ	ದ್ವಾದ	43-48	ಅಶ್ವಿ	19-5	25
10	ಶನಿ	ತ್ರಯೋ	49-7	ಭರ	25-16	26
11	[4] ಭಾನು	ಚತು	60	ಕೃತ್ತಿ	31-50	27

(1) ಮಳೆನಕ್ಷತ್ರ-ಜ್ಯೇಷ್ಠ ೨ ನೆಯಪಾದ. (2) ಮಾರ್ಗಶಿರ ಏಕಾದಶೀ ವ್ರತ, ಮಳೆನಕ್ಷತ್ರ-ಜ್ಯೇಷ್ಠ ೪ ನೆಯ ಪಾದ. (3) ಸಂಜನಕೋಡಿಹಳ್ಳಿ ಶ್ರೀಕಂಠಮುನಿ ಉತ್ಸವ. (4) ಶಿವಯೋಗ.

ಮೈಸೂರು : ವೈ. ಬಸವಾರಾಧ್ಯಯ್ಯನವರಿಂದ ಶ್ರೀ ಸಿದ್ಧಲಿಂಗ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG NO. M. 124.

ಮೈಸೂರ್ ಸ್ಟಾರ್.

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕ್ಕಾವತಾರಾ ಪತ್ರಿಕಾ ನಕ್ಷತ್ರ ಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಕೀಲ ಪಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತುಳಿಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೨ ನೆಯ ಇಸವಿ ಡಿಸೆಂಬರ್ ತಾರೀಖು ೧೨ ನೆಯ ಸೋಮವಾರ [ಸಂಚಿಕೆ ೫೦

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore. (Sd.) S. SHA MANNA,

Secretary, Insurance Committee.

[50—23]



[50—6]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿವಾ	೦—೪—೦	೦—೯—೦
ಚಾರುಶೀಲಚರಿತ್ರೆ	೦—೫—೦	೦—೧೦—೦
ಹರಿಹಾಸ	೦—೪—೦	೦—೯—೦
ವ್ರತಸಂಚಿಕ	೦—೪—೦	೦—೯—೦
ಗುರುಶಂಕರೇಶ್ವರಚರಿತೆ	೦—೧—೦	೦—೬—೦
ಬಸವೇಶ್ವರವಚನ	೦—೮—೦	೦—೧೩—೦
ಸಟೀಕ ಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೦—೧—೦	೦—೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಕ್ಕಾಗಿ ಕ್ಷೀಣರಾಗ ಬೇಡಿರಿ. | ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ | ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ರಜಿ] ವಜ್ರಾಂಗ ಸುಂದರಪಾಕದ. [ಪ್ಟರ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪರ್ಮಾ, ಗರ್ಮಿದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವು, ಹಿಡಿ ಕಡಿಮೆಯಾಗೋದು, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ. ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ಶರೀರಕ್ಕೆ ತರುಣರಂತೆ ಕಾಂತಿ ಜಾಸ್ತಿ ಆಗುತ್ತದೆ. ಶೌಚಕ್ಕೆ ಸಾಫಾಗಿ, ಹಸಿವೆ, ಸ್ಮರಣಶಕ್ತಿ ಮತ್ತು ತಮ್ಮ ತೂಕ ಬೆಳೆಯುತ್ತದೆ. ಇದರಿಂದ ಪುರುಷರವೀರ್ಯಶುದ್ಧಿ ಯಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀರೋಗನಿವಾರಣೆ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ, ಗರ್ಭಾಶಯವು ಶುದ್ಧಿಯಾಗುತ್ತದೆ. ಇಷ್ಟಾದಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು? ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೪೨ ಗೋಲಿಯ ಒಂದು ಡಬ್ಬಿಗೆ ೫| ರೂಪಾಯಿ. ಟಪಾಲು ಖರ್ಚು ೧೫ ಆಣೆ. ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರು, ೫೨ ವನಸ್ಪತಿಗಳ ಹೆಸರು ಮತ್ತು ಟಿಕ್ಕೀನು ಪಾಕದ ಕೂಡ ಕಳಿಸುವ ಅನುಪಾನ ಪತ್ರಿಕೆಯಲ್ಲಿ ಖುಲಾಸಾ ಅದೆ, ಓದಿಕೊಳ್ಳಿರಿ.

ಸ್ತ್ರೀ ರೋಗ ನಿವಾರಣೇ ಚೂರ್ಣ.

ಎಲ್ಲ ಬಣ್ಣದ ಸೆರಗು, ಮುಡಿಚೆಟ್ಟು ಆಗುವದು ಅನಿಯಮಿತತನ, ಹೆಚ್ಚು ಕಡಿಮೆಗಂಟುಗಂಟು ಮುಡಿಚೆಟ್ಟು ಆಗೋದು, ಮುಡಿಚೆಟ್ಟು ಆಗುವ ಕಾಲಕ್ಕೆ, ಮೊದಲು ಹಿಂದುಗಡೆ, ಕಿಬ್ಬೊಟ್ಟೆಯಲ್ಲಿ, ನಡುವಿನಲ್ಲಿ, ಬೆನ್ನಿನಲ್ಲಿ, ತಲೆಯಲ್ಲಿ ಶೂಲಿ, ಮನಸ್ಸು ಗಾಬರಿಯಾಗೋದು, ಎದೆ ಹಾರೋದು, ಉಷ್ಣತೀಜೋರಜ್ವರ, ಮಲಾವರೋಧ, ಗರ್ಭಾಶಯದೋಷ, ಗರ್ಭಧಾರಣೆ ಆಗದೆ ಇರೋದು, ಗರ್ಭಪಾತವಾಗೋದು, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಗುವದಕ್ಕಿಂತ ಮುಂಚೆ ಇದ್ದ ಗೃಹದೇವತೆಗೆ ಇದೇ ಔಷಧ ಅವಶ್ಯ ಕೊಡಿರಿ. ೪೦ ವರ್ಷದ ಸ್ತ್ರೀಯರಿಗಾದರೂ ಶಾಸ್ತ್ರದಿಂದ ಸಂತತಿಯಾಗುತ್ತದೆ. ೨೧ ದಿವಸ ಸಾಲುವ ಪೂರ್ಣಗುಣವುಳ್ಳ ೨೧ ಗೋಲಿಯ ಒಂದು ಡಬ್ಬಿಗೆ ೪ ರೂಪಾಯಿ. ಟ. ಖ. ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

ಯಾರ ಮೈಕಟ್ಟು ನಾಜೂಕ ಅದೆ ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಅತಿ ತೀವ್ರ ಅದೆ ಮತ್ತು ಪ್ರಸೂತಿ ಕಷ್ಟವನ್ನು ಸಹಿಸಲಾಗುವದಿಲ್ಲ ಮತ್ತು ಯಾರನ್ನು ತಿಯಲ್ಲಿ ಹೆಚ್ಚು ಸಂತತಿಯಾಗಿ ದುಃಖದಾಯಕವಾಗುತ್ತದೋ ಮತ್ತು ಯಾವ ಸ್ತ್ರೀಯರಿಗೆ ಭಯಂಕರ ಬಂಜೆತನವಿದೋ, ಇಂಥ ಬೇರೆ ಕಾರಣದಿಂದ ಸಂತತಿ ಇಚ್ಛಾ ಯಾರಿಗೆ ಇರಿರುತ್ತದೋ, ಅವರಿಗೆ ಈ ಉಪಾಯವು ಬಹಳ ಹಿತಕರ ಅದೆ. ಶರೀರದಲ್ಲಿಯೂ ಯಾವ ... ಮುಡಿಚೆಟ್ಟು ಆಗುವದು ಶುರು ಇದ್ದು ಗರ್ಭಧಾರಣ ಬಂದು ಹೋಗುವದು. ಹಿಂದಿನಿಂದ ... ಶುರು ಆಗುವದಿಲ್ಲ ಹೀಗೆ ಸಾಮರ್ಥ್ಯ ಅದೆ. ಪೂರ್ಣಪಾಠ ಮಾಡಿ ತರಿಸಿಕೊಳ್ಳಿರಿ. ಪೂರ್ಣ ಗುಣಕಾರಿ ಒಂದು ಡಬ್ಬಿಗೆ ೬ ರೂ. ಟ. ಖ. ೮ ಆಣೆ. ಮತ್ತು ... ಮುಂದಾಗಿ ೧, ತಿಂಗಳಿಗೆ ... ಸತ್ಯ ಸಂಗತಿ. ... ಆರೋಗ್ಯ ... ತರಿಸಿಕೊಳ್ಳಿರಿ.

[50—50]

ಪತ್ತಾ ಮಾಲಕ :—ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜ ಎಂ. ಎಸ್ ಎಂ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿದು ಬಿಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥ ವಾಗುವ ವ್ಯಾಧಿಗಳು ಯಾವವೆಂದರೆ—ಶಿರಶೂಲೆ, ಒಂಟಿತಲೆನೋವು ತಲೆಸುತ್ತು, ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂಗು ...

ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಇಟ್ಟುಕೊಂಡು ... ಮಾಡಿರಿ ಹೀಗೆ ಪುನಃ ... .

ಬುಡ್ಡಿ ಒಂದಕ್ಕೆ ಕ್ರಯ ರೂ. ೦—೪—೦. ವಿ. ಪಿ. ೦—೯—೦

ಡಜನ್ ೧೨ಕ್ಕೆ ಕ್ರಯ ರೂ. ೨—೮—೦. ವಿ. ಪಿ. ಖರ್ಚು ೮ ಆಣೆ.

ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸ್ಪಷ್ಟವಾಗಿ ಬರೆಯುವಂತೆ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[೪—೧೬] ಪೋ. ಬಾ. ೫೧೧, ಮದರಾಸು.

(5) ಮಧ್ಯವರ್ತಿ ಕಾರ್ಯಕಾರೀ ಮಂಡಲದ ಮತ್ತು ಪ್ರಾಂತಿಕ ಮಂಡಲಗಳ ಮೊದಲಿನ ಸದಸ್ಯರನ್ನು ಮಹಾಸಭೆಯವರು ಈ ಅಧಿವೇಶನದಲ್ಲಿ ನೇಮಿಸತಕ್ಕದ್ದು. ಮುಂದೆ ಪ್ರತಿ ವರ್ಷ ಮಧ್ಯವರ್ತಿ ಮಂಡಲದ ಸದಸ್ಯರನ್ನು ಮಹಾಸಭೆಯ ಅಧಿವೇಶನದಲ್ಲಿಯೇ ಆರಿಸತಕ್ಕದ್ದು. ಪ್ರಾಂತಿಕ ಕಾರ್ಯಕಾರೀ ಮಂಡಲದ ಸದಸ್ಯರನ್ನು ಆಯಾ ಪ್ರಾಂತದ ಮಹಾಸಭೆಯ ಸದಸ್ಯರು ಮಹಾಸಭೆಯ ಅಧಿವೇಶನಕ್ಕಿಂತ 2 ತಿಂಗಳು ಮೊದಲು ಆರಿಸಿ, ಅವರ ಹೆಸರುಗಳನ್ನು ಮಧ್ಯವರ್ತಿ ಕಾರ್ಯಕಾರೀ ಮಂಡಲಕ್ಕೆ ತಿಳಿಸತಕ್ಕದ್ದು. ಇವರ ಹೆಸರನ್ನು ಮಹಾಸಭೆಯಲ್ಲಿ ಪ್ರಕಟಮಾಡಿದನಂತರ ಇವರು ಅಧಿಕಾರಾರೂಢರಾಗುವರು.

(6) ಮಧ್ಯವರ್ತಿ ಕಾರ್ಯಕಾರೀ ಮಂಡಲದ ಸದಸ್ಯರು ಕೆಳಗಿನ ಪ್ರಮಾಣದಿಂದ ಆರಿಸಲ್ಪಡತಕ್ಕದ್ದು.

(1) ಮುಂಬಯಿ ದಕ್ಷಿಣ ಕರ್ನಾಟಕ 7 (2) ಮುಂಬಯಿ ಉತ್ತರ ಕರ್ನಾಟಕ 3 (3) ಮುಂಬಯಿ ಮಹಾರಾಷ್ಟ್ರ 4 (4) ಮೈಸೂರು ಸಂಸ್ಥಾನ 4 (5) ಕೊಡಗು 1 (6) ಮದ್ರಾಸು ಇಲಾಖೆ 3 (7) ನಿಜಾಮ ಇಲಾಖೆ 4 (8) ವರ್ಹಾಡ ಮತ್ತು ಮಧ್ಯಪ್ರಾಂತ 2 (9) ಮುಂಬಯಿ ಇಲಾಖೆಯೊಳಗಿನ ಸಂಸ್ಥಾನಗಳು 2. ಒಟ್ಟು 30.

(7) ಮಹಾಸಭೆಯ ಅಧಿವೇಶನದ ಅಧ್ಯಕ್ಷರು ಮುಂದಿನ ಅಧಿವೇಶನದವರೆಗೆ ಮಧ್ಯವರ್ತಿ ಕಾರ್ಯಕಾರೀ ಮಂಡಲದ ಅಧ್ಯಕ್ಷರು (ಚೇರ್ಮನ್ನರು) ಇರತಕ್ಕದ್ದು. ಸ್ವಾಗತ ಮಂಡಲದ ಚೇರ್ಮನ್ನರು ಅವರ ಉಪಾಧ್ಯಕ್ಷರು (ವ್ಹಾಯಿಸ ಚೇರ್ಮನ್ನರು) ಇರತಕ್ಕದ್ದು. ಈ ಮಂಡಲದವರು ತಮ್ಮೊಳಗೆ ಒಬ್ಬ ಸೆಕ್ರೆಟರಿಯನ್ನೂ, ಇಬ್ಬರು ಜಾಯಿಂಟ ಸೆಕ್ರೆಟರಿಗಳನ್ನೂ, ಒಬ್ಬ ಕೋಶಾಧ್ಯಕ್ಷರನ್ನೂ ಆರಿಸಿಕೊಳ್ಳತಕ್ಕದ್ದು.

(8) ಪ್ರಾಂತಿಕ ಕಾರ್ಯಕಾರೀ ಮಂಡಲದವರು ತಮ್ಮ ತಮ್ಮ ಮಂಡಲಕ್ಕೆ ಒಬ್ಬ ಚೇರ್ಮನ್ನರನ್ನೂ, ಒಬ್ಬ ಅಥವಾ ಇಬ್ಬರು ಸೆಕ್ರೆಟರಿಗಳನ್ನೂ ತಮ್ಮ ತಮ್ಮ ಮಂಡಲದ ಸದಸ್ಯರಲ್ಲಿಯೇ ಆರಿಸಿಕೊಳ್ಳತಕ್ಕದ್ದು. ಪ್ರಾಂತಿಕ ಮಂಡಲದವರು ಜಿಲ್ಲಾ ಮಂಡಲಗಳನ್ನೂ, ಜಿಲ್ಲಾ ಮಂಡಲದವರು ತಾಲೂಕು ಮಂಡಲಗಳನ್ನೂ ಇದೇ ರೀತಿಯಾಗಿ ನೇಮಿಸುವಂತೆ ವ್ಯವಸ್ಥೆ ಮಾಡತಕ್ಕದ್ದು. ಆಯಾ ಮಂಡಲಗಳ ಸದಸ್ಯರ ಸಂಖ್ಯೆಗಳನ್ನು ಅವರೇ ನೇಮಿಸತಕ್ಕದ್ದು.

(9) ಮಹಾಸಭೆಯ ಧನನಿಧಿಗಳು ಎರಡು ಪ್ರಕಾರದವು ಇರುವವು—

(1) ಚಿರಸ್ಥಾಯಿ ಫಂಡು. (2) ಬಳಿಕೆಯ ಫಂಡು.

3 ನೇ ಕಲಮಿನ ಪ್ರಕಾರ ಮಹಾಸಭೆಯ ಆಶ್ರಯದಾತರಿಂದಲೂ, ಸನ್ಮಾನ್ಯ ಆಜೀವ ಸದಸ್ಯರಿಂದಲೂ ಬಂದ ಹಣವು ಮಹಾಸಭೆಯ ಚಿರಸ್ಥಾಯಿ ಫಂಡು ಎನಿಸಿಕೊಳ್ಳುವದು. ಉಳಿದ ಸದಸ್ಯರಿಂದಲೂ, ಬೇರೆ ರೀತಿಯಾಗಿಯೂ ಬಂದ ಹಣವು ಬಳಿಕೆಯ ಫಂಡು ಎನಿಸಿಕೊಳ್ಳುವದು.

(10) ಚಿರಸ್ಥಾಯಿ ಫಂಡಿನ ಆಡಳಿತವು ಮಧ್ಯವರ್ತಿ ಮಂಡಲದ ವ್ಯವಸ್ಥೆಗೆ ಒಳಪಟ್ಟಿರತಕ್ಕದ್ದು.

(11) ಈ ಫಂಡಿನ ಮೂಲ ಧನವನ್ನು ಯಾವದೊಂದು ಕಾರ್ಯಕ್ಕೆ ವಿನಿಯೋಗಿಸದೆ ಮಧ್ಯವರ್ತಿ ಕಾರ್ಯಕಾರೀ ಮಂಡಲದ ತೀರ್ಮಾನದಂತೆ ಸರಕಾರೀ ಅಥವಾ ಸಹಕಾರೀ (ಕೋ-ಅಪರೇಟಿವ್) ಬ್ಯಾಂಕುಗಳಲ್ಲಿ ಇಡಬಹುದು. ಅಥವಾ ಸರಕಾರೀ ಅಥವಾ ಸಹಕಾರೀ (ಕೋ-ಅಪರೇಟಿವ್) ಸೆಕ್ಯುರಿಟಿಗಳನ್ನು ಕೊಳ್ಳಬಹುದು. ಈ ಫಂಡಿನ ವಾರ್ಷಿಕ ಬಡ್ಡಿಯನ್ನು ಅಥವಾ ಅದರ ಭಾಗವನ್ನು ಮಧ್ಯವರ್ತಿ ಕಾರ್ಯಕಾರೀ ಮಂಡಲದವರು ಮಹಾಸಭೆಯ ಅಧಿವೇಶನದ ವೆಚ್ಚಕ್ಕಾಗಿ ಮಹಾಸಭೆಯನ್ನು ನೆರವೇರಿಸುವ ಸ್ವಾಗತ ಮಂಡಲಿಯ ವಶಕ್ಕೆ ಕೊಡತಕ್ಕದ್ದು. ಬಡ್ಡಿಯಲ್ಲಿ ಏನಾದರೂ ಉಳಿದರೆ ಅದನ್ನು ಚಿರಸ್ಥಾಯಿ ಫಂಡಿನ ಮೂಲಕ ಧನದಲ್ಲಿ ಸೇರಿಸುತ್ತ ಹೋಗಬೇಕು.

(12) ಬಳಿಕೆಯ ಫಂಡನ್ನು ಆಯಾ ಪ್ರಾಂತಿಕ ಕಾರ್ಯಕಾರೀ ಮಂಡಲದವರು ತಮ್ಮ ಪ್ರಾಂತದ ಸಭಾಸದರಿಂದ ವಸೂಲ ಮಾಡತಕ್ಕದ್ದು. ಆಯಾ ಪ್ರಾಂತದ ಬಳಿಕೆಯ ಫಂಡುಗಳು ಆಯಾ ಪ್ರಾಂತದ ಪ್ರಾಂತಿಕ ಕಾರ್ಯಕಾರೀ ಮಂಡಲದ ಆಡಳಿತದಲ್ಲಿ ಇರತಕ್ಕದ್ದು. ಈ ಮಂಡಲಗಳು ತಮ್ಮ ಫಂಡಿನ 3/4 ಭಾಗವನ್ನು ಮಹಾಸಭೆಯ ನಿರ್ಣಯಗಳನ್ನು ನಡೆಸಲಿಕ್ಕೆಯಲ್ಲಿ ತರಲಿಕ್ಕೂ ಮಹಾಸಭೆಯ ಉದ್ದೇಶಕ್ಕನುಸರಿಸಿ ಇತರ ಪ್ರಚಾರ ಕಾರ್ಯಕ್ಕೂ ವೆಚ್ಚಮಾಡಲಿಕ್ಕೆ ಇಟ್ಟುಕೊಂಡು, ಉಳಿದ 1/4 ಭಾಗವನ್ನು ಮಧ್ಯವರ್ತಿ ಕಾರ್ಯಕಾರೀ ಮಂಡಲಕ್ಕೆ ಕೊಡತಕ್ಕದ್ದು. ಹೀಗೆ ಯಾವ ತನ್ನ ಪ್ರಾಂತಿಕ ಕಾರ್ಯಕಾರೀ ಮಂಡಲಗಳಿಂದ ಬಂದ ಹಣವನ್ನೂ 22ನೇ ನಿಯಮದ ಪ್ರಕಾರ ಸ್ವಾಗತ ಮಂಡಲದಿಂದ ಬಂದ ಹಣವನ್ನೂ, ಈಗ ಸ್ಟ್ಯಾಂಡಿಂಗ ಕಮಿಟಿಯವರ ವಶದಲ್ಲಿರುವ ಹಣವನ್ನೂ, ಧಾರವಾಡ ಲಿಂಗಾಯತ ಎಜ್ಯುಕೇಶನ್ ಅಸೋಸಿಯೇಶನ್‌ದವರಿಗೆ ಸಾಲವೆಂದು ಕೊಟ್ಟ ಹಣವನ್ನೂ ಬಳಿಕೆಯ ಫಂಡೆಂದು ತಿಳಿದುಕೊಂಡು ಮಧ್ಯವರ್ತಿ ಕಾರ್ಯಕಾರೀ ಮಂಡಲದವರು ಮಹಾಸಭೆಯ ಉದ್ದೇಶಕ್ಕನುಸಾರವಾಗಿ ಉಪಯೋಗಿಸತಕ್ಕದ್ದು.

(13) ಪ್ರಾಂತಿಕ ಕಾರ್ಯಕಾರೀ ಮಂಡಲದವರು ತಾವು ಮಾಡಿದ ಕಾರ್ಯದ ವಿವರವನ್ನೂ (ರಿಪೋರ್ಟನ್ನೂ) ಮತ್ತು ತಮ್ಮ ಲೆಖ್ಖಪತ್ರಗಳ ತಖ್ತೆಗಳನ್ನೂ ಆಡಿಟರರ ರಿಪೋರ್ಟಿನೊಂದಿಗೆ ಪ್ರತಿ ವರ್ಷ ಮಧ್ಯವರ್ತಿ ಕಾರ್ಯಕಾರೀ ಮಂಡಲದವರಿಗೆ ಒಪ್ಪಿಸತಕ್ಕದ್ದು. ಇವುಗಳನ್ನು ಮತ್ತು ತಾವು ಮಾಡಿದ ಕಾರ್ಯದ ವಿವರವನ್ನೂ ತಮ್ಮ ಲೆಖ್ಖಪತ್ರ ಮತ್ತು ಆಡಿಟರರ ರಿಪೋರ್ಟ ಸಹಿತವಾಗಿ ಮಹಾಸಭೆಯ ಅಧಿವೇಶನದೊಳಗಾಗಿ ಮಧ್ಯವರ್ತಿ ಕಾರ್ಯಕಾರೀ ಮಂಡಲದವರು ಪ್ರಕಟಿಸತಕ್ಕದ್ದು.

(14) ಮಧ್ಯವರ್ತಿ ಕಾರ್ಯಕಾರೀ ಮಂಡಲವು ಮಹಾಸಭೆಯ ಅಧಿವೇಶನವು ಪ್ರತಿವರ್ಷ ಯಾವದಾದರೊಂದು ಸ್ಥಳದಲ್ಲಿ ಜರುಗುವಂತೆ ವ್ಯವಸ್ಥೆ ಮಾಡತಕ್ಕದ್ದು. ಮಹಾಸಭೆಯ ಅಧಿವೇಶನವು ಎಲ್ಲಿ ಕೂಡತಕ್ಕದ್ದೆಂಬದನ್ನು ಆಯಾ ಸ್ಥಳಗಳ ಅನುಕೂಲತೆ ಪರಿಸ್ಥಿತಿಗಳನ್ನು ನೋಡಿಕೊಂಡು ಮಧ್ಯವರ್ತಿ ಕಮಿಟಿಯವರೇ ನಿರ್ಣಯಿಸತಕ್ಕದ್ದು.

(15) ಮಹಾಸಭೆಯ ಅಧಿವೇಶನವು ಯಾವ ಸ್ಥಳದಲ್ಲಿ ನಡೆಯತಕ್ಕದ್ದಿರುವದೋ ಅಲ್ಲಿಯ ಅಧಿವೇಶನದ ಸಲುವಾಗಿ ಒಟ್ಟು ಖರ್ಚು ಎಷ್ಟಾಗುವದೆಂಬದರ ಬಗ್ಗೆ ಅಲ್ಲಿಯ ಸ್ವಾಗತ ಮಂಡಲದವರಿಂದ (ರಿಪೋರ್ಟ) ವರದಿ ತರಿಸಿಕೊಂಡು ಚಿರಸ್ಥಾಯಿ ಫಂಡಿನ ಉತ್ಪನ್ನದೊಳಗಿಂದ ಯೋಗ್ಯ ಹಣವನ್ನು ಮಂಜೂರು ಮಾಡಿಕೊಡತಕ್ಕದ್ದು.

(16) ಈ ಮಂಡಲದವರು ಮಹಾಸಭೆಯಲ್ಲಿ ಪಾಸಾದ ನಿರ್ಣಯಗಳನ್ನು ಪ್ರಾಂತಿಕ ಕಾರ್ಯಕಾರೀ ಮಂಡಲದವರಿಂದ ಪ್ರಚಾರದಲ್ಲಿ ತರಿಸಬೇಕು.

(17) ಮಹಾಸಭೆಯ ಅಧಿವೇಶನವು ಮುಗಿದನಂತರ ಅದರ ಚಾಲಕರ ಕಡೆಯಿಂದ ಆ ಬಗ್ಗೆ ರಿಪೋರ್ಟ ಮತ್ತು ಲೆಖ್ಖಪತ್ರಗಳನ್ನು 3 ತಿಂಗಳೊಳಗಾಗಿ ಪ್ರಕಟವಾಗುವಂತೆ ಮಾಡತಕ್ಕದ್ದು.

(18) ಪ್ರಾಂತಿಕ ಕಾರ್ಯಕಾರೀ ಮಂಡಲಗಳ ಕರ್ತವ್ಯಗಳು :—

ಈ ಮಂಡಲದವರು ಮಹಾಸಭೆಯ ಎಲ್ಲ ತರಗತಿಗಳ ಸದಸ್ಯರಿಂದ ಹೆಚ್ಚಿಸಲಿಕ್ಕೆ ಪ್ರಯತ್ನ ಮಾಡತಕ್ಕದ್ದು ಮತ್ತು ಅವರಿಂದ ದೇಣಿಗೆಯನ್ನು ಅಥವಾ ವರ್ಗಣಿಯನ್ನು ಎತ್ತತಕ್ಕದ್ದು ಮತ್ತು ಆಶ್ರಯದಾತರ ಮತ್ತು ಸನ್ಮಾನ್ಯ ಸಜೀವ ಸದಸ್ಯರ ದೇಣಿಗೆ ಹಣವನ್ನು ಚಿರಸ್ಥಾಯಿ ಫಂಡಿಗೆ ಆಗಿಂದಾಗ ಕೂಡಿಸುವದಕ್ಕಾಗಿ ಮಧ್ಯವರ್ತಿ ಕಾರ್ಯಕಾರೀ ಮಂಡಲದ ಸೆಕ್ರೆಟರಿಯವರ ಕಡೆಗೆ ಕಳಿಸತಕ್ಕದ್ದು. ಬೇರೆ ದೇಣಿಗೆಯ ಹಣ ಮತ್ತು ವಾರ್ಷಿಕ ವರ್ಗಣಿಯ ಹಣದ 3/4 ಭಾಗವನ್ನು ತಾವು ಇಟ್ಟುಕೊಂಡು ಉಳಿದ 1/4 ಭಾಗವನ್ನು ಮಧ್ಯವರ್ತಿ ಕಾರ್ಯಕಾರೀ ಮಂಡಲಿಯ ಸೆಕ್ರೆಟರಿಯವರ ಕಡೆಗೆ ಕಳಿಸತಕ್ಕದ್ದು.

(19) (ಅ) ಮಹಾಸಭೆಯ ಅಧಿವೇಶನಕ್ಕೆ ಆಯಾಯ ಪ್ರಾಂತಿಕ ಕಾರ್ಯಕಾರೀ ಮಂಡಲದವರು ಸಾಮಾನ್ಯ ಹಾಗೂ ಸನ್ಮಾನ್ಯ ಆಜೀವ ಸದಸ್ಯರಿಂದ ಪ್ರತಿನಿಧಿಗಳನ್ನು ಆರಿಸಿ ಅವರ ಹೆಸರುಗಳನ್ನು ವರ್ಕಿಂಗ ಕಮಿಟಿಯ ಸೆಕ್ರೆಟರಿಯವರ ಕಡೆಗೆ ಅಧಿವೇಶನದ 1 ತಿಂಗಳ ಮುಂಚೆ ಕಳಿಸತಕ್ಕದ್ದು. (ಬ) ಮತ್ತು ಮುಂದಿನ ವರ್ಷದ ಆ ಪ್ರಾಂತಿಕ ಕಮಿಟಿಯ ಸದಸ್ಯರನ್ನು ಮಹಾಸಭೆಯ ಸಾಮಾನ್ಯ ಮತ್ತು ಸನ್ಮಾನ್ಯ ಆಜೀವ ಸದಸ್ಯರಿಂದ ಆರಿಸಿ ಅಧಿವೇಶನದ 1 ತಿಂಗಳ ಮುಂಚೆ ಕಳಿಸತಕ್ಕದ್ದು.

(20) ಮಹಾಸಭೆಯಲ್ಲಿ ಆದ ನಿರ್ಣಯಗಳನ್ನು ತಮ್ಮ ಕಮಿಟಿಯ ಮುಖಾಂತರವಾಗಲಿ, ಅಥವಾ ಜಿಲ್ಲಾ ಮತ್ತು ತಾಲೂಕು ಕಮಿಟಿಗಳ ಮುಖಾಂತರವಾಗಲಿ 16 ನೇ ಕಲಮಿನ ಅನ್ವಯ ಜಾರಿಯಲ್ಲಿ ತರತಕ್ಕದ್ದು.

(21) ತಮ್ಮ ಆಡಳಿತದಲ್ಲಿದ್ದ ಬಳಿಕೆಯ ಫಂಡಿನ ಲೆಖ್ಖವನ್ನು ಇಟ್ಟು ಮಧ್ಯವರ್ತಿ ಮಂಡಲದವರ ಕಡೆಗೆ ಮಹಾಸಭೆಯ ಅಧಿವೇಶನಕ್ಕಿಂತ 1 ತಿಂಗಳ ಮೊದಲು ಆಯವ್ಯಯದ ಪತ್ರಿಕೆಯನ್ನು ಕಳಿಸತಕ್ಕದ್ದು.

(22) ಮಹಾಸಭೆಯ ಅಧಿವೇಶನವನ್ನು ಜರುಗಿಸಲಿಚ್ಛಿಸುವವರು ತಮ್ಮ ಜಿಲ್ಲೆಯ ಪ್ರಮುಖ ಜನರ ಒಪ್ಪಿಗೆಯಿಂದ ಒಂದು ವರ್ಕಿಂಗ ಕಮಿಟಿಯನ್ನು ನೇಮಿಸಿಕೊಂಡು ಆ ಕಮಿಟಿಯ ಮುಖಾಂತರ ಅಧಿವೇಶನದ ಸಂಬಂಧ ಎಲ್ಲ ಕಾರ್ಯಗಳನ್ನು ನಡಿಸತಕ್ಕದ್ದು. ಈ ಮಂಡಲದವರು ಒಬ್ಬ ಚೇರ್ಮನ್ನರನ್ನು ಮತ್ತು ತಮಗೆ ಬೇಕಾಗುವಷ್ಟು ಸೆಕ್ರೆಟರಿಗಳನ್ನೂ ಮತ್ತು ಸಬ್ ಕಮಿಟಿಗಳನ್ನೂ ಆರಿಸಿಕೊಳ್ಳತಕ್ಕದ್ದು. ಆದಷ್ಟು ತೀವ್ರ ಸ್ವಾಗತ ಕಮಿಟಿಯನ್ನು ಮಾಡಿ, ವರ್ಕಿಂಗ ಕಮಿಟಿಯನ್ನು ಸ್ವಾಗತ ಮಂಡಲವಾದನಂತರ ರದ್ದು ಮಾಡತಕ್ಕದ್ದು. ಆ ಜಿಲ್ಲೆಯ ಪ್ರಮುಖ ಜನರೇ ಮಹಾಸಭೆಯ ಸ್ವಾಗತ ಮಂಡಲದ ಸದಸ್ಯರನ್ನೂ, ಅದರ ಚೇರ್ಮನ್ನರನ್ನೂ ಆರಿಸತಕ್ಕದ್ದು. ಆ ಜಿಲ್ಲೆಯ ಸನ್ಮಾನ್ಯ ಆಜೀವ ಸದಸ್ಯರೆಲ್ಲಾ ಸ್ವಾಗತ ಮಂಡಲದ ಸದಸ್ಯರಿರತಕ್ಕದ್ದು. ಇವರು ಏನೂ ದೇಣಿಗೆಯನ್ನು ಕೊಡತಕ್ಕದ್ದಿರುವದಿಲ್ಲ. ಸ್ವಾಗತ ಮಂಡಲದ ಉಳಿದ ಸದಸ್ಯರು ಪ್ರತಿಯೊಬ್ಬರು 10 ರೂ. ಅಥವಾ ಅದಕ್ಕೂ ಹೆಚ್ಚಾದ ದೇಣಿಗೆಯನ್ನು ಕೊಡತಕ್ಕದ್ದು.

(23) ಸ್ವಾಗತ ಕಮಿಟಿಯವರು ಮಧ್ಯವರ್ತಿ ಕಾರ್ಯಕಾರೀ ಮಂಡಲದ ಒಪ್ಪಿಗೆಯಿಂದ (1) ಮಹಾಸಭೆಯ ಅಧ್ಯಕ್ಷರನ್ನು ಆರಿಸತಕ್ಕದ್ದು. ಮತ್ತು (2) ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(24) ಅಧಿವೇಶನದ ವೆಚ್ಚಕ್ಕೆ ಚಿರಸ್ಥಾಯೀ ಫಂಡಿನಿಂದ ದೊರೆತ ಹಣವನ್ನೂ ಸ್ವಾಗತ ಕಮಿಟಿಯ ಸದಸ್ಯರ, ಪ್ರತಿನಿಧಿಗಳ (Delegates) ಪ್ರೇಕ್ಷಕರ ಕಡೆಯಿಂದ ಬಂದ ಹಣವನ್ನೂ ಉಪಯೋಗಿಸತಕ್ಕದ್ದು.

(25) ಮಹಾಸಭೆಯ ಅಧಿವೇಶನವು ತೀರಿದ 1 ತಿಂಗಳ ಒಳಗಾಗಿ ತಮ್ಮ ಆಯವ್ಯಯಗಳ ಲೆಖ್ಖವನ್ನು ವರ್ಕಿಂಗ್ ಕಮಿಟಿಯವರು ಮಧ್ಯವರ್ತಿ ಕಾರ್ಯಕಾರೀ ಮಂಡಲಕ್ಕೆ ಒಪ್ಪಿಸತಕ್ಕದ್ದು, ಮತ್ತು ಖರ್ಚು ಹೋಗಲಾಗಿ ಉಳಿದ ಹಣವನ್ನು ಅವರ ಕಡೆಗೇ ಕಳಿಸತಕ್ಕದ್ದು.

(26) ಆಶ್ರಯದಾತರು ಮತ್ತು ಆಜೀವ ಸನ್ಮಾನ್ಯ ಸದಸ್ಯರು ಆಯಾ ಪ್ರಾಂತಗಳಿಂದ ಮಹಾಸಭೆಗೆ ಪ್ರತಿನಿಧಿಗಳೆಂದು ತಿಳಿಯತಕ್ಕದ್ದು. ಇವರು ಪ್ರತಿನಿಧಿಗಳು ಕೊಡಬೇಕಾದ ಫೀ ಕೊಡಬೇಕಾಗುವದಿಲ್ಲ. ಉಳಿದ ಪ್ರತಿನಿಧಿಗಳು ಒಬ್ಬರು 5 ರೂ. ಫೀ ಕೊಡಬೇಕಾಗುವದು. ಪ್ರೇಕ್ಷಕರು 2 ರೂ. ಫೀ ಕೊಡಬೇಕಾಗುವದು.

(27) ತಾಲೂಕಾ ಮತ್ತು ಜಿಲ್ಲಾ ಕಮಿಟಿಗಳು—8 ನೇ ನೇಮದ ಪ್ರಕಾರ ಉಂಟಾದ ತಾಲೂಕ ಮತ್ತು ಜಿಲ್ಲಾ ಕಮಿಟಿಯವರು ವರ್ಗಣಿಯನ್ನು ಕೂಡಿಸಿ ಆಗಿಂದಾಗ್ಗೆ ಪ್ರಾಂತಿಕ ಕಮಿಟಿಯ ಕಡೆಗೆ ಹಣವನ್ನು ಮತ್ತು ತಿಂಗಳಿಗೊಮ್ಮೆ ತಮ್ಮ ಕೆಲಸದ ಮತ್ತು ಆಯವ್ಯಯದ ಪತ್ರಿಕೆಯನ್ನು ಕಳಿಸತಕ್ಕದ್ದು. ಮತ್ತು ಆಯಾಯ ತಾಲೂಕ ಮತ್ತು ಜಿಲ್ಲಾ ಕಮಿಟಿಗಳಿಗೆ ಅವರ ವೆಚ್ಚಕ್ಕಾಗಿ ಬೇಕಾಗಬಹುದೆಂದು ಪ್ರಾಂತಿಕ ಕಮಿಟಿಯವರು ನಿರ್ಣಯಿಸಿದ ಮೇರೆಗೆ ಆ ಆ ಕಮಿಟಿಯವರು ವೆಚ್ಚಮಾಡತಕ್ಕದ್ದು.

(28) ಲೆಖ್ಖಪತ್ರ ತಪಾಸಣೆ (Audit)—(ಅ) ಮಧ್ಯವರ್ತಿ ಕಮಿಟಿಯ ಲೆಖ್ಖ ತಪಾಸಣೆಯ ಬಗ್ಗೆ ಮಹಾಸಭೆಯಲ್ಲಿ ಆಡಿಟರನ್ನು ನೇಮಿಸತಕ್ಕದ್ದು. ಮುಂದಿನ ಸಭೆಯ ವರೆಗೆ ಅವರೇ ಕಾಯಂ ಇರತಕ್ಕದ್ದು. ಪ್ರಾಂತಿಕ ಕಮಿಟಿಯ ಲೆಖ್ಖ ತಪಾಸಣೆಯ ಬಗ್ಗೆ ಮಧ್ಯವರ್ತಿ ಕಮಿಟಿಯವರು ಪ್ರತಿವರ್ಷ ಆಡಿಟರನ್ನು ನೇಮಿಸತಕ್ಕದ್ದು. (ಬ) ಮಧ್ಯವರ್ತಿ ಕಮಿಟಿಯ ಹಾಗೂ ಪ್ರಾಂತಿಕ ಕಮಿಟಿಗಳ ಆಯವ್ಯಯದ ಲೆಖ್ಖಪತ್ರಗಳನ್ನು ಆಡಿಟರರ ಮುಖಾಂತರ ಪ್ರತಿ ಮೂರು ತಿಂಗಳಿಗೆ ತಪಾಸ ಮಾಡಿಸತಕ್ಕದ್ದು.

(29) ಯಾವದೇ ಕಮಿಟಿಯವರ ತಮ್ಮ ಕಡೆಗೆ ಯಾವದೇ ರೂಪದಿಂದ ಬಂದ ಹಣವನ್ನು ಆಗಿಂದಾಗ್ಗೆ 11 ನೇ ನಿಯಮಕ್ಕನುಸರಿಸಿ ಸರಕಾರೀ ಅಥವಾ ಸಹಕಾರೀ (ಕೋ-ಅಪರೇಟೀವ್) ಬ್ಯಾಂಕುಗಳಲ್ಲಿ ಇರತಕ್ಕದ್ದು. ಖಾಸಗೀ ರೀತಿಯಿಂದ ಯಾರ ಕಡೆಗೂ ಇಡತಕ್ಕದ್ದಲ್ಲ. ಆದರೆ ತಮ್ಮ ಕಮಿಟಿಯ ಅಗತ್ಯದ ಖರ್ಚಿಗಾಗಿ ಅದರ ಚೇರಮನ್‌ರು 20 ರೂ. ಗಳವರೆಗೆ ಇಟ್ಟುಕೊಳ್ಳಬಹುದು.

(30) ಪ್ರತಿಯೊಂದು ಕಮಿಟಿಯ ಲೆಖ್ಖ ಪತ್ರಗಳನ್ನು ಇಡುವ ಜವಾಬದಾರಿಯು ಚೇರಮನ್ ಮತ್ತು ಸೆಕ್ರೆಟರಿ ಇಬ್ಬರದು ಇರುತ್ತದೆ.

ಸಾಮಾನ್ಯ ನಿಯಮಗಳು.

(31) ಪ್ರತ್ಯೇಕ ಮಂಡಲದ ಅಥವಾ ಕಮಿಟಿಯ ಸಭೆಯಲ್ಲಿ ಕನಿಷ್ಠ ಪಕ್ಷಕ್ಕೆ 1/4 ಸದಸ್ಯರು ಹಾಜರಾದರೆ ಸಭೆಯ ಕೆಲಸವನ್ನು ಜರುಗಿಸಲಿಕ್ಕೆ ಅಡ್ಡಿ ಇಲ್ಲ. ಇಷ್ಟು ಜನರು ಹಾಜರ ಇಲ್ಲದಿದ್ದರೆ ಸಭೆಯನ್ನು ನಿಯಮಿತ ತಾರೀಖಿಗೆ ಮುಂದುವರಿಸಬೇಕು. ಆ ತಾರೀಖಿಗೆ ಹಾಜರಿದ್ದ ಸದಸ್ಯರು ಸಭೆಯ ಕೆಲಸವನ್ನು ಜರುಗಿಸಬೇಕು.

(32) ಮಹಾಸಭೆಯಲ್ಲಿ (1) ಆಶ್ರಯದಾತರು (2) ಸನ್ಮಾನ್ಯ ಆಜೀವ ಸದಸ್ಯರು ಹಾಗೂ (3) ಪ್ರತಿನಿಧಿ ಇವರಿಗೆ ಮಾತ್ರ ಮತಕೊಡುವ ಅಧಿಕಾರವಿರುತ್ತದೆ. ಯಾವತ್ತೂ ಮಂಡಲಗಳ ಅಥವಾ ಕಮಿಟಿಗಳ ಸದಸ್ಯರಿಗೆ ಪ್ರತಿಯೊಬ್ಬರಿಗೆ ಒಂದು ಮತವಿರುವದು. ಸಭೆಗಳಲ್ಲಿ ಭಿನ್ನ ಅಭಿಪ್ರಾಯಗಳಿಗೆ ಸಮಾನ ಸಂಖ್ಯೆಗಳ ಮತಗಳು ಬಂದಾಗ ಅಧ್ಯಕ್ಷರಿಗೆ ಅಥವಾ ಚೇರಮನ್‌ರಿಗೆ ಹೆಚ್ಚಿನ ಒಂದು ಮತ (Casting Vote) ಕೊಡುವ ಅಧಿಕಾರವಿರಬೇಕು.

(33) ಪ್ರತ್ಯೇಕ ಮಂಡಲದ ಅಥವಾ ಕಮಿಟಿಯವರು ತಮ್ಮ ಕಾರ್ಯಗಳನ್ನು ಜರುಗಿಸಲಿಕ್ಕೆ ಈ ನಿಯಮಗಳಿಗೆ ವಿರೋಧ ಬಾರದ ಹಾಗೆ ಪೋಟ ನಿಯಮಗಳನ್ನು ಮಾಡಿಕೊಳ್ಳಬಹುದು.

(34) ಪ್ರತ್ಯೇಕ ಮಂಡಲವು ಅಥವಾ ಕಮಿಟಿಯು ಕಾರ್ಯನಿರ್ವಾಹಕ್ಕಾಗಿ ಕನಿಷ್ಠ ಪಕ್ಷಕ್ಕೆ ಮೂರು ತಿಂಗಳಿಗೆ ಒಂದು ಸಾರೆಯಾದರೂ ಸಭೆಯನ್ನು ನೆರೆಯಿಸತಕ್ಕದ್ದು.

(35) ಮೇಲಿನ ನಿಯಮಗಳಲ್ಲಿ ಹೆಚ್ಚು ಕಡಿಮೆ ಮಾಡುವ ಅಧಿಕಾರವು ಮಹಾಸಭೆಗೆ ಇರುವದು. ಜಿ. ಆರ್. ನಲವಡಿ

ಸ್ವಾಗತ ಸಂಪಾಧ್ಯಕ್ಷರು, 11ನೇ ಅ. ಭಾ. ವೀರಶೈವ ಮಹಾಸಭೆ, ಧಾರವಾಡ.

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ.

೧೮ ನೆಯ ಅಧಿವೇಶನ.

ಪ್ರಕಟಣೆ ೪

ಬರುವ ಡಿಸೆಂಬರ್ ತಿಂಗಳ ಕಡೆಯವಾರದಲ್ಲಿ ಮಡಿಕೇರಿಯಲ್ಲಿ ಜರಗತಕ್ಕ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧಿವೇಶನದ ಮುಂದೆ ಸಾಹಿತ್ಯ ಸಂಬಂಧವಾಗಿ ಪ್ರಬಂಧಗಳನ್ನು ಓದಲೂ ತತ್ಸಂಬಂಧವಾದ ಠರಾವುಗಳನ್ನು ತರಲೂ ಇಷ್ಟವಿರುವ ಸಾಹಿತ್ಯಾಭಿಮಾನಿಗಳು ತಾವು ಪ್ರಬಂಧಗಳನ್ನೂ ಠರಾವುಗಳನ್ನೂ ತಾ॥ 15-12-1932 ರೊಳಗೆ ಶ್ರೀ ಒಡ್ಡುಮನೆ ಆತ್ಮಾರಾಮ ಶಾಸ್ತ್ರಿ, ಸಾಹಿತ್ಯ ಕಮಿಟಿಯ ಕಾರ್ಯದರ್ಶಿ, ಹೈಸ್ಕೂಲು, ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಿ ಕೊಡಬೇಕಾಗಿ ಈ ಮೂಲಕ ವಿಜ್ಞಾಪಿಸಿಕೊಳ್ಳಲಾಗಿದೆ. ಪ್ರಬಂಧಗಳನ್ನು ಅಧಿವೇಶನದ ಮುಂದೆ ಓದಲು ಬಿಡುವ ಹಕ್ಕೂ ಅವುಗಳನ್ನು ಲೇಖಕರ ಕರ್ತೃಗಳಿಗೆ ಮರಳಿಸುವ ಹಕ್ಕೂ ವಿಷಯನಿಯಾಮಕ ಮಂಡಲದ ಕೈಯಲ್ಲಿರುತ್ತದೆ.

ಮೇಲೆ ನಮೂದಿಸಿದ ತಾರೀಖಿನೊಳಗೆ ತಪ್ಪದೆ ಪ್ರಬಂಧಗಳನ್ನಾಗಲೀ ಠರಾವುಗಳನ್ನಾಗಲೀ ರವಾನಿಸಿಕೊಡಬೇಕಾಗಿ ವಿನಂತಿ.

ಮಡಕೇರಿ, ಕ. ಸಾ. ಪ. ಸ್ವಾ.

ಮಂಡಲ, ಶಕ ೧೮೫೪, ಜಂಟಿಕಾರ್ಯದರ್ಶಿಗಳು.

ಕಾರ್ತಿಕ ಬಹುಳ ಸಪ್ತಮಿ.

ನಾರಿನವೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ. ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ

32 M. C

ಪ್ರಕಟಣೆ.

ವಿಜಾಪುರ “ಶಿವಾನುಭವ ಗ್ರಂಥಮಾಲೆ” ವೀರಶೈವ ತತ್ವಗ್ರಂಥಗಳ ಬ್ರಾಂಚ ಡಿಪೋ ಮೈಸೂರು ಪ್ರಾಂತದವರೆಲ್ಲರಿಗೂ ಅನುಕೂಲವಾಗಲೆಂಬ ಉದ್ದೇಶ್ಯದಿಂದ ಬೆಂಗಳೂರಿನಲ್ಲಿ ಏರ್ಪಡಿಸಿರುತ್ತೆ. ಬೇಕಾದವರು ಅಲ್ಲಿಂದಲೇ ಮೂಲ ಕಿಮ್ಮತ್ತಿಗೆ ತರಿಸಿಕೊಳ್ಳಬಹುದು.

ಅಡ್ರೆಸ್ಸು :—ಕೆ. ನಾಗಪ್ಪ, ಬಿ. ವಿಶ್ವನಾಥಪ್ಪ, ಶ್ರೀ ಸರ್ಪಭೂಷಣ ಶಿವಯೋಗಿಗಳ ಮಠ, ಅಣ್ಣಮ್ಮದೇವರ ಗುಡಿ ಬೀದಿ, ಬೆಂಗಳೂರು ಸಿಟಿ.

[12—2] ಮತ್ತು ಹಿತಚಿಂತಕ ಪ್ರಿಂಟಿಂಗ್ ಪ್ರೆಸ್, ವಿಜಾಪುರ.

೧೯೩೨ ನೆಯ ಇಸವಿ ಡಿಸೆಂಬರ್ ತಾ॥ ೫ ರಿಂದ ಡಿಸೆಂಬರ್ ತಾ॥ ೧೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಮಾರ್ಗಶಿರ ಶುದ್ಧ ಅಷ್ಟಮಿಯಿಂದ ಮಾರ್ಗಶಿರ ಶುದ್ಧ ಚತುರ್ದಶಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿಕ ಮಾಸ
5	[1] ಸೋಮ	ಅಷ್ಟ	31-39	ಶತ	3-41	21
6	ಮಂಗಳ	ನವ	32-57	ಪೂಭಾ	6-48	22
7	ಬುಧ	ದಶ	35-23	ಉಭಾ	9-7	23
8	[2] ಗುರು	ಏಕಾ	39-13	ರೇವ	13-19	24
9	[3] ಶುಕ್ರ	ದ್ವಾದ	43-48	ಅಶ್ವಿ	19-5	25
10	ಶನಿ	ತ್ರಯೋ	49-7	ಭರ	25-16	26
11	[4] ಭಾನು	ಚತು	60	ಕೃತ್ತಿ	31-50	27

(1) ಮಳೆನಕ್ಷತ್ರ-ಜ್ಯೇಷ್ಠ ೨ ನೆಯಪಾದ. (2) ಮಾರ್ಗಶಿರ ಲಕ್ಷ್ಮೀ ವ್ರತ, ಮಳೆನಕ್ಷತ್ರ-ಜ್ಯೇಷ್ಠ ೪ ನೆಯ ಪಾದ. (3) ಸಂಜನಕೊಡಿನಲ್ಲಿ ಶ್ರೀಶಂಕರಮೂರ್ತಿ ಉತ್ಸವ. (4) ಶಿವಪೂಜ.

ಮೈಸೂರು : ಶ್ರೀ. ಪಂಚಾಕ್ಷರಮ್ಯಹೆವಿಂಗ್ ಪ್ರೆಸ್ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG NO. M. 124.

ಮೈಸೂರ್ ಸ್ಟಾರ್.

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಚಿಹ್ನಿತಾ । ಘನಪಥಕ್ಕಾವತಾರಾ ಪಕ್ಷಜ್ಞ ನಕ್ಷತ್ರ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾರೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ಸಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚೆತ್ತೀಯಂಸದಾಪುರಿಗೆ ಗೌರೀಶಾನುಕಂಪೋಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸ್ ೧೯೩೨ ನೆಯ ಇಸವಿ ಡಿಸೆಂಬರ್ ತಾರೀಖು ೧೨ ನೆಯ ಸೋಮವಾರ [ಸಂಚಿಕೆ ೫೦

Insurance in the Mysore State Life Insurance, Public Branch.

Life Insurance is admittedly the best form of investment and the greatest eafeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore.

(Sd.) S. SHA MANNA,
Secretary, Insurance Committee.

[50—23]

[50—6]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸಂ.
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿವಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿಹಾಸ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಕಂಠರೇಶ್ವರಶತಕ	೦—೧—೦	೦—೬—೦
ಬಸವೇಶ್ವರವಚನ	೦—೫—೦	೦—೧೪—೦
ಸಟೀಕ ಕರ್ನಾಟಕಶಬ್ದಮಂಜರಿ	೦—೫—೦	೦—೧೪—೦
ಸಟೀಕ ಶತಕತ್ರಯ	೧—೦—೦	೧—೬—೦

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯಕ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಷ್ಟರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದು ಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, ಸ್ತ್ರೀಗೆ ಸ್ಪರ್ಶಮಾಡಿದ ಕೂಡಲೆ ತ್ವರಿತ ವೀರ್ಯಸ್ಖಲನ, ಪ್ರಮೇಹ, ಗರ್ಮೀದೋಷ, ಉಷ್ಣತೆ, ಪಿತ್ತಾಂಶ, ನಡ, ಬೆನ್ನುನೋವ, ನಿದ್ರೆ ಕಡಿಮೆಬರೋದು, ಯಾವದೇತರದ ರೋಗದಿಂದ ಎದ್ದ ಮೇಲಿನ ಕ್ಷೀಣತಾ. ಇವೆಲ್ಲ ರೋಗಗಳು ನಷ್ಟವಾಗಿ, ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ಶರೀರ ತರುಣರಂತೆ ತಾಜಾ ಆಗುತ್ತದೆ. ...

ಸ್ತ್ರೀ ರೋಗ ನಿವಾರಣೇ ಚೂರ್ಣ

ಎಲ್ಲ ಬಗ್ಗೆಯ ಸೆರಗು, ಮುಟ್ಟು ಆಗುವದು ... ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ. ...

ಸಂತತಿ ಪ್ರತಿಬಂಧಕ ಗುಳಿಗೆಗಳು.

...

ಪತ್ತಾ ಮಾಲಕ :—ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜ ಎಂ. ಎಸ್ ಎಂ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿದು ಬಿಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು ...

...

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

ಪೋ. ಬಾ. ...

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಡಿಸೆಂಬರ್ ತಾ|| ೧೨ ನೆಯ ಸೋಮವಾರ.

WOMEN'S RIGHTS UNDER HINDU LAW

It was a unique and praiseworthy step that the Mysore Government took in pursuance of public demand when they appointed a committee under the chairmanship of that able and distinguished Gentleman Dewan Bahadur K. S. Chandrashekhara Iyer, retired Chief Justice, to consider the question of amending the existing law relating to the property rights of Hindu women and prepare a Bill. The Bill was duly brought up before the Representative Assembly where it secured almost a unanimous support, the dissentients being in a hopeless minority. Then the Bill was introduced before the Legislative Council where, as a whole the Bill received a wonderful support and such criticism as there was related only to a few minor details. The next stage arrived with the constitution of the Select Committee for sending their report to the Council. It was a constitution which did not evoke much enthusiasm, for it contained some reactionaries of pronounced views and those who were for a reasonable measure of advance were in a minority. The Select Committee which was to consider in detail this important measure was not convened early enough though it was a year since it was constituted. After every other Select Committee in connection with other Bills of very much less consequence had met and reported, the Hindu Law Select Committee met very late and having got through its work which must necessarily have been in haste only signed the report on 22nd November hardly three weeks before the Council meeting. It was published in the Gazette of 24th November. One of the members Mr. H. C. Dasappa sent a note differing in some material particulars from the majoirty report. We can only note a few of the important matters. The women have been unanimously pleading that the married daughters and married sisters also should have shares allotted to them at a partition. Both Mr. Chandrashakhara Iyer's Bill and the Report of the Salect Committee have not given them any share. It would have been worth while for them to have considered whether they too should not have been granted shares deducting from such shares the portion expended on their marriages. The next thing is they have further restricted the Stridhana estate of women, by stating a female inheriting property from a male when she has a daughter or daughter's son can only take a limited estate. This will only mean a further extension of limited estate in cases which the original Bill had not contemplated. When a widow has her own daughter or daughter's son there is no need for such a restriction as her love and affcetion to her children will be enough inducement for her not to waste such properties. It is only when there is a step-daughter or step-daughter's son that she may not care much for them and therefore such a contingency may be provided by making the widow and the step-daughter or step-daughter's son take as co-heirs. So also in the case of a daughter and step-daughter's son. One most noticable departure which would rouse a volume of protest from the women of the State is as regards succession to Stridhana. Hither to it was a daughter, daughter's daughter, son's daughter and son that constituted the order of heirs. But now the Select Committee have amended so as to permit of the children, male and female succeeding to the property of a female. We alredy see signs of protest among women on what is known as a striking inroad into the rights of women. The justification for this seems to be that the rights of women have been enlarged much and so the sons also should have equal shares with daughters in Stridhana. But the Committee have failed to note tha what they have given is only a small fraction of what husband, father, son or brother might get and here the sons want equal shares. Then there are some females who do not get any share at a partition, namely married daughters and sisters and they may get nothing by way of inheritance. Either the order should be as it is in the Original Bill or if all females are given their shares, the sons may get one fourth the share of a daughter as regards Stridhana. The ocher important matter relates to maintenance. The Select Committee have taken out the case of the husband marrying a second wife from the cases when a wife would be entitled to separate maintenance. They have also taken out the case of gross neglect by the husband. This is most unjust and needs rectification. The definition of reasonable wants has been considerably restricted and it aught to be enlarged. We are not for perpetuating the anamolous estate known to Hindu Law as limited estate. The whole chapter relating to it may go with no harm to any body except to those who stand to gain by endless litigation which results from such an estate. We hope that there will be considerable latitude on the discussion over this Bill and that the President will permit amendments that may be suggested even beyond the time prescribed for sending them. We also trust that the Honorable members will take a liberal view of this measure and their utmost to do justice by the cause of women.

ಸ್ತ್ರೀ ವಾರಸತ್ವ.

ಹಿಂದು ಕುಟುಂಬದ ಆಸ್ತಿಯಲ್ಲಿ ಸ್ತ್ರೀಯರಿಗೆ ದಾಯ ಭಾಗವು ಸಲ್ಲುವಂತೆ ಹಿಂದು ಲಾ (ಧರ್ಮಶಾಸ್ತ್ರ) ದಲ್ಲಿ ತಕ್ಕ [illegible]

ಮೇಕೆಗಳನ್ನು ತಿನ್ನುವ ಗಿಳಿ

[illegible]

ಕಾಂಗ್ರೆಸಿನ ಅಧ್ಯಕ್ಷತೆ

[illegible]

ಹೆನ್ರಿ ಫೋರ್ಡರಿಗೆ ಶಸ್ತ್ರಚಿಕಿತ್ಸೆ

[illegible]

ತಿರುವಾಂಕೂರಿನಲ್ಲಿ ಪೋಲೀಸು ಅತ್ಯಾಚಾರಕ್ಕೆ ಶಿಕ್ಷೆ

[illegible]

[illegible]

ಕಜಿನ್ಸ್ ಸತಿಯವರ ಸೆರೆ ಮತ್ತು ಬಿಡುಗಡೆ

[illegible]

ಮಹಾತ್ಮರ ಭೀಕರ ಪ್ರತಿಜ್ಞೆ

[illegible]

ಶಾಸ್ತ್ರವು ಮನುಷ್ಯಕಲ್ಪಿತವು

[illegible]

ವಿಷ್ಣು ದೇವಾಲಯದಲ್ಲಿ ಪಂಚಮ ಅರ್ಚಕರಿರುತ್ತಾರೆ

[illegible]

ಒಳದೇಶದ ವೃತ್ತಾಂತಗಳು

[illegible]

[illegible] ತಿಳಿಸಿರುತ್ತಾರೆ.

೧೧ ನೇ ಅಖಿಲ ಭಾರತ ಶ್ರೀಮದ್ವೀರಶೈವ ಮಹಾಸಭಾ ಧಾರವಾಡ.

ಧಾರವಾಡದಲ್ಲಿ ಸದ್ಯಕ್ಕೆ ಪ್ಲೇಗು ಹೆಚ್ಚಾಗುತ್ತ ನಡೆದದ್ದರಿಂದಲೂ, ಮಹಾರಾಷ್ಟ್ರ, ಆಂಧ್ರ, ದ್ರಾವಿಡ, ನೈಜಾಮ ಮತ್ತು ಇತರ ಪ್ರಾಂತಗಳ ವೀರಶೈವರು ಮಹಾಸಭೆಯ ಬಗ್ಗೆ ಹೆಚ್ಚು ಉತ್ಸುಕತೆಯನ್ನು ತೋರಿಸುವದು ಇತ್ತೀತ್ತ ಅವರ ಪತ್ರ ವ್ಯವಹಾರದಿಂದ ತಿಳಿದದ್ದರಿಂದ ಅವರನ್ನೆಲ್ಲ ಈ ಸಭೆಗೆ ಬರಮಾಡಿಕೊಳ್ಳುವದು ಅವಶ್ಯವೆಂದು ಕಂಡುಬಂದದ್ದರಿಂದ ಅದಕ್ಕೆ ಅವಕಾಶವು ಉಳಿಯದ್ದರಿಂದಲೂ ಮಹಾಸಭೆಯನ್ನೂ ಅದರೊಡನೆ ಜರಗತಕ್ಕ ಮಹಿಳಾ ಪರಿಷತ್ತು, ಶಿಕ್ಷಣ ಪರಿಷತ್ತು ಮತ್ತು ಕಲಾ ಪ್ರದರ್ಶನಗಳನ್ನೂ 1933 ನೆಯ ಏಪ್ರಿಲ್ ಕೊನೆಯ ವಾರದಲ್ಲಿ ನೆರವೇರಿಸಬೇಕೆಂದೂ ಅಲ್ಲಿಯವರೆಗೆ ಎಲ್ಲಾ ಸಭೆಗಳನ್ನು ಮುಂದೆ ಹಾಕಬೇಕೆಂದು ನಿರ್ಧರಿಸಿತು.

ಎಂ. ಎಸ್. ಕೇಸರೀ
ಸಿ. ಜಿ. ಹುಂಡೇಕರ್
ಎಸ್. ಎಸ್. ಬಸವನಾಳ್
ಪಬ್ಲಿಕೇಶನ್ ಕಮಿಟಿ ಅಖಿಲಭಾರತ ಶ್ರೀಮದ್ವೀರಶೈವ
ತಾ|| 7-12-32. ಮಹಾಸಭಾ, ಧಾರವಾಡ.

WANTED

A Manager for Rao Bahadur Gubbi Thotadappa's Charities, Bangalore City. Must have passed at least the S.S.L.C. A fairly good knowledge of accounts necessary. Salary according to qualifications. Retired men from Government Service may also apply. Applications with testimonials must reach the undersigned before 1st January 1933. Only Veera-Saivas need apply.

(Sd.) K. P. PUTTANNA CHETTY,
President,
Rao Bahadur Dharma Pravartha
Gubbi Thotadappa's Charities,
Bangalore City.

ಹಾಸನ ಟವುನ್ 24 ನೇ ದನವಿನ ಪ್ರದರ್ಶನ.

ಹಾಸನ ಟವುನ್ ದನವಿನ ಪ್ರದರ್ಶನ ಕ್ಷೇತ್ರದಲ್ಲಿ 24 ನೇ ದನವಿನ ಪ್ರದರ್ಶನವು ಏರ್ಪಾಟಾಗಿರುತ್ತೆ.

ಪ್ರದರ್ಶನವು 1933 ನೇ ಜನವರಿ ಮಾಹೆ ತಾರೀಖು 2 ನೇ ಸೋಮವಾರದಿಂದ 6 ನೇ ಶುಕ್ರವಾರದವರೆಗೆ ಉಭಯ ದಿವಸಗಳಲ್ಲೂ ನಡಿಯುತ್ತೆ.

ಗೌರ್ನಮೆಂಟ್ ಆರ್ಡರು ಅನುಸರಿಸಿ ದನಗಳ ಪ್ರದರ್ಶನಕ್ಕೆ ಬಿಡಲ್ಪಡುವ ರಾಸುಗಳ ಮೇಲೆ ರಾಸು ಒಂದಕ್ಕೆ ಎರಡಾಣೆಯಂತೆ ಫೀ ವಸೂಲ್ಮಾಡಲ್ಪಡುತ್ತೆ.

ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲ್ಮಾಡುವ ಫೀ ಬಾಬನ್ನು ಮತ್ತು ಪ್ರದರ್ಶನದ ಮ್ಯುನಿಸಿಪಲ್ ಜಾಗದಲ್ಲಿ ಬೀಳುವ ಗೊಬ್ಬರ ಸಾಗಿಸುವ ಬಾಬನ್ನು ಸಹ ತಾ|| 13-12-32 ರಲ್ಲು ಹಾಸನದ ಸಂತೆ ಹತ್ತಿರ ಇರುವ ಅಕ್ಕಾಯಿ ಕಟ್ಟೆ ಬಳಿ ಮಧ್ಯಾಹ್ನ 2 ಘಂಟೆ ಲಾಗಾಯತು ಹಾಸನ ಟವುನ್ ಮ್ಯುನಿಸಿಪಲ್ ಪ್ರೆಸಿಡೆಂಟರು ಅಥವಾ ವೈಸ್‌ಪ್ರೆಸಿಡೆಂಟರವರಿಂದ ಹರಾಜು ಮಾಡಿಸಲ್ಪಡುತ್ತೆ.

ಅಂಗಡಿ ವಗೈರೆಗಳಿಗಾಗಿ ಬಿಂಗಡಿಸುವ ಜಾಗಾಗಳನ್ನು ತಾ|| 15-12-1932 ರ ಲಾಗಾಯತು ಏಲಮ್ ಮಾಡಲು ಉಪಕ್ರಮಿಸುತ್ತೆ. ಬಾಕಿ ವಿಷಯಗಳನ್ನು ಹಾಸನ ಟವುನ್ ಮ್ಯುನಿಸಿಪಲ್ ಆಫೀಸಿಗೆ ಬಂದು ತಿಳಿದುಕೊಳ್ಳತಕ್ಕದ್ದು.

[3—1] S. P. BRAMHAPPAH,
for President Town Ml. Council &
Chairman Cattle Show
ತಾ|| 4-12-1932. *Committee, Hassan.*

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖಕರಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು — ಸಂಪಾದಕ.

ವಿಷಾದ ವಾರ್ತೆ

ಚಿಕ್ಕಮಗಳೂರು ಟೌನ್ ವಾಸಸ್ಥರಾದ ಮ॥ ರಿಟೈರ್ಡ್ ಅಸಿಸ್ಟೆಂಟು ಇಂಜನೀಯರ್ ಸಿ. ಬಿ. ತಲಿಗೆ ಗೌಡರ ಹಿರಿಯ ಸೊಸೆಯಾದ ಮತ್ತು ಕೈಲಾಸವಾಸಿ ಕಾಫಿ ಪ್ಲ್ಯಾಂಟರ್ ಮ॥ ತಳಲೂರ್ ಚೆನ್ನಬಸಪ್ಪ ಶೆಟ್ಟರವರ ಒಬ್ಬಳೇ ಮಗಳಾದ ಶ್ರೀಮತಿ ಪಾರ್ವತಮ್ಮನವರು ಚಿಕ್ಕಮಗಳೂರಲ್ಲಿ ತಾ॥ 4-12-1932 ನೆ ಭಾನುವಾರ ಬೆಳಿಗ್ಗೆ ಶಿವಾಧೀನರಾದ ಸಂಗತಿಯನ್ನು ತಿಳಿಸಲು ಬಹಳ ವಿಷಾದವೆನಿಸುತ್ತದೆ. ಶ್ರೀಮತಿ ಪಾರ್ವತಮ್ಮನವರು ಇನ್ನೂ ಚಿಕ್ಕ ವಯಸ್ಕರಾಗಿದ್ದರು. ಇವರು ಇಬ್ಬರು ಚಿಕ್ಕ ಹೆಣ್ಣುಮಕ್ಕಳನ್ನೂ 8 ದಿವಸದ ಒಂದು ಗಂಡು ಶಿಶುವನ್ನೂ ಬಿಟ್ಟು ತಮ್ಮ 24 ನೇ ವಯಸ್ಸಿನಲ್ಲಿ ಇಹಲೋಕ ಯಾತ್ರೆಯನ್ನು ಮುಗಿಸಿದರು. ಸ್ವಜನ ಪರಜನ ಬಂಧು ಬಾಂಧವರಲ್ಲಿಯೂ ಅತಿಥಿಗಳಲ್ಲೂ ಭಕ್ತಮಹೇಶ್ವರರಲ್ಲೂ ಪ್ರೇಮ ಭಾವದಿಂದ ತಮ್ಮ ಮನೆತನದ ಕೀರ್ತಿಯನ್ನು ಹೆಚ್ಚಾಗಿ ಬೆಳೆಯಿಸುವುದರಲ್ಲಿಯೇ ಶ್ರಮಪಡುತ್ತಿದ್ದರು. ಇವರ ಪತಿಗಳಾದ ಮ॥ ಕಾಫಿ ಪ್ಲ್ಯಾಂಟರ್ ಸಿ. ಎಚ್. ವೀರಪ್ಪ ಗೌಡರಿಗೆ ಚಿಕ್ಕ ವಯಸ್ಸಿನಲ್ಲಿ ಸದ್ಗುಣಶಾಲಿನಿಯಾದ ಧರ್ಮಪತ್ನಿಯ ವಿಯೋಗ ಉಂಟಾಗಿರುವ ದುಃಖ ಸಮಾಧಾನವನ್ನೂ ಇವರ ಚಿಕ್ಕ ಮಕ್ಕಳಿಗೆ ಆಯುರಾರೋಗ್ಯವನ್ನೂ ದಯಪಾಲಿಸಿ ಕಾಪಾಡಲೆಂದು ಶ್ರೀ ಭಗವಂತನನ್ನು ಪ್ರಾರ್ಥಿಸುತ್ತೇನೆ. ಹಿತೈಷಿ.

ತಾ॥ 14-11-32ರಲ್ಲಿ ನೆಲಮಂಗಲದ ಮ॥ ಅಬ್ದುಲ್ ಅಜೀಜ್ ಷರೀಫ್ ಸಾಹೇಬರು ಕೊಟ್ಟಿರುವ ಆರ್ಟಿಕಲ್‌ಗೆ ಜವಾಬ್.

ನಾನು ನೆಲಮಂಗಲ ಟೌನ್ ವೈಸ್-ಪ್ರೆಸಿಡೆಂಟಾಗಿರುವುದು ನಿಜ. ಈ ಟೌನ್‌ನಲ್ಲಿ ಮುಂಗಾರು ಮಳೆ ಆಗಾಯ್ತು. ಇದುವರಿವಿಗೂ ವಿಪರೀತವಾಗಿ ಮಳೆ ಆಗಿರುತ್ತೆ. ಇದರಿಂದ ಅನೇಕ ಊರುಗಳಲ್ಲಿ ಅನಾಹುತಗಳು ನಡೆದಿರುವ ಸಂಗತಿ ಅನೇಕ ವರ್ತಮಾನ ಪತ್ರಿಕೆಗಳಲ್ಲಿ ಬಂದಿರುವುದನ್ನು ನೀವು ಕೇಳಿರಬಹುದು. ಈ ಊರಿನಲ್ಲಿ ಮಳೆಯ ದೆಸೆಯಿಂದ ರಸ್ತೆಗಳು ಯಾವುದೂ ಕೆಟ್ಟಿಲ್ಲಾ. ಟೌನ್‌ನಲ್ಲಿ ದೀಪವು ಸರಿಯಾಗಿ ಉರಿಯುತ್ತೆ. ಮ॥ ಅಬ್ದುಲ್ ಅಜೀಜ್ ಷರೀಫ್ ಸಾಹೇಬರಿಗೆ ಕಣ್ಣಿನ ನೋಟ ಕಮ್ಮಿ. ಇವರು ಮೊದಲು ಪೋಲೀಸು ಇಲಾಖೆಯಲ್ಲಿ ಸಬ್ ಇನ್ಸ್‌ಪೆಕ್ಟರಾಗಿದ್ದರು. ನೇತ್ರದೃಷ್ಟಿ ಕಮ್ಮಿ ಆದದ್ದರಿಂದ ಕೆಲಸದಿಂದ ನಿವೃತ್ತಮಾಡಲ್ಪಟ್ಟರು. ಇತರರ ಹೇಳಿಕೆ ಮಾತುಗಳನ್ನು ಕೇಳಿ ಈ ತರಹ ಆರ್ಟಿಕಲ್ಲುಗಳನ್ನು ಬರಿಯುವುದಿಲ್ಲವೆಂದು ನಾನು ನಂಬಿರುತ್ತೇನೆ.

ಹಸನ್ ಜಮಾಖಾನ್ ಆನರರಿ ಬೆಂಚ್ ಮೆಜಿಸ್ಟ್ರೇಟ್
ಮತ್ತು ವೈಸ್ ಪ್ರೆಸಿಡೆಂಟ್ ನೆಲಮಂಗಲ.

ಮೈಸೂರು ದೇಶದ ನ್ಯಾಯವಿಧಾಯಕ ಸಭೆಯ ಮೆಂಬರುಗಳವರ ಸನ್ನಿಧಿಯಲ್ಲಿ.

ಮಹನೀಯರೆ, ನಮ್ಮ ಮೈಸೂರು ದೇಶದಲ್ಲಿ ಕೆಲವು ಕಾಂಗ್ರೆಸ್ ಪಕ್ಷದವರು ಅಂತ್ಯಜರನ್ನು ದೇವಾಲಯಗಳಿಗೆ ಪ್ರವೇಶಮಾಡಿಸಬೇಕೆಂದು ಪ್ರಯತ್ನಮಾಡುತ್ತಾ ಇರುತ್ತಾರೆ. ಇದರಿಂದ ಅಂತ್ಯಜರಿಗೆ ಯಾವ ಪ್ರಯೋಜನವಿಲ್ಲದಿದ್ದರೂ, ಭಯವುಂಟಾಗಿದೆ. ಗ್ರಾಮಾಂತರದಲ್ಲಿರುವ ಈ ಅಂತ್ಯಜರು ವಿಶೇಷವಾಗಿ ಇತರರ ಆಶ್ರಯದಲ್ಲಿ ಜೀವಿಸುತ್ತಾ ಇರುವದ್ದರಿಂದ ಉಭಯತ್ರರಿಗೂ ಅಸಮಾಧಾನವುಂಟಾಗಿ ಕ್ರೋಧಹೆಚ್ಚುತ್ತಾ ಇರುವದು ಹೊರಬಿದ್ದಿದೆ. ಈ ಅಂತ್ಯಜರಲ್ಲಿ ಕಣಿಯರು, ಬಲಗೈ ಎಡಗೈ ಇತ್ಯಾದಿ ಒಳಪ್ರಭೇದಗಳಿವೆ. ಈ ಜನರಲ್ಲಿಯೇ ಒಬ್ಬರಿಗೊಬ್ಬರಿಗೆ ಅಸ್ಪೃಶ್ಯವು, ಸೌಹಾರ್ದವಿಲ್ಲದೆ ಭೇದಭಾವಗಳು ಮತ್ತು ತಕರಾರುಗಳಿವೆ. ಇಂಥಾ ಕ್ರೋಧಗಳನ್ನೂ ಈ ಅಂತ್ಯಜರು ಮುಸಲ್ಮಾನರಲ್ಲಿ ಊಟಮಾಡುವದನ್ನೂ, ಗೋವಧೆ, ಗೋಮಾಂಸಭಕ್ಷಣವನ್ನೂ ತಪ್ಪಿಸುವದು ಮತ್ತು ಶುಚಿಯಾಗಿರುವದು ಇತ್ಯಾದಿ ಅಭ್ಯುದಯ ಕಾರ್ಯಗಳನ್ನು ಕಾಂಗ್ರೆಸ್ಸಿನವರಾದರೂ ನಡೆಸಿಕೊಟ್ಟರೆ ಅವರನ್ನು ಚಿರಕಾಲ ವಂದಿಸಬಹುದು. ಇಂಥಾ ಮಹತ್ಕಾರ್ಯವನ್ನು ಬಿಟ್ಟು ದೇವಸ್ಥಾನಕ್ಕೆ ಈ ಅಂತ್ಯಜರು ಪ್ರವೇಶಿಸಿದ ಮಾತ್ರಕ್ಕೇನೇ ಈ ಅಂತ್ಯಜರಲ್ಲಿರುವ ಒಳಪಂಗಡದವರಲ್ಲಿಯು ಕೂಡ ಸೌಹಾರ್ದಹುಟ್ಟಲಾರದು. ಅಲ್ಲದೆ ದೇವಾಲಯಪ್ರವೇಶಕ್ಕೆ ಅಂತ್ಯಜರು ಕೂಡ ಬಹಳವಾಗಿ ಒಪ್ಪುವದೇ ಇಲ್ಲ. ಶಾಂತಿಕರವಾದ ಕೆಲಸಗಳನ್ನು ತಾವು ಸರ್ಕಾರದಲ್ಲಿ ಮಾಡುತ್ತಾರೆಂಬ ಭರವಸೆಯಿಂದಲೇ ತಮ್ಮನ್ನು ಮೆಂಬರುಗಳನ್ನಾಗಿ ಚುನಾಯಿಸಿದರೆಂಬುದನ್ನು ತಾವು ನೆನಪಿನಲ್ಲಿಡಬೇಕು. ಈಗ ನ್ಯಾಯವಿಧಾಯಕ ಸಭೆಯಲ್ಲಿ ಈ ದೇವಾಲಯ ಪ್ರವೇಶವು ಚರ್ಚೆಗೆ ಬರಬಹುದೆಂಬ ಊಹೆಯುಂಟಾಗಿದೆ. ತಾವುಗಳು ತಮ್ಮ ಅಭಿಪ್ರಾಯ ಕೊಡುವಾಗ ಪ್ರಜೆಗಳಲ್ಲಿ ದ್ವೇಷಾದಿಗಳು ಹೆಚ್ಚದಂತೆ ಒಳ್ಳೇ ಅಭಿಪ್ರಾಯವನ್ನು ದಯವಿಟ್ಟು ಕೊಡಿಸಬೇಕಾಗಿ ಪ್ರಾರ್ಥನೆ.

ವಿ. ರಂಗಪ್ಪ, ಅಂತ್ಯಜರ ಹಿತೈಷಿ,
ನಂಜನಗೂಡು.

ಚನ್ನಗಿರಿ ಶ್ರೀ ಶಾರದಾಸಮಾಜ.

ಸದರಿ ಮಹಿಳಾ ಸಮಾಜವು ಸುಮಾರು 3 ತಿಂಗಳ ಹಿಂದೆ ಸ್ಥಾಪಿತವಾಯಿತು. ಇದಕ್ಕೆ ಮೂಲಪುರುಷರು ಮ॥ ಟಿ. ವೆಂಕಟರಾಮಯ್ಯನವರು, ಇವರು ಇದುವರೆವಿಗೂ ಶಿವಮೊಗ್ಗ ಕೋ-ಆಪರೇಟಿವ್ ಸೊಸೈಟಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಿದ್ದು ಈಗಶಾನೆ ತಮ್ಮ ಕೆಲಸದಿಂದ ನಿವೃತ್ತರಾದರು. ಈ ಸಮಾಜವು ಪಕ್ಷಕ್ಕೊಂದು ಸಾರಿ ಮೀಟಿಂಗ್ ನಡೆಸುತ್ತಾ ಇದೆ. ಲಕ್ಷ್ಮೀ ಪೂಜೆ, ಮಹಿಳೆಯರ ಭಾಷಣ, ಭಾರತಪಠಣ, ಸಂಗೀತ ಮುಂತಾದುವುಗಳೇ ಸದ್ಯದಲ್ಲಿ ಮುಖ್ಯ ಕಾರ್ಯಗಳಾಗಿವೆ. ಇನ್ನು ಮೇಲೆ ಹಿಂದಿ ವ್ಯಾಸಂಗಕ್ಕೆ ಪ್ರಾರಂಭಿಸಬೇಕೆಂಬ ಕುತೂಹಲವಿದ್ದರೂ ತಕ್ಕ ಉಪಾಧ್ಯಾಯರ ಅಭಾವದಿಂದ ಕಾಲನಿರೀಕ್ಷಣೆ ಮಾಡುತ್ತಿದೆ. ಚರಕ, ಹೊಲಿಗೆ, ಕಸೂತಿ ಮುಂತಾದ ಕೈ ಕೆಲಸಗಳನ್ನು ನಡೆಸಬೇಕೆಂದು ಇರುತ್ತೇವೆ. ಶೈಶವಾವಸ್ಥೆಯಲ್ಲಿರುವ ಈ ಸಾಮಾಜಾಭ್ಯುದಯಕ್ಕೆ ಸ್ಥಳೀಯ ರಂಗನಾಥ ಕೋ-ಆಪರೇಟಿವ್ ಸೊಸೈಟಿಯವರು ದಯಾರ್ದ್ರಹೃದಯದಿಂದ ದಯಪಾಲಿಸಿರುವ 60 ರೂ. ಧನ ಸಹಾಯವನ್ನು ಕೃತಜ್ಞತೆಯಿಂದ ಅಂಗೀಕರಿಸಿದೆ. ನಗರಗಳಲ್ಲಿ ಮುಂದುವರೆದು ಸ್ತ್ರೀ ಸಮಾಜಗಳಲ್ಲಿ ಕೆಲಸ ಮಾಡುತ್ತಿರುವ ಸ್ತ್ರೀಯರು ಇಲ್ಲಿಗೆ ಬಂದು ತಮ್ಮ ಅನುಭವವನ್ನೂ, ಉತ್ಸಾಹವನ್ನೂ ಉಪನ್ಯಾಸಗಳ ಮುಖಾಂತರ ತಿಳಿಸಿಕೊಟ್ಟಲ್ಲಿ ಇಲ್ಲಿನ ಮಹಿಳೆಯರೆಲ್ಲರೂ ಕೃತಜ್ಞರಾಗಿರುವರು. ಕಳೆದವಾರ ರಿಟೈರಾದ ಟಿ. ವೆಂಕಟರಾಮಯ್ಯನವರು ಇಲ್ಲಿಗೆ ತಮ್ಮ ಕಾರ್ಯಾರ್ಥವಾಗಿ ದಯಮಾಡಿಸಿದ್ದಾಗ ಈ ಸಮಾಜದಲ್ಲಿ ಯಥೋಚಿತವಾಗಿ ಉಪನ್ಯಾಸಮಾಡಿ ತಮ್ಮ ಅನುಭವವನ್ನು ನಮ್ಮೆಲ್ಲರಿಗೂ ತಿಳಿಸಿದರು. ಇವರು ಸಮಾಜಕ್ಕೆ ಇದುವರೆಗೂ ಮಾಡಿರುವ ಇನ್ನು ಮುಂದೆ ಮಾಡಬೇಕೆಂದಿರುವ ಸಹಾಯಕ್ಕೋಸ್ಕರ ಇವರಿಗೆ ಈ ಸಮಾಜದವರು ಯಥಾಶಕ್ತಿ ಮರ್ಯಾದೆಯನ್ನು ಮಾಡಿದರು. ಈ ಸಂದರ್ಭದಲ್ಲಿ ಸಮಾಜದ ವೈಸ್‌ಪ್ರೆಸಿಡೆಂಟ್ ಶ್ರೀಮತಿ ವೆಂಕಟಲಕ್ಷ್ಮಮ್ಮ (ಮಿಸಸ್. ಎಚ್. ಜಿ. ರಾಮಯ್ಯ) ನವರೂ ಸೆಕ್ರೆಟರಿ ಸಿದ್ಧಮ್ಮ (ಮಿಸಸ್. ರುದ್ರಪ್ಪ) ನವರೂ ಸಮಯೋಚಿತಾನುಸಾರವಾದ ಭಾಷಣಗಳನ್ನು ಬಹಳ ಸ್ವಾರಸ್ಯವಾಗಿ ಮಾಡಿದನಂತರ ಸ್ತ್ರೀಯರಿಗೆ ಗಂಧ, ಪುಷ್ಪ, ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಬಿ. ಗೌರಮ್ಮ, ಅಸಿಸ್ಟೆಂಟ್ ಮಿಸ್ಟ್ರೆಸ್, ಗರ್ಲ್ಸ್ ಸ್ಕೂಲು
ಮತ್ತು ಜಾಯಿಂಟ್ ಸೆಕ್ರೆಟರಿ, ಶಾರದಾಸಮಾಜ.

ಕಾರ್ತಿಕ ದೀಪೋತ್ಸವ ಸಮಾರಂಭ.

ಕಳೆದ ಕಾರ್ತಿಕ ಬ॥ ಅಮಾವಾಸ್ಯೆ ಭಾನುವಾರ ಪ್ರಾತಃಕಾಲ ಶ್ರೀಮನ್ನಿರಂಜನ ಜಗದ್ಗುರು ಅನಂತಪುರದ ಮುರಘಾರಾಜೇಂದ್ರ ಸಚ್ಚಿದಾನಂದ ಮಹಾಸ್ವಾಮಿಗಳವರ ಮಠದಲ್ಲಿ ಶ್ರೀ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆ ರಾಜೋಪಚಾರ ಇತ್ಯಾದಿಗಳಿಂದ ಮಹಾಸನ್ನಿಧಿಯ ಪೂಜಾನಡೆದನಂತರ ಆಗಮಿಸಿದ ಭಕ್ತಮಾಹೇಶ್ವರರಿಗು ಮತ್ತು ಸರ್ವ ಜನಾಂಗದವರಿಗು ಸಹ ಸಂತರ್ಪಣೆಯನ್ನು ನಡೆಯಿಸಲಾಯಿತು. ಮಧ್ಯಾಹ್ನ ಶ್ರೀ ಮಹಾಸ್ವಾಮಿಗಳವರ ಸಿಂಹಾಸನಾರೋಹಣದೊಂದಿಗೆ ಸಭೆಯು ಸೇರಿ ಶ್ರೀಮನ್ನಹಾ ಸಾಲೂರು ಹಿರೇಮಠದ ಸ್ಥಿರ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರಿಂದ ಭಕ್ತಿ ವಿಷಯವಾಗಿಯೂ, ಸಾಗರ ತಾ॥ ಕಾಗೋಡು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ಮ॥ ಶಿವಲಿಂಗಪ್ಪಗೌಡರಿಂದ ವಿದ್ಯಾಭ್ಯಾಸದ ವಿಷಯವಾಗಿಯೂ ಪಂಡಿತ ಪಾಮರರಿಗೆ ಹೃದಯಂಗಮವಾಗುವಂತೆ ವ್ಯಾಖ್ಯಾನ ಮಾಡಲ್ಪಟ್ಟು ಮಂಗಲಘೋಷದಿಂದ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು. ಸಾಯಂಕಾಲ ಪೂಜಾನಂತರ ಪದ್ಧತಿಪ್ರಕಾರ ಮಠದ ಕರ್ತೃಗಳ ಗದ್ದಿಗೆಯಲ್ಲಿ ದೀಪಾರಾಧನಾ ಮಂಗಲ ನಡೆಯಿಸಿ ಮಹಾಸ್ವಾಮಿಯ ಆಂದೋಲಿಕಾರೋಹಣಂಗೈದು ಶ್ರೀಮಠದಿಂದ ಸಕಲ ಬಿರುದಾವಳಿಗಳೊಂದಿಗೆ ತಳಿರುತೋರಣಾದಿಗಳಿಂದಲಂಕೃತವಾದ ಶ್ರೀ ಗವಿಮಠದವರಿಗೂ ಹೊನ್ನಾಳಿ ತಾ॥ ನೇಮತಿ ಶ್ರೀಮನ್ನಿರಂಜನ ಭಜನಾಸಂಘದವರಿಂದಲೂ, ಹೊಸನಗರ ತಾ॥ ಹಲೋಸಾಲೆ ಮಳವಳ್ಳಿ ಗ್ರಾಮದ ಶ್ರೀಮನ್ನಿರಂಜನ ಭಜನಾಸಂಘದವರಿಂದಲೂ ಮಾಡಲ್ಪಟ್ಟ ವಾದ್ಯ, ಸಂಗೀತ ಸ್ವಾರಸ್ಯದಿಂದ ಕೂಡಿದ ಶಿವಭಜನೆಯ ಸಮೇತವಾಗಿ ಬಿಜಯಂಗೈಸಿ ಸದರಿ ಮಠದಲ್ಲಿ ದೀಪಾರಾಧನೆ ಮಂಗಲವಂ ನಡೆಯಿಸಿ ಪುನಃ ಶ್ರೀಮಠಕ್ಕೆ ದಯಮಾಡಿಸಿದಮೇಲೆ ಸೇರಿದ ಭಕ್ತಮಹಾಜನಗಳಿಗೆ ಫಲಾಶೀರ್ವಾದವಾಯ್ತು. ಈ ಉತ್ಸವವು ಕಿಕ್ಕಿರಿದು ನಿಂತಿರುವ ಪರಸ್ಥಳಗಳ ಸಾವಿರಾರು ಜನಸಂದಣಿಯಿಂದಲೂ ಇಕ್ಕೆಲದಲ್ಲೂ ಪ್ರಕಾಶಿಸುತ್ತಿದ್ದ ದೀಪಗಳ ತೇಜಸ್ಸಿನಿಂದಲೂ ಪ್ರೇಕ್ಷಕರ ಮನಸ್ಸನ್ನು ಅತ್ಯಾನಂದಗೊಳಿಸುತ್ತಿತ್ತು. ಈ ಉತ್ಸವಭಾಗಿಗಳಾದ ಮಹಾಜನಗಳಿಗೂ, ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೂ ಶ್ರೀ ಮುರಘೇಶನು ಕಲ್ಯಾಣವನ್ನುಂಟುಮಾಡಲೆಂದು ಆಶಿಸುವ

ಓರ್ವ ಸದ್ಭಕ್ತ.

ಸತ್ಪಾತ್ರ ದಾನ.

ಒಂದು ದೇಶವು ಸರ್ವತೋಮುಖವಾಗಿ ಮುಂದುವರಿಯಲು ವಿದ್ಯೆಯು ಅತ್ಯಾವಶ್ಯಕವು. ಅದಿಲ್ಲದಿದ್ದರೆ, ಕಗ್ಗತ್ತಲೆಯಲ್ಲಿರುವ ಕಣ್ಣುಳ್ಳವನಂತೆಯೇ ಸರಿ. ಅವನು ಕಣ್ಣಿದ್ದೂ ಕುರುಡನಂತೆಯೇ, ಅವನು ಯಾವ ಕೆಲಸವನ್ನು ಮಾಡಲೂ ಬೆಳಕಿಲ್ಲದೆ ಮುಂದುವರಿಯಲಾರನು. ಅದರಂತೆ ವಿದ್ಯೆಯು ಬೆಳಕಿಗೆ ಸಮಾನವಾದುದು. ವಿದ್ಯೆಯ ಪ್ರಭಾವದಿಂದ ದೇಶವು ದಿನ ದಿನಕ್ಕೆ ಶುಕ್ಲಪಕ್ಷ ಚಂದ್ರನಂತೆ ಅಭಿವೃದ್ಧಿಯನ್ನೈದುತ್ತದೆ. ಐಕ್ಯಮತ್ಯ, ಸರ್ವಸಮಾನತ್ವ, ಸ್ವದೇಶಾಭಿಮಾನ, ಸಹೋದರಭಾವ, ಕಷ್ಟಸಹಿಷ್ಣುತೆ ಮುಂತಾದುವು ಜನಸಾಮಾನ್ಯದಲ್ಲಿ ವಿದ್ಯೆಯು ಹರಡಿದಂತೆಲ್ಲಾ ತಲೆದೋರುವುವು. ಯಾವ ದೇಶವು ವಿದ್ಯಾವಂತರ ಆಶ್ರಯಸ್ಥಾನವಾಗಿರುವುದೋ ಆ ದೇಶದಲ್ಲಿ ಬಡತನವು ಬಯಲಾಗುವುದು, ಅನೈಕ್ಯವು ಚದರುವುದು. ಸ್ವಾತಂತ್ರ್ಯವು ನಲಿಯುವುದು, ಹೆಚ್ಚೇನು ಯಮನೂ ಕೂಡ ತನ್ನ ಪಾಶವನ್ನು ಮನಸ್ವಿಯಾಗಿ ಬೀರಲು ಹೆದರುವನು. ಇಂಥ ವಿದ್ಯೆಯ ಮಹಿಮೆಯನ್ನು ವರ್ಣಿಸಲು ಅಸದಳ. ಆದುದರಿಂದಲೇ ಪಾಶ್ಚಾತ್ಯರು ವಿದ್ಯೆಯ ಪ್ರಭಾವದಿಂದ ಸಕಲ ಕಲೆಗಳಲ್ಲಿಯೂ ಮುಂದುವರೆದು ಸಕಲೈಶ್ವರ್ಯ ಭೋಗಸಂಪನ್ನರಾಗಿದ್ದಾರೆ. ಸದ್ಯಃ ಸ್ಥಿತಿಯಲ್ಲಿ ನಮ್ಮ ದೇಶವು ವಿದ್ಯೆಯಲ್ಲಿ ಹಿಂದುಳಿದು ಪಾರತಂತ್ರ್ಯದಲ್ಲಿ ಸಿಲುಕಿ, ಬಡತನದಲ್ಲಿ ಬಸವಳಿದು ಬೆಂಡಾಗಿದೆ. ಇಂಥ ಪರಿಸ್ಥಿತಿಯಲ್ಲಿ ವಿದ್ಯಾ ಪ್ರಸಾರಣೆಯು ಅತ್ಯಗತ್ಯವಾದುದು. ಇದನ್ನರಿತೇ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರು ಮುಖ್ಯ ಮುಖ್ಯ ಪಟ್ಟಣಗಳಲ್ಲಿ ವಿದ್ಯಾರ್ಥಿಗಳ ವಸತಿಗೃಹಗಳ ಮೂಲಕ, ವಿದ್ಯಾಲಯಗಳ ಮೂಲಕ ಮತ್ತು ವೇತನಗಳ ಮೂಲಕ ವಿದ್ಯಾಪ್ರಸಾರಣೆಮಾಡಿ ಇತರರಿಗೆ ಮಾರ್ಗದರ್ಶಿಗಳಾಗಿದ್ದಾರೆ. ಈ ಮಹಿಮರ ಮೇಲ್ಪಂಕ್ತಿಯನ್ನನುಸರಿಸಿ ದಾವಣಗೇರಿಯ ಶ್ರೀಮಂತರೆಂದ ನೂರು ಚನ್ನಪ್ಪನವರ ಮಕ್ಕಳು ಮಲ್ಲಶೆಟ್ಟಪ್ಪನವರು ಫಸಲಿನ ವರಮಾನ ಸಹಿತ ಸುಮಾರು 1,000 ರೂ. ಬೆಲೆ ಬಾಳುವ ಜಮೀನನ್ನು ಇದೇ ದಾವಣಗೆರೆ ನಿವಾಸಿ ವೇ॥ ಕಲಪನಹಳ್ಳಿ ಮಠದ ಸಿದ್ಧಲಿಂಗಯ್ಯನವರಿಗೆ ದಾನವಾಗಿ ಕೊಟ್ಟಿದ್ದಾರೆ. ಇವರು ಬಡವರಾದಾಗ್ಯೂ ವಿದ್ಯೆಯ ಮಹಿಮೆಯನ್ನು ತಿಳಿದವರಾದುದರಿಂದ ಎಷ್ಟೇ ಕಷ್ಟ ನಿಷ್ಠುರಗಳು ಬಂದಾಗ್ಯೂ ತಮ್ಮ ಪುತ್ರನಾದ ಕೊಟ್ರೂರು ಬಸವಯ್ಯನವರನ್ನು ಬಿ.ಎ., ಹಾನರ್ಸ್ ತರಗತಿಯವರೆಗೆ ಓದಿಸಿ, ಮುಂದೆ ಎಂ.ಎ., ತರಗತಿಗೆ ಕಳುಹಿಸಿ ಧನಾಭಾವದಿಂದ ಪರಿತಪಿಸುತ್ತಿರುವುದನ್ನು ಕಂಡು, ಸದರಿ ಶ್ರೀಮಂತ ಮಲ್ಲಶೆಟ್ಟಪ್ಪನವರು ಇಂಥ ಕಷ್ಟಸಮಯದಲ್ಲಿ ಮೇಲ್ಕಂಡ 1,000 ರೂ. ಬೆಲೆ ಬಾಳುವ 25 ಎಕರೆ ಜಮೀನನ್ನು ಫಸಲಿನ ವರಮಾನಸಹಿತ ದಾನವಾಗಿ ಕೊಟ್ಟು ಅದರ ಉತ್ಪನ್ನದಿಂದ ಕೊಟ್ರೂರು ಬಸವಯ್ಯನವರು ವಿದ್ಯಾಭ್ಯಾಸವನ್ನು ನಿರಾತಂಕವಾಗಿ ಮುಂದುವರಿಸಲು ಸಹಾಯಕರಾದುದಕ್ಕಾಗಿ ಅವರನ್ನು ಎಷ್ಟು ಕೊಂಡಾಡಿದರೂ ಸಾಲದು. ಜಗದೀಶ್ವರನು ಅವರಿಗೆ ಇನ್ನೂ ಇಂಥ ಅನೇಕ ಪುಣ್ಯಕಾರ್ಯಗಳನ್ನು ಮಾಡಲು ದೀರ್ಘಾಯುಷ್ಯವನ್ನುಕೊಟ್ಟು ಇತರರಿಗೆ ಇದೇ ರೀತಿಯ ಸದ್ಬುದ್ಧಿಯನ್ನು ದಯಪಾಲಿಸಲೆಂದು ಬೇಡುವ

ಓರ್ವ ವಿದ್ಯಾಪಕ್ಷಪಾತಿ.

ಅಭಿನಂದನ ಸಮ್ಮೇಳನ.

ಜಸ್ಟಿಸ್ ಮ॥ ಪಿ. ಮಹಾದೇವಯ್ಯನವರಿಗೆ ಬೆಂಗಳೂರು ಹೈಕೋರ್ಟ್ ಚೀಫ್ ಜಡ್ಜಿಯವರಾಗಿ ನಿಯಮಿಸಲ್ಪಟ್ಟುದರಿಂದ ತಮ್ಮಗಳಿಗುಂಟಾದ ಸಂತೋಷಪ್ರದರ್ಶನಾರ್ಥವಾಗಿ ಬೊಂಬಾಯಿ ನಗರವಾಸಿಗಳಾದ ವೀರಶೈವ ಮಹಾಜನರು ತಮ್ಮ ಲಿಂಗಾಯತ ಸಮಾಜದ ವತಿಯಿಂದ ಪ್ರಿನ್ಸೆಸ್ ಸ್ಟ್ರೀಟಿನಲ್ಲಿರುವ ದೇವಕರ ಭವನದೊಳಗೆ ರಾವ್‌ಬಹದ್ದೂರ್ ಕೆ. ರಾಮಸ್ವಾಮಿ, ಜೆ.ಪಿ.,ಬಿ.ಎಸ್.ಸಿ. ಇವರ ಅಧ್ಯಕ್ಷತೆಯಲ್ಲಿ ಕಳೆದ ನವಂಬರ್ ತಾ॥ 29 ನೆಯ ಮಂಗಳವಾರ ಸಮಾವಿಷ್ಟರಾಗಿದ್ದರು. ಕಾಲೇಜು ವಿದ್ಯಾರ್ಥಿಗಳು, ಅಡ್ವೊಕೇಟರುಗಳು ವರ್ತಕರುಗಳು ಆದಿಯಾಗಿ ಅನೇಕಮಂದಿಗಳಿಂದ ಸಭೆಯು ಕಿಕ್ಕಿರಿದಿದ್ದಿತು. ಈವರೆಗೆ ವೀರಶೈವರಾರಿಗೂ ಲಭ್ಯವಾಗದಿದ್ದ ಹೈಕೋರ್ಟ್ ಚೀಫ್ ಜಡ್ಜಿಯ ಪದವಿಯನ್ನು ಮ॥ ಪಿ. ಮಹಾದೇವಯ್ಯನವರು ಪ್ರಥಮತಃ ಮುನ್ನೇಘರಾಗಿ ಸೇರಿ ತಮ್ಮ ಶಕ್ತಿಸಾಮರ್ಥ್ಯದಿಂದ ಪಡೆದಿರುವುದು ಬಹಳ ಪ್ರಶಂಸನೀಯವಾಗಿರುವುದಲ್ಲದೆ ಪ್ರತಿಯೊಬ್ಬ ಕರ್ನಾಟಕನಿಗೆ ಅದರಲ್ಲೂ ಲಿಂಗಾಯತರಿಗೆ ಹೆಮ್ಮೆಯನ್ನುಂಟುಮಾಡಿರುತ್ತದೆಂದು ಮೊದಲಾಗಿ ಅರ್ಥಗಂಭೀರವಾದ ಸುಸ್ವಾಗತಭಾಷಣವನ್ನು ಮಾಡಿದ ಮೇಲೆ ಮ॥ ಗಳಾದ ಬೊಂಬಾಯಿ ಅಡ್ವೊಕೇಟ್ ಮೋಕಾಶಿಯವರು, ಬೆಳಗಾಂ ಅಡ್ವೊಕೇಟ್ ಹಿರೇಮಠರವರು, ಸೊಲ್ಲಾಪುರದ ಅಟಿಕಸ್ ಜೇರಿಗೆಯವರು ಮತ್ತು ಬಾರ್ಸಿಯ ಭಟ್ಕರ್‌ರವರು ಸಂತೋಷಾಭಿನಂದನ ಪರಭಾಷಣಗಳನ್ನು ಮಾಡಿದರು. ಅಡ್ವೊಕೇಟ್ ಮ॥ ಮೋಕಾಶಿ, ಬಿ. ಎ., ಎಲ್ ಎಲ್ ಬಿ., ಜೆ. ಪಿ., ಯವರಿಂದ ಸೂಚಿತವಾದ ಮುಂದಣ ನಿರ್ಧಾರಗಳು ಅಡ್ವೊಕೇಟ್ ಮ॥ ಹಿರೇಮಠ, ಬಿ. ಎ.,ಎಲ್‌ಎಲ್ ಬಿ. ಇವರಿಂದ ಪುಷ್ಟೀಕರಿಸಲ್ಪಟ್ಟು ಸರ್ವರಿಂದಲೂ ಅಂಗೀಕರಿಸಲ್ಪಟ್ಟಿತು.—

(1) ಮ॥ ಪಿ. ಮಹಾದೇವಯ್ಯನವರು ಮೈಸೂರು ಹೈಕೋರ್ಟ್ ಚೀಫ್ ಜಡ್ಜಿಯ ಪದವಿಯನ್ನು ಹೊಂದಿದುದಕ್ಕಾಗಿ ಅವರಿಗೆ ಸಭೆಯು ತನ್ನ ಹೃತ್ಪೂರ್ವಕವಾದ ಆನಂದಾತಿಶಯವನ್ನೂ ಅಭಿನಂದನವನ್ನೂ ತಿಳಿಸಿ ಇವರಿಗೆ ದೀರ್ಘಾಯುರಾರೋಗ್ಯ ಸಂಪದವನ್ನೂ, ಮೈಸೂರು ನ್ಯಾಯಶಾಖಾಕಾರ್ಯದಲ್ಲಿ ಜಯವನ್ನೂ ಅನುಗ್ರಹಿಸಲೆಂದು ಪರಮೇಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತದೆ. (2) ನ್ಯಾಯಶಾಖೆಯ ಅತ್ಯಂತ ಉನ್ನತಸ್ಥಾನವನ್ನು ಪಡೆಯಲು ಅರ್ಹರಾದ ಮ॥ ಮಹಾದೇವಯ್ಯನವರಿಗೆ ಅನುಗ್ರಹಿಸಿದುದಕ್ಕಾಗಿ ಮೈಸೂರು ಶ್ರೀಮನ್ಮಹಾರಾಜರವರಿಗೂ ಅವರ ಪ್ರಭುತ್ವದವರಿಗೂ ಈ ಸಭೆಯು ತನ್ನ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತದೆ. (3) ಈ ನಿರ್ಧಾರಗಳನ್ನು ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯವರಿಗೂ ಮ॥ ಮಹಾದೇವಯ್ಯನವರಿಗೂ, ಮೈಸೂರು ಪ್ರಭುತ್ವದ ಚೀಫ್ ಸೆಕ್ರೆಟರಿಯವರಿಗೂ ಕಳುಹಲು ಈ ಸಭಾಧ್ಯಕ್ಷರಿಗೆ ಅಧಿಕಾರ ಕೊಡಲ್ಪಟ್ಟಿದೆ. ಈ ನಿರ್ಧಾರಗಳಾದನಂತರ ಭಾರತ ಚಕ್ರವರ್ತಿಯವರ ಮತ್ತು ಮೈಸೂರು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಳಿಂದ ಸಭೆಯು ವಿರಮಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಶ್ರೀಮನ್ಮಹಾಕ್ಯಾಸನೂರ ಸಂಸ್ಥಾನದಲ್ಲಿ ನಡೆದ ಕಾರ್ತಿಕೋತ್ಸವವು ಮತ್ತು ಚನ್ನ ಪಂಚಮರ ಹರಿಜನ ಶಬ್ದ ನಿಷೇಧ ಸಭೆಯು.

ಕಳೆದ ನವಂಬರ್ ತಾ॥ 27 ನೇ ಭಾನುವಾರ 12 ಘಂಟೆಯೊಳಗಾಗಿ ಪೀಠರ ಗುರುಬಸವಸ್ವಾಮಿಗಳವರ ಪಾಣಿಪದ್ಮೋದ್ಭವ ಯೋಗದ ಗುರುಬಸವಸ್ವಾಮಿಗಳವರ ಹಸ್ತಕಮಲೋದ್ಭವ ಭದ್ರ ಗುರುಬಸವಸ್ವಾಮಿಗಳವರ ಕರಕಂಜಾತರಾದ ಷಟ್ಸ್ಥಲ ಗುರುಬಸವಸ್ವಾಮಿಗಳವರ ಯೋಗಾಶ್ರಮದ ಸಮಾಧಿ ಸ್ಥಳದಲ್ಲಿ ಕರ್ತೃಗದ್ದುಗೆಗೆ ಶ್ರೀ ರುದ್ರಾಭಿಷೇಕವೂ, ಸಹಸ್ರ ಬಿಲ್ವಾರ್ಚನೆಯೂ ನಡೆದನಂತರ 4 ಘಂಟೆಯವರಿವಿಗು ಸರ್ವರ ಸಂತರ್ಪಣೆಯು ನಡೆಯಿತು. ಅನಂತರ ಆಶ್ರಮದ ಮುಂಭಾಗದಲ್ಲಿ ರಚಿಸಲ್ಪಟ್ಟಿದ್ದ ಸಭಾಮಂಟಪವು ಅನೇಕ ಚಿತ್ರವಿಚಿತ್ರ ತೋರಣ ಫಲಾವಳಿಗಳಿಂದ ಇಂದ್ರಸಭೆಯಂತೆ ತೋರುತ್ತಿತ್ತು. ಆಶ್ರಮದ ಎಡಭಾಗದಲ್ಲಿದ್ದ ಬಿಲ್ವವೇದಿಕೆಯು ಪುಷ್ಪಮಂಟಪಗಳಿಂದ ಅಲಂಕೃತವಾಗಿತ್ತು. ಜಾಹೀರ ಪ್ರಕಾರ ಎಲ್ಲಾ ಪ್ರಾಂತಗಳಿಂದಲೂ ಮಡಿವಾಳರು, ದೀವನಾಯಕರು, ಒಕ್ಕಲಿಗರು, ಹಸಲವರು ಮತ್ತು ಛಲವಾದಿ, ಚನ್ನಯ್ಯ, ಮಾತಂಗ, ಡೋಹರ, ಸಮಗಾರ, ಮೋಚಿ, ವೀರಮಾಸ್ತಿಗ ಮೊದಲಾದ ಅಸ್ಪೃಶ್ಯ ಪಂಚಮವರ್ಗದ ಶಿಷ್ಯಮಂಡಳಿಯವರು ಸುಮಾರು 600 ಜನರವರಿವಿಗೂ ಆಶ್ರಮದ ಮುಂಭಾಗದಲ್ಲಿ ಸೇರಿದ್ದರು. ಶ್ರೀಮತ್ಪಂಚಾಚಾರ್ಯರ ಭಾವಚಿತ್ರಕ್ಕೆ ಷೋಡಶೋಪಚಾರ ಪೂಜೆಯೂ ಗದ್ದುಗೆಗೆ ಮಹಾಮಂಗಳಾರತಿಯೂ ವಿಧ್ಯುಕ್ತವಾಗಿ ನೆರವೇರಿದಮೇಲೆ ಶ್ರೀ ಮಠದ ಈಗಿನ ಕರ್ತೃಗಳಾದ ಪಂಡಿತಗುರುಬಸವ ಶಿವಾಚಾರ್ಯ ಸ್ವಾಮಿಗಳವರು ಶ್ರೀ ಗೌರೀಕೇರಿ ಸಂಸ್ಥಾನದ ವೇ॥ ಚನ್ನಬಸಯ್ಯನವರು ಮತ್ತು ಚಿಮನೂರು ಪಾ॥ ಹೆಗ್ಗೋಡು ಶಿವಪ್ಪಗೌಡರೇ ಮೊದಲಾದ ಪ್ರಮುಖರೊಡನೆ ಮಠದಿಂದ ಉತ್ಸವಪೂರ್ವಕವಾಗಿ ಬಂದು ಸರ್ವರ ಜಯಘೋಷದೊಡನೆ ಸಭಾಮಂಟಪದೊಳ್ ಮೆರೆವ ಪೀಠವನ್ನು ಅಲಂಕರಿಸಲು ಮದಗ ಮಾಸೂರ ಸುತ್ತುಕೋಟಿ ವೀರಪ್ಪನವರು ಮಂಗಲಗೀತವನ್ನು ಹಾಡಿದರು. ಪ್ರೋಗ್ರಾಂಪ್ರಕಾರ ಚನ್ನ ಪಂಚಮರ ಸಭೆಯು ಆರಂಭವಾಯಿತು. ಅಧ್ಯಕ್ಷ ಪೂಜ್ಯಪಾದರು ನಿಮ್ಮಗಳ ಅಸ್ಪೃಶ್ಯ ಪ್ರಭೇದಗಳ ಪ್ರವರಪುರುಷರಾದ ಛಲದಂಕ ಚೆನ್ನಯ್ಯ, ಹರಳಯ್ಯ, ಕಕ್ಕಯ್ಯ, ಸ್ವಪಚಯ್ಯ, ವೀರಮುಷ್ಟಿ ಮೊದಲಾದವರು ಪರಶಿವಭಕ್ತರಾಗಿಯೂ, ಭಸ್ಮರುದ್ರಾಕ್ಷಿ ಶಿವಲಿಂಗಧಾರಿಗಳಾಗಿಯೂ, ಗುರುಜಂಗಮ ಕಿಂಕರರಾಗಿಯೂ, ವೀರವ್ರತನಿಷ್ಠರಾಗಿಯೂ ಇದ್ದರೆಂಬುವುದು ಸಂಸ್ಕೃತ, ಆಂಧ್ರ, ಕರ್ನಾಟಕ, ಮಹಾರಾಷ್ಟ್ರ ಪುರಾಣಗಳಲ್ಲಿ ಹೇಳುವ ಅವರ ಚರಿತ್ರೆಗಳ ಮೇಲಿಂದಲೂ ಮತ್ತು ಆಧುನಿಕರಾದ ನೀವಾದರೂ ಅವರಂತೆ ಬುನಾದಿಯಿಂದಲೂ ವೀರಶೈವ ಮಠಗಳಿಗೆ ಶಿಷ್ಯರಾಗಿ ನಿಮ್ಮ ಹವ್ಯ, ಕವ್ಯ, ಆಚಾರ, ವಿಚಾರ, ಪ್ರಾಯಶ್ಚಿತ್ತಾದಿಗಳಲ್ಲಿ ವೀರ ಮಾಹೇಶ್ವರರ ತೀರ್ಥಪ್ರಸಾದಗಳಿಂದಲೇ ಪುನೀತರಾಗುತ್ತಿರುವುದು ಲೋಕ ಪ್ರಸಿದ್ಧವಾಗಿರುತ್ತದೆ. ಹೀಗಿದ್ದು ಈಗಿನ ಕೆಲ ಜನರು ಕಾಂಗ್ರೆಸ್ಸಿನ ನೆಪದಿಂದ ತಮ್ಮುದ್ದೇಶವನ್ನು ಸಾಧಿಸಿಕೊಳ್ಳುವುದಕ್ಕೋಸ್ಕರ ನಿಮ್ಮನ್ನು ಗುಡಿಯನ್ನು ಹೊಗಿಸುತ್ತೇವೆ, ಗದ್ದವನ್ನು ಹತ್ತಿಸುತ್ತೇವೆ, ನಿಮ್ಮ ಕೂಡಿ ಉಣ್ಣುತ್ತೇವೆ, ಕುಲದೊಳಗೆ ಕೂಡುತ್ತೇವೆಂದು ಬಣ್ಣದ ಮಾತುಗಳನ್ನಾಡಿ ಗದ್ದಲದಲ್ಲಿ ಗಾಣ ಮಿಣಿಯನ್ನುವಂತೆ ತಮ್ಮ ಬಯಕೆಯನ್ನು ತೀರಿಸಿಕೊಳ್ಳುವುದಕ್ಕೋಸ್ಕರ ಕೆಲವು ವಾರಗಳಿಂದೀಚೆಗೆ ನಿಮಗೆ ಹರಿಜನರೆಂದು ವೃತ್ತಪತ್ರಿಕೆಗಳಲ್ಲಿ ಬರಿಯಹತ್ತಿರುವರು. ಇದರಿಂದ ನಿಮಗೆ ಕಳವಳವುಂಟಾಗಿದ್ದೇನೋ ನ್ಯಾಯವಾದದ್ದೇ ಸರಿ. ಈಗ ಮುಂಬರಿದವರು ಹಿಂದುಳಿದವರನ್ನು ಮೇಲಕ್ಕೆತ್ತುವರೆಂಬುವದಕ್ಕೆ ರಾ॥ ಬ॥ ಒಡೆಯರವರ ಮೇಲೆ ತಂದಿರುವ ಬಸವಾಪೀಗುಡಿಯ ಅಭಿಯೋಗವೇ ಸಾಕ್ಷಿಯಾಗಿರುವದು. ಹಡೆದ ತಾಯಿಗೆ ಇಲ್ಲದ ಮುರುಕವು ಮಲತಾಯಿಗೆ ಬರುವುದೇ? ಅಶಾಸ್ತ್ರೀಯವಾದ ಹರಿಜನ ಶಬ್ದಪ್ರಯೋಗವನ್ನು ಈ ಸಭೆಯ ಮೂಲಕ ನಿಷೇಧಿಸತಕ್ಕದ್ದು ಯುಕ್ತವಾಗಿದೆ. ಮಹಾತ್ಮ ಗಾಂಧಿಯವರ ಅಭಿಪ್ರಾಯವಾದರೂ ಹೀಗಿರಲಾರದು. ಆದರೂ ಅವರನ್ನು ಕೂಡ ಈ ಸಭೆಯ ಮೂಲಕ ಕೇಳತಕ್ಕದ್ದೆಂದು ಗಂಭೀರವಾಗಿ ಭಾಷಣವನ್ನು ಮಾಡಿದರು. ಅನಂತರ ಗೌರೀಕೇರಿ ವೇ॥ ಚನ್ನಬಸಯ್ಯನವರು ಸರ್ವತರಹದ ಅಸ್ಪೃಶ್ಯರು ವೀರಶೈವ ಮತಾಶ್ರಿತರೆಂಬುವ ಬಗ್ಗೆ ಅನೇಕ ಶಿಲಾಶಾಸನ ತಾಮ್ರಪಟಗಳ ಆಧಾರದ ಮೇಲಿಂದಲೂ ಪಂಚಮಠಗಳಲ್ಲಿರುವ ಪ್ರಾಚೀನ ರಿಕಾರ್ಡುಗಳ ಮೇಲಿಂದಲೂ ವಿಶದವಾಗಿ ಪ್ರತಿಪಾದಿಸಿದರು. ಹೊರಬೈಲ ಪಂಚಮ ಸ್ಕೂಲ್ ಮಾಸ್ಟರ್ ಛಲವಾದಿ ನಿಂಗಪ್ಪನು ಮೊದಲಿನಿಂದಲೂ ಶೈವರಾದ ನಾವು ಹರಿಜನರೆಂಬುವುದಕ್ಕೆ ಸುಮ್ಮನಿದ್ದರೆ ನಾಳೆ ಜಂಗಮಯ್ಯ ಮತ್ತು ದಾಸಯ್ಯಗಳ ಎರಡಾಟಕ್ಕೆ ಸಿಲುಕಿ ತ್ರಿಶಂಕು ಸ್ವರ್ಗವನ್ನು ಹೊಂದಬೇಕಾದೀತು. ಸದ್ಯಃ ಇದನ್ನು ಈಗಲೇ ಪರಿಹರಿಸಿಕೊಳ್ಳತಕ್ಕದ್ದು ಯುಕ್ತವೆಂದು ಶಾಸ್ತ್ರದ ಜೊತೆಗೆ ಮಾತನಾಡಿದರು. ಅನಂತರ ಹೊರಬೈಲು ಹುಚ್ಚಪ್ಪ ಎಂಬುವನು ಮದ್ಯಮಾಂಸ ಸೇವನೆಯನ್ನು ಮಾಡಕೂಡದೆಂಬ ಬಗ್ಗೆ ಮತ್ತು ಹೊಸಬಸ್ತಿ ಗಾಳಿಚೌಡಪ್ಪ ಎಂಬುವನು ಸೂಳೆಯರನ್ನು ಬಿಡಬಾರದೆಂಬ ಬಗ್ಗೆ ಸ್ವಾರಸ್ಯವಾಗಿ ಮನವರಿಕೆಮಾಡಿದರು. ಕಾಸರಸುಪ್ಪೆ ಕಟ್ಟೆ ಗೌಡನಮರಿಯಪ್ಪನು, ಹೊಸಬಸ್ತಿ ಬುದ್ಧಿವಂತ ಮಾರಪ್ಪನು ಮುಂತಾದವರು ಈದಿವಸ ಅಪ್ಪನವರ ಆಶೀರ್ವಾದದಿಂದ ನಮ್ಮ ಮತಸುಧಾರಣೆಗೆ ಬೇಕಾದಷ್ಟು ಕಾಲವು ದೊರೆಯಿತೆಂದು ಇನ್ನು ಒಂದು ತಿಂಗಳೊಳಗಾಗಿ ಇದೇ ಸಂಸ್ಥಾನದಲ್ಲಿಯೇ [illegible] ಯಿಂದ ನಮ್ಮ ಚನ್ನಯ್ಯ ಪಂಚಮರ ದೊಡ್ಡ ಸಭೆಯನ್ನು ಸೇರಿಸಿ ಪೂರ್ವದ ಮಠಗಳ ಆಚಾರ ಸ್ಥಾಪನೆಗಳನ್ನು ಅವಶ್ಯಕವಾಗಿ ಮಾಡಿಕೊಳ್ಳಬೇಕೆಂದು ಹುರಿದುಂಬಿಸಿದ ಭಾಷಣವನ್ನು ಮಾಡಿದರು. ಸರ್ವಾನುಮತದಿಂದ ಪಾಸಾದ ಠರಾವುಗಳು.—

(1) ಅಸ್ಪೃಶ್ಯರು ಹರಿಜನರೆಂಬುವದನ್ನು ಈ ಸಭೆಯು ನಿಷೇಧಿಸುತ್ತದೆ.

(2) ಅಸ್ಪೃಶ್ಯರಿಗೆ ಹರಿಜನ ಶಬ್ದವನ್ನು ಪ್ರಯೋಗಿಸಿದ್ದಕ್ಕಾಗಿ ಮಹಾತ್ಮ ಗಾಂಧಿಯವರಿಗೆ ಪತ್ರವನ್ನು ಬರೆಯಬೇಕು.

(3) ಇನ್ನು ಒಂದು ತಿಂಗಳೊಳಗಾಗಿ ಚೆನ್ನಯ್ಯ ಪಂಚಮರ ದೊಡ್ಡ ಸಭೆಯನ್ನು ಇದೇ ಸಂಸ್ಥಾನದಲ್ಲಿ ನಡಿಸತಕ್ಕದ್ದು.

ಈ ಠರಾವುಗಳ ಸರ್ವ ಹಕ್ಕು ಅಧ್ಯಕ್ಷ ಪೂಜ್ಯಪಾದರಿಗೆ ವಹಿಸಲ್ಪಟ್ಟಿತು. ಅನಂತರ ಅಸ್ಪೃಶ್ಯ ಜನರ ಕೋಲು ಹುಯ್ಯುವ ಕುಣಿದಾಟವು ತಾಳ ಮೇಳಗಳೊಡನೆ ಸುಮಾರು 2 ತಾಸುಗಳವರೆಗೆ ಮನೋರಂಜಕವಾಗಿ ನಡೆಯಿತು. ಪುನಃ ದೀವನಾಯಕರ ಕರಡೀ ಕೈತಾಳಗಳ ವಾದನವು 1 ಗಂಟೆಯ ಕಾಲ ಸುತ್ಯಾತ್ಯವಾಗಿ ನಡೆದು ಸರ್ವರಿಗೂ ಪ್ರಸಾದ ಗಂಧ ತಾಂಬೂಲಗಳು ಹಂಚಲ್ಪಟ್ಟನಂತರ ಅಧ್ಯಕ್ಷರ ಅಪ್ಪಣೆಮೇರೆಗೆ ಸ್ಟಾರ್ ಪತ್ರಿಕಾ ಅಭಿವೃದ್ಧಿಗೋಸ್ಕರ ಒಂದು ರೂಪಾಯಿಯು ತೆಗೆಸಲ್ಪಟ್ಟು ಶ್ರೀಮನ್ಮಹಾರಾಜರವರ ಶ್ರೀ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಭರಕಾಸ್ತು ಆಗಲು ಶ್ರೀಗಳವರು ಆಚಾರ್ಯರ ಭಾವಚಿತ್ರದೊಡನೆ ಶ್ರೀ ಮಠಕ್ಕೆ ದಯಮಾಡಿಸಿ ಅತಿಶಯವಾಗಿರುವ ಚೌಘುಡ ಪಾನೆಯ ಪ್ರಾಸಾದದೊಳಗೆ ಉನ್ನತಾಸನದಲ್ಲಿ ಮುಹೂರ್ತಗೊಳಿಸಲು ಸರ್ವರೂ ಶ್ರೀಗಳವರ ಆಶೀರ್ವಾದ ಪಡೆದು ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದರು.

ಓರ್ವ ಪ್ರತ್ಯಕ್ಷದರ್ಶಿ.

[ಮೇಲ್ಕಂಡ 1 ರೂ. ಯನ್ನು ಸಂತೋಷದಿಂದ ಸ್ವೀಕರಿಸಿದೆ—ಸಂ.]

ಶ್ರೀಯುತ ಮಹಾತ್ಮ ಗಾಂಧಿಯವರಿಗೆ

ತಾವು ಕೆಲವು ದಿನಗಳಿಂದೀಚೆಗೆ ವೃತ್ತಪತ್ರಿಕೆಗಳಲ್ಲಿ ಕಟ್ಟಾ ಶೈವರಾಗಿಯೂ ನಮ್ಮ ವೀರಶೈವ ಮಠದ ಶಿಷ್ಯಕೋಟಿಗೆ ಸೇರಿದವರಾಗಿಯೂ ಇರುವ ಅಸ್ಪೃಶ್ಯರಿಗೆ ಹರಿಜನರೆಂಬ ಶಬ್ದವನ್ನು ನೂತನವಾಗಿ ಪ್ರಯೋಗಿಸಿರುವುದರಿಂದ ಅವರಿಗು ಮತ್ತು ನಮಗು ಸಹ ಮನಃಖೇದವುಂಟಾಗಿರುತ್ತದೆ. ಈ ಬಗ್ಗೆ ತಾ॥ 27 ರಲ್ಲಿ ನಮ್ಮ ಮಠದಲ್ಲಿ ಎಲ್ಲಾ ಜಾತಿಯ ಅಸ್ಪೃಶ್ಯರು ಸೇರಿ ಸಭಾ ಮೂಲಕ ನಿಷೇಧವನ್ನು ಪ್ರದರ್ಶಿಸಿರುತ್ತಾರೆ. ಈ ರೀತಿ ಮತಗಳನ್ನು ವಿನಿಮಯ ಮಾಡಲಿಕ್ಕೆ ಕಾರಣವೇನೆಂಬುದನ್ನು ತಿಳಿಸಲಿಕ್ಕೆ ಅಪೇಕ್ಷಿಸುತ್ತೇವೆ.

ಪಂಡಿತ ಗುರುಬಸವ ಭಿಕ್ಷಾವರ್ತಿ ಶಿವಾಚಾರ್ಯ ಮಹಾಸ್ವಾಮಿಗಳು,
ಅಸ್ಪೃಶ್ಯರ ಸಭಾಧ್ಯಕ್ಷರು ಮತ್ತು ಮಠ ಗುರುಗಳು,
ಸಂಸ್ಥಾನ ಕ್ಯಾಸನೂರು,
ಸೊರಬ ತಾ॥ ಶಿವಮೊಗ್ಗಾ ಡಿ॥
ತಾ॥ 28-11-1932. ಮೈಸೂರುಸ್ಟೇಟ್.

ಶ್ರೀಕಂಠೇಶ್ವರ ದೇವಾಲಯದ ಮುಂದೆ ದುರ್ವರ್ತನ.

ಈಶ್ವರ ದರ್ಶನಾರಾಧನಕ್ಕಾಗಿ ಆದಿಕರ್ನಾಟಕರೊಡಗೂಡಿ 10 ಜನರು ಇದೇ ಮಾಹೆ 4 ನೇ ತಾರೀಖು ಭಾನುವಾರ ನಂಜನಗೂಡು ಶ್ರೀ ಶ್ರೀಕಂಠೇಶ್ವರ ದೇವಾಲಯವನ್ನು ಪ್ರವೇಶಿಸುವುದಾಗಿ ಮ॥ ತಗಡೂರು ರಾಮಚಂದ್ರರಾಯರವರ ಹೆಸರಿನಲ್ಲಿ ಪೂರ್ವಭಾವಿಯಾಗಿಯೇ ನೋಟೀಸುಗಳು ಹಂಚಲ್ಪಟ್ಟಿದ್ದುವು. ಕೆಲ ವೈದಿಕ ಪ್ರಮುಖರು ಮೈಸೂರಿನಲ್ಲಿ ಸಭೆ ನಡೆಸಿ ಮೇಲ್ಕಂಡ ವಿಚಾರವನ್ನು ಚರ್ಚಿಸಿ ಶಾಸ್ತ್ರಸಮ್ಮತವಾದ ಆಧಾರವಿದೆಯೇ? ಎಂಬ ಅಂಶವನ್ನು ಹುಡುಕಲು ಸ್ವಲ್ಪ ಕಾಲದವರೆಗೆ ಅವಕಾಶ ಬೇಕೆಂತಲೂ ಮತ್ತು ಕ್ಷಿಪ್ರದಲ್ಲಿಯೇ ನಡೆಯಲಿರುವ ನ್ಯಾಯವಿಧಾಯಕ ಸಭೆಯಲ್ಲಿ ಆದಿಕರ್ನಾಟಕರ ದೇವಾಲಯಪ್ರವೇಶದ ವಿಚಾರವು ಚರ್ಚಿಸಲ್ಪಟ್ಟು ತೀರ್ಮಾನವು ಹೊರಬೀಳುವ ಸಂಭವವಿರುವುದರಿಂದಲೂ ಅದುವರೆಗೆ ಆದಿಕರ್ನಾಟಕರು ದೇವಾಲಯವನ್ನು ಪ್ರವೇಶಿಸಬೇಕೆಂಬ ತಮ್ಮ ಆಕಾಂಕ್ಷೆಯ ಕುತೂಹಲವನ್ನು ಮುಂದುವರಿಸಬೇಕೆಂತಲೂ ಸಭೆಯವರು ಮಾಡಿದ ತೀರ್ಮಾನವನ್ನನುಸರಿಸಿ ಡಿಸೆಂಬರ್ ತಾರೀಖು 4 ನೇ ಭಾನುವಾರ ದೇವಾಲಯದ ಹೊರಭಾಗದಲ್ಲಿಯೇ ನಿಂತು ಭಗವತ್ಪ್ರಾರ್ಥನೆ ಮಾಡಿ ಹೋಗುವುದಾಗಿ ತಾರೀಖು 2 ರಲ್ಲಿ ಮ॥ ರಾಮಚಂದ್ರರಾಯರವರು ಎರಡನೇ ನೋಟೀಸನ್ನು ಊರಿನಲ್ಲೆಲ್ಲ ಹಂಚಿದರು. 4-12-32ನೇ ಭಾನುವಾರ ಪ್ರಾತಃಕಾಲ ಸುಮಾರು 9-10 ಘಂಟೆ ಸಮಯದಲ್ಲಿ ಮ॥ ರಾಮಚಂದ್ರರಾಯರವರು ಸ್ನಾನ, ಮಡಿ, ಭಸ್ಮಧಾರಣಗಳಿಂದ ಅತ್ಯಂತ ಶುಚಿರ್ಭೂತರಾದ ಕೆಲವರು ಆದಿಕರ್ನಾಟಕರೊಡನೆ ಪುರ ಪ್ರದಕ್ಷಿಣೆಯನ್ನು ಮಾಡಿಕೊಂಡು ಬಂದು ದೇವಾಲಯದ ಬಹಿರಾವರಣದ ಪ್ರದಕ್ಷಿಣೆಯನ್ನು ಮಾಡುತ್ತಿರುವ ಸಮಯದಲ್ಲಿ ಪೂರ್ವ ಸಂಕೇತದಂತೆ ಅಕ್ಕಪಕ್ಕಗಳಲ್ಲಿ ಅಡಗಿಕೊಂಡಿದ್ದ ಕೆಲವು ಜನರು ಭಗವತ್ಪ್ರಾರ್ಥನಾಸಕ್ತ ತದೇಕ ಚಿತ್ತಾಂತಃಕರಣ ಪ್ರೇಮ ಪರವಶರಾಗಿದ್ದ ಆ ಸುಹೃದಯರುಗಳನ್ನು ವಾಚಾಮ ಗೋಚರವಾಗಿ ನಿಂದಿಸಿ, ಶಿಲಾ ವೃಷ್ಟಿಗಳಿಂದ ಘಾತಿಸಿ, ಅವರುಗಳ ಮೇಲೆ ಸಗಣಿಯನ್ನೂ ಅಸಹ್ಯ ವಸ್ತುಗಳನ್ನೂ ಬಿಸಾಡಿ, ಅವರುಗಳ ಟೋಪಿಗಳನ್ನು ಕಿತ್ತು ಎಸೆದಾಡಿ, ಅವರುಗಳ ಕಣ್ಣು ತಲೆಗಳಿಗೆ ಧೂಳನ್ನು ಎರಚಿ ಮುಷ್ಟಿ ಪ್ರಹಾರಗಳಿಂದ ಮರ್ದಿಸಿ ಸಹನಾತೀತವಾದ ಉಪಟಳಗಳಿಂದ ಅವರುಗಳನ್ನು ಸಂಕಟಗೊಳಿಸಿದ ದೃಶ್ಯವು ಅತಿ ಭೀಕರವೂ ಅಸಭ್ಯವೂ, ಅಮಾನುಷವೂ ಆಗಿತ್ತು. ಅಷ್ಟರಲ್ಲಿ ವೀರಶೈವ ಮತದ ಮ॥ ಡಿ. ಸುಬ್ಬಣ್ಣನವರೂ, ಎಸ್. ಸುಬ್ಬಣ್ಣನವರೂ ಆದಿಕರ್ನಾಟಕರನ್ನೂ ರಾಮಚಂದ್ರರಾಯರನ್ನೂ ತಮ್ಮಗಳ ಮಧ್ಯೆ ಸೇರಿಸಿಕೊಂಡು ಅವರುಗಳಿಗೆ ಯಾವ ವಿಧವಾದ ತೊಂದರೆಯೂ ಉಂಟಾಗದಂತೆ ಜನಗಳಿಗೆ ವಿವೇಕವನ್ನು ಹೇಳಿದರು. ಇಷ್ಟೆಲ್ಲಾ ಕೋಟಲೆಗೊಳಿಸಲ್ಪಟ್ಟರೂ ಮ॥ ರಾಯರಾಗಲಿ ಆದಿಕರ್ನಾಟಕರಾಗಲಿ ಪ್ರತಿಭಟಿಸದೆ ಒಂದು ಶಬ್ದವನ್ನಾಗಲಿ ಉಚ್ಚರಿಸದೆ ಮೌನವಾಗಿ ನಿಂತು ಕಷ್ಟಗಳನ್ನು ಅನುಭವಿಸಿ ಸತ್ಯಾಗ್ರಹದ ಮಹಿಮೆಯನ್ನೂ ಸತ್ಯಾಗ್ರಹಿಗಳ ಸತ್ವಪೂರ್ಣವಾದ ಸಹನೆಯನ್ನೂ ಪ್ರದರ್ಶಿಸಿದ ಅವರುಗಳ ಕ್ಷಮಾಗುಣವು ಅತ್ಯಂತ ಪ್ರಶಂಸನೀಯವಾಗಿತ್ತು. ಆ ಸಮಯದ ಕ್ಷಮಾಗುಣಕ್ಕಾಗಿ ಅವರು ವಂದನಾರ್ಹರು. ದೇವಾಲಯದ ಮುಂದೆ ದೇವರ ಹೆಸರಿನಲ್ಲಿ ಇಂಥಾ ಭೀಷಣವಾದ ಹಿಂಸಾ ಕೃತ್ಯಗಳು ನಡೆಯುತ್ತಿರುವಾಗ ಜವಾಬ್ದಾರಿ ಅಧಿಕಾರಿಗಳಾರೂ ಇಲ್ಲದೆ ಹೋದದ್ದನ್ನೂ ಕೆಲವರು ದೇವಸ್ಥಾನದ ಒಳಗಡೆ ಸೇರಿಕೊಂಡು ತಟಸ್ಥರಾಗಿದ್ದುದನ್ನೂ ನೋಡಿದರೆ ಅಂದಿನ ದೃಶ್ಯವನ್ನು ಪ್ರತ್ಯಕ್ಷ ಪರೋಕ್ಷವಾಗಿ ತಿಳಿದು ಮರುಗಿ ಸಂಕಟಪಡುವ ಅಧಿಕ ಸಂಖ್ಯಾಕ ಮಾನವ ಕುಲ ಪ್ರೇಮಿಗಳಾದ ಸುಹೃದಯರಾಡಿಕೊಳ್ಳುತ್ತಿರುವ - ಅವಿದ್ಯಾವಂತರೂ ಅಜ್ಞರೂ ಆದ ಜನರನ್ನು ಈ ದುರ್ವರ್ತನೆಗೆ ಪ್ರೋತ್ಸಾಹಿಸಿ ಕೋತಿ ಬುತ್ತಿಯನ್ನವನ್ನು ತಿಂದು ಮೇಕೆ ಬಾಯಿಗೆ ಒರಸಿ ಅದನ್ನು ಶಿಕ್ಷೆಗೆ ಗುರಿಪಡಿಸಿದಂತೆ ದೇವಸ್ಥಾನಕ್ಕೆ ಸಂಬಂಧಪಟ್ಟ ಕೆಲವರು ಕಂಡು ಕಾಣದವರಂತೆ ಇದ್ದರೆಂಬ ಮಾತುಗಳು' ಸತ್ಯವಾದುವುಗಳೆಂದು ಊಹಿಸಿ ನಿರ್ಧರಿಸಲ್ಪಟ್ಟರೆ ಅಕ್ಕ ವಿಚಾರವು ಬಹುಶಃ ಅನುಚಿತವೇನೂ ಆಗಲಾರದು. ಆದಿಕರ್ನಾಟಕರ ದೇವಾಲಯ ಪ್ರವೇಶದ ವಿಚಾರವು ಪೂರ್ವಭಾವಿಯಾಗಿಯೇ ಒಂದೆರಡು ವೇಳೆ ಪ್ರಸಿದ್ಧಪಡಿಸಲ್ಪಟ್ಟು ಜನಜನಿತವಾಗಿರುವಾಗ ಪೋಲೀಸಿನವರು ಸೆಮ್ಮದಿಯನ್ನು ಕಾಪಾಡಲು ಸಜ್ಜಿತರಾಗಿ ತಮ್ಮ ಕರ್ತವ್ಯವನ್ನು ಪರಿಪಾಲಿಸದೆ ತಟಸ್ಥರಾಗಿದ್ದುದು ನಮ್ಮ ಸರ್ಕಾರದ ಘನತೆಗೆ ಲಾಂಛನಾಸ್ಪದವೆನಿಸ ವುದಿಲ್ಲ. ಆನೆಗಳ ರಾತಿಬಿನ ಸಮಯವಲ್ಲವಿದ್ದರೂ, ತಾ॥ ಅಮಲ್ದಾರ್‌ರವರು ಆನೆಗಳನ್ನು ತರಿಸಬೇಡಿ ಪ್ರಮಾದವೇನಾದರೂ ಉಂಟಾದೀತು ಎಂಬದಾಗಿ ಹೇಳಿದರೂ ಲಕ್ಷಿಸದೆ ಪೇಷ್ಕಾರರವರು 2 ಆನೆಗಳನ್ನು ತರಿಸಿ ಆ ಸಮಯದಲ್ಲಿ ದೇವಸ್ಥಾನದ ಬಾಗಿಲನಲ್ಲಿ ಅಡ್ಡವಾಗಿ ನಿಲ್ಲಿಸಿ ಆನೆಗಳಿಗೆ ರಾತೀವುಕೊಡುವ ವ್ಯಾಜದಿಂದ ಭಕ್ತಾದಿಗಳ ದೇವಾಲಯ ಪ್ರವೇಶಕ್ಕೆ ಅಡಚಣೆಯನ್ನುಂಟುಮಾಡಿ ಭೀತಿಪಡಿಸಿದ್ದಲ್ಲದೆ ದೇವಸ್ಥಾನದ ಬಾಗಿಲುಗಳನ್ನು ಮುಚ್ಚಿಸಿ ಮೊಹರನ್ನು ಮಾಡಿಸಿದ್ದರು. ಭಗವದಾರಾಧನ ಮತ್ತು ದರ್ಶನಾರ್ಥಿಗಳಾಗಿ ಆ ಸಮಯದಲ್ಲಿ ಬಂದ ಭಕ್ತಾದಿಗಳಿಗೆ ಈ ವರ್ತನವು ತುಂಬಾ ಸಂಕಟವನ್ನುಂಟುಮಾಡಿರುವುದರಲ್ಲಿ ಸಂಶಯವೇ ಇಲ್ಲ ಮತ್ತು ಅದೇ ಸಮಯದಲ್ಲಿ ಕೆಲವು ವಿವೇಕಶೂನ್ಯರಾದ ಜನರನ್ನು ಕುರಿತು ದೇವಸ್ಥಾನದ ಕೆಲಸಗಾರರೊಬ್ಬರು -ಬ್ರಾಹ್ಮಣೇತರರ ವೈಕಿ ಒಬ್ಬರು ಶ್ರೀಮಂತರು ಈ ದೇವಸ್ಥಾನದ ಧರ್ಮದರ್ಶಿಗಳಾಗಿದ್ದಾರೆ, ಅವರು ಆದಿಕರ್ನಾಟಕರಿಗೆ ಉತ್ತೇಜನಕೊಟ್ಟು ಇಷ್ಟೆಲ್ಲಾ ದಾಂಧಲೆ ನಡೆಸುತ್ತಿದ್ದಾರೆ. ಇತ್ಯಾದಿಯಾಗಿ ಉದ್ರೇಕಕರವಾದ ಮಾತುಗಳನ್ನಾಡಿ ಹುರಿದುಂಬಿಸಿ ಅವರನ್ನು ಪ್ರೋತ್ಸಾಹಿಸಲು ಆ ಮತಿಹೀನರಾದ ಜನರು ಅವರನ್ನು ಕುರಿತು ಸ್ವಾಮಿ ತಮ್ಮ ಅಪ್ಪಣೆಯಾದರೆ ಸಾಕು; ಆತನ ತಲೆಯನ್ನು ತಂದು ಪಾದದಲ್ಲಿರಿಸುತ್ತೇವೆ ಎಂಬದಾಗಿ ಹೇಳಿ ಆ ಶ್ರೀಮಂತರ ಮನೆಕಡೆ ಕ್ರೋಧಾವೇಶರಾಗಿ ಗುಂಪುಕೂಡಿ ನುಗ್ಗುತ್ತಿರುವದನ್ನು ಕಂಡು ಸ॥ ಡಿ॥ ಸಾಹೇಬರವರು ಗುಂಪನ್ನು ತಡೆಯಿಸಿ ಇದೇನು ಪುಂಡಾಟ ನಿಮ್ಮಗಳ ವಿಚಾರದಲ್ಲಿ ತಕ್ಕ ಬಂದೋಬಸ್ತು ಮಾಡಬೇಕೋ ಎಂಬದಾಗಿ ಘರ್ಜಿಸಲು ಆಗ ಜನರು ತಟಸ್ಥರಾದರು. ಸ॥ ಡಿ॥ ಸಾ॥ ರವರು ಆರೀತಿ ಮಾಡದೆ ಇದ್ದಿದ್ದರೆ ದುಷ್ಟರ ದುರಾಗ್ರಹದಿಂದ ಪ್ರಳಯಕಾರಕವಾದ ಪ್ರಮಾದವೇ ನಡೆದುಹೋಗುತ್ತಿದ್ದುದರಲ್ಲಿ ಸಂಶಯವೇ ಇರಲಿಲ್ಲ. ಅದೇ ದಿವಸ ರಾತ್ರಿ ನಾನು ದೇವಸ್ಥಾನದ ಪ್ರದಕ್ಷಿಣೆಗೆ ಹೋಗಿದ್ದ ಸಮಯದಲ್ಲಿ ದಾಂಧಲೆನಡೆಸಿದ ಗುಂಪಿಗೆ ಸೇರಿದವನೊಬ್ಬನು ದೇವಸ್ಥಾನದ ಒಬ್ಬ ನೌಕರನ ಸಂಗಡ - ನೋಡಿದಿರಾ ಸ್ವಾಮಿ, ನಮ್ಮಗಳನ್ನೆಲ್ಲಾ ಪ್ರೋತ್ಸಾಹಿಸಿ ಮುಂದಕ್ಕೆ ತಳ್ಳಿ ಇಷ್ಟು ದಾಂಧಲೆ ನಡೆಸಿದ್ದರಲ್ಲಿ ನಮ್ಮಗಳಿಗೇನಾದರೂ ಮರ್ಯಾದೆಕೊಟ್ಟರೆ? ಎಂದು ಹೇಳಲು ಸದರಿ ನೌಕರನು ಅಯ್ಯೋ! ಅವರು ಆರೀತಿ ಮಾಡಿದರೇ? ಅವರೇ ಮಾಡಿಸಿದರೆಂದು ಜನಗಳು ತಿಳಿದುಕೊಳ್ಳುತ್ತಾರೆ ಎಂಬದಾಗಿ ಹೇಳಿದರು. ಈ ಸಂಭಾಷಣೆಯನ್ನು ಸಮಿಪದಲ್ಲಿ ಜಲವಿಸರ್ಜನೆಗಾಗಿ ಕೂತಿದ್ದ ಕೆಲಸಗಾರರು ಕೇಳಿಯೂ ಇರಬಹುದು. ಅವರನ್ನು ಯಾವ ಕಟ್ಟಳೆ ಕಾನೂನುಗಳಾಗಲಿ ಪದ್ಧತಿಗಳಾಗಲಿ ಮಾಮೂಲುಗಳಾಗಲಿ ಹತೋಟಿಯಲ್ಲಿಡಲು ಶಕ್ತಿಯುಳ್ಳವುಗಳಾಗಿಲ್ಲವೆಂತ ಕಾಣುತ್ತದೆ. ಅವರ ನಿರಂಕುಶವಾದ ಆತ್ಮಾಡಳಿತವೇ ರೂಢಮೂಲವಾಗಿದೆ. ಧರ್ಮದರ್ಶಿಗಳೂ ಮೇಲ್ಪಟ್ಟ ಆಫೀಸರುಗಳೂ ನೆಪಮಾತ್ರಕ್ಕಿರುತ್ತಾರೆ. ಚಾಮುಂಡಿಬೆಟ್ಟ, ಕನ್ನಂಬಾಡಿಜಲಾಶಯ ಮುಂತಾದ ಅದ್ಭುತ ವಿಚಾರಗಳಾಗಿದ್ದರೇನೇ ಸರ್ಕಾರದ ಗಮನಕ್ಕೆ ಬರಲು ಯೋಗ್ಯವಾಗುತ್ತವೆ. ನಮ್ಮ ಸರ್ಕಾರದ ದೃಷ್ಟಿಯಲ್ಲಿ ಇವೆಲ್ಲಾ ಅಲ್ಪವಿಚಾರಗಳು. ಮಾಡತಕ್ಕದ್ದೇನು! ಶ್ರೀಕಂಠೇಶ್ವರ ದೇವಾಲಯದಲ್ಲಿ ಹಿಂದೆ ಮಾಯವಾದ ಮುತ್ತುಗಳೂ ಪಚ್ಚೆ ಮೊದಲಾದ ವಸ್ತುಗಳೂ ಪ್ರಜೆಗಳಿಗೆ ಅಮೌಲ್ಯವಾಗಿ ಕಾಣುತ್ತವೆಯೋ ಹೊರತು ಸರ್ಕಾರದ ದೃಷ್ಟಿಯಲ್ಲಿ ಅದೇನೋ ಒಂದು ಸಣ್ಣ ವಿಚಾರ.

ಪ್ರತ್ಯಕ್ಷದರ್ಶಿ.

ಭಾರತ ರಾಜಕೀಯದೃಶ್ಯ

(ಲೇ—ಕಣಕುಪ್ಪಿ ಗುರುಪಾದಪ್ಪ ಶ್ರೀ ಜಯದೇವ ಪ್ರೆಸ್, ದಾವಣಗೆರೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದುದು.)

ಈ ಪರಿಸ್ಥಿತಿಯಲ್ಲಿ ಜನರು ವಿಕ್ಷುಬ್ಧಚಿತ್ತರಾಗಿದ್ದರೂ ಯಥಾಪ್ರಕಾರ ಜನರ ಕಷ್ಟ ಸುಖಗಳು ಬ್ರಿಟಿಷರಂತಹ ನಾಗರಿಕರ ಆಡಳಿತದಲ್ಲಿದ್ದು ಕೂಡ ಸರ್ವವ್ಯಾಪಿಯಾದ ಜಗದೀಶ್ವರನ ಇಷ್ಟಾನಿಷ್ಟದಮೇಲೆ ನಿಲ್ಲುವಂತಾದವು. ನಮ್ಮ ಕಷ್ಟನಷ್ಟಗಳ ಪರಿಹಾರಬೇಡ, ಅವುಗಳನ್ನು ಕೇಳುವವರಿದ್ದರೆ ನಮಗದಕ್ಕವಕಾಶ ಸಿಕ್ಕುವಂತಿದ್ದರೆ ನಮಗೆಷ್ಟೋ ಸಮಾಧಾನವಾದೀತು. ಶಾಂತಿಯುಂಟಾದೀತು. ಒಂದು ಬಗೆಯ ತೃಪ್ತಿಯೂ ಆಗ ಬಹುಮಟ್ಟಿಗೆ ನಮ್ಮ ವ್ಯಸನ ಕಡಿಮೆಯಾಗುವುದರಲ್ಲಿ ಸಂದೇಹವೇ ಇರುವುದಿಲ್ಲ. ಈ ಕಾರಣದಿಂದ ರಾಷ್ಟ್ರ ಸಭೆಯವರು, ಆರಂಭದಲ್ಲಿ ನಮಗೆ ನಮ್ಮ ಕಷ್ಟನಷ್ಟಗಳನ್ನು ಹೇಳಿಕೊಳ್ಳುವಷ್ಟರ ಮಟ್ಟಿಗಾದರೂ ದೇಶಾಡಳಿತದಲ್ಲಿ ಪ್ರಾತಿನಿಧ್ಯವಿರಬೇಕೆಂದು ಸರ್ಕಾರದವರಲ್ಲಿ ಪದೇಪದೇ ಅರಿಕೆಮಾಡುತ್ತಾ ಬಂದರು. ಪ್ರಾಂತಿಕ ಸಭೆಗಳಲ್ಲಿಯೂ (Supreme) ವರಿಷ್ಠ ಸಭೆಯಲ್ಲಿಯೂ ಅರ್ಥಜನ ಲೋಕನಿಯುಕ್ತ ಸದಸ್ಯರಿರಬೇಕು. ಆಯವ್ಯಯ ಪಟ್ಟಿಯ (Budget) ಮೇಲೆ ಚರ್ಚೆ ನಡೆ ಅದರ ಬಗ್ಗೆ ಅಭಿಪ್ರಾಯಕೊಡಲು ಅವಕಾಶವಿರಬೇಕು. ರಾಜ್ಯಾಡಳಿತ ವಿಚಾರದಲ್ಲುಂಟಾಗುವ ಸಂದೇಹ ಸಂಗತಿಗಳನ್ನು ತಿಳಿದುಕೊಳ್ಳಲು ಅನುಕೂಲ್ಯವಿರಬೇಕು. ಆಡಳಿತ ಕಾರ್ಯಗಳನ್ನು ನಿಷೇಧಿಸಿ ಅವುಗಳ ಗುಣದೋಷಗಳನ್ನು ವಿವರಿಸಬಹುದಾದ ಅರ್ಜಿಗಳನ್ನು ಗಮನಕ್ಕೆ ತೆಗೆದುಕೊಳ್ಳಲು ಪಾರ್ಲಿಮೆಂಟಿನ ಸಮಿತಿಯೊಂದು ಏರ್ಪಡಬೇಕು. 1861 ರಲ್ಲಿ ಶಾಸನವೊಂದು ರಚಿತವಾಯಿತು. ಕೇವಲ ಮಧ್ಯವರ್ತಿಯಾಗಿದ್ದ ಶಾಸನ ರಚನಾಧಿಕಾರವು ಪ್ರಾಂತ್ಯಗಳಿಗೂ ವಹಿಸಲ್ಪಟ್ಟಿತು. ಬೊಂಬಾಯಿ ಮತ್ತು ಮದ್ರಾಸುಗಳಿಗೆ ಈ ಅಧಿಕಾರವು ಕೊಡಲ್ಪಟ್ಟಿತು. ಬಂಗಾಳದಲ್ಲಿಯೂ ಒಂದು ಶಾಸನ ಸಭೆಯು ಏರ್ಪಡಾಯಿತು. ವಾಯವ್ಯ ಪ್ರಾಂತ್ಯ ಮತ್ತು ಪಂಜಾಬುಗಳಲ್ಲಿಯೂ ಶಾಸನ ಸಭೆಗಳನ್ನು ಏರ್ಪಡಿಸುವ ಅಧಿಕಾರವು ಗೌವರ್ನರ್ ಜನರಲ್‌ರವರಿಗೆ ಕೊಡಲ್ಪಟ್ಟಿತು. 1886 ಮತ್ತು 1892 ರಲ್ಲಿ ಈ ಪ್ರಾಂತ್ಯಗಳಲ್ಲಿ ಅವುಗಳು ಆರಂಭವಾದುವು. ವರಿಷ್ಠ ಶಾಸನ ಸಭೆಯ ಸದಸ್ಯರ ಸಂಖ್ಯೆಯು 6 ರಿಂದ 12 ರ ವರೆಗೆ ಹೆಚ್ಚಿಸಲ್ಪಟ್ಟಿತು. ಇವರುಗಳನ್ನು ಗವರ್ನರ್ ಜನರಲ್‌ರವರೇ ಎರಡು ವರ್ಷಗಳ ವರೆಗೆ ನೇಮಿಸಬೇಕೆಂದು ವಿಧಾಯಕವಾಯಿತು. ಇವರಲ್ಲರ್ಧ ಅನಧಿಕಾರಿಗಳಾದರೂ ಅವರೆಲ್ಲರೂ ಭಾರತೀಯರಾಗಿರಲಿಲ್ಲ. ಒಬ್ಬಿಬ್ಬರು ಮಾತ್ರ ನೇಮಿಸಲ್ಪಡುತ್ತಿದ್ದರು. ಹಿಂದುಸ್ಥಾನದಲ್ಲಿ ಬ್ರಿಟಿಷರಿಗೊಳಪಟ್ಟ ಪ್ರದೇಶಗಳಲ್ಲಿನ ದೇಶಿ ಪರದೇಶಿಗಳೂ ಎಲ್ಲಾ ನ್ಯಾಯಸ್ಥಾನಗಳೂ ಈ ಸಭೆಯ ಶಾಸನಾಧಿಕಾರಕ್ಕೊಳಪಟ್ಟವು, ಭಾರತ ಸರ್ಕಾರದ ಸಾಲ, ಧನ, ಇಂಗ್ಲೆಂಡಿನಲ್ಲಿ ಹಣವಸೂಲು ಮೊದಲಾದವುಗಳು ಮಾತ್ರ ಇದಕ್ಕಿರಲಿಲ್ಲ. ಅವಸರ ಸಮಯದಲ್ಲಿ 6 ತಿಂಗಳುಗಳ ವರೆಗೆ ವಿಶೇಷ ಕಾನೂನನ್ನು ಸ್ವತಂತ್ರವಾಗಿ ರಚಿಸುವ ಅಧಿಕಾರವು ಗವರ್ನರ್ ಜನರಲ್‌ರವರಿಗೆ ಕೊಡಲ್ಪಟ್ಟಿತು.

ಮದ್ರಾಸು ಮತ್ತು ಬೊಂಬಾಯಿಗಳಲ್ಲಿನ ಸಭೆಗಳಲ್ಲಿ 4 ರಿಂದ 8 ರ ವರೆಗೆ ಸದಸ್ಯರಿರತಕ್ಕದ್ದು. ಅರ್ಧಜನ ಸದಸ್ಯರನ್ನು ಗವರ್ನರ್ ನೇಮಿಸತಕ್ಕದ್ದು. ಕಂದಾಯ ನಾಣ್ಯ, ಅಂಚೆ ತಂತಿ ಮುಂತಾದುವುಗಳನ್ನು ಬಿಟ್ಟು ಈ ಸಭೆಯು ಕಾರ್ಯ ನಡೆಸತಕ್ಕದ್ದು. ಇಲ್ಲಿ ನಡೆಯತಕ್ಕ ಯಾವತ್ತು ಕಾರ್ಯಗಳೂ ಚರ್ಚೆಗಳೂ ಮುಂಚಿತವಾಗಿಯೇ ಗವರ್ನರ್ ಜನರಲ್‌ರವರ ಅನುಮತಿಯಿಂದ ಆರಂಭವಾಗಿ ಅವರ ಕಟ್ಟಕಡೆಯ ಒಪ್ಪಿಗೆಯಿಂದ ಜಾರಿಗೆ ಬರತಕ್ಕದ್ದು.

1861 ರಿಂದ 1892 ರ ವರೆಗೆ ಕಾನೂನು ಎರಡು ಸಾರಿ ಬದಲಾವಣೆಯಾಗಿ ಗವರ್ನರ್ ಜನರಲ್‌ರವರ ಅಧಿಕಾರ ಹೆಚ್ಚಿಸಲ್ಪಟ್ಟಿತು. 1892 ರಲ್ಲಿ ಭಾರತ ಸರ್ಕಾರದ ರಚನೆಯಲ್ಲಿ ವಿಶೇಷ ಬದಲಾವಣೆಯಾಯಿತು. ಶಾಸನ ಸಭೆಗಳ ಸಂಖ್ಯೆಯೂ ನೇಮಿಸುವ ವಿಧಾನವೂ ಬೇರೆಯಾದುವು. ಗವರ್ನರ್ ಜನರಲ್‌ರವರ ಸಭೆಯು 10 ರಿಂದ 16 ರ ವರೆಗೂ, ಮದ್ರಾಸು ಮತ್ತು ಬೊಂಬಾಯಿಗಳ ಸಭೆಗಳು 8 ರಿಂದ 20 ರ ವರೆಗೂ ಬಂಗಾಳಕ್ಕೆ 20 ಕ್ಕೆ ಹೆಚ್ಚಿಲ್ಲದಂತೆಯೂ ಸಂಯುಕ್ತ ಪ್ರಾಂತ್ಯಗಳಿಗೆ 15 ಕ್ಕೆ ಹೆಚ್ಚಿಲ್ಲದಂತೆಯೂ ಇರಬೇಕೆಂದು ವಿಧಾಯಕವಾಯಿತು. ಸಂಸ್ಥಾನ ಮಂತ್ರಿಯ ಆಲೋಚನಾ ಸಭೆಯ ಒಪ್ಪಿಗೆಯಿಂದ ಗವರ್ನರ್ ಜನರಲ್‌ರವರ ಮಂತ್ರಾಲೋಚನಾ ಸಭೆಯವರು ತಮ್ಮ ಮತ್ತು ಪ್ರಾಂತ್ಯಗಳ ಶಾಸನ ಸಭೆಗಳ ಸದಸ್ಯರ ನೇಮಕದ ಬಗ್ಗೆ ನಿಯಮಗಳನ್ನು ಮಾಡತಕ್ಕದ್ದು. ಗವರ್ನರ್ ಜನರಲ್‌ರವರ ಸಭೆಯಲ್ಲಿ 10 ಅನಧಿಕಾರಿ ಸದಸ್ಯರು ಸೇರಿಸಲ್ಪಟ್ಟರು. ಇವರಲ್ಲಿ ಬಂಗಾಳ ವ್ಯಾಪಾರಿ ಸಂಘಕ್ಕೆ ಮದ್ರಾಸು, ಬೊಂಬಾಯಿ, ಬಂಗಾಳ ಮತ್ತು ಸಂಯುಕ್ತ ಪ್ರಾಂತ್ಯಗಳ ಶಾಸನ ಸಭೆಗಳಿಗೆ ಒಬ್ಬೊಬ್ಬರನ್ನು ನೇಮಿಸುವ ಹಕ್ಕು ದೊರೆಯಿತು. ಪ್ರಾಂತ್ಯಗಳ ಶಾಸನ ಸಭೆಗಳಿಗೆ ಪುರಪಾಲಕ ಸಂಘ ವಿಶ್ವವಿದ್ಯಾಲಯ ಡಿಸ್ಟ್ರಿಕ್ಟ್ ಬೋರ್ಡು ಜಮೀನ್ದಾರ ಮತ್ತು ವ್ಯಾಪಾರಿ ಸಂಘ ಇವರುಗಳು ಶಿಫಾರಸು ಮಾಡಿದವರನ್ನು ಸರ್ಕಾರದವರು ನೇಮಿಸುತ್ತಿದ್ದರು. ಇವರುಗಳ ಶಿಫಾರಸನ್ನೆಂದೂ ಸರ್ಕಾರದವರು ತಿರಸ್ಕರಿಸುತ್ತಿದ್ದಿಲ್ಲ. ಆದಾಗ್ಯೂ ಇದಕ್ಕೆ ನೇರವಾದ ಚುನಾವಣೆಯೆಂದು ಕರೆಯುವಂತಿಲ್ಲ.

ಇಲ್ಲಿಯವರೆಗೂ ಮಧ್ಯ ಮತ್ತು ಪ್ರಾಂತಿಕ ಶಾಸನ ಸಭೆಗಳಲ್ಲಿ ಅರ್ಥಶಾಖೆಯ ಮಂತ್ರಿಗಳು ಹೊಸ ತೆರಿಗೆಯ ಸೂಚನೆಯನ್ನು ತಂದಾಗ ಮಾತ್ರ ಹಣದ ವಿಚಾರವಾಗಿ ಟೀಕಿಸಲು ಸದಸ್ಯರಿಗೆ ಅಧಿಕಾರವಿತ್ತು. ಈಗ ಸರ್ಕಾರದ ಹಣದ ರೀತಿ ನೀತಿಗಳನ್ನು ಟೀಕಿಸುವ ಹಕ್ಕು ಸಂಪೂರ್ಣವಾಗಿ ದೊರೆಯಿತು. ಆದರೆ ಆಯವ್ಯಯ ಪಟ್ಟಿಯನ್ನು ಒಟ್ಟಾಗಿ ವಿಮರ್ಶಿಸಬಹುದೇ ಹೊರತು ಕಲಂಗಳನ್ನು ಬೇರೆಬೇರೆಯಾಗಿ ಚರ್ಚಿಸಕೂಡದೆಂಬ ನಿರ್ಬಂಧ ಹೊಂದಿಸಲ್ಪಟ್ಟಿತು. ಹಣದ ಸಂಬಂಧವಾದ ಚರ್ಚಾಸೌಲಭ್ಯವು ಪ್ರಜೆಗಳಿಗಷ್ಟೇ ಅಲ್ಲದೆ ಸರ್ಕಾರದವರಿಗೂ ಬಹು ಪ್ರಯೋಜನಕಾರಿಯಾಗುತ್ತಿತ್ತು. ನಾನಾಬಗೆಯಿಂದ ಬರತಕ್ಕ ಯುಕ್ತಿಯುಕ್ತವಾದ ಟೀಕೆ ಸಲಹೆಗಳಿಂದ ಸರ್ಕಾರದವರು ಬಹು ಪ್ರಯೋಜನ ಪಡೆಯುತ್ತಿದ್ದರು.

ಆಡಳಿತದ ಬಗ್ಗೆ ಪ್ರಶ್ನೆಹಾಕುವ ಹಕ್ಕು ದೊರೆತುದುದು ಪ್ರಜಾಪ್ರಭುಗಳಿಬ್ಬರಿಗೂ ಬಹು ಪ್ರಯೋಜನಕಾರಿಯಾಗಿ ಪರಿಣಮಿಸಿತು. ನಿಷ್ಕಾರಣವಾಗಿ ತಮ್ಮ ಕಾರ್ಯಗಳ ಬಗ್ಗೆ ಪ್ರಜೆಗಳಲ್ಲಿದ್ದ ಸಂದೇಹಗಳನ್ನು ಸರ್ಕಾರದವರು ನಿವಾರಿಸುವುದಕ್ಕೂ, ತಮಗೆ ಅನ್ಯಾಯ ಅಕ್ರಮಗಳಿಂದು ತೋರುವ ಕಾರ್ಯಗಳ ಬಗ್ಗೆ ಪ್ರಶ್ನೆ ಹಾಕಿ ಸೂಚನೆ ಸಲಹೆಗಳ ಮೂಲಕ ಪ್ರಜೆಗಳು ಸರ್ಕಾರದವರನ್ನು ಮುಖತಃ ಎಚ್ಚರಿಸಿ ಮನಗಾಣಿಸುವುದಕ್ಕೂ ಸಾಧನವು ಸಿಕ್ಕಿದುದು ಪ್ರಯೋಜನಕಾರಿ ಎಂಬುದರಲ್ಲಿ ಸಂಶಯವಿಲ್ಲ.

ಪತಿತ ಸ್ತ್ರೀಯರ ಉದ್ಧಾರ ೩

(ಶ್ರೀ॥ ಹೊಸಹಳ್ಳಿ ಕೆ. ವೀರಣ್ಣ ಗೌಡರಿಂದ)

ನಮ್ಮ ದೇಶದಲ್ಲಿ ವ್ಯಭಿಚಾರವು ಯಾವ ಯಾವ ಕಾರಣಗಳಿಂದ ಹೇಗೆ ಹೇಗೆ ಪ್ರಾರಂಭವಾಗಿ ಈಗ ಯಾವ ಸ್ಥಿತಿಯಲ್ಲಿ ಪ್ರಬಲಹೊಂದುತ್ತಿದೆಯೆಂಬುದನ್ನು ಈ ಲೇಖನಮಾಲೆಯ 3 ನೇ ಲೇಖನದಲ್ಲಿ ಸ್ಥೂಲವಾಗಿ ಚರ್ಚಿಸಿರುವೆನು. ವ್ಯಭಿಚಾರವನ್ನು ತಪ್ಪಿಸಬೇಕೆಂದು ಹೇಳುವುದಾದರೆ ಮಾನವ ಸ್ವಭಾವವನ್ನೇ ಬದಲಾಯಿಸಬೇಕಾಗುತ್ತದೆ. ಇದು ಯಾವ ದೇಶದಲ್ಲೇ ಆಗಲೀ, ಯಾರೊಬ್ಬರ ಪ್ರಯತ್ನದಿಂದ ಅಥವ ಸರ್ಕಾರದ ಯಾವುದೊಂದು ಕಠಿಣ ಶಾಸನದ ಸಹಾಯದಿಂದಲೇ ಆಗಲಿ ಸಾಧ್ಯವಲ್ಲದ ಕೆಲಸ. ಅಂದಮಾತ್ರಕ್ಕೆ ಈ ಸಂಬಂಧವಾಗಿ ಸುಧಾರಕರೂ ದೇಶಹಿತೈಷಿಗಳೂ ಮಾಡಬೇಕಾದ ಕೆಲಸವೇ ಏನೂ ಇಲ್ಲವೆ? ವ್ಯಭಿಚಾರವು ವ್ಯಾಪಾರದ ಅಥವ ಸಂಪಾದನೆಯ ಒಂದು ವೃತ್ತಿಯಾಗಿ ಹಬ್ಬಿ ಹರಡುತ್ತಿರುವುದನ್ನು ನೋಡುತ್ತ ಕೈಕಟ್ಟಿಕೊಂಡು ಕುಳಿತಿರಬೇಕೆ? ಎಂದು ಕೇಳಬಹುದು. ಈ ಸಂಬಂಧವಾಗಿ ಯಾರು ಏನು ಮಾಡಿದರೂ ಈ ವೃತ್ತಿಯನ್ನು ಒಂದು ಹತೋಟಿಗೆ ತರುವ ಪ್ರಯತ್ನಮಾಡಬಹುದು. ಶ್ರೀ॥ ಮಲ್ಲಪ್ಪನವರು ತಂದಿರುವ ಮಸೂದೆಯಿಂದ ಈ ಉದ್ದೇಶವು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆಯೆಂಬುದನ್ನು ನೋಡುವ.

ಶ್ರೀ॥ ಮಲ್ಲಪ್ಪನವರ ಮಸೂದೆ

ಈ ಮಸೂದೆಯಿಂದ ಯಾವ ಯಾವ ಪ್ರಯೋಜನಗಳಾಗುತ್ತವೆಂಬುದನ್ನು ಮಸೂದೆಯಲ್ಲಿ ವಿಸ್ತಾರವಾಗಿ ವಿವರಿಸಿದೆ. ಆ [illegible]

ಮಕ್ಕಳಿದ್ದರೆಮನೆ.ಚಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿರಿ

ಗರ್ಭಧಾರಣ ಸಂಜೀವಿನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರಿ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತೆಕ್ಕೊಂಡರೆ ಪುತ್ರಿಣಿ ಆವಿಗುರಿ. ೯ ಗುಳಿಗೆಗಳ ೩. ೧ ರೂಪಾಯಿ.

ಟ. ಖ. ೫ ಆಣೆ

ಪತ್ತೆ—ವೈದ್ಯ ವ್ಹಿ. ಎಸ್. ಕಾಶೆಮಿರಾ. M. C.

[illegible]

ಲಿಂಗಧಾರಣ ಚಂದ್ರಿಕೆಯ ಕನ್ನಡ ಭಾಷಾಂತರ.

(ಲೇಖಕ :—ಸ್ವಾಮಿ ವಿರೂಪಾಕ್ಷ ಒಡೆಯರು.)

ಲೇಖಾಂಕ ೨.

[illegible]

ನಾರಿನವರ ಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ. ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧ ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

33 M. C

ಪ್ರಕಟಣೆ.

[illegible]

ಅಡ್ರೆಸ್ಸು :—ಕೆ. ನಾಗಪ್ಪ, ಬಿ. ವಿಶ್ವನಾಥಪ್ಪ, ಶ್ರೀ ಸರ್ವಭೂಷಣ ಶಿವಯೋಗಿಗಳ ಮಠ, ಅಣ್ಣಮ್ಮದೇವರ ಗುಡಿ ಬೀದಿ, ಬೆಂಗಳೂರು ಸಿಟಿ.

[12—3] ಮತ್ತು ಹಿತಚಿಂತಕ ಪ್ರಿಂಟಿಂಗ್ ಪ್ರೆಸ್, ವಿಜಾಪುರ.

೧೯೩೨ ನೆಯ ಇಸವಿ ಡಿಸೆಂಬರ್ ತಾ॥ ೧೨ ರಿಂದ ಡಿಸೆಂಬರ್ ತಾ॥ ೧೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಮಾರ್ಗಶಿರ ಶುದ್ಧ ಪೌರ್ಣಿಮೆಯಿಂದ ಮಾರ್ಗಶಿರ ಬಹುಳ ಪಂಚಮಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ವೃಶ್ಚಿ ಧನು
12	[1]ಸೋಮ	ಪೌರ್ಣ	60	ರೋಹಿ	38 20	28
13	ಮಂಗಳ	ಪಾಡ್ಯ	60	ಮೃಗ	44-18	29
14	ಬುಧ	ಪಾಡ್ಯ	4-24	ಆದ್ರಾ	49-27	30
15	[2]ಗುರು	ಬಿದಿ	8-2	ಪುನ	53-48	1
16	ಶುಕ್ರ	ತದಿ	10-26	ಪುಷ್ಯ	56-32	2
17	ಶನಿ	ಚೌತಿ	11-40	ಆಶ್ಲೇ	58-20	3
18	[3]ಭಾನು	ಪಂಚ	11-32	ಮಘ	58-48	4

(೧) ನಂಜನಗೂಡಿನಲ್ಲಿ ಶ್ರೀ ಶ್ರೀಕಂಠೇಶ್ವರಸ್ವಾಮಿ ರಥ, ಮಳೆನಕ್ಷತ್ರ-ಜ್ಯೇಷ್ಠ ೪ ನೆಯಪಾದ. (೨) ಮಳೆನಕ್ಷತ್ರ-ಮೂಲ ೧ ನೆಯ ಪಾದ. (೩) ಮಳೆನಕ್ಷತ್ರ-ಮೂಲ ೨ ನೆಯಪಾದ.

ಮೈಸೂರು : [illegible]

REG NO. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

[illegible]

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸೆ ೧೯೩೨ ನೆಯ ಇಸವಿ ಡಿಸೆಂಬರ್ ತಾರೀಖು ೧೯ ನೆಯ ಸೋಮವಾರ [ಸಂಚಿಕೆ ೫೧

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore.

(Sd.) S. SHA MANNA,
Secretary, Insurance Committee

[50—24]

ಫೋಟೊ, ಬ್ಲಾಕುಗಳು ಹಿತ್ತಾಳೆ, ಸೀಸದ, ಬ್ಲಾಕುಗಳು ಅರಗಿನಸೀಲು, ಜವಾನರ ಬಿಲ್ಲೆ ಮತ್ತು ರಬ್ಬರ್ ಮೊಹರುಗಳೂ ತಯಾರಿಸುತ್ತೇವೆ.

ಚಿಕ್ಕಪೇಟೆ ಬೆಂಗಳೂರು ಸಿಟಿ

[50—7]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸಹ.
ವೀರಶೈವ ಶಿವಪೂಜಾವಿಧಿ।	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ।	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೬—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿಹಾಸ	೦—೪—೦	೦—೬—೦
ವ್ರತಪಂಚಕ	೦—೪—೦	೦—೬—೦
ಗುರುಶಂಕರೇಶ್ವರಶತಕ	೦—೧—೦	೦—೩—೦
ಬಸವೇಶ್ವರನಜನನ	೦—೮—೦	೦—೧೩—೦
ಸಟೀಕ ಕಲ್ಲಾಟಕತಟ್ಟಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಡಾಕ್ಟರ್ ಜೀ. ಬೀ. ಯವರ

ಸುಗಂಧ ನಶ್ಯದ ಪುಡಿ.

[illegible]

[illegible]

[೫೦—೧೦] ಪ್ರೋ. [illegible]

ಸತ್ಯದ ಜಗತ್ತು] ೧೦೦೦ ರೂಪಾಯಿ ಇನಾಮು [ಅದೇನು ನೋಡೋಣ

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ, ಇವರ ೪೦ ವರ್ಷ ವಾಪರಿಸಿದ

ಅಲ್ಪವಯಸ್ಕಾಗಿ ಕ್ಷೀಣರಾಗ ಬೇಡಿರಿ.

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕದ. [ಸ್ವರ

ಧಿಕ್ಕರಿಸಿದರೆ ಕ್ಷೀಣತೆ ಕಾಯ್ದುಕೊಳ್ಳುವಿರಿ.

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು ಮತ್ತು ಮುಷ್ಟಿಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ, ಇಂದ್ರಿಯ ಸಣ್ಣ, ವಕ್ರತಾ, ನಾಮರ್ದತನ, [illegible]

ಸ್ತ್ರೀರೋಗ ನಿವಾರಣೀ ಚೂರ್ಣ

[illegible]

ಸಂತತಿ ಪ್ರತಿಬಂಧಕ ಗುಳಿಗೆಗಳು

[illegible]

ಪತ್ತಾ ಮೊಕಾಮ :—ವೈದ್ಯ ವ್ಹಿ. ಎಸ್. ಕಾಪಸೆ. ಮು. ಪೋ. ಮಿರಜ ಎಂ. ಎಸ್. ಎಂ.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಡಿಸೆಂಬರ್ ತಾ|| ೧೯ ನೆಯ ಸೋಮವಾರ.

UNITY TALKS

The plenary session of the Unity Conference was begun under good auspices. There is writ large in every face that attends the Conference, a genuine desire to bring about unity among all the communities. The speeches that were delivered on the first day show a marked determination to solve this communal tangle which has been the bane of India's domestic amity. It is particularly gratifying that His Highness, the Maharaja of Alwar who attends the Conference, has unreservedly spoken of the dire necessity that calls for united action in the present juncture. We agree with His Highness that whether one belongs to a state or to a British province, his destinies are inextricably bound up with that of United India. The speech of Sheik Abdul Majid is also commendable in that it focuses Muslim opinion on the value of an amicable Muslim Pact with the Hindus and Sikhs. It is true that some of the Muslim members are cautious with a view to placate reactionary members of their group, in their utterances and here and there we notice tightening up of their demands. This, we feel, is an obstacle in the way of smooth solution of some of the thorny questions that come to be reviewed in the session. We wish that both the Muslims and the Hindus would review the agreement so successfully reached by the Unity Committee in a spirit of give and take. It is also to be remembered that the consequences of failure are disastrous in the interest of national solidarity especially in view of foreshadowed R. T. C. failure. The failure will certainly have very heavy repurcussions and will strengthen the hands of die-hards in England. Then the chances of securing for India a rightful place in the British Empire, will be remote. We wish that the Conference so well begun will emerge triumphant having solved one of the most intricate and delicate questions that thwarted solution hitherto and earn the gratitude of all interested in India's communal harmony.

ಐಕ್ಯದ ಪ್ರಸ್ತಾಪಗಳು

ಭಾರತೀಯರ ಐಕ್ಯ ಮಹಾಸಭಾರಂಭವು ಶುಭಸೂಚಕವಾಗಿದ್ದಿತು. ಎಲ್ಲ ಜಾತಿಯವರಲ್ಲೂ ಐಕಮತ್ಯವನ್ನುಂಟುಮಾಡಬೇಕೆಂಬ ನಿಷ್ಕಪಟವಾದ ಆಶಯವು ಸಭೆಗೆ ಬಂದಿರುವ ಪ್ರತಿಯೊಬ್ಬ ಮೆಂಬರಿಗೂ ಇರುವಂತೆ ಅವರ ಮುಖಭಾವದಿಂದ ವ್ಯಕ್ತಗೊಳ್ಳುವುದು. ಭಾರತೀಯರ ಪ್ರೀತ್ಯನುರಾಗಕ್ಕೆ ಕಂಟಕಪ್ರಾಯವಾಗಿರುವ ಜಾತಿಯ ತೊಡಕುಗಳನ್ನು ನಿವಾರಣೆಮಾಡಬೇಕೆಂಬುದು ತಮ್ಮ ಸಂಕಲ್ಪವಾಗಿರುತ್ತದೆಂಬುದು ಅವರುಗಳ ಮೊದಲನೆಯ ದಿವಸ ಮಾಡಿದ ಭಾಷಣಗಳಿಂದ ಗೊತ್ತಾಗುತ್ತದೆ. ಅಲ್ವಾರು ಸಂಸ್ಥಾನದ ಮಹಾರಾಜರು ಈ ಸಭೆಗೆ ಬಂದು ಪ್ರಸಕ್ತ ಗಂಡಾಂತರ ಸಮಯದಲ್ಲಿ ಭಾರತೀಯರು ಏಕವಾಗಿ ಕಾರ್ಯವನ್ನು ಸಾಧಿಸುವುದು ಅತ್ಯಾವಶ್ಯಕವೆಂದು ಮುಚ್ಚುಮರೆಯಿಲ್ಲದೆ ಭಾಷಣ ಮಾಡಿದುದು ಬಹಳ ಸಂತೋಷಪ್ರದವು. ಹಿಂದು ಮಹಮ್ಮದೀಯ ಸಿಕ್ಕರುಗಳ ಐಕಮತ್ಯವು ಬಹಳ ಪ್ರಯೋಜನಕರವೆಂಬುದು ಮಹಮ್ಮದೀಯರ ಅಭಿಪ್ರಾಯವಾಗಿರುತ್ತದೆಂದು ಅಬ್ದುಲ್ ಮಜೀದ್‌ರವರು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದುದು ಪ್ರಶಂಸನೀಯವಾಗಿರುತ್ತದೆ. ಕೆಲ ಮಹಮ್ಮದೀಯ ಮೆಂಬರುಗಳು ತಮ್ಮ ಗುಂಪಿನಲ್ಲಿ ಪ್ರತಿಭಟಿಸತಕ್ಕವರ ಸಮಾಧಾನಾರ್ಥವಾಗಿ ಬಹಳ ಎಚ್ಚರಿಕೆಯಿಂದ ಪ್ರಸ್ತಾಪಿಸಿ ತಮ್ಮ ಕೋರಿಕೆಯ ವಿಚಾರದಲ್ಲಿ ಬಹಳ ಬಿಗಿಪಟ್ಟಿನಿಂದಿದ್ದುದು, ಬಹಳ ಕಂಟಕಪ್ರಾಯವಾಗಿದ್ದ ವಿಚಾರಗಳನ್ನು ಪುನರ್ವಿಮರ್ಶೆಮಾಡಲು ಅಡಚಣೆಯಾಗಿದ್ದಿತು. ಮಹಮ್ಮದೀಯರೂ ಹಿಂದುಗಳೂ ಐಕ್ಯ ಕಮಿಟಿಯಲ್ಲಾದ ಒಡಂಬಡಿಕೆಯನ್ನು ಸದ್ಭಾವನೆಯಿಂದಲೂ ಸುಹೃದಯದಿಂದಲೂ ಸಿಂಹಾವಲೋಕಿಸುವರೆಂದು ಆಶಿಸುತ್ತೇವೆ. ಈ ಪ್ರಯತ್ನವೇನಾದರೂ ವಿಫಲವಾದರೆ, ರೌಂಡುಟೇಬಲು ಮಹಾಸಭೆಯು ವಿಫಲವಾಗುವುದೆಂದೂಹಿಸಲ್ಪಟ್ಟಿರುವ ವೇಳೆಯಲ್ಲಿ ಭಾರತ ರಾಷ್ಟ್ರದ ಐಕ್ಯತೆಗೆ ಮಹಾನರ್ಥ ಸಂಭವಿಸುವುದೆಂಬುದನ್ನು ಮರೆಯಲಾಗದು. ಈ ವಿಫಲತೆಯಿಂದ ಬಹಳ ಕಷ್ಟ ಪ್ರಾಪ್ತವಾಗುವುದಲ್ಲದೆ ಇಂಗ್ಲೆಂಡಿನಲ್ಲಿರುವ ಭಾರತ ವಿರೋಧಿಗಳ ಕೈ ಪ್ರಬಲವಾಗುವುದು. ಆಗ ಭಾರತ ದೇಶವು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಯುಕ್ತವಾದ ಸ್ಥಾನವನ್ನು ಹೊಂದುವ ಸಂಭವವು ದೂರವಾಗುವುದು. ಇದುವರೆಗೂ ಬಗೆಹರಿಯದಿರುವ ಅತ್ಯಂತ ಕ್ಲಿಷ್ಟವೂ ಸೂಕ್ಷ್ಮವೂ ಆದ ಐಕ್ಯ ಸಮಸ್ಯೆಯನ್ನು ಶುಭಸೂಚನೆಯಿಂದ ಆರಂಭಗೊಂಡ ಈ ಸಭೆಯು ಪರಿಷ್ಕರಿಸಿ ಭಾರತೀಯರ ಏಕಮತ್ಯ ಸೌಹಾರ್ದ ಕಾಂಕ್ಷಿಗಳ ಕೃತಜ್ಞತೆಗೆ ಪಾತ್ರವಾಗಲೆಂದು ಇಚ್ಛಿಸುತ್ತೇವೆ.

ವಿಶ್ವವಿದ್ಯಾ ಪ್ರಶಸ್ತಿಯೊಂದೇ ಗೌರವ ಪ್ರದವಲ್ಲ

ಈಗ ಸಾಮಾನ್ಯವಾಗಿ ಸರ್ಕಾರಿಯುದ್ಯೋಗ ಪ್ರಾಪ್ತಿಗಾಗಲಿ, ವರಾನ್ವೇಷಣಕ್ಕಾಗಲಿ, ಪ್ರಭುಪ್ರಜಾಸನ್ಮಾನಕ್ಕಾಗಲಿ ವಿಶ್ವವಿದ್ಯಾನಿಲಯದ ಪ್ರಶಸ್ತಿಗಳೇ ಪ್ರಾಮುಖ್ಯವೆಂದು ಭಾವಿಸಲ್ಪಟ್ಟಿರುವದಷ್ಟೆ. ಇದು ತಪ್ಪುಭಾವನೆಯು. ಈ ಪ್ರಶಸ್ತಿಗಳಿಲ್ಲದೆಯೇ ಅನೇಕರು ಲೋಕಪ್ರಸಿದ್ಧರಾಗಿರುವರೆಂಬ ಬಗೆಗೆ ಲೋಕವಿಖ್ಯಾತರಾದ ಆಚಾರ್ಯ ಪ್ರಫುಲ್ಲಚಂದ್ರರೇಯವರು ಮದ್ರಾಸಿನ ಪಚ್ಚಯಪ್ಪನವರ ಪ್ರೌಢವಿದ್ಯಾಶಾಲೆಯ ವಿದ್ಯಾರ್ಥಿ ಸಂಘದವರ ಕೋರಿಕೆಯಂತೆ ವಿದ್ಯಾರ್ಥಿಗಳ ವೃತ್ತಿಗೌರವವನ್ನು ಕುರಿತು ಭಾಷಣಮಾಡುವಾಗ್ಗೆ ಹೇಳಿದರು. "ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಕೊಡಲ್ಪಡುವ ಪ್ರಶಸ್ತಿಗಳು ಪೋಸ್ಟಾಫೀಸಿನ ಮುದ್ರೆಗಳಂತಿವೆ. ಇವುಗಳಲ್ಲಿ ಸ್ವದೇಶೀಯವೂ ಪರದೇಶೀಯವೂ ಇರುವವು. ಈ ದೇಶದ ದುರದೃಷ್ಟದಿಂದ ಪ್ರಜೆಗಳು ಈ ಪ್ರಶಸ್ತಿಗಳ ಮೇಲಿಂದ ವ್ಯಕ್ತಿಗಳ ಶಕ್ತಿಸಾಮರ್ಥ್ಯಗಳನ್ನೂ ಯೋಗ್ಯತೆಯನ್ನೂ ನಿರ್ಣಯಿಸುವರು. ಈ ಪ್ರಶಸ್ತಿ ವ್ಯಾಮೋಹದಿಂದಲೇ ದೇಶದ ಆರ್ಥಿಕ ವಿಚಾರದಲ್ಲಿ ಬಹಳ ಅಪಕಾರವಾಗಿರುತ್ತದೆ ಬೊಂಬಾಯಾಧಿಪತ್ಯದಲ್ಲಿ ವಿದ್ಯಾಪ್ರಶಸ್ತಿಯುಳ್ಳವನ ತಿಂಗಳ ಸಂಪಾದನಾಯೋಗ್ಯತೆಯು 25 ರೂ. ಮಾತ್ರವಾಗಿರುತ್ತದೆಂದು ಅರ್ಥಶಾಸ್ತ್ರಪಂಡಿತರಾದ ಕೆ.ಟಿ. ಷಾರವರು ಹೇಳಿರುತ್ತಾರೆ. ಪ್ರಶಸ್ತಿಯನ್ನು ಪಡೆದಿರುವ ಬಂಗಾಳಾದೇಶದ ವಿದ್ಯಾರ್ಥಿಯ ಯೋಗ್ಯತೆಯೂ ಇಷ್ಟೇ ಇರುವುದು, ಆದರೆ ಮದರಾಸಿನಲ್ಲಿ ಮಾತ್ರ ಇನ್ನೂ ಅಧ್ವಾನವಾಗಿರುತ್ತದೆ. ಈ ವಿಶ್ವವಿದ್ಯಾಲಯ ಪ್ರಶಸ್ತಿಯಿಲ್ಲದೇ ಅನೇಕರು ಲೋಕಪ್ರಸಿದ್ಧರಾಗಿರುವರು. ಈಗ ಬ್ರಿಟಿಷ್ ಸಾಮ್ರಾಜ್ಯದ ಪ್ರಧಾನ ಮಂತ್ರಿಗಳಾಗಿರುವ ರಾಮ್ಸೆ ಮೆಕ್ಡೊನಾಲ್ಡರವರು 13–14 ವರ್ಷಗಳ ಹುಡುಗನಾಗಿರುವಾಗ್ಗೆ ಲಂಡನ್ ಪಟ್ಟಣದ ಬೀದಿಗಳಲ್ಲಿ ಎಷ್ಟೋ ರಾತ್ರಿ ವೇಳೆ ಹೊಟ್ಟೆಗಿಲ್ಲದೆ ಹಸಿವಿನಿಂದ ಬಳಲಿ ನಿದ್ರಿಸುತ್ತಿದ್ದರು, ಮತ್ತು ಮೊಟ್ಟಮೊದಲು ವಾರವೊಂದಕ್ಕೆ 4 ರೂ. ಸಂಬಳದ ಮೇಲೆ ಉದ್ಯೋಗಕ್ಕೆ ಸೇರಿದರು. ಈಗ ಬ್ರಿಟಿಷ್ ಸಾಮ್ರಾಜ್ಯಕ್ಕೆಲ್ಲ ಪ್ರಧಾನಾಮಾತ್ಯರಾಗಿಯೂ ಪ್ರತಿಭಾವಿಶಿಷ್ಟವಾದ ರಾಜಕೀಯ ಮತ್ತು ಸಾಮಾಜಿಕ ಗ್ರಂಥಗಳನ್ನು ರಚಿಸಿದವರಾಗಿಯೂ ಇರುವ ಈ ಮೆಕ್ಡೊನಾಲ್ಡರವರೇ "ವಿಶ್ವವಿದ್ಯಾಲಯ ಶಿಕ್ಷಣವು ಪ್ರಜೆಗಳಿಗೆ ಉಪಕಾರ ಮಾಡಲು ಅವಕಾಶವಿರುವದೆಲ್ಲಿಯೂ ಕಂಡುಬರುವುದಿಲ್ಲ" ಎಂದು ಹೇಳಿರುತ್ತಾರೆ. ಈಗ ಪ್ರಪಂಚದಲ್ಲೆಲ್ಲ ಅಗ್ರಗಣ್ಯರಾಗಿರುವ ಇಟಲಿ ಫಾಸಿಸ್ಟರ ನಾಯಕರಾದ ಮುಸಲೋನಿಯವರೂ, ಅಮೇರಿಕೆಯ ಸಂಯುಕ್ತ ರಾಷ್ಟ್ರಾಧ್ಯಕ್ಷರಾದ ಹೂವರವರೂ ಬಹಳ ದೀನಾವಸ್ಥೆಯಲ್ಲಿದ್ದು ಸ್ವಪ್ರಯತ್ನದಿಂದ ಈಗಿನ ಅತ್ಯುನ್ನತಾವಸ್ಥೆಗೆ ಬಂದಿರುತ್ತಾರೆ. ಮುಸಲೋನಿಯವರು ಮೂಟೆ ಹೊರುವ ಕೂಲಿಯಾಳಾಗಿದ್ದು ಮನೆಮನೆಗೆ ತಿರುಗಿ ತಿರುಪೆಯೆತ್ತುತ್ತಿದ್ದರು. ಹೂವರವರು ಒಂದು ಕಾಲದಲ್ಲಿ ಕುದುರೆ ಕಾಸ್ತಾರರಾಗಿದ್ದರು. ಜಕೋಸ್ಲಾವಿಯಾ ಅಧ್ಯಕ್ಷರೂ ಅತ್ಯಂತ ದೀನಾವಸ್ಥೆಯಿಂದ ಉನ್ನತಸ್ಥಿತಿಗೆ ಬಂದರು. ಭಾರತ ದೇಶೀಯರಲ್ಲೂ ಸ್ವಪ್ರಯತ್ನದಿಂದ ಉನ್ನತ ಪದವಿಗೆ ಬಂದವರನೇಕರಿರುವರು. ಅವರಲ್ಲಿ ವರ್ತಮಾನ ಪತ್ರಿಕಾ ಲೇಖಕರೂ, ಅಮಾತ್ಯರೂ, ದೇಶ ನಾಯಕರೂ ಎಂದು ಖ್ಯಾತಿಗೊಂಡಿರುವ ಸಿ ವೈ. ಚಿಂತಾಮಣಿಯವರು ಪ್ರಥಮದಲ್ಲಿ ಒಬ್ಬ ಸಣ್ಣ ಗುಮಾಸ್ತೆಯಾಗಿ ಕೆಲಸಕ್ಕೆ ಸೇರಿದರು. ಇವರಿಗೆ ವಿಶ್ವವಿದ್ಯಾಲಯ ಪ್ರಶಸ್ತಿಯೇನೂ ಇರುವುದಿಲ್ಲ. ಸನ್‌ಲೈಟ್ ಸೋಪು ಕಾರ್ಖಾನೆಯ ಯಜಮಾನರಾದ ಲಾರ್ಡ್ ಲಿವರ್‌ರವರು ಪ್ರೌಢ ವಿದ್ಯಾವಂತರಲ್ಲದಿದ್ದರೂ ಕೋಟ್ಯಧೀಶ್ವರರಾಗಿ ನೂರಾರು ಶಾಸ್ತ್ರಜ್ಞರನ್ನು ಸಂಬಳಕ್ಕಿಟ್ಟುಕೊಂಡಿರುವರು. ಕೇಂಬಲ್ ಎಂಬಾತನು 100 ರೂ. ಸಂಬಳಕ್ಕೆ ಸೇರಿ 30 ಕೋಟಿ ರೂಪಾಯಿಗಳನ್ನು ಗಳಿಸಿದನು" ಎಂದು ಮೊದಲಾಗಿ ರೆಯವರು ಹೇಳಿದರು. ನಮ್ಮ ಮೈಸೂರು ದೇಶದಲ್ಲಿ ಪ್ರಥಮತಃ 15–20 ರೂ. ಗಳ ಸಂಬಳಕ್ಕೆ ಸೇರಿ ಸ್ವಪ್ರಯತ್ನ ವಿಶೇಷದಿಂದ ಪ್ರಥಮ ಸಚಿವರಾಗಿ ಶ್ರೀಮನ್ಮಹಾರಾಜರವರಿಂದಲೂ, ಚಕ್ರವರ್ತಿಯವರಿಂದಲೂ ಘನತಮವಾದ ಪ್ರಶಸ್ತಿಗಳನ್ನೂ ಬಿಲ್ಲತ್ತುಗಳನ್ನೂ ಪಡೆದು ಸಂಸ್ಥಾನದ ದಿವಾನ ಪದವಿಗೆ ಅರ್ಹರಾಗಿದ್ದರೂ ಒಂದು ಗ್ರಹದ ವಕ್ರ ದೃಷ್ಟಿಯಿಂದ ಅದನ್ನು ಪಡೆಯದೆ ನಿವೃತ್ತರಾಗಿ ಲೋಕ ಸೇವೆಯನ್ನು ಮಾಡುತ್ತಿರುವ ಸರ್ ಕೆ.ಪಿ. ಪುಟ್ಟಣ್ಣಶೆಟ್ಟರು ಯಾವ ವಿದ್ಯಾ ಪ್ರಶಸ್ತಿಯನ್ನೂ ಪಡೆದವರಾಗಿಲ್ಲ. ಹೀಗೆ ವಿದ್ಯಾ ಪ್ರಶಸ್ತಿಯಿಲ್ಲದೆ ಉನ್ನತ ಪದವಿಗೆ ಬಂದವರು ನಮ್ಮ ಸಂಸ್ಥಾನದಲ್ಲಿ ಇನ್ನೂ ಕೆಲರು ಇರುತ್ತಾರೆ.

೯೯,೧೭,೩೭,೮೪೫ ರೂ. ಭಂಗಾರ ಸಾಗಿತು

1932 ನೆಯ ಜನವರಿ ತಿಂಗಳಿನಿಂದ ನವಂಬರ್ ತಿಂಗಳ ಕಡೆಯವರೆಗೆ ಬೊಂಬಾಯಿ ರೇವಿನಿಂದ ವಿದೇಶಗಳಿಗೆ 99,17,37,845 ರೂ. ಬೆಲೆಯ ಭಂಗಾರವು ಸಾಗಿಸಲ್ಪಟ್ಟಿದೆ.

೨೪ ಘಂಟೆಯಲ್ಲಿ ದಿಲ್ಲಿ ಬಿಟ್ಟು ಹೋಗಬೇಕು

ಜೈಮತುಲ್ಲಾ ಉಲೇಮಾ ಪತ್ರಿಕಾ ಸಂಪಾದಕರಾದ ಮಹಮ್ಮದ್‌ಷಾಫಿಯವರು ಆರ್ಡಿನೆನ್ಸು ಪ್ರಕಾರ 24 ಘಂಟೆಯೊಳಗೆ ದಿಲ್ಲಿ ಪಟ್ಟಣವನ್ನು ಬಿಟ್ಟು ಹೋಗಬೇಕೆಂದು ಆಜ್ಞೆ ಮಾಡಲ್ಪಟ್ಟಿರುತ್ತಾರೆ.

ಫ್ರಾನ್ಸಿನಲ್ಲಿ ಅಧಿಕಾರಿಗಳ ಅಸಮ್ಮತಿ

ಫ್ರಾನ್ಸಿನಲ್ಲಿ ಸಿವಿಲ್ ಸರ್ವಿಸ್ ಉದ್ಯೋಗಿಗಳ ಸಂಬಳವು ತಗ್ಗಿಸಲ್ಪಟ್ಟುದರಿಂದ ಅವರುಗಳು ಕಳೆದ ಗುರುವಾರ ರಾತ್ರಿ ಬೀದಿಗಳಲ್ಲಿ ಉತ್ಸವ ಹೊರಟು ತಮ್ಮ ಅಸಮ್ಮತಿಯನ್ನು ಪ್ರದರ್ಶಿಸಿದರು. ಈ ಸಂದರ್ಭದಲ್ಲಿ 800 ಮಂದಿ ಸೆರೆಹಿಡಿಯಲ್ಪಟ್ಟರು.

ಮನೆಬಿದ್ದು ೮ ಮಂದಿ ಸತ್ತರು

ಸೊಲ್ಲಾಪುರದಲ್ಲಿ ಎರಡು ಅಂತಸ್ತುಗಳ ಮನೆಯೊಂದು ಬಿದ್ದುಹೋಗಿ ಅದರೊಳಗಿದ್ದ 12 ಮಂದಿಗಳಲ್ಲಿ 8 ಮಂದಿ ಸತ್ತರು ಮತ್ತು ನಾಲ್ವರು ಅಪಾಯವನ್ನು ಹೊಂದಿದರು. ಇನ್ನೂ 6 ಮಂದಿ ಅದರೊಳಗಿದ್ದರೆಂದು ಪರಿಶೋಧಿಸಲ್ಪಡುತ್ತಿದ್ದಿತು.

೩೧ ಮಂದಿ ಕಮ್ಯೂನಿಸ್ಟುಗಳ ಸೆರೆ

ದಕ್ಷಿಣ ಬವೇರಿಯಾದಲ್ಲಿ ಅಕ್ರಮ ಸೈನಿಕ ಸಂಘಕ್ಕೆ ಸೇರಿದ 31 ಮಂದಿ ಕಮ್ಯೂನಿಸ್ಟುಗಳು ಸೆರೆಹಿಡಿಯಲ್ಪಟ್ಟರು. ಜರ್ಮನಿಯಲ್ಲೆಲ್ಲ ಜನರು ದೊಂಬಿಯನ್ನೆಬ್ಬಿಸುವುದಕ್ಕಾಗಿ ಈ ಅಕ್ರಮ ಸಂಘಕ್ಕೆ ಸೇರಿದವರು ಪ್ರಯತ್ನಿಸುತ್ತಿರುವುದಾಗಿ ತಿಳಿಯಬಂದಿದೆ.

ವೇಣುನಾದಕ್ಕೆ ಹಾವುಗಳು ಸೇರುವುದು

ಕಲ್ಲಿಕೋಟೆ ಸಮೀಪದಲ್ಲಿರುವ ಥೇವಯ್ಯೂರಿನಲ್ಲಿ ಕೆಲ ಸೈನಿಕರು ಬಂದಿಳಿದಿದ್ದರು. ಇವರು ರಾತ್ರಿವೇಳೆ ಫ್ಲೂಟುಬ್ಯಾಂಡನ್ನು ಅಂದರೆ ಕೊಳಲುಗಳನ್ನು ಬಾಜಿಸುತ್ತಿರುವಾಗ್ಗೆ ಸರ್ಪಗಳು ನಿರ್ಭೀತಿಯಿಂದ ಬಂದು ಗಾನವನ್ನು ಕೇಳಿ ಹೋಗುತ್ತಿದ್ದುವು. ಇವುಗಳಲ್ಲಿ 16 ಹಾವುಗಳು ಸೈನಿಕರಿಂದ ಕೊಲ್ಲಲ್ಪಟ್ಟವಂತೆ.

ಗೋಪುರದಿಂದ ಕೆಳಗೆ ಬಿದ್ದು ಮೃತನಾದನು

ಬರ್ಮಾಕ್ಕೆ ಸೇರಿದ ಮಾಸಿವಾ ಡಿಸ್ಟ್ರಿಕ್ಟಿನಲ್ಲಿ ಒಂದು ಬುದ್ಧ ದೇವಾಲಯದ ಗೋಪುರದ ಶಿಖರದಲ್ಲಿ ರತ್ನಖಚಿತ ಸುವರ್ಣ ಛತ್ರವಿರುವುದು. ಒಬ್ಬ ಬರ್ಮಾ ಯುವಕನು ಒಂದು ರಾತ್ರಿ ಹಗ್ಗದ ಸಹಾಯದಿಂದ ಗೋಪುರದ ಮೇಲಕ್ಕೆ ಹತ್ತಿ ಛತ್ರಿಗೆ ಕೆತ್ತಲ್ಪಟ್ಟಿರುವ ರತ್ನಗಳಲ್ಲಿ ಕೆಲವನ್ನು ಅಪಹರಿಸಿ ಜೇಬಿನಲ್ಲಿಟ್ಟುಕೊಂಡು ಹಗ್ಗದ ಸಹಾಯದಿಂದ ಕೆಳಕ್ಕಿಳಿಯುವಾಗ್ಗೆ ಆಯತಪ್ಪಿ ನೆಲದಮೇಲೆ ಬಿದ್ದು ಮೃತನಾದನು.

ದೇವಸ್ಥಾನಕ್ಕೆ ಅಸ್ಪೃಶ್ಯರನ್ನು ಬಿಡಕೂಡದು

ಬೆಜವಾಡದಲ್ಲಿರುವ ಸೀತಾರಾಮಸ್ವಾಮಿ ದೇವಾಲಯದ ಧರ್ಮದರ್ಶಿಗಳು ಕಲ್ಲಿಕೋಟೆ ಜಾಮರಿನ್‌ರವರಿಗೆ "ಗುರುವಯ್ಯೂರು ದೇವಸ್ಥಾನಕ್ಕೆ ಹರಿಜನರನ್ನು ಬಿಡುವುದಿಲ್ಲವೆಂದು ನೀವು ಹಿಡಿದಿರುವ ಪಟ್ಟನ್ನು ಬಿಡಕೂಡದು. ಸ್ಮೃತಿಗಳೂ, ಆಗಮಗಳೂ, ಪುರಾಣಗಳೂ ನಿಮಗೆ ಸಹಾಯಕವಾಗಿವೆ. ಸನಾತಧರ್ಮಿಗಳ ಅಭಿಪ್ರಾಯಾನುಸಾರವಾಗಿ ನೀವು ನಡೆಯತಕ್ಕದು. ಧರ್ಮಕ್ಕೆಂದೂ ಚ್ಯುತಿ ಬರುವುದಿಲ್ಲ" ಎಂದು ತಂತಿಯ ಮೂಲಕ ತಿಳಿಸಿರುತ್ತಾರೆ.

ಅ. ಭಾರತ ಅಸ್ಪೃಶ್ಯತಾ ನಿವಾರಣಾ ಸಭೆಯು ಮುಂದುವರಿದಿತು

ಇದೇ ತಾ|| 25 ರಿಂದ ಎಂ. ಎಸ್. ಎಂ. ರೈಲ್ವೆ ಕೆಲಸಗಾರರೆಲ್ಲರೂ ಕೆಲಸಕ್ಕೆ ಬರದೆ ನಿಂತುಬಿಡುವರೆಂದು ತಿಳಿದುಬಂದಿರುವುದರಿಂದ, ರೈಲು ಬಂಡಿಗಳು ನಡೆಯುವುದು ಅನುಮಾನಗ್ರಸ್ತವಾಗಿರುತ್ತದೆ. ಅದುಕಾರಣ ಈ ತಿಂಗಳಾಂತ್ಯದಲ್ಲಿ ಜರುಗುವುದೆಂದು ಪ್ರಕಟವಾಗಿದ್ದ 12ನೆಯ ಅಖಿಲಭಾರತ ಅಸ್ಪೃಶ್ಯತಾನಿವಾರಣ ಮಹಾಸಭೆಯು ಮುಂದುವರಿಸಲ್ಪಟ್ಟಿರುತ್ತದೆ ಮತ್ತು ಈ ವಿಚಾರವು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವ ಡಾ|| ಬಿ. ಎಸ್. ಮೂಂಜಿಯವರಿಗೂ ತಿಳಿಸಲ್ಪಟ್ಟಿರುತ್ತದೆಂದೂ ಮುಂದೆ ನಡೆಯುವ ಕಾಲ ತಿಳುಹಲ್ಪಡುವುದೆಂದೂ ಆಹ್ವಾನ ಸಂಘಾಧ್ಯಕ್ಷರು ತಿಳಿಸಿರುತ್ತಾರೆ.

ತುಲಶೀರಾಮ ಲೋಥಿಯವರ ೩೬ ಗಂಟೆಯ ಉಪವಾಸ

ರಾಷ್ಟ್ರೀಯ ಅಸ್ಪೃಶ್ಯತಾ ನಿರ್ಮೂಲನ ಸಂಘಸಭ್ಯರಲ್ಲಿ ಪ್ರಸಿದ್ಧರಾದ ತುಲಶೀರಾಮಲೋಥಿಯವರು ಶಯೋಸೂರಿನಲ್ಲಿ ಹರಿಜನರು ದೇವಾಲಯಗಳಿಗೆ ಬರಲೂ, ಬಾವಿಗಳಲ್ಲಿ ನೀರನ್ನು ಸೇದಲೂ ಸನಾತರೊಡಂಬಡಲಿಲ್ಲವಾಗಿ ಉಪವಾಸ ವ್ರತವನ್ನಾರಂಭಿಸಿದರು. ಉಪವಾಸವು 36 ಘಂಟೆಯಕಾಲ ನಡೆಯಲು ಹರಿಜನರು ಬಾವಿಗಳಲ್ಲಿ ನೀರನ್ನು ಪಯೋಗಿಸಲಿಕ್ಕೂ ದೇವಸ್ಥಾನ ಪ್ರವೇಶಿಸಲಿಕ್ಕೂ ಸನಾತನರು ಸಮ್ಮತಿಸಿದರು. ಅನಂತರ ತುಲಶೀರಾಮರವರು ದೀಕ್ಷೆಯನ್ನು ಬಿಟ್ಟರು. ಗುರುವಯ್ಯೂರು ದೇವಸ್ಥಾನಕ್ಕೆ ಹರಿಜನರನ್ನು ಬಿಡಬೇಕೆಂದು ಜಾಮರಿನ್‌ರವರನ್ನು ಕೇಳಬೇಕಾಗಿ ಪುರಜನರು ಸಭೆಸೇರಿ ನಿರ್ಧರಿಸಿರುತ್ತಾರೆ.

ಪತ್ನಿಯನ್ನು ಶಿಕ್ಷಿಸಿದುದಕ್ಕೆ ಶಿಕ್ಷೆ

ಚುತ್ತಕುಡಿಯ ವಾಸಸ್ಥನಾದ ಪೂಲೂರು ಒಜಿಯೂರು ಎಂಬಾತನ ಪತ್ನಿ ಪೂರ್ವಾಚಾರಪರಾಯಣಳಾದುದರಿಂದ ಮಲೆಯಾಳದೇಶದ ಪೂರ್ವಕಾಲದ ಸ್ತ್ರೀಯರಂತೆ ರವಿಕೆಯನ್ನು ತೊಡದೆ ಕಿವಿಗಳಿಗೆ ಬಹಳ ಅಗಲವಾದ ಓಲೆಗಳನ್ನಿಟ್ಟುಕೊಳ್ಳುತ್ತಿದ್ದಳು. ಗಂಡನಿಗೆ ಪತ್ನಿಯ ಈ ವೇಷವು ಸರಿದೋರದೆ ಈಗಿನ ಕಾಲಕ್ಕೆ ತಕ್ಕಂತೆ ರವಿಕೆಯನ್ನು ತೊಟ್ಟು ಚಿಕ್ಕ ಓಲೆಗಳನ್ನಿಟ್ಟುಕೊಳ್ಳಬೇಕೆಂದು ಬಹಳ ವಿಧವಾಗಿ ಹೇಳುತ್ತಿದ್ದರೂ ಆಕೆಯು ತನ್ನ ಪದ್ಧತಿಯನ್ನು ಬಿಡಲಿಲ್ಲವಾಗಿ ಗಂಡನು ಕೋಪಿಸಿಕೊಂಡು ಒಂದು ಮಚ್ಚಿನಿಂದ ಆಕೆಯನ್ನು ಹೊಡೆದು ಗಾಯಪಡಿಸಿದನು. ಇದಕ್ಕಾಗಿ ಆತನಿಗೆ 7 ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟಿತು.

ಪಂಚ ಮಹಾಪಾತಕ ಮಾಡಿದವರು ಅಸ್ಪೃಶ್ಯರಾಗುವರು

ಪಂಚ ಮಹಾಪಾತಕವನ್ನು ಮಾಡಿದವರು ಮಾತ್ರ ಅಸ್ಪೃಶ್ಯರಾಗುವರು. ಶವವನ್ನು ಮುಟ್ಟುವವರೂ, ಕಲಾಸಿ ಕೆಲಸ ಮಾಡುವವರೂ ಅಸ್ಪೃಶ್ಯರಾದುದರಿಂದ ಹೆಣವನ್ನು ಕೊಯ್ಯುವ ಡಾಕ್ಟರುಗಳೂ ಮಕ್ಕಳ ಮಲವನ್ನು ತೆಗೆಯುವ ತಾಯಿಗಳೂ ಅಸ್ಪೃಶ್ಯರಾಗಬೇಕಾಯಿತು. ಅಗ್ರವರ್ಣದವರೆಂದು ಹೇಳಿಕೊಳ್ಳುವವರಲ್ಲಿ ಪಂಚ ಮಹಾಪಾತಕಗಳನ್ನು ಮಾಡತಕ್ಕವರೆಷ್ಟೋ ಮಂದಿಯಿರುವರು. ಅವರೆಲ್ಲರೂ ದೇವಸ್ಥಾನಗಳಿಗೆ ಬರಗೊಡಲ್ಪಡುವರು. ಆದರೆ ಹರಿಜನರಲ್ಲೆಷ್ಟೋ ಯೋಗ್ಯರಿದ್ದರೂ ಅವರು ದೇವಸ್ಥಾನಕ್ಕೆ ಬಿಡಲ್ಪಡುವುದಿಲ್ಲ. ದೇವದಾಸಿಯರು ಅಭ್ಯಂತರವಿಲ್ಲದೇ ದೇವಸ್ಥಾನಕ್ಕೆ ಬರಗೊಡಲ್ಪಡುತ್ತಿರುವುದರಿಂದ ದೇವಾಲಯಗಳೆಲ್ಲ ವ್ಯಭಿಚಾರ ಗೃಹಗಳಾಗಿರುತ್ತವೆ" ಎಂದು ತಿನ್ನವೆಲ್ಲಿಯ ಪಂಡಿತ ಕನ್ನಭಿರಾಮ್‌ರವರು ಬರೆದಿರುತ್ತಾರೆ.

ಸ್ತ್ರೀಯರಿಗೆ ಓಟಿಂಗು ಅಧಿಕಾರ

"ಇಂಡ್ಯಾದಲ್ಲಿ ಸ್ತ್ರೀಯರಿಗೆ ಓಟಿಂಗು ಅಧಿಕಾರ ಇರಕೂಡದೆಂದು ಬಹಿರಂಗವಾಗಿ ಯಾರೂ ಹೇಳುತ್ತಿಲ್ಲ. ಆದರೂ ಅದು ಅನೇಕರಿಗಿಷ್ಟವಿಲ್ಲದಿರುವ ಪ್ರಯುಕ್ತ ಸ್ತ್ರೀಯರಿಗೆ ಓಟಿಂಗು ಅಧಿಕಾರವು ಕೊಡಲ್ಪಡದಿರುವಂತೆ ಮಾಡಲು ಅನೇಕ ಕುತಂತ್ರಗಳು ಮಾಡಲ್ಪಡುತ್ತಿವೆ. ಈಗ ಓಟಿಂಗು ಅಧಿಕಾರ ಕೊಡಲ್ಪಟ್ಟಿರುವವರಲ್ಲಿ ಬಹಳ ಮಂದಿ ಓಟನ್ನು ಕೊಡುತ್ತಲೇ ಇಲ್ಲ. ಮದರಾಸಿನಲ್ಲಿ ಓಟಿಂಗು ಅಧಿಕಾರ ಇರುವವರೊಳಗೆ ಶೇಕಡ 18 ಜನರು ಮಾತ್ರ ಓಟನ್ನು ಕೊಟ್ಟಿರುತ್ತಾರೆ. ಭಾರತ ಸ್ತ್ರೀಯರಲ್ಲಿ ವಿವಾಹವು ಸಹಜಧರ್ಮವಾಗಿರುತ್ತದೆ. ವಯಸ್ಸಿಗೆ ಬಂದವರಲ್ಲಿ ವಿವಾಹವಾಗದಿರುವ ಹೆಂಗುಸರು ಬಹಳ ಕಡಿಮೆಯಾಗಿರುವರು. ಇವರಲ್ಲಿ ಅನೇಕ ಮಂದಿ ಉಪಾಧ್ಯಾಯಿನಿಯರಾಗಿಯೂ, ಡಾಕ್ಟರುಗಳಾಗಿಯೂ ಇರುವರು. ಮದುವೆಯಾಗಿರುವ ಹೆಂಗುಸರು ಕೂಡ ಮೇಲ್ಕಂಡ ಉದ್ಯೋಗಗಳನ್ನು ಮಾಡಲವಕಾಶವಿರುವುದು" ಎಂದು ಲೋಥಿಯನ್ ಕಮಿಟಿಯ ಮೆಂಬರುಗಳಲ್ಲೊಬ್ಬರಾದ ಮೇರಿ ಫಿಕ್‌ಫರ್ಡ್‌ರವರು ಲಂಡನ್ ಪಟ್ಟಣದಲ್ಲಿ ಹೇಳಿದರು.

ಭಾರತ ದೇಶದಲ್ಲಿ ಕಾರ್ಖಾನೆಗಳು

ಭಾರತ ಪ್ರಭುತ್ವದವರು 1931 ನೆಯ ವರ್ಷದಲ್ಲಿದ್ದ ಭಾರತದೇಶದ ಕಾರ್ಖಾನೆಗಳ ವಿಚಾರವಾಗಿ ಪ್ರಕಟಿಸಲ್ಪಟ್ಟಿರುವುದರಲ್ಲಿ "1931ನೆಯ ವರ್ಷದಲ್ಲಿ ಭಾರತ ದೇಶದೊಳಗೆ 9206 ಕಾರ್ಖಾನೆಗಳಿದ್ದುವು. ಆದರೆ ಅವುಗಳೊಳಗೆ 8143 ಕಾರ್ಖಾನೆಗಳಲ್ಲಿ ಮಾತ್ರ ಕೆಲಸ ನಡೆಯುತ್ತಿದ್ದಿತು. ಒಟ್ಟಿನಮೇಲೆ ಈ ಕಾರ್ಖಾನೆಗಳಲ್ಲಿ 14,31,487 ಮಂದಿ ಕೆಲಸ ಮಾಡುತ್ತಿದ್ದರು. ಆದರೆ ಇದರ ಹಿಂದಣ ವರ್ಷದಲ್ಲಿ 96815 ಮಂದಿ ಹೆಚ್ಚಾಗಿ ಕೆಲಸ ಮಾಡುತ್ತಿದ್ದರು. ಶೇಕಡ 82 ಮಂದಿ ಗಂಡುಸರೂ, 16 ಮಂದಿ ಹೆಂಗುಸರೂ, ಇಬ್ಬರು ಬಾಲರೂ ಇದ್ದರು. ಪ್ರಸಕ್ತ ವರ್ಷದಲ್ಲಿ ಪ್ರಾಣಾಪಾಯಕರವಾದ ಪ್ರಮಾದಗಳು 174, ಬಲವಾದ ಗಾಯಗಳಿಂದ ಕೂಡಿದ ಪ್ರಮಾದಗಳು 3693, ಸಾಮಾನ್ಯ ಪ್ರಮಾದಗಳು 15940 ಜರುಗಿದುವು. ಕೆಲಸಗಾರರ ವಸತಿ ಗೃಹ ನಿರ್ಮಾಣಕ್ಕೆ ಕೆಲ ಕಡೆಗಳಲ್ಲಿ ಏರ್ಪಾಟು ನಡೆಯುತ್ತಿದೆ. ಕಾರ್ಖಾನೆಗಳ ಶಾಸನದ ಪ್ರಕಾರ 7229 ವಿವಾದಗಳು ಹೂಡಲ್ಪಟ್ಟು 1016 ರಲ್ಲಿ ಶಿಕ್ಷೆ ವಿಧಿಸಲ್ಪಟ್ಟಿತು" ಎಂದು ಹೇಳಲ್ಪಟ್ಟಿದೆ.

ಗುರುವಯ್ಯೂರು ಓಟಿನ ಫಲಿತಾಂಶದ ಪ್ರಕಟನೆ

ಗ್ರಾಮ	ಅನುಕೂಲರು		ಪ್ರತಿಕೂಲರು		ಒಟ್ಟು
ತಿರೂರು	100 ಕ್ಕೆ	77	100 ಕ್ಕೆ	10	1695
ಕುಟ್ಟಿಪುರಂ	,,	81	,,	8	2579
ತ್ರಿತಲ	,,	80	,,	7	903
ಪೊನ್ನಾನಿ	,,	93	,,	4	1225
ಅಂದತೋಡು	,,	82	,,	10	459
ಚೌಘಟ	,,	49	,,	26	664
ವಲಪಾಡು	,,	83	,,	8	1229

ಹರಿಜನರು ಗುರುವಯ್ಯೂರು ದೇವಸ್ಥಾನವನ್ನು ಪ್ರವೇಶಿಸುವ ವಿಚಾರದಲ್ಲಿ ಬಹು ಜನಾಭಿಪ್ರಾಯವನ್ನು ತಿಳಿಯುವುದಕ್ಕಾಗಿ ಓಟನ್ನು ತೆಗೆದುಕೊಳ್ಳುವ ಕಾರ್ಯವನ್ನು ಈ ತಾ|| 15 ರೊಳಗೆ ಮುಗಿಸಲು ಸಾಧ್ಯವಾಗಲಿಲ್ಲವಾದುದರಿಂದ ಅವಧಿಯು ಈ ತಾ|| 23ರ ವರೆಗೆ ಮುಂದುವರಿಸಲ್ಪಟ್ಟಿದೆ. ಕಳೆದ ತಾ|| 13ರ ವರೆಗೆ ಬಂದ ಲೆಕ್ಕದ ಪಟ್ಟಿಯು ಸಿದ್ಧಗೊಳಿಸಲ್ಪಟ್ಟಿದೆ. ಇದರಿಂದ ಅಧಿಕ ಸಂಖ್ಯಾಕ ಸವರ್ಣದವರು ಹರಿಜನರ ಪ್ರವೇಶಕ್ಕೆ ಅನುಕೂಲವಾಗಿರುವರೆಂದು ವ್ಯಕ್ತವಾಗುವುದು" ಎಂದು ಈ ಚುನಾವಣಾ ಕಾರ್ಯದರ್ಶಿಯವರು ಪ್ರಕಟಿಸಿರುತ್ತಾರೆ.

ವಿದ್ಯಾರ್ಥಿಗಳಿಗೆ ಮಹಾತ್ಮರ ಸಂದೇಶ

ಅಸ್ಪೃಶ್ಯತಾ ನಿವಾರಣೆಯ ವಿಚಾರದಲ್ಲಿ ವಿದ್ಯಾರ್ಥಿಗಳ ಕರ್ತವ್ಯವೇನೆಂದು ಮಹಾತ್ಮರಿಗೆ ವಿಶಾಖಾ ಪಟ್ಟಣದ ಆಂಧ್ರ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಆಂಧ್ರಭಾಷಾ ಸಂಘದ ಸೆಕ್ರೆಟರಿಯು ಬರೆದಿದ್ದ ಲೇಖನಕ್ಕೆ ಮಹಾತ್ಮರು ಉತ್ತರವನ್ನು ಬರೆದಿರುವುದರಲ್ಲಿ "ಸನಾತರು ಎಷ್ಟು ಪ್ರತಿಕೂಲರಾಗಿದ್ದರೂ ವಿದ್ಯಾರ್ಥಿಗಳು ಕಾರ್ಯಸಾಧನೆಗೆ ಮನಃಪೂರ್ವಕವಾಗಿ ಸಹಾಯಮಾಡಲು ಸಂಕಲ್ಪಿಸಿದರೆ ಅಸ್ಪೃಶ್ಯತೆಯ ನಿರ್ಮೂಲನಕ್ಕೆ ಅನೇಕ ವಿಧದಲ್ಲಿ ಸಹಾಯಮಾಡಬಲ್ಲರು. ಇವರು ಅಸ್ಪೃಶ್ಯರ ವಿವಾಹಗಳಿಗೆ ಹೋಗಿ, ಅವರ ಸರಿಸಮಾನವಾಗಿದ್ದು ಅವರ ಕಷ್ಟನಿಷ್ಠುರಗಳನ್ನು ಕೇಳಿ ತಿಳಿದುಕೊಂಡು ತಮ್ಮ ಶಕ್ತಿಯಿರುವಮಟ್ಟಿಗೂ ಹರಿಜನಸಹೋದರರಿಗೆ ಸಹಾಯಮಾಡಬೇಕು. ವೈದ್ಯಸಹಾಯವನ್ನು ಮಾಡುವುದು, ಶುಚಿ ಮತ್ತು ಆರೋಗ್ಯ ವಿಚಾರವನ್ನು ಬೋಧಿಸುವುದು, ರಾತ್ರಿಯಲ್ಲಾಗಲಿ ಹಗಲಿನಲ್ಲಾಗಲಿ ವಿದ್ಯೆ ಕಲಿಸುವುದು, ಅವರನ್ನು ತಮ್ಮಾಟಗಳಿಗೆ ಸೇರಿಸಿಕೊಳ್ಳುವುದು, ಅವರ ಮಕ್ಕಳೊಡನೆ ವಿನೋದದಿಂದಲೂ ವಿಲಾಸದಿಂದಲೂ ಕಾಲಯಾಪನೆಮಾಡುವುದು ಇವೇ ಮೊದಲಾದ ಕಾರ್ಯಗಳನ್ನು ವಿದ್ಯಾರ್ಥಿಗಳು ಕೈಕೊಳ್ಳಬೇಕು.

ಯುದ್ಧ ಋಣ

ಅಮೇರಿಕೆಯವರಿಗೆ ಬ್ರಿಟಿಷ್‌ನವರು ಕೊಡಬೇಕಾಗಿರುವ 195 ಲಕ್ಷ ಪೌಂಡು ಯುದ್ಧ ಋಣದಲ್ಲಿ ಈ ಡಿಸೆಂಬರು ತಾ|| 15ರ ಅವಧಿಯ ಕಂತಿಗಾಗಿ 95,550,000 ಸಾವಿರ ಡಾಲರುಗಳು ಇಂಗ್ಲೆಂಡು ಬ್ಯಾಂಕಿನಲ್ಲಿ ಅಮೇರಿಕೆಯವರ ಲೆಕ್ಕಕ್ಕೆ ಜಮಾ ಕಟ್ಟಲ್ಪಟ್ಟಿರುವುದಾಗಿ ಅವರು ತಮಗೆ ತಿಳಿಸಿರುತ್ತಾರೆಂದು ಅಮೇರಿಕೆಯ ಕೋಶಾಧಿಕಾರಿ ಪ್ರಕಟಿಸಿರುತ್ತಾರೆ. "ಪ್ರಪಂಚದಲ್ಲೆಲ್ಲ ಬ್ರಿಟಿಷಿನವರು ವಾಣಿಜ್ಯದಲ್ಲಿ ಪ್ರಥಮಸ್ಥಾನವನ್ನು ಹೊಂದಿರುತ್ತಾರೆ. ಅವರ ವಿವೇಕಕ್ಕೂ ಗೌರವಕ್ಕೂ ತಕ್ಕ ರೀತಿಯಲ್ಲಿ ಲಂಡನ್ ಪಾರ್ಲಿಮೆಂಟು ಸಭೆಯಲ್ಲಿ ಚರ್ಚೆಯು ನಡೆಯುತ್ತದೆ" ಎಂದು ಅಮೇರಿಕೆಯ ಪತ್ರಿಕೆಗಳು ಬಹಳವಾಗಿ ಪ್ರಶಂಸೆ ಮಾಡಿ ಬರೆದಿರುತ್ತವೆ. ಈ ಡಿಸೆಂಬರು ತಾ|| 15ರ ವಾಯಿದೆ ಕಂತಿನ ಋಣಕ್ಕಾಗಿ ಬ್ರಿಟನು, ಇಟಲಿ, ಜಕೊಸ್ಲಾವಿಯ, ಫಿನ್ಲಂಡು, ಲಟೀವಿಯಾ ಮತ್ತು ಲಿಥೌನಿಯಾ ಈ 6 ರಾಜ್ಯಗಳು 1250 ಲಕ್ಷ ಡಾಲರುಗಳನ್ನು ಅಮೇರಿಕೆಗೆ ಸಲ್ಲಿಸಿರುತ್ತವೆ. ಫ್ರಾನ್ಸು, ಬೆಲ್ಜಿಯಂ, ಪೋಲೆಂಡು, ಎಸ್ಟೋನಿಯಾ, ಹಂಗೇರಿ ಈ 5 ರಾಜ್ಯಗಳು ಕೊಡಬೇಕಾಗಿರುವ 250 ಲಕ್ಷ ಡಾಲರುಗಳನ್ನು ಅವು ಸಲ್ಲಿಸಲಿಲ್ಲ. ಫ್ರಾನ್ಸು ಋಣವನ್ನು ಸಲ್ಲಿಸಕೂಡದೆಂದು ಮೂರ್ಖತನ ಮಾಡುತ್ತಿರುವುದನ್ನು ಬಿಟ್ಟು ಸಲ್ಲಿಸುವುದುತ್ತಮವೆಂದು ಪರ್ಯಾಲೋಚಿಸುತ್ತಿರುವುದಾಗಿ ತಿಳಿಯಬಂದಿರುತ್ತದೆ

ಮಹಾತ್ಮರಿಗೆ ಆಯುರಾರೋಗ್ಯಾನುಗ್ರಹವಾಗಲಿ

ದಕ್ಷಿಣ ಇಂಡ್ಯಾ ಮಹಮ್ಮದೀಯ ಯುವಜನ ಸಂಘಾಧ್ಯಕ್ಷರಾದ ಮೌಲಾನಾ ಕ್ಯೂರೇಷಿಯವರು ಮಹಾತ್ಮರಿಗೆ ಈ ಪ್ರಕಾರವಾಗಿ ಬರೆದಿರುವರು :—"ಮಹಾತ್ಮರೆ, ತಮ್ಮ ಉಪವಾಸ ದೀಕ್ಷಾ ವಿಚಾರವನ್ನು ಕೇಳಿ ನಮಗೆ ಸಹಿಸಲಾರದಷ್ಟು ಮನೋವ್ಯಥೆಯುಂಟಾಯಿತು. ನೀವು ನಿಮ್ಮುದ್ದೇಶ ಸಾಧನದಲ್ಲಿ ದೃಢಮನಸ್ಕರಾಗಿರುವುದು ನಿಜವೇ. ಈ ವರೆಗೆ ನಿಮ್ಮ ಮಾತಿಗೆ ಲೇಶವೂ ಲೋಪ ಉಂಟಾಗಿಲ್ಲ. ಪ್ರಾಣವನ್ನರ್ಪಿಸಿದ ಹೊರತು ಜಾತಿಯ ಶ್ರೇಯಸ್ಸೂ ಸೌಭಾಗ್ಯವೂ ಉಂಟಾಗವು ಈ ವಿಚಾರದಲ್ಲಿ ನಿಮ್ಮ ತ್ಯಾಗವು ಅಸಮಾನವು. ನೀವು ನಿಮ್ಮ ಪ್ರಾಣವನ್ನು ದೇಶ ಸೇವೆಗಾಗಿ ಸವಿಸುತ್ತಿರುವಿರಿ. ಆದುದರಿಂದ ವಿನಯಪೂರ್ವಕವಾಗಿ ನಿಮ್ಮ ಶರೀರವನ್ನೂ, ಆತ್ಮವನ್ನೂ ನಿಮ್ಮಿಷ್ಟಬಂದಂತೆ ವಿನಿಯೋಗಿಸಬಾರದೆಂದು ಬೇಡುತ್ತೇನೆ. ಸರ್ವವಿಧದಲ್ಲೂ ಅಂತಹ ನಿರ್ಣಯವನ್ನು ದೇಶಕ್ಕೇ ಬಿಟ್ಟುಬಿಡಬೇಕೆಂದು ಪ್ರಾರ್ಥಿಸುವೆನು. ದೇಶವೆಲ್ಲ ಅತ್ಯಂತ ಕಷ್ಟಸ್ಥಿತಿಯಲ್ಲಿ ಮುಳುಗಿ ತೇಲುತ್ತಿದೆ. ದೇಶವನ್ನು ದಡಕ್ಕೆ ಸೇರಿಸಲು ನಿಮ್ಮ ಜೀವಿತವು ಬಹಳ ಅವಶ್ಯವಾಗಿರುವುದರಿಂದ ಸ್ವಲ್ಪ ವಿಷಯಕ್ಕಾಗಲ್ಲದೆ ಮಹಾ ದೊಡ್ಡ ಕಾರ್ಯಗಳಿಗೆ ಮಾತ್ರ ವಿನಿಯೋಗಿಸಬೇಕು ಈಗ ಕಷ್ಟಸ್ಥಿತಿಯಲ್ಲಿ ದೇಶವೆಲ್ಲವೂ ಅಧೋಗತಿಗಿಳಿದಿರುವುದರಿಂದ ಈ ಸಮಯದಲ್ಲಿ ಆಪದ್ಬಾಂಧವನಾದ ಪರಮೇಶ್ವರನು ನಿಮಗೆ ಸಮಾನನಾದ ಉತ್ತಮೋತ್ತಮ ಪುರುಷನು ಹುಟ್ಟುವವರೆಗೂ ನಿಮಗೆ ಆಯುರಾರೋಗ್ಯವನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ."

ಒಳದೇಶದ ವೃತ್ತಾಂತಗಳು

ರಾಜಧಾನಿಯಲ್ಲಿ ಸ್ಪೆಷಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಾದ ಮ|| ಟಿ. ವಿ. ಈಶ್ವರಂರವರ ಬಂಗಲೆಯಲ್ಲಿ ಕೆಲ ಪದಾರ್ಥಗಳು ಕಳುವಾಗಿರುವುದರ ಮೇಲೆ ಪೋಲೀಸಿನವರು ಕೃತ್ಯ ನಡೆಸಿದವರನ್ನು ತಡಕುತ್ತಿರುವುದಾಗಿ ಕೇಳುತ್ತೇವೆ.

1931 ನೆಯ ನವಂಬರು ತಾ|| 1 ರಿಂದ ಒಂದು ವರ್ಷ ಕಾಲದ ವರೆಗೆ ಅಧಿಕಾರಿಗಳ ಪ್ರಯಾಣದ ವೆಚ್ಚವು ಒಂದು ತಿಂಗಳಿನಲ್ಲಿ ಇಂತಿಷ್ಟಕ್ಕೆ ಮೀರಿರಕೂಡದೆಂದು ಗೊತ್ತುಗೊಳಿಸಲ್ಪಟ್ಟಿದ್ದುದು ಮಿತವ್ಯಯದ ಅವಶ್ಯಕತೆಯಿಂದ ಮತ್ತೊಂದು ಅಪ್ಪಣೆಯಾಗುವವರೆಗೂ ನಡೆದುಕೊಂಡು ಬರಬೇಕೆಂದು ಪ್ರಭುತ್ವದ ಅಪ್ಪಣೆಯಾಗಿದೆ.

ನೀಲಗಿರಿಯಿಂದ ಬಂದು ಕಳೆದ 10–15 ದಿವಸಗಳಿಂದ ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರವರ ಅತಿಥಿಗಳಾಗಿದ್ದ ಪೋರ್ಬಂದರ್ ರಾಜರವರ ಪತ್ನಿಯವರಿಗೆ ದೇಹಾಲಸ್ಯವಾಗಿದ್ದು ಗುಣವಾದುದರ ಮೇಲೆ ರಾಜ ದಂಪತಿಗಳು ಪರಿವಾರ ಸಮೇತ ಕಳೆದ ಬುಧವಾರ ಸಾಯಂಕಾಲ ಸ್ಪೆಷಲ್ ರೈಲು ಬಂಡಿಯಲ್ಲಿ ಬೆಂಗಳೂರಿಗೆ ಪ್ರಯಾಣಮಾಡಿದರು ಗೌರವಾರ್ಥವಾಗಿ 13 ಗುಂಡುಗಳು ಹಾರಿಸಲ್ಪಟ್ಟುವು.

ರಾಜಧಾನಿಯ ಮಾಡರ್ನ್ ಮೆಡಿಕಲ್ ಹಾಲು ಸ್ಥಾಪಿತವಾಗಿ 3 ವರ್ಷಗಳು ತುಂಬಿದುದರಿಂದ ಅದರ ವರ್ಧಂತ್ಯುವವನ್ನು ಅದರ ಯಜಮಾನರಾದ ಡಾ|| ಎಂ. ಅಣ್ಣಾಜಪ್ಪನವರು ಕಳೆದ ಸೋಮವಾರ ನೆರವೇರಿಸಿ ಆ ದಿವಸ ಸಾಯಂಕಾಲ ನೂರಾರು ಮಂದಿ ಇಷ್ಟಮಿತ್ರರುಗಳಿಗೆ ದಿವ್ಯವಾದ ಔತಣವನ್ನು ಮಾಡಿಸಿದರು. ಈ ವೈದ್ಯಶಾಲೆಯ ವರ್ಧಂತ್ಯುತ್ಸವವು ಪ್ರತಿ ವರ್ಷವೂ ಇತೋಪ್ಯತಿಶಯವಾಗಿ ನಡೆಯಲೆಂದು ಹರಸುತ್ತೇವೆ.

ಈ ದಿವಸ ಸಾಯಂಕಾಲ 4 ಘಂಟೆಗೆ ರಾಜಧಾನಿಯ ಜಗನ್ಮೋಹನ ಪ್ರಾಸಾದದೊಳಗೆ ಅಖಿಲಭಾರತ ತತ್ತ್ವ ಶಾಸ್ತ್ರ ಮಹಾಸಭೆಯ 8 ನೆಯಧಿವೇಶನವು ಶ್ರೀಮನ್ಮಹಾರಾಜರವರಿಂದ ಆರಂಭಿಸಲ್ಪಟ್ಟು ಆಂಧ್ರ ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರಾದ ಡಾ|| ಸರ್ ಎಸ್. ರಾಧಾಕೃಷ್ಣನ್, ಡಿ.ಲಿಟ್., ರವರ ಅಧ್ಯಕ್ಷತೆಯಲ್ಲಿ 3 ದಿವಸಗಳ ವರೆಗೆ ನಡೆಯುವುದು. ಈ ದಿವಸ ಶ್ರೀಮನ್ಮಹಾರಾಜರವರ ಆರಂಭ ಭಾಷಣಾನಂತರ ಸ್ವಾಗತ ಸಂಘಾಧ್ಯಕ್ಷರ ಮತ್ತು ಮಹಾಸಭಾಧ್ಯಕ್ಷರ ಭಾಷಣಗಳು ನಡೆದು ಇಂದಿನ ಕಾರ್ಯವು ಮುಗಿದಿತು.

ಕಳೆದ ಸೋಮವಾರ ಆಫಿಸಿಯೇಟಿಂಗ್ ದಿವಾನರಾದ ದಿವಾನ್ ಬಹದ್ದೂರ್ ಮ|| ಎಂ. ಎನ್. ಕೃಷ್ಣರಾಯರು ಸರ್ ಕೆ. ಪಿ. ಪುಟ್ಟಣ್ಣಶೆಟ್ಟರು, ಹಾಜಿ ಸರ್ ಇಸ್ಮಾಯಿಲ್ ಸೇಟರು, ರಾಜಸಭಾಭೂಷಣ ಕೆ. ಆರ್. ಶ್ರೀನಿವಾಸಯ್ಯಂಗಾರ್ಯರು, ಮ|| ನಂಡಿ ಹರಿಯಣ್ಣನವರು, ಕೆ. ಎನ್. ಗುರುಸ್ವಾಮಿಯವರೇ ಮೊದಲಾಗಿ ಕೆಲ ಪ್ರಮುಖರುಗಳನ್ನು ತಮ್ಮ ಆಫೀಸಿಗೆ ಬರಮಾಡಿಕೊಂಡು ವಾಣಿಜ್ಯ ಕೈಗಾರಿಕೆಗಳ ಡೈರೆಕ್ಟರ ಸಮಕ್ಷಮ ಮಂಡ್ಯದ ಸಮೀಪದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವ ವಿಚಾರವಾಗಿ ಪ್ರಸ್ತಾಪಿಸಿ ಅವರುಗಳ ಅಭಿಪ್ರಾಯವನ್ನು ಕೇಳಿ ತಿಳಿದುಕೊಂಡರು

ಶಿವಮೊಗ್ಗ ಡಿಸ್ಟ್ರಿಕ್ಟು ಮತ್ತು ಸೆಷನ್ಸು ಜಡ್ಜಿಯವರಾದ ಮ|| ಎನ್. ಕೆ. ಶ್ರೀನಿವಾಸರಾಯರು 3 ತಿಂಗಳ ಕಾಲ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುವುದರಿಂದ ಸಬ್ ಜಡ್ಜಿಯವರಾಗಿದ್ದು ಶ್ರೀಮನ್ಮಹಾರಾಜರವರ ಬಳಿ ಅಸಿಸ್ಟೆಂಟ್ ಸೆಕ್ರೆಟರಿಯುದ್ಯೋಗದಲ್ಲಿರುವ ಮ|| ಎಂ. ರಾಮರಾಯರು ಆಕ್ಟಿಂಗ್ ಡಿಸ್ಟ್ರಿಕ್ಟು ಮತ್ತು ಸೆಷನ್ಸ್ ಜಡ್ಜರ ದರ್ಜೆಗೆ ಹೆಚ್ಚಿಸಲ್ಪಟ್ಟು, ಅವರು ಅರಮನೆಯುದ್ಯೋಗದಲ್ಲಿರುವುದರಿಂದ ಬೆಂಗಳೂರು ಸಬ್ ಜಡ್ಜಿಯವರಾದ ಮ|| ಎಚ್. ಕೆ. ವೀರಬಸವಯ್ಯನವರು ಶಿವಮೊಗ್ಗ ಆಕ್ಟಿಂಗ್ ಡಿಸ್ಟ್ರಿಕ್ಟು ಮತ್ತು ಸೆಷನ್ಸ್ ಜಡ್ಜಿಯರಾಗಿಯೂ, 1 ನೇ ಗ್ರೇಡು ಮುನ್ಸೀಫರಾದ ಮ|| ಎಂ. ಎನ್. ಸುಬ್ಬಣ್ಣನವರು ಬೆಂಗಳೂರು ಆಕ್ಟಿಂಗ್ ಸಬ್ ಜಡ್ಜಿಯರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಕೆಲ ಬಟ್ಟೆಯಂಗಡಿಗಳಿಗೆ ಪಠಾನರು ಬಟ್ಟೆ ಕೊಳ್ಳುವವರಂತೆ ಹೋಗಿ 2–3 ಸಾವಿರ ರೂ. ಬೆಲೆಬಾಳುವ ಟ್ವೀಡು, ಮಕಮಲ್ಲು ಮೊದಲಾದ ಬಟ್ಟೆಗಳನ್ನು ಅಪಹರಿಸಿರುತ್ತಾರೆಂದು 5–6 ಮಂದಿ ಪಠಾನರನ್ನು ಪೋಲೀಸಿನವರು ಸೆರೆಹಿಡಿದು ವಿಚಾರಿಸುತ್ತಿರುವರು ಈ ಪಠಾನರ ಸಂಖ್ಯೆಯು ರಾಜಧಾನಿಯಲ್ಲಿ ದಿನೇದಿನೇ ಹೆಚ್ಚುತ್ತಿರುವುದಲ್ಲದೆ ಇವರ ಉಪಟಳವೂ ಹೆಚ್ಚುತ್ತಿದೆ. ಇವರಲ್ಲಿ ಕೆಲರು ರೂಪಾಯಿ ಒಂದಕ್ಕೆ 1–2 ಆಣೆ ಬಡ್ಡಿಯಂತೆ ಸಣ್ಣ ಪುಟ್ಟ ಅಂಗಡಿಯವರಿಗೆ ದಿನ ಕಂತಿನಮೇಲೆ ಸಾಲಕೊಟ್ಟು ಅವರನ್ನು ನಿರ್ಗತಿಕರನ್ನಾಗಿ ಮಾಡುತ್ತಿರುವರು. ಈ ಜನರಲ್ಲಿ ಕೆಲರು ಹೋಗಿಬರುತ್ತಿದ್ದ ಒಬ್ಬ ಗುಡಸಟ್ಟಿ ಮನೆಯಲ್ಲಿ ಯುವತಿಯ ಕೊಲೆ ಸಹ ಕಳೆದ ವರ್ಷ ನಡೆದಿತು. ಈ ಜನರನ್ನು ತಕ್ಕ ನಿರ್ಬಂಧದಲ್ಲಿಡದಿದ್ದರೆ ಇವರ ಹಾವಳಿ ಇನ್ನೂ ಹೆಚ್ಚುವುದು.

ಮೈಸೂರು ಸಂಸ್ಥಾನದ ಪ್ರಾಥಮಿಕ ಮತ್ತು ಮಾಧ್ಯಮಿಕ ಪಾಠಶಾಲೆಗಳ ಉಪಾಧ್ಯಾಯರ 2 ನೆಯ ಸಮ್ಮೇಳನವು ಇದೇ ತಾ|| 21 ನೆಯ ಬುಧವಾರ ಬೆಳಗಿನ 11 ಘಂಟೆಗೆ ಬೆಂಗಳೂರು ಒಕ್ಕಲಿಗರ ವಿದ್ಯಾರ್ಥಿ ನಿಲಯದೊಳಗೆ ಆಫಿಸಿಯೇಟಿಂಗ್ ದಿವಾನರಾದ ರಾಜಕಾರ್ಯಪ್ರಸಕ್ತ ದಿವಾನ್ ಬಹದ್ದೂರ್ ಮ|| ಎಂ ಎನ್. ಕೃಷ್ಣರಾಯರವರಿಂದ ಆರಂಭಿಸಲ್ಪಟ್ಟು ವಿದ್ಯಾಭ್ಯಾಸದ ಡೈರೆಕ್ಟರಾದ ಮ|| ಎನ್. ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ತಾ|| 24 ರ ವರೆಗೆ ನಡೆಯುವುದಲ್ಲದೆ ಪ್ರಥಮ ದಿವಸ ಮಧ್ಯಾಹ್ನ 2 ಘಂಟೆಗೆ ಬಸವನಗುಡಿಯಲ್ಲಿರುವ ಮಹಾರಾಷ್ಟ್ರ ಮಹಿಳಾ ವಿದ್ಯಾಲಯದಲ್ಲಿ 3 ನೆಯ ಕೌನ್ಸಿಲರಾದ ಮ|| ಎಸ್. ಪಿ. ರಾಜಗೋಪಾಲಾಚಾರ್ಯರಿಂದ ತೆರೆಯಲ್ಪಡುವುದು. ಈ ಸಮ್ಮೇಳನ ಕಾರ್ಯನಿರ್ವಾಹಕ್ಕೆ ದ್ರವ್ಯಸಹಾಯಮಾಡಿರುವ ಡಿ|| ಬೋರ್ಡುಗಳು ಮ್ಯುನಿಸಿಪಾಲಿಟಿಗಳು, ಗ್ರಾಮಪಂಚಾಯತಿಗಳು, ಕೋ-ಆಪರೇಟಿವ್ ಸೊಸೈಟಿಗಳು, ಮೊದಲಾದ ಸಂಸ್ಥೆಗಳಿಗೆ ತಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಈ ಮೂಲಕ ಅರ್ಪಿಸುವುದಾಗಿಯೂ, ಮೇಲ್ಕಂಡ ಸಂಸ್ಥೆಗಳಿಗೂ ಉಪಾಧ್ಯಾಯರುಗಳಿಗೂ ಆಹ್ವಾನಪತ್ರಿಕೆಯು ಕಳುಹಲ್ಪಟ್ಟಿತುತ್ತವಾದರೂ ಈ ಮೂಲಕವೂ ಅವರುಗಳನ್ನು ಆಹ್ವಾನಿಸುವುದಾಗಿಯೂ ಸಮ್ಮೇಳನದ ಸೆಕ್ರೆಟರಿಯವರು ತಿಳಿಸುತ್ತಾರೆ.

ನೋಟೀಸ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ

Mis. No. 22 of 1932—1933.

ಅರ್ಜಿದಾರ್		ಎದುರು ಅರ್ಜಿದಾರ್
1. ಟಿ. ಎ. ರಾಜಾರಾವ್ 2. ನಾರಾಯಣ ಶಾಸ್ತ್ರಿ	VS	ನಂಜನಗೂಡು ಶ್ರೀರಾಮ ಚಂದ್ರ ಬ್ಯಾಂಕು ಲಿಮಿಟೆಡ್ by its Agent ಇ. ಕೃಷ್ಣಪ್ಪನವರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:-

ಮೇಲ್ಕಂಡ ಅರ್ಜಿದಾರರು ಎದುರು ಅರ್ಜಿದಾರ್ ಕಂಪೆನಿಯನ್ನು ವೈಂಡ್ ಅಫ್ ಮಾಡಬೇಕೆಂದು ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿ ದಾಖಲ್ಮಾಡಿರುತ್ತಾರೆ. ಈ ವಿಚಾರದಲ್ಲಿ ಏನಾದರೂ ತಕರಾರು ಇದ್ದಲ್ಲಿ ತಕರಾರುದಾರರು 6-1-33 ನೇ ದಿವಿ 11 ಘಂಟೆಗೆ ಕೋರ್ಟಿಗೆ ಹಾಜರಾಗಿ ತಮ್ಮ ಅಹವಾಲನ್ನು ಹೇಳಿಕೊಳ್ಳಬಹುದು.

Mysore. 13-12-32, M. VENKATAKRISHNIYA, *Advocate for Petitioners.*

ಹಾಸನ ಟರ್ನ 24 ನೇ ದನವಿನ ಪ್ರದರ್ಶನ.

ಹಾಸನ ಟರ್ನ ದನವಿನ ಪ್ರದರ್ಶನ ಕ್ಷೇತ್ರದಲ್ಲಿ 24 ನೇ ದನವಿನ ಪ್ರದರ್ಶನವು ಏರ್ಪಾಟಾಗಿರುತ್ತೆ.

ಪ್ರದರ್ಶನವು 1933 ನೇ ಜನವರಿ ಮಾಹೆ ತಾರೀಖು 2 ನೇ ಸೋಮವಾರದಿಂದ 6 ನೇ ಶುಕ್ರವಾರದವರೆಗೆ ಉಭಯ ದಿವಸಗಳಲ್ಲೂ ನಡಿಯುತ್ತೆ.

ಗೌರ್ನಮೆಂಟ್ ಆರ್ಡರು ಅನುಸರಿಸಿ ದನಗಳ ಪ್ರದರ್ಶನಕ್ಕೆ ಬಿಡಲ್ಪಡುವ ರಾಸುಗಳ ಮೇಲೆ ರಾಸು ಒಂದಕ್ಕೆ ಎರಡಾಣೆಯಂತೆ ಫೀ ವಸೂಲ್ಮಾಡಲ್ಪಡುತ್ತೆ.

ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲ್ಮಾಡುವ ಫೀ ಬಾಬನ್ನು ಮತ್ತು ಪ್ರದರ್ಶನದ ಮ್ಯುನಿಸಿಪಲ್ ಜಾಗದಲ್ಲಿ ಬೀಳುವ ಗೊಬ್ಬರ ಸಾಗಿಸುವ ಬಾಬನ್ನು ಸಹ ತಾ|| 13-12-32 ರಲ್ಲು ಹಾಸನದ ಸಂತೆ ಹತ್ತಿರ ಇರುವ ಅಕ್ಟ್ರಾಯಿ ಕಟ್ಟೆ ಬಳಿ ಮಧ್ಯಾಹ್ನ 2 ಘಂಟೆ ಲಾಗಾಯತು ಹಾಸನ ಟರ್ನ ಮ್ಯುನಿಸಿಪಲ್ ಪ್ರೆಸಿಡೆಂಟರು ಅಥವಾ ವೈಸ್‌ಪ್ರೆಸಿಡೆಂಟರವರಿಂದ ಹರಾಜು ಮಾಡಿಸಲ್ಪಡುತ್ತೆ.

ಅಂಗಡಿ ವಗೈರೆಗಳಿಗಾಗಿ ವಿಂಗಡಿಸುವ ಜಾಗಾಗಳನ್ನು ತಾ|| 15-12-1932 ರ ಲಾಗಾಯತು ಏಲಂವಾರಿ ಮಾಡಲು ಉಪಕ್ರಮಿಸುತ್ತೆ. ಬಾಕಿ ವಿಷಯಗಳನ್ನು ಹಾಸನ ಟರ್ನ ಮ್ಯುನಿಸಿಪಲ್ ಆಫೀಸಿಗೆ ಬಂದು ತಿಳಿದುಕೊಳ್ಳತಕ್ಕದ್ದು.

[3—1] S. P. BRAMHAPPAH, *for President Town Ml. Council & Chairman Cattle Show Committee, Hassan.*

ತಾ|| 2-12-1932.

ಶ್ರೀ ದೊಡ್ಡ ಮೇಟಿಯವರಿಗೆ ಮಹಾತ್ಮರ ದರ್ಶನ

ಶ್ರೀ ದೊಡ್ಡ ಮೇಟಿ ಅಂದಾನಪ್ಪನವರು ಕರ್ನಾಟಕ ಬಂಧು ಸಂಪಾದಕರನ್ನೊಡಗೂಡಿ ತಾ|| 30-11 ನೇ ದಿವಸ ಮಧ್ಯಾಹ್ನ 2 ಘಂಟೆಗೆ ಮಹಾತ್ಮಾ ಗಾಂಧಿಯವರ ದರ್ಶನಕ್ಕೆ ಯರವಾಡಾ ಜೇಲಿಗೆ ಹೋಗಿದ್ದರು. ಹೋದಾಗ್ಗೆ ಮಹಾತ್ಮಾಜಿಯವರು ಆಮ್ರವೃಕ್ಷದ ಕೆಳಗೆ ಪದ್ಮಾಸನದಂತೆ ಲಂಗೋಟಿಯನ್ನುಟ್ಟುಕೊಂಡು ಉತ್ತರೀಯನ್ನು ಹೊದ್ದುಕೊಂಡು ಕುಳಿತಿದ್ದರು. ಮಹಾತ್ಮಾಜಿಯವರು ಅವರನ್ನು ಕಾಣುತ್ತಲೆ ಪರಿಚಯವನ್ನು ಕೇಳಿ ನಗೆಮುಖದಿಂದ ಬರಮಾಡಿಕೊಂಡು ಸಮ್ಮುಖದಲ್ಲಿ ಕೂಡ್ರ ಹೇಳಿದರು. ಅನಂತರ ಶ್ರೀ ದೊಡ್ಡಮೇಟಿಯವರು ಹಾರ ತುರಾಯಿಗಳನ್ನೂ ಹಣ್ಣುಹಂಪಲುಗಳನ್ನೂ ಸಮರ್ಪಿಸಿದ್ದನ್ನು ಮಹಾತ್ಮಾಜಿಯವರು ನಗೆಮುಖದಿಂದ ಸ್ವೀಕರಿಸಿದರು. ಅನಂತರ ಕ್ಷೇಮಲಾಭಗಳನ್ನು ವಿಚಾರಿಸಿ ಕೇಳಬೇಕಾಗಿರುವುದನ್ನು ಕೇಳಿರೆಂದು ಹೇಳಿದರು. ಆ ಬಗ್ಗೆ ಶ್ರೀ ದೊಡ್ಡ ಮೇಟಿಯವರಿಗೂ ಮಹಾತ್ಮರಿಗೂ ಪ್ರಶ್ನೋತ್ತರಗಳು ಈ ಪ್ರಕಾರವಾಗಿ ನಡೆದುವು.

ಪ್ರಶ್ನೆ—ಅಸ್ಪೃಶ್ಯತೆಯು ಎಂದಿನಿಂದ ಅಸ್ತಿತ್ವದಲ್ಲಿ ಬಂತು?

ಉತ್ತರ—ಅಸ್ಪೃಶ್ಯತೆಯು ಅಸ್ತಿತ್ವದಲ್ಲಿ ಬಂದ ಕಾಲವನ್ನು ನಿರ್ಧಾರವಾಗಿ ಹೇಳಲಿಕ್ಕಾಗದಿದ್ದರೂ ಜಗದಾದಿಯಿಂದ ಅದರ ಉತ್ಪತ್ತಿಯಾಗಿರುವದೆಂದು ಮಾತ್ರ ತಿಳಿಯಬಹುದು.

ಪ್ರಶ್ನೆ—ಅಸ್ಪೃಶ್ಯತೆಯ ನಿವಾರಣೆಯ ಅಂತಿಮ ಮೆಟ್ಟು ಯಾವದು.

ಉತ್ತರ—ಹಿಂದೂಸಮಾಜದಲ್ಲಿಯ ಸರ್ವ ಒಳಪಂಗಡದವರಂತೆ ಸಾರ್ವಜನಿಕ ಸ್ಥಳಗಳ ಬಗ್ಗೆ ಅಸ್ಪೃಶ್ಯರಿಗೂ ಎಂದು ಸಂಪೂರ್ಣ ಹಕ್ಕುಬಾಧ್ಯತೆಗಳು ದೊರೆಯುವವೋ ಅಂದು ಸಂಪೂರ್ಣ ಅಸ್ಪೃಶ್ಯತೆ ನಿವಾರಣೆಯಾಯಿತೆಂದು ತಿಳಿಯಬೇಕು.

ಪ್ರಶ್ನೆ—ಬನವಾಸಿಯ ಮಧುಕೇಶ್ವರ ದೇವಾಲಯದ ಬಗ್ಗೆ ಹಲವು ಕೆಲಸಗಳು ಸಿದ್ಧರಿರುವರೆಂಬಾಶಯದ ಪತ್ರವೊಂದು ನನಗೆ ಬಂದಿರುವದು. ಆ ಬಗ್ಗೆ ತಮ್ಮ ಅಭಿಪ್ರಾಯವೇನು?

ಉತ್ತರ—1933 ನೇ ಇಸವಿಯ ಜಾನೇವರಿಯ ನಂತರ ಈ ಬಗ್ಗೆ ವಿಚಾರಿಸತಕ್ಕದ್ದು.

ಪ್ರಶ್ನೆ—ವೀರಶೈವ ಧರ್ಮವು ಅಸ್ಪೃಶ್ಯತಾ ನಿವಾರಣೆಯನ್ನು ವಿರೋಧಿಸುವುದಿಲ್ಲವೆಂದು ತಮಗೆ ಗೊತ್ತಿರುವುದೋ?

ಉತ್ತರ—ಅಸ್ಪೃಶ್ಯತಾ ನಿವಾರಣೆಯನ್ನು ಯಾವ ಧರ್ಮವೂ ವಿರೋಧಿಸುವುದಿಲ್ಲವೆಂದು ನಾನು ನಿರ್ಧಾರವಾಗಿ ಹೇಳುತ್ತೇನೆ. ಒಂದು ವೇಳೆ ಯಾವುದಾದರೊಂದು ಧರ್ಮವು ವಿರೋಧಿಸುತ್ತಿದ್ದರೆ ಅದಕ್ಕೆ ಧರ್ಮವೆಂದು ಹೇಳಲಾಗದು.

ಮೇಲಿನ ಪ್ರಶ್ನೋತ್ತರಗಳಾದ ನಂತರ ಶ್ರೀ ದೊಡ್ಡ ಮೇಟಿಯವರು ತಮ್ಮ ಔತಣವನ್ನು ಸ್ವೀಕರಿಸಬೇಕೆಂದು ವಿನಂತಿಮಾಡಿಕೊಳ್ಳಲು, ಮಹಾತ್ಮರು ಮುಗುಳುನಗೆಯಿಂದ ನಾನೀಗ ಅನಿಯಮಿತ ಕಾಲದವರೆಗೆ ಸರಕಾರದ ಕೈದಿಯಾಗಿರುವಾಗ ಯಾವುದನ್ನೂ ಹೇಳಲಾರೆನು. ನಾನು ನಿಮ್ಮಲ್ಲಿ ಬರಬೇಕೆಂದು ಜಗದೀಶನ ಸಂಕೇತವಿದ್ದರೆ ಅದನ್ನು ಯಾರೂ ತಪ್ಪಿಸಲಾರರೆಂದು ನಿರೂಪಿಸಿದರು. ತರುವಾಯ ಶ್ರೀ ದೊಡ್ಡಮೇಟಿಯವರು ಮಹಾತ್ಮರೊಡನೆ ಈ ಮೊದಲೇ ನಡಿಸಿದ್ದ ಆಧ್ಯಾತ್ಮಿಕ ವಿಷಯದ ಪತ್ರವ್ಯವಹಾರಗಳ ಸಂಬಂಧವಾಗಿ ಕೆಲಹೊತ್ತಿನವರೆಗೆ ಚರ್ಚೆ ನಡೆಯಿತು. ಅನಂತರ ಮಹಾತ್ಮಾ ಗಾಂಧಿಯವರು ಶ್ರೀ ದೊಡ್ಡಮೇಟಿಯವರ ಮನೆತನದ ವಿಷಯವಾಗಿ ಹಲಕೆಲವು ಪ್ರಶ್ನೆಗಳನ್ನು ಮಾಡಿ ಈ ಕೆಳಗಿನಂತೆ ಉಪದೇಶ ಮಾಡಿದರು:—ನೀವು ನಿಮ್ಮ ಉತ್ಪನ್ನದ ಅಲ್ಪಾಂಶವನ್ನು ಮಾತ್ರ ನಿಮ್ಮ ಸ್ವಂತಕ್ಕಾಗಿ ವಿನಿಯೋಗಿಸಿಕೊಂಡು ಉತ್ಪನ್ನದ ಬಹುಭಾಗವನ್ನು ರೈತರ ಹಿತಕ್ಕಾಗಿ ವೆಚ್ಚಮಾಡತಕ್ಕದ್ದು ಮತ್ತು ಪ್ರತಿವರ್ಷದ ಉತ್ಪನ್ನದ ಕೆಲವಂಶವನ್ನು ನಿಮಗೆ ವಿಶ್ವಾಸವಿರುವ ಟ್ರಸ್ಟಿಗಳಿಗೊಪ್ಪಿಸಿ ನಿಮಗಾಗಲಿ ಅವರಿಗಾಗಲಿ ಯೋಗ್ಯವೆಂದು ತೋರಿದ ಸಾರ್ವಜನಿಕ ಸತ್ಕಾರ್ಯಗಳಿಗೆ ಖರ್ಚು ಮಾಡುತ್ತ ಹೋಗಬೇಕು ಎಂದು ಮುಂತಾಗಿ ಉಪದೇಶಿಸಿದರು. ಅನಂತರ ದೊಡ್ಡ ಮೇಟಿಯವರು ತಮ್ಮ ಆಶೀರ್ವಾದವು ಪೂರ್ಣ ಇರಬೇಕು. ಅಂದದ್ದಕ್ಕೆ, ಮಹಾತ್ಮರು ನೀವು ಸತ್ಕಾರ್ಯಗಳನ್ನು ಮಾಡುತ್ತಾ ಹೋಗಬೇಕು. ಆ ಬಗ್ಗೆ ನನ್ನ ಆಶೀರ್ವಾದವು ನಿಮ್ಮ ಮೇಲೆ ಪೂರ್ಣ ಇರುವದೆಂದು ತಿಳಿಯಿರಿ. ಈ ಪ್ರಕಾರ ಮುಕ್ಕಾಲು ತಾಸಿನವರೆಗೆ ಆ ದಿವ್ಯವಿಭೂತಿಯ ದರ್ಶನ ಸಂಭಾಷಣೆಯನ್ನು ಹೊಂದಿ ಮರಳಿ ಬಂದರು.

ಗು. ಕ. ಪಲ್ಲೇದ ದೇಶಸೇವಾ ಸಂಘ ಸೆಕ್ರೆಟರಿ.

ಗುರುವಾಯೂರೂ—ಅದರ ಪ್ರಾಚೀನ ಚರಿತ್ರೆಯೂ

ಕೇರಳಕ್ಕೆ ಗುರುವಾಯೂರು ಪ್ರಸಿದ್ಧವಾಗಿದ್ದರೂ ಇಂಡಿಯಾದ ಇತರ ಪ್ರಾಂತ್ಯಗಳಿಗೆ ಅದರ ಹೆಸರೇ ಗೊತ್ತಿರಲಿಲ್ಲ. ಈಗ ಮಹಾತ್ಮಾಜಿಯವರ ಪ್ರಾಯೋಪವೇಶದ ಸಲುವಾಗಿ ಇಂಡಿಯಾದಲ್ಲಿ ಮಾತ್ರವಲ್ಲದೆ—ಪ್ರಪಂಚದಲ್ಲೆಲ್ಲಾ ಗುರುವಾಯೂರು ಪ್ರಸಿದ್ಧಿಗೆ ಬಂದಿದೆ. ಆದ ಪ್ರಯುಕ್ತ ನಮ್ಮ ವಾಚಕರ ಅವಗಾಹನೆಗಾಗಿ ಈ ದೇವಾಲಯದ ಪೂರ್ವ ಚರಿತ್ರೆಯನ್ನು ಈ ಕೆಳಗೆ ಕೊಡಲಾಗಿದೆ—

ಮಲಬಾರಿನಲ್ಲಿ ಗುರುವಾಯೂರು ಪ್ರಾಚೀನವೂ, ಪ್ರಖ್ಯಾತವೂ ಆದ ಯಾತ್ರಾಸ್ಥಳ. ಹಗಲಿರಳು ತಂಡೋಪತಂಡವಾಗಿ ಭಕ್ತರು ಅಲ್ಲಿ ಸೇರುತ್ತಾರೆ. ಪವಿತ್ರಾರ್ಹವಾದ ಎಷ್ಟೋ ಗಾದೆಗಳು ಈ ದೇವಸ್ಥಾನಕ್ಕೆ ಹಿಂದಿನಿಂದಲೂ ಅಂಟಿವೆ.

ಇಲ್ಲಿಯ ಮೂರ್ತಿಯು ಚರಿತ್ರಾರ್ಹವೂ, ಪುರಾತನವೂ ಆಗಿದೆ. ಈ ವಿಗ್ರಹವು ಕೃಷ್ಣನ ತಂದೆಯಾದ ವಸುದೇವನ ಮನೆಯ ಆರಾಧ್ಯ ದೇವತೆಯಾಗಿತ್ತೆಂದು ಪ್ರತೀತಿ. ವಸುದೇವನು ಕೃಷ್ಣನ ಜನನ ಸಂದರ್ಭದಲ್ಲಿ ಕಂಡ ವಿರಾಟ ಮೂರ್ತಿಯ ಪ್ರತಿಬಿಂಬವೇ ಈ ವಿಗ್ರಹ. ದ್ವಾಪರ ಯುಗಾನಂತರದಲ್ಲಿ ಆದ ಜಗತ್ಪ್ರಳಯದಿಂದ ಪೂಜ್ಯ ದೇವತೆಗಳಾದ ಗುರು (ಬೃಹಸ್ಪತಿ) ಮತ್ತು ವಾಯು ಈ ವಿಗ್ರಹವನ್ನು ಕಾಪಾಡಿದರಂತೆ. ಕಲಿಯುಗಾರಂಭದಲ್ಲಿ ಮೂರ್ತಿಯ ಪುನರ್ಪ್ರತಿಷ್ಠೆಗೋಸ್ಕರ ಎಷ್ಟೋ ಸ್ಥಳಗಳನ್ನು ಪರೀಕ್ಷಿಸಿ ಕೊನೆಗೆ ಈಗಿರುವ ಸ್ಥಳಕ್ಕೆ ಬಂದರಂತೆ. ಇಲ್ಲಿನ ಶಿವಾಲಯದ ಮಹೇಶ್ವರನು ಈ ದೇವತೆಗಳಿಗೆ ಪ್ರತ್ಯಕ್ಷವಾಗಿ ಅವರು ತಂದಿದ್ದ ಮೂರ್ತಿಯನ್ನು ತನ್ನ ಶಿವಾಲಯದಲ್ಲಿ ಪ್ರತಿಷ್ಠೆ ಮಾಡಬೇಕಾಗಿ ಪ್ರಾರ್ಥಿಸಿ ಹಾಗೆ ಮಾಡುವುದಾದರೆ; ತಾನು ಆ ಸ್ಥಳವನ್ನು ಬಿಟ್ಟು ಸಮೀಪದಲ್ಲಿರುವ ಅಂಬಾಪುರಕ್ಕೆ ಹೋಗುವುದಾಗಿಯೂ ಹೇಳಿದನಂತೆ, ಆ ರಮಣೀಯವಾದ ಸ್ಥಳಕ್ಕೆ ಮನಸೋತು ಈಶ್ವರ ಪ್ರಾರ್ಥನೆಯಂತೆ ತಾವು ತಂದಿದ್ದ ಮೂರ್ತಿಯನ್ನು ಆ ಶಿವಾಲಯದಲ್ಲಿ ಪ್ರತಿಷ್ಠೆ ಮಾಡಿದರಂತೆ. ಗುರು ಮತ್ತು ವಾಯು ಈ ಕೆಲಸದ ಮೂಲ ಪುರುಷರಾಗಿದ್ದುದರಿಂದ ಈ ಸ್ಥಳಕ್ಕೆ ಗುರುವಾಯೂರು ಎನ್ನುವ ಹೆಸರು ಬಂತು. ಈಗಲೂ ಗುರುವಾಯೂರಿಗೆ ಬರುವ ಲಕ್ಷಾಂತರ ಭಕ್ತರು ಅಂಬಾಪುರದಲ್ಲಿರುವ ಶಿವನನ್ನು ಸಹಿತ ಪೂಜಿಸುತ್ತಾರೆ.

ಅಲ್ಲಿಂದ ಶಂಕರನ ಕಾಲದ ವರೆಗೆ ಸದ್ದಿಲ್ಲದಿದೆ ಮತ್ತು ಶಂಕರನ ಕಾಲಕ್ಕೆ ಗುರುವಾಯೂರು ದೊಡ್ಡ ಯಾತ್ರಾಸ್ಥಳವಾಯಿತು. ಅದ್ವೈತ ಶಿಖಾಮಣಿಯಾಗಿದ್ದ ಶಂಕರನು ಗುರುವಾಯೂರಿನ ಭಕ್ತನಾದ ಒಂದು ವಿಚಿತ್ರ ಗಾದೆಯಿದೆ. ಈ ಸಲ ಒಂದು ಸ್ಥಳದ ಸಮೀಪಕ್ಕೆ ಬಂದಿದ್ದ ಶಂಕರನು ಪಾಮರರಂತೆ ದೇವರ ದರ್ಶನಕ್ಕೆ ಹೋಗಲು ಒಪ್ಪಲಿಲ್ಲವಂತೆ, ಅಲ್ಲಿಂದ ಹೊರಡಲು ಉದ್ಯುಕ್ತನಾದಾಗ ಶಂಕರನು ವಾತ ರೋಗಕ್ಕೆ ಗುರಿಯಾಗಿ ಕೈಕಾಲು ಸಹಿತ ಅಲುಗಾಡಿಸುವುದಕ್ಕೆ ಸ್ವಾಧೀನವಿಲ್ಲದಾಯಿತಂತೆ. ಆಗ ತನ್ನ ಅಪರಾಧದಿಂದ ಹೀಗಾಯಿತೆಂದು ತಿಳಿದು ಶಂಕರನು ದೇವಾಲಯಕ್ಕೆ ಹೋಗಿ ದೇವರಿಗೆ ಅಡ್ಡಬಿದ್ದನಂತೆ, ಆಗ ಶಂಕರನಿಗೆ ಭಗವಂತನ ನಿಜರೂಪ ದರ್ಶನವಾಯಿತಂತೆ. ಇದರ ಫಲವಾಗಿ ಶಂಕರನು ದೇವಾಲಯದಲ್ಲಿ ಒಂದು ಮಂಡಲಕಾಲವಿದ್ದು ಆರಾಧನಾದಿ ವಿಧಿಗಳನ್ನು ಪುನರ್ವ್ಯವಸ್ಥೆ ಮಾಡಿ ಉತ್ಸವಾದಿಗಳ ವಿಧಿಯನ್ನು ವಿಧಿಸಿದನಂತೆ.

ಇಷ್ಟು ಪ್ರಖ್ಯಾತವಾಗಿದ್ದ ದೇವಾಲಯವಾಗಿದ್ದರೂ ಕೆಲವು ಕಾಲಗಳಲ್ಲಿ ಬಿಲವಾಗಿತ್ತು. 500 ಸಂವತ್ಸರಗಳ ಹಿಂದೆ ಶಿಥಿಲವಾಗಿದ್ದ ಈ ದೇವಾಲಯವನ್ನು ಕಟ್ಟಿಸಿದರಂತೆ. ಈ ಸಂದರ್ಭದಲ್ಲಿ ಒಂದು ಸ್ವಾರಸ್ಯವಾದ ಕಥೆಯನ್ನು ಹೇಳುತ್ತಾರೆ. ಚಕ್ರವರ್ತಿಯು ಹಾವು ಕಡಿತದಿಂದ ಮೃತನಾಗುವನೆಂದು ತಿಳಿದವೇಳೆ ತನ್ನ ಕಾಲವನ್ನು ಪ್ರಾರ್ಥನಾಪೂರ್ವಕವಾಗಿ ವಿನಿಯೋಗ ಮಾಡಲು ಉದ್ಯುಕ್ತನಾಗಿ ಪುಣ್ಯ ಸ್ಥಳಗಳ ತೀರ್ಥಯಾತ್ರೆಯನ್ನು ಮಾಡಿಕೊಂಡು ಗುರುವಾಯೂರಿಗೆ ಬಂದು ತಲ್ಪಿದನಂತೆ. ಶಿಥಿಲವಾಗಿದ್ದ ಆ ದೇವಾಲಯವನ್ನು ಅಲ್ಲಿ ಪ್ರತಿಷ್ಠಿತವಾಗಿದ್ದ ಸುಂದರ ಮೂರ್ತಿಯನ್ನೂ ಕಂಡು ಮನಕರಗಿ, ಆ ದೇವಾಲಯದ ಪುನರುದ್ಧಾರಣಕ್ಕಾಗಿ ಶಕ್ತನಾಗಿ ಅಲ್ಲೇ ನಿಂತುಬಿಟ್ಟನಂತೆ ಅಷ್ಟು ಹೊತ್ತಿಗೆ ತನ್ನ ಅಪಮೃತ್ಯು ಕಾಲವು ಕಳೆದು ಹೋದುದರಿಂದ ಜ್ಯೋತಿಷ್ಕರನ್ನು ಕರೆದು ತನ್ನ ಈ ಸಜೀವಕ್ಕೆ ಕಾರಣವೇನೆಂದು ಪ್ರಶ್ನಿಸಿದನಂತೆ. ಜ್ಯೋತಿಷ್ಕರು ಗಣಿತವನ್ನು ಹಾಕಿ "ಪ್ರಭೂ ನಾವು ಹೇಳಿದ ಜ್ಯೋತಿಷ್ಯವು ಸುಳ್ಳಾಗಲಿಲ್ಲ. ನೀವು ಆ ದೇವಾಲಯದ ಪುನರುದ್ಧಾರಣ ಮಗ್ನರಾಗಿ ಕಾಲಿಡಾಗ ಸರ್ಪವೇನೋ ಕಡಿಯಿತು. ಆ ಕಡಿತದ ಗುರುತನ್ನು ತಮ್ಮ ಕೈಮೇಲೆ ನೋಡಬಹುದು. ಆದರೆ ದೈವ ಕಾರ್ಯಾಸಕ್ತರಾಗಿದ್ದ ತಮ್ಮನ್ನು ಸರ್ಪದ ವಿಷಜ್ವಾಲೆಯು ಸೋಂಕಲಿಲ್ಲ. ಇದಕ್ಕೆ ಆ ಗುರುವಾಯೂರಿನ ದೇವರ ಮಹತ್ವವೇ ಕಾರಣ" ಎಂದು ಬಿನ್ನವಿಸಿದರಂತೆ.

ಆಶ್ಚರ್ಯಮಗ್ನನಾದ ಆ ಪಾಂಡ್ಯ ಭೂಪನು ತಕ್ಷಣವೇ ಕಟ್ಟಡದ ಕೆಲಸವನ್ನು ಪ್ರಾರಂಭಿಸಿ ಪೂರೈಸಿ ಬೇಕಾದಷ್ಟು ಮಾನ್ಯಗಳನ್ನು ಸಹಿತ ಕೊಟ್ಟನಂತೆ.

ಈ ದೇವಸ್ಥಾನದ ಪ್ರತೀತಿಯು ಟಿಪ್ಪು ಸುಲ್ತಾನನನ್ನು ಮಲಬಾರಕ್ಕೆ ಒಯ್ಯಿತು. ಆಗ ತುರಷ್ಕರ ಕೈಗೆ ವಿಗ್ರಹವು ಸಿಕ್ಕಬಹುದೆಂಬ ಭಯದಿಂದ ವಿಗ್ರಹವನ್ನು ತಿರುವಾಂಕೂರು ದೇವಸ್ಥಾನದಲ್ಲಿರುವ ಮತ್ತೊಂದು ಪ್ರಸಿದ್ಧ ಕೃಷ್ಣದೇವಾಲಯಕ್ಕೆ ಸಾಗಿಸಿದರಂತೆ. ಆಗ ಟಿಪ್ಪುವಿನ ಸೈನ್ಯವು ದೇವಸ್ಥಾನದಲ್ಲಿದ್ದ ತುಪ್ಪವನ್ನೆಲ್ಲವನ್ನೂ ಒಟ್ಟುಗೂಡಿಸಿ ಅದಕ್ಕೆ ಬೆಂಕಿಯನ್ನು ಹಚ್ಚಿತಂತೆ. ಆದರೆ ದೈವಮಹತ್ವದಿಂದ ವಿಪರೀತ ಮಳೆ ಬಂದು ದೇವಸ್ಥಾನಕ್ಕೆ ಯಾವದೊಂದು ಅಪಾಯವೂ ಆಗಲಿಲ್ಲವಂತೆ. ಟಿಪ್ಪುವು ಸಹಿತ ವಾತರೋಗದಿಂದ ಪೀಡಿತನಾಗಿ ಸ್ಮೃತಿಹೀನನಾದನಂತೆ. ಇನ್ನೂ ವೈಪರೀತ್ಯಗಳು ಬರಲು ಅವೆಲ್ಲವೂ ಆ ದೇವಸ್ಥಾನದ ಪ್ರಭಾವದ ಫಲವೆಂದು ಅರಿತು ಟಿಪ್ಪು ಸುತ್ತಮುತ್ತಲಿದ್ದ ಗ್ರಾಮಗಳೆಲ್ಲವನ್ನು ಆ ದೇವಸ್ಥಾನಕ್ಕೆ ಕಾಣಿಕೆಯಾಗಿ ಕೊಟ್ಟು ತೆರಳಿದನಂತೆ, 2 ವರ್ಷಗಳನಂತರ ವಿಗ್ರಹವನ್ನು ಪುನಃ ಗುರುವಾಯೂರಿಗೆ ತಂದು ಪ್ರತಿಷ್ಠಿಸಿದನಂತೆ.

ಈ ದೇವಾಲಯವು ಅನಾದಿಯಾಗಿ 72 ಬ್ರಾಹ್ಮಣರ ಕುಟುಂಬಗಳ ಅಧೀನದಲ್ಲಿತ್ತು. ಕಾಲ ಕ್ರಮೇಣ ಒಂದರಹಿಂದೊಂದಾಗಿ ಈ ಕುಟುಂಬಗಳು ನಾಮಾವಶೇಷವಾಗಿ ಹೋಗಿ ಕ್ಯಾಲಿಕಟ್ಟಿನ ಅರಸರ ಅಧೀನಕ್ಕೆ ಬಂದಿತು.

ಪ್ರ. ಮ.

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖಕಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು—ಸಂಪಾದಕ.

ಪತ್ರವ್ಯವಹಾರಕರಿಗೆ ವಿಶೇಷ ಸೂಚನೆ.

ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದ ವಿಷಯಗಳು ನಿಷ್ಪಕ್ಷಪಾತವಾಗಿಯೂ, ಸಾರ್ವಜನಿಕವಾಗಿಯೂ, ಸಂಕ್ಷಿಪ್ತವಾಗಿಯೂ ಸ್ಫುಟಾಕ್ಷರಗಳಿಂದ ಬರೆಯಲ್ಪಟ್ಟವಾಗಿಯೂ, ಇರಬೇಕೆಂದೂ ಬುಧವಾರ ಗುರುವಾರದೊಳಗೆ ನಮ್ಮ ಕೈಸೇರುವಂತೆ ಕಳುಹಲ್ಪಡಬೇಕೆಂದು, ಈ ನಿಬಂಧನೆಗೆ ವಿರುದ್ಧವಾದ ಲೇಖಗಳು ಖಂಡಿತವಾಗಿ ಪ್ರಕಟಿಸಲ್ಪಡುವುದಿಲ್ಲವೆಂದೂ ಅನೇಕವೇಳೆ ಎಚ್ಚರಿಸಿದಾಗ್ಯೂ ಲೇಖಕರು ಲಕ್ಷಿಸದೆ ಅಂಗಿಗಳಿಗೆ ಬೇಕಾದವರನ್ನು ಭೂಷಿಸಿ ಬೇಡವಾದವರನ್ನು ದೂಷಿಸಿ ಪುಟಗಟ್ಟಲೆ ಅಸ್ಫುಟವಾಗಿ ಬರೆದು ನಮಗೆ ತ್ರಾಸನ್ನು ಕೊಡುತ್ತಿರುವರೆಂದು ಬರೆಯಲು ಖೇದವಾಗುತ್ತದೆ. ಆದುಕಾರಣ ಇತಃಪರ ನಮ್ಮ ನಿಬಂಧನೆಯನ್ನು ಉಲ್ಲಂಘಿಸಿ ಬರೆಯಲ್ಪಡುವ ಯಾವ ಪತ್ರವ್ಯವಹಾರವೂ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದಿಲ್ಲವೆಂಬ ಅಂಶವನ್ನು ಸಮಸ್ತರೂ ಗಮನಿಸತಕ್ಕದು—ಸಂ.

ತಿಪಟೂರು ಗೌ|| ಮಿಡಲ್ ಸ್ಕೂಲಿನ ದುರವಸ್ಥೆ.

ನಮ್ಮ ಊರಿನ ಗೌರ್ನಮೆಂಟು ಮಿಡಲ್ ಸ್ಕೂಲು ಅನೇಕ ವರ್ಷಗಳಿಂದ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಬಹಳ ಪ್ರಸಿದ್ಧಿ ಹೊಂದಿತ್ತು. ಇದಕ್ಕೆಲ್ಲಾ ಕಾರಣವೇನೆಂದರೆ, ಅದನ್ನು ಆಳುವವರು ಅಷ್ಟು ಸಮರ್ಥರಾಗಿದ್ದರು. ಈಚೆಗೆ 3 ತಿಂಗಳಿಂದ ಆ ಸ್ಕೂಲಿಗೆ ಹೆಡ್ಮಾಸ್ಟರು ಇಲ್ಲದೆ ಇನ್‌ಛಾರ್ಜ ಹೆಡ್ಮಾಸ್ಟರು ಇರುವುದರಿಂದ ಆ ಸ್ಕೂಲಿನ ಸ್ಥಿತಿಯು ಬಹಳ ವಿಷಾದಕರವಾಗಿದೆ. ಮಾಸ್ಟರುಗಳಲ್ಲಿ ಪರಸ್ಪರ ಕಲಹವಂತೆ. ಇನ್‌ಸ್ಪೆಕ್ಟರವರ ವಿಚಾರಣೆಯು ಆಯಿತಂತೆ. ಅಂತು ಇಂತು ಅತ್ತೆಸೊಸೆಯರ ವ್ಯಾಜ್ಯದಲ್ಲಿ ಕೂಸು ಬಡವಾಯಿತು ಎಂಬಂತೆ ಬಡಪಾಯಿಗಳಾದ ಬಾಲಕರಿಗೆ ಉಂಟಾಗಿರುವ ದುರವಸ್ಥೆಯನ್ನು ನೋಡಿ ವಿದ್ಯಾಭ್ಯಾಸ ಇಲಾಖಾ ಡೈರೆಕ್ಟರವರು ತೂಹಲೆ ಹಿಂದಿನಂತೆ ಶಕ್ತರಾದ ಖಾಯಂ ಹೆಡ್ಮಾಸ್ಟರನ್ನು ನೇಮಕಮಾಡಬೇಕಾಗಿ ಪ್ರಾರ್ಥನೆ. ಇನ್ನೂ ತಡಮಾಡಿದರೆ ಈ ಸ್ಕೂಲಿನ ಬಾಲಕರ ವಿದ್ಯಾಭ್ಯಾಸವೇ ಹಾಳಾಗಿ ಹೋಗುತ್ತದೆ.

ಹಿತಚಿಂತಕ.

ಕುಂಚಿಟಿಗರ ಸಮಾಜಾಭಿವೃದ್ಧಿ

ಮ|| ದೇವಿರಂಗಪ್ಪನವರು ತಮ್ಮ ತಮ್ಮನ ವಿವಾಹವನ್ನು ಸಾಹುಕಾರ್ ಬಿ. ಕೃಷ್ಣಪ್ಪನವರು ಮತ್ತು ತಿಮ್ಮಶೆಟ್ಟಪ್ಪನವರ ಪ್ರೋತ್ಸಾಹದಿಂದ ಸುಮಾರು 235 ರೂಪಾಯಿಗಳ ಖರ್ಚಿನಲ್ಲಿ ಹಿಂದೆ ಸಮಾಜದ ಅನೇಕ ಮಹನೀಯರುಗಳು ತೀರ್ಮಾನಿಸಿದ್ದಂತೆ ಮೂರು ದಿವಸಗಳಲ್ಲೇ ನೆರವೇರಿಸಿರುತ್ತಾರೆ. ಈ ಕಾರ್ಯದಲ್ಲಿ ಅನೇಕ ಸಮಾಜ ಬಾಂಧವರು ಪ್ರೋತ್ಸಾಹಕರಾಗಿ ನಿಂತು ಕಾರ್ಯವನ್ನು ಸಾಂಗಗೊಳಿಸಿದರು. ಇದು ತುಂಬಾ ಸಂತೋಷಪ್ರದವಾದುದು. ನಮ್ಮ ಸಮಾಜದ ಶ್ರೀಮಂತ ಬಾಂಧವರಲ್ಲಿ ನನ್ನದೊಂದು ವಿಜ್ಞಾಪನೆ ಏನೆಂದರೆ—ತಮ್ಮಗಳ ಮನೆಗಳಲ್ಲಿ ನಡೆಯಬಹುದಾದ ಶುಭಶೋಭನಾದಿ ಕಾರ್ಯಗಳಲ್ಲಿ ನಿಷ್ಪ್ರಯೋಜನವಾದ ದುಂದುಗಾರಿಕೆ ಅಂದರೆ ಶೃಂಗಾರ ಮಂಟಪಗಳು, ವೇಶ್ಯಾಂಗನೆಯರ ಹಾಡುಗಳು, ಅನಾರೋಗ್ಯಕರವಾದ ಮದ್ದು ವಗೈರೆಗಳನ್ನು ಸುಡುವುದು ಇವೇ ಮುಂತಾದುವುಗಳನ್ನು ಸಾಧ್ಯವಾದಮಟ್ಟಿಗೆ ಬಡವರಿಗೆ ಅನುಕೂಲವಾಗುವಂತೆ ಹೋತಾಮಾಡಿ ಕುಲಸ್ವಾಮಿಗಳ ತೀರ್ಮಾನದಂತೆ 3 ದಿವಸಗಳ ಲಗ್ನವನ್ನು ಜಾರಿಗೆ ತಂದು ಸಮಾಜದ ಅಭಿವೃದ್ಧಿಗೆ ಮಾರ್ಗದರ್ಶಕರಾಗಬೇಕೆಂದು ಬೇಡುತ್ತೇನೆ. ಯಾವ ಕಾರ್ಯಗಳಲ್ಲೇ ಆಗಲಿ ಶ್ರೀಮಂತರು ಮುಂದುವರಿದು ಮಾರ್ಗವನ್ನು ಕಲ್ಪಿಸದಿದ್ದಲ್ಲಿ ನಮ್ಮ ಜನಾಂಗದ ಏಳಿಗೆಗೇ ಹಾನಿ ಬರುತ್ತದೆಂದು ದೃಢವಾಗಿ ಹೇಳುತ್ತೇನೆ. ಬಾಂಧವರೇ, ಸ್ವಾರ್ಥ, ಪೂರ್ವಾಚಾರಾಭಿಮಾನ ಇವುಗಳಿಂದೇನೂ ಪ್ರಯೋಜನವಿಲ್ಲ. ಮಾನವ ಜನ್ಮಕ್ಕೆ ಪರೋಪಕಾರವೇ ಶ್ರೇಷ್ಠವಾದದ್ದು. ನಮ್ಮ ಸಮಾಜದ ಶ್ರೀಮಂತರಾದ ಬಾಂಧವರು ಇನ್ನುಮುಂದೆ ಯಾವ ಕಾರ್ಯವನ್ನೇ ಆಗಲಿ ಮುಂದುವರಿಸಬೇಕಾದರೆ ಸಮಾಜೋನ್ನತಿ ಕಡೆಗೂ, ಪರೋಪಕಾರದ ಕಡೆಗೂ ದೃಷ್ಟಿ ಇಟ್ಟು ನಿಷ್ಪ್ರಯೋಜನವಾದ ದುಂದುಗಾರಿಕೆಗಳನ್ನೆಲ್ಲಾ [illegible] ಮುಂದುವರಿಸಬೇಕೆಂದು ಅನಂತಾನಂತವಾಗಿ ಬೇಡುತ್ತೇನೆ.

[illegible]

ಪಂಚಾಯತಿ ಕಟ್ಟಡದ ಶಂಕುಸ್ಥಾಪನೆ

ಹುಣಸೂರು ತಾಲ್ಲೂಕು ಹಳೇಬೀಡಿನ ಶ್ರೀ ಮಹಾದೇಶ್ವರ ಸ್ವಾಮಿಯ ದೇವಸ್ಥಾನದ ಪಕ್ಕದಲ್ಲಿ ಮೇಲ್ಕಂಡ ಕಟ್ಟಡದ ಶಂಕುಸ್ಥಾಪನೆಗಾಗಿ ಸಬ್ ಡಿವಿಜನ್ ಸಾಹೇಬರಾದ ಮ|| ಕೆ ಬಸವರಾಜ ಅರಸಿನವರೂ, ಹುಣಸೂರು ತಾ|| ಅಮಲ್ದಾರ್ ಮ|| ಎಚ್. ಎ. ಪಾಳೇಗಾರ್‍ರವರೂ ಗ್ರಾಮ ಪಂಚಾಯತಿಯವರ ಪ್ರಾರ್ಥನೆಯನ್ನು ಅಂಗೀಕರಿಸಿ ಇದೇ ತಾ|| 8 ನೇ ಗುರುವಾರ 11 ಗಂಟೆಗೆ ಮೋಟಾರಿನಲ್ಲಿ ದಯಮಾಡಿಸಿದರು. ಪಂಚಾಯತಿ ಛೇರ್ಮನ್ ಮ|| ಪಟೇಲ್ ಅಪ್ಪಾಜಯ್ಯನವರು ಮೇಲ್ಕಂಡ ಅಧಿಕಾರಿಗಳ ಸುಸ್ವಾಗತವನ್ನು ಬಯಸಿ ಈ ಕಟ್ಟಡದ ಶಂಕುಸ್ಥಾಪನೆಯನ್ನು ತಮ್ಮ ಅಮೃತ ಹಸ್ತದಿಂದ ನೆರವೇರಿಸಬೇಕೆಂದೂ, ಈ ಕಟ್ಟಡವು ಪೂರ್ತಿಯಾದ ಮೇಲೆ ಇದರ ಪ್ರಾರಂಭೋತ್ಸವವನ್ನು ತಾವೇ ನೆರವೇರಿಸಬೇಕೆಂದೂ ಮ|| ಕೆ. ಬಸವರಾಜ ಅರಸಿನವರನ್ನು ಕೇಳಿಕೊಂಡ ಪ್ರಕಾರ ಮ|| ಅರಸಿನವರು, ವಾದ್ಯಘೋಷಗಳು ಮೊಳಗುತ್ತಿರುವಾಗ ತಮ್ಮ ಅಮೃತ ಹಸ್ತದಿಂದ ಮೇಲ್ಕಂಡ ಕಟ್ಟಡದ ಅಸ್ತಿವಾರವನ್ನು ಹಾಕಿ ಈ ಕಟ್ಟಡದಿಂದ ಉಂಟಾಗುವ ಪ್ರಯೋಜನವನ್ನು ಕುರಿತು ಬಹಳ ಸ್ವಾರಸ್ಯವಾಗಿ ಉಪನ್ಯಾಸವನ್ನು ಮಾಡಿದನಂತರ ನೆರೆದಿದ್ದ ಸಭಿಕರಿಗೆ ಫಲಾಹಾರವು ಆದ ಮೇಲೆ ಗಂಧ, ಪುಷ್ಪ, ತಾಂಬೂಲಗಳು ಹಂಚಲ್ಪಟ್ಟು ಶ್ರೀಮನ್ ಮಹಾರಾಜರವರ ಶ್ರೇಯಃ ಪ್ರಾರ್ಥನೆಯಿಂದ ಸಭೆಯು ಭರಖಾಸ್ತಾಯಿತು. ಇವರುಗಳಿಗೆ ಹುಜೂರು ಜಮಾಬಂದಿ ವಗೈರೆ ಅನೇಕ ಸರ್ಕಾರಿ ಕೆಲಸ ಕಾರ್ಯಗಳಿದ್ದರೂ ಅವುಗಳೊಂದನ್ನೂ ಲಕ್ಷೀಕರಿಸದೆ, ವಿರಾಮ ಮಾಡಿಕೊಂಡು ದೇಹಪರಿಶ್ರಮವನ್ನು ವಹಿಸಿ ದಯಮಾಡಿಸಿದ್ದನ್ನು ನೋಡಿದರೆ ಈ ಅಧಿಕಾರಿಗಳಿಗೆ ಪ್ರಜೆಗಳ ಮೇಲೆ ಪ್ರೀತಿಯು ಎಷ್ಟರಮಟ್ಟಿಗೆ ಇದೆ ಎಂಬುದು ವ್ಯಕ್ತಪಡುತ್ತದೆ. ಈ ಶಂಕುಸ್ಥಾಪನೆಯಲ್ಲಿ ಬಹಳ ಶ್ರದ್ಧೆಯನ್ನು ನಮ್ಮ ಬಿಳಿಕೆರೆ ಹೋಬಳಿ ರೆ|| ಇನ್‌ಸ್ಪೆಕ್ಟರು ಮ|| ಬಿ. ಸಿದ್ದಬಸಪ್ಪನವರೂ ವಹಿಸಿದ್ದರು. ಪಂಚಾಯಿತಿ ಚೇರ್ಮನ್ ಮ|| ಅಪ್ಪಾಜಯ್ಯನವರೂ, ರೆ|| ಇನ್‌ಸ್ಪೆಕ್ಟರೂ ಕೂಡ್ಲೆ ಈ ಕಟ್ಟಡವನ್ನು ರಥೋತ್ಸವವು ಆಗುವಷ್ಟರಲ್ಲಿ ಪೂರ್ಣಗೊಳಿಸುತ್ತಾರೆಂದು ನಂಬಿದೆ. ಪ್ರಜಾನುರಾಗಿಗಳೂ, ದಯಾಳುಗಳೂ ಆಗಿರುವ ಮ|| ಕೆ. ಬಸವರಾಜ ಅರಸಿನವರಿಗೂ, ಮ|| ಎಚ್. ಎ. ಪಾಳೇಗಾರ್‍ರವರಿಗೂ ಶ್ರೀ ಮಹಾದೇಶ್ವರ ಸ್ವಾಮಿಯು ಆಯುರಾರೋಗ್ಯವನ್ನೂ, ಉದ್ಯೋಗಾಭಿವೃದ್ಧಿಯನ್ನೂ ಕೊಟ್ಟು ಚಿರಕಾಲ ಕಾಪಾಡಲೆಂದು ಪ್ರಾರ್ಥಿಸುವ

ಓರ್ವ ಪ್ರೇಕ್ಷಕ

ವೀರಶೈವ ಪಂಡಿತರು ಗಮನಿಸಬೇಕು.

ಪ್ರತಿಯೊಂದು ವೈದೀಕ ಮತದಲ್ಲಿದ್ದಂತೆ ನಮ್ಮ ವೀರಶೈವ ಮತದಲ್ಲಿಯೂ ವಿವಾಹ, ದೀಕ್ಷಾ ಮುಂತಾದ ಸಂಸ್ಕಾರಗಳಿಗೆ ವಿಧಿಗಳಿರುವುದು ಸರಿಯಷ್ಟೆ. ಆದರೆ ಅವುಗಳೆಲ್ಲಾ ಸಂಸ್ಕೃತ ಮಯವಾಗಿದ್ದು ಪಾಮರ ಜನರಿಗೆ ಅವುಗಳಲ್ಲಿರುವ ಮಂತ್ರಗಳ ಅರ್ಥವೇನು? ಅವುಗಳನ್ನು ಏತಕ್ಕಾಗಿ ಉಚ್ಚರಿಸಬೇಕೆಂಬ ವಿಚಾರವೇ ತಿಳಿಯದೆ ಪೌರೋಹಿತ್ಯಕ್ಕಾಗಿ ಬರುವವರು ಹೇಳಿಕೊಟ್ಟಂತೆ ಹೇಳಿಬಿಡುತ್ತಾರೆ. ಪೌರೋಹಿತ್ಯಕ್ಕಾಗಿ ಬರುವವರಲ್ಲಿ ಶೇಕಡ 95 ಮಂದಿಗಳು ಪುಸ್ತಕದಲ್ಲಿದ್ದುದನ್ನು ಗಿಳಿಯ ಪಾಠದಂತೆ ಓದಿಬಿಡುವರೇ ಹೊರ್ತು ಅರ್ಥವನ್ನು ಕೇಳಿದರೆ ಬರಿಯ ವಿಧಿಯನ್ನೂ ಅದರಲ್ಲಿ ಈ ರೀತಿ ಮಾಡಬೇಕೆಂದಿರುವ ಕ್ರಮವನ್ನೂ ತೋರಿಸುವರೇ ವಿನಹಾ ಅರ್ಥವನ್ನು ಹೇಳಿ ಸಮಾಧಾನಪಡಿಸುವುದಿಲ್ಲ. ಇದರಿಂದ ಅನೇಕರಿಗೆ ಕೆಲವು ವಿಚಾರಗಳಲ್ಲಿ ಸಂಶಯವುತ್ಪನ್ನವಾಗುವುದು ಸಹಜವಾಗಿದೆ. ಈ ವಿಚಾರದಲ್ಲಿ ಮೊನ್ನೆ ಒಂದು ಲಗ್ನದಲ್ಲಿ ನಡೆದ ಸಮಾಚಾರವೇನೆಂದರೆ—ನಮ್ಮ ಶಾಸ್ತ್ರಿಗಳು ಸಪ್ತ ಪದಿಯನ್ನು ಮಾಡಿಸುವಾಗ ವರನು ತನ್ನ ಬಲದ ಕೈಯಿಂದ ವಧುವಿನ ಬಲಪಾದದ ಅಂಗುಷ್ಠವನ್ನು ಹಿಡಿದುಕೊಂಡು ಏಳು ಸೆರೆಗಳ ಮೇಲೆ ಇಡಬೇಕೆಂದು ಹೇಳಿದರು. ಇದು ನ್ಯಾಯವೇ? ಸಪ್ತಪದೀಮಂತ್ರವಾದ - ಶ್ಲೋ|| ಇಷಏಕಪದೀ..........ಸಖೇಸಪ್ತಪದೀಭವ " ಎಂಬ ಮಂತ್ರಕ್ಕೆ ವೇ|| ಭಾಸ್ಕರಪಂತ್ ಸುಬ್ಬನರಸಿಹ್ಯ ಶಾಸ್ತ್ರಿಗಳವರು ತಮ್ಮ ವೈದೀಕ ವಿವಾಹ ಪದ್ಧತಿ ಎಂಬ ಪುಸ್ತಕದಲ್ಲಿ - ಹೇ ಸಖಿಯಾದ ವಧು! ನೀನು ನನ್ನೊಡನೆ ಏಳು ಹೆಜ್ಜೆಗಳನ್ನು ನಡೆದುದರಿಂದ.... ಇತ್ಯಾದಿ ಅರ್ಥ ಬರೆದಿರುವುದನ್ನು ತೋರಿಸಿ ಇದು ಸರಿಯಲ್ಲವೇ? ಎಂದು ಕೇಳಿದ್ದಕ್ಕೆ ಅವರು ವಿವಾಹ ವಿಧಿಯಲ್ಲಿರುವ ವ್ಯಾಖ್ಯಾನದಲ್ಲಿ "........ಸಪ್ತ ಧಾರೀಚಾಂಕೃತ ತಂಡುಲರಾಶೌವರಃ ಸ್ವದಕ್ಷಿಣಹಸ್ತೇನ ವಧೂ ದಕ್ಷಿಣ ಪಾದಂ ಗೃಹೀತ್ವಾ........" ಇಷ್ಟನ್ನು ತೋರಿಸಿ ಪೂರ್ವದಿಂದಲೂ ಈ ರೀತಿ ನಡೆಯುತ್ತಿದೆಯೆಂದು ಹೇಳಿದರು. ಇದರಿಂದ ನಿಜವಾದ ಅರ್ಥವು ಯಾವುದು ಎಂಬ ಸಂಶಯದಿಂದಲೂ ಒಂದುವೇಳೆ ವಿಧಿಯಲ್ಲಿನ ವ್ಯಾಖ್ಯಾನವು ಸರಿಯಲ್ಲದಿದ್ದರೆ ಪರಮತೀಯರ ಹಾಸ್ಯಕ್ಕೊಳಗಾಗಬೇಕಾಗುವುದರಿಂದ ಪಂಡಿತರ ಗಮನಕ್ಕೆ ತಂದರೆ ಸರಿಯಾದ ಉತ್ತರವು ಸಿಕ್ಕಿ ಅನೇಕರಿಗೆ ಉಪಕಾರವಾಗುವುದೆಂಬ ನಿರೀಕ್ಷಣೆಯಿಂದಲೂ ಈ ಲೇಖನವನ್ನು ಬರೆದಿರುತ್ತೇನೆ. ವೀರಶೈವ ಪಂಡಿತರು ದಯವಿಟ್ಟು ಗಮನಿಸಿ ವೃತ್ತ ಪತ್ರಿಕೆಯಲ್ಲಿ ಉತ್ತರ ಬರೆಯುವರೆಂದು ನಂಬಿರುವ

ಓರ್ವ ವೀರಶೈವ.

ಅರಕಲಗೂಡು ತಾ|| ರಾಮನಾಥಪುರದಲ್ಲಿ ನಡೆದ 3 ನೇ ಪ್ರಾಂತಿಕ ವೀರಶೈವ ಸಭೆ

ಕಳೆದ 3-12-1932 ನೇ ಶನಿವಾರ ಸಾಯಂಕಾಲ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಯ ರಥೋತ್ಸವ ಕಾಲದಲ್ಲಿ ಹಾಸನದ ಡಿಸ್ಟ್ರಿಕ್ಟ್ ಬೋರ್ಡು ವೈಸ್-ಪ್ರೆಸಿಡೆಂಟ್ ಮ|| ಕೇಣಿ ಮಹದೇವಪ್ಪನವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಸಭೆ ನೆರೆದಿದ್ದಿತು. ಸದರಿ ಸಭೆಗೆ ಮ|| ಗಳಾದ ಹಾಸನದ ಅಡ್ವೊಕೇಟ್ ವೈ. ಧರ್ಮಪ್ಪನವರು, ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟ್ ಕುಂಡಪ್ಪನವರು ಮತ್ತು ಅರಕಲಗೂಡು, ಯಡತೊರೆ, ಮೈಸೂರು ಈ ಪ್ರಾಂತಗಳಿಂದ ಅನೇಕ ವೀರಶೈವ ಮಹನೀಯರು ಬಂದು ಸಭೆಯನ್ನಲಂಕರಿಸಿದ್ದರು. ವಿದ್ಯಾಭ್ಯಾಸ, ಸಮಾಜೋನ್ನತಿ ಕಾರ್ಯಕ್ರಮಗಳು, ಆರೋಗ್ಯ ವಗೈರೆ ವಿಚಾರಗಳ ಮೇಲೆ ಮ|| ಧರ್ಮಪ್ಪನವರು, ಡಾಕ್ಟರ್ ಥಾತಾಚಾರ್ರವರು, ಕಾಶಿಸ್ವಾಮಿಗಳು, ಪಟೇಲ್ ವಿಷಕಂಠೇಗೌಡರು, ಗುಂಡಪ್ಪನವರು ಮೊದಲಾದವರು ಬಹಳ ಸ್ವಾರಸ್ಯವಾಗಿ ಭಾಷಣ ಮಾಡಿದರು. ಮುಖ್ಯವಾಗಿ ಸ್ತ್ರೀಯರು ವಿದ್ಯಾವತಿಯರಾದ ಹೊರತು ಯಾವ ಸಮಾಜವಾಗಲೀ ದೇಶವಾಗಲೀ ಅಭಿವೃದ್ಧಿಗೆ ಬರುವುದಿಲ್ಲವೆಂಬ ಸಂಗತಿಯನ್ನು ಧರ್ಮಪ್ಪನವರು ಎಲ್ಲರಿಗೂ ಮನಸಿವಾಗುವಂತೆ ಹೇಳಿದ ಮೇಲೆ ಈ ಕೆಳಗೆ ಕಂಡ ಠರಾವುಗಳು ಏಕಮತದಿಂದ ಪಾಸಾದುವು:—(1) ಪ್ರಕೃತ ಆರ್ಥಿಕ ದುಸ್ಥಿತಿಯಲ್ಲಿ ಜನರು ಮದುವೆ ಮುಂಜಿ ಮುಂತಾದ ಶುಭಕಾರ್ಯಗಳಲ್ಲಿ ವೃಥಾ ದುಂದು ವೆಚ್ಚ ಮಾಡುವುದರ ಮೂಲಕ ಸಾಲವೆಂಬ ಶೂಲಕ್ಕೆ ಸಿಕ್ಕಿ ಸಾಯುವ ಪರ್ಯಂತ ಕಷ್ಟನಷ್ಟಗಳಿಗೆ ಗುರಿಯಾಗುವುದನ್ನು ನಿಲ್ಲಿಸಿ ಮದುವೆ ಮುಂಜಿ ಕಾರ್ಯಗಳನ್ನು ಒಂದೆರಡು ದಿನಗಳಲ್ಲಿ ಮಿತವ್ಯಯದಿಂದ ಪೂರೈಸಬೇಕು. (2) ಮದುವೆ ಕಾಲಗಳಲ್ಲಿ ಹೆಣ್ಣಿನ ತಂದೆತಾಯಿಗಳು ಕನ್ಯಾಶುಲ್ಕ ಅಥವಾ ತೆರ ಮುಂತಾದ್ದನ್ನು ಪಡೆದು ಹೆಣ್ಣುಗಳನ್ನು ವಿಕ್ರಯಿಸುವ ಹೇಯವಾದ ಪದ್ಧತಿಯನ್ನು ನಿಲ್ಲಿಸಿ ಆದಷ್ಟುಮಟ್ಟಿಗೂ ಧರ್ಮಶಾಸ್ತ್ರಕ್ಕನುಸಾರವಾಗಿ ಕನ್ಯಾದಾನ ಮಾಡುವ ಪದ್ಧತಿಯನ್ನು ಅನುಷ್ಠಾನಕ್ಕೆ ತರಬೇಕು. (3) ಬೆಂಗಳೂರು ರಿಟೈರ್ಡ್ ಸೀನಿಯರ್ ಪೋಲೀಸು ಸೂಪರಿಂಟೆಂಡೆಂಟ್ ಮ|| ಜಿ. ಶಾಂತವೀರಪ್ಪನವರು ರಚಿಸಿರುವ ಕಾರ್ಯಕ್ರಮವನ್ನು ಅನುಸರಿಸಿ ವಿಶೇಷವಾಗಿ ವೀರಶೈವ ಮಹನೀಯರಿರುವ ಮಧ್ಯ ರಾಷ್ಟ್ರ ಪ್ರಾಂತಗಳಲ್ಲಿ ವರ್ಷಕ್ಕೊಮ್ಮೆ ಶಿವರಾತ್ರಿ ಕಾಲದಲ್ಲಿ ಮನೆಗೆ 1 ರೂ ನಂತೆ ಒಂದು ಫಂಡು ಏರ್ಪಡಿಸಿ ಹೀಗೆ ಒಟ್ಟುಗೂಡಿದ ಹಣವನ್ನೇ ಸಮಾಜಾಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಬೇಕು. (4) ನಮ್ಮ ವೀರಶೈವ ಸಮಾಜದಲ್ಲಿ ವಿದ್ಯಾವಂತರೂ, ಮುಂದಾಳುಗಳೂ ಆಗಿರುವ ಮ|| ಜಸ್ಟಿಸ್ ಪಿ. ಮಹದೇವಯ್ಯನವರಿಗೆ ಮೈಸೂರು ಹೈ ಕೋರ್ಟಿನ ಪ್ರಧಾನ ನ್ಯಾಯಾಧೀಶಸ್ಥಾನವು ಲಭಿಸಿರುವ ಕಾರಣ ಮ|| ಪಿ. ಮಹದೇವಯ್ಯನವರಿಗೆ ನಮ್ಮ ವೀರಶೈವ ಸಮಾಜದವರು ತಮ್ಮ ಹೃದಯಪೂರ್ವಕವಾದ ಅಭಿನಂದನವನ್ನು ಅರ್ಪಿಸುತ್ತಾರೆಂದೂ, ಘನಹೊಂದಿದ ನಮ್ಮ ಶ್ರೀಮನ್ಮಹಾರಾಜರವರು ಕೃಪೆಯಿಟ್ಟು ಮ|| ಜಸ್ಟಿಸ್ ಪಿ. ಮಹದೇವಯ್ಯನವರಿಗೆ ಪ್ರಧಾನ ನ್ಯಾಯಾಧೀಶ ಸ್ಥಾನವನ್ನು ದಯಪಾಲಿಸಿದ್ದಕ್ಕಾಗಿ ನಮ್ಮ ಶ್ರೀಮನ್ಮಹಾರಾಜರವರಿಗೆ ನಮ್ಮ ವೀರಶೈವ ಸಮಾಜದವರು ಮಹಾರಾಜರ ಪ್ರೈವೇಟ್ ಸೆಕ್ರೆಟರಿಗಳ ಮೂಲಕ ಭಕ್ತಿಪೂರ್ವಕವಾಗಿ ವಂದನೆಗಳನ್ನು ಅರ್ಪಿಸುತ್ತಾರೆಂದೂ ಸರ್ವಾನುಮತದಿಂದ ತೀರ್ಮಾನವಾಯ್ತು. ಅಂತ್ಯದಲ್ಲಿ ಅಧ್ಯಕ್ಷರ ಅರ್ಥಗರ್ಭಿತವಾದ ಭಾಷಣವಾದನಂತರ ಪುಷ್ಪ ತಾಂಬೂಲ ವಿನಿಯೋಗಿಸಲ್ಪಟ್ಟು ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯಿಂದ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು. ಇಂಥಾ ಪ್ರಾಂತಿಕ ಸಭೆಗಳು ಸಮಾಜೋನ್ನತಿಗೆ ಪ್ರಥಮ ಸೋಪಾನಗಳಾಗಿರುವದರಿಂದ ಇತರ ಪ್ರಾಂತಗಳ ಮತಬಾಂಧವರು ತಮ್ಮ ತಮ್ಮ ಪ್ರಾಂತಗಳಲ್ಲಿ ಸಭೆಗಳನ್ನು ಕೂಡಿಸಿ ತಾವು ಸಹ ಸಮಾಜಾಭಿವೃದ್ಧಿಯಲ್ಲಿ ಭಾಗಿಗಳಾಗುತ್ತಾರೆಂದು ನಂಬಿದೆ. ಮೇಲೆ ನಡೆದ ಪ್ರಾಂತಿಕ ಸಭೆಗೆ ಬಂದಿದ್ದ ಮಹಾಜನಗಳ ಊಟಉಪಚಾರಗಳಿಗೇರ್ಪಡಿಸಿದ್ದ ಬಸವಾಪಟ್ಟಣದ ವೀರಶೈವ ಮಹನೀಯರಿಗು ಮತ್ತು ಈ ಸಭೆಯ ಕಾರ್ಯಕಲಾಪಗಳು ಸುಲಲಿತವಾಗಿ ನಡಿಯಲಿಕ್ಕೆ ಮಾರ್ಗದರ್ಶಿಗಳಾಗಿದ್ದ ಮ|| ಧರ್ಮಪ್ಪನವರಿಗು ಸಮಾಜದಪರ ವಂದನೆಗಳನ್ನು ಅರ್ಪಿಸುತ್ತೇನೆ.

ಸಭಿಕ.

ಬ್ರಾಹ್ಮಣರೂ, ಜಾತಿಕಸಬೂ.

ಬಹು ಪುರಾತನ ಕಾಲದಲ್ಲಿ ಹಿಂದು ಧರ್ಮಶಾಸ್ತ್ರಗಳನ್ನು ಬ್ರಾಹ್ಮಣರು ಬರೆದರು ಅಥವಾ ಪರಿಷ್ಕರಿಸಿದರು. ಕಾಲಾನುಗುಣ್ಯವಾಗಿ ಕೆಲವು ಬದಲಾವಣೆಗಳೂ ಆಗಿರುವಂತೆ ತೋರುತ್ತದೆ. ಆದರೆ ಬಹು ಕಾಲದಿಂದೀಚೆಗೆ ಒಂದೇ ರೀತಿ ಇರುತ್ತದೆ. ಹಿಂದೆ ಈ ಧರ್ಮಶಾಸ್ತ್ರಗಳನ್ನು ಬರೆದ ಕಾಲದಲ್ಲಿ ಈ ಭರತಖಂಡದಲ್ಲಿ ಹೂಣರು, ಮ್ಲೇಂಛರು ಇತ್ಯಾದಿ ಪರದೇಶದವರು ಯಾರೂ ಇರಲಿಲ್ಲ. ಆಸೇತು ಹಿಮಾಚಲ ಪರ್ಯಂತರವೂ ಹಿಂದು ಮತಾವಲಂಬಿಗಳೇ ಬಹುಮಟ್ಟಿಗೆ ಇದ್ದರು. ಇವರುಗಳ ಮತ, ಆಚಾರ, ವ್ಯವಹಾರಗಳು ಬಹುಮಟ್ಟಿಗೆ ಒಂದೇ ರೀತಿ ಇರುತ್ತಿದ್ದವು. ಬ್ರಾಹ್ಮಣರು ಗಣ್ಯರಾಗಿದ್ದಂತೆ ತೋರುವುದು, ಇದಕ್ಕೆ ಅವರಲ್ಲಿದ್ದ ಶಮದಮಾದಿಗುಣಗಳೇ ಕಾರಣವಾಗಿರಬಹುದು. ಈ ಶಾಸ್ತ್ರದಂತೆ ಪೂರ್ವದಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ 4 ದೊಡ್ಡ ಜಾತಿಗಳು ಏರ್ಪಟ್ಟವು. ಅಲ್ಲದೆ ಪ್ರತಿ ಜಾತಿಯಲ್ಲೂ ಅನೇಕ ಉಪಜಾತಿಗಳಾದವು. ಈ ಜಾತಿ ಭೇದವನ್ನು ಏರ್ಪಡಿಸಿದ್ದು ದೇಶದ ಹಿತಕ್ಕಾಗಿಯೇ ಎಂತ ತೋರುತ್ತದೆ. ಆಗಿನ ದೇಶದ ಪರಿಸ್ಥಿತಿಯಲ್ಲಿ ಇದರಿಂದ ದೇಶಕ್ಕೆ ಮಹದುಪಕಾರವು ಉಂಟಾಯಿತು. ಈ ಜಾತಿಗಳನ್ನು ಏರ್ಪಡಿಸುವಾಗ ಪ್ರತಿ ಜಾತಿಯವರಿಗೂ ಜೀವನೋಪಾಯಕ್ಕೆ ಸಾಧಕವಾದ ಒಂದು ಕಸಬನ್ನೂ ಏರ್ಪಡಿಸಿದರು. ಇದನ್ನು ಜಾತಿ ಕಸಬು ಎಂದು ಹೇಳುತ್ತಾರೆ. ಉದಾಹರಣೆ:—ರಂಗಾ! ನಿನ್ನ ಜಾತಿಯಾವುದು? ಉತ್ತರ: ಕುಂಬಾರ, ನಿನ್ನ ಕಸಬೇನು? ಜಾತಿಕಸಬು. ಇದೇ ಮೇರೆ ಕಮ್ಮಾರ, ಅಕ್ಕಸಾಲೆ, ಅಗಸ ಮೊದಲಾದವರು ತಮ್ಮ ಕಸಬನ್ನು ಜಾತಿಕಸಬೆನ್ನುತ್ತಾರೆ. ಕುಂಬಾರನ ಜಾತಿಕಸಬು ಮಡಿಕೆಮಾಡುವುದು, ಅಗಸನ ಜಾತಿಕಸಬು ಬಟ್ಟೆ ಒಗೆಯುವುದು, ಹೀಗೆ ಪ್ರತಿ ಜಾತಿಗೂ ಒಂದೊಂದು ಕಸಬನ್ನು ಏರ್ಪಡಿಸಿದ್ದಾರೆ. ಈ ಕಸಬಿನಿಂದ ಆಯಾ ಜಾತಿಯವರು ಧರ್ಮಶಾಸ್ತ್ರ ಹುಟ್ಟಿದಾಗ ಯಾವ ರೀತಿ ಜೀವಿಸುತ್ತಿದ್ದರೋ ಈಗಲೂ ಅದೇ ರೀತಿಯೇ ಜೀವಿಸುತ್ತಿದ್ದಾರೆ. ಹೀಗೆ ಎಲ್ಲಾ ಜಾತಿಗೂ ಕಸಬನ್ನು ಏರ್ಪಡಿಸಿದ ಬ್ರಾಹ್ಮಣರು ತಮ್ಮ ಜಾತಿಗೆ ಯಾವ ಕಸಬನ್ನೂ ಏರ್ಪಡಿಸಲಿಲ್ಲ. ಆಗಿನ ಸಂದರ್ಭದಲ್ಲಿ ಇತರರು ತಮ್ಮನ್ನು ಕಾಪಾಡುತ್ತಾರೆಂಬ ಭರವಸೆಯನ್ನು ಇಟ್ಟುಕೊಂಡು ಕೇವಲ ಪರಾಧೀನರಾದರು. ಈಗಲಾದರೋ ಜಾತಿಕಸಬಿಲ್ಲದೆ ಬ್ರಾಹ್ಮಣರು ಪಡುತ್ತಿರುವ ಅವಸ್ಥೆಯನ್ನು ನೋಡಿಯಾದರು ಊಹಿಸಬಹುದು! ಜಾತಿಕಸಬಿಲ್ಲದ್ದರಿಂದ ಬ್ರಾಹ್ಮಣರು ನಿರುದ್ಯೋಗಿಗಳಾಗಿಯೂ, ಇತರರ ಕಸಬಿಗೆ ಕೈಹಾಕಿ ಅರ್ಧ ಕಸಬಿಗಳಾಗಿಯೂ ತೊಂದರೆ ಪಡುತ್ತಿದ್ದಾರೆ. ಆಗಿಂದಾಗ್ಗೆ ಬ್ರಾಹ್ಮಣರೂ ಕೆಲವುವೇಳೆ ಮಠೀಯರೂ ಸಭೆನಾಡಿ ಬ್ರಾಹ್ಮಣರನ್ನು ಉತ್ತಮಸ್ಥಿತಿಗೆ ತರಬೇಕೆಂತ ಸಲಹೆಗಳನ್ನು ಕೊಡುತ್ತಾರೆ. ಬಡವರಾದ ಹುಡುಗರ ವಿದ್ಯಾಭ್ಯಾಸಕ್ಕೆ ಸಹಾಯಮಾಡಬೇಕೆಂದೂ ವ್ಯವಸಾಯ, ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಹೋಗುವಂತೆ ಪ್ರೋತ್ಸಾಹಿಸಬೇಕೆಂದೂ ಅನ್ನುತ್ತಾರೆ. ಈ ಸಲಹೆಯಿಂದ ಯಾವ ಶಾಶ್ವತವಾದ ಪ್ರಯೋಜನವೂ ಆಗುವುದಿಲ್ಲ. ಹೀಗೆಲ್ಲಾ ಹೇಳಿದರೆ ಅದು ಜಾತಿಕಸಬಾಗುವುದಿಲ. ಉಂಛವೃತ್ತಿ—ಇದರಿಂದ ಬ್ರಾಹ್ಮಣರಿಗೆ ಜೀವನ ಆಗುವುದಿಲ್ಲ. ಯಾರೂ ಭಿಕ್ಷವನ್ನು ಹಾಕುವುದಿಲ್ಲ. ಅಲ್ಲದೆ ಭಿಕ್ಷಾಟನೆಯು ಕಾನೂನಿನಿಂದ ನಿರೋಧಿಸಲ್ಪಟ್ಟಿದೆ. ಅನೇಕ ಸ್ಥಳಗಳಲ್ಲಿ ವೃಥಾಂಗರು ಭಿಕ್ಷಮಾಡಿದರೆ ಶಿಕ್ಷೆಗೆ ಗುರಿಮಾಡಲ್ಪಡುತ್ತಾರೆ. ಯಜ್ಞ ಯಾಗಾದಿಗಳು — ಇವುಗಳಿಂದ ಜೀವನ ನಡೆಯುವುದಿಲ್ಲ. ಈಗಿನ ನಾಗರೀಕತೆ ಮತ್ತು ಜನಸಾಮಾನ್ಯದಲ್ಲಿ ಇದು ಪ್ರಯೋಜನಕಾರಿಯಲ್ಲ. ಆದ್ದರಿಂದ ಇದನ್ನೆಲ್ಲಾ ಜಾತಿಕಸಬೆಂತ ಮಾಡಲಾಗದು. ಕುಂಬಾರ, ಅಗಸ ಮೊದಲಾದವರಿಗೆ ಹೇಗೆ ಜಾತಿಕಸಬು ಈಗಿನ ನಾಗರೀಕತೆಯಲ್ಲೂ ಜೀವನವನ್ನು ಸಂಪಾದಿಸಿಕೊಡುತ್ತೋ ಹಾಗೆಯೇ ಬ್ರಾಹ್ಮಣನಿಗೂ ಜೀವನವನ್ನು ಸ್ವತಂತ್ರವಾಗಿ ಕಲ್ಪಿಸಿಕೊಡುವ ಒಂದು ಜಾತಿಕಸಬನ್ನು ತಕ್ಷಣವೇ ಅತ್ಯವಶ್ಯಕವಾಗಿ ಏರ್ಪಡಿಸಬೇಕಾಗಿದೆ. ಇದನ್ನೇ ನಮ್ಮ ಬ್ರಾಹ್ಮಣಶ್ರೇಷ್ಠರೂ ಮಠಾಧಿಪತಿಗಳೂ ಮೊದಲನೇ ದೇವತಾರಾಧನೆಯೆಂದು ತಿಳಿದು ಶಾಸ್ತ್ರೀಯವಾದ ಒಂದು ಜಾತಿಕಸಬನ್ನು ಏರ್ಪಡಿಸಿ ಪ್ರಚುರಪಡಿಸಿ ಆಚರಣೆಗೆ ತಂದು ಬ್ರಾಹ್ಮಣರನ್ನೂ, ಬ್ರಾಹ್ಮಣ್ಯವನ್ನೂ, ತಮ್ಮ ಮರ್ಯಾದೆಗಳನ್ನೂ ಕಾಪಾಡಿಕೊಂಡು ಸಮಸ್ತ ಬ್ರಾಹ್ಮಣಕೋಟಿಯ ಕೃತಜ್ಞತೆಗೆ ಪಾತ್ರರಾಗಬೇಕೆಂತ ಪ್ರಾರ್ಥನೆ. ಇದರಮೇಲೂ ಮಹನೀಯರು ಉದಾಸೀನರಾಗಿ ಬ್ರಾಹ್ಮಣರಿಗೆ ಜಾತಿಕಸಬನ್ನು ಏರ್ಪಡಿಸದಿದ್ದರೆ ಇನ್ನು 10 ವರ್ಷಗಳಲ್ಲಿ ಬ್ರಾಹ್ಮಣ್ಯವೂ ಬ್ರಾಹ್ಮಣರೆಂದು ಹೇಳಿಕೊಳ್ಳುವವರೂ ಯಾರೂ ಇರುವುದಿಲ್ಲ. ಧರ್ಮಶಾಸ್ತ್ರಗಳೂ ಮಠಗಳೂ ಯಾವುದೂ ಬೇಕಾಗುವುದಿಲ್ಲ. ಕೂಡಲೆ ತಕ್ಕ ಏರ್ಪಾಡು ಆಗಬೇಕಾಗಿದೆ. ಜಾತಿಕಸಬಿಲ್ಲದೆ ಬ್ರಾಹ್ಮಣರು ಮರಳುಗಾಡಿನಲ್ಲಿ ಬಿಸಲ್ಗುದುರೆಯನ್ನು ಅಟ್ಟಿಕೊಂಡು ಹೋಗಿ ದಣಿದಂತೆ ಸಂಕಟಪಡುತ್ತಿದ್ದಾರೆ. ಮಹನೀಯರು ಕಣ್ಣು ಮುಚ್ಚಿಕೊಂಡಿದ್ದರೆ ಗತಿಯೇನು!

ಎಚ್. ಆರ್.

ವೀರಶೈವ ದೀಕ್ಷಾಸಂಸ್ಕಾರವೂ ಧಾರ್ಮಿಕ ಸಭೆಯೂ.

ತಾ|| 7-12-32ರಲ್ಲಿ ಶಿವಮೊಗ್ಗಾ ಡಿ|| ಶಿಕಾರಿಪುರ ತಾ|| ಮಾಳಗೊಂಡನಕೊಪ್ಪದ ಪ್ರಮುಖರ ಪ್ರಾರ್ಥನೆಯಮೇರಿಗೆ ಶ್ರೀ ಕಾಶಿನೂರ ಸಂಸ್ಥಾನದ ಪಂಡಿತ ಗುರುಬಸವ ಶಿವಾಚಾರ್ಯ ಮಹಾಸ್ವಾಮಿಗಳವರು ಆಗಮಿಸಿ, ಸಾಧು ವೀರಶೈವ ಕ್ಷತ್ರಿಯರಾದ, ಮ|| ಪ್ಯಾಟಿ ಬಸವಲಿಂಪ್ಪನವರ ಮನೆಯಲ್ಲಿ ಶ್ರೀ ಮೃತ್ಯುಂಜಯ ಜಪವನ್ನು ತಾ|| 8 ರಿಂದ 3 ದಿವಸ ನೆರವೇರಿಸಿ, ತಾ|| 12 ನೇ ಸೋಮವಾರ ಇದೇ ಗ್ರಾಮದ ಮ|| ಪಾಟೀಲ ಬಸಪ್ಪನವರ ಕೋರಿಕೆಯಂತೆ, ಮಾಹೇಶ್ವರ ವಟುಗಳಿಗೂ ಭಕ್ತರಿಗೂ ಅವರಿಗೂ ದೀಕ್ಷಾಸಂಸ್ಕಾರವನ್ನು ವೇ|| ಬಳಿಗಾವಿ ಆರಾಧ್ಯ ಮಠದ ರುದ್ರಾರಾಧ್ಯರ ಪೌರೋಹಿತ್ಯದಿಂದ ನೆರವೇರಿಸಿದರು. ಮಧ್ಯಾಹ್ನ 2 ಘಂಟೆಯವರೆಗೆ ಭಕ್ತ ಮಾಹೇಶ್ವರರ ಸಂತರ್ಪಣೆಯಾಗಿ 3 ರಿಂದ ಧಾರ್ಮಿಕ ಸಭೆಯು ಮೇಲ್ಕಂಡ ಶ್ರೀಗಳವರ ಅಧ್ಯಕ್ಷತೆಯಲ್ಲಿ ನೆರೆಯಿತು. ಪ್ರೋಗ್ರಾಂ ಪ್ರಕಾರ ಬಳಿಗಾವಿ, ವೇ|| ರುದ್ರಾರಾಧ್ಯರು ಮಠಸ್ಥರ ಹಕ್ಕುಬಾಧ್ಯತೆಯ ಮೇಲೂ ಭಕ್ತ ಮಾಹೇಶ್ವರರು ಗರ್ಭಧಾನಾದಿ ಸಂಸ್ಕಾರಗಳನ್ನು ಮಾಡುವ ಮತ್ತು ಮಾಡಿಸಿಕೊಳ್ಳುವುದರ ಮೇಲೂ, ಧಾರವಾಡ ಡಿ|| ಕೋಡ ತಾ|| ಸುತಕೋಟಿಯ ಸಾಧು ವೀರಶೈವ ಕ್ಷತ್ರಿಯ ಸಂಘಪ್ರಚಾರಕರಾದ ಮ|| ಬಸವಂತಪ್ಪ ಬಣಕಾರ ಇವರು ವೀರಶೈವರಿಗೆ ಆವಶ್ಯಕವಾದ ಆಚಾರಗಳ ಮೇಲೂ ಧರ್ಮಶಾಸ್ತ್ರ ವಚನಗಳ ಉದಾಹರಣೆಗಳೊಡನೆ ಸಭಿಕರ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಸರಳವಾಗಿ ಭಾಷಣಮಾಡಿದರು. ಅಧ್ಯಕ್ಷ ಶ್ರೀಗಳವರು ಪ್ರಥಮದಲ್ಲಿ ಆತ್ಮಾಶ್ರಮ ಧರ್ಮವಿಚಾರವೆಂಬ ಗ್ರಂಥವನ್ನು ನಿರ್ಮಿಸಿದರು. ಅನಂತರ ಚೌಡದಾನಪುರ ಸಂಸ್ಥಾನದ ಪಂಡಿತ ವಿರುಪಾಕ್ಷ ಒಡೆಯರು ಪುಣೆಯ ಪ್ರಾಚ್ಯಸಂಶೋಧಕ ಸಭೆಯೊಳಗೆ ಸಂಸ್ಕೃತದಲ್ಲಿ ಭಾಷಣಮಾಡಿದ ತುಲನಾತ್ಮಕ ತತ್ತ್ವವೆಂಬ ಗ್ರಂಥವನ್ನು ಕನ್ನಡದಲ್ಲಿ ಪರಿವರ್ತಿಸಿದ ಮೇಲೆ ಹೈದರಬಾದಿನಲ್ಲಿ ಉಮರ್ ಮಹಜ್ಜ ಕೋರ್ಟಿನಲ್ಲಿ ನಡೆದ ಪರಳೀ ಪ್ರಕರಣದಲ್ಲಿ ಒಡೆಯರಿಗೆ ಸಹಾಯಕರಾಗಿ ಅನೇಕ ಧರ್ಮಗ್ರಂಥಗಳನ್ನು ಸಂಗ್ರಹಿಸಿ 2-3 ತಿಂಗಳವರೆಗೂ ಕೋರ್ಟಿನಲ್ಲಿ ಪ್ರತಿಪಾದಿಸಿ ಧರ್ಮಗ್ರಂಥಗಳನ್ನು ಹಾಜರ್‌ಮಾಡಿ ಯಶಸ್ವಿಗಳಾದರು. ಇತ್ತೀಚೆಗೆ ಒಡೆಯರವರ ಮತಿಯಿಂದಲೇ ಬೆಂಗಳೂರಿಗೆ ದಯಮಾಡಿಸಿ ಶ್ರೀಕರಭಾಷ್ಯವೆಂಬ ದೊಡ್ಡ ಗ್ರಂಥವನ್ನು ಅಹರ್ನಿಶಿಯೂ ಶ್ರಮಪಟ್ಟು 3 ತಿಂಗಳವರೆಗೂ ಪರಿಶೋಧಿಸಿದ್ದಲ್ಲದೆ, ದಿವಾನ್ ಬಹದ್ದೂರ್ ಸರ್ ಕೆ. ಪಿ. ಪುಟ್ಟಣ್ಣಶೆಟ್ಟರೇ ಮೊದಲಾಗಿ ವೀರಶೈವ ಪ್ರಮುಖರ ಸೂಚನೆಯ ಮೇರಿಗೆ ಶ್ರೀಕರಭಾಷ್ಯದ ಸಾರವನ್ನೆಲ್ಲಾ ಕ್ರೋಡೀಕರಿಸಿ ಸ್ವಮತ ಪರಮತ ಪಂಡಿತಮಂಡಳಿ ಮಂಡಿತವಾದ ದೊಡ್ಡ ಸಭೆಯಲ್ಲಿ ಸರ್ವರ ಹೃದಯದಲ್ಲಿ ಪ್ರತಿಬಿಂಬಿಸುವಂತೆ, ಅತಿ ಪ್ರೌಢವಾದ ವ್ಯಾಖ್ಯಾನಮಾಡಿ ಅಲ್ಲಿಯ ಪ್ರಮುಖರಿಂದ ಖಿಲ್ಲತುಗಳ ಬಹುಮಾನವನ್ನು ಪಡೆದು ಕೀರ್ತಿಯನ್ನು ಹೊಂದಿದರು. ಸಧ್ಯಕ್ಕೆ ನಡೆದಿರುವ ಬನವಾಸಿಯ ಪ್ರಕರಣದಲ್ಲಿ ಈ ಹಿಂದೆ ಸಾಗರದ ಮುನಸೀಫ್ ಕೋರ್ಟಿನ ಕಮಿಷನ್ ವಿಚಾರಣೆಯಲ್ಲಿ ಶ್ರೀಗಳು 8 ದಿವಸಗಳವರೆಗೂ ಸಾಕ್ಷಿರೂಪವಾಗಿ ಧರ್ಮಗ್ರಂಥಗಳನ್ನು ಪ್ರತಿಪಾದಿಸಿ ಹಾಜರ್ ಮಾಡಿದರು. ಇಂಥಾ ಪಂಡಿತರು ನಮ್ಮ ಪ್ರಾರ್ಥನೆಯ ಮೇರಿಗೆ, ನಮ್ಮ ಗ್ರಾಮಕ್ಕೆ ದಯಮಾಡಿಸಿದ್ದು ನಮ್ಮ ಸುದೈವವಾಗಿರುವದರಿಂದ, ಹಳ್ಳಿಗರಾದ ನಮಗೆ ದೀಕ್ಷಾವಿಚಾರವನ್ನು ಬೋಧಿಸುವದು ಆವಶ್ಯಕವಾಗಿರುವದೆಂದು ಇದೇ ಗ್ರಾಮದ ಜಾವಳ್ಳಿ ಮ|| ಶಿವಪ್ಪನವರು ಪ್ರಾರ್ಥಿಸಲು, ಅಧ್ಯಕ್ಷ ಪೂಜ್ಯಪಾದರು, ಈ ಸ್ಥಳವು "ನೈಮಿಷಾರಣ್ಯಕ್ಷೇತ್ರ" ಎಂದು ವ್ಯಾಸೋಕ್ತ ಪುರಾಣದಲ್ಲಿ ಪ್ರತಿಪಾದಿಸಿದ ಶ್ಲೋಕಗಳಂತೆ ಸೂತಪುರಾಣಿಕರು ಶೌನಕಾದಿ ಋಷಿಗಳಿಗೆ ಧರ್ಮಶ್ರವಣವನ್ನುಮಾಡಿಸಿದ ನೈಮಿಷಾರಣ್ಯಾಂತರ್ಗತವಾದ ಅನುಮಿಷಕ್ಷೇತ್ರವಾಗಿದೆ. ಇಲ್ಲಿ ಪೂರ್ವಕಾಲದಲ್ಲಿ ನಂದೀಶ್ವರನು ಅನುಮಿಷನೆಂಬ ಶಿವ ಯೋಗಿಗೆ ಇಷ್ಟಲಿಂಗವನ್ನು ಕೊಟ್ಟನು. ಇಲ್ಲಿ ಅನಿಮಿಷ ಯೋಗಿಯ ಯೋಗ ಸಮಾಧಿಯಿರುವುದು ಈಗಲು ಕೂಡ ಅನೇಕ ಮಹಾತ್ಮರು ಬಂದು ಈ ಆಶ್ರಮದ ಬಿಲ್ವವನದಲ್ಲಿ ಕೆಲಕಾಲ ವಾಸಿಸಿ, ತಪೋನುಷ್ಠಾನಗಳನ್ನು ಮಾಡುತ್ತಿರುವರು. ಇದಕ್ಕೆ ಅರ್ಧ ಮೈಲು ದೂರದಲ್ಲಿ ಬಳಿಗಾವಿ ಎಂಬ ದಕ್ಷಿಣಕೇದಾರಕ್ಷೇತ್ರವಿದ್ದು ಅಲ್ಲಿಯಾದರೂ ಪಂಚಲಿಂಗ ಕೇದಾರೇಶ್ವರ ತ್ರಿಪುರಾಂತಕ ಸೋಮೇಶ್ವರ ಮಹಾಕಾಳಿ ಮೊದಲಾದ ದೇವಾಲಯಗಳೂ ಅತ್ಯುನ್ನತವಾದ ಗರುಡ ಗಂಭವಿರುವುದೂ ನಿಮ್ಮುಗಳಿಗೆಲ್ಲಾ ತಿಳಿದೇ ಇದೆ. ಇವುಗಳನ್ನು ನೋಡೋದರಿಂದ ಭಾರತೀಯರ ಕಲಾಕೌಶಲ್ಯವು ವ್ಯಕ್ತವಾಗುವುದು. ಬಿಜ್ಜಳರಾಜನ ಕಾಲದಲ್ಲಿ ಇವೆರಡೂ ಕ್ಷೇತ್ರಗಳು ಒಂದೇ ಪಟ್ಟಣವಾಗಿದ್ದವೆಂದು ಸ್ಥಳಪುರಾಣಗಳಿಂದ ಗೊತ್ತಾಗುತ್ತದೆ. ಅದರ ಒಂದು ಭಾಗವಾದ ಇಲ್ಲಿ ಮಾಳಗೊಂಡನೆಂಬ ಒಬ್ಬ ಶರಣನಿದ್ದುದರಿಂದ ಇದಕ್ಕೆ ಮಾಳಗೊಂಡನ ಕೊಪ್ಪವೆಂದು ಹೆಸರಾಗಿದೆ. ಈ ಪವಿತ್ರ ಕ್ಷೇತ್ರದಲ್ಲಿ ಈ ದಿವಸ ನಿಂತ ನಿಮ್ಮುಗಳಿಗೆಲ್ಲಾ ಧರ್ಮಬೋಧೆಮಾಡುವ ಸುಯೋಗವೊದಗಿದ್ದರಿಂದ ಇದೇ ಸುಪುಣ್ಯವೆಂದು ನಾವು ಭಾವಿಸುವೆವು. ಈಗ ದೀಕ್ಷಾವಿಚಾರವನ್ನು ಬೋಧಿಸುವದು ಅವಸರವಾಗಿದೆ. ವೀರಶೈವ ಮತದ ಸ್ತ್ರೀಪುರುಷರು [illegible]

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು | ಬಂಜೆತನದಿಂದ ಮುಕ್ತರಾಗುವಿರಿ | ಚಿಂತಿಸಬೇಡಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರ ಪುತ್ರಿಣಿ ಆವಿಗುರಿ. ೯ ಗುಳಿಗೆಗಳ ಕಿ. ೩ ರೂಪಾಯಿ. [illegible]

ಪತ್ತೆ—ವೈದ್ಯ ವ್ಹಿ. ಎಸ್. ಕಾಪಸೆಮಿರಜ. M. C. 24

[illegible]

ಲಿಂಗಧಾರಣ ಚಂದ್ರಿಕೆಯ ಕನ್ನಡ ಭಾಷಾಂತರ.

[illegible]

ವ ನುಷ್ಯನಿಗೆ ಅನುಭವ ಜನ್ಯವಾದ ಮಾತಿದು. ಅದನ್ನೇ ಶಾಸ್ತ್ರಕಾರರು ಇಲ್ಲಿ ವಿಶದೀಪಡಿಸಿರುವರು. ಇದರಲ್ಲಿ "ಲಿಂಗೇಸುಷುಪ್ತಿ!" ಎಂಬ ವಾಕ್ಯದಿಂದ ಹೃದಯಾಂತರ್ವರ್ತಿಯಾದ ಶಿವನಿಗೆ ಪ್ರಾಣಲಿಂಗರೂಪತ್ವವು ಸ್ಪಷ್ಟವಾಗಿ ನಿರ್ದೇಶಿಸಲ್ಪಟ್ಟಂತಾಗಿರುವದು.

ಅಖಿಲ ಕರ್ನಾಟಕ ಸ್ವದೇಶಿ ವಸ್ತು ಪ್ರದರ್ಶನ

ಬಾಗಲಕೋಟೆ

ಹಿಂದುಸ್ಥಾನದ ಅನೇಕ ಸ್ಥಳಗಳಲ್ಲಿ ಸ್ವದೇಶಿ ವಸ್ತುಗಳ ಪ್ರದರ್ಶನವು ಜರುಗಿಸಲ್ಪಟ್ಟು ಅವುಗಳ ಮೂಲಕ ಜನರಲ್ಲಿ ಜಾಗ್ರತೆಯಾಗಿ, ಕಲಾಭಿವೃದ್ಧಿಗೆ ಬಹು ಅಂಶದಿಂದ ಪ್ರೋತ್ಸಾಹವು ದೊರೆತಿದೆ. ನಮ್ಮ ವಿಜಾಪುರ ಜಿಲ್ಲೆಯಲ್ಲಿ ಇಂಥ ಪ್ರದರ್ಶನದ ಯೋಜನೆಯು ಈ ವರೆಗೂ ಆಗದ್ದರಿಂದ ತಾ|| 10-2-33 ನೇ ದಿವಸ ಸ್ವದೇಶಿ ವಸ್ತುಗಳ ಪ್ರದರ್ಶನ ಸಮಾರಂಭವನ್ನು ನೆರವೇರಿಸುವದಾಗಿ ನಿರ್ಣಯವಾಗಿದೆ. ರಾಷ್ಟ್ರದ ಸಾಂಪತ್ತಿಕ ಸ್ಥಿತಿಯ ಬೆಳವಣಿಗೆಗೆ ಕಲಾಕೌಶಲ್ಯಾಭಿವೃದ್ಧಿಯು ಮತ್ತು ಸ್ವದೇಶಿ ವಸ್ತುಗಳ ಉತ್ಪಾದನೆಯು ತಳಹದಿಯಾಗಿವೆ. ಅಲ್ಲಲ್ಲಿಯ ಸ್ವದೇಶಿ ವಸ್ತುಗಳ ಕಲಾ ಕೌಶಲ್ಯ ಮತ್ತು ಅನೇಕ ಸ್ವದೇಶಿ ಮಾಲುಗಳ ಸಂಗ್ರಹ, ಇವುಗಳ ಪ್ರದರ್ಶನದಿಂದ ಜನ ಜಾಗ್ರತೆಯಾಗಿ, ಇವುಗಳು ಊರ್ಜಿತಾವಸ್ಥೆಯನ್ನು ಹೊಂದುವದರಲ್ಲಿ ಏನೂ ಸಂಶಯವಿಲ್ಲ. ಅಲ್ಲಲ್ಲಿಯ ಸ್ವದೇಶಿ ಮಾಲಿನ ಉತ್ಪಾದಕರು ಇಂಥ ಸುಸಂಧಿಯನ್ನು ಕಳೆದುಕೊಳ್ಳದೆ, ತಮ್ಮ ತಮ್ಮ ವಸ್ತುಗಳನ್ನು ಪ್ರದರ್ಶನಕ್ಕೆ ಕಳುಹಿಸಿ ಅವುಗಳ ಪ್ರಸಾರಕ್ಕೆ ಉತ್ತೇಜನ ಹೊಂದಬೇಕಾಗಿ ಇಚ್ಛಿಸುತ್ತೇವೆ. ಮಾಲು ಇಡುವದರ ಬಗ್ಗೆ ಸ್ಟಾಲುಗಳ ಯೋಜನೆಯಾಗುವದಿದ್ದು, ಅವುಗಳನ್ನು ಕಳುಹುವವರು 1933 ನೇ ಜನವರೀ 25 ನೇ ತಾರೀಖಿನೊಳಗಾಗಿ ನಮಗೆ ತಲ್ಪುವಂತೆ ಕಳುಹಿಸಲು ಪ್ರಾರ್ಥನೆ. ಹೆಚ್ಚಿನ ಮಾಹಿತಿಯ ಬಗ್ಗೆ ಬರೆದು ಕೇಳಿಕೊಳ್ಳಬೇಕು.

ಮುರಿಗೆಯ್ಯ ಸೋಮಯ್ಯ ಜಂಗಿನ
ಅಖಿಲ ಕರ್ನಾಟಕ ಸ್ವದೇಶಿ ವಸ್ತು ಪ್ರದರ್ಶನ ಕಮಿಟಿ,
ಬಾಗಲಕೋಟೆ.

ನಾರಿನವೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ

34 M. C

ಪ್ರಕಟಣೆ.

[illegible]

[12—4] ಮತ್ತು ಹಿತಚಿಂತಕ ಪ್ರಿಂಟಿಂಗ್ ಪ್ರೆಸ್, ವಿಜಾಪುರ.

೧೯೩೨ ನೆಯ ಇಸವಿ ಡಿಸೆಂಬರ್ ತಾ|| ೧೯ ರಿಂದ ಡಿಸೆಂಬರ್ ತಾ|| ೨೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಮಾರ್ಗಶಿರ ಬಹುಳ ಷಷ್ಠಿಯಿಂದ ಮಾರ್ಗಶಿರ ಬಹುಳ ತ್ರಯೋದಶಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಧನು ಮಾಸ
19	ಸೋಮ	ಷಷ್ಠಿ	10-8	ಪುಬ್ಬ	58-2	5
20	ಮಂಗಳ	ಸಪ್ತ	7-33	ಉತ್ತ	56-0	6
21	[1] ಬುಧ	ಅ. ಉ	3-54-56-4	ಹಸ್ತ	53-22	7
22	ಗುರು	ದಶ	54-29	ಚಿತ್ತ	49-51	8
23	ಶುಕ್ರ	ಏಕಾ	49-41	ಸ್ವಾತಿ	46-1	9
24	ಶನಿ	ದ್ವಾದ	43-16	ವಿಶಾ	41-50	10
25	[2] ಭಾನು	ತ್ರಯೋ	37-17	ಅನೂ	37-35	11

(1) [illegible] ನಕ್ಷತ್ರ-ಮೂಲ ೪ ನೆಯ ಪಾದ. (2) ಕ್ರಿಸ್ತಮಸ್, ಮಳೆನಕ್ಷತ್ರ-ಮೂಲ ೪ ನೆಯಪಾದ.

ಮೈಸೂರು : ಶ್ರೀ. [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REG NO. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ||
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ||

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೨ ನೆಯ ಇಸವಿ ಡಿಸೆಂಬರ್ ತಾರೀಖು ೨೬ ನೆಯ ಸೋಮವಾರ [ಸಂಚಿಕೆ ೫೨

Insurance in the Mysore State Life Insurance, Public Branch.

Life Insurance is admittedly the best form of investment and the greatest seafeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore.

(Sd.) S. SHA MANNA,
Secretary, Insurance Committee.

[50—25]



[50—8]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	ವಿ.ಪಿ. ಸೇರಿ
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿದಾಸ	೦—೪—೦	೦—೯—೦
ವ್ರತಪಂಚಕ	೦—೪—೦	೦—೯—೦
ಗುರುಶಂಕರೇಶ್ವರಶತಕ	೦—೧—೦	೦—೬—೦
ಬಸವೇಶ್ವರನಜನನ	೦—೮—೦	೦—೧೩—೦
ಸಟೀಕ ಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು | ಚಿಂತಿಸಬೇಡಿರಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆವಿಗುರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆವಿ.ರಜ. M. C. 34

CHITALDRUG DISTRICT BOARD

Notice dated 12th December 1932.

It is hereby notified that old and unserviceable articles of the District Board office will be sold away by public auction on 9th January 1933 at 2 P. M. near the District Board office (Town-Hall) Chitaldrug.

1. Usual sale conditions will be followed.

2. The list of articles and the articles themselves are available for inspection in the office during office hours.

3. One cobbler's sewing machine and a rope twisting caste iron plate are among those to be sold.

G. CHANNAPPA,
President, District Board.

ನಾರಿನವೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

35 M. C

ಪ್ರಕಟಣೆ.

[illegible]

[12—5] ಮತ್ತು ಹಿತಚಿಂತಕ ಪ್ರಿಂಟಿಂಗ್ ಪ್ರೆಸ್, ವಿಜಾಪುರ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು [illegible] ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು [illegible]

[illegible]

[illegible]—ಗುರುಬಸವ ಅಂಡ್ ಕಂಪನಿ [illegible]

[51—17] [illegible]

ರಿಗೆಲ್ಲಾ ದೀಕ್ಷಾ ಕರ್ಮವು ಮುಖ್ಯ ಸಂಸ್ಕಾರವಾಗಿದೆ. ಶ್ಲೋ॥ "ದೀಯತೇ ಜ್ಞಾನಸಂಬಂಧಂ ಕ್ಷೀಯತೇ ಚಮಲತ್ರಯಂ" ಎಂಬ ಪ್ರಮಾಣದಂತೆ ಮಲತ್ರಯಗಳನ್ನು ನಾಶಮಾಡಿ, ಶಿವಜ್ಞಾನವನ್ನುಂಟುಮಾಡತಕ್ಕದ್ದಾಗಿದೆ. ಇದರಿಂದ ಮಾಂಸಪಿಂಡವು ನಿವೃತ್ತಿಯಾಗಿ ಮಂತ್ರಪಿಂಡವು ಪ್ರಾಪ್ತವಾಗುವುದು. ಇದಕ್ಕೆ ಶ್ರೋತ್ರೀಯನಾಗಿಯೂ ಬ್ರಹ್ಮನಿಷ್ಠನಾಗಿಯೂ ಇರುವ ಸದ್ವಂಶದ ಗುರುಕಟಾಕ್ಷವೇ ಕಾರಣವಾಗಿರುವದು. ಈ ಬಗ್ಗೆ ಭಾಷ್ಯಕಾರರು ಕೂಡ "ಅಥಾತೋ ಬ್ರಹ್ಮಜಿಜ್ಞಾಸ" ಎಂಬ ಬ್ರಹ್ಮಸೂತ್ರಕ್ಕೆ "ಸದ್ಗುರು ಕರುಣಾಕಟಾಕ್ಷಲಬ್ಧ ಶಕ್ತಿಪಾತಾದ್ಯವಚ್ಛಿನ್ನ ಪರಶಿವೇಷ್ಟಲಿಂಗ ಧಾರಣಾತ್ಮಕ ಪಾಶುಪತದೀಕ್ಷಾನಂತರ್ಯಂ" ಎಂದು ಭಾಷ್ಯಕಾರರು ಅರ್ಥವನ್ನು ಬರೆದಿರುವದರಿಂದ, ಗುರುಕಟಾಕ್ಷವನ್ನು ಪಡೆಯದವನು ಮೋಕ್ಷವನ್ನು ಹೊಂದಲಾರನು. ಆದ್ದರಿಂದ ಸದ್ಗುರುವನ್ನಾಶ್ರಯಿಸಿ, ಸಂಸ್ಕಾರವನ್ನು ಹೊಂದುವದು ಉತ್ತಮ ವರ್ಣೀಯರ ಕರ್ತವ್ಯವಾಗಿದೆ. ಹೀಗಿದ್ದೂ ಕೆಲವರು ಈ ದೀಕ್ಷೆಯಿಂದಲೇ ಮಾಹೇಶ್ವರರಾಗುವವೆಂದು ಜಗಿದಾಡುತ್ತಾರೆ. ಅದು ಅಸಂಬದ್ಧ ಪ್ರಲಾಪವೇ ಸರಿ. ಶ್ಲೋ॥ "ವೀರಶೈವಾಭಿಧಾ ದೀಕ್ಷಾ ವೀರಮಾಹೇಶ್ವರಾಭಿಧಾ ಏವಂಭಿದ್ಯತೆ ದೀಕ್ಷಾ ಭಕ್ತ ಮಾಹೇಶ್ವರೇಷುಚ" ಈ ಪ್ರಕಾರ ಭಕ್ತರಿಗೆ ವೀರಶೈವ ದೀಕ್ಷೆಯಂತಲೂ ಗುರುವರ್ಗದವರಿಗೆ ವೀರಮಾಹೇಶ್ವರ ದೀಕ್ಷೆಯಂತಲೂ ರಾವ್ ಬಹದ್ದೂರ್ ವಾರದ ಅಪ್ಪಾಸಾಹೇಬರಿಂದ ಮುದ್ರಿತವಾದ ವೀರಶೈವ ಸದಾಚಾರ ಸಂಗ್ರಹವೆಂಬ ಗ್ರಂಥದಲ್ಲಿ ಉಕ್ತವಾಗಿರುವದು. ಮಾಹೇಶ್ವರ ದೀಕ್ಷಾವಿಧಿಯಲ್ಲಿ ಪಟ್ಟಾಧಿಕಾರವುಳ್ಳ ಗುರುವರ್ಗದವರಿಗೆ ಪಂಚಮುದ್ರೆಗಳನ್ನೂ ಗುರುಗದ್ದಿಗೆಯನ್ನೂ ಕೊಡುವದೂ ಹೋಮಹವನಾದಿಗಳನ್ನು ಮಾಡುವದೂ ವಿಧಿಸಲ್ಪಟ್ಟಿರುವವು. ವೀರಶೈವ ದೀಕ್ಷಾವಿಧಿಯಲ್ಲಾದರೂ ಇವುಗಳ ವಿನಹ ಬಾಕಿ ಎಲ್ಲಾ ಸಂಸ್ಕಾರಗಳು ಹೇಳಲ್ಪಟ್ಟಿರುವವು. ಇಂಥಾ ಸಂಸ್ಕಾರ ರಹಿತನು ಉತ್ತಮ ವರ್ಣದವನೆನಿಸಲಾರನು. ಶ್ಲೋ॥ "ಅದೀಕ್ಷಿತೈರನಾಚಾರೈರಮಂತ್ರೈಃ ಕ್ಷುದ್ರವೃತ್ತಿಭಿಃ। ದೂಷಕೈಸಮಯಭ್ರಷ್ಟೈರ್ನಕಾರ್ಯಂ ಶಿವಪೂಜನಂ" ದೀಕ್ಷಾಹೀನರು, ಆಚಾರರಹಿತರು, ಮಂತ್ರೋಪದೇಶ ಇಲ್ಲದವರು, ವೇದಬಾಹ್ಯರು, ನಿಂದಕರು ಮತ್ತು ಮತಭ್ರಷ್ಟರು ಶಿವಪೂಜೆಗೆ ಅನಧಿಕಾರಿಗಳು. ಶ್ಲೋ॥ "ಯಥಾಮೃಗಪತಿಂದೃಷ್ಟ್ವಾ ವನೇಭೀತೋಮಹಾಗಜಃ। ಅದೀಕ್ಷಿತಾರ್ಚನಾದೇವಾ ತಥಾಭೀತೋಮಹೇಶ್ವರಃ" ಅರಣ್ಯದಲ್ಲಿ ಸಿಂಹವನ್ನು ಕಂಡು ಬೆದರುವ ಆನೆಯಂತೆ ದೀಕ್ಷಾವಿಹೀನನು ಮಾಡುವ ಪೂಜೆಗೆ ಶಿವನು ಕೂಡ ಅಂಜುವನೆಂದು ಆಗಮವು ಸಾರುವುದರಿಂದ ಅಷ್ಟಾವರಣ ಸಂಪನ್ನರಾದ ವೀರಶೈವರು ಶಿವಲಿಂಗ ಭಕ್ತಮಾತ್ರಧಾರಿಗಳಾದ, ಶೂದ್ರ ಅಂತ್ಯಜ ಪತಿತ ಸಂಕರಜಾತಿಯವರಂತೆ ಸಂಸ್ಕಾರ ವಿಹೀನರಾಗಿರುವದು ಲಾಂಛನಾಸ್ಪದವಾಗಿದೆ. ಆದುದರಿಂದ ಮುಂದಾದರೂ ಧರ್ಮಶಾಸ್ತ್ರದ ಕಡೆಗೆ ಲಕ್ಷ್ಯವಿಟ್ಟು ನಿಮ್ಮ ಅಧಿಕಾರಕ್ಕೆ ಯೋಗ್ಯವಾದ ದೀಕ್ಷೆಯನ್ನು ಹೊಂದಿ ಧನ್ಯರಾಗಬೇಕೆಂದು ನಂಬಿ ಈ ಭಾಷಣವನ್ನು ವಿರಮಿಸುತ್ತೇನೆಂದು ಬೋಧಿಸಿದರು. ಅನಂತರ ಗಂಧಪುಷ್ಪ ತಾಂಬೂಲ ವಿನಿಯೋಗವಾಗಿ ಶ್ರೀ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಯಾಯಿತು. ಅಧ್ಯಕ್ಷರಪ್ಪಣೆಯ ಮೇರಿಗೆ ಸ್ಟಾರ್ ಪತ್ರಿಕೆಯ ಪೋಷಣೆಗೋಸ್ಕರ 1 ರೂಪಾಯಿ ತೆಗಿಸಲ್ಪಟ್ಟಿತು.

ಪ್ರೇಕ್ಷಕ.

ಲಿಂಗಧಾರಣ ಚಂದ್ರಿಕೆಯ ಕನ್ನಡ ಭಾಷಾಂತರ.

(ಲೇಖಕ:—ಸ್ವಾಮಿ ವಿರೂಪಾಕ್ಷ ಒಡೆಯರು.)

(ಲೇಖಾಂಕ ೩.)

ಕೇವಲ ನಾರಾಯಣನ ಹೃದಯದಲ್ಲಿಯೇ ಶಿವನ ವಾಸವು, ಹಾಗೂ ನಾರಾಯಣನೇ ಶಿವೋಪಾಸಕನೆಂತ ಯಾಕೆ ಹೇಳಬೇಕೆಂದರೆ—"ವೇದಾಂತ ವಿಜ್ಞಾನಸುನಿಶ್ಚಿತಾರ್ಥಾಃ ಸನ್ಯಾಸಯೋಗಾದ್ಯತಯಃ ಶುದ್ಧಸತ್ವಾಃ ತೇ ಬ್ರಹ್ಮಲೋಕೇಷುಪರಾಂತ ಕಾಲೇಪರಾಮೃತಾತ್ ಪರಿಮುಚ್ಯಂತಿಸರ್ವೇ" ಎಂಬ ವೇದಾಂತ ವಿಚಾರದ ವಿಜ್ಞಾನದಿಂದ ನಿಶ್ಚಿತಾರ್ಥರಾದ ಯತಿಗಳು ಸರ್ವಸಂಗಪರಿತ್ಯಾಗರೂಪಯೋಗದಿಂದ ಪರಿಶುದ್ಧಾತ್ಮರಾಗಿ ಬ್ರಹ್ಮಲೋಕದಲ್ಲಿ ವಾಸವಾಗಿರುತ್ತಾರೆಂದು ಹೇಳುವ ಉಪನಿಷದ್ವಾಕ್ಯದಿಂದ ಶುದ್ಧ ಸಾತ್ವಿಕರಾದ ಸರ್ವ ಯತಿಗಳ ಹೃತ್ಕಮಲದಲ್ಲಿ ಪರಶಿವನು ಉಪಾಸ್ಯನಾಗಿದ್ದಾನೆಂಬ ಸಂಬಂಧವನ್ನು ಯಾಕೆ ಹೇಳಬಾರದೆಂದು ವಿಚಾರಿಸಿದಲ್ಲಿ, ಹಾಗನ್ನಬೇಡಿರಿ. ಯಾಕೆಂದರೆ, ಅಮಾವಾಸ್ಯಾ, ಪೌರ್ಣಿಮೆಗಳಲ್ಲಿ ಮಾಡುವ ಯಜ್ಞಯಾಗ ಕ್ರಿಯೆಗಳನ್ನು ಹೇಳುವ ಪ್ರಕರಣದಲ್ಲಿ ಮಧ್ಯಂತರವಾದ ಸಮಿಧ, ಸ್ವಾಹಾ, ಈಡ, ಬರ್ಹಿ, ತನೂನಪಾತ್ ಎಂಬ ಪಂಚವಾಕ್ಯಗಳಿಂದ ವಿಹಿತವಾದ ಉಪಾಸನಾದಿ ಯಜನವು ಸಹ ಹ್ಯಾಗೆ ದರ್ಶಪೂರ್ಣಮಾಸಕ್ಕೆ ಸಂಬಂಧವಿಲ್ಲದಿದ್ದರೂ ಬರೇ ಆ ಪ್ರಕರಣದಲ್ಲಿ ಹೇಳಿದ್ದ ಮಾತ್ರಕ್ಕೆ ಆದರ್ಶಪೂರ್ಣಮಾಸಾಂಗತ್ವದಿಂದಲೇ ಗ್ರಹಿಸುವ ಪರಿಪಾಟಿಯು ಹ್ಯಾಗುಂಟೋ ಹಾಗೆ ಇಲ್ಲಿಯಾದರೂ ನಾರಾಯಣನ ವಿಷಯವಾಗಿ ಹೇಳಲ್ಪಟ್ಟ ಪ್ರಕರಣದಲ್ಲಿ ನಾರಾಯಣ ಸಂಬಂಧಿಯಾದ ಹೃದಯವನ್ನೇ ಗ್ರಹಿಸಬೇಕೇ ಹೊರತು ಅನ್ಯಥಾ ವಸ್ತುವಿನ ಹೃದಯ ಗ್ರಹಣವು ಇಲ್ಲಿ ಸರ್ವಥಾ ಸಂಭವಿಸಲಾರದು. ಆದ್ದರಿಂದ ಇಲ್ಲಿ ಸಂದರ್ಭಾನುಸಾರ ನಾರಾಯಣನ ಹೃದಯವೇ ಗ್ರಹಿಸಲರ್ಹವಾಗಿರುವದು.

"ತತೋಽವ್ಯಯಾತ್ಮಾ ಸಹರಿಃ ಸ್ವಹೃತ್ಪಂಕಜಶಾಯಿನಂ। ದರ್ಶಯಾಮಾಸದೇವಾನಾಂ ಮುರಾರಿ ರ್ಲಿಂಗಮೈಶ್ವರಂ" ನಾರಾಯಣನು ತನ್ನ ಹೃದಯಪುಂಡರೀಕದಲ್ಲಿ ಲಿಂಗಸ್ವರೂಪನಾದ ಈಶ್ವರನನ್ನು ಪೂಜಿಸುತ್ತಾನೆಂಬುದನ್ನು ಭಗವದ್ಗೀತಾ, ವಾಮನ ಪುರಾಣಾದಿ ಅನೇಕ ಪ್ರಮಾಣಗಳಿಂದ ಮತ್ತಷ್ಟು ದೃಢೀಕರಿಸುವನು. ಹ್ಯಾಗೆಂದರೆ, ಮುರಾರಿ, ಹಾಗೂ ನಿತ್ಯಾತ್ಮದಿಂದ ಅಳಿವಿಲ್ಲದ ವಿಷ್ಣುವು ತನ್ನ ಹೃತ್ಕಮಲದಲ್ಲಿ ಶಯನನಾದ ಹಾಗೂ ಸರ್ವಶಕ್ತಾಧೀಶನಾದ ಈಶ್ವರಸ್ವರೂಪ ಲಿಂಗವನ್ನು ದೇವತೆಗಳಿಗೆ ತೋರಿಸಿದನೆಂಬದಾಗಿ ವಾಮನ ಪುರಾಣದಲ್ಲಿ ಹೇಳಿರುವ ವಾಕ್ಯದಿಂದ ನಾರಾಯಣನು ಯಾವಾಗಲೂ ತನ್ನ ಹೃದಯದೊಳಗೆ ಪ್ರಾಣಲಿಂಗೋಪಾಸನೆಯನ್ನು ಮಾಡುತ್ತಿದ್ದಾನೆಂಬುದು ವ್ಯಕ್ತವಾಗುವುದಲ್ಲದೆ ಇದರಿಂದ ಇಷ್ಟ, ಪ್ರಾಣ, ಭಾವ ಎಂಬ ಲಿಂಗತ್ರಯೋಪಾಸನೆಯೂ ಅವನ ಅಂತರಂಗದಿಂದ ಮಾಡಲ್ಪಡುವದೆಂತಲೂ ಬೋಧಿಸಲ್ಪಟ್ಟಂತಾಗಿರುವದು. ಹಾಗೂ ಇದರಂತೆ ಭಗವದ್ಗೀತೆಯಲ್ಲಿಯೂ "ತಮೇವಚಾದ್ಯಂ ಪುರುಷಂ ಪ್ರಪದ್ಯೇಯತಃ ಪ್ರವೃತ್ತಿಃ ಪ್ರಸೃತಾ ಪುರಾಣಿ॥ ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ" ಯಾವ ಪರಮೇಶ್ವರನಿಂದ ಜಗತ್ತಿನ ಚಲನವಲನ ಹಾಗೂ ಪ್ರವೃತ್ತಿಯಿಲ್ಲ ಅವಿಯಲ್ಲಿ ಹಬ್ಬಿಸಲ್ಪಟ್ಟಿತೋ ಅಂಥಾ ಆದ್ಯ ಪರಶಿವನನ್ನೇ ನಾನು ಅಂತ್ಯದಲ್ಲಿ ಅಂದರೆ ಮುಕ್ತದಶೆಯಲ್ಲಿ ಹೊಂದುವೆನೆಂತಲೂ ಕೃಷ್ಣನು ತನ್ನ ಅಂತಿಮಸ್ಥಾನ ಪ್ರಾಪ್ತಿಯನ್ನು ಹೇಳಿ ಅನನ್ಯಾರೆಂಬದಾಗಿ ಪುನಃ ಪ್ರತ್ಯೇಕದ್ವಯವಾಗಲು ನನ್ನಿಂದನ್ಯವಾದ ಪುರುಷೋತ್ತಮ ಪರಮಾತ್ಮ ವಸ್ತುವು ಬೇರೊಂದುಂಟೆಂದು ಸ್ಪಷ್ಟವಾಗಿ ಆ ಪರಶಿವ ವಸ್ತುವನ್ನೇ ಪ್ರಾಪ್ಯನನ್ನಾಗಿ ತೋರಿಸಿರುವನು.

"ಯೋಲೋಕತ್ರಯಮಾವಿಶ್ಯಬಿಭರ್ತ್ಯವ್ಯಯ ಈಶ್ವರಃ॥ ಈಶ್ವರಃಸರ್ವಭೂತಾನಾಂ ಹೃದ್ದೇಶೇಽರ್ಜುನತಿಷ್ಠತಿ" ಇನ್ನು ಯಾವನು ಮೂರು ಲೋಕಗಳನ್ನು ವ್ಯಾಪಿಸಿ ಆ ಮೂರು ಲೋಕಗಳನ್ನೂ ಧಾರಣ ಪೋಷಣಾದಿಗಳಿಂದ ಭರಿಸುವನೋ ಆ ಈಶ್ವರನು ಅವಿನಾಶಿಯೂ ಹಾಗೂ ಸರ್ವಗತವರ್ಣನೂ ಇದ್ದು ಅಂಥಾ ಈಶ್ವರನು ಸರ್ವಪ್ರಾಣಿಮಾತ್ರಗಳ ಅಂತಃಕರಣವೆಂಬ ಸ್ಥಾನದಲ್ಲಿ ವಾಸಮಾಡಿದ್ದಾನೆಂಬದಾಗಿ ಬೇರೊಬ್ಬ ಉಪಾಸ್ಯ ಪುರುಷನನ್ನು ತನ್ನ ಹೃದಯಾಂತರ್ವರ್ತಿಯೆಂದು ಶಿವನಲ್ಲಿಯೇ ಮುಖ್ಯವಾಗಿ ಉಪಯೋಗಿಸಲ್ಪಡುವ ಈಶ್ವರ ಶಬ್ದದಿಂದ ಆ ಪರಶಿವ ವಸ್ತುವನ್ನೇ ಪೂಜ್ಯತ್ವದಿಂದ ನಿರ್ಣಯಮಾಡಿದ್ದು ಮತ್ತು ದಹರೋಪಾಸನೆಗೆ ಸ್ಥಾನಭೂತವಾದ ಹೃತ್ಕಮಲಸಂಬಂಧತ್ವದಿಂದ ಇಲ್ಲಿ ನಾರಾಯಣನೇ ಉಪಾಸಕನು, ಶಿವನೇ ಉಪಾಸ್ಯನೆಂದು ಅವಶ್ಯವಾಗಿ ಅಂಗೀಕರಿಸಬೇಕಾಗಿರುವದು. ಆದರೆ ಇಲ್ಲಿ ಕೆಲವರು ಧೂರ್ತವಿಚಾರದಿಂದ ತಮ್ಮ ಬುದ್ಧಿಪ್ರೌಢಿಮೆಯನ್ನು ತೋರಿಸಲಿಕ್ಕೆ ಹೋಗಿರುವರು. ಹ್ಯಾಗೆಂದರೆ, ಪುರುಷೋತ್ತಮನೆಂದು ವಿಷ್ಣುವಿಗೆ ಹೇಳಿದ್ದು ಆ ಕೃಷ್ಣನೇ ಇಲ್ಲಿ ತನಗೆ ಪುರುಷೋತ್ತಮತ್ವ ಹಾಗೂ ಸರ್ವಶ್ರೇಷ್ಠತ್ವವನ್ನು ಹೇಳಿಕೊಂಡಿರುವನು. ಇದರಿಂದ ಕೃಷ್ಣವಿಗ್ರಹಾಂತರ್ಯಾಮಿಯಾದ ಪರಮೇಶ್ವರವಸ್ತುವು ಅದೇ ಎಂದು ಕೃಷ್ಣಾದಿಗಳಿಗೆ ಪುರುಷೋತ್ತಮತ್ವಾದಿ ಹೆಸರುಗಳನ್ನು ತೋರಿಸಿರುವದು ಅನ್ಯಾಯವಲ್ಲವೆಂದು ಸಂಗತಾರ್ಥ ಜೋಡಿಸಿಕೊಳ್ಳಲಿಕ್ಕೆ ಹೋಗುವರು. ಆದರೆ ಇದೇನು ಅಂಥಾ ಸಮಂಜಸವಲ್ಲ. ಯಾಕೆಂದರೆ, "ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ" ಎಂದು ತನಗನ್ಯವಾದ ಬೇರೊಂದು ಪರಮಾತ್ಮವಸ್ತುವುಂಟೆಂದು ಹೇಳುವ ಶ್ಲೋಕಕ್ಕೆ ಅಪಾರ್ಥವನ್ನು ಕಲ್ಪಿಸುವದು ನ್ಯಾಯವಲ್ಲ. ಅರ್ಥಾತ್ ಸ್ವಯಂ ಕೃಷ್ಣನೇ ಆಗಲಿ, ನಾರಾಯಣನೇ ಆಗಲಿ, ಅವರು ಪರಮಾತ್ಮ ಅಥವಾ ಪುರುಷೋತ್ತಮರಲ್ಲವೆಂಬುದು ಸ್ಪಷ್ಟವಾಗಿ ಕಂಡು ಬರುವದು.

ಇನ್ನು ವೇದಕಾಲದಲ್ಲಿ ಬ್ರಹ್ಮ, ರುದ್ರ, ಶಿವ ಶಬ್ದಗಳನ್ನು ದೇವತಾತ್ವದಿಂದ ಉಚ್ಚಾರಮಾಡಲಿಕ್ಕೆ ಎಷ್ಟು ಪ್ರಾಧಾನ್ಯ ಹಾಗೂ ಶ್ರೇಷ್ಠತ್ವದ್ಯೋತಕ ಮಾಡಿರುವರೋ ಅಷ್ಟೊಂದು ಇತರ ವಿಷ್ಣು ನಾರಾಯಣಾದಿ ಶಬ್ದಗಳಿಗಿರಲಿಲ್ಲ. ಇಷ್ಟೇ ಅಲ್ಲದೆ ಯಾಗಗಳಲ್ಲಿ ಇಂದ್ರದೇವರ ಪ್ರಾಧಾನ್ಯವನ್ನು ತೋರಿಸಿ ವಿಷ್ಣುವನ್ನು ಉಪೇಂದ್ರ ಅಂದರೆ ಇಂದ್ರ ಸಮೀಪವಾಸಿ. ಅಥವಾ ಇಂದ್ರನಿಗಿಂತಲೂ ಕಡಿಮೆ ದರ್ಜೆಯವನೆಂತಲೂ ತೋರಿಸಿರುವರು. ಇದಕ್ಕಾಗಿ ಅಮರಕೋಶದಲ್ಲಿ "ಉಪೇಂದ್ರ ಇಂದ್ರಾವರಜಶ್ಚಕ್ರಪಾಣಿಶ್ಚತುರ್ಭುಜಃ" ಎಂಬದಾಗಿ ಇಂದ್ರನ ಕೆಳಗಿನವನು ಅಥವಾ ಇಂದ್ರ ಸಮೀಪದವನು, ಹಾಗೂ ಇಂದ್ರನ ಅನಂತರ ಹುಟ್ಟಿದವನು ಎಂಬದಾಗಿ ವೇದಗಳಲ್ಲಿ ದೇವರಿಗೆ ವಿಷ್ಣುವಾಚಕ ಶಬ್ದವನ್ನು ಬಹಳ ಅಗೌರವದಿಂದ ಉಪಯುಕ್ತದ್ದರೆಂಬುದು ವೇದಾರ್ಥಬಲ್ಲವರಿಗೆ ಸ್ಪಷ್ಟ ಕಂಡುಬರುವದು. ಇನ್ನು ನಾರಾಯಣ ಹಯಗ್ರೀವ (ಅಂದರೆ ಕುದುರೆ ಮೋರೆಯು) ಯಾವ ವೇದಗಳಲ್ಲಿಯೂ ಹೇಳಿಲ್ಲ. ಆದರೆ ಇದೆಲ್ಲ ಅರ್ವಾಚೀನರು ಕಲ್ಪಿಸಿದ ಕಾಲ್ಪನಿಕ ಕಥೆಗಳು. ದೇವರಲ್ಲಿ ಯಾದರೂ ಕುದುರೆ ಮುಖದವನಾಗುದುಂಟೇ? ಈ ರೀತಿ ದೇವರಿಗೂ ಹಂದಿ ನಾಯಿ (ನರಸಿಂಹ) ಕುದುರೆ, ಮೊಸಳೆಗಳ ಮುಖಗಳನ್ನು ಕಲ್ಪಿಸುವವರಿಗಾದರೂ ನಾಚಿಕೆ ಬಂದಿರಲಿಕ್ಕಿಲ್ಲವೆ? ಶಿವ! ಶಿವಾ!! ದೇವರನ್ನು ಸಹ ನೀಚಾತಿನೀಚಾಕೃತಿಗಳಲ್ಲಿ ದ್ಯೋತಕಮಾಡುವವರಿಗೆ ಯಾವ ನರಕಪ್ರಾಪ್ತಿಯೋ ತಿಳಿಯದಾಗಿದೆ. ಇನ್ನು ಎಲ್ಲವೂ ಬ್ರಹ್ಮವೆಂಬುವವರ ಮಾತಿನಂತ ಒಂದು ರೀತಿಯಾದ ಮಾರ್ಗವನ್ನು ಹಿಡಿಯಬಹುದು. ಯಾಕೆಂದರೆ, ಅವರಲ್ಲಿ ಉಚ್ಚನೀಚತ್ವವೂ, ಪಾಪಪುಣ್ಯಗಳೂ, ಇಷ್ಟಾನಿಷ್ಟಗಳೂ ಯಾವವೂ ಇರದೇ ಎಲ್ಲವೂ ಒಂದೇ ಅಂದಮೇಲೆ ಅಲ್ಲಿ ಹೇಳುವದೇನು? ಆದರೆ ಶ್ರೀ ವಿಷ್ಣು ನಾರಾಯಣಾದಿಗಳ ಭಕ್ತರ ಮಾತು ಹಾಗಲ್ಲ. ಯಾಕೆಂದರೆ, ಇವರು ದೇವರನ್ನು ಹಂದಿ, ನಾಯಿ, ಕುದುರೆ ಮುಖದಿಯುಳ್ಳವನನ್ನಾಗಿ ಮಾಡಲೂ ಬಲ್ಲರು, ಹಾಗೂ ಆ ದೇವರು ಎಲ್ಲದಕ್ಕಿಂತಲೂ ಶ್ರೇಷ್ಠನೆಂದು ಹೇಳಲೂ ಬಲ್ಲರು, ಅಂದಮೇಲೆ ಇದರ ಸಂಮೇಲನವು ಹ್ಯಾಗೆಂಬುದನ್ನು ವಾಚಕರೇ ವಿಚಾರಮಾಡಬಹುದು.

ಈ ರೀತಿ ಹಿಂದೆ ತೋರಿಸಿದ ಅನೇಕ ವಾಕ್ಯಾರ್ಥ ಶೈಲಿಯಿಂದ ಪರಶಿವನೇ ದಹರೋಪಾಸನೋಪಾಸ್ಯನೆಂದು ಶಾಸ್ತ್ರಸಿದ್ಧಾಂತವಿದ್ದರೂ ಅಲ್ಲಿರತಕ್ಕ ಪರಶಿವನು ಲಿಂಗಾಕಾರದಲ್ಲಿ ಸ್ಥಿರಪಟ್ಟಿರುವನೆಂದು ಹೇಳುವ ಪ್ರಮಾಣಗಳಿಲ್ಲವಾದ್ದರಿಂದ ಅಂತರ್ಲಿಂಗಧಾರಣಸಿದ್ಧಿ ಯಾಗಲಾರದೆಂತಾ ಹೇಳಬಹುದಾದೆಂದರೆ ಹಾಗನ್ನಬೇಡಿರಿ. ಯಾಕೆಂದರೆ, ಹಂಸೋಪನಿಷದಾದಿಶಾಸ್ತ್ರಗಳಲ್ಲಿಯೂ ಹಿಂದೆ ಹೇಳಿದ ವಾಮನ ಪುರಾಣದಲ್ಲಿಯೂ ಆ ಪರಶಿವನಿಗೆ ಲಿಂಗರೂಪತ್ವವೇ ನಿಶ್ಚಯಿಸಲ್ಪಟ್ಟಿರುವದರಿಂದ ಶಿವನಿಗೆ ಲಿಂಗಾಕಾರತ್ವವು ಸರ್ವಥಾ ಸಿದ್ಧವಾಗುವದು. "ಹ್ಯಾಗೆಂದರೆ, ಎಷೋಽಸೌ ಪರಮೋಹಂಸೋ ಭಾನುಕೋಟಿ ಪ್ರತೀಕಾಶೋಯೇನೇದಂವ್ಯಾಪ್ತಂ॥ ತಸ್ಯಾಷ್ಟಧಾವೃತ್ತಿರ್ಭವತಿ ಪೂರ್ವದಲೇಪುಣ್ಯವೃತ್ತಿಃ। ಆಗ್ನೇಯೇ ನಿದ್ರಾಲಸ್ಯಾದಯೋಭವಂತಿ ಯಾಮ್ಯೇ ಕ್ರೌರ್ಯಮತಿಃ। ನೈಋತೇಪಾಪೇಮನೀಷಾ। ವಾರುಣ್ಯಾಂಕ್ರೀಡಾ। ವಾಯವ್ಯೇಗಮನಾದೌಬುದ್ಧಿಃ। ಸೌಮ್ಯೇರತಿಪ್ರೀತಿಃ। ಐಶಾನ್ಯೇ ದ್ರವ್ಯಾದಾನಂ। ಮಧ್ಯೇವೈರಾಗ್ಯಂ। ಕೇಸರೇ ಜಾಗ್ರದವಸ್ಥಾ। ಕರ್ಣಿಕಾಯಾಂ ಸ್ವಪ್ನಃ। ಲಿಂಗೇಸುಷುಪ್ತಿಃ। ಪದ್ಮತ್ಯಾಗೇತುರೀಯಂ ಯದಾ ಹಂಸೋನಾದೇವಿಲೀನೋಭವತಿ ತದಾತತ್ತುರೀಯಾತೀತಮಸಿ॥ ಆ ಪರಾತ್ಪರ ಲಿಂಗರೂಪಿಯಾದ ಶಿವನು ಪರಮಹಂಸಸ್ವರೂಪನೂ, ಹಾಗೂ ಕೋಟಿ ಸೂರ್ಯಪ್ರಕಾಶ ಸಮಾನನೂ ಇದ್ದು ಅವನಿಂದಲೇ ಇವೆಲ್ಲ ವ್ಯಾಪಿಸಲ್ಪಟ್ಟಿರುವವು. ಆದರೆ ಶಿವನಿಗೆ ಇಲ್ಲಿ ಪರಮಹಂಸತ್ವಾದಿಗಳನ್ನು ಹೇಳಿರುವದ್ಯಾಕೆಂದರೆ, ಹಾಲು ನೀರುಗಳನ್ನು ಕೂಡಿಸಿದಲ್ಲಿ, ಸ್ವಚ್ಛವಾದ ನೀರು, ಹಾಲುಗಳನ್ನು ಬೇರ್ಪಡಿಸಿ ತೋರಿಸುವ ಹಾಗೂ ಅದರಲ್ಲಿಯ ಅಮೃತರೂಪವಾದ ಹಾಲನ್ನೇ ಬೇರೆಮಾಡಿ ಕುಡಿಯುವ ವಿವೇಕ, ನಿರ್ಮಲತ್ವಾದಿ ಶಕ್ತಿಯು ಹಂಸಪಕ್ಷಿಯಲ್ಲಿರುವಂತೆ ವಿವೇಕನಿರ್ಮಲತ್ವಾದಿ ಪವಿತ್ರ ಗುಣಗಳೂ ಆ ಪರಶಿವನಲ್ಲಿ ಉಂಟೆಂಬ ಸಾದೃಶ್ಯ ತೋರಿಸುವದಕ್ಕಾಗಿ ಹಂಸ, ಪರಮಹಂಸತ್ವಾದಿ ಲಕ್ಷಣಗಳನ್ನು ಪವಿತ್ರಾತ್ಮರಲ್ಲಿಯೂ ಹಾಗೂ ಈಶ್ವರನಲ್ಲಿಯೂ ಶಾಸ್ತ್ರಕಾರರು ಉಪಯೋಗಿಸಿರುವರು.

ಇನ್ನು ಹೃತ್ಕಮಲದ ಎಂಟು ದಿಕ್ಕುಗಳಲ್ಲಿ ಎಂಟು ದಲಗಳಿದ್ದು ಆ ಒಂದೊಂದು ದಲದಲ್ಲಿ ಒಂದೊಂದು ಭಿನ್ನ ಭಿನ್ನವಾದ ವೃತ್ತಿಯನ್ನು ಹೇಳಿದ್ದು, ಆ ಹೃತ್ಕಮಲದ ಪೂರ್ವದಲ್ಲಿ ಪುಣ್ಯರೂಪವಾದ ಧಾರ್ಮಿಕ, ಶಾಸ್ತ್ರೀಕ ವಿಚಾರವೃತ್ತಿಯು, ಆಗ್ನೇಯ ದಿಕ್ಕಿನ ದಳದಲ್ಲಿ ನಿದ್ರಾಲಸ್ಯಾದಿಗಳು, ದಕ್ಷಿಣ ದಳದಲ್ಲಿ ಕ್ರೂರತ್ವ ಬುದ್ಧಿಯು, ನೈಋತ್ಯ ದಳದಲ್ಲಿ ಪಾಪಾದಿ ಕೃತ್ಯಗಳ ಇಚ್ಛೆಯು, ವರುಣ ದಿಕ್ಕಿನ ದಳದಲ್ಲಿ ಕ್ರೀಡೋಲ್ಲಾಸಗಳ ವೃತ್ತಿಯು, ವಾಯವ್ಯ ದಳದಲ್ಲಿ ಪರ್ಯಟನ ಬುದ್ಧಿಯು, ಪಶ್ಚಿಮ ದಳದಲ್ಲಿ ರತಿವಿಲಾಸಾದಿಗಳ ವೃತ್ತಿಯು, ಈಶಾನ್ಯ ದಳದಲ್ಲಿ ಧನಾದಿಗಳ ಸಂಪಾದನೆಯ ವೃತ್ತಿಯು, ಇನ್ನು ಹೃತ್ಕಮಲ ಮಧ್ಯದಲ್ಲಿ ವೈರಾಗ್ಯ ವೃತ್ತಿಯು, ಅಂತೂ ಒಟ್ಟು ಹೃತ್ಕಮಲ ಮಧ್ಯದಲ್ಲಿಯೂ ನಾಲ್ಕು ಭಾಗಗಳನ್ನು ಕಲ್ಪಿಸಿ, ಮಧ್ಯಕೇಸರ, ಕರ್ಣಿಕಾ, ಲಿಂಗ ವೆಂಬ ನಾಲ್ಕು ಭಾಗಗಳಲ್ಲಿ ನಾಲ್ಕು ರೀತಿಯಾದ ಭಿನ್ನ ಭಿನ್ನ ವೃತ್ತಿಯನ್ನು ಹೇಳುವರು. ಹೃತ್ಕಮಲ ಮಧ್ಯದ ಕೇಸರವೆಂಬ ಭಾಗದಲ್ಲಿ ಜಾಗ್ರದಾವಸ್ಥೆಯು, ಕರ್ಣಿಕಾದಲ್ಲಿ ಸ್ವಪ್ನಾವಸ್ಥೆಯು, ಲಿಂಗಭಾಗದಲ್ಲಿ ಸುಷುಪ್ತಾವಸ್ಥೆಯು, ಆ ಹೃತ್ಕಮಲತ್ಯಾಗವಾದಲ್ಲಿ ಚತುರ್ಥಾವಸ್ಥೆಯು, ಹಾಗೂ ಯಾವಾಗ್ಗೆ ಜೀವವು ನಾದದಲ್ಲಿ ವಿಲೀನವಾಗುವದೋ ಆಗ್ಗೆ ಅದು ತುರ್ಯಾತೀತವಾದ ಅವಸ್ಥೆಯಲ್ಲಿ ಅಳವಡುವದು. ಅಂದರೆ ಸಾಕ್ಷಾತ್ ಮುಕ್ತದಶೆಯನ್ನನುಭವಿಸುವದು ಎಂದು ಹೇಳುವ ಹಂಸೋಪನಿಷದ್ವಾಕ್ಯಗಳಿಂದ ಜೀವನು ಸತ್ವ ರಜಸ್ತಮೋಗುಣಜನ್ಯವಾದ ರಾಗದ್ವೇಷಾದಿ ಕ್ಷಣಿಕ ಸುಖದುಃಖಗಳನ್ನು ಜಾಗ್ರತ್ ಸ್ವಪ್ನಾದ್ಯವಸ್ಥೆಯಲ್ಲಿ ಹ್ಯಾಗೆ ಭೋಗಿಸುವನೆಂಬ ಅನುಭವಿಕ ವಿಚಾರಗಳನ್ನು ವ್ಯಕ್ತಪಡಿಸುವದಕ್ಕಾಗಿ ಪ್ರತಿ ಒಬ್ಬ ಮನುಷ್ಯನ ದೇಹದ ಅಷ್ಟದಳ ವಿಶಿಷ್ಟವಾದ ಕಮಲಾಕಾರ ಹೃದಯವಿದ್ದು ಅದರ ಒಂದೊಂದು ದಳದ ಗುಣಗಳು ಭಿನ್ನವಾಗಿದ್ದು ಜೀವವು ಯಾವ್ಯಾವ ಕಾಲಕ್ಕೆ ತತ್ಸಂಗಾನುಸಾರ ಆಯಾಯ ಕೃತಿಗಳಿಗನುಸರಿಸಿ ರಾಗದ್ವೇಷಾದಿ ತತ್ತದ್ವೃತ್ತಿಗೋಸ್ಕರ ನಿಯತವಾದ ಆಯಾಯ ಗುಣವಿಶಿಷ್ಟ ಹೃತ್ಕಮಲ ದಳದಲ್ಲಿ ಜೀವವು ಹೋಗಿ ಆಯಾ ಕ್ಷಣಕ್ಕೆ ಆ ಜೀವವು ತದ್ವೃತ್ತಿ ವಿಶಿಷ್ಟವಾಗುವದು. ಆದರೆ ಇದು ಪರ ಒಬ್ಬ ಮನುಷ್ಯನಿಗೆ ಅನುಭವ ಜನ್ಯವಾದ ಮಾತಿದ್ದು ಅದನ್ನೇ ಶಾಸ್ತ್ರಕಾರರು ಇಲ್ಲಿ ವಿಶದೀಕರಿಸಿರುವರು. ಇದರಲ್ಲಿ "ಲಿಂಗೇಸುಷುಪ್ತಿಃ" ಎಂಬ ವಾಕ್ಯದಿಂದ ಹೃದಯಾಂತರ್ವರ್ತಿಯಾದ ಶಿವನಿಗೆ ಪ್ರಾಣಲಿಂಗರೂಪತ್ವವು ಸ್ಪಷ್ಟವಾಗಿ ನಿರ್ದೇಶಿಸಲ್ಪಟ್ಟಂತಾಗಿರುವದು.

ಅಖಿಲ ಕರ್ನಾಟಕ ಸ್ವದೇಶಿ ವಸ್ತು ಪ್ರದರ್ಶನ

ಬಾಗಲಕೋಟ

ಹಿಂದುಸ್ಥಾನದ ಅನೇಕ ಸ್ಥಳಗಳಲ್ಲಿ ಸ್ವದೇಶಿ ವಸ್ತುಗಳ ಪ್ರದರ್ಶನವು ಜರುಗಿಸಲ್ಪಟ್ಟು ಅವುಗಳ ಮೂಲಕ ಜನರಲ್ಲಿ ಜಾಗ್ರತೆಯಾಗಿ, ಕಲಾಭಿವೃದ್ಧಿಗೆ ಬಹು ಅಂಶದಿಂದ ಪ್ರೋತ್ಸಾಹವು ದೊರೆತಿದೆ. ನಮ್ಮ ವಿಜಾಪುರ ಜಿಲ್ಲೆಯಲ್ಲಿ ಇಂಥ ಪ್ರದರ್ಶನದ ಯೋಜನೆಯು ಈ ವರೆಗೂ ಆಗದ್ದರಿಂದ ತಾ॥ 10-2-33 ನೇ ದಿವಸ ಸ್ವದೇಶಿ ವಸ್ತುಗಳ ಪ್ರದರ್ಶನ ಸಮಾರಂಭವನ್ನು ನೆರವೇರಿಸುವದಾಗಿ ನಿರ್ಣಯವಾಗಿದೆ. ರಾಷ್ಟ್ರದ ಸಾಂಪತ್ತಿಕ ಸ್ಥಿತಿಯ ಬೆಳವಣಿಗೆಗೆ ಕಲಾಕೌಶಲ್ಯಾಭಿವೃದ್ಧಿಯು ಮತ್ತು ಸ್ವದೇಶಿ ವಸ್ತುಗಳ ಉತ್ಪಾದನೆಯು ತಳಹದಿಯಾಗಿವೆ. ಅಲ್ಲಲ್ಲಿಯ ಸ್ವದೇಶಿ ವಸ್ತುಗಳ ಕಲಾಕೌಶಲ್ಯ ಮತ್ತು ಅನೇಕ ಸ್ವದೇಶಿ ಮಾಲುಗಳ ಸಂಗ್ರಹ, ಇವುಗಳ ಪ್ರದರ್ಶನದಿಂದ ಜನ ಜಾಗ್ರತೆಯಾಗಿ, ಇವುಗಳು ಊರ್ಜಿತಾವಸ್ಥೆಯನ್ನು ಹೊಂದುವದರಲ್ಲಿ ಏನೂ ಸಂಶಯವಿಲ್ಲ. ಅಲ್ಲಲ್ಲಿಯ ಸ್ವದೇಶಿ ಮಾಲಿನ ಉತ್ಪಾದಕರು ಇಂಥ ಸುಸಂಧಿಯನ್ನು ಕಳೆದುಕೊಳ್ಳದೆ, ತಮ್ಮ ತಮ್ಮ ವಸ್ತುಗಳನ್ನು ಪ್ರದರ್ಶನಕ್ಕೆ ಕಳುಹಿಸಿ ಅವುಗಳ ಪ್ರಸಾರಕ್ಕೆ ಉತ್ತೇಜನ ಹೊಂದಬೇಕಾಗಿ ಇಚ್ಛಿಸುತ್ತೇವೆ. ಮಾಲು ಇಡುವದರ ಬಗ್ಗೆ ಸ್ಟಾಲುಗಳ ಯೋಜನೆಯಾಗುವದಿದ್ದು ಅವುಗಳನ್ನು ಕಳುಹುವವರು 1933 ನೇ ಜನವರೀ 25 ನೇ ತಾರೀಖಿನೊಳಗಾಗಿ ನಮಗೆ ತಲ್ಪುವಂತೆ ಕಳುಹಿಸಲು ಪ್ರಾರ್ಥನೆ. ಹೆಚ್ಚಿನ ಮಾಹಿತಿಯ ಬಗ್ಗೆ ಬರೆದು ಕೇಳಿಕೊಳ್ಳಬೇಕು.

ಮುರಿಗೆಯ್ಯ ಸೋಮಯ್ಯ ಜಂಗಿನ
ಅಖಿಲ ಕರ್ನಾಟಕ ಸ್ವದೇಶಿ ವಸ್ತು ಪ್ರದರ್ಶನ ಕಮಿಟಿ,
ಬಾಗಲಕೋಟ.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ

34 M. C

ಪ್ರಕಟಣೆ.

ವಿಜಾಪುರ "ಶಿವಾನುಭವ ಗ್ರಂಥಮಾಲೆ" ವೀರಶೈವ ತತ್ವಗ್ರಂಥಗಳ ಬ್ರಾಂಚ ಡಿಪೊ ಮೈಸೂರು ಪ್ರಾಂತದವರೆಲ್ಲರಿಗೂ ಅನುಕೂಲವಾಗಲೆಂಬ ಉದ್ದೇಶದಿಂದ ಬೆಂಗಳೂರಿನಲ್ಲಿ ಏರ್ಪಡಿಸಿರುತ್ತೆ. ಬೇಕಾದವರು ಅಲ್ಲಿಂದಲೇ ಮೂಲ ಕಿಮ್ಮತ್ತಿಗೆ ತರಿಸಿಕೊಳ್ಳಬಹುದು.

ಅಡ್ರೆಸ್ಸು:—ಕೆ. ನಾಗಪ್ಪ, ಬಿ. ವಿಶ್ವನಾಥಪ್ಪ, ಶ್ರೀ ಸರ್ವಭೂಷಣ ಶಿವಯೋಗಿಗಳ ಮಠ, ಅಣ್ಣಮ್ಮದೇವರ ಗುಡಿ ಬೀದಿ, ಬೆಂಗಳೂರು ಸಿಟಿ.

[12—4] ಮತ್ತು ಹಿತಚಿಂತಕ ಪ್ರಿಂಟಿಂಗ್ ಪ್ರೆಸ್, ವಿಜಾಪುರ.

೧೯೩೨ ನೆಯ ಇಸವಿ ಡಿಸೆಂಬರ್ ತಾ॥ ೧೯ ರಿಂದ ಡಿಸೆಂಬರ್ ತಾ॥ ೨೫ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸ ನಾಮಸಂವತ್ಸರದ ಮಾರ್ಗಶಿರ ಬಹುಳ ಷಷ್ಠಿಯಿಂದ ಮಾರ್ಗಶಿರ ಬಹುಳ ತ್ರಯೋದಶಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಧನು ಮಾಸ
19	ಸೋಮ	ಷಷ್ಠಿ	10-8	ಪುಬ್ಬ	58-2	5
20	ಮಂಗಳ	ಸಪ್ತ	7-33	ಉತ್ತ	56-0	6
21	[1] ಬುಧ	ಅ ಉ	3-54-56-4	ಹಸ್ತ	53-22	7
22	ಗುರು	ದಶ	54-29	ಚಿತ್ತ	49-51	8
23	ಶುಕ್ರ	ಏಕಾ	49-41	ಸ್ವಾತಿ	46-1	9
24	ಶನಿ	ದ್ವಾದ	43-16	ವಿಶಾ	41-50	10
25	[2] ಭಾನು	ತ್ರಯೋ	37-17	ಅನೂ	37-35	11

(1) ಮಳೆನಕ್ಷತ್ರ-ಮೂಲ ೩ ನೆಯ ಪಾದ. (2) ಕ್ರಿಸ್ತಮಸ್, ಮಳೆನಕ್ಷತ್ರ-ಮೂಲ ೪ ನೆಯಪಾದ.

ಮೈಸೂರು: ವೈ. ವಿರೂಪಾಕ್ಷಯ್ಯನವರಿಂದ ಶ್ರೀ ... ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

RE G NO. M. 134.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಚಿಕಿತ್ಸಾ । ಘನಪಥಕ್ರಾವತಾರಾ ಪಕ್ಷಪತನಕೃತ ಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತ ಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ರಿಲೆಯಂಸದಾಪುರಿಗೆ ಗೌರೀಶಾನುಕಂಪೋಜ್ಜ್ವಲಂ ॥

[ಸ್ಥಳದವರಿಗೆ ವಾರ್ಷಿಕಚಂದಾ ೧-೧೦-೦] [ಪರಸ್ಥಳದವರಿಗೆ ೨-೮-೦] [ಲೈಬ್ರೆರಿಗೆ ೩-೮-೦]

ಸಂಪುಟ ೪೫] ಮೈಸೂರು ಸ್ಟಾರ್ ಸನ್ ೧೯೩೨ ನೆಯ ಇಸವಿ ಡಿಸೆಂಬರ್ ತಾರೀಖು ೨೬ ನೆಯ ಸೋಮವಾರ [ಸಂಚಿಕೆ ೫೨

Insurance in the Mysore State Life Insurance, Public Branch.

Life Insurance is admittedly the best form of investment and the greatest safeguard against the old age and death.

The best, safest, cheapest, most profitable and most convenient place of Insurance is the Public Branch of the Mysore State Life Insurance

Policies are issued from Rs. 100 to Rs. 10,000 and copies of rules and forms of application can be had from all Government-Treasuries Economic Superintendents, Helpers and the Insurance Office, Public Office Buildings Bangalore.

(Sd.) S. SHAMANNA,
Secretary, Insurance Committee.

[50—25]



[50—8]

ಮೈಸೂರು ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

	ಕ್ರಯ.	(ವಿ.ಪಿ. ಸೇ೦:
ವೀರಶೈವ ಶಿವಪೂಜಾವಿಧಿ	೦—೧೨—೦	೧—೨—೦
ಸಟೀಕ ವೀರಶೈವ ವಿವಾಹವಿಧಿ	೦—೮—೦	೦—೧೪—೦
ಷಟ್ಸ್ಥಲವಿದ್ಯಾ	೦—೪—೦	೦—೯—೦
ಚಾರುಶೀಲೆಚರಿತ್ರೆ	೦—೫—೦	೦—೧೦—೦
ಹರಿಭಾಗಿ	೦—೪—೦	೦—೯—೦
ವ್ರತಪಂಚಿಕೆ	೦—೪—೦	೦—೯—೦
ಗುರುಶಂಕರೇಶ್ವರಶತಕ	೨—೧—೦	೨—೬—೦
ಬಸವೇಶ್ವರವಚನ	೨—೮—೦	೦—೧೩—೦
ಸಟೀಕ ಕರ್ನಾಟಕಶಬ್ದಮಂಜರಿ	೦—೮—೦	೦—೧೩—೦
ಸಟೀಕ ಶತಕತ್ರಯ	೧—೦—೦	೧—೬—೦

ಮಕ್ಕಳಿದ್ದರೆಮನೆ ಚಂದ.

ಮಕ್ಕಳಿಲ್ಲೆಂದು ಚಿಂತಿಸಬೇಡಿರಿ

ಬಂಜೆತನದಿಂದ ಮುಕ್ತರಾಗುವಿರಿ

ಗರ್ಭಧಾರಣ ಸಂಜೀವನೀ

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾನ ಆಗುವವರೆಗೆ ಪ್ರತಿ ಸಾರೆ ಮೂರು ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆವಿಗುರಿ. ೯ ಗುಳಿಗೆಗಳ ಕಿ. ೩ ರೂಪಾಯಿ. ಟ. ಖ. ೫ ಆಣೆ

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ ಮಿರಜ. M. C. 34

CHITALDRUG DISTRICT BOARD

Notice dated 12th December 1932.

It is hereby notified that old and unserviceable articles of the District Board office will be sold away by public auction on 9th January 1933 at 2 P. M. near the District Board office (Town-Hall) Chitaldrug.

1. Usual sale conditions will be followed.
2. The list of articles and the articles themselves are available for inspection in the office during office hours.
3. One cobbler's sewing machine and a rope twisting caste iron plate are among those to be sold.

G. CHANNAPPA,
President, District Board.

ನಾರಿನಮೇಲೆ ರಾಮಬಾಣ

ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದೆ ಎಂದೂ ಆಗುವದಿಲ್ಲ ನಾರಿನವರು ಜರೂರತರಿಸಿ ಕೊಳ್ಳಿರಿ. ಕಿ. ೧। ರೂ. ಟ. ಖ. ೫ ಆಣೆ.

ಪತ್ತಾ—ವೈದ್ಯ ವ್ಹಿ. ಎಸ್. ಕಾಪಸೆ, ಮಿರಜ.

35 M. C

ಪ್ರಕಟಣೆ.

ವಿಜಾಪುರ "ಶಿವಾನುಭವ ಗ್ರಂಥಮಾಲೆ" ವೀರಶೈವ ತತ್ವಗ್ರಂಥಗಳ ಬ್ರಾಂಚ ಡಿಪೊ ಮೈಸೂರು ಪ್ರಾಂತದವರೆಲ್ಲರಿಗೂ ಅನುಕೂಲವಾಗಲೆಂಬ ಉದ್ದೇಶದಿಂದ ಬೆಂಗಳೂರಿನಲ್ಲಿ ಏರ್ಪಡಿಸಿರುತ್ತೆ. ಬೇಕಾದವರು ಅಲ್ಲಿಂದಲೇ ಮೂಲ ಕಿಮ್ಮತ್ತಿಗೆ ತರಿಸಿಕೊಳ್ಳಬಹುದು.

ಅಡ್ರೆಸ್ಸು:—ಕೆ. ನಾಗಪ್ಪ, ಬಿ. ವಿಶ್ವನಾಥಪ್ಪ, ಶ್ರೀ ಸರ್ವಭೂಷಣ ಶಿವಯೋಗಿಗಳ ಮಠ, ಅಣ್ಣಮ್ಮದೇವರ ಗುಡಿ ಬೀದಿ, ಬೆಂಗಳೂರು ಸಿಟಿ.

[12—5] ಮತ್ತು ಹಿತಚಿಂತಕ ಪ್ರಿಂಟಿಂಗ್ ಪ್ರೆಸ್, ವಿಜಾಪುರ.

ಡಾಕ್ಟರ್ ಜೇ. ಬೀ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು

(Registerd Trade Mark)

ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಗುಣವಾಗುವ ವ್ಯಾಧಿಗಳು ಯಾವವೆಂದರೆ—ತಲೆಶೂಲಿ, ಒಂಟಿತಲೆನೋವು ತಲೆಸುತ್ತುವಿಕೆ, ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ ೬೪ ವ್ಯಾಧಿಗಳನ್ನೂ ನಾಶಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಚಿಟಿಕೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಬೆರಸಿಯಿದರೆ ಎಲ್ಲಾ ಪರಿಮಳವಾಗುವುದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸಿಗೆ ಪುಕಟ್ಟೆ ಕಳುಹಿಸುವೆವು.

ಚಿಕ್ಕ ಬಾಟಲ್ ಕ್ರಯ ರೂ. ೦—೪—೦. ವಿ. ಪಿ. ೦—೭—೦.
ದೊಡ್ಡ ೧ ಕ್ರಯ ರೂ. ೨—೮—೦. ವಿ. ಪಿ. ಚಾರ್ಜಿ ೩ ಆಣೆ.

ದಯಮಾಡಿ ನಿಮ್ಮ ಹೆಸರನ್ನು, ಅಡ್ರೆಸ್ಸನ್ನು ಸ್ಪಷ್ಟವಾಗಿ ಬರೆಯಿರಿ.

ವಿಳಾಸ—ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[50—17] ಪೋ. ಬಾ. ೫೫೧, ಮದರಾಸು.

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಡಿಸೆಂಬರ್ ತಾ|| ೨೬ ನೆಯ ಸೋಮವಾರ.

LEGISLATIVE COUNCIL

The winter session of the Mysore Legislative Council concluded its sitting on the 20th instant. The session was very important both for the quality and quantity of work it turned out. It was a very heavy session entailing heavy responsibilities on the part of those who sat in the House. Many important measures such as City, Town and Minor Municipalities bills; a bill relating to the rights of women under Hindu Law; a bill to repeal the breach of Contract Regulation; a bill to amend the University Regulation etc., besides other cut motions, resolutions and interpellations were passed. The bills, important as they are, affecting the administration of local-self-Government; of the rights of women and of the working of the University, evoked a very keen interest. The debate throughout marked a high tone of discussion a liberal and progressive view of tackling the measures. Many amendments were moved by the non-official Councillors and their rejection on account of, official and Government nominees' opposition is regrettable. It is noteworthy that Mr. H. C. Dasappa representing Mysore City fought hard by means of a number of amendments for the deletion of some of the obnoxious clauses in Municipalities bills. He strove for the introduction of a clause in the City Municipal bill to empower the Council to elect its own president in the City of Mysore. He had also moved an amendment to do away with the system of nomination in the City and Town Municipal Councils. These amendments no doubt marked a further advancement in the administration of local-self-Government and certainly will have the approval of all sane-thinking public. It is to be regretted that these amendments were lost. The other amendments of Mr. Dasappa regarding the complete abolition of limited Estates and of securing the right of separate maintenance to a wife when the husband marries again met with the same fate. Dr. Mylvaganam's amendment to retain the right of election to the out-going Senate to the new Senate was certainly wholesome. Its rejection leaves a gap which is not easy to be bridged. The out-going Senate is really a competent body to choose men of ability and experience in the interest of University education. The cut motions brought out the unsatisfactory position of Iron works and its ruinous effects on the resources of the State. The question of Temple-entry had the whole hearted support of the House though the Government were non-comittle in their attitude. The attitude of the Government on all occasions was not what is desirable in a 'responsive' Government. It exhibited a lack of appreciation of the non-official view point. It is hoped that Government would heed the voice of the people's representatives and carry on its policy in conformity to popular will.

ನ್ಯಾಯವಿಧಾಯಕ ಸಭೆ

ಕಳೆದ ತಾ|| 14 ರಲ್ಲಿ ಆರಂಭವಾಗಿ ತಾ|| 21 ರಲ್ಲಿ ಮುಕ್ತಾಯವಾದ ಮೈಸೂರು ನ್ಯಾಯವಿಧಾಯಕ ಸಭೆಯ ಕಾರ್ಯಕಲಾಪಗಳು ಹೆಚ್ಚಾಗಿಯೂ ಸ್ವಾರಸ್ಯವಾಗಿಯೂ ಇದ್ದುದರಿಂದ ಸಭೆಯು ಬಹಳ ಪ್ರಾಮುಖ್ಯವಾಗಿದ್ದಿತಲ್ಲದೆ ಅದರ ಸಭಿಕರ ಉತ್ತರವಾದಿತ್ವವೂ ಅಧಿಕವಾಗಿದ್ದಿತು. ಸಿಟಿ, ಟವರ್ ಮತ್ತು ಮೈನರು ಮ್ಯುನಿಸಿಪಾಲಿಟಿಗಳ ಬಿಲ್ಲು, ಸ್ತ್ರೀವಾರಸತ್ವದ ಬಿಲ್ಲು, ಬ್ರೀಚ್ ಆಫ್ ಕಂಟ್ರಾಕ್ಟು ಆಕ್ಟನ್ನು ತಪ್ಪಿಸುವ ಬಿಲ್ಲು, ವಿಶ್ವವಿದ್ಯಾಲಯ ನಿಯಮಗಳ ಬಿಲ್ಲು, ಇತರ ಬಿಲ್ಲುಗಳು ಅನುಮೋದಿತವಾದವು. ಸ್ಥಳೀಯ ಸರ್ಕಾರದ ಆಡಳಿತ, ಸ್ತ್ರೀವಾರಸತ್ವ, ವಿಶ್ವವಿದ್ಯಾಲಯ ನಿಯಮ ಇವುಗಳಿಗೆ ಸಂಬಂಧಪಟ್ಟ ಬಿಲ್ಲುಗಳು ಬಹಳ ಕುಂದಕವಾಗಿದ್ದುದರಿಂದ ಅವುಗಳ ಮೇಲೆ ಚರ್ಚೆಯು ಬಹಳ ಸ್ವಾರಸ್ಯವಾಗಿಯೂ ತೀಕ್ಷ್ಣವಾಗಿಯೂ ಇದ್ದಿತಲ್ಲದೆ ಚರ್ಚಿಸಿದ ಮೆಂಬರುಗಳ ಉದಾರ ಮತ್ತು ಪ್ರಾಗತಿಕ ಭಾವವನ್ನು ವ್ಯಕ್ತಗೊಳಿಸುತ್ತಿದ್ದಿತು. ಅನಾಫೀಶಿಯಲ್ ಮೆಂಬರುಗಳಿಂದ ಅನೇಕ ಸವರಣಗಳು ಸೂಚಿಸಲ್ಪಟ್ಟವಾದರೂ, ಔದ್ಯೋಗಿಕ ಮತ್ತು ನಾಮಕರಣರಾದ ಮೆಂಬರುಗಳ ಸಂಖ್ಯೆಯು ಹೆಚ್ಚಾಗಿರುವುದರಿಂದ ಅವು ಅಂಗೀಕರಿಸಲ್ಪಡಲಿಲ್ಲ. ರಾಜಧಾನಿಯ ಕಂದಾಯದಾರರ ಪ್ರತಿನಿಧಿಗಳಾಗಿರುವ ಮ|| ಎಚ್. ಸಿ. ದಾಸಪ್ಪನವರು ಮ್ಯುನಿಸಿಪಾಲಿಟಿಗಳ ಬಿಲ್ಲಿನಲ್ಲಿರತಕ್ಕ ದೋಷಭಾಗಗಳನ್ನು ತೆಗೆಯಬೇಕೆಂದೂ, ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನವರು ತಮ್ಮ ಅಧ್ಯಕ್ಷನನ್ನು ತಾವೇ ನಿಯಮಿಸಿಕೊಳ್ಳುವ ಅಧಿಕಾರವಿರಬೇಕೆಂದೂ ಸಿಟಿ ಮತ್ತು ಟವರ್ ಮ್ಯುನಿಸಿಪಾಲಿಟಿಗಳಿಗೆ ಮೆಂಬರುಗಳನ್ನು ನಾಮಕರಣ ಮಾಡುವ ಪದ್ಧತಿಯನ್ನು ತಪ್ಪಿಸಬೇಕೆಂದೂ ಕೆಲ ಸವರಣೆಗಳನ್ನು ಪ್ರತಿಪಾದಿಸಿದರು. ಈ ಸವರಣೆಗಳು ಸ್ಥಳೀಯ ಸರ್ಕಾರದ ಆಡಳಿತಕ್ಕೆ ಬಹಳಮಟ್ಟಿಗೆ ಪ್ರಯೋಜನಕರವಾಗಿರುವವಲ್ಲದೆ ವಿವೇಕ ಪ್ರಜೆಗಳಿಂದ ಅಂಗೀಕರಿಸಲ್ಪಡತಕ್ಕವಾಗಿರುವವು. ಈ ಸವರಣಗಳೂ, ಒಬ್ಬ ಪುರುಷನು ಮೊದಲನೆಯ ಪತ್ನಿ ಇರುವಾಗ ಎರಡನೆಯ ಮದುವೆಯನ್ನು ಮಾಡಿಕೊಂಡಾಗ್ಗೆ ಮೊದಲನೆಯ ಪತ್ನಿಗೆ ಪತಿಯಾಸ್ತಿಯಲ್ಲಿ ಯಾವ ಹಕ್ಕೂ ಇಲ್ಲದೆ ಜೀವನಾಂಶ ಮಾತ್ರ ದೊರೆಯಬೇಕೆಂಬ ಭಾಗವನ್ನು ತೆಗೆಯಬೇಕೆಂಬ ಸವರಣವೂ, ವಿಶ್ವವಿದ್ಯಾಲಯದ ಸೆನೆಟು ಮೆಂಬರುಗಳು ನಿವೃತ್ತರಾಗುವಾಗ್ಗೆ ಹೊಸ ಮೆಂಬರುಗಳನ್ನು ಚುನಾಯಿಸುವ ಅಧಿಕಾರವು ತಪ್ಪಿಸಕೂಡದೆಂಬ ಡಾಕ್ಟರ್ ಮೈಲ್ವಾಗನರವರ ಸವರಣವೂ ಅನುಮೋದಿತವಾಗಲಿಲ್ಲ. ಭದ್ರಾವತಿ ಕಬ್ಬಿಣದ ಕಾರ್ಯಾಲಯದ ವ್ಯಯವನ್ನು ಕಡಿಮೆಮಾಡಬೇಕೆಂಬ ಚರ್ಚೆಯಲ್ಲಿ, ಸಂಸ್ಥಾನದ ಬೊಕ್ಕಸವನ್ನು ಕರಗಿಸಿ ನೀರುಮಾಡಿ ಭದ್ರಾನದಿಯಲ್ಲಿ ಹರಿಸಿಬಿಡುತ್ತಿರುವ ಈ ಕಾರ್ಯಾಲಯದ ನ್ಯೂನತೆಯೂ, ಅಸಮರ್ಪಕಸ್ಥಿತಿಯೂ ಬೈಲಾದುವು. ಹರಿಜನರ ದೇವಾಲಯ ಪ್ರವೇಶ ವಿಚಾರವು ಚರ್ಚಿತವಾಗಿ ಐಕ್ಯಕಂಠದಿಂದ ಅನುಮೋದಿತವಾಯಿತು, ಆದರೆ ಪ್ರಭುತ್ವದವರು ಮಾತ್ರ ಪ್ರಜಾಭಿಪ್ರಾಯವನ್ನು ತಿಳಿಯದೆ ತಾವೇನನ್ನೂ ಹೇಳಲಿಕ್ಕಾಗುವುದಿಲ್ಲವೆಂಬ ಭಾವವನ್ನು ವ್ಯಕ್ತಪಡಿಸಿದರು. ಈ ಭಾವವು ಜವಾಬ್ದಾರಿ ಪ್ರಭುತ್ವಕ್ಕೆ ಅನುಗುಣವಾಗಿರುವುದಿಲ್ಲವಲ್ಲದೆ ಅನಾಫೀಶಿಯಲ್ ಮೆಂಬರುಗಳ ಅಭಿಪ್ರಾಯಕ್ಕೆ ತೀರ ವಿರುದ್ಧವಾಗಿರುವುದು. ನಮ್ಮ ಪ್ರಭುತ್ವದವರು ಜನತೆಯ ಅಭಿಪ್ರಾಯವನ್ನು ತಿಳಿದು ಬಹುಮತದಂತೆ ವರ್ತಿಸುವರೆಂದು ನಿರೀಕ್ಷಿಸುತ್ತೇವೆ.

ಪಾರಿತೋಷಿಕ ವಿನಿಯೋಗಸಮಾರಂಭ

ರಾಜಧಾನಿಯಲ್ಲಿರುವ ಅಂಗವಿಕಲರ ಪೋಷಣಾಲಯದ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳಿಗೆ ಪಾರಿತೋಷಿಕಗಳು ಕಳೆದ ಗುರುವಾರ ಶ್ರೀಮದ್ಯುವರಾಜರವರ ಅಮೃತಹಸ್ತದಿಂದ ಕೊಡಲ್ಪಟ್ಟವು. ಆ ಕಾಲದಲ್ಲಿ ಶ್ರೀಮದ್ಯುವರಾಜರವರು " ಈ ಆಲಯದ ಕಾರ್ಯಕಲಾಪಗಳ ವರದಿಯು ಉತ್ಸಾಹಜನಕವಾಗಿದೆ. ಈಗ್ಗೆ 5 ವರ್ಷಗಳ ಹಿಂದೆ ನೋಡಿದ್ದವರು ಈಗ ನೋಡಿದರೆ ಆಲಯವು ಎಲ್ಲ ಭಾಗದಲ್ಲೂ ಅಭಿವೃದ್ಧಿಗೆ ಬಂದಿರುವುದನ್ನು ತಿಳಿದು ಸಂತೋಷಪಡದೆ ಇರಲಾರರು. ಹಿಂದೆ ಪ್ರತಿದಿನವೂ ಕಾಯಿಲೆ ಇರುತ್ತಿದ್ದವರ ಸಂಖ್ಯೆಯು 5 ಇದ್ದುದು ಈಗ 3 33 ಕ್ಕಿಳಿದಿರುತ್ತದೆಂದೂ, ಪ್ರತಿಯೊಬ್ಬನ ದೇಹ ತೂಕವು ಹೆಚ್ಚಿರುತ್ತದೆಂದೂ ಡಾಕ್ಟರ ವರದಿಯಿಂದ ತಿಳಿಯಬರುತ್ತದೆ. ಈ ಸಂಸ್ಥೆಯ ವಿಚಾರದಲ್ಲಿ ನನಗೆ ವಿಶೇಷ ಅಭಿಮಾನವಿರುವುದು. ಈಗ ಈ ನಿರ್ಭಾಗ್ಯ ಹುಡುಗರಿಗೆ ಆರೋಗ್ಯಕರವಾದ ವಾಸ ಸ್ಥಲವೂ ಸಮರ್ಪಕವಾದ ಊಟವೂ, ಒಂದೇ ಮಾದರಿಯ ಉಡುಪೂ ಒದಗಿಸಲ್ಪಟ್ಟಿರುವುದನ್ನು ಮತ್ತು ಅವರುಗಳು ಕೈ ತೋಟಗಳನ್ನೂ, ಆಟಪಾಟಗಳನ್ನೂ ಮಾಡಿಕೊಂಡು ಹಸನ್ಮುಖಿಗಳಾಗಿರುವುದನ್ನೂ ನೋಡಿ ನನಗೆ ಸಂತೋಷವಾಗುತ್ತದೆ. ಕೆಲ ವರ್ಷಗಳ ಹಿಂದೆ ಕಾಯಿಲೆ ಹುಡುಗರು ಒಬ್ಬನ ಕೈ ಇನ್ನೊಬ್ಬನು ಹಿಡಿದುಕೊಂಡು ವ್ಯಾಯಾಮಕ್ಕಾಗಿ ಸಂಚರಿಸುತ್ತಿದ್ದುದನ್ನು ಈಗ ವಿದ್ಯಾರ್ಥಿಗಳು ಆರೋಗ್ಯವಾಗಿದ್ದು ಇತರ ಸಹಾಯವಿಲ್ಲದೆ ಸ್ವತಃ ವ್ಯಾಯಮ ಮಾಡುತ್ತಿರುವುದಕ್ಕೆ ಹೋಲಿಸಿದರೆ ಸಂಸ್ಥೆಯು ಬಹಳಮಟ್ಟಿಗೆ ಸುಧಾರಿಸಿರುತ್ತದೆಂದು ಕಂಡುಬರುತ್ತದೆ. ಹೀಗಿದ್ದಾಗ್ಯೂ ಸಂಸ್ಥೆಯಲ್ಲಿ ಇನ್ನೂ ನ್ಯೂನತೆಗಳಿವೆ. ಈಗಿನ ಕಟ್ಟಡವು ಅರ್ಧವಾಗಿರುವುದರಿಂದ ಪೂರ್ತಿಯಾಗಬೇಕು ಮತ್ತು ಉಪಾಧ್ಯಾಯರ ಸಂಖ್ಯೆಯು ಹೆಚ್ಚಬೇಕು. ಧರ್ಮಾತ್ಮರುಗಳಿಂದಾಗಲಿ ಪ್ರಭುತ್ವದವರಿಂದಾಗಲಿ ಸಹಾಯ ಮಾಡುವ ಕಾಲವು ಶೀಘ್ರದಲ್ಲಿ ಪ್ರಾಪ್ತವಾಗಿ ಮೇಲಿನ ಕೊರತೆಗಳು ನಿವಾರಣೆಯಾಗುವುವೆಂದು ನಿರೀಕ್ಷಿಸುತ್ತೇನೆ. ಈ ಸಂಸ್ಥೆಯಲ್ಲಿ 72 ಹುಡುಗರೂ ಸ್ತ್ರೀಕಸಬು ಬೋಧನಾಲಯದಲ್ಲಿ 7 ಹುಡುಗಿಯರೂ, ಬೆಂಗಳೂರಿನಲ್ಲಿ 30 ಹುಡುಗರೂ ಪೋಷಣೆಯಲ್ಲಿರುತ್ತಾರೆ. ಸಂಸ್ಥಾನದಲ್ಲಿರುವ ಅಂಗವಿಕಲರ ಒಟ್ಟು ಸಂಖ್ಯೆಯಲ್ಲಿ 30 ಕ್ಕೆ 1ರಂತೆ ಸಹ ಅವರಿಗೆ ಸಹಾಯವು ದೊರೆಯುತ್ತಿಲ್ಲ. ಇನ್ನು 3000 ಚಿಲ್ಲರೆಯವರ ಗತಿಯೇನು? ಈ ಸಂಸ್ಥೆಗೆ ಮಕ್ಕಳು ಬರುವಾಗಣಸ್ಥಿತಿಯನ್ನೂ, ಬಂದು ಹಿಂದಿರುಗಿ ಸ್ವಸ್ಥಳಕ್ಕೆ ಹೋದ ಮೇಲಿನ ಸ್ಥಿತಿಯನ್ನೂ, ಬೀದಿಗಳಲ್ಲಿ ಅಲೆಯುವ ಕುರುಡು ಮಕ್ಕಳ ಸ್ಥಿತಿಯನ್ನೂ ನೋಡಿದರೆ ಅವರ ಅವಸ್ಥೆಯು ಬಹಳ ಶೋಚನೀಯವಾಗಿರುವುದೆಂದು ನಮಗೆ ತೋರದೆ ಇರುವುದಿಲ್ಲ. ಇದರಿಂದ ರಾಜಧಾನಿಯ ನಿವಾಸಿಗಳಾದ ನಾವೆಲ್ಲರೂ ಅವರ ಸಂರಕ್ಷಣೆಗೆ ತಕ್ಕೇರ್ಪಾಟು ಮಾಡಬೇಕೆಂದೂ, ಈ ಸಂಸ್ಥೆಯು ಕಾಲಕ್ರಮೇಣ ಅಭಿವೃದ್ಧಿಯಾಗಬೇಕಲ್ಲದೆ ಇದರಂತೆ ಅನೇಕ ಸಂಸ್ಥೆಗಳು ದೇಶದ ಅನೇಕ ಸ್ಥಳಗಳಲ್ಲಿ ಉತ್ಪನ್ನವಾಗಬೇಕೆಂದೂ ವ್ಯಕ್ತವಾಗುತ್ತದೆ. ಮೇಲೆ ಹೇಳಿದುದೆಲ್ಲವೂ ಅಂಗವಿಕಲರ ಸಂರಕ್ಷಣೋಪಾಯವಾಯಿತು. ಸಂಸ್ಥಾನದ ಕುರುಡು ಮಕ್ಕಳಲ್ಲಿ ಬಹುಭಾಗದವರಿಗೆ ಕಣ್ಬೇನೆಯಿಂದಲೂ ಸಿಡುಬಿನಿಂದಲೂ ಕಣ್ಣುಗಳು ಹೋಗುತ್ತವೆ. ಕಣ್ಬೇನೆಗೆ ಸುಲಭ ಚಿಕಿತ್ಸೆಯುಂಟು ಮತ್ತು ಸಿಡುಬಿನುಪದ್ರವಕ್ಕೆ ಹುಚ್ಚಾಕುವುದೇ ಬಹಳ ಸುಲಭೋಪಾಯವು. ಆದುದರಿಂದ, ಮಕ್ಕಳ ಪ್ರದರ್ಶನ ದಿನಗಳನ್ನು ನಡೆಯಿಸತಕ್ಕ ರೆಡ್‌ಕ್ರಾಸ್ ಸೊಸೈಟಿಯವರು ಪ್ರದರ್ಶನದಲ್ಲೇ ತೃಪ್ತರಾಗದೆ ಪ್ರತಿಯೊಂದು ಮಗುವಿಗೂ ಸಿಡುಬನ್ನು ಹಾಕಿಸಲೇರ್ಪಡಿಸುವುದೂ, ಹುಣ್ಣಿದ್ದಾಗ ತಕ್ಕ ಚಿಕಿತ್ಸೆಮಾಡಿಸುವುದೂ, ಮಕ್ಕಳು ಹುಟ್ಟಿದಾಗ ಕಣ್ಬೇನೆಯಾಗದಂತೆ ನೋಡಿಕೊಳ್ಳುವುದೂ ಅತ್ಯಾವಶ್ಯಕವು " ಎಂದು ಮೊದಲಾಗಿ ಅಪ್ಪಣೆ ಕೊಡಿಸಿದರು.

ವಿಷಾದ ಪ್ರದರ್ಶನ

1932 ನೆಯ ಮಾರ್ಚಿ ತಾ|| 28 ರ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ " ವಚನಗಳ ವಿವೇಚನೆಯು " ಎಂಬ ಶೀರ್ಷಿಕದಿಂದ ಒಂದು ಲೇಖನವನ್ನು ಓರ್ವ ಯಥಾರ್ಥವಾದಿ ಎಂಬವರು ಬರೆದಿರುವರು. ಅದರಲ್ಲಿ ಶರಣರ ವಚನಗಳ ಮೇಲೆ ಟೀಕೆಯನ್ನು ಮಾಡುವಾಗ್ಗೆ ಧಾರವಾಡದಲ್ಲಿ ಇಂಥಾದ್ದೊಂದು ತಂಡವಿದ್ದು ಬಹಳ ಅನಾಚಾರದಿಂದ ನಡೆಯುತ್ತಲಿದೆ ಎಂದು ಮೊದಲಾಗಿ ಬರೆಯಲ್ಪಟ್ಟಿದೆ. ಈ ಲೇಖದಲ್ಲಿ ಕಂಡ ಕಂಡದ ವಿಷಯವು ಧಾರವಾಡದ ಸತ್ಯಸೇವಕ ಸಂಘದವರನ್ನುದ್ದೇಶಿಸಲ್ಪಟ್ಟಿರುವುದೆಂದೂ, ಇದು ಶುದ್ಧ ಸುಳ್ಳು ಇರುವುದಲ್ಲದೆ ಕೇವಲ ದುಷ್ಟ ಮತ್ತು ಅಸೂಯಾ ಬುದ್ಧಿಯಿಂದ ಬರೆಯಲ್ಪಟ್ಟಿರುವ ಪ್ರಯುಕ್ತ ಯಥಾರ್ಥವಾದಿ ಎಂಬ ಕಳ್ಳ ಹೆಸರಿನ ವ್ಯಕ್ತಿಯೂ, ಪತ್ರಿಕಾ ಸಂಪಾದಕರೂ ಪಶ್ಚಾತ್ತಾಪವನ್ನು ತಿಳಿಸಿ ಸಂಘದ ಕ್ಷಮೆಯನ್ನು ಕೋರಬೇಕೆಂದೂ, ಯಥಾರ್ಥವಾದಿಯ ನಿಜ ನಾಮವನ್ನು ತಿಳಿಸಬೇಕೆಂದೂ, ಹಾಗೆ ಮಾಡದೆ ಹೋದರೆ ತಕ್ಕ ನ್ಯಾಯಸ್ಥಾನದಲ್ಲಿ ಮಾನನಷ್ಟಕ್ಕಾಗಿ ನಮ್ಮಗಳ ಮೇಲೆ ಕ್ರಮ ಜರುಗಿಸಲ್ಪಡುವುದೆಂದೂ ಮೇಲ್ಕಂಡ ಸತ್ಯ ಸೇವಕ ಸಂಘದ ಸೆಕ್ರೆಟರಿಯವರು ನಮಗೆ ನೋಟೀಸನ್ನು ಕೊಟ್ಟಿರುತ್ತಾರೆ. ಧಾರವಾಡದ ಸತ್ಯಸೇವಕ ಸಂಘದವರನ್ನು ನಿಂದಿಸುವುದಾಗಲಿ ಅಲ್ಲಗಳೆಯುವುದಾಗಲಿ ನಮ್ಮುದ್ದೇಶವಲ್ಲವು, ಅಲ್ಲದೆ ಧಾರವಾಡದಲ್ಲಿ ಈ ಸಂಘವಿರುವುದೇ ನಮಗೆ ವಾಸ್ತವ್ಯವಾಗಿ ತಿಳಿದಿರಲಿಲ್ಲ. ಈ ಸಂಘದವರನ್ನು ನಿಂದಿಸಿ ಅವರ ಮನಸ್ಸಿಗೆ ವ್ಯಥೆಯನ್ನುಂಟುಮಾಡಬೇಕೆಂಬ ಉದ್ದೇಶದಿಂದ ಯಥಾರ್ಥವಾದಿಯ ಲೇಖನವನ್ನು ನಾವು ಪ್ರಕಟಿಸಿಲ್ಲವಾದರೂ ಇದರಿಂದ ಅವರ ಮನಸ್ಸಿಗೆ ವ್ಯಥೆಯಾಗಿರುವುದಾದಲ್ಲಿ ನಮ್ಮ ವಿಷಾದವನ್ನು ತಿಳಿಸಿ ಸಂಘದವರ ಕ್ಷಮೆಯನ್ನು ಕೋರುತ್ತೇವೆ. ಮೇಲ್ಕಂಡ ಯಥಾರ್ಥವಾದಿಯ ಲೇಖವು ಪ್ರಕಟವಾಗಿ 7 ತಿಂಗಳುಗಳಾದುವು ಪತ್ರವ್ಯವಹಾರಗಳು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾದ 3 ತಿಂಗಳ ಕಾಲದ ಮೇಲೆ ಮೂಲ ಲೇಖಗಳು ನಾಶಪಡಿಸಲ್ಪಡುವ ನಮ್ಮ ನಿಯಮದಂತೆ ಯಥಾರ್ಥವಾದಿಯ ಹಸ್ತಲಿಖಿತ ಪತ್ರವು ನಾಶಪಡಿಸಲ್ಪಟ್ಟಿರುವುದರಿಂದ ಯಥಾರ್ಥವಾದಿಯ ಹೆಸರು ವಿಳಾಸವನ್ನು ತಿಳಿಸಲೆತ್ನವಿಲ್ಲವಾಗಿ ವಿಷಾದಿಸುತ್ತೇವೆ. ಆ ಯಥಾರ್ಥವಾದಿಯು ತಮ್ಮ ನಿಜ ನಾಮವನ್ನು ಧಾರವಾಡದ ಸತ್ಯಶೋಧಕ ಸಂಘದವರಿಗೆ ತಿಳುಹಿಸಿ ಯಥಾರ್ಥವಾದಿಯೆಂಬ ಹೆಸರನ್ನು ಸಾರ್ಥಕಪಡಿಸಿಕೊಳ್ಳುವರೆಂದು ನಿರೀಕ್ಷಿಸುತ್ತೇವೆ.

ಮೈ. ವಿರೂಪಾಕ್ಷಯ್ಯ
ಸಂಪಾದಕ ಮತ್ತು ಪ್ರಕಾಶಕ,
ಮೈಸೂರು ಸ್ಟಾರ್, ಮೈಸೂರು.

ಅಖಿಲಭಾರತ ವೇದಾಂತ ಮಹಾಸಭೆ

ಈ ಮಹಾಸಭಾಧಿವೇಶನವು ಕಳೆದ ಸೋಮವಾರ ಸಾಯಂಕಾಲ 4 ಘಂಟೆಯಲ್ಲಿ ಜಗನ್ಮೋಹನಪ್ರಾಸಾದದ ಸಭಾಂಗಣದೊಳಗೆ ಶ್ರೀಮನ್ಮಹಾರಾಜರವರಿಂದ ಆರಂಭಿಸಲ್ಪಟ್ಟು ಡಾಕ್ಟರ್ ಸರ್ ಎಸ್. ರಾಧಾಕೃಷ್ಣನ್, ಡಿ.ಲಿಟ್., ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಮನ್ಮಹಾರಾಜರವರು ತಮ್ಮ ಆರಂಭ ಭಾಷಣದಲ್ಲಿ ಅಪ್ಪಣೆಕೊಡಿಸಿದುದರ ಮುಖ್ಯಾಂಶವೇನೆಂದರೆ— ಈ ಮಹಾಸಭೆಯು ನೆರೆಯುವ ವಿಚಾರದಲ್ಲಿ ಕಲಕತ್ತ, ಬೊಂಬಾಯಿ ಮದ್ರಾಸು ಮತ್ತು ಮಹಾಪವಿತ್ರಕ್ಷೇತ್ರವಾದ ಕಾಶಿ ಪಟ್ಟಣಗಳನ್ನು ಮೈಸೂರು ಮೀರಿಸಲಾರದುದಾಗಿದ್ದರೂ ತಕ್ಕ ಸ್ಥಳವಾಗಿರುವುದೆನ್ನಲು ಕೆಲ ಕಾರಣಗಳಿರುತ್ತವೆ. ವೇದಾಂತಿಗಳಾವಾಸಸ್ಥಾನವಾಗಿದ್ದ ಮೈಸೂರಿಗೆ ತಮ್ಮನ್ನು ಆಹ್ವಾನಿಸುತ್ತೇನೆ. ಶ್ರುತಕೇವಲಿ ಭದ್ರಬಾಹು ತನ್ನ ಜೈನಧರ್ಮಿಗಳೊಡನೆ ದಕ್ಷಿಣದೇಶಕ್ಕೆ ಸ್ಥಳಾಂತರಮಾಡುವಾಗ್ಗೆ ಮೈಸೂರು ದೇಶದಲ್ಲಿ ನೆಲಸಿದನು. ಶ್ರೀ ಶಂಕರಾಚಾರ್ಯರು ತಮ್ಮ ಮುಖ್ಯ ಪೀಠವನ್ನು ಸ್ಥಾಪಿಸಿದುದು ಮೈಸೂರಿನಲ್ಲೇ. ಶ್ರೀ ರಾಮಾನುಜಾಚಾರ್ಯರು ಚೋಳರಾಜರ ಉಪಟಳವನ್ನು ಸಹಿಸಲಾರದೋಡಿಬಂದು ತಮ್ಮ ಧರ್ಮಪ್ರಸಾರವನ್ನು ಮಾಡಿದುದು ಮೈಸೂರಿನಲ್ಲೇ. ಶ್ರೀ ಮಧ್ವಾಚಾರ್ಯರ ದ್ವೈತ ಮತ ಸಿದ್ಧಾಂತಕ್ಕೆ ಪ್ರಾಶಸ್ತ್ಯವುಂಟಾದುದೂ ಮೈಸೂರಿನಲ್ಲೇ. ಈ ಮೈಸೂರಿನಲ್ಲಿ ವೀರಶೈವ ಮತಸಿದ್ಧಾಂತವು ಅನೇಕ ಶತಮಾನಗಳಿಂದಲೂ ಅಭಿವೃದ್ಧಿಗೆ ಬಂದಿರುತ್ತದೆ.

ಮುಂದುವರಿಯುವುದು.

ಒಳದೇಶದ ವೃತ್ತಾಂತಗಳು

ಶ್ರೀ ಜಯಚಾಮರಾಜ ಒಡೆಯರವರು ಮಲೇರಿಯಾ ಜ್ವರರೋಗಪೀಡಿತರಾಗಿದ್ದು ವೈದ್ಯರ ಔಷಧೋಪಚಾರದಿಂದ ಗುಣವನ್ನು ಹೊಂದುತ್ತಿರುವುದಾಗಿ ತಿಳಿಯಬರುತ್ತದೆ.

ಕಳೆದ ನವೆಂಬರ್ ತಿಂಗಳಲ್ಲಿ ರಾಜಧಾನಿಯೊಳಗೆ 270 ಮಕ್ಕಳ ಜನನವಾಗಿ 286 ಮರಣಗಳಾಗಿರುತ್ತವೆ. ಪ್ಲೇಗು ರೋಗವು 46 ಮಂದಿಗೆ ತಗಲಿ 39 ಮಂದಿಗಳು ಸತ್ತರು.

ರಾಜಧಾನಿಯ ಹಳೇ ಪೋಸ್ಟಾಫೀಸು ರಸ್ತೆಯಲ್ಲಿರುವ ಡೈಯಿಂಗ್, ವೀವಿಂಗ್ ಮತ್ತು ಮೆಟಲ್ ಫ್ಯಾಕ್ಟರಿ ಯಜಮಾನರುಗಳಾದ ಮ|| ವಜ್ರನಾಥಯ್ಯ ಮತ್ತು ಕಂಪೆನಿಯವರು ಪ್ರಕಟಿಸಿರುವ ತೈಲಚಿತ್ರಸಮೇತವಾದ 1933 ನೆಯ ವರ್ಷದ ಕ್ಯಾಲೆಂಡರನ್ನು ಪ್ರೀತಿಪುರಸ್ಸರವಾಗಿ ಸ್ವೀಕರಿಸಿದೆ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ತುಮಕೂರು ವೀರಶೈವ ಮಹಾಜನರ ಪ್ರಾರ್ಥನೆಯಂತೆ ಸಕಲ ಬಿರುದಾವಳಿ ಸಮೇತ ರಜತಾಂದೋಳಿಕೋತ್ಸವದಿಂದ ಬರುವ ಶುಕ್ರವಾರ ಬೆಳಗಿನ 9½ ಘಂಟೆಗೆ ಪುರಪ್ರವೇಶ ಮಾಡುವರು.

ಅಮೇರಿಕೆಯ ನ್ಯೂಯಾರ್ಕು ಪಟ್ಟಣದ ಮೇಯರಾಗಿದ್ದ ಥಾಕರ್‌ರವರು ಸಂಸಾರಸಮೇತ ರಾಜಧಾನಿಗೆ ಬಂದು ಲಲಿತ ಮಹಲಿನಲ್ಲಿ ಶ್ರೀಮದ್ಯುವರಾಜರವರ ಅತಿಥಿಗಳಾಗಿದ್ದು ಅರಮನೆ ಕೃಷ್ಣರಾಜಸಾಗರ ಚಾಮುಂಡಿಬೆಟ್ಟ ಮೊದಲಾದ ಪ್ರೇಕ್ಷಣೀಯ ಸ್ಥಳಗಳನ್ನು ಪರಾಮರ್ಶಿಸಿಕೊಂಡು ಪ್ರಯಾಣಮಾಡಿದರು.

ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನವರು ಮ್ಯು|| ಕೌನ್ಸಿಲರ್ ಮ|| ಮಹಮ್ಮದ್‌ಸೇಟರ ಮೇಲೆ ಮಾಡಿದ್ದ ಕ್ರಿಮಿನಲ್ ಮೊಖದ್ದಮೆಯು ಮ್ಯುನಿಸಿಪಾಲಿಟಿಗೆ ವಿರುದ್ಧವಾಗಿ ಪರ್ಯವಸಾನವಾದುದರಮೇಲೆ ಹೈಕೋರ್ಟಿಗೆ ಅಪೀಲನ್ನು ಮಾಡುವ ವಿಚಾರದಲ್ಲಿ ಗೌರ್ನಮೆಂಟ್ ಅಡ್ವೊಕೇಟರ ಅಭಿಪ್ರಾಯವನ್ನು ಕೇಳಿದ್ದರು. ಅವರು ಕಾಗದಪತ್ರಗಳನ್ನು ನೋಡಿ ಅಪೀಲ್ ಮಾಡುವುದರಿಂದ ಪ್ರಯೋಜನವಿಲ್ಲವೆಂದು ಅಭಿಪ್ರಾಯಪಟ್ಟಿರುವುದಾಗಿ ತಿಳಿಯಬರುತ್ತದೆ.

ಕಳೆದವಾರ ರಾಜಧಾನಿಯಲ್ಲಿ ನಡೆದ ಅಖಿಲಭಾರತ ವೇದಾಂತ ಮಹಾಸಭಾಪತಿಗಳೂ ಪ್ರತಿನಿಧಿಗಳೂ ಅರಮನೆಯ ವಿದ್ವಾಂಸರುಗಳ ಸಂಗೀತ ಮತ್ತು ಕರ್ನಾಟಕಾನ್ಸರ್ಟು ಶ್ರವಣದಿಂದಲೂ, ಚಾಮುಂಡಿ ಜಂಬೂನಾದಲ್ಲಿ ವನವಿಹಾರೋತ್ಸವದಿಂದಲೂ ಸತ್ಕರಿಸಲ್ಪಟ್ಟರು. ಕಲಕತ್ತ ಬೊಂಬಾಯಿ ಮದ್ರಾಸು ಪ್ರಾಂತಗಳಿಂದ ಒಂದಿದ್ದ ಪ್ರತಿನಿಧಿಗಳು ರಾಜಧಾನಿಯ ಶೃಂಗಾರ, ಸತ್ಕಾರ, ಕೃಷ್ಣರಾಜಸಾಗರ ವಿಸ್ತಾರ ಇತ್ಯಾದಿಗಳನ್ನು ನೋಡಿ ಆನಂದಪಟ್ಟರೆಂದು ಕೇಳುತ್ತೇವೆ.

ರಾಜಧಾನಿಯ ಸಯ್ಯಾಜಿರಾವ್ ರೋಡಿನಲ್ಲಿರುವ ರಾಜರಾಜೇಶ್ವರಿಹಾಲಿನ ಯಜಮಾನರಾದ ಮ|| ಯು. ಎಲ್. ರಾಮಚಂದ್ರರಾಯರು ನೆನ್ನೆಯ ದಿವಸ ವಿಠೋಬಾ ದೇವಸ್ಥಾನದಲ್ಲಿ ವಿಶೇಷಾರ್ಚನೆಯನ್ನೂ ಮಹಾಸಂತರ್ಪಣೆಯನ್ನೂ ಬಹಳ ಔದಾರ್ಯದಿಂದಲೂ, ರಾತ್ರಿ ದೇವರುತ್ಸವವನ್ನು ಮನೋಹರವೂ ಭಕ್ತಿಪರವೂ ಆದ ಭಜನೆಯ ಸಮೇತ ಬಹಳ ವೈಭವದಿಂದಲೂ ನಡೆಯಿಸಿ ತಮ್ಮ ದೈವಭಕ್ತಿಯನ್ನು ಪ್ರದರ್ಶಿಸಿದರು. ಈ ಭಜನೆಗಾಗಿ ಬೆಂಗಳೂರಿನಿಂದ ಸ್ವಮತ ಪ್ರಸಿದ್ಧ ಭಜಕರನ್ನು ಕರೆಸಿದ್ದರು.

ಕಳೆದ ಬುಧವಾರ ಸಾಯಂಕಾಲ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನ ತಿಂಗಳ ಮೀಟಿಂಗು ನಡೆದಾಗ್ಗೆ ಚರ್ಚಿತವಾದ ವಿಷಯಗಳಲ್ಲಿ ರೆವಿನ್ಯೂ ಆಫೀಸರ ಯೋಗ್ಯತೆಯ ವಿಚಾರವು ಮುಖ್ಯವಾಗಿದ್ದಿತು. ಹಿಂದಣ ತಿಂಗಳ ಮೀಟಿಂಗಿನಲ್ಲಿ ರೆವಿನ್ಯೂ ಆಫೀಸರುದ್ಯೋಗಕ್ಕೆ ಬರುವವರು ರೆವಿನ್ಯೂ ಕ್ರಿಮಿನಲ್ ಮತ್ತು ಅಕೌಂಟು ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿ ಅಮಲ್ದಾರ್ ತರಗತಿಯವರಾಗಿರಬೇಕೆಂದು ನಿರ್ಧರಿಸಲ್ಪಟ್ಟಿತು. ಅದರ ಪ್ರಕಾರ ಈಗಿರುವ ರೆವಿನ್ಯೂ ಆಫೀಸರು 1 ವರ್ಷ ಕಾಲಾವಧಿಯೊಳಗೆ ಮೇಲ್ಕಂಡ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕೆಂದೂ, ಅವರಿಗೆ ಪ್ರಬೇಷನರಾಗಿರಬೇಕೆಂದೂ ಬಹಳ ಚರ್ಚೆ ನಡೆದು ಕಡೆಗೆ ಬಹುಮತದಿಂದ ನಿರ್ಧರಿಸಲ್ಪಟ್ಟಿತು.

ಬಂಗಾಳೀ ಗ್ರಾಮಗಳಿಗೆ ಅರ್ಥದಂಡ

ಬಂಗಾಳಾದಲ್ಲಿ ಮಿಡ್ನಾಪುರ ಡಿಸ್ಟ್ರಿಕ್ಟಿಗೆ ಸೇರಿದ ಎರಡು ಗ್ರಾಮಗಳವರು ಲಾ ಆರ್ಡರನ್ನು ಭಂಗಪಡಿಸುವ ಕಾರ್ಯಗಳನ್ನು ಮಾಡುತ್ತಿದ್ದಾರೆಂಬ ಅಪರಾಧಕ್ಕಾಗಿ ಒಂದು ಗ್ರಾಮಕ್ಕೆ 350 ಇನ್ನೊಂದಕ್ಕೆ 300 ರೂ. ಗಳ ದಂಡವು ವಿಧಿಸಲ್ಪಟ್ಟಿದೆ.

ವರ್ಣಾಶ್ರಮ ಸ್ವರಾಜ್ಯಸಂಘ ಮಹಾಸಭೆ

ಇದೇ ಡಿಸೆಂಬರ್ ತಾ|| 27, 28 ಮತ್ತು 29 ರಲ್ಲಿ ಗುರುವಾಯೂರಿನೊಳಗೆ ವರ್ಣಾಶ್ರಮ ಸ್ವರಾಜ್ಯ ಸಂಘದವರ ಮಹಾಸಭೆಯು ಶ್ರೀ ಜಗದ್ಗುರು ಶಂಕರಾಚಾರ್ಯಸ್ವಾಮಿಗಳ ಅಧ್ಯಕ್ಷತೆಯಲ್ಲೂ, ಅಖಿಲಭಾರತ ವರ್ಣೀಯ ಮತಾಚಾರ ಮಹಾಸಭೆಯು ಶ್ರೀ ಜಗನ್ನಾಥಪುರಿಮಠಾಧಿಪತಿಗಳ ಅಧ್ಯಕ್ಷತೆಯಲ್ಲೂ ಜರುಗುವುವು.

ಭಾರತದೇಶ ರಕ್ಷಣೆಯ ಮೇಲೆ ಹೋರ್‌ವರ ಲೇಖ

ಬ್ರಿಟಿಷನವರು ಸರಹದ್ದು ರಕ್ಷಣೆಗೇರ್ಪಡಿಸುವುದಕ್ಕೆ ಮೊದಲು ವಿದೇಶೀಯರು ಪದೇಪದೇ ದಾಡಿಬರುತ್ತಲೇ ಇದ್ದರು. ರಕ್ಷಣೆಯೇರ್ಪಾಟು ಮಾಡಿದ ಮೇಲೆ ಒಂದು ದಾಡಿಯಾದರೂ ನಡೆದಿಲ್ಲ. ಬ್ರಿಟಿಷನವರು ಬರೇ ಫಿರಂಗಿಗಳನ್ನು ತಂದಿಕೊಂಡಿಲ್ಲ. ಅಲ್ಲಿಗೆ ಡಾಕ್ಟರುಗಳನ್ನು ಕಳುಹಿಸಿ ಆ ಪ್ರದೇಶದ ಪ್ರಜೆಗಳ ವಾಸಕ್ಕೆ ಯೋಗ್ಯವಾಗಿ ಮಾಡಿರುತ್ತಾರೆ " ಎಂದು ಹೋರ್‌ರವರು ಬರೆದಿರುವರು.

ಅಖಿಲಭಾರತ ವೈದ್ಯಮಹಾಸಭೆ

ಇದೇ ಡಿಸೆಂಬರು ತಾ|| 28 ರಲ್ಲಿ ಲಕ್ನೋ ಪಟ್ಟಣದೊಳಗೆ ಅಖಿಲಭಾರತ ವೈದ್ಯ ಮಹಾಸಭೆಯು ಹೈದರಾಬಾದಿನ ಡಾಕ್ಟರ್ ನಾಯಿಡುರವರ ಅಧ್ಯಕ್ಷತೆಯಲ್ಲಿ ಜರುಗುವುದು. ಇದರ ಜತೆಗೆ ವೈದ್ಯಪ್ರದರ್ಶನ ನಡೆಯಲು ಏರ್ಪಾಟಾಗಿರುತ್ತದೆ ಭಾರತ ಶಾಸನಸಭೆಯಲ್ಲಿ ಉಪಪಾದಿಸಲ್ಪಟ್ಟ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಬಿಲ್ಲಿನ ಸಂಬಂಧವಾಗಿ ವೈದ್ಯ ಮಹಾಸಭೆಯಲ್ಲಿ ಚರ್ಚೆಯು ನಡೆಯುವುದು.

ವೈದಿಕ ಪರಿಷತ್ತು

ಈಗ ವೇದಶಾಸ್ತ್ರಗಳಲ್ಲಿ ವಿಶ್ವಾಸವಿಲ್ಲದವರ ಯಾಜಮಾನ್ಯದಿಂದ ನಡೆಸಲ್ಪಡುತ್ತಿರುವ ದೇವಾಲಯ ಪ್ರವೇಶಾಂದೋಳನವನ್ನು ಚರ್ಚಿಸಿ ನಿರ್ಣಯಿಸುವುದಕ್ಕಾಗಿ ಬರುವ ಜನವರಿ ತಾ|| 21, 22 ಮತ್ತು 23 ರಲ್ಲಿ ವೈದಿಕಪರಿಷತ್ತಿಗೆ ಸಂಬಂಧಪಟ್ಟ ವಿದ್ವತ್ಸಭೆಯು ಅಡ್ವೊಕೇಟ್ ಟಿ. ಎಸ್. ಪಚಕೋಪಾಚಾರ್ಯರ ಅಧ್ಯಕ್ಷತೆಯಲ್ಲೂ, ಲೌಕಿಕ ಸಭೆಯು ದಿವಾನ್ ಬಹದ್ದೂರ್ ಟಿ. ಆರ್. ರಾಮಚಂದ್ರಯ್ಯರ್‌ರವರ ಅಧ್ಯಕ್ಷತೆಯಲ್ಲೂ ನಡೆಯುವುವು.

ಎಲ್ಲರಿಗೂ ಶಂಕರಾಚಾರ್ಯರಂತೆ ಪ್ರವೀಣತೆ ಇರುವುದಿಲ್ಲ

ಶಂಕರಾಚಾರ್ಯರೇ ಮೊದಲಾಗಿ ಹಿಂದು ಮತೋದ್ಧಾರಕರುಗಳಂತೆ ನೀವು ನಿಮ್ಮ ವಿದ್ಯಾಕೌಶಲ್ಯವನ್ನು ವಾದದ ಮೂಲಕ ಪ್ರದರ್ಶಿಸಿ ಪ್ರಜೆಗಳನ್ನು ನಿಮ್ಮ ಪಕ್ಷಕ್ಕೆ ತಿರುಗಿಸಿಕೊಳ್ಳಬೇಕಲ್ಲದೆ ನೀವು ನಿಮ್ಮ ಅಮೂಲ್ಯವಾದ ಪ್ರಾಣವನ್ನು ತ್ಯಜಿಸತಕ್ಕದಲ್ಲ ಎಂದು ರಾಜಸಾಹಿಯ ವಕೀಲರಾದ ರಾಂತನ್ ವೇದಾಂತ ತೀರ್ಥರವರು ಮಹಾತ್ಮರಿಗೆ ಬರೆದಿದ್ದುದಕ್ಕೆ ಎಲ್ಲರಿಗೂ ಶಂಕರಾಚಾರ್ಯರ ಪ್ರವೀಣತೆಯಿರುವುದಿಲ್ಲ. ದೇವರು ನನಗೆ ಅನುಗ್ರಹಿಸಿರುವ ಶಕ್ತಿಯನ್ನು ನಿರ್ವಂಚನೆಯಿಂದ ವಿನಿಯೋಗಿಸುತ್ತಿರುವೆನು. ಎಲ್ಲ ವಿಧದಲ್ಲೂ ಶಂಕರಾಚಾರ್ಯರಂತಹ ಮಹಾಪುರುಷರು ತಮ್ಮ ಅಖಂಡ ವಿದ್ಯಾಸಂಪದವನ್ನು ಮತಕ್ಕೆ ವಿನಿಯೋಗಿಸಿದ ರೀತಿಯಲ್ಲಿ ಬೇರೆ ಕೆಲರು ಪ್ರಾರ್ಥನೆ ಉಪವಾಸಗಳಿಂದ ಮತ ಶ್ರೇಯಸ್ಸಿಗೂ ಸೌಭಾಗ್ಯಕ್ಕೂ ಪ್ರಾಣವನ್ನು ಪೀಸಿರುತ್ತಾರೆ ಎಂದು ಮಹಾತ್ಮರು ಉತ್ತರವನ್ನು ಕೊಟ್ಟರು.

ಮಹಾತ್ಮರ ಸಮಕ್ಷದಲ್ಲಿ ಪಂಡಿತರ ಸಭೆ

ಕಳೆದ ಶುಕ್ರವಾರ ಮಧ್ಯಾಹ್ನ ಎರವಾಡ ಕಾರಾಗೃಹದೊಳಗೆ ಮಹಾತ್ಮರ ಸಮಕ್ಷದಲ್ಲಿ ಗುರುವಾಯೂರು ದೇವಾಲಯಕ್ಕೆ ಹರಿಜನರು ಬರುವ ವಿಚಾರವಾಗಿ ಚರ್ಚಿಸಲು ಒಂದು ವಿದ್ವತ್ಸಭೆಯು ಸೇರಿದ್ದಿತು. ದೇವಾಲಯ ಪ್ರವೇಶಕ್ಕೆ ಅನುಕೂಲರಾಗಿರುವ ಕಾಶಿಯ ಮಹಾಪಾಠಶಾಲಾಚಾರ್ಯ (ಪ್ರಿನ್ಸಿಪಾಲ) ರಾದ ಧ್ರುವರವರು, ಕಾಶಿಯ ಬಾಬು ಭಗವಾನ್ ದಾಸರು, ಪೂನಾದ ರಾವ್ ಬಹದ್ದೂರು ವೈದ್ಯರು, ನಾಗಪೂರಿನ ದಪ್ತರಿಯವರು, ತರ್ಕತೀರ್ಥ ಲಕ್ಷ್ಮಣ ಶಾಸ್ತ್ರಿಗಳು, ಲೊನಾವಾಲದ ಕೊಕಾಜೇ ಶಾಸ್ತ್ರಿಗಳು, ಪೂನಾ ಹಿಂದು ಮಹಾಸಭಾಧ್ಯಕ್ಷ ಪ್ರಜ್ಞಾನೇಶ್ವರ ಕಟಿಯವರು; ಪ್ರತಿಕೂಲರಾದ ಧಾರ್ವಾಡದ ಭಗವಾನ್ ಶಾಸ್ತ್ರಿಗಳು, ಸೊಲ್ಲಾಪುರದ ಪಂಧಾರ ನೀಲಮೇಘಾಚಾರ್ಯ, ನಾಸಿಕದ ಶ್ರೀಧರ ಶಾಸ್ತ್ರಿಗಳು, ಪೂನಾದ ಸರ್ದಾರ್ ನಾನಾ ಸಾಹೇಬ್ ಖಾಸ್ಗೀವಾಲೇಯವರು, ಪೂನಾದ ಲವಠೆಯವರು, ನಾಸಿಕದ ಚಂದ್ರಶೇಖರ ಶಾಸ್ತ್ರಿಗಳು ಇನ್ನೂ ಅನೇಕ ಮಂದಿ ನೆರೆದಿದ್ದರು. ಈ ಚರ್ಚೆಯ ಫಲಿತಾಂಶವಿನ್ನೂ ತಿಳಿದುಬಂದಿಲ್ಲ.

ಗುರುವಾಯೂರು ದೇವಾಲಯ ಪ್ರವೇಶ

ಗುರುವಾಯೂರು ದೇವಾಲಯವನ್ನು ಹರಿಜನರು ಪ್ರವೇಶಿಸುವ ವಿಚಾರದಲ್ಲಿ ಗುರುವಾಯೂರು ಮತ್ತೆ ನೆರೆ ಗ್ರಾಮಗಳ ಪ್ರಜೆಗಳ ಓಟುಗಳು ತೆಗೆದುಕೊಳ್ಳಲ್ಪಡುತ್ತಿವೆ. ಇವುಗಳಲ್ಲಿ ಅನೇಕ ಕಡೆ ಹರಿಜನರ ದೇವಾಲಯ ಪ್ರವೇಶಕ್ಕೆ ಓಟುಗಳು ಅನುಕೂಲವಾಗಿ ಬಂದಿರುತ್ತವೆಂದೂ, ಇತರ ಕಡೆಗಳಲ್ಲಿ ನಡೆದ ಓಟುಗಳ ಫಲಿತಾಂಶವು ಇನ್ನೂ ಗೊತ್ತಾಗಿಲ್ಲವೆಂದೂ ತಿಳಿಯಬಂದಿದೆ. ಪ್ರಜೆಗಳ ಓಟನ್ನು ತೆಗೆದುಕೊಳ್ಳುವುದಕ್ಕೆ ಜಾಮರಿನ್‌ರವರೊಡಂಬಡಲಿಲ್ಲವಷ್ಟೆ. ಈಗ ಶಾಸನ ಸಭೆಯಲ್ಲಿ ದೇವಸ್ಥಾನ ಪ್ರವೇಶದ ಬಿಲ್ಲನ್ನು ಉಪಪಾದಿಸಲು ವೈಸ್ರಾಯರು ಅನುಮತಿಯನ್ನಿತ್ತರೇನಾಗುವುದೊ ಎಂದು ಜಾಮರಿನ್‌ರವರಿಗೆ ಶಂಕೆಯುಂಟಾಗಿದೆ. ಭಾರತ ದೇಶದ ನಾನಾಕಡೆಗಳಿಂದ ನೂರಾರು ವಿದ್ಯಾರ್ಥಿಗಳು ಹರಿಜನರ ದೇವಾಲಯ ಪ್ರವೇಶಕ್ಕೆ ಅವಕಾಶಕೊಡಬೇಕೆಂದು ಜಾಮರಿನ್‌ರವರಿಗೆ ಲೇಖಗಳ ಮೂಲಕವೂ ತಂತಿಯ ಮೂಲಕವೂ ತಿಳಿಸುತ್ತಿರುವರು. ಇದರಂತೆ ಭಾರತ ಸೇವಾಸಂಘದವರೇ ಆದಿಯಾಗಿ ಅನೇಕ ಸಂಘದವರು ಜಾಮರಿನ್‌ರವರಿಗೆ ಬರೆದೂ ಬರೆಯುತ್ತಲೂ ಇರುವರು. ಇತ್ತಲಾಗಿ ಕಾಮಕೋಟಿ ಶಂಕರಾಚಾರ್ಯರೇ ಆದಿಯಾಗಿ ಮಠಪತಿಗಳೂ ಸನಾತನ ಧರ್ಮಾಭಿಮಾನಿಗಳಾದ ಶಾಸ್ತ್ರಿಗಳೂ ಹರಿಜನರ ದೇವಾಲಯ ಪ್ರವೇಶಕ್ಕೆ ಖಂಡಿತವಾಗಿಯೂ ಅವಕಾಶ ಕೊಡಕೂಡದೆಂದು ಜಾಮರಿನ್‌ರವರಿಗೆ ಬರೆದೂ ಬರೆಯುತ್ತಲೂ ಇರುವರು.

ಹೋರ್‌ರವರ ಕಾಶ್ಮೀರ ಸಂಸ್ಥಾನ ಪ್ರಶಂಸೆ

ಭಾರತ ಮಂತ್ರಿಯವರಾದ ಸರ್ ಸ್ಯಾಮುಯಲ್‌ಹೋರ್‌ರವರು ಲಂಡನ್ನಿನ ಒಂದು ಹೋಟಲಿನೊಳಗೆ ವಜೀರ್ ಹುಸೇನ್‌ರವರ ಅಧ್ಯಕ್ಷತೆಯಲ್ಲಿ ನಡೆದ ಔತಣದಲ್ಲಿ ಕಾಶ್ಮೀರ ಸಂಸ್ಥಾನದ ಮಹಾರಾಜರವರ ಆಯುರಾರೋಗ್ಯವನ್ನು ಕೋರಿ ಪ್ರಸ್ತಾವಿಸುವಾಗ್ಗೆ ಹೀಗೆ ಹೇಳಿದರು.—" ಕಳೆದ 1½ ವರ್ಷಗಳಲ್ಲಿ ಇತರ ದೇಶಗಳೊಳಗೆ ಪ್ರಾಪ್ತವಾಗಿದ್ದಂತೆ ಕಾಶ್ಮೀರದಲ್ಲಿ ಸಹ ಬಹಳ ನಷ್ಟ ಪ್ರಾಪ್ತವಾಗಿದ್ದಿತು. ಆದರೆ ಈಗ ರಾಜಕೀಯ ಸಂಬಂಧವಾದ ಕಷ್ಟಗಳೆಲ್ಲ ತೊಲಗಿರುವಂತೆ ತೋರುತ್ತದೆ. ಇನ್ನು ಮುಂದೆ ಅಲ್ಲಿ ಅಭಿವೃದ್ಧಿಯಾಗಲು ಅವಕಾಶವಾಯಿತು. ಕಾಶ್ಮೀರ ಮಹಾರಾಜರವರ ರಾಜ್ಯಾಡಳಿತವನ್ನು ನಾನು ಬಹಳವಾಗಿ ಪ್ರಶಂಸಿಸುತ್ತೇನೆ. ಸರ್ ಮಾಲ್ಕಾಲಂ ಹೇಯಲಿಯವರು ಸಂಯುಕ್ತ ರಾಷ್ಟ್ರಗಳ ಗೌರ್ನರಾಗಿದ್ದಾಗ ಕಂದಾಯ ನಿರಾಕರಣೋದ್ಯಮವು ಅಲ್ಲಿ ಪ್ರಾರಂಭವಾಯಿತು. ಆ ವೇಳೆಯಲ್ಲಿ ಹೇಯಲಿಯವರು ಬಹಳ ಸಮರ್ಥತೆಯಿಂದ ಕೆಲಸ ನಿರ್ವಾಹಮಾಡಿದರು. ವಜೀರ್ ಹುಸೇನ್‌ರವರು ಅಲ್ಲಿಯ ಸಿವಿಲ್ ಸರ್ವಿಸ್ಸಿಗೆ ಸೇರಿದವರು ಇವರು ಹೇಯಲಿಯವರಿಗೆ ಬಹಳಮಟ್ಟಿಗೆ ಸಹಾಯ ಮಾಡಿದರು. ಕಾಶ್ಮೀರ ಸಂಸ್ಥಾನದವರು ಸತ್ಪರಿಪಾಲನೆಗೆ ಬಹಳ ಕಾಲದಿಂದಲೂ ಪ್ರಸಿದ್ಧರಾಗಿರುತ್ತಾರೆ. ಈ ಕಾಶ್ಮೀರದಲ್ಲುಂಟಾಗಿರುವ ಶಾಂತಿಯು, ಇನ್ನು ಫೆಡರೇಷನ್ನೇರ್ಪಟ್ಟ ಮೇಲೆ ಸಂಸ್ಥಾನದವರೂ ಬ್ರಿಟಿಷ್ ಇಂಡ್ಯಾದವರೂ ಕಲೆತು ಕೆಲಸ ಮಾಡುವುದರಿಂದ ದೇಶದಲ್ಲೆಲ್ಲ ವಿರ್ಪಡುವುದು " ಎಂದು ಹೇಳಿದರು.

ಗುರುವಾಯೂರು ಮಹಿಮೆ

ಗುರುವಾಯೂರು ಕೇರಳ ದೇಶದಲ್ಲಿರುವ ಪವಿತ್ರಕ್ಷೇತ್ರಗಳೆಲ್ಲ ಮೊದಲನೆಯದು. ಶ್ರೀಕೃಷ್ಣದೇವರ ಚತುರ್ಭುಜ ಮೂರ್ತಿಯು ದೇವಾಲಯದೊಳಗೆ ಪ್ರತಿಷ್ಠಿತವಾಗಿರುತ್ತದೆ. ಶ್ರೀಕೃಷ್ಣನ ಅವಸಾನಕಾಲದಲ್ಲಿ ತಂದೆಯಾದ ವಸುದೇವನು ಜೀವಿಸಿದ್ದನು. ಪುತ್ರವಿಯೋಗದುಃಖವನ್ನು ತಾಳಲು ಶಕ್ಯವಿಲ್ಲವಾದುದರಿಂದ ವಸುದೇವನ ಸಮಾಧಾನಾರ್ಥವಾಗಿ ಅವತಾರ ಕಾಲದಲ್ಲಿದ್ದ ತನ್ನ ಪ್ರತಿಮೆಯೊಂದನ್ನು ನಿರ್ಮಿಸಿ ಅದರಲ್ಲಿ ತನ್ನ ತೇಜಸ್ಸು ಕೊಂಚವಿರುವುದೆಂದೂ, ಅದನ್ನು ನೋಡಿಕೊಂಡು ಕಾಲಯಾಪನೆ ಮಾಡಬಹುದೆಂದೂ ಶ್ರೀಕೃಷ್ಣನು ಹೇಳಿದನಂತೆ. ವಸುದೇವನು ಕಾಲವಾದನಂತರ ಗುರುವು ಅಥವಾ ಬೃಹಸ್ಪತಿಯು ಮತ್ತು ವಾಯು ಆ ಮೂರ್ತಿಯನ್ನು ತೆಗೆದುಕೊಂಡು ಪವಿತ್ರ ಕ್ಷೇತ್ರದಲ್ಲಿ ಸ್ಥಾಪಿಸಿದರೆ ಸರ್ವರಿಗೂ ಪ್ರಯೋಜನವಾಗುವುದೆಂದು ತಿಳಿದು ದೇಶದಲ್ಲೆಲ್ಲ ತಿರುಗಿತಿರುಗಿ ಕಡೆಯಲ್ಲಿ ಕೇರಳ ಅಂದರೆ ಕಲ್ಲಿಕೋಟೆ ದೇಶದೊಳಗೆ ಒಂದು ಪವಿತ್ರಕ್ಷೇತ್ರವನ್ನು ಹುಡುಕಿ ಈ ಮೂರ್ತಿಯನ್ನು ಪ್ರತಿಷ್ಠಿಸಿದರು. ಗುರುವಿನಿಂದಲೂ ವಾಯುವಿನಿಂದಲೂ ಪ್ರತಿಷ್ಠಿಸಲ್ಪಟ್ಟ ದೇವರಿರುವ ಸ್ಥಳವು ಗುರುವಾಯೂರು ಎಂದು ಪ್ರಸಿದ್ಧವಾಗಿರುವುದಂತೆ. ಉತ್ತರ ಹಿಂದುಸ್ಥಾನದ ಕ್ಷೇತ್ರಗಳಲ್ಲಿರುವ ದೇವಸ್ಥಾನಗಳಿಗಿಂತ ದಕ್ಷಿಣ ಹಿಂದುಸ್ಥಾನದಲ್ಲಿರುವ ದೇವಸ್ಥಾನಗಳ ವೈಭವಗಳೂ ಆಚಾರವ್ಯವಹಾರಗಳೂ ಅಧಿಕವಾಗಿವೆ. ಕೇರಳ ದೇಶದಲ್ಲೆಲ್ಲ ನಂಬೂದಿ ಬ್ರಾಹ್ಮಣರೇ ಅರ್ಚಕರಾಗಿರುವರು. ಅರ್ಚಕರಲ್ಲದೆ ಇತರರಾರೂ ಗರ್ಭಗುಡಿಯನ್ನು ಪ್ರವೇಶಿಸಲು ಅಧಿಕಾರವಿಲ್ಲ. ಸ್ಮಾರ್ತವಿಧಾನದಿಂದ ಪೂಜೆ ನಡೆಯುವುದು ಕಲ್ಲಿಕೋಟೆಯ ರಾಜರಾದ ಜಾಮರಿನ್‌ರವರು ವಂಶಪಾರಂಪರ್ಯವಾಗಿ ಈ ದೇವಸ್ಥಾನದ ಟ್ರಸ್ಟಿಯಾಗಿರುತ್ತಾರೆ. ಸೌತ್ ಇಂಡಿಯನ್ ರೈಲ್ವೆ ಮೂಲಕ ಕಲ್ಲಿಕೋಟೆಗೆ ಹೋಗಿ ಅಲ್ಲಿಂದ ಬಸ್ಸು ಮೂಲಕ ಗುರುವಾಯೂರಿಗೆ ಹೋಗಬೇಕಾಗಿದೆ.

ಹೋರ್‌ರವರಿಗೆ ಜಾಂರವರ ಔತಣಸತ್ಕಾರ

ನವನಗರದ ಮಹಾರಾಜರಾದ ಜಾಂರವರು ಭಾರತ ಮಂತ್ರಿ ಹೋರ್‌ರವರಿಗೆ ಹೋಟಲ್ ಮೆಟ್ರೊಪೋಲಿಯಲ್ಲಿ ಔತಣ ಸತ್ಕಾರಮಾಡಿದಾಗ್ಗೆ " ಹೋರ್‌ರವರಂತಹ ಭಾರತ ಮಂತ್ರಿ ಬೇರೊಬ್ಬರಿಲ್ಲ. ಸಂಸ್ಥಾನಾಧಿಪತಿಗಳು ಒಡಂಬಡಿಕೆಗೆ ಬದ್ಧರಾಗಿರುತ್ತಾರಲ್ಲದೆ ರಾಜಭಕ್ತಿಯುತರಾಗಿರುತ್ತಾರೆ. ಈಗಿರುವ ಸಂಸ್ಥಾನಾಧಿಪತಿಗಳನ್ನು ದೊರತನದವರು ವಿಶ್ವಾಸಿಸಬಹುದು. ಇವರ ಸಂತತಿಯವರು ಕೂಡ ಈ ಪದ್ಧತಿಯನ್ನೇ ಅನುಸರಿಸುವರು " ಎಂದು ಹೋರ್‌ರವರನ್ನು ಬಹಳವಾಗಿ ಪ್ರಶಂಸಿಸಿದರು. ಇದಕ್ಕುತ್ತರವನ್ನು ಕೊಡುವಾಗ್ಗೆ ಹೋರ್‌ರವರು " ಭಾರತ ದೇಶೀಯ ಸಂಸ್ಥಾನಾಧಿಪತಿಗಳು ಪ್ರತಿಯೊಂದು ಮುಖ್ಯ ಸಂದರ್ಭದಲ್ಲಿ ಬಹಳ ಪ್ರಶಂಸನೀಯವಾಗಿ ಕೆಲಸ ಮಾಡಿರುತ್ತಾರೆ. ಜಾಂಸಾಹೇಬರು ಮತ್ತು ಆಗಾಖಾನ್‌ರವರು ವಿಶೇಷ ಜನರಂಜಕರಾಗಿರುವರು. ದೇಶೀಯ ಸಂಸ್ಥಾನಾಧಿಪತಿಗಳು ಫೆಡರೇಷನ್ನಿಗೆ ಸೇರುತ್ತೇನೆಂದು 2 ವರ್ಷಗಳ ಹಿಂದೆ ವಾಗ್ದಾನ ಮಾಡಿದುದರ ಮೇಲೆ ಆ ವಿಷಯವನ್ನು ನಾವುಭಯರೂ ಸೇರಿ ಸಂಪೂರ್ಣವಾಗಿ ಚರ್ಚಿಸಿರುತ್ತೇವೆ ಸಂಸ್ಥಾನಗಳಲ್ಲಿ ನಿರಂಕುಶ ಪದ್ಧತಿಯಿಂದಲೂ ರಾಷ್ಟ್ರಗಳಲ್ಲಿ ಪ್ರಜಾಸತ್ತಾತ್ಮಕ ಪದ್ಧತಿಯಿಂದಲೂ ರಾಜ್ಯಭಾರವು ನಡೆಯುತ್ತಿರುವುದರಿಂದ ಫೆಡರೇಷನ್ನು ಕುದುರುವುದೆ ಎಂಬ ಸಂಶಯವುಂಟಾಗಿದ್ದಿತು, ಆದರೆ ಆ ಸಂಶಯವು ಈಗ ನಿವಾರಣೆಯಾಗಿದೆ. ಸಂಸ್ಥಾನದವರಿಗೂ ಚಕ್ರವರ್ತಿಯವರಿಗೂ ಜರುಗುವ ಒಡಂಬಡಿಕೆಯು ಪೂರ್ತಿಯಾಗಿ ನೆರವೇರುವಲ್ಲಿ ಸಂಸ್ಥಾನಾಧೀಶರುಗಳ ರಾಜ್ಯಾಧಿಕಾರಕ್ಕೆ ಯಾವ ಭಂಗವೂ ಉಂಟಾಗುವುದಿಲ್ಲ. ಫೆಡರೇಷನ್ನಿಗೆ ಸಂಸ್ಥಾ

ಮೈಸೂರು ಸ್ಟಾರ್.

೧೯೩೨ ನೇ ಇಸವಿ ಡಿಸೆಂಬರ್ ತಾ|| ೨೬ ನೆಯ ಸೋಮವಾರ.

LEGISLATIVE COUNCIL

The winter session of the Mysore Legislative Council concluded its sitting on the 20th instant. The session was very important both for the quality and quantity of work it turned out. It was a very heavy session entailing heavy responsibilities on the part of those who sat in the House. Many important measures such as City, Town and Minor Municipalities bills; a bill relating to the rights of women under Hindu Law; a bill to repeal the breach of Contract Regulation; a bill to amend the University Regulation etc., besides other cut motions, resolutions and interpellations were passed. The bills, important as they are, affecting the administration of local-self-Government; of the rights of women and of the working of the University, evoked a very keen interest. The debate throughout marked a high tone of discussion a liberal and progressive view of tackling the measures. Many amendments were moved by the non-official Councillors and their rejection on account of, official and Government nominees' opposition is regrettable. It is noteworthy that Mr. H. C. Dasappa representing Mysore City fought hard by means of a number of amendments for the deletion of some of the obnoxious clauses in Municipalities bills. He strove for the introduction of a clause in the City Municipal bill to empower the Council to elect its own president in the City of Mysore. He had also moved an amendment to do away with the system of nomination in the City and Town Municipal Councils. These amendments no doubt marked a further advancement in the administration of local-self-Government and certainly will have the approval of all sane-thinking public. It is to be regretted that these amendments were lost. The other amendments of Mr. Dasappa regarding the complete abolition of limited Estates and of securing the right of separate maintenance to a wife when the husband marries again met with the same fate. Dr. Mylvaganam's amendment to retain the right of election to the out-going Senate to the new Senate was certainly wholesome. Its rejection leaves a gap which is not easy to be bridged. The out-going Senate is really a competent body to choose men of ability and experience in the interest of University education. The cut motions brought out the unsatisfactory position of Iron works and its ruinous effects on the resources of the State. The question of Temple-entry had the whole hearted support of the House though the Government were non-comittle in their attitude. The attitude of the Government on all occasions was not what is desirable in a 'responsive' Government. It exhibited a lack of appreciation of the non-official view point. It is hoped that Government would heed the voice of the people's representatives and carry on its policy in conformity to popular will.

ನ್ಯಾಯವಿಧಾಯಕ ಸಭೆ

ಕಳೆದ ತಾ|| 14 ರಲ್ಲಿ ಆರಂಭವಾಗಿ ತಾ|| 21 ರಲ್ಲಿ ಮುಕ್ತಾಯವಾದ ಮೈಸೂರು ನ್ಯಾಯವಿಧಾಯಕ ಸಭೆಯ ಕಾರ್ಯಕಲಾಪಗಳು ...

ಮೆಂಬರುಗಳಿಂದ ಅನೇಕ ಸವರಣೆಗಳು ಸೂಚಿಸಲ್ಪಟ್ಟವಾದರೂ, ಓಫಿಶಿಯಲ್ ಮತ್ತು ನಾಮಕರಣರಾದ ಮೆಂಬರುಗಳ ಸಂಖ್ಯೆಯು ಹೆಚ್ಚಾಗಿರುವುದರಿಂದ ಅವು ಅಂಗೀಕರಿಸಲ್ಪಡಲಿಲ್ಲ. ರಾಜಧಾನಿಯ ಕಂದಾಯದಾರರ ಪ್ರತಿನಿಧಿಗಳಾಗಿರುವ ಮ|| ಎಚ್. ಸಿ. ದಾಸಪ್ಪನವರು ಮ್ಯುನಿಸಿಪಾಲಿಟಿಗಳ ಬಿಲ್ಲಿನಲ್ಲಿರತಕ್ಕ ದೋಷಭಾಗಗಳನ್ನು ತೆಗೆಯಬೇಕೆಂದೂ, ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲಿನವರು ತಮ್ಮ ಅಧ್ಯಕ್ಷನನ್ನು ತಾವೇ ನಿಯಮಿಸಿಕೊಳ್ಳುವ ಅಧಿಕಾರವಿರಬೇಕೆಂದೂ ಸಿಟಿ ಮತ್ತು ಟವರ್ ಮ್ಯುನಿಸಿಪಾಲಿಟಿಗಳಿಗೆ ಮೆಂಬರುಗಳನ್ನು ನಾಮಕರಣ ಮಾಡುವ ಪದ್ಧತಿಯನ್ನು ತಪ್ಪಿಸಬೇಕೆಂದೂ ಕೆಲ ಸವರ್ಣಗಳನ್ನು ಪ್ರತಿಪಾದಿಸಿದರು. ...

ಪಾರಿತೋಷಿಕ ವಿನಿಯೋಗಸಮಾರಂಭ

ರಾಜಧಾನಿಯಲ್ಲಿರುವ ಅಂಗವಿಕಲರ ಪೋಷಣಾಲಯದ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳಿಗೆ ಪಾರಿತೋಷಿಕಗಳು ಕಳೆದ ಗುರುವಾರ ಶ್ರೀಮದ್ಯುವರಾಜರವರ ಅಧ್ಯಕ್ಷತೆಯಿಂದ ಕೊಡಲ್ಪಟ್ಟವು. ...

ಮಕ್ಕಳಲ್ಲಿ ಬಹುಭಾಗದವರಿಗೆ ಕಣ್ಬೇನೆಯಿಂದಲೂ ಸಿಡುಬಿನಿಂದಲೂ ಕಣ್ಣುಗಳು ಹೋಗುತ್ತವೆ. ಕಣ್ಬೇನೆಗೆ ಸುಲಭ ಚಿಕಿತ್ಸೆಯುಂಟು ಮತ್ತು ಸಿಡುಬಿನುಪದ್ರವಕ್ಕೆ ಹುಣ್ಣಾಕುವುದೇ ಬಹಳ ಸುಲಭೋಪಾಯವು. ಆದುದರಿಂದ, ಮಕ್ಕಳ ಪ್ರದರ್ಶನ ದಿನಗಳನ್ನು ನಡೆಯಿಸತಕ್ಕ ರೆಡ್‌ಕ್ರಾಸ್ ಸೊಸೈಟಿಯವರು ಪ್ರದರ್ಶನದಲ್ಲೇ ತೃಪ್ತರಾಗದೆ ಪ್ರತಿಯೊಂದು ಮಗುವಿಗೂ ಸಿಡುಬನ್ನು ಹಾಕಿಸಲೇರ್ಪಡಿಸುವುದೂ, ಹುಣ್ಣಿದ್ದಾಗ ತಕ್ಕ ಚಿಕಿತ್ಸೆಮಾಡಿಸುವುದೂ, ಮಕ್ಕಳು ಹುಟ್ಟಿದಾಗ ಕಣ್ಬೇನೆಯಾಗದಂತೆ ನೋಡಿಕೊಳ್ಳುವುದೂ ಅತ್ಯಾವಶ್ಯಕವು " ಎಂದು ಮೊದಲಾಗಿ ಅಪ್ಪಣೆ ಕೊಡಿಸಿದರು.

ವಿಷಾದ ಪ್ರದರ್ಶನ

1932 ನೇಯ ಮಾರ್ಚಿ ತಾ|| 28 ರ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ " ವಚನಗಳ ವಿವೇಚನೆಯು " ಎಂಬ ಶೀರ್ಷಿಕೆಯಿಂದ ಒಂದು ಲೇಖವನ್ನು ಓರ್ವ ಯಥಾರ್ಥವಾದಿ ಎಂಬವರು ಬರೆದಿರುವರು. ...

ವೈ. ವಿರೂಪಾಕ್ಷಯ್ಯ,
ಸಂಪಾದಕ ಮತ್ತು ಪ್ರಕಾಶಕ,
ಮೈಸೂರು ಸ್ಟಾರ್, ಮೈಸೂರು.

ಅಖಿಲಭಾರತ ವೇದಾಂತ ಮಹಾಸಭೆ

ಈ ಮಹಾಸಭಾಧಿವೇಶನವು ಕಳೆದ ಸೋಮವಾರ ಸಾಯಂಕಾಲ 4 ಘಂಟೆಯಲ್ಲಿ ಜಗನ್ಮೋಹನಪ್ಯಾಲೇಸಿನ ಸಭಾಂಗಣದಲ್ಲಿ ಶ್ರೀಮನ್ಮಹಾರಾಜರವರಿಂದ ಆರಂಭಿಸಲ್ಪಟ್ಟಿತು. ಡಾಕ್ಟರ್ ಸರ್ ಎಸ್. ರಾಧಾಕೃಷ್ಣನ್, ಡಿ.ಲಿಟ್., ಇವರ ಅಧ್ಯಕ್ಷತೆಯಲ್ಲಿ ಜರುಗಿತು. ...

ಒಳದೇಶದ ವೃತ್ತಾಂತಗಳು

ಶ್ರೀ ಜಯಚಾಮರಾಜ ಒಡೆಯರವರು ಮಲೇರಿಯಾ ಜ್ವರರೋಗಪೀಡಿತರಾಗಿದ್ದು ವೈದ್ಯರ ಚಿಕಿತ್ಸೆಯಿಂದ ಗುಣವನ್ನು ಹೊಂದುತ್ತಿರುವುದಾಗಿ ತಿಳಿಯಬರುತ್ತದೆ.

ಕಳೆದ ನವೆಂಬರ್ ತಿಂಗಳಲ್ಲಿ ರಾಜಧಾನಿಯೊಳಗೆ 270 ಮಕ್ಕಳ ಜನನವಾಗಿ 286 ಮರಣಗಳಾಗಿರುತ್ತವೆ. ಪ್ಲೇಗು ರೋಗವು 46 ಮಂದಿಗೆ ತಗಲಿ 29 ಮಂದಿಗಳು ಸತ್ತರು.

ರಾಜಧಾನಿಯ ಹಳೇ ಪೋಸ್ಟಾಫೀಸು ರಸ್ತೆಯಲ್ಲಿರುವ ಡೈಯಿಂಗ್, ವೀವಿಂಗ್ ಮತ್ತು ಮೆಟಲ್ ಫ್ಯಾಕ್ಟರಿ ಯಜಮಾನರುಗಳಾದ ಮ|| ವಜ್ರನಾಥಯ್ಯ ಮತ್ತು ಕಂಪೆನಿಯವರು ಪ್ರಕಟಿಸಿರುವ ತೈಲಚಿತ್ರಸಮೇತವಾದ 1933 ನೆಯ ವರ್ಷದ ಕ್ಯಾಲಂಡರನ್ನು ಪ್ರೀತಿಪುರಸ್ಸರವಾಗಿ ಸ್ವೀಕರಿಸಿದೆ.

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ...

ಬಂಗಾಳೀ ಗ್ರಾಮಗಳಿಗೆ ಅರ್ಥದಂಡ

ಬಂಗಾಳದಲ್ಲಿ ಮಿಡ್ನಾಪುರ ಡಿಸ್ಟ್ರಿಕ್ಟಿಗೆ ಸೇರಿದ ಎರಡು ಗ್ರಾಮಗಳವರು ಲಾ ಅಡರನ್ನು ಭಂಗಪಡಿಸುವ ಕಾರ್ಯಗಳನ್ನು ಮಾಡುತ್ತಿದ್ದಾರೆಂಬ ಅಪರಾಧಕ್ಕಾಗಿ ಒಂದು ಗ್ರಾಮಕ್ಕೆ 350 ಇನ್ನೊಂದಕ್ಕೆ 300 ರೂ. ಗಳ ದಂಡವು ವಿಧಿಸಲ್ಪಟ್ಟಿದೆ.

ವರ್ಣಾಶ್ರಮ ಸ್ವರಾಜ್ಯಸಂಘ ಮಹಾಸಭೆ

ಇದೇ ಡಿಸೆಂಬರ್ ತಾ|| 27, 28 ಮತ್ತು 29 ರಲ್ಲಿ ಗುರುವಾಯೂರಿನೊಳಗೆ ವರ್ಣಾಶ್ರಮ ಸ್ವರಾಜ್ಯ ಸಂಘದವರ ಮಹಾಸಭೆಯು ಶ್ರೀ ಜಗದ್ಗುರು ಶಂಕರಾಚಾರ್ಯಸ್ವಾಮಿಗಳ ಅಧ್ಯಕ್ಷತೆಯಲ್ಲೂ, ಅಖಿಲಭಾರತ ವರ್ಣೀಯ ಮಠಾಚಾರ ಮಹಾಸಭೆಯು ಶ್ರೀ ಜಗದ್ಗುರು ... ಅಧ್ಯಕ್ಷತೆಯಲ್ಲೂ ಜರುಗುವುವು.

ಭಾರತದೇಶ ರಕ್ಷಣೆಯ ಮೇಲೆ ಹೋರ್ ವರ ಲೇಖ

ಬ್ರಿಟಿಷರು ಸರಹದ್ದು ರಕ್ಷಣೆಗೋಸ್ಕರ ಇಡುವುದಕ್ಕೆ ...

ಅಖಿಲಭಾರತ ವೈದ್ಯಮಹಾಸಭೆ

ಇದೇ ಡಿಸೆಂಬರು ತಾ|| 28 ರಲ್ಲಿ ಲಕ್ನೋ ಪಟ್ಟಣದೊಳಗೆ ಅಖಿಲಭಾರತ ವೈದ್ಯ ಮಹಾಸಭೆಯು ಹೈದರಾಬಾದಿನ ಡಾಕ್ಟರ್ ನಾಯಿಡುರವರ ಅಧ್ಯಕ್ಷತೆಯಲ್ಲಿ ಜರುಗುವುದು. ಇದರ ಜತೆಗೆ ವೈದ್ಯಪ್ರದರ್ಶನ ನಡೆಯಲು ಏರ್ಪಾಟಾಗಿರುತ್ತದೆ. ಭಾರತ ಶಾಸನಸಭೆಯಲ್ಲಿ ಉಪಪಾದಿಸಲ್ಪಟ್ಟ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಬಿಲ್ಲಿನ ಸಂಬಂಧವಾಗಿ ವೈದ್ಯ ಮಹಾಸಭೆಯಲ್ಲಿ ಚರ್ಚೆಯು ನಡೆಯುವುದು.

ವೈದಿಕ ಪರಿಷತ್ತು

...

ಎಲ್ಲರಿಗೂ ಶಂಕರಾಚಾರ್ಯರಂತೆ ಪ್ರವೀಣತೆ ಇರುವುದಿಲ್ಲ

...

ಮಹಾತ್ಮರ ಸಮಕ್ಷದಲ್ಲಿ ಪಂಡಿತರ ಸಭೆ

...

ಗುರುವಾಯೂರು ದೇವಾಲಯ ಪ್ರವೇಶ

...

ಹೋರ್ ವರ ಕಾಶ್ಮೀರ ಸಂಸ್ಥಾನ ಪ್ರಶಂಸೆ

ಭಾರತ ಮಂತ್ರಿಯವರಾದ ಸರ್ ಸ್ಯಾಮುಯಲ್‌ಹೋರ್ ರವರು ಲಂಡನ್ನಿನ ಒಂದು ಹೋಟಲಿನೊಳಗೆ ವಜಹತ್ ಹುಸೇನ್ ರವರ ಅಧ್ಯಕ್ಷತೆಯಲ್ಲಿ ನಡೆದ ಔತಣದಲ್ಲಿ ಕಾಶ್ಮೀರ ಸಂಸ್ಥಾನದ ಮಹಾರಾಜರವರ ಆಯುರಾರೋಗ್ಯವನ್ನು ಕೋರಿ ಪ್ರಸ್ತಾಪಿಸುವಾಗ್ಗೆ ಹೀಗೆ ಹೇಳಿದರು.—" ಕಳೆದ 1½ ವರ್ಷಗಳಲ್ಲಿ ಇತರ ದೇಶಗಳೊಳಗೆ ಪ್ರಾಪ್ತವಾಗಿದ್ದಂತೆ ಕಾಶ್ಮೀರದಲ್ಲಿ ಸಹ ಬಹಳ ನಷ್ಟ ಪ್ರಾಪ್ತವಾಗಿದ್ದಿತು. ಆದರೆ ಈಗ ರಾಜಕೀಯ ಸಂಬಂಧವಾದ ಕಷ್ಟಗಳೆಲ್ಲ ಕೊಲಗಿರುವಂತೆ ತೋರುತ್ತದೆ. ...

ಗುರುವಾಯೂರು ಪವಿತ್ರಕ್ಷೇತ್ರ

ಗುರುವಾಯೂರು ಕೇರಳ ದೇಶದಲ್ಲಿರುವ ಪವಿತ್ರಕ್ಷೇತ್ರಗಳೆಲ್ಲಲ್ಲ ಮೊದಲನೆಯದು. ...

ಹೋರ್ ರವರಿಗೆ ಜಾಂರವರ ಔತಣಸತ್ಕಾರ

ನವನಗರದ ಮಹಾರಾಜರಾದ ಜಾಂರವರು ಭಾರತ ಮಂತ್ರಿ ಹೋರ್ ರವರಿಗೆ ಹೋಟೆಲ್ ಮೆಟ್ರೋಪೋಲಿಯಲ್ಲಿ ಔತಣ ಸತ್ಕಾರಮಾಡಿದಾಗ್ಗೆ ...

ನಾಧಿಪತಿಗಳು ಸೇರುವುದರಿಂದ ಮುಂದಣ ಭಾರತ ಪ್ರಭುತ್ವದಲ್ಲಿ ಅವರುಗಳಿಗೆ ವಿಶೇಷಾಧಿಕಾರವುಂಟಾಗುವುದು. ಅಂತಹ ಅಧಿಕಾರವು ಎಲ್ಲ ವಿಧದಲ್ಲೂ ಮುಂದಣ ಭಾರತ ಕಲ್ಯಾಣಕ್ಕೆ ಬಹಳ ಮುಖ್ಯವು. ಅದುಕಾರಣ ಸಂಸ್ಥಾನಾಧೀಶರುಗಳು ಕೂಡಲೆ ಫೆಡರೇಷನ್ನಿಗೆ ಸೇರಬೇಕು ಇದರಿಂದ ದೇಶಕ್ಕೂ ಸಂಸ್ಥಾನಾಧೀಶರುಗಳಿಗೂ ಮೇಲಾಗುವುದು. ಅನಾವಶ್ಯಕವಾದ ಆಲಸ್ಯವೂ, ವಿಷನು ಷರತ್ತುಗಳಿಂದ ಕೂಡಿದ ರಾಯಬಾರವೂ ಹಾನಿಕರವು. ಸಂಸ್ಥಾನಾಧಿಪತಿಗಳ ಷರತ್ತುಗಳೂ ಹಕ್ಕು ಬಾಧ್ಯತೆಗಳೂ ಸಂಪೂರ್ಣವಾಗಿ ಕಾಪಾಡಲ್ಪಡುವುದರಿಂದ ಕೂಡಲೆ ಘಟ್ಟಿ ಮನಸ್ಸುಮಾಡಿ ಅವರುಗಳು ಫೆಡರೇಷನ್ನಿಗೆ ಸೇರಬೇಕು " ಎಂದು ಹೇಳಿದರು.

ಚೀಫ್ ಜಡ್ಜ್ ಮಹಾದೇವಯ್ಯನವರ ಅಭಿನಂದನ

ಮ|| ಪಿ. ಮಹಾದೇವಯ್ಯನವರಿಗೆ ಪ್ರಧಾನನ್ಯಾಯಮೂರ್ತಿ ಪದವಿಯು ದೊರಕಿದುದರಿಂದ ಬೆಂಗಳೂರು ಲಾಯರುಗಳಿಗುಂಟಾದ ಸಂತೋಷವನ್ನು ಅವರುಗಳ ಪರವಾಗಿ ಗೌರ್ನಮೆಂಟ್ ಅಡ್ವೊಕೇಟರು ತಿಳಿಸುವಾಗ್ಗೆ ಈ ಪ್ರಕಾರವಾಗಿ ಹೇಳಿದರು :—ತಾವು ಪ್ರಥಮತಃ ಈ ಕೋರ್ಟಿಗೆ ನ್ಯಾಯಮೂರ್ತಿಗಳಾಗಿ ದಯಮಾಡಿಸಿದಾಗ್ಗೆ ತಮ್ಮ ಸುಖಾಗಮನವನ್ನು ನಾವುಗಳು ಬಯಸಿದ 18 ತಿಂಗಳವಧಿಯೊಳಗೆ ಪ್ರಧಾನ ನ್ಯಾಯಮೂರ್ತಿಗಳಾಗಿ ನಿಯಮಿಸಲ್ಪಟ್ಟುದಕ್ಕಾಗಿ ತಮ್ಮನ್ನಭಿನಂದಿಸಲು ಈಗ ನೆರೆದಿರುತ್ತೇವೆ. ತಾವು ಈ ಕೋರ್ಟಿನ ಜಡ್ಜಿಯವರಾಗಿ ಬರುವುದಕ್ಕೆ ಮೊದಲು ತಾವು ಪ್ರೌಢವಿದ್ಯಾಲಯದಲ್ಲೂ, ಪ್ರಭುತ್ವೋದ್ಯೋಗಗಳಲ್ಲೂ ಸಾಮರ್ಥ್ಯದಿಂದ ನಿರ್ವಹಿಸಿದ ಕಾರ್ಯಕಲಾಪಗಳನ್ನು ಕುರಿತು ಹಿಂದೆಯೇ ಪ್ರಸ್ತಾಪಿಸಿರುತ್ತೇನಾದುದರಿಂದ ಪುನಃ ವಿವರಿಸಿ ಹೇಳಬೇಕಾಗಿಲ್ಲ. ಮೈಸೂರು ಮಹಾರಾಜರ ಕಾಲೇಜಿನಲ್ಲಿ ನೀವು ವಿದ್ಯಾವ್ಯಾಸಂಗವನ್ನು ಪೂರೈಸಿದ ಮೇಲೆ ನಿಮ್ಮ ಬುದ್ಧಿ ಕುಶಲತೆಗೆ ಮೆಚ್ಚಿ ಮಿ|| ವೀರ್‌ರವರು ನಿಮ್ಮ ಬಿ.ಎ., ಪರೀಕ್ಷೆಯ ಫಲಿತಾಂಶವು ಗೊತ್ತಾಗುವುದಕ್ಕೆ ಮೊದಲೇ ನಿಮ್ಮನ್ನು ಸಹಾಯೋಪಾಧ್ಯಾಯರನ್ನಾಗಿ ನಿಯಮಿಸಿ ಬಿ.ಎ. ತರಗತಿಯಲ್ಲೂ ಪಾಠಹೇಳಲೇರ್ಪಡಿಸಿದರು. ಕೈ|| ಡಿ. ವೆಂಕಟರಾಮಯ್ಯನವರಿಗೆ ಸಹಾಯಕರಾಗಿದ್ದು ಅನಂತರ ತುಮಕೂರಿನಲ್ಲಿ ಸ್ವತಃ ವಕೀಲಿಯನ್ನು ನಿಮ್ಮ ಬುದ್ಧಿ ಚಾತುರ್ಯ ಮತ್ತು ಕಾರ್ಯದಕ್ಷತೆಗಳ ಪ್ರದರ್ಶನದಿಂದ ಒಳ್ಳೇ ಹೆಸರನ್ನೂ ಆದಾಯವನ್ನೂ ಹೊಂದುವವರಾದಿರಿ. ಇಂತಹ ಆದಾಯವನ್ನು ಬಿಟ್ಟು 1905 ರಲ್ಲಿ ಮುನಸೀಫ್ ಉದ್ಯೋಗವನ್ನೊಪ್ಪಿಕೊಂಡಿರಿ. ನಿಮ್ಮ ಬುದ್ಧಿವಂತಿಕೆಯನ್ನೂ ಶಕ್ತಿ ಸಾಮರ್ಥ್ಯಗಳನ್ನೂ ಪ್ರಭುತ್ವದವರು ಅರಿತು ಸಂಸ್ಥಾನದಲ್ಲಿ ಉತ್ತರವಾದಿತ್ವವುಳ್ಳ ಉದ್ಯೋಗಗಳಿಗೆ ನಿಮ್ಮನ್ನು ನಿಯಮಿಸುತ್ತ ಬಂದರು. ಕೆಲಕಾಲ ನೀವು ಪ್ರಭುತ್ವದವರಿಗೆ ಅಂಡರ್ ಸೆಕ್ರೆಟರಿಯಾಗಿದ್ದು ಅನಂತರ ಸಬ್ ಜಡ್ಜಿ ಮತ್ತು ಡಿಸ್ಟ್ರಿಕ್ಟ್ ಜಡ್ಜಿಯುದ್ಯೋಗಗಳಿಗೇರಿ, ಬಹಳ ಉತ್ತರವಾದಿತ್ವವುಳ್ಳ ಲಾ ಸೆಕ್ರೆಟರಿ ಮತ್ತು ಲೀಗಲ್ ರಿಮೆಂಬರೆನ್ಸರಾಗಿ 1931 ರಲ್ಲಿ ನಿಯಮಿಸಲ್ಪಟ್ಟಿರಿ. ಸ್ತ್ರೀ ವಾರಸತ್ವದ ಬಿಲ್ಲನ್ನು ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ನಿಮ್ಮಿಂದ ಸಮರ್ಥಿಸಲ್ಪಟ್ಟಿತು. ತಾವು ಈ ಹೈ ಕೋರ್ಟಿನ ನ್ಯಾಯಮೂರ್ತಿಗಳಾಗಿ ನಿಯಮಿಸಲ್ಪಟ್ಟ ಸ್ವಲ್ಪ ಕಾಲದಲ್ಲಿಯೇ ನಿಮ್ಮ ಬುದ್ಧಿ ಸಾಮರ್ಥ್ಯಗಳನ್ನೂ ಕಾರ್ಯಾಸಕ್ತಿಯನ್ನೂ ವಕೀಲರುಗಳಲ್ಲಿ ಗೌರವ ಪುರಸ್ಕಾರಗಳನ್ನೂ ತೋರಿಸುತ್ತಿರುವುದಲ್ಲದೆ ವಕೀಲರುಗಳ ವಾದವನ್ನು ಸಾವಧಾನದಿಂದ ಕೇಳುತ್ತಿರುವರೆಂದು ಹೆಸರ್ಗೊಂಡಿರುವಿರಿ. ನಿಮ್ಮ ತೀರ್ಮಾನಗಳು ಹೈ ಕೋರ್ಟು ರಿಪೋರ್ಟುಗಳಲ್ಲೂ ಮೈಸೂರು ಲಾ ಜರ್ನಲ್ಲಿನಲ್ಲೂ ಪ್ರಾಮುಖ್ಯತೆ ಹೊಂದಿರುತ್ತವೆ. ಮತ್ತು ನಿಮ್ಮ ಅಪಾರವಾದ ನ್ಯಾಯಶಾಸ್ತ್ರ ನೈಪುಣ್ಯವನ್ನೂ ನಿಮ್ಮ ಗ್ರಹಣಶಕ್ತಿಯನ್ನೂ ಪ್ರದರ್ಶಿಸುತ್ತವಲ್ಲದೆ ನಮ್ಮಗಳಿಗೆಲ್ಲ ಬಹಳ ಪ್ರಯೋಜನಕರವಾಗಿರುತ್ತವೆ. ಪ್ರಧಾನ ನ್ಯಾಯಮೂರ್ತಿ ಸ್ಥಾನಕ್ಕೆ ಸಂಪೂರ್ಣಾರ್ಹರಾದ ನೀವು ಈ ಮಹತ್ಪದವಿಗೇರಿಸಲ್ಪಟ್ಟುದು ನಮ್ಮೆಲ್ಲರಿಗೂ ಮಹಾತುಷ್ಟಿಕರವಾಗಿದೆ. ಈ ಘನ ಕೋರ್ಟಿನ ಪ್ರಧಾನ ನ್ಯಾಯಮೂರ್ತಿ ಪದವಿಯಲ್ಲಿ ನಿಮಗೆ ಖ್ಯಾತಿಯುಂಟಾಗಲೆಂದು ವಕೀಲರುಗಳ ಪರವಾಗಿ ನಾನು ಕೋರುತ್ತೇನೆ.

ಹಾಸನ ಟೌನ್ 24 ನೇ ದನವಿನ ಪ್ರದರ್ಶನ.

ಹಾಸನ ಟೌನ್ ದನವಿನ ಪ್ರದರ್ಶನ ಕ್ಷೇತ್ರದಲ್ಲಿ 24 ನೇ ದನವಿನ ಪ್ರದರ್ಶನವು ಏರ್ಪಾಟಾಗಿರುತ್ತೆ.

ಪ್ರದರ್ಶನವು 1933 ನೇ ಜನವರಿ ಮಾಹೆ ತಾರೀಖು 2 ನೇ ಸೋಮವಾರದಿಂದ 6 ನೇ ಶುಕ್ರವಾರದವರೆಗೆ ಉಭಯ ದಿವಸಗಳಲ್ಲೂ ನಡಿಯುತ್ತೆ.

ಗೌರ್ನಮೆಂಟ್ ಆರ್ಡರು ಅನುಸರಿಸಿ ದನಗಳ ಪ್ರದರ್ಶನಕ್ಕೆ ಬಿಡಲ್ಪಡುವ ರಾಸುಗಳ ಮೇಲೆ ರಾಸು ಒಂದಕ್ಕೆ ಎರಡಾಣೆಯಂತೆ ಫೀ ವಸೂಲ್ಮಾಡಲ್ಪಡುತ್ತೆ.

ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲ್ಮಾಡುವ ಫೀ ಬಾಬನ್ನು ಮತ್ತು ಪ್ರದರ್ಶನದ ಮ್ಯುನಿಸಿಪಲ್ ಜಾಗದಲ್ಲಿ ಬೀಳುವ ಗೊಬ್ಬರ ಸಾಗಿಸುವ ಬಾಬನ್ನು ಸಹ ತಾ|| 13-12-32 ರಲ್ಲು ಹಾಸನದ ಸಂತೆ ಹತ್ತಿರ ಇರುವ ಆಕ್ಟ್ರಾಯಿ ಕಟ್ಟೆ ಬಳಿ ಮಧ್ಯಾಹ್ನ 2 ಘಂಟೆ ಲಾಗಾಯತು ಹಾಸನ ಟೌನ್ ಮ್ಯುನಿಸಿಪಲ್ ಪ್ರೆಸಿಡೆಂಟರು ಅಥವಾ ವೈಸ್‌ಪ್ರೆಸಿಡೆಂಟರವರಿಂದ ಹರಾಜು ಮಾಡಿಸಲ್ಪಡುತ್ತೆ.

ಅಂಗಡಿ ವಗೈರೆಗಳಿಗಾಗಿ ವಿಂಗಡಿಸುವ ಜಾಗಾಗಳನ್ನು ತಾ|| 15-12-1932 ರ ಲಾಗಾಯತು ವಿಲೆವಾರಿ ಮಾಡಲು ಉಪಕ್ರಮಿಸುತ್ತೆ. ಬಾಕಿ ವಿಷಯಗಳನ್ನು ಹಾಸನ ಟೌನ್ ಮ್ಯುನಿಸಿಪಲ್ ಆಫೀಸಿಗೆ ಬಂದು ತಿಳಿದುಕೊಳ್ಳತಕ್ಕದ್ದು.

[3—3] S. P. BRAMHAPPAH,
for President Town Ml. Council &
Chairman Cattle Show
ತಾ|| 2-12-1932. *Committee, Hassan.*

ಲಿಂಗಧಾರಣ ಚಂದ್ರಿಕೆಯ ಕನ್ನಡ ಭಾಷಾಂತರ.

(ಲೇಖಕ :—ಸ್ವಾಮಿ ವಿರೂಪಾಕ್ಷ ಒಡೆಯರು.)

(ಲೇಖಾಂಕ ೪.)

ಹಿಂದೆ ತೋರಿಸಿದ ಶಾಸ್ತ್ರೀಯ ವಾಕ್ಯಗಳಿಂದ ಶಿವನಿಗೆ ಲಿಂಗಾಕಾರತ್ವವು ಸಿದ್ಧವಾಗುವದಲ್ಲದೆ ಸಿದ್ಧಾಂತ ಶಿಖಾಮಣಿಯಲ್ಲಿಯೂ "ಆಧಾರೇ ಕನಕಪ್ರಖ್ಯಂ ಹೃದಯೇ ವಿದ್ರುಮಪ್ರಭಂ | ಭ್ರೂಮಧ್ಯೇ ಸ್ಫಟಿಕಚ್ಛಾಯಂ ಲಿಂಗಯೋಗೀವಿಭಾವಯೇತ್" ಬಾಹ್ಯ ಪೂಜಾಸ್ಥಾನದಲ್ಲಿ ಅಥವಾ ನಾಭಿಚಕ್ರದಲ್ಲಿ ಸುವರ್ಣದಂತೆ ತೇಜೋವಿಶಿಷ್ಟವಾದ ಲಿಂಗಾಕಾರವನ್ನು ಯೋಗಿಯು ಅಭಿಮುಖೀಗೊಳಿಸಬೇಕು, ಹಾಗೂ ಹೃದಯದಲ್ಲಿ ವೃಕ್ಷಗಳ ಕೋಮಲವಾದ ಚಿಗುರೆಲೆಯ ಸದೃಶ ಆತಸೂಕ್ಷ್ಮ ತೇಜೋಮಯವಾದ ಲಿಂಗಾಕಾರವನ್ನು ಹಾಗೂ ಭ್ರೂಮಧ್ಯದಲ್ಲಿ ಸ್ಫಟಿಕ ಮಣಿ ಸದೃಶ ಕಾಂತಿಯುತವಾದ ಶಿವಲಿಂಗ ಸ್ವರೂಪವನ್ನು ಯಾವಾಗಲೂ ಯೋಗಿಯು ಭಾವಿಸತಕ್ಕದ್ದೆಂಬದಾಗಿ ಹೇಳಿದ್ದು ಇದರಿಂದ ಈ ಎಲ್ಲಾ ಸ್ಥಾನಗಳಲ್ಲಿ ಅವಸ್ಥಾಂತರದಿಂದ ಶಿವನು ಲಿಂಗಾಕಾರದಲ್ಲಿ ಅನುಸಂಧಾನ ಮಾಡಲರ್ಹನೆಂಬುದಾಗಿ ತಿಳಿದುಬರುತ್ತದೆ.

ಇನ್ನು ಉಪನಿಷತ್ತಿನಲ್ಲಿ ದಹರೋಪಾಸನೋಪಾಕ್ಯದ ವಿಷಯವಾಗಿ ನಾರಾಯಣನು ಉಪಾಸಕನೆಂತಲೂ ಶಿವನೇ ಉಪಾಸ್ಯನೆಂತಲೂ ನಿರ್ಣಯ ಮಾಡಿರುವದರಿಂದ "ಸಹಸ್ರ ಶೀರ್ಷಂ" ಎಂಬ ಅನುವಾಕದಲ್ಲಿ ಹೇಳಿದ "ನಾರಾಯಣ ಪರಂಬ್ರಹ್ಮತತ್ವಂ ನಾರಾಯಣಃ ಪರಃ" ಇತ್ಯಾದಿ ವಾಕ್ಯಗಳು ವಿರುದ್ಧವಾಗುವವೆಂದಲ್ಲಿ ಹಾಗೇನು ಸಂಶಯಮಾಡಲಿಕ್ಕೆ ಕಾರಣವಿಲ್ಲ. ಯಾಕೆಂದರೆ ಶದ್ಭಾವದಿಂದಲೇ ತದೇಕಮಯವಾದ ಭಾವನೆಯನ್ನು ಹೊಂದಿದ ನಾರಾಯಣನು ಸಾಮಾನ್ಯ ಶಿವಭಕ್ತರಿಗಿಂತಲೂ ಲಿಂಗಾಂಗ ಸಾಮರಸ್ಯಾದಿ ತತ್ವ ವಿಚಾರದಲ್ಲಿ ಬಹಳ ಬಲ್ಲಿದನು ಹಾಗೂ ಅವರಲ್ಲಿ ಅತ್ಯಂತ ಉನ್ನತಿಯನ್ನು ಹೊಂದಿ ತನ್ನ ಹೃದಯಾಂತರ್ವರ್ತಿ ಜ್ಯೋತಿರ್ಲಿಂಗಾನು ಸಂಧಾನದಿಂದ ಲಿಂಗಮಯನಾಗಿದ್ದಾನೆಂದು ಅವನ ಶಿವಭಕ್ತಿಯ ಆಶಯತ್ವವನ್ನು ತೋರಿಸುವದಕ್ಕಾಗಿ ಸಹಸ್ರ ಶೀರ್ಷಾದಿ ಅನುವಾಕಗಳಲ್ಲಿ ಹಾಗೆ ನಾರಾಯಣನಿಗೆ ಪರಬ್ರಹ್ಮ ಸ್ವರೂಪನೆಂದು ಸ್ತುತಿಮಾಡಿರುವರೆಂತಾ ಯೋಚಿಸಲಿಕ್ಕೆ ಅನುಕೂಲವಿರುವದು. ಆದರೆ ಕೆಲವರು ಇಲ್ಲಿ ನಾರಾಯಣ ಪರಂಬ್ರಹ್ಮ ಎಂಬ ವಾಕ್ಯಕ್ಕೆ "ನಾರಾಯಣಾತ್ ಪರಂ ಬ್ರಹ್ಮ" ಅಂದರೆ ನಾರಾಯಣನಿಗಿಂತ ಅನ್ಯವಾದ ಪರಬ್ರಹ್ಮ ವಸ್ತು ಬೇರೊಂದುಂಟೆಂದು ಸ್ಪಷ್ಟವಾಗುವದೆಂದು ಹೇಳುವರಲ್ಲದೆ ಅದಕ್ಕಾಗಿಯೇ "ನಾರಾಯಣ ಪರಂಬ್ರಹ್ಮ" ಎಂದು ಹೇಳಲ್ಪಟ್ಟಿರುವದು. ಇಲ್ಲವಾದರೆ ನಾರಾಯಣಃ ಪರಂಬ್ರಹ್ಮ ಎಂದು ಹೇಳಬೇಕಾಗಿತ್ತು, ಇದರಿಂದ ಶಿವನೇ ಪರಬ್ರಹ್ಮನಾಗಿದ್ದು ಉಪಾಸ್ಯನೆಂಬುವಲ್ಲಿ ಯಾವ ಶಾಸ್ತ್ರ ವಿರೋಧವೂ ಬರುವಂತಿಲ್ಲ.

ಇನ್ನು ಈ ರೀತಿ ಉಪನಿಷತ್ತುಗಳಲ್ಲಿ ಜ್ಯೋತಿರ್ಲಿಂಗಾನುಸಂಧಾನ ರೂಪವಾದ ಅಂತರ್ಲಿಂಗಧಾರಣೆಯು ಹೇಳಲ್ಪಟ್ಟು ಅದೇ ತೈತರೀಯ ಸಂಹಿತೆಯ ಹದಿನಾರನೇ ಅನುವಾಕದ "ನಿಧನಪತಯೇ ನಮಃ ನಿಧನಪತಾಂತಿಕಾಯನಮಃ ಊರ್ಧ್ವಾಯನಮಃ ಊರ್ಧ್ವಲಿಂಗಾಯನಮಃ ಹಿರಣ್ಯಾಯನಮಃ ಹಿರಣ್ಯಲಿಂಗಾಯನಮಃ........ಏತತ್ ಸೋಮಾಸ್ಯ ಸೂರ್ಯಸ್ಯ ಸರ್ವಲಿಂಗಸ್ಥಾಪಯತಿಪಾಣಿಮಂತ್ರಂ ಪವಿತ್ರಂ" ಇತ್ಯಾದಿ ಮಂತ್ರೋಚ್ಚಾರಣ ಸಂದರ್ಭದಲ್ಲಿ "ಸರ್ವಲಿಂಗಂ ಸ್ಥಾಪಯತಿ" ಎಂಬ ವಾಕ್ಯದಿಂದ ಯಾವಾಗಲೂ ದೇಹದಲ್ಲಿ ಲಿಂಗವನ್ನು ಇಟ್ಟುಕೊಂಡೇ (ಧರಿಸಿಯೇ) ತೀರಬೇಕೆಂದು ಇಷ್ಟಲಿಂಗರೂಪವಾದ ಬಾಹ್ಯಲಿಂಗಧಾರಣೆಯು ವಿಧಿಸಲ್ಪಟ್ಟಿರುವದು. ಆದರೆ ವ್ಯಾಕರಣಶಾಸ್ತ್ರ ಪದ್ಧತಿಯಂತೆ "ಸ್ಥಾಪಯತಿ" ಎಂಬಲ್ಲಿ ವರ್ತಮಾನ ಕಾಲದ ಲಟ್‌ಲಕಾರಪ್ರಯೋಗವಿದ್ದು ಲಿಂಗವನ್ನು ಧರಿಸಿಯೇ ತೀರಬೇಕೆಂದು ವಿಧಾನಮಾಡುವ ವಿಧಿಲಿಂಙ್‌ಲಕಾರಪ್ರಯೋಗವಿಲ್ಲದ್ದರಿಂದ ಲಿಂಗಧಾರಣೆಯ ವಿಷಯದಲ್ಲಿ ನಿಯಮ ನಿಯತತ್ವವು ಇಲ್ಲಿ ಹೇಳಲು ಸಾಧ್ಯವಿಲ್ಲವೆಂದು ಶಂಕಾಮಾಡಿ ತನ್ನಿರಸನಾರ್ಥವಾಗಿ "ವ್ರೀಹೀನ್‌ಪ್ರೋಕ್ಷತಿ" ಇತ್ಯಾದಿ ವಾಕ್ಯಗಳ ಉದಾಹರಣೆಯನ್ನು ತೋರಿಸಿರುವರು. ಯಾಕೆಂದರೆ, "ವೇದಾನಾಂರಕ್ಷಾರ್ಥಮಧ್ಯೇಯಂ ವ್ಯಾಕರಣಂ" ಎಂಬದಾಗಿ ವ್ಯಾಕರಣಾದಿ ಶಾಸ್ತ್ರಗಳನ್ನು ವೇದರಕ್ಷಣೆಗಾಗಿ ಅರ್ಥಾತ್ ವೇದಾರ್ಥಜ್ಞಾನ ವಿಚಾರಾರ್ಥವಾಗಿ ಕಲಿಯತಕ್ಕದ್ದಲ್ಲದೆ ಈ ವ್ಯಾಕರಣಾದಿ ಶಾಸ್ತ್ರಗಳು ಸಾಧನಗಳಿದ್ದು ಈ ಸಾಧನಗಳ ಅಧ್ಯಯನದಲ್ಲಿಯೇ ಮಾನವನು ತನ್ನ ಸರ್ವಾಯುಷ್ಯವನ್ನು ಕಳೆಯದೆ ಸಾಧ್ಯವಾದ ವೇದರಾಶಿಯನ್ನು ಓದಿ ಪುನೀತನಾಗತಕ್ಕದ್ದೆಂತಲೂ ಬೋಧಿಸುವದಕ್ಕಾಗಿ ಪತಂಜಲಿ ಮಹರ್ಷಿಗಳು ವೇದರಕ್ಷಣೆಗೆಂಬದಾಗಿ ಹೇಳಿರುವರು. ಇದರಂತೆ ಶಂಕರಾಚಾರ್ಯರಾದರೂ "ನಹಿನಹಿರಕ್ಷತಿಡುಕೃಞ್‌ಕರಣೆ" ಎಂಬದಾಗಿ ಬರೇ ವ್ಯಾಕರಣದ ಶಬ್ದಪಾರಗಳನ್ನು ನಾಡುತ್ತ ಕೂತಲ್ಲಿ ಫಲವಿಲ್ಲ. ಆದರೆ "ಸರ್ವಜ್ಞ ಕಲ್ಪಸ್ಯ ಋಗ್ವೇದಾದಿ ಶಾಸ್ತ್ರಸ್ಯ" ಸರ್ವಜ್ಞ ಪರಮಾತ್ಮನಿಂದ ಲೀಲಾನ್ಯಾಯದಿಂದ ಆವಿರ್ಭವಿಸಿದ ವೇದವೇದಾಂತಾದಿ ಶಾಸ್ತ್ರಗಳನ್ನು ಓದಿ ಆತ್ಮಪವಿತ್ರತೆಗೆ ಈಡಾಗಿರೆಂಬದಾಗಿ ಹೇಳಿರುವರಲ್ಲದೆ ಕಪಿಲಕಣಾದ ಗೌತಮಾದಿ ಮುನಿಗಳು "ತದ್ವಚನಾದಾಮ್ನಾಯಸ್ಯಪ್ರಾಮಾಣ್ಯಂ" ಎಂದು ಸರ್ವ ವಿಷಯದಲ್ಲೂ ವೇದ ಪ್ರಾಮಾಣ್ಯವೇ ಪ್ರಾಮುಖ್ಯವಾದದ್ದಾಗಿ ಅದು ಈಶ್ವರೀವಚನವೆಂದು ನಿರ್ಧರಿಸಿರುವರು. ಇದರಂತೆ "ವೇದೋಽಖಿಲೋಧರ್ಮಮೂಲಂ" ಎಂದು ಎಲ್ಲಾ ಧರ್ಮಶಾಸ್ತ್ರಕ್ಕೂ ವೇದವೇ ತಳಹದಿಯೆಂದು ಮುಖ್ಯಾದಿ ಸ್ಮೃತಿಕಾರರೂ ಸಹ ವೇದವನ್ನೇ ಪರಿಪರಿಯಾಗಿ ಕೊಂಡಾಡಿರುವರು. ಇದಲ್ಲದೆ ಬುದ್ಧದೇವನು ಸಹ "ಗಾಯತ್ರೀಛಂದಸಾಂ ಮುಖಂ" ಎಂಬದಾಗಿ ವೇದಪ್ರಾಶಸ್ತ್ಯವನ್ನು ಪ್ರತಿಪಾದಿಸಿರುವನು ಹೀಗಿದ್ದೂ ಪುರಾತನರ ಶಾಸ್ತ್ರಾಭ್ಯಾಸ ಪದ್ಧತಿಯನ್ನರಿಯದೆ ಮಧ್ಯಕಾಲದಲ್ಲಿ ಕೆಲವು ಅಜ್ಞ ಶಾಸ್ತ್ರೀ ಜನಾಂಗವು ತಮ್ಮ ಒಂದೊಂದು ಆಯುಷ್ಯವನ್ನೆಲ್ಲ ಬರೇ ಒಂದು ಸಾಧನ ರೂಪವಾದ ವ್ಯಾಕರಣ, ಅಥವಾ ನ್ಯಾಯ ವಿಷಯಗಳನ್ನು ಕಲಿಯುವದರಲ್ಲಿಯೇ ಕಳೆಯಬೇಕೆಂದು ಬೋಧಿಸುವದನ್ನು [illegible]

ಪರಾಂಜಪೇ ಮೊದಲಾದ ಆಂಗ್ಲ ವಿದ್ಯಾ ಸುಶಿಕ್ಷಿತರು ಈ ಸಂಸ್ಕೃತ ಭಾಷೆಯನ್ನು ಹಾಗೂ ಅದರ ಅಭ್ಯಾಸವನ್ನು ದೂರೀಕರಿಸಿದರೇನೇ ರಾಷ್ಟ್ರೋನ್ನತಿಯಾಗುವದೆಂದು ಪರಿಪರಿ ಅಪಹಾಸ್ಯಮಾಡಿ ಒಂದು ವೇಳೆ ಈ ಸಂಸ್ಕೃತ ಭಾಷೆಯು ಉಳಿಯಬೇಕೆಂದು ಅಪೇಕ್ಷೆ ಇದ್ದಲ್ಲಿ ಅದನ್ನೊಂದು ಪಿತ್ತಳೆ ರೂಪದಿಂದ ಒಂದು ದೊಡ್ಡದಾದ ಬುಕ್ಕಿನಲ್ಲಿ ಕಟ್ಟಿಡಬಹುದೆಂದು ಬರೆದಿರುವದನ್ನು ನೋಡಿದರೆ ಈ ಸಂಸ್ಕೃತ ಭಾಷೆಯ ವಿಷಯದಲ್ಲಿ ಈಗಿನ ನೂತನ ಸುಶಿಕ್ಷಿತರಿಗೆ ಎಷ್ಟು ಹೇಯ ತೋರುತ್ತಿರುವದೆಂಬುದು ಸ್ಪಷ್ಟವಾಗುತ್ತದೆ. ಇದರಿಂದ ಇದೆಲ್ಲಕ್ಕು ಕಾರಣವೆಂದರೆ, ಆರ್ಷ ಗ್ರಂಥಗಳನ್ನೋದದ ಅರ್ವಾಚೀನ ಶರ್ಮ, ಭಟ್ಟಾದಿಗಳು ಬರೆದಿಟ್ಟ ಸಂಕುಚಿತ ವಿಚಾರವುಳ್ಳ ಗ್ರಂಥಗಳ ಹಾಗೂ ಅವುಗಳ ಅಧ್ಯಯನವೇ ಕಾರಣವೆಂದು ನಿಃಸಂದೇಹವಾಗಿ ಹೇಳಬಹುದು. ಹಾಗೂ ಈ ವ್ಯವಹಾರ ಶೂನ್ಯರಾದ ಅಜ್ಞ ಶಾಸ್ತ್ರಿ ಜನಾಂಗವನ್ನು ಯಾರಾದರೂ ನೀವು ಕಾಶಿಗೆ ಹೋಗಿ ಏನನ್ನೋದಿ ಬಂದಿರೆಂದು ಕೇಳಿದರೆ ನಾವು ಹನ್ನೆರಡು ವರ್ಷ ಕಾಶಿಯಲ್ಲಿದ್ದು ಶಬ್ದಶಾಸ್ತ್ರಿಗಳಾಗಿ ಬಂದೆವೆಂದು ಹೇಳುವ ಡಾಂಭಿಕತ್ವವೇ ಈ ಅಪಹಾಸ್ಯಕ್ಕೆ ಮೂಲಕಾರಣವು. ಆದ್ದರಿಂದ ಇನ್ನುಮುಂದಾದರೂ ತಮ್ಮ ಒಂದೇ ಆಯುಷ್ಯದಲ್ಲಿ ಸರ್ವಶಾಸ್ತ್ರಾವಲೋಕನೆ ಮಾಡಿ ಸಾಧ್ಯವಾದ ವೇದ ವೇದಾಂತಾದಿ ದಿವ್ಯ ವಿಷಯಗಳಿಂದ ತಮ್ಮ ಘನವಾದ ಆಯುಷ್ಯವನ್ನು ಸಾರ್ಥಕಗೊಳಿಸುವ ಯತ್ನದಲ್ಲಿ ತೊಡಗುವರೆಂದು ಅಪೇಕ್ಷೆಯು.

ಇನ್ನು ಈ ರೀತಿ ವೇದ ವಾಕ್ಯಗಳ ಪ್ರಯೋಗ ವಿಷಯವಾಗಿ "ಬಹುಲಂಛಂದಸಿ, ದೃಷ್ಟಾನುವಿಧಿಶ್ಛಂದಸಿವಿಕಲ್ಪ್ಯಂತೆ" ಎಂಬದಾಗಿ ವ್ಯಾಕರಣ ಶಾಸ್ತ್ರಕರ್ತರಾದ ಪಾಣಿನಿ, ಪತಂಜಲ್ಯಾದಿ ಋಷಿಗಳು ವೇದದಲ್ಲಿಯ ಶಬ್ದಪ್ರಯೋಗವು ವಿಕಲ್ಪಿತವೆಂತಲೂ, ಹಾಗೂ ವೇದದಲ್ಲಿ ಯಾವ ರೀತಿ ಪ್ರಯೋಗವು ಕಂಡುಬರುವುದೋ ಆದರಂತೆ ರೂಪ ಸಿದ್ಧಿಗಳನ್ನು ಮಾಡಿಕೊಳ್ಳಬೇಕೇ ಹೊರ್ತು ಅಲ್ಲಿ ವ್ಯಾಕರಣಾದಿಗಳ ನಿರ್ಬಂಧವು ನಡೆಯಲಾರದೆಂತಲೂ ಸೂತ್ರಸಂಭಾಷಣೆಗಳಿಂದ ಸ್ಪಷ್ಟೀಕರಿಸಿರುವರು.

"ವ್ರೀಹೀನ್ ಪ್ರೋಕ್ಷತಿ" ಇತ್ಯಾದಿಗಳಲ್ಲಿ ವಿಧಿನಿಯಮನ ಮಾಡುವ ಲಿಂಙ್‌ಲಕಾರ ಪ್ರಯೋಗವಿಲ್ಲದಿದ್ದರೂ ಪ್ರೋಕ್ಷಣ, ಹವನ ಕ್ರಿಯೆಗಳನ್ನು ಮಾಡಿಯೇ ತೀರಬೇಕೆಂಬ ಶಾಸ್ತ್ರ ವಿಧಿ ಪ್ರಯೋಜಕತ್ವವು ಇರುವದರಿಂದ ಇಲ್ಲಿ ಹಾಗೆ ನಿಯತ ವಿಧಾನತ್ವವು ಸಂಭವಿಸ ವದೋ ಅದರಂತೆ "ಸ್ಥಾಪಯತಿ" ಎಂಬಲ್ಲಿಯಾದರೂ ಶಾಸ್ತ್ರನಿಯಮನ ಪ್ರಕಾರ ದೇಹದಲ್ಲಿ ಯಾವಾಗಲೂ ಲಿಂಗವನ್ನಿಟ್ಟುಕೊಂಡೇ ತೀರಬೇಕೆಂಬ ವಿಧಿಪ್ರಯೋಜಕತ್ವದಿಂದ ನಿಶ್ಚಿತ ನಿಯಮನತ್ವವು ಇಲ್ಲಿಯೂ ಸಂಭವಿಸಬಹುದೆಂದು ಸಾಮಾನ್ಯ ರೀತಿ ವಿಧಿಪ್ರಯೋಜಕತ್ವವನ್ನು ನೀವು ಇಲ್ಲಿಯಾದರೂ ಹೇಳಬಹುದೆಂದಲ್ಲಿ ಹಾಗನ್ನಬೇಡಿರಿ. ಯಾಕೆಂದರೆ, ಇಲ್ಲಿ ಆ ರೀತಿ ವಿಧಿಪ್ರಯೋಜಕತ್ವವು ಇಲ್ಲವೇ ಇಲ್ಲ. ಹ್ಯಾಗಂದರೆ, "ವಿಧಿರತ್ಯಂತಮಪ್ರಾಪ್ತೌ ನಿಯಮಃಪಾಕ್ಷಿಕೆ ಸತಿತತ್ರ ಚಾನ್ಯತ್ರ ಚಪ್ರಾಪ್ತೌ ಪರಿಸಂಖ್ಯೇತಿಗೀಯತೇ" ಎಲ್ಲಿ ಅತ್ಯಂತವಾಗಿ ಅಪ್ರಾಪ್ತಿಯೋ ಅಲ್ಲಿಯೇ ವಿಧಿನಿಯಮವು ಇನ್ನು ಪಕ್ಷಾಂತರವಿದ್ದಲ್ಲಿ ಅಂದರೆ ಅಲ್ಲಿಯೂ ಇಲ್ಲಿಯೂ ಪ್ರಾಪ್ತವೆಂದಲ್ಲಿ ಪರಿಸಂಖ್ಯಾ ಎಂಬ ನಿಯಮವನ್ನು ಹೇಳಬೇಕಾಗುವದು ಎಲ್ಲಿ ಪ್ರಮಾಣಾಂತರಗಳಿಂದ ಅಪ್ರಾಪ್ತಿಯೋ ಅಲ್ಲಿ ಇದರಿಂದಲೇ ನಿಯಮವು ಅಂಥಾ ಸಂದರ್ಭದಲ್ಲಿ ಅಪೂರ್ವ ವಿಧಿಯೆಂಬ ನಿಯಮವನ್ನು ಉಪಯೋಗಿಸುವರು. ಪಕೃತವಾದ ಪ್ರೋಕ್ಷತಿ ಎಂಬಲ್ಲಿ ಉಭಯಪಕ್ಷದಿಂದಲೂ ಪ್ರಾಪ್ತಿ ಇದ್ದು ಅಂಥಾದ್ದರಲ್ಲಿ ನಿಯಮ ವಿಧಿಯನ್ನೇ ಅನುಸರಿಸಬೇಕಾಗುವದು. ಎಲ್ಲಿ ಸಮುಚ್ಚಯರೂಪದ್ಯೋತಕವೋ ಅಲ್ಲಿ ನಿಯತವಾದ ಪರಿಸಂಖ್ಯೆಯಿಂದ ಕಾರ್ಯನಿರ್ವಹಿಸಲ್ಪಡುವದು. ಹ್ಯಾಗೆಂದರೆ, ಬ್ರಾಹ್ಮಣರ ಶಾಸ್ತ್ರದಲ್ಲಿ ಐದು ಐದು ಉಗುರುಳ್ಳ ಪ್ರಾಣಿಗಳನ್ನು ತಿನ್ನಬಹುದೆಂದು ಸಾಮಾನ್ಯವಾಗಿ ಹೇಳಿದ್ದು ಅಲ್ಲಿ ಏನು, "ಶಶಕಃ ಶಲ್ಯಕೋಗೋಧಾ ಖಡ್ಗೀಕೂರ್ಮಸ್ತು ಪಂಚಮಃ ||" ಅವಿ, ಗಂಡಕಿ, ಶ್ವಾನ ಮೊದಲಾದ ಐದು ಪ್ರಾಣಿಗಳನ್ನಷ್ಟೇ ತಿನ್ನಬೇಕೋ ಅಥವಾ ಇದಿತರ ಐದು ಉಗುರುಳ್ಳ ಯಾವ ಪ್ರಾಣಿಗಳನ್ನಾದರೂ ತಿನ್ನಬಹುದೋ ಎಂಬ ವಿಚಾರವು ಬಂದು ಐದೇ ಐದು ಉಗುರುಳ್ಳ ಪ್ರಾಣಿಗಳಷ್ಟೇ ತಿನ್ನಲರ್ಹವಾಗಿದ್ದು ಇತರ ಪ್ರಾಣಿಗಳನ್ನು ತಿನ್ನಬಾರದೆಂದು ನಿಯಮನಮಾಡುವದೇ ಪರಿಸಂಖ್ಯಾವಿಧಿಯೆಂದು ಹೇಳಲ್ಪಡುವದು ಎಂಬದಾಗಿ ಬ್ರಾಹ್ಮಣರ ಶಾಸ್ತ್ರದಲ್ಲಿ ಹೇಳಿರುವದನ್ನು ನೋಡಿದಿರಾ? ಈ ಬ್ರಾಹ್ಮಣರೂ ಹಾಗೂ ಈ ಅವರ ಶಾಸ್ತ್ರವೂ ಎಂಥಾದ್ದೆಂಬುದು ಇದರಿಂದ ಸರ್ವಜನಾಂಗಕ್ಕೆ ವಿದಿತವಾಗಬಹುದು ಯಾಕೆಂದರೆ, ಈ ಬ್ರಾಹ್ಮಣರು ಮಹಾಪರಿಶುದ್ಧರಂತೆ, ಬಾಯಿಂದ ಹೇಳುವದು ಒಂದು ಅಂತರಂಗಿಕಕೃತಿಯು ಬೇರೊಂದು. ಪರರು ಇಂಥಾ ಹಿಂಸಾಕೃತಿಯನ್ನು ಮಾಡಿದರೆ ಅವರು ಮಾತ್ರ ಅಸ್ಪೃಶ್ಯರಂತೆ! ನರಿ ನಾಯಿ ತಿನ್ನುವವರಾದಿವರು ಮಾತ್ರ ಭೂಸೂರ (ಭೂದೇವ) ರಂತೆ! ಇಂಥಾ ನರಿ ನಾಯಿ ತಿನ್ನುವವರಾದೀ ಜನರು ಮಾಡಿದರೆ ಮಾತ್ರ ದೇವರು ಅಪವಿತ್ರನಾಗುವದಿಲ್ಲವಂತೆ! ಇತರರು ಮಾಡಿದರೆ ಮಾತ್ರ ದೇವರು ಅಪವಿತ್ರನಾಗುವನಂತೆ! ಇದಲ್ಲದೇ ಈ ನರಿ ನಾಯಿ ತಿನ್ನುವವರಾದೀ ಬ್ರಾಹ್ಮಣರು ದೇವರನ್ನು ಸಹ ಪರಿಶುದ್ಧಿ ಮಾಡುವರಂತೆ! ಇಷ್ಟೇ ಅಲ್ಲದೆ ಗೋಭಿಲಾದಿ ಗೃಹ್ಯಸೂತ್ರಗಳಲ್ಲಿಯೂ ಹಾಗೂ ಅದಕ್ಕೆ ಅಗ್ನಿಸ್ವಾಮಿ ಮೊದಲಾದವರು ಬರೆದಿರುವ ಭಾಷ್ಯಗಳಲ್ಲಿಯೂ ಗೋಮಾಂಸಾದಿಗಳನ್ನು ತಿನ್ನಬೇಕೆಂತಲೂ ಬರದಿಟ್ಟದ್ದು ಅದರಂತೆ ಇವರು ಆಚರಿಸುತ್ತಿದ್ದು ಸಹ ಪರರು ಅಂಥವರು ಇಂಥವರು ಎಂದು ನಿಂದೆಮಾಡುತ್ತಿರುವದನ್ನು ನೋಡಿದರೆ ಇವರಿಗೇನನ್ನಬೇಕೋ ತಿಳಿಯದು. ಮಾನವ ಜಾತಿಯಲ್ಲಿ ಅಸ್ಪೃಶ್ಯತೆ ಉಂಟೆಂದೂ ಯಾವ ವೇದಗಳಲ್ಲಿಯೂ ಹೇಳಿಲ್ಲ. ಇಷ್ಟೇ ಅಲ್ಲದೆ ಸಂಪೂರ್ಣ ವೇದರಾಶಿಯಲ್ಲಿ ಅಸ್ಪೃಶ್ಯ ಶಬ್ದವು ಸಹ ಸಿಕ್ಕುವಂತಿಲ್ಲ. ಇದಲ್ಲದೆ, ವೇದಗಳಲ್ಲಿ ಜಾತಿವರ್ಣ ಶಬ್ದಗಳು ಹಾಗೂ ಮನುಷ್ಯರಲ್ಲಿಯೇ ಪರಸ್ಪರ ಉಚ್ಚನೀಚತ್ವವೂ ಉಂಟೆಂದು ಎಲ್ಲಿಯೂ ಹೇಳಿಲ್ಲ. ಇದನ್ನು ನಾವು ಈ ಪೂರ್ವದಲ್ಲಿಯೇ ಎಷ್ಟೋಸಾರೆ ಎಷ್ಟೋ ಲೇಖನಗಳಲ್ಲಿ ವಿಶದೀಕರಿಸಿದ್ದು ದಕ್ಷಿಣಭಾಗದ ಭಿಲ್ಲ, ಲಮಾಣಿ, ಮಾದಿಗ ಮೊದಲಾದ ಅತಿ ಹಿಂದುಳಿದ ಜನಾಂಗದ ಉನ್ನತಿಯ ವಿಚಾರನಾಹಲೋಸುಗ ಸರಕಾರದಿಂದ [illegible] ರಾದ ಸ್ಟಾರ್ಟ, ಆಯ ಸಿ. ಎಸ್. ಎಂಬ ಐರೋಪ್ಯ ಅಧಿಕಾರಿಗಳು ತಮ್ಮ ಧಾರವಾಡ ಸೆಂಟರದಿಂದ ಕೆಲವು ದಿವಸಗಳ ಹಿಂದೆ ಅಸ್ಪೃಶ್ಯತಾ ಮೊದಲಾದ ವಿಷಯವಾಗಿ ನಮ್ಮ ಅಭಿಪ್ರಾಯವನ್ನು ಕೇಳಿದ್ದಕ್ಕೆ ನಾವು ಆಗ್ಗೆಯೇ ಅಸ್ಪೃಶ್ಯತಾದಿಗಳು ಆರ್ಷ ಗ್ರಂಥಗಳಲ್ಲಿ ಹೇಳಲ್ಪಟ್ಟಿಲ್ಲವೆಂದೂ ಹಾಗೂ ಸರ್ವವನ್ನು ಸಮದೃಷ್ಟಿಯಿಂದ [illegible] ಲೂ ಬರೆದಿದ್ದು ಅದು ಆಗ್ಗೆ [illegible] ಪತ್ರಿಕೆಯಲ್ಲಿ ಪ್ರಕಟವಾಗಿಯೂ ಇರುವದು. ಹೀಗಿದ್ದು ಸ್ವಾರ್ಥಾಂಧರಾದ ಬ್ರಾಹ್ಮಣರು [illegible] ಶಾಸ್ತ್ರಪಟವನ್ನು [illegible] ಗೋಳಿಸಲು ಯತ್ನ [illegible]

ಪತ್ರವ್ಯವಹಾರ

☞ ಪತ್ರವ್ಯವಹಾರಕರ ಲೇಖನಗಳಿಗೆ ಸಂಪಾದಕರು ಉತ್ತರವಾದಿಗಳಲ್ಲವೆಂಬಂಶವನ್ನು ಸಕಲರೂ ತಿಳಿಯತಕ್ಕದ್ದು. —ಸಂಪಾದಕ.

ಭಾವಚಿತ್ರದ ಅನಾವರಣೋತ್ಸವ

ನಂಜನಗೂಡು ಮಹಾ ಕ್ಷೇತ್ರದೊಳಗೆ ಕಪಿಲಾ ನದೀ ತೀರದಲ್ಲಿರುವ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯ ಸ್ಥಾಪಕರಾದ ಕೈ|| ಶಿವಪಾದ ಸ್ವಾಮಿಗಳ ಸ್ಮಾರಕವಾಗಿ ನಂಜನಗೂಡು ಮತ್ತು ಮೈಸೂರು ನಿವಾಸಿಗಳು ಬರೆಯಿಸಿರುವ ಭಾವಚಿತ್ರ ಪಟವು ನೆನ್ನೆಯ ದಿವಸ ಪ್ರಾತಃಕಾಲ ವಾದ್ಯವೈಭವದಿಂದಲೂ ಜನಸ್ತೋಮದಿಂದಲೂ ಊರೊಳಗೆಲ್ಲ ಮೆರಯಿಸಲ್ಪಟ್ಟು ರಿಟೈರ್ಡ್ ಮುಜರಾಯಿ ಭಕ್ಷಿಯವರಾದ ರಾಜಕವಿಭೂಷಣ ಮ|| ಎಚ್. ಲಿಂಗರಾಜ ಅರಸಿನವರಿಂದ ದೇವಸ್ಥಾನದೊಳಗೆ ಅನಾವರಣ ಮಾಡಿಸಲ್ಪಟ್ಟಿತು. ಆ ಸಮಯದಲ್ಲಿ ಮ|| ಬಕ್ಷಿಯವರು ಕೈ|| ಶಿವಪಾದ ಸ್ವಾಮಿಗಳ ಗುಣ ಪ್ರಶಂಸೆಯನ್ನು ಗಂಭೀರವಾಣಿಯಿಂದ ಮಾಡಿ ನೆರೆದಿದ್ದ ಭಕ್ತ ಸಮೂಹಕ್ಕೆ ಮನಾನಂದಗೊಳಿಸಿದರು. ಈ ಮಹೋತ್ಸವಕ್ಕೆ ರಾಜಧಾನಿಯೇ ಮೊದಲಾದ ಪರಸ್ಥಳಗಳಿಂದ ಅನೇಕ ಮಂದಿ ಬಂದಿದ್ದರು. ಈ ಮಹೋತ್ಸವವನ್ನು ಬಹಳ ಉತ್ಸಾಹದಿಂದಲೂ ಭಕ್ತಿಯಿಂದಲೂ ನಡೆಸಿದ ಕಾರ್ಯದರ್ಶಿಗಳು ಶ್ರೀ ಅಮ್ಮನವರ ಮತ್ತು ಕೈ|| ಸ್ವಾಮಿಗಳ ಅನುಗ್ರಹಕ್ಕೂ ಭಕ್ತ ಮಂಡಲಿಯ ವಂದನೆಗೂ ಪಾತ್ರರಾಗಿರುತ್ತಾರೆಂದು ಬರೆಯಲು ಸಂತೋಷವಾಗುತ್ತದೆ.

ಉತ್ಸವಭಾಗಿ.

ಶ್ರೀ ಶಿವಪಾದಯೋಗಿಗಳ ಸ್ತೋತ್ರಪಂಚಕ

ಈಶನೇ ತಾಂ ತನ್ನ ಭಕ್ತರ
ಕ್ಲೇಶನೆಲ್ಲವ ಪರಿಹರಿಸಿ ಭವ
ಪಾಶಮಂ ಭೇದಿಸಲು ಶಿವಪಾದಾಖ್ಯಯತಿವರನ |
ವೇಷಮಂ ತಾನಾಂತು ಮಹಿಮಾ
ವಾಸನೆನಿಸುತೆ ಭಕ್ತಲೋಕವ
ಪೋಷಿಸಿದನೆಂದುಸಿರಲಿದು ಸಹಜೋಕ್ತಿ ತಾನಲ್ತೆ ||೧||

ಚಾರುಸುಕ್ಷೇತ್ರದೊಳು ಕಪಿಲಾ
ತೀರದೊಳ್ ಚಾಮುಂಡಿಕಾಂಬಾ
ಗಾರವನು ತಾಂ ಸ್ನಾನಘಟ್ಟವನಂತು ನಿರ್ಮಿಸುತೆ |
ಮಾರಹರನಾಕಾರ ಕರುಣಾ
ಪೂರ ನಿರ್ಮಲಶರಿಷಿನೀಯತಿ
ಸಾರಸತ್ಯಾಚಾರಮಾರ್ಗವ ತೋರ್ಪ ಗುರುವೈಸೆ ||೨||

ಜಾತಿಮತಕುಲಗೋತ್ರಭೇದವ
ನೀತ ನೆರೆ ಬಿಟ್ಟಾತ ಸರ್ವರೊ
ಳಾತುಮನನಾತ್ಮನಲಿ ಸರ್ವರ ಕಾಂಬ ಯತಿಯಾತ |
ಸಾತಿಶಯದಿಂದಖಿಲದೇವ
ವ್ರಾತಕಂ ಪೂಜಾಭಿಷೇಕವ
ನೋತು ಪರಿಪರಿಯಿಂದೆ ಮಾಡುತೆ ಪೂರ್ಣ ತಾನಾದ ||೩||

ಅಂಗಮಂ ಬಿಡದೀಯತಿಯ ತಾ
ನಂಗಜಾತನ ರೂಹುಗೆಡಿಸಿದ
ಲಿಂಗಮಯೆನುಡುರಾಜಕವಿಭೂಷಣನು ಮರೆಮಾಡೆ |
ಹಿಂಗದಾಯತಿಯಂಗಚಿತ್ರವ
ನಂಗಜಾತನ ರೂಪವಾಂತಿಹ
ಲಿಂಗರಾಜಂ ರಾಜಕವಿಭೂಷಣನು ತಾಂ ತೆರೆದಂ ||೪||

ಸಾದರದೆ ಸದ್ಭಕ್ತಿಯಿಂ ಶಿವ
ಪಾದಯೋಗಿಯು ಪಾವನತೆಗಿಂ
ಬಾದ ತಾಣದೆ ನಿರ್ಮಿಸಿರ್ಪೀದೇಗುಲದೆ ಮೆರೆವ |
ಮೋದಮಯೆ ಚಾಮುಂಡಿಕಾಂಬಿಕೆ
ಯಾದವಾನ್ವಯಸಿಂಧುಚಂದ್ರಮ
ನಾದ ನಾಲ್ಮಡಿಕೃಷ್ಣಭೂಮೀಶ್ವರನ ಪಾಲಿಸುಗೆ ||೫||

(ದಕ್ಷಿಣಕಾಶೀಕ್ಷೇತ್ರವೆನಿಸಿದ ನಂಜನಗೂಡಿನ ಕಪಿಲಾ ನದೀತೀರದಲ್ಲಿ ಶ್ರೀ ಶಿವಪಾದಸ್ವಾಮಿಗಳು ಕಟ್ಟಿಸಿರುವ ಚಾಮುಂಡೇಶ್ವರಿ ಅಮ್ಮನವರ ದೇವಾಲಯದಲ್ಲಿ ಸದರಿ ಸ್ವಾಮಿಗಳ ಭಾವಚಿತ್ರಪಟವನ್ನು ಅನಾವರಣ ಮಾಡುವಾಗ ಇದು ರಚಿಸಲ್ಪಟ್ಟಿತು.)

Composed, for the occasion, by
M. S. BASAVALINGAYYA, Esq.,
M.A., B.L., Mysore.

11 ನೆಯ ಉಪಾಧ್ಯಾಯರ ಸಮ್ಮೇಳನ

ಅರಸೀಕೆರೆ ತಾಲ್ಲೂಕು ಸಾತುಂಗೆರೆ ಗ್ರಾಮದ ಆರ್ಡ್ (ಹಿಂದು ಸ್ಟಾ.) ಸ್ಕೂಲ್ ಮುಂಭಾಗದಲ್ಲಿ ತಳಿರುತೋರಣ ಕದಳೀ ಸ್ತಂಭಗಳಿಂದ ಅಲಂಕೃತವಾಗಿ ರಚಿಸಿದ್ದ ಚಪ್ಪರದಲ್ಲಿ ಮೇಲ್ಕಂಡ ಸಮ್ಮೇಳನವು ಅತಿ ವೈಭವದೊಡನೆ ನೆರವೇರಿಸಲ್ಪಟ್ಟಿತು. ಈ ಸಮ್ಮೇಳನಕ್ಕೆ ಸುಮಾರು 30 ಜನರ ಮೇಲ್ಪಟ್ಟು ಉಪಾಧ್ಯಾಯರುಗಳೂ ಕಣಕಟ್ಟೆ ವಗೈರೆ ಗ್ರಾಮಾಂತರಗಳಿಂದ ಅನೇಕ ಜನ ದೊಡ್ಡ ಮನುಷ್ಯರುಗಳೂ ಆಹ್ವಾನಿಸಲ್ಪಟ್ಟಿದ್ದರಲ್ಲದೆ ಗ್ರಾಮ ಪ್ರಮುಖರಾದ ಶ್ರೀ|| ಮಲ್ಲೇಗೌಡರು, ಮರುಳಪ್ಪನವರು ಎ. ಶೇಕ್‌ಬುಡನ್ ಸಾಹೇಬರು, ಅಬ್ದುಲ್ ವಾಹಬ್ ಸಾಹೇಬರು, ಹಸೇನ್ ಸಾಹೇಬರೆ ಮೊದಲಾದ ಮಹನೀಯರು ಆಗಮಿಸಿದ್ದರು. ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಸಭೆಯು ಪ್ರಾರಂಭವಾಯಿತು. ಮ|| ಹಸನ್ ಸಾಹೇಬರ ಪ್ರಾರ್ಥನೆಯಂತೆ ಕಣಕಟ್ಟೆ ಖಂಡೇರಾಯರು ಮತ್ತು ಶೇಕ್‌ಬುಡನ್ ಸಾಹೇಬರು ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳನ್ನು ವಹಿಸಿದರು. ಸಭಾ ಪ್ರಾರಂಭದಲ್ಲಿ ಪದ್ಧತಿ ಮೇರೆ ಬಾಲಕರಿಂದ ದೇವರ ಪ್ರಾರ್ಥನೆಗಳು ನಡೆದು ನಿಡುವಳ್ಳಿ ಸ್ಕೂಲ್ ಮಾಸ್ಟರ್ ಮ|| ಮರುಳ ಸಿದ್ದಯ್ಯನವರು ಪೋಷಕರ ಮತ್ತು ವಿದ್ಯಾರ್ಥಿಗಳ ಕರ್ತವ್ಯವನ್ನು ಕುರಿತು ಪಾಶ್ಚಾತ್ಯ ದೇಶಗಳ ಇತಿಹಾಸಗಳಿಂದಲೂ ಅನೇಕ ಗ್ರಂಥಾಧಾರಗಳಿಂದಲೂ ಒಳ್ಳೇ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು. ಅನಂತರ ಕಣಕಟ್ಟೆ ಸ್ಕೂಲ್ ಹೆ|| ಮಾ|| ಶ್ರೀಕಂಠಯ್ಯನವರು ಉಪಾಧ್ಯಾಯರ ವರ್ತನೆಗಳು, ಉಪಾಧ್ಯಾಯರಿಗೆ ಗ್ರಾಮಸ್ಥರು ಮತ್ತು ಪೋಷಕರು ಮಾಡುವ ಸಹಾಯಗಳು, ಬಾಲಕರ ನಡೆನುಡಿಗಳು, ಉಪಾಧ್ಯಾಯರಿಗೂ ಗ್ರಾಮಸ್ಥರಿಗೂ ಪರಸ್ಪರ ಪ್ರೀತಿ ಉಂಟಾಗತಕ್ಕ ಕಾರ್ಯಗಳು ಇವುಗಳನ್ನು ಕುರಿತು ಸರ್ವರ ಮನಾನಂದವಾಗುವಂತೆ ಬಹು ಗಂಭೀರವಾಗಿ ಭಾಷಣಗಳನ್ನು ಮಾಡಿದರು. ಈ ದಿನದ ಸಮ್ಮೇಳನವನ್ನು ಈ ಗ್ರಾಮದಲ್ಲಿ ಒಳ್ಳೇ ಉತ್ಸಾಹದಿಂದಲೂ ಮುತುವರ್ಜಿಯಿಂದಲೂ ನಡೆಸಲು ಟೊಂಕಕಟ್ಟಿದ್ದ (ಉರ್ದು) ಹಿಂದುಸ್ಥಾನಿ ಸ್ಕೂಲ್ ಹೆ|| ಮಾಸ್ಟರ್ ಮಹಮದ್ ಜಾಫರ್ ಸಾಹೇಬರು, ಶ್ರೀ|| ಮಲ್ಲೇಗೌಡರು, ಹಸನ್ ಸಾಹೇಬರು ವಗೈರೆ ಗ್ರಾಮ ಮಹನೀಯರಿಗೆ ಸಭಾ ಪರವಾದ ವಂದನೆಗಳು ಅರ್ಪಿಸಲ್ಪಟ್ಟ ಸಭೆಯ ಮಂಗಲ ಫಲ ತಾಂಬೂಲಗಳು ನಡೆದ ಮೇಲೆ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯಿಂದ ಸಭೆಯು ಭರಖಾಸ್ತು ಮಾಡಲ್ಪಟ್ಟಿತು. ಸಂಧ್ಯಾಕ್ಕೆ ದಯಮಾಡಿಸಿದ್ದ ಉಪಾಧ್ಯಾಯರೇ ಮೊದಲಾಗಿ ಎಲ್ಲಾ ಮಹನೀಯರಿಗೂ ಊಟ ಉಪಚಾರಾದಿ ಸತ್ಕಾರಗಳು ನಡೆಸಲ್ಪಟ್ಟವು. ಓರ್ವ ಸಂಭಾಷಿಲಾಷಿ.

ನೆಲಮಂಗಲದ ಆನರೆರಿ ಮ್ಯಾಜಿಸ್ಟ್ರೇಟ್ ಎಂ. ಅಬ್ದುಲ್ ಅಜೀಜ್ ಷರೀಫರವರ ವಾಜ್ಮೂಲ

ಸ್ವಾಮಿ, ನಾನು ತಾ|| 14-11-32 ನೇ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ "ನೆಲಮಂಗಲದ ಸುದ್ದಿಗಳು" ಎಂಬ ಹೆಡ್ಡಿಂಗಿನಿಂದ 4 ನೇ ಕಾಲಂನಲ್ಲಿ ಬರೆದಿರುವುದಕ್ಕೆ ಜವಾಬಾಗಿ ನೆಲಮಂಗಲದ ವೈಸ್‌ಪ್ರೆಸಿಡೆಂಟ್ ಮಿ|| ಹಸನ್ ಜವಾನ್ ಖಾನ್‌ರವರು 12-12-32 ನೇ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಿರುವ ಲೇಖನವನ್ನು ಓದಿದೆನು. ನಾನು ನನ್ನ ಬರವಣಿಗೆಯಲ್ಲಿ ಅವರ ಸ್ತೋತ್ರವನ್ನೇ ಮಾಡಿರುವೆನು. ರಸ್ತೆಗಳು ಕೆಟ್ಟುಹೋಗಿರುವುದನ್ನೂ, ಲಾಂದ್ರಗಳು ಸರಿಯಾಗಿ ಉರಿಯದಿರುವುದನ್ನೂ ನಾನು ಆಗಾಗ್ಗೆ ಪ್ರಜೆಗಳ ಓಟುಗಳನ್ನು ಪಡೆದು ಪೌರಸಭೆಯಲ್ಲಿ ಪ್ರಜೆಗಳ ಪ್ರತಿನಿಧಿಗಳಾಗಿರುವ ನನ್ನ ಸ್ನೇಹಿತರಾದ ಮ|| ಗಳಾದ ಗಂಗಪ್ಪನವರಿಗೂ, ಗುಬ್ಬಿ ಹುಚ್ಚಪ್ಪನವರಿಗೂ ತೋರಿಸಿರುವೆನು. ಲಾಂದ್ರಗಳು ಸರಿಯಾಗಿ ಉರಿಯುವುದಿಲ್ಲವೆಂದು ನಮ್ಮ ಪ್ರತಿನಿಧಿಗಳಾದ ಮ|| ಸಿದ್ದರಾಮಶೆಟ್ಟರು ಪೌರಸಭೆಯ ಮೀಟಿಂಗಿನಲ್ಲಿ ಚರ್ಚಿಸಿರುವರು. ಆದರೆ ವೈಸ್‌ಪ್ರೆಸಿಡೆಂಟರು ಲಾಂದ್ರಗಳು ಸರಿಯಾಗಿ ಉರಿಯುತ್ತವೆ ಮತ್ತು ರಸ್ತೆಗಳು ಚೆನ್ನಾಗಿವೆ ಎಂದು ಬರೆದಿರುತ್ತಾರೆ. ಯಾವ ಪೌರಸಭೆಯ ಅಧ್ಯಕ್ಷರೇ ಆಗಲಿ ಉಪಾಧ್ಯಕ್ಷರೇ ಆಗಲಿ ತಮ್ಮ ತಮ್ಮ ಮ್ಯುನಿಸಿಪಾಲಿಟಿಯಲ್ಲಿರುವ ತಪ್ಪುಗಳನ್ನು ಒಪ್ಪಿಕೊಳ್ಳಲಾರರು. ಆದ್ದರಿಂದ ವೈಸ್‌ಪ್ರೆಸಿಡೆಂಟರವರಲ್ಲದೆ ಬೇರೆ ಯಾರಾದರೂ ಜವಾಬ್ ಬರೆದಿದ್ದರೆ ಚೆನ್ನಾಗಿರುತ್ತಿತ್ತು. ಇವರೇ ಬರೆದಿರುವುದು ಅಷ್ಟೇನೂ ಸೂಕ್ತವಾಗಿ ನನಗೆ ಕಂಡುಬರುವುದಿಲ್ಲ. ನಾನು ಪೋಲೀಸ್ ಇಲಾಖೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ಉದ್ಯೋಗದಲ್ಲಿದ್ದುದು ನಿಜ. ನನಗೆ ದೃಷ್ಟಿಮಾಟವು ಕಡಿಮೆಯೆಂಬುದೂ ನಿಜ. ಇಲಾಖಾ ಅಧಿಕಾರಿಗಳಿಂದ ನಾನು ನಿವೃತ್ತಿ ಮಾಡಲ್ಪಡಲಿಲ್ಲ. ಹಾಗೆ ಮಾಡಲ್ಪಟ್ಟನೆಂದು ಹೇಳುವದು ಶುದ್ಧ ಸುಳ್ಳು. ನಾನೇ ನನ್ನ ಕೆಲಸಗಳನ್ನು ಸಮರ್ಪಕವಾಗಿ ಮಾಡಲಾರೆನೆಂದು ತಿಳಿದು ನಾನಾಗಿಯೇ ಅಪೇಕ್ಷಿಸಿ ಗ್ರಾಂಟ್ ಪಡೆದು ಕೆಲಸದಿಂದ ನಿವೃತ್ತಿ ಹೊಂದಿದೆನು. ನಾನು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಕಾಲೇಜು ತರಗತಿಗಳಲ್ಲಿ ವಿದ್ಯಾಭ್ಯಾಸಮಾಡಿರುವೆನು. ನಾನು ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿಯೂ ಸಹ ಪ್ಯಾಸ್‌ಮಾಡಿ ಆ ಭಾಷೆಯಲ್ಲಿಯೂ ಸಾಕಾದಷ್ಟು ಜ್ಞಾನಸಂಪಾದಿಸಿರುವೆನು. ಪೊಲೀಸ್ ಇಲಾಖೆಯಲ್ಲಿ ಜವಾಬ್ದಾರಿ ಹುದ್ದೆಯಲ್ಲಿದ್ದು ನಿವೃತ್ತಿಯಾಗಿರುವೆನು. ಜನಗಳಿಂದ ಚುನಾಯಿಸಲ್ಪಟ್ಟು ಪೌರಸಭೆಯ ಮೆಂಬರೂ ಆಗಿದ್ದೆನು. ಕಳೆದ 6 ವರ್ಷಗಳಿಂದ ಘನಸರ್ಕಾರದವರು ನನ್ನನ್ನು ಆನರೆರಿ ಮ್ಯಾಜಿಸ್ಟ್ರೇಟಾಗಿ ನಿಯಮಿಸಿರುವರು. ಸದರೀ ಪದವಿಯಲ್ಲಿ ಈಗಲೂ ಕೆಲಸ ಮಾಡುತ್ತಿದ್ದೇನೆ. ಅನೇಕ ಕಮಿಟಿಗಳಲ್ಲಿ ಮೆಂಬರಾಗಿರುತ್ತೇನೆ. ನಾನು ನನ್ನ ಜವಾಬ್ದಾರಿಗಳನ್ನು ಚೆನ್ನಾಗಿ ಬಲ್ಲೆನು. ನಾನು ಇತರರ ಮಾತುಗಳಿಗೆ ಕಿವಿಕೊಡುವವನಲ್ಲ. ನಾನು ಖುದ್ದು ನೋಡಿದ್ದನ್ನೂ, ಕೇಳಿದ್ದನ್ನೂ ಮಾತ್ರ ಬರಿಯುವೆನು ಮತ್ತು ಹೇಳುವೆನು. ಇತರರ ಹೇಳಿಕೆ ಮಾತುಗಳನ್ನು ಕೇಳಿ ನಡೆದುಕೊಳ್ಳುವವನೆಂಬುದು ಮ|| ಹಸನ್ ಜವಾನ್ ಖಾನ್‌ರವರ ತಪ್ಪು ಅಭಿಪ್ರಾಯ. ವೈಸ್ ಪ್ರೆಸಿಡೆಂಟ್ ಮತ್ತು ಆನರೆರಿ ಮ್ಯಾಜಿಸ್ಟ್ರೇಟ್ ಎಂಬ ಉನ್ನತ ಪದವಿಗಳನ್ನು ಸ್ವೀಕರಿಸಿರತಕ್ಕ ಮ|| ಹಸನ್ ಜವಾನ್ ಖಾನ್‌ರವರು ಇಂತಹ ಇಲ್ಲದ ಸಲ್ಲದ ಮಾತುಗಳನ್ನು ಬರದದ್ದಕ್ಕಾಗಿ ನಾನು ತುಂಬಾ ವಿಷಾದಿಸುತ್ತೇನೆ

ಎಂ. ಅಬ್ದುಲ್ ಅಜೀಜ್ ಷರೀಫ್
ಆನರೆರಿ ಮ್ಯಾಜಿಸ್ಟ್ರೇಟ್.

ಅರಕಲಗೂಡು ತಾಲ್ಲೂಕು ಬಸವಾಪಟ್ಟಣದಲ್ಲಿ ನಡೆದ ವೀರಶೈವ ಸಭೆ.

ಕಳೆದ ತಾ|| 18 ನೇ ಭಾನುವಾರ ಬಸವಾಪಟ್ಟಣದಲ್ಲಿ ಕಾಶೀ ಸ್ವಾಮಿಗಳು ಸ್ಥಾಪಿಸಿರುವ ವೀರಶೈವ ಅನಾಥಾಲಯದ ಬಳಿ ಹಲವು ತೋರಣಗಳಿಂದ ಶೋಭಿತವಾದ ಮಂಟಪದೊಳಗೆ ಚಿಟ್ಟನಹಳ್ಳಿಯ ಮಠದ ಶ್ರೀ ಚನ್ನವೀರ ದೇಶಿಕೇಂದ್ರ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ವೀರಶೈವರ ಸಭೆ ಸೇರಿದ್ದಿತು. ಮೇಲ್ಕಂಡ ಕಾಶೀ ಸ್ವಾಮಿಗಳು ಒಬ್ಬ ಬಡ ಜಂಗಮರು. ಇವರು ಚಿಟ್ಟನಹಳ್ಳಿಯ ಮಠದ ಶಿಷ್ಯರು ಮತ್ತು ಸ್ವಾರ್ಥತ್ಯಾಗ ಪರಾಯಣರು. ಇವರು ವೀರಶೈವ ಮತಾಭಿಮಾನದಿಂದಲೂ, ವಿದ್ಯಾಪ್ರಸಾರಕಾಂಕ್ಷೆಯಿಂದಲೂ, ಸಮಾಜ ಸುಧಾರಣೆಯ ಆಸಕ್ತಿಯಿಂದಲೂ ಪ್ರೇರಿತರಾಗಿ ಈಗ್ಗೆ ಸುಮಾರು 2-3 ವರ್ಷಗಳಿಂದಲೂ ಗ್ರಾಮಾಂತರಗಳಲ್ಲಿ ಸಂಚಾರಮಾಡಿ ಭಿಕ್ಷೆತೆತ್ತು ಬಡ ವಿದ್ಯಾರ್ಥಿಗಳನ್ನು ಕಂಡುಹಾಕಿ ಅವರಿಗೆ ಉಚಿತವಾಗಿ ಅಶನ ವಸನಗಳಿಗೆ ಏರ್ಪಡಿಸಿ ಬಸವಾಪಟ್ಟಣದಲ್ಲಿರುವ ಮಿಡಲ್ ಸ್ಕೂಲ್ ವಿದ್ಯಾಭ್ಯಾಸವನ್ನು ನಡೆಯುವಂತೆ ಮಾಡಿರುತ್ತಾರೆ. ಈ ಜಿಲ್ಲೆಯಲ್ಲಿ ವೀರಶೈವ ವಿದ್ಯಾರ್ಥಿಗಳಲ್ಲದೆ, ಇತರ ಹಿಂದುಳಿದ [illegible] ವಿದ್ಯಾರ್ಥಿಗಳು [illegible] ನೋಡಿದರೆ ಸದರಿ ಕಾಶೀ ಸ್ವಾಮಿಗಳ ಸ್ವಮತ [illegible] ವ್ಯಕ್ತವಾಗತಕ್ಕದೆ. ಬಸವಾಪಟ್ಟಣದಲ್ಲಿ ಕಾಶೀ ಸ್ವಾಮಿಗಳು ಭಿಕ್ಷೆತ್ತಿ ಏರ್ಪಡಿಸಿ ನಡೆಸುತ್ತಿರುವ ಉಚಿತ ವಿದ್ಯಾರ್ಥಿ ಭವನದಲ್ಲಿ ಹಾಲಿ ಮಿಡಲ್ ಸ್ಕೂಲಿನಲ್ಲೋದುವ 18 ಬಾಲಕರುಗಳಿರುತ್ತಾರೆ. ಹೀಗೆ ಬರೇ ಮಿಡಲ್ ಸ್ಕೂಲ್‌ವರೆಗೆ ಮಾತ್ರ ಬಡವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಂಗವಾದರೆ, ಸಾಲದ್ದಾದುದರಿಂದ ಪ್ರಕೃತ ಸ್ಥಿತಿಯಲ್ಲಿ ಹೈಸ್ಕೂಲು ವಿದ್ಯಾಭ್ಯಾಸಮಾಡುವ ಬಾಲಕರಿಗೆ ಸಹಾಯಮಾಡಬೇಕೆಂಬ ಕಾಂಕ್ಷೆಯಿಂದ ಕಾಶೀ ಸ್ವಾಮಿಗಳು ಹಾಸನದ ಶ್ರೀ ಮಲ್ಲಿಕಾರ್ಜುನ ವೀರಶೈವ ಹಾಸ್ಟಲ್ಲಿನ ಕಮಿಟಿಯವರನ್ನು ಮಿಡಲ್ ಸ್ಕೂಲಿನಲ್ಲಿ ಓದಿ ತೇರ್ಗಡೆಯಾದ ಬಸವಾಪಟ್ಟಣದ ಅನಾಥಾಲಯದ ಬಾಲಕರಿಗೆ ಹಾಸನದ ಹಾಸ್ಟಲಿನಲ್ಲಿ ಧರ್ಮಾರ್ಥವಾಗಿ ಅನ್ನಹಾಕಲಿಕ್ಕೆ ಒಂದು ಬ್ರಾಂಚನ್ನು ಏರ್ಪಡಿಸಬೇಕೆಂದೂ, ಇದಕ್ಕಾಗಿ ತಾವು ಗ್ರಾಮಾಂತರಗಳಲ್ಲಿ ಸಂಚರಿಸಿ ದವಸದ ಭಿಕ್ಷೆಮಾಡಿ ಒದಗಿಸುತ್ತೇವೆಂದೂ, ಈ ಏರ್ಪಾಡು ಸಾರೋದ್ಧಾರವಾಗಿ ನಡೆಯಲಿಕ್ಕೋಸುಗ ಒಂದು ಚಿರಸ್ಥಾಯಿ ಫಂಡು ಏರ್ಪಡಿಸಬೇಕೆಂದೂ ಕೇಳಿಕೊಂಡಿದ್ದರು. ಸದರಿ ಕಾಶೀ ಸ್ವಾಮಿಗಳ ಕೋರಿಕೆಯಂತೆ ಹಾಸನದ ವೀರಶೈವ ಹಾಸ್ಟಲ್ ಕಮಿಟಿಯವರು ಮಲ್ಲಿಕಾರ್ಜುನ ಹಾಸ್ಟಲ್ ಪರವಾಗಿ ಬಡ ವಿದ್ಯಾರ್ಥಿಗಳ ವ್ಯಾಸಂಗದ ಫಂಡಿಗೆ ಗ್ರಾಮಾಂತರಗಳಲ್ಲಿ ಸುಗ್ಗಿಕಾಲದಲ್ಲಿ ಧನಧಾನ್ಯಗಳ ವಸೂಲ್ ಮಾಡಲಿಕ್ಕೆ ಒಪ್ಪಿಕೊಂಡಿರುತ್ತಾರೆ. ಮೇಲ್ಕಂಡ ಸದುದ್ದೇಶಕ್ಕಾಗಿ ಚಿರಸ್ಥಾಯಿ ಫಂಡೊಂದನ್ನು ಸ್ಥಾಪಿಸತಕ್ಕ ಬಗ್ಗೆ ಮೇಲ್ಕಂಡಂತೆ ಬಸವಾಪಟ್ಟಣದಲ್ಲಿ ಒಂದು ಸಭೆ ಸೇರಿದ್ದಿತು. ಈ ಸಭೆಗೆ ಹಾಸನದಿಂದ ಮ|| ಗಳಾದ ಅಡ್ವೋಕೇಟ್ ಧರ್ಮಪ್ಪನವರು, ವೈಸ್‌ಪ್ರೆಸಿಡೆಂಟ್ ಕೇಣಿ ಮಹಾದೇವಪ್ಪನವರು ಅರಕಲಗೂಡು ಸಾಹುಕಾರ್ ಪುಟ್ಟಸ್ವಾಮಯ್ಯನವರು ಮತ್ತು ಅರಕಲಗೂಡು ಎಡತೊರೆ ತಾಲ್ಲೂಕುಗಳಿಂದ ಅನೇಕ ವೀರಶೈವ ಮಹನೀಯರು ದಯಮಾಡಿಸಿದ್ದರು. ಆ ದಿನದ ಸಭೆಯ ಉದ್ದೇಶ, ಮೇಲ್ಕಂಡ ಕಾಶೀ ಸ್ವಾಮಿಗಳು ಅಂಕುರಾರ್ಪಣ ಮಾಡಿರುವ ಬಡ ವೀರಶೈವ ವಿದ್ಯಾರ್ಥಿ ಭವನದ ಏರ್ಪಾಡು ಮತ್ತು ವಿದ್ಯಾಭ್ಯಾಸದ ಪ್ರಾಮುಖ್ಯತೆ ಮುಂತಾದ ವಿಷಯಗಳನ್ನು ಕುರಿತು ಮ|| ಧರ್ಮಪ್ಪನವರು ಸ್ವಾರಸ್ಯವಾಗಿ ಭಾಷಣಮಾಡಿದರು. ಅನಂತರ ಮ|| ಮಹಾದೇವಪ್ಪನವರು, ಮಠಾಧಿಪತಿಗಳ ಸ್ವರೂಪ, ಕರ್ತವ್ಯ, ಅವರುಗಳು ಮನಸ್ಸು ಮಾಡಿದರೆ ಸಮಾಜಾಭಿವೃದ್ಧಿಗೆ ಉಂಟಾಗಬಹುದಾದ ಅನುಕೂಲತೆಗಳು, ಇದುವರೆಗೆ ಸಮಾಜೋನ್ನತಿಗೆ ಮಠಾಧಿಪತಿಗಳು ಮತ್ತು ಗುರುವರ್ಯರು ಆದ ಅಥಣಿ ಶಿವಯೋಗಿಗಳೂ, ಚಿಟ್ಟನಹಳ್ಳಿಯ ಕೈ|| ಚಿಕ್ಕವೀರದೇಶಿಕೇಂದ್ರ ಮಹಾಸ್ವಾಮಿಗಳೂ, ಅಮೋಘವಾಗಿ ನಮ್ಮ ಚಿತ್ರದುರ್ಗ ಮಠದ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು ವಗೈರೆ ಸ್ವಾರ್ಥತ್ಯಾಗಿಗಳೂ, ಮಠೋದ್ಧಾರಕರು ಮತ್ತು ಸಮಾಜಾಭಿಮಾನಿಗಳಾದವರೂ ವಿದ್ಯಾರ್ಥಿ ಭವನಗಳನ್ನು ಕಟ್ಟಿಸುವುದು, ಅನಾಥಾಲಯಗಳನ್ನು ಏರ್ಪಡಿಸುವುದು, ಬಡ ವೀರಶೈವ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ವಗೈರೆ ಕೊಡುವುದು ಮುಂತಾದ ಶ್ಲಾಘ್ಯವಾದ ಏರ್ಪಾಡುಗಳಿಂದ ಸಮಾಜದ ವಿದ್ಯಾಭಿವೃದ್ಧಿಗೆ ಅವಕಾಶ ಕಲ್ಪಿಸಿ ಸಮಾಜಸೇವಾ ಧುರೀಣರೆಂದೆನ್ನಿಸಿಕೊಂಡಿರುವ ವಗೈರೆ ಸಂಗತಿಗಳನ್ನು ದೃಷ್ಟಾಂತಗಳಿಂದ ಸ್ಪಷ್ಟೀಕರಿಸಿದರು. ಡಾಕ್ಟರ್ ಫಾಲಾಕ್ಷಯ್ಯರವರು, ಪಟೇಲ್ ವಿಷಕಂಠೇಗೌಡರೇ ಆದಿಯಾಗಿ ಅನೇಕರು ಸಮಾಜದ ಐಕಮತ್ಯ ವಗೈರೆ ವಿಚಾರಗಳಲ್ಲಿ ಭಾಷಣಮಾಡಿದರು. ಅಲ್ಲಿಗೆ ದಯಮಾಡಿಸಿದ್ದ ಮ|| ಹಾಸನದ ಅಡ್ವೋಕೇಟ್ ವೆಂಕಟೇಶಯ್ಯನವರು ಸಹ ಸಮಾಜಾಭಿವೃದ್ಧಿ ವಿಚಾರದಲ್ಲಿ ತಮ್ಮ ಅಮೋಘವಾದ ಸಲಹೆಗಳನ್ನು ಸೂಚಿಸಿ ಸ್ವಾರಸ್ಯವಾದ ಭಾಷಣಮಾಡಿದ್ದಲ್ಲದೆ ಮೇಲ್ಕಂಡ ಚಿರಸ್ಥಾಯಿ ಫಂಡಿಗಾಗಿ ಕೆಲವು ಮೊಬಲಗನ್ನು ದಯಪಾಲಿಸಿದರು. ಅನಂತರ ಅಧ್ಯಕ್ಷಸ್ಥಾನವನ್ನು ವಹಿಸಿದ ಶ್ರೀ ಚನ್ನವೀರ ದೇಶಿಕೇಂದ್ರ ಮಹಾಸ್ವಾಮಿಗಳು ವೀರಶೈವ ಮತ, ಭಕ್ತಿ, ಮತಸುಧಾರಣೆ ಮುಂತಾದ ವಿಷಯಗಳ ಮೇಲೆ ಶಾಸ್ತ್ರಸಮ್ಮತವೂ ಅರ್ಥಗರ್ಭಿತವೂ ಸ್ವಾರಸ್ಯವೂ ಆದ ಭಾಷಣಮಾಡಿ ಅಲ್ಲಿ ನೆರೆದಿದ್ದ ಸಭಿಕರ ಮನಸ್ಸನ್ನು ಆಕರ್ಷಿಸಿದರಲ್ಲದೆ ತಮ್ಮಲ್ಲಿ ನೆಲೆಗೊಂಡಿದ್ದ ತೇಜಸ್ಸಿನ ಪ್ರಭಾವದಿಂದಲೂ, ವಿದ್ಯಾನೈಪುಣ್ಯದಿಂದಲೂ ಸಮಾಜಸೇವಾಸಕ್ತಿಯಿಂದಲೂ ಸಭಿಕರ ಮನಸ್ಸನ್ನು ಆನಂದಗೊಳಿಸಿದರು ಮತ್ತು ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಆ ದಿನದ ಸಭೆಯ ಕಾರ್ಯಗಳು ಸುಲಲಿತವಾಗಿ ನಡೆದದ್ದನ್ನು ನೋಡಿದರೆ ಸ್ವಾಮಿಗಳಲ್ಲಿ ಭಕ್ತಮಂಡಲಿಗೆ ಇರುವ ಅನನ್ಯ ಭಕ್ತಿಯೂ ಪ್ರೀತಿಯೂ ಚೆನ್ನಾಗಿ ಹೊರಪಟ್ಟವು. ಮುಖ್ಯವಾಗಿ ಸ್ವಾಮಿಗಳು ಮತಾಭಿಮಾನಿಗಳು ಮತ್ತು ಸಮಾಜಪ್ರೇಮಿಗಳು ಆಗಿ ತಮ್ಮ ಗುರುವರ್ಯರು ಕೈಲಾಸವಾಸಿಗಳಾದ ಚಿಕ್ಕವೀರದೇಶಿಕೇಂದ್ರ ಮಹಾಸ್ವಾಮಿಗಳು ಸಮಾಜಸೇವೆ ಮಾಡಿ ಪಡೆದಿರುವ ಅಸಾಧಾರಣವಾದ ಕೀರ್ತಿಯನ್ನು ಇವರು ಸ್ಥಿರಗೊಳಿಸಿ ಇನ್ನೂ ಹೆಚ್ಚಾದ ಪುರಸ್ಕಾರಕ್ಕೆ ಪಾತ್ರರಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಮೇಲ್ಕಂಡ ಬಡ ವಿದ್ಯಾರ್ಥಿ ಭವನದ ಚಿರಸ್ಥಾಯಿ ಫಂಡಿನ ಏರ್ಪಾಡಿಗೆ ಅರಕಲಗೂಡು ತಾಲ್ಲೂಕಿನ ಮುಖ್ಯವಾಗಿ ಬಸವಾಪಟ್ಟಣದ ವೀರಶೈವ ಮಹನೀಯರು ಮುಂದಾಳುಗಳಾಗಿ ಬಂದದ್ದಕ್ಕಾಗಿ ಅವರುಗಳಿಗೆ ನಮ್ಮ ಸಮಾಜದ ಪರವಾಗಿ ವಂದನೆಗಳು. ಚಿಕ್ಕಸ್ವಾಮಿಯವರು ಮತ್ತು ನಮ್ಮವರಲ್ಲಿ ವಿದ್ಯಾವಂತರು ಆಗಿರುವ ಹಾಸನದ ಅಡ್ವೋಕೇಟ್ ಮ|| ಧರ್ಮಪ್ಪನವರು ಸಹ ನಮ್ಮ ಸಮಾಜ ಸೇವೆಯಲ್ಲಿ ಆಸಕ್ತಿಯನ್ನು ತೋರಿಸುತ್ತಿರುವುದು ಬಹಳ ಸ್ತೋತ್ರಾರ್ಹವಾಗಿದೆ. ಅನಂತರ ಪುಷ್ಪ ತಾಂಬೂಲ ವಿನಿಯೋಗದಿಂದ ಮಂಗಳವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರೇಕ್ಷಕ.

ಮೇಲ್ಕಂಡ ಚಿರಸ್ಥಾಯಿ ಫಂಡಿಗಾಗಿ ಧನ ಸಹಾಯಮಾಡಿದ ಮಹನೀಯರುಗಳು :—ಮ|| ಗಳಾದ (1) ಬಸವಾಪಟ್ಟಣದ ಕು|| ಶಿ|| ಅರೇಶೆಟ್ಟರು 100 ರೂ. (2) ತಟ್ಟವಾಳು ಅ|| ಬಸವರಾಜಶೆಟ್ಟರು 100 ರೂ. (3) ಹಾಸನದ ಕೇಣಿ ಮಹಾದೇವಪ್ಪನವರು 50 ರೂ. (4) ಬಸವಾಪಟ್ಟಣದ ಚನ್ನಬಸಪ್ಪಶೆಟ್ಟರು 50 ರೂ. (5) ಡಿಟೋ ಹಳ್ಳಿಮೈಸೂರು ಅಪ್ಪಾಜಿಶೆಟ್ಟರು 50 ರೂ. (6) ಪಟೇಲ್ ವಿಷಕಂಠೇಗೌಡರು 50 ರೂ. (7) ಹ|| ರಾಚಪ್ಪಶೆಟ್ಟರು 50 ರೂ. (8) ತಟ್ಟವಾಳು ಅಪ್ಪಾಜಿಶೆಟ್ಟರು 50 ರೂ. (9) ಅರಕಲಗೂಡು ಪುಟ್ಟಸ್ವಾಮಯ್ಯನವರು 25 ರೂ. (10) ತಟ್ಟವಾಳು ದಾಳಪ್ಪಶೆಟ್ಟರು 25 ರೂ. (11) ಬಸವಾಪಟ್ಟಣದ ಡಾಕ್ಟರ್ ಫಾಲಾಕ್ಷಯ್ಯರವರು 10 ರೂ. (12) ಹಾಸನದ ಧರ್ಮಪ್ಪನವರು 10 ರೂ. (13) ಚಿಟ್ಟನಪುರದ ಪಟೇಲ್ ದೊಡ್ಡಣ್ಣಶೆಟ್ಟರು 10 ರೂ. (14) ಡಿಟೋ ಗ್ರಾಮದ ಚಿಲ್ಲರೆ ಅಂಗಡಿ ತಮ್ಮಯ್ಯನವರು 10 ರೂ. (15) ಹಾಸನದ ಅಂಗಡಿ ಸೋಮಯ್ಯನವರು 10 ರೂ. (16) ಅತ್ತಿಗೋಡು ಅರೇಶೆಟ್ಟರು 10 ರೂ. (17) ಡಿಟೋ ಗ್ರಾಮದ ನಂಜಶೆಟ್ಟರ ಮಕ್ಕಳು ರಾಮಶೆಟ್ಟರು 10 ರೂ. (18) ಬಸವಾಪಟ್ಟಣದ ಶಿ|| ರುದ್ರಶೆಟ್ಟರು 10 ರೂ. (19) ಅರಕಲಗೂಡು ನಾಗಣ್ಣನವರ ಮಕ್ಕಳು ಶಿವಪ್ಪಶೆಟ್ಟರು 10 ರೂ. [illegible] 10 ರೂ. ಕೆಳಗೆ ಅನೇಕ ಮಹನೀಯರು [illegible] ಸಹ ಮಾಡಿರುತ್ತಾರೆ. [illegible] ಕೆಳಗೆ ಕಂಡಂತೆ [illegible] ಸಮಾಡಿರುತ್ತಾರೆ :—ಮ|| ಗಳಾದ (1) ಶೇ|| [illegible] ಸ್ವಾಮಿಗಳವರು 101 ರೂ. (2) [illegible] 25 ರೂ. [illegible] 25 ರೂ.

[illegible] ಬಸಪ್ಪನವರು 10 ರೂ. (5) ಶೇಜೂರು ಪ|| [illegible]ಪ್ಪನವರು 10 ರೂ. (6) ಹಳೇಮೈಸೂರು ಸ್ಕೂಲ್ ಮಾಸ್ತರ್ ಶ್ರೀಶೈಲಪ್ಪನವರು 10 ರೂ. (7) ಬೆಟ್ಟಸೋಗೆ ಅಪ್ಪಾಜಪ್ಪನವರು 15 ರೂ. (8) ಮೈಸೂರು ಜಾಲಿದ ಅಂಗಡಿ ಕೆಂಚಪ್ಪಶೆಟ್ಟರು 10 ರೂ. (9) ಹಸಹಳ್ಳಿ ವೇ|| ಚೆನ್ನಬಸಪ್ಪಸ್ವಾಮಿಗಳು 10 ರೂ. (10) ಕೋರನೂರು ದೊಡ್ಡಪ್ಪನವರು 10 ರೂ. (11) ಡಿಟೋ ದೇವಯ್ಯನವರು 10 ರೂ. (12) ಡಿಟೋ ಕೆ. ರುದ್ರಶೆಟ್ಟರು 10 ರೂ. (13) ಡಿಟೋ ಪ|| ಮುರ್ಘೆಪ್ಪನವರು 10 ರೂ. (14) ಹೆಬ್ಬಾಳೆ ವೀರಭದ್ರಯ್ಯನವರು 10 ರೂ. (15) ಕಟ್ಟಹಳ್ಳಿ ಬಸಪ್ಪನವರು 10 ರೂ. (16) ಬೆಟ್ಟಸೋಗೆ ಪ|| ಸಂಜಪ್ಪನವರು 10 ರೂ. (17) ಮದ್ದೂರು ಚೆನ್ನಬಸಪ್ಪನವರು 10 ರೂ. (18) ಕುದರೆ ಕಾಳಪ್ಪನವರು 10 ರೂ. (19) ತಟ್ಟವಾಳು ಬಸಪ್ಪಶೆಟ್ಟರು 10 ರೂ. ಮೇಲ್ಕಂಡಂತೆ ವಸೂಲಿ ಆದ ಮೊಬಲಗು 722 ಮತ್ತು ಬಾಗ್ದಾನದ ಮೊಬಲಗು 355 ರೂಪಾಯಿಗಳಾಗಿರುತ್ತವೆ.

ಶ್ರೀ ಶಿವಯೋಗ ಮಂದಿರ

ಯೋಗಾಭ್ಯಾಸಕ್ಕೆ ಬೇಕಾಗುವ ಸರ್ವಾನುಕೂಲಗಳಿಂದ ತುಂಬಿತು ಳುಕುತ್ತಿರುವ ಶ್ರೀ ಶಿವಯೋಗ ಮಂದಿರವಿರುವ ಸ್ಥಳವು ಬಹಳ ಮಹತ್ವದ್ದು. ಅದು ಇತ್ತ ಪರಮ ಪವಿತ್ರವಾದ ಮಲಾಪಹಾರಿಯ ನದಿಯ ತೀರವಾಗಿರುವದು, ಅತ್ತ ಅತೀ ಪುರಾತನವಾದ ಮಹಾಕೂಟ ಕ್ಷೇತ್ರದ ಪುಣ್ಯಭೂಮಿಗೆ ಹೊಂದಿರುವದು. ಈ ಸ್ಥಳವೆಂಬ ಅಂಗನಾಮಣಿಯು ಶ್ರೀ ಶಿವಯೋಗ ಮಂದಿರವನ್ನು ಹೊಂದುವದಕ್ಕಾಗಿಯೇ ಎಷ್ಟೋ ವರ್ಷಗಳ ವರೆಗೆ ಕಾಡುಗಿಡ ಗಂಟೆಗಳಲ್ಲಿ ಹುದುಗಿಕೊಂಡು ಕುಳಿತಳು. ಇನ್ನೊಬ್ಬರ ಉಪದ್ರವವು ತನಗೆ ತಟ್ಟಬಾರದೆಂದು ಕಳ್ಳರ ಕಾವಲನ್ನಿಟ್ಟು ಹೇನು ಕೂಟದಂತೆ ಏಕಾಗ್ರ ಚಿತ್ತಕ್ಕೆ ಅನುಕೂಲವಾಗಿ ಮಾಡಿದಳು. ಪಾರ್ವತಿಯಂತೆ ಘೋರ ತಪಸ್ಸನ್ನು ಬಹುದಿವಸ ಆಚರಿಸಿದಳು. ಕಟ್ಟಕಡೆಗೆ ಮಹಾಮಹಿಮರ ಪ್ರಸನ್ನತೆಯನ್ನು ಪಡೆದು, ತಾನು ಹೊಂದಬೇಕೆಂದು ಹೊಂಚುಹಾಕಿದ್ದ ಶ್ರೀ ಶಿವಯೋಗ ಮಂದಿರವನ್ನು ಹೊಂದಿದಳು. ಶ್ರೀ ಶಿವಯೋಗ ಮಂದಿರವನ್ನು ಹೊಂದಿದ ಬಳಿಕ ಈ ಅಂಗನಾಮಣಿಯ ಪ್ರಭಾವವು ವಿಶೇಷ ಬೆಳೆದು ಸರ್ವರಿಗೂ ಬೇಕಾದಳು. ಈಗ ಈಕೆಯ ಆನಂದೋಲ್ಲಾಸಕ್ಕೆ ಎಣೆಯಿಲ್ಲ. ಶಾಂತಿ ಸಮಾಧಾನಗಳಂತೂ ಈಕೆಯಲ್ಲಿ ತುಂಬಿತುಳುಕುತ್ತಿವೆ. ಮಂದಿರದ ಅನೇಕ ತರದ ಕಟ್ಟಡಗಳ ಮೂಲಕ ಈಕೆಯ ವೈಭವವು ಬೆಳೆದಿರುವುದು. ಬಹಳ ಹೇಳುವದೇನು ಇಂದಿಗೆ ಈಕೆಗೆ ಫಲಿಸಬೇಕಾದ ಪುಣ್ಯವೆಲ್ಲ ಫಲಿಸಿ ಈಕೆಯು ದೈವಕೆರದಿರುವದು. ನಾವೆಲ್ಲರೂ 1932 ನೇ ಇಸವಿಯ ನವಂಬರ ತಿಂಗಳ 28 ನೇ ತಾರೀಖಿಗೆ ಶ್ರೀ ಶಿವಯೋಗ ಮಂದಿರಕ್ಕೆ ಹೋಗಿದ್ದೆವು. ನಮ್ಮಂತೆಯೇ ಬೇರೆ ಬೇರೆ ಸ್ಥಳಗಳಿಂದ ಬಂದ ಭಕ್ತರ ಸ್ತೋಮಗಳೆಷ್ಟೋ ಅಲ್ಲಿದ್ದವು. ಇದೇ ಸಮಯಕ್ಕೆ ಶ್ರೀ ಸೂಕ್ಷ್ಮ ಸಿಂಹಾಸನಾಧಿಪತಿಗಳಾದ ಶ್ರೀಮನ್ನಿರಂಜನ ಜಗದ್ಗುರು ಪ್ರಭು (ಜ.ಡಿ.) ಸ್ವಾಮಿಗಳವರು ಹಾಗೂ ಶ್ರೀಮನ್ನಿರಂಜನ ಹಾಲಕೆರೆಯ ಅನ್ನದಾನ ಮಹಾಸ್ವಾಮಿಗಳವರೂ ಅಲ್ಲಿಗೆ ದಯಮಾಡಿಸಿದ್ದರು. ಈ ಉಭಯ ಶ್ರೀಗಳವರು ಒಮ್ಮೆಗೇನೇ ದಯಮಾಡಿಸಿ ಶ್ರೀ ಶಿವಯೋಗ ಮಂದಿರದಲ್ಲಿ ಮಿಲಿತರಾದದ್ದು ನಮ್ಮೆಲ್ಲ ಭಕ್ತಜನರ ಭಾಗ್ಯವೆಂತಲೇ ಹೇಳಬೇಕಾಗಿದೆ. ಅಲ್ಲಿ ಕಾರ್ತೀಕ ಸಮಾರಾಧನೆಗಳು ಈಗಲೂ ನಡೆಯುತ್ತಿ ಇರುವವು. ನಾವು ಹೋದಾಗ ಆಲೂರ ಮಹಾಶಯರ ಸಮಾರಾಧನೆಯು ನಡೆದಿತ್ತು. ಸಮಾರಾಧನೆಯು ಕೆಲಸವೆಲ್ಲ ತೀರಿದ ಬಳಿಕ ಶ್ರೀ ಬಸವಲಿಂಗ ದೇಶಿಕರವರು ಪದ್ಧತಿ ಪ್ರಕಾರ ಸ್ಕಂದ ಪುರಾಣವನ್ನು ಹೇಳತೊಡಗಿದರು. ಆ ದಿವಸ ಪುರಾಣದಲ್ಲಿ ರಾಜಯೋಗದ ಮಹಿಮೆಯು ಹೊರಬಿತ್ತು. ಪುರಾಣಿಕರು ಸ್ವತಃ ಯೋಗವನ್ನು ಅನುಭವಪಡೆದವರಿರುವರಲ್ಲದೆ ಭೌತಿಕ ಶಾಸ್ತ್ರಗಳನ್ನು ಬಲ್ಲವರಾಗಿರುವರು. ಹಾಗೂ ಅವರಿಗೆ ವ್ಯವಹಾರದ ಶಿಷ್ಟಾಚಾರಗಳು ಪರಿಪೂರ್ಣಗೊತ್ತಾಗಿರುವವು. ಪಾರಮಾರ್ಥ ವಿಷಯವು ವಿವರಣೆಗೆ ಬಹು ಬಿಗಿಯಾಗುವದು. ಅದರಲ್ಲಿ ಯೋಗ ವಿಷಯವಂತೂ ಬಲು ಬಿಕ್ಕಟ್ಟಿನದು. ಇಂಥ ಗಹನ ವಿಷಯವನ್ನು ಸಹ ಪುರಾಣಿಕರು ಅನೇಕ ವ್ಯವಹಾರಗಳ ಉದಾಹರಣೆಗಳಿಂದಲೂ ಭೌತಿಕ ಶಾಸ್ತ್ರಗಳ ಆಧಾರದಿಂದಲೂ ತಿಳಿಸಿಕೊಡುವಾಗ ಇವರೊಬ್ಬ ಸರ್ವ ವಿಷಯಗಳನ್ನರಿತ ಗ್ರಾಜ್ಯುವೇಟರೇ ಇರಬಹುದೆಂಬ ಭ್ರಾಂತಿಯು ಯಾರಿಗಾದರೂ ಬಂದೇ ತೀರುವದು. ಪುರಾಣದ ಮಂಗಲವಾದ ಬಳಿಕ ನಮಗಂದೆ ಶ್ರೀ ಬಸವಲಿಂಗ ದೇಶಿಕರವರು ಯೋಗದ ಬಗ್ಗೆ ಮಾತಾಡಲಿಕ್ಕೆ ನನಗೆ ಅಪ್ಪಣೆ ಕೊಡಿಸಿದರು. ನಾನು ಎದ್ದು ನಿಂತು ಹೇಳಬೇಕಾದದ್ದನ್ನು ಹೇಳಿದೆನು. ಬಳಿಕ ಶಿವಯೋಗಿಗಳಲ್ಲಿ ಕೆಲವರು [illegible]ಯ್ಯನ ಹಾಗೂ ನುಲಿ ಚಂದಯ್ಯಗಳ ಸಂಭಾಷಣೆಯನ್ನು ಮಾಡಿದರು. ಬಳಿಕ ಶಿವಯೋಗಿಗಳೆಲ್ಲರೂ ಒಟ್ಟಾಗಿ ಶ್ರೀ ಶಿವಯೋಗ ಮಂದಿರದ ಗಿ[illegible]ನನ್ನು, ಕರ್ನಾಟಕದ ಗೀತೆಗಳನ್ನು ಬಹಳ ಸರಸವಾಗಿ ಸ್ವರಮೇಳದಿಂದಲೂ ಉತ್ಸಾಹದಿಂದಲೂ ಇವುಗಳನ್ನು ಅನ್ನುವಾಗ ನಮ್ಮೆಲ್ಲರಿಗೂ ಆನಂದಾಶ್ಚರ್ಯಗಳುಂಟಾದವು. ಇಷ್ಟೆಲ್ಲ ಆದ ಬಳಿಕ ನಮ್ಮ ಸಮಾಜದಲ್ಲಿ ಶಿವಯೋಗಿಗಳ ಸುಳಿದಾಟವೂ ಶಾಸ್ತ್ರಿಗಳ ಓಡಾಟವೂ ಹೆಚ್ಚಾಗಿ ಬೆಳೆಯಲಿಕ್ಕೆ ಕಾರಣರಾದ ಶ್ರೀಮನ್ನಿರಂಜನ ಹಾನಗಲ್ಲ ಕುಮಾರ ಸ್ವಾಮಿಗಳವರ ಗದ್ದುಗೆಯ ಮುಂದೆ ದೀಪೋತ್ಸವ ಸಮಾರಂಭವು ನಡೆಯಿತು. ಗದ್ದಿಗೆ ಬಟ್ಟೆ ಬೈಲಿನಲ್ಲಿದ್ದು ಅಲ್ಲಿ ಹಚ್ಚಿದ ದೀಪಗಳು ನಕ್ಷತ್ರಗಳ ಮಾಲಿಕೆಯಂತೆ ಶೋಭಾಯಮಾನವಾಗಿ ಕಂಗೊಳಿಸಿದವು. ದೀಪೋತ್ಸವ ಸಮಾರಂಭವು ಮುಗಿದ ಬಳಿಕ ಶಿವಯೋಗಿಗಳೆಲ್ಲರೂ ಶಿವಾರ್ಚನೆಗೆ ದಯಮಾಡಿಸಿದರು. ಮರುದಿವಸ ಮುಂಜಾನೆ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಬಂದ ಬಳಿಕ ಶಿವಯೋಗಿಗಳು ಆಸನಪಾಠವನ್ನು ತೆರೆದಿತು. ಶಿವಯೋಗಿಗಳು ಇವುಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ಕ್ರಮಕ್ಕನುಸರಿಸಿ ಒಳ್ಳೇ ಸಿಸ್ತಿನಿಂದ ಚೆನ್ನಾಗಿ ಹಾಕುವರು. ಇಲ್ಲಿರುವ ಶಿವಯೋಗಿಗಳೆಲ್ಲರೂ ಆಸನಗಳಲ್ಲಿ ಹಕ್ಕಬ್ಬು ನುರಿತಿರುವದ್ದರಿಂದ ಅವರ ಅವಯವಗಳೆಲ್ಲ ಸಂಪೂರ್ಣ ಅವರ ಸ್ವಾಧೀನಕ್ಕೆ ಬಂದುಹೋಗಿವೆ ಹಾಗೂ [illegible]ಯೊಂದು ಅವಯವವು ಮಾಟಸುದ್ದಾಗಿಯೂ ಅಂದವಾಗಿಯೂ ಇರುವೆ. ಅವರ ಮೈಕಟ್ಟು ಕಸಿ ಉಳ್ಳದ್ದಾಗಿರುವದು ಯೋಗಿಗಳ ದೇಹಕ್ಕೆ ಒಪ್ಪುವ ದೇಹಕಾಂತಿಯನ್ನು ಬಹುಶಃ ಎಲ್ಲರೂ ಹೊಂದಿರುವರು. ಶಿವಯೋಗಿಗಳಲ್ಲಿ ಕೆಲವರು ಷಟ್ಕರ್ಮಗಳನ್ನು ಮಾಡುವವರಾದರೂ ಇರುವರು. ಧೌತಿ ಕಪಾಲಭಾತಿ ಮೊದಲಾದ ಷಟ್ಕರ್ಮಗಳಿಂದ ಕರಳು, ಪುಪ್ಪುಸ ಮೊದಲಾದ ಅಂತರೇಂದ್ರಿಯಗಳು ಬಹಳ ನಿರ್ಮಲವಾಗಿ ಅವು ಬಲಗೊಳ್ಳುವವು. ಆದ್ದರಿಂದ ದೇಹದ ಮಲಿನವೆಲ್ಲ ಹೊರಟುಹೋಗಿ ಅದು ಸತೇಜವಾಗಿಯೂ [illegible]ವಾಗಿರುವದು. ಇಷ್ಟೆಲ್ಲ ಆದ ಬಳಿಕ ಮನುಷ್ಯನ ಚಪಲತೆ ಬೆಳೆಯುವದು ಅರಿದಲ್ಲ. ಆಸನಗಳನ್ನು ಹಾಕಿ ಇಲ್ಲವೆ ಷಟ್ಕರ್ಮಗಳನ್ನು [illegible] ರೋಗಗಳನ್ನು ಕಳಕೊಳ್ಳಲಿಕ್ಕೆ ಯಾರಿಗಾದರೂ ಅರುವದು. [illegible] ಸಾಧನಗಳಾಗಿದ್ದು ಇವುಗಳನ್ನು ಬಹುದಿವಸ ಮನ[illegible] ಅಭ್ಯಾಸ[illegible]ದರೆ ಮಾತ್ರ ತಕ್ಕ ಫಲವು ಸಿಗುವುದಲ್ಲದೆ [illegible] ಹರಿದೋಗುವವು. ಆದರೆ ದಿವಸೇ[illegible] ದಿವಸದಲ್ಲಿ [illegible] [illegible]ಸಾಧ್ಯವಾಗುವುದಿಲ್ಲೆಂಬುದನ್ನು ಯಾರೂ ಮರೆಯಬಾರದು. [illegible] ಯೋಗಿಗಳು [illegible] ಮನಸ್ಸಿನಿಂದ ಬಹುದಿವಸ ಒಂದೇಸಮನೆ ಕ್ರಮ [illegible] [illegible] ಎಷ್ಟು [illegible]ಸಾಧನಗಳನ್ನು

[illegible] [illegible] ಮಾಡಿರುವ ಸಾಧನಗಳನ್ನು ನೋಡಿದವರಿಗೆಲ್ಲ [illegible] ಉಕ್ಕಿ ಬರುವವು. ಶ್ರೀ ಶಿವಯೋಗ ಮಂದಿರದ [illegible] ಹಿಡಿದ ಸಲ್ಲದ ಮಾತುಗಳನ್ನಾಡುವವರು ಸ್ವತಃ ತಾವೇ ಅಲ್ಲಿಗೆ ಹೋಗಿ ಎಲ್ಲಾ ಕಣ್ಣಿಟ್ಟು ನೋಡಿ ತಮ್ಮ ವಿಪರೀತ ಭಾವನೆಗಳನ್ನು ಬದಲುಮಾಡಿಕೊಳ್ಳಬೇಕು. ಅಲ್ಲಿರುವ ಶಿವಯೋಗಿಗಳು ಹೊಟ್ಟೆಗಾಗಿ ಬಂದು ಸೇರಿದವರಲ್ಲ. ಹಲವರಿಗೆ ತಮ್ಮ ಮಠದ ಆಸ್ತಿಪಾಸ್ತಿಗಳು ಬೇಕಾದಷ್ಟಿರುವವು. ಅವುಗಳ ವೈಭವದಿಂದ ಮೆರೆಬೇಕೆಂದರೆ ಅವರ ಕೈಹಿಡಿಯುವವರು ಯಾರೂ ಇಲ್ಲ. ಹೀಗಿದ್ದರೂ ಆ ಸಾಧಕರು ತಮ್ಮ ಕರ್ತವ್ಯವನ್ನು ಸ್ಮರಿಸಿ ಕೇವಲ ಸಮಾಜೋನ್ನತಿಗಾಗಿಯೂ ಜನರ ಉದ್ಧಾರಕ್ಕಾಗಿಯೂ ಬೇಕಾಗುವ ಸಾಧನಗಳನ್ನು ಅರಿತುಕೊಳ್ಳಲಿಕ್ಕೂ ಅವುಗಳಲ್ಲಿ ಮನಮುಟ್ಟಿ ದುಡಿಯಲಿಕ್ಕೂ ಅಲ್ಲಿಗೆ ಬಂದಿರುವರು. ಅವರು ಎಲ್ಲವನ್ನೂ ಬಿಟ್ಟು ಪಾರಮಾರ್ಥ ವಿಷಯಗಳಲ್ಲಿ ಹಗಲಿರುಳು ದುಡಿಯುತ್ತಿರುವದು ನಮಗೆ ಭೂಷಣವೂ ಹಿತವೂ ಆಗಿರುವವಲ್ಲದೆ, ಬರೇ ಹುಗ್ಗಿ ಹೊಡೆದು ಹೋರಿ ಗಡಬುಗಳಂತೆ ಉಬ್ಬಿರುವ ಸದ್ದಾಮುದ್ದಾದ ಅಪ್ಪನವರಿಂದ ಸಮಾಜಕ್ಕೇನು ಪ್ರಯೋಜನವಾಗಿರುವದು ? ತಮ್ಮ ಕೆಲಸಕ್ಕೆ ಬೇಕಾಗುವ ವಿಷಯವನ್ನೇನೂ ಅರಿಯದವರೂ ತಮ್ಮ ವ್ಯವಸಾಯದಲ್ಲಿ ಸಾಕಷ್ಟು ನೈಪುಣ್ಯವನ್ನು ಪಡೆಯದವರೂ ಯಾತಕ್ಕೂ ಬಾರರು. ನಮ್ಮ ಸಮಾಜದ ಕೆಲ ಕೆಲವು ಗುರುವರ್ಯರೂ ಸ್ವಾಮಿಗಳೂ ಏನೊಂದೂ ಕೆಲಸವಿಲ್ಲದೆ ಭಕ್ತರಿಂದ ಭಿಕ್ಷೆ ಎತ್ತುವರು ಯಾರ ಹಂಗನ್ನೂ ಹಿಡಿಯದೆ ಇನ್ನೊಬ್ಬರನ್ನು ಕೇಳದೆ ಮನಬಲ್ಲಂತೆ ಖರ್ಚುಮಾಡುವರು ತಮಗೆ ಸರಿಯಲ್ಲದ ಬೆಳ್ಳಿ ಭಂಗಾರದ ವಸ್ತ್ರ ಒಡವೆಗಳನ್ನು ಮಾಡಿಸಿ ಧರಿಸಿ ಮೆರೆಯುವರು, ಇವರ ಸಾಧನವು ಬರೇ ಊಟ ಉಪಚಾರಗಳಲ್ಲಿಯೂ ವಿಷಯಾರಾಮದಲ್ಲಿಯೂ ಮುಗಿಯುವದು. ಪಲ್ಲಂಗದ ಮೇಲಿನ ಗಾದಿಯಮೇಲೆ ಮಲಗಿದಾಗ ಮಾತ್ರ ಇವರಿಗೆ ಸಮಾಧಿ ಹತ್ತುವದು. ತಮ್ಮ ಸ್ವರೂಪವು ಎಂಥಾದ್ದೆಂದು ಅರಿಯದ ಮತ್ತು ತಮ್ಮ ಪವಿತ್ರ ಕರ್ತವ್ಯವೇನೆಂಬದನ್ನು ಸಹ ತಿಳಿಯದ ಈ ಅಪ್ಪನವರಿಂದ ನಮ್ಮ ಸಮಾಜಕ್ಕೆ ಪ್ರಯೋಜನವೇನದೆ ? ಮೊದಲು ತಮಗೆ ಇಲ್ಲದವರು ಕೂಸಿಗೇನು ಹೊಚ್ಚುವರು ? ಅಂತೇ ನಮ್ಮ ಗುರುವರ್ಯರಿಗೂ ಸ್ವಾಮಿಗಳವರಿಗೂ ಅವರ ಕರ್ತವ್ಯಜ್ಞಾನವನ್ನವರಿಗೆ ಮಾಡಿಕೊಟ್ಟು ಅವರಿಂದ ಭಕ್ತರ ಉದ್ಧಾರಮಾಡಿಸಬೇಕೆಂಬ ಸದುದ್ದೇಶದಿಂದ ಶ್ರೀ ಶಿವಯೋಗಮಂದಿರವು ಸ್ಥಾಪಿಸಲ್ಪಟ್ಟಿದೆ.

ಅಲ್ಲಿಯ ಶಿವಯೋಗಿಗಳೆಲ್ಲರೂ 64 ಶೀಲಗಳಲ್ಲಿ ಕೆಲವು ಅಸಾಧ್ಯವಾದವುಗಳನ್ನು ಮಾತ್ರ ಬಿಟ್ಟು ಉಳಿದವುಗಳನ್ನೆಲ್ಲ ಮನಮುಟ್ಟಿ ಆಚರಿಸುವರು. ಬ್ರಹ್ಮಚರ್ಯ ವ್ರತವನ್ನಂತೂ ಪ್ರಾಣಕ್ಕೆ ಸರಿಮಾಡಿ ಪಾಲಿಸುವರು, ಅಲ್ಲಿಯ ಸಾಧಕರು ಸದಾ ವೈರಾಗ್ಯಶೀಲರಾಗಿದ್ದುಕೊಂಡು ಆಹಾರ ವಿಹಾರಗಳಲ್ಲಿ ಒಳ್ಳೇ ಮಿತಿವಂತರಾಗಿರುವರು. ಬಹಳ ಹೇಳುವದೇನು, ಅಲ್ಲಿಯ ಸಾಧಕರೆಲ್ಲರೂ ಆರ್ಯ ಋಷಿವರ್ಯರಂತೆ ಸದಾ ತಮ್ಮ ಕ್ರಮಕಟ್ಟುಗಳಿಗೆ ಬದ್ಧರಾಗಿ ನಡೆಯುವದರಿಂದ ಅವರು ತಮ್ಮ ಸ್ವಾಮಿತ್ವದ ಸೀಮೆಯನ್ನು ಎಂದೆಂದೂ ಉಲ್ಲಂಘಿಸದಂತೆ ಆಗಿಬಿಟ್ಟಿದೆ. ಯಾರೇ ಆಗಲಿ ಕೆಲವು ಉತ್ತಮ ಕ್ರಮಕಟ್ಟುಗಳಂತೆ ತಪ್ಪದೆ ಆಚರಿಸುತ್ತ ಬಂದರೆ ಕೆಲವು ದಿವಸಗಳ ಮೇಲೆ ಅವರ ಜನ್ಮಸ್ವಭಾವವು ಸಹ ತೀರ ಭಿನ್ನಾವಸ್ಥೆಯನ್ನು ಹೊಂದಿ ಮಟ್ಟಿಗೆಬರುವರು. “ನುಡಿಯಂತೆ ನಡೆದರೆ ಇದೇ ಜನ್ಮದ ಕಡೆ” ಎಂಬದು ಪ್ರಸಿದ್ಧವಾಗಿದೆ. ಅದೇನೋ ಇರಲಿ. ಶ್ರೀ ಶಿವಯೋಗಮಂದಿರವು ಸ್ಥಾಪಿತವಾಗುವದಕ್ಕಿಂತ ಮುಂಚೆ ನಮ್ಮ ಅಪ್ಪನವರಲ್ಲೆಷ್ಟೋ ಮಹತ್ವಕರಿಗೆ ಯೋಗಗಳೆಷ್ಟೆಂಬದೂ ಅವು ಯಾವವೆಂಬದೂ ಗೊತ್ತೇ ಇದ್ದಿಲ್ಲ. ಶ್ರೀ ಶಿವಯೋಗಮಂದಿರವೆಂಬ ಮಹತ್ವದ ಸಂಸ್ಥೆಯಿಂದ ನಮ್ಮವರಷ್ಟೇ ಯಾಕೆ ಇಡೀ ಕರ್ನಾಟಕಸ್ಥರೆಲ್ಲರೂ ಯೋಗದ ಬಗ್ಗೆ ಕಲಿಯಲಿಕ್ಕೂ ತಿಳಿಯಲಿಕ್ಕೂ ದೊಡ್ಡದೊಂದು ಅವಸರವೇ ದೊರೆತು ಹೋಗಿರುವದು. ಇಲ್ಲಿ ನಿರ್ವಂಚನೆಯಿಂದ ಹೇಳಲ್ಪಡುವದು ಮತ್ತು ಯಾರಾದರೂ ಆ ವಿಷಯದಲ್ಲಿ ನುರಿತ ಮಹತ್ವಕರು ಮಾಡಿದ ಮಹತ್ವದ ಸೂಚನೆಗಳು ನಿರಭಿಮಾನದಿಂದ ಸ್ವೀಕರಿಸಲ್ಪಡುವವು. ಇಂಥ ಆಶ್ರಮಗಳಾವವೂ ಕರ್ನಾಟಕದಲ್ಲಿ ಇಲ್ಲವೇ ಇಲ್ಲ. ಆದ್ದರಿಂದ ಬರೇ ಲಿಂಗಾಯತರಷ್ಟೇ ಯಾಕೆ ಎಲ್ಲ ಕರ್ನಾಟಕಸ್ಥರೂ ಅದರ ಬಗ್ಗೆ ಅಭಿಮಾನವಹಿಸುವದು ತಕ್ಕದ್ದಾಗಿದೆ ಎಂದು ಶ್ರೀ ಶಿವಯೋಗಮಂದಿರಕ್ಕೆ ಹೋಗಿ ಎಲ್ಲಾ ನೋಡಿಬಂದ ಇಲ್ಲಿಯ ಸಂಗೀತಸಾಹಿತ್ಯ ಪಾಠಶಾಲೆಯ ಶಾಸ್ತ್ರಿಗಳಾದ ಶ್ರೀ ವೇ|| ಮಹಲಿಂಗಾರ್ಯ ಹಿರೇಮಠ ದ್ಯಾಂಪುರದ ಹಾಗೂ ತಿ|| ಸ್ವ|| ಮ|| ಗುರುಬಸಪ್ಪ ಮಾವಾ ಕೋಟಗಿ ಮತ್ತು ಚಿ|| ರಾ|| ಕಳಕಪ್ಪ ಕೋಟಗಿ ಈ ಮೊದಲಾದ ನಾವೆಲ್ಲರೂ ಸೂಚಿಸುವೆವು.

ಸಜ್ಜನ ವಿಧೇಯ,

ರುದ್ರಪ್ಪ ಸಿದ್ಧಪ್ಪ ಕೋಟಗಿ, ಶಾಲಾ ಮಾಸ್ತರ, ಗಜೇಂದ್ರಗಡ.

ಪ್ರಕಟಣೆ ೨೪.

ಕರ್ನಾಟಕ ಸಾಹಿತ್ಯ ಪರಿಷತ್ತಿನ ೧೮ ನೆಯ ಅಧಿವೇಶನ.

ಮಡಿಕೇರಿ, ಕೊಡಗು.

ಈ ಸಾರಿಯ ಅಧಿವೇಶನವು ಮಡಿಕೇರಿಯಲ್ಲಿ ತಾ|| 28-12-32 ರಲ್ಲು ನಡೆಯುವದಾಗಿ ನಿಶ್ಚೈಸಿರುವದಷ್ಟೆ. ಈ ಸಂದರ್ಭದಲ್ಲಿ ಕೊಡಗು ದೇಶದ ಚರಿತ್ರೆ, ಜನಜೀವನ, ಸಾಹಿತ್ಯಕಲಾ ಪ್ರದರ್ಶನವೊಂದನ್ನು ನಡೆಸಲು ನಿಶ್ಚೈಸಿರುತ್ತದೆ. ಇದರ ಬಳಿಯಲ್ಲಿಯೇ ಕನ್ನಡ ಪತ್ರಿಕೆಗಳ ಮತ್ತು ಉತ್ತಮ ಪುಸ್ತಕಗಳ ಪ್ರದರ್ಶನ ಶಾಖೆಯೂ ಇರಿಸಲ್ಪಡುತ್ತದೆ. ಅದು ಕಾರಣ ಬರಹಗಾರರೂ ವೃತ್ತಪತ್ರ ಸಂಪಾದಕರೂ ತಮ್ಮ ಪುಸ್ತಕ ವ ಪತ್ರಿಕೆಗಳ 2 ಪ್ರತಿಗಳನ್ನು ಪ್ರದರ್ಶನದ ಕಾರ್ಯದರ್ಶಿ ಮೆ|| ಬಿ. ಎಣ್. ಕೃಷ್ಣಮೂರ್ತಿ, ಗರ್ಲ್ಸ್ ಹೈಸ್ಕೂಲ್ ಮಡಿಕೇರಿ, ಇವರ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಕೋರಿದೆ. ಕನ್ನಡ ಪ್ರಾಂತ್ಯವಾದ ಕೊಡಗಿನಲ್ಲಿ ಬರಹಗಾರರಿಗೆ ಇದಕ್ಕಿಂತ ಒಳ್ಳೆಯ ಪ್ರಕಟಣೆಯು ಬೇರೊಂದಿರದು.

ಸ್ವಾಗತ ಮಂಡಳಿ. ಜಂಟಿ ಕಾರ್ಯದರ್ಶಿಗಳು.
ಕ. ಸಾ. ಪರಿಷತ್ತು. ತಾ|| 1-12-32.

ವಿಜ್ಞಾಪನೆಗಳು.

ಕರ್ನಾಟಕ ಸಾಹಿತ್ಯ ಪರಿಷತ್ತಿನ 18 ನೆಯ ಸಮ್ಮೇಳನವು ಇದೇ ಅಂಗೀರಸ ಸಂವತ್ಸರದ ಪುಷ್ಯ ಶುದ್ಧ ಪಾಡ್ಯಮಿ ಬುಧವಾರ (1932 ನೆಯ ಡಿಸೆಂಬರು ತಾ|| 28) ಮಡಿಕೇರಿಯಲ್ಲಿ ಆರಂಭವಾಗುವುದು. ಬೆಂಗಳೂರಿನ ಮ|| ರಾ|| ಶ್ರೀ ಡಿ. ವಿ. ಗುಂಡಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸುವರು.

ಕರ್ನಾಟಕ ಸಾಹಿತ್ಯಾಭಿಮಾನಿಗಳು ಈ ಸಮ್ಮೇಳನಕ್ಕೆ ದಯಮಾಡಿ ನಮಗೆ ಪ್ರೋತ್ಸಾಹವನ್ನುಂಟುಮಾಡಬೇಕೆಂದು ಬೇಡುತ್ತೇವೆ.

ಇಂತು, ತಮ್ಮ [illegible]
[illegible] [illegible]
ಸ್ವಾಗತ ಮಂಡಳಿಯ [illegible]
[illegible]

ಕೊಡಗಿನ ಸಂಕ್ಷಿಪ್ತ ವಿವರ

1. ಕೊಡಗು ಪಶ್ಚಿಮ ಘಟ್ಟಗಳ ಪ್ರಸ್ಥಭೂಮಿಯಲ್ಲಿರುವ ಚಿಕ್ಕ ನಾಡು. ಇದರ ಬಡಗು ಮೂಡು ಗಳಲ್ಲಿ ಮೈಸೂರು ದೇಶ, ತೆಂಕಲು ಪಡುವಲುಗಳಲ್ಲಿ ಮಲಬಾರು ದಕ್ಷಿಣ ಕನ್ನಡ ಜಿಲ್ಲೆ[illegible]. ಸಮ್ಮೇಳನವು ನಡೆಯುವ ಮಡಿಕೇರಿಯು ಇದರ ರಾಜಧಾನಿ. [illegible]ನಿಂದ ಕಾಣುವ ಸುತ್ತಲಿನ ನೋಟವು ರಮಣೀಯವಾಗಿದೆ. ಓಂ[illegible] ದೇವಸ್ಥಾನ, ಅರಮನೆ, ಗದ್ದುಗೆಗಳು—ಇವು ಇಲ್ಲಿಯ ರಾಜರ ಕಾಲದ ಕಟ್ಟಡಗಳು.

2. ಕಾವೇರಿಯು ಕೊಡಗಿನಲ್ಲಿ ಮಾತ್ರವೇ ಅಲ್ಲ, ದಕ್ಷಿಣ ದೇಶದಲ್ಲೆಲ್ಲ ಹೆಸರುಗೊಂಡ ನದಿ. ಇದು ಹುಟ್ಟುವುದು ಮಡಿಕೇರಿಯಿಂದ 26 ಮೈಲುಗಳಿರುವ ಅಗಸ್ತ್ಯನ ತಪಸ್ಥಾನವಾದ ಬ್ರಹ್ಮಗಿರಿಯ ತಲಕಾವೇರಿ ಎಂಬಲ್ಲಿ, ಇದು ಘಟ್ಟಗಳ ಮೇಲಿದೆ. ಅಲ್ಲಿಯ ನೋಟವು ಮೈ ಮರೆಯಿಸುವಂತಿದೆ. ಅಲ್ಲಿಗೆ ಹೋಗುವ ದಾರಿಯಲ್ಲಿ, ಘಟ್ಟಗಳ ಬುಡದಲ್ಲಿರುವ ಭಗಂಡಕ್ಷೇತ್ರವಾದ ಭಾಗಮಂಡಲವು ಕಾವೇರಿ, ಕನಿಕೆ, ಸುಜ್ಯೋತಿ—ಈ 3 ನದಿಗಳ ಸಂಗಮಸ್ಥಾನವು. ಸುಜ್ಯೋತಿಯು ಗುಪ್ತಗಾಮಿನಿಯೆಂದು ಸ್ಥಳಪುರಾಣದಲ್ಲಿದೆ. ಭಾಗಮಂಡಲದಿಂದ ತಲಕಾವೇರಿಗೆ ಬಹಳ ಮನೋರಂಜಕವಾದ 3 ಮೈಲುಗಳ ಕಾಲುದಾರಿ. ಕೊಡಗಿನ ದಕ್ಷಿಣದಲ್ಲಿ, ಮಡಿಕೇರಿಯಿಂದ 40 ಮೈಲುಗಳ ದೂರದಲ್ಲಿ, ಲಕ್ಷ್ಮಣತೀರ್ಥವೆಂಬ ಇನ್ನೊಂದು ಪುಣ್ಯಸ್ಥಳವಿದೆ. ಇದೊಂದು ಚಿಕ್ಕ ‘ಜೋಗು’. ಈ 2 ಸ್ಥಳಗಳಿಗೂ ಪ್ರತಿ ದಿನವೂ ಮಡಿಕೇರಿಯಿಂದ ಬಸ್ಸುಗಳು ಹೋಗುವವು.

ಕೊಡಗನ್ನು ಕುರಿತು, ಆಧುನಿಕ ಕವಿಗಳಾದ ಶ್ರೀಮಾನ್ ಡಿ. ವಿ. ಗುಂಡಪ್ಪನವರು ತಮ್ಮ ‘ನಿವೇದನ’ ದಲ್ಲಿ ಹೀಗೆ ವರ್ಣಿಸಿರುವರು :—

ಕಂ|| ಗಿರಿಗಳ ಕಂದರಗಳ ನ |
ಝರಿಗಳ ವಿಪಿನಗಳ ವಕ್ರಪಥಗಳ ದರ ಸುಂ |
ದರ ಶಮಕರ ರೂಪಂಗಳ |
ನರಿಪೊಡೆ ನೀಂ ನಡೆದು ನೋಡು ಕೊಡಗಿನ ಬೆಡಗಂ ||

ಪ್ರಕೃತಿಯ ನರ್ತನ ರಂಗಂ |
ಸುಕೃತಾತ್ಮರಿಗದುವೆ ಲೋಚನೋತ್ಸವ ರಂಗಂ ;
ಅಕೃತಕ ಕವಿತಾ ರಂಗಂ |
ವಿಕೃತ ಮನಸ್ಕರಿಗದೊಂದು ಶಾಂತಿಯ ರಂಗಂ ||

3. ಪ್ರಯಾಣದ ಅನುಕೂಲ್ಯತೆಗಳು—ಮುಂಬಯಿ ಕರ್ನಾಟಕ, ನಿಜಾಂ ಕರ್ನಾಟಕ, ಮೈಸೂರು ದೇಶ, ಬಳ್ಳಾರಿ ಜಿಲ್ಲೆ—ಈ ಪ್ರಾಂತದವರು ರೈಲಿನಲ್ಲಿ ಮೈಸೂರು ನಗರಕ್ಕೆ ಬಂದು ಅಲ್ಲಿಂದ 75 ಮೈಲುಗಳ ದೂರದಲ್ಲಿರುವ ಮಡಿಕೇರಿಗೆ ಬಸ್ಸಿನಲ್ಲಿ ಬರಬಹುದು. ಬೆಳಗಿನ $6\frac{1}{2}$ ಗಂಟೆಗೆ ಒಂದು, 11 ಗಂಟೆಗೆ ಇನ್ನೊಂದು, ಮಧ್ಯಾಹ್ನ 12 ಗಂಟೆಗೆ ಮತ್ತೆರಡು— ಈ ರೀತಿ ಮೈಸೂರಿನಿಂದ ಬಸ್ಸುಗಳು ಹೊರಡುತ್ತವೆ. ಬಸ್ಸಿನ ಬಾಡಿಗೆ ತಲೆಯೊಂದಕ್ಕೆ $1\frac{1}{2}$ ರೂ. ಮೈಸೂರಿನಿಂದ ಮಡಿಕೇರಿಗೆ 6 ಗಂಟೆಗಳ ದಾರಿ. ಮುಂಬಯಿ ಕರ್ನಾಟಕದಿಂದ ದಕ್ಷಿಣ ಕನ್ನಡದ ಮಂಗಳೂರಿಗೂ, ಅಲ್ಲಿಂದ ಮಡಿಕೇರಿಗೂ ಬಸ್ಸುಗಳ ಸಂಚಾರವಿದೆ. ಬಾಡಿಗೆಯು ದರ ತಲೆಯೊಂದಕ್ಕೆ $2\frac{1}{2}$ ರೂ. ಆಗಬಹುದು. ಮಂಗಳೂರಿನಿಂದ ಮಡಿಕೇರಿಗೆ ಬಸ್ಸುಗಳು ಹೊರಡುವ ಕಾಲ :—ಬೆಳಗಿನ ಗಂಟೆ 6, $6\frac{1}{2}$, $7\frac{1}{2}$, 8 ; ಮಧ್ಯಾಹ್ನ 12 ಗಂಟೆ.

ಬಿ. ಎಸ್. ಕುಶಾಲಪ್ಪ,
ಸ್ವಾಗತ ಮಂಡಲಿಯ ಗೌ|| ಕಾರ್ಯದರ್ಶಿ.

ಸೂಚನೆ

(1) ತಾವು ಮಡಿಕೇರಿಗೆ ದಯಮಾಡಿಸುವ ದಿನವನ್ನೂ ಕಾಲವನ್ನೂ ಅಲ್ಲಿಯ ಸಮ್ಮೇಳನದ ಸ್ವಾಗತ ಮಂಡಲಿಯ ಗೌ|| ಕಾರ್ಯದರ್ಶಿಯವರಿಗೆ ಡಿಸೆಂಬರು 22 ನೆಯ ತಾರೀಕಿನೊಳಗಾಗಿ ತಿಳಿಸಿದಲ್ಲಿ ತಮಗೆ ಬೇಕಾದ ಸಹಾಯವನ್ನು ಸಾಧ್ಯವಾದಮಟ್ಟಿಗೆ ಮಾಡಲಾಗುವುದು.

(2) ಸಮ್ಮೇಳನದಲ್ಲಿ ಡೆಲಿಗೇಟು (ಪ್ರತಿನಿಧಿ) ಗಳಾಗಲಿಚ್ಛಿಸುವ ಪ್ರತಿಯೊಬ್ಬರೂ 1 ರೂಪಾಯಿಯನ್ನು ಕೊಡಬೇಕು.

(3) ಹೊರಗಣಿಂದ ಬರುವ ಡೆಲಿಗೇಟುಗಳ ಊಟ ವಸತಿಗಳಿಗೆ ಸ್ವಾಗತ ಮಂಡಲಿಯವರು ಏರ್ಪಡಿಸುವರು. ಈ ಏರ್ಪಾಡಿಗೊಳಗಾಗುವವರು ಇದಕ್ಕಾಗಿ ದಿನ 1 ಕ್ಕೆ 8 ಆಣೆಯ ಮೇರೆಗೆ ಕೊಡಬೇಕು. ಮೊದಲೇ ತಿಳಿಸಿದ್ದಲ್ಲಿ, ಮುಂಬಯಿ ಕರ್ನಾಟಕದವರಿಗೆ, ಅವರ ಅಭ್ಯಾಸಕ್ಕನುಗುಣವಾದ ಊಟವನ್ನು ಏರ್ಪಡಿಸಲಾಗುವುದು.

(4) ಮಡಿಕೇರಿಯಲ್ಲಿ ಉಷ್ಣಮಾಪಕವು ಈಗ ಹೆಚ್ಚು ಕಡಿಮೆ 61° ಸೂಚಿಸುವ ಕಾರಣ, ಚಳಿಯನ್ನು ತಡೆಯುವುದಕ್ಕೆ ಅವಶ್ಯಕವಾದ ಉಣ್ಣೆಯ ಬಟ್ಟೆ ಮೊದಲಾದ ಬೆಚ್ಚನೆಯ ಹೊದಿಕೆಗಳನ್ನು ಪ್ರಯಾಣಿಕರು ತಮ್ಮೊಡನೆ ತರಬೇಕು. ಇಲ್ಲಿಯ ಹವ ಈಗ ಬಹಳ ಆರೋಗ್ಯಕರವಾಗಿದೆ.

೧೯೩೨ ನೆಯ ಇಸವಿ ಡಿಸೆಂಬರ್ ತಾ|| ೨೬ ರಿಂದ ೧೯೩೩ ನೆಯ ಇಸವಿ ಜನವರಿ ತಾ|| ೧ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೫೪ ನೆಯ ಅಂಗಿರಸನಾಮಸಂವತ್ಸರದ ಮಾರ್ಗಶಿರ ಬಹುಳ ಚತುರ್ದಶಿಯಿಂದ ಪುಷ್ಯ ಶುದ್ಧ ಪಂಚಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಧನು ಮಾಸ
26	ಸೋಮ	ಚತು	31-29	ಜ್ಯೇಷ್ಠ	33-29	12
27	ಮಂಗಳ	ಅಮಾ	26-3	ಮೂಲ	29-46	13
28	[1] ಬುಧ	ಪಾಡ್ಯ	21-11	ಪೂಷಾ	26-37	14
29	[2] ಗುರು	ಬಿದಿ	16-57	ಉಷಾ	24-6	15
03	ಶುಕ್ರ	ತದಿ	13-38	ಶ್ರವ	22-31	16
31	ಶನಿ	ಚೌತಿ	11-22	ಧನಿ	21-50	17
1	[3] ಭಾನು	ಪಂಚ	10-15	ಶತ	22-24	18

1 ಮಹಿ[illegible] ಶ್ರೀ-ಪೂಜಾ ೧ ನೆಯ [illegible] (2) [illegible] [illegible]. (3) ಕ್ರಿಸ್ತಮಹಾರಂಭ[illegible] [illegible]

ಮುದ್ರಿಸಿದವರು : ಶ್ರೀ. [illegible]

END

END

END